ಭಾರತ ಅಮೆರಿಕದ ಸ್ನೇಹವನ್ನು ರಷ್ಯಾ ಸಹಿಸಲಾರದು

ಭಾರತವು ತನ್ನ ಮಹಾಚುನಾವಣೆಗಳ ಅಂತಿಮ ಘಟ್ಟದಲ್ಲಿರುವಾಗ, ಸೋವಿಯಟ್ ರಷ್ಯವು ವಿಶ್ವಸಂಸ್ಥೆಯಲ್ಲಿ 'ಭಾರತದ ಪರವಾದ' ನೀತಿಯನ್ನನುಸರಿಸುತ್ತಿರುವುದು, ಕೇವಲ ಆಕಸ್ಮಿಕವಾಗಿರಲಾರದು ಎಂಬುದಾಗಿ ವಾಷಿಂಗ್ಟನ್ ಪೋಸ್ಟ್ ಪತ್ರಿಕೆ ಅಭಿಪ್ರಾಯಪಟ್ಟಿದೆ.

ಚೆಸ್ಟರ್ ಬೌಲ್ಸ್‌ರವರು ಭಾರತಕ್ಕೆ ಅಮೆರಿಕದ ರಾಯಭಾರಿಗಳಾದಾಗಿನಿಂದ, ಭಾರತ ಅಮೆರಿಕ ಬಾಂಧವ್ಯದಲ್ಲಿ ಉಂಟಾಗಿರುವ ಹಠಾತ ಉತ್ತಮ ಪರಿಸ್ಥಿತಿಗೆ ಪ್ರತಿಕ್ರಿಯೆಯಾಗಿ, ರಷ್ಯಕ್ಕೆ ಭಾರತದ ಮೇಲೆ ಇದ್ದಕ್ಕಿದ್ದಂತೆಯೇ ಈ ಪ್ರೇಮ ಉಕ್ಕಿರಬೇಕೆಂದು ಸದರಿ ಪತ್ರಿಕೆ ಸಂಪಾದಕೀಯವಾಗಿ ಟೀಕಿಸಿದೆ.

ಪ್ರಧಾನಿ ನೆಹರೂರವರು ವಿದೇಶಾಂಗ ನೀತಿಯಲ್ಲಿ ಸ್ವತಂತ್ರರಾಗಿದ್ದು, ಅನೇಕ ಮುಖ್ಯ ಪ್ರಶ್ನೆಗಳ ಮೇಲೆ ಪಾಶ್ಚಾತ್ಯ ಕೂಟದೊಡನೆ ಭಿನ್ನಾಭಿಪ್ರಾಯ ಹೊಂದಿದರೂ ಅಮೆರಿಕದೊಡನೆ ಅವರ ಸ್ನೇಹವು ಸೋಭಾವವು ರಷ್ಯನರಿಗೆ ಸಹಿಸಲಾರದಾಗಿದೆ ಎಂದೂ ಪತ್ರಿಕೆ ಬರೆದಿದೆ.

ನೆಹರೂರವರು ಪಾಶ್ಚಾತ್ಯ ಕೂಟದ ಬೆಂಬಲದಿಂದವರನ್ನು ತೆಗಳಲಾಗದ ಸನ್ನಿವೇಶವಿರುವುದರಿಂದ, ವಿಶ್ವಸಂಸ್ಥೆಯ ರಷ್ಯನ್ ನಿಯೋಗವು ಅವರನ್ನು ಹೊ… ಹೊರಟಿದೆ. ಭಾರತೀಯರೂ, ಪಾಕಿಸ್ತಾನಿಗಳೂ ಇದರ ಒಳಾರ್ಥವನ್ನು ಅರಿಯಬಹುದು, ಎಂಬುದಾಗಿ ಪತ್ರಿಕೆ ಉಪಸಂಹಾರ ಮಾಡಿದೆ.

ಮೊರಾರ್ಜಿ ಎಲ್ಲಿ ನಿಂತರು ಸ್ಪರ್ಧೆ

ಶ್ರೀ ಮೊರಾರ್ಜಿ ದೇಸಾಯರು ವಾಪಿಯಿಂದ ತಾಪಿಯವರೆಗೆ ಎಲ್ಲಿಯಾದರೂ ಸ್ಪರ್ಧಿಸಲಿ ಅಲ್ಲಿ ಸಂಘಟಿತ ಸ್ಪರ್ಧೆಯನ್ನು ಚೆನ್ನಾಗಿ ತೋರಿಸುತ್ತೇವೆ ಎಂದು ಇಂದು ಡಾ|| ಅಮುಲ್ ದೇಸಾಯರನ್ನು ಅಭಿನಂದಿಸಲು ಸೇರಿದ್ದ ಪ್ರಚಂಡ ಸಭೆಯಲ್ಲಿ ಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಶೋಕ ಮೆಹ್ತಾ ಮಾತನಾಡುತ್ತಾ ತಿಳಿಸಿದರು.

ಇಂಡೋನೇಷ್ಯಾ ನಿಯೋಗದ ಪ್ರಶಂಸೆ

ಬೆಂಗಳೂರು ಜ ೨೧

ಭಾರತದಲ್ಲಿ ನಡೆಯುತ್ತಿರುವ ಮಹಾಚುನಾವಣೆಗಳನ್ನು ವೀಕ್ಷಿಸಲು ಬಂದಿರುವ ಇಂಡೊನೇಷ್ಯಾದ ನಿಯೋಗದ ನಾಯಕರು ಮಹಾಚುನಾವಣೆ ಯಶಸ್ವಿಯಾಗಿ ನಡೆಯುತ್ತಿದೆಯೆಂದೂ, ಚುನಾವಣೆ ಯಂತ್ರ, ವ್ಯವಸ್ಥೆ ಹಾಗೂ ಮತದಾರರ ಉತ್ಸಾಹ ಪ್ರಶಂಸನಾರ್ಹವೆಂದೂ, ನಿನ್ನೆ ಸಂಜೆ ರೆಸಿಡೆನ್ಸಿಯಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ತಿಳಿಸಿರುವರು.

ಲೋಕ ಸಭೆಗೆ ಶ್ರೀ ಟಿ. ಟಿ. ಕೃಷ್ಣಮಾಚಾರಿ

ಈಗಿನ ಪಾರ್ಲಿಮೆಂಟಿನ ಕಾಂಗ್ರೆಸ್ ಸದಸ್ಯರಾದ ಶ್ರೀ ಟಿ ಟಿ ಕೃಷ್ಣಮಾಚಾರಿಯವರು ಮದರಾಸ್ ನಗರ ಕ್ಷೇತ್ರದಿಂದ ಲೋಕ ಸಭೆಗೆ ಚುನಾಯಿತರಾಗಿದ್ದಾರೆ.

ಕ್ಷಾಮನಿವಾರಣೆಯ ಸಾಧನೆ

ನ್ಯೂಯಾರ್ಕ್ ಜ ೧೯

ಅಮೇರಿಕದ ನಾವಿಕ ವರ್ತಕನೊಬ್ಬನು ತನ್ನದೇ ಆದ ರೀತಿಯಲ್ಲಿ, ಇಂಡಿಯಾ ಮೊರಾಕೋ, ಕೊರಿಯ ಮತ್ತು ಇಸ್ರೇಲ್‌ನಲ್ಲಾಗುವ ಕ್ಷಾಮವನ್ನು ತಡೆಹಿಡಿಯಲು ಒಬ್ಬನೇ ಪ್ರಯತ್ನಿಸುತ್ತಿದ್ದಾನೆಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ತಿಳಿಸುತ್ತದೆ.

ಈ ನಾವಿಕನ ಹೆಸರು ಅಲೋಸಿಸ್ ಎಪ್ ಇ ಪಿ ಮೋಜರ್ ಎಂದು. ಈತನು ಒಬ್ಬ ಅಧಿಕಾರಿ. ಇಂಡಿಯಾ, ಇಸ್ರೇಲ್, ಮೊರಾಕೋ, ಕೊರಿಯಾಗಳಿಗೆ ಹಡಗಿನಲ್ಲೇ ತನ್ನ ಕೆಲಸದ ನಿಮಿತ್ತ ಪ್ರಯಾಣ ಮಾಡುತ್ತಾನೆ. ಸರ್ಕಾರ ಅಥವಾ ಖಾಸಗಿ ಸಂಸ್ಥೆಗಳ ಸಹಾಯವಿಲ್ಲದೆಯೇ ಈತನು ೧೫೦೦೦ ಪಾಕೆಟ್ಟು ಬೀಜಗಳನ್ನು ರೈತರಿಗೆ ಕೊಟ್ಟು ಸಹಾಯ ಮಾಡಿದ್ದಾನೆ. 'ನೀವು ಆಹಾರವಿಲ್ಲದೆ ಸಾಯುತ್ತಿದ್ದರೆ ಈ ಬೀಜಗಳನ್ನು ಬಿತ್ತಿ ಬೆಳೆಯನ್ನೇಕೆ ತೆಗೆಯಬಾರದು' ಎನ್ನುತ್ತಾನೆ. ಮೋಜರನು ಹೋದ ಬಂದರುಗಳಲ್ಲೆಲ್ಲಾ, ೧೦ ಸೆಂಟಿನ ತರಕಾರಿ ಬೀಜಗಳ ಚೀಲಗಳನ್ನು ರೈತರಿಗೆ ಕೊಡುತ್ತಾನೆ.

ಆರು ತಿಂಗಳಲ್ಲಿಯೇ ಅವನ ಪ್ರಯತ್ನಕ್ಕೆ ಫಲ ದೊರೆತಿದೆ. ಇಂಡಿಯಾ, ಗ್ರೀಸ್, ಇಸ್ರೇಲ್ ಮೊರಾಕೋ ರೈತರು, ಬೆಳೆ ಚೆನ್ನಾಗಿ ಆಗಿದೆಯೆಂದು, ಮೋಜರನಿಗೆ ತಿಳಿಸಿದ್ದಾರೆ. ಈ ರೀತಿಯಾಗಿ ೧೮೦೦ರಲ್ಲಿ ಜಾನ್ ಚಾಪ್‌ಮನ್ನು ಓಹಿಯೋ ನದಿ ತೀರದಲ್ಲೆಲ್ಲಾ ಸೇಬಿನ ಬೀಜಗಳನ್ನು ಕೊಟ್ಟು 'ಜಾನಿ ಆಪಲ್‌ಸೀಡ್' ಎಂದು ಹೆಸರುವಾಸಿಯಾಗಿದ್ದನು.

ಈ ನಾವಿಕನಿಗೆ ಧನ್ಯ ಪ್ರಣಾಮಗಳು.

ಸಾರ್ವಜನಿಕ ರಕ್ಷಣೆಯೇ ನಮ್ಮ ಗುರಿ

ವಾಷಿಂಗ್ಟನ್ ಜ ೧೬

ಅಮೇರಿಕದ ಶಾಸನ ಸಭೆಗೆ ಆರ್ಥಿಕ ಸಂದೇಶದಲ್ಲಿ ಟ್ರೂಮನ್ನರು ಮುಂಬರುವ ಕೆಲಸವು ತುಂಬಾ ಮಹತ್ವವಾಗಿರುವುದೆಂದು ತಿಳಿಸಿದ್ದಾರೆ, ಅವರ ಸಂದೇಶವು ಈ ರೀತಿ ಇದೆ.

'೧೯೫೨ನೆಯ ವರ್ಷದಲ್ಲಿ ರಕ್ಷಣಾ ಕಾರ್ಯಕ್ರಮಗಳಿಗಾಗಿ ವಿಶೇಷ ಹಣವನ್ನು ಖರ್ಚುಮಾಡಬೇಕಾಗುತ್ತದೆ. ಇದರಿಂದಾಗಿ ಸರ್ಕಾರದ ಮತ್ತು ಖಾಸಗೀ ಜನರ ಆರ್ಥಿಕ ಜೀವನದಲ್ಲಿ ವ್ಯತ್ಯಾಸವುಂಟಾಗುವುದು. ರಾಷ್ಟ್ರದ ಸಂರಕ್ಷಣೆಯ ದೃಷ್ಟಿಯಿಂದ ಇದನ್ನು ಸಹಿಸಬೇಕಾಗಿದೆ.'

'ಸರ್ಕಾರದ ಲೆಕ್ಕದ ಪ್ರಕಾರ ಖರ್ಚು ರಕ್ಷಣೆಗಾಗಿ ೪೫ ಬಿಲಿಯನ್ ಡಾಲರುಗಳಿಂದ ೬೫ ಬಿಲಿಯನ್ ಡಾಲರುಗಳವರೆಗೆ ಏರಿದೆ.'

'ನಮ್ಮ ರಾಷ್ಟ್ರದ ರಕ್ಷಣೆಯ ಜೊತೆಗೆ ಇತರ ಸ್ವತಂತ್ರ ರಾಷ್ಟ್ರಗಳೂ ಶಕ್ತಿಯುತವಾಗಬೇಕೆಂಬುದು ಅಮೇರಿಕದ ಇಚ್ಛೆ. ನಮ್ಮ ಸಹಾಯವೆಲ್ಲ ಈ ವಿಷಯದಲ್ಲಿ ಪಶ್ಚಿಮ ಯುರೋಪಿಗೆ ಹೋಗುತ್ತಿದೆ.'

'ಸರ್ವ ಜನರ ರಕ್ಷಣೆಯೇ ನಮ್ಮ ಮುಖ್ಯಗುರಿ, ಆದ್ದರಿಂದ ಸಹಾಯವು ಮಿಲಿಟರಿಯಾಗಲಿ, ಆರ್ಥಿಕವಾಗಲಿ, ಗುರಿಯೊಂದೇ.'

'ಇದೇ ದೃಷ್ಟಿಯಿಂದ ದೂರಪ್ರಾಚ್ಯ, ಆಗ್ನೇಯ ಏಷ್ಯಾ ಮತ್ತು ಆಫ್ರಿಕಗಳಿಗೂ ನಾವು ಆರ್ಥಿಕಸಹಾಯ ನೀಡುತ್ತಿದ್ದೇವೆ.'

'ಅಮೇರಿಕದ ಸಹಾಯವನ್ನು ಸ್ವತಂತ್ರ ರಾಷ್ಟ್ರಗಳು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ.'

ಆರಂಭೋತ್ಸವ

ಬೆಂಗಳೂರು ಜ ೨೧

೨೧ನೇ ತಾರೀಖು ಸಂಜೆ ೬ ಗಂಟೆಗೆ ನ್ಯಾಯಾಂಗ ಸಚಿವ ಶ್ರೀ ಕೆ ಟಿ ಭಾಷ್ಯಂರವರು ಪಂತರ ಪಾರ್ಕಿನಲ್ಲಿ ಸಂಸ್ಥಾನದ ನೂತನ ಸಂಚಾರಿ ಚಲಚ್ಚಿತ್ರ ವ್ಯಾನಿನ ಆರಂಭೋತ್ಸವ ನೆರವೇರಿಸಿದರು. ಈ ವ್ಯವಸ್ಥೆ ಅಮೆರಿಕಾ ಸುದ್ದಿ ಶಾಖೆಯ ಪುಸ್ತಕ ಭಂಡಾರ ಚಲಚ್ಚಿತ್ರ ಕಾರ್ಯಕ್ರಮದ ಏರ್ಪಾಡಿಗೆ ಸೇರಿದುದು.

೪೧ ಈಜಿಪ್ಟನ್ನರ ಕೈಸೆರೆ

೪೧ ಈಜಿಪ್ಟನ್ನರನ್ನು ಬ್ರಿಟಿಷ್ ಸೈನ್ಯದವರು ಕೈಸೆರೆ ಹಿಡಿದು, ಬಂಧನದಲ್ಲಿಟ್ಟಿರುವರು.

ಬ್ರಿಟಿಷ್ ಸೈನ್ಯದ ಕಾರ್ಯಾಚರಣೆಗೆ ಈಜಿಪ್ಟ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

‡ ಪಾನ್‌ಮುನ್‌ಜಾನ್‌ನಲ್ಲಿ ನಡೆಯುತ್ತಿರುವ ಮಾತುಕತೆಯಲ್ಲಿ ಪ್ರಗತಿ ಕಂಡು ಬಂದಿಲ್ಲ.

ನ್ಯೂ ಅಪೇರ
೨೦-೧-೫೨ ರಿಂದ ದಿನ ೩ ಆಟಗಳು
ಸಾವನ್-ಬಾದೊ
ಪಾತ್ರ—ಮುನಾವರ್ ಸುಲ್ತಾನ್, ರಾಂಸಿಂಗ್, ರಣಧೀರ್, ಇಂದೂ

ಪ್ರಕಾಶಕರು:—ಜಿ ಎಲ್. ಸ್ವಾಮಿ [illegible] ಮೈಸೂರು
ಮುದ್ರಕರು—ಹಿ. ಕೆ. ಸುಬ್ಬರಾವ್ [illegible] ಮುದ್ರಣಾಲಯ ಮೈಸೂರು

ಪಶ್ಚಿಮ ರಾಷ್ಟ್ರಗಳಿಗೆ ಭಾರತದ ಎಚ್ಚರಿಕೆ

ಚೀಣದ ಮೇಲೆ ವಿಮಾನ ಧಾಳಿಯಾರಂಭಿಸಿದರೆ, ರಷ್ಯಾ ಚೀಣಾ ಪ್ರಜಾಪ್ರಭುತ್ವದ ಪಕ್ಷ ವಹಿಸುವುದಾಗಿ ಭಾರತ ಪಶ್ಚಿಮ ರಾಷ್ಟ್ರಗಳಿಗೆ ಎಚ್ಚರಿಕೆಯಿತ್ತಿದೆ, ಎಂದು 'ರೇನಾಲ್ಡ್ಸ್ ನ್ಯೂಸ್' ಪತ್ರಿಕೆಯು ತಿಳಿಸುತ್ತದೆ.

ಪಾರ್ಲಿಮೆಂಟಿನ ಫಲಿತಾಂಶ

ನಿನ್ನೆ ಹೈದ್ರಾಬಾದ್, ಮದ್ರಾಸ್ ಮತ್ತು ಪಶ್ಚಿಮಬಂಗಾಳದಿಂದ ಪಾರ್ಲಿಮೆಂಟಿನ ೬ ಸ್ಥಾನದ ಫಲಿತಾಂಶ ಹೊರಬಿದ್ದು, ಆರು ಕಾಂಗ್ರೆಸ್ಸಿಗೆ ಲಭಿಸಿವೆ

[ಫೋನ್ ೫೭೪೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೩—೧—೧೯೫೨ನೇ ಬುಧವಾರ [ಸಂಚಿಕೆ ೧೨೫

ಫೋರ್ಡ್ ಪುದುವಟ್ ಸಹಾಯದಿಂದ ಮೈಸೂರಿನಲ್ಲಿ ವ್ಯವಸಾಯಕಾರ್ಯ ವಿಸ್ತರಣೆ

ಮೈಸೂರಿನ ೧೦೦ ಗ್ರಾಮಗಳಲ್ಲಿ ವ್ಯವಸಾಯ ವಿಸ್ತರಣ ಕಾರ್ಯ

ಬೆಂಗಳೂರು ಜ ೨೨

ಅಮೆರಿಕಾ ಫೋರ್ಡ್ ಕಂಪೆನಿ ಮತ್ತು ಭಾರತ ಸರ್ಕಾರಕ್ಕೆ ಆಗಿರುವ ಒಪ್ಪಂದದ ಪ್ರಕಾರ ಫೋರ್ಡ್ ಪುದುವಟ್ಟಿನಿಂದ ವ್ಯವಸಾಯ ವಿಸ್ತರಣ ಕಾರ್ಯಕ್ಕಾಗಿ ಹಣ ಸಹಾಯ ಒದಗಿದೆ. ಪ್ರಕೃತದಲ್ಲಿ ಭಾರತದಲ್ಲಿ ೫೫ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಆ ಕೇಂದ್ರಗಳಲ್ಲಿ ಒಂದು ಮೈಸೂರು ಸಂಸ್ಥಾನದಲ್ಲಿರುತ್ತದೆ. ವ್ಯವಸಾಯ ಸುಧಾರಣೆ, ಪಶುಪಾಲನೆ, ಜನಾರೋಗ್ಯ, ನೈರ್ಮಲ್ಯ ಮುಂತಾದ ಜಾಬುಗಳಲ್ಲಿ ಶಿಕ್ಷಣ ಕೊಡುವುದೇ ಈ ಕೇಂದ್ರಗಳ ಪ್ರಥಮ ಕರ್ತವ್ಯ.

ಅಮೆರಿಕಾ ಭಾರತಕ್ಕೆ ಆಗಿರುವ ಟೆಕ್ನಿಕಲ್ ಯೋಜನೆ ಒಪ್ಪಂದ ಪ್ರಕಾರ ಭಾರತಕ್ಕೆ ಬರಲಿರುವ ೯ ಅಮೆರಿಕನ್ ಪ್ರವೀಣರ ಪೈಕಿ ಒಬ್ಬರು ಈಗಾಗಲೇ ಬೆಂಗಳೂರಿಗೆ ಆಗಮಿಸಿರುವರು. ಮೈಸೂರು ಸರ್ಕಾರವು ೭೫ ಲಕ್ಷ ರೂಪಾಯಿಗಳ ವೆಚ್ಚದಿಂದ ೬ ಸರಕಾರ ಬೇಸಾಯ ಕ್ಷೇತ್ರಗಳನ್ನು ವಿಸ್ತರಿಸುವುದಲ್ಲದೆ ನಾಲಾ ಪ್ರದೇಶದ ೧೦೦ ಗ್ರಾಮಗಳಲ್ಲಿ ಈ ಕಾರ್ಯವನ್ನು ಮಾಡಲಿದೆ. ಭಾರತ ಸರ್ಕಾರವು ಕೊಡಲಿರುವ ೨ ಲಕ್ಷ ರೂಪಾಯಿ ಗ್ರಾಂಟನ್ನು ಈ ಕಾರ್ಯಕ್ಕೆ ಒಂದವಾರವಾಗಿ ಉಪಯೋಗಿಸಲಾಗುತ್ತದೆ ಎಂದು ತಿಳಿಯಬರುತ್ತದೆ.

ಬೊಂಬಾಯಿಗೆ ೧೫ ಮಂತ್ರಿಗಳು ?

ಕಾಂಗ್ರೆಸ್ ಪಕ್ಷವು ಈಗಾಗಲೇ ಶಾಸನ ಸಭೆಯ ಚುನಾವಣೆಯಲ್ಲಿ ಬಹುಮತ ಪಡೆದಿರುವುದರಿಂದ ನೂತನ ಮಂತ್ರಿಮಂಡಲದ ರಚನೆಯ ಬಗ್ಗೆ ಊಹಾಪೋಹಗಳು ಪ್ರಾರಂಭವಾಗಿವೆ. ಈಗ ಮಂತ್ರಿಮಂಡಲದಲ್ಲಿ ೧೧ ಮಂತ್ರಿಗಳಿರುವರು. ಇನ್ನು ಮುಂದೆ ೧೫ ಮಂತ್ರಿಗಳಿರಬೇಕೆಂದು ಅಭಿಪ್ರಾಯ ಹೊರಹೊರಟಿದೆ. ಈಗಿರುವ ಮಂತ್ರಿಗಳಲ್ಲಿ ಕೆಲವರನ್ನು, ಕೆಲವು ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನು ಮಂತ್ರಿಗಳನ್ನಾಗಿ ತೆಗೆದುಕೊಳ್ಳಲಾಗುವುದೆಂದು ಹೇಳಲಾಗಿದೆ. ಮಹಾರಾಷ್ಟ್ರ, ಕರ್ನಾಟಕ, ಗುಜರಾತ ಪ್ರದೇಶಗಳಿಗೂ ಸಂಪನ್ನವಾದ ಪ್ರಾತಿನಿಧ್ಯ ಕೊಡಲಾಗುತ್ತದೆಯೆಂದು ತಿಳಿಯಬರುತ್ತದೆ. ಹೊಸ ಮಂತ್ರಿಮಂಡಲದಲ್ಲಿ ಮುಸ್ಲಿಮರೊಬ್ಬರಿಗೆ ಈ ಬಾರಿ ಸ್ಥಾನಕೊಡಬೇಕೆಂಬ ವಿಷಯವು ಹೊರಬಿದ್ದಿದೆ.

ಗಂಡನನ್ನು ಒಲಿಸಿಕೊಳ್ಳಲು ಸತ್ಯಾಗ್ರಹ

ಆರುವರ್ಷದ ಹಿಂದೆ ವಿವಾಹವಾಗಿ, ಗಂಡನ ಮನೆಯನ್ನು ಸೇರದ ಒಂದು ವರ್ಷದೊಳಗಾಗಿಯೇ ಹೊರದೂಡಲ್ಪಟ್ಟ ನೀಲವ್ವ ಎಂಬ ೨೧ ವರ್ಷದ ಮಹಿಳೆಯು ತನ್ನ ಗಂಡನ ಪ್ರೀತಿಯನ್ನು ಸಂಪಾದಿಸಿ ಆತನು ತನ್ನನ್ನು ಸ್ವೀಕರಿಸುವಂತೆ ಮಾಡಲು ಗಂಡನ ಮನೆಯ ಮುಂದೆ ಸತ್ಯಾಗ್ರಹವನ್ನು ಆರಂಭಿಸಿರುವಳು. ಈ ಮಹಿಳೆಯು ಬಿಜಾಪುರದ ಒಳ ಬಜಾರ ಎಂಬಲ್ಲಿ ಧನಿಕವರ್ತಕ ಶ್ರೀ ನಾಗಪ್ಪ ಬಮ್ಮನಹಳ್ಳಿ ಎಂಬಾತನ ಮಗಳು. ಬಿಜಾಪುರದ ಧನಿಕ ವರ್ತಕನಾದ ಶ್ರೀ ಸಿದ್ದಲಿಂಗಪ್ಪ ನಾವಲಗಿ ಎಂಬುವವನು ಆಕೆಯ ಪತಿ.

ಈ ಸೋಜಿಗವನ್ನು ನೋಡಲು ಸಾವಿರಾರು ಜನರು ಆ ಮನೆಯ ಬಳಿಗೆ ಹೋಗಿ ಬರುತ್ತಲಿರುವರು. ಆ ಮಹಿಳೆಯ ಸ್ಥಿತಿಗೆ ಮನನೊಂದ ಆ ಊರಿನ ಅನೇಕ ಮಹಿಳೆಯರು ಒಂದು ದಿನ ಉಪವಾಸವ ವ್ರತವನ್ನಾಚರಿಸಿರುವರು.

ವೆಲ್‌ಕಮ್ ಕಾಫೀ ಕ್ಲಬ್
(ಪ್ರಭಾ ಟಾಕೀಸ್ ಎದುರು)
೨೪-೧-೫೨ ರಿಂದ ಪ್ರಾರಂಭ
ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮು ರವರಿಂದ ತಯಾರಿಸಿದ,
ಅಪ್ಪಟ ತುಪ್ಪದ 'ಕೇಸರೀ ಭಾತ್'
ಉತ್ತಮವಾದ
'ಸಾದಾ ಸೆಟ್ ದೋಸೆ'
ಒಂದನೇ ನಂ. ಕಾಫೀ ಮತ್ತು ಟೀ ಸೇವಿಸಲು ದಯಮಾಡಿಸಿ.

ಇಸ್ಮೇಲಿಯದಲ್ಲಿ ಮತ್ತೆ ತೀವ್ರ ಘರ್ಷಣೆ

ಇಸ್ಮೇಲಿಯದ ಬಳಿ ಮಹಮದೀಯ ಹಾಗೂ ರೋಮನ್ ಕ್ಯಾಥೊಲಿಕ್ ಗೋರಿಗಳ ನಡುವೆ ಬ್ರಿಟಿಷ್ ಸೇನೆಗಳು ಈಜಿಪ್ಷಿಯನ್ ಯೋಧರೊಡನೆ ಘರಂಗಿ ಯುದ್ಧ ನಡೆಸಿದವು.

ಒಬ್ಬ ಬ್ರಿಟಿಷ್ ಅಧಿಕಾರಿಗೆ ತೀವ್ರ ಗಾಯಗಳಾದವು. ನಾಲ್ಕು ಈಜಿಪ್ಷಿಯನ್ನರು ಮಡಿದರು. ಐದು ಜನರನ್ನು ಸೆರೆಹಿಡಿಯಲಾಯಿತು ಎಂದು ಬ್ರಿಟಿಷ್ ವಕ್ತಾರರು ತಿಳಿಸಿದರು.

ಬ್ರಿಟಿಷ್ ಸೇನೆಗಳು ಗೋರಿಯೊಂದನ್ನು ಬಲಾತ್ಕಾರವಾಗಿ ಒಡೆದು ನೋಡಲಾಗಿ, ಮದ್ದು ಗುಂಡುಗಳು ಶೇಖರಿಸಲ್ಪಟ್ಟಿದ್ದುದು ಕಂಡುಬಂದಿತು

ಲಂಡನ್ ಪ್ರತಿಭಟನೆ

ಸೂಯಜ್ ಕಾಲುವೆ ಪ್ರದೇಶದಲ್ಲಿ ಬ್ರಿಟಿಷ್ ನಾಯಕತ್ವದಲ್ಲಿದ್ದ ಬ್ರಿಟಿಷ್ ಸೇನಾಧಿಕಾರಿಯ 'ಅಮಾನುಷ ಕೊಲೆಗೂ' ಸಂಕಾರ ೯ ಮಂದಿ ಸೈನಿಕರ ಮರಣಕ್ಕೂ ಈಜಿಪ್ಟೇ ಹೊಣೆಯೆಂದು ಬ್ರಿಟಿಷ್ ಸರ್ಕಾರವು ಈಜಿಪ್ಟು ಸರ್ಕಾರಕ್ಕೆ ಪತ್ರವನ್ನು ಕಳುಹಿಸಿದೆ.

ನೂತನ ಮಂತ್ರಿಮಂಡಲಕ್ಕೆ

ಮದರಾಸು ಲಾ ಕಾಲೇಜು ನೌಕರರ ಸಂಬಳವನ್ನು ಪುನರ್ವಿಮರ್ಶಿಸುವ ಕಾರ್ಯವನ್ನು ನೂತನಮಂಡಲಕ್ಕೆ ಬಿಡಬೇಕೆಂದು ಈಗಿನ ಮಂತ್ರಿಮಂಡಲ ನಿರ್ಧರಿಸಿದೆ.

ಕಲ್ಕತ್ತಾದಲ್ಲಿ ಚುನಾವಣೆ

ಕಲ್ಕತ್ತಾದಲ್ಲಿ ನಿನ್ನೆಯ ದಿನದಿಂದ ಚುನಾವಣೆ ಆರಂಭವಾಗಿದೆ. ಪಾರ್ಲಿಮೆಂಟಿನ ೪ ಸ್ಥಾನಗಳಿಗೆ ೨೫, ಶಾಸನಸಭೆಯ ೨೬ ಸ್ಥಾನಗಳಿಗೆ ೨೩೫ ಸ್ಪರ್ಧಿಗಳಿರುವರು. ಸುಮಾರು ೧೨೦೦೦ ಅಧಿಕಾರಿಗಳನ್ನು ಮತದಾನ ಕಾರ್ಯಕ್ಕೆ ನೇಮಿಸಲಾಗಿದೆ.

ರಾಷ್ಟ್ರಾಧ್ಯಕ್ಷರ ಅಸ್ವಸ್ಥತೆ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಸ್ವಲ್ಪ ಕಾಮಾಲೆಯಿಂದ ನರಳುತ್ತಿದ್ದಾರೆಂದೂ, ಸಂಪೂರ್ಣ ವಿಶ್ರಾಂತಿ ಪಡೆಯುತ್ತಿರುವರೆಂದೂ ರಾಷ್ಟ್ರಪತಿ ಭವನದಿಂದ ತಿಳಿದುಬಂದಿದೆ.

ಮುಕ್ತಾಯ

ಕಾಮನ್ವೆಲ್ತ್ ರಾಷ್ಟ್ರಗಳ ಆರ್ಥಿಕ ಸಚಿವರ ಸಮ್ಮೇಳನವು ಲಂಡನ್ನಿನಲ್ಲಿ ಮುಕ್ತಾಯವಾಯಿತು.

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಮಧ್ಯಪ್ರದೇಶ

೧೪೬ ಸ್ಥಾನಗಳಲ್ಲಿ ಕಾಂಗ್ರೆಸ್ ೧೨೩, ಕೆ. ಎಂ. ಪಿ. ೩, ಸೋಷಲಿಸ್ಟ್ ೧, ರಾಮರಾಜ್ಯ ಪರಿಷತ್ತು ೨, ಸ್ವತಂತ್ರ ೧೫, ಇತರರು ೧

ಒರಿಸ್ಸಾ

೫೬ ಸ್ಥಾನಗಳಲ್ಲಿ ಕಾಂಗ್ರೆಸ್ ೨೯, ಸೋಷಲಿಸ್ಟ್ ೩, ಸ್ವತಂತ್ರ ೧೨, ಇತರ ಪಕ್ಷ ೧೨.

ಮದರಾಸ್

೨೪೫ ಸ್ಥಾನಗಳಲ್ಲಿ ಕಾಂಗ್ರೆಸ ೧೦೬, ಕೆ. ಎಂ. ಪಿ. ೨೦, ಕೃಷಕ ಪಕ್ಷ ೬, ಕಮ್ಯೂನಿಸ್ಟ್ ೩೩, ಸ್ವತಂತ್ರ ೩೮, ಇತರ ಪಕ್ಷ ೪೧.

ಹೈದರಾಬಾದ್

೧೪೪ ಸ್ಥಾನಗಳ ಪೈಕಿ ಕಾಂಗ್ರೆಸ್ ೬೪, ಸೋಷಲಿಸ್ಟ್ ೯, ಡೆಮೊಕ್ರಾಟಿಕ್ ಪಕ್ಷ ೩೫, ರೈತಪಕ್ಷ ೯, ಸ್ವತಂತ್ರ ೧೨, ನಿಮ್ನ ವರ್ಗ ೫.

ಬೊಂಬಾಯಿ

೩೦೨ ಸ್ಥಾನಗಳಲ್ಲಿ ಕಾಂಗ್ರೆಸ್ ೨೬೦, ಸೋಷಲಿಸ್ಟ್ ೬, ರೈತಪಕ್ಷ ೧೫, ಪರಿಗಣಿತಕೋಮು ೧, ಸ್ವತಂತ್ರರು ೧೬, ಇತರರು ೩.

ಅಸ್ಸಾಂ

೧೫ ಸ್ಥಾನಗಳಲ್ಲಿ ಕಾಂಗ್ರೆಸ್ ೧೨, ಸ್ವತಂತ್ರ ೧, ಇತರ ಪಕ್ಷ ೨.

ಪೆಪ್ಸು

ಪೆಪ್ಸುವಿನಲ್ಲಿ ಹೊರಬಿದ್ದ ಫಲಿತಾಂಶದಂತೆ ೩ ಸ್ಥಾನವು ಅಕಾಲಿಪಕ್ಷಕ್ಕೂ, ಕಾಂಗ್ರೆಸ್ ೬ ಕೆ-ಎಂ-ಪಿ-೧, ಸ್ವತಂತ್ರ ೧-

ಪಶ್ಚಿಮ ಬಂಗಾಳ

೩೪ ಸ್ಥಾನಗಳಲ್ಲಿ ಕಾಂಗ್ರೆಸ್ ೨೩, ಇತರರು ೧೧.

ದೆಹಲಿ

೨೬ ಸ್ಥಾನಗಳಲ್ಲಿ ಕಾಂಗ್ರೆಸ್ ೨೨, ಜನತಾ ಪಕ್ಷ ೧, ಸ್ವತಂತ್ರ ೨, ಸೋಷಲಿಸ್ಟ್ ೧.

ಬೀಹಾರ

೭ ಸ್ಥಾನಗಳಲ್ಲಿ ಕಾಂಗ್ರೆಸ್ ೫, ಜನತಾ ಪಕ್ಷ ೨.

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ಹೊರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟಿನ ಚುನಾವಣೆ ಫಲಿತಾಂಶದ ಒಟ್ಟು ೧೧೧ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೭೮, ಕೆ- ಎಂ- ಪಿ- ೩, ಯುನೈಟೆಡ್ ಫ್ರಂಟ್ ೩, ಪೀಪಲ್ಸ್ ಫ್ರಂಟ್ ೨, ರೈತ ೧, ಸ್ವತಂತ್ರ ೧೧, ಇತರರು ೧೨-

ಜಪಾನರಿಗೆ ಸ್ವಾತಂತ್ರ್ಯ

ವಾಷಿಂಗ್ಟನ್ ಜ ೨೦

ಇತರ ರಾಷ್ಟ್ರಗಳೊಂದಿಗೆ ಶಾಂತಿಕರಾರುಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯವು ಜಪಾನಿಗಿದ್ದೇ ಇದೆ ಎಂದು ಅಮೇರಿಕದ ವಕ್ತಾರರೊಬ್ಬರು ಅಧಿಕೃತವಾಗಿ ತಿಳಿಸಿದ್ದಾರೆ.

ನ್ಯೂಯಾರ್ಕ್ ಟೈಮ್ಸ್‌ನಲ್ಲಿ ಜೆಮ್ಸ್ ರೆಸ್ಟನ್ನರು ಒಂದು ವರದಿ ಮಾಡುತ್ತಾ, ಜಪಾನ್ ಶಾಂತಿಕರಾರುಗಳಿಗೆ ಚೈನಾವು ಕೆಲವು ಮಿತಿಗೊಳಪಟ್ಟು ಸಹಿ ಹಾಕಬೇಕೆಂದೂ, ಅಮೇರಿಕವು ಬ್ರಿಟನ್ನಿಗೆ ತಿಳಿಸಿದೆ ಎಂದು ವರದಿಮಾಡಿದ್ದರ ಮೇಲೆ ರಾಜ್ಯ ಇಲಾಖೆಯ ವಾರ್ತಾಧಿಕಾರಿಗಳು ಮೇಲ್ಕಂಡಂತೆ ಅಭಿಪ್ರಾಯಪಟ್ಟಿದ್ದಾರೆ.

ಲಿಂಕನ್ ವೈಟರು ಮುಂದುವರಿಯುತ್ತಾ, ಅಮೇರಿಕಕ್ಕೂ ಇಂಗ್ಲೆಂಡಿಗೂ ದೂರಪ್ರಾಚ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುತ್ತಾದರೂ, ಜಪಾನಿನ ಸ್ವಾತಂತ್ರ್ಯ ಮೊಟಕುಮಾಡುವ ಬಗ್ಗೆ ಯಾವ ಚರ್ಚೆಯೂ ಆಗಲಿಲ್ಲವೆಂದು ತಿಳಿಸಿದ್ದಾರೆ. ಜಪಾನು ತನ್ನ ರಾಷ್ಟ್ರದ ಅಭಿವೃದ್ಧಿಯ ಬಗ್ಗೆ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು, ಪ್ರತ್ಯೇಕವಾಗಿ ರಾಯಭಾರಿಗಳನ್ನು ನೇಮಿಸಿಕೊಳ್ಳಬಹುದು ಇತರ ರಾಷ್ಟ್ರಗಳ ಸಂಗಡ ಯೋಷಿದಾ ಸರ್ಕಾರವು ಒಪ್ಪಂದಗಳನ್ನು ಮಾಡಿಕೊಳ್ಳಬಹುದು. ಜಪಾನು ಆಗಲೇ ಸ್ವತಂತ್ರವಾಗಿ ಭಾರತದ ಸಂಗಡ ಚರ್ಚೆ ಪ್ರಾರಂಭಿಸಿಯೇ ಇದ್ದಾರೆ. ಇಂಡೋನೇಷಿಯಾ ಮತ್ತು ಫಿಲಿಪ್ಪೈನ್ ದೇಶಗಳ ಕೂಡವೂ ಮಾತುಕತೆಗಳು ನಡೆಯುತ್ತವೆ. ಎಲ್ಲ ದೃಷ್ಟಿಯಿಂದಲೂ ಜಪಾನು ಸ್ವತಂತ್ರವಾಗಿದೆ ಎಂದು ಲಿಂಕನ್ನರು ಸ್ಪಷ್ಟಪಡಿಸಿದ್ದಾರೆ.

ಭಾರತದ ಬಗ್ಗೆ ಪ್ರಶಂಸೆ

ವಾಷಿಂಗ್ಟನ್ ಜ ೨೦

'ರಾಜಕೀಯವಾಗಿ ಆರ್ಥಿಕವಾಗಿ, ಸಮಾಜಿಕವಾಗಿ ಅಭಿವೃದ್ಧಿಹೊಂದಲು ಭಾರತವು ಹೋರಾಡುತ್ತಿದೆ. ಎಷ್ಟೇ ಅಡಚಣೆಗಳು ಬಂದರೂ ಅವನ್ನು ಎದುರಿಸುತ್ತಿದೆ. ಮಾನವ ಸ್ವಾತಂತ್ರ್ಯವನ್ನು ನಂಬುವ ಎಲ್ಲರೂ ಭಾರತಕ್ಕೆ ಒಳ್ಳೆಯದನ್ನು ಬಯಸಬೇಕು' ಎಂದು ಅಮೇರಿಕದ ರಾಯಭಾರಿ, ಬೌಲ್ಸ್‌ರು ಅಮೇರಿಕದ ಮಹಿಳೆಯರನ್ನುದ್ದೇಶಿಸಿ ಹೇಳಿದರು.

'ವಿಶ್ವದ ಕಣ್ಣುಗಳು ಭಾರತದ ಚುನಾವಣೆಗಳ ಮೇಲಿದೆ. ಇಂಡೋನೇಷ್ಯಾ ಮತ್ತು ಇತರ ರಾಷ್ಟ್ರಗಳು ಪರೀಕ್ಷಕರನ್ನು ಕಳುಹಿಸಿದೆ. ದೇಶದಲ್ಲೆಲ್ಲಾ ರಾಜಕೀಯ ಪಕ್ಷಗಳ ಘೋಷಣೆಗಳಿಂದ ಕೂಡಿ ಹೋಗಿದೆ. ಚುನಾವಣೆಯು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುತ್ತಿದೆ. ಸಂಪೂರ್ಣ ಭಾಷಣ ಸ್ವಾತಂತ್ರ್ಯವಲ್ಲದೆ, ಸ್ತ್ರೀಯರ ಮತದಾರ ಸಂಘಗಳೂ ಇಲ್ಲಿದೆ' ಎಂದರು ಬೌಲ್ಸರು.

'ಭಾರತದ ಭವಿಷ್ಯವು ಅಲ್ಲಿನ ಹಳ್ಳಿಗಳಲ್ಲಿದೆ. ಪ್ರಜಾಸತ್ತಾತ್ಮಕ ರಾಜ್ಯಪದ್ಧತಿ ಬೇಕೆ, ಬೇಡವೇ ಎನ್ನುವುದನ್ನು ನಿರ್ಧರಿಸುವುದು ಹಳ್ಳಿಗಳು, ಭಾರತದಲ್ಲಿ ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯವಿದೆ.'

'ಫೌಂಡೇಶನ್' ಇಂಜನಿಯರ್ ಶ್ರೀ ಸುಧೀರ ಘೋಷರ ಕೆಲಸವನ್ನು ಪ್ರಶಂಸಿ ಅವರು ಅಮೇರಿಕನ್ ಕಾರ್ಯಕರ್ತನೊಂದನ್ನು ಕೂಡ ಅರಿಬಲ್ಲರು' ಎಂದರು.

'ಭಾರತ ಸರ್ಕಾರವು ಅದ್ಭುತ ಕೆಲಸ ಮಾಡಿದೆ. ಅದು ತನ್ನ ಕೆಲಸದಲ್ಲಿ ವಿಜಯಶಾಲಿಯಾದರೆ, ಆಗ್ನೇಯ ಏಷ್ಯಾದಲ್ಲಿ ಪ್ರಭಾವಕರ ಪರಿಣಾಮವಾಗುವುದು' ಎಂದು ತಮ್ಮ ಭಾಷಣ ಮುಗಿಸಿದರು.

ಮುಖ್ಯಮಂತ್ರಿ ಯಾರಾಗಬೇಕು ?

ಶಾಸನಸಭಾ ಚುನಾವಣೆಗೆ ಪರಾಜಿತರಾದಾಗ್ಯೂ, ಈಗಿನ ಬೊಂಬಾಯಿ ಗೃಹಮಂತ್ರಿ, ಶ್ರೀ ಮುರಾರ್ಜಿ ದೇಸಾಯಿಯವರನ್ನು ತಮ್ಮ ಪಕ್ಷದ ನಾಯಕರನ್ನಾಗಿ ಚುನಾಯಿಸಿಕೊಂಡು ಅವರೇ ಬೊಂಬಾಯಿಯ ಮುಖ್ಯಮಂತ್ರಿಯಾಗಬೇಕೆಂದು ಹಲವು ಕಾಂಗ್ರೆಸ್ಸಿಗರು ಈಗಾಗಲೇ ಪ್ರಯತ್ನದಲ್ಲಿ ತೊಡಗಿದ್ದಾರೆಂದು ಹೇಳಲಾಗಿದೆ. ಆದರೆ ಅವರನ್ನು ಮುಖ್ಯಮಂತ್ರಿಯಾಗಿ ಚುನಾಯಿಸಲು ಕಾಂಗ್ರೆಸ್ ನಿಯಮಾವಳಿಯಲ್ಲಿ ಬದಲಾವಣೆಯಾಗಬೇಕಾಗಿದೆ. ಇದಕ್ಕೆ ಎಲ್ಲಾ ಕಾಂಗ್ರೆಸ್ಸಿಗರ ಬಹುಮತ ದೊರೆಯುವುದು ಕಷ್ಟವೆಂದು ಹೇಳಲಾಗಿದೆ. ಪ್ರಾಂತ್ಯದ ಶಾಸನಸಭೆಯ ೨೬೦ ಸ್ಥಾನಗಳಲ್ಲಿ ೧೧೦ ರಲ್ಲಿ ಮಹಾರಾಷ್ಟ್ರ ಪಕ್ಷದವರಿರುವರು. ಅವರು ಈ ಸೂಚನೆಗೆ ತಮ್ಮ ನೆರವು ನೀಡುವರೇ ಎಂಬ ಶಂಕೆಯಿದೆ. ಆ ಪಕ್ಷದ ನಾಯಕರಾದ ಶ್ರೀ ಹೆಚ್. ಎಸ್. ಹಿರೇಯವರು ಮುಖ್ಯಮಂತ್ರಿಯಾಗಬೇಕೆಂದು ಆ ಪಕ್ಷದ ಆಶಯ. ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯು ಇದೇ ೨೯ನೇ ತಾ|| ಸಭೆ ಸೇರಿ ತನ್ನ ತೀರ್ಮಾನವನ್ನು ಮಾಡಲಿದೆಯೆಂದು ಗೊತ್ತಾಗಿದೆ.

ಸೈನ್ಯವನ್ನು ಕರೆಸಲಾಯಿತು

ಪಾಟಿಯಾಲಾದಲ್ಲಿ ಚುನಾವಣಾ ಕಾಲದಲ್ಲಿ ಎರಡು ಪಕ್ಷಗಳವರಿಗೆ ಘರ್ಷಣೆಯಾಗಿ ಸೈನ್ಯವನ್ನು ಕರೆಸಿ ಶಾಂತಿ ಕಾಪಾಡಬೇಕಾಯಿತು.

ಅಹಿಂಸಾ ತತ್ವ ಮಾಯವಾಗುತ್ತಲಿದೆ

ಮನುಷ್ಯನು ತನಗಾಗಿ ಜೀವಿಸಬೇಕಾಗಿಲ್ಲ. ಇತರರಿಗೆ ಸೇವೆ ಮಾಡಬೇಕೆಂಬ ಮಹಾತ್ಮರ ತತ್ವವನ್ನು ನಾವೆಲ್ಲರೂ ಮರೆತಿರುವುದರಿಂದಲೇ ಅಹಿಂಸಾ ತತ್ವವು ಮಾಯವಾಗುತ್ತಾ ಒಂದು ಹಿಂಸಾ ಮಾರ್ಗವೇ ತಲೆದೋರುತ್ತಲಿದೆ. ಧನಿಕರು, ಮಧ್ಯಮ ವರ್ಗದವರು, ವರ್ತಕರು, ವಿದ್ಯಾವಂತರು ಎಲ್ಲರೂ ಸ್ವಾರ್ಥಕ್ಕಾಗಿ ದುಡಿಯಲು ತೊಡಗಿರುವುದೇ ಇದಕ್ಕೆ ಕಾರಣ. ದೇಶದಲ್ಲಿ ಆಹಾರ, ಬಟ್ಟೆ ಮುಂತಾದುವುಗಳ ಅಭಾವಕ್ಕೆ ಸರ್ಕಾರವೊಂದೇ ಕಾರಣವಲ್ಲ. ಜನರೂ ಕಾರಣರಾಗಿದ್ದಾರೆ ಎಂದು ಮದ್ರಾಸಿನ ಮಾಜಿ ಮುಖ್ಯಮಂತ್ರಿ ಶ್ರೀ ರಾಮಸ್ವಾಮಿ ರೆಡ್ಡಿಯಾರ್‌ರವರು ಕಾಂಚೀಪುರದಲ್ಲಿ ಮಾತನಾಡುತ್ತಾ ಹೇಳಿರುವರು.

ಅಟಾಮಿಕ್ ಶಕ್ತಿಯ ಸಂಶೋಧನೆಗೆ ವಿಶೇಷ ಗ್ರಾಂಟ್

ಅಮೇರಿಕದ ಕಾಂಗ್ರೆಸ್ ಸಮಾವೇಶಗೊಂಡಾಗ ಅಟಾಮಿಕ್ ಶಕ್ತಿಯ ಸಂಶೋಧನೆ ಇವೇ ಮುಂತಾದ ಕಾರ್ಯಗಳಿಗೆ ೬೦೦೦ ಮಿಲಿಯನ ಡಾಲರುಗಳ ವಿಶೇಷ ಗ್ರಾಂಟಿನ ಬೇಡಿಕೆಯನ್ನು ಮಂಡಿಸಲಾಗುವದು ಎಂದು ಅಧ್ಯಕ್ಷ ಟ್ರೂಮನ್ನರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿರುವರು.

ರಷ್ಯಾವನ್ನು ಮೀರಿಸುವ ಸಾಧನೆ

ರಾಷ್ಟ್ರದ ಮುಂದೆ ಇಂದು ಒದಗಿರುವ ತುರ್ತು ಆರ್ಥಿಕ ಸಮಸ್ಯೆಗಳೆಡೆಗೆ ಜನ ತಮ್ಮ ಗಮನವನ್ನು ಸೆಳೆಯಬೇಕೆಂದು ಕಾಂಗ್ರೆಸ್ ಅಧ್ಯಕ್ಷ ನೆಹ್ರೂ ರವರು ಪೂನಾದ ಸಭೆಯೊಂದರಲ್ಲಿ ನುಡಿದರು. ಮುಂದುವರಿದು ಸರ್ಕಾರದ ಸಾಧನೆಗಳನ್ನು ವಿವರಿಸಿ ಹೀಗೆಂದರು.

'ಭಾರತ ಇಂದು ವಿಮಾನಗಳನ್ನು ಮೋಟಾರುಗಳನ್ನು ತಯಾರಿಸುತ್ತಿದೆ. ರಾಷ್ಟ್ರೀಯ ವಿಜ್ಞಾನ ಸಂಶೋಧನ ಮಂದಿರಗಳನ್ನು ಸ್ಥಾಪಿಸಿದೆ. ರಷ್ಯಾ ಎಷ್ಟೋ ವರ್ಷಗಳ ಶ್ರಮದಿಂದ ಸಾಧಿಸಿದ ಸಾಧನೆಯನ್ನು ಭಾರತ ಅಲ್ಪಾವಧಿಯಲ್ಲಿ ಸಾಧಿಸಿದೆ. ಮಂತ್ರಹಾಕಿ ಯಂತ್ರೀಕರಣ ಸಾಧಿಸುವುದು ಅಸಾಧ್ಯ; ಪಕ್ವವಾಗುವುದಕ್ಕೆ ಕಾಲಬೇಕು.'

ಪಣ ಕಟ್ಟಿ ೨ ರೂ. ಗೆದ್ದ ಸಚಿವ ಗಾಡ್ಗಿಲ್

ಕೇಂದ್ರ ಮರಾಮತ್ ಸಚಿವ ಎನ್. ವಿ. ಗಾಡ್ಗಿಲರು ಒಂದು ಪಣ ಕಟ್ಟಿ ೨ ರೂ. ಗಳನ್ನು ಗೆದ್ದರು.

ಪೂರ್ವ ಖಾನ್‌ದೇಶದ ದ್ವಿಸದಸ್ಯ ಕ್ಷೇತ್ರವೊಂದರಲ್ಲಿ ಕಾಂಗ್ರೆಸ್ಸಿನ ಪ್ರತಿಸ್ಪರ್ಧಿಗಳಾದ ಒಬ್ಬ ಮುಸ್ಲಿಂ ಹಾಗೂ ಒಬ್ಬ 'ಭಂಗೀ' ಯುವಕರು ಗೆಲ್ಲುವರೆಂದೂ ಹಿಂದೂ ಮಹಾಸಭೆ ನಾಯಕರೊಬ್ಬರೊಂದಿಗೆ ಶ್ರೀ ಗಾಡ್ಗಿಲ್ ಪಣ ಕಟ್ಟಿದ್ದರು. ಅದೇ ರೀತಿ ಆಯಿತು.

ಬರ್ಮ ಗಡಿಯಲ್ಲಿ ಸೇನೆ

ಬರ್ಮದ ಪೂರ್ವ ಗಡಿಯಲ್ಲಿರುವ ಕಮ್ಯೂನಿಸ್ಟರಿಗೆ ಸೇರಿದ ಯೂನಾನ್ ಪ್ರಾಂತ್ಯಕ್ಕೆ ಥೈಲ್ಯಾಂಡಿನಿಂದ ಚೀನಾ ರಾಷ್ಟ್ರೀಯ ಕೋಮಿಂಟಾಂಗಿನ ದಳಗಳು ಅಲ್ಲಿರುವ ಕೋಮಿಂಟಾಂಗ್ ಜನರಲ್‌ರ ಪಡೆಗಳೊಡನೆ ಹೆಚ್ಚು ಹೆಚ್ಚಾಗಿ ಬಂದು ಸೇರುತ್ತಿವೆ. ಎಂದು ವರದಿಯಾಗಿದೆ.

ಈ ಪಡೆಗಳು ಅಮೆರಿಕ ದಳಪತಿಗಳ ನಾಯಕತ್ವದಲ್ಲಿ ಇಲ್ಲಿಗೆ ಬರುತ್ತಿವೆ, ಎಂದು ಬರ್ಮದಲ್ಲಿರುವ ಚೀನಾ ಜನತಾ ರಿಪಬ್ಲಿಕ್ ರಾಯಭಾರಿ ಹ್ಲಾಮಾಂಗ್‌ರವರು ಆಪಾದಿಸಿದ್ದಾರೆ.

ಸುಳ್ಳು ಸುದ್ದಿ

ಭಾರತವು ಪಶ್ಚಿಮ ರಾಷ್ಟ್ರಗಳಿಗೆ ಒಂದು ಎಚ್ಚರಿಕೆಯಿತ್ತು, ಚೈನಾವನ್ನು ಮುತ್ತಿದರೆ ರಷ್ಯಾವು ಅದರ ಸಹಾಯಕ್ಕೆ ಬರುವದೆಂದು ಹೇಳಿರುವುದು ಆಧಾರರಹಿತವಾದದ್ದೆಂದು ದೆಹಲಿ ಅಧಿಕಾರ ವ್ಯಕ್ತಿಗಳಲ್ಲಿ ಹೇಳಲಾಗಿದೆ.

ಬೆಳಗಾಂವಿನಲ್ಲಿ ನಿಷೇಧಾಜ್ಞೆ

ಚುನಾವಣೆಗಳ ಸಂದರ್ಭದಲ್ಲಿ ಗಲಭೆಗಳನ್ನು ನಿವಾರಿಸಲು ಜನವರಿ ೧೫ ರಂದು ಜಾರಿಮಾಡಿದ ೧೪೪ನೇ ಸೆಕ್ಷನ್ ಆಜ್ಞೆಯನ್ನು ಜನವರಿ ೨೪ ರವರೆಗೆ ಮುಂದುವರಿಸಲಾಗಿದೆ.

ವುಡ್‌ಲ್ಯಾಂಡ್ಸ್ * ೧೮—೧—೫೨ ರಿಂದ ಅಮೋಘ ೩ನೇ ವಾರ
* ರಾ ಜ ಪು ತ್ *
ಪಾತ್ರ— ಸುರಯ್ಯ, ಜೈರಾಜ್, ಕುಲದೀಪ್, ಸಪ್ರು.

ಪ್ರ ಭಾ
ಅಮೋಘವಾದ 2ನೇ ವಾರ
25—1—52ರಿಂದ ಪ್ರತಿದಿನ 3 ಆಟಗಳು
ಮಧುಬಾಲ ಮತ್ತು ದಿಲೀಪ್‌ಕುಮಾರ್ ನಟಿಸಿರುವ
* ತ ರಾ ನಾ *
ವಿಶೇಷ ಬೆಳಗಿನ ಪ್ರದರ್ಶನ
25 ಮತ್ತು 26ನೇ ತಾರೀಖುಗಳು ಮಾತ್ರ
—: ತ ರಾ ನಾ :—
ಪ್ರವೇಶದರ: ಸಾಯಂಕಾಲದ ಆಟದಂತೆಯೆ

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು--ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು

ಫೋನ್ ೫೭೪ (ಲೈನ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೪—೧—೧೯೫೨ನೇ ಗುರುವಾರ [ಸಂಚಿಕೆ ೧೨೬

ಸುಪ್ರೀಂ ಕೋರ್ಟಿನಲ್ಲಿ ಶ್ರೀ ರಾಜುರವರ ಅರ್ಜಿ ವಜಾ

ಪಾರ್ಲಿಮೆಂಟಿಗೆ ಶ್ರೀ ಕೈಲಾಸನಾಥ ಖಾಟ್ಜೂ ಮತ್ತು ಮಾವಲಂಕರ್‌ರವರ ಆಯ್ಕೆ

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಮಧ್ಯಪ್ರದೇಶ

೧೯೬ ಸ್ಥಾನಗಳಲ್ಲಿ ಕಾಂಗ್ರೆಸ್ ೧೨೩, ಕೆ ಎಂ. ಪಿ. ೩, ಸೋಷಲಿಸ್ಟ್ ೧, ರಾಮರಾಜ್ಯ ಪರಿಷತ್ತು ೨, ಸ್ವತಂತ್ರ ೧೫. ಇತರರು ೧

ಮಧ್ಯಭಾರತ

೩೦ ಸ್ಥಾನಗಳಲ್ಲಿ ಕಾಂಗ್ರೆಸ್ ೨೪, ಸೋಷಲಿಸ್ಟ್ ಸ್ವತಂತ್ರ ೧, ಇತರ ಪಕ್ಷ ೩

ಒರಿಸ್ಸಾ

೬೬ ಸ್ಥಾನಗಳಲ್ಲಿ ಕಾಂಗ್ರೆಸ್ ೩೨, ಸೋಷಲಿಸ್ಟ್ ೫, ಸ್ವತಂತ್ರ ೧೪, ಇತರ ಪಕ್ಷ ೧೬.

ಮದರಾಸ್

೨೫೬ ಸ್ಥಾನಗಳಲ್ಲಿ ಕಾಂಗ್ರೆಸ ೧೦೯, ಕೆ ಎಂ. ಪಿ. ೨೨, ಕೃಷಕ ಪಕ್ಷ ೮, ಕಮ್ಯೂನಿಸ್ಟ್ ೩೬, ಸ್ವತಂತ್ರ ೪೨, ಇತರ ಪಕ್ಷ ೪೧.

ಹೈದರಾಬಾದ್

೧೫೩ ಸ್ಥಾನಗಳ ಪೈಕಿ ಕಾಂಗ್ರೆಸ್ ೮೦, ಸೋಷಲಿಸ್ಟ್ ೯, ಡೆಮೊಕ್ರಾಟಿಕ್ ಪಕ್ಷ ೩೭, ರೈತಪಕ್ಷ ೯ ಸ್ವತಂತ್ರ ೧೫, ನಿಮ್ನ ವರ್ಗ ೫.

ಬೊಂಬಾಯಿ

೩೦೨ ಸ್ಥಾನಗಳಲ್ಲಿ ಕಾಂಗ್ರೆಸ್ ೨೬೦ ಸೋಷಲಿಸ್ಟ್ ೭, ರೈತಪಕ್ಷ ೧೫, ಪರಿಗಣಿತಕೋಮು ೧, ಸ್ವತಂತ್ರರು ೧೬, ಇತರರು ೩.

ಅಸ್ಸಾಂ

೧೫ ಸ್ಥಾನಗಳಲ್ಲಿ ಕಾಂಗ್ರೆಸ್ ೧೨, ಸ್ವತಂತ್ರ ೧, ಇತರ ಪಕ್ಷ ೨.

ಪೆಪ್ಸು

ಪೆಪ್ಸುವಿನಲ್ಲಿ ಹೊರಬಿದ್ದ ಫಲಿತಾಂಶದಂತೆ ೧೯ ಸ್ಥಾನದಲ್ಲಿ ಅಕಾಲಿಪಕ್ಷ ೪, ಕಾಂಗ್ರೆಸ್ ೧೦, ಇತರರು ೩, ಕೆ-ಎಂ-ಪಿ ೧, ಸ್ವತಂತ್ರ, ೧-

ಪಶ್ಚಿಮ ಬಂಗಾಳ

೫೦ ಸ್ಥಾನಗಳಲ್ಲಿ ಕಾಂಗ್ರೆಸ್ ೩೫, ಇತರರು ೧೫.

ದೆಹಲಿ

೩೩ ಸ್ಥಾನಗಳಲ್ಲಿ ಕಾಂಗ್ರೆಸ್ ೨೬, ಜನತಾ ಪಕ್ಷ ೧, ಸ್ವತಂತ್ರ, ೩, ಸೋಷಲಿಸ್ಟ್ ೧, ಹಿಂದೂಮಹಾಸಭೆ ೧, ಇತರರು ೨.

ಬೀಹಾರ್

೭ ಸ್ಥಾನಗಳಲ್ಲಿ ಕಾಂಗ್ರೆಸ್ ೫, ಜನತಾ ಪಕ್ಷ ೨.

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ಹೊರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟಿನ ಚುನಾವಣೆ ಫಲಿತಾಂಶದ ಒಟ್ಟು ೧೨೬ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೮೯, ಕೆ- ಎಂ- ಪಿ- ೪, ಯುನೈಟೆಡ್ ಫ್ರಂಟ್ ೩, ಪೀಪಲ್ಸ್ ಫ್ರಂಟ್ ೨, ರೈತ ೨, ಸ್ವತಂತ್ರ ೧೩, ಇತರರು ೧೩-

ಶ್ರೀ ಮಾವಲಂಕರ್ ಮತ್ತು ಖಟ್ಜುರವರ ಆಯ್ಕೆ

ಕೇಂದ್ರ ಸರ್ಕಾರದ ಗೃಹ ಸಚಿವರಾದ ಶ್ರೀ ಕೈಲಾಸನಾಥ ಖಟ್ಜುರವರು ಮತ್ತು ಕೇಂದ್ರ ಶಾಸನಸಭೆಯ ಸ್ಪೀಕರ್ ಶ್ರೀ ಮಾವಲಂಕರ್‌ರವರು ಪಾರ್ಲಿಮೆಂಟಿಗೆ ಮಧ್ಯಭಾರತ ಮತ್ತು ಬೊಂಬಾಯಿಯಿಂದ ಚುನಾಯಿತರಾಗಿರುವರು.

ದೆಹಲಿಯಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪನೆ

ದೆಹಲಿಯ ಶಾಸನಸಭೆಗೆ ನಡೆದ ಚುನಾವಣೆಯ 33 ಕ್ಷೇತ್ರಗಳ ಫಲಿತಾಂಶ ಹೊರಬಿದ್ದು ಇದರಲ್ಲಿ ಕಾಂಗ್ರೆಸ್ಸಿಗೆ 26 ಸ್ಥಾನಗಳೂ, ಸ್ವತಂತ್ರರಿಗೆ 3, ಸೋಷಲಿಸ್ಟರಿಗೆ 1, ಹಿಂದೂ ಮಹಾಸಭೆ 1 ಮತ್ತು, ಇತರರಿಗೆ 2 ಸ್ಥಾನಗಳೂ ಲಭಿಸಿವೆ ದೆಹಲಿ ಶಾಸನಸಭೆಗೆ 48 ಸ್ಥಾನಗಳಿದ್ದು ಇನ್ನು 15 ಸ್ಥಾನಗಳ ಫಲಿತಾಂಶ ಹೊರಬೀಳಬೇಕಾಗಿದೆ. ಭಾರತದಲ್ಲಿ ಬೊಂಬಾಯಿ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ ಮತ್ತು ದೆಹಲಿಯಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾಗುವುದು.

ಕಾಂಗ್ರೆಸ್ ಸರ್ಕಾರ

ಕಾಂಗ್ರೆಸ್ ಸರ್ಕಾರವನ್ನು ಸ್ಥಾಪಿಸುವುದಕ್ಕೆ ಬೇಕಾಗುವ ೯೦ ಸ್ಥಾನಗಳನ್ನು ಕಾಂಗ್ರೆಸ್ಸು ಶಾಸನಸಭೆಯಲ್ಲಿ ಪಡೆಯುವುದರಲ್ಲಿ ಸಂದೇಹವಿಲ್ಲವೆಂದು ಹೈದರಾಬಾದ್ ಕಂದಾಯ ಸಚಿವ ಶ್ರೀ ಬಿ. ರಾಮಕೃಷ್ಣರಾಯರು ಹೇಳಿರುವರು.

ಬೆಂಗಳೂರು ಜ ೨೩

ಶ್ರೇಷ್ಠ ನ್ಯಾಯಾಧೀಶರಿಗೆ ವಿಷಪಾನ ಪ್ರಯತ್ನ ನಡೆಯಿತೆಂಬ ಅಪಾದನೆಯ ಮೇಲೆ ವಿಚಾರಣೆಗೆ ಒಳಪಟ್ಟಿರುವ ಶ್ರೀ ಎಲ್. ಎಸ್. ರಾಜುರವರು ತಮ್ಮ ಮೇಲಿನ ಕೇಸುಗಳನ್ನು ಸಂಸ್ಥಾನದ ಹೊರಗೆ ಇರುವ ಕೋರ್ಟ್ ಒಂದರಲ್ಲಿ ವಿಚಾರಿಸಲು ಆಜ್ಞೆ ಮಾಡಬೇಕೆಂದು ಕೋರಿ ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದರು. ಸುಪ್ರೀಂ ಕೋರ್ಟ್ ಇವರ ಅರ್ಜಿಯನ್ನು ಪರಿಶೀಲಿಸಿ ವರ್ಗಾವಣೆಯ ವಿಷಯವು ತನ್ನ ಪರಿಮಿತಿಗೆ ಒಳಪಟ್ಟಿಲ್ಲವೆಂದು ತಿಳಿಸಿ ಶ್ರೀ ಎಲ್. ಎಸ್. ರಾಜುರವರ ಅರ್ಜಿಯನ್ನು ತಳ್ಳಿಹಾಕಿದೆ.

ಭಾರತದ ಯುದ್ಧ ಹಡಗುಗಳು

ರಾಜಕುಮಾರಿ ಎಲಿಜಬೆತ್ ಮತ್ತು ಆಕೆಯ ಪತಿ ಡ್ಯೂಕ್-ಆಫ್-ಎಡಿನ್‌ಬರೋರವರು ಪೂರ್ವ-ಆಫ್ರಿಕಾದಿಂದ ಸಿಂಹಳಕ್ಕೆ ಪ್ರವಾಸಕೈಗೊಳ್ಳುವಾಗ್ಗೆ ಅವರ ರಕ್ಷಣೆಗಾಗಿ ಭಾರತವು ತನ್ನ ರಜಪೂತ್ ಮತ್ತು ರಣಜಿತ್ ಎಂಬ ಎರಡು ಯುದ್ಧದ ಹಡಗುಗಳನ್ನು ಕಳುಹಿಸಿದೆ.

ಸರ್ಕಾರಿ ಕೈಗಾರಿಕಾ ಸಂಸ್ಥೆಗಳ ಆಡಳಿತಕ್ಕೆ

ಸರ್ಕಾರಿ ಆಡಳಿತದಲ್ಲಿರುವ ಕೈಗಾರಿಕಾ ಸಂಸ್ಥೆಗಳಲ್ಲೆಲ್ಲಾ ಏಕರೀತಿಯಾದ ಆಡಳಿತ ವ್ಯವಸ್ಥೆಯಿರುವುದನ್ನು ನೋಡಿಕೊಳ್ಳಲು ಕೇಂದ್ರದ ಆರ್ಥಿಕಶಾಖಾ ಕಾರ್ಯದರ್ಶಿ ಶ್ರೀ|| ವಿ ಎಸ್ ಭಟ್ಟಾಚಾರ್ಯರನ್ನು ಡೈರೆಕ್ಟರ್ ಜನರಲ್‌ರನ್ನಾಗಿ ನೇಮಿಸಲು ಕೇಂದ್ರ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ಹೇಳಲಾಗಿದೆ-

ಹೊಸ ನೋಟುಗಳು

ನಿನ್ನೆಯಿಂದ ಹೊಸದಾಗಿ ಅಚ್ಚಾದ ಒಂದು ರೂ- ನೋಟುಗಳನ್ನು ಚಲಾವಣೆಗೆ ಕೊಡಲಾಗಿದೆ.

ಈ ಹೊಸ ನೋಟಿನಲ್ಲಿ ಹಿಂದೀ ಮತ್ತು ಇಂಗ್ಲೀಷಿನಲ್ಲಿ ನೋಟಿನ ಪ್ರಮಾಣವನ್ನು ತಿಳಿಸಲು ಪ್ರಾಮುಖ್ಯತೆ ಕೊಡಲಾಗಿದೆ

‡ ಗೋವಾದಿಂದ ಜಹಜಿನಲ್ಲಿ ಬೊಂಬಾಯಿಗೆ ಬಂದ ಪ್ರಯಾಣಿಕನನ್ನು ನಿನ್ನೆ ಶೋಧಿಸಿದಾಗ ಹತ್ತುಸಾವಿರ ರೂ ಬೆಲೆ ಬಾಳುವ ನೂರು ತೊಲ ಚಿನ್ನವನ್ನು ಕಳ್ಳತನದಲ್ಲಿ ಸಾಗಿಸುತ್ತಿದ್ದುದನ್ನು ಸುಂಕದ ಅಧಿಕಾರಿಗಳು ಪತ್ತೆ ಮಾಡಿರುವರು.

ಬ್ರಿಟನ್ ರಾಯಭಾರಿಯಾಗಿ ಪರ್ಷಿಯಾಕ್ಕೆ ಬೇಡ

ಬ್ರಿಟನ್ ಸರ್ಕಾರವು ಬುಡಾಪೆಸ್ಟಿನಲ್ಲಿರುವ ಬ್ರಿಟನ್ ರಾಯಭಾರಿ ಮಿ|| ರಾಬರ್ಟ್ ಹ್ಯಾಂಕೆಯವರನ್ನು ಪರ್ಷಿಯಾದ ರಾಯಭಾರಿಯನ್ನಾಗಿ ನೇಮಿಸಿದೆ- ಈ ನೇಮಕವನ್ನು ಪರ್ಷಿಯಾ ಪ್ರತಿಭಟಿಸಿ ಅವರನ್ನು ಪರ್ಷಿಯಾ ರಾಯಭಾರಿಯಾಗಿ ನೇಮಿಸಕೂಡದೆಂದು ಹೇಳಿದೆ-

ಡಾ|| ಮುಸಾದಿಕ್‌ರವರನ್ನು ಕೊಲ್ಲಲು ಯತ್ನ

ಪರ್ಷಿಯಾದಲ್ಲಿರುವ ಫದಿಯಾನ್ ಎಂಬ ಮತಭ್ರಾಂತ ಸಂಸ್ಥೆಯು ತಮ್ಮ ಸಂಸ್ಥೆಯ ನಾಯಕರಾದ ನವಾಬ್ ಸಫಾವಿಯವರನ್ನು ಬಿಡುಗಡೆ ಮಾಡದಿದ್ದರೆ ಡಾ|| ಮುಸಾದಿಕ್‌ರವರ ಪ್ರಾಣಾಪಾಯವುಂಟಾಗುವುದೆಂದು ಎಚ್ಚರಿಕೆಯಿತ್ತಿದೆ-

ಬಿಡುಗಡೆ-ದಸ್ತಗಿರಿ

ಮದರಾಸು ಶಾಸನಸಭೆಗೆ ಚುನಾಯಿತರಾದ ಕಮ್ಯೂನಿಸ್ಟ್ ನಾಯಕ ಶ್ರೀ ಪಿ. ರಾಮಮೂರ್ತಿಯವರನ್ನು ಸರ್ಕಾರಿ ಆಜ್ಞೆ ಪ್ರಕಾರ ಬಿಡುಗಡೆ ಮಾಡಲಾಯಿತು. ಅವರ ಮೇಲೆ ಪುದುಕೋಟೆಯಲ್ಲಿ ಮೊಕದ್ದಮೆಯಿರುವುದರಿಂದ ಕೂಡಲೇ ಪೋಲೀಸಿನವರು ದಸ್ತಗಿರಿ ಮಾಡಿದರು.

ಸಾವಿರ ಜನ ಸತ್ಯಾಗ್ರಹಿಗಳು

ಆಂಧ್ರ ಪ್ರಾಂತ್ಯ ನಿರ್ಮಾಣಕ್ಕಾಗಿ ಸತ್ಯಾಗ್ರಹವನ್ನು ಪ್ರಾರಂಭಿಸಲಿರುವ ಸ್ವಾಮಿ ಸೀತಾರಾಮರು ಒಂದು ಸಾವಿರ ಸತ್ಯಾಗ್ರಹಿಗಳನ್ನೂ ಒಂದು ಲಕ್ಷ ರೂಪಾಯಿಗಳನ್ನು ಶೇಖರಿಸಲಿರುವರೆಂದು ತಿಳಿಸಿದ್ದಾರೆ.

ಹತೋಟಿ ಕ್ರಮ ಪರಿಶೀಲಿಸಲು ಸಲಹೆ

ಈಗ ಜಾರಿಯಲ್ಲಿರುವ ಹತೋಟಿ ಆಜ್ಞೆಗಳಲ್ಲಿ ಹಲವು ಕಾನೂನನ್ನು ತಿದ್ದುಪಡಿ ಮಾಡಿ ಮತ್ತೆ ಕೆಲವು ಪದಾರ್ಥಗಳ ಮೇಲೆ ವಿಧಿಸಿರುವ ಹತೋಟಿ ಆಜ್ಞೆಯನ್ನು ಸಡಿಲಗೊಳಿಸುವಂತೆ ಕೋರಿ ದೆಹಲಿಯ ವ್ಯಾಪಾರ ಸಂಘವು ನಿರ್ಣಯ ಮಾಡಿದೆ.

ಶ್ರೀ ದೇಶಮುಖ್ ಲಂಡನ್ನಿಗೆ

ಭಾರತ ಆರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ಫೆಬ್ರವರಿ ೨ನೇ ತಾ|| ಲಂಡನ್ನಿಗೆ ಹೋಗುವರು.

ಸೋತ ಸಚಿವರು ರಾಜೀನಾಮೆ ಕೊಡಲಿ

'ಮದ್ರಾಸ್' ಗೌರ್ನರ್‌ರವರು ಸೋತ ಮಂತ್ರಿಗಳು ತಕ್ಷಣವೇ ರಾಜೀನಾಮೆ ಕೊಡಬೇಕೆಂದು ತಿಳಿಸಬೇಕು ಮತ್ತು ಅವರ ಪೋರ್ಟ್‌ಫೋಲಿಯೋಗಳನ್ನು ಚುನಾಯಿಸಲ್ಪಟ್ಟಿರುವ ಸಚಿವರಿಗೆ ಹಂಚಬೇಕು' ಎಂದು ಮದ್ರಾಸ್ ಶಾಸನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಟಿ. ವಿಶ್ವನಾಥಂರವರು ಹೇಳಿಕೆಯೊಂದರಲ್ಲಿ ಮದ್ರಾಸ್ ಗೌರ್ನರ್‌ರವರನ್ನು ಆಗ್ರಹಪಡಿಸಿದ್ದಾರೆ.

ಈಗ ಪ್ರಾಂತ್ಯಾದ್ಯಂತ ಅನಿಶ್ಚಿತ ವಾತಾವರಣ ಮೂಡಿದೆ. ಈಗಿನ ಮಂತ್ರಿಮಂಡಲ ಇನ್ನೂ ಅಧಿಕಾರ ಸ್ಥಾನದಲ್ಲಿದೆ. ಈಗ ನಡೆಯುತ್ತಿರುವುದು ಪ್ರಜಾಸತ್ತಾತ್ಮಕ ಸರ್ಕಾರವಲ್ಲ. ಅದರ ಬದಲು ಕೋರಿಕೆ ಮಾತ, ರಾಜ್ಯಾಂಗ ಪರಿಸ್ಥಿತಿಯನ್ನು ಅಭ್ಯಸಿಸಿರುವ ಮಂತ್ರಿಗಳೂ ಮತ್ತು ಅದರ ಶಾಸನ ಪ್ರತಿಭಾಶಾಲಿಗಳೂ ತಮ್ಮ ಸೋಲಿನಂತರ ಮೂರು ತಿಂಗಳ ಕಾಲ ಅಧಿಕಾರದಲ್ಲಿ ಇಯುವುದು ತಾವು ಆಂಗ್ಲ ದೃಷ್ಟಾಂತವನ್ನು ಅನುಸರಿಸಿಯೇ ಎಂದು ಹೇಳುತ್ತಿರುವುದು ಎಂತಹ ವಿಚಿತ್ರ ದುರ್ಘಟನೆ! ಸೋತ ಮಂತ್ರಿಗಳು ಅಧಿಕಾರ ಸ್ಥಾನದಲ್ಲಿರುವುದರಿಂದ ಕಾಂಗ್ರೆಸ್ಸಿಗೆ ಅವಕಾಶವಾಗುವುದು; ಮುಂದಿನ ಜನಾಂಗಕ್ಕೆ ಕೆಟ್ಟ ದೃಷ್ಟಾಂತವಿದು ಎಂದಿದ್ದಾರೆ.

ಮಿಲಿಟರಿ ವಿಚಾರಣೆ

ಸೂಯಜ್ ಕಾಲುವೆ ಪ್ರದೇಶದಲ್ಲಿ ಈಜಿಪ್ಷಿಯನರು ಮತ್ತು ಬ್ರಿಟಿಷ್ ಸೈನ್ಯಗಳಿಗೆ ಘರ್ಷಣೆ ನಡೆದ ಸಮಯದಲ್ಲಿ ಅಮೆರಿಕ ಜನಾಂಗದ ಸಿಸ್ಟರ್ ಆಂಥೋಣಿಯವರಿಗೆ ಗುಂಡಿನೇಟು ತಗುಲಿ ಮರಣ ಹೊಂದಿದರು. ಬ್ರಿಟಿಷ್ ಸೈನ್ಯದವರು ತಮ್ಮಿಷ್ಟಬಂದಂತೆ ಗುಂಡು ಹಾರಿಸಲಿರುವಾಗ ಅವರಿಗೆ ತಗುಲಿತೆಂದು ಆರೋಪಣೆ ಮಾಡಲಾಗಿದೆ. ಆ ದುರ್ಘಟನೆಯ ಮಿಲಿಟರಿ ವಿಚಾರಣೆ ನಡೆಯಲು ಬ್ರಿಟಿಷ್ ಮಿಲಿಟರಿ ಅಧಿಕಾರಿಗಳು ನಿಶ್ಚಯಿಸಿರುವರು.

ಡಾ|| ಗ್ರಹಾಂರವರ ತಾತ್ಕಾಲಿಕ ಯೋಜನೆ

ಪಾಕಿಸ್ತಾನದ ನಿಯೋಗದವರ ಪ್ರಾರ್ಥನೆಯಂತೆ ಕಾಶ್ಮೀರ ಪ್ರತಿನಿಧಿ ಡಾ|| ಗ್ರಹಾಂರವರು ಕಾಶ್ಮೀರದಲ್ಲಿ ಸೈನ್ಯ ವಿಸರ್ಜನೆಗಾಗಿ ತಾತ್ಕಾಲಿಕ ಯೋಜನೆಯೊಂದನ್ನು ಪ್ರಕಟಿಸಿದ್ದಾರೆ.

ವಾರ್ಷಿಕೋತ್ಸವ

ಆಯೋಜನಾ ಸಮಿತಿಯ ಸದಸ್ಯರಾದ ಶ್ರೀ ಜಿ ಎಲ್ ಮೇಹಧಾರರವರು ಭದ್ರಾವತಿಗೆ ಭೇಟಿಯಿತ್ತು, ಕಬ್ಬಿಣ ಕಾರ್ಖಾನೆಯ ವಾರ್ಷಿಕೋತ್ಸವವನ್ನು ಉದ್ಘಾಟಿಸುವರು.

ಕಿಚ್ಚು ಹಾಯಿಸಲು ಹೋದವರಲ್ಲಿ ಘರ್ಷಣೆ

ಬೆಂಗಳೂರು ಜ ೨೫

ಮುನಿರೆಡ್ಡಿ ಪಾಳ್ಯದಲ್ಲಿ ನಿನ್ನೆ ದಿನ ಸಂಜೆ ದನಗಳನ್ನು ಕಿಚ್ಚು ಹಾಯಿಸಲು ಹೋಗಿದ್ದ ಎರಡು ಗುಂಪಿನವರಲ್ಲಿ 'ನಾ ಮುಂದೆ' 'ತಾ ಮುಂದೆ' ಎಂದು ಸ್ಪರ್ಧೆ ನಡೆದು ಕೊನೆಗೆ ಘರ್ಷಣೆಯಲ್ಲಿ ಕೊನೆಗೊಂಡು ಒಬ್ಬನಿಗೆ ಗಾಯವಾಯಿತು.

ಪುರಿ ತಯಾರಿಕೆಗೆ ತಡೆ ಆಜ್ಞೆ

ಮೈಸೂರು ಸಂಸ್ಥಾನದ ಯಾವ ಭಾಗದಲ್ಲೂ ಪುರಿಯನ್ನು ಫೆಬ್ರವರಿ ಮೇ ಮಾಹೆಯವರೆಗೂ ತಯಾರಿಸಕೂಡದೆಂದು ಸರ್ಕಾರ ಆಜ್ಞೆಯಿತ್ತಿದೆ.

ರಜಾದಿನ

ಪ್ರಜಾರಾಜ್ಯ ದಿನೋತ್ಸವ ಸಮಾರಂಭಕ್ಕಾಗಿ ಎಲ್ಲಾ ಸರ್ಕಾರಿ ಕೈಗಾರಿಕಾ ಸಂಸ್ಥೆಗಳಿಗೆ ವೇತನ ಸಹಿತ ರಜಾದಿನವನ್ನಾಗಿ ಸರ್ಕಾರ ಘೋಷಿಸಿದೆ.

ಖಾಸಗೀ ಸಂಸ್ಥೆಗಳೂ ಅದೇ ರೀತಿ ರಜಾ ಕೊಡಬೇಕೆಂದು ಸರ್ಕಾರ ಕೋರಿದೆ.

ಪ್ರಜಾರಾಜ್ಯ ದಿನೋತ್ಸವ

ಇದೇ ಮಾಹೆ ೨೬ನೇ ತಾ|| ಪ್ರಜಾರಾಜ್ಯ ದಿನೋತ್ಸವ ಅಂಗವಾಗಿ ಬೆಂಗಳೂರು ಜಯಚಾಮರಾಜೇಂದ್ರ ಸ್ಟೇಡಿಯಂನಲ್ಲಿ ಬೆಳಗ್ಗೆ ಪೆರೇಡು ನಡೆಯುತ್ತದೆ. ಸಂಸ್ಥಾನ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಧ್ವಜಾರೋಹಣ ಮಾಡಿ ಭಾಷಣ ಮಾಡುವರು.

ಶ್ರೀ ಸೆಟಲ್‌ವಾಡ್ ಭಾರತದ ಪ್ರತಿನಿಧಿ

ಪ್ರಪಂಚ ಸಂಸ್ಥೆಯಲ್ಲಿ ಕಾಶ್ಮೀರ ಪ್ರಶ್ನೆ ಚರ್ಚೆಗೆ ಬಂದಾಗ ಭಾರತದ ಮುಖ್ಯ ಪ್ರತಿನಿಧಿಯಾಗಿ ಭಾರತದ ಅಟಾರ್ನಿ ಜನರಲ್ ಶ್ರೀ ಎಂ ಸಿ ಸೆಟಲ್‌ವಾಡ್‌ರನ್ನು ನೇಮಕಮಾಡಲಾಗಿದೆ.

ವಿದೇಶಾಂಗ ಶಾಖಾ ಸೆಕ್ರೆಟರಿ ಜನರಲ್ ಶ್ರೀ ಗಿರಿಜಾಶಂಕರಬಾಜಪೈರವರೂ ಕೂಡ ಸಲಹೆಗಾಗಿ ಪ್ಯಾರಿಸ್ಸಿಗೆ ಹೋಗುವರು.

ಅಮೆರಿಕಾ ಬಜೆಟ್

ಅಮೆರಿಕಾ ಅಧ್ಯಕ್ಷ ಟ್ರೂಮನ್ನರು ಮುಂದಿನಸಾಲಿಗೆ ೮೫೫೦೦ ಮಿಲಿಯನ್ ಡಾಲರು ವೆಚ್ಚದ ಬಜೆಟ್ಟನ್ನು ಕಾಂಗ್ರೆಸ್ ಒಪ್ಪಿಗೆಗೆ ಸಲ್ಲಿಸಿರುವರು.

ಪರ್ಷಿಯಾದಲ್ಲಿ ಚುನಾವಣೆ

ಪರ್ಷಿಯಾ ರಾಜಧಾನಿ ಟೆಹರಾನಿನಲ್ಲಿ ಚುನಾವಣೆ ಪ್ರಾರಂಭವಾಗಿದೆ.

ವಿರುದ್ಧ ಪಕ್ಷಗಳಿಂದ ಪ್ರಗತಿ ಸಾಧನೆಯಿಲ್ಲ

ಒಡೆದು ಚೂರು ಚೂರುಗಳಾಗಿರುವ ವಿರುದ್ಧ ಪಕ್ಷಗಳು ಸಾಮಾಜಿಕ ಪುನರ್ರಚನಾತ್ಮಕ ಕಾರ್ಯಗಳಿಗೆ ಸಾಧನವಾಗಲು ಸಾಧ್ಯವೆಂಬುದಾಗಿ ಬರಾಬಂಕಿಯಲ್ಲಿ ಪಂಡಿತ ನೆಹರೂರವರು ತಿಳಿಸಿದರು.

ಕಾಂಗ್ರೆಸ್ಸಿಗೆ ಎಪ್ಪತ್ತು ವರ್ಷಗಳ ಶಿಸ್ತಿನ ಇತಿಹಾಸವಿದೆಯೆಂದೂ ಇತರ ವಿರುದ್ಧ ಪಕ್ಷಗಳಲ್ಲಿ ಶಿಸ್ತು ಇಲ್ಲದಿರುವುದು ಮತ್ತು ಆ ಪಕ್ಷಗಳ ಅಧಿಕಾರ ಲಾಲಸೆ, ಸ್ಪಷ್ಟವಾಗೂ ತಿಳಿದ ವಿಷಯವೇ ಆಗಿದೆಯೆಂದೂ ತಿಳಿಸಿ ಜನತೆಯ ಜೀವನಮಟ್ಟವನ್ನೇರಿಸುವ ಒಂದು ದೃಷ್ಟಿಯಿಂದ ಮಾತ್ರ ಚುನಾವಣೆಗಳು ಮುಖ್ಯವೆಂಬುದಾಗಿಯೂ ಶ್ರೀ ನೆಹರೂ ತಿಳಿಸಿದರು.

ಬಿಡುಗಡೆಗೆ ಒತ್ತಾಯ

ಜೈಲಿನಲ್ಲಿರುವ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರನ್ನು ತತ್‌ಕ್ಷಣ ಬಿಡುಗಡೆ ಮಾಡಬೇಕೆಂದು ಪಾಕಿಸ್ತಾನಿ ಪಂಜಾಬಿನಲ್ಲಿ 'ಗಡಿಪಾರು' ಜೀವನ ಅನುಭವಿಸುತ್ತಿರುವ ಗಡಿನಾಡಿನ ಅವಾಮಿ ಲೀಗ್ ನಾಯಕ ಖಾನ್ ಗುಲಾಂ ಮೊಹಮ್ಮದ್ ಖಾನ್‌ರವರು ಒತ್ತಾಯಪಡಿಸಿದ್ದಾರೆ.

ಭತ್ತವನ್ನು ಆಕ್ಕಿ ಮಾಡಕೂಡದು

ಮೈಸೂರು ಸಂಸ್ಥಾನದ ಯಾವ ಭಾಗದಲ್ಲೂ ರೈಸ್‌ಮಿಲ್ಲುಗಳಲ್ಲಿ ವಿನಹಾ ಮತ್ತೆಲ್ಲಿಯೂ ಭತ್ತವನ್ನು ಅಕ್ಕಿ ಮಾಡಕೂಡದೆಂದು ಸರ್ಕಾರ ಆಜ್ಞೆಯಿತ್ತಿದೆ. ಈ ಆಜ್ಞೆಯು ೧೯೫೨ನೇ ಮೇ ಮಾಹೆಯವರೆಗಿರುತ್ತದೆ.

ವೆಲ್‌ಕಮ್ ಕಾಫೀ ಕ್ಲಬ್
(ಪ್ರಭಾ ಟಾಕೀಸ್ ಎದುರು)
೨೩-೧-೫೨ ರಿಂದ ಪ್ರಾರಂಭ
ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ,
ಅಪ್ಪಟ ತುಪ್ಪದ 'ಕೇಸರೀ ಭಾತ್'
ಉತ್ತಮವಾದ
'ಸಾದಾ ಸೆಟ್ ದೋಸೆ'
ಒಂದನೇ ನಂ. ಕಾಫೀ ಮತ್ತು ಟೀ ಸೇವಿಸಲು ದಯವಿಟ್ಟು ದಯಮಾಡಿಸಿ.

ಜೀವಮಾನದಲ್ಲಿ ಮೊದಲನೆ ಬಾರಿ ಮತನೀಡಿದ ಸಚಿವ

ಕೇಂದ್ರ ಸರ್ಕಾರದ ಕೈಗಾರಿಕಾ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬ್‌ರವರು ತಮ್ಮ ಜೀವಮಾನಕಾಲದಲ್ಲಿ ಮೊದಲನೇ ಬಾರಿ ಈಗಿನ ಮಹಾ ಚುನಾವಣೆಯಲ್ಲಿ ತಮ್ಮ ಮತದಾನ ಹಕ್ಕನ್ನು ಚಲಾಯಿಸಿರುವರು. ಈ ಸ್ಥಾನಕ್ಕೆ ಬರುವ ಮುನ್ನ ಅವರು ಒರಿಸ್ಸಾ ಮುಖ್ಯಮಂತ್ರಿಯಾಗಿದ್ದರು.

ಲಕ್ನೋದಲ್ಲಿ

ಲಕ್ನೋ ನಗರದಲ್ಲಿ ಚುನಾವಣೆ ಪ್ರಾರಂಭವಾಯಿತು. ಅನೇಕ ಮಹಿಳೆಯರು ಪಲ್ಲಕ್ಕಿಗಳಲ್ಲಿ ಮತದಾನಕ್ಷೇತ್ರಗಳಿಗೆ ಆಗಮಿಸುತ್ತಿದ್ದನ್ನು ಕಾಣಬಹುದಿತ್ತು. ಎಲ್ಲೆಡೆಯಲ್ಲೂ ಶಾಂತಿಯಿತ್ತು.

ಜಪಾನಿನ ಶಾಂತಿಕರಾರು

ಜಪಾನು ಶಾಂತಿಕರಾರನ್ನು ರದ್ದುಗೊಳಿಸಬೇಕೆಂದು ೬ ಲೇಬರ್ ಸದಸ್ಯರು ಒಂದು ಠರಾವನ್ನು ಬ್ರಿಟಿಷ್ ಪಾರ್ಲಿಮೆಂಟಿಗೆ ಕಳುಹಿಸಿರುವರು.

ವಿಶ್ವಸಂಸ್ಥೆಯಲ್ಲಿ ಸ್ಥಾನ

ವಿಶ್ವಸಂಸ್ಥೆಯಲ್ಲಿ ಸಿಂಹಳ, ನೇಪಾಳ ಮುಂತಾದ ರಾಷ್ಟ್ರಗಳಿಗೆ ಸ್ಥಾನಕೊಡಬೇಕೆಂದು ರಷ್ಯಾ ಪ್ರತಿನಿಧಿ ನಿರ್ಣಯ ಮಂಡಿಸಿರುವರು.

ನ್ಯೂ ಅಪೇರ
೨೩-೧-೫೨ ರಿಂದ ೩ ದಿನಗಳು ಮಾತ್ರ
ಮನದೇಶಂ
(ತೆಲುಗು)
ಪಾತ್ರ—ನಾಗಯ್ಯ, ಕೃಷ್ಣವೇಣಿ.
೨೬—೧—೫೨ ರಿಂದ
ಕೋಭನಚಲರವರ—
—: ಸವಾಸಂ :—
ಪಾತ್ರ— ಪ್ರಭಾಕರರಾವ್, ಕೃಷ್ಣವೇಣಿ ಕನಕಂ, ಸೀತಾರಾಂ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು—ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು

AWAIT GRAND OPENING
Chit Fund Office
(Branch)
Near Rajkamal Talkies. Mysore.

ಫೋನ್ ೫೭೭೪ (ಲೀಟ್) ದಿನಪತ್ರಿಕೆ ರಿ. ನಂ. ಎಂ. ೫೩೧೪

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ
ಸಂಪುಟ ೨] ೨೬—೧—೧೯೫೨ನೇ ಶನಿವಾರ [ಸಂಚಿಕೆ ೧೨೮

ಮೈಸೂರಿನಲ್ಲಿ ಕಾಂಗ್ರೆಸ್ಸಿಗೆ ವಿಜಯ ಪರಂಪರೆ

ಹೈದ್ರಾಬಾದಿನಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾಗುವುದು

ಗೃಹ ಸಚಿವ ಶ್ರೀ ಟಿ. ಮರಿಯಪ್ಪನವರಿಗೆ ಜಯ

ಮೈಸೂರು ಜ ೨೫

ಇಂದು ಪುರಭವನದಲ್ಲಿ ಮೈಸೂರು ನಗರ ಉತ್ತರ ಕ್ಷೇತ್ರದಿಂದ ಮೈಸೂರು ಶಾಸನಸಭೆಯ ಮತದಾನದ ಎಣಿಕೆಗಳು ವಿಶೇಷ ಪೋಲೀಸ್ ಬಂದೋಬಸ್ತಿನಿಂದ ನಡೆಯಿತು.

ಗೃಹಸಚಿವ ಶ್ರೀ ಟಿ. ಮರಿಯಪ್ಪನವರು ೪೦೦೦ಕ್ಕಿಂತ ಹೆಚ್ಚಾಗಿ ಮತ ಪಡೆದು ೪ ಪ್ರತಿಸ್ಪರ್ಧಿಗಳನ್ನು ಸೋಲಿಸಿ ಜಯಗಳಿಸಿದರು.

ಶ್ರೀ ಟಿ. ಮರಿಯಪ್ಪನವರು	12,307
ಜ|| ಮಹಮದ್‌ಷರೀಫ್	8,466
ಶ್ರೀ ಇ. ಪಿ. ನಂಜಪ್ಪ	1,515
ಜ|| ನಿಸಾರ್ ನೂರ್‌ಹುಸೇನ್	1,100
ಶ್ರೀ ಚಂದ್ರಶೇಖರಜೋಯಿಸ್	637

ವ್ಯರ್ಥವಾದ ಓಟುಗಳು 13, ಒಟ್ಟು ಮತದಾನವಾದುದು 24,033. ಕೊನೆಯ ಮೂವರೂ ತಮ್ಮ ಠೇವಣಿಯನ್ನು ಕಳೆದುಕೊಂಡಿರುವರು.

ನಾಳೆ ವಿದ್ಯುತ್ ಸರಬರಾಜಿಲ್ಲ

ಭಾನುವಾರ ಬೆಳಗ್ಗೆ ೮-೩೦ ಗಂಟೆಯಿಂದ ಮಧ್ಯಾಹ್ನ ೩-೩೦ ಗಂಟೆಯವರೆಗೆ ವಿದ್ಯುತ್ ಸರಬರಾಜು ನಿಲ್ಲಿಸಲಾಗುವುದೆಂದು ಇಲಾಖೆಯವರು ಪ್ರಕಟಿಸಿರುವರು.

ಈಜಿಪ್ಟರ ಕೈಸೆರೆ

ಈಜಿಪ್ಟ್ ಪೋಲೀಸಿನವರು ಶರಣಾಗತರಾಗಲು ಒಪ್ಪದಿದ್ದುದರಿಂದ ಬ್ರಿಟಿಷ್ ಸೈನ್ಯವು ಮಿಷನ್‌ಗನ್‌ಗಳನ್ನು ಉಪಯೋಗಿಸಿ ಸೂಯಜ್ ಕಾಲುವೆ ಪ್ರದೇಶದಲ್ಲಿ ಈಜಿಪ್ಟರೊಡನೆ ಹೋರಾಡಿದರು. ಅನೇಕರು ಕೈಸೆರೆಯಾಗಿದೆ.

ಸಲಹಾ ಸಮಿತಿ

ಮೈಸೂರು ಸಂಸ್ಥಾನದಲ್ಲಿ ಟೆಕ್ನಿಕಲ್ ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ವಿದ್ಯಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಲಹಾಸಮಿತಿಯನ್ನು ಸರ್ಕಾರದವರು ನೇಮಿಸಿರುವರು. ಈ ಸಮಿತಿ ೩ ವರ್ಷಕಾಲ ಕೆಲಸ ಮಾಡುತ್ತದೆ.

ಈ ಸಮಿತಿಯಲ್ಲಿ ಖಾಸಗೀ ಸದಸ್ಯರೂ ಇರುವರು.

ವಂದನೆಗಳು

ಸ್ವಾ- ಸು- ಫೋನ್] ಬೆಂ. ಜ ೨೫

ಮಹಾ ಚುನಾವಣೆಯಲ್ಲಿ ಮೈಸೂರು ನಗರ ಉತ್ತರಕ್ಷೇತ್ರದಿಂದ ತಮ್ಮ ಜಯಕ್ಕೆ ಕಾರಣಕರ್ತರಾದ ಎಲ್ಲಾ ಕಾರ್ಯಕರ್ತರು, ಅಭಿಮಾನಿಗಳು ಮತ್ತು ಮತದಾರರಿಗೆ ಗೃಹಸಚಿವ ಶ್ರೀ ಟಿ. ಮರಿಯಪ್ಪನವರು ತಮ್ಮ ವಂದನೆಗಳನ್ನು ಅರ್ಪಿಸಿರುವರು.

ಅಧಿಕಾರವಿಲ್ಲ

ಒಂದು ಹೈಕೋರ್ಟಿನಿಂದ ಮತ್ತೊಂದು ಹೈಕೋರ್ಟಿಗೆ ಒಂದು ಮೊಕದ್ದಮೆಯನ್ನು ವರ್ಗಾಯಿಸುವ ವಿಶೇಷ ಅಧಿಕಾರವು ರಾಜ್ಯಾಂಗದ ಪ್ರಕಾರ ಅಥವಾ ವಿಶೇಷ ಆಜ್ಞೆಯ ಪ್ರಕಾರ ಸರ್ವೋನ್ನತ ನ್ಯಾಯಾಲಯಕ್ಕೆ ಇರಬೇಕಾಗಿತ್ತು.

ಆದರೆ ಈಗಿನ ಮೊಕದ್ದಮೆಯಲ್ಲಿ ಅಪೀಲಿನಲ್ಲಿ ಮಾತ್ರ ಸರ್ವೋನ್ನತ ನ್ಯಾಯಾಲಯವು ಪ್ರವೇಶಿಸಿ, ಅಪರಾಧಿಯನ್ನು ಬಿಡುಗಡೆ ಸಹ ಮಾಡಬಹುದು- ಆಗ ಮಾತ್ರ ತನ್ನ ಅಧಿಕಾರವನ್ನು ಚಲಾಯಿಸಿ ಅಪರಾಧಿಗೆ ಸರಿಯಾಗಿ ನ್ಯಾಯ ದೊರೆಯಲಿಲ್ಲವೆಂದು ಹೇಳಿ ಅಪರಾಧಿಯನ್ನು ಬಿಡುಗಡೆ ಮಾಡಬಹುದು. ಆದರೆ ವರ್ಗಾವಣೆ ಆಜ್ಞೆ ಕೊಡಲು ಸರ್ವೋನ್ನತ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿಲ್ಲವೆಂದು ಸರ್ವೋನ್ನತ ನ್ಯಾಯಾಲಯದ ನ್ಯಾಯಮೂರ್ತಿ ಮಹಾಜನ್‌ರವರು ಶ್ರೀ ಎಲ್. ಎಸ್. ರಾಜುರವರ ವರ್ಗಾವಣೆ ಅರ್ಜಿಯನ್ನು ತಿರಸ್ಕರಿಸುತ್ತಾ, ಹೇಳಿರುವರು.

ವಿಶೇಷ ಪ್ರಸಾರ ಕಾರ್ಯಕ್ರಮ

ಇಂದು ರಿಪಬ್ಲಿಕ್ ದಿನಾಚರಣೆಯ ದೆಹಲಿಯ ಕಾರ್ಯಕ್ರಮವನ್ನು ಭಾರತಾದ್ಯಂತ ಎಲ್ಲಾ ರೇಡಿಯೋ ಕೇಂದ್ರಗಳಲ್ಲಿ ಬೆಳಗ್ಗೆ 10-35 ರಿಂದ 12-10 ರವರೆಗೆ ಪ್ರಸಾರ ಮಾಡಲಾಗುತ್ತದೆ.

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಮದರಾಸ್

೨೮೫ ಸ್ಥಾನಗಳಲ್ಲಿ ಕಾಂಗ್ರೆಸ ೧೧೮, ಕೆ. ಎಂ. ಪಿ ೨೯, ಕೃಷಕ ಪಕ್ಷ ೧೦, ಕಮ್ಯೂನಿಸ್ಟ್ ೪೨, ಸ್ವತಂತ್ರ ೪೫, ಇತರಪಕ್ಷ ೪೫.

ಹೈದರಾಬಾದ್

೧೭೫ ಸ್ಥಾನಗಳ ಪೈಕಿ ಕಾಂಗ್ರೆಸ್ ೮೯, ಸೋಷಲಿಸ್ಟ್ ೧೦, ಡೆಮೊಕ್ರಾಟಿಕ್ ಪಕ್ಷ ೩೯, ರೈತಪಕ್ಷ ೯, ಸ್ವತಂತ್ರ ೧೩, ನಿಮ್ನ ವರ್ಗ ೫.

ಪಶ್ಚಿಮ ಬಂಗಾಳ

೭೭ ಸ್ಥಾನಗಳಲ್ಲಿ ಕಾಂಗ್ರೆಸ್ ೫೦, ಇತರರು ೨೭.

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ಹೊರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟಿನ ಚುನಾವಣೆ ಫಲಿತಾಂಶದ ಒಟ್ಟು ೧೯೭ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೧೦೦, ಕೆ. ಎಂ. ಪಿ. ೪, ಯುನೈಟೆಡ್ ಫ್ರಂಟ್ ೩, ಪೀಪಲ್ಸ್ ಫ್ರಂಟ್ ೩, ರೈತ ೨, ಸ್ವತಂತ್ರ ೧೯, ಇತರರು ೨೦.

ಹೈದ್ರಾಬಾದಿನಲ್ಲಿ ಕಾಂಗ್ರೆಸ್ ಸರ್ಕಾರವೇ ಬರುವುದು

ಈಚೆಗೆ ತಿಳಿದುಬಂದಿರುವ ಹೈದ್ರಾಬಾದ್ ರಾಜ್ಯ ಶಾಸನಸಭೆಯ ಫಲಿತಾಂಶದಂತೆ ಕಾಂಗ್ರೆಸ್ಸಿಗೆ ೮೯ ಸ್ಥಾನಗಳು ಲಭ್ಯವಾಗಿದೆ. ಹೈದ್ರಾಬಾದ್ ಶಾಸನಸಭೆಯಲ್ಲಿನ ೧೭೫ ಸ್ಥಾನಕ್ಕೆ ಈಗ ೧೭೫ ಸ್ಥಾನದ ಫಲಿತಾಂಶ ಹೊರಬಿದ್ದಿದೆ- ಹೈದ್ರಾಬಾದಿನಲ್ಲಿ ಕೂಡ ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾಗುವುದರಲ್ಲಿ ಸಂದೇಹವಿಲ್ಲ-

ಇಲ್ಲಿಯವರೆಗೆ ತಿಳಿದುಬಂದಿರುವ ಫಲಿತಾಂಶದಂತೆ ಹಿಮಾಚಲ ಪ್ರದೇಶ, ದೆಹಲಿ, ಭೋಪಾಲ್, ಮಧ್ಯಪ್ರದೇಶ ಮತ್ತು ಹೈದ್ರಾಬಾದ ಒಟ್ಟು ೫ ರಾಜ್ಯಗಳಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾಗುವುದರಲ್ಲಿ ಸಂದೇಹವೇ ಇಲ್ಲ-

ಸಂಸ್ಥಾನದ ಚುನಾವಣಾ ಫಲಿತಾಂಶಗಳು

ಮಾಲೂರು— ಶ್ರೀ ಹೆಚ್- ಸಿ- ಲಿಂಗಾರೆಡ್ಡಿ (ಕಾಂ) 6560-
ಸಿ- ಹೆಚ್- ವೆಂಕಟರಮಣಪ್ಪ 4672-
ಟಿ- ವೆಂಕಟಪ್ಪ 2543-
ಸಿ- ವಿ- ವೆಂಕಟಪ್ಪ 919
ಟಿ- ನಾರಾಯಣಸ್ವಾಮಿ (ಸೋ) 8-

ಮಂಡ್ಯ— ಶ್ರೀ ಕೆ- ವಿ- ಶಂಕರೇಗೌಡ (ಕಾಂ) 12,980-
ಶ್ರೀ ಕೆ- ಚಿಕ್ಕಲಿಂಗಯ್ಯ (ಕೆ-ಎಂ-ಪಿ) 675 -
ಶ್ರೀ ಎಂ-ಬಿ- ಬೋರೇಗೌಡ (ಸ್ವ) 93 -

ಶ್ರೀರಂಗಪಟ್ಣ— ಶ್ರೀ ಕೆ- ಪುಟ್ಟಸ್ವಾಮಿ (ಕಾಂ) 12,581-
ಶ್ರೀ ಚಂಚೇಗೌಡರು (ಸ್ವ) 7876-

ಅರಸೀಕೆರೆ— ಶ್ರೀ ಕೆ. ಪಂಚಾಕ್ಷರಯ್ಯ (ಕಾಂ) 8631-
ಶ್ರೀ ಪಿ- ವಿ- ಬೊಮ್ಮಣ್ಣ (ಕೆ-ಎಂ-ಪಿ) 8348-
ಶ್ರೀ ಬಸವರಾಜು (ಸ್ವ) 1692-

ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ- ಹನುಮಂತಯ್ಯನವರು ಕೋಲಾರದಿಂದಲೂ, ಶ್ರೀ ಡಿ- ದೇವರಾಜ ಅರಸರವರು ಹುಣಸೂರಿನಿಂದಲೂ, ಶ್ರೀ ವೈ- ಎಂ- ಚಂದ್ರಶೇಖರಯ್ಯನವರು ಕಡೂರಿನಿಂದಲೂ, ಶ್ರೀ ಪಿ- ಹೆಚ್- ಲಿಂಗದೇವರುರವರು ಚಿಕ್ಕನಾಯಕನಹಳ್ಳಿಯಿಂದಲೂ, ಶ್ರೀ ಎಸ್- ಆರ್- ನಾಗಪ್ಪಶೆಟ್ಟರು ಶಿವಮೊಗ್ಗದಿಂದಲೂ ಸಂಸ್ಥಾನದ ಶಾಸನಸಭೆ ಚುನಾಯಿತರಾಗಿರುವರೆಂದು ವಾರ್ತೆ ಬಂದಿದೆ-

ಶ್ರೀ ಎನ್- ಕೇಶವಯ್ಯಂಗಾರ್‌ರವರು ಬೆಂಗಳೂರು ಉತ್ತರ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಚುನಾಯಿತರಾಗಿರುವರೆಂದು ತಿಳಿದುಬಂದಿದೆ-

ಇಲ್ಲಿಯವರೆಗೆ ಚುನಾಯಿತರಾಗಿರುವವರೆಲ್ಲರೂ ಕಾಂಗ್ರೆಸ್ಸಿಗರು.

ರಿಪಬ್ಲಿಕ್ ದಿನೋತ್ಸವ

ಪರಿಶಾ ವಿದ್ಯಾರ್ಥಿ ಸಂಘದಾಶ್ರಯದಲ್ಲಿ ನಾಳೆ ಸಂಜೆ ೬ರ ಗಂಟೆಗೆ ಪ್ರಜಾರಾಜ್ಯ ಮತ್ತು ಬಾಪೂಜಿ ದಿನಾಚರಣೆಯನ್ನು ಶ್ರೀ ಟಿ- ನರಸಿಂಹಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯುವುದು-

ವುಡ್‌ಲ್ಯಾಂಡ್ಸ್ * ೨೫—೧—೫೨ ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
* ದಶಾವತಾರ್ *
ಪಾತ್ರ—ನಿರೂಪರಾಯ್, ತ್ರಿಲೋಕ್‌ಕಪೂರ್.

ಅಮೇರಿಕದ ವಿದೇಶಾಂಗ ಸಮಿತಿಗೆ ಚಾಲ್ಸರ ವರದಿ

ವಾಷಿಂಗ್ಟನ್ ಜ ೨೦

ಅಮೇರಿಕಕ್ಕೂ ಭಾರತಕ್ಕೂ ಆದ ಆರ್ಥಿಕ ಒಪ್ಪಂದದ ಬಗ್ಗೆ ಭಾರತದಲ್ಲಾದ ಅಭಿಪ್ರಾಯಗಳ ವರದಿಯನ್ನು ಭಾರತದಲ್ಲಿ ಅಮೇರಿಕದ ರಾಯಭಾರಿಗಳಾಗಿರುವ ಚೆಸ್ಟರ್ ಚಾಲ್ಸರು, ಅಮೇರಿಕದ ಸೆನೆಟ್ ವಿದೇಶಾಂಗ ಸಮಿತಿಗೆ ಒಪ್ಪಿಸಿದರು.

ಈ ನಿಧಿಯು ಭಾರತದ ಸಾರ್ವಜನಿಕ ಆರೋಗ್ಯ ಅಭಿವೃದ್ಧಿಗೆ, ವ್ಯವಸಾಯ ಅಭಿವೃದ್ಧಿ ಮತ್ತು ಉತ್ಪನ್ನಕ್ಕೆ ಮತ್ತು ಜನಜೀವನದ ಮಟ್ಟವನ್ನು ಹೆಚ್ಚಿಸಲು ಉಪಯೋಗವಾಗುತ್ತದೆ.

ಭಾರತದಲ್ಲಿ ರಷ್ಯಾದ ಹಿಡಿತವು ನಿಧಾನವಾಗಿ ಕಡಿಮೆಯಾಗುತ್ತಿದೆ ಎಂದು ರಾಯಭಾರಿ ಚಾಲ್ಸರು ಹೇಳಿರುವುದಾಗಿ ವಿದೇಶಾಂಗ ಸಮಿತಿಯ ಅಧ್ಯಕ್ಷರಾದ ಸೆನೆಟರ್ ಟಾಮ್ ಕೊನೆಲ್ಲಿಯವರು ತಿಳಿಸಿದರು.

'ಭಾರತಕ್ಕೆ ಕಮ್ಯೂನಿಸ್ಟರ ಪ್ರಭಾವವು ಈಗ ಗೊತ್ತಾಗುತ್ತಿದೆ. ಅದರೂ ಅಲ್ಲಲ್ಲಿ ಕಮ್ಯೂನಿಸ್ಟರು ಭಾರತದಲ್ಲಿ ತಲೆ ಎತ್ತುತ್ತಿದ್ದಾರೆ. ಹೋದ ವರ್ಷ ಅಮೇರಿಕದ ಕಾಂಗ್ರೆಸ್ಸು ಕೊಟ್ಟ ಸಹಾಯದಿಂದ ೧೫೦೦ ಹಳ್ಳಿಗಳ ವ್ಯವಸಾಯಾಭಿವೃದ್ಧಿಯನ್ನು ಮಾಡಲಾಗುವುದು. ಫೋರ್ಡ್ ನಿಧಿಯ ಸಹಾಯವೂ ಸೇರಿದರೆ ಒಟ್ಟು ೨೦೦೦ ಗ್ರಾಮೋದ್ಧಾರವನ್ನು ಕೈಗೊಳ್ಳಲಾಗುವುದು' ಎಂದು ಚಾಲ್ಸರು ಹೇಳಿದರು.

'ಭಾರತವು ಈ ಅಭಿವೃದ್ಧಿಯನ್ನು ಮಾಡಿಕೊಳ್ಳಲಾಗದೆ ಹೋದರೆ, ಏಷ್ಯಾ ಖಂಡವು ಪ್ರಜಾರಾಜ್ಯ ಪದ್ಧತಿಯನ್ನು ಚಿರವಾಗಿ ನಿಲ್ಲಿಸಿಕೊಳ್ಳುವುದು' ಎಂದು ಚಾಲ್ಸರು ಸಮಿತಿಯಲ್ಲಿ ಹೇಳಿದರೆಂದು ಕೊನೆಲಿ ತಿಳಿಸಿದರು.

ಭಾರತದ ಭವಿಷ್ಯ

ವಾಷಿಂಗ್ಟನ್ ಜ ೨೦

ರೇಡಿಯೋ ಚರ್ಚೆಯೊಂದರಲ್ಲಿ ಮಾತನಾಡುತ್ತಾ, ಪ್ರಪಂಚದಲ್ಲಿ ಭಾರತದ ಸ್ಥಾನವೇನೆಂಬುದು ಮುಂಬರುವ ನಾಲ್ಕು ವರ್ಷಗಳಲ್ಲಿ ನಿರ್ಧರಿಸಲ್ಪಡುತ್ತದೆ ಎಂದು ರಾಯಭಾರಿ ಚಾಲ್ಸರು ಹೇಳಿದರು.

ಮುಂದುವರಿಯುತ್ತಾ, ಅವರು ಹೀಗೆ ಹೇಳಿದರು.

'ಆರ್ಥಿಕ ಸ್ಥಿತಿಯು ಕೆಟ್ಟರೆ, ಕಮ್ಯೂನಿಸಂ ಅಪಾಯಕರವೇ ಸರಿ. ಆರ್ಥಿಕ ಪರಿಸ್ಥಿತಿಯು ಸರಿಯಾಗಿದ್ದರೆ, ಏಷಿಯಾದಲ್ಲಿ ಭಾರತವು ಪ್ರಜಾಪ್ರಭುತ್ವ ರಾಜ್ಯಗಳಿಗೆ ಬೆಂಬಲಕೊಡುತ್ತದೆ.'

'ಪ್ರಜಾಪ್ರಭುತ್ವ ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನಿಸುತ್ತಿರುವ ಈಗಿನ ಸರ್ಕಾರವು ಜಯಶಾಲಿಯಾದರೆ ಭಾರತವು ಮುಂದೆ ಪ್ರಜಾಪ್ರಭುತ್ವ ರಾಷ್ಟ್ರಗಳಿಗೇ ಬೆಂಬಲ ಕೊಡುತ್ತದೆ'

'ಭಾರತವು ರಷ್ಯಾದೇಶದ ಬಗ್ಗೆ ಮೊದಲು ಸ್ವಲ್ಪ ಸಹಾನುಭೂತಿ ತೋರಿಸುತ್ತಿತ್ತು, ಆದರೆ ಈಗ ಇಲ್ಲ. ಅವರು ಚೈನಾದೇಶದ ಬಗ್ಗೆ ಜಾಸ್ತಿ ಸಹಾನುಭೂತಿಯುಳ್ಳವರಾಗಿದ್ದಾರೆ, ಏಕೆಂದರೆ ಅದು ಏಷ್ಯದ ದೇಶಗಳಲ್ಲೊಂದು.'

'ಪ್ರಧಾನಿ ನೆಹರೂರವರಿಗೆ ಭಾರತದಲ್ಲಿ ತುಂಬಾ ಗೌರವವಿದೆ. ಅವರು ಅಲ್ಲಿ ತುಂಬಾ ಪ್ರಭಾವಶಾಲಿಗಳು.'

'ಭಾರತದ ಪಕ್ಷಪಾತರಹಿತ ನೀತಿಯು ಭಾರತಕ್ಕೆ ತೊಂದರೆ, ಏಕೆಂದರೆ ನೆರೆಯಲ್ಲಿ ಕಮ್ಯೂನಿಸ್ಟರ ಧಾಳಿಯ ಹೆದರಿಕೆ ಇದೆ' ಎಂದರು ಚಾಲ್ಸರು.

'ಭಾರತದಲ್ಲಿ ಈಗ ಮುಖ್ಯವಾದ ಸಮಸ್ಯೆ ಎಂದರೆ, ಆಹಾರ ಸಮಸ್ಯೆ' ಎಂದು ಹೇಳಿ ತಮ್ಮ ಭಾಷಣ ಮುಗಿಸಿದರು.

೩೧೪ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೨೬೯

ಮುಂಬೈನಲ್ಲಿ ಕಾಂಗ್ರೆಸ್ ಪಕ್ಷವು ಅಸೆಂಬ್ಲಿಯ ಸ್ಥಾನಗಳಲ್ಲಿ ಶೇ|| ೮೬ ಸ್ಥಾನಗಳನ್ನು ಗಳಿಸಿದೆ.

ಕಾಂಗ್ರೆಸ್ ಪಕ್ಷಕ್ಕೆ ೩೧೪ ಸ್ಥಾನಗಳಲ್ಲಿ (೩೧೫ನೇ ಸ್ಥಾನದ ಉಮೇದುವಾರರೊಬ್ಬರ ಮರಣದಿಂದ ಚುನಾವಣೆ ನಡೆಯಬೇಕಾಗಿದೆ) ೨೬೯ ಸ್ಥಾನಗಳನ್ನು ಗಳಿಸಿದೆ. ಅಂದರೆ ಈಗಿರುವ ಸ್ಥಿತಿಗಿಂತ ಉತ್ತಮವಾಗಿದೆ. ಈಗಿನ ಅಸೆಂಬ್ಲಿಯ ೨೦೩ ಸ್ಥಾನಗಳಲ್ಲಿ ಕಾಂಗ್ರೆಸ್ ೧೯೦ ಸ್ಥಾನಗಳನ್ನು ಹೊಂದಿದೆ.

ಪಕ್ಷದ ನಾಯಕರೂ, ಮುಖ್ಯಮಂತ್ರಿಯೇ ಆಗುತ್ತಾರೆಂದು ನಂಬಿದ್ದ ಶ್ರೀ ಮೊರಾರ್ಜಿ ದೇಸಾಯಿರ ಪರಾಜಯ ಗಣನೀಯವಾದ ಅಂಶ.

೫೩೦ ಜನರಿಗೆ ಠೇವಣಿ ಹೋಯಿತು

ದೇಶದ ಸುಮಾರು ೧೫ ರಾಜಕೀಯ ಪಕ್ಷಗಳು ಮತ್ತು ಸ್ವತಂತ್ರರು ಸೇರಿ ೧೨೨೩ ಮಂದಿ ಸ್ಪರ್ಧಿಸಿದ್ದವರಲ್ಲಿ ೫೩೦ ಮಂದಿಗೆ ಠೇವಣಿ ಹೋಯಿತು. ಇದರಲ್ಲಿ ೩೧೧ ಸ್ವತಂತ್ರರು ಸೇರಿದ್ದಾರೆ. ೬೬ ಮಂದಿ ಸೋಷಲಿಸ್ಟರು, ೨೭ ಮಂದಿ ರಾ. ರಾ. ಪ, ೧೭ ಪರಿಶಿಷ್ಟವರ್ಗ, ೧೭ ಕಿಸಾನ್ ಕಾಮಗಾರ್ ಪಕ್ಷ, ೫ ಹಿಂದೂ ಮಹಾಸಭೆ, ೧೨ ಕೆ-ಎಂ-ಪಿ ಮತ್ತು ೧೪ ಕಮ್ಯೂನಿಸ್ಟರು ಸೇರಿದ್ದಾರೆ.

ಪಕ್ಷಗಳ ಬಲಾಬಲ

314 ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ 269, ಸೋಷಲಿಸ್ಟರಿಗೆ 8, ರೈತ ಕಾರ್ಮಿಕ ಪಕ್ಷಕ್ಕೆ 14, ಜೇದಟ್ ಸಂಘ-ಲೋಕ ಪಕ್ಷ 1, ಪರಿಶಿಷ್ಟವರ್ಗ 1, ಕಮ್ಯೂನಿಸ್ಟ್ 1, ಕಿಸಾನ್ ಕಾಮಗಾರ್ 3 ಮತ್ತು ಸ್ವತಂತ್ರರಿಗೆ 17 ಬಂದಿದೆ.

ನೇಪಾಳದಲ್ಲಿ ಅವಸರ ಪರಿಸ್ಥಿತಿ ಘೋಷಣೆ

ನೇಪಾಳದಲ್ಲಿ ಅವಸರ ಪರಿಸ್ಥಿತಿಯನ್ನು ಘೋಷಿಸಿ ರಾಜಾ ತ್ರಿಭುವನರು ಆಡಳಿತದ ಪೂರ್ಣ ಜವಾಬ್ದಾರಿಯನ್ನು ಪ್ರಧಾನಿ ಶ್ರೀ ಎಂ. ಪಿ. ಕೋಯಿರಾಲಾರವರಿಗೆ ಒಪ್ಪಿಸಿದ್ದಾರೆ.

ಇನ್ನೂ ಕೆಲವು ನಿರ್ಬಂಧಾಜ್ಞೆಗಳನ್ನು ಘೋಷಿಸಿ ರಕ್ಷಾದಳದವರಿಂದುದ್ಭವಿಸಿದ ಪರಿಸ್ಥಿತಿಯನ್ನು ಎದುರಿಸಿದ್ದಾರೆ.

ಸರ್ಕಾರದ ಸೈನ್ಯಗಳು ಸಿಂಘ ದರ್ಬಾರನ್ನು ಪ್ರವೇಶಿಸಿದ ನಂತರ ದಂಗೆಯು ಶಾಂತವಾದಂತೆ ತೋರಿದೆ.

ಖಟ್ಮಂಡು ಕಣಿವೆಯ ಹೊರಗಿನ ಎಲ್ಲಾ ಚಲನವಲನಗಳ ಮೇಲೂ ನಿರ್ಬಂಧವನ್ನು ಹಾಕಲಾಗಿದೆ. ಪ್ರತಿಯೊಂದು ಅಂಚೆಕಚೇರಿಗೂ ಒಳಾಡಳಿತ ಸಚಿವರ ಅಪ್ಪಣೆಯನ್ನು ಪಡೆಯಬೇಕು. ರಾಜಧಾನಿಯಲ್ಲಿ ಸಮಾರಂಭಗಳನ್ನು ಬಿಟ್ಟು ಎಲ್ಲಾ ವಿಧವಾದ ಸಭೆ ಮೆರವಣಿಗೆಗಳನ್ನು ನಿಷೇಧಿಸಲಾಗಿದೆ. ಶಸ್ತ್ರಾಸ್ತ್ರಗಳನ್ನು ಕೊಡದೆ ಓಡಿಹೋಗಿರುವ ಎಲ್ಲಾ ದಂಗೆಕೋರರು ಮೂರು ದಿನಗಳೊಳಗಾಗಿ ಶರಣಾಗತರಾಗಬೇಕೆಂದು ಕೇಳಲಾಗಿದೆ. ಡಾ|| ಕೆ. ಐ. ಸಿಂಗ್‌ರವರೊಂದಿಗೆ ಓಡಿಹೋಗಿರುವ ವೈದಿಗಳಿಲ್ಲರೂ ಮೂರು ದಿನಗಳೊಳಗೆ ಶರಣಾಗತರಾಗಬೇಕೆಂದು ಆಜ್ಞೆ ಮಾಡಲಾಗಿದೆ. ಮುಂದೆ ಆಜ್ಞೆ ಮಾಡುವವರೆಗೆ ಸಂಜೆ ೭ ರಿಂದ ಬೆಳಿಗ್ಗೆ ೭ ರವರೆಗೆ ಕರ್ಫ್ಯೂ ಹಾಕಲಾಗಿದೆ.

ಅಧಿಕೃತ ವಕ್ತಾರರೊಬ್ಬರು ಮಾತನಾಡುತ್ತಾ, ಅವಸರ ಪರಿಸ್ಥಿತಿಯನ್ನು ಘೋಷಿಸಿದ್ದರಿಂದ ಸಂಸ್ಥಾನದಲ್ಲೆಲ್ಲಾ ಪ್ರಕ್ಷುಬ್ಧ ಪರಿಸ್ಥಿತಿಯೆಂದು ಹೇಳಲು ಸಾಧ್ಯವಿಲ್ಲ. ದೇಶದಲ್ಲಿ ಎಲ್ಲಾ ಕಡೆಯಲ್ಲೂ ಶಾಂತತೆಯಿದೆ. ಆದರೆ ಡಾ|| ಕೆ.ಐ. ಸಿಂಗರ ಪಲಾಯನದಿಂದ ಇಷ್ಟು ಮುಂಜಾಗರೂಕತೆ ಕ್ರಮಗಳನ್ನು ಕೈಗೊಳ್ಳಬೇಕಾಯಿತು. ಎಂದರು.

ದಂಗೆಕೋರ ನಾಯಕ ಡಾ|| ಕೆ. ಐ. ಸಿಂಗ್ ಖಟ್ಮಂಡುವಿಗೆ ಪಶ್ಚಿಮಕ್ಕೆ ೭ ಮೈಲಿ ದೂರದಲ್ಲಿನ ಬಾಗಮತಿ ನದಿಯ ಒಳಿ ದಾಂಚೌಕ್ ಕಡೆ ಹೋಗಿರುವುದಾಗಿ ಅಧಿಕೃತ ಪ್ರಕಟಣೆ ತಿಳಿಸುತ್ತದೆ

ಕಮ್ಯೂನಿಸ್ಟರ ಚಳುವಳಿ

ಅಸೆಂಬ್ಲಿಗೆ ಚುನಾಯಿತರಾಗಿ ಇನ್ನು ಕಾರಾಗೃಹಗಳಿಂದ ಬಿಡುಗಡೆಯಾಗದಿರುವ ಕಮ್ಯೂನಿಸ್ಟರ ಬಿಡುಗಡೆಗಾಗಿ ಚಳುವಳಿಯನ್ನು ಆರಂಭಿಸಲಾಗುವುದೆಂದು ಭಾರತ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಜಯಕುಮಾರ್ ಘೋಷ್ ತಿಳಿಸಿದ್ದಾರೆ.

ಚಿತ್ರ ಪ್ರದರ್ಶನ

ಪ್ರಧಾನಿ ಪಂಡಿತ ನೆಹರೂರವರಿಂದ ಮನ್ನಣೆಪಡೆದಿರುವ ನವ ಚೀನಾದ ಜನಜೀವನ ಮತ್ತು ಪ್ರಗತಿಯ ಬಗ್ಗೆ ಚಿತ್ರ ಪ್ರದರ್ಶನವು ಇದೇ ತಿಂಗಳು 31ನೇ ತಾ|| ನಿಂದ ಆರಂಭವಾಗಲಿದೆ. ಈ ಪ್ರದರ್ಶನದಲ್ಲಿ ಚೀನಾದ ಕ್ರಾಂತಿಕಾರಿ ಯುದ್ಧಗಳು, ನೂತನ ಪ್ರಜಾಪ್ರಭುತ್ವದ ಸ್ಥಾಪನೆ, ಭೂಸುಧಾರಣೆ, ಕಾಲಾಸಂತೆಯ ನಿರ್ಮೂಲ, ಮಕ್ಕಳ ಬೆಳವಣಿಗೆ, ವಿಜ್ಞಾನವತ್ತಿಯನ್ನು ರಾಷ್ಟ್ರ ನಿರ್ಮಾಣಕ್ಕೆ ಉಪಯೋಗಿಸುತ್ತಿರುವ ಕ್ರಮ, ಮಹಿಳೆಯರ ಮತ್ತು ಕಾರ್ಮಿಕರ ಮುನ್ನಡೆ, ಕಲಾಕೌಶಲ್ಯ, ಸಾಮ್ರಾಜ್ಯ ಶಾಹಿಯ ವಿರುದ್ಧ ಚೀಣೀ ಜನತೆಯ ಮಹತ್ತರವಾದ ಹೋರಾಟ ಇನ್ನೀ ಮುಂತಾದ ವಿಷಯಗಳ ಬಗ್ಗೆ ಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಸಾರ್ವಜನಿಕರು ಸಹಸ್ರಾರುಗಟ್ಟಲೆ ಪ್ರದರ್ಶನಕ್ಕೆ ಬಂದು ಇದರ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಭಾರತ ಚೀನಾ ಮೈತ್ರಿ ಸಂಸ್ಥೆಯ ಮೈಸೂರು ಶಾಖೆಯವರು ಕೋರುತ್ತಾರೆ.

ಬೊಂಬಾಯಿ ಸಚಿವ ಶ್ರೀ ವರ್ತಕ್‌ರವರು ತಮ್ಮ ಸೋಷಲಿಸ್ಟ್ ಪ್ರತಿಸ್ಪರ್ಧಿಯನ್ನು ಕೇವಲ ೯ ಓಟುಗಳಿಂದ ಸೋಲಿಸಿ ಜಯಗಳಿಸಿದರು.

ನ್ಯೂ ಅಪೇರ

೨೬—೧—೫೨ ರಿಂದ

ಶೋಭನಾಚಲರವರ—

* ಸಾವಾಸಂ *

ಪಾತ್ರ— ಪ್ರಭಾಕರರಾವ್, ಕೃಷ್ಣವೇಣಿ ಕನಕಂ, ಸೀತಾರಾಂ.

ವೆಲ್‌ಕಮ್ ಕಾಫೀ ಕ್ಲಬ್

(ಪ್ರಭಾ ಟಾಕೀಸ್ ಎದುರು)

೨೪-೧-೫೨ ರಿಂದ ಪ್ರಾರಂಭ

ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮು ರವರಿಂದ ತಯಾರಿಸಿದ,

ಅಪ್ಪಟ ತುಪ್ಪದ 'ಕೇಸರೀ ಭಾತ್'

ಉತ್ತಮವಾದ

'ಸಾದಾ ಸೆಟ್ ದೋಸೆ'

ಒಂದನೇ ನಂ. ಕಾಫೀ ಮತ್ತು ಟೀ ಸೇವಿಸಲು ದಯಮಾಡಿಸಿ.

ಪ್ರಕಾಶಕರು:—ಜಿ.ಎಲ್. ಸ್ವಾಮಿ ಟ್ಯೂಟೋರಿಯಲ್ ಕಾಲೇಜು ಮೈಸೂರು

ಮುದ್ರಕರು—ಹಿ. ರಾ. ಸುಬ್ಬರಾವ್ ಮೋಹನ ಮುದ್ರಣಾಲಯ ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೫—೧—೧೯೫೨ನೇ ಶುಕ್ರವಾರ [ಸಂಚಿಕೆ ೧೨೭

ಜನರಲ್ ರಿಡ್ಜ್‌ವೇಯವರಿಗೆ ಅಮೆರಿಕಾ ಸೂಚನೆ

ಮೈಸೂರು ಎ.ಐ.ಆರ್. ನಲ್ಲಿ ಚುನಾವಣಾ ಫಲಿತಾಂಶ

ಮೈಸೂರು ಜ ೨೫

ಇಂದಿನಿಂದ ಮೈಸೂರು ಎ.ಐ.ಆರ್ ನಲ್ಲಿ ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟ ಚುನಾವಣಾ ಫಲಿತಾಂಶವನ್ನು ಪ್ರತಿದಿನ ಸಂಜೆ 7-15ಕ್ಕೆ ಸ್ಥಳೀಯ ಪ್ರಕಟಣೆಗಳೊಡನೆ ಹೇಳುವುದಲ್ಲದೆ ರಾತ್ರಿ 8-೪೫ ಗಂಟೆಗೆ ಪ್ರಸಾರಮಾಡಲಾಗುತ್ತದೆ ಯೆಂದು ತಿಳಿಯಬರುತ್ತದೆ

ಪಾಕೀಸ್ತಾನದ ಹೊಟ್ಟೆಯುರಿ

ಟೆಕ್ನಿಕಲ್ ಸಹಾಯ ಯೋಜನೆಯ ಪ್ರಕಾರ ಅಮೆರಿಕಾವು ಪಾಕೀಸ್ತಾನಕ್ಕೆ ಇದೇ ಜೂನ್ 30ಕ್ಕೆ ಅಂತ್ಯವಾಗುವ ಸಾಲಿನಲ್ಲಿ 170 ಲಕ್ಷ ಮಿಲಿಯನ್ ಡಾಲರುಗಳ ಸಹಾಯ ನೀಡಲು ನಿರ್ಧರಿಸಿದೆಯೆಂದು ಹೇಳಲಾಗಿದೆ.

ಭಾರತಕ್ಕೆ ಇದೇ ಯೋಜನೆಯಪ್ರಕಾರ 530 ಲಕ್ಷ ಡಾಲರುಗಳು, ಇಲಾನಿಗೆ 230 ಲಕ್ಷ ಡಾಲರುಗಳನ್ನು ಕೊಟ್ಟು ತಮಗೆ ಮಾತ್ರ 120 ಲಕ್ಷ ಡಾಲರುಗಳನ್ನು ಕೊಟ್ಟಿರುವುದು ಪಾಕೀಸ್ತಾನದ ಸರ್ಕಾರಕ್ಕೂ ಪ್ರಜೆಗಳಿಗೂ ನಿರಾಶೆಯನ್ನುಂಟುಮಾಡಿದೆ ಎಂದು ಪಾಕ್ ಸರ್ಕಾರದ ವಕ್ತಾರರೊಬ್ಬರು ಹೇಳಿರುವರು.

ನಮ್ಮ ವಿತ್ತನೀತಿವನ್ನು ವ್ಯಕ್ತಪಡಿಸಲು ಈ ಸಹಾಯವನ್ನು ಪಾಕ್ ಗೌರ್ನರ್ ಜನರಲರವರು ಒಪ್ಪಿಕೊಂಡಿರುವರು. ಅಮೆರಿಕಾ ಮತ್ತು ರಷ್ಯಾ ರಾಷ್ಟ್ರಗಳು ಪೈಪೋಟಿಯಿಂದ ಭಾರತಕ್ಕೆ ಆರ್ಥಿಕ ಸಹಾಯನೀಡಲು ಹೊರಟಿರುವುದರಿಂದ ಭಾರತಕ್ಕೆ ಹಣವು ಯಥೇಷ್ಟವಾಗಿ ಸುರಿದುಬೀಳುತ್ತದೆ. ಅಮೇರಿಕಾ ನಮಗೆ ಮತ್ತು ಭಾರತಕ್ಕೆ ಮಾಡುವ ಸಹಾಯವನ್ನು ಪರಿಗಣಿಸಿದರೆ ಅಮೆರಿಕಾ ನೀತಿಯು ಅನುಮಾನಾಸ್ಪದವಾಗಿದೆ ಎಂದು ಆ ವಕ್ತಾರರು ಅಭಿಪ್ರಾಯಪಟ್ಟಿರುವುದಾಗಿ ಹೇಳಲಾಗಿದೆ

ಭಾರತಕ್ಕೆ ಒಂದು ಕೋಟಿ ರೂ. ಸಹಾಯ

ಭಾರತ ಮತ್ತು ಫೋರ್ಡ್ ಫೌಂಡೇಷನ್ ಪ್ರತಿನಿಧಿಗಳಿಗಾದ ಒಪ್ಪಂದದ ಪ್ರಕಾರ ಭಾರತವು ಗ್ರಾಮಾಭಿವೃದ್ಧಿಗಾಗಿ ಒಂದು ಕೋಟಿ ರೂಪಾಯಿಗಳ ಆರ್ಥಿಕ ಸಹಾಯವನ್ನು ಪಡೆಯಲಿದೆ.

ಪಾಕಿಸ್ಥಾನದಲ್ಲಿ ಆಹಾರ ಅಭಾವ

ಪಾಕಿಸ್ಥಾನದಲ್ಲಿ ಆಹಾರ ಅಭಾವವು ಕೆಲವರು ಉದ್ದೇಶಪೂರ್ವಕವಾಗಿ ಕೇಬಂದಿಪಡಿಸುತ್ತಿರುವುದರಿಂದ ಉಂಟಾಗಿದೆಯೆಂದು ಆಹಾರ ಇಲಾಖಾ ವಕ್ತಾರರು ಹೇಳಿರುವರು.

ಅರಮನೆಗೆ ದೀಪೋತ್ಸವ

ಮೈಸೂರು ಜ ೨೪

ಡೆಹರಾಡೂನಿನಿಂದ ಬಂದಿದ್ದ ವಿದ್ಯಾರ್ಥಿಗಳ ಕೋರಿಕೆಯಂತೆ ಅರಮನೆಗೆ ಈ ದಿನ ದೀಪೋತ್ಸವ ಮಾಡಲಾಗಿತ್ತು.

ಚುನಾವಣೆ ಮುಕ್ತಾಯ

ಮಹಾ ಚುನಾವಣೆಯು ಸಂಸ್ಥಾನದಲ್ಲಿ ಈದಿನ ಮುಕ್ತಾಯಗೊಂಡಿತು. ಮೊಳಕಾಲ್ಮೂರು, ಪಿರಿಯಾಪಟ್ಟಣ ಮತ್ತು ಕೃಷ್ಣರಾಜನಗರದಲ್ಲಿ ಚುನಾವಣೆಯು ಈದಿನ ನಡೆದು ಸಂಸ್ಥಾನದ ಚುನಾವಣೆಗಳು ಶಾಂತರೀತಿಯಲ್ಲಿ ಮುಕ್ತಾಯವಾಯಿತು.

ನಾಳೆಯಿಂದ ೩೧ನೇ ತಾ|| ವರೆಗೆ ಎಣಿಕೆಯು ನಡೆಯುತ್ತದೆ

ಚಲನಚಿತ್ರೋತ್ಸವದ ಆರಂಭ

ಬೊಂಬಾಯಿಯಲ್ಲಿ ನಿನ್ನೆ ಅಂತರರಾಷ್ಟ್ರೀಯ ಚಲನಚಿತ್ರದ ಉತ್ಸವವು ಆರಂಭವಾಯಿತು. ಕೇಂದ್ರ ಸರ್ಕಾರದ ವಾರ್ತಾ ಇಲಾಖೆಯ ಸಚಿವರಾದ ಶ್ರೀ ಆರ್. ಆರ್. ದಿವಾಕರ್‌ರವರು ಉತ್ಸವದ ಆರಂಭೋತ್ಸವ ಮಾಡಿದರು. ಈ ಉತ್ಸವಕ್ಕೆ 23 ರಾಷ್ಟ್ರಗಳು ಉತ್ತಮ ಚಿತ್ರಗಳನ್ನು ಕಳುಹಿಸಿವೆ. ಈ ಉತ್ಸವದಲ್ಲಿ 52 ಪ್ರಧಾನ ಚಿತ್ರಗಳೂ, 115 ಇತರ ಚಿತ್ರಗಳನ್ನೂ ಪ್ರದರ್ಶಿಸಲಾಗಿದೆ.

ಭಾರತದ ಹಿಂದೀ, ಮರಾಠಿ ಮತ್ತು ಬಂಗಾಳಿಯ ಚಿತ್ರಗಳನ್ನು ಪ್ರದರ್ಶಿಸಲಾಗಿದೆ.

ಶ್ರೀ ಟಿ. ನಾಗರೆಡ್ಡಿಯವರ ಬಿಡುಗಡೆ

ಕಮ್ಯೂನಿಸ್ಟ್ ನೇತಾರರಾದ ಶ್ರೀ ಟಿ. ನಾಗರೆಡ್ಡಿಯವರನ್ನು ಬಳ್ಳಾರಿ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲಾಯಿತು.

ಶ್ರೀ ಕೆ. ಆರ್. ಕೃಷ್ಣ

ಅಂಚೆ ಮತ್ತು ಪೊಲೀಸ್ ದಳಕ್ಕೆ ಎ. ಎಸ್. ಪಿ. ಯವರನ್ನಾಗಿ ಶ್ರೀ ಕೆ ಆರ್. ಕೃಷ್ಣರವರನ್ನು ನೇಮಿಸಲಾಗಿದೆ

ಜನರಲ್ ರಿಡ್ಜ್‌ವೇಯವರಿಗೆ ಅಮೆರಿಕಾ ಸೂಚನೆ

ಕೊರಿಯಾ ಯುದ್ಧ ಪ್ರದೇಶದಲ್ಲಿ ವಿಮಾನ ದಳವನ್ನು ಇನ್ನು ಹೆಚ್ಚಿಸುವುದಿಲ್ಲವೆಂದು ಸಂಧಾನ ಸಮಯದಲ್ಲಿ ಭರವಸೆಯನ್ನು ಕಮ್ಯೂನಿಸ್ಟರಿಗೆ ಕೊಡಬೇಕೆಂದು ಅಮೆರಿಕಾ ಜನರಲ್ ರಿಡ್ಜ್‌ವೇಯವರಿಗೆ ಸೂಚನೆಯಿತ್ತಿದೆಯೆಂದು ಹೇಳಲಾಗಿದೆ.

ಅಲಹಾಬಾದಿನಲ್ಲಿ ಮತದಾನ

ಪ್ರಧಾನಿ ನೆಹರೂರವರು ಸ್ಪರ್ಧಿಸಿರುವ ಅಲಹಾಬಾದಿನಲ್ಲಿ 22ನೇ ತಾ|| ನಿಂದ ಮತದಾನ ಪ್ರಾರಂಭವಾಗಿ ನಿನ್ನೆ ಮುಕ್ತಾಯವಾಯಿತು.

ಆ ಪ್ರದೇಶದಲ್ಲಿರುವ 70,000 ಮುಸ್ಲಿಮರ ಪೈಕಿ 35,000 ಮತದಾರರಲ್ಲರೂ ಪಂಡಿತ ನೆಹರೂರವರಿಗೇ ತಮ್ಮ ಓಟುಗಳನ್ನು ಕೊಟ್ಟಿರುವರೆಂದು ಹೇಳಲಾಗಿದೆ.

ಅವರ ಪ್ರತಿಸ್ಪರ್ಧಿಯಾದ ಬ್ರಹ್ಮಚಾರಿ ಪ್ರಭುದತ್ತರವರು ತಮ್ಮ ಠೇವಣಿಯನ್ನು ಕಳೆದುಕೊಂಡು ಪರಾಜಯ ಹೊಂದುವರೆಂದು ಊಹಿಸಲಾಗಿದೆ.

ಡಾ|| ಸುಶೀಲಾನಾಯರ್ ರವರ ಆಯ್ಕೆ

ದೆಹಲಿಯ ರಾಜ್ಯ ಶಾಸನಸಭೆಗೆ ನಡೆದ ಚುನಾವಣೆಯಲ್ಲಿ ಡಾ|| ಸುಶೀಲಾನಾಯರ್ ಮತ್ತು ಕಾಂಗ್ರೆಸ್ ಅಧ್ಯಕ್ಷ ಶ್ರೀ ಧರ್ಮವೀರ್‌ರವರು ಚುನಾಯಿತರಾಗಿರುವರು.

ಎಷ್ಟು ಆಹಾರ ಕೊಡುವಿರಿ?

ಈ ವರ್ಷದಲ್ಲಿ ಭಾರತಕ್ಕೆ ಎಷ್ಟು ಆಹಾರವನ್ನು ಯಾವ ಒಪ್ಪಂದದ ಮೇಲೆ ಸರಬರಾಜಿಗೆ ಸಿದ್ಧರಿರುವಿರೆಂದು ಭಾರತ ಸರ್ಕಾರವು ಚೈನಾವನ್ನು ಕೇಳಿರುವುದಾಗಿ ಹೇಳಲಾಗಿದೆ

* ಭಾರತ ಮತ್ತು ಆಫ್ಘಾನಿಸ್ಥಾನಕ್ಕೂ ವ್ಯಾಪಾರ ಒಪ್ಪಂದವು ನಡೆದು ಸಹಿ ಹಾಕಲಾಗಿದೆ. ಭಾರತದಿಂದ ಆಫ್ಘಾನಿಸ್ಥಾನಕ್ಕೆ ಪ್ರತಿವರ್ಷವೂ ೯ ಕೋಟಿ ರೂಗಳ ವ್ಯಾಪಾರ ನಡೆಯುತ್ತದೆ.

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ತೋರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಮದರಾಸ್

೨೭೨ ಸ್ಥಾನಗಳಲ್ಲಿ ಕಾಂಗ್ರೆಸ್ ೧೧೪, ಕೆ. ಎಂ. ಪಿ ೨೩, ಕೃಷಿಕರ್ ಪಕ್ಷ ೧೦, ಕಮ್ಯೂನಿಸ್ಟ್ ೩೭, ಸ್ವತಂತ್ರ ೪೩, ಇತರ ಪಕ್ಷ ೪೫

ಹೈದರಾಬಾದ್

೧೫೮ ಸ್ಥಾನಗಳ ಪೈಕಿ ಕಾಂಗ್ರೆಸ್ ೮೩, ಸೋಷಲಿಸ್ಟ್ ೯, ಡೆಮೊಕ್ರಾಟಿಕ್ ಪಕ್ಷ ೩೯, ರೈತಪಕ್ಷ ೯ ಸ್ವತಂತ್ರ ೧೩, ನಿಮ್ನ ವರ್ಗ ೫.

ಬೊಂಬಾಯಿ

೩೦೨ ಸ್ಥಾನಗಳಲ್ಲಿ ಕಾಂಗ್ರೆಸ್ ೨೬೦ ಸೋಷಲಿಸ್ಟ್ ೭, ರೈತಪಕ್ಷ ೧೫, ಪರಿಗಣಿತಕೋಮು ೧, ಸ್ವತಂತ್ರರು ೧೬, ಇತರರು ೩.

ಅಸ್ಸಾಂ

೩೦ ಸ್ಥಾನಗಳಲ್ಲಿ ಕಾಂಗ್ರೆಸ್ ೨೨, ಸ್ವತಂತ್ರ ೫, ಇತರ ಪಕ್ಷ ೩.

ಪೆಪ್ಸು

ಪೆಪ್ಸುವಿನಲ್ಲಿ ತೋರಬಿದ್ದ ಫಲಿತಾಂಶದಂತೆ ೨೧ ಸ್ಥಾನದಲ್ಲಿ ಅಕಾಲಿಪಕ್ಷ ೪, ಕಾಂಗ್ರೆಸ್ ೧೨, ಇತರರು ೩, ಕೆ-ಎಂ-ಪಿ. ೧, ಸ್ವತಂತ್ರ ೧.

ಪಶ್ಚಿಮ ಬಂಗಾಳ

೫೩ ಸ್ಥಾನಗಳಲ್ಲಿ ಕಾಂಗ್ರೆಸ್ ೩೭, ಇತರರು ೧೮.

ದೆಹಲಿ

೪೦ ಸ್ಥಾನಗಳಲ್ಲಿ ಕಾಂಗ್ರೆಸ್ ೩೧, ಜನತಾ ಪಕ್ಷ ೧, ಸ್ವತಂತ್ರ, ೪, ಸೋಷಲಿಸ್ಟ್ ೨, ಹಿಂದೂಮಹಾಸಭೆ ೧, ಇತರರು ೧.

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ತೋರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟಿನ ಚುನಾವಣೆ ಫಲಿತಾಂಶದ ಒಟ್ಟು ೧೫೦ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೯೩, ಕೆ- ಎಂ- ಪಿ ೪ ಗಣತಂತ್ರ ಪರಿಷತ್ ೩, ಪೀಪಲ್ಸ್ ಫ್ರಂಟ್ ೨, ರೈತ ೨, ಸ್ವತಂತ್ರ ೧೩ ಇತರರು ೧೩.

ರಾಜಕಮಲ್

20-1-52 ರಿಂದ

ಅಮೋಘವಾದ 2ನೇ ವಾರ

ದಿನವಹಿ 3 ಪ್ರದರ್ಶನಗಳು

* ಅಮ್ಮ *

(ತಮಿಳು)

ಭೂಮಿಕೆ—ಬಿ ಎಸ್. ಸರೋಜ, ಲಲಿತ, ಶಾಂತಕುಮಾರಿ, ನಂಬಿಯಾರ್ ಮುಂತಾದವರು.

ಕೋಲಾರ ಚಿನ್ನದ ಗಣಿಯಲ್ಲಿ ಭಾರಿ ಆಸ್ಫೋಟನೆ

ಮೊನ್ನೆ ಬೆಳಿಗ್ಗೆ ೭-೧೨ರ ಸಮಯದಲ್ಲಿ, ಚಿನ್ನದ ಗಣಿ ಪ್ರದೇಶದ ಭೂಗರ್ಭದಲ್ಲಿ ಬಂಡೆಯು ಭಾರಿ ಆಸ್ಫೋಟನೆಯಾಗಿ, ಒಂದು ಮೈಲಿ ಫಾಸಲೆಯಲ್ಲಿರುವ ಮನೆ ಮಠಗಳಿಗೂ, ಸಾರ್ವಜನಿಕ ಭವನಗಳಿಗೂ ತೀವ್ರ ಜಖಂ ಆಗಿದೆ.

ಛಾಂಪಿಯನ್ ರೀಫ್ ಮತ್ತು ಮೈಸೂರು ಮೈನ್ಸ್ ಗಣಿಗಳ ಮಧ್ಯೆ, ೩೮೦೦ ಅಡಿಗಳ ಕೆಳಗೆ 'ಗಿಲ್ಬರ್ಟ್ ಷಾಫ್ಟ್' ಎಂಬಲ್ಲಿ ಆಸ್ಫೋಟನೆಯಾಗಿದೆ. ಒಟ್ಟು ಸುಮಾರು ೪—೬ ಲಕ್ಷ ರೂ. ನಷ್ಟವಾಗಿದೆಯೆಂದು ಅಂದಾಜು ಹಾಕಲಾಗಿದೆ.

ಅನೇಕ ಮನೆಗಳು ಕುಸಿದು ಬಿದ್ದುದರಿಂದ ೮ ಮಂದಿಗೆ ಗಾಯಗಳಾದುವೆಂದು ವರದಿಯಾಗಿದೆ. ಅನೇಕ ಗಣಿ ಕೆಲಸಗಾರರೂ, ಪೊಲೀಸರೂ ವಸತಿಯಿಲ್ಲದೆ ನಿರಾಶ್ರಿತರಾಗಿದ್ದಾರೆ.

ಛಾಂಪಿಯನ್ ರೀಫ್ ಗಣಿಯಲ್ಲಿ, ಸುಮಾರು ೭೦೦ ಮಂದಿ ಕೆಲಸಗಾರರು ಬೆಳಗಿನ ಹಾಜರಿಯನ್ನು ಒಪ್ಪಿಸಿ ಭೂಗರ್ಭಕ್ಕೆ ಇಳಿಯುತ್ತಿದ್ದಾಗ, ಗಣಿಯ ಒಳಗಡೆ ದೊಡ್ಡ ಆಸ್ಫೋಟನೆಯಾಯಿತು. ತಕ್ಷಣವೇ ಗಣಿಯನ್ನು ಸೀಲ್ ಮಾಡಲಾಯಿತು.

ಛಾಂಪಿಯನ್ ರೀಫಿನ ಪೊಲೀಸ್ ಲೈನ್, ಮನೆಗಳು ವಾಸಕ್ಕೆ ಅನರ್ಹವಾಗಿವೆ. ಆಸ್ಫೋಟನೆಯ ಫಲವಾಗಿ, ಸವಿಾಪದ ಸಬ್ ಜೈಲಿನ ಗೋಡೆಗಳು ಕುಸಿದು ಬಿದ್ದವು. ತಕ್ಷಣವೇ ೫೦ ಮಂದಿ ಕೈದಿಗಳನ್ನು ಕೋಲಾರ ಜಿಲ್ಲಾ ಜೈಲಿಗೆ ವರ್ಗಾಯಿಸಲಾಯಿತು.

ಸ್ಯಾನಿಟರಿ ಬೋರ್ಡಿನ ಭವನ, ಸೆಂಟ್ ಮೇರಿ ಚರ್ಚ್, ಛಾಂಪಿಯನ್ ರೀಫ್ ರೈಲ್ವೆ ನಿಲ್ದಾಣ, ಪೊಲೀಸ್ ಠಾಣೆ, ವಿಶೇಷ ಮ್ಯಾಜಿಸ್ಟ್ರೇಟರ ಕೋರ್ಟ್, ಮತ್ತಿತರ ಖಾಸಗಿ ಭವನಗಳಿಗೆ ಜಖಂ ಆಗಿದೆ.

ಸವಿಾಪದ ಚರ್ಚಿನಲ್ಲಿ ಸುಮಾರು ೪೦೦ ಮಂದಿ ಪ್ರಾರ್ಥನೆ ನಡೆಸುತ್ತಿದ್ದಾಗ, ಮೇಲಿನ ಛಾವಣಿಯು ಕುಸಿದು ಬಿದ್ದು ಕೆಲವರಿಗೆ ಗಾಯಗಳಾದವು. ಸೆಂಟ್ ಮೇರಿ ಚರ್ಚು ಸಂಪೂರ್ಣವಾಗಿ ನೆಲಸಮವಾಗುವ ಸಂಭವವಿದೆ.

ಪೊಲೀಸ್ ಲೈನಿನಲ್ಲಿ ಕುಸಿದ ಬಿದ್ದ ಗೋಡೆಯ ಕೆಳಗೆ ಸಿಕ್ಕಿಕೊಂಡಿದ್ದ ಮಗುವನ್ನು ರಕ್ಷಿಸಲಾಯಿತು.

ರೈಲ್ವೆ ಸಂಚಾರ ಬಂದ್

ಬೌರಿಂಗ್ ಪೇಟೆ-ಮಾರಿಕುಪ್ಪಂ ಭಾಗದ ರೈಲುಗಳನ್ನು ಮುಂದೆ ತಿಳಿಸುವವರೆಗೂ ನಿಲ್ಲಿಸಲಾಗಿದೆ.

ಮಹಾ ಚುನಾವಣೆಯಿಂದ ಉದ್ಭವಿಸಿರುವ ತೊಡಕು

ಈಗಿನ ಮಹಾ ಚುನಾವಣೆಗಳಿಂದ ಉದ್ಭವಿಸಿರುವ ರಾಜ್ಯಾಂಗದ ತೊಡಕುಗಳನ್ನು ಪ್ರಾಂತ್ಯಾಧಿಕಾರಿಗಳು, ವಿವರಣೆಗಳಿಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆಂದು ಸರ್ಕಾರದ ವಕ್ತಾರರು ತಿಳಿಸಿದರು.

ಓರ್ವ ವ್ಯಕ್ತಿ, ಶಾಸನಸಭೆ ಮತ್ತು ಪಾರ್ಲಿಮೆಂಟಿನಲ್ಲಿರಲು ಬಯಸಿದರೆ ಮತ್ತೊಂದು ಸ್ಥಾನದ ರಾಜೀನಾಮೆ ಪತ್ರವನ್ನು ಆತ ಯಾರಿಗೆ ಕಳುಹಿಸಬೇಕು? ಎಂಬುದು ಒಂದು ತೊಡಕಿನ ಪ್ರಶ್ನೆಯಾಗಿದೆ.

ಚುನಾವಣೆಯ ಫಲಿತಾಂಶವು ಅಧಿಕೃತವಾಗಿ ಹೊರಬಿದ್ದ ೧೪ ದಿನಗಳೊಳಗಾಗಿ ಶಾಸನ ಸಭೆಗೆ ರಾಜೀನಾಮೆಕೊಡದಿದ್ದಲ್ಲಿ ಅವರು ಪಾರ್ಲಿಮೆಂಟಿನ ಸದಸ್ಯತ್ವವನ್ನು ಕಳೆದುಕೊಳ್ಳುವರೆಂದು ರಾಜ್ಯಾಂಗದಲ್ಲಿ ಸೂಚಿಸಲಾಗಿ. ದಿಶಾಸನ ಸಭೆಯ ಸದಸ್ಯತ್ವದ ರಾಜೀನಾಮೆಯನ್ನು ಸ್ವೀಕರಿಸುವವರು ನ್ಯಾಯವಾಗಿ ಶಾಸನ ಸಭಾಧ್ಯಕ್ಷರು.

ಹೊಸ ಶಾಸನ ಸಭೆಯಿನ್ನೂ ಸೇರದಿರುವುದರಿಂದ ಈಗಿನ ಶಾಸನ ಸಭಾಧ್ಯಕ್ಷರು ರಾಜೀನಾಮೆಗಳನ್ನು ಸ್ವೀಕರಿಸಲು ಅಧಿಕಾರ ಹೊಂದಿರುವರೆ?

ಹೊಸ ಶಾಸನ ಸಭೆಗೆ ಚುನಾಯಿತರಾಗಿರುವವರು ಪ್ರಮಾಣವಚನ ಸ್ವೀಕರಿಸುವುದಕ್ಕೆ ಮೊದಲೇ ಚುನಾವಣೆಯ ಫಲಿತಾಂಶ ಹೊರಬಿದ್ದ ತಾರೀಖಿನಿಂದ ಸಂಬಳ ಪಡೆಯಲು ಅರ್ಹತೆ ಪಡೆದಿದ್ದರೂ, ಎಂ. ಎಲ್. ಎ. (ಶಾಸನಸಭಾ ಸದಸ್ಯರು) ಎಂದು ಕರೆಯಲ್ಪಡಬಹುದೇ ? ಎಂಬುದು ಮತ್ತೊಂದು ಪ್ರಶ್ನೆಯಾಗಿದೆ.

ಹೊಸ ಶಾಸನ ಸಭೆಗೆ ಚುನಾಯಿತರಾಗಿರುವವರು ಶಾಸನ ಸಭೆಯಲ್ಲಿ ಕೂರುವ ಪೂರ್ವ ಬೇರೊಬ್ಬರಿಗೆ ಸ್ಥಾನವನ್ನೊದಗಿಸಲು ಅಥವ ಮತ್ಯಾವ ಕಾರಣದಿಂದಲೂ ರಾಜೀನಾಮೆ ಕೊಡಬಹುದೇ ಎಂಬುದು ಮೂರನೆಯ ಪ್ರಶ್ನೆಯಾಗಿದೆ.

ಸಂಬಳಗಳಿಗೆ ಶಾಸನದಂತೆ ಚುನಾವಣಾ ಫಲಿತಾಂಶ ಹೊರಬಿದ್ದ ದಿನದಿಂದ ಚುನಾಯಿತರಾದವರು, ಸಂಬಳಕ್ಕೆ ಅರ್ಹತೆಯನ್ನು ಪಡೆದರೂ ರಾ ಅವರು ಶಾಸನ ಸಭೆಯಲ್ಲಿ ಪ್ರಮಾಣವಚನ ಸ್ವೀಕರಿಸುವವರೆಗೆ ಹಣವನ್ನು ಪಡೆಯುವಂತಿಲ್ಲ.

ಪ್ರಸ್ತುತ ಪರಿಸ್ಥಿತಿಯಲ್ಲಿ ಪ್ರಾಂತ್ಯಾಧಿಕಾರಿಗಳು ೨-೩ ತಿಂಗಳ ಕಾಲ ಹೊಂಗೆ ಮತ್ತು ಒಳಕ್ಕೆ ಪ್ರವೇಶಿಸುವ ಸದಸ್ಯರಿಗೆ ಸಂಬಳ ಕೊಡಬೇಕಾಗಿದೆ.

ಅನುಭವ ಸಾಲದಿದ್ದರಿಂದ ತಪ್ಪುಗಳಿವೆ, ಕ್ಷಮಿಸಿ

'ಕಾಂಗ್ರೆಸ್ಸಿನ ಹಿಂದಿನ ತಪ್ಪುಗಳನ್ನೂ ಮತ್ತು ಅಪಮಾರ್ಗಗಳನ್ನು ಕ್ಷಮಿಸಿ, ಅದನ್ನೆಲ್ಲಾ ಮರೆತು ಬಿಡಿ' ಎಂದು ಮುಂಬಯಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರು ಮುಂಬಯಿ ವಾಣಿಜ್ಯ ಸಂಸ್ಥೆಯ ಆಶ್ರಯದಲ್ಲಿ ವ್ಯಾಪಾರೋದ್ಯಮಿಗಳನ್ನೂ ಮತ್ತು ಪ್ರಜೆಗಳನ್ನೂ ಪ್ರಾರ್ಥಿಸಿಕೊಂಡರು.

ನಮಗಿನ್ನೂ ಅನುಭವ ಸಾಲದ್ದರಿಂದಲೇ ತಪ್ಪುಗಳು ಮಾಡಿದ್ದಾರೆಂಬುದಾಗಿ ಮುಂಬಯಿಯ ಸುಮಾರು ೫೦೦ ಮಂದಿ ಕೈಗಾರಿಕೋದ್ಯಮಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ ತಿಳಿಸಿದರು. ಪಾಟೀಲರವರು ಪಾರ್ಲಿಮೆಂಟಿಗೆ ಚುನಾಯಿತರಾಗಿರುವುದಕ್ಕಾಗಿ ಅವರ ಗೌರವಾರ್ಥವಾಗಿ ಮುಂಬಯಿಯ ವರ್ತಕ ಮಂಡಳಿಯು ಸತ್ಕಾರ ಕೂಟ ಒಂದನ್ನೇರ್ಪಡಿಸಿತ್ತು.

ಅಧ್ಯಕ್ಷಗಿರಿ ಸ್ಪರ್ಧೆಯಿಂದ ಮೆಕಾರ್ಥರ್ ವಾಪಸ್

ಇಲಿನಾಯ್ಸ್ ಸಂಸ್ಥಾನ ಕ್ಷೇತ್ರದಿಂದ ರಿಪಬ್ಲಿಕನ್ ಪಕ್ಷದ ಅಧ್ಯಕ್ಷಗಿರಿ ಉಮೇದುವಾರಿಕೆಯಿಂದ ತಮ್ಮ ಹೆಸರನ್ನು ತೆಗೆಯುವಂತೆ ಮಾಜಿ ಜಪಾನಿನ ದಂಡನಾಯಕ ಜ|| ಮೆಕಾರ್ಥರರು ಮನವಿ ಮಾಡಿದರು.

ವೆಲ್‌ಕಮ್ ಕಾಫೀ ಕ್ಲಬ್

(ಪ್ರಭಾ ಟಾಕೀಸ್ ಎದುರು)

೨೩-೧-೫೨ ರಿಂದ ಪ್ರಾರಂಭ

ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ,

ಅಪ್ಪಟ ತುಪ್ಪದ "ಕೇಸರೀ ಭಾತ್"

ಉತ್ತಮವಾದ

'ಸಾದಾ ಸೆಟ್ ದೋಸೆ'

ಒಂದನೇ ನಂ. ಕಾಫೀ ಮತ್ತು ಟೀ ಸೇವಿಸಲು ದಯಮಾಡಿಸಿ.

ಅಮೇರಿಕಾ ಸಹಾಯ ನಿಲ್ಲಿಸಲಾಗಿಗೆ

ಈಜಿಪ್ಟ್, ಇರಾಕ್, ಇರಾನ್, ಬರ್ಮಾ ಮತ್ತು ಅಫ್ಘಾನಿಸ್ಥಾನಗಳಿಗೆ ತಾತ್ಕಾಲಿಕವಾಗಿ ಆರ್ಥಿಕ ಮತ್ತು ಟೆಕ್ನಿಕಲ್ ಸಹಾಯ ನಿಲ್ಲಿಸಲಾಗಿದೆಯೆಂದು ಅಮೇರಿಕಾದ ಟೆಕ್ನಿಕಲ್ ಸಹಾಯನಿಧಿ ಸಲಹೆಗಾರರಾದ ಎಡ್ವರ್ಡ್ ಹಾರಿಮನ್‌ರವರು ಹೇಳಿರುವರು.

ಟ್ರೂಮನ್ನರ ಯುದ್ಧ

ಕೊರಿಯಾದಲ್ಲಿ ನಡೆಯುತ್ತಲಿರುವ ಯುದ್ಧವು 'ಟ್ರೂಮನ್ನರ ಯುದ್ಧ' ವೆಂದು ಅಮೆರಿಕಾ ಸೆನೆಟರ್ ರಾಬರ್ಟ್ ಟೇಫ್ಟ್ ರವರು ಚುನಾವಣಾ ಭಾಷಣದಲ್ಲಿ ಅಧ್ಯಕ್ಷ ಟ್ರೂಮನ್ನರ ನೀತಿಯನ್ನು ಖಂಡಿಸಿದರು.

ಪ್ಯಾರಿಸ್ಸಿಗೆ

ಕಾಶ್ಮೀರ ಪ್ರಧಾನಿ ಷೇಕ್ ಅಬ್ದುಲ್ಲಾ ಭಾರತ ವಿದೇಶಾಂಗಶಾಖಾ ಸೆಕ್ರಟರಿ ಜನರಲ್ ಶ್ರೀ ಗಿರಿಜಾಶಂಕರಬಾಜಪೈ, ಮತ್ತು ಭಾರತದ ಅಟಾರ್ನಿ ಜನರಲ್‌ರವರು ಕಾಶ್ಮೀರ ಚರ್ಚೆಯಲ್ಲಿ ಭಾಗವಹಿಸಲು ದೆಹಲಿಯಿಂದ ವಿಮಾನದ ಮೂಲಕ ಪ್ಯಾರಿಸ್ಸಿಗೆ ಪ್ರಯಾಣಮಾಡಿದರು.

ವ್ಯವಸಾಯ ಶಾಖೆ ಜಾಯಿಂಟ್ ಡೈರೆಕ್ಟರ್

ಬೆಂಗಳೂರು ಜ ೨೩

ವ್ಯವಸಾಯ ಶಾಖೆ ಡೆಪ್ಯುಟಿ ಡೈರೆಕ್ಟರ್ ಶ್ರೀ ಬಿ. ಟಿ. ನಾರಾಯಣ ರವರು ವ್ಯವಸಾಯ ಶಾಖೆಯ ಜಾಯಿಂಟ್ ಡೈರೆಕ್ಟರ್ ಮತ್ತು ವ್ಯವಸಾಯ ವಿಸ್ತರಣೆ ಯೋಜನೆಯ ಜಾಯಿಂಟ್ ಡೈರೆಕ್ಟರ್ ಆಗಿ ನೇಮಿಸಲಾಗಿದೆ.

ರಣಜಿತ್

೨೫-೧-೫೨ ರಿಂದ ಅಮೋಘ ಪ್ರಾರಂಭ

ಪೃಥ್ವಿರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆ ವಾ ರ ::—

(ಹಿಂದಿ)

ಪ್ರಕಾಶಕರು :—ಜಿ ಎಲ್. ಸ್ವಾಮಿ ಟ್ರೂಲೆಸ್ಸ್ ಬ್ಯೂರೋ ಮೈಸೂರು

ಮುದ್ರಕರು—ಹಿ. ಕಾ. ಸುಬ್ಬರಾವ್ ಬೋರ್ಡ್ ಮುದ್ರಣಾಲಯ ಮೈಸೂರು

ವುಡ್‌ಲ್ಯಾಂಡ್ಸ್ * ೧೮—೧—೫೨ ರಿಂದ ಅಮೋಘ ೩ನೇ ವಾರ

* ರಾ ಜ ಪು ತ್ *

ಪಾತ್ರ— ಸುರಯ್ಯ, ಜೈರಾಜ್, ಕುಲದೀಪ್, ಸಪ್ರು.

ಫೋನ್ ೫೭೪ (ಲೀಸ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೮—೧—೧೯೫೨ನೇ ಸೋಮವಾರ [ಸಂಚಿಕೆ ೧೨೯

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಕಾಂಗ್ರೆಸ್ ನಾಯಕರ ದಸ್ತಗಿರಿ

ಜೋಹಾನ್ಸ್‌ಬರ್ಗ್‌ನಲ್ಲಿ ನಿನ್ನೆ ಭಾರತೀಯ ಕಾಂಗ್ರೆಸ್ ನಾಯಕರಾದ ಡಾ|| ದಾದೂ, ನಾಯಕರ್ ಮುಂತಾದ ಹತ್ತು ಮಂದಿ ನಾಯಕರನ್ನು ದಸ್ತಗಿರಿ ಮಾಡಲಾಗಿದೆ. ಪೊಲೀಸರ ಕೆಲಸಕ್ಕೆ ಅಡ್ಡಿ ತಂದರೆಂದು ಇವರ ಮೇಲೆ ಅಪಾದನೆ ಹೊರಿಸಿ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ.

ಮೈಸೂರು ಸಂಸ್ಥಾನದಾದ್ಯಂತ ಕಾಂಗ್ರೆಸ್ಸಿಗೆ ಜಯಭೇರಿ

ಬೆಂಗಳೂರು ಜ ೨೭

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳಲ್ಲಿ ಸಂಸ್ಥಾನದಾದ್ಯಂತ ಕಾಂಗ್ರೆಸ್ ಜಯಗಳಿಸಿದೆ ಕೇವಲ ಕೆಲವು ಸ್ಥಾನಗಳು ಮಾತ್ರ ಇತರ ಪಕ್ಷದವರಿಗೆ ಹೋಗಿವೆ

ಕಾಂಗ್ರೆಸ್ ಪಡೆದಿರುವ ಸ್ಥಾನಗಳು (ಶಾಸನಸಭೆಗೆ)

ಬೆಂಗಳೂರು

ಮಲ್ಲೇಶ್ವರ	ವಿ. ಆರ್. ನಾಯಿಡು
ಗಾಂಧಿನಗರ	ಡಿ. ವೆಂಕಟೇಶ್
ಚಾಮರಾಜಪೇಟೆ	ಆರ್. ಅನಂತರಾಮನ್
ಬಸವನಗುಡಿ	ಪಿ. ಆರ್. ರಾಮಯ್ಯ
ಕಲ್ಪ್ಪಪೇಟೆ	ಬಿ. ಎಂ. ಸೀನ
ಅಲಸೂರು	ಪಳನಿಯಪ್ಪ
ಸೇಂಟ್‌ಜಾನ್‌ಹಿಲ್	ವಿ. ಎಂ. ಮ್ಯಾಸ್ಕರೆನ್ಹಾಸ್
ಮೈಸೂರು ಉತ್ತರ	ಟಿ. ಮರಿಯಪ್ಪ
ದಕ್ಷಿಣ	ಬಿ. ನಾರಾಯಣಸ್ವಾಮಿ
ಮಾಲೂರು	ಹೆಚ್. ಸಿ. ಲಿಂಗಾರೆಡ್ಡಿ
ಕೊಂಟಗಿರಿ	ಆರ್. ಚೆನ್ನಿಗರಾಮಯ್ಯ
	ಮುದ್ದುರಾಮಯ್ಯ
ರಾಮನಗರಂ	ಕೆ. ಹನುಮಂತಯ್ಯ
ಶ್ರೀರಂಗಪಟ್ಟಣ	ಕೆ. ಪುಟ್ಟಸ್ವಾಮಿ
ಮಂಡ್ಯ	ಕೆ. ವಿ. ಶಂಕರೇಗೌಡ
ಹುಣಸೂರು	ಡಿ. ದೇವರಾಜೇ ಅರಸ್
ಕಡೂರು	ವೈ. ಎಂ. ಚಂದ್ರಶೇಖರಯ್ಯ
ಅರಸೀಕೆರೆ	ಕೆ. ಪಂಚಾಕ್ಷರಯ್ಯ
ಬೇಲೂರು	ದಿ. ಎನ್. ಬೋರಣ್ಣಗೌಡ
ಶಿವಮೊಗ್ಗ	ಎಸ್. ಆರ್. ನಾಗಪ್ಪಶೆಟ್ಟಿ
ಬಂಗಾರುಪೇಟೆ	ಕೆ. ಸಿ. ರೆಡ್ಡಿ
ತಿಪಟೂರು	ತಿಮ್ಮೇಗೌಡ
ಮಾಗಡಿ	ಎಸ್. ಸಿದ್ದಪ್ಪ
ದೊಡ್ಡಬಳ್ಳಾಪುರ	ಟಿ. ಸಿದ್ದಲಿಂಗಯ್ಯ
ಪಾಂಡವಪುರ	ಸೀಲೇಗೌಡ
ಮದ್ದೂರು	ಹೆಚ್. ಕೆ. ವೀರಣ್ಣಗೌಡ
ಮೈಸೂರು ತಾ||	ಶಿವನಂಜೇಗೌಡ
ಚಾಮಗಲ್	ಚಿಕ್ಕಣ್ಣ
ಹೊನ್ನಾಳಿ	ಹೆಚ್. ಎಸ್. ರುದ್ರಪ್ಪ
ಕೋರಾ (ತುಮಕೂರು)	ವಿ. ಸಿ. ನಂಜುಂಡರಾಧ್ಯ
	ತಿಮ್ಮೆಗೌಡ
ಕರ್ಣಕರ್ಣ ಹಳ್ಳಿ	
ಪಾವಗಡ	ಎಂ. ಮರಿಯಪ್ಪ
	ಟಿ. ಹನುಮಂತಯ್ಯ
ಬಿದಾವತಿ	ವರಾಧಾಚಾರ್
ಚಿಕ್ಕನಾಯ್ಕನಹಳ್ಳಿ	ಲಿಂಗದೇವರು
ಗುಬ್ಬಿ	ಅಣ್ಣಯ್ಯಪ್ಪ
ಹಿರಿಯೂರು	ಮರಿಯಪ್ಪ
	ಟಿ ಹನುಮಯ್ಯ
	ಮಾಲಿ ಮರಿಯಪ್ಪ
ಮೂಡಿಗೆರೆ	ಸುಬ್ಬಮ್ಮ
	ಜಿ ಪುಟ್ಟಸ್ವಾಮಿ
ಅರಸೀಕೆರೆ	ಎಂ ವೆಂಕಟಪ್ಪ
ಚನ್ನರಾಯಪಟ್ಟಣ	ಲಕ್ಕಪ್ಪ

ಇತರ ಪಕ್ಷಗಳು

ಸೋಷಲಿಸ್ಟ್

ಸಾಗರ	ವಿ ಗೋಪಾಲಗೌಡ
ಚಿತ್ರದುರ್ಗ	ಮುಲ್ಕಾ ಗೋವಿಂದರೆಡ್ಡಿ

ಕೆ. ಎಂ. ಪಿ.

ಚನ್ನಗಿರಿ	ಎಲ್. ಸಿದ್ದಪ್ಪ
ತುರುವೇಕೆರೆ	ಬಿ ಹುಚ್ಚೇಗೌಡ
ತರೀಕೆರೆ	ಟಿ ನಾಗಪ್ಪ
ಜಗಳೂರು	ಮಹಮದ್ ಇಮಾಂ

ಕಮ್ಯೂನಿಸ್ಟ್

ಚಿನ್ನದಗಣಿ	ಪಾರ್ಕ

ಶೆಡ್ಯೂಲ್ ಕ್ಯಾಸ್ಟ್ ಫೆಡರೇಷನ್

ಚಿನ್ನದಗಣಿ	ಸ್ವಾಮಿದೊರೆ

ಸ್ವತಂತ್ರ

ಚಿಂತಾಮಣಿ	ಅಂಜನೇಯರೆಡ್ಡಿ
	ನಾರಾಯಣಪ್ಪ
ನಾಗಮಂಗಲ	ಶಂಕರಲಿಂಗೇಗೌಡ
ಕೋಲಾರ	ಪಟ್ಟಾಭಿರಾಮನ್
ಪಿರಿಯಾಪಟ್ಟಣ	ಎಸ್ ಎಂ ಮರಿಯಪ್ಪ

ಪಾರ್ಲಿಮೆಂಟಿಗೆ

ಕಾಂಗ್ರೆಸ್

ಬೆಂ. ಉತ್ತರ	ಎನ್ ಕೇಶವಯ್ಯಂಗಾರ್
,, ದಕ್ಷಿಣ	ಟಿ. ಮಾದಯ್ಯಗೌಡ
ಶಿವಮೊಗ್ಗಾ	ಒಡೆಯರ್
ಮಂಡ್ಯ	ಕೆ ಎಂ ಶಿವನಂಜಪ್ಪ

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಮದರಾಸ್

೩೧೧ ಸ್ಥಾನಗಳಲ್ಲಿ ಕಾಂಗ್ರೆಸ್ ೧೫೨, ಕೆ. ಎಂ. ಪಿ ೩೨, ಕೃಷಕ್ ಪಕ್ಷ ೧೦, ಕಮ್ಯೂನಿಸ್ಟ್ ೪೭, ಸ್ವತಂತ್ರ ೪೯, ಇತರ ಪಕ್ಷ ೯೨.

ಹೈದರಾಬಾದ್

೧೭೮ ಸ್ಥಾನಗಳ ಪೈಕಿ ಕಾಂಗ್ರೆಸ್ ೯೦, ಸೋಷಲಿಸ್ಟ್ ೧೦, ಡೆಮೊಕ್ರಾಟಿಕ್ ಪಕ್ಷ ೪೧, ರೈತಪಕ್ಷ ೯, ಸ್ವತಂತ್ರ ೧೩, ನಿಮ್ನ ವರ್ಗ ೫.

ಪಶ್ಚಿಮ ಬಂಗಾಳ

೧೦೯ ಸ್ಥಾನಗಳಲ್ಲಿ ಕಾಂಗ್ರೆಸ್ ೭೧, ಇತರರು ೩೮.

ಮಧ್ಯಪ್ರದೇಶ

೧೮೪ ಸ್ಥಾನಗಳಲ್ಲಿ ಕಾಂಗ್ರೆಸ್ ೧೫೭, ಕೆ. ಎಂ. ಪಿ. ೭, ಸೋಷಲಿಸ್ಟ್ ೧, ರಾಮರಾಜ್ಯ ಪರಿಷತ್ತು, ೨, ಸ್ವತಂತ್ರ ೧೭. ಇತರರು ೧

ಮಧ್ಯಭಾರತ

೫೭ ಸ್ಥಾನಗಳಲ್ಲಿ ಕಾಂಗ್ರೆಸ್ ೪೩, ಸೋಷಲಿಸ್ಟ್ ೩, ಸ್ವತಂತ ೩, ಇತರ ಪಕ್ಷ ೭.

ಒರಿಸ್ಸಾ

೯೪ ಸ್ಥಾನಗಳಲ್ಲಿ ಕಾಂಗ್ರೆಸ್ ೪೭, ಸೋಷಲಿಸ್ಟ್ ೯, ಸ್ವತಂತ್ರ ೧೮, ಇತರ ಪಕ್ಷ ೨೦.

ಬೀಹಾರ್

೫೭ ಸ್ಥಾನಗಳಲ್ಲಿ ಕಾಂಗ್ರೆಸ್ ೨೫, ಜನತಾಪಕ್ಷ ೨, ಇತರ ಪಕ್ಷ ೨೦.

ಅಸ್ಸಾಂ

೪೭ ಸ್ಥಾನಗಳಲ್ಲಿ ಕಾಂಗ್ರೆಸ್ ೩೪, ಸ್ವತಂತ್ರ ೪, ಇತರ ಪಕ್ಷ ೮.

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ಹೊರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟಿನ ಚುನಾವಣೆ ಫಲಿತಾಂಶದ ಒಟ್ಟು ೧೫೮ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೧೧೩, ಕೆ. ಎಂ. ಪಿ. ೪, ಯುನೈಟೆಡ್ ಫ್ರಂಟ್ ೩, ಪೀಪಲ್ಸ್ ಫ್ರಂಟ್ ೭, ರೈತ ೨, ಸ್ವತಂತ್ರ ೧೫, ಇತರರು ೧೫.

ಶ್ರೀ ಚನ್ನಬಸಪ್ಪನವರ ಪರಾಜಯ

ಮೈಸೂರು ಜ ೨೮

ಪಿರಿಯಾಪಟ್ಟಣ ಕ್ಷೇತ್ರದಲ್ಲಿ ೫೦೦ ಓಟುಗಳನ್ನು ಹೆಚ್ಚಾಗಿ ಗಳಿಸಿ ಸ್ವತಂತ್ರ ಸ್ಪರ್ಧಿ ಶ್ರೀ ಮರಿಯಪ್ಪನವರು ಮೈಸೂರು ಜಿಲ್ಲಾಬೋರ್ಡ್ ಅಧ್ಯಕ್ಷ ಶ್ರೀ ಚನ್ನಬಸಪ್ಪನವರನ್ನು ಪರಾಜಯಗೊಳಿಸಿರುವರು.

ಇಂದು ಮತ ಎಣಿಕೆ

ಈ ದಿನ ಈ ಕೆಳಗಿನ ಸ್ಥಳಗಳಲ್ಲಿ ಮತಗಳ ಎಣಿಕೆ ನಡೆಯುತ್ತದೆ

ಮಳವಳ್ಳಿ, ಗೋರಿಬಿದನೂರು, ಕುಣಿಗಲ್, ವಿಜಯಪುರ, ನಂಜನಗೂಡು, ಕೃಷ್ಣರಾಜಪೇಟೆ, ಕೃಷ್ಣರಾಜನಗರ, ಹಾಸನ, ತೀರ್ಥಹಳ್ಳಿ, ಹೊಳಲ್ಕೆರೆ.

ಶ್ರೀ ದಾಸಪ್ಪನವರ ಮತ ಎಣಿಕೆ

ಇಲ್ಲಿಯವರೆಗೆ ಎಣಿಕೆಯಲ್ಲಿ ಶ್ರೀ ದಾಸಪ್ಪನವರು ಒಂದು ಲಕ್ಷ ೩೦ ಸಾವಿರ ಮತವನ್ನು ಗಳಿಸಿರುವರು. ಇನ್ನೂ ಅವರ ೯೦ ಪೆಟ್ಟಿಗೆಗಳನ್ನು ಎಣಿಸಬೇಕಾಗಿದೆ

ಲೆಫ್ಟಿನೆಂಟ್ ಗೌರ್ನರ್‌ಗಳ ನೇಮಕ

ದೆಹಲಿ, ಹಿಮಾಚಲ ಪ್ರದೇಶ ಮತ್ತು ಮಧ್ಯಪ ದೇಶಗಳಲ್ಲಿ ಚೀಫ್ ಕಮೀಷನರುಗಳ ಸ್ಥಾನಗಳನ್ನು ಲೆಫ್ಟಿನೆಂಟ್ ಗೌರ್ನರ್ ಸ್ಥಾನಗಳನ್ನಾಗಿ ಮಾರ್ಪಾಡಿಸಬೇಕೆಂದು ಭಾರತ ಸರ್ಕಾರ ನಿರ್ಧರಿಸಿದೆಯೆಂದು ಹೇಳಲಾಗಿದೆ

ಮೈಸೂರು ಚುನಾವಣೆಯಲ್ಲಿ ಬಲಾಬಲ (ಶಾಸನಸಭೆ)

ಕಾಂಗ್ರೆಸ್ ಪಕ್ಷ	44
ಸೋಷಲಿಸ್ಟ್	2
ಕೆ. ಎಂ. ಪಿ.	4
ಕಮ್ಯೂನಿಸ್ಟ್	1
ಷೆ. ಕಾ. ಫೆ.	1
ಸ್ವತಂತ್ರ	5
ಒಟ್ಟು	57

ಮೈಸೂರು ತಾಲ್ಲೂಕಿನ ಚುನಾವಣಾ ಫಲಿತಾಂಶ

ಮೈಸೂರು ಜ. ೨೬

ಮೈಸೂರು ತಾಲ್ಲೂಕಿನ ಚುನಾವಣೆಯ ಎಣಿಕೆಯು ನೆನ್ನೆ ದಿನ ನಡೆದು ಕಾಂಗ್ರೆಸ್ ಉಮೇದುವಾರರಾದ ಶ್ರೀ ಶಿವಸಂಜೇಗೌಡರು ಜಯಶೀಲರಾದರು.

ಮತದಾರರು ಒಟ್ಟು 17125 ಶ್ರೀಗಳಾದ ಶಿವಸಂಜೇಗೌಡರು 4633, ಮಹದೇವಸ್ವಾಮಿ 2776, ಹೊನ್ನಪ್ಪ 2400, ರಾಮಸ್ವಾಮಿ 2413, ಓಸಪ್ಪ 442, ಸಿದ್ದಯ್ಯ 1859 ಕೊನೆಯ ನಾಲ್ವರು ತಮ್ಮ ಠೇವಣಿಯನ್ನು ಕಳೆದುಕೊಂಡರು.

ಕನ್ನಡ ನಾಡಹಬ್ಬದ ದಿನಾಚರಣೆ

ಫೆಬ್ರವರಿ ಮಾಹೆಯ ೨, ೩, ೪ ಮತ್ತು ೫ನೇ ದಿನಾಂಕಗಳಲ್ಲಿ ಮಹಾರಾಜಾ ಕಾಲೇಜು ಸಂಘದ ಆಶ್ರಯದಲ್ಲಿ ಕನ್ನಡ ನಾಡಹಬ್ಬವನ್ನು ಆಚರಿಸಲಾಗುತ್ತದೆ. ಕರ್ನಾಟಕದ ಉತ್ತಮ ಸಾಹಿತಿಗಳೂ ಕವಿವರ್ಯರುಗಳೂ ಆದ ಮಾಸ್ತಿ ದ. ರಾ ಬೇಂದ್ರೆಯವರು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕ್ಷೀರಸಾಗರ, ಜಿ. ಪಿ. ರಾಜರತ್ನಂ, ಸಿ. ಕೆ. ವೆಂಕಟರಾಮಯ್ಯ, ಎಂ. ರಾಮರಾವ್, ವೆಲ್ ಗುಂಡಪ್ಪ ಮುಂತಾದವರು ಭಾಗವಹಿಸುವರು. ಈ ಸಂದರ್ಭದಲ್ಲಿ ಕನ್ನಡದ ಮುನ್ನಡೆಗೆ ಬೇಕಾದ ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳಲಾಗುವುದು. ಆದುದರಿಂದ ಕರ್ನಾಟಕದ ಹಿತಕ್ಕಾಗಿ ಎಲ್ಲರೂ ಶ್ರಮವಹಿಸಬೇಕಾಗಿ ಈ ಮೂಲಕ ಕೋರಲಾಗಿದೆ. ಕನ್ನಡಿಗರು ಮತ್ತು ಕನ್ನಡಿಗರ ಹಿತೈಷಿಗಳೆಲ್ಲರೂ ದಿನಾಚರಣೆಯಲ್ಲಿ ಭಾಗವಹಿಸಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ಜೋಧ್‌ಪುರ ಮಹಾರಾಜರ ನಿಧನ

ಜೋಧ್‌ಪುರದ ಮಹಾರಾಜರು ರಿಪಬ್ಲಿಕ್ ದಿನಾಚರಣೆಯ ದಿನ ವಿಮಾನಾಪಘಾತದಲ್ಲಿ ಸಿಕ್ಕಿ ಜೋಧ್‌ಪುರಕ್ಕೆ ೬೦ ಮೈಲಿ ದೂರದಲ್ಲಿ ಚಾವೈ ಎಂಬಲ್ಲಿ ನಿಧನರಾದರು. ವಿಮಾನ ಚಾಲಕ ಮತ್ತು ಮತ್ತೊಬ್ಬ ಪ್ರಯಾಣಿಕ ಅಲ್ಲಿಯೇ ಭಸ್ಮವಾದರು. ಜೋಧ್‌ಪುರದ ಮಹಾರಾಜರಿಗೆ ಕೇವಲ ೨೮ ವರ್ಷ ವಯಸ್ಸು. ಅವರು ಪಾರ್ಲಿಮೆಂಟಿಗೆ ಸ್ಪರ್ಧಿಸಿದ್ದರು.

ಆರ್ಚಿಲಾಕ್ ಕರಾಚಿಗೆ

ಭಾರತದ ಮಾಜಿ ದಂಡನಾಯಕ ಫೀಲ್ಡ್ ಮಾರ್ಷಲ್, ಸರ್ ಆರ್ಚಿಲಾಕ್‌ರವರು ಕರಾಚಿಗೆ ಬಂದಿದ್ದಾರೆ. ಸ್ವಂತ ವ್ಯಾಪಾರ ಸಂಬಂಧದಲ್ಲಿ ಈ ಭೇಟಿಯೆಂದು ಹೇಳಲಾಗಿದೆ.

ಶಿವಮೊಗ್ಗಾದಲ್ಲಿ ಪಾರ್ಲಿಮೆಂಟಿಗೆ ಕಾಂಗ್ರೆಸ್ಸಿಗೆ ಜಯ ?

ಶಿವಮೊಗ್ಗಾ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಕೆ. ಎಂ. ಪಿ. ಪಕ್ಷದವರಿಗೆ 43 ಸಾವಿರ, ಸೋಷಲಿಸ್ಟರಿಗೆ 5 ಸಾವಿರ, ಜನಸಂಘಕ್ಕೆ 26 ಸಾವಿರ ಓಟು ಬಂದಿರುವುದರಿಂದ ಕಾಂಗ್ರೆಸ್ ಸ್ಪರ್ಧಿ ಶ್ರೀ ಸ್ವಾಮಿ...ರವರಿಗೆ ಸುಮಾರು ಒಂದು ಲಕ್ಷ ಓಟು ಬಂದು ಗೆಲ್ಲುವರಾಗಿದ್ದಾರೆ.

ಮಂತ್ರಿಗಳ ಜಯಾಪಜಯಗಳು

ಮೈಸೂರು ಸಂಸ್ಥಾನದ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಬಂಗಾರುಪೇಟೆ ಕ್ಷೇತ್ರದಿಂದ ಮೈಸೂರು ಶಾಸನಸಭೆಗೆ ಚುನಾಯಿತರಾಗಿದ್ದಾರೆ. ಅವರ ಪ್ರತಿಸ್ಪರ್ಧಿಗಳಾಗಿದ್ದ ೬ ಜನರೂ ತಮ್ಮ ಠೇವಣಿಯನ್ನು ಕಳೆದುಕೊಂಡಿರುವರು.

ಮಧ್ಯಭಾರತದ ಮುಖ್ಯಮಂತ್ರಿ, ಶ್ರೀ ತಖತ್‌ಮಲ್ ಜೈನರವರೂ, ರಾಜಾಸ್ಥಾನದ ಮುಖ್ಯಮಂತ್ರಿ ಶ್ರೀ ಜಯನಾರಾಯಣವ್ಯಾಸರವರೂ ಪರಾಜಯಹೊಂದಿದ್ದಾರೆ. ಬಿಹಾರಿನ ಅರ್ಥಿಕ ಮಂತ್ರಿ ಶ್ರೀ ಅನುಗ್ರಹ ನಾರಾಯಣಸಿನ್ಹ, ಬಿರ್ಸ್ವಾ ... ಶ್ರೀ ಸದಾಶಿವ ತ್ರಿಪಾಠಿ ಜಯಗಳಿಸಿದ್ದಾರೆ. ಭಾರತ ಸ್ಟೇಟ್ ಸಂಸ್ಥೆ ... ಶ್ರೀ ವಿನೋದಾನಂದಝಾರವರು, ಬಂಗಾಳ ನ್ಯಾಯಾಂಗ ಮಂತ್ರಿ, ಶ್ರೀ ಸಿದ್ಧಾರ್ಥ, ಪ್ರಜುಮದಾರ್‌ರವರೂ ಪರಾಜಯ ಹೊಂದಿದ್ದಾರೆ.

ಸ್ಥಾನಬದ್ಧರ ಬಿಡುಗಡೆ

ತಿರುವಾಂಕೂರು ಕೊಚ್ಚಿನ್ ಪ್ರಾಂತ್ಯದಲ್ಲಿ ಸ್ಥಾನಬದ್ಧರಾಗಿರುವವರನ್ನು ಬಿಡುಗಡೆಮಾಡಲು ಸರ್ಕಾರ ನಿರ್ಧರಿಸಿದೆ.

ಆಹ್ವಾನ

ದೆಹಲಿಯಲ್ಲಿ ನಡೆಯುತ್ತಿರುವ ಕಾಂಗ್ರೆಸ್ ಕಾರ್ಯಕಾರಿ ಸಭೆಗೆ ಹಾಜರಾಗಬೇಕೆಂದು ಮದ್ರಾಸ್ ಮುಖ್ಯಮಂತ್ರಿ, ಶ್ರೀ ಕುಮಾರಸ್ವಾಮಿ ರಾಜಾರವರಿಗೆ ಆಹ್ವಾನ ಬಂದಿರುವುದಾಗಿ ಗೊತ್ತಾಗಿದೆ.

ದಿವಾಳಿತನ

ಕಳೆದ ೬ ತಿಂಗಳಲ್ಲಿ ನಮ್ಮ ಚಿನ್ನದ ಸಂಗ್ರಹದಲ್ಲಿ ಮೂರನೆಯ ಒಂದು ಭಾಗ ಹೋಗಿದೆ. ಇದೇ ರೀತಿ ಮುಂದುವರಿದರೆ ಇನ್ನು ೯ ತಿಂಗಳೊಳಗಾಗಿ ದೇಶದಲ್ಲಿರುವ ಕೊನೆಯ ಚಿನ್ನದ ಗಟ್ಟಿಯೂ ಸಹ ಹೊರಟುಹೋಗುತ್ತದೆ. ಬ್ರಿಟನ್ನೇನಾದರೂ ಅಂತರರಾಷ್ಟ್ರೀಯ ವಿನಿಮಯದಲ್ಲಿ ಪೌಂಡಿನ ಬೆಲೆಯನ್ನು ಕಳೆದುಕೊಂಡಲ್ಲಿ ಆ ದ್ವೀಪದ ಜನರು ಬದುಕಿರಲು ಉಳಿಯಲು ಸಾಧ್ಯವಿಲ್ಲ. ಬ್ರಿಟನ್ನು ಈಗ ಸರ್ವನಾಶದ ಅಂಚಿನಲ್ಲಿದೆ ಎಂದು ಲಾಯ್ಡ್ಸ್ ಬ್ಯಾಂಕ್ ಅಧ್ಯಕ್ಷ ಲಾರ್ಡ್ ಬಾಲ್ಫರ್‌ರವರು ಹೇಳಿರುವರು.

ಮಾಜಿ ಮಂತ್ರಿಗಳ ಮೊಕದ್ದಮೆ ಹಿಂದಕ್ಕೆ

ಹೈದರಾಬಾದ್ ಸಂಸ್ಥಾನದ ಭಾರತ ಸರ್ಕಾರದೊಡನೆ ವಿಲೀನಗೊಳಿಸಿ, ಸಂಸ್ಥಾನದ ಮಾಜಿ ಮಂತ್ರಿಗಳ ಮೇಲಿನ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಂಡಿದೆ. ಇದರ ಪರಿಣಾಮವಾಗಿ ಕಾರಾಗೃಹದಲ್ಲಿರುವ ಮಾಜಿ ಮಂತ್ರಿಗಳ ಪೈಕಿ ೧೦ ಜನರ ಬಿಡುಗಡೆಯಾಗಿದೆ.

ಚಿಟ್ ಫಂಡು ಕಛೇರಿ

ಬೆಂಗಳೂರಿನಲ್ಲಿರುವ ಭಾರತ ಇನ್‌ವೆಸ್ಟ್‌ಮೆಂಟ್ ಲಿಮಿಟೆಡ್‌ನವರು ಮೈಸೂರು ಶ್ರೀರಾಂಪೇಟೆಯಲ್ಲಿ ನೆನ್ನೆಯ ದಿನ ತಮ್ಮ ಕಛೇರಿಯ ಒಂದು ಶಾಖೆಯನ್ನು ಆರಂಭಿಸಿದರು.

ರಾಜಕೀಯ ರಾಷ್ಟ್ರರಕ್ಷಣೆ

'ನವೆಂಬರ್' ತಿಂಗಳಲ್ಲಿ ನಡೆಯಲಿರುವ ಚುನಾವಣೆಯಲ್ಲಿ ಜಯಗಳಿಸಲು ಅಧ್ಯಕ್ಷ ಟ್ರೂಮನ್ನರು ಶಾಂತಿ ಮತ್ತು ಪ್ರಗತಿಯ ಸ್ಪರ್ಧೆಮಾಡುವ ಕಾರ್ಯಕ್ರಮವೊಂದನ್ನು ರಚಿಸಿದ್ದಾರೆ.

ರಾಷ್ಟ್ರರಕ್ಷಣೆ ಮತ್ತು ರಾಜಕೀಯ ಇವೆರಡಕ್ಕೂ ಪರಸ್ಪರ ಸಂಬಂಧವಿಲ್ಲವೆಂದೂ ತಿಳಿಸಿ, ಯಾವ ಪಕ್ಷವಾದರೂ ರಾಷ್ಟ್ರದ ಪ್ರಗತಿಯೊಂದಿಗೆ ರಾಜಕೀಯವನ್ನು ಬೆರಸುವುದಾದರೆ ಅಂತಹ ಪಕ್ಷವು ಪ್ರಜಾಸತ್ತಾತ್ಮಕ ಪಕ್ಷವಲ್ಲವೆಂಬುದಾಗಿಯೂ ಟ್ರೂಮನ್ ಹೇಳಿರುವರು.

೧೩ ಜನ ನೀರಿನಪಾಲು

ಸ್ವಾತಂತ್ರ್ಯ ದಿನಾಚರಣೆಯ ದಿನ ಕಲ್ಕತ್ತ ನಗರದ ಬಳಿ ಯುದ್ಧ ನೌಕೆಗಳನ್ನು ನೋಡಲು ಹೋಗುತ್ತಲಿದ್ದ ಗುಂಪೊಂದರಲ್ಲಿ ೧೩ ಜನ ನೀರಿನ ಪಾಲಾದರು.

ವೆಲ್‌ಕಮ್ ಕಾಫೀ ಕ್ಲಬ್
(ಪ್ರಭಾ ಟಾಕೀಸ್ ಎದುರು)
೨೩-೧-೫೨ ರಿಂದ ಪ್ರಾರಂಭ
ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ
ಅಪ್ಪಟ ತುಪ್ಪದ 'ಕೇಸರೀ ಭಾತ್'
ಉತ್ತಮವಾದ
'ಸಾದಾ ಸೆಟ್ ದೋಸೆ'
ಒಂದನೇ ನಂ. ಕಾಫೀ ಮತ್ತು ಟೀ
ಸೇವಿಸಲು ದಯಮಾಡಿಸಿ.

ಎಣಿಕೆ ಮುಂದುವರಿಯುವುದು

ಬೆಂಗಳೂರು ಜ. ೨೭

ತುಮಕೂರು ನಗರಸಭೆ ಬೂತಿನ ಪೆಟ್ಟಿಗೆಗಳಲ್ಲಿ ಬೂತಿನ ಚೀಟಿ ಅದಲುಬದಲಾಗಿದ್ದುದಕ್ಕೆ ಎಣಿಕೆನಿಂತಿತ್ತು. ಓಟಿನ ಚೀಟಿಗಳನ್ನು ಅದಲುಬದಲು ಮಾಡಿ ಎಣಿಕೆ ಮುಂದುವರಿಸಬೇಕೆಂದು ಕೇಂದ್ರ, ಚುನಾವಣಾಧಿಕಾರಿಗಳ ಸೂಚನೆ ಬಂದಿದೆ.

ಹರಿಹರದಲ್ಲಿ ಪುನಃ ಚುನಾವಣೆ

ಬೆಂಗಳೂರು ಜ. ೨೭

ಹರಿಹರದಲ್ಲಿ ಒಂದು ಮತದಾನ ಪೆಟ್ಟಿಗೆಯ ಸೀಲು ಸರಿಯಾಗಿರಲಿಲ್ಲವೆಂಬ ಕಾರಣದಿಂದ ಆ ಕ್ಷೇತ್ರದಲ್ಲಿ ಫೆಬ್ರವರಿ ೩ನೇ ತಾರೀಖು ಮರು ಚುನಾವಣೆ ನಡೆಯುತ್ತದೆ.

ದಾವಣಗೆರೆಯಲ್ಲಿ ಎಣಿಕೆ ನಿಂತಿತು

ದಾವಣಗೆರೆ ಕ್ಷೇತ್ರದಲ್ಲಿ ಸೋಷಲಿಸ್ಟ್ ಸ್ಪರ್ಧಿ ಶ್ರೀ ಕೆ. ವೀರಭದ್ರಪ್ಪನವರ ಪೆಟ್ಟಿಗೆಯೊಂದು ಕಾಣೆಯಾಗಿದ್ದುದು ಕಂಡುಬಂದ ದಾರಿದ ಓಟಿನ ಎಣಿಕೆ ಅದೇ ಘಟ್ಟದಲ್ಲಿ ನಿಂತಿದೆಯೆಂದು ತಿಳಿದುಬರುತ್ತದೆ.

ಇಲ್ಲಿಯವರೆಗೆ ಎಣಿಕೆ ಆಗಿರುವ ಪ್ರಕಾರ ಕಾಂಗ್ರೆಸ್ ಸ್ಪರ್ಧಿ ಹೆಚ್ಚಿನ ಓಟು ಪಡೆದು ಜಯಗಳಿಸಿದ್ದಾರೆ.

ನ್ಯೂ ಆಪೇರ
೨೭—೧—೫೨ ರಿಂದ
ಶೋಭನಾಚಲರವರ—
* ಸಾವಾಸಂ *
ಪಾತ್ರ—ಪ್ರಭಾಕರರಾವ್, ಕೃಷ್ಣವೇಣಿ ಕನಕಂ, ಸೀತಾರಾಂ.

ಪ್ರಕಾಶಕರು :—ಜೆ ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು—ಎಂ ಕೆ ಸುಬ್ಬರಾವ್
ಮೋಹನ್ ಮುದ್ರಣಾಲಯ ಮೈಸೂರು

ವುಡ್‌ಲ್ಯಾಂಡ್ಸ್ * ೨೫—೧—೫೨ ರಿಂದ ಅಮೋಘ ಪ್ರಾತಃಕಾಲ
ಪ್ರತಿದಿನ ಮೂರು ಆಟಗಳು
* ದಶಾವತಾರ್ *
ಪಾತ್ರ—ನಿರೂಪರಾಯ್, ತ್ರಿಲೋಕ್‌ಕಪೂರ್.

ಫೋನ್ : ೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೩೧—೧—೧೯೫೨ನೇ ಗುರುವಾರ [ಸಂಚಿಕೆ ೧೩೨

ಮೈಸೂರು ಜಿಲ್ಲೆಯಿಂದ ಪಾರ್ಲಿಮೆಂಟಿಗೆ ಗುರುಪಾದಸ್ವಾಮಿಯವರು

ಮೈಸೂರು ಜ. ೩೦

ಭಾರತದ ಪಾರ್ಲಿಮೆಂಟಿಗೆ ಮೈಸೂರು ಜಿಲ್ಲೆಯ ಕ್ಷೇತ್ರದಿಂದ ಕೆ. ಎಂ. ಪಿ. ಪರ ಸ್ಪರ್ಧಿಸಿರುವ ಶ್ರೀ ಗುರುಪಾದಸ್ವಾಮಿಯವರಿಗೆ ೧,೯೬,೧೫೯ ಓಟುಗಳೂ ಮತ್ತು ಇವರ ಪ್ರತಿಸ್ಪರ್ಧಿ ಶ್ರೀ ಹೆಚ್. ಸಿ. ದಾಸಪ್ಪನವರಿಗೆ ೧,೬೫,೫೦೭ ಓಟುಗಳೂ ಬಂದು ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಚುನಾಯಿತರಾಗಿರುವರು. ಇವರಿಬ್ಬರಿಗೂ ಕ್ರಮವಾಗಿ ೧೬,೫೮೭ ಮತ್ತು ೧೧,೩೩೪ ಓಟುಗಳು ಇನ್‌ವ್ಯಾಲಿಡ್ ಆದುವು. ರಿಸರ್ವ್ ಕ್ಷೇತ್ರದ ಓಟುಗಳ ಎಣಿಕೆ ನಡೆಯಬೇಕಾಗಿದೆ.

ಹೊಳೇನರಸೀಪುರದ ಫಲಿತಾಂಶ

ಸಂಸ್ಥಾನದ ಶಾಸನಸಭೆಗೆ ಸ್ಪರ್ಧಿಸಿರುವ ಕಾಂಗ್ರೆಸ್ಸಿನ ಶ್ರೀ ಎ. ಜಿ. ರಾಮಚಂದ್ರರಾಯರಿಗೆ 12514 ಓಟುಗಳೂ, ಶ್ರೀ ಬಿಂದೇರಾಯಶೆಟ್ಟರಿಗೆ 3440 ಓಟುಗಳೂ ಶ್ರೀ ವೀರಪ್ಪನವರಿಗೆ 4665 ಓಟುಗಳು ಬಂದಿವೆ.

ಶ್ರೀ ವಿ. ವಿ. ಗಿರಿಯವರ ಆಯ್ಕೆ

ಕೇಂದ್ರ ಪಾರ್ಲಿಮೆಂಟಿಗೆ ವಿಶಾಖಪಟ್ಟದ ಪಾತಪಟ್ಟದ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ಸಿನ ಉಮೇದುವಾರರಾದ ಶ್ರೀ ವಿ. ವಿ. ಗಿರಿಯವರು ಚುನಾಯಿತರಾಗಿರುವರು. ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರೂ ಸಹ ಪಾರ್ಲಿಮೆಂಟಿಗೆ ಚುನಾಯಿತರಾಗಿರುವರು. ಬಿಹಾರಿನ ಶಾಸನಸಭೆಗೆ ಕೆ. ಎಂ. ಪಿ. ಪಕ್ಷದ ನಾಯಕ ಶ್ರೀ ಮಹಾಮಾಯ ಪ್ರಸಾದರು ಚುನಾಯಿತರಾಗಿರುವರು. ಅಸ್ಸಾಮಿನಿಂದ ಎ. ಐ. ಟಿ. ಯು. ಸಿ. ಯ ಕಮಲಾಕ್ಷ ತ್ರಿಪಾಠಿಯವರು ಚುನಾಯಿತರಾಗಿರುವರು.

ಟಿ. ನರಸೀಪುರದ ಫಲಿತಾಂಶ

ಟಿ. ನರಸೀಪುರದಿಂದ ಶಾಸನಸಭೆಗೆ ಸ್ಪರ್ಧಿಸಿದ್ದ ಕೆ. ಎಂ. ಪಿ. ಪಕ್ಷದ ಶ್ರೀ ಶ್ರೀನಿವಾಸಯ್ಯಂಗಾರ್‌ರವರಿಗೆ ೧೧೦೫೧ ಓಟುಗಳೂ, ಕಾಂಗ್ರೆಸ್ಸಿನ ಶ್ರೀ ಟಿ. ಪಿ. ಬೋರಯ್ಯನವರಿಗೆ ೮೭೦೭ ಓಟುಗಳೂ, ಶ್ರೀ ಎಸ್. ಬೋರಯ್ಯನವರಿಗೆ ೪೮೯೯ ಮತ್ತು ಶ್ರೀ ರಂಗೇಗೌಡರಿಗೆ ೩೧೨೦ ಓಟುಗಳೂ ಬಂದಿವೆಯೆಂದು ಗೊತ್ತಾಗಿದೆ.

ವಿಕ್ಟೋರಿಯ ಆಸ್ಪತ್ರೆಗೆ ಮಹಾರಾಜರ ಭೇಟಿ

ಬೆಂಗಳೂರು ಜ. ೨೯

ಮೈಸೂರಿನ ರಾಜಪ್ರಮುಖರು ಖಾಸಗಿಯಾಗಿ ಬೆಂಗಳೂರಿಗೆ ಆಗಮಿಸಿ, ನೆನ್ನೆ ರಾತ್ರಿ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ಇತ್ತು, ಎಕ್ಸ್‌ರೇ ತೆಗೆಸಿಕೊಂಡರೆಂದು ತಿಳಿದುಬಂದಿದೆ.

ಆಸ್ಪತ್ರೆಯ ಮುಖ್ಯ ವೈದ್ಯರುಗಳೆಲ್ಲ ಹಾಜರಿದ್ದು ರಾಜಪ್ರಮುಖರನ್ನು ಸ್ವಾಗತಿಸಿದರು.

ಭಾರತದಲ್ಲೆಲ್ಲಾ ಸರ್ವೋದಯ ದಿನಾಚರಣೆ

ಮಹಾತ್ಮ ಗಾಂಧೀಜಿಯವರು ಅಮರರಾಗಿ ೪ನೇ ವರ್ಷವಾದ ನೆನ್ನೆ ಭಾರತದಲ್ಲೆಲ್ಲಾ ಸರ್ವೋದಯ ದಿನಾಚರಣೆಯನ್ನು ಆಚರಿಸಲಾಯಿತು. ದೆಹಲಿಯ ರಾಜಘಾಟಿಗೆ ಬೆಳಿಗ್ಗೆ ಸಾವಿರಾರು ಗಟ್ಟಲೆಯಲ್ಲಿ ಜನರು ಸೇರಿ ಪ್ರಾರ್ಥನೆ ಸಾಮೂಹಿಕ ಸೂತ್ರಯಜ್ಞದಲ್ಲಿ ಭಾಗವಹಿಸಿದ್ದರು.

ಪ್ರಧಾನಿ ನೆಹರೂ, ಕೇಂದ್ರ ಸರ್ಕಾರದ ಇತರ ಸಚಿವರುಗಳು, ಕಾಂಗ್ರೆಸ್ ನಾಯಕರುಗಳು ರಾಜಘಾಟಿಗೆ ತೆರಳಿ ಸೂತ್ರಯಜ್ಞ ಮತ್ತು ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿದ್ದರು.

ಬೆಂಗಳೂರಿನ ... ಧ್ವಜಸ್ತಂಭದಲ್ಲಿ ಬೆಳಿಗ್ಗೆ ಪ್ರಾರ್ಥನೆ ನಡೆಯಿತು. ಸಂಜೆ ಮಿಂಟೋ ... ಹರಿಜನ ಕಾಲೋನಿಯಲ್ಲಿ ಶ್ರೀ ಮಾವಳಂಕರ್‌ರವರು ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿದ್ದರು. ಬೊಂಬಾಯಿ, ರಾಜಕೋಟೆ, ಅಮೃತಸರ ಮುಂತಾದೆಡೆ ಸರ್ವೋದಯ ದಿನಾಚರಣೆಯನ್ನು ಆಚರಿಸಲಾಯಿತು.

ಸಾಲವು ಸಹಾಯ ನಿಧಿಯಾಗುವುದೇ ?

ಅಮೆರಿಕಾವು ಕಳೆದ ವರ್ಷ ಆಹಾರದ ರೂಪದಲ್ಲಿ 119 ಮಿಲಿಯನ್ ಡಾಲರುಗಳನ್ನು ಭಾರತಕ್ಕೆ ಸಾಲವಾಗಿ ಕೊಟ್ಟಿದೆ. ಅದನ್ನು ಸಹಾಯ ನಿಧಿಯನ್ನಾಗಿ ಪರಿವರ್ತಿಸಲು ಅಮೆರಿಕದ ಡೆಮೊಕ್ರಾಟಿಕ್ ಪಕ್ಷದವರು ಕಾಂಗ್ರೆಸ್ ಮುಂದೆ ಮಸೂದೆಯೊಂದನ್ನು ತರಲಿರುವರೆಂದು ಹೇಳಲಾಗಿದೆ.

ಮೈಸೂರಿನ ಫಲಿತಾಂಶಗಳು

ಮೈಸೂರು ಜ. ೩೦

ಸಂಸ್ಥಾನದ ಶಾಸನಸಭೆಗೆ ಈ ಕೆಳಗೆ ಕಂಡ ಮಹನೀಯರು ಚುನಾಯಿತರಾಗಿರುವರು.

ಕಾಂಗ್ರೆಸ್—

ಹೊಳೇನರಸೀಪುರ

ಎ. ಜಿ. ರಾಮಚಂದ್ರರಾಯರು

ಹಲಿಯೂರು ಎನ್. ಹುಚ್ಚಮಾಸ್ತಿಗೌಡ

ಮೊಳಕಾಲ್ಮೂರು ಎ. ಭೀಮಪ್ಪನಾಯ್ಕರು

ಕೆ. ಎಂ. ಪಿ.—

ಟಿ. ನರಸೀಪುರ ಶ್ರೀನಿವಾಸಯ್ಯಂಗಾರ್

ಸರ್ವೋದಯ ದಿನಾಚರಣೆ

ಈ ದಿನ ಬೆಳಿಗ್ಗೆ ಶ್ರೀ ಅಗರಂ ರಂಗಯ್ಯನವರು ಸರ್ವೋದಯ ದಿನಾಚರಣೆಯ ಅಂಗವಾಗಿ ಟೌನ್‌ಹಾಲಿನಲ್ಲಿ ಧ್ವಜಾರೋಹಣ ಮಾಡಿದರು. ಟೌನ್‌ಹಾಲ್‌ನಲ್ಲಿ ಪ್ರಾರ್ಥನೆ ಮತ್ತು ಸೂತ್ರಯಜ್ಞವು ನಡೆಯಿತು. ಸಂಜೆ ಪ್ರಾರ್ಥನಾ ಸಭೆಯು ನಡೆಯಿತು.

ಐ.ಪಿ.ಎಸ್.ಗೆ ಅಧಿಕಾರಿಗಳ ಆಯ್ಕೆ

ಬೆಂಗಳೂರು ಜ. ೩೦

ಭಾರತ ಸರ್ಕಾರದ ಶ್ರೀ ಗೋಪಾಲಸ್ವಾಮಿಯವರು ಬೆಂಗಳೂರಿಗೆ ಆಗಮಿಸಿ ಐ. ಎ. ಎಸ್. ಮತ್ತು ಐ. ಪಿ. ಎಸ್.ಗೆ ಮೈಸೂರು ಅಧಿಕಾರಿಗಳನ್ನು ಆರಿಸುವ ಬಗ್ಗೆ ಮೈಸೂರು ಸರ್ಕಾರದೊಡನೆ ಮಾತುಕತೆ ನಡೆಸುತ್ತಿದ್ದಾರೆ. ಶ್ರೀಯುತರು ನೆನ್ನೆದಿನ ಪ್ರಾತಃಕಾಲ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನೂ, ಮಧ್ಯಾಹ್ನ ಚೀಫ್ ಸೆಕ್ರೆಟರಿ ಶ್ರೀ ಎನ್. ವಿ. ಗಣಪತಿ ಅಯ್ಯರ್‌ರವರನ್ನೂ ಕಂಡು ಮಾತುಕತೆ ನಡೆಸಿದರು.

ಡಾ|| ಮಲಾನ್‌ರವರ ಎಚ್ಚರಿಕೆ

ದಕ್ಷಿಣ ಆಫ್ರಿಕಾ ಸರ್ಕಾರದ ವಿಭಜನಾ ನೀತಿಯ ವಿರುದ್ಧ ಅಲ್ಲಿನ ಹಿಂದೂ ಜನರನ್ನು ಹೋರಾಡುವಂತೆ ಪ್ರಚೋದಿಸಿದ್ದೇ ಆದರೆ ಅಂತಹವರ ಮೇಲೆ ಉಗ್ರಕ್ರಮವನ್ನು ಕೈಗೊಳ್ಳಲಾಗುವುದು ಎಂದು ಡಾ|| ಮಲಾನ್‌ರವರು ದಕ್ಷಿಣ ಆಫ್ರಿಕಾದ ಕಾಂಗ್ರೆಸ್ಸಿನವರಿಗೆ ಎಚ್ಚರಿಕೆ ಇತ್ತಿರುವರು.

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಮದರಾಸ್

೩೪೫ ಸ್ಥಾನಗಳಲ್ಲಿ ಕಾಂಗ್ರೆಸ್ ೧೪೧, ಕೆ. ಎಂ. ಪಿ. ೩೩, ಕೃಷಕ್ ಪಕ್ಷ ೧೦, ಕಮ್ಯೂನಿಸ್ಟ್ ೫೫, ಸ್ವತಂತ್ರ ೫೧, ಇತರ ಪಕ್ಷ ೫೫.

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ಹೊರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟ್ಸಿನ ಚುನಾವಣೆ ಫಲಿತಾಂಶದ ಒಟ್ಟು ೨೨೧ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೧೪೧, ಕೆ. ಎಂ. ಪಿ. ೫, ಯುನೈಟೆಡ್ ಫ್ರಂಟ್ ೩, ಪೀಪಲ್ಸ್ ಫ್ರಂಟ್ ೬, ರೈತ ೨, ಸ್ವತಂತ್ರ ೨೧ ಇತರರು ೨೩.

ಹೈದ್ರಾಬಾದಿನ ಫಲಿತಾಂಶಗಳೆಲ್ಲಾ ಹೊರಬಿದ್ದುವು

ಹೈದ್ರಾಬಾದ್ ರಾಜ್ಯ ಶಾಸನಸಭೆಯ 175 ಸ್ಥಾನಗಳ ಫಲಿತಾಂಶವು ಹೊರಬಿದ್ದು ಕಾಂಗ್ರೆಸ್ಸು ೯೩ ಸ್ಥಾನಗಳನ್ನು ಗಳಿಸಿದೆ. ಇತರ ಪಕ್ಷಗಳಿಗಿಂತ ಕಾಂಗ್ರೆಸ್ಸು ೧೧ ಸ್ಥಾನಗಳನ್ನು ಹೆಚ್ಚಾಗಿ ಗಳಿಸಿದೆ.

ಅಲ್ಲಿನ ಪಕ್ಷಗಳ ಬಲಾಬಲ—ಕಾಂಗ್ರೆಸ್ 93, ಪೀಪಲ್ಸ್ ಡೆಮೊಕ್ರಾಟಿಕ್ ಫ್ರಂಟ್ 42, ಸ್ವತಂತ್ರರು 14, ಸೋಷಲಿಸ್ಟರು 11, ರೈತರು ಮತ್ತು ಕಾರ್ಮಿಕರು 10 ಮತ್ತು ನಿಮ್ನ ವರ್ಗ 5 ಸ್ಥಾನಗಳನ್ನು ಗಳಿಸಿದೆ.

ಮೈಸೂರು ಚುನಾವಣೆಯಲ್ಲಿ ಬಲಾಬಲ (ಶಾಸನಸಭೆ)

ಕಾಂಗ್ರೆಸ್ ಪಕ್ಷ	೬೫
ಸೋಷಲಿಸ್ಟ್	೩
ಕೆ. ಎಂ. ಪಿ	೬
ಕಮ್ಯೂನಿಸ್ಟ್	೧
ಪ. ಕಾ. ಫೆ.	೨
ಸ್ವತಂತ್ರ	೮
ಒಟ್ಟು—೮೫	

ರಷ್ಯಾ ಅಪಾದನೆ

ಬರ್ಮವನ್ನು ಹೊಸ ಯುದ್ಧ ಘರ್ಷಣಾಕೇಂದ್ರವನ್ನಾಗಿ ಮಾಡಿ ಆಗ್ನೇಯ ಏಷ್ಯಾ ಜನತೆ ವಿರುದ್ಧ ಅಮೆರಿಕಾ ಸೇನಾ ಮುಖ್ಯರು ಹಂಚಿಕೆ ಹೂಡುತ್ತಿದ್ದಾರೆಂದು ರಷ್ಯಾ ಅಪಾದಿಸಿದೆ.

ಅಕ್ಯಾಡಮಿಕ್ ಕೌನ್ಸಿಲ್ ನಿರ್ಣಯ

ಬೆಂಗಳೂರು ಜ ೩೦

ವಿದ್ಯಾರ್ಥಿಯು ಇಂಟರ್‌ಮೀಡಿಯೆಟ್ ಕಾಲೇಜಿಗೆ ಸೇರುವ ವರ್ಷದ ಜುಲೈ ಮೊದಲನೇ ತಾರೀಖಿಗೆ ಆತನ ಹದಿನೈದನೇ ವರ್ಷ ತುಂಬಿರಬೇಕೆಂದೂ ಎಸ್-ಎಸ್-ಎಲ್-ಸಿ-ಯಲ್ಲಿ ಫಸ್ಟ್‌ಕ್ಲಾಸ್ ಪಡೆದಿದ್ದು ೧೫ ವರ್ಷ ತುಂಬಿರದ ವಿದ್ಯಾರ್ಥಿಯನ್ನು ಸೇರಿಸಬೇಕಾದರೆ ವಿಶೇಷ ಬೋರ್ಡಿನ ಶಿಫಾರಸಾಗಬೇಕೆಂದೂ ನಿನ್ನೆದಿನ ವಿಶ್ವವಿದ್ಯಾನಿಲಯದ ಅಕ್ಯಾಡಮಿಕ್ ಕೌನ್ಸಿಲ್ ಸಭೆಯಲ್ಲಿ ನಿರ್ಣಯಮಾಡಲಾಯಿತು.

ಶ್ರೀ ಎಂ. ಬಿ. ಹೊನ್ನಾವರ್‌ರವರು

ಬೆಂಗಳೂರು ಜ ೨೯

ಮೈಸೂರು ಹೈಕೋರ್ಟಿನ ಛೀಫ್ ಜಸ್ಟಿಸ್ ಶ್ರೀ ಪಿ ಮೇದಪ್ಪನವರಿಗೆ ವಿಷ ಪ್ರಾಶನ ಮಾಡಿಸಲು ಯತ್ನಿಸಿದರೆಂಬ ಅಪವಾದನೆಯ ಮೇಲೆ ಎಲ್ ಎಸ್ ರಾಜು ಮತ್ತು ಮೂವರನ್ನು ವಿಚಾರಣೆ ಮಾಡಲು ಮೈಸೂರು ಸರ್ಕಾರದವರು ಕರೆಸಿರುವ ಮುಂಬೈ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಂ ಬಿ ಹೊನ್ನಾವರ್‌ರವರು ಬೆಂಗಳೂರಿಗೆ ಫೆಬ್ರವರಿ ೩ ರಂದು ಆಗಮಿಸಲಿದ್ದಾರೆ. ಮಾರನೆಯದಿನ ಅವರು ಅಧಿಕಾರ ಸ್ವೀಕಾರ ಮಾಡುವರು. ಫೆ. 11 ರಿಂದ ವಿಚಾರಣೆ ಆರಂಭವಾಗಲಿದೆ. ಕಬ್ಬನ್ ಪಾರ್ಕಿನಲ್ಲಿರುವ ವಿಕ್ಟರಿ ಹಾಲಿನಲ್ಲಿ ಅಥವಾ ಈಗ ಫೆಂಟ್ರಿ ರಸ್ತೆಯಲ್ಲಿರುವ ದುದಿನ ಜಿಲ್ಲಾ ನ್ಯಾಯಾಧೀಶರ ಹಳೆಯ ನ್ಯಾಯಮಂದಿರದಲ್ಲಿ ನ್ಯಾಯಾಸ್ಥಾನ ಏರ್ಪಡುವ ಸಂಭವವಿದೆ.

ಬಸ್ಸು ದರೋಡೆ

ಮದರಾಸಿಗೆ ೪ ಮೈಲಿ ದೂರದಲ್ಲಿ ಪ್ರಯಾಣಿಕರು ಹೋಗುತ್ತಲಿದ್ದ ಒಂದು ಒಸ್ಸಿಗೆ ಮೂರು ಜನ ಸಶಸ್ತ್ರ ದರೋಡೆಗಾರರು ಮೊನ್ನೆ ತಡೆದು ಅದರಲ್ಲಿದ್ದ ೨೮ ಪ್ರಯಾಣಿಕರನ್ನು ಹೊಡೆದು ಅವರಲ್ಲಿದ್ದ ಸುಮಾರು ೩೦೦೦ ರೂ-ಬೆಲೆಯ ವಸ್ತುಗಳನ್ನು ಅಪಹರಿಸಿಕೊಂಡು ಹೋಗಿರುವರು.

ಶ್ರೀರಾಮ ಪ್ರತಿಷ್ಠಾ ಮಹೋತ್ಸವ

ಮೈಸೂರು ಜ ೩೦

ನಾಳೆ ಬೆಳಿಗ್ಗೆ ೧೦ ಗಂಟೆಗೆ ಮೈಸೂರು ಚಾಮರಾಜ ಅಗ್ರಹಾರದಲ್ಲಿರುವ ದಿವಂಗತ ಶ್ರೀ ಅಧ್ಯಾಪಕ ತಾವರಾಜಾಚಾರ್ಯಂ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀ ಸೀತಾಲಕ್ಷ್ಮಣ ಹನುಮತ್ಸಮೇತ ಶ್ರೀರಾಮಚಂದ್ರದೇವರ ಪ್ರತಿಷ್ಠಾ ಮಹೋತ್ಸವವು ನಡೆಯುತ್ತದೆ.

ಶಿಸ್ತಿನಕ್ರಮ ಅಗತ್ಯ

ಬೆಂಗಳೂರು ಜ ೨೯

ಬೆಂಗಳೂರು ಕಾರ್ಪೋರೇಷನ್ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ವಿ ಕೆ ಗೋವಿಂದರಾಜುಲು ಮತ್ತು ಉಪನಾಯಕ ಶ್ರೀ ಹೆಚ್ ಎಸ್ ಸೀತಾರಾಮರವರು ಈಚಿನ ಮೇಯರ್ ಚುನಾವಣೆ ಬಗ್ಗೆ ಜಂಟಿ ಹೇಳಿಕೆಯೊಂದನ್ನಿತ್ತು, ಪಕ್ಷದ ಆದೇಶಕ್ಕೆ ವಿರುದ್ಧವಾಗಿ ಸ್ವತಂತ್ರ ಪರವಾಗಿ ಮತವಿತ್ತು, ಅತಿಸ್ತು ಹಾಗೂ ವಿಶ್ವಾಸಘಾತುಕತನದಿಂದ ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರುಗಳು ವರ್ತಿಸಿದರೆಂದು ಸಖೇದಾಶ್ಚರ್ಯ ವ್ಯಕ್ತಪಡಿಸಿದ್ದಾರೆ.

'ಇದು ದ್ರೋಹ, ಸಂಕಚಿತ ಸ್ವಭಾವದ ಅಪ್ರಾಮಾಣಿಕತೆಯುಳ್ಳ ಅಂಥವರನ್ನು ಸಹಿಸಿ ಯಾವ ಪಕ್ಷವೂ ಬದುಕಲಾರದು.' ಎಂದು ಹೇಳಿಕೆಯಲ್ಲಿ ಶ್ರೀಯುತರುಗಳು ತಿಳಿಸಿ, ಅಗತ್ಯ ಕ್ರಮಕೈಗೊಳ್ಳಲು ಕಾಂಗ್ರೆಸ್ ಹೈ ಕಮ್ಯಾಂಡಿಗೆ ವಿಷಯ ತಿಳಿಸಲಾಗಿದೆಯೆಂದೂ, ಈ ದುರಾದೃಷ್ಟ ಪ್ರಸಂಗದಲ್ಲಿ ನಿಷ್ಪಕ್ಷಪಾತ ವಿಚಾರಣೆಗೆ ಸಾಧ್ಯ ಅವಕಾಶ ನೀಡಬೇಕೆಂದೂ ಕೋರಿದ್ದಾರೆ.

'ಇಂಥವರ ಮೇಲೆ ಶಿಸ್ತಿನಕ್ರಮ ಕೈಕೊಳ್ಳಲು ಅಂಥವರನ್ನು ಕಂಡುಹಿಡಿಯಲು ಸೂಕ್ತಕ್ರಮ ಕೈಕೊಂಡಿದ್ದೇವೆ' ಎಂದು ಹೇಳಿಕೆ ಮುಕ್ತಾಯವಾಗಿದೆ.

ಅವಿಶ್ವಾಸ ಸೂಚನೆ

ನಿನ್ನೆ ಸಂಜೆ ಕಾಂಗ್ರೆಸ್ ಕಛೇರಿಯಲ್ಲಿ ನಡೆದ ಕಾರ್ಪೊರೇಷನ್ ಕಾಂಗ್ರೆಸ್ ಪಕ್ಷದ ಸಭೆ ಸೂಚನವಾಗಿ ಚುನಾಯಿತರಾಗಿರುವ ಮೇಯರ್‌ರವರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡಿಸಲು ತೀರ್ಮಾನಿಸಿತು.

ರಾಜೀನಾಮೆ

ಎಲ್ಲಾ ಕಾಂಗ್ರೆಸ್ ಸದಸ್ಯರು ಕಾರ್ಪೊರೇಷನ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಿ ಆ ಪತ್ರಗಳನ್ನು ತತ್‌ಕ್ಷಣ ಕೊಡಬೇಕೆಂದೂ, ವಿಚಾರಣೆ ಸಮಿತಿಯ ವರದಿಯನ್ನು ಪರಿಶೀಲಿಸಿದನಂತರ ಪಾರ್ಲಿಮೆಂಟರಿ ಉಪಸಮಿತಿ ಸದಸ್ಯರು ರಾಜೀನಾಮೆ ಕೊಡಬೇಕೆಂದು ತೀರ್ಮಾನಿಸಿದ್ದು, ಆ ರಾಜೀನಾಮೆ ಪತ್ರಗಳನ್ನು ಕಾರ್ಪೊರೇಷನ್ ಮೇಯರ್‌ರವರಿಗೆ ಕಳುಹಿಸಬೇಕೆಂದೂ ತೀರ್ಮಾನಿಸಲಾಯಿತು.

ಅದರಂತೆ ಸಭೆಯಲ್ಲಿ ಹಾಜರಿದ್ದ ೪೦ ಕಾಂಗ್ರೆಸ್ ಸದಸ್ಯರು ರಾಜೀನಾಮೆ ಪತ್ರಗಳನ್ನು ಕೊಟ್ಟರೆಂದು ಗೊತ್ತಾಗಿದೆ.

ಕಡ್ಡಾಯ ಮಿಲಿಟರಿ ಶಿಕ್ಷಣ

ಭಾರತದಲ್ಲಿ ದೃಢಕಾಯರಿಗೆಲ್ಲಾ ಕಡ್ಡಾಯ ಮಿಲಿಟರಿ ಶಿಕ್ಷಣ ಕೊಡಬೇಕೆಂದು, ಮಹಾ ದಂಡನಾಯಕ ಜನರಲ್ ಕಾರಿಯಪ್ಪನವರು ತಿಳಿಸಿರುವರು.

ರೈತರಿಗಾಗುತ್ತಿರುವ ಕಿರುಕುಳ ಮತ್ತು ಅನ್ಯಾಯ

ಇಲ್ಲಿಂದ್ಲು ಹೀಗೆ, ಜನ್ನದೇವನ ಕೋಟೆ, ಕೆಂಚನಕೊಡು ಮುಂತಾದ ತಾಲ್ಲೋಕುಗಳಲ್ಲಿ ಕಿರುಗಳ ಕೊಂಡರೆ:—

ಈ ಸಾರಿಯಿಂದ ಗೌರ್ನಮೆಂಟಿನವರು ರೈತರುಗಳಿಗೆಲ್ಲಾ ಗೌರ್ನಮೆಂಟ್ ಡಿಪೋ ವಿನಿಂದ ಹತ್ತಿಕಾಳನ್ನು ಕೊಟ್ಟು, ಅದನ್ನು ಎಂ. ಎಫ್. ಬಿ. ಎಂದು ಹೇಳಿ ಅದನ್ನು ಬೆಳೆದವರಿಗೆ ಹೆಚ್ಚಿನ ಬೆಲೆಗೆ ತೆಗೆದುಕೊಳ್ಳುತ್ತೇವೆ. ಮತ್ತು ಅದಕ್ಕೆ ಕಂಟ್ರೋಲ್ ಬೆಲೆಯನ್ನು ಮಾಡುತ್ತೇವೆಂದು ಹೇಳಿದರು ಆದರೆ ಈವಾಗ ಅವರು ಎ. ಬಿ. ಸಿ. ಎಂಬ ಕ್ಲಾಸುಗಳನ್ನು ಮಾಡಿ ದೊಡ್ಡ ದೊಡ್ಡ ಮಿಲ್ಲು ಮತ್ತು ಸಾಹುಕಾರರುಗಳಿಗೆ ಅದನ್ನು ಕೊಟ್ಟಿದ್ದಾರೆ. ಅವರುಗಳು ರೈತರ ಹತ್ತಿರ ಹತ್ತಿಯನ್ನು ಕಡಮೆ ಬೆಲೆಗೆ ಕೇಳುವುದು ವತ್ತು ಅವರುಗಳೇನಾದರೂ ಸಾಹುಕಾರರ ಹತ್ತಿರಕ್ಕೆ ಬಂದರೆ ನಿಮ್ಮ ಹತ್ತಿ ಚೆನ್ನಾಗಿಲ್ಲ. ೬ ರೂಗೆ, ೭ ರೂಗೆ ಕೊಡು ಇಲ್ಲದಿದ್ದರೆ ಬೇಡವೆಂತಲೂ ಮತ್ತು ನಿನ್ನ ಹತ್ತಿ ಎಂ. ಎಫ್. ವಿ. ಅಲ್ಲವೆಂತಲೂ ಹೇಳಿ ಅವರಿಗೆ ತೊಂದರೆಯನ್ನು ಕೊಡುತ್ತಾರೆ. ಈ ಪದ್ಧತಿಯಿಂದ ಲಂಚ, ರುಷುವತ್ತುಗಳು ಹೆಚ್ಚಾಗುತ್ತವೆಯೇ ಹೊರತು ಮತ್ತೇನೂ ರೈತರಿಗೆ ಉಪಕಾರವಿಲ್ಲ. ಮೊದಲೆಲ್ಲಾ ಯಾವ ಹತ್ತಿಯನ್ನಾದರೂ ಹಳ್ಳಿಗೆ ಹೋಗಿ ರೈತರ ಹತ್ತಿರವೇ ಯಾವುದೋ ಬೆಲೆಗೆ ಕೊಳ್ಳುತ್ತಿದ್ದರು. ಈವಾಗ ಆ ರೈತರೇ ಇಲ್ಲಿಗೆ ಬಂದು ಕೊಡಬೇಕಾದ ಸನ್ನಿವೇಶ ಬಂದಿದೆ. ಅದು ಬಂದರೂ ಚಿಂತೆಯಿಲ್ಲ. ಇಲ್ಲಿ ಈ ಹತ್ತಿಯನ್ನು ಕೊಳ್ಳುವವರು ಸರಿಯಾದ ಬೆಲೆಗೆ ತೆಗೆದುಕೊಳ್ಳುವುದಿಲ್ಲ. ಬೊಂಬಾಯಿ ಮಾರ್ಕೆಟ್ಟಿನ ರೇಟು ಇದ್ದ ಹಾಗೆ ಇಲ್ಲಿಯೂ ಹತ್ತಿಯನ್ನು ಕೊಂಡುಕೊಳ್ಳಲಿ. ಅಲ್ಲಿ ಇರುವ ರೇಟೆ ಬೇರೆ, ಇವರು ಕೊಳ್ಳುತ್ತಿರುವ ರೇಟೆ ಬೇರೆ. ಈ ರೀತಿ ಮಾಡುವುದರಿಂದ ರೈತರಿಗೆ ತೊಂದರೆಯಾಗುತ್ತದೆ. ಈ ರೀತಿ ಆದರೆ ರೈತರು ಹತ್ತಿ ಬೆಳೆಯುವುದನ್ನು ನಿಲ್ಲಿಸಿಬಿಡುತ್ತಾರೆ ಇದರಿಂದ ದೇಶಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಇದಕ್ಕೆ ಮೇಲ್ಕಂಡ ಅಧಿಕಾರಿಗಳು ಗಮನ ಕೊಟ್ಟು ಸರಿಯಾಗಿ ನೋಡಿಕೊಳ್ಳಬೇಕು ಇಲ್ಲದಿದ್ದರೆ ರೈತರಿಗೆ ಅರಳೆಯನ್ನು ಮಾಡಿಸಿ ಮಿಲ್ಲಿಗೆ ನೇರವಾಗಿ ಕೊಡುವ ರೀತಿ ಏರ್ಪಾಡು ಮಾಡಬೇಕು. ಈಗ ಬಟ್ಟೆ ಬೆಲೆಯಂತೂ ಇಳಿದಿಲ್ಲ. ಆದರೆ ಬಟ್ಟೆಗೆ ಬೇಕಾದ ಹತ್ತಿಯ ಬೆಲೆ ಮಾತ್ರ ಇಳಿದಿದೆ. ಈ ರೀತಿ ಮಾಡುವುದು ಅನ್ಯಾಯ. ಆದ್ದರಿಂದ ಇನ್ನಾದರೂ ಈ ರೀತಿ ಮಾಡುವುದಕ್ಕೆ ಅವಕಾಶ ಕೊಡದೆ ಅದಕ್ಕೆ ತಕ್ಕ ಸಲಹೆಯನ್ನು ಕೊಡುತ್ತಾರೆಂದು ನಂಬುತ್ತೇವೆ.

ಇತಿ ರೈತರ ಹಿತೈಷಿ

ಪುಟ್ಟಸ್ವಾಮಯ್ಯ.

ಬ್ರಿಟನ್ನಿಗೆ ಅಮೆರಿಕಾ ಸಹಾಯ

ಬ್ರಿಟನ್ನಿನಲ್ಲಿ ಮಿಲಿಟರಿ ವಿಸ್ತರಣೆ ಯೋಜನೆಗೆ ಅಮೆರಿಕಾವು ೩೦೦೦ ಲಕ್ಷ ಡಾಲರುಗಳನ್ನು ಈ ವರ್ಷದ ಅರ್ಧ ಭಾಗದಲ್ಲಿಯೇ ಕೊಡಲಿದೆಯೆಂದು ಹೇಳಲಾಗಿದೆ.

ಭೂದಾನ ಯಜ್ಞಕ್ಕೆ ನೆರವು

ಹೈದರಾಬಾದಿನಲ್ಲಿ ಆಚಾರ್ಯ ವಿನೋಬ ಭಾವೆಯವರು ಸ್ಥಾಪಿಸಿರುವ ಭೂದಾನ ಯಜ್ಞಕ್ಕೆ ಚಿಕಾಗೋದಿಂದ ಅಮೆರಿಕಾ ವಿದ್ಯಾರ್ಥಿ ನಾಸಿಫೀಸರ್ ಎಂಬುವರು ೫ ಡಾಲರುಗಳನ್ನು ಕಳುಹಿಸಿರುವರು. ನಿಮ್ಮ ಕೆಲಸವು ಅತ್ಯದ್ಭುತವಾಗಿದೆಯೆಂದು ಅವರು ಹೇಳಿರುವರು.

ರಾಜಕಮಲ್

27–1–52ರಿಂದ

ಅಮೋಘವಾದ 3ನೇ ವಾರ

ದಿನವೂ 3 ಪ್ರದರ್ಶನಗಳು

* ಅಮರ *

(ತಮಿಳು) ಚಿತ್ರ!

ಭೂಮಿಕೆ:– ಬಿ. ಎಸ್. ಸರೋಜ, ಲಲಿತ, ಶಾಂತಕುಮಾರಿ, ನಂಬಿಯಾರ್.

ನ್ಯೂ ಅಪೇರ

೨೮—೧—೫೨ ರಿಂದ

ಕೋಲಾಹಲಮಯ—

* ಸಾಹಸಂ *

ಪಾತ್ರ— ಪ್ರಭಾಕರರಾವ್, ಕೃಷ್ಣವೇಣಿ, ಕನಕಂ, ಸೀತಾರಾಂ.

ವೆಲ್‌ಕಮ್ ಕಾಫೀ ಕ್ಲಬ್

(ಪ್ರಭಾ ಟಾಕೀಸ್ ಎದುರು)

೨೯-೧-೫೨ ರಿಂದ ಪ್ರಾರಂಭ

ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ,

ಅಪ್ಪಟ ತುಪ್ಪದ 'ಕೇಸರೀ ಭಾತ್'

ಉತ್ತಮವಾದ

'ಸಾದಾ ಸೆಟ್ ದೋಸೆ'

ಒಂದನೇ ನಂ. ಕಾಫೀ ಮತ್ತು ಟೀ ಸೇವಿಸಲು ದಯಮಾಡಿಸಿ.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು—ಹಿ. ಕಾ. ಸುಬ್ಬರಾವ್ ಮೋಹನ ಮುದ್ರಣಾಲಯ ಮೈಸೂರು

ಫೋನ್ ೫೭೬ (೨೨೯) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೩೦—೧—೧೯೫೨ನೇ ಬುಧವಾರ [ಸಂಚಿಕೆ ೧೩೧

ಮೊರಾರ್ಜಿ ಮುಖ್ಯಮಂತ್ರಿ ಆಗಲು ಸಿದ್ಧತೆ

ಮುರಾರ್ಜಿಯವರಿಗೆ ಮುಖ್ಯಮಂತ್ರಿ ಪಟ್ಟ

ಬೊಂಬಾಯಿ ಚುನಾವಣೆಯಲ್ಲಿ ಪರಾಜಿತರಾದ ಈಗಿನ ಗೃಹಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರನ್ನು ತಮ್ಮ ನಾಯಕರನ್ನಾಗಿ ಮಾಡಿಕೊಂಡು ಮುಖ್ಯಮಂತ್ರಿ ಪದವಿಗೆ ಚುನಾಯಿಸಿಕೊಳ್ಳಬೇಕೆಂಬ ಯೋಜನೆಯಿಂದ ಶಾಸನ ಸಭೆಯ ಕಾಂಗ್ರೆಸ್ ನಿಯಮಾವಳಿಯನ್ನು ಕಾಂಗ್ರೆಸ್ ಪಕ್ಷದ ಸದಸ್ಯರು ಸೇರಿ ಒಮ್ಮತದಿಂದ, ತಿದ್ದುಪಡಿಮಾಡಲು ಒಪ್ಪಿಗೆಯಿತ್ತಿರುವರು.

ಈ ತಿದ್ದುಪಡಿಯ ಪ್ರಕಾರ ಪ್ರಾಂತ್ಯದ ಉಭಯ ಶಾಸನ ಸಭೆಯ ಸದಸ್ಯರಾಗದವರನ್ನು ನಾಯಕರನ್ನಾಗಿ ಚುನಾಯಿಸಿಕೊಳ್ಳಬಹುದು. ೬ ತಿಂಗಳೊಳಗೆ ಅವರು ಶಾಸನಸಭಾ ಸದಸ್ಯರಾಗಬೇಕಾಗಿದೆ.

ಸನ್ಮಿಶ್ರ ಮಂತ್ರಿಮಂಡಲ

ಮದ್ರಾಸಿನಲ್ಲಿ ಸನ್ಮಿಶ್ರ ಮಂತ್ರಿಮಂಡಲವನ್ನು ರಚಿಸಲು ಕೆ. ಎಂ. ಪಿ. ನಾಯಕ ಶ್ರೀ ಟಿ. ಪ್ರಕಾಶಂರವರು ಕಮ್ಯೂನಿಸ್ಟ ಮತ್ತಿತರ ಪಕ್ಷಗಳೊಡನೆ ಚರ್ಚೆ ನಡೆಸುತ್ತಿರುವರೆಂದು ಹೇಳಲಾಗಿದೆ.

ಚಿತ್ರಪ್ರದರ್ಶನ

ಇಂಡಿಯಾ-ಚೀನಾ ಸ್ನೇಹ ಸಂಘದ ಆಶ್ರಯದಲ್ಲಿ ತಾ॥ 31-1-1952 ರಿಂದ 5-2-1952 ರವರೆಗೆ ಚೀನಾದ ಪ್ರಗತಿಯನ್ನು ಪ್ರತಿಬಿಂಬಿಸುವ ಚಿತ್ರಗಳ ಪ್ರದರ್ಶನವನ್ನು ದೇವರಾಜ ಮಾರ್ಕೆಟ್ ಮಹಡಿಯಮೇಲಿರುವ 'ಲಿಬರ್ಟಿ ಟೈಲರ್ಸ್'ರವರ ಹಾಲಿನಲ್ಲಿ ಏರ್ಪಡಿಸಲಾಗಿದೆ. ಈ ಪ್ರದರ್ಶನದ ಉದ್ಘಾಟನೆ ಚೀನಾದಲ್ಲಿ ಇಂಡಿಯಾದ ರಾಯಭಾರಿ ಸರ್ದಾರ್ ಪಣಿಕರ್‌ರವರ ಪುತ್ರಿ ದೇವಕಿ ಪಣಿಕರ್ ಎಂ.ಎ. (ಆಕ್ಸನ್)ರವರಿಂದ ಟೌನ್ ಹಾಲಿನಲ್ಲಿ ನಾಳೆ ಸಂಜೆ 6 ಗಂಟೆಗೆ ನಡೆಯುತ್ತದೆ.

ಶ್ರೀ ನರಹರಿರಾಯರು

ಬೆಂಗಳೂರು ಜ ೨೯

ಭಾರತದ ಆಡಿಟರ್ ಜನರಲ್ ಶ್ರೀ ವಿ. ನರಹರಿರಾಯರು ಇಲ್ಲಿಗೆ ಆಗಮಿಸಿದ್ದಾರೆ. ೩೧ನೇ ತಾರೀಖಿನವರೆಗೂ ಅವರು ಇಲ್ಲಿರುವರು.

ಹೆಸರಿನ ಬದಲಾವಣೆ

ಬೆಂಗಳೂರು ತಾಲ್ಲೂಕಿನ ಮಾರಸಂದ್ರ, ಎಂಬ ಗ್ರಾಮದ ಹೆಸರನ್ನು ಸುಬ್ರಮಣ್ಯಪುರ ಎಂದು ಬದಲಾಯಿಸಲಾಗಿದೆ.

ಶ್ರೀ ಗುರುಸ್ವಾಮಿಯವರ ಪರಾಜಯ

ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಕಾರ್ಯದರ್ಶಿ ಶ್ರೀ ಗುರುಸ್ವಾಮಿಯವರು ಪಾರ್ಲಿಮೆಂಟಿಗೆ ನಿಂತು ಪರಾಜಯರಾಗಿದ್ದಾರೆ.

ಪ್ರದರ್ಶನ ಮಾಡಿ ತೋರಿಸಿ

ಬ್ಯಾಲಟ್ ಪೆಟ್ಟಿಗೆಗಳನ್ನು ಸೀಲು ಒಡೆಯದೆ ತೆಗೆಯಬಹುದೆಂದ. ಮಾಡಿರುವ ಅಪಾದನೆಯ ವಿಷಯವಾಗಿ ಕೇಂದ್ರ ಚುನಾವಣಾಧಿಕಾರಿಗಳು ತಮ್ಮ ಮುಂದೆ ಅ ಪ್ರದರ್ಶನವನ್ನು ಮಾಡಿ ತೋರಿಸಬೇಕೆಂದು ಮನವಿ ಮಾಡಿಕೊಂಡಿರುವರು.

'ಬಿ' ಪ್ರಾಂತ್ಯಗಳಿಗೆ ಸಲಹೆಗಾರರು

ಆಡಳಿತದಲ್ಲಿ ಅಸ್ಥಿರ ಕಾಣಬರುತ್ತಲಿರುವ ಪೆಪ್ಸು, ರಾಜಾಸ್ಥಾನ, ತಿರುವಾಂಕೂರು ಕೊಚ್ಚಿನ್, ಹೈದರಾಬಾದು ಮುಂತಾದ 'ಬಿ' ಪ್ರಾಂತ್ಯಗಳಿಗೆ ಸಲಹೆಗಾರರನ್ನು ನೇಮಿಸಿಕೊಳ್ಳುವ ಪ್ರಶ್ನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ ಶೀಘ್ರವಾಗಿಯೇ ತೀರ್ಮಾನ ಹೊರಬೀಳಲಿದೆ. ಕಾಂಗ್ರೆಸ್ ಸರ್ಕಾರಗಳು ಸ್ಥಾಪಿತವಾಗುವ 'ಬಿ' ಪ್ರಾಂತ್ಯಗಳಲ್ಲಿ ಈ ಯೋಜನೆಗೆ ಪುರಸ್ಕಾರ ದೊರೆತರೂ ಸನ್ಮಿಶ್ರ ಸರ್ಕಾರ ಸ್ಥಾಪನೆಯಾಗುವ ಪ್ರಾಂತ್ಯದಲ್ಲಿ ಕೇಂದ್ರದ ಈ ಸಲಹೆಗೆ ಒಪ್ಪಿಗೆ ದೊರೆಯುವುದೇ ಎಂಬುದೇ ಒಂದು ದೊಡ್ಡ ಪ್ರಶ್ನೆಯಾಗಿದೆ.

ಉಪ ಮಂತ್ರಿಗಳು

ಬೊಂಬಾಯಿನಲ್ಲಿ ಈಗಿನ ಸರ್ಕಾರದಲ್ಲಿರುವ ಪಾರ್ಲಿಮೆಂಟರಿ ಸೆಕ್ರೆಟರಿಗಳ ಹುದ್ದೆಗಳೆಲ್ಲಾ ಈಗಿನ ಮಂತ್ರಿಮಂಡಲ ಮುಕ್ತಾಯವಾದೊಡನೆಯೇ ಮುಗಿಯುವುದರಿಂದ ಹೊಸ ಮಂತ್ರಿಮಂಡಲದಲ್ಲಿ ಆ ಸ್ಥಾನಗಳಿಗೆ ಉಪಸಚಿವರುಗಳನ್ನು ನೇಮಕಮಾಡಿಕೊಳ್ಳಲಾಗುತ್ತದೆಯೆಂದು ಹೇಳಲಾಗಿದೆ.

ತಂದೆ ಮಗನಸ್ಪರ್ಧೆಯಲ್ಲಿ ಮಗ ಗೆದ್ದ!

ಕೃಷ್ಣಾ ಜಿಲ್ಲೆಯ ತಿರುವೂರ್ ಕ್ಷೇತ್ರದಿಂದ ಮದರಾಸು ಶಾಸನ ಸಭೆಗೆ ಕಮ್ಯುನಿಸ್ಟ್ ಸ್ಪರ್ಧಿ ಶ್ರೀ ಪಿ ರಾಮರಾವ್ ಕಾಂಗ್ರೆಸ್ಸಿನಿಂದ ಸ್ಪರ್ಧಿಸಿದ್ದ ತಮ್ಮ ತಂದೆ ಶ್ರೀ ಬಾಪಯ್ಯನವರನ್ನು 21,674 ಮತಗಳಿಂದ ಸೋಲಿಸಿ ಚುನಾಯಿತರಾಗಿದ್ದಾರೆ.

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಮದರಾಸ್

೩೧೯ ಸ್ಥಾನಗಳಲ್ಲಿ ಕಾಂಗ್ರೆಸ್ ೧೫೩, ಕೆ. ಎಂ. ಪಿ. ೩೨, ಕೃಷಕ ಪಕ್ಷ ೧೦, ಕಮ್ಯೂನಿಸ್ಟ್ ೪೯, ಸ್ವತಂತ್ರ ೫೦, ಇತರ ಪಕ್ಷ ೩೭.

ಮೈಸೂರು ಚುನಾವಣೆಯಲ್ಲಿ ಬಲಾಬಲ (ಶಾಸನಸಭೆ)

ಕಾಂಗ್ರೆಸ್ ಪಕ್ಷ	೭೨
ಸೋಷಲಿಸ್ಟ್	೩
ಕೆ. ಎಂ. ಪಿ	೫
ಕಮ್ಯೂನಿಸ್ಟ್	೧
ಪ. ಕಾ. ಫೆ.	೨
ಸ್ವತಂತ್ರ	೮
ಒಟ್ಟು	೮೧

ಈಚೆಗೆ ಹೊರಬಿದ್ದ ಫಲಿತಾಂಶಗಳು

ಕಾಂಗ್ರೆಸ್:–

ಕುಣಿಗಲ್	ಮುದ್ದಲಿಂಗೇಗೌಡ
ಅರಕಲಗೂಡು	ತಿಮ್ಮಪ್ಪಗೌಡ
ಚಿಕ್ಕಬಳ್ಳಾಪುರ	ಗಂಗಾನಾರಾಯಣ (ರಿ)
ನೆಲಮಂಗಲ	ಗೋವಿಂದರಾಜು
ಬೆಂಗಳೂರು ದ॥	ಪಿ- ಟಿ- ಕೆಂಪರಾಜ್
	ಎ- ವಿ- ನರಸಿಂಹರೆಡ್ಡಿ
ಬೇಲೂರು	ಹೆಚ್- ಕೆ- ಸಿದ್ದಯ್ಯ (ರಿ)
ಗೋರಿಬಿದನೂರು	ಎನ್-ಸಿ- ನಾಗಯ್ಯರೆಡ್ಡಿ

ಸೋಷಲಿಸ್ಟ್:–

ಮಳವಳ್ಳಿ	ನಾಗರಾಜಮೂರ್ತಿ
ಬಾಗೇಪಲ್ಲಿ	
	ಬಿ- ವಿ- ನಾರಾಯಣಸ್ವಾಮಿರೆಡ್ಡಿ

ಪರಿಗಣಿತಕೋಮು:–

ಮಳವಳ್ಳಿ	ಚಿಕ್ಕಲಿಂಗಯ್ಯ

‡ ಮದ್ರಾಸ್ ಸರ್ಕಾರವು ಅಲ್ಲಿನ ೮ ಜಿಲ್ಲೆಗಳಲ್ಲಿ ವಿದ್ಯುತ್ ಒದಗಿಸಲು ಒಂದು ಕೋಟಿ ರೂ- ಯೋಜನೆ ಮಂಜೂರ್ಮಾಡಿದೆ-

ಮೈಸೂರಿನಿಂದ ಪಾರ್ಲಿಮೆಂಟಿಗೆ

ಮೈಸೂರು ಜ ೨೯

ಮೈಸೂರಿನಿಂದ ಪಾರ್ಲಿಮೆಂಟಿಗೆ ಶ್ರೀ ಗುರುಪಾದಸ್ವಾಮಿಯವರ ಓಟಿನ ಎಣಿಕೆ ಇಂದು ಸಂಜೆ ೬ ಗಂಟೆವರೆಗೆ ನಡೆಯುತ್ತ-ಇಲ್ಲಿಯವರೆಗೆ ಅವರಿಗೆ ೧ ಲಕ್ಷ ೨೦ ಸಾವಿರ ಚಿಲ್ಲರೆ ಮತ ಬಂದಿದೆಯೆಂದು ತಿಳಿಯಬರುತ್ತದೆ- ಇನ್ನೂ ೩೫೦ ಪೆಟ್ಟಿಗೆ ಎಣಿಕೆ ನಡೆಯಬೇಕಾಗಿದೆ. ಶ್ರೀ ದಾಸಪ್ಪನವರಿಗೆ ೧ ಲಕ್ಷ ೬೩ ಸಾವಿರ ಮತ ಬಂದಿದೆ-

ಪ್ರಾರ್ಥನಾ ಸಭೆ

ಮೈಸೂರು ಜ ೩೦

ಮೈಸೂರು ನಗರ ಕಾಂಗ್ರೆಸ್ ಆಶ್ರಯದಲ್ಲಿ ಇಂದು ಬೆಳಗ್ಗೆ ೯ ಗಂಟೆಗೆ ಪುರಭವನ ಮೈದಾನದಲ್ಲಿ ಧ್ವಜಾರೋಹಣ, ಸಂಜೆ ಪ್ರಾರ್ಥನಾ ಸಭೆ ನಡೆಯುತ್ತದೆ-

ಖಗೋಳ ವಿಜ್ಞಾನಕ್ಷೇತ್ರ

ಹಿಮಾಲಯಾ ಪರ್ವತದಲ್ಲಿ 16,000 ಅಡಿ ಎತ್ತರದ ಏದಾನಾಥದ ಬಳಿ ಖಗೋಳ ವಿಜ್ಞಾನ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ವಿಜ್ಞಾನಿಗಳು ಇದೇ ಮೇ ಮಾಸದಲ್ಲಿ ಅಲ್ಲಿ ಪ್ರವಾಸ ಮಾಡಲಿರುವರು-

ಪ್ರಪಂಚದಲ್ಲಿ ಇದೇ ಅತ್ಯಂತ ಎತ್ತರದಲ್ಲಿರುವ ಸಂಶೋಧನಾಕೇಂದ್ರ.

ಕಚ್ ಮತ್ತು ಮಧ್ಯಭಾರತದಲ್ಲಿ ಕಾಂಗ್ರೆಸ್ಸಿಗೆ ಬಹುಮತ

ಮಧ್ಯಭಾರತ ಮತ್ತು ಕಚ್‌ನಲ್ಲಿ ಕಾಂಗ್ರೆಸ್ಸಿಗೆ ಬಹುಮತವು ಬಂದು ಇಲ್ಲಿ ಕಾಂಗ್ರೆಸ್ ಸರ್ಕಾರವನ್ನು ಸ್ಥಾಪಿಸಲಾಗುವುದು- ಮಧ್ಯಭಾರತದ ಶಾಸನಸಭೆಗೆ ೯೯ ಸ್ಥಾನಗಳಿದ್ದು ೭೫ ಸ್ಥಾನಗಳ ಫಲಿತಾಂಶ ಹೊರಬಿದ್ದಿದೆ. ಇದರಲ್ಲಿ ಕಾಂಗ್ರೆಸ್ಸಿಗೆ ೫೦ ಸ್ಥಾನ ಲಭಿಸಿದೆ. ಹಿಂದೂ ಮಹಾಸಭೆಗೆ ೫, ಸೋಷಲಿಸ್ಟರಿಗೆ ೪, ಸ್ವತಂತ್ರರಿಗೆ ೩, ಜನಸಂಘಕ್ಕೆ ೨, ರಾಮರಾಜ್ಯ ಪರಿಷತ್ ೧ ಸ್ಥಾನ ಲಭಿಸಿದೆ-

ಕಚ್ ಶಾಸನಸಭೆಗೆ ೩೦ ಸ್ಥಾನವಿದ್ದು ೨೮ ಸ್ಥಾನವು ಕಾಂಗ್ರೆಸ್ಸಿಗೂ ಮತ್ತು ೨ ಸ್ಥಾನ ಸ್ವತಂತ್ರರಿಗೆ ಲಭಿಸಿದೆ-

ಭಾರತದಲ್ಲಿ ಒಟ್ಟು ೮ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪಿಸುವಂತಾಯಿತು-

ಪತಿ ಪತ್ನಿಯರ ಸೋಲು

ಮದ್ರಾಸ್ ರಾಜ್ಯ ಶಾಸನಸಭೆಗೆ ಸ್ಪರ್ಧಿಸಿದ್ದ ಡಾ॥ ಸುಬ್ಬರಾಯನ್ ಮತ್ತು ಅವರ ಪತ್ನಿ ಶ್ರೀಮತಿ ರಾಧಾಭಾಯಿ ಸುಬ್ಬರಾಯನ್‌ರವರನ್ನು ಶ್ರೀಕಂಠಸ್ವಾಮಿ ಮತ್ತು ಅರ್ಥನಾರಾಯಣರುಗಳು ಸೋಲಿಸಿರುತ್ತಾರೆ-

ಸಮಾಚಾರ
೩೦—೧—೧೯೫೨ನೇ ಬುಧವಾರ

ಮಹಾತ್ಮರ ಸ್ಮರಣೆ

ಭಾರತ ಸ್ವತಂತ್ರದಾತರಾದ ಬಾಪೂಜೀಯವರು ತಮ್ಮ ಇಹದೇಹವನ್ನು ತ್ಯಜಿಸಿ ಇಂದಿಗೆ ನಾಲ್ಕು ವರ್ಷಗಳಾದುವು. ಈ ಅಲ್ಪಾವಧಿಯಲ್ಲಿ ಭಾರತ ರಾಷ್ಟ್ರವು ಅನೇಕ ರೀತಿಯಾಗಿ ಮಾರ್ಪಾಟಾಗಿದೆ. ದೇಶಾದ್ಯಂತ ದ್ವೇಷಾಸೂಯೆಗಳು, ಸ್ವಕಾರ್ಯಸಾಧನೆ ಮುಂತಾದ ಅನೇಕ ಅನರ್ಥ ಪರಂಪರೆಗಳು ನಮ್ಮನ್ನು ವಿಶೇಷವಾಗಿ ಕಾಡುತ್ತಿವೆ. ಮಹಾತ್ಮರ ಹಿತವಚನಗಳೆಲ್ಲಾ ಒಣಹೆಯ ಮರೆಯುತ್ತ ಬಂದ ಅಂಧಕಾರಕೂಪದಲ್ಲಿ ಬೀಳುತ್ತಲಿದೆ. ವಿದೇಶೀಯರ ಕೃಂಖಲೆಗಳಿಂದ ನಾವು ಪಾರಾಗಿ ಸ್ವಾತಂತ್ರ್ಯವನ್ನು ಗಳಿಸಿಕೊಂಡಿರುವೆವೆಂದು ಬಾಯಿ ಮಾತಿನಲ್ಲಿ ಮಾತ್ರ ಹೇಳುವ ಸ್ಥಿತಿಯಲ್ಲಿದ್ದೇವೆ. ನಮ್ಮ ಇರುವಿಕೆಗೆ ಬೇಕಾದ ಆಹಾರವನ್ನು ಸಹ ನಾವು ನಮ್ಮ ದೇಶದಲ್ಲಿ ಉತ್ಪತ್ತಿ ಮಾಡುತ್ತಿಲ್ಲ. ಅದೇ ರೀತಿಯಾಗಿ ಬಟ್ಟೆ-ಬರೆ ಮುಂತಾದ ಸ್ಥಿತಿಯೂ ಆಗಿದೆ. ನಮ್ಮ ಜೀವನಾಧಾರವಾಗಿ ಇನ್ನೂ ಪರಕೀಯರನ್ನು ನೋಡುತ್ತಿದ್ದೇವೆ. ದೇಶಾದ್ಯಂತ ಮಹಾತ್ಮರ ಹಿತನುಡಿಗಳಂತೆ ಕುಟೀರ ಕೈಗಾರಿಕಾಭಿವೃದ್ಧಿ ಮುಂತಾದ ನಾನಾ ರೀತಿಯ ಗ್ರಾಮಾಭ್ಯುದಯ ಕಾರ್ಯಗಳಲ್ಲಿ ನಮ್ಮ ಕುಶಲತೆಯನ್ನು ತೋರ್ಪಡಿಸುವಂತಾಗಿ ಜನತೆಯಲ್ಲಿ ಹುಟ್ಟಿರುವ ಅಂಧಕಾರವೆಲ್ಲ ಮಾಯವಾಗಿ, ನಮ್ಮಲ್ಲಿ ವಿಶೇಷವಾಗಿ ಉದ್ಭವಿಸಿರುವ ಕೋಮುವಾರು ಪಿಡಂಭೂತವನ್ನು ಹೊರದೂಡಿ ಜಾತಿಯತೆ, ಬೇಧಭಾವನೆಲ್ಲವೂ ಮಾಯವಾಗಿ ದೇಶಾದ್ಯಂತ ಸುಖಜೀವನವು ಸ್ಥಾಪನೆಯಾಗಲೆಂದು ಮಹಾತ್ಮರ ಹಿತವಚನ ಸಂದೇಶಗಳನ್ನು ಈದಿನ ನಾವು ಸ್ಮರಿಸಿಕೊಂಡು ನಮ್ಮ ಇಂದಿನ ಪಥವನ್ನು ಮಾರ್ಪಡಿಸಿಕೊಂಡು ಕಾರ್ಯೋನ್ಮುಖರಾಗೋಣ.

ಜೈ-ಹಿಂದ್.

ಪಾಕೀಸ್ಥಾನದಲ್ಲಿ ಉರ್ದು ಅಧಿಕೃತ ಭಾಷೆ

ಪಾಕೀಸ್ಥಾನದ ಪ್ರಧಾನ ಮಂತ್ರಿ, ಜ|| ಖ್ವಾಜಾನಾಜಿಮುದ್ದೀನರವರು ಕರಾಚಿಯಲ್ಲಿ ಮಾತಾಡುತ್ತಾ, ಪಾಕೀಸ್ಥಾನದಲ್ಲಿ ಉರ್ದುವನ್ನು ಅಧಿಕೃತಭಾಷೆಯನ್ನಾಗಿ ಮಾಡಲಾಗುವುದೆಂದೂ ಇದರಿಂದ ಬಂಗಾಳಿ ಭಾಷೆಗೆ ಅಡ್ಡಿಯುಂಟಾಗುವುದಿಲ್ಲ ವೆಂದೂ ತಿಳಿಸಿರುವರು.

ತಸಿಬಾ ಸಮಿತಿ ನೇಮಕ

ಬೆಂಗಳೂರು ಜ ೨೯

ಯುನೈಟೆಡ್ ಸಿವಿಲ್ ಪಕ್ಷದ ಪ್ರತಿನಿಧಿಗಳಾದ ಶ್ರೀ ಬಿ ವಿ. ಲಂಕಪ್ಪನವರು ೭೫ ಸದಸ್ಯರನ್ನು ಒಳಗೊಂಡ ಕಾರ್ಪೋರೇಷನ್ನಿನ ಸದಸ್ಯರಲ್ಲಿ ಕಾಂ|| ಪಕ್ಷವೇ ೫೦ ಸದಸ್ಯರನ್ನೊಳಗೊಂಡಿದ್ದರೂ ಸಹ, ಮೇಯರಾಗಿ ಚುನಾಯಿತರಾಗಿ ಕಾಂಗ್ರೆಸ್ ಪಕ್ಷದ ಪ್ರತಿನಿಧಿ ಶ್ರೀ ಆರ್. ಎಂ. ಪಟೇಲರನ್ನು ಸೋಲಿಸಿದುದು ಕಾಂಗ್ರೆಸ್ ಪಕ್ಷದವರ ವಿಶ್ವಾಸಘಾತುಕದಿಂದಾದ ಪ್ರಯುಕ್ತ ಇದಕ್ಕೆ ಕಾರಣರಾದವರನ್ನು ಪತ್ತೆ ಮಾಡಲು ಇಂದು ಸಂಜೆ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಬೆಂಗಳೂರು ಕಾರ್ಪೋರೇಷನ್ನಿನ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯೊಂದು ನಡೆಯಿತು. ಪಕ್ಷದ ೫೧ ಮಂದಿಯಲ್ಲಿ ೪೨ ಮಂದಿ ಹಾಜರಿದ್ದರು. ಕೆಲವು ಸದಸ್ಯರ ವಿವರಣೆ ಇತ್ತ ಮೇಲೆ ಇದರ ತನಿಖೆ ನಡೆಸಲು ಶ್ರೀಗಳಾದ ಎಸ್. ರಾಮಚಂದ್ರಶಾಸ್ತ್ರಿ, ಡಿ. ಹೆಚ್. ಚಂದ್ರಶೇಖರಯ್ಯ ಮತ್ತು ಎಂ. ಎ ಗೋಪಾಲಸ್ವಾಮಿ ಅಯ್ಯಂಗಾರ್ಯರನ್ನು ಒಳಗೊಂಡ ಸಮಿತಿಯೊಂದನ್ನು ರಚಿಸಲಾಯಿತೆಂದು ಗೊತ್ತಾಗಿದೆ.

ಕೃಷ್ಣರಾಜನಗರದಲ್ಲಿ ಕಾಂಗ್ರೆಸ್ಸಿಗರ ಸಭೆ

ಕೃಷ್ಣರಾಜನಗರ ಜ ೨೯

ಕೃಷ್ಣರಾಜನಗರ ಮತ್ತು ಪಿರಿಯಾಪಟ್ಟಣಗಳಲ್ಲಿ, ಮೈಸೂರು ಶಾಸನಸಭೆಗೆ ಸ್ಪರ್ಧಿಸಿದ್ದ ಸ್ವತಂತ್ರ ಉಮೇದುವಾರರ ಪರವಾಗಿ ಗೃಹಸಚಿವ ಶ್ರೀ ಮರಿಯಪ್ಪ, ಚುನಾವಣಾ ಸಮಿತಿ ಸದಸ್ಯರಾಗಿದ್ದ ಶ್ರೀ ಎಸ್. ಚನ್ನಯ್ಯ ಮತ್ತಿತರ ಕಾಂಗ್ರೆಸ್ಸಿನವರು ನಡೆಸಿದ ಚಟುವಟಿಕೆಗಳ ಬಗ್ಗೆ ಸಮಾಲೋಚನೆ ನಡೆಸಲು ಈ ಎರಡು ತಾಲ್ಲೂಕುಗಳ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ೩೧ನೇ ತಾ|| ಮಧ್ಯಾಹ್ನ ಒಂದು ಗಂಟೆಗೆ ಸೇರಲಿದೆಯೆಂದು ಕೃಷ್ಣರಾಜನಗರ ತಾಲ್ಲೂಕು ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಶ್ರೀಕಂಠಶೆಟ್ಟಿಯವರು ತಿಳಿಸುತ್ತಾರೆ.

ಜನಘಾತದ ಬೇಗಂರ ದಸ್ತಗಿರಿ

ಜನಘಾತದ ಹಿರಿಯಬೇಗಂ ಮುನಾವರ್ ಜಹಾನರನ್ನು, ಆಕೆ 13 ವರ್ಷ ವಯಸ್ಸಿನ ಪರಿಚಾರಿಕೆಯನ್ನು ಕೊಲೆಮಾಡಿದ ಅಪಾದನೆಯ ಮೇಲೆ ದಸ್ತಗಿರಿ ಮಾಡಲಾಯಿತು.

ವುಡ್‍ಲ್ಯಾಂಡ್ಸ್ * ೨೫—೧—೫೨ ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
* ದಶಾವತಾರ್ *
ಪಾತ್ರ—ನಿರೂಪರಾಯ್, ತ್ರಿಲೋಕ್‍ಕಪೂರ್.

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.
*
ಹೆಚ್ಚಿನ ವಿವರಗಳಿಗೆ ಬರೆಯಿರಿ—
ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ವೆಸ್ಟ್
ಬೆಂಗಳೂರು ೩.

ಕನ್ನಡ ಕಲಿಸುವ ವಿಧಾನ

ಬೆಂಗಳೂರು ಜ ೨೯

'ಕನ್ನಡ ಕಲಿಸುವ ವಿಧಾನ'ವನ್ನು ಬಿ. ಟಿ. ಡಿಗ್ರಿ ಪರೀಕ್ಷೆಯ ವಿಷಯಗಳಲ್ಲಿ ಒಂದನ್ನಾಗಿ ಸೇರಿಸಬೇಕೆಂದು ನಿನ್ನೆದಿನ ಮೈಸೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ ಸಭೆಯಲ್ಲಿ ನಿರ್ಣಯ ಮಾಡಲಾಯಿತು.

ಇತರ ನಿರ್ಣಯಗಳು—

ಬಿ. ಟಿ. ಬದಲು ಬಿ. ಇ. ಡಿ. ಡಿಗ್ರಿ

ಬಿ.ಟಿ. (ಬ್ಯಾಚಲರ್ ಆಫ್ ಟೀಚಿಂಗ್) ಡಿಗ್ರಿಯ ಹೆಸರನ್ನು ಬಿ. ಇ. ಡಿ, ಬ್ಯಾಚಲರ್ ಆಫ್ ಎಜುಕೇಷನ್ ಎಂದು ಬದಲಾಯಿಸಬೇಕೆಂಬ ನಿರ್ಣಯವನ್ನು ಪ್ರೊ|| ದೇವೇಗೌಡರು ಮಂಡಿಸಿ ಅಖಿಲ ಭಾರತದಲ್ಲೆಲ್ಲಾ ಆ ರೀತಿ ಬಿ ಇ. ಡಿ. ಎಂದು ಕರೆಯಲಾಗುವುದೆಂದರು. ನಿರ್ಣಯವು ಅಂಗೀಕರಿಸಲ್ಪಟ್ಟಿತು. ಈಗಾಗಲೇ ಬಿ.ಟಿ. ಡಿಗ್ರಿ ಪಡೆದಿರುವವರಿಗೆ ಇದರಿಂದ ಯಾವ ಪರಿಣಾಮವೂ ಆಗುವುದಿಲ್ಲ.

ಭಾರತೀಯ ವೇದಾಂತ

ಬಿ ಎ. ಡಿಗ್ರಿ ಪರೀಕ್ಷೆಯ ವೇದಾಂತ ಶಾಸ್ತ್ರಭಾಗದಲ್ಲಿ ಭಾರತೀಯ ವೇದಾಂತವನ್ನು ಕಡ್ಡಾಯ ವಿಷಯವನ್ನಾಗಿ ಸೇರಿಸಬೇಕೆಂದು ನಿರ್ಣಯ ಮಾಡಲಾಯಿತು.

ಬಿ ಎ. ಆನರ್ಸ್ (ಇಂಗ್ಲೀಷ್) ಪರೀಕ್ಷೆಯ ಮೂರನೇ ನಂಬರ್ ಮೈನರ್ ವಿಷಯಗಳಲ್ಲಿ ಫ್ರೆಂಚ್ ಸಾಹಿತ್ಯ, ಜರ್ಮನ್ ಸಾಹಿತ್ಯ ಮತ್ತು ಜನರಲ್ ಸೈಕಾಲಜಿ ಎಂಬ ಹೆಚ್ಚಿನ ವಿಷಯಗಳನ್ನು ಸೇರಿಸಬೇಕೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು.

* ಪಶ್ಚಿಮ ಬಂಗಾಳ ಮುಖ್ಯಸಚಿವ ಶ್ರೀ ಬಿಧನ ಚಂದ್ರರಾಯರು ಸಂಸ್ಥಾನ ಶಾಸನ ಸಭೆಗೆ ಆಯ್ಕೆಯಾಗಿದ್ದಾರೆ.

ವೆಲ್‍ಕಮ್ ಕಾಫೀ ಕ್ಲಬ್
(ಪ್ರಭಾ ಟಾಕೀಸ್ ಎದುರು)
೨೪-೧-೫೨ ರಿಂದ ಪ್ರಾರಂಭ
ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ
ಅಪ್ಪಟ ತುಪ್ಪದ 'ಕೇಸರೀ ಭಾತ್'
ಉತ್ತಮವಾದ
'ಸಾದಾ ಸೆಟ್ ದೋಸೆ'
ಒಂದನೇ ನಂ. ಕಾಫೀ ಮತ್ತು ಟೀ
ಸೇವಿಸಲು ದಯಮಾಡಿಸಿ.

ಪ್ರಕಾಶಕರು :—ಜಿ ಎಲ್. ಸ್ವಾಮಿ
ಪ್ರೊಪ್ರೈಟರ್ ಬ್ಯೂರೋ ಮೈಸೂರು
ಮುದ್ರಕರು—ಹಿ. ಕಾ. ಸುಬ್ಬರಾವ್
ಮೋಹನ್ ಮುದ್ರಣಾಲಯ ಮೈಸೂರು

ಫೋನ್ ೫೭೪ (೪೦೨) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೯—೧—೧೯೫೨ನೇ ಮಂಗಳವಾರ [ಸಂಚಿಕೆ ೧೩೦

ಮೈಸೂರಿನಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪನೆಗೆ ಅಭ್ಯಂತರವಿಲ್ಲ

ಬೆಂಗಳೂರು ಜ ೨೮

ಈಗ ಹೊರಬಿದ್ದಿರುವ ಫಲಿತಾಂಶಗಳಂತೆ ಮೈಸೂರು ಶಾಸನ ಸಭೆಯ ೯೯ ಸ್ಥಾನಗಳಲ್ಲಿ ಕಾಂಗ್ರೆಸ್ಸು ಪಕ್ಷವು ೫೪ ಸ್ಥಾನಗಳನ್ನು ಗಳಿಸಿರುವುದರಿಂದ ಕಾಂಗ್ರೆಸ್ಸು ಸರ್ಕಾರ ಸ್ಥಾಪನೆಗೆ ಸಂಶಯವಿಲ್ಲ.

ಈಚೆಗೆ ಹೊರಬಿದ್ದ ಫಲಿತಾಂಶ

ಕಾಂಗ್ರೆಸ್:—

ಶಿಕಾರಿಪುರ	ಹೆಚ್. ಸಿದ್ದಪ್ಪ
ಕೃಷ್ಣರಾಜಪೇಟೆ	ಎಸ್. ಎಂ. ಲಿಂಗಪ್ಪ
ವಿರೂಪಾಕ್ಷಪುರ	ಎಸ್. ಕರಿಯಪ್ಪ
ತೀರ್ಥಹಳ್ಳಿ-ಕೊಪ್ಪ	ಕಡಿದಾಳು ಮಂಜಪ್ಪ
ಚಿಕ್ಕಬಳ್ಳಾಪುರ-ಶಿಡ್ಲಘಟ್ಟ	ಎ. ಮುನಿಯಪ್ಪ, ಜಿ. ಪಾಪಣ್ಣ
ಮುಳಬಾಗಿಲು-ಶ್ರೀನಿವಾಸಪುರ	ಜಿ. ನಾರಾಯಣಗೌಡ
ಹಾಸನ	ಡಿ. ಆರ್. ಕರೀಗೌಡ
ಬೆಂ ಉತ್ತರ	ಕೆ. ಪಿ. ಭೈರೇಗೌಡ
	ಆರ್. ಮುನಿಸ್ವಾಮಯ್ಯ

ಸ್ವತಂತ್ರ:—

ಕೃಷ್ಣರಾಜನಗರ	ಎಸ್. ಹೆಚ್. ತಮ್ಮಯ್ಯ
ಸಿರಾ	ಬಿ. ಎನ್. ರಾಮೇಗೌಡ
ಯಳಂದೂರು	ರಾಜಶೇಖರಮೂರ್ತಿ

ಕೆ.ಎಂ.ಪಿ:—

ಯಳಂದೂರು	ರಾಚಯ್ಯ

ಪಾರ್ಲಿಮೆಂಟ್:—

ಚಿತ್ರದುರ್ಗ	ನಿಜಲಿಂಗಪ್ಪ
ತುಮಕೂರು	ಸಿ. ಆರ್. ಬಸಪ್ಪ
ಹಾಸನ	ಎಸ್. ಸಿದ್ದನಂಜಪ್ಪ

ಮೈಸೂರು ಚುನಾವಣೆಯಲ್ಲಿ ಬಲಾಬಲ (ಶಾಸನಸಭೆ)

ಕಾಂಗ್ರೆಸ್ ಪಕ್ಷ	೫೪
ಸೋಷಲಿಸ್ಟ್	೨
ಕೆ. ಎಂ. ಪಿ	೫
ಕಮ್ಯೂನಿಸ್ಟ್	೧
ಷೆ ಕಾ. ಫೆ.	೧
ಸ್ವತಂತ್ರ	೮
ಒಟ್ಟು	೭೧

* ಈಗ ಭಾರತದಲ್ಲಿ ಸಂಚರಿಸುತ್ತಿರುವ ವಿಮಾನಗಳಲ್ಲಿ ಗ್ಲೈಡರ್ ರೀತಿಗೆ ಪರಿವರ್ತಿಸಲು ಭಾರತ ಸರ್ಕಾರವು ಯೋಚಿಸಿ ಈ ವಿಷಯದಲ್ಲಿ ಸಂಶೋಧಿಸಲು 32,500 ರೂಗಳ ಸಹಾಯ ನೀಡಿದೆ.

ತಿರುವಾಂಕೂರಿನಲ್ಲಿ ಹೊಸ ಸರ್ಕಾರ ಸ್ಥಾಪನೆಗೆ ಮಾತುಕತೆಗಳು

ತಿರುವಾಂಕೂರು-ಕೊಚ್ಚಿನ್ ಪ್ರಾಂತ್ಯದಲ್ಲಿ ಮಹಾ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳಿಸಿರುವ ಕಾಂಗ್ರೆಸ್ ಪಕ್ಷವು ಹೊಸ ಸರ್ಕಾರ ರಚಿಸುವ ವಿಷಯದಲ್ಲಿ ದೆಹಲಿಯಲ್ಲಿ ಮಾತುಕತೆಗಳು ಈಗಾಗಲೆ ಪ್ರಾರಂಭವಾಗಿವೆ. ಕೊಚ್ಚಿನ್ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಪಿ ಮಾಧವನ್ ನಾಯರ್‌ರವರು ಈ ಮಾತುಕತೆಗಳಲ್ಲಿ ಭಾಗವಹಿಸಲು ದೆಹಲಿಯಿಂದ ಆಹ್ವಾನ ಪಡೆದಿದ್ದಾರೆ.

ಕಾಂಗ್ರೆಸ್ ಪಕ್ಷವು ಹೆಚ್ಚು ಸ್ಥಾನಗಳುಳ್ಳ ಪಕ್ಷವಾದಾಗ್ಯೂ, ಸ್ವತಂತ್ರರು ಮತ್ತು ಇತರ ಪಕ್ಷದವರ ಒಟ್ಟು ಸಂಖ್ಯೆಯು ಹೆಚ್ಚಾಗುವುದರಿಂದ, ಕಾಂಗ್ರೆಸ್ ಪಕ್ಷವು ಆಡಳಿತದಲ್ಲಿ ಪ್ರವೇಶಿಸಕೂಡದೆಂದು ಕೆಲವರ ಅಭಿಪ್ರಾಯವಾಗಿದೆ. ಆದರೆ ಇತರರ ಸಹಕಾರಪಡೆದು ಕಾಂಗ್ರೆಸ್ ಸರ್ಕಾರ ರಚಿಸಬೇಕೆಂದು ಮತ್ತೆ ಕೆಲವರ ಅಭಿಪ್ರಾಯ.

ಇತರರ ಸಹಕಾರದಿಂದ ಸ್ಥಿರವಾದ ಸರ್ಕಾರವನ್ನು ಸ್ಥಾಪಿಸಲು ಸಾಧ್ಯವಾದರೆ ಮಾತ್ರ ಕಾಂಗ್ರೆಸ್ಸು ಹೊಸ ಸರ್ಕಾರ ರಚಿಸುವ ಕಾರ್ಯಕ್ಕೆ ಕೈ ಹಾಕಬೇಕೆಂದು ರಾಜಕೀಯ ವ್ಯಕ್ತಿಗಳ ಮುಖ್ಯ ಅಭಿಪ್ರಾಯವಾಗಿರುತ್ತದೆ.

ಪಾರ್ಲಿಮೆಂಟಿಗೆ ಶ್ರೀ ನಿಜಲಿಂಗಪ್ಪನವರು

ಚಿತ್ರದುರ್ಗ ಕ್ಷೇತ್ರದಿಂದ ಲೋಕಸಭೆಗೆ ಶ್ರೀ ಎಸ್ ನಿಜಲಿಂಗಪ್ಪನವರು ಸ್ವತಂತ್ರ ಮತ್ತು ಕೆ ಎಂ ಪಿ ಪಕ್ಷದ ಇಬ್ಬರು ಉಮೇದುವಾರರನ್ನು ಸೋಲಿಸಿ, ಜಯಗಳಿಸಿದ್ದಾರೆ.

ವಿಶ್ವಬ್ಯಾಂಕ್

ವಿಶ್ವಬ್ಯಾಂಕಿಗೆ ಇನ್ನು ಕೆಲವು ರಾಷ್ಟ್ರಗಳು ಸದಸ್ಯರಾದುದರಿಂದ ಅದರ ಅಧಿಕೃತ ಬಂಡವಾಳವು ೮೪೫೩೦ ಲಕ್ಷ ಡಾಲರುಗಳಾಗಿವೆ.

ಕಳೆದ ಸಾಲಿನಲ್ಲಿ ಅದು ೭೭೧೦ ಲಕ್ಷ ಡಾಲರುಗಳನ್ನು ಅನೇಕ ರಾಷ್ಟ್ರಗಳಿಗೆ ಪಾವತಿ ಮಾಡಿದೆ.

ಪಾರ್ಲಿಮೆಂಟಿನ ಓಟುಗಳ ಎಣಿಕೆ

ಮೈಸೂರು ಜ ೨೮

ಭಾರತದ ಪಾರ್ಲಿಮೆಂಟಿಗೆ ಮೈಸೂರು ಜಿಲ್ಲೆಯ ಕ್ಷೇತ್ರದಿಂದ ಕಾಂಗ್ರೆಸ್ಸಿನಪರ ಸ್ಪರ್ಧಿಸಿರುವ ಶ್ರೀ ಹೆಚ್. ಸಿ. ದಾಸಪ್ಪನವರ ಓಟುಗಳನ್ನು ಎಣಿಸಲಾಯಿತು. ಒಟ್ಟು 3,73,202 ಓಟುಗಳಲ್ಲಿ ಶ್ರೀ ದಾಸಪ್ಪನವರಿಗೆ 1 64,507 ಓಟುಗಳು ಬಂದಿವೆಯೆಂದು ಗೊತ್ತಾಗಿದೆ. ಆ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರ ಪೆಟ್ಟಿಗೆಗಳಲ್ಲಿನ ಓಟುಗಳನ್ನು ಎಣಿಕೆಯಾಗುತ್ತಿದೆ.

ಮೈಸೂರಿಗೆ ಜಯ

ರಣಜಿಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ದಕ್ಷಿಣಜೋನ್ ಫೈನಲ್ಸ್‌ನಲ್ಲಿ ಮೈಸೂರಿನವರು ಜಯಶಾಲಿಗಳಾಗಿರುವರು. ಮೈಸೂರು 228 ಮತ್ತು 291- ಮದರಾಸು 194 ಮತ್ತು 151. ಮೈಸೂರು 174 ರನ್ನುಗಳಿಂದ ಜಯಗಳಿಸಿದೆ.

ಧಾಳಿಯ ಪರಿಣಾಮ

ಶನಿವಾರ ಕೈರೋವಿನಲ್ಲಿ ನಡೆದ ಧಾಳಿಯ ಪರಿಣಾಮವಾಗಿ ೨೦ ಜನ ಈಜಿಪ್ಟಿನವರು ಮಡಿದು ಸುಮಾರು ೨೦೦ ಜನರು ಗಾಯಗೊಂಡಿರುವರು. ೩೦೦ ಕ್ಕಿಂತ ಹೆಚ್ಚು ದಸ್ತಗಿರಿಯಾಗಿದೆಯೆಂದು ಹೇಳಲಾಗಿದೆ.

ಸ್ವತಂತ್ರರಿಗೆ ಜಯ

ಯಳಂದೂರಿನಿಂದ ಜನರಲ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಶ್ರೀ ರಾಜಶೇಖರಮೂರ್ತಿಯವರೂ, ರಿಸರ್ವ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಶ್ರೀ ರಾಚಯ್ಯನವರೂ ಜಯಶೀಲರಾಗಿರುವರು.

ಆಹಾರ ಮಂತ್ರಿಯ ಪರಾಜಯ

ಪಶ್ಚಿಮ ಬಂಗಾಳದ ಆಹಾರ ಮಂತ್ರಿ, ಕಾಂಗ್ರೆಸ್ ಪಕ್ಷದ ಶ್ರೀ ಪಿ. ಸಿ. ಸೇನ್‌ರವರು ಚುನಾವಣೆಯಲ್ಲಿ ಪರಾಜಯವಾಗಿರುವರು.

ಸಚಿವರ ಸೋಲು

ರಾಜಸ್ಥಾನದ ಅರ್ಥಸಚಿವ ಶ್ರೀ ವಜಸುಂದರ ಶರ್ಮರವರು ಪರಾಜಯ ಹೊಂದಿದ್ದಾರೆ.

ಫ್ರಾನ್ಸ್ ರಾಯಭಾರಿ

ಬ್ರಿಟನ್ನಿನಲ್ಲಿ ಪಾಕ್ ರಾಯಭಾರಿಯಾಗಿದ್ದ ಹಬೀಬುಲ್ಲಾರವರನ್ನು ಫ್ರಾನ್ಸಿನ ರಾಯಭಾರಿಯಾಗಿ ನೇಮಿಸಲಾಗಿದೆ.

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಮದರಾಸ್

೩೧೯ ಸ್ಥಾನಗಳಲ್ಲಿ ಕಾಂಗ್ರೆಸ್ ೧೩೩, ಕೆ. ಎಂ. ಪಿ ೩೨, ಕೃಷಕ ಪಕ್ಷ ೧೦, ಕಮ್ಯೂನಿಸ್ಟ್ ೪೯, ಸ್ವತಂತ್ರ ೫೦, ಇತರ ಪಕ್ಷ ೩೭.

ಹೈದರಾಬಾದ್

೧೭೨ ಸ್ಥಾನಗಳ ಪೈಕಿ ಕಾಂಗ್ರೆಸ್ ೯೨ ಸೋಷಲಿಸ್ಟ್ ೧೦, ಡೆಮೋಕ್ರಾಟಿಕ್ ಪಕ್ಷ ೪೨, ರೈತಪಕ್ಷ ೯ ಸ್ವತಂತ್ರ ೧೯, ನಿಮ್ನ ವರ್ಗ ೫.

ಸೌರಾಷ್ಟ್ರ

೪೯ ಸ್ಥಾನಕ್ಕೆ ಕಾಂಗ್ರೆಸ್ ೩೯ ಸೋಷಲಿಸ್ಟ್ ೨, ಸ್ವ. ೭, ಇತರರು ೧.

ಪಶ್ಚಿಮ ಬಂಗಾಳ

೧೮೯ ಸ್ಥಾನಗಳಲ್ಲಿ ಕಾಂಗ್ರೆಸ್ ೭೧, ಇತರರು ೩೮.

ಮಧ್ಯಭಾರತ

೫೭ ಸ್ಥಾನಗಳಲ್ಲಿ ಕಾಂಗ್ರೆಸ್ ೪೩, ಸೋಷಲಿಸ್ಟ್ ೩, ಸ್ವತಂತ್ರ ೩, ಇತರ ಪಕ್ಷ ೭.

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ಹೊರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟಿನ ಚುನಾವಣೆ ಫಲಿತಾಂಶದ ಒಟ್ಟು ೧೭೮ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೧೧೮, ಕೆ. ಎಂ. ಪಿ. ೫, ಯುನೈಟೆಡ್ ಫ್ರಂಟ್ ೩, ಪೀಪಲ್ಸ್ ಫ್ರಂಟ್ ೭, ರೈತ ೨, ಸ್ವತಂತ್ರ ೧೭, ಇತರರು ೧೭.

ಸೌರಾಷ್ಟ್ರದಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪನೆ

ಸೌರಾಷ್ಟ್ರ ರಾಜ್ಯ ಶಾಸನಸಭೆಗೆ ಇರುವ ೬೦ ಸ್ಥಾನಗಳಲ್ಲಿ ಈಗ ೪೪ ಸ್ಥಾನಗಳ ಫಲಿತಾಂಶವು ಹೊರಬಿದ್ದು ೩೯ ಸ್ಥಾನಗಳು ಕಾಂಗ್ರೆಸ್ಸಿಗೆ, ೨ ಸೋಷಲಿಸ್ಟರಿಗೆ, ೨ ಸ್ವತಂತ್ರರಿಗೆ ಮತ್ತು ೧ ಸ್ಥಾನವು ಇತರರಿಗೆ ಲಭಿಸಿದೆ. ಕಾಂಗ್ರೆಸ್ಸಿಗೆ ಬಹುಮತವು ಲಭಿಸಿರುವುದರಿಂದ ಇಲ್ಲಿಯೂ ಕೂಡ ಕಾಂಗ್ರೆಸ್ ಸರ್ಕಾರ ಸ್ಥಾಪನೆಯಾಗುವುದು. ಇಲ್ಲಿಗೆ ಒಟ್ಟು ಭಾರತದ ೨೨ ರಾಜ್ಯಗಳಲ್ಲಿ ಆರು ಕಡೆಗಳಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪಿಸುವಂತಾಯಿತು.

ಈಜಿಪ್ಟಿನಲ್ಲಿ ಪಾರ್ಲಿಮೆಂಟ್ ವಿಸರ್ಜಿಸಿಲ್ಲ

ನಹಾಸ್ ಪಾಷಾ ಸರ್ಕಾರ ವಜಾ

ಈಜಿಪ್ಟಿನ ದೊರೆ ಫರೂಕರವರು ನಹಾಸ್ ಪಾಷಾ ಸರ್ಕಾರವನ್ನು ವಜಾ ಮಾಡಿ ಪಾರ್ಲಿಮೆಂಟನ್ನು ವಿಸರ್ಜಿಸಿಲ್ಲ. 1936 ಮತ್ತು 1939 ರಲ್ಲಿ ಪ್ರಧಾನಿಯೂ ಗಿದ್ದ ಅಲಿ ಮಹರ್ ಪಾಷಾರವರು 11 ಜನರುಳ್ಳ ನೂತನ ಮಂತ್ರಿಮಂಡಲವನ್ನು ರಚಿಸಿರುವರು. ನಹಸ್ ಪಾಷಾರವರು ಪ್ರಧಾನಿಯಾದೊಡನೆಯೇ ತಮ್ಮ ರಾಷ್ಟ್ರದ ಜನತೆಯನ್ನುದ್ದೇಶಿಸಿ ಎಲ್ಲರೂ ಶಾಂತರೀತಿಯಿಂದಿರಬೇಕೆಂದೂ ವಿದೇಶೀಯರನ್ನು ಕಾಪಾಡಬೇಕೆಂದೂ ಮನವಿ ಮಾಡಿಕೊಂಡಿರುವರು. ಅವರು ಪ್ರಧಾನಿ ಹುದ್ದೆಯ ಜೊತೆಗೆ ವಿದೇಶಾಂಗ ಮತ್ತು ಯುದ್ಧ ಮಂತ್ರಿಗಳಾಗಿರುವರು. ಅಲ್ಲದೆ ಅವರು ಮಿಲಿಟರಿ ಗವರ್ನರ್-ಜನರಲ್ಲರಾಗಿಯೂ ನೇಮಕವಾಗಿದ್ದಾರೆ.

ಸೂಯೆಜ್ ಪ್ರದೇಶದಲ್ಲಿ ಸೇನಾ ಚಲನೆ

ಸೇನೆಗಳು, ಬಂದೂಕಗಳು, ಶಸ್ತ್ರಸಜ್ಜಿತ ವಾಹನಗಳ ಮೆರವಣಿಗೆಗಳು ಸೂಯೆಜ್ ಕಾಲುವೆ ವಲಯದ ಪ್ರದೇಶಗಳೊಳಗೆ ಚಲಿಸುತ್ತಿರುವಂತೆ ವರದಿಯಾಗಿದೆ.

ಬ್ರಿಟಿಷ್ ಪ್ರಾಣ, ಸ್ವತ್ತುಗಳನ್ನು ರಕ್ಷಿಸಲು ಬ್ರಿಟಿಷ್ ಸೇನೆಯೂ ಅಲೆಕ್ಸಾಂಡ್ರಿಯಾ ಕೈರೋಗಳ ಮೇಲೆ ಮುನ್ನಡೆಯಲು ಸಿದ್ಧವಾಗುತ್ತಿದೆಯೆಂದು ವರದಿಗಳು ಬಂದರೂ 'ಎಕ್ಸ್‌ಪ್ರೆಸ್' ಕೇಂದ್ರ ಕಛೇರಿಯಲ್ಲಿ ದೃಢಪಟ್ಟಿಲ್ಲ. ಆದರೆ ಮಹಮೂರಿಗಾಗಿ ಸಂಬಂಧಪಟ್ಟ ವಲಯಗಳಿಂದ ಸೇನೆಯು 'ಎಲ್ಲಾ ಪರಿಸ್ಥಿತಿಗಳಿಗೂ ಸಿದ್ಧವಾಗಿದೆ' ಎಂದು ತಿಳಿದುಬಂದಿದೆ.

ಕೈರೋ ಮತ್ತಿತರ ಈಜಿಪ್ಟ್ ನಗರಗಳಿಂದ ಬ್ರಿಟಿಷ್ ನಿರಾಶ್ರಿತರುಗಳನ್ನು ಸ್ವಾಗತಿಸಲು ಸಿದ್ಧತೆಯಾಗುತ್ತಿದೆ. ನಗರದಿಂದ ಬ್ರಿಟಿಷ್ ಅಧಿಕಾರಿಗಳು ಮತ್ತಿತರ ವಿದೇಶೀಯರುಗಳನ್ನು ಹೊರಗೆ ಬಿಡಲು ಈಜಿಪ್ಟ್ ಅಧಿಕಾರಿಗಳು ಅವಕಾಶವಿತ್ತಿಲ್ಲ.

ಪರಿಸ್ಥಿತಿ ಹದಗೆಟ್ಟರೆ ಕಾಲುವೆ ವಲಯದಿಂದ ಸೈಪ್ರಸ್‌ಗೆ ವಿಮಾನದಲ್ಲಿ ಬ್ರಿಟಿಷ್ ಸೈನ್ಯ ಒಯ್ಯಲು ಸಿದ್ಧವಾಗಿದೆಯೆಂದು ಅನಧಿಕೃತ ವರದಿಗಳು ಬಂದಿವೆ. ಕೈರೋ ಸ್ಥಿತಿ ಅಪಾಯಕಾರಿಯಾಗಿದ್ದರೂ ಕ್ರಮೇಣ ವಿಷಮ ಕಡಿಮೆಯಾಗುತ್ತಿದೆಯೆಂದು ಕೈರೋ ಬ್ರಿಟಿಷ್ ರಾಯಭಾರ ಕಛೇರಿಯಿಂದ ಸುದ್ದಿ ಹೊರಬಿದ್ದಿದೆ.

ಮರುಚುನಾವಣೆಗೆ ನಗರದಲ್ಲಿ ಪ್ರದರ್ಶನ

ಬೆಂಗಳೂರು ಜ ೩೦

ನಗರದಲ್ಲಿ ನಡೆದ ಚುನಾವಣೆಗಳು ನ್ಯಾಯವಾಗಿ, ಚುನಾವಣೆಗಳು ನಡೆದಿಲ್ಲವೆಂದೂ, ಮರುಚುನಾವಣೆಗಳನ್ನು ನಡೆಸಬೇಕೆಂದೂ, ಘೋಷಣೆಗಳನ್ನು ಕೂಗುತ್ತಾ, ಕಪ್ಪು ಬಾವುಟದೊಡನೆ ನಿನ್ನೆ ಸಂಜೆ ಸುಮಾರು ೫೦೦ ಮಂದಿ ಸಿವಿಲ್ ಪ್ರದೇಶದಲ್ಲಿ ಮೆರವಣಿಗೆ ನಡೆಸಿದರು.

ಭಾರತ ಪಾಕಿಸ್ಥಾನ ಯೋಜನೆಗಳಿಗೆ ಫೋರ್ಡ್‌ನಿಧಿಯ ಸಹಾಯ

ನ್ಯೂಯಾರ್ಕ್ ಜ ೩೦

ಭಾರತದಲ್ಲಿ ನಾಲ್ಕು ವ್ಯವಸಾಯದ ಕಾಲೇಜುಗಳನ್ನೂ, ಪಾಕೀಸ್ಥಾನದಲ್ಲಿ ೧ ಮಹಿಳೆಯರ ಕಾಲೇಜನ್ನೂ ಸ್ಥಾಪಿಸಲು ಅಮೇರಿಕದ ಫೋರ್ಡ್ ಸಂಸ್ಥೆಯು ತನ್ನ ನಿಧಿಯಿಂದ ಸಹಾಯ ಮಾಡುವುದು.

ಫೋರ್ಡ್‌ನಿಧಿಯ ಸಂಚಾಲಕರು ಭಾರತ ಮತ್ತು ಪಾಕೀಸ್ಥಾನಗಳಿಗೆ ಭೇಟಿಕೊಟ್ಟು ಅಲ್ಲಿಯ ಅವಶ್ಯಕತೆಗಳ ಬಗ್ಗೆ ವಿಚಾರ ಮಾಡಿಕೊಂಡು ಹೋಗಿದ್ದರು.

ಮಹಿಳೆಯರ ಕಾಲೇಜೊಂದನ್ನು ಸ್ಥಾಪಿಸಲು ಅಖಿಲ ಪಾಕೀಸ್ತಾನದ ಮಹಿಳಾ ಸಂಸ್ಥೆಗೆ ಹಣ ಕೊಡಲಾಗಿದೆ. ವ್ಯವಸಾಯ ತಂಬೇತು ಶಾಖೆಗಳನ್ನು ಭಾರತ ಸರ್ಕಾರದ ವ್ಯವಸಾಯ ಇಲಾಖೆಯ ಸಹಾಯದಿಂದ ತೆರೆಯುವರು.

ಹೊಸ ರಂಗ ಕಟ್ಟಬೇಕು

ಪ್ರಧಾನಿ ಖ್ವಾಜಾನಾಜಿಮುದ್ದೀನರು ಮಾತನಾಡುತ್ತಾ, ರಾಷ್ಟ್ರದ ರಕ್ಷಣೆಯೇ ಎಲ್ಲಾ ಪಾಕಿಸ್ಥಾನಿಗಳ ಪ್ರಥಮ ಕರ್ತವ್ಯವೆಂದು ನುಡಿದರು.

'ಪಾಕಿಸ್ಥಾನದ ಹಿತಗಳಿಗೆ ಶತೃಗಳಾಗಿರುವವರೆಲ್ಲರ ವಿರುದ್ಧ ನಾವು ಒಂದು ರಂಗ ಕಟ್ಟಬೇಕು' ಎಂದರು.

ಕಾಂಗ್ರೆಸ್ಸಿನೊಡನೆ ಸೇರುವುದಿಲ್ಲ

ದೇಶಕ್ಕೆ ಸೋಷಲಿಸ್ಟರ ಸೇವೆಯು ರೀತಿಯೇ ಬೇರೆ. ಈ ಸಂಸ್ಥೆಯು ಕಮ್ಯೂನಿಸ್ಟರೊಡನೆ ಸೇರುವುದಿಲ್ಲ. ಕಾಂಗ್ರೆಸ್ಸನ್ನು ಬಿಟ್ಟರೆ ಜನತೆಯು ವಿಶ್ವಾಸಗಳಿಸಿರುವ ಸಂಸ್ಥೆಯು ನಮ್ಮದೇ ಆಗಿದೆ. ಇನ್ನೂ ಹೆಚ್ಚಾಗಿ ವಿಶ್ವಾಸಗಳಿಸಲು ನಾವು ಶ್ರಮಿಸುತ್ತೇವೆಂದು ಸೋಷಲಿಸ್ಟ ನಾಯಕ ಶ್ರೀ ಜಯಪ್ರಕಾಶ ನಾರಾಯಣರವರು ಹೇಳಿರುವರು.

ನಿಜಾಮರ ಪ್ರಥಮ ವಿಮಾನ ಯಾನ

ಹೈದರಾಬಾದಿನ ರಾಜಪ್ರಮುಖರಾದ ೬೫ ವರ್ಷ ವಯಸ್ಸಿನ ನಿಜಾಮರು ತಮ್ಮ ಜೀವಮಾನದಲ್ಲಿಯೇ ಮೊದಲ ಬಾರಿ ವಿಮಾನ ಯಾನ ಮಾಡಿದರು. ಅವರು ಡಕೋಟಾ ವಿಮಾನವೊಂದರಲ್ಲಿ ಕುಳಿತು ಅರ್ಧಗಂಟೆ ಕಾಲ ಹೈದರಾಬಾದು ನಗರದ ಮೇಲೆ ಹಾರಾಡಿದರು.

ದೆಹಲಿಯಲ್ಲಿ ನಡೆಯುವ ಪ್ರಮುಖ ಸಭೆಗಳಲ್ಲಿ ಭಾಗವಹಿಸಲೋಸುಗ ಅವರು ವಿಮಾನದಲ್ಲಿ ಪ್ರಯಾಣ ಮಾಡಬೇಕೆಂದಿರುವುದರಿಂದ ಅವರ ಮೇಲೆ ವಿಮಾನಯಾನದ ಪ್ರತಿಕ್ರಿಯೆಯನ್ನು ಪರೀಕ್ಷಿಸಲೋಸುಗ ನಡೆಯಿತೆಂದು ಗೊತ್ತಾಗಿದೆ.

ಜನತೆಯ ಬೆಂಬಲ ಅಗತ್ಯ

'ರಾಷ್ಟ್ರದ ಮೇಲ್ವಿಚಾರಣೆಯಲ್ಲಿ ನಡೆಯಿಸುವ ಕೈಗಾರಿಕೆಗಳು ಜನತೆಯ ಮೇಲೆ ಹೊರೆಯಾಗಬಾರದು. ಜನತೆಯ ಶ್ರಮ ಮತ್ತು ಸಹಕಾರದ ಪೂರ್ಣ ಬೆಂಬಲದ ಆಧಾರದ ಮೇಲೆ ಕೈಗಾರಿಕೆ ಪ್ರಗತಿ ಮತ್ತು ಸಮಾಜ ಹಿತವನ್ನು ಸಾಧಿಸಬೇಕು' ಎಂದು ಭಾರತ ಟ್ಯಾರಿಫ್ ಕಮಿಷನ್ ಅಧ್ಯಕ್ಷರೂ ಮತ್ತು ಕೇಂದ್ರ ಯೋಜನಾ ಸಮಿತಿಯ ಸದಸ್ಯರೂ ಆದ ಶ್ರೀ ಜಿ. ಎಲ್. ಮೆಹ್ತಾರವರು ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ೨೯ನೇ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ ಹೇಳಿರುವರು.

ವಿದೇಶಗಳೊಡನೆ ಪೈಪೋಟಿ ಸಾಧಿಸಲು ಭಾರತ ಕೈಗಾರಿಕೆಗಳಲ್ಲಿ ಯಾಂತ್ರಿಕ ಮತ್ತು ಔದ್ಯೋಗಿಕ ಕುಶಲತೆ ಹೆಚ್ಚಬೇಕೆಂದೂ, ರಾಷ್ಟ್ರೀಕರಣ ಮತ್ತು ಖಾಸಗೀ ಉದ್ಯಮದ ಬಗ್ಗೆ ವಿವಾದದಲ್ಲಿ ವಾಸ್ತವಿಕ ದೃಷ್ಟಿ ತಳೆಯಬೇಕಾದುದು ಅಗತ್ಯವೆಂದೂ ಶ್ರೀ ಮೆಹ್ತಾ ನುಡಿದರು.

ರೈಲ್ವೆ ಸಹ ಸಚಿವರ ಪರಾಜಯ

ಮಯೂರಂ ಪಾರ್ಲಿಮೆಂಟರಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ರೈಲ್ವೆ ಸಹ ಸಚಿವ ಶ್ರೀ ಕೆ. ಸಂತಾನಂರವರಿಗಿಂತ ಅಲ್ಲಿಯೇ ಸ್ಪರ್ಧಿಸಿರುವ ಕಮ್ಯೂನಿಸ್ಟ್ ಕೆ. ಆನಂದ ನಂಬಿಯಾರ್‌ರವರು ಸುಮಾರು ೯ ಸಾವಿರ ಓಟುಗಳನ್ನು ಹೆಚ್ಚಾಗಿ ಗಳಿಸಿ ಸಚಿವರನ್ನು ಪರಾಜಯಗಳಿಸಿದ್ದಾರೆ.

ಸ್ವತಂತ್ರರ ಜಯ

ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಸ್ವತಂತ್ರ ಉಮೇದುವಾರರಾದ ಶ್ರೀ ಎಸ್. ಎಂ. ಮರಿಯಪ್ಪನವರು 12447 ಓಟುಗಳನ್ನು ಗಳಿಸಿ ಶ್ರೀ ಚನ್ನಬಸಪ್ಪನವರ (11913)ನ್ನು ಪರಾಜಯಗೊಳಿಸಿದಾರೆ.

ಕಾರ್ಮಿಕರ ವಸತಿ ಸೌಕರ್ಯಕ್ಕೆ ೭ ಲಕ್ಷ ರೂ.

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯವರು ಕಾರ್ಖಾನೆಯ ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಕಲ್ಪಿಸುವ ಸಲುವಾಗಿ ಮನೆಗಳನ್ನು ಕಟ್ಟಲು ಈ ಸಾಲಿಗೆ ಏಳು ಲಕ್ಷದ ಹತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ.

ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಆಡಳಿತ ವರ್ಗದವರು ಕಾರ್ಖಾನೆಯ ಕಾರ್ಮಿಕರಿಗೆ ಮತ್ತು ಉದ್ಯೋಗಿಗಳಿಗೆ (ಎಫ್. ಜಿ. ಓ ಗಳಿಗೆ ಕೊಟ್ಟಿರುವಂತೆ) ಐದು ರೂಪಾಯಿ ಹೆಚ್ಚಿನ ತುಟ್ಟಿಭತ್ಯ ಕೊಡಲು ನಿರ್ಧರಿಸಿದ್ದಾರೆ. ಇದನ್ನು ೧೯೫೧ನೇ ಡಿಸೆಂಬರ್ ತಿಂಗಳಿಂದ ಜಾರಿಗೆ ಕೊಡಲಾಗುವುದೆಂದು ತಿಳಿದುಬಂದಿದೆ. ಈ ಹೆಚ್ಚಿನ ತುಟ್ಟಿಭತ್ಯವು ಯಾವ ಗ್ರೇಡಿನ ತನಕ ಕೊಡಲಾಗುವುದೆಂಬುದು ಖಚಿತವಾಗಿ ಗೊತ್ತಾಗಿಲ್ಲವಾದರೂ ಸುಮಾರು ಮುನ್ನೂರು ರೂಪಾಯಿ ಸಂಬಳದವರಿಗೆ ಕೊಡಲಾಗುವುದೆಂದು ನಿರೀಕ್ಷಿಸಲಾಗಿದೆ.

ವೆಲ್‌ಕಮ್ ಕಾಫೀ ಕ್ಲಬ್
(ಪ್ರಭಾ ಟಾಕೀಸ್ ಎದುರು)
೩೪-೧-೫೨ ರಿಂದ ಪ್ರಾರಂಭ
ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ,
ಅಪ್ಪಟ ತುಪ್ಪದ 'ಕೇಸರೀ ಭಾತ್'
ಉತ್ತಮವಾದ
'ಸಾದಾ ಸೆಟ್ ದೋಸೆ'
ಒಂದನೇ ನಂ. ಕಾಫೀ ಮತ್ತು ಟೀ
ಸೇವಿಸಲು ದಯಮಾಡಿ.

ನ್ಯೂ ಅಪೇರ
೨೬—೧—೫೨ ರಿಂದ
ಶೋಭನಾಚಲರವರ—
* ಸಾವಾಸಂ *
ಪಾತ್ರ— ಪ್ರಭಾಕರರಾವ್, ಕೃಷ್ಣವೇಣಿ, ಕನಕಂ. ಸೀತಾರಾಂ.

ರ ಣ ಜಿ ತ್
೨೫—೧—೫೨ ರಿಂದ ಅಮೋಘ ಪ್ರಾರಂಭ
ಪೃಥ್ವಿರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ
—:: ಆ ವಾ ರ ::—
(ಹಿಂದಿ)

ಪ್ರಕಾಶಕರು:—ಜಿ ಎಲ್. ಸ್ವಾಮಿ
ಓಲ್ಡ್ ಬ್ಯಾಂಕ್ ಬ್ಯಾಟೋ ಮೈಸೂರು
ಮುದ್ರಕರು—ಹಿ. ಕಾ. ಸುಬ್ಬರಾವ್
ಮೋಹನ್ ಮುದ್ರಣಾಲಯ ಮೈಸೂರು

ಫೋನ್ ೫೭೪೪ (೮೦೯) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೩] ೧—೨—೧೯೫೨ನೇ ಶುಕ್ರವಾರ [ಸಂಚಿಕೆ ೧೩೩

ಸುಧಾರಿತ ವ್ಯವಸಾಯ ವಿಸ್ತರಣ ಕೇಂದ್ರ ಸ್ಥಾಪನೆ

ವ್ಯವಸಾಯಾಭಿವೃದ್ಧಿ ಶಿಕ್ಷಣ ಕೇಂದ್ರ ಸ್ಥಾಪನೆ

ಭಾರತಾದ್ಯಂತ ವ್ಯವಸಾಯಾಭಿವೃದ್ಧಿಗಾಗಿ, ಪಶುಪಾಲನೆ, ಜನಾರೋಗ್ಯ ಮುಂತಾದ ವಿಷಯದಲ್ಲಿ ಉಚ್ಛಶಿಕ್ಷಣವನ್ನು ಕೊಡಲು ಸ್ಥಾಪಿಸಲಿರುವ ೫೫ ಶಿಕ್ಷಣ ಕೇಂದ್ರಗಳಲ್ಲಿ ಒಂದನ್ನು ನಿನ್ನೆಯದಿನ ಅರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶ್‌ಮುಖ್‌ರವರು ಬೊಂಬಾಯಿನ ಹತ್ತಿರವಿರುವ ಆನಂದ್ ಎಂಬಲ್ಲಿ ಸ್ಥಾಪನೆ ಮಾಡಿದರು. ಈ ಯೋಜನೆಯ ಪ್ರಕಾರ ೫ ವರ್ಷಗಳಲ್ಲೇ ವ್ಯವಸಾಯ ವಿಸ್ತರಣಕಾರ್ಯವನ್ನು ೧೫,೦೦೦ ಹಳ್ಳಿಗಳಿಗೆ ಅನ್ವಯಿಸಲಾಗುತ್ತದೆ.

ದೆಹಲಿಗೆ ಹನುಮಂತಯ್ಯನವರು

ಬೆಂಗಳೂರು ಜ ೩೧

ಫೆಬ್ರವರಿ ೩ನೇ ತಾರೀಖಿನಿಂದ ಸೇರಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಭಾಗವಹಿಸಲು ಮೈಸೂರು ಪ್ರಾದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ವಿಶೇಷ ಆಹ್ವಾನದ ಮೇಲೆ ನಾಳೆ ದೆಹಲಿಗೆ ಪ್ರಯಾಣ ಮಾಡುವರು.

ಶ್ರೀ ವೆಂಕಟಗಿರಿಯಪ್ಪನವರ ನಿಧನ

ಮೈಸೂರಿನ ಸುಪ್ರಸಿದ್ಧ ಸಂಗೀತಗಾರರಾದ ಶ್ರೀ ವೀಣೆ ವೆಂಕಟಗಿರಿಯಪ್ಪನವರು ಇಂದು ಸಂಜೆ ತಮ್ಮ ಸ್ವಗೃಹದಲ್ಲಿ ದೈವಾಧೀನರಾದರೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ. ಭಾರತದಲ್ಲೆಲ್ಲಾ ಇವರು ಸುಪ್ರಸಿದ್ಧ ಸಂಗೀತಗಾರರೆನ್ನಿಸಿಕೊಂಡು ವಿಶೇಷ ರೀತಿ ಸನ್ಮಾನಿತರಾಗಿದ್ದರು. ಮೈಸೂರು ಅರಮನೆಯಲ್ಲಿ ಆಸ್ಥಾನ ಮಹಾ ವಿದ್ವಾಂಸರಾಗಿದ್ದರು.

ಸೂಯೆಜ್ ಪ್ರದೇಶ ಬಿಡುವ ಆಲೋಚನೆಯಿಲ್ಲ

ಈಜಿಪ್ಟಿನೊಡನೆ ಮತ್ತೊಂದು ಹೊಸ ಒಪ್ಪಂದವಾಗುವವರೆಗೂ, ಕಾಲುವೆ ಪ್ರದೇಶದಲ್ಲಿ ದೃಢವಾಗಿ ನಿಲ್ಲುವ ಬ್ರಿಟಿಷ್ ನಿರ್ಧಾರಕ್ಕೆ ಈಚಿನ ವಿದ್ಯಮಾನಗಳಿಂದ ಧಕ್ಕೆಯೇನೂ ಬಂದಿಲ್ಲ ಎಂದು ವಿದೇಶಾಂಗ ಮಂತ್ರಿ ಅಂಥೋಣಿ ಈಡನ್ ಕಾಮನ್ಸ್ ಸಭೆಯಲ್ಲಿ ತಿಳಿಸಿರುವರು.

೧೯೩೬ರ ಆಂಗ್ಲೋ-ಈಜಿಪ್ಷಿಯನ್ ಕೌಲನ್ನು ಪುನರ್ ಪರಿಶೀಲಿಸಲು ಸಂಧಾನಗಳನ್ನು ನಡೆಸಬೇಕೆಂಬ ತಮ್ಮ ಸಲಹೆಯನ್ನು ವಾಪಸು ತೆಗೆದುಕೊಂಡಿಲ್ಲವೆಂದು ಈಡನ್ ಹೇಳಿದರು.

* ಸೌರಾಷ್ಟ್ರದಿಂದ ಭಾರತದ ಪಾರ್ಲಿಮೆಂಟಿಗೆ ಇರುವ ಆರು ಸ್ಥಾನಗಳೂ ಕಾಂಗ್ರೆಸ್ಸಿನವರಿಗೆ ಲಭಿಸಿದೆ.

ಹೋಟೇಲು ಕೆಲಸಗಾರರ ಸಮ್ಮೇಳನ

ಮೈಸೂರು ಫೆ ೧

ಮೈಸೂರು ನಗರ ಹೋಟೇಲು ಕೆಲಸಗಾರರ ಸಮ್ಮೇಳನವು ಇದೇ ೩ನೇ ತಾ॥ ಪುರಭವನದಲ್ಲಿ ನಡೆಯಲಿದೆ. ನ್ಯಾಯಾಂಗ ಮಂತ್ರಿ ಶ್ರೀ ಕೆ ಟಿ ಭಾಷ್ಯಂರವರು ಅಧ್ಯಕ್ಷತೆ ವಹಿಸುವರು. ಶ್ರೀ ಕೆ ಪುಟ್ಟಸ್ವಾಮಿಯವರು ಪ್ರಾರಂಭೋತ್ಸವ ನಡೆಸುವರು.

ವಂದನೆಗಳು

ಮೈಸೂರು ಜಿಲ್ಲಾ ಪಾರ್ಲಿಮೆಂಟ್ ಕ್ಷೇತ್ರದಿಂದ ಜಯಗಳಿಸಲು ಕಾರಣಕರ್ತರಾದ ಎಲ್ಲಾ ಸ್ನೇಹಿತರು, ಹಿತೈಷಿಗಳು ಮತ್ತು ಓಟರುಗಳಿಗೆ ಶ್ರೀ ಗುರುಪಾದಸ್ವಾಮಿಯವರು ತಮ್ಮ ವಂದನೆಗಳನ್ನು ಅರ್ಪಿಸಿರುವರು.

ಈ ಸಂದರ್ಭದಲ್ಲಿ ಒಂದು ಪತ್ರಿಕಾಗೋಷ್ಠಿಯನ್ನು ಕರೆದು ಅಲ್ಲಿ ಮಾತನಾಡುತ್ತಾ ಇದೇ ಕ್ಷೇತ್ರದಲ್ಲಿ ಪರಾಜಿತರಾದ ಮೈಸೂರು ಅರ್ಥ ಸಚಿವ ಶ್ರೀ ದಾಸಪ್ಪನವರು ಈ ಚುನಾವಣೆಯ ವಿಷಯದಲ್ಲಿ ಮಾತನಾಡುತ್ತಾ, ಶ್ರೀ ಸುತ್ತೂರು ಮಠಾಧಿಪತಿಗಳು ಈ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದರೆಂಬ ಅಪಾದನೆ ಮಾಡಿರುವರು. ಶ್ರೀ ಸ್ವಾಮಿಗಳವರು ಈ ಪ್ರಚಾರ ಕಾರ್ಯದಲ್ಲಿ ಪ್ರವೇಶಿಸಿಲ್ಲ. ವೃಥಾ ಶ್ರೀ ದಾಸಪ್ಪನವರು ಆರೋಪಣೆ ಮಾಡಿರುವರೆಂದು ಹೇಳಿದರು.

ಭಾರತಕ್ಕೆ ಅಮೇರಿಕಾ ಇಂಜನಿಯರುಗಳು

ಜಲ ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಆಣೆಕಟ್ಟುಗಳ ಸ್ಥಾಪನೆ ಮುಂತಾದ ಇಂಜನಿಯರಿಂಗ್ ಕಾರ್ಯಗಳಲ್ಲಿ ಭಾರತಕ್ಕೆ ಸಲಹೆಕೊಡಲು ಅಮೇರಿಕಾ ಇಂಜನಿಯರುಗಳ ಭಾರತ ಸರ್ಕಾರದ ಸಲಹೆಗಾರರಾಗಿ ಬರಲಿರುವರು. ಮುಖ್ಯವಾಗಿ ಆಹಾರ ಬೆಳವಣಿಗೆಗೆ ಬೇಕಾದ ಜಲಾಶಯ ಕಾರ್ಯ, ಪ್ರವಾಹ ಹತೋಟಿ, ವಿದ್ಯುಚ್ಛಕ್ತಿ, ಬೆಳವಣಿಗೆ ಮುಂತಾದ ಭಾರತದ ಹೊಸ ಹೊಸ ಯೋಜನೆಗಳಿಗೆ ಕಾರ್ಯರೂಪಕ್ಕೆ ಬರಲಿವೆ.

ಈ ಸಲಹೆಗಾರರಲ್ಲಿ ಮಿ॥ ಕ್ಲೇರೆನ್ಸ್ ರಾಹೊಸರ್‌ರವರು ಪ್ರಯಾಣಮಾರ್ಗದಲ್ಲಿರುವರು. ಮಿ॥ ವಾಲ್‌ವಾರ್ಡರ್ ಲಿಪ್ಪೆಯವರು ಫೆಬ್ರವರಿ ಮಾಹೆಯಲ್ಲಿ ಭಾರತಕ್ಕೆ ಬರುವರು.

ವಿದ್ಯಾರ್ಥಿಗಳ ಪ್ರತಿಭಟನೆ

ಉರ್ದು ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಿ ಕಡ್ಡಾಯವಾಗಿ ಎಲ್ಲರೂ ಕಲಿಯಬೇಕೆಂದು ಪಾಕಿಸ್ಥಾನ ಸರ್ಕಾರದ ಆಜ್ಞೆಯನ್ನು ಪ್ರತಿಭಟಿಸಿ ವಿಶ್ವವಿದ್ಯಾನಿಲಯದ ಸಾವಿರಾರು ವಿದ್ಯಾರ್ಥಿಗಳು ಮೆರವಣಿಗೆಯನ್ನು ನಡೆಸಿದರು.

ಬೆಂಗಳೂರಿಗೆ ಎಂ. ಸಿ. ಸಿ. ಟೀಮಿನ ಆಗಮನ

ಬೆಂಗಳೂರು ಜ ೩೦

ಬೆಂಗಳೂರಿಗೆ ಎಂ. ಸಿ. ಸಿ. ಟೀಮು ಡೆಕ್ಕನ್ ಏರ್‌ವೇಸ್ ವಿಮಾನದಲ್ಲಿ ಹೈದರಾಬಾದಿನಿಂದ ಆಗಮಿಸಿತು.

ಇವರನ್ನು ಸ್ವಾಗತಿಸಲು ಹಿಂದೂಸ್ಥಾನ್ ವಿಮಾನ ಕಾರ್ಖಾನೆ ನಿಲ್ದಾಣಕ್ಕೆ ಮೈಸೂರು ಸಂಸ್ಥಾನ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರು ರಾಜಧರ್ಮ ಪ್ರಸಕ್ತ ಶ್ರೀ ಟಿ. ಸಿಂಗಾರವೇಲು ಮೊದಲಿಯಾರ್, ಶ್ರೀ ಎಂ. ಜಿ. ವಿಜಯಸಾರಥಿ, ಶ್ರೀ ಪಿ ವೆಂಕಟಸುಬ್ಬರಾವ್ ಮತ್ತು ಸೌತ್ ಜೋನ್ ಟೀಮಿನ ಕ್ಯಾಪ್ಟನ್ ಶ್ರೀ ಶ್ಯಾಮಸುಂದರ್ ಅನೇಕ ಮಂದಿ ಕ್ರಿಕೆಟ್ ಉತ್ಸಾಹಿಗಳು ಸೇರಿದ್ದರು.

ಸಂಧಾನ ಮುಂದುವರಿಸಲಿ

ಡಾ॥ ಗ್ರಹಾಂರವರು ಭಾರತಕ್ಕೆ ಹಿಂದಿರುಗಿ ಕಾಶ್ಮೀರ ಸಮಸ್ಯಾ ಪರಿಹಾರಕ್ಕಾಗಿ ಯತ್ನಿಸಲು ಸಂಧಾನ ಮುಂದುವರಿಸಬೇಕೆಂದು ಬ್ರಿಟನ್ನಿನ ಪ್ರತಿನಿಧಿ ಸರ್ ಗ್ಲ್ಯಾಡ್ವಿನ್ ಜೆಬ್ ಭದ್ರತಾ ಸಮಿತಿಯಲ್ಲಿ ಸೂಚಿಸಿದರು.

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ಹೊರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟಿನ ಚುನಾವಣೆ ಫಲಿತಾಂಶದ ಒಟ್ಟು ೨೧೧ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೧೪೮, ಕೆ. ಎಂ. ಪಿ. ೬, ಯುನೈಟೆಡ್ ಫ್ರಂಟ್ ೩, ಪೀಪಲ್ಸ್ ಫ್ರಂಟ್ ೬, ರೈತ ೨, ಸ್ವತಂತ್ರ ೨೩ ಇತರರು ೨೨.

ಮೈಸೂರು ಚುನಾವಣೆಯಲ್ಲಿ ಬಲಾಬಲ (ಶಾಸನಸಭೆ)

ಕಾಂಗ್ರೆಸ್ ಪಕ್ಷ	೬೯
ಸೋಷಲಿಸ್ಟ್	೩
ಕೆ. ಎಂ. ಪಿ	೬
ಕಮ್ಯೂನಿಸ್ಟ್	೧
ಷೆ ಕಾ. ಫೆ.	೨
ಸ್ವತಂತ್ರ	೮
ಒಟ್ಟು	೮೯

ಸಂಸ್ಥಾನದ ಶಾಸನಸಭೆಯ ಫಲಿತಾಂಶ

ಕಾಂಗ್ರೆಸ್—

ತಿಮಕೂರು	ಎಂ. ವಿ. ರಾಮರಾವ್
ನೆಲಮಂಗಲ	ಕೆ. ಪ್ರಭಾಕರ್ (ರಿ)
ಹೊಳಲ್ಕೆರೆ	ಜಿ. ಶಿವಪ್ಪ,
	ಜಿ. ದುಗ್ಗಪ್ಪ (ರಿ)

ಭೂಪಾಲ್‌ನಲ್ಲಿ ಕಾಂಗ್ರೆಸ್ಸಿಗೆ ಬಹುಮತ

ಭೂಪಾಲ್ ರಾಜ್ಯ ಶಾಸನಸಭೆಯ ೩೦ ಸ್ಥಾನಗಳಲ್ಲಿ ಈಗ ೧೯ ಸ್ಥಾನದ ಫಲಿತಾಂಶ ಹೊರಬಿದ್ದು ಕಾಂಗ್ರೆಸ್ಸಿಗೆ ೧೬ ಮತ್ತು ೩ ಸ್ಥಾನ ಸ್ವತಂತ್ರರಿಗೆ ಲಭಿಸಿದೆ. ಇಲ್ಲಿಗೆ ಭೂಪಾಲ್‌ನಲ್ಲಿ ಕಾಂಗ್ರೆಸ್ಸಿಗೆ ಬಹುಮತ ಖಚಿತವಾಯಿತು.

ವೈಮಾನಿಕ ಒಪ್ಪಂದ

ಭಾರತ ಅಫ್ಘಾನಿಸ್ಥಾನಗಳ ನಡುವೆ ವೈಮಾನಿಕ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸಲೋಸುಗ ಉಭಯ ರಾಷ್ಟ್ರಗಳ ಪ್ರತಿನಿಧಿಗಳು ವೈಮಾನಿಕ ಒಪ್ಪಂದಕ್ಕೆ ಕಾಬೂಲಿನಲ್ಲಿ ಸಹಿ ಹಾಕಿರುವರು.

ಅಶೋಕಚಕ್ರ ಸಂಘ

ಮೈಸೂರು ಜ 31

ಮೇಲ್ಕಂಡ ಸಂಘದಾಶ್ರಯದಲ್ಲಿ ನಾಳೆ ಸಂಜೆ ಆರೂವರೆ ಗಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಕಛೇರಿಯ ಮಹಡಿ ಮೇಲೆ ಧರ್ಮ ಎಂಬ ವಿಷಯ ಕುರಿತು ಪಂಡಿತ ವೆಂಕಣ್ಣಭಟ್ಟರು ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

* ಸಿಡ್ನಿಯಲ್ಲಿ ಬಿರುಗಾಳಿ ಬೀಸಿದ ಪರಿಣಾಮವಾಗಿ 30 ಜನರು ಮಡಿದು 30 ಲಕ್ಷ ಪೌಂಡ್‌ನಷ್ಟು ನಷ್ಟ ಸಂಭವಿಸಿದೆಯೆಂದು ಹೇಳಲಾಗಿದೆ.

ಸಂಸ್ಥೆಯೊಳಗಿನ ವಿಶ್ವಾಸ ಘಾತುಕತನ ಸೋಲಿಗೆ ಕಾರಣ

ಶ್ರೀ ಹೆಚ್. ಸಿ. ದಾಸಪ್ಪನವರ ವಿವರಣೆ

ಬೆಂಗಳೂರು ಜ ೩೧

'ದೋಷಗಳನ್ನು ಕಡೆಗಂಡು ಪಕ್ಷದ ನೈತಿಕ ಅಂಶಗಳನ್ನು ಒತ್ತಾಯವಾಗಿ ಅಡರಿಸುವ ಪ್ರಯತ್ನ ನಡೆಯದಿದ್ದರೆ ಪಕ್ಷವು ಕೂಡಲೇ ಒಡಕನ್ನೂ ಅಳವನ್ನೂ ಎದುರಿಸಬೇಕಾಗುವುದು' ಎಂದು ನಿನ್ನೆ ಸಂಜೆ ಪತ್ರಿಕಾ ಪ್ರತಿನಿಧಿಗಳಿಗೆ ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ತಿಳಿಸಿದರು.

ಅವರ ಕ್ಷೇತ್ರದ ಚುನಾವಣೆ ಫಲಿತಾಂಶದ ಬಗ್ಗೆ ಅವರ ಪ್ರತಿಕ್ರಿಯೆಯನ್ನು ಕೇಳಿದ ಪತ್ರಿಕಾ ಪ್ರತಿನಿಧಿಗಳಿಗೆ ಶ್ರೀ ದಾಸಪ್ಪನವರು 'ಸಂಸ್ಥೆಯೊಳಗಿನ ವಿಶ್ವಾಸಘಾತುಕತನವೇ ಈ ಸೋಲಿಗೆ ಕಾರಣ. ಚುನಾವಣಾ ನಿಯಮಗಳನ್ನು ಉಲ್ಲಂಘಿಸಿ ಶ್ರೀ ಸುತ್ತೂರು ಸ್ವಾಮಿಗಳು ಚುನಾವಣೆಗಳಲ್ಲಿ ಆಸಕ್ತಿ ವಹಿಸಿದ್ದರೆಂದು ಗೊತ್ತಾಗಿದೆ. ಈ ಸಂಸ್ಥೆಯ ಶುದ್ಧೀಕರಣವಾಗದಿದ್ದರೆ ಅದಕ್ಕೆ ಭವಿಷ್ಯವಿಲ್ಲ. ಮೈಸೂರು ಮಾತ್ರವಲ್ಲ ಉಳಿದ ಭಾಗಗಳಲ್ಲೂ ಈ ರೀತಿಯ ಅವಿಧೇಯತೆಯಿದೆಯೆಂದು ನನಗೆ ತಿಳಿದುಬಂದಿದೆ. ಎಲ್ಲಾ ಸ್ಥಿಮಿತಕ್ಕೆ ಬಂದ ಮೇಲೆ ನಾವು ಮಾಡಬೇಕಾದ ಪ್ರಥಮ ಕರ್ತವ್ಯವೆಂದರೆ ಇತ್ತ ಗಮನವೀಯುವುದು. ಕಾಂಗ್ರೆಸಿನವರಲ್ಲಿ ಕಂಡುಬಂದಿರುವ ಅಶಿಸ್ತು ಮತ್ತು ಅವಿಧೇಯತೆಯನ್ನು ನಿವಾರಿಸುವ ಕಾರ್ಯವನ್ನು ಹೈಕಮಾಂಡ್ ನಿಷ್ಪಕ್ಷಪಾತ ಮಂದಿಯ ಸಮಿತಿಗೆ ವಹಿಸಬೇಕು. ಉಳಿದ ಪ್ರಾಂತ್ಯಗಳಲ್ಲಿ ಮಾಡಿರುವಂತೆ ಅಂತಹ ಕಾಂಗ್ರೆಸ್ ಉಮೇದುವಾರರ ಮೇಲೆ ಕ್ರಮ ಕೈಗೊಳ್ಳಬೇಕು' ಎಂದರು.

ನೆಹರೂ ಕ್ಷೇತ್ರದಲ್ಲಿ ಮತಗಳ ಎಣಿಕೆ

ಭಾರತ ಪ್ರಧಾನಿ ಪಂ|| ಜವಾಹರಲಾಲ್ ನೆಹರೂ ಪಾರ್ಲಿಮೆಂಟಿಗೆ ಸ್ಪರ್ಧಿಸಿರುವ ಅಲಹಾಬಾದ್ ಪೂರ್ವ-ಫುರ ಪಶ್ಚಿಮ ಕ್ಷೇತ್ರದ ಮತಗಳ ಎಣಿಕೆ ಫೆಬ್ರವರಿ ೪ರಂದು ನಡೆಯುವುದು.

ಅಲಹಾಬಾದ್ ಜಿಲ್ಲೆಯಲ್ಲಿ ಮತಗಳ ಎಣಿಕೆ ಒಂದು ದಿನ ಮೊದಲು ಪ್ರಾರಂಭವಾಗುವುದು. ಫೆಬ್ರವರಿ ೭ರ ಹೊತ್ತಿಗೆ ಎಲ್ಲಾ ಮುಗಿಯುವುದು.

ವಿಷಬಾಂಬ್ ಪ್ರಯೋಗ

ಇದೇ ಜನವರಿ ೯ನೇ ತಾರೀಖಿನ ದಿವಸ ಅಮೆರಿಕದ 'ನೌಕಾ ವಿಮಾನಗಳು' ಉತ್ತರ ಕೊರಿಯದ ಮೇಲೆ ವಿಷಬಾಂಬ್ ಹಾಕಿದವೆಂದು ಪಾಂಗ್‌ಯಾಂಗ್ ರೇಡಿಯೋ ಸಾರಿದೆ.

ಓಟುಗಳ ವರ್ಗಾವಣೆ ನಡೆದಿದೆ ಎಂಬ ದೂರು

ಬೆಂಗಳೂರು ಜ ೩೦

ಸ್ವತಂತ್ರ ಹಾಗೂ ನ್ಯಾಯವಾದ ಚುನಾವಣೆಗಳ ಸ್ಥಾಯಿ ಸಮಿತಿಸಭೆ ೨೯ನೇ ತಾ|| ಅಧ್ಯಕ್ಷ ಶ್ರೀ ಬಿ ಹುಚ್ಚೇಗೌಡರ ಅಧ್ಯಕ್ಷತೆ ಎಲ್ಲಿ ಸೇರಿ ಮುಖ್ಯ ಚುನಾವಣಾ ಕಮಿಷನರ್‌ರವರಿಗೆ ಅರ್ಪಿಸಲು ಮನವಿ ಪತ್ರವೊಂದನ್ನು ಅಂಗೀಕರಿಸಿತು.

ಬ್ಯಾಲಟ್ ಪೆಟ್ಟಿಗೆಗಳಿಂದ ಓಟುಗಳ ವರ್ಗಾವಣೆ ನಡೆದಿದೆಯೆಂದು ತಿಳಿಸಿ ಅದಕ್ಕೆ ಮನವಿ ಪತ್ರದಲ್ಲಿ ಎಂಟು ಆಧಾರ ಕಾರಣಗಳನ್ನು ಕೊಟ್ಟು ವಿಚಾರಣೆ ನಡೆಸಬೇಕೆಂದು ಮುಖ್ಯ ಕಮಿಷನರ್‌ರವರನ್ನು ಪ್ರಾರ್ಥಿಸಲಾಗಿದೆ.

ಮಹಾ ಚುನಾವಣೆಗಳು ನ್ಯಾಯವಾಗಿ ನಡೆದಿಲ್ಲವೆಂಬ ಬಗ್ಗೆ ರುಜುವಾತು ಕೊಡುವ ಸ್ಪರ್ಧಿಗಳು ಹಾಗೂ ಸಾರ್ವಜನಿಕರೂ ಫೆಬ್ರವರಿ ೩ನೇ ತಾ|| ಬೆಳಿಗ್ಗೆ ೧೦ ಗಂಟೆಗೆ ಬೆಂಗಳೂರು ನಗರದ ಕೆ ಎಂ ಪಿ. ಪಕ್ಷದ ಕಛೇರಿಯಲ್ಲಿ ನಡೆಯುವ ಸಭೆಗೆ ಬರಬೇಕೆಂದು ಪ್ರಾರ್ಥಿಸಲಾಗಿದೆ.

ಸಮಿತಿ ಸಂಸ್ಥಾನಾದ್ಯಂತ ಪ್ರತಿಭಟನಾ ದಿನಾಚರಣೆ ನಡೆಸಲು ತೀರ್ಮಾನಿಸಿತು. ಫೆಬ್ರವರಿ ೩ರ ಸಭೆಯ ನಂತರ ಪ್ರತಿಭಟನಾ ದಿನಾಚರಣೆಯ ದಿನವನ್ನು ಗೊತ್ತುಮಾಡಲಾಗುವುದು.

ಅಡ್ಮಿರಲ್ ಮೆಕಾರ್ಮಿಕರ ನೇಮಕ

ಅಮೇರಿಕದ ಅಡ್ಮಿರಲ್ ಲಿಂಡೆ ಮೆಕಾರ್ಮಿಕರನ್ನು ಉತ್ತರ ಅಟ್ಲಾಂಟಿಕ್ ಕೌಲು ಸಂಸ್ಥೆಯು ತನ್ನ ಅಟ್ಲಾಂಟಿಕ್‌ನ ಮಿತ್ರ ಮಹಾ ದಂಡನಾಯಕರಾಗಿ ನೇಮಕವಾಗಿದೆ.

ಬ್ರಿಟಿಷ್ ಡೆಪ್ಯುಟಿ ಅಡ್ಮಿರಲ್ ವಿಲಿಯಂ ಜಾರ್ಜ್ ಅಂಡ್ರ್ಯೂಸ್‌ರನ್ನು ಅಟ್ಲಾಂಟಿಕ್‌ನಲ್ಲಿ ಮಹಾ ದಂಡನಾಯಕರಾಗಿರುವ ಅಮೇರಿಕಾ ಅಡ್ಮಿರಲ್ ಲಿಂಡೆ ಮೆಕಾರ್ಮಿಕರ ಕೈಕೆಳಗೆ ಉಪಮಹಾ ದಂಡನಾಯಕರಾಗಿ ನೇಮಿಸಲಾಗಿದೆ.

ದುರಂತದಲ್ಲಿ ಸತ್ತ ಮಹಾರಾಜರು ಚುನಾವಣೆಯಲ್ಲಿ ಗೆದ್ದಿದ್ದಾರೆ

ಶನಿವಾರದಂದು ವಿಮಾನ ಅನಾಹುತದಲ್ಲಿ ಮೃತರಾದ ಜೋಧಪುರದ ಮಹಾರಾಜರು ಮುಖ್ಯಮಂತ್ರಿ, ಜಯನಾರಾಯಣ ವ್ಯಾಸರನ್ನು ಸೋಲಿಸಿ ಆರಿಸಿಬಂದಿದ್ದಾರೆ. ಮಹಾರಾಜರಿಗೆ ೧೮೦೮೫ ಓಟುಗಳೂ, ಜಯನಾರಾಯಣ ವ್ಯಾಸರಿಗೆ ೧೧೭೮೭ ಓಟುಗಳೂ ಬಂದಿವೆ.

ಭಾರತಕ್ಕೆ ಅಮೇರಿಕದ ಸಹಾನುಭೂತಿ

ನ್ಯೂಯಾರ್ಕ್ ಜ ೨೫

ಭಾರತದಲ್ಲಿ ಅಮೇರಿಕದ ರಾಯಭಾರಿಗಳಾಗಿರುವ ಚೆಸ್ಟರ್ ಬೌಲ್ಸರು ನವದೆಹಲಿಗೆ ಹೊರಡುವ ಮುನ್ನ ಹೇಳಿಕೆ ಕೊಡುತ್ತಾ, ವಾಷಿಂಗ್ಟನ್ನಿನಲ್ಲಿ ಭಾರತದ ಬಗ್ಗೆ ಸಂಪೂರ್ಣ ಸಹಾನುಭೂತಿ ಇತ್ತೆಂದು ತಿಳಿಸಿದ್ದಾರೆ.

ಅಮೇರಿಕದ ಶಾಸನಸಭಾ ಸದಸ್ಯರು ಮತ್ತು ಅಧಿಕಾರಿಗಳು ಭಾರತವು ಸ್ವಾತಂತ್ರ್ಯವನ್ನು ಗಳಿಸಿದ ನಂತರ ಸಾಧಿಸುತ್ತಿರುವ ಅಭಿವೃದ್ಧಿಯನ್ನು ಮನಗಂಡಿದ್ದಾರೆ ಎಂದು ಬೌಲ್ಸರು ತಿಳಿಸಿದರು.

ಹೊಸ್ತಿತಾಗಿ ಅಮೇರಿಕವು ಭಾರತಕ್ಕೆ ಕೊಟ್ಟ ೫೦ ಮಿಲಿಯನ್ ಡಾಲರು ಹಣದ ಬಗ್ಗೆ ಪ್ರಸ್ತಾಪಿಸುತ್ತಾ, ಭಾರತವು ಆಹಾರದ ಬಗ್ಗೆ ಸ್ವಯಂ ಪೂರ್ಣತೆಯನ್ನು ಪಡೆಯುವ ಒಂದೇ ಉದ್ದೇಶದಿಂದ ಆ ಸಹಾಯವನ್ನು ಮಾಡಲಾಗಿದೆ ಎಂದು ತಿಳಿಸಿದರು.

ಭಾರತದಲ್ಲಿ ಕಮ್ಯೂನಿಸಂ ಇಲ್ಲದಿದ್ದರೂ, ಇನ್ನೂ ೪ ವರ್ಷಗಳವರೆಗೆ ಈ ಸಹಾಯ ಅವಶ್ಯಕವೆಂದು ತಿಳಿಸಿದರು.

ನಿಜವಾದ ಒಳ್ಳೆಯ ಪ್ರಜಾರಾಜ್ಯಕ್ಕೆ ಬರೀ ಘೋಷಣೆಗಳಿಂದ ಪ್ರಯೋಜನವಿಲ್ಲ. ಒಳ್ಳೆಯ ಜೀವನಮಟ್ಟವಿರಬೇಕು. ಹಸಿವು ನೀಗಿ, ಜನರು ಸುಂದರಜೀವನ ನಾಗಿಸುವಂತಾಗಬೇಕು.

ವೈಜ್ಞಾನಿಕ ಜೀವಣಿಗೆ ಮತ್ತು ಬುದ್ಧಿಶಕ್ತಿ ಇರುವ ನಾವು ಸಹಾಯಮಾಡದಿದ್ದರೆ ಪ್ರಜಾರಾಜ್ಯವು ಯಶಸ್ವಿಯಾದಂತಾಗುವುದಿಲ್ಲ ಎಂಬುದಾಗಿ ಕೊನೆಯಲ್ಲಿ ರಾಯಭಾರಿ ಬೌಲ್ಸರು ನುಡಿದರು.

ಬಿಕ್ಕೀರ್ ಮಹಾರಾಜರ ಚುನಾವಣೆ

ಬಿಕ್ಕೀರ್ ಮಹಾರಾಜರು ಪಾರ್ಲಿಮೆಂಟಿಗೆ ಆರಿಸಿಬಂದರು. ಕಾಂಗ್ರೆಸ್ ಪ್ರತಿಸ್ಪರ್ಧಿ ಸೋತರು. ಸೋಷಲಿಸ್ಟ್ ಪ್ರತಿನಿಧಿ ಮತ್ತು ಜನತಾ ಪಕ್ಷದ ಪ್ರತಿನಿಧಿ ಆರ್. ಡಿ. ಗೋಯಲ್ (ರಾಜಸ್ಥಾನದ ಮಾಜಿ ಕಾಂಗ್ರೆಸ್ ಸಚಿವ) ಠೇವಣಿ ಕಳೆದುಕೊಂಡರು.

ಶಿಕ್ಷಣ ಸಂಸ್ಥೆಗಳಿಗೆ ರಜಾ

ದಕ್ಷಿಣ ಜೋನ್ ಕ್ರಿಕೆಟ್ ಪಂದ್ಯದ ಸಂಬಂಧದಲ್ಲಿ ಫೆ. ಮೊದಲನೇ ಮತ್ತು ಎರಡನೇ ತಾರೀಖು ಬೆಂಗಳೂರು ನಗರದ ಶಿಕ್ಷಣ ಸಂಸ್ಥೆಗಳಿಗೆ ರಜಾ ಕೊಡಲಾಗಿದೆ.

ಫೆಬ್ರುವರಿ, ಮಾರ್ಚಿ ತಿಂಗಳಲ್ಲಿ ಭಾರತಕ್ಕೆ ಬರುವ ಅಮೇರಿಕದ ಗೋಧಿ

ವಾಷಿಂಗ್ಟನ್ ಜ ೨೪

ಫೆಬ್ರವರಿ ಮತ್ತು ಮಾರ್ಚಿ ತಿಂಗಳಲ್ಲಿ ಭಾರತಕ್ಕೆ ಅಮೇರಿಕದಿಂದ 650,000 ಟನ್ನು ಗೋಧಿ ಬರುವುದೆಂದು ಅಮೇರಿಕದ ಕೃಷಿ ಇಲಾಖೆಯ ಪ್ರಕಟಣೆಯೊಂದರಿಂದ ತಿಳಿಯುವುದು

ಫೆಬ್ರವರಿ ತಿಂಗಳಲ್ಲಿ 350,000 ಟನ್ನು ಗೋಧಿಯು ಭಾರತಕ್ಕೆ ಬರುವುದು. ಇತರ ದೇಶಗಳಿಗೆ ಕಳುಹಿಸುವ ಗೋಧಿಗಿಂತ ಭಾರತಕ್ಕೆ ಬರುವ ಗೋಧಿಯೇ ಹೆಚ್ಚು.

ಎಪ್ರಿಲ್ ಮತ್ತು ಮೇ ತಿಂಗಳಿಗೆ ಭಾರತಕ್ಕೆ ರವಾನಿಸಲಾಗುವ ಗೋಧಿಯ ಕೋಟಾವನ್ನು ನಿಗದಿ ಮಾಡಲಾಗಿದೆ. ಎಪ್ರಿಲ್ ತಿಂಗಳಲ್ಲಿ 295,000 ಟನ್ನೂ ಮೇ ತಿಂಗಳಲ್ಲಿ 236,000 ಟನ್ನು ಗೋಧಿಯೂ ಭಾರತಕ್ಕೆ ಬರುವುದು

-:ಪ್ರಭಾ ಟಾಕೀಸ್:-
1-2-52 ರಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಪ್ರದರ್ಶನಗಳು
ಫಿಲಂ ಆರ್ಟ್ಸ್ ರವರ
ಅತ್ಯುತ್ತಮ ಹಿಂದೀ ಚಿತ್ರ
ಬುಜ್‌ದಿಲ್
ತಾರಾಗಣ:- ಕಿಶೋರ್ ಸಾಹು, ನಿಮ್ಮಿ, ಪ್ರೇಮನಾಥ್ ಮತ್ತು ಕಕ್ಕು.
ಸಂಗೀತ— ಎಸ್. ಡಿ. ಬರ್ಮನ್
ನಿರ್ದೇಶಕರು— ಷಹೀದ್ ಲತೀಫ್
(ವಯಸ್ಕರಿಗೆ ಮಾತ್ರ ಪ್ರವೇಶ)

ವೆಲ್‌ಕಮ್ ಕಾಫೀ ಕ್ಲಬ್
(ಪ್ರಭಾ ಟಾಕೀಸ್ ಎದುರು)
೨೩-೧-೫೨ ರಿಂದ ಪ್ರಾರಂಭ
ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮು ರವರಿಂದ ತಯಾರಿಸಿದ
ಅಪ್ಪಟ ತುಪ್ಪದ 'ಕೇಸರೀ ಭಾತ್'
ಉತ್ತಮವಾದ
'ಸಾದಾ ಸೆಟ್ ದೋಸೆ'
ಒಂದನೇ ನಂ. ಕಾಫೀ ಮತ್ತು ಟೀ
ಸೇವಿಸಲು ದಯಮಾಡಿಸಿ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು—ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು

ವುಡ್‌ಲ್ಯಾಂಡ್ಸ್ * ೨೫—೧—೫೨ ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
* ದಶಾವತಾರ್ *
ಪಾತ್ರ—ನಿರೂಪರಾಯ್, ತ್ರಿಲೋಕ್ ಕಪೂರ್.

ಫೋನ್ ೫೭೬೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨—೨—೧೯೫೨ನೇ ಶನಿವಾರ [ಸಂಚಿಕೆ ೧೩೪

ಭಾರತಕ್ಕೆ ಥೈಲ್ಯಾಂಡಿನಿಂದ ೪೪ ಲಕ್ಷ ಮಣ ಅಕ್ಕಿ ಬರುವುದು

ಪಾರ್ಲಿಮೆಂಟಿಗೆ ಶ್ರೀ ಅನಂತಶಯನಂರವರು ಚುನಾಯಿತರಾದರು

ಮೈಸೂರು ಶಾಸನ ಸಭಾಧಿವೇಶನ

ಬೆಂಗಳೂರು ಫೆ ೧

ಮಾರ್ಚಿ ತಿಂಗಳಲ್ಲಿ ಮೊದಲನೇ ಅಥವಾ ಎರಡನೇ ವಾರದಲ್ಲಿ ಈಗಿನ ಶಾಸನಸಭಾಧಿವೇಶನವು ನಡೆಯುವುದೆಂದು ಗೊತ್ತಾಗಿದೆ. ಹೊಸ ಶಾಸನಸಭೆಯ ಪ್ರಥಮ ಅಧಿವೇಶನವು ಮಾರ್ಚಿ ಕೊನೆಯವಾರದಲ್ಲಿ ನಡೆಯುತ್ತದೆ. ಮೈಸೂರು ಹಿರಿಯ ಸಭೆಗೂ ಕೇಂದ್ರ ಹಿರಿಯ ಸಭೆಗೂ ಆಗ ಸದಸ್ಯರನ್ನು ಚುನಾಯಿಸಲಾಗುತ್ತದೆ

ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕು

ಮೈಸೂರು ಜಿಲ್ಲಾ ಕಾಂಗ್ರೆಸ್ ಕಮಿಟಿ ಉಪಾಧ್ಯಕ್ಷ ಶ್ರೀ ವೈ ಎಮ್ ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಮೊನ್ನೆಯ ದಿನ ಕೃಷ್ಣರಾಜನಗರದಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆಯು ನಡೆಯಿತು. ಸಂಸ್ಥಾನದ ನಾನಾಭಾಗಗಳಿಂದ ಸುಮಾರು 300 ಜನ ಭಾಗವಹಿಸಿದ್ದರು. ಪಿರಿಯಾಪಟ್ಟಣ ಮತ್ತು ಕೃಷ್ಣರಾಜನಗರದಿಂದ ಶಾಸನಸಭೆಗೆ ಸ್ಪರ್ಧಿಸಿದ್ದ ಸ್ವತಂತ್ರ ಉಮೇದುವಾರರ ಜಯಕ್ಕೆ ಶ್ರೀ ಮರಿಯಪ್ಪ ಮತ್ತು ಶ್ರೀ ಚನ್ನಯ್ಯನವರು ನೆರವಿತ್ತು, ಕಾಂಗ್ರೆಸ್ ಉಮೇದುವಾರರು ಪರಾಜಯವಾಗಲು ಕಾರಣರಾದ್ದರಿಂದ ಅವರ ನಡತೆ ಬಗ್ಗೆ ಕಾಂಗ್ರೆಸ್ ಅಧ್ಯಕ್ಷರು ತೀವ್ರಕ್ರಮ ಕೈಗೊಳ್ಳಬೇಕೆಂದು ತೀರ್ಮಾನವಾಯಿತೆಂದು ತಿಳಿಯಬಂದಿದೆ.

ರಾಷ್ಟ್ರಾಧ್ಯಕ್ಷರ ಚುನಾವಣೆ

ವಯಸ್ಕರ ಮತದಾನ ಪದ್ಧತಿಯು ಜಾರಿಗೆ ಬಂದನಂತರ ಮಹಾ ಚುನಾವಣೆಗಳು ನಡೆದ ಪ್ರಥಮ ಬಾರಿಯೇ ರಾಷ್ಟ್ರಾಧ್ಯಕ್ಷಸ್ಥಾನಕ್ಕೆ ಚುನಾವಣೆ ನಡೆಯುವಾಗ ಸ್ಪರ್ಧೆ ನಡೆಯುವುದೆಂದು ಹೇಳಲಾಗಿದೆ. ಕಾಂಗ್ರೆಸ್ ಬಹುಮತ ಪಡೆದು ಸರ್ಕಾರವನ್ನು ಸ್ಥಾಪಿಸುವಪಕ್ಷವಾದುದರಿಂದ ಕಮ್ಯೂನಿಸ್ಟ ಪಕ್ಷವು ವಿರೋಧಪಕ್ಷವಾಗಿ ಪರಿಗಣಿಸಲಾಗಬೇಕಾಗುತ್ತದೆ. ಆ ಪಕ್ಷದ ನಾಯಕರು ವಿರೋಧಪಕ್ಷದ ನಾಯಕರಾಗಿ ಆ ಸ್ಥಾನಕ್ಕಿರುವ ವೇತನ ಮುಂತಾದ ಸೌಲಭ್ಯಗಳನ್ನು ಪಡೆಯಬೇಕಾಗುತ್ತದೆಯೆಂದು ಹೇಳಲಾಗಿದೆ.

ಬ್ರಿಟನ್ನಿನೊಡನೆ ಸಂಧಾನಕ್ಕೆ ಸದಾ ಸಿದ್ಧ

ಬ್ರಿಟಿಷ್ ವಿದೇಶಾಂಗ ಮಂತ್ರಿ, ಅಂಥೋನಿ ಈಡನ್‌ರವರು ಸೂಚಿಸುವ ಸಂಧಾನ ಮಾರ್ಗದ ಪರಿಶೀಲನೆ ನಡೆಸಲು ಈಜಿಪ್ಟ್ ಸದಾ ಸಿದ್ಧವಾಗಿರುವದಾಗಿ ಈಜಿಪ್ಟ್ ಪ್ರಧಾನಿ ಅಲಿಮಹರ್ ಪಾಷಾರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಈಜಿಪ್ಟ್ ಮನೋಭಾವಕ್ಕನುಗುಣವಾಗಿ ಯಾವುದಾದರೊಂದು ರೀತಿಯಲ್ಲಿ ಬ್ರಿಟನ್ನು ಈಜಿಪ್ಟಿನೊಡನೆ ಒಪ್ಪಂದ ಮಾಡಿಕೊಳ್ಳಲು ಇನ್ನೂ ಯತ್ನಿಸುತ್ತಿದೆಯೆಂಬುದಾಗಿ ಬ್ರಿಟಿಷ್ ವಿದೇಶಾಂಗ ಶಾಖಾ ಕಾರ್ಯದರ್ಶಿಗಳು ಕಾಮನ್ಸ್ ಸಭೆಯಲ್ಲಿತ್ತ ಭಾಷಣದ ಬಗ್ಗೆ ಟೀಕಿಸುತ್ತಾ, ಅಲಿಮಹರವರು ನುಡಿದರು.

ಭಾರತಕ್ಕೆ ಅಕ್ಕಿ ರವಾನೆ ಇಲ್ಲ

ಪಾಕೀಸ್ತಾನದಲ್ಲಿ ಆಹಾರ-ಅಭಾವವಿಲ್ಲದಿದ್ದಾಗ್ಯೂ, ಅಲ್ಲಿಯ ಪ್ರಜೆಗಳಿಗೆ ಅವಶ್ಯಕತೆಯಿರುವುದರಿಂದ ಭಾರತಕ್ಕೆ ಅಕ್ಕಿ ರವಾನೆಯನ್ನು ನಿಲ್ಲಿಸಲಾಗಿದೆ. ಪಾಕಿಸ್ತಾನದ ಜನರಿಗೆ ಬೇಕಾಗುವಷ್ಟು ಕೊಟ್ಟು ಉಳಿದರೆ ಆಗ ರವಾನೆ ಪ್ರಶ್ನೆಯೆಂದು ಪಾಕೀಸ್ತಾನದ ಆಹಾರಮಂತ್ರಿ ಹೇಳಿರುವರು.

ಮದ್ರಾಸಿಗೆ ಒರಿಸ್ಸಾದಿಂದ ಅಕ್ಕಿ

ಮದ್ರಾಸು ಒರಿಸ್ಸಾದಿಂದ 10,000 ಟನ್ ಅಕ್ಕಿಯನ್ನು ಕೊಂಡುಕೊಂಡಿದೆ. ಮಧ್ಯಪ್ರದೇಶದಿಂದಲೂ 2 ಸಾವಿರ ಟನ್ ಅಕ್ಕಿಯನ್ನು ಮದ್ರಾಸ್ ಕೊಳ್ಳಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆ.

ಬ್ಯಾಂಕನ್ನು ಮುಚ್ಚಲಾಗುವುದು

ಪರ್ಶಿಯಾದಲ್ಲಿರುವ ಬ್ರಿಟಿಷ್ ಬ್ಯಾಂಕನ್ನು ಇನ್ನು ೬ ತಿಂಗಳೊಳಗಾಗಿ ಮುಚ್ಚಲಾಗುವುದೆಂದು ಬ್ಯಾಂಕಿನ ಅಧಿಕಾರಿಗಳು ಪರ್ಶಿಯಾ ಪ್ರಧಾನಿ ಡಾ|| ಮುಸಾದಿಕ್‌ರವರಿಗೆ ತಿಳಿಸಿರುವರು.

ಪಾರ್ಲಿಮೆಂಟ್ ಅಧಿವೇಶನ

ಭಾರತದ ಪಾರ್ಲಿಮೆಂಟು ಅಧಿವೇಶನವು ಇದೇ ಮಾಹೆ ೬ನೇ ತಾ|| ಪ್ರಾರಂಭವಾಗಿ ಮಾರ್ಚಿ ೫ನೇ ತಾ||ನ ವರೆಗೆ ನಡೆಯುವುದೆಂದು ಹೇಳಲಾಗಿದೆ.

ಭಾರತಕ್ಕೆ ಥೈಲ್ಯಾಂಡ್ ಸರ್ಕಾರವು ೪೪ ಲಕ್ಷ ಮಣ ಅಕ್ಕಿಯನ್ನು ಕೊಡಲು ಒಪ್ಪಿ ನಿನ್ನೆ ಭಾರತಕ್ಕೂ ಥೈಲ್ಯಾಂಡಿಗೂ ಒಪ್ಪಂದವು ಆಯಿತೆಂದು ಪ್ರಕಟಿಸಲಾಗಿದೆ.

ಭಾರತ ಸರ್ಕಾರದ ಪರವಾಗಿ ಇಲ್ಲಿನ ಉಪಕಾರ್ಯದರ್ಶಿ ಶ್ರೀ ಜಿ ಟಿ ಗೋಪಾಲಕೃಷ್ಣನ್‌ರವರು ಒಪ್ಪಂದಕ್ಕೆ ಸಹಿ ಹಾಕಿರುವರು. ಸೆಪ್ಟಂಬರ್ ಅಂತ್ಯದವೊಳಗೆ ಥೈಲ್ಯಾಂಡ್ ಸರ್ಕಾರವು ಅಕ್ಕಿಯನ್ನು ಸರಬರಾಜು ಮಾಡುವುದು.

ಕ್ರಿಕೆಟ್ ಪಂದ್ಯ

ಬೆಂಗಳೂರು ಫೆ ೧

ದಕ್ಷಿಣ ಜೋನಿನವರಿಗೂ ಎಂ.ಸಿ.ಸಿ. ಯವರಿಗೂ ಈ ದಿನ ಕ್ರಿಕೆಟ್ ಪಂದ್ಯವು ಆರಂಭವಾಗಿ ದಕ್ಷಿಣ ಜೋನಿನವರು ಆಟವನ್ನು ಆರಂಭಿಸಿ ಎಲ್ಲರೂ ಔಟಾಗಿ ೨೧೭ ರನ್ನು ಗಳಿಸಿರುವರು. ಎಂ. ಸಿ. ಸಿ. ಯವರು ಆಟ ಆರಂಭಿಸಿ ೯ ರನ್ನುಗಳನ್ನು ಗಳಿಸಿರುವರು.

ಪೆರೋಲ್ ಅವಧಿ ಹೆಚ್ಚಿತು

ಮದರಾಸಿನಲ್ಲಿ ಪೆರೋಲ್ ಮೇಲೆ ಬಿಡುಗಡೆ ಮಾಡಿದ್ದ ಕಮ್ಯೂನಿಸ್ಟ್ ಡಿಟೆನ್ಯೂಗಳ ಅವಧಿಯನ್ನು ಈ ತಿಂಗಳ ಅಂತ್ಯದವರೆಗೂ ಹೆಚ್ಚಿಸಲಾಗಿದೆ.

ಅಜ್ಮೀರಿನಲ್ಲಿ ಕಾಂಗ್ರೆಸ್ಸಿಗೆ ಬಹುಮತ

ಅಜ್ಮೀರ್ ರಾಜ್ಯ ಶಾಸನ ಸಭೆಯ ೩೦ ಸ್ಥಾನಕ್ಕೆ ಚುನಾವಣೆಯು ಮುಗಿದು ಅಲ್ಲಿನ ಫಲಿತಾಂಶವು ಹೊರಬಿದ್ದು ಕಾಂಗ್ರೆಸ್ಸಿಗೆ ೨೦ ಸ್ಥಾನವೂ, ೩ ಜನ ಸಂಘ, ೩ ಪೇದತ್ ಸಂಘ, ೪ ಸ್ವತಂತ್ರರಿಗೆ ಲಭಿಸಿದೆ

ಪಾರ್ಲಿಮೆಂಟಿಗೆ ಶ್ರೀ ಗೋಪಾಲನ್

ತಮಿಳುನಾಡಿನ ಕಮ್ಯೂನಿಸ್ಟ್ ನಾಯಕ ಶ್ರೀ ಎ ಕೆ ಗೋಪಾಲನ್‌ರವರು ಪಾರ್ಲಿಮೆಂಟಿಗೆ ಮದರಾಸ್ ಪ್ರಾಂತ್ಯದಿಂದ ಚುನಾಯಿತರಾಗಿರುವರು.

ಉದ್ಘಾಟನೋತ್ಸವ

ಬೊಂಬಾಯಿಯಲ್ಲಿ ನಿನ್ನೆ ವಿಶ್ವದ ಟೇಬಲ್ ಟೆನಿಸ್ ಛಾಂಪಿಯನ್ ಷಿಪ್ ಪಂದ್ಯದ ಉದ್ಘಾಟನೋತ್ಸವವನ್ನು ಕೇಂದ್ರ ಸರ್ಕಾರದ ಆರೋಗ್ಯ ಸಚಿವ ಶ್ರೀಮತಿ ಅಮೃತಕೌರ್‌ರವರು ನೆರವೇರಿಸಿದರು

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು:—

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ಹೊರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟಿನ ಚುನಾವಣೆ ಫಲಿತಾಂಶದ ಒಟ್ಟು ೨೫೧ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೧೫೩, ಕೆ-ಎಂ-ಪಿ-೬, ಯುನೈಟೆಡ್ ಫ್ರಂಟ್ ೩, ಪೀಪಲ್ಸ್ ಫ್ರಂಟ್ ೬, ರೈತ ೨, ಸ್ವತಂತ್ರ ೨೪ ಇತರರು ೨೭.

ಮೈಸೂರು ಚುನಾವಣೆಯಲ್ಲಿ ಬಲಾಬಲ (ಶಾಸನಸಭೆ)

ಕಾಂಗ್ರೆಸ್ ಪಕ್ಷ	೭೦
ಸೋಷಲಿಸ್ಟ್	೩
ಕೆ. ಎಂ. ಪಿ	೬
ಕಮ್ಯೂನಿಸ್ಟ್	೧
ಜೆ ಕಾ. ಫೆ.	೨
ಸ್ವತಂತ್ರ	೮
ಒಟ್ಟು—	೯೦

ಶ್ರೀ ಅನಂತಶಯನಂರವರ ಆಯ್ಕೆ

ಭಾರತದ ಪಾರ್ಲಿಮೆಂಟಿನ ಉಪಾಧ್ಯಕ್ಷರಾಗಿರುವ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ಭಾರತದ ಪಾರ್ಲಿಮೆಂಟಿಗೆ ಕಾಂಗ್ರೆಸ್ ಪರವಾಗಿ ತಿರುಪತಿ ಕ್ಷೇತ್ರದಿಂದ ಸ್ಪರ್ಧಿಸಿದ್ದರಷ್ಟೆ. ಇವರು ಆ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಚುನಾಯಿತರಾಗಿರುವರು ಎಂದು ಪ್ರಕಟಿಸಲಾಗಿದೆ.

ಈಡನ್-ಮೆನನ್ ಭೇಟಿ

ಲಂಡನ್ನಿನಲ್ಲಿ ಮೊನ್ನೆ ಬ್ರಿಟನ್ನಿನ ವಿದೇಶಾಂಗ ಮಂತ್ರಿ ಮಿ|| ಈಡನ್‌ರವರಿಗೂ ಭಾರತದ ಹೈಕಮೀಷನರ್ ಆಗಿರುವ ಶ್ರೀ ವಿ. ಕೆ. ಕೃಷ್ಣಮೆನನ್‌ರವರಿಗೂ ಭೇಟಿ ನಡೆಯಿತು.

ವಾರ್ತಾ ಕಛೇರಿ ಮುಚ್ಚಲು ಆಜ್ಞೆ

ಪರ್ಶಿಯಾದಲ್ಲಿರುವ ಬ್ರಿಟನ್, ಅಮೆರಿಕಾ, ಮುಂತಾದ ಪರದೇಶ ರಾಯಭಾರಿಗಳ ಕಛೇರಿಯಲ್ಲಿನ ವಾರ್ತಾ ಇಲಾಖೆಯನ್ನು ಮುಚ್ಚಬೇಕೆಂದು ಪರ್ಶಿಯಾ ಸರ್ಕಾರವು ಆಜ್ಞೆ ಮಾಡಿರುವುದಾಗಿ ಟೆಹರಾನ್ ರೇಡಿಯೋ ಪ್ರಸಾರ ಮಾಡಿದೆ.

ಸ್ಪರ್ಧೆಗಳ ಹತೋಟಿ ಮತ್ತು ತೆರಿಗೆ ಆಜ್ಞೆ

ಬೆಂಗಳೂರು ಫೆ ೧

ಫೆಬ್ರವರಿ ಒಂದನೇ ತಾರೀಖಿನಿಂದ ಮೈಸೂರು ಲಾಟರಿ ಮತ್ತು ಪ್ರೈಜ್ ಕಾಂಪಿಟಿಷನ್ ಕಂಟ್ರೋಲ್ ಮತ್ತು ಟ್ಯಾಕ್ಸ್ ಕಾನೂನು ಮೈಸೂರು ಸಂಸ್ಥಾನದಲ್ಲಿ ಜಾರಿಗೆ ಬಂದಿದೆ.

ಈ ಕಾನೂನು ರೀತ್ಯಾ ಲೈಸೆನ್ಸನ್ನು ಪಡೆಯಬೇಕಾಗಿದೆ. ಅಂತಹವರು ಬೆಂಗಳೂರಿನಲ್ಲಿರುವ ಸರ್ಕಾರದ ಸ್ಥಳೀಯ ಸಂಸ್ಥೆಗಳ ಶಾಖಾ ಕಾರ್ಯದರ್ಶಿಗಳವರಿಗೆ ಬರೆದುಕೊಳ್ಳಬೇಕು. ಅದಕ್ಕೆ ಸಂಬಂಧಪಟ್ಟ ಫೀ ಹಣವನ್ನು ಹತ್ತಿರವಿರುವ ಟ್ರೆಜರಿಗೆ ಕಟ್ಟಬೇಕಾಗಿದೆ.

ಲೈಸೆನ್ಸ್ ಕೊಟ್ಟ ಪ್ರತಿಯೊಂದು ಸ್ಪರ್ಧೆಗೂ ಆ ಸ್ಪರ್ಧೆಗೆ ಬಂದ ಹಣದಲ್ಲಿ ಶೇ|| ೧೨|| ರಿಂದ ೨೫ ರಷ್ಟು ತೆರಿಗೆ ವಿಧಿಸಲಾಗುತ್ತದೆ.

ಅಸಿಸ್ಟೆಂಟ್ ಇಂಜನಿಯರುಗಳ ವರ್ಗ

ಕೃಷ್ಣರಾಜಸಾಗರದಲ್ಲಿರುವ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಪಂಚವಮೂರ್ತಿಯವರನ್ನು ಮಂಡ್ಯಕ್ಕೂ ಅಲ್ಲಿರುವ ಶ್ರೀ ಕೆ. ಎ ರಾಜರತ್ನರವರನ್ನು ಕೃಷ್ಣರಾಜಸಾಗರಕ್ಕೂ ವರ್ಗಾಯಿಸಲಾಗಿದೆ

ಫಲಿತಾಂಶ ಪ್ರಕಟಣೆ ತಡೆ

ತುಮಕೂರು, ಹುಲಿಯೂರು ದುರ್ಗದ ಕ್ಷೇತ್ರದಿಂದ ಶಾಸನ ಸಭೆಗೆ ಕಾಂಗ್ರೆಸ್ ಉಮೇದುವಾರರಾದ ಶ್ರೀ ಎನ್ ಹುಚ್ಚಮಾಸ್ತಿಗೌಡರು ಒಹುಮತ ಪಡೆದಿದ್ದಾಗ್ಯೂ ೪ ಬ್ಯಾಲೆಟ್ ಪೆಟ್ಟಿಗೆಗಳಲ್ಲಿ ೪೪ ಬ್ಯಾಲಟ್ ಪೇಪರುಗಳು ಗಿದ್ದಲು ತಿಂದು ಬೂರುಜೂರಾಗಿರುವುದೆಂದು ಪ್ರಕಟಣೆ ಹೊರಬಿದ್ದಿದೆ. ಕೇಂದ್ರ ಚುನಾವಣಾ ಕಮಿಷನರ ತೀರ್ಮಾನಕ್ಕೆ ಕಾಯಲಾಗಿದೆ.

ಅವಿಶ್ವಾಸ ಪತ್ರ

ಬೆಂಗಳೂರು ಜ ೩೧

ಬೆಂಗಳೂರು ಕಾರ್ಪೊರೇಷನ್ ಮೇಯರಾಗಿ ಚುನಾಯಿತರಾಗಿರುವ ಶ್ರೀ ಬಿ ಎ ಲಂಕಪ್ಪನವರ ಮೇಲೆ ಅವಿಶ್ವಾಸ ನಿರ್ಣಯ ಸೂಚಿಸುವುದಕ್ಕಾಗಿ ಕಾರ್ಪೊರೇಷನ್ನಿನ ವಿಶೇಷ ಸಭೆಯನ್ನು ಕರೆಯಬೇಕೆಂದು ೩೮ ಜನ ಕಾಂಗ್ರೆಸ್ ಸದಸ್ಯರು ಸಹಿ ಮಾಡಿರುವ ಪತ್ರವನ್ನು ಪಕ್ಷದ ನಾಯಕ ಶ್ರೀ ಗೋವಿಂದರಾಜುಲುರವರು ಮೇಯರಿಗೆ ಕಳುಹಿಸಿದ್ದಾರೆ.

೫೦ ಲಕ್ಷ ಟನ್ ಆಹಾರ

ಭಾರತವು ೧೯೫೨ ರಲ್ಲಿ ೫೦ ಲಕ್ಷ ಟನ್ ಆಹಾರವನ್ನು ಪರರಾಷ್ಟ್ರಗಳಿಂದ ತರಿಸಿಕೊಳ್ಳುತ್ತದೆಯೆಂದು ಹೇಳಲಾಗಿದೆ.

ದಾವಣಗೆರೆಯಲ್ಲಿ ಅಗ್ನಿಶಮನ ಪಡೆಗಳು

ಬೆಂಗಳೂರು ಫೆ ೧

ದಾವಣಗೆರೆ ನಗರಕ್ಕೆ ಸರ್ಕಾರ ೨ ಅಗ್ನಿಶಮನ ಪಡೆಗಳನ್ನು ಮಂಜೂರು ಮಾಡಿದೆ. ಏಪ್ರಿಲ್ ೧ನೇ ತಾ|| ನಿಂದ ಪಡೆಗಳು ವ್ಯವಸ್ಥೆಗೊಳ್ಳುವುವು.

ಭಾರತದ ಶ್ರಾಯಂ ಶ್ರೇಷ್ಠ ನ್ಯಾಯಮೂರ್ತಿ

ಇದುವರೆಗೂ ಭಾರತದ ಹಂಗಾಮಿ ಶ್ರೇಷ್ಠ ನ್ಯಾಯಾಧೀಶರಾಗಿದ್ದ ಜಸ್ಟಿಸ್ ಪತಂಜಲಿ ಶಾಸ್ತ್ರಿಯವರನ್ನು ಭಾರತದ ಖಾಯಂ ಶ್ರೇಷ್ಠ ನ್ಯಾಯಮೂರ್ತಿಗಳನ್ನಾಗಿ ರಾಷ್ಟ್ರಾಧ್ಯಕ್ಷರು ನೇಮಿಸಿರುವರು.

ಲೋಕ ಸಭೆಗೆ ಶ್ರೀ ಎಂ. ವಿ. ಕೃಷ್ಣಪ್ಪನವರ ಆಯ್ಕೆ

ಕೋಲಾರ ಕ್ಷೇತ್ರದಿಂದ ಲೋಕ ಸಭೆಗೆ ಶ್ರೀ ಎಂ. ವಿ. ಕೃಷ್ಣಪ್ಪನವರು [ಕಾಂ] ಚುನಾಯಿತರಾಗಿದ್ದಾರೆ. ರಿಸರ್ವ್ ಕ್ಷೇತ್ರದಿಂದ ದೊಡ್ಡತಿಮ್ಮಯ್ಯ [ಕಾಂ] ಆರಿಸಲ್ಪಟ್ಟಿದ್ದಾರೆ.

ಕಾಂಪೋಸ್ಟ್ ಗೊಬ್ಬರ ತಯಾರಿಕೆಗೆ ಸೂಚನೆ

ಬೆಂಗಳೂರು ಫೆ ೧

ಕಾಂಪೋಸ್ಟ್ ಗೊಬ್ಬರ ತಯಾರಿಕೆಗೆ ಸಾಕಷ್ಟು ಅವಕಾಶ ಕಲ್ಪಿಸಬೇಕೆಂದು ಪೌರಸಭೆಗಳಿಗೆ ಸರ್ಕಾರ ಸೂಚನೆಯಿತ್ತಿದೆ.

ಕನ್ನಡ ಟೈಪ್‌ರೈಟರ್ ಸಮಿತಿ ವರದಿ

ಕನ್ನಡ ಟೈಪ್‌ರೈಟರ್ ಸಮಿತಿ ವರದಿಯ ಪ್ರತಿಗಳು ಸರ್ಕಾರೀ ಬುಕ್ ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿದೆ. ಬೆಲೆ ಪ್ರತಿ ಒಂದಕ್ಕೆ ೧೦ ಆಣೆ.

ಪಾನನಿರೋಧ

ಪರ್ಷಿಯಾದಾದ್ಯಂತ ಮಾದಕ ಪಾನೀಯಗಳ ವಿಹಾರಾಟ ಹಾಗೂ ಉಪಯೋಗವನ್ನು ನಿಷೇಧಿಸುವ ಮಸೂದೆಯನ್ನು ಇರಾನ್ ಸರ್ಕಾರವು ಸೆನೆಟ್ ಸಭೆಯಲ್ಲಿ ಮಂಡಿಸಿದೆ

ಪಾರ್ಲಿಮೆಂಟಿನ ಪರಿಶೀಲನೆ ಮಸೂದೆಯೊಂದನ್ನು ತಯಾರಿಸಬೇಕೆಂಬ ಮಜ್ಲಿಸ್ ಸಭೆಯ ಆದೇಶವನ್ನು ಸರ್ಕಾರವು ಪಾಲಿಸಿದೆ

ನಾಯಕ ಚುನಾವಣೆ

ಹೈದರಾಬಾದಿನಲ್ಲಿ ಹೊಸ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಇದೇ ೧೧ನೇ ತಾರೀಖು ಸೇರಿ ತಮ್ಮ ಪಕ್ಷದ ನಾಯಕರನ್ನು ಚುನಾಯಿಸಿಕೊಳ್ಳುವರೆಂದು ಹೇಳಲಾಗಿದೆ.

ಹೊಸ ಮಂತ್ರಿಮಂಡಲದಲ್ಲಿ ೯ ಜನ ಮಂತ್ರಿಗಳು, ಇಬ್ಬರು ಉಪ ಮಂತ್ರಿಗಳಿರುವರೆಂದೂ, ಶ್ರೀ ಬಿ. ರಾಮಕೃಷ್ಣರಾಯರು ಅಥವಾ ಶ್ರೀ ಡಿ. ಜಿ. ಬಿಂದುರವರಲ್ಲೊಬ್ಬರು ಮುಖ್ಯಮಂತ್ರಿಗಳಾಗುವರೆಂದು ಹೇಳಲಾಗಿದೆ

ಫೆಬ್ರವರಿ ೧೦ನೇ ತಾರೀಖು ಹೈದರಾಬಾದ್ ಪ್ರದೇಶ ಕಾಂಗ್ರೆಸ್ ಸಮಿತಿಯು ಸಭೆ ಸೇರಿ ತೀರ್ಮಾನಿಸಿ ತನ್ನ ನಿರ್ಧಾರವನ್ನು ಶಾಸನಸಭಾ ಕಾಂಗ್ರೆಸ್ ಪಕ್ಷಕ್ಕೆ ತಿಳಿಸಲಿದೆ.

ರೈಲ್ವೆ ಅಧಿಕಾರಿಗಳ ಶಿಕ್ಷಣ ಕಾಲೇಜು

ರೈಲ್ವೆ ಅಧಿಕಾರಿಗಳಿಗೆ ಉತ್ತಮ ಶಿಕ್ಷಣವನ್ನು ಕೊಡಲು ಬರೋಡಾದಲ್ಲಿ ರೈಲ್ವೆ ಸಚಿವ ಶ್ರೀ ಎನ್ ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಒಂದು ಶಿಕ್ಷಣ ಕಾಲೇಜಿನಲ್ಲಿ ಪ್ರಾರಂಭೋತ್ಸವವನ್ನು ನೆರವೇರಿಸಿಯವರು. ಏಷ್ಯಾದಲ್ಲೆಲ್ಲಾ ಇದು ಒಂದು ಪ್ರಥಮದರ್ಜೆಯ ಶಿಕ್ಷಣ ಕೇಂದ್ರವಾಗುತ್ತದೆ

ವುಡ್‌ಲ್ಯಾಂಡ್ಸ್ * 1-2-52 ರಿಂದ ಅಮೋಘಪ್ರಾರಂಭ ಪ್ರತಿದಿನ ಮೂರು ಆಟಗಳು

* ನಗೀನಾ *

ಪಾತ್ರ:— ನಾಸೀರ್‌ಖಾನ್, ನೂತನ್, ಗೋಪ್, ಮೋಹನ.

ಇದರ ಜೊತೆಗೆ ಲಿಯಾಖತ್ ಅಲಿಖಾನ್‌ರವರ ನಿಧನ ಪ್ರದರ್ಶನವನ್ನು ತೋರಿಸಲ್ಪಡುತ್ತೆ

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.

ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.

*

ಹೆಚ್ಚಿನ ವಿವರಗಳಿಗೆ ಬರೆಯಿರಿ—

ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

ನ್ಯೂ ಅಪೇರ

೨—೨—೫೨ ರಿಂದ ೨ನೇ ವಾರ

ಶೋಭನಾಚಲಂರವರ—

* ಸಾವಾಸಂ *

ಪಾತ್ರ— ಪ್ರಭಾಕರರಾವ್, ಕೃಷ್ಣವೇಣಿ, ಕನಕಂ, ಸೀತಾರಾಂ.

ವೆಲ್‌ಕಮ್ ಕಾಫೀ ಕ್ಲಬ್ (ಪ್ರಭಾ ಟಾಕೀಸ್ ಎದುರು)

೨೩-೧-೫೨ ರಿಂದ ಪ್ರಾರಂಭ

ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ,

ಅಪ್ಪಟ ತುಪ್ಪದ 'ಕೇಸರೀ ಭಾತ್'

ಉತ್ತಮವಾದ

'ಸಾದಾ ಸೆಟ್ ದೋಸೆ'

ಒಂದನೇ ನಂ. ಕಾಫೀ ಮತ್ತು ಟೀ ಸೇವಿಸಲು ದಯಮಾಡಿಸಿ.

ಪ್ರಕಾಶಕರು :—ಜಿ ಎಲ್. ಸ್ವಾಮಿ ಟ್ಯೂಟೋರಿಯಲ್ ಬ್ಯೂರೋ ಮೈಸೂರು
ಮುದ್ರಕರು—ಹಿ. ಆ. ಸುಬ್ಬರಾವ್, ಮೋಹನ ಮುದ್ರಣಾಲಯ ಮೈಸೂರು

ಫೋನ್ ೫೭೬೪ (ಲೈನ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೪—೨—೧೯೫೨ನೇ ಸೋಮವಾರ [ಸಂಚಿಕೆ ೧೩೫

ಹಿರಿಯ ಶಾಸನಸಭಾ ಚುನಾವಣೆ ನಡೆದ ಮೇಲೆ ಪಕ್ಷದ ನಾಯಕರ ಚುನಾವಣೆ

ಶ್ರೀ ಮೊರಾರ್ಜಿ ಪುನಃ ಚುನಾವಣೆಗೆ ನಿಲ್ಲಲು ಚುನಾವಣಾ ಸಮಿತಿಯ ಒಪ್ಪಿಗೆ.

ಚುನಾವಣಾ ಫಲಿತಾಂಶ

ಇಲ್ಲಿಯವರೆಗೆ ಹೊರಬಿದ್ದಿರುವ ಚುನಾವಣಾ ಫಲಿತಾಂಶಗಳು—

ಪಾರ್ಲಿಮೆಂಟಿಗೆ

ಇಲ್ಲಿಯವರೆಗೆ ಹೊರಬಿದ್ದಿರುವ ಭಾರತಾದ್ಯಂತ ಪಾರ್ಲಿಮೆಂಟಿನ ಚುನಾವಣೆ ಫಲಿತಾಂಶದ ಒಟ್ಟು ೨೪೦ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೧೬೮, ಕೆ. ಎಂ. ಪಿ. ೭, ಯುನೈಟೆಡ್ ಫ್ರಂಟ್ ೩, ಪೀಪಲ್ಸ್ ಫ್ರಂಟ್ ೭, ರೈತ ೨, ಸ್ವತಂತ್ರ ೨೪ ಇತರರು ೨೮-

ಮೈಸೂರು ಚುನಾವಣೆಯಲ್ಲಿ ಬಲಾಬಲ (ಶಾಸನಸಭೆ)

ಕಾಂಗ್ರೆಸ್ ಪಕ್ಷ	೭೦
ಸೋಷಲಿಸ್ಟ್	೩
ಕೆ. ಎಂ. ಪಿ	೮
ಕಮ್ಯೂನಿಸ್ಟ್	೧
ಪ. ಕಾ. ಫೆ.	೨
ಸ್ವತಂತ್ರ	೮
ಒಟ್ಟು	೯೨

ಲೋಕಸಭೆಗೆ ೧೦ ಕಾಂಗ್ರೆಸ್ಸಿಗರು

ಮೈಸೂರು ಫೆ ೩

ಮೈಸೂರು ಸಂಸ್ಥಾನದಿಂದ ಭಾರತ ಪಾರ್ಲಿಮೆಂಟಿಗೆ ೧೧ ಸ್ಥಾನಗಳಲ್ಲಿ ೧೦ ಸ್ಥಾನಗಳನ್ನು ಕಾಂಗ್ರೆಸ್ ಗಳಿಸಿದೆ. ೧ ಸ್ಥಾನ ಮಾತ್ರ ಕೆ ಎಂ ಪಿ ಪಕ್ಷಕ್ಕೆ ಹೋಗಿದೆ.

ಹೊಸ ಆರ್ಡಿನೆನ್ಸ್

ಸರ್ಕಾರಕ್ಕೆ ಬೇಕಾದ ಯಾವ ಸ್ವತ್ತನ್ನು ವಶಪಡಿಸಿಕೊಳ್ಳಲು ಭಾರತ ರಾಷ್ಟ್ರಾಧ್ಯಕ್ಷರು ಆರ್ಡಿನೆನ್ಸ್ ಕಾನೂನನ್ನು ವಿಧಾಯಕ ಮಾಡಿದ್ದಾರೆ. ಪ್ರಾಂತ್ಯ ಸರ್ಕಾರಗಳಿಗೂ ಈ ಅಧಿಕಾರ ಕೊಡಲಾಗಿದೆ. ಪಾರ್ಲಿಮೆಂಟಿನಲ್ಲಿ ಈ ಬಗ್ಗೆ ಕಾನೂನು ಮಾಡಿದನಂತರ ಈ ಆರ್ಡಿನೆನ್ಸ್ ರದ್ದಾಗುತ್ತದೆ.

ಅಧುನಿಕ ನಾಗರಿಕತೆಯಲ್ಲ

ಜಾನುವಾರುಗಳ ಕೊಲೆಯನ್ನು ಮಾಡುವುದು ಆಧುನಿಕ ನಾಗರಿಕತೆಗೆ ವಿರುದ್ಧವಾದುದು. ಎಂತಹ ಗೊಡ್ಡು ದನಗಳೇ ಆಗಲಿ ವ್ಯವಸಾಯ ಕ್ಷೇತ್ರದಲ್ಲಿ ಉಪಯುಕ್ತವಾಗುತ್ತವೆ ಎಂದು ಆಹಾರ ಮಂತ್ರಿ ಶ್ರೀ ಮುನ್ಷಿಯವರು ಹೇಳಿರುವರು.

ಜ|| ಹಯಾತ್‌ರವರ ಆಗಮನ

ಬೆಂಗಳೂರು ಫೆ ೨

ವಿಶ್ವಸಂಸ್ಥೆಯ ಟೆಕ್ನಿಕಲ್ ಮಿಷನ್ನಿನ ವಿಶೇಷ ಕೆಲಸಕ್ಕಾಗಿ ಬ್ಯಾಂಕಾಕಿಗೆ ತೆರಳಿದ್ದ ಮೈಸೂರು ಸಂಸ್ಥಾನದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್ ಜ|| ಹಯಾತ್‌ರವರು ತಮ್ಮ ಹುದ್ದೆಗೆ ಹಿಂತಿರುಗಿರುವರು. ಅವರ ಗೈರ್‌ಹಾಜರಿಯಲ್ಲಿ ಕೆಲಸ ನೋಡುತ್ತಿದ್ದ ಶ್ರೀ ಚಾಂಡಿಯವರಿಗೆ ಒಂದು ತಿಂಗಳ ರಜಾ ಕೊಡಲಾಗಿದೆ.

ಚಿತ್ರದುರ್ಗದಲ್ಲಿ ಟೆಲಿಫೋನ್ ವ್ಯವಸ್ಥೆ

ಚಿತ್ರದುರ್ಗದ ಅಂಚೆಕಛೇರಿಯಲ್ಲಿ ಟೆಲಿಫೋನ್ ವ್ಯವಸ್ಥೆಯನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಏರ್ಪಡಿಸಲಾಗುತ್ತದೆಯೆಂದು ತಿಳಿಯಬಂದಿದೆ.

ಡಾ|| ಗೋಪಿಚಂದ್ ಭಾರ್ಗವಾರ ಸೋಲು

ಪಂಜಾಬಿನ ಮಾಜಿ ಮುಖ್ಯಮಂತ್ರಿ ಡಾ|| ಗೋಪಿಚಂದ್ ಭಾರ್ಗವಾರವರು [ಸ್ವ] ಧೂರಿನ ಅಸೆಂಬ್ಲಿ ಕ್ಷೇತ್ರದಲ್ಲಿ ಡಾ|| ರಾಮಸ್ವರೂಪ್ ಎಂಬ ಕಾಂಗ್ರೆಸ್ ಸ್ಪರ್ಧಿಯಿಂದ ಸೋಲಿಸಲ್ಪಟ್ಟು ಠೇವಣಿಯನ್ನು ಕಳೆದುಕೊಂಡಿದ್ದಾರೆ.

ಹೈದರಾಬಾದಿಗೆ ಸಲಹೆಗಾರರು

ಹೈದರಾಬಾದ್ ಸರ್ಕಾರಕ್ಕೆ ಸಲಹೆಗಾರರನ್ನು ನೇಮಿಸಲು ಹೈದರಾಬಾದ್ ಕಾಂಗ್ರೆಸ್ ವೃತ್ತಗಳಲ್ಲಿ ಸ್ವಾಗತವೀಯಲಾಗುವುದೆಂದು ಹೇಳಲಾಗಿದೆ.

ಮಿಶ್ರ ಮಂತ್ರಿಮಂಡಲ ರಚನೆಗೆ ಪ್ರಯತ್ನ

ಮದ್ರಾಸಿನಲ್ಲಿ ಕಾಂಗ್ರೆಸ್ಸೇತರ ಪಕ್ಷಗಳ ಮಿಶ್ರ ಮಂತ್ರಿಮಂಡಲವನ್ನು ರಚಿಸುವ ಸಾಧ್ಯಾಸಾಧ್ಯತೆಗಳನ್ನು ಚರ್ಚಿಸಲು ಫೆಬ್ರವರಿ ೮ ಮತ್ತು ೯ ರಂದು ಕಾಂಗ್ರೆಸ್ಸೇತರ ಪಕ್ಷಗಳ ಸಭೆಯು ನಡೆಯುವುದು.

ಶ್ರೀ ವಿ. ನರಹರಿರಾಯರು

ಕಾರ್ಯಗೌರವದ ನಿಮಿತ್ತ ಬೆಂಗಳೂರಿಗೆ ಆಗಮಿಸಿದ್ದ ಭಾರತ ಸರ್ಕಾರದ ಆಡಿಟರ್ ಜನರಲ್ ಶ್ರೀ ವಿ ನರಹರಿರಾಯರು ಆದಿನ ದೆಹಲಿಗೆ ತೆರಳಿದರು.

ಎಂ. ಬಿ. ಹೊನ್ನಾವರ್ ರವರಾಗಮನ

ಬೆಂಗಳೂರು ಫೆ ೩

ನ್ಯಾಯಾಂಗ ಇಲಾಖೆಯ ವಿಶೇಷ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿರುವ ಬೊಂಬಾಯಿನ ಸೆಷನ್ಸ್ ನ್ಯಾಯಾಧೀಶ ಶ್ರೀ ಎಂ ಬಿ ಹೊನ್ನಾವರ್‌ರವರು ಆದಿನ ಆಗಮಿಸಿ ರೆಸಿಡೆನ್ಸಿಯಲ್ಲಿ ತಂಗಿರುವರು.

ಮುಂದಿನ ತಿಂಗಳು ಎ.ಐ.ಸಿ.ಸಿ. ಸಭೆ

ಮುಂದಿನ ತಿಂಗಳು ದೆಹಲಿಯಲ್ಲಿ ೮ರಿಂದ ೧೧ನೇ ತಾ|| ವರೆಗೆ ಕಾರ್ಯಕಾರಿ ಸಮಿತಿ ಸಭೆ ನಡೆಯುತ್ತದೆಂದೂ, ೨೯ ಮತ್ತು ೩೦ನೇ ತಾ|| ಕಲ್ಕತ್ತಾದಲ್ಲಿ ಎ.ಐ.ಸಿ.ಸಿ. ಸಭೆಯು ನಡೆಯುತ್ತದೆ ಎಂದು ಅಧಿಕೃತವಾಗಿ ಪ್ರಕಟಿಸಲಾಗಿದೆ.

ಡಾ|| ಮುಖರ್ಜಿಯವರ ವಿಜಯ

ಮಾಜಿ ಕೇಂದ್ರ ಸಚಿವ ಮತ್ತು ಜನಸಂಘದ ಅಧ್ಯಕ್ಷ ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಕಲ್ಕತ್ತಾದ ಪೂರ್ವ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಚುನಾಯಿತರಾದರು.

ನೈಜಾಮರ ಆಭರಣಗಳು ವಿದೇಶೀ ಬ್ಯಾಂಕಿನಲ್ಲಿ

ಬೊಂಬಾಯಿನಲ್ಲಿರುವ ವಿದೇಶೀ ಬ್ಯಾಂಕೊಂದರಲ್ಲಿ ಭದ್ರವಾಗಿಡಲು ನೈಜಾಮರಿಗೆ ಸೇರಿದ ಸುಮಾರು ೨೫ ಲಕ್ಷ ರೂ ಬೆಲೆಬಾಳುವ ಆಭರಣಗಳನ್ನು ವಿಶೇಷ ವಿಮಾನದಲ್ಲಿ ಹೈದರಾಬಾದಿನಿಂದ ಬೊಂಬಾಯಿಗೆ ಕಳುಹಿಸಲಾಗಿದೆ. ಹಿಂದೆ ಈಗಾಗಲೇ ೨ ಬಾರಿ ಈರೀತಿ ಆಭರಣಗಳನ್ನು ವಿದೇಶೀ ಬ್ಯಾಂಕಿನಲ್ಲಿಡಲು ಕಳುಹಿಸಲಾಗಿದೆ. ಈ ಆಭರಣಗಳಿಗೆ ನೈಜಾಮರು ಒಂದು ಟ್ರಸ್ಟನ್ನು ನೇಮಕ ಮಾಡಿರುವರೆಂದು ಹೇಳಲಾಗಿದೆ.

ಯಂ.ಸಿ.ಸಿ.ಗೆ ಜಯ

ದಕ್ಷಿಣ ಜೋನಿನವರಿಗೂ ಎಂ ಸಿ ಸಿಗೂ ನಡೆಯುತ್ತಿದ್ದ ಕ್ರಿಕೆಟ್ ಪಂದ್ಯದಲ್ಲಿ ಎಂ ಸಿ ಸಿ ಯವರು ೯ ವಿಕೆಟ್‌ಗಳಿಂದ ಜಯಶೀಲರಾದರು ಸ್ಕೋರುಗಳು ದಕ್ಷಿಣಜೋನ್ ೨೧೭ ಮತ್ತು ೨೩೧.

ಎಂ ಸಿ ಸಿ ೯ ವಿಕೆಟ್ಟಿಗೆ ೩೩೫ ಮತ್ತು, ಯಾರೂ ಔಟಾಗದೆ ೧೦೪ ರನ್ನುಗಳು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯಗಳು

ನಿನ್ನೆ ಮುಕ್ತಾಯವಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಣಯಗಳು—

ಎಲ್ಲಾ ಪ್ರಾಂತ್ಯಗಳಲ್ಲೂ ಉಭಯ ಶಾಸನಸಭೆಗಳ ಚುನಾವಣೆ ಮುಗಿಯುವವರೆಗೆ ಪಕ್ಷದ ನಾಯಕರನ್ನು ಚುನಾಯಿಸಕೂಡದು-

ಸೋತವರಿಗೆ ಸ್ಥಾನವಿಲ್ಲ

ಚುನಾವಣೆಗಳಲ್ಲಿ ಸೋತ ನಾಯಕರು ಮತ್ತು ಸಚಿವರುಗಳಿಗೆ ಹಿರಿಯ ಸಭೆಯಲ್ಲಿ ಸ್ಥಾನಗಳನ್ನು ಕೊಡಕೂಡದು-

ಅಂಗರಚನೆ ತಿದ್ದುಪಡಿಗೆ ಉಪಸಮಿತಿ

ಕಾಂಗ್ರೆಸ್ಸಿನ ಅಂಗರಚನೆಯನ್ನು ತಿದ್ದುಪಡಿ ಮಾಡಲು ಅಧ್ಯಕ್ಷ ನೆಹರೂ, ಕಾರ್ಯದರ್ಶಿಗಳು, ಶ್ರೀಗಳಾದ ಹರೇಕೃಷ್ಣ ಮೆಹತಾಬ್, ಸಂತಾನಂ ಕೈಲಾಸನಾಥಖಟ್ಜು, ಶ್ರೀಪ್ರಕಾಶ ರವರನ್ನೊಳಗೊಂಡ ಉಪಸಮಿತಿಯನ್ನು ರಚಿಸಲಾಯಿತು-

ಶ್ರೀ ಮೊರಾರ್ಜಿಗೆ ಸ್ಥಾನ

ಬೊಂಬಾಯಿನಲ್ಲಿ ಪರಾಜಿತರಾದ ಗೃಹಸಚಿವ ಶ್ರೀ ಮುರಾರ್ಜಿಯವರನ್ನು ಹಿರಿಯ ಶಾಸನಸಭೆಗೆ ನಿಲ್ಲಿಸಬೇಕಲ್ಲದೆ ಕಿರಿಯ ಶಾಸನಸಭೆಯ ಉಪಚುನಾವಣೆಗೆ ನಿಲ್ಲಿಸಬೇಕು- ಉಭಯ ಸಭೆಗಳಿಗೆ ಚುನಾಯಿತರಾದಲ್ಲಿ ಹಿರಿಯ ಸಭೆಗೆ ಅವರು ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ್ ಚುನಾವಣಾ ಸಮಿತಿಯು ನಿರ್ಧರಿಸಿದೆ.

ಶ್ರೀ ಹೆಚ್ ವಿ ಕಾಮತ್‌ರವರ ಪರಾಜಯ

ಪಾರ್ಲಿಮೆಂಟಿಗೆ ಮಧ್ಯಭಾರತದಿಂದ ಸ್ಪರ್ಧಿಸಿದ್ದ ಶ್ರೀ ಹೆಚ್- ವಿ- ಕಾಮತ್‌ರವರನ್ನು ಜ|| ಸೆಯುದ್ ಮಹಮದ್‌ರವರು ಸೋಲಿಸಿರುವರು-

ನ್ಯೂ ಅಪೇರ

೩—೨- ೫೨ ರಿಂದ

ರತ್ನಮಾಲಾ

(ತೆಲುಗು) (ನ್ಯೂಪ್ರಿಂಟ್)

ತಾರಾಗಣ:— ಭಾನುಮತಿ, ಸಿ.ಎಸ್.ಆರ್, ನಾಗೇಶ್ವರರಾವ್, ಡಾ|| ಜಿ. ವಿ. ಸುಬ್ಬರಾವ್.

ರಾಗಿ, ಜೋಳದ ರೇಷನ್ ಅರ್ಧಕ್ಕಿಳಿಯಿತು

ಅದರ ಬದಲು ಗೋಧಿ ತೆಗೆದುಕೊಳ್ಳಬೇಕು

ಬೆಂಗಳೂರು ಫೆ ೩

ಸಂಸ್ಥಾನದಲ್ಲಿ ರಾಗಿ ಜೋಳದ ಫಸಲು ಕಡಿಮೆಯಾಗಿರುವುದರಿಂದ ಈ ಸಲ ಸಂಗ್ರಹಣೆ ಪ್ರಮಾಣದಲ್ಲಿ ಕಡಿಮೆ ಬೀಳಬಹುದಾದ್ದರಿಂದ ಸರ್ಕಾರದವರು ತಾ|| ೧-೨-೫೨ ರಿಂದ ರಾಗಿ ಮತ್ತು ಜೋಳದ ಪ್ರಮಾಣದಲ್ಲಿ ಖೋತಾ ಮಾಡಿದಾರೆ. ಈಗಿನ ರಾಗಿ ಮತ್ತು ಜೋಳದ ಕೋಟಾದಲ್ಲಿ ಅರ್ಧ ಭಾಗ ಮಾತ್ರ ಕೊಡಲಾಗುವುದು ಉಳಿದ ಅರ್ಧದ ಬದಲು ಗೋಧಿ ತೆಗೆದುಕೊಳ್ಳಬೇಕಾಗುವುದು.

'ಬಿ' ದರ್ಜೆಯವರಿಗೆ ೫ ಔನ್ಸ್ ಅಕ್ಕಿ ೫|| ಔನ್ಸ್ ಗೋಧಿ, ೩|| ಔನ್ಸ್ ರಾಗಿ ಜೋಳ ಕೊಡಲಾಗುವುದು. ಅಧಿಕ ಶ್ರಮಜೀವಿಗಳಿಗೆ ೩ ಔನ್ಸ್ ಅಕ್ಕಿ, ೮ ಔನ್ಸ್ ಗೋಧಿ ಮತ್ತು ೫ ಔನ್ಸ್ ರಾಗಿ ಜೋಳ ಕೊಡಲಾಗುವುದು. ಪ್ಲಾಂಟೇಶನ್ ಕಾರ್ಮಿಕರಿಗೆ ೬ ಔನ್ಸ್ ಅಕ್ಕಿ, ೪|| ಔನ್ಸ್ ಗೋಧಿ ಮತ್ತು ೧|| ಔನ್ಸ್ ರಾಗಿ ಜೋಳ ದೊರಕುವುದು.

'ಎ' ದರ್ಜೆಯವರ ಮತ್ತು ಬರೀ ಗೋಧಿ ತಿನ್ನುವವರ ರೇಷನ್ ಪ್ರಮಾಣಗಳಲ್ಲೇನೂ ಬದಲಾವಣೆಯಿಲ್ಲ.

ಶಾಂತಿ ಸ್ಥಾಪಿಸಲು ಯತ್ನ

ಈಜಿಪ್ಟಿನಲ್ಲಿ ಶಾಂತಿ ಸ್ಥಾಪಿಸಿ ಪುನಃ ಬ್ರಿಟನ್ನಿನೊಡನೆ ಸಂಧಾನ ನಡೆಸಲು ಈಜಿಪ್ಟಿನ ಹೊಸ ಪ್ರಧಾನಿ ಮಿ|| ಅಲಿ ಮೆಹರ್ ಪಾಷಾರವರು ಯುಕ್ತಿಸುತ್ತಿದ್ದಾರೆ. ಪೋಲೀಸು ಮತ್ತು ಶಾಂತಿರಕ್ಷಣೆಗೆ ಸಂಬಂಧಪಟ್ಟ ಮುಖ್ಯಾಧಿಕಾರಿಗಳು ಮತ್ತು ಇತರ ಉನ್ನತ ೧೦ ಅಧಿಕಾರಿಗಳನ್ನು ಕೆಲಸದಿಂದ ನಿವೃತ್ತಿಗೊಳಿಸಿ ಸೈನ್ಯವನ್ನು ಸೇವಿಸಿರುವರು ಆತಂಕವಾಗಿ ವರ್ತಿಸುವವರ ಮೇಲೆ ತೀವ್ರ ಕಾರ್ಯಕ್ರಮತೆಗೆದುಕೊಳ್ಳುವುದಾಗಿ ಪ್ರಕಟಿಸಿರುವರು.

ಈ ಕಾರ್ಯಕ್ರಮವು ಬ್ರಿಟಿಷರಿಗೆ ಸಮಾಧಾನವನ್ನುಂಟುಮಾಡಿದೆಯೆಂದು ಹೇಳಲಾಗಿದೆ.

ವಿಮಾನ ಬಿದ್ದು ಪೈಲಟ್‌ಗೆ ಸಾವು

ಭಾರತ ವಿಮಾನದಳದ ವಿಮಾನವೊಂದು ಅಂಬಾಲಾ ಸಮೀಪದಲ್ಲಿ ಅಪಘಾತಕ್ಕೀಡಾಯಿತು. ಒಳಗಿದ್ದ ಒಬ್ಬರೇ ಪೈಲಟ್ಟರು ಹತರಾದರು.

ನ್ಯಾಯಾಂಗಶಾಖೆಯ ವಿಶೇಷಾಧಿಕಾರಿಗಳು

ಬೆಂಗಳೂರು ಫೆ ೨

ಬೊಂಬಾಯಿ ಸಿಟಿ ಸಿವಿಲ್‌ಕೋರ್ಟಿನ ಪ್ರಿನ್ಸಿಪಲ್ ಜಡ್ಜರೂ ಬೃಹತ್ ಬೊಂಬಾಯಿನ ಸೆಷನ್ಸ್ ಜಡ್ಜರೂ ಆದ ಶ್ರೀ ಎಂ ಬಿ ಹೊನ್ನಾವರ್ ಇವರ ಸರ್ವಿಸ್ಸನ್ನು ಮೈಸೂರು ಸರ್ಕಾರಕ್ಕೆ ಎರವು ಕೊಡಲಾಗಿದ್ದು, ಅವರನ್ನು ಮೈಸೂರು ಸರ್ಕಾರ ನ್ಯಾಯಾಂಗ ಶಾಖೆಯ ಸ್ಪೆಷಲ್ ಆಫೀಸರಾಗಿ ನೇಮಕಮಾಡಲಾಗಿದೆ ಎಂದು ನಿನ್ನೆಯದಿನ ಹೊರಬಿದ್ದ ಮೈಸೂರು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಡಾ|| ಗ್ರಹಾಂ ಪುನಃ ಭಾರತಕ್ಕೆ

ಕಾಶ್ಮೀರ ಸಮಸ್ಯೆಯು ಇನ್ನೂ ಹೆಚ್ಚಿನ ಸಂಧಾನಕ್ಕೆ ಒಗ್ಗಿ ಪ್ರ|| ಸಂಸ್ಥೆ ಕಾಶ್ಮೀರ ಪ್ರತಿನಿಧಿ ಡಾ|| ಗ್ರಹಾಂರವರು ಭಾರತಕ್ಕೆ ಮತ್ತೆ ಭೇಟಿ ಕೊಡುವರು. ತಮ್ಮ ಭೇಟಿಯ ಕಾರ್ಯಕ್ರಮ ಕುರಿತು ಮಾತುಕತೆ ನಡೆಸಲು ಡಾ|| ಗ್ರಹಾಂರವರು ಪ್ಯಾರಿಸ್ಸಿನಲ್ಲಿ ಪ್ರಪಂಚ ಸಂಸ್ಥೆ ಅಸೆಂಬ್ಲಿಗೆ ಬಂದಿರುವ ಶ್ರೀ ಗಿರಿಜಾಶಂಕರ ಬಾಜಪೈ ಮತ್ತು ಮಿ|| ಮಹಮದ್ ಜಫ್ರುಲ್ಲಾಖಾನ್ ಇವರೊಡನೆ ಮಾತುಕತೆ ನಡೆಸುವರು.

ಫೆಬ್ರವರಿ ಅಖೈರು ವೇಳೆಗೆ ಡಾ|| ಗ್ರಹಾಂರವರು ಭಾರತಕ್ಕೆ ಬರುವ ಸಂಭವವಿದೆ.

ಆರ್. ಎಸ್. ಎಸ್ಸಿಗರ ದಸ್ತಗಿರಿ

ಮೈಸೂರು ಫೆ ೩

ಮೊನ್ನೆ ಮೈಸೂರಿನ ಫಸ್ಟ್‌ಗ್ರೇಡ್ ಕಾಲೇಜಿನ ಒಳಗೆ ಎರಡು ವಿದ್ಯಾರ್ಥಿಗಳವರಿಗೆ ಘರ್ಷಣೆ ಜರುಗಿ ಕೆಲವರಿಗೆ ಗಾಯಗಳಾಗಿ ಆಸ್ಪತ್ರೆಗೆ ಸೇರಿದ ಸಂಬಂಧದಲ್ಲಿ ಪೋಲೀಸರು ಗಲಭೆಗೆ ಕಾರಣರೆಂದು ಹೇಳಲಾದ ಜಿಲ್ಲಾ ಆರ್. ಎಸ್. ಎಸ್. ಸಂಚಾಲಕರಾದ ಶ್ರೀ ಮಾಧವರಾವ್, ಫಸ್ಟ್ ಗ್ರೇಡ್ ಕಾಲೇಜಿನ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯೂ ಹಾಗೂ ಆರ್. ಎಸ್. ಎಸ್. ಆದ ಎಸ್. ಸತ್ಯನಾರಾಯಣರಾವ್ ಮತ್ತು ವಿದ್ಯಾರ್ಥಿಗಳೂ ಹಾಗೂ ಆರ್. ಎಸ್. ಎಸ್. ಪಕ್ಷದ ಸದಸ್ಯರೂ ಆದ ಎಂ. ಎಲ್. ರಾಜಗೋಪಾಲ್, ಸುಬ್ಬರಾವ್, ಎಸ್. ಸಿದ್ದಬಸಪ್ಪ, ಎಂ. ಸಿ. ಜಯದೇವ ಮುಂತಾದವರನ್ನು ದಸ್ತಗಿರಿ ಮಾಡಿ ಸಬ್ ಜೈಲಿನಲ್ಲಿ ಇಟ್ಟಿದ್ದಾರೆ.

ನಾಡಹಬ್ಬ ದಿನಾಚರಣೆ

ಮೈಸೂರು ಫೆ ೩

ನಿನ್ನೆ ಸಂಜೆ ಮಹಾರಾಜಾ ಕಾಲೇಜಿನಾವರಣದಲ್ಲಿ ಕರ್ನಾಟಕ ಸಂಘದಾಶ್ರಯದಲ್ಲಿ ನಾಡಹಬ್ಬವನ್ನಾಚರಿಸಲಾಯಿತು. ಶ್ರೀಮಾನ್ ಕೆ ವಿ. ಪುಟ್ಟಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಕಾವ್ಯವಾಚನವಾದ ಮೇಲೆ ಸಂಘದ ಅಧ್ಯಕ್ಷ ಶ್ರೀ ಶಾಂತಮೂರ್ತಿಯವರಿಂದ ಸ್ವಾಗತ ಭಾಷಣವಾದನಂತರ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಕರ್ನಾಟಕದ ಏಕೀಕರಣಮತ್ತು ಕನ್ನಡ ಮಾಧ್ಯಮದ ವಿಷಯವಾಗಿ ಭಾಷಣ ಮಾಡಿದರು. ನಂತರ ಶ್ರೀ ಪುಟ್ಟಪ್ಪನವರು ಭಾಷಣ ಮಾಡಿದರು. ವಂದನಾರ್ಪಣೆಯಾದನಂತರ ಸಭೆಯು ಮುಕ್ತಾಯವಾಯಿತು.

ಚಾಮರಾಜ ನಗರದಲ್ಲಿ ಕೆ. ಎಂ. ಪಿ. ಯವರು

ಮೈಸೂರು ಫೆ ೩

ಮೈಸೂರು ಶಾಸನ ಸಭೆಗೆ ಚಾಮರಾಜನಗರ ಕ್ಷೇತ್ರದಿಂದ ಕೆ ಎಂ ಪಿ ಪಕ್ಷದ ಶ್ರೀ ಮಾದಪ್ಪನವರು ೭೫೧೯ ಓಟುಗಳನ್ನು ಗಳಿಸಿ ಕಾಂಗ್ರೆಸ್ ಮತ್ತು ಸ್ವತಂತ್ರ ಸ್ಪರ್ಧಿಗಳನ್ನು ಸೋಲಿಸಿರುವರು

೧೦ ಲಕ್ಷ ರೂ. ಚಿನ್ನ ಪತ್ತೆ

ಕರಾಚಿ ಮಾರ್ಗವಾಗಿ ಬೊಂಬಾಯಿಗೆ ಪರ್ಷಿಯಾ ಕೊಲ್ಲಿಯಿಂದ ಬಂದು ಬಂದು ಹಡಗಿನಲ್ಲಿ ಬೊಂಬಾಯಿ ಸುಂಕದಧಿಕಾರಿಗಳು ೧೦ ಲಕ್ಷ ರೂ ಗಳಿಗಿಂತಲೂ ಹೆಚ್ಚಾಗಿ ಬೆಲೆ ಬಾಳುವ ೯೩೫೦ ತೊಲ ಚಿನ್ನವನ್ನು ಪತ್ತೆ ಹಚ್ಚಿ ವಶಪಡಿಸಿಕೊಂಡಿರುವರು.

ಸೂಯಜ್ ಕಾಲುವೆ ಪ್ರದೇಶಕ್ಕೆ ಹೆಚ್ಚಿಗೆ ಸೈನ್ಯ

ಸೂಯಜ್ ಕಾಲುವೆ ಪ್ರದೇಶದಲ್ಲಿರುವ ಬ್ರಿಟಿಷ್ ಠಾಣ್ಯಕ್ಕೆ ಇನ್ನೂ ಅಧಿಕಸಂಖ್ಯೆಯುಳ್ಳ ಬ್ರಿಟಿಷ್ ಸೈನ್ಯ ಮತ್ತು ೩೨ ಯುದ್ಧ ವಿಮಾನಗಳು, ೮ ಬಾಂಬುಗಳು ಬಂದಿವೆ ಎಂದು ಹೇಳಲಾಗಿದೆ.

ಅಕ್ಕಿ ಬೆಲೆಯಲ್ಲಿ ಇಳಿತಾಯ

ಅಕ್ಕಿಯನ್ನು ಮಾರುವ ಬೆಲೆಯನ್ನು ಸ್ವಲ್ಪ ಇಳಿಸಬೇಕೆಂದು ಮದರಾಸ್ ಸರ್ಕಾರವು ಪರಿಶೀಲಿಸುತ್ತಿರುವುದಾಗಿ ಹೇಳಲಾಗಿದೆ.

ವೆಲ್‌ಕಮ್ ಕಾಫೀ ಕ್ಲಬ್

(ಪ್ರಭಾ ಟಾಕೀಸ್ ಎದುರು)

೨೩-೧-೫೨ ರಿಂದ ಪ್ರಾರಂಭ

ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ

ಅಪ್ಪಟ ತುಪ್ಪದ 'ಕೇಸರೀ ಭಾತ್'

ಉತ್ತಮವಾದ

'ಸಾದಾ ಸೆಟ್ ದೋಸೆ'

ಒಂದಸಲ ಕಾಫೀ ಮತ್ತು ಟೀ ಸೇವಿಸಲು ದಯಮಾಡಿ

ರಣಜಿತ್

೧-೨-೫೨ ರಿಂದ ಅಮೋಘ ೨ನೇ ವಾರ

ಪೃಥ್ವಿರಾಜ್, ಸುರೈಯಾ, ರಾಜಕಪೂರ್ ನಟಿಸಿರುವ

—:: ಆ ವಾ ರ ::—

(ಹಿಂದಿ)

ವುಡ್‌ಲ್ಯಾಂಡ್ಸ್ * 1-2-52 ರಿಂದ ಅಮೋಘಪ್ರಾರಂಭ ಪ್ರತಿದಿನ ಮೂರು ಆಟಗಳು

* ನಗೀನಾ *

ಪಾತ್ರ:— ನಾಸೀರ್‌ಖಾನ್, ನೂತನ್, ಗೋಪ್, ಮೋಹನ.

ಇದರ ಜೊತೆಗೆ ಲಿಯಾಖತ್ ಅಲಿಖಾನ್‌ರವರ ನಿಧನ ಪ್ರದರ್ಶನವನ್ನು ತೋರಿಸಲ್ಪಡುತ್ತೆ.

ABSTRACT NOTIFICATION

Dated 29 th January 1952

Sealed tenders for renewing the damaged terrace of a portion of the store room and verandah of Farashkhana Offices Block in the South Wing (rear block) of Jaganmohan Palace, Mysore will be received till 3-30 P.M. on 13 th February 1952.

Sd/ H.K. PANDITHARADHYA,
Palace Engineer.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು—ಹಿ. ಆ. ಸುಬ್ಬರಾವ್ ಮೋಹನ್ ಮುದ್ರಣಾಲಯ ಮೈಸೂರು

ಫೋನ್ ೨೭೪ (ಆಫೀಸ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೫—೨—೧೯೫೨ನೇ ಮಂಗಳವಾರ [ಸಂಚಿಕೆ ೧೩೬

ಒಂದೇ ಶಾಸನಸಭೆ ಇರುವ ಪ್ರಾಂತ್ಯಗಳಲ್ಲಿ ಹೊಸ ಮಂತ್ರಿಮಂಡಲ ರಚನೆ

ಕೊಡಗಿನಲ್ಲಿ ಪ್ರಪ್ರಥಮವಾಗಿ ಮಂತ್ರಿಮಂಡಲದ ಸ್ಥಾಪನೆ

೧೫ ದಿವಸಗಳೊಳಗಾಗಿ ಹೊಸ ಮಂತ್ರಿಮಂಡಲ ಸ್ಥಾಪನೆ

ಒಂದೇ ಶಾಸನಸಭೆಯಿರುವ ಹೈದರಾಬಾದ, ತಿರುವಾಂಕೂರುಕೊಚ್ಚಿನ್, ಮಧ್ಯಭಾರತ, ಮಧ್ಯಪ್ರದೇಶ, ಒರಿಸ್ಸಾ, ಸೌರಾಷ್ಟ್ರ ಮುಂತಾದ ಪ್ರಾಂತ್ಯಗಳಲ್ಲಿ ಇನ್ನೂ ೧೫ ದಿವಸಗಳೊಳಗಾಗಿ ಹೊಸ ಮಂತ್ರಿ ಮಂಡಲಗಳನ್ನು ಸ್ಥಾಪಿಸಲಾಗುವುದೆಂದು ಹೇಳಲಾಗಿದೆ.

ಎ ಭಾಗದ ಪ್ರಾಂತ್ಯಗಳು ಮತ್ತು ಮೈಸೂರು ಪ್ರಾಂತ್ಯದಲ್ಲಿ ಹಿರಿಯ ಮತ್ತು ಕಿರಿಯ ಶಾಸನಸಭೆಗಳಿರುವುದರಿಂದ ಈ ಪ್ರಾಂತ್ಯಗಳಲ್ಲಿ ಹಿರಿಯ ಶಾಸನ ಸಭೆಯ ಚುನಾವಣೆಯಾದನಂತರ ಹೊಸ ಸರ್ಕಾರಗಳ ಸ್ಥಾಪನೆ ನಡೆಯುತ್ತದೆಯೆಂದು ಹೇಳಲಾಗಿದೆ. ಹಿರಿಯ ಶಾಸನಸಭೆ ಚುನಾವಣೆಯಾಗುವವರೆಗೂ ಪಕ್ಷದ ಬಲಾಬಲಗಳು ಗೊತ್ತಾಗುವುದಿಲ್ಲ. ಪಕ್ಷದ ನಾಯಕರ ಚುನಾವಣೆಯೂ ನಡೆಯುವುದಿಲ್ಲ.

ಲಕ್ನೋಬಳಿ ವಿಮಾನ ಅಪಘಾತ

ಲಕ್ನೋ-ದೆಹಲಿ ಮಾರ್ಗವಾಗಿ ಹಾರುತ್ತಲಿದ್ದ ವಿಮಾನವೊಂದು ಲಕ್ನೋವಿಗೆ ೩೦ ಮೈಲಿ ದೂರದಲ್ಲಿ ಅಪಘಾತಕ್ಕೀಡಾಯಿತು. ವಿಮಾನಕ್ಕೆ ವಿಶೇಷವಾಗಿ ನಷ್ಟವಾಯಿತಾದರೂ ಪ್ರಯಾಣಿಕರಿಗೊಬ್ಬರಿಗೂ ಏನೂ ತೊಂದರೆ ಆಗಲಿಲ್ಲ. ಆ ವಿಮಾನದಲ್ಲಿ ಸೈನ್ಯಾಧಿಕಾರಿಗಳಾಗಿರುವ ಮೇಜರ್ ಜನರಲ್‌ಗಳಾದ ಶ್ರೀ ನಾಗೇಶ್ ಮತ್ತು ತಿಮ್ಮಯ್ಯನವರುಗಳಿದ್ದರು.

ನಾಲ್ಕನೇ ಸ್ವಾತಂತ್ರ್ಯೋತ್ಸವ

ಸಿಂಹಳದಲ್ಲಿ ನಾಲ್ಕನೇ ವಾರ್ಷಿಕ ಸ್ವಾತಂತ್ರ್ಯೋತ್ಸವವು ನಿನ್ನೆ ಅತ್ಯಂತ ವೈಭವದಿಂದ ನಡೆಯಿತು. ಈ ಸಮಯದಲ್ಲಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಭಾರತ ಪ್ರಧಾನಿ ನೆಹರೂರವರು ಸಿಂಹಳ ಪ್ರಧಾನಿಗೆ ಸಂದೇಶ ಕಳುಹಿಸಿರುವರು.

ಕಾಂಗ್ರೆಸ್ಸಿಗೆ ಬಹುಮತ

ಬೀಹಾರ ಮತ್ತು ಪಂಜಾಬ್ ಪ್ರಾಂತ್ಯಗಳ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬಹುಮತ ದೊರೆತಿರುವುದರಿಂದ ಅಲ್ಲಿ ಕಾಂಗ್ರೆಸ್ ಸರ್ಕಾರವನ್ನು ಸ್ಥಾಪಿಸಲು ಅಡ್ಡಿಯೇನೂ ಇಲ್ಲ.

ಮೈಸೂರು ಶಾಸನಸಭೆ ಅಧಿವೇಶನ

ಮಾರ್ಚಿ ೬ನೇ ತಾ|| ಪ್ರಾರಂಭ

ಬೆಂಗಳೂರು ಫೆ ೩

ಸದ್ಯದ ಮೈಸೂರು ಶಾಸನ ಸಭೆಯ ಕಡೆಯ ಅಧಿವೇಶನ ಮಾರ್ಚಿ ೬ನೇ ತಾ|| ಬೆಂಗಳೂರಿನಲ್ಲಿ ಆರಂಭವಾಗುವುದು.

ಅಧಿವೇಶನ ೧ ವಾರ ನಡೆಯುವುದಾಗಿ ನಿರೀಕ್ಷಿಸಲಾಗಿದೆ.

ಅಧಿವೇಶನ ಮುಖ್ಯವಾಗಿ ಇಂದಿನ ಮಂತ್ರಿಮಂಡಲ ಮಂಡಿಸುವ ತಾತ್ಕಾಲಿಕ ಬಜೆಟ್ಟನ್ನು ಚರ್ಚಿಸಿ, ಅಂಗೀಕರಿಸುವುದು. ಬಜೆಟ್ಟಿನಲ್ಲಿ ಏಪ್ರಿಲ್ ೧ ರಿಂದ ೩ ತಿಂಗಳವರೆಗೆ ಮಾತ್ರ ಖರ್ಚು ಮಂಜೂರಾತಿಗಳಿರುವುದೆಂದು ತಿಳಿದುಬಂದಿದೆ.

ಈ ಅಧಿವೇಶನದಲ್ಲೇ ಸಭೆಯ ಮುಂದಿರುವ ಇನಾಂ ರದ್ದಿಯಾತಿ ಮಸೂದೆ ಮತ್ತು ಕೆ ಜಿ ಎಫ್ ಸ್ಯಾನಿಟರಿ ಬೋರ್ಡ್ ಮಸೂದೆಗಳು ಅಂಗೀಕೃತವಾಗುತ್ತದು.

ರಾಜಪ್ರಮುಖರು ಅಧಿವೇಶನದ ಆರಂಭದ ದಿನ ರಾಜ್ಯಾಂಗದ ನಿಯಮಕ್ಕನುಗುಣವಾಗಿ ಸಭೆಯನ್ನುದ್ದೇಶಿಸಿ ಭಾಷಣ ಮಾಡುವರು. ಭಾಷಣದ ಮೇಲೆ ಮಾರನೆ ದಿನ ಚರ್ಚೆ ನಡೆಯುವುದು. ಸದಸ್ಯರ ನಿರ್ಣಯಗಳ ಚರ್ಚೆಗಾಗಿ ಒಂದು ದಿನ ಗೊತ್ತುಮಾಡಲಾಗಿದೆ.

ದೇಶಮುಖ್‌ರವರು ಲಂಡನ್ನಿಗೆ

ಭಾರತದ ಅರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಬ್ರಿಟಿಷ್ ಸರ್ಕಾರದೊಡನೆ ಆರ್ಥಿಕ ವಿಷಯ ಚರ್ಚೆ ನಡೆಸಲು ಲಂಡನ್ನಿಗೆ ಪ್ರಯಾಣ ಮಾಡಿದರು.

ಅದೇ ವಿಮಾನದಲ್ಲಿ ರಷ್ಯಾದಲ್ಲಿರುವ ಭಾರತ ರಾಯಭಾರಿ ಡಾ|| ರಾಧಾಕೃಷ್ಣನ್‌ರವರೂ ಪ್ರಯಾಣ ಮಾಡಿದರು.

ಕೊಡಗಿನಲ್ಲಿ ತ್ರಿಮೂರ್ತಿಗಳ ಸಚಿವಮಂಡಲಿ

ಕೊಡಗಿನಲ್ಲಿ ೩ ಜನರಿಂದೊಡಗೂಡಿದ ಸಚಿವ ಮಂಡಲಿಯು ಸದ್ಯದಲ್ಲೇ ರಚನೆಯಾಗುವುದೆಂದು ಹೇಳಲಾಗಿದೆ. ಅಲ್ಲದೆ ಚೀಫ್ ಸೆಕ್ರೆಟರಿ ಮತ್ತು ಡೆಪ್ಯುಟಿ ರುಜಿಸ್ಟ್ರೇಟರ್ ಹೊಸ ಹುದ್ದೆಗಳನ್ನು ಸ್ಥಾಪಿಸಲಾಗುತ್ತದೆ. ಶ್ರೀ ಪೂಣಚ್ಚಾರವರು ಪ್ರಥಮ ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿಗಳಾಗುವರೆಂದು ಊಹಿಸಲಾಗಿದೆ.

ಪತ್ರಿಕಾಗೋಷ್ಠಿ

ಮೈಸೂರು ಫೆ ೪

ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಅದರಲ್ಲೂ ಪಿರಿಯಾಪಟ್ಟಣ, ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ ಚುನಾವಣೆಯು ನ್ಯಾಯವಾಗಿ ನಡೆಯಲಿಲ್ಲ. ಕೆಲವು ಕಾಂಗ್ರೆಸ್ ಪ್ರಮುಖ ವ್ಯಕ್ತಿಗಳು ಕಾಂಗ್ರೆಸ್ ಉಮೇದುವಾರರಿಗೆ ವಿರುದ್ಧವಾಗಿ ಸ್ಪರ್ಧಿಸಿದ್ದ ಸ್ವತಂತ್ರರಿಗೆ ಪೂರ್ಣ ಬೆಂಬಲವಿತ್ತು, ಅವರು ಗೆಲ್ಲುವಂತೆ ಮಾಡಿದರು. ಅಂತಹವರ ಮೇಲೆ ತೀವ್ರ ಕಾರ್ಯಕ್ರಮ ಅತ್ಯಗತ್ಯವೆಂದು ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಇಂದು ಪತ್ರಿಕಾಗೋಷ್ಠಿಯಲ್ಲಿ ಮೈಸೂರಿನಲ್ಲಿ ನಡೆದ ಚುನಾವಣೆಯ ವಿಷಯದಲ್ಲಿ ಮಾತನಾಡುತ್ತಾ ಹೇಳಿದರು.

ಹೊಸ ಮಂತ್ರಿಮಂಡಲದ ವಿಷಯವಾಗಿ ಮಾತನಾಡುತ್ತಾ, ಈಗಿನ ಪರಿಸ್ಥಿತಿಯಲ್ಲಿ ನಾಯಕರು ಮಂತ್ರಿಮಂಡಲಗಳಲ್ಲಿ ಬದಲಾವಣೆಯು ಅತ್ಯವಶ್ಯಕವೆಂದು ಹೇಳಿದರು.

ಉನ್ನತ ಶಿಕ್ಷಣಕ್ಕಾಗಿ ನೂತನ ಶಿಕ್ಷಣ ಕೇಂದ್ರ

ವೈದ್ಯ ಶಾಸ್ತ್ರದಲ್ಲಿ ಉನ್ನತ ಶಿಕ್ಷಣವನ್ನು ಕೊಡುವುದಕ್ಕಾಗಿ ದೆಹಲಿಯಲ್ಲಿ ನೂತನ ಕೇಂದ್ರವನ್ನು ಸದ್ಯದಲ್ಲಿಯೇ ತೆರೆಯಲಾಗುವುದು. ಕೆನಡಾವು ಇತ್ತಿರುವ ೨೫೦೦೦೦ ಡಾಲರುಗಳನ್ನು ಈ ಶಿಕ್ಷಣ ಕೇಂದ್ರವನ್ನು ಕಟ್ಟಲು ಉಪಯೋಗಿಸಕೊಳ್ಳಲಾಗುವುದು ಎಂದು ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ಸಚಿವರಾದ ರಾಜಕುಮಾರಿ ಅಮೃತ ಕೌರ್‌ರವರು ನಿನ್ನೆ ತಿಳಿಸಿದರು.

ನಿರಾಕರಣೆ

ಈಗಾಗಲೇ ಅನೇಕ ನೂತನ ಯೋಜನೆಗಳು ಜಾರಿಗೆ ಬರಬೇಕಾಗಿರುವುದರಿಂದಲೂ ತನ್ನ ಮುಂದಿನ ಅಭಿವೃದ್ಧಿ ಕಾರ್ಯದ ವೇಳಾಪಟ್ಟಿ ಈಗಾಗಲೇ ನಿರ್ಧಾರವಾಗಿರುವುದರಿಂದ ಬೊಂಬಾಯಿನಲ್ಲಿ ಒಂದು ಪೆನ್ಸಿಲಿನ್ ಕಾರ್ಖಾನೆಯನ್ನು ಸ್ಥಾಪಿಸಬೇಕೆಂಬ ಕೇಂದ್ರದ ಸಲಹೆಯನ್ನು ಬೊಂಬಾಯಿ ಸರ್ಕಾರ ನಿರಾಕರಿಸಿರುವುದಾಗಿ ಹೇಳಲಾಗಿದೆ.

ನಂಜನಗೂಡಿನ ಫಲಿತಾಂಶಗಳು

ಮೈಸೂರು ಫೆ ೪

ನಂಜನಗೂಡಿನ ಕ್ಷೇತ್ರದ ಮಹಾಚುನಾವಣೆಯ ಫಲಿತಾಂಶಗಳನ್ನು ನಿನ್ನೆಯಿಂದ ಎಣಿಸಲಾಗುತ್ತಿದೆಯಷ್ಟೆ.

ಶ್ರೀ ಪಿ. ಎಸ್. ಎಸ್. ಆರಾಧ್ಯರಿಗೆ ೧೦,೭೭೮ ಓಟುಗಳೂ, ಶ್ರೀ ಹೆಜ್ಜಿಗೆ ಲಿಂಗಣ್ಣನವರಿಗೆ ೧೧,೧೨೨, ಶ್ರೀ ಬಳಿಗಿರಿ ರಂಗಯ್ಯನವರಿಗೆ ೬೨೭೭, ಶ್ರೀ ಬಸವಯ್ಯನವರಿಗೆ ೪೩೨೨, ಶ್ರೀ ಸೇರಳೆ ಮಾದಯ್ಯನವರಿಗೆ ೬೯೩೦, ಶ್ರೀ ಲಿಂಗಪ್ಪನವರಿಗೆ ೫೯೧೩ ಓಟುಗಳೂ ಬಂದಿವೆ. ರಿಸರ್ವ್ ಕ್ಷೇತ್ರದಿಂದ ಸ್ಪರ್ಧಿಸಿರುವ ಕಾಂಗ್ರೆಸ್ಸಿನ ಶ್ರೀ ಸೇರಳೆ ಮಾದಯ್ಯನವರಿಗೆ ಹೆಚ್ಚು ಓಟುಗಳು ಬಂದಿರುವುದರಿಂದ ಅವರು ಗೆಲ್ಲುವ ಸಂಭವವಿದೆ.

ಕೇಂದ್ರ ಅಡ್ಮಿನಿಸ್ಟ್ರೇಟಿವ್ ಸರ್ವೀಸ್‌ನವರ ನೇಮಕ

ಮೈಸೂರು ಸಂಸ್ಥಾನದಲ್ಲಿಯ ಕೆಲವು ಉನ್ನತ ಅಧಿಕಾರಿ ಸ್ಥಾನಗಳಿಗೆ ಕೇಂದ್ರದ ಅಡ್ಮಿನಿಸ್ಟ್ರೇಟಿವ್ ಸರ್ವೀಸ್‌ನವರನ್ನು ನೇಮಕ ಮಾಡುತ್ತಿದ್ದಲ್ಲದೆ ಸಂಸ್ಥಾನದ ಜನಸಂಖ್ಯೆಯನ್ನು ಗಮನಿಸಿ ಈಗಿರುವ ೯ ಜಿಲ್ಲೆಗಳನ್ನು ೬ ಜಿಲ್ಲೆಗೆ ಇಳಿಸಬೇಕೆಂದು ಕೇಂದ್ರ ಸರ್ಕಾರದ ಅಭಿಪ್ರಾಯವಿರುವುದಾಗಿ ಅದರಿಂದ ಚಿಕ್ಕಮಗಳೂರು ಜಿಲ್ಲೆಯನ್ನು ರದ್ದು ಮಾಡುವ ವಿಷಯವು ಸರ್ಕಾರ ಪರಿಶೀಲಿಸುತ್ತಿರುವುದಾಗಿ ಚಿಕ್ಕಮಗಳೂರು ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಮುಖ್ಯಮಂತ್ರಿಗಳು ತಿಳಿಸಿದ ವಿಷಯವು ಜಿಲ್ಲಾಬೋರ್ಡಿನ ಸಭೆಯಲ್ಲಿ ಚರ್ಚೆ ನಡೆದು ಈ ಜಿಲ್ಲೆಯನ್ನು ಪಜಾ ಮಾಡಕೂಡದೆಂದು ತೀರ್ಮಾನಿಸಲಾಗಿದೆ.

ಮತ್ತೊಂದೆಡೆ ಠೇವಣಿ ಹೋಯಿತು

ಪಂಜಾಬಿನ ಮುಖ್ಯಮಂತ್ರಿ ಡಾ|| ಗೋಪಿಚಂದ ಭಾರ್ಗವಾ ಎರಡು ಕ್ಷೇತ್ರಗಳಿಂದ ಅಲ್ಲಿನ ಶಾಸನಸಭೆಗೆ ಸ್ಪರ್ಧಿಸಿದ್ದರಷ್ಟೆ. ಅವರು ಎರಡು ಕ್ಷೇತ್ರಗಳಲ್ಲೂ ಪರಾಜಿತರಾಗಿರುವದಲ್ಲದೆ ಠೇವಣಿ ಸಹ ಕಳೆದುಕೊಂಡಿರುವರು.

‡ ಬಂಗಾಳದಿಂದ ಶ್ರೀ ಲಕ್ಷ್ಮೀಕಾಂತ ಮೈತ್ರಾರವರು ಸೋತಲಿಸ್ಪರಾದ ಶ್ರೀ ಎಸ್. ಸಿ. ಮಿಶ್ರಾರವರು ಪಾರ್ಲಿಮೆಂಟಿಗೆ ಚುನಾಯಿತರಾಗಿರುವರು.

ಮಹಾ ಚುನಾವಣೆಗಳು ಉತ್ತಮ ಮಟ್ಟದಲ್ಲಿ ನಡೆದಿವೆ

ಕೇಂದ್ರ ಚುನಾವಣಾಧಿಕಾರಿಗಳ ಅಭಿಪ್ರಾಯ

ಭಾರತಾದ್ಯಂತ ಮಹಾಚುನಾವಣೆಗಳು ಉತ್ತಮ ಮಟ್ಟದಲ್ಲಿ ನಡೆದಿವೆ. ಅಧಿಕಾರ ವರ್ಗದವರು ಮತದಾರರು ವಿಶೇಷ ಶಿಸ್ತಿನಿಂದ ನಡೆದಿರುವರು. ನ್ಯಾಯವನ್ನು ಪರಿಪಾಲಿಸುವುದರಲ್ಲಿ ಭಾರತೀಯರು ಮೊದಲಿನಿಂದಲೂ ಹೆಸರು ಗಳಿಸಿದ್ದಾರೆ. ಈಗಲೂ ಹಾಗೆಯೇ ನಡೆದುಕೊಂಡಿರುವರು. ಪಟ್ಟಣಗಳಿಗಿಂತ ಗ್ರಾಮ ಪ್ರದೇಶಗಳಲ್ಲಿ ಮತದಾನ ವಿಶೇಷ ಸಂಖ್ಯೆಯಲ್ಲಿ ನಡೆದಿದೆ. ಪುರುಷರಿಗಿಂತ ಮಹಿಳೆಯರು ಹೆಚ್ಚಾಗಿ ಮತದಾನದಲ್ಲಿ ಭಾಗವಹಿಸಿರುವರು. ಪ್ರಾಂತ್ಯಗಳಲ್ಲೆಲ್ಲಾ ತಿರುವಾಂಕೂರ್-ಕೊಚ್ಚಿನ್‌ನಲ್ಲಿ ಮತದಾನ ಮಾಡಿರುವವರ ಸಂಖ್ಯೆಯು ಹೆಚ್ಚು. ಅಲ್ಲಿಯ ಒಂದು ಕ್ಷೇತ್ರದಲ್ಲಿ ೧೦೦ಕ್ಕೆ ನೂರು ಜನ ಮತದಾನ ಕೊಟ್ಟಿರುವರು. ಜಯಪುರದ ಕೆಲವು ಕಡೆ ಮತದಾನ ಕೇಂದ್ರಗಳಲ್ಲಿ ಮತದಾನ ಮಾಡುವವರೇ ಇರಲಿಲ್ಲ. ಎಂದು ಮಹಾಚುನಾವಣೆಗಳ ವಿಷಯದಲ್ಲಿ ಕೇಂದ್ರ ಚುನಾವಣಾಧಿಕಾರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಮತದಾನದ ಪಟ್ಟಿಗಳ ವಿಷಯವಾಗಿ ಮಾತನಾಡುತ್ತಾ, ಮತದಾನ ಪಟ್ಟಿಗಳಲ್ಲಿ ಅನೇಕ ಲೋಪದೋಷಗಳಿವೆ. ಅವುಗಳೆಲ್ಲಾ ಸರಿಪಡಿಸಲಾಗುತ್ತದೆ. ಮತದಾನ ಪಟ್ಟಿಗಳನ್ನು ಪುನರ್ಪರಿಶೀಲಿಸಿ ಹೊಸ ಪಟ್ಟಿಗಳನ್ನು ತಯಾರಿಸುವ ಕಾರ್ಯವನ್ನು ಮುಂದಿನ ವರ್ಷದಿಂದ ಕೈಗೆದುಕೊಳ್ಳಲಾಗುತ್ತದೆಯೆಂದು ಹೇಳಿರುವರು.

ಒಂದು ಓಟಿನಲ್ಲಿ ಜಯ

ಸಿದ್ದಾಬಾದಿನ ಜುಕಾಪುರ ಎಂಬಲ್ಲಿ ಪ್ರತಾಪಸಿಂಗ್ ಎಂಬ ಸ್ವತಂತ್ರ ಸ್ಪರ್ಧಿಯು ಮತ್ತೊಬ್ಬ ಸ್ವತಂತ್ರ ಸ್ಪರ್ಧಿಗಿಂತ ಒಂದು ಓಟನ್ನು ಹೆಚ್ಚಾಗಿ ಗಳಿಸಿ ಶಾಸನ ಸಭೆಗೆ ಚುನಾಯಿತರಾದರು. ಕಾಂಗ್ರೆಸ್ ಪಕ್ಷದ ಉಮೇದುವಾರರಿಗಿಂತ ಇವರಿಗೆ ೪ ಓಟು ಹೆಚ್ಚಾಗಿ ಬಂದಿದೆ.

ನಿಜಾಮರ ಪ್ರಯಾಣ

ಮಾರ್ಚಿ ೧೪ ರಿಂದ ದೆಹಲಿಯಲ್ಲಿ ಆರಂಭವಾಗುವ ಗವರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನದಲ್ಲಿ ಭಾಗವಹಿಸಲು ನಿಜಾಮರು ದೆಹಲಿಗೆ ತೆರಳುವರೆಂದು ತಿಳಿದುಬಂದಿದೆ.

ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ರಾಕ್‌ಫೆಲರ್ ನಿಧಿಯ ಸಹಾಯ

ನ್ಯೂಯಾರ್ಕ್ ಜ ೩೦

ಶಿಕ್ಷಣ ಮತ್ತು ಸಂಶೋಧನೆಗಳಿಗಾಗಿ ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ರಾಕ್‌ಫೆಲರ್ ನಿಧಿಯಿಂದ ಹಣ ಸಹಾಯವನ್ನು ಒದಗಿಸಲಾಗುವುದು.

ಸಿರಿಯಾ, ಲೆಬನಾನ್, ಟರ್ಕಿ ಮತ್ತು ಇಂಡಿಯಾ ದೇಶಗಳ ಶಿಕ್ಷಣ ಸಂಸ್ಥೆಗಳಿಗೆ ಈ ನಿಧಿಯನ್ನು ಕೊಡಲಾಗುವುದು.

ಮೈಸೂರು, ಮದರಾಸು, ಕಲ್ಕತ್ತಾ, ಬೊಂಬಾಯಿ, ಅಮೃತಸರ ಮತ್ತು ಲಕ್ನೋ ನಗರಗಳಿಗೆ ಶಿಕ್ಷಣ ಮತ್ತು ಸಂಶೋಧನೆಗಾಗಿ ೨೧,೭೭೫ ಡಾಲರುಗಳನ್ನು ಕೊಡಲಾಗುವುದು.

೭೫೦೦೦ ಡಾಲರುಗಳನ್ನು ಪೂನಾದ ಸಂಶೋಧನಾಲಯದಲ್ಲಿ ಸಾಂಖ್ಯಿಕ ವಿಷ ಸಂಶೋಧನೆಗಾಗಿ ಕೊಡಲ್ಪಟ್ಟಿದೆ.

ವಿದ್ಯಾರ್ಥಿ ಪ್ರ॥ ಸಂ॥ಯ ಮಂತ್ರಿಮಂಡಲಕ್ಕೆ

ಜೆರೂಸಲೇಂ ಜ ೩೦

ಲೂಸಿಯಾನಾ ವಿಶ್ವವಿದ್ಯಾನಿಲಯದಲ್ಲಿ ಅಂತರರಾಷ್ಟ್ರೀಯ ಸೌಹಾರ್ದತೆಯನ್ನು ಹೆಚ್ಚಿಸಲು ಒಂದು ಸಂಸ್ಥೆ ಸ್ಥಾಪಿಸಲಾಗಿದೆ. ಈ ಸಂಸ್ಥೆಯಲ್ಲಿ ೪೫ ಪ್ರ॥ ಸಂ॥ಯ ಸದಸ್ಯ ರಾಷ್ಟ್ರಗಳಿಂದ ಬಂದ ವಿದ್ಯಾರ್ಥಿಗಳು ಇದ್ದಾರೆ. ಅವರಲ್ಲಿ ಒಂದು 'ಮಂತ್ರಿಮಂಡಲ'ವಿದೆ. ಆ ಮಂತ್ರಿಮಂಡಲದಲ್ಲಿ ಈಜಿಪ್ಟ್, ಇಂಡಿಯಾ, ಅಫ್ಘಾನಿಸ್ತಾನಗಳ ವಿದ್ಯಾರ್ಥಿಗಳಿಗೆ ಪ್ರಾತಿನಿಧ್ಯ ದೊರಕಿದೆ.

ಭಾರತದ ಶ್ರೀ ರಂಗರೆಡ್ಡಿ, ಭೂಮರೆಡ್ಡಿ ಎಂಬುವರು ಆ ಮಂತ್ರಿಮಂಡಲದಲ್ಲಿದ್ದಾರೆ. ಈಜಿಪ್ಟಿನಿಂದ ಹಸನಾ ಗಾಮಗನ್‌ರವರು, ಅಫ್ಘಾನಿಸ್ಥಾನದಿಂದ ಮೊಹಮದ್ ವೆಸ್ಸಾಂವರೂ ಆರಿಸಲ್ಪಟ್ಟಿದ್ದಾರೆ.

ಈ ಸಂಸ್ಥೆಯವರು ಪ್ರತಿ ತಿಂಗಳೂ, ಅಂತರರಾಷ್ಟ್ರೀಯ ಸ್ನೇಹ ಸೌಹಾರ್ದತೆಯನ್ನು ಕುರಿತು ಚರ್ಚೆ ನಡೆಸುವರು.

ಈಜಿಪ್ಟಿನ ಭರವಸೆ

ಈಜಿಪ್ಟಿನಲ್ಲಿ ವಿದೇಶೀಯರ ಭದ್ರತೆ ಮತ್ತು ಹಿತಗಳನ್ನು ರಕ್ಷಿಸಲಾಗುವುದೆಂದು ಈಜಿಪ್ಟಿನ ಸರ್ಕಾರ ಭರವಸೆನೀಡಿದೆ. ಈ ಬಗ್ಗೆ ಮಂತ್ರಿ ಸಂಪುಟದ ಅಧ್ಯಕ್ಷ ಶಶಿಧರ ಪ್ರಕಟಣೆ ಹೊರಡಿಸಿದೆ.

ವಿಮಾನ ಸಾರಥಿಯ ದಸ್ತಗಿರಿ

ನಾಗಪುರದ ಬಳಿ ಘಟನೆ

ಏರ್‌ವೇಸ್ ಇಂಡಿಯಾ ಸಂಸ್ಥೆಯಲ್ಲಿ ಪೈಲಟ್ ಆಗಿ ಕೆಲಸ ಮಾಡುತ್ತಿರುವ ಆಸ್ಟ್ರೇಲಿಯದ ಕ್ಯಾಪ್ಟನ್ ಡ್ಯೂಯರ್ ಎಂಬಾತನನ್ನು ನಾಗಪುರದ ಪೋಲೀಸರು ಬಂಧಿಸಿದ್ದಾರೆ. ಆತನ ಲೈಸೆನ್ಸನ್ನು ರದ್ದುಗೊಳಿಸಲಾಗಿದೆಯೆಂದು ಗೊತ್ತಾಗಿದೆ.

ಕಳೆದ ಭಾನುವಾರ ಈ ಪೈಲಟ್ ವಿಮಾನವೊಂದನ್ನು ಕಲ್ಕತ್ತೆಯಿಂದ ಹಾರಿಸಿಕೊಂಡು ಬಂದು ಮಧ್ಯಮಾರ್ಗದಲ್ಲಿ ಕುಡಿದಿದ್ದರಿಂದ ಶರೀರದ ಮೇಲಿನ ಹತೋಟಿ ತಪ್ಪಿತು. ಇದರಿಂದ ೧೦ ಸಾವಿರ ಅಡಿ ಎತ್ತರದಲ್ಲಿ ಹಾರುತ್ತಿದ್ದ ವಿಮಾನ ಇದ್ದಕ್ಕಿದ್ದಂತೆ ೪ ಸಾವಿರ ಅಡಿಗೆ ಇಳಿಯಿತು. ಆ ವಿಮಾನದಲ್ಲಿ ಸಂಚಾರಮಾಡುತ್ತಿದ್ದ ೧೩ ಮಂದಿ ಪ್ರಯಾಣಿಕರಲ್ಲಿ ೧೧ ಮಂದಿ ವಿದೇಶೀಯರು. ಅವರಿಗೆ ತಮ್ಮ ಜೀವಕ್ಕೆ ಅಪಾಯ ಒದಗಿದೆಯೆಂಬ ಭೀತಿ ಉಂಟಾಯಿತು. ಪೈಲಟನನ್ನು ಸಾರಥ್ಯದ ಸ್ಥಾನದಿಂದ ಹೊರಕ್ಕೆ ಕರೆತರಬೇಕೆಂದು ಪ್ರಯಾಣಿಕರಲ್ಲಿ ಏರ್‌ಹೋಸ್ಟೆಸ್ ಬಿನ್ನವಿಸಿಕೊಂಡಳಂತೆ. ವಿಮಾನ ನಡೆಸಲಾಗದಷ್ಟು ಮಿತಿಮೀರಿ ಆತ ಕುಡಿದಿದ್ದ.

ಕ್ಯಾ॥ ಡ್ಯೂಯರ್ ಆರಡಿ ಎತ್ತರದ ಆಜಾನುಬಾಹು; ಆದರಿಂದ ಬಲಪ್ರಯೋಗ ವ್ಯರ್ಥವೆಂದು ಪ್ರಯಾಣಿಕರು ಗ್ರಹಿಸಿದರು. ಅವರ ಪೈಕಿ ಒಬ್ಬಾತ ಇನ್ನೊಂದು ಪೆಗ್ ಕೊಡುವ ಆಸೆ ತೋರಿಸಿ ಆತನನ್ನು ಹೊರಕ್ಕೆ ಬರುವಂತೆ ಮಾಡಿದ. ಕೂಡಲೆ ಕುಳಿತೊಡನೆಯೇ ಆತನನ್ನು ಕಟ್ಟಿಹಾಕಿ ಇನ್ನೂರು ಮೈಲಿ ದೂರದಲ್ಲಿದ್ದ ನಾಗಪುರಕ್ಕೆ ರೇಡಿಯೋ ಸುದ್ದಿ ಕಳಿಸಿ ಪೋಲೀಸರು ಸಿದ್ಧವಿರುವಂತೆ ತಿಳಿಸಲಾಯಿತು. ಸಹಾಯಕ ಸಾರಥಿ ಬುದ್ಧಿಮತ್ತೆಯಿಂದ ವಿಮಾನವನ್ನು ನಾಗಪುರದಲ್ಲಿ ಇಳಿಸಿದ. ಪೋಲೀಸರು ನಿಲ್ದಾಣದಲ್ಲಿ ಕಾದಿದ್ದು ವಿಮಾನ ನಿಂತೊಡನೆಯೇ ಆತನನ್ನು ಬಂಧಿಸಿದರು. ವಾಯುನಿರೋಧ ಶಾಸನರೀತ್ಯ ಆತನ ಮೇಲೆ ಕ್ರಮ ಕೈಗೊಳ್ಳಲಾಗುವುದು. ಆತನ ಬಳಿ ಇದ್ದ ಗಾಜಿನ ಲೋಟ ಮತ್ತು ಜಿನ್‌ಸೀಸೆ ವಶಪಡಿಸಿಕೊಳ್ಳಲಾಗಿದೆ.

ಭಾರತ ವಿಮಾನ ಶಾಸನರೀತ್ಯಾ ಕುಡಿತ ಅಪರಾಧಕ್ಕಾಗಿ ಕ್ಯಾಪ್ಟನ್ ಡ್ಯೂಯರ್‌ನ ಲೈಸೆನ್ಸನ್ನು ರದ್ದುಮಾಡಲಾಗಿದೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು—ಪಿ. ಕೆ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು

೮೦೦ ಜನ ದಸ್ತಗಿರಿ

ಕೈರೋದಲ್ಲಿ ನಡೆದ ಇತ್ತೀಚಿನ ಘಟನೆಗಳ ಪರಿಣಾಮವಾಗಿ ಇಲ್ಲಿಯವರೆಗೆ ೮೦೦ ಜನರ ದಸ್ತಗಿರಿಯಾಗಿದೆಯೆಂದು ಹೇಳಲಾಗಿದೆ. ದಸ್ತಗಿರಿಯಾದವರಲ್ಲಿ ಸೋಷಲಿಸ್ಟ್ ನಾಯಕ ಅಹಮದ್ ಹುಸೇನ್ ರವರೂ ಇರುವರು.

ನಗರಾಭಿವೃದ್ಧಿ ಸಮಿತಿ, ಮೈಸೂರು.

ಪ್ರಕಟಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಸರಸ್ವತಿಪುರಂ ಬಡಾವಣೆಯಲ್ಲಿ ಹೊಸದಾಗಿ ವಿಂಗಡಿಸಿರುವ ೭೭ ಕಾಟೇಜ್ ಸೈಟುಗಳನ್ನು ಚ. ಗ. ೧ಕ್ಕೆ ೩—೦—೦ ರೂಪಾಯಿ ಮೇರೆ ವಿಲೆ ಬಗ್ಗೆ ಮೈಸೂರು ಸಿಟಿಯಲ್ಲಿ ಮನೆ ಅಥವಾ ಸೈಟುಗಳಿಲ್ಲದವರಿಂದ ಗೊತ್ತಾದ ನಮೂನೆಯಲ್ಲಿ ತಾ॥ ೧೬—೨—೫೨ ರವರೆಗೆ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ. ಅರ್ಜಿ ಫಾರಂ ೧ಕ್ಕೆ ೦—೧—೬ ಮೇರೆ ಆಫೀಸಿನಲ್ಲಿ ಪಡೆಯಬಹುದು. ಈಗಾಗಲೇ ಬಂದಿರುವ ಮತ್ತು ಗೊತ್ತಾದ ನಮೂನೆಯಲ್ಲಿಲ್ಲದ ಮತ್ತು ೧೬-೨-೫೨ ರನಂತರ ಬರುವ ಅರ್ಜಿಗಳಿಗೆ ಬೆಲೆ ಕೊಡಲಾಗುವುದಿಲ್ಲ.

(ಸಹಿ) ಪಿ. ಗೋಪಾಲಕೃಷ್ಣಶೆಟ್ಟಿ
ಅಧ್ಯಕ್ಷರು

ನ್ಯೂ ಅಪೇರ

೩—೨—೫೨ ರಿಂದ

ರತ್ನಮಾಲಾ
(ತೆಲುಗು) (ನ್ಯೂಪ್ರಿಂಟ್)
ತಾರಾಗಣ:- ಭಾನುಮತಿ,
ಸಿ.ಎಸ್.ಆರ್, ನಾಗೇಶ್ವರರಾವ್,
ಡಾ॥ ಜಿ. ವಿ. ಸುಬ್ಬರಾವ್.

ವೆಲ್‌ಕಮ್ ಕಾಫೀ ಕ್ಲಬ್
(ಪ್ರಭಾ ಟಾಕೀಸ್ ಎದುರು)
೨೩-೧-೫೨ ರಿಂದ ಪ್ರಾರಂಭ
ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮು ರವರಿಂದ ತಯಾರಿಸಿದ
ಅಪ್ಪಟ ತುಪ್ಪದ 'ಕೇಸರೀ ಭಾತ್'
ಉತ್ತಮವಾದ
'ಸಾದಾ ಸೆಟ್ ದೋಸೆ'
ಒಂದನೇ ನಂ. ಕಾಫೀ ಮತ್ತು ಟೀ ಸೇವಿಸಲು ದಯಮಾಡಿಸಿ.

ಫೋನ್ ೫೭೬೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೬—೨—೧೯೫೨ನೇ ಬುಧವಾರ [ಸಂಚಿಕೆ ೧೩೭

ಹೆಚ್ಚು ಆಹಾರ ಬೆಳೆ ಯೋಜನೆ ಪರಿಶೀಲಿಸಲು ಸಮಿತಿ ರಚನೆ

ಚೈನಾಕ್ಕೆ ಭಾರತದ ಸೌಹಾರ್ದ ನಿಯೋಗ ಕಳುಹಿಸಲಾಗುವುದು

ಹೆಚ್ಚು ಆಹಾರಬೆಳೆ ಯೋಜನೆ ವಿಮರ್ಶಿಸಲು ಸಮಿತಿ

ರಾಷ್ಟ್ರಾಧ್ಯಕ್ಷರ ಭಾಷಣ

ಪಾರ್ಲಿಮೆಂಟಿನಲ್ಲಿ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ನಿನ್ನೆ ಆರಂಭ ಭಾಷಣ ಮಾಡಿದರು. ರಾಷ್ಟ್ರಾಧ್ಯಕ್ಷರು ಭಾರತದಲ್ಲಿ ನಡೆದ ಮಹಾ ಚುನಾವಣೆಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ ಚುನಾವಣೆಗಳು ಯಶಸ್ವಿಯಾದುದಕ್ಕೆ ಜನರನ್ನೂ ಅಧಿಕಾರಿ ವರ್ಗದವರನ್ನೂ ಅಭಿನಂದಿಸಿ ಚುನಾವಣೆಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತನೀಡಿದುದಕ್ಕೆ ಅವರನ್ನು ಶ್ಲಾಘಿಸಿದರು.

ಭಾರತದ ಆಹಾರಪರಿಸ್ಥಿತಿಯನ್ನು ಡಾ॥ ರಾಜೇಂದ್ರಪ್ರಸಾದರು ವಿಮರ್ಶಿಸುತ್ತಾ, ದಿನದಿನಕ್ಕೂ ಈ ಆಹಾರಪರಿಸ್ಥಿತಿಯು ಸಮಸ್ಯೆಯಾಗಿ ಪರಿಣಮಿಸುತ್ತಿದೆಯೆಂದು ಹೆಚ್ಚು ಆಹಾರಬೆಳೆ ಯೋಜನೆಯು ಸಾರ್ಥಕವಾಗಿದೆಯೇ ಇಲ್ಲವೆ ಎಂಬುದನ್ನು ಪರಿಶೀಲಿಸಿ ಸಲಹೆನೀಡಲು ಸಮಿತಿಯೊಂದನ್ನು ರಚಿಸಲಾಗುವುದೆಂದರು.

ಭಾರತವು ಇತರ ದೇಶಗಳೊಡನೆ ನಡೆಸುತ್ತಿರುವ ವ್ಯಾಪಾರ ವ್ಯವಹಾರದಲ್ಲಿ ಅಭಿವೃದ್ಧಿಯಾಗಿದ್ದರೂ ಭಾರತವು ಲಾಭದಾಯಕವಾದ ಪರಿಸ್ಥಿತಿಯಲ್ಲಿಲ್ಲವೆಂದು ಹೇಳಿದರು.

ನಂತರ ರಾಷ್ಟ್ರಾಧ್ಯಕ್ಷರು ತಮ್ಮ ಭಾಷಣದಲ್ಲಿ ಭಾರತದ ವಿದೇಶಾಂಗನೀತಿಯನ್ನು ಪ್ರಸ್ತಾಪಿಸಿ ಸರ್ವವಿಧದಲ್ಲೂ ಎಲ್ಲಾ ದೇಶಗಳೊಡನೆಯೂ ಶಾಂತರೀತಿಯಿಂದ ಭಾರತವು ವರ್ತಿಸಿ ವಿಶ್ವದಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕೆ ಭಾರತವು ಸದಾ ಶ್ರಮಿಸುವುದೆಂದರು.

ದಕ್ಷಿಣ ಆಫ್ರಿಕದಲ್ಲಿನ ವರ್ಣವಿಭಜನಾನೀತಿಯನ್ನು ರಾಷ್ಟ್ರಾಧ್ಯಕ್ಷರು ಖಂಡಿಸಿದರು. ಭಾರತವು ಚೈನಾಕ್ಕೆ ಶೀಘ್ರದಲ್ಲೇ ಸಾಂಸ್ಕೃತಿಕ ನಿಯೋಗವೊಂದನ್ನು ಕಳುಹಿಸಲಿದೆಯೆಂದು ರಾಷ್ಟ್ರಾಧ್ಯಕ್ಷರು ತಿಳಿಸಿದರು.

ರಾಷ್ಟ್ರಾಧ್ಯಕ್ಷರು ತಮ್ಮ ಭಾಷಣದಲ್ಲಿ ಭಾರತ ಸರ್ಕಾರವು ಭಾರತದ ಅಭಿವೃದ್ಧಿಗೆ ಕೈಕೊಂಡಿರುವ ಯೋಜನೆ ಪ್ರಸ್ತಾಪಿಸಿ ಫೋರ್ಡ್ ನಿಧಿಯಿಂದ ಸಹಾಯಧನ ಪಡೆಯಲು ಮಾಡಿಕೊಂಡಿರುವ ಒಪ್ಪಂದ ಮತ್ತು ಹಲವು ಅಭಿವೃದ್ಧಿಗೆ ೫ ಕೋಟಿ ಡಾಲರು ಸಹಾಯ ಪಡೆಯುವ ವಿಷಯವನ್ನು ವಿವರಿಸಿದರು. ಉತ್ಪಾದನೆ ಅಂಶವನ್ನು ಪ್ರಸ್ತಾಪಿಸಿ ಭಾರತವು ಬಟ್ಟೆ, ಸಿಮೆಂಟ್, ಕಬ್ಬಿಣ, ಹತ್ತಿ, ಸೆಣಬು ಮತ್ತು ಸಕ್ಕರೆ ಈ ವಸ್ತುಗಳಲ್ಲಿ ಸ್ವಸಂಪೂರ್ಣತೆ ಪಡೆಯಲು ಕೈಕೊಂಡ ಕ್ರಮವನ್ನು ವಿವರಿಸಿದರು.

ಪ್ರಸ್ತುತ ಪಾರ್ಲಿಮೆಂಟಿನಲ್ಲಿ ಅವಶ್ಯಕವಾದ ವಿಷಯಗಳನ್ನು ಚರ್ಚಿಸಲಾಗುವುದೆಂದೂ, ವಾದಕ್ಕೊಳಪಡುವ ಅಂಶವನ್ನು ನೂತನವಾಗಿ ರಚಿತವಾಗುವ ಪಾರ್ಲಿಮೆಂಟಿನ ಮುಂದೆ ಬಿಡಲಾಗುವುದು.

ಕಾರ್ಮಿಕರ ಹಿತಸಾಧನೆಗೆ ಭಾರತ ಸರ್ಕಾರವು ಕೈಕೊಂಡ ಕಾರ್ಯವನ್ನು ವಿವರಿಸಿ ಬಲಾತ್ಕಾರ ದುಡಿಮೆ ವಿರುದ್ಧ ಹಲವು ಉಗ್ರಶಾಸನ ರಚಿಸಲಾಗಿದೆಯೆಂದರು.

ರಾಷ್ಟ್ರಾಧ್ಯಕ್ಷರು ಕಾಶ್ಮೀರ ಸಮಸ್ಯೆಯು ಆದಷ್ಟು ಜಾಗ್ರತೆ ಬಗೆಹರಿದು ಕಾಶ್ಮೀರದ ಜನರ ಪರವಾಗಿ ಈ ಸಮಸ್ಯೆ ತೀರ್ಮಾನವಾಗಲೆಂದು ಆಶಿಸಿದರು. ಭಾರತವು ಶೀಘ್ರದಲ್ಲಿಯೇ ಜಪಾನ್ ನೊಡನೆ ಶಾಂತಿ ಸಂಧಾನವನ್ನು ಮಾಡಿಕೊಳ್ಳುವುದೆಂದರು.

ಭಾರತವು ವಿಶ್ವಶಾಂತಿಗಾಗಿ ಕೈಕೊಂಡ ಕಾರ್ಯಕ್ರಮವು ಯಶಸ್ವಿಯಾಗುತ್ತಿದೆಯೆಂದೂ ಆದರೆ ವಿಶ್ವದ ಇತರ ರಾಷ್ಟ್ರಗಳಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗುತ್ತಿರುವುದು ತಮ್ಮ ಮನಸ್ಸನ್ನು ನೋಯಿಸಿದೆಯೆಂದು ತಿಳಿಸಿದರು.

ನೇಪಾಳಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿ ಅದು ಎದುರಿಸಬೇಕಾದ ಸಮಸ್ಯೆಗಳನ್ನು ರಾಷ್ಟ್ರಾಧ್ಯಕ್ಷರು ಪ್ರಸ್ತಾಪಿಸಿ ನೇಪಾಳವು ಶೀಘ್ರದಲ್ಲಿಯೇ ಆ ಸಮಸ್ಯೆಗಳನ್ನು ಎದುರಿಸಿ ಬಗೆಹರಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲವೆಂದು ರಾಷ್ಟ್ರಾಧ್ಯಕ್ಷರು ತಿಳಿಸಿದರು.

ರಾಷ್ಟ್ರಾಧ್ಯಕ್ಷರ ಮೆರವಣಿಗೆ

ಪಾರ್ಲಿಮೆಂಟಿನ ಮುಕ್ತಾಯ ಅಧಿವೇಶನದ ಭಾಷಣ ಮಾಡಲು ರಾಷ್ಟ್ರಾಧ್ಯಕ್ಷರು ನಿನ್ನೆ ಮೆರವಣಿಗೆಯಲ್ಲಿ ಪಾರ್ಲಿಮೆಂಟ್ ಭವನಕ್ಕೆ ದಯಮಾಡಿಸಿದರು.

ಬಾಲರತ್ನಂ ಮೊಕದ್ದಮೆ ಸೆಷನ್ಸಿಗೆ

ಬೆಂಗಳೂರು ಜ ೫

ಅಡ್ವೋಕೇಟ್ ಶ್ರೀ ಬಾಲರತ್ನಂ, ಮಾಗಡಿ ಹನುಮಂತ ಮತ್ತು ಚಾರಿ ಇವರುಗಳು ದೊಡ್ಡಬಳ್ಳಾಪುರದ ವಕೀಲರಾದ ಶ್ರೀ ವಿ. ರಾಮಕೃಷ್ಣಯ್ಯನವರನ್ನು ಕೊಲೆಮಾಡಲು ಪ್ರಯತ್ನಿಸಿದರೆಂಬ ಆಪಾದನೆಯಲ್ಲಿ ಪೂರ್ವಭಾವಿ ವಿಚಾರಣೆಯು ಮುಗಿದಿದ್ದು ಸಾಕಾದಷ್ಟು ದೊರಕಿರುವುದರಿಂದ ಅವರುಗಳ ವಿಚಾರಣೆಯು ಸೆಷನ್ಸ್ ಕೋರ್ಟಿನಲ್ಲೇ ನಡೆಯತಕ್ಕದ್ದೆಂದು ಇಂದಿನ ನಗರ ನ್ಯಾಯಾಧೀಶರು ತೀರ್ಪಿತ್ತು ತಿಳಿಸಿದರು.

ಉತ್ತರ ಪ್ರದೇಶದ ಚುನಾವಣೆಗಳು

ಉತ್ತರ ಪ್ರದೇಶದ ಚುನಾವಣೆಯ ೭೭ ಫಲಿತಾಂಶಗಳು ನಿನ್ನೆ ಹೊರಬಿದ್ದು ಅದರಲ್ಲಿ ೬೭ ಕಾಂಗ್ರೆಸ್ಸಿಗೂ ೪ ಸ್ಥಾನ ಸೋಷಲಿಸ್ಟರಿಗೂ, ಸ್ವತಂತ್ರರು ೩, ಕೆ-ಎಂ-ಪಿ-ಗೆ ಒಂದು ಸ್ಥಾನವೂ ದೊರಕಿದೆ.

ಪಂಜಾಬಿನಲ್ಲಿ ನಿನ್ನೆ ೪ ಚುನಾವಣಾ ಫಲಿತಾಂಶ ಹೊರಬಿದ್ದು ೩ ಕಾಂಗ್ರೆಸ್ಸಿಗೂ ಒಂದು ಕಮ್ಯೂನಿಸ್ಟರಿಗೂ ದೊರಕಿದೆ. ಶ್ರೀ ಗುರುದಯಾಳ್‌ಸಿಂಗ್‌ರವರು ಸಚಿವ ಶ್ರೀ ಜ್ಞಾನಿಕರ್ತಾರ್‌ಸಿಂಗ್‌ರವರನ್ನು ಸೋಲಿಸಿದರು.

ಬಂಗಾಳದಿಂದ ಪಾರ್ಲಿಮೆಂಟಿಗೆ ಸ್ಪರ್ಧಿಸಿದ್ದ ಕಾಂಗ್ರೆಸ್ ಉಮೇದುವಾರ ಶ್ರೀ ಪ್ರಭುದಯಾಳ್ ಹಿಮತ್‌ಸಿಂಗ್‌ಕಾರವರನ್ನು ಡಾ॥ ಮೇಘನಾಥ ಸಹಾರವರು ಸೋಲಿಸಿದರು.

ಸಂಪಾದಕರ ಸಭೆ

ಅಖಿಲ ಭಾರತ ವೃತ್ತಪತ್ರಿಕಾ ಸಂಪಾದಕರ ಸಭೆಯು ಈ ಮಾಹೆ ೨೮ನೇ ತಾ॥ ಸಮಾವೇಶಗೊಳ್ಳುವುದು.

ಪಾರ್ಲಿಮೆಂಟಿನ ಅಧ್ಯಕ್ಷ ಶ್ರೀ ಜಿ-ವಿ- ಮಾವಲಂಕರ್‌ರವರು ರಾಷ್ಟ್ರಾಧ್ಯಕ್ಷರನ್ನು ಸ್ವಾಗತಿಸಿದರು.

ನಿನ್ನೆ ಪಾರ್ಲಿಮೆಂಟಿನಲ್ಲಿ ರಾಷ್ಟ್ರಾಧ್ಯಕ್ಷರ ಭಾಷಣ ಕೇಳಲು ಟರ್ಕಿಯಿಂದ ಆಗಮಿಸಿರುವ ಪತ್ರಿಕಾ ಸೌಹಾರ್ದ ನಿಯೋಗ ಮತ್ತು ಅನೇಕ ರಾಯಭಾರ ವರ್ಗದವರು ಬಂದಿದ್ದರು.

ಹೆಜ್ಜಿಗೆ ಲಿಂಗಣ್ಣನವರಿಗೆ ವಿಜಯ

ನಂಜನಗೂಡು ಕ್ಷೇತ್ರದಿಂದ ಜನರಲ್ ಸ್ಥಾನಕ್ಕೆ ಶಾಸನಸಭೆಗೆ ಸ್ಪರ್ಧಿಸಿದ್ದ ಶ್ರೀಗಳಾದ ಡಿ. ಎಂ. ಸಿದ್ದಯ್ಯ [ಕಾಂ] ಬಿ. ಎಸ್. ಎಸ್. ಆರಾಧ್ಯ, ಸಗರ್ಲೆ ಲಿಂಗಪ್ಪ ಮತ್ತು ಹೆಜ್ಜಿಗೆ ಲಿಂಗಣ್ಣ ಇವರಲ್ಲಿ ಶ್ರೀ ಹೆಜ್ಜಿಗೆ ಲಿಂಗಣ್ಣನವರು (ಸ್ವ) ತಮ್ಮ ಪ್ರತಿಸ್ಪರ್ಧಿಗಳೆಲ್ಲರಿಗಿಂತಲೂ ಹೆಚ್ಚಿನ ಓಟು ಗಳಿಸಿ ಜಯಶೀಲರಾಗಿದ್ದಾರೆ.

ಜನರಲ್

ಶ್ರೀಗಳಾದ—

ಹೆಜ್ಜಿಗೆ ಲಿಂಗಣ್ಣ	11122	ಸ್ವ
ಬಿ.ಎಸ್.ಎಸ್. ಆರಾಧ್ಯ	10778	ಸ್ವ
ಡಿ.ಎಂ. ಸಿದ್ದಯ್ಯ	8465	ಕಾಂ
ಎಸ್.ಎಸ್. ಲಿಂಗಪ್ಪ	5113	ಕೆ.ಎಂ.ಪಿ

ಶ್ರೀ ನೇರಿಳೆ ಮಾದಯ್ಯನವರ ಜಯ

ಇದೇ ಕ್ಷೇತ್ರದಿಂದ ರಿಸರ್ವ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್ ಉಮೇದುವಾರರಾದ ಶ್ರೀ ನೇರಳೆ ಮಾದಯ್ಯನವರು ಜಯಶೀಲರಾಗಿದ್ದಾರೆ.

ರಿಸರ್ವ್

ಶ್ರೀಗಳಾದ

ಎಂ. ಮಾದಯ್ಯ	6929	ಕಾಂ
ಎಸ್. ಸಿ- ಬಿಳಿಗಿರಿ ರಂಗಯ್ಯ	6227	ಸ್ವ
ಬಿ. ಬಸವಯ್ಯ	4322	ಕೆ.ಎಂ.ಪಿ

ಚುನಾವಣಾ ಫಲಿತಾಂಶಗಳು

ನಿನ್ನೆ ದಿನ ಭಾರತದ ವಿವಿಧ ರಾಜ್ಯ ಶಾಸನ ಸಭೆಯ ೩೭ ಸ್ಥಾನಗಳ ಫಲಿತಾಂಶ ಹೊರಬಿದ್ದು ಉತ್ತರಪ್ರದೇಶದ ಸಚಿವ ಶ್ರೀ ಠಾಕೂರ್‌ಹರ್ ಗೋವಿಂದಸಿಂಗ್ ಪೆಷ್ಟವಿನ ಸಚಿವ ಶ್ರೀ ಸಂಪೂರ್ಣಾನಂದ್‌ರವರು ಚುನಾಯಿತರಾಗಿರುವರು.

ಕಾಂಗ್ರೆಸ್ ಪಕ್ಷದ ಸಭೆ

ನಿನ್ನೆ ನವದೆಹಲಿಯಲ್ಲಿ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದವರ ಸಭೆಯು ನಡೆದು ಪಕ್ಷದ ನಾಯಕರೂ, ಕಾಂಗ್ರೆಸ್ ಅಧ್ಯಕ್ಷರೂ ಆದ ಪ್ರಧಾನಿ ಪಂಡಿತ ಜವಹರಲಾಲ್ ನೆಹ್ರೂರವರು ಸಭೆಯಲ್ಲಿ ದೇಶದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರೆಂದು ಹೇಳಲಾಗಿದೆ.

ಕಲ್ಕತ್ತಾಕ್ಕೆ ಅಮೇರಿಕದ ಔಷಧಗಳು

ವಾಷಿಂಗ್ಟನ್ ಜ ೩೦

ಅಮೇರಿಕದ ಖಾಸಗಿ ಸೇವಾ ಸಂಸ್ಥೆಯವರು ಕಲ್ಕತ್ತಾಕ್ಕೆ ಕಳುಹಿಸಿರುವ ಔಷಧ ಸಾಮಗ್ರಿಗಳು ಫೆಬ್ರವರಿ ಮೊದಲನೆಯ ವಾರದ ಹೊತ್ತಿಗೆ ಕಲ್ಕತ್ತಾಕ್ಕೆ ಬರುವುವು.

ಔಷಧ ಸಾಮಗ್ರಿಗಳ ಒಟ್ಟು ೧೬೦೨ ಪೌಂಡುಗಳಿದ್ದು, ಸುಮಾರು ೮೦೦೦ ರೂಪಾಯಿ ಬೆಲೆ ಬಾಳುವುದಾಗಿದೆ. ಈ ಸಾಮಗ್ರಿಗಳನ್ನು ತುಂಬಿಕೊಂಡ ಹಡಗು ಜನವರಿ ೧೦ನೇ ತಾರೀಖು ನ್ಯೂಯಾರ್ಕ್ ನಗರವನ್ನು ಬಿಟ್ಟಿದೆ.

೧೯೫೧ನೇ ಆಹಾರ ಕಾನೂನಿನ ಪ್ರಕಾರ ಅಮೇರಿಕಾ ಸರ್ಕಾರವೇ ಈ ಸಾಮಗ್ರಿಗಳನ್ನು ಕಳುಹಿಸಿ ಕೊಡುತ್ತದೆ.

ಈ ಆಹಾರ ಕಾನೂನಿನ ಪ್ರಕಾರ ಅಮೇರಿಕವು ೧೯೦ ಮಿಲಿಯನ್ ಡಾಲರುಗಳನ್ನು ಅಮೇರಿಕದ ೨ ಮಿಲಿಯನ್ ಟನ್ ಗೋಧಿಯನ್ನು ಕೊಳ್ಳಲು ಸಾಲವಾಗಿ ಕೊಟ್ಟಿದೆ. ಈ ಕಾನೂನಿನ ಪ್ರಕಾರ, ಅಮೇರಿಕದ ಖಾಸಗೀ ಸಂಸ್ಥೆಯವರು ಭಾರತಕ್ಕೆ ಆಹಾರ ಸಾಮಗ್ರಿಗಳು, ಔಷಧ ಸಹಾಯ ಮತ್ತು ವ್ಯವಸಾಯದ ಸಾಮಾನುಗಳನ್ನು ಸಹಾಯವಾಗಿ ಕಳುಹಿಸಿ ಕೊಟ್ಟದಾದರೆ, ಅಮೇರಿಕ ಸರ್ಕಾರವು ಉಚಿತವಾಗಿ ರವಾನಿಸಬೇಕೆಂದು ನಮೂದಾಗಿ ಕರಾರಾಗಿದೆ.

ಹಾರುವ ಹಡಗುಗಳು

ಅಮೇರಿಕದ ನೌಕಾ ಇಲಾಖೆಯವರು ಎರಡು ಹಾರುವ ಹಡಗುಗಳನ್ನು ತಯಾರು ಮಾಡಲಿದ್ದಾರೆ. ಈ ಕ್ಷಿಪಣಿ ಹಡಗುಗಳು ನೌಕಾ ಪಡೆಯ ಬೆಂಕಿ ಆರಿಸುವ ಶಕ್ತಿಯುಳ್ಳ ಹಡಗುಗಳ ಗುಂಪಿಗೆ ಸೇರುವುದು.

೧೩,೬೦೦ ಟನ್ ತೂಕವುಳ್ಳ 'ಬೋಸ್ಟನ್' ಮತ್ತು 'ಕಾನಬೇರಾ' ಎಂಬ ಹಡಗುಗಳನ್ನು ಕ್ಷಿಪಣಿ ಹಡಗುಗಳನ್ನಾಗಿ ಮಾರ್ಪಾಡು ಮಾಡಲಾಗುವುದು.

ಈ ಹಡಗುಗಳನ್ನು ಕಟ್ಟಲು ೩೦, ಮಿಲಿಯನ್ ಡಾಲರುಗಳನ್ನು ಖರ್ಚು ಮಾಡಲಾಗುವುದು. ಈ ಎರಡು ಹಡಗುಗಳು ಎರಡನೆಯ ಮಹಾಯುದ್ಧದಲ್ಲಿ ಭಾಗ ತೆಗೆದುಕೊಂಡಿದ್ದು ಮೊನ್ನೆ ಮೊನ್ನೆಯವರೆಗೆ ಗಡಂಗುಗಳಲ್ಲಿದ್ದವು.

ತುಮಕೂರಿನಲ್ಲಿ ಅಂಗಡಿ ನೌಕರರ ಶಾಸನ

ಫೆಬ್ರವರಿ ೧ನೇ ತಾ|| ನಿಂದ ತುಮಕೂರಿನಲ್ಲಿ ಅಂಗಡಿ ನೌಕರರ ಶಾಸನವು ಜಾರಿಗೆ ಬಂದಿದೆ.

ರಾಜೀನಾಮೆಕೊಡಲು ಸಿದ್ಧ

ಕುಮಾರಸ್ವಾಮಿ ರಾಜಾರವರ ಹೇಳಿಕೆ

'ಮದರಾಸು ಮಂತ್ರಿಮಂಡಲದಲ್ಲಿರುವ ಅನೇಕ ಮಂತ್ರಿಗಳು ಚುನಾವಣೆಗಳಲ್ಲಿ ಸೋತಿರುವುದರಿಂದ ಮಂತ್ರಿಮಂಡಲವು ರಾಜೀನಾಮೆಕೊಡಲು ಸಿದ್ಧವಾಗಿದೆ. ಈ ವಿಚಾರವನ್ನು ನಾನು ದೆಹಲಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಸಮಿತಿಯ ಸದಸ್ಯರಿಗೆ ಈಗಾಗಲೇ ತಿಳಿಸಿದ್ದೇನೆ.

ತೀರ್ಮಾನವು ಕಾಂಗ್ರೆಸ್ ವರ್ಕಿಂಗ್ ಸಮಿತಿಯ ಕೈಯಲ್ಲಿದೆ. ಸಮಿತಿಯವರು ಹೇಳಿದಂತೆ ನಾವು ನಡೆದುಕೊಳ್ಳಲು ಸಿದ್ಧರಾಗಿದ್ದೇವೆ' ಎಂಬುದಾಗಿ ಮದರಾಸಿನ ಮುಖ್ಯ ಮಂತ್ರಿಗಳಾದ ಶ್ರೀ ಕುಮಾರಸ್ವಾಮಿ ರಾಜಾರವರು ಮದ್ರಾಸಿನ ವಿಮಾನನಿಲ್ದಾಣದಲ್ಲಿ ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿರುವರು.

ಶ್ರೀ ಹೊನ್ನಾವರ್ ಅಧಿಕಾರ ಸ್ವೀಕಾರ

ಬೆಂಗಳೂರು ಫೆ ೫

ಎಲ್. ಎಸ್. ರಾಜು ಮೊಕದ್ದಮೆಯ ವಿಚಾರಣೆ ನಡೆಸುವ ಹಾಗೂ ನ್ಯಾಯಾಂಗ ಇಲಾಖೆಯ ವಿಶೇಷಾಧಿಕಾರಿಗಳಾಗಿ ನೇಮಕವಾಗಿರುವ ಶ್ರೀ ಎಂ. ಬಿ. ಹೊನ್ನಾವರ್ ನಿನ್ನೆ ಅಧಿಕಾರ ಸ್ವೀಕಾರ ಮಾಡಿದರು. ಮೊಕದ್ದಮೆ ೧೧ನೇ ತಾ|| ನಿಂದ ಆರಂಭವಾಗುವುದು.

ಕಾಮರ್ಸ್ ಕಾಲೇಜಿನ ಸ್ಥಳ ಬದಲಾವಣೆ

ಬೆಂಗಳೂರು ಫೆ ೪

ಬೆಂಗಳೂರಿನ ಕಾಮರ್ಸ್ ಕಾಲೇಜನ್ನು ಬೆಂಗಳೂರಿನ 'ಇಂಟರ್‌ಮೀಡಿಯೆಟ್' ಕಾಲೇಜಿನ ಭವನದಿಂದ ತಾ|| ೪-೨-೫೨ ರಿಂದ ಹೈಗ್ರೌಂಡ್ಸ್‌ನಲ್ಲಿರುವ 'ಪೂರ್ಣಪ್ರಸಾದಕ್ಕೆ' ಬದಲಾಯಿಸಲಾಗಿದೆ.

ಅಂತರ್‍ರಾಷ್ಟ್ರೀಯ ವಿದ್ಯಾರ್ಥಿ ಗೋಷ್ಠಿ

ಅಂತರ್‍ರಾಷ್ಟ್ರೀಯ ವಿದ್ಯಾರ್ಥಿ ವ್ಯಾಸಂಗ ಗೋಷ್ಠಿಯ ಐದನೆಯ ಅಧಿವೇಶನವು ಭಾರತದಲ್ಲಿ ಮೇ ೨೮ ರಿಂದ ಜುಲೈ ೨ ರವರೆಗೆ ನಡೆಯುವುದು.

ಈ ಗೋಷ್ಠಿಯಲ್ಲಿ ೪೦ ಮಂದಿ ಆಗ್ನೇಯ ಏಷ್ಯ, ಮತ್ತು ಇತರ ದೇಶಗಳಿಂದ ೪೦ ಮಂದಿ ವಿದ್ಯಾರ್ಥಿಗಳು ಭಾಗ ವಹಿಸಲಿರುವರು.

ನೂತನ ಶಾಸನ ಸಭಾಧಿವೇಶನ

ಮೈಸೂರಿನ ನೂತನ ಲೆಜಿಸ್ಲೆಟಿವ್ ಅಸೆಂಬ್ಲಿಯ ಪ್ರಥಮಾಧಿವೇಶನವು ಮಾರ್ಚ್ ತಿಂಗಳ ಕೊನೆಯ ಭಾಗದಲ್ಲಿ ನಡೆಯುವ ನಿರೀಕ್ಷೆಯಿದೆ.

ಶ್ರೀ ಸಿದ್ದವೀರಪ್ಪನವರಿಗೆ ವಿಜಯ

ಹರಿಹರಕ್ಷೇತ್ರದಿಂದ ಮೈಸೂರಿನ ಶಾಸನ ಸಭೆಗೆ ಕಾಂಗ್ರೆಸ್ ಉಮೇದುವಾರರಾದ ಶ್ರೀ ಎಚ್. ಸಿದ್ದವೀರಪ್ಪನವರು ಚುನಾಯಿತರಾಗಿದ್ದಾರೆ.

ವಿಶ್ವಬ್ಯಾಂಕ್ ಅಧ್ಯಕ್ಷರು

ವಿಶ್ವಬ್ಯಾಂಕಿನ ಅಧ್ಯಕ್ಷರಾದ ಯುಜೆನ್‌ಬ್ಲಾಕ್‌ರವರು ಕರಾಚಿಗೆ ಆಗಮಿಸಿರುವರು. ಇವರು ಇಲ್ಲಿರುವ ಒಂದು ವಾರದ ಕಾಲಾವಧಿಯಲ್ಲಿ ಪಾಕಿಸ್ತಾನ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸುವುದಲ್ಲದೆ ಪಾಕಿಸ್ತಾನದ ಉನ್ನತಾಧಿಕಾರಿಗಳನ್ನೂ ಭೇಟಿ ಮಾಡುವರು.

ಇವರು ಭಾನುವಾರ ದೆಹಲಿಗೆ ಆಗಮಿಸುವ ನಿರೀಕ್ಷೆ ಇದೆ.

ದೆಹಲಿಗೆ ಶ್ರೀ ರೆಡ್ಡಿಯವರು

ಬೆಂಗಳೂರು ಫೆ ೪

ಕೌನ್ಸಿಲ್‌ಗೆ ಪ್ರತಿನಿಧಿಗಳನ್ನಾರಿಸುವುದು, ಹೊಸ ಶಾಸನ ಸಭೆಯ ಸಮಾವೇಶನ ಮುಂತಾದ ವಿಷಯಗಳನ್ನು ಚರ್ಚಿಸಲು ದೆಹಲಿಗೆ ಬರುವಂತೆ ಪಂ|| ಜವಹರ್‌ಲಾಲ್ ನೆಹರೂರವರಿಂದ ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರಿಗೆ ಕರೆ ಬಂದಿದೆ. ಶ್ರೀ ರೆಡ್ಡಿಯವರು ಫೆ|| ೬ ರಂದು ದೆಹಲಿಗೆ ತೆರಳಿ ೩-೪ ದಿನಗಳ ನಂತರ ಬೆಂಗಳೂರಿಗೆ ಹಿಂತಿರುಗುವರು.

ಮದರಾಸಿನ ಬಿಕ್ಕಟ್ಟು

ಮದರಾಸಿನಲ್ಲಿ ನಡೆದ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಬಹುಮತ ಬರದೆ ಇರುವುದರಿಂದ, ಹೆಚ್ಚು ಸ್ಥಾನಗಳಿಸುವ ಪಕ್ಷವಾದಾಗ್ಯೂ ಸರ್ಕಾರವನ್ನು ರಚಿಸುವ ಸ್ಥಿತಿಯಲ್ಲಿಲ್ಲ. ಆದರೆ ಸ್ವತಂತ್ರವಾಗಿ ಚುನಾಯಿತರಾಗಿರುವವರು ೬೨ ಜನರುವುದರಿಂದ ಅವರಲ್ಲಿ ಯಾರಾದರೂ ಕಾಂಗ್ರೆಸ್ ಪಕ್ಷಕ್ಕೆ ಸೇರಲು ಇಷ್ಟಪಟ್ಟು ಕಾಂಗ್ರೆಸ್ ಪಕ್ಷಕ್ಕೆ ಬಹುಮತ ದೊರೆಯುವ ಸಂಭವವಿದ್ದರೆ ಆಗ ಕಾಂಗ್ರೆಸ್ ಪಕ್ಷವು ಸರ್ಕಾರವನ್ನು ರಚಿಸುವುದು, ಇಲ್ಲವಾದರೆ ಆ ಗೊಡವೆಗೆ ಹೋಗದೆ ವಿರೋಧಪಕ್ಷಗಳಿಗೇ ಸ್ಥಾನಬಿಟ್ಟುಬಿಡುವುದು. ಸ್ಥಿರವಾದ ಸರ್ಕಾರ ರಚಿಸಲು ಸಾಧ್ಯವಾಗದಿದ್ದಲ್ಲಿ ಗವರ್ನರ್ ರಾಜ್ಯವನ್ನು ಘೋಷಿಸಿ ಪುನಃ ಚುನಾವಣೆಗಳು ನಡೆಸಬೇಕಾಗುತ್ತದೆಯೆಂಬ ಅಭಿಪ್ರಾಯವು ಹೊರಬಿದ್ದಿದೆ. ಸದ್ಯದಲ್ಲೇ ನಿರ್ದಿಷ್ಟವಾದ ನೀತಿಯು ಹೊರಬೀಳುವುದು.

ಕೇಂದ್ರದೊಡನೆ ಘರ್ಷಿಸಲು ಇಚ್ಛಿಸುವುದಿಲ್ಲ

'ಕೆಲವು ಪ್ರಾಂತ್ಯಗಳಲ್ಲಿ ಕಮ್ಯೂನಿಸ್ಟರು ಮಂತ್ರಿಮಂಡಲಗಳನ್ನು ರಚಿಸಲು ಯಶಸ್ವಿಯಾದರೆ, ಕೇಂದ್ರ ಸರ್ಕಾರದೊಡನೆ ಘರ್ಷಿಸಿ, ಬಿಕ್ಕಟ್ಟು ಉಂಟುಮಾಡಲಿಚ್ಛಿಸುವುದಿಲ್ಲ' ಎಂದು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಅಜಯಘೋಷ್ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿರುವರು.

ಹರಿಜನ ಪತ್ರಿಕೆ ನಿಲ್ಲಿಸಕೂಡದು

ನವಜೀವನ ಸಂಸ್ಥೆಯವರು, ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ನಡೆಸುತ್ತಲಿದ್ದ ಹರಿಜನ ಮತ್ತು ಇತರ ವಾರಪತ್ರಿಕೆಗಳನ್ನು ನಿಲ್ಲಿಸಲು ನಿರ್ಧರಿಸಿರುವರು. ಗುಜರಾತ್ ಲೋಕಪಕ್ಷದ ಅಧ್ಯಕ್ಷ ಶ್ರೀ ದಯಾಲಾಲ್ ಪಟೇಲ್‌ರವರು ಈ ಪತ್ರಿಕೆಗಳನ್ನು ನಿಲ್ಲಿಸಕೂಡದೆಂದೂ ಅವುಗಳಿಂದ ಆಗುತ್ತಲಿರುವ ನಷ್ಟವನ್ನೆಲ್ಲಾ ತಾವು ವಹಿಸಿಕೊಳ್ಳುವುದಾಗಿ ತಿಳಿಸಿರುವುದಾಗಿ ಹೇಳಲಾಗಿದೆ.

ಗುಜರಾತಿನ ಪತ್ರಿಕೆಯಾದ 'ಪ್ರಭಾತ್' ಸಹ ಇದೇ ರೀತಿ ದ್ರವ್ಯ ಸಹಾಯಕೊಡಲು ಮುಂದೆ ಬಂದಿದೆ.

ವೆಲ್‌ಕಮ್ ಕಾಫೀ ಕ್ಲಬ್
(ಪ್ರಭಾ ಟಾಕೀಸ್ ಎದುರು)
೨೩-೧-೫೨ ರಿಂದ ಪ್ರಾರಂಭ
ಸುಪ್ರಸಿದ್ಧರಾದ ಶ್ರೀ ಮಣಿ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ,
ಅಪ್ಪಟ ತುಪ್ಪದ 'ಕೇಸರೀ ಭಾತ್'
ಉತ್ತಮವಾದ
'ಸಾದಾ ಸೆಟ್ ದೋಸೆ'
ಒಂದನೇ ನಂ. ಕಾಫೀ ಮತ್ತು ಟೀ ಸೇವಿಸಲು ದಯಮಾಡಿಸಿ.

ರಣಜಿತ್
೧-೨-೫೨ ರಿಂದ ಅಮೋಘ ೨ನೇ ವಾರ
ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ
—:: ಆ ವಾ ರ ::—
(ಹಿಂದಿ)

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು—ಹಿ. ಕಾ. ಸುಬ್ಬರಾವ್
ಮೋಹನ್ ಮುದ್ರಣಾಲಯ ಮೈಸೂರು

ವುಡ್‌ಲ್ಯಾಂಡ್ಸ್ * 1-2-52 ರಿಂದ ಅಮೋಘಪ್ರಾರಂಭ ಪ್ರತಿದಿನ ಮೂರು ಆಟಗಳು
* ನಗೀನಾ *
ಪಾತ್ರ:— ನಾಸೀರ್‌ಖಾನ್, ನೂತನ್, ಗೋಪ್, ಮೋಹನ.
ಇದರ ಜೊತೆಗೆ ಲಿಯಾಖತ್ ಅಲಿಖಾನ್‌ರವರ ನಿಧನ ಪ್ರದರ್ಶನವನ್ನು ತೋರಿಸಲ್ಪಡುತ್ತೆ.

ಫೋನ್ ೫೭೬೪ (ಲಿಂ) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೬—೨—೧೯೫೨ನೇ ಗುರುವಾರ [ಸಂಚಿಕೆ ೧೩೮

ಬ್ರಿಟನ್ನಿನ ದೊರೆ ಆರನೆ ಜಾರ್ಜ್ ನಿಧನ

ರಾಜಕುಮಾರಿ ಎಲಿಜಬೆತ್ ಬ್ರಿಟನ್ನಿನ ರಾಣಿಯಾಗುವಳು

ಬ್ರಿಟನ್ನಿನ ದೊರೆ ಆರನೇ ಜಾರ್ಜ್‌ರವರು ನಿನ್ನೆ ಬೆಳಗ್ಗೆ ನಾರ್‌ಫೋಕ್‌ನಲ್ಲಿರುವ ಸ್ಯಾಂಡ್ರಿಂಗ್‌ಹ್ಯಾಮ್ ಅರಮನೆಯಲ್ಲಿ ರಾತ್ರಿ ಮಲಗಿದವರು ಹಾಗೆಯೇ ನಿಧನ ಹೊಂದಿದರು. ಇವರ ಅಂತ್ಯ ಕಾಲದಲ್ಲಿ ರಾಣಿಯವರೂ ಅವರ ಕುಮಾರ್ತಿಯವರು ದೊರೆ ಜಾರ್ಜ್‌ರವರ ಬಳಿ ಇದ್ದರು.

ಕಳೆದ ಸೆಪ್ಟಂಬರ್‌ನಲ್ಲಿ ಆರನೇ ದೊರೆ ಜಾರ್ಜ್‌ರವರಿಗೆ ಶಸ್ತ್ರಚಿಕಿತ್ಸೆ ನಡೆದು ವಿಶ್ರಾಂತಿಗಾಗಿ ಅವರು ನಾರ್‌ಫೋಕ್‌ಗೆ ತೆರಳಿದ್ದರು.

ಜಾರ್ಜ್ ದೊರೆಗಳಿಗೆ ೫೬ ವರ್ಷ ವಯಸ್ಸು. ೧೯೩೬ ರಲ್ಲಿ ಇವರು ಇವರ ಅಣ್ಣ ರಾಜ್ಯತ್ಯಾಗ ಮಾಡಿದ ನಂತರ ಇಂಗ್ಲೆಂಡಿನ ದೊರೆ ಮತ್ತು ಭಾರತದ ಚಕ್ರವರ್ತಿಯಾಗಿ ೧೯೪೭ ರವರೆಗೆ ಆಡಳಿತ ನಡೆಸಿ ಭಾರತಕ್ಕೆ ಸ್ವರಾಜ್ಯ ಲಭಿಸಿದ ನಂತರ ಇವರು ಕೇವಲ ಬ್ರಿಟನ್ನಿನ ದೊರೆಗಳಾದರು.

ಬ್ರಿಟನ್ನಿನ ದೊರೆಯವರು ನಿಧನ ಹೊಂದಿದ ವಾರ್ತೆಯನ್ನು ಕೆನ್ಯಾದಲ್ಲಿರುವ ಅವರ ಪ್ರಥಮ ಪುತ್ರಿ ಮತ್ತು ಮುಂದಿನ ಇಂಗ್ಲೆಂಡಿನ ರಾಣಿ ರಾಜಕುಮಾರಿ ಎಲಿಜಬೆತ್‌ರವರಿಗೆ ತಿಳಿಸಲಾಯಿತು. ಅವರು ಲಂಡನ್ನಿಗೆ ತಮ್ಮ ಪತಿ ಡ್ಯೂಕ್ ಆಫ್ ಎಡಿನ್‌ಬರೋರವರೊಂದಿಗೆ ಹಿಂತಿರುಗಿದರು.

ಬ್ರಿಟನ್ನಿನ ಮಂತ್ರಿಮಂಡಲದ ಸಭೆಯು ನಡೆದು ಮುಂದಿನ ದೊರೆಯ ನೇಮಕದ ಬಗ್ಗೆ ಕಾಮನ್ಸ್ ಸಭೆಯು ಮುಂದೆ ಅಧಿಕೃತ ಘೋಷಣೆ ಹೊರಡಿಸಲಾಗುವುದು.

ಪಾರ್ಲಿಮೆಂಟಿನ ಸಂತಾಪಸೂಚನೆ

ಪಾರ್ಲಿಮೆಂಟಿನ ಭಾರತ ಅಧಿವೇಶನ ಮುಗಿಯುವುದಕ್ಕೆ ಕೇವಲ ಸ್ವಲ್ಪ ನಿಮಿಷಗಳ ಪೂರ್ವ ಇಂಗ್ಲೆಂಡಿನ ದೊರೆಗಳ ನಿಧನಹೊಂದಿದ ವಾರ್ತೆಯು ಪ್ರಧಾನಿ ನೆಹರೂರವರಿಗೆ ತಲುಪಿತು.

ಪ್ರಧಾನಿ ಪಂ|| ನೆಹರೂರವರು ಬಹಳ ದುಃಖದಿಂದ ಶೋಕವಾರ್ತೆಯನ್ನು ಸಭೆಗೆ ತಿಳಿಸಿ ಬ್ರಿಟನ್ನಿನ ದೊರೆಗಳ ನಿಧನದಿಂದ ಅವರಪತ್ನಿ ಎಲಿಜಬೆತ್‌ರವರಿಗೂ ಮತ್ತು ಮಕ್ಕಳಿಗೂ ಅಪಾರ ದುಃಖ ಒದಗಿದೆಯೆಂದೂ ಬ್ರಿಟನ್ನಿನ ಪ್ರಜೆಗಳಿಗೆ ಸಹಿಸಲಾರದ ವ್ಯಸನವುಂಟಾಗಿದೆಯೆಂದು ತಿಳಿಸಿದರು.

ವಿಶ್ವದಲ್ಲಿ ರಾಜತ್ವ ಮತ್ತು ಪ್ರಜಾಪ್ರಭುತ್ವಗಳಲ್ಲಿ ಪ್ರಬಲ ವ್ಯತ್ಯಾಸವಿದ್ದು ಭಾರತವು ಪ್ರಜಾಪ್ರಭುತ್ವವನ್ನು ಒಪ್ಪಿದೆಯೆಂದರು. ಆದರೆ ಬ್ರಿಟನ್ನಿನಲ್ಲಿರುವವರು ಪ್ರಜಾಪ್ರಭುತ್ವ ಸಿದ್ಧಾಂತದಂತೆ ರಾಜ್ಯಾಂಗ ರಚಿಸಿದ್ದರೂ ಅಲ್ಲಿನ ಪ್ರಜೆಗಳು ರಾಜ್ಯದಲ್ಲಿ ವ್ಯಕ್ತಪಡಿಸಿರುವ ಭಕ್ತಿ, ನಿಷ್ಠೆಯೇ ಇಂಗ್ಲೆಂಡಿನಲ್ಲಿ ರಾಜಮನೆತನವಿದ್ದು ರಾಜತ್ವ ಉಳಿಯಲು ಕಾರಣವಾಗಿದೆಯೆಂದು ಪ್ರಧಾನಿ ನೆಹರೂರವರು ಸಭೆಯಲ್ಲಿ ತಿಳಿಸಿ ಭಾರತದ ಜನರ ಪರವಾಗಿ ರಾಣಿ ಎಲಿಜಬೆತ್‌ರವರಿಗೂ ಇಂಗ್ಲೆಂಡಿನ ಪ್ರಜೆಗಳಿಗೂ ಸಂತಾಪವನ್ನು ಪಾರ್ಲಿಮೆಂಟ್ ಅಧ್ಯಕ್ಷರು ತಿಳಿಸಬೇಕೆಂದು ಕೋರಿದರು. ನಂತರ ಪಾರ್ಲಿಮೆಂಟ್ ಅಧ್ಯಕ್ಷರು ಭಾರತದ ಪರವಾಗಿ ಸಂತಾಪ ವ್ಯಕ್ತಪಡಿಸುವ ನಿರ್ಣಯವನ್ನು ಪಾರ್ಲಿಮೆಂಟ್ ಮುಂದೆ ಮಂಡಿಸಿದರು. ಸದಸ್ಯರೆಲ್ಲರೂ ಕೊನೆಯಲ್ಲಿ ಎದ್ದುನಿಂತು ಮೌನ ವ್ಯಕ್ತಪಡಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಶೋಕ ದಿನ

ಇಂಗ್ಲೆಂಡ್ ದೊರೆ ನಿಧನ ಹೊಂದಿದ ಪ್ರಯುಕ್ತ ಇಂಡಿಯಾದ್ಯಂತ ಶೋಕ ದಿನವನ್ನು ಆಚರಿಸಬೇಕೆಂದು ಕೇಂದ್ರ ಸರ್ಕಾರ ಎಲ್ಲಾ ಪ್ರಾಂತ ಮತ್ತು ರಾಜ್ಯ ಸರ್ಕಾರಗಳಿಗೆ ಆದೇಶವನ್ನು ಕಳುಹಿಸಿದೆ.

ಭಾರತದ ಪಾರ್ಲಿಮೆಂಟ್ ಅಧಿವೇಶನವನ್ನು ಮುಂದುವರಿಸಲಾಗಿದೆ.

ಕೇಂದ್ರ ಸರ್ಕಾರವು ಈ ದಿನ ದಿನ ವಿಶೇಷ ಪ್ರಕಟಣೆ ಹೊರಡಿಸಿ ಎಷ್ಟು ದಿನ ಶೋಕ ದಿನ ಆಚರಿಸಬೇಕೆಂಬುದನ್ನು ತಿಳಿಸುವುದು.

ನಿನ್ನೆಯ ದಿನ ದೆಹಲಿಯಲ್ಲಿ ಏರ್ಪಡಿಸಿದ್ದ ವಿಶೇಷ ಸಮಾರಂಭಗಳನ್ನು ಮುಂದುವರಿಸಲಾಯಿತು.

ದೆಹಲಿಗೆ ಶ್ರೀ ಕೆ. ಸಿ. ರೆಡ್ಡಿಯವರು

ಬೆಂಗಳೂರು ಫೆ ೬

ಈ ದಿನ ಬೆಳಗ್ಗೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ದೆಹಲಿಗೆ ವಿಮಾನದಲ್ಲಿ ತೆರಳಿದರು.

ನೆಹರೂ ಪ್ರವಾಸಕ್ಕೆ ಕಾಂಗ್ರೆಸ್ಸಿನಿಂದ ೧೪೦೦೦ ರೂ. ವೆಚ್ಚವಾಗಿದೆ

ನಿನ್ನೆ ನಡೆದ ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ಚುನಾವಣಾ ಪ್ರಚಾರಕ್ಕೆ ಐ. ಎ. ಎಫ್. ಡಕೋಟಾದಲ್ಲಿ ಪ್ರಯಾಣಮಾಡಿದ ವಿಷಯ ಚರ್ಚೆಗೆ ಬಂದಾಗ ಶ್ರೀ ನೆಹರೂ ಉತ್ತರವೀಯುತ್ತಾ, ಈ ವಿಷಯವು ಕಳೆದ ಅಕ್ಟೋಬರಿನಲ್ಲಿಯೇ ಒಂದು ನಿರ್ಧಾರಕ್ಕೆ ಬರಲು ಒಂದು ಸಮಿತಿಯನ್ನು ನೇಮಿಸಲಾಗಿತ್ತು. ಅಡಿಟರ್ ಜನರಲ್‌ರವರ ಅಭಿಪ್ರಾಯವನ್ನು ಪಡೆಯಲಾಯಿತು. ಅದರಂತೆ ವಿಧಿವತ್ತಾಗಿ ಸರ್ಕಾರೀ ವಿಮಾನದಲ್ಲಿ ಪ್ರಯಾಣ ಮಾಡಲಾಯಿತು. ಈ ವಿಮಾನದಲ್ಲಿ ಸುಮಾರು ೧೮ ಸಾವಿರ ಮೈಲಿ ಪ್ರವಾಸಮಾಡಲಾಗಿದೆ. ಕಾಂಗ್ರೆಸ್ಸಿನಿಂದ ಇದಕ್ಕಾಗಿ ಸರ್ಕಾರಕ್ಕೆ ೧೪೦೦೦ ರೂ ಗಳನ್ನು ಕೊಡಲಾಗಿದೆ. ಕೆಲವು ಪ್ರಾಂತ್ಯಗಳಲ್ಲಿ ವಿಶೇಷ ರೈಲು ವ್ಯವಸ್ಥೆ ಮಾಡಲಾಗಿತ್ತು. ಅದರ ವೆಚ್ಚವನ್ನು ಸ್ಥಳೀಯ ಕಾಂಗ್ರೆಸ್ ಕೊಟ್ಟಿದೆ. ಆದ್ದರಿಂದ ತಮ್ಮ ಪ್ರವಾಸಕ್ಕೆ ಸರ್ಕಾರೀ ವೆಚ್ಚವೇನೂ ಆಗಿಲ್ಲವೆಂದು ಹೇಳಿದರು.

ವಿಸ್ಮಯ

ಭಾರತದ ಕೆಲ ಪ್ರದೇಶಗಳಲ್ಲಿ ಕಮ್ಯೂನಿಸ್ಟರು ಜಯಗಳಿಸಿರುವ ಸಂಗತಿ, ಜಗತ್ತಿನಲ್ಲಿ ಇತ್ತೀಚೆಗೆ ನಡೆದ ಅತ್ಯಾಶ್ಚರ್ಯಕರ ಘಟನೆಗಳಲ್ಲೊಂದು ಎಂಬುದಾಗಿ ಮುಂಬೈಗೆ ಬಂದಿರುವ ಓರ್ವ ಜರ್ಮನಿಯ ಕಮ್ಯೂನಿಸ್ಟ್ ಪಕ್ಷದ ಅಧ್ಯಕ್ಷರಾಗಿದ್ದ ಗ್ರಂಥಕರ್ತ ರುತ್ ಫಿಷರ್ ಹೇಳಿರುವರು.

'ಭಾರತದಲ್ಲಿ ಕಮ್ಯೂನಿಸ್ಟರಿಲ್ಲವೆಂದೇ ನಾವೆಲ್ಲಾ ಭಾವಿಸಿದ್ದೆವು. ಇಲ್ಲಿಯ ಕಮ್ಯೂನಿಸ್ಟ್ ನಾಯಕರೆಲ್ಲ ಬೆಂಬಲರಹಿತ ದುರ್ಬಲ ವ್ಯಕ್ತಿಗಳು ಎಂದು ಜಗತ್ತಿಗೆಲ್ಲ ಸಾರಲಾಗಿತ್ತು. ಆಗಿನ ಸಂದರ್ಭ ನೋಡಿ ಜಗತ್ತಿಗೆಲ್ಲ ವಿಸ್ಮಯವಾಗಿದೆ' ಎಂಬುದಾಗಿ ವಿವರಿಸಿದರು.

ಕಾಂಗ್ರೆಸ್ ಪಕ್ಷದ ಸಭೆ

ಮಧ್ಯಪ್ರದೇಶದ ನೂತನ ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ಫೆಬ್ರವರಿ ೧೫ ರಂದು ಸೇರಿ, ಪಕ್ಷದ ನಾಯಕನನ್ನು ಆರಿಸುವುದು.

ಸಂಸ್ಥಾನದಲ್ಲಿ ಸಾರ್ವತ್ರಿಕರಜಾ ಘೋಷಣೆ

ಬೆಂಗಳೂರು ಜ ೬

ಇಂಗ್ಲೆಂಡಿನ ದೊರೆ ಆರನೆಜಾರ್ಜ್‌ರವರು ನಿಧನಹೊಂದಿದುದರಿಂದ ಸಂಸ್ಥಾನದಲ್ಲಿ ನಾಳೆಯದಿನ ಸಾರ್ವತ್ರಿಕ ರಜಾವನ್ನು ಘೋಷಿಸಲಾಗಿದೆ. ಸಾರ್ವಜನಿಕ ಕಟ್ಟಡಗಳ ಮೇಲೆ ಬಾವುಟವನ್ನು ಅರ್ಧಮಟ್ಟದಲ್ಲಿ ಹಾರಿಸಬೇಕೆಂದು ತಿಳಿಸಿ ಸರ್ಕಾರದ ಆಜ್ಞೆ ಮಾಡಲಾಗಿದೆ.

ಕೂಡಲೇ ನಿವೃತ್ತಿ ಮಾಡಿ

ಮಹಾಚುನಾವಣೆಗಳಲ್ಲಿ ಪರಾಜಯ ಹೊಂದಿದ ಬಂಗಾಳದ ಕಾಂಗ್ರೆಸ್ ಮಂತ್ರಿಗಳೂ ಮುಖ್ಯಮಂತ್ರಿ, ಡಾ|| ಬಿ. ಸಿ. ರಾಯರಿಗೆ ರಾಜೀನಾಮೆಯನ್ನು ಸಲ್ಲಿಸಿರುವರೆಂದು ಅಧಿಕೃತವಾಗಿ ತಿಳಿದು ಬಂದಿದೆ.

ಶ್ರೀಗಳಾದ ಪ್ರಫುಲ್ಲಸೇನ್ (ಆಹಾರ) ನಿಹರೇಂದು ದತ್ತಮಜುಂದಾರ್ (ನ್ಯಾಯಾಂಗ), ಕಾಳಿಪಾದ ಮುಖರ್ಜಿ (ಕಾರ್ಮಿಕ), ನಿಕುಂಜ ಮೈತಿ (ಸಂಬರಾಜು) ಮತ್ತು ಭೂಪತಿ ಮಜುಂದಾರ್ (ಮರಾಮತ್) ಮುಂತಾದ ಸಚಿವರು, ತಮ್ಮನ್ನು ಆದಷ್ಟು ಬೇಗನೆ ನಿವೃತ್ತಿ ಮಾಡಬೇಕೆಂದು ಮುಖ್ಯಮಂತ್ರಿಗಳನ್ನು ಕೋರಿದ್ದಾರೆ.

ಅವರನ್ನು ನಿವೃತ್ತಿ ಮಾಡಲು ತಕ್ಕ ವ್ಯವಸ್ಥೆಗಳನ್ನು ಮಾಡುವವರೆಗೂ, ಈ ಸೋತ ಮಂತ್ರಿಗಳು ಅಧಿಕಾರದಲ್ಲಿರುವರು.

ಪಾರ್ಲಿಮೆಂಟಿಗೆ

ಭಾರತದ ಪಾರ್ಲಿಮೆಂಟಿಗೆ ಕೇಂದ್ರದ ವಿದ್ಯಾ ಸಚಿವ ಮೌಲಾನಾಆಜಾದ್, ವಿಜ್ಞಾನ ಮತ್ತು ಸಂಶೋಧನೆ ಇಲಾಖೆಗಳ ಸಚಿವ ಶ್ರೀ ಪ್ರಕಾಶ್ ಮತ್ತು ಶ್ರೀಮತಿ ವಿಜಯಲಕ್ಷ್ಮಿಯವರು ಚುನಾಯಿತರಾಗಿರುವರು.

ಏಪ್ರಿಲ್ ೭ ವಿಶ್ವಆರೋಗ್ಯ ದಿನಾಚರಣೆ

ಏಪ್ರಿಲ್ ೭ನೇ ತಾ|| ಭಾರತವು ವಿಶ್ವ ಆರೋಗ್ಯ ದಿನಾಚರಣೆಯನ್ನು ನೆರವೇರಿಸುವುದು. ೧೯೪೮ರಲ್ಲಿ ಇದೇ ತಾರೀಖಿನಂದು ವಿಶ್ವ ಆರೋಗ್ಯ ಸಂಸ್ಥೆಯ ರಾಜ್ಯಾಂಗವು ಅಸ್ತಿತ್ವಕ್ಕೆ ಬಂದಿತು.

ಮದ್ರಾಸ್ ಸಚಿವರ ರಾಜೀನಾಮೆ

ಮದರಾಸ್ ಮಂತ್ರಿಮಂಡಲವು ಕೂಡಲೇ ರಾಜೀನಾಮೆಕೊಡಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಆದೇಶ ಬಂದಿದೆ. ಅದರಂತೆ ಪ್ರಧಾನಿ ಶ್ರೀ ಕುಮಾರಸ್ವಾಮಿರಾಜಾರವರು ತಮ್ಮ ಮಂತ್ರಿ ಸಂಪುಟದ ರಾಜೀನಾಮೆ ಪತ್ರಗಳನ್ನು ಇಂದು ಮಧ್ಯಾಹ್ನ ಗೌರ್ನರವರಿಗೆ ಸಲ್ಲಿಸುವರೆಂದು ತಿಳಿಯಬಂದಿದೆ.

ತಿರುವಾಂಕೂರ್‌ನಲ್ಲೂ ರಾಜೀನಾಮೆ

ತಿರುವಾಂಕೂರ್ ಮುಖ್ಯಮಂತ್ರಿ ಶ್ರೀ ಕೇಶವನ್ ಪಿಳ್ಳೆಯವರು ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ, ತಮ್ಮ ಮಂತ್ರಿಮಂಡಲವೂ ಸದ್ಯದಲ್ಲೇ ರಾಜೀನಾಮೆಯನ್ನು ರಾಜಪ್ರಮುಖರಿಗೆ ಕೊಡುವುದೆಂದು ಹೇಳಿರುವರು.

ಬೊಂಬಾಯಿನಲ್ಲಿ ಮಂತ್ರಿಮಂಡಲ ರಚನೆ

ಬೊಂಬಾಯಿನಲ್ಲಿ ಹೊಸ ಮಂತ್ರಿಮಂಡಲ ಏಪ್ರಿಲ್ ೧ಕ್ಕೆ ರಚಿಸಲ್ಪಡಬಹುದೆಂದು ಅಧಿಕೃತವಾಗಿ ತಿಳಿದು ಬಂದಿದೆ.

ವಿದ್ಯಾರ್ಥಿಗಳ ಮುಷ್ಕರ

ಪರೀಕ್ಷಾ ಶುಲ್ಕವನ್ನು ಹೆಚ್ಚಿಸಿದ್ದರಿಂದ ಪ್ರತಿಭಟಿಸಿ ಮೂರು ದಿನಗಳಿಂದ ಮುಷ್ಕರ ಹೂಡಿರುವ ಉಸ್ಮಾನಿಯ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಮೇಲಿನ ಸಹಾನುಭೂತಿಗಾಗಿ ಹೈದರಾಬಾದಿನ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಮೊನ್ನೆ ಕ್ಲಾಸುಗಳಿಗೆ ಹೋಗಲೇ ಇಲ್ಲ.

ವಿದ್ಯಾರ್ಥಿ ನಿಯೋಗದ ಭೇಟಿಗೆ ವೈಸ್ ಛಾನ್ಸಲರ್‌ರವರು ಅವಕಾಶಕೊಡಲಿಲ್ಲವೆಂದು ಹೇಳಲಾಗಿದೆ.

ಮದರಾಸಿನಲ್ಲಿ ಕಾಂಗ್ರೆಸ್ಸೇತರ ಪಕ್ಷಗಳ ಸಭೆ

ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳು ಸೇರಿ ಮದರಾಸಿನಲ್ಲಿ ಮಂತ್ರಿಮಂಡಲವನ್ನು ರಚಿಸುವ ಬಗ್ಗೆ ಸರ್ವಸಮ್ಮತ ಯೋಜನೆಯನ್ನು ತಯಾರಿಸಲು ಫೆಬ್ರವರಿ ೧೨ ಮತ್ತು ೧೩ ರಂದು ಸಮ್ಮೇಳನವು ನಡೆಯುವುದೆಂದು ಪ್ರಕಟಿಸಲಾಗಿದೆ.

ಶ್ರೀಗಳಾದ ಟಿ ಪ್ರಕಾಶಂ, ಕೆ ಕೇಳಪ್ಪನ್, ಎಸ್ ಬಿ ಆದಿತ್ಯನ್ (ಕೆ ಎಂ ಪಿ); ಎ ಕೆ ಗೋಪಾಲನ್ (ಕಮ್ಯುನಿಸ್ಟ್), ರಾಮಸ್ವಾಮಿ ಪಡಯಾಚಿ [ಟಿಯುಸಿಪಿ] ಮುಂತಾದ ನಾಯಕರು ಕಾಂಗ್ರೆಸ್ಸೇತರ ಶಾಸನಸಭಾ ಸದಸ್ಯರಿಗೆ ಆಹ್ವಾನಗಳನ್ನು ಕಳುಹಿಸಿದ್ದಾರೆ.

ತಗಡೂರಿನಲ್ಲಿ ಶ್ರೀ ಅಂಕನಾಥೇಶ್ವರಸ್ವಾಮಿ ಕೊಂಡ

ತಗಡೂರಲ್ಲಿ ಶ್ರೀ ಅಂಕನಾಥೇಶ್ವರಸ್ವಾಮಿಯವರ ಮತ್ತು ಶ್ರೀ ಪಟ್ಟದಮ್ಮನವರ ಕೊಂಡದ ವಿಷಯದಲ್ಲಿ ಬಹಳ ವರ್ಷಗಳಿಂದಲೂ ಪರಿವಾರದ ಮತ್ತು ಗಾಣಿಗ ಸೆಟ್ಟಿಗಳ ಕೋಮುಗಳಿಗೆ ವ್ಯವಹಾರಗಳು ನಡೆಯುತ್ತಿತ್ತು. ಕೊನೆಗೆ ಕೋರ್ಟುಗಳಲ್ಲೂ ವ್ಯವಹಾರಗಳು ನಡೆದು ಹೈಕೋರ್ಟಿನಲ್ಲಿ ಪರಿವಾರದ ಕೋಮಿನವರಂತೆ ತೀರ್ಮಾನವಾಯಿತು. ಫೆಬ್ರವರಿ ಒಂದನೇ ತಾ॥ ಶುಕ್ರವಾರ ರಾತ್ರಿ ಶ್ರೀ ಪಟ್ಟದಮ್ಮನವರ ಕೊಂಡವೂ, ಮೂರನೇ ತಾ॥ ಭಾನುವಾರ ರಾತ್ರಿ ಶ್ರೀ ಅಂಕನಾಥೇಶ್ವರಸ್ವಾಮಿಯವರ ಕೊಂಡವೂ ಬಹಳ ವಿಜೃಂಭಣೆಯಿಂದ ನಡೆಯಿತು. ಆ ಕಾಲದಲ್ಲಿ ಪರಿವಾರದ ಕೋಮಿನವರು ಶ್ರೀ ಅಂಕನಾಥೇಶ್ವರಸ್ವಾಮಿಯವರಿಗೆ ಅಭಿಷೇಕವನ್ನು ಶ್ರೀ ಪಲ್ಲೇಮಾದಪ್ಪನವರು ಮಂಟಪೋತ್ಸವವನ್ನೂ ಮಾಡಿಸಿದರು.

ನಂಜನಗೂಡು ಅ ಪೋ ಸೂಪರಿಂಟೆಂಡೆಂಟರವರೂ, ತಾ॥ ಪೋ. ಇನ್‌ಸ್ಪೆಕ್ಟರವರೂ, ಕೌಲಂದೆ ಪೋ. ಸಬ್ ಇನ್‌ಸ್ಪೆಕ್ಟರವರೂ ಮತ್ತು ಒಂದು ಪ್ಲಾಟೂನ್ ರಿಸರ್ವ್ ಪೋಲೀಸಿನವರೂ ಬಂದಿದ್ದರು. ಈ ಅಧಿಕಾರಿಗಳು ಮತ್ತು ಪೋಲೀಸರೂ ಶಾಂತವಾಗಿ ದೇವರ ಉತ್ಸವವೂ, ಕೊಂಡವೂ ಹೈಕೋರ್ಟ್ ತೀರ್ಪಿನಂತೆ ಜಾರಿಯಾಗಲು ವ್ಯವಸ್ಥೆಯಿಂದ ವ್ಯವಹಾರಗಳೆಲ್ಲವನ್ನೂ ಮುಗಿಸಿದರು. ಅದಕ್ಕಾಗಿ ಅವರುಗಳಿಗೆ ನಮ್ಮ ಧನ್ಯವಾದಗಳು.

ತಗಡೂರು ರಾಮಚಂದ್ರರಾವ್

ಯುನೆಸ್ಕೊ ಸಮ್ಮೇಳನದಲ್ಲಿ ಮಧ್ಯಪ್ರಾಚ್ಯದ ವಿದ್ಯಾರ್ಥಿಗಳು

ನ್ಯೂಯಾರ್ಕ್ ೫ ೩೧

ಮಧ್ಯ ಪ್ರಾಚ್ಯ ಮತ್ತು ಏಷ್ಯಾ ದೇಶಗಳಿಂದ ಬಂದ ತರುಣ ವಿದ್ಯಾರ್ಥಿಗಳು ತಮ್ಮ ತಮ್ಮ ದೇಶಗಳ ನೀತಿ, ನಡೆವಳಿಕೆಗಳ ಬಗ್ಗೆ ಚರ್ಚೆಗಳ ಮೂಲಕ ಅಮೇರಿಕನ್ನರಿಗೆ ತಿಳಿಸುತ್ತಿರುವರು.

ವಿದ್ಯಾರ್ಥಿಗಳು ಈಜಿಪ್ಟ್, ಇಂಡಿಯಾ ಇಸ್ರೇಲ್, ಪಾಕೀಸ್ತಾನ ಮತ್ತು ಇತರ ದೇಶಗಳಿಂದ ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ಚರ್ಚಾಗೋಷ್ಠಿಗೆ ಬಂದಿದ್ದಾರೆ. ಈಗತಾನೆ, ಎರಡು ದಿನದ ಯುನೆಸ್ಕೋ ಸಮ್ಮೇಳನವನ್ನು ಮುಗಿಸಿದರು. ಸುಮಾರು ೧೦೦೦ ಅಮೇರಿಕನ್ ವಿದ್ಯಾರ್ಥಿಗಳು, ಹಿಂದುಳಿದ ರಾಷ್ಟ್ರಗಳ ಸಮಸ್ಯೆಗಳಾದ ಬಡತನ, ಅನಕ್ಷರತೆ ಮುಂತಾದ ವಿಷಯಗಳನ್ನು ಏಷ್ಯಾ ದೇಶದ ಪ್ರತಿನಿಧಿಗಳಿಂದ ತಿಳಿದುಕೊಂಡರು.

ಭಾರತದ ಪ್ರತಿನಿಧಿಯಾದ ತಿರುವಾಂಕೂರಿನ ಶ್ರೀಮತಿ ಮಿರ್ಟಲ್ ಜೋಸೆಫ್‌ರವರು, ಅಮೇರಿಕನ್ನರಿಗೆ ಭಾರತದ ಬಗ್ಗೆ ಅನೇಕ ತಪ್ಪು ತಿಳುವಳಿಕೆಗಳಿವೆ ಎಂದು ತಿಳಿಸಿದರು.

ಅಸ್ಸಾಮಿನಿಂದ ಬಂದ ಶ್ರೀ ರಾಜೇಂದ್ರನಾಥ ಬಾರೂವರು, ಭಾರತದಲ್ಲಿ ಜಾತಿ ಪದ್ಧತಿಯು ಅಳಿಸಿಹೋಗುತ್ತಿದೆಯೆಂದೂ, ಭಾರತದ ರಾಜ್ಯಾಂಗ ರಚನೆಯು, ತುಂಬಾ ಪ್ರಜಾಪ್ರಭುತ್ವಾತ್ಮಕವಾಗಿದೆಯೆಂದೂ ಅಮೇರಿಕನ್ ವಿದ್ಯಾರ್ಥಿಗಳ ಸಮೂಹಕ್ಕೆ ತಿಳಿಸಿದರು

ಪರಿಶೀಲನೆ ಮುಗಿಯಿತು

ಭಾರತದ ಮಹಾಚುನಾವಣೆಯನ್ನು ವೀಕ್ಷಿಸಲು ಬಂದಿದ್ದ ಇಂಡೋನೇಷ್ಯಾದ ನಿಯೋಗದವರು ಭಾರತದ ವಿವಿಧ ಭಾಗಗಳಲ್ಲಿ ನಡೆದ ಚುನಾವಣೆಗಳನ್ನು ವೀಕ್ಷಿಸಿ ಈಗ ದೆಹಲಿಗೆ ವಾಪಸ್ ಬಂದಿರುವರು. ಇವರು ಶುಕ್ರವಾರ ಇಂಡೊನೇಷ್ಯಾಕ್ಕೆ ವಾಪಸ್ ತೆರಳುವರು.

ಆಹಾರ ಸಂಗ್ರಹಣೆ

ಈ ವರ್ಷ ಭಾರತಾದ್ಯಂತ 3,236000 ಟನ್ ಧಾನ್ಯವನ್ನು ಸಂಗ್ರಹಿಸಬೇಕಾಗಿದೆ ಇದರಲ್ಲಿ 2,536,000 ಅಕ್ಕಿ ಮತ್ತು ಇತರ ಧಾನ್ಯಗಳು ಮತ್ತು 700,000 ಟನ್ ಗೋಧಿ ಎಂದು ತಿಳಿದುಬಂದಿದೆ-

ರಾಜಕಮಲ್

3-2-52ರಿಂದ ಅಮೋಘವಾದ

4ನೇ ವಾರ

ದಿನವಹಿ 3 ಪ್ರದರ್ಶನಗಳು

* ಅಮ್ಮ (ತಮಿಳು) ಚಿತ್ರ *

ಭೂಮಿಕೆ:- ಬಿ. ಎಸ್. ಸರೋಜ, ಲಲಿತ, ಶಾಂತಕುಮಾರಿ, ನಂಬಿಯಾರ್.

ನ್ಯೂ ಅಪೇರ

೩—೨- ೫೨ ರಿಂದ

ರತ್ನಮಾಲಾ (ತೆಲುಗು) ಚಿತ್ರ (ನ್ಯೂಪ್ರಿಂಟ್)

ತಾರಾಗಣ:- ಭಾನುಮತಿ, ಸಿ.ಎಸ್.ಆರ್, ನಾಗೇಶ್ವರರಾವ್, ಡಾ॥ ಜಿ. ವಿ. ಸುಬ್ಬರಾವ್.

ವೆಲ್‌ಕಮ್ ಕಾಫೀ ಕ್ಲಬ್

(ಪ್ರಭಾ ಟಾಕೀಸ್ ಎದುರು)

೨೪-೧-೫೨ ರಿಂದ ಪ್ರಾರಂಭ

ಸುಪ್ರಸಿದ್ಧರಾದ ಶ್ರೀ ಮನೆ ನಾರಾಯಣಾಚಾರ್‌ರವರ ಮಕ್ಕಳು ಶ್ರೀ ರಾಮುರವರಿಂದ ತಯಾರಿಸಿದ,

ಅಪ್ಪಟ ತುಪ್ಪದ 'ಕೇಸರೀ ಭಾತ್'

ಉತ್ತಮವಾದ

'ಸಾದಾ ಸೆಟ್ ದೋಸೆ'

ಒಂದನೇ ನಂ. ಕಾಫೀ ಮತ್ತು ಟೀ ಸೇವಿಸಲು ದಯವಿಟ್ಟು ದಯಮಾಡಿಸಿ.

ಪ್ರಕಾಶಕರು :—ಜಿ ಎಲ್. ಸ್ವಾಮಿ ಟೂರಿಸ್ಟ್ ಬ್ಯೂರೋ ಮೈಸೂರು ಮುದ್ರಕರು—ಪಿ. ಕೆ. ಸುಬ್ಬರಾವ್ ಬೋರ್ಡ್ ಮುದ್ರಣಾಲಯ ಮೈಸೂರು

ಶ್ರೀ ಎ. ಜೆ. ಫಿಲ್‌ಪಾಟ್

ಭಾರತದಲ್ಲಿ ಪ್ರವಾಸ ಕೈಗೊಂಡಿರುವ ಬ್ರಿಟಿಷ್ ಧರ್ಮ ವೈಜ್ಞಾನಿಕರು, ಅವರು ಭಾರತದ ಅನೇಕ ವೈಜ್ಞಾನಿಕ ಕೇಂದ್ರಗಳನ್ನು ಭೇಟಿ ಮಾಡುವರು.

ಫೋನ್ ೭೬೪ (ಆ..) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೯—೨—೧೯೫೨ನೇ ಶನಿವಾರ [ಸಂಚಿಕೆ ೧೪೦

ಮುಂದಿನ ತಿಂಗಳು ಹೈದರಾಬಾದಿನಲ್ಲಿ ಪ್ರಜಾ ಸರ್ಕಾರ ಸ್ಥಾಪನೆ

೧೦ ಸಾವಿರ ಎಕರೆಯಲ್ಲಿ ಕಾರುರಾಗಿ ಬೆಳೆಯಲು ಕೃಷ್ಣರಾಜಸಾಗರದಿಂದ ನೀರು ಸರಬರಾಜು

ಇಂಜನಿಯರಿಂಗ್ ಮ್ಯೂಸಿಯಂ ಪ್ರಾರಂಭೋತ್ಸವ

ಗೃಹಸಚಿವ ಶ್ರೀ ಟಿ ಮರಿಯಪ್ಪನವರು ನಿನ್ನೆ ಕೃಷ್ಣರಾಜಸಾಗರದಲ್ಲಿ ಇಂಜನಿಯರಿಂಗ್ ಮ್ಯೂಸಿಯಮ್ಮಿನ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಕೃಷ್ಣರಾಜಸಾಗರಕ್ಕೆ ನಾನಾಭಾಗಗಳಿಂದ ಇಂಜನಿಯರಿಂಗ್ ತಜ್ಞರು, ವಿದ್ಯಾರ್ಥಿಗಳು ಬರುವುದರಿಂದ ಅವರಿಗೆ ಉಪಯೋಗವಾಗಲೆಂದು ಈ ಮ್ಯೂಸಿಯಂ ತೆರೆಯಲಾಗಿದೆ. ಈ ರೀತಿಯಾದ ಮ್ಯೂಸಿಯಂ ಪ್ರಾರಂಭಿಸಿರುವುದು ಇದೇ ಮೊದಲು.

ಸಲಹೆಗಾರರಾಗಿರಲು ಶ್ರೀ ವೆಲ್ಲೋಡಿಯವರ ಒಪ್ಪಿಗೆ

ಹೈದ್ರಾಬಾದಿನಲ್ಲಿ ಈಗ ಇರುವ ಮಂತ್ರಿಮಂಡಲವು ಮುಂದಿನ ತಿಂಗಳ ಮಧ್ಯಭಾಗದ ವೇಳೆಗೆ ರಾಜೀನಾಮೆಯನ್ನಿತ್ತು ಆ ತಿಂಗಳ ಕೊನೆಯ ವೇಳೆಗೆ ಹೊಸ ಮಂತ್ರಿಮಂಡಲದ ರಚನೆ ಆಗುವುದು ಎಂದು ಅಲ್ಲಿ ಈಗ ಮುಖ್ಯಮಂತ್ರಿಯಾಗಿರುವ ಶ್ರೀ ಎಂ. ಕೆ ವೆಲ್ಲೋಡಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುವರು. ನೂತನ ಮಂತ್ರಿಮಂಡಲವೇರ್ಪಟ್ಟಾಗ ತಾವು ಆ ಸರ್ಕಾರದ ಸಲಹೆಗಾರರಾಗಿರಲು ಒಪ್ಪಿರುವರೆಂದೂ ಆದರೆ ಸಲಹೆಗಾರರ ಕರ್ತವ್ಯದ ಬಗ್ಗೆ ನಿರ್ದಿಷ್ಟವಾದ ಸೂಚನೆ ಬಂದಿಲ್ಲವೆಂದು ಅವರು ತಿಳಿಸಿದರು.

ಹೈದ್ರಾಬಾದಿಗೆ ಹಣಕಾಸಿನ ತಜ್ಞರೊಬ್ಬರನ್ನು ನೇಮಿಸಲಾಗುವುದು. ಇವರು ಸಚಿವ ಮಂಡಲಿಗೂ ಸಲಹೆಗಾರ ಶ್ರೀ ಎಂ. ಕೆ. ವೆಲ್ಲೋಡಿಯವರಿಗೂ ಸಲಹೆ ನೀಡುವರು.

ಕ್ರಿಕೆಟ್ ಪಂದ್ಯ

ಮದರಾಸಿನಲ್ಲಿ ನಿನ್ನೆ ಎಂ ಸಿ ಸಿಗೂ ಭಾರತಕ್ಕೂ ಟೆಸ್ಟ್ ಕ್ರಿಕೆಟ್ ಪಂದ್ಯವು ಮುಂದುವರಿದು ಮೊದಲನೆ ಇನ್ನಿಂಗ್ಸ್‌ನಲ್ಲಿ ಎಂ ಸಿ ಸಿ ಯವರು ೨೬೬ ರನ್ನುಗಳಿಗೆ ಔಟಾದರು. ಭಾರತದವರು ತಮ್ಮ ಆಟವನ್ನು ಆರಂಭಿಸಿ ೪ ವಿಕೆಟ್ಟಿಗೆ ೨೦೬ ರನ್ನುಗಳನ್ನು ಮಾಡಿರುವರು. ಆಟವು ಈ ದಿನ ನಡೆಯುತ್ತದೆ.

೧೦೦೦೦ ಎಕರೆ ಕಾರುರಾಗಿ ಬೆಳೆಗೆ ನೀರು

ಮೈಸೂರು ಫೆ ೮

ಕೃಷ್ಣರಾಜಸಾಗರ ಸಮಿತಿಯು ಇಂದು ಕೃಷ್ಣರಾಜಸಾಗರದಲ್ಲಿ ಪಿ ಡಬ್ಲ್ಯು ಸಚಿವ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು.

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ೩॥ ಅಡಿ ಹೆಚ್ಚಾಗಿರುವುದರಿಂದ ಈ ವರ್ಷ ಕಾರುರಾಗಿ ಬೆಳೆಗೆ ನೀರನ್ನು ಒದಗಿಸುವ ವಿಷಯವು ವಿಪುಲವಾಗಿ ಚರ್ಚೆಯಾಯಿತು. ಮಂಡ್ಯ, ಮಳವಳ್ಳಿ ಪ್ರದೇಶಗಳಲ್ಲಿ ಕೆರೆ ಬೈಲಿನಲ್ಲಿ ೫೦೦೦ ಮತ್ತು ನಾಲಾ ಬೈಲುಗಳಲ್ಲಿ ೫೦೦೦ ಎಕರೆಗಳಲ್ಲಿ ಕಾರುರಾಗಿಯನ್ನು ಬೆಳೆಯಲು ನೀರನ್ನು ಒದಗಿಸಬೇಕೆಂದು ತೀರ್ಮಾನವಾಯಿತು.

ವಂದನಾರ್ಪಣೆ

ಪುರಸಭಾ ಉಪಾಧ್ಯಕ್ಷರೂ, ಪಾರ್ಲಿಮೆಂಟ್ ಸದಸ್ಯರೂ ಆದ ಶ್ರೀ ಎಚ್. ರಾಚಯ್ಯನವರು ತಮಗೆ ವೋಟುಗಳನ್ನಿತ್ತ ಮಹಾಜನರಿಗೆ ವಂದನೆ ಅರ್ಪಿಸಿ ತಮ್ಮ ಕೈಲಾದ ಸೇವೆಯನ್ನು ಮಾಡುವುದಾಗಿ ತಿಳಿಸಿದ್ದಾರೆ. ತಮ್ಮ ಜಯಕ್ಕೆ ವಿಶೇಷವಾಗಿ ಶ್ರಮಿಸಿದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಇತರ ಮಹನೀಯರಿಗೆ ಕೃತಜ್ಞತೆ ಅರ್ಪಿಸಿದ್ದಾರೆ.

ತಮ್ಮೊಡನೆ ಪಾರ್ಲಿಮೆಂಟಿಗೆ ಜನರಲ್ ಸ್ಥಾನಕ್ಕೆ ಸ್ಪರ್ಧಿಸಿ ಪರಾಜಿತರಾದ ಶ್ರೀ ಹೆಚ್ ಸಿ. ದಾಸಪ್ಪನವರಿಗೆ ತಮ್ಮ ಅನುತಾಪ ವ್ಯಕ್ತಪಡಿಸಿದ್ದಾರೆ.

ಪೌರಸಭೆಯ ಅನುತಾಪ

ಮೈಸೂರು ಪುರಸಭೆಯ ಮುಂದುವರಿದ ಅಧಿವೇಶನವು ನಿನ್ನೆ ಸಭೆ ಸೇರಿ ದಿವಂಗತ ಬ್ರಿಟಿಷ್ ರಾಜರ ಬಗ್ಗೆ ತನ್ನ ಅನುತಾಪವನ್ನು ಸೂಚಿಸಿ, ದಿವಂಗತರ ಮಾತೆ ಮೇರಿಯವರಿಗೂ ಅವರ ಪತ್ನಿ ಮತ್ತು ಹೊಸ ರಾಣಿಯವರಿಗೂ ಮತ್ತಿತರ ರಾಜಮನೆತನದವರಿಗೂ ತಮ್ಮ ದುಃಖವನ್ನು ಸೂಚಿಸುವ ನಿರ್ಣಯವಮಾಡಿ ೨ ನಿಮಿಷಕಾಲ ಮೌನವನ್ನಾಚರಿಸಿತು-

ಎಣಿಕೆ ನಿಂತಿತು

ಜಾರ್ಜ್ ದೊರೆಯ ನಿಧನದ ಬಗ್ಗೆ ೭ನೇ ತಾ॥ ಉತ್ತರ ಪ್ರದೇಶದಲ್ಲಿ ಎಣಿಕೆ ಕಾರ್ಯವನ್ನು ನಿಲ್ಲಿಸಲಾಯಿತು,

ಜೋಗ್‌ನಲ್ಲಿ ಎರಡು ಜನರೇಟರ್ ಸ್ಥಾಪನೆ

ಜೋಗ್‌ನಲ್ಲಿ ಮಹಾತ್ಮ ಗಾಂಧಿ ಹೈಡ್ರೋ ಎಲೆಕ್ಟ್ರಿಕ್ ಉತ್ಪಾದನಾ ಕೇಂದ್ರದಲ್ಲಿ ೪ ಜನರೇಟರ್‌ಗಳನ್ನು ಸ್ಥಾಪಿಸಿ ಈಗ ೪೮೦೦೦ ಕಿಲೋವಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ ಮುಂದಿನ ತಿಂಗಳ ಕೊನೆಯ ವೇಳೆಗೆ ಇಲ್ಲಿ ಇನ್ನೂ ಎರಡು ಜನರೇಟರ್‌ಗಳನ್ನು ಸ್ಥಾಪಿಸಿ ಬಹುಶಃ ೧೨,೦೦೦ ಕಿಲೋವಾಟ್ ವಿದ್ಯುತ್ತನ್ನು ಪ್ರಾರಂಭದಲ್ಲಿ ಉತ್ಪಾದಿಸಲಾಗುವುದು.

ಇಲ್ಲಿನ ಕಾರ್ಯವು ೧೯೪೫ರಲ್ಲಿ ಆರಂಭವಾಗಿ ೯ ಕೋಟಿ ರೂ. ಖರ್ಚಾಗಿದೆ. ಈ ಕೇಂದ್ರದ ಕಾರ್ಯವು ಮುಗಿಯುವ ವೇಳೆಗೆ ಇಲ್ಲಿ ೧,೨೦,೦೦೦ ಕಿಲೋವಾಟ್ ವಿದ್ಯುತ್ ಉತ್ಪಾದನೆಯಾಗುವುದೆಂದು ನಿರೀಕ್ಷಿಸಲಾಗಿದೆ.

ಗುಂಡ್ಲುಪೇಟೆಯ ಫಲಿತಾಂಶ

ಸಂಸ್ಥಾನದ ಶಾಸನಸಭೆಗೆ ಗುಂಡ್ಲುಪೇಟೆ ಹೆಗ್ಗಡದೇವನಕೋಟೆ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸ್ವತಂತ್ರ ಉಮೇದುವಾರರಾದ ಶ್ರೀ ಶಿವರುದ್ರಪ್ಪನವರು, ರಿಸರ್ವ್ ಕ್ಷೇತ್ರದಿಂದ ಶ್ರೀ ಕುನ್ನಯ್ಯನವರು ಚುನಾಯಿತರಾಗಿರುವರು-

೨೯ ಕೋಟಿ ರೂ. ಪತ್ತೆ

ಕೇಂದ್ರ ಸರ್ಕಾರದವರು ಗುಪ್ತ ಆದಾಯವನ್ನು ಪತ್ತೆಮಾಡಲು ಒಂದು ಸಮಿತಿ ರಚಿಸಿದ್ದರಷ್ಟೆ. ಸಮಿತಿಯವರು ಸುಮಾರು ೨೯ ಕೋಟಿ ರೂ. ಗುಪ್ತ ಆದಾಯವನ್ನು ಪತ್ತೆ ಹಚ್ಚಿರುವರು. ಸಮಿತಿಯ ಅವಧಿಯನ್ನು ಕೇಂದ್ರ ಸರ್ಕಾರದವರು ಡಿಸೆಂಬರ್ ಅಂತ್ಯದವರೆವಿಗೂ ಹೆಚ್ಚಿಸಿರುತ್ತಾರೆ.

ಜಾರ್ಜರ ಕಳೇಬರ ಸೋಮವಾರ ಲಂಡನ್ನಿಗೆ ಬರುವುದು

ದಿವಂಗತ ದೊರೆ ೬ನೇ ಜಾರ್ಜ್‌ರವರ ಮೃತದೇಹವನ್ನು ಸಾಂಡ್ರಿಂಗ್‌ಹ್ಯಾಂನಿಂದ ಸೋಮವಾರ ಲಂಡನ್ನಿಗೆ ರಾಜಮರ್ಯಾದೆಯಲ್ಲಿ ತಂದು ವೆಸ್ಟ್‌ಮಿನಿಸ್ಟರ್ ಅಬೆಯಲ್ಲಿಡಲಾಗುವುದು. ೧೫ನೇ ತಾ॥ ಶುಕ್ರವಾರ ರಾಜಮರ್ಯಾದೆಯೊಡನೆ ಇವರ ಅಂತ್ಯಕ್ರಿಯೆ ನಡೆಯುತ್ತದೆ.

ಮದ್ರಾಸ್ ಮಂತ್ರಿಗಳ ರಾಜೀನಾಮೆ

ನಿನ್ನೆ ಮಧ್ಯಾಹ್ನ ಮದರಾಸಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಅಲ್ಲಿನ ಗೌರ್ನರವರಿಗೆ ಒಪ್ಪಿಸಿದರು

ಗೌರ್ನರ್‌ರವರು ನೋತ ಸಚಿವರ ರಾಜೀನಾಮೆಯನ್ನು ಅಂಗೀಕರಿಸಿ ಚುನಾಯಿತ ಸಚಿವರಿಂದ ಕೂಡಿದ ತಾತ್ಕಾಲಿಕ ಮಂತ್ರಿಮಂಡಲವನ್ನು ರಚಿಸಿರುವರು. ತಾತ್ಕಾಲಿಕ ಮಂತ್ರಿಮಂಡಲದಲ್ಲಿ ಜಯಶೀಲರಾದ ಸಚಿವರುಗಳಾದ ಶ್ರೀ ಸೀತಾರಾಮರೆಡ್ಡಿ, ಡೋಪೆವಿಕ್ಟೋರಿಯಾ ಶ್ರೀ ಪರಮೇಶ್ವರನ್, ಶ್ರೀ ಪೆರುಮಾಳ್‌ಸ್ವಾಮಿ ರೆಡ್ಡಿ, ಶ್ರೀ ಎ. ಬಿ. ಶೆಟ್ಟಿಯವರುಗಳಿರುವರು. ತಾತ್ಕಾಲಿಕ ಮಂತ್ರಿಮಂಡಲಕ್ಕೂ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾರವರು ಮುಖ್ಯಮಂತ್ರಿಯಾಗಿರುವರು.

ಮದ್ರಾಸ್ ಗೌರ್ನರ್‌ರವರು ರಾಜೀನಾಮೆಯ ವಿಷಯವನ್ನು ರಾಷ್ಟ್ರಾಧ್ಯಕ್ಷರಿಗೆ ತಿಳಿಸಿ ಅವರ ಸಲಹೆ ಬಂದನಂತರ ಅದಕ್ಕನುಗುಣವಾಗಿ ಕ್ರಮ ಕೈಗೊಳ್ಳುವರು. ಈ ಬಗ್ಗೆ ಮದ್ರಾಸ್ ಸರ್ಕಾರದ ಅಧಿಕೃತ ಪ್ರಕಟಣೆ ಹೊರಬಿದ್ದಿದೆ.

೩೮ ಲಕ್ಷ ಟನ್ ಆಹಾರ ಖೋತಾ

ಭಾರತದಲ್ಲಿ ಎಲ್ಲಾ ರಾಜ್ಯಗಳ ಎನಹ ಮಿಕ್ಕೆಲ್ಲಾ ಪ್ರಾಂತಗಳಿಂದಲೂ ಸುಮಾರು ೩೮ ಲಕ್ಷ ಟನ್ ಆಹಾರ ಧಾನ್ಯ ಖೋತಾ ಬೀಳುವುದೆಂದು ನಿರೀಕ್ಷಿಸಲಾಗಿದೆ. ಸದ್ಯದಲ್ಲೇ ಎಲ್ಲಾ ಪ್ರಾಂತ ಮತ್ತು ರಾಜ್ಯ ಸಭೆಗಳ ಆಹಾರ ಸಚಿವರುಗಳ ಸಭೆ ನಡೆದು ಖೋತಾ ಪ್ರಮಾಣವನ್ನು ಅರಿಯಲಾಗುವುದೆಂದು ಭಾರತಕ್ಕೆ ಈ ಸಾಲಿಗೆ ೫೩ ಲಕ್ಷ ಟನ್ ಆಹಾರ ಧಾನ್ಯವನ್ನು ಆಮದು ಮಾಡಿಕೊಳ್ಳಲಾಗುವುದೆಂದು ತಿಳಿದು ಬಂದಿದೆ.

ಮೃತರಾದ ಜೋದ್‌ಪುರದ ರಾಜರು

ವಿಮಾನ ಅಪಘಾತದಲ್ಲಿ ಮೃತರಾದ ಜೋದ್‌ಪುರದ ಮಹಾರಾಜರು ಪಾರ್ಲಿಮೆಂಟಿಗೂ ಚುನಾಯಿತರಾಗಿದ್ದಾರೆ. ಈಗಾಗಲೇ ಅವರು ಪ್ರಾಂತ್ಯ ಶಾಸನ ಸಭೆಗೂ ಚುನಾಯಿತರಾಗಿದ್ದರು.

ಚಿದಂಬರಕ್ಕೆ ಮೈಸೂರು ರಾಜಪ್ರಮುಖರು

ಚಿದಂಬರಕ್ಕೆ ಮೈಸೂರು ರಾಜಪ್ರಮುಖರು ಮತ್ತು ಅವರ ಪರಿವಾರದವರು ಫೆಬ್ರವರಿ ೧೧ನೇ ತಾ|| ನಟರಾಜ ದೇವಸ್ಥಾನಕ್ಕೆ ಭೇಟಿ ಕೊಡಲಿರುವರು. ಅಂದು ಅವರನ್ನು ಸ್ವಾಗತಿಸುವುದಕ್ಕೂ ಮತ್ತು ದೇವರನ್ನು ಅವರು ಪೂಜಿಸುವುದಕ್ಕೂ ತಕ್ಕ ವ್ಯವಸ್ಥೆ ಮಾಡಲಾಗಿದೆ. ರಾಜಪ್ರಮುಖರು ದೇವಸ್ಥಾನದ ಜವಹಿರಿಯನ್ನು ನೋಡುವರು.

ಪದಚ್ಯುತರನ್ನಾಗಿ ಮಾಡಿ

ಭಾರತ ಯೂನಿಯನ್ನಿಗೆ ಹೈದರಾಬಾದ್ ಸಂಸ್ಥಾನವು ಮಿಳಿತವಾಗಿರುವುದಕ್ಕೆ ಇಲ್ಲಿಯ ಜನತೆ ಇನ್ನೂ ತಮ್ಮ ಒಪ್ಪಿಗೆಯನ್ನಿತ್ತಿಲ್ಲ. ಆದ್ದರಿಂದ ನೈಜಾಮರ ವಿಷಯವಾಗಿ ಇಲ್ಲಿಯ ಜನತೆ ಪರಿಶೀಲಿಸಲು ಅವಕಾಶವಿದೆ. ಅಲ್ಲದೆ ಪಂಡಿತ ನೆಹರೂ ಮತ್ತು ದಿವಂಗತ ಪಟೇಲರು ಹೈದರಾಬಾದಿನ ಭವಿಷ್ಯವನ್ನು ಅಲ್ಲಿಯ ಜನರೇ ನಿರ್ಧರಿಸಿಕೊಳ್ಳಬೇಕೆಂದು ಹೇಳಿರುವುದರಿಂದ ತಮ್ಮ ಪಕ್ಷವು ಕೂಡಲೇ ನೈಜಾಮರನ್ನು ಪದಚ್ಯುತರನ್ನಾಗಿ ಮಾಡಬೇಕೆಂಬ ನಿರ್ಣಯವನ್ನು ಮುಂಬರುವ ಶಾಸನಸಭಾಧಿವೇಶನದಲ್ಲಿ ಮಂಡಿಸಲು ಅಭ್ಯಂತರವೇನೂ ಇಲ್ಲವೆಂದು ಹೈದರಾಬಾದ್ ಸೋಷಲಿಸ್ಟ್ ಪಕ್ಷದ ನಾಯಕರೊಬ್ಬರು ಹೇಳಿರುವುದಾಗಿ ವರದಿಯಾಗಿದೆ.

ಸೋಷಲಿಸ್ಟ್ ಪಕ್ಷ ಮತ್ತು ಶಾಸನ ಸಭೆಯಲ್ಲಿ ಹೆಚ್ಚು ಸ್ಥಾನಗಳಿಸಿರುವ ೨ನೇ ಪಕ್ಷವಾದ ಪೀಪಲ್ಸ್ ಡೆಮೊಕ್ರಾಟಿಕ್ ಪಕ್ಷವು ನೈಜಾಮರನ್ನು ಪದಚ್ಯುತರನ್ನಾಗಿ ಮಾಡಬೇಕೆಂಬ ಅಭಿಪ್ರಾಯವುಳ್ಳದ್ದಾಗಿದೆ.

ಗೌರ್ನರರ ರಾಜೀನಾಮೆ

'ಎ' ವಿಭಾಗದ ಎಲ್ಲಾ ೯ ಪ್ರಾಂತ್ಯಗಳ ಗೌರ್ನರುಗಳೂ ವಿಧಿವಿಹಿತರಾಗಿ ರಾಜೀನಾಮೆ ಇತ್ತಿರುವರೆಂದು ಹೇಳಲಾಗಿದೆ.

ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಪ್ರಾಂತ್ಯಗಳ ಗೌರ್ನರುಗಳ ಹೊರತು, ಇತರ ಗೌರ್ನರುಗಳನ್ನು ರಾಜ್ಯಾಂಗದ ತಾತ್ಕಾಲಿಕ ವ್ಯವಸ್ಥೆಗಳನುಸಾರವಾಗಿ ನೇಮಿಸಲಾಗಿತ್ತು. ರಾಷ್ಟ್ರಾಧ್ಯಕ್ಷರಿಂದ ಹೊಸ ಖಾಯಂ ಗೌರ್ನರುಗಳು ನೇಮಕವಾಗುವವರೆಗೂ ಈಗಿನ ಗೌರ್ನರುಗಳು ತಮ್ಮ ಸ್ಥಾನಗಳಲ್ಲಿಯೇ ಇರುವರು. ರಾಜ್ಯಾಂಗವು ಜಾರಿಗೆ ಬಂದ ನಂತರವೇ ಅಸ್ಸಾಂ ಮತ್ತು ಪಶ್ಚಿಮ ಬಂಗಾಳದಲ್ಲಿ ಈಗಿರುವ ಗೌರ್ನರುಗಳ ನೇಮಕವಾಗಿದೆ.

ಸ್ವಾಮಿ ಸೀತಾರಾಂರಿಗೆ ಆಂಧ್ರ ಕಮ್ಯೂನಿಸ್ಟ್ ಪಕ್ಷದ ಸೂಚನೆ

ಆಂಧ್ರ ಪ್ರಾಂತ್ಯ ನಿರ್ಮಾಣದ ಬಗ್ಗೆ ಸತ್ಯಾಗ್ರಹ ಚಳುವಳಿಯನ್ನು ಸದ್ಯಕ್ಕೆ ನಿಲ್ಲಿಸಿ, ಆಂಧ್ರದೇಶದ ಸರ್ವ ರಾಜಕೀಯ ಪಕ್ಷಗಳನ್ನೂ ಮತ್ತು ರಾಷ್ಟ್ರನಿಷ್ಠರನ್ನೂ ಒಟ್ಟುಗೂಡಿಸಿ ಎಲ್ಲರೂ ಒಪ್ಪುವ ಕಾರ್ಯಕ್ರಮ ಒಂದನ್ನು ಕೈಗೊಳ್ಳಬೇಕೆಂಬುದಾಗಿ ಸ್ವಾಮಿ ಸೀತಾರಾಂರವರನ್ನು ಪ್ರಾರ್ಥಿಸಬೇಕೆಂಬ ನಿರ್ಣಯವೊಂದನ್ನು ಸಮಾವೇಶಗೊಂಡಿದ್ದ ಆಂಧ್ರ ಪ್ರಾಂತ್ಯ ಕಮ್ಯೂನಿಸ್ಟ್ ಪಕ್ಷದ ಸಮಿತಿಯು ಅಂಗೀಕರಿಸಿತು. ಆಂಧ್ರ ಪ್ರಾಂತ್ಯ ನಿರ್ಮಾಣದ ಗುರಿ ಸಾಧನೆಗಾಗಿ ಇದೇ ಮಾಹೆ ೧೨ ರಂದು ಸ್ವಾಮಿ ಸೀತಾರಾಂರವರ ನೇತೃತ್ವದಲ್ಲಿ ಈಗಿನ ಕಾರ್ಯಕ್ರಮದ ಪ್ರಕಾರ ಸತ್ಯಾಗ್ರಹ ಪ್ರಾರಂಭವಾಗಬೇಕಾಗಿದೆ.

ಯಾವ ರಾಜಕೀಯ ಪಕ್ಷಗಳ ಹಾಗೂ ನುರಿತ ವ್ಯಕ್ತಿಗಳ ಸಲಹೆಗೆ ಮನ್ನಣೆ ಕೊಡದೆ ಸ್ವಾಮಿಜೀಯವರು ಆಂಧ್ರ ಪ್ರಾಂತ್ಯ ನಿರ್ಮಾಣದ ಬಗ್ಗೆ ಆತುರದ ಕ್ರಮ ಕೈಗೊಂಡಿರುವುದಾಗಿಯೂ ನಿರ್ಣಯ ಸೂಚಿಸುತ್ತದೆ.

ಸಮಾಲೋಚನೆ

ಮದರಾಸಿನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ದೊರೆಯದ ಪ್ರಯುಕ್ತ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ ಕೆ. ಎಂ. ಪಿ. ಅಧ್ಯಕ್ಷರೊಡನೆ ಸಮಾಲೋಚನೆ ನಡೆಸುವ ಸಲುವಾಗಿ ಮದರಾಸು ಕಿಸಾನ್ ಮಜ್ದೂರ್ ಪ್ರಜಾ ಪಕ್ಷದ ಅಧ್ಯಕ್ಷರಾದ ಶ್ರೀ ಟಿ ಪ್ರಕಾಶಂರವರು ನಿನ್ನೆ ದೆಹಲಿಗೆ ಆಗಮಿಸಿದರು.

ಕಾಮನ್‌ವೆಲ್ತ್ ಪ್ರವಾಸ ಮುಂದಕ್ಕೆ

ತಮ್ಮ ತಂದೆ ಜಾರ್ಜ್ ಚಕ್ರವರ್ತಿಗಳ ನಿಧನದ ಪರಿಣಾಮವಾಗಿ ತಮ್ಮ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರವಾಸವನ್ನು ಮುಂದಕ್ಕೆ ಹಾಕಿರುವುದಾಗಿ ಎಲಿಜಬೆತ್ ರಾಣಿಯವರು ಸಿಂಹಳ ಸರ್ಕಾರಕ್ಕೆ ತಿಳಿಸಿದರು.

ನರೇಂದ್ರ ದೇವ್‌ರಿಗೆ ಸೋಲು

ಸೋಷಲಿಸ್ಟ್ ಪಕ್ಷದ ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷರಾದ ಆಚಾರ್ಯ ನರೇಂದ್ರ ದೇವ್‌ರವರು ಕಾಂಗ್ರೆಸ್ ಸ್ಪರ್ಧಿಗಿಂತ ೪೪೭ ಓಟು ಕಮ್ಮಿ ಪಡೆದಿದ್ದಾರೆಂದು ವರದಿಯಾಗಿದೆ. ಈ ಕ್ಷೇತ್ರದಿಂದ ೫ ಮಂದಿ ಸ್ಪರ್ಧಿಸಿದ್ದಾರೆ. ಅಧಿಕೃತ ವಲಯಗಳಿಂದ ತಿಳಿದುಬಂದಿರುವ ರೀತ್ಯಾ ಆಚಾರ್ಯ ನರೇಂದ್ರದೇವ್‌ರಿಗೆ ೧೮೧೧೫, ಕಾಂಗ್ರೆಸ್ ಸ್ಪರ್ಧಿಗೆ ೧೮೫೬೨ ಓಟು ಬಂದಿದೆ.

ಈಜಿಪ್ಟಿನಲ್ಲಿ ೧೪ ದಿನ ಮೌನಸೂಚಕ ದಿನ

ಬ್ರಿಟನ್ನಿನ ದೊರೆ ೬ನೇ ಜಾರ್ಜ್ ನಿಧನ ವಾರ್ತೆಯನ್ನು ಈಜಿಪ್ಟಿನಲ್ಲಿ ಕೇಳಿ ಅಲ್ಲಿನ ದೊರೆ ಫಾರೂಕರು ಈಜಿಪ್ಟಿನಾದ್ಯಂತ ೧೪ ದಿನ ಶೋಕ ದಿನವನ್ನು ಆಚರಿಸಬೇಕೆಂದು ತಿಳಿಸಿರುವರು. ಬ್ರಿಟನ್ನಿನ ದೊರೆಯ ಅಂತ್ಯಕ್ರಿಯೆ ಕಾಲದಲ್ಲಿ ತಮ್ಮ ಪರವಾಗಿ ಹಾಜರಿರಲು ಒಂದು ನಿಯೋಗವನ್ನು ಲಂಡನ್ನಿಗೆ ಕಳುಹಿಸುವರು.

ಅಮೆರಿಕದ ಅಧ್ಯಕ್ಷ ಟ್ರೂಮನ್, ವಿಶ್ವಸಂಸ್ಥೆಯ ಕಾರ್ಯದರ್ಶಿ ಮಿ|| ಲೀ, ಫ್ರಾನ್ಸಿನ ರಾಷ್ಟ್ರಾಧ್ಯಕ್ಷರು ದಿವಂಗತ ೬ನೇ ಜಾರ್ಜ್‌ರವರ ಬಗ್ಗೆ ತಮ್ಮ ಅನುತಾಪ ವ್ಯಕ್ತಪಡಿಸಿರುವರು.

೧೫ನೇ ತಾ|| ಶುಕ್ರವಾರ ಅಂತ್ಯಕ್ರಿಯೆ

ಇದೇ ೧೫ನೇ ತಾ|| ಶುಕ್ರವಾರ ದಿವಂಗತ ಇಂಗ್ಲೆಂಡ್ ರಾಜ ೬ನೇ ಜಾರ್ಜರ ಅಂತ್ಯಕ್ರಿಯೆಯು ನಡೆಯುತ್ತದೆ.

ರಜಾ ದಿನವಾಗಿ ಘೋಷಣೆ

೧೫ನೇ ತಾ|| ನ ದಿವಸ ಭಾರತಾದ್ಯಂತವೆಲ್ಲಾ ಶಾಲಾ ಕಾಲೇಜುಗಳು, ಬ್ಯಾಂಕುಗಳಿಗೆ ಪೂರ್ತಿ ರಜ ಕೊಡಲಾಗಿದೆ. ಸರ್ಕಾರೀ ಕಛೇರಿಗಳಿಗೆ ಮಧ್ಯಾಹ್ನ ರಜಾ ಕೊಡಲಾಗುತ್ತದೆ.

ಪರಿಶೀಲನಾ ಸಮಿತಿ

ರಾಷ್ಟ್ರಾಧ್ಯಕ್ಷರು ಪಾರ್ಲಿಮೆಂಟಿನಲ್ಲಿ ತಮ್ಮ ಭಾಷಣದಲ್ಲಿ ತಿಳಿಸಿದಂತೆ ಆಯೋಜನಾ ಮಂಡಲಿಯ ಸದಸ್ಯ ಶ್ರೀ ವಿ ಟಿ ಕೃಷ್ಣಮಾಚಾರ್ಯರ ಅಧ್ಯಕ್ಷತೆಯಲ್ಲಿ ೮ ಜನರನ್ನೊಳಗೊಂಡ ಒಂದು ಸಮಿತಿಯನ್ನು ಹೆಚ್ಚು ಆಹಾರಬೆಳೆ ಯೋಜನೆಯ ಕಾರ್ಯ ಪರಿಶೀಲಿಸಿ ಸರ್ಕಾರಕ್ಕೆ ತಕ್ಕ ಸಲಹೆನೀಡಲು ನೇಮಿಸಲಾಗಿದೆ.

ಮಂತ್ರಿಮಂಡಲದ ರಾಜೀನಾಮೆ

ಮಧ್ಯಭಾರತ ಮುಖ್ಯಮಂತ್ರಿ ಶ್ರೀ ತಾಖತ್‌ಮಲ್‌ಜೈನ್‌ರವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ರಾಜಪ್ರಮುಖರಿಗೆ ನಿನ್ನೆ ಸಲ್ಲಿಸಿದರೆಂದು ಗೊತ್ತಾಗಿದೆ.

ಪ್ರಿನ್ಸ್ ಕಾನ್ಸಾರ್ಟ್

ರಾಜಕುಮಾರಿ ಎಲಿಜಬೆತ್ ರಾಣಿಯಾದುದರಿಂದ ಆಕೆಯ ಪತಿ ಡ್ಯೂಕ್ ಆಫ್ ಎಡಿನ್‌ಬರೋರವರು ಪ್ರಿನ್ಸ್ ಕಾನ್ಸಾರ್ಟ್ ಆದರು.

ನ್ಯೂ ಅಪೇರ

೩—೨—೫೨ ರಿಂದ

ರತ್ನಮಾಲಾ

(ತೆಲುಗು) (ನ್ಯೂ ಪ್ರಿಂಟ್)

ತಾರಾಗಣ:- ಭಾನುಮತಿ, ಸಿ.ಎಸ್.ಆರ್, ನಾಗೇಶ್ವರರಾವ್, ಡಾ|| ಜಿ. ವಿ. ಸುಬ್ಬರಾವ್.

ರಣಜಿತ್

೧—೨—೫೨ ರಿಂದ ಅಮೋಘ ೨ನೇ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆವಾರ ::—

(ಹಿಂದಿ)

ಪ್ರಕಾಶಕರು :—ಜಿ ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು—ಹಿ. ಕಾ. ಸುಬ್ಬರಾವ್ ಮೋಹನ್ ಮುದ್ರಣಾಲಯ ಮೈಸೂರು

ವುಡ್‌ಲ್ಯಾಂಡ್ಸ್ * 1-2-52 ರಿಂದ ಅಮೋಘಪ್ರಾರಂಭ ಪ್ರತಿದಿನ ಮೂರು ಆಟಗಳು

* ನಗೀನಾ *

ಪಾತ್ರ:- ನಾಸಿರ್‌ಖಾನ್, ನೂತನ್, ಗೋಪ್, ಮೋಹನ.

ಇದರ ಜೊತೆಗೆ ಲಿಯಾಖತ್ ಅಲಿಖಾನ್‌ರವರ ನಿಧನ ಪ್ರದರ್ಶನವನ್ನು ತೋರಿಸಲ್ಪಡುತ್ತೆ

ABSTRACT NOTIFICATION

Dated 29 th January 1952

Sealed tenders for renewing the damaged terrace of a portion of the store room and verandah of Farashkhana Offices Block in the South Wing (rear block) of Jaganmohan Palace, Mysore will be received till 3-30 P.M. on 13 th February 1952.

Sd/ H. K. PANDITHARADHYA,
Palace Engineer.

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೧—೨—೧೯೫೨ನೇ ಸೋಮವಾರ [ಸಂಚಿಕೆ ೧೪೧

ತಿರುವಾಂಕೂರ್ ಕೊಚ್ಚಿನ್ನಿನ ಮಂತ್ರಿಮಂಡಲ ರಾಜೀನಾಮೆ

ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭಾರತಕ್ಕೆ ಪ್ರಪ್ರಥಮ ವಿಜಯ

ಭಾರತಕ್ಕೆ ಪ್ರಪ್ರಥಮ ವಿಜಯ

ಐದನೆ ಟೆಸ್ಟಿನಲ್ಲಿ ಒಂದು ಇನ್ನಿಂಗ್ಸ್ ೮ ರನ್ನುಗಳಿಂದ ಜಯ

ಕಳೆದ ನಾಲ್ಕು ದಿನಗಳಿಂದ ಮದ್ರಾಸಿನಲ್ಲಿ ಭಾರತಕ್ಕೂ ಎಂ. ಸಿ. ಸಿ ಗೂ ನಡೆಯುತ್ತಿದ್ದ ಐದನೆ ಟೆಸ್ಟಿನಲ್ಲಿ ಭಾರತವು ಒಂದು ಇನ್ನಿಂಗ್ಸ್ ಮತ್ತು ೮ ರನ್ನುಗಳಿಂದ ಜಯಗಳಿಸಿದೆ.

ಭಾರತವು ಇಲ್ಲಿಯವರೆಗೂ ಒಂದು ಟೆಸ್ಟಿನಲ್ಲೂ ಜಯಗಳಿಸದೆ ಈಗ ಒಂದು ಇನ್ನಿಂಗ್ಸಿನಿಂದ ಜಯಗಳಿಸಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ.

ಎಂ. ಸಿ. ಸಿ ಯವರು ಮೊದಲನೆ ಇನ್ನಿಂಗ್ಸಿನಲ್ಲಿ ೨೬೬ ರನ್ನು ಗಳಿಸಿದರು. ಭಾರತ ಮೊದಲನೆ ಇನ್ನಿಂಗ್ಸಿನಲ್ಲಿ ೯ ವಿಕೆಟ್ಟಿಗೆ ೪೫೭ ರನ್ನುಗಳಿಗೆ ಡಿಕ್ಲೇರ್ ಮಾಡಿಕೊಂಡರು. ಇದರಿಂದ ೧೯೧ ರನ್ನುಗಳನ್ನು ಭಾರತ ಹೆಚ್ಚಾಗಿ ಗಳಿಸಿತು. ಎಂ. ಸಿ. ಸಿ. ಯವರು ನಿನ್ನೆ ಎರಡನೆ ಇನ್ನಿಂಗ್ಸಿನಲ್ಲಿ ಎಲ್ಲರೂ ೧೮೩ ರನ್ನುಗಳಿಗೆ ಔಟಾದರು.

ಭಾರತವು ಟೆಸ್ಟ್ ಕ್ರಿಕೆಟ್ ಪಂದ್ಯಗಳಲ್ಲಿ ಭಾಗವಹಿಸಲು ೨೦ ವರ್ಷಗಳಿಂದ ಆರಂಭಿಸಿತು.

ಭಾರತವು ಒಟ್ಟು ೨೫ ಟೆಸ್ಟ್‌ಗಳಲ್ಲಿ ಭಾಗವಹಿಸಿ ೧೨ ಪಂದ್ಯದಲ್ಲಿ ಪರಾಜಯ ಹೊಂದಿ ೧೨ ಪಂದ್ಯಗಳನ್ನು ಸಮಮಾಡಿಕೊಂಡು ನಿನ್ನೆ ನಡೆದ ಪಂದ್ಯದಲ್ಲಿ ಜಯಗಳಿಸಿದೆ.

ಭಾರತವು ಇಲ್ಲಿಯವರೆಗೆ ಇಂಗ್ಲೆಂಡಿನ ಮೇಲೆ ೧೫, ವೆಸ್ಟ್ ಇಂಡೀಸ್‌ನವರೊಂದಿಗೆ ೫ ಮತ್ತು ಎಂ. ಸಿ. ಸಿ. ಯವರೊಂದಿಗೆ ೫ ಟೆಸ್ಟ್ ಪಂದ್ಯಗಳನ್ನಾಡಿದೆ.

೯ ಮಂದಿ ಸಮಿತಿ ನೇಮಕ

ತಿರುವಾಂಕೂರಿನ ಶಾಸನಸಭೆಯ ಕಾಂಗ್ರೆಸ್ಸೇತರ ಯುನೈಟೆಡ್ ಫ್ರಂಟ್ ಪಕ್ಷಗಳು ತಮ್ಮ ಮುಂದಿನ ನೀತಿ, ಕಾರ್ಯಕ್ರಮವನ್ನು ನಿರ್ಧರಿಸಿಕೊಳ್ಳಲು ೯ ಮಂದಿಯ ಒಂದು ಸಮಿತಿಯನ್ನು ನೇಮಿಸಿದೆ.

ಶೋಕಕಾಲ

ಇಂಗ್ಲೆಂಡಿನ ಜಾರ್ಜ್ ದೊರೆಗಳ ನಿಧನದ ಬಗ್ಗೆ ಶೋಕ ಕಾಲವನ್ನು ೧೯೫೨ನೇ ಮೇ ಮಾಹೆ ಅಂತ್ಯದವರೆಗೆಯೆಂದು ನಿರ್ಧರಿಸಲಾಗಿದೆ.

ಲೈಸೆನ್ಸ್‌ಗಳ ತನಿಖೆ

ಬೆಂಗಳೂರು ಫೆ ೧೧

ಪೋಸ್ಟಲ್ ಇಲಾಖೆಯವರು ಬೆಂಗಳೂರಿನಲ್ಲಿ ೧೮ನೇ ತಾ|| ನಿಂದಲೂ, ಮೈಸೂರಿನಲ್ಲಿ ೨೪ನೇ ತಾ|| ನಿಂದಲೂ ಲೈಸನ್ಸ್ ಇಲ್ಲದೆ ರೇಡಿಯೋ ಸೆಟ್ ಹೊಂದಿರುವುದರ ಬಗ್ಗೆ ತನಿಖೆ ನಡೆಸುವರು. ರೇಡಿಯೋ ಹೊಂದಿರುವವರು ತನಿಖೆಮಾಡಲು ಬರುವವರಿಗೆ ತಮ್ಮ ಲೈಸೆನ್ಸ್‌ಗಳನ್ನು ತೋರಿಸಬೇಕೆಂದು ಕೋರಲಾಗಿದೆ.

೭ ಮಂತ್ರಿಗಳ ಪರಾಜಯ

ಪಶ್ಚಿಮ ಬಂಗಾಳದಲ್ಲಿರುವ ೧೨ ಮಂತ್ರಿಗಳ ಪೈಕಿ ೭ ಮಂತ್ರಿಗಳು ಚುನಾವಣೆಯಲ್ಲಿ ಪರಾಜಯ ಹೊಂದಿರುವರು. ಅಲ್ಲಿಯ ಗೌರ್ನರರು ಡಾ|| ಬಿ ಸಿ ರಾಯ್‌ರವರ ಸರ್ಕಾರದ ರಾಜೀನಾಮೆಯನ್ನು ಅಂಗೀಕರಿಸಿ, ಪುನಃ ಅವರ ನಾಯಕತ್ವದಲ್ಲಿಯೇ ಜಯಗಳಿಸಿದ ಮಂತ್ರಿಗಳನ್ನೊಳಗೊಂಡ ತಾತ್ಕಾಲಿಕ ಮಂತ್ರಿಮಂಡಲವು ರಚನೆಯಾಗುವುದೆಂದು ಹೇಳಲಾಗಿದೆ.

ರಾಜಕುಮಾರರ ದಸ್ತಗಿರಿ

ಮದರಾಸಿನ ಗೌರ್ನರ್ ಭಾವನಗರದ ಮಹಾರಾಜರ ಕಿರಿಯ ಸಹೋದರ ನಿರ್ಮಲ ಕುಮಾರ ಸಿಂಹಜೀಯವರನ್ನು ಸೌರಾಷ್ಟ್ರ ಸರ್ಕಾರವು ದರೋಡೆ ಅಪಾದನೆ ಮೇಲೆ ದಸ್ತಗಿರಿ ಮಾಡಿರುವರೆಂದು ಹೇಳಲಾಗಿದೆ. ಅವರ ಬಳಿಯಲ್ಲಿದ್ದ ಆಯುಧ ಗುಂಡುಮದ್ದುಗಳನ್ನು ಸರ್ಕಾರವು ವಶಪಡಿಸಿಕೊಂಡಿದೆ.

ಪಾರ್ಲಿಮೆಂಟ್ ಫಲಿತಾಂಶ

ನಿನ್ನೆ ಹೊರಬಿದ್ದ ಪಾರ್ಲಿಮೆಂಟಿನ ನಾಲ್ಕು ಫಲಿತಾಂಶಗಳಲ್ಲಿ ನಾಲ್ಕೂ ಕಾಂಗ್ರೆಸ್ಸಿಗೆ ಲಭಿಸಿ ಉತ್ತರ ಪ್ರದೇಶದ ಶ್ರೀ ಜೋಗೇಂದ್ರಸಿಂಗ್, ಶ್ರೀ ಅಚಲಸಿಂಗ್ ಸೇಟ್, ಅಸ್ಸಾಮಿನ ಶ್ರೀ ರೋಹಿಣಿಕುಮಾರ ಚೌಧುರಿ ಮತ್ತೊಬ್ಬರು ಚುನಾಯಿತರಾಗಿರುವರು. ಈಗ ಪಾರ್ಲಿಮೆಂಟಿನಲ್ಲಿ ಕಾಂಗ್ರೆಸ್‌ಗೆ ಬಹುಮತ ಬಂದಿದೆ.

ಆಹಾರ ಸರಬರಾಜು

ಅಮೇರಿಕಾದಿಂದ ಭಾರತಕ್ಕೆ ಕೊಟ್ಟಿರುವ ೨೦ ಮಿಲಿಯನ್ ಡಾಲರ್ ಆಹಾರದ ಕೊನೆಯ ಕಂತು ಏಪ್ರಿಲ್ ಮಾಹೆಯೊಳಗೆ ಭಾರತಕ್ಕೆ ಬರಲಿದೆಯೆಂದು ಹೇಳಲಾಗಿದೆ. ಅಲ್ಲಿಗೆ ಸಂಬಂಧಾಯ ಪೂರ್ತಿಯಾಗುತ್ತದೆ.

೪ ವರ್ಷದ ಮಹಾರಾಜರಿಗೆ ೧೦ ಲಕ್ಷ ರೂ. ರಾಜವೇತನ

ವಿಮಾನ ಅಪಘಾತದಲ್ಲಿ ಮರಣ ಹೊಂದಿದ ಜೋಧ್‌ಪುರದ ಮಹಾರಾಜರ ೪ ವರ್ಷದ ಮಗ ಮಹಾರಾಜ ಗಜೇಂದ್ರಸಿಂಗ್ ರಾಠೋರ್‌ರವರಿಗೆ ಭಾರತ ಸರ್ಕಾರವು ವರ್ಷಂಪ್ರತಿ ೧೦ ಲಕ್ಷ ರೂಗಳ ರಾಜವೇತನವನ್ನು ಮಂಜೂರ್ ಮಾಡಿದೆ. ನಿಧನರಾದ ರಾಜರಿಗೆ ವರ್ಷಂಪ್ರತಿ ೧೭|| ಲಕ್ಷ ರೂಪಾಯಿ ಕೊಡಲಾಗುತ್ತಲಿತ್ತು.

ಉಸ್ಮಾನಿಯಾ ವಿಶ್ವವಿದ್ಯಾಲಯದ ತೀರ್ಮಾನ

ಉಸ್ಮಾನಿಯಾ ವಿಶ್ವವಿದ್ಯಾಲಯದ ಕಾಲೇಜುಗಳಿಗೆ ಸೇರಬೇಕೆಂದು ಅರ್ಜಿ ಹಾಕುವ ವಿದ್ಯಾರ್ಥಿಗಳ ಜಾತಿ ಮತ್ತು ಧರ್ಮಗಳನ್ನು ಕೇಳಬೇಕಾಗಿಲ್ಲವೆಂದು ನಿನ್ನೆ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ತೀರ್ಮಾನಿಸಿದೆ.

ಅಂತರರಾಷ್ಟ್ರೀಯ ಬ್ಯಾಂಕ್ ಅಧ್ಯಕ್ಷರು

ಅಂತರರಾಷ್ಟ್ರೀಯ ಅಭಿವೃದ್ಧಿ ಕಾರ್ಯಗಳ ಬ್ಯಾಂಕಿನ ಅಧ್ಯಕ್ಷ ಮಿ|| ಯೂಜೀನ್ ಬ್ಲಾಕ್‌ರವರು ದೆಹಲಿಗೆ ಆಗಮಿಸಿರುವರು. ಭಾರತದಲ್ಲಿ ಆರ್ಥಿಕಾಭಿವೃದ್ಧಿ ವಿಷಯವಾಗಿ ಅವರು ಉನ್ನತಾಧಿಕಾರಿಗಳನ್ನು ಭೇಟಿಮಾಡಿ ಸಮಾಲೋಚನೆ ನಡೆಸುವರು. ಅಲ್ಲದೆ ಅನೇಕ ಮುಖ್ಯ ಕ್ಷೇತ್ರಗಳಿಗೆಲ್ಲಾ ಭೇಟಿ ಕೊಡುವರು.

ಮದರಾಸಿನಲ್ಲಿ ಫಲಿತಾಂಶ ಮುಕ್ತಾಯ

ಮದರಾಸಿನಲ್ಲಿ ಶಾಸನ ಸಭೆಯ ಫಲಿತಾಂಶಗಳೆಲ್ಲಾ ಹೊರಬಿದ್ದಿವೆ. ಕಾಂಗ್ರೆಸ್ಸಿಗೆ ೧೫೨, ಕಮ್ಯೂನಿಸ್ಟ್ ೬೨, ಸ್ವತಂತ್ರ ೬೨, ಕೆ ಎಂ ಪಿ ೩೫, ತಮಿಳುನಾಡು ಶ್ರಮಜೀವಿ ೧೯, ಕೃಷಿಕರ್ ಪಕ್ಷ ೧೫, ಸೋಷಲಿಸ್ಟ್ ೧೩, ಕಾಮನ್‌ವೆಲ್ತ್ ೬, ಮುಸ್ಲಿಂಲೀಗ್ ೫, ಫಾರ್‌ವರ್ಡ್ ಬ್ಲಾಕು ೯, ಷೆಡ್ಯೂಲ್ ಕ್ಲಾಸ್ಟ್ ೨, ಜಸ್ಟಿಸ್ ಪಕ್ಷ ೧ ಸ್ಥಾನಗಳು ದೊರೆತಿವೆ.

ಹೊಸ ಶಾಸನಸಭಾಧಿವೇಶನ

ತಿರುವಾಂಕೂರ್-ಕೊಚ್ಚಿನ್ ಪ್ರಾಂತ್ಯದಲ್ಲಿ ಹೊಸ ಶಾಸನಸಭಾಧಿವೇಶನವು ಮುಂದಿನ ಮಾಹೆ ೨೦ನೇ ತಾರೀಖು ನಡೆಯುವುದೆಂದು ಹೇಳಲಾಗಿದೆ. ಇದೇ ಮಾಹೆ ೧೮ನೇ ತಾರೀಖು ಕಾಂಗ್ರೆಸ್ ಪಕ್ಷದವರು ಸಭೆ ಸೇರಿ ತಮ್ಮ ಪಕ್ಷದ ನಾಯಕರನ್ನು ಚುನಾಯಿಸಿಕೊಳ್ಳುವರು.

ತಿರುವಾಂಕೂರು-ಕೊಚ್ಚಿನ್ನಿನ ಮುಖ್ಯಮಂತ್ರಿ ಶ್ರೀ ಕೇಶವನ್‌ಪಿಳ್ಳೆಯವರು ನಿನ್ನೆಯದಿನ ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಅಲ್ಲಿನ ರಾಜಪ್ರಮುಖರಿಗೆ ಒಪ್ಪಿಸಿದರು. ಚುನಾವಣೆಗಳಲ್ಲಿ ಹಲವು ಮಂತ್ರಿಗಳು ಸೋತುದರ ಪರಿಣಾಮವಾಗಿ ಈ ಕಾರ್ಯಕ್ರಮ ಕೈಕೊಳ್ಳಲಾಯಿತೆಂದು ಮುಖ್ಯಮಂತ್ರಿಗಳು ರಾಜಪ್ರಮುಖರಿಗೆ ತಿಳಿಸಿದರು. ರಾಜೀನಾಮೆ ಕೊಟ್ಟುದಕ್ಕೆ ರಾಜಪ್ರಮುಖರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿ ನೂತನ ಏರ್ಪಾಡು ಆಗುವವರೆಗೆ ಈಗಿರುವ ಮಂತ್ರಿಮಂಡಲವನ್ನೇ ಮುಂದುವರಿಸಬೇಕೆಂದು ತಿಳಿಸಿದರೆಂದು ಗೊತ್ತಾಗಿದೆ.

ಉತ್ತರ ಪ್ರದೇಶದ ಫಲಿತಾಂಶ

ಉತ್ತರ ಪ್ರದೇಶ ಶಾಸನ ಸಭೆಯ ಪಕ್ಷಗಳ ಬಲಾಬಲ ಈರೀತಿ ಇದೆ. ಕಾಂಗ್ರೆಸ್ ೨೦೭, ಸೋಷಲಿಸ್ಟ್ ೧೦, ಸ್ವತಂತ್ರ ೨, ೬, ಕ್ರಾಂತಿಕಾರಿ ಸೋಷಲಿಸ್ಟ್ ೧, ಕೆ ಎಂ ಪಿ ೧, ಜನ ಸಂಘ ೧, ಉತ್ತರ ಪ್ರದೇಶ ಪ್ರಜಾಪಂಚಕ್ ೧, ಒಟ್ಟು ೨೩೭ ಫಲಿತಾಂಶ ಹೊರಬಿದ್ದಿದೆ.

ಕರ್ಫ್ಯೂ ಸಡಿಲ ಮಾಡಲಾಗಿತ್ತು

ಜಮ್ಮುವಿನಲ್ಲಿ ನಿನ್ನೆ ಜನರು ಆಹಾರ ಕೊಳ್ಳಲು ಅಲ್ಲಿ ವಿಧಿಸಲಾಗಿದ್ದ ಕರ್ಫ್ಯೂ ಆಜ್ಞೆಯನ್ನು ಸಡಿಲಗೊಳಿಸಲಾಗಿತ್ತಲ್ಲದೆ ಜನರು ರೇಷನ್ ಡಿಪೋಗಳ ಬಳಿ ಗುಂಪುಕೂಡದಂತೆ ಆಹಾರ ಹಂಚಲು ಏರ್ಪಾಡು ಮಾಡಲಾಗಿತ್ತೆಂದು ತಿಳಿಸಿ ಪ್ರಕಟನೆ ಹೊರಬಿದ್ದಿದೆ. ಈಗ ಅಲ್ಲಿ ಪರಿಸ್ಥಿತಿಯು ಶಾಂತವಾಗಿದೆಯೆಂದು ಅದೇ ಪ್ರಕಟನೆ ತಿಳಿಸುತ್ತದೆ.

ಪಾರ್ಲಿಮೆಂಟಿಗೆ

ಪಾರ್ಲಿಮೆಂಟಿನ ೪೯೭ ಸ್ಥಾನಗಳಲ್ಲಿ ಈಗಾಗಲೇ ೩೫೧ ಸ್ಥಾನಗಳ ಫಲಿತಾಂಶ ಹೊರಬಿದ್ದಿದೆ. ಕಾಂಗ್ರೆಸ್ಸಿಗೆ ೨೫೦ ಸ್ಥಾನಗಳು, ಕಮ್ಯೂನಿಸ್ಟ್ ೧೫, ಸೋಷಲಿಸ್ಟ್ ೫, ಕೆ ಎಂ ಪಿ ೯, ಡೆಮೊಕ್ರಾಟಿಕ್ ಫ್ರಂಟ್ ೭, ಹಿಂದೂ ಮಹಾಸಭೆ ೩, ಗಣತಂತ್ರ ಪರಿಷತ್ತು ೫, ಸ್ವತಂತ್ರರು ೩೨ ಸ್ಥಾನಗಳು, ಇತರರು ೨೭.

ಸ್ವತಂತ್ರ ರಾಷ್ಟ್ರಗಳ ಶಕ್ತಿಯು ಅಗಾಧವಾಗಿದೆ

ವಾಷಿಂಗ್ಟನ್ ಫೆ ೧

ಸ್ವತಂತ್ರ ರಾಷ್ಟ್ರಗಳ ಮಾನವ ಮತ್ತು ಇತರ ಶಕ್ತಿಗಳು ರಷ್ಯಾ ಮತ್ತು ಅದರ ಬೆಂಬಲಿಗ ರಾಷ್ಟ್ರಗಳ ಶಕ್ತಿಗಿಂತ ಜಾಸ್ತಿಯಾಗಿದೆ

'ಪ್ರಪಂಚದ ಶಕ್ತಿ' ಎಂಬ ಪತ್ರಿಕೆಯನ್ನು ಅಮೆರಿಕ ಪರಸ್ಪರ ರಕ್ಷಣಾನಿಧಿಯವರು ಹೊರಡಿಸಿ, ಮೇಲ್ಕಂಡ ಅಂಶವನ್ನು ಆ ಪತ್ರಿಕೆಯಲ್ಲಿ ಕಾಣಿಸಿದ್ದಾರೆ. ಅದರಲ್ಲಿ ರಷ್ಯಾ ಮತ್ತು ಸ್ವತಂತ್ರ ದೇಶಗಳ ಪ್ರಜಾಸಂಖ್ಯೆ ಮತ್ತು ಉತ್ಪತ್ತಿಯು ತುಲನಾತ್ಮಕ ದೃಷ್ಟಿಯಲ್ಲಿ ಕಾಣಿಸಲಾಗಿದೆ.

ಅದರ ಅಂಕಿ ಅಂಶಗಳ ಪ್ರಕಾರ ಅಮೇರಿಕ ಮತ್ತು ಪಶ್ಚಿಮ ಯುರೋಪಿನ ರಾಷ್ಟ್ರಗಳ ಜನಸಂಖ್ಯೆಯು ೪೩೪ ಮಿಲಿಯನ್ ಇದ್ದು ೧೬೯ ಮಿಲಿಯನ್ ಟನ್ ಉಕ್ಕನ್ನೂ, ೧೦೬೫ ಮಿಲಿಯನ್ ಟನ್ ಕಬ್ಬಿಣವನ್ನೂ ಪ್ರತಿವರ್ಷವೂ ಉತ್ಪತ್ತಿ ಮಾಡುತ್ತದೆ

ಸೋವಿಯೆಟ್ ಗುಂಪಿನ ರಾಷ್ಟ್ರಗಳ ಜನಸಂಖ್ಯೆಯು ೩೦೨ ಮಿಲಿಯನ್ ಇದ್ದು ೪೩ ಮಿಲಿಯನ್ ಟನ್ ಉಕ್ಕನ್ನೂ ೪೨೦ ಮಿಲಿಯನ್ ಟನ್ ಕಬ್ಬಿಣವನ್ನೂ ತಯಾರು ಮಾಡುತ್ತವೆ.

ಅಮೇರಿಕದ ಜನಸಂಖ್ಯೆ ೧೫೬ ಮಿಲಿಯನ್ ಇದೆ ಆ ಒಂದು ರಾಷ್ಟ್ರದ ಉಕ್ಕು ಮತ್ತು ಕಬ್ಬಿಣದ ಉತ್ಪತ್ತಿಯು ಕ್ರಮವಾಗಿ ೧೦೬ ಮತ್ತು ೫೬೪ ಮಿಲಿಯನ್ ಟನ್ನುಗಳೆಂದು ಕಾಣಿಸಲಾಗಿದೆ.

ಸ್ವಾತಂತ್ರ್ಯದೊಂದಿಗೆ ಶಾಂತಿ

ಫೌಂಟೆನ್‌ಬ್ಲೂ ಫೆ ೪

ಉತ್ತರ ಅಟ್ಲಾಂಟಿಕ್ ಒಪ್ಪಂದ ಸಮ್ಮೇಳನದ ದೇಶಗಳಿಗೆ ಶಾಂತಿಬೇಕು. ಆದರೆ ಶಾಂತಿಗೋಸ್ಕರವಾಗಿ ಸ್ವಾತಂತ್ರ್ಯವನ್ನು ಬಲಿಕೊಡಲು ಸಾಧ್ಯವಿಲ್ಲ ಎಂದು ಸೇನಾಪತಿ ಐಸೆನ್‌ಹೋವರು ನ್ಯಾಟೋ ಸೈನಿಕರನ್ನುದ್ದೇಶಿಸಿ ಹೇಳಿದರು.

ನ್ಯಾಟೋ ರಾಷ್ಟ್ರಗಳು ತಮ್ಮ ರಾಷ್ಟ್ರಗಳ ಸ್ವರಕ್ಷಣೆಗೋಸ್ಕರವಾಗಿ ಮಾತ್ರ ಶಸ್ತ್ರಾಸ್ತ್ರಗಳನ್ನು ಪಯೋಗಿಸುವರು. ನಾವು ಹೆದರಿಕೆಗೂ ಬೆದರುವುದಿಲ್ಲ. ಯಾರಲ್ಲಿಯೂ ಭಿಕ್ಷೆಬೇಡಲು ಹೋಗುವುದಿಲ್ಲ

ರಾಷ್ಟ್ರದ, ಪ್ರಪಂಚದ ಶಾಂತಿಯನ್ನು ಕಾಯ್ದು ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಕಾರ್ಯದಲ್ಲಿ ನ್ಯಾಟೋ ಸೈನಿಕರಿಗೆ ಅಪೂರ್ವವಾದ ಅವಕಾಶವಿರುವುದಾಗಿ ಸೇನಾಪತಿಗಳು ತಿಳಿಸಿದರು.

ಮೈಸೂರಿಗೆ ಮಾತ್ರ ಸಲಹೆಗಾರರಿಲ್ಲ

'ಬಿ' ವಿಭಾಗದ ಸಂಸ್ಥಾನಗಳಲ್ಲಿ ಸಲಹೆಗಾರರನ್ನು ನೇಮಿಸಲು ಭಾರತ ಸರ್ಕಾರ ನಿರ್ಧರಿಸಿದೆ ಎಂದು ತಿಳಿದುಬಂದಿದೆ.

ಈ ಸಂಸ್ಥಾನಗಳಲ್ಲಿರುವ ಸಲಹೆಗಾರರು ಅಥವಾ ಪ್ರಾದೇಶಿಕ ಕೌನ್ಸಿಲರುಗಳ ಕರ್ತವ್ಯಗಳನ್ನು ವಹಿಸಿಕೊಳ್ಳುವರು?

ಈಗಿನ ಮುಖ್ಯಮಂತ್ರಿಗಳಾದ ಶ್ರೀ ಎಂ. ಕೆ. ವೆಲ್ಲೋಡಿ ಸಹಿತ, ಹೈದರಾಬಾದಿಗೆ ಇಬ್ಬರು ಸಲಹೆಗಾರರನ್ನು ನೇಮಕ ಮಾಡಲಾಗುವುದು.

ತಿರುವಾಂಕೂರು-ಕೊಚ್ಚಿಯಲ್ಲಿ ಈಗ ಸಲಹೆಗಾರರಾಗಲೀ, ಕಮಿಷನರರಾಗಲೀ ಇಲ್ಲ- ಆ ಸಂಸ್ಥಾನದಲ್ಲಿ ಸಲಹೆಗಾರರನ್ನು ನೇಮಿಸಲಾಗುವುದೆಂದು ಗೊತ್ತಾಗಿದೆ

ಆದರೆ, ಈಗಾಗಲೇ ರಾಜ್ಯಾಂಗದ ೩೭೧ನೇ ವಿಧಿಯಿಂದ ರಿಯಾಯಿತಿಯನ್ನು ಹೊಂದಿರುವ ಮೈಸೂರು ಸಂಸ್ಥಾನಕ್ಕೆ ಮಾತ್ರ ಸಲಹೆಗಾರರನ್ನು ನೇಮಿಸಲಾಗುವುದಿಲ್ಲವೆಂದೂ ಸಹ ಖಚಿತವಾಗಿ ತಿಳಿದು ಬಂದಿದೆ

ಲೋಕಸಭೆಗೆ ಉಪಸಚಿವ ಆಯ್ಕೆ

ಕೇಂದ್ರ ಸರ್ಕಾರದ ವಿದ್ಯಾಸಚಿವ ಮೌಲಾನಾ ಅಬುಲ್ ಕಲಾಂ ಆಜಾದರು ಉತ್ತರ ಪ್ರದೇಶದ ರಾಂಪುರ-ಬರೈಲಿ ಕ್ಷೇತ್ರದಿಂದಲೂ, ವಿದೇಶಾಂಗ ಶಾಖೆಯ ಉಪಸಚಿವ ಡಾ॥ ಬಿ ವಿ. ಕೇಸ್ಕರರು ಸುಲ್ತಾನ್‌ಪುರ ಜಿಲ್ಲಾ ದಕ್ಷಿಣ ಕ್ಷೇತ್ರದಿಂದಲೂ ಲೋಕಸಭೆಗೆ ಚುನಾಯಿತರಾಗಿದ್ದಾರೆ.

ನೆಹರೂ--ಸ್ವಾಮಿ ಸೀತಾರಾಂ ಭೇಟಿ

ಪ್ರತ್ಯೇಕ ಆಂಧ್ರ ಪ್ರಾಂತದ ರಚನೆಯ ಬಗ್ಗೆ ಚರ್ಚಿಸಲೋಸುಗ ಭಾರತದ ಪ್ರಧಾನಿ ಹಾಗೂ ಕಾಂಗ್ರೆಸ್ ಅಧ್ಯಕ್ಷರಾದ ಜವಾಹರಲಾಲ್ ನೆಹರೂರನ್ನು ಆಂಧ್ರ ನಾಯಕ ಸ್ವಾಮಿ ಸೀತಾರಾಂರವರು ದೆಹಲಿಯಲ್ಲಿ ಸದ್ಯದಲ್ಲಿಯೇ ಭೇಟಿ ಮಾಡುವರೆಂದು ಖಚಿತವಾಗಿ ಗೊತ್ತಾಗಿದೆ.

ದ್ವಿ ಸದಸ್ಯತ್ವ

ಮೈಸೂರು ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿ ಒಂದೇ ಕಾಲದಲ್ಲಿ ಸಂಸ್ಥಾನದ ಶಾಸನಸಭೆ ಮತ್ತು ಪಾರ್ಲಿಮೆಂಟಿಗೆ ಸದಸ್ಯರಾಗುವುದನ್ನು ನಿಷೇಧಿಸುವ ಕಾನೂನನ್ನು, ಸಂಸ್ಥಾನದ ಅಸೆಂಬ್ಲಿ ಅಥವಾ ಪಾರ್ಲಿಮೆಂಟಿಗೆ ಚುನಾಯಿಸಲ್ಪಟ್ಟಿರುವವರ ಗಮನಕ್ಕೆ ತಂದಿದ್ದಾರೆ.

ಚುನಾವಣಾ ಫಲಿತಾಂಶ ಹೊರಬಿದ್ದ ಹತ್ತು ದಿವಸಗಳೊಳಗಾಗಿ ತಾವು ಯಾವ ಸಭೆಯಿಂದ ಸಸೇವೆ ಲ್ಲಿಸಲ್ಪಟ್ಟಿರುವರೆಂಬ ಬಗ್ಗೆ ರಾಜಪ್ರಮುಖರಿಂದ ನಿಯೋಜಿಸಲ್ಪಟ್ಟವರಿಗೆ ಲಿಖಿತಮೂಲಕ ತಿಳಿಸಬೇಕು.

ಮಂತ್ರಿಮಂಡಲ ಸಭೆ ಭದ್ರಾವತಿಯಲ್ಲಿ

ಮೈಸೂರು ಸರ್ಕಾರದ ಆರು ಜನ ಮಂತ್ರಿಗಳೂ ತಾ॥ ೧೪-೨-೫೨ ರಲ್ಲಿ ಬೆಂಗಳೂರಿನಿಂದ ಕಾರಿನಲ್ಲಿ ಬೆಳಿಗ್ಗೆ ಹೊರಟು ಮಧ್ಯಾಹ್ನ ಸುಮಾರು ಹನ್ನೆರಡು ಗಂಟೆಗೆ ತಿಮ್ಮಣ್ಣಗುಂಡಿಯನ್ನು ತಲುಪುವರು. ತಿಮ್ಮಣ್ಣಗುಂಡಿಯ ಗಣಿಗಳನ್ನು ಪರೀಕ್ಷಿಸಿ, ಅಲ್ಲಿಂದ ಒಂದಿ ಗುಡ್ಡದ ಗಣಿಗಳನ್ನು ಪರಿಶೀಲಿಸಿ, ಲಕ್ಕವಳ್ಳಿ ಪ್ರಾಜೆಕ್ಟನ್ನು ಪರಿಶೀಲಿಸಿ, ಅದೇ ದಿವಸ ಸಾಯಂಕಾಲ ಭದ್ರಾವತಿಗೆ ತಲುಪುವರು.

ತಾ॥ ೧೫-೨-೫೨ ರಲ್ಲಿ ಉಕ್ಕಿನ ಕಾರ್ಖಾನೆಯ 'ಫೇರ್ಲಾನ್' ಬಂಗಲೆಯಲ್ಲಿ ಮಂತ್ರಿಮಂಡಲದ ಸಭೆ ಸೇರುವುದು. ತಾ॥ ೧೬-೨-೫೨ ರ ಬೆಳಿಗ್ಗೆ ಜೋಗ್‌ಗೆ ತೆರಳಿ ಹಿರೇ ಭಾಸ್ಕರ ಅಣೆಕಟ್ಟು ಮತ್ತು ಇಪ್ಪತ್ತು ಕೋಟಿ ರೂ. ಅಂದಾಜಿನಿಂದ ನಿರ್ಮಾಣವಾಗಲಿರುವ ಹೊಸ್ನೆ ಮರಡು ಪ್ರಾಜೆಕ್ಟನ್ನು ಪರಿಶೀಲಿಸುವರು ಎಂದು ತಿಳಿದುಬಂದಿದೆ.

ಸರ್ಕಾರ ರಚಿಸಲು ಸಿದ್ಧ

ಕೆ. ಎಂ. ಪಿ. ಪಕ್ಷದ ಎಚಸಿಯು ಮೊದಲ ಹಂತದಲ್ಲಿ, ಮದ್ರಾಸಿನಲ್ಲಿ ವಿರೋಧ ಪಕ್ಷವಾಗಿ ಉಳಿಯಲು ಇಚ್ಛಿಸುತ್ತದೆ

ಇತರ ಪ್ರತಿಗಾಮಿ ಪಕ್ಷಗಳೊಂದಿಗೆ ಸಹಕರಿಸಿ ಕಾಂಗ್ರೆಸ್ಸೇತರ ಸರ್ಕಾರವನ್ನು ಸ್ಥಾಪಿಸಬೇಕೆಂದು ಜನತೆಯು ಒತ್ತಾಯ ಮಾಡಿದರೆ, ರಾಷ್ಟ್ರದ ಹಿತದೃಷ್ಟಿಯಿಂದ ಆ ಹೊಣೆಯನ್ನು ಹೊರಲು ಕೆ. ಎಂ. ಪಿ. ಸಿದ್ಧವಿದೆ, ಎಂದು ಆಚಾರ್ಯ ಕೃಪಲಾನಿ ತಿಳಿಸಿದರು.

ಫೆಬ್ರವರಿ ೧೨ ರಂದು ಮದ್ರಾಸಿನಲ್ಲಿ ನಡೆಯುವ ಕಾಂಗ್ರೆಸ್ಸೇತರ ಶಾಸನಸಭಾ ಸದಸ್ಯರ ಸಭೆಯು ಕಾರ್ಯಕಲಾಪಗಳಿಂದ ಬರುವ ಸಲಹೆಗಳನ್ನು ಪರಿಶೀಲಿಸಿ ಮುಂದಿನ ಕಾರ್ಯಕ್ರಮವನ್ನು ಕೆ. ಎಂ. ಪಿ. ಪಕ್ಷದ ಕಾರ್ಯಕಾರಿ ಸಮಿತಿಯು ನಿರ್ಧರಿಸುವುದು, ಎಂದು ಶ್ರೀ ಕೃಪಲಾನಿ ಹೇಳಿದರು.

ಶ್ರೀ ಕೆ. ಎಂ. ಮುನಷಿ ಮದರಾಸಿನ ಗೌರ್ನರ್?

ಕೇಂದ್ರದ ಆಹಾರ ಸಚಿವ ಶ್ರೀ ಕೆ ಎಂ ಮುನ್ಷಿಯವರನ್ನು ಮದರಾಸಿನ ಗೌರ್ನರನ್ನಾಗಿ ನೇಮಿಸುವ ಪ್ರಯತ್ನ ದೆಹಲಿಯಲ್ಲಿ ಸಾಗಿದೆಯೆಂದು ಗೊತ್ತಾಗಿದೆ.

ಒಂದುಸಾವಿರ ಆಟಂಬಾಂಬ್ ಇದೆ

ಅಮೇರಿಕದ ಬಳಿ ೧೯೫೪ರಲ್ಲಿ ನಾಗಾಸಾಕಿಯಲ್ಲಿ ಹಾಕಿದಂಥ ಒಂದು ಸಾವಿರ ಆಟಂಬಾಂಬುಗಳಿವೆಯೆಂದು ಧಾರಾಳವಾಗಿ ಹೇಳಬಹುದು ಎಂದು ಅಣುಶಾಸ್ತ್ರಜ್ಞ ಡಾ॥ ರಾಲ್ಫ್ ತಿಳಿಸಿದರು.

ಮಿತವ್ಯಯ ಕ್ರಮ

ಬೆಂಗಳೂರು ಫೆ ೯

ಖರ್ಚಿನಲ್ಲಿ ಶೇಕಡ ಐದರಿಂದ ಹತ್ತರಷ್ಟು ಕಡಿಮೆ ಮಾಡಬೇಕೆಂದು ಮೈಸೂರು ಸರ್ಕಾರ ಆಜ್ಞೆ ಮಾಡಿದೆ. ನೌಕರರ ಸಂಬಳವನ್ನು ಕಡಿಮೆ ಮಾಡಬೇಕೆಂದು ಸಲಹೆ ಮಾಡಿದೆ ಮತ್ತು ನೌಕರ ವರ್ಗದವರ ಸಂಖ್ಯಾ ಪ್ರಮಾಣವನ್ನು ನಿಗದಿ ಮಾಡಲಾಗಿದೆ

ಕಳೆದುಕೊಂಡ ಠೇವಣಿ

೩೮೭೫೦ ರೂ.

ಮೈಸೂರಿನಲ್ಲಿ ಕಾಂಗ್ರೆಸ್ ಪಕ್ಷ ಲೆಜಿಸ್ಲೆಟಿವ್ ಅಸೆಂಬ್ಲಿಯ ೯೯ ಸ್ಥಾನಗಳ ಪೈಕಿ ೭೨ ಸ್ಥಾನಗಳನ್ನು ಗಳಿಸಿ ಮತ್ತೆ ಅಧಿಕಾರಕ್ಕೆ ಬರುತ್ತದೆ.

ಸ್ಪರ್ಧಿಸಿದ್ದ ೩೯೩ ಉಮೇದುವಾರರಲ್ಲಿ ೧೫೫ ಮಂದಿ ಠೇವಣಿ ಕಳೆದುಕೊಂಡರು. ಇದರಿಂದ ಸರ್ಕಾರಕ್ಕೆ ೩೮೭೫೦ ರೂ ವರಮಾನಬಂದಿದೆ.

ನ್ಯೂ ಅಪೇರ

೧೦—೨—೫೨ರಿಂದ ೨ನೇ ವಾರ

ರತ್ನಮಾಲಾ

(ತೆಲುಗು)ನ (ನ್ಯೂಪ್ರಿಂಟ್)

ತಾರಾಗಣ:- ಭಾನುಮತಿ, ಸಿ.ಎಸ್.ಆರ್, ನಾಗೇಶ್ವರರಾವ್, ಡಾ॥ ಜಿ. ವಿ. ಸುಬ್ಬರಾವ್.

ರಣಜಿತ್

೮—೨—೫೨ ರಿಂದ ಅಮೋಘ ೩ನೇ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆ ವಾ ರ ::—

(ಹಿಂದಿ)

ಪ್ರಕಾಶಕರು :—ಜಿ.ಎಲ್. ಸ್ವಾಮಿ

ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು—ಹಿ. ಕಾ. ಸುಬ್ಬರಾವ್

ಮೋಹನ ಮುದ್ರಣಾಲಯ ಮೈಸೂರು

ವುಡ್‌ಲ್ಯಾಂಡ್ಸ್ * 8-2-52ರಿಂದ ಅಮೋಘ 2ನೇ ವಾರ ಪ್ರತಿದಿನ ಮೂರು ಆಟಗಳು

* ನಗೀನಾ *

ಪಾತ್ರ:- ನಾಸೀರ್‌ಖಾನ್, ನೂತನ್, ಗೋಪ್, ಮೋಹನ.

ಇದರ ಜೊತೆಗೆ ಲಿಯಾಖತ್ ಅಲಿಖಾನ್‌ರವರ ನಿಧನ ಪ್ರದರ್ಶನವನ್ನು ತೋರಿಸಲ್ಪಡುತ್ತೆ.

ಫೋನ್ ೫೭೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೩—೨—೧೯೫೨ನೇ ಬುಧವಾರ [ಸಂಚಿಕೆ ೧೪೩

ಶ್ರೀ ಕೆ. ಸಿ. ರೆಡ್ಡಿಯವರ ನಾಯಕತ್ವ ಬದಲಾವಣೆ ಯಾಗಲೇಬೇಕು

ಪತ್ರಿಕಾಗೋಷ್ಠಿಯಲ್ಲಿ ಶ್ರೀ ಹನುಮಂತಯ್ಯನವರ ವಿವರಣೆ

ಕಮ್ಯೂನಿಸ್ಟ್ ಮಿಶ್ರ ಮಂತ್ರಿಮಂಡಲ ಸ್ಥಾಪನೆ ಅಸಾಧ್ಯ

ಕಮ್ಯೂನಿಸ್ಟ್ ಮಿಶ್ರ ಮಂತ್ರಿಮಂಡಲವನ್ನು ಮದರಾಸಿನಲ್ಲಿ ಸ್ಥಾಪಿಸುವುದು ಅಸಾಧ್ಯವೆಂದು ಈಚೆಗೆ ಕಾಂಗ್ರೆಸ್ಸೇತರರಲ್ಲಿ ನಡೆದ ಸಮಾಲೋಚನೆಯಿಂದ ತಿಳಿದುಬಂದಿದೆ.

ಕೆ ಎಂ ಪಿ ಪಕ್ಷದ ಮದರಾಸ್ ನಾಯಕ ಶ್ರೀ ಟಿ ಪ್ರಕಾಶಂರವರು ಹೇಗಾದರೂ ಮಾಡಿ ಕಾಂಗ್ರೆಸ್ಸನ್ನು ಬಿಟ್ಟರೆ ಅಧಿಕ ಸಂಖ್ಯೆಯಲ್ಲಿ ಸ್ಥಾನಗಳಿರುವ ಕಮ್ಯೂನಿಸ್ಟ್ ಪಕ್ಷದೊಡನೆ ಸೇರಿ, ಉಭಯ ಪಕ್ಷಗಳಿಗೂ ಸರಿಹೋಗುವಂತಹ ಹೊಸ ನೀತಿಯನ್ನು ತಯಾರಿಸಿ ಮಂತ್ರಿಮಂಡಲ ಸ್ಥಾಪಿಸಬೇಕೆಂಬ ಆಸೆಯು ನಿಷ್ಫಲವಾಗುವುದೆಂದು ಹೇಳಲಾಗಿದೆ. ಮಹಾ ಚುನಾವಣೆಗಳವರೆಗೆ ಅನೇಕ ದೌರ್ಜನ್ಯ ಕೃತ್ಯಗಳನ್ನು ಎಸಗಿರುವ ಕಮ್ಯೂನಿಸ್ಟ್ ಪಕ್ಷದೊಂದಿಗೆ ಕೆ ಎಂ ಪಿ ಪಕ್ಷವು ಸೇರುವುದು ಉಚಿತವಲ್ಲವೆಂದೂ ಹಾಗೇನಾದರೂ ಸೇರಲು ಶ್ರೀ ಟಿ ಪ್ರಕಾಶಂರವರ ಶ್ರಮಿಸಿದಲ್ಲಿ ಇತರ ಕೆ ಎಂ ಪಿ ಸದಸ್ಯರು ಆ ಪಕ್ಷಕ್ಕೆ ರಾಜೀನಾಮೆ ಕೊಡುವುದಾಗಿ ಹೇಳಿರುವಂತೆ ತೋರಬರುತ್ತದೆ.

ಇತ್ತೀಚೆಗೆ ಹೊರಬಿದ್ದ ಸುದ್ದಿಯ ಪ್ರಕಾರ ಕಮ್ಯೂನಿಸ್ಟರು ಸರ್ಕಾರ ಸ್ಥಾಪನೆ ಮಾಡುವ ಯೋಚನೆಯನ್ನು ಕೈಬಿಟ್ಟು ಶಾಸನ ಸಭೆಯಲ್ಲಿ ವಿರೋಧಪಕ್ಷವಾಗಿ ಮಾತ್ರ ಕೆಲಸ ಮಾಡಲು ನಿರ್ಧರಿಸಿರುವುದಾಗಿ ಹೇಳಲಾಗಿದೆ.

ಈಗಾಗಲೇ ಸೋಷಲಿಸ್ಟರು ಮತ್ತು ಕೃಷಕ ಲೋಕಪಕ್ಷದ ಪರವಾಗಿ ಶಾಸನ ಸಭೆಗೆ ಚುನಾಯಿತರಾಗಿರುವವರು ತಾವು ಕಮ್ಯೂನಿಸ್ಟರೊಡನೆ ಸೇರುವುದಿಲ್ಲವೆಂದು ಹೇಳಿರುವರು. ಅಲ್ಲದೆ ಮುಸ್ಲಿಮ್‌ಲೀಗಿನ ಪರ ಚುನಾಯಿತರಾದವರೂ ಇದೇರೀತಿ ಹೇಳಿರುವರು.

ಈ ಸ್ಥಿತಿಯಲ್ಲಿ ಇನ್ನೂ ಶ್ರೀ ಟಿ ಪ್ರಕಾಶಂರವರು ಮಿಶ್ರ ಮಂತ್ರಿಮಂಡಲ ಸ್ಥಾಪನೆಗೆ ಶ್ರಮಿಸುತ್ತಲೇ ಇರುವರು.

ಈ ಸಂದಿಗ್ಧ ಸಮಯದಲ್ಲಿ ಕಾಂಗ್ರೆಸ್ ಇನ್ನೂ ಯಾವ ನಿರ್ಧಾರವನ್ನೂ ತೆಗೆದುಕೊಳ್ಳದೆ ಸಾವಧಾನದಿಂದ ಎಲ್ಲವನ್ನೂ ವೀಕ್ಷಿಸುತ್ತಲಿದೆ.

ತಿರುವಾಂಕೂರಿನಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪನೆಯ ಸಾಧ್ಯತೆ

ಕಾಂಗ್ರೆಸ್ ಪಕ್ಷವು ಸ್ವತಂತ್ರರು ಮತ್ತು ಮತ್ತಿತರ ಸಣ್ಣಪುಟ್ಟ ಪಕ್ಷಗಳೊಂದಿಗೆ ಸೇರಿ ಮಿಶ್ರ ಮಂತ್ರಿ ಮಂಡಲವನ್ನು ತಿರುವಾಂಕೂರು-ಕೊಚ್ಚಿನ್ ಪ್ರಾಂತ್ಯದಲ್ಲಿ ಸ್ಥಾಪಿಸಲು ಸಾಧ್ಯವಿಲ್ಲ. ಆದರೆ ಸೋಷಲಿಸ್ಟ್ ಪಕ್ಷವು ನೀತಿ, ಧ್ಯೇಯಗಳಿಂದ ಕೂಡಿರುವುದರಿಂದ ಆ ಪಕ್ಷದವರೇನಾದರೂ ಮಿಶ್ರ ಮಂತ್ರಿಮಂಡಲ ಸೇರಲು ಒಪ್ಪಿದರೆ ಆಗ ಕಾಂಗ್ರೆಸ್ ಮಂತ್ರಿಮಂಡಲ ರಚಿಸಬಹುದು. ಅಲ್ಲದೆ ತಮಿಳುನಾಡು ಕಾಂಗ್ರೆಸ್‌ಪಕ್ಷದವರೇನಾದರೂ ಸೇರಿದರೆ ಆಗಲೂ ಸಾಧ್ಯವಾಗುತ್ತದೆ. ಇಲ್ಲದಿದ್ದಲ್ಲಿ ಕಾಂಗ್ರೆಸ್ ಪಕ್ಷವು ಮಂತ್ರಿಮಂಡಲ ರಚನೆಯ ಗೊಡವೆಗೆ ಹೋಗುವುದೇ ತರವಲ್ಲವೆಂದು ಕೇರಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕಂಬುಪಿಳ್ಳೆಯವರು ಹೇಳಿರುವರು

ಭಾರತದಲ್ಲಿ ೮೧ ಸರ್ವೋದಯ ಕೇಂದ್ರಗಳು

ಭಾರತದಲ್ಲಿ ಒಟ್ಟು ೮೧ ಸರ್ವೋದಯ ಕೇಂದ್ರಗಳಿವೆ. ಇವುಗಳಲ್ಲಿ ಹಲವಕ್ಕೆ ಅಲ್ಲಿನ ರಾಜ್ಯ ಸರ್ಕಾರ ಸಹಾಯನೀಡುತ್ತಿದೆ- ಕೇಂದ್ರ ಸರ್ಕಾರವು ಯಾವ ಕೇಂದ್ರವನ್ನೂ ತೆರೆದಿಲ್ಲ ಮತ್ತು ಕೇಂದ್ರಕ್ಕೂ ಹಣ ಸಹಾಯನೀಡುತ್ತಿಲ್ಲ ಎಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೆಗೆ ಉತ್ತರವಾಗಿ ತಿಳಿಸಲಾಯಿತು- ಇವುಗಳಲ್ಲಿ ೨೧ ಬೊಂಬಾಯಿಯಲ್ಲೂ, ೩೯ ಪಂಜಾಬಿನಲ್ಲೂ, ಇನ್ನು ೨೧ ಕೇಂದ್ರಗಳು ಉಳಿದ ರಾಜ್ಯ ಸರ್ಕಾರಗಳಲ್ಲೂ ಇವೆಯೆಂದು ತಿಳಿಸಲಾಯಿತು-

ಜಮ್ಮುವಿನಲ್ಲಿ ಪರಿಸ್ಥಿತಿ ಶಾಂತವಾಗಿದೆ

ಜಮ್ಮುವಿನಲ್ಲಿ ನಿನ್ನೆ ಕರ್ಫ್ಯೂ ಆಜ್ಞೆಯನ್ನು ಸಡಿಲಗೊಳಿಸಲಾಗಿತ್ತು. ಅಂಚೆಯನ್ನು ಮನೆಮನೆಗೂ ಹಂಚಲಾಯಿತು. ಜನರು ಆಹಾರಪದಾರ್ಥಕೊಳ್ಳಲು ಡಿಪೋಗಳ ಬಳಿ ತೆರಳಿದ್ದರು. ಪರಿಸ್ಥಿತಿಯು ಶಾಂತವಾಗಿತ್ತು. ಯಾವ ಘಟನೆಯೂ ನಡೆದಿಲ್ಲವೆಂದು ಅಲ್ಲಿನ ಸರ್ಕಾರ ಪ್ರಕಟಿಸಿದೆ-

ನಾಯಕರ ಬದಲಾವಣೆ ಯಾಗಲೇ ಬೇಕು

ಸರ್ವಾನುಮತದಿಂದ ಚುನಾವಣೆ

ಸ್ವ. ಸು [ಬೆಂಗಳೂರು. ಫೆ ೧೨

ಮೈಸೂರು ಕಾಂಗ್ರೆಸ್ ಶಾಸನಸಭಾ ಸದಸ್ಯರು ಸರ್ವಾನುಮತದಿಂದ ತಮ್ಮ ನಾಯಕರನ್ನು ಚುನಾಯಿಸಿಕೊಳ್ಳಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ಹೇಳಿರುವರು- ಅದೇ ರೀತಿ ಮಾಡಲು ತಕ್ಕ ಕಾರ್ಯಕ್ರಮ ಮಾಡಲಾಗುತ್ತಲಿದೆ, ವಿಧಿಯಿಲ್ಲದೆ ಹೋದರೆ ಮಾತ್ರ ಬಹುಮತದಿಂದ ಆರಿಸಿಕೊಳ್ಳಬೇಕಾಗುತ್ತದೆ ಎಂದು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ಇಂದು ಬೆಳಿಗ್ಗೆ ಪತ್ರಿಕಾಸಮ್ಮೇಳನದಲ್ಲಿ ತಿಳಿಸಿದರು.

ಶ್ರೀ ದಾಸಪ್ಪನವರ ರಾಜೀನಾಮೆ

ಶ್ರೀ ದಾಸಪ್ಪನವರ ರಾಜೀನಾಮೆ ವಿಷಯವಾಗಿ ಮಾತನಾಡುತ್ತಾ, ತಾವು ದೆಹಲಿಗೆ ತೆರಳುವ ಮುನ್ನ ಶ್ರೀ ದಾಸಪ್ಪನವರು ಮಂತ್ರಿಪದವಿಗೆ ರಾಜೀನಾಮೆ ತಮ್ಮ ಕೈಲಿ ಕೊಟ್ಟಿದ್ದರೆಂದೂ ಆ ವಿಷಯವು ಶ್ರೀ ನೆಹರೂರವರ ಪರಿಶೀಲನೆಯಲ್ಲಿದೆಯೆಂದು ಹೇಳಿದರು.

ನಾಯಕರ ಬದಲಾವಣೆ

ಹೊಸ ನಾಯಕರನ್ನು ಯಾವಾಗ ಚುನಾಯಿಸಲಾಗುತ್ತದೆ ಎಂಬ ವಿಷಯವಾಗಿ ಪ್ರಸ್ತಾಪಿಸಿ ಹಿರಿಯ ಶಾಸನಸಭೆಯ ಚುನಾವಣೆಯಾದನಂತರ ನಾಯಕರ ಚುನಾವಣೆ ನಡೆಯಬೇಕೆಂದು ನಮಗೆ ನಿರೂಪ ಬಂದಿದೆ- ಈ ಕಾರ್ಯವು ಇನ್ನೂ ಎರಡು ತಿಂಗಳಾಗುವುದರಿಂದ ನಾಯಕರ ಬದಲಾವಣೆಯು ಈಗಲೇ ಆಗುವುದಿಲ್ಲವೆಂದು ಹೇಳಲಾಗುವುದಿಲ್ಲ. ದಕ್ಷರಾದ ಮಂತ್ರಿಗಳಿಂದ ಕೂಡಿದ ಪ್ರಭುತ್ವವು ನಮ್ಮ ಸಂಸ್ಥಾನದಲ್ಲಿ ಸ್ಥಾಪಿಸಬೇಕೆಂಬುದೇ ತಮ್ಮ ಆಶಯವಾಗಿದೆ- ಸಾಧ್ಯವಾದಷ್ಟು ಬೇಗ ಸಂಸ್ಥಾನದಲ್ಲಿ ರಾಜಕೀಯ ಬದಲಾವಣೆಯಾಗಬೇಕಾದುದು ಅವಶ್ಯಕವೆಂದು ಶ್ರೀ ಹನುಮಂತಯ್ಯನವರು ಹೇಳಿದರು-

ಕಾಂಗ್ರೆಸ್ ಬಿಟ್ಟವರ ಮೇಲೆ ಕಾರ್ಯಕ್ರಮ

ಕಾಂಗ್ರೆಸ್ ಬಿಟ್ಟವರ ವಿಷಯವಾಗಿ ಮಾತನಾಡುತ್ತಾ, ಅವರಿಗೆ ಯಾವ ರಿಯಾಯಿತಿಯನ್ನು ಕೊಡುವುದಿಲ್ಲ- ಅವರನ್ನು ಪುನಃ ಕಾಂಗ್ರೆಸ್ಸಿಗೆ ಸೇರಿಸಿಕೊಳ್ಳುವುದಿಲ್ಲವೆಂದು ತಿಳಿಸಿದರು-

ಒಂದೇ ವಿಮಾನದಲ್ಲಿ ಪ್ರವಾಸ ಬೇಡ

ಸರ್ಕಾರದ ಮುಖ್ಯ ಸ್ಥಾನಗಳಲ್ಲಿರುವ ಅಧಿಕಾರಿಗಳು ಸಾಮಾನ್ಯವಾಗಿ ಒಂದೇ ವಿಮಾನದಲ್ಲಿ ಪ್ರವಾಸ ಕೈಗೊಳ್ಳುವುದು, ಮುನ್ನೆಚ್ಚರಿಕೆ ದೃಷ್ಟಿಯಿಂದ ಹಿತವಲ್ಲವೆಂದು ರಾಷ್ಟ್ರಾಧ್ಯಕ್ಷರು ಸೈನ್ಯದ ಉನ್ನತಾಧಿಕಾರಿಗಳನ್ನೊಳಗೊಂಡ ವಿಮಾನವು ಫೆಬ್ರವರಿ ೩ನೇ ತಾ॥ ಲಕ್ನೋಬಳಿ ಪ್ರಯಾಣಿಕರಿಗೆ ತೊಂದರೆಯಾಗದೆ ಬಲವಂತವಾಗಿ ಇಳಿದಿದ್ದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತ ಸಲಹೆ ನೀಡಿರುವರು.

ಕಾಂಗ್ರೆಸ್ಸೇತರರ ಸಭೆ

ಮದ್ರಾಸಿನಲ್ಲಿ ಕೆ- ಎಂ- ಪಿ- ಪಕ್ಷದ ನಾಯಕ ಶ್ರೀ ಟಿ- ಪ್ರಕಾಶಂರವರ ಅಧ್ಯಕ್ಷತೆಯಲ್ಲಿ ಕೆ- ಎಂ- ಪಿ- ಕಮ್ಯೂನಿಸ್ಟ್ ಮುಂತಾದ ಕಾಂಗ್ರೆಸ್ಸೇತರರ ಪಕ್ಷ ಸಭೆ ನಿನ್ನೆ ಪ್ರಾರಂಭವಾಗಿ ಮದ್ರಾಸಿನಲ್ಲಿ ಕಾಂಗ್ರೆಸ್ಸೇತರರ ಸಚಿವ ಮಂಡಲಿಯನ್ನು ಸ್ಥಾಪಿಸುವ ವಿಷಯ ಪರಿಶೀಲಿಸುತ್ತಲಿದೆ-

ವೀಕ್ಷಕರಾಗಿ ಸೋಷಲಿಸ್ಟ್ ಪಕ್ಷದ ಇಬ್ಬರು ಸದಸ್ಯರು ಹಾಜರಿದ್ದರು-

ಜನತೆಯ ಸಂಪರ್ಕವಿರಲಿಲ್ಲ

ಮದ್ರಾಸಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲದವರು ಜನತೆಯ ಸಂಪರ್ಕವನ್ನು ಸಂಪೂರ್ಣವಾಗಿ ಬಿಟ್ಟಿದ್ದುದರಿಂದಲೇ ಕಾಂಗ್ರೆಸ್ಸಿಗೆ ಆ ಪ್ರಾಂತ್ಯದಲ್ಲಿ ಪರಾಜಯವು ಹೆಚ್ಚಾಗಿ ಆಗಿದೆಯೆಂದು ಪಾರ್ಲಿಮೆಂಟಿನ ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ಹೇಳಿರುವರು-

ಪಾಕಿಸ್ಥಾನದ ಮೇಲೆ ಯುದ್ಧ ಹೂಡುವುದಿಲ್ಲ

ಪ್ರಧಾನಿ ನೆಹರೂ ಪಾರ್ಲಿಮೆಂಟಿನಲ್ಲಿ ಕಾಶ್ಮೀರ ಪ್ರಶ್ನೆ ವಿಷಯವಾಗಿ ಮಾತನಾಡುತ್ತಾ, ಈ ಪ್ರಶ್ನೆಯನ್ನು ವಿಶ್ವಸಂಸ್ಥೆಯಿಂದ ಹಿಂದಕ್ಕೆ ತೆಗೆದುಕೊಳ್ಳಲಾಗುವುದಿಲ್ಲ ಅಲ್ಲದೆ ಕಾಶ್ಮೀರ ವಿವಾದ ಪರಿಹಾರಕ್ಕೆ ಪಾಕೀಸ್ಥಾನದ ಮೇಲೆ ನಾವು ಯುದ್ಧ ಹೂಡುವುದಿಲ್ಲವೆಂದು ಹೇಳಿದರು.

ಕೆಲವು ಉನ್ನತಾಧಿಕಾರಿಗಳನ್ನು ಸಾಕ್ಷಿಗಳನ್ನಾಗಿ ಕರೆಸಲು ನಿರಾಕರಣೆ

ಬೆಂಗಳೂರು ಫೆ ೧೧

ವಿಷಪ್ರಯೋಗ ಯತ್ನಾಪಾದನೆ ಮೊಕದ್ದಮೆಯಲ್ಲಿ ಆಪಾದಿತರು ಪಟ್ಟಿಕೊಟ್ಟಿದ್ದ ಸಾಕ್ಷಿಗಳಲ್ಲಿ ಕೆಲವರಿಗೆ ಸಮನ್ಸ್ ಕಳುಹಿಸಲು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ ಪಿ. ಜೆ. ಕೊಸಲರಾಂರವರು, ವಾದ ವಿವಾದ ಕೇಳಿ ನಿರಾಕರಿಸಿದ್ದಾರೆ.

ಕಳೆದ ಶುಕ್ರವಾರ ಮತ್ತು ಶನಿವಾರ ಮ್ಯಾಜಿಸ್ಟ್ರೇಟರು ಆಪಾದಿತರುಗಳನ್ನು ಕರೆಸಿ ಕೆಲವು ಸಾಕ್ಷಿಗಳ ಸಾಕ್ಷ್ಯ ಹೇಗೆ ವಿಚಾರಣೆಯಲ್ಲಿ ಸಂಬಂಧಪಟ್ಟಿದ್ದರೆಂಬುದನ್ನು ಕೇಳಿದ ನಂತರ ನ್ಯಾಯಾಧೀಶರು ಅವರುಗಳ ಸಾಕ್ಷ್ಯ ಮುಖ್ಯವಾದದ್ದಲ್ಲವೆಂಬ ನಿರ್ಧಾರಕ್ಕೆ ಬಂದರು.

ಆ ಆಪಾದಿತರುಗಳು ಹೇಳಿದ್ದ ಸಾಕ್ಷಿಗಳ ಹೆಸರುಗಳಿವು—

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್, ಪ್ರಧಾನಿ ಪಂಡಿತ ನೆಹರೂ, ಮುಖ್ಯಮಂತ್ರಿ ಶ್ರೀ ಕೆ ಸಿ. ರೆಡ್ಡಿ, ಸಚಿವರುಗಳಾದ ಶ್ರೀಗಳಾದ ಹೆಚ್. ಸಿ ದಾಸಪ್ಪ, ಕೆ ಟಿ. ಭಾಷ್ಯಂ, ಟಿ ಮರಿಯಪ್ಪ, ನ್ಯಾಯಾಧೀಶರುಗಳಾದ ಶ್ರೀಗಳಾದ ಆರ್. ವೆಂಕಟರಾಮಯ್ಯ, ಎನ್. ಬಾಲಕೃಷ್ಣಯ್ಯ, ಟಿ ಎನ್. ಮಲ್ಲಪ್ಪ, ಬಿ. ವಾಸುದೇವಮೂರ್ತಿ, ಅಡ್ವೊಕೇಟ್ ಜನರಲ್ ಶ್ರೀ ಎ. ಆರ್. ಸೋಮನಾಥಯ್ಯರ್ ಐ ಪಿ ಮೆನನ್, ಐ-ಜಿ-ಪಿ-ಶ್ರೀ ನಾಗರಾಜರಾವ್, ಡಿ ಐ. ಜಿ. ಶ್ರೀ ಎನ್. ವಿ ಬಾಬುರೆಡ್ಡಿ, ಮೈಸೂರು ಸರ್ಕಾರದ ಮುಖ್ಯ ಕಾರ್ಯದರ್ಶಿ, ಪ್ರಾಸಿಕ್ಯೂಟರ್ ಶ್ರೀ ಕೆ ಎಸ್. ನರಸಿಂಹಮೂರ್ತಿ ಮತ್ತು ಶ್ರೀಮತಿ ಮೇದಪ್ಪ ಮತ್ತು ಮಿಸ್ ಮೇದಪ್ಪ.

೧೩ನೇ ತಾರೀಖಿನಿಂದ ವಿಚಾರಣೆ ಆರಂಭ

ಎಲ್. ಎಸ್. ರಾಜು ಮೊಕದ್ದಮೆಯ ವಿಚಾರಣೆ ನಡೆಸುವ ಸಿವಿಲ್ ಪ್ರದೇಶದ ಅಡಿಷನಲ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಂ. ಬಿ. ಹೊನ್ನಾವರ್ ರವರು ಇಂದು ಕೋರ್ಟಿನಲ್ಲಿ ಛಾರ್ಜು ವಹಿಸಿಕೊಂಡರು.

ಚೀಫ್ ಕೋರ್ಟಿನಲ್ಲಿ ಹಿಂದೆ ಸೆಷನ್ಸ್ ಕೋರ್ಟು ಇದ್ದ ಕಟ್ಟಡದಲ್ಲಿ ವಿಚಾರಣೆ ಫೆಬ್ರವರಿ ೧೩ನೇ ತಾರೀಖಿನಿಂದ ಆರಂಭವಾಗುವುದು.

ಗೌಹತಿಯಲ್ಲಿ ಭೂಕಂಪ

ನಿನ್ನೆಯದಿನ ಗೌಹತಿಯಲ್ಲಿ ಸಾಮಾನ್ಯ ಭೂಕಂಪವಾಯಿತು. ನಷ್ಟವೇನೂ ವರದಿಯಾಗಿಲ್ಲ.

ಪೈಲ್ವಾನ-ಪೈಲ್ವಾನಿ

ಕೋಲಾರದಲ್ಲಿ ಒಂದು ಕುಸ್ತಿ ಪಂದ್ಯ ಏರ್ಪಡಿಸಲಾಗಿತ್ತು. ಆ ಪಂದ್ಯದಲ್ಲಿ ಒಬ್ಬ ಮಹಿಳೆ ಮತ್ತು ಒಬ್ಬ ಪುರುಷನ ನಡುವೆ ಒಂದು ಪಂದ್ಯ ನಡೆಯಬೇಕಾಗಿತ್ತು. ಕಡೆ ಘಳಿಗೆಯಲ್ಲಿ ಈ ಪಂದ್ಯಕ್ಕೆ ಲೈಸನ್ಸ್ ನಿರಾಕರಿಸಲ್ಪಟ್ಟಿತು. ಫಲವಾಗಿ ಜನರಿಗೂ ಮತ್ತು ಪೋಲೀಸರಿಗೂ ಬಿಸಿ ಬಿಸಿ ಮಾತು ನಡೆದು ಪೋಲೀಸರು ಲಘು ಲಾಠಿ ಪ್ರಹಾರ ಮಾಡಿ ಗುಂಪು ಚದುರಿಸಬೇಕಾಯಿತು.

ಪೈಲ್ವಾನಿ ಶ್ರೀಮತಿ ಜೈತೂನ್ ಬೀಬಿ ಇರಾನಿಗೂ ಮತ್ತು ಬಿಜವಾಡದ ಪೈಲ್ವಾನ್ ಜನಾಬ್ ಅಲ್ಲಾವುದ್ದೀನ್‌ಗೂ ಕುಸ್ತಿ ಪಂದ್ಯವು ಕೋಲಾರ ಕೋಟೆಯಲ್ಲಿರುವ ಶ್ರೀ ಶಿವಾನಂದ ಚಿತ್ರಾಲಯದ ಬಳಿಯ ಮೈದಾನದಲ್ಲಿ ನಡೆಯುವುದಾಗಿ ಕಳೆದ ಎರಡು ವಾರಗಳಿಂದ ಪ್ರಸಿದ್ಧ ಪತ್ರಿಕೆಗಳನ್ನು ಹಂಚಲಾಗಿತ್ತು.

ಪ್ರದರ್ಶನ ನೋಡಲು ಚಿತ್ತೂರು, ಮದನಪಲ್ಲಿ, ಚಿನ್ನದಗಣಿ, ಬೆಂಗಳೂರು, ಮೈಸೂರು, ಮೊದಲಾದ ದೂರದ ಪ್ರದೇಶಗಳಿಂದಲೂ ಮತ್ತು ಸುತ್ತಮುತ್ತಲ ಗ್ರಾಮಗಳಿಂದಲೂ ಅಧಿಕ ಸಂಖ್ಯೆಯಲ್ಲಿ ಪ್ರೇಕ್ಷಕರು ಸೇರಿದ್ದರು. ಪೈಲ್ವಾನಿ ಮತ್ತು ಪೈಲ್ವಾನ ಸಹಾ ಆಗಮಿಸಿದ್ದರು. ಆದರೆ ಸಂಜೆ ಐದೂಕಾಲ್ ವೇಳೆಗೆ ಪೋಲೀಸ್ ಅಧಿಕಾರಿಯು ಜನಸಮೂಹದ ಬಳಿಗೆ ಆಗಮಿಸಿ 'ಈ ಕುಸ್ತಿ ಪಂದ್ಯ ನಡೆಸಲು ಅನುಮತಿ ಕೊಡಬೇಕಾದ ಪ್ರಥಮ ದರ್ಜೆ ನ್ಯಾಯಾಧೀಶರು ಈಗ ತಾನೇ ಲಿಖಿತ ಆಜ್ಞೆಯೊಂದನ್ನು ತಮಗೆ ತಲುಪಿಸಿ, ಹೆಂಗಸು ಮತ್ತು ಗಂಡಸಿನ ಮಧ್ಯೆ ಕುಸ್ತಿ ನಡೆಯಲು ಅನುಮತಿ ಕೊಡಲು ನಿರಾಕರಿಸಿದ್ದಾರೆಂದು' ತಿಳಿಸಿದರು. ಇದರಿಂದ ಗಲಾಟೆಯಾಯಿತು.

ಭೂ ಸುಧಾರಣಾ ನಿರ್ಣಯ

ರಂಗೂನ್ ಫೆ ೫

ಪ್ರ॥ ಸಂ॥ ದ ಆಗ್ನೇಯ ಏಷ್ಯಾ ಆರ್ಥಿಕ ಸಮಿತಿಯು ಭೂ ಸುಧಾರಣೆಗಳ ಮೇಲೆ ನಿರ್ಣಯವೊಂದನ್ನು ಮಾಡುತ್ತಾ, ಪ್ರಪಂಚದ ರಾಷ್ಟ್ರಗಳಲ್ಲಿ ತಕ್ಷಣ ಭೂ ಸುಧಾರಣೆಗಳಾಗಬೇಕೆಂದು ಅಭಿಪ್ರಾಯ ಪಟ್ಟಿತು.

ಈ ನಿರ್ಣಯವನ್ನು ಅಮೇರಿಕವು ಸೂಚಿಸಿತು, ರಷ್ಯಾ ಮತ ಕೊಡಲಿಲ್ಲ.

ವಿಶ್ವ ಸಂಸ್ಥೆಯು ಜನವರಿ ೧೨ನೇ ತಾ॥ ಅಂಗೀಕರಿಸಿದ ತಾಂತ್ರಿಕ ಸಹಾಯ ನಿರ್ಣಯಕ್ಕೆ ಈ ನಿರ್ಣಯವು ತುಂಬಾ ಸಹಕಾರಿಯಾಗಿದೆ.

ಪ್ರ॥ ಸಂ॥ ಯು ಮತ್ತು ಅಮೇರಿಕದ ತಂತ್ರಜ್ಞರು, ದೇಶದ ನಾನಾ ಭಾಗಗಳಲ್ಲಿ ತಾಂತ್ರಿಕ ಸಲಹೆ ನೀಡಿ ಭೂ ಸುಧಾರಣೆ ಮಾಡುವರು.

ಶ್ರೀಮತಿ ರೂಸವೆಲ್ಟರ ಭೇಟಿ

ಪ್ಯಾರಿಸ್ ಫೆ ೬

ಮಧ್ಯಪ್ರಾಚ್ಯ ಮತ್ತು ದೂರ ಪ್ರಾಚ್ಯದ ಆರ್ಥಿಕ ಸ್ಥಿತಿಗತಿಗಳನ್ನು ಅಭ್ಯಾಸಿಸಲು ಶ್ರೀಮತಿ ರೂಸವೆಲ್ಟರು ಎರಡು ತಿಂಗಳಕಾಲ ಪ್ರವಾಸಮಾಡಲು ಶುಕ್ರವಾರ ಮಧ್ಯಾಹ್ನ ಪ್ಯಾರಿಸ್ ನಗರವನ್ನು ಬಿಡುವರು.

ಶ್ರೀಮತಿಯವರು ಖಾಸಗೀ ಪ ಜೆ ಯಾಗಿ ಪ್ರಯಾಣ ಬೆಳಸಿ ಆರ್ಥಿಕಾಭಿವೃದ್ಧಿಮಾಡುವ ಬಗ್ಗೆ ಒಂದು ಪುಸ್ತಕ ಬರೆಯಲಿರುವರು.

ಪ್ಯಾಲೆಸ್ಟೈನ್ ನಿರಾಶ್ರಿತರ ಸಮಸ್ಯೆಯ ಬಗ್ಗೆ ಹೆಚ್ಚು ಅಭ್ಯಾಸ ಮಾಡುವರು. ಫೆ. ೧೫ನೇ ತಾರೀಖಿನವೇಳೆಗೆ ಇಸ್ರೇಲ್‌ಗೆ ಹೋಗುವರು.

ಫೆ ೨೦ನೇ ತಾ॥ ಭಾರತವನ್ನು ಮುಟ್ಟಿ ಒಂದು ತಿಂಗಳಕಾಲ ಭಾರತ ಮತ್ತು ಪಾಕೀಸ್ತಾನದ ನಾನಾ ನಗರಗಳಿಗೆ ಭೇಟಿ ಕೊಡುವರು.

ಭಾರತ, ಪಾಕೀಸ್ತಾನ ಮಹಿಳಾ ಸಂಸ್ಥೆಗಳಲ್ಲಿ ಭಾಷಣ ಮಾಡುವರು, ಹಾಗೂ ಮುಖ್ಯಮಂತ್ರಿ ನೆಹರೂರವರನ್ನೂ ಭೇಟಿ ಮಾಡುವರು.

ಅನಂತರ ಥೈಲೆಂಡ್, ಇಂಡೋನೇಷ್ಯಾ, ಮಲಯ, ಫಿಲಿಪೈನ್ ರಿಪಬ್ಲಿಕ್‌ಗಳಿಗೆ ಭೇಟಿ ಕೊಡುವರು.

ತಾವು ಹೋದಕಡೆಗಳಲ್ಲೆಲ್ಲಾ ನೇರವಾಗಿ ಜನರನ್ನು ಕಂಡು ಅವರ ಸಮಸ್ಯೆಗಳನ್ನು ಅರಿತುಕೊಳ್ಳುವುದಾಗಿಯೂ, ಆ ಸಮಸ್ಯೆಗಳ ಬಗ್ಗೆ ಆಸಕ್ತಿಯನ್ನು ಅವರ ಪತಿ ಅಧ್ಯಕ್ಷ ರೂಸವೆಲ್ಟರು ಹುಟ್ಟಿಸಿದರೆಂದೂ ತಿಳಿಸಿದರು.

ಶ್ರೀಮತಿಯವರು ಅಲ್ಲಿನ ದೇಶಗಳ ಹೊಲಗಳು, ಕಾರ್ಖಾನೆಗಳು, ಕೆಲಸಗಾರರನ್ನು ಸ್ವಂತವಾಗಿ ಭೇಟಿಮಾಡುವರು. ಹಾಗೆಯೇ ಸ್ಥಳೀಯ ಅಧಿಕಾರಿಗಳನ್ನೂ ನೋಡುವರು

ವುಡ್ ಲ್ಯಾಂಡ್ಸ್

8-2-52ರಿಂದ ಅಮೋಘ 2ನೇ ವಾರ

ನ ಗೀ ನಾ

ಪಾತ್ರ:—ನಾಸೀರ್‌ಖಾನ್, ನೂತನ್, ಗೋಪ್, ಮೋಹನ.

೧೫—೨—೫೨ ರಿಂದ

'ಅಲ್-ಬೆಲಾ'

ಪಾತ್ರ:— ಗೀತಾಬಾಲಿ, ಭಗವಾನ್.

ಪ್ರಕಾಶಕರು :—ಜೆ ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು ಮುದ್ರಕರು—ಹಿ. ಕಾ. ಸುಬ್ಬರಾವ್ ಮೋಹನ ಮುದ್ರಣಾಲಯ ಮೈಸೂರು

ನ್ಯೂ ಆಪೇರ

೧೩-೨-೫೨ರಿಂದ ಪ್ರತಿದಿನ ೩ ಆಟಗಳು

ಭಕ್ತ

ತುಳಸೀದಾಸ್

(ತಮಿಳು)

ಪಾತ್ರ:—ಬಿ. ಎಸ್. ರಾಜಯ್ಯಂಗಾರ್, ಅಕ್ಷ್ಮೀಶಂಕರ್, ಪಂತುಲು.

ನಗರಾಭಿವೃದ್ಧಿ ಸಮಿತಿ, ಮೈಸೂರು

ಪ್ರ ಕ ಟ ಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ— ಮೈಸೂರು ಸಿಟಿ ಚಾಮರಾಜ ಮೊಹಲ್ಲಾದಲ್ಲಿ ಅದಿಕರ್ನಾಟಕ ಪುರಂನಲ್ಲಿ ಕಟ್ಟಿರುವ ವಾದಂ ಮನೆಗಳ ಪೈಕಿ ಉತ್ತರ ಭಾಗದಿಂದ ೨೪ ಮನೆಗಳನ್ನು ಬಿಟ್ಟು ೨೫ನೇ ಮನೆ ಲಾಗಾಯ್ತು ೪೪ನೇ ನಂಬರು ಮನೆ ವರೆವಿಗೆ ೨೦ ಮನೆಗಳ ವಿಲೆ ಬಗ್ಗೆ ಮೈಸೂರು ಸಿಟಿಯಲ್ಲಿ ಮನೆ ಅಥವಾ ಸೈಟುಗಳಿಲ್ಲದ ನಿಮ್ನ ವರ್ಗದವರಿಂದ (Harijan and dipres-sed classes) ಅರ್ಜಿಗಳನ್ನು ೨೯—೨—೧೯೫೨ ರವರೆವಿಗೆ ಸ್ವೀಕರಿಸಲಾಗುತ್ತದೆ. ಪ್ರತಿ ಮನೆಯ ಬೆಲೆ ೨೪೦೦ ರೂಪಾಯಿಗಳು. ಆಫೀಸಿನಲ್ಲಿ ದೊರೆಯುವ ಅರ್ಜಿ ನಮೂನೆಯಲ್ಲಿ ೧೦೦ ರೂಪಾಯಿ ಕೇವಣಿ ಪಾವತಿ ಮಾಡಿ ಅರ್ಜಿ ಹಾಕಿಕೊಳ್ಳಬೇಕು. ಮನೆ ಕೊಟ್ಟ ಬಗ್ಗೆ ಆರ್ಡರು ಕೊಟ್ಟ ೧೫ದಿನಗಳಲ್ಲಿ ಕೇವಣಿ ಮೊಬಲಗು ಜಾತಾ ಉಳಿಯುವ ೨೩೦೦ ರೂಪಾಯಿಗಳನ್ನು ೯೬ ಸಮನಾದ ಮಾಹೆವಾರ ಕಂತುಗಳಲ್ಲಿ ಶೇಕಡ ೩ ರೂಪಾಯಿ ಬಡ್ಡಿ ಸೇರಿಸಿ ಪಾವತಿ ಮಾಡಬೇಕು. ವಿಧಾಯಕವಾದ ಅಗ್ರಿಮೆಂಟ್ ಬರೆದುಕೊಟ್ಟನಂತರ ಮನೆ ಸ್ವಾಧೀನಕ್ಕೆ ಕೊಡಲಾಗುವುದು. ತಪ್ಪಿದಲ್ಲಿ ಕೇವಣಿ ಮೊಬಲಗು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮನೆ ಸಿಕ್ಕದಿದ್ದವರ ಕೇವಣಿ ಮೊಬಲಗು ವಾಪಸ್ಸು ಮಾಡಲಾಗುವುದು. ವಿಧಾಯಕವಾದ ನಮೂನೆಯಲ್ಲಿಲ್ಲದ ಕೇವಣಿ ಸಮೇತ ಬರದಿರುವ ಅರ್ಜಿಗಳಿಗೆ ಗಮನ ಕೊಡಲಾಗುವುದಿಲ್ಲ.

Sd/P. Gopalakrishnasetty

ಅಧ್ಯಕ್ಷರು

ಫೋನ್ ೫೭೬೪ (ರಿಂಗ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೪—೨—೧೯೫೨ನೇ ಗುರುವಾರ [ಸಂಚಿಕೆ ೧೪೪

ಪಂಡಿತ ನೆಹರೂರವರು ಪಾರ್ಲಿಮೆಂಟಿಗೆ ಚುನಾಯಿತರಾದರು

ಕಾಂಗ್ರೆಸ್ಸಿಗೆ ವಿರುದ್ಧವಾಗಿ ಕೆಲಸ ಮಾಡಿದ ಕಾಂಗ್ರೆಸ್ಸಿಗರ ಮೇಲೆ ಶಿಸ್ತಿನ ಕ್ರಮ ಕೈಕೊಳ್ಳಲು ನಿರ್ಣಯ

ಪಟ್ಟಾಭಿಷೇಕ ಮುಂದಿನ ವರ್ಷ

ಎಲಿಜಬೆತ್ ರಾಣಿಯ ಪಟ್ಟಾಭಿಷೇಕ ೧೯೫೩ ರ ವಸಂತ ಕಾಲಕ್ಕಿಂತ ಮುಂಚೆ ನಡೆಯದೆಂದು ಹೇಳಲಾಗಿದೆ. ಜಾರ್ಜ್ ದೊರೆಗಳ ನಿಧನಕ್ಕಾಗಿ ಸಂತಾಪ ಸೂಚನೆಗೆ ಗೊತ್ತುಮಾಡಿರುವ ಕಾಲ ಬಹಳ ಹೆಚ್ಚು ಅತ್ಯಂತ ಕಡಿಮೆಯಾಗಿದ್ದುದು. ನಿಧನರಾದ ಜಾರ್ಜ್‌ದೊರೆಗಳು ತಮ್ಮ ಮಗಳಿಗೆ ನಿಸ್ವಾರ್ಥ ಆತ್ಮೀಯತೆಯಲ್ಲಿ ಜನರನ್ನು ಬಹುಕಾಲ ಶೋಕದಲ್ಲಿ ಇರಿಸಬೇಡ ಎಂದು ಹೇಳಿದ್ದರಂತೆ.

ಶ್ರೀ ರಾಮಕೃಷ್ಣರಾವ್ ಹೈದರಾಬಾದ್ ಶಾ. ಸ. ಕಾಂಗ್ರೆಸ್ ಪಕ್ಷದ ನಾಯಕರಾಗಿ ಆಯ್ಕೆ

ಹೈದರಾಬಾದಿನ ರೆವಿನ್ಯೂ ಮತ್ತು ಶಿಕ್ಷಣ ಶಾಖಾ ಸಚಿವರಾದ ಶ್ರೀ ಬಿ ರಾಮಕೃಷ್ಣರಾಯರು ಹೈದರಾಬಾದ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಒಮ್ಮತದಿಂದ ಆರಿಸಲ್ಪಟ್ಟರು.

ಹೈದರಾಬಾದಿನ ಮೊಟ್ಟಮೊದಲಿನ ಚುನಾಯಿತ ಮುಖ್ಯಮಂತ್ರಿಗಳಿವರು.

ಬೊಂಬಾಯಿ ಶಾಸನ ಸಭೆಯ ಅಂತ್ಯ ಫಲಿತಾಂಶ

೩೧೫ ಸ್ಥಾನಗಳನ್ನುಳ್ಳ ಬೊಂಬಾಯಿ ಶಾಸನ ಸಭೆಯ ಕಡೇ ಸ್ಥಾನದ ಫಲಿತಾಂಶ ಹೊರಬಿದ್ದು, ಅದು ಸೋಷಲಿಸ್ಟರಿಗೆ ಸೇರಿತು ಈಗ ಪಕ್ಷಗಳ ಬಲಾಬಲ ಈ ರೀತಿಯಂತಿದೆ.

ಕಾಂಗ್ರೆಸ್ ೨೬೯ ಸೋಷಲಿಸ್ಟ್ ೯ ಕೃಷಿಕ ಮತ್ತು ಕಾರ್ಮಿಕ ಪಕ್ಷ ೧೪, ನಿಮ್ನವರ್ಗ ೧, ಕಮ್ಯೂನಿಸ್ಟ್ ೧, ಕಿಸಾನ್ ಕಾಮಗಾರ್ ಪಕ್ಷ ೩, ಸ್ವತಂತ್ರರು ೧೭ ಶೆಡ್ಯೂಲ್ಡ್ ಫೆಡರೇಷನ್, ಲೋಕ ಪಕ್ಷ ೧ ಒಟ್ಟು ೩೧೫.

ಶಿಸ್ತಿನ ಕಾರ್ಯಕ್ರಮ ತೆಗೆದುಕೊಳ್ಳಬೇಕು

ಮೈಸೂರು ಫೆ ೧೩

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯು ನಿನ್ನೆ ಮತ್ತು ಅದಿನ ಸಭೆ ಸೇರಿ ಚುನಾವಣಾ ಫಲಿತಾಂಶಗಳನ್ನು ಪರಿಶೀಲಿಸಿ, ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್ಸಿಗರಲ್ಲಿ ಕೆಲವರು ಕಾಂಗ್ರೆಸ್ ಉಮೇದುವಾರರುಗಳಿಗೆ ಬೆಂಬಲ ನೀಡದೆ ಕಾಂಗ್ರೆಸ್ಸೇತರರಿಗೆ ಸಹಾಯನೀಡಿದರ ಫಲವಾಗಿ ಕಾಂಗ್ರೆಸ್ಸು ಉಮೇದುವಾರರಿಗೆ ಸೋಲಾಯಿತು. ಆದ್ದರಿಂದ ಅಂತಹವರ ಮೇಲೆ ತೀವ್ರ ಶಿಸ್ತಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿತು.

ಕಾಂಗ್ರೆಸ್ಸಿಗೆ ವ್ಯತಿರಿಕ್ತವಾಗಿ ಕೆಲಸ ಮಾಡಿದ ಕಾಂಗ್ರೆಸ್ಸೇತರರನ್ನು ಸಂಸ್ಥೆಗೆ ಸೇರಿಸಿಕೊಳ್ಳಕೂಡದೆಂದೂ ಹಾಗೇನಾದರೂ ವಿಶೇಷ ಸಂದರ್ಭಗಳಲ್ಲಿ ಸೇರಿಸಿಕೊಳ್ಳುವ ಅವಶ್ಯಕ ಕಂಡು ಬಂದಲ್ಲಿ ಆ ವಿಷಯವು ಎಂ. ಪಿ. ಸಿ. ಸಿಯು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಭಿಪ್ರಾಯ ಪಡೆದು ತೀರ್ಮಾನಿಸಬೇಕೆಂದು ನಿರ್ಣಯವನ್ನು ಸಭೆಯು ಮಾಡಿತು.

ಜಿಲ್ಲೆಯ ನಾನಾಭಾಗಗಳಿಂದ ಸುಮಾರು ೧೦೦ ಜನ ಸಭೆಯಲ್ಲಿ ಹಾಜರಿದ್ದರು.

ಸೂರ್ಯಗ್ರಹಣ

ಫೆಬ್ರವರಿ ೨೫ನೇ ತಾರೀಖಿನ ದಿವಸ ಬರಲಿರುವ ಸೂರ್ಯಗ್ರಹಣ ಕೋಲಾರ, ಬೆಂಗಳೂರು, ತುಮಕೂರು, ಮಂಡ್ಯ, ಮೈಸೂರು, ಹಾಸನ ಈ ಜಿಲ್ಲೆಗಳಲ್ಲಿಲ್ಲ ಆದರೆ ಶಿವಮೊಗ್ಗ, ಕಡೂರು ಜಿಲ್ಲೆ ಒಳರೇಖೆಗೆ ಉತ್ತರ ಭಾಗದವರಿಗೆ ಚಿತ್ರದುರ್ಗ ಜಿಲ್ಲೆಯ ಪೂರ್ತಾಯಿರುವುದಾಗಿ ಕೊಳ್ಳೇಗಾಲದ ಆಸ್ಥಾನ ವಿದ್ವಾಂಸರಾದ ಶ್ರೀ ವೆಂಕಟಸುಬ್ಬಶಾಸ್ತ್ರಿಗಳು ಬರೆದಿರುತ್ತಾರೆ.

ಪ್ರಭಾ

15—2—52ರಿಂದ ಅಮೋಘಪ್ರಾರಂಭ ಪ್ರತಿದಿನ ಮೂರು ಆಟಗಳು

ರೂಪಕಮಲ್‌ರವರಿಂದ ತಯಾರಿಸಲ್ಪಟ್ಟಿರುವ ಅತ್ಯಮೋಘವಾದ ಪೌರಾಣಿಕ ಹಿಂದಿ ಚಿತ್ರ

* ಶ್ರೀ ವಿಷ್ಣು ಭಗವಾನ್ *

ಪಾತ್ರ:—ನಿರೂಪ್‌ರಾಯ್, ತ್ರಿಲೋಕ್‌ಕಪೂರ್, ಉಷಾಕಿರಣ್.

ಬೆಳಗಿನ ಪ್ರದರ್ಶನ— 15-2-52 ರಿಂದ —ಮೂರು ದಿನಗಳು ಮಾತ್ರ

THE RED SHOES (In Technicolour)

ನಗರ ನಿರ್ಮಾಣ ನಿಪುಣರು

ಬೆಂಗಳೂರು ಫೆ ೧೩

ಭಾರತದಲ್ಲಿ ಪ್ರವಾಸ ಮಾಡುತ್ತಿರುವ ಬ್ರಿಟನ್ನಿನ ನಗರ ನಿರ್ಮಾಣ ನಿಪುಣರಾದ ಮಿ॥ ಮೇಕ್ಸ್‌ಲ ಕ್‌ರವರು ನಿನ್ನೆಯ ದಿನ ಮೈಸೂರು ನಗರಕ್ಕೆ ಭೇಟಿಯಿತ್ತರು. ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿ ಮತ್ತು ಮೈಸೂರು ಸರ್ಕಾರಿ ನಗರ ನಿರ್ಮಾಣ ಅಧಿಕಾರಿಗಳಿಂದ ಶ್ರೀ ಮಾಣಿಕ್ಯಂರವರು ಮಿ॥ ಮೆಕ್ಸಲ್‌ಲಾಕ್‌ರವರನ್ನು ನಗರ ನಾನಾ ಭಾಗಗಳಿಗೆ ಕರೆದೊಯ್ಯುವ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಿದರು ಮೈಸೂರು ನಗರದ ನಿರ್ಮಾಣ ಮತ್ತು ಮೈಸೂರು ನಗರಾಭಿವೃದ್ಧಿ ಸಮಿತಿಯ ಕಾರ್ಯಕಲಾಪಗಳನ್ನು ಮಿ॥ ಮೇಕ್ಸ್‌ರವರು ಪರಿಶೀಲಿಸಿ ಪ್ರಶಂಸಿಸಿದರು.

ಓಟರುಗಳ ಪಟ್ಟಿ

ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಓಟರುಗಳ ಪಟ್ಟಿಯನ್ನು ಇಂದು ಸಂಸ್ಥಾನಾದ್ಯಂತ ಪ್ರಕಟಿಸಲಾಯಿತು. ಈ ಬಗ್ಗೆ ಆಕ್ಷೇಪಣೆ ಸಲ್ಲಿಸಲು ಮಾರ್ಚಿ ೪ನೇ ತಾ॥ ಆಖೈರುದಿನ.

ಪಾರ್ಲಿಮೆಂಟಿಗೆ ಶ್ರೀ ನೆಹರೂ ಆಯ್ಕೆ

ಕಾಂಗ್ರೆಸ್ ಅಧ್ಯಕ್ಷ ಪ್ರಧಾನಿ ಪಂಡಿತ ಜವಹಿರಲಾಲ್ ನೆಹರೂರವರು ಭಾರತದ ಪಾರ್ಲಿಮೆಂಟಿಗೆ ಚುನಾಯಿತರಾದರೆಂದು ನಿನ್ನೆ ಅಧಿಕೃತವಾಗಿ ಘೋಷಿಸಲಾಯಿತು.

ಅಲಹಾಬಾದ್ ಮತ್ತು ಜಾನ್‌ಪುರ ಕ್ಷೇತ್ರದಿಂದ ಪಂಡಿತ ನೆಹರೂರವರಿಗೆ ವಿರೋಧವಾಗಿ ನಾಲ್ವರು ಸ್ಪರ್ಧಿಸಿದ್ದರು. ಇವರ ಪೈಕಿ ಪಂಡಿತ ಜವಹಿರಲಾಲ್ ನೆಹರೂರವರಿಗೆ ೨,೨೩,೫೭೧ ಓಟುಗಳೂ, ಪ್ರಭುದತ್ತ ಬ್ರಹ್ಮಚಾರಿಗೆ ೫೬,೭೧೮, ಸ್ವತಂತ್ರರಾದ ಶ್ರೀ ಕೆ. ಕೆ- ಛಟರ್ಜಿಗೆ ೨೨೩೯೬, ಹಿಂದೂ ಮಹಾಸಭೆಯ ಶ್ರೀ ಎಲ್- ಡಿ- ಶಟ್ಟಿಯವರಿಗೆ ೨೫,೮೨೦ ಮತ್ತು ಶ್ರೀ ಬದರೀ ಪ್ರಸಾದ ಮಿತ್ರರಿಗೆ ೧೮೮೧೨ ಓಟುಗಳು ಬಂದು ಕೊನೆಯ ಮೂವರು ಡಿಪಾಸಿಟ್ ಕಳೆದುಕೊಂಡರು-

ಈ ಕ್ಷೇತ್ರವು ದ್ವಿಸದಸ್ಯತ್ವ ಕ್ಷೇತ್ರವಾಗಿದ್ದು ಕಾರಿಟ್ಟ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್ ಉಮೇದುವಾರರು ಕೂಡ ಚುನಾಯಿತರಾದರು-

ಬೆಂಗಳೂರಿನಿಂದ ತಿರುಪತಿಗೆ ಬಸ್ಸು

ಬೆಂಗಳೂರಿನಿಂದ ತಿರುಪತಿಗೆ ಒಂದು ಸರ್ಕಾರಿ ಬಸ್ಸನ್ನು ಓಡಿಸಲು ಏರ್ಪಾಡುಗಳಾಗುತ್ತಲಿವೆ ಈ ವಿಷಯದಲ್ಲಿ ಮೈಸೂರು-ಮದ್ರಾಸ್ ಸರ್ಕಾರಗಳಿಗೆ ವ್ಯವಹಾರ ನಡೆಯುತ್ತಲಿರುವುದಾಗಿ ಗೊತ್ತಾಗಿದೆ

ಹೃದಯನಾಥ ಕುಂಜ್ರುರವರ ಸೋಲು

ಬಿಹಾರಿನಿಂದ ಪಾರ್ಲಿಮೆಂಟಿಗೆ ಸ್ಪರ್ಧಿಸಿದ್ದ ಪಂಡಿತ ಹೃದಯನಾಥ ಕುಂಜುರವರು ಕಾಂಗ್ರೆಸ್ ಉಮೇದುವಾರ ಶ್ರೀ ರಘುವೀರಸಿಂಗರವರಿಂದ ಸೋಲಿಸಲ್ಪಟ್ಟರು-

ಭಾರತಕ್ಕೆ ಪಾಕಿಸ್ಥಾನದ ಆಹಾರವಿಲ್ಲ

ಭಾರತಕ್ಕೆ ಪಾಕಿಸ್ಥಾನದಿಂದ ಬರಬೇಕಾಗಿರುವ ೬೦,೦೦೦ ಟನ್ ಅಕ್ಕಿಯು ಬರುವ ಸಂಭವವಿಲ್ಲವೆಂದು ಹೇಳಲಾಗಿದೆ.

ಉದಾರದಾನ

ಅಮೇರಿಕಾದಲ್ಲಿರುವ ನಾನಾತರಹದ ವ್ಯಾಪಾರ ಸಂಸ್ಥೆಗಳು, ಶಾಲಾ ಕಾಲೇಜು ಆಸ್ಪತ್ರೆ, ಸಾರ್ವಜನಿಕ ಉಪಯೋಗ ಮುಂತಾದ ಬಾಬುಗಳಿಗೆ ಸುಮಾರು ೩೫೦೦ಲಕ್ಷ ಡಾಲರುಗಳನ್ನು ದಾನವಾಗಿ ೧೯೫೧ನೇ ಸಾಲಿನಲ್ಲಿ ಕೊಟ್ಟಿವೆ.

ಆಹಾರ ಹಂಚಿಕೆ

ಅಖಿಲಭಾರತ ರೈಲ್ವೆಯ ೩ನೇ ತರಗತಿಯ ಪ್ರಯಾಣಿಕರಿಗೆ ಸುಲಭದರದಲ್ಲಿ ಉತ್ತಮ ಆಹಾರವನ್ನು ಹಂಚುವ ವ್ಯವಸ್ಥೆಯನ್ನು ಅಖಿಲಭಾರತ ಆಹಾರ ಸಮಿತಿಯವರು ಸದ್ಯದಲ್ಲೇ ಮಾಡಲಿರುವರೆಂದು ಹೇಳಲಾಗಿದೆ

ಸರ್. ಎಂ. ವಿ. ದೆಹಲಿಗೆ

ಮೈಸೂರು ಸಂಸ್ಥಾನದ ಕೈಗಾರಿಕಾಭಿವೃದ್ಧಿ ವಿಷಯವಾಗಿ ಭಾರತ ಸರ್ಕಾರದೊಡನೆ ಮಾತುಕತೆ ನಡೆಸಲು ಸರ್ ಎಂ. ವಿ ಶ್ವೇಶ್ವರಯ್ಯನವರು ಈ ದಿನ ದೆಹಲಿಗೆ ತೆರಳುವರು-

ಚುನಾವಣಾ ದೂರುಗಳ ಬಗ್ಗೆ ತನಿಖೆ

ಚುನಾವಣೆ ಸಂಬಂಧದಲ್ಲಿ ತಮಗೆ ಬಂದಿರುವ ದೂರನ್ನು ಪ್ರಸ್ತಾಪಿಸಿ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರು 'ನನಗೆ ಅನೇಕ ದೂರುಗಳು ಲಿಖಿತ ಮೂಲಕ ಬಂದಿವೆ. ಪಂಡಿತ ನೆಹರೂರವರೊಡನೆ ನಾನು ಇತ್ತೀಚೆಗೆ ಮಾತುಕತೆ ನಡೆಸಿದ ಸಮಯದಲ್ಲಿ ಈ ದೂರುಗಳನ್ನು ಅವರ ಮುಂದಿಟ್ಟೆ. ಅವರು ಈ ವಿಷಯವನ್ನು ನಾನು ಆಸ್ಥಾನದ ಮೇಲೆ ಹಾಜರಿದ್ದ ವರ್ಕಿಂಗ್ ಕಮಿಟಿಯಲ್ಲಿ ಮಂಡಿಸಿದರು. ಚರ್ಚಿಸಲ್ಪಟ್ಟಿತು. ಆದರೆ ಯಾವ ತೀರ್ಮಾನವನ್ನು ಕೈಗೊಳ್ಳಲಿಲ್ಲ. ಅವರು ಅಖಿಲ ಭಾರತ ದೃಷ್ಟಿಯಿಂದ ಈ ಪ್ರಶ್ನೆಯನ್ನು ಕಾಣುತ್ತಾರೆ. ಭಾರತದ ಎಲ್ಲಾ ಪ್ರಾಂತ್ಯಗಳಿಂದಲೂ ಈ ರೀತಿ ದೂರುಗಳು ಬಂದಿವೆ. ಈ ಅಸಂಖ್ಯಾತ ದೂರುಗಳನ್ನು ಕಂಡು ಏನು ಮಾಡಬೇಕೆಂಬ ಬಗ್ಗೆ ಅವರಿಗೆ ದಿಕ್ಕು ತೋಚದಂತಾಗಿದೆ. ಮೈಸೂರಿನ ಮಟ್ಟಿಗೆ ನಾನು ಪಂಡಿತ ನೆಹರೂರವರಿಗೆ ಪತ್ರ ಬರೆದು ಕೊಟ್ಟು ಈ ದೂರುಗಳ ತನಿಖೆ ವರ್ಕಿಂಗ್ ಕಮಿಟಿಯ ನಿಜನ್ನಿಂಬುದಾಗಲೀ ಅಥವಾ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನೇಮಿಸುವ ಸಮಿತಿಯಿಂದಾಗಲೀ ನಡೆಯಬೇಕೆಂದು ತಿಳಿಸಿದ್ದೇನೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರು ಹೇಳಿರುವರು.

ಒಬ್ಬ ಮಂತ್ರಿಯ ಮೇಲೆ ದೂರು

ದೂರುಗಳು ಯಾವ ರೀತಿಯವೆಂದು ಕೇಳಿದ ಪ್ರಶ್ನೆಗೆ ಶ್ರೀ ಹೆಚ್. ಸಿ. ದಾಸಪ್ಪನವರು ವಿವರಣೆಯನ್ನೀಯುತ್ತಾ, 'ಒಂದು ರೀತಿಯ ದೂರಿನಲ್ಲಿ ಕೆಲವು ಕಾಂಗ್ರೆಸ್ ನಾಯಕರು ಮತ್ತು ಒಬ್ಬ ಮಂತ್ರಿಯೂ ಕಾಂಗ್ರೆಸ್ಸಿನ ಅಧಿಕೃತ ಉಮೇದುವಾರರ ವಿರುದ್ಧ ಕೆಲಸ ಮಾಡಿದರೆಂದು ತಿಳಿಸಲಾಗಿದೆ. ಮತ್ತೊಂದು ರೀತಿಯ ದೂರಿನಲ್ಲಿ ಕಾಂಗ್ರೆಸ್ಸಿಗರು ಅಲ್ಲಲ್ಲಿ ಕಾಂಗ್ರೆಸ್ ಉಮೇದುವಾರರ ವಿರುದ್ಧ ಕೆಲಸ ಮಾಡಿದರೆಂದು ತಿಳಿಸಲಾಗಿದೆ. ಇನ್ನೊಂದು ರೀತಿಯ ದೂರಿನಲ್ಲಿ ಕಾಂಗ್ರೆಸ್ಸಿಗರ ಕರ್ತವ್ಯ ಕಾಂಗ್ರೆಸ್ ಉಮೇದುವಾರರಿಗೆ ಬೆಂಬಲವಿತ್ತು ಕೆಲಸ ಮಾಡಬೇಕಾದುದಾದರೂ ಕೆಲವರು ಆ ರೀತಿ ಬೆಂಬಲನೀಡದೆ ಸುಮ್ಮನಿದ್ದರೆಂದು ಹೇಳಲಾಗಿದೆ. ಒಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯು ಕಾಂಗ್ರೆಸ್‌ಗೆ ವಿರುದ್ಧವಾಗಿ ಪ್ರಚಾರ ಮಾಡಿದೆಯೆಂದು ಕೂಡ ದೂರು ಬಂದಿದೆ' ಎಂದರು.

ಕಾರ್ಯಕಾರಿ ಸಮಿತಿ ಸದಸ್ಯರ ಸಭೆ ೧೭ನೇ ತಾ|| ಬೆಂಗಳೂರಿನಲ್ಲಿ ನಡೆಯಲಿದೆ

ಬೆಂಗಳೂರು ಫೆ ೧೩

೧೭ನೇ ತಾ|| ಭಾನುವಾರ ಬೆಳಗ್ಗೆ ೧೦ ಗಂಟೆಗೆ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಕಾಂಗ್ರೆಸ್ ಕಛೇರಿಯಲ್ಲಿ ನಡೆಯಲಿದೆ.

ಅದೇ ದಿನ ೧೧ ಗಂಟೆಗೆ ಪ್ರದೇಶ ಕಾಂಗ್ರೆಸ್ ಎಲೆಕ್ಷನ್ ಕಮಿಟಿಯ ಸಭೆಯು ನಡೆಯಲಿದೆ.

೧೨ ಗಂಟೆಗೆ ಪಾರ್ಲಿಮೆಂಟರಿ ಉಪಸಮಿತಿಯ ಸಭೆ ಸೇರಲಿದೆ.

ಪಂಚಾಯಿತಿಗಳಿಗೆ ಜೀವದಾನ

ರಾಜಪ್ರಮುಖರು ಇಂದು ವಿಶೇಷ ಶಾಸನವನ್ನು ಜಾರಿ ಮಾಡಿ, ಕೆಲವು ಪಂಚಾಯಿತಿಗಳ ರಚನೆ ಮತ್ತು ಅವು ಮುಂದುವರಿಯುವುದನ್ನು ಕ್ರಮಗೊಳಿಸಿದ್ದಾರೆ. ಪಂಚಾಯಿತಿಗಳ ಅವಧಿಯನ್ನು ಕೃತಪಡಿಸುವ ಸೆಕ್ಷನ್ನಿನಲ್ಲಿ ೪ ವರ್ಷ ಎಂದಿರುವುದು ೫ ವರ್ಷ ಎಂದು ತಿದ್ದುಪಾಟು ಮಾಡಲಾಗಿದೆ.

ಬ್ರಿಟಿಷ್ ಸಲಹೆಗೆ ಅಮೆರಿಕಾ ತಿರಸ್ಕಾರ

ಚೀಣೀ ರಾಷ್ಟ್ರೀಯ ಗೆರಿಲ್ಲಾಗಳು ಬರ್ಮಾದಲ್ಲಿ ಕಾರ್ಯಾಚರಣೆ ನಡೆಸುತ್ತಿರುವುದನ್ನು ಶೋಧಿಸುವ ಸಲುವಾಗಿ ವಿಶ್ವಸಂಸ್ಥೆ ನಿಯೋಗವೊಂದು ಪರಿಶೀಲನೆ ನಡೆಸಬೇಕೆಂಬ ಬ್ರಿಟಿಷ್ ಸಲಹೆಯನ್ನು ಅಮೆರಿಕದ ರಾಷ್ಟ್ರ ಶಾಖೆ ತಿರಸ್ಕರಿಸಿದೆ.

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಹರತಾಳ ಸಡಿಲವಾಗಿದೆ

ಬ್ರಿಟಿಷ್ ಯೋಧರು ಈಜಿಪ್ಟ್ ಪೋಲೀಸಿನ ೮೦ ಮಂದಿ ಅಧಿಕಾರಿಗಳನ್ನು ಬಿಡುಗಡೆ ಮಾಡಿದ್ದಾರೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ. ಸೂಯೆಜ್ ಕಾಲುವೆ ಪ್ರದೇಶದಲ್ಲಿನ ಹರತಾಳಗಳಲ್ಲಿ ಇತ್ತೀಚೆಗೆ ಆಗಿರುವ ಸಡಿಲತೆಯ ಪರಿಣಾಮವಾಗಿ ಈ ರೀತಿ ಬಿಡುಗಡೆ ಮಾಡಲಾಗಿದೆಯೆಂದು ಹೇಳಲಾಗಿದೆ.

ಹೈದ್ರಾಬಾದ್ ಹೈಕೋರ್ಟಿನ ನೂತನ ನ್ಯಾಯಾಧೀಶರು

ಬ್ಯಾರಿಸ್ಟರ್ ಶ್ರೀ ಪಿಂಗಳಿ ಜಗನ್ಮೋಹನ ರೆಡ್ಡಿಯವರನ್ನು ಹೈದ್ರಾಬಾದ್ ಹೈಕೋರ್ಟಿನ ನ್ಯಾಯಾಧೀಶರಾಗಿ ರಾಷ್ಟ್ರಾಧ್ಯಕ್ಷರು ನೇಮಿಸಿದ್ದಾರೆಂದೂ, ಒಳಾಡಳಿತ ಸಚಿವ ಶಾಖೆಯು ಪ್ರಕಟಣೆಯು ತಿಳಿಸುತ್ತದೆ.

ಗಲಭೆಯಲ್ಲಿ ೨೬ ಮಂದಿ ಮರಣ

ಜನವರಿ ೨೬ ರಂದು ಕೈರೋವಿನಲ್ಲಿ ನಡೆದ ದೊಂಬಿಯಲ್ಲಿ ಅಪಘಾತಕ್ಕೆ ಈಡಾದವರು ಒಟ್ಟು ೫೫ ಎಂದು ಈಜಿಪ್ಟ್ ಪತ್ರಿಕೆ 'ಅಲ್ ಅಹರಾಂ' ಪ್ರಕಟಿಸಿದೆ.

೨೬ ಜನರು ಕೊಲೆಗೀಡಾದರು. ಅವರಲ್ಲಿ ೧೩ ಜನರು ಬಾರ್ಕ್ಲೇ ಬಾಂಕಿನೊಳಗಡೆಯೂ, ಒರ್ವರು ಹೊರಗಡೆಯೂ ಮತ್ತು ೯ ಜನ ಬ್ರಿಟಿಷ್ ಕ್ಲಬ್ ಒಳಿಯೂ ಸಾವಿಗೀಡಾದರು.

ಪ್ರಭುದತ್ತ ಬ್ರಹ್ಮಚಾರಿಗೆ ೫೫ ಸಾವಿರ ಓಟು

ಪಂ|| ನೆಹರು ಅವರ ಪ್ರತಿಸ್ಪರ್ಧಿಯಾಗಿ ನಿಂತಿರುವ ಪ್ರಭುದತ್ತ ಬ್ರಹ್ಮಚಾರಿಯವರ ಮತಗಳ ಎಣಿಕೆ ಇಂದು ಮುಗಿಯಿತು. ಅವರಿಗೆ ಅಲಹಾಬಾದ್ ಕ್ಷೇತ್ರದಲ್ಲಿ ೫೦೦೦೦ ಮತಗಳು ಬಂದಿವೆ. ಬಾನಪುರ ಕ್ಷೇತ್ರದಲ್ಲಿ ಅವರಿಗೆ ೫೦೦೦ ಮತಗಳು ಬಂದಿವೆ. ಇವರಿಗೆ ೫೬೭೧೮ ಓಟು ಬಂದಿವೆ. ಬ್ರಹ್ಮಚಾರಿಗಳ ಜೊತೆಗೆ ಇನ್ನಿಬ್ಬರ ಎಣಿಕೆಯೂ ಮುಗಿಯಿತು.

ನೇಪಾಳಮಂತ್ರಿ ಲಂಡನ್ನಿಗೆ

ಶುಕ್ರವಾರ ನಡೆಯಲಿರುವ ಜಾರ್ಜ್ ದೊರೆಗಳ ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ನೇಪಾಳದ ಅಭಿವೃದ್ಧಿ ಶಾಖಾ ಸಚಿವ ಮೇಜರ್ ಜನರಲ್ ಮಹಬೀರ್ ಶಂಷೇರರವರು ಲಂಡನ್ನಿಗೆ ಹೋಗಿರುವರು.

ಪಾರ್ಲಿಮೆಂಟ್ ಸದಸ್ಯರ ನಿಧನ

ಪಾರ್ಲಿಮೆಂಟಿಗೆ, ಕೊಯಮತ್ತೂರು-ನೀಲಗಿರಿ ಕ್ಷೇತ್ರದಿಂದ ಅವಿರೋಧವಾಗಿ ಆರಿಸಿ ಬಂದ ಶ್ರೀ ಟಿ. ಎ. ರಾಮಲಿಂಗಂ ಚೆಟ್ಟಿಯಾರ್‌ರವರು ಮೊನ್ನೆ ಸಂಜೆ ಹೃದಯಸ್ತಂಭನದಿಂದ ಮೃತರಾದರು. ಇವರಿಗೆ ೬೧ ವರ್ಷ ವಯಸ್ಸಾಗಿತ್ತು.

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.

*

ಹೆಚ್ಚಿನ ವಿವರಗಳಿಗೆ ಬರೆಯಿರಿ—
ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ
ಬೆಂಗಳೂರು ೩.

ರಾಜಕಮಲ್
10-2-52ರಿಂದ ಆಮೋಘವಾದ 5ನೇ ವಾರ
* ಅಮ್ಮ * (ತಮಿಳು)
ಭೂಮಿಕೆ:- ಬಿ. ಎಸ್. ಸರೋಜ, ಲಲಿತ, ಶಾಂತಕುಮಾರಿ, ನಂಬಿಯಾರ್.

ವುಡ್‌ಲ್ಯಾಂಡ್ಸ್
೧೫-೨-೫೨ ರಿಂದ ಅಮೋಘಪ್ರಾರಂಭ
ದಿನವೂ 3 ಪ್ರದರ್ಶನಗಳು
ಅಲ್‌ಬೇಲ
ಪಾತ್ರ:- ಗೀತಾಬಾಲಿ, ಭಗವಾನ್, ಬದರೀಪ್ರಸಾದ್, ಸುಂದರ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ, ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು—ಹಿ. ಶ್ರೀ. ಸುಬ್ಬರಾವ್. ಮೋಹನ ಮುದ್ರಣಾಲಯ ಮೈಸೂರು

ಫೋನ್ ೫೭೪ (ಲಾಡ್ಜ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೫—೨—೧೯೫೨ನೇ ಶುಕ್ರವಾರ [ಸಂಚಿಕೆ ೧೪೫

ಸಂತಾನಂ-ಹಿಮ್ಮತ್‌ಸಿಂಗ್‌ಜೀ ಲೆಫ್ಟಿನೆಂಟ್ ಗೌರ್ನರುಗಳಾಗಿ ನೇಮಕ

ಇಂದು ಜಾರ್ಜ್ ದೊರೆಗಳ ಅಂತ್ಯಕ್ರಿಯೆ

ಪೌರಸಭಾಧಿವೇಶನ

ಮೈಸೂರು ಫೆ. ೧೪

ಮೈಸೂರು ಪುರಸಭೆಯ ಮುಂದುವರಿದ ಅಧಿವೇಶನವು ನಿನ್ನೆ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಮುಂಬರುವ ಪೌರಸಭೆಯ ಚುನಾವಣೆಯು ವಯಸ್ಕರ ಮತದಾನ ಪದ್ಧತಿಯ ಪ್ರಕಾರ ನಡೆಯಬೇಕಾಗಿರುವುದರಿಂದ ಮೈಸೂರು ಸಿಟಿಯನ್ನು ವಾರ್ಡುಗಳನ್ನಾಗಿ ವಿಭಾಗಿಸಲು ಸರ್ಕಾರವು ಪೌರಸಭೆಯ ಅಭಿಪ್ರಾಯವನ್ನು ಕೇಳಿರುವ ವಿಷಯವು ಸಭೆಯಲ್ಲಿ ಬಂದು ಈ ವಿಷಯವನ್ನು ಪರಿಶೀಲಿಸಿ ಕೂಡಲೇ ವರದಿಯನ್ನೊಪ್ಪಿಸಲು ಒಂದು ಸಮಿತಿಯನ್ನು ನೇಮಿಸಲಾಯಿತು.

ಈ ಸಮಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಶ್ರೀಗಳಾದ ಪಾಲಹಳ್ಳಿ ಸೀತಾರಾಮಯ್ಯ, ಎಸ್. ಲಿಂಗಣ್ಣ, ಮಹದೇವಸ್ವಾಮಿ, ಬಿ. ಕೆ. ರಾಮಕೃಷ್ಣಯ್ಯ ಮತ್ತು ಜನಾಬ್ ಸಯ್ಯದ್ ಅಬ್ದುಲ್ ರಹಮಾನರವರು ಇರುವರು.

೨೫೦೦ ಲಕ್ಷ ಡಾಲರು ಸಹಾಯ

ಭಾರತದಲ್ಲಿ ಆರೋಗ್ಯ ಮತ್ತು ವಿದ್ಯಾಭ್ಯಾಸ ಅಭಿವೃದ್ಧಿ ಕಾರ್ಯಕ್ಕೆ ಅಮೆರಿಕಾವು ಭಾರತಕ್ಕೆ ೨೫೦೦ ಲಕ್ಷ ಡಾಲರುಗಳಷ್ಟು ಸಹಾಯನೀಡಬೇಕೆಂದು ಭಾರತದಲ್ಲಿಯ ಅಮೆರಿಕಾ ರಾಯಭಾರಿ ಮಿ|| ಚೆಸ್ಟರ್ ಬೌಲ್ಸ್‌ರವರು ತಮ್ಮ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವರು.

ಇದಲ್ಲದೆ ಭಾರತಕ್ಕೆ ಗೋಧಿ ಮತ್ತು ಹತ್ತಿಯನ್ನು ಅಧಿಕ ಪ್ರಮಾಣದಲ್ಲಿ ಕೊಡಲು ಸಾಧ್ಯವೆಂದೂ ಈ ಸಹಾಯಕ್ಕೆ ರಾಜಕೀಯ ಬಣ್ಣವೇನೂ ಇಲ್ಲವೆಂದೂ ಅವರು ಹೇಳಿರುವರು.

ಮರಣದಂಡನೆ

ಬಾಂಗೀರ್ ಎಂಬಲ್ಲಿ ೧೩ ವರ್ಷದ ಹುಡುಗಿಯನ್ನು ಅಪಹರಿಸಿಕೊಂಡು ಹೋಗಿ ಆಕೆಯನ್ನು ಕೊಂದು ಹಾಕಿ ಆಭರಣಗಳನ್ನು ಅಪಹರಿಸಿಕೊಂಡರೆಂಬ ಅಪವಾದನೆಯ ಮೇಲೆ ನಾಲ್ಗೊಂಡಾ ಜಿಲ್ಲಾ ನ್ಯಾಯಾಧೀಶರು ೫ ಜನ ಮುಸ್ಲೀಮರಿಗೆ ಮರಣದಂಡನೆಯನ್ನು ವಿಧಿಸಿರುವರು.

ಬಸ್ಸು ಡ್ರೈವರುಗಳಿಗೆ ಲಾಠಿ ಮತ್ತು ಕಬ್ಬಿಣದ ಸಲಾಕಿಗಳು

ಮದ್ರಾಸಿನ ಬಳಿ ಇತ್ತೀಚೆಗೆ ಕೆಲವು ಬಸ್ಸುಗಳನ್ನು ನಿಲ್ಲಿಸಿ ದರೋಡೆ ನಡೆಸಿದುದರ ಪರಿಣಾಮವಾಗಿ ಎಲ್ಲಾ ಬಸ್ಸು ಡ್ರೈವರುಗಳು ಅಂತಹ ಸಮಯದಲ್ಲಿ ಉಪಯೋಗಿಸಲು ಲಾಠಿಗಳು ಮತ್ತು ಕಬ್ಬಿಣದ ಸಲಾಕಿಗಳನ್ನು ಕೊಡಲು ಮದ್ರಾಸ್ ಪೋಲೀಸಿನವರು ಪರಿಶೀಲಿಸುತ್ತಲಿರುವರು.

ಶೇ|| ಹತ್ತರಷ್ಟು ವಿದ್ಯುತ್ ಖೋತಾ

ಮೆಟ್ಟೂರು ಅಣೆಕಟ್ಟಿನಲ್ಲಿ ನೀರಿನ ಪರಿಮಾಣವು ಕಡಿಮೆಯಾಗಿರುವುದರಿಂದ ಈಗ ಇಲ್ಲಿಂದ ವಿದ್ಯುತ್ ಪಡೆಯುತ್ತಿದ್ದವರಿಗೆ ಶೇ|| ೧೦ ರಷ್ಟು ವಿದ್ಯುತ್ ಖೋತಾ ಮಾಡಲಾಗಿದೆ. ಒಟ್ಟಿನಲ್ಲಿ ಶೇ|| ೨೫ ರಷ್ಟು ಖೋತಾ ಮಾಡಿದಂತಾಗಿದೆ.

ಭೂಪಾಲ್‌ನಲ್ಲಿ ಚುನಾವಣೆ ಮುಗಿಯಿತು

ಭೂಪಾಲಿನ ರಾಜ್ಯ ಶಾಸನಸಭೆಗೆ ಚುನಾವಣೆಯು ಮುಗಿದು ಆ ರಾಜ್ಯ ಶಾಸನಸಭೆಯ ೩೦ ಸ್ಥಾನಗಳಲ್ಲಿ ೨೫ ಕಾಂಗ್ರೆಸ್ಸಿಗೆ, ೪ ಸ್ವತಂತ್ರರಿಗೆ, ಒಂದು ಹಿಂದೂ ಮಹಾಸಭೆಗೆ ದೊರೆತಿದೆ.

ಅಶೋಕ ಚಕ್ರ

ಇದೇ ಫೆಬ್ರವರಿ ೩ನೇ ತಾ|| ಉನ್ನತ ಸೈನ್ಯಾಧಿಕಾರಿಗಳು ವಿಮಾನ ಪ್ರಯಾಣ ಮಾಡುತ್ತಲಿದ್ದಾಗ ವಿಮಾನವು ಬೆಂಕಿಯಿಂದ ಹತ್ತಿಕೊಂಡು ಅಪಘಾತಕ್ಕೀಡಾಗುತ್ತಿದ್ದಾಗ ತನ್ನ ಬುದ್ಧಿ ಸಾಮರ್ಥ್ಯವನ್ನು ಪ್ರಯೋಗಿಸಿ ಆ ವಿಮಾನವನ್ನು ಲಕ್ನೋ ಬಳಿ ಕೆಳಕ್ಕಿಳಿಸಿದ ಭಾರತ ವಿಮಾನದಳದ ಫ್ಲೈಯಿಂಗ್ ಲೆಫ್ಟಿನೆಂಟ್ ಸುಹಾಸ್ ಬಿಸ್ವಾಸ್‌ರವರ ಕಾರ್ಯದಕ್ಷತೆ ಮೆಚ್ಚಿ ರಾಷ್ಟ್ರಾಧ್ಯಕ್ಷರು ಒಂದನೇ ದರ್ಜೆಯ ಅಶೋಕಚಕ್ರ ಬಹುಮಾನವನ್ನು ದಯಪಾಲಿಸಿರುವರು.

‡ ಕಳೆದ ವರ್ಷ ಭಾರತದಲ್ಲಿನ ನೇಯ್ಗೆ ಗಿರಣಿಗಳು ವಾರಕ್ಕೆ ೪೨ ಗಂಟೆಗಳ ಕಾಲ ಕೆಲಸ ಮಾಡುತ್ತಿದ್ದುವು. ಈಗ ಈ ಗಿರಣಿಗಳಿಗೆ ನೇಯ್ಗೆ ತೃಪ್ತಿಕರವಾಗಿ ಸರಬರಾಜು ಇರುವುದರಿಂದ ಈಗ ವಾರಕ್ಕೆ ೪೮ ಗಂಟೆಗಳ ಕಾಲ ಕೆಲಸಮಾಡುವುವು.

ಜಾರ್ಜ್ ದೊರೆಗಳ ಅಂತ್ಯಕ್ರಿಯೆ

ಜಾರ್ಜ್ ದೊರೆಗಳ ಅಂತ್ಯಕ್ರಿಯೆಯು ಇಂದು ಸಂಜೆ ೬-೩೦ ಗಂಟೆ ವೇಳೆಗೆ ವಿಂಡ್ಸರ್‌ನಲ್ಲಿ ನಡೆಯುತ್ತದೆ.

ಮೆರವಣಿಗೆಯು ಲಂಡನ್ನಿನ ವೆಸ್ಟ್ ಮಿನಿಸ್ಟರ್ ಅಬೆಯಿಂದ ೨|| ಮೈಲಿ ಹೋಗಿ ಅನಂತರ ವಿಶೇಷ ರೈಲಿನಲ್ಲಿ ೨೫ ಮೈಲಿ ದೂರದಲ್ಲಿರುವ ವಿಂಡ್ಸರ್‌ಗೆ ಹೋಗುತ್ತದೆ.

ಇಂದು ಬೆಳಗ್ಗೆ ೧೦ ಗಂಟೆಯಿಂದ ೧೧-೪೫ ರವರೆಗೆ ದೆಹಲಿಯ ಚರ್ಚಿನಲ್ಲಿ ವಿಶೇಷ ಪ್ರಾರ್ಥನೆ ನಡೆಯುತ್ತದೆ. ಅದಕ್ಕೆ ಪ್ರಧಾನಿ ನೆಹರೂ, ಸಚಿವರೂ, ಮಿಲಿಟರಿ ಅಧಿಕಾರಿಗಳು ಹೋಗುವರು. ಈ ಕಾರ್ಯಕ್ರಮವನ್ನು ರೇಡಿಯೋನಲ್ಲಿ ಬಿತ್ತರ ಮಾಡಲಾಗುತ್ತದೆ.

ಸರ್ವಾನುಮತದಿಂದ ನಾಯಕರ ಚುನಾವಣೆ ಆಗಬೇಕು

ಶ್ರೀ ಕೆ. ಸಿ. ರೆಡ್ಡಿಯವರ ವಿವರಣೆ

ಬೆಂಗಳೂರು ಫೆ ೧೪

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ದಿನ ಬೆಂಗಳೂರಿಗೆ ದೆಹಲಿಯಿಂದ ಆಗಮಿಸಿದರು. ಶ್ರೀ ಕೆ. ಸಿ. ರೆಡ್ಡಿಯವರು ತಾವು ದೆಹಲಿಯಲ್ಲಿ ಪಂಡಿತ ನೆಹರೂರವರೊಡನೆ ಮತ್ತು ಹೈಕಮಾಂಡ್‌ನವರೊಡನೆ ಸಂಸ್ಥಾನದ ಪರಿಸ್ಥಿತಿಯನ್ನು ಕುರಿತು ಮಾತನಾಡಿದರಾಗಿಯೂ, ಸಂಸ್ಥಾನದಲ್ಲಿ ಉಭಯ ಶಾಸನಸಭೆಗಳ ಪ್ರತಿನಿಧಿಗಳಿಂದ ಕೂಡಿದ ಕಾಂಗ್ರೆಸ್ ಪಕ್ಷದವರ ಸಭೆಯಲ್ಲಿ ಸರ್ವಾನುಮತದಿಂದ ಅಥವಾ ಬಹುಮತ ಪಡೆದವರನ್ನು ನಾಯಕರನ್ನಾಗಿ ಆರಿಸಬೇಕೆಂದು ಸಲಹೆ ನೀಡಿದರೆಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ಸಂಸ್ಥಾನದ ಪರಿಸ್ಥಿತಿಯನ್ನು ಕಾಂಗ್ರೆಸ್ ಪಕ್ಷವು ಅರಿತು ಅಂತಿಮ ನಿರ್ಧಾರವನ್ನು ಕೈಕೊಳ್ಳುವುದೆಂದು ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿದರು.

ಭದ್ರಾವತಿಗೆ ಸಚಿವರ ಪ್ರಯಾಣ

ಭದ್ರಾವತಿ, ಹೊಸ್ಪೇಟೆ ಮುಂತಾದ ಕಡೆಗಳ ಕಾರ್ಯಕ್ರಮ ವೀಕ್ಷಿಸಲು ಸಚಿವರುಗಳಾದ ಶ್ರೀಗಳಾದ ಹೆಚ್. ಸಿ. ದಾಸಪ್ಪ, ಕೆ. ಟಿ. ಭಾಷ್ಯಂ, ಆರ್. ಚೆನ್ನಿಗರಾಮಯ್ಯ ಮತ್ತು ಹೆಚ್. ಸಿದ್ದಯ್ಯನವರು ಈ ದಿನ ಬೆಂಗಳೂರಿನಿಂದ ತೆರಳಿದರು.

ಭಾರತ ಸರ್ಕಾರದ ರಾಜ್ಯ ಸಚಿವ ಶ್ರೀ ಕೆ. ಸಂತಾನಂರವರನ್ನು ವಿಂಧ್ಯ ಪ್ರದೇಶದ, ರಕ್ಷಣಾ ಶಾಖೆಯ ಉಪಮಂತ್ರಿ, ಮೇಜರ್ ಜನರಲ್ ಹಿಮ್ಮತ್‌ಸಿಂಗ್‌ಜೀಯವರನ್ನು ಹಿಮಾಚಲ ಪ್ರದೇಶದ ಲೆಫ್ಟಿನೆಂಟ್ ಗೌರ್ನರ್‌ಗಳನ್ನಾಗಿ ರಾಷ್ಟ್ರಾಧ್ಯಕ್ಷರು ನೇಮಕ ಮಾಡಿದ್ದಾರೆ.

ಶ್ರೀ ಎಂ. ಎಸ್. ಬೋರಯ್ಯನವರ ಮೇಲೆ ಮೋಸದ ಅಪಾದನೆ

ಮೈಸೂರು ಫೆ ೧೪

ಕಲ್ಯಾಣ ತಾಜಾದ ಪೂರ್ಣಿಮಾ ಪಿಕ್ಚರ್ಸ್ ಪ್ರತಿನಿಧಿಯೆಂದು ಹೇಳಿಕೊಂಡು, ಅನೇಕರಿಗೆ ಮೇಲ್ಕಂಡ ಸಂಸ್ಥೆಯಲ್ಲಿ ಕೆಲಸ ಒದಗಿಸುವುದಾಗಿ ತಿಳಿಸಿ ಅವರುಗಳಿಂದ ಎಂಡೆರಡು ರೂ ಪಡೆದು ಶ್ರೀ ಎಂ. ಎಸ್. ಬೋರಯ್ಯನವರು ಮೋಸ ಮಾಡಿದರೆಂಬ ಅಪಾದನೆ ಮೇಲೆ ಕೃಷ್ಣರಾಜ ಪೋಲಿಸ್ ಸ್ಟೇಷನ್ನವರು ಮೊಕದ್ದಮೆ ಹೂಡಿಯಾರೆ. ಕೋರ್ಟಿನಲ್ಲಿ ಮೊಕದ್ದಮೆಯು ಇಂದಿನಿಂದ ಪ್ರಾರಂಭವಾಗಿ ಇಬ್ಬರು ಸಾಕ್ಷಿ ವಿಚಾರಣೆ ನಡೆಯಿತು. ಸುಮಾರು ೫೦ ಜನ ಸಾಕ್ಷಿಗಳಿರುವರೆಂದು ಹೇಳಲಾಗಿದೆ.

ಶ್ರೀಯುತರು ಚುನಾವಣಾ ಕಾಲದಲ್ಲಿ ಅಖಿಲ ಭಾರತ ಓಟರುಗಳ ಸಂಘವೆಂಬ ಒಂದು ಸಂಘ ಸ್ಥಾಪಿಸಿ ತಾವು ಅಧ್ಯಕ್ಷರೆಂದು ಹೇಳಿಕೊಂಡು ಓಡಾಡುತ್ತಲಿದ್ದರು.

ಭಾರತಕ್ಕೆ ನ್ಯೂಸಿಲೆಂಡಿನ ಸಹಾಯ

ನ್ಯೂಸಿಲೆಂಡ್ ಸರ್ಕಾರವು ಕೊಲಂಬೋ ಯೋಜನೆಗನುಗುಣವಾಗಿ ಭಾರತದ ಆರ್ಥಿಕಾಭಿವೃದ್ಧಿಯ ಕಾರ್ಯಕ್ರಮಗಳಿಗೆ ೨,೫೦,೦೦೦ ಪೌಂಡುಗಳನ್ನು ಉದಾರವಾಗಿ ನೀಡಿದೆ. ಭಾರತ ಸರ್ಕಾರದವರು ಈ ನಿಧಿಯನ್ನು ಕೃತಜ್ಞತೆಯಿಂದ ಸ್ವೀಕರಿಸಿರುವರು.

ನ್ಯೂಜಿಲೆಂಡಿನ ಇರ್ವರು ಪ್ರತಿನಿಧಿಗಳು ಈ ನಿಧಿಯನ್ನು ತೆಗೆದುಕೊಂಡು ಭಾರತಕ್ಕೆ ಆಗಮಿಸಿರುವರು.

೧೪ ದಿನ ಶೋಕ

ಜಾರ್ಜ್ ದೊರೆಯ ನಿಧನದ ಪ್ರಯುಕ್ತ ಈಜಿಪ್ಟಿನಲ್ಲಿ ೧೪ ದಿನ ಶೋಕಕಾಲವನ್ನಾಗಿ ಘೋಷಿಸಲಾಗಿದೆ.

ಏಪ್ರಿಲ್ ಮೊದಲನೇ ವಾರದಲ್ಲಿ ಚುನಾವಣೆ

ಬೆಂಗಳೂರು ಫೆ ೧೪

ಸಂಸ್ಥಾನದ ಲೆಜಿಸ್ಲೆಟಿವ್ ಕೌನ್ಸಿಲಿಗೆ ಏಪ್ರಿಲ್ ಮೊದಲನೇ ವಾರದಲ್ಲಿ ಚುನಾವಣೆ ನಡೆದು ಮೇ ಮೊದಲನೇ ವಾರದಲ್ಲಿ ಓಟಿನ ಎಣಿಕೆ ನಡೆಯುವುದಾಗಿ ತಿಳಿದು ಬಂದಿದೆ.

ಕೌನ್ಸಿಲಿನಲ್ಲಿ ೪೦ ಸದಸ್ಯರಿರುವರು. ಶಾಸನ ಸಭೆ ೧೩ ಮಂದಿಯನ್ನು ಚುನಾಯಿಸುವುದು, ಸ್ಥಳೀಯ ಸಂಸ್ಥೆಗಳು ೧೩, ಪದವೀಧರರು ೩, ಉಪಾಧ್ಯಾಯರು ೩, ಸದಸ್ಯರನ್ನು ಚುನಾಯಿಸುವರು. ರಾಜಪ್ರಮುಖರು ೮ ಮಂದಿಯನ್ನು ನಾಮಕರಣ ಮಾಡುವರು.

ಕೌನ್ಸಿಲಿನ ಓಟರುಗಳ ಪ್ರಾಥಮಿಕ ಪಟ್ಟಿ ಮಂಗಳವಾರ ಪ್ರಕಟವಾಗಿದೆ. ಆಕ್ಷೇಪಣೆಗಳಿಗೆ ೨೧ ದಿನಗಳ ಅವಕಾಶವಿದೆ.

ಸಾರ್ವತ್ರಿಕ ರಜ

ಇಂಗ್ಲೆಂಡಿನ ದೊರೆ ಜಾರ್ಜರ ಅಂತ್ಯಕ್ರಿಯೆ ನಡೆಯುವ ದಿನ ಫೆಬ್ರವರಿ ೧೫ನೇ ತಾ॥ ಸಂಸ್ಥಾನದಲ್ಲಿ ಸಾರ್ವತ್ರಿಕ ರಜಾ ಘೋಷಿಸಲಾಗಿದೆ. ರಜಾ ಸರ್ಕಾರಿ ಕೈಗಾರಿಕೆ ಸಂಸ್ಥೆಗಳಿಗೂ ಅನ್ವಯಿಸುವುದು.

ಅಂದು ಸರ್ಕಾರಿ ಕಛೇರಿಗಳು ಮಧ್ಯಾಹ್ನ ಮಾತ್ರ ಮುಚ್ಚಿರುವುವು. ಬೆಳಿಗ್ಗೆ ೮ರಿಂದ ೧೧ರ ವರೆಗೆ ಕೆಲಸ ನಡೆಯುವುವು.

ಸರ್ಕಾರಿ ಸುದ್ದಿ

ಶಿವಮೊಗ್ಗ ಜಿಲ್ಲಾ ವೈದ್ಯಾಧಿಕಾರಿ ಡಾ॥ ಬಿ. ನಾರಾಯಣರಾವ್‌ರವರನ್ನು ರಾಜಪ್ರಮುಖರ ಅಸ್ಸ್ಟ. ಅಧಿಕಾರಿ ವರ್ಗಕ್ಕೆ ವರ್ಗಾಯಿಸಲಾಗಿದೆ.

ಮಿಂಟೋ ಆಸ್ಪತ್ರೆಯ ಸೂ॥ ಡಾ॥ ಎಸ್. ವಾಸುದೇವರಾವ್‌ರವರನ್ನು ಶಿವಮೊಗ್ಗ ಜಿಲ್ಲಾ ವೈದ್ಯಾಧಿಕಾರಿಯಾಗಿ ವರ್ಗಾಯಿಸಲಾಗಿದೆ.

ಬೌರಿಂಗ್ ಆಸ್ಪತ್ರೆಯಲ್ಲಿರುವ ಅಸಿಸ್ಟೆಂಟ್ ಸರ್ಜನ್ ಡಾ॥ ಡಿ. ಆರ್. ನಂಜಪ್ಪ ಅವರನ್ನು ಮಿಂಟೋ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಆಗಿ ನೇಮಿಸಲಾಗಿದೆ.

ಪೆನ್ಸಿಲ್ಲಿನ ಕಾರ್ಖಾನೆ

ಕೇಂದ್ರ ಸಚಿವ ಶ್ರೀ ಎನ್ ವಿ ಗಾಡ್ಗಿಲ್‌ರು, ಮಾರ್ಚಿ ೧೦ ರಂದು ಪೂನಾ ಬಳಿಯಲ್ಲಿರುವ ಪಿಂಪ್ರಿ ಎಂಬಲ್ಲಿ ಭಾರತದ ಪ್ರಥಮ ಪೆನ್ಸಿಲಿನ್ ಕಾರ್ಖಾನೆಯ ಶಂಕುಸ್ಥಾಪನೆಯನ್ನು ನಡೆಸುವರೆಂದು ತಿಳಿದು ಬಂದಿದೆ.

ಕಾರ್ಖಾನೆಯ ಕಟ್ಟಡ ಕೆಲಸವನ್ನು ಸದ್ಯದಲ್ಲೇ ಪ್ರಾರಂಭಿಸಲಾಗುವುದೆಂದು ಗೊತ್ತಾಗಿದೆ.

ಅಮೆರಿಕದ ಅಧ್ಯಕ್ಷ ಚುನಾವಣೆ

ವಾಷಿಂಗ್ಟನ್ ಫೆ ೧೧

ಪ್ರಪಂಚದ ಪರಿಸ್ಥಿತಿಯಲ್ಲಿ ಈ ವರ್ಷ ಅಷ್ಟೇನೂ ಮಹತ್ವವಾದ ಬದಲಾವಣೆಗಳಿಲ್ಲದ್ದರಿಂದ, ಅಮೆರಿಕದಲ್ಲಿ ನಡೆಯುವ ೧೯೫೨ನೇ ಇಸ್ವಿಯ ಅಧ್ಯಕ್ಷ ಚುನಾವಣೆಯಲ್ಲಿ ಕೇವಲ ಅಮೆರಿಕದ ಒಳಾಡಳಿತ ಪ್ರಶ್ನೆಗಳೇ ಚುನಾವಣೆಯ ಮುಖ್ಯ ವಿಷಯಗಳಾಗಬಹುದು.

ವಿದೇಶಾಂಗ ನೀತಿಯ ಬಗ್ಗೆ ಮುಖ್ಯವಾದ ಎರಡು ಪಕ್ಷಗಳು ತಮ್ಮ ಒಪ್ಪಿಗೆಯನ್ನು ತೋರಿಸಿರುವುದರಿಂದ, ಆ ಬಗ್ಗೆ ಏನೂ ತಿಕ್ಕಾಟವಾಗಲಾರದು.

ಈ ನೀತಿಯು ಪ್ರದರ್ಶನ ಸೆನೆಟ್‌ನಲ್ಲಿ ಗ್ರೀಸ್, ಟರ್ಕಿ, ನ್ಯಾಟೋ ಸಮ್ಮೇಳನಕ್ಕೆ ಸೇರುವ ಬಗ್ಗೆ ಮತ ತೆಗೆದುಕೊಂಡಾಗ ಗೊತ್ತಾಯಿತು.

ರಿಪಬ್ಲಿಕನ್ ಪಕ್ಷದ ಉಮೇದುವಾರರಾಗಲಿರುವ ಸೆನೆಟರ್ ಟ್ಯಾಫ್ಟ್‌ರು ಮೊದಲು ಇದರ ವಿರೋಧಿಗಳಾಗಿದ್ದು, ಈಗ ಅವರೇ ಅದಕ್ಕೆ ಬೆಂಬಲ ಕೊಟ್ಟು ಮತ ಕೊಟ್ಟಿದ್ದರಿಂದ ಅಮೆರಿಕದ ವಿದೇಶಾಂಗ ನೀತಿ ಅಧ್ಯಕ್ಷ ಚುನಾವಣೆಯ ಚರ್ಚೆಯ ಗೊಂದಲಕ್ಕೆ ಸಿಗುವುದಿಲ್ಲ.

ರಷ್ಯನರ ಧಾಳಿಯ ವಿರುದ್ಧ ಸ್ವತಂತ್ರ ರಾಷ್ಟ್ರಗಳನ್ನು ಬಲಪಡಿಸಬೇಕೆಂಬ ಬಗ್ಗೆಯೂ ಎರಡು ಪಕ್ಷಗಳಲ್ಲಿಯೂ ಒಪ್ಪಿಗೆ ಇದೆ.

ಬ್ರಿಟನ್ನಿನ ಮುಖ್ಯಮಂತ್ರಿ ಚರ್ಚಿಲ್ಲರು ಮೊನ್ನೆ ಕಾಂಗ್ರೆಸ್ಸಿನ ಸಂಯುಕ್ತ ಅಧಿವೇಶನದಲ್ಲಿ ಮಾತನಾಡುತ್ತಾ, ಬ್ರಿಟನ್ನಿನ ರಾಜಕೀಯ ಪಕ್ಷಗಳಲ್ಲಿ, ಹೊರಗಿನವರು ಎಣಿಸುವಷ್ಟು ಭಿನ್ನತೆಗಳಿಲ್ಲವೆಂದು ತಿಳಿಸಿದರು.

ಆರ್ಥಿಕ ಹತೋಟಿ ಜಾರಿ

ಪ್ರಪಂಚದಲ್ಲಿ ರಕ್ಷಣೆಗಾಗಿ ಹೆಚ್ಚು ಶಕ್ತಿಯನ್ನು ಕ್ರೋಢಿಕರಿಸುವ ಅವಶ್ಯಕತೆ ಇರುವುದರಿಂದ, ರಕ್ಷಣಾ ಉತ್ಪತ್ತಿಗಳ ಮೇಲೆ ಆರ್ಥಿಕ ಹತೋಟಿಯನ್ನು ಹೆಚ್ಚಿಸಬೇಕೆಂದು ಅಧ್ಯಕ್ಷ ಟ್ರೂಮನ್ನರು ತಿಳಿಸಿದ್ದಾರೆ.

ಕಾಂಗ್ರೆಸ್ಸಿಗೆ ಸಂದೇಶವನ್ನು ಕಳುಹಿಸುತ್ತ, ಇನ್ನು ಎರಡು ವರ್ಷಗಳ ಕಾಲವಾದರೂ ಸರ್ಕಾರ ಈ ಹತೋಟಿಯನ್ನಿಟ್ಟುಕೊಂಡಿರಬೇಕೆಂದು ತಿಳಿಸಿದ್ದಾರೆ.

ರಕ್ಷಣಾ ಕಾನೂನಿನ ಪ್ರಕಾರ ಸರ್ಕಾರವು ರಕ್ಷಣಾ ಸಾಮಾನುಗಳನ್ನು ಹೆಚ್ಚಿಗೆ ಉತ್ಪತ್ತಿ ಮಾಡಿ, ರಕ್ಷಣಾ ಕೈಗಾರಿಕೆಗಳಿಗೆ ಉತ್ತೇಜನ ಕೊಟ್ಟು ಹತೋಟಿ ಇಟ್ಟುಕೊಂಡಿರುವುದು.

ಪೆಟ್ರೋಲ್ ಪತ್ತೆ ಮಾಡಲು ಪರಿಣತರ ನಿಯೋಗ

ಪಂಜಾಬಿನ ಕಾಂಗ್ಡ ವಿಭಾಗದ ಜ್ವಾಲಾಮುಖಿ ಎಂಬೆಡೆ ಭೂಗರ್ಭದಲ್ಲಿರುವ ಪೆಟ್ರೋಲನ್ನು ಕೊಳವೆಗಳ ಮೂಲಕ ಸಂಶೋಧಿಸಿ ವರದಿ ಮಾಡಲು ಭಾರತ ಸರ್ಕಾರವು ಒಂದು ಪರಿಣತರ ನಿಯೋಗವನ್ನು ಪಂಜಾಬಿಗೆ ಕಳುಹಿಸಲು ನಿರ್ಧರಿಸಿದೆ.

ದೆಹಲಿಯಲ್ಲಿ ಮಂತ್ರಿಗಳ ಅಂತಿಮ ಪಟ್ಟಿ

ಹೈದ್ರಾಬಾದ್ ಶಾಸನ ಸಭೆಗೆ ನಾಯಕರಾಗಿ ಚುನಾಯಿತರಾದ ಶ್ರೀ ಬಿ ರಾಮಕೃಷ್ಣರಾವ್‌ರವರು ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ, ತಾವು ತಮ್ಮ ಪಕ್ಷದವರೊಂದಿಗೆ ಸಮಾಲೋಚನೆ ನಡೆಸಿ ಮಂತ್ರಿಗಳನ್ನು ಚುನಾಯಿಸುವರೆಂದೂ ನಂತರ ದೆಹಲಿಗೆ ತೆರಳಿ ಪ್ರಧಾನಿ ನೆಹರೂರವರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡು, ಸಂಸ್ಥಾನ ಕಾಂಗ್ರೆಸ್ಸಿನವರೊಂದಿಗೆ ಮಾತುಕಥೆ ನಡೆಸಿ ಮಂತ್ರಿಮಂಡಲದ ಪಟ್ಟಿ ಹೊರಗೆಡಹುವುದಾಗಿ ತಿಳಿಸಿದರು.

ದೆಹಲಿಯ ಮಾತುಕಥೆಗಳ ನಂತರ ಮಂತ್ರಿಗಳ ಪಟ್ಟಿಯು ಅಂತಿಮರೂಪ ಪಡೆಯುವುದೆಂದು ಶ್ರೀ ರಾಮಕೃಷ್ಣರಾವ್ ತಿಳಿಸಿದರು.

ರಿಡ್ಜ್‌ವೇ ಎಚ್ಚರಿಕೆ

ಕೊರಿಯಾ ಶಾಂತಿ ಒಪ್ಪಂದದ ಬಗ್ಗೆ ಊಹಾಪೋಹಗಳನ್ನು ಮಾಡುವುದರಿಂದ ಶತ್ರು ಪಕ್ಷದವರಿಗೆ ಹೆಚ್ಚು ಸಹಾಯವಾಗುತ್ತದೆ, ಎಂದು ಸಂ. ರಾ. ದಂಡನಾಯಕ ಜ॥ ರಿಡ್ಜ್‌ವೇಯವರು ಅಮೆರಿಕದ ಪತ್ರಿಕಾ ಸಂಪಾದಕರನ್ನು ಎಚ್ಚರಿಸಿದ್ದಾರೆ.

ಮದ್ರಾಸಿನಲ್ಲಿ ಅಉನ್ಸ್ ಅಕ್ಕಿ

ಮದರಾಸ್ ಸಂಸ್ಥಾನದಲ್ಲಿ ಕೊಡುತ್ತಿರುವ ಪಡಿತರದಲ್ಲಿಯ ಅಕ್ಕಿ ಪ್ರಮಾಣವನ್ನು ಮಾರ್ಚಿ ೨ರಿಂದ ೬ ಔನ್ಸುಗಳಿಂದ ೮ ಔನ್ಸುಗಳಿಗೆ ಹೆಚ್ಚಿಸಲಾಗುವುದೆಂಬುದಾಗಿ ಮದರಾಸ್ ಆಹಾರ ಖಾತೆ ಸಚಿವ ಜೆ ಎಲ್ ಪಿ ರೋಚ್ ವಿಕ್ಟೋರಿಯಾ ಇಂದು ನುಡಿದರು. ನವದೆಹಲಿಯಲ್ಲಿ ನಡೆಯಲಿರುವ ಆಹಾರ ಸಚಿವರ ಸಮ್ಮೇಳನ ಈ ಹೆಚ್ಚಿಗೆಗೆ ಭಾರತ ಸರ್ಕಾರ ಸಮ್ಮತಿ ನೀಡುವುದೆಂದು ತಾವು ನಂಬುವುದಾಗಿ ನುಡಿದರು.

ಅವಧಿ ಹೆಚ್ಚಿತು

ಭಾರತಕ್ಕೂ ಬ್ರಿಟನ್ನಿಗೂ ಏರ್ಪಟ್ಟಿದ್ದ ಸುವರ್ಣಮೌಲ್ಯದ ವಿನಿಮಯದ ಅವಧಿಯನ್ನು ೧೯೫೭ನೇ ಜೂನ್‌ವರೆಗೆ ಹೆಚ್ಚಿಸಲಾಗಿದೆ.

೬೨ ಮಂದಿಗೆ ಗಾಯ; ವ್ಯವಸ್ಥೆಗೆ ಸೇನೆ

ಇಂಫಾಲ್‌ನಲ್ಲಿ ನಡೆದ ಎರಡು ಪ್ರದರ್ಶನಗಳನ್ನು ಪೋಲೀಸರು ಲಾಠಿ ಹಾಗೂ ರೈಫಲ್‌ಗಳ ಕೊನೆಗಳಿಂದ ಚದುರಿಸಿದಾಗ ೬೨ ಮಂದಿ ಗಾಯಗೊಂಡರು.

ನಿಕೋಬಾರಿಗೆ ಅರಣ್ಯ ಪರಿಶೋಧಕರ ಗುಂಪು

ನಿಕೋಬಾರಿನಲ್ಲಿರುವ ಅರಣ್ಯಸಂಪತ್ತನ್ನು ಉಳಿಸಲು ಮತ್ತು ಈ ವಿಷಯದಲ್ಲಿ ಭಾರತ ಸರ್ಕಾರಕ್ಕೆ ಸಲಹೆನೀಡಲು ಭಾರತ ಸರ್ಕಾರವು ಮುಂದಿನ ವರ್ಷದೊಳಗೆ ಸಂಶೋಧಕರನ್ನು ಕಳುಹಿಸಲಿದೆ.

ಜಪಾನ್ ನಿಯೋಗ

ಭಾರತದಲ್ಲಿರುವ ಕೈಗಾರಿಕಾ ಪ್ರಗತಿಯನ್ನು ತಿಳಿದುಕೊಳ್ಳಲು ಮುಂದಿನ ಮಾಹೆ ಜಪಾನಿನ ಒಂದು ಕೈಗಾರಿಕಾ ನಿಯೋಗವು ಬರಲಿದೆ.

ಸ್ಥಳ ಬದಲಾವಣೆ

ಮೈಸೂರು ಸಿಟಿ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್‌ನಲ್ಲಿದ್ದ ಎಂ ಎ ಟಿ ಆಚಾರ್ಯ ಮತ್ತು ಕಂಪೆನಿಯವರ ಅಂಗಡಿಯನ್ನು ಧನ್ವಂತರಿ ರಸ್ತೆಯಲ್ಲಿರುವ ಗಾಯತ್ರೀ ಭವನದ ಕಟ್ಟಡಕ್ಕೆ ಬದಲಾಯಿಸಲಾಗಿದೆ.

ನ್ಯೂ ಆಪೇರ

೧೩-೨-೫೨ರಿಂದ ಪ್ರತಿದಿನ ೩ ಆಟಗಳು

ಭಕ್ತ ತುಳಸೀದಾಸ್ (ತಮಿಳು)

ಪಾತ್ರ:-ಬಿ. ಎಸ್. ರಾಜಯ್ಯಂಗಾರ್, ಲಕ್ಷ್ಮೀಶಂಕರ್, ಪಂತುಲು.

ರಣಜಿತ್

೮-೨-೫೨ರಿಂದ ಅಮೋಘ ೩ನೇ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆ ವಾ ರ ::—

(ಹಿಂದಿ)

ಪ್ರಕಾಶಕರು :—ಜಿ ಎಲ್. ಸ್ವಾಮಿ ಟ್ರೂಂಕ್ಸ್ ಬ್ಯೂರೋ ಮೈಸೂರು ಮುದ್ರಕರು—ಹಿ ಕಾ ಸುಬ್ಬರಾವ್ ಮೋಹನ್ ಮುದ್ರಣಾಲಯ ಮೈಸೂರು

ಫೋನ್ ೫೬೪ (೦೧) ದಿನಪತ್ರಿಕೆ ರಿ. ನ. ಎಂ. ೫೪೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೬—೨—೧೯೫೨ನೇ ಶನಿವಾರ [ಸಂಚಿಕೆ ೧೪೬

ತಿರುವಾಂಕೂರಿಗೆ ೩೭೧ನೇ ವಿಧಿ ವಿನಾಯಿತಿಯಿಲ್ಲ

ಮೈಸೂರನ್ನು ಎ ಪ್ರಾಂತ್ಯವನ್ನಾಗಿ ಪರಿವರ್ತಿಸಲಾಗುವುದಿಲ್ಲ

ಪಾರ್ಲಿಮೆಂಟಿನಲ್ಲಿ ಶ್ರೀ ಎನ್. ಗೋಪಾಲಸ್ವಾಮಯ್ಯಂಗಾರ್‌ರವರು ಪ್ರಶ್ನೆಯೊಂದಕ್ಕೆ ಉತ್ತರಕೊಡುತ್ತಾ, ಮೈಸೂರಿಗೆ ಮಸ್ತ್ರಕ್ತಿ ೩೭೧ನೇ ವಿಧಿ ವಿನಾಯಿತಿ ಕೊಡಲಾಗಿದೆ. ಆದರೆ ಅದನ್ನು ಎ ವಿಭಾಗದ ಪ್ರಾಂತವನ್ನಾಗಿ ಪರಿವರ್ತಿಸಲು ಸಾಧ್ಯವಿಲ್ಲ. ಹಾಗೆ ಮಾಡಬೇಕಾದರೆ ರಾಜ್ಯಾಂಗವನ್ನು ತಿದ್ದಬೇಕಾಗುತ್ತದೆ ಎಂದು ತಿಳಿಸಿದರು.

ತಿರುವಾಂಕೂರು—ಕೊಚ್ಚಿನ್ ಸಹ ೩೭೧ನೇ ವಿಧಿಯಿಂದ ವಿನಾಯಿತಿಗೆ ಪ್ರಾರ್ಥಿಸಿದೆ. ಆದರೆ ವಿನಾಯಿತಿ ಕೊಡುವ ವಾತಾವರಣವು ಅಲ್ಲಿ ಕಲ್ಪಿತವಾಗಿಲ್ಲವೆಂದು ತಿಳಿಸಿರುವರು.

ಮಧ್ಯ ಪ್ರದೇಶ ಸಭೆಗೆ ಶ್ರೀ ರವಿಶಂಕರ ಶುಕ್ಲ ನಾಯಕರು

ಮಧ್ಯಪ್ರದೇಶ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರ ಸಭೆ ನಡೆದು ಶ್ರೀ ರವಿಶಂಕರ ಶುಕ್ಲರವರನ್ನು ಪಕ್ಷದ ನಾಯಕರನ್ನಾಗಿ ಚುನಾಯಿಸಲಾಗಿದೆ.

ಮಧ್ಯ ಪ್ರದೇಶ ಶಾಸನ ಸಭೆಯಲ್ಲಿ ೨೩೦ ಸದಸ್ಯರಿದ್ದು ಕಾಂಗ್ರೆಸ್ ಪಕ್ಷದವರು ೧೯೩ ಸ್ಥಾನ ಗಳಿಸಿರುವರು. ಶ್ರೀ ರವಿಶಂಕರ ಶುಕ್ಲರವರು ಈಗ ಮಧ್ಯಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿರುವರು.

ಮಾಜಿ ಆರ್ಥಿಕ ಸಚಿವರ ದಸ್ತಗಿರಿ

ಪೂರ್ವ ಪಾಕಿಸ್ತಾನದ ಮಾಜಿ ಆರ್ಥಿಕ ಸಚಿವ ಮಿ॥ ಹಮೀದುಲ್‌ಹಕ್ ಮತ್ತು 'ಪಾಕಿಸ್ತಾನ ಅಬ್ಸರ್‌ವರ್' ಪತ್ರಿಕೆಯ ಸಂಪಾದಕ ಮಿ॥ ಅಬ್ದುಸ್ ಸಲಾಂರವರನ್ನು, ಪೂರ್ವ ಪಾಕಿಸ್ತಾನ ಸರ್ಕಾರವು ದಸ್ತಗಿರಿ ಮಾಡಿದೆ. ಸಂಸ್ಥಾನ ವಿರುದ್ಧ ಅನೇಕ ಲೇಖನಗಳನ್ನು ಈ ಪತ್ರಿಕೆಯಲ್ಲಿ ಪ್ರಕಟ ಮಾಡಿದರೆಂಬುದೇ ಅಪಾದನೆ.

ಮದ್ರಾಸಿಗೆ ಅಕ್ಕಿ

ಮಧ್ಯಪ್ರದೇಶ ಮತ್ತು ಒರಿಸ್ಸಾ ಪ್ರಾಂತ್ಯಗಳಿಂದ ಮದ್ರಾಸಿಗೆ ಅಕ್ಕಿ ಸರಬರಾಜು ಪ್ರಾರಂಭವಾಗಿದೆ.

ವಾಣಿಜ್ಯ ಒಪ್ಪಂದ

೧೯೫೨ ರವರೆಗೆ ಸಿಂಹಳದೊಡನೆ ಭಾರತವು ವಾಣಿಜ್ಯ ಒಪ್ಪಂದಕ್ಕೆ ಸಹಿ ಹಾಕಿತು.

ಜನವರಿ ೧ ರಿಂದ ೧೯೫೨ರ ಡಿಸೆಂಬರ್ ೩೧ ರವರೆಗೆ ಜಾರಿಯಲ್ಲಿರುವ ಈ ಒಪ್ಪಂದವು ಉಭಯ ರಾಷ್ಟ್ರಗಳ ನಡುವಣ ಸಾಂಪ್ರದಾಯಿಕ-ವಾಣಿಜ್ಯ ಪದ್ಧತಿಗೆ ಅನುಸಾರವಾಗಿರುವುದು.

ಅಸ್ಸಾಂ ಮುಖ್ಯಮಂತ್ರಿ

ಅಸ್ಸಾಂ ಶಾಸನಸಭೆಯ ಕಾಂಗ್ರೆಸ್ ಪಕ್ಷವು ಪುನಃ ಶ್ರೀ ವಿಷ್ಣುರಾಂ ಮೇಧಿಯವರನ್ನು ತಮ್ಮ ಪಕ್ಷದ ನಾಯಕರನ್ನಾಗಿ ಚುನಾಯಿಸಿಕೊಂಡಿದೆ.

* ಪಾರ್ಲಿಮೆಂಟಿಗೆ ಮಧ್ಯಪ್ರದೇಶದಿಂದ ಶ್ರೀ ಸೇಠ್‌ಗೋವಿಂದದಾಸ್‌ರವರು ಚುನಾಯಿತರಾಗಿರುವರು.

ಶಾಸನಸಭಾ ಸದಸ್ಯರಿಗೆ ೧೫೦ ರೂ. ವೇತನ

ಶಾಸನಸಭಾ ಸದಸ್ಯರಿಗೆ ಮಾಹೆಯಾನಾ ೧೫೦ ರೂ. ವೇತನ ಮತ್ತು ಸಭಾಧಿವೇಶನ ಕಾಲದಲ್ಲಿ ಡೈಲೀ ಅಲೊಯನ್ಸ್ ಕೊಡುವಂತೆ ಹೈದರಾಬಾದ್ ಶಾಸನಸಭೆಯು ಮಾರ್ಚಿ ಮಾಹೆಯಲ್ಲಿ ನಡೆಯುವ ತನ್ನ ಪ್ರಥಮ ಅಧಿವೇಶನದಲ್ಲಿ ಒಂದು ಮಸೂದೆಯನ್ನು ತರಲಿದೆ.

ಹೈದರಾಬಾದ್ ನಾಯಕರು ದೆಹಲಿಗೆ

ಹೈದರಾಬಾದ್ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನೂತನ ನಾಯಕರಾದ ಶ್ರೀ ಬಿ. ರಾಮಕೃಷ್ಣರಾಯರು ತಮ್ಮ ಹೊಸ ಮಂತ್ರಿಮಂಡಲದ ಪಟ್ಟಿಯೊಡನೆ ಇದೇ ೨೧ನೇ ತಾರೀಖು ದೆಹಲಿಗೆ ತೆರಳಿ ಪಂಡಿತ ನೆಹರೂರವರಿಗೆ ಈ ಪಟ್ಟಿಯನ್ನು ಒಪ್ಪಿಸುವರೆಂದು ಹೇಳಲಾಗಿದೆ.

ಭಾರತಾದ್ಯಂತ ಮೌನ ದಿನಾಚರಣೆ

ದಿವಂಗತ ಜಾರ್ಜ್‌ರವರ ಅಂತಿಮ ಕ್ರಿಯೆ ನಿನ್ನೆ ನಡೆದುದರಿಂದ ಭಾರತದಲ್ಲಿ ಇವರಿಗೆ ಅಂತಿಮ ಗೌರವ ವ್ಯಕ್ತಪಡಿಸಲು ನಿನ್ನೆ ದೆಹಲಿಯ ಚರ್ಚಿನಲ್ಲಿ ವಿಶೇಷ ಪ್ರಾರ್ಥನೆ ನಡೆಯಿತು. ವಿಶೇಷ ಪ್ರಾರ್ಥನೆಗೆ ಪ್ರಧಾನಿ ನೆಹರೂ ಇತರ ಸಚಿವರುಗಳು ಒಟ್ಟು ಸಾವಿರಾರು ಜನ ದಯಮಾಡಿಸಿದ್ದರು. ಭಾರತಾದ್ಯಂತ ಧ್ವಜವನ್ನು ಅರ್ಧ ಮಟ್ಟಕ್ಕೆ ಹಾರಿಸಲಾಗಿದ್ದು ಸರ್ಕಾರಿ ಕೋರ್ಟ್, ಕಛೇರಿಗಳಿಗೆ ಮಧ್ಯಾಹ್ನ ರಜಾ ಕೊಡಲಾಗಿತ್ತು.

ದೆಹಲಿಯಲ್ಲಿ ಇವರ ಗೌರವಾರ್ಥವಾಗಿ ೫೧ ತೋಪು ಹಾರಿಸಲಾಯಿತು.

ನಿನ್ನೆ ವಿಂಡ್ಸರ್‌ನ ಸೇಂಟ್ ಜಾರ್ಜ್ ಚಾಪೆಲ್‌ನಲ್ಲಿ ದಿವಂಗತ ಆರನೆ ಜಾರ್ಜ್‌ರವರ ಅಂತ್ಯಕ್ರಿಯೆ ನಡೆದು ಅವರ ಶವವನ್ನು ಸಮಾಧಿ ಮಾಡಲಾಯಿತು. ಅವರ ವಯಸ್ಸನ್ನು ಸೂಚಿಸುವ ೫೬ ತೋಪುಗಳನ್ನು ಹಾರಿಸಲಾಯಿತು.

† ಆಂಧ್ರಪ್ರಾಂತ್ಯ ರಚನೆಯ ಸಂಬಂಧದಲ್ಲಿ ಪ್ರಧಾನಿ ನೆಹರೂರವರನ್ನು ಭೇಟಿ ಮಾಡಲು ದೆಹಲಿಗೆ ಬಂದಿದ್ದ ಸ್ವಾಮಿ ಸೀತಾರಾಂರವರಿಗೆ, ಅನೇಕ ಕಾರಣಗಳಿಗಾಗಿ ಅವರನ್ನು ನೋಡಲು ಸಾಧ್ಯವಿಲ್ಲವೆಂದು ಪ್ರಧಾನಿ ನೆಹರೂ ತಿಳಿಸಿರುವುದಾಗಿ ಹೇಳಲಾಗಿದೆ.

ಮದರಾಸಿನಿಂದ ಬೇಡಿಕೆ ಬಂದಿಲ್ಲ

ಮದರಾಸಿನಲ್ಲಿ ಅಕ್ಕಿಯ ಪಡಿತರವನ್ನು ೬ ಔನ್ಸಿನಿಂದ ೮ ಔನ್ಸಿಗೆ ಏರಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬೇಡಿಕೆಯೇನೂ ಬಂದಿಲ್ಲ. ಬಂದರೆ ಪರಿಶೀಲಿಸಲಾಗುವುದು ಎಂದು ನಿನ್ನೆ ಪಾರ್ಲಿಮೆಂಟಿನಲ್ಲಿ ಆಹಾರ ಮಂತ್ರಿ ತಿಳಿಸಿದರು.

ಪಂಜಾಬಿನಲ್ಲಿ ಒಂದು ಲಕ್ಷ ರೂ. ಹೆಚ್ಚು ಆದಾಯ

ಪಂಜಾಬಿನಲ್ಲಿ ಕಳೆದ ವರ್ಷ ವೆಚ್ಚಕ್ಕಿಂತ ಆದಾಯವು ಒಂದು ಲಕ್ಷ ರೂ. ಹೆಚ್ಚಾಗಿತ್ತೆಂದು ಹೇಳಲಾಗಿದೆ. ಕೇಂದ್ರ ಸರ್ಕಾರದ ಹಣಕಾಸಿನ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ಪಂಜಾಬಿನ ಬಡ್ಜೆಟ್ಟನ್ನು ಶ್ವೇತ ಪತ್ರ ರೂಪದಲ್ಲಿ ಪಾರ್ಲಿಮೆಂಟ್ ಮುಂದೆ ಮಂಡಿಸಿ ಮುಂದಿನ ನಾಲ್ಕು ತಿಂಗಳಿಗೆ ಬಡ್ಜೆಟ್ಟಿನ ಒಪ್ಪಿಗೆ ಪಡೆದರು.

೫೨ ಲಕ್ಷ ರೂ. ನ ಉಪಬೇಡಿಕೆಗೆ ಪಾರ್ಲಿಮೆಂಟ್ ಅಂಗೀಕಾರವಿತ್ತು, ಇನ್ನೆರಡು ಉಪಬೇಡಿಕೆಯನ್ನು ಸೋಮವಾರ ಪರಿಶೀಲಿಸುವುದು.

ಪಂಜಾಬಿನ ಆಡಳಿತವನ್ನು ರಾಷ್ಟ್ರಾಧ್ಯಕ್ಷರು ವಹಿಸಿಕೊಂಡು ಇರುವುದರಿಂದ ಪಾರ್ಲಿಮೆಂಟ್ ಮುಂದೆ ಅಲ್ಲಿನ ಬಡ್ಜೆಟ್ ಮಂಡಿಸಲಾಯಿತು.

ಈ ತಿಂಗಳ ಕೊನೆಗೆ ಹೊಸ ಮಂತ್ರಿಮಂಡಲ

ರಾಜಸ್ಥಾನದಲ್ಲಿ ಈ ತಿಂಗಳ ಕೊನೆಯವೇಳೆಗೆ ಹೊಸ ಮಂತ್ರಿಮಂಡಲ ಸ್ಥಾಪನೆಯಾಗಿ ಬಹುಶಃ ಮುಂದಿನ ತಿಂಗಳ ೩ನೇ ವಾರದಲ್ಲಿ ನೂತನ ಶಾಸನ ಸಭಾಧಿವೇಶನವು ಸಮಾವೇಶಗೊಳ್ಳಲಿರುವುದು.

ಶ್ರೀ ನಾಭಕೃಷ್ಣ ಚೌಧುರಿ ನಾಯಕರಾಗಿ ಚುನಾಯಿತರಾದರು

ಒರಿಸ್ಸಾದ ಶಾಸನಸಭೆಯ ಕಾಂಗ್ರೆಸ್ ಪಕ್ಷದವರ ಸಭೆಯು ಉತ್ಕಲ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ವಿಶ್ವನಾಥದಾಸ್‌ರವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ನಾಭಕೃಷ್ಣ ಚೌಧುರಿಯವರನ್ನು ಪಕ್ಷದ ನಾಯಕರನ್ನಾಗಿ ಚುನಾಯಿಸಲಾಯಿತು.

ಕಬ್ಬು ಪರಿಶೋಧನೆಗೆ ೩೫ ಲಕ್ಷ ರೂ.

ಲಕ್ನೋದಲ್ಲಿ ಕಬ್ಬಿನ ಪರಿಶೋಧನಾ ಕೇಂದ್ರವನ್ನು ಸ್ಥಾಪಿಸಲು ಪಾರ್ಲಿಮೆಂಟು ಪ್ರಸಕ್ತಸಾಲಿಗೆ ೩೫ ಲಕ್ಷ ರೂಪಾಯಿಗಳನ್ನು ನೀಡಿದೆ ಎಂದು ಆಹಾರ ಶಾಖೆಯ ಉಪಸಚಿವ ಶ್ರೀ ತಿರುಮಲರಾಯರು ನಿನ್ನೆ ಪಾರ್ಲಿಮೆಂಟ್‌ನಲ್ಲಿ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಚುನಾವಣೆ ಮುಗಿಯಿತು

ಮಧ್ಯಪ್ರದೇಶದಿಂದ ಪಾರ್ಲಿಮೆಂಟಿಗೆ ೨೯ ಸ್ಥಾನಗಳಿದ್ದು ಈ ಸ್ಥಾನಗಳ ಚುನಾವಣೆ ಮುಗಿಯಿತು. ೨೯ರಲ್ಲಿ ೨೬ ಕಾಂಗ್ರೆಸ್ಸಿಗೆ ಲಭಿಸಿತು. ೨ ಸ್ಥಾನಗಳು ಸ್ವತಂತ್ರರಿಗೆ ಲಭಿಸಿದೆ.

ಚುನಾಯಿತ ಸಮಿತಿ ವರದಿ

ಭಾರತದ ರಾಷ್ಟ್ರಾಧ್ಯಕ್ಷ ಮತ್ತು ಉಪರಾಷ್ಟ್ರಾಧ್ಯಕ್ಷರ ಚುನಾವಣೆ ನಡೆಸುವುದರ ಬಗ್ಗೆ ಪಾರ್ಲಿಮೆಂಟು ನೇಮಕ ಮಾಡಿದ್ದ ಚುನಾಯಿತ ಸಮಿತಿಯು ವರದಿಯನ್ನು ಸಲ್ಲಿಸಿ ಭಾರತದ ಎಲ್ಲಾ ಕಡೆಯಲ್ಲೂ ರಾಷ್ಟ್ರಾಧ್ಯಕ್ಷ ಮತ್ತು ಉಪರಾಷ್ಟ್ರಾಧ್ಯಕ್ಷರ ಚುನಾವಣೆಯು ಏಕಕಾಲದಲ್ಲಿ ನಡೆಯಬೇಕೆಂದು ತಿಳಿಸಿ, ಚುನಾವಣಾ ಕಮೀಷನರು ಕೇಂದ್ರ ಸರ್ಕಾರದ ಸಲಹೆ ಪಡೆದು ಚುನಾವಣಾಧಿಕಾರಿಗಳನ್ನು ನೇಮಿಸಬೇಕೆಂದು ಸೂಚಿಸಿದೆ.

‡ ಕಾಶ್ಮೀರ ಪ್ರಧಾನಿ ಷೇಕ್‌ಅಬ್ದುಲ್ಲಾ ನಿನ್ನೆ ಬೊಂಬಾಯಿಯಿಂದ ದೆಹಲಿಗೆ ತೆರಳಿದರು.

ಮೈಸೂರಿನಲ್ಲಿ ನೂತನ ಮಂತ್ರಿಮಂಡಲ ರಚನೆ

(ರಾಜಕೀಯ ಬಾತ್ಮೀದಾರರಿಂದ)
ಬೆಂಗಳೂರು ಫೆ ೧೫

ಮೈಸೂರು ಸಂಸ್ಥಾನದಲ್ಲಿ ನೂತನ ಮಂತ್ರಿಮಂಡಲ ರಚನೆಯು ಯಾವಾಗ ನಡೆಯಬೇಕೆಂಬ ವಿಷಯದಲ್ಲಿ ನಾನಾಭಿಪ್ರಾಯಗಳು ಹೊರಬೀಳುತ್ತಲಿವೆ.

ಹಿರಿಯ ಶಾಸನ ಸಭೆಯ ಅಧಿವೇಶನವು ಈ ಪ್ರಾಂತ್ಯದಲ್ಲಿ ಏಪ್ರಿಲ್ ಮಾಹೆಯಲ್ಲಿ ನಡೆಯುತ್ತದೆ. ಈ ಸಭೆಯ ಚುನಾವಣೆಯು ಮುಗಿದನಂತರ ಉಭಯ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಸೇರಿ ಹೊಸ ನಾಯಕರನ್ನು ಚುನಾಯಿಸಿಕೊಳ್ಳಬೇಕೆಂಬ ನಿಯಮವು ಕಾಂಗ್ರೆಸ್ ಹೈಕಮಾಂಡಿನಿಂದ ಹೊರಬಿದ್ದಿದೆಯಾಗಿ ನಾಯಕರ ಚುನಾವಣೆ, ನೂತನ ಮಂತ್ರಿಮಂಡಲ ರಚನೆಯು ಮೇ ಮಾಹೆಯವರೆಗೆ ನಡೆಯುವ ಸಂಭವವೇ ಇಲ್ಲ. ಫೆಬ್ರವರಿ ತಿಂಗಳಲ್ಲಿ ಚುನಾಯಿತರಾದ ಶಾಸನ ಸಭಾ ಸದಸ್ಯರೆಲ್ಲರೂ ಅಲ್ಲಿಯವರೆಗೆ ಸುಮ್ಮನೆ ಕುಳಿತಿರಬೇಕಾಗುತ್ತದೆ. ಅಲ್ಲಿಯವರೆಗೆ ಹೊಸ ಶಾಸನ ಸಭೆಯ ಅಧಿವೇಶನವೂ ನಡೆಯುವುದು ದುರ್ಲಭ.

ಈಗಿರುವ ರಾಜ್ಯಾಂಗ ಪ್ರಕಾರ ಮಂತ್ರಿಮಂಡಲವು ಸಂಸ್ಥಾನದ ಲೆಜಿಸ್ಲೆಟಿವ್ ಅಸೆಂಬ್ಲಿಗೆ ಜವಾಬ್ದಾರಿಯಾಗಿರುತ್ತದೆ. ಅಂದರೆ ಅಸೆಂಬ್ಲಿಯ ಚುನಾವಣೆಯಾದೊಡನೆಯೇ ನಾಯಕರ ಚುನಾವಣೆ ಆಗಿ ಹೊಸ ಮಂತ್ರಿಮಂಡಲ ರಚನೆಯಾಗಬಹುದಾಗಿದೆ. ಹಿರಿಯ ಶಾಸನ ಸಭೆಯ ಚುನಾವಣೆಗೆ ಕಾಯಬೇಕಾಗಿಲ್ಲ. ಆದ್ದರಿಂದ ಮೈಸೂರಿನಲ್ಲಿ ಹಿರಿಯ ಶಾಸನ ಸಭೆಯ ಚುನಾವಣೆಗಳನ್ನು ಕಾಯದೆ ಕೂಡಲೆ ಕಿರಿಯ ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ತನ್ನ ಹೊಸನಾಯಕರನ್ನು ಚುನಾಯಿಸಿಕೊಂಡು, ಹೊಸ ಸರ್ಕಾರ ರಚಿಸುವ ವಿಷಯದಲ್ಲಿ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರು ಈಗಾಗಲೇ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರೊಡನೆ ಪತ್ರ ವ್ಯವಹಾರ ನಡೆಸುತ್ತಲಿರುವುದಾಗಿ ಗೊತ್ತಾಗಿದೆ.

ಮೇ॥ ಜ॥ ಗುರುದೀಪ್ ಸಿಂಗ್ ಧಿಲ್ಲಾನರ ನಿಧನ

ಉತ್ತರ ಪ್ರದೇಶದ ಸೇನಾನಾಯಕ ಮೇಜರ್ ಜನರಲ್ ಗುರುದೀಪಸಿಂಗರು ಕಂಟೋನ್ಮೆಂಟ್ ಆಸ್ಪತ್ರೆಯಲ್ಲಿ ನಿಧನರಾದರು.

ಬೆಂಗಳೂರಿನ ಮೆಡಿಕಲ್ ಸ್ಕೂಲ್ ಕಾಲೇಜನ್ನಾಗಿ ಮಾಡಲು ಮುಂಬೈ, ಮೈಸೂರು ಸಚಿವರ ಮಾತುಕತೆ

ಬೆಂಗಳೂರು ಫೆ ೧೫

ಬೆಂಗಳೂರಿನ ಮೆಡಿಕಲ್ ಸ್ಕೂಲನ್ನು ಕಾಲೇಜನ್ನಾಗಿ ಪರಿವರ್ತಿಸುವ ವಿಚಾರದಲ್ಲಿ ಮೈಸೂರಿನ ವಿದ್ಯಾಸಚಿವರಾದ ಶ್ರೀ ಆರ್. ಚೆನ್ನಿಗರಾಮಯ್ಯನವರು ಮುಂಬೈ ಆರೋಗ್ಯಸಚಿವ ಡಾ॥ ಎಂ.ಡಿ. ಗಿಲ್ಡರ್‌ರವರೊಡನೆ ಮಾರ್ಚಿ ೩ರಂದು ಸಮಾಲೋಚನೆ ನಡೆಸಲಿದ್ದಾರೆ.

ಈ ವಿಚಾರದಲ್ಲಿ ಮುಂಬೈನ ಮುಖ್ಯಮಂತ್ರಿ ಶ್ರೀ ಬಿ ಜಿ. ಖೇರ್‌ರವರು ಈ ಹಿಂದೆ ತುಮಕೂರಿಗೆ ಬಂದಿದ್ದಾಗ ಅವರೊಡನೆ ಪೂರ್ವಭಾವಿಯಾಗಿ ವಿಚಾರ ವಿನಿಮಯ ನಡೆಸಿದರೆಂದು ಗೊತ್ತಾಗಿದೆ.

ಮೆಡಿಕಲ್ ಸ್ಕೂಲನ್ನು ಕಾಲೇಜನ್ನಾಗಿ ಪರಿವರ್ತಿಸುವುದರಿಂದ ಪ್ರತಿವರ್ಷ ೪೦ ಲಕ್ಷ ರೂ ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಮುಂಬೈ ಸರ್ಕಾರ ಅರ್ಧಭಾಗವನ್ನು ಮೈಸೂರು ಸರ್ಕಾರ ಅರ್ಧಭಾಗವನ್ನು ವಹಿಸಿಕೊಳ್ಳಬೇಕೆಂದೂ ಯೋಚಿಸಲಾಗಿದೆ.

ಕಾಲೇಜಿನಲ್ಲಿ ಅರ್ಧಭಾಗದಷ್ಟು ಪ್ರವೇಶವನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ಯೋಜನೆಯಲ್ಲಿ ಸೂಚಿಸಲಾಗಿದೆ.

ಯೋಜನೆ ಫಲಕಾರಿಯಾದರೆ; ಬೆಂಗಳೂರಿನಲ್ಲೇ ಮೆಡಿಕಲ್ ಕಾಲೇಜ್ ಇರುವಂತಾಗುತ್ತದೆ.

ಚುನಾವಣೆಗಳು ನ್ಯಾಯವಾಗಿ ನಡೆಯಲಿಲ್ಲ

ಪಂಜಾಬಿನ ಮಾಜಿ ಮುಖ್ಯ ಸಚಿವ ಡಾ॥ ಗೋಪಿಚಂದ್ ಭಾರ್ಗವಾ, ಮಾಸ್ಟರ್ ತಾರಾಸಿಂಗ್, ಮುಂತಾದವರು ಸಂಸ್ಥಾನದಲ್ಲಿ ಚುನಾವಣೆಗಳು ನ್ಯಾಯವಾಗಿ ನಡೆಯಲಿಲ್ಲವೆಂದು ದೂರಿದ್ದಾರೆ.

ವಿಮಾನ ವಾಪಸ್

ಮದ್ರಾಸಿನಿಂದ ಮುಂಬಯಿಗೆ ಹೊರಟಿದ್ದ ಪ್ಯಾಸೆಂಜರ್ ವಿಮಾನವು ೧೫೦ ಮೈಲಿಗಳ ದೂರ ಸಂಚರಿಸಿದನಂತರ ಇಂಜಿನ್ನು ಕೆಟ್ಟುಹೋದ ಪ್ರಯುಕ್ತ ಮದ್ರಾಸಿಗೆ ವಾಪಸ್ ಬಂದಿತು.

೪೦೦ ಪೌಂಡು ತೂಗಬಲ್ಲ "ದ್ರೋಲ್" ನವಾಜಿ ರಾಜರ ಬಂಧನ

ಸೌರಾಷ್ಟ್ರ ಸಂಸ್ಥಾನದ ಒಂದು ಭಾಗವಾದ ದ್ರೋಲಿನ ಮಾಜಿ ರಾಜರಾದ ಶ್ರೀ ಥಾಕೂರ್ ಚಂದ್ರಸಿನ್ಹಜಿ ಯವರನ್ನು ಬೊಂಬಾಯಿ ಪೋಲೀಸರು ಬಂಧಿಸಿದ್ದು ಸೌರಾಷ್ಟ್ರ ಪೋಲೀಸರ ಅಧೀನಕ್ಕೆ ಒಪ್ಪಿಸಿದರು.

ಬಸಂತ್ ಪುಂಡರ ಗುಂಪಿನ ಸಹಾಯದಿಂದ ಏನೂ ಅರಿಯದ ಗ್ರಾಮಸ್ಥರನ್ನು ಕೊಲೆಮಾಡಿ ತನ್ಮೂಲಕ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಪಿತೂರಿಯನ್ನು ಅವರು ಹೂಡಿದ್ದರೆಂಬ ಆಪಾದನೆಯ ಮೇಲೆ ಅವರನ್ನು ಸ್ಥಾನಬದ್ಧತೆ ಮುನ್ನೆಚ್ಚರಿಕೆ ಕ್ರಮದರೀತ್ಯಾ ಬಂಧಿಸಲಾಗಿದೆಯೆಂದು ಸೌರಾಷ್ಟ್ರ ಸರ್ಕಾರ ಪ್ರಕಟಣೆಯೊಂದನ್ನು ಹೊರಡಿಸಿದೆ.

ಪೆಡ್ಡಾರಿನಲ್ಲಿರುವ ಅವರ ಸುಂದರ ಭವನದಲ್ಲಿ ಪೋಲೀಸರು ಅವರನ್ನು ಕರೆದುಕೊಂಡುಹೋಗಲು ಬಂದಾಗ ೪೦೦ ಪೌಂಡುಗಳಿಗಿಂತಲೂ ಹೆಚ್ಚಾಗಿ ತೂಗಬಲ್ಲ ಈ ಥಾಕೂರರು 'ನೀವು ಹೇಳಿದಂತೆ ನಾನು ಮಾಡುತ್ತೇನೆ' ಎಂಬುದಾಗಿ ಪೋಲಿಸರಿಗೆ ತಿಳಿಸಿ ಶರಣಾದರು

ಕೌನ್ಸಿಲ್ ರಚನೆಯ ನಂತರವೇ ನಾಯಕ ಚುನಾವಣೆ

'ಅಂತ್ಯವಾಗಿ ಪರಿಸ್ಥಿತಿ' ಎಂಬುದನ್ನು ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ವಿವರಿಸದೇ ಹೋದರೂ, ಲೆಜಿಸ್ಲೆಟಿವ್ ಕೌನ್ಸಿಲ್ ರಚನೆ ಪೂರೈಸಿದ ವೇಲೆ ಮಾತ್ರ, ನಾಯಕ ಚುನಾವಣೆ ನಡೆಸಲು ಸಾಧ್ಯವೆಂದು ಅವರ ಹತ್ತಿರದ ವ್ಯಕ್ತಿಗಳಲ್ಲಿ ಅಭಿಪ್ರಾಯ ಪಡಲಾಗಿದೆ ಹೈಕಮಾಂಡಿನ ಅಭಿಪ್ರಾಯವೂ ಅದೇ ಎಂದೂ ಹೇಳಲಾಗಿದೆ

ಎಂ ಪಿ ಸಿ ಸಿ ಸಭೆ ಮುಂದುವರಿಯಿತು

ಈ ತಿಂಗಳು ೧೭ನೇ ತಾ॥ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಸಭೆ ಬೆಂಗಳೂರಿನಲ್ಲಿ ಸೇರಬೇಕಾಗಿತ್ತು. ಆದರೆ ಕಾರಣಾಂತರಗಳಿಂದ ಅದನ್ನು ಮುಂದುವರಿಸಲಾಗಿದೆಯೆಂದು ಕಾಂಗ್ರೆಸ್ ಕಾರ್ಯದರ್ಶಿಗಳಾದ ಶ್ರೀ ಎ. ಜಿ ರಾಮಚಂದ್ರರಾಯರು ಹೇಳಿಕೆ ಇತ್ತಿದ್ದಾರೆ.

ಒಳಪಂಗಡಗಳಿರಕೂಡದು

ಕಾಂಗ್ರೆಸ್ ಇನ್ನುಮುಂದೆ ಸುಭದ್ರ ರಾಜಕೀಯ ಪಕ್ಷದಂತೆ ನಿರ್ದಿಷ್ಟ ಆರ್ಥಿಕ ಕಾರ್ಯಕ್ರಮದಿಂದ; ಒಳಪಂಗಡಗಳಿಲ್ಲದೆ ಕಾರ್ಯ ನಿರ್ವಹಿಸಬೇಕಾದ್ದು ಅಗತ್ಯ' ಎಂದು ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಾಹರಲಾಲ್ ನೆಹರೂರವರು ಸೂಚನಾಪತ್ರ ಹೊರಗೆಡಹಿದ್ದಾರೆ

ಕಾರ್ಖಾನೆಗಳಿಗೆ ಪ್ರಾವಿಡೆಂಟ್ ನಿಧಿ

ಕಾರ್ಮಿಕ ಸಚಿವ ಶ್ರೀ ಜಗಜೀವನ ರಾಂರವರು ಪಾರ್ಲಿಮೆಂಟಿನಲ್ಲಿ ಕಾರ್ಖಾನೆ ಮತ್ತಿತರ ಸಂಸ್ಥೆಗಳ್ಲನ ನೌಕರರಿಗೆ ಪ್ರಾವಿಡೆಂಟ್ ನಿಧಿ ಒದಗಿಸುವ ಮಸೂದೆಯನ್ನು ಮಂಡಿಸಿರುವರು.

ಸಿಮೆಂಟ್, ಸಿಗರೇಟ್, ವಿದ್ಯುತ್ ಯಾಂತ್ರಿಕ ಅಥವಾ ಸಾಧಾರಣ ರೀತಿಯ ಎಂಜಿನೀಯರಿಂಗ್ ಉತ್ಪನ್ನಗಳು, ಕಬ್ಬಿಣ ಮತ್ತು ಉಕ್ಕು, ಕಾಗದ ಮತ್ತು ಒಟ್ಟೆ (ಹತ್ತಿ, ಸೆಣಬು ಅಥವಾ ರೇಷ್ಮೆ) ಮುಂತಾದ ಆರು ಮುಖ್ಯ-ಕೈಗಾರಿಕೆಗಳಲ್ಲಿ ಪ್ರಥಮತಃ ಪ್ರಾವಿಡೆಂಟ್ ನಿಧಿ ಅನುಕೂಲ ನೀಡುತ್ತದೆ. ಕೇಂದ್ರ, ಅಥವಾ ಸಂಸ್ಥಾನ ಸರ್ಕಾರ ಅಥವಾ ಸ್ಥಳೀಯ ವ್ಯವಸ್ಥೆಯ ಸಂಸ್ಥೆಗಳಿಗೆ ಈ ಮಸೂದೆ ಅನ್ವಯಿಸದು.

ಯುನೆಸ್ಕೋದ ನೂತನ ಡೆಪ್ಯುಟಿ ಡೈರೆಕ್ಟರ್

ಕೇಂದ್ರ ಸರ್ಕಾರದ ಶಿಕ್ಷಣ ಶಾಖೆಯ ಉಪಕಾರ್ಯದರ್ಶಿಗಳಾದ ಶ್ರೀ ಪಿ ಎನ್. ಕಿರ್ಪಾಲ್‌ರವರು ಒಂದು ವರ್ಷದ ಕಾಲ ಯುನೆಸ್ಕೋ ಡೆಪ್ಯುಟಿ ಡೈರೆಕ್ಟರಾಗಿ ನೇಮಕರಾಗಿದ್ದಾರೆ. ಈ ನೂತನ ಹುದ್ದೆಯ ಅಧಿಕಾರವನ್ನು ವಹಿಸಿಕೊಳ್ಳಲು ಶ್ರೀ ಕಿರ್ಪಾಲ್‌ರವರು ಇಂದು ದೆಹಲಿಯಿಂದ ತೆರಳುವರು.

ನ್ಯೂ ಅಪೇರ
೧೩-೨-೫೨ರಿಂದ ಪ್ರತಿದಿನ ೩ ಆಟಗಳು
ಭಕ್ತ ತುಳಸೀದಾಸ್ (ತಮಿಳು)
ಪಾತ್ರ:—ಬಿ. ಎಸ್. ರಾಜಯ್ಯಂಗಾರ್, ಲಕ್ಷ್ಮೀಶಂಕರ್, ಪಂತುಲು.

ವುಡ್ ಲ್ಯಾಂಡ್ಸ್
೧೫—೨—೫೨ ರಿಂದ ಅನೋಖಿಪ್ರಾರಂಭ
ದಿನವೂ 3 ಪ್ರದರ್ಶನಗಳು
ಅಲ್ ಬೇಲ
ಪಾತ್ರ:— ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ಪ್ರಕಾಶಕರು :—ಜಿ ಎಲ್. ಸ್ವಾಮಿ
ಟೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು—ಹಿ. ಕಿ. ಸುಬ್ಬರಾವ್,
ಮೋಹನ ಮುದ್ರಣಾಲಯ ಮೈಸೂರು

ಫೋನ್ ೫೭೮೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ
ಸಂಪುಟ ೨] ೧೮—೨—೧೯೫೨ನೇ ಸೋಮವಾರ [ಸಂಚಿಕೆ ೧೪೭

ಸೌರಾಷ್ಟ್ರ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ರಾಜರ ಪ್ರಯತ್ನ

ತಮಿಳುನಾಡು ಕಾಂಗ್ರೆಸ್ ಅಧಿಕಾರವರ್ಗದವರು ರಾಜೀನಾಮೆ ಕೊಡಬೇಕು

ಭಾರತಕ್ಕೆ ವಿಶ್ವಖ್ಯಾತಿ ಪಿಟೀಲುಗಾರ

ವಿಶ್ವಖ್ಯಾತಿ ಪಡೆದ ಯೆಹೂದಿ ಮೆನುಹಿನ್ ಮತ್ತು ಆತನ ಪತ್ನಿ ಫೆಬ್ರವರಿ ತಿಂಗಳ ಕೊನೆಯಲ್ಲಿ ಭಾರತಕ್ಕೆ ಬಂದು, ದೆಹಲಿ ಬೊಂಬಾಯಿ, ಕಲ್ಕತ್ತ, ಬೆಂಗಳೂರು; ಮದರಾಸಿನಲ್ಲಿ ಸಂಗೀತ ಕಚೇರಿ ನಡೆಸುವರು. ಮಾರ್ಷಲ್ ಗಜಲೆಯವರು ಪಿಯಾನೋ ಬಾರಿಸುವರು.

ನವದೆಹಲಿಯಲ್ಲಿ ಫೆಬ್ರವರಿ ೨೮-೨೯ನೇ ತಾ॥ ಗಳಲ್ಲಿಯೂ, ಬೊಂಬಾಯಿನಲ್ಲಿ ಫೆ. ೨೮, ಮಾರ್ಚ್ ೪ ಮತ್ತು ೭ನೇ ತಾ॥ ಗಳಲ್ಲಿಯೂ, ಮದರಾಸಿನಲ್ಲಿ ಮಾರ್ಚಿ ೧೯ ಮತ್ತು ೨೦ನೇ ತಾ॥ ಗಳಲ್ಲಿ ತಮ್ಮ ಪಿಟೀಲುವಾದನ ಕಚೇರಿಯನ್ನು ನಡೆಸುವರು. ಬೆಂಗಳೂರಿನಲ್ಲಿ ಕಚೇರಿ ನಡೆಯುವ ದಿನವನ್ನೂ ಗೊತ್ತಾಗಿಲ್ಲ.

ಕಲ್ಕತ್ತಾ ನಗರದಲ್ಲಿ ಮಾರ್ಚ್ ೨೩, ೨೫, ೨೭ನೇ ತಾ॥ ಗಳಲ್ಲಿ ಅವರ ಕಾರ್ಯಕ್ರಮ ಏರ್ಪಟ್ಟಿದೆ.

ಪ್ರಪಂಚದ ಸುಪ್ರಸಿದ್ಧ ಪಿಟೀಲುಗಾರರೆಂದು ಯೆಹೂದಿ ಮೆನುಹಿನ್‌ರು ಹೆಸರುವಾಸಿ ಪಡೆದಿದ್ದಾರೆ.

ಮೆನುಹಿನ್ನರು ೧೮೫೦ ಸಲ ತಮ್ಮ ಪಿಟೀಲುವಾದನವನ್ನು ರಿಕಾರ್ಡು ಮಾಡಿಸಿದ್ದಾರೆ. ಮೂರು ಚಲನಚಿತ್ರಗಳಲ್ಲಿ ಭಾಗವಹಿಸಿದ್ದಾರೆ. ೬ ಭಾಷೆಗಳನ್ನು ಕಲಿತಿದ್ದಾರೆ. ಯೆಹೂದಿ ಅವರು ನಾಟಕ, ರಾಜಕೀಯ ವಿಷಯಗಳನ್ನು ಚರ್ಚಿಸುತ್ತಾರೆ.

ಇಂಗ್ಲೆಂಡಿನ ಡಯನಾಗೋಲ್ಡ್‌ರನ್ನು ಮದುವೆಯಾಗಿ ಈಗ [illegible] ಮಕ್ಕಳ ತಂದೆ, ಕ್ರೋವ್ ಮತ್ತು ಜೆರಾಡ್ ಎಂಬ ಹುಡುಗರು, [illegible] ಎಂಬ ಹುಡುಗಿಯೂ ಅವರ ಮಕ್ಕಳು. [illegible]

ಸಚಿವ ಮಂಡಲದ ರಾಜೀನಾಮೆ

ಮಧ್ಯಪ್ರದೇಶದ ಮುಖ್ಯಮಂತ್ರಿ ಶ್ರೀ ರವಿಶಂಕರ ಶುಕ್ಲರವರು ತಮ್ಮ ಸಚಿವ ಸಂಪುಟದ ರಾಜೀನಾಮೆಯನ್ನು ಅಲ್ಲಿನ ಗವರ್ನರರವರಿಗೆ [illegible] ಗವರ್ನರರವರು ರಾಜೀನಾಮೆಯನ್ನು ಅಂಗೀಕರಿಸಿ, ನೂತನ ವ್ಯವಸ್ಥೆಯಾಗುವವರೆಗೂ ಹಳೆಯ ಮಂತ್ರಿಮಂಡಲವನ್ನು ಮುಂದುವರಿಸುವಂತೆ ತಿಳಿಸಿರುವರು.

ಅಜಿತ್ ಪ್ರಸಾದ್ ಜೈನ್ ಜಯಶೀಲರಾದರು

ಉತ್ತರ ಪ್ರದೇಶದಿಂದ ಪಾರ್ಲಿಮೆಂಟಿಗೆ ಸ್ಪರ್ಧಿಸಿದ್ದ ಕೇಂದ್ರ ಸರ್ಕಾರದ ನಿರಾಶ್ರಿತರ ಪುನರ್ವ್ಯವಸ್ಥೆಯ ಶಾಖೆಯ ರಾಜ್ಯ ಸಚಿವರಾದ ಶ್ರೀ ಅಜಿತ್ ಪ್ರಸಾದ ಜೈನ್‌ರವರು ಜಯಶೀಲರಾದರು.

ವೈದ್ಯವಿದ್ಯಾ ಸಂಸ್ಥೆಗಳ ಸಮ್ಮೇಳನ

ಭಾರತದಲ್ಲಿರುವ ನಾನಾ ವೈದ್ಯವಿದ್ಯಾ ಸಂಸ್ಥೆಗಳ ಪ್ರತಿನಿಧಿಗಳ ಸಮ್ಮೇಳನವು ಸೇವಾಗ್ರಾಮದಲ್ಲಿ ಮುಂದಿನ ವರ್ಷ ೫೩ರಲ್ಲಿ ಸೇರುವುದೆಂದು ಹೇಳಲಾಗಿದೆ.

ಕಮ್ಯುನಿಸ್ಟರು ಅಧಿಕಾರಕ್ಕೆ ಬರಕೂಡದು

ಮದರಾಸಿನಲ್ಲಿ ಅಥವಾ ಭಾರತದ ಯಾವುದೇ ಭಾಗದಲ್ಲಿ 'ಕಮ್ಯುನಿಸ್ಟರು ಅಧಿಕಾರಕ್ಕೆ ಬರಕೂಡದು' ಎಂಬುದಾಗಿ ಆಂಧ್ರ ಕೃಷಿಕಾರ್ ಲೋಕಪಕ್ಷದ ಕಾರ್ಯಕಾರಿ ಸಭೆ ನಿರ್ಣಯ ಮಾಡಿದೆ.

ವಿರೋಧಪಕ್ಷದ ಸ್ಥಾಪನೆ

ಮೈಸೂರು ಅಸೆಂಬ್ಲಿಗೆ ಹೊಸದಾಗಿ ಚುನಾಯಿತರಾದ ಕಾಂಗ್ರೆಸ್ಸೇತರ ಸಭೆಯು ನಿನ್ನೆ ಮಧ್ಯಾಹ್ನ ಕೆ ಎಂ ಪಿ ಪಕ್ಷದ ಕಛೇರಿಯಲ್ಲಿ ನಡೆಯಿತು. ಕೇವಲ ೧೦ ಜನ ಮಾತ್ರ ಹಾಜರಿದ್ದರು. ಸಂಸ್ಥಾನದಲ್ಲಿ ಕಾಂಗ್ರೆಸ್ಸೇತರರ ಸಂಯುಕ್ತ ವಿರೋಧಪಕ್ಷವನ್ನು ಬದ್ಧತೆಯಿಂದ ಕಟ್ಟಬೇಕೆಂದೂ ಅದಕ್ಕಾಗಿ ಸಭೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಸದಸ್ಯರು ಸೇರಿ ತೀರ್ಮಾನಿಸಬೇಕೆಂದು, ಈ ಸಭೆಯು ಮುಂದಿನ ತಿಂಗಳು ೨ನೇ ತಾ॥ ಸೇರಬೇಕೆಂದು ತೀರ್ಮಾನಿಸಲಾಯಿತು.

ಯೋಜನೆತಲೆಕೆಳಗಾಗುತ್ತದೆ

[illegible] 'ಮದ್ರಾಸ್' ಅಸೆಂಬ್ಲಿಯ ಕಾಂಗ್ರೆಸ್ಸೇತರರು ರಚಿಸಿದ [illegible] ಯೋಜನೆ ಕ್ರಮಪ್ರಕಾರವಾಗ [illegible] ಕಾಂಗ್ರೆಸ್ ಅಧ್ಯಕ್ಷ ಶ್ರೀ [illegible] ಸಂಜೀವರೆಡ್ಡಿ [illegible]

ಸೌರಾಷ್ಟ್ರ ಸರ್ಕಾರಕ್ಕೆ ಕೆಟ್ಟ ಹೆಸರನ್ನು ತರಲು ಹಲವು ರಾಜರು ಪ್ರಯತ್ನಿಸುತ್ತಿರುವರೆಂದು ಇಲ್ಲಿಯವರೆಗೆ [illegible] ದರೋಡೆಗಳನ್ನು ನಡೆಸಿ ೭೯ ಜನರ ಕೊಲೆಗೆ ಕಾರಣರಾದ ಹಲವು ರಾಜರ ಒಳಸಂಚು ಪತ್ತೆಯಾಗಿದೆ.

ಈ ರಾಜರುಗಳು ಭೂಪತ್ ಗ್ಯಾಂಗ್ ಎಂಬ ದರೋಡೆಕೋರರ ಗುಂಪಿಗೆ ಸಹಾಯ ನೀಡುತ್ತಿದ್ದರೆಂದು ಇಲ್ಲಿಯವರೆಗೆ ಈ ಗುಂಪಿಗೆ ಸೇರಿದ ೮೦ ಜನರನ್ನು ಡಿಸೆಂಬರ್ ನಿಂದ ದಸ್ತಗಿರಿ ಮಾಡಲಾಗಿದ್ದು ಈಗ ದ್ರೋಲ್ ಸಂಸ್ಥಾನ ಥಾಕೂರ್ ಚಂದ್ರಸಿನ್ಹಜಿಯವರನ್ನು ಕೂಡ ಈ ಸಂಬಂಧದಲ್ಲಿ ದಸ್ತಗಿರಿ ಮಾಡಲಾಗಿದೆ.

ಭಾವಾನಗರದ ರಾಜಕುಮಾರ ನಿರ್ಮಲಕುಮಾರಸಿಂಹಜಿಯವರನ್ನು ಕೂಡ ದಸ್ತಗಿರಿ ಮಾಡಲಾಗಿದ್ದು ಈಗ ಇವರನ್ನು ಬಿಡುಗಡೆ ಮಾಡಲಾಗಿದೆ.

ಲಿಂಬ್ಡಿಯ ರಾಜಕುಮಾರ ಪ್ರತಾಪಸಿಂಹಜಿಯವರ ಅರಮನೆಯನ್ನು ಶೋಧಿಸಿದಾಗ ಒಂದು ಮಣ ತೂಕವಾಗುವ ಬಂಧಿ, ಸಾವಿರ ಪಲ್ಲಗಳಲ್ಲಿ ಸುಮಾರು ೬೦,೦೦೦ದಿಂದ ೮೦,೦೦೦ ಕಾಟ್ರಿಡ್ಜುಗಳು ಸಿಕ್ಕಿತು. ಇವರಿಗೆ ಈ ಶಸ್ತ್ರಗಳನ್ನು ಇಟ್ಟುಕೊಳ್ಳಲು ಲೈಸನ್ಸ್ ಇರುವುದೂ ಇಲ್ಲವೆಂದು ತಿಳಿಯಬಂದಿದೆ.

ದ್ರೋಲ್ ಸಂಸ್ಥಾನದ ರಾಜರ ಅರಮನೆ ಶೋಧಿಸಿದಾಗ ಹೇರಳವಾಗಿ ಶಸ್ತ್ರಾಸ್ತ್ರಗಳು ದೊರೆತಿವೆಯೆಂದು ಹೇಳಲಾಗಿದೆ.

ಇನ್ನೂ ಅನೇಕ ದಸ್ತಗಿರಿಗಳಾಗುವುವೆಂದು ಹೇಳಲಾಗಿದೆ. ಈ ವಿಷಯದಲ್ಲಿ ಸೌರಾಷ್ಟ್ರ ಮುಖ್ಯಮಂತ್ರಿ ಕೇಂದ್ರ ಸರ್ಕಾರದೊಡನೆ ವ್ಯವಹಾರ ನಡೆಸುತ್ತಲಿರುವರು.

ನೂತನ ಕೈಗಾರಿಕಾ ಯೋಜನೆ

ಕಾಶ್ಮೀರ ಸರ್ಕಾರವು ತನ್ನ ದೇಶದ ಕೈಗಾರಿಕೆ ನೀತಿಯನ್ನು [illegible] ನೂತನವಾದ ನೀತಿಯನ್ನು ಅನುಸರಿಸುವುದೆಂದು ತಿಳಿದುಬಂದಿದೆ.

ಶಾಂತಿ ಕರಾರು ಮಾಡಿಕೊಳ್ಳಲು ಸಿದ್ಧತೆ

ಜಪಾನ್ ದೇಶದೊಡನೆ [illegible] ಶಾಂತಿ ಕರಾರು ಮಾಡಿಕೊಳ್ಳಲು ಸಿದ್ಧತೆ ನಡೆಸುತ್ತಿದೆ.

ನಿನ್ನೆ ತಮಿಳುನಾಡಿನ ಜಿಲ್ಲೆ, ತಾ॥ ಸರ್ಕಲ್ ಮತ್ತು ವಾರ್ಡ್ ಕಾಂಗ್ರೆಸ್ ಸಮಿತಿಗಳ ಅಧಿಕಾರಿಗಳ ಸಭೆಯು ಶ್ರೀ ಕಾಮರಾಜನಾಡಾರ್‌ರವರ ಅಧ್ಯಕ್ಷತೆಯಲ್ಲಿ ನಡೆದು ತಮಿಳುನಾಡಿನಲ್ಲಿರುವ ಎಲ್ಲಾ ಕಾಂಗ್ರೆಸ್ ಸಮಿತಿಗಳಲ್ಲಿರುವ ಅಧಿಕಾರವರ್ಗದವರು ಕೂಡಲೆ ತಮ್ಮ ರಾಜೀನಾಮೆ ಕೊಡಬೇಕೆಂದು ನಿರ್ಧರಿಸಿದರು.

ಇದು ನಿಜವಾದ ನಿಷ್ಠಾವಂತ ಕಾಂಗ್ರೆಸ್ ಶುದ್ಧೀಕರಣದ ಕಾರ್ಯಕ್ರಮದ ಪ್ರಥಮ ಹಂತವೆಂದು ಹೇಳಲಾಗಿದೆ

ಕಿರೀಟಧಾರಣ ಮಹೋತ್ಸವ

ಇಂಗ್ಲೆಂಡಿನ ರಾಣಿ ಎರಡನೆ ಎಲಿಜಬೆತ್‌ರವರ ಕಿರೀಟಧಾರಣ ಮಹೋತ್ಸವವು ಸೆಪ್ಟೆಂಬರ್ ಕೊನೆಯಲ್ಲಿ ಅಥವಾ ಅಕ್ಟೋಬರ್ ಮೊದಲ ವಾರದಲ್ಲಿ ನಡೆಯುವುದೆಂದು ಹೇಳಲಾಗಿದೆ.

ಇಂಗ್ಲೆಂಡಿನ ರಾಣಿ ಎಲಿಜಬೆತ್‌ರವರು ಕಿರೀಟಧಾರಣಾ ಮಹೋತ್ಸವಾನಂತರ ಆಸ್ಟ್ರೇಲಿಯಾಗೆ ಭೇಟಿ ಕೊಡುವರೆಂದು ಹೇಳಲಾಗಿದೆ.

ಸಮಿತಿಯ ನೇಮಕ

ವಿಶ್ವಬ್ಯಾಂಕ್ ಪ್ರತಿನಿಧಿಗಳಿಗೂ ಸರ್ಕಾರದ ವಕ್ತೃಗಣಗಳ ಕಮಿಷನ್‌ನವರಿಗೂ ನಡೆಯುತ್ತಿದ್ದ ಮಾತುಕತೆಗಳು ವಿಫಲವಾದ ಪಕ್ಷ ಈ ಆತನನ್ನು ಪ್ರಸ್ತಾಪಿಸಲು ಒಂದು ಸಮಿತಿಯನ್ನು ರಚಿಸಲಾಗುವುದು.

ರಾಜಕೀಯ ಸಮ್ಮೇಳನ

ವಾನ್‌ಮುನ್ ಜಾನಿನಲ್ಲಿ ಕೊರಿಯದ ಶಾಂತಿ ಸ್ಥಾಪಿಸಲು ಮಾತುಕತೆಗಳು ನಡೆಯುತ್ತಿದೆಯಷ್ಟೆ. ಶಾಂತಿ ಸ್ಥಾಪಿಸಲು ಮತ್ತು ಹಲವು ರಾಜಕೀಯ ವಿಷಯಗಳನ್ನು ವಿಚಾರವಿನಿಮಯ ಮಾಡಿಕೊಳ್ಳಲು ಒಂದು ರಾಜಕೀಯ ಸಮ್ಮೇಳನ ಕರೆಯಬೇಕೆಂದು ನಿರ್ಧರಿಸಲಾದೆಯೆಂದು ಹೇಳಲಾಗಿದೆ

ನ್ಯೂ ಅಪೇರ
೧೭—೨—೫೨ ರಿಂದ
ದಿಗಂಬರ ಸ್ವಾಮಿಯಾರ್
ಪಾತ್ರ:— ನಂಬಿಯಾರ್, ಬಾಲಸುಬ್ರಮಣ್ಯಂ, ನರಸಿಂಹಭಾರತಿ, ದ್ರೌಪದಿ, ಲಲಿತಪದ್ಮಿನಿ
೨೨—೨—೫೨ ರಿಂದ
"ಶಾಂತಿ" (ತೆಲುಗು)

೪೫೫ ಮೂಟೆ ಅಕ್ಕಿ ದಾಸ್ತಾನು ಮಾಡಿದ್ದಕ್ಕೆ ೧೦,೦೦೦ ರೂ. ಜುಲ್ಮಾನೆ, ೩೦ ತಿಂಗಳ ಸಜಾ

೬ನ ತಪ್ಪುದ ವ್ಯಾಪಾರಿ ಶ್ರೀ ಸೀತಾರಾಮಶೆಟ್ಟಿಯೆಂಬುವವರು ೪೫೫ ಚೀಲ ಅಕ್ಕಿಯನ್ನು ಲೈಸೆನ್ಸಿಲ್ಲದೆ ದಾಸ್ತಾನು ಮಾಡಿದ್ದರೆಂಬ ಅಪಾದನೆ ಮೇಲೆ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎ. ಸತ್ಯನಾರಾಯಣರವರು ೩೦ ತಿಂಗಳ ಕಠಿಣ ಸಜಾ ೧೦,೦೦೦ ರೂ. ಜುಲ್ಮಾನೆ ವಿಧಿಸಿರುವರು. ಅಲ್ಲದೆ ಅದರಲ್ಲಿ ಅರ್ಧ ಭಾಗ ಅಕ್ಕಿಯನ್ನು ಮಾರಿ ಸಜಾ ಹಣಕ್ಕೆ ತೆಗೆದುಕೊಳ್ಳಬೇಕೆಂದೂ ಉಳಿದುದನ್ನು ಸರ್ಕಾರ ವಶಪಡಿಸಿಕೊಳ್ಳಬೇಕೆಂದು ಹೇಳಿರುವರು.

ಈ ಅಕ್ಕಿಯನ್ನು ಅನಂತಪುರದಿಂದ ಕರ್ನೂಲಿಗೆ ತೆಗೆದುಕೊಂಡು ಹೋಗಿ ಕಾಳಸಂತೆಯ ವ್ಯಾಪಾರದ ಏರ್ಪಾಡು ನಡೆದಿತ್ತು.

ಅಮೇರಿಕೆಯಲ್ಲಿ ಭಾರತದ ವೈದ್ಯರು

ವಾಷಿಂಗ್ಟನ್ ಫೆ ೩

ಮದರಾಸಿನ 'ಹೆಲ್ತ್ ಸರ್ವಿಸ್' ಮೆಡಿಕಲ್ ಸೆಂಟರಿನ ಡಾ॥ ಎ. ದೇವಸಹಾಯಮ್‌ರು ಅಮೇರಿಕದ ಗ್ರಾಮಾಂತರ ಪ್ರದೇಶಗಳ ಆರೋಗ್ಯ ಭಾಗ್ಯವಿಧಾನವನ್ನು ಕಂಡು ತಿಳಿದುಕೊಳ್ಳಲು ೪ ತಿಂಗಳ ಪ್ರವಾಸವನ್ನು ಕೈಗೊಳ್ಳುವರು.

'ಭಾರತದ ಆರೋಗ್ಯವನ್ನು ಅಭಿವೃದ್ಧಿ ಪಡಿಸಲು ಬೇಕಾದಷ್ಟು ಕೆಲಸ ಮಾಡಬೇಕಾಗಿದೆ. ಅಮೇರಿಕದಲ್ಲಿ ಉಪಯೋಗದಲ್ಲಿರುವ ಚಲಿಸುವ ಆರೋಗ್ಯ ಕೇಂದ್ರಗಳ ಬಗ್ಗೆ ಹೆಚ್ಚು ಮಾಹಿತಿಪಡೆಯಲು ನಾನು ಕಾತುರನಾಗಿದ್ದೇನೆ' ಎಂದು ಡಾ॥ ದೇವಸಹಾಯಮ್‌ರು ತಿಳಿಸಿದರು.

ಡಾ॥ ದೇವ ಸಹಾಯಮ್‌ರಿಗೆ ಈ ಪ್ರವಾಸಮಾಡಲು ಅನುಕೂಲಮಾಡಿಕೊಟ್ಟಿದೆ. ಅವರು ದಕ್ಷಿಣದ ಸಂಸ್ಥಾನಗಳನ್ನು ಮೊದಲು ಭೇಟಿ ಮಾಡಿ ಅಲ್ಲಿನ ಆರೋಗ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಶೀಲಿಸುವರು.

ಅಮೇರಿಕದ ಕ್ರಮಜೀವಿಗಳ ಆರೋಗ್ಯವು ಎಷ್ಟರಮಟ್ಟಿನ ಹೆಚ್ಚು ಆರೋಗ್ಯದಲ್ಲಿದೆ ಎಂಬುದನ್ನು ಸಹ ಡಾ॥ ಸಹಾಯಮ್‌ರು ಅಭ್ಯಾಸ ಮಾಡುವರು.

ಡಾ॥ ಸಹಾಯಮ್‌ರು ಸುಪ್ರಸಿದ್ಧ ಕ್ಷಯರೋಗದ ವೈದ್ಯರು. ತಮ್ಮ ಅನುಭವ ಮತ್ತು ಜ್ಞಾನವನ್ನು ಅವರು ಬಂಡವಾಳ ಭಾರತೀಯರಿಗೆ ನೀಡುವರು.

ಕೌನ್ಸಿಲ್ ಕ್ಷೇತ್ರ ಮತದಾರರ ಪಟ್ಟಿ

ಬೆಂಗಳೂರು ಫೆ ೧೭

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್‌ನ ಕ್ಷೇತ್ರಗಳಲ್ಲಿನ ಮತದಾರರ ಪಟ್ಟಿಯ ಪ್ರಕಟಣೆ ಬಗ್ಗೆ ಮೈಸೂರು ಸರ್ಕಾರದ ಅಧಿಕೃತ ಹೇಳಿಕೆಯೊಂದು ನಿನ್ನೆ ಹೊರಬಿದ್ದಿದೆ.

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಪದವೀಧರರ ಕ್ಷೇತ್ರ, ಉಪಾಧ್ಯಾಯರ ಕ್ಷೇತ್ರ ಮತ್ತು ಸ್ಥಳೀಯ ಅಧಿಕಾರಿಗಳ ಕ್ಷೇತ್ರಗಳ ಮತದಾರರ ಪಟ್ಟಿ ೧೯೫೨ರ ಫೆಬ್ರವರಿ ೧೭ರಂದು ಸಂಬಂಧಪಟ್ಟ ಮತದಾರರ ದಾಖಲೆ ಕಛೇರಿಯಲ್ಲಿ ಪ್ರಕಟವಾಗಿದೆ. ಅರ್ಹತೆಯಿದ್ದರೂ ಮತದಾರರ ಪಟ್ಟಿಯಲ್ಲಿ ಸೇರದ ವ್ಯಕ್ತಿಗಳು ತಮ್ಮ ಕ್ಲೇಮುಗಳನ್ನು ಸಲ್ಲಿಸಲು, ಯಾರಾದರೂ ಹೆಸರಿನ ಸೇರಿಕೆಗೆ ಆಕ್ಷೇಪಣೆ ಎತ್ತಲು ಆಹ್ವಾನಿಸಲಾಗಿದೆ.

ಮತದಾರರ ದಾಖಲೆ ಅಧಿಕಾರಿಗಳಿಂದ ಉಚಿತವಾಗಿ ದೊರಕುವ ಆಚ್ಚಾದ ಫಾರಮ್ಮುಗಳಲ್ಲಿ ಆಕ್ಷೇಪಣೆ ಅಥವಾ ಕ್ಲೇಮುಗಳನ್ನು ಪುನರ್ವಿಮರ್ಶ ಅಧಿಕಾರಿಯ ಕಛೇರಿಗೆ ಕಳುಹಿಸಬೇಕೆಂದೂ ತಿಳಿಸಲಾಗಿದೆ. ಬೆಂಗಳೂರು, ಮೈಸೂರುಗಳಲ್ಲಿ ಪ್ರಿನ್ಸಿಪಲ್ ಸಬಾರ್ಡಿನೇಟ್ ಜಡ್ಜರೂ ಉಳಿದ ಜಿಲ್ಲಾ ಕೇಂದ್ರಗಳಲ್ಲಿ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರೂ ಪುನರ್ವಿಮರ್ಶಾಧಿಕಾರಿಗಳು.

ಪೂರ್ವಭಾವಿ ಮತದಾರರ ಪಟ್ಟಿ ಪ್ರಕಟವಾದ ೧೨ ದಿನಗಳಲ್ಲಿ ಕ್ಲೇಮು ಹಾಗೂ ಆಕ್ಷೇಪಣೆಗಳು ನಿರ್ದೇಶಿತ ಅಧಿಕಾರಿಗಳಿಗೆ ತಲುಪಬೇಕು. ಅವಧಿಯಾದ ಬಳಿಕ ಬರುವ ಕ್ಲೇಮು ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು. ಪುಟಕ್ಕೆ ಮೂರು ಕಾಸಿನಂತೆ ಮತದಾರರ ಪಟ್ಟಿ, ಮತದಾರರ ದಾಖಲು ಅಧಿಕಾರಿಗಳ ಕಛೇರಿಗಳಲ್ಲಿ ದೊರಕುತ್ತದೆ.

ಕ್ಲೇಮುಗಳ ಅಥವಾ ಆಕ್ಷೇಪಣೆ ಕಳುಹಿಸುವ ವ್ಯಕ್ತಿಗಳು ಕೂಡಲೇ ಹಾಜರಾಗಬೇಕೆಂದೂ ಕಡೆಯ ದಿನದವರೆಗೆ ಕಾಯಬಾರದೆಂದೂ ಇದರಿಂದ ಮತದಾರರ ಅಂತಿಮ ಪಟ್ಟಿ ರಚನೆ ಶೀಘ್ರವಾಗಲು ಅನುಕೂಲವಾಗುವುದೆಂದೂ ಸರ್ಕಾರ ಪ್ರಕಟಣೆ ತಿಳಿಸುತ್ತದೆ.

ಹೈಕಮ್ಯಾಂಡಿನ ಒತ್ತಾಯ ಇಲ್ಲ, ಸಲಹೆ ಮಾತ್ರ

ಬೆಂಗಳೂರು ಫೆ ೧೭

ಸಂಸ್ಥಾನ ಕಾಂಗ್ರೆಸ್ ಶಾಸನಸಭಾ ಸದಸ್ಯರಲ್ಲಿ ಐಕ್ಯತೆ ತಂದು, ಸರ್ವಾನುಮತದಿಂದ ನಾಯಕರ ಆಯ್ಕೆ ಮಾಡಲು ಅವರಿಗೆ ನೆರವಾಗುವುದೇ ಇಲ್ಲಿಗೆ ನಾನು ಬಂದಿರುವುದರ ಉದ್ದೇಶ ಎಂದು ಅಖಿಲ ಭಾರತ ಕಾಂಗ್ರೆಸ್ ಮಹಾ ಕಾರ್ಯದರ್ಶಿ ಶ್ರೀ ಲಾಲ ಬಹದೂರ್ ಶಾಸ್ತ್ರಿಯವರು ಬೆಂಗಳೂರಿನಲ್ಲಿ ನಿನ್ನೆ ತಿಳಿಸಿದರು.

ಸರ್ವಾನುಮತದ ಆಯ್ಕೆ ಅಗತ್ಯ

'ರಾಷ್ಟ್ರಾದ್ಯಂತ ಶಾಸನಸಭೆಯ ಕಾಂಗ್ರೆಸ್ ಪಕ್ಷಗಳ ನಾಯಕರುಗಳ ಚುನಾವಣೆಯಲ್ಲಿ ಐಕ್ಯತೆ ಇರಬೇಕೆಂಬುದೇ ನಮ್ಮ ಪ್ರಯತ್ನ. ಆದ್ದರಿಂದ ಮೈಸೂರಿನಲ್ಲೂ ಪಕ್ಷದ ನಾಯಕರ ಆಯ್ಕೆ ಸರ್ವಾನುಮತದಿಂದ ಆಗಬೇಕೆಂಬುದರಲ್ಲಿ ನಮಗೆ ಆಸಕ್ತಿಯಿದೆ' ಎಂದು ಶ್ರೀ ಶಾಸ್ತ್ರಿ ತಿಳಿಸಿ, ಮಿತ್ರರುಗಳಾದ ಶ್ರೀ ರೆಡ್ಡಿ ಮತ್ತು ಶ್ರೀ ಹನುಮಂತಯ್ಯ ಇಬ್ಬರ ದೆಹಲಿಗೆ ಬಂದು ಮಾತುಕತೆ ನಡೆಸಿದರು. ಅವರೊಡನೆ ಹೆಚ್ಚು ಮಾತುಕತೆ ನಡೆಸುವುದು ಅಗತ್ಯವಾಗಿ ಕಂಡುಬಂತು. ಆದ್ದರಿಂದ ಮಾತುಕತೆಗಳನ್ನು ಪೂರೈಸಲು ನಾನು ಇಲ್ಲಿಗೆ ಬಂದಿದ್ದೇನೆ. ನಾನಿಲ್ಲಿ ಇರುವಾಗ ಸಾಧ್ಯವಾದಷ್ಟು ಮಂದಿ ಕಾಂಗ್ರೆಸ್ ಶಾಸನಸಭಾ ಸದಸ್ಯರುಗಳನ್ನು ಕಂಡು ಅವರ ಅಭಿಪ್ರಾಯ ತಿಳಿಯುವ ಇಚ್ಛೆ ನನಗಿದೆ ಎಂದರು.

ಕಾಂಗ್ರೆಸ್ ಹೈಕಮ್ಯಾಂಡ್, ಪಕ್ಷದ ಮೇಲೆ ನಾಯಕರನ್ನು ಹೇರುವುದಿಲ್ಲವೆಂದೂ, ನಾಯಕರೊಬ್ಬರ ಆಯ್ಕೆ ಮಾಡಲು ಪಕ್ಷಕ್ಕೆ ಸ್ವಾತಂತ್ರ್ಯವಿದೆಯೆಂದೂ, ಶ್ರೀ ಶಾಸ್ತ್ರಿ ಸ್ಪಷ್ಟಪಡಿಸಿ, ಆದರೆ ಈ ಬಗ್ಗೆ ನಮ್ಮಿಂದ ಸಲಹೆ ಅಗತ್ಯವಾದರೆ ಅದನ್ನು ನೀಡಲು ನಾವು ಸಿದ್ಧ ಎಂದರು.

ಆಯ್ಕೆ ಮುಂದೆ ಹಾಕುವುದು ಸೂಕ್ತವಲ್ಲ

ಸಂಸ್ಥಾನದ ಲೆಜಿಸ್ಲೇಟಿವ್ ಕೌನ್ಸಿಲ್ ರಚನೆಯಾಗುವವರೆಗೂ ನಾಯಕರ ಆಯ್ಕೆಯನ್ನು ಮುಂದೆ ಹಾಕುವುದು ಸೂಕ್ತವಲ್ಲವೆಂದೂ, ಮೇ ತಿಂಗಳ ಅಂತ್ಯದಲ್ಲಿ ಕೌನ್ಸಿಲ್ ರಚನೆ ಪೂರ್ಣವಾಗುವುದೆಂದು ತಿಳಿದು ಬಂದಿದೆಯೆಂದೂ, ನಾಯಕರ ಆಯ್ಕೆ ಅಷ್ಟು ವಿಳಂಬವಾಗುವುದು ಅಪೇಕ್ಷಣೀಯವಲ್ಲವೆಂದೂ, ಕಾಂಗ್ರೆಸ್ ಮಹಾ ಕಾರ್ಯದರ್ಶಿ ಅಭಿಪ್ರಾಯಪಟ್ಟರು.

ರೆಡ್ಡಿ, ಹನುಮಂತಯ್ಯ: ಶಾಸ್ತ್ರಿ ಅವರಿಗೆ ಕೆಲಸೂ ಪತ್ರ

ಆಗಮಿಸಿದ ಕೂಡಲೇ ಶ್ರೀ ಶಾಸ್ತ್ರಿಯವರು ಶ್ರೀಗಳಾದ ಕೆ. ಸಿ. ರೆಡ್ಡಿ ಹಾಗೂ ಶ್ರೀ ಕೆ. ಹನುಮಂತಯ್ಯನವರುಗಳಿಗೆ ಸಂಕ್ಷಿಪ್ತವಾಗಿ ಪತ್ರ ಬರೆದು ಅವರನ್ನು ಕಂಡು ಮಾತನಾಡುವ ಸಮಯ ನಿಗದಿಪಡಿಸಿ ಸಂದೇಶ ಕಳುಹಿಸಿದ ಪತ್ರಗಳನ್ನು ನೀಡಿದರು. ಆ ಪತ್ರಗಳಲ್ಲಿ ಅಡಕವಾಗಿರುವ ಅಂಶಗಳ ಬಗ್ಗೆ ಪ್ರಶ್ನಿಸಲಾಗಿ ಶ್ರೀ ಶಾಸ್ತ್ರಿಯವರು, 'ಅವು ಇಲ್ಲಿ ನನ್ನ ಕೆಲಸವನ್ನು ಹಗುರಮಾಡಲು ಸಹಾಯಕವಾಗುವುವೆಂಬ ಉದ್ದೇಶವಿದೆ' ಎಂದರು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರಿಗೂ ಒಂದು ಪತ್ರವನ್ನು ಶ್ರೀ ಶಾಸ್ತ್ರಿ ತಂದಿದ್ದಾರೆ. ಚುನಾವಣೆಗಳಲ್ಲಿ ಸೋತುದರಿಂದಾಗಿ ಸಚಿವ ಮಂಡಲಕ್ಕೆ ರಾಜೀನಾಮೆ ಕೊಡಲು ಶ್ರೀ ದಾಸಪ್ಪನವರು ಮುಂದೆ ಬಂದಿರುವುದಕ್ಕೆ ಈ ಪತ್ರ ಸಂಬಂಧಿಸಿದೆ.

ಶ್ರೀ ಶ್ರೀ ಪ್ರಕಾಶ್ ಮದರಾಸ್ ಗೌರ್ನರು?

ಬೊಂಬಾಯಿ ಪ್ರಧಾನಿ ಶ್ರೀ ಬಿ. ಜಿ. ಖೇರ್‌ರವರು ಮದರಾಸಿನ ಗೌರ್ನರರಾಗಲು ಕೇಂದ್ರ ಸರ್ಕಾರದ ಪ್ರಾರ್ಥನೆಯನ್ನು ತಮ್ಮ ಆರೋಗ್ಯದ ಕಾರಣಗಳಿಗಾಗಿ ನಿರಾಕರಿಸಿದ್ದಾರೆಂದು ತಿಳಿದುಬಂದಿದೆ. ಈ ಹುದ್ದೆಗೆ ವಿಜ್ಞಾನ ಪರಿಶೋಧನೆ ಮತ್ತು ಪ್ರಕೃತಿ ಸಂಪತ್ತಿನ ಶಾಖಾ ಸಚಿವರಾದ ಶ್ರೀ ಶ್ರೀ ಪ್ರಕಾಶ ಹೆಸರು ಸೂಚಿತವಾಗಿರುವುದಾಗಿ ತಿಳಿದು ಬಂದಿದೆ.

ಕಮ್ಯುನಿಸ್ಟರ ಬಿಡುಗಡೆ

ಪಶ್ಚಿಮ ಬಂಗಾಳ ಸರ್ಕಾರ ಹೊರಡಿಸಿದ ಆಜ್ಞೆಯೊಂದರಂತೆ ಇತ್ತೀಚೆಗೆ ಪಶ್ಚಿಮ ಬಂಗಾಳ ಶಾಸನಸಭೆಗೆ ಚುನಾಯಿತರಾಗಿರುವ ಶ್ರೀ ಬೀರೇಂದ್ರನಾಥ ಬ್ಯಾನರ್ಜಿ ಮತ್ತು ಶ್ರೀ ತಾರಾಪಾದದೇವ ಎಂಬ ಕಮ್ಯುನಿಸ್ಟ್ ಸದಸ್ಯರನ್ನು ಸ್ಥಾನಬದ್ಧತೆಯಿಂದ ಬಿಡುಗಡೆ ಮಾಡಲಾಗಿದೆ.

ಇವಲ್ಲದೆ ಇತರ ೪೪ ಸ್ಥಾನಬದ್ಧರನ್ನೂ ಪಶ್ಚಿಮ ಬಂಗಾಳ ಸರ್ಕಾರ ಬಿಡುಗಡೆ ಮಾಡಿದೆ.

[redacted]

ವುಡ್ ಲ್ಯಾಂಡ್ಸ್

[illegible]

ದಿನವೂ 3 ಪ್ರದರ್ಶನಗಳು

ಅಲ್‌ಬೇಲ

ನಾತ್ರ— ಗೀತಾಬಾಲಿ, ಭಗವಾನ್. ಬಹರೀತ್ರೈಬ್, ಸುಂದರ್.

[redacted]

[illegible]

[illegible]

—:: ಆ ಪಾ ರ ::—

[redacted]

ಪ್ರಕಾಶಕರು :— ಜಿ. ಎಲ್. ಸ್ವಾಮಿ [illegible] ಮೈಸೂರು ಮುದ್ರಕರು—[illegible] ಮುದ್ರಣಾಲಯ ಮೈಸೂರು

ಫೋನ್ ೫೭೪ (ಆಫೀಸ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೯—೨—೧೯೫೨ನೇ ಮಂಗಳವಾರ [ಸಂಚಿಕೆ ೧೪೮

ಮುಂದಿನ ತಿಂಗಳು ೨೭ನೇ ತಾ॥ ಕೌನ್ಸಿಲ್ ಆಫ್ ಸ್ಟೇಟ್‌ಗೆ ಚುನಾವಣೆ

ಭಾರತದ ಹಿರಿಯ ಶಾಸನಸಭೆಗೆ ವಿವಿಧ ರಾಜ್ಯ ಮತ್ತು ಪ್ರಾಂತ ಸರ್ಕಾರಗಳಿಂದ ಒಟ್ಟು ೨೦೦ ಸ್ಥಾನಕ್ಕೆ ಚುನಾವಣೆ ನಡೆಯುವುದು. 'ಕೌನ್ಸಿಲ್ ಆಫ್ ಸ್ಟೇಟ್'ಗೆ ೨೧೬ ಸ್ಥಾನಗಳಿದ್ದು ಕಾಶ್ಮೀರಕ್ಕೆ ೪ ಸ್ಥಾನಗಳೂ, ೧೨ ಸ್ಥಾನಗಳನ್ನು ರಾಷ್ಟ್ರಾಧ್ಯಕ್ಷರೂ ನಾಮಕರಣದ ಮೂಲಕ ಭರ್ತಿ ಮಾಡುವರು. ದೆಹಲಿ ಮತ್ತು ಕಾಶ್ಮೀರ ಚುನಾವಣೆಯಲ್ಲಿ ಭಾಗವಹಿಸುವುದಿಲ್ಲ.

ಭಾರತದ ಹಿರಿಯ ಶಾಸನಸಭೆಗೆ ಸ್ಪರ್ಧಿಸುವವರು ಮಾರ್ಚಿ ೧೩ನೇ ತಾ॥ ಅರ್ಜಿ ಸಲ್ಲಿಸಬೇಕು. ಅರ್ಜಿ ಪರಿಶೀಲನೆ ೧೪ನೇ ತಾ॥. ಅರ್ಜಿ ವಾಪಸ್ ಪಡೆಯಲು ೧೭ನೇ ತಾ॥ ನಿಗದಿ ಮಾಡಿ ೨೭ನೇ ತಾ॥ ಚುನಾವಣೆಯು ನಡೆಸುವುದು. ಚುನಾವಣೆಯು ಭಾರತದ ಎಲ್ಲಾ ಭಾಗದಲ್ಲೂ ಏಕಕಾಲದಲ್ಲಿ ನಡೆಯುತ್ತದೆ.

ಹಿರಿಯ ಶಾಸನಸಭೆಯಲ್ಲಿ ಬೊಂಬಾಯಿ ೧೭, ಮೈಸೂರು ೬, ಅಜ್ಮೀರ ಮತ್ತು ಕೊಡಗಿನಿಂದ ಒಂದು, ಮದ್ರಾಸು ೨೨, ತಿರುವಾಂಕೂರ್-ಕೊಚ್ಚಿನ್ ೬, ವಿಂಧ್ಯ ಪ್ರದೇಶ ೪, ಉತ್ತರ ಪ್ರದೇಶ ೩೧, ಮಧ್ಯ ಭಾರತ ೬, ಬಂಗಾಳ ೧೪, ಅಸ್ಸಾಂ ೬, ಒರಿಸ್ಸಾ ೯, ರಾಜಾಸ್ಥಾನ ೯, ಸೌರಾಷ್ಟ್ರ ೪, ಪೆಪ್ಸು ೩, ಮಣಿಪುರ ೧, ಉಳಿದ ಪ್ರಾಂತ್ಯಗಳಿಗೆ ೬೧ ಸ್ಥಾನಗಳನ್ನು ಹಂಚಲಾಗಿದೆ.

ಶ್ರೀ ರಘುನಾಥರಾಯರ ವರದಿ ಮೇಲೆ ಚರ್ಚೆ

ಸೂಯಜ್ ಪ್ರದೇಶದಲ್ಲಿ ಬ್ರಿಟಿಷರು ಈಜಿಪ್ಟಿನ ಕಾರ್ಮಿಕರಿಗೆ ವಿಶೇಷ ಕಿರುಕುಳ ಕೊಡುತ್ತಿರುವರೆಂದು ಬಂದಿದ್ದ ದೂರನ್ನು ಪರೀಕ್ಷಿಸಲು ಮತ್ತು ವರದಿಯನ್ನು ಕೊಡಲು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯವರು ಶ್ರೀ ರಘುನಾಥರಾಯರನ್ನು ನೇಮಿಸಿದ್ದರು. ಶ್ರೀ ರಾಯರು ವರದಿ ಒಪ್ಪಿಸಿತ್ತು, ದೂರು ನಿರಾಧಾರವೆಂದು ತಿಳಿಸಿರುವರು.

ವೈಮಾನಿಕದಳದ ಪರಿಶೀಲನೆ

ಬೆಂಗಳೂರು ಫೆ ೧೮

ಭಾರತದ ವಿಮಾನದಳದ ಮಾರ್ಷಲ್ ಮಿ॥ ಗಿಬ್ಸ್‌ರವರು ನಿನ್ನೆ ಭಾರತೀಯ ವೈಮಾನಿಕದಳದ ಪರಿಶೀಲನೆ ಮಾಡಿ, ಜಾಲಹಳ್ಳಿಯಲ್ಲಿ ವೈಮಾನಿಕ ಶಿಕ್ಷಣದಳದವರಿಂದ ಸೆಲ್ಯೂಟ್ ಸ್ವೀಕರಿಸಿದರು.

ಅತಾವುಲ್ಲಾ ಖಾನರವರು ನಿಧನ ಹೊಂದಿದರು

ವಾಯುವ್ಯ ಗಡಿನಾಡಿನ ಕಾಂಗ್ರೆಸ್ ಸಂಸ್ಥೆಯ ಮುಖ್ಯನಾಯಕರೂ, ಅವಿಭಾಜ್ಯ ಭಾರತವಾಗಿದ್ದಾಗ ವಾಯುವ್ಯ ಗಡಿನಾಡಿನ ಕಂದಾಯ ಸಚಿವರೂ ಆಗಿದ್ದ ಡಾ॥ ಅತಾವುಲ್ಲಾ ಖಾನ್‌ರವರು ನಿನ್ನೆ ನಿಧನ ಹೊಂದಿದರು. ಇವರು ಅನೇಕ ದಿನಗಳಿಂದ ಜೈಲಿನಲ್ಲಿದ್ದು, ಇವರ ಆರೋಗ್ಯ ಕೆಟ್ಟು ಜೈಲಿನಿಂದ ಬಿಡುಗಡೆ ಮಾಡಲ್ಪಟ್ಟಿದ್ದರು.

ಕಾಮನ್ವೆಲ್ತ್ ಟೀಮಿಗೆ ಜಯ

ಎಂ. ಸಿ. ಸಿ ಗೂ ಕಾಮನ್ವೆಲ್ತ್‌ಗೂ ಕೊಲಂಬೋದಲ್ಲಿ ನಡೆಯುತ್ತಿದ್ದ ಕ್ರಿಕೆಟ್ ಪಂದ್ಯವು ಮುಕ್ತಾಯವಾಗಿ ಕಾಮನ್ವೆಲ್ತ್‌ನವರು ಒಂದು ಇನ್ನಿಂಗ್ಸ್ ಮತ್ತು ೨೫೯ ರನ್ನುಗಳಿಂದ ಜಯಗಳಿಸಿದರು. ಸ್ಕೋರುಗಳು ಕಾಮನ್ವೆಲ್ತ್, ಮೊದಲನೇ ಇನ್ನಿಂಗ್ಸ್ ೫೧೭, ಎಂ. ಸಿ. ಸಿ. ಮೊದಲನೇ ಇನ್ನಿಂಗ್ಸ್ ೧೦೩ ಮತ್ತು ಎರಡನೇ ಇನ್ನಿಂಗ್ಸ್ ೧೫೫

LATEST

ಸರ್ವಾನುಮತದಿಂದ ಚುನಾವಣೆ ನಡೆಯುವುದರಲ್ಲಿ ಸಂದೇಹವಿಲ್ಲ

ಸ್ವ. ಸು. ಫೋನ್] ಬೆಂಗಳೂರು ಫೆ ೧೮

ಸರ್ವಾನುಮತದಿಂದ ನಾಯಕರ ಚುನಾವಣೆಯು ನಡೆಯುವುದರಲ್ಲಿ ತೊಂದರೆಯೇನು ಇಲ್ಲವೆಂದು ನನಗೆ ತಿಳಿದುಬಂದಿದೆ. ಸಂಸ್ಥಾನದ ಶಾಸನಸಭೆಗೆ ಚುನಾಯಿತರಾಗಿ ಬಂದಿರುವ ಅನೇಕರ ಅಭಿಪ್ರಾಯವೂ ಇದೇ ರೀತಿಯದೆಯೆಂದು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಇಂದು ತಿಳಿಸಿದ್ದರು.

ನಾವು ಶ್ರೀ ಕೆ. ಸಿ. ರೆಡ್ಡಿ ಮತ್ತು ಶ್ರೀ ಕೆ. ಹನುಮಂತಯ್ಯನವರನ್ನು ಭೇಟಿ ಮಾಡಿದುದಾಗಿಯೂ ಅವರ ಸೌಜನ್ಯ ಮತ್ತು ಸಹಕಾರಪೂರಿತ ಮನೋಭಾವವು ತಮ್ಮ ಕೆಲಸವನ್ನು ಹಗುರವನ್ನಾಗಿ ಮಾಡಿದೆಯೆಂದು ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ತಿಳಿಸಿದರು.

ಏಕವಾಕ್ಯದಿಂದ ನಾಯಕರನ್ನು ಆರಿಸುವ ವಿಷಯವನ್ನು ಸಂಸ್ಥಾನದ ನಾಯಕರಿಗೆ ವಹಿಸುವುದಾದರೆ ಕೆಲಸವು ಸುಗಮವಾಗುವುದರಲ್ಲಿ ಸಂದೇಹವಿಲ್ಲವೆಂದು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿ ಮದರಾಸಿಗೆ ತೆರಳಿದರು.

ಎ. ಐ. ಸಿ. ಸಿ. ಕಾರ್ಯದರ್ಶಿಯವರಿಂದ ಶಾಸನಸಭಾ ಸದಸ್ಯರ ಅಭಿಪ್ರಾಯ ಸಂಗ್ರಹ

ಬೆಂಗಳೂರು ಫೆ ೧೮

ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಚುನಾವಣೆ ಸರ್ವಾನುಮತದಿಂದ ನಡೆಯುವುದರಲ್ಲಿ ಸಹಾಯ ಮಾಡಲು ನಗರಕ್ಕಾಗಮಿಸಿರುವ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ನಿನ್ನೆ ೩೮ ಮಂದಿ ಪಕ್ಷದ ಸದಸ್ಯರನ್ನು ಭೇಟಿ ಮಾಡಿ ಅವರ ಅಭಿಪ್ರಾಯಗಳನ್ನು ಪಡೆದುಕೊಂಡರು.

ಪ್ರದೇಶ ಕಾಂಗ್ರೆಸ್ ಸಮಿತಿ ಮೂಲಕ ಬರಲಿ

ಅಧಿಕೃತ ಸ್ಪರ್ಧಿಗಳ ವಿರುದ್ಧ ಕಾಂಗ್ರೆಸ್ಸಿಗರೇ ಸ್ಪರ್ಧಿಸಿದರೆಂದು ದೂರುಗಳ ಸ್ಥಿತಿಯ ಶ್ರೀ ಹೆಚ್. ಎಂ. ಚನ್ನಬಸಪ್ಪ, ಎಂ. ಎಲ್. ಸಿ. ಜಯರಾಜ್ ಆಂಡ್ ಮುಂತಾದ ಮೈಸೂರು ಜಿಲ್ಲೆಯ ಕೆಲವು ಕಾಂಗ್ರೆಸ್ ಕಾರ್ಯಕರ್ತರು ರಾತ್ರಿ ಪ್ರಧಾನ ಕಾರ್ಯದರ್ಶಿಗಳನ್ನು ಭೇಟಿ ಮಾಡಿದ್ದರು.

ದೂರುಗಳನ್ನು ನೇರವಾಗಿ ಗಮನಕ್ಕೆ ತೆಗೆದುಕೊಂಡು ಪರಿಶೀಲಿಸಲು ಸಾಧ್ಯವಿಲ್ಲವೆಂದೂ, ಪ್ರದೇಶ ಕಾಂಗ್ರೆಸ್ ಸಮಿತಿ ಮೊದಲು ಪರಿಶೀಲಿಸಿ, ಅದರ ಮೂಲಕ ಬರಬೇಕೆಂದೂ, ಈ ನಡವಳಿಕೆಯನ್ನು ಅನುಸರಿಸಬೇಕಾದುದು ಅಗತ್ಯವೆಂದೂ, ಶ್ರೀ ಶಾಸ್ತ್ರಿಗಳು ತಿಳಿಸಿದರೆಂದೂ ಗೊತ್ತಾಗಿದೆ. ಪ್ರತಿಯೊಂದು ದೂರನ್ನು ಪರಿಶೀಲಿಸಲಾಗುವುದೆಂದೂ, ಆದರೆ ಪ್ರಥಮವಾಗಿ ಪ್ರದೇಶ ಕಾಂಗ್ರೆಸ್ ವಿಚಾರಣೆ ನಡೆಸಿ ಕಾರ್ಯಕಾರಿ ಸಮಿತಿಗೆ ಕಳುಹಿಸಿ ಕೊಡಬೇಕೆಂದೂ ತಿಳಿಸಿದರೆಂದು ಗೊತ್ತಾಗಿದೆ.

ರಾಜೀನಾಮೆ ಕೊಟ್ಟಿಲ್ಲ

ತಮ್ಮ ಸಚಿವ ಸ್ಥಾನಕ್ಕೆ ತಾವು ರಾಜೀನಾಮೆ ಸಲ್ಲಿಸಿಲ್ಲವೆಂದೂ ಪ್ರಕಟವಾಗಿರುವ ವದಂತಿ ನಿಜವಲ್ಲವೆಂದು ಹಣಕಾಸಿನ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರು ತಿಳಿಸಿದರು.

ಬಹುಮಂದಿ ಮತದಾರರು ತಮ್ಮ ವಿಚಾರದಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿರುವುದರಿಂದ ತಾವು ಮಂತ್ರಿ ಸಂಪುಟಕ್ಕೆ ರಾಜೀನಾಮೆ ಸಲ್ಲಿಸಲು ಆಸಕ್ತರಾಗಿರುವುದಾಗಿಯೂ ಆ ಬಗ್ಗೆ ತಾವು ಕಾಂಗ್ರೆಸ್ ಹೈಕಮ್ಯಾಂಡಿನ ಸಲಹೆಯನ್ನು ಕೋರಿ ಬರೆದಿದ್ದ ಪತ್ರವನ್ನು ಜನವರಿ ೩೧ ರಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರಿಗೆ ಕೊಟ್ಟಿದುದಾಗಿಯೂ ತಿಳಿಸಿದರು

ಲಾರಿಗೆ ಸಿಕ್ಕಿ ಮಗುವಿನ ಸಾವು

ಬೆಂಗಳೂರು ಫೆ ೧೭

ಇಂದು ಮಧ್ಯಾಹ್ನ ೧೧—೪೦ರ ವೇಳೆಯಲ್ಲಿ ಚಾಮರಾಜಪೇಟೆ ಮೊದಲನೆ ರೋಡಿನಲ್ಲಿ ೫ ವರ್ಷದ ಮಗುವೊಂದು ಲಾರಿಗೆ ಸಿಕ್ಕಿ ಜಜ್ಜಲ್ಪಟ್ಟಿತು. ಲಾರಿ ಮಾಗಡಿಯ ಗೋವಿಂದರಾಜು ಎಂಬುವರಿಗೆ ಸೇರಿದ್ದು, ಲಾರಿ ನಡೆಯಿಸುತ್ತಿದ್ದ ಡ್ರೈವರ್ ಮುನಿಯಪ್ಪನನ್ನು ದಸ್ತಗಿರಿ ಮಾಡಲಾಗಿದೆ

ಲಾರಿಗೆ ಟ್ಯಾಕ್ಸ್ ಕಟ್ಟಿಲ್ಲವೆಂದು ಪೋಲೀಸಿನವರು ಠಾಣೆಗೆ ಅದನ್ನು ಕರೆತರುವಾಗ, ಡ್ರೈವರ್ ಲಾರಿಯನ್ನು ವೇಗದಿಂದ ನಡೆಸಿದನೆಂದೂ, ಮಗು ಅಡ್ಡಲಾಗಿ ಬಂದಾಗ, ಲಾರಿ ನಿಲ್ಲಿಸಲಾಗದೆ ದುರಂತಕ್ಕೆ ಕಾರಣವಾಯಿತೆಂದು ಹೇಳಲಾಗಿದೆ.

ದುರಂತಕ್ಕೆ ಈಡಾದ ಐದು ವರ್ಷದ ಮಗು ವೆಂಕಟೇಶ, ವೆಂಕಟಪ್ಪ ಎಂಬುವರ ಪುತ್ರ. ವಿವಾಹವಾದ ಹತ್ತು ಹನ್ನೆರಡು ವರ್ಷಗಳಿಂದ ಮಕ್ಕಳಿಲ್ಲದೆ ಇದ್ದು ಕೊನೆಗೆ ಹೊಂದಿದ್ದ ಏಕಮಾತ್ರ ಸಂತಾನ.

೫ ಮಂದಿ ಜೀವಸಹಿತ ಸುಟ್ಟುಹೋದರು

ತಿರುವೇಂದ್ರಂಗೆ ದಕ್ಷಿಣಕ್ಕೆ ಬಲರಾಮಪುರದ ಉತ್ತರಕ್ಕೆ ಒಂದು ಮೈಲಿ ದೂರದಲ್ಲಿ ಪ್ರಯಾಣಿಕರ ಬಸ್ ಒಂದು ಭಸ್ಮವಾಗಿ ಕಡೆಯ ಪಕ್ಷ ೫ ಜನರು (ಗಂಡಸರೋ, ಹೆಂಗಸರೋ ಅಥವ ಮಕ್ಕಳೊ ಯಾರಿಗೂ ತಿಳಿಯದು) ಸುಟ್ಟು ಮಡ್ಡಿಯಾಗಿಬಿಟ್ಟಿದ್ದಾರೆ ಬಸ್ಸಿನ ಉಕ್ಕಿನ ಚೌಕಟ್ಟು ವಿನಾ ಉಳಿದೆಲ್ಲ ಭಾಗವೂ ನಾಶವಾಗಿದೆ

ಆಸ್ಪತ್ರೆಗೆ ಸಾಗಿಸಿದ ೧೬ ಮಂದಿಯಲ್ಲಿ ಇಬ್ಬರು ನೆಯ್ಯಾಟ್ಟಿಂಕರಾ ಆಸ್ಪತ್ರೆಯಲ್ಲಿ ಸತ್ತರು ಒಬ್ಬ ತಿರುವೇಂದ್ರಂ ಜನರಲ್ ಆಸ್ಪತ್ರೆಯಲ್ಲಿ ಸತ್ತ. ಉಳಿದ ೧೩ ಜನರಲ್ಲಿ ಇಬ್ಬರು ಗಂಡಸರು ಮತ್ತು ಇಬ್ಬರು ಹೆಂಗಸರ ಸ್ಥಿತಿ ಚಿಂತಾಜನಕವಾಗಿದೆ

೩ ಪಶ್ಚಿಮದ ಪ್ರಜಾಪ್ರಭುತ್ವಗಳು ಮತ್ತು ಹೊಸದಾಗಿ ಪೂರ್ವದಲ್ಲಿ ಸ್ಥಾಪಿತವಾಗಿರುವ ಸ್ವತಂತ್ರ ದೇಶಗಳು ನಿಜವಾದ ಕ್ರಾಂತಿಕಾರಕ ದೇಶಗಳು, ಎಂದು ಫೋರ್ಡ್ ನಿಧಿಯ ಚಾಲಕರಾದ ಜೆ. ಹಾಫ್ ಮನ್ನರು ತಿಳಿಸಿದ್ದಾರೆ.

ಸಣ್ಣ ರಾಷ್ಟ್ರಗಳ ರಕ್ಷಕ ವಿಶ್ವಸಂಸ್ಥೆ

ನ್ಯೂಯಾರ್ಕ್ ಫೆ ೧೩

ಸಣ್ಣ ರಾಷ್ಟ್ರಗಳ ಹಿತರಕ್ಷಣೆಯನ್ನು ಮತ್ತು ಹಕ್ಕುಬಾಧ್ಯತೆಗಳನ್ನು ರಕ್ಷಿಸಲು ವಿಶ್ವಸಂಸ್ಥೆಯು ತುಂಬಾ ಸಹಕಾರಿಯಾಗಿದೆ, ಎಂದು ಶ್ರೀಮತಿ ರೂಸವೆಲ್ಟರು ತಿಳಿಸಿದ್ದಾರೆ

ವಿಶ್ವಸಂಸ್ಥೆಯು ಕೇವಲ ಒಂದು ಚರ್ಚಾಕೂಟ ಎಂಬ ಟೀಕೆಗೆ ಉತ್ತರ ಕೊಡುತ್ತಾ, ವಿಶ್ವಸಂಸ್ಥೆಯ ಚರ್ಚೆಗಳು ಪರಸ್ಪರ ಸೌಹಾರ್ದವನ್ನು ಬೆಳೆಸುತ್ತದೆ ಮತ್ತು ಕಾರ್ಯಕಾರಿ ಕೆಲಸ ಮಾಡುತ್ತದೆ, ಎಂದು ತಿಳಿಸಿದ್ದಾರೆ.

ಸೋವಿಯೆಟ್ ಧೋರಣೆಯ ಬಗ್ಗೆ ಎಚ್ಚರಿಕೆ ಕೊಡುತ್ತಾ, ಸ್ವತಂತ್ರ ರಾಷ್ಟ್ರಗಳು ತುಂಬಾ ಹುಷಾರಾಗಿರಬೇಕೆಂದು ತಿಳಿಸಿದ್ದಾರೆ.

ರಷ್ಯಾವು ನಿಶ್ಶಸ್ತ್ರೀಕರಣ ಸಮಿತಿಯಲ್ಲಿ ಭಾಗವಹಿಸಲು ತೀರ್ಮಾನಿಸಿ ಸಹಕರಿಸಲು ನಿರ್ಧರಿಸಿರುವುದೇ ಒಂದು ದೊಡ್ಡ ಆಶ್ಚರ್ಯ. ವಿಶ್ವಸಂಸ್ಥೆ ಈಸಾರಿಯ ಸಭೆಯಲ್ಲಿ ನಡೆದ ಮುಖ್ಯ ತೀರ್ಮಾನಗಳಲ್ಲಿ ಇದೊಂದು.

ಆಹಾರಸಚಿವ ಸಮ್ಮೇಳನ

ಇದಿನ ದೇಹಲಿಯಲ್ಲಿ ಆರಂಭವಾಗಿ ಎರಡುದಿನ ಕಾಲ ನಡೆಯುವ ಆಹಾರ ಸಚಿವರ ಸಮ್ಮೇಳನವು ಆಹಾರ ಧಾನ್ಯಗಳನ್ನು ಅಭಾವದ ಪ್ರದೇಶಗಳಿಗೆ ಹಂಚುವ ಮೂಲಕ ಯೋಜನೆಯನ್ನು ನಿರ್ಧರಿಸುವುದಲ್ಲದೇ ೧೯೫೨ರಲ್ಲಿ ಆಹಾರದ ಬಗ್ಗೆ ಪ್ರಾಂತಗಳಿಗೆ ಧನಸಹಾಯವನ್ನು ವಿಸ್ತರಿಸುವ ಮಿತಿಯನ್ನೂ ನಿರ್ಧರಿಸುವುದೆಂದೂ ಗೊತ್ತಾಗಿದೆ.

ಕ್ಷಯರೋಗ ತಡೆಗಟ್ಟಲು ಆರಂಭ

ಗೋ ಸಂಪತ್ತಿಗೆ ಹಾನಿಯುಂಟು ಮಾಡುವ ಕ್ಷಯರೋಗವನ್ನು ಹೈದ್ರಾಬಾದ್ ಮತ್ತು ಬಿಹಾರದಲ್ಲಿ ತಡೆಗಟ್ಟಲು ಆರಂಭಿಸಿ ಮೋಲ್ಯಾಂಡ ಕಡೆಗಳಲ್ಲಿ ಕೇಂದ್ರಗಳನ್ನು ತೆರೆಯಲಾಗಿದೆ. ಮದ್ರಾಸ್ ಮತ್ತು ಇನ್ನೊಂದೆಡೆ ಇಂತಹ ಕೇಂದ್ರ ತೆರೆಯಲಾಗಿದೆ

೩ ಪ್ರಪಂಚ ಸಂಸ್ಥೆಯ ಆರೋಗ್ಯಾಧಿಕಾರಿಗಳು, ಟೈಫಸ್ ಮತ್ತು ಕ್ಷಯರೋಗವನ್ನು ತಡೆಯಲು, ಕೊರಿಯಾದಲ್ಲಿ ಹಗಲಿರುಳು ದುಡಿಯುತ್ತಿದ್ದಾರೆ. ಧಾಳಿ ಮಾಡುವ ಕಮ್ಯೂನಿಸ್ಟ್ ಸೈನ್ಯಗಳು ನಾಶ ಮಾಡಿ ಸಾವು ತಂದದ್ದಲ್ಲದೆ ಜೊತೆಗೆ ಪ್ಲೇಗು ಮುಂತಾದ ಸಾಂಕ್ರಾಮಿಕ ಜಾಡ್ಯಗಳನ್ನೂ ತಂದಿದ್ದಾರೆ

ಹಜಾರೆ ಭಾರತ ಟೀಮಿನ ಕ್ಯಾಪ್ಟನ್ ಗುಪ್ತ ಮ್ಯಾನೇಜರ್

ಭಾರತದ ಕ್ಯಾಪ್ಟನ್ ವಿಜಯ ಹಜಾರೆ ಈ ಬೇಸಿಗೆಯಲ್ಲಿ ಇಂಗ್ಲೆಂಡಿನಲ್ಲಿ ಪ್ರವಾಸಮಾಡಲಿರುವ ಭಾರತದ ಕ್ರಿಕೆಟ್ ಟೀಮಿನ ಕ್ಯಾಪ್ಟನ್ನರಾಗಿ ಭಾರತದ ಕ್ರಿಕೆಟ್ ಕಂಟ್ರೋಲ್ ಬೋರ್ಡಿನ ವಿಶೇಷ ಸಭೆಯಲ್ಲಿ ಸರ್ವಾನುಮತದಿಂದ ಚುನಾಯಿಸಲ್ಪಟ್ಟಿದ್ದಾರೆ.

ಭೂದಾನ ಯಜ್ಞಕ್ಕೆ ಬೆಂಗಳೂರು ವರ್ತಕರ ದಾನ

ಬೆಂಗಳೂರು ಫೆ ೧೭

ಆಚಾರ್ಯ ವಿನೋಬಭಾವೆಯವರ ಭೂದಾನ ಯಜ್ಞಕ್ಕಾಗಿ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರ ಹುಟ್ಟಿದ ಸಂದರ್ಭದಲ್ಲಿ ಬೆಂಗಳೂರಿನ ವರ್ತಕರಾದ ಜ|| ಸೈಯದ್ ಹುಸೇನ್‌ರವರು, ೧,೦೦೦ ಎಕರೆ (೪೦೦ ಎಕರೆ ಗದ್ದೆ ೬೦೦ ಎಕರೆ ಹೊಲ) ಭೂಮಿಯನ್ನು ದಾನ ಮಾಡಿದ್ದಾರೆ.

ಭಾರತದ ಜನರಲ್ಲಿ ಮೂರನೇ ಒಂದುಭಾಗ ರೋಗಗ್ರಸ್ತರು

ಭಾರತದಲ್ಲಿ ಮೂರನೇ ಒಂದು ಭಾಗದ ಜನರು ವ್ಯಾಧಿಗಳಿಂದ ಕೂಡಿದ್ದಾರೆ, ಎಂದು ಕಲ್ಕತ್ತೆಯಲ್ಲಿ ಇತ್ತೀಚೆಗೆ ನಡೆದ ವೈಜ್ಞಾನಿಕ ಸಮ್ಮೇಳನಕ್ಕೆ ಬಂದಿದ್ದ ಇಬ್ಬರು ಅಮೇರಿಕದ ವಿಜ್ಞಾನ ಸಂಶೋಧಕರು ತಿಳಿಸಿದ್ದಾರೆ.

ಇವರು ಮುಂದುವರಿದು ಇವರಲ್ಲಿ ಸುಮಾರು ನಾಲ್ಕು ಕೋಟಿ ಜನರು ಕಣ್ಣಿನ ವ್ಯಾಧಿಯಿಂದ ಕೂಡಿದ್ದಾರೆ.

ವುಡ್ ಲ್ಯಾಂಡ್ಸ್

೧೫—೨—೫೨ ರಿಂದ ಅಮೋಘಪ್ರಾರಂಭ

ದಿನವೂ 3 ಪ್ರದರ್ಶನಗಳು

ಅಲ್‌ಬೇಲ

ಪಾತ್ರ:— ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ರಣಜಿತ್

೧೫—೨—೫೨ ರಿಂದ ಅಮೋಘ ೪ನೇ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆವಾರ ::—

ಪ್ರಕಾಶಕರು:—ಜೆ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು—ಹಿ. ಕಾ. ಸುಬ್ಬರಾವ್ ಮೋಹನ ಮುದ್ರಣಾಲಯ ಮೈಸೂರು

ಫೋನ್ ೫೭೪ (ಲಂ) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜೆ. ಎಲ್. ಸ್ವಾಮಿ

ಸಂಪುಟ ೨] ೨೦—೨—೧೯೫೨ನೇ ಬುಧವಾರ [ಸಂಚಿಕೆ ೧೪೯

ಅಕ್ಕಿ ಸರಪರಾಜನಲ್ಲಿ ಮಾರ್ಪಾಡು

ನಾಗಪುರದಲ್ಲಿ ವಿಮಾನಾಪಘಾತ

ಮಹಾ ಚುನಾವಣೆಗೆ ೨೨॥ ಕೋಟಿ ರೂ. ವೆಚ್ಚ

ಸ್ವತಂತ್ರ ಭಾರತದ (ಮೊಟ್ಟಮೊದಲನೆಯ ಮಹಾ ಚುನಾವಣೆಗೆ ಭಾರತವು ಇಪ್ಪತ್ತೆರಡೂವರೆ ಕೋಟಿ ರೂ. ಗಳ ವೆಚ್ಚ ಮಾಡಿದೆ.

ಈ ಮಹಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ಉಮೇದುವಾರರು ಈ ವಾರಾಂತ್ಯದ ವೇಳೆಗೆ ೧೨,೫೨,೨೮,೦೦೦ ರೂ. ಗಳನ್ನು ಚುನಾವಣಾ ಪ್ರಚಾರಕ್ಕಾಗಿ ವೆಚ್ಚ ಮಾಡಿರುವರೆಂದು ಅಂದಾಜು ಹಾಕಲಾಗಿದೆ. ರಾಜಕೀಯ ಪಕ್ಷಗಳು ತಮ್ಮ ಕಡೆಯಿಂದಾಗಿ ಮಾಡಿದ ವೆಚ್ಚವನ್ನು ಉಮೇದುವಾರರ ವೆಚ್ಚಕ್ಕೆ ಸೇರಿಸಲಾಗಿದೆ. ಮಹಾಚುನಾವಣೆಗಾಗಿ ಇಂಡಿಯಾ ಸರಕಾರಕ್ಕೆ ಆಗುವ ವೆಚ್ಚ ಹತ್ತು ಕೋಟಿ ರೂ. ಗಳು ಇದೀ ಚುನಾವಣೆಗೆ ಆಗುವ ವೆಚ್ಚ ೨೨,೫೨,೨೮,೦೦೦ ರೂಪಾಯಿಗಳು.

ಪಾರ್ಲಿಮೆಂಟಿನ ಚುನಾವಣೆಗೆ ಉಮೇದುವಾರರಾಗೂ ಮತ್ತು ಅವರರಾಜಕೀಯ ಪಕ್ಷಗಳಿಗೂ ೪,೭೫,೦೦,೦೦೦ ರೂ. ಗಳ ವೆಚ್ಚಮಾಡಿದ್ದಾರೆ.

ಪ್ರಾಂತೀಯ ಶಾಸನಸಭೆಗಳಿಗೆ ಆಗುತ್ತಿರುವ ವೆಚ್ಚ ೭೭, ೦೦,೦೦೦ ರೂ. ಗಳೆಂದು ಭಾವಿಸಲಾಗಿದೆ

ಪ್ರಾಂತೀಯ ಮತ್ತು ಶಾಸನಸಭೆಗಳ ರಾಜಕೀಯ ಪಕ್ಷಗಳಿಗೆ ೩,೧೫,೦೦,೦೦೦ ರೂಗಳಿಗಿಂತ ಅಧಿಕ ಹಣ ವೆಚ್ಚವಾಗಿದೆಯೆಂದು ಅಂದಾಜಾಗಿದೆ. ಇದರಲ್ಲಿ ಹೆಚ್ಚು ಹಣ ಪೋಸ್ಟರುಗಳು, ಸಾರ್ವಜನಿಕ ಸಭೆಗಳು ಮತ್ತು ಚುನಾವಣಾ ಕಛೇರಿಗಳಿಗೆ ವೆಚ್ಚವಾಗಿದೆ ನಿಯಮಾನುಸಾರ ಪ್ರತಿಯೊಬ್ಬ ಉಮೇದುವಾರನಿಗೂ ಆರು ಸಾವಿರಕ್ಕಿಂತ ಅಧಿಕ ಚುನಾವಣಾ ವೆಚ್ಚವಿಲ್ಲ.

ಎ. ಜೆ. ಜಾನ್ ತಿರುವಾಂಕೂರ್-ಅಸೆಂಬ್ಲಿ ಪಕ್ಷದ ನಾಯಕರು

ತಿರುವಾಂಕೂರಿನ ಮಾಜಿ ಹಣಕಾಸಿನ ಮಂತ್ರಿ ಶ್ರೀ ಎ. ಜೆ. ಜಾನ್‌ರವರು ಇಂದು ತಿರುವಾಂಕೂರು ಕೊಚಿನ್ ಶಾಸನಸಭೆ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆರಿಸಲ್ಪಟ್ಟಿದ್ದಾರೆ.

ಪ್ರವಾಸ ಮುಕ್ತಾಯ

ಮೈಸೂರು ಫೆ ೧೯

ದಕ್ಷಿಣ ಭಾರತ ಪ್ರವಾಸವನ್ನು ಮುಗಿಸಿಕೊಂಡು ಶ್ರೀಮನ್ಮಹಾರಾಜರು ನಿನ್ನೆ ಇದಿನ ರಾಜಧಾನಿಗೆ ಹಿಂತಿರುಗಿದರು.

ಆಪಾದನೆ ನಿರಾಧಾರ

ಮೈಸೂರಿನ ಈಗಿನ ಮಂತ್ರಿಮಂಡಲವು ಇನ್ನೂ ಅಧಿಕಾರದಲ್ಲಿ ಇರಬೇಕೆಂಬ ಉದ್ದೇಶದಿಂದ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಚುನಾವಣೆಯನ್ನು ಮುಂದಕ್ಕೆ ಹಾಕಲಾಗಿದೆಯೆಂದು ಹಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವದಂತಿ ಸತ್ಯಾಂಶದಿಂದ ದೂರವಾದ ಅಂಶವೆಂದು ಮೈಸೂರಿನ ನ್ಯಾಯಾಂಗ ಮತ್ತು ಕಾರ್ಮಿಕ ಶಾಖಾ ಸಚಿವರಾದ ಶ್ರೀ ಕೆ ಟಿ ಭಾಷ್ಯಂರವರು ನಿನ್ನೆ ಮಧ್ಯಾಹ್ನ ತಮ್ಮ ಛೇಂಬರ್ಸಿನಲ್ಲಿ ಏರ್ಪಡಿಸಿದ್ದ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

ನಿಮ್ನವರ್ಗ ಫೆಡರೇಷನ್ ಚಳುವಳಿ

ನಿಮ್ನವರ್ಗದವರಿಗಾಗಿ ಮೀಸಲಿರುವ ಸ್ಥಾನಗಳಿಗೆ ಚುನಾಯಿತರಾಗಿರುವ ವಿವಿಧ ಶಾಸನ ಸಭಾ ಸದಸ್ಯರ ಅಕ್ರಮ ಪ್ರಾತಿನಿಧ್ಯದ ವರ್ತನೆಯನ್ನು ನಿಮ್ನವರ್ಗದ ಜನತೆ ಖಂಡಿಸುವುದನ್ನು ಪ್ರದರ್ಶಿಸುವ ಸಲುವಾಗಿ ರಾಷ್ಟ್ರವ್ಯಾಪ್ತ ಜನತಾ ಚಳುವಳಿಯೊಂದನ್ನು ನಿಮ್ನವರ್ಗದ ಫೆಡರೇಷನ್ನು ಪರಿಶೀಲಿಸುತ್ತದೆ ಎಂದು ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ಎನ್. ರಾಜಭೋಜರು ತಿಳಿಸಿದ್ದಾರೆ

ಶ್ರೀ ರಾಜಭೋಜರು ಮುಂದುವರಿದು ಈ ಜನತಾ ಚಳುವಳಿ ಶ್ರೀಯಾವ ರೀತಿಯದಾಗಿರುವುದೆಂದು ಈಗಲೇ ಹೇಳಲು ಸಾಧ್ಯವಿಲ್ಲವೆಂದು ಹೇಳಿದರು.

ಮೌನವನ್ನಾಚರಿಸದಿರಲು ಶಿಕ್ಷೆ

ದಿವಂಗತ ಜಾರ್ಜರ ಅಂತ್ಯಕ್ರಿಯೆ ನಡೆದ ದಿನ ಲಂಡನ್ನಿನಲ್ಲಿ ಮಿ|| ಅಂಥೋಣಿ ಜಾರ್ಜ್ ಎಂಬುವವನು ೨ ನಿಮಿಷ ಮೌನವನ್ನಾಚರಿಸಲು ನಿರಾಕರಿಸಿದ್ದ 'ಅಪಮಾನಕರವಾದ ಪ್ರವರ್ತನೆ'ಗೆ ಒಂದು ಪೌಂಡು ಜುಲ್ಮಾನೆಯನ್ನು ವಿಧಿಸಲಾಗಿದೆ ಮೌನವನ್ನಾಚರಿಸದಿದ್ದುದಲ್ಲದೆ ಜನರು ಅವನ ಮೇಲೆ ಕೋಪದಿಂದ ಬೀಳಹೋಗಲು ಪೋಲೀಸರು ಅವನನ್ನು ರಕ್ಷಿಸಬೇಕಾಯಿತು.

ಮೂವರ ಮರಣ, ೧೪ ಜನರಿಗೆ ಗಾಯ

ಮದ್ರಾಸಿನಿಂದ ದೆಹಲಿಗೆ ಮೊನ್ನೆ ರಾತ್ರಿ ೧೧-೪೦ ಘಂಟೆಗೆ ಹೊರಟ ಡೆಕ್ಕನ್ ಏರ್‌ವೇಸ್ ವಿಮಾನವು ನಾಗಪುರಕ್ಕೆ ೨-೩೦ ಘಂಟೆಗೆ ಬಂದು ನಿಲ್ದಾಣದ ಬಳಿ ಇಳಿಯುತ್ತಿದ್ದಾಗ ಮುರಿದುಬಿದ್ದು ಮೂವರು ಮಡಿದು ೧೪ ಜನರಿಗೆ ಗಾಯಗಳಾಗಿ ಆಸ್ಪತ್ರೆಗೆ ಚಿಕಿತ್ಸೆಗೆ ಸಾಗಿಸಲ್ಪಟ್ಟರು. ವಿಮಾನದ ಚಾಲಕವರ್ಗದವರು ನಾಲ್ವರು ೧೩ ಜನ ಪ್ರಯಾಣಿಕರು ಸಂಚರಿಸುತ್ತಿದ್ದರು.

ವಿಮಾನಚಾಲಕ ಕ್ಯಾಪ್ಟನ್ ಶ್ರೀ ನಾಥುರ್, ಚಾಲಕವರ್ಗದ ಶ್ರೀ ಆರ್. ಎನ್. ಮೂರ್ತಿ ಮತ್ತು ತಿರುವಾಂಕೂರು ಕೊಚ್ಚಿನ್ನಿನ ಸಿವಿಲ್ ಸಪ್ಲೈಸ್ ಇಲಾಖೆಯ ಕಮಿಷನರ್ ಶ್ರೀ ಪಿ. ಕೆ. ಆರ್. ಮೆನನ್ ಮೃತರಾದವರುಗಳು.

ಪೃಥ್ವೀರಾಜ್ ಮತ್ತು ರಾಜಕಪೂರ್ ಅಭಿನಯಿಸಿದ ಚಿತ್ರಕ್ಕೆ ಬಹಿಷ್ಕಾರ

ಪಾಕಿಸ್ತಾನದಲ್ಲಿ ಶ್ರೀ ಪೃಥ್ವೀರಾಜ್ ಮತ್ತು ಶ್ರೀ ರಾಜಕಪೂರ್ ಅಭಿನಯಿಸಿರುವ ಚಿತ್ರಗಳ ಪ್ರದರ್ಶನಕ್ಕೆ ಬಹಿಷ್ಕಾರ ಹಾಕಲಾಗಿದೆಯೆಂದು ನಿನ್ನೆ ಪಾರ್ಲಿಮೆಂಟಿನಲ್ಲಿ ವೃಗಾರಿಕಾ ಸಚಿವ ಶ್ರೀ ಹರೇಕೃಷ್ಣ ಮೆಹತಾಬ್ ತಿಳಿಸಿದರು. ಪಾಕೀಸ್ಥಾನದಲ್ಲಿರುವ ಭಾರತದ ಹೈಕಮಿಷನರು ಈ ವಿಷಯವನ್ನು ಆ ಸರ್ಕಾರ ದೊಡನೆ ಪ್ರಸ್ತಾಪಿಸಿರುವರೆಂದೂ, ಶ್ರೀ ಹರೇಕೃಷ್ಣ ಮೆಹತಾಬ್ ಹೇಳಿದರು.

ಅತ್ಯುಗ್ರ ಕ್ಷಾಮ

ಇನ್ನು ೨-೩ ತಿಂಗಳೊಳಗಾಗಿ ಅಸ್ಸಾಂನಲ್ಲಿ ಅತ್ಯುಗ್ರವಾದ ಕ್ಷಾಮವು ತಲೆದೋರುವ ಭೀಕರ ಪರಿಸ್ಥಿತಿಯುಂಟಾಗಿದೆ ಎಂದು ಹೇಳಲಾಗಿದೆ

ಗಡಿನಾಡಿನ ಗಾಂಧಿಯವರ ಸ್ಥಿತಿ ಚಿಂತಾಜನಕ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರವರ ದೇಹಸ್ಥಿತಿಯು ಕೆಟ್ಟು ಚಿಂತಾಜನಕವಾಗಿದೆಯೆಂದು ಪಾಕೀಸ್ತಾನ ಪತ್ರಿಕೆ ಪ್ರಕಟಿಸಿದೆಯೆಂದು ವದಂತಿಯಾಗಿದೆ.

ಅಕ್ಕಿಯನ್ನು ಹೆಚ್ಚಾಗಿ ಉಪಯೋಗಿಸುವ ದಕ್ಷಿಣಭಾರತ ಮತ್ತು ಬಂಗಾಳ ಪ್ರಾಂತ್ಯಗಳಿಗೆ ಮಾತ್ರ ಅಕ್ಕಿಯನ್ನು ಸರಬರಾಜು ಮಾಡಿ ಇತರ ಪ್ರಾಂತ್ಯಗಳಿಗೆ ಸಂಪೂರ್ಣವಾಗಿ ನಿಲ್ಲಿಸಬೇಕು ಈ ಆಲ್ಯಕ್ರಮ ಕಠವವಾದಕೂಡದೆಂದು ಪ್ರಧಾನಿ ನೆಹರೂ ನಿನ್ನೆ ಆಹಾರ ಸಮ್ಮೇಳನದಲ್ಲಿ ಮಾತನಾಡುತ್ತಾ ಹೇಳಿದರು.

ವಿಶ್ವದ ಯಾವನೆಯಲ್ಲಿ ಅಕ್ಕಿ ದೊರೆತರೂ ಭಾರತವು ಕೊಳ್ಳಲು ಸಿದ್ಧವಿದೆಯೆಂದು ಆಹಾರ ಮಂತ್ರಿ ಶ್ರೀ ಮುನ್ಷಿಯವರು ಹೇಳಿದರು

ಸರಕಾರಿ ಸುದ್ದಿಗಳು

ಬೆಂಗಳೂರು ಫೆ ೧೯

ಚಳ್ಳಕೆರೆ ಸಬ್‌ಡಿವಿಜನ್ ಅಸಿಸ್ಟೆಂಟ್ ಎಂಜನಿಯರಾದ ಶ್ರೀ ಬಿ. ಎಂ. ನಂದಿಬಸಪ್ಪನವರನ್ನು ದಾವಣಗೆರೆ ಪ್ರಾಂತಕ್ಕೆ

ಚಿತ್ರದುರ್ಗ ಡಿವಿಜನ್ನಿನ ಎಗ್ಸಿಕ್ಯೂಟಿವ್ ಎಂಜನಿಯರ್ ಆದ ಶ್ರೀ ಕೆ ವಿ ಸಿದ್ದಬಸವಯ್ಯನವರನ್ನು ದಾವಣಗೆರೆ ಸಬ್ ಡಿವಿಜನ್‌ಗೆ,

ಕೃಷ್ಣರಾಜ ನಗರ ಡಿವಿಜನ್ನಿಂದ ಶ್ರೀ ಬಿ ಎನ್ ಶ್ರೀ ಹರ್ಷನ್‌ರವರನ್ನು ಚಿತ್ರದುರ್ಗ ಡಿವಿಜನ್‌ಗೆ ವರ್ಗಾಯಿಸಲಾಗಿದೆ.

ಶ್ರೀ ಕೆ. ಜಿ. ಎಫ್ ಭಾಸ್ಕರರವರನ್ನು ಶ್ರೀ ಜಯಚಾಮರಾಜೇಂದ್ರ ಆಕ್ಯುಪೇಷನಲ್ ಇನ್‌ಸ್ಟಿಟ್ಯೂಟ್ ಎಲೆಕ್ಟ್ರಿಕಲ್ ಎಂಜನಿಯರ್ ಶಾಖೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟರನ್ನಾಗಿ ನೇಮಿಸಲಾಗಿದೆ

ರೆವಿನ್ಯೂ ಮತ್ತು ಜನರಲ್ ಸೆಕ್ರೆಟೆರಿಯೆಟ್‌ನ ಸೂಪರಿಂಟೆಂಡೆಂಟರಾದ ಶ್ರೀ ಟಿ ವಿ. ಸಂಪಂಗಿರಾಮಯ್ಯನವರನ್ನು ಅಸಿಸ್ಟೆಂಟ್ ಸೆಕ್ರೆಟರಿಗಳನ್ನಾಗಿ ನೇಮಿಸಲಾಗಿದೆ

ಬ್ಯೂರೊ ಆಫ್ ಎಕನಾಮಿಕ್ಸ್ ರಾಲಜಿ ಸೂಪರಿಂಟೆಂಡೆಂಟರಾದ ಶ್ರೀ ಎಂ ರಾಮಚಂದ್ರರಾವ್, ಪಶುವೈದ್ಯ ಶಾಖೆ ಅಸಿಸ್ಟೆಂಟ್ ಡೈರೆಕ್ಟರಾದ ಶ್ರೀ ಪಿ. ಕೆ ರಾಮರಾವ್‌ರವರಿಗೆ ಕೆಲಸದಿಂದ ನಿವೃತ್ತರಾಗುವ ಮುನ್ನ ಅನುಕೂಲ ಕಾಲ ರಜಾ ಕೊಡಲಾಗಿದೆ

ಟಿ. ಕೆ. ಕೃಷ್ಣಮೂರ್ತಿ

ರೇಷ್ಮೆ ಇಲಾಖೆ ಅಸಿಸ್ಟೆಂಟ್ ಡೈರೆಕ್ಟರಾದ ಶ್ರೀ ಟಿ ಕೆ. ಕೃಷ್ಣಮೂರ್ತಿಯವರನ್ನು ಚನ್ನಪಟ್ಟಣ ಸಿಲ್ಕ್ ಫಾರಂ ಅಧಿಕಾರಿಗಳನ್ನಾಗಿ ನೇಮಿಸಿ ಅವರ ಸ್ಥಳಕ್ಕೆ ಸೀನಿಯರ್ ಸೆರಿಕಲ್ಚರಲ್ ಇನ್ಸ್‌ಪೆಕ್ಟರಾದ ಶ್ರೀ ಎಂ ಮುರುಡಪ್ಪನವರನ್ನು ನೇಮಿಸಲಾಗಿದೆ.

ಪತ್ರವ್ಯವಹಾರ

ಯಾರು ಶಿಕ್ಷಾರ್ಹರು?

ಸ್ವಾಮಿ,—

ಜಾರ್ಜ್ ದೊರೆಗಳ ಅಂತ್ಯಕ್ರಿಯೆ ನಡೆದ ದಿನ ಭಾರತಾದ್ಯಂತ ಶೋಕದಿನವನ್ನಾಗಿ ಘೋಷಿಸಿ, ಶಾಲಾ ಕಾಲೇಜು ಕೈಗಾರಿಕಾ ಸಂಸ್ಥೆಗಳಿಗೆ ಪೂರ್ತಾ ರಜಾ, ಕಛೇರಿಗಳಿಗೆ ಮಧ್ಯಾಹ್ನದ ರಜಾ ಎಂದು ಕೇಂದ್ರ ಸರ್ಕಾರವು ಪ್ರಕಟಿಸಿತ್ತು. ಆ ದಿನ ಬೆಳಗ್ಗೆ ೧೧-೪೫ರ ವೇಳೆಯಲ್ಲಿ ಭಾರತಾದ್ಯಂತ ಪ್ರಮುಖ ಪಟ್ಟಣಗಳಲ್ಲಿ ಚರ್ಚ್‌ಗಳಲ್ಲಿ ವಿಶೇಷ ಪ್ರಾರ್ಥನೆ ನಡೆದು ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು.

ಅದಿನ ಲಂಡನ್ನಿನಲ್ಲಿ ಟ್ರಿವರ್ ಪ್ರಿಡೆಯಾದ ಸಿಂಫೋನಿ ಜಾರ್ಜ್ ಎಂಬುವವನು ಎರಡು ನಿಮಿಷ ಮೌನವನ್ನಾಚರಿಸಲು ನಿರಾಕರಿಸಿದಕ್ಕೆ ಅವನ ಅವಮಾನಕರವಾದ ಪ್ರವರ್ತಿಗೆ ಒಂದು ಪೌಂಡು ಜುಲ್ಮಾನೆಯನ್ನು ವಿಧಿಸಲಾಯಿತೆಂದು ಮದಿಯಾಗಿದೆ.

ಹೀಗಿರುವಲ್ಲಿ ಮೈಸೂರಿನಲ್ಲಿರುವ ಸೇಂಟ್ ಫಿಲೋಮಿನಾ ಹೈಸ್ಕೂಲು ಮತ್ತು ಮಿಡಲ್ ಸ್ಕೂಲುಗಳಿಗೆ ಪೂರ್ತಾ ರಜಾ ಕೊಡದೆ ಬೆಳಗ್ಗೆ ತರಗತಿಗಳನ್ನು ನಡೆಸಿದರು. ಇದಕ್ಕೆ ಕಾರಣವೇನು? ಒಂದೆಡೆ ಸರ್ಕಾರ ಅಪ್ಪಣೆ ಉಲ್ಲಂಘನೆ ಮತ್ತೊಂದೆಡೆ ದಿವಂಗತ ಜಾರ್ಜರಿಗೆ ಗೌರವತೋರಿಸಲು ನಿರಾಕರಣೆಯಾದ ಅಪರಾಧವನ್ನವರೆಂದಕ್ಕೆ ಹೊಣೆಯಾರು? ಸರ್ಕಾರದವರು ಈ ವಿಷಯದಲ್ಲಿ ತಕ್ಕ ತನಿಖೆಕ್ರಮ ನಡೆಯಿಸುವರೆಂದು ನಂಬಿದೆ.

ಪ್ರಜಾಹಿತೈಷಿ.

ಆಹಾರ ಶೇಖರಣೆ ತೃಪ್ತಿಕರವಾಗಿದೆ

ಮದ್ರಾಸಿನಲ್ಲಿ ಈಗ ಆಹಾರದ ಶೇಖರಣೆ ತೃಪ್ತಿಕರವಾಗಿದ್ದು ಅಲ್ಲಿನ ಉಗ್ರಾಣದಲ್ಲಿ ೩,೧೪,೦೦೦ ಟನ್ ಆಹಾರ ಗ್ರಾಸವಿದೆ. ಈಗ ಅಲ್ಲಿನ ಆಹಾರ ಪರಿಸ್ಥಿತಿ ತೃಪ್ತಿಕರವಾಗಿದೆ ಎಂದು ಪಾರ್ಲಿಮೆಂಟಿನಲ್ಲಿ ಆಹಾರ ಶಾಖಾ ಸಚಿವ ಶ್ರೀ ಕೆ. ಎಂ. ಮುನ್ಷಿ ತಿಳಿಸಿದ್ದಾರೆ.

‡ ಬ್ರಿಟನ್ನಿನ ರಾಣಿ ಮಾತೆಯವರು ಭಾರತದ ಪಾರ್ಲಿಮೆಂಟಿನ ಅಧ್ಯಕ್ಷರಿಗೆ ಪತ್ರ ಬರೆದು ದಿವಂಗತ ಜಾರ್ಜರವರ ಬಗ್ಗೆ ಪಾರ್ಲಿಮೆಂಟ್ ಮಾಡಿದ ಅನುತಾಪ ನಿರ್ಣಯಕ್ಕಾಗಿ ಪಾರ್ಲಿಮೆಂಟ್ ಮುಂದು ಮಂಡಿಸಿದ್ದಕ್ಕಾಗಿ ತಮ್ಮ ಕೃತಜ್ಞತೆ ವ್ಯಕ್ತಪಡಿಸಿರುವರು.

ದೆಹಲಿಗೆ ಆಹಾರ ಶಾಖೆ ಅಧಿಕಾರಿಗಳು

ಬೆಂಗಳೂರು ಫೆ ೧೯

ಇಂದಿನಿಂದ ದೆಹಲಿಯಲ್ಲಿ ನಡೆಯುವ ಆಹಾರ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಲು ಸಂಸ್ಥಾನದ ಆಹಾರ ಇಲಾಖೆ ಡೈರೆಕ್ಟರ್ ಶ್ರೀ ಎಚ್ ಮಾಣಿಕರಾವ್ ಕಾರ್ಯದರ್ಶಿ ಶ್ರೀ ಎನ್ ಪುಟ್ಟರಂಗಸ್ವಾಮಿಯವರು ನಿನ್ನೆ ಪ್ರಾತಃಕಾಲ ದೆಹಲಿಗೆ ಪ್ರಯಾಣ ಮಾಡಿದರು.

ಮೊದಲಿನ ಕಾರ್ಯಕ್ರಮದಂತೆ ದೆಹಲಿಗೆ ತೆರಳಬೇಕಾಗಿದ್ದ ಸಚಿವ ಶ್ರೀ ಟಿ ಮರಿಯಪ್ಪನವರು ಕಾರಣಾಂತರದಿಂದ ಹೋಗಲಿಲ್ಲ.

ತಿರುವಾಂಕೂರಿಗೆ ಸಂಸ್ಥಾನ ಶಾಖೆ ಕಾರ್ಯದರ್ಶಿ

ತಿರುವಾಂಕೂರ್-ಕೊಚ್ಚಿನ್ನಿನಲ್ಲಿ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಲು ಸಂಸ್ಥಾನಶಾಖೆ ಸಹಕಾರ್ಯದರ್ಶಿ ಶ್ರೀ ಎನ್. ಎಂ. ಬಸಪ್ಪನವರು ಬಂದಿದ್ದಾರೆ.

ಶಾಸಗಿಯಾಗಿ ಮುಂದೈಗೆ ತೆರಳಿದ್ದ ರಾಜ ಪ್ರಮುಖರು ಸಹ ಹಿಂತಿರುಗಿದರು.

ಹೈದರಾಬಾದಿನಿಂದ ಪಾಠ ಕಲಿಯಿರಿ

ಬೆಂಗಳೂರು ಫೆ. ೧೮

ರಾಜಕೀಯ ಜಾಗ್ರತಿಯಲ್ಲಿ ಹಿಂದೆ ಬಿದ್ದಿರುವ ಹೈದರಾಬಾದ್ ಸಂಸ್ಥಾನದಲ್ಲಿ ನಾಡುಕರ ಚುನಾವಣೆಯು ಒಮ್ಮತದಿಂದ ನಡೆದು ಅದು ಮೈಸೂರಿಗೆ ಪಾಠ ಕಲಿಸುವಂತಿದೆಯೆಂದೂ, ಹೈದರಾಬಾದಿನ ಉದಾಹರಣೆಯನ್ನು ಮೈಸೂರು ಅನುಸರಿಸಬೇಕೆಂದೂ, ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಈ ದಿನ ರಾತ್ರಿ ಪತ್ರಿಕೋದ್ಯೋಗಿಗಳಿಗೆ 'ಕಿನಡ್ಡಿ' ಭವನದಲ್ಲಿ ಹೇಳಿಕೆ ಇತ್ತಿದ್ದಾರೆ.

೧೦೦ ಭಾವಿ ತೆಗೆಸುವ ಯೋಜನೆ

ಅಧಿಕ ಆಹಾರ ಬೆಳೆ ಯೋಜನೆಗೆ ಅನುಗುಣವಾಗಿ ಮದರಾಸಿನ ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ೮ ಲಕ್ಷ ರೂ ವೆಚ್ಚದಲ್ಲಿ ೧೦೦ ಭಾವಿಗಳನ್ನು ತೆಗೆಸಬೇಕೆಂದು ನಿರ್ಧರಿಸಲಾಗಿದ್ದು ಈಗ ಅಲ್ಲಿ ೬೧ ಭಾವಿಗಳನ್ನು ತೆಗೆದು ೪೦೦೦ ಎಕರೆ ಜಮೀನನ್ನು ಸಾಗುವಳಿಗೆ ತರಲಾಗಿದೆ.

ದಸ್ತಗಿರಿ

ಮೈಸೂರು ಫೆ ೧೯

ಮೈಸೂರು ತಾ|| ಹಿನಕಲ್ಲು ಗ್ರಾಮದಲ್ಲಿ ಸಂಜಯ್ಯ ಎಂಬುವವರ ಹಸುಗಳು ಶ್ರೀ ಮಾದಯ್ಯ ಎಂಬುವವರ ಹೊಲದಲ್ಲಿ ಮೇಯುತ್ತಿದ್ದುವೆಂದು ಮಾದಯ್ಯನವರ ಮಕ್ಕಳಾದ ಶ್ರೀ ಪುಟ್ಟಬಸವಯ್ಯ, ಸುಬ್ಬಯ್ಯನವರುಗಳು ಮತ್ತು ಸಂಜಯ್ಯನಿಗೂ ಮಾತುಕತೆ ನಡೆದು ಸಂಜಯ್ಯನು ಚಾಕುವಿನಿಂದ ಬಸವಯ್ಯ ಸುಬ್ಬಯ್ಯನವರನ್ನು ಇರಿದು ಗಾಯಪಡಿಸಿದನೆಂದೂ ತಾಲ್ಲೂಕು ಪೋಲೀಸಿನವರು ಸಂಜಯ್ಯನನ್ನು ದಸ್ತಗಿರಿ ಮಾಡಿರುವರು. ಬಸವಯ್ಯ, ಸುಬ್ಬಯ್ಯ ಇಬ್ಬರೂ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಸತ್ಕಾರಕೂಟಗಳು ಕೂಡದು

ಮಹಾ ಚುನಾವಣೆಗಳಲ್ಲಿ ಜಯಶೀಲರಾದ ಕಾಂಗ್ರೆಸ್ಸಿಗರಿಗೆ ಸತ್ಕಾರಕೂಟಗಳನ್ನು ನಡೆಸಕೂಡದೆಂದು ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಡಿ ಜೆ ಬಿಂದು ರವರು ಮನವಿಮಾಡಿಕೊಂಡಿರುವರು.

ಶಿಸ್ತು ಸ್ವಾಂತ ದೃಷ್ಟಿಯಿಂದಲೂ ಮತ್ತು ಶೀಲವನ್ನು ಕಾಪಾಡುವ ದೃಷ್ಟಿಯಿಂದಲೂ ಈ ಸತ್ಕಾರ ಕೂಟಗಳನ್ನು ತಡೆಗಟ್ಟಬೇಕೆಂದು ಜಯಶೀಲರಾದ ಕಾಂಗ್ರೆಸ್ ಸದಸ್ಯರನ್ನೂ ಕೋರಿರುವರು.

ಲಿಸ್ಟರ್ ಎಕ್ಲಿಪ್ಸ್ ಎಂಬ ನೂತನ ಏಣಿ



ಬ್ರಿಟನ್ನಿನಲ್ಲಿ ನಡೆದ ಕೈಗಾರಿಕಾ ವಸ್ತುಪ್ರದರ್ಶನದಲ್ಲಿ ವಿದ್ಯುತ್ ಸಲಕರಣೆಯ ಸಹಾಯದಿಂದ ಎತ್ತರಿಸಬಹುದಾದ ೨೪ ಅಡಿ ಎತ್ತರದ 'ಲಿಸ್ಟರ್ ಎಕ್ಲಿಪ್ಸ್' ಎಂಬ ಮೇಲ್ಗಂಡ ಏಣಿಯನ್ನು ಪ್ರದರ್ಶಿಸಲಾಗಿತ್ತು. ಇದರ ಮೇಲ್ಭಾಗದಲ್ಲಿರುವ ಸುತ್ತಲೂ ತಿರುಗುವಂತಹ ಮಂಟಪದಲ್ಲಿ ಇಬ್ಬರು ಧಾರಾಳವಾಗಿ ನಿಂತು ಕೆಲಸ ಮಾಡಬಹುದು.

ಪ್ರಭಾ ಅಮೋಘ ಪ್ರಾರಂಭ 22-2-52 ರಿಂದ ದಿನವೂ 3 ಆಟಗಳು

ಬಾಂಬೆ ಟಾಕೀಸ್‌ರವರ ಅತ್ಯುತ್ತಮ ರೋಮಾಂಚಕ ಹಿಂದಿ ಚಿತ್ರ

* ಮಹಲ್ *

ಪಾತ್ರ :- ಅಶೋಕ್ ಕುಮಾರ್, ಮಧುಬಾಲಾ, ವಿಜಯಲಕ್ಷ್ಮಿ, ಮತ್ತು ಕನೂರಾಯ್

ನ್ಯೂ ಅಪೇರ

೧೬—೨—೫೨ ರಿಂದ

ದಿಗಂಬರ ಸ್ವಾಮಿಯಾರ್

ಪಾತ್ರ :- ನಂಬಿಯಾರ್, ಬಾಲಸುಬ್ರಮಣ್ಯಂ, ನರಸಿಂಹಭಾರತಿ, ದ್ರೌಪದಿ ಲಲಿತ-ಪದ್ಮಿನಿ

೨೨—೨—೫೨ ರಿಂದ

"ಶಾಂತಿ" (ತೆಲುಗು)

ಪ್ರಕಾಶಕರು :—ಜಿ ಎಲ್. ಸ್ವಾಮಿ ಟೌನ್ ಹಾಲ್ ರೋ ಮೈಸೂರು ಮುದ್ರಕರು—ಹಿ. ಕೆ. ಸುಬ್ಬರಾವ್ ಮೋಹನ ಮುದ್ರಣಾಲಯ ಮೈಸೂರು.

ಫೋನ್ ೫೭೪ (ರಿಂಗ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೧—೨—೧೯೫೨ನೇ ಗುರುವಾರ [ಸಂಚಿಕೆ ೧೫೦

ಅಕ್ಕಿ ಉಪಯೋಗಿಸುವ ಪ್ರಾಂತ್ಯಗಳಿಗೆ ಹೆಚ್ಚಿಗೆ ಸರಬರಾಜು

ಯಾವ ಪ್ರಾಂತ್ಯದಲ್ಲೂ ೬ ಔನ್ಸಿಗಿಂತ ಹೆಚ್ಚಿಗೆ ಅಕ್ಕಿ ಕೊಡಕೂಡದು

ಅಕ್ಕಿಯನ್ನು ಮುಖ್ಯ ಆಹಾರವಾಗಿ ಉಪಯೋಗಿಸುವ ಪ್ರಾಂತ್ಯಗಳಿಗೆ ಅಕ್ಕಿ ಸರಬರಾಜನ್ನು ಹೆಚ್ಚಿಸಬೇಕೆಂದು ದೆಹಲಿಯ ನಡೆದ ಆಹಾರಮಂತ್ರಿಗಳ ಸಮ್ಮೇಳನವು ನಿರ್ಧರಿಸಿದೆ.

ಈ ನಿರ್ಧಾರದ ಪ್ರಕಾರ (೧) ಅಕ್ಕಿಯನ್ನು ಮುಖ್ಯವಾಗಿ ಉಪಯೋಗಿಸುವ ಪ್ರಾಂತ್ಯಗಳಲ್ಲಿ ದಿನಕ್ಕೆ ೬ ಔನ್ಸುಗಳಿಗಿಂತ ಹೆಚ್ಚಿಗೆ ಅಕ್ಕಿ ಕೊಡಕೂಡದು.

(೨) ಇತರ ಆಹಾರಗಳೊಡನೆ ಅಕ್ಕಿ ಉಪಯೋಗಿಸುವ ಪ್ರಾಂತ್ಯಗಳಲ್ಲಿ ೧ ಔನ್ಸಿಗಿಂತ ಹೆಚ್ಚಾಗಿ ಕೊಡಕೂಡದು.

(೩) ಹೋಟೇಲುಗಳಲ್ಲಿ ಪಾಯಂ ಊಟ ಮಾಡುವವರಿರುವ ಕಡೆ ವಿನಹ ಇತರಕಡೆ ಅಕ್ಕಿ ಸರಬರಾಜು ನಿಲ್ಲಿಸಬೇಕು ಎಂದು ತೀರ್ಮಾನವಾಗಿದೆ.

ಉತ್ತರ ಪ್ರದೇಶ, ದೆಹಲಿ ಮತ್ತು ಪಂಜಾಬಿನಲ್ಲಿ ಅಕ್ಕಿ ಪಡಿತರವನ್ನು ಕಡಮೆ ಮಾಡಲು ಆಯಾ ಸರ್ಕಾರದ ಆಹಾರಸಚಿವರು ಸಮ್ಮತಿಸಿರುವರು.

ದಕ್ಷಿಣ ಭಾರತ ಪ್ರಾಂತ್ಯಗಳಿಗೆ ಹೆಚ್ಚಿನ ಅಕ್ಕಿ ಕೊಡಬೇಕೆಂದು ತಿರುವಾಂಕೂರು ಕೊಚ್ಚಿನ್, ಮದ್ರಾಸ್ ಮಂತ್ರಿಗಳು ತಿಳಿಸಿದರು. ಉತ್ತರದಕ್ಷಿಣವೆಂಬ ಬೇಧ ಮಾಡಲಾಗುವುದಿಲ್ಲವೆಂದು ಆದರೆ ಅಕ್ಕಪಕ್ಕ ಅಕ್ಕಿ ಸರಬರಾಜು ಮಾಡಲಾಗುವುದೆಂದೂ, ಈಗಿನ ಪರಿಸ್ಥಿತಿಯಲ್ಲಿ ತನ್ನಲ್ಲಿರುವ ಪ್ರಮಾಣವನ್ನು ಅರಿತುಕೊಳ್ಳದೆ ಅಕ್ಕಿ ಪಡಿತರವನ್ನು ಹೆಚ್ಚಿಸುವುದು ಕ್ಷೇಮವಲ್ಲವೆಂದು ಶ್ರೀ ಮುನ್ಷಿಯವರು ಹೇಳಿರುವರು.

ರಾಯಲಸೀಮೆಗೆ ಸರ್ವ ಸಹಾಯ ನೀಡಲಾಗುವುದು

ಮದರಾಸಿನ ರಾಯಲ ಸೀಮೆಯಲ್ಲಿ ಮಳೆ ಅಭಾವದಿಂದ ಕ್ಷಾಮವು ತಲೆದೋರುವ ಪರಿಸ್ಥಿತಿಯಿದ್ದು ಅಲ್ಲಿನ ಜನರಿಗೆ ಸರ್ವ ಸೌಲಭ್ಯವನ್ನು ನೀಡಲು ಮದ್ರಾಸ್ ಸಿದ್ಧವಿದೆ. ಮದ್ರಾಸ್ ಸರ್ಕಾರವು ಇಲ್ಲಿಗೆ ಬೇಕಾದ ಹಣವನ್ನು ಒದಗಿಸಲು ಅಲ್ಲಿನ ಕಲೆಕ್ಟರುಗಳಿಗೆ ಹಣವನ್ನು ಕೊಟ್ಟಿದೆ. ಎಂದು ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿರಾಜಾರವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುವರು.

೧೨ ಸಾವಿರ ಟನ್ ಸಕ್ಕರೆ ಮಾರುಕಟ್ಟೆಗೆ

ಕೇಂದ್ರ ಸರ್ಕಾರವು ಈ ಮಾಹೆ ದೇಶದ ವಿವಿಧ ಭಾಗದ ಮಾರುಕಟ್ಟೆಗಳಿಗೆ ರಹದಾರಿಯಿಲ್ಲದೆ ವ್ಯಾಪಾರಕ್ಕೆ ಒಟ್ಟು ೧೨ ಸಾವಿರ ಟನ್ ಸಕ್ಕರೆಯನ್ನು ಕೊಟ್ಟಿದೆಯೆಂದು ಪ್ರಕಟಣೆ ಹೊರಬಿದ್ದಿದೆ.

ಅಕ್ಷರ ಕಲಿತವರಿಗೆ ಜೈಲುವಾಸ ಕಡಮೆ

ಹೈದ್ರಾಬಾದ್ ಸರ್ಕಾರವು ತನ್ನ ದೇಶದ ಜೈಲಿನಲ್ಲಿರುವ ಕೈದಿಗಳು ಅಕ್ಷರ ಕಲಿಯಲು ವಿಶೇಷ ಸೌಲಭ್ಯ ಏರ್ಪಡಿಸಿದೆ. ಅಕ್ಷರ ಕಲಿತು ವಿದ್ಯಾವಂತರಾಗಿ ಒಳ್ಳೆ ನಡತೆಯನ್ನು ವ್ಯಕ್ತಪಡಿಸುವ ಕೈದಿಗಳು ಸಜಾದಲ್ಲಿ ಹತ್ತುದಿನ ಕಡಿಮೆಮಾಡಲಾಗುವುದು ಎಂದು ತಿಳಿಸಿದೆ.

ವಿದ್ಯಾವಂತರಾದಂತಹ ಕೈದಿಗಳು ಸೂಕ್ತ ರಿಯಾಯಿತಿ ಪಡೆಯುವರು ಎಂದು ಆ ಸರ್ಕಾರ ತಿಳಿಸಿದೆ.

೯೯ ಕೋಟಿ ರೂ. ಉಪಬೇಡಿಕೆಗೆ ಮಂಜೂರು

ಪಾರ್ಲಿಮೆಂಟಿನಲ್ಲಿ ನಿನ್ನೆ ಪ್ರಸಕ್ತ ಸಾಲಿಗೆ ೮೯ ಕೋಟಿ ೨೪ ಲಕ್ಷ ರೂ. ಗಳ ಉಪಬೇಡಿಕೆಗೆ ಮಂಜೂರಾತಿ ದೊರೆಯಿತು. ಈ ಬೇಡಿಕೆಯ ವೆಚ್ಚದಲ್ಲಿ ಅಮೆರಿಕವು ಭಾರತಕ್ಕೆ ಆಹಾರ ಧಾನ್ಯರೂಪದಲ್ಲಿ ನೀಡಿದ್ದ ೬೯ ಕೋಟಿ ರೂ. ಸಾಲದ ಮೊಬಲಗು ಇದ್ದು ಅದನ್ನು ಅಭಿವೃದ್ಧಿ ಯೋಜನೆಗಾಗಿ ವಿನಿಯೋಗಿಸಲಾಗುವುದು.

ಪಾರ್ಲಿಮೆಂಟು ಇದಲ್ಲದೆ ರೈಲ್ವೆಯ ೬½ ಕೋಟಿ ರೂನ ಉಪಬೇಡಿಕೆಗೆ ಮಂಜೂರ್ ನೀಡಿತು.

ಚಲನಚಿತ್ರೋತ್ಸವ ತೃಪ್ತಿಕರವಾಗಿತ್ತು

ಭಾರತಕ್ಕೆ ರಷ್ಯದ ಪರವಾಗಿ ಚಲನಚಿತ್ರೋತ್ಸವದಲ್ಲಿ ಭಾಗವಹಿಸಲು ಬಂದಿರುವ ನಿಯೋಗದ ನಾಯಕರು ಭಾರತದಲ್ಲಿ ಏರ್ಪಡಿಸಿದ್ದ ಚಲನಚಿತ್ರೋತ್ಸವವು ತೃಪ್ತಿಕರವಾಗಿತ್ತು ಎಂದು ತಿಳಿಸಿರುವರು.

‡ ಪಾರ್ಲಿಮೆಂಟಿನಲ್ಲಿ ನಿನ್ನೆ ಸುಮಾರು ೫-೬೮ ಕೋಟಿ ರೂಗಳು ೪ ಉಪಬೇಡಿಕೆಗಳಿಗೆ ಮಂಜೂರ್ಮಾಡಿದೆ.

ಗಾಂಧಿ ನಿಧಿಯಿಂದ ೮ ಲಕ್ಷ ರೂ. ವೆಚ್ಚ

ಮಹಾತ್ಮ ಗಾಂಧಿಯವರ ಸ್ಮಾರಕ ನಿಧಿಯಿಂದ ೧೯೫೨ನೇ ವರ್ಷದ ನಾನಾ ಯೋಜನೆಗಳ ವೆಚ್ಚಕ್ಕಾಗಿ ೮ ಲಕ್ಷ ರೂಪಾಯಿಗಳ ಮಂಜೂರ್ಮಾಡಲಾಗಿದೆ.

ಶ್ರೀ ವಿ. ಪಿ. ಮೆನನ್ ಬೆಂಗಳೂರಿಗೆ

ಕಳೆದ ೩ ತಿಂಗಳಿಂದಲೂ, ಆರ್ಥಿಕ ಕಮಿಷನ್ನಿನ ಸದಸ್ಯರಾಗಿದ್ದ ಮಾಜಿ ಸಂಸ್ಥಾನ ಶಾಖಾ ಕಾರ್ಯದರ್ಶಿ ಶ್ರೀ ವಿ. ಪಿ ಮೆನನ್‌ರವರು ತಮ್ಮ ಅಧಿಕಾರವನ್ನು ಶ್ರೀ ಎ. ಎಲ್. ಮೆಹ್ತಾರವರಿಗೆ ಒಪ್ಪಿಸಿರುವರು. ಶ್ರೀ ವಿ. ಪಿ. ಮೆನನ್‌ರವರು ಬೆಂಗಳೂರಿಗೆ ಹಿಂತಿರುಗಿ ಇಲ್ಲಿಯೇ ನೆಲಸಿ ತಮ್ಮ ವಿರಾಮ ಕಾಲವನ್ನು ಕಳೆಯುವರೆಂದು ಹೇಳಲಾಗಿದೆ.

ಒಪ್ಪಂದ ಮುಂದುವರಿಯಿತು

ರಷ್ಯಾಕಕ್ಕೂ ಮತ್ತು ಈಜಿಪ್ಟಿಗೂ ನಡೆಯಬೇಕಾಗಿದ್ದ ವಾಣಿಜ್ಯ ಒಪ್ಪಂದದ ಮಾತುಕಥೆಗಳನ್ನು ಅನಿರ್ದಿಷ್ಟ ಕಾಲದವರೆಗೆ ಮುಂದುವರಿಸಲಾಗಿದೆ

ಡಾ|| ಗ್ರಹಾಂ ಭಾರತಕ್ಕೆ

ಪಾಕೀಸ್ತಾನಕ್ಕೆ ಹೋಗುವ ಮುನ್ನ ಡಾ|| ಗ್ರಹಾಂರವರು ಭಾರತಕ್ಕೆ ಈ ತಿಂಗಳ ಅಂತ್ಯದಲ್ಲಿ ಬರುವರೆಂದು ಹೇಳಲಾಗಿದೆ. ಪಾಕೀಸ್ತಾನಕ್ಕೆ ಮುಂದಿನ ತಿಂಗಳು ಮೊದಲನೇ ವಾರದಲ್ಲಿ ಹೋಗುವ ನಿರೀಕ್ಷೆಯಿದೆ.

ಕಳೆದ ವರ್ಷ ಸಂಧಾನಕ್ಕೆ ಬಂದಿದ್ದಾಗ ಅವರು ಮೊದಲು ಪಾಕೀಸ್ತಾನಕ್ಕೆ ಭೇಟಿಯಿತ್ತಿದ್ದರು.

೨ ಗಂಟೆ ೪೫ ನಿಮಿಷದಲ್ಲಿ ೧೩೦೦ ಮೈಲಿ ಪ್ರಯಾಣ

ಬ್ರಿಟಿಷ್ ವಿಮಾನದಳದ ಜೆಟ್ ಬಾಂಬರು ಒಂದು ಲಂಡನ್ನಿನಿಂದ ೧೩೦೦ ಮೈಲಿ ದೂರದ ಟ್ರಿಪೋಲಿಗೆ ೨ ಗಂಟೆ ೪೫ ನಿಮಿಷಗಳಲ್ಲಿ ಯಾನಮಾಡಿ ಹೊಸ ರಿಕಾರ್ಡ್ ಮಾಡಿದೆ. ೧೯೪೯ರಲ್ಲಿ ಒಂದು ವಿಮಾನವು ೩ ಗಂಟೆ ೨೩ ನಿಮಿಷಗಳ ಕಾಲವನ್ನು ತೆಗೆದುಕೊಂಡಿತ್ತು.

ಸರ್ಪ ದೇವರ ಭಕ್ತನ ಬಂಧನ

ಒಬ್ಬ ಮುದುಕಿ ಒಬ್ಬ ಹುಡುಗ ಮತ್ತು ಒಬ್ಬ ದಾರಿಹೋಕರಾದ ಮೂವರನ್ನು ಬರ್ದ್ವಾನ್ನಿನಲ್ಲಿ ತೀವ್ರಗಾಯಗಳಿಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ ಮತ್ತು ಸರ್ಪದೇವತೆಯ ಭಕ್ತನೊಬ್ಬನನ್ನು ಪೋಲೀಸ್ ಲಾಕಪ್ಪಿಗೆ ಸಾಗಿಸಲಾಗಿದೆ,

ಸರ್ಪ ದೇವತೆಯ ಭಕ್ತನು ಹುಡುಗನೊಬ್ಬನನ್ನು ಸರ್ಪ ದೇವತೆಗೆ ಬಲಿಕೊಡುವ ಸಮಯದಲ್ಲಿ ಮುದುಕಿಯೂ ದಾರಿಹೋಕನೂ ಸೇರಿ ರಕ್ಷಿಸಿದರು.

ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಪ್ರಧಾನಿ ಮಲಾನರಿಗೆ

ಏಪ್ರಿಲ್ ೬ ರಿಂದ ಆಫ್ರಿಕವನ್ನು ಅನ್ಯಾಯವಾದ ವರ್ಣಭೇದ ಪೂರಿತವಾದ ಶಾಸನಗಳ ವಿರುದ್ಧ ಅಸಹಕಾರ ಚಳುವಳಿ ಕೈಗೊಳ್ಳಲು ನಿರ್ಧರಿಸುವುದಾಗಿ ಆಫ್ರಿಕ ರಾಷ್ಟ್ರೀಯ ಕಾಂಗ್ರೆಸ್ ದಕ್ಷಿಣಆಫ್ರಿಕ ಪ್ರಧಾನಿ ಮಲಾನ್‌ರಿಗೆ ಎಚ್ಚರಿಕೆ ಇತ್ತಿದೆ.

ಒತ್ತಾಯ ಸಂಸ್ಕೃತ ಶಿಕ್ಷಣ

ಉತ್ತರ ಭಾರತದ ಭಾಷೆಗಳಿಗೆಲ್ಲಾ ಸಂಸ್ಕೃತವೇ ಮೂಲ ಭಾಷೆಯಾಗಿರುವ ಪ್ರಯುಕ್ತ ಶಾಲಾ ಕಾಲೇಜುಗಳಲ್ಲಿ ಸಂಸ್ಕೃತವನ್ನು ನಿರ್ಬಂಧ ದ್ವಿತೀಯ ಭಾಷೆಯನ್ನಾಗಿ ಮಾಡಬೇಕೆಂಬುದಾಗಿ ಪಾರ್ಲಿಮೆಂಟಿನ ಡೆಪ್ಯುಟಿ ಸ್ಪೀಕರ್ ಶ್ರೀ ಅನಂತಶಯನಂ ಅಯ್ಯಂಗಾರ್ ತಿಳಿಸಿರುವರು

ಸಕ್ಕರೆ ಉತ್ಪತ್ತಿ ಹೆಚ್ಚಿದೆ

ಉತ್ತರ ಪ್ರದೇಶದಲ್ಲಿ ಈ ಬಾರಿ ಸಕ್ಕರೆಉತ್ಪತ್ತಿಯು ಕಳೆದವರ್ಷಕ್ಕಿಂತ ೧½ ಲಕ್ಷ ಟನ್ ಹೆಚ್ಚಾಗಿ ಉತ್ಪಾದನೆ ಮಾಡಿದೆ. ಕಳೆದವರ್ಷ ೬೬ ಕಾರ್ಖಾನೆಗಳಲ್ಲಿ ೩½ ಲಕ್ಷ ಟನ್ ಉತ್ಪತ್ತಿಯಾಗಿದ್ದು ಈ ಸಾಲ ೪½ ಲಕ್ಷ ಟನ್ ಸಕ್ಕರೆ ಉತ್ಪತ್ತಿಯಾಗಿದೆ.

ನ್ಯೂ ಅಪೇರ

೨೨—೨—೫೨ ರಿಂದ

"ಸ್ತ್ರೀಸಾಹಸಂ" ತಯಾರಿಸಿರುವ ವಿನೋದ ಪ್ರೊಡಕ್ಷನರವರ

ಶಾಂತಿ

(ತೆಲುಗು)

ಪಾತ್ರ :—ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ|| ಸುಬ್ಬರಾವ್.

ಒರಿಸ್ಸಾದಲ್ಲಿ ಹೊಸ ಕಾಂಗ್ರೆಸ್ ಮಂತ್ರಿಮಂಡಲ ರಚನೆ

ಶ್ರೀ ನಾಭಾಕೃಷ್ಣ ಚೌಧುರಿ ಮುಖ್ಯಮಂತ್ರಿ

ಮಹಾ ಚುನಾವಣಾದನಂತರ ಮೊದಲನೆಯದಾಗ ಕಾಂಗ್ರೆಸ್ ಮಂತ್ರಿಮಂಡಲವು ನಿನ್ನೆಯದಿನ ಒರಿಸ್ಸಾದಲ್ಲಿ ತನ್ನ ಅಧಿಕಾರ ಸೂತ್ರವನ್ನು ವಹಿಸಿಕೊಂಡಿತು. ಕಾಂಗ್ರೆಸ್ ನಾಯಕರಾಗಿ ಚುನಾಯಿತರಾದ ಶ್ರೀ ನಾಭಾಕೃಷ್ಣ ಚೌಧರಿಯವರು ಮುಖ್ಯಮಂತ್ರಿ. ಇವರಲ್ಲದೆ ಮಂತ್ರಿಮಂಡಲದಲ್ಲಿ ೪ ಜನ ಮಂತ್ರಿಗಳೂ ೫ ಜನ ಉಪಸಚಿವರಲ್ಲಿ ಇಬ್ಬರು ಮಹಿಳೆಯರು. ಒರಿಸ್ಸಾ ಗೌರ್ನರ್ ಶ್ರೀ ಅಸಫಾಲಿಯವರ ಸಮ್ಮುಖದಲ್ಲಿ ನಿನ್ನೆ ಅಧಿಕಾರ ಸ್ವೀಕಾರ, ಪ್ರಮಾಣ ವಚನವು ನಡೆಯಿತು.

ಕಾಂಗ್ರೆಸ್ಸು ಬಿಟ್ಟವರನ್ನು ಪುನಃ- ಸೇರಿಸಿಕೊಳ್ಳುವುದಿಲ್ಲ

ಚುನಾವಣಾ ಕಾಲದಲ್ಲಿ ಕಾಂಗ್ರೆಸ್ಸನ್ನು ತ್ಯಜಿಸಿದವರನ್ನು ಪುನಃ ಕಾಂಗ್ರೆಸ್ಸಿಗೆ ಸೇರಿಸಿಕೊಳ್ಳುವುದಿಲ್ಲ. ಆದರೆ ೨-೩ ವರ್ಷಗಳ ಹಿಂದೆ ಕಾಂಗ್ರೆಸ್ ತ್ಯಜಿಸಿದವರು ಈಗ ಆ ಸಂಸ್ಥೆಯನ್ನು ಸೇರಲು ಬಂದರೆ ಅದು ವಿಷಯವನ್ನು ಪರ್ಯಾಲೋಚಿಸಲಾಗುತ್ತದೆ ಎಂದು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಮದರಾಸಿನಲ್ಲಿ ಹೇಳಿದರು.

ಸೂರ್ಯಗ್ರಹಣ ವಿಷಯ

ಇದೇ ಮಾಹೆ ೨೫ನೇ ತಾ|| ಬರಲಿರುವ ಸೂರ್ಯಗ್ರಹಣವು ಮಂಗಳೂರು, ಕಾಸ, ಕಡೂರು, ಸಿರಾ, ಗೌರಿಬಿದನೂರು ಈ ಸ್ಥಳಗಳಿಗೂ ಇದಕ್ಕೆ ಉತ್ತರದಿಕ್ಕಿನಲ್ಲಿರುವ ಸ್ಥಳಗಳಿಗೂ ಕಾಣಿಸುವುದರಿಂದ ಅಲ್ಲಿಯವರು ಗ್ರಹಣ ಕರ್ಮವನ್ನು ಆಚರಿಸಬೇಕೆಂದೂ ಅದಕ್ಕೆ ದಕ್ಷಿಣದಲ್ಲಿರುವವರು ಗ್ರಹಣ ನಿಮಿತ್ತ ಯಾವಕಾರ್ಯವನ್ನೂ ಮಾಡಬೇಕಾದ್ದಿಲ್ಲವೆಂದು ಶ್ರೀ ಶೃಂಗೇರಿ ಮಠದ ಜೋಯಿಸರು ಮತ್ತು ಪಂಡಿತರು ನಿರ್ಣಯಿಸಿರುತ್ತಾರೆ.

ಸರ್ಕಾರದಲ್ಲಿ ವಿಶ್ವಾಸ ವ್ಯಕ್ತಪಡಿಸಿತು

ಫ್ರಾನ್ಸ್ ದೇಶದ ಸೇನೆಗಳು ಯೂರೋಪಿನ ದಕ್ಷಿಣಾ ಒಕ್ಕೂಟದಲ್ಲಿ ಭಾಗವಹಿಸಬೇಕು ಎಂಬ ಬಗ್ಗೆ ಫ್ರಾನ್ಸ್ ಶಾಸನ ಸಭೆಯಲ್ಲಿ ಚರ್ಚೆ ನಡೆದು ಶಾಸನಸಭೆಯು ಸರ್ಕಾರ ಕೈಗೊಂಡ ನೀತಿಗೆ ತನ್ನ ಬೆಂಬಲ ವ್ಯಕ್ತಪಡಿಸಿತು.

ಶಾರದಾವಿಲಾಸ ಕಾಲೇಜ್ ಯೂನಿಯನ್

ಮೈಸೂರು ಫೆ ೨೦

ಶಾರದವಿಲಾಸ ಕಾಲೇಜು ಯೂನಿಯನ್ನಿನಲ್ಲಿ ನಾಳೆ ಸಂಜೆ ೫-೩೦ ಗಂಟೆಗೆ ಮೈಸೂರು ಪುರಸಭಾ ಕಮಿಷನರ್ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರು ಭಾಷಣ ಮಾಡುವರು. ಯೂನಿಯನ್ನಿನ ಅಧ್ಯಕ್ಷ ಶ್ರೀ ಎಂ ಎಸ್ ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಶ್ರೀ ಎ ವಿ ರಾಘವಾ ಚಾರ್‌ರಿಗೆ ಗಾಯ

ಬೆಂಗಳೂರು ಫೆ ೨೦

ನಾಗಪುರದ ಬಳಿ ವಿಮಾನ ಅಪಘಾತದಲ್ಲಿ ಮೈಸೂರು ಸರ್ಕಾರದ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪಿನ ಸೂಪರಿಂಟೆಂಡೆಂಟರಾದ ಶ್ರೀ ಎ ವಿ ರಾಘವಾಚಾರ್‌ರವರಿಗೆ ಗಾಯವಾಗಿ ನಾಗಪುರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಲಿರುವರು.

ಶಸ್ತ್ರ ಚಿಕಿತ್ಸೆ

ಮಾಜಿ ವಿದ್ಯಾಸಚಿವ ಶ್ರೀ ಟಿ ಸಿದ್ದಲಿಂಗಯ್ಯನವರು ಶಸ್ತ್ರ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿರುವರು.

ವಿಚಾರಣೆ

ನಾಗಪುರದ ಬಳಿ ವಿಮಾನ ಅಪಘಾತವಾದುದರ ಬಗ್ಗೆ ಸಿವಿಲ್ ಏವಿಯೇಷನ್ ಡೆಪ್ಯುಟಿ ಡೈರೆಕ್ಟರ್‌ರವರ ಅಧ್ಯಕ್ಷತೆಯಲ್ಲಿ ವಿಚಾರಣಾ ಸಮಿತಿಯನ್ನು ನೇಮಿಸಲಾಗಿದೆ.

ಮಂಜಿನ ಮಳೆ

ಅಮೆರಿಕಾ ಸಂಯುಕ್ತ ಸಂಸ್ಥಾನದ ಈಶಾನ್ಯಭಾಗದಲ್ಲಿ ಉಂಟಾಗಿರುವ ಮಂಜಿನಮಳೆ ಪರಿಣಾಮವಾಗಿ ೨೪ ಜನರು ಮಡಿದಿರುವರು.

ಸಿ. ಆರ್‌ರೊಡನೆ ಭೇಟಿ

ಮದರಾಸಿಗೆ ಆಗಮಿಸಿದೊಡನೆಯೇ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಶ್ರೀ ಸಿ. ರಾಜಗೋಪಾಲಾಚಾರಿಯವರನ್ನು ಭೇಟಿ ಮಾಡಿದ್ದರು.

ಈಜಿಪ್ಟಿನಿಂದ ಅಕ್ಕಿ ಆಮದಿಲ್ಲ

ಈ ವರ್ಷ ಭಾರತಕ್ಕೆ ಈಜಿಪ್ಟಿನಿಂದ ಅಕ್ಕಿಯನ್ನು ಆಮದು ಮಾಡುವುದಿಲ್ಲವೆಂದು ಅಧಿಕೃತವಾಗಿ ತಿಳಿದುಬಂದಿದೆ. ಕಳೆದವರ್ಷ ಈಜಿಪ್ಟ್ ಭಾರತಕ್ಕೆ ೬೦ ಸಾವಿರ ಟನ್ ಅಕ್ಕಿಯನ್ನು ಕಳುಹಿಸಿತ್ತು. ಈ ವರ್ಷ ನೀರಿಗೆ ಅಲ್ಲೇ ಅಭಾವವಿರುವುದರಿಂದ ಈಜಿಪ್ಟಿನಲ್ಲಿ ಭತ್ತದಬೆಳೆ ಉತ್ತಮವಾಗಿಲ್ಲ.

ಶ್ರೀ ಎನ್ ಜಿ ರಂಗಾರ ಹೇಳಿಕೆ

ಕೃಷಕ ಲೋಕಪಕ್ಷವು ಕಾಂಗ್ರೆಸ್ ಪಕ್ಷದೊಡನೆ ಮಿಳಿತವಾಗುವ ಪ್ರಶ್ನೆಯೇ ಇಲ್ಲ ಆದರೆ ಈ ಪಕ್ಷವೂ ಮತ್ತು ಸೋಷಲಿಸ್ಟ್ ಪಕ್ಷವು ಪ್ರತ್ಯೇಕವಾಗಿಯೇ ಉಳಿದುಕೊಂಡು ಕಾಂಗ್ರೆಸ್ಸಿನೊಡನೆ ಸಹಕರಿಸುವ ವಿಷಯವು ಪ್ರತ್ಯೇಕ ಎಂದು ಕೃಷಕ ಲೋಕಪಕ್ಷದ ನಾಯಕ ಶ್ರೀ ಎನ್ ಜಿ ರಂಗಾರವರು ಮದರಾಸಿನಲ್ಲಿ ಹೇಳಿರುವರು.

ಭಾರತದಲ್ಲಿ ಹೊಸ ಪಾಕ್ ಹೈಕಮಿಷನರ್

ಜೋಯಿಬ ಖುರೇಷಿಯವರು ಭಾರತದಲ್ಲಿ ಪಾಕೀಸ್ಥಾನದ ಹೈಕಮಿಷನರಾಗಿ ನೇಮಿತರಾಗಿದ್ದಾರೆ.

ಡಾ|| ಚಿಸಾಮ್‌ರವರ ಪ್ರವಾಸ

ವಿಶ್ವ ಆರೋಗ್ಯಸಂಸ್ಥೆಯ ಡಾ|| ಚಿಸಾಮ್‌ರವರು ಭಾರತಕ್ಕೆ ಆಗಮಿಸಿ ಪ್ರಧಾನಿ ನೆಹ್ರೂ ಮತ್ತು ರಾಷ್ಟ್ರಾಧ್ಯಕ್ಷರನ್ನು ಭೇಟಿಮಾಡುವರು. ವಿಶ್ವ ಆರೋಗ್ಯ ಸಂಸ್ಥೆಯು ದೆಹಲಿಯಲ್ಲಿ ಕೈಗೊಂಡ ಕೆಲಸವನ್ನು ಇವರು ವೀಕ್ಷಿಸುವರು.

ಮರುಭೂಮಿ ಪರಿಶೀಲನೆ

ರಾಜಸ್ಥಾನದಲ್ಲಿ ಮರುಭೂಮಿಯು ಹರಡದಂತೆ ಕಾರ್ಯಕ್ರಮ ಕೈಕೊಳ್ಳಲು ಮತ್ತು ಮರುಭೂಮಿಯು ಪರಿಶೀಲನೆ ಮಾಡಲು ಭಾರತದ ಹನ್ನೊಂದು ವಿಜ್ಞಾನಿಗಳು ಅಲ್ಲಿಗೆ ತೆರಳಿದರು.

ಮದ್ರಾಸಿನಲ್ಲಿ ಕೆ. ಎಂ. ಮುನ್ಷಿಯವರ ಪ್ರವಾಸ

ಕೇಂದ್ರ ಸರ್ಕಾರದ ಆಹಾರ ಸಚಿವರಾದ ಶ್ರೀ ಕೆ. ಎಂ. ಮುನ್ಷಿಯವರು ಮದರಾಸಿನ ಕ್ಷಾಮ ಪೀಡಿತವಾದ ಪ್ರದೇಶಗಳಾದ ಚಿತ್ತೂರ್, ಕಡಪ, ಕರ್ನೂಲ್, ಮುಂತಾದೆಡೆ ಪ್ರವಾಸವನ್ನು ಮುಂದಿನ ತಿಂಗಳು ಕೈಕೊಳ್ಳುವರು.

ಟಿಬೆಟ್‌ನಲ್ಲಿ ಚೈನಾ ಸೈನ್ಯ

ಟಿಬೆಟ್ ರಾಜಧಾನಿ ಲಾಸಾದಲ್ಲಿ ಚೈನಾ ಸರ್ಕಾರವು ತನ್ನ ಸೈನ್ಯ ಶಿಬಿರವನ್ನಾಗಿ ಮಾಡಿಕೊಂಡಿದೆ ಎಂದು ಚೈನಾ ಪತ್ರಿಕೆಗಳು ಪ್ರಕಟಿಸಿವೆ.

ಶಾಸನ ಸಭಾಧಿವೇಶನ

ಬೆಂಗಳೂರು, ಫೆ ೧೯

ಮೈಸೂರು ಶಾಸನಸಭೆಯ ಕಡೆಯ ಅಧಿವೇಶನ ಮಾರ್ಚ್ ೧೭ ನೇ ತಾ|| ನಿಂದ ಆರಂಭವಾಗುವುದು.

ಎಕ್ಸ್ ಚೆಕರ್‌ರವರೊಡನೆ ಮಾತುಕಥೆ

ಬ್ರಿಟನ್, ಫ್ರಾನ್ಸ್, ಮತ್ತು ಅಮೆರಿಕದ ವಿದೇಶಾಂಗ ಸಚಿವರು 'ಪಶ್ಚಿಮ ಜರ್ಮನಿಯ ಸಚಿವರೊಂದಿಗೆ' ಮಾತುಕತೆ ನಡೆಸಿದರು.

ಟೆಂಡರ್ ನೋಟೀಸ್

ಮುನಿಸಿಪಲ್ ಕಮಿಷನರ್‌ರವರ ಆಫೀಸ್, ಮೈಸೂರು

ತಾ|| 15–2–52

1952–53ನೇ ಸಾಲಿಗೆ (1-4-52ರಿಂದ 31–3–53) ಬೇಕಾಗುವ ಈ ಕೆಳಗೆ ನಮೂದಿಸಿರುವ ಸಾಮಾನುಗಳ ಸಪ್ಲೈ ಬಗ್ಗೆ ಮೊಹರಾದ ಟೆಂಡರ್‌ಗಳು ಸದರಿ ಮುನಿಸಿಪಲ್ ಆಫೀಸಿನಲ್ಲಿ ಮುನಿಸಿಪಲ್ ಕಮಿಷನರ್‌ರವರಿಂದ ಅಥವ ಅವರಿಂದ ಮೊಕರೂರಾದವರಿಂದ ತಾ|| 5-3-52ನೇ ಬುಧವಾರ ಮಧ್ಯಾಹ್ನ 4 ಗಂಟೆಯವರೆವಿಗೂ ಸ್ವೀಕರಿಸಲ್ಪಡುತ್ತೆ. ಪ್ರತಿ ಟೆಂಡರೊಡನೆ ಮುನಿಸಿಪಲ್ ಖಜಾನೆಗೆ ರೂ 100 ಟೆಂಡರ್ ಡಿಪಾಜಿಟ್ಟು ಕಟ್ಟಿದ ಸರ್ಟಿಫೈಡ್ ಚಲನ್ನು ಕಳುಹಿಸತಕ್ಕದ್ದು. ಹಾಗೆ ಪಡೆಟ್ಟು ಇದರ ಟೆಂಡರನ್ನು ನಿರಾಕರಿಸಲಾಗುತ್ತೆ. ಹೆಚ್ಚಿಗೆ ವಿವರಗಳನ್ನು ಆಫೀಸು ವೇಳೆಯಲ್ಲಿ ಪಡೆಯಬಹುದು. ನೋಟೀಸು ಬೋರ್ಡಿನಲ್ಲಿಯೂ ಕಾಣಬಹುದು.

ವಿವರ:— (1) ತೆಂಗಿನಕಡ್ಡಿ ಬರಲು (2) ಈಚಲುಕುಕ್ಕೆ (3) ಬೊಂಬು (4) ಗಳು ವಗೈರೆ

(ಸಹಿ) ಎಂ. ಎಸ್. ಸ್ವಾಮಿನಾಥನ್, ಮುನಿಸಿಪಲ್ ಕಮಿಷನರು.

ವುಡ್ ಲ್ಯಾಂಡ್ಸ್

೧೫—೨—೫೨ ರಿಂದ ಅಮೋಘಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಅಲ್ ಬೇಲ

ಪಾತ್ರ:— ಗೀತಾಬಾಲಿ, ಭಗವಾನ್, ಬದರೀಪ್ರಸಾದ್, ಸುಂದರ್.

ಪ್ರಕಾಶಕರು :—ಜಿ ಎಲ್. ಸ್ವಾಮಿ ಟ್ರೂಪ್ರಿಂಟ್ ಬ್ಯೂರೋ ಮೈಸೂರು

ಮುದ್ರಕರು:— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೬೪ (೮೬೯) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೨—೨—೧೯೫೨ನೇ ಶುಕ್ರವಾರ [ಸಂಚಿಕೆ ೧೫೧

ಡಾಕ್ಕಾದಲ್ಲಿ ವಿದ್ಯಾರ್ಥಿಗಳ ಮೇಲೆ ಗೋಲಿಬಾರ್

ಪ್ರಧಾನಿ ನೆಹರೂರವರಿಂದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಾರಂಭ

ಶ್ರೀಮನ್ಮಹಾರಾಜರು ದೆಹಲಿಗೆ

ಬೆಂಗಳೂರು ಫೆ ೨೦

ಶ್ರೀಮನ್ಮಹಾರಾಜರು ದೆಹಲಿಯಲ್ಲಿ ೧೫—೧೭ ರಲ್ಲಿ ನಡೆಯುವ ರಾಜಪ್ರಮುಖರ ಗೌರ್ನರರ ಸಮ್ಮೇಳನದಲ್ಲಿ ಭಾಗವಹಿಸಲು ಮಾರ್ಚ್ ೧೨ನೇ ತಾ|| ಮೈಸೂರಿನಿಂದ ಹೊರಟು ಸಮ್ಮೇಳನ ಮುಗಿಸಿಕೊಂಡು ೨೦ನೇ ತಾ|| ನ ವೇಳೆಗೆ ಮೈಸೂರು ಶಾಸನ ಸಭಾಧಿವೇಶನದಲ್ಲಿ ಪ್ರಾರಂಭ ಭಾಷಣಮಾಡಲು ಬೆಂಗಳೂರಿಗೆ ಹಿಂತಿರುಗುವರು.

ಮಾಜಿ ಐ. ಜಿ. ಪಿ. ಯವರ ನಿಧನ

ಬೆಂಗಳೂರು ಫೆ ೨೦

ನಿವೃತ್ತ ಐ. ಜಿ ಪಿ. ಯವರಾದ ಜನಾಬ್ ಅಬ್ದುಲ್ ಅಜೀಜ್ ಖಾನ್‌ರವರು ಈ ದಿನ ಬೆಳಗ್ಗೆ ೯ ಗಂಟೆ ದೈವಾಧೀನರಾದರು.

ಬೆಳಗ್ಗೆ ತಾನೇ ಅವರು ವಾಕಿಂಗ್ ಮುಗಿಸಿಕೊಂಡು ಮನೆಗೆ ಹಿಂತಿರುಗಿದೊಡನೆಯೇ ಹೃದಯ ಬಾಧೆಯಿಂದ ಮೃತಪಟ್ಟರು.

ನಗರದಲ್ಲಿ ಇರಿತ

ಬೆಂಗಳೂರು ಫೆ ೨೦

ಚಾಮರಾಜಪೇಟೆ ಬಡಾವಣೆಯ ಕೆಮ್ಮಣ್ಣುಗುಂಡಿಯಲ್ಲಿ ವಾಸಿಸುವ ೪೮ ವರ್ಷ ವಯಸ್ಸಿನ ಗೋವಿಂದ ಎಂಬಾತನನ್ನು ಯಾರೋ ಇರಿದು ಕೊಲೆಮಾಡಿರುವ ಪ್ರಕರಣವು ವರದಿಯಾಗಿದೆ

ನಿನ್ನೆ ಸಂಜೆ ಗೋವಿಂದನು ಗಾಡಿಯೊಂದರಲ್ಲಿ ಮನೆಯಿಂದ ಹೊರಟನೆಂದೂ, ನಂತರ ಹಿಂತಿರುಗಲಿಲ್ಲವೆಂದೂ ಗೊತ್ತಾಗಿದೆ

ಮಾಗಡಿ ರಸ್ತೆಯ ದ್ರಾಕ್ಷಿ ತೋಟಗಳ ಬಳಿ ಅವನ ಶವವು ಪತ್ತೆಯಾದುದಾಗಿ ತಿಳಿದುಬಂದಿದೆ. ಕೆಂಗೇರಿ ಗೇಟ್ ಪೋಲೀಸಿನವರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ರಜಾ

ಬೆಂಗಳೂರು ಫೆ ೨೦

ಆರೋಗ್ಯಶಾಖೆಯಲ್ಲಿರುವ ಶ್ರೀ ಎಂ. ರಾಮಚಂದ್ರ ರಾವ್‌ರವರಿಗೆ ಕೆಲಸದಿಂದ ನಿವೃತ್ತರಾಗುವ ಮುನ್ನ ಫೆಬ್ರವರಿ ೨೯ ರಿಂದ ೬ ತಿಂಗಳ ರಜಾ ಕೊಡಲಾಗಿದೆ.

ಇನ್ನು ೧೫ ದಿನಗಳಲ್ಲಿ ನಿರ್ಧಾರ

ಮದ್ರಾಸ್ ಮತ್ತು ಕೊಚ್ಚಿನ್ ತಿರುವಾಂಕೂರ್ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲವನ್ನು ರಚಿಸುವ ವಿಷಯವು ಇನ್ನು ೧೫ ದಿವಸಗಳೊಳಗಾಗಿ ತೀರ್ಮಾನಿಸಲಾಗುವುದೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಗಳು ತಿಳಿಸಿರುವರು.

ಈ ಪ್ರಾಂತ್ಯಗಳಲ್ಲಿ ಮಿಶ್ರ ಸರ್ಕಾರವನ್ನು ಕಾಂಗ್ರೆಸ್ ರಚಿಸುವ ಪ್ರಶ್ನೆಯೇ ಇಲ್ಲವೆಂದು ಅವರು ಹೇಳಿರುವರು.

ಡಾ|| ಜಸವಂತಸಿಂಗ್ ನಾಯಕರು

ಹಿಮಾಚಲ ಪ್ರದೇಶದ ಶಾಸನಸಭೆಯ ಕಾಂಗ್ರೆಸ್ ಪಕ್ಷದವರ ಸಭೆ ನಡೆದು ಡಾ|| ಜಸವಂತಸಿಂಗ್ ಪರಮಾರರನ್ನು ಪಕ್ಷದ ನಾಯಕರನ್ನಾಗಿ ಚುನಾಯಿಸಲಾಗಿದೆ.

ಹಿಮಾಚಲ ಪ್ರಾಂತದಲ್ಲಿ ಕಾಂಗ್ರೆಸ್ಸಿಗೆ ಶಾಸನಸಭೆಯಲ್ಲಿ ೨೫ ಸ್ಥಾನ ದೊರೆತಿದೆ.

ಚುನಾವಣೆ ಶಾಂತವಾಗಿ ನಡೆಯಿತು

ಮಣಿಪುರ, ತ್ರಿಪುರ ಮುಂತಾದೆಡೆ ಚುನಾವಣೆ ಶಾಂತಿಯುತವಾಗಿ ನಡೆಯಿತು ಕಮ್ಯೂನಿಸ್ಟರಿಂದ ಗಲಭೆಯಾಯಿತೆಂದು ಸರ್ಕಾರಕ್ಕೆ ಅಧಿಕೃತವಾಗಿ ದೂರು ಬಂದಿಲ್ಲ ಎಂದು ಪಾರ್ಲಿಮೆಂಟಿನಲ್ಲಿ ಸಂಸ್ಥಾನ ಶಾಖಾ ಸಚಿವ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್‌ರವರು ತಿಳಿಸಿದರು.

೨೦,೦೦೦ ಪ್ರವಾಸಿಕರು ಬಂದಿದ್ದರು

ಭಾರತಕ್ಕೆ ಕಳೆದ ವರ್ಷ ೨೦,೦೦೦ ಪ್ರವಾಸಿಕರು ಬಂದಿದ್ದರು. ಇವರಲ್ಲಿ ೫೦೦೦ ಅಮೆರಿಕನ್ ಪ್ರಯಾಣಿಕರಿದ್ದು ೨ ಲಕ್ಷ ಡಾಲರ್ಸ್ ಭಾರತಕ್ಕೆ ಉತ್ಪತ್ತಿ ಆಯಿತೆಂದು ವರದಿಯಾಗಿದೆ.

ರಷ್ಯದಲ್ಲಿ ಹೆಚ್ಚಿನ ಶಸ್ತ್ರಾಸ್ತ್ರ

ವಿಮಾನ ಟ್ಯಾಂಕ್ ಫಿರಂಗಿ ಇತ್ಯಾದಿ ಯುದ್ಧಾಸ್ತ್ರಗಳ ತಯಾರಿಕೆ ಹಾಗೂ ಸಂಶೋಧನದಲ್ಲಿ ಸೋವಿಯಟ್ ರಷ್ಯ ಅಮೆರಿಕಕ್ಕಿಂತಲೂ ಒಂದು ಹೆಜ್ಜೆ ಮುಂದಿದೆ ಎಂಬುದಾಗಿ ನ್ಯೂಯಾರ್ಕಿನ "ವಾಲ್ ಸ್ಟ್ರೀಟ್ ಜರ್ನಲ್" ಬರೆದಿದೆ.

ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ಪ್ರಾರಂಭ

ದೆಹಲಿಯಲ್ಲಿ ನಿನ್ನೆ ಪ್ರಧಾನಿ ಪಂಡಿತ ನೆಹರೂರವರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವವನ್ನು ನ್ಯಾಷನಲ್ ಫಿಸಿಕಲ್ ಲ್ಯಾಬೊರೇಟರಿಯಲ್ಲಿ ಆರಂಭ ಮಾಡಿದರು. ಈ ಉತ್ಸವಕ್ಕೆ ಕೇಂದ್ರ ಸರ್ಕಾರದ ಸಚಿವರುಗಳು, ರಾಯಭಾರಿ ವರ್ಗದವರು ದಯಮಾಡಿಸಿದ್ದರು.

ಪಂಡಿತ ನೆಹ್ರೂರವರು ಚಲನಚಿತ್ರೋತ್ಸವದ ಆರಂಭೋತ್ಸವ ಮಾಡುತ್ತಾ ಇಂತಹ ಚಿತ್ರೋತ್ಸವಗಳು ರಾಷ್ಟ್ರಗಳ ಮಿತ್ರತ್ವವನ್ನು ಹೆಚ್ಚಿಸುವುದೆಂದು ಹೇಳಿದರು. ಚಲನಚಿತ್ರಗಳು ಮಾನವನ ಮೇಲೆ ವಿಪರೀತ ಪರಿಣಾಮವುಂಟು ಮಾಡುವುದರಿಂದ ಇಂತಹ ಕೈಗಾರಿಕೆಯ ಮೇಲೆ ಹತೋಟಿ ಅತ್ಯವಶ್ಯಕವೆಂದರು.

ಆಫ್‌ಘಾನಿಸ್ಥಾನದೊಡನೆ ವಿಮಾನ ಸಂಚಾರ

ಭಾರತದ ವಿಮಾನ ಸಂಚಾರ ಕಂಪನಿಯೊಂದು ಜಾಂ ನಗರದ ಮೂಲಕ ಆಫ್‌ಘಾನಿಸ್ಥಾನಕ್ಕೆ ಸಂಚಾರ ಸೌಲಭ್ಯ ಏರ್ಪಡಿಸಿತ್ತು. ಈಗ ಆ ವಿಮಾನವು ಕರಾಚಿಯ ಮೂಲಕ ಆಫ್‌ಘಾನಿಸ್ಥಾನಕ್ಕೆ ಓಡಾಡುವುದು.

ಭಾರತ ನೇಪಾಳದ ವ್ಯವಹಾರದಲ್ಲಿ ಕೈಹಾಕುತ್ತಿಲ್ಲ

ನೇಪಾಳದ ಪ್ರಧಾನ ಮಂತ್ರಿ ಶ್ರೀ ಎಂ. ಪಿ. ಕೊಯಿರಾಲಾ ನಿನ್ನೆ ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತಾಡುತ್ತಾ ಭಾರತವು ನೇಪಾಳದ ಆಂತರಿಕ ವ್ಯವಹಾರದಲ್ಲಿ ಕೈಹಾಕುತ್ತಿದೆಯೆಂಬ ಅಪಾದನೆಯನ್ನು ನಿರಾಕರಿಸಿದರು.

ನೇಪಾಳವು ತನ್ನ ದೇಶದ ಕೈಗಾರಿಕಾಭಿವೃದ್ಧಿಗೆ ೧೫ ಕೋಟಿ ರೂ. ಸಾಲ ಕೇಳಿರುವುದೆಂದು ಶ್ರೀ ಕೊಯಿರಾಲಾ ತಿಳಿಸಿರುವರು.

೨೦ ಯೋಜನೆಗೆ ೭೧ ಲಕ್ಷ ರೂ. ಮಂಜೂರ್ಮಾಡಲಾಗಿದೆ

ಮದರಾಸ್ ಸರ್ಕಾರವು ತನ್ನ ಪ್ರಾಂತದಲ್ಲಿ ೨೦ ವಿದ್ಯುದ್ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ೭೧ ಲಕ್ಷ ರೂಗಳನ್ನು ಮಂಜೂರ್ಮಾಡಿದೆ.

ನಿನ್ನೆ ಡಾಕ್ಕಾದಲ್ಲಿ ವಿಶ್ವವಿದ್ಯಾನಿಲಯದ ಆವರಣದ ಬಳಿ ೧೪೪ನೇ ಸೆಕ್ಷನ್ ಜಾರಿಯಲ್ಲಿದ್ದರೂ ವಿದ್ಯಾರ್ಥಿಗಳು ಪ್ರದರ್ಶನಗಳನ್ನು ಮಾಡಿದರು. ಪ್ರದರ್ಶನಗಳನ್ನು ನಿಲ್ಲಿಸಿ ಶಾಂತ ಪರಿಸ್ಥಿತಿಯುಂಟು ಮಾಡಲು ಪೋಲೀಸರು ಗುಂಡು ಹಾರಿಸಿದರೆಂದೂ ತತ್ಫಲವಾಗಿ ಒಬ್ಬ ವಿದ್ಯಾರ್ಥಿಯು ಮೃತನಾದನೆಂದು ವರದಿಯಾಗಿದೆ. ಈ ರೀತಿ ಪ್ರದರ್ಶನವು ಎರಡನೇ ಭಾರಿ ನಡೆದಿರುವುದು. ಬಂಗಾಳಿಯ ಬದಲು ಉರ್ದುವನ್ನು ರಾಷ್ಟ್ರ ಭಾಷೆಯನ್ನಾಗಿ ಮಾಡಬೇಕೆಂದಿರುವುದೇ ಈ ರೀತಿಯ ಪ್ರದರ್ಶನಗಳಿಗೆ ಕಾರಣವಾಗಿದೆ.

ರಾಂಜಿ ಕ್ರಿಕೆಟ್ ಸೆಮಿ ಫೈನಲ್ಸ್

ರಾಂಜಿ ಟ್ರೋಫಿಯ ಅಖಿಲ ಭಾರತದ ಸೆಮಿ ಫೈನಲ್ಸ್ ಕ್ರಿಕೆಟ್ ಪಂದ್ಯವು ಈ ದಿನ ಬೆಂಗಳೂರಲ್ಲಿ ಮೈಸೂರಿನವರಿಗೂ ಬೊಂಬಾಯಿನವರಿಗೂ ಆರಂಭವಾಗುತ್ತದೆ.

ಉತ್ತರ ಪ್ರದೇಶದಲ್ಲಿ ಚುನಾವಣೆ ಮುಗಿಯಿತು

ಉತ್ತರ ಪ್ರದೇಶದ ಬೆಟ್ಟಪ್ರದೇಶಗಳಲ್ಲಿ ಚುನಾವಣೆಯು ನಿನ್ನೆಗೆ ಮುಗಿಯಿತು ಓಟಿನ ಎಣಿಕೆ ಬಹುಶಃ ಬುಧವಾರದಿಂದ ಆರಂಭವಾಗುವುದು. ಈ ಪ್ರದೇಶಗಳಿಂದ ಆ ರಾಜ್ಯ ಶಾಸನಸಭೆಗೆ ೧೧ ಸ್ಥಾನವೂ ಪಾರ್ಲಿಮೆಂಟಿಗೆ ಐದು ಸ್ಥಾನವೂ ಇದೆ.

ಹಿಂದೂ ಮಹಾಸಭಾ ಕಾರ್ಯದರ್ಶಿಯ ಸೋಲು

ಉತ್ತರ ಪ್ರದೇಶದ ಬಸ್ತಿ ಡಿಸ್ಟ್ರಿಕ್ಟಿನಿಂದ ಪಾರ್ಲಿಮೆಂಟಿಗೆ ಸ್ಪರ್ಧಿಸಿದ್ದ ಅಖಿಲ ಭಾರತ ಹಿಂದೂ ಮಹಾ ಸಭೆಯ ಕಾರ್ಯದರ್ಶಿ ಶ್ರೀ ಮಹಂತದಿಗ್ವಿಜಯನಾಥ್‌ರವರನ್ನು ಕಾಂಗ್ರೆಸ್ ಸ್ಪರ್ಧಿಯು ಸೋಲಿಸಿರುವರು.

ಮುಂದಿನ ತಿಂಗಳು ನೂತನ ಶಾಸನಸಭೆ

ಮಧ್ಯಪ್ರದೇಶದಲ್ಲಿ ನೂತನ ಶಾಸನ ಸಭೆಯು ಮುಂದಿನ ತಿಂಗಳು ೩ನೇ ತಾ|| ನಾಗಪುರದಲ್ಲಿ ಸಮಾವೇಶಗೊಂಡು ೮ ದಿನಗಳ ಕಾಲ ನಡೆಯುವುದು.

ಹಿಂದೂಸ್ಥಾನ ವಿಮಾನ ಕಾರ್ಖಾನೆ ರಕ್ಷಣಾಶಾಖೆ ಆಡಳಿತಕ್ಕೆ?

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ ವಿಮಾನ ಕಾರ್ಖಾನೆಯನ್ನು ಸಂಪೂರ್ಣವಾಗಿ ಕೇಂದ್ರ ರಕ್ಷಣಾಶಾಖೆಯು ವಹಿಸಿಕೊಳ್ಳುವ ವಿಷಯವು ಕೇಂದ್ರ ಸರ್ಕಾರದ ಯೋಜನೆಯಲ್ಲಿದೆಯೆಂದು ತಿಳಿಯಬರುತ್ತದೆ. ಈ ಕಾರ್ಖಾನೆಯನ್ನು ಅಭಿವೃದ್ಧಿಗೊಳಿಸಲು ಮೈಸೂರು ಸರ್ಕಾರವು ಹೆಚ್ಚಿಗೆ ಹಣವನ್ನು ವ್ಯಯಮಾಡಲು ಸಿದ್ಧವಿಲ್ಲವಾದುದರಿಂದ ಕೇಂದ್ರವೇ ತನ್ನ ಆಡಳಿತಕ್ಕೆ ತೆಗೆದುಕೊಳ್ಳಬೇಕೆಂದಿರುತ್ತದೆ.

ಆದಾಗ್ಯೂ ಮೈಸೂರು ಸರ್ಕಾರವು ಇಲ್ಲಿಯವರೆಗೆ ಕಾರ್ಖಾನೆಯ ಅಭಿವೃದ್ಧಿಗೆ ವಿಶೇಷವಾಗಿ ನೆರವು ನೀಡಿರುವುದರಿಂದ ಮುಂದೆಯೂ ಅದು ಸಹಕಾರ ಅತ್ಯಗತ್ಯವಾದುದರಿಂದ ಮೈಸೂರು ಸರ್ಕಾರದ ಅಭಿಪ್ರಾಯವನ್ನು ಕೇಂದ್ರವು ಕೇಳಿದೆಯೆಂಬ ಅಂಶವನ್ನು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ಸಮಯದಲ್ಲಿ ರಕ್ಷಣಾಸಚಿವ ಸರ್ದಾರ್ ಬಲದೇವಸಿಂಗ್‌ರವರು ಹೇಳಿರುವರು.

ವಿಶೇಷಾಧಿಕಾರ

ತಮಗಿರುವ ವಿಶೇಷಾಧಿಕಾರಗಳು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಇನ್ನು ಕೆಲಕಾಲವಿರುವಂತೆ ಅಧ್ಯಕ್ಷ ಟ್ರೂಮನ್ನರು ಕಾಂಗ್ರೆಸ್ಸನ್ನು ಕೇಳಿರುವರು. ಅಧ್ಯಕ್ಷರು ಉತ್ಕಟ ಪರಿಸ್ಥಿತಿಯಲ್ಲಿ ತಮಗಿರುವ ವಿಶೇಷಾಧಿಕಾರದಂತೆ ರೈಲ್ವೆಗಳ ಮೇಲ್ವಿಚಾರಣೆಯನ್ನು ವಹಿಸಿಕೊಳ್ಳಬಲ್ಲರು. ರಾಷ್ಟ್ರ ರಕ್ಷಣೆಗೆ ಕೊಡುತ್ತಿರುವ ರಾಜಧನವನ್ನ ಕಡಿಮೆ ಮಾಡಬಲ್ಲರು ಮತ್ತು ಸರ್ವೆ ಅಧಿಕಾರಿಗಳನ್ನು ನೇಮಕ ಮಾಡಬಲ್ಲರು.

ಮುಷ್ಕರ ಅನಿವಾರ್ಯ

ಸಂಧಾನದ ಮೂಲಕ ವಿವಾದಗಳು ಇತ್ಯರ್ಥವಾಗದಿದ್ದಲ್ಲಿ ಅವುಗಳನ್ನು ಪಂಚಾಯತಿಗೆ ಒಪ್ಪಿಸಬೇಕೆಂಬ ಆಡಳಿತವರ್ಗದಲ್ಲಿ ತಮಗೆ ಪ್ರಾತಿನಿಧ್ಯವಿರಬೇಕಾದ ಕಾರ್ಮಿಕರ ಹಕ್ಕಿನ ಮೂಲ ಬೇಡಿಕೆಗಳನ್ನು ಸರ್ಕಾರವು ಒಪ್ಪದಿದ್ದಲ್ಲಿ ರೈಲ್ವೇ ಮುಷ್ಕರವು ಅನಿವಾರ್ಯ. ರೈಲ್ವೆ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗುರುಸ್ವಾಮಿಯವರು ಎ. ಎಸ್. ರೈಲ್ವೆ ಕೆಲಸಗಾರರ ಸಾಮೂಹಿಕ ಕೂಟವೊಂದರಲ್ಲಿ ಹೇಳಿರುವರು.

ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾದವರು

ಬೆಂಗಳೂರು ೨ ಫೆ ೨೦

೧೯೫೧ನೇ ಜುಲೈನಲ್ಲಿ ನಡೆದ ಇಂಜಿನಿಯರಿಂಗ್ ಇಲಾಖಾ ಪರೀಕ್ಷೆಯಲ್ಲಿ ಈ ಕೆಳಗೆ ಕಂಡ ಅಸಿಸ್ಟೆಂಟು ಇಂಜನಿಯರುಗಳು ಉತ್ತೀರ್ಣರಾಗಿರುವುದಾಗಿ ಸರ್ಕಾರದವರು ಪ್ರಕಟಿಸಿರುವರು.

ಶ್ರೀಗಳಾದ ಕೆ ಆರ್. ನಾರಾಯಣರಾವ್, ಬಿ ಗುಂಡೂರಾವ್, ಬಿ ಕಾಶೀಪತಯ್ಯ, ಹೆಚ್ ಎಂ ಕೋರಿ, ಎಂ ಜಿ ಮಲ್ಲಪ್ಪ, ಜಿ ಎಸ್ ಪರಮಶಿವಯ್ಯ, ಹೆಚ್ ರಾಮಕೃಷ್ಣ, ಕೆ ಆರ್ ಸೂರ್ಯನಾರಾಯಣಗೌಡ,

ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಸೂಪರ್‌ವೈಜರುಗಳು.

ಎಂ ಎ ತಿರುಮಲಾಚಾರ್, ಕೆ ಎ ಗುಂಡಪ್ಪ, ಕೆ ಜಿ ನಾಗರಾಜಶಾಸ್ತ್ರಿ, ಎ ಎ ತಿಪ್ಪಯ್ಯ.

ಶಾಸನಸಭಾಧಿವೇಶನ

ಮೈಸೂರು ಶಾಸನಸಭಾಧಿವೇಶನವು ಮಾರ್ಚ್ ೨೦ನೇ ತಾ॥ ಮಧ್ಯಾಹ್ನ ೪ ಗಂಟೆಗೆ ಬೆಂಗಳೂರಿನಲ್ಲಿ ಸರ್ ಪುಟ್ಟಣಶೆಟ್ಟಿ ಪುರಭವನದಲ್ಲಿ ಪ್ರಾರಂಭವಾಗುತ್ತದೆ.

ವಿಮಾನ ಪ್ರಯಾಣಿಕರಿಗೆ ಹೆಚ್ಚಿಗೆ ಛಾರ್ಜು

ಲಂಡನ್ನಿಗೆ ಯೂರೋಪಿನ ಇತರ ಭಾಗಗಳಿಂದ ವಿಮಾನದಲ್ಲಿ ಬರುವ ಪ್ರಯಾಣಿಕರಿಗೆ ೫ ಷಿಲಿಂಗ್ ಇತರ ಭಾಗಗಳಿಂದ ಬರುವವರಿಗೆ ೭॥ ಷಿಲಿಂಗ್ 'ಸರ್ವಿಸ್ ಛಾರ್ಜ್'ನ್ನು ಮೇ ಮೂರನೆಯಿಂದ ವಿಧಿಸಲು ಅಲ್ಲಿಯ ವಿಮಾನ ಇಲಾಖೆಯು ನಿರ್ಧರಿಸಿದೆ. ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಸೌಕರ್ಯಗಳನ್ನು ಒದಗಿಸಲು ಈ ದರವನ್ನು ವಿಧಿಸಲಾಗುವುದೆಂದು ಹೇಳಲಾಗಿದೆ.

ಅವಿಶ್ವಾಸ ನಿರ್ಣಯ

ಥೋರಿಗಳ ಮರಣದಿಂದ ಮುಂದು ಪರಿಸಲ್ಪಟ್ಟಿದ್ದ ಬ್ರಿಟನ್ನಿನ ಪ್ರಧಾನಿ ಚರ್ಚಿಲ್ಲರ ಮೇಲಿನ ಅವಿಶ್ವಾಸ ನಿರ್ಣಯವನ್ನು ಮುಂದಿನ ಸೋಮವಾರ ಅಥವ ಮಂಗಳವಾರ ಲೇಬರ್ ಪಕ್ಷ ತರಲಿದೆ.

ಈ ಅವಿಶ್ವಾಸ ನಿರ್ಣಯ ಅವರು ಅಮೆರಿಕದಲ್ಲಿದ್ದಾಗ ಅವರ ವಿದೇಶಾಂಗ ನೀತಿಯ ಬಗ್ಗೆ ಕುರಿತು ತರಲಾಗಿದೆ.

ಬೆಂಗಳೂರಿನಲ್ಲಿ ತಯಾರಾದ ೨ ನೇ ವಿಮಾನ

ಬೆಂಗಳೂರು ಫೆ ೨೦.

ಹಿಂದೂಸ್ಥಾನ್ ವಿಮಾನ ಕಾರ್ಖಾನೆಯಿಂದ ತಯಾರಿಸಲಾದ ಎಚ್. ಟಿ ಮಾದರಿಯ ಎರಡನೆ ವಿಮಾನವನ್ನು ನಿನ್ನೆಯ ದಿನ ಕಾರ್ಖಾನೆಗೆ ಭೇಟಿ ಇತ್ತ ಭಾರತ ವಿಮಾನದಳದ ದಂಡನಾಯಕ ಏರ್ ಮಾರ್ಷಲ್ ಗಿಬ್ಸ್‌ರ ಸಮ್ಮುಖದಲ್ಲಿ ಪರೀಕ್ಷಿಸಲ್ಪಟ್ಟಿತು.

ವಿಮಾನಪಘಾತಕ್ಕೀಡಾಗಿ ಗಾಯಗೊಂಡವರ ಪರಿಸ್ಥಿತಿ

ನಾಗಪುರದಲ್ಲಿ ನಿನ್ನೆಯದಿನ ನಡೆದ ವಿಮಾನ ಅಪಘಾತದಲ್ಲಿ ಗಾಯಗೊಂಡ ನೃತ್ಯ ಸಹೋದ್ಯೋಗಿಗಳಾದ ಶ್ರೀ ಹೀರಾಲ್ ಮತ್ತು ಶ್ರೀ ಸಂಪತ್‌ರವರ ಕಾಲಿಗೆ ವಿಪರೀತ ಪೆಟ್ಟಾಗಿ ಅವರಿನ್ನೂ ಅಪಾಯಸ್ಥಿತಿಯಲ್ಲಿರುವರೆಂದು ಹೇಳಲಾಗಿದೆ.

ಕೋ-ಪೈಲೆಟ್ ಉತ್ತಮಗೊಳ್ಳುತ್ತಿರುವಂತೆ ಕಾಣಬಂದರೂ ಅವರ ಎಡಗಾಲನ್ನು ಕತ್ತರಿಸಬೇಕಾಗಬಹುದೆಂದು ತಿಳಿಯಬಂದಿದೆ.

ಶ್ರೀ ಮುರಳೀಧರ್ ಮತ್ತು ದಾವೂದ್ ಎಂಬುವವರಿಬ್ಬರು ಗುಣಹೊಂದಿ ಬೊಂಬಾಯಿಗೆ ತೆರಳಿದರು.

ಮೈಸೂರಿನ ಶ್ರೀ ಎ ಎ ರಾಘವಾಚಾರ್‌ರವರಿಗೆ ಮುಖದ ಮೇಲೆ ಮಾತ್ರ ಸ್ವಲ್ಪ ಗಾಯಗಳಾಗಿವೆ ಇನ್ನಾವ ತೀವ್ರವಾದ ಪೆಟ್ಟೂ ಬಿದ್ದಿಲ್ಲ. ಸದ್ಯದಲ್ಲೇ ಗುಣಮುಖರಾಗಲಿರುವರೆಂದು ಹೇಳಲಾಗಿದೆ.

ಪ್ರಾಣಾಪಾಯ ಯಾರಿಗೂ ಇಲ್ಲ. ಎಲ್ಲರೂ ಗುಣಮುಖರಾಗುವರೆಂದು ತಿಳಿಯಬರುತ್ತದೆ.

ಕೇಂದ್ರ ಸಬ್ಸಿಡಿ ಇಲ್ಲ

ಕಳೆದವರ್ಷ ಕೇಂದ್ರ ಸರ್ಕಾರ ೫೦ ಕೋಟಿ ರೂಗಳನ್ನು ಆಹಾರ 'ಸಬ್ಸಿಡಿ' ರೂಪದಲ್ಲಿ ಮತ್ತು ೪ ಕೋಟಿ ರೂ. ಗಳನ್ನು ಬೋನಸ್ ರೂಪದಲ್ಲಿ ಕೊಟ್ಟಿತ್ತು.

ಆಹಾರ ಸಬ್ಸಿಡಿ ಹೊರೆಯನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳಲು ಇಷ್ಟಪಡುವುದಿಲ್ಲವೆಂದು ಕೇಂದ್ರ ಆಹಾರ ಸಚಿವರು ವ್ಯಕ್ತಪಡಿಸಿದರು.

ಆದರೆ ಸಂಸ್ಥಾನ ಸರ್ಕಾರಗಳು ಕೇಂದ್ರ ಸರ್ಕಾರ ಗ್ರ್ಯಾಂಟ್ ಕೊಡುವುದನ್ನು ನಿಲ್ಲಿಸುವುದಕ್ಕೆ ವಿರೋಧ ವ್ಯಕ್ತಪಡಿಸಿರುವುವು.

೫॥ ಮಂತ್ರಿಗಳ ನೇಮಕ

ಕಾಶ್ಮೀರ ಸರ್ಕಾರವು ಸದ್ಯದಲ್ಲಿಯೇ ನಾಲ್ಕು ಮಂದಿ ಡೆಪ್ಯುಟಿ ಮಂತ್ರಿಗಳನ್ನು ಐದು ಮಂದಿ ಪಾರ್ಲಿಮೆಂಟರಿ ಸೆಕ್ರೆಟರಿಗಳನ್ನು ನೇಮಿಸಲಿದೆ.

ಏಪ್ರಿಲ್ ಅಂತ್ಯದೊಳಗೆ ಹೊಸ ಮಂತ್ರಿಮಂಡಲ

ನಾಲ್ಕು ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು, ಪ್ರಧಾನಿ ಶ್ರೀ ಬಿ. ಜಿ. ಖೇರ್ ಮತ್ತು ಒಳಾಡಳಿತ ಮಂತ್ರಿ ಶ್ರೀ ಮೊರಾರ್ಜಿ ದೇಸಾಯಿರ ಸಭೆಯೊಂದು ನಡೆದು ಏಪ್ರಿಲ್ ಅಂತ್ಯದೊಳಗಾಗಿ ಹೊಸ ಮಂತ್ರಿಮಂಡಲ ರಚನೆ ಆಗಬೇಕೆಂದು ನಿರ್ಧರಿಸಿ ಏಪ್ರಿಲ್ ೧೫ನೇ ತಾರೀಖು ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ನಾಯಕ ಆಯ್ಕೆಯಾಗಬೇಕೆಂದು ತೀರ್ಮಾನಿಸಿರುವುದಾಗಿಯೂ ವರದಿಯಾಗಿದೆ.

ಶ್ರೀ ಬಿ. ಜಿ. ಖೇರರ ನಿವೃತ್ತಿಯ ನಂತರ ಶ್ರೀ ಮೊರಾರ್ಜಿ ದೇಸಾಯಿರೇ ನಾಯಕತ್ವವನ್ನು ವಹಿಸಿಕೊಳ್ಳಬೇಕೆಂದೂ ಅವಿರೋಧವಾಗಿ ಎಲ್ಲರೂ ಇಷ್ಟಪಟ್ಟರೆಂದು ತಿಳಿದು ಬಂದಿದೆ.

† ಭಾರತ ವಿಭಾಗವಾದಂದಿನಿಂದ ವಿಶ್ವದ ಎಲ್ಲಾ ಬಂದರುಗಳಲ್ಲಿದ್ದ ಭಾರತದ ನೌಕೆಯನ್ನು ಸರಿಯಾಗಿ ಹಂಚಿಕೊಳ್ಳಲು ಆಗದೆ ಈಗ ಭಾರತಕ್ಕೆ ಇನ್ನೂ ೬೦ ನೌಕೆಗಳು ಲಭಿಸಿದೆ.

ರಾಜಕಮಲ್
ಮಹಾಶಿವರಾತ್ರಿ ಪ್ರಯುಕ್ತ
ಶನಿವಾರ ರಾತ್ರಿ ೧ ಗಂಟೆಗೆ
ಸ್ಪೆಷಲ್ ಪ್ರೊಗ್ರಾಂ
ತಾ॥—೨೨—೨—೫೨ ರಿಂದ
ಅಮೋಘ ಪ್ರಾರಂಭ
[ಪ್ರತಿದಿನ ಮೂರು ಆಟಗಳು]
ಸರ್ವೋದಯ ಇರವರ

ಮಾನವತಿ (ತೆಲುಗು)
ಭೂಮಿಕೆ—ಜಿ. ವರಲಕ್ಷ್ಮೀ, ಶ್ರೀರಂಜನಿ, ನಾರಾಯಣರಾವ್, ರೇಲಂಗಿ, ಶಿವರಾವ್, ವಂಗಕ್ಕಾಮುಲ ಮುಂತಾದವರು.

ನ್ಯೂ ಆಪೇರ
೨೨—೨—೫೨ ರಿಂದ
"ಸ್ತ್ರೀಸಾಹಸಂ" ತಯಾರಿಸಿರುವ ವಿನೋದ ಪ್ರೊಡಕ್ಷರವರ
ಶಾಂತಿ
(ತೆಲುಗು)
ಪಾತ್ರ :—ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ॥ ಸುಬ್ಬರಾವ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೨೦೮) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೩—೨—೧೯೫೨ನೇ ಶನಿವಾರ [ಸಂಚಿಕೆ ೧೫೨

ಶ್ರೀ ಶ್ರೀ ಪ್ರಕಾಶರವರು ಮದರಾಸಿನ ಗೌರ್ನರಾಗಿ ನೇಮಕ

ಮುಂದಿನ ವರ್ಷ ಭಾರತದ ರೈಲ್ವೆಯ ಶತಮಾನೋತ್ಸವ

ಶಿಕ್ಷೆ ಖೋತಾ ಮತ್ತು ಮನ್ನಾ

ಬೆಂಗಳೂರು ಫೆ ೨೧

ಶ್ರೀಮನ್ಮಹಾರಾಜರ ದ್ವಿತೀಯಪುತ್ರಿಯ ನಾಮಕರಣದ ಸಂತೋಷಾರ್ಥವಾಗಿ ಸಂಸ್ಥಾನದ ನಾನಾ ಜೈಲು ಮತ್ತು ಲಾಕಪ್ಪುಗಳಲ್ಲಿರುವ ಕೆಲವು ಬಗೆಯ ಖೈದಿಗಳಿಗೆ ಅವರ ಕಾರಾಗೃಹವಾಸದ ಅವಧಿಯನ್ನು ಮನ್ನಾ ಮತ್ತು ಖೋತಾಮಾಡಿ ಶ್ರೀಮನ್ಮಹಾರಾಜರು ಆಜ್ಞೆಮಾಡಿದ್ದಾರೆ.

ನಾಯಕರು ದೆಹಲಿಗೆ

ಬೆಂಗಳೂರು ಫೆ ೨೨

ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಮೈಸೂರು ಮದರಾಸ್ ಪ್ರಾಂತ್ಯಗಳಲ್ಲಿ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ದೆಹಲಿಗೆ ಹಿಂತಿರುಗಿದರು. ಶ್ರೀ ಯು ಎನ್ ಧೇಬರ್ ಮೈಸೂರಿನಲ್ಲಿ ತಾವು ನಡೆಸಿದ ಸಂಧಾನ ವಿಷಯವನ್ನೆಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರಿಗೆ ವರದಿಮಾಡಿದ ಮೇಲೆ ಶ್ರೀ ನೆಹರೂರವರು ಪುನಃ ಮೈಸೂರು ನಾಯಕರುಗಳಾದ ಶ್ರೀ ಕೆ ಸಿ ರೆಡ್ಡಿ ಮತ್ತು ಹನುಮಂತಯ್ಯನವರನ್ನು ದೆಹಲಿಗೆ ಬರಮಾಡಿಕೊಂಡು ಪುನಃ ಮಾತುಕತೆ ನಡೆಸಿ ಹೇಗಾದರೂ ಮಾಡಿ ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯು ಅವಿರೋಧವಾಗಿ ನಡೆಯುವಂತೆ ಏರ್ಪಾಡು ಮಾಡಲಿರುವರೆಂದು ಹೇಳಲಾಗಿದೆ

ಮೋಟಾರು ಕೆಲಸಗಾರರ ಸಭೆ

ಮೈಸೂರು ಫೆ ೨೨

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸರ್ವಸದಸ್ಯರ ಸಭೆಯು ೨೫ನೇ ತಾ॥ ಸೋಮವಾರ ಸಂಜೆ ೬ ಗಂಟೆಗೆ ಸಂಘದ ಕಛೇರಿಯಲ್ಲಿ ನಡೆಯುತ್ತದೆ.

ಮೈಸೂರು ಪ್ರಾಂತ್ಯದ ಎ ಎ ಟಿ ಯು ಸಿ ಕಾರ್ಯದರ್ಶಿಗಳಾದ ಶ್ರೀ ಹೆಚ್ ಕೇಶವ ಅಯ್ಯಂಗಾರ್ಯರವರು ಭಾಷಣ ಮಾಡುವರು

* ಬೆಂಗಳೂರಿನಲ್ಲಿರುವ ಹಿಂದೂಸ್ಥಾನ ವಿಮಾನ ಕಾರ್ಖಾನೆಯು ಇದುವರೆಗೆ ಸಾಲಿಯಾನಾ ೧೦೦ ರೈಲ್ವೆ ಕೋಚುಗಳನ್ನು ತಯಾರಿಸುತ್ತಲಿದೆ. ಇನ್ನು ಮುಂದೆ ೧೮೦ ಕೋಚುಗಳನ್ನು ತಯಾರಿಸುವುದೆಂದು ಹೇಳಲಾಗಿದೆ.

ಚುನಾವಣಾ ಸಮಿತಿಸಭೆ

ಬೆಂಗಳೂರು ಫೆ ೨೨

ಮೈಸೂರು ಕಾಂಗ್ರೆಸ್ ಚುನಾವಣಾ ಸಮಿತಿಯ ಸಭೆಯು ಭಾರತ ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ಲಿಗೆ ಉಮೇದುವಾರರನ್ನು ಆರಿಸಲು, ನಾಳೆ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುತ್ತದೆ.

ಶ್ರೀ ತಾಕಮತ್‌ಜೈರ್ ಪುನಃ ನಾಯಕರು

ಮಧ್ಯ ಭಾರತ ಶಾಸನ ಸಭೆಗೆ ಚುನಾವಣೆಯಲ್ಲಿ ಪರಾಜಿತರಾದ ಶ್ರೀ ತಾಕಮತ್ ಜೈರರವರನ್ನು ಅಲ್ಲಿ ಹೊಸದಾಗಿ ಚುನಾಯಿತರಾಗಿರುವ ಶಾಸನ ಸಭೆಯ ಕಾಂಗ್ರೆಸ್ ಪಕ್ಷದವರು ಪುನಃ ನಾಯಕರನ್ನಾಗಿ ಐಕಮತ್ಯದಿಂದ ಚುನಾಯಿಸಿಕೊಂಡಿರುವರು. ಅವರು ಪುನಃ ಶಾಸನ ಸಭೆಗೆ ಉಪಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದೂ ಚುನಾಯಿತರಾಗಿ ಬರುವವರೆಗೆ ಪಕ್ಷದ ಉಪನಾಯಕರು ನಾಯಕ ಕಾರ್ಯವನ್ನು ನಿರ್ವಹಿಸಬೇಕೆಂದು ತೀರ್ಮಾನಿಸಿರುವರು.

ನೈಜಾಮರ ಪದಚ್ಯುತಿ ಪ್ರಶ್ನೆ ಶಾಸನಸಭೆಯಲ್ಲಿ ಕೂಡದು

ಹೈದರಾಬಾದ್ ನೈಜಾಮರನ್ನು ಪದಚ್ಯುತಿ ಮಾಡಬೇಕೆಂದು ಹೈದರಾಬಾದಿನ ವಾಮ ಪಕ್ಷದವರು ಮುಂದಿನ ಶಾಸನಸಭೆಯಲ್ಲಿ ಒಂದು ನಿರ್ಣಯವನ್ನು ತರಬೇಕೆಂದಿರುವುದನ್ನು ಶಾಸನಸಭಾಧ್ಯಕ್ಷರು ತಳ್ಳಿಹಾಕುವರೆಂದು ಹೇಳಲಾಗಿದೆ. ಹೈದರಾಬಾದ್ ನೈಜಾಮರು ಭಾರತ ರಾಜ್ಯಾಂಗದೀಕ್ಷೆ ಹೈದರಾಬಾದಿನ ರಾಜಪ್ರಮುಖರಾಗಿರುವರು. ಆದ್ದರಿಂದ ಭಾರತ ರಾಜ್ಯಾಂಗ ತಿದ್ದುಪಡಿಯಾಗುವವರೆಗೂ ಅವರನ್ನು ಪದಚ್ಯುತರನ್ನಾಗಿ ಮಾಡಲಾಗುವುದಿಲ್ಲ ಅದು ಪ್ರಾಂತ್ಯದ ಶಾಸನ ಸಭೆಗೆ ಒಳಪಟ್ಟ ವಿಷಯವಲ್ಲವಾದ್ದರಿಂದ ಈ ನಿರ್ಣಯವನ್ನು ತಳ್ಳಿಹಾಕಲಾಗುತ್ತದೆ

ರಾಷ್ಟ್ರಾಧ್ಯಕ್ಷರ ಆಡಳಿತ ಮುಕ್ತಾಯ

ಪಂಜಾಬಿನಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತವು ಏಪ್ರಿಲ್ ೨೬ನೇ ತಾ॥ನ ವೇಳೆಗೆ ಮುಕ್ತಾಯವಾಗುವುದೆಂದು ಹೇಳಲಾಗಿದೆ.

ಪಕ್ಷದಶಿಸ್ತು ಕಾಪಾಡಲು ಶಿಕ್ಷೆ

ಬೊಂಬಾಯಿ ನಗರದಲ್ಲಿ ನಡೆಯಲಿರುವ ಪೌರ ಚುನಾವಣೆಗಳಲ್ಲಿ ಕಾಂಗ್ರೆಸ್ ಅಧಿಕೃತ ಸದಸ್ಯರಿಗೆ ವಿರೋಧವಾಗಿ ನಿಲ್ಲಲು ತೊಂಟ ೬ ಜನ ಕಾಂಗ್ರೆಸ್ಸಿಗರನ್ನು ಬೊಂಬಾಯಿ ಪ್ರಾದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲ್‌ರು ಕಾಂಗ್ರೆಸ್ಸಿನಿಂದ ಸಸ್ಪೆಂಡು ಮಾಡಿರುತ್ತಾರೆ. ಮುಂದಿನಶಿಸ್ತಿನ ಕಾರ್ಯಕ್ರಮವನ್ನು ಅಲ್ಲಿಯ ಕಾರ್ಯಕಾರಿಸಮಿತಿ ನಿರ್ಧರಿಸಲಿದೆ.

ಸೂಚನೆ

ಮಹಾಶಿವರಾತ್ರಿ, ಪಾರಣೆ ಪ್ರಯುಕ್ತ ಭಾನುವಾರ ನಮ್ಮ ಕಾರ್ಯಾಲಯಕ್ಕೆ ರಜ. ಸೋಮವಾರದ ಪತ್ರಿಕೆ ಇಲ್ಲ

ವ್ಯವಸ್ಥಾಪಕ—

ಶ್ರೀ ಶ್ರೀಪ್ರಕಾಶ ಮದ್ರಾಸ್ ಗೌರ್ನರ್

ರಾಷ್ಟ್ರಾಧ್ಯಕ್ಷರ ಭವನದಿಂದ ನಿನ್ನೆ ಪ್ರಕಟಣೆಯೊಂದು ಹೊರಬಿದ್ದು ರಾಷ್ಟ್ರಾಧ್ಯಕ್ಷರು ಕೇಂದ್ರ ಸರ್ಕಾರದ ನೈಸರ್ಗಿಕ ಮತ್ತು ವೈಜ್ಞಾನಿಕ ಸಂಶೋಧನೆ ಇಲಾಖೆ ಸಚಿವ ಶ್ರೀ ಶ್ರೀ ಪ್ರಕಾಶರವರನ್ನು ಮದರಾಸಿನ ಗೌರ್ನರ್‌ರವರಾಗಿ ನೇಮಿಸಿರುವರು ಎಂದು ತಿಳಿಸುತ್ತದೆ.

ಶ್ರೀ ಶ್ರೀ ಪ್ರಕಾಶರವರು ಮೊದಲು ಅಸ್ಸಾಂ ಗೌರ್ನರ್‌ರವರಾಗಿದ್ದರು. ಪಾಕೀಸ್ತಾನದಲ್ಲಿ ಭಾರತದ ಹೈಕಮಿಷನರಾಗಿದ್ದರು.

ಮದರಾಸಿನ ಗೌರ್ನರ್ ಶ್ರೀ ಭಾವನಗರ್ ಮಹಾರಾಜರು ಕಳೆದ ಡಿಸೆಂಬರ್‌ನಲ್ಲಿ ವೈಯಕ್ತಿಕ ಕಾರಣಕ್ಕಾಗಿ ನಿವೃತ್ತಿ ಮಾಡಬೇಕೆಂದು ರಾಷ್ಟ್ರಾಧ್ಯಕ್ಷರನ್ನು ಕೇಳಿದ್ದರು.

ಕುಶಲ ಕಲೆಗಳ ಪ್ರದರ್ಶನ

ಹೈದರಾಬಾದಿನಲ್ಲಿ ಮುಂದಿನ ತಿಂಗಳು ಕುಶಲಕಲೆಗಳ ಪ್ರದರ್ಶನವೊಂದು ನಡೆಯುವುದಾಗಿ ಅಲ್ಲಿಯ ಮುಖ್ಯಮಂತ್ರಿ ಶ್ರೀ ಕೆ. ವೆಲ್ಲೋಡಿಯವರು ಹೇಳಿರುವರು.

ಭಾರತದಲ್ಲಿ ೧೮೫೩ ರಲ್ಲಿ ಬೊಂಬಾಯಿಯಲ್ಲಿ ಪ್ರಥಮವಾಗಿ ರೈಲ್ವೇ ಸಂಚಾರ ಆರಂಭವಾಯಿತು. ಇಲ್ಲಿಯವರೆಗೆ ಅಗಾಧವಾದ ಪ್ರಗತಿ ಸಾಧಿಸಲಾಗಿದೆ. ಮುಂದಿನ ವರ್ಷ ಭಾರತದಲ್ಲಿ ರೈಲ್ವೆ ಶತಮಾನೋತ್ಸವ ಮಾಡಲಾಗುವುದು. ಭಾರತದಲ್ಲಿ ಅಂತರ ರಾಷ್ಟ್ರೀಯ ರೈಲ್ವೇ ಸಮ್ಮೇಳನ ಮುಂದಿನ ವರ್ಷ ನಡೆಯುತ್ತದೆ. ಮುಂದಿನ ವರ್ಷ ರೈಲ್ವೆಯ ಆದಾಯದಲ್ಲಿ ೨೫ ಕೋಟಿರೂ ಹೆಚ್ಚಿಗೆ ಅಂದಾಜು ಮಾಡಿದ್ದೇವೆ ಎಂದು ಭಾರತದ ರೈಲ್ವೇ ಸಚಿವ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಪಾರ್ಲಿಮೆಂಟಿನಲ್ಲಿ ರೈಲ್ವೆ ಬಗ್ಗೆ ಶ್ವೇತಪತ್ರ ಪ್ರಕಟಣೆಯನ್ನು ವಿವರಿಸುತ್ತಾ ತಿಳಿಸಿದರು.

ಶ್ರೀ ತಿಕ್ಕಾರಾಂ ಪಾಲೀವಾಲ್ ರಾಜಾಸ್ಥಾನ್ ಶಾಸನಸಭಾ ನಾಯಕರು

ರಾಜಾಸ್ಥಾನ್ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ನಿನ್ನೆ ನಡೆದು ಈಗ ಕಂದಾಯ ಸಚಿವರಾಗಿರುವ ಶ್ರೀ ತಿಕ್ಕಾರಾಂ ಪಾಲೀವಾಲರನ್ನು ಪಕ್ಷದ ನಾಯಕರನ್ನಾಗಿ ಚುನಾಯಿಸಲಾಯಿತು.

ರಾಜಾಸ್ಥಾನ್ ಶಾಸನಸಭೆಯಲ್ಲಿ ಕಾಂಗ್ರೆಸ್ಸಿಗೆ ೮೧ ಸ್ಥಾನಗಳು ಲಭಿಸಿದೆ.

ಢಕ್ಕಾದಲ್ಲಿ ಪುನಃ ಗೋಲಿಬಾರ್

ಪೂರ್ವ ಪಾಕಿಸ್ಥಾನದ ರಾಜಧಾನಿ ಢಕ್ಕಾದಲ್ಲಿ ನಿನ್ನೆಯೂ ಮತ್ತೆ ವಿದ್ಯಾರ್ಥಿಗಳು ಪ್ರದರ್ಶನ ನಡೆಸಿ ಪ್ರದರ್ಶನ ತಡೆಗಟ್ಟಲು ಪೋಲೀಸರು ಗುಂಡು ಹಾರಿಸಬೇಕಾಗಿ ಬಂದು ಮೂವರು ಮಡಿದರು.

ಮೊನ್ನೆ ನಡೆದ ಗೋಲಿಬಾರ್‌ನಲ್ಲಿ ಇಬ್ಬರು ಮಡಿದರು.

ನೂತನ ಲೆಫ್ಟಿನೆಂಟ್ ಗೌರ್ನರ್‌ಗಳು

ವಿಂಧ್ಯಪ್ರದೇಶ ಮತ್ತು ಹಿಮಾಚಲ ಪ್ರದೇಶಗಳಿಗೆ ಲೆಫ್ಟಿನೆಂಟ್ ಗೌರ್ನರ್‌ಗಳಾಗಿ ನೇಮಕವಾಗಿರುವ ಶ್ರೀ ಕೆ. ಸಂತಾನಂ ಮತ್ತು ಮೇಜರ್ ಜನರಲ್ ಹಿಮ್ಮತ್ ಸಿಂಗ್ ಜೀಯವರು ಮಾರ್ಚ್ ಒಂದನೇ ತಾರೀಖು ತಮ್ಮ ನೂತನ ಹುದ್ದೆಯನ್ನು ಸ್ವೀಕರಿಸುವರು.

ಪ್ರಾಂತ್ಯಾನುಗುಣವಾಗಿ ಆಹಾರ ಶೇಖರಣೆ ಬೆಲೆ ಹೆಚ್ಚಿಸಲಾಗುವುದು

ಆಹಾರ ಮಂತ್ರಿಗಳ ಸಮ್ಮೇಳನವು ದೆಹಲಿಯಲ್ಲಿ ನಡೆದು ಆಹಾರ ಶೇಖರಣೆ, ದಾಸ್ತಾನು, ಹಂಚಾಣಿಕೆ ವಿಷಯವಾಗಿ ಸಮ್ಮೇಳನವು ಮಾಡಿದ ತೀರ್ಮಾನಗಳನ್ನು ಕೇಂದ್ರ ಆಹಾರ ಸಚಿವ ಶ್ರೀ ಕೆ. ಎಂ. ಮುನ್ಷಿಯವರು ನಿನ್ನೆಯ ದಿನ ಪಾರ್ಲಿಮೆಂಟಿನಲ್ಲಿ ವಿವರಿಸುತ್ತಾ, ಕೊರತೆ ಪ್ರಾಂತ್ಯಗಳಿಗೆ ಆಹಾರ-ಪದಾರ್ಥಗಳನ್ನು ಸಾಕಾದಷ್ಟು ಹಂಚಲು ತಕ್ಕ ಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ. ಪ್ರಾಂತ್ಯಾನುಗುಣವಾಗಿ ಆಹಾರ ಶೇಖರಣೆ ಬೆಲೆಯನ್ನು ಸ್ವಲ್ಪವಾಗಿ ಹೆಚ್ಚಿಸಲಾಗುತ್ತದೆ. ಈ ಹೆಚ್ಚಿನ ಬೆಲೆಯು ಮೇ ಮಾಹೆ ಅಂತ್ಯದವರೆಗೆ ಮಾತ್ರವಿರುತ್ತದೆ. ಮಣ ೧ಕ್ಕೆ ೨೦ ರೂ ನವರೆಗೆ ಹೆಚ್ಚಿಸಲಾಗುತ್ತದೆ. ಆ ಹೊರ ಪ್ರಾಂತ್ಯವನ್ನನುಸರಿಸಿ ಬೆಲೆ ಹೆಚ್ಚಿಸಲಾಗುವುದಿಲ್ಲ. ಕೊರತೆ ಪ್ರಾಂತ್ಯಗಳಿಗೆ ಆಹಾರವನ್ನು ಒದಗಿಸಲು ಈ ಹೆಚ್ಚುವರಿಯಿಂದ ಸುಮಾರು ೫ ಲಕ್ಷ ಟನ್ ಆಹಾರವು ದೊರೆಯುವ ನಿರೀಕ್ಷೆಯಿದೆ. ಕೆಲವು ವರ್ಷಗಳಿಂದ ಎಲ್ಲಾ ಪ್ರಾಂತ್ಯಗಳಿಗೂ ಸಬ್ಸಿಡಿಯನ್ನು ಕೆಲವೆಡೆ ಬೋನಸ್ಸನ್ನು ಕೊಡಲಾಗುತ್ತಲಿದೆ. ಅದನ್ನು ಇನ್ನು ಮುಂದೆ ನಿಲ್ಲಿಸಬೇಕೆಂಬ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಮುಂದಿನ ತಿಂಗಳಿಂದ ಈ ಸಬ್ಸಿಡಿ ಅಥವಾ ಬೋನಸ್ಸು ಕೊಡುವುದಿಲ್ಲ. ಆದರೆ ಈಗಿರುವ ಆಹಾರ-ಪದಾರ್ಥಗಳ ಬೆಲೆಯು ಮಣ ೧ಕ್ಕೆ ೧೯ ರೂ ಹಿಂದೆ ೧೫ ರೂ ಇತ್ತು. ೧೫ ರೂ ಸಂತೆಯೇ ಇರುವ ಕಡೆ ಮಾತ್ರ ಈ ಸಬ್ಸಿಡಿಕೊಡುವ ವಿಷಯವನ್ನು ವಿಮರ್ಶಿಸಲಾಗುತ್ತದೆ. ವಿಶೇಷವಾಗಿ ಆಹಾರಕೊರತೆ ಪ್ರದೇಶವಾದ ತಿರುವಾಂಕೂರು ಕೊಚ್ಚಿನ್ ಪ್ರಾಂತ್ಯಕ್ಕೆ ಇನ್ನು ಸ್ವಲ್ಪಕಾಲ ಬೇರೇ ರೂಪದಲ್ಲಿ ದ್ರವ್ಯಸಹಾಯ ಕೊಡುವ ಪ್ರಶ್ನೆಯು ಪರಿಶೀಲನೆಯಲ್ಲಿದೆ ಎಂದು ತಿಳಿಸಿದರು.

ನಾಲ್ಕು ಅಂಶ ಯೋಜನೆಯ ನಿಧಿ

ವಾಷಿಂಗ್ಟನ್ ಫೆ. ೧೮

ಹಿಂದುಳಿದ ದೇಶಗಳಿಗೆ ಕೊಡುತ್ತಿರುವ ತಾಂತ್ರಿಕ ಸಹಾಯ ನಿಧಿಯು ಮೊದಲು ವರ್ಷದ ಅಂದಾಜಿಗಿಂತ ಅರಷ್ಟು ಮೇಲ್ಪಟ್ಟು ಖರ್ಚಾಗುತ್ತದೆ. ಇದರಲ್ಲಿ ನಾಲ್ಕು ಅಂಶಗಳ ಯೋಜನೆಯ ನಿಧಿಯು ಸೇರಿಕೊಂಡಿದೆ.

ಈ ಸಾಲಿಗೆ ಪರಸ್ಪರ ರಕ್ಷಣಾನಿಧಿಯಲ್ಲಿ ನಾಲ್ಕು ಅಂಶಗಳ ಯೋಜನೆಗಾಗಿ ೨೦೯ ಮಿಲಿಯನ್ ಡಾಲರುಗಳನ್ನು ಒದಗಿಸಲಾಗಿದೆ. ೧೯೫೧ ನೇ ಇಸ್ವಿಯ ನಾಲ್ಕು ಅಂಶಗಳ ಯೋಜನೆಯ ಅಂದಾಜು ಪಟ್ಟಿ ಕೇವಲ ೩೫ ಮಿಲಿಯನ್ ಡಾಲರುಗಳಾಗಿತ್ತು.

ಈ ಯೋಜನೆಯ ನಿಧಿಯನ್ನು ಮತ್ತು ಸಹಾಯವನ್ನು ಯಾವ ದೇಶಗಳು ತಮ್ಮ ದೇಹ ಶ್ರಮದಿಂದ ದುಡಿದು ಜೀವನ ಮಟ್ಟವನ್ನು ಉತ್ತಮಪಡಿಸಿಕೊಳ್ಳುವರೋ ಅಂತಹ ದೇಶಗಳ ಉಪಯೋಗಕ್ಕಾಗಿ ಕೊಡಲಾಗುವುದೆಂದು ಈ ಯೋಜನೆಯ ಹೊಸ ಅಧ್ಯಕ್ಷ ಎರಿಕ್ ಜಾನ್ಸನ್ನರು ತಿಳಿಸಿದರು.

ನಾಲ್ಕು ಅಂಶಗಳ ಯೋಜನೆಯು ೨೦ ನೇ ಶತಮಾನದ ಅಮೆರಿಕದ ತಾಂತ್ರಿಕ ಮತ್ತು ಆರ್ಥಿಕ ಸಹಾಯ ನೀಡುವ ಒಂದು ಉದಾಹರಣೆ ಎಂದು ತಿಳಿಸಿದರು.

ಈ ವರ್ಷದ ೨೦೯ ಮಿಲಿಯನ್ ಡಾಲರುಗಳಲ್ಲಿ ಲ್ಯಾಟಿನ್ ಅಮೆರಿಕಕ್ಕೆ ೧೯ ಮಿಲಿಯನ್ ಡಾಲರುಗಳು ಮಧ್ಯ ಪ್ರಾಚ್ಯ ಮತ್ತು ಸ್ವತಂತ್ರ ಆಫ್ರಿಕಕ್ಕೆ ಏಷ್ಯಾಕ್ಕೆ ೬೬ ಮಿಲಿಯನ್ ಡಾಲರುಗಳು ಇಸ್ರೇಲಿ ನಿರಾಶ್ರಿತರಿಗೆ ೫೦ ಮಿಲಿಯನ್ ಡಾಲರುಗಳನ್ನು ಮೀಸಲಿಡಲಾಗಿದೆ.

ಅಮೆರಿಕವು ಈ ನಿಧಿಯ ಪರವಾಗಿ ಭಾರತದ ಅಭಿವೃದ್ಧಿಗೆ ೫೦ ಮಿಲಿಯನ್ ಡಾಲರುಗಳನ್ನು ಕೊಡುವುದು.

ನ್ಯೂಸ್ ಪ್ರಿಂಟ್ ತಯಾರಿಕೆ

ಅಮೇರಿಕಾದಲ್ಲಿ ನ್ಯೂಸ್‌ಪ್ರಿಂಟ್ ಕಾಗದವನ್ನು ಅಪಾರ ಪ್ರಮಾಣದಲ್ಲಿ ತಯಾರಿಸಲು ಕೋಟ್ಯಾಂತರ ಡಾಲರುಗಳ ಬೆಲೆಬಾಳುವ ಮೂರು ಕಾರ್ಖಾನೆಗಳನ್ನು ಡಿಫೆನ್ಸ್ ಉತ್ಪನ್ನ ಇಲಾಖೆಯು ಸ್ಥಾಪಿಸಲು ಅವಕಾಶಕೊಟ್ಟಿದೆ.

ಕಡ್ಡಾಯ ಮಿಲಿಟರಿ ಶಿಕ್ಷಣ

ಅಮೇರಿಕಾದಲ್ಲಿ ಎಲ್ಲಾ ಪುರುಷರಿಗೂ ಕಡ್ಡಾಯ ಮಿಲಿಟರಿ ಶಿಕ್ಷಣವನ್ನು ಕೊಡಬೇಕೆಂದು ಅಮೇರಿಕಾ ಸೆನೆಟ್ ಮಸೂದೆಯನ್ನು ಅಂಗೀಕರಿಸಿದೆ

ಭಾರತದಲ್ಲಿ ಹೊಸ ಔಷಧದ ಕಾರ್ಖಾನೆ

ನ್ಯೂಯಾರ್ಕ್ ಫೆ ೧೬

'ಅತುಲ್ ಲಿಮಿಟೆಡ್' ಎಂಬ ಹೆಸರಿನಲ್ಲಿ ಬೊಂಬಾಯಿನ ಬುಲ್ಸಾರ್ ಹತ್ತಿರ ಒಂದು ಔಷಧವನ್ನು ತಯಾರು ಮಾಡುವ ಕಾರ್ಖಾನೆಯು ಅಮೆರಿಕದ ಬಂಡವಾಳದ ಸಹಾಯದಿಂದ ಸ್ಥಾಪಿತವಾಗುವುದು ಪ್ಲೇಗ್ ಉಪದ್ರವವನ್ನು 'ತಡೆಯುವ ಸಲ್ಫಡಯಾಜೀನ್' ಎಂಬ ಔಷಧವನ್ನು ಇಲ್ಲಿ ತಯಾರು ಮಾಡುವರು. ಅಮೆರಿಕನ್ ಸಿನಾಮಿಡ್' ಕಂಪನಿಯವರು ಶೇಕಡ ೧೦ ರಷ್ಟು ಬಂಡವಾಳವನ್ನು ಹಾಕಿರುವರು.

ಈ ಕಂಪನಿಯ ಉಪಾಧ್ಯಕ್ಷರಾದ ಶ್ರೀ ಎಸ್. ಸಿ. ಮೂಡಿಯವರು ಭಾರತಕ್ಕೆ ಬಂದು ಈ ಕಾರ್ಖಾನೆಯ ಸ್ಥಾಪನೆಯ ಪ್ರಾರಂಭೋತ್ಸವದಲ್ಲಿ ಭಾಗವಹಿಸುವರು.

ಈ ಸಲ್ಫ ಡ್ರಗ್ಗುಗಳಲ್ಲಿ ಕಾಲರ, ಪ್ಲೇಗ್, ನ್ಯುಮೋನಿಯಾ, ರಕ್ತವಿಷವಾಗುವುದು ಮೊತ್ತ ರೋಗಗಳು ಮುಂತಾದ ರೋಗಿಗಳಿಗೂ ಉಪಯೋಗಿಸಲಾಗುವುದು ಎಂದು ಸಿನಾಮಿಡ್' ಕಂಪನಿಯ ಸಂಶೋಧಕ ಡಾ|| ಆರ್ ಡಬ್ಲಿಯು ಲಿಂಟ್‌ರು ಹೇಳಿದ್ದಾರೆ.

ರೇಷ್ಮೆ ಕಾರ್ಖಾನೆ ಸೋಲ್ ಏಜೆನ್ಸಿ

ಮೈಸೂರು ಸರ್ಕಾರವು ಒಂದು ಪ್ರಕಟಣೆ ಹೊರಡಿಸಿ ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಗೆ ಟೆಂಡರ್ ಕರೆಯದೆ ಸೋಲ್ ಏಜೆಂಟನ್ನು ನೇಮಿಸಲಾಯಿತೆಂದು ಮೈಸೂರು ರೇಷ್ಮೆ ಬಟ್ಟೆ ವರ್ತಕರ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಅಂಗೀಕರಿಸಲ್ಪಟ್ಟಿತೆಂದು ವರದಿಯಾಗಿರುವ ನಿರ್ಣಯದ ಕಡೆ ಸರ್ಕಾರದ ಗಮನ ಸೆಳೆಯಲ್ಪಟ್ಟಿದೆ. ಟೆಂಡರನ್ನು ಕರೆಯಲಿಲ್ಲವೆಂಬುದು ಸಂಪೂರ್ಣ ತಪ್ಪು ಅಭಿಪ್ರಾಯ ೧೯೫೦ ನೇ ಡಿಸೆಂಬರ್ ೭ ಮತ್ತು ೧೪ ನೇ ತಾರೀಖಿನ ಗೆಜೆಟ್ ಪ್ರಕಟಣೆ ಮತ್ತು ಸ್ಥಳೀಯ ಪತ್ರಿಕೆಗಳಲ್ಲಿನ ಪ್ರಕಟಣೆಯಂತೆ ಟೆಂಡರನ್ನು ಕರೆಯಲಾಗಿತ್ತು. ಬಂದ ಟೆಂಡರುಗಳನ್ನು ಕೈಗಾರಿಕಾ ಸಂಸ್ಥೆಗಳ ಮ್ಯಾನೇಜ್‌ಮೆಂಟ್ ಬೋರ್ಡ್‌ನಲ್ಲಿ ಸಂಪೂರ್ಣವಾಗಿ ಪರಿಶೀಲಿಸಿ ಪಂತಾರು ಬೋರ್ಡಿನ ಶಿಫಾರಸಿನಂತೆ ಹೆಚ್ಚು ಅನುಕೂಲವಾಗಿದೆಯೆಂದು ಪ್ರಕೃತ ಏಜೆನ್ಸಿಯನ್ನು ಕೊಡಲಾಯಿತು. ಹಾಲಿ ಏಜೆಂಟರಾದ ಜನಾಬ್ ಮಹಮದ್ ಅಬ್ಬಾಸ್‌ಸೇಟ್‌ರವರು ಉದ್ಯಮದಲ್ಲಿಲ್ಲವೆಂಬುದು ಸರಿಯಲ್ಲ. ಮೂವತ್ತು ವರ್ಷಕ್ಕಿಂತ ಹೆಚ್ಚಾಗಿ ಅವರು ಮೈಸೂರಿನಲ್ಲಿ ಪ್ರಸಿದ್ಧ ಬಟ್ಟೆ ವ್ಯಾಪಾರಿಗಳಾಗಿದ್ದರು. ಆದುದರಿಂದ ನಿರ್ಣಯ ತಪ್ಪು ತಿಳುವಳಿಕೆಯಿಂದ ಕೂಡಿದೆ ಎಂದು ತಿಳಿಸಲಾಗಿದೆ.

ಸಮಾಜಸೇವಾಕೇಂದ್ರದ ಆರಂಭ

ಪಶ್ಚಿಮ ಬಂಗಾಳದಲ್ಲಿ ಮುಂದಿನ ತಿಂಗಳು ಸಮಾಜಸೇವಾ ಕೇಂದ್ರಗಳನ್ನು ತೆರೆಯಲಾಗುವುದೆಂದೂ, ಅಮೆರಿಕದ ಪರಿಣಿತರೊಬ್ಬರು ಈ ಕೇಂದ್ರಗಳಲ್ಲಿ ತರಪೇತು ಕೊಡುವರೆಂದೂ ಹೇಳಲಾಗಿದೆ. ಈ ಕೇಂದ್ರ ಸ್ಥಾಪಿಸಲು ನಿವೇಶನದ ಪರಿಶೀಲನೆಯಾಗುತ್ತಿದೆ.

ಈ ದಿನ ಬೆಳಿಗ್ಗೆ ೧೦-೩೦ಕ್ಕೆ ಸರಿಯಾಗಿ ಪೌರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ರಾಜಕಮಲ್' ಚಿತ್ರಮಂದಿರದಲ್ಲಿ ರಾಜನರ್ತಕಿ ಎಂಬ ಹಿಂದೀ ಚಿತ್ರವನ್ನು ಮಾದರೀಶಾಲಾ ಸಹಾಯಾರ್ಥವಾಗಿ ಪ್ರದರ್ಶಿಸಲ್ಪಡುವುದು ಸಾರ್ವಜನಿಕರು ಸಹಕರಿಸಬೇಕಾಗಿ ವಿನಂತಿ.

ವುಡ್ ಲ್ಯಾಂಡ್ಸ್

೨೨—೨—೫೨ ರಿಂದ ೨ ನೇ ವಾರ

ದಿನವಹಿ 3 ಪ್ರದರ್ಶನಗಳು

ಮಹಾಶಿವರಾತ್ರಿ ಪ್ರಯುಕ್ತ ಈ ದಿನ ವಿಶೇಷ ಪ್ರೋಗ್ರಾಂ ರಾತ್ರಿ ೧೨—೪೫ ಕ್ಕೆ

ಅಲ್‌ಬೇಲ

ಪಾತ್ರ:— ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ನ್ಯೂ ಆಪೇರ

೨೨—೨—೫೨ ರಿಂದ

"ಶ್ರೀಸಾಹಸಂ" ತಯಾರಿಸಿರುವ ವಿನೋದ ಪ್ರೊಡಕ್ಷನರವರ

ಶಾಂತಿ

(ತೆಲಗು)

ಪಾತ್ರ :—ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ|| ಸುಬ್ಬರಾವ್.

ಮಹಾಶಿವರಾತ್ರಿ ಪ್ರಯುಕ್ತ ಈ ದಿನ ವಿಶೇಷ ಪ್ರೋಗ್ರಾಂ ರಾತ್ರಿ ೧೨—೪೫ ಕ್ಕೆ

ರಣಜಿತ್

೨೨—೨—೫೨ ರಿಂದ ಅಮೋಘವಾದ ೨ನೇ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆ ವಾ ರ ::—

ಪ್ರಕಾಶಕರು :—ಜಿ ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೬—೨—೧೯೫೨ನೇ ಮಂಗಳವಾರ [ಸಂಚಿಕೆ ೧೫೩

ಶ್ರೀ ಕೆ. ಸಿ. ರೆಡ್ಡಿ ಮತ್ತು ಶ್ರೀ ಕೆ. ಹನುಮಂತಯ್ಯ ದೆಹಲಿಗೆ

ರೈಲ್ವೇ ಕಾರ್ಮಿಕರ ಕನಿಷ್ಠವೇತನ, ಪ್ರಾವಿಡೆಂಟ್ ಫಂಡುಗಳ ಪರಿಶೀಲನೆಗೆ ಸಮಿತಿ ನೇಮಕ

ವಾರ್ಷಿಕೋತ್ಸವ

ಮೈಸೂರು ಫೆ ೨೫

ಇದೇ ಸಂಜೆ ಶ್ರೀ ಸುತ್ತೂರು ವಿದ್ಯಾರ್ಥಿನಿಲಯ ಸಂಘದ ವಾರ್ಷಿಕೋತ್ಸವವು ನಡೆದು ಮಹಾರಾಜ ಕಾಲೇಜು ಅಸಿಸ್ಟೆಂಟ್ ಪ್ರೊಫೆಸರಾದ ಶ್ರೀ ಎಂ. ಯಮುನಾಚಾರ್ಯರು ಮುಖ್ಯ ಭಾಷಣಮಾಡಿದರು.

ಮೈಸೂರು ಪುರಸಭಾ ಕಮಿಷನರ್ ಶ್ರೀ ಎಂ. ಎನ್. ಸ್ವಾಮಿನಾಥನವರು ಅಧ್ಯಕ್ಷತೆ ವಹಿಸಿದ್ದರು.

ಅಖಿಲಕರ್ನಾಟಕ ಸಮ್ಮೇಳನದ ಮಾಜಿ ಅಧ್ಯಕ್ಷ ಶ್ರೀ ಚಂದ್ರಶೇಖರಶಾಸ್ತ್ರಿಗಳು ಶ್ರೀ ತಿ. ತಿ. ಬಸವನಾಳರವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ನೆರವೇರಿಸಿದರು.

ಬಟ್ಟೆ ಗಿರಣಿಗಳಿಗೆ ಬೀಗ ಮುದ್ರೆ

ಬಟ್ಟೆ ಕೊಳ್ಳುವವರಿಗೆ ಕೊಡದೆ ಕಾಳಸಂತೆಯಲ್ಲಿ ಮಾರಲು ಬಟ್ಟೆಯನ್ನು ಶೇಖರಿಸಿಟ್ಟುಕೊಂಡಿದ್ದರೆಂಬ ಅಪಾದನೆ ಮೇಲೆ ಕೇಂದ್ರ ಸರ್ಕಾರದ ಟೆಕ್ಸ್‌ಟೈಲ್ ಕಮೀಷನರ್ ಆಜ್ಞೆ ಮೇರೆಗೆ ಬೊಂಬಾಯಿ ಪೋಲೀಸಿನವರು ಬೊಂಬಾಯಿನ ಪ್ರಮುಖ ೫ ಬಟ್ಟೆ ಗಿರಣಿಗಳಿಗೆ ಬೀಗ ಮುದ್ರೆಹಾಕಿ ಅಲ್ಲಿ ಶೇಖರಿಸಿಟ್ಟಿದ್ದ ಬಟ್ಟೆಯನ್ನೆಲ್ಲ ವಶಪಡಿಸಿಕೊಂಡಿರುವರೆಂದು ಹೇಳಲಾಗಿದೆ

ಸಿರಿಯಾ ಭಾರತ ವ್ಯಾಪಾರ ಒಪ್ಪಂದ

ಭಾರತಕ್ಕೂ ಸಿರಿಯಾಗೂ ನಿನ್ನೆ ವ್ಯಾಪಾರ ಮತ್ತು ಸಾಂಸ್ಕೃತಿಕ ಒಪ್ಪಂದವಾಯಿತು. ಭಾರತವು ಇಲ್ಲಿಂದ ರಬ್ಬರ್, ಕಚ್ಚಾ ಹತ್ತಿ, ಹತ್ತಿಬಟ್ಟೆ ಮುಂತಾದುವನ್ನು ಕಳುಹಿಸುವುದು.

ನೌಕರರ ರಾಷ್ಟ್ರೀಯ ವಿಮಾ ಯೋಜನೆ

ಭಾರತದ ಸಮಾಜ ಭದ್ರತೆಯ ಪ್ರಧಾನ ಯೋಜನೆಗಳಲ್ಲಿ ಒಂದಾದ ನೌಕರರ ರಾಷ್ಟ್ರೀಯ ವಿಮಾ ಯೋಜನೆಯ ಆರಂಭೋತ್ಸವವನ್ನು ಪ್ರಧಾನಿ ನೆಹ್ರೂರವರು ಮೊನ್ನೆ ನೆರವೇರಿಸಿದರು ಪ್ರಾರಂಭದಲ್ಲಿ ಈ ಯೋಜನೆಯನ್ನು ದೆಹಲಿಯಲ್ಲೂ ಕಾನ್‌ಪುರದಲ್ಲೂ ಜಾರಿಗೆ ತರಲಾಗುವುದು.

ಚುನಾವಣಾ ಸಮಿತಿ

ಬೆಂಗಳೂರು ಫೆ ೨೫

ಸಂಸ್ಥಾನ ಲೆಜಿಸ್ಲೇಟಿವ್ ಕೌನ್ಸಿಲ್ ಕೌನ್ಸಿಲ್ ಆಫ್‌ಸ್ಟೇಟ್ಸ್ ಚುನಾವಣೆಗೆ ಕಾಂಗ್ರೆಸ್ ಸ್ಪರ್ಧಿಗಳ ಆಯ್ಕೆಯ ಕ್ರಮ ಪರಿಶೀಲಿಸಲು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ಭಾನುವಾರ ಸೇರಬೇಕಾದ್ದುದನ್ನು ಇದೇ ೨೮ನೈ ಗುರುವಾರ ಬೆಳಿಗ್ಗೆ ೯ ಗಂಟೆಯವರೆಗೆ ಮುಂದು ಹಾಕಲಾಗಿದೆ. ಕೆಲವು ಸದಸ್ಯರುಗಳಿಗೆ ಭಾನುವಾರ ಸಭೆಗೆ ಬರಲಾಗದಿದ್ದುದೇ ಇದಕ್ಕೆ ಕಾರಣ

ಕಮ್ಯೂನಿಸ್ಟರ ವಿರುದ್ಧ ಪ್ರಜಾಪ್ರಭುತ್ವ ರಕ್ಷಣೆ

ಕಮ್ಯುನಿಸ್ಟರು ಮತ್ತಿತರರಂತೆ ಹಿಂಸೆಯಿಂದ ಅಧಿಕಾರ ಕಿತ್ತುಕೊಳ್ಳಬಯಸುವವರಿಂದ ಭಾರತೀಯ ಪ್ರಜಾಪ್ರಭುತ್ವವನ್ನು ರಕ್ಷಿಸಬಯಸುವ ಎಲ್ಲ ಪ್ರಜಾಪ್ರಭುತ್ವ ಶಕ್ತಿಗಳೂ ಒಂದುಗೂಡಲು ತಾವು ಇಚ್ಛಿಸುವುದಾಗಿ ಕೃಷಿಕಾರ ಲೋಕಪಕ್ಷದ ನಾಯಕ ಶ್ರೀ ಎನ್. ಜಿ. ರಂಗಾ ಮೊನ್ನೆ ಪತ್ರಿಕಾ ಗೋಷ್ಠಿಯೊಂದರಲ್ಲಿ ತಿಳಿಸಿದರು.

ಚುನಾವಣಾ ಮುಕ್ತಾಯ

ಮೈಸೂರು ಸಂಸ್ಥಾನದಲ್ಲಿ ಕೊನೆಯದಾಗಿ ಹೊಸಕೋಟೆ ಚುನಾವಣಾ ಕ್ಷೇತ್ರದಲ್ಲಿ ಮೊನ್ನೆಯ ದಿನ ಚುನಾವಣೆ ಮುಕ್ತಾಯವಾಯಿತು. ಇಲ್ಲಿಯ ದ್ವಿಸದಸ್ಯಕ್ಷೇತ್ರದಿಂದ ೧೧ ಜನ ಸ್ಪರ್ಧಿಸಿರುವರು. ನಿನ್ನೆಯಿಂದ ಎಣಿಕೆ ಪ್ರಾರಂಭವಾಗುತ್ತದೆ.

ಆಗಷ್ಟ್ ೭ ಕ್ಕೆ ಪಟ್ಟಾಭಿಷೇಕ

ಇಂಗ್ಲೆಂಡಿನಲ್ಲಿ ರಾಣಿ ಎಲಿಜಬೆತ್‌ರವರ ಕಿರೀಟಧಾರಣಮಹೋತ್ಸವಕ್ಕೆ ಆಗಸ್ಟ್ ೭ ನೇ ತಾರೀಖು ಗುರುವಾರ ಶುಭದಿನವೆಂದು ಪರಿಗಣಿಸಲಾಗಿದೆ.

ರೈಲ್ವೇ ಪರಿಶೋಧನಾ ಕೇಂದ್ರ

ಅಖಿಲ ಭಾರತ ರೈಲ್ವೆ ಬೋರ್ಡ್ ಛೇರ್ಮನ್‌ರವರು ನಿನ್ನೆ ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತಾಡುತ್ತಾ ರೈಲ್ವೆ ಇಲಾಖೆಯಲ್ಲಿ ನಾನಾ ಪ್ರಗತಿ ಸಾಧಿಸಲು ಲಕ್ನೋದಲ್ಲಿ ಒಂದು ರೈಲ್ವೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗುವುದು ಎಂದು ತಿಳಿಸಿರುವರು.

ಸುಪ್ರೀಂಕೋರ್ಟಿಗೆ ಸಿರಾ ಮೊಕದ್ದಮೆ

ಬೆಂಗಳೂರು ೨೫

ಸಿರಾದಲ್ಲಿ ಕೆಲವು ಕಾಲದಹಿಂದೆನಡೆದ ದೊಂಬಿ ಮೊಕದ್ದಮೆಯನ್ನು ವಿಶೇಷ ನ್ಯಾಯಾಲಯವು ವಿಚಾರಿಸಿ ಹಲವು ಅಪರಾಧಿಗಳಿಗೆ ಶಿಕ್ಷೆ ವಿಧಿಸಿದ್ದರಷ್ಟೆ. ಈ ಅಪರಾಧಿಗಳಲ್ಲಿ ಹಲವರು ಸುಪ್ರೀಂಕೋರ್ಟಿನಲ್ಲಿ ವಿಚಾರಣೆಯಾಗಬೇಕೆಂದು ಕೋರಿದ್ದರಿಂದ ಮೈಸೂರು ಶ್ರೇಷ್ಠ ನ್ಯಾಯಾಲಯವು ಇವರಿಗೆ ಸುಪ್ರೀಂಕೋರ್ಟಿಗೆ ಹೋಗಲು ರಹದಾರಿ ನೀಡಿದೆ.

ಕನಿಷ್ಠವೇತನ ಪ್ರಾವಿಡೆಂಟ್ ಫಂಡಿಗೆ ಸಮಿತಿ

ಕೇಂದ್ರ ಸರ್ಕಾರದ ರೈಲ್ವೇಶಾಖೆಯ ರಾಜ್ಯಸಚಿವ ಶ್ರೀ ಕೆ ಸಂತಾನಂ ನಿನ್ನೆ ಪಾರ್ಲಿಮೆಂಟಿನಲ್ಲಿ ರೈಲ್ವೆ ಬಜೆಟ್ಟಿನಬಗ್ಗೆ ಸದಸ್ಯರು ಮಾಡಿದ ಟೀಕೆಗೆ ಉತ್ತರಕೊಡುತ್ತಾ ರೈಲ್ವೆನೌಕರರ ಕನಿಷ್ಠವೇತನ ನಿಗದಿಮಾಡಲು ಮತ್ತು ಪ್ರಾವಿಡೆಂಟ್ ಫಂಡ್‌ಗಳಿಗೆ ಮಾಲೀಕರ ಭಾಗ ಏರ್ಪಡಿಸಲು ಒಂದು ಸಮಿತಿ ರಚಿಸಲಾಗುವುದೆಂದರು

ಗ್ರಹಣಸ್ನಾನಕ್ಕೆ ೫ಲಕ್ಷ ಜನರು

ಸುಮಾರು ಸಾವಿರ ವರ್ಷದಿಂದೀಚೆಗೆ ಸೋಮವಾರದದಿನ ಬಂದ ಸೂರ್ಯಗ್ರಹಣದಲ್ಲಿ ಜನರು ಮೋಕ್ಷ ಸಂಪಾದಿಸಲು ದೇಶದ ವಿವಿಧಭಾಗದಲ್ಲಿ ಪುಣ್ಯಕ್ಷೇತ್ರಗಳಲ್ಲಿ ನಿನ್ನೆ ಸ್ನಾನ ಜಪತಪ ಮಾಡಿದರು. ಪಂಜಾಬಿನಲ್ಲಿ ಕುರುಕ್ಷೇತ್ರದಲ್ಲಿ ನಿನ್ನೆ ಐದುಲಕ್ಷ ಜನರು ಗ್ರಹಣಸ್ನಾನಮಾಡಲು ಸೇರಿದ್ದರು. ಗುಂಪು ತಡೆಗಟ್ಟಲು ೨೦೦೦ ಪೋಲೀಸರು, ೫೦೦೦ ಸ್ಕೌಟುಗಳಿದ್ದರಲ್ಲದೆ ಗುಂಪಿನ ಒತ್ತಡದಿಂದ ಯಾರಾದರೂ ಮುಳುಗಿದರೆ ಅವರನ್ನು ಎತ್ತಲು ೪೦೦ ಜನ ಈಜುಗಾರರು ಸಿದ್ಧವಾಗಿದ್ದರು. ಕೇಂದ್ರಸರ್ಕಾರದ ಗೃಹಸಚಿವ ಕೈಲಾಸನಾಥ ಖಟ್ಜು ಶ್ರೀ ಎನ್. ಗ್ಯಾಡ್ಗಿಲ್ ಮತ್ತು ಪಂಜಾಬಿನ ಗೌರ್ನರ್ ಶ್ರೀ ಚಂದೂಲಾಲ್‌ತ್ರಿವೇದಿ ಸ್ನಾನಮಾಡಿದರು. ಭಾರತದ ವಿಜ್ಞಾನಿಗಳು ಇರಾಕಿನಲ್ಲಿ ಸೂರ್ಯಗ್ರಹಣ ವೀಕ್ಷಿಸಿದರು.

ದೆಹಲಿಗೆ ಶ್ರೀ ರೆಡ್ಡಿ ಮತ್ತು ಶ್ರೀ ಹನುಮಂತಯ್ಯ

ಬೆಂಗಳೂರು ಫೆ ೨೫

ಭಾರತದ ಪ್ರಧಾನಿ ಮತ್ತು ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ಜವಹರಲಾಲರ ಆಹ್ವಾನದಂತೆ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮತ್ತು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ನಾಳೆರಾತ್ರಿ ದೆಹಲಿಗೆ ತೆರಳುವರು.

ರಾಜಪ್ರಮುಖ ರಾಜ್ಯಗಳಿಗೆ ಸಲಹೆಗಾರರು

ಹೈದರಾಬಾದ್, ತಿರುವಾಂಕೂರ್,—ಕೊಚ್ಚಿನ್, ರಾಜಸ್ಥಾನ, ಪೆಪ್ಸು ಮುಂತಾದ ರಾಜಪ್ರಮುಖ ರಾಜ್ಯಗಳಿಗೆ ಭಾರತ ಸರ್ಕಾರವು ಸಲಹೆಗಾರರನ್ನು ನೇಮಿಸುವುದೆಂದು ಸಂಸ್ಥಾನ ಶಾಖಾ ಸಚಿವ ಶ್ರೀ ಗೋಪಾಲಸ್ವಾಮಯ್ಯಂಗಾರ್'ರವರು ಹೇಳಿರುವರು. ಇವರಿಗೆ ಕೌನ್ಸಿಲರ್ ಎಂಬ ಹೆಸರುಕೊಡಲಾಗುತ್ತದೆ. ಎಂದು ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸುತ್ತಾ, ಹೈದರಾಬಾದಿಗೆ ಇಬ್ಬರು, ಇತರ ಪ್ರಾಂತ್ಯಗಳಿಗೆ ಒಬ್ಬರನ್ನು ನೇಮಿಸಲಾಗುತ್ತದೆ ಎಂದು ತಿಳಿಸಿದರು.

ಮೈಸೂರಿಗೆ ಮಾತ್ರ ಸಲಹೆಗಾರರ ನೇಮಕವಿಲ್ಲ.

ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗುವುದು

ಕೇಂದ್ರ ಸರ್ಕಾರದ ರಾಜ್ಯ ಸಚಿವ ಶ್ರೀ ರಾಜ ಬಹದ್ದೂರ್'ರವರು ನಿನ್ನೆ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗೆ ಉತ್ತರ ಕೊಡುತ್ತಾ, ನಾಗಪುರದಲ್ಲಿ ನಡೆದ ವಿಮಾನಾಪಘಾತದ ಮರಿ ಬಂದನಂತರ ಇನ್ನು ಮುಂದೆ ವಿಮಾನ ನಡೆಸುವಾಗ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗುವುದು. ರಾತ್ರಿ ವೇಳೆ ಟಪ್ಪಾಲ್ ಸಾಗಿಸುವ ವಿಷಯವನ್ನೂ ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದರು.

ಟೈಕ್ಸ್ ಟೈಲ್ ಮಿಷಗ ಕಾರ್ಖಾನೆಯಾರಂಭ

ಬೊಂಬಾಯಿ ಬಳಿ ಥಾನಾದಲ್ಲಿ ರಾಷ್ಟ್ರಾಧ್ಯಕ್ಷರು ನಿನ್ನೆ ಟೆಕ್ಸ್‌ಟೈಲ್ ಮಿಷನ್ ಟೂಲ್ಸ್ ಫ್ಯಾಕ್ಟರಿಯನ್ನು ಆರಂಭ ಮಾಡಿದರು.

ಬ್ರಿಟನ್ನಿನ ಬಜೆಟ್

ಹೆಚ್ಚಿಗೆ ವರಮಾನವಿರುವವನಿಗೆ ಶೇ|| ೯೭.೫ ರಷ್ಟು ತೆರಿಗೆ

೧೯೦೦ ರಿಂದ ಪ್ರಥಮವಾಗಿ ಈ ವರ್ಷ ಮಾರ್ಚ್ ೪ನೇ ತಾ|| ಬ್ರಿಟಿಷ್ ಸರ್ಕಾರದ ಆರ್ಥಿಕ ಸಚಿವರು ಪಾರ್ಲಿಮೆಂಟಿಗೆ ಮುಂದಿನ ವರ್ಷದ ಆಯವ್ಯಯ ಪಟ್ಟಿಯನ್ನು ಮಂಡಿಸಲಿರುವರು.

ಸಾಮಾನ್ಯವಾಗಿ ಈ ಬಜೆಟ್ಟನ್ನು ಏಪ್ರಿಲ್ ಮಾಹೆಯಲ್ಲಿ ಮಂಡಿಸಲಾಗುವ ಪದ್ಧತಿ. ಆದರೆ ಇಂದಿನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಮುಂಚಿತವಾಗಿಯೇ ಈ ಬಜೆಟ್ಟನ್ನು ಪಾರ್ಲಿಮೆಂಟಿನಲ್ಲಿ ಸರ್ಕಾರ ಮಂಡಿಸಲು ಯೋಚಿಸಿದೆ.

ಈ ಬಜೆಟ್ಟನ್ನು ಲಾಭ ಮತ್ತು ಆದಾಯದ ಮೇಲೆ ನೇರವಾದ ತೆರಿಗೆ ಕಡಮೆಯಾಗಿ, ಕಟ್ಟುವ ತೆರಿಗೆ, ಹೊಗೆಸೊಪ್ಪು ತೆರಿಗೆ ಅಧಿಕವಾಗಿರುವುದು ಒಂದು ವೈಶಿಷ್ಟ್ಯ.

ನೇರವಾಗಿ ತೆರಿಗೆಯು ಯುದ್ಧಕಾಲದಲ್ಲಿ ಶೇಕಡ ೬೪.೧ ಇತ್ತು.

ಲೇಬರ್ ಸರ್ಕಾರವು ಆಡಳಿತಕ್ಕೆ ಬಂದ ಮೇಲೆ ಇದು ಶೇ|| ೩೩ ಇಳಿಯಿತು.

ಬ್ರಿಟನ್ನಿನಲ್ಲಿ ಆದಾಯ ತೆರಿಗೆಯು ಸಾಮಾನ್ಯವಾಗಿ ಶಕ್ತರಾದವರ ಮೇಲೆ ಹೊರಿಸುವುದು ಹೆಚ್ಚು. ವರ್ಷಕ್ಕೆ ೧೫೦೦೦ ಪೌಂಡುಗಳಿಗಿಂತ ಹೆಚ್ಚಿಗೆ ಆದಾಯವಿರುವವನು ಶೇ|| ೯೭.೫ ರಷ್ಟು ಆದಾಯ ತೆರಿಗೆಯನ್ನು ಕೊಡುವನು. ವರ್ಷಕ್ಕೆ ೧೦೦,೦೦೦ ಪೌಂಡು ಆದಾಯವುಳ್ಳವನು ತೆರಿಗೆ ಕೊಟ್ಟ ಮೇಲೆ ಕೇವಲ ೬೦೦೦ ಪೌಂಡುಗಳು ಉಳಿಯುವುದೂ ಕಷ್ಟವಾಗುತ್ತದೆ.

ಆದರೆ ಸಣ್ಣಪುಟ್ಟ ಆದಾಯದಾರರಿಗೆ ಅನೇಕ ರಿಯಾಯಿತಿಗಳಿವೆ. ಒಂದು ಸಂಸಾರಕ್ಕೆ ೪೦೦ ಪೌಂಡುಗಳವರೆಗೆ ಆದಾಯ ತೆರಿಗೆಯಿಲ್ಲ. ವಾರ್ಷಿಕ ಸಾಮಾನ್ಯವಾಗಿ ೮ ಪೌಂಡುಗಳನ್ನು ಸಂಪಾದಿಸುವವನು ಕೇವಲ ಶೇ|| ೧೨-೧೩ ರಷ್ಟು ಮಾತ್ರ ತೆರಿಗೆ ಕೊಡುವನು.

ಕೈಗಾರಿಕಾ ಸಂಸ್ಥೆಗಳಲ್ಲಿಯ ಕಾರ್ಮಿಕರಲ್ಲಿ ಸುಮಾರು ೫,೧೦೦,೦೦೦ ತೆರಿಗೆ ಕೊಡುವವರು ೨೧,೦೦೦,೦೦೦ ಇರುವರು.

ವ್ಯಾಪಾರ ಲಾಭಗಳ ಮೇಲೆ ಮೇಲೆ ಶೇ|| ೬೦, ವಿಣ ತೆರಿಗೆ ಶೇ|| ೨೦ ರಿಂದ ೭೫ ಮತ್ತು ಸ್ಟಾಂಪು ಡ್ಯೂಟಿ ಇವುಗಳು ನೇರವಾದ ತೆರಿಗೆಗಳಾಗಿವೆ.

ಹೊಗೆಸೊಪ್ಪಿನ ತೆರಿಗೆಯಿಂದ ವರ್ಷಕ್ಕೆ ೬೦,೦೦೦,೦೦೦ ಪೌಂಡುಗಳ ಉತ್ಪತ್ತಿಯಾಗುತ್ತಲಿದೆ. 'ಬೀರ' ಮಾದಕದ್ರವ್ಯದಿಂದ ೧೯೫೦ ಗಳದಲ್ಲಿ ೨೬೩,೦೦೦,೦೦೦ ಪೌಂಡುಗಳು ಇದರ ಮಾದಕದ್ರವ್ಯಗಳಿಂದ ೧೧೪,೦೦೦,೦೦೦ ಪೌಂಡುಗಳು ಬಂದಿವೆ.

ಕೊಳ್ಳುವ ತೆರಿಗೆಯಿಂದ ವರ್ಷದಿ ಪ್ರತಿ ೩೦೦,೦೦೦,೦೦೦ ಪೌಂಡುಗಳ ಉತ್ಪತ್ತಿಯಿದೆ. ಈ ಬಾಬಿನಲ್ಲಿ ೩ ವಿಧ ತೆರಿಗೆ ಕ್ರಮಗಳಿವೆ. ಭೋಗ ವಸ್ತುಗಳ ಮೇಲೆ ಶೇ|| ೧೦೦, ಮೋಟಾರು, ರೇಡಿಯೋ ಮುಂತಾದ ವಸ್ತುಗಳ ಮೇಲೆ ಶೇ|| ೬೬ ೨/೩, ಇತರ ವಸ್ತುಗಳ ಮೇಲೆ ಶೇ|| ೩೩ ೧/೩.

ಹೊಗೆಸೊಪ್ಪು, ಬೀರ್, ಮಾದಕದ್ರವ್ಯ ಮತ್ತು ಕೊಳ್ಳುವ ತೆರಿಗೆ ಈ ನಾಲ್ಕು ಬಾಬುಗಳಲ್ಲಿಯೇ ಬ್ರಿಟನ್ನಿನ ಆದಾಯದಲ್ಲಿ ೧/೩ ಭಾಗವು ಉತ್ಪತ್ತಿಯಾಗುತ್ತದೆ.

ಭೂಕಂಪ

ಶಿಲಾಂಗ್ ಮತ್ತು ಗೌಹತಿಗಳಲ್ಲಿ ಮೊನ್ನೆ ಅಲ್ಪಪ್ರಮಾಣದಲ್ಲಿ ಭೂಕಂಪವುಂಟಾಯಿತೆಂದು ಗೊತ್ತಾಗಿದೆ.

ಎಡ, ಬಲ ಪಂಥಗಳೊಡನೆ ಸೇರುವುದಿಲ್ಲ

ಸೂತದ ಸಂಸ್ಥಾನ ಶಾಸನ ಸಭೆಗಳಲ್ಲಿ ಕಾಂಗ್ರೆಸ್ ವಿರುದ್ಧವಾದ ಅಥವಾ ಕಮ್ಯುನಿಸ್ಟ್ ವಿರುದ್ಧವಾದ ರಾಜಕೀಯ ಪಂಥ ವ್ಯಾಪ್ತಿದಕ್ಕೇ ಸೇರಲು ಸೋಷಲಿಸ್ಟ್ ಪಕ್ಷ ಇಷ್ಟಪಡುವುದಿಲ್ಲವಾಗಿ, ಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಕಮ್ಯುನಿಸ್ಟ್ ನಾಯಕ ಶ್ರೀ ಎಸ್. ಎ. ಡಾಂಗೆ ಅವರಿಗೆ ತಿಳಿಸಿದ್ದಾರೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು ಮತ್ತು ಚಲನಚಿತ್ರಗಳಲ್ಲಿ ಅಭಿನಯಿಸಲು ಅವಕಾಶಮಾಡಿ ಕೊಡಲಾಗುವುದು. ಆಸಕ್ತಿವುಳ್ಳವರು ಇಂದೇ ವಿಚಾರಿಸಿರಿ.

ವ್ಯವಸ್ಥಾಪಕ.

ರ ಣ ಜಿ ತ್

೨೨-೨-೫೨ ರಿಂದ ಅಮೋಘ ೫ನೇ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆ ವಾ ರ ::—

† ನೇಪಾಳ ಸೈನಿಕರಿಗೆ ಸೈನ್ಯ ಶಿಕ್ಷಣವನ್ನು ಭಾರತ ಸೈನ್ಯ ನಿಯೋಗವೊಂದು ಖಟ್ಮಂಡುವಿಗೆ ಇದೇ ೨೭ನೇ ತಾರೀಖು ಹೋಗಲಿದೆ. ಈ ನಿಯೋಗದಲ್ಲಿ ೨೦ ಜನರಿರುವರು.

ವುಡ್ ಲ್ಯಾಂಡ್ಸ್

೨೨-೨-೫೨ ರಿಂದ ೨ ನೇ ವಾರ

ದಿನವೂ 3 ಪ್ರದರ್ಶನಗಳು

ಅಲ್ ಬೇಲ

ಪಾತ್ರ:— ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ನ್ಯೂ ಅಪೇರ

೨೨—೨—೫೨ ರಿಂದ

"ಸ್ತ್ರೀಸಾಹಸಂ" ತಯಾರಿಸಿರುವ ವಿನೋದ ಪ್ರೊಡಕ್ಷರ್‌ರವರ

ಶಾಂತಿ

(ತೆಲುಗು)

ಪಾತ್ರ:— ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ|| ಸುಬ್ಬರಾವ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು
ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.
❋
ಹೆಚ್ಚಿನ ವಿವರಗಳಿಗೆ ಬರೆಯಿರಿ—
ಗೌರ್ನಮೆಂಟ್ ಪೋರ್ಸಲೇನ್
ಫ್ಯಾಕ್ಟರಿ, ಮಲ್ಲೇಶ್ವರಂ
ಬೆಂಗಳೂರು ೩.

ಅಕ್ರಮ ಮತದಾನ ಪ್ರಯತ್ನ ಅಪಾದನೆ

೨ ತಿಂಗಳು ಕಠಿಣ ಸಜಾ

ಬೆಂಗಳೂರು ಫೆ ೨೪

ಇತ್ತೀಚೆಗೆ ನಡೆದ ಮಹಾಚುನಾವಣೆಯಲ್ಲಿ ಬರೆಯಪ್ಪ ಎಂಬ ಮತದಾರನ ಗುರುತಿನ ಚೀಟಿ ತೆಗೆದುಕೊಂಡು ಓಟುಮಾಡಲೆತ್ನಿಸಿದರೆಂಬ ಅಪಾದನೆ ಮೇಲೆ ಅಲಸೂರಿನ ಪೀರಪ್ಪ ಎಂಬುವವರಿಗೆ ಸಿವಿಲ್ ಪ್ರದೇಶದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ೨ ತಿಂಗಳ ಕಠಿಣ ಶಿಕ್ಷೆ ವಿಧಿಸಿದ್ದಾರೆ.

ರೈಲ್ವೆ ಫೆಡರೇಷನ್ ಕಾರ್ಯಕಾರಿ ಸಮಿತಿ ಸಭೆ

ಮಾರ್ಚ್ ೩೦ ಮತ್ತು ೩೧ ರಂದು ಅಖಿಲಭಾರತ ರೈಲ್ವೆ ಫೆಡರೇಷನ್ ಕಾರ್ಯಸಮಿತಿಯು ಅಸ್ವಾಮಿನ ಅಮೀನ್‌ಸೋಪಿನಲ್ಲಿ ಸಮಾವೇಶಗೊಳ್ಳುವುದೆಂದು ಫೆಡರೇಷನ್ನಿನ ಪ್ರಧಾನಕಾರ್ಯದರ್ಶಿ ಶ್ರೀ ಎಸ್. ಗುರುಸ್ವಾಮಿಯವರು ಪ್ರಕಟಿಸಿದ್ದಾರೆ.

‡ ಮದರಾಸ್ ಸಂಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರ ರಚಿಸುವ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸುವ ಸಲುವಾಗಿ ಹೈಕಮಾಂಡಿನವರು ಮದರಾಸ್ ಕಾಂಗ್ರೆಸ್ ನಾಯಕರುಗಳಿಗೆ ಕರೆ ಕಳುಹಿಸಿದಾರೆಂದು ಗೊತ್ತಾಗಿದೆ. ಈ ವಾರದ ಮಧ್ಯದಲ್ಲಿ ಈ ನಾಯಕರುಗಳು ದೆಹಲಿಗೆ ತೆರಳುವರೆಂದು ತಿಳಿದುಬಂದಿದೆ.

ಫೋನ್ ೫೭೭೪(ಎಂ) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೭—೨—೧೯೫೨ನೇ ಬುಧವಾರ [ಸಂಚಿಕೆ ೧೫೪

ಮುಂದಿನ ತಿಂಗಳು ೧೨ನೇ ತಾ|| ಮದರಾಸ್ ಗೌರ್ನರ್‌ರ ಅಧಿಕಾರ ಸ್ವೀಕಾರ

ಭಾರತದ ತುರ್ತು ಆಹಾರಯೋಜನೆಗೆ ಅಮೇರಿಕದಿಂದ ೮೫ ಲಕ್ಷ ಡಾಲರ್ ಸಹಾಯ

ಮೈಸೂರಿನಲ್ಲಿ ಐ. ಪಿ. ಎಸ್. ಅಧಿಕಾರಿಗಳು

ಮೈಸೂರು ಫೆ ೨೬

ಮೈಸೂರು ಸಂಸ್ಥಾನದಲ್ಲಿ ಪೋಲೀಸ್ ಇಲಾಖೆಯಲ್ಲಿಯ ಐ. ಜಿ. ಪಿ. ೩ ಡಿ. ಐ. ಜಿ., ೯ ಜಿಲ್ಲಾ ೪ ಸೀನಿಯರ್‌ಡ್ಯೂಟಿ ಪೋಸ್ಟ್ ಒಟ್ಟು ೧೭ ಸ್ಥಾನಗಳನ್ನು ೧೯೫೧ ನೇ ಜನವರಿ ೨೬ ರಿಂದ ಇಂಡಿಯನ್ ಪೋಲೀಸ್ ಕೇಡರಾಗಿ ರಾಷ್ಟ್ರಾಧ್ಯಕ್ಷರು ಮಂಜೂರ್ಮಾಡಿರುವರು.

ಮೈಸೂರಿಗೆ ಆಹಾರ

ಮೈಸೂರು ಸರ್ಕಾರವು ಈವರ್ಷಕ್ಕೆ ಕೇಂದ್ರವನ್ನು ಕೇಳಿದ್ದ ೩ ಲಕ್ಷಟನ್ ಆಹಾರಧಾನ್ಯದಪೈಕಿ ಒಂದೂವರೆಲಕ್ಷಟನ್ ಮಾತ್ರ ಕೊಡಲು ಕೇಂದ್ರಸರ್ಕಾರವು ಈಗ ಒಪ್ಪಿರುವುದಾಗಿ ತಿಳಿದುಬಂದಿದೆ.

ಪ್ಲಾನಿಂಗ್ ಕಮೀಷನ್ನಿನ ಸಂಶೋಧನಾಧಿಕಾರಿಭೇಟಿ

ಪ್ಲಾನಿಂಗ್ ಕಮೀಷನ್ನಿನ ಗೃಹನಿರ್ಮಾಣಶಾಖೆಯ ಸಂಶೋಧನಾಧಿಕಾರಿಗಳಾದ ಡಾ|| ಆರ್. ಬಿ. ಗುಪ್ತಾರವರು ಮೈಸೂರಿಗೆ ೨೩ ನೇ ತಾ|| ಆಗಮಿಸಿ ೨೩ ಮತ್ತು ೨೪ ನೇ ತಾರೀಖುಗಳಲ್ಲಿ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರೊಡನೆ ಸಮಿತಿಯ ನಾನಾ ಕಾರ್ಯಗಳನ್ನು ಪರಿಶೀಲಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಮೈಸೂರು ನಗರವನ್ನು ಅಭಿವೃದ್ಧಿಗೊಳಿಸುವುದಲ್ಲದೆ ಬಡಜನರಿಗೆ ಉಪಯುಕ್ತವಾಗುವಂತೆ ಮನೆಗಳನ್ನೂ ಸ್ವಲ್ಪ ವರಮಾನದವರು ಮತ್ತು ಮಧ್ಯಮರಿಗೆ ತಿಳಿವುವರಿಗೆ ಉಪಯೋಗಕ್ಕೆ ನಿವೇಶನಗಳನ್ನು ವಿಭಜಿಸಿ ಕೊಳ್ಳುಪಸೀಯು ಕಾರ್ಯಗಳನ್ನು ಮಾಡುತ್ತಲಿದೆಯೆಂದು ಅವರು ಹೇಳಿದರು.

ಅಮೇರಿಕದ ಸಾಲ

ಭಾರತಕ್ಕೆ ಅಮೇರಿಕವು ಕೊಟ್ಟಿರುವ ೬೦ ಮಿಲಿಯನ್ ಡಾಲರುಗಳ ಸಾಲದಲ್ಲಿ ಮೂವತ್ತೆರಡು ಮಿಲಿಯನ್ ಡಾಲರು ಸಾಲ ತೀರಿಸಿದೆ. ಭಾರತದ ನಾನಾ ಅಭಿವೃದ್ಧಿ ಕಾರ್ಯಗಳಿಗೆ ವಿಶ್ವಬ್ಯಾಂಕಿನಿಂದ ಇನ್ನೂ ಹಣ ಸಾಲಪಡೆಯಲು ವ್ಯವಹಾರ ನಡೆಸಲಾಗುತ್ತಿದೆಯೆಂದು ಕೇಂದ್ರ ಸರ್ಕಾರದ ಅರ್ಥಿಕಸಚಿವರು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿದರು.

೪ ತಿಂಗಳಿಗೆ ೯೫ ಕೋಟಿ ರೂ. ಮಂಜೂರು

ಪಾರ್ಲಿಮೆಂಟ್ ನಿನ್ನೆ ಸಮಾವೇಶಗೊಂಡು ರೈಲ್ವೇ ಖರ್ಚು ವೆಚ್ಚಕ್ಕೆ ಏಪ್ರಿಲ್‌ವರೆಗೆ ೯೫ಕೋಟಿರೂಗಳ ಬಜೆಟ್ಟನ್ನು ಮಂಜೂರ್ಮಾಡಿತು. ಗೋರಖ್‌ಪುರದ ರೈಲ್ವೇವರ್ಕ್‌ಶಾಪಿನ ಅಭಿವೃದ್ಧಿಗೆ ಒಂದು ಕೋಟಿ ರೂ ಮಂಜೂರ್ಮಾಡಿತು.

ಭೂದಾನಕ್ಕೆ ೫೦೦೦೦ ಎಕರೆ ಜಮೀನು

ಆಚಾರ್ಯ ವಿನೋಬಾ ಭಾವೆಯವರು ಭೂದಾನಯಜ್ಞ ಚಳುವಳಿಯಲ್ಲಿ ಉತ್ತರ ಪ್ರದೇಶದಲ್ಲಿಯೇ ೫೦ ಸಾವಿರ ಎಕರೆ ಜಮೀನನ್ನು ಸಂಪಾದಿಸಿರುವರು.

ಶ್ರೀಮತಿ ರೂಸ್‌ವೆಲ್ಟ್‌ರವರು ಭಾರತಕ್ಕೆ

ಶ್ರೀಮತಿ ರೂಸವೆಲ್ಟರು ಭಾರತಕ್ಕೆ ಆಗಮಿಸಿ ಮುಂದಿನತಿಂಗಳು ೨೪ ರವರೆಗೆ ಭಾರತದಲ್ಲಿರುವರು.

ಕರೋಲಿ ಠಾಕೂರರ ದಸ್ತಗಿರಿ

ಮಧ್ಯಭಾರತದಲ್ಲಿರುವ ಕರೋಲಿ ಸಂಸ್ಥಾನದ ಠಾಕೂರರನ್ನು ದಸ್ತಗಿರಿ ಮಾಡಲಾಗಿದೆ. ಕಳ್ಳರುವರಿಗೆ ಡಕಾಯಿತರೊಡನೆ ಸಂಪರ್ಕ ಹೊಂದಿದ್ದರೆಂಬ ಅಪಾದನೆ ಮೇಲೆ ೪೫ ದಸ್ತಗಿರಿಗಳಾಗಿವೆ.

ಗ್ರಾಮರಸ್ತೆಗಳ ನಿರ್ಮಾಣ

ಭಾರತದಲ್ಲಿನ ಗ್ರಾಮಾಂತರಪ್ರದೇಶಕ್ಕೆ ಸಂಚಾರಸೌಲಭ್ಯ ಹೆಚ್ಚಿಸಲು ಕೇಂದ್ರ ಸರ್ಕಾರವು ಹಣ ಸಹಾಯ ನೀಡಲು ಒಂದು ಯೋಜನೆ ತಯಾರಿಸಿದೆ. ಒಟ್ಟು ವೆಚ್ಚದ ೧/೩ ಭಾಗವನ್ನು ಗ್ರಾಮಸ್ಥರು ಕೊಡಲು ಮುಂದೆ ಬಂದರೆ ಉಳಿದುದನ್ನು ಪ್ರಾಂತಸರ್ಕಾರವೂ, ಕೇಂದ್ರಸರ್ಕಾರವೂ ಸಹಾಯಮಾಡಲು ಸಿದ್ಧವಿದೆ.

ಶಸ್ತ್ರಾಸ್ತ್ರಗಳ ವಶ

ಪಾಲಿಟಾನದ ಮಹಾರಾಜ ಬಹದೂರ್ ಸಿಂಗ್‌ಜೀಯವರ ಶಸ್ತ್ರಾಸ್ತ್ರಗಳನ್ನೆಲ್ಲಾ ಸೌರಾಷ್ಟ್ರ ಸರ್ಕಾರವು ವಶಪಡಿಸಿಕೊಳ್ಳಲಿದೆ. ರಾಜಕೋಟೆ ಬಿಟ್ಟಿದ್ದ ಮಹಾರಾಜರು ಈ ಶಸ್ತ್ರಾಸ್ತ್ರಗಳನ್ನು ವಹಿಸಿಕೊಡಲು ಪಾಲಿಟಾನಕ್ಕೆ ಹೋಗಿರುವರು.

ಅಮೇರಿಕದ ಅಧ್ಯಕ್ಷ ಟ್ರೂಮನ್ನರು ಭಾರತದ ಹೆಚ್ಚುವರಿ ಆಹಾರದ ಅನುಕೂಲಕ್ಕೆಂದು ೮೫ ಲಕ್ಷ ಡಾಲರುಗಳನ್ನು ನೀಡಲು ಕಾಂಗ್ರೆಸ್ಸಿನ ಅಂಗೀಕಾರ ಪಡೆದಿರುವರು. ಭಾರತಕ್ಕೆ ಆಹಾರದ ಸಹಾಯ ನೀಡುವ ಈ ನಿಧಿಯಲ್ಲಿ ಈಗಾಗಲೆ ೫ ಕೋಟಿ ೭೫ ಲಕ್ಷ ಡಾಲರ್ ವೆಚ್ಚವಾಗಿರುವುದು.

ಡಾಕಾದಲ್ಲಿ ಐವರ ದಸ್ತಗಿರಿ

ನಿನ್ನೆ ಡಾಕಾದಲ್ಲಿ ಐವರ ದಸ್ತಗಿರಿಯಾಗಿದೆ. ಇದರಲ್ಲಿ ಒಬ್ಬ ಶಾಸನಸಭಾ ಸದಸ್ಯರು ಮತ್ತು ಮೂವರು ಕಾಲೇಜು ಪ್ರೊಫೇಸರುಗಳಿರುವರು. ಮುಷ್ಕರವು ಮುಂದುವರಿಯುತ್ತಿದೆ.

ಪಾರ್ಲಿಮೆಂಟಿಗೆ ಶ್ರೀ ಮಹಾವೀರತ್ಯಾಗಿ

ಕೇಂದ್ರ ಸರ್ಕಾರದ ಹಣಕಾಸಿನ ಇಲಾಖೆಯ ರಾಜ್ಯ ಸಚಿವ ಶ್ರೀ ಮಹಾವೀರ ತ್ಯಾಗಿಯವರು ಪಾರ್ಲಿಮೆಂಟಿಗೆ ಉತ್ತರ ಪ್ರದೇಶದಿಂದ ಚುನಾಯಿತರಾಗಿರುವರು.

ಸೋಷಲಿಸ್ಟ್ ಪಕ್ಷದ ಕಾರ್ಯನೀತಿ ವಿವರಣೆ

ಮದರಾಸಿನಲ್ಲಿ ಕಳೆದ ಮೂರು ದಿನಗಳಿಂದ ಸಮಾವೇಶಗೊಂಡಿದ್ದ ಸೋಷಲಿಸ್ಟ್‌ಪಕ್ಷವು ಭಾರತದಲ್ಲಿನ ವಿವಿಧ ರಾಜ್ಯ ಶಾಸನ ಸಭೆಗಳಲ್ಲಿ ತನ್ನ ಕಾರ್ಯನೀತಿಯನ್ನು ವಿವರಿಸಿ ನಿರ್ಣಯಮಾಡಿದೆ.

ಸೋಷಲಿಸ್ಟ್‌ಪಕ್ಷವು ಕಾಂಗ್ರೆಸ್ ಮತ್ತು ಕಮ್ಯೂನಿಸ್ಟರೊಡನೆ ಸಹಕರಿಸದೆ ಶಾಸನ ಸಭೆಗಳಲ್ಲಿ ವಿರೋಧಪಕ್ಷವಾಗಿ ಉಳಿಯುವುದು. ರಚನಾತ್ಮಕವಾದ ಕಾರ್ಯನೀತಿಯನ್ನು ಹಾಕಿಕೊಂಡಿರುವ ಇತರ ವಿರುದ್ಧಪಕ್ಷದೊಂದಿಗೆ ಸಹಕರಿಸುವುದು ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ.

ಬೆಳ್ಳಿಯ ರಜತ ಪರದೆ

ಭಾರತ ಸರ್ಕಾರವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ನೆಂವೇರಿಸಿದ ಜ್ಞಾಪಕಾರ್ಥವಾಗಿ ಬೆಳ್ಳಿಯಿಂದ ರಜತ ಪರದೆಯನ್ನು ಮಾಡಿಸಲಿದೆ. ಈ ರಜತ ಪರದೆಯು ಚಲನಚಿತ್ರ ಮಂದಿರಗಳಲ್ಲಿರುವ ರಜತಪರದೆಯ ದ್ವಿಗುಣದಷ್ಟಿರುವುದು.

೧೨ನೇ ತಾ|| ಶ್ರೀ ಶ್ರೀ ಪ್ರಕಾಶ ಅಧಿಕಾರ ವಹಿಸಿಕೊಳ್ಳುವರು

ಮದರಾಸಿಗೆ ಗೌರ್ನರ್‌ರಾಗಿ ನೇಮಿಸಲಾಗಿರುವ ಶ್ರೀ ಶ್ರೀ ಪ್ರಕಾಶರವರು ಮುಂದಿನ ತಿಂಗಳು ೧೨ ನೇ ತಾ|| ಅಧಿಕಾರವಹಿಸಿಕೊಳ್ಳುವರು. ಭಾವನಗರ ಮಹಾರಾಜರು ತಮ್ಮ ಪತ್ನಿಯೊಂದಿಗೆ ಆದಿನ ಬೆಂಗಳೂರಿಗೆ ಬರುವರು ಎಂದು ಗೊತ್ತಾಗಿದೆ.

ಬಂಧನದಲ್ಲಿರುವವರ ವೈಯುಕ್ತಿಕ ಪರಿಶೀಲನೆ

ಪಾರ್ಲಿಮೆಂಟಿನಲ್ಲಿ ನಿನ್ನೆ ರೈಲ್ವೇಬಜೆಟ್‌ಮೇಲೆ ಶ್ರೀ ಹೆಚ್. ವಿ. ಕಾಮತ್‌ರವರು ಮಾತಾಡುತ್ತಾ, ೧೯೪೯ ರಲ್ಲಿ ರೈಲ್ವೇ ಮುಷ್ಕರ ನಡೆಸಲಾಗುವುದೆಂದು ತಿಳಿಸಿ ಆಗ ದಸ್ತಗಿರಿಯಾದ ಹಲವರನ್ನು ಬಿಡುಗಡೆಮಾಡಬೇಕೆಂದೂ ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ರೈಲ್ವೇಸಚಿವ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಇದಕ್ಕೆ ಉತ್ತರವಿತ್ತು, ಮುಷ್ಕರ ಸಂಬಂಧವಾಗಿ ಬಂಧನದಲ್ಲಿರುವವರ ಚಟುವಟಿಕೆಗಳನ್ನು ತಾವು ವೈಯಕ್ತಿಕವಾಗಿ ಪರಿಶೀಲಿಸಿ ಸಂತರ ನಿರ್ಧಾರಕ್ಕೆ ಬರುವುದಾಗಿ ತಿಳಿಸಿದರು.

ಪಾರಿವಾಳದ ಮೂಲಕ ಸಮಾಚಾರ ವ್ಯವಸ್ಥೆ

ಮಹಾ ಚುನಾವಣೆಯ ವೇಳೆಯಲ್ಲಿ ಒರಿಸ್ಸಾ ಸರ್ಕಾರವು ಸಮಾಚಾರವನ್ನು ಒಯ್ಯಲು ಪಾರಿವಾಳಗಳ ಮೂಲಕ ವ್ಯವಸ್ಥೆ ಕಲ್ಪಿಸಿತ್ತೆಂದೂ ಈ ವ್ಯವಸ್ಥೆಯಿಂದ ತೃಪ್ತಿಕರವಾಗಿ ಕೆಲಸಕಾರ್ಯ ನಡೆಯಿತೆಂದೂ ಹೇಳಲಾಗಿದೆ.

ಡಾ|| ಗ್ರಹಾಂ ಭಾರತಕ್ಕೆ

ಕಾಶ್ಮೀರ ವಿವಾದವನ್ನು ಬಗೆಹರಿಸಲು ವಿಶ್ವಸಂಸ್ಥೆಯಿಂದ ನಿಯೋಜಿತರಾಗಿರುವ ಡಾ|| ಗ್ರಹಾಂರವರು ಭಾರತಕ್ಕೆ ಹೊರಡಲು ನಿನ್ನೆ ಪ್ಯಾರಿಸ್ಸಿನಿಂದ ತೆರಳಿದರು.

* ವಿಶ್ವವಿದ್ಯಾನಿಲಯದ ಬಜೆಟ್ ಸಭೆಯು ನಾಳೆ ವೈಸ್‌ಛಾನ್ಸಲರ್‌ರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಚೈನಾದಿಂದ ಅಕ್ಕಿಯಿಲ್ಲ

ಕಮ್ಯೂನಿಸ್ಟ್ ಚೈನಾದಿಂದ ಅಕ್ಕಿಯನ್ನು ಕೊಂಡುಕೊಳ್ಳಲು ಸಾಧ್ಯವಾಗಿಲ್ಲವೆಂದು ಪ್ರಧಾನಿ ನೆಹರು ಹೇಳಿದ್ದಾರೆ. ಆಹಾರಮಂತ್ರಿಗಳ ಪಂಕ್ತಿಯಲ್ಲಿ ಈ ಸುದ್ದಿಯನ್ನು ತಿಳಿಸುತ್ತಾ, ನೆಹರು ಕಮ್ಯೂನಿಸ್ಟ್ ಚೈನಾಕ್ಕೆ ಕಳುಹಿಸಿದ್ದ ಭಾರತದ ಅಧಿಕಾರಿಗಳು ಬರಿಗೈಯಲ್ಲಿ ಬಂದರು ಎಂದಿದ್ದಾರೆ.

ವಿದ್ಯಾಭ್ಯಾಸ

ಐವರಲ್ಲಿ ಒಬ್ಬರು ಅಮೆರಿಕದಲ್ಲಿ ೧೯೫೧ರಲ್ಲಿ ಶಾಲೆಗೆ ಹೋಗುತ್ತಿದ್ದರು. ೫ರಿಂದ ೩೪ರ ವಯಸ್ಸಿನವರಲ್ಲಿ ೩೦,೫೦೦,೦೦೦ ಅಮೆರಿಕನ್ನರು ಶಾಲೆಯಲ್ಲಿ ಓದಲು ತಮ್ಮ ಹೆಸರನ್ನು ಹಚ್ಚಿಸಿದ್ದರು. ಇದರಲ್ಲಿ ಸುಮಾರು ೨೧,೮೦೦,೦೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರಾಥಮಿಕ ಶಾಲೆಯಲ್ಲಿದ್ದರು.

ಶತಮಾನೋತ್ಸವ

ಅಮೆರಿಕದ ಸುಪ್ರಸಿದ್ಧ ಮೋಟಾರು ಸಂಸ್ಥೆಯಾದ ಸ್ಟುಡಿಬೇಕರ್ ಕಾರ್ಪೋರೇಷನ್ ಈ ತಿಂಗಳಲ್ಲಿ ತನ್ನ ಶತಮಾನೋತ್ಸವವನ್ನು ಆಚರಿಸಲಿದೆ. ಇದು ಮೂಲಧನ ಕೇವಲ ೬೮ ಡಾಲರಿತ್ತು, ಈಗ ೫೦ ವರ್ಷದಲ್ಲಿ ೭ ಮಿಲಿಯನ್ ಕಾರುಗಳನ್ನು ತಯಾರಿಸಿದೆ.

ಮೈಸೂರು ಪೋಲೀಸ್ ಅಧಿಕಾರಿಗಳು ಕೇಂದ್ರಕ್ಕೆ

ಮೈಸೂರು ಪೋಲೀಸ್ ಶಾಖೆಯಲ್ಲಿ ಕೆಲಸ ಮಾಡುತ್ತಲಿರುವ ಈ ಕೆಳಗೆ ನಮೂದಿಸಿರುವ ಅಧಿಕಾರಿಗಳನ್ನು ಇಂಡಿಯನ್ ಪೋಲೀಸ್ ಸರ್ವಿಸ್ಸಿಗೆ ಚುನಾಯಿಸಿಕೊಂಡು, ಅವರನ್ನು ೧೯೫೧ನೇ ಜನವರಿ ೨೬ನೇ ತಾ॥ ನಿಂದ ಪ್ರೊಬೇಷನ್ ಮೇಲೆ ನೇಮಿಸಲಾಗಿದೆಯೆಂದು ಕೇಂದ್ರ ಸರ್ಕಾರದ ಪ್ರಕಟಣೆಯೊಂದು ಹೊರಬಿದ್ದಿದೆ. ಶ್ರೀಗಳಾದ ಸಿ ಬಿ ಮಾಚಯ್ಯ, ಎಚ್ ಪಿ ಬಾಬುರೆಡ್ಡಿ, ಬಿ ತಿಮ್ಮಪ್ಪರಾಜೇ ಅರಸ್, ಸಿ ಚಾಂಡಿ, ಕೆ ಎಸ್ ಕೃಷ್ಣಮೂರ್ತಿ, ಎಂ ಖಾದರ್ ಅಲಿ, ಎ ಪಿ ರಕ್ಕರಾಜಯ್ಯ, ಪಿ ಎಸ್ ನರಸಿಂಹಾಚಾರ್, ಎಂ ಮಹದೇವಪ್ಪ ಮತ್ತು ಬಿ ಪಿ ರೇವಣ್ಣ.

ಅಸ್ಸಾಂ ಮಂತ್ರಿಮಂಡಲ

ಅಸ್ಸಾಂನಲ್ಲಿ ಹೊಸ ಮಂತ್ರಿ ಮಂಡಲವು ನಿನ್ನೆದಿನ ಅಧಿಕಾರ ಸ್ವೀಕರಿಸಿತು. ಶ್ರೀ ವಿಷ್ಣುರಾಂಮೇಧಿಯವರು ಮುಖ್ಯಮಂತ್ರಿ ೧೦ ಮಂತ್ರಿಗಳು ಇಬ್ಬರು ಉಪಮಂತ್ರಿಗಳು ಈ ಮಂತ್ರಿಮಂಡಲದಲ್ಲಿರುವರು. ಪ್ರಮಾಣವಚನವು ಗವರ್ನರ್ ಶ್ರೀ ದೌಲತ್‌ರಾಮ್‌ರವರ ಸಮ್ಮುಖದಲ್ಲಿ ನಡೆಯಿತು.

ಮೈಸೂರಿಗೆ ಮದರಾಸ್ ಜಿ. ಒ. ಸಿ. ಭೇಟಿ

ಮೈಸೂರು ಫೆ ೨೭

ಮದರಾಸ್ ಪ್ರಾಂತ್ಯದ ಜನರಲ್ ಆಫೀಸರ್ ಕಮ್ಯಾಂಡಿಂಗ್, ಮೇಜರ್ ಜನರಲ್, ಹೆಚ್. ಎಂ. ಮೋಹಿತೆಯವರು ನಿವೃತ್ತ ಸೈನಿಕರ ಕುಂದುಕೊರತೆಗಳನ್ನು ವಿಚಾರಿಸಲು ತಾ॥ ೨೮-೨-೫೨ನೇ ಗುರುವಾರ ಬೆಳಿಗ್ಗೆ ೧೧ ಗಂಟೆಗೆ ಮೈಸೂರು ಟೌನ್‌ಹಾಲಿಗೆ ದಯಮಾಡಿಸುವರು. ಎಲ್ಲಾ ನಿವೃತ್ತ ಸೈನಿಕರೂ ಸ್ಥಳದಲ್ಲಿ ಗೊತ್ತುಮಾಡಲ್ಪಟ್ಟ ಕಾಲಕ್ಕೆ ಅರ್ಧ ಗಂಟೆ ಮುಂಚಿತವಾಗಿ, ತಮ್ಮ ತಮ್ಮ ಆರ್ಮಿ ಬಿಡುದಾವೆಳಿಗಳೊಡನೆ ಹಾಜರಾಗಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ನಗರ ಆರೋಗ್ಯ ಪರಿಸ್ಥಿತಿ

ಮೈಸೂರು ಫೆ ೨೭

ಮೈಸೂರು ನಗರದ ಆರೋಗ್ಯಪರಿಸ್ಥಿತಿಯನ್ನು ಕುರಿತು ಮೈಸೂರು ನಗರ ಆರೋಗ್ಯಾಧಿಕಾರಿಗಳು ಫೆಬ್ರವರಿ ೧೫ಕ್ಕೆ ಮುಕ್ತಾಯವಾದ ಪಕ್ಷದ ವರದಿಯನ್ನು ಪ್ರಕಟಿಸಿರುವರು.

ಪ್ಲೇಗ್ ಉಪದ್ರವವೆಲ್ಲೂ ಇರಲಿಲ್ಲ ೧೨೭೨ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಗಿದೆ.

ಸಿಡುಬುರೋಗವು ೧೦ ಜನಕ್ಕೆ ತಗುಲಿ ೩ ಮರಣಗಳಾಗಿವೆ. ಮಂಡಿಮೊಹಲ್ಲಾದಲ್ಲಿ ಈ ಮರಣಗಳಾಗಿವೆ. ೮೫೨ ಪ್ರಾಥಮಿಕ ೨೩೪೨ ಪುನಃ ಟೀಕೆ ಹಾಕಲಾಗಿದೆ.

ಡಿಪ್ತೀರಿಯಾ ೭ ಜನಕ್ಕೆ ತಗುಲಿ ಒಂದು ಮರಣವಾಗಿದೆ. ಟೈಫಾಯಿಡ್ ಇಬ್ಬರಿಗೆ ತಗುಲಿದೆ. ೩೮ ಡಿಪ್ತೀರಿಯಾ ಮತ್ತು ೧೯ ಟೈಫಾಯಿಡ್ ನಿರೋಧ ಇನಾಕ್ಯುಲೇಷನ್‌ಗಳನ್ನು ಹಾಕಲಾಗಿದೆ.

ಕಾಲರಾ ಉಪದ್ರವವೆಲ್ಲಿಯೂ ಇರಲಿಲ್ಲ. ೩೧ ಕಾಲರಾ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು.

ಪುನಃ ೨೫ ಕೋಟಿ ಡಾಲರ್ ಸಹಾಯ?

ಜುಲೈನಿಂದ ಆರಂಭವಾಗುವ ಹೊಸ ವರ್ಷದಲ್ಲಿ ಮತ್ತೆ ೨೫ ಕೋಟಿ ಡಾಲರುಗಳ ನೆರವನ್ನು ಭಾರತಕ್ಕೆ ಕೊಡುವಂತೆ ತಾವು ತಮ್ಮ ಸರಕಾರವನ್ನು ಕೇಳಿರುವುದಾಗಿ ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಚೆಸ್ಟರ್ ಬೌಲ್ಸ್‌ರವರು ಹೇಳಿರುವರು.

* ಕೇಂದ್ರಸರ್ಕಾರದ ವಿದ್ಯಾಸಚಿವ ಮೌಲಾನ ಆಜಾದ್ ಮುಂದಿನತಿಂಗಳು ೫ನೇ ತಾ॥ ದೆಹಲಿಯಲ್ಲಿ ರಾಷ್ಟ್ರದ ಕುಶಲಕಲೆಗಳ ಆರಂಭೋತ್ಸವಮಾಡುವರು.

ಪುರಸಭಾಧಿವೇಶನ

ಮೈಸೂರು ಫೆ ೨೭

ಮೈಸೂರು ಪುರಸಭೆಯ ಮಾಹೆಯಾನ ಅಧಿವೇಶನವು ೨೮ ನೇ ತಾ॥ ಸಂಜೆ ೪ ಗಂಟೆಗೆ ನಡೆಯುತ್ತದೆ.

ಗೃಹಕೃತ್ಯದ ನೋಟೀಸ್

ಚಾಮರಾಜನಗರದ ತಾಲ್ಲೂಕು ಉಮ್ಮತ್ತೂರು ಗ್ರಾಮದಲ್ಲಿರುವ ಲಿಂಗಶಾಪುರದ ಮಾದಪ್ಪನವರ ಮಗ ಗಂಗಾಧರಪ್ಪನು ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನಮ್ಮ ತಂದೆ ಮಾದಪ್ಪ ಎಂಬುವರಿಗೆ ಸುಮಾರು 95 ವರ್ಷಗಳ ಮೇಲೆ ವಯಸ್ಸಾಗಿ ತುಂಬಾ ಹಣ್ಣಾಗಿ ವಾಯು ರೋಗದಿಂದ ಪೀಡಿತರಾಗಿರುತ್ತಾರೆ. ನನಗೆ ಆಗದವರ ದುರ್ಬೋಧನೆಗೆ ಒಳಪಟ್ಟು ಕುಟುಂಬದ ಆಸ್ತಿ ಪೈಕಿ ಉಮ್ಮತ್ತೂರು ಗ್ರಾಮಕ್ಕೆ ಸೇರಿದ ಸರ್ವೆ 731/1ನೇ ಜಮೀನನ್ನು ತನ್ನ ಮಗಳಾದ ಪುಟ್ಟಮಾದಮ್ಮನಿಗೆ 21—1—52 ರಲ್ಲಿ ದಾನಪತ್ರ ಬರೆದು ಇರುತ್ತಾರೆ. ಇದನ್ನು ನಂಜನಗೂಡು ಮುನ್ಸೀಫರ ಕೋರ್ಟಿನಲ್ಲಿ ದಾವಮಾಡಿ ಕ್ಯಾನ್ಸಲ್ ಬಗ್ಗೆ o.s.803ನೇ ನಂಬರ್ ಕೇಸು ನಡೆಯುತ್ತಾ ಇದೆ. 51–52 ಹೀಗಿದ್ದಾಗ್ಯೂ ಸದರಿ ನಮ್ಮ ತಂದೆ ಮಾದಪ್ಪನವರು ನನಗೆ ಆಗದ ಜನಗಳ ದುರ್ಬೋಧನೆಗೆ ಒಳಪಟ್ಟು ಇತರ ಸ್ಥಿರ ಸ್ವತ್ತುಗಳನ್ನು ಪರಾಧೀನ ಮಾಡಬೇಕೆಂದು ಉದ್ದೇಶಪಟ್ಟಿರುವುದಾಗಿ ವರ್ತಮಾನ ಕೇಳಿರುತ್ತೇನೆ ಇವರಿಂದ ಯಾರೇ ಆಗಲಿ ಆಧಾರ, ಭೋಗ್ಯ ಕ್ರಯ, ದಾನ, ವಗೈರೆ ಮಾಡಿಸಿಕೊಂಡರೆ ಅದು ಊರ್ಜಿತವಾಗುವುದಿಲ್ಲವೆಂದು ಸಮಸ್ತ ಜನಗಳಿಗೂ ತಿಳಿಸಿರುತ್ತೇನೆ.

ಶೆಡ್ಯೂಲ್ ಸ್ವತ್ತುಗಳು

ಚಾಮರಾಜನಗರದ ತಾ॥ ಉಮ್ಮತ್ತೂರು ಗ್ರಾಮದಲ್ಲಿ ನನ್ನ ಸ್ವಾಧೀನ ಅನುಭವದಲ್ಲಿರುವ ಜಮೀನುಗಳು.

ಸರ್ವೆ ನಂಬರು	ವಿಸ್ತೀರ್ಣ	ಆ (ರೂ)
362/2	6-00	9-0-0
358/2-3	1-22	2-4-0
435	1-0	2-0-0
293	1-10	7-8-0

ಹೆಂಚಿನಮನೆ 10 ಅಂಕಣದ ಕೊಟ್ಟಿಗೆಮನೆ 16 ಅಂಕಣ ಉಳ್ಳದ್ದು ನಹ, ಹಿಂಭಾಗದ ಹಿತ್ತಲು ಸಮೇತ.

ಗಂಗಾಧರಪ್ಪನ ರುಜು.

ಮದರಾಸಿನಲ್ಲಿ ೮ ಟನ್ನು ಅಕ್ಕಿಕೊಡುವ ನಿರೀಕ್ಷೆ

ಮದರಾಸಿನಲ್ಲಿ ಪಡಿತರವನ್ನು ೮ ಔನ್ಸುಗಳಿಗೆ ಏರಿಸಲು ಕೇಂದ್ರಸರ್ಕಾರವು ಅನುಮತಿಮಾಡುವ ನಿರೀಕ್ಷೆಯು ಇನ್ನು ಇರುವುದಾಗಿ ಮದ್ರಾಸಿನ ಆಹಾರಮಂತ್ರಿ, ಶ್ರೀ ರೋಷೆ ವಿಕ್ಟೋರಿಯಾರವರು ಹೇಳಿರುವರು.

ಕಾಂಗ್ರೆಸ್ ಸರ್ಕಾರ ರಚಿಸದಿದ್ದರೆ ಅಪಚಾರ ಮಾಡಿದಂತೆ

ಮದರಾಸ್ ಅಸೆಂಬ್ಲಿಯ ಹಾಲಿ ಸದಸ್ಯ ಹಾಗೂ ಸಂಯುಕ್ತ ಜನತಾ ಪಕ್ಷದ (ಸ್ವತಂತ್ರರು) ನಾಯಕರಾದ ಶ್ರೀ ಎಂ. ಎ. ಮುತ್ತಯ್ಯ ಚೆಟ್ಟಿಯಾರರು ಈ ವಿಷಮ ಕಾಲದಲ್ಲಿ ಸರಕಾರ ರಚಿಸಲು ಕಾಂಗ್ರೆಸ್ ನಿರಾಕರಿಸಿದರೆ ದೇಶಕ್ಕೆ ಅಪಚಾರ ವೆಸಗಿದಂತೆ ಎಂದು ಹೇಳಿರುವರು.

ಅಹಮದಾಬಾದಿನಿಂದ ಶ್ರೀ ಮೊರಾರ್ಜಿ ಸ್ಪರ್ಧೆ

ಮುಂಬೈ ಒಳಾಡಳಿತ ಸಚಿವ ಶ್ರೀ ಮೊರಾರ್ಜಿ ದೇಸಾಯಿಯನ್ನು ಮೇಲ್ಮನೆಯ ಸ್ಥಾನಕ್ಕೆ ಅಹಮದಾಬಾದ್ ನಗರದ ಸ್ಥಳೀಯ ಸಂಸ್ಥೆ ಕ್ಷೇತ್ರದಿಂದ ಸ್ಪರ್ಧಿಸಲು ಆರಿಸಲಾಗಿದೆ.

ನಗರಾಭಿವೃದ್ಧಿ ಸಮಿತಿ ಕಛೇರಿ ಮೈಸೂರು

ಹರಾಜು ಇಸ್ತಿಹಾರ್

ತಾ॥ ೨೫-೨-೫೨

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ದೇವರಾಜಮೊಹಲ್ಲಾ ಲ್ಯಾನ್ಸ್‌ಡೌನ್ ಬಜಾರಿನಲ್ಲಿ ಒಡೆಯಲಾಗುತ್ತಿರುವ ಕಟ್ಟಡಗಳ ಸಾಮಾನುಗಳನ್ನು ಇದೇ ಮಾಹೆ ೨೯ನೇ ತಾ॥ (ಶುಕ್ರವಾರ) ಬೆಳಗ್ಗೆ ೯ ಗಂಟೆಗೆ ಅದೇ ಸ್ಥಳದಲ್ಲಿ ಟ್ರಸ್ಟ್‌ಬೋರ್ಡ್ ಇಂಜಿನೀಯರಿಂದಾಗಲೀ ಅಥವಾ ಅವರಿಂದ ಅಧಿಕಾರ ಪಡೆದ ಇತರ ಅಧಿಕಾರಿಯಿಂದಾಗಲೀ ಬಹಿರಂಗವಾಗಿ ಹರಾಜು ಮಾಡಲಾಗುವುದು.

(Sd) ಪಿ. ಗೋಪಾಲಕೃಷ್ಣಶೆಟ್ಟಿ,
ಅಧ್ಯಕ್ಷರು.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೦೦) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೮—೨—೧೯೫೨ನೇ ಗುರುವಾರ [ಸಂಚಿಕೆ ೧೯೫

ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರ ರಾಜೀನಾಮೆ

ಆಂಧ್ರಪ್ರಾಂತ್ಯಕ್ಕಾಗಿ ಸ್ವಾಮಿ ಸೀತಾರಾಂರ ಸತ್ಯಾಗ್ರಹಾರಂಭ

ದೆಹಲಿಗೆ ಶ್ರೀ ರೆಡ್ಡಿ ಶ್ರೀ ಹನುಮಂತಯ್ಯ

ಬೆಂಗಳೂರು ಫೆ ೨೭

ಮುಖ್ಯಮಂತ್ರಿ ಶ್ರೀ ಕೆ.ಸಿ. ರೆಡ್ಡಿಯವರೂ, ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರೂ ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರುರವರ ಕರೆಯ ಮೇರೆಗೆ ನಿನ್ನೆಯ ದಿನ ರಾತ್ರಿ, ಮದ್ರಾಸ್ ರೈಲಿನಲ್ಲಿ ದೆಹಲಿಗೆ ಪ್ರಯಾಣ ಮಾಡಿದರು.

ಎಂ. ಪಿ. ಸಿ. ಸಿ ಕಾರ್ಯದರ್ಶಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಅವರೊಡನೆ ಹೋದರು.

ನಿವೃತ್ತಿ ಮುನ್ನ ರಜಾ

ಬೆಂಗಳೂರು ಫೆ ೨೭

ವ್ಯವಸಾಯ ಇಲಾಖಾ ಡೈರೆಕ್ಟರ್ ಶ್ರೀ ಕೆ ಹೆಚ್ ಶ್ರೀನಿವಾಸನ್‌ರವರಿಗೆ ಕೊಟ್ಟಿರುವ ೭ ತಿಂಗಳು ೨೪ ದಿನಗಳ ರಜಾ ಜೊತೆಗೆ ಇನ್ನೂ ೪ ತಿಂಗಳು ೬ ದಿನಗಳ ಅರ್ಧ ಸಂಬಳದ ರಜಾ ಮಂಜೂರ್ ಮಾಡಲಾಗಿದೆ. ಅನಂತರ ೪-೧೨-೫೨ ರಲ್ಲಿ ಅವರು ಕೆಲಸದಿಂದ ನಿವೃತ್ತರಾಗುವರು.

ಬಡ್ತಿ

ಬೆಂಗಳೂರು ಫೆ ೨೭

ಮೈಸೂರು ಟೀಚರ್ಸ್ ಕಾಲೇಜು ಪ್ರಿನ್ಸಿಪಾಲ್ ಶ್ರೀ ಎ ಸಿ ದೇವೇಗೌಡರನ್ನು ಪ್ರಥಮ ದರ್ಜೆ ಪ್ರೊಫೆಸರಾಗಿ ಬಡ್ತಿ ಕೊಡಲಾಗಿದೆ.

ಜೈಲಿಗೆ ರವಾನೆ

ಮೋರ್ವಿ ಸಂಸ್ಥಾನಾಧೀಶರ ಸಹೋದರ ಶ್ರೀ ಕುಮಾರ ಕಾಳಿಪ್ರಸಾದರು ದರೋಡೆಗಾರ ಭೂಪತ್ ಎಂಬುವನೊಡನೆ ಸೇರಿ ದರೋಡೆಗಳಲ್ಲಿ ಭಾಗವಹಿಸಿದ್ದರೆಂಬ ಆಪಾದನೆ ಮೇಲೆ ಬಂಧನದಲ್ಲಿದ್ದವರನ್ನು ಪುಣೆಯ ಯರವಾಡಾ ಜೈಲಿಗೆ ಕರೆದೊಯ್ಯಲಾಗಿದೆ.

ಉತ್ತರಪ್ರದೇಶದ ಫಲಿತಾಂಶ

ಉತ್ತರಪ್ರದೇಶದ ಶಾಸನಸಭೆಗೆ ಸ್ಪರ್ಧಿಸಿದ್ದ ಸ್ವತಂತ್ರ ಉಮೇದುವಾರರಾದ ಮಹಾರಾಜ ಬಾಲೇಂದು ಶಾಹರವರು ಚುನಾಯಿತರಾಗಿರುವರು.

ಮುತ್ತಿನ ಜಮಖಾನಗಳು

ಬರೋಡಾ ಅರಮನೆಯಲ್ಲಿದ್ದ ಮುತ್ತಿನ ಜಮಖಾನಗಳ ವಿಷಯವಾಗಿ ಪ್ರಶ್ನೆಯೊಂದಕ್ಕೆ ಪಾರ್ಲಿಮೆಂಟಿನಲ್ಲಿ ಸಂಸ್ಥಾನ ಶಾಖಾ ಸಚಿವ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಉತ್ತರವೀಯುತ್ತಾ ಸರ್ ಜಾರ್ಜ್‌ಬರ್ಡ್ ಉಡ್‌ರವರ 'ಇಂಡಸ್ಟ್ರಿಯಲ್ ಆರ್ಟ್ಸ್ ಆಫ್ ಇಂಡಿಯಾ'ದ ಪ್ರಕಾರ ೧೮೮೦ರಲ್ಲಿ ಒಂದು ಕೋಟಿ ರೂ ಬೆಲೆ ಕಟ್ಟಿದ್ದ ಮುತ್ತಿನ ಜಮಖಾನವು ಬರೋಡಾದಲ್ಲಿತ್ತು. ಈಚಿನ ವರ್ತಮಾನದ ಪ್ರಕಾರ ಮೊದಲು ೪ ಮುತ್ತಿನ ಜಮಖಾನಗಳಿದ್ದುವು. ಅವುಗಳ ಅಂದಾಜು ಬೆಲೆಯು ೧,೬೯,೪೪೭ ರೂಗಳು ಅವುಗಳಲ್ಲಿ ಎರಡನ್ನು ೧೯೧೬ನೇ ಸೆಪ್ಟಂಬರಿನಲ್ಲಿ ಮಾರಲಾಯಿತು. ೬೮,೦೦೦ ಮತ್ತು ೧೫,೨೦೦ ರೂ. ಬೆಲೆಯೆಂದು ತೋರಿಸಿರುವ ಇನ್ನೆರಡು ಜಮಖಾನಗಳನ್ನು ೧೯೩೮ರಲ್ಲಿ ಬರೋಡಾದ ಮಾಜಿ ಅರಸು ತೆಗೆದುಕೊಂಡರು ಈ ಮುತ್ತಿನ ಜಮಖಾನಗಳು ಬರೋಡಾ ಅರಸು ಸ್ವಂತ ಆಸ್ತಿಯ ಪಟ್ಟಿಯಲ್ಲಿ ಸೇರಿಸಲಾಗಿದೆಯೆಂದು ಹೇಳಿದರು.

ಈ ಜಮಖಾನಗಳು ಇಂದಿನ ಸ್ಥಿತಿಯೇನೆಂದು ವಿಚಾರಿಸಲಾಗಿ ಮಾಜಿ ಅರಸರಿಂದ ಈ ವಿಷಯ ತಿಳಿದುಕೊಂಡು ಇತ್ಯರ್ಥಪಡಿಸಬೇಕಾಗಿದೆಯೆಂದ ಅವರು ಹೇಳಿದರು.

ಶ್ರೀ ಕೇಶವನ್‌ಶಾಸ್ತ್ರಿ ತಾತ್ಕಾಲಿಕ ಸ್ಪೀಕರ್

ತಿರುವಾಂಕೂರು ಕೊಚ್ಚಿನ್ನಿನ ರಾಜಪ್ರಮುಖರು ಶ್ರೀ ಕೇಶವನ್‌ಶಾಸ್ತ್ರಿಯವರನ್ನು ಅಲ್ಲಿನ ನೂತನ ಶಾಸನ ಸಭೆಗೆ ಹಂಗಾಮಿ ಸ್ಪೀಕರ್‌ರನ್ನಾಗಿ ನೇಮಿಸಿರುವರು. ತಿರುವಾಂಕೂರು ಕೊಚ್ಚಿನ್ನಿನ ನೂತನ ಶಾಸನಸಭೆಯು ಮುಂದಿನ ತಿಂಗಳು ೧೯ ನೇ ತಾ॥ ಸಮಾವೇಶಗೊಳ್ಳುವುದು.

ರೈಲ್ವೇ ಸಂಶೋಧನಾ ಕೇಂದ್ರ

ಅಖಿಲ ಭಾರತ ರೈಲ್ವೆ ಸಂಶೋಧನಾ ಕೇಂದ್ರವೊಂದನ್ನು ಲಕ್ನೋ ಬಳಿ ಸ್ಥಾಪಿಸಲು ಕೇಂದ್ರಸರ್ಕಾರವು ೧೮ ಲಕ್ಷ ರೂ. ಗಳನ್ನು ಮಂಜೂರ್ ಮಾಡಿದೆ.

ಶ್ರೀ ಮಾವ್ಳಂಕರ್‌ರವರಿಗೆ ಸತ್ಕಾರ

ಪಾರ್ಲಿಮೆಂಟಿನ ಸದಸ್ಯರು ನಿನ್ನೆ ಸತ್ಕಾರ ಸಮಾರಂಭವನ್ನೇರ್ಪಡಿಸಿ ಪಾರ್ಲಿಮೆಂಟಿನ ಸ್ಪೀಕರ್ ಶ್ರೀ ಮಾವ್ಳಂಕರ್‌ರವರನ್ನು ಗೌರವಿಸಿದರು. ಪಾರ್ಲಿಮೆಂಟಿನ ಸದಸ್ಯರು ದಂತದಲ್ಲಿ ತಯಾರಿಸಿದ ಮಹಾತ್ಮ ಗಾಂಧಿಯವರ ವಿಗ್ರಹವನ್ನು ಪ್ರಧಾನಿ ನೆಹರೂರವರ ಮೂಲಕ ಅರ್ಪಿಸಿದರು.

ಆಂಧ್ರ ಪ್ರಾಂತ್ಯಕ್ಕೆ ಸತ್ಯಾಗ್ರಹಾರಂಭ

ಸ್ವಾಮಿ ಸೀತಾರಾಂರವರು ಆಂಧ್ರಪ್ರಾಂತ್ಯಕ್ಕಾಗಿ ನಿನ್ನೆ ಬೆಳಿಗ್ಗೆಯಿಂದ ಅಲ್ಲೂರಿನಲ್ಲಿ ಸತ್ಯಾಗ್ರಹ ಆರಂಭಿಸಿದರು. ಇದರ ಸಂಬಂಧವಾಗಿ ನಿನ್ನೆ ಮೆರವಣಿಗೆ ಮುಂತಾದುವು ನಡೆಯಿತು.

ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಶಾಸನ

ಕೇಂದ್ರ ಸರ್ಕಾರದ ಉಪಯೋಗಕ್ಕೆ ಭಾರತದ ಯಾವಭಾಗದಲ್ಲಾದರೂ ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳುವ ಶಾಸನವನ್ನು ತಯಾರಿಸಿ ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದ್ದು ಅದನ್ನು ತಿದ್ದುಪಡಿ ಮಾಡಲು ಚುನಾಯಿತ ಸಮಿತಿಗೆ ಬಿಡಲಾಗಿತ್ತು. ಚುನಾಯಿತ ಸಮಿತಿ ಈ ಶಾಸನದ ಬಗ್ಗೆ ತನ್ನ ಅಭಿಪ್ರಾಯವನ್ನು ಸೂಚಿಸಿ ವರದಿಯನ್ನು ಪಾರ್ಲಿಮೆಂಟ್ ಮುಂದೆ ಮಂಡಿಸಿತು. ಪಾರ್ಲಿಮೆಂಟು ಈ ಶಾಸನಕ್ಕೆ ಒಪ್ಪಿಗೆ ಇತ್ತಿತು.

ಬತ್ತ ಸಂಗ್ರಹಣೆ ಬೆಲೆ ಹೆಚ್ಚಿತು

ಮದ್ರಾಸ್ ಪ್ರಾಂತ್ಯದ ಪೂರ್ವ ಮತ್ತು ಪಶ್ಚಿಮ ಗೋದಾವರಿ, ಗುಂಟೂರು, ಕೃಷ್ಣಾ, ನೆಲ್ಲೂರು ಜಿಲ್ಲೆಗಳಲ್ಲಿ ಮತ್ತು ತಂಜಾವೂರಿನಲ್ಲಿ ಸರ್ಕಾರದವರು ತಾವು ಸಂಗ್ರಹಿಸುವ ಬತ್ತದ ಬೆಲೆಯನ್ನು ಮಣ ಒಂದಕ್ಕೆ ಒಂದು ರೂ. ನಂತೆ ಹೆಚ್ಚಿಸಿರುತ್ತಾರೆ. ಈ ಬೆಲೆಯನ್ನು ಜನರಿಂದ ಸಂಗ್ರಹಿಸಿಕೊಂಡಿರುವ ಅಕ್ಕಿಗೆ ಅಥವಾ ಬತ್ತಕ್ಕೆ ಕೊಡಲಾಗುವುದು.

ಪ್ರಧಾನಿ ನೆಹರೂರವರು ಸೂಚನೆಯಂತೆ ಕಾಂಗ್ರೆಸ್ ಸಂಸ್ಥೆಯ ಶುದ್ಧೀಕರಣಕ್ಕಾಗಿ ಆಂಧ್ರಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಧ್ಯಕ್ಷರ ವಿನಃ ಸದಸ್ಯರೆಲ್ಲರೂ ರಾಜೀನಾಮೆಯನ್ನು ಕೊಡಬೇಕೆಂದು ಆಂಧ್ರ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಕಾಂಗ್ರೆಸ್ ಅಧ್ಯಕ್ಷ ನೆಹರೂರವರ ಸಲಹೆಯಂತೆ ಮುಂದೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

ಶ್ರೀ ಮತಿ ರೂಸವೆಲ್ಟರ ಆಗಮನ

ಅಮೆರಿಕದ ದಿವಂಗತ ಅಧ್ಯಕ್ಷ ಮಿ॥ ರೂಸವೆಲ್ಟರ ಪತ್ನಿ ಶ್ರೀ ಮತಿ ಎಲಿನಾರ್ ರೂಸವೆಲ್ಟರು ನಿನ್ನೆ ಭಾರತಕ್ಕೆ ಆಗಮಿಸಿದರು.

ವಿಮಾನ ನಿಲ್ದಾಣದಲ್ಲಿ ಪ್ರಧಾನಿ ನೆಹರು, ಶ್ರೀ ಮತಿ ವಿಜಯಲಕ್ಷ್ಮೀ, ರಾಜಕುಮಾರಿ ಅಮೃತಕೌರ್, ಶ್ರೀಮತಿ ಇಂದಿರಾ ಗಾಂಧಿ ಮತ್ತು ರಾಷ್ಟ್ರಾಧ್ಯಕ್ಷರ ಪರ ಅವರ ಮಿಲಿಟರಿ ಕಾರ್ಯದರ್ಶಿಯವರು ಹಾಜರಿದ್ದು ಶ್ರೀ ಮತಿ ರೂಸವೆಲ್ಟರನ್ನು ಸ್ವಾಗತಿಸಿದರು.

ಗೃಹನಿರ್ಮಾಣ ಕಾರ್ಖಾನೆ

ದೆಹಲಿಯಲ್ಲಿರುವ ಗೃಹನಿರ್ಮಾಣ ಕಾರ್ಖಾನೆಗೆ ಅಂತಿಮ ಸ್ವರೂಪವನು ಕೊಡಲಾಗಿದೆ. ಸಧ್ಯದಲ್ಲಿಯೇ ಗೃಹನಿರ್ಮಾಣ ಕಾರ್ಯ ಆರಂಭವಾಗಬಹುದು. ವಿದೇಶದಿಂದ ಬಂದಿರುವ ಮಾದರೀ ಮನೆಯನ್ನು ಇಲ್ಲಿಯ ಇಂಜನಿಯರುಗಳು ವೀಕ್ಷಿಸಿ ನಂತರ ತಯಾರಿ ಬಗ್ಗೆ ನಿರ್ಧಾರವಾಗಬಹುದು ಎಂದು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಲಾಯಿತು.

೫೮ ಜನರ ದಸ್ತಗಿರಿ

ಲಾಹೋರಿನಲ್ಲಿ ಗೋಧಿ ದಿನಾಚರಣೆ ನಡೆಯುತ್ತಿದ್ದು ಇಲ್ಲಿಯವರೆಗೆ ೫೮ ಜನರು ದಸ್ತಗಿರಿಯಾಗಿದೆಯೆಂದು ಹೇಳಲಾಗಿದೆ. ಅನೇಕರು ತಲೆತಪ್ಪಿಸಿಕೊಂಡು ಹೋಗಿರುವರೆಂದು ಹೇಳಲಾಗಿದೆ.

‡ ಸೌರಾಷ್ಟ್ರ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆ ನಡೆದು ಶ್ರೀ ದೇಭಾರ್‌ರವರನ್ನು ಮತ್ತೆ ಪಕ್ಷದ ನಾಯಕರನ್ನಾಗಿ ಚುನಾಯಿಸಲಾಯಿತು.

ಬ್ರಿಟನ್ನಿನಲ್ಲಿ ಆಟಂಬಾಂಬ್ ತಯಾರಿಸಲಾಗಿದೆ

ಬ್ರಿಟನ್ ಆಟಂಬಾಂಬ್ ಒಂದನ್ನು ತಯಾರಿಸಿದೆ- ತಯಾರಿಕೆಯ ಯಂತ್ರೋಪಕರಣಗಳು ಇಲ್ಲವೆ ಹಿಂದಿನ ಸೋಷಲಿಸ್ಟ್ ಸರ್ಕಾರ ಬಾಂಬ್ ತಯಾರಿಸಿತು. ನಾನು ಅಧಿಕಾರ ವಹಿಸಿಕೊಳ್ಳುವವರೆಗೆ ಆ ವಿಷಯ ನನಗೆ ತಿಳಿದಿರಲಿಲ್ಲ ಎಂದು ಪ್ರಧಾನಿ ಚರ್ಚಿಲ್ ಕಾಮನ್ಸಿನಲ್ಲಿ ತಿಳಿಸಿರುವರು.

ಕೇಂದ್ರದಲ್ಲಿ ನೂತನಮಂತ್ರಿ ಮಂಡಲ

ಏಪ್ರಿಲ್ ಪ್ರಥಮ ಅಥವಾ ದ್ವಿತೀಯ ವಾರದಲ್ಲಿ ಕೇಂದ್ರದಲ್ಲಿ ಹೊಸಮಂತ್ರಿ ಮಂಡಲದ ರಚನೆಯಾಗಬಹುದೆಂದು ನಂಬಲರ್ಹವಾದ ಕಡೆಗಳಿಂದ ಗೊತ್ತಾಗಿದೆ.

ಪ್ರಧಾನಿ ಪಂಡಿತ್ ನೆಹರೂರವರನ್ನು ಕಾಂಗ್ರೆಸ್ ಪಕ್ಷದ ನಾಯಕರಾಗಿಯೂ ಇತರ ಕಾರ್ಯನಿರ್ವಾಹಕ ಸಮಿತಿಸದಸ್ಯರನ್ನೂ ಉಪನಾಯಕರನ್ನೂ ಮತ್ತು ಚೀಫ್ ವಿಪ್‌ರನ್ನೂ ಚುನಾಯಿಸುವುದು ಸಲುವಾಗಿ ಕಲ್ಕತ್ತೆಯಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನಾನಂತರ ಏಪ್ರಿಲ್ ಪ್ರಥಮ ವಾರದಲ್ಲಿ ಪಾರ್ಲಿಮೆಂಟಿನ ನೂತನ ಕಾಂಗ್ರೆಸ್ ಸದಸ್ಯರ ಮತ್ತು ಕೌನ್ಸಿಲ್ ಆಫ್ ಸ್ಟೇಟ್ಸ್ ಸದಸ್ಯರ ಸಭೆ ನಡೆಸುವ ಸೂಚನೆಗಳಿವೆ.

ಯುವಕರಿಗೆ ಆಡಳಿತದ ಕೆಲಸದಲ್ಲಿ ತರಬೇತು ಮಾಡುವುದರ ಸಲುವಾಗಿಯೂ ಮತ್ತು ಸಚಿವರುಗಳಿಗೆ ಪಾರ್ಲಿಮೆಂಟಿನ ಮತ್ತು ಆಡಳಿತ ಕೆಲಸಗಳಲ್ಲಿ ಸ್ವಲ್ಪಮಟ್ಟಿಗೆ ಬಿಡುವು ದೊರೆತು ಅವರು ಹೆಚ್ಚಿನ ಸಾರ್ವಜನಿಕ ಸಂಪರ್ಕವನ್ನು ಏರ್ಪಡಿಸಿಕೊಳ್ಳಲು ಅನುಕೂಲವಾಗಲೂ ಹೆಚ್ಚಿನ ಉಪಮಂತ್ರಿಗಳನ್ನು ನೇಮಕಮಾಡುವ ನಿರೀಕ್ಷೆ ಇದೆ.

ಶ್ರೀಮತಿ ರೂಸ್‌ವೆಲ್ಟರು

ಶ್ರೀಮತಿ ರೂಸ್‌ವೆಲ್ಟರು ದೆಹಲಿಗೆ ನಿನ್ನೆ ಆಗಮಿಸಿದರು. ಅವರು ಭಾರತದಲ್ಲಿ ೧೧ ವಾರಗಳು ಇರುವರು. ಆ ವೇಳೆಯಲ್ಲಿ ಅವರು ಮುಖ್ಯ ಶೈಕ್ಷಣಿಕ ಕೇಂದ್ರಗಳು ಸಾಮಾಜಿಕ, ಕೈಗಾರಿಕೆ ಸ್ಥಳಗಳು ಮತ್ತು ಚಾರಿತ್ರಿಕ ಪ್ರಾಮುಖ್ಯತೆ ಪಡೆದಿರುವ ಸ್ಥಳಗಳಿಗೂ ಭೇಟಿ ಕೊಡುವರು.

ಪಂಜಾಬ್, ಉತ್ತರಪ್ರದೇಶ, ಮುಂಬೈ, ಭೂಪಾಲ್, ತಿರುವಾಂಕೂರು-ಕೊಚ್ಚಿನ್, ಮದರಾಸ್, ಮೈಸೂರು, ಹೈದರಾಬಾದ್‌ಗಳಿಗೆ ಭೇಟಿಕೊಡುವರು.

ಕೋ-ಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳಿಗೆ ನೋಟೀಸು

ರಾಜಧಾನಿಯ ಸಿಟಿ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ಕಳೆದ ಒಂದು ವರ್ಷದಿಂದಲೂ ಕೆಲಸಕಾರ್ಯಗಳು ಸಮರ್ಪಕ ಮತ್ತು ಸುಗಮವಾಗಿ ನಡೆಯದೆ ಇರುವ ಸಂಬಂಧವಾಗಿ ಸಹಕಾರಸಂಘಗಳ ರಿಜಿಸ್ಟ್ರಾರ್‌ರವರು ಸದರಿ ಬ್ಯಾಂಕಿನ ಡೈರೆಕ್ಟರುಗಳಿಗೆ ನೋಟೀಸನ್ನು ಕೊಟ್ಟು ಆಡಳಿತ ವರ್ಗದವರನ್ನು ತೆಗೆದುಹಾಕಿ ಬೇರೆ ವ್ಯವಸ್ಥೆಯನ್ನು ಏಕೆ ಮಾಡಬಾರದೆಂಬುದಕ್ಕೆ ಸೂಕ್ತ ಸಮಜಾಯಿಷಿಕೊಡಬೇಕೆಂದು ತಿಳಿಸಿರುತ್ತಾರೆ.

ಅಕ್ಕಿ ಮೂಟೆ ಉರುಳಿ ಮರಣ

ಕೃಷ್ಣಾಜಿಲ್ಲೆಗೆ ಸೇರಿದ ನಜವೀದ್ ಬಳಿ ಇರುವ ಗ್ರಾಮವೊಂದರಲ್ಲಿ ನಿನ್ನೆ ದಿನ ೮ ಜನ ಸ್ತ್ರೀಯರು ಅಕ್ಕಿ ಗಿರಣಿಯೊಂದರಲ್ಲಿ ಮಲಗಿದ್ದಾಗ ಅವರಮೇಲೆ ಅಕ್ಕಿಮೂಟೆ ಉರುಳಿ ಅವರು ಮೃತರಾದರೆಂದು ನಜವೀದ್ ವರದಿ ತಿಳಿಸುತ್ತದೆ.

ನೂತನ ಮಂತ್ರಿಮಂಡಲದ ಅಧಿಕಾರ ಸ್ವೀಕಾರ

ಸೌರಾಷ್ಟ್ರದ ಮಂತ್ರಿಮಂಡಲ ನಿನ್ನೆ ರಾಜೀನಾಮೆ ಕೊಟ್ಟಿತು. ಮುಖ್ಯಮಂತ್ರಿ ಶ್ರೀ ಢೇಬರ್ ಮತ್ತೆ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆರಿಸಲ್ಪಡುವ ಸಂಭವವಿದೆ. ಈ ದಿನ ನೂತನ ಮಂತ್ರಿಮಂಡಲದ ಪ್ರಮಾಣ ಸ್ವೀಕಾರ ನಡೆಯುತ್ತದೆ.

ಪ್ರಸಿದ್ಧ ರತ್ನಪುಡಿ ವ್ಯಾಪಾರಿಗಳ ಬಂಧನ

ಎರಡು ಲಕ್ಷ ರೂ. ಬೆಲೆಯ ವಜ್ರಗಳನ್ನು ಕಳ್ಳತನದಲ್ಲಿ ಸಾಗಿಸುತ್ತಿದ್ದ ಬೊಂಬಾಯಿನ ಇಬ್ಬರು ಪ್ರಸಿದ್ಧ ರತ್ನಪುಡಿ ವ್ಯಾಪಾರಿಗಳನ್ನು ಪೋಲೀಸರು ಬಂಧಿಸಿದರು. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಜಾಮೀನಿನ ಮೇಲೆ ಅವರನ್ನು ಬಿಟ್ಟರು.

೧೧ ಮಂತ್ರಿಗಳು

ಹೈದರಾಬಾದಿನಲ್ಲಿ ರಚಿತವಾಗಲಿರುವ ಮಂತ್ರಿಮಂಡಲದಲ್ಲಿ ೧೧ ಮಂತ್ರಿಗಳು ೪-೫ ಜನ ಉಪಮಂತ್ರಿಗಳು ಇರುವರೆಂದು ಹೇಳಲಾಗಿದೆ.

ಪತ್ರವ್ಯವಹಾರ

ಸ್ವಾಮಿ,—

ಮೈಸೂರು ಸಿಟಿ ಕೋ ಆಪರೇಟಿವ್ ಸಂಘಗಳ ಧರ್ಮ ಸತ್ಯ ನ್ಯಾಯ ಪರಿಶೀಲನಾ ಮತ್ತು ಹೊಡೆದಾಡುತ್ತಿರುವ ಅನೇಕ ಡೈರೆಕ್ಟರುಗಳು ಮತ್ತು ಮೆಂಬರುಗಳು ಸಹ ಮೈಸೂರು ಘನ ಸರ್ಕಾರದವರು ತಮ್ಮ ಘನ ಚಿತ್ತಕ್ಕೆ ಈ ಸೊಸೈಟಿಗಳಲ್ಲಿ ನಡೆಯುತ್ತಿರುವ ಘಟನೆಗಳು ಮತ್ತು ಡೈರೆಕ್ಟರುಗಳ ದಬ್ಬಾಳಿಕೆಗಳನ್ನು ತಡೆಗಟ್ಟಲು ತಮ್ಮ ಸರ್ಕಾರದ ಸಹಕಾರ ಸಂಘಗಳ ನಿಯಮಗಳನ್ನು ಅಂದರೆ (ಎಲ್ ಬಿ) ಪ್ರಕಾರ ಬದಲಾಯಿಸಿ ಇನ್ನು ಮುಂದೆ ಈ ಸಂಘಗಳಲ್ಲಿ ಹದಿನೈದು ಜನಗಳು ಚುನಾಯಿತರಾಗದೇಕಾದ್ದರಲ್ಲಿ ಕಡೇ ಪಕ್ಷ ಅರ್ಧಕ್ಕೆ ಕಡಿಮೆ ಇಲ್ಲದಂತೆ ಹೊಸ ಸದಸ್ಯರುಗಳು ಚುನಾವಣೆಯಾಗಬೇಕೆಂದು ಹಾಗೆ ನಿವೃತ್ತರಾಗುವವರಲ್ಲಿ ಬಹಳ ಹಳಬರುಗಳಾದ ಡೈರೆಕ್ಟರುಗಳು ನಿವೃತ್ತರಾಗಬೇಕೆಂದು ರೂಲ್ಸ್ ಬದಲಾವಣೆಮಾಡಿ ಜಾರಿಗೆ ತರಬೇಕೆಂದು ಅರ್ಜಿ ಕೊಡಿಸಿದೆ. ಇದು ಕೇವಲ ಶ್ಲಾಘನೀಯವಾಗಿಯೂ ಸಹಕಾರ ಸಂಘದ ಮೆಂಬರುಗಳಿಗೆ ಸ.ವ್ಯವಸ್ಥೆಯಿಂದ ರೂಲ್ಸ್ ಬದ್ಧವಾಗಿ ದಬ್ಬಾಳಿಕೆಯಿಲ್ಲದೆ ಅನುಕೂಲಕರವಾಗಿ ಕೆಲಸ ನಡೆಯಲು ಅವಕಾಶವಾಯಿತೆಂದು ತಿಳಿಸುವುದಲ್ಲದೆ ಇದಕ್ಕೋಸ್ಕರ ನಮ್ಮ ಘನಸರ್ಕಾರಕ್ಕೂ, ರಾಜಪ್ರಮುಖರಿಗೂ ಅನೇಕ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ.

ಸಹಕಾರ ಸಂಘಗಳ ಮತ್ತು ಮೆಂಬರುಗಳ ಹಿತೈಷಿ.

ಡಾ|| ಸೂರ್ಯನಾರಾಯಣರಾವ್.

ಭಾರತದ ವೈಮಾನಿಕ ಅಧಿಕಾರಿಗಳು

ವಾಷಿಂಗ್ಟನ್ ಫೆ ೧೮

ಭಾರತದ ವೈಮಾನಿಕ ಅಧಿಕಾರಿಗಳಿಬ್ಬರು ತಮ್ಮ ಅಮೇರಿಕದ ಪ್ರವಾಸದಲ್ಲಿ ಸಾಕಷ್ಟು ಒಳ್ಳೆಯ ಅಭಿಪ್ರಾಯಗಳನ್ನು ಸಂಗ್ರಹಿಸಿ ತಮ್ಮ ಪ್ರವಾಸವು ಫಲದಾಯಕವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಬಿ ಎಂ ಗುಪ್ತ ಮತ್ತು ಎಂ ಹೆಚ್ ಪರಾಂಜಪೆಯವರು ನಾಲ್ಕು ಅಂತಗಳ ಯೋಜನೆಯ ಪ್ರಕಾರ ಅಮೇರಿಕದ ವೈಮಾನಿಕ ವ್ಯವಸ್ಥೆಯನ್ನು ಅಭ್ಯಾಸಿಸಲು ಬಂದಿದ್ದಾರೆ.

ವಿಮಾನ ಸಂಚಾರ ವ್ಯವಸ್ಥೆಯಲ್ಲಿ ಅಮೇರಿಕವು ಬಹುಮುಂದೆ ಹೋಗಿದೆ. ಅದರ ಅನುಭವವನ್ನು ಭಾರತವು ಪಡೆಯಬಹುದಾಗಿದೆ ಎಂದು ಭಾರತದ ವೈಮಾನಿಕಾಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ

ಸಿಟಿ ಮುನಿಸಿಪಲ್ ಆಫೀಸ್

ಮೈಸೂರು ತಾ|| ೨೦-೨-೫೨

ಟೆಂಡರು ನೋಟಿಫಿಕೇಷನ್

ಈ ಮೂಲಕ ತಿಳಿಯಪಡಿಸುವುದೇನೆಂದರೆ—

೧೯೫೨-೫೩ನೇ ಸಾಲಿಗೆ (೧-೪-೫೨ ರಿಂದ ೩೧-೩-೫೩ ರವರೆಗೆ) ಮುನಿಸಿಪಲ್ ಫಾರಂಗೆ ಸೇರಿದ ಎತ್ತುಗಳಿಗೆ ಲಾಳಕಟ್ಟಲು ಮೊಹರಾದ ಟೆಂಡರುಗಳನ್ನು ಮಾರ್ಚಿ ಮಾಹೆ ೩ನೇ ತಾ|| (೩-೩-೫೨) ಸೋಮವಾರ ಮಧ್ಯಾಹ್ನ ೪ ಗಂಟೆಯ ವರೆವಿಗೂ ಸ್ವೀಕರಿಸಲಾಗುತ್ತೆ. ಅಪೇಕ್ಷೆಯುಳ್ಳವರು ರೂ. ೧೦೦ ಡಿಪಾಜಿಟ್ಟನ್ನು ಮುನಿಸಿಪಲ್ ಖಜಾನೆಗೆ ಪಾವತಿ ಮಾಡಿ ಸರ್ಟಿಫೈಡ್ ಚಲನ್ ಸಮೇತ ಮೊಹರಾದ ಟೆಂಡರುಗಳನ್ನು ಕಳುಹಿಸತಕ್ಕದ್ದು. ಹೆಚ್ಚಿಗೆ ವಿವರಗಳನ್ನು ಆಫೀಸ್ ವೇಳೆಯಲ್ಲಿ ಪಡೆಯಬಹುದು.

(ಸಹಿ) ಎಂ. ಎಸ್. ಸ್ವಾಮಿನಾಥನ್,
ಮುನಿಸಿಪಲ್ ಕಮೀಷನರ್.

ವುಡ್ ಲ್ಯಾಂಡ್ಸ್

೨೨-೨-೫೨ ರಿಂದ ೨ ನೇ ವಾರ

ದಿನವೂ 3 ಪ್ರದರ್ಶನಗಳು

ಆಲ್ ಬೇಲ

ಪಾತ್ರ:- ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ನ್ಯೂ ಆಪೇರ

೨೨—೨—೫೨ ರಿಂದ

"ಶ್ರೀಸಾಹಸಂ" ತಯಾರಿಸಿರುವ ವಿನೋದ ಪ್ರೊಡಕ್ಷನ್‌ರವರ

ಶಾಂತಿ

(ತೆಲುಗು)

ಪಾತ್ರ :—ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ|| ಸುಬ್ಬರಾವ್.

ರ ಣ ಜಿ ತ್

೨೨-೨-೫೨ ರಿಂದ ಅಮೋಘಚಿತ್ರ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆ ವಾ ರ ::—

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ರೈಬ್ಯೂನ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮ ಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ರಿಂಗ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧—೩—೧೯೫೨ನೇ ಶನಿವಾರ [ಸಂಚಿಕೆ ೧೫೭

೫೨-೫೩ನೇ ಸಾಲಿನ ಭಾರತದ ಬಜೆಟ್ಟಿನಲ್ಲಿ ೧೮.೭೩ ಕೋಟಿ ರೂಪಾಯಿ ಉಳಿತಾಯ

ಫ್ರಾನ್ಸಿನಲ್ಲಿ ಐದು ವಾರದ ಹಿಂದೆ ರಚಿತವಾದ ಮಂತ್ರಿಮಂಡಲದ ರಾಜೀನಾಮೆ

ಸಕ್ಕರೆ ದಾಸ್ತಾನು ವಿಶೇಷವಾಗಿದೆ

ಬೊಂಬಾಯಿನಲ್ಲಿರುವ ಸಕ್ಕರೆ ಗಿರಣಿಗಳಲ್ಲಿ ಸಕ್ಕರೆ ದಾಸ್ತಾನು ವಿಶೇಷವಾಗಿ ಅವುಗಳ ಮಾರಾಟವು ನಿಧಾನವಾಗಿ ಆರ್ಥಿಕ ತೊಂದರೆಗೊಳಗಾಗಿದ್ದಾರೆ.

ಈ ಗಿರಣಿಗಳ ಸಂಘದ ಪರವಾಗಿ ಕೆಲವರು ಮೊನ್ನೆ ಕೇಂದ್ರಸರ್ಕಾರದ ವ್ಯವಸಾಯಶಾಖೆಯ ಕಾರ್ಯದರ್ಶಿಯನ್ನು ಭೇಟಿ ಮಾಡಿ ತಮಗುಂಟಾಗಿರುವ ಆರ್ಥಿಕ ದುಸ್ಥಿತಿಯನ್ನು ವಿವರಿಸಿಕೊಂಡು ತಮ್ಮ ದಾಸ್ತಾನಿನಮೇಲೆ ಬ್ಯಾಂಕುಗಳು ಹಣಕೊಡುವಂತೆ ಏರ್ಪಡಿಸಬೇಕೆಂದು ಕೇಳಿಕೊಂಡರು ತಮ್ಮಲ್ಲಿ ಸಕ್ಕರೆ ದಾಸ್ತಾನು ಹೆಚ್ಚಾಗಿರುವುದರಿಂದ ಕೂಡಲೇ ಅವುಗಳ ವಿಲೆಗೆ ಸರ್ಕಾರ ಏರ್ಪಡಿಸಬೇಕು. ಅನೇಕಕಡೆ ವಾರಕ್ಕೊಮ್ಮೆ ಸಕ್ಕರೆ ಕೊಡುತ್ತಿರುವುದರ ಬದಲು ತಿಂಗಳಕೋಟಾವನ್ನೆಲ್ಲಾ ಒಂದೇ ಸಲ ಕೊಡುವಂತೆ ಆಜ್ಞೆಕೊಡಬೇಕು, ಸಕ್ಕರೆ ಸರಬರಾಜು ಹೆಚ್ಚಾಗಿರುವಕಡೆ ರಫ್ತಿನ ಅವಕಾಶ ಕೊಡಬೇಕೆಂದು ಮನವಿಮಾಡಿಕೊಂಡರು

ಕೇಂದ್ರ ಸರ್ಕಾರದವರು ಎಲ್ಲಾ ಪ್ರಾಂತ್ಯ ಸರ್ಕಾರಗಳಿಗೂ ಈಗ ಕೊಡುತ್ತಿರುವಸಕ್ಕರೆಯ ಪ್ರಮಾಣವನ್ನು ಶೇ ೧೦ರಷ್ಟು ಹೆಚ್ಚಿಸಿ ಅಲ್ಲಿ ೪ ತಿಂಗಳ ಕೋಟಾವನ್ನು ಒಂದೇ ಸಲ ಕೊಡಬಹುದೆಂದು ಆಜ್ಞೆ ಮಾಡಿದೆ.

ಅತ್ಯುತ್ತಮವಾದ ಹೋರಿ

ದೆಹಲಿಯಲ್ಲಿ ನಡೆದ ದನಗಳ ಪ್ರದರ್ಶನದಲ್ಲಿ ಹೈದರಾಬಾದ್ ಗಾಡನೂರು ಎಂಬಲ್ಲಿಯ ಎಕ್ರಾಂ ಎಂಬುವನಿಗೆ ಉತ್ತಮ ರೀತಿಯಲ್ಲಿ ಹೋರಿಯನ್ನು ಸಾಕಿದ್ದಕ್ಕಾಗಿ ೫ ಬಹುಮಾನಗಳು ದೊರೆತುವು ಇದಲ್ಲದೆ ವ್ಯವಸಾಯ ಸಂಶೋಧನೆಯ ಭಾರತ ಕೌನ್ಸಿಲ್‌ನಿಂದ ೧೦೦೦ ರೂ ಬಹುಮಾನವೂ ಸೇರಿ ಆತನು ೩೧೦೦ ರೂಗಳ ನಗದು ಬಹುಮಾನವನ್ನೂ ಪಡೆದನು.

ರಕ್ಷಣಾವ್ಯವಸ್ಥೆ

ಭಾರತದ ರಕ್ಷಣಾವ್ಯವಸ್ಥೆಗೆ ಬಜೆಟ್ಟಿನಲ್ಲಿ ಮುಂದಿನಸಾಲಿಗೆ ೧೯೮ ಕೋಟಿ ರೂ ಅಂದಾಜುಮಾಡಲಾಗಿದೆ ಇಂದಿನ ಪರಿಸ್ಥಿತಿಯಲ್ಲಿ ಸೈನ್ಯದಸಂಖ್ಯೆ ಕಡಿಮೆಮಾಡಲು ಸಾಧ್ಯವಿಲ್ಲವೆಂದು ಅರ್ಥಸಚಿವರು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ಶ್ರೀಮತಿ ರೂಸ್‌ವೆಲ್ಟರಿಗೆ ಪಾರ್ಲಿಮೆಂಟಿನಲ್ಲಿ ಸ್ವಾಗತ

ಭಾರತದ ಪಾರ್ಲಿಮೆಂಟ್ ನಿನ್ನೆ ಅಮೇರಿಕದ ದಿವಂಗತ ಅಧ್ಯಕ್ಷ ರೂಸ್‌ವೆಲ್ಟ್ ರ ಪತ್ನಿಯವರಿಗೆ ಸ್ವಾಗತವನ್ನು ನೀಡಿತು ಪಾರ್ಲಿಮೆಂಟ್ ಸ್ಪೀಕರ್ ಶ್ರೀ ಜಿ. ವಿ. ಮಾವಲಂಕರ್‌ರವರು ಆಕೆಯನ್ನು ಪಾರ್ಲಿಮೆಂಟ್ ಸದಸ್ಯರಿಗೆ ಪರಿಚಯಮಾಡಿಕೊಟ್ಟರು- ಶ್ರೀಮತಿ ರೂಸ್‌ವೆಲ್ಟರು ಭಾಷಣಮಾಡಿ ಭಾರತವು ಸ್ವತಂತ್ರಪಡೆದ ನಂತರ ಎಲ್ಲವಿಷಯದಲ್ಲೂ ಸ್ವಶಕ್ತಿಯಮೇಲೆ ನಿಲ್ಲುವುದರಲ್ಲಿ ತಮಗೆ ಸಂದೇಹವಿಲ್ಲವೆಂದರು.

ನೂರುಲ್ಲಾ ಸರ್ಕಾರವನ್ನು ವಜಾಮಾಡಿ

ಪೂರ್ವಬಂಗಾಳ (ಪಾಕಿಸ್ತಾನ) ದಲ್ಲಿ ನೂರುಲ್ಲಾ ಸರ್ಕಾರವನ್ನು ಕೂಡಲೇ ವಜಾ ಮಾಡಿ, ಗವರ್ನರ್ ಆಡಳಿತವನ್ನು ಸ್ಥಾಪಿಸಬೇಕೆಂದು ಸಿಂಧ್ ಪ್ರಾಂತ್ಯ ಮುಸ್ಲಿಂಲೀಗ್ ನಿರ್ಣಯಮಾಡಿ, ಢಕ್ಕಾದಲ್ಲಿ ವಿದ್ಯಾರ್ಥಿಗಳ ಮೇಲೆ ಗುಂಡುಹಾರಿಸಿದುದನ್ನು ತೀವ್ರವಾಗಿ ಖಂಡಿಸಿ ನೂರುಲ್ಲಾ ಸರ್ಕಾರವು ಆಡಳಿತ ನಡೆಸಲು ಶಕ್ತವಾಗಿಲ್ಲವೆಂದು ತಿಳಿಸಿದೆ.

ವರ್ಕಿಂಗ್ ಕಮಿಟಿ ಸೂಚನೆ

ಮದ್ರಾಸಿನಲ್ಲಿ ಹೊಸ ಮಂತ್ರಿಮಂಡಲದ ರಚನೆಯಾಗುವವರೆಗೆ ಅಧಿಕಾರದಲ್ಲಿರಬೇಕೆಂದು ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾರವರಿಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸೂಚನೆಯಿತ್ತಿದೆಯೆಂದು ನಂಬಿಕೆಯರ್ಹವಾದ ಕಡೆಗಳಿಂದ ಗೊತ್ತಾಗಿದೆ. ಹೊಸ ಮಂತ್ರಿಮಂಡಲ ಮಾರ್ಚಿ ಅಂತ್ಯ ಅಥವ ಏಪ್ರಿಲ್ ಆದಿಯಲ್ಲಿ ರಚನೆಯಾಗಲಿದೆ.

ಅಧಿಕಾರ ಸ್ವೀಕಾರ

ವಿಂಧ್ಯ ಪ್ರದೇಶ ಲೆಫ್ಟಿನೆಂಟ್ ಗೌರ್ನರ್ ಆಗಿ ನೇಮಿಸಲಾಗಿರುವ ಶ್ರೀ ಕೆ. ಸಂತಾನಂರವರು ನಿನ್ನೆಯ ದಿನ ದೆಹಲಿಯಿಂದ ರೇವಾಪಟ್ಟಣಕ್ಕೆ ಹೊರಟರು. ಈ ದಿನ ಮಧ್ಯಾಹ್ನ ಅವರು ತಮ್ಮ ನೂತನ ಹುದ್ದೆಯನ್ನು ಸ್ವೀಕರಿಸುವರು.

‡ ಭಾರತದಲ್ಲಿ 13,000,000 ಕೋಳಿಗಳಿವೆ ವರ್ಷಂಪ್ರತಿ 2,730,000,000 ಮೊಟ್ಟೆಗಳು ಉತ್ಪತ್ತಿಯಾಗುತ್ತಲಿವೆ

ಪಾರ್ಲಿಮೆಂಟಿನಲ್ಲಿ ಬಜೆಟ್ ಮಂಡಿಸಲಾಯಿತು

ಪಾರ್ಲಿಮೆಂಟಿನಲ್ಲಿ ನಿನ್ನೆ ಹಣಕಾಸಿನ ಸಚಿವರು 1951-52ನೇ ಸಾಲಿನ ಆದಾಯ ವೆಚ್ಚವನ್ನು 52-53 ನೇಸಾಲಿನ ಬಜೆಟ್ಟನ್ನು ಶ್ವೇತಪತ್ರದ ರೂಪದಲ್ಲಿ ಪ್ರಕಟಿಸಿದರು

1951-52 ನೇಸಾಲಿಗೆ 497·67 ಕೋಟಿ ರೂ ಆದಾಯವೂ 405·6 ಕೋಟಿರೂ ವೆಚ್ಚವೂ ಆಗಿ 92·61 ಕೋಟಿ ಉಳಿತಾಯ ಬಂದಿದೆ.

52-53 ನೇಸಾಲಿಗೆ 425 ಕೋಟಿ ಆದಾಯವನ್ನೂ 406 ಕೋಟಿರೂ ವೆಚ್ಚವನ್ನೂ ನಿರೀಕ್ಷಿಸಲಾಗಿದ್ದು 18·73 ಕೋಟಿ ರೂ ಉಳಿತಾಯವಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ಆದಾಯದ ವೆಚ್ಚದಲ್ಲಿ ಸಿ ಸಂಸ್ಥಾನಗಳಿಗೆ ಸ್ವಲ್ಪ ಆರ್ಥಿಕ ಸಹಾಯವೂ ಸೇರಿದೆ. ಹಣಕಾಸಿನ ಸಚಿವ ಶ್ರೀ ಸಿ- ಡಿ- ದೇಶಮುಖ್‌ರವರು ದೇಶದ ಹಣಕಾಸಿನ ಪರಿಸ್ಥಿತಿಯನ್ನು ಇದರಿಂದ ತಿಳಿಯಲಾಯಿತಲ್ಲದೆ ಮುಂದಿನ ಶಾಸನ ಸಭೆಗೆ ಬಜೆಟ್ ತಯಾರಿಸಲು ಹಿನ್ನೆಲೆ ದೊರಕಿದಂತಾಗಿದೆಯೆಂದರು- ನಂತರ ಶ್ರೀ ದೇಶಮುಖ್‌ರವರು ಫೈನಾನ್ಸ್ ಬಿಲ್ಲನ್ನು ಸಭೆಯಮುಂದೆ ಮಂಡಿಸಿದರು-

ಮುಂದಿನ ಆಯವ್ಯಯ ಪಟ್ಟಿಯಲ್ಲಿ ಯಾವ ಹೊಸ ತೆರಿಗೆಯನ್ನು ಸೂಚಿಸಿಲ್ಲ.

ವರ್ಗಾವರ್ಗಿ

ಬೆಂಗಳೂರು ಫೆ ೨೯

ಮೈಸೂರು ಸಿಟಿ ಮಾಜಿಸ್ಟ್ರೇಟರಾದ ಶ್ರೀ ಎ- ವಿಶ್ವನಾಥ್‌ರವರನ್ನು ಮಂಡ್ಯ ಸಬ್‌ಡಿವಿಜನ್ ಆಫೀಸರಾಗಿಯೂ, ಮೈಸೂರುಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟ್ ಶ್ರೀ ಎಚ್- ಸಿದ್ದಯ್ಯನವರನ್ನು ಬೆಂಗಳೂರು ಜಿಲ್ಲಾ ಟ್ರೆಷರಿ ಆಫೀಸರಾಗಿಯೂ ಅಲ್ಲಿದ್ದ ಶ್ರೀ ಎಸ್- ಹೆಚ್ ವೆಂಕಟೇಶ್‌ರವರನ್ನು ಮೈಸೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟ್‌ರಾಗಿ ವರ್ಗಾಯಿಸಲಾಗಿದೆ-

ಪ್ರಾಂತ್ಯಸರ್ಕಾರಗಳಿಗೆಸಾಲ

ಮುಂದಿನಸಾಲಿನಲ್ಲಿ ಕೇಂದ್ರಸರ್ಕಾರದಿಂದ ಪ್ರಾಂತ್ಯ ಮತ್ತು ರಾಜ್ಯ ಸರ್ಕಾರಗಳಿಗೆ ಸಾಲಕೊಡಲು ಬಜೆಟ್ಟನಲ್ಲಿ ೮೩ ಕೋಟಿ ರೂ ನಿಗದಿಮಾಡಲಾಗಿದೆ.

ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜ್

ಮೈಸೂರು ೨೯

ಕೇಂದ್ರಸರ್ಕಾರದ ಕಾರ್ಮಿಕಶಾಖೆಯು ಮೈಸೂರು ವಸ್ತುಪ್ರದರ್ಶನ ಕಟ್ಟಡದಲ್ಲಿ ಮಾರ್ಚಿ ೩ ನೇ ತಾ|| ಒಂದು ಜಿಲ್ಲಾ ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜ್ ಕಛೇರಿಯನ್ನು ತೆರೆಯಲಿದೆ. ಮೈಸೂರುಸರ್ಕಾರದ ಕಾರ್ಮಿಕಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಪ್ರಾರಂಭೋತ್ಸವ ನಡೆಸುವರು.

ಫ್ರಾನ್ಸಿನ ೫ ವಾರದ ಮಂತ್ರಿಮಂಡಲದ ರಾಜೀನಾಮೆ

ಕೇವಲ ಐದು ವಾರಕಾಲ ಆಡಳಿತ ನಡೆಸಿದ ಫ್ರಾನ್ಸಿನ ಸಮ್ಮಿಶ್ರ ಸರ್ಕಾರವು ನಿನ್ನೆಯದಿನ ರಾಜೀನಾಮೆ ಸಲ್ಲಿಸಿದೆ. ತೆರಿಗೆಯನ್ನು ಹೆಚ್ಚಿಸಬೇಕೆಂಬ ಸರ್ಕಾರದ ಸಲಹೆಯು ಅಲ್ಲಿಯ ಶಾಸನಸಭೆಯಲ್ಲಿ ಬಿದ್ದುಹೋದುದೇ ಈ ರಾಜೀನಾಮೆಗೆ ಕಾರಣ.

ಅಶೋಕ ಚಕ್ರಸಂಘ

ರಾಜಧಾನಿಯ ಅಶೋಕಚಕ್ರಸಂಘದ ಆಶ್ರಯದಲ್ಲಿ ಡಿ. ಸುಬ್ಬಯ್ಯರಸ್ತೆಯಲ್ಲಿರುವ ಸಾಧ್ವಿ ಪತ್ರಿಕೆ ಆಫೀಸಿನ ಮಹಡಿಮೇಲೆ ಫಸ್ಟ್‌ಗ್ರೇಡ್‌ಕಾಲೇಜಿನ ಉಪಾಧ್ಯಾಯಿನಿಯರಾದ ಶ್ರೀಮತಿ ರುಕ್ಮಿಣಿ ಕೃಷ್ಣಮೂರ್ತಿಯವರು ನಾಳೆಸಂಜೆ ೬ ಘಂಟೆಗೆ ಆಧ್ಯಾತ್ಮಕಜೀವನ ಎಂಬ ವಿಷಯದಲ್ಲಿ ಉಪನ್ಯಾಸ ಮಾಡುವರು,

ಹೊಸ ಸಾಲ

ಮುಂದಿನಸಾಲಿನಲ್ಲಿ ೨೫ ಕೋಟಿರೂ ಸಾಲಪಡೆಯಲು ನಿರ್ಧರಿಸಿರುವುದಾಗಿ ಅರ್ಥಸಚಿವರು ಬಜೆಟ್ಟನ್ನು ಪಾರ್ಲಿಮೆಂಟ್‌ಮುಂದೆ ಮಂಡಿಸಿದಾಗ ತಿಳಿಸಿದರು.

ಆದರಸ್ವೀಕಾರ

ಮದರಾಸಿನಲ್ಲಿರುವ ಅಮೆರಿಕದ ಕನ್ನಡದ ವಾರ್ತಾಶಾಖೆಯವರು ಕಳುಹಿಸಿರುವ ವರ್ಣರಂಜಿತ ಮತ್ತು ವಿಶೇಷವಾಗಿ ಅಮೆರಿಕದ ಉಪಯುಕ್ತ ವಿಷಯಗಳನ್ನೊಳಗೊಂಡ ೧೯೫೨ ನೇಸಾಲಿನ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಹೈದ್ರಾಬಾದಿನಲ್ಲಿ ಮುಂದಿನ ತಿಂಗಳು ನೂತನ ಮಂತ್ರಿ ಮಂಡಲದ ಅಧಿಕಾರ ಸ್ವೀಕಾರ

ಹೈದ್ರಾಬಾದಿನ ಹೊಸ ಮಂತ್ರಿಮಂಡಲದಲ್ಲಿ ಶ್ರೀ ಬಿ. ರಾಮಕೃಷ್ಣರಾಯರು ಮುಖ್ಯಮಂತ್ರಿಗಳಾಗಿದ್ದು ಇನ್ನು ೧೨ ಮಂದಿ ಸಚಿವರಿರುವರೆಂದು ಕಾಂಗ್ರೆಸ್ ವರ್ತುಲಗಳಿಂದ ವ್ಯಕ್ತಪಟ್ಟಿದೆ

ಹೈದ್ರಾಬಾದಿನ ನೂತನ ಮಂತ್ರಿಮಂಡಲದಲ್ಲಿರುವ ೧೩ ಜನರಿವರು.—

ಶ್ರೀಗಳಾದ ಬಿ ರಾಮಕೃಷ್ಣರಾವ್ (ಮುಖ್ಯಮಂತ್ರಿ) ದಿಗಂಬರರಾವ್ ಬಿಂದು (ಕಾಂಗ್ರೆಸ್ ಅಧ್ಯಕ್ಷ) ವಿನಾಯಕರಾವ್ ವಿದ್ಯಾಲಂಕಾರ್, ಫೂಲ್‌ಚಂದ್ ಗಾಂಧಿ ವಿ ಬಿ ರಾಜು, (ಈಗಿನ ಮಂತ್ರಿಮಂಡಲದಲ್ಲಿರುವವರು) ವೆಂಕಟರೆಡ್ಡಿ, ಅಣ್ಣಾರಾವ್ ಜಗನ್ನಾಥರಾವ್, ದೇವಿಸಿಂಗ್ ಚವ್ಹಾನ ಶಂಕರದೇವ್ (ಹರಿಜನ) ಡಾ॥ ಜಿ. ಎಸ್. ಮೇಲುಕೋಟೆ, ಡಾ॥ ಚಿನ್ನಾರೆಡ್ಡಿ ಮತ್ತು ನವಾಬ್ ಮೆಹದಿ ನವಾಜ್‌ಜಂಗ್.

ಉಪಸಚಿವರಾಗಲಿ, ಪಾರ್ಲಿಮೆಂಟರಿ ಸೆಕ್ರೆಟರಿಗಳಾಗಲಿ ಇರುವುದಿಲ್ಲವೆಂದು ಗೊತ್ತಾಗಿದೆ.

ಮುಖ್ಯಮಂತ್ರಿಗಳಾದ ಶ್ರೀ ಬಿ ರಾಮಕೃಷ್ಣರಾಯರು ಜನರಲ್ ಅಡ್ಮಿನಿಸ್ಟ್ರೇಷನ್ ಶಾಖೆ ವಹಿಸಿಕೊಳ್ಳುವರು ದಿಗಂಬರರಾವ್ ಬಿಂದು ಗೃಹಶಾಖಾ ಸಚಿವರಾಗುವರು ವಿನಾಯಕರಾವ್ ವಿದ್ಯಾಲಂಕಾರ್ ರವರಿಗೆ ಅರ್ಥಿಕ ಶಾಖೆ ವಹಿಸಿಕೊಳ್ಳುವಂತೆ ಪ್ರಾರ್ಥಿಸಲಾಗಿದೆ.

೧೮,೦೦೦ ವಜ್ರವುಳ್ಳ ಅಮೋಘ ಜಮಖಾನ

ಕೊಲಂಬೊ ವಸ್ತುಪ್ರದರ್ಶನದಲ್ಲಿ ಭಾರತದ ವಿಭಾಗದಲ್ಲಿ ಪ್ರದರ್ಶಿಸಲಾಗಿರುವ ೫ ಲಕ್ಷ ರೂಗಳ ಬೆಲೆಯ ಜಮಖಾನವೊಂದು. ಇತರ ಎಲ್ಲ ವಸ್ತುಗಳಿಗಿಂತಲೂ ಹೆಚ್ಚು ನೋಟಕರನ್ನು ಆಕರ್ಷಿಸುತ್ತಿದೆ.

ಆ ಜಮಖಾನದಲ್ಲಿ ಸುಮಾರು ೧೮,೦೦೦ ವಜ್ರಗಳನ್ನು ಹೆಣೆಯಲಾಗಿದೆಯಲ್ಲದೆ, ಅದರಲ್ಲಿ ೮೦ ಔನ್ಸು ಬೆಳ್ಳಿಯೂ, ೧೬೫ ಔನ್ಸುಗಳಷ್ಟು ೪ ಬಗೆಯ ಚಿನ್ನದ ದಾರ ಹಾಗೂ ತಂತಿಗಳೂ ೧೧೦ ಔನ್ಸುಗಳಷ್ಟು ಬೆಳ್ಳಿಯದಾರ ಹಾಗೂ ತಂತಿಗಳೂ, ಸುಮಾರು ೩೦ ಔನ್ಸು ರೇಷ್ಮೆಯೂ ಇದೆಯೆಂದೂ, ಅದನ್ನು ತಯಾರಿಸಲು ೨ ವರ್ಷಕಾಲ ಬೇಕಾಯಿತೆಂದೂ ಅದರ ಮಾಲೀಕರಾದ ಆಗ್ರಾದ ವ್ಯಾಪಾರಿಯೊಬ್ಬರು ಹೇಳಿದ್ದಾರೆ.

ಜಮಖಾನದ ಪ್ರತಿ ಹೂವಿನಲ್ಲೂ ಸರಾಸರಿ ೧೫೦೦-೨೦೦೦ ಹೊಲಿಗೆಗಳನ್ನು ಉಪಯೋಗಿಸಲಾಗಿದೆ. ಕೆಲವು ಹೂವುಗಳಲ್ಲಿ ಸುಮಾರು ೧೫೦೦೦ ಹೊಲಿಗೆಗಳನ್ನು ಹಾಕಲಾಗಿದೆ.

೬ ಅಡಿ, ೫ ಅಂಗುಲ ಉದ್ದ ಹಾಗೂ ೫ ಅಡಿ, ೫ ಅಂಗುಲ ಅಗಲವಿರುವ ಈ ಜಮಖಾನದ ಮಧ್ಯದಲ್ಲಿ ೫೬ ಅಂಗುಲ ಉದ್ದ ಮತ್ತು ೩೬ ಅಂಗುಲ ಅಗಲವಿರುವ ನವೀನಬಣ್ಣದ ಮಖಮಲ್ಲನ್ನು ಹೊಲಿಯಲಾಗಿದೆ.

ಪ್ರಾಂತಗಳಿಗೆ ಹೆಚ್ಚು ಪ್ರಮಾಣದಲ್ಲಿ ಸಕ್ಕರೆ

ಮಾರ್ಚಿ ೧ರಿಂದ ಆರಂಭವಾಗುವ ಮುಂದಿನ ೪ ತಿಂಗಳುಗಳಲ್ಲಿ ಪ್ರಾಂತೀಯ ಸರ್ಕಾರಗಳಿಗೆ ಕೊಡಲಾಗುತ್ತಿರುವ ಸಕ್ಕರೆ ಪ್ರಮಾಣವನ್ನು ಶೇ॥ ೧೦ ರಷ್ಟು ಹೆಚ್ಚಿಸಲಾಗುವುದೆಂದು ಕೇಂದ್ರದ ಆಹಾರ ಸಚಿವ ಶ್ರೀ ಕೆ ಎಂ ಮುನ್ಷಿ ತಿಳಿಸಿರುವರು.

ವಿಮಾನಾಪಘಾತ

ಯೂರೋಪಿಗೆ ಹೊರಟಿದ್ದ ಸಿ ೪೬ ಟ್ರಾನ್ಸ್‌ಪೋರ್ಟ್ ವಿಮಾನವು ಅಪಘಾತಕ್ಕೀಡಾಯಿತು. ಅದರೊಳಗಿದ್ದ ೧೮ ಮಂದಿ ಅಮೆರಿಕದ ವಾಯುದಳದವರು 'ಪ್ಯಾರಾಚೂಟ್' ಮೂಲಕ ಭೂಮಿಗೆ ಇಳಿದರು. ಅವರಲ್ಲಿ ಮೂವರು ಯಾವ ಗಾಯಗಳೂ ಆಗದಂತೆ ಸುರಕ್ಷಿತವಾಗಿ ಭೂಮಿಗೆ ಬಂದರು. ಉಳಿದವರುಮಾತ್ರ ಇನ್ನೂ ಪತ್ತೆ ಆಗಿಲ್ಲ.

ಡಾ॥ ಗ್ರಹಾಂರವರಾಗಮನ

ನಿನ್ನೆ ಸಂಜೆ ಕಾಶ್ಮೀರದ ಮಧ್ಯಸ್ಥಿಕೆಗಾರರಾದ ಡಾ॥ ಗ್ರಹಾಂರವರು ದೆಹಲಿಗೆ ಆಗಮಿಸಿದರು.

ಶ್ರೀ ಕಾಶಿನಾಥ್‌ರಾವ್ ವೈದ್ಯ ಶಾಸನಸಭಾಧ್ಯಕ್ಷರೆ?

ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಕಾಶೀನಾಥರಾವ್ ವೈದ್ಯರು ಹೈದರಾಬಾದ್ ಅಸೆಂಬ್ಲಿ ಅಧ್ಯಕ್ಷರಾಗಬಹುದೆಂದು ಹೇಳಲಾಗಿದೆ.

ಶ್ರೀ ದಿಗಂಬರರಾವ್ ಬಿಂದುರವರು ಸಚಿವರಾಗಿರುವುದರ ಜೊತೆಗೆ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವರು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಮತ್ತು ಚಲನಚಿತ್ರಗಳಲ್ಲಿ ಅಭಿನಯಿಸಲು ಅವಕಾಶಮಾಡಿ ಕೊಡಲಾಗುವುದು. ಆಸಕ್ತಿವುಳ್ಳವರು ಇಂದೇ ವಿಚಾರಿಸಿರಿ.

ವ್ಯವಸ್ಥಾಪಕ.

ವುಡ್ ಲ್ಯಾಂಡ್ಸ್

೨೯—೨—೫೨ ರಿಂದ

ಅಮೋಘವಾದ ೩ನೇ ವಾರ

ದಿನವಹಿ 3 ಪ್ರದರ್ಶನಗಳು

ಅಲ್ ಬೇಲ

ಪಾತ್ರ:- ಗೀತಾಬಾಲಿ,. ಭಗವಾನ್. ಬದರೀಪ್ರಸಾದ್, ಸುಂದರ್.

ನ್ಯೂ ಅಪೇರ

೨೯—೨—೫೨ ರಿಂದ ೨ನೇ ವಾರ

"ಸ್ತ್ರೀಸಾಹಸಂ" ತಯಾರಿಸಿರುವ ವಿನೋದ ಪ್ರೊಡಕ್ಷನ್‌ರವರ

ಶಾಂತಿ

(ತೆಲುಗು)

ಪಾತ್ರ :—ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ॥ ಸುಬ್ಬರಾವ್.

ರಣಜಿತ್

೨೯—೨—೫೨ರಿಂದ ಅಮೋಘ ೬ನೇ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆವಾರ ::—

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ, ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಕಾಂಗ್ರೆಸ್ ಅಧ್ಯಕ್ಷತೆ ಬಿಡಲು ಸಿದ್ಧ

'ಯಾರಾದರೂ ತನ್ನ ಸ್ಥಾನವನ್ನು ವಹಿಸಿಕೊಂಡಲ್ಲಿ ಕಾಂಗ್ರೆಸ್ಸಿಗೆ ಇನ್ನೂ ಉತ್ತಮವಾದ ಹಾಗೂ ದಕ್ಷ ಸೇವೆಯನ್ನು ಸಲ್ಲಿಸಲು ಮುಂದೆ ಬಂದಲ್ಲಿ ಸಂತೋಷದಿಂದ ನನ್ನ ಸ್ಥಾನವನ್ನು ಬಿಟ್ಟುಕೊಡುತ್ತೇನೆ' ಎಂದು ಮೊನ್ನೆ ಚಿತ್ತೂರಿನಿಂದ ಹಿಂತಿರುಗಿದ ಆಂಧ್ರ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಎನ್ ಸಂಜೀವರೆಡ್ಡಿ ವರದಿಗಾರರಿಗೆ ತಿಳಿಸಿರುವರು

ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂ ಸೂಚನೆ

ಕರ್ನಲ್ ರಘುವೀರ ಸಿಂಗರನ್ನೇ ಕಾಂಗ್ರೆಸ್ ಪಕ್ಷದ ನಾಯಕರನ್ನಾಗಿ ಆರಿಸಿರೆಂದು ಪೆಪ್ಸು ಪ್ರದೇಶ ಕಾಂಗ್ರೆಸ್ ಕಾರ್ಯಸಮಿತಿ ಸದಸ್ಯರಿಗೆಕಾಂಗ್ರೆಸ್ ಅಧ್ಯಕ್ಷ ನೆಹರು ಸೂಚಿಸಿದ್ದಾರೆ.

ನೆಹ್ರೂಗೆ ಚೀಣದ ಆಹ್ವಾನ

ಚೀಣದಿಂದ ತಮಗೆ ಅನೌಪಚಾರಿಕ ಆಹ್ವಾನ ಬಂದಿದೆಯೆಂದೂ ಆದರೆ ಈಗಿನ ಪರಿಸ್ಥಿತಿಯಲ್ಲಿ ಸದ್ಯಕ್ಕೆ ಹೋಗಲು ತಮಗೆ ಅವಕಾಶವಾಗಲಾರದೆಂದು ಮಹಾಪ್ರಧಾನಿ ಪಂಡಿತ್ ನೆಹರೂರವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ತಿಳಿಸಿದರು.

ಅಮಾನುಷ ಕೊಲೆ

ಬೆಂಗಳೂರು ಸೌತ್ ತಾಲ್ಲೂಕಿನ ಗೊಟ್ಟಿಗೆರೆಯ ಸುಮಾರು ೩೦ ವರ್ಷದ ಹನುಮಂತ ಎಂಬುವನು ಬೆಂಗಳೂರು ಫಸ್ಟ್ ಮ್ಯಾಜಿಸ್ಟ್ರೇಟರಾದ ಜ॥ ಜಪರುಲ್ಲಾ ಖಾನ್‌ರವರ ಸಮ್ಮುಖದಲ್ಲಿ ಎರಡು ಕತ್ತರಿಸಲ್ಪಟ್ಟ ಮಾನವ ತಲೆಗಳನ್ನು ಹಾಜರ್ಪಡಿಸಿದ ವಿಚಿತ್ರವೂ ಆಶ್ಚರ್ಯಕರವೂ ಆದ ಘಟನೆಯೊಂದು ಮೊನ್ನೆ ದಿನಮಧ್ಯಾಹ್ನ ನಡೆಯಿತು

ಮ್ಯಾಜಿಸ್ಟ್ರೇಟರು ಹನುಮಂತನ ಹೇಳಿಕೆಯನ್ನು ಪಡೆದು ಅವನನ್ನು ಜೈಲಿಗೆ ರಿಮ್ಯಾಂಡ್ ಮಾಡಿ ಹನುಮಂತನೇ ತಂದಿದ್ದ ಮಚ್ಚೊಂದನ್ನು ರಾಸಾಯನಿಕ ವಿಶ್ಲೇಷಣಕ್ಕಾಗಿ ಕಳುಹಿಸಿದರು.

ಎರಡು ತಲೆಗಳಲ್ಲಿ ಒಂದು ಹನುಮಂತನ ಹೆಂಡತಿ ಸುಮಾರು ೨೦ ವರ್ಷದ ಮುನಿ ಎಂಬಾಕೆಯದೆಂದೂ ಮತ್ತೊಂದು ಸುಮಾರು ೨೫ ವರ್ಷದ ಗೂಳಿಗ ಎಂಬುವನದೆಂದೂ ವರದಿಯಾಗಿದೆ.

ಪ್ರಿವೆಂಟಿವ್ ಡಿಟೆನ್ಷನ್ ಕಾನೂನು

ಮಾರ್ಚಿ ೩೧ಕ್ಕೆ ಕೊನೆಗೊಳ್ಳಲಿರುವ ಪ್ರಿವೆಂಟಿವ್ ಡಿಟೆನ್ಷನ್ ಕಾನೂನನ್ನು ಇನ್ನೂ ೬ ತಿಂಗಳು ಮುಂದುವರಿಸಲು ಪಾರ್ಲಿಮೆಂಟು ತನ್ನ ಒಪ್ಪಿಗೆ ಇತ್ತಿದೆ.

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೩—೩—೧೯೫೨ನೇ ಸೋಮವಾರ [ಸಂಚಿಕೆ ೧೫೮

ಶಿಕ್ಷಣವನ್ನು ಪ್ರಾದೇಶಿಕ ಭಾಷೆಯಲ್ಲಿ ನಡೆಸಬೇಕು

ಎಂದು ರಾಷ್ಟ್ರಾಧ್ಯಕ್ಷರ ಅಭಿಪ್ರಾಯ

ಮೈಸೂರಲ್ಲಿ ಫರ್ಟಿಲೈಸರ್ ಕಾರ್ಖಾನೆ

ಬೆಂಗಳೂರು ಮಾ ೧

ಮೈಸೂರಿನಲ್ಲಿ ಒಂದು ಕೋಟಿ ಡಾಲರ್ ವೆಚ್ಚದಲ್ಲಿ ಫರ್ಟಿಲೈಸರ್ ಕಾರ್ಖಾನೆಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ವಿಶೇಷ ಪ್ರಯತ್ನಗಳನ್ನು ನಡೆಸುತ್ತಿದೆಯೆಂದು ಗೊತ್ತಾಗಿದೆ. ಇದಕ್ಕಾಗಿ ಪ್ರಪಂಚ ಬ್ಯಾಂಕಿನಿಂದ ಸಾಲ ಕೇಳಲಾಗಿ ಈ ಬಗ್ಗೆ ಸಂಧಾನಗಳು ನಡೆಯುತ್ತಿವೆಯೆಂದೂ ಗೊತ್ತಾಗಿದೆ.

ಆಹಾರ ಪದಾರ್ಥಗಳ ಬೆಲೆ ಹೆಚ್ಚಿಸಬಾರದು

ಬೆಂಗಳೂರು ಮಾ ೨

ಆಹಾರ ಪದಾರ್ಥದ ಬೆಲೆಯನ್ನು ಹೆಚ್ಚಿಸುವುದರಿಂದ ಜನರಿಗೆ ಬಹಳ ಕಷ್ಟವಾಗುವುದೆಂಬ ಅಂಶವನ್ನು ಮೈಸೂರು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒತ್ತಾಯಪೂರ್ವಕವಾಗಿ ತಿಳಿಸಿದ್ದಾರೆಂದೂ ಗೊತ್ತಾಗಿದೆ.

ಕ್ರಿಕೆಟ್

ಬೊಂಬಾಯಿಯಲ್ಲಿ ಮೊನ್ನೆ ರಾಂಜಿ ಟ್ರೋಫಿಯ ಫೈನಲ್ಸ್ ಪಂದ್ಯವು ಆರಂಭವಾಗಿ ಬೊಂಬಾಯಿಯವರು ಎಲ್ಲರೂ ಔಟಾಗಿ ೫೯೬ ರನ್ನುಗಳಿಸಿದರು. ಹೋಲ್ಕರ್ ಟೀಮಿನವರು ಆಟ ಆರಂಭಿಸಿ ೨ ವಿಕೆಟ್ಟಿಗೆ ೧೫೮ ರನ್ನುಗಳನ್ನು ಮಾಡಿರುವರು.

ತುರ್ಕಿಯ ಪತ್ರಿಕಾ ನಿಯೋಗದವರ ಆಗಮನ

ಮೈಸೂರು ಮಾ ೨

ಭಾರತಕ್ಕೆ ಆಗಮಿಸಿರುವ ತುರ್ಕಿಯ ಪತ್ರಿಕಾನಿಯೋಗದ ಸದಸ್ಯರಾದ ಮಿ॥ ಅಹಮದ್ ಸುಕ್ರ ಎಸ್ಮಲ್ ಮತ್ತಿತರರು ಬೆಂಗಳೂರಿನಿಂದ ಸಂಸ್ಥಾನದ ವಿವಿಧ ಪ್ರೇಕ್ಷಣೀಯ ಸ್ಥಳಕ್ಕೆ ಭೇಟಿಕೊಡಲು ಆರಂಭಿಸಿ ಚನ್ನಪಟ್ಟಣ ಮಂಡ್ಯ ಮತ್ತು ಶ್ರೀರಂಗಪಟ್ಟಣಕ್ಕೆ ಭೇಟಿಯಿತ್ತು, ಅದಿನ ರಾತ್ರಿ ಅವರು ಕೃಷ್ಣರಾಜಸಾಗರಕ್ಕೆ ಬಂದು ಅಲ್ಲಿಂದ ಅವರು ಮೈಸೂರಿಗೆ ಬಂದರು.

ನಾಳೆ ಅವರು ಮೈಸೂರಿನಲ್ಲಿ ವಿವಿಧ ಪ್ರೇಕ್ಷಣೀಯ ಸ್ಥಳಕ್ಕೆ ಭೇಟಿಕೊಟ್ಟು ಸಂಜೆ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಕುರಿತು ಭಾಷಣ ಮಾಡುವರು. ನಾಳೆ ರಾತ್ರಿ ಇವರು ಬೆಂಗಳೂರಿಗೆ ವಾಪಸ್ ತೆರಳುವರು.

ಇವರೊಡನೆ ಕೇಂದ್ರ ಸರ್ಕಾರದ ಉಪವಾರ್ತಾ ಅಧಿಕಾರಿ ಶ್ರೀ ಎಂ. ಎಲ್. ಭಾರದ್ವಾಜ್ ಮತ್ತು ಸಂಸ್ಥಾನದ ವಾರ್ತಾ ಇಲಾಖೆಯ ಅಧಿಕಾರಿಗಳಾದ ಶ್ರೀ ಬಿ. ಎನ್. ಸತ್ಯನ್‌ರವರು ಆಗಮಿಸಿರುವರು.

* ಉದ್ಯೋಗ ವಿನಿಮಯಕೇಂದ್ರವು ಪರಿಶಿಷ್ಟಕೋಮಿನ ೬೨೯ ಜನಕ್ಕೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದೆ.

ಭದ್ರಾವತಿ ಉಕ್ಕಿನ ಕಾರ್ಖಾನೆಯ ಅಭಿವೃದ್ಧಿಗೆ ೨ ಕೋಟಿ ರೂ.

ಬೆಂಗಳೂರು ಮಾ ೨

ಕೇಂದ್ರಸರ್ಕಾರದವರು ಸಂಸ್ಥಾನದ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಭಿವೃದ್ಧಿಗೆ ೨ ಕೋಟಿ ರೂ ಸಾಲಕೊಡುವರೆಂದು ಅದರಲ್ಲಿ ಈ ಸಾಲಿಗೆ ೨೫ ಲಕ್ಷ ರೂಗಳನ್ನು ಮುಂದಿನಸಾಲಿಗೆ ೧,೭೫,೦೦,೦೦೦ ರೂಗಳನ್ನು ಕೊಡುವರೆಂದು ಹೇಳಲಾಗಿದೆ.

ಕಮ್ಯುನಿಸ್ಟ್‌ನಾಯಕರೊಡನೆ ಪಣಿಕರರ ಪುತ್ರಿ ವಿವಾಹ

ಚೈನಾದಲ್ಲಿ ಭಾರತದ ರಾಯಭಾರಿಯಾಗಿರುವ ಸರ್ದಾರ್ ಕೆ. ಎಂ. ಪಣಿಕರರ ಪುತ್ರಿ ಶ್ರೀಮತಿ ದೇವಕಿ ಪಣಿಕರನ್ನು ಕಮ್ಯೂನಿಸ್ಟ್ ನಾಯಕರಾದ ಶ್ರೀ ಎಂ. ಎನ್ ಗೋವಿಂದನ್ ನಾಯರು ವಿವಾಹವಾದರು.

ಹಿಮಾಲಯ ಪರ್ವತ ಆರೋಹಣ

ಮಾರ್ಚಿ ೬ ರಂದು ಬ್ರಿಟನ್ನಿನಿಂದ ೯ ಮಂದಿ ಪರ್ವತಾರೋಹಿಗಳ ನಿಯೋಗ ಒಂದು ಎವರೆಸ್ಟ್ ಶಿಖರದಲ್ಲಿರುವ ಚಿವೀಯೋ ಪರ್ವತವನ್ನು ಹತ್ತಲು ಭಾರತಕ್ಕೆ ಹೊರಡಲಿದೆ. ಇವರ ನಾಯಕ ಎರಿಕ್‌ಶಿಪ್ಟನ್ನರು ಮಾರ್ಚಿ ೨೫ ರಂದು ವಿಮಾನದಲ್ಲಿ ಲಂಡನ್ನಿನಿಂದ ಭಾರತಕ್ಕೆ ತೆರಳುವರು. ಇವರು ಅತ್ಯಂತ ನವೀನ ಉಪಕರಣಗಳನ್ನು ಉಪಯೋಗಿಸುವರು. ಇವರಿಗೆ ನೇಪಾಳಸರ್ಕಾರ ಪರ್ವತಹತ್ತಲು ಅನುಮತಿ ಇತ್ತಿದೆ.

ನಾಲ್ಕಾಣೆಯ ಸದಸ್ಯತ್ವ ಪುನಃ ಜಾರಿಗೆಬರಲಿ

ಕಾಂಗ್ರೆಸ್ಸಿನಲ್ಲಿ ಈಗ ಜಾರಿಯಲ್ಲಿರುವ ಒಂದುರೂಪಾಯಿ ಶುಲ್ಕದ ಪ್ರಾಥಮಿಕ ಸದಸ್ಯತ್ವದ ಸ್ಥಾನದಲ್ಲಿ ಮುಂಚಿನ ನಾಲ್ಕಾಣೆಯ ಸದಸ್ಯತ್ವವನ್ನು ಪುನಃ ಜಾರಿಗೆ ತರಬೇಕೆಂದು ಉತ್ತರಪ್ರದೇಶ ಕಾಂಗ್ರೆಸ್‌ಸಮಿತಿಯ ಕಾರ್ಯಕಾರಿಸಮಿತಿಯು ಎ. ಐ. ಸಿ. ಸಿ. ಗೆ ಶಿಫಾರಸುಮಾಡಿದೆ.

ಬೊಂಬಾಯಿಯಲ್ಲಿ ಕೇಂದ್ರಸರ್ಕಾರದ ಆಹಾರಶಾಖೆಯ ಸಚಿವ ಶ್ರೀ ಕೆ. ಎಂ. ಮುನ್ಷಿಯವರು ಮಾತಾಡುತ್ತಾ ದೇಶದಲ್ಲಿ ಆಹಾರದ ಉತ್ಪನ್ನವನ್ನು ಹೆಚ್ಚಿಸಲು ಕಾಲೇಜುಗಳಲ್ಲಿ ಭೂಸೇನೆ ರಚಿಸುವಂತೆ ತಾವು ಎಲ್ಲಾ ವಿಶ್ವವಿದ್ಯಾನಿಲಯಗಳ ವೈಸ್‌ಛಾನ್ಸಲರುಗಳನ್ನು ಪ್ರಾರ್ಥಿಸಿರುವುದಾಗಿ ತಿಳಿಸಿದರು.

ಸಿಂಧ್ರಿಯ ಗೊಬ್ಬರ ಕಾರ್ಖಾನೆಯ ಆರಂಭ

ಏಷ್ಯಾದಲ್ಲೆಲ್ಲಾ ಪ್ರಪ್ರಥಮವೂ ವಿಶ್ವದ ಪ್ರಮುಖ ಕೈಗಾರಿಕಾ ಕೇಂದ್ರಗಳಲ್ಲಿ ಒಂದೂ ಆದ ಸಿಂಧ್ರಿ ಕೃತಕ ಗೊಬ್ಬರ ಕಾರ್ಖಾನೆಯನ್ನು ನಿನ್ನೆ ಪಂಡಿತ ಜವಹರಲಾಲ್ ನೆಹರೂರವರು ಆರಂಭಮಾಡಿದರು.

ಈ ಕಾರ್ಖಾನೆಯಲ್ಲಿ ದಿನ ಒಂದಕ್ಕೆ ೧೦೦೦ ಟನ್ ಅಮೋನಿಯಂ ಸಲ್ಫೇಟ್ ತಯಾರಿಸಲಾಗುವುದು. ಇದಕ್ಕೆ ಬೇಕಾಗುವ ಜಿಪ್ಸಂಅನ್ನು ರಾಜಾಸ್ಥಾನ್ ಮತ್ತು ಬಿಹಾರ್ ಒದಗಿಸುವುದು. ಸಿಂಧ್ರಿ ಕಾರ್ಖಾನೆಗೆ ಬೇಕಾಗುವ ಕಲ್ಲಿದ್ದಲು ಜರಿಯಾದಿಂದಾ ಸರಬರಾಜಾಗುವುದಲ್ಲದೆ ಈ ಕಾರ್ಖಾನೆಯೊಳಗೆ ಇದರಬಳಿ ಇದೆ.

ಈ ಕಾರ್ಖಾನೆಯಲ್ಲಿ ಈಗ ನಿರೀಕ್ಷಿಸಲಾಗಿರುವಷ್ಟು ಗೊಬ್ಬರ ತಯಾರಾದರೆ ದೇಶದಲ್ಲಿ ೮,೭೫,೦೦೦ ಟನ್ ಆಹಾರ ಧಾನ್ಯ ಹೆಚ್ಚಿಗೆ ಉತ್ಪತ್ತಿ ಆಗುವುದೆಂದು ಅಂದಾಜು ಮಾಡಲಾಗಿದೆ.

ಈ ಕಾರ್ಖಾನೆಗೆ ಬೇಕಾಗುವ ವಿದ್ಯುಚ್ಛಕ್ತಿಯನ್ನು ಕೂಡ ಇದರ ಒಳಗೆಯೇ ೮೦,೦೦೦ ಕಿಲೋವಾಟ್ ಅಷ್ಟು ಉತ್ಪಾದಿಸಿ ಇಲ್ಲಿಂದ ದಾಮೋದರ ಕಣಿವೆಗೂ ಒದಗಿಸಲಾಗುವುದು.

ನೂತನಸರ್ಕಾರದ ಅಧಿಕಾರ ಸ್ವೀಕಾರ

ಹೈದ್ರಾಬಾದಿನ ೧೩ ಮಂದಿ ಸಚಿವರನ್ನುಳ್ಳ ನೂತನ ಮಂತ್ರಿಮಂಡಲವು ಇದೇ ತಿಂಗಳು ೬ ನೇ ತಾ॥ ಅಧಿಕಾರ ಸ್ವೀಕಾರ ಮಾಡುವುದೆಂದು ಖಚಿತವಾಗಿ ಗೊತ್ತಾಗಿದೆ.

ಗೃಹಕೈಗಾರಿಕಾ ಯೋಜನೆ

ಮದ್ರಾಸ್ ಸರ್ಕಾರವು ಗೃಹಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಒಂದು ಯೋಜನೆಯನ್ನು ತಯಾರಿಸಿದೆಯೆಂದೂ ಈಯೋಜನೆಯಂತೆ ಆ ಪ್ರಾಂತ್ಯದಲ್ಲಿ ೧೦,೦೦೦ ಗೃಹಕೈಗಾರಿಕಾ ಕೇಂದ್ರವನ್ನು ಆರಂಭಿಸುವುದೆಂದೂ ಹೇಳಲಾಗಿದೆ.

ಕಾಲೇಜುಗಳಲ್ಲಿ ಭೂಸೈನ್ಯವನ್ನು ರಚಿಸಬೇಕು

ವಿಶ್ವವಿದ್ಯಾನಿಲಯಗಳ ಸಲಹೆ ಕೇಳಲಾಗಿದೆ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರು ನಿನ್ನೆ ಗುಜರಾತ್ ವಿದ್ಯಾಪೀಠದ ಪದವಿದಾನ ಸಮಾರಂಭವನ್ನು ನೆರವೇರಿಸಿದರು. ಅವರು ಈ ಸಂದರ್ಭದಲ್ಲಿ ಮಾತಾಡಿ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಆಯಾಪ್ರಾದೇಶಿಕ ಭಾಷೆಯಲ್ಲೇ ಕೊಡಬೇಕೆಂದರು. ವಿದೇಶಿಭಾಷೆಯಲ್ಲೇ ಶಿಕ್ಷಣವನ್ನು ಕೊಡುವುದು ಕಷ್ಟತರವಾಗಿದೆಯಲ್ಲದೆ ಭಾರತದ ಸಂಸ್ಕೃತಿಕಲೆ ಮುಂತಾದುವುಗಳಿಗೆ ಇದು ವಿರೋಧವಾಗಿದ್ದು ಪ್ರಾದೇಶಿಕ ಭಾಷೆಯಲ್ಲಿ ಶಿಕ್ಷಣಕೊಡುವುದರಿಂದ ಇವುಗಳ ಅಭಿವೃದ್ಧಿಯಾಗುವುದೆಂದರು. ಪ್ರಾರಂಭದಲ್ಲಿ ಬೊಂಬಾಯಿಯ ಗೃಹಸಚಿವ ಶ್ರೀ ಮೊರಾರ್ಜಿ ದೇಸಾಯಿಯರು ಭಾಷಣಮಾಡಿದರು.

ಈಜಿಪ್ಟಿನಲ್ಲಿ ಹೊಸ ಮಂತ್ರಿಮಂಡಲದ ರಚನೆ

ಈಜಿಪ್ಟಿನ ವೆಹರ' ಪಾಷಾ ಮಂತ್ರಿ ಮಂಡಲ ಮೊನ್ನೆ ರಾಜೀನಾಮೆನ್ನಿತ್ತಿತು. ಪಾರ್ಲಿಮೆಂಟ್' ಅಧಿವೇಶನವನ್ನು ಮುಂದುವರಿಸುವ ಸಂಬಂಧದಲ್ಲಿ ಉಂಟಾದ ರಾಜ್ಯಾಂಗದ ಬಿಕ್ಕಟ್ಟಿನಿಂದಾಗಿ ವೆಹರ' ಪಾಷಾ ರಾಜೀನಾಮೆ ಕೊಡಲು ನಿರ್ಧರಿಸಿದರು.

ಅಹಮದ್ ನಜ್ಯೂಬ' ಹಿಲ್ಲಾಲಿ ಪಾಷಾ (ಸ್ವತಂತ್ರ ಮಾಜಿ ವಾಫ್'ಡಿಸ್ಟ್ ಸದಸ್ಯರು) ನೂತನ ಈಜಿಪ್ಟ್ ಮಂತ್ರಿಮಂಡಲವನ್ನು ರಚಿಸಿದ್ದಾರೆ. ಇವರು ೧೯೪೨-೪೪ರಲ್ಲಿ ವಾಫ್'ಡಿಸ್ಟ್ ಸರ್ಕಾರದ ಶಿಕ್ಷಣ ಸಚಿವರಾಗಿದ್ದರು.

ಸೈನಿಕರ ಪುನರ್ವ್ಯವಸ್ಥೆಗೆ ಯೋಜನೆ

ಬೆಂಗಳೂರು ಮಾ ೨

ವಿಲೀನೀಕರಣಪ್ರಯುಕ್ತ ಕೆಲಸದಿಂದ ತೆಗೆಯಲ್ಪಟ್ಟ ಮೈಸೂರು ಸೈನಿಕರಿಗೆ ಜೀವನಕ್ಕೆ ತಕ್ಕ ಸೌಲಭ್ಯವನ್ನು ಕಲ್ಪಿಸಲು ಮೈಸೂರು ಸರ್ಕಾರದವರು ತಯಾರಿಸಿರುವ ಯೋಜನೆಯು ಬಹಳ ಶೀಘ್ರದಲ್ಲಿಯೇ ಜಾರಿಗೆ ಬರಲಿದೆ.

ಹುಣಸೂರುಸಮೀಪದಲ್ಲಿ ४೦೦೦ ಎಕರೆ ಪ್ರದೇಶವನ್ನು ೩೫೦ ಮಂದಿಗೆ ಕೊಟ್ಟು ಅವರಿಗೆ ಸೂಕ್ತ ಪ್ರೋತ್ಸಾಹ ಮತ್ತು ಸಹಾಯಕೊಡಲು ಸರ್ಕಾರದವರು ನಿರ್ಧರಿಸಿದ್ದಾರೆ. ಪ್ರತಿಯೊಬ್ಬರಿಗೂ ಕೇಂದ್ರ ಸರ್ಕಾರದ ಗ್ರಾಂಟ್ ೭೫೦ ರೂ ಗಳನ್ನೂ ಮತ್ತು ಸಂಸ್ಥಾನದಿಂದ ೫೦೦ ರೂ ಗಳನ್ನೂ ಗ್ರಾಂಟ್' ರೂಪದಲ್ಲಿ ಕೊಡಲಾಗುವುದು. ಜೊತೆಗೆ ಸಾಲವನ್ನು ಕೊಡಲಾಗುವುದು.

ನಿವೃತ್ತ ಸೈನಿಕರಿಗೆಲ್ಲಾ ವಿವಿಧ ರೀತಿಯಲ್ಲಿ ವ್ಯವಸ್ಥೆಮಾಡಲು ಸುಮಾರು ೨೦ ಲಕ್ಷ ರೂ ಗಳ ಒಂದು ಯೋಜನೆಯು ತಯಾರಾಗಿದೆ.

ಕೇಂದ್ರ ಸರ್ಕಾರದ ಡಿಫೆನ್ಸ್ ಶಾಖೆಯ ಶ್ರೀ ರಾಮಚಂದ್ರರವರು ಬೆಂಗಳೂರಿಗೆ ಆಗಮಿಸಿ ಮೈಸೂರು ಸೈನಿಕರಿಗೆ ಬೇಕಾದ ಸೌಲಭ್ಯ ಕಲ್ಪಿಸುವ ಬಗ್ಗೆ ತಯಾರಾಗಿರುವ ಯೋಜನೆಯನ್ನು ಕುರಿತು ನ್ಯಾಯಾಂಗ ಮಂತ್ರಿಗಳೊಡನೆಯೂ ಮತ್ತು ಗೃಹ ಮಂತ್ರಿಗಳೊಡನೆಯೂ ಮಾತುಕತೆ ನಡೆಸಿದರು.

ವಿದ್ಯಾರ್ಥಿಗಳಿಗೆ ಸೈನ್ಯ ಶಿಕ್ಷಣ

ಮೈಸೂರು ಮಾ ೨

ಸ್ವಾತಂತ್ರ್ಯವನ್ನು ಗಳಿಸಿದುದಕ್ಕಿಂತಲೂ ಅದನ್ನು ಕಾಪಾಡಿಕೊಳ್ಳುವುದು ಅತ್ಯಂತ ಮುಖ್ಯಕರ್ತವ್ಯವಾಗಿರುತ್ತದೆ. ಆ ಕೆಲಸವು ಈಗಿನ ವಿದ್ಯಾರ್ಥಿಗಳಿಂದಲೇ ಮಾತ್ರ ಸಾಧ್ಯ. ವಿಶ್ವವಿದ್ಯಾನಿಲಯಗಳಲ್ಲಿ ಎಲ್ಲಾ ವಿದ್ಯಾರ್ಥಿಗಳೂ ಮಿಲಿಟರಿ ಶಿಕ್ಷಣವನ್ನು ಪಡೆಯಬೇಕು. ಮಿಲಿಟರಿ ಶಿಕ್ಷಣವು ಬೇಕಾದುದು ಯುದ್ಧಕ್ಕಾಗಿ ಅಲ್ಲ. ರಕ್ಷಣೆಗಾಗಿ ಅತ್ಯವಶ್ಯಕ. ಸ್ವರಕ್ಷಣೆಗೆ ಮಿಲಿಟರಿ ಶಿಕ್ಷಣವು ಕಡ್ಡಾಯವಾಗಿ ಬೇಕಾಗಿದೆ. ಈಗಿನ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಮಿಲಿಟರಿ ಶಿಕ್ಷಣವು ಅತ್ಯವಶ್ಯಕವಾಗಿ ಬೇಕೆಂಬುದು ಚೆನ್ನಾಗಿ ಮನವರಿಕೆಯಾಗುತ್ತದೆ ಎಂದು ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಡಾ|| ಎಂ ವಿ ಗೋಪಾಲಸ್ವಾಮಿಯವರು ನಿನ್ನೆಯದಿನ ವಿಶ್ವವಿದ್ಯಾನಿಲಯದ ನ್ಯಾಷನಲ' ಕ್ಯಾಡೆಟ'ಕೋರ'ನ ಸಮಾರಂಭದಲ್ಲಿ ಮಾತನಾಡುತ್ತಾ ಹೇಳಿದರು.

ಪ್ರಾರಂಭದಲ್ಲಿ ಪರೇಡು ನಡೆದು ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾದ ಲೆಫ್ಟಿನೆಂಟ್ ಕರ್ನಲ್ ಡಾ|| ಮಂಜುನಾಥ'ರವರು ಗೌರವರಕ್ಷೆಯನ್ನು ಸ್ವೀಕರಿಸಿದರು. ಅನಂತರ ಈ ದಳದ ಆಫೀಸರ' ಕಮ್ಯಾಂಡಿಂಗ'ರವರಾದ ಶ್ರೀ ನಂಬಿಯಾರ್‌ರವರು ಸ್ವಾಗತಭಾಷಣ ಮಾಡುತ್ತಾ, ವಿಶ್ವವಿದ್ಯಾನಿಲಯಗಳಲ್ಲಿ ಮಿಲಿಟರಿ ಶಿಕ್ಷಣವನ್ನು ಪಡೆಯುತ್ತಲಿರುವ ವಿದ್ಯಾರ್ಥಿಗಳಿಗೆ ಕೆಲವು ರಿಯಾಯತಿ ಕೊಡಬೇಕೆಂದರು. ಡಾ|| ಮಂಜುನಾಥ'ರವರು ಭಾಷಣಮಾಡುತ್ತಾ, ವಿಶ್ವವಿದ್ಯಾನಿಲಯದಲ್ಲಿ ಮಿಲಿಟರಿ ಶಿಕ್ಷಣಪಡೆಯುತ್ತಲಿರುವವರಿಗೆ ರಿಯಾಯಿತಿಗಳನ್ನು ಕೊಡುವ ಪ್ರಶ್ನೆಯು ಈಗಾಗಲೇ ವಿಶ್ವವಿದ್ಯಾನಿಲಯದ ಆಡಳಿತ ವರ್ಗದವರು ಪರಿಶೀಲಿಸುತ್ತಲಿರುವರು. ಇತರ ಕಾಲೇಜು ವಿದ್ಯಾರ್ಥಿಗಳೂ ಸಹ ಆಗ ಸೇರಲು ಕಾತುರರಾಗಿದ್ದಾರೆ. ಮುಂದಿನ ವರ್ಷದ ಹೊತ್ತಿಗೆ ಅದು ಸಾಧ್ಯವಾಗಬಹುದು. ಈ ದಳದಲ್ಲಿ ಉತ್ತಮ ತರಬೇತು ಪಡೆದವರು ದೇಶದ ರಕ್ಷಣೆಗಾಗಿ ಕ್ರಮವಾಗಿ ಸೈನ್ಯವನ್ನು ಸೇರಲನುಕೂಲವಾಗುತ್ತದೆ ಎಂದು ಹೇಳಿದರು.

ನವೀನ ವೈದ್ಯಕೀಯ ಯೋಜನೆ

ಭಾರತದಲ್ಲಿಯೇ ಬಹುಶಃ ಮೊಟ್ಟಮೊದಲನೆಯದಾಗಿ, ಪರಸ್ಪರ ಸಹಾಯಕ ವೈದ್ಯಕೀಯ ಯೋಜನೆಯನ್ನು, ಮಹೂವ ಮುನಿಸಿಪಾಲಿಟಿಯು ಏಪ್ರಿಲ್ ೧ ರಿಂದ ಜಾರಿಗೆ ತರಲಿದೆ.

ಈ ಯೋಜನೆ ಪ್ರಕಾರ ೧೦೦ ರೂ. ಗಳಿಗಿಂತ ಕಡಿಮೆ ದುಡಿಯುವವರು ತಿಂಗಳೊಂದಕ್ಕೆ ೬ದ. ರೂಪಾಯಿಯಂತೆಯೂ. ೧೫೦ ರೂ. ಗಿಂತ ಹೆಚ್ಚಿಗೆ ದುಡಿಯುವವರು ೨ ರೂಪಾಯಿಯಂತೆಯೂ ಕೊಡಬೇಕು ಇದರ ಪ್ರತಿಫಲವಾಗಿ ಅವರ ಕುಟುಂಬದವರಿಗೆಲ್ಲಾ ಉಚಿತ ವೈದ್ಯಸಹಾಯವನ್ನು ಕೊಡಲಾಗುವುದು ಅಲ್ಲದೆ, ಉಚಿತವಾಗಿ, ವೈದ್ಯರು ಮನೆಗಳಿಗೂ ಭೇಟಿಕೊಡುವರು.

ಈ ಯೋಜನೆಗೆ, ವರ್ಷವೊಂದಕ್ಕೆ ಒಂದುಲಕ್ಷ ಇಪ್ಪತ್ತೈದುಸಾವಿರ ರೂ. ಖರ್ಚುತಗಲುವ ಅಂದಾಜಿದೆ. ಸರ್ಕಾರವು ४೨ ಸಾವಿರ ರೂಪಾಯಿಗಳನ್ನು ಒದಗಿಸಲಿದೆ. ಈ ಪಟ್ಟಣದಲ್ಲಿ ೩೦ ಸಾವಿರ ಜನಸಂಖ್ಯೆಯಿದೆ.

ಬಡತನದಿಂದ ಮಕ್ಕಳನ್ನು ಕೊಂದ

ಕೊಯಮತ್ತೂರು ಜಿಲ್ಲೆಯ ಹಳ್ಳಿಯೊಂದರಲ್ಲಿ ಬಡತನ ಮತ್ತು ಹಸಿವುಗಳನ್ನು ಸಹಿಸಲಾರದ ಒಬ್ಬನು ತನ್ನ ಮೂರು ಮಕ್ಕಳನ್ನು ನಿನ್ನೆ ರಾತ್ರಿ ಕುಡುಗೋಲಿನಿಂದ ಕೊಲೆಮಾಡಿ ತಾನು ಅದೇ ಕುಡುಗೋಲಿನಿಂದ ಆತ್ಮಹತ್ಯ ಮಾಡಿಕೊಳ್ಳಲು ಹವಣಿಸುತ್ತಿದ್ದಾಗ ಪೋಲೀಸರು ಬಂಧಿಸಿದರೆಂದು ಧರ್ಮಪುರಿಯಿಂದ ವಾರ್ತೆ ವರದಿಯಾಗಿದೆ.

ದೂರದ ಪೂರ್ವದಲ್ಲಿ ಭಾರತ ಫುಟ್‌ಬಾಲ್ ಟೀಮಿನ ಪ್ರವಾಸ

ದೂರದ ಪೂರ್ವದಲ್ಲಿ ಪ್ರವಾಸ ಮಾಡುವ ಉದ್ದೇಶದಿಂದ ೨४ ಮಂದಿ ಭಾರತೀಯ ಫುಟ'ಬಾಲ' ಆಟಗಾರರು ಏಪ್ರಿಲ' ೧೦ನೇ ತಾರೀಖು ಸಿಂಗಪೂರಿಕ್ಕೆ ಹೋಗಲಿದ್ದಾರೆ. ಅವರಲ್ಲಿ ಮೈಸೂರು ಸಂಸ್ಥಾನದವರೇ ೧४ ಮಂದಿ.

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ|ಅಧ್ಯಕ್ಷರ ಆಯ್ಕೆ

ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಶ್ರೀ ಮತಿ ಕುಟ್ಟಿಮಾಲು ಅಮ್ಮರವರು ೩೭ ಓಟು ಗಳಿಸಿ ಆರಿಸಲ್ಪಟ್ಟರು. ಪ್ರತಿಸ್ಪರ್ಧಿಗಳಾಗಿದ್ದ ಕೊಚಿನ್ ನಾಯಕ ಶ್ರೀ ಮಾಧವನ' ನಾಯರ್ ಅವರಿಗೆ ೩४ ಓಟುಗಳು ಬಂದವು.

ನೂತನ ಅಧ್ಯಕ್ಷರು ಮದ್ರಾಸಿನ ಮಾಜಿ ಸಚಿವ ಶ್ರೀ ಕೆ. ಮಾಧವ ಮೆನನ್ನರ ಪತ್ನಿ.

ಸುಂಟರಗಾಳಿ ಅಪಾಹುತದಿಂದ ೧೩ ಜನರ ಸಾವು

ಟೆನಿಸ್ಸಿಯಲ್ಲಿ ಕಳೆದ ರಾತ್ರಿ ಬೀಸಿದ ಸುಂಟರಗಾಳಿಯಿಂದ ಸಂಭವಿಸಿದ ಅನಾಹುತಕ್ಕೆ ೧೩ ಮಂದಿ ಬಲಿಯಾದರು. ೧೫೦ ಮಂದಿಗೆ ಗಾಯಗಳಾಗಿವೆ. ಅನೇಕ ಕಟ್ಟಡಗಳು ನೆಲಸಮವಾಗಿವೆ.

ಪೌರಸಭೆಯ ಚುನಾವಣೆಗಳು

ಬೀರೂರು ಪೌರಸಭಾ ಚುನಾವಣೆಯ ೧೫ ಸ್ಥಾನಕ್ಕೆ ೫೩ ಜನರು ಸ್ಪರ್ಧಿಸಿರುತ್ತಾರೆ.

ಹರಿಹರ ಪೌರಸಭೆಯ ೨೦ ಸ್ಥಾನಗಳಿಗೆ ೧೧೬ ಮಂದಿ ಉಮೇದುವಾರಿಕೆ ಅರ್ಜಿ ಸಲ್ಲಿಸಿದ್ದಾರೆ.

ಚುನಾವಣೆ ವೆಚ್ಚದ ಲೆಕ್ಕ

ಈ ದಿನ ಮೈಸೂರು ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ ಉಮೇದುವಾರಿಕೆ ಅರ್ಜಿಯನ್ನು ವಾಪಸ್ ಪಡೆದವರು ಕೂಡ ಚುನಾವಣಾಧಿಕಾರಿಗಳಿಗೆ ಚುನಾವಣೆ ವೆಚ್ಚವನ್ನು ಗೆಜೆಟ'ನಲ್ಲಿ ಫಲಿತಾಂಶ ಪ್ರಕಟವಾದ ४೫ ದಿನಗಳೊಳಗೆ ಒಪ್ಪಿಸಬೇಕೆಂದು ಸ್ಪಷ್ಟಪಡಿಸಿದ್ದಾರೆ.

ವುಡ್ ಲ್ಯಾಂಡ್ಸ್

२९—२—५२ ರಿಂದ

ಅಮೋಘವಾದ ३ನೇ ವಾರ

ದಿನವೂ 3 ಪ್ರದರ್ಶನಗಳು

ಅಲ್ ಬೇಲ

ಪಾತ್ರ:- ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ನ್ಯೂ ಅಪೇರ

२९—२—५२ ರಿಂದ २ನೇ ವಾರ

"ಸ್ತ್ರೀಸಾಹಸಂ" ತಯಾರಿಸಿರುವ ವಿನೋದ ಪ್ರೊಡಕ್ಷರವರ

ಶಾಂತಿ

(ತೆಲುಗು)

ಪಾತ್ರ :—ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ|| ಸುಬ್ಬರಾವ್.

ಪ್ರಕಾಶಕರು :—ಜಿ.ಎಲ್'. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭४ (೮೦ಸ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ४—೩—೧೯೫೨ನೇ ಮಂಗಳವಾರ [ಸಂಚಿಕೆ ೧೫೯

ಭಾರತದಲ್ಲಿ ಜನಶಕ್ತಿಯೇ ರಾಷ್ಟ್ರಸಂಪತ್ತು

ಆರನೇ ತಾರೀಖು ಮೈಸೂರಿಗೆ ಶ್ರೀಮತಿ ರೂಸ್'ವೆಲ್ಟ್'ರ ಭೇಟಿ

ಮೈಸೂರು ಮಾ ೩

ಕಾರ್ಮಿಕರಲ್ಲಿ ಉತ್ತಮ ವಾತಾವರಣವು ಕಲ್ಪನೆಯಾಗಿ, ಸಕ್ಷಮವಾದ ಜೀವನದ ಮಾರ್ಗವನ್ನು ಕಲ್ಪಿಸಿಕೊಂಡು ಉತ್ತಮ ದರ್ಜೆಯ ಕಾರ್ಮಿಕರಾಗಬೇಕಾದರೆ ಉದ್ಯೋಗವಿನಿಮಯ ಸಂಸ್ಥೆಗಳಮೂಲಕ ಸಾಧ್ಯ. ದೇಶದಲ್ಲಿ ನಿರುದ್ಯೋಗದಲ್ಲಿರುವ ಉತ್ತಮ ಕಾರ್ಮಿಕರನೇಕರಿರುವರು. ಉತ್ತಮ ಕಾರ್ಮಿಕರ ಅವಶ್ಯಕತೆಯಿರುವ ಮಾಲೀಕರಿರುವರು. ಅವರೆಲ್ಲರಿಗೂ ಸಂಬಂಧ ಕಲ್ಪಿಸಬೇಕಾದರೆ ಈ ಸಂಸ್ಥೆಯು ಸಹಾಯಮಾಡುವುದು.

ಈಗಿನ ವಿದ್ಯಾಭ್ಯಾಸದಲ್ಲಿ ಸಂಪಾದನೆಗೆ ಅವಕಾಶಕಲ್ಪಿಸಿಕೊಂಡುಸುಖಜೀವನ ನಡೆಸುವುದು ಕಷ್ಟ. ಈಗ ಜೀವನೋಪಾಯದ ಶಿಕ್ಷಣ ಅತ್ಯವಶ್ಯಕ. ಮಾಲೀಕರ ಅಭಿವೃದ್ಧಿಯಾಗಬೇಕಾದರೆ ಉತ್ತಮ ಕಾರ್ಮಿಕರಿಂದ. ಕಾರ್ಮಿಕರ ಹಿತಸಾಧನೆಯನ್ನು ಮಾಲೀಕರು ಉತ್ತಮರೀತಿಯಲ್ಲಿ ನಡೆಸಿದರೆ ರಾಷ್ಟ್ರದ ಅಭಿವೃದ್ಧಿ ಹೆಚ್ಚಾಗಿ ಆರ್ಥಿಕಮಟ್ಟವೇ ಜೀವನವು ಸುಖಮಯವಾಗುತ್ತದೆ. ಎಂದು ಕಾರ್ಮಿಕಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಇಂದು ಉದ್ಯೋಗವಿನಿಮಯಸಂಸ್ಥೆ ಪ್ರಾರಂಭೋತ್ಸವವನ್ನು ಮಾಡುತ್ತಾ ಹೇಳಿದರು.

ಪ್ರಾರಂಭದಲ್ಲಿ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಸ್ವಾಗತ ಭಾಷಣಮಾಡಿ ಕಾರ್ಮಿಕ ಕ್ಷೇತ್ರದಲ್ಲಿ ಶ್ರೀ ಭಾಷ್ಯಂರವರ ಸೇವೆಯನ್ನು ವಿವರಿಸಿದರು.

ಅನಂತರ ಶ್ರೀಗಳಾದ ಬಿ. ಎಸ್. ಪುಟ್ಟಸ್ವಾಮಿ, ಬಿ. ಕೆ. ಮೂರ್ತಿ ಮತ್ತು ಕೆ. ಪುಟ್ಟಸ್ವಾಮಿಗಳು ಭಾಷಣಮಾಡಿ ಈ ಉದ್ಯೋಗ ವಿನಿಮಯ ಸಂಸ್ಥೆಯ ಸ್ಥಾಪನೆಯ ಆವಶ್ಯಕತೆಯನ್ನು ವಿವರಿಸುತ್ತ, ಭಾರತದಲ್ಲಿ ಜನಶಕ್ತಿಯು ರಾಷ್ಟ್ರಸಂಪತ್ತು ಅದನ್ನು ಸರಿಯಾಗಿ ವಿನಿಮಯಮಾಡಿಕೊಂಡು ನಮ್ಮ ಆವಶ್ಯಕತೆಯ ವಸ್ತುಗಳ ಉತ್ಪಾದನೆಮಾಡಿಕೊಂಡು ಪರರಾಷ್ಟ್ರಗಳ ಸೇವೆ ಕಡಿಮೆ ಮಾಡಿಕೊಳ್ಳಬೇಕೆಂದರು.

‡ ಬಿಹಾರಿನ ಶಾಸನಸಭೆಯ ಕೊನೆಯ ಅಧಿವೇಶನವು ನಿನ್ನೆಯಿಂದ ಆರಂಭವಾಯಿತು.

ಮೈಸೂರು ಮಾ ೩

ಭಾರತದಲ್ಲಿ ಪ್ರವಾಸ ಕೈಗೊಂಡಿರುವ ಅಮೆರಿಕಾ ಮಾಜಿ ಅಧ್ಯಕ್ಷ ರೂಸ್'ವೆಲ್ಟರ ಪತ್ನಿಯವರು ಮೈಸೂರಿಗೆ ೬ನೇ ತಾ|| ಬಂದು ಒಂದುದಿನವಿದ್ದು ಇಲ್ಲಿಂದ ಬೆಂಗಳೂರಿಗೆ ಪ್ರಯಾಣ ಮಾಡುವರೆಂದು ಗೊತ್ತಾಗಿದೆ. ಶ್ರೀಮತಿಯವರು ತಿರುವಾಂಕೂರಿನಿಂದ ಇಲ್ಲಿಗೆ ಬರುವರು

ನೂತನ ಮಂತ್ರಿಗಳ ಅಧಿಕಾರ ಸ್ವೀಕಾರ

ಮಧ್ಯಭಾರತದಲ್ಲಿ ಶ್ರೀ ಮಿಶ್ರಿಲಾಲ ಗಂಗಾವಾಲ'ರವರ ನಾಯಕತ್ವದಲ್ಲಿ ಆರು ಸಚಿವರುನಿನ್ನೆ ಪ್ರಮಾಣವಚನ ಸ್ವೀಕರಿಸಿದರು. ರಾಜಾಸ್ಥಾನದಲ್ಲಿ ಶ್ರೀ ತಿಕ್ಕಾರಾಂ ಪಾಲೀವಾಲ'ರವರ ನಾಯಕತ್ವದಲ್ಲಿ ೬ ಜನ ಸಚಿವರು ಪ್ರಮಾಣವಚನ ಸ್ವೀಕರಿಸಿದರು.

ವಿಶ್ವಶಾಂತಿಗೆ ಪ್ರಯತ್ನಿಸಿ

ಪ್ರಧಾನಿ ನೆಹರೂರವರು ನಿನ್ನೆ ಬೋಲ'ಪುರದಿಂದ ಶಾಂತಿನಿಕೇತನಕ್ಕೆ ತೆರಳಿ ಅಲ್ಲಿ ವಿದ್ಯಾರ್ಥಿಗಳನ್ನೂ, ಅಧ್ಯಾಪಕರನ್ನೂ ಕುರಿತು ಮಾತಾಡಿ ವಿಶ್ವದಲ್ಲಿ ಪ್ರತಿಯೊಬ್ಬರಲ್ಲೂ ಸ್ನೇಹ ಸೌಹಾರ್ದತೆ ಬೆಳೆದು ಶಾಂತಿಯುತ ಸಹಕಾರ ವೃತಿಯೊಂದು ಕಾರ್ಯದಲ್ಲಿಯೂ ದೊರೆತು ವಿಶ್ವದಲ್ಲಿ ಶಾಂತಿಯುತವಾದ ವಾತಾವರಣ ಕಲ್ಪಿಸಲು ಪ್ರತಿಯೊಬ್ಬರೂ ಪ್ರಯತ್ನಿಸಬೇಕೆಂದರು.

ಪಟ್ಟಿ ಒಪ್ಪಿಸಲಾಯಿತು.

ಹಿಮಾಚಲ ಪ್ರದೇಶದಲ್ಲಿ ಅಲ್ಲಿನ ಶಾಸನಸಭೆಯ ಕಾಂಗ್ರೆಸ'ಪಕ್ಷದ ನಾಯಕ ಶ್ರೀ ಜಸವಂತಸಿಂಗ'ರವರು ಅಲ್ಲಿನ ಲೆಫ್ಟಿನೆಂಟ' ಗೌರ್ನರ' ಶ್ರೀ ಹಿಮ್ಮತಸಿಂಗ'ಜಿಯವರಿಗೆ ಸಚಿವ ಸಂಪುಟದ ಪಟ್ಟಿಯನ್ನು ಒಪ್ಪಿಸಿದರು.

ಶ್ರೀ ಕೆ. ಸಿ. ರೆಡ್ಡಿ ಮತ್ತು ಹನುಮಂತಯ್ಯನವರ ಆಗಮನ

ಬೆಂಗಳೂರು ಮಾ ೨೩

ಮುಖ್ಯಮಂತ್ರಿ, ಶ್ರೀ ಕೆ. ಸಿ. ರೆಡ್ಡಿಯವರೂ ಪ್ರದೇಶ ಕಾಂಗ್ರೆಸ' ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಈದಿನ ದೆಹಲಿಯಿಂದ ವಾಪಸ್ಸಾದರು.

೨೦ ದಿನಗಳ ಹಸುಗೂಸನ್ನು ಚಿತ್ರಮಂದಿರದಲ್ಲಿ ಬಿಟ್ಟ ಪ್ರಸಂಗ

ಮೈಸೂರು ಮಾ ೩

ಮೊನ್ನೆರಾತ್ರಿ, ಶ್ರೀ ಗಾಯಿತ್ರಿಟಾಕೀಸಿಗೆ ೨ನೇ ಆಟ ನೋಡಲು ಬಂದವರೊಬ್ಬರು ೧೫-೨೦ ದಿನಗಳ ಒಂದು ಹೆಣ್ಣುಮಗುವನ್ನು ಚಿತ್ರಮಂದಿರದಲ್ಲೇ ಬಿಟ್ಟ ಪ್ರಸಂಗವೊಂದು ವರದಿಯಾಗಿದೆ. ಮೊನ್ನೆ ರಾತ್ರಿ ಸುಮಾರು ೫೬ ಮಂದಿ ಹೆಂಗಸರು ಗುಂಪಾಗಿ ಚಿತ್ರಕ್ಕೆ ಬಂದಿದ್ದರೆಂದೂ, ಅವರುಗಳು ವಾಪಸಾಗುವಾಗ್ಗೆ ಈರೀತಿ ಆ ಹಸುಗೂಸನ್ನು ಅಲ್ಲಿ ಬಿಟ್ಟು ಹಿಂತಿರುಗಿರುವರೆಂದು ಗೊತ್ತಾಗಿದೆ ಮಗುವನ್ನು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿಡಲಾಗಿದೆ. ಶಿಶು ಆರೋಗ್ಯವಾಗಿದೆ ವಾರಸುದಾರರು ಪತ್ತೆಯಾಗಿಲ್ಲ

ಸೈಕಲ್ ಕೊಳ್ಳಲು ಅಡ್ವಾನ್ಸ್

ಬೆಂಗಳೂರು ಮಾ ೩

ಸೀನಿಯರ' ಸರ್ವಿಸ'ನಲ್ಲಿರುವ ನಾನ್‌ಗೆಜೆಟೆಡ' ನೌಕರರು ಸೈಕಲ' ಕೊಳ್ಳಲು ಮುಂಗಡ ಕೊಡಬಹುದಾಗಿದ್ದ ೧೫೦ ರೂಪಾಯಿಗಳನ್ನು ಸರ್ಕಾರದವರು ೩೦೦ ರೂಗಳಿಗೆ ಹೆಚ್ಚಿಸಿದ್ದಾರೆ ೩೫೦ ಕೊಡುವಂತೆ ಪ್ರಾರ್ಥನೆ ಸಲ್ಲಿಸಲಾಗಿತ್ತು.

ಪಾರ್ಲಿಮೆಂಟ್ ಚುನಾವಣೆ

ಪಾರ್ಲಿಮೆಂಟಿನ ಚುನಾವಣೆಯು ಮುಕ್ತಾಯವಾಗಿದೆ. ಪಾರ್ಲಿಮೆಂಟಿಗೆ ಚುನಾವಣೆ ನಡೆದ, ४೮೯ ಸ್ಥಾನಗಳ ಪೈಕಿ ಕಾಂಗ್ರೆಸ್ ೩೬೩ ಸ್ಥಾನಗಳನ್ನು ಗಳಿಸಿದೆ.

ಪಾರ್ಲಿಮೆಂಟಿನಲ್ಲಿ ಒಟ್ಟು ४೯೭ ಸ್ಥಾನಗಳಲ್ಲಿ ಇನ್ನೂ ೮ ಸ್ಥಾನಗಳಿಗೆ ರಾಷ್ಟ್ರಾಧ್ಯಕ್ಷರು ನಾಮಕರಣಮಾಡಬೇಕಾಗಿದೆ. ಇತರಪಕ್ಷಗಳಲ್ಲಿ ಕಮ್ಯೂನಿಸ್ಟ್ ೨೭ ಸೋಷಲಿಸ್ಟ್ ೧೨, ಸ್ವತಂತ್ರರು ೩೭ ಸ್ಥಾನಗಳನ್ನು ಪಡೆದಿರುವರು.

ಹಣದ ದುರಸ್ತಿಗಾಗಿ ವಕೀಲರಿಗೆ ಶಿಕ್ಷೆ ಮತ್ತು ಪತ್ನಿಯ ಖುಲಾಸೆ

ಭೂಮಿಯನ್ನು ವಶಪಡಿಸಿಕೊಂಡ ಬಾಬ್ತು ಹಣವನ್ನು ತುಮಕೂರಿನ ವಕೀಲರಾದ ಶ್ರೀ ಗುರುಸಂಗಾರ್ಯ ಮತ್ತು ಅವರ ಪತ್ನಿ ಇಬ್ಬರೂ ದುರಸ್ತುಮಾಡಿರುವ ಬಗ್ಗೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ತೀರ್ಪುಕೊಡಲ್ಪಟ್ಟು ವಕೀಲರಿಗೆ ೬ ತಿಂಗಳು ಕಠಿಣಶಿಕ್ಷೆ ಮತ್ತು ಪತ್ನಿಯ ಖುಲಾಸೆ ಆಗಿದೆ.

ಹೈದರಾಬಾದಿನಲ್ಲಿ ಶಾಸನಸಭಾಧಿವೇಶನ

ಹೈದರಾಬಾದ'ನ ಹೊಸ ಸರ್ಕಾರವು ಮಾರ್ಚಿ ೭ನೇ ತಾರೀಖು ಅಧಿಕಾರ ಸ್ವೀಕಾರ ಮಾಡುತ್ತದೆ. ಇದೇ ಮಾಹೆ ೨೭ನೇ ತಾರೀಖು ಹೊಸ ಶಾಸನಸಭೆಯ ಪ್ರಥಮ ಅಧಿವೇಶನವು ಪ್ರಾರಂಭವಾಗಿ ಸಂಸ್ಥಾನದ ಬಜೆಟ್ಟನ್ನು ಪರಿಶೀಲಿಸಲಿದೆಯೆಂದು ಹೇಳಲಾಗಿದೆ.

ಬಟ್ಟೆ ಹತೋಟಿ ಸದ್ಯಕ್ಕೆ ಹೋಗುವುದಿಲ್ಲ

ಬಟ್ಟೆ ಹತೋಟಿಯನ್ನು ಸದ್ಯಕ್ಕೆ ಭಾರತ ಸರ್ಕಾರವು ತೆಗೆದುಹಾಕುವುದಿಲ್ಲ ಮತ್ತು ಅದರ ನೀತಿಯಲ್ಲಿ ಅವಸರವಾಗಿ ಯಾವ ಬದಲಾವಣೆಯನ್ನೂ ಸದ್ಯಕ್ಕೆ ಮಾಡುವುದಿಲ್ಲವೆಂದು ಟೆಕ್ಸ್‌ಟೈಲ' ಕಮೀಷನರು ಅಹಮದಾಬಾದಿನಲ್ಲಿ ಹೇಳಿರುವರು.

ಸಾರ್ವಜನಿಕ ಪುಸ್ತಕಭಂಡಾರ

ಕಳೆದಮಾಹೆ ಮೈಸೂರು ಸಾರ್ವಜನಿಕ ಪುಸ್ತಕಭಂಡಾರಕ್ಕೆ ಭೇಟಿಯಿತ್ತವರ ಸಂಖ್ಯೆ ೭೭೫೦. ಅವರುಗಳಿಗೆ ಒದಗಿಸಲಾಗಿದ್ದ ಪುಸ್ತಕಗಳ ಸಂಖ್ಯೆ ೩೨४೧.

ಟರ್ಕಿಯ ಪತ್ರಿಕಾ ನಿಯೋಗ

ಭಾರತಕ್ಕೆ ಆಗಮಿಸಿರುವ ಟರ್ಕಿಯ ಪತ್ರಿಕಾನಿಯೋಗದವರು ರಾತ್ರಿ ಬೆಂಗಳೂರಿಗೆ ಆಗಮಿಸಿದರು ಅವರುಗಳು ಇಂದು ವಿಮಾನದಲ್ಲಿ ಹೈದ್ರಾಬಾದಿಗೆ ತೆರಳುವರು.

ಭಾರತದ ಸಹಾಯ

ಫಿಜಿ ಸರ್ಕಾರಕ್ಕೆ. ಭಾರತಸರ್ಕಾರವು ಅಲ್ಲಿಯ ಕ್ಷಾಮನಿವಾರಣೆಗಾಗಿ ೧೦೦೦ ಪೌಂಡುಗಳನ್ನು ಉದಾರವಾಗಿ ದಾನಮಾಡಿದೆ

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಮತ್ತು ಚಲನಚಿತ್ರಗಳಲ್ಲಿ ಅಭಿನಯಿಸಲು ಅವಕಾಶಮಾಡಿ ಕೊಡಲಾಗುವುದು. ಆಸಕ್ತಿವುಳ್ಳವರು ಇಂದೇ ವಿಚಾರಿಸಿರಿ

ವ್ಯವಸ್ಥಾಪಕ.

ರಾಜಕೀಯ ಭವಿಷ್ಯ ನಿರ್ಧಾರ

ಮುಂದಿನ ನಾಲ್ಕು ವರ್ಷಗಳ ಅಮೇರಿಕದ ರಾಜಕೀಯವನ್ನು ನಿರ್ಧರಿಸುವ ನವೆಂಬರ್ ೪ನೆಯ ತಾ|| ನಡೆಯಲಿರುವ ಚುನಾವಣೆಯಲ್ಲಿ ಅಮೇರಿಕದ ಸುಮಾರು ೫೦-೫೫ ಮಿಲಿಯನ್ ಮತದಾರರು ತಮ್ಮ ಮತವನ್ನು ಚಲಾಯಿಸುವರು.

ಸಂಸವಾದ ರೀತಿಯಲ್ಲಿ ಗುರುತಿಸುವ ಮೂಲಕ ಮತದಾರರು ತಮ್ಮ ಅಭಿಪ್ರಾಯವನ್ನು ಸೂಚಿಸುವರು.

ಈ ವರ್ಷ ಅವರು (೧) ಅಮೇರಿಕದ ಅಧ್ಯಕ್ಷ, ಉಪಾಧ್ಯಕ್ಷರನ್ನೂ ಚುನಾಯಿಸುವರು

(೨) ಸೆನೆಟ್ ಸಭೆಯಲ್ಲಿರುವ ೯೬ ಸದಸ್ಯರಲ್ಲಿ ೩೨ ಸದಸ್ಯರನ್ನು ಚುನಾಯಿಸುವರು. ೯೬ ರಲ್ಲಿ ೫೦ ಡೆಮೊಕ್ರಾಟಿಕ್ ಪಕ್ಷಕ್ಕೆ ಸೇರಿದವರೂ, ೪೬ ರಿಪಬ್ಲಿಕನ್ ಪಕ್ಷಕ್ಕೆ ಸೇರಿದವರೂ ಇದ್ದಾರೆ.

(೩) ಅಮೆರಿಕ ಶಾಸನಸಭೆಯ ಕೆಳ ಮನೆಯ ಎಲ್ಲ ಸದಸ್ಯರೂ ಚುನಾಯಿತರಾಗುವರು. ಒಟ್ಟು ೪೩೫ ಸ್ಥಳಗಳಿವೆ. ಇಂದಿನ ಸಭೆಯಲ್ಲಿ ೨೩೩ ಸದಸ್ಯರು ಡೆಮೊಕ್ರಾಟಿಕ್ ಪಕ್ಷಕ್ಕೆ ಸೇರಿದವರು ೨೦೧ ಸದಸ್ಯರು ರಿಪಬ್ಲಿಕನ್ನರು, ಒಬ್ಬರೇ ಸ್ವತಂತ್ರ ಸದಸ್ಯರಿದ್ದಾರೆ.

(೪) ೪೮ ಸಂಸ್ಥಾನಗಳಲ್ಲಿ ೩೦ ಸಂಸ್ಥಾನಗಳ ಗವರ್ನರರನ್ನು ಚುನಾಯಿಸಬೇಕು.

(೫) ಅಲ್ಲದೆ ಸಂಸ್ಥಾನದ ಶಾಸನ ಸಭೆಗಳು, ಕಾರ್ಯಕಾರಿ ಮಂಡಲಗಳು, ಮತ್ತು ಸಾವಿರಾರು ನಗರ, ಪಟ್ಟಣ, ಊರಿನ ಅಧಿಕಾರಿಗಳ ಚುನಾವಣೆಯಾಗಬೇಕಾಗಿದೆ.

ಪ್ರಾಥಮಿಕ ಚುನಾವಣೆಗಳ ಮೂಲಕ ಜನರು ತಮ್ಮ ಅಧ್ಯಕ್ಷರನ್ನು ಆರಿಸಿಕೊಳ್ಳಬಹುದು. ಈ ಪ್ರಾಥಮಿಕ ಚುನಾವಣೆಗಳು ಪಕ್ಷಗಳ ರಾಷ್ಟ್ರಕೂಟಕ್ಕೆ ಮುಂದಿನ ಅಧ್ಯಕ್ಷರ ನಾಮಕರಣಕ್ಕೆ ಅನುಕೂಲವಾಗುವುದು.

ಈ ವರ್ಷದ ಚುನಾವಣೆಯಲ್ಲಿ ಸ್ವತಂತ್ರ ಮತದಾರರು, ಯಾವ ಪಕ್ಷಕ್ಕೂ ಸೇರದೆ ಇರುವವರು, ಚುನಾವಣೆಯಲ್ಲಿ ಹೆಚ್ಚಿನ ಪ್ರಭಾವ ಬೀರುವವರೆಂದು ತಿಳಿಯಲಾಗಿದೆ. ಸುಮಾರು ೧೦ ರಿಂದ ೧೫ ಮಿಲಿಯನ್ ಸ್ವತಂತ್ರ ಮತದಾರರಿರುವರೆಂದು ಲೆಕ್ಕ ಹಾಕಲಾಗಿದೆ.

ಈ ವರ್ಷದ ಅಧ್ಯಕ್ಷರನ್ನು ಆರಿಸುವಾಗ ಸ್ವತಂತ್ರ ಮತದಾರರು ತಮ್ಮ ಪ್ರಭಾವವನ್ನು ಬೀರಿ ಅವರ ವಿಜಯಕ್ಕೂ ಕಾರಣರಾಗಬಹುದು

* ಕೊರಿಯ ಯುದ್ಧದಲ್ಲಿ ಅಮೇರಿಕದ ೩೪ ಹಡಗುಗಳು ಮತ್ತು ೪೦೦ ವಿಮಾನಗಳು ನಾಶವಾಗಿವೆ.

ಇನ್ನೂ ತೀರ್ಮಾನವಿಲ್ಲ

ಬೆಂಗಳೂರು ಮಾ. ೩

ಮೈಸೂರು ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ನಾಯಕ ಪಟ್ಟ ಶ್ರೀ ಕೆ. ಹನುಮಂತಯ್ಯನವರಿಗೆ ಲಭಿಸುವುದು ನಿಶ್ಚಯವೆಂದು ನವದೆಹಲಿಯ ರಾಜಕೀಯ ವರ್ತುಲಗಳಲ್ಲಿ ಅಭಿಪ್ರಾಯ ಪಟ್ಟಿರುವುದಾಗಿ ಸುದ್ದಿ ಬಂದಿದೆ.

ಕೇಂದ್ರ ಚುನಾವಣೆ ಸಮಿತಿಯು ಒನೆಯ ತಾರೀಖು ಸಮಾವೇಶವಾಗಿ ಮೈಸೂರು ಅಸೆಂಬ್ಲಿ ಕಾಂಗ್ರೆಸ್ ಪಕ್ಷದ ನಾಯಕತ್ವದ ಬಗ್ಗೆ ಅಂತಿಮ ತೀರ್ಮಾನಕ್ಕೆ ಬಂದಿದೆ. ಅದರ ತೀರ್ಮಾನವನ್ನನುಸರಿಸಿ ಅಸೆಂಬ್ಲಿ ಕಾಂಗ್ರೆಸ್ ಪಕ್ಷವು ಕೂಡಲೇ ಸೇರಿ ನಾಯಕರನ್ನು ಆರಿಸಲಿದೆ

ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕತ್ವದ ಚುನಾವಣೆ ಸಂಬಂಧದಲ್ಲಿ ನೆಹರೂ ಅವರೊಂದಿಗೆ ಮಾತುಕತೆ ನಡೆಸಲು ದೆಹಲಿಗೆ ತೆರಳಿದ್ದ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಹೈದರಾಬಾದಿನಲ್ಲಿ ಈ ರೀತಿ ಹೇಳಿರುವರು.

'ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕತ್ವದ ಚುನಾವಣೆಗೆ ನಾನು ಮತ್ತು ಶ್ರೀ ಕೆ. ಸಿ. ರೆಡ್ಡಿಯವರು ನಿಲ್ಲಬೇಕೆಂದಿದ್ದೇವೆ.

ಆದರೆ ಕಾಂಗ್ರೆಸ್ ಹೈಕಮಾಂಡ' ನಾಯಕತ್ವದ ಚುನಾವಣೆ ಒಮ್ಮತದಿಂದಾಗಬೇಕೆಂದು ಅಭಿಪ್ರಾಯಪಟ್ಟಿದೆ, ನಾಯಕರು ಯಾರಾಗಬೇಕೆಂಬ ಬಗ್ಗೆ ಇನ್ನೂ ಯಾವ ತೀರ್ಮಾನವೂ ಆಗಿಲ್ಲ. ಈ ವಾರಾಂತ್ಯದಲ್ಲಿ ಸೇರುವ ಸೆಂಟ್ರಲ್ ಪಾರ್ಲಿಮೆಂಟರಿ ಬೋರ್ಡ್ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಮಾಡಲಾಗುವುದು.

ಹೆಚ್ಚು ಆಹಾರ ಉತ್ಪಾದನೆಗೆ ಪ್ರಯತ್ನ

ಅಸ್ಸಾಮಿನ ಚುನಾಯಿತ ಗ್ರಾಮಗಳಲ್ಲಿ ಹೆಚ್ಚು ಆಹಾರ ಉತ್ಪನ್ನಕ್ಕೆ ಪ್ರಯತ್ನಿಸಲು ಸರ್ಕಾರವು ನಿರ್ಧರಿಸಿ ಇದಕ್ಕಾಗಿ ೧೫ ಲಕ್ಷ ರೂ. ವೆಚ್ಚ ಮಾಡಲಿದೆ.

ಕಾರವಾರಕ್ಕೆ ಭೂಗರ್ಭಶಾಸ್ತ್ರ ತಜ್ಞರು

ಕಾರವಾರದ ಬಳಿ ಇರುವ ಕೈಗಾನ ಹಳ್ಳಿಯಲ್ಲಿ ಗಂಧಕವು ವಿಶೇಷವಾಗಿ ದೊರೆಯುವುದೆಂದು ಭಾರತ ಸರ್ಕಾರಕ್ಕೆ ತಿಳಿದು ಇದನ್ನು ಪರಿಶೀಲಿಸಲು ಭೂಗರ್ಭ ಶಾಸ್ತ್ರ ತಜ್ಞರು ಅಲ್ಲಿಗೆ ತೆರಳಿದರು.

ವನಸ್ಪತಿ ಬೆಲೆ

ಉತ್ತರ ಇಂಡಿಯಾದ ಕೆಲವು ಪ್ರದೇಶಗಳಲ್ಲಿ ಭಾರತ ಸರ್ಕಾರವು ವನಸ್ಪತಿ ಎಣ್ಣೆಯ ಬೆಲೆಯನ್ನು ಪೌಂಡಿಗೆ ೨-೨|| ಆಣೆಗಳಷ್ಟು ಕಡಿಮೆಮಾಡಿ ಪ್ರಕಟಣೆ ಹೊರಡಿಸಿರುವರು.

ಭಾರತದ ವಿದೇಶಾಂಗ ನೀತಿ

ಭಾರತ ವಿದೇಶಾಂಗ ನೀತಿಯ ಮೂಲೋದ್ದೇಶಗಳೇ ಅಮೆರಿಕದವರಿಗೆ ಅರ್ಥವಾಗಿಲ್ಲ. ಆದರೆ ಈಗೀಗ ಮೊದಲಿಗಿಂತಲೂ ಚೆನ್ನಾಗಿ ಅರ್ಥ ಮಾಡಿಕೊಳ್ಳಲಾರಂಭಿಸಿದ್ದಾರೆ, ಎಂದು ಶ್ರೀಮತಿ ಎಲಿನಾರ ರೂಜ್‌ವೆಲ್ಟ್‌ರವರು ಬೊಂಬಾಯಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ತಿಳಿಸಿದರು

ಶ್ರೀಮತಿ ರೂಜ್‌ವೆಲ್ಟರು ಮುಂದುವರಿದು, ಇದಕ್ಕೆ ಅಮೆರಿಕನ್ನರನ್ನು ಆಕ್ಷೇಪಣೆ ಮಾಡಬಾರದು, ೧೯೩೦ ರವರೆಗೂ ಅಮೆರಿಕನ್ನರು ವಿಶ್ವದ ರಾಜಕೀಯದಲ್ಲಿ ಆಸಕ್ತಿ ವಹಿಸಿರಲಿಲ್ಲ ಏಕಾಂಗಿಯಾಗಿದ್ದರು. ಯುದ್ಧಾನಂತರವೇ ವಿಶ್ವದಲ್ಲಿ ಅಮೆರಿಕದ ಪ್ರಭಾವವೇನೆಂಬುದು ತಿಳಿಯಬಂತು.

ಈಗೀಗ ಸೆನೆಟ್ ಮತ್ತು ಕಾಂಗ್ರೆಸ್ ಸದಸ್ಯರು ಭಾರತವನ್ನು ಮತ್ತು ಅದರ ಸಮಸ್ಯೆಗಳನ್ನು ಚೆನ್ನಾಗಿ ಅರಿಯಲಾರಂಭಿಸಿದ್ದಾರೆ, ಎಂದರು.

ಇತರ ಪ್ರಜಾಪ್ರಭುತ್ವ ರಾಷ್ಟ್ರಗಳಂತೆಯೇ ಭಾರತವೂ ಪ್ರಜಾಪ್ರಭುತ್ವ ತತ್ವಗಳನ್ನು ಮುಂದುವರಿಸಲು ಪ್ರಯತ್ನಿಸುತ್ತಿದೆಯೆಂದು ನೀವು ತಿಳಿಯುವಿರಾ ಎಂಬ ಪ್ರಶ್ನೆಗೆ 'ಹೌದು, ಅಮೆರಿಕದವರಿಗೆ ಈಗೀಗ ಅದು ಅರ್ಥವಾಗಲಾರಂಭಿಸಿದೆ' ಎಂದರು.

ರಷ್ಯದ ಆಕ್ರಮಣ ವಿಶ್ವಕ್ಕೆ ವಿಪತ್ತು ಸಂಭವಿಸಿದೆ ರಷ್ಯದ ಆಕ್ರಮಣದ ವಿರುದ್ಧ ಯಾವ ಸಿದ್ಧತೆಯಾದರೂ ಅದರಲ್ಲಿ ನಾವಾಸಕ್ತಿಯುಳ್ಳವರಾಗಿದ್ದೇವೆ. ಭಾರತದ ತಾಟಸ್ಥ್ಯ ನೀತಿ ಸೃಜಿತ ಅರಿವಾಗಿದೆ. ವಿಶ್ವಶಾಂತಿ ಸ್ಥಾಪನೆಯಲ್ಲಿ ಈಗ ಭಾರತ ಪ್ರಮುಖ ಪಾತ್ರ ವಹಿಸಲಿದೆ' ಎಂದರು

ವಿಶ್ವದ ವಯಸ್ಸು

ಪ್ರಪಂಚವು ಹುಟ್ಟಿ ೩೦೦೦೦ ಲಕ್ಷ ವರ್ಷಗಳಾಗಿದೆಯೆಂದು ವಿಶ್ವವಿಜ್ಞಾನ ಪ್ರವೀಣ ಮತ್ತು ನೋಬೆಲ್ ಬಹುಮಾನ ಪಡೆದಿರುವ ಪ್ರೊ|| ಹರಾಲ್ಡ್ ಯುರೇಯವರು ಹೇಳಿರುವರು.

ಭಾರತಕ್ಕೆ ಬರ್ಮಾ ಅಕ್ಕಿ

ಬರ್ಮಾ ವ್ಯವಸಾಯೋತ್ಪನ್ನ ಮಾರಾಟಸಂಘ ೧೯೫೨ರ ಪ್ರಥಮಾರ್ಧದಲ್ಲಿ ೧,೭೭,೩೦೦ ಟನ್ ಅಕ್ಕಿ ರಫ್ತು ಮಾಡಲಿದೆ ಅವೈಕಿ ಭಾರತಕ್ಕೆ ೭೦,೦೦೦ ಟನ್ ಅಕ್ಕಿ ರಫ್ತಾಗಲಿದೆ

ಟ್ರೇಡ್ ಯೂನಿಯನ್ನಿನ ರಿಜಿಸ್ಟ್ರಾರ್

ಸಂಸ್ಥಾನದ ಲೇಬರ್ ಕಮೀಷನರ್‌ರವರನ್ನು ಮೈಸೂರಿನಲ್ಲಿ ಟ್ರೇಡ್ ಯೂನಿಯನ್ ರಿಜಿಸ್ಟ್ರಾರ್‌ರನ್ನಾಗಿ ನೇಮಿಸಲಾಗಿದೆ.

ವಿಶ್ವವಿದ್ಯಾ ನಿಲಯಗಳಲ್ಲಿ ಇಂಗ್ಲೀಷು ಮಾಧ್ಯಮ ವಿರಲೇಬೇಕು

ರಾಷ್ಟ್ರೀಯ ಮತ್ತು ಪ್ರಾಂತೀಯ ಭಾಷೆಗಳಲ್ಲಿ ಸಾಕಾದಷ್ಟು ಪಠ್ಯ ಪುಸ್ತಕಗಳು, ಪತ್ರಿಕೆಗಳು, ಮುಂತಾದುವೆಲ್ಲಾ ದೊರೆಯುವವರೆಗೂ ಇಂಗ್ಲೀಷ್ ಮಾಧ್ಯಮವಾಗಿಯೂ ವಿಶ್ವವಿದ್ಯಾನಿಲಯಗಳಲ್ಲಿ ಉಳಿದಿರಬೇಕು.

ಈಗಿನ ಪ್ರಪಂಚವು ವಿಜ್ಞಾನ ಯುಗವಾಗಿದ್ದು ಪ್ರತಿ ಏಳಿಗೆಯಲ್ಲೂ ಹೊಸ ಹೊಸದಾಗಿ ಸಂಶೋಧನೆ ಹೊರಬೀಳುತ್ತಲಿರುವುದರಿಂದ, ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲೀಷ್ ಭಾಷೆಯನ್ನು ನಾವು ವಿಸರ್ಜಿಸುವುದಕ್ಕಾಗುವುದಿಲ್ಲ. ಇಂಗ್ಲೀಷ್ ಭಾಷೆಯಲ್ಲಿಯೇ ಬೋಧನಕ್ರಮ ಇದ್ದರೆ ರಾಷ್ಟ್ರ ಮತ್ತು ಪ್ರಾಂತ್ಯ ಭಾಷೆಗಳಿಗೆ ಸ್ವಲ್ಪವೂ ಚ್ಯುತಿಬರುವುದಿಲ್ಲ ಎಂದು ಮದರಾಸಿನಲ್ಲಿ ನಡೆದ ವಿಶ್ವವಿದ್ಯಾನಿಲಯದ ಉಪಾಧ್ಯಾಯರ ಸಂಘವು ತೀರ್ಮಾನಿಸಿದೆ.

ಸದರ್ನ್ ರೈಲ್ವೆಗಳಿಗೆ ಒಂದೇ ಲೇಬರ್ ಯೂನಿಯನ್ ಇರಬೇಕು

ಸದರ್ನ್ ರೈಲ್ವೆಗಳಿಗೆಲ್ಲಾ ಒಂದೇ ಲೇಬರ್ ಯೂನಿಯನ್ ರೂಪಿಸಲ್ಪಡಬೇಕು ಎಂದು ಕಮ್ಯೂನಿಸ್ಟ್ ನಾಯಕ ಶ್ರೀ ಪಿ. ರಾಮಮೂರ್ತಿ ತಿಳಿಸಿದರು.

ರಾಮಮೂರ್ತಿಯವರು ದಕ್ಷಿಣ ಭಾರತ ರೈಲ್ವೆ ಯೂನಿಯನ್ನಿನ ಮಧ್ಯ ರಾ. ಶಾಖೆಯ ಆರಂಭೋತ್ಸವವನ್ನು ನಿನ್ನೆ ನೆರವೇರಿಸಿದರು.

ಶ್ರೀಮತಿ ರೂಸ್‌ವೆಲ್ಟರು

ಶ್ರೀಮತಿ ರೂಸ್‌ವೆಲ್ಟರು ತಮ್ಮ ಬೊಂಬಾಯಿವ ಪ್ರವಾಸವನ್ನು ಮುಗಿಸಿಕೊಂಡು ನಾಳೆ ತಿರುವಾಂಕೂರಿಗೆ ಹೋಗುವರು.

ನ್ಯೂ ಅಪೇರ

೨೯—೨—೫೨ ರಿಂದ ೨ನೇ ವಾರ

"ಸ್ತ್ರೀಸಾಹಸಂ" ತಯಾರಿಸಿರುವ ವಿನೋದ ಪ್ರದರ್ಶಕರವರ

ಶಾಂತಿ

(ತೆಲುಗು)

ಪಾತ್ರ :—ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ|| ಸುಬ್ಬರಾವ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯುಟೋರಿಯಲ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೫—೩—೧೯೫೨ನೇ ಬುಧವಾರ [ಸಂಚಿಕೆ ೧೬೦

ಜಪಾನ್ ಬಳಿ ಭೂಕಂಪದಿಂದ ನೂರಾರು ಜನರ ಮರಣ

ಭಾರತದ ಹಿರಿಯ ಶಾಸನಸಭೆಗೆ ಮುಂದಿನ ತಿಂಗಳೊಳಗೆ ಚುನಾವಣೆ

ಜಪಾನಿನ ಹೋಕೈಡೋದ್ವೀಪದಲ್ಲಿ ಇದ್ದಕ್ಕಿದ್ದಂತೆ ಭೂಕಂಪವಾಗಿ ನೂರಾರು ಜನರು ಮೃತರಾಗಿ ಅನೇಕರು ಮನೆಮಠಗಳನ್ನು ಕಳೆದುಕೊಂಡರು. ಭೂಕಂಪವಾದಾಗ ಚಲಿಸುತ್ತಿದ್ದ ರೈಲು ಕಂಬಿತಪ್ಪಿ ಸುಮಾರು ನೂರುಚದುರಮೈಲಿ ಪ್ರದೇಶವು ಈ ಅನಾಹುತಕ್ಕೆ ಒಳಗಾಗಿದೆ ಎಂದು ಹೇಳಲಾಗಿದೆ. ಅಮೆರಿಕನ್ ಸೇನೆಗಳನ್ನು ಪರಿಹಾರಕಾರ್ಯಕ್ಕೆ ಕಳುಹಿಸಲಾಗಿದೆ.

೧೦೦೦೦ ರೂಗಳ ದರೋಡೆ

ಬೆಂಗಳೂರು ಮಾ ೩

ಬೆಂಗಳೂರು ಸೆಂಟ್ರಲ್ ಬ್ಯಾಂಕಿಗೆ ಈ ದಿನ ಬೆಳಗ್ಗೆ ೧೧-೪೫ ವೇಳೆಯಲ್ಲಿ ಒಬ್ಬ ಮನುಷ್ಯನು ೧೧ ರೂಪಾಯಿಗಳ ನೋಟಿಗೆ ಚಿಲ್ಲರೆ ಕೇಳುವ ನೆಪದಲ್ಲಿ ೧೦೦೦೦ ರೂಪಾಯಿಗಳ ನೋಟಿನ ಕಂತೆಯನ್ನು ಅಪಹರಿಸಿಕೊಂಡು ಓಡಲೆತ್ನಿಸಿದಾಗ ಅವನನ್ನು ಮಾಲುಸಮೇತ ಹಿಡಿಯಲಾಯಿತು. ಇವನನ್ನು ಉಪ್ಪಾರಪೇಟೆ ಪೋಲೀಸ್ ಸ್ಟೇಷನ್ನಿಗೆ ಒಪ್ಪಿಸಲಾಯಿತು ಮುಂದಿನ ತನಿಖೆ ಕ್ರಮ ನಡೆಯುತ್ತಲಿದೆ.

ಆಸಾಮಿಯು ತನ್ನ ಹೆಸರು ಬಾದರ್ ಹುಸೇನ್ ಎಂದೂ ತಾನೂ ಮದ್ರಾಸಿನವನೆಂದೂ ಹೇಳಿರುವುದಾಗಿ ತಿಳಿದುಬಂದಿದೆ.

ಮ್ಯಾಂಗನೀಸ್ ರಫ್ತು

ಬೆಂಗಳೂರು ಮಾ ೩

೧೯೫೨ನೇ ಸಾಲಿನಲ್ಲಿ ಸಂಸ್ಥಾನದಿಂದ ಮ್ಯಾಂಗನೀಸ್ ಅದಿರನ್ನು ರಫ್ತುಮಾಡಬಹುದಾದ ಪ್ರಮಾಣವನ್ನು ಸರ್ಕಾರದವರು ೩ ಸಾವಿರ ಟನ್‌ಗೆ ನಿಗದಿ ಮಾಡಿದ್ದಾರೆ. ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಮ್ಯಾಂಗನೀಸ್ ಅದಿರು ಬೇಕಾಗುವುದರಿಂದ ಈ ರೀತಿ ರಫ್ತನ್ನು ನಿಗದಿ ಮಾಡಲಾಗಿದೆ.

ಕ್ಷಯರೋಗ ನಿವಾರಣಾ ಕೇಂದ್ರದ ಆರಂಭೋತ್ಸವ

ಸರ್ ಆರ್ಕಿಬಾಲ್ಡ್ ನೈ‌ರವರು ನಿನ್ನೆ ಮದರಾಸಿನ ತಾಂಬರಂ ಬಳಿ ಕ್ಷಯರೋಗನಿವಾರಣಾಕೇಂದ್ರದ ಆರಂಭೋತ್ಸವವನ್ನು ಮಾಡಿದರು. ಈ ಕೇಂದ್ರವನ್ನು ರಾಜಕುಮಾರಿ ಅಮೃತಕೌರ್‌ರವರ ಹೆಸರಿನಲ್ಲಿ ಕಟ್ಟಲಾಗಿದ್ದು ಇದಕ್ಕೆ ಅಮೃತನಗರವೆಂದು ಹೆಸರಿಡಲಾಗಿದೆ

ನೂತನ ಶಾಸನಸಭೆಯ ಆರಂಭ

ಒರಿಸ್ಸಾದ ನೂತನಸಭೆಯ ಅಧಿವೇಶನವು ನಿನ್ನೆ ಭುವನೇಶ್ವರದಲ್ಲಿ ಆರಂಭವಾಯಿತು. ಶಾಸನಸಭೆಗೆ ಚುನಾಯಿತರಾಗಿರುವ ಸದಸ್ಯರು ಪ್ರಮಾಣವಚನ ಸ್ವೀಕರಿಸಲು ಆರಂಭಿಸಿದರು ಗುರುವಾರ ಅಲ್ಲಿನ ಗೌರ್ನರ್‌ರವರು ಶಾಸನಸಭೆಯನ್ನು ಉದ್ದೇಶಿಸಿ ಮಾತನಾಡುವರೆಂದು ಹೇಳಲಾಗಿದೆ.

ಕೊಡಗಿಗೆ ಇಬ್ಬರು ಸದಸ್ಯರ ಮಂತ್ರಿಮಂಡಲ

ಕೊಡಗು ಸಂಸ್ಥಾನದ ೨೪ ಸದಸ್ಯರನ್ನುಳ್ಳ ಶಾಸನಸಭೆಯಲ್ಲಿ ಪೂರ್ಣ ಬಹುಮತ ಗಳಿಸಿರುವ ಕಾಂಗ್ರೆಸ್ ಪಕ್ಷವು ಕೊಡಗು ಸಂಸ್ಥಾನಕ್ಕೆ ಎರಡು ಮಂದಿ ಸಚಿವರನ್ನುಳ್ಳ ಮಂತ್ರಿಮಂಡಲವನ್ನು ರಚಿಸಲು ನಿರ್ಧರಿಸಿದೆ. ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿ ಶ್ರೀ ಶ್ರೀನಿವಾಸಮಲ್ಯರವರ ಸಲಹೆಯ ಮೇರೆ ಕೊಡಗಿನ ಶಾಸನಸಭೆಯ ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ಕೊಡಗಿಗೆ ಇಬ್ಬರು ಮಂತ್ರಿಗಳುಳ್ಳ ಮಂತ್ರಿಮಂಡಲವಿರಬೇಕೆಂದು ನಿರ್ಧರಿಸಲಾಯಿತೆಂದು ಕೊಡಗಿನ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರೂ ಭಾವೀ ಮುಖ್ಯಮಂತ್ರಿಗಳೂ ಆದ ಶ್ರೀ ಸಿ. ಎಂ. ಪೂಣಚ್ಚರವರು ಪತ್ರಿಕಾ ಪ್ರತಿನಿಧಿಯೊಡನೆ ತಿಳಿಸಿದರು. ಶ್ರೀ ಕೆ. ಮಲ್ಲಪ್ಪನವರು ಇನ್ನೊಬ್ಬ ಸಚಿವರಾಗಬೇಕೆಂದೂ ಸಚಿವರುಗಳು ೬೫೦ ರೂಪಾಯಿ ಸಂಬಳ ತೆಗೆದುಕೊಳ್ಳಬೇಕೆಂದೂ ಸಭೆಯು ಶಿಫಾರಸು ಮಾಡಿದೆ.

ಧ್ಯೇಯ ಬದಲಾವಣೆಯಿಲ್ಲ

ಈಜಿಪ್ಟಿನಲ್ಲಿ ಮಂತ್ರಿಮಂಡಲವು ಬದಲಾವಣೆಯಾದಮಾತ್ರಕ್ಕೆ ಈಜಿಪ್ಟಿನ ಧ್ಯೇಯದಲ್ಲಿ ಏನೂ ಬದಲಾವಣೆಯಿಲ್ಲ. ಬ್ರಿಟಿಷ್ ಸೇನೆಗಳನ್ನು ಹೊರಕ್ಕೆ ಕಳುಹಿಸುವುದು. ಈಜಿಪ್ಟ್, ಸೂಡಾನ್ ಐಕ್ಯತೆ ಸ್ಥಾಪಿಸುವುದು. ಈಜಿಪ್ಟಿನ ಮಹತ್ವಾಕಾಂಕ್ಷೆಗಳು. ಅದನ್ನು ಸಾಧಿಸುವುದೇ ತಮ್ಮ ಕರ್ತವ್ಯವೆಂದು ಈಜಿಪ್ಟಿನ ಹೊಸ ಪ್ರಧಾನಿ ಹೇಳಿರುವರು

೨೭೧ ಕೋಟಿ ರೂಗಳ ಬೇಡಿಕೆಗೆ ಅಂಗೀಕಾರ

ಕೇಂದ್ರ ಶಾಸನಸಭೆಯು ನಿನ್ನೆ ಸಮಾವೇಶಗೊಂಡಾಗ ಮುಂದಿನವರ್ಷದ ಹಣಕಾಸಿನಸಾಲಿನ ನಾಲ್ಕುತಿಂಗಳಿಗೆ ೨೭೧ ಕೋಟಿ ರೂಗಳ ಖರ್ಚುವೆಚ್ಚದ ಬೇಡಿಕೆಗೆ ಅಂಗೀಕಾರವನ್ನು ಇತ್ತಿದೆ ನಿನ್ನೆ ಶಾಸನಸಭೆಯ ಅಧಿವೇಶನವು ಮುಗಿಯುವವೇಳೆಗೆ ಭಾರತದ ವಿವಿಧ ಇಲಾಖೆಗಳ ೮೧ ಕೋಟಿ ರೂಗಳ ಬೇಡಿಕೆಗೆ ಅಂಗೀಕಾರ ದೊರೆಯಿತು ನಂತರ ಶಾಸನಸಭಾ ಉಪಾಧ್ಯಕ್ಷರು ಒಟ್ಟಾಗಿ ೨೭೧ ಕೋಟಿರೂಗಳ ಬೇಡಿಕೆಯನ್ನು ಸಭೆಯಮುಂದೆ ಮಂಡಿಸಿ ಅಂಗೀಕಾರಪಡೆದರು.

ಹಿರಿಯ ಶಾಸನಸಭೆಗೆ ಚುನಾವಣಾ ನಡೆಸಲು ಸೂಚನೆ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ನಿನ್ನೆ ಒಂದು ಆಜ್ಞೆ ಹೊರಡಿಸಿ ವಿವಿಧ ರಾಜ್ಯ ಮತ್ತು ಪ್ರಾಂತ ಶಾಸನಸಭೆಯ ಸದಸ್ಯರು ಕೌನ್ಸಿಲ್ ಆಫ್ ಸ್ಟೇಟಿಗೆ ಚುನಾವಣೆ ವೇಳಾಪಟ್ಟಿಯನ್ನು ಪ್ರಕಟಿಸಿರುವರು. ಈ ಆಜ್ಞೆಯಂತೆ ಹಿರಿಯ ಸಭೆಗೆ ಮುಂದಿನತಿಂಗಳು ಒಂದನೇ ತಾ|| ಒಳಗೆ ಚುನಾವಣೆ ಮುಗಿಯಬೇಕಾಗಿದೆ, ಈ ಮಾಹೆ ೧೩ನೇ ತಾ|| ಅರ್ಜಿಸಲ್ಲಿಸಬೇಕು. ೧೪ನೇ ತಾ|| ಅರ್ಜಿಗಳ ಪರಿಶೀಲನೆ ಅರ್ಜಿ ವಾಪಸ್‌ಪಡೆಯಲು ೨೭ನೇ ತಾ|| ಕೊನೆಯದಿನವಾಗಿದ್ದು ೨೭ನೇತಾ|| ಚುನಾವಣೆಗಳು ನಡೆಯಬೇಕಾಗಿದೆ.

ಈವರ್ಷದೊಳಗೆ ಸಮಸ್ಯೆ ಪರಿಹಾರ

ಪಶ್ಚಿಮ ಪಾಕೀಸ್ಥಾನದಿಂದ ಬಂದು ಭಾರತದಲ್ಲಿ ನೆಲೆಸಿ ಅದರಲ್ಲೂ ಡೇರಾಗಳಲ್ಲಿ ವಾಸಿಸುತ್ತಿರುವವರ ಸಮಸ್ಯೆಗಳನ್ನು ಈವರ್ಷದೊಳಗೆ ಬಗೆಹರಿಸಿ ಅವರಿಗೆ ವಸತಿಸೌಕರ್ಯಗಳನ್ನು ಕಲ್ಪಿಸಿಕೊಡಲಾಗುವುದೆಂದು ಪಾರ್ಲಿಮೆಂಟಿನಲ್ಲಿ ನಿರಾಶ್ರಿತರ ಸಮಸ್ಯೆ ಬಗೆಹರಿಸಲು ನಿಯಮಿತರಾಗಿರುವ ರಾಜ್ಯಸಚಿವ ಶ್ರೀ ಅಜಿತ್‌ಪ್ರಸಾದಜೈನ್ ತಿಳಿಸಿದರು.

ರಷ್ಯಾ ವ್ಯಾಪಾರದಿಂದ ೫ ಕೋಟಿ ರೂ ಲಾಭ

ಭಾರತಕ್ಕೂ ರಷ್ಯಾಕ್ಕೂ ನಡೆದ ವ್ಯಾಪಾರದಿಂದ ಭಾರತವು ಐದುಕೋಟಿ ರೂಗಳಷ್ಟು ಲಾಭ ಸಂಪಾದಿಸಿದೆಯೆಂದು ಹೇಳಲಾಗಿದೆ ಭಾರತದಿಂದ ರಷ್ಯಾಕ್ಕೆ ಸಂಬಾರದ ಪದಾರ್ಥಗಳು, ಟೀ, ಹೊಗೆಸೊಪ್ಪು ರಫ್ತಾಗಿ ಅಲ್ಲಿಂದ ನ್ಯೂಸ್‌ಪ್ರಿಂಟ್ ತರಿಸಿಕೊಳ್ಳಲಾಗಿತ್ತು,

ಕೊರಿಯಾದಿಂದ ಆಗಮನ

ಭಾರತದಿಂದ ಕೊರಿಯಾಕ್ಕೆ ತೆರಳಿದ್ದ ಅಂಬುಲೆನ್ಸ್ ಪಡೆಯ ೨ನೇ ತಂಡದವರು ಕೊಲಂಬೋವಿನಿಂದ ಮದರಾಸಿಗೆ ನಿನ್ನೆ ಆಗಮಿಸಿದರು.

‡ ಪೂರ್ವಪಾಕೀಸ್ಥಾನದ ರಾಜಶಾಹಿಯಲ್ಲಿ ೧೬ ಜನರನ್ನು ದಸ್ತಗಿರಿ ಮಾಡಲಾಗಿದೆ.

ಶ್ರೀ ಮೊರಾರ್ಜಿ ಚುನಾಯಿತರಾದರು

ಬೊಂಬಾಯಿಯ ಹಿರಿಯ ಶಾಸನಸಭೆಗೆ ಅಹಮದಾಬಾದ್ ಪೌರಸಭಾಕ್ಷೇತ್ರದಿಂದ ಶ್ರೀಮೊರಾರ್ಜಿ ದೇಸಾಯಿಯವರು ಅವಿರೋಧವಾಗಿ ಚುನಾಯಿತರಾದರೆಂದು ಅಧಿಕೃತ ಪ್ರಕಟಣೆ ಹೊರಬಿದ್ದಿದೆ.

ದೆಹಲಿ ಶಾಸನಸಭೆಗೆ ನಾಯಕರ ಆಯ್ಕೆ

ದೆಹಲಿಯ ಶಾಸನಸಭೆಯ ಕಾಂಗ್ರೆಸ್ ಪಕ್ಷದವರ ಸಭೆನಡೆದು ಶ್ರೀ ಚೌದುರಿ ಬ್ರಹ್ಮಪ್ರಕಾಶರವರನ್ನು ಪಕ್ಷದ ನಾಯಕರನ್ನಾಗಿ ಚುನಾಯಿಸಲಾಯಿತು.

ಕೈಗಾರಿಕಾ ನ್ಯಾಯಾಲಯ

ಹೈದರಾಬಾದಿನ ಷಹಾಬಾದಿನಲ್ಲಿರುವ ಸಿಮೆಂಟ್ ಕಾರ್ಖಾನೆಯ ಆಡಳಿತವರ್ಗಕ್ಕೂ ಕಾರ್ಮಿಕರಿಗೂ ಉದ್ಭವಿಸಿರುವ ಸಮಸ್ಯೆ ಬಗೆಹರಿಸಲು ಅವರ ವಿವಾದವನ್ನು ಕೈಗಾರಿಕಾಕೋರ್ಟಿಗೆ ಬಿಡಲಾಗಿದೆ.

ಪರಿಣಿತರ ಆಗಮನ

ಅಮೆರಿಕದ ಆಹಾರ ಮತ್ತು ವ್ಯವಸಾಯ ಇಲಾಖೆಯ ಪರಿಣಿತರ ಗುಂಪೊಂದು ಭಾರತಕ್ಕೆ ಆಗಮಿಸಿ ಇಲ್ಲಿ ಆಹಾರ ಉತ್ಪನ್ನ ಹೆಚ್ಚಿಸಲು ಸಲಹೆ ನೀಡುವುದು.

ಉಪಸಚಿವರ ನೇಮಕ

ಜಮ್ಮು ಕಾಶ್ಮೀರ ಸರ್ಕಾರದ ಮಂತ್ರಿಮಂಡಲಕ್ಕೆ ೪ ಜನ ಉಪಸಚಿವರನ್ನು ನೇಮಿಸಲಾಗಿದೆ.

* ರಾಂಜಿ ಟ್ರೋಪಿಯ ಫೈನಲ್ಸ್ ಪಂದ್ಯದ ೨ ನೇ ಇನ್ನಿಂಗ್ಸ್‌ನಲ್ಲಿ ಬೊಂಬಾಯಿಯವರು ೫ ವಿಕೆಟ್ಟಿಗೆ ೪೩೮ ರನ್ನುಗಳನ್ನು ಮಾಡಿದರು.

ಸಮಾಚಾರ

ತಾರೀಖು ೫—೩—೫೨ ಬುಧವಾರ

ನಿಯೋಗ ಬಂದು ಮಾಡಿದ್ದೇನು ?

ಭಾರತವು ಸ್ವತಂತ್ರರಾಷ್ಟ್ರವಾದ ಮೇಲೆ ವಿಶ್ವದ ನಾನಾ ಭಾಗಗಳಿಂದ ಪ್ರಮುಖ ವ್ಯಕ್ತಿಗಳು, ವಿವಿಧ ನಿಯೋಗಗಳು ಭಾರತಕ್ಕೆ ಬರಲಾರಂಭಿಸಿರುವರು. ಉಭಯ ರಾಷ್ಟ್ರಗಳಿಗೂ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದೇ ಈ ನಿಯೋಗಗಳ ಪ್ರಮುಖಕರ್ತವ್ಯ. ಆದಕ್ಕಾಗಿ ಈ ನಿಯೋಗದವರು ರಾಷ್ಟ್ರದ ನಾನಾ ಭಾಗಗಳಲ್ಲಿ ಪ್ರವಾಸ ಕೈಗೊಂಡು ಅಲ್ಲಿಯ ಅನೇಕ ವ್ಯಕ್ತಿಗಳು ಮತ್ತು ಸಂಸ್ಥೆಗಳೊಡನೆ ಭೇಟಿ ನಡೆಸಿ ವಿಚಾರವಿನಿಮಯ ನಡೆಸುವುದು ವಾಡಿಕೆಯಾಗಿದೆ. ಸಾಮಾನ್ಯವಾಗಿ ಪರರಾಷ್ಟ್ರಗಳ ಈ ಪ್ರವಾಸಿಗರು ಎಲ್ಲೆಡೆಯಲ್ಲಿಯೂ ಪತ್ರಿಕಾಕರ್ತರನ್ನು ಭೇಟಿಮಾಡುವುದು ಅತಿ ಮುಖ್ಯವಾದುದಾಗಿದೆ

ಈ ವ್ಯಕ್ತಿಗಳ ಪ್ರವಾಸಕ್ಕೆ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ಎಲ್ಲಾ ವ್ಯವಸ್ಥೆಯನ್ನು ಏರ್ಪಡಿಸಿ ಆದಕ್ಕಾಗಿ ಸಾವಿರಾರು ರೂ ಗಳ ವೆಚ್ಚವನ್ನು ಮಾಡುತ್ತಲಿರುವರು ಅವರಿಗೆ ಅನೇಕ ಕಡೆ ಊಟೋಪಚಾರಗಳು, ಸತ್ಕಾರಕೂಟಗಳು ನಡೆಯುತ್ತವೆ ಸರ್ಕಾರದವರೂ ಸಹ ಅವರನ್ನು ಸತ್ಕರಿಸುವರು. ಬಂದ ನಿಯೋಗದವರು ಇಲ್ಲಿಯ ಆದರಾತಿಥ್ಯಗಳನ್ನು ಸ್ವೀಕರಿಸಿ, ಗೌರವಯುತವಾದ ಅಭಿಪ್ರಾಯದಿಂದ ತಮ್ಮ ದೇಶಕ್ಕೆ ಹಿಂತಿರುಗುವರು. ಅವರ ಸ್ವರಾಷ್ಟ್ರಗಳ ವಿಷಯವೂ ಇಲ್ಲಿ ಸ್ವಲ್ಪ ಹೊಂಗೆಡಹುವರು

ಹೀಗಿರುವಲ್ಲಿ ಮೊನ್ನೆ ಮೈಸೂರಿಗೆ ಭೇಟಿಯಿತ್ತ ಟರ್ಕಿ ಪತ್ರಿಕಾ ನಿಯೋಗದವರ ವರ್ತನೆಯೇ ಹೊಸದಾಗಿ ಕಾಣಬರುತ್ತಲಿತ್ತು. ಭಾರತಾದ್ಯಂತವಿರುವ ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತು, ಪರರಾಷ್ಟ್ರದ ವೆಚ್ಚದಿಂದ ತಾವು ಆನಂದಪಟ್ಟು ಹೋಗಬೇಕೆಂದು ಬಂದಿರುವಹಾಗೆ ಭಾಸವಾಗುತ್ತದೆ. ಅವರು ಬೆಂಗಳೂರಿಗೆ ಬರುವ ಮುನ್ನ ಕೆಲವು ಕಾರ್ಯಕ್ರಮಗಳು ಹೊರಬಿದ್ದುವು ಅವುಗಳಲ್ಲಿ ಬೆಂಗಳೂರು ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿ ಮೈಸೂರಿನಲ್ಲಿ ಮಹಾರಾಜಾ ಕಾಲೇಜು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಎಂದಿತ್ತು ಆದರೆ ಭೇಟಿಯ ಕಾಲದಲ್ಲಿ ಅವರು ಬೆಂಗಳೂರು ಪತ್ರಿಕೋದ್ಯೋಗಿ ಸಂಘಕ್ಕೆ ಹೋಗಲು ಪ್ರಾರಂಭದಲ್ಲಿ ಇಷ್ಟಪಡದೆ ಕೊನೆಗೆ ಒತ್ತಾಯದಿಂದ ಭೇಟಿಯಿತ್ತರೆಂದು ತಿಳಿಯಬರುತ್ತದೆ ಮೈಸೂರಿಗೆ ಬಂದೊಡನೆಯೇ ಅವರನ್ನು ಮೈಸೂರು ನಗರ ಪತ್ರಿಕೋದ್ಯೋಗಿ ಸಂಘಕ್ಕೆ ಆಹ್ವಾನಿಸಲಾಯಿತು. ಅದನ್ನು ಅವರು ನಿರಾಕರಿಸಿದರು. ಮಹಾರಾಜಾ ಕಾಲೇಜಿನ ಭೇಟಿಯನ್ನು ವಜಾಮಾಡಿ, ಪ್ರೇಕ್ಷಣೀಯ ಸ್ಥಳಗಳಿಗೆಲ್ಲಾ ಭೇಟಿಯಿತ್ತು, ಬೆಂಗಳೂರಿಗೆ ಹಿಂತಿರುಗಿದರು. ಕೃಷ್ಣರಾಜಸಾಗರದಲ್ಲಿ ಮೈಸೂರು ಸರ್ಕಾರದ ಪರವಾಗಿ ಅವರಿಗೆ ಆತಿಥ್ಯ ನಡೆದು, ಭೋಜನಕೂಟ ಸಹ ನಡೆಯಿತು ಸರ್ಕಾರಿ ಭವನದಲ್ಲಿ ಅವರಿಗೆ ಸೌಲಭ್ಯಗಳನ್ನೊದಗಿಸಲಾಗಿತ್ತು. ಸರ್ಕಾರದವರೂ ಸಹ ಸ್ಥಳೀಯ ಪತ್ರಿಕೋದ್ಯೋಗಿಗಳ ಸಂಪರ್ಕವನ್ನು ಅವರಿಗೆ ಉಂಟುಮಾಡಲು ಪ್ರಯತ್ನಿಸಲಿಲ್ಲ.

ಈ ರೀತಿಯಾದ ನಿಯೋಗಗಳು ನಮ್ಮ ದೇಶಕ್ಕೆ ಬಂದರೆ ವೃಥಾ ಸರ್ಕಾರದ ಹಣ ವ್ಯಯವೇ ಹೊರತು ಯಾರಿಗೂ ಏನೂ ಪ್ರಯೋಜನವಾಗುವುದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

---

* ಜಯಪುರದ ಒಳಿ ಪಿಲಾನಿಯಂಬಲ್ಲಿ ಒಬ್ಬ ಮಹಿಳೆಯು ತನ್ನ ಗಂಡನೊಡನೆ ಸಹಗಮನ ನಡೆಸಲು ಯತ್ನಿಸಿದಾಗ ತಪ್ಪಿಸಲಾಯಿತಲ್ಲದೆ. ಜಯಪುರದ ಮಹಾರಾಣಿಯವರು ಆಕೆಗೆ ೫೦೦ ರೂ ಸಹಾಯನಿಧಿ ಕಳುಹಿಸಿರುವರೆಂದು ಗೊತ್ತಾಗಿದೆ.

ಅಕ್ರಮ ಚಿನ್ನದ ಸಾಗಾಣಿಕೆ

೧೯೫೧ನೇ ಡಿಸೆಂಬರ್ ೩೧ರವರೆಗೆ ೯ ತಿಂಗಳಲ್ಲಿ ಭಾರತಕ್ಕೆ ಅಕ್ರಮವಾಗಿ ತಂದ ಸುಮಾರು ೬೩,೨೪,೨೬೭ ರೂಗಳ ಬೆಲೆ ಬಾಳುವ ಚಿನ್ನವನ್ನು ಪತ್ತೆ ಹಚ್ಚಿ ಸರ್ಕಾರದ ವಶಪಡಿಸಿದೆ ಎಂದು ಸಚಿವ ಮಹಾವೀರ ತ್ಯಾಗಿಯವರು ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು.

ಶ್ರೀ ಹೆಚ್. ಸಿ. ದಾಸಪ್ಪ.

ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಮಾ॥ ೧೩ರಂದು ಚಂಪನಗರದಲ್ಲಿ ಹತ್ತು ದಿನಗಳ ಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭದ ಅಧ್ಯಕ್ಷತೆ ವಹಿಸುವರು.

‡ ಬೊಂಬಾಯಿ ಮತ್ತು ಮದರಾಸಿನ ಬುಲಿಯನ್ ಮಾರ್ಕೆಟ್ಟುಗಳು ನಿನ್ನೆ ವ್ಯಾಪಾರವನ್ನು ಮಾಡದೆ ಮುಚ್ಚಲಾಗಿತ್ತು.

ನಾಳೆ ಅಂತ್ಯ ತೀರ್ಮಾನ

ಬೆಂಗಳೂರು ಮಾ. ೫

ನಾಳೆ ದೆಹಲಿಯಲ್ಲಿ ನಡೆಯುವ ಕಾಂಗ್ರೆಸ್ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನಲ್ಲಿ ಮೈಸೂರು ಶಾಸನಸಭೆ ಕಾಂಗ್ರೆಸ್ ಪಕ್ಷಕ್ಕೆ ಸರ್ವಾನುಮತ ನಾಯಕತ್ವ ಆಯ್ಕೆ ಪ್ರಶ್ನೆಯ ಬಗ್ಗೆ ನಿರ್ಧಾರಕ್ಕೆ ಬಂದು ತನ್ನ ತೀರ್ಮಾನವನ್ನು ಸಂಸ್ಥಾನ ಶಾಸನಸಭೆ ಕಾಂಗ್ರೆಸ್ ಪಕ್ಷಕ್ಕೆ ತಿಳಿಸುವುದು

ತನ್ನ ನಿರ್ಧಾರದೊಡನೆ ನಾಯಕ ಚುನಾವಣೆ ಮುಗಿಯಬೇಕಾದ ಕಾಲವನ್ನೂ ಬೋರ್ಡ್ ತಿಳಿಸುವುದೆಂದು ಗೊತ್ತಾಗಿದೆ.

ಶ್ರೀ ಹನುಮಂತಯ್ಯನವರಿಗೆ ಬಹುಮತ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಬೆಂಗಳೂರಿಗೆ ಬಂದು ನಾಯಕತ್ವದ ಪ್ರಶ್ನೆ ಬಗ್ಗೆ ಶಾಸನಸಭಾ ಸದಸ್ಯರ ಅಭಿಪ್ರಾಯವನ್ನು ಸಂಗ್ರಹಿಸಿರುವುದರಲ್ಲಿ ಶ್ರೀ ಹನುಮಂತಯ್ಯನವರಿಗೆ ಬಹುಮತ ಬಂದಿದೆಯೆಂದೂ, ಈ ಅಭಿಪ್ರಾಯ ಸಂಗ್ರಹದ ಆಧಾರದ ಮೇಲೆ ಪಾರ್ಲಿಮೆಂಟರಿ ಬೋರ್ಡ್ ನಿರ್ಧಾರಕ್ಕೆ ಬಂದು ಸಲಹೆ ನೀಡುವುದಾಗಿಯೂ ರಾಜಕೀಯ ವೃತ್ತಗಳಲ್ಲಿ ಹೇಳಲಾಗುತ್ತಿದೆ

ಜನಗಣತಿ ಬಗ್ಗೆ ನಡೆದ ಪುನರ್ ಎಣಿಕೆ ಫಲಿತಾಂಶ

ಬೆಂಗಳೂರು ಮಾ. ೪

ಕಳೆದ ವರ್ಷ ನಡೆದ ಜನಗಣತಿಯಲ್ಲಿ ಒಂದು ಲಕ್ಷಕ್ಕಿಂತ ಸ್ವಲ್ಪ ಹೆಚ್ಚು ಜನರು ಬಿಟ್ಟುಹೋಗಿದ್ದಾರೆ.

ಇತ್ತೀಚೆಗೆ ನಡೆದ ಮಾದರಿ ಪುನರ್ ಪರಿಶೀಲನೆಯಲ್ಲಿ ಈ ಅಂಶ ಹೊರಬಿದ್ದಿದೆ

ಗ್ರಾಮಾಂತರ ಪ್ರದೇಶಗಳಲ್ಲಿ ೬೦೭೭೦ ಮಂದಿ ಮತ್ತು ನಗರ ಪ್ರದೇಶಗಳಲ್ಲಿ ೩೦೪೯೮೭ ಮಂದಿ ಗಣತಿಯಲ್ಲಿ ಬಿಟ್ಟುಹೋಗಿದ್ದಾರೆ

ಈ ಪುನರ್ ಪರಿಶೀಲನೆ ಕಾರ್ಯದಲ್ಲಿ ಸುಮಾರು ೧೩೦ ಮಂದಿ ಮ್ಯಾಜಿಸ್ಟ್ರೇಟರುಗಳು ನಿರತರಾಗಿದ್ದು ಸುಮಾರು ಒಂದು ಸಾವಿರ ಮನೆಗಳನ್ನು ಅಲ್ಲಲ್ಲಿ ಆರಿಸಿ ಲೆಕ್ಕದ ಪುನರ್ ಪರಿಶೀಲನೆ ನಡೆಸಿದರು.

ಲೆಕ್ಕ ತೆಗೆದುಕೊಳ್ಳುವಾಗ ಬಿಟ್ಟುಹೋಗಿದೆಯೇ ವಿನಾ, ಹೆಚ್ಚು ಲೆಕ್ಕ ನಡೆದಿಲ್ಲವೆಂದೂ ತಿಳಿದುಬಂದಿದೆಯೆಂದು ಸೆನ್ಸಸ್ ಕಮೀಷನರ್ ತಿಳಿಸುತ್ತಾರೆ.

* ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ರಾಮ ಸಹಾಯ ಸಂಘದಲ್ಲಿ ಎಂದಿನಂತೆ ಎಲ್. ಎಸ್. ತರಗತಿಯ ಉಪನ್ಯಾಸ ತರಗತಿಗಳು ನಾಳಿದ್ದಿನಿಂದ ಸಂಜೆಯವೇಳೆ ೫-೩೦ ರಿಂದ ೭-೩೦ ರವರೆಗೆ ನಡೆಯುತ್ತದೆ. ಸೇರಲು ಇಷ್ಟವುಳ್ಳವರು ಕೂಡಲೆ ಸೇರಬೇಕೆಂದು ಸಂಚಾಲಕ ಶ್ರೀ ವಾಚು ತಿಳಿಸುತ್ತಾರೆ

ಮುನಿಸಿಪಲ್ ಆಫೀಸ್, ಮೈಸೂರು

ತಾ॥ ೨೭—೨—೧೯೫೨

ಟೆಂಡರ್ ನೋಟೀಸ್

೧೯೫೨—೫೩ನೇ ಸಾಲಿಗೆ ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಲ್ಲಿ ಮಾಡಿಸುವ ಮುದ್ರಣ ಕಾರ್ಯಗಳನ್ನು ಮುದ್ರಿಸಲು ಇದೇ ಮಾರ್ಚಿ ಮಾಹೆ ೧೨ನೇ ತಾ॥ ಬುಧವಾರ ಮಧ್ಯಾಹ್ನ ೪ ಗಂಟೆಯವರೆವಿಗೆ ಟೆಂಡರುಗಳನ್ನು ಸ್ವೀಕರಿಸಲಾಗುವುದು. ಈ ಟೆಂಡರುಗಳನ್ನು ಕೊಡಲು ೫೦|— (ಐವತ್ತು ರೂಪಾಯಿ) ಗಳನ್ನು ಮುನಿಸಿಪಲ್ ಖಜಾನೆಗೆ ಇರಸಾಲ್ ಮಾಡಿ ರಸೀತಿಯನ್ನು ಟೆಂಡರ್ ಜೊತೆಯಲ್ಲಿ ಲಗತ್ತಿಸಿ ಸೀಲ್ ಮಾಡಿದ ಕವರನ್ನು ಕಮೀಷನರವರ ಆಫೀಸಿಗೆ ಆಫೀಸು ನಡೆಯುವ ಕಾಲದಲ್ಲಿ ಕೊಡತಕ್ಕದ್ದು. ಈ ಟೆಂಡರಿಗೆ ಸಂಬಂಧಿಸಿದ ವಿವರಗಳನ್ನು ಸದರಿ ಆಫೀಸಿನಲ್ಲಿ ಆಫೀಸು ನಡೆಯುವ ಕಾಲದಲ್ಲಿ ತಿಳಿಯಬಹುದು.

(ಸಹಿ) ಎಂ. ಎಸ್. ಸ್ವಾಮಿನಾಥನ್.
ಮುನಿಸಿಪಲ್ ಕಮೀಷನರ್.

ವುಡ್ ಲ್ಯಾಂಡ್ಸ್

೨೯—೨—೫೨ ರಿಂದ
ಅಮೋಘವಾದ ೩ನೇ ವಾರ
ದಿನವಹಿ 3 ಪ್ರದರ್ಶನಗಳು

ಅಲ್ ಬೇಲ

ಪಾತ್ರ:- ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ರಣಜಿತ್

೨೯-೨-೫೨ರಿಂದ ಅಮೋಘ ೬ನೇ ವಾರ
ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ
—:: ಆ ವಾ ರ ::—

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ರ್ಯಾರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂತಯ್ಯ.
ಜೈಹಿಂದ್ ಪ್ರೆಸ್, ಮೈಸೂರು

TENDER NOTICE

Sealed Tenders for the supply of Provisions, etc., to the Palace for the year 1952–53 i. e., fron 1-4-1952 to 31-3-53 will be received by the undersigned at 10 A. M. on 15 th March 1952 at the Palace Office, Mysore. Particulars can be had from the Bakshi, Palace Mothikhana Department, Mysore.

H.N. PALLEGAR
Huzur Secretary

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ
ಸಂಪುಟ ೨] ೬—೩—೧೯೫೨ನೇ ಗುರುವಾರ [ಸಂಚಿಕೆ ೧೬೧

ಪ್ರಜಾ ಸರ್ಕಾರ ಸ್ಥಾಪನಾರಂಭ ಸಮಯದಲ್ಲಿ ಖೈದಿಗಳ ಬಿಡುಗಡೆ

ಸ್ವತಂತ್ರ ಸದಸ್ಯರು ಕಾಂಗ್ರೆಸ್ ಸೇರಿದುದರಿಂದ ಕಾಂಗ್ರೆಸ್ ಸರ್ಕಾರ ಸ್ಥಾಪನೆ

ಮೈಸೂರಿನಲ್ಲಿ ಶ್ರೀಮತಿ ರೂಸ್‌ವೆಲ್ಟ್‌ರವರ ಕಾರ್ಯಕ್ರಮ

ಮೈಸೂರು ಮಾ ೬

ಅಮೆರಿಕಾ ಮಾಜಿ ಅಧ್ಯಕ್ಷರ ಪತ್ನಿ ಶ್ರೀಮತಿ ರೂಸ್‌ವೆಲ್ಟ್‌ರವರು ಇಂದು ೧೧ ಗಂಟೆ ವೇಳೆಗೆ ತಿರುವಾಂಕೂರಿನಿಂದ ಮೈಸೂರಿಗೆ ವಿಶೇಷ ವಿಮಾನದಲ್ಲಿ ಬರಲಿರುವರು.

ವಿಮಾನ ನಿಲ್ದಾಣದಿಂದ ಲಲಿತಮಹಲ್‌ಗೆ ತೆರಳಿ ಸ್ವಲ್ಪ ವಿಶ್ರಾಂತಿ ಪಡೆದು ೧೧-೪೫ ಗಂಟೆಗೆ ಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯ ಮತ್ತು ಜಗನ್ಮೋಹನ ಚಿತ್ರಶಾಲೆಗೆ ಭೇಟಿ ಕೊಡುವರು.

ಮಧ್ಯಾಹ್ನ ೩ ಗಂಟೆಗೆ ರೇಷ್ಮೆ ಕಾರ್ಖಾನೆ, ಆಹಾರ ಪರಿಶೋಧನಾ ಕೇಂದ್ರಕ್ಕೆ ಭೇಟಿಯಿತ್ತನಂತರ ಗುಣಾಂಬಾ ಗರ್ಭಿಣಿ ಮತ್ತು ಶಿಶುಸಂರಕ್ಷಣಾ ಕೇಂದ್ರಕ್ಕೆ ಹೋಗುವರು.

ಸಂಜೆ ೫-೪೫ ಗಂಟೆಗೆ ಚಾಮುಂಡಿ ಬೆಟ್ಟಕ್ಕೆ ತೆರಳಿ ಅಲ್ಲಿಂದ ಕೃಷ್ಣರಾಜಸಾಗರಕ್ಕೆ ಹೋಗಿ ರಾತ್ರಿ ೮-೧೫ಕ್ಕೆ ಹಿಂತಿರುಗುವರು

ನಾಳೆ ಬೆಳಗ್ಗೆ ಮೋಟಾರಿನಲ್ಲಿ ಬೆಂಗಳೂರಿಗೆ ಪ್ರಯಾಣ ಮಾಡುವರು. ಮಾರ್ಗದಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ಕೊಡಲಿರುವರು.

ಮೈಸೂರಿಗೆ ಮಂತ್ರಿಗಳ ಆಗಮನ

ಮೈಸೂರು ಮಾ ೬

ಬೆಂಗಳೂರಿನಿಂದ ಸಚಿವರೆಲ್ಲರೂ ನಿನ್ನೆಯದಿನ ಮೈಸೂರಿಗೆ ಆಗಮಿಸಿರುವರು. ಈದಿನ ಮಂತ್ರಿಮಂಡಲ ಸಭೆಯು ಇಲ್ಲಿ ನಡೆಯುವುದೆಂದು ತಿಳಿಯಬರುತ್ತದೆ

ನಿನ್ನೆ ಸಂಜೆ ಮುಖ್ಯಮಂತ್ರಿ ಶ್ರೀ ಕೆ.ಸಿ ರೆಡ್ಡಿಯವರು ಶ್ರೀಮನ್ಮಹಾರಾಜರನ್ನು ಭೇಟಿಮಾಡಿದ್ದರೆಂದು ತಿಳಿಯಬರುತ್ತದೆ

ಸಚಿವರುಗಳಾದ ಶ್ರೀ ಕೆ ಟಿ ಭಾಷ್ಯಂ ಮತ್ತು ಶ್ರೀ ದಾಸಪ್ಪನವರಿಗೂ ಶ್ರೀಮನ್ಮಹಾರಾಜರು ನಿನ್ನೆ ಸಂಜೆ ಭೇಟಿ ದಯಪಾಲಿಸಿದರು.

ಪಾರ್ಲಿಮೆಂಟು ಅಧಿವೇಶನ ಮುಕ್ತಾಯ

ಪಾರ್ಲಿಮೆಂಟು ಕೊನೆಯ ಅಧಿವೇಶನವು ನಿನ್ನೆಯದಿನ ಮುಕ್ತಾಯವಾಯಿತು.

ಬೆಳಗ್ಗೆ ಪಾರ್ಲಿಮೆಂಟಿನ ಅಧ್ಯಕ್ಷ ಶ್ರೀ ಮಾವಲಂಕರ್‌ರವರು ಭಾರತದ ಪ್ರಪ್ರಥಮ ಪಾರ್ಲಿಮೆಂಟಿಗೆ ತಮ್ಮನ್ನು ಚುನಾಯಿಸಿದಲ್ಲದೆ ಇಲ್ಲಿಯವರೆಗೆ ತಮಗೆ ನೆರವು ನೀಡಿದ್ದಕ್ಕಾಗಿ ಸಭಾಸದಸ್ಯರಿಗೆಲ್ಲಾ ತಮ್ಮ ವಂದನೆಗಳನ್ನರ್ಪಿಸಿದರು.

ಯಾವ ಬೇಧಭಾವವನ್ನು ತೋರಿಸದೆ ಅತ್ಯುತ್ತಮ ಮಟ್ಟದಲ್ಲಿ ಪಾರ್ಲಿಮೆಂಟ್ ಅಧಿವೇಶನಗಳನ್ನು ನಡೆಸಿದ್ದಕ್ಕಾಗಿ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ನೆಹರೂರವರು ಶ್ರೀ ಮಾವಲಂಕರಿಗೆ ಎಲ್ಲರಪರವಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

ಶ್ರೀ ಭೀಮಸೇನ ಸಾಚಾರ್ ನಾಯಕರು

ಪಂಜಾಬಿನ ಶಾಸನಸಭೆಯ ಕಾಂಗ್ರೆಸ್ ಪಕ್ಷವು ನಿನ್ನೆ ಸಭೆ ಸೇರಿ ತಮ್ಮ ಪಕ್ಷದ ನಾಯಕರನ್ನಾಗಿ ಶ್ರೀ ಭೀಮಸೇನ ಸಾಚಾರ್‌ರವರನ್ನು ಚುನಾಯಿಸಿಕೊಂಡಿದೆ.

ವಿದೇಶೀಯರಿಗೆ ಪಾನ ನಿರೋಧ ರಿಯಾಯಿತಿ

ಭಾರತದಲ್ಲಿ ನೆಲಸಿರುವ ಪೋರ್ಚುಗಲ್ಲಿನ ಪ್ರಜೆಗೆ ಮಾದಕವಸ್ತುಗಳನ್ನಿಟ್ಟುಕೊಳ್ಳಲು ಅನುಮತಿಯನ್ನು ಮದ್ರಾಸ್ ಸರ್ಕಾರವು ನಿರಾಕರಿಸಿರುವುದು ತಪ್ಪು ಎಂದು ಮದ್ರಾಸ್ ಹೈಕೋರ್ಟಿನ ನ್ಯಾಯಾಧೀಶರುಗಳಾದ ಶ್ರೀ ಪಿ. ವಿ. ರಾಜಮನ್ನಾರ್ ಮತ್ತು ಶ್ರೀ ಟಿ. ಎಲ್. ವೆಂಕಟರಾಮ ಅಯ್ಯರು ತೀರ್ಪಿತ್ತರು.

ಗ್ರಹಾಂ-ನೆಹರೂ ಭೇಟಿ

ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ॥ ಗ್ರಹಾಂರವರು ನಿನ್ನೆಯದಿನ ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ಒಂದು ಗಂಟೆ ಕಾಲ ಮಾತುಕತೆ ನಡೆಸಿದರು. ಆ ಕಾಲದಲ್ಲಿ ವಿದೇಶ ವ್ಯವಹಾರ ಶಾಖಾ ಸಚಿವ ಶ್ರೀ ಗಿರಿಜಾ ಶಂಕರ ಬಾಜ್‌ಪೈರವರೂ ಇದ್ದರು.

ಈ ಮಾಸಾಂತ್ಯದಲ್ಲಿ ನಾಯಕ ಚುನಾವಣೆಯಿಲ್ಲ

ಈ ತಿಂಗಳಲ್ಲಿ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆ ನಡೆದು ಹೊಸ ನಾಯಕರ ಚುನಾವಣೆಯು ನಡೆಯುವುದಿಲ್ಲವೆಂದು ಮದ್ರಾಸ್ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ಹೇಳಿರುವರು.

ಮನೆಯಿಲ್ಲದವರಿಗೆ ಮನೆ

ಮನೆಯಿಲ್ಲದೆ ತೊಂದರೆಪಡುತ್ತಿರುವವರಿಗೆ ಮನೆಗಳನ್ನು ಕಟ್ಟಿಸಿಕೊಡಲು ಮದರಾಸ್ ಕಾರ್ಪೊರೇಷನ್ ಮುಂದಿನ ಸಾಲಿನಲ್ಲಿ ೨.೧೫ ಲಕ್ಷ ರೂ ಗಳನ್ನೂ ವೆಚ್ಚ ಮಾಡಲಿದೆ.

ರಾಣಿಯ ವರ್ಧಂತಿ

ಬ್ರಿಟನ್ನಿನ ಹೊಸ ರಾಣಿ ಎಲಿಜಬೆತ್‌ರವರ ವರ್ಧಂತಿ ಮಹೋತ್ಸವವು ಜೂನ್ ೫ನೇ ತಾರೀಖು ನಡೆಯುವಂತೇರ್ಪಡಿಸಲಾಗಿದೆ

ಚಿತ್ರಕಲಾ ಪ್ರದರ್ಶನ

ರಷ್ಯಾ ಚಿತ್ರಕಲಾ ಪ್ರದರ್ಶನದ ಪ್ರಾರಂಭೋತ್ಸವವನ್ನು ದೆಹಲಿಯಲ್ಲಿ ಭಾರತ ವಿದ್ಯಾಸಚಿವ ಮೌಲಾನಾ ಅಬುಲ್ ಕಲಾಂ ಅಜಾದರು ನಿನ್ನೆ ನೆರವೇರಿಸಿದರು. ರಷ್ಯಾದ ಹೊರದೇಶಗಳಲ್ಲಿ ರಷ್ಯಾ ಕಲಾ ಪ್ರದರ್ಶನ ನಡೆಯುವುದೇ ಇದೇ ಮೊದಲು.

ಸರ್ಕಾರ ವಿರುದ್ಧ ಪಿತೂರಿ

ಸೌರಾಷ್ಟ್ರದಲ್ಲಿ ಸರ್ಕಾರ ವಿರುದ್ಧ ಪಿತೂರಿ ನಡೆದುದರ ಪರಿಣಾಮವಾಗಿ ಇಲ್ಲಿಯವರೆಗೆ ೬೦—೭೦ ಜನರ ದಸ್ತಗಿರಿಯಾಗಿದೆ. ೬ ರಾಜಕುಮಾರರು ರಾಜ ಸಂಬಂಧದವರು ಇರುವರು. ಕೇಂದ್ರದಿಂದ ಪೋಲೀಸ್ ಸಹಾಯವನ್ನು ಈ ಕಾರ್ಯಕ್ಕಾಗಿ ನೀಡಲಾಗಿದೆ ಎಂದು ಸಂಸ್ಥಾನ ಶಾಖಾ ಸಚಿವ ಶ್ರೀ ಎನ್. ಜಿ. ಅಯ್ಯಂಗಾರ್‌ರವರು ಹೇಳಿರುವರು.

ಹೆಚ್ಚಿಗೆ ಸಕ್ಕರೆ ತಯಾರಿ

ಭಾರತದಲ್ಲಿ ಈ ವರ್ಷ ಕಳೆದ ಸಾಲಿಗಿಂತ ೭೪ ಸಾವಿರ ಟನ್ ಸಕ್ಕರೆ ಹೆಚ್ಚಾಗಿ ತಯಾರಾಗಿದೆಯೆಂದು ತಿಳಿಯಬರುತ್ತದೆ.

ಮತವಿದ್ವೇಶಕ್ಕೆ ಅವಕಾಶ ಕೊಡುವುದಿಲ್ಲ

ಕಾಶ್ಮೀರದಲ್ಲಿ ಮತವಿದ್ವೇಶಕ್ಕೆ ಅವಕಾಶ ಕೊಡುವುದಿಲ್ಲ. ವಿದ್ಯಾರ್ಥಿಗಳನ್ನು ಸುಮ್ಮನೆ ಕಾರಾಗೃಹವಾಸದಲ್ಲಿಡಲು ಸರ್ಕಾರಕ್ಕೆ ಇಷ್ಟವಿಲ್ಲ. ಅವರು ದೇಶದ್ರೋಹ ಚಳುವಳಿಗಳಲ್ಲಿ ಭಾಗವಹಿಸುವುದಿಲ್ಲವೆಂದು ಭರವಸೆಯಿತ್ತಲ್ಲಿ ಈಗ ಕಾರಾಗೃಹದಲ್ಲಿರುವ ಎಲ್ಲಾ ವಿದ್ಯಾರ್ಥಿಗಳನ್ನು ಬಿಡಲಾಗುತ್ತದೆಂದು ಕಾಶ್ಮೀರ ಪ್ರಧಾನಿ ಶೇಕ್ ಅಬ್ದುಲ್ಲಾರವರು ಹೇಳಿರುವರು.

ಖೈದಿಗಳ ಬಿಡುಗಡೆ

ಹೈದರಾಬಾದಿನಲ್ಲಿ ಪ್ರಥಮವಾಗಿ ಪ್ರಜಾ ಸರ್ಕಾರ ಸ್ಥಾಪನೆಯಾದುದರ ಸಂತೋಷಾರ್ಥವಾಗಿ ೩ ತಿಂಗಳೊಳಗೆ ಕಾರಾಗೃಹವಾಸ ಅನುಭವಿಸಬೇಕಾಗಿರುವ ಖೈದಿಗಳನ್ನೂ ಬಿಡುಗಡೆಮಾಡುವುದಲ್ಲದೆ ಹೆಚ್ಚಿಗೆ ಕಾರಾಗೃಹವಾಸ ಅನುಭವಿಸಬೇಕಾದವರ ಶಿಕ್ಷೆ ಅವಧಿಯನ್ನು ಕಡಮೆ ಮಾಡುವುದಾಗಿ ಹೈದರಾಬಾದ್ ಸರ್ಕಾರವು ಘೋಷಿಸಿದೆ.

ಕಾಂಗ್ರೆಸ್ಸಿಗೆ ಸೇರಿದರು

ಪೆಪ್ಸುವಿನಲ್ಲಿ ೫ ಜನ ಸ್ವತಂತ್ರ ಸದಸ್ಯರು ಕಾಂಗ್ರೆಸ್ಸನ್ನು ಸೇರಿದುದರ ಪರಿಣಾಮವಾಗಿ ಅಲ್ಲಿಯ ೬೦ ಜನರ ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿಗೆ ೩೧ ಸ್ಥಾನಗಳು ದೊರೆತಂತಾದುವು.

ಸಹಾಯ ನಿಧಿ

ಮದ್ರಾಸಿನಲ್ಲಿ ನಡೆಯಬೇಕಾಗಿರುವ ಅನೇಕ ಪರಿಹಾರ ಕಾರ್ಯಗಳಿಗಾಗಿ ಮದ್ರಾಸ್ ಸರ್ಕಾರವು ಕೇಂದ್ರವನ್ನು ೨ ಕೋಟಿ ರೂಪಾಯಿ ಸಾಲ ಒಂದು ಕೋಟಿ ರೂಪಾಯಿ ಗ್ರಾಂಟು ಕೇಳಿದೆ.

ಫೈಜ್ ಮಹಮದ್

ಪಾಕಿಸ್ಥಾನದ ಪ್ರಧಾನಿಯಾಗಿದ್ದ ದಿವಂಗತ ಲಿಯಾಕತ್ ಅಲಿಖಾನರವರಿಗೆ ಹೆದರಿಕೆ ಪತ್ರಗಳನ್ನು ಬರೆದಿದ್ದರೆಂಬ ಅಪಾದನೆ ಮೇಲೆ ಕರಾಚಿ ಸಿ. ಐ. ಡಿ. ಪೋಲೀಸಿನವರು, ಕೆಲವು ದಿನದಿಂದ ಮರೆಯಾಗಿದ್ದ ಫೈಜ್ ಮಹಮದ್ ಎಂಬುವನನ್ನು ದಸ್ತಗಿರಿ ಮಾಡಿರುವುದಾಗಿ ಗೊತ್ತಾಗಿದೆ.

ಪತ್ರವ್ಯವಹಾರ

ಪೌರಸಭೆ ತೀರ್ಮಾನ ಸಾಧುವಾದುದಲ್ಲ

ಸ್ವಾಮಿ,—

ತಾರೀಖು ೨೮-೨-೫೨ ರಲ್ಲು ನಡೆದ ಪೌರಸಭೆ ಮಾಹೆವಾರಿ ಮೀಟಿಂಗಿನಲ್ಲಿ ಸರ್ಕಾರವು ಜಿ.ನಾವಣೆ ನಡೆದ ಮೇಲೆ ಬಿ ತರಗತಿ ರೇಷನ್ ದಾರರಿಗೆ ಅಕ್ಕಿ ಕೋಟ ಕಡಿಮೆ ಮಾಡಿ ಅದರ ಬದಲು ಗೋಧಿಯನ್ನು ಕೊಡಲಾಗುತ್ತೆ ಎಂದು ಹೊರಡಿಸಿದ ಪ್ರಕಟಣೆ ಮೇಲೆ ರೇಷನ್ ದಾರರ ಸಂಘದ ಅಧ್ಯಕ್ಷರೂ, ಪೌರಸಭಾ ಸದಸ್ಯರೂ ಆದ ಡಾ|| ಬಿ ಜಿ ದಾಸ್‌ರವರು ಬಿ ತರಗತಿ ರೇಷನ್ ದಾರರ ಕಷ್ಟವನ್ನು ಸೂಚಿಸಿ ಇವರಿಗೆ ಅಕ್ಕಿ ಪಡಿತರ ಕಡಿಮೆ ಮಾಡಕೂಡದೆಂದು ಸರ್ಕಾರಕ್ಕೆ ಶಿಫಾರಸು ಮಾಡುವ ನಿರ್ಣಯ ಒಂದನ್ನು ಮಂಡಿಸಿದ್ದರು. ಈ ನಿರ್ಣಯದ ಮೇಲೆ ಹಿರಿಯ ಪೌರಸಭಾ ಸದಸ್ಯರಲೊಬ್ಬರಾದ ಶ್ರೀ ಎಸ್ ಲಿಂಗಣ್ಣನವರು ಅಕ್ಕಿ ಪಡಿತರದ ವಿಷಯವನ್ನೇ ಬಿಟ್ಟು ಗೋಧಿಗೆ ಬದಲು ರಾಗಿ ಜೋಳವನ್ನೇ ಕೊಡಿಸಲೆಂಬ ತಿದ್ದುಪಡಿ ತಂದ ಬಗ್ಗೆ ಈ ತಿದ್ದುಪಡಿಯ ಮೇಲೆ ಸದರಿ ನಿರ್ಣಯವು ಅಂಗೀಕೃತವಾದಂತೆ ಪತ್ರಿಕೆಗಳಲ್ಲಿ ಪ್ರಕಟವಾಗಿಯತ್ತೆ. ಸರ್ಕಾರವು ಬಿ ತರಗತಿ ರೇಷನ್ ದಾರರಿಗೆ ಅಕ್ಕಿ ಕೊಡುತ್ತಿದ್ದುದೇ ಕಡಮೆ ಹೀಗಿರುವಲ್ಲಿ ಪೌರಸಭೆಯು ತಿದ್ದುಪಡಿ ತೀರ್ಮಾನವು ಬಿ ತರಗತಿ ರೇಷನ್ ದಾರರಿಗೆ ಸಿಡಿಲು ಬಡಿದಂತಾಗಿದೆ. ಈ ಬಗ್ಗೆ ವಿಷಾದವನ್ನು ವ್ಯಕ್ತಪಡಿಸದೆ ವಿಧಿ ಇಲ್ಲ ಸರ್ಕಾರವು ಬಡವರ ಕಷ್ಟವೇ ಅರಿವಿಲ್ಲದ ಪೌರಸಭೆಯವರ ತೀರ್ಮಾನಕ್ಕೆ ಮನ್ನಣೆಕೊಡದೆ ಬಿ ತರಗತಿ ರೇಷನ್ ದಾರರಿಗೆ ಅಕ್ಕಿ ಪಡಿತರವನ್ನು ಕಡಿಮೆ ಮಾಡದೆ ಹಿಂದಿನಂತೆಯೇ ಕೊಡಿಸಬೇಕೆಂದು ಕೋರಲಾಗಿದೆ.

ಎಂ. ಸಿ. ನರಸಿಂಹಯ್ಯ,
ಫೌರಪಿಸೈಪಿ.

ಪ್ರತಿಬಂಧಕ ತೆಗೆಯಬೇಕು

ಪಂಜಾಬ್ ಮತ್ತು ಉತ್ತರ ಪ್ರದೇಶಗಳ ಮಣಿಕವರ್ಗದ ನಿಯೋಗವೊಂದು ಆಹಾರ ಸಚಿವ ಶ್ರೀ ಕೆ ಎಂ ಮುನ್‌ಷಿಯವರನ್ನು ಭೇಟಿ ಮಾಡಿ ಬೆಲ್ಲ ಮತ್ತು ಎಣ್ಣೆಬೀಜಗಳ ಪ್ರವಾಸದ ಮೇಲಿನ ಪ್ರತಿಬಂಧಕವನ್ನು ತೆಗೆದುಹಾಕಬೇಕೆಂದು ಪ್ರಾರ್ಥಿಸಿದರು. ಈ ವಿಷಯವನ್ನು ಸಂಬಂಧಪಟ್ಟ ಸಚಿವರುಗಳ ಪರಿಶೀಲನೆಗೆ ಸೂಚಿಸಲಾಗುವುದೆಂದು ಶ್ರೀ ಮುನ್‌ಷಿಯವರು ಭರವಸೆಯಿತ್ತರು.

ವಿವಿಧವಾರ್ತೆಗಳು

ಅಮೇರಿಕವು ಕೋಟಿಗಟ್ಟಲೆ ಡಾಲರುಗಳನ್ನು, ರಕ್ಷಣೆ, ಆರ್ಥಿಕ ಸಮಸ್ಯೆ ಮತ್ತು ತಾಂತ್ರಿಕ ಸಹಾಯಗಳಿಗಾಗಿ ಖರ್ಚುಮಾಡುತ್ತಿದೆ. ಮಿಲಿಟರಿ ಧಾಳಿಯನ್ನು ತಡೆಯುವುದು, ಹಸಿವು, ಬಡತನ, ರೋಗ ಅವಿದ್ಯೆಯನ್ನು ಹೋಗಲಾಡಿಸುವುದು, ಇವೇ ಎರಡು ಮುಖ್ಯ ಉದ್ದೇಶ ಎಂದು ಅಮೇರಿಕ ವ್ಯವಸಾಯ ಶಾಖೆಯ ಕಾರ್ಯದರ್ಶಿ ಚಾರ್ಲ್ಸ್ ಎಫ್ ಬ್ರಾನನ್ನರು ತಿಳಿಸಿದ್ದಾರೆ.

* ಜನವರಿ ತಿಂಗಳಿನಲ್ಲಿ ಸುಮಾರು ೧ ಮಿಲಿಯನ್ ಟನ್ನಿನಷ್ಟು, ಆರ್ಥಿಕ, ಮಿಲಿಟರಿ ಸಂಬಂಧವಾದ ಸಾಮಾನುಗಳನ್ನು ಏಷ್ಯಾ, ದೂರಪ್ರಾಚ್ಯ, ಆಫ್ರಿಕಗಳಿಗೆ ಕಳುಹಿಸಿಕೊಟ್ಟಿದೆ ಅಮೇರಿಕ.

* ಮೈಸೂರಿನಲ್ಲಿರುವ ಆಹಾರ ಸಂಶೋಧನಾಲಯದಲ್ಲಿ, ಭಾರತದ ವಿಜ್ಞಾನಿಗಳು ಟೋಪಿಯೋಕದಿಂದ 'ಸಿಂಥೆಟಿಕ್ ಅಕ್ಕಿ' ಯನ್ನು ತಯಾರುಮಾಡುವ ವಿಧಾನವನ್ನು ಕಂಡುಹಿಡಿದಿದ್ದಾರೆ. ಟೋಪಿಯೋಕವು, ಭಾರತದಲ್ಲಿ ವಿಶೇಷವಾಗಿ ಬೆಳೆಯುತ್ತದೆ.

ಭಾರತ ಸರ್ಕಾರ ಮತ್ತು ಮೈಸೂರು ಸರ್ಕಾರವು ಜೊತೆಗೂಡಿ ೧೯೫೨ ರಲ್ಲಿ ಅಕ್ಕಿಯನ್ನು ಹೇರಳವಾಗಿ ತಯಾರು ಮಾಡುವ ಯೋಜನೆಯನ್ನು ಇಟ್ಟುಕೊಂಡಿದ್ದಾರೆ.

ಈ ಹೊಸ ಅಕ್ಕಿಯಲ್ಲಿ ಆಹಾರಾಂಶವು ಹೆಚ್ಚಾಗಿದ್ದು, ಕಡಿಮೆ ಬೆಲೆಯಲ್ಲಿ ತಯಾರಾಗುವುದು.

ಹೈದರಾಬಾದಿನಲ್ಲಿ ಪ್ರಜಾ ಸರ್ಕಾರ ಸ್ಥಾಪನೆ

ಈ ದಿನ ಹೊಸ ಮಂತ್ರಿಮಂಡಲದ ಅಧಿಕಾರ ಸ್ವೀಕಾರ

ಹೈದರಾಬಾದಿನ ನೂತನ ಮಂತ್ರಿಮಂಡಲ ಈ ದಿನ ಅಧಿಕಾರ ಸ್ವೀಕರಿಸುವುದು. ಮೊದಲು ೬ನೇ ತಾ|| ಎಂದು ಗೊತ್ತಾಗಿತ್ತು. ಅಧಿಕಾರ ಸ್ವೀಕಾರೋತ್ಸವ ಷಹಾಮಂಜಿಲ್ ಅರಮನೆಯಲ್ಲಿ ನಡೆಯುವುದು.

ಶ್ರೀ ಎಂ. ಕೆ ವೆಲ್ಲೋಡಿಯವರ ಸಚಿವಮಂಡಲಿ ನಿನ್ನೆ ರಾಜೀನಾಮೆ ಇತ್ತೊಡನೆಯೇ ರಾಜಪ್ರಮುಖರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಬಿ ರಾಮಕೃಷ್ಣರಾಯರನ್ನು ಆಹ್ವಾನಿಸಿ ಮಂತ್ರಿಮಂಡಲ ರಚಿಸುವಂತೆ ಸೂಚಿಸಿದರು.

ಶ್ರೀ ರಾಮಕೃಷ್ಣರಾಯರು ನಂತರ ತಮ್ಮ ಸಚಿವ ಮಂಡಲಿಯಲ್ಲಿರುವವರ ಪಟ್ಟಿಯನ್ನು ರಾಜಪ್ರಮುಖರಿಗೆ ಒಪ್ಪಿಸಿದರು.

ಶ್ರೀ ಸಿದ್ದಲಿಂಗಯ್ಯನವರ ದೇಹಸ್ಥಿತಿ

ಬೆಂಗಳೂರು ಮಾ. ೫

ಶ್ರೀ ಟಿ ಸಿದ್ದಲಿಂಗಯ್ಯನವರಿಗೆ ಸುಮಾರು ೧೫ ದಿನಗಳ ಹಿಂದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯಾಗಿ ಗುಣ ಹೊಂದುತ್ತಿದ್ದರಷ್ಟೆ. ಕಳೆದ ಎರಡು ದಿನಗಳಲ್ಲಿ ಅವರಿಗೆ ಜ್ವರ ಬಂದಿದ್ದು ಈಗ ನಿಂತಿದೆ. ಅವರಿಗೆ ಈಗ ಸಂಪೂರ್ಣ ವಿಶ್ರಾಂತಿ ಅಗತ್ಯವೆಂದು ಅದನ್ನು ದೊರಕಿಸಿಕೊಡುವುದರಲ್ಲಿ ಅವರ ಗೆಳೆಯರೂ ಹಿತೈಷಿಗಳೂ ನೆರವಾಗಬೇಕೆಂದೂ ವೈದ್ಯರು ಪ್ರಾರ್ಥಿಸಿದ್ದಾರೆ.

ಕಾಲೇಜಾಗಿ ಮೆಡಿಕಲ್ ಸ್ಕೂಲ್ ಪರಿವರ್ತನೆ

ಬೆಂಗಳೂರು ಮಾ. ೫

ಬೆಂಗಳೂರು ನಗರದಲ್ಲಿರುವ ಮೆಡಿಕಲ್ ಸ್ಕೂಲನ್ನು ಕಾಲೇಜಾಗಿ ಪರಿವರ್ತಿಸುವ ಬಗ್ಗೆ ಮೈಸೂರು ಮತ್ತು ಬೊಂಬಾಯಿ ಸರ್ಕಾರಗಳಿಗೆ ಮಾತುಕತೆ ನಡೆದು ಯಾವ ಅಂತ್ಯ ನಿರ್ಧಾರಗಳಿಗೂ ಬಂದಿಲ್ಲ. ಸಲಹೆಯ ಬಗ್ಗೆ ಪರಿಶೀಲಿಸಲು ಸದ್ಯದಲ್ಲೇ ಬೊಂಬಾಯಿನ ಆರೋಗ್ಯ ಸಚಿವರು ಬೆಂಗಳೂರಿಗೆ ಬರುವರು.

ಈ ಸಂಬಂಧದಲ್ಲಿ ಬೊಂಬಾಯಿಗೆ ಹೋಗಿದ್ದ ವಿದ್ಯಾ ಸಚಿವ ಶ್ರೀ ಆರ್. ಚೆನ್ನಿಗರಾಮಯ್ಯನವರು ಬೊಂಬಾಯಿಯ ಮುಖ್ಯಮಂತ್ರಿ ಮತ್ತು ಆರೋಗ್ಯ ಸಚಿವರೊಡನೆ ಮಾತುಕತೆ ನಡೆಸಿ ಸೋಮವಾರ ಸಂಜೆ ಹಿಂದಿರುಗಿದರು.

ಎಂ. ಶೇಷಾದ್ರಿ ಮತ್ತು ರಾವ್ ಬೆಂಗಳೂರಿಗೆ

ಹೈದರಾಬಾದ್ ಮಂತ್ರಿಮಂಡಲದಲ್ಲಿ ಈಗ ಸಚಿವರಾಗಿರುವ ಮೈಸೂರಿನವರಾದ ಶ್ರೀ ಎಂ. ಶೇಷಾದ್ರಿ ಮತ್ತು ಸಿ. ವಿ ಎಸ್. ರಾವ್ ನಿವೃತ್ತರಾದ ಮೇಲೆ ಇದೇ ೬ನೇ ತಾರೀಖು ಬೆಂಗಳೂರಿಗೆ ಬರುವರು.

ನೂತನ ಕಾಂಗ್ರೆಸ್ ಮಂತ್ರಿಮಂಡಲ ರಚಿತವಾದ ಮೇಲೆ ಸಂಸ್ಥಾನಕ್ಕೆ ಆರ್ಥಿಕ ಸಲಹೆಗಾರರಾಗಿ ಇರುವುದು ತಮ್ಮಿಂದ ಸಾಧ್ಯವಿಲ್ಲವೆಂದು ಶ್ರೀ ಸಿ. ವಿ. ಎಸ್. ರಾವ್ ತಿಳಿಸಿದ್ದಾರೆ

ಪ್ರಪಂಚದ ಪ್ರಥಮ ತೇಲುವ ರೇಡಿಯೊ ನಿಲಯ

ಕಮ್ಯೂನಿಸ್ಟರ ವಿರುದ್ಧ ಪ್ರಚಾರ ನಡೆಸಲು ಕಮ್ಯೂನಿಸ್ಟ್ ಜಲಕ್ಷೇತ್ರದಲ್ಲಿದ್ದು, 'ವಾಯ್ಸ್ ಆಫ್ ಅಮೆರಿಕಾ' ಕಾರ್ಯಕ್ರಮವನ್ನು ಪ್ರಸಾರಗೊಳಿಸುವುದಕ್ಕಾಗಿ ಕೋರಿಯರ್ ಹಡಗಿನಲ್ಲಿ ನಿರ್ಮಿಸಲಾಗಿರುವ ರೇಡಿಯೊ ನಿಲಯದ ಪ್ರಾರಂಭೋತ್ಸವವನ್ನು ಅಧ್ಯಕ್ಷ ಟ್ರೂಮನ್ನರು ನೆರವೇರಿಸಿದರು.

ಸುಂಕದ ಅಧಿಕಾರಿಗಳಿಂದ ೧ ಕೋಟಿ ರೂ. ಸ್ವಾಧೀನ

ಕಳ್ಳ ಸಾಗಾಣಿಕೆಯನ್ನು ತಡೆಯಲು ಕೈಕೊಂಡ ಉಗ್ರ ಕಾರ್ಯಕ್ರಮದ ಫಲವಾಗಿ, ಭಾರತದ ಸುಂಕದ ಅಧಿಕಾರಿಗಳು ೧೯೫೧ರಲ್ಲಿ ಒಂದು ಕೋಟಿ ರೂಪಾಯಿಗಳನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆಂದು ಮೊನ್ನೆ ಹೊರಗೆಡಹಿದ, ಹಣಕಾಸಿನ ಸಚಿವ ಶಾಖೆಯ ಕಾರ್ಯಕಲಾಪಗಳ ವರದಿಯಿಂದ ವ್ಯಕ್ತಪಟ್ಟಿದೆ.

ಕೌನ್ಸಿಲ್ ಆಫ್ ಸ್ಟೇಟ್‌ಗೆ ಆಚಾರ್ಯ ಕೃಪಲಾನಿ

ಅಖಿಲ ಭಾರತ ಕಿಸಾನ್ ಮಜ್ದೂರ್ ಪ್ರಜಾ ಪಕ್ಷದ ನಾಯಕರಾದ ಆಚಾರ್ಯ ಕೃಪಲಾನಿಯವರು ಮದರಾಸಿನಿಂದ ಕೌನ್ಸಿಲ್ ಆಫ್ ಸ್ಟೇಟ್‌ಗೆ ಸ್ಪರ್ಧಿಸಬೇಕೆಂದು ಆಂಧ್ರದ ಕೆ. ಎಂ ಪಿ. ಪಕ್ಷದ ಕಾರ್ಯಕಾರಿ ಸಮಿತಿಯು ಪ್ರಾರ್ಥಿಸಿದೆ.

ಆಂಧ್ರದ ಕೆ. ಎಂ. ಪಿ. ಪಕ್ಷದ ನಾಯಕರಾದ ಶ್ರೀ ಟಿ. ಪ್ರಕಾಶಂರವರು ಪ್ರಾಂತ್ಯ ಲೆಜಿಸ್ಲೆಟಿವ್ ಕೌನ್ಸಿಲಿಗೆ ಸ್ಪರ್ಧಿಸಬೇಕೆಂದೂ ಸಮಿತಿ ಪ್ರಾರ್ಥಿಸಿದೆ.

ಮೋಟಾರು ಕೆಲಸಗಾರರ ಬೇಡಿಕೆಗಳು

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸರ್ವ ಸದಸ್ಯರ ಸಭೆಯು ೩ನೇ ತಾರೀಖು ಸೇರಿ, ಕೈಗಾರಿಕಾ ಕೋರ್ಟು ರಚನೆಯಾಗಿ ಅದಕ್ಕೆ ಕೆಲಸಗಾರರ ಸಂಘದ ಬೇಡಿಕೆಗಳನ್ನು ಒಪ್ಪಿಸಿ ೯ ತಿಂಗಳಾದರೂ ಇನ್ನೂ ಏನೂ ಇತ್ಯರ್ಥವಾಗಿಲ್ಲವಾದ್ದರಿಂದ ೧೬-೩-೫೨ನೇ ದಿನ ನಡೆಯಲಿರುವ ಕೋರ್ಟಿನಲ್ಲಿ ಸರ್ವ ಸದಸ್ಯರ ಅಸಮಾಧಾನವನ್ನು ತಿಳಿಸಿ, ಕೇಸನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ತೀರ್ಮಾನಿಸಿದೆ ಈ ಕೆಲಸವನ್ನು ಮಾಡಲೂ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಲೂ ೧೨ ಜನರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಅದಕ್ಕೆ ಪೂರ್ಣ ಅಧಿಕಾರವನ್ನು ಕೊಟ್ಟಿದೆ.

ನ್ಯೂ ಅಪೇರ
೭—೩—೫೨ ರಿಂದ ೨ನೇ ವಾರ
"ಸ್ತ್ರೀಸಾಹಸಂ" ತಯಾರಿಸಿರುವ ವಿನೋದ ಪ್ರದರ್ಶಕರವರ
ಶಾಂತಿ
(ತೆಲುಗು)
ಪಾತ್ರ :— ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ|| ಸುಬ್ಬರಾವ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ರಿಂಗ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೬—೩—೧೯೫೨ನೇ ಶುಕ್ರವಾರ [ಸಂಚಿಕೆ ೧೬೨

ಹೈದ್ರಾಬಾದಿನಲ್ಲಿ ಪ್ರಥಮ ಪ್ರಜಾ ಮಂತ್ರಿಮಂಡಲದ ಅಧಿಕಾರ ಸ್ವೀಕಾರ

ತಿರುವಾಂಕೂರ್ ಕೊಚ್ಚಿನ್‌ನಲ್ಲಿ ಈ ವಾರದೊಳಗೆ ಕಾಂಗ್ರೆಸ್ ಸರ್ಕಾರ ಸ್ಥಾಪಿಸುವ ಸಂಭವ

ಶ್ರೀಮನ್ ಮಹಾರಾಜರ ಉತ್ತರಭಾರತದ ಪ್ರವಾಸ

ಮೈಸೂರು ೬

ಉತ್ತರಭಾರತದಲ್ಲಿ ಪ್ರವಾಸ ಕೈಗೊಳ್ಳಲು ಶ್ರೀಮನ್ ಮಹಾರಾಜರು ಈದಿನ ಬೆಳಿಗ್ಗೆ ರಾಜಧಾನಿಯಿಂದ ಹೊರಟು ಬೆಂಗಳೂರುತಲಪಿದರು ೮-೧೫ ಘಂಟೆಗೆ ಗುಂತಕಲ್ ಟ್ರೈನಿನಲ್ಲಿ ಅಲ್ಲಿಂದ ಬೊಂಬಾಯಿಗೆ ತೆರಳಿದರು.

ಶ್ರೀಮನ್ ಮಹಾರಾಜರೊಡನೆ ಶ್ರೀ ಸಫಿ ದಾರಾಷಾ, ಶ್ರೀ ಹೆಚ್.ಎನ್ ಪಾಳ್ಯೇಗಾರ್, ಮಿಲಿಟರಿ ಕಾರ್ಯದರ್ಶಿ ಶ್ರೀ ಮದನಗೋಪಾಲರಾಜೇ ಅರಸ್ ಮತ್ತು ಕ್ಯಾಪ್ಟನ್ ಶ್ರೀ ಮಹದೇವಯ್ಯನವರು ತೆರಳಿದರು.

ಶ್ರೀಮತಿ ಎಲಿನಾರ್ ರೂಸ್‌ವೆಲ್ಟರ ಕಾರ್ಯಕ್ರಮ

ಮೈಸೂರು ಮಾ ೬

ನಿನ್ನೆ ಮಧ್ಯಾಹ್ನ ಶ್ರೀಮತಿ ಎಲಿನಾರ್ ರೂಸ್‌ವೆಲ್ಟರು ಹಣಕಾಸಿನ ಸಚಿವರೊಡನೆ ಚಾಮರಾಜೇಂದ್ರ ವೃತ್ತಿ ಶಿಕ್ಷಣಾಲಯ, ಜಗನ್ಮೋಹನ್, ಕೆಲವು ದೇವಾಲಯ- ಅರಮನೆ, ಚಾಮುಂಡಿಬೆಟ್ಟ ಮತ್ತು ಕೃಷ್ಣರಾಜ ಸಾಗರಕ್ಕೆ ತೆರಳಿದ್ದರು- ಲಲಿತಮಹಲ್‌ನಲ್ಲಿ ಇವರ ಗೌರವಾರ್ಥವಾಗಿ ಭೋಜನಕೂಟವನ್ನು ಏರ್ಪಡಿಸಲಾಗಿದ್ದಿತು-

ಶ್ರೀಮತಿಯವರು ಈದಿನ ಬೆಳಿಗ್ಗೆ ಮಹಾರಾಜಾಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣಮಾಡುವರು- ನಂತರ ಬೆಂಗಳೂರಿಗೆ ತೆರಳುವರು-

ಮಂತ್ರಿಮಂಡಲದ ಸಭೆ

ಮೈಸೂರು ಮಾ ೬

ಈದಿನ ಬೆಳಿಗ್ಗೆ ಲೇಕ್‌ವ್ಯೂನಲ್ಲಿ ಮಂತ್ರಿಮಂಡಲದ ಸಭೆಯು ಶ್ರೀ ಹೆಚ್ ಸಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು-

ಅನಾರೋಗ್ಯದ ನಿಮಿತ್ತ ಮುಖ್ಯಮಂತ್ರಿಯವರಾದ ಶ್ರೀ ಕೆ ಸಿ ರೆಡ್ಡಿಯವರು ಬೆಂಗಳೂರಿನಿಂದ ಬರಲಿಲ್ಲ-

ಪ್ರೊ|| ಆಗ್‌ಬರ್ನ್‌ರವರ ಭಾಷಣ

ಚಿಕಾಗೋ ವಿಶ್ವವಿದ್ಯಾನಿಲಯದ ಪ್ರೊಫೆಸರಾದ ಮಿ|| ಆಗ್‌ಬರ್ನ್‌ರವರು ನಾಳೆಸಂಜೆ ಮಹಾರಾಜಾಕಾಲೇಜಿನಲ್ಲಿ ಭಾಷಣಮಾಡುವರು-

ಹಿರಿಯ ಶಾಸನ ಸಭೆಗಳಿಗೆ ಕಾಂಗ್ರೆಸ್ ಸದಸ್ಯರು

ಈ ಸಂಜೆ ಪಟ್ಟಿ ಹೊರಬಿತ್ತು

ಬೆಂಗಳೂರು ೬

ಸಂಸ್ಥಾನದ ಶಾಸನಸಭೆಯ ಹಿರಿಯ ಸಭೆಗೆ, ಕೌನ್ಸಿಲ್ ಆಫ್ ಸ್ಟೇಟಿಗೆ ಸಂಸ್ಥಾನದಿಂದ ಕಾಂಗ್ರೆಸ್‌ಪರವಾಗಿ ಉಮೇದುವಾರರ ಪಟ್ಟಿಯು ಹೊರಬಿತ್ತು.

ಸಂಸ್ಥಾನದ ಶಾಸನಸಭೆಯಿಂದ ಕೇಂದ್ರದ ಹಿರಿಯ ಸಭೆಗೆ ೬ ಸದಸ್ಯರನ್ನು ಚುನಾಯಿಸಿ ಕಳುಹಿಸಲು ಅವಕಾಶವಿದ್ದು ಕಾಂಗ್ರೆಸ್ ಪರವಾಗಿ ಪ್ರಕಟಿಸಿರುವ ಪಟ್ಟಿಯಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರು, ಶ್ರೀಗಳಾದ ಟಿ. ಸುಬ್ರಮಣ್ಯಂ, ಎಂ.ಗೋವಿಂದರೆಡ್ಡಿ, ಬಿ. ಪಿ. ಬಸಪ್ಪಶೆಟ್ಟರು ಮತ್ತು ಜ|| ವಲ್ಲಿಯುಲ್ಲಾರವರ ಹೆಸರುಗಳಿವೆ.

ಸಂಸ್ಥಾನದ ಹಿರಿಯಸಭೆಗೆ ಶಾಸನಸಭೆಯು ಹದಿಮೂರು ಸದಸ್ಯರನ್ನು ಚುನಾಯಿಸಬೇಕಾಗಿದ್ದು ಅದರಲ್ಲಿ ಕಾಂಗ್ರೆಸ್ ಹತ್ತು ಸದಸ್ಯರ ಹೆಸರನ್ನು ಸೂಚಿಸಿದೆ ಈ ಪಟ್ಟಿಯಲ್ಲಿ ಶ್ರೀಗಳಾದ ಕೆ. ಟಿ. ಭಾಷ್ಯಂ, ಎಸ್. ವಿ. ಕೃಷ್ಣಮೂರ್ತಿರಾವ್,ಎಂ.ಎನ್ ಜೋಯಿಸ್, ಎಸ್ ವೀರಬಸಪ್ಪ, ಬ್ರಹ್ಮಯ್ಯ ಹೆಚ್. ಎಂ, ಗಂಗಾಧರಯ್ಯ, ಎಂ. ಹನುಮಂತಯ್ಯ,ಎಂ. ಶಂಕರಯ್ಯ ಜ|| ವೆಲ್ಲೂರಿ, ಮತ್ತು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರ ಹೆಸರುಗಳಿವೆ-

ಉಳಿದ ಸ್ಥಾನಗಳಿಗೆ ಸ್ವತಂತ್ರರು ಸ್ಪರ್ಧಿಸಲೆಂದು ಕಾಂಗ್ರೆಸ್ಸು ಹೆಸರನ್ನು ಸೂಚಿಸಿಲ್ಲ-

* ಬೊಂಬಾಯಿಯ ಬುಲಿಯನ್ ಮಾರ್ಕೆಟ್ ನಿನ್ನೆಕೂಡ ಮುಚ್ಚಲಾಗಿತ್ತು-

ಈ ವಾರಾಂತ್ಯದಲ್ಲಿ ಹೊಸ ಸರ್ಕಾರ

ಕಾಂಗ್ರೆಸ್ ಪಕ್ಷವು ಹೊಸ ಸರ್ಕಾರವನ್ನು ತಿರುವಾಂಕೂರು ಕೊಚ್ಚಿನ್ ಪ್ರಾಂತ್ಯದಲ್ಲಿ ಈ ವಾರಾಂತ್ಯದಲ್ಲಿ ರಚಿಸುವುದೆಂದು ಹೇಳಲಾಗಿದೆ.

ಹರಿತಾಳ

ಸರ್ಕಾರೀಭಾಷೆಯಾಗಿ ಬಂಗಾಳಿಭಾಷೆಯನ್ನು ಉಪಯೋಗಿಸಬೇಕೆಂಬವಿಷಯದಲ್ಲಿ ಪೂರ್ವಪಾಕೀಸ್ತಾನದಲ್ಲಿ ಹರಿತಾಳನಡೆಯಿತು. ೧೫ ಜನರ ದಸ್ತಗಿರಿಯಾಗಿದೆ.

ಮೈಸೂರು ಮಾ ೬

ಅಮೆರಿಕದ ಮಾಜಿ ಅಧ್ಯಕ್ಷ ರೂಸ್ವೆಲ್ಟ್‌ರವರ ಪತ್ನಿ ಶ್ರೀಮತಿ ಎಲಿನಾರ್ ರೂಸ್ವೆಲ್ಟ್‌ರವರು ಈದಿನ ೧೨ ಗಂಟೆಗೆ ತಿರುವಾಂಕೂರಿನಿಂದ ಭಾರತ ಸರ್ಕಾರದ ವಿಮಾನದಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದರು.

ವಿಮಾನನಿಲ್ದಾಣದಲ್ಲಿ ಹಣಕಾಸಿನ ಸಚಿವ ಶ್ರೀ ಹೆಚ್ ಸಿ ದಾಸಪ್ಪನವರು ಅವರನ್ನು ಸಂಸ್ಥಾನದ ಪರವಾಗಿ ಸ್ವಾಗತಿಸಿ ಹುರಾಯಿಯನ್ನು ಅರ್ಪಿಸಿ ಛೀಫ್ ಸೆಕ್ರೆಟರಿ ಶ್ರೀ ಇ ವಿ ಗಣಪತಿ ಅಯ್ಯರನ್ನೂ ಮತ್ತು ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರನ್ನೂ ಪರಿಚಯ ಮಾಡಿಕೊಟ್ಟು ಪುರಸಭಾಧ್ಯಕ್ಷರು ಮೈಸೂರಿನ ನಾಗರೀಕರಪರ ಅವರನ್ನು ಸ್ವಾಗತಿಸಿ ಹುರಾಯಿಯನ್ನು ಅರ್ಪಿಸಿದರು.

ವಿಮಾನ ನಿಲ್ದಾಣದಲ್ಲಿ ಸಚಿವರುಗಳಾದ ಶ್ರೀ ಕೆ ಟಿ ಭಾಷ್ಯಂ, ಶ್ರೀ ಟಿ ಮರಿಯಪ್ಪ, ಶ್ರೀ ಹೆಚ್ ಸಿದ್ದಯ್ಯ ಮತ್ತು ಶ್ರೀ ಆರ್ ಚೆನ್ನಿಗರಾಮಯ್ಯನವರು, ಪುರಸಭಾ ಕಮೀಷನರ್ ಶ್ರೀ ಎಂ ಎಸ್ ಸ್ವಾಮಿನಾಥನ್, ಜಿಲ್ಲಾಧಿಕಾರಿಗಳಾದ ಜ|| ಮಹಮದ್ ಅಹಮದ್, ನಗರಾಭಿವೃದ್ಧಿ ಸಮಿತಿ ಛೇರ್ಮನ್ ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಹಾಜರಿದ್ದು ಶ್ರೀ ಹೆಚ್ ಸಿ ದಾಸಪ್ಪನವರು ಇವರನ್ನು ಶ್ರೀಮತಿ ರೂಸ್ವೆಲ್ಟರಿಗೆ ಪರಿಚಯ ಮಾಡಿಸಿದರು.

ವಿಮಾನ ನಿಲ್ದಾಣದಲ್ಲಿ ಅಮೆರಿಕದ ವೈಸ್ ಕೌನ್ಸಿಲ್ ಮಿ|| ಪರ್ನೆಲ್, ಚಿಕಾಗೋ ವಿಶ್ವವಿದ್ಯಾನಿಲಯದ ಪ್ರೊ|| ಆಗ್‌ಬರ್ನ್, ಡಿ ವಿ ಜಿ, ಡಿ.ಎಸ್ ಪಿ, ಎ ಎಸ್ ಪಿ ರಿಸೆಪ್ಷನ್ ಅಧಿಕಾರಿಗಳು ಮತ್ತು ಪತ್ರಿಕೋದ್ಯೋಗಿಗಳು ಇದ್ದರು.

ರಾಜಕೀಯ ಉದ್ದೇಶವೇನೂ ಇಲ್ಲ

ಜಪಾನ್ ಸರ್ಕಾರವು ಕೋಮಿಂಗ್ ಟಾಂಗ್ ಸರ್ಕಾರದೊಡನೆ ವಾಣಿಜ್ಯ ಮತ್ತು ಸೌಹಾರ್ದ ಒಪ್ಪಂದವನ್ನು ಮಾಡಿಕೊಳ್ಳಲು ಯತ್ನಿಸುತ್ತಿರುವುದರಲ್ಲಿ ರಾಜಕೀಯವೇನೂ ಇಲ್ಲವೆಂದು ಜಪಾನಿನಲ್ಲಿ ಮಿ|| ಯೋಷಿದಾ ತಿಳಿಸಿದ್ದಾರೆ-

ಮೂರುಹೊಸ ರೈಲ್ವೆ ಜೋನ್ ಆರಂಭಿಸಲಾಗುವುದು

ಸೆಂಟ್ರಲ್ ರೈಲ್ವೆ ಸಲಹಾಸಮಿತಿಸಭೆ ಶ್ರೀ ಎನ್. ಗೋಪಾಲಸ್ವಾಮಿಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು ಹೊಸದಾಗಿ ಉತ್ತರ, ಈಶಾನ್ಯ, ಪೂರ್ವ ರೈಲ್ವೇಜೋನ್ ಆರಂಭಿಸಲುನಿರ್ಧರಿಸಿತು ನಾರ್ದರ್ನ್ ರೈಲ್ವೇಗೆ ಗೋರಕ್‌ಪುರವೂ, ಈಸ್ಟರ್ನ್‌ರೈಲ್ವೇಗೆ ಕಲ್ಕತ್ತಾವೂ ಕೇಂದ್ರವಾಗಿರುವುದು-

ಮಧ್ಯಭಾರತದಲ್ಲಿ ಉಳಿತಾಯದ ಬಡ್ಜೆಟ್

ಮಧ್ಯಭಾರತದ ಶಾಸನಸಭೆಯು ನಿನ್ನೆ ನಡೆದು ಹಣಕಾಸಿನಸಚಿವ ಶ್ರೀ ಬ್ರಜಕಿಶೋರ್ ಚತುರ್ವೇದಿ ಬಡ್ಜೆಟ್ಟನ್ನು ಮಂಡಿಸಿದರು-

ಈಗ ಅವರು ಮಂಡಿಸಿರುವ ಬಡ್ಜೆಟ್ಟಲ್ಲಿ ೨೦ ಕೋಟಿ ೬೪ ಲಕ್ಷ ಆದಾಯವೂ ೧೯ ಕೋಟಿ ೮೩ ಲಕ್ಷ ವೆಚ್ಚವನ್ನೂ ನಿರೀಕ್ಷಿಸಲಾಗಿದ್ದು ೮೧ ಲಕ್ಷರೂ ಉಳಿತಾಯವಾಗುವುದೆಂದು ಅಂದಾಜುಮಾಡಲಾಗಿದೆ. ಈವರ್ಷ ಅಲ್ಲಿ ಹೊಸತೆರಿಗೆಯನ್ನು ವಿಧಿಸಿಲ್ಲ- ಅಲ್ಲಿನ ಗೌರ್ನರ್ ಶ್ರೀ ಮಂಗಳದಾಸ ಪಕ್ವಾಸ ಸಭೆಯನ್ನುದ್ದೇಶಿಸಿ ಮಾತಾಡಿದರು-

ಭಾರತ ಲಲಿತಕಳೆ

ಭಾರತದ ಲಲಿತಕಲೆಗಳಲ್ಲಿ ವಿಶೇಷವಾಗಿ ಗೂಡಾರ್ಥವಿದೆ. ಅದನ್ನು ಅರ್ಥವತ್ತಾಗಿ ಅಮೇರಿಕನ್ನರಿಗೆ ವಿವರಿಸಬೇಕೆಂದು ಶ್ರೀಮತಿ ರೂಸ್‌ವೆಲ್ಟರವರು ಹೇಳಿದರು.

ಪ್ರಭಾ 3ನೇ ಮತ್ತು ಕಡೇ ವಾರ
7—3—52 ರಿಂದ ಪ್ರತಿದಿನ 3 ಆಟಗಳು
* ಮಹಲ್ *
MORNING SHOWS
FROM 7-3-52 FOR 3 DAYS
A MATTER OF LIFE & DEATH
(In Technicolour)

ಹಿರಿಯ ಸಭೆಗಳಿಗೆ ಕಾಂಗ್ರೆಸ್ಸಿನ ಉಮೇದುವಾರರು

ಬೆಂಗಳೂರು ಮಾ. ೬

ಕೌನ್ಸಿಲ್ ಆಫ್ ಸ್ಟೇಟ್ ಸಭೆಗೆ ಮೈಸೂರಿನಿಂದ ಕಳುಹಿಸಬೇಕಾಗಿರುವ ಆರು ಮಂದಿ ಸದಸ್ಯರ ಪೈಕಿ ಕಾಂಗ್ರೆಸ್ ೫ ಮಂದಿ ಉಮೇದುವಾರರನ್ನು ನಿಲ್ಲಿಸಲಿದೆ. ಈ ೫ಮಂದಿ ಕಾಂಗ್ರೆಸ್ ಉಮೇದುವಾರರ ಪಟ್ಟಿಯಲ್ಲಿ ಶ್ರೀ ಹೆಚ್. ಸಿ. ದಾಸಪ್ಪ, ಶ್ರೀ ಟಿ. ಸುಬ್ರಮಣ್ಯಂ ಈ ಇಬ್ಬರ ಹೆಸರುಗಳು ಇರುವುದು ಖಂಡಿತವೆಂದೂ ಹೇಳಲಾಗಿದೆ.

ಶ್ರೀ ಹನುಮಂತಯ್ಯನವರು ತಿರುಪತಿಗೆ

ಮೈ. ಪ್ರ. ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಹನುಮಂತಯ್ಯನವರು ಈದಿನ ಬೆಳಿಗ್ಗೆ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸಭೆಯನ್ನು ಮುಗಿಸಿಕೊಂಡು ತಿರುಪತಿಗೆ ಹೋಗಿ ದೇವರ ಸೇವೆ ಮಾಡಿಕೊಂಡು ೮ನೇ ತಾರೀಖು ಬೆಂಗಳೂರಿಗೆ ಹಿಂತಿರುಗುವರು.

ಅಸೆಂಬ್ಲಿ ಸಭೆಯ ನಾಯಕರ ಚುನಾವಣೆಗೆ ಸಂಬಂಧಪಟ್ಟ ಸೂಚನೆಯು ದೆಹಲಿಯಿಂದ ನಾಳೆ ಮೈಸೂರು ಕಾಂಗ್ರೆಸ್ ಕಛೇರಿಗೆ ತಲುಪುವ ನಿರೀಕ್ಷಣೆಯಿದೆ.

ಚುನಾವಣೆ ವೇಳಾಪಟ್ಟಿ

ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ಸದಸ್ಯರು ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ೧೩ ಮಂದಿಯನ್ನೂ ಕೇಂದ್ರದ ಕೌನ್ಸಿಲ್ ಆಫ್ ಸ್ಟೇಟ್‌ಗೆ ಆರುಮಂದಿಯನ್ನು ಚುನಾಯಿಸಬೇಕಾಗಿದೆಯಷ್ಟೆ. ಈ ಸಂಬಂಧದಲ್ಲಿ ಚುನಾವಣಾಧಿಕಾರಿಗಳಾದ ಶಾಸನಸಭೆ ಕಾರ್ಯದರ್ಶಿ ಶ್ರೀ ಜಿ. ಎಸ್. ವೆಂಕಟರಮಣಯ್ಯರ್‌ರವರು ಕೆಳಗಿನ ವೇಳಾಪಟ್ಟಿಯನ್ನು ಪ್ರಕಟಿಸಿದ್ದಾರೆ.

ಮಾರ್ಚಿ ೧೩ನೇ ತಾರೀಖು ಉಮೇದುವಾರಿಕೆ ಅರ್ಜಿ ಸಲ್ಲಿಸಲು ಕೊನೆಯ ದಿನ, ೧೪ನೇ ತಾ|| ಅರ್ಜಿ ಪರಿಶೀಲನೆ ೧೬ನೇ ತಾ|| ಅರ್ಜಿ ವಾಪಸ್ ಪಡೆಯಲು ಕೊನೆಯ ದಿನ. ಚುನಾವಣೆ ೨೬ ರಂದು.

ಉಮೇದುವಾರಿಕೆ ಅರ್ಜಿಯನ್ನು ಚುನಾವಣಾಧಿಕಾರಿಗಳ ಕಛೇರಿಯಲ್ಲಿ ಪಡೆಯಬಹುದು. ಮಾರ್ಚಿ ೧೩ ಅಥವಾ ಅದರೊಳಗೆ ಉಮೇದವಾರಿಕೆ ಅರ್ಜಿಯನ್ನು ಪ್ರಾತಃಕಾಲ ೧೧ ರಿಂದ ಮಧ್ಯಾಹ್ನ ೩ ರೊಳಗೆ ಚುನಾವಣಾಧಿಕಾರಿಗಳಿಗೆ ಸಲ್ಲಿಸಬಹುದು.

ಸ್ವತಂತ್ರರು ಕಾಂಗ್ರೆಸ್ಸಿಗೆ

ಮದರಾಸ್ ಶಾಸನ ಸಭೆಯ ೫ ಸ್ವತಂತ್ರ ಸದಸ್ಯರು ಕಾಂಗ್ರೆಸ್ ಪಕ್ಷವನ್ನು ಸೇರುವುದಾಗಿ ಆಂಧ್ರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವರೆಡ್ಡಿಯವರು ಹೇಳಿರುವರು.

ಟಾಟಾ ವಿಜ್ಞಾನ ಮಂದಿರದ ಹೊಸ ಸಂಶೋಧನೆ

ಬೆಂಗಳೂರು ಮಾ. ೫

ಸಾಮಾನ್ಯವಾದ ಅಗ್ಗದ ಸೌದೆ ಇತ್ಯಾದಿಗಳ ಬೆಂಕಿಯಿಂದ ನಡೆಯುವ ಎಂಜಿನ್ ಒಂದನ್ನು ಬೆಂಗಳೂರು ಟಾಟಾ ವಿಜ್ಞಾನ ಮಂದಿರದಲ್ಲಿ ಕಂಡುಹಿಡಿಯಲಾಗಿದೆ.

ಹೊರ ದೇಶಗಳಿಂದ ತರಿಸುವ ಪೆಟ್ರೋಲು ಮುಂತಾದುವುಗಳ ಸಹಾಯವಿಲ್ಲದೆ ಅಗ್ಗವಾಗಿ ದೇಶದಲ್ಲಿಯೇ ದೊರೆಯುವ ಸೌದೆ ಮುಂತಾದವುಗಳಿಂದ ನಡೆಸಬಹುದಾದ ಎಂಜಿನನ್ನು ವಿದೇಶೀ (ಎಕ್ಸ್‌ಚೇಂಜ್) (ವಿನಿಮಯದ ಹಣ)ವನ್ನು ಉಳಿಸಲು ಕಂಡುಹಿಡಿಯಲಾಗಿದೆ. ಇದರ ಬಿಸಿಗಾಳಿಯನ್ನು ಶಕ್ತಿಯುತ್ಪಾದನೆಗೆ ಬಳಸುವುದರಿಂದ ಇದಕ್ಕೆ ಹಾಟ್‌ಏರ್ ಎಂಜಿನ್ ಎಂದು ಹೆಸರನ್ನು ಇಡಲಾಗಿದೆ

ಈ ಎಂಜಿನನ್ನು ಎರಡು, ಮೂರು, ನಾಲ್ಕು, ಐದು ಅಥವ ಹತ್ತು ಅಶ್ವಶಕ್ತಿಗಳ ಪ್ರಮಾಣದಲ್ಲಿ ತಯಾರಿಸಬಹುದು. ಈ ಎಂಜಿನ್ನುಗಳನ್ನು ಕಾಳುಗಳನ್ನು ಹಿಟ್ಟು ಮಾಡಲು, ಕಬ್ಬನ್ನು ಹಿಂಡಲು, ಭತ್ತದ ಮಿಲ್ಲುಗಳು ಎಣ್ಣೆ ಮಿಷನ್ನುಗಳು ಮತ್ತು ನೀರಿನ ಪಂಪುಗಳಿಗೆ ಉಪಯೋಗಿಸಿಕೊಳ್ಳಬಹುದು ಇದನ್ನು ನಡೆಸುವ ವೆಚ್ಚ ತೀರಾ ಅಗ್ಗವಾಗಿದ್ದು ಅಂತಹ ನಿಪುಣರ ಸಹಾಯವೇನೂ ಇಲ್ಲದೆ ಯಾರು ಬೇಕಾದರೂ ನಡೆಸಬಹುದಾಗಿರುತ್ತೆ.

ಎನ್. ಜಿ. ಅಯ್ಯಂಗಾರ್ ರಾಜ್ಯ ಪರಿಷತ್ತಿಗೆ

ಭಾರತದ ಸಂಸ್ಥಾನ ಸಚಿವರಾದ ಶ್ರೀ ಎನ್. ಜಿ. ಅಯ್ಯಂಗಾರ್‌ರವರು ಭಾರತ ರಾಜ್ಯ ಪರಿಷತ್ತಿಗೆ ಸ್ಪರ್ಧಿಸುವರೆಂದು ಗೊತ್ತಾಗಿದೆ.

ಮುಖ್ಯಮಂತ್ರಿ ಕುಮಾರಸ್ವಾಮಿರಾಜಾರವರ ಹೆಸರು ಸಂಸ್ಥಾನದ ಲೆಜಿಸ್ಲೇಟೀವ್ ಕೌನ್ಸಿಲ್ ಉಮೇದುವಾರರ ಪಟ್ಟಿಯಲ್ಲಾಗಲೀ ಅಥವ ಭಾರತ ರಾಜ್ಯಪರಿಷತ್ತಿನ ಉಮೇದುವಾರರ ಪಟ್ಟಿಯಲ್ಲಾಗಲೀ ಸೇರಿಲ್ಲ.

ನೂತನ ಶಸ್ತ್ರಸಜ್ಜಿತ ಪೋಲೀಸ್ ಪಡೆ

ಬೆಂಗಳೂರು ಮಾ ೫

ವರ್ಷ ಒಂದಕ್ಕೆ ೭,೩೧,೬೩೦ ರೂ ಖರ್ಚಿನಲ್ಲಿ ಸರ್ಕಾರ ಸಂಸ್ಥಾನಕ್ಕೆ ಹೊಸ ಶಸ್ತ್ರ ಸಜ್ಜಿತ ಪೋಲೀಸ್ ಪಡೆಯೊಂದನ್ನು ಮಂಜೂರು ಮಾಡಿದೆ. ಪಡೆಯಲ್ಲಿ ನಾಲ್ಕು ಕಂಪೆನಿಗಳಿರುತ್ತವೆ. ಅವುಗಳಲ್ಲಿ ೩ ಕಂಪೆನಿಗಳನ್ನು ಹೊಸದಾಗಿ ಸಿದ್ಧಗೊಳಿಸಬೇಕಾಗಿದೆ. ಮೈಸೂರಿನಲ್ಲಿರುವ ಕಂಪೆನಿ ಬೆಂಗಳೂರಿಗೆ ಬಂದು, ಬೆಟಾಲಿಯನ್ನಿನ ಒಂದು ಭಾಗವಾಗಿರುವುದು.

ವಿವಿಧವಾರ್ತೆಗಳು

೨೦ನೇ ಶತಮಾನದ ಕೊನೆಯ ಅರ್ಧಭಾಗದಲ್ಲಿ ಪ್ರಪಂಚವು ಹೊಸದಾರಿಯಲ್ಲಿ ಕಾಲಿಡುತ್ತಲಿದೆ ಈ ಕಾಲದಲ್ಲಿ ಅಮೆರಿಕವು ನಾಯಕತ್ವವನ್ನು ವಹಿಸಿದೆ. ರಾಜಕೀಯವಾಗಿ ಅಮೆರಿಕಕ್ಕೆ ಒಂದು ಅಂಗುಲ ನೆಲವೂ ಬೇಡ. ಆರ್ಥಿಕವಾಗಿ, ತನ್ನ ಸುಖವನ್ನು ಇತರ ದೇಶಗಳೊಂದಿಗೆ ಭಾಗ ಮಾಡಿಕೊಡಲು ಅಮೆರಿಕವು ಆಶಿಸುತ್ತದೆ ಎಂದು ಅಂಕಾರಾದ 'ಉಲುಸ್' ಎಂಬ ಪತ್ರಿಕೆಯು ಬರೆದಿದೆ.

* ಮಲೇರಿಯ ಹತೋಟಿಗೆ ತರಲು ಆಗ್ನೇಯ ಏಷ್ಯಾದ ದೇಶಗಳಲ್ಲಿ ಸಾರ್ವಜನಿಕ ಆರೋಗ್ಯದ ಅಧಿಕಾರಿಗಳು, ಈಗಾಗಲೇ ಥೈಲ್ಯಾಂಡಿನಲ್ಲಿ ೪೦,೦೦೦ ಮನೆಗಳಲ್ಲಿಯೂ, ವಿಯಟ್‌ನಾಮ್‌ನಲ್ಲಿ ೧೧೪,೦೦೦ ಮನೆಗಳಲ್ಲಿಯೂ ಡಿ.ಡಿ.ಟಿ. ಯನ್ನು ಹೊಡೆದು ಸೊಳ್ಳೆಗಳನ್ನು ನಿರ್ಮೂಲ ಮಾಡಲಾಗಿದೆ.

ಭಾರತದಲ್ಲೊಂದು ಪೆನ್ಸಿಲಿನ್ ತಯಾರುಮಾಡುವ ಕಾರ್ಖಾನೆಯು ಪ್ರಾರಂಭವಾಗಲಿದೆ ಈ ಉದ್ಯಮಕ್ಕೆ ವಿಶ್ವಸಂಸ್ಥೆಯ ಆರೋಗ್ಯ ಸಮಿತಿಯವರು, ವಿಶ್ವಸಂಸ್ಥೆಯ ಮಕ್ಕಳನಿಧಿ ಸಂಸ್ಥೆಯವರು, ಭಾರತದ ಸರ್ಕಾರ, ಮೂವರೂ ಒಟ್ಟಾಗಿ ಸಹಾಯಮಾಡಲಿದ್ದಾರೆ

ಹೈದರಾಬಾದಿನಲ್ಲಿ ಹೊಸ ಮಂತ್ರಿಮಂಡಲ

ಹೈದರಾಬಾದಿನಲ್ಲಿ ಹೊಸ ಮಂತ್ರಿಮಂಡಲವು ನಿನ್ನೆ ಅಧಿಕಾರ ಸ್ವೀಕರಿಸಿ, ರಾಜಪ್ರಮುಖರಾದ ನೈಜಾಮರ ಸಮಕ್ಷಮದಲ್ಲಿ ಪ್ರಮಾಣವಚನ ಸ್ವೀಕರಿಸಿತು.

ಮುಖ್ಯಮಂತ್ರಿ ಶ್ರೀ ಬಿ ರಾಮಕೃಷ್ಣರಾವ್‌ರವರು ಸಾಮಾನ್ಯ ಆಡಳಿತ, ರೆವಿನ್ಯೂ, ಶ್ರೀ ದಿಗಂಬರರಾವ್ ಬಿಂದೂ ಒಳಾಡಳಿತ, ಡಾ|| ಜಿ ಎಸ್ ಮೇಲುಕೋಟೆಯವರು ಆರ್ಥಿಕಸಚಿವರಾಗಿರುವರು. ಒಟ್ಟು ಮಂತ್ರಿಮಂಡಲದಲ್ಲಿ ೧೨ ಜನ ಸಚಿವರಿರುವರು. ಶ್ರೀ ಮೇಲ್ಕೋಟೆಯವರು ಮೈಸೂರು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎ ಜಿ ರಾಮಚಂದ್ರರಾಯರ ಸಹೋದರ.

ನೌಕರರ ಮುಷ್ಕರ

ತಮ್ಮ ಕೋರಿಕೆಗಳನ್ನು ಈಡೇರಿಸಲಿಲ್ಲವೆಂದು ಅಲಹಾಬಾದಿನ ವಿಶ್ವವಿದ್ಯಾನಿಲಯದ ಒಟ್ಟು ೪೦೦ ಜನ ನೌಕರರು ಮಂಗಳವಾರದಿಂದ ಮುಷ್ಕರ ಹೂಡಿರುವರು.

ಚಿನ್ನ, ಬೆಳ್ಳಿ ಬೆಲೆ ಇಳಿತಾಯ

ಚಿನ್ನದ ಬೆಲೆಯು ಅನಧಿಕೃತವಾಗಿ ತೊಲ ೧ಕ್ಕೆ ೮೪-೮೫ ರೂ ಬೆಳ್ಳಿ ೧೦೦ ತೊಲಕ್ಕೆ ೧೬೪-೬೫ ರೂಪಾಯಿಗಳಾಗಿ ಬೊಂಬಾಯಿ ಚಿನಿವಾರಪೇಟೆಯನ್ನು ಮುಚ್ಚಲಾಗಿದೆ.

ತಿರುವಾಂಕೂರು-ಕೊಚ್ಚಿನ್ ಕಾಂಗ್ರೆಸ್ ಮಂತ್ರಿಮಂಡಲ

ತಿರುವಾಂಕೂರು-ಕೊಚ್ಚಿನ್ ರಾಜ್ಯದಲ್ಲಿ ಕಾಂಗ್ರೆಸ್ ಮಂತ್ರಿಮಂಡಲವನ್ನು ಸ್ಥಾಪಿಸಲು ಅಲ್ಲಿಯ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಮಿ|| ಎ ಜೆ ಜಾನ್‌ರವರು ಕಾಂಗ್ರೆಸ್ ಹೈಕಮಾಂಡ್ ಒಪ್ಪಿಗೆಗಾಗಿ ೬ ಜನರ ಹೆಸರಿನ ಪಟ್ಟಿಯನ್ನು ದೆಹಲಿಗೆ ಕಳುಹಿಸಿರುವುದಾಗಿ ತಿಳಿದುಬರುತ್ತದೆ.

ವಿರೋಧಪಕ್ಷದ ನಾಯಕರು

ಪಾರ್ಲಿಮೆಂಟಿನಲ್ಲಿ ವಿರೋಧಪಕ್ಷದ ನಾಯಕರನ್ನಾಗಿ ಶ್ರೀಮತಿ ಸುಚೇತಾ ಕೃಪಲಾನಿಯವರನ್ನು ಆರಿಸಲಾಗುತ್ತದೆಯೆಂದು ಹೇಳಲಾಗಿದೆ.

ಬ್ಯಾಂಕಿಂಗ್ ಕಂಪೆನಿಗಳಿಗೆ ಲೈಸನ್ಸ್

೧೯೫೨ನೇ ಏಪ್ರಿಲ್‌ನಿಂದ ಬ್ಯಾಂಕಿಂಗ್ ಕಂಪೆನಿಗಳಿಗೆ ಲೈಸನ್ಸನ್ನು ಕೊಡಲು ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ನಿರ್ಧರಿಸಿದೆ. ಲೈಸೆನ್ಸುಗಳನ್ನು ೧೯೪೯ ರ ಬ್ಯಾಂಕಿಂಗ್ ಕಾನೂನಿನ ೨೨ನೇ ವಿಧಿಯ ಷರತ್ತುಗಳಿಗೆ ಅನುಸಾರವಾಗಿದ್ದಲ್ಲಿ ಕೊಡಲಾಗುವುದು.

ರಾಜಕಮಲ್

ತಾ||—೭—೩—೫೨ ರಿಂದ

ಮೂರನೇ ವಾರ

[ಪ್ರತಿದಿನ ಮೂರು ಆಟಗಳು]

ಸರ್ವೋದಯರವರ

ಮಾನವತಿ (ತೆಲುಗು)

ಭೂಮಿಕೆ—ಜಿ. ವರಲಕ್ಷ್ಮೀ, ಶ್ರೀರಂಜನಿ, ನಾರಾಯಣರಾವ್, ರೇಲಂಗಿ, ಶಿವರಾವ್, ಮುಕ್ಕಾಮುಲ ಮುಂತಾದವರು.

ವುಡ್ ಲ್ಯಾಂಡ್ಸ್

೭—೩—೫೨ ರಿಂದ

ಅಮೋಘವಾದ ೪ನೇ ವಾರ

ದಿನವಹಿ ೩ ಪ್ರದರ್ಶನಗಳು

ಅಲ್ ಬೇಲ.

ಪಾತ್ರ:- ಗೀತಾಬಾಲಿ, ಭಗವಾನ್, ಬದರೀಪ್ರಸಾದ್, ಸುಂದರ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೦೦೯) ದಿನಪತ್ರಿಕೆ ರಿ. ನ. ಎಂ. ೫೩೧೨

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೮—೩—೧೯೫೨ನೇ ಶನಿವಾರ [ಸಂಚಿಕೆ ೧೬೩

ದೆಹಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಸಭೆ

ಮೈಸೂರಿನ ಕಾಂಗ್ರೆಸ್ ನಾಯಕ ಚುನಾವಣೆಯ ಅಂತ್ಯತೀರ್ಮಾನ ಈದಿನವಾಗುವ ಸಂಭವ

ದೆಹಲಿಯಲ್ಲಿ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಸಭೆಯು ಪಂಡಿತ ಜವಹರಲಾಲ್‌ರವರ ಅಧ್ಯಕ್ಷತೆಯಲ್ಲಿ ನಡೆದು ವಿವಿಧ ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪಿಸುವ ವಿಷಯವನ್ನೂ, ದೇಶದ ಪರಿಸ್ಥಿತಿಯನ್ನೂ ಮತ್ತು ಕೋಮುವಾರು ಸಂಘಗಳ ವಿಷಯವನ್ನೂ ಪರಿಶೀಲಿಸಿತು ಮದರಾಸಿನಲ್ಲಿ ಕಾಂಗ್ರೆಸ್ ಸರ್ಕಾರ ಸ್ಥಾಪಿಸುವ ವಿಷಯವೂ ಕಾಂಗ್ರೆಸ್ಸಿನ ಅಂಗರಚನೆಯನ್ನೂ ತಿದ್ದುಪಡಿಮಾಡುವ ವಿಷಯವೂ ಸಹ ಕಾಂಗ್ರೆಸ್ ಕಾರ್ಯಕಾರಿಸಮಿತಿಯು ಚರ್ಚಿಸಿ ಸಭೆಯನ್ನು ಈದಿನಕ್ಕೆ ಮುಂದುವರಿಸಲಾಗಿದೆ

ಮದರಾಸಿನ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರು ಈ ದಿನವೇ ದೆಹಲಿಗೆ ಬರಲು ಆಹ್ವಾನ ಕೊಡಲಾಗಿದೆ. ಆದರೆ ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸಬೇಕಾಗಿರುವುದರಿಂದ ಈಗಲೇ ಬರಲಾಗುವುದಿಲ್ಲವೆಂದು ಶ್ರೀ ರಾಜಾರವರು ತಿಳಿಸಿರುವುದಾಗಿ ಹೇಳಲಾಗಿದೆ.

ಮೈಸೂರಿನ ಶಾಸನಸಭೆಗೆ ನಾಯಕರನ್ನು ಆರಿಸುವ ವಿಷಯವು ನಿನ್ನೆ ತೀರ್ಮಾನವಾಗಿಲ್ಲವೆಂದೂ ಬಹುಶಃ ಈದಿನ ತೀರ್ಮಾನವಾಗುವುದೆಂದೂ ಹೇಳಲಾಗಿದೆ

೨ ವರ್ಷ ಕಠಿಣಶಿಕ್ಷೆ

ಬೆಂಗಳೂರು ಮಾ ೭

ಕಳೆದ ೩ನೇ ತಾ|| ಗಾಂಧಿನಗರದಲ್ಲಿರುವ ಸೆಂಟ್ರಲ್‌ಬ್ಯಾಂಕ್ ಆಫ್ ಇಂಡಿಯಾದಿಂದ ೧೦ ಸಾವಿರ ರೂ ನೋಟುಗಳನ್ನು ಅಪಹರಿಸಲೆತ್ನಿಸಿದನೆಂದು ಮದರಾಸಿನ ಖಾದರ್‌ಹುಸೇನ್ ಎಂಬುವವನನ್ನು ಹಿಡಿಯಲಾಗಿತ್ತಷ್ಟೆ. ಉಪ್ಪಾರಪೇಟೆ ಪೋಲೀಸ್‌ನವರು ೨ನೇ ನಗರ ನ್ಯಾಯಾಧೀಶರ ಮುಂದೆ ಐ ಪಿ ಸಿ ೩೮೦ನೇ ವಿಧಿಕ್ರಮ ಆಪಾದನೆ ಹೊರಿಸಿ ಹುಸೇನ್ ಮೇಲೆ ಮೊಕದ್ದಮೆ ಹೂಡಿದರು. ೨ನೇ ನಗರ ನ್ಯಾಯಾಧೀಶರಾದ ಶ್ರೀ ಆರ್ ನಾಗರಾಜ್‌ರವರು ಮೊಕದ್ದಮೆಯ ವಿಚಾರಣೆ ನಡೆಸಿ ಆಪಾದಿತನಿಗೆ ೨ ವರ್ಷ ಕಠಿಣಶಿಕ್ಷೆ ವಿಧಿಸಿದರು.

ಮದ್ರಾಸ್ ಕಾಂಗ್ರೆಸ್‌ಪಕ್ಷದ ನಾಯಕತ್ವ

ಕಾಂಗ್ರೆಸ್ಸಿನ ನಾಯಕರಾದ ಡಾ|| ಪಿ. ವರದರಾಜುಲುನಾಯ್ಡುರವರು ಮದರಾಸು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೆ ಸ್ಪರ್ಧಿಸುವುದಾಗಿ ತಮ್ಮ ನಿರ್ಧಾರವನ್ನು ತಿಳಿಸಿರುವರು. ಕಾಂಗ್ರೆಸ್ ಪಕ್ಷದ ಸಭೆಯು ಈತಿಂಗಳಿನ ಕೊನೆಗೆ ಮದ್ರಾಸಿನಲ್ಲಿ ಸೇರುವುದು.

ಬ್ಲಿಡ್ಸ್ ಪತ್ರಿಕಾಕರ್ತರ ಮೇಲೆ ದಸ್ತಗಿರಿ ವಾರೆಂಟ್

ಬೊಂಬಾಯಿಯಿಂದ ಪ್ರಕಟವಾಗುವ ಬ್ಲಿಡ್ಸ್ ಪತ್ರಿಕೆಯಲ್ಲಿ ಕಳೆದ ಸೆಪ್ಟಂಬರ್‌ನಲ್ಲಿ ಉತ್ತರ ಪ್ರದೇಶ ಶಾಸನ ಸಭೆಯ ಸದಸ್ಯರ ಹಕ್ಕು ಬಾಧ್ಯತೆಗೆ ಧಕ್ಕೆ ಬರುವಂತಹ ಲೇಖನ ಬರೆದು ಆ ಶಾಸನಸಭೆಯ ಹಕ್ಕು ಬಾಧ್ಯತಾ ಸಮಿತಿಯು ಈ ಪತ್ರಿಕೆಯ ಸಂಪಾದಕರನ್ನು ವಿವರಣೆ ಕೊಡುವುದಕ್ಕೆ ಬರುವಂತೆ ಅನೇಕ ಬಾರಿ ಪ್ರಾರ್ಥಿಸಿತು. ಈ ಪತ್ರಿಕೆಯ ಸಂಪಾದಕರು ಉತ್ತರ ಪ್ರದೇಶ ಶಾಸನಸಭೆಯ ಕೋರಿಕೆಯನ್ನು ಈಡೇರಿಸದಿಲ್ಲವಾಗಿ ಅವರನ್ನು ದಸ್ತಗಿರಿ ಮಾಡಲು ವಾರೆಂಟ್ ಹೊರಡಿಸಬೇಕೆಂದು ಶಾಸನಸಭೆಯು ನಿರ್ಧರಿಸಿ ನಿರ್ಣಯ ಮಾಡಿದೆ ಎಂದು ತಿಳಿಯಬರುತ್ತದೆ.

* ಜಿಲ್ಲಾಧಿಕಾರಿ ಶ್ರೀ ಎಲ್ ಮುನಿಸ್ವಾಮಿಯವರಿಗೆ ಮಂಜೂರಾಗಿದ್ದ ರಜೆಯನ್ನು ಮಾರ್ಚ್ ಅಂತ್ಯದವರೆಗೆ ಹೆಚ್ಚಿಸಲಾಗಿದೆ.

ನ್ಯೂಯಾರ್ಕಿಗೆ

ಐ ಎನ್ ಟಿ ಯು. ಸಿ. ಕಾರ್ಯದರ್ಶಿಗಳಾದ ಶ್ರೀ ಹರಿಹರನಾಥಶಾಸ್ತ್ರಿಯವರು, ನ್ಯೂಯಾರ್ಕಿನಲ್ಲಿ ಸೇರುವ ಅಂತರಾಷ್ಟ್ರೀಯ ಕಾರ್ಮಿಕರ ಸಂಸ್ಥೆಯ ಕಾರ್ಯಕಾರಿಸಮಿತಿಯ ಸಭೆಯಲ್ಲಿ ಭಾಗವಹಿಸಲು ಪ್ರಯಾಣಮಾಡಿದರು.

ಪ್ರತಿಭಟನೆ

ಪಶ್ಚಿಮಪಾಕಿಸ್ಥಾನದಲ್ಲಿ ಭಾರತದ ಚಲನಚಿತ್ರಗಳ ಮೇಲೆ ಶೇಕಡ ೨೦ ರಷ್ಟು ಮಾರಾಟತೆರಿಗೆಯನ್ನು ಪಾಕಿಸ್ಥಾನ ಸರ್ಕಾರವು ವಿಧಿಸಿರುವುದಕ್ಕೆ ಭಾರತಸರ್ಕಾರವು ಪ್ರತಿಭಟನೆಯನ್ನು ಸೂಚಿಸಿದೆ.

ಪ್ರವಾಸ

ಕೇಂದ್ರ ಸರ್ಕಾರದ ಆಹಾರಶಾಖೆಯ ಸಚಿವರಾದ ಶ್ರೀ ಕೆ. ಎಂ. ಮುನ್ಷಿಯವರು ನಾಳೆ ಮದರಾಸಿನ ಕ್ಷಾಮಪೀಡಿತ ಪ್ರದೇಶದಲ್ಲಿ ಪ್ರವಾಸಮಾಡುವರು.

ನಿನ್ನೆ ಮದರಾಸಿನ ಆಹಾರ ಇಲಾಖೆಯವರೊಂದಿಗೆ ಕೇಂದ್ರಸರ್ಕಾರದ ಆಹಾರ ಇಲಾಖೆಯ ಡೈರೆಕ್ಟರ್ ಶ್ರೀ ಕೃಷ್ಣಸ್ವಾಮಿಯವರು ಮಾತುಕಥೆ ನಡೆಸಿದರು.

ಶ್ರೀಮತಿ ರೂಸ್‌ವೆಲ್ಟರ ನಿರ್ಗಮನ

ಮೈಸೂರು ಮಾ ೭

ಶ್ರೀಮತಿ ರೂಸ್‌ವೆಲ್ಟರವರು ಈದಿನ ಬೆಳಿಗ್ಗೆ ಮಹಾರಾಜಾ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣಮಾಡಿ ಅನಂತರ ಆಹಾರ ಸಂಶೋಧನಾಕೇಂದ್ರಕ್ಕೆ ಭೇಟಿಯಿತ್ತು, ಅಲ್ಲಿಯ ಕೆಲಸಕಾರ್ಯಗಳನ್ನು ನೋಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಶ್ರೀಮತಿಯವರು ಮೈಸೂರಿನಿಂದ ಶ್ರೀರಂಗಪಟ್ಟಣಕ್ಕೆ ಭೇಟಿಯಿತ್ತು, ಚರಿತ್ರಾರ್ಹ ಪ್ರದೇಶಗಳನ್ನೆಲ್ಲಾ ನೋಡಿ, ಸೋಮನಾಥಪುರಕ್ಕೆ ತೆರಳಿ ಅಲ್ಲಿಯ ದೇವಸ್ಥಾನವನ್ನು ನೋಡಿಕೊಂಡು ಬೆಂಗಳೂರಿಗೆ ಮೋಟಾರಿನಲ್ಲಿ ಪ್ರಯಾಣಮಾಡಿದರು.

ಶ್ರೀಮತಿ ಎಲಿನಾರ್ ರೂಸ್ವೆಲ್ಟರು ಆಹಾರಸಂಶೋಧನಾಲಯದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತಾಡಿ ಇಂತಹ ಕೇಂದ್ರದಲ್ಲಿ ಭಾರತಕ್ಕೆ ಮಾತ್ರವಲ್ಲದೆ ಇತರ ದೇಶಗಳಿಗೂ ಸಹಾಯವಾಗುವುದೆಂದು ಆಶಿಸಿದರು.

ಪ್ರಧಾನಿ ನೆಹ್ರೂರವರ ಅನುತಾಪ

ಜಪಾನಿನ ಹೊಕ್ಕೈಡೋದ್ವೀಪದಲ್ಲಿ ಅಗ್ನಿಪರ್ವತದ ಹಾವಳಿಗೆ ಸಿಲುಕಿ ಮೃತರಾದವರಿಗೆ ಮತ್ತು ಕಷ್ಟನಷ್ಟಗಳಿಗೆ ಒಳಗಾದವರಿಗೆ ಭಾರತಸರ್ಕಾರ ಮತ್ತು ಜನತೆಯ ಪರ ಪಂಡಿತ ನೆಹ್ರೂರವರು ಒಂದು ಸಂದೇಶವನ್ನು ಕಳುಹಿಸಿ ಅನುತಾಪ ವ್ಯಕ್ತಪಡಿಸಿರುವರು.

ಬೊಂಬಾಯಿಯಲ್ಲಿ ಶ್ರೀಮನ್ ಮಹಾರಾಜರು

ಬೊಂಬಾಯಿಯಲ್ಲಿ ಮೂರುದಿನಗಳ ಕಾರ್ಯಕಲಾಪಗಳನ್ನು ಹೊಂದಿರುವ ಶ್ರೀಮನ್ಮಹಾರಾಜರು ನಿನ್ನೆ ಬೊಂಬಾಯಿಯನ್ನು ತಲುಪಿ ಅಲ್ಲಿನ ಗೌರ್ನರ್‌ರವರ ಅತಿಥಿಗಳಾಗಿರುವರು.

ಶ್ರೀಮನ್ಮಹಾರಾಜರನ್ನು ರೈಲ್ವೇನಿಲ್ದಾಣದಲ್ಲಿ ಬೊಂಬಾಯಿಯ ಮೇಯರ್ ಶ್ರೀ ಎಸ್. ಕೆ. ಪಾಟೀಲ್, ವ್ಯವಸಾಯ ಮಂತ್ರಿ ಎಂ. ಪಿ. ಪಾಟೀಲ್. ಶ್ರೀಗಳಾದ ಜಿ. ಎನ್. ಅಯ್ಯರ್, ಎನ್. ಎಸ್. ಗುಬ್ಬಿ ಮುಂತಾದ ಅನೇಕ ಮಹನೀಯರು ಸ್ವಾಗತಿಸಿ ಪುಷ್ಪಹಾರಗಳನ್ನು ಅರ್ಪಿಸಿದರು.

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು
ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.

ಹೆಚ್ಚಿನ ವಿವರಗಳಿಗೆ ಬರೆಯಿರಿ—

ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

೨೧ ದಿನಗಳ ನಿರಶನ ವ್ರತ

ದಕ್ಷಿಣಾಫ್ರಿಕಾ ಸರ್ಕಾರದ ವರ್ಣಭೇದ ಶಾಸನದ ವಿರುದ್ಧ ನಡೆವ ಸತ್ಯಾಗ್ರಹದಲ್ಲಿ ಭಾಗವಹಿಸಲು ಆತ್ಮ ಪರಿಶುದ್ಧಿಗಾಗಿ ೨೧ ದಿನಗಳ ಉಪವಾಸ-ಪ್ರಾರ್ಥನೆಯನ್ನು ಮಹಾತ್ಮರ ಪುತ್ರ ಮಣಿಲಾಲ್ ಗಾಂಧಿ ಪ್ರಾರಂಭಿಸಿದ್ದಾರೆ.

ಮೈಸೂರಿಗೆ ಕೇಂದ್ರದಿಂದ ಧಾನ್ಯ

ಮಾರ್ಚ್ ತಿಂಗಳಿಗೆ ಮೈಸೂರಿಗೆ ೧೦,೦೦೦ ಟನ್ ಗೋಧಿ ಮತ್ತು ೫ ಸಾವಿರ ಟನ್ ಮೈಲೋವನ್ನು ಕೇಂದ್ರ ಸರ್ಕಾರ ಅಲಾಟ್‌ಮಾಡಿದೆ.

ಮದರಾಸಿಗೆ ೮೧೦ ಸಾವಿರ ಟನ್ ಅಕ್ಕಿ, ೩೪,೯೦೦ ಗೋಧಿ ೧೭೭೦೦೦ ಟನ್ ಮೈಲೋ ಕೊಡಲಾಗಿದೆ. ತಿರುವಾಂಕೂರು ಕೊಚ್ಚಿನ್‌ಗೆ ೨೨,೦೦೦ ಟನ್ ಅಕ್ಕಿ, ೨೦,೦೦೦ ಟನ್ ಗೋಧಿ ಅಲಾಟ್‌ಮಾಡಿದೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ ಶ್ರೀ ನೃತ್ಯ ಕಲಾಮಂದಿರ ಮೈಸೂರು

ಸಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಮತ್ತು ಚಲನಚಿತ್ರಗಳಲ್ಲಿ ಅಭಿನಯಿಸಲು ಅವಕಾಶವನ್ನು ಕೊಡಲಾಗುವುದು. ಆಸಕ್ತಿವುಳ್ಳವರು ಇಂದೇ ವಿಚಾರಿಸಿರಿ

ವ್ಯವಸ್ಥಾಪಕ.

ವುಡ್ ಲ್ಯಾಂಡ್ಸ್

೭—೩—೫೨ ರಿಂದ

ಅಮೋಘವಾದ ೪ನೇ ವಾರ

ದಿನವಹಿ 3 ಪ್ರದರ್ಶನಗಳು

ಅಲ್ ಬೇಲ

ಪಾತ್ರ:- ಗೀತಾಬಾಲಿ, ಭಗವಾನ್, ಬದರೀಪ್ರಸಾದ್, ಸುಂದರ್.

ರ ಣ ಜಿ ತ್

೭-೩-೫೨ರಿಂದ ಅಮೋಘ ೭ನೇ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆ ವಾ ರ ::—

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಸುಬ್ರಹ್ಮಣ್ಯಯ್ಯ ಜೈಹಿಂದ್ ಪ್ರೆಸ್, ಮೈಸೂರು

TENDER NOTICE

Sealed tenders for the supply of Provisions, etc., to the Palace for the year 1952-53 i. e., from 1-4-1952 to 31-3-53 will be received by the undersigned at 10 A. M. on 15 th March 1952 at the Palace Office, Mysore. Particulars can be had from the Bakshi, Palace Mothikhana Department, Mysore.

H.N. PALLEGAR
Huzur Secretary

ನ್ಯೂ ಅಪೇರ

೭—೩—೫೨ ರಿಂದ ೩ ನೇ ವಾರ

"ಸ್ತ್ರೀಸಾಹಸಂ" ತಯಾರಿಸಿರುವ ವಿನೋದ ಪ್ರದರ್ಶಕರವರ

ಶಾಂತಿ (ತೆಲುಗು)

ಪಾತ್ರ :—ಚಂದ್ರಕುಮಾರಿ. ಸಾವಿತ್ರಿ, ಹೇಮಲತಾ, ಡಾ|| ಸುಬ್ಬರಾವ್.

OFFICE OF THE MUNICIPAL COMMISSIONER,
CITY MUNICIPAL OFFICE, MYSORE.

NOTIFICATION

Dated 4-3-1952

Notice is hereby given to the inhabitants of the Municipality of Mysore that the Municipal Council desire to amend the Bye-laws relating to the markets contained in Chapter XIV of the Municipal Rules and Bye-laws so as to effect the following amendments.

NO. AND WORDING OF THE BYE-LAW NOW EXISTING	NO. AND WORDING OF HE BYE-LAW AS PROPOSED
8. Every shop--keeper, stallholder or permanent vendor, who may employ another person to act in his stead shall declare the fact to the Market Daroga, who shall enter the name of the said substitute on the back of the rent receipt.	(8) No shop-keeper, stall holder vendor or lessee of any place or shop in the market shall employ or sublet to another person or otherwise dispose of or employ any person to work in his shop or permit any person whatsoever to use in whole or part any such shop, stall or any place in the market, without previo--usly obtaining in writing, the permission of the Managing Committee or the Municipal Council. "Provided that such previous permission in writing shall not be necessary in a case where a tenant while being in actual charge or possession of the premises leased out to him, wishes to employ a paid servant to give him assistance in the place or shop leased out to him and it would be sufficient in such a case if the employment of the servant in question is intimated to the Managing Committee or the Council whosh all have the right to permit the employment of the servant or to refuse the employment of the servant, on a consideration of the merits of each case."
9 A. No shop, stall or permanent sitting stall sub--let without the sanciton of the President.	9 (A) Every lefsse of any such stall, except the daily fee stall who pays the contractor, shall execute a mutchalika in the form approved by the Managing Committee.

TO BE NEWLY ADDED AS BYE-LAW NO. 20 A

"Any violation of the breach of comditions of agreement or any bye-laws will render the lessee liable for cancellation of the agreement, eviction and other penalties imposed under the Act and bye-laws."

Any inhabitant of the Municipality objecting to the proposed amendment may within one month from the date of this notice send his objections in writing to the Municipal Council.

(Sd) M S Swaminathan
Municipal Commissioner.

ಫೋನ್ ೫೭೪ (ಲೀಗ್) ದಿನಪತ್ರಿಕೆ ರಿ. ನ. ಎಂ. ೫೩೧೨

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೧—೩—೧೯೫೨ನೇ ಮಂಗಳವಾರ [ಸಂಚಿಕೆ ೧೭೪

ಒಪ್ಪಂದಕ್ಕೆ ಬಾರದಿದ್ದಲ್ಲಿ ಬೇರೆ ನಾಯಕರನ್ನು ಚುನಾಯಿಸಿ

ಭಾರತದಲ್ಲೆಲ್ಲಾ ಅತ್ಯಂತ ದೊಡ್ಡ ಪೆನ್ಸಿಲಿನ್ ಕಾರ್ಖಾನೆ

ಪರಿಸ್ಥಿತಿ ಸಾಮಾನ್ಯಮಟ್ಟಕ್ಕೆ ಬರುವಂತೆ ನೋಡಿಕೊಳ್ಳುತ್ತೇವೆ

ದೇಶದ ಹಿತಕ್ಕೆ ವಿರುದ್ಧವಾಗಿ ಪರಿಸ್ಥಿತಿ ತಿರುಗಲು ನಾವೆಂದಿಗೂ ಅವಕಾಶಕೊಡಲಾರೆವೆಂಬ ಬಗ್ಗೆ ನೀವು ನಮ್ಮಲ್ಲಿ ನಂಬಿಕೆಯುಸಿಡಬೇಕು.

ಪರಿಸ್ಥಿತಿ ಸಾಮಾನ್ಯ ಮಟ್ಟಕ್ಕೆ ಬರುವಂತೆ ನಾವು ನೋಡಿಕೊಳ್ಳುತ್ತೇವೆ. ಇದಕ್ಕಾಗಿ ನಾವು ಬಹಳ ಸೂಕ್ಷ್ಮದೃಷ್ಟಿಯಿಂದ ಕಾಯುತ್ತಿದ್ದೇವೆ. ಎಂದು ಭಾರತ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಮಂತ್ರಿ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಹೇಳಿರುವರು

ದಕ್ಷಿಣ ಭಾರತದ ಸೌಂದರ್ಯ ರಾಣಿಯರು

ಮದರಾಸಿನ ಸಶಸ್ತ್ರದಳಗಳ ಅಭಿವೃದ್ಧಿ ಕೇಂದ್ರದಲ್ಲಿ ಮೊನ್ನೆ ನಡೆದ ಸೌಂದರ್ಯ ಸ್ಪರ್ಧೆಯಲ್ಲಿ ಮದರಾಸಿನ ಶ್ರೀಮತಿ ಟಿ. ಸೂರ್ಯಕುಮಾರಿ ಮತ್ತು ಬೆಂಗಳೂರಿನ ಶ್ರೀಮತಿ ಲಲಿತರುದ್ರಾ, ಇವರೀರ್ವರನ್ನೂ ಸೌಂದರ್ಯ ರಾಣಿಯರೆಂಬುದಾಗಿ ಶೀ ವರ್ಣಿಸಲಾಯಿತು.

ಶ್ರೀಮತಿ ಹೇಮವತಾಲಿನಿ ವಿಜಯರಾಘವನ್ ಮತ್ತು ಬೆಂಗಳೂರಿನ ಶ್ರೀಮತಿ ಲೀಲಾ ಭಗವಂತರಾಜ್‌ರವರನ್ನು ಸೌಂದರ್ಯ ಸ್ಪರ್ಧೆಯಲ್ಲಿ ದ್ವಿತೀಯ ದರ್ಜೆಗೆ ಸೇರಿಸಲಾಯಿತು. ಇವರನ್ನೂ ಸಹ ಆಯ್ಕೆಗಾಗಿ ಬೊಂಬಾಯಿಗೆ ಕಳುಹಿಸಲಾಗುವುದು. ಈ ಸ್ಪರ್ಧೆಯಲ್ಲಿ ಒಟ್ಟು ೧೨ ಮಂದಿ ಯುವತಿಯರು ಭಾಗವಹಿಸಿದ್ದರು.

ಪಾಕೀಸ್ಥಾನಕ್ಕೆ ೨೦೦ ಲಕ್ಷ ಡಾಲರ್

ಪಾಕೀಸ್ತಾನದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಕ್ಕೆ ೨೦೦ ಲಕ್ಷ ಡಾಲರ್ ಸಹಾಯನೀಡುವ ಹೊಸ ಸಂಧಾನವನ್ನು ಅಮೆರಿಕವು ನಡೆಸಿದೆಯೆಂದು ತಿಳಿಯಬರುತ್ತದೆ.

೧೨ನೇ ತಾ|| ಟೆಲಿಗ್ರಾಫ್ ರಜ

೧೨ನೇ ತಾ|| ಹೋಲಿ ಹಬ್ಬದ ಪ್ರಯುಕ್ತ 'ಟೆಲಿಗ್ರಾಫ್' ಆಫೀಸಿಗೆ ರಜ ಕೊಡಲಾಗಿದೆ.

ತೆಂಗಿನಕಾಯಿ ಸಮಿತಿಸಭೆ

ಬೆಂಗಳೂರು ೧೦

ಕೇಂದ್ರಸರ್ಕಾರದ ಆಹಾರಶಾಖೆಯ ಉಪಸಚಿವ ಶ್ರೀ ಬಿ ತಿರುಮಲರಾಯರ ಅಧ್ಯಕ್ಷತೆಯಲ್ಲಿ ಶಾಸನ ಸಭಾಭವನದಲ್ಲಿ ಅಖಿಲಭಾರತ ತೆಂಗಿನಕಾಯಿ ಸಮಿತಿಸಭೆಯು ನಾಳಿದ್ದು ನಡೆಯುತ್ತದೆ.

ಮಳೆ ಬಿದ್ದು ೨೬ ಲಕ್ಷ ರೂ. ನಷ್ಟ

ಗ್ವಾಲಿಯರ್‌ನಲ್ಲಿ ಮಾರ್ಚ್ ೧ ರಂದು ಬಿರುಸಾದ ಆಲಿಕಲ್ಲು ಮಳೆಬಿದ್ದು ೨೬ ಲಕ್ಷ ರೂಗಳಷ್ಟು ಬೆಲೆಬಾಳುವ ಬೆಳೆ ನಷ್ಟವಾಗಿದೆಯೆಂದು ಅಂದಾಜು ಮಾಡಲಾಗಿದೆ. ಮಳೆ ಪೀಡಿತಗ್ರಾಮಗಳಿಂದ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ವರದಿಗಳು ಬಂದಿವೆ.

ಎರಡು ಲಕ್ಷ ಟನ್‌ಗಳಷ್ಟು ನಷ್ಟವನ್ನು ಅಂದಾಜು ಮಾಡಲಾಗಿದೆ.

ಭಾವಚಿತ್ರ ಅನಾವರಣ

ಸರ್ ಮೋಕ್ಷಗುಂಡಂರವರ ಕಾರ್ಯವನ್ನು ಪ್ರಶಂಸಿಸುತ್ತ, ಮೈಸೂರು ರಾಜಪ್ರಮುಖರು, 'ಮೈಸೂರಿಗರು ಎಲ್ಲೆಲ್ಲಿದ್ದರೂ ಅವರಿಗೆ ಶ್ರೀಯುತರು ಸ್ಫೂರ್ತಿಯ ಕೇಂದ್ರ' ಎಂದು ಸರ್ ಎಂ ವಿಶ್ವೇಶ್ವರಯ್ಯನವರ ಭಾವಚಿತ್ರ ಅನಾವರಣ ಮಾಡುತ್ತಾ ಹೇಳಿದರು.

ಮುಂದುವರಿದು ರಾಜಪ್ರಮುಖರು, ಮೈಸೂರಿನ ಹೆಸರು ಕೀರ್ತಿಗಳನ್ನು ರಾಷ್ಟ್ರಾದ್ಯಂತ ಎತ್ತಿ ಹಿಡಿಯಲು ಸರ್ ಮೋಕ್ಷಗುಂಡಂ ಸೇವಾಗಿರುವರೆಂದೂ, ದಿವಾನರಾಗಿರುವಾಗಲೂ, ಅನಂತರವೂ ಅವರು ಮಾಡಿದ ಕಾರ್ಯ ಸ್ಮರಣೀಯವೆಂದೂ, ಕೃಷ್ಣರಾಜಸಾಗರದ ಅಣೆಕಟ್ಟು, ಭದ್ರಾವತಿ ಕಬ್ಬಿಣದ ಕಾರ್ಖಾನೆ, ಹಾಗೂ ರೈಲ್ವೇ ವಿಸ್ತರಣವು ಅವರ ಪ್ರತಿಭೆಗೆ ಸಾಕ್ಷಿಯೆಂದೂ ನುಡಿದರು. ಸರ್ ಎಂ ವಿಶ್ವೇಶ್ವರಯ್ಯನವರು ಬೊಂಬಾಯಿನ ಮೈಸೂರು ಸಂಘದ ಗೌರವ ಸದಸ್ಯರು.

ಕೈಗಾರಿಕಾ ನಿಪುಣರ ಆಗಮನ

ಜಪಾನಿನಿಂದ ಭಾರತಕ್ಕೆ ೧೨ ಜನ ಕೈಗಾರಿಕಾ ನಿಪುಣರು ಆಗಮಿಸುವರು. ಇವರು ಭಾರತದೊಡನೆ ವಾಣಿಜ್ಯ ಒಪ್ಪಂದದ ಬಗ್ಗೆ ಮಾತುಕಥೆ ನಡೆಸುವರು ಇವರು ಭಾರತದ ಬೊಂಬಾಯಿ, ಕಲ್ಕತ್ತಾ, ಬೆಂಗಳೂರಿಗೆ ಭೇಟಿಯಿತ್ತು, ಇಲ್ಲಿನ ಕೈಗಾರಿಕೆಗಳನ್ನು ವೀಕ್ಷಿಸುವರು.

ನಾಯಕರ ಚುನಾವಣೆ ಈ ಮಾಹೆಯ ಕೊನೆಗೆ

ಮದರಾಸಿನ ಶಾಸನಸಭೆಯ ಕಾಂಗ್ರೆಸ್ ಪಕ್ಷದವರು ಈ ತಿಂಗಳ ಕೊನೆಯ ವೇಳೆಗೆ ತಮ್ಮ ಪಕ್ಷದ ನಾಯಕರನ್ನು ಚುನಾಯಿಸುವರೆಂದು ಹೇಳಲಾಗಿದೆ.

ಮಿಡಿತೆಕಾಟ ತಪ್ಪಿಸಲು ಕಾರ್ಯಕ್ರಮ

ಈ ತಿಂಗಳು ಅಂತ್ಯದೊಳಗೆ ಟೆಹರಾನಿನಲ್ಲಿ ಭಾರತ ಪಾಕೀಸ್ತಾನ ಮತ್ತು ಪರ್ಷಿಯದ ಪ್ರತಿನಿಧಿಗಳು ಕಲೆತು ಮಿಡಿತೆಕಾಟವನ್ನು ತಪ್ಪಿಸಲು ಸಂಯುಕ್ತ ಕಾರ್ಯಕ್ರಮ ಕೈಕೊಳ್ಳುವಬಗ್ಗೆ ಸಮಾಲೋಚಿಸುವರು.

ಜರ್ಮನಿಗೆ ರಾಯಭಾರಿ

ಭಾರತವು ಜರ್ಮನಿಯೊಂದಿಗೆ ರಾಯಭಾರ ಸಂಬಂಧ ಹೊಂದಲು ನಿರ್ಧರಿಸಿ ಶ್ರೀ ಎಸ್ ದತ್‌ರವರನ್ನು ಜರ್ಮನಿಗೆ ರಾಯಭಾರಿಯನ್ನಾಗಿ ನೇಮಿಸಿದೆ.

ಜರ್ಮನಿಯು ಡಾ|| ಎಸ್ ಡಬ್ಲ್ಯು ಮೈರ್‌ರವರನ್ನು ಭಾರತದಲ್ಲಿ ರಾಯಭಾರಿಯನ್ನಾಗಿ ನೇಮಿಸಿದೆ.

ಮುಕ್ತಾಯಭಾಷಣ

ಮೈಸೂರು ಮಾ ೧೦

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಇಂದು ಬೆಳಗ್ಗೆ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. ಮಧ್ಯಾಹ್ನ ಶ್ರೀಯುತರು ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಸಂಘ, ಪ್ರಥಮದರ್ಜೆ ಕಾಲೇಜು ಸಂಘಗಳಲ್ಲಿ ಮುಕ್ತಾಯಭಾಷಣಮಾಡಿ ರಾತ್ರಿಯೇ ಬೆಂಗಳೂರಿಗೆ ಹಿಂತಿರುಗಿದರು.

* ಜಪಾನಿನ ಹೊಕ್ಕಾಡೊ ದ್ವೀಪದಲ್ಲಿ ಮತ್ತೆ ಭೂಕಂಪವಾಗಿದೆ, ಸಾವು ನೋವಿನ ವರದಿಯಾಗಿಲ್ಲ.

ಜೀಹಾರಿನ ಕಾಂಗ್ರೆಸ್ ಪಕ್ಷದಲ್ಲಿ ನಾಯಕರಾಗಬೇಕೆಂದಿರುವ ಶ್ರೀ ಕೃಷ್ಣಸಿನ್ಹ ಮತ್ತು ಶ್ರೀ ಅನುಗ್ರಹ ನಾರಾಯಣ ಸಿನ್ಹರವರಲ್ಲಿ ಪಕ್ಷದ ನಾಯಕರ ಚುನಾವಣೆಗೊಮ್ಮತವೇರ್ಪಡದಿದ್ದರೆ ಮೂರನೆಯವರನ್ನು ಚುನಾಯಿಸಿಕೊಳ್ಳಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹ್ರೂರವರು ಅಲ್ಲಿಯ ಕಾಂಗ್ರೆಸ್ ಅಧ್ಯಕ್ಷರಿಗೆ ತಿಳಿಸಿರುವುದಾಗಿ ಹೇಳಲಾಗಿದೆ.

ಪ್ರತಿಭಟನಾ ದಿನಾಚರಣೆ

ದಕ್ಷಿಣಆಫ್ರಿಕಾ ಸರ್ಕಾರದ ವರ್ಣಭೇದ ನೀತಿಯನ್ನು ಪ್ರತಿಭಟಿಸಲು ಮುಂದಿನತಿಂಗಳು ಆರನೇ ತಾ|| ದಕ್ಷಿಣ ಆಫ್ರಿಕಾದಾದ್ಯಂತ ಪ್ರತಿಭಟನಾ ದಿನಾಚರಣೆ ಆಚರಿಸಲು ಅಲ್ಲಿನ ಕಾಂಗ್ರೆಸ್‌ಸಮಿತಿ ನಿರ್ಧರಿಸಿದೆ.

ಬಂದರು ವಿಸ್ತರಣಾ ಕಾರ್ಯ

ಭಾರತ ಸರ್ಕಾರವು ತನ್ನ ಪಂಚವಾರ್ಷಿಕ ಯೋಜನೆ ಪ್ರಕಾರ ೫ ವರ್ಷಗಳಲ್ಲಿ ೭೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಬಂದರುಗಳ ವಿಸ್ತರಣಾ ಕಾರ್ಯವನ್ನು ಮಾಡಲಿದೆ

ಆಂಧ್ರಪ್ರಾಂತ್ಯ ರಚನೆಗೆ ಆತುರಬೇಡ

ಮದರಾಸಿನ ಗೌರ್ನರ್ ಆಗುವ ಶ್ರೀ ಶ್ರೀಪ್ರಕಾಶ್‌ರವರು ಆಂಧ್ರಪ್ರಾಂತರಚನೆ ವಿಷಯವಾಗಿ ಮಾತನಾಡುತ್ತಾ, ಅತ್ಯುನ್ನತ ಮಟ್ಟದಲ್ಲಿರುವ ನಮ್ಮ ನಾಯಕರು ಆಂಧ್ರಪ್ರಾಂತ್ಯ ರಚನೆಯನ್ನು ಒಪ್ಪಿಕೊಂಡಿರುವರು. ಹೇಗೆ ಯಾವಾಗ ಮಾಡಬೇಕೆಂಬುದು ಈಗಿನ ಪ್ರಶ್ನೆ. ಭಾರತಾದ್ಯಂತ ಆಹಾರವು ಮುಖ್ಯ ಪ್ರಶ್ನೆಯಾದುದರಿಂದ ಆಂಧ್ರಪ್ರಾಂತ್ಯರಚನೆಗೆ ಆತುರ ಬೇಡವೆಂದು ಹೇಳಿರುವರು.

ಪ್ರಭಾ * —: ಅ ಮೋ ಘ ಪ್ರಾ ರಂ ಭ :—

೧೪—೩—೫೨ ರಿಂದ -:- ದಿನವಹಿ ೩ ಆಟಗಳು

ಹಿಂದೂಸ್ತಾನ್ ಚಿತ್ರದವರ ಅತ್ಯುತ್ತಮ ಹಿಂದಿ ಚಿತ್ರ

ಸ ಪ್ನ

ತಾರಾಗಣ-:ಕಿಶೋರ್‌ಸಾಹು, ಬಿನಾರಾಯ್, ಹೀರಾಲಾಲ್, ಶಕುಂತಲ, ಕಕ್ಕೂ, ರಾಣಿ ಚಂದಾ (ಹೊಸತಾರೆ)

ನಿರ್ಮಾಪಕ-ಕಿಶೋರ್‌ಸಾಹು ದಿಗ್ದರ್ಶನ-ಕಿದಾರ್‌ಶರ್ಮ

MORNING SHOWS · FROM 14-3-52 FOR 3 DAYS
Bernard shaw's CAESAR & CLEOPATRA
(In Technicolour)

ಭಾರತದ ಕೌನ್ಸಿಲ್ ಆಫ್ ಸ್ಟೇಟ್ ಸಭೆಗೆ

ಮಹಾಮನಾವಣೆಯಲ್ಲಿ ಸೋತವರಿಗೆ ಸ್ಥಾನವಿಲ್ಲ

ಬೆಂಗಳೂರು ಮಾ ೧೦

ಮೈಸೂರು ಸಂಸ್ಥಾನದಿಂದ ಭಾರತ ಕೌನ್ಸಿಲ್ ಆಫ್ ಸ್ಟೇಟಿಗೆ ೬ ಮಂದಿಯನ್ನು ಚುನಾಯಿಸಬೇಕಾಗಿದೆ. ಮೈಸೂರು ಕಾಂಗ್ರೆಸ್ ಚುನಾವಣಾ ಸಮಿತಿಯು ೫ ಮಂದಿ ಕಾಂಗ್ರೆಸ್ಸಿನವರ ಹೆಸರನ್ನು ಕೇಂದ್ರ ಚುನಾವಣಾ ಸಮಿತಿಗೆ ಸೂಚಿಸಿತ್ತು—ಶ್ರೀಗಳಾದ ಹೆಚ್. ಸಿ ದಾಸಪ್ಪ, ಟಿ ಸುಬ್ರಹ್ಮಣ್ಯಂ, ಎಂ ಗೋವಿಂದರೆಡ್ಡಿ, ಬಸಪ್ಪಶೆಟ್ಟಿ ಮತ್ತು ಜಿ ವಲಿಯುಲ್ಲಾ.

ಕೇಂದ್ರ ಚುನಾವಣಾ ಸಮಿತಿಯು ಈ ಪಟ್ಟಿಯಲ್ಲಿ ಐಕ್ಯತೆಯ ವಿಷಯದಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಹನುಮಂತಯ್ಯನವರೊಡನೆ ಟೆಲಿಫೋನ್ ಮೂಲಕ ಮಾತುಕತೆ ನಡೆಸಿ ಕೊನೆಗೆ ಮಹಾಚುನಾವಣೆಯಲ್ಲಿ ಪರಾಜಿತರಾದ ಶ್ರೀಗಳಾದ ಹೆಚ್ ಸಿ ದಾಸಪ್ಪ ಮತ್ತು ಸುಬ್ರಹ್ಮಣ್ಯಂರವರು ಕೌನ್ಸಿಲ್ ಆಫ್ ಸ್ಟೇಟಿಗೆ ಸ್ಪರ್ಧಿಸಲು ತನ್ನ ಒಪ್ಪಿಗೆಯನ್ನೀಯದೆ ಕೇಂದ್ರ ಚುನಾವಣಾಸಮಿತಿಯು ಶ್ರೀಗಳಾದ ಎಂ ಶಂಕರಯ್ಯ, ಎಸ್ ವಿ ಕೃಷ್ಣಮೂರ್ತಿರಾವ್, ಬಸಲಿಂಗಪ್ಪ, ಬಿ ಪಿ ಬಸಪ್ಪಶೆಟ್ಟಿ ಮತ್ತು ಜ॥ ವಲಿಯುಲ್ಲಾರವರನ್ನು ಆರಿಸಿದೆ

ಶ್ರೀ ಎಂ ಶಂಕರಯ್ಯ ಮತ್ತು ಶ್ರೀ ಎಸ್ ವಿ ಕೃಷ್ಣಮೂರ್ತಿರಾಯರನ್ನು ಮೈಸೂರು ಕಾಂಗ್ರೆಸ್ ಚುನಾವಣಾ ಸಮಿತಿಯು ಮೈಸೂರು ಹಿರಿಯ ಶಾಸನಸಭೆಗೆ ಸ್ಪರ್ಧಿಸಲು ಚುನಾಯಿಸಿತು.

ಬೊಂಬಾಯಿನಲ್ಲಿರುವ ಮೈಸೂರು ಸಂಘ 'ಅನಧಿಕೃತ ರಾಯಭಾರಿ'

ಬೊಂಬಾಯಿ ಮಾ ೯

ಮೈಸೂರಿನವರು ಎಲ್ಲೇ ವಾಸಿಸಿದರೂ, ಮೈಸೂರಿಗೆ ಕೀರ್ತಿ ತರುವಂತೆ ವಾಸಿಸುವ ಸ್ಥಳದ ಜನರ ಸೇವೆಸಲ್ಲಿಸಿದ್ದಾರೆ ಬೊಂಬಾಯಿನಲ್ಲಿರುವ ಮೈಸೂರು ಸಂಘವನ್ನು ನಾವು ಮೈಸೂರಿನ 'ಅನಧಿಕೃತ ರಾಯಭಾರಿ'ಯೆಂದು ಕರೆಯಬಹುದು ಎಂದು ಮೈಸೂರಿನ ಶ್ರೀಮನ್ಮಹಾರಾಜರು ಬೊಂಬಾಯಿ ಮೈಸೂರು ಸಂಘದ ರಜತ ಮಹೋತ್ಸವದ ಸಂದರ್ಭದಲ್ಲಿ ಮಾತನಾಡುತ್ತಾ ತಿಳಿಸಿದರು.

ಹೊಸ ಶಾಸನಸಭಾಧಿವೇಶನ

ಇದೇ ಮಾಹೆ ೨೧ನೇ ತಾರೀಖು ಹೈದರಾಬಾದಿನಲ್ಲಿ ಹೊಸ ಶಾಸನಸಭಾಧಿವೇಶನವು ಪ್ರಾರಂಭವಾಗುವುದು.

ಭಾರತದಲ್ಲಿ ನೂತನ ಟಂಕಸಾಲೆ

ಭಾರತದಲ್ಲೆಲ್ಲಾ ಅಂತ್ಯತ ದೊಡ್ಡದಾದ ಟಂಕಸಾಲೆಯನ್ನೊಂದು ಕಲ್ಕತ್ತಾ ಬಳಿ ಅಲೀಪುರನಲ್ಲಿ ಇದೇ ಮಾಹೆ ೧೯ನೇ ತಾರೀಖು ಭಾರತ ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಪ್ರಾರಂಭ ಮಾಡಲಿರುವರು.

ಈ ಟಂಕಸಾಲೆಯನ್ನು ಸುಮಾರು ೨ ಕೋಟಿ ರೂಪಾಯಿಗಳ ವೆಚ್ಚದಿಂದ ಕಟ್ಟಲಾಗುತ್ತಲಿದೆ. ಇಲ್ಲಿ ದಿನ ಒಂದಕ್ಕೆ ಸುಮಾರು ೧೨ ಲಕ್ಷ ನಾಣ್ಯಗಳನ್ನು ತಯಾರಿಸಿ, ಭಾರತಕ್ಕೆ ಬೇಕಾಗುವ ಎಲ್ಲಾ ನಾಣ್ಯಗಳನ್ನು ತಯಾರಿಸುವುದಲ್ಲದೆ ವಿದೇಶೀಗಳ ನಾಣ್ಯಗಳನ್ನು ಸಹ ಇಲ್ಲಿ ಛಾಪಾ ಹಾಕಲಾಗಲು ಅವಕಾಶವನ್ನು ಕಲ್ಪಿಸಲಾಗಿದೆ.

ಕಳೆದ ೧೨೫ ವರ್ಷಗಳಿಂದ ಹೈದರಾಬಾದಿನಲ್ಲಿರುವ ಪುರಾತನವಾದ ಟಂಕಸಾಲೆಯನ್ನು ಇನ್ನು ಮುಂದೆ ಮುಚ್ಚಲಾಗುತ್ತದೆಯೆಂದು ಹೇಳಲಾಗಿದೆ.

ಡಾ॥ ಗ್ರಹಾಂ ಕರಾಚಿಗೆ

ಕಾಶ್ಮೀರ ಪ್ರತಿನಿಧಿ ಡಾ॥ ಗ್ರಹಾಂರವರು ಕರಾಚಿಗೆ ತೆರಳಿರುವರು. ಮುಂದಿನ ವಾರ ಅವರು ಪುನಃ ಭಾರತಕ್ಕೆ ಬರಲಿರುವರೆಂದು ಹೇಳಲಾಗಿದೆ

ಪುನಃ ಭೂಕಂಪ

ಜಪಾನ್‌ನಲ್ಲಿ ಪುನಃ ಭೂಕಂಪವುಂಟಾಯಿತು. ೪—೫ ಜನ ಮಡಿದು ೨೦ ಜನರಿಗೆ ಗಾಯಗಳಾಗಿ ಸುಮಾರು ೮೪ ಮನೆಗಳು ಪೂರ್ಣವಾಗಿ ಹಾಳಾಗಿಹೋದುವೆಂದು ಹೇಳಲಾಗಿದೆ.

ವ್ಯವಸಾಯ ವಿಶ್ವವಿದ್ಯಾನಿಲಯ

ಉತ್ತರ ಪ್ರದೇಶದಲ್ಲಿ ಕೇಂದ್ರ ಸರ್ಕಾರದವರು ಒಂದು ಗ್ರಾಮಾಂತರ ವ್ಯವಸಾಯ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದಿರುವುದಾಗಿ ಗೊತ್ತಾಗಿದೆ

ಎಲ್ಲಾ ವ್ಯವಸಾಯ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳು ವಾರಕ್ಕೊಂದು ದಿವಸಗಳಾದರೂ ಜಮೀನುಗಳಲ್ಲಿ ಕಡ್ಡಾಯವಾಗಿ ಕೆಲಸ ಮಾಡುವಂತೆ ಏರ್ಪಡಿಸಲಾಗುತ್ತದೆಯೆಂದು ಹೇಳಲಾಗಿದೆ

೩ ಕೋಟಿ ೩೦ ಲಕ್ಷ ಡಾಲರು ಸಾಲ

ಅಮೆರಿಕಾವು ಭಾರತದಲ್ಲಿ ಆಹಾರಕ್ಕಾಗಿ ಸಾಲವಾಗಿ ಕೊಟ್ಟಿರುವ ೧೯ ಕೋಟಿ ಡಾಲರುಗಳ ಪೈಕಿ ಕೊನೆಯ ಕಂತಾಗಿ ಅಮೆರಿಕಾವು ಭಾರತಕ್ಕೆ ೩ ಕೋಟಿ ೩೦ ಲಕ್ಷ ಡಾಲರುಗಳನ್ನು ಮಂಜೂರ್ಮಾಡಿದೆ. ಇಲ್ಲಿಗೆ ಸಾಲವನ್ನು ಪೂರ್ತಿ ಕೊಟ್ಟಂತಾಯಿತು.

ತಿರುವಾಂಕೂರಿನಲ್ಲಿ ಕಾಂಗ್ರೆಸ್ ಮಂತ್ರಿಮಂಡಲ

ತಿರುವಾಂಕೂರು-ಕೊಚ್ಚಿನ್‌ನಲ್ಲಿ ತಿರುವಾಂಕೂರು ಮಂತ್ರಿಮಂಡಲವನ್ನು ಸ್ಥಾಪಿಸಲು ನಿರ್ಧಾರ ಮಾಡಲಾಗಿದೆ. ಮಂತ್ರಿಮಂಡಲದಲ್ಲಿ ೬ ಮಂತ್ರಿಗಳಿರುವರು. ಪಕ್ಷದ ಸಭೆಯು ಇದೇ ೨೫ನೇ ತಾರೀಖು ನಡೆಯಲಿದೆಯೆಂದು ತಿಳಿಯಬರುತ್ತದೆ.

ಬೊಂಬಾಯಿನಲ್ಲಿ ಪೌರ ಚುನಾವಣೆ

ಬೊಂಬಾಯಿನಲ್ಲಿ ಪೌರ ಚುನಾವಣೆಗಳು ನಡೆದು ಒಟ್ಟು ೧೨೪ ಸ್ಥಾನಗಳ ಪೈಕಿ ೫೬ ಸ್ಥಾನಗಳ ಫಲಿತಾಂಶ ಹೊರಬಿದ್ದಿದೆ. ಕಾಂಗ್ರೆಸ್ಸಿಗೆ ೨೬ ಸ್ಥಾನಗಳು ಸೋಷಲಿಸ್ಟ್ ೧೮ ಇತರ ಪಕ್ಷ ಉಳಿದ ಸ್ಥಾನಗಳನ್ನು ಗಳಿಸಿದ್ದೆ.

ಮನರಂಜನ ತೆರಿಗೆ ವಿನಾಯಿತಿ

ಮೈಸೂರು ಸಂಸ್ಥಾನದ ಕ್ರಿಕೆಟ್ ಸಂಘದವರು ನಡೆಯಿಸುವ ಕ್ರಿಕೆಟ್ ಪಂದ್ಯಗಳಿಗೆ ಮೈಸೂರು ಸರ್ಕಾರದವರು ಮನರಂಜನ ತೆರಿಗೆ ವಿನಾಯಿತಿಯನ್ನು ಕೊಟ್ಟಿರುವರು.

'ಸಂಯುಕ್ತ ಜನತಾರಂಗ'

ಮೈಸೂರಿನ ಕಾಂಗ್ರೆಸ್ಸೇತರ ಪಕ್ಷಗಳಿಗೆ ಸೇರಿದ ಅಸೆಂಬ್ಲಿ ಸದಸ್ಯರು ಸಭೆಸೇರಿ 'ಸಂಯುಕ್ತ ಜನತಾರಂಗ' (ಯುನೈಟೆಡ್ ಪೀಪಲ್ಸ್ ಫ್ರಂಟ್) ಸ್ಥಾಪಿಸಿದರು.

ಚಿನ್ನ ತೊಲಕ್ಕೆ ೬೧ ರೂ?

ಚಿನ್ನ ತೊಲಕ್ಕೆ ಪಾಟಿಯಾಲದ ಧುಸ್ರಿಗಾನಲ್ಲಿ ೬೧ ರೂ.ಗಳಂತೆಯೂ, ಮಾನ್ಸಾದಲ್ಲಿ ೫೬ ರೂಗಳಂತೆಯೂ ಮಾರಾಟವಾಯಿತೆಂದು ವರದಿಯಾಗಿದೆ.

ಸೀರೆ ಬೆಲೆ ಇಳಿತ

ಷೋಲಾಪುರದ ಕೈಮಗ್ಗದವರ ಕಷ್ಟ ವಿಪರೀತವಾಗಿದೆ- ದೇಶಾದ್ಯಂತ ಬೆಲೆ ಇಳಿದುದರ ಪರಿಣಾಮವಾಗಿ ಇಲ್ಲಿಯ ಮಗ್ಗಗಳ ಮುಖ್ಯ ತಯಾರಿಕೆಯಾದ ಸೀರೆಗಳ ಮಾರಾಟ ನಿಂತುಹೋಗಿದೆ. ತತ್ಪರಿಣಾಮವಾಗಿ ಸೀರೆ ಬೆಲೆ ಒಂದೊಂದಕ್ಕೆ ೩ ರಿಂದ ೪ ರೂಗಳಷ್ಟು ಇಳಿದಿದೆಯೆಂದು ಹೇಳಲಾಗಿದೆ.

ನ್ಯೂ ಆಪೇರ

೧೧-೩-೫೨ ರಿಂದ ಅಮೋಘಪ್ರಾರಂಭ ಶೋಭನಾಚಲರವರ ತಮಿಳು ಚಿತ್ರ—

ಮಾಯಾ ಕುದುರೆ

ಪಾತ್ರ:—ನಾಗೇಶ್ವರರಾವ್, ಅಂಜಲೀ.

ಶ್ರೀ ಮುನ್ಷಿ ಪ್ರಯಾಣ

ಕೇಂದ್ರ ಆಹಾರ ಶಾಖಾ ಸಚಿವ ಶ್ರೀ ಕೆ. ಎಂ ಮುನ್ಷಿಯವರು ಮದ್ರಾಸಿನ ರಾಯಲು ಸೀಮೆ ಚಿತ್ತೂರು ಮುಂತಾದ ಅಭಾವ ಪ್ರದೇಶಗಳಲ್ಲಿ ಪ್ರವಾಸ ಮಾಡುತ್ತಲಿರುವರು

ಚಿತ್ತೂರಿನಲ್ಲಿ ರೈತರನ್ನುದ್ದೇಶಿಸಿ ಮಾತನಾಡುತ್ತಾ ಭೂ ಸೇನೆಯನ್ನು ರಚಿಸಿ, ವಾರಕ್ಕೊಂದು ದಿವಸವಾದರೂ ಎಲ್ಲರೂ ಅಭಾವವನ್ನು ನೀಗಿಸಲು ಹೊಲಗದ್ದೆಗಳಲ್ಲಿ ದುಡಿಯಬೇಕೆಂದೂ ಸರ್ಕಾರದವರು ಇದಕ್ಕಾಗಿ ತಮ್ಮ ಸಂಪೂರ್ಣ ನೆರವನ್ನು ನೀಡುವರೆಂದು ಹೇಳಿರುವರು.

ಪೆನಿಸಲಿನ್ ಕಾರ್ಖಾನೆ

ಕೇಂದ್ರ ಮರಾಮತ್ತು ಮತ್ತು ಉತ್ಪನ್ನ ಶಾಖಾ ಸಚಿವ ಶ್ರೀ ಗಾಡ್ಗಿಲ್‌ರವರು ಪೂನಾದ ಬಳಿ ನಿನ್ನೆಯದಿನ ಭಾರತದಲ್ಲೇ ಪ್ರಥಮವಾದ ಅತ್ಯಂತ ಹಿರಿಯದಾದ ಒಂದು ಪೆನಿಸಲಿನ್ ಕಾರ್ಖಾನೆಯ ಶಂಕುಸ್ಥಾಪನೆಯನ್ನು ನೆರವೇರಿಸಿದರು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಮತ್ತು ಚಲನಚಿತ್ರಗಳಲ್ಲಿ ಅಭಿನಯಿಸಲು ಅವಕಾಶಮಾಡಿ ಕೊಡಲಾಗುವುದು. ಆಸಕ್ತಿವುಳ್ಳವರು ಇಂದೇ ವಿಚಾರಿಸಿರಿ.

ವ್ಯವಸ್ಥಾಪಕ.

ವುಡ್ ಲ್ಯಾಂಡ್ಸ್

೭—೩—೫೨ ರಿಂದ

ಅಮೋಘವಾದ ೪ನೇ ವಾರ

ದಿನವೂ 3 ಪ್ರದರ್ಶನಗಳು

ಅಲ್‌ಬೇಲ

ಪಾತ್ರ:- ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ರಣಜಿತ್

೭-೩-೫೨ರಿಂದ ಅಮೋಘ ೭ನೇ ವಾರ

ಪೃಥ್ವೀರಾಜ್, ನರ್ಗೀಸ್, ರಾಜಕಪೂರ್ ನಟಿಸಿರುವ

—:: ಆ ವಾ ರ ::—

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೧೦೮) ದಿನಪತ್ರಿಕೆ ರಿ. ನಂ. ಎಂ. ೫೩೧೨

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೨—೩—೧೯೫೨ನೇ ಬುಧವಾರ [ಸಂಚಿಕೆ ೧೬೫

ತಿರುವಾಂಕೂರಿನಲ್ಲಿ ಈದಿನ ಹೊಸ ಕಾಂಗ್ರೆಸ್ ಸರ್ಕಾರದ ಅಧಿಕಾರ ಸ್ವೀಕಾರ

ಪಾಲಿಟಾನಾ ಮಹಾರಾಜರ ದಸ್ತಗಿರಿ

ನಿವೃತ್ತ ಇಂಜನಿಯರುಗಳ ಸೇವೆ ಪಡೆಯಬೇಕು

ಮೈಸೂರು ಮಾ ೧೧

ಮೈಸೂರು ಪ್ರಾದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ನಿನ್ನೆಯ ದಿನ ರಾಜಧಾನಿಯಲ್ಲಿರುವ ನ್ಯಾಷನಲ್ ಇಂಜನಿಯರಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ಮಾತನಾಡುತ್ತಾ ಅತ್ಯಂತ ಪ್ರಭಾವಶಾಲಿಗಳೂ ನಿಪುಣರೂ ಆದ ಅನೇಕ ನಿವೃತ್ತ ಇಂಜನಿಯರುಗಳು ನಮ್ಮ ಸಂಸ್ಥಾನದಲ್ಲಿರುವರು. ಸಾಧ್ಯವಾದೆಡೆಯಲ್ಲೆಲ್ಲಾ ಅವರಿಗೆ ಪುನಃ ಕೆಲಸಗಳನ್ನು ಕೊಟ್ಟು ದೇಶದ ಪ್ರಗತಿ ಸಾಧಿಸಬೇಕು. ಈ ರೀತಿ ಮಾಡಿದಲ್ಲಿ ಹಣದ ವೆಚ್ಚವೂ ಕಡಮೆಯಾಗುವುದಲ್ಲದೆ, ಉತ್ತಮ ಫಲಿತಾಂಶಗಳುಂಟಾಗುವುವೆಂದು ಹೇಳಿದರು.

ಉಪಾಧ್ಯಾಯರಕ್ಷೇತ್ರದಿಂದ ಸ್ಪರ್ಧಿಗಳು

ಬೆಂಗಳೂರು ೧೦

ಸಂಸ್ಥಾನದ ಲೆಜಿಸ್ಲೇಟಿವ್ ಕೌನ್ಸಿಲಿಗೆ ಉಪಾಧ್ಯಾಯರ ಕ್ಷೇತ್ರದಿಂದಿರುವ ೩ ಸ್ಥಾನಗಳಿಗೆ ಶ್ರೀ ಕೆ. ಶ್ರೀನಿವಾಸನ್, ಮೈಸೂರು ಶಾರದ ವಿಲಾಸ ಹೈಸ್ಕೂಲ್. ಶ್ರೀ ಬಿ. ರಾಮಣ್ಣ ಮತ್ತು ಗಾಂಧಿನಗರ ಹೈಸ್ಕೂಲಿನ ಶ್ರೀ ಎಂ. ಪಿ. ಎಲ್. ಶಾಸ್ತ್ರಿಗಳನ್ನು ಸ್ಪರ್ಧಿಗಳಾಗಿ ನಿಲ್ಲಿಸಲು ಅಖಿಲ ಮೈಸೂರು ಸಂಸ್ಥೆಯಾದ ಮೈಸೂರು ಸಂಸ್ಥಾನದ ಏಡೆಡ್ ಹೈಸ್ಕೂಲುಗಳ ಉಪಾಧ್ಯಾಯರುಗಳ ಸಂಘ ತೀರ್ಮಾನಿಸಿದೆ.

‡ ಮದರಾಸಿನ ಹೊಸ ಗವರ್ನರ್ ಶ್ರೀ ಶ್ರೀ ಪ್ರಕಾಶರವರು ಇಂದು ಅಧಿಕಾರ ಸ್ವೀಕರಿಸುವರು.

ಪೇಟೆ ಧಾರಣೆ

ಮೈಸೂರು ತಾ॥ 11-3-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಕ್ಕೆ	11-6	16-8
ಹೊಂಗೆಬೀಜ ,,	10-2	10-6
ಹುರುಳಿ ,,	22-0	26-6
ಮೆ. ಕಾಯಿ ಮಣಕ್ಕೆ	7-2	16-12
ಹುಣಿಸೇಹಣ್ಣು ,,	1-6	2-13
ಸೀಗೆಕಾಯಿ ,,	2-14	2-15
ತೆಂಗಿನಕಾಯಿ 1100ಕ್ಕೆ		130

ಶ್ರೀ ಬಾಬುರೆಡ್ಡಿ ಐ.ಜಿ.ಪಿ.

ಬೆಂಗಳೂರು ಮಾ ೧೦

ಐ ಪಿ ಎಸ್ ಗೆ ಸೇರಿದ ಮುನ್ನ ರಜಾದ ಮೇಲೆ ಹೋಗುವ ಐ ಜಿ ಪಿ ಶ್ರೀ ಜಿ ಎಸ್ ನಾಗರಾಜರಾಯರ ಸ್ಥಾನದಲ್ಲಿ ಡಿ ಐ ಜಿ ಶ್ರೀ ಎನ್ ಪಿ ಬಾಬುರೆಡ್ಡಿಯವರನ್ನು ಐ ಜಿ ಪಿ ಆಗಿ ಸರ್ಕಾರ ನೇಮಿಸಿದೆಯೆಂದು ತಿಳಿದುಬಂದಿದೆ.

ಕೊಡಗಿನ ಮುಖ್ಯ ಕಾರ್ಯದರ್ಶಿ

ಮಂಡ್ಯದ ಜಿಲ್ಲಾಧಿಕಾರಿಯಾಗಿರುವ ಐ ಪಿ ಎಸ್ ಗೆ ಸೇರಿದ ಶ್ರೀ ಸಿ ನರಸಿಂಹಮೂರ್ತಿಗಳನ್ನು ಕೊಡಗಿನ ಮುಖ್ಯ ಕಾರ್ಯದರ್ಶಿಯಾಗಿ ಕೇಂದ್ರ ಸರ್ಕಾರ ನೇಮಿಸಿದೆಯೆಂದು ತಿಳಿದುಬಂದಿದೆ.

ಐದು ಲಕ್ಷ ಎಕರೆ ಭೂದಾನ

ಉತ್ತರ ಪ್ರದೇಶ ಶಾಸನಸಭೆಗೆ ಹೊಸದಾಗಿ ಚುನಾಯಿತರಾಗಿರುವ ಸದಸ್ಯರು ಆಚಾರ್ಯ ಜುಗಲ್ ಕಿಶೋರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈಗ ಉತ್ತರ ಪ್ರದೇಶದಲ್ಲಿ ಪ್ರವಾಸ ಮಾಡುತ್ತಿರುವ ಆಚಾರ್ಯ ವಿನೋಬಾ ಭಾವೆಯವರಿಗೆ ಭೂದಾನವನ್ನು ಕೊಡಬೇಕೋಸುಗ ೧೫ ದಿವಸ ಕಾಲ ಚಳುವಳಿ ನಡೆಸಿ ಐದು ಲಕ್ಷ ಎಕರೆ ಭೂಮಿಯನ್ನು ಕೂಡಿಸಿ ಕೊಡಬೇಕೆಂದು ನಿರ್ಧರಿಸಿದೆ.

ಶ್ರೀ ಮುನ್ಷಿಯವರ ಪ್ರವಾಸ

ಕೇಂದ್ರ ಆಹಾರಸಚಿವ ಶ್ರೀ ಕೆ. ಎಂ. ಮುನ್ಷಿಯವರು ಮದ್ರಾಸಿನ ಆಹಾರ ಕೊರತೆ ಪ್ರದೇಶಗಳ ಭೇಟಿ ಅಲ್ಲಿ ಕ್ಷಾಮವು ಉತ್ಕಟಸ್ಥಿತಿಯಲ್ಲಿದೆ ಎಂಬುದನ್ನು ಮನವರಿಕೆ ಮಾಡಿಕೊಂಡಿರುವರು. ಆದ್ದರಿಂದ ಮದ್ರಾಸ್ ಸರ್ಕಾರವು ಪರಿಹಾರ ಕಾರ್ಯಗಳಿಗಾಗಿ ಕೇಂದ್ರವನ್ನು ಕೇಳಿರುವ ೨ ಕೋಟಿ ರೂ ಸಾಲ ೧ ಕೋಟಿ ರೂಪಾಯಿ ಗ್ರ್ಯಾಂಟುಸಹ ದೊರೆಯುವುದೆಂದು ಆಶಿಸಲಾಗಿದೆ.

ಲಲಿತ ಕಲಾಪ್ರದರ್ಶನ

ಭಾರತದ ಲಲಿತ ಕಲಾ ಪರಿಷತ್ತಿನ ೨೪ ನೆಯ ಅಖಿಲ ಭಾರತ ಲಲಿತ ಹಾಗೂ ಕುಶಲ ಕಲೆಗಳ ಪ್ರದರ್ಶನದ ಉದ್ಘಾಟನೆಯನ್ನು ಭಾರತದಸೇನೆಯ ದಂಡನಾಯಕರಾದ ಜನರಲ್ ಕೆ. ಎಂ. ಕಾರಿಯಪ್ಪನವರು ಅಮೃತಸರದ ಮಹಾರಾಜ ರಣಜಿತ್ ಸಿಂಗ್ ಅರಮನೆಯಲ್ಲಿ ನೆರವೇರಿಸಿದರು.

ಶ್ರೀ ಸಿ ಎಂ ಗರುಡಾಚಾರ್ಯರ ನಿಧನ

ಬೆಂಗಳೂರು ಮಾ ೧೦

ನಿವೃತ್ತ ವಿದ್ಯಾ ಇಲಾಖಾ ಸರ್ಕಲ್ ಇನ್‌ಸ್ಪೆಕ್ಟರಾದ ಶ್ರೀ ಸಿ ಎಂ ವಿಜಯರಾಘವಾಚಾರ್ಯರ ಪುತ್ರ, ಬೆಂಗಳೂರು ಪೌರಸಭೆಯ ಮಾಜಿ ಸದಸ್ಯ ಶ್ರೀ ಸಿ. ಎಂ. ಗರುಡಾಚಾರ್‌ರವರು ಇಂದು ಸಂಜೆ ೪-೩೦ ಗಂಟೆಗೆ ತಮ್ಮ ಸ್ವಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ- ಇವರಿಗೆ ಸುಮಾರು ೬೧-೬೨ ವರ್ಷ ವಯಸ್ಸಾಗಿತ್ತು. ಪತ್ನಿ, ವೃದ್ಧ ಮಾತಾಪಿತೃಗಳು, ಸೋದರರು, ಏಕಮಾತ್ರ ಪುತ್ರರಿರುವರು.

ಲಂಚ ಪಡೆದುದಕ್ಕಾಗಿ ಪೌರ ಸದಸ್ಯರಮೇಲೆ ಕ್ರಮ ಜರುಗಿಸಿ

ಲಂಚಪಡೆದುದು ಸರ್ಕಾರದ ಗಮನಕ್ಕೆ ಬಂದರೂ ಸುಮ್ಮನಿದ್ದರೆ ಆಡಳಿತ ದಕ್ಷತೆಗೇ ಧಕ್ಕೆಬರುತ್ತದೆ ಎಂದು ಗುಂಟೂರು ಪೌರಸಭಾ ಚುನಾವಣೆಗೆ ಸಂಬಂಧಪಟ್ಟ ಒಂದು ಮೊಕದ್ದಮೆಯಲ್ಲಿ ತೀರ್ಪನ್ನು ಕೊಡುತ್ತಾ, ಮದ್ರಾಸ್ ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಕೆ ಸುಬ್ಬರಾಯರು ಹೇಳಿರುವರು.

ಪೌರಸಭೆಯ ಅಧ್ಯಕ್ಷ ಚುನಾವಣಾ ಕಾಲದಲ್ಲಿ ಅಲ್ಲಿಯ ಪೌರಸಭೆಯ ೯ ಜನ ಸದಸ್ಯರು ಉಮೇದುವಾರರಿಂದ ಲಂಚಪಡೆದರೆಂಬುದು ರುಜುವಾತಾಗಲು ಚುನಾವಣಾಧಿಕಾರಿಗಳು ಪುನಃ ಚುನಾವಣೆ ನಡೆಸಬೇಕೆಂದು ಆಜ್ಞೆಯಿತ್ತರು ಆ ಮರುಚುನಾವಣೆಯನ್ನು ತಡೆಗಟ್ಟಬೇಕೆಂದು ಹೈಕೋರ್ಟಿನಲ್ಲಿ ಮೊಕದ್ದಮೆ ಹೂಡಲು ನ್ಯಾಯಮೂರ್ತಿಗಳು ಮರುಚುನಾವಣೆ ನಡೆಯಬಹುದೆಂದು ತಿಳಿಸಿ, ಸದಸ್ಯರು ಲಂಚವನ್ನು ಪಡೆದರೆಂಬುದು ರುಜುವಾತಾದರೂ ಸರ್ಕಾರ ಸುಮ್ಮನಿರುವುದು ಆಶ್ಚರ್ಯವಾಗಿದೆ, ಆ ಸದಸ್ಯರಮೇಲೆ ಕಾನೂನುರೀತ್ಯಾ ಕ್ರಮವನ್ನು (ಪ್ರಾಸಿಕ್ಯೂಷನ್) ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ಸಲಹೆನೀಡಿರುವರು.

ತಿರುವಾಂಕೂರು-ಕೊಚ್ಚಿನ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಎ. ಜೆ. ಜಾನ್‌ರವರು ಹೊಸ ಮಂತ್ರಿಮಂಡಲದ ಪಟ್ಟಿಯನ್ನು ನಿನ್ನೆಯದಿನ ರಾಜಪ್ರಮುಖರಿಗೆ ಒಪ್ಪಿಸಿದರು. ಈ ದಿನಹೊಸ ಸಚಿವಮಂಡಲಿಯು ಅಧಿಕಾರ ಸ್ವೀಕರಿಸುವುದು.

ಈ ಹೊಸ ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿಯಾಗಲಿರುವ ಶ್ರೀ ಜಾನ್‌ರವರಲ್ಲದೆ ಇನ್ನೈದು ಸಚಿವರುಗಳಿರುವರು. ಶ್ರೀಗಳಾದ ಟಿ. ಎಮ್. ವರ್ಗೀಸ್, ಪಿ. ಗೋವಿಂದಮೆನನ್, ವೇಲಾಯುಧನ್, ಮುಂತಾದವರಿರುವರು.

ಪಾಲಿಟಾನ ಮಹಾರಾಜರ ದಸ್ತಗಿರಿ

ಸೌರಾಷ್ಟ್ರ ಸರ್ಕಾರವನ್ನು ಉರುಳಿಸಿ ಅದಕ್ಕೆ ಕೆಟ್ಟಹೆಸರು ತರಬೇಕೆಂದು ಪ್ರಯತ್ನಿಸಿದ ಗುಂಪಿನೊಡನೆ ಸಹಕರಿಸಿದರೆಂಬ ಅಪಾದನೆಮೇಲೆ ಪಾಲಿಟಾನ ಮಹಾರಾಜರನ್ನು ಸೌರಾಷ್ಟ್ರ ಸರ್ಕಾರವು ರಾಜಕೋಟೆಯಲ್ಲಿ ದಸ್ತಗಿರಿ ಮಾಡಿರುವುದಾಗಿ ಗೊತ್ತಾಗಿದೆ.

ರಾಜ್ಯಪರಿಷತ್ತಿಗೆ ಮೈಸೂರು ಚುನಾವಣೆಗಳು

ರಾಜ್ಯ ಪರಿಷತ್ತಿಗೆ (ಕೌನ್ಸಿಲ್ ಆಫ್ ಸ್ಟೇಟ್ಸ್) ಚುನಾವಣೆಗಳಿಗೆ ಮತದಾನ ಮೈಸೂರಿನಲ್ಲಿ ಮಾರ್ಚಿ ೨೭ರಂದು ಬೆಳಿಗ್ಗೆ ೯ ರಿಂದ ಸಂಜೆ ೫ ಗಂಟೆ ೩೦ ವರೆಗೆ ಆಗಬೇಕೆಂದ ಕೇಂದ್ರ ಸರ್ಕಾರ ಪ್ರಕಟಿಸಿದೆ.

ಅಭಿನಂದನಾ ಭಾಷಣ

ತಮ್ಮ ಅಧಿಕಾರಕಾಲದಲ್ಲಿ ಮದ್ರಾಸ್ ಜನತೆ, ಪತ್ರಿಕೆ, ಮಂತ್ರಿಗಳು ಇತ್ಯಾದಿ ಸಹಕಾರಕ್ಕಾಗಿ ಅಭಿನಂದಿಸುತ್ತಾ, ಮದರಾಸಿನಿಂದ ಹೊರಟುಹೋಗಲು ತಮಗೂ ತಮ್ಮ ಪತ್ನಿಗೂ ಅತ್ಯಂತ ದುಃಖವಾಗುವುದಾಗಿಯೂ ಆದರೆ ಅಧಿಕಾರದಿಂದ ನಿವೃತ್ತರಾದರೂ ಈ ಪ್ರಾಂತ್ಯದ ಅಭಿವೃದ್ಧಿಗಾಗಿ ಆಸಕ್ತಿಯು ತಮ್ಮಲ್ಲಿ ಸದಾ ಇರುವುದಾಗಿ ಇಂದು ನಿವೃತ್ತರಾಗಲಿರುವ ಮದ್ರಾಸ್ ಗವರ್ನರ್ ಶ್ರೀ ಭಾವನಗರ್ ಮಹಾರಾಜರು ನಿನ್ನೆ ಸಂಜೆ ಒಂದು ಅಭಿನಂದನಾ ಭಾಷಣಮಾಡುತ್ತಾ ಹೇಳಿದರು.

ಸತ್ಯವೇ ನಿಜವಾದ ಮಿತ್ರ

ವಾಷಿಂಗ್ಟನ್ ಮಾ ೮

ಪ್ರಪಂಚದ ರಕ್ಷಣೆಯನ್ನು ಮಾಡಿಕೊಂಡು ಶಾಂತಿಯನ್ನು ಕಾಯ್ದುಕೊಳ್ಳಲು ವಿಶ್ವಸಂಸ್ಥೆಯು ಮಾಡುತ್ತಿರುವ ಪ್ರಯತ್ನಗಳಿಗೆ, ಸತ್ಯವೇ ನಿಜವಾದ ಮಿತ್ರನೆಂದು ಅಮೆರಿಕಾ ರಾಜ್ಯ ಇಲಾಖೆಯ ಕಾರ್ಯದರ್ಶಿ ಡೀನ್ ಅಚೆಸನ್ನರು ತಿಳಿಸಿದ್ದಾರೆ.

ಕಮ್ಯೂನಿಸ್ಟ್ ಪ್ರಭಾವಾನ್ವಿತ ದೇಶಗಳಿಗೆ ವಾಯ್ಸ್ ಆಫ್ ಅಮೇರಿಕ ಸುದ್ದಿಗಳನ್ನು ತಿಳಿಸಲು 'ಕೋರಿಯರ್' ಹಡಗಿನಲ್ಲಿ ನಿರ್ಮಿತವಾದ ರೇಡಿಯೋ ಯಂತ್ರದ ಪ್ರಾರಂಭೋತ್ಸವದಲ್ಲಿ ಮೇಲ್ಕಂಡಂತೆ ಅಚೆಸನ್ನರು ನುಡಿದರು, ಅಧ್ಯಕ್ಷ ಟ್ರೂಮನ್ನರೂ ಭಾಷಣ ಮಾಡಿದರು.

ಈ ಭಾಷಣಗಳನ್ನು ಇಂಗ್ಲೀಷಿನಲ್ಲಲ್ಲದೆ, ಇತರ ೪೫ ಭಾಷೆಗಳಲ್ಲಿ ಬಿತ್ತರಿಸಲಾಯಿತು.

ಟ್ರೂಮನ್ನರು ಭಾಷಣಮಾಡುತ್ತಾ ಕಳೆದ ೨೦೦ ವರ್ಷಗಳಿಂದಲೂ ಅಮೇರಿಕ-ರಷ್ಯಾ ದೇಶಗಳಿಗೆ ಮೈತ್ರಿ ಇದೆಯೆಂದು ಇತ್ತೀಚಿನ ಆಡಳಿತಗಾರರ ದ್ವೇಷವನ್ನು ಹೆದರಿಕೆಯನ್ನೂ ಬಿತ್ತುತ್ತಿದ್ದಾರೆಂದೂ, ಶಾಂತಿಯನ್ನು ಪ್ರಪಂಚದಲ್ಲಿ ಸ್ಥಾಪಿಸುವುದೇ ರಷ್ಯನರ ಮುಖ್ಯ ಉದ್ದೇಶವಾಗಿದ್ದಲ್ಲಿ, ಅವರು ದ್ವೇಷಭಾವನೆಯನ್ನು ಧಾಳಿ ಮನೋಭಾವನೆಯನ್ನು ಬಿಟ್ಟು, ಒಪ್ಪಂದ ಮಾಡಿಕೊಂಡು ತಮ್ಮ ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳಬೇಕೆಂದೂ ತಿಳಿಸಿದ್ದಾರೆ.

ಅಧಿಕಾರ ಸ್ವೀಕಾರ

ಮದ್ರಾಸಿಗೆ ಗೌರ್ನರಾಗಿ ನೇಮಕವಾಗಿರುವ ಶ್ರೀ ಶ್ರೀ ಪ್ರಕಾಶರವರು ಮೊನ್ನೆಯ ದಿನ ಮದ್ರಾಸಿಗೆ ಆಗಮಿಸಿದರು ಅವರನ್ನು ಅಭೂತ ವೈಭವದಿಂದ ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಲಾಯಿತು ಮದ್ರಾಸಿಗೆ ಬಂದ ಸ್ವಲ್ಪ ಕಾಲದೊಡನೆಯೇ ಮಾಜಿ ಗೃಹಸಚಿವ ಶ್ರೀ ಸಿ. ರಾಜಗೋಪಾಲಾಚಾರಿಯವರು ಶ್ರೀ ಶ್ರೀ ಪ್ರಕಾಶರವರನ್ನು ಭೇಟಿಮಾಡಿ ಒಂದುಗಂಟೆ ಕಾಲ ಮಾತುಕತೆ ನಡೆಸಿದರು

ಶ್ರೀ ಶ್ರೀ ಪ್ರಕಾಶರವರು ಈ ದಿನ ತಮ್ಮ ಅಧಿಕಾರ ಸೂತ್ರವನ್ನು ವಹಿಸಿಕೊಳ್ಳುವರು. ಈ ದಿನವೇ ನಿವೃತ್ತರಾಗಲಿರುವ ಮದ್ರಾಸ್ ಗೌರ್ನರ್ ಭಾವನಗರದ ಮಹಾರಾಜರು ಮಹಾರಾಣಿಯವರೊಡನೆ ಬೆಂಗಳೂರಿಗೆ ಆಗಮಿಸಿ ಒಂದೆರಡು ತಿಂಗಳು ಕಾಲ ಇಲ್ಲಿ ವಿಶ್ರಾಂತಿ ಪಡೆಯುವರೆಂದು ಹೇಳಲಾಗಿದೆ.

ಭೊಂಬಾಯಿನಲ್ಲಿ ಪೌರ ಚುನಾವಣೆ

ಬೊಂಬಾಯಿನಲ್ಲಿ ಪೌರ ಚುನಾವಣೆಯು ನಡೆದು ಒಟ್ಟು ೧೩೪ ಸ್ಥಾನಗಳ ಪೈಕಿ ೧೨೦ ಸ್ಥಾನಗಳ ಫಲಿತಾಂಶ ಹೊರಬಿದ್ದಿದೆ. ಕಾಂಗ್ರೆಸ್ ಪಕ್ಷವು ೫೫ ಸ್ಥಾನಗಳನ್ನು ಸೋಷಲಿಸ್ಟರು ೩೬ ಸ್ಥಾನಗಳನ್ನು ಇತರ ಪಕ್ಷಗಳು ೨೯ ಸ್ಥಾನಗಳನ್ನು ಗೆದ್ದಿರುವರು. ಇನ್ನು ೪ ಸ್ಥಾನಗಳ ಫಲಿತಾಂಶ ಹೊರಬೀಳಬೇಕಾಗಿದೆ.

ಮಿಡತೆ ನಾಶಕ್ಕಾಗಿ ತ್ರಿರಾಷ್ಟ್ರ ಸಮ್ಮೇಳನ

ಪ್ರತಿವರ್ಷ ಇರಾಕ್, ಭಾರತ ಮತ್ತು ಪಾಕಿಸ್ಥಾನಗಳಲ್ಲಿ ಪೈರಿಗೆ ವಿಪರೀತ ನಷ್ಟ ಮಾಡುತ್ತಿರುವ ಮಿಡತೆಗಳ ಹಾವಳಿ ತಡೆಗಟ್ಟಲು ಕೈಕೊಳ್ಳಬೇಕಾದ ಕ್ರಮಗಳನ್ನು ಪರಿಶೀಲಿಸಲು ಆ ರಾಷ್ಟ್ರಗಳ ಪ್ರವೀಣರ ಸಭೆಯೊಂದು ಟೆಹರಾನ್‌ನಲ್ಲಿ ಏಪ್ರಿಲ್ ೯ ರಲ್ಲಿ ಸೇರಲಿದೆ.

ಈ ಸಭೆಗೆ ಬ್ರಿಟನ್, ಅಮೆರಿಕ, ರಷ್ಯ, ಅಫ್ಘಾನಿಸ್ಥಾನ ಮತ್ತು ಇರಾಕ್‌ಗಳ ಪ್ರತಿನಿಧಿಗಳೂ ಬರುವ ನಿರೀಕ್ಷೆ ಇದೆ.

೧೨ ಲಕ್ಷ ರೂಗಳಷ್ಟು ಹತ್ತಿ ಕೇಳುವವರೇ ಇಲ್ಲ

೧೦—೧೨ ಲಕ್ಷ ರೂ.ಗಳಷ್ಟು ಬೆಲೆ ಬಾಳುವ ಕರುಂಗಣ್ಣಿ ಮತ್ತು ಕಾಂಬೋಡಿಯಾ ಕಾಪಾಸ್ ಬೇಲುಗಳೂ, ಹತ್ತಿ ಬೇಲುಗಳೂ ರಾಜಪಾಳ್ಯಂ ಹತ್ತಿ ಮಧುರಾ ಮಾರುಕಟ್ಟೆಯಲ್ಲಿ ಕೇಳುವವರಿಲ್ಲದೆ ಬಿದ್ದಿದ್ದು ಮಾರುಕಟ್ಟೆಯನ್ನು ಅನಿರ್ದಿಷ್ಟ ಕಾಲ ಮುಚ್ಚಲಾಗಿದೆ.

ಚತುರಾಷ್ಟ್ರ ಸಮ್ಮೇಳನ

ಜರ್ಮನಿಯಲ್ಲಿ ಶಾಂತಿಸ್ಥಾಪನೆಮಾಡಲು ಕೂಡಲೇ ಚತುರಾಷ್ಟ್ರ ಸಮ್ಮೇಳನವನ್ನು ನಡೆಸಬೇಕೆಂದು ರಷ್ಯಾ ವಿದೇಶಾಂಗ ಉಪಸಚಿವ ಮಿ॥ ಗ್ರೊಮೈಕೋರವರು ಇತರ ಮೂರು ಮಹಾರಾಷ್ಟ್ರಗಳಿಗೆ ತಿಳಿಸಿರುವುದಾಗಿ ಹೇಳಲಾಗಿದೆ.

೧೫೦೦೦ ಟೆಲಿಫೋನುಗಳು

ಬೆಂಗಳೂರು ಟೆಲಿಫೋನ್ ಕಾರ್ಖಾನೆಯಲ್ಲಿ ಕಳೆದ ಸಾಲಿನಲ್ಲಿ ತನ್ನಲ್ಲಿಯೇ ತಯಾರಾದ ಟೆಲಿಫೋನ್ ಸಲಕರಣಗಳನ್ನು ಸೇರಿಸಿ ೧೫೦೦೦ ಟೆಲಿಫೋನ್ ಯಂತ್ರಗಳನ್ನು ತಯಾರಿಸಿದೆ.

ಸದರನ್ ರೈಲ್ವೆ ಕೆಲಸಗಾರರ ಸಂಘ

ಅಖಿಲ ಮೈಸೂರು ರೈಲ್ವೆ ಕೆಲಸಗಾರರ ಸಂಘ, ಸೌತ್ ಇಂಡಿಯನ್ ರೈಲ್ವೆ ಸಂಘ ಮತ್ತು ಎಂ. ಎಸ್. ಎಂ. ರೈಲ್ವೆ ಕೆಲಸಗಾರರ ಸಂಘಗಳ ಪ್ರತಿನಿಧಿಗಳು ಮದ್ರಾಸಿನಲ್ಲಿ ಸಭೆ ಸೇರಿ ಈ ಎಲ್ಲಾ ಸಂಘಗಳ ಸಂಘಟನೆಯಿಂದ ಸದರನ್ ರೈಲ್ವೆ ಕೆಲಸಗಾರರ ಸಂಘವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿರುವರು.

ಸಲಹೆಗಾರರು

ಕೇಂದ್ರ ಸರ್ಕಾರದಲ್ಲಿ ಸಂಸ್ಥಾನ ಶಾಖಾ ಸಹಕಾರ್ಯದರ್ಶಿಗಳಾಗಿರುವ ಶ್ರೀ ಎನ್. ಎಂ. ಬೂಚ್‌ರವರಲ್ಲಿ ತಿರುವಾಂಕೂರು-ಕೊಚ್ಚಿನ್‌ಗೂ, ಕೇಂದ್ರ ರೈಲ್ವೆ ಬೋರ್ಡಿನಲ್ಲಿ ಆರ್ಥಿಕ ಡೈರೆಕ್ಟರಾಗಿದ್ದ ಶ್ರೀ ಎಂ ರಾಮಸ್ವಾಮಿ ಅಯ್ಯರ್‌ರವರನ್ನು ಹೈದರಾಬಾದಿನ ಆರ್ಥಿಕ ಸಲಹೆಗಾರರಾಗಿ ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳು

ಬೆಂಗಳೂರು ಮಾ. ೧೧

ಜಿಲ್ಲಾ ಮತ್ತು ತಾಲ್ಲೂಕು ಸಮ್ಮೇಳನಗಳನ್ನು ಹಿಂದೆ ನಡೆಸುತ್ತಿದ್ದಂತೆ ಮುಂದಿನ ವರ್ಷದಿಂದ ಈ ಸಮ್ಮೇಳನಗಳನ್ನು ನಡೆಸಬೇಕೆಂದು ಸರ್ಕಾರದವರು ಸೂಚಿಸಿದ್ದಾರೆ.

ಗೌರವ ಪ್ರಶಸ್ತಿ

ಹೈದರಾಬಾದ್ ಸಂಸ್ಥಾನದ ಸಲಹೆಗಾರರಾದ ಮಿ॥ ವಿಲ್ಲೋಡಿಯವರಿಗೆ ಉಸ್ಮಾನಿಯಾ ವಿಶ್ವವಿದ್ಯಾನಿಲಯವು ಡಾಕ್ಟರ್ ಆಫ್ ಲೆಟರ್ಸ್ ಎಂಬ ಗೌರವ ಪ್ರಶಸ್ತಿಯನ್ನು ಕೊಡಲು ನಿರ್ಧರಿಸಿದೆ.

ವುಡ್ ಲ್ಯಾಂಡ್ಸ್

೭—೩—೫೨ ರಿಂದ

ಅಮೋಘವಾದ ೪ನೇ ವಾರ

ದಿನವೂ 3 ಪ್ರದರ್ಶನಗಳು

ಅಲ್ ಬೇಲ

ಪಾತ್ರ:- ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ಬ್ರಿಟಿಷ್ ಕಾಮನ್ವೆಲ್ತ್ ಲೀಗಿನವರು ಏರ್ಪಡಿಸುವ ಒಂದು ಯೋಜನೆಯ ಪ್ರಕಾರ ಬ್ರಿಟನ್ನಿನ ಮತ್ತು ಕಾಮನ್ವೆಲ್ತಿನ ರಾಷ್ಟ್ರಗಳಿಂದ ಉಪಾಧ್ಯಾಯರುಗಳನ್ನು ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಕಳುಹಿಸಿ ಶಿಕ್ಷಣವನ್ನು ಕೊಡುವ ಕ್ರಮವು ಕೆಲವು ವರ್ಷಗಳಿಂದ ಜಾರಿಗೆ ಬಂದಿದೆ. ಈಗಾಗಲೇ ಸುಮಾರು ೫೦೦೦ ಉಪಾಧ್ಯಾಯರು ಈ ರೀತಿ ಶಿಕ್ಷಣವನ್ನು ಪಡೆದು ವಿದೇಶಗಳಲ್ಲಿ ಯಾವ ರೀತಿ ಬೋಧನ ಕ್ರಮ ನಡೆಯುತ್ತದೆಯೆಂಬುದರಲ್ಲಿ ಪರಿಶ್ರಮ ಪಡೆದಿರುವರು.

ಆಸ್ಟ್ರೇಲಿಯಾದ ಒಬ್ಬ ಉಪಾಧ್ಯಾಯಿನಿಯು ಬ್ರಿಟನ್ನಿನಲ್ಲಿ ಒಂದು ಪ್ರದರ್ಶನ ಶಾಲೆಯಲ್ಲಿ ಮಕ್ಕಳನ್ನು ಆಟವಾಡಿಸುತ್ತಲಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೬೪ (ಲಿಂಕ್) ದಿನಪತ್ರಿಕೆ ರಿ. ನೆ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೩—೩—೧೯೫೨ನೇ ಗುರುವಾರ [ಸಂಚಿಕೆ ೧೩೬

ಭಾರತಕ್ಕೆ ಜಪಾನಿನ ಕೈಗಾರಿಕಾ ನಿಯೋಗದ ಆಗಮನ

ಕೃಷಕ್‌ಲೋಕ್ ಪಕ್ಷವು ಕಮ್ಯೂನಿಸ್ಟ್ ಪಕ್ಷದೊಡನೆ ಸೇರಕೂಡದು

ಭಾರತದ ಯಾವಪ್ರಾಂತದಲ್ಲಿಯೂ ಕೃಷಕ್‌ಲೋಕ್‌ಪಕ್ಷವು ಕಮ್ಯೂನಿಸ್ಟ್‌ಪಕ್ಷದೊಡನೆ ಸೇರಕೂಡದೆಂದು ಕೃಷಕ್‌ಲೋಕ್‌ಪಕ್ಷದ ಕೇಂದ್ರ ಸಮಿತಿಯು ಸೂಚನೆಯಿತ್ತಿದೆ.

ಬೆಂಗಳೂರಿನಲ್ಲಿ ಟೈಪ್‌ರೈಟರ್ ಕಾರ್ಖಾನೆ

ಬೆಂಗಳೂರು ಮಾ ೧೧

ಭಾರತ ಮತ್ತು ಸುತ್ತಮುತ್ತ ರಾಷ್ಟ್ರಗಳಿಗೆ ಬೇಕಾಗುವ ಟೈಪ್‌ರೈಟರ್ ಯಂತ್ರದ ಭಾಗಗಳನ್ನು ಭಾರತದಲ್ಲಿ ತಯಾರಿಸಲು ಸುಪ್ರಸಿದ್ಧ ರೆಮಿಂಗ್‌ಟನ್ ಕಂಪನಿ ಯೋಜನೆ ತಯಾರಿಸಿದೆಯೆಂದೂ ಬೆಂಗಳೂರಿನಲ್ಲಿ ಕಾರ್ಖಾನೆ ಸ್ಥಾಪಿಸಲ್ಪಡುವುದೆಂದು ತಿಳಿದುಬಂದಿದೆ.

ನೂತನ ಐ. ಜಿ. ಪಿ.

ಬೆಂಗಳೂರು ಮಾ ೧೨

ಐ. ಜಿ. ಪಿ. ಯಾಗಿ ನೇಮಕವಾಗಿರುವ ಡಿ ಐ. ಜಿ. ಶ್ರೀ ಎನ್. ಪಿ ಬಾಬುರೆಡ್ಡಿಯವರು ಸೋಮವಾರ ಅಧಿಕಾರ ವಹಿಸಿಕೊಳ್ಳುವರೆಂದು ತಿಳಿಯಬರುತ್ತದೆ.

ಹೊಸ ಕಾಂಗ್ರೆಸ್ ಸರ್ಕಾರ

ತಿರುವಾಂಕೂರು ಕೊಚ್ಚಿನ್‌ನಲ್ಲಿ ಹೊಸ ಕಾಂಗ್ರೆಸ್ ಸರ್ಕಾರವು ನಿನ್ನೆ ಅಧಿಕಾರ ವಹಿಸಿಕೊಂಡಿತು. ಈ ಮಂತ್ರಿಮಂಡಲದಲ್ಲಿ ೭ ಸಚಿವರಿರುವರು. ಶ್ರೀ ಎ ಜೆ. ಜಾನ್ ಮುಖ್ಯಮಂತ್ರಿ, ಶ್ರೀಗಳಾದ ಟಿ. ಎಂ. ವರ್ಗೀಸ್, ಪನಂಪಲ್ಲಿ ಗೋವಿಂದಮೆನನ್, ಕಾಲತಿಲ್ ವೇಲಾಯುಧನ್ ನಾಯರ್, ವಿ. ಮಾಧವನ್ ಮತ್ತು ಕೋಚುಕುಟ್ಟನ್‌ರವರು ಇತರ ಸಚಿವರುಗಳು.

ಕಾಂಗ್ರೆಸ್ಸಿಗೆ ಬಹುಮತವಿಲ್ಲ

ಬೊಂಬಾಯಿ ಪೌರಸಭಾ ಚುನಾವಣೆಗಳಲ್ಲಿಯ ೧೨೪ ಸ್ಥಾನಗಳಲ್ಲಿ ಕಾಂಗ್ರೆಸ್ ೫೭ ಸ್ಥಾನಗಳನ್ನು ಮಾತ್ರ ಪಡೆದಿದೆ. ಇನ್ನಾವಪಕ್ಷವು ಇದರೊಡನೆ ಸೇರಿದರೆ ಆಗ ಮಾತ್ರ ಕಾಂಗ್ರೆಸ್‌ಗೆ ಬಹುಮತ ದೊರೆಯಬಹುದು.

ಪೇಟೆ ಧಾರಣೆ

ಮೈಸೂರು ತಾ॥ 12-3-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಕ್ಕೆ	11-4	20
ಹೊಂಗೆಬೀಜ ,,	7-14	12
ಹುರುಳಿ ,,	24-0	26-8
ಹೆಸರು ,,	50	
ಅವರೆ ,,	42-0	46-0
ಮೆ, ಕಾಯಿ ದುಡ್ಡಕ್ಕೆ	11-10	15-4
ಹುಣಸೇಹಣ್ಣು ,,	1-12	2-4
ಸೀಗೆಕಾಯಿ ,,	2-13	3-3
ತೆಂಗಿನಕಾಯಿ 1100ಕ್ಕೆ	150	

ಅಕ್ಕಿ, ಜೋಳದ ಬೆಲೆಯಲ್ಲಿ ಇಳಿತಾಯ

ಭಾರತದಲ್ಲಿ ವ್ಯಾಪಾರ ವಸ್ತುಗಳ ಬೆಲೆಯಲ್ಲಿ ವಿಶೇಷವಾಗಿ ಇಳಿತಾಯವಾಗುತ್ತಲಿರುವುದರ ಪರಿಣಾಮವಾಗಿ ರಾಯಲು ಸೀಮೆಯ ಕೆಲವು ಪ್ರದೇಶಗಳಲ್ಲಿ ಅಕ್ಕಿ, ಜೋಳಗಳ ಬೆಲೆಯು ಸರ್ಕಾರಿ ಬೆಲೆಗಿಂತಲೂ ಕಡಮೆಯಾಗಿ ಮಾರಲಾಗುತ್ತಲಿದೆಯೆಂದು ಮದ್ರಾಸ್ ಸಚಿವ ಶ್ರೀ ಸೀತಾರಾಮರೆಡ್ಡಿಯವರು ಹೇಳಿರುವರು.

ತಿರುವಾಂಕೂರು ಕೊಚ್ಚಿನ್ನಿನಲ್ಲಿ ತೀವ್ರಕ್ಷಾಮ

ತಿರುವಾಂಕೂರು ಕೊಚ್ಚಿನ್ನಿನ ಕೆಲವು ಭಾಗದಲ್ಲಿ ರಾಯಲಸೀಮೆಗಿಂತ ತೀವ್ರತರವಾದ ಕ್ಷಾಮಪರಿಸ್ಥಿತಿ ಇದೆ ಸಚಿವ ಶ್ರೀ ಮುನಷಿಯವರು ಅಲ್ಲಿಗೆ ಬೇಟಿ ಕೊಡದಿರುವುದು ದುರ್ದೈವವೆಂದು ತಿರುವಾಂಕೂರು ಕೊಚ್ಚಿನ್ನಿನ ಆಹಾರಸಚಿವ ಕೆ ಎಂ ಕೋರಾ ತಿಳಿಸಿರುವರು.

ಡಿಪಾಸಿಟ್ಟು ತೆಗೆದುಕೊಳ್ಳಕೂಡದು

ಪಾಕಿಸ್ಥಾನದಲ್ಲಿರುವ ೧೭ ಬ್ಯಾಂಕುಗಳು ಇನ್ನುಮುಂದೆ ಡಿಪಾಸಿಟ್ಟುಗಳನ್ನು ಸ್ವೀಕರಿಸಕೂಡದೆಂದು ಪಾಕಿಸ್ಥಾನ ರಾಷ್ಟ್ರ ಬ್ಯಾಂಕು ಆಜ್ಞೆಯಿತ್ತಿರುವುದಾಗಿ ಹೇಳಲಾಗಿದೆ.

ಪುನಃ ಸಂಧಾನ

ಇರಾನಿನ ಎಣ್ಣೆ ಪ್ರಕರಣದಲ್ಲಿ ಇತ್ಯರ್ಥಕ್ಕಾಗಿ ಯತ್ನಿಸುತ್ತಿರುವ ವಿಶ್ವಬ್ಯಾಂಕಿನೊಡನೆ ಮಾತುಕತೆಗಳನ್ನು ಮುಂದುವರಿಸಲು ಮೂವರು ಸದಸ್ಯರನ್ನುಳ್ಳ ಉಪಸಮಿತಿಯೊಂದನ್ನು ಇರಾನಿನ ಮಿತ್ರಯೆಣ್ಣೆ ಸಮಿತಿಯು ನೇಮಿಸಿದೆ.

ಡಿ. ಡಿ. ಟಿ. ಕಾರ್ಖಾನೆ

ಬೊಂಬಾಯಿನಲ್ಲಿ ಒಂದು ಆಧುನಿಕ ಡಿ. ಡಿ. ಟಿ. ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ. ವಿಶ್ವ ಆರೋಗ್ಯಸಂಸ್ಥೆ, ವಿಶ್ವಸಂಸ್ಥೆ ಮಕ್ಕಳ ನಿಧಿ ಮತ್ತು ಭಾರತ ಸರ್ಕಾರದವರು ಸೇರಿ ಈ ಕಾರ್ಖಾನೆಯನ್ನು ಸ್ಥಾಪಿಸಲಿರುವರು.

ಸಕ್ಕರೆಗೆ ಗಿರಾಕಿಗಳಿಲ್ಲ

ಬೆಂಗಳೂರು ಮಾ ೧೨

ಗಿರಾಕಿಗಳಿಲ್ಲದುದರ ಪರಿಣಾಮವಾಗಿ ಮಂಡ್ಯ ಸಕ್ಕರೆಕಾರ್ಖಾನೆಯಲ್ಲಿ ೧ ಲಕ್ಷ ೪೨ ಸಾವಿರ ಚೀಲ ಸಕ್ಕರೆಯು ಇದುವರೆಗೆ ಎಂದೂ ಆಗದ ಪ್ರಮಾಣದಲ್ಲಿ (ರೆಕಾರ್ಡ್ ಸ್ಟಾಕ್) ಸಂಗ್ರಹವಾಗಿದೆಯೆಂದು ಮಂಡ್ಯ ಸಕ್ಕರೆ ಕಂಪೆನಿಯ ಅಧ್ಯಕ್ಷ ಶ್ರೀ ಎ. ಜಿ. ಬಂದೀಗೌಡರು ತಿಳಿಸಿರುವರು.

ಬೆಂಗಳೂರಿಗೆ ಆಗಮನ

ಬೆಂಗಳೂರು ೧೨

ನಿವೃತ್ತರಾದ ಮದ್ರಾಸಿನ ಗೌರ್ನರ್ ಭಾವನಗರದ ಮಹಾರಾಜರು ಮಹಾರಾಣಿಯವರೊಡನೆ ಬೆಂಗಳೂರಿಗೆ ವಿಶೇಷ ವಿಮಾನದಲ್ಲಿ ಆಗಮಿಸಿದರು. ಅವರು ಎರಡುತಿಂಗಳಕಾಲ ಬೆಂಗಳೂರಿನಲ್ಲಿರುವರೆಂದು ಗೊತ್ತಾಗಿದೆ.

ಅಧಿಕೃತ ಪ್ರಕಟಣೆ

ಬೆಂಗಳೂರು ೧೨

ಹಂಗಾಮಿ ಜಿಲ್ಲಾಧಿಕಾರಿಗಳಾಗಿರುವ ಶ್ರೀ ಕೆ. ನರಸಿಂಹಮೂರ್ತಿಯವರನ್ನು ಕೊಡಗಿನ ಶ್ರೇಷ್ಠ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆಯೆಂದು ಮೈಸೂರುಸರ್ಕಾರದ ಅಧಿಕೃತ ಪ್ರಕಟಣೆ ಹೊರಬಿದ್ದಿದೆ.

ಹೈದರಾಬಾದಿನಲ್ಲಿ ವಜ್ರದ ಗಣಿ

ಹೈದರಾಬಾದ್‌ಪ್ರಾಂತ್ಯದ ವಾರಂಗಲ್ ಜಿಲ್ಲೆಯಲ್ಲಿ ಚರಿತ್ರಾರ್ಹವಾದ ಗೋಲ್ಕಂಡಾಬಳಿ ವಜ್ರದ ಗಣಿಗಳಿವೆಯೆಂದು ಭೂಸಂಶೋಧನಾಧಿಕಾರಿಗಳು ಕಂಡುಹಿಡಿದಿರುವರೆಂದು ಹೇಳಲಾಗಿದೆ. ಇದಲ್ಲದೆ ಹೈದರಾಬಾದಿನ ಕೆಲವೆಡೆ ಕಬ್ಬಿಣದ ಅದುರು ವಿಶೇಷವಾಗಿ ದೊರೆಯುವುದೆಂದು ತಿಳಿದುಬಂದಿದೆ.

ಕೈಗಾರಿಕಾ ನಿಯೋಗ

೧೩ ಸದಸ್ಯರನ್ನೊಳಗೊಂಡ ಜಪಾನೀ ಕೈಗಾರಿಕಾ ನಿಯೋಗವೊಂದು ಭಾರತಕ್ಕೆ ಬಂದಿದೆ. ಜಪಾನು ತನ್ನಲ್ಲಿರುವ ಭಾರಿ ಯಂತ್ರೋಪಕರಣಗಳನ್ನು ಭಾರತಕ್ಕೆ ಸರಬರಾಜುಮಾಡಿ ಅದಕ್ಕೆ ಬದಲಾಗಿ ಕಲ್ಲಿದ್ದಲು, ಕಬ್ಬಿಣ, ಅದುರು ಮುಂತಾದುವನ್ನು ಪಡೆಯಲು ಸಂಧಾನವನ್ನು ಈ ನಿಯೋಗ ನಡೆಸುತ್ತದೆ. ನಿಯೋಗದವರು ಭಾರತದಲ್ಲಿ ಒಂದು ತಿಂಗಳಕಾಲವಿರುವರೆಂದು ಹೇಳಲಾಗಿದೆ.

ಶ್ರೀ ಜಿ. ಎನ್. ನಾಗರಾಜರಾಯರಿಗೆ ರಜಾ

ಐ. ಜಿ. ಪಿ. ಯವರಾಗಿರುವ ಶ್ರೀ ಜಿ. ಎನ್. ನಾಗರಾಜರಾಯರಿಗೆ ಇದೇಮಾಹೆ ೧೭ನೇ ತಾರೀಖಿನಿಂದ ಒಂದು ತಿಂಗಳ ರಜಾಕೊಡಲಾಗಿದೆ.

ಸಹಾಯನಿಧಿ

ರಾಯಲುಸೀಮೆಯಲ್ಲಿ ಕಡಪ ಚಿತ್ತೂರು ಜಿಲ್ಲೆಯಲ್ಲಿ ಉಂಟಾಗಿರುವ ಆಹಾರಅಭಾವದ ಪ್ರದೇಶಗಳಿಗೆ ಭೇಟಿಯಿತ್ತು, ಅಲ್ಲಿಯ ಜನರಿಗೆ ಸಹಾಯಮಾಡಲು ಪ್ರಧಾನಿ ನೆಹರೂರವರು ಪಾರ್ಲಿಮೆಂಟ್ ಸದಸ್ಯೆ ಶ್ರೀಮತಿ ದುರ್ಗಾಬಾಯಿಯವರನ್ನು ಕಳುಹಿಸಿರುವರು. ಈ ಕಾರ್ಯಕ್ಕಾಗಿ ೨೫೦೦೦ ರೂಗಳನ್ನು ಕೊಟ್ಟಿರುವರೆಂದು ತಿಳಿದುಬರುತ್ತದೆ.

ಪ್ರಾಚೀನ ವಸ್ತುಸಂಗ್ರಹಣೆ

ಸೌರಾಷ್ಟ್ರದ ಅಮರೇಲಿ ಎಂಬಲ್ಲಿ ಕ್ರಿಸ್ತಪೂರ್ವದ ಮತ್ತು ಗುಪ್ತ ಕಾಲದ ಶಿಲಾಪ್ರತಿಮೆ, ಆಭರಣ, ನಾಣ್ಯ ಮುಂತಾದುವನ್ನು ಭೂಗರ್ಭ ಸಂಶೋಧನಾಧಿಕಾರಿಗಳು ಕಂಡುಹಿಡಿದಿರುವರೆಂದು ತಿಳಿದುಬಂದಿದೆ.

ಡಾ॥ ಗ್ರಹಾಂ ಡೆಹಲಿಗೆ

ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ॥ ಗ್ರಹಾಂರವರು ಪಾಕೀಸ್ಥಾನದಲ್ಲಿ ತಮ್ಮ ಮಾತುಕತೆಗಳನ್ನು ಮುಗಿಸಿಕೊಂಡು ಈ ದಿನ ಡೆಹಲಿಗೆ ಬರಲಿರುವರೆಂದು ಗೊತ್ತಾಗಿದೆ.

ಪತ್ರಿಕಾ ವ್ಯವಸಾಯದ ನೀತಿನಿಯಮಗಳು

ಪ್ರಪಂಚದ ಪತ್ರಿಕೋದ್ಯಮಿಗಳಿಗೆಲ್ಲಾ ಅನ್ವಯವಾಗುವಂತೆ ಒಂದು ನಿಯಮಾವಳಿಯನ್ನು ಮತ್ತು, ಅದರ ಕರಡು ಪ್ರತಿಯನ್ನು, ವಿಶ್ವಸಂಸ್ಥೆಯ ಸುದ್ದಿ ಮತ್ತು ಪತ್ರಿಕಾ ಸ್ವಾತಂತ್ರ್ಯದ ಉಪ ಸಮಿತಿಯು ಚರ್ಚಿಸುತ್ತಲಿದೆ.

ಅಂತರ ರಾಷ್ಟ್ರೀಯ ನಿಯಮಾವಳಿಯನ್ನು ೧೨ ಜನ ಸದಸ್ಯರನ್ನೊಳಗೊಂಡ ಸಮಿತಿಯು ತನ್ನ ಕೊನೆಯ ಅಧಿವೇಶನದಲ್ಲಿ ಚರ್ಚಿಸುವುದು.

ಈ ಸಮಿತಿಯ ಅಧ್ಯಕ್ಷರಾದ ಈಜಿಪ್ಟಿನ ಮಹಮದ್ ಅಜ್ಮೀಬೇರವರು ಸಮಿತಿಯ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ, ಹಿಂದಿನ ಅಧಿವೇಶನದಿಂದೀಚೆಗೆ ಸುದ್ದಿ ಸ್ವಾತಂತ್ರ್ಯದ ಸಮಸ್ಯೆಯು ಬಲು ತೊಡಕಾಗಿದೆ ಎಂದು, ಹೇಳಿದರು.

ಅಮೆರಿಕದ ಪ್ರತಿನಿಧಿಗಳಾದ ಕೆರೋಲ್ ಬೈಂಡರ್‌ರವರು ಮಾತನಾಡುತ್ತಾ, ಸುದ್ದಿ ಮೂಲಗಳನ್ನು ಹುಡುಕುವ ಬಗ್ಗೆ ಕಾರ್ಗತ್ತಲೆಯೇ ಕವಿದಿದೆ ಎಂದು ನುಡಿದರು.

ಈ ಉಪಸಮಿತಿಯ ಚರ್ಚೆಯಲ್ಲಿ ಲೆಬನಾನ್, ಈಜಿಪ್ಟ್, ಚೈನಾ, ಯುಗೋಸ್ಲೇವಿಯಾ, ಫಿಲಿಫೈನ್ಸ್ ದ್ವೀಪಗಳು, ಉರುಗ್ವೆ, ಚಿಲಿ, ಫ್ರಾನ್ಸ್, ಭಾರತ, ಅಮೆರಿಕ, ಇಂಗ್ಲೆಂಡ್, ರಷ್ಯಾ ದೇಶಗಳು ಭಾಗವಹಿಸಿವೆ

ಡಾ|| ವರದರಾಜುಲು ನಾಯಿಡುರವರು

ಡಾ|| ವರದರಾಜುಲು ನಾಯಿಡುರವರು ಮದ್ರಾಸ್ ಶಾಸನಸಭೆಯ ನಾಯಕಸ್ಥಾನಕ್ಕೆ ಸ್ಪರ್ಧಿಸಬೇಕೆಂದಿರುವ ತಮ್ಮ ನಿರ್ಧಾರವನ್ನು ಪಂಡಿತ ನೆಹರೂರವರಿಗೆ ತಿಳಿಸಿ, ಕಾಂಗ್ರೆಸ್ ಹೈಕಮಾಂಡಿನ ಅಭಿಪ್ರಾಯವನ್ನು ತಾವು ನಿರೀಕ್ಷಿಸುತ್ತಿರುವುದಾಗಿ ಶ್ರೀ ನಾಯಿಡುರವರು ಮದ್ರಾಸಿನಲ್ಲಿ ಹೇಳಿರುವರು.

ಬ್ಯಾಂಕ್ ಬಡ್ಡಿದರ ಹೆಚ್ಚಿತು

ಬ್ಯಾಂಕ್ ಬಡ್ಡಿದರ ಶೇಕಡ ಎರಡೂವರೆಯಿಂದ ನಾಲ್ಕಕ್ಕೆ ಏರಿಸಲಾಗಿದೆಯೆಂದು ಬ್ರಿಟನ್ ಅರ್ಥಿಕ ಸಚಿವರು ಬಟ್ಲರ್ ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಎಲ್ಲರೂ ಸಹಕರಿಸಿ

ತಾವು ಕೈಗೊಂಡಿರುವ ಭೂದಾನ ಚಳುವಳಿಯಲ್ಲಿ ಪಕ್ಷಗಳ ಬೇಧಭಾವವನ್ನು ತೋರಿಸದೆ ಎಲ್ಲರೂ ಸಹಕಾರ ನೀಡಬೇಕೆಂದು ಆಚಾರ್ಯ ವಿನೋಬ ಭಾವೆಯವರು ಎಲ್ಲಾ ಪಕ್ಷದವರಲ್ಲಿ ಮನವಿಮಾಡಿಕೊಂಡಿರುವರು. ಈಗಾಗಲೇ ಉತ್ತರ ಪ್ರದೇಶದಲ್ಲಿ ಸುಮಾರು ೮೦೦೦ ಜನರು ೫೦೦೦೦ ಎಕರೆ ಜಮೀನನ್ನು ಉಚಿತವಾಗಿ ಕೊಟ್ಟಿರುವರು.

ಅಧಿಕಾರ ಸ್ವೀಕಾರ

ಮದ್ರಾಸಿನ ನೂತನ ಗವರ್ನರ್ ಶ್ರೀ ಶ್ರೀ ಪ್ರಕಾಶರವರು ನಿನ್ನೆಯದಿನ ಬೆಳಿಗ್ಗೆ ರಾಜಾಜಿ ಭವನದಲ್ಲಿ ಮದ್ರಾಸಿನ ಗವರ್ನರಾಗಿ ಪ್ರಮಾಣ ಸ್ವೀಕರಿಸಿದರು. ಮದ್ರಾಸಿನ ಶ್ರೇಷ್ಠನ್ಯಾಯಾಲಯದ ಶ್ರೇಷ್ಠನ್ಯಾಯಮೂರ್ತಿ ಶ್ರೀ ಪಿ. ವಿ. ರಾಜಮನ್ನಾರ್‌ರವರ ಸಮ್ಮುಖದಲ್ಲಿ ಪ್ರಮಾಣ ಸ್ವೀಕಾರ ನಡೆಯಿತು. ಸಮಾರಂಭಕ್ಕೆ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾ, ಮತ್ತಿತರ ಮಂತ್ರಿಗಳು, ನ್ಯಾಯಮೂರ್ತಿಗಳು, ಪ್ರಮುಖ ಅಧಿಕಾರಿಗಳು, ಪಾರ್ಲಿಮೆಂಟಿನ ಮತ್ತು ಶಾಸನಸಭಾ ಸದಸ್ಯರು ಹಾಜರಾಗಿದ್ದರು. ವಿಶೇಷ ಆಹ್ವಾನದ ಮೇಲೆ ಮಾಜಿ ಗೃಹ ಸಚಿವ ಶ್ರೀ ಸಿ. ರಾಜಗೋಪಾಲಾಚಾರಿಯವರು ಬಂದಿದ್ದರು.

ರಾಜಾಜಿ ಭವನಕ್ಕೆ ಬಂದೊಡನೆಯೇ ಮುಖ್ಯಮಂತ್ರಿಗಳು ಭಾವಿ ಗವರ್ನರ್‌ರನ್ನು ಸ್ವಾಗತಿಸಿದರು. ಮಿಲಿಟರಿ ಗೌರವ ರಕ್ಷೆಯನ್ನು ಶ್ರೀ ಶ್ರೀ ಪ್ರಕಾಶರವರು ಸ್ವೀಕರಿಸಿದರು. ಪ್ರಮಾಣ ಸ್ವೀಕಾರವಾದೊಡನೆಯೇ ೧೭ ಕುಶಾಲತೋಪುಗಳನ್ನು ಹಾರಿಸಿ, ರಾಷ್ಟ್ರಧ್ವಜವನ್ನು ಹಾರಿಸಲಾಯಿತು.

ಈ ಸಮಾರಂಭಕ್ಕೆ ಮುನ್ನ ಗವರ್ನರಾಗಿದ್ದ ಭಾವನಗರ ಮಹಾರಾಜರು ತಮ್ಮ ಪರಿವಾರದೊಡನೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಿದರು. ವಿಮಾನ ನಿಲ್ದಾಣದಲ್ಲಿ ಶ್ರೀ ಶ್ರೀ ಪ್ರಕಾಶ್, ಮುಖ್ಯಮಂತ್ರಿ ಮತ್ತಿತರ ಮಂತ್ರಿಗಳು ಪ್ರಮುಖರು ಹಾಜರಿದ್ದರು.

ಡಾ|| ಖಾನ್ ಸಾಹೇಬರ ಮೇಲೆ ನಿರ್ಬಂಧ ಸಡಿಲ

ವಾಯುವ್ಯ ಗಡಿನಾಡು ಪ್ರಾಂತ್ಯ ಸರ್ಕಾರವು ಡಾ|| ಖಾನ್ ಸಾಹೇಬರ ಮೇಲೆ ವಿಧಿಸಿರುವ ನಿರ್ಬಂಧವನ್ನು ಸಡಿಲಿಸಿ, ಅವರು ರಾವಲ್ಪಿಂಡಿಗೆ ಪೋಲೀಸ್ ಉಸ್ತುವಾರಿಯಿಲ್ಲದೆ ಹೋಗಬಹುದೆಂದು ಅಲ್ಲಿಯ ಮುಖ್ಯಮಂತ್ರಿ ಶಾಸನಸಭೆಯಲ್ಲಿ ತಿಳಿಸಿರುವುದಾಗಿ ಹೇಳಲಾಗಿದೆ.

ಬ್ಲಿಟ್ಸ್ ಸಹ ಸಂಪಾದಕರ ದಸ್ತಗಿರಿ

ಉತ್ತರ ಪ್ರದೇಶದ ಶಾಸನಸಭೆಯು ಬ್ಲಿಟ್ಸ್ ಪತ್ರಿಕೆಯ ಸಹ ಸಂಪಾದಕ ಶ್ರೀ ಹೆಚ್. ಎಸ್. ಮಿಶ್ರಯವರ ಮೇಲೆ ದಸ್ತಗಿರಿ ವಾರಂಟನ್ನು ಕೊಡಬೇಕೆಂದು ಮಾಡಿದ ತೀರ್ಮಾನದಂತೆ ಲಕ್ನೋದಿಂದ ಉನ್ನತ ಸಿ. ಐ. ಡಿ. ಅಧಿಕಾರಿಗಳು ವಾರಂಟಿನೊಡನೆ ಬೊಂಬಾಯಿಗೆ ತೆರಳಿ ಪತ್ರಿಕೆಯ ಸಹ ಸಂಪಾದಕರನ್ನು ಮೊನ್ನೆ ದಸ್ತಗಿರಿ ಮಾಡಿ ವಿಶೇಷ ವಿಮಾನದಲ್ಲಿ ಲಕ್ನೋಗೆ ವಿಚಾರಣೆಗಾಗಿ ಕರತಂದಿರುವುದಾಗಿ ಗೊತ್ತಾಗಿದೆ.

'ಕೋಮು ಭಾವನೆ ಹೆಚ್ಚುತ್ತಿದೆ'

ಬೆಂಗಳೂರು ಮಾ ೧೧

ಸಂಸ್ಥಾನದಲ್ಲಿ ಕೋಮುವಾರು ಭಾವನೆ ಹೆಚ್ಚುತ್ತಿರುವ ಬಗ್ಗೆ ಮೈಸೂರಿನ ಚೀಫ್ ಜಸ್ಟಿಸ್ ಶ್ರೀ ಪಿ ಮೇದಪ್ಪನವರು ವಿಷಾದ ಸೂಚಿಸಿದರು.

ಇಂದು ಸಂಜೆ ಸರ್ಕಾರಿ ಲಾ ಕಾಲೇಜ್ ಸಂಘದ ಉತ್ಸವದಲ್ಲಿ ಕಾಲೇಜ್ ನಿವೇಶನದಲ್ಲಿ ಅಧ್ಯಕ್ಷ ಭಾಷಣಮಾಡುತ್ತಾ ಶ್ರೀ ಮೇದಪ್ಪನವರು ಲೌಕಿಕ ಪ್ರಜಾಸತ್ತೆಗೆ ಅವಕಾಶವೀಯುವ ರಾಜ್ಯಾಂಗದ ಆಶ್ರಯದಲ್ಲಿ ಎಲ್ಲರೂ ಬಾಳುತ್ತಿರುವುದರಿಂದ ಕೋಮುವಾದವನ್ನು ಎಲ್ಲ ರೀತಿಯಲ್ಲೂ ಕಿತ್ತೊಗೆಯಬೇಕೆಂದೂ, ಶ್ರೀ ಮೇದಪ್ಪನವರು ಹೇಳಿದರು.

ಮುಂದುವರಿದು ಚೀಫ್ ಜಸ್ಟಿಸರು ಈಚಿನ ಚುನಾವಣೆಗಳಲ್ಲಿ ಕೋಮುವಾದಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆತುದಕ್ಕಾಗಿ ವಿಷಾದಿಸಿ ಸಂಸ್ಥಾನದ ಕೋರ್ಟುಗಳಲ್ಲಿನ ಕೆಲವು ಕಾರ್ಯಕಲಾಪಗಳಲ್ಲೂ ಕೋಮುವಾರು ಸೂಚನೆ ಕಂಡುಬಂದಿತ್ತೆಂದೂ, ಈ ವಿಷವನ್ನು ನಿವಾರಿಸಬೇಕೆಂದೂ ವಿವರಿಸಿ, ಈಗಿನ ಕಾಲೇಜುಗಳು ಸರ್ಕಾರದ ಹತೋಟಿಯಲ್ಲಿರುವುದಕ್ಕೆ ಬದಲಾಗಿ ವಿಶ್ವವಿದ್ಯಾನಿಲಯದ ಅಧೀನದಲ್ಲಿರಬೇಕೆಂದೂ ಲಾ ಕಾಲೇಜಿಗೂ ಸಂಸ್ಥಾನದ ಹೈಕೋರ್ಟಿಗೂ ನಿಕಟಬಾಂಧವ್ಯವಿರಬೇಕೆಂದು ತಮ್ಮ ಅಭಿಪ್ರಾಯವೆಂದೂ ತಿಳಿಸಿದರು.

ಆಹಾರ ಹೆಚ್ಚುವರಿ

ಪಾಟಿಯಾಲಾ ಪೂರ್ವ ಪಂಜಾಬ್ ಒಕ್ಕೂಟದಲ್ಲಿ ೨೫೦೦೦ ಟನ್ ಆಹಾರ ಪದಾರ್ಥಗಳು ಹೆಚ್ಚುವರಿಯಿದೆಯೆಂದು ಅಲ್ಲಿಯ ಸರ್ಕಾರವು ಸಾರಿದೆ. ಇದರಲ್ಲಿ ೧೫೦೦೦ ಟನ್ ಗೋಧಿ, ೫೦೦೦ ಟನ್ ಅಕ್ಕಿಯೂ ಇದೆಯೆಂದು ಗೊತ್ತಾಗಿದೆ. ಈ ಹೆಚ್ಚುವರಿ ಆಹಾರವನ್ನು ಕೊರತೆ ಪ್ರದೇಶಗಳಿಗೆ ಕಳುಹಿಸಲಾಗುವುದೆಂದು ಹೇಳಲಾಗಿದೆ.

ಈ ಪ್ರಾಂತ್ಯದಲ್ಲಿ ೧೧೪ ಗ್ರಾಮಗಳಲ್ಲಿ ೨೧ ಸಾವಿರ ಎಕರೆ ಜಮೀನಿನಲ್ಲಿ ಆಹಾರ ಬೆಳೆಯನ್ನು ಅಭಿವೃದ್ಧಿಗೊಳಿಸುವ ೩೦ ಲಕ್ಷ ರೂಪಾಯಿವೆಚ್ಚದ ಪಂಚವಾರ್ಷಿಕ ಯೋಜನೆಯನ್ನು ಸರ್ಕಾರವು ತಯಾರಿಸಿದೆ.

ಅರವಿಂದಾಶ್ರಮಕ್ಕೆ ಭೇಟಿ

ಮದ್ರಾಸಿನ ಕ್ಷಾಮಪೀಡಿತ ಪ್ರದೇಶಗಳಿಗೆ ಭೇಟಿಯಿತ್ತನಂತರ ಕೇಂದ್ರ ಆಹಾರ ಸಚಿವ ಶ್ರೀ ಕೆ. ಎಂ. ಮುನ್ಷಿಯವರು ಪುದುಚೇರಿಗೆ ಹೋಗಿ, ಅರವಿಂದಾಶ್ರಮಕ್ಕೆ ಭೇಟಿಯನ್ನಿತ್ತರು.

ಕೌನ್ಸಿಲ್ ಆಫ್ ಸ್ಟೇಟಿನ ಪ್ರತಿನಿಧಿಗಳಲ್ಲಿ ಬದಲಾವಣೆ

ಈಗ ಹೊರಬಿದ್ದಿರುವ ಕೇಂದ್ರ ಕಾಂಗ್ರೆಸ್ ಚುನಾವಣಾ ಸಮಿತಿಯ ಅಭ್ಯರ್ಥಿ ಪಟ್ಟಿಯಂತೆ ಮೈಸೂರಿನಿಂದ ಕೌನ್ಸಿಲ್ ಆಫ್ ಸ್ಟೇಟಿಗೆ ಶ್ರೀಗಳಾದ ಎಸ್. ವಿ. ಕೃಷ್ಣಮೂರ್ತಿರಾವ್, ಬಿ. ಪಿ. ಬಸಪ್ಪಶೆಟ್ಟಿ, ಮಹಮದ್ ವಲಿಯುಲ್ಲ, ಎಂ. ಗೋವಿಂದರೆಡ್ಡಿ ಮತ್ತು ತಿಮ್ಮಬೋವಿ (ಹರಿಜನ) ರವರನ್ನು ಆರಿಸಲಾಗಿದೆಯೆಂದು ತಿಳಿಯಬರುತ್ತದೆ.

ಹಿರಿಯ ಶಾಸನ ಸಭೆಗೆ

ಮೈಸೂರು ಕೌನ್ಸಿಲ್ ಸಭೆಗೆ ನಿಲ್ಲಿಸಿದ್ದ ಶ್ರೀ ಎಸ್. ವಿ. ಕೃಷ್ಣಮೂರ್ತಿಯವರನ್ನು ಕೇಂದ್ರ ಕಾಂಗ್ರೆಸ್ ಚುನಾವಣೆ ಸಮಿತಿಯು ಕೌನ್ಸಿಲ್ ಆಫ್ ಸ್ಟೇಟ್ ಸಭೆಗೆ ನಿಲ್ಲಿಸಿರುವುದರಿಂದ, ಅವರಿಗೆ ಬದಲಾಗಿ ಮದ್ದೂರಿನ ಶ್ರೀ ತಿರುಮಲೇಗೌಡರನ್ನು ಮೈಸೂರು ಕೌನ್ಸಿಲ್ ಸಭೆಗೆ ನಿಲ್ಲಿಸಲಾಗುವುದೆಂದು ಗೊತ್ತಾಗಿದೆ.

ಆರುಕೋಟಿ ರೂ. ನಷ್ಟ

ಬಳ್ಳಾರಿ, ಕರ್ನೂಲು, ಕಡಪ ಮತ್ತು ಅನಂತಪುರಗಳ ಪಶ್ಚಿಮಭಾಗಗಳಲ್ಲಿ ಚಿನ್ನ, ಬೆಳ್ಳಿ, ಹತ್ತಿ, ಕಡಲೆಕಾಯಿ ಬೀಜ ಮತ್ತು ಕಡಲೆಕಾಯಿ ಎಣ್ಣೆಯ ವ್ಯಾಪಾರಿಗಳಿಗೆ ಬೆಲೆಯ ಇಳಿತದಿಂದ ಸುಮಾರು ಆರು ಕೋಟಿ ರೂಪಾಯಿ ನಷ್ಟವಾಗಿದೆಯೆಂದು ಅಲ್ಲಿಯ ಪ್ರಮುಖ ವ್ಯಾಪಾರಿಗಳು ಅಂದಾಜು ಹಾಕಿದ್ದಾರೆ.

ನ್ಯೂಅಪೇರ

೧೧-೩-೫೨ ರಿಂದ ಅಮೋಘಪ್ರಾರಂಭ

ಶೋಭನಾಚಲರವರ ತೆಲುಗು ಚಿತ್ರ—

ಮಾಯಾ ಕುದುರೆ

ಪಾತ್ರ:—ನಾಗೇಶ್ವರರಾವ್, ಅಂಜಲೀ.

ರಣಜಿತ್

೧೪-೩-೫೨ರಿಂದ ಅಮೋಘ ಪ್ರಾರಂಭ

* ಸಾಖಿ *

ಪಾತ್ರ:- ಮಧುಬಾಲ, ಪ್ರೇಂನಾಥ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೦೧)   ದಿನಪತ್ರಿಕೆ   ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೩]   ೧೪—೩—೧೯೫೨ನೇ ಶುಕ್ರವಾರ   [ಸಂಚಿಕೆ ೧೬೭

ಮೈಸೂರು ಸರಾಫು ಅಂಗಡಿಯಲ್ಲಿ ಭಾರಿ ಕಳ್ಳತನ

ಮೈಸೂರು ಮಾ ೧೩

ಮೈಸೂರು ಅಶೋಕಾರಸ್ತೆಯಲ್ಲಿರುವ ಮೈಸೂರು ಜ್ಯೂಯಲರಿಮಾರ್ಟಿನಲ್ಲಿ ನಿನ್ನೆ ರಾತ್ರಿ ಮನೆಯ ಹಿಂಭಾಗದಲ್ಲಿರುವ ವಿದ್ಯುಚ್ಛಕ್ತಿ ಕಂಬದಿಂದ ಮನೆಯೊಳಕ್ಕೆ ನುಗ್ಗಿ ಅಲ್ಲಿಯ ಅನೇಕ ಚಿನ್ನದ ಆಭರಣಗಳ ಕಳ್ಳತನ ನಡೆದಿದೆ. ಉಂಗುರಗಳು, ಚೈನುಗಳು, ಓಲೆ ಮುಂತಾದ ಬರೀ ಚಿನ್ನದ ಆಭರಣಗಳೇ ಕಳುವಾಗಿವೆ. ಪೋಲೀಸಿನವರು ತನಿಖೆ ನಡೆಸುತ್ತಲಿರುವರು. ಕಳುವಾದ ಮಾಲುಗಳ ಬೆಲೆಯು ಇನ್ನೂ ನಿಖರವಾಗಿ ತಿಳಿದಿಲ್ಲವಾದರೂ ಸುಮಾರು ೨೦-೨೫ ಸಾವಿರ ರೂ ಗಳಿರಬಹುದೆಂದು ಹೇಳಲಾಗಿದೆ

ಸೈಟಿಗೆ ಅರ್ಜಿಹಾಕಿರುವವರ ಸಭೆ

ಮೈಸೂರು ೧೩

ಸಂಸ್ಕೃತಿಪುರಂನ ಹೊಸ ಬಡಾವಣೆಯಲ್ಲಿ ಸೈಟಿಗಾಗಿ ಅರ್ಜಿಹಾಕಿರುವವರ ಸಭೆಯು ನಾಳೆಯದಿನ ಸಂಜೆ ೬-೩೦ ಘಂಟೆಗೆ ಕನ್ನೇಗೌಡನ ಕೊಪ್ಪಲಿನ ಹೊಸ ಬೀದಿಯಲ್ಲಿರುವ ಶ್ರೀ ದಾಸೇಗೌಡರ ಗುಡಿಯ ಆವರಣದಲ್ಲಿ ನಡೆಯುತ್ತದೆ. ಸೈಟಿನ ವಿಲೇವಾರಿಬಗ್ಗೆ ಉಂಟಾಗಿರುವ ಕುಂದುಕೊರತೆಗಳನ್ನು ಸಭೆಯಲ್ಲಿ ಪರಿಶೀಲಿಸಲಾಗುವುದು

ಖೈದಿಗಳಿನ್ನು ಮನುಷ್ಯರಂತೆ ಪರಿಗಣಿಸಿ

ಖೈದಿಗಳನ್ನು ಮನುಷ್ಯರಂತೆ ತಿಳಿದುಕೊಂಡು ಅವರಿಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಅಲ್ಲದೆ ಅಪರಾಧಗಳು ಜಾಡ್ಯವೆಂದು ಅರಿತು ಅದಕ್ಕೆ ತಕ್ಕ ಚಿಕಿತ್ಸೆ ಕೊಡಬೇಕೆಂದು ಬೊಂಬಾಯಿ ಗೃಹಸಚಿವ ಶ್ರೀ ಮುರಾರ್ಜಿ ದೇಸಾಯಿಯವರು ವಿಶ್ವಸಂಸ್ಥೆಯ ಆಶ್ರಯದಲ್ಲಿ ನಿನ್ನೆ ಬೊಂಬಾಯಿಯಲ್ಲಿ ನಡೆದ ಜೈಲು ಅಧಿಕಾರಿಗಳ ಸಮ್ಮೇಳನದಲ್ಲಿ ಮಾತನಾಡುತ್ತಾ ಹೇಳಿರುವರು.

ಸ್ಥಳೀಯಸಂಸ್ಥೆ ಕ್ಷೇತ್ರದಿಂದ ಉಮೇದುವಾರರು

ಪ್ರದೇಶ ಕಾಂಗ್ರೆಸ್ ಸಮಿತಿಯವರು ಸ್ಥಳೀಯಸಂಸ್ಥೆ ಕ್ಷೇತ್ರದಿಂದ ಹಿರಿಯ ಶಾಸನಸಭೆಗೆ ನಡೆಯುವ ಚುನಾವಣೆಗೆ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರನ್ನು ಮೈಸೂರುನಗರದಿಂದ ಉಮೇದುವಾರರನ್ನಾಗಿ ಚುನಾಯಿಸಿರುವರು.

ಸಲಹೆಗಾರರು

ಭಾರತ ಸರ್ಕಾರದ ಸಂಸ್ಥಾನ ಶಾಖಾ ಸಹ ಕಾರ್ಯದರ್ಶಿ ಶ್ರೀ ಎನ್. ಬುಚ್‌ರವರು ತಿರುವಾಂಕೂರು-ಕೊಚ್ಚಿನ್ ಸರ್ಕಾರದ ಸಲಹೆಗಾರರಾಗಿ ಇದೇ ೨೦ನೇ ತಾರೀಖು ಅಧಿಕಾರ ವಹಿಸಿಕೊಳ್ಳುವರೆಂದು ಹೇಳಲಾಗಿದೆ.

ಶ್ರೀ ಮಣಿಲಾಲ್‌ಗಾಂಧಿ ಹಾಸಿಗೆ ಹಿಡಿದಿದ್ದಾರೆ

ಆತ್ಮ ಪರಿಶುದ್ಧತೆಗಾಗಿ ೨೦ ದಿನಗಳ ಕಾಲ ಉಪವಾಸವ್ರತವನ್ನು ಕೈಗೊಂಡಿರುವ ಮಹಾತ್ಮ ಗಾಂಧಿಯವರಪುತ್ರ ಶ್ರೀ ಮಣಿಲಾಲ್ ಗಾಂಧಿಯವರು ಮೊನ್ನೆಯಿಂದ ಹಾಸಿಗೆ ಹಿಡಿದಿದ್ದಾರೆ.

ಕಪ್ಪು ಬಾವುಟದ ಪ್ರದರ್ಶನ ಯತ್ನ

ದ್ರಾವಿಡಯನ್ ಫೆಡರೇಷನ್ನಿನ ಸದಸ್ಯರು ನೂತನ ಗವರ್ನರ್ ಶ್ರೀ ಶ್ರೀ ಪ್ರಕಾಶರು ಅಧಿಕಾರ ಸ್ವೀಕಾರ ಮಾಡುವಾಗ ಕಪ್ಪು ಬಾವುಟ ಪ್ರದರ್ಶನ ನಡೆಸಲೆತ್ನಿಸಿದಾಗ ಪೋಲೀಸರು ಅವರನ್ನು ಬಂಧಿಸಿ ನಂತರ ಎಚ್ಚರಿಸಿ ಬಿಡಲಾಯಿತು.

ಪರಿಹಾರಕ್ಕಾಗಿ ೨೯೦೦೦ ರೂಪಾಯಿಗಳು

ಕ್ಷಾಮಪೀಡಿತವಾಗಿರುವ ಚಿತ್ತೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಗ್ರಾಮಾಂತರ ಕಾರ್ಯಗಳಿಗಾಗಿ, ಮದ್ರಾಸ್ ಸರ್ಕಾರವು ೨೯೦೦೦ ರೂಪಾಯಿಗಳನ್ನು ಮಂಜೂರ್ ಮಾಡಿದೆ

ತಿರುವಾಂಕೂರು ಕೊಚ್ಚಿನ್ ಶ್ರೇಷ್ಠ ಕಾರ್ಯದರ್ಶಿ

ಐ ಸಿ ಎಸ್ ಅಧಿಕಾರಿಗಳಾದ ಶ್ರೀ ವಿ ಎಸ್ ರಾಜ್‌ರವರು ತಿರುವಾಂಕೂರು ಕೊಚ್ಚಿ ಒಕ್ಕೂಟದ ಶ್ರೇಷ್ಠ ಕಾರ್ಯದರ್ಶಿಗಳಾಗಿ ಅಧಿಕಾರ ವಹಿಸಿಕೊಂಡರು. ಕೊಯಮತ್ತೂರು ಜಿಲ್ಲೆಯ ಕಲೆಕ್ಟರ್ ಆಗಿದ್ದ ಇವರ ಸೇವೆಯನ್ನು ಮದರಾಸ್ ಸರ್ಕಾರ ಎರವಲು ಕೊಟ್ಟಿದೆ

ಯಳಂದೂರಿಗೆ ವಿದ್ಯುಚ್ಛಕ್ತಿ

ಬೆಂಗಳೂರು ಮಾ ೧೩

ಯಳಂದೂರಿನಲ್ಲಿ ವಿದ್ಯುಚ್ಛಕ್ತಿ ಪ್ರಾರಂಭೋತ್ಸವವನ್ನು ನ್ಯಾಯಾಂಗಸಚಿವ ಶ್ರೀ ಕೆ. ಟಿ. ಭಾಷ್ಯಂರವರು ಇದೇ ಮಾತೆ ೧೬ನೇ ತಾರೀಖು ನೆರವೇರಿಸುವರು.

ಮುಂಗಡವಾಗಿ ೪ ತಿಂಗಳ ಸಕ್ಕರೆ

ಕೇಂದ್ರಸರ್ಕಾರದವರುಹೆಚ್ಚಿನ ಪ್ರಮಾಣದಲ್ಲಿ ಸಂಸ್ಥಾನಕ್ಕೆ ಸಕ್ಕರೆಯನ್ನು ಒದಗಿಸಿರುವುದರಿಂದ ೪ ತಿಂಗಳ ಸಕ್ಕರೆಯನ್ನು ಈಗಲೇ ಕೊಳ್ಳಲು ಅವಕಾಶವಿತ್ತು, ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಗೊತ್ತಾಗಿದೆ.

ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲ

ಅನಾರೋಗ್ಯನಿಮಿತ್ತ ಬಿಹಾರ್ ಗವರ್ನರಾದ ಶ್ರೀ ಅಣೆಯವರು, ಈಗತಾನೆ ದೆಹಲಿಯಿಂದ ಮದ್ರಾಸಿಗೆ ಹೋಗಿರುವ ಮದ್ರಾಸ್‌ಗವರ್ನರ್ ಶ್ರೀ ಶ್ರೀಪ್ರಕಾಶರವರು ರಾಜಪ್ರಮುಖರ ಮತ್ತು ಗವರ್ನರ್‌ಗಳ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ಗೊತ್ತಾಗಿದೆ.

ಕೈಗಾರಿಕಾ ನಿಯೋಗ

ಭಾರತಕ್ಕೆ ಆಗಮಿಸಿರುವ ಜಪಾನ್ ಕೈಗಾರಿಕಾ ನಿಯೋಗದವರು ಇದೇ ೨೬ನೇ ತಾರೀಖು ಬೆಂಗಳೂರಿಗೆ ಆಗಮಿಸಿ ಒಂದು ವಾರ ಇಲ್ಲಿರುವರೆಂದು ಗೊತ್ತಾಗಿದೆ. ಇಲ್ಲಿಯ ಪ್ರಮುಖ ಕಾರ್ಖಾನೆಗಳಿಗವರು ಭೇಟಿ ಕೊಡುವರು.

ಎ. ಐ. ಸಿ. ಸಿ. ಗೆ ಆಹ್ವಾನ

ಇದೇ ತಿಂಗಳು ೨೨ ಮತ್ತು ೨೩ನೇ ತಾರೀಖು ನಡೆಯಲಿರುವ ಎ ಐ ಸಿ ಸಿ ಅಧಿವೇಶನಕ್ಕೆ ಶ್ರೀಮತಿ ಎಲೆನಾರ್ ರೂಸ್‌ವೆಲ್ಟ್‌ರವರು, ವಿಶೇಷ ಆಹ್ವಾನಿತರಾಗಿ, ಬರಲಿರುವರೆಂದು ವರದಿಯಾಗಿದೆ.

ರಾಜಕಮಲ್ ಟಾಕೀಸ್, ಮೈಸೂರು

ತಾರೀಖು 14—3—52 ರಿಂದ ವಿಜೃಂಭಣೆಯ ಪ್ರದರ್ಶನಾರಂಭ

ಪಾತಾಳಭೈರವಿಯನ್ನು ನಿರ್ಮಿಸಿ ಪ್ರಖ್ಯಾತರಾದ ಶ್ರೀ "ವಿಜಯಾ" ರವರ ಅತ್ಯಂತ ಕೋಲಾಹಲವನ್ನು ಉಂಟುಮಾಡುತ್ತಿರುವ

* ಮದುವೆ ಮಾಡಿ ನೋಡು *

ಎಂಬ ಶ್ರೇಷ್ಠ ತೆಲುಗು ಚಿತ್ರ

ಇದರಲ್ಲಿ ಯಾವ ಕಥೆಯೂ ಆಕಾಶಕುಸುಮಕ್ಕೆ ಕೈಯೊಡ್ಡಿ ಹೊರಬಿದ್ದಿಲ್ಲ. ಬಿಸಿಲುಕುದುರೆಯ ಬೆನ್ನು ಹತ್ತಿ, ನಡೆದುದಲ್ಲ. ಎಲ್ಲಾ ಕಥೆಯಲ್ಲಿಯೂ ಬರುವ ಕಲಾವಿದರು ನಮ್ಮ ನಿಮ್ಮಂಥಹ ಸಾಮಾನ್ಯ ಜನರು. ಅವರು ತಮ್ಮ ಬಾಳನ್ನು ಅವರವರ ಆಸೆ ಆಕಾಂಕ್ಷೆಗಳ ಫಲಪ್ರಾಪ್ತಿಗೆ ಹೇಗೆ ಎರವಾಗುವರು ಎಂಬುದೇ ಈ ಕಥೆಯ ಸಾರಾಂಶ

ತಾರಾಗಣ:—ಜಿ. ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ಜೋಗ್‌ರಾವ್.

ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿಗಳನ್ನು ಆರು ವಾರಗಳು ಮನ್ನಾಮಾಡಿದೆ

ಪತ್ರಿಕಾ ವ್ಯವಸಾಯದ ನೀತಿನಿಯಮಗಳು

ಪ್ರಪಂಚದ ಪತ್ರಿಕೋದ್ಯಮಿಗಳಿಗೆಲ್ಲಾ ಅನ್ವಯವಾಗುವಂತೆ ಒಂದು ನಿಯಮಾವಳಿಯನ್ನು ಮತ್ತು ಅದರ ಕರಡು ಪ್ರತಿಯನ್ನು, ವಿಶ್ವಸಂಸ್ಥೆಯ ಸುದ್ದಿ ಮತ್ತು ಪತ್ರಿಕಾ ಸ್ವಾತಂತ್ರ್ಯದ ಉಪ ಸಮಿತಿಯು ಚರ್ಚಿಸುತ್ತಿದೆ.

ಅಂತರ ರಾಷ್ಟ್ರೀಯ ನಿಯಮಾವಳಿಯನ್ನು ೧೨ ಜನ ಸದಸ್ಯರನ್ನೊಳಗೊಂಡ ಸಮಿತಿಯು ತನ್ನ ಕೊನೆಯ ಅಧಿವೇಶನದಲ್ಲಿ ಚರ್ಚಿಸುವುದು.

ಈ ಸಮಿತಿಯ ಅಧ್ಯಕ್ಷರಾದ ಈಜಿಪ್ಟಿನ ಮಹಮದ್ ಅಜ್ಮೀಬೇರವರು ಸಮಿತಿಯ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ, ಹಿಂದಿನ ಅಧಿವೇಶನದಿಂದೀಚೆಗೆ ಸುದ್ದಿ ಸ್ವಾತಂತ್ರ್ಯದ ಸಮಸ್ಯೆಯು ಬಲು ತೊಡಕಾಗಿದೆ ಎಂದು, ಹೇಳಿದರು.

ಅಮೆರಿಕದ ಪ್ರತಿನಿಧಿಗಳಾದ ಕೆರೋಲ್ ಬೈಂಡರ್‌ರವರು ಮಾತನಾಡುತ್ತಾ, ಸುದ್ದಿ ಮೂಲಗಳನ್ನು ಹುಡುಕುವ ಬಗ್ಗೆ ಕಾರ್ಗತ್ತಲೆಯೇ ಕವಿದಿದೆ ಎಂದು ನುಡಿದರು.

ಈ ಉಪಸಮಿತಿಯ ಚರ್ಚೆಯಲ್ಲಿ ಲೆಬನಾನ್, ಈಜಿಪ್ಟ್, ಚೈನಾ, ಯುಗೋಸ್ಲೇವಿಯಾ, ಫಿಲಿಪೈನ್ಸ್ ದ್ವೀಪಗಳು, ಉರುಗ್ವೆ, ಚಿಲಿ, ಫ್ರಾನ್ಸ್, ಭಾರತ, ಅಮೆರಿಕ, ಇಂಗ್ಲೆಂಡ್, ರಷ್ಯಾ ದೇಶಗಳು ಭಾಗವಹಿಸಿವೆ.

ಡಾ|| ವರದರಾಜುಲು ನಾಯಿಡುರವರು

ಡಾ|| ವರದರಾಜುಲು ನಾಯಿಡುರವರು ಮದ್ರಾಸ್ ಶಾಸನಸಭೆಯ ನಾಯಕಸ್ಥಾನಕ್ಕೆ ಸ್ಪರ್ಧಿಸಬೇಕೆಂದಿರುವ ತಮ್ಮ ನಿರ್ಧಾರವನ್ನು ಪಂಡಿತ ನೆಹರೂರವರಿಗೆ ತಿಳಿಸಿ, ಕಾಂಗ್ರೆಸ್ ಹೈಕಮಾಂಡಿನ ಅಭಿಪ್ರಾಯವನ್ನು ತಾವು ನಿರೀಕ್ಷಿಸುತ್ತಿರುವುದಾಗಿ ಶ್ರೀ ನಾಯಿಡುರವರು ಮದ್ರಾಸಿನಲ್ಲಿ ಹೇಳಿರುವರು.

ಬ್ಯಾಂಕ್ ಬಡ್ಡಿದರ ಹೆಚ್ಚಿತು

ಬ್ಯಾಂಕ್ ಬಡ್ಡಿದರ ಶೇಕಡ ಎರಡೂವರೆಯಿಂದ ನಾಲ್ಕಕ್ಕೆ ಏರಿಸಲಾಗಿದೆಯೆಂದು ಬ್ರಿಟನ್ ಆರ್ಥಿಕ ಸಚಿವರು ಬಟ್ಲರ್ ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಎಲ್ಲರೂ ಸಹಕರಿಸಿ

ತಾವು ಕೈಗೊಂಡಿರುವ ಭೂದಾನ ಚಳುವಳಿಯಲ್ಲಿ ಪಕ್ಷಗಳ ಬೇಧಭಾವವನ್ನು ತೋರಿಸದೆ ಎಲ್ಲರೂ ಸಹಕಾರ ನೀಡಬೇಕೆಂದು ಆಚಾರ್ಯ ವಿನೋಬ ಭಾವೆಯವರು ಎಲ್ಲಾ ಪಕ್ಷದವರಲ್ಲಿ ಮನವಿಮಾಡಿಕೊಂಡಿರುವರು. ಈಗಾಗಲೇ ಉತ್ತರ ಪ್ರದೇಶದಲ್ಲಿ ಸುಮಾರು ೮೦೦೦ ಜನರು ೫೦೦೦೦ ಎಕರೆ ಜಮೀನನ್ನು ಉಚಿತವಾಗಿ ಕೊಟ್ಟಿರುವರು.

ಅಧಿಕಾರ ಸ್ವೀಕಾರ

ಮದ್ರಾಸಿನ ನೂತನ ಗವರ್ನರ್ ಶ್ರೀ ಶ್ರೀ ಪ್ರಕಾಶರವರು ನಿನ್ನೆಯದಿನ ಬೆಳಿಗ್ಗೆ ರಾಜಾಜಿ ಭವನದಲ್ಲಿ ಮದ್ರಾಸಿನ ಗವರ್ನರಾಗಿ ಪ್ರಮಾಣ ಸ್ವೀಕರಿಸಿದರು. ಮದ್ರಾಸಿನ ಶ್ರೇಷ್ಠನ್ಯಾಯಾಲಯದ ಶ್ರೇಷ್ಠನ್ಯಾಯಮೂರ್ತಿ ಶ್ರೀ ಪಿ. ವಿ. ರಾಜಮನ್ನಾರ್‌ರವರ ಸಮ್ಮುಖದಲ್ಲಿ ಪ್ರಮಾಣ ಸ್ವೀಕಾರ ನಡೆಯಿತು. ಸಮಾರಂಭಕ್ಕೆ ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾ, ಮತ್ತಿತರ ಮಂತ್ರಿಗಳು, ನ್ಯಾಯಮೂರ್ತಿಗಳು, ಪ್ರಮುಖ ಅಧಿಕಾರಿಗಳು, ಪಾರ್ಲಿಮೆಂಟಿನ ಮತ್ತು ಶಾಸನಸಭಾ ಸದಸ್ಯರು ಹಾಜರಾಗಿದ್ದರು. ವಿಶೇಷ ಆಹ್ವಾನದ ಮೇಲೆ ಮಾಜಿ ಗೃಹ ಸಚಿವ ಶ್ರೀ ಸಿ. ರಾ ಜ ಗೋ ಪಾ ಲ ಚಾ ರಿ ಯ ವ ರು ಬಂದಿದ್ದರು.

ರಾಜಾಜಿ ಭವನಕ್ಕೆ ಬಂದೊಡನೆಯೇ ಮುಖ್ಯಮಂತ್ರಿಗಳು ಭಾವಿ ಗವರ್ನರ್‌ರನ್ನು ಸ್ವಾಗತಿಸಿದರು. ಮಿಲಿಟರಿ ಗೌರವ ರಕ್ಷೆಯನ್ನು ಶ್ರೀ ಶ್ರೀ ಪ್ರಕಾಶರವರು ಸ್ವೀಕರಿಸಿದರು. ಪ್ರಮಾಣ ಸ್ವೀಕಾರವಾದೊಡನೆಯೇ ೧೭ ಕುಶಾಲತೋಪುಗಳನ್ನು ಹಾರಿಸಿ, ರಾಷ್ಟ್ರ ಧ್ವಜವನ್ನು ಹಾರಿಸಲಾಯಿತು.

ಈ ಸಮಾರಂಭಕ್ಕೆ ಮೊದಲು ಗವರ್ನರ್ ರಾಗಿದ್ದ ಭಾವನಗರ ಮಹಾರಾಜರು ತಮ್ಮ ಪರಿವಾರದೊಡನೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳಿದರು. ವಿಮಾನ ನಿಲ್ದಾಣದಲ್ಲಿ ಶ್ರೀ ಶ್ರೀ ಪ್ರಕಾಶ್, ಮುಖ್ಯ ಮಂತ್ರಿ ಮತ್ತಿತರ ಮಂತ್ರಿಗಳು ಪ್ರಮುಖರು ಹಾಜರಿದ್ದರು.

ಡಾ|| ಖಾನ್ ಸಾಹೇಬರ ಮೇಲೆ ನಿರ್ಬಂಧ ಸಡಿಲ

ವಾಯುವ್ಯ ಗಡಿನಾಡು ಪ್ರಾಂತ್ಯ ಸರ್ಕಾರವು ಡಾ|| ಖಾನ್ ಸಾಹೇಬರ ಮೇಲೆ ವಿಧಿಸಿರುವ ನಿರ್ಬಂಧವನ್ನು ಸಡಿಲಿಸಿ, ಅವರು ರಾವಲ್ಪಿಂಡಿಗೆ ಪೋಲೀಸ್ ಉಸ್ತುವಾರಿಯಿಲ್ಲದೆ ಹೋಗಬಹುದೆಂದು ಅಲ್ಲಿಯ ಮುಖ್ಯಮಂತ್ರಿ ಶಾಸನಸಭೆಯಲ್ಲಿ ತಿಳಿಸಿರುವುದಾಗಿ ಹೇಳಲಾಗಿದೆ.

ಬ್ಲಿಟ್ಸ್ ಸಹ ಸಂಪಾದಕರ ದಸ್ತಗಿರಿ

ಉತ್ತರ ಪ್ರದೇಶದ ಶಾಸನಸಭೆಯು ಬ್ಲಿಟ್ಸ್ ಪತ್ರಿಕೆಯ ಸಹ ಸಂಪಾದಕ ಶ್ರೀ ಹೆಚ್. ಎಸ್. ಮಿಶ್ರಯವರ ಮೇಲೆ ದಸ್ತಗಿರಿ ವಾರಂಟನ್ನು ಕೊಡಬೇಕೆಂದು ಮಾಡಿದ ತೀರ್ಮಾನದಂತೆ ಲಕ್ನೋದಿಂದ ಬಂದ ಸಿ. ಐ. ಡಿ. ಅಧಿಕಾರಿಗಳು ವಾರಂಟಿನೊಡನೆ ಬೊಂಬಾಯಿಗೆ ತೆರಳಿ ಪತ್ರಿಕೆಯ ಸಹ ಸಂ ಪಾ ದ ಕ ರ ನ್ನು ಮೊನ್ನೆ ದಸ್ತಗಿರಿ ಮಾಡಿ ವಿಶೇಷ ವಿಮಾನದಲ್ಲಿ ಲಕ್ನೋಗೆ ವಿಚಾರಣೆಗಾಗಿ ಕರತಂದಿರುವುದಾಗಿ ಗೊತ್ತಾಗಿದೆ.

'ಕೋಮು ಭಾವನೆ ಹೆಚ್ಚುತ್ತಿದೆ'

ಬೆಂಗಳೂರು ಮಾ ೧೧.

ಸಂಸ್ಥಾನದಲ್ಲಿ ಕೋಮುವಾರು ಭಾವನೆ ಹೆಚ್ಚುತ್ತಿರುವ ಬಗ್ಗೆ ಮೈಸೂರಿನ ಚೀಫ್ ಜಸ್ಟಿಸ್ ಶ್ರೀ ಪಿ ಮೇದಪ್ಪನವರು ವಿಷಾದ ಸೂಚಿಸಿದರು.

ಇಂದು ಸಂಜೆ ಸರ್ಕಾರಿ ಲಾ ಕಾಲೇಜ್ ಸಂಘದ ಉತ್ಸವದಲ್ಲಿ ಕಾಲೇಜ್ ನಿವೇಶನದಲ್ಲಿ ಅಧ್ಯಕ್ಷ ಭಾಷಣಮಾಡುತ್ತಾ ಶ್ರೀ ಮೇದಪ್ಪನವರು ಲೌಕಿಕ ಪ್ರಜಾಸತ್ತೆಗೆ ಅವಕಾಶವೀಯುವ ರಾಜ್ಯಾಂಗದ ಆಶ್ರಯದಲ್ಲಿ ಎಲ್ಲರೂ ಬಾಳುತ್ತಿರುವುದರಿಂದ ಕೋಮುವಾದವನ್ನು ಎಲ್ಲ ರೀತಿಯಲ್ಲೂ ಕಿತ್ತೊಗೆಯಬೇಕೆಂದೂ, ಶ್ರೀ ಮೇದಪ್ಪನವರು ಹೇಳಿದರು.

ಮುಂದುವರಿದು ಚೀಫ್ ಜಸ್ಟಿಸರು ಈಚಿನ ಚುನಾವಣೆಗಳಲ್ಲಿ ಕೋಮುವಾದಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆತುದಕ್ಕಾಗಿ ವಿಷಾದಿಸಿ ಸಂಸ್ಥಾನದ ಕೋರ್ಟುಗಳಲ್ಲಿನ ಕೆಲವು ಕಾರ್ಯಕಲಾಪಗಳಲ್ಲೂ ಕೋಮುವಾರು ಸೂಚನೆ ಕಂಡುಬಂದಿತ್ತೆಂದೂ, ಈ ವಿಷಯವನ್ನು ನಿವಾರಿಸಬೇಕೆಂದೂ ವಿವರಿಸಿ, ಈಗಿನ ಕಾಲೇಜುಗಳು ಸರ್ಕಾರದ ಹತೋಟಿಯಲ್ಲಿರುವುದಕ್ಕೆ ಬದಲಾಗಿ ವಿಶ್ವವಿದ್ಯಾನಿಲಯದ ಅಧೀನದಲ್ಲಿರಬೇಕೆಂದೂ- ಲಾ ಕಾಲೇಜಿಗೂ ಸಂಸ್ಥಾನದ ಹೈಕೋರ್ಟಿಗೂ ನಿಕಟಬಾಂಧವ್ಯವಿರಬೇಕೆಂದು ತಮ್ಮ ಅಭಿಪ್ರಾಯವೆಂದೂ ತಿಳಿಸಿದರು.

ಆಹಾರ ಹೆಚ್ಚುವರಿ

ಪಾಟಿಯಾಲಾ ಪೂರ್ವ ಪಂಜಾಬ್ ಒಕ್ಕೂಟದಲ್ಲಿ ೨೫೦೦೦ ಟನ್ ಆಹಾರ ಪದಾರ್ಥಗಳು ಹೆಚ್ಚುವರಿಯಿದೆಯೆಂದು ಅಲ್ಲಿಯ ಸರ್ಕಾರವು ಸಾರಿದೆ. ಇದರಲ್ಲಿ ೧೫೦೦೦ ಟನ್ ಗೋಧಿ, ೫೦೦೦ ಟನ್ ಅಕ್ಕಿಯೂ ಇದೆಯೆಂದು ಗೊತ್ತಾಗಿದೆ. ಈ ಹೆಚ್ಚುವರಿ ಆಹಾರವನ್ನು ಕೊರತೆ ಪ್ರದೇಶಗಳಿಗೆ ಕಳುಹಿಸಲಾಗುವುದೆಂದು ಹೇಳಲಾಗಿದೆ.

ಈ ಪ್ರಾಂತ್ಯದಲ್ಲಿ ೧೧೯ ಗ್ರಾಮಗಳಲ್ಲಿ ೨೧ ಸಾವಿರ ಎಕರೆ ಜಮೀನಿನಲ್ಲಿ ಆಹಾರ ಬೆಳೆಯನ್ನು ಅಭಿವೃದ್ಧಿಗೊಳಿಸಿದ ೩೦ ಲಕ್ಷ ರೂಪಾಯಿವೆಚ್ಚದ ಪಂಚವಾರ್ಷಿಕ ಯೋಜನೆಯನ್ನು ಸರ್ಕಾರವು ತಯಾರಿಸಿದೆ.

ಅರವಿಂದಾಶ್ರಮಕ್ಕೆ ಭೇಟಿ

ಮದ್ರಾಸಿನ ಕ್ಷಾಮಪೀಡಿತ ಪ್ರದೇಶಗಳಿಗೆ ಭೇಟಿಯಿತ್ತನಂತರ ಕೇಂದ್ರ ಆಹಾರ ಸಚಿವ ಶ್ರೀ ಕೆ. ಎಂ. ಮುನ್ಷಿಯವರು ಪುದುಚೇರಿಗೆ ಹೋಗಿ, ಅರವಿಂದಾಶ್ರಮಕ್ಕೆ ಭೇಟಿಯನ್ನಿತ್ತರು.

ಕೌನ್ಸಿಲ್ ಆಫ್ ಸ್ಟೇಟಿನ ಪ್ರತಿನಿಧಿಗಳಲ್ಲಿ ಬದಲಾವಣೆ

ಈಗ ಹೊರಬಿದ್ದಿರುವ ಕೇಂದ್ರ ಕಾಂಗ್ರೆಸ್ ಚುನಾವಣಾ ಸಮಿತಿಯ ಅಭ್ಯರ್ಥಿ ಪಟ್ಟಿಯಂತೆ ಮೈಸೂರಿನಿಂದ ಕೌನ್ಸಿಲ್ ಆಫ್ ಸ್ಟೇಟಿಗೆ ಶ್ರೀಗಳಾದ ಎಸ್ ವಿ ಕೃಷ್ಣಮೂರ್ತಿರಾವ್, ಬಿ ಪಿ ಬಸಪ್ಪಶೆಟ್ಟಿ, ಮಹಮದ್ ವಲಿಉಲ್ಲ, ಎಂ ಗೋವಿಂದರೆಡ್ಡಿ ಮತ್ತು ತಿಮ್ಮಬೋವಿ (ಹರಿಜನ್) ರವರನ್ನು ಆರಿಸಲಾಗಿದೆಯೆಂದು ತಿಳಿಯಬರುತ್ತದೆ.

ಹಿರಿಯ ಶಾಸನ ಸಭೆಗೆ

ಮೈಸೂರು ಕೌನ್ಸಿಲ್ ಸಭೆಗೆ ನಿಲ್ಲಿಸಿದ್ದ ಶ್ರೀ ಎಸ್ ವಿ ಕೃಷ್ಣಮೂರ್ತಿಯವರನ್ನೂ ಕೇಂದ್ರ ಕಾಂಗ್ರೆಸ್ ಚುನಾವಣೆ ಸಮಿತಿಯು ಕೌನ್ಸಿಲ್ ಆಫ್ ಸ್ಟೇಟ್ ಸಭೆಗೆ ನಿಲ್ಲಿಸಿರುವುದರಿಂದ, ಅವರಿಗೆ ಬದಲಾಗಿ ಮದ್ದೂರಿನ ಶ್ರೀ ತಿರುಮಲೇಗೌಡರನ್ನು ಮೈಸೂರು ಕೌನ್ಸಿಲ್ ಸಭೆಗೆ ನಿಲ್ಲಿಸಲಾಗುವುದೆಂದು ಗೊತ್ತಾಗಿದೆ.

ಆರುಕೋಟಿ ರೂ. ನಷ್ಟ

ಬಳ್ಳಾರಿ, ಕರ್ನೂಲು, ಕಡಪ ಮತ್ತು ಅನಂತಪುರಗಳ ಪಶ್ಚಿಮಭಾಗಗಳಲ್ಲಿ ಚಿನ್ನ, ಬೆಳ್ಳಿ, ಹತ್ತಿ, ಕಡಲೆಕಾಯಿ ಬೀಜ ಮತ್ತು ಕಡಲೆಕಾಯಿ ಎಣ್ಣೆಯ ವ್ಯಾಪಾರಿಗಳಿಗೆ ಬೆಲೆಯ ಇಳಿತದಿಂದ ಸುಮಾರು ಆರು ಕೋಟಿ ರೂಪಾಯಿ ನಷ್ಟವಾಗಿದೆಯೆಂದು ಅಲ್ಲಿಯ ಪ್ರಮುಖ ವ್ಯಾಪಾರಿಗಳು ಅಂದಾಜು ಹಾಕಿದ್ದಾರೆ.

ನ್ಯೂಅಪೇರ

೧೧—೩—೫೨ ರಿಂದ ಅಮೋಘಪ್ರಾರಂಭ ಶೋಭನಾಚಲರವರ ತೆಲುಗು ಚಿತ್ರ—

ಮಾಯಾ ಕುದುರೆ

ಪಾತ್ರ:—ನಾಗೇಶ್ವರರಾವ್, ಅಂಜಲೀ.

ರಣಜಿತ್

೧೪—೩—೫೨ರಿಂದ ಅಮೋಘ ಪ್ರಾರಂಭ

* ಸಾಖಿ *

ಪಾತ್ರ:- ಮಧುಬಾಲ, ಪ್ರೇಂನಾಥ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ರಿಂಗ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೪—೩—೧೯೫೨ನೇ ಶುಕ್ರವಾರ [ಸಂಚಿಕೆ ೧೩೭

ಮೈಸೂರು ಸರಾಫು ಅಂಗಡಿಯಲ್ಲಿ ಭಾರಿ ಕಳ್ಳತನ

ಮೈಸೂರು ಮಾ ೧೩

ಮೈಸೂರು ಅಶೋಕರಸ್ತೆಯಲ್ಲಿರುವ ಮೈಸೂರು ಜ್ಯೂಯಲರಿಮಾರ್ಟ್ ನಿನ್ನೆ ರಾತ್ರಿ ಮನೆಯ ಹಿಂಬಾಗದಲ್ಲಿರುವ ವಿದ್ಯುಚ್ಛಕ್ತಿ ಕಂಬದಿಂದ ಮನೆಯೊಳಕ್ಕೆ ನುಗ್ಗಿ ಅಲ್ಲಿಯ ಅನೇಕ ಚಿನ್ನದ ಆಭರಣಗಳ ಕಳ್ಳತನ ನಡೆದಿದೆ ಉಂಗುರಗಳು, ಚೈನುಗಳು, ಓಲೆ ಮುಂತಾದ ಬರೀ ಚಿನ್ನದ ಆಭರಣಗಳೇ ಕಳುವಾಗಿವೆ. ಪೋಲೀಸಿನವರು ತನಿಖೆ ನಡೆಸುತ್ತಲಿರುವರು. ಕಳುವಾದ ಮಾಲುಗಳ ಬೆಲೆಯು ಇನ್ನೂ ನಿಖರವಾಗಿ ತಿಳಿದಿಲ್ಲವಾದರೂ ಸುಮಾರು ೨೦-- ೨೫ ಸಾವಿರ ರೂ ಗಳಿರಬಹುದೆಂದು ಹೇಳಲಾಗಿದೆ.

ಸೈಟಿಗೆ ಅರ್ಜಿಹಾಕಿರುವವರ ಸಭೆ

ಮೈಸೂರು ೧೩

ಸಂಸ್ಕೃತಿಪುರಂನ ಹೊಸ ಬಡಾವಣೆಯಲ್ಲಿ ಸೈಟಿಗಾಗಿ ಅರ್ಜಿಹಾಕಿರುವವರ ಸಭೆಯು ನಾಳೆಯದಿನ ಸಂಜೆ ೬-೩೦ ಘಂಟೆಗೆ ಕನ್ನೇಗೌಡನ ಕೊಪ್ಪಲಿನ ಹೊಸ ಬೀದಿಯಲ್ಲಿರುವ ಶ್ರೀ ದಾಸೇಗೌಡರ ಗುಡಿಯ ಆವರಣದಲ್ಲಿ ನಡೆಯುತ್ತದೆ. ಸೈಟಿನ ವಿಲೇವಾರಿಬಗ್ಗೆ ಉಂಟಾಗಿರುವ ತುಂದುಕೊರತೆಗಳನ್ನು ಸಭೆಯಲ್ಲಿ ಪರಿಶೀಲಿಸಲಾಗುವುದು.

ಖೈದಿಗಳೆಷ್ಟು ಮನುಷ್ಯರಂತೆ ಪರಿಗಣಿಸಿ

ಖೈದಿಗಳನ್ನು ಮನುಷ್ಯರಂತೆ ತಿಳಿದುಕೊಂಡು ಅವರಿಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಅಲ್ಲದೆ ಅಪರಾಧಗಳು ಚಾಡ್ಯವೆಂದು ಅರಿತು ಅದಕ್ಕೆ ತಕ್ಕ ಚಿಕಿತ್ಸೆ ಕೊಡಬೇಕೆಂದು ಬೊಂಬಾಯಿ ಗೃಹಸಚಿವ ಶ್ರೀ ಮುರಾರ್ಜಿ ದೇಸಾಯಿಯವರು ವಿಶ್ವಸಂಸ್ಥೆಯ ಆಶ್ರಯದಲ್ಲಿ ನಿನ್ನೆ ಬೊಂಬಾಯಿಯಲ್ಲಿ ನಡೆದ ಜೈಲು ಅಧಿಕಾರಿಗಳ ಸಮ್ಮೇಳನದಲ್ಲಿ ಮಾತನಾಡುತ್ತಾ ಹೇಳಿರುವರು.

ಸ್ಥಳೀಯಸಂಸ್ಥೆ ಕ್ಷೇತ್ರದಿಂದ ಉಮೇದುವಾರರು

ಪ್ರದೇಶ ಕಾಂಗ್ರೆಸ್ ಸಮಿತಿಯವರು ಸ್ಥಳೀಯಸಂಸ್ಥೆ ಕ್ಷೇತ್ರದಿಂದ ಹಿರಿಯ ಶಾಸನಸಭೆಗೆ ನಡೆಯುವ ಚುನಾವಣೆಗೆ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರನ್ನು ಮೈಸೂರುನಗರದಿಂದ ಉಮೇದುವಾರರನ್ನಾಗಿ ಚುನಾಯಿಸಿರುವರು.

ಸಲಹೆಗಾರರು

ಭಾರತ ಸರ್ಕಾರದ ಸಂಸ್ಥಾನ ಶಾಖಾ ಸಹ ಕಾರ್ಯದರ್ಶಿ ಶ್ರೀ ಎನ್. ಬುಚ್‌ರವರು ತಿರುವಾಂಕೂರು-ಕೊಚ್ಚಿನ್ ಸರ್ಕಾರದ ಸಲಹೆಗಾರರಾಗಿ ಇದೇ ೨೦ನೇ ತಾರೀಖು ಅಧಿಕಾರ ವಹಿಸಿಕೊಳ್ಳುವರೆಂದು ಹೇಳಲಾಗಿದೆ.

ಶ್ರೀ ಮಣಿಲಾಲ್‌ಗಾಂಧಿ ಹಾಸಿಗೆ ಹಿಡಿದಿದ್ದಾರೆ

ಆತ್ಮಪರಿಶುದ್ಧತೆಗಾಗಿ ೨೦ ದಿನಗಳ ಕಾಲ ಉಪವಾಸವ್ರತವನ್ನು ಕೈಗೊಂಡಿರುವ ಮಹಾತ್ಮ ಗಾಂಧಿಯವರಪುತ್ರ ಶ್ರೀ ಮಣಿಲಾಲ್ ಗಾಂಧಿಯವರು ಮೊನ್ನೆಯಿಂದ ಹಾಸಿಗೆ ಹಿಡಿದಿದ್ದಾರೆ.

ಕಪ್ಪು ಬಾವುಟದ ಪ್ರದರ್ಶನ ಯತ್ನ

ದ್ರಾವಿಡಯನ್ ಫೆಡರೇಷನ್ನಿನ ಸದಸ್ಯರು ನೂತನ ಗವರ್ನರ್ ಶ್ರೀ ಶ್ರೀ ಪ್ರಕಾಶರು ಅ ಧಿ ಕಾ ರ ಸ್ವೀ ಕಾ ರ ಮಾಡುವಾಗ ಕಪ್ಪು ಬಾವುಟ ಪ್ರದರ್ಶನ ನಡೆಸಲೆತ್ನಿಸಿದಾಗ ಪೋಲೀಸರು ಅವರನ್ನು ಬಂಧಿಸಿ ನಂತರ ಎಚ್ಚರಿಸಿ ಬಿಡಲಾಯಿತು.

ಪರಿಹಾರಕ್ಕಾಗಿ ೨೯೦೦೦ ರೂಪಾಯಿಗಳು

ಕ್ಷಾಮಪೀಡಿತವಾಗಿರುವ ಚಿತ್ತೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ಗ್ರಾಮಾಂತರ ಕಾರ್ಯಗಳಿಗಾಗಿ, ಮದ್ರಾಸ್ ಸರ್ಕಾರವು ೨೯೦೦೦ ರೂಪಾಯಿಗಳನ್ನು ಮಂಜೂರು ಮಾಡಿದೆ

ತಿರುವಾಂಕೂರು ಕೊಚ್ಚಿನ್ ಶ್ರೇಷ್ಠ ಕಾರ್ಯದರ್ಶಿ

ಐ ಸಿ ಎಸ್ ಅಧಿಕಾರಿಗಳಾದ ಶ್ರೀ ವಿ ಎಸ್ ರಾಜನ್‌ರವರು ತಿರುವಾಂಕೂರು ಕೊಚ್ಚಿ ಒಕ್ಕೂಟದ ಶ್ರೇಷ್ಠ ಕಾರ್ಯದರ್ಶಿಗಳಾಗಿ ಅಧಿಕಾರ ವಹಿಸಿಕೊಂಡರು. ಕೊಯಮತ್ತೂರು ಜಿಲ್ಲೆಯ ಕಲೆಕ್ಟರ್ ಆಗಿದ್ದ ಇವರ ಸೇವೆಯನ್ನು ಮದರಾಸ್ ಸರ್ಕಾರ ಎರವಲು ಕೊಟ್ಟಿದೆ

ಯಳಂದೂರಿಗೆ ವಿದ್ಯುಚ್ಛಕ್ತಿ

ಬೆಂಗಳೂರು ಮಾ ೧೨

ಯಳಂದೂರಿನಲ್ಲಿ ವಿದ್ಯುಚ್ಛಕ್ತಿ ಪ್ರಾರಂಭೋತ್ಸವವನ್ನು ನ್ಯಾಯಾಂಗಸಚಿವ ಶ್ರೀ ಕೆ ಟಿ ಭಾಷ್ಯಂರವರು ಇದೇಮಾತೆ ೧೭ನೇ ತಾರೀಖು ನೆರವೇರಿಸುವರು.

ಮುಂಗಡವಾಗಿ ೪ ತಿಂಗಳ ಸಕ್ಕರೆ

ಕೇಂದ್ರಸರ್ಕಾರದವರುಹೆಚ್ಚಿನಪ್ರಮಾಣದಲ್ಲಿ ಸಂಸ್ಥಾನಕ್ಕೆ ಸಕ್ಕರೆಯನ್ನು ಒದಗಿಸಿರುವುದರಿಂದ ೪ ತಿಂಗಳ ಸಕ್ಕರೆಯನ್ನು ಈಗಲೇ ಕೊಳ್ಳಲು ಅವಕಾಶವಿತ್ತು, ಸರ್ಕಾರದವರು ಆಜ್ಞೆ ಮಾಡಿರುತ್ತಾರೆ. ಗೊತ್ತಾಗಿದೆ.

ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲ

ಅನಾರೋಗ್ಯನಿಮಿತ್ತ ಬಿಹಾರ್ ಗವರ್ನರಾದ ಶ್ರೀ ಅಣೆಯವರು, ಈಗತಾನೆ ದೆಹಲಿಯಿಂದ ಮದ್ರಾಸಿಗೆ ಹೋಗಿರುವ ಮದ್ರಾಸ್‌ಗವರ್ನರ್ ಶ್ರೀ ಶ್ರೀಪ್ರಕಾಶರವರು ರಾಜಪ್ರಮುಖರ ಮತ್ತು ಗವರ್ನರ್‌ಗಳ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ಗೊತ್ತಾಗಿದೆ.

ಕೈಗಾರಿಕಾ ನಿಯೋಗ

ಭಾರತಕ್ಕೆ ಆಗಮಿಸಿರುವ ಜಪಾನ್ ಕೈಗಾರಿಕಾ ನಿಯೋಗದವರು ಇದೇ ೨೭ನೇ ತಾರೀಖು ಬೆಂಗಳೂರಿಗೆ ಆಗಮಿಸಿ ಒಂದು ವಾರ ಇಲ್ಲಿರುವರೆಂದು ಗೊತ್ತಾಗಿದೆ. ಇಲ್ಲಿಯ ಪ್ರಮುಖ ಕಾರ್ಖಾನೆಗಳಿಗವರು ಭೇಟಿ ಕೊಡುವರು.

ಎ. ಐ. ಸಿ. ಸಿ. ಗೆ ಆಹ್ವಾನ

ಇದೇ ತಿಂಗಳು ೨೨ ಮತ್ತು ೨೩ನೇ ತಾರೀಖು ನಡೆಯಲಿರುವ ಎ ಐ ಸಿ ಸಿ ಅಧಿವೇಶನಕ್ಕೆ ಶ್ರೀಮತಿ ಎಲೆನಾರ್ ರೂಸ್‌ವೆಲ್ಟ್‌ರವರು, ವಿಶೇಷ ಆಹ್ವಾನಿತರಾಗಿ, ಬರಲಿರುವರೆಂದು ವರದಿಯಾಗಿದೆ.

ರಾಜಕಮಲ್ ಟಾಕೀಸ್, ಮೈಸೂರು

ತಾರೀಖು 14—3—52 ರಿಂದ ವಿಜೃಂಭಣೆಯ ಪ್ರದರ್ಶನಾರಂಭ

ಪಾತಾಳಭೈರವಿಯನ್ನು ನಿರ್ಮಿಸಿ ಪ್ರಖ್ಯಾತರಾದ ಶ್ರೀ "ವಿಜಯಾ" ರವರ ಅತ್ಯಂತ ಕೋಲಾಹಲವನ್ನುಉಂಟುಮಾಡುತ್ತಿರುವ

* ಮದುವೆ ಮಾಡಿ ನೋಡು *

ಎಂಬ ಶ್ರೇಷ್ಠ ತೆಲುಗು ಚಿತ್ರ

ಇದರಲ್ಲಿ ಯಾವ ಕಥೆಯೂ ಆಕಾಶಕುಸುಮಕ್ಕೆ ಕೈಯೊಡ್ಡಿ ಹೊರಬಿದ್ದಿಲ್ಲ, ಬಿಸಿಲುಕುದುರೆಯ ಬೆನ್ನುಹತ್ತಿ, ನಡೆದುದಲ್ಲ, ಎಲ್ಲಾ ಕಥೆಯಲ್ಲಿಯೂ ಬರುವ ಕಲಾವಿದರು ನಮ್ಮ ನಿಮ್ಮಂಥಹ ಸಾಮಾನ್ಯ ಜನರು. ಅವರು ತಮ್ಮ ಬಾಳನ್ನು ಅವರವರ ಆಶೆ ಆಕಾಂಕ್ಷೆಗಳ ಫಲಪ್ರಾಪ್ತಿಗೆ ಹೇಗೆ ಎರವಾಗುವರು ಎಂಬುದೇ ಈ ಕಥೆಯ ಸಾರಾಂಶ

ತಾರಾಗಣ:—ಜಿ. ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ಜೋಗ್‌ರಾವ್.

ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿಗಳನ್ನು ಆರು ವಾರಗಳು ಮನ್ನಾಮಾಡಿದೆ

ಮಾರ್ಚಿ ೨೭ ರಲ್ಲಿ ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಆಯ್ಕೆ?

ಭಾರತ ಕೌನ್ಸಿಲ್ ಆಫ್ ಸ್ಟೇಟಿನ ೭ ಸದಸ್ಯರನ್ನು ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್‌ಗೆ ೧೩ ಜನರನ್ನು ಆರಿಸಲು ಮೈಸೂರು ಶಾಸನಸಭೆಯು ಇದೇ ೨೭ನೇ ತಾರೀಖು ಸಭೆ ಸೇರಲಿದೆ. ಆ ದಿನ ಕಾಂಗ್ರೆಸ್ ಸದಸ್ಯರು ತಮ್ಮ ನಾಯಕರನ್ನು ಆಯ್ಕೆ ಮಾಡುವರೆಂದು ಹೇಳಲಾಗಿದೆ. ಈ ತಿಂಗಳ ಅಂತ್ಯಕ್ಕೆ ಶ್ರೀ ಕೆ. ಹನುಮಂತಯ್ಯನವರು ತಮ್ಮ ಸಚಿವ ಸಂಪುಟವನ್ನು ಪ್ರಕಟಿಸುವ ನಿರೀಕ್ಷೆಯಿದೆ. ಏಪ್ರಿಲ್ ಒಂದನೇ ತಾರೀಖು ಹೊಸ ಸಚಿವ ಮಂಡಲಿಯು ಅಧಿಕಾರ ವಹಿಸಿಕೊಳ್ಳಬಹುದು.

ಶಾಸನಸಭಾಧಿವೇಶನ

ಇದೇ ೨೦ನೇ ತಾರೀಖಿನಿಂದ ಪ್ರಾರಂಭವಾಗಲಿರುವ ಈಗಿನ ಶಾಸನಸಭೆಯ ಕೊನೆಯ ಅಧಿವೇಶನವು ೪ ದಿನಗಳ ಕಾಲ ನಡೆದು ೧೯೫೨-೫೩ ರ ಬಡ್ಜೆಟ್ಟನ್ನು ಅಂಗೀಕರಿಸಲಿದೆ.

ಭಾರತಕ್ಕಾಗಮನ

ಕರಾಚಿಯಲ್ಲಿ ಇದೇ ತಿಂಗಳು ೨೪ನೇ ತಾ|| ನಡೆಯಲಿರುವ ಕೊಲಂಬೋ ಯೋಜನೆಯ ಸಮಾಲೋಚನಾ ಸಭೆಯಲ್ಲಿ ಭಾಗವಹಿಸಲು ಬ್ರಿಟಿಷ್ ನಿಯೋಗದ ನಾಯಕರಾಗಿ ಮಾರ್ಕ್ವಿಸ್ ಆಫ್ ರೀಡಿಂಗ್‌ರವರು ಆಗಮಿಸಲಿರುವರು. ಏಪ್ರಿಲ್ ಪ್ರಥಮವಾರ ಭಾರತಕ್ಕೆ ಭೇಟಿ ಕೊಡಲಿದ್ದಾರೆ. ನವದೆಹಲಿಯಲ್ಲಿ ಅವರು ಭಾರತ ಪ್ರಧಾನಿ ಪಂಡಿತ ನೆಹರೂರವರನ್ನು ಭೇಟಿ ಮಾಡಲಿದ್ದಾರೆ.

ಮಾರ್ಕ್ವಿಸ್ ಆಫ್ ರೀಡಿಂಗ್‌ರವರು ಬ್ರಿಟಿಷ್ ಮಂತ್ರಿಮಂಡಲದ ವಿದೇಶಾಂಗ ಶಾಖೆಯ ಪಾರ್ಲಿಮೆಂಟರಿ ಉಪಸಚಿವರಾಗಿದ್ದಾರೆ. ಬ್ರಿಟಿಷ್ ಸಚಿವರೊಬ್ಬರು ಭಾರತಕ್ಕೆ ಭೇಟಿ ಕೊಡುತ್ತಿರುವುದು ಇದೇ ಮೊದಲು.

ಪ್ರಭಾ ಇಂದಿನಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಆಟಗಳು
ಕಿಶೋರ್‌ಸಾಹು, ಬಿನಾರಾಯ್ ನಟಿಸಿರುವ
* ಸಪ್ನ *

ಗೌರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನ

ಭಾರತದ ಎಲ್ಲಾ ಪ್ರಾಂತ್ಯ ಗೌರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನವು ಈ ದಿನ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಲಿದೆ.

ಹೈದರಾಬಾದ್ ಮತ್ತು ಮೈಸೂರಿನ ರಾಜಪ್ರಮುಖರೂ ಈ ಸಮ್ಮೇಳನಕ್ಕೆ ಹೋಗಿರುವರು. ಭಾರತ ಸ್ವತಂತ್ರ ರಾಷ್ಟ್ರವಾದ ಮೇಲೆ ನಡೆದ ಈ ರೀತಿಯ ಸಮ್ಮೇಳನದಲ್ಲಿ ಹೈದರಾಬಾದ್ ನೈಜಾಮರು ಮತ್ತು ಮೈಸೂರು ಮಹಾರಾಜರು ಭಾಗವಹಿಸುವುದು ಇದೇ ಮೊದಲು.

ಹೈದರಾಬಾದ್ ನೈಜಾಮರು ವಿಮಾನಯಾನ ಮಾಡಿದ್ದು ಇದೇ ಪ್ರಥಮಸಾರಿ. ನಿನ್ನೆ ನೈಜಾಮರು ವಿಶೇಷ ವಿಮಾನದಲ್ಲಿ ಹೈದರಾಬಾದಿನಿಂದ ದೆಹಲಿಗೆ ಆಗಮಿಸಿದರು. ಅವರ ಜೊತೆಯಲ್ಲಿ ಸಂಸ್ಥಾನ ಸಲಹೆಗಾರರಾದ ಶ್ರೀ ಎಂ. ಕೆ. ವೆಲ್ಲೋಡಿಯವರೂ ಹೋಗಿರುವರು. ನೈಜಾಮರು ದೆಹಲಿಗೆ ಭೇಟಿಯಿತ್ತು ಈಗಾಗಲೇ ೧೬ ವರ್ಷಗಳಾಗಿದ್ದುವು.

ಅಕ್ಕಿ ರೇಷನ್ ಹೆಚ್ಚುವುದು

'ತಿರುವಾಂಕೂರು ಕೊಚ್ಚಿನ್‌ನಲ್ಲಿ ಏಪ್ರಿಲ್ ೧ನೇ ತಾ|| ನಿಂದ ಅಕ್ಕಿ ರೇಷನ್ ೫ ರಿಂದ ೭ ಔನ್ಸಿಗೆ ಹೆಚ್ಚಿಸಲಾಗುವುದು' ಎಂದು ಕೇಂದ್ರದ ಆಹಾರ ಸಚಿವ ಶ್ರೀ ಕೆ.ಎಂ. ಮುನ್ಷಿ ತಿಳಿಸಿರುವರು.

ಬರ್ಮ ಪ್ರಥಮ ರಾಷ್ಟ್ರಾಧ್ಯಕ್ಷರು

ಬರ್ಮ ಸುಪ್ರೀಂ ಕೋರ್ಟಿನ ಮಾಜಿ ಶ್ರೇಷ್ಠ ನ್ಯಾಯಾಧೀಶರಾದ ಡಾ|| ಬಾ ಉರವರು ಬರ್ಮದ ಪ್ರಥಮ ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾದರು.

ಅಮೆರಿಕದಲ್ಲಿ ಮೊದಲನೆಯ ಪ್ರಾಥಮಿಕ ಚುನಾವಣೆ

ಕಾನ್‌ಕಾರ್ಡ್ ಮಾ|| ೭

ಅಮೆರಿಕದ ಚಿಕ್ಕ ಸಂಸ್ಥಾನವಾದ ನ್ಯೂಹ್ಯಾಂಪ್‌ಷೈರ್‌ನಲ್ಲಿ ಪ್ರಥಮ ಬಾರಿಗೆ ಪ್ರಾಥಮಿಕ ಚುನಾವಣೆಯು ನಡೆಯುವುದು. ಮುಂಬರುವ ಅಧ್ಯಕ್ಷರು ಯಾರಾಗಬೇಕೆಂಬ ಬಗ್ಗೆ ಇಲ್ಲಿ ಸೂಚಿಸಲಾಗುವುದು. ಪ್ರಜಾಪ್ರಭುತ್ವದ ಪ್ರಥಮ ನಾಟಕದ ಮೊದಲಂಕವು ಇಲ್ಲಿಂದ ಪ್ರಾರಂಭವಾಗುವುದು.

ಮುಂದಿನ ಮಂಗಳವಾರ ಈ ಚುನಾವಣೆ ನಡೆಯುವುದು. ಮೂವರು ಉಮೇದುವಾರರು ಈಗಾಗಲೇ ೨೨ ನಗರಗಳನ್ನು ಸುತ್ತಿಬಂದಿದ್ದಾರೆ. ಈ ಚುನಾವಣೆಯಲ್ಲಿ ನ್ಯೂಹ್ಯಾಂಪ್‌ಷೈರ್ ಸಂಸ್ಥಾನದ ಡೆಮೊಕ್ರಾಟಿಕ್ ಮತ್ತು ರಿಪಬ್ಲಿಕನ್ ರಾಷ್ಟ್ರಕೂಟಗಳ ಆಯಾ ಪಕ್ಷದ ಪ್ರತಿನಿಧಿಗಳನ್ನು ಚುನಾಯಿಸಲಾಗುವುದು. ಚುನಾವಣೆಗೆ ನಿಂತಿರುವ ಐವರು ಉಮೇದುವಾರರಲ್ಲಿ, ಯಾರೂ ಹೆಚ್ಚು ಜನಾದರಣೀಯರಾಗಿರುವರೆಂಬುದೂ ಇಲ್ಲಿ ಗೊತ್ತಾಗುವುದು.

ರಿಪಬ್ಲಿಕನ್ ಉಮೇದುವಾರರಾದ ಸೆನೆಟರ್ ಟ್ಯಾಫ್ಟ್ ಮತ್ತು ಹೆರಾಲ್ಡ್ ಸ್ಟಾಸನ್‌ರು, ರೇಡಿಯೋ ಟೆಲಿವಿಷನ್ ಮುಂತಾದ ಆಧುನಿಕ ಯಂತ್ರ ಸಾಮಗ್ರಿಗಳ ಗೋಜಿಗೆ ಹೋಗದೆ, ಸ್ವಂತವಾಗಿ ಜನರನ್ನು ಭೇಟಿ ಮಾಡಿ ತಮ್ಮ ಪ್ರಚಾರ ಮಾಡಿಕೊಳ್ಳುತ್ತಿದ್ದಾರೆ.

ಮಂಜುಗಡ್ಡೆಗಳಿಂದಾವೃತವಾದ ರಸ್ತೆಗಳಲ್ಲಿ ಪ್ರಯಾಣ ಮಾಡುತ್ತಾ, ಸಣ್ಣ ಸಣ್ಣ ಸಭೆಗಳಲ್ಲಿ ಮಾತನಾಡುತ್ತಾ, ಸಾವಿರಾರು ಮತದಾರರ ಕೈಕುಲುಕುತ್ತಾ ತಮ್ಮ ಪ್ರಚಾರ ಸಾಗಿಸಿದ್ದಾರೆ. ಇದೇ ರೀತಿಯಾಗಿ ಡೆಮೊಕ್ರಾಟಿಕ್ ಪಕ್ಷದ ಸೆನೆಟರ್ ಇಸ್ಟ್‌ಕೇಫವರ್‌ರವರು ತಮ್ಮ ಪ್ರಚಾರ ನಡೆಸಿದ್ದಾರೆ.

ಅಧ್ಯಕ್ಷ ಟ್ರೂಮನ್ ಸೇನಾಪತಿ ಐಸೆನ್‌ಹೋವರರ ಪರವಾಗಿಯೂ ಚುರುಕಾದ ಪ್ರಚಾರ ಕಾರ್ಯವು ಪ್ರಾರಂಭವಾಗಿದೆ.

ಈ ಚುನಾವಣೆಯಲ್ಲಿ ರಿಪಬ್ಲಿಕ್ ಪಕ್ಷದ ಪರವಾಗಿ ಟ್ಯಾಫ್ಟ್ ಮತ್ತು ಐಸೆನ್‌ಹೋವರರಲ್ಲಿಯೂ, ಡೆಮೊಕ್ರಾಟಿಕ್ ಪಕ್ಷದಲ್ಲಿ ಟ್ರೂಮನ್ ಮತ್ತು ಕೇಫವರ್‌ರಲ್ಲಿಯೂ, ದೇಶವು ಯಾವ ಪ್ರಮಾಣದಲ್ಲಿ ಬೆಂಬಲಕೊಡುತ್ತದೆ, ಎಂಬುದನ್ನು ನೋಡಬೇಕಾಗಿದೆ.

ಸೇನಾಪತಿ ಐಸೆನ್‌ಹೋವರರು ಸ್ನೇಹಿತರಿಗೆ ಕಾಗದವನ್ನು ಬರೆಯುತ್ತಾ, ರಾಷ್ಟ್ರದ ಕರೆಯನ್ನು ಮನ್ನಿಸುವುದಾಗಿ ತಿಳಿಸಿದ್ದಾರೆ.

ಸಿಂಧ್ರಿ ಕಾರ್ಖಾನೆ

ಭಾರತದಲ್ಲಿ ಸಿಂಧ್ರಿ ಫರ್ಟಿಲೈಸರ್ ಕಾರ್ಖಾನೆ ಪ್ರಾರಂಭವಾಗಿರುವುದರಿಂದ ಪರದೇಶಗಳಿಂದ ೨೦ ಮಿಲಿಯನ್ ಡಾಲರು ಬೆಲೆಯ ಫರ್ಟಿಲೈಸರ್‌ನ್ನು ತರಿಸಿಕೊಳ್ಳುತ್ತಿದ್ದುದು, ಈಗ ಭಾರತಕ್ಕೆ ಉಳಿತಾಯವಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

೫೦ ಮಿಲಿಯನ್ ಡಾಲರು ವೆಚ್ಚದಲ್ಲಿ ತಯಾರಿಸಿದ ಸಿಂಧ್ರಿ ಕಾರ್ಖಾನೆಯು ಏಷ್ಯಾದಲ್ಲಿ ಬಹು ದೊಡ್ಡದು. ಪ್ರಪಂಚದ ದೊಡ್ಡ ಕಾರ್ಖಾನೆಗಳ ಶ್ರೇಣಿಗೆ ಇದು ಈಗ ಸೇರಬಹುದಾಗಿದೆ.

ಮ್ಯಾನೇಜಿಂಗ್ ಡೈರೆಕ್ಟರ್

ಬೆಂಗಳೂರು ಮಾ. ೧೩

ಹಿಂದೂಸ್ಥಾನ ವಿಮಾನ ಕಾರ್ಖಾನೆಯ ಡೈರೆಕ್ಟರಾಗಿ ನೇಮಕವಾಗಿರುವ ಶ್ರೀ ಜೆ.ಎಂ. ಶ್ರೀನಾಗೇಶ್‌ರವರು ಇಂದು ಅಧಿಕಾರ ವಹಿಸಿಕೊಂಡರು. ಅವರು ನೇಪಾಳದಲ್ಲಿ ಸಲಹೆಗಾರರಾಗಿದ್ದರು.

ಶ್ರೀಮತಿ ರೂಸ್‌ವೆಲ್ಟರಿಗೆ ಡಾಕ್ಟರೇಟ್ ಪ್ರಶಸ್ತಿ

ದೆಹಲಿಯ ವಿಶ್ವವಿದ್ಯಾನಿಲಯವು ಶ್ರೀಮತಿ ಎಲೆನಾರ್ ರೂಸ್‌ವೆಲ್ಟರಿಗೆ ೧೫ನೇ ತಾ|| ಛಾನ್ಸಲರಾದ ಡಾ|| ರಾಜೇಂದ್ರಪ್ರಸಾದರ ಅಧ್ಯಕ್ಷತೆಯಲ್ಲಿ ನಡೆಯಲಿರುವ ವಿಶೇಷ ಘಟಿಕೋತ್ಸವ ಸಮಾರಂಭದಲ್ಲಿ 'ಡಾಕ್ಟರ್ ಆಫ್ ಲಾಸ್' ಗೌರವ ಪ್ರಶಸ್ತಿಯನ್ನು ಕೊಡಲಿದೆ.

ವುಡ್‌ಲ್ಯಾಂಡ್ಸ್
೭—೩—೫೨ ರಿಂದ
ಅಮೋಘವಾದ ೪ನೇ ವಾರ
ದಿನವೂ 3 ಪ್ರದರ್ಶನಗಳು
ಅಲ್‌ಬೇಲ
ಪಾತ್ರ:- ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

TENDER NOTICE

Sealed tenders for the supply of Provisions, etc., to the Palace for the year 1952–53 i. e., fron 1-4-1952 to 31-3-53 will be received by the undersigned at 10 A. M. on 15 th March 1952 at the Palace Office, Mysore. Particulars can be had from the Bakshi, Palace Mothikhana Department, Mysore.

H.N. PALLEGAR
Huzur Secretary

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯುರಿಸ್ಟ್ ಬ್ಯೂರೋ ಮೈಸೂರು.
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೫—೩—೧೯೫೨ನೇ ಶನಿವಾರ [ಸಂಚಿಕೆ ೧೩೮

ಮದರಾಸಿನಲ್ಲಿ ಆಹಾರಸಮಸ್ಯೆಗೆ ಮೊದಲು ಗಮನವೀಯಬೇಕು

ಭಾರತದಲ್ಲಿ ಮಹಿಳಾ ಭೂಮಿಸೇನಾ ರಚನೆಯಾಗಬೇಕು

ಮದರಾಸಿನಲ್ಲಿ ಪರಿಹಾರವಾಗಬೇಕಾದ ಅನೇಕ ಮುಖ್ಯವಾದ ಸಮಸ್ಯೆಗಳಿದ್ದರೂ, ಆಹಾರಸಮಸ್ಯೆಯು ಅತಿ ಮುಖ್ಯವಾದುದು; ಅದಕ್ಕೆ ಪ್ರಥಮ ಗಮನವೀಯಬೇಕು. ಈ ಕಾರ್ಯವನ್ನು ಸಾಧಿಸಲು ಮದರಾಸ್ ಪ್ರಾಂತ್ಯದ ಜನತೆಯು ತಮಗೆ ಪೂರ್ಣ ಸಹಕಾರವೀಯುವುದೆಂದು ತಮಗೆ ಪೂರ್ಣ ಭರವಸೆಯಿರುವುದಾಗಿ ಮದರಾಸಿನ ನೂತನ ಗೌರ್ನರ್ ಶ್ರೀ ಶ್ರೀಪ್ರಕಾಶರವರು ನಿನ್ನೆ ರಾತ್ರಿ ಮದ್ರಾಸ್ ಪ್ರಜೆಗಳನ್ನು ಕುರಿತು ಭಾಷಣಮಾಡುತ್ತಾ ಹೇಳಿರುವರು.

ಮದ್ರಾಸಿನಲ್ಲಿ ಕ್ಷಾಮಪೀಡಿತ ಪ್ರದೇಶದಲ್ಲಿ ಪರಿಹಾರ ಕಾರ್ಯಗಳಿಗೆ ಪ್ರಧಾನಿ ನೆಹರೂರವರು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಾಗಿಯೂ ಗೌರ್ನರ್ ಭಾಷಣದಲ್ಲಿ ಹೇಳಿದರು.

ಮಹಿಳಾ ಭೂಮಿಸೇನಾ ರಚನೆ

ಅಖಿಲ ಭಾರತ ಆಹಾರ ಮಹಿಳಾ ಕೇಂದ್ರದ ವಿಶಾಖಪಟ್ಟಣದ ಶಾಖೆಯು ಮಹಿಳಾ ಭೂಮಿಸೇನೆಯನ್ನು ರಚಿಸಲು ಕೇಂದ್ರ ಸಮಿತಿಗೆ ಒಂದು ಸಲಹೆಯಿತ್ತಿದೆ. ಸದ್ಯಕ್ಕೆ ಆಹಾರ ಸಮಿತಿಯ ಸದಸ್ಯರು, ವಿದ್ಯಾರ್ಥಿನಿಯರು ಭೂಸೈನ್ಯಕ್ಕೆ ಸೇರಿ, ಆಧುನಿಕ ವ್ಯವಸಾಯ ವಿಧಾನವನ್ನು ಜನಪ್ರಿಯಮಾಡಲು ಶ್ರಮಿಸಲಾಗುವುದೆಂದು ತಿಳಿಸಿದೆ.

ಗೌರ್ನರ್‌ರ ಪ್ರವಾಸ

ಮದರಾಸಿನ ನೂತನಗೌರ್ನರ್ ಶ್ರೀ ಶ್ರೀಪ್ರಕಾಶರವರು ಇದೇ ಮಾಹೆ ೨೩ನೇ ತಾರೀಖಿನಿಂದ ಕಡಪ, ಅನಂತಪುರ ಮತ್ತು ಕರ್ನೂಲ್ ಜಿಲ್ಲೆಗಳಲ್ಲಿ ಪ್ರವಾಸಕೈಗೊಳ್ಳಲಿರುವರು. ಕೇಂದ್ರ ಆಹಾರಸಚಿವ ಶ್ರೀ ಕೆ. ಎಂ. ಮುನ್ಷಿಯವರು ಪ್ರವಾಸ ಕೈಗೊಳ್ಳದ ಪ್ರದೇಶಗಳಲ್ಲಿ ೪ ದಿನಗಳ ಕಾಲ ಇವರು ಪ್ರವಾಸಮಾಡುವರು.

ಕೌನ್ಸಿಲ್ ಆಫ್ ಸ್ಟೇಟಿಗೆ

ಮದ್ರಾಸಿನಿಂದ ಭಾರತ ಹಿರಿಯ ಶಾಸನಸಭೆಯಾದ ಕೌನ್ಸಿಲ್ ಆಫ್ ಸ್ಟೇಟಿಗಿರುವ ೨೭ ಸ್ಥಾನಗಳಿಗೆ ೭೭ ಸ್ಪರ್ಧಿಗಳಿರುವರು.

ಮದ್ರಾಸು ಹಿರಿಯ ಶಾಸನಸಭೆಗೆ ಕಿರಿಯ ಶಾಸನ ಸಭಾಸದಸ್ಯರು ಚುನಾಯಿಸಬೇಕಾಗಿರುವ ೨೪ ಸ್ಥಾನಗಳಿಗೆ ೭೫ ಜನ ಉಮೇದುವಾರರು ಅರ್ಜಿ ಸಲ್ಲಿಸಿರುವರು

ಬೆಂಗಳೂರಿನಲ್ಲಿ ಕುದುರೆ ಪಂದ್ಯ

ಬೆಂಗಳೂರು ಮಾ ೧೩

ಬೆಂಗಳೂರಿನಲ್ಲಿ ಕುದುರೆ ಪಂದ್ಯ ಮೇ ೨೪ನೇ ತಾ|| ಆರಂಭವಾಗಿ ಜುಲೈ ೭ನೇ ತಾ|| ಮುಕ್ತಾಯವಾಗಲಿದೆ. ಒಟ್ಟು ೧೨ ದಿನ ಪಂದ್ಯ ನಡೆಯಲಿದೆ.

ಲಾಲ್ ಬಹದ್ದೂರ್ ಶಾಸ್ತ್ರಿ ಕೇಂದ್ರದ ಸಚಿವರೆ?

ಕೌನ್ಸಿಲ್-ಆಫ್-ಸ್ಟೇಟ್ ಚುನಾವಣೆಗೆ ಕಾಂಗ್ರೆಸ್ ಪಕ್ಷದವರು ನಿಲ್ಲಿಸಲಿರುವ ಉಮೇದುವಾರರ ಪಟ್ಟಿಯಲ್ಲಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರ ಹೆಸರನ್ನು ಸೇರಿಸಿರುವುದು ಅನೇಕರಿಗೆ ವಿಸ್ಮಯವನ್ನುಂಟುಮಾಡಿದೆ. ರಚಿಸಲಾಗಲಿರುವ ಕೇಂದ್ರ ಸರ್ಕಾರದ ನೂತನ ಮಂತ್ರಿಮಂಡಲದಲ್ಲಿ ಅವರಿಗೆ ಸ್ಥಾನವೊಂದನ್ನು ಕಲ್ಪಿಸಬಹುದೆಂಬ ಅಭಿಪ್ರಾಯ ಅನೇಕರಲ್ಲಿ ಮೂಡಿದೆ.

ಹತ್ತಿ ಹತೋಟಿ ಆಜ್ಞೆ ತಿದ್ದುಪಡಿ

ಹತ್ತಿಯ ವ್ಯಾಪಾರ ಮತ್ತು ಕೊಳ್ಳುವಿಕೆಯ ಸಂಬಂಧದಲ್ಲಿ ಉಂಟಾಗುತ್ತಿದ್ದ ಹಲವಾರು ತೊಂದರೆಗಳನ್ನು ಪರಿಹರಿಸಲು ಕೇಂದ್ರ ಸರ್ಕಾರದವರು ೧೯೫೦ ರ ಹತ್ತಿ ಹತೋಟಿ ಆಜ್ಞೆಯನ್ನು ತಿದ್ದುಪಡಿ ಮಾಡಿದ್ದಾರೆ.

ಮಧ್ಯಮ ವರ್ಗದವರಿಗೆ ಸ್ವಲ್ಪ ಪರಿಹಾರ

ಇತ್ತೀಚೆಗೆ ಸಾಮಗ್ರಿಗಳ ಬೆಲೆಯು ಇಳಿದಿರುವುದರಿಂದ ಬಹಳ ತೊಂದರೆಗೀಡಾಗಿದ್ದ ಮಧ್ಯಮ ವರ್ಗದವರಿಗೆ ಸ್ವಲ್ಪ ಮಟ್ಟಿಗೆ ಪರಿಹಾರ ದೊರೆಯಬಹುದು—ಎಂದು, ಒಳಾಡಳಿತ ಸಚಿವ ಡಾ|| ಕೈಲಾಸನಾಥಕಟ್ಜುರವರು ತಿಳಿಸಿರುವರು.

ಹೈದರಾಬಾದಿನ ವಿರೋಧಪಕ್ಷ

ಹೈದರಾಬಾದಿನ ಶಾಸನ ಸಭೆಯ ವಿರೋಧಪಕ್ಷದ ನಾಯಕರಾಗಿ ಶ್ರೀ ವಿ ಡಿ ದೇಶಪಾಂಡೆ ಆರಿಸಲ್ಪಟ್ಟರು. ಶಾಸನ ಸಭೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ವಿರೋಧ ಪಕ್ಷವು ಸ್ಪರ್ಧಿಸಬೇಕೆಂದು ನಿರ್ಧರಿಸಿದೆ.

ಹೈದ್ರಾಬಾದ್ ವಿಭಜನೆಗೆ ಕೋರಿಕೆ

ನಿಜಾಮರನ್ನು ಪದಚ್ಯುತಿಗೊಳಿಸಿ ಹೈದರಾಬಾದ್ ಸಂಸ್ಥಾನವನ್ನು ಭಾಷಾವಾರಾಗಿ ವಿಂಗಡಿಸಬೇಕೆಂಬ ನಿರ್ಣಯವನ್ನು ಹೈದರಾಬಾದ್ ಶಾಸನ ಸಭೆಯಲ್ಲಿ ರಾಜಪ್ರಮುಖರ ಭಾಷಣಾನಂತರ ಮಂಡಿಸಬೇಕೆಂದು ಶಾಸನಸಭಾ ಜನತಾ ಪಕ್ಷದವರು ನಿರ್ಧರಿಸಿರುವರು.

ಬ್ಯಾಂಕ್‌ದರದಲ್ಲಿ ಬದಲಾವಣೆಯಿಲ್ಲ

ಭಾರತದಲ್ಲಿ ಬ್ಯಾಂಕ್ ದರದಲ್ಲಿ ಬದಲಾವಣೆಯಾಗದೆಂದು ರಿಜರ್ವ್ ಬ್ಯಾಂಕ್‌ನಿಂದ ಅಧಿಕೃತವಾಗಿ ತಿಳಿದುಬಂದಿದೆ.

ಸೂಚನೆ

"ಸಮಾಚಾರ" ಪತ್ರಿಕೆಯು ಇನ್ನು ಮುಂದೆ ಭಾನುವಾರ ಪ್ರಕಟವಾಗುತ್ತದೆ. ಸೋಮವಾರ ಪತ್ರಿಕೆಯಿಲ್ಲ.

—ವ್ಯವಸ್ಥಾಪಕ.

ಬಟ್ಟೆ ಹತೋಟಿ ಹೋಯಿತು

ಬಟ್ಟೆಯ ಧಾರಣೆಗಳು ಬಿದ್ದು ಹೋಗಿರುವುದರಿಂದ ದೆಹಲಿಯಲ್ಲಿ ಮಾಡಿರುವಂತೆ ಬಂಗಾಳದಲ್ಲಿ ಬಟ್ಟೆ ಹತೋಟಿಯನ್ನು ತೆಗೆದುಹಾಕಬೇಕೆಂದು ಬಂಗಾಳ ಗಿರಣಿ ಮಾಲೀಕರ ಪ್ರಾರ್ಥನೆಗೆ ಸರ್ಕಾರ ಮನ್ನಣೆಯಿತ್ತಿದೆ.

ಸರ್ವೋದಯ ಕ್ಷೇತ್ರಗಳು

ಬೊಂಬಾಯಿನಲ್ಲಿ ೨೯ ಸರ್ವೋದಯ ಕೇಂದ್ರಗಳಿವೆ. ಇವುಗಳಿಗಾಗಿ ಬೊಂಬಾಯಿನ ಸರ್ಕಾರವು ೫೦-೫೧ನೇ ಸಾಲಿನಲ್ಲಿ ೧೮ ಲಕ್ಷ ರೂಪಾಯಿಗಳನ್ನೂ, ೫೧-೫೨ನೇ ಸಾಲಿನಲ್ಲಿ ೧೯ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು.

ಮದರಾಸಿನಲ್ಲಿ ಚಿನ್ನ ಬೆಳ್ಳಿ ದರಗಳು

14–3–52

ಸವರನ್	64-12-0
"	64-14-0
ಚಿನ್ನ ತೊಲ	84-0-0
" ಮೂಸ	84-8-0
ಬೆಳ್ಳಿ 100 ತೊಲ	150-0-0
" 1 ತೊಲ	1-10-0

ಗೌರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನ

ದೆಹಲಿಯಲ್ಲಿ ನಿನ್ನೆಯದಿನ ಭಾರತದ ಪ್ರಾಂತ್ಯಗಳ ಗೌರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನವನ್ನು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರವರು ಪ್ರಾರಂಭಿಸಿದರು. ಪ್ರಧಾನಿ ನೆಹರೂ, ಅರ್ಥಸಚಿವ ಶ್ರೀ ಚಿಂತಾಮಣಿ ದೇಶಮುಖ್, ಆಹಾರಸಚಿವ ಶ್ರೀ ಕೆ. ಎಂ. ಮುನ್ಷಿ ಮತ್ತು ಗೃಹಸಚಿವ ಶ್ರೀ ಕೈಲಾಸನಾಥ ಕಟ್ಜುರವರು ಈ ಸಮ್ಮೇಳನಾರಂಭಸಮಯದಲ್ಲಿ ಹಾಜರಿದ್ದರು.

ಈ ಸಮ್ಮೇಳನವು ನಿನ್ನೆ ಬೆಳಗ್ಗೆ ಮತ್ತು ಮಧ್ಯಾಹ್ನ ಸೇರಿತ್ತು. ಭಾರತದ ಆರ್ಥಿಕ ಮತ್ತು ಆಹಾರ ಸಮಸ್ಯೆಗಳು ಚರ್ಚೆಯಾದುವೆಂದು ತಿಳಿಯಬರುತ್ತದೆ. ಪ್ರಾಂತ್ಯ ಭಾಷೆ ಮತ್ತು ರಾಷ್ಟ್ರಭಾಷೆಗೆ ಸಂಬಂಧಪಟ್ಟ ವಿಷಯಗಳೂ ಚರ್ಚೆಯಾದುವೆಂದು ಗೊತ್ತಾಗಿದೆ. ಈ ದಿನವೂ ಸಭೆ ನಡೆಯುವುದು.

ಒಪ್ಪಂದ ನಡೆಯುವುದು ಅನುಮಾನ

ವಿಶ್ವಸಂಸ್ಥೆಯು ಎಷ್ಟು ಪ್ರಮಾಣಿಕತೆಯಿಂದ ಸಂಧಾನ ಮಾತುಗಳು ನಡೆಸುತ್ತಲಿದ್ದರೂ ಕೊರಿಯಾಯುದ್ಧ ಮುಕ್ತಾಯಕ್ಕೆ ಒಪ್ಪಂದಕ್ಕೆ ಬರುವುದು ಅನುಮಾನವಾಗಿದೆಯೆಂದು ವಿಶ್ವಸಂಸ್ಥೆ ಡೈರೆಕ್ಟರ್ ಜನರಲ್ ಮಿ|| ಟ್ರಿಗ್ವೆಲಿಯವರು ಹೇಳಿರುವರು.

ಮಾರುಕಟ್ಟೆ ಮುಚ್ಚಲಾಗುವುದು

ಬೊಂಬಾಯಿನ ಮಾರುಕಟ್ಟೆಯನ್ನು ಇದೇ ೨೭ ನೇ ತಾರೀಖಿನವರೆಗೆ ಮುಚ್ಚಲು ಸರ್ಕಾರ ಅನುಮತಿ ಇತ್ತಿದೆ.

ಭಾರತಕ್ಕೆ ಆಗಮನ

ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ|| ಗ್ರಹಾಂರವರು ಕರಾಚಿಯಲ್ಲಿ ಪಾಕೀಸ್ಥಾನ ಸರ್ಕಾರದೊಡನೆ ಮಾತುಕಥೆ ಮುಗಿಸಿಕೊಂಡು ಪುನಃ ದೆಹಲಿಗೆ ಆಗಮಿಸಿರುವರು.

* ಮೈಸೂರು ಶಾಸನ ಸಭಾಧಿವೇಶನವು ೨೦ನೇ ತಾ|| ಸಂಜೆ ೪ ಗಂಟೆಗೆ ಬೆಂಗಳೂರು ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಪ್ರಾರಂಭವಾಗುತ್ತದೆ. ಶ್ರೀಮನ್ಮಹಾರಾಜರು ಪ್ರಾರಂಭ ಭಾಷಣಮಾಡುವರು.

ಕೃಷ್ಣಾಪೆನ್ನಾರ್ ನೀರಾವರಿ ಯೋಜನೆ

ಮದ್ರಾಸಿನಲ್ಲಿರುವ ೨೪ ಜಿಲ್ಲೆಗಳ ಪೈಕಿ ೮ ಜಿಲ್ಲೆಗಳ ಸ್ವಾಭಾವಿಕ ಲಕ್ಷಣಗಳನ್ನೇ ಬದಲಾಯಿಸಿ, ವ್ಯವಸಾಯ ಕ್ಷೇತ್ರವನ್ನು ವಿಸ್ತರಿಸಿ ಮದ್ರಾಸ್ ಪ್ರಾಂತ್ಯದ ಆಹಾರ ಕೊರತೆಯನ್ನು ಸಂಪೂರ್ಣವಾಗಿ ನೀಗಿಸಲು ಕೃಷ್ಣಾಪೆನ್ನಾರ್ ಯೋಜನೆಯು ತಯಾರಾಗಿದೆ.

ಹಿರಿದಾದ ಎರಡು ಜಲಾಶಯಗಳನ್ನು ಒಟ್ಟುಗೂಡಿಸಿ ವ್ಯವಸಾಯ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ಅವಕಾಶ ಕಲ್ಪಿಸುವುದಕ್ಕೆ ತಯಾರಾದ ಭಾರತದ ಬೃಹತ್ ಯೋಜನೆಗಳಲ್ಲಿ ಇದು ಅತ್ಯಂತ ಮುಖ್ಯವಾದುದು ಮತ್ತು ಪ್ರಪ್ರಥಮವಾದುದು.

ಈ ಯೋಜನೆಯ ಪ್ರಕಾರ ೩೭ ಲಕ್ಷ ಎಕರೆ ಜಮೀನು ಸಾಗುವಳಿಗೆ ಬಂದು, ಸುಮಾರು ೫೩ ಕೋಟಿ ರೂಪಾಯಿಗಳ ಬೆಲೆಬಾಳುವ ೧೭ ಲಕ್ಷ ಟನ್ ಅಕ್ಕಿ ಮತ್ತು ಒಂದು ಲಕ್ಷ ಟನ್ ಇತರ ಆಹಾರ ಧಾನ್ಯಗಳ ಬೆಳೆಗೆ ಅನುಕೂಲವಾಗುತ್ತದೆ. ಇದಲ್ಲದೆ ಈ ಪ್ರದೇಶದಲ್ಲಿ ೧,೨೦,೦೦೦ ಕಿಲೋವಾಟ್ ವಿದ್ಯುಚ್ಛಕ್ತಿಯು ಸಹ ಉತ್ಪತ್ತಿಯಾಗಲವಕಾಶವುಂಟಾಗುತ್ತದೆ. ಈ ಯೋಜನೆಗೆ ಒಟ್ಟು ೧೩೦ ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆ.

ಈ ಯೋಜನೆಯ ಪ್ರಕಾರ ಕರ್ನೂಲಿನ ಸಿದ್ಧೇಶ್ವರ ಎಂಬಲ್ಲಿ ಕೃಷ್ಣಾ ನದಿಗೆ ೩೩೦೭ ಅಡಿ ಉದ್ದ, ೧೩೮.೫ ಅಡಿ ಎತ್ತರವಿರುವ ಕೃಷ್ಣಾ ಅಣೆಕಟ್ಟೆಯನ್ನು ಕಟ್ಟಿ ಜಲಾಶಯವನ್ನು ನಿರ್ಮಿಸಲಾಗುತ್ತದೆ. ಇದಕ್ಕೆ ೧೯-೦೭ ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆ.

ನೆಲ್ಲೂರು ಜಿಲ್ಲೆಯ ಸೋಮೇಶ್ವರಂ ಎಂಬಲ್ಲಿ ಪೆನ್ನಾರ್ ನದಿಗೆ, ಕೃಷ್ಣಾ ಅಣೆಕಟ್ಟಿಗೆ ೨೫೦ ಮೈಲಿ ದೂರದಲ್ಲಿ, ೧೭೦ ಅಡಿ ಎತ್ತರ, ೩೭೦೦ ಅಡಿ ಉದ್ದವಿರುವ ಪೆನ್ನಾರ್ ಅಣೆಕಟ್ಟನ್ನು ೨೩-೪೦ ಕೋಟಿ ರೂಪಾಯಿಗಳ ವೆಚ್ಚದಿಂದ ಕಟ್ಟಲಾಗುತ್ತದೆ.

ಈ ಎರಡು ಜಲಾಶಯಗಳಿಂದ ೧೫೦೦ ಮೈಲಿ ಉದ್ದವಿರುವ ನಾಲೆಗಳನ್ನು ತೆಗೆಯಲಾಗುತ್ತದೆ. ಈ ಎರಡು ಅಣೆಕಟ್ಟುಗಳಿಗೂ ನಾಲೆಗಳ ಮೂಲಕ ಸಂಬಂಧವನ್ನು ಕಲ್ಪಿಸಲಾಗುವುದು.

ಈ ಎರಡು ಜಲಾಶಯಗಳಲ್ಲದೆ ಗಾಂಧಿಕೋಟೆ ಎಂಬಲ್ಲಿ ಪೆನ್ನಾರ್ ನದಿಗೆ ಮತ್ತೊಂದು ಅಣೆಕಟ್ಟನ್ನು ಕಟ್ಟಲಾಗುವುದು. ಇಲ್ಲಿಯ ಜಲಾಶಯಕ್ಕೆ ಕೃಷ್ಣಾ ನದಿಯ ನೀರೂ ಬಂದು ಸೇರುವುದು.

ಈ ಯೋಜನೆಯು ಪೂರ್ಣವಾಗಲು ೧೫ ವರ್ಷಗಳಾಗುತ್ತವೆ. ಮೊದಲನೇ ಹಂತವು ೭ ವರ್ಷಗಳಲ್ಲಿ ಪೂರ್ಣವಾಗಿ ೨೧ ಲಕ್ಷ ಎಕರೆಗಳ ವ್ಯವಸಾಯಕ್ಕೆ ಸಹಾಯವಾಗುತ್ತದೆ. ಇದಕ್ಕೆ ೭೭-೭೦ ಕೋಟಿ ರೂ. ವೆಚ್ಚ ತಗುಲುವುದು.

ಹೊರಗಿನಿಂದ ವಕೀಲರೇ ?

ಬೆಂಗಳೂರು ಮಾ. ೧೪

ಶ್ರೀ ಎಲ್. ಎಸ್. ರಾಜು ಮತ್ತಿತರ ಮೇಲಿನ ವಿಷಪ್ರಾಶನ ಪ್ರಯುಕ್ತ ಆರೋಪದ ಮೊಕದ್ದಮೆಯಲ್ಲಿ ವಾದ ಪ್ರತಿವಾದಗಳಲ್ಲಿ ಮೈಸೂರು ಸರ್ಕಾರದ (ಪ್ರಾಸಿಕ್ಯೂಷನ್) ಪರ ವಾದಿಸಲು ಸಂಸ್ಥಾನದ ಹೊರಗಿನಿಂದ ಒಬ್ಬ ವಕೀಲರನ್ನು ಕರೆಸಲು ಸರ್ಕಾರದವರು ಆಲೋಚಿಸಿದ್ದಾರೆಂದು ಗೊತ್ತಾಗಿದೆ.

ಈ ಸಂಬಂಧದಲ್ಲಿ ಬೊಂಬಾಯಿನ ಸುಪ್ರಸಿದ್ಧ ಕ್ರಿಮಿನಲ್ ಲಾಯರಾದ ಶ್ರೀ ಸೋಮಜಿಯವರನ್ನು ಕರೆಸಲು ಸರ್ಕಾರದವರು ಅವರೊಡನೆ ಪತ್ರವ್ಯವಹಾರ ನಡೆಸುತ್ತಿದ್ದಾರೆಂದು ಗೊತ್ತಾಗಿದೆ.

ರಾಜಾಜಿ ನೇತೃತ್ವದಲ್ಲಿ ಮಂತ್ರಿಮಂಡಲ ಆಗಬೇಕು

'ಮದ್ರಾಸ್' ಪ್ರಾಂತದ ಈಗಿನ ರಾಜಕೀಯ ಸ್ಥಿತಿಗತಿ ನೋಡಿದರೆ ಶ್ರೀ ಸಿ. ರಾಜಗೋಪಾಲಾಚಾರ್ಯರ ಮುಖಂಡತ್ವದಲ್ಲೇ ಕಾಂಗ್ರೆಸ್ ಮಂತ್ರಿಮಂಡಲ ರಚಿತವಾಗಬೇಕಾದುದು ಅಗತ್ಯ' ಎಂಬುದಾಗಿ ವಿರುಧನಗರದ ಕಾಂಗ್ರೆಸ್ ಸಮಿತಿಯು ನಿರ್ಣಯ ಮಾಡಿದೆ.

ಎಲ್ಲಾ ವರ್ಗ ಪಂಗಡಗಳ ಸಾರ್ವಜನಿಕರ ಹೃತ್ಪೂರ್ವಕ ಆಶೆಯೂ ರಾಜಾಜಿಯವರೇ ಮುಖ್ಯಮಂತ್ರಿಯಾಗಬೇಕೆಂದಿದೆಯೆಂದೂ ಆದ್ದರಿಂದ ರಾಜಾಜಿ ಅದಕ್ಕೆ ಒಪ್ಪಬೇಕೆಂದೂ ಪ್ರಾರ್ಥಿಸಲಾಗಿದೆ. ಮಂತ್ರಿಮಂಡಲ ರಚಿಸುವಂತೆ ಅವರಿಗೆ ಸೂಚನೆ ಕೊಡಬೇಕೆಂದು ಪಂಡಿತ ನೆಹ್ರೂರನ್ನು ಕೋರಲಾಗಿದೆ.

ಬೆಲೆ ತಗ್ಗುತ್ತಿರುವುದರ ಪರಿಣಾಮ

ಹೈದರಾಬಾದಿನ ಲಾತೂರ್ ಎಂಬಲ್ಲಿ ಇಬ್ಬರೂ ವ್ಯಾಪಾರಸ್ಥರು ಹೆಚ್ಚು ಅಫೀಮು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವರದಿ ಬಂದಿದೆ. ಅವರುಗಳು ಮಾರುಕಟ್ಟೆಯಲ್ಲಿ ಆಗುತ್ತಿರುವ ಬೆಲೆಗಳ ಇಳುವರಿಯಿಂದ ಗಾಬರಿಯಾಗಿ ಹೀಗೆ ಮಾಡಿಕೊಂಡಿರಬಹುದೆಂದೂ ಹೇಳಲಾಗಿದೆ

ಡಾ॥ ಕೇಸ್ಕರ್

ವಿದೇಶಾಂಗಶಾಖಾ ಉಪಸಚಿವ ಡಾ॥ ಕೇಸ್ಕರ್‌ರವರು ತಮ್ಮ ಕೆಲಸದಜೊತೆಗೆ ರೈಲ್ವೇ ಶಾಖಾ ಉಪಸಚಿವ ಕೆಲಸವನ್ನೂ ವಹಿಸಿಕೊಂಡರು.

ಕೊರಿಯಾದಲ್ಲಿ ಭಾರಿ ಕದನ

ಕಳೆದ ಒಂದುತಿಂಗಳಿಂದ ಯಾವಾಗಲೂ ನಡೆಯದಿರುವ ಅಧಿಕಪ್ರಮಾಣದಲ್ಲಿ ಕೊರಿಯಾದಲ್ಲಿ ಭಾರಿಕದನ ಪ್ರಾರಂಭವಾಗಿದೆ.

ವಿಂಧ್ಯ ಪ್ರದೇಶದಲ್ಲಿ ನೂತನ ಮಂತ್ರಿಮಂಡಲ

ವಿಂಧ್ಯ ಪ್ರದೇಶದಲ್ಲಿ ನೂತನ ಕಾಂಗ್ರೆಸ್ ಸರ್ಕಾರವು ಅಧಿಕಾರ ವಹಿಸಿಕೊಂಡಿದೆ. ಸಚಿವ ಮಂಡಲದಲ್ಲಿ ೪ ಮಂತ್ರಿಗಳಿರುವರು. ಶ್ರೀ ಶಂಭುನಾಥ ಶುಕ್ಲರವರು ಮುಖ್ಯಮಂತ್ರಿ.

ರೇಡಿಯೋ ಸಂಪರ್ಕ

ಭಾರತ-ಬರ್ಮಾ ನಡುವೆ ಟೆಲಿಗ್ರಾಫ್ ಸಂಪರ್ಕವನ್ನು ಈ ವರ್ಷ ಮಾಡಲಾಗುತ್ತದೆಯೆಂದು ಹೇಳಲಾಗಿದೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಮತ್ತು ಚಲನಚಿತ್ರಗಳಲ್ಲಿ ಅಭಿನಯಿಸಲು ಅವಕಾಶಮಾಡಿ ಕೊಡಲಾಗುವುದು. ಆಸಕ್ತಿವುಳ್ಳವರು ಇಂದೇ ವಿಚಾರಿಸಿರಿ.

ವ್ಯವಸ್ಥಾಪಕ.

ನ್ಯೂ ಅಪೇರ

೧೧-೩-೫೨ ರಿಂದ ಅಮೋಘಪ್ರಾರಂಭ

ಶೋಭನಾಚಲರವರ ತಮಿಳು ಚಿತ್ರ—

ಮಾಯಾ ಕುದುರೆ

ಪಾತ್ರ:—ನಾಗೇಶ್ವರರಾವ್, ಅಂಜಲೀ.

ಪ್ರಕಾಶಕರು:—ಜಿ.ಎಲ್. ಸ್ವಾಮಿ
ಟೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮನೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ರಾಜಕಮಲ್ ಟಾಕೀಸ್, ಮೈಸೂರು

ತಾರೀಖು **14—3—52** ರಿಂದ ವಿಜೃಂಭಣೆಯ ಪ್ರದರ್ಶನಾರಂಭ

ಪಾತಾಳಭೈರವಿಯನ್ನು ನಿರ್ಮಿಸಿ ಪ್ರಖ್ಯಾತರಾದ ಶ್ರೀ "ವಿಜಯಾ" ರವರ ಅತ್ಯಂತ ಕೋಲಾಹಲವನ್ನುಉಂಟುಮಾಡುತ್ತಿರುವ

*** ಮದುವೆ ಮಾಡಿ ನೋಡು ***

ಎಂಬ ಶ್ರೇಷ್ಠ ತೆಲುಗು ಚಿತ್ರ

ಇದರಲ್ಲಿ ಯಾವ ಕಥೆಯೂ ಆಕಾಶಕುಸುಮಕ್ಕೆ ಕೈಯೊಡ್ಡಿ ಹೊರಡಿದ್ದಿಲ್ಲ, ದಿಸಿಲುಕುದುರೆಯ ಬೆನ್ನುಹತ್ತಿ, ನಡೆದುದಲ್ಲ, ಎಲ್ಲಾ ಕಥೆಯಲ್ಲಿಯೂ ಬರುವ ಕಲಾವಿದರು ನಮ್ಮ ನಿಮ್ಮಂಥಹ ಸಾಮಾನ್ಯ ಜನರು. ಅವರು ತಮ್ಮ ಬಾಳನ್ನು ಅವರವರ ಆಶೆ ಆಕಾಂಕ್ಷೆಗಳ ಫಲಪ್ರಾಪ್ತಿಗೆ ಹೇಗೆ ಎರವಾಗುವರು ಎಂಬುದೇ ಈ ಕಥೆಯ ಸಾರಾಂಶ

ತಾರಾಗಣ:—ಜಿ. ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ಜೋಗ್‌ರಾವ್.

ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿಗಳನ್ನು ಆರು ವಾರಗಳು ಮನ್ನಾಮಾಡಿದೆ

ಫೋನ್ ೫೭೪ (೨೮) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೬—೩—೧೯೫೨ನೇ ಭಾನುವಾರ [ಸಂಚಿಕೆ ೧೩೯

ಕೆಲವು ವಸ್ತುಗಳ ಮೇಲೆ ರಫ್ತು ಸುಂಕ ವಜಾ

ಕಡಲೆಕಾಯಿಎಣ್ಣೆ, ಹುಚ್ಚೆಳ್ಳೆಣ್ಣೆ, ಕಚ್ಚಾಉಣ್ಣೆ, ಕುಸುಮೆಬೀಜಗಳಮೇಲೆ ಭಾರತಸರ್ಕಾರವು ರಫ್ತು ತೆರಿಗೆಯನ್ನು ಮನ್ನಾ ಮಾಡಿದೆ.

ಕಚ್ಚಾ ಹತ್ತಿಯಮೇಲೆ ವಿಧಿಸುತ್ತಿದ್ದ ಬೇಲಿಗೆ ೪೦೦ ರೂಪಾಯಿನ ಸುಂಕವನ್ನು ೨೦೦ ರೂಪಾಯಿಗಿಳಿಸಿದೆ- ಇದು ಈದಿನದಿಂದ ಜಾರಿಗೆಬರಲಿದೆ.

ನಯವಾದ ಬಟ್ಟೆ ಮತ್ತು ನೂಲಿನ ಈಗಿನ ದರವನ್ನು ಸ್ವಲ್ಪ ಕಡಮೆಮಾಡಲಾಗುವುದೆಂದು ತಿಳಿಯಬರುತ್ತದೆ.

ಮೇ ೧೨ರ ವೇಳೆಗೆ ಹೊಸ ಪಾರ್ಲಿಮೆಂಟ್ ಅಧಿವೇಶನ

ಭಾರತದಲ್ಲಿ ವಯಸ್ಕರ ಮತದಾನ ಪದ್ಧತಿಯ ಮೇಲೆ ಮಹಾಚುನಾವಣೆಗಳು ನಡೆದು ಚುನಾಯಿತರಾದ ನೂತನ ಪಾರ್ಲಿಮೆಂಟಿನ ಮೊದಲನೆಯ ಅಧಿವೇಶನವು ಮೇ ೧೨ನೇ ತಾರೀಖಿನ ವೇಳೆಗೆ ನಡೆಯಬಹುದೆಂದು ಹೇಳಲಾಗಿದೆ. ಇದಕ್ಕೆ ಸದಸ್ಯರಿಗೆ ಸೂಚನೆಯು ಮುಂದಿನ ವಾರದಲ್ಲಿ ಕೊಡಲಾಗುತ್ತದೆ.

ರಾಷ್ಟ್ರಾಧ್ಯಕ್ಷರ ಚುನಾವಣೆಗೆ ತಕ್ಕ ಕಾರ್ಯಕ್ರಮವನ್ನು ಮಾಡಲಾಗುತ್ತಲಿದೆ. ಅವಿರೋಧವಾಗಿ ರಾಷ್ಟ್ರಾಧ್ಯಕ್ಷರ ಚುನಾವಣೆಯು ನಡೆದಲ್ಲಿ ಏಪ್ರಿಲ್ ಮಧ್ಯಭಾಗದಲ್ಲೇ ಫಲಿತಾಂಶ ಹೊರಬೀಳುತ್ತದೆ. ಇಲ್ಲವಾದಲ್ಲಿ ಮೇ ಮೊದಲನೇ ವಾರದಲ್ಲಿ ಚುನಾವಣೆ ನಡೆಯುತ್ತದೆ. ಒಂದು ವಾರದನಂತರ ಫಲಿತಾಂಶ ಹೊರಬೀಳುವುದು.

ಪ್ರಾಂತ್ಯ ಶಾಸನಸಭೆಗಳಲ್ಲಿ ರಾಷ್ಟ್ರಾಧ್ಯಕ್ಷರ ಚುನಾವಣೆಯು ಆಯಾ ಪ್ರಾಂತ್ಯಗಳಲ್ಲೂ ಪಾರ್ಲಿಮೆಂಟಿನಲ್ಲಿ ಚುನಾವಣೆಯು ದೆಹಲಿಯಲ್ಲೂ ನಡೆದು, ಮತದಾನ ಪೆಟ್ಟಿಗೆಗಳನ್ನೆಲ್ಲಾ ದೆಹಲಿಗೆ ತರಿಸಿಕೊಂಡು ಅಲ್ಲಿಯೇ ಎಣಿಕೆ ನಡೆಯುತ್ತದೆಯೆಂದು ಹೇಳಲಾಗಿದೆ

ರಾಷ್ಟ್ರದ ಉಪಾಧ್ಯಕ್ಷರ ಚುನಾವಣೆಯು ಪ್ರತ್ಯೇಕವಾಗಿ ನಡೆಯುತ್ತದೆ

ರಬ್ಬರು ಎಸ್ಟೇಟುಗಳ ಮಾರಾಟ

ಮಲಯಾದಲ್ಲಿರುವ ಯೂರೋಪಿಯನ್ನರ ಯಜಮಾನ್ಯದಲ್ಲಿರುವ ರಬ್ಬರ್ ಎಸ್ಟೇಟುಗಳ ಮಾರಾಟ ಪ್ರಾರಂಭವಾಗಿದೆಯೆಂದು ಹೇಳಲಾಗಿದೆ.

ಮದರಾಸಿನಲ್ಲಿ ಚಿನ್ನ ಬೆಳ್ಳಿ ದರಗಳು

15–3–52	ರೂ.
ಸವರನ್	64–8
"	64–10
ಚಿನ್ನ ತೊಲ	83–0
" ಮೊಹರ	83–8
ಬೆಳ್ಳಿ 100 ತೊಲ	134–0
" 1 ತೊಲ	1–9

ಪೇಟೆ ಧಾರಣೆ

ಮೈಸೂರು ತಾ॥ 15-3-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	13-10	17-8
ಹೊಂಗೆಬೀಜ "	7-14	13-4
ಹುರುಳಿ "	26-0	28-4
ಅವರೆ "	42-0	45-0
ಮೆ. ಕಾಯಿ ಮಣಕ್ಕೆ	8-12	14-12
ಹುಣಸೇಹಣ್ಣು "	1-12	2-5
ಸೀಗೆಕಾಯಿ "	2-15	3-2
ತೆಂಗಿನಕಾಯಿ 1100ಕ್ಕೆ	180	

ಗೌರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನ

ಮೊನ್ನೆ ಮುಂದುವರಿದ ಗೌರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನವು ನಿನ್ನೆಯೂ ನಡೆಯಿತು.

ಬೆಳಗಿನ ಅಧಿವೇಶನದಲ್ಲಿ ಪ್ರಧಾನಿ ನೆಹರೂರವರು ಸಭೆಯಲ್ಲಿ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನೂ, ಗೃಹಸಚಿವ ಶ್ರೀ ಕೆ. ಎನ್. ಖಟ್ಜುರವರು ದೇಶದ ನ್ಯಾಯ ಮತ್ತು ಶಿಸ್ತು ಪರಿಪಾಲನ ಪರಿಸ್ಥಿತಿಯನ್ನೂ ವಿವರಿಸಿದರೆಂದು ಹೇಳಲಾಗಿದೆ.

ನಿನ್ನೆ ಮಧ್ಯಾಹ್ನ ನಡೆದ ಸಭೆಯಲ್ಲಿ ಪ್ರಧಾನಿನೆಹ್ರೂ, ಸಂಸ್ಥಾನ ಶಾಖಾಸಚಿವ ಶ್ರೀ ಎನ್. ಜಿ ಅಯ್ಯಂಗಾರ್, ಗೃಹಸಚಿವ ಪುನರ್ವ್ಯವಸ್ಥೆ ಶಾಖಾಸಚಿವರೂ ಹಾಜರಿದ್ದರು. ಭಾರತ ಪಾಕೀಸ್ತಾನ ಬಾಂಧವ್ಯ, ಪುನರ್ವ್ಯವಸ್ಥೆ ಕಾರ್ಯಕ್ರಮ ಮುಂತಾದುವು ಚರ್ಚೆಯಾದುವೆಂದು ಹೇಳಲಾಗಿದೆ. ಇಲ್ಲಿಗೆ ಸಮ್ಮೇಳನವು ಮುಕ್ತಾಯವಾಯಿತು. ಕೆಲವು ಗೌರ್ನರ್‌ಗಳು ನಿನ್ನೆಯೇ ದೆಹಲಿಯಿಂದ ಹೊರಟುಹೋದರು. ಈದಿನ ಬೆಳಗ್ಗೆ ರಾಜಪ್ರಮುಖರ ಸಭೆಯು ಸೇರುವುದೆಂದು ಹೇಳಲಾಗಿದೆ.

ಮದ್ರಾಸಿನ ಬಡ್ಜೆಟ್

ಮದ್ರಾಸಿನ ಬಡ್ಜೆಟ್ ಅಧಿವೇಶನವು ನಿನ್ನೆ ಪ್ರಾರಂಭವಾಯಿತು- ಅರ್ಥಿಕಸಚಿವ ಶ್ರೀ ಎ. ಬಿ. ಶೆಟ್ಟಿಯವರು ಬಡ್ಜೆಟ್ಟನ್ನು ಮಂಡಿಸಿದರು.

ಮುಂದಿನಸಾಲಿನ ಆದಾಯವು ೬೦ ಕೋಟಿ ೯೩ ಲಕ್ಷ ವೆಚ್ಚವು ೬೪ ಕೋಟಿ ೭೭ ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಕ್ಷಾಮಪರಿಹಾರಕಾರ್ಯಗಳಿಗೆ ೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ

† ಭಾರತದಲ್ಲಿ ಎಣ್ಣೆ ಬೀಜಗಳ ಉತ್ಪತ್ತಿ ಭಾರತ ವಿಭಜನೆಯಾಗುವಮುಂಚೆ ಯಾವ ಪ್ರಮಾಣದಲ್ಲಿತ್ತೋ ಆ ಪ್ರಮಾಣದಲ್ಲಿ ಈಗ ಇದೆಯೆಂದು ಹೇಳಲಾಗಿದೆ. ಈ ಸಾಲಿನಲ್ಲಿ ಒಟ್ಟು ೭೫ ಲಕ್ಷ ಟನ್ ಎಣ್ಣೆ ಉತ್ಪತ್ತಿಯಾಗಿದೆ ದರ್ಬ ಮತ್ತು ದಕ್ಷಿಣ ಭಾರತದಲ್ಲೇ ಎಣ್ಣೆ ಬೀಜಗಳ ಉತ್ಪತ್ತಿ ಹೆಚ್ಚಾಗಿದೆ.

ಹೊಸ ಧನಮೂಲ ಕಂಡು ಹಿಡಿಯಬೇಕು

ಮಾರಾಟ ತೆರಿಗೆ, ಮೋಟಾರು ತೆರಿಗೆ ಮುಂತಾದುವು ಪರಮಾವಧಿಯನ್ನು ಮುಟ್ಟಿವೆ. ಈಗಿನ ಬೆಲೆ ಇಳಿತಾಯ ಪರಿಸ್ಥಿತಿಯಿಂದ ಪ್ರಾಂತ್ಯದ ಆದಾಯವು ಕಡಮೆಯಾಗುತ್ತದೆ. ಪಂಚವಾರ್ಷಿಕ ಯೋಜನೆಗಳಿಗಾಗಿ ಹೊಸ ಧನಮೂಲವನ್ನು ಮುಂದೆ ಬರುವ ಹೊಸ ಸರ್ಕಾರವು ಕಂಡುಹಿಡಿಯಬೇಕೆಂದು ಮದರಾಸ್ ಅರ್ಥಿಕ ಸಚಿವ ಶ್ರೀ ಎ ಬಿ ಶೆಟ್ಟಿಯವರು ಹೇಳಿರುವರು.

ಬಿಕ್ಕಟ್ಟು ಪರಿಹಾರ

ಬಿಹಾರಿನಲ್ಲಿ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯಲ್ಲಿ ಉಂಟಾಗಿದ್ದ ಬಿಕ್ಕಟ್ಟು ಪರಿಹಾರವಾಗಿದೆ.

ಈಗ ಮುಖ್ಯಮಂತ್ರಿಯಾಗಿರುವ ಡಾ॥ ಶ್ರೀ ಕೃಷ್ಣಸಿನ್ಹರು ಪಕ್ಷದ ನಾಯಕರಾಗಿಯೂ ಡಾ॥ ಅನುಗ್ರಹ ನಾರಾಯಣ ಸಿನ್ಹರವರು ಉಪನಾಯಕರಾಗಿಯೂ ಒಮ್ಮತದಿಂದ ಚುನಾಯಿತರಾಗಿರುವರು.

ಕ್ರಿಮಿ ಯುದ್ಧ ಆರೋಪಣೆ

ವಿಶ್ವಸೈನ್ಯಗಳು ಕೊರಿಯಾ ರಣರಂಗದಲ್ಲಿ ಪುನಃ ಕ್ರಿಮಿ ಯುದ್ಧ ಕ್ರಮವನ್ನು ಪ್ರಾರಂಭಿಸಿರುವುದಾಗಿ ಪೀಕಿಂಗ್ ರೇಡಿಯೋ ಪುನಃ ಆರೋಪಿಸಿರುವುದಾಗಿ ಹೇಳಲಾಗಿದೆ.

ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನ

ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನವು ಮುಂದಿನ ತಿಂಗಳು ಮಾಸ್ಕೋವಿನಲ್ಲಿ ನಡೆಯುತ್ತದೆ ಅಖಿಲ ಭಾರತ ಗ್ರಾಮ ಕೈಗಾರಿಕಾ ಸಂಘದ ಡಾ॥ ಜೆ ಸಿ ಕುಮಾರಪ್ಪನವರು ಈ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಲಿರುವರು.

ಶ್ರೀಮತಿ ವಿಜಯಲಕ್ಷ್ಮಿಯವರ ನೇತೃತ್ವದಲ್ಲಿ ನಿಯೋಗ

ಭಾರತದಿಂದ ಚೀಣಾಕ್ಕೆ ಏಪ್ರಿಲ್ ಮಧ್ಯಭಾಗದಲ್ಲಿ ತೆರಳಿರುವ ಸೌಹಾರ್ದ ಮತ್ತು ಸಾಂಸ್ಕೃತಿಕ ನಿಯೋಗವು ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ನಾಯಕತ್ವದಲ್ಲಿ ಹೋಗಲಿರುವುದಾಗಿ ತಿಳಿಯಬರುತ್ತದೆ. ನಿಯೋಗದ ಸದಸ್ಯರಾರೆಂಬುದು ಇನ್ನೂ ತಿಳಿದುಬಂದಿಲ್ಲ.

ಧಾನ್ಯಗಳ ಬೆಲೆ ಸರ್ಕಾರ ಹೆಚ್ಚಿಸುವುದಿಲ್ಲ

ಭಾರತದಲ್ಲಿ ವಸ್ತುಗಳ ಬೆಲೆಯ ಇಳಿಮುಖವನ್ನೇ ನಡೆಸಿಕೊಂಡು ಬರುವುದು ಸರ್ಕಾರದ ನೀತಿ. ಅಕ್ಕಿಯನ್ನು ಬಿಟ್ಟು ಇತರ ಆಹಾರ ಧಾನ್ಯಗಳ ಸಂಗ್ರಹ ಬೆಲೆಯನ್ನು ಸರ್ಕಾರ ಹೆಚ್ಚಿಸುವುದಿಲ್ಲವೆಂದು ಸರ್ಕಾರೀ ವೃತ್ತಗಳಿಂದ ತಿಳಿಯಬರುತ್ತದೆ.

ಥಾಕಿನ್ನೂ ಮಿ॥ ನೂ ಆದರು

ಬರ್ಮಾದಲ್ಲಿ ಹೊಸ ರಾಜ್ಯಾಂಗ ಪ್ರಕಾರ ನೂತನ ಮಂತ್ರಿಮಂಡಲವು ಸದ್ಯದಲ್ಲೇ ರಚನೆಯಾಗುತ್ತದೆ. ಈಗ ಪ್ರಧಾನಿಯಾಗಿರುವ ಥಾಕಿನ್ ನೂರವರೇ ಪುನಃ ಪ್ರಧಾನಿಯಾಗುವರು. ಅವರು ತಮ್ಮ ಹೆಸರಿನ ಜೊತೆಯಲ್ಲಿದ್ದ 'ಥಾಕಿನ' ಎಂಬ ಬಿರುದನ್ನು ತ್ಯಜಿಸಿರುವರು, ಇನ್ನು ಮುಂದೆ ಅವರನ್ನು ಮಿ॥ 'ನೂ' ಎಂದು ಕರೆಯಲಾಗುತ್ತದೆ

ಗೌರವಪ್ರಶಸ್ತಿ

ಅಮೆರಿಕಾ ಮಾಜಿ ಅಧ್ಯಕ್ಷ ದಿವಂಗತ ರೂಸ್‌ವೆಲ್ಟರ ಪತ್ನಿ ಶ್ರೀಮತಿ ರೂಸ್‌ವೆಲ್ಟರವರಿಗೆ ದೆಹಲಿ ವಿಶ್ವವಿದ್ಯಾನಿಲಯವು ನಿನ್ನೆಯದಿನ ವಿಶೇಷ ಘಟಿಕೋತ್ಸವದಲ್ಲಿ ಡಾಕ್ಟರ್ ಆಫ್ ಲೆಟರ್ಸ್ ಎಂಬ ಗೌರವಪ್ರಶಸ್ತಿಯನ್ನು ಕೊಟ್ಟಿದೆ. ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್‌ರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಬಿ. ಎನ್. ರಾವ್ ಶ್ರೀಮತಿ ವಿಜಯಲಕ್ಷ್ಮಿ ಮುಂತಾದವರು ಈ ಸಮಾರಂಭದಲ್ಲಿ ಹಾಜರಿದ್ದರು.

* ಮುಂದಿನಸಾಲಿನಲ್ಲಿ ಪಾಕೀಸ್ತಾನವು ತನ್ನ ಮರ್ಯಾದಾಯದಲ್ಲಿ ಕೇಕಡ ೪೦ ರಷ್ಟನ್ನು ವೆಚ್ಚಮಾಡಿದೆಯೆಂದು ಹೇಳಲಾಗಿದೆ.

ಎಲ್ಲಾ ವಸ್ತುಗಳ ಬೆಲೆ ಇಳಿವರಿ

ಭಾರತದಲ್ಲೆಲ್ಲಾ ಮುಖ್ಯ ವ್ಯಾಪಾರ ಕೇಂದ್ರವಾದ ಬೊಂಬಾಯಿನಲ್ಲಿ ಎಲ್ಲಾ ಆಹಾರ ವಸ್ತುಗಳು, ಎಣ್ಣೆ, ಸಕ್ಕರೆ, ಬಟ್ಟೆ, ಲೋಹಗಳ ಮುಂತಾದುವುಗಳ ಬೆಲೆಯು ದಿನೇ ದಿನೇ ಇಳಿಮುಖವಾಗುತ್ತಲಿದೆ.

ಮೋಟಾರು, ಬೈಸಿಕಲ್ಲುಗಳು, ಸಿಲ್ಕು, ಮುಂತಾದುವುಗಳ ಬೆಲೆಯು ಇಳಿವರಿಯು ವಿಶೇಷ ಕಾಣಬರುತ್ತಲಿರುವುದರಿಂದ ಹೇಗಾದರೂ ಲಾಭವಿಲ್ಲದೆ ಮಾರಲು ಪ್ರಯತ್ನಗಳು ನಡೆಯುತ್ತಲಿದ್ದರೂ ಗಿರಾಕಿಗಳೇ ಇಲ್ಲವಾಗಿದೆ.

ಮಧ್ಯಮ ವರ್ಗದ ಜನರೆಲ್ಲರೂ ಈ ಇಳಿವರಿಯಿಂದ ಸ್ವಲ್ಪ ಸಮಾಧಾನಚಿತ್ತರಾಗುತ್ತಲಿರುವರು.

ಸರ್ಕಾರಗಳು ಈ ಇಳಿವರಿಯನ್ನು ಸೂಕ್ಷ್ಮವಾಗಿ ವೀಕ್ಷಿಸುತ್ತಲಿರುವುದಾಗಿ ತಿಳಿಯಬರುತ್ತದೆ.

ಸಂಧಾನ

ಬೊಂಬಾಯಿನಲ್ಲಿ ಸ್ಥಾಪಿತವಾಗಲಿರುವ ಎರಡು ಎಣ್ಣೆ ಕೇಂದ್ರಗಳ ಪ್ರತಿನಿಧಿಗಳು ಬೊಂಬಾಯಿ ಮಂತ್ರಿ ಶ್ರೀ ಜೀವರಾಜ ಮೇಹತಾರವರೊಡನೆ ಮಾತುಕತೆ ನಡೆಸಿ ಈ ಕೇಂದ್ರಗಳಿಗೆ ಬೇಕಾಗುವ ವಿದ್ಯುಚ್ಛಕ್ತಿಯನ್ನೆಲ್ಲಾ ಬೊಂಬಾಯಿ ಸರ್ಕಾರವೇ ಒದಗಿಸುವಂತೆ ತೀರ್ಮಾನಕ್ಕೆ ಬಂದಿರುವರು. ಈ ಮಾತುಕತೆ ಸಮಯದಲ್ಲಿ ಕೇಂದ್ರ ಮಂತ್ರಿ ಶ್ರೀ ಗಾಡ್ಗಿಲ್‌ರವರೂ ಇದ್ದರು.

ಮುಷ್ಕರ

ಹೆಚ್ಚು ವೇತನ ಕೊಡಬೇಕೆಂದು ಬ್ರಿಟನ್ನಿನ ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುತ್ತಲಿರುವ ೭ ಲಕ್ಷ ಕಾರ್ಮಿಕರು ಮುಷ್ಕರವನ್ನು ಹೂಡಿರುವರೆಂದು ತಿಳಿಯಬರುತ್ತದೆ.

ಶ್ರೀ ಕೆ. ಎಂ. ಮುನಷಿ ಬೀಹಾರ್ ಗೌರ್ನರ್?

ಅನಾರೋಗ್ಯ ನಿಮಿತ್ತ ಬೀಹಾರ್ ಗವರ್ನರು ಶ್ರೀ ಎಂ ಎಸ್ ಆಣೆಯವರು ತಮ್ಮನ್ನು ಅಧಿಕಾರದಿಂದ ನಿವೃತ್ತಿಮಾಡಬೇಕೆಂದು ರಾಷ್ಟ್ರಾಧ್ಯಕ್ಷರನ್ನು ಕೇಳಿರುವರು. ಅವರು ಗವರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನಕ್ಕೂ ಹಾಜರಾಗಲಿಲ್ಲ. ಇದರ ಸ್ಥಾನಕ್ಕೆ ಕೇಂದ್ರ ಆಹಾರ ಸಚಿವ ಶ್ರೀ ಕೆ ಎಂ ಮುನಷಿಯವರನ್ನು ಬಿಹಾರ ಗವರ್ನರ್ ಆಗಿ ನೇಮಕ ಮಾಡಲಾಗುವುದೆಂದು ಹೇಳಲಾಗಿದೆ.

ಸಣ್ಣ ಕಥೆಗಳ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ

ವಿಶ್ವದ ಸಣ್ಣ ಕತೆಗಳ ಸ್ಪರ್ಧೆಯಲ್ಲಿ ಮದರಾಸಿನ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ಪ್ರೊಫೇಸರು ಶ್ರೀ ಪದ್ಮರಾಜರವರು ಎರಡನೇ ಬಹುಮಾನವನ್ನು ಪಡೆದಿರುವರು. ವಿಶ್ವದ ೨೨ ರಾಷ್ಟ್ರಗಳಲ್ಲಿಯ ವೃತ್ತಪತ್ರಿಕೆಗಳು ಈ ಸ್ಪರ್ಧೆಯನ್ನು ಏರ್ಪಡಿಸಿದ್ದುವು.

ಉಪವಾಸ

ಮಹಾತ್ಮ ಗಾಂಧಿಯವರ ಪುತ್ರ ಮಣಿಲಾಲ್ ಗಾಂಧಿಯವರು, ಆತ್ಮಶುದ್ಧಿಗಾಗಿ ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭಿಸಿರುವ ೨೧ ದಿನದ ಉಪವಾಸದಲ್ಲಿ ೧೦ ದಿನ ಕಳೆದುವು- ಅವರ ಆರೋಗ್ಯವು ಸಮಾಧಾನಕರವಾಗಿದೆಯೆಂದು ಹೇಳಲಾಗಿದೆ. ಮುಂದಿನ ತಿಂಗಳು ೬ನೇ ತಾರೀಖು, ೩೦೦ ವರ್ಷದಿಂದ ನಡೆದು ಬಂದು ವಿರೋಷ್ಠ ದಿನಾಚರಣೆಯು ನಡೆಯುತ್ತದಾಗಿ ಆ ದಿನ ಚಳುವಳಿ ಹೂಡಿದರೆ ಶಾಂತಿಭಂಗವಾಗುವ ಸಂಭವವಿರುವುದರಿಂದ ಆ ದಿನ ಮುಷ್ಕರ ಹೂಡಕೂಡದೆಂದು ಶ್ರೀ ಮಣಿಲಾಲ್ ಗಾಂಧಿಯವರು ತಿಳಿಸಿದ್ದಾರೆ.

ಹೊಸ ಮಂತ್ರಿಮಂಡಲ ಅಧಿಕಾರ ಸ್ವೀಕಾರ

ಕೊಡಗಿನ ನೂತನ ಮಂತ್ರಿಮಂಡಲವು ನಾಳೆದಿನ ಪದವಿ ಸ್ವೀಕಾರ ಮಾಡಲಿದೆ. ಮಂತ್ರಿಮಂಡಲದಲ್ಲಿ ಇಬ್ಬರು ಸಚಿವರಿರುವರು. ಶ್ರೀ ಪೂನಾಚಾರವರು ಮುಖ್ಯ ಮಂತ್ರಿಗಳು

ಗಫಾರ್ ಮಾರ್ಕೆಟ್

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ನಾಮಾಂಕಿತದಲ್ಲಿ, ದೆಹಲಿಯಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು, ಒಂದು ಮಾರ್ಕೆಟ್ಟಿನ ಪ್ರಾರಂಭೋತ್ಸವವನ್ನು ನಡೆಸುತ್ತಾ ಖಾನ್ ಸಾಹೇಬರು ಸ್ವತಂತ್ರ ಗಳಿಸಲು ಶ್ರಮಿಸಿದ ವೀರಾಗ್ರಣಿಗಳಲ್ಲೊಬ್ಬರು ಅಂತಹವರನ್ನು ನಾವು ಸದಾ ಸ್ಮರಿಸಿಕೊಳ್ಳುತ್ತ ನಮ್ಮ ಮುಂದಿನ ಪಥವನ್ನಿಡಬೇಕು. ಅಂತಹ ಮಹಾಮಹಿಮರು ಇನ್ನೂ ಪಾಕಿಸ್ಥಾನದಲ್ಲಿ ಜೈಲು ವಾಸವನ್ನನುಭವಿಸುತ್ತಲಿರುವುದು ನಮ್ಮ ದುರಾದೃಷ್ಟವೆಂದು ಹೇಳಿದರು.

ಶಾಸನಸಭಾಧಿವೇಶನ

ನಿನ್ನೆ ಮದರಾಸಿನ ಹಳೆಯ ಶಾಸನಸಭೆಯ ಅಧಿವೇಶನವು ಪ್ರಾರಂಭವಾಯಿತು- ೨೭ನೇ ತಾ|| ವರೆಗೆ ನಡೆಯುತ್ತದೆ. ಹೊಸ ವರ್ಷದ ಮೊದಲನೆ ೪ ತಿಂಗಳುಗಳ ವೆಚ್ಚವನ್ನು ಮಾತ್ರ ಈ ಅಧಿವೇಶನವು ಮಂಜೂರ್ಮಾಡಲಿದೆ.

ಮುಂದಿನ ವಾರ ನಿರ್ಧಾರ

ಮದ್ರಾಸ್ ಪ್ರಾಂತ್ಯದಲ್ಲಿ ಅಕ್ಕಿ ಪಡಿತರವನ್ನು ೬ ಔನ್ಸ್‌ಗಳಿಗಿಂತ ಹೆಚ್ಚಾಗಿ ಕೊಡುವ ವಿಷಯವನ್ನು ಮುಂದಿನ ವಾರ ನಿರ್ಧರಿಸಲಾಗುವುದೆಂದು ಅಲ್ಲಿಯ ಆಹಾರ ಮಂತ್ರಿ ಶ್ರೀ ರೋಜೆ ವಿಕ್ಟೋರಿಯಾರವರು ಹೇಳಿರುವರು.

ದೌರ್ಜನ್ಯಕಾರರ ನಿಧನ

ನೇಪಾಳದಲ್ಲಿ ದೌರ್ಜನ್ಯ ಕೃತ್ಯಗಳನ್ನು ಎಸಗುತ್ತಾ ಇದ್ದ ಪುಂಡಗಾರರ ನಾಯಕ ಕೆ. ಐ. ಸಿಂಗ್‌ರವರು ಹಿಮಾಲಯ ಪ್ರದೇಶದಲ್ಲಿ ಎಲ್ಲಿಯೋ ನಿಧನರಾಗಿರುವರೆಂದು ಹೇಳಲಾಗಿದೆ.

ನ್ಯೂ ಅಪೇರ

೧೧-೩-೫೨ ರಿಂದ ಅಮೋಘವಾದಂಥ ಶೋಧನಾಚಲರವರ ತಮಿಳು ಚಿತ್ರ—

ಮಾಯಾ ಕುದುರೆ

ಪಾತ್ರ:—ನಾಗೇಶ್ವರರಾವ್, ಅಂಜಲೀ.

ವುಡ್ ಲ್ಯಾಂಡ್ಸ್

೧೪—೩—೫೨ ರಿಂದ

ಅಮೋಘವಾದ ೫ನೇ ವಾರ

ದಿನವಹಿ 3 ಪ್ರದರ್ಶನಗಳು

ಅಲ್ ಬೇಲ

ಪಾತ್ರ:- ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ರಣಜಿತ್

೧೪-೩-೫೨ರಿಂದ ಅಮೋಘ ಪ್ರಾರಂಭ

*** ಸಾಖಿ ***

ಪಾತ್ರ:- ಮಧುಬಾಲ, ಪ್ರೇಂನಾಥ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ, ಜೈಹಿಂದ್ ಪ್ರೆಸ್, ಮೈಸೂರು

ರಾಜಕಮಲ್ ಟಾಕೀಸ್, ಮೈಸೂರು

ತಾರೀಖು 14—3—52 ರಿಂದ ವಿಜೃಂಭಣೆಯ ಪ್ರದರ್ಶನಾರಂಭ

ಪಾತಾಳಭೈರವಿಯನ್ನು ನಿರ್ಮಿಸಿ ಪ್ರಖ್ಯಾತರಾದ ಶ್ರೀ "ವಿಜಯಾ" ರವರ ಅತ್ಯಂತ ಕೋಲಾಹಲವನ್ನುಂಟುಮಾಡುತ್ತಿರುವ

*** ಮದುವೆ ಮಾಡಿ ನೋಡು ***

ಎಂಬ ಶ್ರೇಷ್ಠ ತೆಲುಗು ಚಿತ್ರ

ಇದರಲ್ಲಿ ಯಾವ ಕಥೆಯೂ ಆಕಾಶಕುಸುಮಕ್ಕೆ ಕೈಯೊಡ್ಡಿ ಹೊರದದ್ದಿಲ್ಲ. ದಿಸಿಲುಕುದುರೆಯು ಬೆನ್ನೇರಿ ನಡೆದುದಲ್ಲ. ಎಲ್ಲಾ ಕಥೆಯಲ್ಲಿಯೂ ಬರುವ ಕಲಾವಿದರು ನಮ್ಮ ನಿಮ್ಮಂಥಹ ಸಾಮಾನ್ಯ ಜನರು. ಅವರು ತಮ್ಮ ಬಾಳನ್ನು/ ಅವರವರ ಆಶೆ ಆಕಾಂಕ್ಷೆಗಳ ಫಲಪ್ರಾಪ್ತಿಗೆ ಹೇಗೆ ಎರವಾಗುವರು ಎಂಬುದೇ ಈ ಕಥೆಯ ಸಾರಾಂಶ

ತಾರಾಗಣ:—ಜಿ. ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ಜೋಗ್‌ರಾವ್.

ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿಗಳನ್ನು ಆರು ವಾರಗಳು ಮನ್ನಾಮಾಡಿದೆ

ಫೋನ್ ೫೭೪ (ರಿಂಗ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೮—೩—೧೯೫೨ನೇ ಮಂಗಳವಾರ [ಸಂಚಿಕೆ ೧೭೦

ಬಟ್ಟೆಯ ಹತೋಟಿಯಲ್ಲಿ ಸಡಿಲ

ಅತ್ಯುತ್ತಮ ಮತ್ತು ಅತಿ ನಯವಾದ ಬಟ್ಟೆಗಳಮೇಲಿನ ಹತೋಟಿಯನ್ನು ಭಾರತಸರ್ಕಾರ ತೆಗೆದುಹಾಕಿದೆ. ಗಿರಣಿಗಳು ತಮ್ಮಿಷ್ಟಬಂದವರಿಗೆ ಈ ದರ್ಜೆಯ ಬಟ್ಟೆಗಳನ್ನು ಮಾರಬಹುದು.

ಉತ್ತಮದರ್ಜೆಯ ಒರಟುಬಟ್ಟೆ, ಸಾಮಾನ್ಯದರ್ಜೆಯ ಬಟ್ಟೆಗಳನ್ನು ಮಾಮೂಲಿನಂತೆ ಪ್ರಾಂತ್ಯಗಳಿಗೆ ನಿಗದಿಮಾಡಲಾಗುತ್ತದೆ. ಹಾಗೆ ನಿಗದಿಮಾಡಿದ ಬಟ್ಟೆಗಳನ್ನು ತೆಗೆದುಕೊಳ್ಳದೆಹೋದರೆ ಆ ಗಿರಣಿಗಳು ತಮ್ಮಿಷ್ಟಬಂದವರಿಗೆ ಇನ್ನು ಮುಂದೆ ಮಾರಲವಕಾಶ ಕೊಡಲಾಗಿದೆ.

ಶಾಸನ ಸಭಾಧಿವೇಶನ ಮುಗಿದೊಡನೆಯೇ ಶ್ರೀ ರೆಡ್ಡಿಯವರ ರಾಜೀನಾಮೆ

ಸ್ವ- ಸು-] ಬೆಂ- ಮಾ ೧೭

- ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ಶ್ರೀ ಕೆ ಹನುಮಂತಯ್ಯನವರನ್ನು ನಾಯಕರನ್ನಾಗಿ ಚುನಾಯಿಸಿಕೊಳ್ಳಲು ಶ್ರೀ ನೆಹರೂ ಒಪ್ಪಿಗೆಯಿತ್ತು, ಶ್ರೀ ಕೆ. ಹನುಮಂತಯ್ಯನವರಿಗೆ ಪತ್ರ ಬರೆದಿರುವುದಾಗಿ ಗೊತ್ತಾಗಿದೆ.

೨೦ನೇ ತಾ|| ಪ್ರಾರಂಭವಾಗಲಿರುವ ಶಾಸನಸಭಾಧಿವೇಶನವು ಮುಗಿದೊಡನೆ ಶ್ರೀ ಕೆ ಸಿ ರೆಡ್ಡಿಯವರು ಮಂತ್ರಿಮಂಡಲ ರಾಜೀನಾಮೆಕೊಡುವುದೆಂದು ಗೊತ್ತಾಗಿದೆ-

ಸಚಿವರಿಗೆ ೧೫೦೦ ರೂ. ಸಂಬಳ

ಹೈದರಾಬಾದ್ ಸಂಸ್ಥಾನದ ಪ್ರಥಮ ಜನತಾ ಸರ್ಕಾರದ ಸಚಿವರುಗಳು ತಿಂಗಳು ಒಂದಕ್ಕೆ ೧೫೦೦ ರೂ ಸಂಬಳವನ್ನು ತೆಗೆದುಕೊಳ್ಳುವ ಸಂಭವವಿದೆ. ಇದಲ್ಲದೆ ಸಚಿವರುಗಳಿಗೆ ಮುಫತ್ತು ವಸತೀ ಗೃಹಗಳು ಮತ್ತು ಪ್ರಯಾಣಭತ್ಯದ ಅನುಕೂಲವಿರುವುದು. ಈ ಸಂಬಂಧದಲ್ಲಿ ನಿರ್ಧಾರ ಕೈಗೊಳ್ಳಲಾಗಿದೆಯೆಂದು ಗೊತ್ತಾಗಿದೆ.

ಕಂಟ್ರೋಲ್ ತೆಗೆದರೆ ತೊಂದರೆ ತಪ್ಪುತ್ತದೆ

ವಸ್ತುಗಳಮೇಲೆ ಹತೋಟಿಯನ್ನು ಹಾಕಿರುವವರ ದುಷ್ಪರಿಣಾಮ ವಿಷಯವಾಗಿ ಮದ್ರಾಸಿನ ವಾಣಿಜ್ಯ ಸಂಸ್ಥೆಯಲ್ಲಿ ಮಾತನಾಡುತ್ತಾ ಸಭಾಧ್ಯಕ್ಷ ಶ್ರೀ ಬಿ. ರಾಮಚಂದ್ರರೆಡ್ಡಿಯವರು ವಸ್ತುಗಳಮೇಲಿನ ಹತೋಟಿ ತೆಗೆದು ಅವುಗಳ ಸಾಗಾಣಿಕೆಗೆ ನಿರ್ಬಂಧವಿಲ್ಲದಿದ್ದರೆ ಜನತೆಗೆ ಉಂಟಾಗಿರುವ ತೊಂದರೆಯೆಲ್ಲಾ ತಪ್ಪುತ್ತದೆಯೆಂದು ಹೇಳಿರುವರು.

ಮಂತ್ರಿಗಳಿಗೆ ೩೮ ಮೋಟಾರುಗಳು

೧೯೪೭ ರಿಂದ ಇಲ್ಲಿಯವರೆಗೆ ಮಂತ್ರಿಗಳ ಉಪಯೋಗಕ್ಕಾಗಿ ೩,೭೦,೨೧೫ ರೂಪಾಯಿಗಳ ವೆಚ್ಚದಲ್ಲಿ ೩೮ ಮೋಟಾರುಕಾರುಗಳನ್ನು ಕೊಳ್ಳಲಾಯಿತೆಂದು ಮದ್ರಾಸಿನ ಅರ್ಥಸಚಿವ ಶ್ರೀ ಎ. ಬಿ. ಶೆಟ್ಟಿಯವರು ಮದ್ರಾಸ್ ಶಾಸನಸಭೆಯಲ್ಲಿ ಹೇಳಿರುವರು.

ನಾಲ್ಕು ಶಿಶುಗಳ ಜನನ

ಬ್ರಹ್ಮಾಂಡಪುರಕ್ಕೆ ೩೫ ಮೈಲಿದೂರದಲ್ಲಿರುವ ಕಪಿಲ ಎಂಬ ಗ್ರಾಮದಲ್ಲಿ ದೋಣಿ ಚಾಲಕನ ಪತ್ನಿಯೊಬ್ಬಳು ಇತ್ತೀಚೆಗೆ ನಾಲ್ಕು ಶಿಶುಗಳನ್ನು ಹಡೆದಳು ಈ ಪೈಕಿ ಎರಡು ಶಿಶುಗಳು ಹುಟ್ಟುವಾಗಲೇ ಮೃತಿಹೊಂದಿದುವು. ಇನ್ನೆರಡು ಬದುಕಿವೆ.

ಶ್ರೀ ಕೆ. ವಿ. ಸೋಮಜಿ

ಬೆಂಗಳೂರು ಮಾ ೧೭

ಶ್ರೀ. ಪೊ. ಕೋಡಿನ ೪೯ನೇ ನಿಬಂಧನೆಯಪ್ರಕಾರ ಬೊಂಬಾಯಿ ಶ್ರೀ ಕೆ ವಿ. ಸೋಮಜಿಯವರನ್ನು ರಾಜ್ಯದ ಮೊಕದ್ದಮೆಯಲ್ಲಿ ಸರಕಾರದ ಪರ ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಲಾಗಿದೆ. ಅವರಿಗೆ ೧೦ ಸಾವಿರ ರೂ. ಸಂಭಾವನೆಯೆಂದು ಹೇಳಲಾಗಿದೆ-

ಉಪಮಂತ್ರಿಗಳಿಗೆ ೭೫೦ ರೂ. ಸಂಬಳ ೨೦೦ ರೂ. ಅಲೋಯನ್ಸ್

ಮಧ್ಯ ಪ್ರದೇಶದ ಸಚಿವ ಮಂಡಲಿಯಲ್ಲಿರುವ ಉಪಮಂತ್ರಿಗಳಿಗೆ ೭೫೦ ರೂ ಸಂಬಳ ೨೦೦ ರೂ ಅಲೋಯನ್ಸ್ ಕೊಡುವಂತೆ ಅಲ್ಲಿಯ ಸರ್ಕಾರ ನಿರ್ಧರಿಸಿದೆ ಸರ್ಕಾರಿ ಮೋಟಾರನ್ನಾಗಲೀ ವಾಸಗೃಹವನ್ನಾಗಲೀ ಉಚಿತವಾಗಿ ಕೊಡುವುದಿಲ್ಲ.

ಆಕಾಶವಾಣಿ ಕೇಂದ್ರದ ಅಧಿಕಾರಿಗಳ ಸಮ್ಮೇಳನ

ಭಾರತದ ಎಲ್ಲಾ ಎ. ಐ. ಆರ್- ಕೇಂದ್ರಗಳ ಡೈರೆಕ್ಟರುಗಳ ಸಮ್ಮೇಳನವು ದೆಹಲಿಯಲ್ಲಿ ಪ್ರಾರಂಭವಾಯಿತು, ವಾರ್ತಾ ಶಾಖಾಸಚಿವ ಶ್ರೀ ಆರ್. ಆರ್. ದಿವಾಕರ್‌ರವರು ಸಮ್ಮೇಳನದಲ್ಲಿ ಭಾಷಣಮಾಡುತ್ತಾ, ಈಗಾಗಲೇ ಭಾರತದಲ್ಲಿ ಈ ಪ್ರಸಾರಕೇಂದ್ರಗಳು ವಿಶೇಷ ಪ್ರಗತಿಯನ್ನು ತೋರಿಸಿವೆ. ಇನ್ನೂ ಮಾಡಬೇಕಾದ ಕೆಲಸಗಳು ವಿಶೇಷವಿವೆ. ಎಲ್ಲಿಯೂ ವಿಶೇಷ ಶ್ರದ್ಧೆ, ಆಸಕ್ತಿಗಳಿಂದ ಕೆಲಸ ಮಾಡಬೇಕಾಗಿದೆ. ನಾವು ಜನತೆಯ ಸೇವಕರು ಅವರ ಟೀಕೆಗಳನ್ನು ಸ್ವಾಗತಿಸಿ ನಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಬೇಕೆಂದು ಹೇಳಿದರು.

ಕೊಡಗಿನಲ್ಲಿ ಪ್ರಥಮ ಮಂತ್ರಿಮಂಡಲ ಸ್ಥಾಪನೆ

ನಿನ್ನೆಯ ದಿನ ಕೊಡಗಿನ ಪ್ರಥಮ ಮಂತ್ರಿಮಂಡಲವು ಅಧಿಕಾರ ಸ್ವೀಕರಿಸಿತು- ಶ್ರೀ ಪೂನಾಚಾರವರು ಮುಖ್ಯಮಂತ್ರಿಗಳು ಕೊಡಗಿನ ಚೀಫ್ ಕಮಿಷನರ್ ಶ್ರೀ ದಯಾಸಿಂಗ್ ಬೇಡಿಯವರ ಮುಂದೆ ಪ್ರತಿಜ್ಞಾ ಸ್ವೀಕಾರ ನಡೆಯಿತು-

ಇದೇ ೨೫ನೇ ತಾ|| ಕೊಡಗಿನ ಪ್ರಥಮಶಾಸನಸಭೆಯ ಅಧಿವೇಶನವು ನಡೆಯುತ್ತದೆ-

ಪ್ರಶಂಸೆ

ಕಾಶ್ಮೀರದಲ್ಲಿ ಪ್ರಧಾನಿ ಷೇಕ್ ಅಬ್ದುಲ್ಲಾರವರ ಸರ್ಕಾರವು ಅತ್ಯಂತ ಉತ್ತಮ ಕಾರ್ಯವನ್ನು ನಡೆಸುತ್ತಲಿದೆ ವಿಶೇಷವಾಗಿ ಈ ಪ್ರಾಂತ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆದಿವೆ ಅಲ್ಲದೆ ಎಲ್ಲಿಯೂ ಆರ್ಥಿಕಾಭಿವೃದ್ಧಿ ಕಾಣಬರುತ್ತಲಿದೆಯೆಂದು ಕಾಶ್ಮೀರಕ್ಕೆ ಭೇಟಿಯಿತ್ತ ಟರ್ಕಿ ಪತ್ರಿಕಾಪ್ರಿಯೋಗದವರು ಷೇಕ್ ಅಬ್ದುಲ್ಲಾ ಸರ್ಕಾರವನ್ನು ಪ್ರಶಂಸಿಸಿರುವರು.

ಕೇಂದ್ರದಲ್ಲಿ ನೂತನ ಸರ್ಕಾರ

ಕೇಂದ್ರದ ಪಾರ್ಲಿಮೆಂಟ್ ಮತ್ತು ಕೌನ್ಸಿಲ್ ಆಫ್ ಸ್ಟೇಟಿನ ಕಾಂಗ್ರೆಸ್ ಪಕ್ಷದ ಸದಸ್ಯರು ಮೇ ೧೧ನೇ ತಾ|| ಸಭೆ ಸೇರಿ ತಮ್ಮ ನಾಯಕರ ಚುನಾವಣೆಯನ್ನು ನಡೆಸುವರೆಂದು ಹೇಳಲಾಗಿದೆ- ಆದಾದನಂತರ ಪಂ|| ನೆಹರೂರವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಸಲ್ಲಿಸಿ, ಪುನಃ ಹೊಸ ಮಂತ್ರಿ ಮಂಡಲವನ್ನು ರಚಿಸಲು ಅಧ್ಯಕ್ಷರಿಂದ ಆಹ್ವಾನ ಸ್ವೀಕರಿಸುವರು.

ಭಾರತ ಉಪರಾಷ್ಟ್ರಾಧ್ಯಕ್ಷರ ಚುನಾವಣೆಯು ಮೇ ೧೨ನೇ ತಾ|| ನಡೆಯುವುದೆಂದು ಹೇಳಲಾಗಿದೆ.

ಮೌಲಾನಾ ಅಬ್ದುಲ್‌ಕಲಾಂಅಜಾದ್, ಸರ್ದಾರ್ ಬಲದೇವಸಿಂಗ್, ಶ್ರೀಗಳಾದ ಜಗಜೀವನರಾಂ, ಎನ್ ವಿ ಗಾಡ್ಗಿಲ್, ಎನ್ ಗೋಪಾಲಸ್ವಾಮಿಯ್ಯಂಗಾರ್, ಚಿಂತಾಮಣಿ ದೇಶಮುಖ್ ಮತ್ತು ಕೈಲಾಸ ನಾಥಕಟ್ಜು ಮುಂದೆಯೂ ಮಂತ್ರಿಗಳಾಗಿರುವರು. ರಾಜಕುಮಾರಿ ಅಮೃತಕೌರ್, ಶ್ರೀ ಹರೇಕೃಷ್ಣ ಮೆಹತಾಬ್ ಮತ್ತು ಶ್ರೀ ಕೆ ಎಂ ಮುನ್ಷಿಯವರು ಗೌರ್ನರುಗಳಾಗಿ ನೇಮಕವಾಗುವರೆಂದು ತಿಳಿಯಬರುತ್ತದೆ.

ಬಣ್ಣದ ಕಾರ್ಖಾನೆ ಸ್ಥಾಪನೆ

ಭಾರತದಲ್ಲೆಲ್ಲಾ ಅತ್ಯಂತ ಹಿರಿಯದಾದ ಬಣ್ಣದ ಕಾರ್ಖಾನೆಯ ಪ್ರಾರಂಭೋತ್ಸವವನ್ನು ಪ್ರಧಾನಿ ನೆಹರೂರವರು ಬೊಂಬಾಯಿನಬಳಿ ನೆರವೇರಿಸಿದರು.

ಹೊಸ ಮಂತ್ರಿಮಂಡಲ

ದೆಹಲಿ ಪ್ರಾಂತ್ಯಕ್ಕೆ ೬ ಮಂತ್ರಿಗಳ ಮಂತ್ರಿಮಂಡಲವು ನಿನ್ನೆಯದಿನ ಅಧಿಕಾರ ಸ್ವೀಕರಿಸಿತು ಶ್ರೀ ಬ್ರಹ್ಮಪ್ರಕಾಶರವರು ಮುಖ್ಯಮಂತ್ರಿಗಳು. ಈ ಪ್ರಾಂತ್ಯದಲ್ಲಿ ಇದೇ ಪ್ರಥಮ ಮಂತ್ರಿಮಂಡಲ, ಅಧಿಕಾರ ಸ್ವೀಕಾರಕ್ಕೆ ಮುಂಚೆ ಸಚಿವರು ಮಹಾತ್ಮ ಗಾಂಧಿಯವರ ಸಮಾಧಿಗೆ ಭೇಟಿಯಿತ್ತು ಪುಷ್ಪಗಳನ್ನರ್ಪಿಸಿ ಮೆರವಣಿಗೆಯಿಂದ ಬಂದು ಪ್ರಮಾಣವಚನ ಸ್ವೀಕರಿಸಿದರು. ಡಾ|| ಸುಶೀಲಾನಾಯರವರೂ ಒಬ್ಬ ಮಂತ್ರಿಗಳು.

† ಕನ್ನೇಗೌಡನಕೊಪ್ಪಲಿನಿಂದ ಸೈಟಗಾಗಿ ಅರ್ಜಿ ಹಾಕಿರುವ ನಿವಾಸಿಗಳು ೧೪-೩-೫೨ ರಲ್ಲಿ ಒಂದು ಸಭೆ ನಡೆಸಿ ಸಂಸ್ಕೃತೀಪುರಂನಲ್ಲಿ ಸೈಟುಗಳ ವಿಲೇವಾರಿ ಮಾಡುವಾಗ್ಗೆ ಕನ್ನೇಗೌಡನಕೊಪ್ಪಲಿನವರ ಅರ್ಜಿಗಳನ್ನು ಮೊದಲು ಪರಿಶೀಲಿಸಿ ಅವರಿಗೆ ಸೈಟುಗಳನ್ನು ಕೊಟ್ಟು ಅದರ ಬೆಲೆಯನ್ನು ಮಾಹೆಯಾನಾ ಕಂತಿನಲ್ಲಿ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿರುವರು.

‡ ಜಮ್ಮು ಮತ್ತು ಕಾಶ್ಮೀರ ವಿಮಾನ ಕಾರ್ಯಾಚರಣೆಯಲ್ಲಿ ಅತ್ಯಂತ ಖ್ಯಾತಿಪಡೆದು 'ಮಹಾವೀರಚಕ್ರ'ವನ್ನು ಪಡೆದ ೩೬ ವರ್ಷದ ಏರ್ ಕಮೋಡರ್ ಮೆಹರ್‌ಸಿಂಗ್‌ರವರು ಮೊನ್ನೆ ದೆಹಲಿ ಬಳಿ ವಿಮಾನಪಘಾತದಲ್ಲಿ ಮಡಿದವರಲ್ಲೊಬ್ಬರು-

* ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಶ್ರೀ ಜಿ. ವೆಂಕಟಕೃಷ್ಣರಾಯರನ್ನು ಮಂಡ್ಯ ಜಿಲ್ಲಾಧಿಕಾರಿಗಳಾಗಿ ನೇಮಿಸಲಾಗಿದೆ

ರಾಜಪ್ರಮುಖರುಗಳಿಗೆ ಸತ್ಕಾರ

ಸಂಸ್ಥಾನ ಸಚಿವ ಕಚೇರಿಯಲ್ಲಿ ಕೇಂದ್ರದ ಸಂಸ್ಥಾನ ಸಚಿವರಾದ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆದ ರಾಜಪ್ರಮುಖರ ಸಭೆಯಲ್ಲಿ ಸಂಸ್ಥಾನಗಳ ರಾಜರುಗಳಿಗೆ ಸಂಬಂಧಿಸಿದ ಅನೇಕ ವಿಷಯಗಳನ್ನು ಚರ್ಚಿಸಲಾಯಿತು. ಈ ಸಮ್ಮೇಳನದಲ್ಲಿ ಮೈಸೂರು, ಸೌರಾಷ್ಟ್ರ, ಮಧ್ಯಭಾರತ, ರಾಜಾಸ್ಥಾನ ಮತ್ತು ಪೆಪ್ಸು ಸಂಸ್ಥಾನಗಳ ರಾಜಪ್ರಮುಖರುಗಳು ಭಾಗವಹಿಸಿದ್ದರು. ರಾಜರುಗಳ ಖಾಸಗಿ ಆಸ್ತಿಪಾಸ್ತಿಗಳ ಆಡಳಿತ ನಿರ್ವಹಣೆ, ಆಸ್ತಿಪಾಸ್ತಿಗಳ ವಿಲೇವಾರಿ ವಿಷಯ ಮುಂತಾದ ಅಂಶಗಳನ್ನು ಚರ್ಚಿಸಲಾಯಿತು.

ಅನಂತರ ಸಂಸ್ಥಾನ ಸಚಿವ ಶಾಖೆಯವರು ರಾಜಪ್ರಮುಖರುಗಳಿಗೆ ಒಂದು ಔತಣಕೂಟವನ್ನೇರ್ಪಡಿಸಿದ್ದರು.

ಕನ್ನಡ ಟೈಪ್‌ರೈಟರ್

ಬೆಂಗಳೂರು ಮಾ. ೧೭

ಈಗ್ಗೆ ಕೆಲ ತಿಂಗಳುಗಳಿಂದ ತೀವ್ರ ತರ್ಕಕ್ಕೊಳಗಾಗಿರುವ 'ಕನ್ನಡ ಟೈಪ್‌ರೈಟರ್' ನಿರ್ಮಾಣದ ಬಗ್ಗೆ ಮೈಸೂರು ಸರ್ಕಾರ 'ಅಂತಿಮ' ನಿರ್ಧಾರ ಕೈಗೊಂಡಿದೆಯೆಂದೂ, ಸರ್ಕಾರದಿಂದ ರಚಿತವಾದ ತಜ್ಞ ಸಮಿತಿಯ ಸಲಹೆಗಳನ್ನಂಗೀಕರಿಸಿ, ಸದರಿ ಸಮಿತಿಯು ಸೂಚಿಸಿರುವ 'ಸುಧಾರಣೆಯಾದ ಲಿಪಿ' ಯ ಟೈಪ್‌ರೈಟರುಗಳನ್ನು ತಯಾರಿಸಲು ರೆಮಿಂಗ್ಟನ್ ಕಂಪೆನಿಗೆ ಆರ್ಡರ್' ಕೊಡುವ ತೀರ್ಮಾನವಾಡಿದೆಯೆಂದೂ ಖಚಿತವಾಗಿ ಗೊತ್ತಾಗಿದೆ.

ಕಾಂಗ್ರೆಸ್ ಪಕ್ಷದ ಸದಸ್ಯರು ಭಾಗವಹಿಸುವುದಿಲ್ಲ

ಬೆಂಗಳೂರು ಕಾರ್ಪೊರೇಷನ್ ಮೇಯರ್' ಏರ್ಪಡಿಸುವ ಸಮಾರಂಭಗಳಲ್ಲಿ ಕಾಂಗ್ರೆಸ್' ಪಕ್ಷದ ಸದಸ್ಯರು ಭಾಗವಹಿಸಬಾರದೆಂದು ಕಾರ್ಪೊರೇಷನ್ ಕಾಂಗ್ರೆಸ್' ಪಕ್ಷ ನಿರ್ಧರಿಸಿದೆಯೆಂದು ತಿಳಿದುಬಂದಿದೆ.

ಡಿ. ಐ. ಜಿ.

ಬೆಂಗಳೂರು ಸಂಸ್ಥಾನದ ಸಶಸ್ತ್ರ ಪೋಲೀಸ್' ದಳದ ಸೂಪರಿಂಟೆಂಡೆಂಟ್' ಶ್ರೀ ಸಿ. ಚಾಂಡಿಯವರನ್ನು ಡಿ. ಐ. ಜಿ.ಯಾಗಿ ನೇಮಿಸಲಾಗಿದೆ

ಸಿ. ಐ. ಡಿ. ಮುಖ್ಯ ಅಧಿಕಾರಿಗಳ ಸಮ್ಮೇಳನ

ನಿನ್ನೆ ನವದೆಹಲಿಯಲ್ಲಿ ಪ್ರಾಂತೀಯ ಸಿ ಐ ಡಿ. ಮುಖ್ಯಾಧಿಕಾರಿಗಳ ಸಮ್ಮೇಳನ ಪ್ರಾರಂಭವಾಯಿತು. ಗೃಹ ಸಚಿವ ಡಾ॥ ಕೈಲಾಸನಾಥ್ ಕಟ್ಜು ಪ್ರಾರಂಭೋತ್ಸವ ನೆರವೇರಿಸಿದರು. ಸಮ್ಮೇಳನ ಎರಡು ದಿನ ನಡೆಯುವುದು.

ಎನ್. ಜಿ. ಓ.ಗಳ ಸ್ಥಿತಿ ಸುಧಾರಣೆ

ಬೆಂಗಳೂರು. ಮಾ. ೧೭

(೧) ಮೈಸೂರು ಸಂಸ್ಥಾನದಲ್ಲಿರುವ ಕೇಂದ್ರ ಸರ್ಕಾರದ ನೌಕರರಿಗೆ ಕೊಡುತ್ತಿರುವ ಸಂಬಳ ಮತ್ತು ತುಟ್ಟಿಭತ್ಯ ಹಾಗೂ ಇತರ ಭತ್ಯಗಳ ಪ್ರಮಾಣವನ್ನು ಮೈಸೂರಿನ ನಾನ್‌ಗೆಜೆಟೆಡ್ ನೌಕರರಿಗೂ ಕೊಡಬೇಕು.

(೨) ಹೈದರಾಬಾದ್ ಸರ್ಕಾರದವರು ಏರ್ಪಡಿಸಿರುವ ರೀತಿಯಲ್ಲಿ ಎಲ್ಲಾ ನಾನ್‌ಗೆಜೆಟೆಡ್' ನೌಕರರಿಗೂ ಅವರ ಸಂಸಾರಗಳಿಗೂ ಉಚಿತ ವೈದ್ಯಕೀಯ ಉಪಚಾರದ ಸೌಲಭ್ಯಗಳನ್ನು ಮೈಸೂರಿನಲ್ಲೂ ನೀಡಬೇಕು.

(೩) ನಾನ್‌ಗೆಜೆಟೆಡ್' ನೌಕರರ ಮಕ್ಕಳಿಗೆ ಉಚಿತ ಪ್ರಾಥಶಿಕ್ಷಣ ಕೊಡಬೇಕು.

—ಎಂಬ ಮೂರು ನಿರ್ಣಯಗಳನ್ನು ಭಾನುವಾರ ಬೆಳಗ್ಗೆ ಶ್ರೀ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಸೇರಿದ ಮೈಸೂರು ಸರ್ಕಾರಿ ನಾನ್‌ಗೆಜೆಟೆಡ್' ನೌಕರರ ಸಂಘದ ಸರ್ವ ಸದಸ್ಯರ ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ಸಮಾಲೋಚನೆ ನಿಷ್ಫಲ

ಕಳೆದ ಕೆಲವು ದಿವಸಗಳಿಂದ ವಿಶ್ವಬ್ಯಾಂಕ' ಪ್ರತಿನಿಧಿಗಳಿಗೂ ಪರ್ಷಿಯಾ ಸರ್ಕಾರಕ್ಕೂ ನಡೆಯುತ್ತಲಿದ್ದ ಎಣ್ಣೆ ವಿವಾದಕ್ಕೆ ಸಂಬಂಧಪಟ್ಟ ಸಮಾಲೋಚನೆಗಳು ನಿಷ್ಫಲವಾಗಿ, ವಿಶ್ವಬ್ಯಾಂಕ' ಪ್ರತಿನಿಧಿಗಳು ತಮ್ಮ ರಾಷ್ಟ್ರಕ್ಕೆ ಹಿಂತಿರುಗಲಿರುವರೆಂದು ಹೇಳಲಾಗಿದೆ.

ವಿಮಾನ ಅಪಘಾತ

ದೆಹಲಿಗೆ ೧೨ ಮೈಲಿ ದೂರದಲ್ಲಿ ಜಗತ್‌ಪುರವೆಂಬಲ್ಲಿ ಮೊನ್ನೆ ಸಂಜೆ ಒಂದು ವಿಮಾನವು ಅಪಘಾತಕ್ಕೀಡಾಗಿ ಸುಟ್ಟು ಹೋದ ಎರಡು ಶವಗಳು ದೊರೆತಿವೆ ವಿಮಾನವು ಪೂರ್ಣವಾಗಿ ಸುಟ್ಟುಹೋಗಿದೆ. ಕಾಶ್ಮೀರದಿಂದ ಭಾರತಕ್ಕೆ ಬರುತ್ತಲಿದ್ದ ಖಾಸಗಿ ವಿಮಾನವೆಂದು ಗೊತ್ತಾಗಿದೆ.

ನಾಯಕರ ಚುನಾವಣೆ

ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಮಾರ್ಚಿ ೨೯ ರಂದು ಸೇರಿ ಪಕ್ಷದ ನಾಯಕರನ್ನು ಚುನಾಯಿಸುರು, ಎಂದು ಪ್ರಕಟಿಸಲಾಗಿದೆ.

ಡಾಕ್ಟರ್ ಆಫ್‌ಲಾಸ್

ಅಲಹಾಬಾದ್ ವಿಶ್ವವಿದ್ಯಾನಿಲಯವು ನಿನ್ನೆ ಶ್ರೀಮತಿ ರೂಸ್ ವೆಲ್ಟ್‌ರವರಿಗೆ 'ಡಾಕ್ಟರ್ ಆಫ್ ಲಾಸ್' ಎಂಬ ಗೌರವ ಪ್ರಶಸ್ತಿಯನ್ನು ಕೊಟ್ಟಿದೆ.

ಪ್ರಕಟಣೆ

ಮೈಸೂರು ಮೆಡಿಕಲ್ ಕಾಲೇಜು ಕ್ಯಾಂಟೀನಿನಲ್ಲಿ ಶ್ರೀ ಗೋಪಾಲರಾವ್ ರೊಡನೆ ಕೆಲಸ ಮಾಡುತ್ತಲಿದ್ದ ಎನ್. ವೆಂಕಟರಾವ್ ಈ ಮೂಲಕ ಸಮಸ್ತ ಜನರಿಗೂ ತಿಳಿಸುವುದೇನೆಂದರೆ —

೧೯೪೯, ೧೯೫೦ ದಸರಾ ವಸ್ತುಪ್ರದರ್ಶನದಲ್ಲಿ ಕ್ಯಾಂಟೀನ್ ನಡೆಯಲು ನಾನೂ ಶ್ರೀ ಗೋಪಾಲರಾವ್ ಇಬ್ಬರೂ ಸೇರಿ ನಿಷ್ಕರ್ಷೆ ಮಾಡಿಕೊಂಡು ಇದಕ್ಕಾಗಿ ನಾನು ೫೦೦ ರೂಪಾಯಿಗಳನ್ನು ಕೊಟ್ಟು, ಲಾಭದಲ್ಲಿ ನನಗೆ ೪ ಆಣೆ ಭಾಗ ಸಲ್ಲಬೇಕೆಂದು ತೀರ್ಮಾನ ಮಾಡಿಕೊಂಡೆವು ಈ ಎರಡು ವರ್ಷಗಳಲ್ಲಿ ಸುಮಾರು ೪೦೦೦ ರೂಪಾಯಿ ಲಾಭ ಬಂದಿರುತ್ತದೆ ನನ್ನ ಭಾಗದ ಹಣದಲ್ಲಿ ೨೫ ರೂ. ವಿನಹ ಉಳಿಕೆ ಹಣ ಗೋಪಾಲರಾವ್ ಇನ್ನೂ ನನಗೆ ಕೊಟ್ಟಿಲ್ಲ ನನಗೆ ಸಲ್ಲಬೇಕಾಗಿರುವ ಪೂರ್ತಿ ಹಣವನ್ನು ಧರ್ಮಸ್ಥಳದಲ್ಲಿ ದೇವರ ಸೇವೆಗಾಗಿ ಶ್ರೀ ಗೋಪಾಲರಾವ್ ಸಲ್ಲಿಸಬೇಕೆಂದು ಅವರಿಗೆ ಈಗಾಗಲೇ ತಿಳಿಸಿರುತ್ತೇನೆ ಇದೇ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ಈ ಮೂಲಕ ತಿಳಿಯಪಡಿಸಿರುತ್ತೇನೆ.

ಎನ್. ವೆಂಕಟರಾವ್,
ತಗಡೂರು ಮಠದ ಬೀದಿ, ಮೈಸೂರು

ನ್ಯೂ ಅಪೇರ

೧೧-೩-೫೨ ರಿಂದ ಅಮೋಘ ಪ್ರಾರಂಭ ಶೋಭನಾಚಲರವರ ತಮಿಳು ಚಿತ್ರ—

ಮಾಯಾ ಕುದುರೆ

ಪಾತ್ರ:—ನಾಗೇಶ್ವರರಾವ್, ಅಂಜಲೀ

ವುಡ್ ಲ್ಯಾಂಡ್ಸ್

೧೪—೩—೫೨ ರಿಂದ
ಅಮೋಘವಾದ ೫ನೇ ವಾರ
ದಿನವೂ 3 ಪ್ರದರ್ಶನಗಳು

ಅಲ್‌ಬೇಲ

ಪಾತ್ರ:– ಗೀತಾಬಾಲಿ, ಭಗವಾನ್. ಬಧರೀಪ್ರಸಾದ್, ಸುಂದರ್.

ರಣಜಿತ್

೧೪-೩-೫೨ರಿಂದ ಅಮೋಘ ಪ್ರಾರಂಭ

* ಸಾಖಿ *

ಪಾತ್ರ:– ಮಧುಬಾಲ, ಪ್ರೇಂನಾಥ್.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಮತ್ತು ಚಲನಚಿತ್ರಗಳಲ್ಲಿ ಅಭಿನಯಿಸಲು ಅವಕಾಶಮಾಡಿ ಕೊಡಲಾಗುವುದು. ಆಸಕ್ತಿವುಳ್ಳವರು ಇಂದೇ ವಿಚಾರಿಸಿರಿ.

ವ್ಯವಸ್ಥಾಪಕ.

ಪ್ರಕಾಶಕರು :—ಜಿ.ಎಲ್'. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು.— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ರಾಜಕಮಲ್ ಟಾಕೀಸ್, ಮೈಸೂರು

ತಾರೀಖು 14—3—52 ರಿಂದ ವಿಜೃಂಭಣೆಯ ಪ್ರದರ್ಶನಾರಂಭ

ಪಾತಾಳಭೈರವಿಯನ್ನು ನಿರ್ಮಿಸಿ ಪ್ರಖ್ಯಾತರಾದ ಶ್ರೀ " ವಿಜಯಾ " ರವರ ಅತ್ಯಂತ ಕೋಲಾಹಲವನ್ನು ಉಂಟುಮಾಡುತ್ತಿರುವ

* ಮದುವೆ ಮಾಡಿ ನೋಡು *

ಎಂಬ ಶ್ರೇಷ್ಠ ತೆಲುಗು ಚಿತ್ರ

ತಾರಾಗಣ:—ಜಿ. ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ಜೋಗ್‌ರಾವ್.

ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟ್‌ಗಳನ್ನು ಆರು ವಾರಗಳು ಮನ್ನಾ ಮಾಡಿದೆ

ಫೋನ್ ೫೭೪ (ಲೈನ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೯—೩—೧೯೫೨ನೇ ಬುಧವಾರ [ಸಂಚಿಕೆ ೧೭೧

ಬೃಹತ್ ಬೆಂಗಳೂರು ಯೋಜನೆ ಪರಿಶೀಲಿಸಲು ಸಮಿತಿ

ಮಾರ್ಚಿ ೨೮ ರಲ್ಲಿ ಮೈಸೂರು ಶಾಸನಸಭೆಯ ಕಾಂಗ್ರೆಸ್‌ಪಕ್ಷದ ನಾಯಕರ ಚುನಾವಣೆ

ಶ್ರೀ ಕೆ. ಸಿ. ರೆಡ್ಡಿಯವರು ಕೇಂದ್ರಕ್ಕೆ

ಬೆಂಗಳೂರು ಮಾ ೧೮

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರಿಗೆ ಕೇಂದ್ರಸರ್ಕಾರದಲ್ಲಿ ಉನ್ನತ ಹುದ್ದೆಯೊಂದನ್ನು ಕೊಡಲಾಗುವುದೆಂದು ಅದರ ಬಗ್ಗೆ ಅವರ ಅಭಿಪ್ರಾಯವನ್ನು ಕೇಳಿರುವ ಪತ್ರವು ಅವರಿಗೆ ಬಂದಿರುವುದಾಗಿ ಗೊತ್ತಾಗಿದೆ.

ಡಿ. ಎಸ್. ಪಿ. ಯಾಗಿ ಬಡ್ತಿ

ಬೆಂಗಳೂರು ಮಾ ೧೮

ಚನ್ನಪಟ್ಟಣದ ಎ. ಎಸ್'. ಪಿ. ಗಳಾದ ಶ್ರೀ ಎಂ. ಮಹದೇವಪ್ಪನವರಿಗೆ ಡಿ.ಎಸ್'. ಪಿ. ಯಾಗಿ ಬಡ್ತಿ ಕೊಟ್ಟು ರೈಲ್ವೆ ಇಲಾಖೆಗೆ ವರ್ಗಾಯಿಸಲಾಗಿದೆ

ಎ. ಎಸ್. ಪಿ. ಯಾಗಿ ಬಡ್ತಿ

ಬೆಂಗಳೂರು ಮಾ ೧೮

ಸ್ಪೆಷಲ್' ಬ್ರ್ಯಾಂಚಿನ ಇನ್‌ಸ್ಪೆಕ್ಟರ್' ಶ್ರೀ ಕೆ. ತಿಮ್ಮೇಗೌಡರಿಗೆ ಎ. ಎಸ್'. ಪಿ. ಯಾಗಿ ಬಡ್ತಿ ಕೊಟ್ಟು ಚನ್ನಪಟ್ಟಣಕ್ಕೆ ವರ್ಗಾಯಿಸಲಾಗಿದೆ.

ಕಾಲಾವಧಿ ಹೆಚ್ಚಿಸಲಾಗಿದೆ

ಮೈಸೂರು ಮಾ ೧೮

ತಾ॥ ೧೬-೩-೫೨ನೇ ದಿನ ಭಾರತ ಸೇವಾದಳದ ಕಾರ್ಯಕಾರೀ ಸಮಿತಿಯು ಸೇರಿ ಬೇಸಿಗೆ ಶಿಬಿರಗಳ ವ್ಯವಸ್ಥೆಯ ಬಗ್ಗೆ ಕೆಲವು ನಿರ್ಧಾರಗಳನ್ನು ತೆಗೆದುಕೊಂಡಿದೆ.

ಭಾರತ ಸೇವಾದಳದ ಸದಸ್ಯರಾಗಲು ಅವಧಿಯು ಮಾರ್ಚಿ ತಿಂಗಳು ಅಂತ್ಯದವರೆವಿಗೂ ಹೆಚ್ಚಿಸಲಾಗಿದೆ. ಸದಸ್ಯತ್ವದ ಫಾರಂ ಅಪೇಕ್ಷಿಸುವವರು, ಮೈಸೂರು ಮೋಟಾರ್' ಕೆಲಸಗಾರರ ಸಂಘದ ಕಛೇರಿಯಲ್ಲಿ ಪಡೆಯಬಹುದು.

ಮಹಿಳಾ ಮಾಧ್ಯಮಿಕ ಸೇವಾದಳ ಶಿಬಿರವು

ಎಲ್ಲ ಜಿಲ್ಲೆಗಳಿಂದ ಚುನಾಯಿತರಾದ ೬೦ ಮಂದಿ ಮಹಿಳೆಯರಿಗೆ ಏರ್ಪಡುವ ಭಾರತ ಸೇವಾದಳದ ಮಾಧ್ಯಮ ಶಿಕ್ಷಣ ಶಿಬಿರವು ಮೈಸೂರಿನಲ್ಲಿಯೇ ಜರುಗಿಸಲು ನಿರ್ಧರಿಸಲಾಗಿದೆ.

‡ ಅಮೇರಿಕದ ವಿಜ್ಞಾನ ಅಧಿಕಾರಿಗಳು, 'ರಾಕೆಟ್ ಫ್ಯೂಯಲ್' ಬೆಳವಣಿಗೆಯನ್ನು ಸಧ್ಯಕ್ಕೆ ನಿಲ್ಲಿಸಿದ್ದಾರೆ ಕಾರಣ ಅದಕ್ಕೆ ಬೇಕಾಗುವ ಹೈಡ್ರೋಜನನ್ನು ಈಗ ಕ್ಷಯ ರೋಗನಿವಾರಣೆಯ ಔಷಧಿ ತಯಾರಿಕೆಗೆ ಉಪಯೋಗಿಸಲಾಗುತ್ತಿದೆ.

ಗರಗಸಕ್ಕೆ ಸಿಕ್ಕಿ ಮರಣ

ಮೈಸೂರು ಮಾ ೧೮

ಮಾನಂದವಾಡಿ ರಸ್ತೆಯಲ್ಲಿರುವ ಸದಾಶಿವ ಸಾಮಿಲ್ಲಿನಲ್ಲಿ ಗೋವಿಂದಯ್ಯ ಎಂಬಾತನು ಈ ಬೆಳಿಗ್ಗೆ ವಿದ್ಯುಚ್ಛಕ್ತಿಯ ಪಟ್ಟಿಗೆ ಸಿಕ್ಕಿ ಗರಗಸದ ಬಳಿಗೆ ಒಯ್ಯಲ್ಪಟ್ಟು ಅವನ ತಲೆಯನ್ನು ಗರಗಸವು ಹೋಳು ಮಾಡಿತೆಂದೂ ವರದಿಯಾಗಿದೆ.

ನಿಧನ

ರಾಜಧಾನಿಯ ಸುಪ್ರಸಿದ್ಧ ಮರಮುಟ್ಟುಗಳ ವ್ಯಾಪಾರಿ ಶ್ರೀ ವಿ ಎಂ ಕಾಳಪ್ಪನವರು ನಿನ್ನೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಉಪವಾಸ ಮುಷ್ಕರ

೬ ವರ್ಷಗಳಿಂದ ಬಸವನಗುಡಿ ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದು, ಈಗ ಕೆಲಸದಿಂದ ತೆಗೆಯಲ್ಪಟ್ಟ ಶ್ರೀ ಎಂ ಗೌರಿಶಂಕರ್‌ರವರು ಈ ಬೆಳಗಿನಿಂದ ಶಾಲೆಯ ಬಳಿ ಉಪವಾಸ ಮುಷ್ಕರ ಪ್ರಾರಂಭಿಸಿರುವರು.

ನಾಯಕರ ಚುನಾವಣೆ

ಬೆಂಗಳೂರು ಮಾ ೧೮

ಇದೇ ಮಾಹೆ ೨೮ನೇ ತಾ॥ ಬೆಳಗ್ಗೆ ೮-೩೦ ಗಂಟೆಗೆ ಹೊಸ ಶಾಸನ ಸಭೆಯ ಕಾಂಗ್ರೆಸ್ ಸದಸ್ಯರು ಬೆಂಗಳೂರು ಕುಮಾರಪಾರ್ಕಿನಲ್ಲಿ ಸಭೆ ಸೇರಿ ನಾಯಕರ ಚುನಾವಣೆ ನಡೆಸುವರು.

ಎಣ್ಣೆ ಗಾಣದ 'ಮಾದರಿ'ಗೆ ೫,೦೦೦ ರೂ.

ಗ್ರಾಮದ ಅತ್ಯುತ್ತಮ ಎಣ್ಣೆ ಗಾಣದ ಮಾದರಿಗೆ ೫,೦೦೦ ರೂ ಪಾರಿತೋಷಕವನ್ನು ಕೊಡುವುದಾಗಿ ಭಾರತದ ಕೇಂದ್ರ ಎಣ್ಣೆಬೀಜಗಳ ಸಮಿತಿ ತಿಳಿಸಿದೆ. ಈ ಮಾದರಿ ಇಂಡಿಯಾ ಸರ್ಕಾರಕ್ಕೆ ಆಗಸ್ಟ್ ೩೧ನೇ ತಾ॥ ಸೋಳಗಾಗಿ ತಲುಪಬೇಕು.

ವಿಮಾನದಲ್ಲಿ ಆನೆ ಪ್ರಯಾಣ

ಪಾನ್ ಅಮೆರಿಕನ್' ಕ್ಲಿಪರ್' ವಿಮಾನದಲ್ಲಿ ೧೨೦೦ ಪೌಂಡ್' ಭಾರದ ರಾಜ ಎಂಬ ಆನೆ ಬೋಸ್ಟನ್' ನಗರಕ್ಕೆ ಪ್ರಯಾಣ ಬೆಳಿಸಿತು. ಇದು ಪೂರ್ವಬಂಗಾಳದ ಗೌರ್ನಿಂದ ಬೋಸ್ಟನ್‌ಪಾರ್ಕ್ ಕಮಿಷನ್‌ಗೆ ಉಚಿತವಾಗಿ ಕೊಡಲ್ಪಟ್ಟಿದೆ.

ಅಟ್ಲಾಂಟಿಕ್'ಸಾಗರ ದಾಟುತ್ತಿರುವ ಆನೆಗಳಲ್ಲಿ ಇದು ಮೊದಲನೆಯದು.

ಕೂಡಲೇ ಬಿಡುಗಡೆ ಮಾಡಬೇಕು

ಬೊಂಬಾಯಿನ 'ಬ್ಲಿಟ್ಸ್' ಪತ್ರಿಕೆಯ ಉಪಸಂಪಾದಕರನ್ನು ದಸ್ತಗಿರಿಮಾಡಿ ಲಕ್ನೋವಿಗೆ ಕರೆದುಕೊಂಡು ಹೋಗಿರುವುದು ನ್ಯಾಯಬಾಹಿರ ಅವರನ್ನು ಕೂಡಲೆ ಬಿಡುಗಡೆಮಾಡಬೇಕೆಂದು ಭಾರತದ ಶ್ರೇಷ್ಠ ನ್ಯಾಯಾಲಯವು ತೀರ್ಮಾನಿಸಿತ್ತಿದೆ.

ಉತ್ತರಪ್ರದೇಶದ ಶಾಸನಸಭಾಧ್ಯಕ್ಷರ ಆಜ್ಞೆಪ್ರಕಾರ ಅವರ ದಸ್ತಗಿರಿಯಾಗಿತ್ತು. ದಸ್ತಗಿರಿಯಾದ ೨೪ ಗಂಟೆಗಳೊಳಗಾಗಿ ಮ್ಯಾಜಿಸ್ಟ್ರೇಟರಮುಂದೆ ಹಾಜರ್ಮಾಡಬೇಕೆಂದು ಹಾಗೆ ಮಾಡದಿರುವುದರಿಂದ ಅವರನ್ನು ಬಿಡುಗಡೆಮಾಡಬೇಕೆಂದು ತಿಳಿಸಿದರು. ಕೂಡಲೆ ಅವರ ಬಿಡುಗಡೆಯಾಯಿತು.

ಮಾಜಿ ಮಂತ್ರಿಗಳ ದಸ್ತಗಿರಿ

ಈಜಿಪ್ಟ್ ಸರ್ಕಾರವು ಹಿಂದಿನ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದ ಇಬ್ಬರು ಮಂತ್ರಿಗಳನ್ನು ಗೃಹ ದಸ್ತಗಿರಿಮಾಡಿರುವರೆಂದು ಹೇಳಲಾಗಿದೆ. ಈಜಿಪ್ಟ್‌ನಲ್ಲಿಯ ಅಶಾಂತಿಗೆ ಇವರೂ ಕಾರಣರೆಂದು ಹೇಳಲಾಗಿದೆ.

ಜನಾಭಿಪ್ರಾಯ ಪಡೆಯಬೇಕು

ಮದ್ರಾಸಿನ ಕೆಲವು ಪ್ರದೇಶದಲ್ಲಿ ಪಾನನಿರೋಧವನ್ನು ಮುಂದುವರಿಸಲು ಜನಾಭಿಪ್ರಾಯ ಪಡೆಯಬೇಕೆಂದು ಮಾಜಿ ಅರ್ಥಸಚಿವ ಶ್ರೀ ಗೋಪಾಲರೆಡ್ಡಿಯವರು ಹೇಳಿರುವರು.

ಗಂಧಕದ ಉತ್ಪಾದನೆ

ಭಾರತದ ನಾನಾ ಪ್ರದೇಶಗಳಲ್ಲಿ ಗಂಧಕವು ಸೇರಿರುವ ಕಬ್ಬಿಣ ಗಣಿಗಳಿವೆ. ಅವುಗಳಲ್ಲಿ ಬೀಹಾರ್, ಉತ್ತರ ಆರ್ಕಾಟು ಮತ್ತು ನೀಲಗಿರಿ ವೈನಾಡ್ ಪ್ರದೇಶಗಳಲ್ಲಿರುವುವು ಅತಿ ಮುಖ್ಯವಾದುವು. ಅಲ್ಲಿ ಗಂಧಕದ ಉತ್ಪಾದನೆಯನ್ನು ಪ್ರಾರಂಭಿಸಿದರೆ ಭಾರತಕ್ಕೆ ಬೇಕಾಗುವಷ್ಟು ದೊರೆಯುವುದೆಂದು ಹೇಳಲಾಗಿದೆ.

* ಬ್ರಿಟನ್ನಿನ ಸೈನ್ಯವೆಲ್ಲವೂ ಸೂಯಜ್' ಕಾಲುವೆ ಪ್ರದೇಶದಲ್ಲಿರುವ ಇಸ್ಮೇಲಿಯದಿಂದ ಹೊರಟುಹೋಗುವುದೆಂದು ಹೇಳಲಾಗಿದೆ.

ಅಧಿಕಜನಸಂಖ್ಯೆಯಿಂದ ಅಗಾಧವಾಗಿ ಬೆಳೆಯುತ್ತಲಿರುವ ಬೆಂಗಳೂರು ನಗರದಲ್ಲಿ ನಡೆಸಬೇಕಾಗಿರುವ ಅಭಿವೃದ್ಧಿ ಕಾರ್ಯಗಳ ಒಂದು ಯೋಜನೆಯನ್ನು ಕಂಡುಹಿಡಿಯಲು ಮಾಜಿ ದಿವಾನ್ ಶ್ರೀ ಎನ್' ಮಾಧವರಾಯರ ಅಧ್ಯಕ್ಷತೆಯಲ್ಲಿ ಮೈಸೂರು ಸರ್ಕಾರವು ಬೆಂಗಳೂರು ಅಭಿವೃದ್ಧಿ ಸಮಿತಿಯೆಂಬ ಸಮಿತಿಯೊಂದನ್ನು ನೇಮಿಸಿದೆ.

ಔದ್ಯೋಗಿಕ ಸಹಾಯ

ವಿಶ್ವಸಂಸ್ಥೆಯ ವ್ಯವಸಾಯ ಮತ್ತು ಆಹಾರ ಸಮಿತಿಯು ಭಾರತಕ್ಕೆ ೬ ಲಕ್ಷ ಡಾಲರುಗಳ ಔದ್ಯೋಗಿಕ ಸಹಾಯ ಮಾಡುವುದಾಗಿ ಸಮಿತಿಯ ಅಧ್ಯಕ್ಷ ನಾರಿಸ್' ಡಾಡ್ಜ್‌ರವರು ಹೇಳಿರುವರು.

ಶ್ರೀ ಬಿ. ಎಂ. ಕೃಷ್ಣನ್

ಮೈಸೂರುಡಿವಿಜನ್ನಿನ ವ್ಯಾಪಾರತೆರಿಗೆ ಅಧಿಕಾರಿಗಳಾದ ಶ್ರೀ ಬಿ. ಎಂ. ಕೃಷ್ಣನ್'ರವರು ಸಂಸ್ಥಾನದ ಅಕೌಂಟ್ಸ್ ಇಲಾಖೆಯ ಕಂಟ್ರೋಲರಾಗಿ ನೇಮಕವಾಗಿದ್ದಾರೆ.

ಭಾರತಕ್ಕೆ ಬರಬೇಕಾದ ಹಣ

ಪಾಕೀಸ್ಥಾನವು ಭಾರತಕ್ಕೆ ೩೦೦ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಬಡ್ಡಿಸಮೇತ ಈ ಹಣವನ್ನು ೫೦ ವರ್ಷಗಳಲ್ಲಿ ತೀರಿಸಬೇಕಾಗಿದೆ.

ಕಾಂಗ್ರೆಸ್ಸಿಗೆ ಒಂದು ಸ್ಥಾನ

ಮದ್ರಾಸಿನ ಹಿರಿಯ ಶಾಸನಸಭೆಯ ೧೦ ಸ್ಥಾನಗಳ ಫಲಿತಾಂಶವು ನಿನ್ನೆ ಹೊರಬಿತ್ತು. ಕಾಂಗ್ರೆಸ್' ಒಂದು ಸ್ಥಾನವನ್ನು ಗಳಿಸಿದೆ. ಉಳಿಕೆ ಎಲ್ಲಾ ೯ ಸ್ಥಾನಗಳೂ ಸ್ವತಂತ್ರರಿಗೆ ಹೋಗಿವೆ.

ಮಣಿಲಾಲ್ ಗಾಂಧಿಯವರ ಉಪವಾಸ

ಆತ್ಮಶುದ್ಧಿಗಾಗಿ ದಕ್ಷಿಣಾ ಆಫ್ರಿಕಾದಲ್ಲಿ ೨೧ ದಿನ ಉಪವಾಸ ಕೈಗೊಂಡಿರುವ ಮಣಿಲಾಲ್' ಗಾಂಧಿಯವರು ೧೨ ದಿನವನ್ನು ಕಳೆದರು. ಅವರು ತೀರಾ ನಿಶ್ಶಕ್ತರಾಗಿದ್ದಾರೆಂದು ಹೇಳಲಾಗಿದೆ. ಈಗಾಗಲೇ ಅವರ ತೂಕವು ೮ ಪೌಂಡು ಕಡಿಮೆಯಾಗಿದೆ.

* ಶ್ರೀ ಡಿ. ಬಸವರಾಜೆ ಅರಸರನ್ನು ಮೈಸೂರು ಜಿಲ್ಲಾ ಖಜಾನೆ ಅಧಿಕಾರಿಗಳಾಗಿ ವರ್ಗಾಯಿಸಲಾಗಿದೆ.

ಮೇಲ್ಮನೆಗಳ ಸ್ಪರ್ಧೆ

ಬೆಂಗಳೂರು ಮಾ ೧೭

ರಾಜ್ಯ ಪರಿಷತ್ತಿಗೂ (ಕೌನ್ಸಿಲ್ ಆಫ್ ಸ್ಟೇಟ್ಸ್) ಮತ್ತು ಶಾಸನಸಭಾ ಮೇಲ್ಮನೆಗೂ (ಲೆಜಿಸ್ಲೆಟಿವ್ ಕೌನ್ಸಿಲ್) ಸ್ಪರ್ಧಿಸಲು ಉಮೇದುವಾರಿಕೆ ಅರ್ಜಿಗಳಲ್ಲಿ ಕೆಲವು ವಾಪಸ್ಸಾಗಿ ಈಗ ಚುನಾವಣೆಗೆ ನಿಂತಿರುವವರು.

ರಾಜ್ಯ ಪರಿಷತ್ತಿಗೆ

ರಾಜ್ಯ ಪರಿಷತ್ತಿನಲ್ಲಿ ಮೈಸೂರಿಗಿರುವ ಆರು ಸ್ಥಾನಗಳಿಗೆ ೧೧ ಮಂದಿ ಸ್ಪರ್ಧಿಸುವರು.

ಶ್ರೀಗಳಾದ ಮಹಮದ್ ವಲಿಯುಲ್ಲಾ (ಕಾಂ) ಬಿ. ಪಿ. ಬಸಪ್ಪಶೆಟ್ಟಿ (ಕಾಂ) ಎಸ್. ವಿ. ಕೃಷ್ಣಮೂರ್ತಿರಾವ್ (ಕಾಂ) ಜಿ. ಮರುಳಪ್ಪ, ಕೆ. ಎಂ. ರುದ್ರಪ್ಪ, ಎಂ. ಗೋವಿಂದರೆಡ್ಡಿ (ಕಾಂ) ಮಿರ್ಲೆ ಎನ್. ಲಕ್ಷ್ಮೀನಾರಾಯಣಪ್ಪ, ಎಸ್. ಎಂ. ಸಿದ್ದಯ್ಯ, ಸಿ. ಜಿ. ಕೆ. ರೆಡ್ಡಿ, ಬಿ. ಎಂ. ಕೃಷ್ಣಮೂರ್ತಿ ಮತ್ತು ತಿಮ್ಮಬೋಯಿ (ಕಾಂ)

ಮೈಸೂರು ಹಿರಿಯ ಸಭೆಗೆ ೧೩ ಸ್ಥಾನಗಳಿಗೆ ೧೭ ಮಂದಿ ಸ್ಪರ್ಧಿಸುವರು.

ಶ್ರೀಗಳಾದ ಕೆ. ಟಿ. ಭಾಷ್ಯಂ (ಕಾಂ) ಟಿ. ಪಿ. ಬ್ರಹ್ಮಯ್ಯ (ಕಾಂ), ಪಿ. ತಿರುಮಲೇಗೌಡ (ಕಾಂ), ಎಂ. ಎನ್. ಜೋಯಿಸ್ (ಕಾಂ), ಎಂ. ಹನುಮಂತಯ್ಯ (ಕಾಂ) ಎನ್. ಸಿ. ಬಿಳಿಗಿರಿರಂಗಯ್ಯ, ಮಹಮದ್ ವೆಲ್ಲೂರ (ಕಾಂ) ಕೆ. ಎಂ. ನಾಗಣ್ಣ, ಎಂ. ಶಂಕರಯ್ಯ (ಕಾಂ) ಎಸ್. ಎಂ. ಸಿದ್ದಯ್ಯ, ಎಚ್. ಎನ್. ಮಹಂತದೇವರು, ಎಸ್. ವೀರಬಸಪ್ಪ (ಕಾಂ), ಎಚ್. ಎಂ. ಗಂಗಾಧರಯ್ಯ (ಕಾ) ಎಸ್. ಶಿವಪ್ಪ, ಬಿ. ಟಿ. ರಾಮಯ್ಯ, ಕೆ. ಭೀಮಯ್ಯ ಮತ್ತು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ.

ಟ್ರೂಮನ್‌ರೊಡನೆ ಭೇಟಿ

ನ್ಯೂಯಾರ್ಕ್ ಮಾ ೧೫

ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ಫೋರಂಗೆ ಬಂದಿರುವ ೨೪ ಏಷ್ಯನ್ ವಿದ್ಯಾರ್ಥಿಗಳು, ಅಮೆರಿಕನ್ ವಿದ್ಯಾರ್ಥಿಗಳೊಂದಿಗೆ ಅಧ್ಯಕ್ಷ ಟ್ರೂಮನ್ನರನ್ನು ಭೇಟಿ ಮಾಡುವರು.

ಟ್ರೂಮನ್ನರು ಕೊಲಂಬಿಯ ವಿಶ್ವವಿದ್ಯಾನಿಲಯದ ಪತ್ರಿಕಾ ಸಂಸ್ಥೆಯ ವಾರ್ಷಿಕ ಸಮ್ಮೇಳನದ ಭಾಷಣ ಮಾಡಲು ನ್ಯೂಯಾರ್ಕಿಗೆ ಫ್ಲಾರಿಡಾದಿಂದ ಬರಲಿರುವರು. ಏಷ್ಯನ್ ವಿದ್ಯಾರ್ಥಿ ತಂಡದಲ್ಲಿ ಈಜಿಪ್ಟ್, ಇಂಡಿಯಾ, ಸಿಂಹಳ, ಲೆಬನಾನ್, ಇಸ್ರೇಲ್, ಇರಾಕ್ ದೇಶದ ವಿದ್ಯಾರ್ಥಿಗಳೂ ಇರುವರು.

ಅಧ್ಯಕ್ಷರು ಇವರೊಂದಿಗೆ ೪೦ ನಿಮಿಷ ಕಳೆಯುವರು.

ಹೊಟೇಲುಗಳಲ್ಲಿ ಹಾಲಿನ ಉಪಯೋಗ ನಿಷೇಧ

ಬೆಂಗಳೂರು ಮಾ ೧೭

ಇತ್ತೀಚೆಗೆ ಉತ್ತಮ ಹಾಲಿನ ಸರಬರಾಯಿ ಸಿಗುತ್ತಿಲ್ಲ ಪಟ್ಟಣಪ್ರದೇಶದಲ್ಲಿರುವ ಹೊಟೇಲುಗಳ ಹಾಲನ್ನು ಹೆಚ್ಚಾಗಿ ಉಪಯೋಗಿಸುತ್ತಿರುವುದೇ ಇದಕ್ಕೆ ಮುಖ್ಯಕಾರಣವಾಗಿದೆ. ಪಟ್ಟಣಗಳಲ್ಲಿರುವ ಎಲ್ಲಾ ಹೊಟೇಲುಗಳು ಹಾಲಿನ ಪುಡಿಯನ್ನೇ ಕಡ್ಡಾಯವಾಗಿ ಉಪಯೋಗಿಸುವಂತೆ ಮಾಡಿ ಹಾಲಿನ ಉಪಯೋಗವನ್ನು ಹೊಟೇಲುಗಳಲ್ಲಿ ತಡೆಗಟ್ಟಬೇಕೆಂದು ಸರ್ಕಾರ ಅಭಿಪ್ರಾಯಪಟ್ಟಿದೆ.

ಅದರಂತೆ ರೇಷನ್ ವ್ಯವಸ್ಥೆಯಿರುವ ಪ್ರದೇಶಗಳಲ್ಲಿರುವ ಹೊಟೇಲುಗಳಲ್ಲಿ ಹಾಲಿನ ಉಪಯೋಗವನ್ನು ನಿಷೇಧಿಸುವುದು, ಅವರಿಗೆ ಹಾಲಿನ ಪುಡಿಯನ್ನು ಸರಬರಾಯಿ ಮಾಡುವುದಕ್ಕೆ ತಕ್ಕ ವ್ಯವಸ್ಥೆಮಾಡುವುದು, ಮುಂತಾದುವನ್ನೆಲ್ಲಾ ಪರಿಶೀಲಿಸಿ ಸರ್ಕಾರಕ್ಕೆ ಒಂದು ತಿಂಗಳೊಳಗಾಗಿ ಒಂದು ವರದಿಯನ್ನು ಒಪ್ಪಿಸುವಂತೆ ತಿಳಿಸಿ ಮೈಸೂರು ಸರ್ಕಾರದವರು ಒಂದು ಸಮಿತಿಯನ್ನು ನೇಮಿಸಿರುವರು.

ಪ್ರಕಾಶಕರು:—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.

*

ಹೆಚ್ಚಿನ ವಿವರಗಳಿಗೆ ಬರೆಯಿರಿ—
ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

ಸಕ್ಕರೆಗೆ ಗಿರಾಕಿಯಿಲ್ಲದೆ ಕಾರ್ಖಾನೆಗಳು ಬಂದ್

ಸಕ್ಕರೆಯ ಬೆಲೆಯು ಇಳಿದಿರುವುದರಿಂದ ದಾಸ್ತಾನು ಹೆಚ್ಚಾಗಿರುವುದರಿಂದ ಹಮಾರಾ ಮತ್ತು ಘಗಾರಾಗಳಲ್ಲಿರುವ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಗಾಣವಾಡುವುದನ್ನು ನಿಲ್ಲಿಸಿವೆ.

ಬೆಲೆ ಇಳಿತವು ಪೆಪ್ಸುವಿನಲ್ಲಿರುವ ಗೋಬಿದ್‌ಗರ್‌ನ ಐದಾರು ಕಬ್ಬಿನ ಕಾರ್ಖಾನೆಗಳ ಮೇಲೂ ಪರಿಣಾಮವುಂಟುಮಾಡಿದೆ ಅವು ಈಗ ಮುಚ್ಚಿರುವುದಾಗಿ ವರದಿಯಾಗಿದೆ. ಅವುಗಳ ತಯಾರಿಕೆಗೆ ಗಿರಾಕಿಯೇ ಇಲ್ಲವೆಂದು ಹೇಳಲಾಗಿದೆ.

ದೊಡ್ಡ ಔಷಧಿ ಕಾರ್ಖಾನೆ

ಬುಲ್ಸಾರಿಗೆ ಏಳು ಮೈಲಿ ದೂರದಲ್ಲಿರುವ ಪರ್ನೀರಾ ಬಳಿ ಸ್ಥಾಪಿಸಲ್ಪಟ್ಟಿರುವ ಭಾರತದ ಪ್ರಥಮ ಮತ್ತು ದೊಡ್ಡ ಬಣ್ಣಗಳ ಮತ್ತು ಔಷಧಿ ವಸ್ತುಗಳ ಕಾರ್ಖಾನೆಯನ್ನು ಭಾರತ ಮಹಾ ಪ್ರಧಾನಿ ನೆಹರೂರವರು ಆರಂಭಿಸಿದರು.

ಎರಡು ಕೋಟಿ ರೂಪಾಯಿ ವೆಚ್ಚದ ಭಾರತ-ಅಮೆರಿಕಾ ಉದ್ಯಮ ಸಂಸ್ಥೆಯಾದ ಈ ಕಾರ್ಖಾನೆಯಲ್ಲಿ ಪ್ರಥಮದಲ್ಲಿ ೪ ದಶ ಲಕ್ಷ ಪೌಂಡು ದ್ರಾವಕ ಬಣ್ಣ ಮತ್ತು ಒಂದು ಲಕ್ಷ ಪೌಂಡು ಔಷಧಿಗಳೂ ತಯಾರಾಗುವುವು. ನೆಹರೂರವರು ಕಾರ್ಖಾನೆಯನ್ನೆಲ್ಲ ಸುತ್ತಿ ಪರಿಶೀಲಿಸಿದರು.

ರಕ್ಷಣೆಯು ಅಗತ್ಯ

ಲೀಡ್ಸ್ ಮಾ ೧೦

ಸ್ವತಂತ್ರ ರಾಷ್ಟ್ರಗಳ ರಕ್ಷಣೆಗೆ, ಜೊತೆಯಾಗಿ ರಕ್ಷಣೆ ಮಾಡಿಕೊಳ್ಳುವುದೇ ಸರಿಯಾದ ಮಾರ್ಗ, ಎಂಬುದಾಗಿ ವಿಶ್ವಸಂಸ್ಥೆಯ ಟ್ರಸ್ಟಿಷಿಪ್ ಕೌನ್ಸಿಲ್ ಸಂಚಾಲಕರಾದ ಡಾ॥ ರಾಲ್ಫ್‌ಬಂಚೆಯವರು ತಿಳಿಸಿದ್ದಾರೆ.

ಶಾಂತಿಯನ್ನು ಕಾಪಾಡಲು, ಸ್ವರಕ್ಷಣೆ ಮಾಡಿಕೊಳ್ಳಲು ಎಲ್ಲರೂ ಶಸ್ತ್ರಸಜ್ಜಿತರಾಗಲೇ ಬೇಕಾಗಿದೆ, ಇಲ್ಲದಿದ್ದರೆ, ಧಾಳಿಯನ್ನು ಎದುರಿಸಲು ಸಾಧ್ಯವಾಗಲಾರದು ಎಂದು ಡಾ॥ ಬಂಚೆಯವರು ತಿಳಿಸಿದರು.

ತಾಂತ್ರಿಕ ಸಹಾಯದ ಜೊತೆಗೆ ಅಭಿಪ್ರಾಯ ವಿನಿಮಯವೂ ಆಗಬೇಕಾದುದ್ದು ಮುಖ್ಯವಾದುದು, ಸ್ವಾತಂತ್ರ್ಯ ಸಮತಾಭಾವನೆ, ಭೂಮಿಯ ಮೂಲೆ ಮೂಲೆಗೂ ಹರಡಲ್ಪಡಬೇಕು, ಎಂಬುದಾಗಿ ಬಂಚೆಯವರು ಸರ್ ಮಾಂಟೆಗೋ ಬರ್ಟನ್ ಭಾಷಣ ಮಾಲೆಯಲ್ಲಿ ೧೦ನೇ ಭಾಷಣ ಮಾಡುತ್ತ ತಿಳಿಸಿದರು.

* ಪಶ್ಚಿಮ ಟಿಬೆಟ್‌ನಲ್ಲಿ ಕ್ಷಾಮ ತಲೆದೋರಿದೆಯೆಂದು ಭಾರತದ ಪತ್ರಿಕೆಗಳು ಬರೆದಿವೆ ಕಾರಣ, ಅಲ್ಲಿಯ ಕಮ್ಯೂನಿಸ್ಟರು, ಭಾರತದ ವರ್ತಕರನ್ನು, ಅವರ ಸಂಸಾರವನ್ನು ಕೊಂದುಹಾಕಿದುದೇ ಎಂದು ಹೇಳಲಾಗಿದೆ.

ನ್ಯೂ ಅಪೇರ
೧೯-೩-೫೨ ರಿಂದ ಅಮೋಘವಾಗಿ ರಂಗ
ದುಖಿಯಾರಿ
(ಹಿಂದಿ)
ಪಾತ್ರ:-ಸುರೇಂದ್ರ, ಚಂದ್ರಮೋಹನ್, ಮೀನ, ಕಕ್ಕು.

ನಗರಾಭಿವೃದ್ಧಿ ಸಮಿತಿ ಕಛೇರಿ ಮೈಸೂರು.

ಹರಾಜು ಇಸ್ತಿಹಾರ್

ತಾ॥ ೧೭—೩—೫೨

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರುಸಿಟಿ ದೇವರಾಜ ಮೊಹಲ್ಲಾ ಲ್ಯಾನ್ಸ್‌ಡೌನ್ ಬಜಾರಿನಲ್ಲಿ ಒಡೆಯಲಾಗುತ್ತಿರುವ ಕಟ್ಟಡಗಳ ಸಾಮಾನುಗಳನ್ನು ಇದೇ ಮಾಹೆ ೨೦ನೇ ತಾರೀಖು (ಗುರುವಾರ) ಬೆಳಿಗ್ಗೆ ೯ ಘಂಟೆಗೆ ಅದೇ ಸ್ಥಳದಲ್ಲಿ ಟ್ರಸ್ಟಬೋರ್ಡು ಇಂಜನಿಯರಿಂದಾಗಲೀ ಅಥವಾ ಅವರಿಂದ ಅಧಿಕಾರ ಪಡೆದ ಇತರ ಅಧಿಕಾರಿಯಿಂದಾಗಲೀ ಬಹಿರಂಗವಾಗಿ ಹರಾಜು ಮಾಡಲಾಗುವುದು.

(ಸಹಿ) ಪಿ. ಗೋಪಾಲಕೃಷ್ಣಶೆಟ್ಟಿ
ಅಧ್ಯಕ್ಷರು

ಫೋನ್ ೫೭೪೪ (೧೦೯) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೦—೩—೧೯೫೨ನೇ ಗುರುವಾರ [ಸಂಚಿಕೆ ೧೬೨

ಅಕ್ಕಿ ಪಡಿತರ ಒಂದು ಔನ್ಸು ಹೆಚ್ಚಿತು

ಸಕ್ಕರೆ ಹತೋಟಿ ಹೋಗುವುದಿಲ್ಲ

ಸರ್ಕಾರ ನಿಗದಿಮಾಡಿರುವ ಬೆಲೆಗಿಂತ ಕಡಿಮೆಬೆಲೆಯಲ್ಲಿ ಸಕ್ಕರೆಯನ್ನು ಮಾರಲಾಗುತ್ತಲಿದ್ದಾಗ್ಯೂ ಸದ್ಯಕ್ಕೆ ಸಕ್ಕರೆ ಹತೋಟಿಯನ್ನು ಸರ್ಕಾರವು ತೆಗೆದುಹಾಕುವುದಿಲ್ಲವೆಂದು ಆಹಾರಸಚಿವ ಶ್ರೀ ಮುನ್ಷಿಯವರು ಬೊಂಬಾಯಿಯಲ್ಲಿ ಹೇಳಿರುವರು.

ಮುಂದಿನ ಭಾನುವಾರದಿಂದ ಮದ್ರಾಸ್ ಪ್ರಾಂತ್ಯದಲ್ಲಿ ಅಕ್ಕಿಯ ಪಡಿತರವನ್ನು ಒಂದುಔನ್ಸ್ ಹೆಚ್ಚಿಸಲು ಮದ್ರಾಸ್ ಸರ್ಕಾರವು ಆಜ್ಞೆಯಿತ್ತಿದೆ. ಈಗ ೬ ಔನ್ಸ್ ಕೊಡಲಾಗುತ್ತಿದೆ ಇನುಮುಂದೆ ೭ಔನ್ಸ್ ಕೊಡಲಾಗುತ್ತದೆ. ದ್ವಿದಳಧಾನ್ಯ ಉಪಯೋಗಿಸುವವರಿಗೆ ೩ ಔನ್ಸ್ ಮಿಶ್ರಾಹಾರದವರಿಗೆ ೪ ಔನ್ಸ್ ಕೊಡಲಾಗುತ್ತದೆ.

ಶ್ರೀ ಹನುಮಂತಯ್ಯನವರು ದೆಹಲಿಗೆ

ಬೆಂಗಳೂರು ಮಾ ೧೯

ಇದೇ ೨೪ನೇ ತಾ॥ ಬೆಳಗ್ಗೆ ಬೆಂಗಳೂರು ಕುಮಾರಪಾರ್ಕಿನಲ್ಲಿ ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ಸಭೆ ಸೇರಿ ಶ್ರೀ ಕೆ ಹನುಮಂತಯ್ಯನವರನ್ನು ತಮ್ಮ ನಾಯಕರನ್ನಾಗಿ ಚುನಾಯಿಸಲಿದೆ ಹೊಸ ಮಂತ್ರಿಮಂಡಲದಲ್ಲಿ ಯಾರಿರಬೇಕೆಂಬುದನ್ನು ನಿರ್ಧರಿಸಲು ಶ್ರೀ ಕೆ ಹನುಮಂತಯ್ಯನವರು ಈ ನಾಯಕ ಚುನಾವಣೆಯಾದನಂತರ ದೆಹಲಿಗೆ ಬರಬೇಕೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ಆಹ್ವಾನಿಸಿರುವುದಾಗಿ ಹೇಳಲಾಗಿದೆ.

ಪದವೀಧರರ ಕ್ಷೇತ್ರದಿಂದ ಚುನಾವಣೆ

ಬೆಂಗಳೂರು ಮಾ ೧೯

ಪದವೀಧರ, ಉಪಾಧ್ಯಾಯರ ಮತ್ತು ಲೋಕಲ್ ಅಥಾರಿಟಿ ಕ್ಷೇತ್ರಗಳಿಂದ ಮೈಸೂರು ಹಿರಿಯ ಶಾಸನಸಭೆಗೆ ಚುನಾವಣೆಯ ವೇಳಾ ಪಟ್ಟಿಯನ್ನು ಸರ್ಕಾರ ಪ್ರಕಟಿಸಿದೆ ಅರ್ಜಿ ದಾಖಲ್ಮಾಡುವುದು ಮಾರ್ಚಿ ೨೪, ಪರಿಶೀಲನೆ ಮಾರ್ಚಿ ೨೫, ಉಮೇದುವಾರಿಕೆ ವಾಪಸ್ಸು ಮಾರ್ಚಿ ೨೮, ಚುನಾವಣೆ ಏಪ್ರಿಲ್ ೨೮.

ಟಂಕಸಾಲೆ ಆರಂಭೋತ್ಸವ

ಕಲ್ಕತಾ ಬಳಿ ಅಲೀಪುರವೆಂಬಲ್ಲಿ ಏಷ್ಯಾದಲ್ಲೆಲ್ಲಾ ಅತ್ಯಂತ ದೊಡ್ಡದಾದ ಟಂಕಶಾಲೆಯ ಆರಂಭೋತ್ಸವವನ್ನು ಕೇಂದ್ರ ಅರ್ಥಿಕಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ನಿನ್ನೆ ನೆರವೇರಿಸಿದರು.

ಬಾಜಪೈರವರು ಬೊಂಬಾಯಿ ಗೌರ್ನರ್ ?

ಸದ್ಯದಲ್ಲೇ ನಿವೃತ್ತರಾಗಲಿರುವ ಬೊಂಬಾಯಿ ಗೌರ್ನರ್ ರಾಜಾ ಮಹಾರಾಜಸಿಂಗ್‌ರವರ ಸ್ಥಾನದಲ್ಲಿ ವಿದೇಶಿ ಶಾಖಾ ಸೆಕ್ರೆಟರಿ ಜನರಲ್ ಶ್ರೀ ಗಿರಿಜಾಶಂಕರ ಬಾಜಪೈರವರನ್ನು ಬೊಂಬಾಯಿ ಗೌರ್ನರಾಗಿ ನೇಮಕ ಮಾಡಲಾಗುವುದೆಂದು ಹೇಳಲಾಗಿದೆ ಈ ವಿಷಯವು ಅಲ್ಲಿಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಮುರಾರ್ಜಿ ದೇಸಾಯಿಯವರ ಪರ್ಯಾಲೋಚನೆಯಲ್ಲಿದೆ

ಜರ್ಮನ್ ಕೈಗಾರಿಕಾ ನಿಯೋಗ ಬೆಂಗಳೂರಿಗೆ

ಭಾರತದಲ್ಲಿ ಪ್ರವಾಸ ಮಾಡುತ್ತಲಿರುವ ಜರ್ಮನ್ ಕೈಗಾರಿಕಾ ನಿಯೋಗವು ಬೆಂಗಳೂರಿಗೆ ೨೭ನೇ ತಾರೀಖು ಬರಲಿದೆ. ನಿಯೋಗವು ಏಪ್ರಿಲ್ ೨ನೇ ತಾರೀಖಿನವರೆಗೆ ಕೈಗಾರಿಕಾ ಪ್ರದೇಶಗಳಲ್ಲಿ ಪ್ರವಾಸ ಕೈಗೊಳ್ಳುವರು.

ಕನ್ನಡ ಟೈಪುರೈಟರ್

ಕನ್ನಡ ಟೈಪುರೈಟರು ರಚನೆಯ ವಿಷಯದಲ್ಲಿ ಶರ್ಮಸಮಿತಿ ವರದಿಗೆ ಸರ್ಕಾರವು ಒಪ್ಪಿಗೆಯಿತ್ತು, ೧೦೦ ಯಂತ್ರಗಳನ್ನು ತಯಾರಿಸಲು ತಕ್ಕ ವ್ಯವಸ್ಥೆಮಾಡುವಂತೆ ಮುದ್ರಣಶಾಖಾ ಡೈರೆಕ್ಟರಿಗೆ ಸೂಚಿಸಿಯಿತ್ತಿರುವುದಾಗಿ ತಿಳಿದುಬಂದಿದೆ ರೆಮಿಂಗ್‌ಟನ್ ಕಂಪೆನಿಗೆ ಆರ್ಡರ್ ಕೊಟ್ಟಿಲ್ಲ.

ಬೇಸಿಕ್ ವಿದ್ಯಾಭ್ಯಾಸ

ಬೇಸಿಕ್ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಸಮ್ಮೇಳನವು ದೆಹಲಿಯಲ್ಲಿ ನಡೆಯಿತು ಭಾರತದ ನಾನಾಭಾಗಗಳಿಂದ ೪೦೦ ಪ್ರತಿನಿಧಿಗಳು ಈ ಸಮ್ಮೇಳನಕ್ಕೆ ಆಗಮಿಸಿದ್ದರು

ಕಾಂಗ್ರೆಸ್ ಮಂತ್ರಿಮಂಡಲ ಸ್ಥಾಪನೆ

ಪೆಪ್ಸುವಿನಲ್ಲಿ ಕಾಂಗ್ರೆಸ್‌ಪಕ್ಷದ ನಾಯಕ ಕರ್ನಲ್ ರಘುಬೀರ್‌ಸಿಂಗ್‌ರವರು ಹೊಸ ಸರ್ಕಾರವನ್ನು ರಚಿಸಿ ನಿನ್ನೆಯದಿವಸ ರಾಜಪ್ರಮುಖರ ಸಮ್ಮುಖದಲ್ಲಿ ಅಧಿಕಾರ ಸ್ವೀಕರಿಸಿದರು. ಮಂತ್ರಿಮಂಡಲದಲ್ಲಿ ಇವರಲ್ಲದೆ ೪ ಮಂತ್ರಿಗಳು ೩ ಉಪಮಂತ್ರಿಗಳಿರುವರು.

ಪೆಪ್ಸು ಶಾಸನಸಭೆಯಲ್ಲಿರುವ ೬೦ ಸ್ಥಾನಗಳಲ್ಲಿ ಹೆಚ್ಚಿನಸ್ಥಾನಪಡೆದಿರುವುದು ಕಾಂಗ್ರೆಸ್‌ಪಕ್ಷ. ಅಕಾಲಿಪಕ್ಷದ ನಾಯಕರು ರಾಜಪ್ರಮುಖರಬಳಿ ಹೋಗಿ ಕಾಂಗ್ರೆಸ್ಸಿಗಿಂತ ತಮ್ಮ ಪಕ್ಷವು ಹೆಚ್ಚಿಗೆಸ್ಥಾನಗಳಿಸಿರುವುದರಿಂದ ಕಾಂಗ್ರೆಸ್‌ಸರ್ಕಾರ ರಚಿಸಕೂಡದೆಂದು ತಿಳಿಸಿದರು ಆದರೆ ಪ್ರಯೋಜನವಾಗಲಿಲ್ಲ.

ಕ್ರಿಮಿ ಯುದ್ಧ ತನಿಖೆ

ಕೊರಿಯಾ ರಣರಂಗದಲ್ಲಿ ವಿಶ್ವಸೈನ್ಯಗಳು ಕಾಲರಾ, ಟೈಫಸ್ ಮತ್ತು ಪ್ಲೇಗು ಕ್ರಿಮಿಗಳನ್ನು ಉಪಯೋಗಿಸುತ್ತಲಿರುವುದಾಗಿ ಉತ್ತರಕೊರಿಯನ್ನರು ಆರೋಪಿಸಿರುವುದನ್ನು ಪರಿಶೀಲಿಸಲು ಫ್ರಾನ್ಸ್, ಬ್ರಿಟನ್ ಮುಂತಾದ ರಾಷ್ಟ್ರಗಳ ಕೆಲವು ವೈದ್ಯರು ಹೋಗಿರುವುದಾಗಿ ಹೇಳಲಾಗಿದೆ.

ಭೂಪಾಲಿನಲ್ಲಿ ಕಾಂಗ್ರೆಸ್ ಸರ್ಕಾರ

ಭೂಪಾಲಿನಲ್ಲಿ ಕಾಂಗ್ರೆಸ್ಸು ಡಾ॥ ಶಂಕರದಯಾಳ್‌ರವರ ನಾಯಕತ್ವದಲ್ಲಿ ರಚಿತವಾಗಿರುವ ಸಚಿವಮಂಡಲಿಯು ಈ ದಿನ ಅಧಿಕಾರವಹಿಸಿಕೊಳ್ಳುತ್ತದೆ. ಶಾಸನ ಸಭೆಯಲ್ಲಿ ೩೦ ಸ್ಥಾನಗಳನ್ನು ಕಾಂಗ್ರೆಸ್ ೨೫ ಸ್ಥಾನಗಳಿಸಿದೆ.

ಕಾರ್ಖಾನೆ ವಿಸ್ತರಣೆ

ಗೊಬ್ಬರವನ್ನು ತಯಾರುಮಾಡಲು ಭಾರತದಲ್ಲೇ ಅತ್ಯಂತ ಹಿರಿಯ ಕಾರ್ಖಾನೆಯಾದ ಸಿಂಧ್ರಿ, ಗೊಬ್ಬರ ಕಾರ್ಖಾನೆಯನ್ನು ವಿಸ್ತರಿಸಲು ಕೇಂದ್ರಸರ್ಕಾರವು ಪರಿಶೀಲಿಸುತ್ತಿದೆ.

ವಿಶ್ವಸಂಸ್ಥೆ ನಿರ್ಣಯ ತಿರಸ್ಕಾರ

ದಕ್ಷಿಣಆಫ್ರಿಕಾ ವರ್ಣಬೇಧ ನೀತಿಯನ್ನು ಪರಿಶೀಲಿಸಲು ಭಾರತ, ದಕ್ಷಿಣ ಆಫ್ರಿಕಾ ಪ್ರತಿನಿಧಿಗಳು ಸಮಿತಿಸೇರಿ ನಿರ್ಧರಿಸಬೇಕೆಂದು ವಿಶ್ವಸಂಸ್ಥೆಯು ಮಾಡಿದ ನಿರ್ಣಯವನ್ನು ದಕ್ಷಿಣ ಆಫ್ರಿಕಾವು ತಿರಸ್ಕರಿಸಿ ಈ ವಿಷಯವು ತನ್ನ ಒಳಾಡಳಿತಕ್ಕೆ ಸೇರಿದುದೆಂದು ತಿಳಿಸಿದೆ. ಹೀಗೆ ವಿಶ್ವಸಂಸ್ಥೆಯ ನಿರ್ಣಯವನ್ನು ತಿರಸ್ಕರಿಸಿರುವುದು ೫ನೇ ಸಲ.

ಕ್ರಿಕೆಟ್ ಟೀಮು ಪ್ರವಾಸ

ಇಂಗ್ಲೆಂಡಿನಲ್ಲಿ ಪ್ರವಾಸ ಕೈಗೊಳ್ಳಲಿರುವ ಭಾರತದ ಕ್ರಿಕೆಟ್ ಟೀಂಗೆ ೧೭ ಜನರನ್ನು ಚುನಾಯಿಸಲಾಗಿದೆ. ಈ ಟೀಮಿಗೆ ಶ್ರೀ ವಿಜಯ ಹಜಾರೆಯವರು ಕ್ಯಾಪ್ಟನ್ ಮತ್ತು ಶ್ರೀ ಅಧಿಕಾರಿ ವೈಸ್ ಕ್ಯಾಪ್ಟನ್.

* ಭಾರತದಲ್ಲಿ ನಾಣ್ಯಗಳನ್ನು ತಯಾರಿಸುತ್ತಲಿರುವ ಕಾರ್ಖಾನೆಯಲ್ಲಿ ಮುಖ್ಯಾಧಿಕಾರಿಗಳನ್ನಾಗಿ ಭಾರತೀಯರನ್ನು ಪ್ರಥಮವಾಗಿ ಹೊಸದಾಗಿ ಸ್ಥಾಪಿಸಿಯುವ ಅಲಿಪುರ ಟಂಕಶಾಲೆಯಲ್ಲಿ ನೇಮಿಸಲಾಗುತ್ತದೆ.

ರಾಜಕಮಲ್ ಟಾಕೀಸ್, ಮೈಸೂರು
14—3—52 ರಿಂದ ವಿಜೃಂಭಣೆಯ ಪ್ರದರ್ಶನಾರಂಭ ಪ್ರತಿದಿನ ೩ ಆಟಗಳು
ಪಾತಾಳಭೈರವಿಯನ್ನು ನಿರ್ಮಿಸಿ ಪ್ರಖ್ಯಾತರಾದ ಶ್ರೀ "ವಿಜಯಾ" ರವರ ಅತ್ಯಂತ ಕೋಲಾಹಲವನ್ನು ಉಂಟುಮಾಡುತ್ತಿರುವ
* ಮದುವೆ ಮಾಡಿ ನೋಡು *
ಎಂಬ ಶ್ರೇಷ್ಠ ತೆಲುಗು ಚಿತ್ರ
ತಾರಾಗಣ:— ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ಜೋಗ್‌ರಾವ್.
ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿಗಳನ್ನು ಆರು ವಾರಗಳು ಮನ್ನಾ ಮಾಡಿದೆ

ಸಮಾಚಾರ

೨೦—೩—೫೨ನೇ ಗುರುವಾರ

ಈ ಆತುರವೇಕೆ ?

ಶ್ರೀ ಶರ್ಮಾ ಸಮಿತಿಯು ವರದಿಗೆ ಅಂಗೀಕಾರವಿತ್ತು ಮೈಸೂರು ಸರ್ಕಾರವು ಈಗಾಗಲೇ ಕನ್ನಡ ಟೈಪ್‌ರೈಟರ್‌ಗಳನ್ನು ತಯಾರಿಸಲು ಮುದ್ರಣ ಶಾಖಾ ಡೈರೆಕ್ಟರಿಗೆ ಸೂಚನೆ ಕೊಟ್ಟಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಸರ್ಕಾರದ ಈ ಆಜ್ಞೆಯು ಜನತೆಗೆ ಆಶ್ಚರ್ಯವನ್ನುಂಟುಮಾಡಿದೆ. ಕನ್ನಡದಲ್ಲಿ ಟೈಪ್‌ರೈಟರುಗಳನ್ನು ತಯಾರಿಸುವ ವಿಷಯದಲ್ಲಿ ಕೂಲಂಕುಶವಾಗಿ ಪರಿಶೀಲನೆ ನಡೆಸಿ ವರದಿಯನ್ನು ಒಪ್ಪಿಸಲು ಸರ್ಕಾರ ಈ ಸಮಿತಿಯನ್ನು ನೇಮಿಸಿತು. ಕೆಲವು ದಿನಗಳು ಈ ಸಮಿತಿಯ ಕಾರ್ಯಕಲಾಪಗಳು ಪ್ರಾರಂಭವಾಗಲೇ ಇಲ್ಲ. ಇದಕ್ಕಿಂದಿಂತೆಯೇ ಕಾರ್ಯಕಲಾಪಗಳು ಪ್ರಾರಂಭವಾಗಿ ಹಲವಾರು ವರ್ಷಗಳಿಂದ ಕನ್ನಡ ಟೈಪ್‌ರೈಟರುಗಳನ್ನು ತಯಾರಿಸಲು ತಮ್ಮ ಮನಸ್ಸನ್ನೆಲ್ಲಾ ವ್ಯಯ ಮಾಡಿ ಶ್ರಮಿಸಿದ ಹತ್ತಾರು ಜನರನ್ನು ಬರಮಾಡಿಕೊಂಡು ಅವರು ಯಾವ ರೀತಿ ಕನ್ನಡ ಟೈಪ್‌ರೈಟರುಗಳನ್ನು ತಯಾರಿಸಲು ಸಂಶೋಧನೆ ನಡೆಸಿ ಪ್ರತ್ಯೇಕ ಕೀ ಬೋರ್ಡುಗಳನ್ನು ತಯಾರಿಸಿರುವರೆಂಬುದನ್ನು ಪರಿಶೀಲಿಸಿ ಅವರಿಂದ ವಿಷಯ ಸಂಗ್ರಹಣ ಮಾಡಿಕೊಂಡು, ಅವುಗಳ ಆಧಾರದ ಮೇಲೆ ತಮ್ಮದೇ ಆದ ಪ್ರತ್ಯೇಕ ಕೀ ಬೋರ್ಡನ್ನು ತಯಾರಿಸಿ, ಕನ್ನಡ ಲಿಪಿಯಲ್ಲಿಯೇ ಕೆಲವು ಬದಲಾವಣೆಗಳನ್ನು ಸೂಚಿಸಿ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದರು. ಸರ್ಕಾರದವರು ಕಳೆದ ತಿಂಗಳಲ್ಲಿ ಈ ವರದಿಯನ್ನು ಪ್ರಕಟಿಸಿದರು. ಅದರ ಮೇಲೆ ಹಲವಾರು ಟೀಕೆಗಳು ಬಂದು ಶರ್ಮ ಸಮಿತಿಯ ಸಲಹೆಯು ತೀರಾ ಅನುಪಯುಕ್ತವೆಂದು ಹೊರಗೆಡಹಲಾಯಿತು. ಸರ್ಕಾರದವರು ಈ ಟೀಕೆಗಳನ್ನು ಗಮನಿಸಿದರೋ ಇಲ್ಲವೋ ತಿಳಿಯದು.

ಶ್ರೀ ಶರ್ಮ ಸಮಿತಿಯ ವರದಿಯ ಮೇಲೆ ಸಾರ್ವಜನಿಕರಿಂದ, ಕನ್ನಡ ಭಾಷಾ ತಜ್ಞರಿಂದ ಏನಾದರೂ ಸರ್ಕಾರವು ಅಭಿಪ್ರಾಯವನ್ನು ಪಡೆದು ತನ್ನ ಕೊನೆಯ ನಿರ್ಧಾರವನ್ನು ತೆಗೆದುಕೊಂಡಂತೆ ಕಾಣುವುದಿಲ್ಲ.

ನೂರಾರು ವರ್ಷಗಳಿಂದ ಬಳಕೆಯಲ್ಲಿರುವ ಕನ್ನಡ ಭಾಷಾ ಲಿಪಿಯನ್ನು, ನಾಲ್ಕಾರು ಜನ ಸೇರಿಕೊಂಡು ಬದಲಾವಣೆ ಸೂಚಿಸಿದ ಮಾತ್ರಕ್ಕೆ ಅದಕ್ಕೆ ಮನ್ನಣೆಯಿತ್ತು, ಆತುರಾತುರದಿಂದ ನಿರ್ಧಾರ ತೆಗೆದುಕೊಳ್ಳುವ ಅವಶ್ಯಕತೆಯೇನಿತ್ತು ? ಈಗಾಗಲೇ ಕರ್ನಾಟಕ ಭಾಷಾ ಪ್ರಾಂತ್ಯ ರಚನೆ ಮುಂತಾದ ಪ್ರಶ್ನೆಗಳು ನಮ್ಮ ಮುಂದೆ ಇರುವಾಗ ಕರ್ನಾಟಕದ ನಾನಾ ಭಾಗದ ಜನತೆಯ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಪಡೆಯಬೇಕಾದ್ದುದು ಸೂಕ್ತವಲ್ಲವೆ? ಅಲ್ಲದೆ ಹತ್ತಾರು ವರ್ಷಗಳಿಂದ ಈ ಯಂತ್ರಗಳನ್ನು ತಯಾರಿಸಲು ಶ್ರಮಿಸಿರುವವರನ್ನೆಲ್ಲಾ ಪುನಃ ಆಹ್ವಾನಿಸಿ ಅವರಿಗೂ ಈ ಸಮಿತಿಯ ವರದಿಯನ್ನು ಕೊಟ್ಟು, ಎಲ್ಲರಿಗೂ ಒಪ್ಪುವ ರೀತಿಯಲ್ಲಿ ಒಂದು ಯಂತ್ರವನ್ನು ತಯಾರಿಸುವುದು ಮುಖ್ಯ ಕರ್ತವ್ಯವಲ್ಲವೆ? ಪ್ರಕೃತ ಬಳಕೆಯಲ್ಲಿರುವ ಲಿಪಿಯಲ್ಲಿಯೇ ಪ್ರಾರಂಭದಲ್ಲಿ ಯಂತ್ರ ತಯಾರಿಸಿ ಹಲವಾರು ವರ್ಷ ಸುಧಾರಿಸಿ ಲಿಪಿ ಸಂಸ್ಕರಣ ಅವಶ್ಯಕವೆಂದು ಜನತೆಗೆ ಕಂಡು ತಕ್ಕ ಬದಲಾವಣೆ ಮಾಡಿದಲ್ಲಿ ಆಗ ಯಂತ್ರಗಳಲ್ಲೂ ತಕ್ಕ ಬದಲಾವಣೆ ಮಾಡಲು ಅನುಕೂಲವಾಗುತ್ತಿತ್ತು. ಈಗಾಗಲೇ ಅನೇಕ ಭಾಷಾ ತಜ್ಞರು ಲಿಪಿ ಸಂಸ್ಕರಣವನ್ನು ವಿರೋಧಿಸಿರುವರು.

ಯಾವ ವಿಷಯವನ್ನೂ ಅವಸರವಾಗಿ, ಗಮನಿಸದೆ ಈಗಿನ ಮಂತ್ರಿಮಂಡಲವು ತನ್ನ ಅಧಿಕಾರವನ್ನು ಬಿಟ್ಟುಹೋಗುವ ವೇಳೆಯಲ್ಲಿ ಆತುರಾತುರದಿಂದ ನಿರ್ಧಾರ ತೆಗೆದುಕೊಂಡು ಲಕ್ಷಾಂತರ ರೂಪಾಯಿಗಳ ನಷ್ಟವನ್ನು ಮಾಡುವುದು ಬಡ ಬೋರೆಗಾರನ ಹಣವು ವ್ಯರ್ಥ ವ್ಯಯವಾಗಿ ಜನತೆಗೆ ಏನೂ ಪ್ರಯೋಜನವಾಗುವುದಿಲ್ಲವೆಂದು ವ್ಯಸನದಿಂದ ಹೇಳಬೇಕಾಗಿದೆ.

ಈಗಲೂ ಸರ್ಕಾರ ಪುನರ್ವಿಮರ್ಶಿಸುವುದು ಸೂಕ್ತ.

ಜೈಹಿಂದ್.

ಬಡವರಿಗೆ, ಹಸಿದವರಿಗೆ ಮೊದಲು ಸಹಾಯ ನೀಡಬೇಕು

ಶಸ್ತ್ರಸಜ್ಜಿತ ಸೈನ್ಯಗಳಿಗೆ ಹಣ ಖರ್ಚು ಮಾಡುವುದಕ್ಕಿಂತ, ಬಡವರಿಗೆ ಮತ್ತು ಹಸಿದವರಿಗೆ ಮೊದಲು ಸಹಾಯ ಮಾಡಿದರೆ, ಅವರಿಗೆ ಪ್ರಪಂಚಕ್ಕೆ ಹೆಚ್ಚಿಗೆ ಲಾಭವುಂಟೆಂದು ಅಧ್ಯಕ್ಷ ಟ್ರೂಮನ್ನರ ಅಭಿಪ್ರಾಯ. ಆದರೆ ಸೋವಿಯೆಟ್ ಧಾಳಿಯ ವಿರುದ್ಧ ಸ್ವತಂತ್ರ ರಾಷ್ಟ್ರಗಳು ತಮ್ಮ ರಕ್ಷಣೆಯನ್ನು ಮಾಡಿಕೊಂಡಿರಬೇಕು, ಎಂದು ಎಚ್ಚರಿಸಿದ್ದಾರೆ.

ಸ್ವತಂತ್ರ ರಾಷ್ಟ್ರಗಳ ಪರಸ್ಪರ ಸಹಾಯದಿಂದಲೇ ಪ್ರಪಂಚದ ಶಾಂತಿಯೆಂದೂ ಟ್ರೂಮನ್ ತಿಳಿಸಿದ್ದಾರೆ.

ಕಾಂಗ್ರೆಸ್ ಕಾರ್ಯಸಮಿತಿ

ಮಾರ್ಚಿ ೨೧ ರಂದು ಕಲ್ಕತ್ತಾದಲ್ಲಿ ನಡೆಯುವ ಕಾಂಗ್ರೆಸ್ ಕಾರ್ಯಕಾರಿಸಮಿತಿಯ ಸಭೆಗೆ ಅಧ್ಯಕ್ಷ ಪಂಡಿತ ನೆಹರೂ, ಶ್ರೀ ಸಿ ರಾಜಗೋಪಾಲಾಚಾರಿಯವರಿಗೆ ಆಹ್ವಾನವಿತ್ತಿರುವರೆಂದು ತಿಳಿದುಬಂದಿದೆ.

ಮೈಸೂರಿಗೆ ಕೇಂದ್ರ ಗೃಹ ಸಚಿವರು

ಬೆಂಗಳೂರು ಮಾ. ೧೯

ಕೇಂದ್ರ ಗೃಹ ಸಚಿವ ಶ್ರೀ ಕೆ. ಎನ್. ಕಟ್ಜುರವರು ಇದೇ ಮಾಹೆ ೨೪ ರಲ್ಲಿ ಬೆಂಗಳೂರಿಗೆ ಬಂದು ಅದೇ ದಿನ ಮೈಸೂರಿಗೆ ಬಂದು ರಾತ್ರಿ ಇಲ್ಲಿದ್ದು ಮಾರನೇ ದಿನ ಮಡಕೇರಿಗೆ ತೆರಳುವರು. ಅಲ್ಲಿ ನೂತನ ಶಾಸನಸಭೆಯ ಅಧಿವೇಶನ ಪ್ರಾರಂಭ ಮಾಡಿ ೨೭ನೇ ತಾರೀಖು ಮೈಸೂರಿಗೆ ಹಿಂತಿರುಗಿ ಅದೇ ಸಂಜೆ ಬೆಂಗಳೂರು ಮಾರ್ಗವಾಗಿ ಹೈದರಾಬಾದಿಗೆ ಹೋಗುವರು.

ಸಂಸ್ಥಾನಕ್ಕೆ ಕೇಂದ್ರದಿಂದ ಆಹಾರ

ಬೆಂಗಳೂರು ಮಾ ೧೮

ಭಾರತ ಸರ್ಕಾರದಿಂದ ಇತ್ತೀಚೆಗೆ ೧೦,೦೦೦ ಟನ್ ಗೋದಿ ಮತ್ತು ೫೦೦೦ ಟನ್ ಮೈಲೋ, ಬೆಂಗಳೂರಿಗೆ ಬಂದಿದೆ.

೧೯೫೨ ರಲ್ಲಿ ಸಂಸ್ಥಾನಕ್ಕೆ ಕೇಂದ್ರದಿಂದ ನಿಗದಿಯಾಗಿರುವ ೧,೫೦,೦೦೦ ಟನ್‌ಗಳಲ್ಲಿ ಈ ಆಹಾರ ದಾಸ್ತಾನು ಒಂದು ಭಾಗ.

ಪತಿಪತ್ನಿಯರಿಬ್ಬರೂ ಎಲಕ್ಟ್ರಿಕಲ್ ಇಂಜನಿಯರುಗಳು

ತಿರುವಾಂಕೂರಿನ ಶ್ರೀಮತಿ ಲಿಲ್ಲಿ ಶೇಷು ಎಂಬುವರು ಅಮೆರಿಕಾದ ಇಲಿನಾಯ್ ವಿಶ್ವವಿದ್ಯಾನಿಲಯದಲ್ಲಿ ಎಲೆಕ್ಟ್ರಿಕಲ್ ಇಂಜನಿಯರಿಂಗ್ ಅಭ್ಯಾಸ ಮಾಡುತ್ತಿದ್ದಾರೆ.

೫೯,೦೦೦ ವಿದ್ಯಾರ್ಥಿಗಳಿರುವ ಕಾಲೇಜಿನಲ್ಲಿ ಆಕೆ ಬೇಸರವಿಲ್ಲದೆ ಅಭ್ಯಾಸ ನಡೆಸಿದ್ದಾರೆ.

ಶ್ರೀಮತಿ ಶೇಷುರವರ ಪತಿಯೂ ಎಲೆಕ್ಟ್ರಿಕಲ್ ಇಂಜನಿಯರ್ ಆಗಿದ್ದು ಶೀಘ್ರದಲ್ಲಿಯೇ ಅಮೆರಿಕಕ್ಕೆ ತೆರಳಲಿರುವರು. ಶ್ರೀಮತಿ ಶೇಷುರವರಿಗೆ ಫುಲ್‌ಬ್ರೈಟ್ ಮತ್ತು ಸ್ಮಿತ್ ಮುಂಡಟ್ ವಿದ್ಯಾರ್ಥಿವೇತನ ಸಿಕ್ಕಿದೆ.

ಸಿಗರೇಟ್ ಸೇದಿದ್ದಕ್ಕೆ ಜುಲ್ಮಾನೆ

ಸಿಂಗಪುರದಲ್ಲಿ ರಿಕ್ಷಾ ಡ್ರೈವರ್ ಹಾರಿ ಎಂಬುವನು ಪ್ರಯಾಣಿಕರೊಬ್ಬರನ್ನು ಕೂಡಿಸಿಕೊಂಡು ರಿಕ್ಷಾ ಎಳೆಯುತ್ತಿದ್ದಾಗ ಸಿಗರೇಟು ಸೇದಿದುದಕ್ಕಾಗಿ ಆತನಿಗೆ ೫ ಡಾಲರ್ ಜುಲ್ಮಾನೆ ಹಾಕಲಾಯಿತು. ಪ್ರಯಾಣಿಕರೇ ತನಗೆ ಸಿಗರೇಟು ಕೊಟ್ಟದ್ದಾಗಿ ಆತ ಕೋರ್ಟಿಗೆ ತಿಳಿಸಿದನು. ಆದರೆ ವಿನಯ ಸಂಪ್ರದಾಯವು ಶಿಸ್ತಿನ ಭಂಗಕ್ಕೆ ದಾರಿಯಾಗಬಾರದೆಂದು ಆತನಿಗೆ ತಿಳಿಸಲಾಯಿತು.

ಡಾ|| ಜಯಕರರ ರಾಜೀನಾಮೆ

ವಿಶ್ವವಿದ್ಯಾನಿಲಯದ ಉಪಸ್ಥಾನಪತಿ ಸ್ಥಾನಕ್ಕೆ ಡಾ|| ಎಂ ಆರ್ ಜಯಕರರು ರಾಜೀನಾಮೆ ಸಲ್ಲಿಸಿದ್ದಾರೆ. ಕಾರ್ಯನಿರ್ವಾಹಕ ಮಂಡಲಿಗೆ ಕಳಿಸಿರುವ ಈ ಪತ್ರದಲ್ಲಿ ಅವರು ತಮ್ಮ ನಿರ್ಧಾರಕ್ಕೆ ಕಾರಣವೇನೆಂಬುದನ್ನು ತಿಳಿಸಿಲ್ಲ.

ಬಿರ್ಲಾರಿಂದ ಲಕ್ಷ ರೂ. ದಾನ

ಮದರಾಸಿನ ಟೆಕ್ನಾಲಜಿ ಇನ್‌ಸ್ಟಿಟ್ಯೂಟಿಗೆ ಶ್ರೀ ಘನಶ್ಯಾಮದಾಸ್ ಬಿರ್ಲಾರವರು ಒಂದು ಲಕ್ಷ ರೂಗಳ ಕಾಣಿಕೆ ಸಲ್ಲಿಸಿದ್ದಾರೆ ಎಂಬುದಾಗಿ ಮದರಾಸ್ ಗವರ್ನರ್ ಶ್ರೀ ಶ್ರೀಪ್ರಕಾಶರವರು ಪ್ರಕಟಿಸಿದ್ದಾರೆ. ಈ ಮೊಬಲಗನ್ನು ಹಾಸ್ಟಲ್ ಕಟ್ಟಲು ಉಪಯೋಗಿಸಲಾಗುವುದೆಂದೂ ಅದಕ್ಕೆ ಬಿರ್ಲಾ ಹೆಸರನ್ನು ಇಡಲಾಗುವುದೆಂದು ನುಡಿದರು.

ಡಾ|| ರಾಜೇಂದ್ರಪ್ರಸಾದರು ಪುನಃ ರಾಷ್ಟ್ರಾಧ್ಯಕ್ಷರು ?

ಭಾರತ ನೂತನ ರಾಜ್ಯಾಂಗ ಪ್ರಕಾರ ರಾಷ್ಟ್ರಾಧ್ಯಕ್ಷರ ಚುನಾವಣೆಯು ಮೇ ೨ನೇ ತಾರೀಖು ನಡೆದು ೬ನೇ ತಾರೀಖು ಫಲಿತಾಂಶ ಹೊರಬೀಳುತ್ತದೆ. ಕಾಂಗ್ರೆಸ್ ಪರವಾಗಿ ಡಾ|| ರಾಜೇಂದ್ರಪ್ರಸಾದರವರನ್ನೇ ನೂತನ ರಾಷ್ಟ್ರಾಧ್ಯಕ್ಷರನ್ನಾಗಿ ಚುನಾಯಿಸಲಾಗುತ್ತದೆಯೆಂದು ಹೇಳಲಾಗುತ್ತಲಿದೆ. ಸ್ಪರ್ಧೆ ನಡೆಯಬಹುದೆಂದು ಊಹಿಸಲಾಗಿದೆ.

ಉಪರಾಷ್ಟ್ರಾಧ್ಯಕ್ಷರ ಚುನಾವಣೆಯು ಮೇ ೧೨ನೇ ತಾರೀಖು ನಡೆಯುತ್ತದೆ. ಹೊಸ ಪಾರ್ಲಿಮೆಂಟ್ ಮತ್ತು ಹಿರಿಯ ಶಾಸನಸಭೆಗಳು ಮೇ ೧೩, ೧೪ ರಲ್ಲಿ ಸೇರುತ್ತವೆ. ೧೫ನೇ ತಾರೀಖು ಪಾರ್ಲಿಮೆಂಟಿನ ಅಧ್ಯಕ್ಷರ ಚುನಾವಣೆ ನಡೆಯುತ್ತದೆ.

ವುಡ್ ಲ್ಯಾಂಡ್ಸ್
೧೪—೩—೫೨ ರಿಂದ
ಅಮೋಘವಾದ ೫ನೇ ವಾರ
ದಿನವಹಿ 3 ಪ್ರದರ್ಶನಗಳು
ಅಲ್‌ಬೇಲ
ಪಾತ್ರ:- ಗೀತಾಬಾಲಿ, ಭಗವಾನ್. ಬದರೀಪ್ರಸಾದ್, ಸುಂದರ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪೪ (ರಿಂಗ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೦—೩—೧೯೫೨ನೇ ಗುರುವಾರ [ಸಂಚಿಕೆ ೧೬೩

ಹೊಸ ಮಂತ್ರಿಮಂಡಲದಲ್ಲಿ ಯಾರ‍್ಯಾರು ?

(ರಾಜಕೀಯ ಬಾತ್ಮಿದಾರರಿಂದ)

ಬೆಂಗಳೂರು ಮಾ- ೨೦

ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷವು ಶ್ರೀ ಕೆ. ಹನುಮಂತಯ್ಯನವರನ್ನು ನಾಯಕರನ್ನಾಗಿ ಒಮ್ಮತದಿಂದ ಚುನಾಯಿಸಿಕೊಳ್ಳಬೇಕೆಂದು ಪಂಡಿತ ನೆಹರೂರವರಿಂದ ಪತ್ರಬಂದಿರುವುದರಿಂದ ನಾಯಕರಾರೆಂಬುದು ನಿರ್ಧಾರವಾಯಿತು. ಈಗ ಮಂತ್ರಿಗಳಾರೆಂಬುದಕ್ಕೆ ಪ್ರಮುಖ ವಿಷಯವಾಗಿದೆ.

ಈಗಾಗಲೇ ಈ ವಿಷಯದಲ್ಲಿ ಮಾತುಕತೆಗಳು ಪ್ರಾರಂಭವಾಗಿದೆ. ಶ್ರೀಗಳಾದ ಎ. ಜಿ. ರಾಮಚಂದ್ರರಾವ್, ಟಿ ಚನ್ನಯ್ಯ ಟಿ. ಸಿದ್ದಲಿಂಗಯ್ಯನವರುಗಳು ಮಂತ್ರಿಗಳಾಗುವುದರಲ್ಲಿ ಸಂದೇಹಕಾರಣ ಬರುವುದಿಲ್ಲ. ಮಂತ್ರಿಮಂಡಲದಲ್ಲಿ ಕೇವಲ ೬ ಜನ ಸಚಿವರು ಸಾಕೆಂದು ಈಗಾಗಲೇ ತೀರ್ಮಾನಿಸಿರುವುದಾಗಿಯೂ ಇದರಲ್ಲಿ ೨ ಸ್ಥಾನಗಳನ್ನು ಈಗಿನ ಮಂತ್ರಿಮಂಡಲದಲ್ಲಿರುವವರಿಗೆ ಕೊಡಲಾಗುತ್ತದೆಯೆಂದೂ ಹೇಳಲಾಗಿದೆ. ಇವರಿಬ್ಬರಾರೆಂಬುದು ರಿಸ್ಕಿನದಾಗಿ ವಿಚಾರಣೆಯಾಗಬೇಕಾಗಿದೆ. ಶ್ರೀಗಳಾದ ಟಿ. ಮರಿಯಪ್ಪ ಮತ್ತು ಕೆ. ಟಿ. ಭಾಷ್ಯಂರವರ ಹೆಸರೇ ಮುಖ್ಯವಾಗಿ ಕೇಳಲ್ಪಡುತ್ತಿದೆ.

ಈ ಕ್ರಮವನ್ನು ಅನುಸರಿಸಿದಲ್ಲಿ ಶ್ರೀ ಚನ್ನಯ್ಯನವರ ಪಕ್ಷದವರು ಶ್ರೀ ಹನುಮಂತಯ್ಯನವರಿಗೆ ಪೂರ್ಣ ಬೆಂಬಲ ನೀಡುವರೆಂದು ಹೇಳಲಾಗಿದೆ. ಉಭಯಪಕ್ಷದವರಲ್ಲಿ ಕೆಲವರನ್ನು ಆರಿಸಿಕೊಂಡು ಉಪಮಂತ್ರಿಗಳನ್ನಾಗಿ ನೇಮಕಮಾಡಲಾಗುವುದೆಂದೂ ಹೇಳಲಾಗಿದೆ.

ಪ್ರಭಾ * 21–3–52 ರಿಂದ ಅಮೋಘವಾದ 2ನೇ ವಾರ
ಪ್ರತಿದಿನ 3 ಆಟಗಳು
ಕಿಶೋರ್‌ಸಾಹು ಮತ್ತು ಬಿನಾರಾಯ್ ನಟಿಸಿರುವ ಸಪ್ನ

ಹೈದರಾಬಾದಿನಲ್ಲಿ ಟೆಲಿಫೋನ್ ವ್ಯವಸ್ಥೆ

ಕಟ್ಟಡವು ಸಿದ್ಧವಾದೊಡನೆಯೇ ಹೈದರಾಬಾದಿನಲ್ಲಿ ಆಟೋಮ್ಯಾಟಿಕ್ ಟೆಲಿಫೋನ್ ವ್ಯವಸ್ಥೆ ಮಾಡಲಾಗುವುದೆಂದು ಅಂಚೆ ಮತ್ತು ತಂತಿ ಇಲಾಖಾ ಡೈರೆಕ್ಟರ್ ಜನರಲ್ ತಿಳಿಸಿರುವರು.

ಡಾ|| ಗ್ರಹಾಂ ಪುನಃ ಕರಾಚಿಗೆ

ದೆಹಲಿಯಲ್ಲಿ ಪ್ರಧಾನಿ ನೆಹರೂರೊಡನೆ ಮಾತುಕತೆ ನಡೆಸಿಕೊಂಡು ಕಾಶ್ಮೀರ ಪ್ರತಿನಿಧಿ ಡಾ|| ಗ್ರಹಾಂರವರು ಪುನಃ ಕರಾಚಿಗೆ ನಿನ್ನೆ ತೆರಳಿದರು.

ಕಾಮನ್‌ವೆಲ್ತ್ ಸಮ್ಮೇಳನ

ಕಲ್ಕತ್ತಾದಲ್ಲಿ ಪಶ್ಚಿಮಬಂಗಾಳದ ಮುಖ್ಯಮಂತ್ರಿ ಡಾ|| ಬಿ. ಸಿ. ರಾಯರವರು ಕಾಮನ್ವೆಲ್ತ್ ಸಮ್ಮೇಳನವನ್ನು ಪ್ರಾರಂಭಿಸಿದರು. ಬ್ರಿಟನ್, ಕೆನಡಾ ಮುಂತಾದ ಅನೇಕ ರಾಷ್ಟ್ರಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಹಾಜರಿದ್ದರು.

ನ್ಯಾಯಬಾಹಿರವಾದುದು

ಯೂರೋಪಿಯನರಿಗೆ ಪ್ರತ್ಯೇಕ ಮತದಾನ ಪಟ್ಟಿಗಳನ್ನು ತಯಾರಿಸಿ ಯೂರೋಪಿಯನ ಸದಸ್ಯರಿಗೆ ಮಾತ್ರ ಅವರು ಮತ ನೀಡಬೇಕೆಂದು ದಕ್ಷಿಣ ಆಫ್ರಿಕಾವು ಮಾಡಿರುವ ಶಾಸನವು ನ್ಯಾಯಬಾಹಿರವೆಂದು ದಕ್ಷಿಣ ಆಫ್ರಿಕಾ ಸುಪ್ರೀಂ ಕೋರ್ಟು ತೀರ್ಮಾನ ಮಾಡಿದೆ.

ಮದರಾಸಿನಲ್ಲಿ ಚಿನ್ನ ಬೆಳ್ಳಿ ದರಗಳು

20–3–52	ರೂ.
ಸವರನ್	66–0
"	66–10
ಚಿನ್ನ ತೊಲ	91–0
" ಮೂಸ	90–0
ಬೆಳ್ಳಿ 100 ತೊಲ	158–0
" ತೊಲ	1–11

ಆಹಾರ ಸರಬರಾಜಿನಿಂದ ಸಂಸ್ಥಾನಕ್ಕೆ ೩|| ಕೋಟಿ ರೂಪಾಯಿ ನಷ್ಟ

ರಾಜ್ಯಾಂಗದ ೩೭೧ನೇ ನಿಬಂಧನೆಗೆ ವಿನಾಯಿತಿ ಕೊಟ್ಟದ್ದಕ್ಕೆ ರಾಷ್ಟ್ರಾಧ್ಯಕ್ಷರಿಗೆ ವಂದನೆ

ಬೆಂಗಳೂರು ಮಾ ೨೦

ಮೈಸೂರು ಶಾಸನಸಭೆಯ ಕೊನೆಯ ಅಧಿವೇಶನವು ಇಂದು ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಮೈಸೂರು ರಾಜಪ್ರಮುಖರು ಪ್ರಾರಂಭಭಾಷಣ ಮಾಡಿದರು. ಶಾಸನಸಭೆಯ ಇಲ್ಲಿಯವರೆಗಿನ ಕಾರ್ಯಗಳಿಗೆ ತಮ್ಮ ಮೆಚ್ಚಿಗೆಯನ್ನು ಸೂಚಿಸಿದರು. ಶ್ರೀಮನ್ಮಹಾರಾಜರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಪ್ರಾಂತ್ಯದಲ್ಲಿ ಸರ್ಕಾರ ಆಹಾರ ಸರಬರಾಜನ್ನು ಮಾಡುತ್ತಲಿರುವುದರಿಂದ ಮೂರೂವರೆ ಕೋಟಿ ರೂಪಾಯಿಗಳು ನಷ್ಟವಾಗುತ್ತಲಿದೆಯೆಂದರು.

ನಿವೃತ್ತ ಸೈನಿಕರ ವಿಷಯವಾಗಿ ಮಾತನಾಡುತ್ತಾ, ಅವರ ಮರುವಸತಿಗೆ ತಕ್ಕ ವ್ಯವಸ್ಥೆ ಮಾಡಿರುವುದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಮಹಾಚುನಾವಣೆ ವಿಷಯ ಪ್ರಸ್ತಾಪಿಸಿ ಮೈಸೂರುಸಂಸ್ಥಾನದಲ್ಲಿ ಮಹಾಚುನಾವಣೆಯು ಜಯಪ್ರದವಾಗಿ ನಡೆದುದಕ್ಕೆ ತಮ್ಮ ಮೆಚ್ಚಿಗೆ ಸೂಚಿಸಿದರು.

ಮೈಸೂರುಸಂಸ್ಥಾನಕ್ಕೆ ರಾಜ್ಯಾಂಗದ ೩೭೧ನೇ ನಿಬಂಧನೆ ವಿನಾಯಿತಿ ಕೊಟ್ಟಿರುವುದಕ್ಕೆ ರಾಷ್ಟ್ರಾಧ್ಯಕ್ಷರಿಗೆ ವಂದನೆಗಳನ್ನರ್ಪಿಸಿದರು.

ಕಾಂಗ್ರೆಸ್ ಮಂತ್ರಿ ಮಂಡಲವೇ ಖಂಡಿತ

ಮದ್ರಾಸ್‌ಪ್ರಾಂತ್ಯದಲ್ಲಿ ಕಾಂಗ್ರೆಸ್ ಹೊಸ ಮಂತ್ರಿಮಂಡಲವನ್ನು ಏರ್ಪಡಿಸುವುದರಲ್ಲಿ ಸಂದೇಹವಿಲ್ಲ. ಈ ವಿಷಯದಲ್ಲಿ ಈಗಾಗಲೇ ನಿರ್ಧಾರವಾಗಿದೆ. ಈಚೆಗೆ ಯಾವಪಕ್ಷಕ್ಕೂ ಇಲ್ಲದೆ ೮ ಸ್ವತಂತ್ರ ಸದಸ್ಯರ ಕಾಂಗ್ರೆಸ್ ಪಕ್ಷಕ್ಕೆ ಸೇರುವುದರಿಂದ ಶಾಸನಸಭೆಯಲ್ಲಿ ಕಾಂಗ್ರೆಸ್ ೧೬೦ ಸ್ಥಾನಪಡೆದಿದೆಯೆಂದು ಆಂಧ್ರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಂಜೀವರೆಡ್ಡಿಯವರು ಹೇಳಿರುವರು.

ವ್ಯಾಪಾರ ಒಡಂಬಡಿಕೆ

ಭಾರತ ಮತ್ತು ಪಶ್ಚಿಮ ಜರ್ಮನಿಗೆ ವ್ಯಾಪಾರ ಒಡಂಬಡಿಕೆ ನಡೆದಿದೆ. ಈ ಒಪ್ಪಂದಪ್ರಕಾರ ಭಾರತಕ್ಕೆ ಜರ್ಮನಿಯಿಂದ ಅನೇಕ ವಸ್ತುಗಳು ಸರಬರಾಜಾಗುತ್ತವೆ.

ವ್ಯವಸಾಯ ಮತ್ತು ಪಶುಪಾಲನಾ ಸಮ್ಮೇಳನ

ಭಾರತದ ನಾನಾ ಭಾಗಗಳ ವ್ಯವಸಾಯ ಮತ್ತು ಪಶುಪಾಲನಾಧಿಕಾರಿಗಳು ಇಂದೂರಿನಲ್ಲಿ ಸಮ್ಮೇಳನದಲ್ಲಿ ಭಾಗವಹಿಸುತ್ತಲಿರುವರು. ನಿನ್ನೆ ಆದಿನ ರಾಜಪ್ರಮುಖರು ಪ್ರಾರಂಭೋತ್ಸವ ನಡೆಸಿದರು. ಆಹಾರ ಸಚಿವ ಶ್ರೀ ಮುನ್ಷಿಯವರು ಹಾಜರಿದ್ದರು.

ಕೃಷ್ಣಾ ಯೋಜನೆ

ಕೃಷ್ಣಾಯೋಜನೆಯನ್ನು ಪಂಚವಾರ್ಷಿಕ ಯೋಜನಾಪಟ್ಟಿಯಲ್ಲಿ ಸೇರಿಸಿಕೊಂಡು ಮದರಾಸ್ ಮತ್ತು ಹೈದರಾಬಾದ್ ಸರ್ಕಾರಗಳು ಸಂಯುಕ್ತವಾಗಿ ನಡೆಸಬೇಕೆಂದು ಹೈದರಾಬಾದ್‌ಸರ್ಕಾರ ನಿರ್ಧರಿಸಿದೆ.

ಶ್ರೀ ಎ.ಎಸ್. ಪಟ್ವರ್ಧನ್

ಮಧ್ಯಭಾರತದ ಶಾಸನಸಭೆಗೆ ಕಾಂಗ್ರೆಸ್‌ಪಕ್ಷದ ಶ್ರೀ ಎ. ಎಸ್. ಪಟ್ವಾರ್ಧನ್‌ರವರು ಸ್ಪೀಕರಾಗಿ ಚುನಾಯಿತರಾಗಿದ್ದಾರೆ. ಇವರು ಹಳೆಯ ಶಾಸನಸಭೆಯಲ್ಲಿ ಡೆಪ್ಯುಟಿ ಸ್ಪೀಕರಾಗಿದ್ದರು.

ಭೂಪಾಲ್ ಸರ್ಕಾರ

ಭೂಪಾಲಿನಲ್ಲಿ ಸರ್ಕಾರವನ್ನು ಕಾಂಗ್ರೆಸ್ ಪಕ್ಷದ ನಾಯಕರ ರಚಿಸಿದರು. ಮುಖ್ಯಮಂತ್ರಿ ಶಂಕರದಯಾಳ್‌ಶರ್ಮ ಮತ್ತು ಇತರಇಬ್ಬರು ಮಂತ್ರಿಗಳು ನಿನ್ನೆ ಪ್ರಮಾಣ ಸ್ವೀಕಾರ ಮಾಡಿದರು.

ಸರ್ ಆರ್ಕಿಬಾಲ್ಡ್‌ನೇ

ಭಾರತದಲ್ಲಿ ಬ್ರಿಟನ್ ಹೈಕಮೀಷನರಾಗಿದ್ದ ಸರ್ ಆರ್ಕಿಬಾಲ್ಡ್‌ನೇಯವರು ತಮ್ಮ ಪತ್ನೀಸಮೇತ ನಿನ್ನೆ ಲಂಡನ್ನಿಗೆ ತೆರಳಿದರು. ಕಳೆದ ಮೂರುವರೆ ವರ್ಷಗಳಿಂದ ಅವರು ಭಾರತದಲ್ಲಿ ಹೈಕಮೀಷನರಾಗಿದ್ದರು. ಈಗ ಅವರು ಕೆನಡಾದಲ್ಲಿ ಹೈಕಮೀಷನರಾಗಿ ನೇಮಕವಾಗಿದ್ದಾರೆ.

ಟೆಲಿಫೋನ್ ಸಂಬಂಧ

ಬದರೀನಾಥ್ ಮತ್ತು ಕೇದಾರ್‌ನಾಥ ನಡುವೆ ಮುಂದಿನಮಾಹೆಯಲ್ಲಿ ಟೆಲಿಫೋನ್ ಸಂಬಂಧ ಕಲ್ಪಿಸಲಾಗುವುದೆಂದು ಹೇಳಲಾಗಿದೆ.

ಶ್ರೀರಾಮನವಮಿ ಮಹೋತ್ಸವ

ಶ್ರೀ ಕಾಂಚೀಕಾಮಕೋಟಿಪೀಠಾಧಿಪತಿ ಜಗದ್ಗುರು ಶ್ರೀ ಶಂಕರಾಚಾರ್ಯಸ್ವಾಮಿಗಳವರ ಶ್ರೀಮಠದ ಶ್ರೀ ಕಾರ್ಯಸಂಸ್ಥಾಧಿಕಾರಿಯು ಶ್ರೀ ಸ್ವಾಮಿಗಳವರ ಅಭಿಪ್ರಾಯ ಪ್ರಕಾರ ನಮ್ಮ ದೇಶದಲ್ಲಿರುವ ಎಲ್ಲಾ ಹಿಂದುಗಳಿಗೆ ವಿಜ್ಞಾಪಿಸುವುದೇನೆಂದರೆ—

ಶ್ರೀರಾಮನವಮಿ (೩—೪—೧೯೫೨) ಪುಣ್ಯಕಾಲದಲ್ಲಿ ಒಬ್ಬೊಬ್ಬರು ತಮ್ಮ ಮಾತೃಭಾಷೆಯಲ್ಲಿ ವಚನರೂಪದಲ್ಲಿರುವ ಶ್ರೀ ರಾಮನ ಕಥೆಯನ್ನು ಓದಲು ಆರಂಭಿಸಿ ಆ ದಿವಸದಿಂದ ಪ್ರತಿದಿವಸವೂ ಸ್ವಲ್ಪ ಸ್ವಲ್ಪವಾಗಿ ಓದಿ ಮುಂದಿನ ಪುನರ್ವಸು ನಕ್ಷತ್ರ (೩೦—೪—೧೯೫೨) ದಲ್ಲಿ ಪಟ್ಟಾಭಿಷೇಕ ಕಥೆಯನ್ನು ಓದಿ ಪೂರ್ತಿ ಮಾಡಬೇಕು.

ಹಿಂದೀ ಪಂಡಿತರುಗಳು ತುಳಸೀದಾಸರು ರಚಿಸಿರುವ ಶ್ರೀರಾಮಚರಿತಮಾನಸದಲ್ಲಿ ಶ್ರೀರಾಮನವಮಿ ದಿವಸ ಅವತಾರ ಘಟ್ಟವನ್ನು ಪಾರಾಯಣಮಾಡಿ ಅನಂತರ ಆ ದಿವಸವೇ ಆರಂಭಿಸಿ ಮುಂದಿನ ಪುನರ್ವಸುವರಂಗೆ ಸುಂದರಕಾಂಡವನ್ನು ಪೂರ್ತಿಯಾಗಿ ಪಾರಾಯಣಮಾಡಿ ಪುನರ್ವಸು ನಕ್ಷತ್ರದಲ್ಲಿ ಪಟ್ಟಾಭಿಷೇಕ ಘಟ್ಟವನ್ನು ಪಾರಾಯಣಮಾಡಿ ಮುಗಿಸಬೇಕು. ಶ್ರೀ ವಾಲ್ಮೀಕಿ ರಾಮಾಯಣ ಉಪದೇಶವಾಗಿರುವ ಸಂಸ್ಕೃತ ಪಂಡಿತರುಗಳು ಈ ಪ್ರಕಾರವೇ ಶ್ರೀರಾಮನವಮಿ ದಿವಸ ಶ್ರೀ ವಾಲ್ಮೀಕಿ ರಾಮಾಯಣದಲ್ಲಿ ಅವತಾರ ಘಟ್ಟವನ್ನು ಪಾರಾಯಣಮಾಡಿ ಅನಂತರ ಆ ದಿವಸವೇ ಆರಂಭಿಸಿ ಮುಂದಿನ ಪುನರ್ವಸುವರಂಗೆ ಸುಂದರಕಾಂಡವನ್ನು ಪೂರ್ತಿಯಾಗಿ ಪಾರಾಯಣಮಾಡಿ ಪುನರ್ವಸು ನಕ್ಷತ್ರದಲ್ಲಿ ಪಟ್ಟಾಭಿಷೇಕ ಘಟ್ಟವನ್ನು ಪಾರಾಯಣಮಾಡಿ ಮುಗಿಸಬೇಕು.

ಶ್ರೀ ವಾಲ್ಮೀಕಿ ರಾಮಾಯಣ ಉಪದೇಶವಿಲ್ಲದವರು ಪಾರಾಯಣ ಮಾಡಲು ಆರಂಭಿಸುವುದಕ್ಕೆ ಮುಂಚಿತವಾಗಿ ನಿತ್ಯವು ನಿಯಮವಾಗಿ ಪಾರಾಯಣ ಮಾಡುವವರಿಂದ ಶ್ರೀ ರಾಮಾಯಣ ಉಪದೇಶವನ್ನು ಪಡೆದುಕೊಂಡು ನಂತರ ಪಾರಾಯಣ ಮಾಡಲು ಆರಂಭಿಸಬೇಕು.

ರಾಮಚರಿತ ಮಾನಸವನ್ನೂ, ವಾಲ್ಮೀಕಿ ರಾಮಾಯಣವನ್ನೂ ಪಾರಾಯಣ ಮಾಡುವವರು ಶ್ರವಣ ಮಾಡುವುದಕ್ಕೆ ಯಾರಾದರೂ ಇದ್ದರೆ ಸಾಯಂಕಾಲ ಅಥವಾ ರಾತ್ರಿಯಲ್ಲಿ ಆ ದಿವಸ ಬೆಳಗ್ಗೆ ಪಾರಾಯಣ ಮಾಡಿದ ಭಾಗಕ್ಕೆ ಅರ್ಥಪ್ರವಚನ ಮಾಡಬೇಕು ಶ್ರವಣ ಮಾಡಲು ಒಬ್ಬರು ಸಿಕ್ಕಿದರೂ ಸಾಕು ಅರ್ಥಪ್ರವಚನವನ್ನು ತಮ್ಮ ಮನೆಯಲ್ಲಿ ಅಥವಾ ಸೌಕರ್ಯವಾದ ಬೇರೆ ಸ್ಥಳದಲ್ಲಿ ಮಾಡಬಹುದು.

ಕುಟುಂಬ ಯೋಜನೆ ಬಗ್ಗೆ ಸಲಹೆ

ಬೆಂಗಳೂರು ಮಾ. ೨೦

'ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರತಿ ಬುಧವಾರ ಸಂಜೆ ೪ ಗಂಟೆಯಿಂದ ೫-೩೦ ರವರೆಗೆ ಕುಟುಂಬ ಯೋಜನೆ ಬಗ್ಗೆ ಸಲಹೆಗಳನ್ನೀಯಲು ಏರ್ಪಾಡುಮಾಡಲಾಗಿದೆ' ಎಂದು ನಿನ್ನೆ ಹೊರಟ ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಪ್ರಕಟಣೆ ಮುಂದುವರಿದು ಒಂದೇ ಸಮನೆ ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕುಟುಂಬಗಳ ವ್ಯವಸ್ಥೆಯಲ್ಲಿ ಹದವಿಲ್ಲದಿರುವ ಕಾರಣಗಳಿಂದಾಗಿ ಕುಟುಂಬ ಯೋಜನೆ ಅಗತ್ಯವಾಗಿದೆಯೆಂದೂ, ಸಕಾಲದಲ್ಲಿ ವೈದ್ಯರನ್ನು ವಿಚಾರಿಸಿ ಕುಟುಂಬ ಯೋಜನೆ ಬಗ್ಗೆ ಅವರ ಸಲಹೆ ಪಡೆಯುವುದರಿಂದ ಆಗುವ ಬಹುಭಾಗ ನಷ್ಟವನ್ನು ತಡೆಯಬಹುದೆಂದೂ, ಈ ಉದ್ದೇಶದಿಂದ ವಿಕ್ಟೋರಿಯಾ ಆಸ್ಪತ್ರೆಯ 'ಔಟ್ ಪೇಷಂಟ್' ಇಲಾಖೆಯಲ್ಲಿ ಕುಟುಂಬ ಯೋಜನೆ ಕ್ಲಿನಿಕ್'ಗಳನ್ನು ತೆರೆದು ಪ್ರತಿ ಬುಧವಾರ, ಎಲ್ಲಾ ಗೃಹಿಣಿಯರಿಗೆ ಸಲಹೆಗಳನ್ನು ಕೊಡಲು ಏರ್ಪಾಡು ಮಾಡಲಾಗಿದೆಯೆಂದೂ ತಿಳಿಸುತ್ತದೆ.

ಈ ಪ್ರಕಾರ ಪಾರಾಯಣ ಮಾಡುವವರು ಕುಂಭಕೋಣ ಶ್ರೀ ಶಂಕರಾಚಾರ್ಯ ಸ್ವಾಮಿಗಳವರ ಶ್ರೀಮಠಕ್ಕೆ ತಾವು ಪಾರಾಯಣ ಆರಂಭಿಸಿದ್ದನ್ನು ತಿಳಿಯಪಡಿಸಿದರೆ ಶ್ರೀರಾಮನಾಮವನ್ನು ಜಪಮಾಡಿಕೊಂಡು ಅರಿಸಿದ ಮಂತ್ರಾಕ್ಷತೆಯನ್ನು ಪುನರ್ವಸು ದಿವಸ ಪಟ್ಟಾಭಿಷೇಕಕ್ಕೆ ಕಳುಹಿಸಲ್ಪಡುವುದು.

ಶ್ರೀ ರಾಮಚರಿತಮಾನಸವನ್ನೂ ಶ್ರೀ ವಾಲ್ಮೀಕಿ ರಾಮಾಯಣವನ್ನೂ ಪಾರಾಯಣ ಮಾಡುವವರು ಪ್ರತಿದಿವಸವೂ ತಾವು ಪಾರಾಯಣ ಮಾಡುವ ಭಾಗಗಳಿಗೆ ಒಂದು ಲೆಖ್ಖ ಬರೆದು ಇಟ್ಟುಕೊಂಡು ೧೮—೪—೧೯೫೨ನೇ ತಾರೀಖು ದಿವಸ ಆ ದಿವಸದವರಿಗೆ ಪಾರಾಯಣ ಮಾಡಿರುವ ಲೆಖ್ಖದ ನಕಲನ್ನು ಶ್ರೀಮಠಕ್ಕೆ ಕಳುಹಿಸಿಕೊಡಬೇಕು.

ಬಟ್ಟೆ ಮೇಲಿನ ಹತೋಟಿ ಬದಲಾವಣೆಯಿಲ್ಲ

ಬೆಂಗಳೂರು ಮಾ. ೨೦

ಉಗಾದಿ ಹಬ್ಬವು ೨೬ನೇ ತಾರೀಖಿನ ದಿನ ಬರುವುದರಿಂದಲೂ ಮತ್ತು ಈ ಹಬ್ಬಕ್ಕೆ ಹಿಂದುಗಳು ಹೊಸ ಬಟ್ಟೆಕೊಳ್ಳುವುದು ಸಾಂಪ್ರದಾಯಕವಾಗಿ ಬಂದಿರುವ ಪದ್ಧತಿಯಾಗಿರುವುದರಿಂದಲೂ ಆ ಹಬ್ಬವು ಕಳೆಯುವವರೆಗೆ, ಮೈಸೂರಿನಲ್ಲಿ ಬಟ್ಟೆ ಹಂಚಿಕೆಯ ವಿಚಾರದಲ್ಲಿ ಇದುವರೆಗೆ ಅನುಸರಿಸಿದ್ದ ನೀತಿಯನ್ನೇ ಮುಂದುವರಿಸಿಕೊಂಡು ಬರಲಾಗುವುದೆಂದೂ ತರುವಾಯ ಪರಿಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ಕಾರ್ಯವನ್ನು ಸರ್ಕಾರದವರು ಕೈಗೊಳ್ಳಲಿರುವರೆಂದೂ ಗೊತ್ತಾಗಿದೆ

ಶಿಕ್ಷೆ ವಿಧಿಸಬೇಕು

ಉತ್ತರ ಪ್ರದೇಶದ ಅಸೆಂಬ್ಲಿ ಬ್ಲಿಟ್ಜ ಪತ್ರಿಕೆಯ ಡೆಪ್ಯುಟಿ ಸಂಪಾದಕರಾದ ಶ್ರೀ ಹೋಮಿ ದೀನ ಷಾಮಿಸ್ತ್ರಿಯವರು ಶಾಸನಸಭೆಗೆ ಅವಮಾನ ಮಾಡಿದರೆಂದು ತೀರ್ಮಾನಿಸಿ ಅಧ್ಯಕ್ಷರು ಅವರನ್ನು ಸಭೆ ಮುಂದೆ ಹಾಜರು ಪಡಿಸಿ ಅವರ ಹೇಳಿಕೆ ತೆಗೆದುಕೊಂಡು ತಕ್ಕ ಶಿಕ್ಷೆಯನ್ನು ವಿಧಿಸಲು ಕ್ರಮವನ್ನು ಕೈಗೊಳ್ಳಬೇಕೆಂದು ತೀರ್ಮಾನಿಸಿದೆ.

ಪೇಟೆ ಧಾರಣೆ

ಮೈಸೂರು ತಾ|| 15-3-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	12	17-2
ಹೊಂಗೆಬೀಜ	"	9	10
ಹುರುಳಿ	"	28-10	32-10
ಹೆಸರು	"	52-10	55-10
ಅವರೆ	"	41-0	45-0
ಮೆ. ಕಾಯಿ	ಮಣಕ್ಕೆ	7-14	15-8
ಹುಣಸೇಹಣ್ಣು	"	2-4	4
ಸೀಗೆಕಾಯಿ	"	3-2	3-11
ತೆಂಗಿನಕಾಯಿ	1100ಕ್ಕೆ	141	185

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಆಹಾರ ಸಬ್‌ಸಿಡಿ ಇನ್ನಿಲ್ಲ

ಬೆಂಗಳೂರು ಮಾ. ೨೦

ಆಹಾರ ಪದಾರ್ಥಗಳನ್ನು ಕಡಿಮೆ ದರದಲ್ಲಿ ಮಾರಾಟ ಮಾಡುವುದಕ್ಕೆ ಸಬ್‌ಸಿಡಿಯನ್ನು ಕೊಡಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರವು ಮೈಸೂರು ಸರ್ಕಾರಕ್ಕೆ ಖಚಿತವಾಗಿ ತಿಳಿಸಿದೆಯೆಂದು ತಿಳಿದು ಬಂದಿದೆ.

ಇದುವರೆಗೆ ಮೈಸೂರು ಸರ್ಕಾರಕ್ಕೆ ಸುಮಾರು ೩—೪ ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ದೊರೆಯುತ್ತಿತ್ತೆಂದೂ ಈಗ ಒಂದು ಕೋಟಿ ರೂಪಾಯಿಗಳಾದರೂ ಸಬ್‌ಸಿಡಿ ಕೊಡಬೇಕೆಂದು ಮೈಸೂರು ಸರ್ಕಾರ ಕೇಂದ್ರವನ್ನು ಕೇಳಿಕೊಂಡಿತ್ತೆಂದೂ ತಿಳಿದುಬನಿದಿದೆ

ವುಡ್ ಲ್ಯಾಂಡ್ಸ್
21—3—52 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ವರ್ಮಾ ಫಿಲಿಂಸ್'ರವರ—
ಪರ್ ಬತ್
(ಹಿಂದಿ)
ಪಾತ್ರ:- ನೂತನ್, ಪ್ರೇಂನಾಥ್
ಕೆ. ಎನ್. ಸಿಂಗ್, ಉಲ್ಲಾಸ್.

ನ್ಯೂ ಅಪೇರ
೧೯—೩—೫೨ ರಿಂದ ಅಮೋಘಪ್ರಾರಂಭ
ದುಖಿಯಾರಿ
(ಹಿಂದಿ).
ಪಾತ್ರ:-ಸುರೇಂದ್ರ, ಚಂದ್ರಮೋಹನ್,
ಮೀನ, ಕಕ್ಕು.

ರಣಜಿತ್
೧೪—೩—೫೨ರಿಂದ ಅಮೋಘ ಪ್ರಾರಂಭ
* ಸಾಖಿ *
ಪಾತ್ರ:- ಮಧುಬಾಲ, ಪ್ರೇಂನಾಥ್.

ರಾಜಕಮಲ್ ಟಾಕೀಸ್, ಮೈಸೂರು
21—3—52 ರಿಂದ ಜನಭರಿತವಾದ 2ನೇ ವಾರ ಪ್ರತಿದಿನ 3 ಆಟಗಳು
ಪಾತಾಳಭೈರವಿಯನ್ನು ನಿರ್ಮಿಸಿ ಪ್ರಖ್ಯಾತರಾದ ಶ್ರೀ "ವಿಜಯಾ" ರವರ ಅತ್ಯಂತ ಕೋಲಾಹಲವನ್ನು ಉಂಟುಮಾಡುತ್ತಿರುವ
* ಮದುವೆ ಮಾಡಿ ನೋಡು *
ಎಂಬ ಶ್ರೇಷ್ಠ ತೆಲುಗು ಚಿತ್ರ
ತಾರಾಗಣ:- ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ಜೋಗ್‌ರಾವ್.
ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿಗಳನ್ನು ೨ಯು ವಾರಗಳು ಮನ್ನಾ ಮಾಡಿದೆ

ಫೋನ್ ೫೭೪ (ಲಂಚ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೨—೩—೧೯೫೨ನೇ ಶನಿವಾರ [ಸಂಚಿಕೆ ೧೭೪

ಮೈಸೂರು ಆಯವ್ಯಯದಲ್ಲಿ ೮೩ ಲಕ್ಷ ೯೫ ಸಾವಿರ ರೂ. ಇಳುವರಿ

ಮದರಾಸಿನಲ್ಲಿ ಆಹಾರಕೊರತೆ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ೨ ಕೋಟಿ ೪೮ ಲಕ್ಷ ರೂ. ಸಹಾಯ

ಬೆಂಗಳೂರು ಮಾ ೨೧

ಮೈಸೂರು ಶಾಸನಸಭೆಯ ಮುಂದೆ ಹಣಕಾಸಿನ ಸಚಿವರು ಮುಂದಿನಸಾಲಿನ ಅಂದಾಜು ಆಯವ್ಯಯ ಪಟ್ಟಿಯನ್ನು ಇದಿನ ಮಂಡಿಸಿದರು.

ಒಟ್ಟು ಉತ್ಪತ್ತಿಯ ಅಂದಾಜು ೧೯ ಕೋಟಿ ೮೨.೮೫ ಲಕ್ಷ ರೂ ವೆಚ್ಚವು ೨೦ ಕೋಟಿ ೬೬.೮೦ ಲಕ್ಷ ರೂ. ಆಹಾರದ ಸಹಾಯದ್ರವ್ಯ ಖೋತಾ, ನೌಕರರಿಗೆ ಹೆಚ್ಚಿಗೆ ತುಟ್ಟಿಭತ್ಯ ಮುಂತಾದುವುಗಳಿಂದಬಜೆಟ್ಟಿನಲ್ಲಿ ೮೩ ಲಕ್ಷ ೯೫ ಸಾವಿರ ರೂಪಾಯಿ ಖೋತಾ ಆಗುವುದಾಗಿ ಗೊತ್ತಾಗಿದೆ.

ಈಗಿನ ತೆರಿಗೆ ಆಧಾರದಮೇಲೆಯೇ ಆಯುವ್ಯಯ ಪಟ್ಟಿ ತಯಾರಿಸಲಾಗಿದೆ ಹೆಚ್ಚಿಗೆ ತೆರಿಗೆ ಯಾವುದೂ ಸೂಚಿಸಿಲ್ಲ.

೨ ಕೋಟಿ ೪೮ ರೂ. ಧನಸಹಾಯ

ಮದರಾಸ್ ಪ್ರಾಂತ್ಯದಲ್ಲಿ ಆಹಾರ ಕೊರತೆ ಪ್ರದೇಶಗಳಲ್ಲಿ ಪರಿಹಾರಕ್ಕಾಗಿ ಕೇಂದ್ರ ಸರ್ಕಾರವು ೨ ಕೋಟಿ ೪೮ ಲಕ್ಷ ರೂಪಾಯಿಗಳನ್ನು ಕೊಡಲು ಅಂಗೀಕಾರವಿತ್ತಿರುವುದಾಗಿ ಆಹಾರ ಸಚಿವ ಶ್ರೀ ಮುನಷಿಯವರು ಮದರಾಸಿನ ಅರ್ಥಸಚಿವ ಶ್ರೀ ಸೀತಾರಾಮಯ್ಯವರಿಗೆ ಪತ್ರ ಬರೆದಿರುವುದಾಗಿ ಗೊತ್ತಾಗಿದೆ.

ಇದರ ಪೈಕಿ ೨ ಕೋಟಿ ಸಾಲದರೂಪವಾಗಿಯೂ ೪೮ ಲಕ್ಷವನ್ನು ಗ್ರಾಂಟು ರೂಪವಾಗಿಯೂ ಕೊಡುವುದಾಗಿ ಹೇಳಲಾಗಿದೆ.

ಶ್ರೀ ಮನ್ಮಹಾರಾಜರೊಡನೆ ಭೇಟಿ

ಬೆಂಗಳೂರು ಮಾ ೨೧

ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ನಿನ್ನೆಯಬೆಳಗ್ಗೆ ೧೦|| ಗಂಟೆಯ ಸಮಯದಲ್ಲಿ ಶ್ರೀಮನ್ಮಹಾರಾಜರನ್ನು ಭೇಟಿಮಾಡಿದ್ದರೆಂದು ತಿಳಿಯಬಂದಿದೆ.

ಕಾಂಗ್ರೆಸ್ ಸ್ಪರ್ಧಿಸುವುದಿಲ್ಲ

ಬೆಂಗಳೂರು ಮಾ ೨೧

ಮೈಸೂರುಹಿರಿಯ ಶಾಸನಸಭೆಗೆ ಪದವೀಧರ ಮತ್ತು ಉಪಾಧ್ಯಾಯರ ಕ್ಷೇತ್ರಗಳಿಗೆ ಮೈಸೂರು ಕಾಂಗ್ರೆಸು ತನ್ನ ಸಂಸ್ಥೆಯಪರವಾಗಿ ಸ್ಪರ್ಧಿಗಳನ್ನು ನಿಲ್ಲಿಸುವುದಿಲ್ಲವೆಂದು ಕಾಂಗ್ರೆಸ್ ಚುನಾವಣಾ ಸಮಿತಿಯು ನಿರ್ಧರಿಸಿದೆ.

ಆದರೆ ಕಾಂಗ್ರೆಸ್'ನವರು ವೈಯಕ್ತಿಕವಾಗಿ ಸ್ಪರ್ಧಿಸಲು ಅಭ್ಯಂತರವೇನೂ ಇಲ್ಲವೆಂದು ತಿಳಿಯಬಂದಿದೆ.

ಪರ್ಷಿಯಾಕ್ಕೆ ಆರ್ಥಿಕ ಸಹಾಯ

ಪರ್ಷಿಯಾದ ಎಣ್ಣೆ ವಿವಾದವು ಇತ್ಯರ್ಥವಾಗುವವರೆಗೆ ಅಮೇರಿಕಾ ಪರ್ಷಿಯಾಕ್ಕೆ ಆರ್ಥಿಕಸಹಾಯ ಮಾಡುವುದಿಲ್ಲವೆಂದು ಅಧ್ಯಕ್ಷ ಟ್ರೂಮನ್'ರವರು ಹೇಳಿರುವರು.

ಕೊಡಗಿನ ಶಾಸನಸಭೆ

ಕೊಡಗಿನ ಪ್ರಥಮ ಶಾಸನಸಭೆಯು ೨೬ನೇ ತಾ|| ಮಡಕೇರಿಯಲ್ಲಿ ಪ್ರಾರಂಭವಾಗಲಿದೆ. ಕೇಂದ್ರ ಗೃಹಸಚಿವ ಶ್ರೀ ಕೆ. ಎನ್. ಕಟ್ಜುರವರು ಪ್ರಾರಂಭೋತ್ಸವ ನಡೆಸುವರು. ಭಾರತ ಶ್ರೇಷ್ಠ ದಂಡನಾಯಕ ಜ|| ಕಾರಿಯಪ್ಪ ಮತ್ತು ಮೈಸೂರು, ಮದ್ರಾಸ್ ಮುಖ್ಯಮಂತ್ರಿಗಳಿಗೆ ಈಸಭೆಗೆ ವಿಶೇಷ ಆಹ್ವಾನವನ್ನು ಕೊಡಲಾಗಿದೆ.

ಮದರಾಸಿನಲ್ಲಿ ಚಿನ್ನ ಬೆಳ್ಳಿ ದರಗಳು

21-3-52	ರೂ.
ಸವರನ್	70-0
"	70-4
ಚಿನ್ನ ತೊಲ	95-8
" ಮುಷ	94-0
ಬೆಳ್ಳಿ 100 ತೊಲ	165-0
" ತೊಲ	1-12

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ಕಾಂಗ್ರೆಸ್ ಕಾರ್ಯಕಾರಿಸಮಿತಿಯ ಸಭೆ ನಿನ್ನೆಯದಿನ ಶ್ರೀ ನೆಹರೂರವರ ಅಧ್ಯಕ್ಷತೆಯಲ್ಲಿ ಕಲ್ಕತ್ತಾದಲ್ಲಿ ನಡೆಯಿತು.

ಹತ್ತಿಬೀಜದ ಎಣ್ಣೆ ತಯಾರಿಕೆ

ಅನಂತಪುರದಲ್ಲಿರುವ ಎಣ್ಣೆ ಪರಿಶೋಧನಾಕೇಂದ್ರದಲ್ಲಿ ಹತ್ತಿಬೀಜದಿಂದ ಎಣ್ಣೆ ತಯಾರಿಸಲು ತಕ್ಕ ಸಂಶೋಧನೆಯನ್ನು ನಡೆಸಲು ಮದ್ರಾಸ್ ಸರ್ಕಾರ ನಿರ್ಧರಿಸಿದೆ.

ಇದಕ್ಕಾಗಿ ತಗಲುವ ಸುಮಾರು ಒಂದುಲಕ್ಷರೂಪಾಯಿ ವೆಚ್ಚದಲ್ಲಿ ಅರ್ಧಭಾಗವನ್ನು ಕೇಂದ್ರ ಎಣ್ಣೇಬೀಜ ಸಮಿತಿಯು ವಹಿಸಿಕೊಳ್ಳುತ್ತದೆ.

ಸಂಶೋಧನೆಯು ಉಪಯುಕ್ತವಾದಲ್ಲಿ ಸುಮಾರು ೫ ಕೋಟಿ ರೂಪಾಯಿಗಳ ಬೆಲೆಯ ಎಣ್ಣೆಯನ್ನು ತಯಾರಿಸಲು ಸಾಧ್ಯವಾಗುತ್ತದೆ.

೬೦ ವರ್ಷದವರು ಎಸ್.ಎಸ್.ಸಿ. ಪರೀಕ್ಷೆಗೆ

ಭೋಟಾ ಉದಯಪುರದ ಪ್ರಾಥಮಿಕ ಶಾಲೆಯ ೬೦ ವರ್ಷ ವಯಸ್ಸಿನ ಉಪಾಧ್ಯಾಯರೊಬ್ಬರು ಈಸಾರಿ ಎಸ್.ಎಸ್.ಸಿ. ಪರೀಕ್ಷೆಗೆ ಕುಳಿತಿದ್ದಾರೆ. ಇವರೊಂದಿಗೆ ಇವರ ಇಬ್ಬರು ಹೆಣ್ಣುಮಕ್ಕಳೂ ಸಹ ಇದೇ ಪರೀಕ್ಷೆಗೆ ಒಂದೇ ವಿಷಯಗಳಿಗೆ ಕುಳಿತಿದ್ದಾರೆ

೬೦ ವರ್ಷ ವಯಸ್ಸಾದ ಇನ್ನಿಬ್ಬರೂ ಸಹ ಇದೇ ಪರೀಕ್ಷೆಗೆ ಕುಳಿತಿದ್ದಾರೆ.

ಸಂಧಾನ ಮುಕ್ತಾಯ

ಕಾಶ್ಮೀರದಲ್ಲಿ ವಿಶ್ವಸಂಸ್ಥೆಯ ಪ್ರತಿನಿಧಿಯಾದ ಡಾ|| ಗ್ರಹಾಂರವರು ತಮ್ಮ ಮಾತುಕಥೆಗಳನ್ನು ಪೂರೈಸಿಕೊಂಡು ಕರಾಚಿಗೆ ಹೋಗಿರುವರು. ಅವರು ಪುನಃ ಭಾರತಕ್ಕೆ ಬರುವುದಿಲ್ಲ ಈ ವಾರಾಂತ್ಯದಲ್ಲಿ ಅವರು ವಿಶ್ವಸಂಸ್ಥೆಗೆ ತಮ್ಮ ವರದಿಯನ್ನು ಒಪ್ಪಿಸಲಿರುವರು.

ಆಹಾರವಿಲ್ಲದೆ ಮರಣ

ಮಾರ್ಚಿ ಒಂದನೇತಾರೀಖು ಅನಂತಪುರಜಿಲ್ಲೆಯ ಕದಿರಿ ಎಂಬ ಗ್ರಾಮದಲ್ಲಿ ಇಬ್ಬರು ಆಹಾರವಿಲ್ಲದೆ ಮರಣಹೊಂದಿದರೆಂದು ಕಮ್ಯೂನಿಸ್ಟ್ ಪಕ್ಷದವರು ಹೇಳಿರುವರು. ಆದರೆ ಅಧಿಕಾರವರ್ಗದವರು ನಿರಾಕರಿಸಿದ್ದಾರೆ.

ಚುನಾವಣೆಯಲ್ಲಿ ಅಧಿಕಾರಿಗಳ ಪಾತ್ರ

ಬೆಂಗಳೂರು ಮಾ ೨೧

ಶ್ರೀಗಳಾದ ಹೆಚ್ ಬಿ ಗುಂಡಪ್ಪಗೌಡ, ಚಿತ್ರದುರ್ಗದ ಎಕ್ಸಿಕ್ಯುಟಿವ್ ಇಂಜನಿಯರ್ ಶ್ರೀ ಸಿದ್ದಬಸವಯ್ಯ ಮುಂತಾದ ೨೨ ಜನ ಅಧಿಕಾರಿಗಳ ಮೇಲೆ ಚುನಾವಣೆಗಳಲ್ಲಿ ಪಕ್ಷವಹಿಸಿದ್ದರೆಂಬ ದೂರುಗಳು ಬಂದಿದ್ದವೆಂದೂ, ಆ ಪೈಕಿ ಚಿತ್ರದುರ್ಗದ ಇಂಜನಿಯರು, ಚಿಂತಾಮಣಿ ಅಮಲ್ದಾರ್, ಹೈಕೋರ್ಟಿನ ಗುಮಾಸ್ತ, ಶ್ರೀ ಜಿ ಎಸ್ ರುದ್ರಪ್ಪ, ಮತ್ತು ಇನ್ನೊಬ್ಬರ ಮೇಲಿನ ಅಪಾದನೆಗಳು ನಿರಾಧಾರವಾದುವೆಂದು ಗೊತ್ತಾಯಿತೆಂದೂ, ಉಳಿದವರ ಮೇಲಿನ ದೂರುಗಳು ತನಿಖೆಯಲ್ಲಿವೆಯೆಂದೂ ಶ್ರೀ ಕೆ ಟಿ ಭಾಷ್ಯಂರವರು ಶಾಸನ ಸಭೆಯಲ್ಲಿ ಪ್ರಶ್ನೆಗೆ ಉತ್ತರವಿತ್ತರು.

ಮೂಲ ವಿದ್ಯಾಭ್ಯಾಸ ಶಿಕ್ಷಣ

ಕೂಡಲೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಬದಲಾಗಿ ಮೂಲ ವಿದ್ಯಾಭ್ಯಾಸವನ್ನು ಜಾರಿಗೆ ತರಬೇಕೆಂದು ಕೇಂದ್ರ ವಿದ್ಯಾ ಸಲಹಾಸಮಿತಿ ಇತ್ತೀಚೆಗೆ ದೆಹಲಿಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದೆ

ತಮಿಳು ದೇಶಭಾಷೆ

ಸಿಂಹಳದ್ವೀಪದಲ್ಲಿ ಸಿಂಹಳಭಾಷೆಯು ಸ್ವಲ್ಲದೆ ತಮಿಳುಭಾಷೆಯನ್ನೂ ಸರ್ಕಾರಿ ಭಾಷೆಯನ್ನಾಗಿ ಉಪಯೋಗಿಸಬೇಕೆಂದು ನಿರ್ಧರಿಸಲಾಗಿದೆ.

ಶ್ರೇಷ್ಠ ನ್ಯಾಯಾಲಯದ ತೀರ್ಪಿಗೆ ಸ್ವಾಗತ

ದಕ್ಷಿಣ ಆಫ್ರಿಕಾದಲ್ಲಿ ಯೂರೋಪೇತ್ಯರಿಗೆ ಸಂಬಂಧಪಟ್ಟ ಮತದಾನಕ್ಕೆ ಸರ್ಕಾರದ ಕಾನೂನು ನ್ಯಾಯಬಾಹಿರವೆಂದು ಅಲ್ಲಿಯ ಶ್ರೇಷ್ಠ ನ್ಯಾಯಾಲಯವಿತ್ತಿರುವ ತೀರ್ಪನ್ನು ಕಾಂಗ್ರೆಸ್ ಕಾರ್ಯಕಾರಿಸಮಿತಿ ಸ್ವಾಗತಿಸಿದೆ.

ಶಾಸನಸಭಾಧಿವೇಶನಾರಂಭ

ಮದ್ರಾಸಿನಲ್ಲಿ ನೂತನ ಶಾಸನಸಭಾರಂಭವು ಹಂಗಾಮಿ ಅಧ್ಯಕ್ಷ ಶ್ರೀ ನರಸಿಂಗರಾಯರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಮುಖ್ಯಮಂತ್ರಿ ಶ್ರೀ ರಾಮಕೃಷ್ಣರಾಯರು ಇತರ ೧೨ ಮಂತ್ರಿಗಳು, ಇತರ ಸದಸ್ಯರು ಪ್ರಮಾಣವಚನ ಸ್ವೀಕಾರ ಮಾಡಿದರು.

ಗುಲ್ಜಾರ್

ಪಂಜಾಬಿನಲ್ಲಿ ಐದೂವರೆ ವರ್ಷದ ಗುಲ್ಜಾರ್' ಎಂಬ ಹಸುವು ಭಾರತದಲ್ಲೆಲ್ಲಾ ಹೆಚ್ಚಿನಪ್ರಮಾಣದಲ್ಲಿ ಹಾಲು ಕೊಟ್ಟಿರುವುದಕ್ಕಾಗಿ ಭಾರತ ವ್ಯವಸಾಯ ಸಮಿತಿಯವರಿಂದ ೧೦೦೦ ರೂಪಾಯಿಗಳು ಬಹುಮಾನ ಪಡೆದಿದೆ. ಈ ಹಸುವು ಈಗಾಗಲೇ ಮೂರುಸಲ ಬಹುಮಾನವನ್ನು ಪಡೆದಿದೆ.

ಮೈಸೂರು ಶಾಸನಸಭಾಧಿವೇಶನಾರಂಭ

ಬೆಂಗಳೂರು ಮಾ. ೨೧

ಶ್ರೀಮನ್ಮಹಾರಾಜರು ನಿನ್ನೆಯ ದಿನ ಮಧ್ಯಾಹ್ನ ಮೈಸೂರು ಶಾಸನಸಭೆಯ ಅಧಿವೇಶನವನ್ನು ಪ್ರಾರಂಭಿಸಿದರು. ತಮ್ಮ ಭಾಷಣದಲ್ಲಿ ಅವರು ಮೈಸೂರಿನ ಇಂದಿನ ಸ್ಥಿತಿಗತಿಗಳನ್ನು ಪ್ರಸ್ತಾಪಿಸಿದರು. ಅವುಗಳ ಮುಖ್ಯಾಂಶ.

ಈ ಸಭೆಯು ಸದ್ಯದಲ್ಲೇ ವಿಸರ್ಜನೆಯಾಗುವುದರಿಂದ ಹಾಲಿ ವರ್ಷವು ಮುಕ್ತಾಯವಾಗುವುದಕ್ಕೆ ಮುಂಚಿತವಾಗಿ ಕೆಲವು ಜರೂರಾದ ಮತ್ತು ಪ್ರಾಮುಖ್ಯ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ.

ಹೊಸ ಸಾಲಿನ ನಾಲ್ಕು ತಿಂಗಳುಗಳ ವೆಚ್ಚಗಳಿಗೆ ಈ ಸಭೆ ಅನುಮೋದಿಸಬೇಕಾಗಿದೆ.

ಮೈಸೂರು ಶಾಸನಸಭೆಗೆ ಸಂಬಂಧಪಟ್ಟ (ಅನರ್ಹತೆಯನ್ನು ನಿರೋಧಗೊಳಿಸುವ ತಿದ್ದುಪಡಿ) ಆರ್ಡಿನೆನ್ಸಿಗೆ ಬದಲಾಗಿ ಶಾಸನ, ಮೈಸೂರು ಸ್ಟಾಂಪು ಆಕ್ಟ್ ಕಾನೂನಿಗೆ ತಿದ್ದುಪಡಿ ಕಾನೂನು ಪರಿಶೀಲಿಸುವುದು.

ಭಾರತ ರಾಜ್ಯಾಂಗದ ಮೇರೆಗೆ 'ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್' ಮತ್ತು 'ಇಂಡಿಯನ್ ಪೋಲೀಸ್ ಸರ್ವಿಸ್' ಮೈಸೂರಿಗೂ ಅನ್ವಯಿಸಿರುವುದರಿಂದ ನಮ್ಮ ಅಧಿಕಾರಿಗಳು ಕೇಂದ್ರ ಆಡಳಿತದಲ್ಲೂ ಸೇವೆ ಸಲ್ಲಿಸಲು ಸಾವಕಾಶ ದೊರೆತಿದೆ. ಇಲ್ಲಿಯ ಅಧಿಕಾರಿಗಳ ನ್ಯಾಯಹಿತ ಸಾಧನೆಗೆ ಧಕ್ಕೆ ಬರದಂತೆ ಅವರು ಅಲ್ಲಿಯ ಉತ್ತಮ ಸೇವೆ ನಡೆಸಬಹುದಾಗಿದೆ.

ಸಂಸ್ಥಾನದಲ್ಲಿ ಅಕೌಂಟ್ಸ್ ಮತ್ತು ಆಡಿಟ್ ಇಲಾಖೆಗಳು ಒಟ್ಟು ಸೇರಿಸಿ ಅಖಿಲಭಾರತ ಆಡಿಟ್ ಇಲಾಖೆಯ 'ಆಲ್-ಇಂಡಿಯಾ ಸರ್ವಿಸ್' ಮತ್ತು ಸಂಸ್ಥಾನ 'ಸ್ಟೇಟ್ ಅಕೌಂಟ್ಸ್ ಸರ್ವಿಸ್' ಎಂಬುದಾಗಿ ಏರ್ಪಡಿಸಲಾಗಿದೆ.

ದೇಶದಲ್ಲಿ ಮಳೆಬಾರದೆ ಕೆಲವೆಡೆ ದುರ್ಭಿಕ್ಷ ತಲೆದೋರುವ ಸೂಚನೆಗಳಿರುವುದರಿಂದ ಈಗಾಗಲೇ ಪರಿಹಾರ ಕಾರ್ಯಗಳಿಗಾಗಿ ೧೦ ಲಕ್ಷ ರೂಪಾಯಿಗಳ ಗ್ರಾಂಟನ್ನು ಹಂಚಲಾಗಿದೆ.

ದೇಶದಲ್ಲಿ ಮಳೆಬಾರದೆ ಆಹಾರ ಪರಿಸ್ಥಿತಿಯು ಉತ್ತಮಗೊಂಡಿಲ್ಲ. ಕೇಂದ್ರವು ನಮಗೆ ೩ ಲಕ್ಷ ಟನ್ ಆಹಾರವನ್ನು ಒದಗಿಸುವಂತೆ ಕೋರಲಾಗಿದೆ. ಕೇಂದ್ರವು ನಮಗೆ ಸಹಾಯ ದ್ರವ್ಯ ಕೊಡುವುದಿಲ್ಲವೆಂದು ಹೇಳಿರುವುದರಿಂದ ೩ ಕೋಟಿ ರೂಪಾಯಿ ನಷ್ಟವಾಗುತ್ತದೆ. ಈ ವಿಷಯವನ್ನು ಕೇಂದ್ರದ ಗಮನಕ್ಕೆ ತರಲಾಗಿದೆ.

ಸೈನ್ಯದಲ್ಲಿ ಕೆಲಸ ಮಾಡುತ್ತಲಿದ್ದು ಈಗ ನಿವೃತ್ತರಾಗಿರುವವರಿಗೆ ಮರುವಸತಿಗಾಗಿ ಕೆಲವು ಯೋಜನೆಗಳಿಗೆ ಕೇಂದ್ರದ ಮಂಜೂರಾತಿ ದೊರೆತಿದೆ. ಹುಣಸೂರಿನಲ್ಲಿ ವಸತಿ ಕಲ್ಪಿಸುವುದು, ವ್ಯವಸಾಯಕ್ಕೆ ಜಮೀನು ಕೊಡುವುದು, ಲಾರಿ ಮತ್ತು ಆಟೋ ರಿಕ್ಷಾ ಸರ್ವಿಸ್ಸುಗಳನ್ನು ನಡೆಸುವುದು ಮತ್ತು ಆಟೋ ವರ್ಕ್‌ಷಾಪ್ ಏರ್ಪಡಿಸುವ ಯೋಜನೆ, ವೃತ್ತಿ ಶಿಕ್ಷಣ ಯೋಜನೆ.

ಸರ್ಕಾರಿ ಕೈಗಾರಿಕೆಗಳು ದಕ್ಷತೆಯಿಂದ ನಿರ್ವಹಿಸಲು ಸಂಸ್ಥಾನದಲ್ಲಿ ಒಂದು ಕೈಗಾರಿಕೆಗಳ ಡೈರೆಕ್ಟರೇಟ್ ಏರ್ಪಡಿಸುವ ವಿಷಯ ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಭದ್ರಾವತಿ ಕಬ್ಬಿಣ ಕಾರ್ಖಾನೆ ಬಡಾವಣೆಗೆ ಕೇಂದ್ರ ಪ್ಲಾನಿಂಗ್ ಕಮಿಷನ್ನಿನ ಅನುಮೋದನೆ ದೊರೆತಿದೆ. ಇದಕ್ಕೆ ವೆಚ್ಚ ೪೩ ಕೋಟಿ ರೂಪಾಯಿ ಭದ್ರಾವತಿಯಲ್ಲಿ ರಸಾಯನಗೊಬ್ಬರ ಕಾರ್ಖಾನೆ ಸ್ಥಾಪಿಸುವ ಯೋಜನೆಗೂ ಕಮಿಷನ್ನಿನ ಅನುಮೋದನೆ ದೊರೆತಿದೆ. ಈ ಯೋಜನೆಗೆ ವಿಶ್ವಸಂಸ್ಥೆ ಬ್ಯಾಂಕಿನಿಂದ ಸಾಲ ಪಡೆಯುವ ಸಲಹೆಯಿದೆ.

ವಿದ್ಯುಚ್ಛಕ್ತಿಯ ಉತ್ಪತ್ತಿ ಹೆಚ್ಚಿಸಲು ಹೊಸ ಮಡುವು ಯೋಜನೆ, ಕಪಿನೀ ಜಲಾಶಯ ಯೋಜನೆ, ಶಿಂಷಾ ಜಲಾಶಯದ ಯೋಜನೆ ಮತ್ತು ಮೇಕೆದಾಟು ಯೋಜನೆಗಳು ಪರ್ಯಾಲೋಚನೆಯಲ್ಲಿವೆ.

ಭಾರತದ ರಿಸರ್ವ್ ಬ್ಯಾಂಕ್ ಬಿ ಭಾಗದ ಸಂಸ್ಥಾನಗಳ ಸರ್ಕಾರದ ಬ್ಯಾಂಕರ್ ರಾಗಿರಲು ಒಪ್ಪಿದೆ. ನಮ್ಮ ಸರ್ಕಾರ ಈ ವಿಷಯದಲ್ಲಿ ರಿಸರ್ವ್ ಬ್ಯಾಂಕಿನೊಡನೆ ವ್ಯವಹಾರ ನಡೆಸುತ್ತಲಿದೆ.

ಈಗಿನ ಧಾರಣೆವಾಸಿಗಳ ಇಳಿತಾಯದಿಂದ ಹಣದ ಉಬ್ಬರದ ಏರಿಕೆಯನ್ನು ತಡೆಗಟ್ಟಲು ಸಹಾಯಕವಾಗುತ್ತದೆ. ಅಲ್ಲದೆ ಜೀವನವೆಚ್ಚವು ಕಡಮೆಯಾಗಿ ಸಾಮಾನ್ಯ ಜನರ ಮತ್ತು ಕಾರ್ಮಿಕರ ಆರ್ಥಿಕ ಸ್ಥಿತಿ ಉತ್ತಮವಾಗಲವಕಾಶವಾಗುತ್ತದೆ.

ಸ್ಥಳೀಯ ಸಂಸ್ಥೆಗಳಿಗೆ ಕಾಂಗ್ರೆಸ್ ಸ್ಪರ್ಧಿಗಳು

ಬೆಂಗಳೂರು ಮಾ. ೨೧

ಸ್ಥಳೀಯ ಸಂಸ್ಥೆಗಳಿಗೆ ಇರುವ ೧೯ ಸ್ಥಾನಗಳಿಗೆ ಕಾಂಗ್ರೆಸ್ ಪರವಾಗಿ ಈ ಕೆಳಗೆ ಸೂಚಿಸಿರುವ ಉಮೇದುವಾರರನ್ನು ನಿಲ್ಲಿಸಬೇಕೆಂದು ನಿರ್ಧರಿಸಲಾಗಿದೆ.

ಶ್ರೀ ಪಿ ಸೀತಾರಾಮಯ್ಯ (ಮೈಸೂರು ನಗರ ಮತ್ತು ಜಿಲ್ಲೆ) ಶ್ರೀ ಜೆ ದೇವಯ್ಯ (ಮಂಡ್ಯ ಜಿಲ್ಲೆ) ಶ್ರೀಗಳಾದ ಆರ್ ಸುಬ್ಬಣ್ಣ ಮತ್ತು ಎಸ್ ಆರ್ ಗುರು (ಬೆಂಗಳೂರು ನಗರ ಮತ್ತು ಜಿಲ್ಲೆ) ಕೆ ರಂಗಯ್ಯಂಗಾರ್ (ತುಮಕೂರು ಜಿಲ್ಲೆ) ಶ್ರೀ ಕೆ ಎನ್ ತಿಮ್ಮಯ್ಯ (ಕೋಲಾರ ಜಿಲ್ಲೆ ಚಿನ್ನದಗಣಿ ಪ್ರದೇಶ ಸೇರಿ) ಶ್ರೀ ಪಾಪಣ್ಣಶೆಟ್ಟಿ (ಹಾಸನ ಜಿಲ್ಲೆ) ಶ್ರೀ ಯು ಪಿ ಶಂಕರರಾವ್ (ಶಿವಮೊಗ್ಗ ಜಿಲ್ಲೆ) ಶ್ರೀ ಅಣ್ಣಪ್ಪಶೆಟ್ಟಿ ಚಿಕ್ಕಮಗಳೂರು ಜಿಲ್ಲೆ] ಶ್ರೀಗಳಾದ ಜಿ ಕೃಷ್ಣರಾವ್ ಮತ್ತು ಟಿ ವೀರಣ್ಣ (ಚಿತ್ರದುರ್ಗ ಮತ್ತು ದಾವಣಗೆರೆ).

ಮೈಸೂರು ನಗರ ಮತ್ತು ಜಿಲ್ಲೆಯಿಂದಲೂ, ಕೋಲಾರ ಜಿಲ್ಲೆ, ಚಿನ್ನದಗಣಿ ಪ್ರದೇಶದ ಕ್ಷೇತ್ರದಿಂದಲೂ ಮತ್ತೆ ಒಬ್ಬೊಬ್ಬ ಉಮೇದುವಾರರ ಆರಿಸುವ ವಿಷಯ ಪರಿಶೀಲನೆಯಲ್ಲಿದೆ.

ನಗರದ ಬ್ಯಾಂಕ್ ಒಂದರಲ್ಲಿ ಮಾಜಿ ಗುಮಾಸ್ತರ ಮರಣ

ಬೆಂಗಳೂರು ಮಾ. ೨೧

ಅವೆನ್ಯೂ ರಸ್ತೆಯಲ್ಲಿರುವ ವೈಶ್ಯ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಶ್ರೀ ಬಿ ಎಸ್ ಕೇಶವಮೂರ್ತಿ ಎಂಬುವರು ಈದಿನ ಪ್ರಾತಃಕಾಲ ಮರಣ ಹೊಂದಿದ ವಿಷಯ ವರದಿಯಾಗಿದೆ.

ಶ್ರೀ ಕೇಶವಮೂರ್ತಿಯವರು ಹಿಂದೆ ಬ್ಯಾಂಕಿನಲ್ಲಿ ಗುಮಾಸ್ತರಾಗಿದ್ದರೆಂದೂ ನಿನ್ನೆಯದಿನ ರಾತ್ರಿ ಬ್ಯಾಂಕಿನಲ್ಲಿ ಬಂದು ಮಲಗಿದ್ದರೆಂದೂ ಈದಿನ ಪ್ರಾತಃಕಾಲ ಅವರು ಮರಣ ಹೊಂದಿದ್ದುದು ಕಂಡು ಬಂದಿತೆಂದೂ ಹೇಳಲಾಗಿದೆ. ಶವವನ್ನು ವೈದ್ಯಪರೀಕ್ಷೆಗೆ ಕಳುಹಿಸಲಾಗಿದೆ. ಪೋಲೀಸರು ತನಿಖೆಕ್ರಮ ನಡೆಸುತ್ತಿದ್ದಾರೆ.

ಸುಪ್ರೀಂ ಕೋರ್ಟಿನ ತೀರ್ಮಾನಕ್ಕೆ ಮನ್ನಣೆಯಿಲ್ಲ

ವರ್ಣೀಯ ಮತದಾರರನ್ನು ಪ್ರತ್ಯೇಕ ಚುನಾವಣಾ ಪಟ್ಟಿಯಲ್ಲಿ ಸೇರಿಸುವ ಶಾಸನವು ನ್ಯಾಯಬಾಹಿರವೆಂದು ಸುಪ್ರೀಂ ಕೋರ್ಟಿನ ಘೋಷಣೆಯಿಂದ ಶಾಸನಾಂಗದ ಬಿಕ್ಕಟ್ಟು ಉದ್ಭವಿಸಿದೆ. ತೀರ್ಪನ್ನು ಒಪ್ಪಲಸಾಧ್ಯವೆಂದು ದಕ್ಷಿಣ ಆಫ್ರಿಕದ ಪ್ರಧಾನಮಂತ್ರಿ ಡೇನಿಯಲ್ ಮಲಾನ್‌ರವರು ಹೇಳಿರುವರು.

ಶ್ರೀ ಕೆ. ಸಿ. ರೆಡ್ಡಿ ಗುಣಮುಖರಾಗಿದ್ದಾರೆ

ಬೆಂಗಳೂರು ಮಾ. ೨೧

ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಈಗ ಆರೋಗ್ಯದಿಂದಿದ್ದಾರೆ. ಅವರು ನಿನ್ನೆ ನಡೆದ ಅಸೆಂಬ್ಲಿ ಸಭೆಗೆ ಬಂದಿದ್ದರು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಮತ್ತು ಚಲನಚಿತ್ರಗಳಲ್ಲಿ ಅಭಿನಯಿಸಲು ಅವಕಾಶಮಾಡಿ ಕೊಡಲಾಗುವುದು. ಆಸಕ್ತಿವುಳ್ಳವರು ಇಂದೇ ವಿಚಾರಿಸಿ.

ವ್ಯವಸ್ಥಾಪಕ.

ನ್ಯೂ ಅಪೇರ

೧೯-೩-೫೨ ರಿಂದ ಅಮೋಘಪ್ರಾರಂಭ

ದುಖಿಯಾರಿ (ಹಿಂದಿ)

ಪಾತ್ರ:- ಸುರೇಂದ್ರ, ಚಂದ್ರಮೋಹನ್, ಮೀನ, ಕಕ್ಕು.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ರಾಜಕಮಲ್ ಟಾಕೀಸ್, ಮೈಸೂರು

21—3—52 ರಿಂದ ಜನಭರಿತವಾದ 2ನೇ ವಾರ ಪ್ರತಿದಿನ 3 ಆಟಗಳು

ಪಾತಾಳಭೈರವಿಯನ್ನು ನಿರ್ಮಿಸಿ ಪ್ರಖ್ಯಾತರಾದ ಶ್ರೀ "ವಿಜಯಾ" ರವರ ಅತ್ಯಂತ ಕೋಲಾಹಲವನ್ನುಂಟು ಮಾಡುತ್ತಿರುವ

* ಮದುವೆ ಮಾಡಿ ನೋಡು *

ಎಂಬ ಶ್ರೇಷ್ಠ ತೆಲುಗು ಚಿತ್ರ

ತಾರಾಗಣ:— ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ಜೋಗ್‌ರಾವ್.

ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟರಿಗಳನ್ನು ಈ ವಾರಗಳು ಮನ್ನಾಮಾಡಿದೆ

ಫೋನ್ ೫೭೪ (೨೦೮) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೩—೩—೧೯೫೨ನೇ ಭಾನುವಾರ [ಸಂಚಿಕೆ ೧೭೫

ಸಿಂಹಳ ಪ್ರಧಾನಿ ಸೇನಾನಾಯಕೆಯವರ ನಿಧನ

ಕಲ್ಕತ್ತೆಯಲ್ಲಿ ಎ.ಐ.ಸಿ.ಸಿ. ಅಧಿವೇಶನಾರಂಭ

ಶಾಸನ ಸಭಾಸದಸ್ಯರು ಸರ್ಕಾರದ ಕಂಟ್ರಾಕ್ಟು, ಸಾಲ ಮುಂತಾದುದನ್ನು ತೆಗೆದುಕೊಳ್ಳಕೂಡದು

ತನ್ನ ಪಕ್ಷದ ನಿಯಮಾವಳಿಯನ್ನು ಮಾರ್ಪಡಿಸಿ, ಉತ್ತರಪ್ರದೇಶ ಶಾಸನಸಭೆಯ ಕಾಂಗ್ರೆಸ್ ಪಕ್ಷವು, ಅಧಿಕೃತವಾಗಿ ಕಾಂಗ್ರೆಸ್ಸು ತಿಳಿಸದಲ್ಲಿ ಕಾಂಗ್ರೆಸ್ ಪಕ್ಷದ ಶಾಸನ ಸಭಾಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕೆಂದು ಪ್ರತಿಜ್ಞೆ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದೆ.

ಹೊಸ ನಿಯಮಾವಳಿಪ್ರಕಾರ ಯಾವ ಸಭಾಸದಸ್ಯರೂ ಖಾಸಗೀ ಜನರಿಗೆ ಬಸ್ಸುಗಳಿಗೆ ಅಥವಾ ಹಕೋಟಿಯಲ್ಲಿರುವ ವಸ್ತುಗಳಿಗೆ ರಹದಾರಿ ಕೊಡಿಸಲು ಯಾವ ಪಾತ್ರ ವಹಿಸಿಕೊಳ್ಳಕೂಡದು. ಅಧಿಕಾರಿಗಳ ವರ್ಗ ಅಥವಾ ಶಿಕ್ಷೆ ಯಲ್ಲಿ ಪ್ರವೇಶಿಸಕೂಡದು. ಆದರೆ ಮಂತ್ರಿಗಳ ಅಥವಾ ಮುಖ್ಯಾಧಿಕಾರಿಗಳ ಗಮನಕ್ಕೆ ಅಪಾದನೆಗಳನ್ನು ತರಬಹುದು.

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯನಾರೂ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ, ತಾನಾಗಲೀ ತನ್ನ ಕಡೆಯವರಾಗಲೀ ಹಕೋಟಿ ವಸ್ತುಗಳಲ್ಲಿ ವ್ಯಾಪಾರಮಾಡಕೂಡದು. ಸ್ಥಳೀಯ ಸಂಸ್ಥೆಗಳ ಅಥವಾ ಸರ್ಕಾರದ ಯಾವ ಕಂಟ್ರಾಕ್ಟ್‌ನ್ನಾಗಲೀ ಕಮಿಷನ್ನಾಗಲೀ ತೆಗೆದುಕೊಳ್ಳಕೂಡದು.

ಸರ್ಕಾರದಿಂದ ಸಾಲ, ಗ್ರಾಂಟು ಮುಂತಾದ ರೂಪದಲ್ಲಿ ಯಾವ ವಿಧವಾದ ವಿಶೇಷ ರಿಯಾಯತಿಗಳನ್ನು ಪಡೆಯಕೂಡದು. ವೇತನವನ್ನು ಪಡೆಯತಕ್ಕಂಥ ರಾಜಕೀಯಕ್ಕೆ ಸಂಬಂಧಪಡದ ಯಾವ ಸ್ಥಾನವನ್ನು ಯಾವ ಸದಸ್ಯನೂ ಒಪ್ಪಿಕೊಳ್ಳಕೂಡದೆಂದು ಹೊಸ ನಿಯಮಾವಳಿಯು ತಿಳಿಸುತ್ತದೆ. ಈ ನಿಯಮಾವಳಿಯನ್ನು ಉಲ್ಲಂಘಿಸಿದವರನ್ನು ಸಂಸ್ಥೆಯಿಂದ ಹೊರದೂಡಲಾಗುತ್ತದೆ.

ಸೆಣಬುರಫ್ತಿಗಿದ್ದ ಖೋಟಾ ಪದ್ಧತಿರದ್ದು

ಸೆಣಬು ಪದಾರ್ಥಗಳ ರಫ್ತಿಗೆ ಈವರೆಗಿದ್ದ ಆತಂಕಗಳನ್ನು ಕೂಡಲೇ ರದ್ದುಗೊಳಿಸಲು ಭಾರತ ಸರ್ಕಾರ ತೀರ್ಮಾನಿಸಿದೆ ಖೋಟಾಪದ್ಧತಿ ಅನುಸರಿಸಿ/ರಫ್ತುಮಾಡುತ್ತಿದ್ದ ರಾಷ್ಟ್ರಗಳಿಗೆ ಈ ನಿರ್ಧಾರ ಅನ್ವಯಿಸುತ್ತದೆ.

ಶ್ರೀ ಕಾಶೀನಾಥರಾವ್ ವೈದ್ಯ

ಹೈದರಾಬಾದ್ ಶಾಸನಸಭೆಗೆ ಕಾಂಗ್ರೆಸ್ ಪಕ್ಷದ ಶ್ರೀ ಕಾಶೀನಾಥರಾವ್ ವೈದ್ಯರವರು ಸ್ಪೀಕರರಾಗಿ ಚುನಾಯಿತರಾಗಿದ್ದಾರೆ.

ಉಪನ್ಯಾಸ

ಥಿಯಸಾಫಿಕಲ್ ಸೊಸೈಟಿಯ ಆಶ್ರಯದಲ್ಲಿ ಮೈಸೂರು ನರಸಿಂಹರಾಜಮೊಹಲ್ಲಾ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ೨೪ ನೇ ಮತ್ತು ೨೫ನೇ ತಾರೀಖುಗಳಲ್ಲಿ ಸಂಜೆ ೬-೩೦ ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಅಧ್ಯಾಪಕಿಯರಾದ ಶ್ರೀಮತಿ ವಿ ರುಕ್ಮಿಣಿಯವರಿಂದ ಪುನರ್ಜನ್ಮ ಮತ್ತು ಜೀವನದ ಗುರಿ ಎಂಬ ವಿಷಯದಲ್ಲಿ ಭಾಷಣ ನಡೆಯುತ್ತದೆ.

ಲೆಕ್ಚರರಾದ ಶ್ರೀ ಕೃಷ್ಣಮೂರ್ತಿಯವರಿಂದ ಹಿಂದೂ ಮತದ ಧರ್ಮ ಮತ್ತು ವ್ಯಕ್ತಿಯ ಜೀವಣಿಗೆ ಎಂಬ ವಿಷಯದಲ್ಲೂ ಉಪನ್ಯಾಸ ನಡೆಯುತ್ತದೆ. ಎಂದು ವ್ಯವಸ್ಥಾಪಕರಾದ ಶ್ರೀ ಎಂ. ಆರ್. ಶ್ರೀನಿವಾಸಯ್ಯಂಗಾರ್ ತಿಳಿಸಿರುತ್ತಾರೆ.

ಪಾಠ ಕಲಿಯಬೇಕು

ಭಾರತದಲ್ಲಿ ನಡೆದ ಮಹಾಚುನಾವಣೆಗಳಿಂದ ಇತರ ರಾಷ್ಟ್ರಗಳು ಅನೇಕ ವಿಷಯಗಳನ್ನು ಕಲಿಯಬೇಕಾಗಿದೆ ಎಂದು ಶ್ರೀಮತಿ ರೂಸ್‌ವೆಲ್ಟ್‌ರವರು ಹೇಳಿರುವರು.

ಎ.ಐ.ಸಿ.ಸಿ. ಬಾಷ್ಪಾಂಜಲಿ

ಕಲ್ಕತ್ತಾದಲ್ಲಿ ಎ ಐ ಸಿ ಸಿ ಅಧಿವೇಶನವು ನಡೆಯುತ್ತಿರುವಾಗ ಸಿಂಹಳ ಪ್ರಧಾನಿ ಶ್ರೀ ಸೇನಾನಾಯಕೆಯವರ ಮರಣವಾರ್ತೆ ಬಂದಿತು. ಶ್ರೀ ನೆಹರೂರವರು ಅವರ ಗುಣಕಥನಮಾಡಿದ ಮೇಲೆ ಎ ಐ ಸಿ ಸಿ ಯು ತನ್ನ ಬಾಷ್ಪಾಂಜಲಿಯನ್ನರ್ಪಿಸಿತು.

ಇಸ್ಲಾಮಿಕ್ ರಾಜ್ಯ ಸ್ಥಾಪನೆಗೆ ಬೆಂಬಲವಿಲ್ಲ

ಜಾತ್ಯಾತೀಯ ರಾಜ್ಯ ಸಂಘಟನೆ ನಾವು ಪೂರ್ಣ ಬೆಂಬಲನೀಡುತ್ತೇವೆ. ವಿನಹ ಇಸ್ಲಾಮಿಕ್ ರಾಜ್ಯಕ್ಕೆ ನಾವು ಬೆಂಬಲನೀಡುವುದಿಲ್ಲ ಎಂದು ಅರಬ್‌ಲೀಗ್ ಸೆಕ್ರೆಟರಿ ಜನರಲ್ ಅಜಾಂಪಾಷಾರವರು ಹೇಳಿರುವರು.

ಸ್ವಾತಂತ್ರ್ಯವನ್ನು ಗಳಿಸಿದ ನಾಲ್ಕೈದು ವರ್ಷಗಳಲ್ಲಿಯೇ ಭಾರತವು ಸಾಧಿಸಿರುವ ಪ್ರಗತಿಯನ್ನು ವಿಶ್ವದ ಯಾವ ರಾಷ್ಟ್ರಗಳೂ ಸಾಧಿಸಿಲ್ಲ. ಕಾಡುಗಳಲ್ಲಿನೇಕವು ಸುಂದರ ಪಟ್ಟಣಗಳಾಗಿ ಕೈಗಾರಿಕಾ ಕ್ಷೇತ್ರಗಳಾಗಿವೆ. ವಿದೇಶೀ ಸಹಾಯವಿಲ್ಲದೆ ಭಾರತವು ಸ್ಥಳಾಂತರರಾದವರಿಗೆ ಪುನರ್ವಸತಿಕಾರ್ಯವನ್ನೆಸಗಿದೆ. ಭಾರತದಲ್ಲಿ ಶಾಂತಿಯುತವಾಗಿ ಶಿಸ್ತಿನಿಂದ ಚುನಾವಣೆಗಳು ನಡೆದಿವೆ ಎಂದು ಪಂಡಿತ ಶ್ರೀ ನೆಹರೂರವರು ನಿನ್ನೆಯದಿನ ಕಲ್ಕತ್ತಾದಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಭಾಷಣಮಾಡುತ್ತಾ ಹೇಳಿದರು.

ಪಂಡಿತ ನೆಹರೂರವರು ಇಂದಿನ ರಾಜಕೀಯ ಸಂಘಟನೆ ವಿಷಯವಾಗಿ ಮಾತಾಡುತ್ತಾ, ನಾವು ಸ್ವಾತಂತ್ರ್ಯ ಗಳಿಸಿದುದಾಯಿತು ಈಗ ಆರ್ಥಿಕಾಭಿವೃದ್ಧಿ ಗಳಿಸಬೇಕಾಗಿದೆ ಜೀವನಮಟ್ಟ ಉತ್ತಮಗೊಳ್ಳಬೇಕು ಅಸಮಾನತೆ ತೊಲಗಬೇಕು ನಮಗೆ ಆರ್ಥಿಕ ಸ್ವಾತಂತ್ರ್ಯಬೇಕು. ಅಂದರೆ ದೇಶದ ಸಂಪತ್ತು ವಸ್ತುರೂಪದಲ್ಲಿ ಹೆಚ್ಚಬೇಕು. ಯೋಜನಾಸಮಿತಿಯು ತಯಾರಿಸುವ ಯೋಜನೆಗಳನ್ನೆಲ್ಲಾ ಕಾರ್ಯಗತಮಾಡಲು ಎಲ್ಲರೂ ಸಹಾಯಮಾಡಬೇಕು. ನಮ್ಮಲ್ಲಿ ಮತೀಯ ಭಾವನೆ ಸಂಪೂರ್ಣವಾಗಿ ತೊಲಗಬೇಕೆಂದು ಹೇಳಿದರು.

ರಾಣಿಯವರ ಅನುತಾಪ

ಸಿಂಹಳ ಪ್ರಧಾನಿ ಶ್ರೀ ಸೇನಾನಾಯಕೆಯವರ ನಿಧನದಬಗ್ಗೆ ಇಂಗ್ಲೆಂಡಿನ ರಾಣಿ ಎಲಿಜಬೆತ್‌ರವರು ತಮ್ಮ ಅನುತಾಪ ವ್ಯಕ್ತಪಡಿಸಿರುವರು.

ಅಂತ್ಯ ಸಂಸ್ಕಾರ

ಶ್ರೀ ಸೇನಾನಾಯಕರ ಶವಸಂಸ್ಕಾರವು ಮುಂದಿನ ಶನಿವಾರ ನಡೆಯುವುದೆಂದು ಗೊತ್ತಾಗಿದೆ.

ನಿಯಂತ್ರಣ ಹೋಗಬೇಕು

ಕ್ರಮವಾಗಿ ನಿಯಂತ್ರಣವನ್ನು ತೆಗೆಯುವಂತೆ ನಮ್ಮ ಹಿಂದಿನ ನೀತಿಯನ್ನು ಮುಂದುವರಿಸಲಾಗುತ್ತದೆಯೆಂದು ಮದರಾಸಿನ ಆಹಾರಮಂತ್ರಿ ಹೇಳಿರುವರು.

ಪುನಃ ಸಂಧಾನ

ಪರ್ಷಿಯ ಎಣ್ಣೆವಿವಾದ ಪರಿಹಾರಕ್ಕೆ ಸಂಬಂಧಪಟ್ಟ ಮಾತುಗಳು ಹಿರಿಯಮಟ್ಟದಲ್ಲಿ ಸದ್ಯದಲ್ಲೇ ಪ್ರಾರಂಭವಾಗಲಿದೆಯೆಂದು ಹೇಳಲಾಗಿದೆ.

ಸಿಂಹಳದ ಪ್ರಧಾನಿ ಶ್ರೀ ಡಿ. ಎಸ್. ಸೇನಾನಾಯಕೆಯವರು ನಿನ್ನೆ ಮಧ್ಯಾಹ್ನ ಕೊಲಂಬೋವಿನಲ್ಲಿ ನಿಧನರಾದರು.

ಶ್ರೀ ಸೇನಾನಾಯಕೆಯವರು ಮೊನ್ನೆಯ ದಿನ ಕುದುರೆಸವಾರಿ ಮಾಡುತ್ತಿರುವಾಗ ಬಿದ್ದುಹೋಗಿ ಜ್ಞಾನತಪ್ಪಿತು ಕೂಡಲೇ ಅವರನ್ನು ಆಸ್ಪತ್ರೆಗೆ ಕೊಂಡೊಯ್ದು ಚಿಕಿತ್ಸೆಮಾಡಲಾಯಿತು, ದೇಹದಲ್ಲಿ ಕೆಲವು ಎಲುಬುಗಳು ಮುರಿದುವೆಂದು ಗೊತ್ತಾಯಿತು. ಎಷ್ಟು ಚಿಕಿತ್ಸೆ ನಡೆದರೂ ಜ್ಞಾನವೇ ಬರಲಿಲ್ಲ ಕೂಡಲೇ ಅವರ ಸ್ಥಿತಿಯನ್ನು ಬ್ರಿಟನ್ ಪ್ರಧಾನಿ ಚರ್ಚಿಲರಿಗೆ ತಿಳಿಸಿ ಕೂಡಲೇ ಮಿದುಳಿಗೆ ಸಂಬಂಧಪಟ್ಟ ಪರಿಣಿತ ವೈದ್ಯರ ಸಹಾಯಕೋರಲಾಯಿತು. ವಿಶೇಷ ವಿಮಾನದಲ್ಲಿ ಒಬ್ಬರನ್ನು ಕಳುಹಿಸಲು ವ್ಯವಸ್ಥೆ ನಡೆಯುತ್ತಿದ್ದಾಗ ಶ್ರೀ ಸೇನಾನಾಯಕರ ಸ್ಥಿತಿಯು ವಿಶೇಷ ಅಪಾಯಕರವಾದುದರಿಂದ ಪರಿಣಿತರು ಬಂದರೂ ಪ್ರಯೋಜನವಾಗುವುದಿಲ್ಲವೆಂದು ಲಂಡನ್ನಿಗೆ ತಿಳಿಸಲಾಯಿತು.

ಸ್ವಲ್ಪ ಹೊತ್ತಾದನಂತರ ಶ್ರೀಯುತರ ಸ್ಥಿತಿಯು ಉತ್ತಮಗೊಂಡಂತೆ ಕಾಣಬಂದಿತು. ಈ ವಿಷಯವು ಲಂಡನ್ನಿಗೆ ತಿಳಿಸಲು ಪರಿಣಿತರನ್ನು ಕಳುಹಿಸುವ ಏರ್ಪಾಡು ಪುನಃ ನಡೆದು ಅವರು ವಿಮಾನ ಹತ್ತುವ ವೇಳೆಗೆ ಶ್ರೀಯುತರು ನಿಧನರಾದರೆಂಬ ವಾರ್ತೆಯು ತಿಳಿಯಿತು.

ಶ್ರೀ ಸೇನಾನಾಯಕೆಯವರು ಸಿಂಹಳದ್ವೀಪದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರಲ್ಲಿ ಅಗ್ರಗಣ್ಯರು. ಶ್ರೀಯುತರು ೧೯೨೨ರಲ್ಲಿಯೇ ರಾಜಕೀಯಕ್ಕಿಳಿದರು. ಅನೇಕಸಲ ಕಾರಾಗೃಹವಾಸವನ್ನನುಭವಿಸಿದರು. ೧೯೨೪ ರಿಂದ ಶಾಸನಸಭಾಸದಸ್ಯರಾದರು. ೧೯೩೦ ರಿಂದ೪೭ ರವರೆಗೆ ವ್ಯವಸಾಯ ಸಚಿವರಾಗಿದ್ದು ಸಿಂಹಳಕ್ಕೆ ಡೊಮಿನಿಯನ್ ಸ್ಥಾನ ಬರಲು ಹೋರಾಡಿ ೧೯೪೭ ರಲ್ಲಿ ಪ್ರಥಮ ಪ್ರಧಾನಿಯಾದರು. ಇವರಿಗೆ ೬೮ ವರ್ಷ ವಯಸ್ಸು.

* ಅಡಮಾನ ಬ್ಯಾಂಕು ಪ್ರತಿನಿಧಿಗಳ ೨೨ನೇ ಸಮ್ಮೇಳನವು ನಿನ್ನೆಯದಿನ ಮದರಾಸಿನಲ್ಲಿ ಪ್ರಾರಂಭವಾಯಿತು. ಶ್ರೀ ಶ್ರೀಪ್ರಕಾಶರವರು ಉದ್ಘಾಟಿಸಿದರು.

* ಮಧ್ಯಭಾರತದ ರಾಜಧಾನಿ ಯಾವುದಾಗಬೇಕೆಂಬುದನ್ನು ಪಂಡಿತ ನೆಹರೂರವರು ನಿರ್ಧರಿಸಬೇಕಾಗಿದೆಯೆಂದು ಅಲ್ಲಿಯ ಮುಖ್ಯಮಂತ್ರಿ ಹೇಳಿರುವರು.

ಪೂ॥ಪಂಜಾಬು ಕೋರ್ಟಿನಲ್ಲಿ ಪುಟ್ಟರಾಜಅರಸರ ಅರ್ಜಿ

ಮೈಸೂರು ಹೈಕೋರ್ಟಿನಲ್ಲಿ ನ್ಯಾಯಾಧೀಶರಾಗಿದ್ದ ಶ್ರೀ ಆರ್. ಪುಟ್ಟರಾಜ ಅರಸರವರು ರಾಷ್ಟ್ರಾಧ್ಯಕ್ಷರು ತಮ್ಮನ್ನು ಅಧಿಕಾರದಿಂದ ತೆಗೆದುಹಾಕಿದ್ದನ್ನು ಪ್ರಶ್ನಿಸಿ ಪೂರ್ವ ಪಂಜಾಬು ಹೈಕೋರ್ಟಿನಲ್ಲಿ ವಾದವನ್ನು ಹೂಡಿದ್ದು ವಿಚಾರಣೆಗೆ ತೆಗೆದುಕೊಳ್ಳಲಾಯಿತು.

ತಮ್ಮನ್ನು ಅಧಿಕಾರದಿಂದ ರಾಷ್ಟ್ರಾಧ್ಯಕ್ಷರ ೧೯೫೦ನೇ ಜನವರಿ ೨೬ ರಲ್ಲಿ ತೆಗೆದಿದ್ದು ರಾಜ್ಯಾಂಗ ರೀತ್ಯಾ ವಿರುದ್ಧ, ಅಕ್ರಮ, ಏಕಪಕ್ಷೀಯ ಮತ್ತು ಅನ್ಯಾಯ ಎಂದೂ ಆದ್ದರಿಂದ ತಾವು ತಮ್ಮ ಅಧಿಕಾರದಲ್ಲಿದ್ದುಕೊಂಡು ಸಂಬಳವನ್ನು ತೆಗೆದುಕೊಳ್ಳಲು ಆಜ್ಞೆಯಾಗಲು ಅರ್ಹರಾಗಿದ್ದಾರೆಂದೂ ತಿಳಿಸಿದ್ದಾರೆ.

ಶ್ರೀ ಅರಸರವರು ತಮ್ಮ ಸಾಕ್ಷ್ಯ ಸಾಹಿತ್ಯವನ್ನು ಇನ್ನೂ ಸಿದ್ಧಪಡಿಸಿಕೊಂಡಿಲ್ಲದ್ದರಿಂದ ವಿಚಾರಣೆ ಈ ತಿಂಗಳು ೨೮ಕ್ಕೆ ಹಾಕಲ್ಪಟ್ಟಿದೆ.

ಭಾರತದಲ್ಲಿ ಒಂದು ಲಕ್ಷ ಜನಕ್ಕೆ ೬೩ ಕಾರುಗಳು

ಭಾರತದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ೬೩ ಮೋಟಾರುಗಳಂತೆ ಇದೆ. ಅಮೆರಿಕದಲ್ಲಿ ನಾಲ್ಕು ಜನಕ್ಕೆ ಒಂದು ಮೋಟಾರಿನಂತೆ ಇದೆ. ವಿಶ್ವದಲ್ಲೆಲ್ಲಾ ಅಮೆರಿಕದಲ್ಲಿಯೇ ಹೆಚ್ಚು ಮೋಟಾರುಗಳು ಇರುವುದು. ಎಂದು ಭಾರತ ರಸ್ತೆ ಮತ್ತು ಸಾಗಾಣಿಕೆ ಅಭಿವೃದ್ಧಿ ಸಂಘದ ವರದಿ ತಿಳಿಸುತ್ತದೆ.

ಇತರ ದೇಶಗಳಲ್ಲಿ ಒಂದು ಲಕ್ಷ ಜನಸಂಖ್ಯೆಗೆ, ಕೆನಡಾ ೧೭,೦೦೦, ಆಸ್ಟ್ರೇಲಿಯಾ ೧೬,೭೭೭, ನ್ಯೂಜಿಲ್ಯಾಂಡ್ ೧೪೧೮೫, ಗ್ರೇಟ್ ಬ್ರಿಟನ್ ೫೫೯೦ ದಕ್ಷಿಣ ಆಫ್ರಿಕ, ೪೦೨೭, ಫ್ರಾನ್ಸ್ ೫೫೯೩, ಸ್ವಿಟ್ಜರ್‌ಲ್ಯಾಂಡ್ ೨೫೩೧ ಮತ್ತು ಸಿಲೋನ್ ೪೯೭.

ಮಧ್ಯಪ್ರದೇಶ ಗೌರ್ನರ್ ಪದವಿ ನಿರಾಕರಣೆ

ಮುಖ್ಯಮಂತ್ರಿ ಶ್ರೀ ಬಿ ಜಿ ಖೇರರು ತಾವು ಮಧ್ಯಪ್ರದೇಶದ ಗೌರ್ನರಗಿರಿ ಒಪ್ಪಲು ಆಹ್ವಾನವನ್ನು ನಿರಾಕರಿಸಿರುವುದಾಗಿ ತಿಳಿಸಿದ್ದಾರೆ.

ರೇಷ್ಮೆ ಉತ್ಪತ್ತಿ ತಗ್ಗಿಸಲಾಗುವುದು

ಇತ್ತೀಚಿಗೆ ಬೆಲೆಗಳು ಇಳಿದುಹೋದುದರ ಪರಿಣಾಮವಾಗಿ ಮುಂಬೈನ ೧೫೦ ರೇಷ್ಮೆ ಕಾರ್ಖಾನೆಗಳು ತಮ್ಮ ಉತ್ಪತ್ತಿಯಲ್ಲಿ ಸುಮಾರು ಶೇ. ೭೦ ರಿಂದ ೭೫ ಭಾಗವನ್ನು ನಿಲ್ಲಿಸಬೇಕೆಂದು ತೀರ್ಮಾನಿಸಿವೆ.

ಸೀಲ್ ಒಡೆಯದೆ ಓಟಿನಪೆಟ್ಟಿಗೆ ತೆರೆಯಬಹುದು

ಬೆಂಗಳೂರು ಮಾ ೨೧

ಮಹಾ ಚುನಾವಣೆಗಳಲ್ಲಿ ಉಪಯೋಗಿಸಲಾದ ಬ್ಯಾಲೆಟ್ ಪೆಟ್ಟಿಗೆಗಳನ್ನು ಸೀಲುಗಳಿಗೆ ಧಕ್ಕೆ ಉಂಟುಮಾಡದೆ-ಹಾಗೆಯೇ ತೆಗೆಯಲು ಯಾರಾದರೂ ತಯಾರಿದ್ದರೆ ಆ ರೀತಿ ಮಾಡಿ ತೋರಿಸಬಹುದೆಂದು ಇಂದು ಶಾಸನ ಸಭೆಯಲ್ಲಿ ನ್ಯಾಯಾಂಗ ಸಚಿವ ಶ್ರೀ ಕೆ ಟಿ ಭಾಷ್ಯಂರವರು ಹಾಕಿದ ಸವಾಲನ್ನು ಸೋಷಲಿಸ್ಟ್ ಪಕ್ಷದ ಸದಸ್ಯರಾದ ಡಾ॥ ಕೆ ಆರ್ ಶ್ರೀಕಂಠೇಶ್ವರ್ ಸ್ವೀಕರಿಸಿದರು.

ತಿರುವಾಂಕೂರು ಕೊಚ್ಚಿ ಸಲಹೆಗಾರರು

ರಾಷ್ಟ್ರಾಧ್ಯಕ್ಷರ ಕಾರ್ಯದರ್ಶಿಯಾಗಿದ್ದು ಕಳೆದ ಆಗಸ್ಟ್ ತಿಂಗಳಲ್ಲಿ ನಿವೃತ್ತರಾದ ಶ್ರೀ ಬಿ ಕೆ ಗೋಖಲೆ ಅವರನ್ನು ತಿರುವಾಂಕೂರು-ಕೊಚ್ಚಿ ಸಂಸ್ಥಾನದ ಸಲಹೆಗಾರರಾಗಿ ನೇಮಿಸಿರುವುದಾಗಿ ತಿಳಿದುಬಂದಿದೆ.

ಸಲಹೆಗಾರರಾಗಿ ತಿರುವಾಂಕೂರು-ಕೊಚ್ಚಿ ಸಂಸ್ಥಾನಕ್ಕೆ ಹೋಗಬೇಕಾಗಿದ್ದ ಸಂಸ್ಥಾನ ಶಾಖಾ ಸಹಕಾರ್ಯದರ್ಶಿ ಶ್ರೀ ಎಚ್ ಎಂ ಬುಷ್‌ರವರು ಖಾಸಗಿ ಕಾರ್ಯಗಳ ನಿಮಿತ್ತ ರಜಾ ಹೋಗಲಿದ್ದಾರೆಂದು ತಿಳಿದುಬಂದಿದೆ.

* ಮೈಸೂರು ಕನ್ನೇಗೌಡನ ಕೊಪ್ಪಲಿನ ನಿವಾಸಿಗಳು ಇದೇ ೨೦ನೇ ತಾರೀಖು ಒಂದು ಸಭೆ ನಡೆಸಿ, ಈ ಕೊಪ್ಪಲಿಗೆ ಸೇರಿದ ೨೫ ಎಕರೆ ಜಮೀನನ್ನು ನಗರಾಭಿವೃದ್ಧಿ ಸಮಿತಿಯವರು ಆಕ್ವೈರ್ ಮಾಡಿಕೊಳ್ಳಬೇಕೆಂದಿರುವುದನ್ನು ನಿಲ್ಲಿಸಬೇಕೆಂದೂ, ಸರಸ್ವತೀಪುರಂನಲ್ಲಿರುವ ಜಮೀನನ್ನು ಬೇಕಾದರೆ ಆಕ್ವೈರ್ ಮಾಡಿಕೊಳ್ಳಲೆಂದೂ ಈ ವಿಷಯದಲ್ಲಿ ಶ್ರೀ ಡಿ ದೇವರಾಜೇ ಅರಸರವರ ಮುಂದಾಳತ್ವದಲ್ಲಿ ಒಂದು ನಿಯೋಗವು ಮಂತ್ರಿಗಳನ್ನು ನೋಡಬೇಕೆಂದೂ ತೀರ್ಮಾನಿಸಿತು.

ಸುಪ್ರೀಂ ಕೋರ್ಟಿಗಿಂತ ಪಾರ್ಲಿಮೆಂಟಿಗೆ ಹೆಚ್ಚಿಗೆ ಅಧಿಕಾರ

ಯೂನಿಯನ್ ಪಾರ್ಲಿಮೆಂಟಿಗೆ ಶಾಸನಗಳನ್ನು ವಿಧಾಯಕ ಮಾಡುವ ಸಾರ್ವಭೌಮಾಧಿಕಾರವನ್ನು ಉಳಿಸಿಕೊಳ್ಳಲು ಪ್ರಧಾನಿ ಮಲಾನ್ ಕೊಟ್ಟ ಹೇಳಿಕೆಗೆ ಬೆಲೆಯನ್ನು ಕೊಡುವಂತಹ ಶಾಸನವೊಂದನ್ನು ಆಸ್ಟ್ರೇಲಿಯಾ ಸರ್ಕಾರವು ಈಸ್ಟರ್ ರಜಾ ದಿನಗಳನಂತರ ಪಾರ್ಲಿಮೆಂಟಿನಲ್ಲಿ ತರಲಿರುವುದೆಂದು ಪಾರ್ಲಿಮೆಂಟಿನ ವೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ

ಸಕ್ಕರೆ ರೇಷನ್ ಹೆಚ್ಚಿತು

ಬೆಂಗಳೂರು ಮಾ ೨೧

ಮೈಸೂರು ಸಂಸ್ಥಾನದ ಎಲ್ಲಾ ಕಡೆ ಈವರೆಗೂ ಎಲ್ಲಾ ತರಗತಿಯ ರೇಷನ್ ಕಾರ್ಡುಗಳಿಗೆ ಕೊಡುತ್ತಿದ್ದ ಸಕ್ಕರೆ ಪಡಿತರ ಪ್ರಮಾಣವನ್ನು ಮಾರ್ಚಿ ೩೧ರಿಂದ ದ್ವಿಗುಣಗೊಳಿಸಲಾಗಿಯೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಮದರಾಸಿನಲ್ಲಿ ಚಿನ್ನ ಬೆಳ್ಳಿ ದರಗಳು

22-3-52	ರೂ.
ಸವರನ್	68-0
"	68-2
ಚಿನ್ನ ತೊಲ	95-0
" ಮೂಸ	94-0
ಬೆಳ್ಳಿ 100 ತೊಲ	165-0
" ತೊಲ	1-10

ಪೇಟೆ ಧಾರಣೆ

ಮೈಸೂರು ತಾ॥ 22-3-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	13	18-6
ಹೊಂಗೆಬೀಜ	"	8-14	11-14
ಹುರುಳಿ	"	27-0	29-12
ಹೆಸರು	"	50-4	49-10
ಮೆ. ಕಾಯಿ ಮಣಕ್ಕೆ		6-0	15-4
ಹುಣಸೇಹಣ್ಣು	"	2-7	3-4
ಸೀಗೆಕಾಯಿ	"	3-1	3-11
ತೆಂಗಿನಕಾಯಿ 1100ಕ್ಕೆ			168

ವುಡ್ ಲ್ಯಾಂಡ್ಸ್

21—3—52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ವರ್ಮಾ ಫಿಲಿಂಸ್‌ರವರ—

ಪರ್ ಬತ್ (ಹಿಂದಿ)

ಪಾತ್ರ:- ನೂತನ್, ಪ್ರೇಂನಾಥ್ ಕೆ. ಎನ್. ಸಿಂಗ್, ಉಲ್ಲಾಸ್.

ರಣಜಿತ್

೧೪-೩-೫೨ರಿಂದ ಅಮೋಘ ಪ್ರಾರಂಭ

* ಸಾಖಿ *

ಪಾತ್ರ:- ಮಧುಬಾಲ, ಪ್ರೇಂನಾಥ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂಟೋರಿಯಲ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮ ಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ರಾಜಕಮಲ್ ಟಾಕೀಸ್, ಮೈಸೂರು

21—3—52 ರಿಂದ ಜನಭರಿತವಾದ 2ನೇ ವಾರ ಪ್ರತಿದಿನ 3 ಆಟಗಳು

ಪಾತಾಳಭೈರವಿಯನ್ನು ನಿರ್ಮಿಸಿ ಪ್ರಖ್ಯಾತರಾದ ಶ್ರೀ "ವಿಜಯಾ" ರವರ ಅತ್ಯಂತ ಕೋಲಾಹಲವನ್ನು ಉಂಟುಮಾಡುತ್ತಿರುವ

* ಮದುವೆ ಮಾಡಿ ನೋಡು *

ಎಂಬ ಶ್ರೇಷ್ಠ ತೆಲುಗು ಚಿತ್ರ

ತಾರಾಗಣ:- ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್, ಜೋಗ್‌ರಾವ್.

ಎಲ್ಲಾ ವಿಧವಾದ ಫ್ರೀ ಮತ್ತು ಕಾಂಪ್ಲಿಮೆಂಟುಗಳನ್ನು ಆರು ವಾರಗಳು ಮನ್ನಾ ಮಾಡಿದೆ

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೫-೩—೧೯೫೨ನೇ ಮಂಗಳವಾರ [ಸಂಚಿಕೆ ೧೭೬

ನೂತನ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಗಳಿಗೆ ಆಯ್ಕೆ

ಸೋಷಲಿಸ್ಟ್ ಪಕ್ಷದ ಶ್ರೀ ನೀಲಕಂಠನ್‌ಪಿಳ್ಳೆ ತಿರುವಾಂಕೂರು-ಕೊಚ್ಚಿನ್ ಶಾಸನಸಭಾಧ್ಯಕ್ಷರು

ನಿವೃತ್ತ ಸೈನಿಕರ ಉಡುಪಿನ ಹಣ

ಬೆಂಗಳೂರು ಮಾ ೧೪

ಮೈಸೂರು ಸೈನ್ಯದಲ್ಲಿದ್ದು ಬಿಡಿಸಲ್ಪಟ್ಟಿರುವ ಸುಮಾರು ೨೦೦೦ ಮಂದಿ ಸೈನಿಕರ ಉಡುಪಿನ ಹಣವು ಅವರ ವಿಳಾಸಗಳು ಸರಿಯಾಗಿ ತಿಳಿಯದೆ ಹೋಗಿರುವುದರಿಂದ ವಿನಿಯೋಗವಾಗದೆ ಇದೆ ಈ ಕಛೇರಿಯನ್ನು ಸದ್ಯದಲ್ಲಿಯೇ ಮುಚ್ಚಲಿರುವುದರಿಂದ ನಿವೃತ್ತ ಸೈನಿಕರೆಲ್ಲರೂ ಮೈಸೂರು ಸೈನ್ಯಗಳ ರಿಕಾರ್ಡ್ ಶಾಖೆ ಅಧಿಕಾರಿಗಳಿಗೆ ಪ್ರತ್ಯಕ್ಷವಾಗಿಯಾಗಲಿ ಅಥವ ಅಂಚೆ ಮೂಲಕ ತಿಳಿಸಿ ಹಣ ಪಡೆಯಬೇಕೆಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ನಗರಾರೋಗ್ಯ

ಮೈಸೂರು ಮಾ ೨೪

ಮಾರ್ಚ್ ೧೫ಕ್ಕೆ ಮುಕ್ತಾಯವಾದ ಪಕ್ಷದಲ್ಲಿ ನಗರಾರೋಗ್ಯದ ಬಗ್ಗೆ ನಗರಾರೋಗ್ಯಾಧಿಕಾರಿಗಳು ಪ್ರಕಟಣೆಯಿತ್ತಿರುವರು.

ಪ್ಲೇಗು ಉಪದ್ರವವೆಲ್ಲೂ ಇರಲಿಲ್ಲ. ೧೧೮೮ ಮನೆಗಳಿಗೆ ಸೈನೋಗಾಸ್ ಮಾಡಲಾಯಿತು.

ಸಿಡುಬು ರೋಗವು ೬ ಜನಕ್ಕೆ ತಗುಲಿ ನಾಲ್ಕು ಮರಣಗಳಾದುವು ೭೭೭ ಪ್ರಾಥಮಿಕ ಮತ್ತು ೫೩೫ ಪುನಃ ದೇವಿ ಹಾಕಲಾಗಿದೆ ಡಿಫ್ತೀರಿಯಾವು ೮ ಜನಕ್ಕೆ ತಗುಲಿ ಒಂದು ಮರಣವೂ, ಟೈಫಾಯಿಡ್ ೨ ತಗುಲಿ ಒಂದು ಮರಣವೂ ಆಗಿದೆ ಈ ಪಕ್ಷದಲ್ಲಿ ಡಿಫ್ತೀರಿಯಾ ನಿರೋಧಕ್ಕಾಗಿ ೪೫, ಟೈಫಾಯಿಡ್ ನಿರೋಧಕ್ಕಾಗಿ ೧೦ ಇನಾಕ್ಯುಲೇಷನ್ ಮಾಡಲಾಗಿದೆ. ಕಾಲರಾರೋಗವೆಲ್ಲೂ ಇರಲಿಲ್ಲ

ಅಕ್ಕಿ ಸರಬರಾಜು

ಉತ್ತರ ಪ್ರದೇಶವು ಈ ಸಾಲಿನಲ್ಲಿ ಕೊರತೆಯ ಇತರ ಪ್ರದೇಶಗಳಿಗೆ ೩೫೦೦೦ ಟನ್ ಅಕ್ಕಿಯನ್ನು ರವಾನೆ ಮಾಡುವುದಾಗಿ ತಿಳಿಸಿದೆ.

ಎಣ್ಣೆ ವಿವಾದ

ಪರ್ಶಿಯಾ ಎಣ್ಣೆ ವಿವಾದದಲ್ಲಿ ಮಾತುಕತೆಗಳನ್ನು ಪರ್ಶಿಯಾದೊಡನೆ ಪುನಃ ಪ್ರಾರಂಭಿಸುವುದು ಕಷ್ಟವೆಂದು ವಿಶ್ವಬ್ಯಾಂಕಿನ ನಾಯಕರು ಲಂಡನ್ನಿನಲ್ಲಿ ಹೇಳಿರುವರು.

ಮುಂಬೈ ಸರ್ಕಾರದ ಮೇಲೆ ಮೊಕದ್ದಮೆ?

ಮುಂಬೈ 'ಬ್ಲಿಟ್ಸ್' ವಾರಪತ್ರಿಕೆಯ ಉಪಸಂಪಾದಕರಾಗಿರುವ ಶ್ರೀ ಹೋಮಿ ಮಿಸ್ತ್ರಿಯವರು, ತಮ್ಮನ್ನು ಮಾರ್ಚಿ ೧೧ನೇ ತಾ॥ನಲ್ಲಿ ದಸ್ತಗಿರಿ ಮಾಡಿದ್ದು ಅಕ್ರಮವೆಂದೂ ಅದಕ್ಕಾಗಿ ಮುಂಬೈ ಸರ್ಕಾರ ಮತ್ತು ಪೋಲೀಸರ ಮೇಲೆ ಮುಂಬೈ ಹೈಕೋರ್ಟಿನಲ್ಲಿ ಮೊಕದ್ದಮೆ ಹೂಡುವುದಾಗಿಯೂ ಪತ್ರಿಕಾಕರ್ತರಿಗೆ ತಿಳಿಸಿರುವರು.

ಪ್ರತ್ಯೇಕ ಸಂಸ್ಥೆಯಾಗಿಯೇ ಇರುವುದು

ಅಖಿಲಭಾರತ ಪರಿಗಣಿತ ಕೋಮು ಸಂಸ್ಥೆಯು ಇತರ ಯಾವ ರಾಜಕೀಯ ಪಕ್ಷದೊಡನೆಯೂ ಸೇರುವುದಿಲ್ಲ. ಪ್ರತ್ಯೇಕ ಸಂಸ್ಥೆಯಾಗಿಯೇ ಇದ್ದುಕೊಂಡು ಕೆಲಸಮಾಡುವುದಾಗಿ ಸಂಸ್ಥೆಯ ಕಾರ್ಯದರ್ಶಿ ಶ್ರೀರಾಜ'ಭೋಜ'ರವರು ಹೇಳಿರುವರು.

ವನಸ್ಪತಿ ಎಣ್ಣೆ ಆರೋಗ್ಯಕರ

ವನಸ್ಪತಿ ಎಣ್ಣೆಯು ಅನಾರೋಗ್ಯವೆಂದು ಕೆಲವರ ಅಭಿಪ್ರಾಯವಿದೆ. ಶಾಸ್ತ್ರೋಕ್ತವಾಗಿ ನಡೆದ ಪರಿಶೋಧನೆಗಳಿಂದ ವನಸ್ಪತಿ ಎಣ್ಣೆಯು ಆರೋಗ್ಯಕರವೆಂದು ಧೃಢಪಟ್ಟಿದೆ ಈಗಿನ ಆಹಾರಪರಿಸ್ಥಿತಿಯಲ್ಲಿ ವನಸ್ಪತಿ ಎಣ್ಣೆಯಿಲ್ಲದೆ ಇರುವುದಕ್ಕಾಗುವುದಿಲ್ಲವೆಂದು ಕೇಂದ್ರ ಆಹಾರಮಂತ್ರಿ ಶ್ರೀ ಕೆ ಎಂ ಮುನಷಿಯವರು ಇಂದೂರಿನಲ್ಲಿ ಮಾತನಾಡುತ್ತಾ ಹೇಳಿರುವರು

ಜಿಲ್ಲೆಗಳ ಸಂಖ್ಯೆ ಕಡಿಮೆ ಮಾಡುವ ಯೋಚನೆಯಿಲ್ಲ

ಮೈಸೂರು ಮಾ ೨೩

ಸಂಸ್ಥಾನದ ಜಿಲ್ಲೆಗಳ ಸಂಖ್ಯೆಯನ್ನು ಕಡಿಮೆ ಮಾಡುವ ಆಲೋಚನೆ ಸರ್ಕಾರಕ್ಕಿಲ್ಲವೆಂದು ಸಚಿವ ಶ್ರೀ ಹೆಚ್. ಸಿದ್ದಯ್ಯನವರು ಶಾಸನಸಭೆಯಲ್ಲಿ ತಿಳಿಸಿರುವರು.

ಹರಿಜನರಿಗೆ ಜಮೀನು

ಭೂದಾನ ಚಳುವಳಿಯಲ್ಲಿ ತಾವು ಪಡೆಯುವ ಜಮೀನಿನಲ್ಲಿ ಮೂರನೇ ಒಂದು ಭಾಗವನ್ನು ಹರಿಜನರಿಗೆ ಹಂಚುವುದಾಗಿ ಆಚಾರ್ಯ ವಿನೋಬ ಭಾವೆಯವರು ಹೇಳಿರುವರು.

§ ಮೃತರಾದ ಪ್ರಧಾನಿ ಸೇನಾನಾಯಕೆ ಪುತ್ರ ಡಡ್ಲಿ ಸೇನಾನಾಯಕೆ ಸಿಲೋನ್ ಪ್ರಧಾನಿಗಳಾಗಬಹುದೆಂದು ಹೇಳಲಾಗಿದೆ.

ಪದವೀಧರರ ಕ್ಷೇತ್ರದ ಉಮೇದುವಾರರು

ಮೈಸೂರು ಮಾ ೨೪

ಪದವೀಧರರ ಕ್ಷೇತ್ರದಿಂದ ಹಿರಿಯ ಶಾಸನಸಭೆಯ ಮೂರು ಸ್ಥಾನಗಳಿಗೆ ೯ ಜನ ಉಮೇದುವಾರಿಕೆ ಈದಿನ ಸಲ್ಲಿಸಿದರು.

ಶ್ರೀಗಳಾದ ಕೆ. ವಿ. ಸುಬ್ರಾಯಮೊದಲಿಯಾರ್, ವಿ. ಲಿಂಗಪ್ಪಯ್ಯ, ಎ. ಬಿ. ಮರಿಯಪ್ಪ, ಕೆ. ಎನ್. ರಾಮಸ್ವಾಮಿ, ಟಿ. ಎಸ್. ರಾಜಗೋಪಾಲಯ್ಯಂಗಾರ್, ಎಂ. ಪಿ. ಎಲ್. ಶಾಸ್ತ್ರಿ, ಜಿ. ವೀರಪ್ಪ, ಎ. ಎನ್. ರಾಮರಾವ್ ಮತ್ತು ಶ್ರೀಮತಿ ತ್ರಿಪುರಸುಂದರಮ್ಮನವರುಗಳು ಅರ್ಜಿ ಸಲ್ಲಿಸಿದರು.

೩೦ನೇ ತಾ॥ ಮದ್ರಾಸ್ ಮಂತ್ರಿಮಂಡಲದ ರಾಜೀನಾಮೆ

ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷವು ತನ್ನ ನಾಯಕರನ್ನು ೨೯ನೇ ತಾ॥ ಚುನಾಯಿಸಿಕೊಳ್ಳಲಿದೆ ಮಾರನೇದಿನವೇ ತಾವು ರಾಜೀನಾಮೆ ಕೊಡುವುದಾಗಿಯೂ ಮುಂದಿನ ಮಂತ್ರಿಮಂಡಲ ರಚನೆಯ ವಿಷಯ ಗೌರ್ನರ್‌ರಿಗೆ ಸೇರಿರುವುದಾಗಿ ಮದ್ರಾಸ್ ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿರಾಜಾರವರು ಹೇಳಿರುವರು.

ಶ್ರೀ ಕೆ.ಪಿ.ನೀಲಕಂಠನ್‌ಪಿಳ್ಳೆ ಶಾಸನಸಭಾಧ್ಯಕ್ಷರು

ತಿರುವಾಂಕೂರು ಕೊಚ್ಚಿನ್ ಶಾಸನಸಭೆಗೆ ಸೋಷಲಿಸ್ಟ್‌ಸ್ಪರ್ಧಿ ಶ್ರೀ ಕೆ. ಪಿ. ನೀಲಕಂಠನ್‌ಪಿಳ್ಳೆಯವರು ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಇವರಿಗೆ ೫೮ ಓಟುಗಳು ಇವರ ಪ್ರತಿಸ್ಪರ್ಧಿಯಾಗಿದ್ದ ಯುನೈಟೆಡ್ ಫ್ರಂಟ್ ಉಮೇದುವಾರರಿಗೆ ೪೮ ಓಟುಗಳು ಬಂದುವು ಕಾಂಗ್ರೆಸ್ ಸದಸ್ಯರೂ ಸೋಷಲಿಸ್ಟ್ ಉಮೇದುವಾರರಿಗೇ ಮತನೀಡಿದರು.

ಭಾರತಪ್ರವಾಸ ಮುಕ್ತಾಯ

ಶ್ರೀಮತಿ ರೂಸ್‌ವೆಲ್ಟರವರು ತಮ್ಮ ಭಾರತ ಪ್ರವಾಸವನ್ನು ನಿನ್ನೆ ಮುಗಿಸಿ ಕಲ್ಕತ್ತಾದಿಂದ ಬ್ಯಾಂಕಾಕಿಗೆ ಪ್ರಯಾಣ ಮಾಡಿದರು.

‡ ಹತ್ತಿಬೀಜದ ಮೇಲಿನ ಎಲ್ಲಾ ಹತೋಟಿಗಳನ್ನು ಭಾರತ ಸರ್ಕಾರವು ತೆಗೆದುಹಾಕಿದೆ.

ನಿನ್ನೆ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಮತ್ತು ಕೇಂದ್ರಪಾರ್ಲಿಮೆಂಟ್ ಸಮಿತಿಯ ಸಂಯುಕ್ತ ಸಭೆಯು ರಾಷ್ಟ್ರಾಧ್ಯಕ್ಷ, ಉಪರಾಷ್ಟ್ರಾಧ್ಯಕ್ಷರ ಆಯ್ಕೆ ವಿಷಯವಾಗಿ ಪರ್ಯಾಲೋಚಿಸಿ, ಅಧ್ಯಕ್ಷಸ್ಥಾನಕ್ಕೆ ಡಾ॥ ರಾಜೇಂದ್ರಪ್ರಸಾದರು ಉಪಾಧ್ಯಕ್ಷಸ್ಥಾನಕ್ಕೆ ಡಾ॥ ಎಸ್ ರಾಧಾಕೃಷ್ಣನ್‌ರವರು ಉಮೇದುವಾರರಾಗುವಂತೆ ಪ್ರಾರ್ಥಿಸಬೇಕೆಂದು ತೀರ್ಮಾನಿಸಿರುವುದಾಗಿ ಗೊತ್ತಾಗಿದೆ.

ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ

ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು ಅಕ್ಟೋಬರಿನಲ್ಲಿ ನಡೆಯುತ್ತದೆಯೆಂದು ಗೊತ್ತಾಗಿದೆ.

ಮದ್ರಾಸ್ ಮಂತ್ರಿಮಂಡಲ

ನಿನ್ನೆಯದಿನ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮದ್ರಾಸ್ ಮಂತ್ರಿಮಂಡಲ ವಿಷಯವೂ ಚರ್ಚೆಯಾಯಿತು. ತೀರ್ಮಾನವೇನೂ ಆಗಲಿಲ್ಲ. ನಾಯಕರ ಚುನಾವಣೆಯಾದನಂತರ ಪ್ರಶ್ನೆಯು ಇತ್ಯರ್ಥವಾಗುತ್ತದೆ.

ಶ್ರೀ ಸಿ. ರಾಜಗೋಪಾಲಚಾರಿಯವರು ನಾಯಕರಾಗಲು ಒಪ್ಪಿಲ್ಲವೆಂದು ಹೇಳಲಾಗಿದೆ.

ಮುಂದಿನ ಅಧಿವೇಶನ

ಎ- ಐ. ಸಿ. ಸಿ. ಯ ಮುಂದಿನ ಅಧಿವೇಶನವು ಒರಿಸ್ಸಾದಲ್ಲಿ ನಡೆಯಬೇಕೆಂದು ಉತ್ಕಲ್ ಕಾಂಗ್ರೆಸ್ ಆಹ್ವಾನವಿತ್ತಿದೆಯೆಂದು ಇನ್ನೂ ಕಾಲ ಸ್ಥಳ ನಿರ್ಧಾರವಾಗಿಲ್ಲವೆಂದೂ ಹೇಳಲಾಗಿದೆ.

ಪಾರ್ಲಿಮೆಂಟ್ ರದ್ದು

ಈಜಿಪ್ಟ್ ಪಾರ್ಲಿಮೆಂಟನ್ನು ದೊರೆ ಫರೂಕ್‌ರವರು ರದ್ದುಗೊಳಿಸಿದ್ದಾರೆ. ಹೊಸಚುನಾವಣೆಗಳು ಮೇ ೧೮ ರಕ್ಕೆ ನಡೆದು ೩೧ರಲ್ಲಿ ಹೊಸ ಪಾರ್ಲಿಮೆಂಟ್ ಅಧಿವೇಶನ ಸೇರುತ್ತದೆ.

ಕಾರ್ಯಕಾರಿಸಮಿತಿ

ಅಖಿಲಭಾರತ ಕಾಂಗ್ರೆಸ್‌ಕಾರ್ಯಕಾರಿಸಮಿತಿಯು ಮುಂದಿನ ಅಧಿವೇಶನವು ಹೈದ್ರಾಬಾದ್‌ನಲ್ಲಿ ನಡೆಸಬೇಕೆಂದು ಅಲ್ಲಿಯ ಕಾಂಗ್ರೆಸ್‌ಸಮಿತಿಯ ಆಹ್ವಾನವನ್ನು ಅಂಗೀಕರಿಸಲಾಗಿದೆಯೆಂದು ಗೊತ್ತಾಗಿದೆ.

ಭಾರತದ ಪಂಚವಾರ್ಷಿಕ ಯೋಜನೆ

ನ್ಯೂಯಾರ್ಕ್ ಮಾರ್ಚಿ ೧೮

ಪ್ರಜಾಪ್ರಭುತ್ವದ ಯೋಜನೆಗಳಲ್ಲಿ ಭಾರತದ ಪಂಚವಾರ್ಷಿಕ ಯೋಜನೆಯು ಒಂದು ಧೈರ್ಯವಾದ ಪ್ರಯೋಗ, ಇದಕ್ಕೆ ಅಮೆರಿಕವು ಸರಿಯಾದ ಸಹಾಯವನ್ನು ನೀಡುವುದು, ಎಂದು '೧೯೪೭ನೇ ಇಸವಿಯಿಂದ ಭಾರತದಲ್ಲಿದ್ದ ಅಲ್ಬರ್ಟ್ ಮೇಯರ್'ರವರು ತಿಳಿಸಿದ್ದಾರೆ.

ಮೇಯರ'ರವರು ಈಗ ಉತ್ತರಪ್ರದೇಶ ಸರ್ಕಾರದಲ್ಲಿ ಯೋಜನಾಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಸಮಾಜಸೇವೆ ಸಂಶೋಧನೆಯ ಶಾಲೆಯಲ್ಲಿ ಅವರಿಗಿತ್ತ ಸತ್ಕಾರಕೂಟವೊಂದರಲ್ಲಿ ಅವರು ಮೇಲ್ಕಂಡಂತೆ ತಿಳಿಸಿದರು. ಪಂಚವಾರ್ಷಿಕ ಯೋಜನೆಯು ಕಾರ್ಯರೂಪವಾದದ್ದು ಮತ್ತು ಬಿಗಿಯಾದದ್ದೂ ಎಂದು ತಿಳಿಸುತ್ತಾ, "ಅದು ಪ್ರಜಾಪ್ರಭುತ್ವ ತತ್ವವನ್ನೊಳಗೊಂಡ ಯೋಜನೆ. ಈ ಯೋಜನೆಯನ್ನು ತಯಾರಿಸುವುದಕ್ಕೆ ಮುಂಚೆ ರಾಷ್ಟ್ರೀಯ ಯೋಜನಾ ಸಮಿತಿಯವರು, ಪ್ರತಿಯೊಂದು ವಿಭಾಗಕ್ಕೆ ಸೇರಿದ ಪರಿಣತರ ಅಭಿಪ್ರಾಯವನ್ನೂ ತೆಗೆದುಕೊಂಡರು. ಆ ಮೇಲೆ ಕರಡು ಯೋಜನೆಯನ್ನು ಹೊರಗೆಡವಿ, ಅದರ ಮೇಲೆ ಟೀಕೆ ಟಿಪ್ಪಣಿಗಳನ್ನು ಆಹ್ವಾನಿಸಿದರು. ಗಾಂಧೀಜಿಯವರ ತತ್ವಗಳ ಹಿನ್ನೆಲೆಯಿರುವುದರಿಂದ ಈ ಯೋಜನೆಯು ಬಲವಂತವಾಗಲ್ಲದೆ, ಆತ್ಮಪ್ರೇರಣೆಯಿಂದ ಜನರು ಕಾರ್ಯರೂಪಕ್ಕೆ ತರಬಲ್ಲರು" ಎಂದು ಹೇಳಿದರು.

ಮೇಯರವರು ನಗರ ಶಿಲ್ಪಿಗಳು, ವರ್ಷದಲ್ಲಿ ೩|| ತಿಂಗಳು ಭಾರತದಲ್ಲಿ ಕಳೆಯುವರು. ಎಟ್ವಾ ಮತ್ತು ಗೋರಕ್'ಪುರ ಯೋಜನೆಗಳಲ್ಲಿ ಇವರು ಭಾಗವಹಿಸಿದ್ದಾರೆ.

ಮಾರ್ಚಿ ೨೩ಕ್ಕೆ ಭಾರತಕ್ಕೆ ಹೊರಟಿದ್ದಾರೆ.

ಪಾನನಿರೋಧ ಬೇಡವೆಂದು ಕಾಂಗ್ರೆಸ್ ಸಮಿತಿ ನಿರ್ಣಯ

ಪಾನನಿರೋಧ ಶಾಸನವನ್ನು ರದ್ದುಗೊಳಿಸಿ, ಅಬ್ಕಾರಿಬಾಬಿನಿಂದ ಬರುವ ಹಣವನ್ನು ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕೆಂದು ಕಡಪ ಜಿಲ್ಲಾ ಕಾಂಗ್ರೆಸ್ ಸಮಿತಿಯು ನಿರ್ಣಯ ಮಾಡಿದೆ. ಪಾನನಿರೋಧಕ್ಕೆ ಜನತೆಯ ಬೆಂಬಲವಿಲ್ಲವೆಂದೂ ತಿಳಿಸಿದೆ.

ನ್ಯೂಯಾರ್ಕಿಗೆ ಬಿ. ಎನ್. ರಾವ್

ಅಂತರಾಷ್ಟ್ರೀಯ ಕೋರ್ಟಿನ ನ್ಯಾಯಮೂರ್ತಿಗಳಾದ ಬಿ. ಎನ್. ರಾಯರು ಲಂಡನ್ನಿಗೆ ತೆರಳಿದರು. ಅಲ್ಲಿಂದ ಅವರು ನ್ಯೂಯಾರ್ಕಿಗೆ ಹೊರಡುವರು.

ಶ್ರೀ ಸೋಂಜಿಯವರಿಗೆ ದಿನಕ್ಕೆ ೧೫೦೦ ರೂ. ಸಂಭಾವನೆ

ಬೆಂಗಳೂರು ಮಾ. ೨೩

ಈ ದಿನ ಅಸೆಂಬ್ಲಿಯಲ್ಲಿ ಜನಾಬ್ ಮಹಮದ್ ಇಮಾಂರವರ ಅಲ್ಪಾವಧಿ ಕಾಲದ ಪ್ರಶ್ನೆಗೆ ಉತ್ತರವೀಯುತ್ತಾ, ನ್ಯಾಯಾಂಗ ಸಚಿವರಾದ ಶ್ರೀ ಕೆ. ಟಿ. ಭಾಷ್ಯಂರವರು 'ಶ್ರೀ ಎಲ್. ಎಸ್. ರಾಜುರವರ ಮೇಲಿನ ಮೊಕದ್ದಮೆಯಲ್ಲಿ ವಾದ ಮಾಡಲು ಶ್ರೀ ಕೆ ಎ. ಸೋಂಜಿ ಎಂಬುವರನ್ನು ಅಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಲಾಗಿದೆ. ದಿನಕ್ಕೆ ಸಾವಿರದಐದೂ ರೂ ರೂಪಾಯಿ ಸಂಭಾವನೆ ಕೊಡುವ ಭರವಸೆಯನ್ನೀಯಲಾಗಿದೆ' ಎಂದು ತಿಳಿಸಿದರು.

ವಿರೋಧ ಪಕ್ಷದವರ ಸಭಾತ್ಯಾಗ

ಹೈದರಾಬಾದ್ ಅಸೆಂಬ್ಲಿಯಲ್ಲಿ, ನಿಜಾಮರು ತಮ್ಮ ಪ್ರಾರಂಭ ಭಾಷಣ ಮಾಡಿದಾಗ, ವಿರೋಧ ಪಕ್ಷದ ೭೦ ಮಂದಿ ಸದಸ್ಯರು ಸಭಾತ್ಯಾಗ ಮಾಡಿದರು.

ನಿಮ್ನವರ್ಗದ ೫ ಮಂದಿ ಮತ್ತು ಇಬ್ಬರು ಸ್ವತಂತ್ರ ಸದಸ್ಯರು ಸಭಾತ್ಯಾಗ ಮಾಡಲಿಲ್ಲ.

'ಹೈದರಾಬಾದಿನ ಜನತೆಯೂ ವಿರೋಧ ಪಕ್ಷದಲ್ಲಿರುವ ನಾವೂ ನಿಜಾಮರನ್ನು ರಾಜಪ್ರಮುಖನ್ನಾಗಿ ಒಪ್ಪಿಕೊಂಡಿಲ್ಲವಾದ್ದರಿಂದ ನಾವು ಸಭೆಯಿಂದ ಹೊರಗೆ ಹೋಗುತ್ತೇವೆ' ಎಂದು ೭೦ ಮಂದಿ ಸದಸ್ಯರೂ ಸಹಿ ಮಾಡಿದ ಒಂದು ಪತ್ರವನ್ನು, ನಿಜಾಮರು ಸಭೆಗೆ ಬರುವ ಮುನ್ನ ಅಸೆಂಬ್ಲಿ ಸ್ಪೀಕರ್ ಅವರಿಗೆ ಅವರ ಛೇಂಬರಿನಲ್ಲಿ ಒಪ್ಪಿಸಲಾಗಿತ್ತು.

ವಿರೋಧ ಪಕ್ಷದ ನಾಯಕರಾದ ಶ್ರೀ ದೇಶಪಾಂಡೆಯವರು ಪಿ. ಟಿ. ಐ. ಪ್ರತಿನಿಧಿಯೊಡನೆ ಮಾತನಾಡುತ್ತಾ, ನಿಜಾಮರ ಭವಿಷ್ಯವನ್ನು ನಿರ್ಧರಿಸುವುದೂ, ಹೈದರಾಬಾದ್ ಸಂಸ್ಥಾನವನ್ನು ಭಾಷಾವಾರು ಪ್ರಾಂತವನ್ನಾಗಿ ವಿಂಗಡಿಸುವುದು ಬಹಳ ಮುಖ್ಯವೆಂದೂ ನಿಜಾಮರ ಮನೆತನದ ನಿರಂಕುಶಾಡಳಿತವನ್ನು ಮುಗಿಸಬೇಕೆಂದು ೨೫ ವರ್ಷಗಳಿಂದ ಹೋರಾಡಲಾಯಿತೆಂದೂ ಅಲ್ಲದೆ ತಮ್ಮ ಕಾರ್ಯಕ್ಕೆ ಜನತೆಯ ಬೆಂಬಲವಿದೆಯೆಂದೂ ವ್ಯಕ್ತಪಡಿಸಿದರು.

ಕಾ|| ನಿ|| ಪತ್ರಿಕೋದ್ಯೋಗಿಗಳ ಫೆಡರೇಷನ್

ಲಕ್ನೋದ 'ನ್ಯಾಷನಲ್ ಹೆರಾಲ್ಡ್'ನ ಸಂಪಾದಕರಾದ ಶ್ರೀ ಎಂ. ಚಲಪತಿರಾಯರನ್ನು ಪುನಃ ಅಖಿಲ ಭಾರತ ಕಾರ್ಯನಿರತ ಪತ್ರಿಕೋದ್ಯೋಗಿಗಳ ಫೆಡರೇಷನ್ನಿನ ಅಧ್ಯಕ್ಷರನ್ನಾಗಿ ಆರಿಸಲಾಗಿದೆ.

ವಿವಿಧವಾರ್ತೆಗಳು

* ನಾಲ್ಕು ಅಂಶಗಳ ಯೋಜನೆಯ ಪ್ರಕಾರ ಮಿಸ್ ಲಿಲಿಯನ್ ಬಿಸ್ಕಾಪ್ ಎಂಬ ದಾದಿಯು ಶೀಘ್ರದಲ್ಲಿಯೇ ಭಾರತಕ್ಕೆ ಬರಲಿರುವಳು. ಅಮೇರಿಕದ ಸಾರ್ವಜನಿಕ ಆರೋಗ್ಯಶಾಖೆಯು ಈಗ ನವದೆಹಲಿಯಲ್ಲಿದ್ದು, ಲಿಲಿಯನ್ನಳು, ಭಾರತದ ದಾದಿಯರಿಗೆ ಸಾರ್ವಜನಿಕ ಆರೋಗ್ಯ ಕೇಂದ್ರಗಳನ್ನು ತೆರೆಯಲು ಸಹಾಯ ಮಾಡುವಳು.

* ಅಮೇರಿಕದ ಶಾಲೆ ಕಾಲೇಜುಗಳಲ್ಲಿ ಈಗ ಸುಮಾರು ೩೦೪೮೭ ವಿದ್ಯಾರ್ಥಿಗಳಿರುವರೆಂದು ನ್ಯೂಯಾರ್ಕಿನ ಇನ್ಸಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಎಜ್ಯುಕೇಷನ್ ಸಂಸ್ಥೆಯವರು ತಿಳಿಸಿದ್ದಾರೆ. ಇದರಲ್ಲಿ ಭಾರತ, ಚೈನಾ, ಮೆಕ್ಸಿಕೋ, ಜರ್ಮನಿ ಮತ್ತು ಕೆನಡಾದಿಂದ ಬಂದ ವಿದ್ಯಾರ್ಥಿಗಳ ಸಂಖ್ಯೆಯೇ ಹೆಚ್ಚು. ಈ ವಿದ್ಯಾರ್ಥಿಗಳು ಸುಮಾರು ೧೪೦೦ ವಿದ್ಯಾಸಂಸ್ಥೆಗಳಲ್ಲಿ ಓದುತ್ತಿದ್ದಾರೆ.

ಜಮೀನ್ದಾರರೊಬ್ಬರ ಉದಾರತ್ವ

ಪೆಪ್ಸು ಪ್ರದೇಶದಲ್ಲೆಲ್ಲಾ ಅತಿ ದೊಡ್ಡ ಜಮೀನ್ದಾರರಲ್ಲೊಬ್ಬರಾದ ರಾಜಾ ನರ್ಪಾಲ್‌ಸಿಂಗ್'ರವರು ತಮಗೆ ಸೇರಿದ ೫೦೦೦ ಎಕರೆ ಜಮೀನನ್ನು ಗುತ್ತಿಗೆ ಮಾಡುತ್ತಿರುವ ರೈತರಿಗೇ ಯಾವ ಪರಿಹಾರವನ್ನು ಪಡೆಯದೆ ಬಿಟ್ಟುಕೊಡುವುದಾಗಿ ತಿಳಿಸಿದ್ದಾರೆ.

ಇತರ ಜಮೀನ್ದಾರರೂ ಇದೇರೀತಿ ಮಾಡಲೆಂದು ಹಾರೈಸಿದ್ದಾರೆ.

* ಚುನಾವಣೆಗಾಗಿ ಕಾಂಗ್ರೆಸ್ ೨೯,೭೦,೧೪೯ ರೂ. ಹನ್ನೆರಡು ಆಣೆಯನ್ನು ವಸೂಲುಮಾಡಿ ಸಾಮಾನ್ಯವಾಗಿ ಎಲ್ಲವನ್ನೂ ವೆಚ್ಚ ಮಾಡಿತೆಂದು ಕಾಂಗ್ರೆಸ್ ಅಧ್ಯಕ್ಷ ನೆಹರೂರವರು ತಿಳಿಸಿರುವರು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಪೇಟೆ ಧಾರಣೆ

ಮೈಸೂರು ತಾ|| 24-3-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		11-4	19-10
ಹೊಂಗೆಬೀಜ	"	9-0	11-6
ಹುರುಳಿ	"	26-0	29-10
ಹೆಸರು	"	49-4	—
ಮೆ. ಕಾಯಿ ಮಣಕ್ಕೆ		5-0	15-4
ಹುಣಸೇಹಣ್ಣು	"	2-6	3-6
ಸೀಗೆಕಾಯಿ	"	3-0	3-9
ತೆಂಗಿನಕಾಯಿ 1100ಕ್ಕೆ		11-8	246

ಮದರಾಸಿನಲ್ಲಿ ಚಿನ್ನ ಬೆಳ್ಳಿ ದರಗಳು

24-3-52

	ರೂ.
ಸವರನ್	68-8
"	68-10
ಚಿನ್ನ ತೊಲ	94-12
" ಮೂಟೆ	94-0
ಬೆಳ್ಳಿ 100 ತೊಲ	164-0
" ತೊಲ	1-12

ನ್ಯೂಅಪೇರ

೨೨-೩-೫೨ ರಿಂದ ಅಮೋಘಪ್ರಾರಂಭ

ಸ್ವಪ್ನಸುಂದರಿ

(ತಮಿಳು)

ಪಾತ್ರ- ನಾಗೇಶ್ವರರಾವ್, ಶಿವರಾವ್, ಅಂಜಲಿದೇವಿ, ಜಿ. ವರಲಕ್ಷ್ಮಿ.

ವುಡ್ ಲ್ಯಾಂಡ್ಸ್

21—3—52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ವರ್ಮಾ ಫಿಲಿಂಸ್'ರವರ—

ಪರ್ ಬತ್

(ಹಿಂದಿ)

ಪಾತ್ರ:- ನೂತನ್, ಪ್ರೇಂನಾಥ್ ಕೆ. ಎನ್. ಸಿಂಗ್, ಉಲ್ಲಾಸ್.

ರಣಜಿತ್

೧೯-೩-೫೨ರಿಂದ ಅಮೋಘ ಪ್ರಾರಂಭ

* ಸಾಖಿ *

ಪಾತ್ರ:- ಮಧುಬಾಲ, ಪ್ರೇಂನಾಥ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೬—೩—೧೯೫೨ನೇ ಬುಧವಾರ [ಸಂಚಿಕೆ ೧೭೭

ತಿರುವಾಂಕೂರ್-ಕೊಚ್ಚಿನ ಕಾಂಗ್ರೆಸ್ ಸರ್ಕಾರಕ್ಕೆ ಪ್ರಥಮ ಸೋಲು

ಇನ್ನೆರಡು ವರ್ಷಗಳೊಳಗಾಗಿ ಮೋಟಾರು, ವಿಮಾನಗಳು ಭಾರತದಲ್ಲಿ ತಯಾರಾಗುವಂತಾಗಬೇಕು

ಶುಭಾಶಯಗಳು

ಇಂದಿನಿಂದ ಪ್ರಾರಂಭವಾಗಲಿರುವ ನಂದನ ಸಂವತ್ಸರವು ನಮ್ಮ ವಾಚಕ ವೃಂದಕ್ಕೂ ಚಂದಾದಾರರಿಗೂ, ಅಭಿಮಾನಿಗಳಿಗೂ ಸುಖ, ಶಾಂತಿ ಆಯುರಾರೋಗ್ಯವನ್ನು ಕೊಡಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಸಂಪಾದಕ.

ಪಾಕೀಸ್ಥಾನದೊಡನೆ ಸೇರುವುದಿಲ್ಲವೆಂಬುದು ಖಂಡಿತ

ನಾವು ರಚಿಸಿರುವ ರಾಜ್ಯಾಂಗಸಭೆಯು ಕಾಶ್ಮೀರವು ಭಾರತದೊಡನೆ ಸೇರುವುದನ್ನು ಸಮರ್ಥಿಸುವುದೇ ಇಲ್ಲವೇ ಎಂಬುದನ್ನು ನಿರ್ಧರಿಸುತ್ತದೆ.

ನಾವು ಭಾರತದ ಒಂದು ಭಾಗವಾಗಿರುವುದರಿಂದ ಭಾರತದೊಡನೇ ಇರುತ್ತೇವೆ. ಹಾಗೆ ನಮ್ಮ ಜನತೆಯು ಇಷ್ಟಪಡದಿದ್ದರೆ ನಾವು ಹಿಂದೆ ಹೇಗೆ ಸ್ವತಂತ್ರವಾಗಿದ್ದೆವೋ ಹಾಗೆಯೇ ಸ್ವತಂತ್ರವಾಗಿ ಉಳಿಯುವೆವೇ ಹೊರತು ಪಾಕೀಸ್ಥಾನದೊಡನೆ ನಾವು ಖಂಡಿತವಾಗಿ ಸೇರುವುದಿಲ್ಲವೆಂದು ಕಾಶ್ಮೀರಪ್ರಧಾನಿ ಶೇಕ್ ಅಬ್ದುಲ್ಲಾರವರು ಹೇಳಿರುವುದಾಗಿ ವರದಿಯಾಗಿದೆ.

ತಿರುವಾಂಕೂರ್ ಕೊಚ್ಚಿನ್ ಆಯವ್ಯಯ

ತಿರುವಾಂಕೂರ್ ಕೊಚ್ಚಿನ್ ಶಾಸನ ಸಭೆಯಲ್ಲಿ ಅರ್ಥಸಚಿವ ಶ್ರೀ ಗೋವಿಂದಮೆನನ್'ರವರು ಸರ್ಕಾರದ ಆಯವ್ಯಯ ಪಟ್ಟಿಯನ್ನು ಮಂಡಿಸಿದರು.

ಮುಂದಿನ ಸಾಲಿನ ಅಂದಾಜು ಉತ್ಪತ್ತಿಯು ೧೭ ಕೋಟಿ ೩೦ ಲಕ್ಷ ರೂ ವೆಚ್ಚವು ೧೭ ಕೋಟಿ ೨೭ ಲಕ್ಷ ರೂ ವಿದ್ಯಾಭ್ಯಾಸಕ್ಕೆ ೩ ಕೋಟಿ ೨೭ ಲಕ್ಷ ರೂ ಗಳನ್ನು ಒದಗಿಸಲಾಗಿದೆ.

ಸೂಚನೆ

ಚಾಂದ್ರಮಾನ ಯುಗಾದಿ ಪ್ರಯುಕ್ತ ಈದಿನ ನಮ್ಮ ಕಾರ್ಯಾಲಯಕ್ಕೆ ರಜಾ ಕೊಡಲಾಗಿದೆ ನಾಳೆ ಪತ್ರಿಕೆಯಿಲ್ಲ.

—ವ್ಯವಸ್ಥಾಪಕ.

ಶ್ರೀ ದಾಸಪ್ಪನವರ ಕೊಲೆಯತ್ನ ?

ಬೆಂಗಳೂರು ಮಾ ೨೪

ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿ ಶ್ರೀ ಎಲ್. ಮುನಿಸ್ವಾಮಿಯವರ ಪುತ್ರ ಶ್ರೀ ಹನುಮಂತರೆಡ್ಡಿಯವರನ್ನು ಅರ್ಥಸಚಿವ ಶ್ರೀ ಹೆಚ್. ಸಿ ದಾಸಪ್ಪನವರ ಕತ್ತು ಹಿಸುಕಲು ಯತ್ನಿಸಿದರೆಂಬ ಆಪಾದನೆ ಮೇರೆಗೆ ಸೋಮವಾರ ಬೆಳಗ್ಗೆ ಬೆಂಗಳೂರು ಪೋಲೀಸರು ದಸ್ತಗಿರಿಮಾಡಿದರು. ಶ್ರೀ ರೆಡ್ಡಿಯವರು ಈಗ ಪೋಲೀಸು ವಶದಲ್ಲಿದ್ದಾರೆ ತನಿಖೆ ಮುಂದುವರಿಯುತ್ತಿದೆ.

ಪ್ರತಿಭಟನಾ ಸಭೆಗಳು

ದಕ್ಷಿಣ ಆಫ್ರಿಕಾದಲ್ಲಿ ಡಾ|| ಮಲಾನ್ ಸರ್ಕಾರದ ನೀತಿಯನ್ನು ವಿರೋಧಿಸುವ ಅನೇಕ ಪ್ರತಿಭಟನಾ ಸಭೆಗಳು ನಡೆಯುತ್ತಲಿವೆ. ನ್ಯಾಯಾಲಯಗಳ ಅಧಿಕಾರವನ್ನು ಮೊಟಕುಮಾಡಬೇಕೆಂಬ ಅವರ ನೀತಿಗೆ ಎಲ್ಲಿಯೂ ಪುರಸ್ಕಾರದೊರೆತಿಲ್ಲ. ಅವರ ಸರ್ಕಾರವು ಕೂಡಲೇ ರಾಜೀನಾಮೆಕೊಡಬೇಕೆಂದು ಒತ್ತಾಯ ನಡೆಯುತ್ತಲಿದೆಯೆಂದು ಹೇಳಲಾಗಿದೆ.

ಹರಿಕಥೆ

ವಾಣೀವಿಲಾಸ ಮೊಹಲ್ಲಾದಲ್ಲಿ ಈ ಸಂಜೆ ೬ ಗಂಟೆಗೆ ನೂತನ ವರ್ಷದ ಪ್ರಯುಕ್ತ ಶ್ರೀ ಬದರೀಪ್ರಸಾದ್'ರವರ ನೂತನಗೃಹದಲ್ಲಿ ಬೆಂಗಳೂರಿನ ಶ್ರೀ ಹರಿಹರಾನಂದ ಭಾರತೀಸ್ವಾಮಿಯವರಿಂದ ಹರಿಕಥೆಯನ್ನು ಏರ್ಪಡಿಸಲಾಗಿದೆ ಸರ್ವರಿಗೂ ಆಹ್ವಾನವುಂಟು

ರಾಜೀನಾಮೆ

ಉತ್ತರಅಟ್ಲಾಂಟಿಕ್ ಸುಪ್ರೀಂ ಕಮ್ಯಾಂಡರಾಗಿರುವ ಜನರಲ್ ಐಸನ್‌ಹೋವರ್'ರವರು ಅಮೆರಿಕಾ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಲು ತಮ್ಮ ಹುದ್ದೆಗೆ ರಾಜೀನಾಮೆ ಕೊಡುವರೆಂದು ಹೇಳಲಾಗಿದೆ.

ಕಬ್ಬಿಣದ ಕಾರ್ಖಾನೆ

ಭಾರತದಲ್ಲೆಲ್ಲಾ ಅತ್ಯಂತ ದೊಡ್ಡದಾದ ಬೀಡುಕಬ್ಬಿಣ ತಯಾರಿಸುವ ಕಾರ್ಖಾನೆಯನ್ನು ಭಾರತ ಸರ್ಕಾರವು ಸ್ಥಾಪಿಸಲಿದೆಯೆಂದು ಹೇಳಲಾಗಿದೆ.

ಪಾರ್ಲಿಮೆಂಟಿಗೆ

ಕಾಶ್ಮೀರರಾಜ್ಯಾಂಗಸಭೆಯು ಭಾರತ ಪಾರ್ಲಿಮೆಂಟಿನ ಹಿರಿಯಸಭೆಗೆ ४, ಕಿರಿಯ ಸಭೆಗೆ ೬ ಸದಸ್ಯರನ್ನು ನಾಮಕರಣಮಾಡಿದೆ.

ವಿಶ್ವಬ್ಯಾಂಕಿನಿಂದ ೩ ಕೋಟಿ ರೂ. ಸಾಲ

ಬೆಂಗಳೂರು ಮಾ ೨೫

ಭದ್ರಾವತಿಯಲ್ಲಿ ಕೃತಕ ಗೊಬ್ಬರದ ಕಾರ್ಖಾನೆಯನ್ನು ಸ್ಥಾಪಿಸಲು ಮೈಸೂರು ಸರ್ಕಾರವು ವಿಶ್ವಬ್ಯಾಂಕಿನಲ್ಲಿ ೩ ಕೋಟಿ ರೂ ಸಾಲ ಪಡೆಯುವುದಾಗಿ ಗೊತ್ತಾಗಿದೆ.

ಸೇವಾದಳ ಶಿಬಿರಗಳು

ಮೈಸೂರು ಮಾ. ೨೫

ಮೈಸೂರಿನ ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸುವಂತೆ ಮೈಸೂರಿನಲ್ಲಿ ಮಹಿಳಾ ಮಾಧ್ಯಮಿಕ ಶಿಕ್ಷಣ ಶಿಬಿರವನ್ನು ೨೮-೪-೫೨ ರಿಂದ ತೆರೆಯಲಾಗುವುದು.

ಮೈಸೂರು ಜಿಲ್ಲೆಯ ಮಾಧ್ಯಮಿಕ ಶಿಕ್ಷಣ ಶಿಬಿರವನ್ನು ತಲಕಾಡಿನಲ್ಲಿ, ಹುಣಸೂರು ಮತ್ತು ಪಿರಿಯಾಪಟ್ಟದಲ್ಲಿ ಕೂಡ ಸೇವಾಶಿಬಿರ ತೆರೆಯಲು ನಿರ್ಧರಿಸಲಾಗಿದೆ.

ವಿದ್ಯಾಕೇಂದ್ರ ಸ್ಥಾಪನೆ

ಬೆಂಗಳೂರು ಮಾ. ೨೫

ಯುನೈಟೆಡ್ ನೇಷನ್ಸ್ ಆಶ್ರಯದಲ್ಲಿ ಒಂದು ವಿದ್ಯಾಕೇಂದ್ರವನ್ನು ಮೈಸೂರಿನಲ್ಲಿ ಸ್ಥಾಪಿಸುವ ವಿಷಯವು ಮೈಸೂರು ಸರ್ಕಾರದ ಪರ್ಯಾಲೋಚನೆಯಲ್ಲಿದೆ ಇದಕ್ಕೆ ೧೫ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ ಈ ಕೇಂದ್ರದಲ್ಲಿ ಉಪಾಧ್ಯಾಯರಿಗೆ ಮೂಲಶಿಕ್ಷಣ ಕೊಡಲಾಗುತ್ತದೆಯೆಂದು ಗೊತ್ತಾಗಿದೆ.

ಸ್ವೀಕಾರ

ಮೈಸೂರು ಮಾ. ೨೫

ಮೈಸೂರು ರಾಜಕಮಲ್ ಟಾಕೀಸಿನವರು ಕಳುಹಿಸಿರುವ ನೂತನವರ್ಷದ ಶುಭಾಶಯಗಳನ್ನು ಆದರದಿಂದ ಸ್ವೀಕರಿಸಿರುತ್ತೇವೆ

ಸೋಷಲಿಸ್ಟ್ ಕಾರ್ಯದರ್ಶಿ ದಸ್ತಗಿರಿ

ಜನವರಿ ೨೬ನೇ ತಾ|| ನಡೆದ ದಂಗೆಯಲ್ಲಿ ಭಾಗವಹಿಸಿದ್ದರೆಂಬ ಆಪಾದನೆ ಮೇಲೆ ಸೋಷಲಿಸ್ಟ್ ಪಕ್ಷದ ಕಾರ್ಯದರ್ಶಿ ಮಿ|| ಇಬ್ರಾಹಿಂ ಚೌಕ್ರಿಯವರನ್ನು ಈಜಿಪ್ಟ್ ಸರ್ಕಾರವು ದಸ್ತಗಿರಿ ಮಾಡಿರುವುದಾಗಿ ಹೇಳಲಾಗಿದೆ.

ನಿನ್ನೆ ತಿರುವಾಂಕೂರ್ ಕೊಚ್ಚಿನ್ ಶಾಸನಸಭೆಯಲ್ಲಿ ಸರ್ಕಾರವು ಉಪಬೇಡಿಕೆಗಳನ್ನು ಮಂಡಿಸಿದಾಗ ಬೇಡಿಕೆಯೊಂದು ಮಂಜೂರಾಗದೆ ಸರ್ಕಾರಕ್ಕೆ ಸೋಲುಂಟಾಯಿತೆಂದು ಹೇಳಲಾಗಿದೆ. ಬೇಡಿಕೆಯ ಪರವಾಗಿ ೪೯ ಓಟುಗಳೂ, ವಿರೋಧವಾಗಿ ೫೧ ಓಟುಗಳೂ ಬಂದುವು.

ಅಖಿಲಭಾರತ ಉತ್ಪನ್ನಗಾರರ ಸಭೆ

ಅಖಿಲಭಾರತ ಉತ್ಪನ್ನಗಾರರ ಸಭೆಯು ದೆಹಲಿಯಲ್ಲಿ ಮೈಸೂರಿನ ಮಾಜಿ ದಿವಾನರಾದ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆಯಿತು.

ಪ್ರಾರಂಭಭಾಷಣಮಾಡುತ್ತಾ, ಕೇಂದ್ರಸರ್ಕಾರದ ಉತ್ಪನ್ನಶಾಖಾಸಚಿವ ಶ್ರೀ ಮಹ್ತಾಬ್'ರವರು ಪಂಚವಾರ್ಷಿಕ ಯೋಜನೆಯಲ್ಲಿ ಉತ್ಪನ್ನಗಾರರ ಪಾತ್ರವೇನೆಂಬುದನ್ನು ವಿವರಿಸಿದರು.

ಶ್ರೀ ವಿಶ್ವೇಶ್ವರಯ್ಯನವರು ತಮ್ಮ ಅಧ್ಯಕ್ಷಭಾಷಣದಲ್ಲಿ ಕಬ್ಬಿಣ, ಉಕ್ಕು, ಮೋಟಾರು, ವಿಮಾನ ತಯಾರಿಕೆಗೆ ಬೇಕಾಗುವ ವಿದ್ಯುಚ್ಛಕ್ತಿ, ಸರಬರಾಜಿಗೆ ಅಗ್ರಮಾನ್ಯತೆಯನ್ನು ಕೊಡಬೇಕು. ಅಲ್ಲದೆ ಮೋಟಾರುಗಳು, ವಿಮಾನಗಳು ಭಾರತದಲ್ಲಿ ೨-೩ ವರ್ಷಗಳಲ್ಲಿ ತಯಾರಾಗಬೇಕೆಂದು ಹೇಳಿದರು.

ಪರದೇಶಗಳೊಡನೆ ವ್ಯಾಪಾರನೀತಿ, ವಿದೇಶಿಯ ಬಂಡವಾಳದಿಂದ ಭಾರತದಲ್ಲಿ ಸ್ಥಾಪಿಸುವ ಕೈಗಾರಿಕೆ, ಕಾರ್ಮಿಕ ಹಿತಾತಯಕ್ಕೆ ಸಂಬಂಧಪಟ್ಟ ಕೆಲವು ನಿರ್ಣಯಗಳನ್ನು ಸಭೆಯಲ್ಲಿ ಮಾಡಲಾಯಿತು.

ರಾಜೀನಾಮೆ ಕೊಡುವುದಿಲ್ಲ

ಪ್ರತಿಭಟನಾ ಸಭೆಗಳನ್ನು ನಡೆಸಿ ರಾಜೀನಾಮೆಯನ್ನು ಕೊಡಬೇಕೆಂದು ಒತ್ತಾಯಪಡಿಸಿದ ಮಾತ್ರಕ್ಕೆ ತಮ್ಮ ಸರ್ಕಾರವು ರಾಜೀನಾಮೆಕೊಡುವುದಿಲ್ಲವೆಂದು ದಕ್ಷಿಣ ಆಫ್ರಿಕಾ ಮುಖ್ಯಮಂತ್ರಿ ಡಾ|| ಮಲಾನರು ಹೇಳಿರುವರು.

ನೆಹರೂ ದೆಹಲಿಗೆ

ಎ. ಐ. ಸಿ. ಸಿಯಲ್ಲಿ ಭಾಗವಹಿಸಿದ ನಂತರ ಪಂಡಿತ ನೆಹರೂರವರು ಕಲ್ಕತ್ತಾದಿಂದ ದೆಹಲಿಗೆ ನಿನ್ನೆ ಹಿಂತಿರುಗಿದರು.

ಪತ್ರಿಕೋದ್ಯಮ ಶಿಕ್ಷಣ

ಬೊಂಬಾಯಿ ಮಾ ೨೫

ಅಮೆರಿಕದ ಸಿರಾಕ್ಯೂಸ್ ವಿಶ್ವವಿದ್ಯಾನಿಲಯದ ಪ್ರೊ|| ರೋಲೆಂಡ್ ಇ. ವುಲ್‌ಸೆಲೆಯವರು ನಾಗಪುರದ ಹಿಸ್‌ಲಾಪ್ ಕಾಲೇಜಿನಲ್ಲಿ ಪತ್ರಿಕೋದ್ಯಮ ಶಿಕ್ಷಣ ವ್ಯವಸ್ಥೆ ಮಾಡಲು, ಬೊಂಬಾಯಿಗೆ ಬಂದರು.

ಹಿಸ್‌ಲಾಪ್ ಕಾಲೇಜಿನ ಪ್ರಿನ್ಸಿಪಾಲ್ ಡೇವಿಡ್ ಮೋಸನ್‌ರ ಆಹ್ವಾನದ ಮೇಲೆ ಪ್ರೊ|| ವುಲ್‌ಸೆಲೆಯವರು ಫುಲ್‌ಬ್ರೈಟ್ ನಿಧಿಯ ಸಲವಾಗಿ ಬಂದಿದ್ದು, ಒಂದು ವರ್ಷ ನಾಗಪುರದಲ್ಲಿರುವರು.

ನಾಗಪುರಕ್ಕೆ ತೆರಳಿ ಅಲ್ಲಿ ಒಂದು ವಾರವಿದ್ದು, ನಂತರ ನವದೆಹಲಿ, ಕಲ್ಕತ್ತ, ಮದರಾಸು ಮುಂತಾದ ನಗರಗಳಲ್ಲಿನ ವೃತ್ತಪತ್ರಿಕಾ ಸಂಸ್ಥೆಗಳಿಗೆ ಭೇಟಿ ಕೊಟ್ಟು, ಭಾರತದ ವೃತ್ತಪತ್ರಿಕಾ ವ್ಯವಸಾಯವನ್ನು ಅಭ್ಯಾಸ ಮಾಡುವರು.

ಪ್ರೊ|| ವುಲ್‌ಸೆಲೆಯವರಿಗೆ ಸಹಾಯಕರಾಗಿ ಜಬ್ಬಲ್‌ಪುರದ ಲಿಯನಾರ್ಡ್ ಥಿಯಲಾಜಿಕಲ್ ಕಾಲೇಜಿನ ಪ್ರೊಫೆಸರರೂ, ಇಂಡಿಯನ್ ಥಿಯಲಾಜಿಕಲ್ ಜರ್ನಲ್‌ನ ಸಂಪಾದಕರೂ ಆದ ಪ್ರೊ|| ಹೆರಾಲ್ಡ್ ಹೈನ್ಸ್ ಪರ್ಗರ್‌ರವರು, ಕೆಲಸ ಮಾಡುವರು. ಇವರ ಜೊತೆಗೆ ಭಾರತೀಯ ಅಧ್ಯಾಪಕರೂ ಕೆಲಸ ಮಾಡುವರು.

ಮೊದಲ ವರ್ಷದಲ್ಲಿ ೬೦ ವಿದ್ಯಾರ್ಥಿಗಳನ್ನು ತರಗತಿಗೆ ಸೇರಿಸಿಕೊಳ್ಳಲಾಗುವುದು. ಸುದ್ದಿ ಬರೆಯುವ ವಿಧಾನ, ಸಂಪಾದಕೀಯ ವಿಭಾಗ, ಕಥೆ ಬರೆಯುವ ಕ್ರಮ, ಪತ್ರಿಕಾ ಕಾನೂನು, ಭಾರತದ ಪತ್ರಿಕಾ ಇತಿಹಾಸ, ಮುಂತಾದ ಹತ್ತು ವಿಷಯಗಳನ್ನು ಕಲಿಸಿಕೊಡಲಾಗುವುದು.

ಪ್ರಥಮವಾಗಿ ಪಾಠಪ್ರವಚನಗಳನ್ನು ಇಂಗ್ಲೀಷಿನಲ್ಲಿ ಹೇಳಿಕೊಡಲಾಗುವುದು. ಕ್ರಮೇಣ ಇತರ ಭಾಷೆಗಳಲ್ಲಿಯೂ ಹೇಳಿಕೊಡಬಹುದು.

ಮೊದಲನೆಯ ವರ್ಷ ವಿದ್ಯಾರ್ಥಿಗಳಿಗೆ ಡಿಪ್ಲೋಮವನ್ನು ಕೊಡಲಾಗುವುದು. ಉತ್ಸಾಹ ಹೆಚ್ಚಿದರೆ, ಎರಡು ವರ್ಷದ 'ಡಿಗ್ರಿ' ತರಗತಿಯನ್ನಾಗಿ ಮಾರ್ಪಡಿಸಬಹುದು. ಪ್ರೊ|| ವುಲ್‌ಸೆಲೆಯವರು ಈಗಾಗಲೇ ಅಮೆರಿಕ, ಇಂಗ್ಲೆಂಡಿನಿಂದ ೧೦೦ ಪುಸ್ತಕಗಳನ್ನು ತಂದಿದ್ದಾರೆ.

ಒಂದು ವರ್ಷದ ನಂತರ ಪ್ರೊ|| ವುಲ್‌ಸೆಲೆಯವರು ಪುನಃ ಸಿರಾಕ್ಯೂಸ್ ವಿಶ್ವವಿದ್ಯಾನಿಲಯಕ್ಕೆ ಮರಳುವರು.

ಭಾರತ ವಿಭಜನೆಗೆ ಮುನ್ನ ಪಂಜಾಬ್ ವಿಶ್ವವಿದ್ಯಾನಿಲಯದ ಲಾಹೋರ್‌ನಲ್ಲಿ ಪತ್ರಿಕೋದ್ಯಮದ ಡಿಪ್ಲೋಮ ತರಗತಿಗಳಿದ್ದವು. ಈಗ ಕಲ್ಕತ್ತ ಮತ್ತು ಮದರಾಸು ವಿಶ್ವವಿದ್ಯಾನಿಲಯಗಳಲ್ಲಿ ಕೇವಲ ಡಿಪ್ಲೋಮ ತರಗತಿಗಳು ಮಾತ್ರ ಇವೆ.

ಅಮೆರಿಕದಲ್ಲಿ ಸುಮಾರು ೫೦೦ ಕಾಲೇಜುಗಳಲ್ಲಿ ಪತ್ರಿಕೋದ್ಯಮದ ಅಭ್ಯಾಸವನ್ನು ಹೇಳಿಕೊಡಲಾಗುವುದೆಂದೂ, ಪ್ರತಿ ವರ್ಷವೂ ಸುಮಾರು ೫೦೦೦ ವಿದ್ಯಾರ್ಥಿಗಳು ಪತ್ರಿಕೋದ್ಯಮದ ಡಿಗ್ರಿ ಪಡೆಯುವವರೆಂದೂ ಪ್ರೊ|| ವುಲ್‌ಸೆಲೆಯವರು ತಿಳಿಸಿದರು.

ಪ್ರೊ|| ವುಲ್‌ಸೆಲೆಯವರು ಬೊಂಬಾಯಿನ ಪತ್ರಿಕಾ ಪ್ರತಿನಿಧಿಗಳನ್ನು ಭೇಟಿ ಮಾಡಿದರು. ವುಲ್‌ಸೆಲೆಯವರೊಂದಿಗೆ ಅವರ ಪತ್ನಿಯವರೂ ಭಾರತಕ್ಕೆ ಬಂದಿದ್ದಾರೆ.

ಪೋಲೀಸರಿಂದ ಗೋಲಿಬಾರು

ಮೊನ್ನೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಸಿಂಗೋನಹಳ್ಳಿ ಎಂಬಲ್ಲಿ ಹಳ್ಳಿಗರ ಹೊಡೆದಾಟವನ್ನು ನಿಲ್ಲಿಸಲು ಪೋಲೀಸರು ಗುಂಡುಹಾರಿಸಬೇಕಾಯಿತು ಒರ್ವ ಸ್ಥಳದಲ್ಲಿಯೇ ಸತ್ತನು.

ಹೊಡೆದಾಟದ ಸಮಯದಲ್ಲಿ ಹಳ್ಳಿಗರು ಪೋಲೀಸರನ್ನೇ ಮುತ್ತಿದರು. ೫ ಜನ ಪೋಲೀಸರಿಗೆ ಗಾಯಗಳಾಗಿವೆ.

ದಳವಾಯಿ ಕೆರೆಯ ನೀರನ್ನು ಗಳಿಗ ಕೆರೆ ತೋಟಗಳಿಗೆ ಕೊಟ್ಟದ್ದೇ ಹೊಡೆದಾಟಕ್ಕೆ ಕಾರಣ.

ಹೆಚ್ಚಿನ ರಿಜರ್ವ್ ಪೋಲೀಸ್ ಪಡೆ ಇಲ್ಲಿಂದ ಸ್ಥಳಕ್ಕೆ ಕಳಿಸಲ್ಪಟ್ಟಿದೆ. ಡೆಪ್ಯುಟಿ ಕಮೀಷನರೂ ಮತ್ತು ಪೋಲೀಸ್ ಜಿಲ್ಲಾ ಸೂಪರಿಂಟೆಂಡೆಂಟರೂ ಸ್ಥಳಕ್ಕೆ ತೆರಳಿದ್ದಾರೆ

ಮಾರ್ಷಲ್ ಲಾ ಮುಂದುವರಿಸಲಾಗಿದೆ

ಈಜಿಪ್ಟಿನಲ್ಲಿ ಈಗೆರಡು ತಿಂಗಳ ಕೆಳಗೆ ವಿಧಿಸಿದ್ದ ಮಾರ್ಷಲ್‌ಲಾವನ್ನು ಅನಿರ್ದಿಷ್ಟವಾಗಿ ಮುಂದುವರಿಸಲಾಗಿದೆಯೆಂದು ಗೊತ್ತಾಗಿದೆ.

ಟ್ರಾಕ್ಟರುಗಳ ಉಪಯೋಗ

ಮದರಾಸು ಸರಕಾರವು ವ್ಯವಸಾಯಾಭಿವೃದ್ಧಿಗಾಗಿ ೫೫೦ ಟ್ರಾಕ್ಟರುಗಳನ್ನು ಉಪಯೋಗಿಸುತ್ತಲಿದೆಯೆಂದು ಹೇಳಲಾಗಿದೆ.

ಪೇಟೆ ಧಾರಣೆ

ಮೈಸೂರು ತಾ|| 25-3-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಕ್ಕೆ	13-0	18-2
ಹೊಂಗೆಬೀಜ	,,	9-0	11-2
ಹುರುಳಿ	,,	27-6	29-0
ಅವರೆ	,,	45-14	46-0
ಮೆ. ಕಾಯಿ ಮಣಕ್ಕೆ		10-0	14-10
ಹುಣಸೇಹಣ್ಣು	,,	2-1	2-9
ಸೀಗೆಕಾಯಿ	,,	3-10	—
ತೆಂಗಿನಕಾಯಿ 1100ಕ್ಕೆ		130-0	219

ಚಿನ್ನ ಬೆಳ್ಳಿ ದರಗಳು

25—3—52	ರೂ.
ಸವರನ್	68—8
,,	68—10
ಚಿನ್ನ ತೊಲ	95—4
,, ಮೂಸ	94—0
ಬೆಳ್ಳಿ 100 ತೊಲ	162—8
,, ತೊಲ	1-12

ಕೊಲೆ ಮತ್ತು ಆತ್ಮಹತ್ಯೆ

ಬೊಂಬಾಯಿ ಪೋಲೀಸ್ ಇನ್ಸ್‌ಪೆಕ್ಟರು ಮಹಾಕಾಲ್ ಎಂಬುವರು ತಮ್ಮ ಪತ್ನಿಯನ್ನು ಗುಂಡಿನಿಂದ ಹೊಡೆದು ಕೊಂದು ತಾವೂ ಸಹ ಹೊಡೆದುಕೊಂಡು ಸತ್ತರು.

ನ್ಯೂ ಆಪೇರ

೨೬-೩-೫೨ ರಿಂದ ಅಮೋಘಪ್ರಾರಂಭ

ಪಕ್ಷಿರಾಜರವರ—

* ಕನ್ನಿಕ *

(ತಮಿಳು)

ಪಾತ್ರ—ಟಿ. ಇ. ವರದನ್, ಡಿ. ಬಾಲಸುಬ್ರಮಣ್ಯಂ, ಎ. ಎಸ್. ಕೃಷ್ಣ, ಎಂ. ಎಸ್. ಸರೋಜಿನಿ, ಎಂ. ಆರ್. ಸಂತಾನಲಕ್ಷ್ಮಿ, ಟಿ. ಎ. ಮಧುರಂ ಲಲಿತ—ಪದ್ಮಿನಿ.

ವುಡ್ ಲ್ಯಾಂಡ್ಸ್

21—3—52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ವರ್ಮಾ ಫಿಲಿಂಸ್‌ರವರ—

ಪರ್ ಬತ್

(ಹಿಂದಿ)

ಪಾತ್ರ:— ನೂತನ್, ಪ್ರೇಂನಾಥ್ ಕೆ. ಎನ್. ಸಿಂಗ್, ಉಲ್ಲಾಸ್.

ಉಗಾದಿ ಶುಭಾಶಯ

ನಮ್ಮ ಕಲಾಮಂದಿರವು ತನ್ನ ಬಾಲ್ಯಾವಸ್ಥೆಯ ನಾಲ್ಕನೇ ವರ್ಷವನ್ನು ದಾಟಿ ಐದನೇ ವರ್ಷದಲ್ಲಿ ಕಾಲಿಟ್ಟು ಮುನ್ನಡೆಯುತ್ತಿರುವ ಸಂತೋಷ ಸಮಯದಲ್ಲಿ ಹೊಸ ವರ್ಷವು ಕಲಾಭಿಮಾನಿಗಳಿಗೆ ಸಕಲ ಸನ್ಮಂಗಳವನ್ನುಂಟುಮಾಡಲೆಂದು ಹಾರೈಸುತ್ತದೆ.

ವ್ಯವಸ್ಥಾಪಕ.

ಶ್ರೀ ನೃತ್ಯ ಕಲಾಮಂದಿರ ಮೈಸೂರು.

ಅತ್ಯಾಚಾರ ಮಾಡಿದ್ದಕ್ಕೆ ಕತ್ತೆಯಮೇಲೆ ಮೆರವಣಿಗೆ

ಮೈಸೂರು ಸಂಸ್ಥಾನದ ಜಿಲ್ಲಾ ಕೇಂದ್ರವೊಂದರಲ್ಲಿರುವ ಖಾಸಗಿ ಪಾಠಶಾಲೆಯ ಉಪಾಧ್ಯಾಯರೊಬ್ಬರ ಹಣೆಗೆ ನಾಮವಿಟ್ಟು ತಲೆಗೆ ಮೂರ್ಖರ ಟೋಪಿ ಹಾಕಿ ಕತ್ತೆ ಮೇಲೆ ಕೂರಿಸಿ ನಗರದ ಪ್ರಮುಖ ಬೀದಿಯಾದ ದೊಡ್ಡಪೇಟೆಯಲ್ಲಿ ನಡುಹಗಲಿನಲ್ಲಿ ಮೆರವಣಿಗೆ ಮಾಡಿದ ಘಟನೆಯೊಂದು ವರದಿಯಾಗಿದೆ. ೫೬ ವರ್ಷ ವಯಸ್ಸಿನ ಉಪಾಧ್ಯಾಯರು ತಮ್ಮ ಶಾಲೆಗೆ ಬರುತ್ತಿದ್ದ ಮೈನರ್ ಬಾಲಕಿಯ ಮೇಲೆ ಅತ್ಯಾಚಾರಮಾಡಲು ಪ್ರಯತ್ನಿಸಿದರೆಂಬ ವಿಚಾರ ಹಲವು ಹಿರಿಯರಿಗೆ ತಿಳಿದು ಅವರು ಈ ಶಿಕ್ಷೆ ವಿಧಿಸಿದರೆಂದು ಗೊತ್ತಾಗಿದೆ.

ಯಶಸ್ವಿಯಾಗಿಲ್ಲ ?

ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ|| ಗ್ರಹಾಂರವರು ತಮ್ಮ ಸಂಧಾನ ಮುಗಿಸಿಕೊಂಡು ಕರಾಚಿಯಿಂದ ಜಿನಾವಾಗೆ ತೆರಳಿದರು. ಅವರ ಮಾತುಕತೆಗಳಲ್ಲಿ ಪ್ರಗತಿಯೇನೂ ಕಾಣಬಂದಿಲ್ಲವೆಂದು ಹೇಳಲಾಗಿದೆ.

ಆಜ್ಞೆಗಳೆಲ್ಲಾ ಹಿಂದಕ್ಕೆ

೧೯೫೦ ರಿಂದ ಕಮ್ಯೂನಿಸ್ಟರ ಮೇಲೆ ವಿಧಿಸಿದ್ದ ಆಜ್ಞೆಗಳನ್ನೆಲ್ಲಾ ತಿರುವಾಂಕೂರು—ಕೊಚ್ಚಿನ್ ಸರ್ಕಾರವು ಹಿಂದಕ್ಕೆ ತೆಗೆದುಕೊಂಡಿದೆ. ಈ ಸಂಸ್ಥೆಯವರೇನಾದರೂ ಪುನಃ ದೌರ್ಜನ್ಯಕೃತ್ಯಗಳನ್ನು ಎಸಗಿದರೆ ಆಜ್ಞೆಗಳನ್ನು ಪುನಃ ವಿಧಿಸಲಾಗುತ್ತದೆಯೆಂದು ಅಲ್ಲಿಯ ರಾಜಪ್ರಮುಖರು ಎಚ್ಚರಿಸಿದ್ದಾರೆ.

ಫೋನ್ ೫೭೪ (ರಿಂಗ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೮—೩—೧೯೫೨ನೇ ಶುಕ್ರವಾರ [ಸಂಚಿಕೆ ೧೭೮

ಶ್ರೀ ಎಲ್. ಎಸ್. ರಾಜುರವರಿಗೆ ೨ವರ್ಷ ಸಾದಾ ಸಜ ೨೦೦೦ ರೂ. ಜುಲ್ಮಾನೆ

ದಾಸಪ್ಪನಾಯಿಡು, ಆಗ್ನೇಸ್‌ರಿಗೆ ೨ ವರ್ಷ ಕಠಿಣ ಸಜಾ

ಜಯರಾಂರ ಬಿಡುಗಡೆ

ಬೆಂಗಳೂರು ಮಾ. ೨೭

ಶ್ರೇಷ್ಠ ನ್ಯಾಯಮೂರ್ತಿ ಶ್ರೀ ಮೇದಪ್ಪನವರಿಗೆ ವಿಷಪ್ರಯೋಗದ ಅಪಾದನೆ ಮೇಲೆ ವಿಶೇಷ ನ್ಯಾಯಾಧೀಶರಾದ ಶ್ರೀ ಹೊನ್ನಾಪುರ್‌ರವರು ಈದಿನ ತಮ್ಮ ತೀರ್ಪನ್ನಿತ್ತು, ಶ್ರೀ ರಾಜುರವರಿಗೆ ೨ ವರ್ಷ ಸಾದಾ ಶಿಕ್ಷೆ, ೨೦೦೦ ರೂ. ಜುಲ್ಮಾನೆ ಅದು ತಪ್ಪಿದಲ್ಲಿ ಮತ್ತೊಂದು ವರ್ಷ ಸಾದಾ ಶಿಕ್ಷೆ. ಶ್ರೀ ದಾಸಪ್ಪನಾಯುಡು ಮತ್ತು ಶ್ರೀಮತಿ ಆಗ್ನೇಸ್‌ರಿಗೆ ತಲಾ ೨ ವರ್ಷ ಕಠಿಣ ಶಿಕ್ಷೆ ವಿಧಿಸಿದರು. ಮತ್ತೊಬ್ಬ ಅಪರಾಧಿಯಾದ ಶ್ರೀ ರಾಜುರವರ ಪುತ್ರ ಶ್ರೀ ಜಯರಾಂರವರು ನಿರಪರಾಧಿಯೆಂದು ಬಿಡುಗಡೆ ಮಾಡಲಾಗಿದೆ.

ಶ್ರೀ ರಾಜುರವರ ವಯಸ್ಸು ಮತ್ತು ಈಗಾಗಲೇ ಅನುಭವಿಸುತ್ತಲಿರುವ ಜೈಲುವಾಸವನ್ನು ಗಮನಿಸಿ ಈ ಶಿಕ್ಷೆಯನ್ನು ವಿಧಿಸಿರುವುದಾಗಿ ನ್ಯಾಯಾಧೀಶರು ತೀರ್ಪಿನಲ್ಲಿ ಹೇಳಿರುವರು.

ರಾಜಾಜಿ ನಾಯಕರಾಗಲಿ

ವಿರುದನಗರ, ಚಿದಂಬರಂ, ಕುಂಭಕೋಣಂ ಮುಂತಾದೆಡೆ ಕಾಂಗ್ರೆಸ್ ಕಾರ್ಯಕರ್ತರ ಸಭೆಗಳು ನಡೆದು ಈಗಿನ ಮದರಾಸಿನ ಪರಿಸ್ಥಿತಿಯಲ್ಲಿ ಶ್ರೀ ರಾಜಗೋಪಾಲಾಚಾರಿಯವರು ನಾಯಕತ್ವ ವಹಿಸಿಕೊಳ್ಳುವಂತೆ ಕೋರುವ ನಿರ್ಣಯಗಳನ್ನು ಮಾಡಿರುವರು.

ಜಾರ್ಜ್ ಫಾಸ್ಟರ್‌ಡಲ್ಸರ ರಾಜೀನಾಮೆ

ಅಮೆರಿಕಾ ಸ್ಟೇಟ್ ಇಲಾಖೆಯ ಸಲಹೆಗಾರರಾಗಿ, ಜಪಾನಿನ ಶಾಂತಿ ಕರಾರಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಿ|| ಜಾರ್ಜ್ ಫಾಸ್ಟರ್‌ಡಲ್ಸ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿದ್ದಾರೆ. ಮುಂಬರುವ ಚುನಾವಣೆಗಳಲ್ಲಿ ತಾವು ಸ್ವತಂತ್ರವಾಗಿ ವರ್ತಿಸಲು ಈ ರೀತಿ ಮಾಡಿರುವುದಾಗಿ ಹೇಳಲಾಗಿದೆ.

ಮಸೀದಿ ಪುನರುದ್ಧಾರಕ್ಕೆ ಕಾಶೀಮಠದ ಉದಾರದಾನ

ಕುಂಭಕೋಣದಬಳಿಯಿರುವ ಕಾಶೀಮಠದ ಶ್ರೀ ಕಾಶಿವಾಸಿ ಅರುಳನಂದಿ ತಾಂಬಿರಾನ್ ಸ್ವಾಮಿಗಳವರು ಕುಂಭಕೋಣದ ತಾಲ್ಲೂಕು ತ್ರಿಲೋಕಿ ಗ್ರಾಮದಲ್ಲಿರುವ ಮಸೀದಿಯೊಂದರ ಪುನರುದ್ಧಾರಕಾರ್ಯಕ್ಕೆ ೫೦೦ ರೂಪಾಯಿಗಳ ಉದಾರದಾನ ನೀಡಿರುವರು

ಪೌರ ಚುನಾವಣೆ

ಕಲ್ಕತ್ತಾದಲ್ಲಿ ಪೌರ ಚುನಾವಣೆಯು ನಿನ್ನೆಯದಿನ ನಡೆಯಿತು. ಪೌರಸಭೆಯ ಕಾರ್ಯಕಲಾಪಗಳನ್ನು ಕಳೆದ ೪ ವರ್ಷಗಳಿಂದ ಸರ್ಕಾರವೇ ನಡೆಸುತ್ತಲಿತ್ತು. ೭೫ ಸದಸ್ಯರುಳ್ಳ ಈ ಕಾರ್ಪೊರೇಷನ್ನಿನ ಚುನಾವಣೆಗೆ ೨೯೦ ಜನ ಸ್ಪರ್ಧಿಗಳಿರುವರು

ಭಾರತಕ್ಕೆ ಪರಿಣಿತರು

ಕೊಲೊಂಬೋ ಯೋಜನೆಪ್ರಕಾರ ನದೀಕಣಿವೆ ಯೋಜನೆಗಳಿಗೆ ಸಂಬಂಧಪಟ್ಟ ಕಾರ್ಯಗಳಿಗೆ ಸಹಾಯನೀಡಲು ಭಾರತಕ್ಕೆ ಬ್ರಿಟನ್ನಿನಿಂದ ಮಿ|| ಜೆ ಡಬ್ಲ್ಯು ಮೆಕನ್‌ಸಿ, ಮಿ|| ಇ ಆರ್ ಹಾರ್ವೆ ಎಂಬ್ಬ ಇಂಜನಿಯರಿಂಗ್ ಪರಿಣತರು ಸದ್ಯದಲ್ಲೇ ಭಾರತಕ್ಕೆ ಬರಲಿರುವರು.

ರಾಜಕಮಲ್

28—3—52ರಿಂದ

ಜನಭರಿತವಾದ 3ನೇ ವಾರ

ವಿಜಯಾರವರ—

ಮದುವೆ ಮಾಡಿ ನೋಡು

(ತೆಲುಗು)

ಪಾತ್ರ:— ಎನ್. ಟಿ. ರಾಮರಾವ್, ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎಸ್.ವಿ.ರಂಗರಾವ್, ಜೋಗ್‌ರಾವ್.

ಜಪಾನ್ ಕೈಗಾರಿಕಾ ನಿಯೋಗ

ಬೆಂಗಳೂರು, ಮಾ. ೨೭

ಭಾರತದಲ್ಲಿ ಪ್ರವಾಸಮಾಡುತ್ತಿರುವ ಜಪಾನ್ ಕೈಗಾರಿಕಾನಿಯೋಗದವರು ಇಂದು ಬೆಂಗಳೂರಿಗೆ ಆಗಮಿಸಿದರು. ಶ್ರೀ ಕೆ. ಸಿ. ರೆಡ್ಡಿಯವರನ್ನು ಭೇಟಿಮಾಡಿದ್ದರು ಮುಖ್ಯವಾದ ಕೈಗಾರಿಕಾಸಂಸ್ಥೆಗಳಿಗೆಲ್ಲಾ ಭೇಟಿಯಿತ್ತರು. ನಾಳೆ ಅವರು ಭದ್ರಾವತಿಗೆತೆರಳಿ ೩೦ನೇ ತಾ|| ಮೈಸೂರಿಗೆ ಭೇಟಿ ಕೊಡಲಿರುವರು.

ಕೌನ್ಸಿಲ್ ಆಫ್ ಸ್ಟೇಟ್

ಭಾರತದ ಹಿರಿಯ ಶಾಸನಸಭೆಯಾದ ಕೌನ್ಸಿಲ್ ಆಫ್ ಸ್ಟೇಟಿಗೆ ೧೯೫ ಸದಸ್ಯರ ಚುನಾವಣೆಯು ನಡೆದಿದೆ. ಇನ್ನೂ ೧೬ ಜನರನ್ನು ಭಾರತ ರಾಷ್ಟ್ರಾಧ್ಯಕ್ಷರು ನಾಮಕರಣ ಮಾಡುತ್ತಾರೆ.

ಪ್ರಭಾ *

ಇಂದಿನಿಂದ ಅಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

ಪುತ್ಲಿ

ಪಾತ್ರ— ಮುಮ್ತಾಜ್‌ಶಾಂತಿ, ಪ್ರಾಣ್ ಹುಸ್ನಭಾನು ಮತ್ತು, ಯಾಕೂಬ್

ಬೆಳಗಿನ ಪ್ರದರ್ಶನ ಇಂದಿನಿಂದ ಮೂರು ದಿನಗಳು ವಸಂತ ಬಾಂಬೇ ಟಾಕೀಸ್‌ರವರ

—: ಮಜಬೂರ್ :—

ಕೌನ್ಸಿಲ್ ಆಫ್ ಸ್ಟೇಟಿಗೆ ಮೈಸೂರಿನಿಂದ

ಸ್ವ- ಸು- ಫೋನ್] ಬೆಂ- ಮಾ ೨೭

ಭಾರತ ಕೌನ್ಸಿಲ್ ಆಫ್ ಸ್ಟೇಟಿಗೆ ಮೈಸೂರಿಂದ ಈ ಕೆಳಗೆ ನಮೂದಿಸಿರುವವರು ಚುನಾಯಿತರಾದರು— ಕಾಂಗ್ರೆಸ್ ಪಕ್ಷದ ಶ್ರೀಗಳಾದ ಕೃಷ್ಣಮೂರ್ತಿರಾವ್, ಗೋವಿಂದರೆಡ್ಡಿ, ಬಸಪ್ಪಶೆಟ್ಟಿ, ತಿಮ್ಮಾಬೋಯಿ ಜನಾಬ್ ವಲಿಯುಲ್ಲಾ ಮತ್ತು ಸೋಷಲಿಸ್ಟ್ ನಾಯಕರಾದ ಶ್ರೀ ಸಿ ಜಿ ಕೆ ರೆಡ್ಡಿ.

ಮೈಸೂರು ಹಿರಿಯ ಶಾಸನಸಭೆಯ ಚುನಾವಣೆಗಳು ಇಂದು ನಡೆದುವು ನಾಳೆ ದಿನ ಎಣಿಕೆ ನಡೆದು ಫಲಿತಾಂಶ ಪ್ರಕಟವಾಗುತ್ತದೆ.

ರಾಯಲುಸೀಮೆಯಲ್ಲಿ ಕ್ಷಾಮಪರಿಸ್ಥಿತಿ

ಮದ್ರಾಸ್‌ಗೌರ್‍ನರ್ ಶ್ರೀ ಶ್ರೀಪ್ರಕಾಶ್‌ರವರು ರಾಯಲುಸೀಮೆಯಲ್ಲಿಯ ಕ್ಷಾಮಪ್ರದೇಶ ಸ್ಥಳಗಳಲ್ಲಿ ೩ ದಿನಗಳ ಪ್ರವಾಸ ಪೂರೈಸಿಯವರು ಪ್ರವಾಸವಿಷಯದಲ್ಲಿ ಅವರು ಮಾತನಾಡುತ್ತಾ, ಈ ಪ್ರಾಂತ್ಯದಲ್ಲಿ ಆಹಾರಪರಿಸ್ಥಿತಿ ಚೆನ್ನಾಗಿಲ್ಲ. ನೀರಿನ ತೊಂದರೆಯು ವಿಶೇಷವಾಗಿದೆ. ಸರಕಾರವು ಕೆಲಸವಿಲ್ಲದವರಿಗೆ ಕೆಲಸ ಮಕ್ಕಳಿಗೆ ಆಹಾರ ಒದಗಿಸುವುದು ಅದರ ಕರ್ತವ್ಯವಾಗಿದೆ. ಸರ್ಕಾರವು ಈ ಕಾರ್ಯದಲ್ಲಿ ಅತ್ಯಂತ ಗುರುತರವಾಗಿ ಸೂಕ್ತ ಕಾರ್ಯಗಳನ್ನೆಲ್ಲಾ ತೆಗೆದುಕೊಳ್ಳುತ್ತಿರುವುದಾಗಿ ಅವರು ಹೇಳಿರುವರು.

ಪ್ರತಿಭಟನೆ

ತಿರುವಾಂಕೂರು-ಕೊಚ್ಚಿನ್ ಪ್ರಾಂತ್ಯಕ್ಕೆ ಕೇಂದ್ರ ಸರ್ಕಾರವು ಸಲಹೆಗಾರರನ್ನು ನೇಮಿಸುವ ಬಗ್ಗೆ ಸೋಷಲಿಸ್ಟ್ ಮುಂತಾದ ಪಕ್ಷಗಳ ಪ್ರತಿಭಟನೆಗೆ ತಮ್ಮ ಪಕ್ಷವೂ ಬೆಂಬಲನೀಡುವುದಾಗಿ ಅಲ್ಲಿಯ ಅರ್ಥಿಕ ಸಚಿವ ಶ್ರೀ ಗೋವಿಂದಮೆನನ್‌ರವರು ಹೇಳಿರುವುದಾಗಿ ತಿಳಿದುಬಂದಿದೆ.

ಜನಾಬ್ ಹಯಾತ್ ಬ್ಯಾಂಕಾಕಿಗೆ

ಬೆಂಗಳೂರು, ಮಾ. ೨೭

ಕೇಂದ್ರಸರ್ಕಾರದ ಮನವಿ ಪ್ರಕಾರ ಮೈಸೂರುಸಂಸ್ಥಾನದ ವಿದ್ಯುಚ್ಛಕ್ತಿ ಇಲಾಖಾ ಮುಖ್ಯಾಧಿಕಾರಿ ಜನಾಬ್ ಹಯಾತ್‌ರವರ ಸೇವೆಯನ್ನು ವಿಶ್ವಸಂಸ್ಥೆಗೆ ೮ ತಿಂಗಳಕಾಲ ಎರವುಕೊಡಲಾಗಿದೆ. ಅವರು ಏಪ್ರಿಲ್ ೬ ನೇತಾರೀಖು ಬ್ಯಾಂಕಾಕಿಗೆ ತೆರಳುವರು.

ಡಾ|| ಕೆ. ಎನ್. ಕಟ್ಜು

ಮೈಸೂರು, ಮಾ. ೨೭

ಕೊಡಗಿನ ಶಾಸನಸಭಾಧಿವೇಶನದ ಉದ್ಘಾಟನೆಗೆ ತೆರಳಿದ್ದ ಕೇಂದ್ರ ಗೃಹಸಚಿವ ಕೈಲಾಸನಾಥ ಕಟ್ಜುರವರು ಮಡಕೇರಿಯಿಂದ ಹಿಂತಿರುಗಿ ಈದಿನ ವಕೀಲಸಂಘಕ್ಕೆ ಭೇಟಿಯಿತ್ತು, ವಕೀಲರನ್ನುದ್ದೇಶಿಸಿ ಭಾಷಣಮಾಡಿ ಮಧ್ಯಾಹ್ನ ಬೆಂಗಳೂರಿಗೆ ತೆರಳಿದರು. ಅವರ ಜೊತೆಯಲ್ಲಿ ಅರ್ಥಿಕಸಚಿವ ಶ್ರೀ ದಾಸಪ್ಪನವರೂ ಇದ್ದರು.

ವೈರಮುಡಿಗೆ ಯಾರೂ ಹೋಗಬಾರದು

೩೦ ನೇ ತಾ|| ಮೇಲುಕೋಟೆಯಲ್ಲಿ ನಡೆಯಲಿರುವ ವೈರಮುಡಿ ಸಮಾರಂಭ ಸಮಯದಲ್ಲಿ ೫೦ ಜನಕ್ಕಿಂತ ಹೆಚ್ಚಿಗೆ ಸೇರಕೂಡದೆಂದು ಮಂಡ್ಯ ಜಿಲ್ಲಾಧಿಕಾರಿಗಳು ಆಜ್ಞೆ ಹೊರಡಿಸಿರುವರು. ಆ ಪ್ರದೇಶದ ಸುತ್ತಮುತ್ತಲೂ ಕಾಲರಾರೋಗವಿರುವುದರಿಂದ ಯಾರೂ ಈ ಉತ್ಸವಕ್ಕೆ ಹೋಗಕೂಡದೆಂದು ಎಚ್ಚರಿಸಿರುವರು

ಚುನಾವಣೆಯಲ್ಲಿ ಸೋತವರಿಗೆ ಸಚಿವ ಸ್ಥಾನ

ಪಶ್ಚಿಮ ಬಂಗಾಳದ ಶಾಸನಸಭೆಯ ಕಾಂಗ್ರೆಸ್ ಪಕ್ಷವು ಸರ್ವಾನುಮತದಿಂದ ಡಾ|| ಬಿ. ಸಿ. ರಾಯ್‌ರವರನ್ನು ತನ್ನ ಪಕ್ಷದ ನಾಯಕರನ್ನಾಗಿ ಚುನಾಯಿಸಿಕೊಂಡಿದೆ. ಅವರು ನೂತನ ಮಂತ್ರಿಮಂಡಲವನ್ನು ರಚಿಸಿ ಮುಖ್ಯಮಂತ್ರಿಗಳಾಗುವರು. ಈಗಿನ ಮಂತ್ರಿಮಂಡಲದಲ್ಲಿದ್ದು ಚುನಾವಣೆಯಲ್ಲಿ ಪರಾಜಿತರಾದ ಶ್ರೀ ಪಿ. ಸಿ. ಸೇ ಮತ್ತು ಶ್ರೀ ಕೆ. ಪಿ. ಮುಖರ್ಜಿಯವರನ್ನು ಹೊಸ ಮಂತ್ರಿಮಂಡಲದಲ್ಲೂ ಸೇರಿಸಿಕೊಳ್ಳಲಾಗುವುದೆಂದು ಹೇಳಲಾಗಿದೆ. ಇವರಿಬ್ಬರನ್ನು ಹಿರಿಯ ಶಾಸನಸಭೆಗೆ ನಾಮಕರಣ ಮಾಡಲಾಗುತ್ತದೆಯೆಂದು ಹೇಳಲಾಗಿದೆ.

ನೂತನ ಪಾರ್ಲಿಮೆಂಟ್ ಅಧಿವೇಶನ

ನೂತನ ಪಾರ್ಲಿಮೆಂಟಿನ ಹಿರಿಯ ಮತ್ತು ಕಿರಿಯ ಸಭೆಗಳ ಸಂಯುಕ್ತ ಅಧಿವೇಶನವು ೧೬ನೇ ತಾ|| ನಡೆಯುತ್ತದೆ. ಆ ದಿನ ನೂತನ ರಾಷ್ಟ್ರಾಧ್ಯಕ್ಷರು ಭಾಷಣ ಮಾಡುತ್ತಾರೆ. ಎರಡು ಸಭೆಗಳೂ ಪ್ರತ್ಯೇಕವಾಗಿ ೧೯ನೇ ತಾರೀಖು ಸಭೆ ಸೇರಿ ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಚರ್ಚೆ ನಡೆಸುವರೆಂದು ಹೇಳಲಾಗಿದೆ.

ಎರಡು ಸಭೆಗಳೂ ಮೇ ೧೩ನೇ ತಾರೀಖಿನಿಂದ ತಮ್ಮ ಕಾರ್ಯವನ್ನು ಪ್ರಾರಂಭಿಸುತ್ತವೆ. ಮೇ ೬ನೇ ತಾರೀಖು ರಾಷ್ಟ್ರಾಧ್ಯಕ್ಷರ ಚುನಾವಣೆ, ಮೇ ೧೨ನೇ ತಾರೀಖು ಉಪರಾಷ್ಟ್ರಾಧ್ಯಕ್ಷರ ಚುನಾವಣೆ ನಡೆಯುತ್ತದೆ. ಉಪರಾಷ್ಟ್ರಾಧ್ಯಕ್ಷರೇ ಹಿರಿಯ ಶಾಸನಸಭೆಯ ಅಧ್ಯಕ್ಷರಾಗಿರುತ್ತಾರೆ. ಕಿರಿಯ ಶಾಸನಸಭೆಯ ಅಧ್ಯಕ್ಷರ ಚುನಾವಣೆಯು ೧೫ನೇ ತಾ|| ನಡೆಯುತ್ತದೆ.

ಡಕಾಯಿತಿ

ಮದರಾಸಿಗೆ ೧೭ ಮೈಲಿ ದೂರದಲ್ಲಿ ೭ ಜನ ಡಕಾಯಿತರು ಮಂಗಳವಾರ ರಾತ್ರಿ ಒಂದು ಮೋಟಾರನ್ನು ಅಡ್ಡಕಟ್ಟಿ ಅದರಲ್ಲಿದ್ದವರ ಒಡವೆಹಣವನ್ನೆಲ್ಲಾ ದೋಚಿಕೊಂಡು ಹೋಗಿರುವರು. ಈರೀತಿ ಅಲ್ಲಿ ನಡೆದಿರುವುದು ೪ನೇ ಬಾರಿಯೆಂದು ಗೊತ್ತಾಗಿದೆ.

ಟೆಲಿವಿಷನ್ ಮೂಲಕ ವಿದ್ಯಾಭ್ಯಾಸ

ಟೆಲಿವಿಷನ್ ಮೂಲಕ ಬಾಲಕರಿಗೆ ವಿದ್ಯೆಯನ್ನು ಬೋಧಿಸುವ ಹೊಸಕ್ರಮವನ್ನು ಬ್ರಿಟನ್ನಿನ ೬ ಪಾಠಶಾಲೆಗಳಲ್ಲಿ ಮೇ ಮಾಹೆಯಿಂದ ಪ್ರಾರಂಭಿಸಲು ತಕ್ಕ ವ್ಯವಸ್ಥೆ ಮಾಡಲಾಗಿದೆ.

ಇರಾನ್ ಎಣ್ಣೆ ಸಮಸ್ಯೆಯಲ್ಲಿ ಅಮೆರಿಕದ ಪಾತ್ರ

ವಾಷಿಂಗ್ಟನ್ ಮಾ ೨೦

ಇರಾನ್ ಎಣ್ಣೆ ಸಮಸ್ಯೆಯಲ್ಲಿ ಅಮೆರಿಕದ ಪಾತ್ರವೇನು, ಎಂಬ ಬಗ್ಗೆ ಅಮೆರಿಕಾ ರಾಜ್ಯ ಇಲಾಖೆಯು ಒಂದು ಪ್ರಕಟಣೆ ಹೊರಡಿಸಿದೆ.

ಇರಾನಿನ ಮುಖ್ಯಮಂತ್ರಿ ಮೊಸಾದಿಕ್ಕರು 'ನಾವು ಬ್ರಿಟಿಷ್ ಯೋಜನೆಯನ್ನು ಒಪ್ಪಿದರೆ ಮಾತ್ರ, ಅಧ್ಯಕ್ಷ ಟ್ರೂಮನ್ನರು ನಮಗೆ ಆರ್ಥಿಕ ಸಹಾಯನೀಡುವರು' ಎಂದು ಹೇಳಿದ ಪತ್ರಿಕಾ ವರದಿಯನ್ನು ರಾಜ್ಯ ಇಲಾಖಾ ಪ್ರಕಟಣೆಯು ಸಂಪೂರ್ಣವಾಗಿ ಅಲ್ಲಗಳೆದಿದೆ.

ಬ್ರಿಟನ್ನಿಗೂ, ಇರಾನಿಗೂ ಸಮ್ಮತವಾದ ಒಪ್ಪಂದವಾಗಬೇಕೆಂಬುದೇ ಅಮೆರಿಕದ ಆಶಯ. ಯಾರ ಮೇಲೂ ಯಾವ ಆರ್ಥಿಕ ನಿರ್ಬಂಧವನ್ನು ಹಾಕಬೇಕೆಂಬ ಆಶಯ ಅಮೆರಿಕಕ್ಕೆ ಇಲ್ಲ.

ಇರಾನಿಗೂ, ಬ್ರಿಟನ್ನಿಗೂ ಈ ವಿವಾದದಲ್ಲಿ ಒಪ್ಪಂದವೂ ಸಾಧ್ಯವಿದೆಯೆಂದೂ, ಆ ಕಾರಣದಿಂದ ಅಂತರರಾಷ್ಟ್ರೀಯ ಬ್ಯಾಂಕ್ ಮಧ್ಯಸ್ಥಿಕೆ ವಹಿಸಲು ಸಿದ್ಧವಾಗಿರುವ ಅವಕಾಶವನ್ನು ಇರಾನ್ ಮತ್ತು ಬ್ರಿಟನ್ ತೆಗೆದುಕೊಂಡರೆ, ಸದ್ಯಕ್ಕಾದರೂ ಒಂದು ಒಪ್ಪಂದವಾಗಲು ಸಾಧ್ಯವೆಂದು ಅಮೆರಿಕದ ಆಶಯವಾಗಿದೆ.

ಸಿಂಹಳ ಪ್ರಧಾನಿ

ದಿವಂಗತರಾದ ಸಿಂಹಳ ಪ್ರಧಾನಿ ಸೇನಾನಾಯಕೆಯವರ ಸ್ಥಾನಕ್ಕೆ ಅವರ ಪುತ್ರ, ಶ್ರೀ ಡಡ್ಲಿ ಸೇನಾನಾಯಕೆಯವರನ್ನು ಸಿಂಹಳದ ಪ್ರಧಾನಿಯಾಗಿ ಅಲ್ಲಿಯ ಗೌರ್ನರ್ ಜನರಲ್ ಲಾರ್ಡ್‌ಸಾಲ್ಬರಿಯವರು ನೇಮಿಸಿ ಹೊಸಮಂತ್ರಿಮಂಡಲವನ್ನು ರಚಿಸುವಂತೆ ಆಹ್ವಾನವಿತ್ತಿದ್ದಾರೆ.

ಶ್ರೀ ಡಡ್ಲಿ ಸೇನಾನಾಯಕೆಯವರು ಈ ಆಹ್ವಾನವನ್ನು ಸ್ವೀಕರಿಸಿರುವರು. ಸದ್ಯದಲ್ಲೇ ಹೊಸ ಮಂತ್ರಿಮಂಡಲವನ್ನು ರಚಿಸಲಿರುವರು. ಈಗಿರುವ ಸಚಿವರೆಲ್ಲರೂ ಮುಂದಿನ ಮಂತ್ರಿಮಂಡಲಕ್ಕೆ ತಾವು ತೆಗೆದುಕೊಳ್ಳುವುದಾಗಿ ಅವರು ಹೇಳಿರುವರು.

ಇಲ್ಲಿಯವರೆಗೆ ಶ್ರೀ ಡಡ್ಲಿ ಸೇನಾನಾಯಕೆಯವರು ಅವರ ತಂದೆಯವರ ಸಚಿವಮಂಡಲಿಯಲ್ಲಿ ವ್ಯವಸಾಯ ಮತ್ತು ಕಾರ್ಮಿಕ ಶಾಖಾ ಸಚಿವರಾಗಿದ್ದರು.

ಪುನಃ ಅಧ್ಯಕ್ಷರಾಗಿ ಚುನಾವಣೆ

ಅಖಿಲ ಭಾರತ ತಯಾರಿಕೆಗಾರರ ಸಂಘದವರು ಶ್ರೀ ಎಂ. ವಿಶ್ವೇಶ್ವರಯ್ಯನವರು ತಮ್ಮ ಸಂಘದ ಅಧ್ಯಕ್ಷರಾಗಿ ಪುನಃ ಸರ್ವಾನುಮತದಿಂದ ಚುನಾಯಿಸಿಕೊಂಡಿರುತ್ತಾರೆ.

ಪೌರಸಭಾಧಿವೇಶನ

ಮೈಸೂರು ಮಾ ೨೭

ಮೈಸೂರು ಪೌರಸಭೆಯ ಮಾಹೆಯಾನ ಅಧಿವೇಶನವು ೩೧ನೇ ತಾ|| ಮಧ್ಯಾಹ್ನ ೪ ಗಂಟೆಗೆ ನಡೆಯುತ್ತದೆ.

ಮೈಸೂರು ನಗರದ ಶಾಂತ ಭಾಗಗಳಲ್ಲಿರುವ ಫುಟ್‌ಪಾತ್‌ಗಳಲ್ಲಿ ಲಾರಿಗಳು ಮತ್ತು ಬಸ್ಸುಗಳನ್ನು ನಿಲ್ಲಿಸುವುದನ್ನು ತಪ್ಪಿಸಬೇಕೆಂದೂ; ಇಡ್ಲಿ ದೋಸೆಗಳನ್ನು ಮಾಡುವ ನೆಪದಲ್ಲಿ ಅಕ್ಕಿ ಮತ್ತು ಗೋಧಿಯನ್ನು ವಿಶೇಷವಾಗಿ ಉಪಹಾರಮಂದಿರಗಳಲ್ಲಿ ಉಪಯೋಗಿಸುತ್ತಲಿರುವುದರಿಂದ ಮೈಸೂರು ನಗರದಲ್ಲಿ ಉಪಹಾರ ಮಂದಿರಗಳಲ್ಲಿ ಇಡ್ಲಿ-ದೋಸೆ ಮಾಡದಂತೆ ಸರ್ಕಾರವು ನಿಷೇಧಹಾಕಬೇಕೆಂದೂ, ಶ್ರೀ ಬಿ ಜೆ ದಾಸ್‌ರವರು ನಿರ್ಣಯಗಳನ್ನು ಮಂಡಿಸಿರುವರು.

ಮೈಸೂರು ಸಿಟಿಯಲ್ಲಿರುವ ಹಳೇ ಕಬ್ಬಿಣದ ಸಾಮಾನುಗಳನ್ನು ಮಾರುವ ಗುಜರಿ ಅಂಗಡಿಗಳಿಗೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸುವಂತೆ ನಗರಾಭಿವೃದ್ಧಿ ಸಮಿತಿಯನ್ನು ಪ್ರಾರ್ಥಿಸಬೇಕೆಂಬ ನಿರ್ಣಯವೊಂದನ್ನು ಶ್ರೀ ಚೌಡಯ್ಯನವರು ಮಂಡಿಸಿರುವರು.

ಹಿರಿಯ ಶಾಸನ ಸಭೆಗೆ ಚುನಾವಣೆ

ಕಿರಿಯ ಶಾಸನಸಭಾ ಸದಸ್ಯರಿಂದ ಕೇಂದ್ರ ಹಿರಿಯ ಶಾಸನಸಭೆಗೆ ಚುನಾವಣೆಗಳು ನಿನ್ನೆ ಹದಿನ ೧೮ ಪ್ರಾಂತ್ಯಗಳಲ್ಲಿ ನಡೆದುವು.

ಪ್ರಧಾನಿ ದಸ್ತಗಿರಿ

ಟ್ಯುನಿಸಿಯದಲ್ಲಿ ಪ್ರಧಾನಿ ಮತ್ತು ಇತರ ಮಂತ್ರಿಗಳನ್ನು ಫ್ರೆಂಚ್ ಸರ್ಕಾರವು ದಸ್ತಗಿರಿ ಮಾಡಿ, ಮಾರ್ಷಲ್‌ಲಾವನ್ನು ಜಾರಿಮಾಡಿದೆ. ದೇಶದಲ್ಲಿ ಉಂಟಾಗಿರುವ ಅಶಾಂತಿಯೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು.

ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಕಾಂಗ್ರೆಸ್ಸಿಗೆ ಸೇರಿದರು

ಮದ್ರಾಸು ಶಾಸನಸಭೆಯ ೪ ಜನ ಸ್ವತಂತ್ರ ಸದಸ್ಯರು ಕಾಂಗ್ರೆಸ್ ಪಕ್ಷವನ್ನು ಸೇರಿರುವುದಾಗಿ ವರದಿಯಾಗಿದೆ.

ಹೆಚ್ಚಿಗೆ ಅಕ್ಕಿ

ತಿರುವಾಂಕೂರು ಕೊಚ್ಚಿನ್ ಪ್ರಾಂತದಲ್ಲಿ ಈಗ ಕೊಡುತ್ತಿರುವ ೫ ಔನ್ಸ್ ಅಕ್ಕಿ ಪಡಿತರವನ್ನು ಏಪ್ರಿಲ್ ಒಂದರಿಂದ ೬ ಔನ್ಸ್‌ಗಳಿಗೆ ಹೆಚ್ಚಿಸಲಾಗಿದೆ.

ಮೈಸೂರಿನಿಂದ ಕೊಡಗಿಗೆ ವಿದ್ಯುಚ್ಛಕ್ತಿ

ಮೈಸೂರಿನಿಂದ ಕೊಡಗಿಗೆ ವಿದ್ಯುಚ್ಛಕ್ತಿಯನ್ನು ಸರಬರಾಯಿ ಮಾಡುವ ಏರ್ಪಾಡು ಪೂರ್ಣವಾಗಿದೆಯೆಂದು ಹೇಳಲಾಗಿದೆ.

ಚಿನ್ನ ಬೆಳ್ಳಿ ದರಗಳು

27-3-52	ರೂ.
ಸವರನ್	66-0
"	66-2
ಚಿನ್ನ ತೊಲ	90-0
" ಮೂಸ	89-0
ಬೆಳ್ಳಿ 100 ತೊಲ	152-0
" ತೊಲ	1-10

ನ್ಯೂ ಅಪೇರ

೨೭-೩-೫೨ ರಿಂದ ಅಮೋಘಪ್ರಾರಂಭ

ಪಕ್ಷಿ ರಾಜರವರ—

ಕನ್ನಿಕ (ತಮಿಳು)

ಪಾತ್ರ—ಟಿ. ಇ. ವರದನ್, ಡಿ. ಬಾಲಸುಬ್ರಮಣ್ಯಂ, ಎನ್. ಎಸ್. ಕೃಷ್ಣನ್, ಎಂ. ಎಸ್. ಸರೋಜಿನಿ, ಎಂ. ಆರ್. ಸಂತಾನಲಕ್ಷ್ಮಿ, ಟಿ. ಎ. ಮಧುರಂ ಲಲಿತ-ಪದ್ಮಿನಿ.

ವುಡ್ ಲ್ಯಾಂಡ್ಸ್

21—3—52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ವರ್ಮಾ ಫಿಲಿಂಸ್‌ರವರ—

ಪರ್ ಬತ್ (ಹಿಂದಿ)

ಪಾತ್ರ:- ನೂತನ್, ಪ್ರೇಂನಾಥ್ ಕೆ. ಎನ್. ಸಿಂಗ್, ಉಲ್ಲಾಸ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೯—೩—೧೯೫೨ನೇ ಶನಿವಾರ [ಸಂಚಿಕೆ ೧೭೯

ವಿಷಪಾನ ಮೊಕದ್ದಮೆಯಲ್ಲಿ ತೀರ್ಪು

ಬೆಂಗಳೂರು ಮಾ ೨೭

ರಾಜುರವರಿಗೆ ಎರಡು ವರ್ಷ ಸಾದಾ ಸಜ ಮತ್ತು ಎರಡು ಸಾವಿರ ರೂ ಜುಲ್ಮಾನೆ, ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೆ ಒಂದು ವರ್ಷ ಸಾದಾ ಸಜ. ದಾಸಪ್ಪ ನಾಯ್ಡು ಮತ್ತು ಅಗ್ನೇಸಳಿಗೆ ತಲಾ ಎರಡು ವರ್ಷ ಕಠಿಣ ಸಜ ವಿಧಿಸಿತು. ರಾಜುರವರನ್ನು 'ಎ' ವರ್ಗ ಬಂದಿಯನ್ನಾಗಿಯೂ ದಾಸಪ್ಪನಾಯ್ಡುರವರನ್ನು 'ಬಿ' ವರ್ಗದ ಬಂದಿಯನ್ನಾಗಿಯೂ ಪರಿಗಣಿಸಲಾಗಿದೆ. ದಸ್ತಗಿರಿಯಾಗಿ ಈಗಾಗಲೇ ಸುಮಾರು ಹದಿಮೂರುವರೆ ತಿಂಗಳಾದುದರಿಂದಲೂ ವಯಸ್ಸಾಗಿರುವುದರಿಂದಲೂ ಮತ್ತು ಅವರ ದೇಹಸ್ಥಿತಿಯ ದೃಷ್ಟಿಯಿಂದಲೂ ರಾಜುರವರಿಗೆ ಸಾದಾ ಸಜವನ್ನು ವಿಧಿಸುವುದಾಗಿ ನ್ಯಾಯಾಧೀಶರು ತಿಳಿಸಿರುವರು. ಶ್ರೀ ರಾಜುರವರು ಜುಲ್ಮಾನೆ ಕೊಡಲು ೨ ವಾರ ಕಾಲಾವಕಾಶ ಕೊಡಲಾಗಿದೆ.

ಮತ್ತೊಂದು ಮೊಕದ್ದಮೆಯಲ್ಲಿ ಈಗ ಅನುಭವಿಸುತ್ತಲಿರುವ ಶಿಕ್ಷೆಯು ಮುಗಿದನಂತರ ಈ ಶಿಕ್ಷೆ ಅನುಭವಿಸಬೇಕಾಗಿದೆ.

ಹಿನ್ನೆಲೆ

ಶ್ರೀ ಮೇದಪ್ಪನವರ ಮನೆಯಲ್ಲಿ ಘಟನೆ ನಡೆದದ್ದು ೧೯೫೧ ನೇ ಜನವರಿ ೨೯ನೇ ಸೋಮವಾರದ ದಿನ. ೧೯೫೧ನೇ ಫೆಬ್ರವರಿ ೧೭ರಂದು ರಾಜು, ದಾಸಪ್ಪ ನಾಯ್ಡು ಮತ್ತು ಅಗ್ನೇಸಳ ಬಂಧನವಾಯಿತು. ೧೮ನೇ ತಾ|| ಜಯರಾಂರವರ ದಸ್ತಗಿರಿಯಾಯಿತು. ೧೯೫೧ನೇ ಮಾರ್ಚಿ ೨ನೇ ತಾ|| ಚಾರ್ಜ್‌ಷೀಟ್ ಹಾಕಲಾಯಿತು. ಕಳೆದ ಸಾಲಿನ ಆಕ್ಟೋಬರ್ ೧ನೇ ತಾ|| ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ ಬಿ ಜಿ ಕೋಸಲರಾಂರವರು ಅಪಾದಿತರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದರು. ೧೯೫೨ನೇ ಫೆಬ್ರವರಿ ೧೩ ರಂದು ಶ್ರೀ ಹೊನ್ನಾವರ್‌ರವರ ಸಮ್ಮುಖದಲ್ಲಿ ಸೆಷನ್ಸ್ ವಿಚಾರಣೆ ಆರಂಭವಾಯಿತು.

ಡಾ|| ಬಿ. ಸಿ. ರಾಯ್ ಮತ್ತೆ ನಾಯಕರು

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಡಾ|| ಬಿ. ಸಿ ರಾಯ್‌ರನ್ನು ಪುನಃ ಅಸೆಂಬ್ಲಿ ಕಾಂಗ್ರೆಸ್ ಪಾರ್ಟಿಯ ನಾಯಕರನ್ನಾಗಿ ಆರಿಸಲಾಗಿದೆ.

ಮೈಸೂರು ಹಿರಿಯ ಶಾಸನಸಭೆಗೆ ಆಯ್ಕೆ

ಸ್ವಂ. ಸು.] ಬೆಂಗಳೂರು ಮಾ ೨೮

ಮೈಸೂರಿನ ಹಿರಿಯ ಶಾಸನಸಭೆಗೆ ಈ ಕೆಳಗೆಕಂಡವರು ಚುನಾಯಿತರಾಗಿದ್ದಾರೆ-

ಶ್ರೀಗಳಾದ ಕೆ. ಟಿ. ಭಾಷ್ಯಂ, ಟಿ ಪಿ. ಬ್ರಹ್ಮಯ್ಯ, ಹೆಚ್. ಎಂ. ಗಂಗಾಧರಯ್ಯ- ಎಂ, ಶಂಕರಯ್ಯ, ಎಂ. ಎನ್. ಜೋಯಿಸ್, ಎಂ. ಹನುಮಂತಯ್ಯ, ಎಸ್. ವೀರಬಸಪ್ಪ, ತಿರುಮಲೆಗೌಡ, ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ ಜ|| ವೆಲ್ಲೂರಿ (ಕಾಂಗ್ರೆಸ್) ಶ್ರೀ ಎಸ್. ಶಿವಪ್ಪ (ಸೋ), ಬಿ. ಟಿ. ರಾಮಯ್ಯ ಮತ್ತು ಎಂ. ಎನ್. ಮಹಂತದೇವರು(ಕೆ. ಎಂ. ಪಿ.)

ಚುನಾವಣಾ ಕಮಿಷನ್ನಿನ ಪ್ರಕಟಣೆ

ಬೆಂಗಳೂರು ಮಾ ೨೭

ಸಂಸ್ಥಾನದ ಹಿರಿಯ ಶಾಸನ ಸಭೆಯ ಚುನಾವಣೆಯಲ್ಲಿ ಮತದಾರರ ಇಂಚೆಯ ಮತದಾನದ ಚೀಟಿಗಳಿಗೆ ಸಹಿ ಹಾಕಲು ಅಧಿಕಾರವುಳ್ಳ ಪ್ರತಿಯೊಬ್ಬರೂ ತಮ್ಮ ಸಹಿಯ ಕೆಳಗೆ ತಮ್ಮ ಪೂರ್ಣ ಹೆಸರನ್ನು ದೊಡ್ಡ (ಇಂಗ್ಲೀಷ್) ಅಕ್ಷರಗಳಲ್ಲಿ ಬರೆದು ತಮ್ಮ ಅಧಿಕಾರದ ಮುದ್ರೆಯನ್ನು ಹಾಕಬೇಕೆಂದೂ ಚುನಾವಣಾ ಕಮಿಷನ್ನಿನ ಪ್ರಕಟಣೆಯೊಂದು ತಿಳಿಸಿದೆ.

ಮ್ಯಾಜಿಸ್ಟ್ರೇಟರುಗಳಲ್ಲದೆ ಸಂಸ್ಥಾನದ ಅಥವಾ ಕೇಂದ್ರ ಸರ್ಕಾರದ ಗೆಜೆಟೆಡ್ ಅಧಿಕಾರಿಗಳೂ ಮತದಾನದ ಚೀಟಿಗಳಿಗೆ ತಮ್ಮ ಸಹಿಯನ್ನು ಹಾಕಬಹುದು.

ಸಚಿವರ ಕೆಲಸಗಳಲ್ಲಿ ಪ್ರವೇಶಿಸಬಾರದು

ಸಚಿವರುಗಳ ದಿನವಹಿ ಕೆಲಸಗಳಲ್ಲಿ ಕಾಂಗ್ರೆಸ್ಸಿನವರು ಮಧ್ಯ ಪ್ರವೇಶಿಸಬಾರದೆಂದು ಪೆಪ್ಸು ಕಾಂಗ್ರೆಸ್ ಸಮಿತಿಯು ಪ್ರಾಂತ್ಯದ ಎಲ್ಲಾ ಕಾಂಗ್ರೆಸ್ ಕೆಲಸಗಾರರಿಗೂ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೂ ಸೂಚನೆಗಳನ್ನು ಕಳುಹಿಸಿದೆ.

೫ನೇ ತಾ|| ಅಧಿಕಾರ ಸ್ವೀಕಾರ

ಈಗ ಗೊತ್ತಾಗಿರುವಪ್ರಕಾರ ಶ್ರೀ ಹನುಮಂತಯ್ಯನವರ ನೂತನ ಮಂತ್ರಿಮಂಡಲವು ಏಪ್ರಿಲ್ ೫ನೇ ತಾ|| ಮೈಸೂರಿನಲ್ಲಿ ರಾಜಪ್ರಮುಖರ ಸಮ್ಮುಖದಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿ ಅಧಿಕಾರ ಸೂತ್ರಗಳನ್ನು ವಹಿಸಿಕೊಳ್ಳಲಿದೆ.

ಶ್ರೀ ರೆಡ್ಡಿಯವರ ಮಂತ್ರಿಮಂಡಲದ ರಾಜೀನಾಮೆ

ಶ್ರೀ ಮನ್ಮಹಾರಾಜರೊಡನೆ ಈ ದಿನ ಶ್ರೀ ಕೆ. ಹನುಮಂತಯ್ಯನವರ ಭೇಟಿ

ಮೈಸೂರು ಮಾ ೨೯

ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ನಿನ್ನೆದಿನ ರಾತ್ರಿ ೮-೪೫ ಗಂಟೆಗೆ ಶ್ರೀ ಮನ್ಮಹಾರಾಜರನ್ನು ಭೇಟಿಮಾಡಿ ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ರಾಜಪ್ರಮುಖರಿಗೆ ಒಪ್ಪಿಸಿದರು.

ನಿನ್ನೆ ಸಂಜೆ ೬-೩೦ ವೇಳೆಗೆಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಕಾಂಗ್ರೆಸ್‌ಪಕ್ಷದ ನೂತನ ನಾಯಕರಾದ ಶ್ರೀ ಕೆ. ಹನುಮಂತಯ್ಯನವರೊಡನೆ ಮೈಸೂರಿಗೆ ಆಗಮಿಸಿದರು. ಶ್ರೀ ಹನುಮಂತಯ್ಯನವರು ಸರ್ಕಾರಿಭವನದಲ್ಲಿ ಇಳಿದುಕೊಂಡಿರುವರು.

ಶ್ರೀ ಕೆ. ಹನುಮಂತಯ್ಯನವರು ಇಂದು ಬೆಳಗ್ಗೆ ೧೧ ಗಂಟೆಗೆ ರಾಜಪ್ರಮುಖರನ್ನು ಭೇಟಿಮಾಡಿ ಹೊಸಮಂತ್ರಿಮಂಡಲ ರಚನೆ ವಿಷಯದಲ್ಲಿ ಮಾತುಕತೆ ನಡೆಸುವರೆಂದು ಗೊತ್ತಾಗಿದೆ.

ರಾಜಪ್ರಮುಖರೊಡನೆ ಅವರ ಸಮಾಲೋಚನೆಯಾದನಂತರ ಮುಖ್ಯಮಂತ್ರಿ ಅಧಿಕಾರವನ್ನು ಅವರು ವಹಿಸಿಕೊಳ್ಳುವ ಸಂಭವವಿದೆ.

ಅನಂತರ ಅವರು ಬೆಂಗಳೂರಿಗೆ ಹಿಂತಿರುಗಿ ಪಕ್ಷದ ಇತರ ಪ್ರಮುಖರೊಡನೆ ಸಮಾಲೋಚನೆ ನಡೆಸಿ ಹೊಸ ಮಂತ್ರಿಮಂಡಲದ ಪಟ್ಟಿಯೊಡನೆ ದೆಹಲಿಗೆತೆರಳಿ ಪಂಡಿತ ನೆಹರೂರವರ ಒಪ್ಪಿಗೆಪಡೆದು ಹಿಂತಿರುಗಿದಮೇಲೆ ಮಂತ್ರಿಮಂಡಲಿಯು ಪ್ರಮಾಣವಚನ ಸ್ವೀಕರಿಸುತ್ತದೆಯೆಂದು ಹೇಳಲಾಗಿದೆ. ಹೊಸ ಮಂತ್ರಿಮಂಡಲವು ಏಪ್ರಿಲ್ ಮೊದಲನೆವಾರದ ಪ್ರಾರಂಭದಲ್ಲಿಯೇ ಅಧಿಕಾರಕ್ಕೆ ಬರುವ ನಿರೀಕ್ಷೆಯಿದೆ.

ಮಣಿಲಾಲ್ ಗಾಂಧಿ ಮಹೋಪವಾಸ ಮುಕ್ತಾಯ

ಮಹಾತ್ಮ ಗಾಂಧಿಯವರ ಪುತ್ರ ಶ್ರೀ ಮಣಿಲಾಲ್ ಗಾಂಧಿಯವರ ೨೧ ದಿನಗಳ ಮಹೋಪವಾಸ ನಿನ್ನೆ ಮುಕ್ತಾಯವಾಯಿತು. ಶ್ರೀ ಗಾಂಧಿಯವರು ತೀರಾ ನಿಶ್ಶಕ್ತರಾಗಿದ್ದಾರೆ. ಇವರಿಗೆ ೫೯ ವರ್ಷ.

ಕೌನ್ಸಿಲ್ ಆಫ್ ಸ್ಟೇಟಿಗೆ ಮದ್ರಾಸಿನಿಂದ

ಭಾರತ ಕೌನ್ಸಿಲ್ ಆಫ್ ಸ್ಟೇಟಿಗೆ ಮದ್ರಾಸಿನಿಂದ ೧೧ ಜನರನ್ನು ಚುನಾಯಿಸಲಾಗಿದೆ ಚುನಾಯಿತರಾದವರಲ್ಲಿ ಕೇಂದ್ರ ಸಂಸ್ಥಾನ ಶಾಖಾ ಸಚಿವ ಶ್ರೀ ಎನ್. ಗೋಪಾಲಸ್ವಾಮಯ್ಯಂಗಾರ್, ಕೃಷಕ್ ಲೋಕ ಪಕ್ಷದ ನಾಯಕ ಶ್ರೀ ಎನ್-ಜಿ- ರಂಗಾ ಮತ್ತು ಅಖಿಲ ಭಾರತ ರೈಲ್ವೆ ಫೆಡರೇಷನ ಕಾರ್ಯದರ್ಶಿ ಶ್ರೀ ಗುರುಸ್ವಾಮಿಯವರಿರುವರು

ರಾಜ್ಯಾಂಗಕ್ಕೆ ವಿರೋಧ

ರಾಜಪ್ರಮುಖರ ಭಾಷಣ ಸಮಯದಲ್ಲಿ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿರುವುದು ರಾಜ್ಯಾಂಗಕ್ಕೆ ವಿರೋಧ ರಾಜ್ಯಾಂಗಪ್ರಕಾರ ರಾಜ ಪ್ರಮುಖರ ನೇಮಕವಾಗಿದೆ. ರಾಜ್ಯಾಂಗವನ್ನು ಪಾಲಿಸುವುದಾಗಿ ಪ್ರಮಾಣ ಸ್ವೀಕರಿಸಿ ಈ ರೀತಿ ಮಾಡಿದುದು ಸಾಧುವಲ್ಲ. ಇನ್ನು ಮುಂದಾದರೂ ಈರೀತಿ ನಡೆಯದಿರಲೆಂದು ಹೈದರಾಬಾದ್ ಮುಖ್ಯಮಂತ್ರಿ ಶ್ರೀ ಕೆ ರಾಮಕೃಷ್ಣರಾಯರು ಶಾಸನಸಭೆಯಲ್ಲಿ ಹೇಳಿರುವರು

ನೂತನ ಯೋಜನೆಗಳು

೧೧ ವ್ಯವಸಾಯ ಮತ್ತು ೩ ವಿದ್ಯುಚ್ಛಕ್ತಿ ಉತ್ಪತ್ತಿಗೆ ಸಂಬಂಧಪಟ್ಟ ೧೪ ಯೋಜನೆಗಳನ್ನೊಳಗೊಂಡ ಒಂದು ಸಪ್ಲಿಮೆಂಟರಿ ಪಟ್ಟಿಯನ್ನು ಕೇಂದ್ರ ಆಯೋಜನಾಸಮಿತಿಗೆ ಕಳುಹಿಸಿರುವುದಾಗಿ ಮದ್ರಾಸ್ ಮಂತ್ರಿಗಳು ಶಾಸನಸಭೆಯಲ್ಲಿ ತಿಳಿಸಿರುವರು. ಈ ಯೋಜನೆಗಳ ಒಟ್ಟು ವೆಚ್ಚವು ೧೯೩.೧ ಕೋಟಿ ರೂಪಾಯಿಗಳಾಗಬಹುದು.

* ರಾಯಲುಸೀಮೆಯ ಕ್ಷಾಮಪರಿಹಾರ ಕಾರ್ಯಗಳಿಗಾಗಿ ಪಂಡಿತ ನೆಹರೂರವರು ಇನ್ನೂ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು.

ಎ. ರಾಮಸ್ವಾಮಿ ಮೊದಲಿಯಾರ್

ಶ್ರೀ ಎ. ರಾಮಸ್ವಾಮಿ ಮೊದಲಿಯಾರ್‌ರವರು ಕೌನ್ಸಿಲ್‌ಆಫ್ ಸ್ಟೇಟಿಗೆ ಸ್ವತಂತ್ರ ಉಮೇದುವಾರರಾಗಿ ಮದರಾಸಿನಿಂದ ಚುನಾಯಿತರಾಗಿರುವರು.

‡ ಜಪಾನಿನ ಕೈಗಾರಿಕಾ ನಿಯೋಗದ ಒಂದು ತಂಡವು ಈದಿನ ಬೆಂಗಳೂರಿನಿಂದ ರೈಲಿನಲ್ಲಿ ಮೈಸೂರಿಗೆ ಆಗಮಿಸಲಿದೆ- ಮತ್ತೊಂದು ತಂಡವು ಭದ್ರಾವತಿಗೆ ಹೋಗಿ ಅಲ್ಲಿಂದ ಮೈಸೂರಿಗೆ ಬರಲಿದೆ-

ಸಮಾಚಾರ

ತಾ|| ೨೯—೩—೫೨ನೇ ಶನಿವಾರ

ಶುಭಸೂಚನೆ

ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ನಿನ್ನೆಯ ದಿನ ಸಭೆ ಸೇರಿ ವಿರೋಧವಿಲ್ಲದೆ ಸರ್ವಾನುಮತದಿಂದ ಶ್ರೀ ಕೆ. ಹನುಮಂತಯ್ಯನವರನ್ನು ತಮ್ಮ ಪಕ್ಷದ ನಾಯಕರನ್ನಾಗಿ ಚುನಾಯಿಸಿಕೊಂಡಿರುವುದು ಒಂದು ಶುಭಸೂಚನೆಯಾಗಿದೆ. ಶ್ರೀ ಕೆ. ಸಿ. ರೆಡ್ಡಿಯವರೇ ಶ್ರೀ ಹನುಮಂತಯ್ಯನವರ ಹೆಸರನ್ನು ನಾಯಕಸ್ಥಾನಕ್ಕೆ ಸೂಚಿಸಿರುವುದು ಮತ್ತೂ ಶ್ಲಾಘ್ಯನೀಯವಾದುದು. ದೇಶದ ಪ್ರಗತಿಯ ಕಡೆ ಈ ಉಭಯ ನಾಯಕರು ಹೆಚ್ಚು ಗಮನವಿತ್ತು, ಈ ರೀತಿ ನಡೆದುದು ನಮ್ಮ ಪ್ರಾಂತ್ಯದಲ್ಲಿ ಹೊಸ ಅಧ್ಯಾಯವು ಪ್ರಾರಂಭವಾದಂತಾಯಿತು. ದೇಶದಲ್ಲಿ ಈಗಾಗಲೇ ನಾನಾ ಕಾರಣಗಳಿಂದ ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಜನತೆಗೆ ಅತೃಪ್ತಿಯುಂಟಾಗಿದೆ. ಆ ಅತೃಪ್ತಿಯನ್ನು ಅನೇಕ ವೇಳೆ ಅನೇಕ ರೀತಿ ಬಹಿರಂಗ ಪಡಿಸಿದಾಗ್ಯೂ, ಮಹಾಚುನಾವಣೆಗಳ ಕಾಲದಲ್ಲಿ ಮಾತ್ರ, ಮತ್ಯಾವ ಪಕ್ಷವಾದರೂ ಆಡಳಿತಕ್ಕೆ ಬಂದರೆ ಇನ್ನೂ ಹದಗೆಡುವುದೆಂಬುದನ್ನು ಚೆನ್ನಾಗಿ ತಿಳಿದಿತ್ತು ಜನತೆಯು ಕಾಂಗ್ರೆಸ್ ಪಕ್ಷಕ್ಕೆ ತನ್ನ ಬಹುಮತ ಬೆಂಬಲನೀಡಿತು. ಅದರ ಪರಿಣಾಮವಾಗಿ ನಮ್ಮ ಸಂಸ್ಥಾನ ಶಾಸನಸಭೆಯ ೯೯ ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ೭೪ ಸ್ಥಾನ ದೊರಕಿವೆ.

ಇಲ್ಲಿಯವರೆಗೆ ಕಾಂಗ್ರೆಸ್ ಸಂಸ್ಥೆಯಲ್ಲಿ ಒಳಪಂಗಡಗಳು ಹುಟ್ಟಿಕೊಂಡು ದೇಶದ ಪ್ರಗತಿಗೆ ಅಡ್ಡಲಾಗಿ ಬಂದುದನ್ನು ಇನ್ನಾದರೂ ನಮ್ಮ ಕಾಂಗ್ರೆಸ್ಸಿಗರು ಬೆಳೆಯಲು ಅವಕಾಶಕೊಡದೆ ಇಲ್ಲಿಗೆ ಮುಕ್ತಾಯ ಮಾಡಿ ಜನತೆಯ ಹಿತಸಾಧನೆಗೆ ದುಡಿಯುವಂತಾಗಲು ನಮ್ಮ ನೂತನ ನಾಯಕ ಶ್ರೀ ಕೆ. ಹನುಮಂತಯ್ಯನವರು ತಮ್ಮ ಉತ್ಸಾಹ, ಶಕ್ತಿ ಸಾಮರ್ಥ್ಯಗಳನ್ನೆಲ್ಲಾ ಉಪಯೋಗಿಸಿ ಜನತೆಯ ಹಿತಚಿಂತಕರಲ್ಲಿ ಪ್ರಥಮ ಸ್ಥಾನವನ್ನು ಗಳಿಸಲೆಂದು ನಾವು ಕೋರುತ್ತೇವೆ.

ಇತ್ತೀಚೆಗೆ ದೇಶದಲ್ಲೆಲ್ಲಾ ತಾಂಡವಾಡುತ್ತಲಿರುವ ಜಾತಿ, ಮತ, ಕೋಮು ಭಾವನೆಗಳೆಲ್ಲಾ ಪೂರ್ಣವಾಗಿ ಮಾಯವಾಗಿ ಸಚಿವರು, ಸರ್ಕಾರೀ ಅಧಿಕಾರಿಗಳ ನಿತ್ಯ ಆಡಳಿತದಲ್ಲಿ ಕಾಂಗ್ರೆಸ್ಸಿಗರಾರೂ ಪ್ರವೇಶಿಸದೆ, ತಮ್ಮ ಸ್ವರಾಜ್ಯ ಸಾಧನೆಗಾಗಿ ದುಡಿಯದೆ, ದೇಶದ ಹಿತಸಾಧನೆಗಾಗಿ ನಮ್ಮ ನಾಯಕರಿಗೆ ಪೂರ್ಣ ಬೆಂಬಲನೀಡಲೆಂದು ನಮ್ಮ ಕಾಂಗ್ರೆಸ್ ಬಂಧುಗಳನ್ನೆಲ್ಲಾ ಈ ಮೂಲಕ ಕೋರುತ್ತೇವೆ.

ಇತ್ತೀಚೆಗೆ ಪೆಪ್ಸು ಸಂಸ್ಥಾನದಲ್ಲಿ ಕಾಂಗ್ರೆಸ್ಸಿಗರಾರೂ ಸಚಿವರ ನಿತ್ಯ ಆಡಳಿತದಲ್ಲಿ ಪ್ರವೇಶಿಸಕೂಡದೆಂದು ಪ್ರಾದೇಶಿಕ ಸಮಿತಿಯು ತನ್ನ ಎಲ್ಲಾ ಸದಸ್ಯರಿಗೂ ತಿಳಿಸಿದೆ. ಅಲ್ಲದೆ ಉತ್ತರ ಪ್ರದೇಶ ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ತಮ್ಮ ನಿಯಮಾವಳಿಯನ್ನೇ ಮಾರ್ಪಡಿಸಿ ಶಾಸನಸಭಾ ಸದಸ್ಯರು ಸರ್ಕಾರದಿಂದ ಯಾವ ರೀತಿಯಾದ ರಿಯಾಯತಿಗಳನ್ನು ಪಡೆಯಕೂಡದೆಂದು ತೀರ್ಮಾನಿಸಿದೆ. ಶ್ರೀ ಕೆ ಹನುಮಂತಯ್ಯನವರು ಈಗ ಕಾಂಗ್ರೆಸ್ ಪಕ್ಷದ ನಾಯಕರಲ್ಲದೆ ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ಆಗಿರುವುದರಿಂದ ಪೆಪ್ಸು ಮತ್ತು ಉತ್ತರ ಪ್ರದೇಶಗಳಲ್ಲಿ ಕಾಂಗ್ರೆಸ್ ಪಕ್ಷವು ಅನುಸರಿಸಲಿರುವ ನೀತಿಯನ್ನು ನಮ್ಮ ಸಂಸ್ಥಾನದಲ್ಲೂ ಅನುಸರಿಸುವಂತೆ ಮಾಡಿದಲ್ಲಿ, ಕಾಂಗ್ರೆಸ್ ಸಂಸ್ಥೆಯ ಮೇಲಿನ ಕಳಂಕವೆಲ್ಲವೂ ಮಾಯವಾಗುವುದರಲ್ಲಿ ಸಂದೇಹವಿಲ್ಲ.

ಶ್ರೀ ಕೆ. ಹನುಮಂತಯ್ಯನವರು ಹೊಸ ಮಂತ್ರಿಮಂಡಲವನ್ನು ರಚಿಸುವಾಗ್ಗೆ ಜಾತಿ, ಕೋಮು, ಮುಂತಾದುವಾವುದನ್ನೂ ಪರಿಗಣಿಸದೆ ಮೇಧಾವಿಗಳನ್ನೇ ತಮ್ಮ ಮಂತ್ರಿಮಂಡಲಕ್ಕೆ ಚುನಾಯಿಸಿಕೊಂಡು, ಸರ್ಕಾರ ಆಡಳಿತವನ್ನು ದಕ್ಷತೆಯಿಂದ ನಡೆಸಲಿ.

—ಜೈಹಿಂದ್.

ಪೇಟೆ ಧಾರಣೆ

ಮೈಸೂರು ತಾ|| 28-3-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	12-4	17-12
ಹೊಂಗೆಬೀಜ	,,	12-0	12-6
ಹುರುಳಿ	,,	29-10	30-12
ಅವರೆ	,,	49-0	53-2
ಮೆ. ಕಾಯಿ ಮಣಕ್ಕೆ		13-10	15-10
ಹುಣಸೇಹಣ್ಣು	,,	2-8	3-4
ಸೀಗೆಕಾಯಿ	,,	2-13	3-5
ತೆಂಗಿನಕಾಯಿ 1100ಕ್ಕೆ		135-0	—

ಚಿನ್ನ ಬೆಳ್ಳಿ ದರಗಳು

28-3-52		ರೂ.
ಸವರನ್		66-8
,,		66-10
ಚಿನ್ನ	ತೊಲ	91-12
,,	ಮುಟ	90-0
ಬೆಳ್ಳಿ 100	ತೊಲ	156-0
,,	ತೊಲ	1-11

ಶ್ರೀ ಕೆ. ಹನುಮಂತಯ್ಯನವರು ಸರ್ವಾನುಮತದಿಂದ ನಾಯಕರಾಗಿ ಚುನಾಯಿತರಾದರು

ಬೆಂಗಳೂರು ಮಾ ೨೮

ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷ ಸದಸ್ಯರು ಈದಿನ ಬೆಳಗ್ಗೆ ಕುಮಾರಪಾರ್ಕಿನಲ್ಲಿ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರನ್ನು ಅವಿರೋಧವಾಗಿ ತಮ್ಮ ನಾಯಕರನ್ನಾಗಿ ಚುನಾಯಿಸಿಕೊಂಡರು. ಶ್ರೀ ಕೆ ಸಿ ರೆಡ್ಡಿಯವರು ನಾಯಕಸ್ಥಾನಕ್ಕೆ ಶ್ರೀ ಕೆ ಹನುಮಂತಯ್ಯನವರನ್ನು ಸೂಚಿಸಿದರು. ಸರ್ವಾನುಮತದಿಂದ ಚುನಾವಣೆ ನಡೆಯಿತು.

ಸಭೆಗೆ ವಿಶೇಷ ಆಹ್ವಾನದಮೇಲೆ ಶ್ರೀಗಳಾದ ಎಸ್ ನಿಜಲಿಂಗಪ್ಪ, ಹೆಚ್. ಸಿ. ದಾಸಪ್ಪ, ಕೆ. ಟಿ ಭಾಷ್ಯಂ ಮತ್ತು ಎಸ್. ಚನ್ನಯ್ಯನವರು ಬಂದಿದ್ದರು.

ಶ್ರೀ ಹನುಮಂತಯ್ಯನವರನ್ನು ಅಭಿನಂದಿಸಿ ಶ್ರೀ ರೆಡ್ಡಿಯವರೂ ಇತರ ಸದಸ್ಯರೂ ಭಾಷಣಮಾಡಿದರು.

ಶ್ರೀ ಹನುಮಂತಯ್ಯನವರು ಉತ್ತರವಿತ್ತು, ತಮ್ಮ ಧನ್ಯವಾದವನ್ನು ಸಲ್ಲಿಸಿ ಎಲ್ಲರ ಸಹಕಾರವನ್ನು ಕೋರಿ, ಶ್ರೀ ರೆಡ್ಡಿಯವರೇ ಆದಿಯಾಗಿ ಎಲ್ಲ ಹಿರಿಯರ ಸಲಹೆಯನ್ನು ತೆಗೆದುಕೊಂಡು ತಾವು ಮಂತ್ರಿಮಂಡಲವನ್ನು ರಚಿಸುವುದಾಗಿ ಹೇಳಿದರು. ಈತಿಂಗಳು ೩೧ನೇ ತಾ|| ತಾವು ದೆಹಲಿಗೆ ತೆರಳುವುದಾಗಿ ತಿಳಿಸಿದರು.

ಅವಿಶ್ವಾಸ ನಿರ್ಣಯ ತಳ್ಳಿಹಾಕಲಾಯಿತು

ತಿರುವಾಂಕೂರು ಕೊಚ್ಚಿನ್ ಶಾಸನಸಭೆಯಲ್ಲಿ ಮೊನ್ನೆಯ ದಿನ ರಾಜಪ್ರಮುಖರ ಭಾಷಣ ಚರ್ಚೆಗೆಬಂದಾಗ ಸೋಷಲಿಸ್ಟ್ ಪಕ್ಷದವರು ಕಾಂಗ್ರೆಸ್ ಸರ್ಕಾರದಮೇಲೆ ಒಂದು ಅವಿಶ್ವಾಸ ನಿರ್ಣಯವನ್ನು ಮಂಡಿಸಲೆತ್ನಿಸಿದಾಗ ರಾಜಪ್ರಮುಖರ ಭಾಷಣಕ್ಕೆ ಇದು ಸಂಬಂಧಪಟ್ಟಿದ್ದಲ್ಲವೆಂದು ಸಭಾಧ್ಯಕ್ಷರು ನಿರ್ಣಯವನ್ನು ತಳ್ಳಿಹಾಕಿದರು.

೧೦೦೦ ರೂ. ದಾನ

ರಾಯಲು ಸೀಮೆಯ ಪರಿಹಾರ ನಿಧಿಗೆ ರಾಷ್ಟ್ರಾಧ್ಯಕ್ಷರು ಒಂದು ಸಾವಿರ ರೂಪಾಯಿಗಳನ್ನು ದಾನ ಮಾಡಿರುವರು.

ನಗರಾಭಿವೃದ್ಧಿ ಸಮಿತಿ ಮೈಸೂರು

ತಾ|| ೧೭—೩—೫೨

ಮಾದರಿ ಮನೆಗಳ ಹರಾಜು

ಪ್ರಕಟಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ,—

ಮೈಸೂರು ನರಸಿಂಹರಾಜ ಮೊಹಲ್ಲಾ ಕರುಣಾಪುರದ ಪೂರ್ವದಿಕ್ಕಿನಲ್ಲಿ ಅಂದರೆ ಸೆಂಟ್ ಫಿಲೋಮಿನಾ ಹೈಸ್ಕೂಲಿಗೆ ಉತ್ತರಕ್ಕೂ ಫೋರ್ಬ್ಸ್ ಎಲೆಕ್ಟ್ರಿಕ್ ಸ್ಟೇಷನ್‌ಗೆ ಪೂರ್ವಕ್ಕೂ ಇರುವ ನಿವೇಶನದಲ್ಲಿ ಹೊಸದಾಗಿ ಕಟ್ಟಿರುವ ೨೭ ಮಾದರಿ ಮನೆಗಳ ಪೈಕಿ ಉತ್ತರ ಭಾಗದ ಒಂದರಿಂದ ಹನ್ನೆರಡು ಮನೆಗಳನ್ನು ತಾ|| ೯—೪—೫೨ನೇ ಬುಧವಾರ ಬೆಳಗ್ಗೆ ೯ ಗಂಟೆ ಲಾಗಾಯತು ಮನೆಗಳ ಬಳಿ ತಾ ೬—೩—೫೨ ರ ಹರಾಜು ಇಸ್ತಿಹಾರ್‌ನಾಮೆಯ ಷರತ್ತುಗಳಿಗೆ ಒಳಪಡಿಸಿ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಪಿ. ಗೋಪಾಲಕೃಷ್ಣಶೆಟ್ಟಿ, ಅಧ್ಯಕ್ಷರು.

ವುಡ್‌ಲ್ಯಾಂಡ್ಸ್

21—3—52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ವರ್ಮಾ ಫಿಲಿಂಸ್‌ರವರ—

ಪರ್ ಬತ್ (ಹಿಂದಿ)

ಪಾತ್ರ:- ನೂತನ್, ಪ್ರೇಂನಾಥ್ ಕೆ. ಎನ್. ಸಿಂಗ್, ಉಲ್ಲಾಸ್.

ರಣಜಿತ್

೧೪-೩-೫೨ರಿಂದ ಅಮೋಘ ಪ್ರಾರಂಭ

* ಸಾಖಿ *

ಪಾತ್ರ:- ಮಧುಬಾಲ, ಪ್ರೇಂನಾಥ್.

ಪ್ರಕಾಶಕರು:—ಜಿ.ಎಲ್. ಸ್ವಾಮಿ ಟ್ಯುಟೋರಿಯಲ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೩೭೪ (ಲಂಕ್) ದಿನಪತ್ರಿಕೆ ರಿ. ನೆ. ಎಂ. ೩೩೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೩೦—೩—೧೯೫೨ನೇ ಭಾನುವಾರ [ಸಂಚಿಕೆ ೧೬೦

ಶ್ರೀ ಕೆ. ಹನುಮಂತಯ್ಯನವರು ಇಂದು ಅಧಿಕಾರ ಸ್ವೀಕರಿಸುವರು

೧೦-೩೦ ಗಂಟೆಗೆ ಅರಮನೆಯಲ್ಲಿ ಪ್ರತಿಜ್ಞಾ ಸ್ವೀಕಾರ

ಮೈಸೂರು ಮಾ ೩೦

ಮೈಸೂರು ಶಾಸನಸಭೆಯ ನೂತನ ನಾಯಕರಾದ ಶ್ರೀ ಕೆ ಹನುಮಂತಯ್ಯನವರು ನಿನ್ನೆ ಬೆಳಗ್ಗೆ ೧೧ ಗಂಟೆ ಸಮಯದಲ್ಲಿ ಶ್ರೀಮನ್ಮಹಾರಾಜರನ್ನು ಭೇಟಿಮಾಡಿ ನೂತನ ಮಂತ್ರಿಮಂಡಲ ರಚನೆಯ ವಿಷಯವಾಗಿ ದೀರ್ಘಕಾಲ ಸಮಾಲೋಚನೆ ನಡೆಸಿದರು.

ಮೊನ್ನೆ ರಾತ್ರಿ, ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಒಪ್ಪಿಸಿದ ಅವರ ಮಂತ್ರಿಮಂಡಲದ ರಾಜೀನಾಮೆಯನ್ನು ಶ್ರೀಮನ್ಮಹಾರಾಜರು ಅಂಗೀಕರಿಸಿ, ಹೊಸನಾಯಕರಾದ ಶ್ರೀ ಕೆ ಹನುಮಂತಯ್ಯನವರನ್ನು ಹೊಸಮಂತ್ರಿಮಂಡಲ ರಚಿಸುವಂತೆ ಆಹ್ವಾನವಿತ್ತರು ಅದನ್ನು ಶ್ರೀ ಕೆ ಹನುಮಂತಯ್ಯನವರು ಸ್ವೀಕರಿಸಿದರು

ಈದಿನ ಬೆಳಗ್ಗೆ ೧೦-೩೦ ಗಂಟೆಗೆ ಶ್ರೀಮನ್ಮಹಾರಾಜರ ಸಮ್ಮುಖದಲ್ಲಿ ಶ್ರೀ ಕೆ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿ ಪ್ರಮಾಣವಚನ ಸ್ವೀಕಾರ ಮಾಡುತ್ತಾರೆ

ಇತರ ಮಂತ್ರಿಗಳ ನೇಮಕ

ನಿನ್ನೆ ಶ್ರೀ ಕೆ. ಹನುಮಂತಯ್ಯನವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತ ತಾವು ಅಧಿಕಾರ ವಹಿಸಿಕೊಂಡೊಡನೆಯೇ ಬೆಂಗಳೂರಿಗೆ ಹಿಂತಿರುಗಿ ಹೊಸ ಮಂತ್ರಿಗಳ ನೇಮಕ ವಿಷಯದಲ್ಲಿ ತಮ್ಮ ಪಕ್ಷದ ಇತರ ನಾಯಕರೊಡನೆ ಸಮಾಲೋಚನೆ ನಡೆಸಿ ೩೧ನೇ ತಾರೀಖು ಮಂತ್ರಿಗಳ ಪಟ್ಟಿಯೊಡನೆ ದೆಹಲಿಗೆ ತೆರಳುವುದಾಗಿ ತಿಳಿಸಿದರು. ಹೊಂದುವಮುನ್ನ ಹೊಸಮಂತ್ರಿಗಳ ಹೆಸರನ್ನು ಪ್ರಕಟಿಸುವ ಸಂಭವವಿದೆ ಎಂದು ಗೊತ್ತಾಗಿದೆ

ಉಪಮಂತ್ರಿಗಳು

ಪ್ರಶ್ನೆಯೊಂದಕ್ಕೆ ಉತ್ತರವೀಯುತ್ತಾ, ಶ್ರೀ ಹನುಮಂತಯ್ಯನವರು ಹೊಸ ಸಚಿವ ಮಂಡಲಿಯಲ್ಲಿ ಎಷ್ಟು ಜನರಿರುವರು ಎಂದು ಇನ್ನೂ ನಿಷ್ಕರ್ಷೆಯಾಗಿಲ್ಲ. ಸಹಕಾರ, ವಿದ್ಯಾಭ್ಯಾಸ, ಹೆಚ್ಚು ಆಹಾರಬೆಳೆ ಮುಂತಾದ ರಾಷ್ಟ್ರಾಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಗಮನವೀಯಲು ಕೆಲವು ಉಪಮಂತ್ರಿಗಳನ್ನು ನೇಮಿಸಿಕೊಳ್ಳುವುದಾಗಿ ತಿಳಿಸಿದರು

ಸೋತವರಿಗೆ ಸ್ಥಾನವಿಲ್ಲ

ಮಹಾಚುನಾವಣೆಯಲ್ಲಿ ಪರಾಜಯ ಹೊಂದಿದವರನ್ನು ಸಚಿವಮಂಡಲಿಗೆ ತೆಗೆದುಕೊಳ್ಳುವುದಿಲ್ಲವೆಂದೂ ಮತ್ತೊಂದು ಪ್ರಶ್ನೆಗೆ ಉತ್ತರವಿತ್ತರು.

ತಮ್ಮ ಹೊಸ ಮಂತ್ರಿಮಂಡಲದಲ್ಲಿ ದಕ್ಷರಾದವರನ್ನೇ ಸೇರಿಸಿಕೊಳ್ಳುವುದಾಗಿಯೂ, ಹಾಗೇನಾದರೂ ಕೆಲಸಕಾರ್ಯಗಳು ಸಮರ್ಪಕವಾಗಾಗದಿದ್ದರೆ ಸಚಿವರುಗಳನ್ನು ಬದಲಾಯಿಸಲು ತಾವು ಹಿಂತೆಗೆಯುವುದಿಲ್ಲವೆಂದೂ ತಿಳಿಸಿದರು

ಸರ್ಕಾರಿ ಪ್ರಕಟಣೆ

ಬೆಂಗಳೂರು ಮಾ ೨೯

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ತಮ್ಮ ಮತ್ತು ತಮ್ಮ ಸಹೋದ್ಯೋಗಿಗಳ ರಾಜೀನಾಮೆಯನ್ನು ರಾಜಪ್ರಮುಖರಿಗೆ ನಿನ್ನೆ ಸಲ್ಲಿಸಿದರೆಂದೂ ಅದನ್ನು ರಾಜಪ್ರಮುಖರು ಅಂಗೀಕಾರಮಾಡಿ ಹೊಸ ಮಂತ್ರಿಮಂಡಲವು ಅಧಿಕಾರಕ್ಕೆ ಬರುವವರೆಗೆ ಈಗಿನ ಮಂತ್ರಿಮಂಡಲವೇ ಮುಂದುವರಿಯಬೇಕೆಂದು ತಿಳಿಸಿದರೆಂದ ಸರ್ಕಾರ ಪ್ರಕಟಣೆಯೊಂದು ಹೊರಬಿದ್ದಿದೆ.

ಸಿ. ಆರ್. ರವರೇ ನಾಯಕರಾಗಬೇಕು

ಮದ್ರಾಸ್ ಶಾಸನಸಭೆಯ ಕಾಂಗ್ರೆಸ ಪಕ್ಷ ನಾಯಕರ ಚುನಾವಣೆಗಾಗಿ ಸಭೆ ನಡೆಸಿ ಕೇಂದ್ರಸರ್ಕಾರದ ಮಾಜಿ ಗೃಹಸಚಿವ ಶ್ರೀ ಸಿ. ರಾಜಗೋಪಾಲಚಾರಿಯವರನ್ನು ನಾಯಕರಾಗಲು ಕೋರಬೇಕೆಂದು ಸರ್ವಾನುಮತದಿಂದ ತೀರ್ಮಾನವಾಯಿತೆಂದು ತಿಳಿದುಬರುತ್ತದೆ.

ಮುಖ್ಯಮಂತ್ರಿ ಶ್ರೀ ಕುಮಾರಸ್ವಾಮಿ ರಾಜಾರವರ ನಾಯಕತ್ವದಲ್ಲಿ ೭ ಜನ ನಿಯೋಗವು ಶ್ರೀ ಸಿ ಆರ್ ರವರ ಬಳಿಗೆ ತೆರಳಿ ಈ ವಿಷಯವನ್ನು ತಿಳಿಸಿದರು. ವಿಷಯವನ್ನು ಪರಿಶೀಲಿಸಲು ಈ ಸಂಜೆವರೆಗೆ ಕಾಲಾವಕಾಶಬೇಕೆಂದು ಶ್ರೀ ಸಿ ಆರ್ ತಿಳಿಸಿದರು.

‡ ಪ್ರಸಿದ್ಧ ಸಂಗೀತಗಾರರಾದ ಶ್ರೀ ಅರೈಕುಡಿ ರಾಮಾನುಜಯ್ಯಂಗಾರ್ ಮತ್ತು ಶ್ರೀ ಕರೈಕುಡಿ ಸಾಂಬಶಿವಯ್ಯರ್ ರವರಿಗೆ ಭಾರತ ಸರ್ಕಾರವು ೧೦೦೦ ರೂ ನಗದು ಮತ್ತು ೫೦೦ ರೂ ಬೆಲೆಯ ಕಾಶ್ಮೀರ ಶಾಲುಗಳನ್ನು ಕೊಟ್ಟು ಸನ್ಮಾನಿಸಿದೆ- ಇದೇ ರೀತಿ ಉತ್ತರ ಭಾರತದ ಇಬ್ಬರಿಗೂ ಸನ್ಮಾನಿಸಿದೆ.

ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿ

ಮೈಸೂರು ೩೦

ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಮತ್ತು ನೂತನ ಮುಖ್ಯಮಂತ್ರಿ, ಶ್ರೀ ಕೆ. ಹನುಮಂತಯ್ಯನವರು ಈದಿನಬೆಳಗ್ಗೆ ೧೧-೩೦ ಗಂಟೆಗೆ ಮೈಸೂರು ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿ ಕೊಡಲಿರುವರು.

ಜಿಲ್ಲಾಬೋರ್ಡ್‌ಸಭೆ

ಮೈಸೂರು ಮಾ. ೨೯

ಮೈಸೂರು ಜಿಲ್ಲಾ ಬೋರ್ಡ್ ಸಾಮಾನ್ಯಸಭೆಯು ಏಪ್ರಿಲ್ ೫ನೇ ತಾರೀಖು ಶನಿವಾರ ಜಿಲ್ಲಾಬೋರ್ಡ್ ಭವನದಲ್ಲಿ ನಡೆಯುತ್ತದೆ.

ಗಂಗಾನದಿಗೊಂದು ಸೇತುವೆ

ಗಂಗಾನದಿಗೆ ಬ್ರಾಡ್‌ಗೇಜ್ ಸೇತುವೆಯೊಂದನ್ನು ಕಟ್ಟಲು ಭಾರತ ಸರ್ಕಾರ ಆಲೋಚಿಸಿರುವ ಸಂಬಂಧದಲ್ಲಿ ಯಾವ ಸ್ಥಳದಲ್ಲಿ ಸೇತುವೆ ಕಟ್ಟಬೇಕೆಂಬ ಬಗ್ಗೆ ಮೈಸೂರಿನ ಮಾಜೀ ದಿವಾನರೂ ಪ್ರಖ್ಯಾತ ಇಂಜನಿಯರೂ ಆದ ಸರ್ ಎಂ ವಿಶ್ವೇಶ್ವರಯ್ಯನವರು ಸ್ಥಳ ಪರಿಶೀಲನೆ ನಡೆಸಿ ಅತ್ಯಂತ ಸೂಕ್ತವಾದ ಸ್ಥಳವನ್ನು ಗೊತ್ತುಮಾಡಿ ಭಾರತ ಸರ್ಕಾರಕ್ಕೆ ಶಿಫಾರಸು ಮಾಡಲಿದ್ದಾರೆಂದು ರೈಲ್ವೆ ಬೋರ್ಡಿನ ಪ್ರಕಟಣೆಯೊಂದು ತಿಳಿಸುತ್ತದೆ.

ಪತ್ರಿಕಾಭೇಟಿಗೆ ಅಪ್ಪಣೆಬೇಕು

ದೆಹಲಿಯ ಚೀಫ್ ಕಮೀಷನರ್ ಅಥವಾ ಸಂಬಂಧಪಟ್ಟ ಮಂತ್ರಿಗಳ ಅಪ್ಪಣೆಯಿಲ್ಲದೆ ಇಲಾಖೆಯ ಕಾರ್ಯದರ್ಶಿಗಳೇಆಗಲಿ · ಮುಖ್ಯಾಧಿಕಾರಿಗಳೇಆಗಲಿ ಪತ್ರಿಕಾಭೇಟಿ ಕೊಡಕೂಡದು ಎಂದು ದೆಹಲಿಯ ಚೀಫ್‌ಕಮೀಷನರ್ ಒಂದು ನಿರ್ದೇಶನವನ್ನು ಹೊರಡಿಸಿದ್ದಾರೆ.

ಪರ್ವತಾರೋಹಿಗಳು

ಹಿಮಾಲಯಪರ್ವತದ ಅತ್ಯಂತ ಎತ್ತರ ಶಿಖರವಾದ ಗೌರೀಶಂಕರವನ್ನು ಮುಟ್ಟಲು ಸ್ವಿಟ್ಸರ್ಲೆಂಡಿನ ೧೦ ಜನರು ನಿನ್ನೆ ಖಟ್ಮಂಡುವಿನಿಂದ ಪ್ರಯಾಣಮಾಡಿದರು. ಇವರಲ್ಲಿ ೮ ಪರ್ವತಾರೋಹಿಗಳು ೨ ಶಾಸ್ತ್ರಜ್ಞರಿರುವರು.

ಶ್ರೀ ಕೆ. ಹನುಮಂತಯ್ಯನವರು

ಸಕ್ಕರೆ ಬೆಲೆ ಇಳಿಯಿತು

ಬೆಂಗಳೂರು ಮಾ ೩೦

ಏಪ್ರಿಲ್ ೧ನೇ ತಾ|| ನಿಂದ ಸಕ್ಕರೆ ಬೆಲೆಯನ್ನು ವೀಸೆಗೆ ರೂ ೧—೩—೬ ಗೆ ಇಳಿಸಲಾಗಿದೆ

ಜಿಲ್ಲಾಧಿಕಾರಿಗಳ ವರ್ಗ

ಬೆಂಗಳೂರು ಮಾ ೩೦

ಚಿಕ್ಕಮಗಳೂರು ಜಿಲ್ಲಾಧಿಕಾರಿ ಶ್ರೀ ವಿ. ಎನ್. ಅನಂತರಾಮಯ್ಯನವರನ್ನು ರೋಡ್‌ಟ್ರಾನ್ಸ್‌ಪೋರ್ಟ್ ಜನರಲ್‌ಮ್ಯಾನೇಜರಾಗಿ, ಅಲ್ಲಿದ್ದ ಜ|| ಎ. ಎಸ್. ಖಲೀಲ್ ರನ್ನು ಹಾಸನ ಜಿಲ್ಲಾಧಿಕಾರಿಗಳಾಗಿ ತಿಂಗಳು ವರ್ಗಾಯಿಸಲಾಗಿದೆ.

ಹಾಸನ ಜಿಲ್ಲಾಧಿಕಾರಿ ಶ್ರೀ ಕೆ. ಎಂ. ನರಸಿಂಹಯ್ಯನವರಿಗೆ ನಿವೃತ್ತರಾಗುವ ಮುನ್ನ ಏಪ್ರಿಲ್ ೯ನೇ ತಾರೀಖಿನಿಂದ ೬ ತಿಂಗಳು ರಜಾ ಕೊಡಲಾಗಿದೆ.

ಕೌನ್ಸಿಲ್-ಆಫ್ ಸ್ಟೇಟಿಗೆ

ಕೌನ್ಸಿಲ್-ಆಫ್ ಸ್ಟೇಟಿಗೆ ಶ್ರೀಗಳಾದ ಲಾಲ್‌ಬಹದ್ದೂರ್ ಶಾಸ್ತ್ರಿ, ಆಚಾರ್ಯ ನರೇಂದ್ರದೇವ್, ಬಿ ಜಿ ಖೇರ್, ಆರ್. ಆರ್. ದಿವಾಕರ್, ಡಾ|| ಗಿಲ್ಡರ್. ಬಿ ಆರ್ ಅಂಬೇಡ್ಕರ್ ಮತ್ತು ಶ್ರೀಮತಿ ಲೀಲಾವತಿ ಮುನ್ಷಿಯವರು ಚುನಾಯಿತರಾಗಿದ್ದಾರೆ.

ಹತೋಟಿ ರದ್ದು

ತೊಗರಿ, ಕಡಲೆಬೇಳೆ, ಹಾರಕ, ಬರಗು, ಸಿಮೊಲಿನಾವುಗಳ ಮೇಲಿನ ಆಮದು ಹತೋಟಿಯನ್ನು ಭಾರತ ಸರ್ಕಾರ ರದ್ದುಗೊಳಿಸಿದೆ. ಈ ವಸ್ತುಗಳನ್ನು ಯಾರು ಬೇಕಾದರೂ ಯಾವ ನಿರ್ಬಂಧವೂ ಇಲ್ಲದೆ ತರಿಸಬಹುದು.

ಅಮೆರಿಕದಲ್ಲಿ ಭಾರತದ ಹೆಸರಾಂತ ಶಿಲ್ಪಿ

ವಾಷಿಂಗ್ಟನ್ ಮಾ. ೨೪

ನ್ಯೂಯಾರ್ಕ್‌ನಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಎಜ್ಯುಕೇಷನ್ ಸಂಸ್ಥೆಯು ಪಂವಾಗಿ ಅಮೆರಿಕದಲ್ಲಿ ಎಳು ದೇಶದ ಶಿಲ್ಪಿಗಳು ಪ್ರವಾಸ ಮಾಡಿ ಪರಸ್ಪರ ಅಭಿಪ್ರಾಯ ವಿನಿಮಯ ಮಾಡಿಕೊಂಡರು. ಅವರಲ್ಲಿ ನವದೆಹಲಿಯ ಹೆಸರಾಂತ ಶಿಲ್ಪಿ ಶ್ರೀ ಧನರಾಜಭಗತ್‌ರವರೂ ಇದ್ದಾರೆ.

ಶ್ರೀ ಭಗತ್‌ರು ಅಮೆರಿಕದ ಕಲಾಶಾಲೆಗಳನ್ನೂ, ವಸ್ತುಪ್ರದರ್ಶನಾಲಯಗಳನ್ನು ಮತ್ತು ಅಲ್ಲಿಯ ಹೆಸರಾಂತ ಶಿಲ್ಪಿಗಳನ್ನೂ ಭೇಟಿ ಮಾಡಿದರು. ಭಾರತದ ಕಲೆಯ ವಿಚಾರವಾಗಿ ಡಿಟ್ರಾಯಿಟ್ ನಗರದಲ್ಲಿಯೂ, ವಾಷಿಂಗ್ಟನ್ ನಗರದಲ್ಲಿಯೂ ಭಾಷಣ ಮಾಡಿದರು. ಅನೇಕ ನಗರಗಳಲ್ಲಿ ತಾವು ಮಾಡಿದ ಕೃತಿಗಳನ್ನು ಪ್ರದರ್ಶಿಸಿದರು.

ಲಂಡನ್ ಮುಖಾಂತರವಾಗಿ ಭಾರತಕ್ಕೆ ತೆರಳುವುದಕ್ಕೆ ಮುನ್ನ ಶ್ರೀ ಭಗತ್‌ರು, ಏಷ್ಯಾ ಸಂಸ್ಕೃತಿಯು ಅಮೆರಿಕದ ಕಲೆಯ ಮೇಲೆ ಪ್ರಭಾವ ಬೀರಿರುವುದಾಗಿಯೂ, ಅಮೆರಿಕನ್ನರು, ಹೃದಯಕ್ಕೆ ಶಾಂತಿ ತರುವ ತತ್ವಗಳಲ್ಲಿ ಆಸಕ್ತಿಯುಳ್ಳರಾಗಿರುವರೆಂದೂ ತಿಳಿಸಿದರು.

ಅನೇಕ ಅಮೆರಿಕನ್ ಶಿಲ್ಪಿಗಳು ಭಾರತಕ್ಕೆ ಬಂದು ಇಲ್ಲಿಯ ಶಿಲ್ಪ ಕಲಾ ಶಾಸ್ತ್ರವನ್ನು ಅಭ್ಯಾಸ ಮಾಡಲು ಕುತೂಹಲವುಳ್ಳವರಾಗಿರುವರೆಂದು ಶ್ರೀ ಭಗತ್ ತಿಳಿಸಿದರು. ಅಮೆರಿಕದಲ್ಲಿ ಮಕ್ಕಳಿಗೆ ಕಲೆಯನ್ನು ಅಭ್ಯಾಸ ಮಾಡಲು ತುಂಬಾ ಅನುಕೂಲಗಳಿವೆಯೆಂದರು.

ಶ್ರೀ ಭಗತ್‌ರು ಪ್ಯಾರಿಸ್, ರೋಂ ನಗರಗಳಿಗೆ ಭೇಟಿ ಕೊಟ್ಟು ಏಪ್ರಿಲ್ ಮಧ್ಯಭಾಗದಲ್ಲಿ ಭಾರತಕ್ಕೆ ಹಿಂತಿರುಗುವರು.

ನೇಪಾಳಿ ಹುಡುಗಿಗೆ ಬಹುಮಾನ

ನ್ಯೂಯಾರ್ಕ್ ಮಾ ೨೭

ಅಮೆರಿಕಕ್ಕೆ ಹೋಗಿರುವ ನೇಪಾಳದ ಶ್ರೀಮತಿ ಧಿಂಡಮಲ್ಲಳಿಗೆ ಒಂದು ಸಮಸ್ಯೆ ತಲೆದೋರಿದೆ.

ಈ ವಿದ್ಯಾರ್ಥಿನಿ ಅಮೆರಿಕಕ್ಕೆ ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ಚರ್ಚೆಯಲ್ಲಿ ಭಾಗವಹಿಸಲು ಹೋಗಿದ್ದಳು. ಅಲ್ಲಿ ಅವಳು ಟೆಲಿವಿಷನ್ ಪ್ರಶ್ನೋತ್ತರ ಮಾಲೆಯಲ್ಲಿ ಭಾಗವಹಿಸಿ ಪ್ರಥಮ ಬಹುಮಾನ ಪಡೆದಳು ಅವಳಿಗೆ ಬಹುಮಾನವಾಗಿ ಒಂದು ಟೆಲಿವಿಷನ್ ಸೆಟ್ಟು ಕೊಡಲಾಯಿತು.

ಆದರೆ ಅವಳು ನೇಪಾಳಕ್ಕೆ ಅದನ್ನು ತಂದಾಗ, ಟೆಲಿವಿಷನ್ ಕಾರ್ಯಕ್ರಮಗಳನ್ನು ಹೇಗೆ ಹುಡುಕಿ ಅದರಲ್ಲಿ ನೋಡಬೇಕು. ಈಗ ಇದೇ ಅವಳ ಸಮಸ್ಯೆಯಾಗಿದೆ.

ನಂಜನಗೂಡು ಜಾತ್ರೆಗೆ ಹೋಗಕೂಡದು

ಮೈಸೂರು ಮಾ ೨೯

ತಿರುಪತಿಯಿಂದ ಬಂದ ಯಾತ್ರಾರ್ಥಿಗಳಿಂದ ಕಾಲರಾ ಸಾಂಕ್ರಾಮಿಕ ರೋಗವು ನಂಜನಗೂಡು ತಾ॥ನ ಕೆಲವು ಹಳ್ಳಿಗಳಲ್ಲಿ ಹರಡಿರುವುದರಿಂದ, ಮೈಸೂರು ಹಜರತ್ ಡೆಪ್ಯುಟಿಕಮೀಷನರ್ ಸಾಹೇಬರವರು ನೋಟಿಫಿಕೇಷನ್ ನಂ. H ೫೧೮೫ ೫೧ ತಾ॥ ೨೪-೩-೫೨ರಲ್ಲಿ ಮುಂದೆ ತಾ॥ ೬-೪-೫೨ ಆದಿತ್ಯವಾರದಲ್ಲಿ ನಡೆಯುವ, ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿ ಜಾತ್ರೆಗೆ ಯಾರೂ ಹೋಗಕೂಡದೆಂದು, ಎಚ್ಚರಿಕೆ ಕೊಟ್ಟು, ಪಬ್ಲಿಕ್ ಹೆಲ್ತ್-ಆಕ್ಟ್-ಸೆಕ್ಷನ್ ನಂ- ೭೭ ಮತ್ತು ೭೭ ರಂತೆ ನೋಟಿಫಿಕೇಷನ್ ಮಾಡಿರುತ್ತಾರೆ.

ನೂರುಜನಕ್ಕೆ ಗಾಯ

ಬಿಹರಾನಿನ ರಸ್ತೆಯಲ್ಲಿ ಕಮ್ಯೂನಿಸ್ಟ್ ಸಹಾನುಭೂತಿಗಾರರಿಗೂ ಮತ್ತು ಅವರ ವಿರುದ್ಧ ಪಕ್ಷದವರಿಗೂ ಘರ್ಷಣೆ ನಡೆಯಿತು. ಪೋಲೀಸಿನವರೂ ಮತ್ತು ಮಿಲಿಟರಿಯವರೂ ಕಮ್ಯೂನಿಸ್ಟ್ ಸಹಾನುಭೂತಿಗಾರರನ್ನು ಚದುರಿಸುವ ಸಮಯದಲ್ಲಿ ಸುಮಾರು ೧೦೦ ಜನಕ್ಕೆ ಗಾಯವಾಯಿತು.

ಶಾಸನಸಭಾ ಉಪಾಧ್ಯಕ್ಷರು

ಹೈದರಾಬಾದ್ ಶಾಸನಸಭಾ ಉಪಾಧ್ಯಕ್ಷಸ್ಥಾನಕ್ಕೆ ಸ್ವತಂತ್ರ ಉಮೇದುವಾರ ಶ್ರೀ ಪಂಪನಗೌಡರು ಚುನಾಯಿದಾದರು ಇವರಿಗೆ ೮೭ ಓಟುಗಳು ಬಂದುವು ಕಾಂಗ್ರೆಸ್ ಸ್ಪರ್ಧಿ ಶ್ರೀ ಶ್ರೀನಿವಾಸರಾವ್ ೭೮ ಓಟುಗಳಿಸಿ ಪರಾಜಿತರಾದರು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಭಾರತ ವಸ್ತುಗಳಿಂದಲೇ ವಿಮಾನ ಇಂಜನ್ನಿನ ರಚನೆ

ಬೆಂಗಳೂರು ಮಾ ೨೮

ಕೇವಲ ಭಾರತೀಯ ವಸ್ತುಗಳಿಂದಲೇ ಸಿದ್ಧಗೊಳಿಸಲ್ಪಡಬಹುದಾದ ವಿಮಾನ ಇಂಜನ್ನಿನ ನಕ್ಷೆಯನ್ನು ತಯಾರಿಸಿ ಅಭಿವೃದ್ಧಿಗೊಳಿಸುವ ಕಾರ್ಯವನ್ನು ಇಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್-ಆಫ್-ಸೈನ್ಸ್ ಮಾಡುತ್ತಿದೆ ಎಂದು ಇಂದು ಅಧಿಕೃತವಾಗಿ ಗೊತ್ತಾಯಿತು.

ಪಾಕ್ ವಿದೇಶ ನೀತಿ

'ಪಾಕಿಸ್ತಾನದ ವಿದೇಶಾಂಗ ನೀತಿಯು ನಾಚಿಕೆಗೇಡಿನ' ನೀತಿ, ಅದು ವಿಶ್ವದ ದೃಷ್ಟಿಯಲ್ಲಿ ಪಾಕಿಸ್ತಾನಕ್ಕೆ ಅಗೌರವ ತಂದಿದೆ.' ಎಂಬುದಾಗಿ ಸರ್ದಾರ್ ಶೌಕತ್ ಹಯಾತ್‌ಖಾನ್‌ರವರು ಟೀಕಿಸಿದ್ದಾರೆ.

ಪಾಕಿಸ್ತಾನದ ವಿದೇಶಾಂಗ ನೀತಿಯು ಯಾವುದೇ ಒಂದು ಪಕ್ಷವನ್ನು ವಹಿಸಬೇಕೆಂದು ತಾವು ವಾದಿಸುವುದಿಲ್ಲವೆಂದೂ ಪಾಕಿಸ್ತಾನದ ಹಿತಕ್ಕೆ ತಕ್ಕಂತೆ ವರ್ತಿಸುವುದು ಅಗತ್ಯವೆಂದೂ ಹೇಳಿ 'ಪಂ॥ ನೆಹರೂರವರ ವಿದೇಶಾಂಗ ನೀತಿಯಿಂದ ಕಲಿತುಕೊಳ್ಳುವುದಿದೆ. ಆಂಗ್ಲೋ ಅಮೆರಿಕನ್ ಮತ್ತು ಸೋವಿಯಟ್ ಕೂಟಗಳೆರಡರಿಂದಲೂ ರಿಯಾಯಿತಿಗಳನ್ನು ಪಡೆಯುವುದರಲ್ಲಿ ಭಾರತ ನೆಹರೂ ನೀತಿ ಅನುಸರಿಸಿ ಯಶಸ್ವಿಯಾಗಿದೆ' ಎಂದು ಶೌಕತ್‌ಹಯಾತ್‌ಖಾನ್ ನುಡಿದರು.

ಆಹಾರ ಧಾನ್ಯಗಳ ಬೆಲೆ ಏರಿಕೆ

ಆಹಾರ ಧಾನ್ಯಗಳ ಬೆಲೆಯನ್ನು ಮುಂಬೈ ಸಂಸ್ಥಾನದಾದ್ಯಂತ ಶೇಕಡ ಐವತ್ತರಷ್ಟು ಹೆಚ್ಚಿಸುವ ನಿರ್ಧಾರವನ್ನು ಮುಂಬೈ ಸರ್ಕಾರ ಕೈಗೊಂಡಿದೆ. ಎಂಬುದಾಗಿ ಮುಂಬೈ ಸರಬರಾಜು ಶಾಖಾ ಸಚಿವ ಶ್ರೀ ದಿನಕರರಾವ್ ದೇಸಾಯ್‌ರವರು ಪ್ರಕಟಿಸಿರುವರು.

ಗೋಧಿಯ ಬೆಲೆಯನ್ನು ಮಣಕ್ಕೆ ೧೬-೦-೮ ಯಿಂದ ರೂ ೨೩-೮-೮ ಕಾಸುಗಳಿಗೂ (ಸುಮಾರು ಶೇ॥ ೪೫) ಸಾಮಾನ್ಯ ಅಕ್ಕಿ ಬೆಲೆಯನ್ನು ೧೮-೨-೦ ಯಿಂದ ೨೮-೨-೦ (ಶೇ ೫೫) ಒಳ್ಳೆ ಅಕ್ಕಿಯ ಬೆಲೆಯನ್ನು ೨೯-೨-೦ ಯಿಂದ ೩೧-೪-೦ ಗೂ ಮಿಲೋ ಬೆಲೆಯನ್ನು ೧೧-೦-೮ ರಿಂದ ೧೬-೪-೦ ಗೂ ಹೆಚ್ಚಿಸಲಾಗುವುದು.

‡ ದಕ್ಷಿಣ ಆಫ್ರಿಕವು ಈಗ ಹಿಂದೆಂದೂ ಕಾಣದಂತಹ ಉಗ್ರ, 'ಘಟನಾತ್ಮಕ' ಬಿಕ್ಕಟ್ಟನ್ನು ಎದುರಿಸಬೇಕಾಗಿದೆಯೆಂದು ವಿರೋಧ ಪಕ್ಷದ ನಾಯಕ ಸ್ಟ್ರಾಸ್‌ರವರು ಮಲಾನ್ ಸರ್ಕಾರವನ್ನು ಶಾಸನಸಭೆಯಲ್ಲಿ ಖಂಡಿಸಿದರು.

ಪರಿಹಾರಕ್ಕೆ ಸಹಾಯ

ಭಾರತ ಪಾಕಿಸ್ತಾನಗಳ ನಡುವಿನ ಬಿಕ್ಕಟ್ಟು ಈಚೆಗೆ ಕೊಂಚ ಕಡಿಮೆಯಾಗುತ್ತಿರುವುದು ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಸಹಾಯವಾಗಬಹುದೆಂದು ಜಿನೀವಾಕ್ಕೆ ಬಂದ ವಿಶ್ವಸಂಸ್ಥೆಯ ಮಧ್ಯಸ್ಥಿಕೆಗಾರ ಡಾ॥ ಗ್ರಹಾಂರವರು ಆಶೆ ವ್ಯಕ್ತಪಡಿಸಿದ್ದಾರೆ.

ಪೇಟೆ ಧಾರಣೆ

ಮೈಸೂರು ತಾ॥ 29-3-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	8-10	18-4
ಹೊಂಗೆಬೀಜ	,,	10-0	12-6
ಹುರುಳಿ	,,	29-12	32-4
ಹೆಸರು	,,	54-10	55 10
ಅವರೆ	,,		48-10
ಮೆ. ಕಾಯಿ ಮಣಕ್ಕೆ		7-0	14-12
ಹುಣಸೇಹಣ್ಣು	,,	1-8	3-8
ಸೀಗೆಕಾಯಿ	,,	2-9	3-8
ತೆಂಗಿನಕಾಯಿ 1100ಕ್ಕೆ		129-0	213-0

ಚಿನ್ನ ಬೆಳ್ಳಿ ದರಗಳು

29-3-52	ರೂ.
ಸವರನ್	66-4
,,	66-6
ಚಿನ್ನ ತೊಲ	92-4
,, ಮೊಹ	90-8
ಬೆಳ್ಳಿ 100 ತೊಲ	156-0
,, ತೊಲ	1-11

ವುಡ್‌ಲ್ಯಾಂಡ್ಸ್

21-3-52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ವರ್ಮಾ ಫಿಲಿಂಸ್‌ರವರ—

ಪರ್ ಬತ್ (ಹಿಂದಿ)

ಪಾತ್ರ:- ನೂತನ್, ಪ್ರೇಂನಾಥ್ ಕೆ. ಎನ್. ಸಿಂಗ್, ಉಲ್ಲಾಸ್.

ನ್ಯೂಅಪೇರ

೨೭-೩-೫೨ ರಿಂದ ಅಮೋಘಪ್ರಾರಂಭ

ಪಕ್ಷಿರಾಜರವರ—

* ಕನ್ನಿಕ * (ತಮಿಳು)

ಪಾತ್ರ-ಟಿ. ಇ. ವರದನ್, ಡಿ. ಬಾಲಸುಬ್ರಮಣ್ಯಂ, ಎನ್. ಎಸ್. ಕೃಷ್ಣನ್, ಎಂ. ಎಸ್. ಸರೋಜಿನಿ, ಎಂ. ಆರ್. ಸಂತಾನಲಕ್ಷ್ಮಿ, ಟಿ. ಎ. ಮಧುರಂ ಲಲಿತ-ಪದ್ಮಿನಿ.

ಪ್ರಕಾಶಕರು:—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು.
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೭೪ (೭೦೪) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೩] ೧-೪-೧೯೫೨ನೇ ಮಂಗಳವಾರ [ಸಂಚಿಕೆ ೧೮೧

ನಾಯಕರಾಗಲು ರಾಜಾಜಿಯವರ ಒಪ್ಪಿಗೆ

ಶ್ರೀ ಕೆ. ಹನುಮಂತಯ್ಯನವರು ದೆಹಲಿಗೆ ಪ್ರಯಾಣ ಮಾಡಿದರು, ೨ನೇ ತಾ॥ ಹಿಂತಿರುಗುವರು

ಬಡ್ಜೆಟ್ ಅಧಿವೇಶನ

ಮೈಸೂರು ಮಾ. ೩೧

ಮೈಸೂರು ನಗರಾಭಿವೃದ್ಧಿ ಸಮಿತಿಯ ಆಯವ್ಯಯ (ಬಡ್ಜೆಟ್) ಅಧಿವೇಶನವು ನಿನ್ನೆ ಬೆಳಗ್ಗೆ ೮-೩೦ ಗಂಟೆಗೆ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಪಿ ಗೋಪಾಲಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಅಧ್ಯಕ್ಷರು ೧೯೫೧-೫೨ ರ ಆಯವ್ಯಯವನ್ನು ಸಭೆಯ ಮುಂದೆ ಮಂಡಿಸಿ ಆಯವ್ಯಯದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳಾಗಿರುವುದನ್ನು ಸಭೆಯ ಗಮನಕ್ಕೆ ತಂದರು.

೧೯೫೨-೫೩ನೇ ಸಾಲಿನ ಆಯವ್ಯಯ

೧೯೫೨-೫೩ನೇ ಸಾಲಿನಲ್ಲಿ ಈ ಸಮಿತಿಗೆ ಒಟ್ಟು ೨೩,೮೪,೩೭೧ ರೂ ಗಳು ಆದಾಯ ಬಂದು, ೨೦,೩೧,೦೦೦ ರೂ ಗಳು ಖರ್ಚಾಗಿ, ೩,೫೩,೩೭೧ ರೂ ಗಳು ಉಳಿಯುವ ಅಂದಾಜು ಮಾಡಲಾಗಿದೆ

ಮುಂದಿನ ಸಾಲಿನ ಕಾರ್ಯಕ್ರಮ

ಸರ್ಕಾರಿ ನೌಕರರಿಗಾಗಿ ಚಾಮರಾಜಪುರಂ ರೈಲ್ವೆ ಸ್ಟೇಷನ್ನಿನ ಹತ್ತಿರ ೮ ಮನೆಗಳನ್ನು ಕಟ್ಟಬೇಕೆಂದೂ, ಸುಣ್ಣದಕೇರಿ ನಿವಾಸಿಗಳಿಗೆ ತಾತ್ಕಾಲಿಕ ವಾಸಸ್ಥಳ ಒದಗಿಸಿ, ಅಲ್ಲಿ ನಿರ್ಮಲೀಕರಣಕಾರ್ಯ ಕೈಕೊಳ್ಳುವುದು, ದೊಡ್ಡಕೆರೆ ಮೈದಾನದಲ್ಲಿ ಕ್ರೀಡಾ ಮೈದಾನ ನಿರ್ಮಿಸುವುದು, ನಗರದಲ್ಲಿ ಬ್ಯಾಂಡ್‌ಸ್ಟ್ಯಾಂಡು ನಿರ್ಮಾಣ ಇತ್ಯಾದಿ ಕಾರ್ಯಕ್ರಮಗಳನ್ನಿಟ್ಟುಕೊಂಡಿರುವುದಾಗಿ ತಿಳಿಸಿದರು. ಅಧ್ಯಕ್ಷರು ಸಮಿತಿಯ ಸದಸ್ಯರ, ನಗರಸಭೆ ಮತ್ತು ಸರ್ಕಾರದ ಬೆಂಬಲ, ಪ್ರೋತ್ಸಾಹ, ಸಹಕಾರಗಳಿಂದ ನಗರದ ಅಭಿವೃದ್ಧಿಗಾಗಿ ಶಕ್ತಿಮೀರಿ ಶ್ರಮಿಸುವುದಾಗಿ ತಿಳಿಸಿ, ಸರ್ವರೂ ಬೆಂಬಲ ಸಹಕಾರ ಕೊಡಬೇಕೆಂದು ಕೋರಿದರು.

ಅಧಿಕಾರ ವಹಿಸಿಕೊಳ್ಳಲು ಶ್ರೀ ಪ್ರಕಾಶಂ ಸಿದ್ಧ

ಮದರಾಸಿನ ನೂತನ ಶಾಸನ ಸಭೆಯ ಸಂಯುಕ್ತ ಪ್ರಜಾ ಸತ್ತಾತ್ಮಕ ಪಕ್ಷದ ನಾಯಕರಾದ ಶ್ರೀ ಟಿ ಪ್ರಕಾಶಂರವರು ಮದರಾಸ್ ಗವರ್ನರರಾದ ಶ್ರೀ ಶ್ರೀ ಪ್ರಕಾಶಾರವರಿಗೆ ಪತ್ರವೊಂದನ್ನು ಬರೆದು, ತಮ್ಮ ಪಕ್ಷದಲ್ಲಿ ೧೬೭ ಮಂದಿ ಶಾಸನ ಸಭಾಸದಸ್ಯರಿರುವುದಾಗಿ ಅವರ ಹೆಸರುಗಳನ್ನು ತಿಳಿಸಿದ್ದಾರೆ.

ಪತ್ರಿಕೆಗಳು ತಮ್ಮ ಜವಾಬ್ದಾರಿ ಅರಿತು ವರ್ತಿಸಬೇಕು

ಮೈಸೂರು ಮಾ ೩೧

ಮೈಸೂರುಸಂಸ್ಥಾನದಲ್ಲಿರುವ ಪತ್ರಿಕೆಗಳಲ್ಲೆಲ್ಲಾ ಒಂದೆರಡು ಪತ್ರಿಕೆಗಳು ವಿನಹ ಮಿಕ್ಕವುಗಳೆಲ್ಲಾ ಉತ್ತಮರೀತಿಯಲ್ಲಿ ಕರ್ತವ್ಯವನ್ನು ಮಾಡುತ್ತಲಿವೆ. ಸರ್ಕಾರದ ಮತ್ತು ನಾನಾ ಪಕ್ಷಗಳ ಕಾರ್ಯವನ್ನು ಟೀಕಿಸಲು ಪತ್ರಿಕೆಗಳಿಗೆ ಪೂರ್ಣ ಹಕ್ಕಿದ್ದರೂ ತಮ್ಮ ಜವಾಬ್ದಾರಿಯನ್ನರಿತು ರಚನಾತ್ಮಕರೀತಿಯಲ್ಲಿ ತಮ್ಮ ಸಲಹೆಗಳನ್ನು ನೀಡಬೇಕೇವಿನಹ ವ್ಯಕ್ತಿಗಳನ್ನುದ್ದೇಶಿಸಿ ಅಶ್ಲೀಲ ಭಾಷೆಗಳನ್ನು ಉಪಯೋಗಿಸಿ ಪತ್ರಿಕೆಗಳನ್ನು ನಡೆಸುವುದು ಹಿತವಲ್ಲವೆಂದು ಮುಖ್ಯಮಂತ್ರಿ ಸ್ಥಾನವನ್ನು ವಹಿಸಿಕೊಂಡೊಡನೇ ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿಯಿತ್ತ ಶ್ರೀ-ಕೆ. ಹನುಮಂತಯ್ಯನವರು ನುಡಿದರು.

ತಮ್ಮ ಭಾಷಣವನ್ನು ಮುಂದುವರಿಸುತ್ತಾ, ದೇಶದ ಆಗುಹೋಗುಗಳಿಗೆಲ್ಲಾ ಇಲ್ಲಿಯವರೆಗೆ ಎಲ್ಲಾ ಪತ್ರಿಕೆಗಳು ನೆರವು ನೀಡಿವೆ. ಅದೇರೀತಿ ತಮ್ಮ ಅಧಿಕಾರಕಾಲದಲ್ಲೂ ತಮಗೆ ಪೂರ್ಣ ಸಹಕಾರವನ್ನು ಪತ್ರಿಕೆಗಳು ನೀಡಬೇಕೆಂದು ಅವರು ಕೋರಿದರು.

ಮೈಸೂರು ಪೌರಸಭೆಯ ಅಧಿವೇಶನ

ಮೈಸೂರು ಮಾ ೩೧

ಮೈಸೂರು ಪೌರಸಭೆಯ ಮಾಹೆಯಾನಾಧಿವೇಶನವು ಈ ಸಂಜೆ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾವ್‌ರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಾರ್ಯಕಲಾಪ ಪ್ರಾರಂಭವಾಗುವ ಮುನ್ನ ಸಂಸ್ಥಾನದ ಹೊಸ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಗೆ ಅಭಿನಂದಿಸುವ ನಿರ್ಣಯಮಾಡಲಾಯಿತು.

ಉಪಹಾರ ಮಂದಿರಗಳಲ್ಲಿ ಇಡ್ಲಿ, ದೋಸೆ ಮಾಡಕೂಡದು, ವೈದ್ಯಕೀಯ ವಸ್ತುಗಳ ಸ್ಟ್ಯಾಂಪಿನ ಮೇಲೆ ತೆರಿಗೆ ಹಾಕಬಾರದು ಎಂದು ಶ್ರೀ ಬಿ. ಜಿ. ದಾಸ್‌ರವರು ಮಂಡಿಸಿದ್ದ ನಿರ್ಣಯಗಳು ೭-೧೧ ಓಟುಗಳಿಂದ ಬಿದ್ದುಹೋಯಿತು.

ಮಾರ್ಷಲ್ ಲಾ

ಟೆಹರಾನಿನಲ್ಲಿ ಒಂದು ತಿಂಗಳು ಕಾಲ ಪರ್ಷಿಯಾ ಸರ್ಕಾರವು ಮಾರ್ಷಲ್ ಲಾ ವನ್ನು ಘೋಷಿಸಿದೆ.

ಶ್ರೀ ಹನುಮಂತಯ್ಯನವರು ದೆಹಲಿಗೆ

ಬೆಂಗಳೂರು ಮಾ ೩೧

ನೂತನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಶ್ರೇಷ್ಠ ಕಾರ್ಯದರ್ಶಿ ಶ್ರೀ ಇ. ವಿ. ಗಣಪತಿಅಯ್ಯರ್‌ರವರೊಡನೆ ದೆಹಲಿಗೆವಿಮಾನದಲ್ಲಿ ಈದಿನ ತೆರಳಿದರು ಹೊಸ ಮಂತ್ರಿಮಂಡಲ ರಚನೆ ಆಹಾರವಿಷಯ ಮುಂತಾದುವನ್ನು ಪ್ರಧಾನಿಯವರೊಡನೆ ಚರ್ಚೆನಡೆಸಿ ಶ್ರೀ ಹನುಮಂತಯ್ಯನವರು ಏಪ್ರಿಲ್ ೨ನೇ ತಾ॥ ಬೆಂಗಳೂರಿಗೆ ಹಿಂತಿರುಗುವರೆಂದು ಗೊತ್ತಾಗಿದೆ.

ವಸ್ತುಪ್ರದರ್ಶನಾರಂಭ

ಬೆಂಗಳೂರು ಮಾ ೩೧

ಮಾಜಿ ಆರ್ಥಿಕಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಈದಿನ ಸುಭಾಸ್‌ನಗರದಲ್ಲಿ ಕಾಂಗ್ರೆಸು ವಸ್ತುಪ್ರದರ್ಶನ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಪೋಲೀಸ್ ಠಾಣೆಗಳನ್ನು ಮುಚ್ಚಲಾಯಿತು

ಕೃಷ್ಣಾಜಿಲ್ಲೆಯಲ್ಲಿ ಕಮ್ಯೂನಿಸ್ಟರ ಹಿಂಸಾತ್ಮಕ ಚರ್ಯೆಗಳು ಬಹಳ ಕಡಿಮೆಯಾಗಿರುವುದರಿಂದ ಅಲ್ಲಿ ಸ್ಥಾಪಿಸಿದ್ದ ೧೩ ಪೋಲೀಸ್ ಠಾಣೆಗಳನ್ನು ಇಂದಿನಿಂದ ಮುಚ್ಚಲಾಗಿದೆ.

ನೀರಾವರಿ ಪರಿಣಿತರು ಮದ್ರಾಸಿಗೆ

ಮದ್ರಾಸಿನಲ್ಲಿ ಉಂಟಾಗಿರುವ ನೀರಿನ ಅಭಾವ ಪರಿಹಾರಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲು ಸಲಹೆನೀಡಲು ಭಾರತಸರ್ಕಾರವು ನೀರಾವರಿ ನಿಪುಣರಿಬ್ಬರನ್ನು ಮದರಾಸಿಗೆ ಕಳುಹಿಸಲಿದೆ.

ಹರಿಜನ ಸಮ್ಮೇಳನ

ಕುಣಿಗಲು ತಾ॥ ಹರಿಜನ ಸಮ್ಮೇಳನವು ಮುಂದಿನ ತಿಂಗಳು ೫ನೇ ತಾರೀಖು ಎಡೆಯೂರಿನಲ್ಲಿ ಶ್ರೀಮಾನ್ ಡಿ. ಎನ್. ಕೃಷ್ಣಯ್ಯಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಮೈಸೂರುಸಂಸ್ಥಾನದ ಹರಿಜನ ಸೇವಕಸಂಘದ ಕಾರ್ಯದರ್ಶಿ ಶ್ರೀ ಪ್ರಿಯವ್ರತರವರು ಅಧ್ಯಕ್ಷತೆ ವಹಿಸುವರು.

* ಅಮೇರಿಕಾ ಅಧ್ಯಕ್ಷ ಟ್ರೂಮನ್ನರು ಪುನಃ ತಾವು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಿಲ್ಲವೆಂದು ತಿಳಿಸಿದ್ದಾರೆ.

ಮದರಾಸ್ ಶಾಸನ ಸಭೆಯ ಕಾಂಗ್ರೆಸ ಪಕ್ಷದ ನಾಯಕರಾಗಲು ಕೇಂದ್ರ ಮಾಜಿ ಗೃಹಸಚಿವ ಶ್ರೀ ಸಿ ರಾಜಗೋಪಾಲಾಚಾರಿಯವರು ಒಪ್ಪಿಗೆಯನ್ನಿತ್ತಿರುವುದಾಗಿ ತಿಳಿದುಬಂದಿದೆ

ನಿನ್ನೆ ಸಂಜೆ ೬॥ ಗಂಟೆಗೆ ನಡೆದ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಶ್ರೀ ಕುಮಾರಸ್ವಾಮಿ ರಾಜಾರವರು ಈ ವಿಷಯವನ್ನು ಹೊರಗೆಡಹಿದರು.

ಶ್ರೀ ರಾಜಗೋಪಾಲಾಚಾರಿಯವರನ್ನು ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು.

ಈ ವಿಷಯದಲ್ಲಿ ಮೂರು ದಿನಗಳಿಂದ ಸಂಧಾನ ನಡೆಯುತ್ತಲಿತ್ತು. ಈಗಾಗಲೇ ಕಾಂಗ್ರೆಸ್‌ಪಕ್ಷ ಶ್ರೀ ರಾಜಾಜಿಯವರೇ ನಾಯಕರಾಗಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಿತ್ತು. ಪ್ರಾರಂಭದಲ್ಲಿ ಶ್ರೀ ರಾಜಾಜಿ ಒಪ್ಪಲಿಲ್ಲವಾದರೂ ಕಾಂಗ್ರೆಸ್ ಅಧ್ಯಕ್ಷ ನೆಹರೂರವರ ಮಧ್ಯಸ್ಥಿಕೆಯಿಂದ ತಮ್ಮ ಒಪ್ಪಿಗೆಯನ್ನಿತ್ತಿರುವರೆಂದು ಗೊತ್ತಾಗಿದೆ.

ಮದ್ರಾಸ್ ಗೌರ್ನರ್ ಶ್ರೀ ಶ್ರೀಪ್ರಕಾಶರವರು ಮದ್ರಾಸ್ ಹಿರಿಯ ಶಾಸನಸಭೆಗೆ ಶ್ರೀ ಸಿ. ರಾಜಗೋಪಾಲಾಚಾರಿ ಜ॥ ಮಹಮದ್ ಉಸ್ಮಾನ್ ಮತ್ತು ಶ್ರೀ ಎ. ಭಾಷ್ಯಂರವರನ್ನು ನಾಮಕರಣಮಾಡಿರುವರು.

ರಾಜೀನಾಮೆ

ಮುಂಬರುವ ಚುನಾವಣೆಯಲ್ಲಿ ಅಮೆರಿಕಾ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಲು ಈ ವಾರದಲ್ಲಿ ಜನರಲ್ ಐಸೆನ್‌ಹೋವರ್‌ರವರು ಉತ್ತರ ಅಟ್ಲಾಂಟಿಕ್ ಸುಪ್ರೀಂ ಕಮ್ಯಾಂಡರ ಸ್ಥಾನಕ್ಕೆ ರಾಜೀನಾಮೆ ಕೊಡಲಿರುವರೆಂದು ಹೇಳಲಾಗಿದೆ.

ಸ್ಥಾನಬದ್ಧ ಖೈದಿಗಳ ಬಿಡುಗಡೆ

೪೦೦ ಸ್ಥಾನಬದ್ಧ ಖೈದಿಗಳನ್ನು ಬಿಡಲು ಹೈದರಾಬಾದ್ ಸರ್ಕಾರವು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಹತೋಟಿಯಲ್ಲಿ ಸಡಿಲ

ಅತ್ಯುತ್ತಮ ಮತ್ತು ಉತ್ತಮ ದರ್ಜೆಯ ಒಟ್ಟಿಗಳ ವಿಲೇವಾರಿಯಲ್ಲಿ ಹತೋಟಿಯನ್ನು ಕೇಂದ್ರ ಸರ್ಕಾರ ಸಡಿಲಿಸಿದೆ.

ದಕ್ಷಿಣ ಭಾರತ ಭಾಷೆಯನ್ನು ಉತ್ತರ ಭಾರತೀಯರು ಕಲಿಯಬೇಕು

ಕಾಶಿ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಿಲರ್ ಆಚಾರ್ಯ ನರೇಂದ್ರದೇವ್‌ರವರು ದೇಶ ಭಾಷೆಗಳ ವಿಷಯವಾಗಿ ಪ್ರಸ್ತಾಪಿಸುತ್ತಾ, ಉತ್ತರ ಭಾರತೀಯರು ದಕ್ಷಿಣ ಭಾರತದ ಯಾವುದಾದರೂ ಒಂದು ಭಾಷೆಯನ್ನು ಕಡ್ಡಾಯವಾಗಿ ಕಲಿಯುವಂತೆ ಏರ್ಪಡಿಸಬೇಕೆಂದು ಹೇಳಿರುವರು.

ಕ್ರಿಮಿ ಯುದ್ಧ ನಡೆದಿದೆ

ಡೆಮೊಕ್ರಾಟಿಕ್ ಲಾಯರುಗಳ ಅಂತರರಾಷ್ಟ್ರೀಯ ಸಂಘದ ಅಧ್ಯಕ್ಷರಾದ ಶ್ರೀ ಪ್ರಿಟ್‌ರವರು ಇತ್ತ ಹೇಳಿಕೆಯಲ್ಲಿ 'ಕೊರಿಯಾದಲ್ಲಿ ಅಮೆರಿಕನರು ಕ್ರಿಮಿಯುದ್ಧ ನಡೆಸುತ್ತಿರುವರೆಂಬ ಅಪಾದನೆ ಹೊರಬಿದ್ದಿರುವುದರಿಂದ ಅದರ ತನಿಖೆ ನಡೆಸಲು ಸಂಘದ ಪರವಾಗಿ ನೈರುತ್ಯ ಚೀಣಕ್ಕೆ ಕಳುಹಿಸಲ್ಪಟ್ಟ ಸದಸ್ಯರ ಗೋಷ್ಠಿಯ ಬ್ರಿಟಿಷ್ ಸದಸ್ಯರೂ ಮತ್ತು ಲಂಡನ್ ಸಾಲಿಸಿಟರೂ ಆದ ಶ್ರೀ ಜ್ಯಾಕ್ ಗ್ಯಾಸ್ಟರ್‌ರವರಿಂದ ಕೇಬಲ್ ಒಂದು ನನಗೆ ಬಂದಿದೆ ಅದರಲ್ಲಿ ಆಪಾದನೆಯನ್ನು ಸ್ಥಿರಪಡಿಸುವ ಸಾಕ್ಷ್ಯ ದೊರೆದಿದೆ' ಎಂದು ತಿಳಿಸಿದಾರೆ.

ಅಂತರರಾಷ್ಟ್ರೀಯ ಆರ್ಥಿಕ ಸಮ್ಮೇಳನ

ಮಾಸ್ಕೋದಲ್ಲಿ ಮುಂದಿನವಾರ ನಡೆಯಲಿರುವ ಅಂತರ್ರಾಷ್ಟ್ರೀಯ ಆರ್ಥಿಕ ಸಮ್ಮೇಳನದಲ್ಲಿ ಭಾಗವಹಿಸಲು ಡಾ॥ ಜೆ ಸಿ ಕುಮಾರಪ್ಪ ತೆರಳಿದರು.

ಫಿಲ್ಮ್ ಇಂಡಿಯಾ ಪತ್ರಿಕೆಗೆ ಬಹಿಷ್ಕಾರ

ಬೊಂಬಾಯಿನಲ್ಲಿ ಪ್ರಕಟವಾಗುವ ಫಿಲ್ಮ್ ಇಂಡಿಯಾ ಎಂಬ ಪತ್ರಿಕೆಯನ್ನು ಪಾಕಿಸ್ಥಾನಕ್ಕೆ ತರಿಸಕೂಡದೆಂದು ಸರ್ಕಾರ ಬಹಿಷ್ಕರಿಸಿದೆ.

ಮೇಯರಿಗೆ ಸೂಚನೆ ಕೊಡಿ

ಬೆಂಗಳೂರು, ಮಾ ೩೦

'ಮೇಯರ್' ವಿರುಧ ಅವಿಶ್ವಾಸ ಸೂಚನೆ ಕಳುಹಿಸಿದ್ದ ನಿರ್ಣಯವನ್ನು ಚರ್ಚಿಸಲು ವಿಶೇಷ ಸಭೆಯನ್ನು ಕರೆಯುವಂತೆ ಮೇಯರ್‌ರವರಿಗೆ ಸೂಚನೆಯಿತ್ತಾಯಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ಅರ್ಜಿಯನ್ನು ಕಾರ್ಪೊರೇಷನ್ ಕಾಂಗ್ರೆಸ್ ಪಕ್ಷದ ಪರವಾಗಿ, ನಾಯಕ ಶ್ರೀ ಎ ಕೆ ಗೋವಿಂದರಾಜುಲುರವರು ಸರ್ಕಾರಕ್ಕೆ ಸಲ್ಲಿಸಿರುವರು.

ಭಾರತ ಸೇವಾದಳ ಮಾಧ್ಯಮಿಕ ಶಿಕ್ಷಣ ಶಿಬಿರ

ಮಂಡ್ಯದಲ್ಲಿ ಭಾರತ ಸೇವಾದಳ ಮಾಧ್ಯಮಿಕ ಶಿಕ್ಷಣಶಿಬಿರವು ತಾ॥ ೨೫-೪-೫೨ರಿಂದ ೪೦ ದಿನಗಳ ಕಾಲ ಚುನಾಯಿತರಾದ ೬೦ ಮಂದಿಗೆ ಏರ್ಪಡಿಸಲಾಗುತ್ತದೆ. ಶಿಬಿರದಲ್ಲಿ ಉಚಿತ ಊಟ, ವಸತಿ ಸೌಕರ್ಯ ಏರ್ಪಡಿಸಿರುತ್ತದೆ. ಈ ಶಿಕ್ಷಣಕ್ಕೆ ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳ ಪ್ರತಿ ತಾಲ್ಲೂಕುಗಳಿಂದಲೂ ಒರುವಂತೆ ಸೇವಾದಳ ಕೇಂದ್ರ ಸಮಿತಿಯವರು ತೀರ್ಮಾನ ಮಾಡಿರುತ್ತಾರೆ ಬರತಕ್ಕವರು ವಿದ್ಯಾವಂತರೂ, ಧೃಡಕಾರ್ಯರೂ, ದೇಶಪ್ರೇಮಿಗಳೂ ಆದ ಯುವಕರು ತಾ॥ ೧೮-೪-೫೨ರಲ್ಲಿ ಅರ್ಜಿಯನ್ನು ಸಲ್ಲಿಸಬೇಕಾಗಿ ಕೋರಿದೆ. ಈ ಕಾರ್ಯದಲ್ಲಿ ಸೇವಾದಳ ಕಾರ್ಯಕರ್ತರು ಸಹಾಯಾದವರನ್ನು ಚುನಾಯಿಸಿ ಕಳುಹಿಸಬೇಕಾಗಿ ಕೋರಿದೆ. ಶಿಬಿರಕ್ಕೆ ಬರುವ ಸ್ವಯಂಸೇವಕರು ಖಾದಿ ಕರಿಯ ನಿಕ್ಕರು, ಖಾದಿ ಬಿಳಿಯ ಬನೀನು, ಖಾದಿ ಟೋಪಿ, ಹಾಸಿಗೆ, ಊಟದ ತಟ್ಟೆ, ಲೋಟ, ಬರೆಯುವ ಪುಸ್ತಕ, ಚರಕ ಅಥವಾ ತಕಲಿ ಇವುಗಳನ್ನು ಮರೆಯದೆ ತರಬೇಕು. ಹೆಚ್ಚಿನ ವಿವರಗಳಿಗೆ ಎಂ ಪುಟ್ಟತಿಮ್ಮಯ್ಯ, ಜಿಲ್ಲಾ ಸಂಘಟಕರು, ಭಾರತ ಸೇವಾದಳ ಮಂಡ್ಯ. ಇವರಿಗೆ ಬರೆಯಿರಿ.

ಮಹಿಳಾ ಮಾಧ್ಯಮಿಕ ಶಿಕ್ಷಣ ಶಿಬಿರ ಮೈಸೂರಿನಲ್ಲಿ

ಏಪ್ರಿಲ್ ಅಂತ್ಯದಲ್ಲಿ ಮೈಸೂರಿನಲ್ಲಿ ಮಹಿಳಾ ಮಾಧ್ಯಮಿಕ ಭಾರತ ಸೇವಾದಳ ಶಿಕ್ಷಣ ಶಿಬಿರವು ನಡೆಯಲು ಏರ್ಪಾಡಾಗಿದೆ. ಹೋದ ವರ್ಷ ಇಲ್ಲಿಯೇ ನಡೆದ ಪ್ರಾಥಮಿಕ ಶಿಬಿರಕ್ಕೆ ಬಂದವರು ವ.ಕ್ತ ಮೈಸೂರು ಸಂಸ್ಥಾನದಿಂದ ಬರಲಿರುವ ಮಹಿಳೆಯರನ್ನು ಸ್ವಾಗತಿಸಲಾಗಿದೆ. ಶಿಬಿರವು ಬಹುಶಹ ೩೦ ದಿನಗಳು ನಡೆಯುತ್ತವೆ. ಶಿಬಿರ ವಾಸಿಗಳು ಹೋಗಿಬರುವ ಖರ್ಚನ್ನು ತಾವೇ ವಹಿಸಬೇಕು. ಶಿಬಿರದಲ್ಲಿ ಊಟ, ವಸತಿ ಸೌಕರ್ಯವನ್ನು ಉಚಿತವಾಗಿ ಏರ್ಪಾಡು ಮಾಡಲಾಗಿದೆ ಹೆಚ್ಚಿನ ವಿವರಗಳಿಗೆ ಶ್ರೀಮತಿ ಟಿ ಸುನಂದಮ್ಮ ಸೇವಾದಳ ಮಹಿಳಾ ಶಿಬಿರದ ವ್ಯವಸ್ಥಾಪಕರು 'ಸ್ವರಾಜ್ಯ ಭವನ' ವಾಣಿವಿಲಾಸಮೊಹಲ್ಲಾ ಮೈಸೂರು ರವರಿಗೆ ಬರೆಯಿರಿ.

ಪತ್ರಿಕಾ ಕಾನೂನು

ಪಾಕಿಸ್ಥಾನವು ಒಂದು ಪತ್ರಿಕಾ ಕಾನೂನು ಮಾಡಿ ಪಾಕಿಸ್ಥಾನದಲ್ಲಿರುವ ಪತ್ರಿಕೆಗಳ ಮಾಲೀಕರು ಪಾಕಿಸ್ಥಾನಿಗಳಾಗಿರಬೇಕು. ಕಂಪೆನಿಗಳಲ್ಲಿ ಶೇ॥ ೭೫ ರಷ್ಟು ಪಾಕಿಸ್ಥಾನದವರ ಷೇರುಗಳಿರಬೇಕೆಂದು ತಿಳಿಸಿರುವರು.

ದೂರಪ್ರಾಚ್ಯಕ್ಕೆ ಮೈಸೂರಿನ ಆಟಗಾರರು

ಮೈಸೂರು ಬ್ಲೂಸ್ ಕ್ಯಾಪ್ಟನ್ ಶ್ರೀ ನಂಜುಂಡಯ್ಯನವರು ಆರ್ಯನ್ ಜಿಂಖಾನಾ ಕ್ಲಬ್ಬಿನ ಪರವಾಗಿ ದೂರಪ್ರಾಚ್ಯದಲ್ಲಿ ನಡೆಯುವ ಪ್ರದರ್ಶನ ಫುಟ್‌ಬಾಲ್ ಪಂದ್ಯಗಳಲ್ಲಿ ಭಾಗವಹಿಸಲು ಮೊನ್ನೆ ರಾತ್ರಿ ಮೈಸೂರಿನಿಂದ ಪ್ರಯಾಣ ಬೆಳಿಸಿದರು. ಇವರು ನಿನ್ನೆ ಬೆಂಗಳೂರನ್ನು ಬಿಟ್ಟು ಇಂದು ಮದ್ರಾಸನ್ನು ತಲುಪಿ ಏಪ್ರಿಲ್ ೨ನೇ ತಾರೀಖು 'ರಜೂಲಾ' ಎಂಬ ಹಡಗಿನಲ್ಲಿ ಸಿಂಗಪೂರಕ್ಕೆ ಪ್ರಯಾಣ ಮಾಡುವರು. ಮೊನ್ನೆರಾತ್ರಿ, ನೂರಾರು ಜನ ಫುಟ್‌ಬಾಲ್ ಅಭಿಮಾನಿಗಳು ರೈಲ್ವೆ ಸ್ಟೇಷನ್ನಿಗೆ ಬಂದು ಹಾರಾ ತುರಾಯಿಗಳನ್ನರ್ಪಿಸಿ ಶ್ರೀಯುತರಿಗೆ ಸುಖಪ್ರಯಾಣ ಕೋರಿದರು.

ಪ್ರಶಂಸೆ

ಕೊರಿಯಾ ಯುದ್ಧ ರಂಗದಲ್ಲಿ ಭಾರತ ಸೈನ್ಯದ ವೈದ್ಯ ಪಡೆಯವರು ಅತ್ಯುತ್ತಮ ಕಾರ್ಯವೆಸಗುತ್ತಲಿರುವುದಾಗಿ ರಣರಂಗಕ್ಕೆ ಭೇಟಿಯಿತ್ತ ಲೇಡಿ ಮೌಂಟ್‌ಬೇಟನ್‌ರವರು ಹೇಳಿರುವರು.

ಕಾರ್ಯಕಾರಿ ಸಮಿತಿಗೆ ರಾಜೀನಾಮೆ

ಸರ್ವೋದಯ ಕಾರ್ಯಕಲಾಪಗಳಲ್ಲಿ ಹೆಚ್ಚಿಗೆ ಸೇವೆಗೈಯಲು ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಶಂಕರಲಾಲ್‌ದೇವ್‌ರವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ರಾಜೀನಾಮೆ ಕೊಟ್ಟಿರುವರು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ,

ಪೇಟೆ ಧಾರಣೆ

ಮೈಸೂರು ತಾ॥ 31-3-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	10-8	12-0
ಹೊಂಗೆಬೀಜ	"	8-10	14-8
ಹುರುಳಿ	"	29-2	31-2
ಹೆಸರು	"	53-2	56 10
ಅವರೆ	"	45-14	47-2
ಮೆ. ಕಾಯಿ ಮಣಕ್ಕೆ		6-2	15-0
ಹುಣಸೇಹಣ್ಣು	"	2-7	3-6
ಸೀಗೆಕಾಯಿ	"	2-8	3-9
ತೆಂಗಿನಕಾಯಿ 1100ಕ್ಕೆ		139-0	171-0

ಚಿನ್ನ ಬೆಳ್ಳಿ ದರಗಳು

31-3-52	ರೂ.
ಸವರನ್	66-0
"	66-2
ಚಿನ್ನ ತೊಲ	91-12
" ಮೂಸ	90-4
ಬೆಳ್ಳಿ 100 ತೊಲ	157-0
" ತೊಲ	1-11

ವುಡ್ ಲ್ಯಾಂಡ್ಸ್

28—3—52 ರಿಂದ ಅಮೋಘ 2ನೇ ವಾರ

ಪ್ರತಿದಿನ ಮೂರು ಆಟಗಳು

ವರ್ಮಾ ಫಿಲ್ಮ್ಸ್‌ರವರ—

ಪರ್ ಬತ್ (ಹಿಂದಿ)

ಪಾತ್ರ:- ನೂತನ್, ಪ್ರೇಂನಾಥ್ ಕೆ. ಎನ್. ಸಿಂಗ್, ಉಲ್ಲಾಸ್.

ನ್ಯೂ ಅಪೇರ

೨೬-೩-೫೨ ರಿಂದ ಅಮೋಘಪ್ರಾರಂಭ

ಪಕ್ಷಿ ರಾಜರವರ—

* ಕನ್ನಿಕ * (ತಮಿಳು)

ಪಾತ್ರ—ಟಿ. ಇ. ವರದನ್, ಡಿ. ಬಾಲಸುಬ್ರಮಣ್ಯಂ, ಎನ್. ಎಸ್. ಕೃಷ್ಣನ್, ಎಂ. ಎಸ್. ಸರೋಜಿನಿ, ಎಂ. ಆರ್. ಸಂತಾನಲಕ್ಷ್ಮಿ, ಟಿ. ಎ. ಮಧುರಂ ಲಲಿತ-ಪದ್ಮಿನಿ.

ರಣಜಿತ್

೨೮-೩-೫೨ರಿಂದ ಅಮೋಘ ೩ನೇ ವಾರ

* ಸಾಖಿ *

ಪಾತ್ರ:- ಮಧುಬಾಲ, ಪ್ರೇಂನಾಥ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨—೪—೧೯೫೨ನೇ ಬುಧವಾರ [ಸಂಚಿಕೆ ೧೩೨

ರಾಜಾಜಿಯವರು ಸರ್ಕಾರ ರಚಿಸಲು ಒಪ್ಪಿಗೆಯಿತ್ತಿರುವರು

ಶಾಸನಾಂಗ ಮತ್ತು ಆಡಳಿತಾಂಗ ಪ್ರತ್ಯೇಕವಾಗಿರಬೇಕು

ಶಾಸನಸಭಾ ಸದಸ್ಯರಿಗೆ ರಾಜಾಜಿಯವರ ಹಿತೋಕ್ತಿ

ಶಾಸನಗಳನ್ನು ತಯಾರಿಸುವುದು ಶಾಸನ ಸಭಾ ಸದಸ್ಯರ ಕರ್ತವ್ಯ. ಅದನ್ನು ಜಾರಿಗೆ ತರುವ ಕರ್ತವ್ಯವು ಮಂತ್ರಿಗಳಿಗೂ ಅಧಿಕಾರವರ್ಗದವರಿಗೂ ಸೇರಿದುದು.

ಶಾಸನಾಂಗ ಆಡಳಿತಾಂಗ ಬೇರೆಯಿದ್ದರೆ ಮಾತ್ರ ನ್ಯಾಯ ದೊರೆಯುತ್ತದೆ-

ಶಾಸನಸಭಾ ಸದಸ್ಯರು ಅಧಿಕಾರವರ್ಗದವರ ಕಾರ್ಯಕಲಾಪಗಳಲ್ಲಿ ಪ್ರವೇಶಿಸಕೂಡದು. ಈಗಿನ ಪರಿಸ್ಥಿತಿಯಲ್ಲಿ ಎಲ್ಲಾ ಪಕ್ಷಗಳ ಜನರ ಸಹಕಾರವನ್ನು ನಾವು ಪಡೆದು ಬಹಳ ವಿವೇಚನೆಯಿಂದ ವರ್ತಿಸಬೇಕಾಗಿದೆಯೆಂದು ಮದ್ರಾಸ್ ಶಾಸನಸಭೆಯ ನೂತನ ನಾಯಕರಾದ ಶ್ರೀ ಸಿ. ರಾಜಗೋಪಾಲಚಾರಿಯವರು ಶಾಸನಸಭಾಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ ನಿನ್ನೆಯದಿನ ತಿಳಿಸಿದರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಯಾವ ಅಧಿಕಾರ ಲಾಲಸೆಯಿಂದ ತಾವು ನಾಯಕಸ್ಥಾನವನ್ನು ಒಪ್ಪಿಕೊಂಡಿಲ್ಲವೆಂದೂ ಯಾವರೀತಿಯಾದರೂ ದಾಕ್ಷಿಣ್ಯ, ಭೀತಿಗೊಳಪಟ್ಟು ಕರ್ತವ್ಯ ನಡೆಸಬೇಕಾಗಿಲ್ಲವೆಂದೂ ತಿಳಿಸಿದರು.

ಇತ್ತೀಚೆಗೆ ಈ ಪ್ರಾಂತ್ಯದಲ್ಲಿ ಕೋಮುವಾರು ಭಾವನೆ, ಪ್ರತ್ಯೇಕತಾ ಮನೋಭಾವನೆ ಹೆಚ್ಚಾಗಿದೆ ಅದನ್ನು ಬುಡಸಮೇತ ಕಿತ್ತುಹಾಕಬೇಕಾಗಿದೆಯೆಂದೂ ಹೇಳಿದರು.

ಶ್ರೀ ಟಿ ಪ್ರಕಾಶಂರವರೂ ತಾವೂ ಇಬ್ಬರೂ ಸಹೋದ್ಯೋಗಿಗಳಾಗಿ ಹಿಂದೆ ಕೆಲಸಮಾಡಿದ್ದೇವೆ ಈಗಲೂ ಅವರು ತಮ್ಮ ಸಹೋದ್ಯೋಗಿಯಾಗಲಿ ಎಂಬುದೇ ತಮ್ಮ ಆಶೆ. ಶ್ರೀ ಟಿ. ಪ್ರಕಾಶಂರವರು ವಿರೋಧಪಕ್ಷದಲ್ಲಿಯೇ ಉಳಿದರೂ ತಾವಿಬ್ಬರೂ ಸಹೋದ್ಯೋಗಿಗಳು. ಬ್ರಿಟಿಷ್ ಸರ್ಕಾರದಲ್ಲಿರುವಂತೆ ದೇಶದ ಆಡಳಿತದಲ್ಲಿ ವಿರೋಧಪಕ್ಷದ ಸಹಕಾರಬೇಕು. ಅವರು ಸಹಕರಿಸಲಿ ಎಂದು ರಾಜಾಜಿ ಹೇಳಿದರು.

ಸೂಚನೆ

ನಾಳೆ ಶ್ರೀರಾಮನವಮಿ ಪ್ರಯುಕ್ತ ಪತ್ರಿಕೆಯು ಪ್ರಕಟವಾಗುವುದಿಲ್ಲ.

—ವ್ಯವಸ್ಥಾಪಕ.

ಕನ್ನಡದ ಕೊಲೆಯನ್ನು ತಪ್ಪಿಸಿರಿ

ತಾ॥ ೩೦-೩-೫೨ರಲ್ಲಿ ಮೈಸೂರು ಸಂಸ್ಥಾನದ ನೂತನ ಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ಮೈಸೂರು ನಗರ ಪತ್ರಿಕೋದ್ಯೋಗಿಗಳ ಸಂಘಕ್ಕೆ ಆಗಮಿಸಿದ್ದಾಗ, ಸೇವಕ ಪತ್ರಿಕೆಯ ಸಂಪಾದಕರೂ, ಕನ್ನಡ ಟೈಪ್‌ರೈಟರ್ ಕರ್ತರೂ ಆದ ಶ್ರೀ ಕೆ. ಅನಂತಸುಬ್ಬರಾಯರು ಅವರಿಗೆ ಮೊಟ್ಟಮೊದಲನೆಯದಾಗಿ ಅರ್ಜಿಯೊಂದನ್ನು ಸಲ್ಲಿಸಿ 'ನಮ್ಮ ಕನ್ನಡಕ್ಕೆ ೨೦ ವರ್ಷಗಳಕಾಲ ಕಷ್ಟಪಟ್ಟು ಲಿಪಿ ಬದಲಾಯಿಸದೆ ಟೈಪ್‌ರೈಟರ್ ತಯಾರಿಸಿ ಕಾರ್ಯತಃ ಪ್ರಯೋಗದಲ್ಲಿ ಬೇಕಾದಷ್ಟು ತಂದಿದ್ದಾಗ್ಯೂ ಹಿಂದಿನ ಸರ್ಕಾರದವರು ಲಿಪಿ ಬದಲಾವಣೆಯ ಮನೋಭಾವದ ಕಮಿಟಿಯ ವರದಿಯನ್ನೂ ನಂಬಿಕೊಂಡು ಕಮಿಟಿ ಲಿಪಿ ಬದಲಾವಣೆಯ ಟೈಪ್‌ರೈಟರನ್ನು ತಯಾರಿಸಲು ಲಕ್ಷಾಂತರ ರೂ. ವೆಚ್ಚ ಮಾಡಲು ಅವಕಾಶವಿತ್ತಿರುವುದು ವ್ಯರ್ಥ ಮತ್ತು ಬಹಳ ಅನ್ಯಾಯವೆಂದೂ, ಇದರಿಂದ ಇಡೀ ಕನ್ನಡ ನಾಡಿನ ಎಲ್ಲ ಸಾಹಿತ್ಯ ಗ್ರಂಥ ಪತ್ರಿಕೆ ಪುಸ್ತಕಾದಿಗಳೆಲ್ಲಾ ನಾಶವಾಗುವುದೆಂದೂ ಮತ್ತು ನಾಡಿನ ಕೋಟ್ಯಾಂತರ ಜನರೂ, ಮಕ್ಕಳಿಂದ ಹಿಡಿದು ಮುದುಕರವರೆಗೂ ಹೊಸದಾಗಿ ಈಗ ಅಕ್ಷರ ಕಲಿಯುವಂಥ ಶಿಕ್ಷೆಯನ್ನು ಕೊಡಬಾರದೆಂದೂ ಮನವಿಮಾಡಿಕೊಂಡಿದ್ದಾರೆ.

ಮಂತ್ರಿಮಂಡಲದ ರಾಜೀನಾಮೆ

ಮದ್ರಾಸ್ ಮುಖ್ಯಮಂತ್ರಿ, ಶ್ರೀ ಕುಮಾರಸ್ವಾಮಿ ರಾಜಾರವರು ತಮ್ಮ ಮಧ್ಯವರ್ತಿ ಮಂತ್ರಿಮಂಡಲದ ರಾಜೀನಾಮೆಯನ್ನು ನಿನ್ನೆಯದಿನ ಗೌರ್ನರಿಗೆ ಒಪ್ಪಿಸಿದರು. ಹೊಸ ಮಂತ್ರಿಮಂಡಲ ರಚನೆಯಾಗುವವರೆಗೆ ಈ ಮಂತ್ರಿಮಂಡಲವೇ ಮುಂದುವರಿಸಬೇಕೆಂದು ಗೌರ್ನರ್ ಶ್ರೀ ರಾಜಾರವರಿಗೆ ತಿಳಿಸಿರುವರು.

ಆರ್ಥಿಕ ದಾಸ್ಯತ್ವ

ಪರದೇಶೀ ಸಹಾಯವು ಆರ್ಥಿಕ ದಾಸ್ಯತ್ವವನ್ನುಂಟುಮಾಡುತ್ತದೆಯೆಂದು ಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಜಯಪ್ರಕಾಶನಾರಾಯಣರವರು ಗೌಹತಿಯಲ್ಲಿ ಮಾತನಾಡುತ್ತಾ ಹೇಳಿರುವರು.

ಮಂತ್ರಿಗಳಿಗೆ ತಿಂಗಳಿಗೆ ೧೨೫೦ ರೂ. ಸಂಬಳ

ಹೈದರಾಬಾದಿನ ಮಂತ್ರಿಗಳಿಗೆ ೨೫೦ ರೂ. ಸಂಬಳ ಉಚಿತ ನಿವಾಸ, ಕಾರು ಒದಗಿಸಬೇಕೆಂದು ಶಾಸನಸಭೆಯ ಕಾಂಗ್ರೆಸ್ ಪಕ್ಷ ನಿರ್ಧರಿಸಿದೆ.

ಶಾಸನಸಭಾಸದಸ್ಯರಿಗೆ ೧೫೦ ರೂ. ಸಂಬಳ ಮತ್ತು ಸಭೆ ನಡೆಯುವಾಗ ೧೨-೮-೦ ಭತ್ಯ ಕೊಡಬೇಕೆಂದು ನಿರ್ಧರಿಸಿದೆ.

ಅಸಭ್ಯರೀತಿ ವರ್ತನೆ ಬಗ್ಗೆ ೧೦ ರೂ. ಜುಲ್ಮಾನೆ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದ ನಿವಾಸಿ ಶ್ರೀಮತಿ ಹೊನ್ನಮ್ಮ ಉರುಫ್ ರಾಜಮ್ಮ ಎಂಬುವರು ಜಟಕಾ ಗಾಡಿಯವನೊಬ್ಬನನ್ನು ಹಿಡಿದುಕೊಂಡು ಹೊಡೆದು, ಉಗುಳಿದ-ದಕ್ಕಾಗಿ ನಗರದ ನ್ಯಾಯಾಧೀಶರು ೧೦ ರೂ ಜುಲ್ಮಾನೆಯನ್ನು ವಿಧಿಸಿದ್ದಾರೆ.

ಡೈರೆಕ್ಟರುಗಳ ಚುನಾವಣೆ

ಮೈಸೂರು ಸಿಟಿ ಕೊ- ಆಪರೇಟೀವ್ ಬ್ಯಾಂಕ್ ಡೈರೆಕ್ಟರುಗಳ ಚುನಾವಣೆ ನಡೆದು ಈ ಕೆಳಗೆಕಂಡವರು ಚುನಾಯಿತರಾಗಿದ್ದಾರೆ.— ಶ್ರೀಗಳಾದ ಅಂಪ್ಪ ಉರುಫ್ ಚೌಡಯ್ಯ, ಡಿ ಬಿ ಕೃಷ್ಣಪ್ಪ, ಎ. ಕೃಷ್ಣಮೂರ್ತಿರಾವ್, ಟಿ. ಗುಂಡಪ್ಪ, ಜನಾರ್ಧನನಾಯ್ಡು, ಎಂ. ವಿ. ನಾರಾಯಣರಾವ್, ಡಬ್ಲ್ಯು ಹೆಚ್. ಥಿಯೋಬಾಲ್ಡ್, ಕೆ. ನಂದೀಬಸಪ್ಪ, ಕೆ. ಪಟ್ಟಾಭಿರಾವ್, ಎಂ. ಆರ್. ಸಿ. ಬಸಪ್ಪ ಡಾ॥ ಎ. ವಿ. ರಂಗರಾವ್, ಹೆಚ್. ರಾಮಣ್ಣ, ಎ. ವಿ. ಶ್ರೀಕಂಠಯ್ಯ, ಎ. ಕೆ ರಂಗರಾವ್, ಟಿ. ಸಿ. ಗೌಡ-

ನೂತನ ಅಧಿಕಾರವರ್ಗ

ನಗರದ ವಕೀಲರುಗಳ ಸಂಘದ ೪೫ನೇ ವಾರ್ಷಿಕಸಭೆಯು ನಡೆದು ಮುಂದಿನಸಾಲಿಗೆ ಶ್ರೀ ಹೆಚ್. ಸುಬ್ಬರಾವ್‌ರವರು ಅಧ್ಯಕ್ಷರಾಗಿಯೂ ಎಂ. ಆರ್. ನಾರಾಯಣಸ್ವಾಮಿಯವರು ಗೌರವಕಾರ್ಯದರ್ಶಿಗಳಾಗಿಯೂ, ಶ್ರೀ ಪಿ. ಚಿಕ್ಕಬೋರಯ್ಯನವರು ಜಂಟಿ ಕಾರ್ಯದರ್ಶಿಗಳಾಗಿಯೂ, ಚುನಾಯಿತರಾದರು.

ಹೊಸ ಮಂತ್ರಿಮಂಡಲ

ಇಂಡೋನೇಷಿಯಾದಲ್ಲಿ ಡಾ॥ ವಿಲಿಯೋಪ್‌ರವರ ನಾಯಕತ್ವದಲ್ಲಿ ಮಂತ್ರಿಮಂಡಲವನ್ನು ರಚಿಸಲಾಗಿದೆ.

ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ನಿನ್ನೆ ಮಧ್ಯಾನ್ಹ ಗೌರ್ನರ್ ಶ್ರೀ ಶ್ರೀಪ್ರಕಾಶರವರನ್ನು ಭೇಟಿ ಮಾಡಿ ಸುಮಾರು ಒಂದುಘಂಟೆಕಾಲ ಮಾತುಕತೆನಡೆಸಿದರು. ಪುನಃ ರಾಜಾಜಿಯವರು ಗೌರ್ನರನ್ನು ರಾತ್ರಿ ಭೇಟಿಮಾಡಿ ಹೊಸಮಂತ್ರಿ ಮಂಡಲ ರಚಿಸುವ ವಿಷಯದಲ್ಲಿ ಚರ್ಚೆನಡೆಸಿದರು.

ಶ್ರೀ ಸಿ. ರಾಜಗೋಪಾಲಚಾರಿಯವರು ಹೊಸಸರ್ಕಾರವನ್ನು ರಚಿಸಲು ಗೌರ್ನರರ ಆಹ್ವಾನವನ್ನು ಸ್ವೀಕರಿಸಿರುವರು. ತಮ್ಮ ಮಂತ್ರಿಮಂಡಲವನ್ನು ರಚಿಸಲು ಕಾಲಾವಕಾಶವನ್ನು ಕೇಳಿರುವುದಾಗಿ ಗೊತ್ತಾಗಿದೆ.

ಚುನಾವಣೆಗಳು

ಉತ್ತರ ಪ್ರದೇಶದಲ್ಲಿ ಮತ್ತು ಬಿಹಾರಿನಲ್ಲಿ ಹಿರಿಯ ಶಾಸನ ಸಭೆಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಿದೆ. ಉತ್ತರ ಪ್ರದೇಶದಲ್ಲಿ ೨೪ ಸ್ಥಾನಗಳಲ್ಲಿ ೨೨ ಸ್ಥಾನಗಳನ್ನೂ, ಬಿಹಾರಿನಲ್ಲಿ ೨೪ ಸ್ಥಾನಗಳಲ್ಲಿ ೧೭ ಸ್ಥಾನಗಳನ್ನೂ ಗಳಿಸಿದೆ.

ಗಡಿನಾಡು ಗಾಂಧಿ ಆಸ್ಪತ್ರೆಗೆ

ಪಾಕಿಸ್ತಾನದಲ್ಲಿ ಜೈಲುವಾಸವನ್ನನುಭವಿಸುತ್ತಲಿರುವ ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ದೇಹಸ್ಥಿತಿಯು ಕೆಟ್ಟಿರುವುದರಿಂದ ಜೈಲಿನಿಂದ ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆಯೆಂದು ಹೇಳಲಾಗಿದೆ

ಆರ್ಥಿಕ ಸಮ್ಮೇಳನ

ಮುಂದಿನವಾರ ಮಾಸ್ಕೊವಲ್ಲಿ ನಡೆಯುವ ಅಂತರ್ರಾಷ್ಟ್ರೀಯ ಆರ್ಥಿಕಸಮ್ಮೇಳನಕ್ಕೆ ಭಾರತದ ಪರವಾಗಿ ಡಾ॥ ಜೆ. ಸಿ. ಕುಮಾರಪ್ಪನವರಲ್ಲದೆ ಕೆಲವುಮಂದಿ ಹೊರಟಿದ್ದಾರೆ. ಇವರಲ್ಲಿ ಕೇಂದ್ರ ಸರಕಾರದ ಆರ್ಥಿಕ ಸಲಹೆಗಾರರಾದ ಡಾ॥ ಜ್ಞಾನಚಂದ್, ಗುಜರಾತಿನ ನಾಯಕರಾದ ಶ್ರೀ ಇಂದುಲಾಲ್ ಯಾಜ್ಞಿಕ್, ಪ್ರೊ॥ ಡಿ. ಪಿ. ಮುಖರ್ಜಿಯವರು ಇದಾರೆ.

ನೆಹರೂರೊಡನೆ ಭೇಟಿ

ಭಾರತಕ್ಕೆ ಆಗಮಿಸಿರುವ ಬ್ರಿಟಿಷ್ ಪಾರ್ಲಿಮೆಂಟಿನ ಉಪಕಾರ್ಯದರ್ಶಿ ಲಾರ್ಡ್ ರೀಡಿಂಗ್‌ರವರು ನಿನ್ನೆ ಯದಿನ ಪಂ॥ ನೆಹರೂರವರೊಡನೆ ಮತ್ತು ವಿದೇಶಾಂಗಶಾಖಾ ಸೆಕ್ರೆಟರಿ ಜನರಲ್ ಶ್ರೀ ಗಿರಿಜಾಶಂಕರ ಬಾಜಪೈರವರನ್ನೂ ಭೇಟಿ ಮಾಡಿದ್ದರು.

ಪೂರ್ಣ ರಾಷ್ಟ್ರೀಕರಣ ಅಸಾಧ್ಯ

ಬೆಂಗಳೂರು ಮಾ ೩೧

'ಎಂತಹ ಕ್ರಾಂತಿಕಾರಕ ಸರ್ಕಾರವೇ ಬರಲಿ ಎಲ್ಲ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡುವುದು ಅನೇಕ ವರ್ಷಗಳ ನಂತರವೂ ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಿ' ಎಂದು ನಿನ್ನೆ ತಾನೇ ಕೈಗಾರಿಕಾ ಸಚಿವ ಪದವಿಯಿಂದ ನಿವೃತ್ತರಾದ ಶ್ರೀ ಹೆಚ್ ಸಿ ದಾಸಪ್ಪನವರು ಈ ದಿನ ಕೈಗಾರಿಕೋದ್ಯಮಿಗಳಿಗೆ ತಿಳಿಸಿದರು.

ಮಾಜಿ ಮುಖ್ಯಮಂತ್ರಿ ವಿಚಾರಣಾರಂಭ

ಸಿಂಧ್ ಪ್ರಾಂತ್ಯದ ಮಾಜಿ ಮುಖ್ಯಮಂತ್ರಿ ಎಂ ಎ ಖುರೂರವರ ಮೇಲೆ ಲಂಚ-ಋಷುವತ್ತುಗಳ ಆಪಾದನೆ ವಿಷಯದಲ್ಲಿ ಹೂಡಿರುವ ಮೊಕದ್ದಮೆಯ ವಿಚಾರಣೆ ವಿಶೇಷ ನ್ಯಾಯಾಲಯದಲ್ಲಿ ಪ್ರಾರಂಭವಾಗಿದೆ.

೧೫ ಮೈಲಿಗಳೆತ್ತರದ ವಿಮಾನವನ್ನು ಉರುಳಿಸಲು ಯಂತ್ರ

೧೫ ಮೈಲಿಗಳೆತ್ತರದಲ್ಲಿ ಓಡಾಡುವ ಶತ್ರು ವಿಮಾನಗಳನ್ನು ಹೊಡೆದು ಕೆಡವಬಲ್ಲ ನಿರ್ದೇಶಿತಾಸ್ತ್ರಗಳನ್ನು [ಗೈಡೆಡ್ ಮಿಸೈಲ್ಸ್] ಅಮೇರಿಕದಲ್ಲಿ ಕಂಡು ಹಿಡಿಯಲಾಗುತ್ತಿದೆಯೆಂದು ತಿಳಿಯಲಾಗಿದೆ.

ವಾರ್ಷಿಕೋತ್ಸವ

ಭಾರತದ ವಿಮಾನ ದಳದ ೧೯ನೇ ವಾರ್ಷಿಕೋತ್ಸವವು ಈ ದಿನ ಭಾರತ ಮುಖ್ಯವಾದ ಪಟ್ಟಣಗಳಾದ ದೆಹಲಿ, ಬೊಂಬಾಯಿ, ಮದ್ರಾಸ್, ಕಲ್ಕತ್ತಾ ಮುಂತಾದೆಡೆ ನಡೆದುವು.

ಉಪನ್ಯಾಸ ಮಾಲೆ

ಮೈಸೂರು ಥಿಯಾಸಾಫಿಕಲ್ ಸೊಸೈಟಿ ಆಶ್ರಯದಲ್ಲಿ ನರಸಿಂಹರಾಜ ಮೊಹಲ್ಲಾದಲ್ಲಿರುವ ಶ್ರೀ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ಶ್ರೀ ಸು ಕೃಷ್ಣಮೂರ್ತಿ ಮತ್ತು ಶ್ರೀಮತಿ ವಿ ರುಕ್ಮಿಣಿಯವರಿಂದ ಇದೇ ಮಾಹೆ ೨ನೇ ತಾ॥ ೬-೩೦ಕ್ಕೆ ಸಾಹಿತ್ಯ ಮತ್ತು ವಿಜ್ಞಾನ ಇಂದಿನ ಸಮಸ್ಯೆಗಳು, ೩ನೇ ತಾ॥ ೬-೩೦ಕ್ಕೆ ಸೂಕ್ಷ್ಮ ಲೋಕಗಳು ಮತ್ತು ಸೂಕ್ಷ್ಮ ದೇಹಗಳು ಮತಗಳ ಸಾರ, ೫ನೇ ತಾ॥ ೬-೩೦ಕ್ಕೆ ಮರಣಾನಂತರ ಸ್ಥಿತಿ ಥಿಯಸಾಫಿಕಲ್ ಸೊಸೈಟಿ, ೫ನೇ ತಾ॥ ೬-೩೦ಕ್ಕೆ ಸ್ತ್ರೀಪುರಾಣ ಸತಿ ಸಾವಿತ್ರಿ ಎಂಬ ಉಪನ್ಯಾಸಗಳು ನಡೆಯುತ್ತವೆ.

ಮುಸ್ಲಿಂ ಸಮ್ಮೇಳನ

ಇದೇ ೧೫ನೇ ತಾರೀಖು ಪಾಕಿಸ್ತಾನವು ಏರ್ಪಡಿಸಿರುವ ಮುಸ್ಲಿಂ ಸಮ್ಮೇಳನಕ್ಕೆ ಮಧ್ಯಪ್ರಾಚ್ಯದ ನಾನಾ ಮುಸ್ಲಿಂ ರಾಷ್ಟ್ರಗಳಿಗೆ ಆಹ್ವಾನವನ್ನು ನೀಡಲಾಗಿದೆ. ಈ ಸಮ್ಮೇಳನವು ರಾಜಕೀಯ ಸಮ್ಮೇಳನವೆನಿಸಿಕೊಂಡು ಜಾತ್ಯಾಧಾರದ ಮೇಲೆ ನಡೆಯುವುದಾದರೆ ಹೊರರಾಷ್ಟ್ರಗಳು ಈ ಸಮ್ಮೇಳನದಲ್ಲಿ ಭಾಗವಹಿಸುವ ವಿಷಯದಲ್ಲಿ ಜಿಜ್ಞಾಸೆ ಹುಟ್ಟಿದೆ. ಈ ಸಮ್ಮೇಳನವನ್ನು ಕರೆದಿರುವ ಉದ್ದೇಶ, ಕಾರ್ಯಕ್ರಮ ಮುಂತಾದುವನ್ನೆಲ್ಲಾ ಪೂರ್ವಭಾವಿಯಾಗಿ ತಮಗೆ ತಿಳಿಸಬೇಕೆಂದು ಮಧ್ಯಪ್ರಾಚ್ಯ ರಾಜ್ಯಗಳು ಪಾಕಿಸ್ತಾನವನ್ನು ಕೇಳಿರುವುದಾಗಿ ಹೇಳಲಾಗಿದೆ.

ಪಂಚವಾರ್ಷಿಕ ಯೋಜನೆ

ಈಗ ಭಾರತ ಸರ್ಕಾರವು ಕೈಗೊಂಡಿರುವ ಪಂಚವಾರ್ಷಿಕ ಯೋಜನೆಯನ್ನು ಕೊಲಂಬೋ ಯೋಜನೆಗೆ ಸರಿಹೊಂದಿಸಲು ೬ ವರ್ಷದ ಯೋಜನೆಯನ್ನಾಗಿ ಬದಲಾಯಿಸಲಾಗಿದೆ. ೧೭೯೩ ಕೋಟಿ ರೂಪಾಯಿಗಳ ಈ ಯೋಜನೆಯ ವೆಚ್ಚವು ಈಗ ೫೦೭ ಕೋಟಿ ರೂಪಾಯಿಗಳಿಂದ ಹೆಚ್ಚಿದೆ. ಹೊಸ ಯೋಜನೆ ಪ್ರಕಾರ ಅಂದಾಜು ವೆಚ್ಚವು ೨೩೦೦ ಕೋಟಿ ರೂಪಾಯಿಗಳು.

ಶ್ರೀ ಮಣಿಲಾಲ್ ಗಾಂಧಿ

ದಕ್ಷಿಣ ಆಫ್ರಿಕಾದಲ್ಲಿ ೨೧ ದಿನ ಉಪವಾಸವನ್ನು ನಡೆಸಿದ ಶ್ರೀ ಮಣಿಲಾಲ್ ಗಾಂಧಿಯವರ ದೇಹಸ್ಥಿತಿ ಈಗ ಉತ್ತಮವಾಗುತ್ತಲಿದೆ. ಅವರ ನಿಶ್ಶಕ್ತಿಯು ಕ್ರಮೇಣ ಕಡಮೆಯಾಗುತ್ತಿರುವುದಾಗಿ ವರದಿಯಾಗಿದೆ.

ಹೈಕೋರ್ಟಿಗೆ ರಜಾ

ಬೇಸಿಗೆ ರಜಾ ನಿಮಿತ್ತ ಮೈಸೂರು ಹೈಕೋರ್ಟು ಮಾರ್ಚಿ ೩೧ನೇ ತಾರೀಖಿನಿಂದ ಮೇ ೩೧ನೇ ತಾರೀಖಿನವರೆಗೆ ಮುಚ್ಚಲ್ಪಡುವುದು. ನ್ಯಾಯಮೂರ್ತಿ ಶ್ರೀ ಎನ್. ಬಾಲಕೃಷ್ಣಯ್ಯನವರು ಮಾರ್ಚಿ ೩೧ರಿಂದ ಏಪ್ರಿಲ್ ೩೦ರವರೆಗೆ ಬೇಸಿಗೆ ರಜದ ನ್ಯಾಯಾಧೀಶರಾಗಿಯೂ, ನ್ಯಾಯಮೂರ್ತಿ ಶ್ರೀ ಬಿ. ವಾಸುದೇವಮೂರ್ತಿಯವರು ಮೇ ೧ನೇ ತಾರೀಖಿನಿಂದ ಮೇ ೩೧ರವರೆಗೆ ಬೇಸಿಗೆ ರಜದ ನ್ಯಾಯಾಧೀಶರಾಗಿಯೂ ಇರುವರು.

* ಮಾಸ್ಕೋದಲ್ಲಿ ನಡೆಯುವ ವಿಶ್ವ ಆರ್ಥಿಕ ಸಮ್ಮೇಳನದಲ್ಲಿ ಭಾಗವಹಿಸಲು ೨೦ ಮಂದಿ ಬ್ರಿಟಿಷ್ ಪ್ರತಿನಿಧಿಗಳು ಮಾಸ್ಕೋವಿಗೆ ಪ್ರಯಾಣ ಮಾಡಿರುವರು.

ಚಲಿಸುವ ಅರಮನೆ

ಸಾದಿ ಅರೇಬಿಯದ ಇಬ್ನ್ ಸಾಉದ್ ದೊರೆಗಾಗಿ ನಿರ್ಮಿಸಲಾಗಿರುವ ಅತ್ಯಂತ ಸುಂದರವಾದ ಚಲಿಸುವ ಅರಮನೆಯು ಈಗ ಸಾದಿ ಅರೇಬಿಯಕ್ಕೆ ರವಾನೆಗೆ ಬಹಳ ಮಟ್ಟಿಗೆ ಸಿದ್ಧವಾಗಿದೆ.

ದೊಡ್ಡ ಆಕೃತಿಯ ಈ ಚಾಲನೆ ಅರಮನೆಯ ನಿರ್ಮಾಣಕ್ಕೆ ಅನೇಕ ತಿಂಗಳು ಹಿಡಿಯಿತು.

ಎರ ಕಂಡೀಷನ್ನಿನಿಂದ ಕೂಡಿದ ಈ ವಾಸದ ಗೃಹ ಒಂದು ಸ್ನಾನದ ಕೊಠಡಿ, ಕಂದುಬಣ್ಣದ ಅಲಂಕೃತವಾದ ಮಲಗುವ ಮನೆ ಮತ್ತು ಸಿಂಹಾಸನದ ಕೊಠಡಿಯಲ್ಲಿ ಒಟ್ಟಿಗೆ ೧೨ ಜನರು ಕೂಡುವಷ್ಟು ಸ್ಥಳಾವಕಾಶವಿದೆ. ಸಿಂಹಾಸನ ಕೊಠಡಿ ಮತ್ತು ಇತರೆ ಅರಮನೆಗಳಿಗಿಂತ ಒಂದು ಅಡಿ ಎತ್ತರವಾಗಿದೆ. ಇದರ ಮೇಲೆ ಹ್ಯಾಂಡ್ ಲೂಮ್ ಒಟ್ಟಿ ಮತ್ತು ಸ್ವರ್ಣದಾರದಿಂದ ಅಲಂಕರಿಸಲಾಗಿದೆ.

ಈ ಚಲನ ಅರಮನೆಯು ೪೨ ಅಡಿ ಉದ್ದ ೯ ಅಡಿ ಎತ್ತರದಿಂದ ಕೂಡಿದೆ. ಇದಕ್ಕೆ ತನ್ನದೇ ಆದ ಪವರ್ ಜನರೇಟರ್ ಇದೆ. ಇದರ ಬೆಲೆ ಎಷ್ಟೆಂಬುದನ್ನು ಹೊರಗೆಡಹಿಲ್ಲ.

ಗಾಂಧೀಜಿಯವರ ಮೇಲೆ ನಿಜಾಮರ ಕವನ

ಹೈದರಾಬಾದಿನ ನಿಜಾಮರು ಮಹಾತ್ಮಾ ಗಾಂಧೀಜಿಯವರ ಮೇಲೆ ಪರ್ಶಿಯಾ ಭಾಷೆಯಲ್ಲಿ ಪದ್ಯವೊಂದನ್ನು ರಚಿಸಿದ್ದಾರೆ.

ಮಂಡ್ಯಕ್ಕೆ ಟೆಲಿಫೋನ್ ವ್ಯವಸ್ಥೆ

ಮಂಡ್ಯಕ್ಕೆ ಬರುವ ತಿಂಗಳಿಂದ ಅಂಚೆ ಇಲಾಖೆಯವರು ಟ್ರಂಕ್ ಟೆಲಿಫೋನ್ ವ್ಯವಸ್ಥೆ ಕೊಡಲಿದ್ದಾರೆ.

ರೈಲ್ವೆ ಕಾರ್ಮಿಕರಿಗೆ ಒಂದೇಮಟ್ಟದ ಸಂಬಳ

ದೇಶದಾದ್ಯಂತ ರೈಲ್ವೆ ಕಾರ್ಮಿಕರ ಸಂಬಳಗಳನ್ನು ಒಂದೇಮಟ್ಟಕ್ಕೆ ತರಬೇಕೆಂಬುದಾಗಿ ಎಲ್ಲಾ ರೈಲ್ವೆಗಳ ಜನರಲ್ ಮ್ಯಾನೇಜರ್‌ಗಳಿಗೂ ಕೇಂದ್ರ ಸರ್ಕಾರ ನಿರ್ದೇಶನ ಕೊಟ್ಟಿದೆಯೆಂದು ತಿಳಿದು ಬಂದಿದೆ.

ವಿದ್ಯಾಭ್ಯಾಸಕ್ರಮ ಬದಲಾವಣೆಯಾಗಬೇಕು

ಭಾರತದಲ್ಲಿ ವಿದ್ಯಾಭ್ಯಾಸಕ್ರಮವು ಮಾರ್ಪಡಬೇಕು. ಯುವಕರಿಗೆ ನಾನಾ ಭಾಗಗಳಲ್ಲಿ ಶಿಕ್ಷಣ ದೊರೆಯುವಂತಾಗಬೇಕೆಂದು ಭಾರತಕ್ಕೆ ಭೇಟಿಯಿತ್ತ ಶ್ರೀಮತಿ ರೂಸ್‌ವೆಲ್ಟರವರು ಹೇಳಿರುವರು.

ಹಿರಿಯ ಶಾಸನಸಭೆಗೆ

ಮದ್ರಾಸ್ ಹಿರಿಯ ಶಾಸನಸಭೆಗೆ ಮದ್ರಾಸ್ ಗವರ್ನರ್‌ರವರು ಮಾಜಿ ಮುಖ್ಯಮಂತ್ರಿ ಶ್ರೀ ಓಮಂದೂರ್ ರಾಮಸ್ವಾಮಿ ರೆಡ್ಡಿಯಾರ್‌ರವರನ್ನೂ ನಾಮಕರಣ ಮಾಡಿರುವರು.

ಪೇಟೆ ಧಾರಣೆ

ಮೈಸೂರು ತಾ॥ 1-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಕ್ಕೆ	11-0	16-4
ಹೊಂಗೆಬೀಜ	,,	12-14	14-4
ಹುರುಳಿ	,,	29-4	32-0
ಹೆಸರು	,,	44-2	57 0
ಅವರೆ	,,	46-0	47-12
ಮೆ. ಕಾಯಿ ಮಣಕ್ಕೆ		11-4	15-6
ಹುಣಸೇಹಣ್ಣು	,,	1-14	3-9
ಸೀಗೆಕಾಯಿ	,,	2-10	3-9

ಚಿನ್ನ ಬೆಳ್ಳಿ ದರಗಳು

1-4-52	ರೂ.
ಸವರನ್	66-4
,,	66-6
ಚಿನ್ನ ತೊಲ	90-0
,, ಮೂಸ	88-4
ಬೆಳ್ಳಿ 100 ತೊಲ	154-8
,, ತೊಲ	1-10

ವುಡ್‌ಲ್ಯಾಂಡ್ಸ್

28—3—52 ರಿಂದ ಅಮೋಘ 2ನೇ ವಾರ

ಪ್ರತಿದಿನ ಮೂರು ಆಟಗಳು

ವರ್ಮಾ ಫಿಲಿಂಸ್‌ರವರ—

ಪರ್ ಬತ್ (ಹಿಂದಿ)

ಪಾತ್ರ:- ನೂತನ್, ಪ್ರೇಂನಾಥ್ ಕೆ. ಎನ್. ಸಿಂಗ್, ಉಲ್ಲಾಸ್.

ನ್ಯೂ ಅಪೇರ

೨೭—೩—೫೨ ರಿಂದ ಅಮೋಘಪ್ರಾರಂಭ

ಪಕ್ಷಿರಾಜರವರ—

* ಕನ್ನಿಕ * (ತಮಿಳು)

ಪಾತ್ರ—ಟಿ. ಇ. ವರದನ್, ಡಿ. ಬಾಲಸುಬ್ರಮಣ್ಯಂ, ಎನ್. ಎಸ್. ಕೃಷ್ಣನ್, ಎಂ. ಎಸ್. ಸರೋಜಿನಿ, ಎಂ. ಆರ್. ಸಂತಾನಲಕ್ಷ್ಮಿ, ಟಿ. ಎ. ಮಧುರಂ ಲಲಿತ-ಪದ್ಮಿನಿ.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು.

ಫೋನ್ ೫೭೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೪—೪—೧೯೫೨ನೇ ಶುಕ್ರವಾರ [ಸಂಚಿಕೆ ೧೮೩

ಮೈಸೂರಿನಲ್ಲಿ ಹೊಸ ಮಂತ್ರಿಮಂಡಲ

ನೂತನ ಸಚಿವರು ಈದಿನ ಮಧ್ಯಾಹ್ನ ಪ್ರಮಾಣ ಸ್ವೀಕಾರ ಮಾಡುವರು

ಶ್ರೀಗಳಾದ ಟಿ. ಸಿದ್ದಲಿಂಗಯ್ಯ, ಎ. ಜಿ. ರಾಮಚಂದ್ರರಾವ್, ಟಿ. ಚನ್ನಯ್ಯ, ಕಡಿದಾಳ್ ಮಂಜಪ್ಪ. ಮತ್ತು ದಾವಣಗೆರೆಯ ಸಿದ್ದವೀರಪ್ಪನವರು ನೂತನಮಂತ್ರಿಗಳು

ಬೆಂಗಳೂರು ಏ ೪

ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಮ್ಮ ನೂತನ ಮಂತ್ರಿಮಂಡಲವನ್ನು ರಚಿಸಿ ನಿನ್ನೆ ಸಂಜೆ ಪ್ರಕಟಿಸಿರುವರು.

ಹೊಸ ಮಂತ್ರಿಮಂಡಲದಲ್ಲಿ ಮುಖ್ಯಮಂತ್ರಿಗಳೂ ಸೇರಿ ೬ ಜನ ಮಂತ್ರಿಗಳಿರುವರು.

ಹೊಸ ಮಂತ್ರಿಗಳು— ಶ್ರೀಗಳಾದ ಟಿ. ಸಿದ್ದಲಿಂಗಯ್ಯ, ಎ. ಜಿ. ರಾಮಚಂದ್ರರಾವ್, ಟಿ ಚನ್ನಯ್ಯ, ಕಡಿದಾಳ್ ಮಂಜಪ್ಪ ಮತ್ತು ಸಿದ್ದವೀರಪ್ಪ.

ಉಪಮಂತ್ರಿಗಳ ನೇಮಕವು ಇನ್ನೂ ಎರಡು ವಾರಗಳಾದಮೇಲೆ ಆಗುವುದೆಂದು ಗೊತ್ತಾಗಿದೆ.

ಈದಿನ ಮಧ್ಯಾಹ್ನ ೧-೩೦ ಗಂಟೆಗೆ ಅರಮನೆಯಲ್ಲಿ ಶ್ರೀ ಮನ್ಮಹಾರಾಜರ ಸಮ್ಮುಖದಲ್ಲಿ ಹೊಸ ಮಂತ್ರಿಗಳು ಪ್ರಮಾಣವಚನವನ್ನು ಸ್ವೀಕರಿಸುವರು.

ಶ್ರೀ ಕೆ ಹನುಮಂತಯ್ಯನವರು ಬೆಳಿಗ್ಗೆ ೧೦ ಗಂಟೆಗೆ ಶ್ರೀಮನ್ಮಹಾರಾಜರನ್ನು ಭೇಟಿಮಾಡಿ ಹೊಸ ಮಂತ್ರಿಗಳ ಪಟ್ಟಿಯನ್ನು ಒಪ್ಪಿಸುವರು.

ನಿನ್ನೆ ಬೆಳಗಿನಿಂದಲೂ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕಾಂಗ್ರೆಸ್ಸಿನ ನಾಯಕರಾದ ಶ್ರೀಗಳಾದ ನಿಜಲಿಂಗಪ್ಪ, ಕೆ. ಸಿ. ರೆಡ್ಡಿ, ಭಾಷ್ಯಂ, ಎಸ್. ಚನ್ನಯ್ಯ ಮುಂತಾದವರೊಡನೆ ಸಮಾಲೋಚನೆ ನಡೆಸಿ ಕೊನೆಗೆ ತಮ್ಮ ನೂತನ ಮಂತ್ರಿಮಂಡಲ ಸದಸ್ಯರನ್ನು ನಿರ್ಧರಿಸಿದರು.

ನೂತನ ಸಚಿವರುಗಳ ಹೆಸರನ್ನು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸುತ್ತಾ, ಶ್ರೀ ಕೆ. ಹನುಮಂತಯ್ಯನವರು ಆಡಳಿತ, ಅನುಭವ, ದಕ್ಷತೆ, ಕಾರ್ಯನಿಷ್ಠೆ ಮುಂತಾದುವನ್ನೂ ಜಿಲ್ಲಾ ಪ್ರಾತಿನಿಧ್ಯವೆಲ್ಲಾ ಗಮನಕ್ಕೆ ತೆಗೆದುಕೊಂಡು ಈ ಆಯ್ಕೆ ಮಾಡಿರುವುದಾಗಿ ತಿಳಿಸಿದರು. ಉಪಸಚಿವರುಗಳ ನೇಮಕ ವಿಷಯವಾಗಿ ಮಾತನಾಡುತ್ತಾ, ಇನ್ನು ೧೫ ದಿನಗಳೊಳಗಾಗಿ ಮೂವರು ಉಪಸಚಿವರನ್ನು ನೇಮಿಸಲಾಗುವುದೆಂದು ತಿಳಿಸಿದರು.

ಈ ನಡುವೆ ಮುಖ್ಯಮಂತ್ರಿಗಳು ಸರ್ಕಾರ ಸೆಕ್ರೆಟರಿಯೇಟ್‌ಗೆ ತಮ್ಮ ಪ್ರಥಮ ಭೇಟಿಯನ್ನಿತ್ತರು. ಪ್ರಧಾನ ಕಾರ್ಯದರ್ಶಿ ಶ್ರೀ ಇ. ಎ. ಗಣಪತಿಅಯ್ಯರ್‌ರವರು ಇವರನ್ನು ಸ್ವಾಗತಿಸಿ ನಾನಾ ಇಲಾಖಾ ಕಾರ್ಯದರ್ಶಿಗಳನ್ನೂ ಇತರ ಮುಖ್ಯಾಧಿಕಾರಿಗಳನ್ನೂ ಪರಿಚಯಮಾಡಿಕೊಟ್ಟು ಹೊಸ ಮಂತ್ರಿಮಂಡಲಕ್ಕೆ ತಮ್ಮಗಳ ಪೂರ್ಣ ಸಹಕಾರ ನೀಡುವುದಾಗಿ ಭರವಸೆಯಿತ್ತರು. ಅದಕ್ಕೆ ಮುಖ್ಯಮಂತ್ರಿಗಳು ವಂದಿಸಿದರು.

ಮುಖ್ಯಮಂತ್ರಿಗಳ ಕಾರ್ಯದರ್ಶಿ

ಬೆಂಗಳೂರು ಏ ೩

ಆಹಾರ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರಾಗಿರುವ ಶ್ರೀ ಸಿ ರಾಮಸ್ವಾಮಿಯವರನ್ನು ಮುಖ್ಯಮಂತ್ರಿಗಳ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆಯೆಂದು ಗೊತ್ತಾಗಿದೆ.

ಎಸ್. ಎಸ್. ಎಲ್. ಸಿ. ಪರೀಕ್ಷೆಗೆ

ಬೆಂಗಳೂರು ಏ ೩

ಮೈಸೂರು ಸಂಸ್ಥಾನದಲ್ಲಿ ೧೯೫೨ನೇ ಎಸ್ ಎಸ್ ಎಲ್ ಸಿ ಪರೀಕ್ಷೆಗೆ ೧೯೬೩೨ ಅಭ್ಯರ್ಥಿಗಳು ಕುಳಿತಿದ್ದಾರೆ. ೨೦೦೦ಕ್ಕಿಂತ ಹೆಚ್ಚಾಗಿ ವಿದ್ಯಾರ್ಥಿನಿಯರಿರುವರು.

ಏಪ್ರಿಲ್ ೧೬ ರಿಂದ ಪ್ರಾರಂಭವಾಗಲಿರುವ ಎಂ ಎಸ್ ಮತ್ತು ಅಪ್ಪರ್‌ಪ್ರೈಮರಿ ಪರೀಕ್ಷೆಗಳಿಗೆ ೪೩೮೦೨ ಅಭ್ಯರ್ಥಿಗಳಿರುವರು.

ಸರ್ಕಾರಿ ಆಜ್ಞೆ

ಬೆಂಗಳೂರು ಏ ೩

ರಜಾದ ಮೇಲಿರುವ ಎಕ್ಸಿಕ್ಯುಟಿವ್ ಇಂಜನಿಯರ್ ಶ್ರೀ ಹೆಚ್ ಸಿ ಕೆ ಭಟ್ಟರವರನ್ನು ಸೂಪರಿಂಟೆಂಡೆಂಟ್ ಇಂಜನಿಯರಾಗಿ ಬಡ್ತಿಕೊಟ್ಟು ಡೆಪ್ಯುಟಿ ಚೀಫ್ ಇಂಜನಿಯರಾಗಿ ನೇಮಿಸಲಾಗಿದೆ.

ಮಾಜಿ ಹಣಕಾಸಿನ ಸಚಿವರ ಪರ್ಸನಲ್ ಅಸಿಸ್ಟೆಂಟ್‌ರಾಗಿದ್ದ ಶ್ರೀ ಎ ರಾಮಪ್ಪನವರನ್ನು ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿನ ಅಧ್ಯಕ್ಷರ ಪರ್ಸನಲ್ ಅಸಿಸ್ಟೆಂಟರಾಗಿ ನೇಮಿಸಲಾಗಿದೆ.

ಕೇಂದ್ರದ ಸಹಾಯ

ಬೆಂಗಳೂರು ಏ ೩

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಅಭಿವೃದ್ಧಿ ಕಾರ್ಯಗಳಿಗಾಗಿ ಭಾರತ ಸರ್ಕಾರವು ೫೧-೫೨ ನೇ ಸಾಲಿಗೆ ೪೦ ಲಕ್ಷ ರೂ ಗಳನ್ನು ಕೊಟ್ಟಿದೆ. ೫೨-೫೩ನೇ ಸಾಲಿಗೆ ಸಹಾಯಕೊಡುವ ನಿರೀಕ್ಷೆಯಿದೆಯೆಂದು ಸರ್ಕಾರ ಪ್ರಕಟಣೆಯೊಂದು ತಿಳಿಸುತ್ತದೆ.

ನೆಹರೂ ಸಿಮ್ಲಾದಲ್ಲಿ

ಪ್ರಧಾನಿ ನೆಹರೂರವರು ನಿನ್ನೆಯದಿನ ದೆಹಲಿಯಿಂದ ಸಿಮ್ಲಾಕ್ಕೆ ತೆರಳಿರುವರು. ಅಲ್ಲಿ ಅವರು ಭಾನುವಾರದವರೆಗೆ ಇರುವರೆಂದು ಗೊತ್ತಾಗಿದೆ.

ಮುಖ್ಯಮಂತ್ರಿಗಳ ಅಧಿಕೃತನಿವಾಸ

ಮುಖ್ಯಮಂತ್ರಿ, ಶ್ರೀ ಕೆ ಹನುಮಂತಯ್ಯನವರು ಸದ್ಯದಲ್ಲಿ ಕಾರ್ಲ್‌ಟನ್ ಭವನಕ್ಕೆ ಹೋಗುವುದಿಲ್ಲ. ಅವರ ಅಧಿಕೃತ ನಿವಾಸವು ಸಿಲ್ವರ್‌ಜ್ಯೂಬಿಲಿ ಪಾರ್ಕ್‌ರಸ್ತೆಯಲ್ಲಿಯೇ ಇರುತ್ತದೆ.

ಶ್ರೀ ರಂಗಾರೊಡನೆ ಸಮಾಲೋಚನೆ

ಮದರಾಸಿನ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಸಿ ರಾಜಗೋಪಾಲಾಚಾರಿಯವರು ನಿನ್ನೆಯದಿನ ಕೃಷಿಕ ಲೋಕಪಕ್ಷದ ನಾಯಕ ಶ್ರೀ ಎನ್ ಜಿ ರಂಗಾರವರನ್ನು ಭೇಟಿಮಾಡಿ ಹೊಸ ಸರ್ಕಾರ ರಚನೆ ವಿಷಯ ಮಾತುಕತೆ ನಡೆಸಿದರೆಂದು ಹೇಳಲಾಗಿದೆ.

ಭಾರತದ ಬಗ್ಗೆ ಬ್ರಿಟನ್ನಿನ ನೀತಿ

ಬ್ರಿಟನ್ನಿನ ಹಿಂದಿನ ಲೇಬರ್ ಸರ್ಕಾರ ಭಾರತದ ಬಗ್ಗೆ ಯಾವ ಧೋರಣೆಯನ್ನು ಹೊಂದಿತ್ತೋ ಚರ್ಚಿಲ್ ಸರ್ಕಾರವೂ ಅದೇ ಧೋರಣೆಯನ್ನು ಹೊಂದಿದೆಂಬುದಾಗಿ ಬ್ರಿಟನ್ ವಿದೇಶಾಂಗ ಶಾಖೆಯ ಉಪಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಲಾರ್ಡ್ ರೀಡಿಂಗ್‌ರವರು ದೆಹಲಿಯಲ್ಲಿ ತಿಳಿಸಿರುವರು.

ರಾಷ್ಟ್ರೀಯ ವಾರ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಲಾಲಬಹದ್ದೂರ್ ಶಾಸ್ತ್ರಿಗಳು ಎಲ್ಲಾ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ಒಂದು ಸುತ್ತೋಲೆಯನ್ನು ಕಳುಹಿಸಿ ಏಪ್ರಿಲ್ ೬ ರಿಂದ ಆರಂಭವಾಗುವ ರಾಷ್ಟ್ರೀಯ ವಾರದಲ್ಲಿ ಕಾಂಗ್ರೆಸ್ ಸಂಸ್ಥೆ ಪರಿಸ್ಥಿತಿಯನ್ನರಿತು ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕೆಂದು ಸೂಚಿಸಿದ್ದಾರೆ.

ಅಗ್ರಮಾನ್ಯತೆ

ತುಂಗಭದ್ರಾ ಯೋಜನೆಗನುಗುಣವಾಗಿ ಸುಮಾರು ೩ ಲಕ್ಷ ಎಕರೆ ಜಮೀನು ಸಾಗುವಳಿಗೆ ಯೋಗ್ಯವಾಗಿ ಮಾಡಲು ಅಗ್ರಮಾನ್ಯತೆ ಕೊಡುವುದಾಗಿ ಗೊತ್ತಾಗಿದೆ. ಇಲ್ಲಿ ಕೆಲಸ ಮಾಡಲು ೪೦ ಟ್ರಾಕ್ಟರು ಮತ್ತು ಬುಲ್ಡೋಜರುಗಳನ್ನು ಉಪಯೋಗಿಸಲಾಗುತ್ತದೆಯೆಂದು ಹೇಳಲಾಗಿದೆ.

ಡಾ॥ ಮೇಲುಕೋಟೆಯವರ ಆಗಮನ

ಮೈಸೂರು ಏ ೪

ಹೈದರಾಬಾದ್ ಆರ್ಥಿಕಸಚಿವ ಡಾ॥ ಜಿ. ಎಸ್. ಮೇಲುಕೋಟೆಯವರು ಈದಿನ ಮೈಸೂರಿಗೆ ಆಗಮಿಸುವರು.

ಶ್ರೀಯುತರು ಮೈಸೂರಿನ ನೂತನ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರ ಸಹೋದರರು.

ಅಭಿವಂದನಾ ಸಭೆ

ಮೈಸೂರು ಏ ೪

ನೂತನ ಮಂತ್ರಿಮಂಡಲ ಸದಸ್ಯರಿಗೆ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಈದಿನ ೪ ಗಂಟೆಗೆ ಮೈಸೂರು ಸರ್ಕಾರಿ ಭವನದಲ್ಲಿ ಅಭಿವಂದಿಸುವ ಸಲುವಾಗಿ ಒಂದು ಸಭೆಯನ್ನು ಏರ್ಪಡಿಸುವರು.

ಶ್ರೀ ಕೆ. ಸಿ. ರೆಡ್ಡಿ ಅಮೆರಿಕಾಕ್ಕೆ

ಮಾಜಿ ಮುಖ್ಯಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಸದ್ಯದಲ್ಲೇ ೬ ತಿಂಗಳು ಕಾಲ ಅಮೆರಿಕಾ ಪ್ರವಾಸ ಕೈಗೊಳ್ಳಲಿರುವರೆಂದು ತಿಳಿದುಬಂದಿದೆ.

ಗೌರ್ನರ್‌ರೊಡನೆ ಭೇಟಿ

ಮದರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಸಿ ರಾಜಗೋಪಾಲಾಚಾರಿಯವರು ಮದರಾಸ್ ಗೌರ್ನರ್ ಶ್ರೀ ಶ್ರೀಪ್ರಕಾಶರವರನ್ನು ಭೇಟಿ ಮಾಡಿದ್ದರು. ಪರಿಸ್ಥಿತಿಯಲ್ಲಿ ಏನೂ ಬದಲಾವಣೆಯಿಲ್ಲವೆಂದು ಹೇಳಲಾಗಿದೆ.

ಕಾರ್ಮಿಕರಿಗೆ ವಸತಿಗೃಹ

ಹೈದರಾಬಾದಿನಲ್ಲಿ ಕಾರ್ಮಿಕರಿಗೆ ಸುಮಾರು ೧೦೦೦೦ ವಾಸಗೃಹಗಳನ್ನು ಕಟ್ಟಿಸಿಕೊಡುವ ಯೋಜನೆಯೊಂದನ್ನು ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ಗೊತ್ತಾಗಿದೆ.

ಕೌನ್ಸಿಲ್ ಆಫ್ ಸ್ಟೇಟ್‌ಗೆ ನಾಮಕರಣ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರು ಕೌನ್ಸಿಲ್ ಆಫ್ ಸ್ಟೇಟ್ಸ್‌ಗೆ ಈ ಕೆಳಗಿನ ೧೨ ಮಂದಿಯನ್ನು ನಾಮಕರಣ ಮಾಡಿದ್ದಾರೆ.

ಡಾ॥ ಜಕೀರ್‌ಹುಸೇನ್, ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಪ್ರೊ॥ ಸತ್ಯೇಂದ್ರನಾಥಬೋಸ್, ಡಾ॥ ಜೆ. ಮೋಹನದಾಸ್, ಕುವೆಂಪು, ಡಾ॥ ಕಾಳಿದಾಸ್ ನಾಗ್, ಶ್ರೀ ಕಾಕಾಸಾಹೇಬ್ ಕಾಲೇಲ್ಕರ್, ಶ್ರೀ ಮೈಥಿಲಿ ಶರಣಗುಪ್ತ, ಶ್ರೀ ಪೃಥ್ವಿರಾಜಕಪೂರ್, ಪ್ರೊ॥ ರಾಧಾಕುಮುದ ಮುಖರ್ಜೀ, ಡಾ॥ ಸಾಹಿಬ್‌ಸಿಂಗ್ ಸೋಖಿ, ಶ್ರೀಮತಿ ರುಕ್ಮಿಣಿದೇವಿ ಮತ್ತು ಪ್ರೊ॥ ಎನ್. ಆರ್. ಮಾಲ್ಕನಿ.

ಪಣಿಕ್ಕರ್ ರಷ್ಯಾದಲ್ಲಿ ಭಾರತ ರಾಯಭಾರಿಗಳೇ ?

ಚೀನಾದಲ್ಲಿ ಈಗ ಭಾರತ ರಾಯಭಾರಿಗಳಾಗಿರುವ ಸರ್ದಾರ್ ಕೆ. ಎಂ ಪಣಿಕ್ಕರ್‌ರವರು ಡಾ॥ ರಾಧಾಕೃಷ್ಣನ್‌ರವರ ಸ್ಥಾನಕ್ಕೆ ರಷ್ಯಾ ರಾಯಭಾರಿಗಳಾಗಿ ಬರಬಹುದೆಂದು ಹೇಳಲಾಗಿದೆ.

ಇಡೀ ಗ್ರಾಮದ ಭೂಮಿ ದಾನ

ಮಧ್ಯಪ್ರದೇಶದ ಗುಣಜಿಲ್ಲೆಯ ಅಡಾನಿನ ರಾಜಾಸಾಹೇಬ್ ಗಂಗಾಸಿಂಗ್‌ರವರು ೧೭೨೫ ಎಕರೆಗಳನ್ನುಳ್ಳ ಸಖರ್ಡ ಎಂಬ ಹಳ್ಳಿಯನ್ನೇ ಆಚಾರ್ಯವಿನೋಬಾಭಾವೆಯವರಿಗೆ ದಾನಮಾಡಿದ್ದಾರೆ.

ಬಟ್ಟೆ ಹಂಚಿಕೆ ಹತೋಟಿ ರದ್ದು ಮಾಡಿ

ಬೆಂಗಳೂರು ಏ. ೨

ಈ ದಿನ ಸಿವಿಲ್ ಸಪ್ಲೈಸ್ ಕಂಟ್ರೋಲರ್‌ರವರ ಕಛೇರಿಯಲ್ಲಿ ಬಟ್ಟೆ ವ್ಯಾಪಾರಿಗಳ ಪ್ರತಿನಿಧಿಗಳ ಸಭೆಯೊಂದು ಸೇರಿತ್ತು. ಇಂಡಿಯಾ ಸರ್ಕಾರದವರು ಏಪ್ರಿಲ್ ೧ನೇ ತಾ॥ ಹೊರಡಿಸಿರುವ ಬಟ್ಟೆ ಹತೋಟಿಯನ್ನು ಸಡಿಲಪಡಿಸುವ ಆಜ್ಞೆಯ ದೆಸೆಯಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಕುರಿತು ಚರ್ಚೆಗಳು ನಡೆದವು.

ಈಗಿರುವ ಹಂಚಿಕೆ ವ್ಯವಸ್ಥೆಯನ್ನು ರದ್ದುಗೊಳಿಸಿ, ಮಿಲ್ಲುಗಳಿಂದ ರಹದಾರಿ ಮೂಲಕ ಬರುವ ಬಟ್ಟೆಯನ್ನು ಸೊಸೈಟಿಗಳ ಮೂಲಕ ಜನರಿಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕೆಂದು ಆ ಸಭೆಯಲ್ಲಿ ನಿರ್ಧರಿಸಲಾಯಿತೆಂದು ಗೊತ್ತಾಗಿದೆ.

ಬೆಂಗಳೂರಿನಲ್ಲಿ ಜೆಟ್ ವಿಮಾನಗಳ ತಯಾರಿಕೆ

ಜೆಟ್ ಸಂಚಲಿತ ವ್ಯಾಂಪೈರ್ ವಿಮಾನಗಳು ಈಗ ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ನಿರ್ಮಿತವಾಗುತ್ತಿವೆ ಎಂಬುದಾಗಿ ಅಧಿಕೃತವಾಗಿ ತಿಳಿಸಲಾಗಿದೆ.

ವಿವಿಧವಾರ್ತೆಗಳು

ಭಾರತದಲ್ಲಿ ವಿದ್ಯಾಭಿವೃದ್ಧಿಯು ಹೊಸ ರೀತಿಯಲ್ಲಿ ಮುನ್ನಡೆಯುವುದೆಂದು ವಿಶ್ವಸಂಸ್ಥೆಯ ಯುನೆಸ್ಕೊ ಸಮಿತಿಯಿಂದ ತಿಳಿದುಬಂದಿರುತ್ತದೆ. ಭಾರತದ ವಿದ್ಯಾಶಾಖೆಯು ಹೊಸ ಅಭ್ಯಾಸ ವಿಧಾನಗಳನ್ನು ಕಂಡುಹಿಡಿಯಲು ಸಂಶೋಧನೆ ಕೇಂದ್ರಗಳನ್ನು ಸ್ಥಾಪಿಸುವುದು ಹೊಸ ಶಾಲಾ ಕಟ್ಟಡಗಳನ್ನು ಆಧುನಿಕ ರೀತಿಯಲ್ಲಿ ಕಟ್ಟುವುದೂ ಸುಧಾರಣೆಯಲ್ಲಿ ಅಡಕವಾಗಿದೆ.

o o o o

ವಾಷಿಂಗ್ಟನ್ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವ ಇರಾನಿಯನ್ ವಿದ್ಯಾರ್ಥಿ, ಮಹಮದ್ ಜೆ. ಮೇಮಂಡಿಯು, ರಕ್ತದಾನಬೇಕೆಂದು, ೨೦ ಭಾಷೆಗಳಲ್ಲಿ ಬರೆದು ಮೆರವಣಿಗೆ ಮಾಡಿದುದು ಜನರನ್ನು ಆಕರ್ಷಿಸಿತು. ಇದರಿಂದ ಅನೇಕ ವಿದೇಶಿ ವಿದ್ಯಾರ್ಥಿಗಳು, ಎಣಿಸಿದ್ದಕ್ಕಿಂತ ಹೆಚ್ಚಾಗಿ ರಕ್ತದಾನ ಮಾಡಿದರು.

o o o o

ಕುರುಡರ ವಿದ್ಯಾಭಿವೃದ್ಧಿಯ ಬಗ್ಗೆ ವಿಶ್ವಸಂಸ್ಥೆಯು ತೆಗೆದುಕೊಂಡಿರುವ ಕಾರ್ಯಕ್ರಮ ಯಶಸ್ವಿಯಾಗುತ್ತಬಂದಿದೆ. ಮೊದಲನೆಯ ಕೇಂದ್ರವು ಈಜಿಪ್ಟ್‌ನಲ್ಲಿ ಪ್ರಾರಂಭವಾಗುವುದು.

o o o o

ನಾಲ್ಕು ಸ್ವಾತಂತ್ರ್ಯಗಳಿಗೆ ತಳಹದಿಯನ್ನು ಹಾಕಿದ ಜ್ಞಾಪಕಾರ್ಥಕ ದಿನದ ಊಟದ ಸಮಾರಂಭದಲ್ಲಿ ಮಾತಾಡುತ್ತಾ, ಅಮೆರಿಕ ಯುದ್ಧ ಕಾರ್ಯದರ್ಶಿಗಳಾದ ಪೇಸ್‌ರು, ಕೇವಲ ಅಮೆರಿಕವೊಂದೇ ಸ್ವಾತಂತ್ರ್ಯ ಸುಖವನ್ನನುಭವಿಸಬೇಕು ಎಂದ. ಹೇಳಿದರು. ಆದ್ದರಿಂದಲೇ ಅಮೆರಿಕವು ತನ್ನ ತಾಂತ್ರಿಕ ಜ್ಞಾನವನ್ನು, ಹಿಂದುಳಿದ ದೇಶಗಳ ಪುರೋಭಿವೃದ್ಧಿಗಾಗಿ ಕೊಡುತ್ತಿರುವುದು ಎಂದು ತಿಳಿಸಿದರು.

o o o o

ಭಾರತದ ಶಿಲ್ಪಿಯೊಬ್ಬರು, ಅಮೆರಿಕದ ಲ್ಲಿ. ತರುಣ ಶಿಲ್ಪಿಗಳು ತಮ್ಮ ಕಲಾಕೌಶಲ್ಯದ ಪ್ರದರ್ಶನ ಮಾಡಬೇಕು, ಯಾಕೆಂದರೆ ಅಲ್ಲಿ ಕಲೆಯ ಬೆಲೆಯನ್ನರಿತ ಜನರಿದ್ದಾರೆ, ಎಂಬುದಾಗಿ ಹೇಳಿದ್ದಾರೆ. ಆ ಶಿಲ್ಪಿಗಳೇ ಅಮರನಾಥ ಸೇಗಾಲ್ ಎಂದು ಅಮೆರಿಕದಲ್ಲಿ ೨॥ ವರ್ಷಗಳ ಶಿಲ್ಪಶಾಸ್ತ್ರ ಅಭ್ಯಾಸ ಮಾಡಿ ಈಗ ಭಾರತಕ್ಕೆ ಮರಳಿದ್ದಾರೆ

ಬೆಲ್ಲ ರಫ್ತಿಗೆ ಅನುಮತಿ

ಭಾರತ ಸರ್ಕಾರವು ೨೫ ಸಾವಿರ ಟನ್ ಬೆಲ್ಲವನ್ನು ರಾಷ್ಟ್ರದಿಂದ ಹೊರಗೆ ರಫ್ತು ಮಾಡಲು ಅನುಮತಿ ಕೊಟ್ಟಿರುವುದಾಗಿ ಪ್ರಕಟಿಸಿದೆ. ಈ ನಿರ್ಧಾರ ತಕ್ಷಣ ಜಾರಿಗೆ ಬರಲಿದೆ.

ಫೋರ್ಡ್‌ನಿಧಿಯಿಂದ ವಿಷ್ಯಾಕ್ಕೆ ಸಹಾಯ

ನ್ಯೂಯಾರ್ಕ್ ಮಾ ೨೮

ನುರಿತ ಅಮೆರಿಕನ್ನರನ್ನು ಕೂಲಿಕಾರ ಶಿಕ್ಷಣೆಕ ಮತ್ತು ಸಣ್ಣಾಂದ ಭಾಗಗಳಿಗೆ ಒದಗಿಸಿಕೊಟ್ಟು ದೇಶಗಳು ಅಭಿವೃದ್ಧಿಗೆ ಬರುವಂತೆ ಮಾಡುವುದೇ ಫೋರ್ಡ್ ಸಂಸ್ಥೆಯ ಉದ್ದೇಶ.

ಸಂಸ್ಥೆಯ ಅಧ್ಯಕ್ಷರಾದ ಗ್ರೇಯವರು 'ಮಧ್ಯಪ್ರಾಚ್ಯ, ಏಷ್ಯಾ, ದೇಶಗಳಿಗೆ ಅಭ್ಯಾಸಮಾಡಲು ೧೦೦ ಅಮೇರಿಕನ್ನರನ್ನು ವಿದ್ಯಾರ್ಥಿ ವೇತನಕೊಟ್ಟು ಕಳುಹಿಸಿಕೊಡಲಾಗುವುದು' ಎಂದು ತಿಳಿಸಿದರು

ಈ ಹೊಸ ಯೋಜನೆಗಾಗಿ ೫೦೦,೦೦೦ ಡಾಲರುಗಳನ್ನು ಕಾದಿರಿಸಲಾಗಿದೆ ಎಂದು ಅಧ್ಯಕ್ಷ ಪಾಲ್‌ಹಾಫ್‌ಮನ್ನರು ತಿಳಿಸಿರುವರು.

ಆತ್ಮಪರಿಶೋಧನೆ ಮಾಡಿಕೊಳ್ಳಿ

ಕಾಂಗ್ರೆಸ್ಸಿಗರು ರಾಷ್ಟ್ರೀಯ ವಾತಾವರಣದಲ್ಲಿ ಆತ್ಮಪರಿಶೋಧನೆ ಮಾಡಿಕೊಳ್ಳಬೇಕೆಂದು ಎ. ಐ. ಸಿ. ಸಿ. ಕಾರ್ಯದರ್ಶಿ ಶ್ರೀ ಲಾಲಬಹದ್ದೂರ್ ಶಾಸ್ತ್ರಿ ತಿಳಿಸಿದ್ದಾರೆ

ನ್ಯೂ ಅಪೇರ

೨೬–೩–೫೨ ರಿಂದ ಅಮೋಘಪ್ರಾರಂಭ

ಪಕ್ಷಿರಾಜರವರ—

* ಕನ್ನಿಕ * (ತಮಿಳು)

ಪಾತ್ರ—ಟಿ. ಇ. ವರದನ್, ಡಿ. ಬಾಲಸುಬ್ರಮಣ್ಯಂ, ಎನ್. ಎಸ್. ಕೃಷ್ಣನ್, ಎಂ. ಎಸ್. ಸರೋಜಿನಿ, ಎಂ. ಆರ್. ಸಂತಾನಲಕ್ಷ್ಮಿ, ಟಿ. ಎ. ಮಧುರಂ ಲಲಿತ–ಪದ್ಮಿನಿ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕರ್‌ರವರ ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ,

ಪೇಟೆ ಧಾರಣೆ

ಮೈಸೂರು ತಾ॥ 3-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	10-0	17-8
ಹೊಂಗೆಬೀಜ	,,	12-0	13-12
ಹುರುಳಿ	,,	29-14	31-6
ಹೆಸರು	,,	56-12	57 8
ಮೆ. ಕಾಯಿ ಮಣಕ್ಕೆ		7-2	13-14
ಹುಣಸೇಹಣ್ಣು	,,	2-6	3-6
ತೆಂಗಿನಕಾಯಿ 1100ಕ್ಕೆ		151-0	160-0

ಚಿನ್ನ ಬೆಳ್ಳಿ ದರಗಳು

3-4-52	ರೂ.
ಸವರನ್	66-0
,,	66-4
ಚಿನ್ನ ತೊಲ	91-0
,, ಮೂಸ	89-8
ಬೆಳ್ಳಿ 100 ತೊಲ	155-0
,, ತೊಲ	1-10

ರಾಜಕಮಲ್

4—4—52ರಿಂದ

ಜನಭರಿತವಾದ 4ನೇ ವಾರ

ವಿಜಯಾರವರ—

ಮದುವೆ ಮಾಡಿ ನೋಡು (ತೆಲುಗು)

ಪಾತ್ರ:– ಎನ್. ಟಿ. ರಾಮರಾವ್, ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎಸ್.ವಿ.ರಂಗರಾವ್, ಜೋಗ್‌ರಾವ್.

ವುಡ್ ಲ್ಯಾಂಡ್ಸ್

೪—೪—೫೨ ರಿಂದ ಪ್ರತಿದಿನ ೩ ಆಟಗಳು

ಮೀನಾಕುಮಾರಿ, ಮುಬಾರಕ್ ಪಾತ್ರವಹಿಸಿರುವ ಹಿಂದಿ ಚಿತ್ರ.

- ಮದೋಷ್ -

ರಣಜಿತ್

೪—೪—೫೨ರಿಂದ ಪ್ರತಿದಿನ ೩ ಆಟಗಳು

ಫಿಲ್ಮಿಸ್ತಾನ್‌ರವರ—

ಶ್ರೀಮತಿಜೀ

ಪಾತ್ರ:–ನಾಸೀರ್‌ಖಾನ್, ಶ್ಯಾಮಾ.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ, ಮೈಸೂರು

ಮುದ್ರಕರು— ಟಿ. ಪ್ರಿ. ಶ್ರೀಕಂಠಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೭೪ (ಲಂಚ್) ದಿನಪತ್ರಿಕೆ ರಿ. ನ. ಎಂ. ೫೩೯೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೫–೪—೧೯೫೨ನೇ ಶನಿವಾರ [ಸಂಚಿಕೆ ೧೮೪

ದಕ್ಷರಾದವರನ್ನೇ ಮಂತ್ರಿಗಳನ್ನಾಗಿ ತೆಗೆದುಕೊಳ್ಳಲಾಗಿದೆ

ಮಂತ್ರಿಮಂಡಲದಲ್ಲಿ ಲೋಪದೋಷಗಳಿದ್ದರೆ ತಿದ್ದಿಕೊಳ್ಳಲು ಹೋಗಬೇಡಿ

ಮೈಸೂರು ಏ ೪

ಮುಖ್ಯಮಂತ್ರಿಯಲ್ಲಿ ಶ್ರದ್ಧಾಭಕ್ತಿ, ಅವರು ಕೊಡುವ ಸೂಚನೆಗಳನ್ನು ಕೇಳುವ ಮನೋಭಾವದವರು ಮಂತ್ರಿ ಸಂಪುಟದಲ್ಲಿ ಸೇರಿದ್ದರೆಮಾತ್ರ ಮಂತ್ರಿಮಂಡಲ ಕಾರ್ಯಗಳನ್ನು ಸುಸೂತ್ರವಾಗಿ ನಡೆಸಬಹುದು ಅಂತಹವರನ್ನೇ ಆರಿಸಿ ಈಗ ಮಂತ್ರಿಮಂಡಲವನ್ನು ರಚಿಸಲಾಗಿದೆ.

ಪಕ್ಷದಲ್ಲಿ ಇವರಹಾಗೆಯೇ ಇರುವ ದಕ್ಷರೂ ಪ್ರತಿಭಾಶಾಲಿಗಳೂ ಅನೇಕರಿರುವರು. ಎಲ್ಲರನ್ನೂ ಮಂತ್ರಿಗಳನ್ನಾಗಿ ತೆಗೆದುಕೊಳ್ಳಲು ಸಾಧ್ಯವಿಲ್ಲ. ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಕೆಲಸವನ್ನು ಮಾಡತಕ್ಕವರು ಮಂತ್ರಿಗಳಾಗಬೇಕು ಕಾಂಗ್ರೆಸ್ಸಿನಲ್ಲಿರುವ ಸಹಸ್ರಾರುಜನರೂ ನಮಗೆ ಪೂರ್ಣ ನೆರವನ್ನು ಕೊಡಬೇಕಾಗಿದೆ ಲೋಪದೋಷಗಳಿದ್ದಲ್ಲಿ ತಿದ್ದಬೇಕಾಗಿದೆ ಹಾಗೆಮಾಡದೆ ನಮ್ಮನ್ನು ಪದಚ್ಯುತಿಮಾಡಲು ಕೊಳ್ಳಲು ಹೋಗಬಾರದು ಮಂತ್ರಿಮಂಡಲದಲ್ಲಿ ತಮ್ಮತಮ್ಮಲ್ಲಿಯೇ ಜಗಳವಾಡಿಕೊಂಡು ಬರುತ್ತಾ, ಇರುವ ಅಸಹಾಯ ಶೂರರಿರುವುದಕ್ಕಿಂತಲೂ ಸಹಾಯಮಾಡತಕ್ಕವರಿದ್ದರೆ ಸಾಕಾಗಿದೆ ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಜಿಲ್ಲಾ ಕಾಂಗ್ರೆಸ್‌ಸಮಿತಿಯವರು ಈದಿನ ಸರ್ಕಾರಿಭವನದಲ್ಲಿ ನೂತನ ಮಂತ್ರಿಗಳಿಗಿತ್ತ ಸತ್ಕಾರ ಸಮಾರಂಭದಲ್ಲಿ ಮಾತನಾಡುತ್ತಾ ಹೇಳಿದರು,

ಶ್ರೀ ಕೆ ಹನುಮಂತಯ್ಯನವರು ತಮ್ಮ ಭಾಷಣವನ್ನು ಮುಂದುವರಿಯುತ್ತಾ, ಕಾಂಗ್ರೆಸ್ ಕೆಲಸಗಾರರಿಗೂ ಇಲ್ಲಿ ನೆರೆದಿರುವವರಿಗೂ ಜನತೆಗೂ ನಮ್ಮ ಪ್ರಾರ್ಥನೆಯೇನೆಂದರೆ ಜನತೆಗೆ ಉಂಟಾಗಿರುವ ಕಷ್ಟವನ್ನೆಲ್ಲಾ ನಾವು ಪೂರ್ಣವಾಗಿ ಪರಿಹಾರ ಮಾಡಲಾಗುವುದಿಲ್ಲ. ನಮ್ಮ ಶಕ್ತಿಮೀರಿ ಅವರ ಕಷ್ಟ ಪರಿಹಾರಕ್ಕೆ ದುಡಿಯುತ್ತೇವೆ. ಆದರೆ ಜನತೆಯ ಆಸೆಯುಗಳೆಲ್ಲಾ ಹೊಸ ಮಂತ್ರಿಮಂಡಲ ಪೂರ್ತಿಮಾಡಲೆಂಬುದು ಅತ್ಯಂತ ಅಪಾಯಕರ. ಹಾಗೆ ಆಸೆಯನ್ನೆಲ್ಲಾ ಪೂರ್ಣಗೊಳಿಸಲು ಭಗವಂತನಿಗೂ ಸಹ ಸಾಧ್ಯವಿಲ್ಲ. ಎಂದು ಹೇಳಿದರು. ದಾವಣಗೆರೆಯಲ್ಲಿ ನಡೆದ ರಾಜಕೀಯ ಸಮ್ಮೇಳನ ವಿಷಯವಾಗಿ ಪ್ರಸ್ತಾಪಿಸಿ ಆಹಾರ, ಬಟ್ಟೆ ವಿದ್ಯಾಭ್ಯಾಸ ವಿಷಯಗಳಲ್ಲಿ ನಾವು ಮಾಡಿದ ನಿರ್ಣಯಗಳನ್ನೆಲ್ಲಾ ನಾವು ಜಾರಿಗೆತರಲು ತಕ್ಕ ವ್ಯವಸ್ಥೆ ಮಾಡಬೇಕೆಂದಿರುತ್ತೇವೆ. ಪುನಃ ಅದೇರೀತಿ ರಾಜಕೀಯ ಸಮ್ಮೇಳನವನ್ನು ನಡೆಸಿ ಜನತೆಯ ಅಭಿಪ್ರಾಯವನ್ನು ಪಡೆಯಬೇಕೆಂದಿದ್ದೇವೆಂದು ಹೇಳಿದರು.

ಪ್ರಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್‌ಸಮಿತಿಯ ಅಧ್ಯಕ್ಷ ಶ್ರೀ ಎಸ್. ನಾರಾಯಣರಾಯರು ಮಂತ್ರಿವರ್ಗದವರಿಗೆ ಸ್ವಾಗತಬಯಸುತ್ತಾ, ಜನತೆಯೊಡನೆ ಹೆಚ್ಚು ಸಂಪರ್ಕವಿಟ್ಟುಕೊಂಡು ಮಂತ್ರಿಮಂಡಲ ಕೆಲಸ ಮಾಡಬೇಕಾಗಿದೆಯೆಂದೂ ಭೇದಮನೋಭಾವ, ಕೋಮುವಾರುಭಾವನೆ ಇವುಗಳು ಇಲ್ಲದಂತೆ ನಡೆದುಕೊಳ್ಳಬೇಕೆಂದು ಹೇಳಿದರು.

ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಶ್ರೀ ನಾರಾಯಣರಾಯರ ಹಿತವಚನಗಳನ್ನು ತಾವು ಗಮನಿಸಿ ಅದರಂತೆ ನಡೆದುಕೊಳ್ಳುವುದಾಗಿ ಭರವಸೆಯಿತ್ತರು.

ಕೊನೆಯಲ್ಲಿ ಜಿಲ್ಲಾ ಕಾಂಗ್ರೆಸ್‌ಸಮಿತಿ ಕಾರ್ಯದರ್ಶಿ ಶ್ರೀ ಎಂ. ಎಲ್. ಸುಬ್ಬರಾಜೇಅರಸಿನವರು ವಂದನೆ ಅರ್ಪಿಸುತ್ತಾ, ಈ ಬಾರಿ ರಾಜಕೀಯ ಸಮ್ಮೇಳನವನ್ನು ಮೈಸೂರುಜಿಲ್ಲೆಯಲ್ಲಿ ನಡೆಸಬೇಕೆಂದು ಕೋರಿದರು.

ಕಳ್ಳತನ ಪತ್ತೆ ಹಚ್ಚಲು ಯಂತ್ರ

ಭಾರತಕ್ಕೆ ವಿದೇಶಗಳಿಂದ ಚಿನ್ನ, ವಜ್ರ, ಮುಂತಾದ ಬೆಲೆಯುಳ್ಳ ವಸ್ತುಗಳನ್ನು ಕಳ್ಳತನದಲ್ಲಿ ತರುವುದನ್ನು ಪತ್ತೆ ಹಚ್ಚಲು ಒಂದು ಹೊಸ ಯಂತ್ರವನ್ನು ತಯಾರಿಸಲಾಗಿದೆ. ಈ ಯಂತ್ರವನ್ನು ಪೆಟ್ಟಿಗೆಗಳ ಮೇಲೆ ಇಟ್ಟಾಗ ಕಳ್ಳತನ ವಸ್ತುಗಳಿದ್ದಲ್ಲಿ ಒಂದು ರೀತಿ ಶಬ್ದವಾಗುತ್ತದೆ. ಮನುಷ್ಯನು ತನ್ನ ಹತ್ತಿರ ಅಂತಹ ವಸ್ತುಗಳನ್ನು ಹೊಂದಿದ್ದರೆ, ಕೊನೆಗೆ ನುಂಗಿ ದೇಹದಲ್ಲಿದ್ದರೂ ಈ ಯಂತ್ರವು ಕಂಡುಹಿಡಿಯುವ ಸಾಮರ್ಥ್ಯವನ್ನು ಹೊಂದಿದೆ.

ರಾಜೀನಾಮೆ

ಶ್ರೀ ಕೆ ಕಾಮರಾಜ ನಾಡಾರರು ತಮಿಳುನಾಡು ಕಾಂಗ್ರೆಸ್ ಸಮಿತಿ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಕೊಡುವರೆಂದ. ಗೊತ್ತಾಗಿದೆ.

ಸಮಿತಿಯು ಈ ತಿಂಗಳ ೩ನೇ ವಾರದಲ್ಲಿ ಸಮಾವೇಶಗೊಂಡಾಗ ಶ್ರೀ ಕಾಮರಾಜ ನಾಡಾರರು ತಮ್ಮ ರಾಜೀನಾಮೆ ಸಲ್ಲಿಸುವರು.

ಪ್ರದೇಶ ಕಾಂಗ್ರೆಸ್ ಸಮಿತಿಗಳು ಪುನರ್ವ್ಯವಸ್ಥೆಯಾಗಬೇಕೆಂದು ಕಾಂಗ್ರೆಸ್ ಹೈ ಕಮ್ಯಾಂಡು ಎಲ್ಲ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೂ ಸೂಚನೆಕೊಟ್ಟಿದೆಯೆಂದು ಗೊತ್ತಾಗಿದೆ.

ಬೆಲೆ ಏರಿದ್ದಕ್ಕೆ ಪ್ರತಿಭಟನೆ

ಆಹಾರ-ಪದಾರ್ಥಗಳ ಬೆಲೆ ಏರಿಸಿರುವ ನೀತಿಯನ್ನು ಪ್ರತಿಭಟಿಸಿ ಏಪ್ರಿಲ್ ೮ನೇ ತಾ॥ ಪ್ರದರ್ಶನ ನಡೆಸಬೇಕೆಂದು ಭಾರತದ ಕಮ್ಯೂನಿಸ್ಟ್ ಪಕ್ಷ ನಿರ್ಧರಿಸಿದೆ

ಪೋರ್ಟ್‌ಫೋಲಿಯೋ

ಮೈಸೂರು ಏ ೫

ಮಂತ್ರಿಮಂಡಲದ ಸಭೆಯು ನಿನ್ನೆ ರಾತ್ರಿ ನಡೆದು ಪೋರ್ಟ್‌ಫೋಲಿಯೋ ಹಂಚಿಕೆಯಾಯಿತೆಂದು ಗೊತ್ತಾಗಿದೆ—

ಕೈಗಾರಿಕೆಗಳುಮತ್ತು ಕಾರ್ಮಿಕ—ಶ್ರೀ ಟಿ ಸಿದ್ದಲಿಂಗಯ್ಯ; ಹೋಂ ಮತ್ತು ಲಾ, ಶ್ರೀ ಸಿದ್ದವೀರಪ್ಪ; ವಿದ್ಯಾಭ್ಯಾಸ, ವಾರ್ತೆ ಶ್ರೀ ಎ ಜಿ ರಾಮಚಂದ್ರರಾವ್; ರೆವೆನ್ಯೂ, ಆಹಾರ, ವ್ಯವಸಾಯ—ಶ್ರೀ ಕಡಿದಾಳ್ ಮಂಜಪ್ಪ; ಆರೋಗ್ಯ ಮತ್ತು ಸ್ಥಳೀಯ ಸಂಸ್ಥೆ—ಶ್ರೀ ಟಿ ಚನ್ನಯ್ಯ; ಪಬ್ಲಿಕ್ ವರ್ಕ್ಸ್‌, ಹಣಕಾಸು—ಮುಖ್ಯಮಂತ್ರಿಗಳು

ಮೈಸೂರು ಜನತೆಗೆ ಮುಖ್ಯಮಂತ್ರಿಗಳ ಸಂದೇಶ

ಮೈಸೂರು ಏ ೪

ಆಲ್ ಇಂಡಿಯಾ ರೇಡಿಯೋಮೂಲಕ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಜನತೆಗೆ ಸಂದೇಶವನ್ನೀಯುತ್ತಾ, ಈ ರೀತಿ ಹೇಳಿರುವರು—

ನಿಶ್ಚಲ ದೇಶಭಕ್ತಿ, ಸತ್ಯ, ಸಾಮರ್ಥ್ಯಗಳಭ್ಯೇಯದಿಂದ ಗುರುತರವಾದ ಜವಾಬ್ದಾರಿ ಹೊರೆಯನ್ನು ಹೊತ್ತಿದ್ದೇವೆ. ಮೈಸೂರು ಚರಿತ್ರೆಯಲ್ಲಿ ಎಂದೂ ಇಲ್ಲದಷ್ಟು ಸಂಸ್ಥಾನ ಆದಾಯ ವೆಚ್ಚದಲ್ಲಿ ಏರುಪೇರುಬಂದು ೪ ಕೋಟಿ ರೂಪಾಯಿ ನಷ್ಟ ಕಾಣುತ್ತಿದೆ. ಆದಾಯ ನಷ್ಟ ಸರಿದೂಗಿಸುವ ಕಠಿಣಕಾರ್ಯ ನಮ್ಮ ಪಾಲಿಗೆ ಬಿದ್ದಿದೆ ಆಹಾರವಿಷಯದಲ್ಲಿ ಅಸಮಾಧಾನ, ಆರೋಪಣೆ ವಿಶೇಷವಾಗಿದೆ. ಆಹಾರ ಶೇಖರಣೆ, ಹಂಚಿಕೆಯಲ್ಲಿ ಲೋಪದೋಷಗಳಿವೆ.

ದಾವಣಗೆರೆಯಲ್ಲಿ ಆಹಾರ, ವಿದ್ಯಾಭ್ಯಾಸ ವಿಷಯದಲ್ಲಿ ಆದ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಲಿದ್ದೇವೆ ಅನ್ನದಾತರಾದ ಬೆಳೆಯುವ ರೈತರಿಗೆ ಈ ಕಂಟ್ರೋಲ್ ಪದ್ಧತಿಯಿಂದ ಅವಮಾನ ಕಿರುಕುಳ ನಡೆಯುತ್ತಿದೆ.

ರೈತನಿಗೆ ಕಾಣುವಹಾಗೆ ಖರ್ಚುಕಳೆದು ಹಣ ಮಿಗುವಂತಾಗಬೇಕು. ಇವೆಲ್ಲವನ್ನೂ ಏಕಕಾಲದಲ್ಲಿ ಮಾಡಲಾಗುವುದಿಲ್ಲ. ಒಂದೊಂದಾಗಿ ತೆಗೆದುಕೊಳ್ಳಬೇಕಾಗಿದೆ. ಎಂದರು.

ಧಾನ್ಯಗಳ ಬೆಲೆ ವಿಷಯವಾಗಿ ಮಾತನಾಡುತ್ತಾ ಆಹಾರಧಾನ್ಯ ಬೆಲೆ ಹೆಚ್ಚಿಸುವುದು ಅನಿವಾರ್ಯವೆಂದು ಪಂಡಿತರು-ಪ್ರಾಜ್ಞರು ಹೇಳುತ್ತಿರುವರು- ನಮ್ಮ ಮಂತ್ರಿಮಂಡಲವೂ ಈ ವಿಷಯವನ್ನು ಪರಿಶೀಲಿಸಲಿದೆ- ಹಾಗೇನಾದರೂ ಬೆಲೆ ಏರಿಸಿದಲ್ಲಿ ಜನರೆ ಈ ವಿಷಯವನ್ನು ಸಹಿಷ್ಣುತೆ ಸಮಾಧಾನದಿಂದ ಪರಿಶೀಲಿಸಬೇಕೆಂದರು-

ಸರ್ಕಾರಿ ನೌಕರರ ವಿಷಯವಾಗಿ ಮಾತನಾಡುತ್ತಾ, ಸರ್ಕಾರದ ಖರ್ಚು ಕಡಮೆ ಮಾಡಬೇಕಾಗಿದೆ- ಆದ್ದರಿಂದ ನೌಕರರ ಸಂಖ್ಯೆ ಕಡಮೆಮಾಡಬೇಕಾಗಬಹುದು- ನೂರಾರುಮಂದಿಗೆ ಇದರಿಂದ ತೊಂದರೆಯಾಗಬಹುದು- ವಿಧಿಯಿಲ್ಲವೆಂದು ಹೇಳುತ್ತಾ, ಜನರ ಮತ್ತು ಜನಾರ್ದನನ ಸಹಾಯ ಅನುಗ್ರಹವು ತಮ್ಮ ಮಂತ್ರಿಮಂಡಲಕ್ಕೆ ದೊರೆಯಲೆಂದು ಆಶಿಸಿದರು-

ನೀರಿನ ಸರಬರಾಜು

ಬೆಂಗಳೂರು ಏ ೪

ಬೇಸಿಗೆ ಬೆಳೆಗಾಗಿ ಏಪ್ರಿಲ್ ೧೨ ರಿಂದ ೧೦ ದಿನ. ಕಾಲ ವಿಶ್ವೇಶ್ವರಯ್ಯನಾಲಾ ಮತ್ತು ಅದರ ಉಪನಾಲಾಗಳಲ್ಲಿ ನೀರನ್ನು ಬಿಡಲಾಗುವುದೆಂದು ಗೊತ್ತಾಗಿದೆ.

ಪರಿಹಾರನಿಧಿ

೧೯೪೭ ರಲ್ಲಿ ಸ್ಥಾಪಿತವಾದ ಮುಖ್ಯ ಪ್ರಧಾನಿಯವರ ಪರಿಹಾರನಿಧಿಯಿಂದ ಇಲ್ಲಿಯವರೆಗೆ ಸುಮಾರು ೯೨ ಲಕ್ಷ ರೂಪಾಯಿಗಳನ್ನು ಪರಿಹಾರ ಕಾರ್ಯಗಳಿಗಾಗಿ ಕೊಡಲಾಗಿದೆ. ವಸೂಲಿಯಾಗಿರುವ ಹಣವು ೯೯ ಲಕ್ಷ ರೂಪಾಯಿಗಳು.

ಸ್ವಾಗತ ಸಮಿತಿ ಸಭೆ

ಏ ಎನ್. ಟಿ ಯು. ಸಿ. ಮೈಸೂರು ಶಾಖೆಯಿಂದ ಜನರಲ್ ಕೌನ್ಸಿಲ್ ವ್ಯವಸ್ಥೆಗಾಗಿ ನೇಮಿತವಾಗಿರುವ ಸ್ವಾಗತ ಸಮಿತಿ ಸಭೆಯು ೬ನೇ ತಾರೀಖು ಭಾನುವಾರ ಬೆಂಗಳೂರಿನಲ್ಲಿರುವ ಕೇಂದ್ರ ಕಛೇರಿಯಲ್ಲಿ ನಡೆಯುತ್ತದೆ.

ನೂತನ ಮಂತ್ರಿಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭ

ಮೈಸೂರು ಏ ೪

ಶ್ರೀ ಕೆ. ಹನುಮಂತಯ್ಯನವರ ನಾಯಕತ್ವದಲ್ಲಿ ರಚಿತವಾದ ನೂತನ ಮಂತ್ರಿಮಂಡಲದ ಸದಸ್ಯರುಗಳಾದ ಶ್ರೀಗಳಾದ ಟಿ. ಸಿದ್ದಲಿಂಗಯ್ಯ, ಎ. ಜಿ. ರಾಮಚಂದ್ರರಾವ್, ಟಿ. ಚನ್ನಯ್ಯ, ಕಡಿದಾಳು ಮಂಜಪ್ಪ ಮತ್ತು ಹೆಚ್. ಸಿದ್ದವೀರಪ್ಪನವರು ಈ ದಿನ ಮಧ್ಯಾಹ್ನ ೧—೩೦ ಗಂಟೆಗೆ ಶ್ರೀಮನ್ಮಹಾರಾಜರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರು. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು, ಪ್ರಧಾನ ಕಾರ್ಯದರ್ಶಿ ಶ್ರೀ ಇ. ಎ. ಗಣಪತಿ ಅಯ್ಯರ್, ಮಹಾರಾಜರ ಆಪ್ತ ಕಾರ್ಯದರ್ಶಿ ಶ್ರೀ ಸಫಿದಾರಾವಾ ಇವರುಗಳೂ ಹಾಜರಿದ್ದರು.

ಕೆನಡಾ ಹೈಕಮಿಷನರ ಆಗಮನ

ಭಾರತದಲ್ಲಿರುವ ಕೆನಡಾ ಹೈಕಮಿಷನರ್ ಮಿ|| ನಾಲ್ವಾರ್ ಚಿಪ್‌ಮನ್ ರವರು ಈ ದಿನ ರಾಜಧಾನಿಗೆ ಆಗಮಿಸಿದರು. ಮಧ್ಯಾಹ್ನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಭೇಟಿ ಮಾಡಿದ್ದರು.

ಮಿಸ್ ಇಂಡಿಯಾ

ಬೊಂಬಾಯಿನಲ್ಲಿ ನಡೆದ ಅಖಿಲ ಭಾರತ ಸೌಂದರ್ಯ ಸ್ಪರ್ಧೆಯಲ್ಲಿ ೨೩ ವಯಸ್ಸಿನ ಕಲ್ಕತ್ತೆಯ ಶ್ರೀಮತಿ ಇಂದ್ರಾಣಿ ರಹಮಾನ್‌ರನ್ನು 'ಮಿಸ್ ಇಂಡಿಯಾ'ರನ್ನಾಗಿ ಚುನಾಯಿಸಲಾಯಿತು.

ಇಂದ್ರಾಣಿಯವರಿಗೆ ೫ ವರ್ಷ ವಯಸ್ಸಿನ ಮಗಳಿದ್ದಾಳೆ. ಆಕೆಯ ಪತಿ ರಹಮಾನ್‌ರು ಪಶ್ಚಿಮ ಬಂಗಾಳದ ಮುಖ್ಯ ಶಿಲ್ಪಿಯಾಗಿದ್ದಾರೆ.

ಶ್ರೀಮತಿ ಇಂದ್ರಾಣಿಯವರು, ಬೆಂಗಳೂರಿನಲ್ಲಿರುವ ಪ್ರಖ್ಯಾತ ನರ್ತಕಿ ಶ್ರೀಮತಿ ರಾಗಿಣಿದೇವಿಯವರ ಪುತ್ರಿ.

ಮದ್ರಾಸಿನ ಶ್ರೀಮತಿ ಸೂರ್ಯಕುಮಾರಿಯವರನ್ನು ಎರಡನೆಯವರನ್ನಾಗಿ ಆರಿಸಲಾಗಿದೆ.

ಮದರಾಸ್ ಸಚಿವ ಪಟ್ಟಿ

ನೂತನ ಮಂತ್ರಿಮಂಡಲದ ಪಟ್ಟಿಯನ್ನು ಈ ವಾರ ಅಥವಾ ಮುಂದಿನ ವಾರದ ಆದಿಯಲ್ಲಿ ಮದರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಸಿ. ರಾಜಗೋಪಾಲಾಚಾರ್ಯರು ಹೊರಗೆಡಹುವರೆಂದು ಗೊತ್ತಾಗಿದೆ.

ಎ. ಐ. ಆರ್. ಮುಖ್ಯ ಅಧಿಕಾರಿ ಸಸ್ಪೆಂಡ್

ಅಖಿಲ ಭಾರತ ರೇಡಿಯೋ ಡೈರೆಕ್ಟರ್ ರವರಾದ ಶ್ರೀ ಎಸ್. ಎ. ಎಸ್. ಲಕ್ಷ್ಮೀರವರನ್ನು ಅವರ ನಡವಳಿಕೆ ಬಗ್ಗೆ ಸೂಕ್ತ ವಿಚಾರಣೆಯಾಗುವವರೆಗೆ ಇಂಡಿಯಾ ಸರ್ಕಾರದವರು ಅವರ ಹುದ್ದೆಯಿಂದ ಸಸ್ಪೆಂಡ್ ಮಾಡಿರುವರೆಂದು ತಿಳಿದುಬಂದಿದೆ.

ಅವರ ಸ್ಥಾನದಲ್ಲಿ ಶ್ರೀ ಸಿ. ಬಿ. ರಾವ್, ಐ. ಸಿ. ಎಸ್. ರವರನ್ನು ಡೈರೆಕ್ಟರ್ ಜನರಲ್ ರವರಾಗಿ ನೇಮಕ ಮಾಡಲಾಗಿದೆಯೆಂದು ತಿಳಿದುಬಂದಿದೆ.

ಭಾರತಕ್ಕೆ ಅಮೆರಿಕಾ ಸಹಾಯ

ಮಾರ್ಚಿ ಮಾಹೆಯ ಕೊನೆಯ ಎರಡು ವಾರಗಳಲ್ಲಿ ಅಮೆರಿಕಾ ಜನತೆಯು ಭಾರತಕ್ಕೆ ೧೪೩, ೭೭೭ ಪೌಂಡುಗಳ ಆಹಾರ ಮತ್ತು ವೈದ್ಯಕೀಯ ವಸ್ತುಗಳನ್ನು ಸರಬರಾಜು ಮಾಡಿದೆ. ಇದರಲ್ಲಿ ೩೯,೭೫೦ ಪೌಂಡು ಅಕ್ಕಿ, ೧೦೧,೦೪೫ ಪೌಂಡು ಗೋಧಿ ಸೇರಿವೆ.

ಹಿಂದುಳಿದ ರಾಷ್ಟ್ರಗಳಿಗೆ ಸಹಾಯ

ವಾಷಿಂಗ್ಟನ್ ಏ ೩

ಅಮೇರಿಕದ ೩೫ ನಾಗರಿಕ ಸಂಘಗಳ ನೂರಾರು ಪ್ರತಿನಿಧಿಗಳು ರಾಜಧಾನಿಯಾದ ವಾಷಿಂಗ್ಟನ್ ನಗರದಲ್ಲಿ ಏಪ್ರಿಲ್ ೭ ರಂದು, ಹಿಂದುಳಿದ ರಾಷ್ಟ್ರಗಳಿಗೆ ಸಹಾಯನೀಡಲು ತಕ್ಕ ಆರ್ಥಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಭೆ ಸೇರುವವರಿದ್ದಾರೆ.

ಮೂರು ದಿನ ಸೇರುವ ಈ ಸಭೆಯನ್ನುದ್ದೇಶಿಸಿ, ಲೆಬನೀಸ್ ರಾಯಭಾರಿ, ಚಾರ್ಲ್ಸ್ ಮಲ್ಲಿಕರು ಮಾತನಾಡುವರು. ಅಂತರಾಷ್ಟ್ರೀಯವಾಗಿ ಈ ಸಭೆಯು ಆರ್ಥಿಕ ಮತ್ತು ಸಮಾಜ ಬೆಳವಣಿಗೆಯ ಅಭಿವೃದ್ಧಿಯನ್ನು ಚರ್ಚಿಸುವುದು. ಈ ಸಮ್ಮೇಳನವನ್ನುದ್ದೇಶಿಸಿ ಅಧ್ಯಕ್ಷ ಟ್ರೂಮನ್ನರೂ ಸುಪ್ರೀಮ್ ಕೋರ್ಟು ನ್ಯಾಯಾಧೀಶರಾದ ಮಿ|| ವಿಲಿಯಂ, ಒ ಡೊಗ್ಲಾಸರು ಮಾತನಾಡುವರು.

ನಾಲ್ಕು ಅಂಶ ಯೋಜನೆಯ ಚಾಲಕರಾಗಿದ್ದು ವಿಮಾನ ಅಪಘಾತದಲ್ಲಿ ಮರಣ ಹೊಂದಿದ ಡಾ|| ಹೆನ್ರಿ ಜಿ ಬೆನೆಟ್‌ರವರಿಗೆ ಈ ಸಭೆಯು ಗೌರವವನ್ನು ತೋರಿಸುವುದು.

ಈ ಸಭೆಯು ನೇರವಾಗಿ ಹಿಂದುಳಿದ ದೇಶಗಳಿಗೆ ಸಹಾಯ ಮಾಡುವುದು ಸಾಧ್ಯವಾಗದಿದ್ದರೂ ಕೆಲಸಗಳು ಜಾಗ್ರತೆ ನಡೆಯುವಂತೆ ಸ್ಫೂರ್ತಿಕೊಡುವುದು, ಮತ್ತು ಅಮೇರಿಕನರಿಗೆ ಈ ಸಹಾಯದ ಕಾರ್ಯವಿಧಾನವನ್ನು ಚೆನ್ನಾಗಿ ತಿಳಿಸುವುದು.

ಈ ಸಭೆಯಲ್ಲಿ ಮುಖ್ಯವಾಗಿ ನಾಲ್ಕು ಅಂಶಗಳ ಯೋಜನೆಯನ್ನು ಚರ್ಚಿಲಾಗುವುದು.

ಹರಿಜನ ಮಂತ್ರಿಗಳ ಮತ್ತು ಅಸೆಂಬ್ಲಿ ಸದಸ್ಯರ ಸಮ್ಮೇಳನ

ಭಾರತದ ನಾನಾ ಸಂಸ್ಥಾನಗಳ ಹರಿಜನ ಮಂತ್ರಿಗಳ ಮತ್ತು ಅಸೆಂಬ್ಲಿ ಸದಸ್ಯರ ಸಮ್ಮೇಳನವೊಂದನ್ನು ನಡೆಸಲು ಯೋಚಿಸಿರುವುದಾಗಿ ಕೇಂದ್ರ ಮಂತ್ರಿ ಶ್ರೀ ಜಗಜೀವನರಾಂರವರು ತಿಳಿಸಿರುವರು.

ಬಟ್ಟೆ ಹತೋಟಿ ತೆಗೆಯಬೇಕು

ಬಟ್ಟೆಯ ಮೇಲಿರುವ ಎಲ್ಲಾ ವಿಧವಾದ ಹತೋಟಿಗಳನ್ನು ಕೂಡಲೇ ರದ್ದುಮಾಡಬೇಕೆಂದು ಬೊಂಬಾಯಿ ಬಟ್ಟೆ ವ್ಯಾಪಾರ ಸಂಘದವರು ಸರ್ಕಾರವನ್ನು ಒತ್ತಾಯಪಡಿಸುತ್ತಲಿರುವರು.

ಪೇಟೆ ಧಾರಣೆ

ಮೈಸೂರು ತಾ|| 4-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಕ್ಕೆ	10-8	17-6
ಹೊಂಗೆಬೀಜ	,,	13-10	14-14
ಹುರುಳಿ	,,	30-0	31-12
ಹೆಸರು	,,		55-6
ಮೆ. ಕಾಯಿ ಮಣಕ್ಕೆ		11-4	14-14
ಹುಣಸೇಹಣ್ಣು	,,	2-12	3-7
ಸೀಗೆಕಾಯಿ	,,	3-4	3-5
ತೆಂಗಿನಕಾಯಿ 1100ಕ್ಕೆ		131	185

ನ್ಯೂ ಅಪೇರ

೩೬—೪—೫೨ ರಿಂದ ಅಮೋಘಪ್ರಾರಂಭ

ಪಕ್ಷಿರಾಜರವ—

* ಕನ್ನಿಕ * (ತಮಿಳು)

ಪಾತ್ರ—ಟಿ. ಇ. ವರದನ್, ಡಿ. ಬಾಲಸುಬ್ರಮಣ್ಯಂ, ಎಸ್. ಎಸ್. ಕೃಷ್ಣನ್, ಎಂ. ಎಸ್. ಸರೋಜಿನಿ, ಎಂ. ಆರ್. ಸಂತಾನಲಕ್ಷ್ಮಿ, ಟಿ. ಎ. ಮಧುರಂ ಲಲಿತ–ಪದ್ಮಿನಿ.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಸಮುದ್ರದಲ್ಲಿ ಅಣುಶಕ್ತಿಗೆ ಸಂಬಂಧಪಟ್ಟ ವಿನಾಶಕಾರಕ ವಸ್ತುಗಳನ್ನು ಕಂಡುಹಿಡಿಯಲು ಪರಿಶೋಧನೆಯ ಕ್ರಮವನ್ನು ಅನುಸಂಧಿಸುತ್ತಿರುವ ದೃಶ್ಯ. ಜಾರ್ಜ್ ಟೇಲರ್ ಎಂಬ ನಾವಿಕನು ಹಡಗಿನಲ್ಲಿ ಈ ಪರೀಕ್ಷೆ ನಡೆಸುತ್ತಲಿದ್ದಾನೆ.

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೬—೪—೧೯೫೨ನೇ ಭಾನುವಾರ [ಸಂಚಿಕೆ ೧೮೫

ಚೈನಾಕ್ಕೆ ಭಾರತ ಸೌಹಾರ್ದ್ಯ ನಿಯೋಗ ಭೇಟಿ

ಶ್ರೀಮತಿ ವಿಜಯಲಕ್ಷ್ಮೀಪಂಡಿತರ ನಾಯಕತ್ವದಲ್ಲಿ ೨೭ನೇ ತಾರೀಖು ಹೊರಡಲಿದೆ

ಎಂ. ಪಿ. ಸಿ. ಸಿ. ಮತ್ತು ರಾಜಕೀಯ ಸಮ್ಮೇಳನ

ಮೈಸೂರು ಏ ೫

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಸದ್ಯದಲ್ಲೇ ಸಮಾವೇಶಗೊಂಡು ಎಂ.ಪಿ.ಸಿ.ಸಿ. ಮತ್ತು ರಾಜಕೀಯ ಸಮ್ಮೇಳನ ನಡೆಸಲು ನಿರ್ಧರಿಸಿ ತಾರೀಖನ್ನೂ ಸಹ ಗೊತ್ತುಮಾಡಲಾಗುವುದೆಂದು ತಿಳಿದುಬಂದಿದೆ.

ಡಾ|| ಪಿಚ್ಚು ಮುತ್ತು ಅಮೆರಿಕಾಕ್ಕೆ

ಮದರಾಸ್ ಏ ೪

ಮೈಸೂರು ಸರ್ಕಾರದ ಭೂಗರ್ಭಶಾಖೆಯ ಡೈರೆಕ್ಟರ್ ಡಾ|| ಸಿ ಎಸ್ ಪಿಚ್ಚುಮುತ್ತುರವರು ೭ನೇ ತಾ|| ಅಮೇರಿಕಾಕ್ಕೆ ಹೊರಟು ೩ ತಿಂಗಳು ಕಾಲ ಅಲ್ಲಿ ಸರ್ಕಾರಿ ಅತಿಥಿಗಳಾಗಿರುವರು.

ಆ ಕಾಲದಲ್ಲಿ ಡಾ|| ಪಿಚ್ಚುಮುತ್ತುರವರು ಅಮೇರಿಕಾ ಭೂಗರ್ಭ ಸಂಸ್ಥೆಯ ಸಭೆಗಳಲ್ಲಿ ಭಾಗವಹಿಸುವುದಲ್ಲದೆ ಗಣಿಗಳು, ವಿಶ್ವವಿದ್ಯಾನಿಲಯಗಳಿಗೆ ಭೇಟಿ ಕೊಡಲಿರುವರು.

ಪೌರಸಭೆಯ ವಿಶೇಷ ಅಧಿವೇಶನ

ಮೈಸೂರು ಏ ೫

ಮೈಸೂರು ಪೌರಸಭೆಯ ವಿಶೇಷಾಧಿವೇಶನವು ೧೯೫೨-೫೩ನೇ ಸಾಲಿನ ಬಡ್ಜೆಟ್ ಪರಿಶೀಲಿಸಲು ಸೋಮವಾರ ಸಂಜೆ ೩ ಗಂಟೆಗೆ ಸೇರಲಿದೆ.

ನಗರ ಪರಿಶೀಲನೆ

ಮೈಸೂರು ಏ ೫

ಪುರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು, ಕಮಿಷನರ್ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಮತ್ತು ವಾಣಿವಿಲಾಸ ವಾಟರ್ ವರ್ಕ್ಸ್ ಸೂಪರಿಂಟೆಂಡೆಂಟ್ ಶ್ರೀ ಅಂಬೇಡ್ಕರ್‌ರವರು ನಿನ್ನೆ ಕೃಷ್ಣರಾಜ ಮೊಹಲ್ಲಾ ಮತ್ತು ಶಿಲ್ಲೇ ಮೊಹಲ್ಲಾಗಳಿಗೆ ಭೇಟಿಯಿತ್ತು, ನೀರಿನ ಸರಬರಾಜಿನ ಬಗ್ಗೆ ಇರುವ ಕುಂದುಕೊರತೆಗಳನ್ನು ಪರಿಶೀಲಿಸಿದರು.

ಪುರಸಭಾಧ್ಯಕ್ಷರು ನಿನ್ನೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಭೇಟಿ ಮಾಡಿ ಪುರಸಭೆಯ ಆಡಳಿತದ ಬಗ್ಗೆ ಮಾತುಕತೆ ನಡೆಸಿದರೆಂದು ಗೊತ್ತಾಗಿದೆ.

ಚೈನಾಕ್ಕೆ ಭಾರತದ ಸಾಂಸ್ಕೃತಿಕ ನಿಯೋಗ

ಚೈನಾ ಸರ್ಕಾರದ ಆಹ್ವಾನವನ್ನು ಮನ್ನಿಸಿ ಭಾರತಸರ್ಕಾರವು ಇದೇ ೨೭ನೇ ತಾ|| ಶ್ರೀಮತಿ ವಿಜಯಲಕ್ಷ್ಮಿಯವರ ನಾಯಕತ್ವದಲ್ಲಿ ೧೫ ಜನಸಂಖ್ಯೆಗೊಂಡ ಒಂದು ನಿಯೋಗವನ್ನು ಕಳುಹಿಸಲಿದೆ.

ಈ ನಿಯೋಗದಲ್ಲಿ ಆಚಾರ್ಯ ನರೇಂದ್ರದೇವ್, ಶ್ರೀ ಬಾಲಕೃಷ್ಣಶರ್ಮ, ಶ್ರೀಮತಿ ದ.ಗರ್ಬಾಬಾಯಿ, ನವಾಬ್ ಯೂರ್‌ಜಂಗ್, ಶ್ರೀ ಚಲಪತಿರಾವ್, ಮಿ|| ಫ್ರಾಂಕ್ ಮೂರೆಸ್ ಮುಂತಾದವರಿರುವರು.

ಶಾಂತಿಸ್ಥಾಪನೆಗಾಗಿ ಹೋರಾಡುವೆನು

ಅಧ್ಯಕ್ಷ ಟ್ರೂಮನ್ನರು ತಾವು ಸೆನೆಟ್ಟಿಗಾಗಲಿ ಅಥವ ಪ್ರತಿನಿಧಿ ಸಭೆಗಾಗಲಿ ಚುನಾವಣೆಗೆ ನಿಲ್ಲುವುದಿಲ್ಲವೆಂದು ತಿಳಿಸಿ ತಾವು ಅಧ್ಯಕ್ಷ ಪದವಿಯಿಂದ ನಿವೃತ್ತರಾದ ಮೇಲೆ ಶಾಂತಿಸ್ಥಾಪನೆಗಾಗಿ ಹೋರಾಡಲಿರುವರೆಂದು ತಿಳಿಸಿರುವರು.

ಪ್ರಾಂತ್ಯ ಆಡಳಿತಗಾರರ ಸಭೆ

ಪಾಕಿಸ್ಥಾನದಲ್ಲಿ ಪ್ರಾಂತ್ಯದ ಆಡಳಿತಗಾರರ ಸಭೆಯು ಇದೇ ಮಾಹೆ ೮ನೇ ತಾರೀಖಿನಂದ ಕರಾಚಿಯಲ್ಲಿ ನಡೆಯುತ್ತಲಿದೆ. ಕಮ್ಯೂನಿಸ್ಟ್ ಪಕ್ಷದ ಮೇಲೆ ನಿಷೇಧಾಜ್ಞೆ ಹಾಕುವುದು, ಪಾಕಿಸ್ಥಾನದಲ್ಲಿ ಬಂಗಾಳಿ ಭಾಷೆಯನ್ನು ಸರ್ಕಾರ ಭಾಷೆಯನ್ನಾಗಿ ಏರ್ಪಡಿಸುವ ವಿಷಯ ಮುಂತಾದುವು ಚರ್ಚೆಯಾಗುತ್ತಲಿರುವುದಾಗಿ ಹೇಳಲಾಗಿದೆ.

ರಾತ್ರಿಕೆಲಸವಿಲ್ಲ

ವಿಲೆಯಾಗದೆ ವಿಶೇಷವಾಗಿ ಬಟ್ಟೆಯು ಉಳಿದುಹೋಗಿರುವುದರಿಂದ ಉತ್ಪನ್ನವನ್ನು ಸ್ವಲ್ಪ ಕಡಿಮೆ ಮಾಡಬೇಕಾಗಿ ಬಂದಿದೆ. ಅದಕ್ಕಾಗಿ ಅಹಮದಾಬಾದಿನಲ್ಲಿ ೫೦ ಗಿರಣಿಗಳು ರಾತ್ರಿಕೆಲಸ ಮಾಡುವುದನ್ನು ನಿಲ್ಲಿಸುವುದಾಗಿ ತಿಳಿಯಬಂದಿದೆ. ಇದರಿಂದ ಸುಮಾರು ೩೦ ಸಾವಿರ ಜನಕ್ಕೆ ಕೆಲಸವಿಲ್ಲದೆ ಹೋಗುತ್ತದೆ.

* ಮೈಸೂರು ಸಿಟಿ ಕೋ-ಆಪರೇಟಿವ್ ಸೊಸೈಟಿಗೆ ಶ್ರೀ ಎ. ಕೃಷ್ಣಮೂರ್ತಿರಾಯರು ಅಧ್ಯಕ್ಷ ಶ್ರೀ ನಂದೀಬಸಪ್ಪನವರು ಉಪಾಧ್ಯಕ್ಷ ಮತ್ತು ಶ್ರೀ ಎ. ವಿ. ಶ್ರೀಕಂಠಯ್ಯನವರು ಕಾರ್ಯದರ್ಶಿಗಳಾಗಿ ಚುನಾಯಿತರಾಗಿದ್ದಾರೆ.

ಶ್ರೀ ಮೇಲ್ಕೋಟೆಯವರಿಗೆ ಸತ್ಕಾರ

ಮೈಸೂರು ಏ ೫

ಮಹಾಚುನಾವಣೆಗಳಲ್ಲಿ ಉಮೇದುವಾರರು ಹಣವನ್ನು ವ್ಯಯಮಾಡಿ ಓಟು ಗಳಿಸಿಕೊಳ್ಳಬಾರದು. ಜನತೆಯು ತಾವಾಗಿಯೇ ಮುಂದೆಬಂದು ತಮಗೆ ಬೇಕಾದವರನ್ನು ಆರಿಸಿಕೊಂಡು ಅವರಿಗೆ ಮತ ಕೊಡುವಂತಾಗಬೇಕು. ಅದೇ ಧ್ಯೇಯದ ಮೇಲೆ ತಾವು ಚುನಾವಣೆಗಳಲ್ಲಿ ಮತಗಳಿಸಿರುವುದಾಗಿ ಹೈದರಾಬಾದ್ ಆರ್ಥಿಕ ಸಚಿವ ಡಾ|| ಮೇಲ್ಕೋಟೆಯವರು ಈ ದಿನ ಸಾಧ್ವಿಪತ್ರಿಕಾ ಕಛೇರಿಯಲ್ಲಿ ನಡೆದ ಸತ್ಕಾರಕೂಟದಲ್ಲಿ ಮಾತನಾಡುತ್ತಾ ತಿಳಿಸಿದರು.

ಡಾ|| ಮೇಲ್ಕೋಟೆಯವರು ತಮ್ಮ ವಿದ್ಯಾಭ್ಯಾಸದ ಸವಿನೆನಪುಗಳನ್ನು ವಿವರಿಸುತ್ತಾ, ಕಳೆದ ೩೦ ವರ್ಷಗಳಿಂದ ಹೈದರಾಬಾದಿನಲ್ಲಿ ನೆಲಸಿ ತಾವು ಪ್ರಜಾಸೇವೆಯನ್ನು ಕೈಗೊಂಡು ಜನರ ಪ್ರೀತಿ, ವಿಶ್ವಾಸಗಳನ್ನು ಗಳಿಸಿರುವುದನ್ನು ವಿವರಿಸಿದರು.

ಸರ್ಕಾರ ನಡವಳಿಕೆಗಳ ವಿಷಯವಾಗಿ ಮಾತನಾಡುತ್ತಾ, ವಿಶ್ವದ ಇಂದಿನ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವನೀತಿಯನ್ನೇ ಪೂರ್ಣವಾಗಿ ಅನುಸರಿಸಿಯಾಗಲಿ, ಸರ್ವಾಧಿಕಾರತ್ವದಿಂದಾಗಲೀ ರಾಜ್ಯಭಾರ ನಡೆಸುವುದು ಅತ್ಯಂತ ಕಷ್ಟ. ಸಮ್ಮಿಶ್ರನೀತಿಯನ್ನು ಅನುಸರಿಸಬೇಕಾಗಿದೆ. ಉದಾಹರಣೆಗೆ ಕೆಲವು ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕೆಂದು ಕೇಂದ್ರ ಪ್ರಾಂತ ಸರ್ಕಾರಗಳಿಗೆ ಹೇಳಬೇಕಾದ ಪರಿಸ್ಥಿತಿ ಯಿದೆ. ಮತ್ತೆ ಕೆಲವನ್ನು ಪ್ರಜಾಪ್ರಭುತ್ವ ತತ್ವದಮೇಲೆ ನಾವೇ ನಡೆಸಬೇಕಾಗಿದೆ. ನಾಯಕರ ಚುನಾವಣೆಯ ವಿಷಯದಲ್ಲಿ ಪ್ರಜಾಪ್ರಭುತ್ವ ತತ್ವದಮೇಲೆ ಬಹುಮತಗಳಿಸುವ ನಾಯಕರನ್ನೇ ಆರಿಸಿಕೊಳ್ಳಿ ಎಂದು ನಮ್ಮ ಹಿರಿಯ ನಾಯಕರಾದ ಪಂಡಿತ ನೆಹರೂರವರು ಹೇಳುತ್ತಾ, ಇಂತಹವರನ್ನೇ ನಾಯಕರನ್ನಾಗಿ ಮಾಡಿಕೊಳ್ಳಿ ಎಂದು ಹೇಳಿರುವರು. ಹಾಗೆ ನಡೆಯದಿದ್ದರೆ ಮಾರ್ಗವಿಲ್ಲವೆಂದರು ಜನತೆಯ ಹಿತಾಕಾಂಕ್ಷೆಗಳನ್ನು ನಾವು ಮನವಂತು ಅವರ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ನಾವೆಲ್ಲಾ ದುಡಿಯಬೇಕೆಂದು ಹೇಳಿದರು.

ಈ ಸಮಾರಂಭಕ್ಕೆ ಪುರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು, ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜನಾಡಾರರು, ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ, ನಗರ ಪ್ರಮುಖ ಮಹನೀಯರು, ಪತ್ರಿಕೋದ್ಯೋಗಿಗಳು ಆಗಮಿಸಿದ್ದರು.

ಶ್ರೀ ಅಗರಂ ರಂಗಯ್ಯನವರು ಡಾ|| ಮೇಲ್ಕೋಟೆಯವರನ್ನು ಸ್ವಾಗತಿಸುತ್ತಾ, ಅವರ ಸೇವೆಯನ್ನು ವಿವರಿಸಿದರು.

ಮಂತ್ರಿಗಳು ಬೆಂಗಳೂರಿನಲ್ಲಿ

ಬೆಂಗಳೂರು ಏ ೫

ನಿನ್ನೆಯ ದಿನ ಮೈಸೂರಿನಲ್ಲಿ ಶ್ರೀಮನ್ಮಹಾರಾಜರ ಸಮ್ಮುಖದಲ್ಲಿ ಪ್ರಮಾಣ ವಚನ ಸ್ವೀಕರಿಸಿದ ನೂತನ ಮಂತ್ರಿಗಳೆಲ್ಲಾ ಈ ದಿನ ಬೆಳಗ್ಗೆ ಇಲ್ಲಿ ಆಗಮಿಸಿ ಸರ್ಕಾರಿ ಕೆಲಸಕಾರ್ಯಗಳಲ್ಲಿ ತೊಡಗಿರುವರು.

ಕೃಷಕ್ ಲೋಕ್‌ಪಕ್ಷದ ಸಭೆಯ ಸಹಕಾರ

ಕೃಷಕ್‌ಲೋಕ್ ಪಕ್ಷದ ಆಂಧ್ರಸಭೆಯ ಕಾರ್ಯಕಾರಿಸಮಿತಿಯ ಸದಸ್ಯರು, ಮದರಾಸ್ ಶಾಸನಸಭೆಯಲ್ಲಿರುವ ಈ ಪಕ್ಷದ ಸದಸ್ಯರು ಒಟ್ಟಿಗೆಸೇರಿ ನಿನ್ನೆಯದಿನ ಸಭೆ ನಡೆಸಿ, ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷದೊಡನೆ ಸರ್ಕಾರ ರಚಿಸಲು ಸಹಕರಿಸುವ ವಿಷಯವನ್ನು ಚರ್ಚಿಸಿದರು. ಪಕ್ಷದ ನಾಯಕರಾದ ಪ್ರೊಫೆಸರ್ ಎನ್. ಜಿ. ರಂಗಾ, ಶಾಸನಸಭೆಯಲ್ಲಿಯ ಈ ಪಕ್ಷದ ನಾಯಕ ಶ್ರೀ ಲಚ್ಚಣ್ಣನವರೂ ಚರ್ಚೆಯಲ್ಲಿ ಭಾಗವಹಿಸಿ ಕೊನೆಗೆ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೊಸ ಮಂತ್ರಿಮಂಡಲ ಸ್ಥಾಪಿಸಲು ಪೂರ್ಣ ಸಹಕಾರ ನೀಡಬೇಕೆಂದೂ, ತಮ್ಮ ಪಕ್ಷದ ಪ್ರತ್ಯೇಕತೆಯನ್ನು ಉಳಿಸಿಕೊಂಡೇ ಇರಬೇಕೆಂದೂ ತೀರ್ಮಾನಿಸಿದೆ.

ಅಖಿಲಭಾರತ ಯುವಜನ ಸಂಘ

ಭಾರತದಲ್ಲಿ ಒಂದು ಅಖಿಲಭಾರತ ಯುವಜನಸಂಘವನ್ನು ಸ್ಥಾಪಿಸಲು ಭಾರತದ ನಾನಾಭಾಗಗಳಿಂದ ಯುವಕಸಂಘದ ಪ್ರತಿನಿಧಿಗಳು ಸದ್ಯದಲ್ಲೆ ದೆಹಲಿಯಲ್ಲಿ ಸೇರಲಿರುವರೆಂದು ಹೇಳಲಾಗಿದೆ.

ಮಾನಪತ್ರ

ಮದರಾಸ್ ಗೌರ್ನರ್ ಶ್ರೀ ಶ್ರೀಪ್ರಕಾಶರವರಿಗೆ ಮದರಾಸ್ ಪುರಸಭೆಯು ಮಾನಪತ್ರವನ್ನು ನಿನ್ನೆ ಒಪ್ಪಿಸಿತು.

ವಿವಿಧವಾರ್ತೆಗಳು

ಗ್ರಾಮಾಂತರ ಪ್ರದೇಶದ ೫೩ ಮಿಲಿಯನ್ ಜನರಿಗೆ ಉಪಯೋಗವಾಗಲಿರುವ ೭೫ ಸಹಕಾರ ಹೊಲ ಯೋಜನೆಯನ್ನು ಭಾರತ ಸರ್ಕಾರವು ತಕ್ಷಣ ಜಾರಿಗೆ ತರುವುದು. ಅಮೆರಿಕದ ತಂತ್ರಜ್ಞರು, ತಾಂತ್ರಿಕ ಸಹಾಯ ನೀಡುವರು. ಭಾರತದ ಆಹಾರವನ್ನು ಹೆಚ್ಚು ಉತ್ಪತ್ತಿ ಮಾಡುವುದೇ ಈ ಯೋಜನೆಯ ಉದ್ದೇಶ.

೦ ೦ ೦ ೦

ಅಮೆರಿಕ ಸರ್ಕಾರವು ಪ್ರಸಿದ್ಧಿ ಪಡಿಸಿದ ವರದಿಯ ಮೇರೆಗೆ, ಈ ವರ್ಷ ೧೯೫೧ರಲ್ಲಿ ಅಮೆರಿಕದಲ್ಲಿ ಬಹು ಕಡಿಮೆ ಸಾವುಗಳಾಯಿತೆಂದು ತಿಳಿದುಬಂದಿದೆ. ಅಲ್ಲಿಯ ಸರಾಸರಿ ಜೀವನ ೬೮.೨ ವರ್ಷ. ಅಲ್ಲಿ ನಿರುದ್ಯೋಗವೂ ಈ ವರ್ಷ ತುಂಬಾ ಕಡಿಮೆಯಾಗಿದೆ

೦ ೦ ೦ ೦

ಪರಸ್ಪರ ತಿಳುವಳಿಕೆ, ತಾಳ್ಮೆ ಮತ್ತು ಸಂಧಿಕೆ, ದಕ್ಷಿಣ ಏಷ್ಯಾದ ಸಮಸ್ಯೆಗಳನ್ನು ಬಗೆಹರಿಸಲು ಅಗತ್ಯವಾಗಿ ಬೇಕಾದ ಮುಖ್ಯ ಗುಣಗಳು ಎಂದು, ವಿಶ್ವಸಂಸ್ಥೆಯ, ಇಂಡೋನೇಷ್ಯಾದ ಪ್ರತಿನಿಧಿ ಮಂಡಲದ ಶುದ್ಧಿ ಶಾಖೆಯ ಅಧಿಕಾರಿಗಳಾದ ಕುಮಾರಿ ಜೆನ್ನಿ ಮಿಂಟ್ಜ ರವರು ತಿಳಿಸಿದರು.

ಯುದ್ಧ ತಪ್ಪಿಸಲು ಸಾಧ್ಯ

ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ಚರ್ಚೆಯಲ್ಲಿ ಭಾಗವಹಿಸಿದ ಅಮೇರಿಕ ಹೈಸ್ಕೂಲ್ ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾ, ಪ್ರಚಲಿತ ಕಲಹಗಳು ನಿಂತರೆ, ಯುದ್ಧವನ್ನು ತಪ್ಪಿಸಬಹುದೆಂದು ತಿಳಿಸಿದರು

ಆದರೆ ಸೋವಿಯಟ್ಟಿನ ಧಾಳಿ ಮನೋಭಾವನೆಯನ್ನು ತಪ್ಪಿಸಲು ಮತ್ತು ಸೋವಿಯಟ್ ದೇಶದ ಮಿಲಿಟರಿ ಶಕ್ತಿಯೊಂದಿಗೆ ಸರಿಸಮಾನವಾಗಿ ತೂಗಿಸಲು, ಸ್ವತಂತ್ರ ರಾಷ್ಟ್ರಗಳು ಮತ್ತು ಅಮೇರಿಕವು ತಮ್ಮ ಮಿಲಿಟರಿ ಶಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಗೊಳಿಸಿದರು

ಅಧ್ಯಕ್ಷರ ಚುನಾವಣೆ

ರಾಷ್ಟ್ರಾಧ್ಯಕ್ಷರ ಚುನಾವಣೆಗೆ ನಾಮಪತ್ರವನ್ನು ಸಲ್ಲಿಸುವ ದಿನವನ್ನು ಇದೇ ಮಾಚಿ ೧೨ನೇ ತಾ|| ಅರ್ಜಿಗಳ ಪರಿಶೀಲನೆ ೧೪ನೇ ತಾ|| ನಡೆಯುತ್ತದೆಯೆಂದು ಪಾರ್ಲಿಮೆಂಟ್ ಕಾರ್ಯದರ್ಶಿಗಳು ಪ್ರಕಟಿಸಿರುವರು.

ನಾಲಗೆ ದೇವತೆಗರ್ಪಣೆ

ಜಗ'ಧಂನ' ಎಂಬ ಹರಿಜನನೋರ್ವನು ದುರ್ಗಾ ದೇವತೆಯನ್ನು ಒಲಿಸಿಕೊಳ್ಳಬೇಕೆಂಬ ತನ್ನ ಭಕ್ತಿಯ ಪರಕಾಷ್ಠತೆಯಲ್ಲಿ ತಮ್ಮ ನಾಲಗೆಯನ್ನೇ ಚಾಕುವಿನಿಂದ ಕತ್ತರಿಸಿ ದೇವತೆಗೆ ಅರ್ಪಿಸಿದನು

ಹೈಕೋರ್ಟಿನಲ್ಲಿ ವಾದವಿವಾದ

ಬೆಂಗಳೂರು ಏ. ೫

ಮಾಜಿ ಅರ್ಥ ಸಚಿವರಾದ ಶ್ರೀ ಹೆಚ್. ಸಿ. ದಾಸಪ್ಪನವರ ಕತ್ತು ಹಿಸುಕಲು ಯತ್ನಿಸಿದರೆಂಬ ಅಪಾದನೆಯ ಮೇಲೆ ದಸ್ತಗಿರಿಯಾಗಿರುವ ಶ್ರೀ ಹನುಮಂತರೆಡ್ಡಿ ಎಂಬುವರ ಜಾಮೀನು ಅರ್ಜಿ ಹೈಕೋರ್ಟಿನಲ್ಲಿ ನ್ಯಾಯಮೂರ್ತಿ ಶ್ರೀ ಎನ್. ಬಾಲಕೃಷ್ಣಯ್ಯನವರ ಮುಂದೆ ಬಂದು ವಾದ ವಿವಾದಗಳು ಮುಂದುವರಿದವು. ಈ ಬಗ್ಗೆ ಆಜ್ಞೆಯನ್ನು ಸೋಮವಾರಕ್ಕೆ ಕಾದಿರಿಸಲಾಯಿತು.

ಕಾನೂನು ವಿರುದ್ಧ

ಶ್ರೀ ಸಿ ರಾಜಗೋಪಾಲಾಚಾರಿಯವರನ್ನು ಮದರಾಸ್ ಗವರ್ನರು ಮದರಾಸಿನ ಲೆಜಿಸ್ಲೇಟಿವ್ ಕೌನ್ಸಿಲ್ಲಿಗೆ ನಾಮಕರಣ ಮಾಡಿರುವುದು ಕಾನೂನು ವಿರುದ್ಧವೆಂದೂ ಇದನ್ನು ಕೂಡಲೆ ರದ್ದುಗೊಳಿಸಲು ಆಜ್ಞೆ ಹೊರಡಿಸಬೇಕೆಂದೂ, ಕಮ್ಯೂನಿಸ್ಟ್ ಎಂ ಎಲ್ ಎ ಆಗಿರುವ ಶ್ರೀ ಪಿ ರಾಮಮೂರ್ತಿಯವರು ಮದರಾಸ್ ಹೈಕೋರ್ಟಿನಲ್ಲಿ ಅರ್ಜಿ ಸಲ್ಲಿಸಿದ್ದಾರೆ

ಶ್ರೀ ರಾಮಮೂರ್ತಿಯವರು ತಮ್ಮ ಅರ್ಜಿಯಲ್ಲಿ—ನಾಮಕರಣ ಮಾಡುವ ಅಧಿಕಾರವನ್ನು ಗವರ್ನರು ದುರುಪಯೋಗಪಡಿಸಿಕೊಂಡಿದ್ದಾರೆಂದು ತಿಳಿಸಿದ್ದಾರೆ

ಸ್ವತಂತ್ರ ಪ್ರಪಂಚದ ಭವಿಷ್ಯ ಚೆನ್ನಾಗಿದೆ

ಪ್ಯಾರಿಸ್ ಏ ೨

ಉತ್ತರ ಅಟ್ಲಾಂಟಿಕ್ ಒಪ್ಪಂದ ಸಮ್ಮೇಳನದ ಸೇನಾಪತಿಗಳಾದ ಐಸೆನ್ ಹೋವರ್‌ರವರು ತಮ್ಮ ವರದಿಯೊಂದನ್ನು ಒಪ್ಪಿಸುತ್ತಾ, ಪ ಪಂಚಕ್ಕೆ ಒದಗಿದ ತೊಂದರೆಯು ಈಗ ಕಡಿಮೆಯಾಗಿ, ಸ್ವತಂತ್ರ ಪ್ರಪಂಚದ ಭವಿಷ್ಯ ಚೆನ್ನಾಗಿರಲು ಕಾರಣವಿದೆ ಎಂದು ತಿಳಿಸಿದ್ದಾರೆ.

ಸರ್ವಾಧಿಕಾರ ಧಾಳಿಯು ಯಾವ ಭೂಮಿಯಲ್ಲಾದರೂ ಆಗಬಹುದು ಅದಕ್ಕೆ ಎಲ್ಲೆಯಿಲ್ಲ ಎಲ್ಲಿ ಅದೂ ಅದನ್ನು ತಡೆಗಟ್ಟಲೇಬೇಕು ಅಥವಾ ಪ್ರಾದೇಶಿಕ ಜನರು ಈ ಧಾಳಿಯನ್ನು ಮಟ್ಟಹಾಕಲು ತಯಾರಾಗಿರಬೇಕು, ಎಂದು ತಮ್ಮ ವರದಿಯಲ್ಲಿ ಸೇನಾಪತಿಗಳು ಸಮರ್ಥಿಸಿದ್ದಾರೆ.

ಈ ವರದಿಯನ್ನು ನ್ಯಾಟೋ ಒಪ್ಪಂದ ರಾಷ್ಟ್ರಗಳೆಲ್ಲಕ್ಕೂ ಕಳುಹಿಸಿ ಕೊಡಲಾಯಿತು.

ಹೋದ ವರ್ಷಕ್ಕೂ ಈ ವರ್ಷಕ್ಕೂ ಇರುವ ಅಂತರವನ್ನು ವಿವರಿಸುತ್ತಾ, ಹೋದ ವರ್ಷ, ಯಾವಾಗ ಬೇಕಾದಾಗ, ಎಲ್ಲಿ ಬೇಕಾದರೂ, ಧಾಳಿಯಾಗಬಹುದೆಂಬ ಹೆದರಿಕೆಯಿತ್ತು, ಆ ಹೆದರಿಕೆ ಈ ವರ್ಷ ಕಾಣುತ್ತಿಲ್ಲವೆಂದು ಹೇಳಿದ್ದಾರೆ.

ಹೈದರಾಬಾದಿನಲ್ಲಿ ನಿರ್ಬಂಧಾಜ್ಞೆ

ಹೈದರಾಬಾದ್ ಅಸೆಂಬ್ಲಿ ನಡೆಯುತ್ತಿರುವ ಭವನದ ಸುತ್ತ ಮುನ್ನೂರು ಗಜ ಫಾಸಲೆಯಲ್ಲಿ ಮೆರವಣಿಗೆಗಳು, ಸಭೆಗಳು, ಘೋಷಣೆಗಳು ಮತ್ತು ಆಯುಧಗಳನ್ನು ಹೊತ್ತು ತಿರುಗುವುದು ಮೂರು ದಿನಗಳ ಕಾಲ ಕೂಡದೆಂದು ಪೋಲೀಸ್ ಕಮೀಷನರು ಆಜ್ಞೆ ಮಾಡಿದ್ದಾರೆ.

ರಾಜಾಜಿಯವರಿಗೆ ನೆರವು

ಮಂತ್ರಿಮಂಡಲವೇರ್ಪಡಿಸಿ ಸರ್ಕಾರವನ್ನು ಉತ್ತಮರೀತಿಯಲ್ಲಿ ನಡೆಸಲು ಮದರಾಸ್ ಶಾಸನಸಭೆಯಲ್ಲಿರುವ ಸ್ವತಂತ್ರ ಸದಸ್ಯರನೇಕರು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಸಿ ರಾಜಗೋಪಾಲಾಚಾರಿಯವರಿಗೆ ಪೂರ್ಣ ಬೆಂಬಲನೀಡುವರೆಂದು ಹೇಳಲಾಗಿದೆ.

ಈ ಸ್ವತಂತ್ರ ಕಾಂಗ್ರೆಸ್ ಉಮೇದುವಾರರಿಗೆ ಪ್ರತಿಸ್ಪರ್ಧಿಗಳಾಗಿ ನಿಂತು ಚುನಾಯಿತರಾಗಿರುವುದರಿಂದ ಇವರು ಕಾಂಗ್ರೆಸ್ ಪಕ್ಷವನ್ನು ಸೇರುವುದಿಲ್ಲವಾದರೂ ಇವರನ್ನು ಕಾಂಗ್ರೆಸ್ ಪಕ್ಷದ ಅಸೋಸಿಯೇಟ್ ಮೆಂಬರುಗಳಾಗಿ ತೆಗೆದುಕೊಂಡು ಶಾಸನಸಭೆಯ ಹೊರಗೆ ಸ್ವತಂತ್ರರಾಗಿರುವಂತೆ ಮಾಡಲಾಗುವುದೆಂದು ಗೊತ್ತಾಗಿದೆ.

ಸರ್ಕಾರ ಜವಾಬ್ದಾರಿಯಲ್ಲ

ವಿದೇಶೀಗಳೊಡನೆ ಅಂಚೆ ತಿಕ್ಷಣ ವಿಷಯದಲ್ಲಿ ಸರ್ಕಾರಕ್ಕೆ ಅನೇಕ ಆಕ್ಷೇಪಣಾ ಪತ್ರಗಳು ಬಂದಿವೆ. ಈ ವಿಷಯದಲ್ಲಿ ಸರ್ಕಾರ ಜವಾಬ್ದಾರಿಯಲ್ಲ. ಈ ವಿಷಯದಲ್ಲಿ ಸರ್ಕಾರದೊಡನೆ ಪತ್ರವ್ಯವಹಾರಕ್ಕೆ ಆಸ್ಪದವಿಲ್ಲವೆಂದು ಕೇಂದ್ರ ಸರ್ಕಾರ ಪ್ರಕಟಿಸಿದೆ.

ಬಟ್ಟೆ ಮಾರಾಟ ನಿರ್ಬಂಧ ರದ್ದು

ವಿಂಧ್ಯಪ್ರದೇಶ ಸರ್ಕಾರದವರು ಬಟ್ಟೆ ಮಾರಾಟದ ಮೇಲಿನ ನಿರ್ಬಂಧಗಳನ್ನು ತಕ್ಷಣದಿಂದಲೇ ತೆಗೆದುಹಾಕಿದ್ದಾರೆ. ಬಟ್ಟೆ ಬೆಲೆಗಳು ಎಂದಿನಂತೆ ನಿಯಂತ್ರಣಕ್ಕೆ ಒಳಗಾಗಿರುವುವು.

ಶ್ರೀ ನಿಜಲಿಂಗಪ್ಪ ಮತ್ತು ರಾಮರಾಜ ನಾಡರ್

ಮೈಸೂರು ಏ ೪

ತಮಿಳುನಾಡು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಕಾಮರಾಜನಾಡರ್ ಮತ್ತು ಕೆ ಪಿ ಸಿ ಸಿ ಅಧ್ಯಕ್ಷರಾದ ಶ್ರೀ ಎಸ್ ನಿಜಲಿಂಗಪ್ಪನವರು ಇಂದು ಕೊಳ್ಳೇಗಾಲದಿಂದ ಮೈಸೂರು ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣ ಮಾಡಿದರು.

ಪೇಟೆ ಧಾರಣೆ

ಮೈಸೂರು ತಾ|| 5-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	11-12	18-4
ಹೊಂಗೆಬೀಜ	,,		13-14
ಹುರುಳಿ	,,	30-6	31-10
ಹೆಸರು	,,	56-2	57-8
ಮೆ. ಕಾಯಿ ಮಣಕ್ಕೆ		7-4	14-0
ಹುಣಸೇಹಣ್ಣು	,,	2-10	3-9
ಸೀಗೆಕಾಯಿ	,,	3-1	3-7
ತೆಂಗಿನಕಾಯಿ 1100ಕ್ಕೆ		133	212

ಚಿನ್ನ ಬೆಳ್ಳಿ ದರಗಳು

5-4-52	ರೂ.
ಸವರನ್	66-0
,,	66-2
ಚಿನ್ನ ತೊಲ	91-10
,, ಮೂಟ	90-8
ಬೆಳ್ಳಿ 100 ತೊಲ	157-8
,, ತೊಲ	1-11

ರಣಜಿತ್

೪—೪—೫೨ರಿಂದ ಪ್ರತಿದಿನ ೩ ಆಟಗಳು

ಫಿಲ್ಮಿಂಸ್ತಾನ್‌ರವರ—

ಶ್ರೀಮತಿಜೀ

ಪಾತ್ರ:-ನಾಸೀರ್ ಖಾನ್, ಶ್ಯಾಮಾ.

ವುಡ್ ಲ್ಯಾಂಡ್ಸ್

೪—೪—೫೨ ರಿಂದ ಪ್ರತಿದಿನ ೩ ಆಟಗಳು

ಮೀನಾಕುಮಾರಿ, ಮುಬಾರಕ್ ಪಾತ್ರವಹಿಸಿರುವ ಹಿಂದಿ ಚಿತ್ರ.

-ಮದೋಷ್-

ನ್ಯೂಅಪೇರ

೨೮—೩—೫೨ ರಿಂದ ಅಮೋಘವಾಗಿ ಪ್ರದರ್ಶಿತ

ಪಕ್ಷಿರಾಜರವರ—

ಕನ್ನಿಕ (ತಮಿಳು)

ಪಾತ್ರ-ಟಿ. ಇ. ವರದನ್, ಡಿ. ಬಾಲಸುಬ್ರಹ್ಮಣ್ಯಂ, ಎನ್. ಎಸ್. ಕೃಷ್ಣನ್, ಎಂ. ಎಸ್. ಸರೋಜಿನಿ, ಎಂ. ಆರ್. ಸಂತಾನಲಕ್ಷ್ಮಿ, ಟಿ. ಎ. ಮಧುರಂ ಲಲಿತ-ಪದ್ಮಿನಿ.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯಾಂಕ್ ಬಂಡ್‌ರೋ ಮೈಸೂರು ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಕೈಸಿಂದ್ ಪ್ರೆಸ್, ಮೈಸೂರು

ಫೋನ್ ೫೭೪೪ (ರಿಂಗ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೮-೪—೧೯೫೨ನೇ ಮಂಗಳವಾರ [ಸಂಚಿಕೆ ೧೮೩

ರಾಜಾಜಿಯವರ ನಾಮಕರಣ ಕ್ರಮಬದ್ಧವಾಗಿದೆ

ಮಧ್ಯ ಭಾರತದಲ್ಲಿ ನೀರಿನ ಬೆಲೆಯು ಪೆಟ್ರೋಲ್ ಬೆಲೆಗಿಂತ ಹೆಚ್ಚಾಗಿದೆ

ಡಾ|| ಮಲಾನ್‌ರ ನೀತಿಯ ಖಂಡನೆ

ಬೆಂಗಳೂರು ಏ ೭

ಡಾ|| ಮಲಾನ್‌ರ ವರ್ಣಭೇದ ನೀತಿಯನ್ನು ಖಂಡಿಸಿ ದಕ್ಷಿಣಾಫ್ರಿಕಾದ ವರ್ಣೀಯರ ಹೋರಾಟಕ್ಕೆ ಬೆಂಬಲವನ್ನೀಯುವ ನಿರ್ಣಯವನ್ನು ಈ ದಿನ ಸಂಜೆ ನ್ಯಾಷನಲ್ ಕಾಲೇಜ್ ಆವರಣದಲ್ಲಿ ಸೇರಿದ್ದ ಬಹಿರಂಗ ಸಭೆಯಲ್ಲಿ ಅಂಗೀಕರಿಸಲಾಯಿತು.

ದಕ್ಷಿಣ ಆಫ್ರಿಕ ದಿನಾಚರಣೆ ಸಂಬಂಧದಲ್ಲಿ ಸರ್ವೆಂಟ್ಸ್-ಆಫ್-ಇಂಡಿಯ ಸೊಸೈಟಿ, ಇಂಡಿಯನ್ ಕೌನ್ಸಿಲ್-ಆಫ್ ವರ್ಲ್ಡ್ ಅಫೇರ್ಸ್, ಗೋಖಲೆ ಸಾರ್ವಜನಿಕ ಸಂಸ್ಥೆ ಮತ್ತು ಸೋಷಲಿಸ್ಟ್ ಪಾರ್ಟಿ ಆಶ್ರಯದಲ್ಲಿ ಸಭೆಯನ್ನು ಕರೆಯಲಾಗಿತ್ತು. ಕೇಂದ್ರ ಸರ್ಕಾರದ ಸಂಸ್ಥಾನ ಶಾಖೆ ಮಾಜಿ ಕಾರ್ಯದರ್ಶಿ ಶ್ರೀ ವಿ ಪಿ ಮೆನನ್‌ರವರು ಅಧ್ಯಕ್ಷತೆ ವಹಿಸಿದ್ದರು

ವಿದೇಶಿ ಸಂಸ್ಥೆಗಳ ಬಗ್ಗೆ ಡಾ|| ಕಿಚ್ಲೂ ಆರೋಪ

ಭಾರತವನ್ನು ಯುದ್ಧದಲ್ಲಿ ಸಿಲುಕಿಸಲು ಕೆಲವು ವಿದೇಶಿ ಸಂಸ್ಥೆಗಳು ಪ್ರಯತ್ನಿಸುತ್ತಿವೆಯೆಂದು ಅಧಿಕೃತವಾಗಿ ನನಗೆ ಗೊತ್ತು ಎಂದು ಪಂಜಾಬಿನ ಡಾ|| ಸೈಫುದ್ದೀನ್ ಕಿಚ್ಲೂರವರು ರಂಗೂನಿನಲ್ಲಿ ನೆರೆದಿದ್ದ ಒಂದುಲಕ್ಷ ಜನತೆಯನ್ನುದ್ದೇಶಿಸಿ ಭಾಷಣಮಾಡುತ್ತಾ ತಿಳಿಸಿದರು.

ಈಚೆಗೆ ತಾವು ದಕ್ಷಿಣಭಾರತ ಪ್ರವಾಸಮಾಡಿದಾಗ ಯುದ್ಧ ನೆಲೆಗಳ ಸ್ಥಾಪನೆಗೆ ಸಾಧ್ಯವಾಗುವಂಥ ಅನೇಕ ಒಳಸಂಚುಗಳು ಕಂಡುಬಂದುವೆಂದೂ ಡಾ|| ಕಿಚ್ಲೂರವರು ಹೇಳಿರುವರು.

ದಕ್ಷಿಣ ಆಫ್ರಿಕದಲ್ಲಿ ಚಳುವಳಿ

ದಕ್ಷಿಣ ಆಫ್ರಿಕದಲ್ಲಿ ಸರ್ಕಾರದ ವರ್ಣಭೇದ ನೀತಿಯನ್ನು ಪ್ರತಿಭಟಿಸುವ ಚಳುವಳಿಯನ್ನು ದಕ್ಷಿಣ ಆಫ್ರಿಕಾದಲ್ಲಿರುವ ಯೂರೋಪೀಯರಲ್ಲದವರೂ ನಿನ್ನೆ ಪ್ರಾರಂಭಿಸಿದರು. ಭಾರಿ ಪ್ರಮಾಣದಲ್ಲಿ ಸಭೆಗಳು ನಡೆದುವು

ಭಾರತದ ಪ್ರಧಾನಿ ನೆಹರೂ, ಪರ್ಷಿಯ ಪ್ರಧಾನಿ ಡಾ|| ಮುಸಾದಿಕ್, ಚೈನಾ ಮತ್ತು ಪಶ್ಚಿಮ ಆಫ್ರಿಕಾ ಪ್ರಧಾನಿಗಳೂ ಚಳುವಳಿಗೆ ಜಯಕೋರಿ ಸಂದೇಶಗಳನ್ನು ಕಳುಹಿಸಿರುವರು.

ರಾಧಾಕೃಷ್ಣನ್-ಸ್ಟಾಲಿನ್ ಭೇಟಿ

ರಷ್ಯಾದಲ್ಲಿ ಭಾರತರಾಯಭಾರಿಯಾಗಿರುವ ಡಾ|| ರಾಧಾಕೃಷ್ಣನ್‌ರವರು ತಮ್ಮ ಹುದ್ದೆಯಿಂದ ಸದ್ಯದಲ್ಲೇ ನಿವೃತ್ತರಾಗಲಿರುವುದರಿಂದ ರಷ್ಯಾ ಪ್ರಧಾನಿ ಸ್ಟಾಲಿನ್‌ರವರು ಇವರಿಗೆ ಭೇಟಿಯಿತ್ತು, ೧ ಗಂಟೆಕಾಲ ಭಾರತ-ರಷ್ಯಾ, ಅಂತರರಾಷ್ಟ್ರೀಯ ಸಂಬಂಧಪಟ್ಟ ವಿಷಯಗಳಲ್ಲಿ ಮಾತುಕತೆ ನಡೆಸಿದರೆಂದು ಗೊತ್ತಾಗಿದೆ.

ವಿದೇಶೀ ರಾಯಭಾರಿಗಳಿಗೆ ಅವರ ಅಧಿಕಾರಸ್ವೀಕಾರ ಮಾಡುವ ಮತ್ತು ನಿವೃತ್ತರಾಗುವ ಮುನ್ನ ಮಿ|| ಸ್ಟಾಲಿನ್‌ರ ಭೇಟಿಯು ದೊರೆಯುದುದು ಭಾರತರಾಯಭಾರಿಯಾದ ಡಾ|| ರಾಧಾಕೃಷ್ಣನ್‌ರವರಿಗೆ ಪ್ರಥಮವೆಂದು ಹೇಳಲಾಗಿದೆ.

ಉಭಯತ್ರರ ಭೇಟಿಯು ಅತ್ಯಂತ ಸೌಹಾರ್ದ್ಯಯುತವಾಗಿತ್ತೆಂದು ಪ್ರಕಟವಾಗಿದೆ.

ರಷ್ಯಕ್ಕೆ ಸಂಧಾನದ ಆಸಕ್ತಿ

ಚರ್ಚೆ ಮತ್ತು ಸಂಧಾನಗಳಿಂದ ಬಿಡಿಸಲಾಗದಂತಹ ಜಗತ್ತನ್ನು ವಿಭಜಿಸುವ ಮಹತ್ಸಮಸ್ಯೆ ಯಾವುದೂ ಇಂದು ಇಲ್ಲ ಎಂಬುದಾಗಿ ಎಸ್. ರಾಧಾಕೃಷ್ಣನ್‌ರವರು ಹೇಳಿರುವರು

ಡಾ|| ರಾಧಾಕೃಷ್ಣನ್‌ರವರು ಪತ್ರಿಕಾ ಹೇಳಿಕೆಯೊಂದನ್ನು ಹೊರಡಿಸಿ ಪ್ರತಿಯೊಂದು ಪ್ರಯತ್ನಕ್ಕೂ ಅಡ್ಡಹಾಕಿ ಅಸಾಧ್ಯವೆಂದು ಕೈ ಕೊಡವಿ ಸುಮ್ಮನಾಗುವುದು ಸರಿಯಲ್ಲ. ಯಾವ ಕ್ರಮವನ್ನೂ ಪೋಲುಮಾಡಬಾರದು. ಅಗ್ರ ನಾಯಕರನ್ನು ಒಂದುಗೂಡಿಸಲು ಸರ್ವಪ್ರಯತ್ನ ಮಾಡಬೇಕು ಎಂದು ತಿಳಿಸಿದರು.

ಶ್ರೀ ಮಹಾವೀರ ಜಯಂತ್ಯುತ್ಸವ

ಮೈಸೂರು ಏ ೭

ನಾಳೆ ಸಂಜೆ ೬-೩೦ ಗಂಟೆಗೆ ಪುರಭವನದಲ್ಲಿ ಪುರಸಭಾ ಕಮೀಷನರ್ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿ ಶ್ರೀ ಮಹಾವೀರ ಜಯಂತ್ಯುತ್ಸವ ನಡೆಯುತ್ತದೆ.

ಶ್ರೀಗಳಾದ ಎಂ. ಯಮುನಾಚಾರ್ ಮತ್ತು ಹೆಚ್ ಕೆ ರಾಜಾರಾವ್‌ರವರು ಭಾಷಣಮಾಡುವರು ಸಂಗೀತವಿದುಷಿ ಶ್ರೀಮತಿ ಲಕ್ಷ್ಮಮ್ಮನವರ ಸಂಗೀತವೇರ್ಪಡಿಸಲಾಗಿದೆ.

ಕನ್ಯಕಾಪರಮೇಶ್ವರಿ ದೇವಸ್ಥಾನ

ರಾಜಧಾನಿಯ ಅಶೋಕಾರಸ್ತೆಯಲ್ಲಿರುವ ಶ್ರೀ ಮತ್ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಮಾಮೂಲಿನಂತೆ ಈ ಸಾರಿಯೂ ರಾಮೋತ್ಸವವು ಏರ್ಪಾಡಾಗಿದೆ. ಇದರ ಅಂಗವಾಗಿ ಕಳೆದ ೩ನೇ ತಾರೀಖಿನಿಂದ ೧೫ನೇ ತಾರೀಖಿನವರೆಗೆ ವಿವಿಧ ಉತ್ಸವಗಳು ಮತ್ತು ಪೂಜಾದಿಗಳು ಏರ್ಪಡಿಸಲಾಗಿದೆ.

ಉನ್ನತಾಧಿಕಾರಿಗಳಮೇಲೆ ಪ್ರಾಸಿಕ್ಯೂಷನ್

ಕಪ್ಪದ ಸೀಮೆಗೊಬ್ಬರದ ವ್ಯವಹಾರದಲ್ಲಿ ಭಾರತಸರ್ಕಾರಕ್ಕೆ ಲಕ್ಷಾಂತರ ರೂ. ನಷ್ಟವಾಗಿದೆಯೆಂಬ ಅಪಾದನೆಯನ್ನು ವಿಚಾರಿಸಲು ಕೇಂದ್ರಸರ್ಕಾರವು ನೇಮಿಸಿದ್ದ ವಿಚಾರಣಾಸಮಿತಿಯ ವರದಿಯ ಫಲವಾಗಿ, ಕೆಲವು ಉನ್ನತಾಧಿಕಾರಿಗಳ ಮೇಲೆ ಕೇಂದ್ರಸರ್ಕಾರವು ಪ್ರಾಸಿಕ್ಯೂಷನ್ ಹೂಡಲು ನಿರ್ಧರಿಸಿದೆಯೆಂದು ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ.

ಪ್ರಭಾ ಟಾಕೀಸ್ ಮೈಸೂರು

ಅಮೋಘ ಪ್ರಾರಂಭ ೧೦—೪—೫೨ ರಿಂದ ಪ್ರತಿದಿನ ಮೂರು ಆಟಗಳು

ಡಾ|| ರವೀಂದ್ರನಾಥ್ ಟಾಗೂರರ ಚಾರ್ ಅಧ್ಯಾಯ್

ಎಂಬ ಕಥೆಯ ಆಧಾರದ ಮೇಲೆ ತಯಾರಿಸಿದ ಉತ್ತಮ ದರ್ಜೆಯ ಹಿಂದೀ ಚಿತ್ರ

* ಜಲ್ ಜಲಾ *

ಪಾತ್ರ—† ಕಿಶೋರ್‌ಸಾಹು. † ದೇವಾನಂದ್, † ಗೀತಾಬಾಲಿ

ನಿರ್ಮಾಪಕ ಮತ್ತು ನಿರ್ದೇಶನ—ಪಾಲ್ ಜಿಲ್ಸ್ ಸಂಗೀತ—ಪಂಕಜ್‌ಮಲ್ಲಿಕ್

ಬೆಳಗಿನ ಪ್ರದರ್ಶನ ೧೧—೪—೫೨ ರಿಂದ ನೂರು ದಿನಗಳು ಮಾತ್ರ

ಮಿನರ್ವಾ ಮೂವಿಟೋನ್‌ರವರ— ⁂ ಪೃಥ್ವೀವಲ್ಲಭ್ ⁂

ತಕರಾರು ಅರ್ಜಿ ತಳ್ಳಿಹಾಕಲಾಗಿದೆ

ಮದ್ರಾಸ್ ಗೌರ್ನರ್‌ರವರು ಶ್ರೀ ಸಿ. ರಾಜಗೋಪಾಲಾಚಾರಿಯವರನ್ನು ಮದರಾಸ್ ಹಿರಿಯ ಶಾಸನಸಭೆಗೆ ನಾಮಕರಣ ಮಾಡಿರುವುದು ರಾಜ್ಯಾಂಗಕ್ಕೆ ವಿರೋಧವೆಂದು ಅದನ್ನು ರದ್ದುಗೊಳಿಸಬೇಕೆಂದು ಶಾಸನಸಭಾಧ್ಯಕ್ಷ ಶ್ರೀ ಪಿ ರಾಮಮೂರ್ತಿಯವರು ಮದರಾಸ್ ಹೈಕೋರ್ಟಿನಲ್ಲಿ ಹಾಕಿದ್ದ ತಕರಾರು ಮೊಕದ್ದಮೆಯನ್ನು ಮದ್ರಾಸ್ ಹೈಕೋರ್ಟು ವಿಚಾರಣೆನಡೆಸಿ ನಾಮಕರಣವು ಕ್ರಮಬದ್ಧವಾಗಿದೆಯೆಂದು ಹೇಳಿ ತಕರಾರನ್ನು ತಳ್ಳಿಹಾಕಿದೆ

ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಅಧಿಕಾರವರ್ಗ

ಮೈಸೂರು ಸಿಟಿ ಕೋ-ಆಪರೇಟೀವ್ ಬ್ಯಾಂಕ್‌ಗೆ ಶ್ರೀ ಎ. ಕೃಷ್ಣಮೂರ್ತಿರಾವ್‌ರವರು ಅಧ್ಯಕ್ಷರಾಗಿಯೂ, ಧರ್ಮರತ್ನಾಕರ ಕೆ. ನಂದೀಬಸಪ್ಪನವರು ಉಪಾಧ್ಯಕ್ಷರಾಗಿಯೂ, ಶ್ರೀ ಎ. ವಿ. ಶ್ರೀಕಂಠಯ್ಯನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ.

ನೀರಿನ ಬೆಲೆ ಪೆಟ್ರೋಲ್‌ಗಿಂತ ಹೆಚ್ಚು

ಮಧ್ಯಭಾರತದ ತಹಶೀಲಿನ ಬಹೋರಾದಲ್ಲಿ ನೀರಿನ ಅಭಾವ ಅತ್ಯಂತ ತೀವ್ರವಾಗಿದೆ ಪೆಟ್ರೋಲಿಗಿಂತ ನೀರಿನ ಬೆಲೆಯೇ ಹೆಚ್ಚಾಗಿದೆ ಎಂದು ವಾರ್ತಾ ಇಲಾಖೆಯ ಪ್ರಕಟಣೆಯೊಂದು ತಿಳಿಸುತ್ತದೆ.

ಪುರಸಭಾಧಿವೇಶನ

ಮೈಸೂರು ಏ ೭

೭-೪-೫೨ ನೇ ದಿನ ನಡೆಯಬೇಕಾಗಿದ್ದ ಪುರಸಭೆಯ ಅಯವ್ಯಯ ಅಧಿವೇಶನವನ್ನು ಅನೇಕಮಂದಿ ಸದಸ್ಯರ ಅಭಿಪ್ರಾಯದಮೇರೆಗೆ ೧೦-೪-೫೨ನೇದಿನ ಮಧ್ಯಾಹ್ನ ೩ ಗಂಟೆಗೆ ಮುಂದುವರಿಸಲಾಗಿದೆಯೆಂದು ಪುರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ತಿಳಿಸುತ್ತಾರೆ.

ಪ್ರೊಫೆಸರ್ ಕೆ. ಟಿ. ಷಾ

ಪ್ರೊಫೆಸರ್ ಕೆ. ಟಿ. ಷಾರವರು ಭಾರತ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಅರ್ಜಿಯನ್ನು ಸಲ್ಲಿಸಿರುವರು. ಶ್ರೀ ಮೇಘನಾಥ್ ಸಹಾರವರು ಹೆಸರು ಸೂಚಿಸಿ ಶ್ರೀ ಎ. ಕೆ. ಗೋಪಾಲನ್‌ರವರು ಅನುಮೋದಿಸಿರುವರು.

ಅಮೆರಿಕದ ರಾಜಕೀಯ

ಅಮೆರಿಕದ ಇತಿಹಾಸ ನಡವಳಿಕೆಯಂತೆ, ಅಧ್ಯಕ್ಷ ಟ್ರೂಮನ್ನರು ನಡೆದುಕೊಂಡರು. ಅವರು ಈ ಸಲ ಅಧ್ಯಕ್ಷ ಚುನಾವಣೆಗೆ ನಿಲ್ಲುವುದಿಲ್ಲವೆಂದು ಹೇಳಿರುವುದು ಅವರ ಘನತೆ, ಗಾಂಭೀರ್ಯದ ಉದಾಹರಣೆ. ಅಧ್ಯಕ್ಷ ರೂಸವೆಲ್ಟರ ಮರಣಾನಂತರ ಪಟ್ಟಕ್ಕೆ ಬಂದ ಟ್ರೂಮನ್ನರು ಸುಮಾರು ಎಂಟು ವರ್ಷಗಳ ಕಾಲ ಅಧಿಕಾರದಲ್ಲಿದ್ದರು. ಆದರೆ ಚುನಾಯಿತರಾದದ್ದು ಒಂದೇ ಸಲ-ಅದು ೧೯೪೮ರಲ್ಲಿ.

ಟ್ರೂಮನ್ನರ ಅಧಿಕಾರಾವಧಿಯಲ್ಲಿ ಕಾಂಗ್ರೆಸ್ಸು ಒಂದು ತಿದ್ದುಪಡಿಯನ್ನು ಒಪ್ಪಿಕೊಂಡಿತು. ಯಾರೊಬ್ಬರು, ಎಂಟು ವರ್ಷಗಳಿಗಿಂತ ಹೆಚ್ಚಾಗಿ ಅಮೆರಿಕದ ಅಧ್ಯಕ್ಷರಾಗಿರಬಾರದೆಂದು, ಟ್ರೂಮನ್ನರು ಚುನಾಯಿತರಾದದ್ದು ಒಂದೇ ಸಲವಾದ್ದರಿಂದ ಇನ್ನೊಮ್ಮೆ ಚುನಾವಣೆಗೆ ನಿಲ್ಲಬಹುದಾಗಿತ್ತು. ಆದರೆ ಕಾನೂನಿನ ನಿಜವಾದ ಅರ್ಥಕ್ಕೆ ಬೆಲೆಕೊಟ್ಟು ಚುನಾವಣೆಯಿಂದ ದೂರ ಸರಿದರು.

ಯುದ್ಧಾನಂತರದ ಅವಧಿಯಲ್ಲಿ ಟ್ರೂಮನ್ನರು ಕಷ್ಟದ ಕೆಲಸಗಳನ್ನು ಸಾಧಿಸಿದ್ದಾರೆ. ವಿದೇಶಾಂಗ ನೀತಿಯಲ್ಲಿ, ಅಮೆರಿಕ ಇನ್ನು ಕೆಲವು ವರ್ಷ, ಅದೇ ನೀತಿಯನ್ನು ಅನುಸರಿಸಿ ಬೇಕಾಗುವಷ್ಟು ತಳಹದಿ ಹಾಕಿದ್ದಾರೆ. ಸ್ವತಂತ್ರ ರಾಷ್ಟ್ರಗಳ ಸಹಕಾರದಿಂದ ಪ್ರಪಂಚದ ಶಾಂತಿಯನ್ನು ಕಾಪಾಡಬೇಕೆಂಬ ಘನ ಉದ್ದೇಶವನ್ನು ಅವರು ತಮ್ಮ ವಿದೇಶಾಂಗ ನೀತಿಯಲ್ಲಿ ಒಡೆದು ಕಾಣುವಂತೆ ತೋರಿದ್ದಾರೆ.

ಒಳಾಡಳಿತದಲ್ಲಿ ನಾಣ್ಯದ ತಳಿವರಿಯನ್ನು ತಪ್ಪಿಸಿ, ಉತ್ಪತ್ತಿ ಜಾಸ್ತಿ ಮಾಡಿಸಿ ದೇಶದ ರಕ್ಷಣೆಯನ್ನು ಬಲಪಡಿಸಿದ್ದಾರೆ. ಇತಿಹಾಸ ಬರೆದಿಡುವ ಮುಖ್ಯವಾದ ಅಂಶಗಳಿವು.

ಟ್ರೂಮನ್ನರ ನಿರ್ಧಾರದಿಂದ ಡೆಮೊಕ್ರಾಟಿಕ್ ಪಕ್ಷದಲ್ಲಿ ಸಮಸ್ಯೆ ತಲೆದೋರಿದೆ. ಮುಂದಿನ ನಾಯಕರಾರು? ಟ್ರೂಮನ್ನರ ಬೆಂಬಲ ಯಾರಿಗೆ? ಟ್ರೂಮನ್ನರು ಚುನಾವಣೆಯಿಂದ ದೂರ ಸರಿದದ್ದರಿಂದ ರಿಪಬ್ಲಿಕನ್ನರು, ಟ್ರೂಮನ್ನರ ಧೋರಣೆಯನ್ನು ಟೀಕಿಸದೆ ಮುಂದುವರಿಯುವಂತಿಲ್ಲ.

ನೆಬ್ರಾಸ್ಕ ಮತ್ತು ವಿಸ್‌ಕಾನ್‌ಸಿನ್ ಸಂಸ್ಥಾನದಲ್ಲಿ ಆದ ಪ್ರಾಥಮಿಕ ಚುನಾವಣೆಯಿಂದಾಗಿ ಸೆನೆಟರ್ ಟ್ಯಾಫ್ಟರು ಪುನಃ ಸ್ಪರ್ಧೆಯಲ್ಲಿ ಬಂದಂತಾಯಿತು.

ಮುಖ್ಯವಾಗಿ ಅಧ್ಯಕ್ಷ ಚುನಾವಣೆಯ ಪರಿಸ್ಥಿತಿ ಈ ರೀತಿ ಇದೆ.

ರಿಪಬ್ಲಿಕನ್ ಪಕ್ಷದ ಪರವಾಗಿ ಬಹುಜನರಿಂದ ಮಾನಿತರಾದ ಸೇನಾಪತಿ ಐಸೆನ್‌ಹೋವರರೂ, ಪಕ್ಷದ ಬೆಂಬಲವಿರುವ ಸೆನೆಟರ್ ಟ್ಯಾಫ್ಟರವರೂ, ಹುರಿಯಾಳುಗಳಾಗಿ ನಾಮಕರಣ ಸ್ಪರ್ಧೆಗೆ ನಿಲ್ಲುವರು.

ಡೆಮೊಕ್ರಾಟಿಕ್ ಪಕ್ಷದಿಂದ ಸೆನೆಟರ್ ಇಸ್ಟೆಸ್ ಕೀಫವರ್ ಮತ್ತು ಪಕ್ಷದಿಂದ ಅಧಿಕಾರಯುತವಾಗಿ ಬೆಂಬಲ ಪಡೆಯುವ ಹುರಿಯಾಳು, ರಾಷ್ಟ್ರಕೂಟದಲ್ಲಿ ನಾಮಕರಣ ಸ್ಪರ್ಧೆಗೆ ನಿಲ್ಲಬಹುದು.

ಈ ಪರಿಸ್ಥಿತಿಯು ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ನಡೆಯುವ ಪ್ರಾಥಮಿಕ ಚುನಾವಣೆಗಳಿಂದ ಏನೂ ಬದಲಾವಣೆಯಾಗುವ ಚಿನ್ಹೆ ಕಾಣುವುದಿಲ್ಲ.

ಮೈಸೂರು ಜಿಲ್ಲಾ ಬೋರ್ಡ್ ಆಯವ್ಯಯ

ಮೈಸೂರು ಏ ೭

ಮೈಸೂರು ಜಿಲ್ಲಾ ಬೋರ್ಡಿನ ಆಯವ್ಯಯದ ಅಧಿವೇಶನವು ನಿನ್ನೆಯದಿನ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ನೂತನ ಮಂತ್ರಿಮಂಡಲವನ್ನು ಅಭಿನಂದಿಸಿ ಅವರ ಅಧಿಕಾರಾವಧಿ ಕಾಲದಲ್ಲಿ ಆಡಳಿತವು ಉನ್ನತಮಟ್ಟದಲ್ಲಿ ಜರುಗಲೆಂದು ಜನತೆಗೆ ಸುಖಶಾಂತಿಗಳು ಲಭಿಸಲೆಂಬುವ ನಿರ್ಣಯವನ್ನು ಶ್ರೀ ಎಫ್. ಸಿ. ದೇವರಾಜೇ ಅರಸಿನವರು ಮಂಡಿಸಿ ಶ್ರೀ ವೆಂಕಟಸುಬ್ಬಯ್ಯನವರು ಅನುಮೋದಿಸಿದರು. ಸರ್ವಾನುಮತದಿಂದ ನಿರ್ಣಯ ಅಂಗೀಕಾರವಾಯಿತು.

ಜಿಲ್ಲಾ ಬೋರ್ಡ್ ಇಲ್ಲಿಯವರಿಗೆ ಮಾಡಿರುವ ಕಾರ್ಯಗಳನ್ನೆಲ್ಲಾ ಅಧ್ಯಕ್ಷರು ವಿವರಿಸಿ ಮುಂದಿನ ಸಾಲಿನ ಆಯವ್ಯಯಪಟ್ಟಿಯನ್ನು ಸಭೆಯ ಮುಂದೆ ಮಂಡಿಸಿದರು.

ಮುಂದಿನ ಸಾಲಿನಲ್ಲಿ ೨೨,೫೯,೦೦೦ ರೂ ಆದಾಯ, ೨೧,೪೩,೮೦೦ ರೂ ವೆಚ್ಚವನ್ನು ಅಂದಾಜು ಮಾಡಲಾಗಿದೆ.

ಹೊಸ ಜಿಲ್ಲಾ ಬೋರ್ಡ್ ಮತ್ತು ಪಂಚಾಯಿತಿ ಶಾಸನದ ವಿಷಯವಾಗಿ ಅಧ್ಯಕ್ಷರು ಪ್ರಸ್ತಾಪಿಸುತ್ತ ಹೊಸ ಶಾಸನ ಪ್ರಕಾರ ಭೂಕಂದಾಯದಲ್ಲಿ ಶೇಕಡ ೨೫ ರಷ್ಟನ್ನು ಜಿಲ್ಲಾ ಬೋರ್ಡುಗಳಿಗೆ ಕೊಡಬೇಕೆಂದು ನಿಗದಿ ಮಾಡಲಾಗಿದೆ. ಆದರೆ ಗ್ರಾಮಾಂತರ ಅಭಿವೃದ್ಧಿ ಕಾರ್ಯಗಳು ವಿಶೇಷವಾಗಿ ನಡೆಯಬೇಕಾಗಿರುವುದರಿಂದ ಈ ನಿಗದಿ ಮಾಡಿರುವುದು ಏನೂ ಸಾಲದು. ಶೇಕಡ ೫೦ ರಷ್ಟನ್ನಾದರೂ ಸರ್ಕಾರ ಕೊಡಬೇಕೆಂದು ತಿಳಿಸಿದರು.

ಬಿಡುಗಡೆ

ಕಾಶ್ಮೀರದ ಪ್ರಜಾಪರಿಷತ್ತು ನಾಯಕರನ್ನೆಲ್ಲಾ ಬಿಡುಗಡೆ ಮಾಡಿರುವುದಾಗಿ ಪ್ರಧಾನಿ ಶೇಕ್ ಅಬ್ದುಲ್ಲಾರವರು ತಿಳಿಸಿರುವರು. ಭಾರತದ ಸಂಸ್ಥಾನಿಕರಾಷ್ಟ್ರಪತಿಯವರ ಭೇಟಿಯ ಗೌರವಾರ್ಥವಾಗಿ ಈ ಬಿಡುಗಡೆಯಾಗಿದೆ.

ಹೆಸರುಗಳನ್ನು ಅರಿಸುವ ಸಾಹಸದಲ್ಲಿದ್ದೇನೆ

'ನಿಮಗೆ ಹೇಳಲು ಯಾವ ಸುದ್ದಿ ಇಲ್ಲದ್ದಕ್ಕೆ ವಿಷಾದಿಸುತ್ತೇನೆ. ಹೆಸರುಗಳನ್ನು ಆರಿಸುವ ಸಾಹಸದಲ್ಲಿದ್ದೇನೆ. ದಯಮಾಡಿ ನಾಳೆಯೂ ನನ್ನನ್ನು ಕೇಳಬೇಡಿ' ಎಂದು ಮದರಾಸ್ ಅಸೆಂಬ್ಲಿ ಕಾಂಗ್ರೆಸ್ ಪಾರ್ಟಿಯ ನಾಯಕ ಶ್ರೀ ರಾಜಗೋಪಾಲಾಚಾರಿಯವರು ಪತ್ರಿಕಾ ಕರ್ತರಿಗೆ ನಿನ್ನೆ ತಿಳಿಸಿದರು.

ಕಮ್ಯೂನಿಸಂನಿಂದ ಸ್ವಾತಂತ್ರ್ಯಕ್ಕೆ ಎಡೆಯಿಲ್ಲ

'ಏಷ್ಯಾದ ಆರ್ಥಿಕ ದುಸ್ಥಿತಿಗೆ ಕಮ್ಯೂನಿಸ್ಟ್ ತತ್ವದಿಂದ ಪರಿಹಾರ ದೊರೆಯಲಾರದು, ಕಮ್ಯೂನಿಸ್ಟ್ ತತ್ವದಿಂದ ಅನ್ನವನ್ನು ಸಂಪಾದಿಸುವುದಾದರೆ ಸ್ವಾತಂತ್ರ್ಯವನ್ನು ಮಾರಿಕೊಳ್ಳಬೇಕು. ಇದು ಏಷಿಯನರಿಗೆ ಎಲ್ಲಿ ಸಾಧ್ಯ! ಕಮ್ಯೂನಿಸಮ್ಮಿನಿಂದ ಸ್ವಾತಂತ್ರ್ಯವೂ ಇಲ್ಲ ಅನ್ನವೂ ಇಲ್ಲ' ಎಂದು ಭಾರತದ ಸೋಷಿಯಲಿಸ್ಟ್ ನಾಯಕ ಡಾ|| ರಾಮಮನೋಹರಲೋಹಿಯಾರವರು ಹಿಂದಿನವಾರ ರಂಗೂನಿನಲ್ಲಿ ನಡೆದ ಏಷಿಯಾ ಸೋಷಿಯಲಿಸ್ಟರ ಗುಪ್ತ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಸೈನ್ಯಾಧಿಕಾರಿಯ ಮಗನ ಪತ್ತೆ

ಕೊರಿಯಾ ಯುದ್ಧ ರಣರಂಗದಲ್ಲಿ ಅಮೆರಿಕಾದ ಅಷ್ಟಮದಳದ ಸೈನ್ಯಾಧಿಕಾರಿ ಜನರಲ್ ವಾನ್ ಫ್ಲೀಟ್‌ರವರ ೨೬ ವರ್ಷದ ಮಗನು ಕೊರಿಯಾ ರಣರಂಗದಲ್ಲಿ ಪತ್ತೆಯಿಲ್ಲ. ಈತನು ವಿಮಾನದಳದಲ್ಲಿ ಪೈಲೆಟ್ ಆಗಿದ್ದಾನೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ ಶ್ರೀ ನೃತ್ಯ ಕಲಾಮಂದಿರ ಮೈಸೂರು

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ,

ವಿಶ್ವ ಆರೋಗ್ಯ ದಿನಾಚರಣೆ

ವಿಶ್ವ ಆರೋಗ್ಯ ಸಂಸ್ಥೆಯ ೪ನೇ ವಾರ್ಷಿಕ ದಿನಾಚರಣೆಯು ವಿಶ್ವದಾದ್ಯಂತ, ಭಾರತದಲ್ಲಿ ನಿನ್ನೆ ನಡೆಯಿತು. ವಿಶ್ವ ಆರೋಗ್ಯ ಸಂಸ್ಥೆಯನ್ನು ವಿಶ್ವಸಂಸ್ಥೆಯಲ್ಲಿ ಖಾಯಂ ಭಾಗವನ್ನಾಗಿ ಮಾಡಿ ಇಂದಿಗೆ ೪ ವರ್ಷಗಳಾದುವು.

ಎ. ಐ. ಸಿ. ಸಿ. ಸಭೆ ಹೈದರಾಬಾದಿನಲ್ಲಿ

ಮುಂದಿನ ಅಖಿಲಭಾರತ ಕಾಂಗ್ರೆಸ್ ಸಮಿತಿ ಅಧಿವೇಶನವನ್ನು ಹೈದರಾಬಾದಿನಲ್ಲಿ ಜರುಗಿಸಬೇಕೆಂದು ಹೈದರಾಬಾದ್ ಪ್ರದೇಶದ ಅಡ್ ಹಾಕ್ ಕಾಂಗ್ರೆಸ್ ಸಮಿತಿ ಆಹ್ವಾನಿಸಿರುವುದಾಗಿ ತಿಳಿದಿದೆ.

ಪೇಟೆ ಧಾರಣೆ

ಮೈಸೂರು ತಾ|| 7-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	11-0	17-10
ಹೊಂಗೆಬೀಜ	,,	11-0	14-0
ಹುರುಳಿ	,,	29-6	31-14
ಹೆಸರು	,,	57-4	57-6
ಮೆ. ಕಾಯಿ ಮಣಕ್ಕೆ		9-12	16-2
ಹುಣಸೇಹಣ್ಣು	,,	2-10	3-3
ಸೀಗೆಕಾಯಿ	,,	2-15	3-8
ತೆಂಗಿನಕಾಯಿ 1100ಕ್ಕೆ		105	223

ನ್ಯೂ ಆಪೇರ

೧೧—೪—೫೨ ರಿಂದ ಅಮೋಘಪ್ರಾರಂಭ

* ಕುಮಾರಿ *

(ತಮಿಳು)

ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜನಿ (ಜೂ), ಶಾಮ, ದೊರೆರಾಜ್, ಪುಳಿಮೊಟ್ಟೆ.

ಮೂರು ದಿನಗಳು ಮಾತ್ರ,

—: ಕನ್ನಿಕ :—

ವುಡ್ ಲ್ಯಾಂಡ್ಸ್

೪—೪—೫೨ ರಿಂದ ಪ್ರತಿದಿನ ೩ ಆಟಗಳು

ಮೀನಾಕುಮಾರಿ, ಮುಬಾರಕ್ ಪಾತ್ರವಹಿಸಿರುವ ಹಿಂದಿ ಚಿತ್ರ.

- ಮದ್ಹೋಷ್ -

ಪ್ರಕಾಶಕರು :—ಜಿ. ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೮೦೮) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೯—೪—೧೯೫೨ನೇ ಬುಧವಾರ [ಸಂಚಿಕೆ ೧೮೭

ಭಾರತದಲ್ಲಿ ಹತ್ತಿ ವ್ಯಾಪಾರಕ್ಕೆ ಸರ್ಕಾರದ ಸಹಾಯ

ನೂತನ ಸಚಿವರಿಗೆ ನಾನಾ ಇಲಾಖೆಗಳ ಹಂಚಿಕೆ

ಜಾಮೀನಿನ ಮೇಲೆ ಬಿಡುಗಡೆ ಇಲ್ಲ

ಬೆಂಗಳೂರು ಏ ೭

ವಿಷಪಾನ ಮಾಡಿಸುವ ಪ್ರಯತ್ನದ ಅಪಾದನೆ ಮೊಕದ್ದಮೆಯಲ್ಲಿ ಸೆಷನ್ಸ್ ನ್ಯಾಯಾಧೀಶರಿಂದ ೨ ವರ್ಷದ ಸಾದಾ ಸಜ ಮತ್ತು ೨ ಸಾವಿರ ರೂ ಜುಲ್ಮಾನೆ ವಿಧಿಸಲ್ಪಟ್ಟಿರುವ ಶ್ರೀ ಎಲ್ ಎಸ್ ರಾಜುರವರ ಪರವಾಗಿ ಅವರ ಜೂನಿಯರ್ ಶ್ರೀ ಶ್ರೀ ಸಿ ಶ್ರೀನಿವಾಸ ಅಯ್ಯಂಗಾರ್‌ರವರು ಈ ದಿನ ಮೈಸೂರು ಹೈಕೋರ್ಟಿನಲ್ಲಿ ಅಪೀಲು ಸಲ್ಲಿಸಿದರು. ಶ್ರೀ ಶ್ರೀನಿವಾಸ ಅಯ್ಯಂಗಾರ್‌ರವರು ಜಾಮೀನು ಅರ್ಜಿಯನ್ನೂ ಕೂಡ ಸಲ್ಲಿಸಿದರು.

ವೆಕೇಷನ್ ನ್ಯಾಯಾಧೀಶರಾದ ಶ್ರೀ ಎನ್ ಬಾಲಕೃಷ್ಣಯ್ಯನವರು ಜಾಮೀನು ಬಿಡುಗಡೆ ಅರ್ಜಿಯನ್ನು ವಿಚಾರಣೆ ಮಾಡಿ ಜಾಮೀನಿನ ಮೇಲೆ ಬಿಡಲು ಸಾಧ್ಯವಿಲ್ಲವೆಂದು ಆಜ್ಞೆ ಮಾಡಿದರು,

ಆದರೆ ರಾಜುರವರು ಜುಲ್ಮಾನೆ ಹಣವನ್ನು ಅಪೀಲು ಇತ್ಯರ್ಥವಾಗುವವರೆವಿಗೆ ಕೊಡಬೇಕಾಗಿಲ್ಲವೆಂದೂ ಕಮಿಟಲ್ ನ್ಯಾಯಾಧೀಶರಿಗೆ ತೃಪ್ತಿಕರವಾದ ರೀತಿಯ ಸೆಕ್ಯೂರಿಟಿಯನ್ನು ಕೊಡಬೇಕೆಂದೂ ಆಜ್ಞೆ ಮಾಡಿದರು.

ಚಾರ್ಜ್‌ಷೀಟ್

ಬೆಂಗಳೂರು ಏ ೭

'ಇ' ಡಿವಿಜನ್ ಪೋಲೀಸ್ ಇನ್‌ಸ್ಪೆಕ್ಟರ್‌ರವರಾದ ಶ್ರೀ ಎಸ್ ಪುಟ್ಟರಾಜೇ ಅರಸ್ಸರವರು ಈ ದಿನ ಇನ್‌ಚಾರ್ಜ್ ನಗರ ನ್ಯಾಯಾಧೀಶರಾದ ಶ್ರೀ ಎ ಎಸ್ ರಾಮಚಂದ್ರರಾವ್‌ರವರ ಸಮ್ಮುಖದಲ್ಲಿ ಸಂಸ್ಥಾನದ ಮಾಜಿ ಹಣಕಾಸಿನ ಸಚಿವ ಶ್ರೀ ಹೆಚ್ ಸಿ ದಾಸಪ್ಪನವರನ್ನು ಕೊಲ್ಲಲು ಯತ್ನಿಸಿದರೆಂಬ ಅಪಾದನೆಯ ಮೇಲೆ ಬಂಧಿಸಲ್ಪಟ್ಟಿರುವ ಶ್ರೀ ಎಂ ಹನುಮಂತರೆಡ್ಡಿಯವರ ಮೇಲೆ ಐ ಪಿ ಸಿ ೪೪೯ (ಅಕ್ರಮ ಪ್ರವೇಶ) ಮತ್ತು ಐ ಪಿ ಸಿ ೩೦೮ (ಕೊಲೆಪ್ರಯತ್ನ)ನೇ ವಿಧಿರೀತ್ಯಾ ಚಾರ್ಜ್‌ಷೀಟ್ ಹಾಕಿದರು.

ಬಟ್ಟೆ ಹತೋಟಿ ರದ್ದು?

ಮದರಾಸಿನಲ್ಲಿ ಇನ್ನು ೪ ತಿಂಗಳೊಳಗಾಗಿ ಕ್ರಮಕ್ರಮವಾಗಿ ಬಟ್ಟೆಯ ಮೇಲಿರುವ ಎಲ್ಲಾ ರೀತಿಯ ಹತೋಟಿಯನ್ನು ಸಂಪೂರ್ಣವಾಗಿ ತೆಗೆದುಹಾಕುವುದೆಂದು ತಿಳಿಯಬಂದಿದೆ.

ಸೈಟು ಕಳೆದುಕೊಂಡವರ ಕಾರ್ಯಕ್ರಮ

ಚಾಮರಾಜನಗರ ಏ ೭

ಚಾಮರಾಜನಗರದ ಇಪ್ಪತ್ತೇಳು ಜನರು ತಮ್ಮ ತಮ್ಮ ಮನೆ ಸೈಟುಗಳ ಮೇಲೆ ಕಾನೂನಿಗೆ ವಿರುದ್ಧವಾಗಿ ತಮ್ಮಗಳಿಗೆ ಯಾವ ತಿಳುವಳಿಕೆಯನ್ನೂ ಕೊಡದೆ ನಂಜನಗೂಡು ಸಬ್ ಡಿವಿಜನ್ ಆಫೀಸರ್‌ರವರು ಆಕ್ವಿಜಿಷನ್ ಕಾರ್ಯಕ್ರಮ ನಡೆಸಿರುವುದು ಲ್ಯಾಂಡ್ ಆಕ್ವಿಜಿಷನ್ ಶಾಸನದ ೯ನೇ ಸೆಕ್ಷನ್ ೩ನೇ ಉಪನಿಯಮಕ್ಕೆ ವಿರುದ್ಧವಾಗಿದೆಯೆಂದೂ ಈ ಆಕ್ವಿಜಿಷನ್ನನ್ನು ರದ್ದುಪಡಿಸಬೇಕೆಂದೂ ಸಿವಿಲ್ ಪ್ರೊಸಿಜರ್ ಕೋಡಿನ ೮೦ನೇ ಕಲಂ ಪ್ರಕಾರ ಮೈಸೂರು ಚೀಫ್ ಸೆಕ್ರೆಟರಿಯವರಿಗೆ ನೋಟೀಸನ್ನು ಕೊಟ್ಟಿದ್ದಾರೆ. ಎರಡು ತಿಂಗಳವಳಗಾಗಿ ಆಕ್ವಿಜಿಷನ್ ರದ್ದುಪಡಿಸದಿದ್ದರೆ ಕಕ್ಷಿಗಾರರು ಕ್ರಮವಾದ ಕೋರ್ಟಿನಲ್ಲಿ ದಾವ ಹೂಡುವುದಾಗಿಯೂ ಅದರ ಖರ್ಚು ವೆಚ್ಚಗಳಿಗೂ ಮತ್ತು ನಷ್ಟಗಳಿಗೂ ಸರ್ಕಾರದವರೇ ಜವಾಬ್ದಾರರಾಗಬೇಕೆಂದೂ, ಈ ನೋಟೀಸ್ ಫೀ ಹದಿನೈದು ರೂಗಳನ್ನು ಸರ್ಕಾರದವರೇ ಪಾವತಿ ಮಾಡಬೇಕಾಗುತ್ತೆಂದೂ ಸಹ ನೋಟೀಸಿನಲ್ಲಿ ನಮೂದಿಸಿದ್ದಾರೆ. ಚಾಮರಾಜನಗರದ ಮುನಿಸಿಪಲ್ ಕೌನ್ಸಿಲನ್ನೂ ಸಹ ಪಾರ್ಟಿಯನ್ನಾಗಿ ಮಾಡಿ ಲಾಯರವರಿಂದ ನೋಟೀಸ್ ಕೊಡಿಸಿದ್ದಾರೆ.

ಈ ಸೈಟುಗಳನ್ನು ಹರಾಜು ಮಾಡಿರುವುದನ್ನು ರದ್ದುಪಡಿಸಬೇಕೆಂದು ಜಿಲ್ಲಾ ಡೆಪ್ಯುಟಿ ಕಮಿಷನರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುವರು.

ಪಬ್ಲಿಕ್ ಪ್ರಾಸಿಕ್ಯೂಟರಿಗೆ ಶಿಕ್ಷೆ

ಮದರಾಸಿನ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಗೋವಿಂದಸ್ವಾಮಿನಾಥನ್‌ರವರಿಗೆ ನಗರದ ನ್ಯಾಯಾಧೀಶರು, ಅಜಾಗರೂಕತೆಯಿಂದ ಕಾರನ್ನು ನಡೆಸಿ, ಗರ್ಭಿಣಿ ಸ್ತ್ರೀಯ ಮರಣಕ್ಕೆ ಕಾರಣರಾದರೆಂಬ ಅಪಾದನೆಯ ಮೇಲೆ ೧೦೦೦ ರೂಗಳ ದಂಡ ವಿಧಿಸಿದರು. ದಂಡ ಕೊಡದಿದ್ದಲ್ಲಿ ೩ ತಿಂಗಳ ಕಠಿಣ ಶಿಕ್ಷೆ ಅನುಭವಿಸಬೇಕೆಂದು ತೀರ್ಪಿತ್ತರು. ಮತ್ತು ೨ ವರ್ಷಗಳ ಕಾಲ ಡ್ರೈವಿಂಗ್ ಲೈಸೆನ್ಸ್ ರದ್ದುಗೊಳಿಸಿದರು.

ಮಂತ್ರಿಗಳಿಗೆ ಪೋರ್ಟ್‌ಫೋಲಿಯೋ

ಬೆಂಗಳೂರು ಏ ೮

ನೂತನ ಮಂತ್ರಿಗಳಿಗೆ ಪೋರ್ಟ್‌ಫೋಲಿಯೊಗಳ ವಿಷಯವಾಗಿ ಆಖೈರ್ ತೀರ್ಮಾನವಾಗಿ ಶ್ರೀಮನ್ಮಹಾರಾಜರ ಒಪ್ಪಿಗೆ ಕಳುಹಿಸಲಾಗಿದೆ.

ಮುಖ್ಯಮಂತ್ರಿ—ಹಣಕಾಸು, ಹಿಂದುಳಿದ ವರ್ಗ ಮತ್ತು ಗ್ರಾಮಾಭಿವೃದ್ಧಿ; ಶ್ರೀ ಟಿ. ಸಿದ್ದಲಿಂಗಯ್ಯ—ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ; ಶ್ರೀ ಎ. ಜಿ. ರಾಮಚಂದ್ರರಾವ್—ವಿದ್ಯಾಭ್ಯಾಸ, ವಾರ್ತೆ ಮತ್ತು ನ್ಯಾಯಾಂಗ; ಶ್ರೀ ಟಿ. ಚನ್ನಯ್ಯ—ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಆರೋಗ್ಯ; ಶ್ರೀ ಕಡಿದಾಳ್ ಮಂಜಪ್ಪ ರೆವಿನ್ಯೂ ಮತ್ತು ಮರಾಮತ್; ಶ್ರೀ ಹೆಚ್. ಸಿದ್ದವೀರಪ್ಪ—ಆಹಾರ, ವ್ಯವಸಾಯ ಮತ್ತು ಗೃಹಶಾಖೆ.

ಸೌದೆ ಬೆಲೆ

ಬೆಂಗಳೂರು ಏ ೮

ಮೈಸೂರು ನಗರದಲ್ಲಿ ಮುನಿಸಿಪಲ್ ಲೈಸನ್ಸ್ ಪಡೆದು ಸೌದೆ ಮಾರುವ ಡಿಪೋಗಳಲ್ಲಿ ಸೌದೆಯನ್ನು ಒಡೆದಿರುವುದು ರೂಗೆ ೩ ಮಣ ಒಡೆಯದಿರುವುದು ರೂಗೆ ೩|| ಮಣದಂತೆ ಮಾರಬೇಕೆಂದು ಸರ್ಕಾರ ನಿಗದಿಮಾಡಿದೆ. ತಲೆಹೊರೆ ಮತ್ತಿತರ ಅಂಗಡಿಗಳಿಗೆ ಈ ಆಜ್ಞೆ ಅನ್ವಯಿಸುವುದಿಲ್ಲ.

ಶ್ರೀ ಮುನಿಷಿ ಬೆಂಗಳೂರಿಗೆ

ಬೆಂಗಳೂರಿಗೆ ಏ ೮

ಕೇಂದ್ರ ಆಹಾರ ಸಚಿವ ಶ್ರೀ ಕೆ ಎಂ ಮುನಿಷಿಯವರು ಸಧ್ಯದಲ್ಲೇ ಬೆಂಗಳೂರಿಗೆ ಬರುವರೆಂದು ಗೊತ್ತಾಗಿದೆ. ಆಗ್ಗೆ ಆಹಾರ ಪರಿಸ್ಥಿತಿ ವಿಷಯವನ್ನು ಮೈಸೂರು ಮಂತ್ರಿಮಂಡಲವು ಇವರೊಡನೆ ಚರ್ಚಿಸಲಿದೆ.

ಗೌರವ ಪ್ರಶಸ್ತಿ

ಬೊಂಬಾಯಿ ಮುಖ್ಯಮಂತ್ರಿ ಶ್ರೀ ಬಿ ಜಿ ಖೇರ್‌ರವರಿಗೆ ಪೂನಾ ವಿಶ್ವವಿದ್ಯಾನಿಲಯವು ಎಲ್ ಎಲ್ ಡಿ ಯ ಗೌರವ ಪ್ರಶಸ್ತಿಯನ್ನು ಕೊಡಲು ನಿರ್ಧರಿಸಿದೆ.

‡ ಮದ್ರಾಸಿನಲ್ಲಿ ಹೊಸ ಮಂತ್ರಿಮಂಡಲ ರಚನೆಯ ಬಗ್ಗೆ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಸಿ. ರಾಜಗೋಪಾಲಾಚಾರಿಯವರ ನಿರ್ಧಾರವು ಈ ದಿನ ಹೊರಬೀಳಬಹುದೆಂದು ಊಹಿಸಲಾಗಿದೆ.

ಭಾರತದಲ್ಲಿ ಹತ್ತಿಯ ಬೆಲೆಯು ಕನಿಷ್ಠಮಟ್ಟಕ್ಕಿಂತ ಇಳಿದರೆ ಸರ್ಕಾರವು ಸಹಾಯ ನೀಡುವ ಯೋಜನೆಯನ್ನು ತಯಾರಿಸಿರುವುದಾಗಿ ಭಾರತ ಆರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ಬೊಂಬಾಯಿನಲ್ಲಿ ವಣಿಕ ಸಂಘದಲ್ಲಿ ಮಾತನಾಡುತ್ತಾ ಹೇಳಿರುವರು.

'ಫಿಲ್ಮಿಂಡಿಯಾ' ಮೇಲೆ ಕ್ರಮ

'ಭಾರತದ ಮೇಲೆ ಅರ್ಧಚಂದ್ರ' ಎಂಬ ಶೀರ್ಷಿಕೆಯ ಅಡಿಯಲ್ಲಿ, 'ಫಿಲ್ಮಿಂಡಿಯಾ' ಪತ್ರಿಕೆಯ ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನದ ಬಗ್ಗೆ ಭಾರತ ಸರ್ಕಾರದ ಗಮನವನ್ನೆಳೆಯಲಾಗಿದೆಯೆಂದು ಒಳಾಡಳಿತ ಸಚಿವ ಶಾಖೆ ಪ್ರಕಟಣೆ ತಿಳಿಸುತ್ತದೆ.

ಈ ಲೇಖನವು 'ಕುಂಟ ಆಕ್ಷೇಪಕರ' ಎಂದು ಭಾರತ ಸರ್ಕಾರ ಭಾವಿಸುವುದಾಗಿಯೂ ಭಾರತೀಯ ಪತ್ರಿಕೆಯೇ ಅಂಥ ಲೇಖನ ಪ್ರಕಟಿಸಿರುವುದಕ್ಕಾಗಿ ವಿಷಾದ ಸೂಚಿಸುವುದಾಗಿಯೂ ಈ ಪ್ರಕಟಣೆ ಸೂಚಿಸಿ ಈ ಬಗ್ಗೆ ಕ್ರಮ ಕೈಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆಯೆಂದೂ ತಿಳಿಸುತ್ತದೆ.

ರಾಧಾಕೃಷ್ಣನ್ ಭಾರತಕ್ಕೆ

ಭಾರತ ಉಪರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ತಮ್ಮ ಹುದ್ದೆಯಿಂದ ಸದ್ಯದಲ್ಲೆ ನಿವೃತ್ತರಾಗಲಿರುವ ರಷ್ಯಾದಲ್ಲಿ ಭಾರತ ರಾಯಭಾರಿ ಡಾ|| ಸರ್ವಪಲ್ಲಿ ರಾಧಾಕೃಷ್ಣನ್‌ರವರು ನಿನ್ನೆಯದಿನ ಮಾಸ್ಕೋವಿನಿಂದ ಭಾರತಕ್ಕೆ ಲಂಡನ್ ಮಾರ್ಗವಾಗಿ ಪ್ರಯಾಣ ಹೊರಟರು. ಭಾರತ ರಾಯಭಾರಿ ಕಛೇರಿ ಅಧಿಕಾರಿಗಳು, ರಷ್ಯಾ ಉನ್ನತಾಧಿಕಾರಿಗಳು ಅವರನ್ನು ವಿಮಾನ ನಿಲ್ದಾಣದಲ್ಲಿ ಬೀಳ್ಕೊಟ್ಟರು.

ಭೂದಾನ ಯಜ್ಞ

ಭೂದಾನ ಯಜ್ಞ ಯಾತ್ರೆಯಲ್ಲಿ ಆಚಾರ್ಯ ವಿನೋಬಭಾವೆಯವರು ಇಲ್ಲಿಯವರೆಗೆ ೭೧ ಸಾವಿರ ಎಕರೆ ಜಮೀನನ್ನು ಸಂಗ್ರಹಿಸಿರುವರು.

ಡಿ. ಡಿ. ಟಿ. ಕಾರ್ಖಾನೆ

ಬೊಂಬಾಯಿನಲ್ಲಿ ಸ್ಥಾಪಿಸಬೇಕೆಂದಿದ್ದ ಡಿ ಡಿ ಟಿ ಫ್ಯಾಕ್ಟರಿಯನ್ನು ದೆಹಲಿಯಲ್ಲಿ ಸ್ಥಾಪಿಸಲಾಗುತ್ತದೆಯೆಂದು ಹೇಳಲಾಗಿದೆ

ಧಾನ್ಯದ ಬೆಲೆ ಏರಿಸಬಾರದು

ಮೈಸೂರು ಏ ೭

ತಾ|| ೭-೪-೧೯೫೨ರಲ್ಲಿ ಡಾ|| ಬಿ ಜಿ ದಾಸ್‌ರವರ ಅಧ್ಯಕ್ಷತೆಯಲ್ಲಿ ನಡೆದ ರೇಷನ್ ದಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಆದ ತೀರ್ಮಾನಗಳು—

೧) ಶ್ರೀ ಕೆ. ಹನುಮಂತಯ್ಯನವರು ನಮ್ಮ ಸಂಸ್ಥಾನದ ನೂತನ ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡದ್ದನ್ನು ಸಭೆಯು ಆದರದಿಂದ ಸ್ವಾಗತಿಸುತ್ತದೆ. ಮತ್ತು ಶ್ರೀಯುತರ ಆಡಳಿತವು ಆಹಾರಾಭಾವವನ್ನು ಯಶಸ್ವಿಯಾಗಿ ನಿವಾರಿಸುವಂತೆ ಪರಮಾತ್ಮನು ಅವರಿಗೆ ಶಕ್ತಿಯನ್ನು ದಯಪಾಲಿಸಲೆಂದು ಹಾರೈಸುತ್ತದೆ.

೨) ಮದ್ರಾಸ್ ಮುಖ್ಯಮಂತ್ರಿಗಳು ತಮ್ಮ ಪ್ರಸಾರ ಭಾಷಣದಲ್ಲಿ ಆಹಾರ ಧಾನ್ಯಗಳ ಬೆಲೆ ಹೆಚ್ಚಿಸಬಹುದೆಂಬ ಒಂದು ಸೂಚನೆಯನ್ನು ಕೊಟ್ಟಿರುವುದನ್ನು ಈ ಸಭೆಯು ಕುತೂಹಲದಿಂದ ಪರಿಶೀಲಿಸಿ, ಮದ್ರಾಸ್ ಮಂತ್ರಿಗಳು ಈ ವಿಷಯದಲ್ಲಿ ಎಷ್ಟೇ ತೊಂದರೆ ಬಂದಾಗ್ಯೂ ಎದುರಿಸಿ, ಧಾನ್ಯದ ಬೆಲೆಯನ್ನು ಏರಿಸಲು ಖಂಡಿತವಾಗಿಯೂ ಅವಕಾಶ ಕೊಡಬಾರದೆಂದು ಈ ಸಭೆಯು ಒತ್ತಾಯದಿಂದ ಪ್ರಾರ್ಥಿಸುತ್ತದೆ.

೩) ದಾವಣಗೆರೆಯ ರಾಜಕೀಯ ಸಮ್ಮೇಳನದಲ್ಲೂ, ಇತ್ತೀಚಿನ ಚುನಾವಣ ಪ್ರಚಾರ ಭಾಷಣದಲ್ಲೂ, ಬಡಜನರ ಮತ್ತು ರೈತರ ಕಷ್ಟವನ್ನು ಗಮನಿಸಿ ಕಂಟ್ರೋಲ್ ತೆಗೆಯಲೇಬೇಕೆಂದು ನಿರ್ಧರಿಸಿರುವ ವಿಷಯವನ್ನು ನಮ್ಮ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಲ್ಲದೆ ಮದ್ರಾಸ್ ಮಂತ್ರಿಯವರು ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಈ ಸಭೆಯು ಪ್ರಾರ್ಥಿಸುತ್ತದೆ

೪) ತುರ್ತು ಬಹಿರಂಗ ಸಭೆಯೊಂದನ್ನು ಕರೆಯಬೇಕೆಂದು ತೀರ್ಮಾನಿಸಲಾಯಿತು

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರಂ

ಮೈಸೂರು ಏ ೮

ಮೇಲ್ಕಂಡ ಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ತಾ|| ೧೧-೪-೫೨ನೇ ಶುಕ್ರವಾರ ಸಂಜೆ ೬ ಗಂಟೆಗೆ, ಮಂದಿರದ ವಿದ್ಯಾರ್ಥಿಗಳಾದ ಮಿಸ್ಟರ್ ಮತ್ತು ಮಿಸಸ್ ರೋಲ್ಯಾಂಡ್ ವರ್ಮಾರವರುಗಳು ತಮ್ಮ ವ್ಯಾಸಂಗವನ್ನು ಮುಗಿಸಿ ಅಮೇರಿಕಾ ದೇಶಕ್ಕೆ ಹಿಂತಿರುಗುವುದರಿಂದ ಅವರುಗಳನ್ನು ಬೀಳ್ಕೊಡುವ ಸಮಾರಂಭವನ್ನು ಏರ್ಪಡಿಸಲಾಗಿದೆ. ಈ ಸಮಾರಂಭಕ್ಕೆ ಪತ್ರಿಕೋದ್ಯೋಗಿ ಶ್ರೀ ಮಾಸ್ಟರ್ ಎನ್. ಶ್ರೀನಿವಾಸಮೂರ್ತಿಯವರು ಅಧ್ಯಕ್ಷತೆ ವಹಿಸುವರು. ಮಂದಿರದ ಸದಸ್ಯರೂ ಅಭಿಮಾನಿಗಳೆಲ್ಲರೂ ದಯಮಾಡಿಸಬೇಕಾಗಿ ಮೈಸೂರು ಸಹೋದರರು ಪ್ರಾರ್ಥಿಸುತ್ತಾರೆ.

ಬೆಂಗಳೂರಲ್ಲಿ ಐ. ಎನ್. ಟಿ. ಯು. ಸಿ. ಜನರಲ್ ಕೌನ್ಸಿಲ್

ಮೈಸೂರು ಏ. ೮

ಈ ತಿಂಗಳು ೨೭ ಮತ್ತು ೨೮ನೇ ತಾರೀಖುಗಳಲ್ಲಿ ಅಖಿಲ ಭಾರತ ಐ. ಎನ್. ಟಿ. ಯು. ಸಿ. ಜನರಲ್ ಕೌನ್ಸಿಲ್ ಸಭೆಯನ್ನು ಬೆಂಗಳೂರಿನಲ್ಲಿ ನಡೆಸಲು ಮೈಸೂರು ಪ್ರಾಂತೀಯ ಐ. ಎನ್. ಟಿ. ಯು. ಸಿ. ಯ ಸ್ವಾಗತ ಸಮಿತಿಯ ಸಭೆಯು ಮೊನ್ನೆ ದಿನ ಬೆಂಗಳೂರಿನಲ್ಲಿ ಶ್ರೀ ಎನ್. ಕೇಶವಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ಸೇರಿ ನಿರ್ಧರಿಸಿತು

ಸಭೆಯ ಖರ್ಚಿಗಾಗಿ ಅಫಿಲಿಯೇಟಾದ ಸಂಘಗಳ ಎಲ್ಲಾ ಸದಸ್ಯರುಗಳಿಂದ ೦—೪—೦ಗೆ ಕಡಿಮೆಯಿಲ್ಲದಂತೆ ಚಂದಾ ವಸೂಲಿ ಮಾಡಿ ಈ ತಿಂಗಳ ೨೦ನೇ ತಾರೀಖಿನೊಳಗೆ ಕೇಂದ್ರ ಕಛೇರಿಗೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಹಣ ವಸೂಲಿ ಮತ್ತಿತರ ಕಾರ್ಯಗಳನ್ನು ನಡೆಸಲು ಶ್ರೀಗಳಾದ ಎನ್. ಕೇಶವಯ್ಯಂಗಾರ್, ಸಿ- ಜಿ- ದೇವನಾಥ್, ಡಿ- ವೆಂಕಟೇಶ್, ಎಲ್- ರಾಮಯ್ಯ, ಟಿ- ಎಂ- ಕಪ್ಪಣ್ಣ, ಜಿ- ಲಿಂಗಯ್ಯ, ಕೆ- ಎಸ್- ಕುಮಾರನ್, ಕೇಶವಕುಲಕರ್ಣಿ ಮತ್ತು ಎ- ರಾಮಣ್ಣ (ಕನ್ವೀನರುಗಳು) ರವರೊಳಗೊಂಡ ಸಮಿತಿಯೊಂದನ್ನು ನೇಮಿಸಿ ಆ ಸಮಿತಿಗೆ ಪೂರ್ಣಾಧಿಕಾರ ಕೊಡಲಾಯಿತು.

ನೂತನ ಅಸೆಂಬ್ಲಿ ಅಧಿವೇಶನ

ಬೆಂಗಳೂರು ಏ ೭

ಸಂಸ್ಥಾನದಲ್ಲಿ ಹೊಸದಾಗಿ ಆರಿಸಲ್ಪಟ್ಟ ಶಾಸನ ಸಭೆಯ ಮೊದಲ ಅಧಿವೇಶನವು ಜೂನ್ ತಿಂಗಳ ಅಧಿಭಾಗದಲ್ಲಿ ಸೇರಬಹುದೆಂದು ತಿಳಿದುಬಂದಿದೆ.

ಈಗಿನ ಅಸೆಂಬ್ಲಿ ಸಭಾ ಭವನದಲ್ಲಿ ೬೮ ಮಂದಿಗೆ ಕೂಡಲು ಆಸನ ಸೌಕರ್ಯವಿರುವುದು. ಅದನ್ನು ೯೯ ಮಂದಿಗೆ ಅಳವಡಿಸಬೇಕಾಗಿದೆ. ಇನ್ನು ಇತರ ವ್ಯವಸ್ಥೆಗಳೂ ಸಹ ಆಗಬೇಕಾಗಿದೆ ಇವೆಲ್ಲದಕ್ಕೂ ಕಾಲಾವಕಾಶ ಕೊಡಬೇಕಾಗಿದೆ

ಜಾಮೀನಿನ ಮೇಲೆ ಬಿಡುಗಡೆ

ಶ್ರೀ ಹೆಚ್ ಸಿ ದಾಸಪ್ಪನವರನ್ನು ಕೊಲ್ಲಲು ಯುಕ್ತಿಸಿದರೆಂಬ ಅಪಾದನೆಯ ಮೇಲೆ ಬಂಧಿಸಲ್ಪಟ್ಟಿರುವ ಶ್ರೀ ಹನುಮಂತರೆಡ್ಡಿಯವರನ್ನು ತಲಾ ೧೦ ಸಾವಿರ ರೂಗಳ ಎರಡು ಜಾಮೀನುಗಳು ಮತ್ತು ಅದೇ ಮೊಬಲಗಿನ ಮತ್ತೊಂದು ವೈಯಕ್ತಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಈ ದಿನ ಹೈಕೋರ್ಟಿನಲ್ಲಿ ನ್ಯಾಯಮೂರ್ತಿ ಶ್ರೀ ಬಾಲಕೃಷ್ಣಯ್ಯನವರು ಆಜ್ಞೆ ಮಾಡಿದರು.

ವಿಶ್ವಸಂಸ್ಥೆಯ ತಾಂತ್ರಿಕ ಸಹಾಯ ಒಪ್ಪಂದಕ್ಕೆ ಭಾರತದ ಸಹಿ

ವಿಶ್ವಸಂಸ್ಥೆ ಏ ೩

ವಿಶ್ವಸಂಸ್ಥೆಗೂ ಮತ್ತು ಭಾರತಕ್ಕೂ ಆದ ಮೂಲ ಒಪ್ಪಂದದ ಪರಿಣಾಮವಾಗಿ ತಾಂತ್ರಿಕ ಸಹಾಯವನ್ನು ಹೆಚ್ಚು ಪ್ರಮಾಣದಲ್ಲಿ ಭಾರತಕ್ಕೆ ಕೊಡಬಹುದಾಗಿದೆ.

ವಿವಿಧ ಒಪ್ಪಂದಗಳ ಪ್ರಕಾರ ಅನೇಕ ವಿಶ್ವಸಂಸ್ಥೆಯ ಪರಿಣತರು ಈಗಾಗಲೇ ಭಾರತಕ್ಕೆ ಬಂದಿದ್ದಾರೆ. ಸಮಾಜ ಸುಧಾರಣೆ, ಆರ್ಥಿಕ ಬೆಳವಣಿಗೆ, ಸಾರ್ವಜನಿಕಾಡಳಿತ, ಮುಂತಾದ ವಿಷಯಗಳ ಬಗ್ಗೆ ಹೆಚ್ಚು ಮಾಹಿತಿಪಡೆಯಲು ಈ ೫ ವರ್ಷಗಳಲ್ಲಿ ವಿಶ್ವಸಂಸ್ಥೆಯು ಸುಮಾರು ೧೦೦ ವಿದ್ಯಾರ್ಥಿವೇತನಗಳನ್ನು ಕೊಟ್ಟಿದೆ.

ಹಡಗು ನಿರ್ಮಾಣ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಸಹಕಾರ ನೀಡಲು ಈಗಾಗಲೇ ಇಬ್ಬರು ತಜ್ಞರು ಭಾರತಕ್ಕೆ ಬಂದಿದ್ದಾರೆ.

ಈ ಹೊಸ ಒಪ್ಪಂದ ಪ್ರಕಾರ ಹಡಗು ಕಟ್ಟುವ ನಿಲ್ದಾಣದ ಬಗ್ಗೆ ಸಹಾಯಮಾಡಲು ಇಂಜಿನಿಯರುಗಳು ಭಾರತಕ್ಕೆ ಬರುವರು ಮತ್ತು ಸಿಂಧ್ರಿಗೊಬ್ಬರದ ಕಾರ್ಖಾನೆಗೆ ಒಬ್ಬ ಉಪಕರಣ ತಯಾರಿಕೆಯಲ್ಲಿ ಸಲಹೆಕೊಡಲು ಒಬ್ಬ ಉಪಕರಣ ಇಂಜಿನಿಯರು ಬರಲಿದ್ದಾರೆ ತಯಾರು ಮನೆಗಳನ್ನು ಕಟ್ಟುವ ಯೋಜನೆಗೆ ಸಹಾಯ ಮಾಡಲು ಇನ್ನೊಬ್ಬ ಇಂಜಿನಿಯರರೂ, ಈ ಒಪ್ಪಂದದ ಪರವಾಗಿ ಭಾರತಕ್ಕೆ ಬರಲಿದ್ದಾರೆ.

ಈ ಒಪ್ಪಂದಕ್ಕೆ ಭಾರತದ ಪರವಾಗಿ ಶ್ರೀ ರಾಜೇಶ್ವರ ದಯಾಳರೂ, ವಿಶ್ವಸಂಸ್ಥೆಯ ಪರವಾಗಿ ಹ್ಯೂ ಎಲ್ ಕೀಸ್‌ಲೇ ಸೈಡ್‌ರವರೂ ರುಜು ಹಾಕಿದರು.

ಭಾರತಕ್ಕೆ ನೀರಾವರಿ ನಿಪುಣರು

ವಾಷಿಂಗ್ಟನ್ ಏ ೩

ಭಾರತ ಮತ್ತು ಪಾಕೀಸ್ತಾನಗಳಿಗೆ ಇಬ್ಬರು ನೀರಾವರಿ ನಿಪುಣರು, ಅಮೇರಿಕೆಯಿಂದ ತಾಂತ್ರಿಕ ಸಹಾಯ ನಿಧಿಯ ಆಶ್ರಯದಲ್ಲಿ ಬರಲಿದ್ದಾರೆ.

ಭಾವಿಗಳನ್ನು ತೋಡಿ ನೀರು ಸರಬರಾಯಿ ಮಾಡುವ ಭಾರತದ ಯೋಜನೆಗೆ ಡೇವಿಡ್ ಎ ಸ್ಟೋನರ್ ಎಂಬ ನೀರಾವರಿ ನಿಪುಣರು ಭಾರತದಲ್ಲಿ ಸಹಾಯಮಾಡಲಿದ್ದಾರೆ ಇದರಿಂದ ಆಹಾರೋತ್ಪತ್ತಿ ಜಾಸ್ತಿಯಾಗಿ ಕ್ಷಾಮ ಕಡಿಮೆಯಾಗುವುದು.

ಪಾಕೀಸ್ತಾನಕ್ಕೆ ಸಿ ಆರ್ ಮೇಯರ್ ಹಾಫರ್‌ರವರು ಬರುವರು.

ಇಬ್ಬರೂ ಜೂನಿಗೆ ಅಮೇರಿಕಕ್ಕೆ ತೆರಳುವರು.

ಸರ್ಕಾರಿ ಸುದ್ದಿ

ಬೆಂಗಳೂರು ಏ ೮

ಬೆಂಗಳೂರು ನಗರ ಟ್ರಸ್ಟ್‌ಬೋರ್ಡಿನಿಂದ ಮೈಸೂರು ಪೌರಸಭೆಗೆ ಆಗಿದ್ದ ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಹೆಚ್ ಎನ್ ಸುಬ್ಬರಾವ್‌ರವರ ವರ್ಗವನ್ನು ರದ್ದುಗೊಳಿಸಲಾಗಿದೆ

ಪೇಟೆ ಧಾರಣೆ

ಮೈಸೂರು ತಾ|| 8-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಕ್ಕೆ	10-8	18-2
ಹೊಂಗೆಬೀಜ	„	11-0	13-12
ಹುರುಳಿ	„	30-0	31-8
ಮೆ. ಕಾಯಿ ಮಣಕ್ಕೆ		7-14	15-6
ಹುಣಸೇಹಣ್ಣು	„	2-9	3-3
ಸೀಗೆಕಾಯಿ	„	2-15	3-9
ತೆಂಗಿನಕಾಯಿ	1100ಕ್ಕೆ	135	215

ಚಿನ್ನ ಬೆಳ್ಳಿ ದರಗಳು

8-4-52	ರೂ.
ಸವರನ್	66-0
„	66-2
ಚಿನ್ನ ತೊಲ	92-8
„ ಮೂಸ	91-0
ಬೆಳ್ಳಿ 100 ತೊಲ	161-0
„ ತೊಲ	1-12

ನ್ಯೂ ಅಪೇರ

೧೧-೪-೫೨ ರಿಂದ ಅಮೋಘವಾರಂಭ

* ಕುಮಾರಿ *
(ತಮಿಳು)

ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜಿನಿ (ಜೂ), ತಾಮ, ದೊರೆರಾಜ್, ಪುಳಿಮೊಟ್ಟೈ.

ಎರಡು ದಿನಗಳು ಮಾತ್ರ

—: ಕನ್ನಿಕ :—

ರಣಜಿತ್

೪—೪—೫೨ರಿಂದ ಪ್ರತಿದಿನ ೩ ಆಟಗಳು

ಫಿಲ್ಮಿಂಸ್ತಾನ್‌ರವರ—

ಶ್ರೀ ಮತಿಜೀ

ಪಾತ್ರ:-ನಾಸೀರ್ ಖಾನ್, ಶ್ಯಾಮಾ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೬೪ (ಲಂಚ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೦—೪—೧೯೫೨ನೇ ಗುರುವಾರ [ಸಂಚಿಕೆ ೧೮೮

ರಾಜಾಜಿಯವರ ಹೊಸ ಮಂತ್ರಿಮಂಡಲ ಈ ದಿನ ಅಧಿಕಾರಕ್ಕೆ ಬರುವುದು

ಮಂತ್ರಿಮಂಡಲದಲ್ಲಿ ೧೫ ಜನರಿರುವರು

ಮದ್ರಾಸಿನ ಶ್ರೀ ಕುಮಾರಸ್ವಾಮಿ ರಾಜಾರವರ ಮಂತ್ರಿಮಂಡಲದ ರಾಜೀನಾಮೆಯನ್ನು ಗೌರ್ನರ್ ಶ್ರೀ ಶ್ರೀಪ್ರಕಾಶರವರು ನಿನ್ನೆ ಅಂಗೀಕರಿಸಿದರು. ರಾಜೀನಾಮೆಯು ಈದಿನದಿಂದ ಜಾರಿಗೆ ಬರುತ್ತದೆ.

ನಿನ್ನೆ ರಾತ್ರಿ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಸಿ. ರಾಜಗೋಪಾಲಾಚಾರಿಯವರು ತಮ್ಮ ಮಂತ್ರಿಮಂಡಲದ ಸದಸ್ಯರ ಪಟ್ಟಿಯನ್ನು ಗೌರ್ನರವರಿಗೆ ಒಪ್ಪಿಸಿದರು.

ಗೌರ್ನರ್ ಆ ಪಟ್ಟಿಗೆ ತಮ್ಮ ಒಪ್ಪಿಗೆಯಿತ್ತು, ಹೊಸ ಮಂತ್ರಿಮಂಡಲದ ಸದಸ್ಯರ ಹೆಸರನ್ನು ಪ್ರಕಟಿಸಿರುವರು ಇವರು ಈ ಬೆಳಿಗ್ಗೆ ಅಧಿಕಾರ ಸ್ವೀಕಾರಮಾಡುತ್ತಾರೆ. ಹೊಸ ಮಂತ್ರಿಮಂಡಲದಲ್ಲಿರುವವರು—

ಶ್ರೀಗಳಾದ ರಾಜಗೋಪಾಲಾಚಾರಿ (ಮುಖ್ಯಮಂತ್ರಿ). ಎ ಬಿ ಶೆಟ್ಟಿ, ಸಿ ಸುಬ್ರಹ್ಮಣ್ಯಂ, ಕೆ ವೆಂಕಟಸ್ವಾಮಿನಾಯಿಡು, ಎನ್ ರಂಗಾರೆಡ್ಡಿ, ಡಾ|| ಎಂ ಎ ಕೃಷ್ಣರಾವ್, ಪಳನಿಸ್ವಾಮಿ ಗೌಂಡರ್, ಡಾ|| ಯು ಕೃಷ್ಣರಾವ್, ಡಾ|| ನಾಗಣ್ಣಗೌಡ ಎನ್ ಶಂಕರರೆಡ್ಡಿ, ಕೆ ಪಿ ಕುಟ್ಟೀ ಕೃಷ್ಣ ನಾಯರ್, ರಾಜೇಶ್ವರ ಸೀತಾಪತಿ, ಎಂ ಎ ಮಾಣಿಕ್ಯವೇಲು ನಾಯ್ಕರ್, ಎಸ್ ಬಿ ಪಟ್ಟಾಭಿರಾಮರಾವ್ ಮತ್ತು ಎ ಸಂಜೀವಯ್ಯ.

ಮದ್ರಾಸಿನಲ್ಲಿ ಶಾಸನಸಭೆಯ ಕಾಮನ್‌ವೀಲ್‌ಪಕ್ಷವೂ ಶ್ರೀ ರಾಜಾಜಿಯವರ ಹೊಸ ಸರ್ಕಾರಕ್ಕೆ ಪೂರ್ಣ ಬೆಂಬಲಕೊಡುವುದೆಂದು ಪಕ್ಷದ ನಾಯಕ ಶ್ರೀ ಮಾಣಿಕ್ಯವೇಲು ನಾಯುಕರವರು ಹೇಳಿರುವರು.

ಕೃಷಕ್ ಲೋಕ್‌ಪಕ್ಷದ ನಾಯಕ ಶ್ರೀ ಎನ್. ಜಿ- ರಂಗಾರವರು ತಮ್ಮ ಪಕ್ಷ ಪೂರ್ಣ ಸಹಕಾರ ನೀಡುವುದೆಂದು ಈಗಾಗಲೇ ತಿಳಿಸಿರುವರು.

ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿ

ಬೆಂಗಳೂರು ಏ ೯

ಮಂಡ್ಯ ಜಿಲ್ಲಾಧಿಕಾರಿಗಳಾದ ಶ್ರೀ ಜಿ. ವೆಂಕಟಕೃಷ್ಣರಾವ್‌ರವರನ್ನು ಮುಖ್ಯಮಂತ್ರಿಗಳು ತಮ್ಮ ಆಪ್ತ ಕಾರ್ಯದರ್ಶಿಗಳನ್ನಾಗಿ ನೇಮಿಸಿಕೊಂಡಿದ್ದಾರೆ.

ಆಪ್ತ ಕಾರ್ಯದರ್ಶಿಗಳಾಗಿ ಕೆಲಸ ಮಾಡುತ್ತಿದ್ದ ಶ್ರೀ ಸಿ. ರಾಮಸ್ವಾಮಿಯವರು ಪರ್ಸನಲ್ ಅಸಿಸ್ಟೆಂಟ್ ಕೆಲಸ ಮಾಡುತ್ತಾರೆ.

ಮುಖ್ಯಮಂತ್ರಿಗಳಾಗಲಿ ಹಿಂದಿನ ದಿವಾನರಾಗಲೀ ಜಿಲ್ಲಾಧಿಕಾರಿಗಳ ದರ್ಜೆಯವರನ್ನು ತಮ್ಮ ಆಪ್ತ ಕಾರ್ಯದರ್ಶಿಗಳನ್ನಾಗಿ ನೇಮಿಸಿಕೊಂಡಿರಲಿಲ್ಲ. ಈಗ ಇದೇ ಮೊದಲು.

ಸ್ಪೆಷಲ್ ಆಫೀಸರ್ ಶ್ರೀ ಬಿ ಬೀರಪ್ಪನವರು ಮಂಡ್ಯ ಜಿಲ್ಲಾಧಿಕಾರಿಗಳಾಗುವರು.

ಸಂಸ್ಕೃತ ಬೋಧನೆಯ ಪುನರುದ್ಧಾರ

ಸಂಸ್ಕೃತ ಬೋಧನೆಯ ಸಾಂಪ್ರದಾಯಿಕ ಕ್ರಮಗಳನ್ನು ಸುಧಾರಣೆಗೊಳಿಸದ ಮತ್ತು ಪುನರುಜ್ಜೀವನಗೊಳಿಸದಹೊರತು ನಮ್ಮ ಪಾಠಶಾಲೆಗಳೆಲ್ಲಾ ಮಾಯವಾಗುವುವು ಮತ್ತು ಸಂಸ್ಕೃತವು ಸಜೀವಭಾಷೆಯಾಗಿ ಮತ್ತು ಮಾತನಾಡಬಲ್ಲಂತಹ ಭಾಷೆಯಾಗಿರುವುದೂ ತಪ್ಪಿಹೋಗಿ ಅಂತಿಮವಾಗಿ ಮೃತಪಡುವುದು ಎಂದು ಕೇಂದ್ರ ಆಹಾರಮಂತ್ರಿ ಕೆ ಎಂ. ಮುನ್ಷಿ ಒತ್ತಿ ಹೇಳಿದ್ದಾರೆ.

ಸಂಸ್ಕೃತವನ್ನು ನಮ್ಮ ಜೀವನದ ಸಜೀವ ಪ್ರಚೋದನಾಶಕ್ತಿಯಾಗಿ ಮುಂದುವರಿಸಿಕೊಂಡು ಹೋಗಲು ನಾವು ವಿಫಲರಾದಲ್ಲಿ, ನಾವು ನಮ್ಮ ಪೂರ್ವಜರು ಬಿಟ್ಟು ಹೋಗಿರುವ ಮಹಾ ಸಂಸ್ಕೃತಿಯನ್ನು ಕಳೆದುಕೊಳ್ಳುವೆವಷ್ಟೇ ಅಲ್ಲ. ಆಧ್ಯಾತ್ಮಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಜಗತ್ತಿನ ನಾಯಕತ್ವ ಹೊಂದಿರುವುದನ್ನೂ ಕೂಡ ಕಳೆದುಕೊಳ್ಳುತ್ತೇವೆ ಎಂದು ಶ್ರೀ ಮುನ್ಷಿ ಹೇಳಿದರು.

ಜನತೆಗೆ ಸಂದೇಶ

ಮದ್ರಾಸಿನ ನೂತನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮದ್ರಾಸ್ ಜನತೆಯನ್ನುದ್ದೇಶಿಸಿ ಈಸಂಜೆ ೭-೩೦ ಗಂಟೆಗೆ ತಮಿಳಿನಲ್ಲಿ ೮-೪೫ಗಂಟೆಗೆ ಇಂಗ್ಲೀಷಿನಲ್ಲಿ ಸಂದೇಶವನ್ನೀಯುವರು.

ಅಕ್ಕಿ, ರಾಗಿ, ಗೋಧಿ ಬೆಲೆ ಹೆಚ್ಚಿತು

ಬೆಂಗಳೂರು ಏ ೧೦

ಆಹಾರ ರೇಷನ್ ವಸ್ತುಗಳಾದ ಅಕ್ಕಿ, ರಾಗಿ, ಗೋಧಿಗಳ ಬೆಲೆಯನ್ನು ಈದಿನದಿಂದ ಹೆಚ್ಚಿಸಿ ಸರ್ಕಾರವು ಪ್ರಕಟಣೆ ಇತ್ತಿದೆ

ಸಣ್ಣಕ್ಕಿ ರೂ ಗೆ ೧|| ಸೇರು; ದಪ್ಪಕ್ಕಿ ರೂ ಗೆ ೧||| ಸೇರು ಒಂದು ಚಟಾಕು; ಗೋಧಿ ರೂ ಗೆ ೧|| ಸೇರು; ರಾಗಿ, ಜೋಳ ರೂ ಗೆ ೪ ಸೇರು.

ಈದಿನದಿಂದಲೇ ಹೊಸದರವು ಜಾರಿಗೆ ಬರಲಿದೆ.

ಎಲ್ಲಾ ಡಿಪೋಗಳಲ್ಲಿರುವ ದಾಸ್ತಾನನ್ನು ತನಿಖೆಮಾಡಲು ನಿನ್ನೆ ರೇಷನ್ ಜಾರಿಯಿರುವ ಪ್ರದೇಶಗಳಲ್ಲಿ ಎಲ್ಲಾ ಡಿಪೋಗಳನ್ನು ಮುಚ್ಚಲಾಗಿತ್ತು.

ಜಿಲ್ಲಾಧಿಕಾರಿಗಳ ವರ್ಗಾವರ್ಗಿ

ಬೆಂಗಳೂರು ಏ೯

ಜಿಲ್ಲಾಧಿಕಾರಿಗಳ ವರ್ಗ ಸರ್ಕಾರವು ಈ ರೀತಿಮಾಡಿದೆ ಚಿತ್ರದುರ್ಗ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಶೇಷಗಿರಿರಾವ್ ಹಾಸನಕ್ಕೆ, ಕೋಲಾರದ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಚಿಕ್ಕನಾರಾಯಣಸ್ವಾಮಿ ಚಿತ್ರದುರ್ಗಕ್ಕೆ, ಚುನಾವಣಾ ಕಮೀಷನರ್ ಶ್ರೀ ಕೆ. ಪಿ. ರಾಮನಾಥಯ್ಯ ಕೋಲಾರಕ್ಕೆ.

ಹಾಸನಕ್ಕೆ ವರ್ಗಾಯಿಸಲ್ಪಟ್ಟಿದ್ದ ಜ|| ಎ. ಎಸ್. ಖಲೀಲ್ ಮತ್ತು ರಸ್ತೆ ಸಂಚಾರದ ಜನರಲ್‌ಮ್ಯಾನೇಜರಾಗಿ ವರ್ಗಾಯಿಸಲ್ಪಟ್ಟಿದ್ದ ಶ್ರೀ ಕೆ. ಅನಂತರಾಮಯ್ಯನವರ ವರ್ಗವನ್ನು ರದ್ದುಪಡಿಸಲಾಗಿದೆ.

ಪುರಸಭಾಧಿವೇಶನ

ಮೈಸೂರು ಏ ೯

ಮೈಸೂರುನಗರವನ್ನು ಏಕಸದಸ್ಯ ಚುನಾವಣಾ ಕ್ಷೇತ್ರವನ್ನಾಗಿ ವಿಂಗಡಿಸಲು ಏರ್ಪಾಡಾಗಿದ್ದ ಸಮಿತಿಯ ಸಲಹೆಯನ್ನು ಪರಿಶೀಲಿಸಿ ೪೦ ವಾರ್ಡುಗಳಿಗೆ ಕಡಿಮೆಯಿಲ್ಲದಂತೆ ಮಾಡಬೇಕೆಂದು ನಿನ್ನೆ ಪೌರಸಭಾಧಿವೇಶನದಲ್ಲಿ ತೀರ್ಮಾನವಾಯಿತು.

ರಾಧಾಕೃಷ್ಣನ್ ಭಾರತಕ್ಕೆ

ಡಾ|| ರಾಧಾಕೃಷ್ಣನ್‌ರವರು ಭಾರತಕ್ಕೆ ಭಾನುವಾರ ಬರಲಿರುವರು.

ಮೈಸೂರಿಗೆ ಹೆಚ್ಚಿಗೆ ಆಹಾರ ಕೊಡಿ

ಈ ತಿಂಗಳಿಗೆ ೧೧ ಸಾವಿರ ಟನ್ ಗೋಧಿ, ೮ ಸಾವಿರ ಟನ್ ಕೆಂಪುಜೋಳವನ್ನು ಕೇಂದ್ರದವರು ಸಂಸ್ಥಾನಕ್ಕೆ ಕೊಡುತ್ತಾರೆ. ರಾಗಿ, ಜೋಳ ವಗೈರೆ ಧಾನ್ಯದ ಫಸಲು ಕೆಟ್ಟುಹೋದುದರಿಂದ ಈ ವರ್ಷದಲ್ಲಿ ೮೦ ಸಾವಿರ ಟನ್ ಕೆಂಪುಜೋಳವನ್ನು ಕೊಡುವಂತೆ ಮೈಸೂರು ಸರ್ಕಾರದವರು ಕೇಂದ್ರವನ್ನು ಪ್ರಾರ್ಥಿಸಿರುತ್ತಾರೆ.

ಕಲಾಪ್ರದರ್ಶನ

ಹೈದರಾಬಾದ್ ಕಲಾಪ್ರದರ್ಶನವನ್ನು ರಾಷ್ಟ್ರಾಧ್ಯಕ್ಷರು ಈ ದಿನ ದೆಹಲಿಯಲ್ಲಿರುವ ಹೈದರಾಬಾದ್ ಭವನದಲ್ಲಿ ಪ್ರಾರಂಭಿಸುವರು.

ಅತ್ಯಂತ ಪುರಾತನಕಾಲದ, ಯುಗಯುಗಾಂತರದ ಭಾರತ ಸಂಸ್ಕೃತಿಯನ್ನು ವಿವರಿಸುವ ಅನೇಕ ವಿಧವಾದ ಸುಮಾರು ೩ ಸಾವಿರ ವಸ್ತುಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ.

ವಿಮಾನಸಂಚಾರ ಸಂಧಾನ

ಭಾರತ ಈಜಿಪ್ಟ್ ನಡುವೆ ವಿಮಾನಸಂಚಾರ ಸಂಧಾನ ಮಾತುಕತೆಗಳು ಮುಕ್ತಾಯವಾದುವು ಸದ್ಯದಲ್ಲಿ ಉಭಯದೇಶದವರು ಕರಾರಿಗೆ ಸಹಿ ಹಾಕುವರು

ಸಕ್ಕರೆ ಕಾರ್ಖಾನೆಗಳ ಸ್ಥಾಪನೆ

ಮದರಾಸ್ ಪ್ರಾಂತ್ಯದಲ್ಲಿ ಉತ್ತರ ಆರ್ಕಾಟ್, ದಕ್ಷಿಣ ಆರ್ಕಾಟ್ ಕೊಯಂಬತ್ತೂರು ಜಿಲ್ಲೆಗಳಲ್ಲಿ ಮತ್ತು ತಿರುಚನಾಪಲ್ಲಿ ತಂಜಾವೂರು ಪ್ರಾಂತ್ಯದಲ್ಲಿ ಒಟ್ಟು ೪ ಸಕ್ಕರೆ ಗಿರಣಿಗಳನ್ನು ಸ್ಥಾಪಿಸುವ ಯೋಜನೆಯನ್ನು ಸರ್ಕಾರವು ಪರಿಶೀಲಿಸುತ್ತಲಿದೆ.

ತಿರುವಾಂಕೂರು ಕೊಚ್ಚಿನ್‌ಗೆ ೩ ಕೋಟಿ ರೂ. ಆಹಾರ ಸಬ್ಸಿಡಿ

೧೯೫೨-೫೩ನೇ ಸಾಲಿಗೆ ಭಾರತ ಸರ್ಕಾರವು ತಿರುವಾಂಕೂರು-ಕೊಚ್ಚಿನ್ ಸಂಸ್ಥಾನಕ್ಕೆ ೩ ಕೋಟಿ ರೂಗಳ ಆಹಾರ ಸಬ್ಸಿಡಿಯನ್ನು ಕೊಡಲು ನಿರ್ಧರಿಸಿದೆಂಬುದು ತಿಳಿದುಬಂದಿದೆ.

ಭೂಸೈನ್ಯ

ಪೆಪ್ಸುವಿನಲ್ಲಿ ಸರ್ಕಾರವು ಭೂಸೈನ್ಯವನ್ನು ರಚಿಸಲು ನಿರ್ಧರಿಸಿದೆ ಅಧಿಕಾರಿಗಳು, ಸಾರ್ವಜನಿಕರು ಎಲ್ಲರೂ ಈ ದಳವನ್ನು ಸೇರುವರು.

ಐವರು ಆಹಾರ ಇಲಾಖಾ ನೌಕರರ ಮೇಲೆ ಕಾರ್ಯಕ್ರಮ

ಇಬ್ಬರು ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರ ವಜಾ

ಬೆಂಗಳೂರು ಏ ೮

ಮಾರ್ಚಿ ೧೫ಕ್ಕೆ ಮುಕ್ತಾಯವಾಗುವ ಪಕ್ಷದಲ್ಲಿ ನಡೆದ ಆಹಾರ ಮೊಕದ್ದಮೆಗಳನ್ನು ಸರ್ಕಾರದವರು ಪ್ರಕಟಿಸಿರುವರು.

ಮೈಸೂರು ನಗರದಲ್ಲಿ ಆಹಾರ-ಪದಾರ್ಥಗಳ ಅನಧಿಕೃತ ದಾಸ್ತಾನಿಗಾಗಿ ಇಬ್ಬರಿಗೆ ೬೦ ರೂ, ೪೦ ರೂ, ಜುಲ್ಮಾನೆ ಹಾಕಲಾಗಿದೆ.

ಸುಳ್ಳು ದಾಖಲೆತೋರಿಸಿ ಬತ್ತದ ದಾಸ್ತಾನನ್ನು ಹೊಂದಿದ್ದಕ್ಕೆ ಒಬ್ಬ ಮಹಿಳೆಗೆ ೪೦ ರೂ ಜುಲ್ಮಾನೆ ಹಾಕಲಾಯಿತು.

ವಿಶೇಷ ಪ್ರಮಾಣದಲ್ಲಿ ಕಡಮೆ ದಾಸ್ತಾನು ತೋರಿಸಿದ್ದಕ್ಕಾಗಿ ಎರಡು ಸಹಕಾರ ಸಂಘಗಳಿಗೆ ಸರ್ ಚಾರ್ಜು ಮಾಡಲಾಗಿದೆ.

ಆಹಾರ-ಪದಾರ್ಥಗಳಿಗಾಗಿ ಕೊಟ್ಟ ಚೆಕ್ಕುಗಳು ವಾಪಸಾದ್ದಕ್ಕಾಗಿ ೫ ಡಿಪೋಗಳಿಗೆ ೧೦ ರೂ ಯಿಂದ ೫೦ ರೂ ವರೆಗೆ ಜುಲ್ಮಾನೆ ಹಾಕಲಾಗಿದೆ.

ಅನಧಿಕೃತವಾಗಿ ಸರ್ಕಾರಿ ಗೋಡೌನಿನಿಂದ ಸಕ್ಕರೆ ಪಡೆದಿದ್ದಕ್ಕೆ ಎಂದು ಡಿಪೋದವರಿಗೆ ಲೈಸೆನ್ಸ್ ವಜಾ ಮಾಡಲಾಗಿದೆ

ಸರ್ಕಾರಿ ಗೋಡೌನಿನಿಂದ ಅನಧಿಕೃತವಾಗಿ ಸಕ್ಕರೆಯನ್ನು ತೆಗೆದುಕೊಂಡು ಹೋದುದಕ್ಕಾಗಿ ಇಬ್ಬರು ಸ್ಪೆಷಲ್ ರೆವೆನ್ಯೂ ಇನ್ಸ್‌ಪೆಕ್ಟರ್ ಸೇರಿ ೫ ಜನ ಸರ್ಕಾರಿ ನೌಕರರನ್ನು ಕೆಲಸದಿಂದ ವಜಾ ಮಾಡಲಾಗಿದೆ.

ಬೆಂಗಳೂರಿನಲ್ಲಿ—ರೇಷನ್ ವಸ್ತುಗಳನ್ನು ರಹದಾರಿಯಿಲ್ಲದೆ ಸಾಗಿಸುತ್ತಿದ್ದುದಕ್ಕಾಗಿ ೫ ಜನರಿಗೆ ೫ ರೂ ಯಿಂದ ೧೫೦ ರೂ ವರೆಗೆ ಜುಲ್ಮಾನೆ ವಿಧಿಸಲಾಗಿದೆ.

ರೇಷನ್ ಕಾನೂನನ್ನು ಮೀರಿದ್ದಕ್ಕೆ ಒಬ್ಬರಿಗೆ ೧೫ ರೂ ಜುಲ್ಮಾನೆ ಹಾಕಲಾಗಿದೆ.

ಕೆಲವು ನ್ಯೂನಾತಿರೇಕಗಳು ಕಾಣಬಂದುದಕ್ಕಾಗಿ ಒಂದು ಸಾದೆ ಡಿಪೋ ಮತ್ತು ಒಂದು ಸಹಕಾರ ಸಂಘಕ್ಕೆ ೨೫ ರೂ ಜುಲ್ಮಾನೆ ಹಾಕಲಾಗಿದೆ.

ಬೆಳ್ಳಿಯ ಸಾಲ

ಯುದ್ಧ ಸಮಯದಲ್ಲಿ ಅಮೆರಿಕಾದಿಂದ ಭಾರತವು ಪಡೆದಿದ್ದ ೨೨೬ ಮಿಲಿಯನ್ ಔನ್ಸ್‌ಗಳ ಬೆಳ್ಳಿಯನ್ನು ಅಮೆರಿಕಾಕ್ಕೆ ೧೯೫೭ರ ವೇಳೆಗೆ ಹಿಂದಕ್ಕೆ ಕೊಡಬೇಕು. ಬೆಳ್ಳಿಯನ್ನು ಶೇಖರಿಸಲು ಈಗ ಸ್ಥಾಪಿತವಾದ ಅಲೀಪುರ ಟಂಕಸಾಲೆಯಲ್ಲಿ ತಕ್ಕ ವ್ಯವಸ್ಥೆಮಾಡಲಾಗುತ್ತಿದೆ.

ರಷ್ಯಾದೊಂದಿಗೆ ಅಮೆರಿಕದ ಸಹಕಾರ ಪ್ರಯತ್ನ

ಅಮೆರಿಕದ ರಾಯಭಾರಿಗಳಾಗಿ ರಷ್ಯಾಕ್ಕೆ ನಿಯಮಿಸಲ್ಪಟ್ಟಿರುವ ಮಿ| ಜಾರ್ಜ್ ಎಫ್. ಕೆನ್ನನರು ಈ ತಿಂಗಳ ಅಂತ್ಯದಲ್ಲಿ ಸೋವಿಯೆಟ್ ಯೂನಿಯನ್ ಬರುವರು. ರಷ್ಯಾಕ್ಕೆ ಇಷ್ಟವಿದ್ದರೆ ಅದು ವಿಚಾರವಿನಿಮಯ ಮಾಡುವುದರ ಮೂಲಕ ಪ್ರಪಂಚದಲ್ಲಿ ಒಂದು ಹೊಸ ಅಧ್ಯಾಯವನ್ನೇ ಪ್ರಾರಂಭ ಮಾಡಬಹುದು. ಅಭಿಪ್ರಾಯ ವಿಚಾರವಿನಿಮಯ ಮಾಡಿ ರಷ್ಯಾದೊಂದಿಗೆ ಸಹಕರಿಸಲು ಯಾವಾಗಲೂ ಸಿದ್ಧವಿದೆ.

೪೮ ವರ್ಷ ವಯಸ್ಸಿನ ಕೆನ್ನನ್ನರು ರಷ್ಯಾ ಚರಿತ್ರೆ ಮತ್ತು ನೀತಿಯಲ್ಲಿ ಅಗ್ರಗಣ್ಯರು ತುಂಬಾ ತಿಳಿದುಕೊಂಡಿದ್ದಾರೆ. ರಷ್ಯನ್ ಭಾಷೆಯನ್ನು ಸರಳವಾಗಿಯೂ ಸುಲಭವಾಗಿಯೂ ಮಾತನಾಡುತ್ತಾರೆ ಮತ್ತು ಕಮ್ಯೂನಿಸಂ ತತ್ವದಲ್ಲಿ ಅಧಿಕಾರಯುತವಾಗಿ ಮಾತನಾಡಬಲ್ಲರು.

ಅಮೇರಿಕ ಮತ್ತು ರಷ್ಯಾದ ನಡುವಿರುವ ಸಮಸ್ಯೆಗಳು ತೀರ ಕಷ್ಟವಿದೆ ಎಂಬುದು ಕೆನ್ನನ್ನರಿಗೆ ಗೊತ್ತು. ಬಹುಶಃ ಕೆಲವು ಸಮಸ್ಯೆಗಳಿಗೆ ಪರಿಹಾರವೇ ಇಲ್ಲವೇನೋ, ಕೆಲಸ ಎಷ್ಟೆ ಕಷ್ಟವಾದರೂ ರಾಜಕಾರಣ ನಿಪುಣತೆಯಿಂದ ಆ ಸಮಸ್ಯೆಗಳನ್ನು ಬಗೆಹರಿಸಬಹುದು.

ಅಮೆರಿಕ ರಷ್ಯಾಗಳಿಗೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ರಾಜಕೀಯದಲ್ಲಿ, ಸಾಂಸ್ಕೃತಿಕ ಸಂಬಂಧವನ್ನೂ ಎರಡು ರಾಷ್ಟ್ರಗಳೂ, ಪರಸ್ಪರ ಅನುಕೂಲಕ್ಕಾಗಿ ಬೆಳೆಸಿಕೊಂಡು ಹೋಗಬಹುದೆಂಬುದನ್ನು ರಾಯಭಾರಿ ಕೆನ್ನನ್ನರು ನಂಬಿದ್ದಾರೆ.

ರಾಯಭಾರಿಯಾಗಿ ಪ್ರಮಾಣವಚನ ಸ್ವೀಕಾರಮಾಡುತ್ತಾ, ಮಿ| ಕೆನ್ನನ್ನರು ಮಾಸ್ಕೋದ ತಮ್ಮ ಹೊಸ ಹುದ್ದೆಯನ್ನು ಸ್ವೀಕರಿಸುವುದರಲ್ಲಿ ತಮಗೆ ತುಂಬಾ ಸಂತೋಷವಾಗಿದೆಯೆಂದರು. ಅಂತರರಾಷ್ಟ್ರೀಯ ವರ್ತುಳದಲ್ಲಿನ ಬಿಗಡಾಯಿಸಿದ ಪರಿಸ್ಥಿತಿಯನ್ನು ಬಿಡಿಸಲು, ಸಹಾಯಮಾಡಲು ತಮಗೆ ಅವಕಾಶಸಿಕ್ಕಿದ್ದು, ತಮ್ಮ ಅದೃಷ್ಟವೆಂದರು.

ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು [illegible]ಮಾಡುವುದು ಅಮೆರಿಕಾ ಮತ್ತು ಸೋವಿಯೆಟ್ ರಾಷ್ಟ್ರವು ಇಷ್ಟಪಟ್ಟರೆ ಅದು ಸಾಧ್ಯ ಎಂಬುದಾಗಿ ಕೆನ್ನನ್ ನುಡಿದರು.

ಚಿನ್ನದ ಬಳೆ ಅಪಹಾರಕ್ಕೆ ೧೦ ವರ್ಷ ಕಠಿಣ ಶಿಕ್ಷೆ

ನವೆಂಬರ್ ೧೪ ರಂದು ಕಾಲೇಜ್ ತರುಣಿಗೆ ಚೂರಿ ತೋರಿಸಿ ಚಿನ್ನದ ಬಳೆ ಅಪಹರಿಸಿದ ೨೫ ವರ್ಷದ ಬಾಬೂಲಾಲ್ ರೂಪ್ ಎಂಬ ತರುಣನಿಗೆ ೧೦ ವರ್ಷ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತು.

ಆಹಾರ ನೀತಿ ಪರಿಶೀಲನೆಗೆ ಸಮಿತಿ

ಬೆಂಗಳೂರು ಏ ೯

ದಾವಣಗೆರೆಯ ರಾಜಕೀಯ ಸಮ್ಮೇಳನದ ನಿರ್ಣಯದ ದೃಷ್ಟಿಯಿಂದ ಮೈಸೂರು ಸರ್ಕಾರದ ಆಹಾರ ನೀತಿಯನ್ನು ಪುನಃ ಪರಿಶೀಲಿಸಲು ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿದೆ.

ಈ ಸಮಿತಿಯಲ್ಲಿ ಆಹಾರ ಶಾಖೆ ಡೈರೆಕ್ಟರು, ಹಣಕಾಸಿನ ಶಾಖೆ ಕಾರ್ಯದರ್ಶಿ, ರೆವಿನ್ಯೂ ಕಮೀಷನರ್‌ರವರು, ಆಹಾರ ಶಾಖೆ ಕಾರ್ಯದರ್ಶಿ ಸದಸ್ಯರು ಆಹಾರ ಶಾಖೆ ಅಸಿಸ್ಟೆಂಟ್ ಕಾರ್ಯದರ್ಶಿ ಶ್ರೀ ಎಂ ಕೆ ರಾಮಣ್ಣನವರು ಸಮಿತಿಯ ಕಾರ್ಯದರ್ಶಿ.

ವಿಶ್ವದ ಭೂ ಸಮಸ್ಯೆ ಪರಿಹಾರಕ್ಕೆ ಪರಮೌಷಧ

ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞದ ಪ್ರಯತ್ನವು ವಿಶ್ವದ ಭೂ ಸಮಸ್ಯೆಯನ್ನು ಪರಿಹರಿಸುವಂತಹ ಅತ್ಯುತ್ತಮವಾದ, ನೇರವಾದ ಮತ್ತು ಅತ್ಯಂತ ಸುಲಭವಾದ ಮಾರ್ಗವಾಗಿದೆ' ಎಂದು ಶಾಂತಿನಿಕೇತನದ ಪ್ರೊ| [illegible]ರವರು ಅಭಿಪ್ರಾಯ ಪಟ್ಟಿದ್ದಾರೆ.

ಕಾಂಗ್ರೆಸ್ಸಿಗರಿಗೆ ಎಚ್ಚರಿಕೆ

ಕಾಂಗ್ರೆಸ್ಸಿನವರು ಆಡಳಿತ ವಿಚಾರದಲ್ಲಿ ಮಧ್ಯ ಪ್ರವೇಶಿಸಬಾರದೆಂದೂ ಮತ್ತು ಉದ್ಯೋಗ-ಪರ್ಮಿಟ್‌ಗಳಿಗಾಗಿ ಸಚಿವರುಗಳನ್ನು ತೊಂದರೆ ಪಡಿಸಬಾರದೆಂದೂ ಕೇಂದ್ರ ಸಚಿವ ಡಾ| ಕಟ್ಜು ತಿಳಿಸಿರುವರು.

ಶಾಸನಸಭಾ ಅಧ್ಯಕ್ಷರ ಸಂಬಳ ೧,೨೫೦ ರೂ.

ಹೈದರಾಬಾದ್ ಶಾಸನಸಭೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸಂಬಳ ಮಸೂದೆಯಂತೆ ಅಧ್ಯಕ್ಷರಿಗೆ ೧೨೫೦ ರೂ. ಸಂಬಳ ಮತ್ತು ೫೦೦ ರೂ. ಕಾರ ಲೋಯನ್ಸ್ ದೊರೆಯುವುದು ವಾಸಕ್ಕೆ ಉಚಿತವಾದ ಬಂಗಲೆ

ಉಪಾಧ್ಯಕ್ಷರಿಗೆ ೬೫೦ ರೂಗಳ ಮಾಸಾಶನ ಸಿಗಲಿದೆ

ಮಿಲಿಟರಿ ಸೇವೆಗೆ ಬಾರದಿರಲು ಮರಣದಂಡನೆ

ಹೊರಗಡೆ ವಾಸಿಸುತ್ತಿರುವ ೩೦ ಮಂದಿ ಗ್ರೀಕ್ ವಿದ್ಯಾರ್ಥಿಗಳಿಗೆ ಅವರ ಗೈರ್‌ಹಾಜರಿಯಲ್ಲೇ ಮಿಲಿಟರಿ ಕೋರ್ಟೊಂದು ಮರಣದಂಡನೆ ವಿಧಿಸಿದೆ. ಮಿಲಿಟರಿ ಸೇವೆಗಾಗಿ ಅವರ ವಯಸ್ಸಿನವರನ್ನೆಲ್ಲ ಕರೆದಾಗ ಅವರು ಮುಂದೆ ಬಂದು ಹಾಜರಾಗಲಿಲ್ಲವೆಂಬ ಕಾರಣದ ಮೇಲೆ ಜನರಿಗೆ ಮರಣದಂಡನೆ ವಿಧಿಸಲಾಗಿದೆ

ಪರ್ಸನಲ್ ಅಸಿಸ್ಟೆಂಟ್‌ರಾಗಿ ನೇಮಕ

ಸಚಿವ ಶ್ರೀ ಸಿದ್ದಲಿಂಗಯ್ಯನವರ ಪರ್ಸನಲ್ ಅಸಿಸ್ಟೆಂಟರನ್ನಾಗಿ ಶ್ರೀ ಸೂರನಾರಾಯಣ್‌ರನ್ನು ನೇಮಿಸಲಾಗಿದೆ.

ಶ್ರೀ ದೇವದಾಸರನ್ನು ಗೃಹ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರ ಪರ್ಸನಲ್ ಅಸಿಸ್ಟೆಂಟರನ್ನಾಗಿ ನೇಮಿಸಲಾಗಿದೆ.

ಪೇಟೆ ಧಾರಣೆ

ಮೈಸೂರು ತಾ| 9-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	10-0	17-14
ಹೊಂಗೆಬೀಜ	,,	12-14	14-4
ಹುರುಳಿ	,,	30-10	31-14
ಮೆ. ಕಾಯಿ	ಮಣಕ್ಕೆ	8-10	16-2
ಹುಣಸೇಹಣ್ಣು	,,	2-8	3-9
ಸೀಗೆಕಾಯಿ	,,	2-15	3-7
ತೆಂಗಿನಕಾಯಿ	1100ಕ್ಕೆ	132	205

ಚಿನ್ನ ಬೆಳ್ಳಿ ದರಗಳು

9-4-52	ರೂ.
ಸವರನ್	66-4
,,	66-6
ಚಿನ್ನ ತೊಲ	92-10
,, ಮೂಸ	91-8
ಬೆಳ್ಳಿ 100 ತೊಲ	162-8
,, ತೊಲ	1-12

ವುಡ್ ಲ್ಯಾಂಡ್ಸ್
೪—೪—೫೨ ರಿಂದ ಪ್ರತಿದಿನ ೩ ಆಟಗಳು
ಮೀನಾಕುಮಾರಿ, ಮುಬಾರಕ್ ಪಾತ್ರವಹಿಸಿರುವ ಹಿಂದಿ ಚಿತ್ರ.
-ಮದ್ಹೋಷ್-

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಲಕ್ಷ್ಮಿನರಸಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೧—೪—೧೯೫೨ನೇ ಶುಕ್ರವಾರ [ಸಂಚಿಕೆ ೧೮೯

ಆಹಾರ ಸಂಶೋಧನಾ ಕೇಂದ್ರ

ಮೈಸೂರು ಏ ೧೧

ಮೈಸೂರಿನಲ್ಲಿರುವ ಆಹಾರ ಸಂಶೋಧನಾ ಕೇಂದ್ರದ ವಾರ್ತಾ ಶಾಖೆಯ ಮುಖ್ಯಾಧಿಕಾರಿಗಳು ಈದಿನ ಬೆಳಿಗ್ಗೆ ಪತ್ರಿಕಾಗೋಷ್ಠಿಯೊಂದನ್ನು ನಡೆಸಿ ಕಳೆದ ಸಾಲಿನಲ್ಲಿ ಕೇಂದ್ರವು ಮಾಡಿರುವ ಕಾರ್ಯಗಳನ್ನೆಲ್ಲಾ ವಿವರಿಸಿದರು

ಕೇಂದ್ರಕ್ಕೂ ಜನತೆಗೂ ಹೆಚ್ಚಿಗೆ ಸಂಪರ್ಕವುಂಟಾಗಬೇಕಾಗಿರುವುದರಿಂದ ಪತ್ರಿಕೆಗಳು ತಮಗೆ ನೆರವು ನೀಡಬೇಕೆಂದು ಕೋರಿದರು.

ನಗರಾರೋಗ್ಯ

ಮೈಸೂರು ಏ ೧೦

ಮಾರ್ಚಿ ಅಂತ್ಯಕ್ಕೆ ಮುಕ್ತಾಯವಾದ ಪಕ್ಷದ ನಗರಾರೋಗ್ಯದ ಬಗ್ಗೆ ಮೈಸೂರು ನಗರ ಆರೋಗ್ಯಾಧಿಕಾರಿಗಳು ಒಂದು ಪ್ರಕಟಣೆ ಹೊರಡಿಸಿರುವರು.

ಇಬ್ಬರಿಗೆ ಸಿಡುಬುರೋಗ ತಗುಲಿ ಒಬ್ಬರು ಸತ್ತರು. ೬೭೭ ಪ್ರೈಮರಿ ಮತ್ತು ೪೪೧೦ ರಿವ್ಯಾಕ್ಸಿನೇಷನ್ ಮಾಡಲಾಯಿತು.

ಡಿಫ್ತೀರಿಯಾ ರೋಗವು ೬ ಜನಕ್ಕೆ ತಗುಲಿತು, ೨೧ ಡಿಫ್ತೀರಿಯಾ ವಿರೋಧ ಇನಾಕ್ಯುಲೇಷನ್ ಮಾಡಲಾಗಿದೆ

ಕರಗ ಮಹೋತ್ಸವ

ಬೆಂಗಳೂರು ಏ ೧೦

ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಕರಗ ಮಹೋತ್ಸವವು ನಿನ್ನೆ ರಾತ್ರಿ ಅತ್ಯಂತ ವೈಭವದಿಂದ ನಡೆಯಿತು

'ನಮಗೆ ರೊಟ್ಟಿಬೇಕು'

ದೊಡ್ಡ ಗಾತ್ರದ ರೊಟ್ಟಿಯೊಂದನ್ನು ಹಿಡಿದುಕೊಂಡು, 'ನಮಗೆ ರೊಟ್ಟಿಬೇಕು' ಎಂಬ ಘೋಷಣೆಯೊಡನೆ ಅಂಬಾಲ ಪುರಸಭೆಯ ಸುಮಾರು ೫೦೦ ಝಾಡಮಾಲಿಗಳು ಹೆಚ್ಚು ವೇತನಗಳ ಮತ್ತು ಹೆಚ್ಚು ಸೌಕರ್ಯಗಳ ತಮ್ಮ ಬೇಡಿಕೆಗಳಿಗಾಗಿ ಪ್ರದರ್ಶನ ನಡೆಸಿದರು.

ಝಾಡಮಾಲಿಗಳು ಈಗಾಗಲೇ ಮುಷ್ಕರದ ನೋಟೀಸನ್ನು ಪುರಸಭೆಗೆ ಕೊಟ್ಟಿದ್ದಾರೆ. ಪುರಸಭೆಯು ಝಾಡಮಾಲಿಗಳ ಸಂಘಕ್ಕೆ ಪ್ರತಿಯಾಗಿ ನೋಟೀಸು ಕೊಟ್ಟು ಯಾವ ಷರತ್ತೂ ಇಲ್ಲದೆ ಮುಷ್ಕರ ನೋಟೀಸನ್ನು ವಾಪಸ್ ಪಡೆಯಬೇಕೆಂದು ತಿಳಿಸಿದ್ದಾರೆ.

ಆಗಸ್ಟ್ ಮಾಹೆಯಲ್ಲಿ ಎ. ಐ. ಸಿ. ಸಿ. ಅಧಿವೇಶನ

ಎ ಐ ಸಿ ಸಿ ಯ ಮುಂದಿನ ಅಧಿವೇಶನ ಆಗಸ್ಟ್ ತಿಂಗಳಲ್ಲಿ ಹೈದರಾಬಾದಿನಲ್ಲಿ ನಡೆಯಲಿದೆಯೆಂದು, ಅಲ್ಲಿಯ ಕಾಂಗ್ರೆಸ್ ಕಛೇರಿ ಪ್ರಕಟಿಸಿದೆ

ನಿರ್ದಿಷ್ಟವಾದ ತಾರೀಖನ್ನು ಮುಂದೆ ತಿಳಿಸಲಾಗುವುದು.

ಟ್ರೂಮನ್ ಆಜ್ಞೆಯ ವಿರುದ್ಧ ಮೊಕದ್ದಮೆ

ಸರ್ಕಾರ ಉಕ್ಕಿನ ಕೈಗಾರಿಕೆಯನ್ನು ವಶಪಡಿಸಿಕೊಳ್ಳಬೇಕೆಂಬುದಾಗಿ ಅಮೆರಿಕಾಧ್ಯಕ್ಷ ಟ್ರೂಮನ್ನರು ಹೊರಡಿಸಿರುವ ಆಜ್ಞೆಯ ನ್ಯಾಯಬದ್ಧತೆಯನ್ನು ಪ್ರಶ್ನಿಸಿ ಎರಡು ಉಕ್ಕಿನ ಕಂಪೆನಿಗಳು ವ್ಯವಹಾರ ಹೂಡಿವೆ.

ರಾಷ್ಟ್ರಾಧ್ಯಕ್ಷಸ್ಥಾನಕ್ಕೆ

ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಡಾ| ರಾಜೇಂದ್ರ ಪ್ರಸಾದರವರ ಹೆಸರನ್ನು ಸೂಚಿಸಿ ಪ್ರಧಾನಿ ಶ್ರೀ ನೆಹರೂರವರು ಸ್ವಂತವಾಗಿ ರಿಟರ್ನಿಂಗ್ ಆಫೀಸರ ಬಳಿಗೆ ಹೋಗಿ ಉಮೇದುವಾರಿಕೆ ಪತ್ರವನ್ನು ನಿನ್ನೆ ಸಲ್ಲಿಸಿದರು. ಮೌಲಾನಾ ಆಜಾದರು ಡಾ| ಪ್ರಸಾದರವರ ಹೆಸರನ್ನು ಅನುಮೋದಿಸಿರುವರು.

ಪಂಜಾಬಿನ ವಕೀಲರಾದ ಶ್ರೀ ಹರಿರಾಂರವರೂ ಸಹ ತಮ್ಮ ಉಮೇದುವಾರಿಕೆಯನ್ನು ನಿನ್ನೆ ಸಲ್ಲಿಸಿದರು.

ಅಧಿಕಾರ ಸ್ವೀಕಾರ

ಮದರಾಸ್ ಮುಖ್ಯಮಂತ್ರಿ ಶ್ರೀ ಸಿ ರಾಜಗೋಪಾಲಾಚಾರಿ ಮತ್ತು ಇತರ ೧೪ ಜನ ಮಂತ್ರಿಗಳು ನಿನ್ನೆಯ ದಿನ ಗವರ್ನರ್ ಶ್ರೀ ಶ್ರೀಪ್ರಕಾಶರವರ ಸಮ್ಮುಖದಲ್ಲಿ ಪ್ರಮಾಣ ಸ್ವೀಕಾರ ಮಾಡಿದರು.

ಸ್ವೀಕಾರ

ಮೈಸೂರು ರಾಜಗೋಪಾಲ್ ಕೃಷ್ಣ ಕಲಾ ಮಂದಿರದವರು ಪ್ರಕಟಿಸಿರುವ ೧೯೫೨-೫೩ನೇ ಸಾಲಿನ ಕ್ಯಾಲೆಂಡರನ್ನು ಅದರಿಂದ ಸ್ವೀಕರಿಸಿದ್ದೇವೆ

ಹೊಸ ಮಂತ್ರಿಮಂಡಲ

ಬೊಂಬಾಯಿ ನೂತನ ಮಂತ್ರಿಮಂಡಲವು ಶ್ರೀ ಮೊರಾರ್ಜಿಯವರ ನೇತೃತ್ವದಲ್ಲಿ ಈ ತಿಂಗಳು ೧೬ನೇ ತಾ| ಅಧಿಕಾರ ಸ್ವೀಕರಿಸುವುದೆಂದು ತಿಳಿದುಬಂದಿದೆ.

ಹೆಚ್ಚಿಗೆ ತೆರಿಗೆಗಳಾವುವೂ ಇಲ್ಲ

ಮೈಸೂರು ಪುರಸಭೆಯ ಮುಂದಿನಸಾಲಿನ ಬಜೆಟ್

ಮೈಸೂರು ಏ ೧೦

ಮೈಸೂರು ಪುರಸಭೆಯ ಬಜೆಟ್ಟು ಅಧಿವೇಶನವು ಈದಿನ ಉಪಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು

೧೯೫೨-೫೩ನೇ ಸಾಲಿನಲ್ಲಿ ೩,೧೪೨,-೯೯೨ ರೂ ಉತ್ಪತ್ತಿ, ೩೦,೬೪,೦೦೦ ರೂ ವೆಚ್ಚವನ್ನು ಅಂದಾಜುಮಾಡಲಾಗಿದೆ

ಹೊಸಬಜೆಟ್ಟನ್ನು ಮಂಡಿಸುತ್ತಾ, ಪುರಸಭಾಧ್ಯಕ್ಷ ಶ್ರೀ ಕೃಷ್ಣಮೂರ್ತಿರಾಯರು

ಈ ವರ್ಷದ ಆದಾಯವೆಚ್ಚವನ್ನು ಯಾವ ರೀತಿ ಹೆಚ್ಚಿಗೆ ತೆರಿಗೆಯನ್ನು ವಿಧಿಸದೆ ಸಮತೂಗಿಸಲಾಗಿದೆ. ಜೀವನಮಟ್ಟ ಏರುವುದು ಆಹಾರವಸ್ತುಗಳ ಬೆಲೆ ಏರಿಕೆ, ಮುಂತಾದುವುಗಳನ್ನೆಲ್ಲಾ ಈ ಬಜೆಟ ತಯಾರಿಸುವಾಗ ಪರಿಶೀಲಿಸಲಾಗಿದೆಂದು ಹೇಳಿದರು.

ಈ ಸಾಲಿನಲ್ಲಿ ರಸ್ತೆ, ದೀಪ, ನೀರಿನ ಸರಬರಾಜು ಮುಂತಾದ ಪೌರ ಸೌಕರ್ಯಗಳಿಗೆ ಹೆಚ್ಚಿಗೆ ಹಣವನ್ನು ಒದಗಿಸಲಾಗಿದೆ ಈ ನಗರದಲ್ಲಿ ನೀರಿನ ಅಭಾವವು ವಿಶೇಷವಾಗಿದೆ ನಗರದ ದಕ್ಷಿಣಭಾಗಗಳಲ್ಲಂತೂ ಹೇಳತೀರದು. ಕೆಲವುಕಡೆ ಒಂದೆರಡುಗಂಟೆ ನೀರು ಬರುವುದು ಕಷ್ಟ ಮತ್ತೆ ಕೆಲವುಕಡೆ ೨೪ ಗಂಟೆಗಳಕಾಲವೂ ಇರುತ್ತದೆ ನೀರಿನ ಸರಬರಾಜನ್ನು ಮೈಸೂರಿನಲ್ಲಿ ಸರಿಪಡಿಸಲು ಸರ್ಕಾರವು ಅಷ್ಟು ಮುತುವರ್ಜಿಯನ್ನು ವಹಿಸುತ್ತಿಲ್ಲ. ನೀರಿನ ಅಭಾವಕ್ಕೆ ಸರ್ಕಾರ ಮತ್ತು ನೀರಿನ ಇಲಾಖೆಯು ಹೊಣೆಯಾಗಿದೆ

ಭದ್ರಾವತಿಯಲ್ಲಿ ತಯಾರಾಗುವ ನೀರಿನ ಪೈಪುಗಳಲ್ಲಿ ಕೆಲವನ್ನು ಸರ್ಕಾರವು ನಮಗೆ ಸರಬರಾಜುಮಾಡಿದರೆ ಹೆಚ್ಚಾಗಿ ನೀರನ್ನು ನಗರಕ್ಕೆ ಒದಗಿಸಬಹುದಾಗಿದೆ. ಸರ್ಕಾರವು ಇದರಕಡೆ ಗಮನವಿತ್ತಿಲ್ಲ ಇಲಾಖೆಯ ತಾತ್ಸಾರ ಉಪೇಕ್ಷೆಯು ಮತ್ತೊಂದು ಕಾರಣವಾಗಿದೆ ಮೀಟರುಗಳನ್ನು ಹಾಕಿ ಎಂದರೆ ಎಲ್ಲೂ ಹಾಕಿಲ್ಲ ನಗರದಲ್ಲಿ ನೀರಿನ ಸರಬರಾಜನ್ನು ಉತ್ತಮಗೊಳಿಸಲು ಮಂತ್ರಿಮಂಡಲದಬಳಿ ಒಂದು ನಿಯೋಗ ಹೋಗಬೇಕಾಗಿದೆ ಎಂದು ಅಧ್ಯಕ್ಷರು ತಿಳಿಸಿದರು.

ನಗರದಲ್ಲಿರುವ ಬಸ್ಸು ಸರ್ವೀಸ್ ವಿಷಯವಾಗಿ ಪ್ರಸ್ತಾಪಿಸುತ್ತಾ ಈಗಿರುವ ಸಿಟಿ ಸರ್ವೀಸ್‌ನಬಗ್ಗೆ ಅನೇಕ ದೂರುಗಳಿವೆ. ಕಾಲ, ಮಾರ್ಗ ನಿರ್ದೇಶವಿಲ್ಲ. ಈ ಸರ್ವೀಸನ್ನು ಸುವ್ಯವಸ್ಥೆಗೊಳಿಸಿ ಈಗಿರುವವರು ಸರಿಯಾಗಿ ನಡೆಸದಿದ್ದಲ್ಲಿ ಪೌರಸಭೆಯೇ ಇದನ್ನು ವಹಿಸಿಕೊಳ್ಳಬೇಕೆಂದರು.

ಆರೋಗ್ಯಶಾಖೆಯಲ್ಲಿ ಕೆಲಸಮಾಡುವ ಝಾಡಮಾಲಿಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸಲು ಒಬ್ಬ ಲೇಡಿ ವೆಲ್‌ಫೇರ್ ಆಫೀಸರ್ ನೇಮಿಸಿಕೊಳ್ಳಬೇಕೆಂದಿದ್ದೇವೆ ಪುರಸಭೆಯ ನೌಕರರ ಉಪಯೋಗಕ್ಕಾಗಿ ಪುರಸಭೆಯ ಕಛೇರಿಬಳಿ ಒಂದು ಆಸ್ಪತ್ರೆಯನ್ನು ಕಟ್ಟಿಸಲು ಏರ್ಪಾಡು ಮಾಡಲಾಗುತ್ತಿದೆಯೆಂದು ತಿಳಿಸಿದರು.

ಆಹಾರ ಬೆಲೆ ಹೆಚ್ಚಿಸಿದ ವಿಷಯ ಚರ್ಚಿಸಲು ವಿಶೇಷ ಸಭೆ

ಮೈಸೂರು ಏ ೧೧

ಆಹಾರದ ಬೆಲೆಯನ್ನು ಹೆಚ್ಚಿಸಿರುವ ವಿಷಯವನ್ನು ಚರ್ಚಿಸಲು ಮೈಸೂರು ಪೌರಸಭೆಯ ವಿಶೇಷ ಅಧಿವೇಶನವನ್ನು ಕರೆಯಬೇಕೆಂದು ಸದಸ್ಯರು ಕೋರಿರುವರು.

ರಾಜಾಜಿಯವರ ಸಂದೇಶ

ನಾನು ವಿಶ್ರಾಂತಿಯನ್ನು ಪಡೆಯಬೇಕೆಂದಿದ್ದ ವೇಳೆಯಲ್ಲಿ ಇದ್ದಕ್ಕಿದ್ದಂತೆಯೇ ಅತ್ಯಂತ ಕಠಿಣವಾದ ಸಮಸ್ಯೆಯು ತಲೆಯಮೇಲೆ ಬಿತ್ತು. ಜನತೆಯ ಬಹುಮತ, ಹಿರಿಯ ನಾಯಕರ ಸಲಹೆಯ ಪ್ರಕಾರ ಈ ಗುರುತರವಾದ ಕಾರ್ಯವನ್ನು ವಹಿಸಿಕೊಂಡಿದ್ದೇನೆ.

ಕೋಮುವಾರುಭಾವನೆ, ರಾಜಕೀಯ ಪಕ್ಷ ಪ್ರತ್ಯೇಕತೆ, ಸ್ವಕಾರ್ಯ ಸಾಧನೆ ಮುಂತಾದುವನ್ನೆಲ್ಲಾ ಮರೆತು ಬಡವರನ್ನು, ಅತ್ಯಂತ ಕಷ್ಟದಲ್ಲಿರುವವರನ್ನೂ ಉದ್ಧಾರಮಾಡಿ ದೇಶಕ್ಕೆ ಕೀರ್ತಿ ತರಬೇಕೆಂಬ ಉದ್ದೇಶದಿಂದ ಎಲ್ಲರೂ ನನಗೆ ನೆರವುನೀಡಿ ನಾವು ನಮ್ಮ ಪ್ರಯತ್ನಗಳನ್ನೆಲ್ಲಾ ಮಾಡೋಣ ಫಲಿತಾಂಶವನ್ನು ಪರಮಾತ್ಮನಿಗೊಪ್ಪಿಸೋಣವೆಂದು ಮದ್ರಾಸಿನ ನೂತನ ಪ್ರಧಾನಿ ಶ್ರೀ ಸಿ. ರಾಜಗೋಪಾಲಾಚಾರಿಯವರು ನಿನ್ನೆ ರಾತ್ರಿ ಮದ್ರಾಸಿನ ಜನತೆಗೆ ಒಂದು ಸಂದೇಶವನ್ನೀಯುತ್ತಾ ಹೇಳಿದರು.

ಶಾಸನಸಭಾ ನಾಯಕರು

ನೂತನ ಅರ್ಥಸಚಿವ ಶ್ರೀ ಸಿ. ಸುಬ್ರಮಣ್ಯಂರವರು ಮದ್ರಾಸ್ ಕಿರಿಯ ಶಾಸನಸಭೆಯ ನಾಯಕರಾಗಿರುವರು

ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಹಿರಿಯ ಶಾಸನಸಭೆಯ ನಾಯಕರಾಗಿರುವರು.

ಸಮಾಚಾರ

ಮೈಸೂರು ತಾ॥ ೧೧—೪—೫೨

ಆಹಾರ ವಸ್ತುಗಳ ಬೆಲೆ ಏರಿಕೆ

ರೇಷನ್ ವ್ಯವಸ್ಥೆಯಿರುವ ಪ್ರದೇಶಗಳಲ್ಲಿ ಇದ್ದಕ್ಕಿದ್ದಂತೆಯೇ ಮೊನ್ನೆಯದಿನ ಜನತೆಗೆ ಯಾವ ತಿಳುವಳಿಕೆಯನ್ನೂ ಕೊಡದೆ ರೇಷನ್ ಅಂಗಡಿಗಳನ್ನೆಲ್ಲಾ ಬಂದು ಮಾಡಿ, ನಿನ್ನೆಯ ದಿನ ಆಹಾರವಸ್ತುಗಳ ಬೆಲೆಯನ್ನು ಏರಿಸಿರುವುದು ಮೈಸೂರು ಜನತೆಗೆ ಸಿಡಿಲುಬಡಿದಂತಾಗಿದೆ. ಬಡವನಿಂದ ಹಿಡಿದು ಭಾಗ್ಯವಂತರವರೆಗೆ ಎಲ್ಲರ ಬಾಯಲ್ಲೂ ಈ ಮಾತೇ ಆಗಿದೆ. ನೂತನವಾಗಿ ರಚಿತವಾದ ಮಂತ್ರಿಮಂಡಲದವರು ಈ ಏರಾಣಿಕೆಗೆ ಜವಾಬ್ದಾರರಲ್ಲದಿದ್ದಾಗ್ಯೂ ಹೊಸ ಮಂತ್ರಿಮಂಡಲವು ಸ್ಥಾಪನೆಯಾದೊಡನೆಯೇ ದರ ಏರಿಸಿರುವುದು ಹೊಸಮಂತ್ರಿಮಂಡಲವೆಂದು ಜನತೆ ದೂರುವಂತಾಗಿದೆ. ಆದಾಗ್ಯೂ ಜವಾಬ್ದಾರರಾರೆಂಬುದು ಮುಖ್ಯವಲ್ಲ. ಇನ್ನು ಮುಂದೆ ನಿತ್ಯ ಜೀವನವನ್ನು ಹೇಗೆ ನಡೆಸಬೇಕೆಂಬುದು ಮುಖ್ಯಪ್ರಶ್ನೆ. ಈಗಾಗಲೇ ನಾನಾ ರೀತಿಯ ತೆರಿಗೆ ಹೊರೆಗಳು ಬಿದ್ದು ತಾವು ಅರೆಹೊಟ್ಟೆ ತಿಂದು ಮಕ್ಕಳುಮರಿಗಳಿಗೆ ಒಪ್ಪತ್ತು ಊಟವನ್ನು ಹಾಕುತ್ತಲಿದ್ದುದೂ ಸಹ ಇನ್ನು ಮುಂದೆ ದುಸ್ತರವಾಯಿತಲ್ಲಾ ಎಂಬುದೇ ದೊಡ್ಡ ಕೂಗಾಗಿದೆ.

ಸರ್ಕಾರವು ದೇಶದ ಪ್ರಗತಿಗಾಗಿ ಎಷ್ಟು ಯೋಜನೆಗಳನ್ನು ತಯಾರಿಸಿ ಕೋಟ್ಯಾಂತರ ರೂಪಾಯಿಗಳನ್ನು ವೆಚ್ಚ ಮಾಡುತ್ತಲಿದ್ದಾಗ್ಯೂ, ಜೀವನಾಧಾರವಾದ ಆಹಾರ ವಿಷಯದಲ್ಲಿ ಜನತೆಗೆ ತೊಂದರೆಗಳು ಹೆಚ್ಚಾಗುತ್ತಲಿರುವುದರಿಂದ ದೇಶದ ಆದಾಯದಲ್ಲಿ ಹೆಚ್ಚಿಗೆ ಭಾಗವನ್ನು ಆಹಾರವನ್ನೊದಗಿಸಲು ವ್ಯಯ ಮಾಡಬೇಕಾದುದು ಪ್ರಥಮ ಕರ್ತವ್ಯವಾಗಿದೆ.

ಸಂಸ್ಥಾನದಲ್ಲಿ ಕೇವಲ ಶೇ॥ ೪೫ರಷ್ಟು ಜನಸಂಖ್ಯೆಗೆ ಮಾತ್ರ ರೇಷನ್ ವ್ಯವಸ್ಥೆ ಅನ್ವಯಿಸುವುದರಿಂದ ಸಾರ್ವತ್ರಿಕ ರೆವೆನ್ಯೂ ಬಾಬಿನಿಂದ ಹಣವನ್ನು ಖರ್ಚುಮಾಡಿ ಈ ಜನರಿಗೆ ಆಹಾರವನ್ನೊದಗಿಸುವುದು ಸಾಧ್ಯವಿಲ್ಲವೆಂದು ಆಹಾರ ಮಂತ್ರಿಗಳು ಹೇಳಿರುವರು. ಇದು ವಿಚಿತ್ರವಾಗಿದೆ. ಈ ವಸ್ತುಗಳ ಬೆಲೆ ಏರಿಸಿರುವುದು ನಗರದಲ್ಲಿರುವ ಜನತೆಗೆ ಮಾತ್ರ ಅನ್ವಯಿಸುತ್ತದೆಯೇ? ಅಥವಾ ದೇಶಾದ್ಯಂತ ಬೆಲೆಯೇರಿದೆಯೇ? ರೇಷನ್ ಇರುವ ಊರುಗಳಲ್ಲಿ ವಿನಹ ಇತರೆಡೆ ಕೊಳ್ಳುವವರೇ ಇಲ್ಲವೆ? ಸರ್ಕಾರದವರು ತಮ್ಮ ಆರ್ಥಿಕ ವೆಚ್ಚ ಸರಿತೂಗಿಸಲು ಅನೇಕ ಬಾಬುಗಳಲ್ಲಿ ವೆಚ್ಚ ಕಡಮೆಮಾಡಿ, ಜನತೆಗೆ ಹಿಂದಿನ ದರದಲ್ಲಿಯಾದರೂ ಆಹಾರವನ್ನು ಒದಗಿಸುವಂತೆ ಸುವ್ಯವಸ್ಥೆ ಮಾಡಬೇಕೇ ವಿನಹ ಬೆಲೆ ಏರಿಸಿರುವುದು ತರವಲ್ಲ. ಜೋತಾ ಹಣ ಪಡೆಯಲು ಲಾಭ ಸಂಪಾದನೆ ಮೇಲೆ ಹೆಚ್ಚಿಗೆ ತೆರಿಗೆ ವಿಧಿಸಲಿ. ಅತ್ಯಂತ ಕುರುತಾದ ಕೆಲಸಗಳನ್ನು ಮಾತ್ರ ಮಾಡುವಂತೆ ಏರ್ಪಡಿಸಿ ಸಾಮಾನ್ಯ ವೆಚ್ಚಗಳನ್ನು ಕಡಮೆ ಮಾಡಲಿ. ಇದೂ ಆಗದಿದ್ದಲ್ಲಿ ಪ್ರಜೆಗಳ ಮೇಲೆ ಮಾತ್ರ ಹೆಚ್ಚಿಗೆ ಭಾರ ಹಾಕದೆ ಬೇರೇ ರೀತಿಯಲ್ಲಿ ಹಣವೊದಗುವಂತೆ ವಿತರಣೆಯಿಂದ ನಮ್ಮ ಹೊಸ ಸರ್ಕಾರ ಕಾರ್ಯವೆಸಗಲಿ.

ದಾವಣಗೆರೆಯಲ್ಲಾದ ರಾಜಕೀಯ ಸಮ್ಮೇಳನದಲ್ಲಿ ಆಹಾರ ಹತೋಟಿಯ ವಿಷಯದಲ್ಲಾದ ನಿರ್ಣಯಗಳನ್ನು ಜಾರಿಗೆ ತರಲು ಶ್ರೀ ಕೆ. ಹನುಮಂತಯ್ಯನವರ ಮಂತ್ರಿಮಂಡಲವು ತೆಗೆದುಕೊಂಡ ಕಾರ್ಯಕ್ರಮವನ್ನು ಜನರು ಸ್ವಾಗತಿಸುತ್ತಾ, ಅವರನ್ನು ಅಭಿನಂದಿಸುತ್ತಾರಾದರೂ ಈ ಬೆಲೆಗಳ ಏರಾಣಿಕೆಯಿಂದ ಜನರಲ್ಲಿ ಅವಿಶ್ವಾಸ ಮೂಡುವುದಾಗಿದೆ. ಬೆಲೆ ಏರಿಸಬಾರದಾಗಿತ್ತೆಂಬುದೇ ಜನತೆಯ ಅಭಿಪ್ರಾಯ. ಶ್ರೀ ಕೆ. ಹನುಮಂತಯ್ಯನವರು ಹೇಗಾದರೂ ಮಾಡಿ ಈ ಬೆಲೆ ಏರಾಣಿಕೆಯನ್ನು ನಿಲ್ಲಿಸುವರೆಂಬುದೇ ನಮ್ಮ ಆಶಯ.

ಜೈಹಿಂದ್.

ರೇಷನ್ ಇರುವ ಕಡೆ ವಿನಹ ಮಿಕ್ಕೆಡೆ ಆಹಾರ ಸಾಗಾಣಿಕೆಗೆ ಪ್ರತಿಬಂಧಕವಿಲ್ಲ

ಮೈಸೂರು, ಬೆಂಗಳೂರು, ದಾವಣಗೆರೆ, ಕೆ. ಜಿ. ಎಫ್, ಭದ್ರಾವತಿಯಲ್ಲಿ ಮಾತ್ರ ರೇಷನ್ ವ್ಯವಸ್ಥೆ

ಬೆಂಗಳೂರು ಏ ೧೦

ಮೈಸೂರ ಸಂಸ್ಥಾನದಲ್ಲಿ ಆಹಾರ ಪದಾರ್ಥಗಳ ಬೆಲೆಯನ್ನು ಏರಿಸುತ್ತಾ ಸಂಸ್ಥಾನ ಆಹಾರ ಸಚಿವರು ಮತ್ತು ಮುಖ್ಯಮಂತ್ರಿಗಳು ಈ ದಿನ ನಡೆದ ಪತ್ರಿಕಾಗೋಷ್ಠಿಯಲ್ಲಿ ಈ ರೀತಿ ತಿಳಿಸಿದರು.

ಪ್ರಾಂತ್ಯದಲ್ಲಿ ಆಹಾರನೀತಿಯನ್ನು ಮಾರ್ಪಡಿಸಲಾಗಿದೆ. ಮೇ ೧ನೇ ತಾ॥ ನಿಂದ ಮೈಸೂರು, ಬೆಂಗಳೂರು, ದಾವಣಗೆರೆ, ಕೆ ಜಿ ಎಫ ಮತ್ತು ಭದ್ರಾವತಿ ಈ ಐದು ನಗರಗಳಲ್ಲಿ ಮಾತ್ರ ರೇಷನ್ ವ್ಯವಸ್ಥೆಯಿರುತ್ತದೆ. ಇತರ ಕಡೆ ಯಾವ ರೀತಿಯಾದ ರೇಷನ್ ವ್ಯವಸ್ಥೆಯಿಲ್ಲ.

ರೇಷನ್ ವ್ಯವಸ್ಥೆಯಿರುವ ಪ್ರದೇಶಕ್ಕೆ ಅಥವಾ ಅಲ್ಲಿಂದ ಹೊರಕ್ಕೆ ಆಹಾರ ಸಾಗಣೆಕೆ ಪ್ರತಿಬಂಧಕವಿದೆ. ಇತರ ಕಡೆ ಪ್ರತಿಬಂಧಕವಿಲ್ಲ.

ಪ್ರತಿ ತಾಲ್ಲೂಕಿನಲ್ಲೂ ಸರ್'ಪ್ಲಸ್ ಹೋಲ್ಡರುಗಳಾರೆಂಬುದರ ಪಟ್ಟಿ ತಯಾರಿಸಿ ಅವರು ಎಷ್ಟು ಧಾನ್ಯ ಕೊಡಬೇಕೆಂಬುದನ್ನು ನಿಗದಿ ಮಾಡಲಾಗುತ್ತದೆ.

ಆಹಾರ ಸಂಗ್ರಹಣೆ ಕಾಲದಲ್ಲಿ ಸ್ಥಳದಲ್ಲೇ ಹಣ ಕೊಟ್ಟು ಆಹಾರವನ್ನು ತೆಗೆದುಕೊಳ್ಳಲಾಗುತ್ತದೆ.

ಕಂದಾಯವನ್ನು ಆಹಾರ ಧಾನ್ಯ ರೂಪದಲ್ಲಿ ವಸೂಲ್ಮಾಡಲಾಗುತ್ತದೆ. ಸಂಸ್ಥಾನದಿಂದ ಹೊರಕ್ಕೆ ಆಹಾರ ಸಾಗಾಣಿಕೆಯಾಗದಂತೆ ತಕ್ಕ ತಕ್ಕ ವ್ಯವಸ್ಥೆ ಮಾಡಲಾಗುತ್ತದೆ.

ಆಹಾರ ವಿತರಣೆಯ ವಿಷಯದಲ್ಲಿ ಆದಷ್ಟು ಸ್ಥಾನಿಕಾಧಿಕಾರಕ್ಕೆ ಪ್ರಯತ್ನಿಸಲಾಗುತ್ತದೆ. ಕೇಂದ್ರದಿಂದ ಹೆಚ್ಚಿಗೆ ಆಹಾರ ಪಡೆಯಲು ತಕ್ಕ ಪ್ರಯತ್ನಗಳನ್ನು ಮಾಡಲಾಗುತ್ತದೆ.

ದಾವಣಗೆರೆ ರಾಜಕೀಯ ಸಮ್ಮೇಳನದಲ್ಲಿ ನಡೆದ ನಿರ್ಣಯಗಳ ಆಧಾರದ ಮೇಲೆ ಈ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

ಪೇಟೆ ಧಾರಣೆ

ಮೈಸೂರು ತಾ॥ 10-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	12-6	17-14
ಹೊಂಗೆಬೀಜ	"	11-12	13-8
ಹುರುಳಿ	"	30-14	32-6
ಮೆ. ಕಾಯಿ	ಮಣಕ್ಕೆ	11-6	14-2
ಹುಣಸೇಹಣ್ಣು	"	2-8	3-2
ಸೀಗೆಕಾಯಿ	"	3-7	3-13
ತೆಂಗಿನಕಾಯಿ 1100ಕ್ಕೆ		139	235

ಚಿನ್ನ ಬೆಳ್ಳಿ ದರಗಳು

10-4-52	ರೂ.
ಸವರನ್	65-12
"	65-14
ಚಿನ್ನ ತೊಲ	91-10
" ಮೂಸ	90-8
ಬೆಳ್ಳಿ 100 ತೊಲ	161-0
" ತೊಲ	1-11

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ
ಶ್ರೀ ನೃತ್ಯ ಕಲಾಮಂದಿರ ಮೈಸೂರು
(ಸೀತಾವಿಲಾಸ ಅಗ್ರಹಾರದ ಹಿಂಬಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ರಾಜಕಮಲ್
11—4—52ರಿಂದ
ಜನಭರಿತವಾದ 5ನೇ ವಾರ
ವಿಜಯಾರವರ—
ಮದುವೆ ಮಾಡಿ ನೋಡು
(ತೆಲುಗು)
ಪಾತ್ರ:– ಎನ್. ಟಿ. ರಾಮರಾವ್, ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎಸ್.ವಿ.ರಂಗರಾವ್, ಜೋಗ್‌ರಾವ್.

ನ್ಯೂ ಅಪೇರ
೧೧-೪-೫೨ ರಿಂದ ಅಮೋಘಪ್ರಾರಂಭ
* ಕುಮಾರಿ *
(ತಮಿಳು)
ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜನಿ (ಜೂ), ಶಾಮು, ದೊರೆರಾಜ್, ಪುಳಿಮೊಟ್ಟೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೬೪ (೮೦೯) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ
ಸಂಪುಟ ೨] ೧೨—೪—೧೯೫೨ನೇ ಶನಿವಾರ [ಸಂಚಿಕೆ ೧೯೦

ಮುದ್ರಣಕಾಗದ ಕಂಟ್ರೋಲ್ ಆಜ್ಞೆ ಮುಂದುವರಿಯಬೇಕು

ಮುದ್ರಣ ಕಾಗದ ಸಲಹಾ ಸಮಿತಿಯು ಭಾರತ ಸರ್ಕಾರದ ವಾಣಿಜ್ಯ ಮಂತ್ರಿ ಶ್ರೀ ಹೆಚ್ ಕೆ ಮಹತಾಬ್'ರವರ ಅಧ್ಯಕ್ಷತೆಯಲ್ಲಿ ಸೇರಿ, ಕಾಗದ ಸರಬರಾಜು ಪರಿಸ್ಥಿತಿಯು ಅನಿಶ್ಚಿತವಾಗಿದೆಯಾಗಿ, ೧೯೫೦ರ ಮುದ್ರಣ ಕಾಗದ ನಿಯಂತ್ರಣ ಆಜ್ಞೆಯು ಇನ್ನೂ ಕೆಲಕಾಲದವರೆಗೆ ಮುಂದುವರೆಯತಕ್ಕದ್ದು ಎಂದು ಶಿಫಾರಸು ಮಾಡಿದೆ.

ಅಧಿಕಾರಿಗಳಿಗೆ ಎಚ್ಚರಿಕೆ

ರೆವಿನ್ಯೂ ಮತ್ತು ಮರಾಮತ್ತು ಶಾಖೆಯ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ತುಮಕೂರಿಗೆ ಭೇಟಿ ಇತ್ತರು. ಟಿ. ಬಿ. ಒಳಿ ಅಧಿಕಾರಿಗಳು ಮತ್ತು ಪುರಪ್ರಮುಖರು ಸ್ವಾಗತಿಸಿದರು. ಸರ್ಕಾರದ ಅಧಿಕಾರಿಗಳನ್ನುದ್ದೇಶಿಸಿ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಮಾತಾಡಿ ಇಂದಿನ ಮಂತ್ರಿಮಂಡಲವು ಅಧಿಕಾರಿಗಳಿಂದ ದಕ್ಷತೆ ಮತ್ತು ಶ್ರದ್ಧೆಯನ್ನು ನಿರೀಕ್ಷಿಸುತ್ತದೆ. ಶ್ರದ್ಧೆ ಮತ್ತು ದಕ್ಷತೆಯಿಲ್ಲದ ನೌಕರರನ್ನು ಕೆಲಸದಿಂದ ವಜಾಮಾಡಲೂ ಸಹ ಹಿಂಜರಿಯುವುದಿಲ್ಲವೆಂದು ಹೇಳಿದರು.

ಪ್ರತಿ ಕಛೇರಿಯಲ್ಲಿಯೂ ಕಾಗದಪತ್ರಗಳ ವಿಲೇವಾರಿ ನಿಧಾನವಾಗಿದ್ದು ನೌಕರರು ಇವುಗಳ ವಿಲೇವಾರಿಗೆ ಮೊದಲು ಗಮನ ಕೊಡಬೇಕೆಂದರು ಎಂದು ತಿಳಿಯಬರುತ್ತದೆ. ನಂತರ ಸಚಿವರು ಶಿವಮೊಗ್ಗಾಗಿ ತೆರಳಿದರು.

ಕೇಂದ್ರ ಸಚಿವರಿಂದ ವ್ಯವಸಾಯ ವಿಸ್ತರಣ ಯೋಜನೆ

ಕೇಂದ್ರ ಸರ್ಕಾರದ ಆಹಾರಶಾಖೆಯ ಮಂತ್ರಿ ಶ್ರೀ ಕೆ. ಎಂ. ಮುನ್ಷಿಯವರು ಇದೇ ೨೬ನೇ ತಾರೀಖು ಏಕ್ತ್ರೀಕೃತ ರಾಷ್ಟ್ರ ನಾನಾ ವಿಸ್ತರಣೆ ಯೋಜನೆಯ ಆರಂಭೋತ್ಸವ ಮಾಡುವರು.

ಅಮೆರಿಕಾಸರ್ಕಾರದ ಸಹಾಯದೊಡನೆ ಈ ಯೋಜನೆ ಕಾರ್ಯರೂಪಕ್ಕೆ ಬರುವುದು.

ಚೀನಾ 'ಮೇ' ದಿನಾಚರಣೆಗೆ ಭಾರತ ಕಾರ್ಮಿಕ ನಿಯೋಗ

ಭಾರತದ ಕಾರ್ಮಿಕರ ಸಂಘಗಳ ಪರವಾಗಿ ೮ ಮಂದಿಯ ನಿಯೋಗವೊಂದು 'ಮೇ' ದಿನಾಚರಣೆಯಲ್ಲಿ ಭಾಗವಹಿಸಲು ಇಷ್ಟರಲ್ಲೇ ಚೀನಾಕ್ಕೆ ತೆರಳಲಿದೆ. ಶ್ರೀ ಚಟರ್ಜಿ ಮುಕರ್ಜಿಯವರು ಇದರ ನಾಯಕರಾಗಿದ್ದಾರೆ.

ಮೈತ್ರಿ ಒಪ್ಪಂದ

ಫಿಲಿಫೈನ್ಸ್ ಮತ್ತು ಭಾರತಕ್ಕೆ ಮೈತ್ರಿ ಒಪ್ಪಂದಕ್ಕೆ ಸಂಬಂಧಪಟ್ಟ ಮಾತುಕತೆಗಳೆಲ್ಲಾ ಮುಗಿದಿರುವಾಗಿವೆ. ಸದ್ಯದಲ್ಲೇ ಉಭಯರಾಷ್ಟ್ರಗಳ ಪ್ರತಿನಿಧಿಗಳು ಒಪ್ಪಂದಕ್ಕೆ ಸಹಿಹಾಕಲಿರುವರೆಂದು ಗೊತ್ತಾಗಿದೆ.

ಮುಂದುವರಿದ ಸಭೆ

ಮೈಸೂರು ಏ ೧೧

ನಿನ್ನೆ ಪ್ರಾರಂಭವಾದ ಮೈಸೂರು ಪುರಸಭೆಯ ಬಡ್ಜೆಟ್ ಅಧಿವೇಶನವನ್ನು ಇದೇ ೧೬ನೇ ತಾರೀಖಿಗೆ ಮುಂದೂಡಲಾಗಿದೆ.

ಪ್ರಭಾ ಟಾಕೀಸ್ ಮೈಸೂರು
ಅಮೋಘ ಪ್ರಾರಂಭ ೧೦—೪—೫೨ ರಿಂದ ಪ್ರತಿದಿನ ಮೂರು ಆಟಗಳು
ಡಾ॥ ರವೀಂದ್ರನಾಥ್ ಟಾಗೂರರ ಚಾರ್ ಅಧ್ಯಾಯ್
ಎಂಬ ಕಥೆಯ ಆಧಾರದ ಮೇಲೆ ತಯಾರಿಸಿದ ಉತ್ತಮ ದರ್ಜೆಯ ಹಿಂದೀ ಚಿತ್ರ
* ಜಲ್ ಜಲಾ *
ಪಾತ್ರ—† ಕಿಶೋರ್‌ಸಾಹು. † ದೇವಾನಂದ್, † ಗೀತಾಬಾಲಿ
ನಿರ್ಮಾಪಕ ಮತ್ತು ನಿರ್ದೇಶನ—ಪಾಲ್ ಜೆಲ್ಸ್ ಸಂಗೀತ—ಶಂಕರ್ ಮಲ್ಲಿಕ್
ಬೆಳಗಿನ ಪ್ರದರ್ಶನ ೧೧—೪—೫೨ ರಿಂದ ಮೂರು ದಿನಗಳು ಮಾತ್ರ
ಮಿನರ್ವಾ ಮೂವಿಟೋನ್‌ರವರ— ‡‡ ಪೃಥ್ವೀವಲ್ಲಭ್ ‡‡

ಮೈಸೂರು ಮಹಾರಾಜರ ಅಧ್ಯಕ್ಷತೆಯಲ್ಲಿ ಅರಣ್ಯಾಭಿವೃದ್ಧಿಮಂಡಲಿ

ಕಾರ್ಮಿಕ ವಿಮಾಯೋಜನೆ ಬೆಂಗಳೂರಿಗೆ ಅನ್ವಯ

ಭಾರತದಲ್ಲಿರುವ ಅರಣ್ಯಗಳನ್ನು ಅಭಿವೃದ್ಧಿಪಡಿಸಲು ಸಂಬಂಧಪಟ್ಟಂತೆ ಅವುಗಳ ಬೆಳವಣಿಗೆ, ಪಾಲನೆ ಸಂಗ್ರಹಣ ಕಾರ್ಯ, ಉದ್ಯಾನವನನಿರ್ಮಾಣ ಮುಂತಾದ ಹೊಸ ಕ್ರಮಗಳನ್ನು ಕಂಡುಹಿಡಿಯಲು ಕೇಂದ್ರ ಸರ್ಕಾರವು ಮೈಸೂರು ಮಹಾರಾಜರವರ ಅಧ್ಯಕ್ಷತೆಯಲ್ಲಿ ಒಂದು ಮಂಡಲಿಯನ್ನು ನೇಮಿಸಿದೆ.

ಕಲಾಕ್ಷೇತ್ರದ ನಿಯೋಗ

ಮೈಸೂರು ಏ ೧೧

ಮೈಸೂರಿನ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಕಲಾವಿಭಾಗದಿಂದ, ಕಲಾ ಮತ್ತು ಸಾರ್ವಜನಿಕ ಸಂಸ್ಥೆಗಳಲ್ಲಿ ಸೇವೆಸಲ್ಲಿಸುತ್ತಿರುವ ಸರಿಯಾದ ವ್ಯಕ್ತಿಗಳನ್ನು ತೆಗೆದುಕೊಳ್ಳುವಂತೆ ಮಾನ್ಯ ಪ್ರಧಾನಿಗಳಲ್ಲಿ ಮನವಿಮಾಡಿಕೊಳ್ಳಲು ರಾಜಧಾನಿಯಿಂದ ಶ್ರೀ ನಂಜುಂಡರಾವ್, ತಿಪ್ಪೇಸ್ವಾಮಿ, ರಾಮದಾಸ್‌ರವರೂ, ಬೆಂಗಳೂರಿನಿಂದ ಶ್ರೀ ಅಯ್ಯರ್ ಮತ್ತು ವಿದ್ಯಾರ್ಥಿ ಸಂಪಾದಕರಾದ ರೇಣುಕಾಪ್ರಸಾದ್ ರೊಡಗೂಡಿದ ಕಲಾಕ್ಷೇತ್ರ ನಿಯೋಗವು ಇಷ್ಟರಲ್ಲಿ ಹೊರಡಲಿದೆ.

ಸದಸ್ಯತ್ವ ರದ್ದು

ಚುನಾವಣಾ ವೆಚ್ಚದ ಪಟ್ಟಿಯನ್ನು ಸರಿಯಾಗಿ ಒಪ್ಪಿಸಲಿಲ್ಲವೆಂದು ಬೊಂಬಾಯಿ ಶಾಸನಸಭೆಗೆ ಬರೋಡಾ ಕ್ಷೇತ್ರದಿಂದ ಚುನಾಯಿತರಾದ ಕಾಂಗ್ರೆಸ್ ಸದಸ್ಯ ಮತ್ತು ಉಮೇದುವಾರ ಹಿಂದಕ್ಕೆ ತೆಗೆದುಕೊಂಡ ಮತ್ತಿತರ ೬ ಜನ ಬಗ್ಗೆ ಚುನಾವಣಾಧಿಕಾರಿಗಳು ಆಜ್ಞೆ ಮಾಡಿ ಚುನಾಯಿತರಾದವರು ತಮ್ಮ ಸದಸ್ಯತ್ವವನ್ನು ಕಳೆದುಕೊಂಡಿರುವುದಾಗಿಯೂ ಎಲ್ಲರೂ ಇನ್ನು ೫ ವರ್ಷಕಾಲ ಚುನಾವಣೆಗೆ ನಿಲ್ಲಲಾಗದೆಂದೂ ಓಟುಕೊಡುವ ಹಕ್ಕನ್ನು ಕಳೆದುಕೊಂಡಿರುವುದಾಗಿ ತಿಳಿಸಿರುವರು.

ವಾರ್ಷಿಕೋತ್ಸವ

ರಾಜಧಾನಿಯ ಶ್ರೀ ಕೆ. ಎಸ್. ರಾಜಗೋಪಾಲ್‌ರವರ ಶ್ರೀ ನೃತ್ಯ ಕಲಾಮಂದಿರದ ತೃತೀಯ ಮತ್ತು ಚತುರ್ಥ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಸಹಕಾರಭವನದಲ್ಲಿ ನೆರವೇರುವುದು. ಅರುಣಪತ್ರಿಕೆ ಸಂಪಾದಕರಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಸಂದೇಶವೇನಿಲ್ಲ

ಸೋವಿಯಟ್ ನಾಯಕ ಸ್ಟಾಲಿನ್ನರಿಂದ ಪಶ್ಚಿಮ ರಾಷ್ಟ್ರಗಳಿಗೆ ಸಂದೇಶವೇನನ್ನೂ ತಂದಿಲ್ಲವೆಂದು ಕಳೆದ ವಾರ ಸ್ಟಾಲಿನ್ನರನ್ನು ಭೇಟಿ ಮಾಡಿ ಬಂದ ಡಾ॥ ರಾಧಾಕೃಷ್ಣನ್ ತಿಳಿಸಿದರು. ಚತುರಾಷ್ಟ್ರ ಪ್ರತಿನಿಧಿಗಳ ಭೇಟಿಗೆ ತಾವು ಆಹ್ವಾನ ತರುವಂತಹ ಪ್ರಶ್ನೆ ಉದ್ಭವಿಸುವುದಿಲ್ಲವೆಂದರು.

ಜಮೀನ್ದಾರರಿರುವ ಮಂತ್ರಿಮಂಡಲ

ಮದ್ರಾಸಿನಲ್ಲಿ ಶ್ರೀ ಸಿ ರಾಜಗೋಪಾಲಾಚಾರಿಯವರು ರಚಿಸಿರುವ ಮಂತ್ರಿಮಂಡಲದಲ್ಲಿ ೭ ಜನರು ಜಮೀನ್ದಾರರಿರುವರು. ಈ ಸರ್ಕಾರಕ್ಕೆ ಹೇಗೆ ಸಹಕಾರ ನೀಡಲುಸಾಧ್ಯ ಎಂದು ಕಮ್ಯೂನಿಸ್ಟ್ ನಾಯಕ ಶ್ರೀ ರಾಮಮೂರ್ತಿಯವರು ಹೇಳಿರುವರು.

ಸಂಘಟನಾಶಕ್ತಿ ಕಡಿಮೆಯಾಗಿಲ್ಲ

ಕಾಂಗ್ರೆಸ್‌ಪಕ್ಷವು ಹೊಸದಾಗಿ ರಚಿಸಿರುವ ಮಂತ್ರಿಮಂಡಲದಿಂದ ತಮ್ಮ ಪಕ್ಷದ ಸಂಘಟನಾಶಕ್ತಿಯೇನೂ ಕಡಿಮೆಯಾಗಿಲ್ಲ. ನಾಯಕರ ಅವಮಾನಕ್ಕೆ ಒಳಗಾದ ಕಾಂಗ್ರೆಸ್‌ಪಕ್ಷದ ನಾಯಕತ್ವವನ್ನು ಶ್ರೀ ಸಿ. ರಾಜಗೋಪಾಲಾಚಾರಿಯವರಂತಹ ರಾಜಕಾರಣಿಗಳು ವಹಿಸಿಕೊಳ್ಳಬಾರದಾಗಿತ್ತೆಂದು ಡೆಮೊಕ್ರಾಟಿಕ್‌ಪಕ್ಷದ ನಾಯಕ ಶ್ರೀ ಟಿ. ಪ್ರಕಾಶಂರವರು ಹೇಳಿರುವರು.

ಕಾರ್ಮಿಕ ವಿಮಾಯೋಜನೆ ಬೆಂಗಳೂರಿಗೆ

ಕಾರ್ಮಿಕ ವಿಮಾಯೋಜನೆಯನ್ನು ಮುಂದಿನ ಸಾಲಿನ ಜನವರಿಯವೇಳೆಗೆ ಬೆಂಗಳೂರು, ಬೊಂಬಾಯಿ, ಅಹಮದಾಬಾದಿಗೆ ಅನ್ವಯಿಸಲಾಗುತ್ತದೆಯೆಂದು ಸಂಸ್ಥೆಯ ಡೈರೆಕ್ಟರ್ ಜನರಲ್‌ರವರು ಹೇಳಿರುವರು.

ಹೊಸ ಮಂತ್ರಿಮಂಡಲ

ಬೊಂಬಾಯಿ ಹೊಸ ಮಂತ್ರಿಮಂಡಲವು ಇದೇ ೧೬ನೇ ತಾ॥ ಅಧಿಕಾರ ಸ್ವೀಕಾರ ಮಾಡುತ್ತದೆ. ಮಂತ್ರಿಮಂಡಲದಲ್ಲಿ ೧೧ ಮಂತ್ರಿಗಳು ೯ ಉಪಮಂತ್ರಿಗಳು ಇರುವರೆಂದು ಹೇಳಲಾಗಿದೆ.

ಮುಂದಿನ ಸುಗ್ಗಿಯಿಂದ ಆಹಾರ ಸಂಗ್ರಹಣೆಯಲ್ಲಿ ಮಾರ್ಪಾಟು

ಸರ್ಕಾರದ ಹೊಸ ಆಹಾರ ನೀತಿ

ಬೆಂಗಳೂರು ಏ ೧೦

ಕಳೆದ ಆಗಸ್ಟ್ ಮಾಹೆಯಲ್ಲಿ ದಾವಣಗೆರೆಯಲ್ಲಿ ನಡೆದ ರಾಜಕೀಯ ಸಮ್ಮೇಳನದಲ್ಲಿ ಕಾಂಗ್ರೆಸ್ ಪಕ್ಷ ನಿರ್ಣಯಗಳನ್ನು ಮಾಡಿರುವುದನ್ನೆಲ್ಲಾ ಪರಿಶೀಲಿಸಿ ಸರ್ಕಾರವು ತನ್ನ ಹೊಸ ರೀತಿಯನ್ನು ತಯಾರಿಸಿ ಒಂದು ಸರ್ಕಾರಿ ಪ್ರಕಟಣೆಯ ಮೂಲಕ ಪ್ರಕಟಿಸಿದೆ.

ಈಗಿರುವಂತೆ ಶಾಸನಬದ್ಧ ಪಡಿತರವು ಬೆಂಗಳೂರು, ಮೈಸೂರು, ದಾವಣಗೆರೆ ಮತ್ತು ಕೆ ಜಿ ಎಫ್‌ನಲ್ಲಿ ಮಾತ್ರ ಜಾರಿಯಲ್ಲಿರುತ್ತದೆ. ಮುಂದೆ ಭದ್ರಾವತಿಗೂ ಅನ್ವಯಿಸಲಾಗುತ್ತದೆ. ಸಂಸ್ಥಾನದ ಇತರ ಪ್ರದೇಶಗಳಲ್ಲಿ ಪಡಿತರ ಪದ್ಧತಿಯನ್ನು ಸಂಪೂರ್ಣವಾಗಿ ರದ್ದುಗೊಳಿಸಲು ಸರ್ಕಾರವು ನಿರ್ಧರಿಸಿದೆ. ಈ ಬದಲಾವಣೆಗಳು ಮುಂದಿನ ಸುಗ್ಗಿಯ ಕಾಲದಿಂದ ಜಾರಿಗೆ ಬರುತ್ತವೆ.

ಭೂ ಕಂದಾಯವನ್ನು ಇನ್ನು ಮುಂದೆ ಧಾನ್ಯರೂಪದಲ್ಲಿ ತೆಗೆದುಕೊಳ್ಳಲು ಸರ್ಕಾರವು ನಿರ್ಧರಿಸಿದೆ. ಇದಕ್ಕೆ ತಕ್ಕ ಶಾಸನವನ್ನು ಮಾಡಲಾಗುತ್ತದೆ.

ಆಹಾರ ಸಂಗ್ರಹಣೆ ಪದ್ಧತಿಯಲ್ಲಿ ಬದಲಾವಣೆಗಳನ್ನು ಮಾಡಲಾಗುತ್ತದೆ ಅವು ಯಾವುವೆಂದರೆ;—

ಹೆಚ್ಚಿಗೆ ಆಹಾರ ಬೆಳೆಯುವವರು ಪಟ್ಟಿಯನ್ನು ತಯಾರಿಸುವುದಲ್ಲದೆ, ಎಷ್ಟು ಆಹಾರವನ್ನು ಸರ್ಕಾರಕ್ಕೆ ಕೊಡಬೇಕೆಂಬುದನ್ನು ನಿಗದಿ ಮಾಡಲಾಗುತ್ತದೆ.

ಈ ಸಂದರ್ಭಗಳಲ್ಲಿ ವಿನಾಯಿತಿಯನ್ನು ಕೊಡಲು ಸರ್ಕಾರವು ತೀರ್ಮಾನಿಸಿದೆ;—

(೧) ನದೀ ಕಾಲುವೆಗಳ ಕೆಳಗಿರುವ ತರಿಭೂಮಿ ಮತ್ತು ಒಂದು ಎಕರೆಯವರೆಗೆ ಭಾವಿಗಳ ಸಹಾಯದಿಂದ ಕೃಷಿ ಮಾಡುವ ಭೂಮಿ;

(೨) ಕೆರೆ ಬೈಲಿನಲ್ಲಿ ಎರಡು ಎಕರೆ,

(೩) ಜೋಗು ಮತ್ತು ಮಿಶ್ರ ಭೂಮಿಯಲ್ಲಿ ೩ ಎಕರೆ;

(೪) ಖುಷ್ಕಿ ಭೂಮಿಯಲ್ಲಿ ೫ ಎಕರೆ

(೫) ಬಂಜರು ಭೂಮಿ ಮತ್ತು ಹುಲ್ಲುಗಾವಲು ಭೂಮಿಯ ಬಗ್ಗೆ ನ್ಯಾಯವಾದ ಅವಕಾಶ ಬಿಟ್ಟುಕೊಡಲಾಗುತ್ತದೆ.

(೬) ಆಗಾಗ್ಗೆ ನೀಡುವ ವಿನಾಯಿತಿಗಳೊಡನೆ ಪ್ರಮಾಣ ನಿಗದಿ ಪದ್ಧತಿ ಜಾರಿಗೆ ಬರುತ್ತದೆ.

(೭) ಬೆಳೆ ನಷ್ಟವಾಗುವ ಮತ್ತು ಕ್ಷಾಮಪೀಡಿತ ಪ್ರದೇಶಗಳಲ್ಲೂ ವಿನಾಯಿತಿ ಕೊಡಲಾಗುತ್ತದೆ.

ಈ ರಿಯಾಯಿತಿಗಳನ್ನು ಕೊಟ್ಟು ಹಿಡುವಳಿ ಪ್ರದೇಶದಲ್ಲಿ ಆಹಾರ ಬೆಳೆಯುವ ಅಥವಾ ಬೆಳೆಯುದರಿಂದ ಕೊಡಬೇಕಾದ ಪ್ರಮಾಣವನ್ನು ನಿಗದಿ ಮಾಡಲಾಗುತ್ತದೆ.

ನಿಗದಿಯಾದ ಪ್ರಮಾಣದಲ್ಲಿ ಸರ್ಕಾರಕ್ಕೆ ಕೊಟ್ಟು, ಕಂದಾಯವನ್ನು ಧಾನ್ಯರೂಪದಲ್ಲಿ ಕೊಟ್ಟು, ಉಳಿದ ಅಧಿಕ ಧಾನ್ಯವನ್ನು ನ್ಯಾಯವಾಗಿ ಬಳಸುವವರಿಗೆ, ಮಾರಬಹುದು. ಹಾಗೆ ಮಾರಿದ ಮೇಲೂ ಉಳಿಕೆ ಧಾನ್ಯವಿದ್ದರೆ ಲೈಸನ್ಸ್ ಪಡೆದಿರುವ ವ್ಯಾಪಾರಿಗಳಿಗೆ ಮಾರಬಹುದು. ಈ ಪದ್ಧತಿಯು ಬರುವ ಸುಗ್ಗಿಯ ಕಾಲದಿಂದ ಜಾರಿಗೆ ಬರುತ್ತದೆ.

ಮೇ ೧ನೇ ತಾರೀಖಿನಿಂದ ಬೆಂಗಳೂರು, ಮೈಸೂರು, ಕೆ. ಜಿ. ಎಫ್ ಮತ್ತು ದಾವಣಗೆರೆ ವಿನಹ ಇತರ ಪ್ರದೇಶಗಳಲ್ಲಿ ಹೊರಕ್ಕೆ ಅಥವಾ ಒಳಕ್ಕೆ ಧಾನ್ಯಗಳ ಸಾಗಾಣಿಕೆಯ ಮೇಲಿರುವ ಪ್ರತಿಬಂಧಕಗಳೆಲ್ಲಾ ರದ್ದಾಗುತ್ತವೆ. ರೇಷನ್ ವ್ಯವಸ್ಥೆಯಿರುವ ಪ್ರದೇಶಗಳಲ್ಲಿ ೨ ಸೇರು ಧಾನ್ಯ ತೆಗೆದುಕೊಂಡು ಹೋಗುವ ರಿಯಾಯಿತಿಯು ಮುಂದುವರಿಯುತ್ತದೆ.

ಶ್ರೀ ವಿ. ಎಸ್. ಕುಪ್ಪಸ್ವಾಮಿ ಮೊದಲಿಯಾರ್

ವ್ಯವಸಾಯ ಸಂಶೋಧನೆ ಯೋಜನೆಯ ವ್ಯಾಧಿಶಾಸ್ತ್ರಾಧಿಕಾರಿಗಳಾದ ಶ್ರೀ ವಿ. ಎಸ್. ಕುಪ್ಪಸ್ವಾಮಿ ಮೊದಲಿಯಾರ್‌ರವರನ್ನು ಸೀರಂ ಇನ್‌ಸ್ಟಿಟ್ಯೂಟಿನ ಸೂಪರಿಂಟೆಂಡೆಂಟರನ್ನಾಗಿ ನೇಮಿಸಲಾಗಿದೆ.

ಕುತುಬಮಿನಾರ್‌ನಿಂದ ಹಾರಿ ಪ್ರಾಣಬಿಟ್ಟ

೩೫ ವರ್ಷದ ತರುಣನೊಬ್ಬ ೩೩೦ ಅಡಿ ಎತ್ತರದ ಕುತುಬಮಿನಾರದಿಂದ ಕೆಳಕ್ಕೆ ಹಾರಿ ಪ್ರಾಣಬಿಟ್ಟ. ಜೀವನದಲ್ಲಿನ ಜಿಗುಪ್ಸೆಯೇ ಕಾರಣ.

---

‡ ಎ ಐ ಟಿ ಯು ಸಿ ಮೈಸೂರು ಪ್ರಾಂತೀಯ ಶಾಖೆಯ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಈ ಹೇಳಿಕೆ ಕೊಟ್ಟಿದ್ದಾರೆ.

ಇದೇ ತಿಂಗಳ ೨೭ ಮತ್ತು ೨೮ನೇ ತಾರೀಖುಗಳಲ್ಲಿ ಬೆಂಗಳೂರು ನಗರದಲ್ಲಿ ಎ. ಐ. ಟಿ. ಯು. ಸಿ. (ಅಖಿಲ ಭಾರತ) ಜನರಲ್ ಕೌನ್ಸಿಲ್ ಸಭೆಯನ್ನು ನಡೆಸಲು ಏರ್ಪಡಿಸಲಾಗಿದೆ. ಸಂಸ್ಥೆಯು ಜನ್ಮತಾಳಿದಂದಿನಿಂದ ಈ ಸಭೆ ದಕ್ಷಿಣ ಭಾರತದಲ್ಲಿ ಸೇರುತ್ತಿರುವುದು ಇದೇ ಮೊದಲನೇ ಸಾರಿ. ಅಂತಿರುವಾಗ ಈ ಸಭೆಯ ಮಹತ್ವ ಎಷ್ಟಿರಬಹುದೆಂಬುದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಎ. ಐ. ಟಿ. ಯು. ಸಿ. ಉದಾರ ಧ್ಯೇಯದಿಂದ ಕೂಡಿದ್ದಾಗಿರುವುದರಿಂದ ಕೇವಲ ಕೆಲವೇ ವರ್ಷಗಳಲ್ಲಿ ಒಂದೂವರೆ ಮಿಲಿಯಕ್ಕಿಂತಲೂ ಹೆಚ್ಚು ಕಾರ್ಮಿಕರ ವಿಶ್ವಾಸಕ್ಕೆ ಪಾತ್ರವಾಗಿ ಇಂದು ಸದಸ್ಯರಾಗುವಂತಾಗಿದೆ. ಅಂತಹ ಸಂಸ್ಥೆಯ ಮುಖಂಡರೊಡನೆ ಕಲೆಯಲು ಒಂದು ಸದವಕಾಶ ದೊರೆತಿರುವುದನ್ನು ಸದುಪಯೋಗಪಡಿಸಬೇಕಾಗಿದೆ. ಈ ಸಭೆಗೆ ಬರತಕ್ಕಂತಹ ಅನೇಕ ನುರಿತ ಕಾರ್ಮಿಕ ಪ್ರತಿನಿಧಿಗಳಿಗೆ ಸಂಸ್ಥಾನದ ಘನತೆಗೌರವಗಳಿಗೆ ತಕ್ಕಂತಹ ಸ್ವಾಗತ ನೀಡಲು ಏರ್ಪಾಡು ಮಾಡಿ ಅದಕ್ಕಾಗಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿಗೆ ಸಂಸ್ಥಾನದ ಕಾರ್ಮಿಕ ವರ್ಗ ಅದರಲ್ಲೂ ಎ. ಐ. ಟಿ. ಯು. ಸಿ. ಗೆ ಅಫಿಲಿಯೇಟಾದ ಕಾರ್ಮಿಕ ಸಂಸ್ಥೆಗಳೂ ಹಾಗೂ ಸಾರ್ವಜನಿಕರು ತಮ್ಮ ಕೈಲಾದ ಸಹಾಯ ಸಹಕಾರನೀಡಿ ಸಭೆಯು ಯಶಸ್ವಿಯಾಗುವಂತೆ ಮಾಡಿ ಅದರ ಪ್ರಯೋಜನವು ನಮ್ಮ ದೇಶದ ಕಾರ್ಮಿಕರಿಗೆ ದೊರೆಯುವಂತೆ ಮಾಡಬೇಕಾಗಿ ಕೋರುತ್ತೇನೆ.

Mysore City Municipality

NOTICE

Sealed quotations will be received upto 4 p.m. on 15-4-52 by the Municipal Engineer for the collection and consolidation of road materials for the year 1952-53. Each quotation by non-registered contractors must be accompanied with a challan for having remitted Rs. 200/-in the Municipal treasury. For full particulars, please see the notification on the office notice board.

(Sd) V.K. MUKUNDAM,
Municipal Engineer.

ಕಾನಕಾನಹಳ್ಳಿ ಕನಕಪುರವಾಯಿತು

ಕಾನಕಾನಹಳ್ಳಿ ಹೆಸರನ್ನು 'ಕನಕಪುರ' ಎಂದು ಬದಲಾಯಿಸಲಾಗಿದೆ.

ಡಾ|| ಬಿ. ಚಂದ್ರಶೇಖರ್

ಡಾ|| ಬಿ. ಚಂದ್ರಶೇಖರ್‌ರವರನ್ನು ಪಶುವೈದ್ಯ ಶಾಖೆಯ ಸಂಶೋಧನಾಧಿಕಾರಿಯನ್ನಾಗಿ ನೇಮಿಸಲಾಗಿದೆ.

† ಕುರುಡರ ಜನ್ಮಸ್ನೇಹಿತಳಾದ ಶ್ರೀಮತಿ ಹೆಲನ್ ಕೆಲ್ಲರ್‌ರವರು ಏಪ್ರಿಲ್ ೧೫ರಿಂದ ೨೭ರ ವರೆಗೆ ಈಜಿಪ್ಟ್ ಸರ್ಕಾರದ ಅತಿಥಿಗಳಾಗಿರುವರು. ಖಾಸಗಿ ಜನರು ಮತ್ತು ಸಂಸ್ಥೆಗಳು ಕುರುಡರಬಗ್ಗೆ ಇನ್ನೂ ಹೆಚ್ಚಿನ ಆಸಕ್ತಿಯನ್ನು ತೋರಿಸಲು ಸ್ಫೂರ್ತಿಕೊಡುವುದೇ ಆಕೆಯ ಉದ್ದೇಶ. ಶ್ರೀಮತಿ ಕೆಲ್ಲರ್‌ರವರು ಮಧ್ಯಪ್ರಾಚ್ಯದ ಅನೇಕ ದೇಶಗಳಿಗೆ ಭೇಟಿಕೊಡುವರು.

‡ ಎಷ್ಟೇ ಕಷ್ಟಬಂದರೂ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲೇಬೇಕು, ಎಂದು ಹೇಳುವಜನರು ಏಷ್ಯಾಖಂಡದಲ್ಲಿ ಬಹುಮಂದಿ ಇದ್ದಾರೆಂದು, ಅಂತರಾಷ್ಟ್ರೀಯ ಕೂಲಿಕಾರ ಸಂಘದ ಅಧ್ಯಕ್ಷರು ತಿಳಿಸಿದ್ದಾರೆ.

ಚಿನ್ನ ಬೆಳ್ಳಿ ದರಗಳು

11-4-52	ರೂ.
ಸವರನ್	65-12
"	65-14
ಚಿನ್ನ ತೊಲ	91-8
" ಮೂಸ	90-8
ಬೆಳ್ಳಿ 100 ತೊಲ	160-0
" ತೊಲ	1-11

ವುಡ್‌ಲ್ಯಾಂಡ್ಸ್

೧೧-೪-೫೨ ರಿಂದ ದಿನವಹಿ ೩ ಆಟಗಳು

- ಬೇತಾಬ್ - (ಹಿಂದಿ)

ಪಾತ್ರ:—ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ೩ ವಾರ ಮನ್ನಾ ಮಾಡಿರುತ್ತೆ.

ರಣಜಿತ್

೪—೪—೫೨ರಿಂದ ಪ್ರತಿದಿನ ೩ ಆಟಗಳು

ಫಿಲ್ಮಿಸ್ತಾನ್‌ರವರ—

ಶ್ರೀಮತಿಜೀ

ಪಾತ್ರ:—ನಾಸೀರ್ ಖಾನ್, ಶ್ಯಾಮಾ.

ಪ್ರಕಾಶಕರು:—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಚಿನ್ನಸ್ವಾಮಿ ಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೨-೪—೧೯೫೨ನೇ ಶನಿವಾರ [ಸಂಚಿಕೆ ೧೯೧

ಭಾರತ ರಾಷ್ಟ್ರಾಧ್ಯಕ್ಷಸ್ಥಾನಕ್ಕೆ ಐದು ಉಮೇದುವಾರರು

ಭಾರತದಲ್ಲಿ ವಿದ್ಯಾಭ್ಯಾಸಕ್ರಮ ಮಾರ್ಪಾಡಾಗಬೇಕು

ವಿಶ್ವಸಂಸ್ಥೆ ಮೈಸೂರು ಶಾಖೆಯ ವಾರ್ಷಿಕೋತ್ಸವ

ಮೈಸೂರು ಏ ೧೨

ವಿಶ್ವಸಂಸ್ಥೆಯ ಮೈಸೂರು ಸಂಘದ ತೃತೀಯ ವಾರ್ಷಿಕೋತ್ಸವವು ೧೫ನೇ ತಾ|| ಸಂಜೆ ೬ ಗಂಟೆಗೆ ಮೈಸೂರು ಪುರಭವನದಲ್ಲಿ ನಡೆಯುತ್ತದೆ. ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸುತ್ತಾರೆ. ಅಂತರರಾಷ್ಟ್ರೀಯ ಕಾರ್ಮಿಕಶಾಖೆಯ ಬೆಂಗಳೂರು ಕಛೇರಿಯ ವಿ|| ಎಸ್ ವಿರ್ಮಾ, ಯುನೆಸ್ಕೊ ವಿಜ್ಞಾನ ಶಾಸ್ತ್ರದ ದೆಹಲಿ ಶಾಖೆಯ ಡಾ|| ಕಾಂಲ'ಬೋರ್ಗ್ ಮತ್ತು ಮೈಸೂರು ಸರ್ಕಾರದ ಎಕ್ಸ್‌ಟೆನ್ಷನ್ ಸಲಹೆಗಾರರಾದ ಮಿ|| ಡಿಕ್ ಎ ಫಾರ್ಗರವರು ಭಾಷಣ ಮಾಡುತ್ತಾರೆ.

ಹತೋಟಿ ಕೂಡಲೆ ರದ್ದಾಗಲಿ

ಬೆಂಗಳೂರು ಏ ೧೧

ಆಹಾರಹತೋಟಿಯನ್ನು ರದ್ದುಗೊಳಿಸುವುದೇ ಇರುವ ಒಂದೇ ಮಾರ್ಗವೆಂದೂ ಸೂಚಿಸಿ ಈ ಸಂಬಂಧದಲ್ಲಿ ಸರ್ಕಾರ ತಕ್ಷಣ ನಿರ್ಧಾರಕ್ಕೆ ಬರಬೇಕೆಂದು ಸರ್ಕಾರವನ್ನು ಒತ್ತಾಯಮಾಡಿ ಕೆ. ಎಂ. ಪಿ. ಪಕ್ಷದ ಕಾರ್ಯನಿರ್ವಾಹಕ ಸಮಿತಿಯು ನಿರ್ಣಯಮಾಡಿದೆ.

ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ೫ ಜನ ಉಮೇದುವಾರರು

ರಾಷ್ಟ್ರಾಧ್ಯಕ್ಷಸ್ಥಾನಕ್ಕೆ ಡಾ|| ರಾಜೇಂದ್ರಪ್ರಸಾದ್, ಪ್ರೊ|| ಕೆ ಟಿ ಷಾ ಶ್ರೀಗಳಾದ ಹರಿರಾಂ, ಕೃಷ್ಣಕುಮಾರ ಛಟರ್ಜೀ ಮತ್ತು ಎಲ್ ಜಿ ಥಟ್ಟೆ ಒಟ್ಟು ೫ ಜನ ಉಮೇದುವಾರಿಕೆಗಳನ್ನು ಸಲ್ಲಿಸಿ ಸ್ಪರ್ಧಿಸಿರುವರು.

ಬಟ್ಟೆ ಹತೋಟಿ ರದ್ದು ಬೇಡ

ಸದ್ಯದ ಪರಿಸ್ಥಿತಿಯಲ್ಲಿ ಹತ್ತಿ, ಬಟ್ಟೆ ಮೇಲಿನ ಹತೋಟಿಯನ್ನು ಪೂರ್ಣವಾಗಿ ತೆಗೆದುಹಾಕಲಾಗದೆಂದು ಬಟ್ಟೆ ಹತೋಟಿ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಒಂದು ನಿಮಿಷ ಸಭೆ

ಕೊರಿಯಾ ಯುದ್ಧ ಮುಕ್ತಾಯ ಸಂಧಾನ ಪ್ರತಿನಿಧಿಗಳು ಮೊನ್ನೆಯ ದಿನ ಪಾನ್‌ಮುನ್‌ಜಾನ್‌ನಲ್ಲಿ ಕೇವಲ ೧|| ನಿಮಿಷ ನಿನ್ನೆ ಕೇವಲ ಒಂದುನಿಮಿಷ ಮಾತ್ರ ಸೇರಿದ್ದರೆಂದು ಗೊತ್ತಾಗಿದೆ.

ಸುಳ್ಳು ಅಪಾದನೆ ಮಾಡಿದ್ದಕ್ಕೆ ೨೦೦ ರೂ. ಜುಲ್ಮಾನೆ

ನೆಲ್ಲೂರು ಜಿಲ್ಲೆಯ ಕನ್ನಿಗಿರಿ ತಾ|| ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಪಿ ಸೋಮಯಾಜಿ ಎನ್ನುವವರು ಕೆಲವು ರೆವಿನ್ಯೂ ನೌಕರರು ಮತ್ತು ಗ್ರಾಮ ಮುನಿಸೀಫರು ಲಂಚಪಡೆದರೆಂದು ಅಪಾದನೆ ಮಾಡಿ ಸಿ ಐ ಡಿ ಡೆಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟರಿಗೆ ಪತ್ರ ಬರೆದಿದ್ದು, ಅಪಾದನೆಗಳು ಸುಳ್ಳೆಂದು ರುಜುವಾತಾದಮೇಲೆ ಶ್ರೀ ಸೋಮಯಾಜಿಯ ಮೇಲೆ ಐ ಪಿ ಸಿ ೨೧೧ನೇ ಸೆಕ್ಷನ್ ಪ್ರಕಾರ ಮೊಕದ್ದಮೆ ಹೂಡಲಾಗಿತ್ತು. ಸುಳ್ಳು ಅಪಾದನೆ ಮಾಡಿದ್ದಕ್ಕಾಗಿ ಶ್ರೀ ಸೋಮಯಾಜಿಯವರಿಗೆ ಮ್ಯಾಜಿಸ್ಟ್ರೇಟರು ೨೦೦ ರೂ ಜುಲ್ಮಾನೆ, ಕೋರ್ಟು ಏಳುವವರೆಗೆ ಸಜಾ ವಿಧಿಸಿದರು.

ಖಟ್ಮಂಡುವಿನಲ್ಲಿ ವಿಶ್ವೇಶ್ವರಯ್ಯನವರು

ನೇಪಾಳದಲ್ಲಿ ಅಭಿವೃದ್ಧಿ ಯೋಜನೆಗಳ ಬಗ್ಗೆ ಸಲಹೆನೀಡಲು ಭಾರತದ ಕೈಗಾರಿಕಾ ಪರಿಣತರಾದ ಸರ್ ಎಂ. ವಿಶ್ವೇಶ್ವರಯ್ಯನವರು ಖಟ್ಮಂಡುವಿಗೆ ಹೋಗಿರುವರು.

ಗಂಗಾನದಿಯಮೇಲೆ ಕಟ್ಟುವ ಸೇತುವೆಗೆ ನೇಪಾಳ ಸರ್ಕಾರದ ಪ್ರತಿಕ್ರಿಯೆ ತಿಳಿಯಲು ಇವರೊಡನೆ ಭಾರತ ಮತ್ತು ಬಿಹಾರ್ ಸರ್ಕಾರಗಳ ೬ ಮಂದಿ ಅಧಿಕಾರಿಗಳೂ ಸಹ ಹೋಗಿರುವರು.

ಇದರಿಂದ ಭಾರತ ನೇಪಾಳದ ವಾಣಿಜ್ಯ ಅಭಿವೃದ್ಧಿಯಾಗಲಿದೆ.

ಸಿಂಹಳದಲ್ಲಿ ಭಾರತೀಯರಿಗೆ ಮತದಾನದ ಹಕ್ಕು

ಈ ಸಾಲಿನಲ್ಲಿ ನಡೆಯುವ ಸಿಂಹಳದ ಮಹಾಚುನಾವಣೆಯಲ್ಲಿ ಅಲ್ಲಿ ವಾಸವಾಗಿರುವ ಭಾರತೀಯರಿಗೆ ಮತದಾನ ಹಕ್ಕನ್ನು ಹೇಗಾದರೂ ಗಳಿಸಿಕೊಡಲು ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಭಾರತಸರ್ಕಾರವು ತನ್ನ ಹೈಕಮೀಷನರಿಗೆ ಸೂಚನೆಯಿತ್ತಿದೆ. ೧೯೪೭ನೇ ಚುನಾವಣೆಯಲ್ಲಿ ೨,೨೫,೦೦೦ ಭಾರತೀಯರಿಗೆ ಮತದಾನ ಹಕ್ಕಿತ್ತು. ಈ ಸಾಲಿನಲ್ಲಿ ಕೇವಲ ೮೫೦೦ ಮಾತ್ರವಿದೆ. ಎಲ್ಲರಿಗೂ ಹಕ್ಕು ದೊರೆಯುವಂತೆ ಭಾರತವು ಸಿಂಹಳ ಸರ್ಕಾರವನ್ನು ಒತ್ತಾಯಪಡಿಸುತ್ತಲಿದೆ.

ಉಪಾಧ್ಯಕ್ಷ ಚುನಾವಣಾ ಕಾರ್ಯಕ್ರಮ

ಉಪರಾಷ್ಟ್ರಾಧ್ಯಕ್ಷರ ಚುನಾವಣಾ ಕಾರ್ಯಕ್ರಮವನ್ನು ಚುನಾವಣಾಧಿಕಾರಿಗಳು ಪ್ರಕಟಿಸಿದ್ದಾರೆ.

ಅರ್ಜಿಗಳನ್ನು ಸ್ವೀಕರಿಸುವುದು ೨೧ನೇ ತಾ|| ೩ ಗಂಟೆವರೆಗೆ, ಪರಿಶೀಲನೆ ೨೩ನೇ ತಾ|| ಮತದಾನ (ಅಗತ್ಯವಾಗಿದ್ದರೆ) ಮುಂದಿನತಿಂಗಳು ೧೨ ನೇ ತಾರೀಖು.

ಅಖಿಲಭಾರತ ವಿದ್ಯಾ ಸಮ್ಮೇಳನ

ಅಖಿಲಭಾರತ ೩೭ನೇ ವಿದ್ಯಾಭ್ಯಾಸ ಸಮ್ಮೇಳನವನ್ನು ಭಾರತ ರಾಷ್ಟ್ರಾಧ್ಯಕ್ಷರು ನಿನ್ನೆಯ ದಿನ ದೆಹಲಿಯಲ್ಲಿ ಉದ್ಘಾಟಿಸಿದರು. ಪೆಪ್ಸು ರಾಜಪ್ರಮುಖರು ಅಧ್ಯಕ್ಷತೆವಹಿಸಿದ್ದರು. ಈ ಸಮಯದಲ್ಲಿ ರಾಷ್ಟ್ರಾಧ್ಯಕ್ಷರು ಮಾತನಾಡುತ್ತಾ ಭಾರತದಲ್ಲಿ ವಿದ್ಯಾಭ್ಯಾಸಕ್ರಮವು ತೀವ್ರ ಬದಲಾವಣೆಯಾಗಬೇಕಾಗಿದೆ.

ನೈತಿಕ ಮತ್ತು ಧಾರ್ಮಿಕ ಶಿಕ್ಷಣವು ಅವಶ್ಯಕವೆಂದೂ ಅದಕ್ಕೆ ಪ್ರಾಮುಖ್ಯತೆ ಕೊಡಬೇಕೆಂದು ಹೇಳಿದರು. ಅಧ್ಯಕ್ಷರು ಭಾರತಾದ್ಯಂತ ವ್ಯವಸಾಯ ವಿದ್ಯಾಭ್ಯಾಸಶಿಕ್ಷಣ ನಡೆಯಬೇಕೆಂದು ಹೇಳಿದರು. ಕೇಂದ್ರ ವಿದ್ಯಾಸಚಿವ ಮೌಲಾನಾ ಅಜಾದರೂ ಸಮ್ಮೇಳನದಲ್ಲಿ ಹಾಜರಿದ್ದರು.

ಭಾರತದ ಬಗ್ಗೆ ಶ್ರೀಮತಿ ರೂಸ್‌ವೆಲ್ಟರ ಅಭಿಪ್ರಾಯ

ಆರ್ಥಿಕ ಮತ್ತು ವ್ಯವಸಾಯ ದೃಷ್ಟಿಯಿಂದ ಭಾರತ ಬಹು ಅಭಿವೃದ್ಧಿ ಸಾಧಿಸಿದೆ ಎಂದು ಶ್ರೀಮತಿ ರೂಸ್‌ವೆಲ್ಟರು ಅಮೆರಿಕಾದಲ್ಲಿ ತಿಳಿಸಿರುವರು.

ಭಾರತದಲ್ಲಿ ಉತ್ತಮವಾದ ಆಡಳಿತಗಾರರು ಇರುವರೆಂದೂ ವ್ಯವಸಾಯ ವಿಷಯದಲ್ಲಿ ಭಾರತ ಪಾಕಿಸ್ತಾನಗಳು ಹೆಚ್ಚಿನ ಪ್ರಗತಿ ಸಾಧಿಸಿವೆ ಎಂದೂ ಹೇಳಿರುವರು.

ಅರ್ಜಿ ನಿರಾಕರಣೆ

ಭಾರತ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ವಿಂಧ್ಯಪ್ರದೇಶದ ಶ್ರೀಮತಿ ಸುಮಿತ್ರಿಯವರು ಅರ್ಜಿ ಸಲ್ಲಿಸಲು ಬಂದಾಗ ಅಧಿಕೃತ ಮತದಾನ ಪಟ್ಟಿಯನ್ನು ಹಾಜರ್ಪಡಿಸದಿದ್ದರಿಂದ ರಿಟರ್ನಿಂಗ್ ಆಫೀಸರ್ ಅವರ ಅರ್ಜಿಯನ್ನು ನಿರಾಕರಿಸಿದರು.

ಕಾರ್ಯನಿರತ ಪತ್ರಿಕೋದ್ಯೋಗಿ ಸಂಘದ ವಾರ್ಷಿಕೋತ್ಸವ

ಅಖಿಲಭಾರತ ಕಾರ್ಯನಿರತ ಪತ್ರಿಕೋದ್ಯೋಗಿಗಳ ಮಹಾಸಂಘದ ವಾರ್ಷಿಕೋತ್ಸವವು ಕಲ್ಕತ್ತಾದಲ್ಲಿ ನಿನ್ನೆ ಪ್ರಾರಂಭವಾಯಿತು. ಶ್ರೀ ಚಲಪತಿರಾಯರು ಅಧ್ಯಕ್ಷಭಾಷಣಮಾಡುತ್ತಾ, ಕಾರ್ಯನಿರತ ಪತ್ರಿಕೋದ್ಯೋಗಿಗಳ ಸ್ಥಿತಿಗತಿಗಳನ್ನು ಉತ್ತಮಗೊಳಿಸಬೇಕೆಂದು ತಿಳಿಸಿ ಅದಕ್ಕೆ ಸಂಬಂಧಪಟ್ಟಂತೆ ನೂತನ ಪಾರ್ಲಿಮೆಂಟ್ ಒಂದು ವಿಚಾರಣಾಸಮಿತಿ ನೇಮಿಸಬೇಕೆಂದು ತಿಳಿಸಿದರು.

ಭಾರತಾದ್ಯಂತವಿರುವ ಪತ್ರಿಕಾಸಲಹಾ ಸಮಿತಿಗಳನ್ನೆಲ್ಲಾ ರದ್ದುಗೊಳಿಸಬೇಕು. ಸುದ್ದಿ ಸಮಾಚಾರಗಳನ್ನು ಭಾರತದಲ್ಲಿ ಸಂಗ್ರಹಿಸಲು ನಮ್ಮ ದೇಶದ ಒಂದು ಸಂಸ್ಥೆ ಇರಬೇಕೆಂದು ತಿಳಿಸಿದರು.

ಒಂದು ಎಕರೆಯಲ್ಲಿ ೬೭ ಮಣ ಗೋಧಿ

ಉತ್ತರಪ್ರದೇಶದಲ್ಲಿ ಲಕ್ಷ್ಮೀಪುರವೆಂಬಲ್ಲಿ ರಾಮದಾಸ್ ಸಿಂಗ್ ಎಂಬುವರು ಒಂದು ಎಕರೆಯಲ್ಲಿ ೬೭ ಮಣ ಗೋಧಿಯನ್ನು ಬೆಳೆದಿರುವರು. ಕಳೆದಸಾಲಿನಲ್ಲಿ ಅವರಿಗೆ ಅತ್ಯಧಿಕ ಬೆಳೆಯ ಬಹುಮಾನವನ್ನು ಇದೇರೀತಿ ಬೆಳೆ ಬೆಳೆಸಿದ್ದಕ್ಕಾಗಿ ಸರ್ಕಾರವು ಕೊಟ್ಟಿದೆ.

ನೌಕಾ ಶಿಕ್ಷಣಕೇಂದ್ರ

ರಾಯಲ್ ನೌಕಾ ಶಿಕ್ಷಣಕೇಂದ್ರಕ್ಕೆ ಸರಿಸಮಾನವಾದ ಒಂದು ನೌಕಾಕೇಂದ್ರವನ್ನು ಕೊಚ್ಚಿನ್ನಿನಲ್ಲಿ ಸ್ಥಾಪಿಸಲಾಗುತ್ತದೆ.

ಬೊಂಬಾಯಿ ಬಂದರನ್ನು ವಿಸ್ತರಣೆ ಮಾಡಲಾಗುತ್ತದೆ ವಿಶಾಖಪಟ್ಟಣನೌಕಾ ಕೇಂದ್ರವನ್ನು ಭಾರತದಲ್ಲೆಲ್ಲಾ ಅತ್ಯಂತ ದೊಡ್ಡ ಕೇಂದ್ರವನ್ನಾಗಿ ಮಾಡಲಾಗುತ್ತದೆ ಎಂದು ನೌಕಾ ಮುಖ್ಯಾಧಿಕಾರಿ ವೈಸ್ ಅಡ್ಮಿರಲ್ ಪೈಜೆಯವರು ಹೇಳಿರುವರು.

† ಅಭ್ರಕ ಸಲಹಾ ಸಮಿತಿಯು ಮದರಾಸಿನಲ್ಲಿ ಸೇರಲಿದೆ. ಗೌರ್ನರ್ ಶ್ರೀ ಶ್ರೀಪ್ರಕಾಶರವರು ಪ್ರಾರಂಭಿಸುವರೆಂದು, ಭೂಗರ್ಭ ಶಾಖಾ ಡೈರೆಕ್ಟರ್ ಜನರಲ್ ಡಾ|| ಕೃಷ್ಣನ್‌ರವರು ಅಧ್ಯಕ್ಷತೆ ವಹಿಸುವರು.

ಚೀಣಾಕ್ಕೆ ಹೋಗಲು ಡಾ|| ಡಾಂಗೆಯವರಿಗೆ ರಹದಾರಿ ನಿರಾಕರಣೆ

'ಮೇ ದಿನಾಚರಣೆ'ಯಲ್ಲಿ ಭಾಗವಹಿಸುವ ಸಲುವಾಗಿ ಚೀಣಾದಿಂದ ಆಹ್ವಾನಿತರಾಗಿರುವ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಮಹಾ ಕಾರ್ಯದರ್ಶಿ ಶ್ರೀ ಎಸ್. ಎ. ಡಾಂಗೆಯವರಿಗೆ ರಹದಾರಿ ಕೊಡಲು ಮುಂಬೈ ಸರ್ಕಾರ ನಿರಾಕರಿಸಿದೆ. ಈ ಸಂಗತಿ ಗೊತ್ತಾದ ಕೂಡಲೇ ಶ್ರೀ ಡಾಂಗೆಯವರು ಈ ಬಗ್ಗೆ ಪ್ರಧಾನಿ ನೆಹರೂರವರಿಗೂ, ಭಾರತ ಸರ್ಕಾರಕ್ಕೂ ಪತ್ರ ಬರೆದಿದ್ದಾರೆ ಒಂದು ತಿಂಗಳ ಕಾಲ ಚೀಣದಲ್ಲಿ ಪ್ರವಾಸ ಮಾಡುವಂತೆ ಕೂಡ ಚೀಣ ಡಾಂಗೆಯವರನ್ನು ಆಹ್ವಾನಿಸಿದೆ.

ಹೊರಕ್ಕುರುಳಿದರೂ ಮತ್ತೆ ವಿಮಾನ ಸೇರಿದ

ವಿಮಾನವೊಂದು ಕೋರ್ಟ್ಲಾಂಡ್ ಪರ್ವತ ಶ್ರೇಣಿಯ ಮೇಲೆ ಹಾರುತ್ತಿದ್ದಾಗ ಅಮೆರಿಕನ್ ವೈಮಾನಿಕನೊಬ್ಬನು ಬಾಗಿಲಿನಿಂದ ಆಚೆಗೆ ತಳ್ಳಲ್ಪಟ್ಟನು ಆತ ಕೆಳಕ್ಕೆ ಬೀಳುತ್ತಿದ್ದಂತೆ ವಿಮಾನ ತಕ್ಷಣ ಕೆಳಕ್ಕಿಳಿದು ಬಾಗಿಲಲ್ಲಿ ಆತನನ್ನು ಆತುಕೊಂಡಿತು. ಆತನಿಗೆ ಗಾಯವೇನೂ ಆಗಿಲ್ಲ.

ನೂತನ ಪಾರ್ಲಿಮೆಂಟ್ ಅಧಿವೇಶನ ಎರಡು ತಿಂಗಳು ಕಾಲ

ಹೊಸ ಪಾರ್ಲಿಮೆಂಟ್ ಅಧಿವೇಶನವು ಮುಂದಿನ ಮಾಹೆ ೧೩ನೇ ತಾ|| ಪ್ರಾರಂಭವಾಗುವುದೆಂದು ತಿಳಿಯಬರುತ್ತದೆ ಈ ಪ್ರಥಮ ಅಧಿವೇಶನವು ಸುಮಾರು ೨-೨|| ತಿಂಗಳು ಕಾಲ ನಡೆಯಬಹುದೆಂದು ಹೇಳಲಾಗಿದೆ.

ಕರಗ ಮಹೋತ್ಸವ

ಬೆಂಗಳೂರು ಏ. ೧೧

ಶ್ರೀ ಧರ್ಮರಾಯಸ್ವಾಮಿ ಕರಗ ಮಹೋತ್ಸವವು ಶುಕ್ರವಾರ ರಾತ್ರಿ ೧-೩೦ ಗಂಟೆಗೆ ದೇವಸ್ಥಾನದಿಂದ ಹೊರಟು ಅಷ್ಟದಿಕ್ಕು ಪ್ರದಕ್ಷಿಣೆಯ ನಂತರ ಬೆಳಿಗ್ಗೆ ೧೧ ಗಂಟೆಗೆ ವಾಪಸ್ ಆಯಿತು. ಉತ್ಸವವನ್ನು ನೋಡಲು ಎಂದಿಗಿಂತ ಜನಸಂದಣಿ ನಗರದಲ್ಲಿ ಹೆಚ್ಚಾಗಿತ್ತು.

ಉತ್ಸವ ಸಮಯದಲ್ಲಿ ಶ್ರೇಷ್ಠ ನ್ಯಾಯಮೂರ್ತಿ ಪಿ. ಮೇದಪ್ಪ, ಮೇಯರ್ ಬಿ. ವಿ. ಲಂಕಪ್ಪ, ಐ ಜಿ. ಪಿ ಎಚ್. ವಿ. ಬಾಬುರೆಡ್ಡಿ, ಕಾರ್ಪೊರೇಷನ್ ಕಮೀಷನರ್ ಹಿರಣ್ಣಯ್ಯ, ಜಿಲ್ಲಾಧಿಕಾರಿ ರಂಗಮಲ್ಲಯ್ಯ, ಡಿ ಐ ಜಿ.ಪಿ. ಚಾಂಡಿ, ಮುಂತಾದ ಉನ್ನತಾಧಿಕಾರಿಗಳೂ, ಪೌರಗಣ್ಯರೂ, ಹಾಜರಿದ್ದರು.

ಆಹಾರ ನೀತಿ ಬಗ್ಗೆ ಪುನಃ ಸರ್ಕಾರದ ಪ್ರಕಟಣೆ

ಬೆಂಗಳೂರು ಏ ೧೨

ಮೈಸೂರು ಸರ್ಕಾರದವರು ನಿನ್ನೆ ದಿನ ಪುನಃ ಒಂದು ಪತ್ರಿಕಾ ಪ್ರಕಟಣೆ ಹೊರಡಿಸಿ ಸರ್ಕಾರದ ಹೊಸ ಆಹಾರ ನೀತಿಯ ಬಗ್ಗೆ ಕೆಲ ವಿವರಣೆಗಳನ್ನು ಇತ್ತಿದ್ದಾರೆ. ಅಧಿಕೃತವಾಗಿ ಪಡಿತರವಿಲ್ಲದ ಪ್ರದೇಶಗಳಲ್ಲಿ ಈ ಹೊಸ ನೀತಿಯಿಂದ ಪರಿಸ್ಥಿತಿ ಉಗ್ರವಾಗಬಹುದೆಂದು ಕೆಲ ವರ್ತುಲಗಳು ಅಭಿಪ್ರಾಯಪಟ್ಟಿವೆಯೆಂದೂ ಆದರೆ 'ಮುಂದಿನ ಸುಗ್ಗಿಯವರೆಗೆ ಅಲ್ಲೆಲ್ಲ ಇಂದಿನ ಆಹಾರ ಡಿಪೋಗಳು ಇದ್ದು ವಿಧ್ಯುಕ್ತವಲ್ಲದ ಪಡಿತರ ವ್ಯವಸ್ಥೆಯು ಮುಂದುವರಿಯುವುದು ಮತ್ತು ಸಾಗಾಣಿಕೆಯ ಮೇಲಿನ ಹತೋಟಿ ರದ್ದಿನ ಹೊರತು ಮತ್ತಾವುದೇ ವಿಧವಾದ ಬದಲಾವಣೆಯಾಗುವುದಿಲ್ಲ. ಆದರಿಂದ ಹೆಚ್ಚಿನ ಅನುಕೂಲವೇ ಹೊರತು ಅನಾನುಕೂಲವೇನೂ ಇಲ್ಲ' ಎಂಬುದಾಗಿ ತಿಳಿಸಲಾಗಿದೆ.

ಜ|| ಐಸೆನ್‌ಹೋವರ್ ನಿವೃತ್ತಿ

ಜನರಲ್ ಐಸೆನ್‌ಹೋವರ್‌ರವರು ತಮ್ಮ ಅಟ್ಲಾಂಟಿಕ್ ಮಹಾ ಸೇನಾನಿ ಪದವಿಯಿಂದ ಜೂನ್ ೧ನೇ ತಾರೀಖು ನಿವೃತ್ತರಾಗಲು ಅಮೆರಿಕಾಧ್ಯಕ್ಷ ಟ್ರೂಮನ್ನರು ಒಪ್ಪಿಗೆ ನೀಡಿದ್ದಾರೆ.

ನಿರ್ಬಂಧ ಸಡಿಲ

ತಿರುವಾಂಕೂರು ಕೊಚ್ಚಿನ್ ಪ್ರಾಂತವು ಇತರ ಪ್ರಾಂತ್ಯಗಳಿಗೆ ಟೋಪಿಯೋಕಾ ಮತ್ತು ಅದರಿಂದ ತಯಾರಾದ ವಸ್ತುಗಳನ್ನು ರವಾನಿಸುವ ಮೇಲೆ ಇದ್ದ ನಿರ್ಬಂಧವನ್ನು ಸರ್ಕಾರವು ಒಂದು ತಿಂಗಳ ಕಾಲ ತೆಗೆದುಹಾಕಿದೆ.

ಜೀವನಮಟ್ಟ ಹೆಚ್ಚಿಸಲು ದ್ರವ್ಯವಿನಿಯೋಗ

ಜೀವನದ ಮಟ್ಟವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಜನತೆಗೆ ಸ್ವಸಹಾಯ ಮಾಡಿಕೊಳ್ಳಲು ಸಹಾಯ ಮಾಡುವ ಉದ್ದೇಶದಿಂದ ಫೋರ್ಡ್ ಫೌಂಡೇಷನ್ ಸಂಸ್ಥೆ ಭಾರತ, ಪಾಕಿಸ್ತಾನ ಮತ್ತು ಮಧ್ಯಪ್ರಾಚ್ಯಗಳಲ್ಲಿ ಕಳೆದ ವರ್ಷ ೬೫,೫೫೦ ಡಾಲರುಗಳನ್ನು ವಿನಿಯೋಗಿಸಿತು ಎಂಬುದಾಗಿ ಫೌಂಡೇಷನ್ನಿನ ಅಧ್ಯಕ್ಷರೂ ಮತ್ತು ಡೈರೆಕ್ಟರೂ ಆದ ಪಾಲ್ ಹಾಫ್‌ಮನ್‌ರವರು ತಮ್ಮ ವಾರ್ಷಿಕ ವರದಿಯಲ್ಲಿ ತಿಳಿಸಿದ್ದಾರೆ.

ಲೆ|| ಗೌರ್ನರ ಭಾಷಣ ಚರ್ಚೆಗವಕಾಶವಿಲ್ಲ

ಏ. ೨೧ ರಂದು ವಿಧ್ಯಪ್ರದೇಶ ಶಾಸನ ಸಭೆಯ ಅಧಿವೇಶನದಲ್ಲಿ ತಮ್ಮ ಭಾಷಣದ ಬಗ್ಗೆ ಚರ್ಚಿಸಲವಕಾಶ ಕೊಡುವುದಿಲ್ಲವೆಂಬುದಾಗಿ ಲೆ|| ಗೌರ್ನರರಾದ ಶ್ರೀ ಕೆ. ಸಂತಾನಂರವರು ಪ್ರಕಟಿಸಿರುವ ಪ್ರಯುಕ್ತ ಸೋಷಲಿಸ್ಟ್ ಸದಸ್ಯರು ಹಾಜರಿರುವುದಿಲ್ಲವೆಂದು ನಿರ್ಧರಿದ್ದಾರೆ.

ಏಪ್ರೆಲ್ ೨೦ನೇ ತಾ|| 'ಪ್ರತಿಭಟನಾದಿನ'

ಆಹಾರ ಬೆಲೆ ಏರಿಕೆಯನ್ನು ಪ್ರತಿಭಟಿಸಲು, ಮೈಸೂರು ಸೋಷಲಿಸ್ಟ್ ಪಾರ್ಟಿ ಅಧ್ಯಕ್ಷ ಶ್ರೀ ಸಿ ಜಿ ಕೆ ರೆಡ್ಡಿಯವರು ಹೇಳಿಕೆಯೊಂದರಲ್ಲಿ ತಿಳಿಸಿ, ಸ್ವಾಭಿಮಾನವಿರುವ ಪ್ರಜೆಗಳೆಲ್ಲಾ ಏಪ್ರೆಲ್ ೨೦ನೇ ತಾ|| ಸಂಸ್ಥಾನಾದ್ಯಂತ 'ಪ್ರತಿಭಟನಾ' ದಿನವನ್ನಾಚರಿಸಬೇಕೆಂದು ಕರೆ ಇತ್ತಿದ್ದಾರೆ.

ದಾವಣಗೆರೆಯಲ್ಲಿ ಸಭೆ ನಡೆಸಲು ನಿಷೇದಾಜ್ಞೆ

ದಾವಣಗೆರೆ ನಗರದಲ್ಲಿ ಮತ್ತು ಮುನಿಸಿಪಲ್ ಸರಹದ್ದಿನ ಸುತ್ತಲೂ ಒಂದು ಮೈಲಿ ದೂರ ಸಭೆ ಮೆರವಣಿಗೆಗಳನ್ನು ಮಾಡಕೂಡದೆಂದು ನಿಷೇಧಿಸುವ ೧೪೪ನೇ ಸೆಕ್ಷನನ್ನು ೮ನೇ ತಾ|| ನಿಂದ ಎರಡು ತಿಂಗಳು ಕಾಲ ಅಮಲ್ದಾರರವರು ಜಾರಿ ಮಾಡಿದ್ದಾರೆ.

ಪೇಟೆ ಧಾರಣೆ

ಮೈಸೂರು ತಾ|| 12-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	12-4	18-4
ಹೊಂಗೆಬೀಜ	,,	13-0	14-0
ಹುರುಳಿ	,,	30-8	31-12
ಹೆಸರು	,,	58 0	58-4
ಮೆ. ಕಾಯಿ ಮಣಕ್ಕೆ		8-2	14-10
ಹುಣಸೇಹಣ್ಣು	,,	2-11	3-6
ಸೀಗೆಕಾಯಿ	,,	3-0	3-9
ತೆಂಗಿನಕಾಯಿ 1100ಕ್ಕೆ		129	215

ಚಿನ್ನ ಬೆಳ್ಳಿ ದರಗಳು

12-4-52	ರೂ.
ಸವರನ್	66-
,,	66-
ಚಿನ್ನ ತೊಲ	92-
,, ಮೂಸ	91-0
ಬೆಳ್ಳಿ 100 ತೊಲ	162-8
,, ತೊಲ	1-12

ನ್ಯೂ ಅಪೇರ

೧೩-೪-೫೨ ರಿಂದ ಆಮೋಘಪ್ರಾರಂಭ

* ಕುಮಾರಿ *
(ತಮಿಳು)

ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜಿನಿ (ಜೂ), ತಾಮು, ದೊರೆರಾಜ್, ಪುಳಿಮೊಟ್ಟೆ.

ವುಡ್‌ಲ್ಯಾಂಡ್ಸ್

೧೧-೪-೫೨ ರಿಂದ ದಿನವೂ ೩ ಆಟಗಳು

- ಬೇತಾಬ್ -
(ಹಿಂದಿ)

ಪಾತ್ರ:—ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ೩ ವಾರ ಮನ್ನಾ ಮಾಡಿರುತ್ತೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಕೊಲಂಬೋವಿನಲ್ಲಿ ನಡೆದ ವಸ್ತುಪ್ರದರ್ಶನಲ್ಲಿ ಭಾರತ ವಸ್ತುಗಳನ್ನು ಪ್ರದರ್ಶಿಸಿರುವ ಭಾಗ

ಸಿಂಹಳದ ಗೌರ್ನರ್ ಜನರಲ್ ಲಾರ್ಡ್ ಸಾಲ್ಸಬರಿ ಮತ್ತು ಸಿಂಹಳದಲ್ಲಿರುವ ಭಾರತ ಹೈಕಮಿಷನರ್ ಶ್ರೀ ಕೇಶವ ಮೆನನ್‌ರವರು ವಸ್ತುಪ್ರದರ್ಶನದ ಭಾರತ ಶಾಖೆಯಲ್ಲಿರುವ ದೃಶ್ಯ.

ಫೋನ್ ೫೭೪ (೮೦) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೫ ೪—೧೯೫೨ನೇ ಮಂಗಳವಾರ [ಸಂಚಿಕೆ ೧೯೨

ಉತ್ತರ, ಈಶಾನ್ಯ, ಪೂರ್ವ ರೈಲ್ವೆ ವಲಯಗಳ ಉದ್ಘಾಟನೆ

ಕೊಡಗಿನ ಶಾಸನಸಭೆಯಲ್ಲಿ ವಿರೋಧಪಕ್ಷದವರು ಕಾಂಗ್ರೆಸ್ ಸೇರಿದರು

ಪರಿಶೀಲನೆ

ಬೆಂಗಳೂರು ಏ ೧೨

ಶಾಸನಬದ್ಧ ಪಡಿತರವಿರುವ ಪ್ರದೇಶಗಳಿಗೆ ಧಾನ್ಯವನ್ನು ತೆಗೆದುಕೊಂಡುಹೋಗಲು ನಿಗದಿಯಾಗಿರುವ ಸೇರು ಪ್ರಮಾಣವನ್ನು ಹೆಚ್ಚಿಸಲು ಸರ್ಕಾರವು ಪರಿಶೀಲಿಸುತ್ತಿರುವುದಾಗಿ ಮುಖ್ಯಮಂತ್ರಿಗಳು ಹೇಳಿರುವರು.

ಕಲಾವಿದರ ಆಯ್ಕೆ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದವರು ಶ್ರೀ ಯು ಕ ಎನ್ ರಾಮಶೆಟ್ಟರವರ ಅಧ್ಯಕ್ಷತೆಯಲ್ಲಿ ಜರೂರು ಸಭೆ ಸೇರಿ ಸಂಸ್ಥಾನದ ಲೆಜಿಸ್ಲೆಟಿವ್ ಕೌನ್ಸಿಲ್‌ಗೆ ಕಲಾವಿಭಾಗದಿಂದ ಕಲಾವಿದರೊಬ್ಬರನ್ನು ತೆಗೆದುಕೊಳ್ಳುವುದು ಅಗತ್ಯವೆಂದೂ, ಆ ಸ್ಥಾನಕ್ಕೆ ಕಲಾಕೋವಿದರೂ ಸಾರ್ವಜನಿಕಕ್ಷೇತ್ರ ಧುರೀಣರೂ ಆದ ರುಮಾಲೆ ಚನ್ನಬಸಪ್ಪನವರನ್ನು ತೆಗೆದುಕೊಳ್ಳಬೇಕೆಂದು ಕಲಾವಿಧ ಎಂ ಎಸ್ ನಂಜುಂಡರಾವ್‌ರವರು ತಂದ ನಿರ್ಣಯವನ್ನು ಸರ್ವಾನುಮತದಿಂದ ತೀರ್ಮಾನಿಸಲಾಯಿತು

ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಒತ್ತಾಯಪಡಿಸುವ ನಿರ್ಣಯವನ್ನು ಮಾಡಿ ಕಳುಹಿಸಲಾಯಿತು.

ರಾಜಧಾನಿಯ 'ಕಲಾಕ್ಷೇತ್ರ'ದ ಕಾರ್ಯದರ್ಶಿಗಳು ನಿನ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಲೆಜಿಸ್ಲೇಟೀವ್ ಕೌನ್ಸಿಲ್ ಕಲಾವಿಭಾಗದಿಂದ, ಶ್ರೀ ಕೆ ವೆಂಕಟಪ್ಪನವರನ್ನಾಗಲೀ, ಶ್ರೀ ರುಮಾಲೆ ಚನ್ನಬಸಪ್ಪನವರನ್ನಾಗಲೀ ತೆಗೆದುಕೊಳ್ಳಬೇಕೆಂದು ಒಂದು ಒತ್ತಾಯದ ತಂತಿಯನ್ನು ಕೊಟ್ಟಿರುತ್ತಾರೆ

ರಾಷ್ಟ್ರಾಧ್ಯಕ್ಷರ ಚುನಾವಣೆ

ಭಾರತ ರಾಷ್ಟ್ರಾಧ್ಯಕ್ಷರ ಸ್ಥಾನಕ್ಕೆ ಚುನಾವಣೆಗೆ ಸಲ್ಲಿಸಿರುವ ೫ ಉಮೇದುವಾರಿಕೆ ಪತ್ರಗಳನ್ನು ಚುನಾವಣಾಧಿಕಾರಿಗಳು ಪರಿಶೀಲಿಸಿ ಅವುಗಳನ್ನು ಅಂಗೀಕರಿಸಿರುವರು. ೪೦೫೭ ಮತದಾರರು ಮತವನ್ನು ನೀಡಬೇಕಾಗಿದೆ

ಶ್ರೀ ಜಿ. ಡಿ. ಜೋಷಿ

ಬೊಂಬಾಯಿನ ಶ್ರೀ ಜಿ ಡಿ. ಜೋಷಿಯವರು ಜೂನ್ ಮಾಹೆಯಲ್ಲಿ 'ಹಿಮಾಲಯ ಪರ್ವತಾರೋಹಣ ಮಾಡಬೇಕೆಂದು ನಿರ್ಧರಿಸಿರುವರೆಂದು ಗೊತ್ತಾಗಿದೆ ಇವರು ಸುಮಾರು ೨೦೦೦೦ ಅಡಿ ಎತ್ತರವಿರುವ ಪರ್ವತ ಶಿಖರವನ್ನು ಏರಬೇಕೆಂದಿರುವರು

ವಿರೋಧಪಕ್ಷದವರು ಕಾಂಗ್ರೆಸ್ ಸೇರಿದರು

ಕೊಡಗಿನಲ್ಲಿ ಕಾಂಗ್ರೆಸ್ಸಿಗರಲ್ಲಿ ಕೊಡಗು ಕರ್ನಾಟಕಕ್ಕೆ ಸೇರ ಬೇಕೆ ಅಥವಾ ಮೈಸೂರಿಗೆ ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯ ತಲೆದೋರಿ ಚುನಾವಣೆಗಳಲ್ಲಿ ಜಯಗಳಿಸಿ ವಿರೋಧಪಕ್ಷವಾಗಿರುವ ೯ ಜನರು ಇತ್ತೀಚೆಗೆ ಕಾಂಗ್ರೆಸ್ಸನ್ನು ಸೇರಿ ವಿರೋಧಪಕ್ಷವನ್ನು ವಿಸರ್ಜಿಸಲು ನಿರ್ಧರಿಸಿರುವುದಾಗಿ ಪಕ್ಷದ ನಾಯಕರಾದ ಶ್ರೀ ಪಿ ಐ ಬೆಳ್ಳಿಯಪ್ಪನವರು ತಿಳಿಸಿರುವರು ಕೊಡಗಿನ ಭವಿಷ್ಯವಿಷಯದಲ್ಲಿ 'ಪ್ರಜಾಭಿಪ್ರಾಯವನ್ನು ಪಡೆಯುವುದಾಗಿ ಇತ್ತೀಚೆಗೆ ಕಾಂಗ್ರೆಸ್ ಪಕ್ಷವು ನಿರ್ಧರಿಸಿರುವುದರಿಂದ ಅವರಲ್ಲಿ ಮೂಡಿದ್ದ ಭಿನ್ನಾಭಿಪ್ರಾಯವು ನಿವಾರಣೆಯಾಯಿತು.

ಬೆಲೆ ಹೆಚ್ಚಿದ್ದಕ್ಕೆ ದಾಸ್ತಾನು ಹೆಚ್ಚಿತು

ಆಹಾರವಸ್ತುಗಳ ಬೆಲೆ ಹೆಚ್ಚಿದ್ದರಿಂದ ಮದ್ರಾಸಿನಲ್ಲಿ ಗೋಧಿ ಮತ್ತು ಮೈಲೋವನ್ನು ಕೊಳ್ಳುವವರ ಸಂಖ್ಯೆ ಕಡಿಮೆಯಾಗಿ ದಾಸ್ತಾನು ಹೆಚ್ಚಾಗಿದೆ ಸರಬರಾಜನ್ನು ನಿಧಾನಮಾಡಬೇಕೆಂದು ಮದರಾಸ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿಮಾಡಿದೆ.

ಡಾ|| ರಾಧಾಕೃಷ್ಣನ್ ಮದರಾಸಿನಲ್ಲಿ

ಡಾ|| ರಾಧಾಕೃಷ್ಣನ್‌ರವರು ಮಾಸ್ಕೋದಿಂದ ನಿನ್ನೆ ಬೊಂಬಾಯಿಗೆ ಆಗಮಿಸಿ ಮದರಾಸಿಗೆ ತೆರಳಿರುವರು.

ಅನರ್ಹತೆ

ಬೊಂಬಾಯಿ ಶಾಸನಸಭೆಗೆ ಗೃಹಸಚಿವ ಶ್ರೀ ಮೊರಾರ್ಜಿ ದೇಸಾಯಿಯವರ ಪ್ರತಿಸ್ಪರ್ಧಿಯಾಗಿ ಜಯಗಳಿಸಿದ ಸೋಷಲಿಸ್ಟ್ ಪಕ್ಷದ ಡಾ|| ಅಮುಲ್ ದೇಸಾಯಿಯವರು ನಿಗದಿಯಾದ ಕಾಲದಲ್ಲಿ ಚುನಾವಣಾ ಲೆಖ್ಖವನ್ನು ಒಪ್ಪಿಸಲಿಲ್ಲವೆಂಬ ಕಾರಣ ತಮ್ಮ ಸದಸ್ಯತ್ವವನ್ನು ಕಳೆದುಕೊಂಡು ೫ ವರ್ಷಕಾಲ ಉಮೇದುವಾರಿಕೆಗೆನಿಲ್ಲಲು ಅಥವಾ ಮತನೀಡಲು ಅನರ್ಹರಾಗಿದ್ದಾರೆ.

ಬಲ್‌ಸಾರ್ ಕ್ಷೇತ್ರದಿಂದ ಕಾಂಗ್ರೆಸ್ ಸ್ಪರ್ಧಿಯನ್ನು ಸೋಲಿಸಿದ ಶ್ರೀ ಮನುಬಾಯಿ ದೇಸಾಯಿಯವರೂ ಅನರ್ಹರಾಗಿರುವರು. ಬೊಂಬಾಯಿಪ್ರಾಂತ್ಯದಲ್ಲಿ ಈ ರೀತಿಯಾಗಿ ಒಟ್ಟು ೨೫ ಜನರು ಅನರ್ಹರಾಗಿದ್ದಾರೆ.

ಆಹಾರ ಮುಖ್ಯಾಧಿಕಾರಿಗಳಿಂದ ಪರಿಶೀಲನೆ

ಮೈಸೂರು ಏ ೧೪

ಮೈಸೂರು ಸಂಸ್ಥಾನದ ಆಹಾರಶಾಖಾ ಮುಖ್ಯಾಧಿಕಾರಿಗಳಾದ ಶ್ರೀ ಎಚ್ ಮಾಧವರಾಯ ಮೈಸೂರು ರೇಷನಿಂಗ್ ಆಫೀಸರ್ ಶ್ರೀ ವಿಜಯರಾಘವರೆಡ್ಡಿಯವ ರೊಡನೆ ನಗರದ ಕೆಲವು ರೇಷನ್ ಡಿಪೋಗಳಿಗೆ ಅನಿರೀಕ್ಷಿತ ಭೇಟಿಯಿತ್ತು, ಆಹಾರ ವಸ್ತುಗಳನ್ನು ಪರಿಶೀಲನೆ ನಡೆಸಿದರು.

ಮೈಸೂರು ನಗರದ ರೇಷನ್ ಡಿಪೋಗಳಲ್ಲಿ ಬೆಂಗಳೂರು ಡಿಪೋಗಳಿಗಿಂತ ಉತ್ತಮರೀತಿಯಲ್ಲಿ ಹೆಚ್ಚಾಗಿ ಕಲ್ಲು, ಮಣ್ಣುಗಳಿಲ್ಲದೆ ಆಹಾರವಸ್ತುಗಳನ್ನು ಕೊಡಲಾಗುತ್ತಿದೆ ಇನ್ನೂ ಉತ್ತಮಗೊಳಿಸಲು ಹೆಚ್ಚಿಗೆ ವ್ಯವಸ್ಥೆಮಾಡಬೇಕೆಂದು ಆಹಾರ ಡೈರೆಕ್ಟರ್ ಅಭಿಪ್ರಾಯಪಟ್ಟಿರುವುದಾಗಿ ತಿಳಿಯಬಂದಿದೆ.

ತತ್ವಶಾಸ್ತ್ರ ಕಾಂಗ್ರೆಸ್ ಅಧಿವೇಶನ

ಮೈಸೂರು ಏ ೪

ಭಾರತದ ತತ್ವಶಾಸ್ತ್ರ ಕಾಂಗ್ರೆಸ್ ಅಧಿವೇಶನವು ಡಿಸೆಂಬರ್ ೩ ನೇ ವಾರದಲ್ಲಿ ಮೈಸೂರಿನಲ್ಲಿ ನಡೆಯುತ್ತದೆ. ಪಾಶ್ಚಾತ್ಯ ಮತ್ತು ಪೌರಾತ್ಯ ದೇಶಗಳಿಂದ ಪ್ರತಿನಿಧಿಗಳು ಬರುವರು ಪಾಟ್ನಾ ವಿಶ್ವವಿದ್ಯಾನಿಲಯದ ಡಾ|| ಡಿ ಎಂ. ದತ್‌ರವರು ಅಧ್ಯಕ್ಷತೆ ವಹಿಸುವರು.

ಈಗಿನ ಪಾರ್ಲಿಮೆಂಟ್ ರದ್ದು

ಹೊಸ ಪಾರ್ಲಿಮೆಂಟ್ ಅಧಿವೇಶನ ನಡೆಯುವ ಬಗ್ಗೆ ರಾಷ್ಟ್ರಾಧ್ಯಕ್ಷರ ಆಜ್ಞೆಯು ಶುಕ್ರವಾರದಿನ ಹೊರಬೀಳುವುದೆಂದು ಹೇಳಲಾಗಿದೆ ಈ ಆಜ್ಞೆ ಹೊರಬಿದ್ದೊಡನೆಯೇ ಈಗಿರುವ ಪಾರ್ಲಿಮೆಂಟು ರದ್ದಾಗುತ್ತದೆ.

ಸೂರ್ಯಕಿರಣದಿಂದ ಅಡಿಗೆ

ಸೂರ್ಯಕಿರಣವನ್ನು ಅಡಿಗೆಮಾಡಲು ಉಪಯೋಗಿಸಲು ಒಂದು ಪ್ರಯೋಗವನ್ನು ಭಾರತದಲ್ಲಿರುವ ಭೌತಿಕ ಶಾಸ್ತ್ರಪ್ರಯೋಗಶಾಲೆಯು ಕಂಡುಹಿಡಿದಿದೆ. ನೂತನವಾದ ಒಂದು ಕುಕ್ಕರನ್ನು ತಯಾರಿಸಿ ಪ್ರಯತ್ನ ನಡೆದಿದೆ.

ರೈಲ್ವೆ ಮಂಡಲ

ಭಾರ. ರೈಲ್ವೆ ಪುನರ್‌ವರ್ಗೀಕರಣಯೋಜನೆಪ್ರಕಾರ ನಿನ್ನೆಯದಿನ ಉತ್ತರ, ಈಶಾನ್ಯ ಮತ್ತು ಪೂರ್ವ ರೈಲ್ವೆ ಮಂಡಲಗಳ ಸ್ಥಾಪನೆಯಾಯಿತು ರೈಲ್ವೆಮಂತ್ರಿ ಶ್ರೀ ಎನ್. ಜಿ. ಗೋಪಾಲಸ್ವಾಮಯ್ಯಂಗಾರ್‌ರವರು ಉದ್ಘಾಟನ ಮಾಡಿದ ಪಂ|| ನೆಹರೂರವರನ್ನು ಸ್ವಾಗತಿಸಿದರು.

ಉತ್ತರ ವಲಯದ ಕಛೇರಿಯು ದೆಹಲಿಯಲ್ಲಿ ಈಶಾನ್ಯದ ಕಛೇರಿಯು ಗೋರಕಪುರದಲ್ಲಿ, ಪೂರ್ವದ ಕಛೇರಿಯು ಕಲ್ಕತ್ತಾದಲ್ಲಿರುತ್ತವೆ. ೧೯೪೮ಕ್ಕೆ ಮುಂಚೆ ಭಾರತದಲ್ಲಿ ಒಟ್ಟು ೪೨ ವಿವಿಧ ರೈಲ್ವೆ ಕೇಂದ್ರಗಳಿದ್ದುವು. ಈಗ ಕೇವಲ ಆರು ವಲಯಗಳಿವೆ

೭೦೦೦೦ ಮಂದಿಗೆ ಮನೆಮಠಗಳಿಲ್ಲ

ಅಮೆರಿಕಾದಲ್ಲಿ ಮಿಸ್ಸೌರಿ ನದಿಯಲ್ಲಿ ವಿಶೇಷವಾಗಿ ಪ್ರವಾಹ ಬಂದು ಸುಮಾರು ೭೦೦೦೦ ಮಂದಿ ಮನೆಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ.

ಪುನಃ ಶಸ್ತ್ರೀಕರಣ ಯುದ್ಧಕ್ಕೆ ಮೂಲ

ಪುನಶಸ್ತ್ರೀಕರಣವು ಮತ್ತೊಂದು ಯುದ್ಧಕ್ಕೆ ಸಿದ್ಧವಾದಂತೆ ಎಂದು ಆಸ್ಟ್ರೇಲಿಯಾ ವಿರೋಧಪಕ್ಷ ಲೇಬರ್ ಪಾರ್ಟಿಯ ನಾಯಕ ಡಾ|| ಹರ್ಬೇಟ್ ಇವೆಟ್‌ರವರು ಹೇಳಿರುವರು

ಆರ್ಥಿಕ ಮಾತುಕತೆಗಳು

ಕೆಲವು ವರ್ಷಗಳಿಂದ ನಿರ್ಧಾರವಾಗದ ಆರ್ಥಿಕ ವಿಷಯಗಳಬಗ್ಗೆ ಭಾರತ-ಪಾಕೀಸ್ಥಾನಗಳ ಆರ್ಥಿಕ ಶಾಖಾಧಿಕಾರಿಗಳಿಗೆ ನಿನ್ನೆಯಿಂದ ಕರಾಚಿಯಲ್ಲಿ ಮಾತುಕತೆಗಳು ಪ್ರಾರಂಭವಾಗಿವೆ.

ಹತ್ತಿವ್ಯಾಪಾರ ನಿಲ್ಲಿಸಲಾಗಿದೆ

ಬೆಲೆಯು ಅಸ್ಥಿರಸ್ಥಿತಿಯಲ್ಲಿಯೇ ಇರುವುದರಿಂದ ಮಧ್ಯಪ್ರದೇಶದಲ್ಲಿ ಇದೇ ಮಾಹೆ ೨೦ ನೇ ತಾರೀಖಿನವರೆಗೆ ಹತ್ತಿವ್ಯಾಪಾರವನ್ನು ನಿಲ್ಲಿಸಲಾಗಿದೆ.

ಸ್ಪರ್ಧಿಸುವುದಿಲ್ಲ

ಜನರಲ್ ಮೆಕಾರ್ಥರ್‌ರವರು ತಾವು ಅಮೆರಿಕಾ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸುವುದಿಲ್ಲವೆಂದು ಹೇಳಿರುವರು.

ಕಾಂಗ್ರೆಸ್ಸಿಗರ ಮೇಲೆ ಶಿಸ್ತಿನ ಕಾರ್ಯಕ್ರಮ

ಬೆಂಗಳೂರು ಏ ೧೨

ಇತ್ತೀಚೆಗೆ ನಡೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿಗಳ ವಿರುದ್ಧ ಸ್ಪರ್ಧಿಸಿ, ಅಶಿಸ್ತಿನಿಂದ ವರ್ತಿಸಿದರೆಂಬ ಕಾರಣದ ಮೇಲೆ, ೩೩ ಮಂದಿ ಕಾಂಗ್ರೆಸ್ಸಿಗರು ಸಂಸ್ಥೆಯಿಂದ ೬ ವರ್ಷಗಳ ಕಾಲ ಸಸ್ಪೆಂಡ್ ಮಾಡಲ್ಪಟ್ಟಿದ್ದಾರೆ.

ಇಂದು ಮಧ್ಯಾಹ್ನ ನಡೆದ ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸಭೆ ಮೇಲಿನ ನಿರ್ಧಾರವನ್ನು ಕೈಗೊಂಡಿತು.

ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು,

ಚುನಾವಣೆಗಳ ಸಂಬಂಧದಲ್ಲಿ ಕಾಂಗ್ರೆಸ್ಸಿಗರ ವಿರುದ್ಧ ಬಂದಿರುವ ದೂರುಗಳನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸಲಾಯಿತು.

೧೯೩೮ರಲ್ಲಿ ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ನಡೆದ ಮದ್ದೂರು ಬಳಿಯಿರುವ ಶಿವಪುರದಲ್ಲಿ ಸ್ಮಾರಕವೊಂದನ್ನು ನಿರ್ಮಿಸಲು ಸಮಿತಿ ನಿರ್ಣಯಮಾಡಿ ಆ ಸಂಬಂಧದಲ್ಲಿ ಶ್ರೀಗಳಾದ ಎಸ್ ಚನ್ನಯ್ಯ, ಎಚ್ ಕೆ ವೀರಣ್ಣಗೌಡ, ತಿರುಮಲೇಗೌಡರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು

ಎಂ. ಪಿ. ಸಿ. ಸಿ. ಸಭೆ

ಮೇ ತಿಂಗಳ ಮೊದಲನೇ ವಾರದಲ್ಲಿ ಎಂ ಪಿ ಸಿ ಸಿ ಸಭೆ ಸಂಜನಗೂಡಿನಲ್ಲಿ ನಡೆಯುವುದು.

ಧಾನ್ಯದಲ್ಲಿ ಕಲ್ಲು, ಮಣ್ಣು ತಪ್ಪಿಸುತ್ತೇವೆ

ಬೆಂಗಳೂರು ಏ ೧೩

ಆಹಾರ ಧಾನ್ಯಗಳಲ್ಲಿ ಕಲ್ಲು, ಮಣ್ಣು ಇರುವುದನ್ನು ನಿಲ್ಲಿಸಲು ತಕ್ಕ ಕ್ರಮ ಕೈಗೊಳ್ಳುವುದಾಗಿ ಆಹಾರ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ನಿನ್ನೆ ತಿಳಿಸಿದರು.

ಬೆಳಗ್ಗೆ ಎಂ-ಪಿ-ಸಿ-ಸಿ- ಕಛೇರಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಸಚಿವರು ಆಹಾರ ನೀತಿ ಬಗ್ಗೆ ಮಾತನಾಡುತ್ತಾ ಆಹಾರ ಧಾನ್ಯಗಳಲ್ಲಿ ಕಲ್ಲು, ಮಣ್ಣು ಇರುವುದು ಎಲ್ಲರ ಗಮನಕ್ಕೂ ಬಂದಿರುವ ವಿಷಯ ಕೊಡುವುದೇ ಒಂದೂವರೆ ಸೇರು, ಅದರಲ್ಲಿ ಕಲ್ಲು, ಮಣ್ಣು, ಧೂಳು ಇರುವುದು ಅನ್ಯಾಯವಾದುದು. ಅನಿರೀಕ್ಷಿತ ಭೇಟಿಗಳು, ಮತ್ತಿತರ ಕ್ರಮಗಳ ಮೂಲಕ, ಧಾನ್ಯಗಳ ಬೆಲೆ ಮತ್ತು ಸರಿಯಾದ ಅಳತೆಯಲ್ಲಿರುವ ಲೋಪಗಳನ್ನು ಕಡಿಮೆ ಮಾಡಬೇಕೆಂದು ಆಹಾರ ಇನ್ಸ್‌ಪೆಕ್ಟರ್, ಮತ್ತಿತರಿಗೆ ಕಟುವಾದ ಸೂಚನೆಗಳನ್ನಿತ್ತಿದ್ದೇವೆ ಎಂದೂ ತಿಳಿಸಿದರು.

ಮುಖ್ಯ ಮಂತ್ರಿಗಳ ಅಧಿಕೃತನಿವಾಸ

ಬೆಂಗಳೂರು ಏ ೧೩

ಹೈಗ್ರೌಂಡಿನಲ್ಲಿರುವ 'ಕುಮಾರಾಪಾರ್ಕ್' ಭವನವನ್ನು ತಮ್ಮ ಅಧಿಕೃತ ನಿವಾಸವನ್ನಾಗಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಆರಿಸಿಕೊಂಡಿದ್ದಾರೆ.

ಇಲ್ಲಿಯ ವರೆಗೆ ಕುಮಾರಾಪಾರ್ಕ್ ಅತಿಥಿಗಳ ಬಿಡಾರವಾಗಿತ್ತು.

ಇಲ್ಲಿಯವರೆ ದಿವಾನರ ಮತ್ತು ಮುಖ್ಯ ಮಂತ್ರಿಗಳ ಅಧಿಕೃತನಿವಾಸವಾಗಿದ್ದ ಕಾರ್ಲ್‌ಟನ್ ಭವನವನ್ನು ಶಾಸನಸಭಾ ಸದಸ್ಯರ ಕ್ಲಬ್'ಹೌಸ್' ಆಗಿ ಮಾರ್ಪಡಿಸಲಾಗುವುದೆಂದ ತಿಳಿದುಬಂದಿದೆ.

ಕಾಂಗ್ರೆಸ್ ಸ್ಪರ್ಧಿಯಲ್ಲ

ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಹರಲಾಲ್ ನೆಹರೂರವರು ಒಂದು ಹೇಳಿಕೆ ಹೊರಡಿಸಿ ಡಾ॥ ರಾಜೇಂದ್ರಪ್ರಸಾದರನ್ನು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಉಮೇದುವಾರರನ್ನಾಗಿ ನಿಲ್ಲಿಸಿಲ್ಲವೆಂದೂ ಅವರು ರಾಷ್ಟ್ರವ್ಯಕ್ತಿಯೆಂದೂ ಎಲ್ಲರೂ ಅವರಿಗೆ ಓಟುಮಾಡಬೇಕೆಂದೂ ಕೋರಿದ್ದಾರೆ.

ಗಡಿನಾಡು ಗಾಂಧಿಗೆ ಶಸ್ತ್ರಚಿಕಿತ್ಸೆ

ಗಡಿನಾಡಿನ ಕೆಂಪು ಅಂಗಿ ನಾಯಕರಾದ ಖಾನ್ ಅಬ್ದುಲ್ ಗಫಾರ್ ಖಾನರವರಿಗೆ ಮೂತ್ರದ್ವಾರಕ್ಕೆ ಸಂಬಂಧಿಸಿದ ತೊಂದರೆಗಾಗಿ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಗಡಿನಾಡಿನ ಗಾಂಧಿಯೆಂದು ಹೆಸರು ಪಡೆದ ಖಾನರವರನ್ನು ಪಾಕಿಸ್ತಾನ ಸರ್ಕಾರ ಇನ್ನೂ ಜೈಲಿನಲ್ಲಿಯೇ ಇಟ್ಟಿದೆ

ಶಸ್ತ್ರಕ್ರಿಯೆಯು ತೃಪ್ತಿಕರವಾಗಿ ನಡೆಯಿತೆಂದೂ ಕಳವಳಕರ ಪರಿಸ್ಥಿತಿಯೇನೂ ಇಲ್ಲವೆಂದೂ ಖಾನ್ ಅಬ್ದುಲ್ ಗಫಾರ್ ಖಾನರವರ ಆರೋಗ್ಯ ಸ್ಥಿತಿಯು ತೃಪ್ತಿಕರವಾಗಿದೆಯೆಂದೂ ಈ ಸಂಬಂಧದಲ್ಲಿ ಹೊರಬಿದ್ದ ಅಧಿಕೃತ ಪ್ರಕಟನೆಯೊಂದು ತಿಳಿಸುತ್ತದೆ

ಭಾರತ--ನೇಪಾಳ ಸೌಹಾರ್ದ್ಯ ಅತ್ಯಗತ್ಯ

ನೇಪಾಳದ ಸಾರ್ವತ್ರಿಕ ಅಭಿವೃದ್ಧಿಗೆ ಭಾರತದ ಪೂರ್ಣ ನೆರವು ಅಗತ್ಯವಾದ್ದರಿಂದ, ಭಾರತ-ನೇಪಾಳ ಸಂಬಂಧವನ್ನು ಭದ್ರಗೊಳಿಸಲು ಜನತೆ ಸಹಕರಿಸಬೇಕೆಂದು ರಾಜಾತ್ರಿಭುವನರು ಪ್ರಾರ್ಥಿಸಿದ್ದಾರೆ.

ವಿದ್ಯಾ ಮಾರ್ತಾಂಡ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರಿಗೆ 'ವಿದ್ಯಾ ಮಾರ್ತಾಂಡ' ಎಂಬ ಪ್ರಶಸ್ತಿಯನ್ನರ್ಪಿಸಲು ಬಿಹಾರದ ಸಂಸ್ಕೃತ ಸಂಘವು ನಿರ್ಧರಿಸಿದೆ.

ಪಾರ್ಲಿಮೆಂಟ್ ವ್ಯವಹಾರ

ಪಾರ್ಲಿಮೆಂಟಿಗೆ ಸಂಬಂಧಪಟ್ಟ ಕಾಗದ ಪತ್ರಗಳು, ಪ್ರಕಟಣೆ, ಹಂಚಿಕೆ, ಮೊದಲಾದ ಮುಂತಾದುವಕ್ಕೆ ಪಾರ್ಲಿಮೆಂಟ್ ಸ್ಪೀಕರು ಅನುಮತಿ ಕೊಡಬಹುದು ಸದಸ್ಯರು ರಾಜೀನಾಮೆಯಿತ್ತಾಗ ಕಾರಣವನ್ನು ಸಮೂಹ ಸಬೇಕಾಗಿಲ್ಲ. ಹಾಗೆ ನಮೂದಿಸಿದರೂ ಅದನ್ನು ಸಭೆಯಲ್ಲಿ ತಿಳಿಸಬೇಕಾಗಿಲ್ಲ

ಸ್ಟ್ಯಾಂಡಿಂಗ್ ಕಮಿಟಿ ವರದಿಗಳಿಗೆ ಕಮಿಟಿಯ ಸದಸ್ಯರೆಲ್ಲಾ ಅದಕ್ಕೆ ಸಹಿಹಾಕಬೇಕಾಗಿಲ್ಲ. ಛೇರ್ಮನ್ನರೊಬ್ಬರ ರುಜುವಿದ್ದರೆ ಸಾಕು. ಹಾಗೆ ಅವರ ರುಜುವನ್ನು ಪಡೆಯಲು ಸಾಧ್ಯವಾಗದಿದ್ದರೆ ಸದಸ್ಯರಲ್ಲೊಬ್ಬರು ರುಜು ಹಾಕಬಹುದೆಂದು ಪಾರ್ಲಿಮೆಂಟ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಪ್ರಕಟಣೆ ಹೊರಬಿದ್ದಿದೆ.

ಪರಿಹಾರವಿಲ್ಲದೆ ಜಾಗಿರ್ದಾರಿ ರದ್ದು

ಭೂಪಾಲಿನಲ್ಲಿ ಪರಿಹಾರವಿಲ್ಲದೆ ಜಾಗಿರ್ದಾರಿ ಪದ್ಧತಿಯನ್ನು ರದ್ದುಮಾಡಲಾಗುವುದೆಂದು ಸಚಿವ ವಲಯಗಳಿಂದ ತಿಳಿದು ಬಂದಿದೆ.

ಹತೋಟಿ ಯಾವಾಗ ರದ್ದು?

ಬೆಂಗಳೂರು ಏ ೧೨

ಪ್ರಾಂತ್ಯದಲ್ಲಿ ಹತೋಟಿಗಳನ್ನು ಪೂರ್ಣವಾಗಿ ರದ್ದುಗೊಳಿಸಬೇಕೆಂಬುದೇ ಸರ್ಕಾರದ ನೀತಿ, ಆದರೆ ಅದನ್ನು ತಕ್ಷಣ ಜಾರಿಗೆ ತರಲು ಸಾಧ್ಯವಿಲ್ಲ ಸ್ವಲ್ಪಕಾಲಾವಕಾಶಬೇಕೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೇಳಿರುವರು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು (ಸೀತಾವಿಲಾಸ ಅಗ್ರಹಾರದ ಹಿಂಬಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ವಿದೇಶಗಳೊಡನೆ ೧೬೦ ದಶ ಲಕ್ಷ ಡಾಲರ್‌ಗಳ ವ್ಯಾಪಾರ

ಮಾಸ್ಕೋ ನಗರದಲ್ಲಿ ನಡೆದ ಅಂತರಾಷ್ಟ್ರೀಯ ಆರ್ಥಿಕ ಸಮ್ಮೇಳನದಲ್ಲಿ ಚೀಣಾದ ಪ್ರತಿನಿಧಿಗಳು ವಿದೇಶಿ ವ್ಯಾಪಾರಿಗಳೊಡನೆ ೧೬೦ ದಶಲಕ್ಷ ಡಾಲರುಗಳ ಒಪ್ಪಂದವನ್ನು ಮಾಡಿಕೊಂಡಿದ್ದಾರೆಂದು ಹೇಳಲಾಗಿದೆ.

ಪೇಟೆ ಧಾರಣೆ

ಮೈಸೂರು ತಾ॥ 14-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಕ್ಕೆ	11-8	17-12
ಹೊಂಗೆಬೀಜ	,,	12-0	12-14
ಹುರುಳಿ	,,	30-0	31-14
ಹೆಸರು	,,	52.14	62-4
ಮೆ. ಕಾಯಿ	ಮಣಕ್ಕೆ	10-2	15-0
ಹುಣಸೇಹಣ್ಣು	,,	2-0	3-12
ಸೀಗೆಕಾಯಿ	,,	3-4	3-9
ತೆಂಗಿನಕಾಯಿ	1100ಕ್ಕೆ	144	252

ಚಿನ್ನ ಬೆಳ್ಳಿ ದರಗಳು

14-4-52	ರೂ.
ಸವರನ್	66-2
,,	66-4
ಚಿನ್ನ ತೊಲ	92-4
,, ಮೂಸ	91-0
ಬೆಳ್ಳಿ 100 ತೊಲ	163-0
,, ತೊಲ	1-12

ನ್ಯೂಅಪೇರ

೧೩-೪-೫೨ ರಿಂದ ಅಮೋಘಪ್ರಾರಂಭ

* ಕುಮಾರಿ * (ತಮಿಳು)

ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜಿನಿ (ಜೂ), ಶಾಮು, ದೊರೆರಾಜ್, ಪುಳಿಮೂಟ್ಟೆ.

ವುಡ್‌ಲ್ಯಾಂಡ್ಸ್

೧೧-೪-೫೨ ರಿಂದ ದಿನವಹಿ ೩ ಆಟಗಳು

- ಬೇತಾಬ್ - (ಹಿಂದಿ)

ಪಾತ್ರ:-ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ೩ ವಾರ ಮನ್ನಾ ಮಾಡಿರುತ್ತೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯುರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೦೦೯) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೬ ೪—೧೯೫೨ನೇ ಬುಧವಾರ [ಸಂಚಿಕೆ ೧೯೩

ಸರ್ಕಾರಿ ಕಛೇರಿಗಳು ಅನ್ನ-ಛತ್ರಗಳಲ್ಲ

ಆಹಾರ ಇಲಾಖೆಯಲ್ಲಿ ನೌಕರರನ್ನು ಹೆಚ್ಚಾಗಿ ತೆಗೆದು ಹಾಕಲಾಗುತ್ತದೆ

ಮುಖ್ಯಮಂತ್ರಿಗಳ ಆಗಮನ

ಮೈಸೂರು ಏ ೧೫

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇಂದು ಮಧ್ಯಾಹ್ನ ೪-೩೦ ಗಂಟೆಗೆ ರಾಜಧಾನಿಗೆ ಆಗಮಿಸಿದರು.

ಆಹಾರ ಅಭಾವ ಪ್ರದೇಶಕ್ಕೆ ಜ॥ ಕಾರಿಯಪ್ಪನವರ ಭೇಟಿ

ಮದರಾಸಿನ ಆಹಾರಾಭಾವ ಪ್ರದೇಶಗಳನ್ನು ಸೇನಾನಿ ಜ॥ ಕಾರಿಯಪ್ಪನವರು ಪರಿಶೀಲಿಸುತ್ತಿರುವರು ಅವರು ಹಳ್ಳಿಯೊಂದರಲ್ಲಿ ಮಾತನಾಡುತ್ತಾ, ಅಭಾವಪ ದೇಶಗಳಲ್ಲಿ ಮುಖ್ಯವಾದುದು ನೀರಿನ ಅಭಾವ ಸೈನ್ಯವು ಬಾವಿಗಳನ್ನು ತೆಗೆದು ನೀರನ್ನು ಒದಗಿಸಲು ಕನಿಷ್ಟಪಕ್ಷ ೪ ತಿಂಗಳಾಗುವುದೆಂದೂ, ಈಗಾಗಲೆ ೧೩೮೦೦೦ ನೀರಿನ ಟ್ಯಾಂಕ್‌ಗಳನ್ನು ಮಿಲಿಟರಿಯು ಒದಗಿಸಿದೆಯೆಂದೂ ಇನ್ನೂ ಭಾರತ ಇತರ ಕಡೆಗಳಿಂದ ಸೈನ್ಯವನ್ನು ರಾಯಲಸೀಮ ಪ್ರದೇಶಕ್ಕೆ ಕಳುಹಿಸಲಾಗುವುದೆಂದೂ, ತಿಳಿಸಿದರು.

ಸಕ್ಕರೆ ರಫ್ತಿಗೆ ಅನುಮತಿ ಕೊಡಲಾಗುವುದು

ಕೇಂದ್ರಸರ್ಕಾರವು ಪ್ರಕಟಣೆಯೊಂದು ಹೊರಡಿಸಿ ಉತ್ತರಪ್ರದೇಶ, ಮದರಾಸ್ ಮತ್ತು ಬೊಂಬಾಯಿಗಳಿಂದ ೫೦೦೦೦ ಟನ್ ವರೆವಿಗೂ ರಫ್ತುಮಾಡಲು ಸಕ್ಕರೆ ಕಂಪೆನಿಗಳಿಗೆ ಅನುಮತಿ ಕೊಡಲಾಗುವುದು. ರಫ್ತುಮಾಡಲು ತಮ್ಮ ಸ್ವಂತ ವ್ಯವಸ್ಥೆಮಾಡಿಕೊಳ್ಳುವವರು ಕೇಂದ್ರ, ಆಹಾರಮಂತ್ರಿ, ಯವರಿಗೆ ಬರೆದು ಅಪ್ಪಣೆ ಪಡೆಯಬಹುದೆಂದು ಹೇಳಲಾಗಿದೆ

ಪ್ರಭಾ ಟಾಕೀಸ್

18—4—52 ರಿಂದ

ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ನವಕೇತನ್‌ರವರ ಅತ್ಯುತ್ತಮ ಸಾಮಾಜಿಕ ಹಿಂದೀ ಚಿತ್ರ

.... ಬಾಜಿ ....

ಪಾತ್ರ—ದೇವಾನಂದ್, ಗೀತಾಬಾಲಿ, ಕಲ್ಪನಾಕಾರ್ತಿಕ್

ಈಗ ಪ್ರದರ್ಶಿಸಲ್ಪಡುತ್ತಿದೆ— ಪಾಲ್‌ಜಿಲ್ಸ್‌ರವರ— ಜಲ್‌ಜಲಾ

ಶ್ರೀಮನ್ಮಹಾರಾಜರ ಮೆಚ್ಚುಗೆ

ಬೆಂಗಳೂರು ಏ ೧೫

ಮೈಸೂರುಸೈನ್ಯವು ಭಾರತ ಸೈನ್ಯದೊಡನೆ ವಿಲೀನೀಕರಣವಾದ ಸಂಬಂಧವಾಗಿ ಬೆಂಗಳೂರು ಸ್ಟೇಡಿಯಂನಲ್ಲಿ ಪೆರೇಡು ನಡೆಯಿತು. ಮುಖ್ಯಮಂತ್ರಿ, ಶ್ರೀ ಕೆ. ಹನುಮಂತಯ್ಯನವರು ಸೆಲ್ಯೂಟ್ ಸ್ವೀಕರಿಸಿದರು

ಈ ಸಂದರ್ಭದಲ್ಲಿ ಶ್ರೀಮನ್ಮಹಾರಾಜರು ಒಂದು ಸಂದೇಶವನ್ನು ಕಳುಹಿಸಿ ಮೈಸೂರು ಇನ್‌ಫೆಂಟ್ರಿಯು ಇಲ್ಲಿಯವರೆ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿರುವರು ಈಗ ಈ ಸೈನ್ಯಕ್ಕೆ ಸೇವೆಗೈಯಲು ಕ್ಷೇತ್ರ ವಿಶಾಲವಾಗಿದೆ ಹೆಚ್ಚು ಸೇವೆಗೈದು ಯಶಸ್ವಿಯಾಗಿ ಬೆಳಗಲೆಂದು ಹೇಳಿರುವರು.

ಮುಖ್ಯಮಂತ್ರಿಗಳು ಮಾತನಾಡುತ್ತಾ, ಈ ಸೈನ್ಯವು ಹೆಚ್ಚಿಗೆ ದಕ್ಷತೆ ಬೆಳಗಲೆಂದು ಆಶಿಸಿದರು ಮೈಸೂರು ಸರ್ಕಾರದಪರವಾಗಿ ಒಂದು ಶೀಲ್ಡನ್ನು ಕೊಡಲಾಯಿತು.

ಕೇಂದ್ರ ಆಹಾರ ಸಂಶೋಧನಾಸಂಸ್ಥೆಗೆ ಭೇಟಿ

ಮೈಸೂರು ಏ ೧೫.

ದೇಶದಲ್ಲಿಯುವ ಯುನೆಸ್ಕೋವಿನ ಸೈನ್ಸ್ ಕೊ ಆಪರೇಷನ್ ಆಫೀಸಿನ ಡೈರೆಕ್ಟರ್ ಡಾ॥ ಕಾರಲ್‌ಬ್ರಾಟ್‌ರವರು ಈ ದಿನ ಬೆಳಗ್ಗೆ ಆಹಾರಕೇಂದ್ರಕ್ಕೆ ಭೇಟಿಯಿತ್ತು, ಅಲ್ಲಿಯ ಕಾರ್ಖಾನೆಗಳನ್ನು ಸುಮಾರು ೩ ಗಂಟೆಗಳಕಾಲ ಪರಿಶೀಲಿಸಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತಾ, ಅಧಿಕಪ್ರಮಾಣದಲ್ಲಿ ಯಾರಕೆ ನಡೆಯುವಂತೆ ಕೈಗಾರಿಕ ಸಂಸ್ಥೆಗಳಿಗೆ ಹೊಸವಸ್ತು ತಯಾರಿಕ ಕಾರ್ಯವನ್ನು ವಹಿಸುವುದೊಂದೆ ಬಾಕಿಯೆಂದು ಹೇಳಿದರು.

ಈ ಕೇಂದ್ರದಲ್ಲಿ ನಡೆಸುತ್ತಿರುವ ಕಾರ್ಯವು ಭಾರತಕ್ಕೇ ಅಲ್ಲದೆ ಇತರ ದೇಶಗಳಿಗೂ ಸಹಾಯವಾಗುತ್ತದೆ ಎಂದು ಅವರು ಹೇಳಿರುವರು.

ವಿದ್ಯಾಸಚಿವರು ಮೈಸೂರಿಗೆ

ಮೈಸೂರು ಏ ೧೫

ಆಗ್ನೇಯ ಏಷ್ಯಾ ವಿದ್ಯಾ ಶಿಕ್ಷಣ ಕೇಂದ್ರವನ್ನು ಮೈಸೂರಿನಲ್ಲಿ ಸ್ಥಾಪಿಸಲು ಸ್ಥಳ ಪರಿಶೀಲನೆಗಾಗಿ ವಿದ್ಯಾಸಚಿವ ಶ್ರೀ ಎ. ಜಿ ರಾಮಚಂದ ರಾಯರು ಮೈಸೂರಿಗೆ ಆಗಮಿಸಿರುವರು.

ಉಪಮಂತ್ರಿಗಳ ನೇಮಕ

ಮೈಸೂರು ಏ ೧೫

ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಆರಾತ್ರಿ, ಪತ್ರಿಕೋದ್ಯೋಗಿಗಳು ಭೇಟಿಮಾಡಿದಾಗ ಉಪಮಂತ್ರಿಗಳ ನೇಮಕದಬಗ್ಗೆ ಪ್ರಶ್ನಿಸಲಾಗಿ ಹಿರಿಯ ಶಾಸನಸಭೆಯ ಚುನಾವಣೆಯು ಪೂರಾ, ಅದಮೇಲೆ ಉಪಮಂತ್ರಿಗಳ ನೇಮಕ ಮಾಡಿಕೊಳ್ಳಲಾಗುತ್ತದೆ ಎಂದೂ, ದರ್ಸ್ರು ಅಲ್ಲಿದ್ದರೆ ಆ ಸಭೆಯಿಂದಲೂ ಉಪಮಂತ್ರಿಗಳನ್ನು ತೆಗೆದುಕೊಳ್ಳಲು ಅಭ್ಯಂತರವೇನೂ ಇಲ್ಲವೆಂದು ಹೇಳಿದರು.

ಶ್ರೀಮನ್ಮಹಾರಾಜರ ಅಮೇರಿಕಾ ಪ್ರವಾಸ

ಸದ್ಯದಲ್ಲಿ ಶ್ರೀಮನ್ಮಹಾರಾಜರು ಅಮೇರಿಕಾ ಪ್ರವಾಸವನ್ನು ಕೈಗೊಳ್ಳಲಿರುವರು. ಆ ಕಾಲದಲ್ಲಿ ರಾಜಪ್ರಮುಖರ ಕಾರ್ಯವನ್ನು ಯಾರು ಮಾಡುವರೆಂದು ಕೇಳಿದ್ದಕ್ಕೆ ಶ್ರೀಮನ್ಮಹಾರಾಜರು ಯಾರನ್ನು ನೇಮಕಮಾಡಬೇಕೆಂದು ಇಷ್ಟಪಡುತ್ತಾರೋ ಅವರನ್ನು ನೇಮಕಮಾಡಲು ಸಚಿವ ಮಂಡಲದ ಅಭ್ಯಂತರವೇನೂ ಇಲ್ಲವೆಂದು ಮುಖ್ಯಮಂತ್ರಿಗಳು ತಿಳಿಸಿದರು.

ಸರ್ಕಾರ ಕಛೇರಿಗಳು ಅನ್ನಛತ್ರವಲ್ಲ

ಸರ್ಕಾರದ ಆದಾಯ ಖರ್ಚನ್ನು ಸಮದೂಗಿಸಲು ಎಲ್ಲಾ ಇಲಾಖೆಗಳಲ್ಲೂ ಅನೇಕರನ್ನು ಕೆಲಸದಿಂದ ತೆಗೆದ ಹಾಕಲಾಗುತ್ತದೆ ಇದು ಸಣ್ಣ ಪುಟ್ಟ ನೌಕರಿಗೆ ಮಾತ್ರವಲ್ಲ ಅಧಿಕಾರಿಗಳಿಗೂ ಅನ್ವಯಿಸುತ್ತದೆ. ಸರ್ಕಾರಿ ಕಛೇರಿಗಳು ಅನ್ನಛತ್ರಗಳಲ್ಲ. ಆಹಾರ ಇಲಾಖೆಯಲ್ಲಿ ಹೆಚ್ಚಾಗಿ ನೌಕರರನ್ನು ತೆಗೆದುಹಾಕಲಾಗುತ್ತದೆಯೆಂದು ಮುಖ್ಯಮಂತ್ರಿಗಳ ಹೇಳಿದರು. ಅಲ್ಲದೆ ಹೊಸ ಮಂತ್ರಿಮಂಡಲ ಬಂದು ಬಂದು ವಾರದೊಳಗಾಗಿಯೇ ಸರ್ಕಾರಿ ನೌಕರರ ಸಂಖ್ಯೆಯನ್ನು ಕೆಲವೆಡೆ ಕಡಿಮೆ ಮಾಡಿದೆಯೆಂದು ತಿಳಿಸಿದರು.

ಗೋಧಿ ಬೆಲೆ ಕಮ್ಮಿಯಾಯಿತು

ಪಂಜಾಬಿನಲ್ಲಿ ಗೋಧಿಯ ಬೆಲೆಯನ್ನು ಮಣಕ್ಕೆ, ಪಟ್ಟಣಗಳಲ್ಲಿ ೭ ಆಣೆ ೮ ಕಾಸು, ಹಳ್ಳಿಯ ಕಡೆಗಳಲ್ಲಿ ೭ ಆಣೆಯಂತೆಯೂ ಕಮ್ಮಿ ಮಾಡಲಾಗಿದೆ.

‡ ಲಾಹೋರಿನಲ್ಲಿ ಮುಸ್ಲಿಂ ಲೀಗಿನ ಇಬ್ಬರು ಪ್ರಮುಖ ವರ್ತಕರನ್ನು ಪಾಕಿಸ್ತಾನ ಸರ್ಕಾರವು ದಸ್ತಗಿರಿ ಮಾಡಿದೆ. ಕಾರಣ ತಿಳಿಸಿಲ್ಲ.

ಮುಖ್ಯಮಂತ್ರಿಗಳಲ್ಲಿ ನಿಯೋಗ

ಮೈಸೂರು ಏ ೧೫

ಮೈಸೂರು ನಗರ ರೇಷನ್ ಕಾರ್ಡುದಾರರ ಸಂಘದ ಪ್ರತಿನಿಧಿಗಳು ಇದಿನ ಮುಖ್ಯಮಂತ್ರಿಗಳ ಬಳಿ ನಿಯೋಗ ಹೋಗಿ ಆಹಾರ ಬೆಲೆ ಹೆಚ್ಚಿಸಿರುವುದನ್ನು ತಪ್ಪಿಸಲು ಈ ಸಲಹೆಗಳನ್ನಿತ್ತರು.

೧ ಶಾಸನನಿರೋಧ ನಿಲ್ಲಿಸುವುದು.

೨ ಗ್ರಾಮಾಭಿವೃದ್ಧಿ ಇಲಾಖಾ, ವ್ಯವಸಾಯ ಇಲಾಖಾ, ಕಾರ್ಮಿಕ ಇಲಾಖೆಗಳನ್ನು ರದ್ದುಗೊಳಿಸುವುದು.

೩ ಕಡಲೇಕಾಯಿಯ ಮೇಲೆ ರಫ್ತು ಸುಂಕ ವಿಧಿಸುವುದು-

೪ ಉಪಮಂತ್ರಿಗಳ ನೇಮಕ ನಿಲ್ಲಿಸುವುದು,

ಈ ಬಾಬ್ತುಗಳಿಂದ ಬರುವ ಹಣವನ್ನು ಆಹಾರ ಸಬ್ಸಿಡಿಗೆ ಉಪಯೋಗಿಸಿಕೊಂಡು ಆಹಾರಬೆಲೆ ಹೆಚ್ಚಿಸಿರುವುದನ್ನು ತಪ್ಪಿಸುವುದು-

ಈ ಸಲಹೆಗಳನ್ನು ಪಕ್ಷದ ಸಭೆ ಮತ್ತು ಮಂತ್ರಿಮಂಡಲ ಸಭೆಗಳಲ್ಲಿ ಪರಿಶೀಲಿಸಲಾಗುತ್ತದೆಯೆಂದು ಮುಖ್ಯಮಂತ್ರಿಗಳು ತಿಳಿಸಿದರು-

ಮಾಡಲ್ ಸರ್ವೆ

ವಿಶ್ವವಿದ್ಯಾಲಯದ ಮಹಿಳೆಯರ ಭಾರತೀಯ ಫೆಡರೇಷನ್‌ರವರು ಭಾರತಾದ್ಯಂತ ಇರುವ ಕಾರ್ಮಿಕ ಮಹಿಳೆಯರ ಹಾಗೂ ಇತರ ಮಹಿಳೆಯರ ಕಷ್ಟಸುಖಗಳ ಜೀವನ ಪದ್ಧತಿಯನ್ನು ರೆಕಾರ್ಡ್‌ಮಾಡಲು ಮತ್ತು ಪರಿಶೀಲನೆ ನಡೆಸುವ ಯೋಚಿಸುತ್ತಿದ್ದಾರೆ ಹೀಗೆ ಮಾಡುವುದರಿಂದ ಮಧ್ಯಮವರ್ಗದವರ ಸರಿಯಾದ ಜೀವನ ವೆಚ್ಚದ ಅಂಕಿ-ಅಂಶಗಳೂ ದೊರೆಯುವುವೆಂದು ಭಾವಿಸಿದ್ದಾರೆ.

ಶಾಸನಸಭಾಧಿವೇಶನ

ಮದ್ರಾಸ್ ಕಿರಿಯ ಶಾಸನಸಭೆಯು ಮೇ ೩, ಹಿರಿಯ ಶಾಸನಸಭೆಯು ಮೇ ೫ ರಲ್ಲಿ ಸೇರುತ್ತದೆ ೭ನೇ ತಾ॥ ಗೌರ್ನರ್‌ರವರು ಭಾಷಣಮಾಡುವ ನಿರೀಕ್ಷೆಯಿದೆ.

ಶ್ರೀ ಪಂತರಿಂದ ಪರಿಶೀಲನೆ

ಉತ್ತರಪ್ರದೇಶದ ಮುಖ್ಯಮಂತ್ರಿ ಶ್ರೀ ಗೋವಿಂದ್‌ವಲ್ಲಭ್ ಪಂತ್‌ರವರು ಆ ರಾಜ್ಯದ ಆಹಾರ ಅಭಾವ ಜಾಗಗಳನ್ನು ಪರಿಶೀಲಿಸಲು ನಿನ್ನೆ ಲಕ್ನೋವಿನಿಂದ ಹೊರಟರು,

ಪಾನ ನಿರೋಧ ರದ್ದುಗೊಳಿಸಲು ಸಾಧ್ಯವಿಲ್ಲ

ಬೆಂಗಳೂರು ಏ ೧೫

ನೂತನ ಆಹಾರ ನೀತಿಗಳಿಂದ 'ಒದಗಿಸಿರುವ ಸೌಲಭ್ಯಗಳನ್ನು, ವರ್ತಕರಾಗಲೀ, ಜನರಾಗಲೀ, ಸರ್ಕಾರಿ ಅಧಿಕಾರಿಗಳಾಗಲೀ, ದುರುಪಯೋಗಪಡಿಸಿಕೊಂಡಲ್ಲಿ ಹ ಕೋಟೆಗಳು ಮತ್ತೆ ಬಂದು ನಮ್ಮ ಕೈಕಾಲುಗಳನ್ನು ಕಟ್ಟಲು ಆರಂಭಿಸುತ್ತವೆ' ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಸಂಜೆ ರಾಷ್ಟ್ರೀಯ ವಿದ್ಯಾಲಯದಲ್ಲಿ ನಡೆದ ಅಭಿನಂದನಾ ಸಭೆಯಲ್ಲಿ ತಿಳಿಸಿದರು.

ಪಾನನಿರೋಧ ನೀತಿ ಮಾರ್ಪಾಡಾಗಬೇಕೆಂಬ ಸಲಹೆಯನ್ನು ಪ್ರಸ್ತಾಪಿಸಿ 'ಮುಂದಿನ ಕಾಂಗ್ರೆಸ್ ಸಮಿತಿಯಲ್ಲಿ ಅಥವಾ ಸಮ್ಮೇಳನದಲ್ಲಿ ಚರ್ಚೆಗೆ ಇಟ್ಟುಕೊಳ್ಳೋಣ, ಅಭಿಪ್ರಾಯ ಹೇಗೆ ಬರುತ್ತೋ ನೋಡೋಣ' ಎಂದರು.

ಸಬ್ಸಿಡಿಗಾಗಿ.... 'ಪಾನನಿರೋಧವನ್ನು ರದ್ದುಗೊಳಿಸಿ, ಬರುವ ಆದಾಯವನ್ನು ಸಬ್ಸಿಡಿಗಾಗಿ ಉಪಯೋಗಿಸಿ' ಎಂದಿರುವ ಸಲಹೆಯನ್ನು ಪ್ರಸ್ತಾಪಿಸಿ, ಆ ಸಲಹೆಯನ್ನು 'ಅನಾಗರೀಕ ಸಲಹೆ' ಯೆಂದು ಕರೆದು, ಹರಿಜನರು ಹೆಚ್ಚು ಕುಡಿಯುವವರೆಂದು ತಿಳಿಸಿ, ಅವರಿಂದ ಕಾಸು ಕಿತ್ತುಕೊಂಡು ಸಬ್ಸಿಡಿಗೆ ಉಪಯೋಗಿಸಿ-ಅಂದರೆ, ಕಾಂಗ್ರೆಸ್ ಸಂಸ್ಥೆ ಅಳಿದರೂ, ನಮ್ಮ ಮಂತ್ರಿ ಪದವಿಗಳು ಗಾಳಿಪಟವಾಗಿ ಹೋದರೂ ಚಿಂತೆಯಿಲ್ಲ. ಆ ನೀತಿ ಅನುಸರಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು.

ದೆಹಲಿಗೆ ಮುಖ್ಯಮಂತ್ರಿಗಳು

ಬೆಂಗಳೂರು ಏ ೧೫

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಸಧ್ಯದಲ್ಲೇ ದೆಹಲಿಗೆ ಹೋಗಿ ಮೈಸೂರು ಸರ್ಕಾರದ ನೂತನ ಆಹಾರ ನೀತಿ ಬಗ್ಗೆ ಕೇಂದ್ರದ ಅಭಿಪ್ರಾಯ, ಹೆಚ್ಚು ಆಹಾರ ಪಡೆಯುವುದು, ಸಬ್ಸಿಡಿ ಮೊದಲಾದ ವಿಷಯಗಳ ಬಗ್ಗೆ ಕೇಂದ್ರದೊಡನೆ ಮಾತುಕತೆ ನಡೆಸುವರೆಂದು ಗೊತ್ತಾಗಿದೆ.

ರೇಷ್ಮೆ ಪವರ್‌ಲೂಂ ಕಾರ್ಖಾನೆಗಳು ಬಂದು

ಬೆಂಗಳೂರು ಏ. ೧೫

ಮಾರ್ಕೆಟ್ ಪರಿಸ್ಥಿತಿ ಉತ್ತಮಗೊಳ್ಳುವವರೆಗೆ ಸಂಸ್ಥಾನದಲ್ಲಿರುವ ರೇಷ್ಮೆ ಪವರ್‌ಲೂಂ ಫ್ಯಾಕ್ಟರಿಗಳು ಮೇ ೧ನೇ ತಾ|| ನಿಂದ ಮುಚ್ಚಬೇಕೆಂದು ೧೧ನೇ ತಾ|| ನಡೆದ ರೇಷ್ಮೆ ತಯಾರಿಕೆಗಾರರ ಸಂಘದ ಕಾರ್ಯನಿರ್ವಾಹಕ ಸಮಿತಿ ನಿರ್ಧರಿಸಿದೆ.

ಮದರಾಸು ಕಲಾವಿದರ ವಿಜಯ

ಮದರಾಸು ಏ ೧೦

ಗೋಡೆಯ ಮೇಲೆ ಅಂಟಿಸುವ ಪ್ರಚಾರ ಪತ್ರಿಕೆಯನ್ನು ಅಂಟಿಸುವ ಕಲೆಯಲ್ಲಿ ಮದರಾಸಿನ ನಾಲ್ಕು ಕಲಾವಿದರಿಗೆ ಬಹುಮಾನ ಕೊಡಲಾಗಿದೆ. ಬಹುಮಾನ ಹೊಂದಿದ ಈ ಪ್ರಚಾರ ಚೀಟಿಗಳನ್ನು ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ನಡೆಯುವ ಅಮೇರಿಕನ್ ಅಕ್ಯಾಡೆಮಿ ಎಷ್ಯನ್ ಸ್ಟಡೀಸ್ ಹಬ್ಬದಲ್ಲಿ ಪ್ರದರ್ಶಿಸಲಾಗುವುದು.

ಬಹುಮಾನ ಹೊಂದಿದ ಕಲಾವಿದರು, ಮದರಾಸು ನಗರದ ಶ್ರೀ ಕೆ ಶ್ರೀನಿವಾಸಲು ಮತ್ತು ಶ್ರೀ ಜೆ ವಿ ಸುಬ್ಬರಾವ್, ಕೊಯಮತ್ತೂರಿನ ಶ್ರೀ ಎಂ ಎನ್ ನ್ಯಾಮ್‌ರವರು ತಿರುಚನಾಪಳ್ಳಿಯ ಶ್ರೀ ಎ ವೈ ಎನ್ ನಾರ್ಥರವರು.

ಸ್ಯಾನ್‌ಫ್ರಾನ್ ಸಿಸ್ಕೋದಲ್ಲಿ ಈ ಹಬ್ಬವು ಫೆಬ್ರವರಿಯಲ್ಲಿಯೇ ನಡೆಯಬೇಕಾಗಿತ್ತು. ಅನಿವಾರ್ಯಕಾರಣಗಳಿಂದ ಮುಂದೆ ಬಿದ್ದದ್ದು, ಈಗ ೧೯೫೨ನೇ ಇಸವಿಯ ನವೆಂಬರ್ ೧ನೇ ತಾ|| ನಿಂದ ೧೬ನೇ ತಾ|| ನವರೆಗೆ ನಡೆಯುವುದು. ತಾರೀಖನ್ನು ಮುಂದೆ ಹಾಕಿರುವುದರಿಂದ ಇನ್ನೂ ಹೆಚ್ಚಿನ ಸಂಗ್ರಹಣೆಯನ್ನು ಮಾಡಬಹುದಾಗಿದೆ.

ಈ ಹಬ್ಬದಲ್ಲಿ ಭಾರತೀಯ ನೃತ್ಯಕಲೆ ಸಂಗೀತ, ಮುಂತಾದುವುಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಲಾಗುವುದು. ೧೫೦ ರೂಪಾಯಿನ ಎರಡನೆಯ ಬಹುಮಾನಪಡೆದ ಶ್ರೀನಿವಾಸಲುರವರು ಅಡಿಯಾರಿನ ಬೆಸೆಂಟ್‌ಶಾಲೆಯ ಕಲಾ ಸಂಚಾಲಕರು ಶ್ರೀ ಜೆ ವಿ ಸುಬ್ಬರಾಯರು ಕಲಾಕ್ಷೇತ್ರದ ಕಲೆಯನ್ನು ಹೇಳಿಕೊಡುವ ಉಪಾಧ್ಯಾಯರು

ಸರ್ ಸಿ ಪಿ ರಾಮಸ್ವಾಮಿ ಐಯ್ಯರ್‌ರವರು ತೀರ್ಪುಗಾರರಾಗಿದ್ದರು.

ಮೈಸೂರಿಗೆ ಜೋಳ

ಭಾರತ ಸರ್ಕಾರವು ಹೈದರಾಬಾದಿಗೆ ೧೮ ಸಾವಿರ ಟನ್‌ಗಳಷ್ಟೂ ಮೈಸೂರಿಗೆ ಸಾವಿರ ಟನ್‌ಗಳಷ್ಟೂ ಮಧ್ಯಭಾರತದ ಜೋಳವನ್ನು ಒದಗಿಸಲಿದೆಯೆಂದು ಗೊತ್ತಾಗಿದೆ.

ಅಹಿಂಸಾ ಚಳುವಳಿ

ಭಾರತೀಯರಿಗೆ ವೋಟಿನ ಹಕ್ಕನ್ನು ಕೊಡಲು ಸಿಲೋನ್ ಸರ್ಕಾರದ ಮೇಲೆ ಒಂದು 'ನೈತಿಕ ಒತ್ತಾಯ' ವನ್ನು ತರಲು ಸಿಂಹಳ ಭಾರತೀಯ ಕಾಂಗ್ರೆಸ್ ಅಹಿಂಸಾ ಚಳುವಳಿಯನ್ನು ಆರಂಭಿಸಲಿರುವುದೆಂದು ಭಾರತೀಯ ರಾಜಕೀಯ ವಲಯಗಳಿಂದ ತಿಳಿದು ಬಂದಿದೆ.

ಸಕ್ಕರೆ ಮೇಲಿನ ಕಂಟ್ರೋಲ್ ಬೇಡ

ಬೆಂಗಳೂರು ಏ ೧೫

ಸಕ್ಕರೆ ಅಭಾವ ಕಣ್ಮರೆಯಾಗಿ ಅಧಿಕ ಪ್ರಮಾಣದಲ್ಲಿ ದೊರಕುತ್ತಿದೆಯೆಂದೂ ಈಗಿನ ರೀತಿಯಲ್ಲಿ ಸಕ್ಕರೆ ಮೇಲಿನ ಕಂಟ್ರೋಲು ಅನಗತ್ಯವಾಗಿದೆಯೆಂದೂ ಆದುದರಿಂದ ಸಕ್ಕರೆ ಮೇಲಿನ ಕಂಟ್ರೋಲನ್ನು ತೆಗೆಯಲು ಸಕಾಲವಾಗಿದೆಯೆಂದೂ ಸಕ್ಕರೆ ಕಂಪೆನಿ ಛೇರ್ಮನ್‌ರವರಾದ ಶ್ರೀ ಎ ಜಿ ಬಂದೀಗೌಡರು ನಿನ್ನೆದಿನ ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು.

ಹೈದರಾಬಾದಿನಲ್ಲಿ ವಿದ್ಯಾರ್ಥಿಗಳಿಗೆ ಸೈನ್ಯ ಶಿಕ್ಷಣ

ಈಗ ಕೇಂದ್ರ ಸರ್ಕಾರಕ್ಕೂ ಹೈದರಾಬಾದ್ ಸರ್ಕಾರಕ್ಕೂ ನಡೆಯುತ್ತಿರುವ ಮಾತುಕತೆಗಳ ಫಲಪ್ರದವಾದರೆ ಹೈದರಾಬಾದ್ ಸಂಸ್ಥಾನದ ಶಾಲಾ ಕಾಲೇಜುಗಳ ಇಷ್ಟಪಡುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಮಿಲಿಟರಿ ಶಿಕ್ಷಣ ಸೌಲಭ್ಯವನ್ನು ಕಲ್ಪಿಸಿಕೊಡಲಾಗುವುದೆಂದು ತಿಳಿದುಬಂದಿದೆ.

ಕ್ಷಮಾಪಣೆ

ಬುಲ್ಸಾರ್ ಕ್ಷೇತ್ರದಿಂದ ಸ್ಪರ್ಧಿಸಿ ಮುರಾರ್ಜಿ ದೇಸಾಯಿಯರನ್ನು ಮಹಾ ಚುನಾವಣೆಯಲ್ಲಿ ಸೋಲಿಸಿದ ಡಾ|| ಅಮುಲ್‌ದೇಸಾಯರು ತಾವು ಚುನಾವಣೆ ಸಂಬಂಧದಲ್ಲಿನ ಲೆಕ್ಕಪತ್ರಗಳನ್ನು ಸಕಾಲದಲ್ಲಿ ಒಪ್ಪಿಸಲಿಲ್ಲವೆಂಬ ಕಾರಣಕ್ಕಾಗಿ ತಮ್ಮ ಸದಸ್ಯತ್ವವನ್ನು ಅನರ್ಹಗೊಳಿಸಿದ್ದರ ಬಗ್ಗೆ ಚೀಫ್ ಎಲೆಕ್ಷನ್ ಕಮೀಷನರಿಗೆ ಅಪೀಲ್ ಸಲ್ಲಿಸಿರುವರು.

ಎಲೆಕ್ಷನ್ ಕಮೀಷನರಿಗೆ ತಾವು ತಡವಾಗಿ ಲೆಕ್ಕ ಸಲ್ಲಿಸಿದ್ದರಿಂದ ಉಂಟಾಗಿರುವ ಸದಸ್ಯತ್ವ ಅನರ್ಹತೆಯನ್ನು ಹೋಗಲಾಡಿಸಲು ಅಧಿಕಾರವಿದೆಯೆಂದೂ, ಅಪರಾಧವನ್ನು ಕ್ಷಮಿಸಬೇಕೆಂದೂ, ಅದು ಕೇವಲ ತಾಂತ್ರಿಕ ಅಂಶವೆಂದೂ ದೇಸಾಯಿ ತಿಳಿಸಿದ್ದಾರೆ

ಅಮೇರಿಕಾದಲ್ಲಿ ರೇಡಿಯೋ

ಅಮೇರಿಕಾದಲ್ಲಿ ಒಟ್ಟು 105,300,000 ರೇಡಿಯೋ ಸೆಟ್ಟುಗಳು ಉಪಯೋಗದಲ್ಲಿವೆ

ವಿಶೇಷ ಸಭೆ

ಮೈಸೂರು ಏ ೧೫

ರೇಷ್ಮೆ ವಸ್ತುಗಳ ಬೆಲೆಯನ್ನು ಹೆಚ್ಚಿಸಿರುವುದರಿಂದ ಉಂಟಾಗಿರುವ ಪರಿಸ್ಥಿತಿಯನ್ನು ಚರ್ಚಿಸಲು ಮೈಸೂರು ಪುರಸಭೆಯ ವಿಶೇಷ ಅಧಿವೇಶನವು ನಾಳೆ ಮಧ್ಯಾಹ್ನ ೩ ಗಂಟೆಗೆ ನಡೆಯುತ್ತದೆ.

೩೩ ಕೋಟಿ ರೂಪಾಯಿ ಜಮೀನ್ದಾರರಿಗೆ

ಉತ್ತರಪ್ರದೇಶದಲ್ಲಿ ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಲು ೩೩ ಕೋಟಿ ರೂ. ಗಳನ್ನು ಇನ್ನು ಜಮೀನ್ದಾರರಿಗೆ ಕೊಡಬೇಕಾಗಿರುವುದು ಎಂದು ಸರ್ಕಾರಿ ಪ್ರಕಟಣೆ ತಿಳಿಸಿದೆ.

ನಿಯೋಗದ ಪ್ರಯಾಣ

ಇರಾಕಿನ ಮಹಿಳಾ ನಿಯೋಗವು ಮುಂಬೈ ವಿಮಾನ ಮೂಲಕ ಬಾಸ್ರಾಕ್ಕೆ ಪ್ರಯಾಣ ಬೆಳೆಸಿತು

ನಿಯೋಗದವರಲ್ಲಿ ಒಬ್ಬರಾದ ಶ್ರೀಮತಿ ಇಸ್ಮತ್‌ರವರು ವಿಮಾನ ಚಲಿಸುವ ಮುನ್ನ ಪತ್ರಿಕಾ ಪ್ರತಿನಿಧಿಗಳಿಗೆ 'ಬುದ್ಧಿವಂತರಾದ ನಾಯಕರನ್ನೂ ಮತ್ತು ಉನ್ನತ ಮಹಿಳೆಯರನ್ನೂ ಹೊಂದಿರುವ ಶ್ರಮಿಸುತ್ತಿರುವ ರಾಷ್ಟ್ರವೊಂದನ್ನು ನಾವು ನೋಡಿದೆವು. ಇದು ಭಾರತಕ್ಕೆ ಒಳ್ಳೆಯ ಭವಿಷ್ಯ ಸೂಚಕವಾಗಿದೆಯೆಂದು ತಮ್ಮ ಅಭಿಪ್ರಾಯ ಯೂರೋಪ ಅಮೇರಿಕಗಳನ್ನು ಅರಿಯುವುದಕ್ಕಿಂತ ಹೆಚ್ಚಾಗಿ ನಾವು ನಿಮ್ಮನ್ನು ಅರಿಯುವುದು ಅವಶ್ಯವಿದೆ' ಎಂದು ತಿಳಿಸಿದರು.

ಪೇಟೆಧಾರಣೆ

ಮೈಸೂರು ತಾ|| 15-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	11-2	17-2
ಹೊಂಗೆಬೀಜ	,,	11-4	12-12
ಹುರುಳಿ	,,	30-10	31-12
ಮೆ. ಕಾಯಿ ಮಣಕ್ಕೆ		7-6	14-6
ಹುಣಸೇಹಣ್ಣು	,,	2-6	3-7
ಸೀಗೆಕಾಯಿ	,,	3-3	3-7
ತೆಂಗಿನಕಾಯಿ 1100ಕ್ಕೆ		171	233

ವುಡ್ ಲ್ಯಾಂಡ್ಸ್

೧೧-೪-೫೨ ರಿಂದ ದಿನವಹಿ ೩ ಆಟಗಳು

- ಬೇತಾಬ್ -

(ಹಿಂದಿ)

ಪಾತ್ರ:—ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ೩ ವಾರ ಮನ್ನಾ ಮಾಡಿಯಿದೆ

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೮೦ರ) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೭ ೪—೧೯೫೨ನೇ ಗುರುವಾರ [ಸಂಚಿಕೆ ೧೯೪

ಆಹಾರ ಧಾನ್ಯಗಳನ್ನು ಹಿಂದಿನಬೆಲೆಗೆ ಮಾರಬೇಕು

ವಿಶ್ವ ಸಂಸ್ಥೆಯಿಂದ ಉಪಕರಣಗಳು ಬೇಕೇ ಹೊರತು ಸಲಹೆಗಳಲ್ಲ

ಕೂಲಿಗಾರರಿಗೆ ಗೇಣಿದಾರರಿಗೆ ಆಹಾರ ಬೆಲೆ ಹೆಚ್ಚಿಸಿರುವುದು ಹೆಚ್ಚಿನ ಪರಿಣಾಮವನ್ನುಂಟುಮಾಡಿದೆ ನಮ್ಮ ಪ್ರಾಂತ್ಯವು ಕೇಂದ್ರದೊಡನೆ ಆರ್ಥಿಕ ವಿಲೀನೀಕರಣವಾದಮೇಲೆ ನಮ್ಮ ಸಂಸ್ಥಾನದ ವರಮಾನ ಕಡಿಮೆಯಾಯಿತು. ಆದರೆ ನಮ್ಮಲ್ಲುಂಟಾಗುವ ಆರ್ಥಿಕ ಖೋತಾವನ್ನು ಕೇಂದ್ರವು ಕೊಡಲೇಬೇಕಾಗಿದೆ.

ನಮಗೆ ಸೇರಿದ ಅನೇಕ ಮುಖ್ಯ ಮುಖ್ಯ ಇಲಾಖೆಗಳನ್ನು ಕೇಂದ್ರಕ್ಕೆ ವಹಿಸಿಬಿಟ್ಟಿದ್ದೇವೆ. ಅವರು ಸಬ್ಸಿಡಿ ಕೊಟ್ಟ ಮಾತ್ರಕ್ಕೆ ಅದು ನಮ್ಮ ಹಣವೇ ಆಗಿದೆ. ನಮ್ಮ ವರಮಾನವನ್ನೆಲ್ಲಾ ಅವರಿಗೆ ಒಪ್ಪಿಸಿರುವಾಗ ಏಕಾಏಕಿ ಸಬ್ಸಿಡಿ ನಿಲ್ಲಿಸಿದುದು ಅರ್ಥವಿಲ್ಲ ಭಾರತದಲ್ಲಿ ಯಾವಪ್ರಾಂತಕ್ಕೂ ಸಬ್ಸಿಡಿ ಕೊಡುವುದಿಲ್ಲವೆಂದು ಹೇಳಿ ಈಗ ತಿರುವಾಂಕೂರ್ ಕೊಚ್ಚಿನ್ನಿಗೆ ೨ ಕೋಟಿರೂಪಾಯಿಗಳನ್ನೇಕೆ ಕೊಟ್ಟಿರುವರು ಕೇಂದ್ರವು ಹಣ ಕೊಡುವುದಿಲ್ಲವೆಂದರೆ ರಾಜ್ಯಾಡಳಿತವೆಲ್ಲಾ ನೀವೆ ವಹಿಸಿಕೊಳ್ಳಿ ಎಂದು ಹೇಳಬೇಕಾಗಿತ್ತು. ಅಲ್ಲದೆ ಇಂಥಾ ಸಂದರ್ಭಗಳಲ್ಲಿ ಜವಾಬ್ದಾರಿಯುತ ಸಂಸ್ಥೆಗಳಲ್ಲಿದ್ದುಕೊಂಡು ನಾವು ಜನತೆಗೆ ಹೇಗೆ ಮುಖತೋರಿಸುವುದು? ಕೇಂದ್ರವು ಲಕ್ಷಾಂತರ ರೂಪಾಯಿಗಳನ್ನು ಕಾಶ್ಮೀರಕ್ಕೆ ವೆಚ್ಚಮಾಡುತ್ತಿಲ್ಲವೇ? ಶೇಖ್ ಅಬ್ದುಲ್ಲಾರವರ ಭಾಷಣ ಕೇಳಿದರೆ ಆ ಹಣವನ್ನು ನಾವು ನೀರಿನಲ್ಲಿ ಕಡಚಿದಂತಾಗಿದೆ

ಕೇಂದ್ರವು ಹಿಂದಿನಂತೆಯೇ ಮೂರುವರೆಕೋಟಿ ರೂ. ಸಬ್ಸಿಡಿ ಕೊಡುವಂತೆ ನಮ್ಮ ಸರಕಾರ ಒತ್ತಾಯಪಡಿಸಬೇಕು ಕೂಡಲೇ ಹಿಂದಿನದರದಲ್ಲಿಯೇ ಆಹಾರವಸ್ತುಗಳನ್ನು ಮಾರಬೇಕೆಂದು ಶ್ರೀ ಎಸ್. ಲಿಂಗಣ್ಣನವರು ಆಹಾರವಿಷಯದಲ್ಲಿ ನಡೆದ ವಿಶೇಷ ಪೌರಸಭಾ ಅಧಿವೇಶನದಲ್ಲಿ ಮಾತನಾಡುತ್ತಾ ಹೇಳಿದರು

ಶ್ರೀ ವೆಂಕಟೇಶಯ್ಯನವರು ಮಾತನಾಡುತ್ತಾ ಪ್ರಜಾರಾಜ್ಯದಲ್ಲಿ ಮಂತ್ರಿಮಂಡಲವು ಜನತೆಯ ಸೇವಕರು. ಜನಾಭಿಪ್ರಾಯ ಪಡೆಯದೆ ಬೆಲೆ ಹೆಚ್ಚಿಸಿರುವುದು ಸಾಧುವಲ್ಲ ಶಾಸನಸಭೆಯ ಅಥವಾ ಪ್ರಜಾಪ್ರತಿನಿಧಿಗಳಂಥ ಮುಖ್ಯ ಸಭೆಗಳ ಅಭಿಪ್ರಾಯ ಪಡೆಯಬೇಕಾಗಿತ್ತು. ಮುಖ್ಯಮಂತ್ರಿಗಳಲ್ಲಿ ನಾವು ನಿಯೋಗ ಹೋದಾಗ ಈ ವಿಷಯವನ್ನು ಪಕ್ಷದ ಸಭೆಯಲ್ಲಿ ಪರಿಶೀಲಿಸಲಾಗುತ್ತದೆಂದು ಹೇಳಿದುದು ಆಶ್ಚರ್ಯವಾಗಿದೆ. ಇದು ಸರ್ಕಾರವು ಪರಿಶೀಲಿಸಬೇಕಾದ ವಿಷಯವೇ ಹೊರತು ಕಾಂಗ್ರೆಸ್ ಪಕ್ಷವಲ್ಲ. ಜನರ ಸಂಕಟವು ಹೇಳತೀರದು. ನಾವು ಒತ್ತಾಯಪೂರ್ವಕವಾಗಿ ಸರ್ಕಾರವನ್ನು ಹಿಂದಿನ ಬೆಲೆಯಲ್ಲೇ ಮಾರಬೇಕೆಂದು ಕೇಳೋಣವೆಂದು ಹೇಳಿದರು.

ಪುರಸಭಾ ಕಮೀಷನರು ಮತ್ತು ಛೀಫ್ ರೇಷನಿಂಗ್ ಆಫೀಸರ್ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರು ಆಹಾರವಸ್ತುಗಳ ಬೆಲೆ ಮುಂತಾದ ವಿಷಯದಲ್ಲಿ ಅಂಕಿ ಅಂಶಗಳ ವಿವರವನ್ನಿತ್ತರು.

ಜ|| ಸೆಯ್ಯದ್ ಅಬ್ದುಲ್ ರಹಿಮಾನ್, ಶ್ರೀ ರಂಗಸ್ವಾಮಯ್ಯ, ಡಾ|| ಪಿ ಡಿ ಕೃಷ್ಣಸ್ವಾಮಿ ಜ|| ಅಹಮದ್‌ಖಾನ್ ಮುಂತಾದವರು ಆಹಾರಬೆಲೆ ಹೆಚ್ಚಿಸಿರುವುದನ್ನು ನಿಲ್ಲಿಸಿ ಹಿಂದಿನಬೆಲೆಯಲ್ಲಿ ಮಾರಬೇಕೆಂದು ತಮ್ಮ ಭಾಷಣಗಳಲ್ಲಿ ತಿಳಿಸಿದರು.

ಹೊಸ ಸರ್ಕಾರವು ಬಂದೊಡನೇ ಆಹಾರವಸ್ತುಗಳ ಬೆಲೆ ಕಡಿಮೆಯಾಗಬಹುದೆಂದು ತಿಳಿದಿದ್ದರು ಆದರೆ ಹೆಚ್ಚು ಕಡಿಮೆಗಳಲ್ಲಿ ಅಕ್ಕಿ ತೆಗೆದುಕೊಂಡೊಡನೆಯೇ ಅಡಿಗೆಗೆ ಮಾಡುವ ರೀತಿಯಲ್ಲಿ ಇದೆಯೆಂದು ಹೇಳಿದರು.

ಅನಂತರ ಶ್ರೀ ಪಿ. ಸೀತಾರಾಮಯ್ಯನವರು ಮಾತನಾಡುತ್ತಾ, ಹಿಂದಿನ ಭಾಷಣಗಾರರ ಅಭಿಪ್ರಾಯಗಳನ್ನು ಸಮರ್ಥಿಸುತ್ತಾ, ಕಮ್ಯೂನಿಸ್ಟ್ ವ್ಯಾಪನೆ ಹೆಚ್ಚಿಸಿರುವತಿರುವಾಂಕೂರ್‌ಕೊಚ್ಚಿನ್ ಪ್ರಾಂತ್ಯಕ್ಕೆ ಕಾಂಗ್ರೆಸ್ ಸರ್ಕಾರವು ಹೆದರಿಕೆಯಿಂದ ೨ ಕೋಟಿ ರೂ ಗಳನ್ನು ಗ್ರ್ಯಾಂಟ್‌ರೂಪದಲ್ಲಿ ಕೊಟ್ಟಿರುವಾಗ ನಮಗೇಕೆ ಕೊಡಬಾರದು. ನಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿ ಕೇಂದ್ರವನ್ನು ಒತ್ತಾಯಪಡಿಸಿ ಸಬ್ಸಿಡಿಯನ್ನು ತೆಗೆದುಕೊಳ್ಳಬೇಕಾಗಿಂದಿನಬೆಲೆಯಲ್ಲಿಯೇ ಆಹಾರವಸ್ತುಗಳನ್ನು ಮಾರಬೇಕೆಂದು ಹೇಳಿದರು.

ಶ್ರೀ ರಾಮಸ್ವಾಮಿಶೆಟ್ಟರು ಮಾತನಾಡುವಾಗ ಸರ್ಕಾರವನ್ನು ವೃಥಾಟೀಕಿಸಿದರೆ ಪ್ರಯೋಜನವಿಲ್ಲ. ರಚನಾತ್ಮಕ ಸಲಹೆಗಳನ್ನು ಮಾಡಲೆಂದು ಅಧ್ಯಕ್ಷರು ಅಭಿಪ್ರಾಯಪಟ್ಟರು. ಸರ್ಕಾರವನ್ನು ಟೀಕಿಸಲು ಪ್ರತಿಯೊಬ್ಬ ಪ್ರಜೆಗೂ ಅಧಿಕಾರವಿದೆಯೆಂದು ಶ್ರೀ ವೆಂಕಟೇಶಯ್ಯನವರು ವಾದಿಸಿದರು.

ಹಿಂದಿನ ಬೆಲೆಗೆ ಆಹಾರವಸ್ತುಗಳನ್ನು ಮಾರಲು ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು.

ನಮಗೆ ಬೇಕಾದುದು ತಾಂತ್ರಿಕ ಸಲಹೆಯಲ್ಲ ಉಪಕರಣಗಳು

ಮೈಸೂರು ಏ ೧೬

ಭಾರತವು ಕಮ್ಯೂನಿಸ್ಟರನ್ನು ಎದುರಿಸಿ ಅವರು ನಾಶವಾಗುವಂತೆ ಮಾಡಲು ವಿಶ್ವಸಂಸ್ಥೆ ಮತ್ತು ಅಮೆರಿಕಾಗಳು ಆಶಯವಿಟ್ಟದ್ದರೆ ಭಾರತ ವಿಷಯದಲ್ಲಿ ಅವು ತಮ್ಮ ವರ್ತನೆಯನ್ನು ಬದಲಾಯಿಸಿ ತಾಂತ್ರಿಕ ಸಲಹೆಕೊಡುವುದಕ್ಕೆ ಮುನ್ನ ನಮಗೆ ಬೇಕಾದ ಯಂತ್ರ ಮತ್ತು ಇತರ ಸಲಕರಣೆಗಳ ಸಹಾಯ ನೀಡಲಿ. ನಮ್ಮಲ್ಲಿ ಜನಶಕ್ತಿಯಿದೆ, ಬುದ್ಧಿಶಕ್ತಿಯಿದೆ ಅವುಗಳನ್ನು ಉತ್ತಮರೀತಿಯಲ್ಲಿ ಉಪಯೋಗಿಸಿಕೊಂಡು ಬರಲು ಸಹಾಯನೀಡಲಿ ಎಂದು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಿನ್ನೆ ವಿಶ್ವಸಂಸ್ಥೆ ಮೈಸೂರು ಶಾಖೆಯ ತೃತೀಯ ವಾರ್ಷಿಕೋತ್ಸವದಲ್ಲಿ ಮಾತನಾಡುತ್ತಾ ಹೇಳಿದರು.

ಮೊದಲನೆ ಮಹಾಯುದ್ಧವಾದನಂತರ ಲೀಗ್-ಆಫ್-ನೇಷನ್ಸ್ ಶಾಂತಿಸ್ಥಾಪನೆ ಧ್ಯೇಯದ ಮೇಲೆ ಸ್ಥಾಪನೆಯಾಯಿತು. ಆದರೂ ೨ನೇ ಮಹಾಯುದ್ಧ ನಡೆಯಿತು. ಈಗ ಒದೇ ಧ್ಯೇಯದಿಂದ ವಿಶ್ವಸಂಸ್ಥೆ ಸ್ಥಾಪನೆಯಾಗಿದೆ. ಅದರ ಧ್ಯೇಯ ಉತ್ತಮವಾಗಿದ್ದರೂ ಅವುಗಳ ನೀತಿ, ಕಾರ್ಯಕ್ರಮ ಪರಿಶೀಲಿಸಿದರೆ ಅಷ್ಟು ತೃಪ್ತಿಕರವಾಗಿ ಕಾಣುವುದಿಲ್ಲ. ಅನೇಕ ರಾಷ್ಟ್ರಗಳಿಗೆ 'ಮಾರ್ಷಲ್' ಸಹಾಯನೀಡುತ್ತಿರುವುದು ಕೆಲವೆಡೆ ಸರ್ವಾಧಿಕಾರತ್ವ ಸ್ಥಾಪನೆಗೆ ಎಡೆಕೊಟ್ಟಿದೆ. ಭಾರತವನ್ನು ಹಿರಿಯರಾಷ್ಟ್ರವಾದ ಬ್ರಿಟನ್ ಬಿಟ್ಟು ಹೋಯಿತು. ಸಣ್ಣಪುಟ್ಟ ಸ್ವಾಸ್ಥ್ಯಗಳು ಹೊಂದಿರುವ ಫ್ರೆಂಚ್ ಮತ್ತು ಪೋರ್ಚುಗೀಸರು ಭಾರತ ಬಿಡಲು ಹಿಂತೆಗೆಯುತ್ತಿದ್ದಾರೆ. ಈ ರಾಷ್ಟ್ರಗಳಿಗೆ ವಿಶ್ವಸಂಸ್ಥೆ ಬುದ್ಧಿ ಹೇಳಲಾಗುವುದಿಲ್ಲವೆ? ಎಂದು ಮುಖ್ಯಮಂತ್ರಿಗಳು ಹೇಳಿದರು.

ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ ಎಸ್ ಸ್ವಾಮಿನಾಥನ್‌ರವರಿಂದ ಧನ್ಯವಾದಗಳಾದನಂತರ ಸಭೆ ಮುಗಿಯಿತು.

ಶ್ರೀ ಕೆ ಹನುಮಂತಯ್ಯನವರು

ಮೈಸೂರು ಏ ೧೬

ಮೈಸೂರಿಗೆ ಆಗಮಿಸಿದ್ದ ಶ್ರೀ ಕೆ ಹನುಮಂತಯ್ಯನವರು ಇಂದಿನ ಬೆಳಗ್ಗೆ ಬೆಂಗಳೂರಿಗೆ ಪ್ರಯಾಣಮಾಡಿದರು.

ಕನ್ನಡ ಟೈಪ್‌ರೈಟರ್‌ಗಳ ಆರ್ಡರ್ ರದ್ದುಗೊಳಿಸಿ

ಬೆಂಗಳೂರು ಏ ೧೫

ಕನ್ನಡ ಟೈಪ್‌ರೈಟರ್ ಬಗ್ಗೆ ಕರ್ಮ ಸಮಿತಿ ಸಲ್ಲಿಸಿರುವ ವರದಿಯ ಆಧಾರದ ಮೇಲೆ ಟೈಪ್‌ರೈಟರ್‌ಗಳಿಗಾಗಿ ಸರ್ಕಾರ ಆರ್ಡರ್ ಕೊಟ್ಟಿರುವುದನ್ನು ರದ್ದುಮಾಡಬೇಕೆಂದೂ ಪ್ರವೀಣರ ಮತ್ತು ಜನಸಾಮಾನ್ಯರ ಅಭಿಪ್ರಾಯವನ್ನು ಪಡೆಯದೆ ಯಾವ ಕ್ರಮವನ್ನೂ ಕೈಗೊಳ್ಳಬಾರದೆಂದೂ ಕನ್ನಡ ಸಾಹಿತಿಗಳ ಒಂದು ನಿಯೋಗ ನಿನ್ನೆಯ ದಿನ ಶಿಕ್ಷಣ ಮಂತ್ರಿಗಳನ್ನು ಕಂಡು ಒತ್ತಾಯಪಡಿಸಿತು.

ನಿಯೋಗದಲ್ಲಿ ಶ್ರೀಗಳಾದ ಎ ಸೀತಾರಾಮಯ್ಯ, ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿ, ಎಲ್ ಗುಂಡಪ್ಪ ಮುಂತಾದ ಸಾಹಿತಿಗಳಿದ್ದರು.

ಮೂಲ ಶಿಕ್ಷಣ ಕ್ರಮ ಜಾರಿಗೆ ತರಲು ಒತ್ತಾಯ

ಶ್ರೀಗಳಾದ ಪಿ ಆರ್ ರಾಮಯ್ಯ, ವಿಶ್ವಾನಂದಜೀ, ಸಿದ್ಧವನಹಳ್ಳಿ ಕೃಷ್ಣಶರ್ಮ, ಪಿ ಯಮ್ಮತ ಮುಂತಾದವರು ಮೊನ್ನೆಯ ದಿನ ಶಿಕ್ಷಣಸಚಿವರನ್ನು ಕಂಡು ಸಂಸ್ಥಾನದಲ್ಲಿ ಮೂಲಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂದು ಒತ್ತಾಯಪಡಿಸಿ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸುವಂತೆ ಸಲಹೆ ಮಾಡಿದರು.

ಬೇಸಾಯಗಾರರಿಗೆ ಹಂಚಲು ಜಮೀನು

ಇಡೀ ಭಾರತದಲ್ಲಿರುವ ರಚನಾತ್ಮಕ ಕಾರ್ಯಕರ್ತರೂ ಭೂದಾನಯಜ್ಞದ ಚಳುವಳಿಯಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿ ಜಮೀನಿಲ್ಲದೆ ತೊಂದರೆಗೆ ಒಳಗಾಗಿರುವ ಬೇಸಾಯಗಾರರಿಗೆ ಹಂಚುವುದಕ್ಕಾಗಿ ಎರಡು ವರ್ಷಗಳಲ್ಲಿ ಇಪ್ಪತ್ತೈದು ಲಕ್ಷ ಎಕರೆ ಜಮೀನನ್ನು ಕೂಡಿಸಬೇಕೆಂಬ ಸರ್ವೋದಯ ಸೇವಾಸಂಘದ ನಿರ್ಣಯವು ಅಖಿಲಭಾರತ ಸರ್ವೋದಯ ಸೇವಾ ಸಂಘದ ನಿರ್ಣಯವು ಅಖಿಲ ಭಾರತ ಸರ್ವೋದಯ ಸಮ್ಮೇಳನದಲ್ಲಿ ಅಂಗೀಕೃತವಾಯಿತು.

ಲಂಡನಿನಲ್ಲಿ ಭಾರತದ ಹೈ-ಕಮಿಷನರಾಗಿರುವ ಶ್ರೀ ವಿ ಕೆ ಕೃಷ್ಣಮೆನನ್‌ರವರು ನಿನೆ ಬೊಂಬಾಯಿಗೆ ಆಗಮಿಸಿ ರಾತ್ರಿಯೇ ದೆಹಲಿಗೆ ತೆರಳಿದರು.

ವಿಶ್ವದಲ್ಲೆಲ್ಲಾ ಭಾರಿ ಜಲಾಶಯ

ವಾಷಿಂಗ್ಟನ್

೧೯೫೨ನೇ ಇಸ್ವಿ ಮೇ ೨೨ನೇ ತಾರೀಖು, ಅಮೆರಿಕದ ಪಶ್ಚಿಮ ಭಾಗದ ಒಂದು ಮಿಲಿಯನ್ ಎಕರೆ ಭೂಮಿಗೆ, ಪ್ರಪಂಚದ ದೊಡ್ಡ ಜಲಾಶಯವೊಂದರಿಂದ ನೀರು ಬಿಡಲಾಗುವುದು. ಕೊಲಂಬಿಯ ನದಿಯ ಹತ್ತಿರವಿರುವ ಗ್ರ್ಯಾಂಡ್ ಕೌಲಿ ಅಣೆಕಟ್ಟಿನಿಂದ ಈ ನೀರನ್ನು ಬಿಟ್ಟು ಹೆಚ್ಚು ಬೆಲೆಬಾಳುವ ಬೆಳೆಯನ್ನು ಬೆಳೆಯಬಹುದು.

ಈ ವರ್ಷ ಸುಮಾರು ೮೭ ಸಾವಿರ ಎಕರೆ ಭೂಮಿಗೆ ನೀರನ್ನು ಒದಗಿಸಲಾಗುವುದು. ಆ ಮೇಲೆ ಪ್ರತಿವರ್ಷವೂ ೬೦ ಸಾವಿರ ಎಕರೆ ಭೂಮಿಗೆ ನೀರು ಬಿಡಲಾಗುವುದು.

ಈ ನೀರಾವರಿ ಯೋಜನೆಯು ವಾಷಿಂಗ್ಟನ್ ಸಂಸ್ಥಾನದ ಪೂರ್ವ ಭಾಗದಲ್ಲಿದೆ. ಅಲ್ಲಿ ೧೨ ದೊಡ್ಡ ಪಂಪುಗಳಿವೆ. ಫ್ರ್ಯಾಂಕಲಿನ್ ಡಿ ರೂಸವೆಲ್ಟ ಸರೋವರದಿಂದ ಗ್ರ್ಯಾಂಡ್ ಕೌಲಿಡ್ಯಾಮಿಗೆ ೨೮೦ ರಿಂದ ೩೬೦ ಅಡಿವರೆಗೆ ನೀರನ್ನು ಎತ್ತಿ ಸಂಗ್ರಹ ಮಾಡಲಾಗುವುದು. ನ್ಯೂಯಾರ್ಕ್ ನಗರದಂತಹ ಪಟ್ಟಣಕ್ಕೆ ಸಾಕಾಗುವಷ್ಟು ನೀರನ್ನು ಒದಗಿಸುವ ಶಕ್ತಿಯು ಆ ಒಂದೊಂದು ಪಂಪಿಗೂ ಇದೆ.

ಒಂದೇ ದಿನದಲ್ಲಿ ಭೂಮಿಯನ್ನು ಚೊಕ್ಕಟಮಾಡಿ, ತೋಟಮಾಡಿ, ಒಂದು ಮನೆಯನ್ನು ಕಟ್ಟಿ, ಆ ತೋಟವನ್ನು ಅಮೆರಿಕದ ಸೈನಿಕನೊಬ್ಬನಿಗೆ ಅವನು ಜಾಗತಿಕ ಶಾಂತಿಗೆ ಸಲ್ಲಿಸಿದ ಸೇವೆಗಾಗಿ ಕೊಡಲ್ಪಡುವುದು. ಹೀಗೆಯೇ ಅನೇಕ ಸೈನಿಕರೂ ಬಂದು ಇಲ್ಲಿ ನೆಲಸಬಹುದು. ಆದರೆ ಮೊದಲನೆಯ ದಿನ ತಯಾರಾದ ತೋಟ ಮತ್ತು ಮನೆಯನ್ನು ಉಚಿತವಾಗಿ ಕೊಡಲ್ಪಡುವುದು.

ಹೀಗೆ ಒಂದು ಮಿಲಿಯನ್ ಎಕರೆ ಭೂಮಿಯಲ್ಲಿ ೩೦ ವರ್ಷಗಳಲ್ಲಿ ೧೩,೦೦೦ ಹೊಸ ತೋಟಗಳು ಮಾರ್ಪಾಡಾಗಬಹುದು.

ಫೋರ್ಜರಿ ಮಾಡಿದ ಅಧಿಕಾರಿಗಳು

ಇತರರ ಹೆಸರಿನಲ್ಲಿ ಸಂಬಳಗಳನ್ನು ತೆಗೆದುಕೊಳ್ಳಲು ತಮ್ಮ ಹೆಬ್ಬೆಟ್ಟಿನ ಗುರ್ತುಗಳನ್ನು ಉಪಯೋಗಿಸಿದ್ದಕ್ಕೆ ಮತ್ತು ಸುಳ್ಳು ಸಂಬಳಗಳ ಲೆಖ್ಖವನ್ನಿಟ್ಟಿದ್ದಕ್ಕೆ ದೆಹಲಿಯ ಪಿ ಡಬ್ಲ್ಯು ಡಿ ಶಾಖೆಯ ಓವರ್‌ಸಿಯರ್ ಮಹಾವೀರಸಿಂಗ್ ಮತ್ತು ಲೆಖ್ಖದ ಗುಮಾಸ್ತೆ 'ರಾಧೆಶ್ಯಾಮ್' ಎಂಬುವರಿಗೆ ತಲಾ ಒಂದೂವರೆ ಮತ್ತು ಒಂದು ವರ್ಷ ಶಿಕ್ಷೆಯನ್ನು ವಿಧಿಸಲಾಗಿದೆ.

ಶ್ರೀ ವಿ. ಕೆ. ಕೃಷ್ಣಮೆನನ್ ಗೌರ್ನರ್

ಭಾರತ ವಿದೇಶಾಂಗ ರಾಯಭಾರಿ ವರ್ಗಗಳಲ್ಲಿ ಕೆಲವು ಬದಲಾವಣೆಗಳಾಗುವುವೆಂದು ಹೇಳಲಾಗಿದೆ.

ಬ್ರಿಟನ್ನಿನಲ್ಲಿರುವ ಭಾರತ ಹೈಕಮಿಷನರ್ ಶ್ರೀ ವಿ ಕೆ. ಕೃಷ್ಣಮೆನನ್‌ರವರನ್ನು ಒಂದು ಪ್ರಾಂತ್ಯದ ಗೌರ್ನರ್‌ರಾಗಿ ನೇಮಕಮಾಡಲಾಗುತ್ತದೆ. ಅವರ ಸ್ಥಾನಕ್ಕೆ ಫ್ರಾನ್ಸ್‌ನಲ್ಲಿರುವ ಶ್ರೀ ಹೆಚ್. ಎಸ್. ಮಲ್ಲಿಕ್‌ರವರನ್ನು ನೇಮಕ ಮಾಡಲಾಗುವುದು ಶ್ರೀಮತಿ ವಿಜಯಲಕ್ಷ್ಮಿಯವರು ಚೈನಾ ರಾಯಭಾರಿಯಾಗಬಹುದು. ಶ್ರೀ ಕೆ. ಎಂ. ಮುನ್ಷಿಯವರನ್ನು ಅಮೆರಿಕಾದಲ್ಲಿ ರಾಯಭಾರಿಯಾಗಿ ನೇಮಿಸಿ ಶ್ರೀ ಬಿ. ಆರ್. ಸೇನ್‌ರವರನ್ನು ವಿಶ್ವಸಂಸ್ಥೆಯಲ್ಲಿ ಭಾರತ ಪ್ರತಿನಿಧಿಯಾಗಿ ಚುನಾಯಿಸಲಾಗುವುದೆಂದು ಹೇಳಲಾಗಿದೆ.

ಶ್ರೀ ಜಿ. ಎಸ್. ಬಾಜಪೈ ಬೊಂಬಾಯಿ ಗೌರ್ನರ್

ವಿದೇಶಾಂಗ ಶಾಖಾ ಡೈರೆಕ್ಟರ್ ಜನರಲ್ ಶ್ರೀ ಗಿರಿಜಾಶಂಕರಬಾಜಪೈರವರನ್ನು ಬೊಂಬಾಯಿ ಗೌರ್ನರ್ ಆಗಿ ನೇಮಿಸಲಾಗುತ್ತದೆಯೆಂದು ಹೇಳಲಾಗಿದೆ

ಪ್ರಜಾಪ್ರಭುತ್ವ ಯುಗದಲ್ಲಿ ಪತ್ರಿಕೆಗಳ ಪಾತ್ರ

ಆಧುನಿಕ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಸ್ವತಂತ್ರ, ಮತ್ತು ನಿರ್ಭಯವಾದ ಪತ್ರಿಕೆಗಳು ಅತ್ಯಗತ್ಯವೆಂದು ಮುಂಬೈ ಮುಖ್ಯಮಂತ್ರಿ ಶ್ರೀ ಬಿ ಜಿ ಖೇರ್‌ರವರು ತಿಳಿಸಿರುವರು.

ಉಚಿತ ಗೋಧಿಯ ಹಂಚಿಕೆ

ಪ್ರಪಂಚದ ಸಹಾಯದಳದವರು ಕೊಟ್ಟಿರುವ ೨೪೫೦ ಚೀಲ ಗೋಧಿಯನ್ನು ಆಹಾರ ಶಾಖೆಯವರು ತಮ್ಮ ಪ್ರಾಂತ್ಯದ ಜನರಿಗೆ ಉಚಿತವಾಗಿ ಹಂಚಿಸಿದ್ದಾರೆ. ೧,೨೨೪ ಚೀಲವನ್ನು ಚಿಟ್‌ನಗರ್ ನಿರಾಶ್ರಿತರಿಗೂ ಮಿಕ್ಕದ್ದನ್ನು ಕ್ಷಾಮಪ್ರದೇಶವಾದ ಸಾವ್ಲಾ ಮತ್ತು ಔರಂಗಾಬಾದಿಗೂ ಹಂಚಿದರು.

ಲಂಚಿತಿಂದ ಅಧಿಕಾರಿಯ ಬಂಧನ

ಕೇಂದ್ರ ಸರ್ಕಾರದ ಲಂಚನಿರೋಧ ಶಾಖಾಧಿಕಾರಿಗಳು ಅಂಬಾಲಾ ಕಂಟೋನ್ಮೆಂಟಿನ ಸುಂಕದ ಸೂಪರಿಂಟೆಂಡೆಂಟ್ ದಿವಾನ್‌ಚಂದ್ ಎಂಬಾತನನ್ನು ಲಂಚತಿಂದ ಅಪಾದನೆಗೆ ದಸ್ತಗಿರಿ ಮಾಡಿದ್ದಾರೆ. ಇವನ ಜೊತೆಗೆ ಪ್ರೇರೇಪಿಸಿದರೆಂಬ ಅಪಾದನೆಯಿಂದ ಇವನ ಹೆಂಡತಿ ಮತ್ತು ಮಗನನ್ನು ದಸ್ತಗಿರಿ ಮಾಡಿದ್ದಾರೆ.

ಆಹಾರ ಸಚಿವ ಶಾಖೆಯಲ್ಲಿ ಗೊಂದಲ

ವ್ಯವಸಾಯೋಪಕರಣಗಳ ತಯಾರಿಕೆಯ ಬಗ್ಗೆ ಕೇಂದ್ರ ಆಹಾರ ಮತ್ತು ವ್ಯವಸಾಯ ಸಚಿವ ಶಾಖೆಯಲ್ಲಿ ಉಂಟಾಗಿರುವ ಮತ್ತೊಂದು ಅಗಾಧ 'ಗೊಂದಲ'ವನ್ನು ಕಂಡು ಹಿಡಿದು ವಿಚಾರಣೆ ನಡೆಸಲು ಮುಂಬಯಿಯ ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಶ್ರೀ ಹೆಚ್ ವಿ ದಿವೇತಿಯಾರವರು ಪ್ರಯತ್ನಿಸುತ್ತಿದ್ದಾರೆ.

ಭಾರತಕ್ಕೆ ಕೃಷ್ಣಮೆನನ್‌ರ ಆಗಮನ

ಬ್ರಿಟನ್ನಿನಲ್ಲಿ ಭಾರತದ ಹೈಕಮಿಷನರಾಗಿರುವ ಶ್ರೀ ವಿ ಕೆ ಕೃಷ್ಣಮೆನನ್‌ರು ನಿನ್ನೆ ಏರ್ ಇಂಡಿಯಾ ಇಂಟರ್ ನ್ಯಾಷನಲ್ ವಿಮಾನದಲ್ಲಿ ಭಾರತಕ್ಕೆ ಆಗಮಿಸಿದರು ರಾತ್ರಿ ವಿಮಾನದಲ್ಲಿಯೇ ದೆಹಲಿಗೆ ತೆರಳಿದರು. ಭಾರತ ಸರ್ಕಾರದೊಡನೆ ಸಮಾಲೋಚನೆ ನಡೆಸುವುದೇ ಶ್ರೀ ಮೆನನ್‌ರ ಪ್ರಯಾಣದ ಉದ್ದಿಶ್ಯ.

ಕಡಪಾದಲ್ಲಿ 'ಕಾರ್ಯಾಚರಣೆ ಕೇಂದ್ರ'

ಭಾರತದ ಮಹಾದಂಡನಾಯಕ ಜನರಲ್ ಕಾರಿಯಪ್ಪನವರು, ಕ್ಷಾಮಪೀಡಿತ ರಾಯಲಸೀಮೆಯ ಜಿಲ್ಲಾ ಕಲೆಕ್ಟರುಗಳು ಕ್ಷಾಮ ಪರಿಹಾರ ಕಮಿಷನರು ಮತ್ತು ಉನ್ನತ ಮಿಲಿಟರಿ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿ ಈ ಜಿಲ್ಲೆಗಳಲ್ಲಿ ಭಾರತ ಸೈನ್ಯವು 'ಕ್ಷಾಮ ಪರಿಹಾರ' ಕ್ರಮಗಳನ್ನು ಕೈಗೊಳ್ಳುವುದೆಂದು ಪ್ರಕಟಿಸಿದ್ದಾರೆ.

'ಶಾಸನ ಸಭೆ ಸೇರಲಿ'

ಬೆಂಗಳೂರು ಏ ೧೫

ಸರ್ಕಾರದವರು ಆಹಾರಧಾನ್ಯಗಳ ಬೆಲೆ ಏರಿಸಿರುವುದು ಲಕ್ಷಾಂತರ ಜನರ ಜೀವನಕ್ಕೆ ಸಂಬಂಧಿಸಿದ್ದಾದ್ದರಿಂದ ನೂತನ ಶಾಸನಸಭೆಯ ಅಭಿಪ್ರಾಯಪಡೆಯಬೇಕಾಗಿತ್ತೆಂದೂ, ಆದ್ದರಿಂದ ಈ ಬಗ್ಗೆ ಚರ್ಚಿಸಲು ಕೂಡಲೇ ಶಾಸನಸಭೆಯ ಅಧಿವೇಶನವೊಂದನ್ನು ಕರೆಯಬೇಕೆಂದೂ, ಶಾಸನಸಭಾ ಸದಸ್ಯ ಶ್ರೀ ಮುಲ್ಕಾಗೋವಿಂದರೆಡ್ಡಿಯವರು ಮುಖ್ಯಮಂತ್ರಿಗಳಿಗೆ ಪತ್ರವೊಂದನ್ನು ಬರೆದು ಪ್ರಾರ್ಥಿಸಿದ್ದಾರೆ.

ತೈಲಚಿತ್ರ ಅರ್ಪಣೆ

ಮೈಸೂರು ಏ. ೧೬

ಈ ದಿನ ಮೈಸೂರು ಆರ್ಟ್ಸ್ ಸ್ಟುಡಿಯೊವಿನ ಕಲಾವಿದ ಶ್ರೀ ಎಂ. ಹೆಚ್. ರಾಮುರವರು ಮುಖ್ಯಮಂತ್ರಿಗಳವರನ್ನು ಭೇಟಿಮಾಡಿ ತಾವೇ ಚಿತ್ರಿಸಿದ್ದ ತೈಲಚಿತ್ರವನ್ನು ಅರ್ಪಿಸಿದರು. ಮುಖ್ಯಮಂತ್ರಿಗಳು ರಾಮುರವರ ಕಲಾ ಪ್ರತಿಭೆಯನ್ನು ಮೆಚ್ಚಿ ಅಭಿನಂದಿಸಿದರು.

ಮುಖ್ಯಮಂತ್ರಿಯವರಲ್ಲಿ ನಿಯೋಗ

ಬೆಂಗಳೂರು ಏ. ೧೭

ಇಂದು ಬೆಳಗ್ಗೆ ಮೈಸೂರು ಪುರಸಭಾ ಸದಸ್ಯರು ಮುಖ್ಯಮಂತ್ರಿಯವರನ್ನು ಭೇಟಿಮಾಡಿ ಆಹಾರ ವಸ್ತುಗಳ ಬೆಲೆ ಹೆಚ್ಚಿಸಿರುವುದನ್ನು ಚರ್ಚಿಸಿ ಕೂಡಲೇ ಹಿಂದಿನ ಬೆಲೆಯಲ್ಲಿಯೇ ಆಹಾರ ಪದಾರ್ಥಗಳನ್ನು ಮಾರಬೇಕೆಂದು ಬಿನ್ನವಿಸಿಕೊಂಡು ಕೆಲವು ಸಲಹೆಗಳನ್ನಿತ್ತರು. ಅವುಗಳನ್ನು ಪರಿಶೀಲಿಸುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರು.

ಕಮ್ಯೂನಿಸ್ಟರ ಮೇಲಿನ ನಿಷೇಧ ರದ್ದು

ಮೂರುವರೆ ವರ್ಷಗಳಿಂದ ಜಾರಿಯಲ್ಲಿರುವ ಆಂಧ್ರ ಮಹಾಸಭೆ ಮತ್ತು ಕಮ್ಯೂನಿಸ್ಟ್ ಪಕ್ಷದ ಮೇಲಿನ ನಿಷೇಧವನ್ನು ರದ್ದುಗೊಳಿಸುವ ಉದ್ದೇಶವಿದೆಯೆಂದು ಸಂಸ್ಥಾನ ಹಾಗೂ ಕೇಂದ್ರ ಸರ್ಕಾರಗಳೆರಡೂ ಈ ಅಂಶವನ್ನು ಹೈದರಾಬಾದ್ ಸರ್ಕಾರವು ಪರಿಶೀಲಿಸುತ್ತಿದೆಯೆಂದೂ ಗೊತ್ತಾಗಿದೆ.

ಚಿನ್ನ ಬೆಳ್ಳಿ ದರಗಳು

16-4-52		ರೂ.
ಸವರನ್		66-0
"		66-2
ಚಿನ್ನ	ತೊಲ	91-4
"	ಮೂಶ	90-8
ಬೆಳ್ಳಿ	100 ತೊಲ	163-0
"	ತೊಲ	1-12

ನ್ಯೂ ಅಪೇರ

೧೩—೪—೫೨ ರಿಂದ ಅಮೋಘಪ್ರಾರಂಭ

* ಕುಮಾರಿ *

(ತಮಿಳು)

ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜಿನಿ (ಜೂ), ಶಾಮ, ದೊರೆರಾಜ್, ಪುಳಿಮೊಟ್ಟೈ.

ರಣಜಿತ್

೪—೪—೫೨ರಿಂದ ಪ್ರತಿದಿನ ೩ ಆಟಗಳು

ಫಿಲ್ಮಿಸ್ತಾನ್‌ರವರ—

ಶ್ರೀಮತಿಜೀ

ಪಾತ್ರ:-ನಾಸೀರ್ ಖಾನ್, ಶ್ಯಾಮಾ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಒ. ಕೃಷ್ಣ ಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೮ (೮೦೮) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೮ ೪—೧೯೫೨ನೇ ಶುಕ್ರವಾರ [ಸಂಚಿಕೆ ೧೯೩

ಕಾಂಗ್ರೆಸ್ ಸಮಿತಿಗಳಲ್ಲಿ ಹೊಸ ಅಧಿಕಾರಿವರ್ಗದ ಆಯ್ಕೆಗಾಗಿ ಸೂಚನೆ

ಕೇಂದ್ರದ ಹೊಸ ಉಭಯ ಶಾಸನಸಭೆಗಳು ಮುಂದಿನ ೧೩ನೇ ತಾ॥ ಸೇರಲು ರಾಷ್ಟ್ರಾಧ್ಯಕ್ಷರ ಆಜ್ಞೆ

ದೇಶಾದ್ಯಂತ ಕಾಂಗ್ರೆಸ್ ಪ್ರದೇಶ, ಜಿಲ್ಲಾ ಸಮಿತಿಗಳಲ್ಲಿ ಅಧ್ಯಕ್ಷ, ಕಾರ್ಯದರ್ಶಿ ಮತ್ತಿತರ ಅಧಿಕಾರಿ ವರ್ಗದವರ ಚುನಾವಣೆಯು ಕೂಡಲೇ ನಡೆಯುವಂತೇರ್ಪಡಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳು ಸಂಬಂಧಪಟ್ಟ, ಎಲ್ಲಾ ಸಮಿತಿಗಳಿಗೆ ಸೂಚಿಸುತ್ತಿದ್ದಾರೆ-

ಉತ್ಸಾಹಶಾಲಿಗಳಾದ ಹೊಸಬರಿಗೆ 'ಹಳಬರು' ಸ್ಥಾನವನ್ನು ಬಿಟ್ಟುಕೊಡಬೇಕೆಂದೂ ಸೂಚನೆ ಕೊಡಲಾಗಿದೆ-

ಆಹಾರ ಧಾನ್ಯದ ಬೆಲೆ ಹೆಚ್ಚಿಸಕೂಡದು

ಮೈಸೂರು ಏ ೧೬

ಮೈಸೂರು ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆಯು ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಆಹಾರವಸ್ತುಗಳ ಬೆಲೆಯನ್ನು ಹೆಚ್ಚಿಸಿರುವುದನ್ನು ಪರಿಶೀಲಿಸಿ—

'ಇದುವರೆವಿಗೂ ಕೊಡುತ್ತಿದ್ದಂತೆಯೇ ಇನ್ನು ಮುಂದೆಯೂ ಆಹಾರದ ಸಬ್ಸಿಡಿಯನ್ನು ಮುಂದುವರಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಬೇಕೆಂದೂ ಮತ್ತು ಈ ಮಾಹೆ ೧೦ ನೇ ತಾರೀಖಿಗೆ ಮುಂಚೆಯಿದ್ದ ಧಾರಣೆಯಲ್ಲಿಯೇ ಪಡಿತರ ಧಾನ್ಯಗಳನ್ನು ನಾಗರೀಕರಿಗೆ ಒದಗಿಸಬೇಕೆಂದೂ ಸಂಸ್ಥಾನ ಸರ್ಕಾರವನ್ನು ಮೈಸೂರು ನಗರ ಕಾಂಗ್ರೆಸ್ ಕೆಲಸಗಾರರ ಈ ಸಭೆಯು ಕೋರುತ್ತದೆ' ಎಂಬ ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಭೂದಾನ ಯಜ್ಞದ ಬಗ್ಗೆ ವಿನೋಬಾಭಾವೆ

'ನಾನು ಆರ್. ಕೆ. ಪಾಟೀಲ್ ಮತ್ತು, ಗುಲ್ಜಾರಿಲಾಲ್ ನಂದಾರವರೊಡನೆ ಮಾತನಾಡಿದ್ದೇನೆ ಅವರ ಯೋಜನೆಗೂ ನನ್ನ ಯೋಜನೆಗೂ ಭೇದವಿದೆ ನನ್ನದು ವಿಕೇಂದ್ರೀಕೃತ ಸಮಾಜಪದ್ಧತಿ ಆದರೆ ಯೋಜನಾಕಮೀಶನ್ನಿನ ನೀತಿಗೆ ಅಧಿಕಾರ ವಿಕೇಂದ್ರೀಕೃತವಾಗಿರುವುದು. ಸರ್ವೋದಯ ಮೂಲತತ್ವಕ್ಕೆ ವಿರೋಧವಲ್ಲದ ಕಾರ್ಯಗಳನ್ನು ಕೈಗೊಂಡ ಯೋಜನಾಸಮಿತಿಯ ಕೆಲಸಗಳಿಗೆ ಸರ್ವೋದಯದ ಕಾರ್ಯಕರ್ತರು ನೆರವುನೀಡುವರು. ಎಂದು ಶ್ರೀ ವಿನೋಬಾಭಾವೆಯವರು ಸೇವಾಪುರ ಆಶ್ರಮದಲ್ಲಿ ಕಳೆದ ೩ ದಿನಗಳಿಂದ ನಡೆಯುತ್ತಿದ್ದ ಅಖಿಲಭಾರತಸೇವಾ ಸಮ್ಮೇಳನದಲ್ಲಿ ಭಾಷಣಮಾಡುವ ಕಾಲದಲ್ಲಿ ತಿಳಿಸಿದರು.

ಭಾರತಕ್ಕೆ ಗೋಧಿ

ಮುಂದಿನವರ್ಷದಿಂದ ಆಫ್ಘಾನಿಸ್ತಾನ, ಭಾರತಕ್ಕೂ ಮತ್ತು ಇತರ ದೇಶಗಳಿಗೂ ಒಂದಷ್ಟು ಪ್ರಮಾಣದಲ್ಲಿ ಗೋಧಿಯನ್ನು ರಫ್ತು ಮಾಡುವ ಸ್ಥಿತಿಯಲ್ಲಿದೆ. ಆಫ್ಘಾನಿಸ್ತಾನದ ನೀರಾವರಿ ಯೋಜನೆಗಳ ಸೂತ್ರಧಾರಿ ಅಮೆರಿಕನ್ ಎಂಜನಿಯರ್ ಒಬ್ಬರು ನುಡಿದಿದ್ದಾರೆ.

ಕಾಂಗ್ರೆಸ್ ಮಂತ್ರಿಗಳು ವಿರೋಧಪಕ್ಷ ಸೇರಿದರು

ಪೆಪ್ಸು ಶಾಸನ ಸಭೆಯಲ್ಲಿ ಸಭಾಧ್ಯಕ್ಷರ ಚುನಾವಣೆ ನಡೆಯುವ ವೇಳೆಯಲ್ಲಿ ಕಾಂಗ್ರೆಸ್ ಪಕ್ಷದವರು ರಚಿಸಿರುವ ಮಂತ್ರಿಮಂಡಲದಲ್ಲಿರುವ ಉಪಮಂತ್ರಿ, ಶ್ರೀ ಚೌಧರಿ ಕಹನ್‌ಸಿಂಗ್‌ರವರು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆಯಿತ್ತಿರುವುದಾಗಿ ತಿಳಿಸಿ ವಿರೋಧಪಕ್ಷದವರೊಡನೆ ಕುಳಿತರು- ಶ್ರೀಗಳಾದ ಲೇಖ್‌ರಾಂ ಮತ್ತು ಓಂಕಾರಸಿಂಗ್ ಎಂಬ ಇಬ್ಬರು ಕಾಂಗ್ರೆಸ್ ಪಕ್ಷದ ಶಾಸನಸಭಾ ಸದಸ್ಯರು ಸಹ ಹಾಗೆಯೇ ಮಾಡಿ ವಿರೋಧಪಕ್ಷವಾದ ಯುನೈಟೆಡ್ ಫ್ರಂಟ್‌ನೊಡನೆ ಸೇರಿದರು- ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿ ಸೋತು ಚೌಧರಿ ಕಹನ್‌ಸಿಂಗ್‌ರವರು ಅಧ್ಯಕ್ಷರಾಗಿ ಚುನಾಯಿತರಾದರು-

ಪಕ್ಷಕ್ಕೊಮ್ಮೆ ಪತ್ರಿಕಾ ಗೋಷ್ಠಿ

ಪ್ರತಿಪಕ್ಷವೂ ಪತ್ರಿಕಾಗೋಷ್ಠಿಯನ್ನು ಕಾವ್ಯ ನಡೆಸುವುದಾಗಿ ಮದ್ರಾಸ್ ಮುಖ್ಯಮಂತ್ರಿಗಳು ತಿಳಿಸಿರುವರು.

ಜಮೀನು ಇಲ್ಲ

ರಾಜಕೀಯದಲ್ಲಿ ನೊಂದವರಿಗೆ ಉಚಿತವಾಗಿ ಜಮೀನನ್ನು ಕೊಡುತ್ತಿದ್ದುದನ್ನು ಕೂಡಲೇ ನಿಲ್ಲಿಸಬೇಕೆಂದು ಮದ್ರಾಸ್ ಮುಖ್ಯಮಂತ್ರಿಗಳು ಎಲ್ಲಾ ಜಿಲ್ಲಾ ಕಲೆಕ್ಟರುಗಳಿಗೆ ಸೂಚನೆಯಿತ್ತಿರುವುದಾಗಿ ಹೇಳಲಾಗಿದೆ.

ರೇಷ್ಮೆ ಕೊಳ್ಳುವವರೇ ಇಲ್ಲ

ಬೆಂಗಳೂರಿನಲ್ಲಿ ರೇಷ್ಮೆ ಬಟ್ಟೆಯ ಬೆಲೆಗಜ ಒಂದಕ್ಕೆ ೨-೩ ರೂಪಾಯಿ ಕಡಿಮೆ. ಹಾಗಿದ್ದರೂ ರೇಷ್ಮೆ ಬಟ್ಟೆಯನ್ನು ಕೊಳ್ಳುವವರೇ ಇಲ್ಲದೆ ಸುಮಾರು ೫೦ ಲಕ್ಷ ರೂಪಾಯಿನ ರೇಷ್ಮೆ ಪದಾರ್ಥಗಳು ಬಿದ್ದಿದೆಯೆಂದು ಹೇಳಲಾಗಿದೆ

ಮೇ ಮಾಹೆಯಲ್ಲಿ ಶಾಸನಸಭೆ ಅಧಿವೇಶನ

ಬೊಂಬಾಯಿನಲ್ಲಿ ಶಾಸನಸಭಾಧಿವೇಶವು ಮೇ ಮಾಹೆ ಮೊದಲನೇ ವಾರದಲ್ಲಿ ನಡೆಯುತ್ತದೆಯೆಂದು ಹೇಳಲಾಗಿದೆ-

ಅಧಿಕಾರ ಸ್ವೀಕಾರ

ಬೊಂಬಾಯಿ ಹೊಸ ಮಂತ್ರಿಮಂಡಲವು ಸೋಮವಾರ ಬೆಳಗ್ಗೆ ಅಧಿಕಾರ ಸ್ವೀಕರಿಸುವುದೆಂದು ತಿಳಿದುಬರುತ್ತದೆ.

ಮುನಿಷಿಯವರು ಬೆಂಗಳೂರಿಗೆ

ಬೆಂಗಳೂರು ಏ ೧೬

ಕೇಂದ್ರ, ಆಹಾರಸಚಿವ ಶ್ರೀ ಕೆ. ಎಂ. ಮುನಿಷಿಯವರು ಇದೇ ೨೭ನೇ ತಾರೀಖು ಬೆಂಗಳೂರಿಗೆ ಆಗಮಿಸಿ ೨೮ನೇ ತಾರೀಖು ಮಂಡ್ಯದಲ್ಲಿ ವಿಶ್ವೇಶ್ವರಯ್ಯ ನಾಲಾಪ್ರದೇಶದಲ್ಲಿ ಫೋರ್ಡ್ ನಿಧಿಯಿಂದ ಸ್ಥಾಪಿತವಾಗುವ ವ್ಯವಸಾಯಕೇಂದ್ರದ ಪ್ರಾರಂಭೋತ್ಸವವನ್ನು ನಡೆಸಿ ಮಾರನೇದಿನ ನಾಗಪುರಕ್ಕೆ ತೆರಳುವರು.

ಪೌರಸಭೆಯ ಬಡ್ಜೆಟ್ ಅಧಿವೇಶನ

ಮೈಸೂರು ಏ ೧೬

ಮೈಸೂರು ಪುರಸಭೆಯ ಮುಂದುವರಿದ ಬಡ್ಜೆಟ್ ಅಧಿವೇಶನವು ಇದೇ ೧೯ನೇ ತಾ॥ ಮಧ್ಯಾನ್ಹ ಸೇರಲಿದೆ-

ತಾತ್ಕಾಲಿಕ ಅಧ್ಯಕ್ಷರು

ಪಾರ್ಲಿಮೆಂಟ್ ಅಧಿವೇಶನವು ನಿನ್ನೆ ರದ್ದಾದುದರಿಂದ, ರಾಷ್ಟ್ರಾಧ್ಯಕ್ಷರು ಶ್ರೀ ಮಾವಳಂಕರ್‌ರವರನ್ನು ಹೊಸ ಪಾರ್ಲಿಮೆಂಟಿನ ತಾತ್ಕಾಲಿಕ ಅಧ್ಯಕ್ಷರನ್ನಾಗಿ ನೇಮಿಸಿದ್ದಾರೆ

ನಿನ್ನೆ ಅವರು ಹೊಸ ಪಾರ್ಲಿಮೆಂಟಿನ ಸದಸ್ಯರಾಗಿ ಅನಂತರ ಅಧ್ಯಕ್ಷರಾಗಿ ರಾಷ್ಟ್ರಾಧ್ಯಕ್ಷರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕಾರಮಾಡಿದರು. ಆಗ ಪ್ರಧಾನಿ ನೆಹರೂರವರೂ, ಪಾರ್ಲಿಮೆಂಟಿನ ಸಚಿವ ಶ್ರೀ ಸತ್ಯನಾರಾಯಣ ಸಿನ್ಹ ಮುಂತಾದವರು ಹಾಜರಿದ್ದರು. ಮುಂದಿನಮಾಹೆ ೧೫ ನೇ ತಾ॥ ಹೊಸ ಅಧ್ಯಕ್ಷರ ಚುನಾವಣೆಯು ನಡೆಯುತ್ತದೆ. ಶ್ರೀ ಮಾವಲಂಕರ್‌ರವರನ್ನೇ ಖಾಯಂ ಅಧ್ಯಕ್ಷರನ್ನಾಗಿ ಚುನಾಯಿಸಲಾಗುತ್ತದೆಯೆಂದು ಹೇಳಲಾಗಿದೆ.

ವಿದ್ಯಾಸಚಿವರ ಪ್ರವಾಸ

ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ೧೯ ನೇ ತಾ॥ ಶಿವನಸಮುದ್ರಕ್ಕೆ ಭೇಟಿಯಿತ್ತು, ಅಲ್ಲಿಯ ವಿದ್ಯುತ್ ಕೇಂದ್ರವನ್ನು ಪರಿಶೀಲಿಸಿ, ಕೊಳ್ಳೆಗಾಲಕ್ಕೆ ಹೋಗಿ ಅಲ್ಲಿಯ ಲೋಕಲ್‌ಬೋರ್ಡ್ ಹೈಸ್ಕೂಲಿನ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸುವರು. ೨೦ ನೇ ತಾ॥ ಬೆಂಗಳೂರಿಗೆ ಹಿಂತಿರುಗುವರು.

ಐಸೆನ್ ಹೋವರ್ ವಿಜಯ

ಅಮೆರಿಕದ ಅಧ್ಯಕ್ಷತೆಗಾಗಿ ನ್ಯೂಜೆರ್ಸಿ ಕ್ಷೇತ್ರದಿಂದ ಪ್ರಾಥಮಿಕ ಚುನಾವಣೆಯಲ್ಲಿ ಜನರಲ್ ಐಸೆನ್ ಹೋವರ್‌ರವರು ರಾಬರ್ಟ್ ಟ್ಯಾಫ್ಟ್‌ರವರನ್ನು ಸೋಲಿಸಿದರು.

ಪಾರ್ಲಿಮೆಂಟ್ ಅಧಿವೇಶನ

ಹೊಸ ಕೇಂದ್ರ ಶಾಸನ ಉಭಯ ಸಭೆಗಳ ಅಧಿವೇಶನವು ಮೇ ೧೩ನೇ ತಾ॥ ನಿಂದ ಸೇರಬೇಕೆಂದು ರಾಷ್ಟ್ರಾಧ್ಯಕ್ಷರ ಆಜ್ಞೆ ಹೊರಬಿದ್ದಿದೆ- ಈಗಿನ ಪಾರ್ಲಿಮೆಂಟ್ ನಿನ್ನೆಯಿಂದ ರದ್ದಾಗಿದೆ-

ಅವಾಮಿ ಲೀಗ್ ಕೋರಿಕೆ

ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್‌ಖಾನ್‌ರವರ ದೇಹಸ್ಥಿತಿಯು ಇತ್ತೀಚೆಗೆ ಕೆಡುತ್ತಲಿರುವುದರಿಂದ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದು ಅವಾಮಿಲೀಗ್ ಗಡಿನಾಡು ಸರ್ಕಾರವನ್ನು ಕೋರಿದೆ-

ಕಾಂಗ್ರೆಸ್ ಸದಸ್ಯತ್ವ

ಕಾಂಗ್ರೆಸ್ ಸದಸ್ಯರನ್ನು ಕೂಡಿಸುವ ಬಗ್ಗೆ ಸದಸ್ಯತ್ವದ ಪುಸ್ತಕಗಳು ಕೇಂದ್ರ ಕಛೇರಿಯಿಂದ ನಗರ ಕಾಂಗ್ರೆಸ್ ಕಛೇರಿಗೆ ಬಂದಿರುವುದಾಗಿಯೂ, ಕಾಂಗ್ರೆಸ್ ಕಾರ್ಯಕರ್ತರುಗಳು ಅವುಗಳನ್ನು ನಗರ ಕಾಂಗ್ರೆಸ್ ಕಛೇರಿಯಿಂದ ಪಡೆದು ಹುರುಪಿನಿಂದ ಸದಸ್ಯರನ್ನು ಕೂಡಿಸುವ ಕಾರ್ಯದಲ್ಲಿ ತೊಡಗಬೇಕೆಂದೂ ಕಾರ್ಯದರ್ಶಿ ಶ್ರೀ ಕೆ. ಎಸ್. ಸೂರ್ಯನಾರಾಯಣರಾಯರು ಕೋರಿರುತ್ತಾರೆ.

ಶ್ರೀ ಮೊರಾರ್ಜಿಯವರ ಮುಖ್ಯಮಂತ್ರಿ

ಬೊಂಬಾಯಿನ ಮುಖ್ಯಮಂತ್ರಿ ಶ್ರೀ ಶ್ರೀ ಬಿ. ಜಿ. ಖೇರ್‌ರವರು ನಿನ್ನೆ ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಅಲ್ಲಿಯ ಗೌರ್ನರ್ ಶ್ರೀ ರಾಜ ಮಹಾರಾಜ ಜಸಿಂಗ್‌ರಿಗೆ ಒಪ್ಪಿಸಿದರು. ಗೌರ್ನರು ಶ್ರೀ ಮೊರಾರ್ಜಿಯವರನ್ನು ಹೊಸ ಮಂತ್ರಿಮಂಡಲ ರಚಿಸಬೇಕೆಂದು ಕೇಳಿರುವರು. ಶ್ರೀ ದೇಶಾಯಿಯವರು ಹೊಸ ಮಂತ್ರಿಮಂಡಲವನ್ನು ರಚಿಸಲು ಒಪ್ಪಿರುವರು. ಹೊಸ ಮಂತ್ರಿಮಂಡಲವು ಅಧಿಕಾರಕ್ಕೆ ಬರುವವರೆಗೂ ಹಳೆಯ ಮಂತ್ರಿಮಂಡಲವೇ ಅಧಿಕಾರದಲ್ಲಿರಬೇಕೆಂದು ಗೌರ್ನರು ತಿಳಿಸಿದ್ದಾರೆ.

ಹೊಸ ಮಂತ್ರಿಮಂಡಲವು ಈಗಿನ ಮಂತ್ರಿಮಂಡಲಿಯಂತೆ ೧೨ ಜನ ಮಂತ್ರಿಗಳಿಂದ ಕೂಡಿರುವುದೆಂದು ಹೇಳಲಾಗಿದೆ. ಅವುಗಳಲ್ಲಿ ಮಹಾರಾಷ್ಟ್ರದಿಂದ ೫ ಮಂತ್ರಿಗಳನ್ನೂ, ಗುಜರಾತಿನಿಂದ ೪ ಮಂತ್ರಿಗಳನ್ನೂ, ಕರ್ನಾಟಕದಿಂದ ಇಬ್ಬರನ್ನೂ ಮತ್ತು ಬೊಂಬಾಯಿಯಿಂದ ಒಬ್ಬರನ್ನೂ ತೆಗೆದುಕೊಳ್ಳಬಹುದೆಂದು ಹೇಳಲಾಗಿದೆ.

ಈಜಿಪ್ಟಿನ ಆಶಯ

ಭಾರತದೊಡನೆ ವ್ಯಾಪಾರ ನಡೆಸಬೇಕೆಂದು ಈಜಿಪ್ಟ್ ಬಹಳ ಆಶಯದಿಂದ ಕೂಡಿದೆ ಎಂದು ಈಜಿಪ್ಟಿನ ವಾಣಿಜ್ಯ ಪ್ರತಿನಿಧಿ ಕಲ್ಕತ್ತಾದಲ್ಲಿ ತಿಳಿಸಿದರು. ಈಜಿಪ್ಟಿನಲ್ಲಿ ಗೋಣಿಚೀಲಗಳಿಗೆ ಬಹಳ ಬೆಲೆಯಿದೆಯೆಂದೂ ಅವರು ಹೇಳಿದರು.

ಶ್ರೀ ಕೃಷ್ಣರಾವ್ ಆಯ್ಕೆಯ ರದ್ದಿಗೆ ಒತ್ತಾಯ

ಹಾಲಿ ಮದ್ರಾಸ ಕಾಂಗ್ರೆಸ್ ಸರ್ಕಾರದ ಕೈಗಾರಿಕಾ ಸಚಿವರಾದ ಡಾ|| ಯು. ಕೃಷ್ಣರಾಯರು ಸಂಸ್ಥಾನ ಶಾಸನಸಭೆಗೆ ಆರಿಸಲ್ಪಟ್ಟಿರುವುದರ ಅರ್ಹತೆಯನ್ನು ಪ್ರಶ್ನಿಸಿ ಮದರಾಸಿನ ಸಂಯುಕ್ತ ಪ್ರಜಾಪಕ್ಷದ ನಾಯಕ ಶ್ರೀ ಟಿ. ಪ್ರಕಾಶಂರವರು ಕೇಂದ್ರ ಚುನಾವಣಾ ಕಮೀಷನ್ನಿಗೆ ಒಂದು ಚುನಾವಣಾ ತಕರಾರು ಅರ್ಜಿ ಹಾಕಿರುವುದಾಗಿ ತಿಳಿಸಿರುವರು.

ಅಕ್ಕಿ ಪಡಿತರ ಹೆಚ್ಚುವುದಿಲ್ಲ

ಅಕ್ಕಿ ಪಡಿತರವನ್ನು ಹೆಚ್ಚಿಸಲು ಮದ್ರಾಸ್ ಪ್ರಾಂತ್ಯದ ಆಹಾರ ಪರಿಸ್ಥಿತಿಯು ಉತ್ತಮಗೊಂಡಿಲ್ಲವೆಂದು ಆಹಾರಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ತಿಳಿಸಿದರು.

ಆಹಾರ ಕ್ಷೇಬಂಕೆಯೂ, ಕೇಂದ್ರದಿಂದ ಸಹಾಯವೂ ಸರಿಯಾಗಿ ಬರುವುದಾದರೂ, ಈಗಿನ ಏಳು ಔನ್ಸ್ ಪಡಿತರವನ್ನು ಮುಂದುವರಿಸಲು ಸುಮಾರು ೩೦,೦೦೦ ಟನ್ ಅಧಿಕ ಆಹಾರ ಬೇಕಾಗಿದೆ, ಎಂದು ಆಹಾರ ಮಂತ್ರಿಗಳು ತಿಳಿಸಿರುವರು.

ಸಿಕ್ಕಿಂಗೆ ಪಂ|| ನೆಹರೂರವರ ಭೇಟಿ

ಪ್ರಧಾನಿ ಪಂ|| ನೆಹರೂರವರು ಈ ತಿಂಗಳು ಕೊನೆಯಲ್ಲಿ ಸಿಕ್ಕಿಂಗೆ ಭೇಟಿ ಕೊಡಲಿರುವರು. ಇದು ಮೊದಲನೆಯ ಬಾರಿ ಅವರು ಸಿಕ್ಕಿಂಗೆ ಭೇಟಿ ಕೊಡುವುದು.

೨೬ನೇ ತಾ|| ಡಾರ್ಜೀಲಿಂಗಿಗೆ ತೆರಳಿ ಅಲ್ಲಿಂದ ಸಿಕ್ಕಿಂಗೆ ತೆರಳುವರು. ನಂತರ ೩೦ ರಂದು ದೆಹಲಿಗೆ ವಾಪಸ್ಸಾಗುವರೆಂದು ಹೇಳಲಾಗಿದೆ.

ನೀರು ಸರಬರಾಜಿ ಅಧಿವೇಶನ

ಉಷ್ಣವಲಯದ ಪ್ರದೇಶಗಳಲ್ಲಿನ ನೀರಿನ ಸಮಸ್ಯೆಯನ್ನು ಚರ್ಚಿಸಲು ಅಂಕಾರದಲ್ಲಿ ಈ ತಿಂಗಳ ಅಂತ್ಯದಲ್ಲಿ ೧೫ ದೇಶಗಳ ೨೭ ವಿಜ್ಞಾನಿಗಳು ಸಭೆ ಸೇರುವರು. ಈ ಸಭೆಯನ್ನು ಯುನೆಸ್ಕೊ ಮತ್ತು ಟರ್ಕಿ ಸರ್ಕಾರಗಳು ಕರೆದಿವೆ. ಏಪ್ರಿಲ್ ೨೫ ರಂದ ಪ್ರಾರಂಭವಾಗುವ ಈ ಸಭೆಯಲ್ಲಿ ಭೂಮಿಯ ತಳದಲ್ಲಿನ ನೀರು ಸರಬರಾಜಿನ ವ್ಯವಸ್ಥೆಯ ಬಗ್ಗೆ ಮುಖ್ಯವಾಗಿ ಚರ್ಚಿಸಲಾಗುವುದು.

ಈ ಸಮ್ಮೇಳನದಲ್ಲಿ ಭಾರತವೂ ಭಾಗವಹಿಸುವುದು. ಜೊತೆಗೆ ಇಂಗ್ಲೆಂಡ್, ಅಮೆರಿಕ, ಫ್ರಾನ್ಸ್, ಇಸ್ರೇಲ್, ಮೆಕ್ಸಿಕೊ, ಪಾಕೀಸ್ಥಾನ, ಆಫ್ರಿಕಾ ದೇಶಗಳೂ ಭಾಗವಹಿಸುವುವು.

ಬೊಂಬಾಯಿಯಲ್ಲಿ ಶ್ರೀ ಪತಂಜಲಿಶಾಸ್ತ್ರಿ

ಭಾರತದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪತಂಜಲಿಶಾಸ್ತ್ರಿಯವರು ಮೊನ್ನೆ ಮಧ್ಯಾಹ್ನ ಬೊಂಬಾಯಿ ಹೈಕೋರ್ಟಿಗೆ ತಮ್ಮ ಎಂಡನೆಯ ಭೇಟಿಯನ್ನಿತ್ತರು. ಬಾರ್ ಅಸೋಸಿಯೇಷನ್ನಿನ ಸದಸ್ಯರುಗಳು ಅವರನ್ನು ಭೇಟಿಮಾಡಿದರು. ಅನಂತರ ಶ್ರೇಷ್ಠ ನ್ಯಾಯಮೂರ್ತಿಗಳು ಬಾರ್ ಕೌನ್ಸಿಲ್ ಸದಸ್ಯರಿಗೆ ನ್ಯಾಯಾಧೀಶರ ಪುಸ್ತಕಭಂಡಾರ ಭವನದಲ್ಲಿ ಭೇಟಿ ದಯಪಾಲಿಸಿದರು. ಸಂಜೆ ಅವರ ಗೌರವಾರ್ಥವಾಗಿ ಬಾರ್ ಅಸೋಸಿಯೇಷನ್ನಿನವರು ಸತ್ಕಾರಕೂಟವೊಂದನ್ನೇರ್ಪಡಿಸಿದ್ದರು.

ಬಾಂಬರ್ ವಿಮಾನಪಘಾತ

ಪ್ರಪಂಚದಲ್ಲೇ ದೊಡ್ಡದಾದ ಬಾಂಬರ್ ವಿಮಾನವು ಮೊನ್ನೆ ವಾಷಿಂಗ್‌ಟನ್ ಬಿಟ್ಟ ಸ್ವಲ್ಪ ಹೊತ್ತಿನಲ್ಲೆ ಅಪಘಾತಕ್ಕೀಡಾಗಿ ಅದರಲ್ಲಿದ್ದ ೧೭ ಜನ ಪ್ರಯಾಣಿಕರಲ್ಲಿ ೧೫ ಜನರು ಮರಣಹೊಂದಿದರು. ಇಬ್ಬರ ಸ್ಥಿತಿ ಬಹಳ ತೀವ್ರವಾಗಿದೆ.

ಸಭಾತ್ಯಾಗ

ಪೆಪ್ಸು ರಾಜಪ್ರಮುಖರು ನಿನ್ನೆ ಶಾಸನಸಭೆಯ ಅಧ್ಯಕ್ಷ ಭಾಷಣವನ್ನು ಮಾಡಲು ಬಂದಾಗ ಸಭೆಯು ವಿರೋಧಪಕ್ಷದವರು ಸಭಾತ್ಯಾಗ ಮಾಡಿದರು.

ಫೋರ್ಡ್ ನಿಧಿಯ ವರದಿ

ಫೋರ್ಡ್ ನಿಧಿ ಸಂಸ್ಥೆಯವರನ್ನು ಭಾರತ ಪಾಕೀಸ್ತಾನ ದೇಶಗಳು ಸ್ವಾಗತ ಮಾಡಿ ಹೃತ್ಪೂರ್ವಕ ಸಹಕಾರ ಮಾಡಿರುವುದರಿಂದಲೂ ಭಾರತ ಪಾಕೀಸ್ಥಾನ ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಫೋರ್ಡ್ ನಿಧಿಯಿಂದ ೬,೫೫೦,೭೦೦ ಡಾಲರುಗಳನ್ನು ಕೊಡಲಾಗಿದೆ. ದೇಶದ ಜನರು ತಮ್ಮ ಜೀವನಮಟ್ಟವನ್ನು ಹೆಚ್ಚಿಸಿಕೊಳ್ಳಲೆಂದು, ಅಲ್ಲಿಯ ವಿದ್ಯಾಭ್ಯಾಸವನ್ನು ಹೆಚ್ಚುಮಾಡಿ ಸಮಾಜಾಭಿವೃದ್ಧಿಯನ್ನು ಮಾಡಲೆಂಬುದೇ ಈ ನಿಧಿಯ ಉದ್ದೇಶ.

ಈ ನಿಧಿಯ ಸಹಾಯವು ಕೇವಲ ಹಿಂದುಳಿದ ಮಾಡದೆ ಇದ್ದ ಕೆಲಸಗಳನ್ನು ಪೂರ್ತಿಮಾಡಲು ಸಹಾಯಮಾಡುವುದೇ ಆಗಿದೆ. ಯಾವ ದೇಶದ ಸಂಸ್ಕೃತಿಯ ಮೇಲೂ ಅಮೇರಿಕದ ನಡೆನುಡಿಗಳನ್ನು ಹೇರುವ ಉದ್ದೇಶ ಈ ನಿಧಿಯದಲ್ಲ.

'ಶಾಂತಿಯ ಸಾಧನೆ'ಯೆ ಈ ನಿಧಿಯ ಇನ್ನೊಂದು ಮುಖ್ಯ ಉದ್ದೇಶ. ಆ ದೃಷ್ಟಿಯಿಂದ ಪ್ರಪಂಚದ ಹಿಂದುಳಿದ ರಾಷ್ಟ್ರಗಳಿಗೆ ಸಹಾಯ ಮಾಡಿದಾಗಿದೆ. ಎಂದು ನಿಧಿಯ ಅಧ್ಯಕ್ಷ ಮಿ|| ಪಾಲ್ ಆಫ್‌ಮನ್‌ರು ತಿಳಿಸಿದ್ದಾರೆ.

ಭಾರತದ ಆಹಾರ ಕ್ಷಾಮವನ್ನು ತಡೆಗಟ್ಟಲು ವ್ಯವಸಾಯ ಪರಿಣತರನ್ನು ಈ ನಿಧಿಯಿಂದ ಒದಗಿಸಲಾಗಿದೆ. ಮಹಾತ್ಮ ಗಾಂಧಿಯವರ ಹೆಸರಿನಲ್ಲಿ ದೆಹಲಿಯಲ್ಲಿ ಒಂದು ಸಮಾಜಸೇವಾ ಕೇಂದ್ರವನ್ನು ಹರಿಜನರಿಗಾಗಿ ಈ ನಿಧಿಯಿಂದ ಸ್ಥಾಪಿಸಲಾಗುವುದು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

(ಸೀತಾವಿಲಾಸ ಅಗ್ರಹಾರದ ಹಿಂಬಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಪಂಜಾಬಿಗೆ ಹೊಸ ಮಂತ್ರಿಮಂಡಲ

ನಿನ್ನೆ ಪಂಜಾಬಿನ ಹೊಸ ಮಂತ್ರಿಮಂಡಲವು ಶ್ರೀ ಭೀಮಸೇನಸಾಚಾರ್‌ರವರ ನಾಯಕತ್ವದಲ್ಲಿ ಅಲ್ಲಿಯ ರಾಜಪ್ರಮುಖರ ಮುಂದೆ ಅಧಿಕಾರವನ್ನು ವಹಿಸಿಕೊಂಡಿದೆ. ಮಂತ್ರಿಮಂಡಲವು ೮ ಜನರಿಂದ ಕೂಡಿದೆ.

ಪೇಟೆ ಧಾರಣೆ

ಮೈಸೂರು ತಾ|| 17-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		12-8	19-6
ಹೊಂಗೆಬೀಜ	,,	3-0	12-14
ಹುರುಳಿ	,,	30-6	31-0
ಹೆಸರು	,,	30-10	60-4
ಮೆ. ಕಾಯಿ ಮೂಟೆಕ್ಕೆ		9-2	16-0
ಹುಣಸೇಹಣ್ಣು	,,	2-1	3-1
ಸೀಗೆಕಾಯಿ	,,	2-13	3-7
ತೆಂಗಿನಕಾಯಿ 1100ಕ್ಕೆ		139	236

ಚಿನ್ನ ಬೆಳ್ಳಿ ದರಗಳು

17-4-52	ರೂ.
ಸವರಿನ್	66-0
,,	66-2
ಚಿನ್ನ ತೊಲ	91-14
,, ಮೂಸ	90-8
ಬೆಳ್ಳಿ 100 ತೊಲ	161-8
,, ತೊಲ	1-11

ರಾಜಕಮಲ್

18—4—52ರಿಂದ

ಜನಭರಿತವಾದ 6ನೇ ವಾರ

ವಿಜಯಾರವರ—

ಮದುವೆ ಮಾಡಿ ನೋಡು

(ತೆಲುಗು)

ಪಾತ್ರ:— ಎನ್. ಟಿ. ರಾಮರಾವ್, ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎಸ್.ವಿ.ರಂಗರಾವ್, ಜೋಗ್‌ರಾವ್.

ವುಡ್ ಲ್ಯಾಂಡ್ಸ್

೧೮—೪—೫೨ ರಿಂದ

ಜನಭರಿತವಾದ ೨ನೇ ವಾರ

ದಿನವೂ ೩ ಆಟಗಳು

- ಬೇತಾಬ್ -

(ಹಿಂದಿ)

ಪಾತ್ರ:—ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ಕಾಂಪ್ಲಿಮೆಂಟ್ ಮತ್ತು ಫ್ರೀ ಪಾಸುಗಳನ್ನು ೩ ವಾರ ಮನ್ನಾ ಮಾಡಿರುತ್ತೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಲಕ್ಷ್ಮಣ ಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೯ ೪—೧೯೫೨ನೇ ಶನಿವಾರ [ಸಂಚಿಕೆ ೧೯೩

ಪೆಪ್ಸುವಿನಲ್ಲಿ ಹೊಸ ಕಾಂಗ್ರೆಸ್ ಸರ್ಕಾರದ ರಾಜೀನಾಮೆ

ಮೈಸೂರಿನಲ್ಲಿ ಶಿಕ್ಷಣನೀತಿ ಬದಲಾವಣೆಗಾಗಿ ಶಿಕ್ಷಣ ಅಧಿಕಾರಿಗಳ, ಪರಿಣಿತರ ಸಮ್ಮೇಳನ

೯೦೦ ಮಂದಿಯನ್ನು ಪೆಟ್ರೋಲ್ ಸುರಿದು ಸುಡಲಾಯಿತು

ಕೊರಿಯಾದಲ್ಲಿ ವಿಶ್ವಸಂಸ್ಥೆಯ ಸೇನೆಗಳು ಯುದ್ಧ ಖೈದಿಗಳನ್ನು ಅನ್ಯಾಯವಾಗಿ ಅಮಾನುಷ ಕೊಲೆಗೆ ಗುರಿಮಾಡಿದ ಮತ್ತು ಕ್ರಿಮಿಯುದ್ಧ ನಡೆಸಿದ ಅಂತರರಾಷ್ಟ್ರೀಯ ಲಾಯರುಗಳ ಕಮಿಷನಿನ ನಾಯಕರಾದ ಹೆನ್ರಿ ಬ್ರ್‌ರವರು ತಮ್ಮ ಹೇಳಿಕೆಯನ್ನು ಹೊರಗೆಡಹಿ ಈ ಕೆಳಗಿನಂತೆ ತಿಳಿಸಿದ್ದಾರೆ.

ಕೊರಿಯಾ ಮತ್ತು ಚೀನಾಗಳ ಮೇಲೆ ಅಮೆರಿಕನರ ವಿಮಾನಗಳ ಕ್ರಿಮಿ ಉತ್ಪಾದಕ ಹುಳುಗಳನ್ನು ಅಪಾಯಕರ ವಾಯುವನ್ನೂ ಚೆಲ್ಲಿದುದಕ್ಕೆ ಪ್ರತ್ಯಕ್ಷ ಸಾಕ್ಷಿಗಳು ದೊರೆತಿವೆ.

ಸಾಮೂಹಿಕ ಕೊಲೆಯ ಬಗ್ಗೆ ಬೇಕಾದಷ್ಟು ಆಧಾರಗಳಿವೆ. ೧೯೫೦ನೇ ಅಕ್ಟೋಬರ್ ೧೮ ರಲ್ಲಿ ೩೦೦ ಚಿಕ್ಕಮಕ್ಕಳನ್ನೊಳಗೊಂಡ ೯೦೦ ಜನರನ್ನು ಇಂಚಾನ್ ಎಂಬಲ್ಲಿ ಒಂದೇ ಕಡೆ ತುರುಕಿ ಅವರ ಮೇಲೆಲ್ಲಾ ಪೆಟ್ರೋಲ್ ಚೆಲ್ಲಿ ಅಮೆರಿಕದ ದಂಡನಾಯಕ ಹ್ಯಾರಿಸನ್ ಎಂಬುವರ ಆಜ್ಞೆ ಮೇರೆಗೆ ಸುಟ್ಟುಹಾಕಲಾಯಿತು. ಇದು ಸಾಮೂಹಿಕ ಕೊಲೆಯ ಒಂದು ಉದಾಹರಣೆ. ಹ್ಯಾರಿಸನ್‌ರವರು ಈ ಕೊಲೆಯ ದೃಶ್ಯದ ಚಿತ್ರವನ್ನು ತೆಗೆದುಕೊಂಡಿದ್ದಾರೆಂಬುದಾಗಿ ಆ ಸ್ಥಳೀಯ ಮುಖಂಡ ಹೇಳಿದ್ದಾರೆ.

ಶ್ರೀ ತಾಂಡನ್‌ರವರು ಉಪಚುನಾವಣೆಗೆ

ಅಲಹಾಬಾದ್ ಜಿಲ್ಲೆಯ ಪಶ್ಚಿಮ ಕ್ಷೇತ್ರದಿಂದ ಕೇಂದ್ರ ಪಾರ್ಲಿಮೆಂಟಿಗೆ ಚುನಾಯಿತರಾಗಿದ್ದು ಈಗ ಮದ್ರಾಸ್ ಗೌರ್ನರ್ ಪದವಿ ಸ್ವೀಕರಿಸಿದ ಶ್ರೀ ಶ್ರೀಪ್ರಕಾಶಂರವರ ಸ್ಥಾನಕ್ಕೆ ನಡೆಯುವ ಉಪಚುನಾವಣೆಯಲ್ಲಿ ಮಾಜಿ ಕಾಂ|| ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ತಾಂಡನ್ ಸ್ಪರ್ಧಿಸುವರು.

ಲಂಚನಿರೋಧ ಶಾಖೆ ರದ್ದು

ಬೆಂಗಳೂರು ೧೮

ಲಂಚನಿರೋಧ ಶಾಖೆಯನ್ನು ಸರ್ಕಾರವು ಸಧ್ಯದಲ್ಲೇ ರದ್ದುಗೊಳಿಸಿ ಒಂದೂ ಮುಕ್ಕಾಲು ಲಕ್ಷ ರೂಪಾಯಿಗಳ ವೆಚ್ಚವನ್ನು ಉಳಿಸಲು ನಿರ್ಧರಿಸಿರುವುದಾಗಿ ಹೇಳಲಾಗಿದೆ.

ಕಾಂಗ್ರೆಸ್ ಸರ್ಕಾರವನ್ನು ಟೀಕಿಸಬಾರದು

ಪ್ರದೇಶ ಕಾಂಗ್ರೆಸ್ ಸಮಿತಿಗಳು ಮಂತ್ರಿಮಂಡಲಗಳೊಂದಿಗೆ ಪೂರ್ಣ ಸಹಕಾರದಿಂದ ನಡೆದುಕೊಳ್ಳಬೇಕೆಂದು 'ತಿಳಿಸುತ್ತಾ, 'ಕಾಂಗ್ರೆಸ್ಸಿಗರು ಸರ್ಕಾರವನ್ನು ಅಥವ ಅದರ ನಿರ್ಧಾರಗಳನ್ನು ಬಹಿರಂಗವಾಗಿ ಟೀಕಿಸುವುದರಲ್ಲಿ ಅಥವ ಹಳಿಯುವುದರಲ್ಲಿ ತೊಡಗಬಾರದು' ಎಂದು ತಿಳಿಸಿ ಸದಸ್ಯರಿಗೆ ಅಥವ ಸಮಿತಿಗಳಿಗೆ ಪಕ್ಷದಲ್ಲಿಯೇ ಚರ್ಚೆ ನಡೆಸಲು ಪೂರ್ಣಾವಕಾಶ ಕೊಡಲ್ಪಡಬೇಕು ಆದರೆ ಒಂದು ನಿರ್ಧಾರವನ್ನು ತೆಗೆದುಕೊಂಡ ಮೇಲೆ ಅದನ್ನು ಬಹಿರಂಗವಾಗಿ 'ನಮ್ಮ ಸಂಬಂಧವಲ್ಲದ್ದು' ಎಂದು ತಿಳಿಸಿ ಸಂಸ್ಥೆಯನ್ನು ಅಥವ ಸರ್ಕಾರವನ್ನು ವಿವಾದಕ್ಕೆ ಒಳಗಾಗುವಂತೆ ಮಾಡಬಾರದು ಇಂತಹ ಶಿಸ್ತು ವಿವಾದ ವರ್ತನೆಗಳ ವಿಷಯದಲ್ಲಿ ಸಮಿತಿಗಳು ತೀವ್ರ ಗಮನವನ್ನು ಕೊಡಬೇಕು, ಎಂದು ಕಾಂಗ್ರೆಸ್ ಕಾರ್ಯದರ್ಶಿಗಳು ಕಾಂಗ್ರೆಸ್ ಸಮಿತಿಗಳಿಗೆ ತಿಳಿಸಿದ್ದಾರೆ.

ಶಾಸನಸಭಾಧಿವೇಶನ

ಮೈಸೂರು ಏ ೧೮

ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್‌ನ ಸಭೆಯು ಜೂನ್ ೧೬-೧೭ ಅಸೆಂಬ್ಲಿಯು ಜೂನ್ ೧೮ ನೇ ತಾ|| ಸೇರಲಿದೆ. ಉಭಯಶಾಸನ ಸಭೆಗಳ ಸಂಯುಕ್ತ ಸಭೆಯು ಜೂನ್ ೧೯ ರಲ್ಲಿ ಸೇರುತ್ತದೆ ಆಗ ಶ್ರೀ ಪ್ರಮುಖರವರು ಪ್ರಾರಂಭಭಾಷಣಮಾಡುತ್ತಾರೆಂದು ಶಿಕ್ಷಣಸಚಿವ ಶ್ರೀ ಎ ಜಿ. ರಾಮಚಂದ್ರರಾಯರು ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶಿಕ್ಷಣ ಅಧಿಕಾರಿಗಳ ಸಮ್ಮೇಳನ

ಜಿಲ್ಲಾ ಶಿಕ್ಷಣ ಅಧಿಕಾರಿಳಪರಿಣತರ ಸಮ್ಮೇಳನವನ್ನು ಮುಂದಿನವಾರದ ಮೊದಲನೆವಾರದಲ್ಲಿ ನಡೆಸಿ ಶಿಕ್ಷಣನೀತಿ ಬದಲಾವಣೆಗಾಗಿ ಅವರ ಅಭಿಪ್ರಾಯ ಸಂಗ್ರಹಿಸಲಾಗುತ್ತದೆಯೆಂದ ಸಚಿವರು ಹೇಳಿದರು.

ಶಿಕ್ಷಣನೀತಿ

ಹೊಸಸರ್ಕಾರದ ಶಿಕ್ಷಣನೀತಿಯನ್ನು ಕುರಿತು ಮಾತನಾಡುತ್ತಾ, ಆಹಾರನೀತಿಯಾದೊಡನೇ ಎರಡನೇಸ್ಥಾನವನ್ನು ಶಿಕ್ಷಣಕೊಡಲಾಗುತ್ತದೆ. ಶಿಕ್ಷಣನೀತಿಯನ್ನೂ ಸೂಕ್ತ, ಬದಲಾವಣೆಗಳನ್ನು ಮಾಡಬೇಕಾಗಿದೆಯೆಂದರು.

ಹೊಸ ಕಾಂಗ್ರೆಸ್ ಸರ್ಕಾರದ ರಾಜೀನಾಮೆ

ಪೆಪ್ಸು ಶಾಸನಸಭೆಯು ಪ್ರಾರಂಭವಾದಾಗ ರಾಜಪ್ರಮುಖರ ಭಾಷಣ ಸಮಯದಲ್ಲಿ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು.

ಮೊನ್ನೆ ೧೦ ದಿನ ಅಧ್ಯಕ್ಷರ ಚುನಾವಣೆಯಾಗುವಾಗ ಕಾಂಗ್ರೆಸ್ ಸರ್ಕಾರದ ಉಪಸಚಿವ ಶ್ರೀ ಚೌಧರಿಕರನ್‌ಸಿಂಗ್‌ರವರು ಮಂತ್ರಿಸ್ಥಾನಕ್ಕೆ ರಾಜೀನಾಮೆಯನ್ನಿತ್ತರಲ್ಲದೆ ಕಾಂಗ್ರೆಸ್ಸಿಗೂ ರಾಜೀನಾಮೆಯಿತ್ತು, ವಿರೋಧ ಪಕ್ಷವಾದ ಯುನೈಟೆಡ್ ಫ್ರಂಟನ್ನು ಸೇರಿದರು. ಅವರೇ ಶಾಸನಸಭೆಯ ಅಧ್ಯಕ್ಷರಾಗಿ ಚುನಾಯಿತರಾದರು.

ನಿನ್ನೆಯದಿನ ಶಾಸನಸಭೆ ಸೇರಿದಾಗ ವಿರೋಧ ಪಕ್ಷವು ಎರಡು ಅವಿಶ್ವಾಸ ನಿರ್ಣಯಗಳನ್ನು ಮಂಡಿಸಲು ಅಧ್ಯಕ್ಷರು ಅವಕಾಶವಿತ್ತರು. ಮುಖ್ಯಮಂತ್ರಿ ಕರ್ನಲ್ ರಘುಬೀರ್‌ಸಿಂಗ್‌ರವರು ತಮ್ಮ ಮಂತ್ರಿಮಂಡಲವು ರಾಜೀನಾಮೆ ಕೊಡುವುದಾಗಿ ಘೋಷಿಸಿದರು. ಅಲ್ಲದೆ ಒಂದು ಹೇಳಿಕೆಯನ್ನೀಯುತ್ತಾ, ಸಭಾಧ್ಯಕ್ಷರು ಪಕ್ಷದ ನಾಯಕರಿಗೆ ತಿಳಿಸದೆಯೇ ಅವಿಶ್ವಾಸ ನಿರ್ಣಯಗಳನ್ನು ಮಂಡಿಸಲು ಅನುಮತಿಯಿತ್ತಿದುದು ಸಭೆಯ ಸಂಪ್ರದಾಯಕ್ಕೆ ದರುದ್ಧವೆಂದು ಹೇಳಿರುವರು.

ಮುಖ್ಯಮಂತ್ರಿಗಳವರು ರಾಜೀನಾಮೆ ವಿಷಯವನ್ನು ತಿಳಿಸಿದೊಡನೆಯೇ ಅಭಿವೃದ್ಧಿ ಶಾಖಾ ಸಚಿವರೂ ರಾಜೀನಾಮೆಯಿತ್ತು, ಕಾಂಗ್ರೆಸ್ಸನ್ನು ತ್ಯಜಿಸಿ ವಿರೋಧ ಪಕ್ಷ ಸೇರಿದರು.

ಭಾರತದಲ್ಲಿ ಹೊಸದಾಗಿ ಮಹಾಚುನಾವಣೆಗಳು ನಡೆದು ಸ್ಥಾಪಿತವಾದ ಕಾಂಗ್ರೆಸ್ ಸರ್ಕಾರಗಳಲ್ಲಿ ಇದೇ ಪ್ರಥಮ ಸೋಲಾಗಿ ಮಂತ್ರಿಮಂಡಲ ರಾಜೀನಾಮೆ ಕೊಟ್ಟಿದೆ.

ಸರ್ಕಾರದ ಮೋಟಾರಾಗಲಿ ಬಂಗಲೆಯಾಗಲಿ ಬೇಡ!

ಮದ್ರಾಸ್ ನೂತನ ಸಚಿವರಾದ ಶ್ರೀ ಎಸ್. ಆರ್. ನೇತೂಪತಿಯವರು ಪತ್ರಿಕೋದ್ಯೋಗಿಗಳೊಡನೆ ಸಂಭಾಷಿಸುತ್ತಾ ನಾನು ಸರ್ಕಾರ ಕಾರನ್ನಾಗಲೀ ಬಂಗಲೆಯನ್ನಾಗಲಿ ಉಪಯೋಗಿಸದೆ ಅವರ ಖರ್ಚನ್ನು ಉಳಿಸುವೆ ಎಂದು ತಿಳಿಸಿದ್ದಾರೆ.

ಭಾರತ ಪಾಕೀಸ್ತಾನ ನಡುವೆ ಪ್ರಯಾಣ ರಹದಾರಿ

ಭಾರತ-ಪಾಕೀಸ್ತಾನಗಳ ನಡುವೆ ಪ್ರಯಾಣಮಾಡಲು ಪಾಸ್‌ಪೋರ್ಟ್ ಪಡೆಯಬೇಕೆಂದು ಪಾಕೀಸ್ತಾನ ಸರ್ಕಾರವು ಸಧ್ಯದಲ್ಲಿಯೇ ಆಜ್ಞೆ ಮಾಡಲಿದೆಯೆಂದು ಹೇಳಲಾಗಿದೆ ಪ್ರಕೃತ ಭಾರತ ಪಶ್ಚಿಮ ಪಾಕೀಸ್ಥಾನದ ನಡುವೆ ಓಡಾಟಕ್ಕೆ ಪಾಸ್‌ಪೋರ್ಟ್ ಪಡೆಯಬೇಕಾಗಿದೆಯೇ ವಿನಹ ಭಾರತ ಪಾಕೀಸ್ತಾನದ ನಡುವೆ ಬೇಕಾಗಿಲ್ಲ.

ಭಾರತಕ್ಕೆ ಕೆನಡ ಸಹಾಯ

ಕೊಲಂಬೋ ಯೋಜನೆಯ ರೀತ್ಯಾ ೫೧-೫೨ನೇ ವರ್ಷಕ್ಕೆ ಕೆನಡಾವು ಭಾರತಕ್ಕೆ ೨೫,೦೦೦,೦೦೦, ಡಾಲರುಗಳು ನೆರವನ್ನೂ ಪಾಕೀಸ್ಥಾನಕ್ಕೆ ೧೫,೦೦೦,೦೦೦ಡಾಲರುಗಳಷ್ಟು ನೆರವನ್ನೂ ಕೊಡಲು ಒಪ್ಪಿದೆ. ಈ ಮೊಬಲಗಿನ ಪೈಕಿ ೧೦ ದಶಲಕ್ಷ ಡಾಲರುಗಳು ಗೋಧಿಯ ರೂಪದಲ್ಲಿ ಕೊಡಲ್ಪಡುವುದೆಂದೂ ಈ ಗೋಧಿಯ ಮಾರಾಟದಿಂದ ಬಂದ ಹಣವನ್ನು ಮಯೂರಾಕ್ಷಿ ನೀರಾವರಿ ಯೋಜನೆಗೂ ಪಶ್ಚಿಮ ಬಂಗಾಳದ ವಿದ್ಯುಚ್ಛಕ್ತಿ ಯೋಜನೆಗೂ ಉಪಯೋಗಿಸತಕ್ಕದ್ದೆಂದೂ ತಿಳಿದು ಬಂದಿದೆ.

ಟೆಲಿಪ್ರಿಂಟರ್ ಬೇಡ

ಹಿರ್ಚು ಖೋತಾ ಮಾಡಬೇಕಾಗಿರುವುದರಿಂದ ಬೆಂಗಳೂರು ಅರಮನೆ ರಾಜಭವನ ಮತ್ತು ಮುಖ್ಯಮಂತ್ರಿಗಳ ನಿವಾಸಗಳಲ್ಲಿರುವ ಟೆಲಿಪ್ರಿಂಟರ್‌ಗಳು ತೆಗೆದುಹಾಕಲು ಸರ್ಕಾರ ನಿರ್ಧರಿಸಿರುವುದಾಗಿಯೂ ಇದರಿಂದ ೭೫ ಸಾವಿರ ರೂಗಳ ಉಳಿತಾಯವಾಗುತ್ತದೆ.

ಅಮೆರಿಕಾ ಅಧ್ಯಕ್ಷತೆಗೆ ಉಮೇದುವಾರ

ಡೆಮೋಕ್ರಾಟಿಕ್‌ಪಕ್ಷವು ಮಿ|| ಹಾರಿಮನ್‌ರವರನ್ನು ಅಮೆರಿಕಾ ಅಧ್ಯಕ್ಷತೆಯ ಉಮೇದುವಾರರನ್ನಾಗಿ ನಿಲ್ಲಿಸಲು ನಿರ್ಧರಿಸಿರುವುದಾ ಮಿ|| ಟ್ರೂಮನ್‌ರು ಹೇಳಿರುವುದಾಗಿ ವರದಿಯಾಗಿದೆ.

ಮೇ ೩೧ ರೊಳಗೆ ಚುನಾವಣೆ

ಭಾರತಾದ್ಯಂತ ಎಲ್ಲಾ ಪ್ರಾದೇಶಿಕ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿದಲ್ಲಿ ಅಧಿಕಾರವರ್ಗದವರ ಚುನಾವಣೆಯು ಮೇ ೩೧ ರೊಳಗೆ ನಡೆಯಬೇಕೆಂದು ಅಖಿಲಭಾರತ ಕಾಂಗ್ರೆಸ್ ಕಾರ್ಯದರ್ಶಿಗಳು ಸೂಚಿಸಿಯಿತ್ತಿದ್ದಾರೆ.

ಶ್ರೀ ಬಿ. ಎನ್. ಗೋಪಾಲರಾಯರಿಗೆ ೨ ವರ್ಷ ಜೈಲುವಾಸ

ಬೆಂಗಳೂರು ಏ. ೧೮

ಶ್ರೀ ಬಿ. ಎನ್. ಗೋಪಾಲರಾವ್ ಮತ್ತು ಅವರ ಬಂಧುಗಳಾದ ಶ್ರೀ ಪ್ರಹ್ಲಾದರಾವ್ ಎಂಬವರಿಬ್ಬರೂ ಮುಂಡ್ಯದ ಜವಳಿ ವರ್ತಕರಾದ ಶ್ರೀ ಶೀನಪ್ಪ ಎಂಬುವರಿಂದ ೧ ಲಕ್ಷ ರೂಗಳನ್ನು ಪಡೆದು ಅವರಿಗೆ ಮೋಸ ಮಾಡಿರೆಂಬ ಅಪಾದನೆಯ ಮೇಲೆ ಪೋಲೀಸಿನವರು ಹೂಡಿದ್ದ ಮೊಕದ್ದಮೆಯ ವಿಚಾರಣೆ ನಡೆಸಿ ಅಡಿಷನಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ ಎ. ಎಸ್. ರಾಮಚಂದ್ರರಾಯರು ನಿನ್ನೆ ತೀರ್ಪಿತ್ತು, ಶ್ರೀ ಗೋಪಾಲರಾಯರಿಗೆ ಎರಡು ವರ್ಷ ಕಠಿಣ ಶಿಕ್ಷೆ ವಿಧಿಸಿ ಶ್ರೀ ಪ್ರಹ್ಲಾದರಾಯರನ್ನು ಬಿಡುಗಡೆ ಮಾಡಿದರು.

ಶ್ರೀ ನಾಗರಾಜರಾವ್ ಹೋಂ ಸೆಕ್ರೆಟರಿಗಳು

ರಜದ ಮೇಲಿರುವ ಶ್ರೀ ಜಿ ಎನ್ ನಾಗರಾಜರಾಯರನ್ನು ಮೈಸೂರು ಸರ್ಕಾರದ ಹೋಂ ಸೆಕ್ರೆಟರಿಗಳನ್ನಾಗಿ ಮೆಡಿಕಲ್ ಸೆಕ್ರೆಟರಿಗಳಾಗಿದ್ದ ಜ॥ ರಹಿಮತುಲ್ಲಾರವರ ಸ್ಥಾನದಲ್ಲಿ ನೇಮಿಸಲಾಗಿದೆ ಮೆಡಿಕಲ್ ಸೆಕ್ರೆಟರಿ ಸ್ಥಾನವನ್ನು ರದ್ದುಗೊಳಿಸಲಾಗಿದೆಯೆಂದು ಗೊತ್ತಾಗಿದೆ.

ಜ॥ ರಹಿಮತುಲ್ಲಾರವರನ್ನು ಕಂಟ್ರೋಲರ್ ಆಫ್ ಸ್ಟೇಟ್ ಅಕೌಂಟ್ಸ್ ಆಗಿ ನೇಮಿಸಲಾಗಿದೆ.

ರಜದ ಮೇಲಿದ್ದ ಶ್ರೀ ಬಿ ಎಂ ಕೃಷ್ಣರಾವರನ್ನು ಮೈಸೂರಿನಲ್ಲಿ ಸೇಲ್ಸ್ ಟ್ಯಾಕ್ಸ್ ಡೆಪ್ಯುಟಿ ಕಮಿಷನರನ್ನಾಗಿ ನೇಮಿಸಲಾಗಿದೆ.

ಕಮ್ಯೂನಿಸ್ಟರ ಸ್ವಾಗತ

ಕಮ್ಯೂನಿಸ್ಟ್ ಪಕ್ಷದ ಮೇಲಿನ ನಿಷೇಧವನ್ನು ರದ್ದುಗೊಳಿಸಬೇಕೆಂಬ ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರ ಯೋಜನೆಯನ್ನು ಕಮ್ಯೂನಿಸ್ಟ್ ನಾಯಕರು ಸ್ವಾಗತಿಸಿದ್ದಾರೆ. ಕಮ್ಯೂನಿಸ್ಟ್ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ರವಿನಾರಾಯಣ ರೆಡ್ಡಿಯವರು ಈ ಬಗ್ಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ.

"ಸ್ಥಾನ ಬದ್ಧರಿಗೂ ರಾಜಕೀಯ ಬಂದಿಗಳಿಗೂ ಸಾಕಷ್ಟು ಸೌಲಭ್ಯವನ್ನು ಕಲ್ಪಿಸಿಕೊಟ್ಟು, ವ.ರೆಮಾಚಿಕೊಂಡಿರುವ ಕಮ್ಯೂನಿಸ್ಟ್ ಕಾರ್ಯಕರ್ತರ ಮೇಲಿನ ವಾರಂಟ್ ಆಜ್ಞೆಗಳು ರದ್ದಾಗಲೂ ಈ ಯೋಜನೆ ಅನುಕೂಲವಾಗಲೆಂದು ಶ್ರೀ ರವಿನಾರಾಯಣರೆಡ್ಡಿಯವರು ಆಶಿಸಿದ್ದಾರೆ.

ಶೇ॥ ೪೦ರಷ್ಟು ಬೆಲೆಗಳ ಇಳಿತಾಯ

೧೯೫೦ ಜುಲೈವರೆಗೆ, ಅನಾವಶ್ಯಕ ಮತ್ತು ಆಡಂಬರ ಜೀವನದ ವಿರುದ್ಧ ನಡೆಸಿದ ಚಳವಳಿಯ ಪರಿಣಾಮವಾಗಿ ಚೀಣದಲ್ಲಿ ಜೀವನ ವಸ್ತುಗಳ ಬೆಲೆಯನ್ನು ಅಗಾಧವಾಗಿ ಇಳಿಸಲಾಗಿದೆಯೆಂದು ನವಚೀಣಾ ವಾರ್ತಾ ಸಂಸ್ಥೆ ವರದಿ ಮಾಡಿದೆ.

ಜೀವನೋಪಯುಕ್ತ ವಸ್ತುಗಳ ಬೆಲೆ ಶೇಕಡಾ ಎರಡರಿಂದ ಸುಮಾರು ೧೦ರವರೆಗೆ ಇಳಿಸಲ್ಪಟ್ಟಿದೆ ಪೀಕಿಂಗಿನ ಕಾರ್ಮಿಕರ ಸಂಸಾರಗಳಿಗೆ ಈ ಬೆಲೆ ಇಳಿತಾಯವು ಸಂಪಾದನೆಯಲ್ಲಿ ಶೇ॥ ೪೦ರಷ್ಟು ಹೆಚ್ಚಳಕ್ಕೆ ಸಮಾನವಾದಂತಾಯಿತು.

ಹೆರಿಗೆ ಆಸ್ಪತ್ರೆಗೆ ಅಡಿಗೆಯವನ ದಾನ

ಒರಿಸ್ಸಾದಿಂದ ಬಂದು ಕಲ್ಕತ್ತೆಯಲ್ಲಿ ನೆಲೆಸಿರುವ ಬೋನೋಮಾಲಿಠಾಕೂರ್ ಎಂಬ ೪೫ ವಯಸ್ಸಿನ ಬ್ರಾಹ್ಮಣ ಅಡುಗೆಯವನೊಬ್ಬನು ತನ್ನ ಜೀವಮಾನ ಕಾಲದಲ್ಲಿ ಕೂಡಿಟ್ಟಿರುವ ೭೦೦೦ ರೂಗಳ ಬೆಲೆಯ ರಾಷ್ಟ್ರೀಯ ಸರ್ಟಿಫಿಕೇಟ್‌ಗಳನ್ನು ನಗರದ ಹೆರಿಗೆ ಆಸ್ಪತ್ರೆಯೊಂದಕ್ಕೆ ದಾನ ಮಾಡಿದ್ದಾನೆ.

ದೀನಬಾಂಧವ ಭಂಡಾರ ಎಂಬ ಸ್ಥಳೀಯ ಸಮಾಜ ಸೇವಾ ಸಂಸ್ಥೆ ಈ ಆಸ್ಪತ್ರೆಯನ್ನು ನಡೆಸುತ್ತಿದೆ.

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನ

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಶ್ರೀ ಸ್ವಾಮಿ ರಮಾನಂದ ತೀರ್ಥರ ಹೆಸರು ಪರಶೀಲಿಸಲ್ಪಡುತ್ತಿದೆಯೆಂದು ಹೇಳಲಾಗಿದೆ

ಡಾ॥ ರಾಧಾಕೃಷ್ಣನ್ ನಿವೃತ್ತರಾದರು

ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ರವರು ವಿದೇಶಾಂಗ ಕಛೇರಿಯಲ್ಲಿ ಸೆಕ್ರೆಟರಿ ಜನರಲ್ ರಾದ ಶ್ರೀ ಗಿರಿಜಾಶಂಕರಬಾಜಪೈ ಮತ್ತು ವಿದೇಶಾಂಗ ಕಾರ್ಯದರ್ಶಿ ಶ್ರೀ ಕೆ. ಪಿ. ಎಸ್. ಮೆನನ್ನರನ್ನು ಭೇಟಿ ಮಾಡಿದ್ದರು.

ರಾಧಾಕೃಷ್ಣನ್ನರು ದೆಹಲಿಯಲ್ಲಿ ಪಂಡಿತ ನೆಹರೂರನ್ನು ಭೇಟಿ ಮಾಡಿ ಅವರೊಂದಿಗೆ ತಾವು ಮಾರ್ಷಲ್ ಸ್ಟಾಲಿನ್ನರೊಂದಿಗೆ ಭೇಟಿ ಮಾಡಿದ ವಿವರಗಳನ್ನು ತಿಳಿಸಿದ್ದಾರೆ

ನಿನ್ನೆ ಡಾ॥ ರಾಧಾಕೃಷ್ಣನ್ನರು ತಮ್ಮ ಅಧಿಕಾರ ತ್ಯಜಿಸಿ ಇಂದು ಮದರಾಸಿಗೆ ತೆರಳುವ ನಿರೀಕ್ಷೆ ಇದೆ.

ಸಮಾಲೋಚನೆಗಾಗಿ ದೆಹಲಿಗೆ ಆಗಮಿಸಿರುವ ಲಂಡನ್ನಿನಲ್ಲಿ ಭಾರತ ಹೈಕಮಿಷನರಾಗಿರುವ ಶ್ರೀ ಕೃಷ್ಣಮೇನನ್ನರೂ ಈ ದಿನ ವಿದೇಶಾಂಗ ಕಛೇರಿಗೆ ಭೇಟಿ ಕೊಟ್ಟಿದ್ದರು. ಶ್ರೀ ಮೆನನ್ನರು ಪಂಡಿತ ನೆಹರೂರೊಂದಿಗಿದ್ದಾರೆ.

ಭಾರತ ರಾಜ್ಯಾಂಗದ ಕನ್ನಡ ಪ್ರತಿ

ಭಾರತ ರಾಜ್ಯಾಂಗ ಶಾಸನದ ಕನ್ನಡ ಪ್ರತಿ ಮೈಸೂರು ಸರಕಾರದ ಮುದ್ರಣಾಲಯದಲ್ಲಿ ಮಾರಾಟಕ್ಕಿಡಲಾಗಿದೆ. ಬೆಲೆ ಎಂಟು ರೂಗಳು ರಾಜ್ಯಾಂಗಶಾಸನದ ಅನುವಾದಕ್ಕಾಗಿ ಶ್ರೀ ದಿವಾಕರ್ ಅಧ್ಯಕ್ಷತೆಯಲ್ಲಿ ಸಮಿತಿಗೊಂದು ರಚಿಸಲ್ಪಟ್ಟಿದ್ದಿತು

ಮುಂದಿನವಾರ ಕಾಶ್ಮೀರ ಸಂಧಾನ ವರದಿ

ಕಾಶ್ಮೀರದ ವಿವಾದ ವಿಷಯದಲ್ಲಿ ಡಾ॥ ಗ್ರಹಾಮರು ನಡೆಸಿದ ಸಂಧಾನದ ವರದಿಯು ಮುಂದಿನ ವಾರದ ಮಧ್ಯದ ವೇಳೆಗೆ ಭದ್ರತಾ ಸಮಿತಿಗೆ ಮತ್ತು ಭಾರತ ಪಾಕಿಸ್ಥಾನ ಸರ್ಕಾರಗಳ ಹಸ್ತಗತವಾಗುವ ನಿರೀಕ್ಷೆಯಿದೆ.

ಹಿಂದಿನಸಾರಿ ಡಾ॥ ಗ್ರಹಾಮರು ತಮ್ಮ ವರದಿಯು ವಿಫಲತೆಯನ್ನು ಈ ಸಾರಿ ಆದಷ್ಟು ಸರಿಪಡಿಸಬೇಕೆಂದು ಬಹಳ ಕಷ್ಟಪಟ್ಟು ಕೆಲಸ ಮಾಡುವುದಾಗಿ ಹೇಳಲಾಗಿದೆ

ಪೇಟೆ ಧಾರಣೆ

ಮೈಸೂರು ತಾ॥ 18-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಕ್ಕೆ	12-2	18-2
ಹೊಂಗೆಬೀಜ	"	9-6	12-0
ಹುರುಳಿ	"	31-12	31-12
ಹೆಸರು	"	59-12	——
ಮೆ, ಕಾಯಿ	ಮಣಕ್ಕೆ	11-6	14-14
ಹುಣಸೇಹಣ್ಣು	"	2-7	3-6
ಸೀಗೆಕಾಯಿ	"	2-6	—
ತೆಂಗಿನಕಾಯಿ 1100ಕ್ಕೆ		127	216

ಚಿನ್ನ ಬೆಳ್ಳಿ ದರಗಳು

18–4–52	ರೂ.
ಸವರನ್	65–14
"	66–0
ಚಿನ್ನ ತೊಲ	92–0
" ಮೊಹರು	90–12
ಬೆಳ್ಳಿ 100 ತೊಲ	161–8
" ತೊಲ	1–11

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು
ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ
ಕೇಳ್ವಿಕೆಗಳು ವಹಿಸಲ್ಪಡುವುವು.

*

ಹೆಚ್ಚಿನ ವಿವರಗಳಿಗೆ ಬರೆಯಿರಿ—

ಗೌರ್ನಮೆಂಟ್ ಪೋರ್ಸಲೇನ್
ಫ್ಯಾಕ್ಟರಿ, ಮಲ್ಲೇಶ್ವರಂ
ಬೆಂಗಳೂರು ೩.

ನ್ಯೂ ಅಪೇರ
೧೩–೪–೫೨ ರಿಂದ ಅಮೋಘಪ್ರಾರಂಭ
* ಕುಮಾರಿ *
(ತಮಿಳು)
ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜನಿ (ಜೂ), ಶಾಮ, ದೊರೆರಾಜ್, ಪುಳಿಮೊಟ್ಟೈ.

ರಣಜಿತ್
೧೮–೪–೫೨ರಿಂದ ಪ್ರತಿದಿನ ೩ ಆಟಗಳು
- ಸಂಯ್ಯೋಗಿ -
ಪಾತ್ರ:-ಮಧುಬಾಲ, ಸಜ್ಜನ್, ಅಜಿತ್, ಲೀಲಾಚಿಟ್ನಿಸ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೭ (೮೯೪) ದಿನಪತ್ರಿಕೆ ರಿ. ನಂ. ಎಂ. ೫೬೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೦ ೪—೧೯೫೨ನೇ ಭಾನುವಾರ [ಸಂಚಿಕೆ ೧೯೭

ಬಟ್ಟೆ ಗಿರಣಿಗಳು ಹೆಚ್ಚಿಗೆ ಪ್ರಮಾಣದಲ್ಲಿ ತಮ್ಮಿಷ್ಟಬಂದವರಿಗೆ ಬಟ್ಟೆ ಮಾರಬಹುದು

ಸೆಕೆಂಡರಿ ಶಾಲೆಗಳಲ್ಲಿ ಶಿಕ್ಷಣ ಶುಲ್ಕ ಹೆಚ್ಚಿಸುವ ವಿಷಯ ಪರಿಶೀಲನೆಯಲ್ಲಿದೆ

ರೇಷನ್‌ಕಾರ್ಡುದಾರರ ಸಂಘದ ಸಭೆ

ಮೈಸೂರು ಏ ೧೯

ರೇಷನ್ ಕಾರ್ಡು ಹೋಲ್ಡರುಗಳ ಬಹಿರಂಗಸಭೆ ನಿನ್ನೆ ಟೌನ್‌ಹಾಲಿನಲ್ಲಿ ಡಾ॥ ಬಿ ಜಿ. ದಾಸ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸರ್ಕಾರದವರು ಆಹಾರಪದಾರ್ಥಗಳ ಬೆಲೆ ಹೆಚ್ಚಿಸಿರುವುದನ್ನು ಕುರಿತು ಶ್ರೀಗಳಾದ ಎಂ ಆರ್ ಸಿ ಬಸಪ್ಪನವರು, ಜಿ ಸ್ವಾಮಿದಾಸರು, ಕೆ ಅನಂತಸುಬ್ಬರಾಯರು ಮತ್ತು ಅನೇಕರು ಭಾಷಣ ಮಾಡಿದರು.

ಸರ್ಕಾರದವರು ಮುಂದಿನ ತಿಂಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರಧಾನ್ಯಗಳ ಸಾಗಾಣಿಕೆಗೆ ಅವಕಾಶ ಕೊಟ್ಟಿರುವಂತೆ ರೇಷನ್ ಜಾರಿಯಲ್ಲಿರುವ ಐದು ಪ್ರದೇಶಗಳಲ್ಲಿಯೂ ಕಂಟ್ರೋಲಿಗೊಳಪಟ್ಟಿರುವ ಆಹಾರಧಾನ್ಯಗಳ ಸಾಗಾಣಿಕೆಗೆ ಅವಕಾಶ ಕೊಡಬೇಕೆಂದೂ, ದಾವಣಗೆರೆ ನಿರ್ಣಯದಂತೆ ಹತೋಟಿಯನ್ನು ರದ್ದು ಮಾಡಬೇಕೆಂದೂ ತಿಳಿಸಿ ನಿರ್ಣಯಮಾಡಿರುವರು.

ಸಕ್ಕರೆ, ಹತ್ತಿ, ಬಟ್ಟೆ ಮತ್ತು ಕಬ್ಬಿಣ ಇವುಗಳಮೇಲಿನ ಹತೋಟಿ ತೆಗೆಯಬೇಕು ಎನ್ನುವ ನಿರ್ಣಯ ಮಾಡಲಾಯಿತು.

ನಾಲ್ಕುವರೆಲಕ್ಷ ಎಕರೆ ಉಚಿತವಾಗಿ

ಹೈದರಾಬಾದ್ ಸರ್ಕಾರವು ನಾಲ್ಕುವರೆಲಕ್ಷ ಎಕರೆಗಳ ಜಮೀನನ್ನು ಉಚಿತವಾಗಿ ಹಂಚಲು ತೀರ್ಮಾನಿಸಿರುವುದಾಗಿ ಗೊತ್ತಾಗಿದೆ.

ಶಿಕ್ಷಣ ಶುಲ್ಕ ಹೆಚ್ಚುವುದೇ

ಸೆಕೆಂಡರಿ ಶಾಲೆಗಳಲ್ಲಿ ಶಿಕ್ಷಣ ಶುಲ್ಕವನ್ನು ಹೆಚ್ಚಿಸಲಾಗುವುದೆಂಬ ಸುದ್ದಿ ನಿಜವೇ ? ಎಂದು ಕೇಳಿದ ಪ್ರಶ್ನೆಗೆ ಸಚಿವರು ಬಡ್ಜೆಟ್ ರಚನೆ ಸಂಬಂಧದಲ್ಲಿ ಈ ವಿಷಯವೂ ಇದೆ. ಮಂತ್ರಿಮಂಡಲವು ಪರಿಶೀಲನೆಯಲ್ಲಿದೆಯೆಂದು ವಿದ್ಯಾಸಚಿವರು ಹೇಳಿರುವರು.

ದಕ್ಷತೆ ಕೆಡದಂತೆ ಮಿತವ್ಯಯ

ಸರ್ಕಾರ ವೆಚ್ಚದಲ್ಲಿ ಮಿತವ್ಯಯದ ಬಗ್ಗೆ ಕೇಳಲಾದ ಪ್ರಶ್ನೆಗೆ ಸಚಿವರು ಉತ್ತರವಿತ್ತು, ದಕ್ಷತೆ ಕೆಡದ ರೀತಿಯಲ್ಲಿ ಮಿತವ್ಯಯ ಮಾಡಲಾಗುವುದೆಂದು ವಿದ್ಯಾಸಚಿವರು ಭರವಸೆಯನ್ನಿತ್ತಿರುವರು.

ಹಿರಿಯ ಶಾಸನಸಭೆಗೆ ನಾಮಕರಣ

ಮದರಾಸ್ ಹಿರಿಯ ಶಾಸನಸಭೆಗೆ ಮದ್ರಾಸ್ ಗೌರ್ನರ್‌ರವರು ೮ ಮಂದಿಯನ್ನು ನಾಮಕರಣ ಮಾಡಿರುವರು—

ಡಾ॥ ಮುತ್ತುಲಕ್ಷ್ಮಿರೆಡ್ಡಿ, ಶ್ರೀ ದೇವಕಿ ರಾಮಯ್ಯ, ಶ್ರೀಮತಿ ಸುಬ್ಬಲಕ್ಷ್ಮಿ ಅಮ್ಮಾಳ್, ಶ್ರೀಗಳಾದ ಜಿ. ವೆಂಕಟಾಚಲಂ, ನರಸಿಂಹದೇವ ಸತ್ಯನಾರಾಯಣ, ಎಂ. ಸತ್ಯನಾರಾಯಣ, ಶ್ರೀಮತಿ ಕ್ಲಬ್‌ವಾಲಾ, ದೇವಕಿಬಾಮಣಿ.

ಸಭಾಧ್ಯಕ್ಷರುಗಳು

ಮದ್ರಾಸ್ ಹಿರಿಯ ಶಾಸನಸಭೆಗೆ ಹಂಗಾಮಿ ಅಧ್ಯಕ್ಷರನ್ನಾಗಿ ಶ್ರೀ ಟಿ. ಟಿ. ರಾಜಾರವರನ್ನು ಕಿರಿಯ ಶಾಸನಸಭೆಗೆ ಅಧ್ಯಕ್ಷರನ್ನಾಗಿ ಶ್ರೀ ಚರಿಯನ್‌ರವರನ್ನು ಗೌರ್ನರ್ ನಾಮಕರಣಮಾಡಿರುವರು. ಅವರು ನಾಳೆಯದಿನ ಪ್ರಮಾಣವಚನ ಸ್ವೀಕರಿಸುವರು.

ಹೋರಾಟಕ್ಕೆ ಸಿದ್ಧ

ಸಿಲೋನಿನಲ್ಲಿರುವ ಭಾರತೀಯರ ವೋಟಿನ ಹಕ್ಕನ್ನು ಕಸಿದುಕೊಂಡಿರುವುದನ್ನು ಮತ್ತೆ ಅವರಿಗೆ ಕೊಡಬೇಕೆಂದೂ, ಇದು ಅವರ ನ್ಯಾಯವಾದ ಹಕ್ಕುಬಾಧ್ಯತೆಗಳಲ್ಲಿ ಸೇರಿದೆಯೆಂದೂ ಸಿಲೋನ್ ಇಂಡಿಯನ್ ಕಾಂಗ್ರೆಸ್ ಅಧ್ಯಕ್ಷರೂ ಮತ್ತು ಸೆನೆಟರ್ ಆದ ಶ್ರೀ ಪೆರಿ ಸುಂದರಂರವರು ಸಿಲೋನ್ ಇಂಡಿಯನ್ ಕಾಂಗ್ರೆಸ್ಸಿನ ೧೨ನೆಯ ವಾರ್ಷಿಕಾಧಿವೇಶನದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತಿಳಿಸಿದರು.

ಹೀಗೆ ಭಾರತೀಯರ ಒಂದೊಂದು ಹಕ್ಕನ್ನು ಕಿತ್ತುಕೊಳ್ಳುತ್ತಾ ಬಂದು ಅವರನ್ನು ರಾಜಕೀಯವಾಗಿ ಬಹಿಷ್ಕರಿಸುತ್ತಿರಲಾಗಿದೆ ಇಂದಿನ ಯುಗದಲ್ಲಿ ಹೀಗಿರಲು ಸಾಧ್ಯವಿಲ್ಲ. ಇದನ್ನು ಸರಿಪಡಿಸಲೇಬೇಕು ಎಂದರು.

ಭಾರತೀಯರು ತಮ್ಮ ಹಕ್ಕುಬಾಧ್ಯತೆಗಳನ್ನು ಸಂಪಾದಿಸಿಕೊಳ್ಳಲು ಹೋರಾಡಬೇಕಾದುದು ಉಳಿದಿದೆ. ಇದು ಕಾರ್ಯಕಾರಿ ಸಮಿತಿಯ ಪರಿಶೀಲನೆಯಲ್ಲಿದೆ. ಭಾರತೀಯರು ಯಾವಾಗ ಕರೆದರೆ ಆವಾಗ ಹೋರಾಡಲು ಸಿದ್ಧರಾಗಿರಬೇಕು ಎಂದೂ ಸಹ ಶ್ರೀ ಪೆರಿಸುಂದರಂ ತಿಳಿಸಿದರು.

ನೆಹರೂ ಡಾರ್ಜಿಲಿಂಗ್‌ಗೆ

ಪ್ರಧಾನಿ ನೆಹರೂರವರು ಮುಂದಿನ ಶನಿವಾರ ಡಾರ್ಜಿಲಿಂಗ್‌ಗೆ ಭೇಟಿ ಕೊಡಲಿರುವರು.

ಪ್ರಧಾನಿ ಕಾರ್ಯದರ್ಶಿಯವರಿಗೆ ಘಾಯ

ನಿರಾಶ್ರಿತ ಯುವಕನೊಬ್ಬನು ಪ್ರಧಾನಿ ನೆಹರೂರವರ ಕಾರ್ಯದರ್ಶಿಯವರಲ್ಲೊಬ್ಬರಾದ ಶ್ರೀ ಎಸ್ ಪಿ ಖಿನ್ನಾರವರ ಬಳಿಗೆ ತಾನು ನೆಹರೂರವರನ್ನು ನೋಡಬೇಕೆಂದು ಕೇಳಿದನು. ಪ್ರಧಾನಿಗಳನ್ನು ಈಗ ನೋಡಲು ಸಾಧ್ಯವಿಲ್ಲ. ಅರ್ಜಿಯನ್ನು ನೋಡಿ ಅನಂತರ ತಿಳಿಸುವುದಾಗಿ ಹೇಳಿದಾಗ ಅವರನ್ನು ಮೂರುಭಾರಿ ಚಾಕುವಿನಿಂದ ಇರಿದನು ಕೂಡಲೇ ಪೋಲೀಸರು ಬಂದು ಅವನನ್ನು ದಸ್ತಗಿರಿ ಮಾಡಿದರು. ಶ್ರೀ ಖಿನ್ನಾರವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಅಖಿಲಭಾರತ ವ್ಯವಸಾಯ ಶಿಕ್ಷಣ ಸಮ್ಮೇಳನ

ಅಖಿಲಭಾರತ ವ್ಯವಸಾಯ ಶಿಕ್ಷಣ ಸಮ್ಮೇಳನವು ಹೈದರಾಬಾದಿನಲ್ಲಿ ಸೇರಲಿದೆ ಶ್ರೀ ಮುನ್ಷಿಯವರು ಪ್ರಾರಂಭೋತ್ಸವ ನಡೆಸುವರು.

ಬಟ್ಟೆ ವಿಲೆ

ಭಾರತದಲ್ಲಿರುವ ಬಟ್ಟೆ ಗಿರಣಿಗಳು ತಮ್ಮಲ್ಲಿ ತಯಾರಾಗುವ ಬಟ್ಟೆಯಲ್ಲಿ ಶೇ॥ ೮೦ ರಷ್ಟನ್ನು ತಮ್ಮಿಷ್ಟಬಂದವರಿಗೆ ಮಾರಲು ಸರ್ಕಾರವು ಅವಕಾಶ ನೀಡಿದೆ.

ಅಭಿವೃದ್ಧಿ ಅಧಿಕಾರಿಗಳ ಸಭೆ

ಭಾರತ ವಿವಿಧ ಪ್ರಾಂತ್ಯಗಳ ಅಭಿವೃದ್ಧಿ ಅಧಿಕಾರಿಗಳ ಸಭೆಯು ಮುಂದಿನ ಮಾಹೆ ೭ನೇ ತಾ॥ ದೆಹಲಿಯಲ್ಲಿ ನಡೆಯಲಿದೆ.

ಪಾರ್ಲಿಮೆಂಟ್ ಅಧಿವೇಶನ

ಮುಂದಿನ ಮಾಹೆ ಪ್ರಾರಂಭವಾಗಲಿರುವ ಪಾರ್ಲಿಮೆಂಟು ಅಧಿವೇಶನವು ಜುಲೈ ಮಾಹೆ ಆಖೈರಿನವರೆಗೆ ನಡೆಯುವುದಾಗಿ ಗೊತ್ತಾಗಿದೆ.

ಶ್ರೀ ಬಿ. ನರಸಿಂಗರಾವ್

ವಿಶ್ವಸಂಸ್ಥೆಯಲ್ಲಿ ಇದುವರೆವಿಗೂ ಭಾರತದ ಖಾಯಂ ಪ್ರತಿನಿಧಿಗಳಾಗಿದ್ದ ಶ್ರೀ ಬೆನಗಲ್ ನರಸಿಂಗರಾಯರು ಈಗ ಅಂತರರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿ ನೂತನ ಹುದ್ದೆಯನ್ನು ವಹಿಸಿಕೊಂಡಿದ್ದಾರೆಂದು ತಿಳಿದುಬಂದಿದೆ.

ಉಪರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ

ಭಾರತ ಉಪರಾಷ್ಟ್ರಾಧ್ಯಕ್ಷರ ಸ್ಥಾನಕ್ಕೆ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರ ನಾಮಕರಣಪತ್ರವನ್ನು ಶ್ರೀ ಗುಲ್ಜಾರಿಲಾಲ್ ನಂದಾರವರು ರಿಟರ್ನಿಂಗ್ ಅಧಿಕಾರಿಗಳಿಗೆ ನಿನ್ನೆ ಒಪ್ಪಿಸಿದರು.

ಪ್ರಧಾನಿ ನೆಹರೂರವರು ಡಾ॥ ರಾಧಾಕೃಷ್ಣನ್‌ರವರ ಹೆಸರನ್ನು ಸೂಚಿಸಿ, ಶ್ರೀ ಗುಲ್ಜಾರಿಲಾಲ್ ನಂದಾರವರು ಅನುಮೋದಿಸಿದ್ದಾರೆ.

ವಿಶ್ವಆರೋಗ್ಯ ಸಂಸ್ಥೆ ಸಮ್ಮೇಳನ

ಜಿನೀವಾದಲ್ಲಿ ನಡೆಯಲಿರುವ ವಿಶ್ವಆರೋಗ್ಯ ಸಂಸ್ಥೆಯಲ್ಲಿ ಭಾಗವಹಿಸಲು ಡಾ॥ ಲಕ್ಷ್ಮಣಸ್ವಾಮಿಮೊದಲಿಯಾರ್‌ರವರ ನಾಯಕತ್ವದಲ್ಲಿ ಭಾರತದಿಂದ ಒಂದು ಅಧಿಕೃತ ನಿಯೋಗವು ಹೋಗಲಿದೆಯೆಂದು ಗೊತ್ತಾಗಿದೆ.

ರಿಸೆಪ್ಷನ್ ಅಧಿಕಾರಿ

ಮದ್ರಾಸ್ ಸರ್ಕಾರವು ಒಬ್ಬ ರಿಸೆಪ್ಷನ್ ಅಧಿಕಾರಿಗಳನ್ನು ನೇಮಿಸಿದೆ. ಈ ಅಧಿಕಾರಿಗಳನ್ನು ಸೆಕ್ರೆಟರಿಯೇಟ್ ಕಛೇರಿಯಲ್ಲಿರುತ್ತಾರೆ ಮಂತ್ರಿಗಳು ಅಥವಾ ಸೆಕ್ರೆಟರಿಗಳನ್ನು ಭೇಟಿ ಮಾಡಲಿಚ್ಛಿಸುವರು ಮೊದಲು ರಿಸೆಪ್ಷನ್ ಅಧಿಕಾರಿಗಳನ್ನು ನೋಡಬೇಕಾಗಿದೆ

ವಿಚಾರಣೆ

ಆಲ್ ಇಂಡಿಯಾ ರೇಡಿಯೋ ಕೇಂದ್ರದ ಡೈರೆಕ್ಟರ್ ಜನರಲ್ ಶ್ರೀ ಎನ್. ಎಸ್. ಲಕ್ಷ್ಮಣನ್‌ರವರ ಮೇಲಿನ ಆರೋಪಣೆಗಳನ್ನು ವಿಚಾರಿಸಲು ಪಾಟ್ನಾ ಹೈಕೋರ್ಟಿನ ಮಾಜಿ ನ್ಯಾಯಮೂರ್ತಿ ಮತ್ತು ಫೆಡರಲ್‌ಬೋರ್ಡಿನ ಕೇಂದ್ರ ಸಮಿತಿಯ ಅಧ್ಯಕ್ಷರಾದ ಶ್ರೀ ಅಗರವಾಲಾರವರನ್ನು ನೇಮಿಸಲಾಗುತ್ತದೆಯೆಂದು ಹೇಳಲಾಗಿದೆ.

ವಿಮಾನ ಸಂಚಾರ ಒಪ್ಪಂದ

ಭಾರತ ಇರಾನ್ ರಾಷ್ಟ್ರಗಳ ನಡುವೆ ವಿಮಾನಸಂಚಾರ ಒಪ್ಪಂದಕ್ಕಾಗಿ ಭಾರತದ ಕೆಲವು ಅಧಿಕಾರಿಗಳು ಟೆಹರಾನ್‌ಗೆ ತೆರಳಿರುವರು.

೧,೩೬,೪೦೦ ರೂಗಳ ಉಳಿತಾಯದ ನಿರೀಕ್ಷೆ

ಬೆಂಗಳೂರು ಏ ೧೯

ಕಾರ್ಪೋರೇಷನ್ ಹಣಕಾಸಿನ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ ಎ. ಕೆ. ಗೋವಿಂದರಾಜುಲುರವರು ನಿನ್ನೆ ಸಂಜೆ ಕಾರ್ಪೋರೇಷನ್ ಸಭೆಯಲ್ಲಿ ೧೯೫೨-೫೩ರ ೧,೩೬,೪೦೦ ರೂಪಾಯಿ ಉಳಿತಾಯ ಬಜೆಟ್ಟನ್ನು ಮಂಡಿಸಿದರು. ಇದರಲ್ಲಿ ಕಾರ್ಪೋರೇಷನ್‌ಗೆ ಬರಬೇಕಾಗಿರುವ ೩,೫೬,೦೦೦ ರೂಗಳು ಸೇರಿಲ್ಲ.

೧೯೫೨-೫೩ ರಲ್ಲಿ ಓಪನಿಂಗ್ ಬ್ಯಾಲೆನ್ಸ್ ೮,೮,೩೧೦೦ ರೂ ಒಟ್ಟು ೧,೧೨,೫೨,೪೦೦ ರೂ ಆದಾಯ ಕ್ಲೋಸಿಂಗ್ ಬ್ಯಾಲೆನ್ಸ್ ಜನರಲ್ ರೆವಿನ್ಯೂ ಬಾಬ್ತು ೧,೩೬,೪೦೦ ರೂ ಸಾಲದ ಬಾಬ್ತು ೩,೫೬,೦೦೦ ರೂ ಒಟ್ಟು ೧,೧೬,೪೨,೧೦೦ ರೂಪಾಯಿ ವೆಚ್ಚ. ಒಟ್ಟು ೧,೩೬,೪೦೦ ರೂಪಾಯಿ ಉಳಿತಾಯವಾಗಲಿದೆ.

ಮೈಸೂರಿನಲ್ಲಿ ಸಾಮಾಜಿಕ ಶಿಕ್ಷಣ ಕೇಂದ್ರ

ಸಂಯುಕ್ತ ರಾಷ್ಟ್ರ ಪರಿಷತ್ತಿನ ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಶಾಖೆಯು ಮೈಸೂರಿನಲ್ಲಿ ಆರಂಭಿಸುವ ಸಾಮಾಜಿಕ ಶಿಕ್ಷಣ ಕೇಂದ್ರಕ್ಕೆ ಕಟ್ಟಡ ಒದಗಿಸಲು ಮೈಸೂರು ಸರ್ಕಾರ ಒಪ್ಪಿದೆಯೆಂದು ನಿನ್ನೆ ಶಿಕ್ಷಣ ಸಚಿವರು ತಿಳಿಸಿದರು. ಆಗ್ನೇಯ ಏಷ್ಯಕ್ಕೆಲ್ಲಾ ಇದೊಂದೇ ಕೇಂದ್ರ.

ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಸಮ್ಮೇಳನವು ಬೇಲೂರಿನಲ್ಲಿ ಮೇ ೮, ೯ ಮತ್ತು ೧೦ಕ್ಕೆ ಬದಲಾಗಿ ೧೬ ರಿಂದ ೧೮ನೇ ತಾರೀಖಿನವರೆಗೆ ನಡೆಯುವುದೆಂದು ಪರಿಷತ್ತಿನ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕಾಂಗ್ರೆಸ್ಸಿನಿಂದ ಹೊರಕ್ಕೆ

ಹಿರಿಯ ಕಾಂಗ್ರೆಸ್ಸಿಗರಾಗಿ ಪಾರ್ಲಿಮೆಂಟಿಗೆ ಚುನಾಯಿತರಾಗಿರುವ ಶ್ರೀ ತ್ರಿಭುವನವರು ಕಾಂಗ್ರೆಸ್ಸಿನ ವಿರೋಧವಾಗಿ ಸ್ಪರ್ಧಿಸಿದ್ದ ತಮ್ಮ ಸಹೋದರರಿಗೆ ಸಹಾಯ ನೀಡಿದ್ದರೆಂದು ೬ ವರ್ಷಗಳ ಕಾಲ ಕಾಂಗ್ರೆಸ್ಸಿನಿಂದ ಹೊರದೂಡಲ್ಪಟ್ಟಿದ್ದಾರೆ.

ಕಲ್ಕತ್ತಾದಲ್ಲಿ ಶ್ರೀ ಜಯಪ್ರಕಾಶ

ಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶ ನಾರಾಯಣರವರು ಮೊನ್ನೆ ಪಾಟ್ನಾದಿಂದ ಕಲ್ಕತ್ತಾಕ್ಕೆ ವಿಮಾನದಲ್ಲಿ ಹೊರಟರು. ಕಾಶಿ, ಬೊಂಬಾಯಿ ಮತ್ತು ನಾಗಪುರ ಇವುಗಳಲ್ಲಿ ಪ ವಾಸಾನಂತರ ಪಾಟ್ನಾಕ್ಕೆ ಹಿಂತಿರುಗಲಿರುವರು.

ಮಂತ್ರಿಮಂಡಳ ರಚನೆಯಲ್ಲಿ ಭಿನ್ನಾಭಿಪ್ರಾಯ

ಬೊಂಬಾಯಿಯ ಮಂತ್ರಿಮಂಡಳ ರಚನೆಯಲ್ಲಿ ಪ್ರಾದೇಶಿಕ ಪ್ರಾತಿನಿಧ್ಯ ಸಂಬಂಧದಲ್ಲಿ ಮತ್ತು ಪೋರ್ಟ್‌ಪೋಲಿಯೋ ಹಂಚಿಕೆಯಲ್ಲಿ ಭಿನ್ನಾಭಿಪ್ರಾಯ ಉದ್ಭವಿಸಿದ ಪರಿಣಾಮವಾಗಿ ಕಾಂಗ್ರೆಸ್ ಅಧ್ಯಕ್ಷ ನೆಹರೂರವರೊಡನೆ ಸಮಾಲೋಚಿಸಲು ಶ್ರೀ ಮೊರಾರ್ಜಿ ದೇಸಾಯಿ ಮತ್ತು ಶ್ರೀ ಜಿ ಎಸ್ ಹಿರೆಯವರು ದೆಹಲಿಗೆ ನಿನ್ನೆ ರಾತ್ರಿ ವಿಮಾನದಲ್ಲಿ ತೆರಳಿದರು

ಹೈದರಾಬಾದಿಗೆ ಲಾಲ್ ಬಹದ್ದೂರ್ ಶಾಸ್ತ್ರಿ

ಹೈದರಾಬಾದ್ ಶಾಸನಸಭೆಯ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್ ಉಮೇದುವಾರರಿಗುಂಟಾದ ಸೋಲಿನ ಕಾರಣವನ್ನು ಕಂಡುಹಿಡಿಯಲು ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂ ಕಾರ್ಯದರ್ಶಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳನ್ನು ಹೈದರಾಬಾದಿಗೆ ಕಳಿಸಲಿದ್ದಾರೆ

ಶ್ರೀ ಶಾಸ್ತ್ರಿ ಈ ತಿಂಗಳ ಅಖೈರಿಗೆ ಹೈದರಾಬಾದಿಗೆ ಬರುವರು.

ಪಾನನಿರೋಧ ರದ್ದಾಗಲಿ

ಬೆಂಗಳೂರು ಏ. ೧೮

ಪಾನನಿರೋಧ ಬೇಕೇ ಬೇಡವೇ? ಎಂಬ ಬಗ್ಗೆ ಅಬ್ಕಾರಿ ಸಚಿವ ಶ್ರೀ ಟಿ ಚನ್ನಯ್ಯನವರು ನಡೆಸಿದ 'ಅಭಿಪ್ರಾಯ ಸಂಗ್ರಹ' ಪ್ರಯೋಗದಲ್ಲಿ ಕೂಡಲೇ ಪಾನನಿರೋಧವನ್ನು ತೆಗೆದುಹಾಕಬೇಕೆಂಬ ಬಗ್ಗೆ ಬಹುಮತ ವ್ಯಕ್ತಪಟ್ಟಿತು.

ಮೊನ್ನೆಯದಿವಸ ಸಂಜೆ ಸ್ಥಳೀಯ ಸಂಸ್ಥೆಗಳ ಮತ್ತು ಅಬ್ಕಾರಿ ಶಾಖೆಯ ಸಚಿವರಾದ ಶ್ರೀ ಟಿ ಚನ್ನಯ್ಯನವರು ಪಾನನಿರೋಧದ ಬಗ್ಗೆ ಜನಾಭಿಪ್ರಾಯವನ್ನು ಪಡೆಯಲು ಕಿಂಗ್'ಜಾರ್ಜ್ ಹಾಲಿನಲ್ಲಿ ನಡೆಸಿದ ಒಂದು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕೆ ಜಿ ಎಫ್ ಪ್ರದೇಶದಲ್ಲಿನ ಎಲ್ಲ ವರ್ಗದ ನಿವಾಸಿಗಳನ್ನು ಪ್ರತಿನಿಧಿಸುವ ಹತ್ತೊಂಬತ್ತು ಮಂದಿ ಸಾರ್ವಜನಿಕ ಪ್ರಮುಖರು ಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು.

೧೯ ಮಂದಿಯ ಪೈಕಿ ೧೫ ಮಂದಿ, ಪಾನನಿರೋಧವನ್ನು ಕೂಡಲೇ ತೆಗೆಹಾಕಬೇಕೆಂದು ಅಭಿಪ್ರಾಯಪಟ್ಟು ವಾದಿಸಿದರು. ನಾಲ್ಕು ಮಂದಿ ಪಾನನಿರೋಧವನ್ನು ರದ್ದುಮಾಡಬೇಕೆಂಬ ವಾದವನ್ನು ವಿರೋಧಿಸಿ ಮಾತನಾಡಿದರು. ಇನ್ನಿಬ್ಬರು, ಕ್ರಮೇಣ ಘಟ್ಟಘಟ್ಟದಲ್ಲಿ ಪಾನನಿರೋಧವನ್ನು ಜಾರಿಮಾಡಬೇಕೆಂದೂ, ಆ ಅವಧಿಯಲ್ಲಿ ಮದ್ಯಪಾನೀಯಗಳನ್ನು ಪಡಿತರದಲ್ಲಿ ಕೊಡಬೇಕೆಂದೂ ಅಭಿಪ್ರಾಯಪಟ್ಟರು.

ರಷ್ಯದಿಂದ ಆಕ್ರಮಣ ಭೀತಿ

ರಕ್ಷಣೆಯ ವೆಚ್ಚವನ್ನು ಕಡಿತ ಮಾಡಬೇಕೆಂದು 'ಹೌಸ್ ಆಫ್ ರೆಪ್ರೆಸೆಂಟೆಟಿವ್' ಸಭೆ ಇತ್ತೀಚೆಗೆ ತೀರ್ಮಾನಿಸಿದುದನ್ನು ಜಾರಿಗೆ ತರುವುದಾದರೆ ಶಸ್ತ್ರಾಸ್ತ್ರಗಳ ತಯಾರಿಕೆಯ ಕಂಟ್ರಾಕ್ಟುಗಳನ್ನು ಸರ್ಕಾರವು ರದ್ದುಗೊಳಿಸಬೇಕಾದ ನೀತಿಯನ್ನು ಅನುಸರಿಸಬೇಕಾಗುವುದೆಂದು ರಾಷ್ಟ್ರಾಧ್ಯಕ್ಷ ಟ್ರೂಮನ್ ತಿಳಿಸಿರುವರು.

ಹಿಂದೆ ಯೋಧರಾಗಿದ್ದವರ ಸಂಸ್ಥೆಯಲ್ಲಿ ಟ್ರೂಮನ್ ಭಾಷಣ ಮಾಡುತ್ತ, ಅಮೆರಿಕವಿನ್ನೂ ಸೋವಿಯಟ್ ರಷ್ಯದ ಆಕ್ರಮಣದ ಭಯಾನಕವಾದ ಅಪಾಯದಲ್ಲಿದೆ. ಹಿಂದೆ ಯೋಧರಾಗಿದ್ದವರು, ಅಮೆರಿಕವನ್ನು ಈ ಅಪಾಯದಿಂದ ಪಾರು ಮಾಡಲು ಸಹಾಯ ಮಾಡಬೇಕು ಎಂದು ಹೇಳಿದರು.

ಬಾಂಬುಗಳ ಪತ್ತೆ

ಬೆಂಗಳೂರು ಏ. ೧೯

ಹೆಬ್ಬಾಳ್ ಕೆರೆಯಲ್ಲಿ ಬಾಂಬುಗಳು, ಕೈಬಾಂಬುಗಳು, ಸ್ಮೋಕ್ ಜನರೇಟರುಗಳು ದೊರಕಿದೆ

ಮೊನ್ನೆಯದಿನ ಸಂಜೆ ಸುಮಾರು ನಾಲ್ಕು ಗಂಟೆ ಸಮಯದಲ್ಲಿ ಕೆಲವು ಹುಡುಗರು ಈಜಲು ಹೆಬ್ಬಾಳ್ ಕೆರೆಗೆ ಇಳಿದಾಗ ಕಾಲಿಗೆ ಕೆಲವು ಸ್ಫೋಟಕ ವಸ್ತುಗಳು ದೊರಕಿದವು. ಅವುಗಳನ್ನು ತಂದು ಆ ಹುಡುಗರು ಪೋಲೀಸರಿಗೆ ಒಪ್ಪಿಸಲು ನಿನ್ನೆಯದಿನ ಪ್ರಾತಃಕಾಲ ಮಿಲಿಟರಿಯವರ ಸಹಾಯದೊಂದಿಗೆ ಕೆರೆಯನ್ನು ಶೋಧಿಸಲು ಸುಮಾರು ೨೦೦ ಕೈಬಾಂಬುಗಳು, ಡಿಟೊನೇಟರುಗಳು ಒಂದು ಡಜನ್ ದೊಡ್ಡ ಬಾಂಬುಗಳು ದೊರಕಿದವು. ದೊರಕಿರುವ ಬಾಂಬುಗಳಿಗೆ ಮಾರ್ಟರ್ ಬಾಂಬುಗಳೆಂದು. ಇವು ಎಲ್ಲವೂ ಸಜೀವ ಸ್ಫೋಟಕ ವಸ್ತುಗಳು.

ಮಿ॥ ಸಿಡ್ನಿ ಥಾಮಸ್ ಅಸೆಂಬ್ಲಿಗೆ

ಶ್ರೀಮನ್ಮಹಾರಾಜರವರು ಮಿ॥ ಸಿಡ್ನಿ ಎ. ಥಾಮಸ್‌ರವರನ್ನು ಮೈಸೂರು ಅಸೆಂಬ್ಲಿಗೆ ಆಂಗ್ಲೋ-ಇಂಡಿಯನ್ ಕೋಮಿನ ಪ್ರತಿನಿಧಿಯನ್ನಾಗಿ ನಾಮಕರಣ ಮಾಡಿದ್ದಾರೆ ಈ ಕೋಮಿನ ಪ್ರತಿನಿಧಿಯಿಲ್ಲದಿದರಿಂದ ಇವರನ್ನು ರಾಜ್ಯಾಂಗ ನಿಬಂಧನೆ ಪ್ರಕಾರ ನಾಮಕರಣ ಮಾಡಲಾಗಿದೆ

ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಹ್ಯಾರಿಮನ್

ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಅವೆರೆಲ್ ಹ್ಯಾರಿಮನ್‌ರವರು ಸ್ಪರ್ಧಿಸುವುದನ್ನು ಅಧ್ಯಕ್ಷ ಟ್ರೂಮನ್ನರು ವಿಶೇಷೋತ್ಸಾಹದಿಂದ ಸ್ವಾಗತಿಸಿದ್ದಾರೆ

ಡೆಮೋಕ್ರಾಟಿಕ್ ಪಕ್ಷದಿಂದ ಹ್ಯಾರಿಮನ್ನರು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಸೂಕ್ತ ಉಮೇದುವಾರರೆಂದು ಹೇಳಲ್ಪಡುತ್ತಿದೆ

ಮಿ॥ ಚರ್ಚಿಲ್ ಸ್ವಸ್ಥವಿಲ್ಲ

ಬ್ರಿಟಿಷ್ ಪ್ರಧಾನಿ ಮಿ॥ ಚರ್ಚಿಲ್‌ರವರು ಬಹಳ ನೆಗಡಿಯಿಂದ ತೊಂದರೆ ಪಡುತ್ತಿರುವರೆಂದೂ, ಸ್ವಲ್ಪ ವಿಶ್ರಾಂತಿ ಪಡೆಯಬೇಕೆಂದೂ ಡಾ॥ ತಿಳಿಸಿರುವರು.

ಪೇಟೆ ಧಾರಣೆ

ಮೈಸೂರು ತಾ॥ 19-4-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	8-0	18-8
ಹೊಂಗೆಬೀಜ ,,	11-0	12-0
ಹುರುಳಿ ,,	30-8	31-12
ಮೆ. ಕಾಯಿ ಮಣಕ್ಕೆ	5-2	15-0
ಹುಣಸೇಹಣ್ಣು ,,	2-7	2-13
ಸೀಗೆಕಾಯಿ ,,	3-0	3-6
ತೆಂಗಿನಕಾಯಿ 1100ಕ್ಕೆ	112	194

ಚಿನ್ನ ಬೆಳ್ಳಿ ದರಗಳು

19-4-52	ರೂ.
ಸವರನ್	65-14
,,	66-0
ಚಿನ್ನ ತೊಲ	92-6
,, ಮೂಸ	91-0
ಬೆಳ್ಳಿ 100 ತೊಲ	163-0
,, ತೊಲ	1-12

ನ್ಯೂ ಅಪೇರ

೧೩-೪-೫೨ ರಿಂದ ಅಮೋಘಪ್ರಾರಂಭ

* ಕುಮಾರಿ *
(ತಮಿಳು)

ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜಿನಿ (ಜೂ), ಶಾಮ, ದೊರೆರಾಜ್, ಪುಳಿಮೂಟ್ಟೈ.

ವುಡ್ ಲ್ಯಾಂಡ್ಸ್

೧೮—೪—೫೨ ರಿಂದ
ಜನಭರಿತವಾದ ೨ನೇ ವಾರ
ದಿನವಹಿ ೩ ಆಟಗಳು

- ಬೇತಾಬ್ -
(ಹಿಂದಿ)

ಪಾತ್ರ:-ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ೩ ವಾರ ಮನ್ನಾ ಮಾಡಿರುತ್ತೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೬೪ (೮೦೯) ದಿನಪತ್ರಿಕೆ ರಿ. ನೆ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೨ ೪—೧೯೫೨ನೇ ಮಂಗಳವಾರ [ಸಂಚಿಕೆ ೧೯೮

ಪೂನಾ ಬಳಿ ಆಯುಧ ಪರಿಶೋಧನಾ ಕೇಂದ್ರ ಸ್ಥಾಪನೆ

ಭಾರತ ಉಪರಾಷ್ಟ್ರಾಧ್ಯಕ್ಷ ಚುನಾವಣೆಗೆ ಸ್ಪರ್ಧೆಯಿಲ್ಲ

ಮುಖ್ಯಮಂತ್ರಿಗಳೊಡನೆ ಭೇಟಿ

ಬೆಂಗಳೂರು ಏ ೧೯

ಸೋಮವಾರ ಮತ್ತು ಬುಧವಾರಗಳಲ್ಲಿ ಮಂತ್ರಿಗಳು ತಮ್ಮ ಅಧಿಕೃತ ನಿವಾಸದಲ್ಲಿ ಸಾರ್ವಜನಿಕರಿಗೆ ಬೆಳಿಗ್ಗೆ ೯ ಗಂಟೆಯಿಂದ ೧೦ ಗಂಟೆವರೆಗೆ ಭೇಟಿಕೊಡುವರು ಮೂರುದಿನ ಪೂರ್ವಭಾವಿಯಾಗಿ ಭೇಟಿಯನ್ನು ಪಡೆಯಲಿಚ್ಛಿಸುವವರು ಮುಖ್ಯಮಂತ್ರಿಗಳ ಪರ್ಸನಲ್ ಸೆಕ್ರೆಟರಿಯವರಿಗೆ ಲಿಖಿತಮೂಲಕ ತಿಳಿಸಬೇಕು

ಹಾಗೆ ಮುಂಚಿತವಾಗಿ ತಿಳಿಸಲವಕಾಶವಿಲ್ಲದಿರುವವರು ಮುಖ್ಯಮಂತ್ರಿಗಳನ್ನು ಪ್ರತಿ ಶುಕ್ರವಾರ ಬೆಳಿಗ್ಗೆ ೯-೧೦ ರವರೆಗೆ ಆಫೀಸುಕಛೇರಿಯಲ್ಲಿ ಭೇಟಿಮಾಡಲವಕಾಶವನ್ನು ಕಲ್ಪಿಸಲಾಗಿದೆ.

ಚೆನ್ನಪಟ್ಟಣ ಸಿಲ್ಕು ಕಾರ್ಖಾನೆ ಬಂದು

ಬೆಂಗಳೂರು ಏ ೨೦

ಇತ್ತೀಚಿನ ಸಿಲ್ಕು ವ್ಯಾಪಾರದಲ್ಲಿ ವಿಶೇಷವಾಗಿ ಇಳಿಮುಖವುಂಟಾಗಿ ಕೊಳ್ಳುವವರೇ ಇಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ದಾಸ್ತಾನು ಉಳಿದುಹೋಗಿರುವುದರಿಂದ ಕಳೆದವಾರ ೧೬ ನೇ ತಾರೀಖಿನಿಂದಲೇ ಚೆನ್ನಪಟ್ಟಣದ ಸಿಲ್ಕು ಕಾರ್ಖಾನೆಯನ್ನು ಮುಚ್ಚಲು ಅಧಿಕಾರಿಗಳು ನಿಶ್ಚಯಿಸಿದರು.

ಈ ಕಾರ್ಖಾನೆಯ ಅಧಿಕಾರಿವರ್ಗದವರು, ಕಾರ್ಮಿಕಸಮಿತಿ ಮತ್ತು ಪ್ರಮುಖ ಸಭೆಯು ಕೈಗಾರಿಕಾ ಮಂತ್ರಿಗಳ ಕಛೇರಿಯಲ್ಲಿ ನಡೆದು ಪುನಃ ಈ ವಿಷಯವನ್ನು ಪರಿಶೀಲಿಸಿ ಡೈರೆಕ್ಟರುಗಳ ಬೋರ್ಡು ನಿಶ್ಚಯಿಸಿರುವಂತೆ ಕಾರ್ಖಾನೆಯನ್ನು ತಾತ್ಕಾಲಿಕವಾಗಿ ಮುಚ್ಚಿ, ಸಂಸ್ಥೆಗೆ ಸ್ವಲ್ಪ ನಷ್ಟವಾದರೂ ಗಮನಿಸದೆ ಇರುವ ದಾಸ್ತಾನನ್ನೆಲ್ಲಾ ಮಾರಿ ವರ್ಕಿಂಗ್ ಕ್ಯಾಪಿಟಲ್‌ಗೆ ಹಣವನ್ನು ಒದಗಿಸಿಕೊಂಡು ಅದಷ್ಟು ಜಾಗ್ರತೆಯಾಗಿ ಕಾರ್ಖಾನೆ ಕೆಲಸಗಳನ್ನು ಪುನಃ ಪ್ರಾರಂಭಿಸಬೇಕೆಂದು ನಿರ್ಧರಿಸಲಾಯಿತು.

ವನಮಹೋತ್ಸವ ಬಹುಮಾನ

ವನಮಹೋತ್ಸವ ಸಂದರ್ಭದಲ್ಲಿ ೧೯೫೧ನೇ ಸಾಲಿನ ಅತ್ಯಂತ ಅಧಿಕ ಸಂಖ್ಯೆ ಗಿಡಗಳನ್ನು ಹಾಕಿದ್ದಕ್ಕಾಗಿ ಮೈಸೂರು ಬಹುಮಾನವನ್ನು ಪಡೆದಿದೆ.

ಜಮೀನು ಹಿಂದಕ್ಕೆ ಕೊಟ್ಟುಬಿಡಿ

ರಾಜಕೀಯ ಹೋರಾಟದಲ್ಲಿ ಸೂರೆ ಹೊಡೆದುಕೊಂಡಿರುವ ಜಮೀನುಗಳಲ್ಲಿ ತಾವೇ ಸ್ವತಃ ಬೆಳೆ ಮಾಡದಿದ್ದರೆ ಅಂತಹವರು ಆ ಜಮೀನನ್ನೆಲ್ಲಾ ಹಿಂದಕ್ಕೆ ಕೊಟ್ಟುಬಿಟ್ಟು ಈ ಹಂಚಿಕೆ ವಿಷಯದಲ್ಲಿ ಉಂಟಾಗಿರುವ ಅನೇಕ ದೂರುಗಳು ತಪ್ಪುವಂತೆಮಾಡಿ, ಕಾಂಗ್ರೆಸ್ಸಿನ ಘನತೆಯನ್ನು ಉಳಿಸಿ ಎಂದು ರಾಜಾಜಿಯವರು ಕಾಂಗ್ರೆಸ್ ಕೆಲಸಗಾರರನ್ನುದ್ದೇಶಿಸಿ ಸೇಲಂನಲ್ಲಿ ಮಾತನಾಡುತ್ತಾ ಹೇಳಿರುವರು.

ಮಂತ್ರಿಗಳು ಬೀದಿ ಗುಡಿಸಿದರು

ಸಿಕಂದರಾಬಾದ್‌ಬಳಿ ಖಮ್ಮಂ ಎಂಬ ಹರಿಜನರಿರುವ ಗ್ರಾಮವೊಂದಕ್ಕೆ ಭೇಟಿಯಿತ್ತಾಗ ಹೈದರಾಬಾದ್ ಮಂತ್ರಿ ಶ್ರೀ ಎಂ. ಶಂಕರದೇವ್‌ರವರು ಬೀದಿಗಳನ್ನು ಹೇಗೆ ಶುಚಿಯಾಗಿಟ್ಟುಕೊಳ್ಳಬೇಕೆಂಬುದನ್ನು ತಾವೇ ಒಂದು ಬರಲನ್ನು ತೆಗೆದುಕೊಂಡು ಗುಡಿಸಿ ತೋರಿಸಿಕೊಟ್ಟರು.

ಯುದ್ಧವಿರುದ್ಧ ಪ್ರತಿಜ್ಞೆ ಮಾಡಲಿ

ಅಮೆರಿಕಾ ಅಧ್ಯಕ್ಷರು ಯುದ್ಧಕ್ಕೆ ಅಥವಾ ಶಾಂತಿಗೆ ಆಧಾರಭೂತರಾಗಿರುವರು. ಯುದ್ಧ ವಿರೋಧ ಪ್ರತಿಜ್ಞೆಯನ್ನು ಅಧ್ಯಕ್ಷ ಟ್ರೂಮನ್ನರು ಮಾಡಲಿ ಆಗ ಶಾಂತಿಸ್ಥಾಪನೆಯಾಗುತ್ತದೆಯೆಂದು ತಿಳಿಸಿ ಪ್ರತಿಜ್ಞೆಮಾಡಲು ಟ್ರೂಮನ್ನರ ಮನಸ್ಸನ್ನು ಒಲಿಸಲು ದೆಹಲಿಯಲ್ಲಿ ನಿರ್ಮಲಸಿಂಗ್ ಎಂಬ ಸಾಧುವು ಉಪವಾಸವನ್ನು ಪ್ರಾರಂಭಿಸಿರುವನು.

ಸರ್ ಸ್ಟಾಫರ್ಡ್ ಕ್ರಿಪ್ಸ್

ಬ್ರಿಟನ್ನಿನ ಮಾಜಿ ಛಾನ್ಸಲರ್ ಆಫ್ ಎಕ್ಸ್ ಚೆಕರ್ ಸ್ಟಾಫರ್ಡ್ ಕ್ರಿಪ್ಸ್‌ರವರ ದೇಹಾರೋಗ್ಯವು ಇತ್ತೀಚೆಗೆ ತೀರ ಹದಗೆಟ್ಟಿ, ಚಿಂತಾಜನಕವಾಗಿದೆಯೆಂದು ತಿಳಿಯಬಂದಿದೆ. ಅವರಿಗೆ ೬೩ ವರ್ಷ ವಯಸ್ಸು ಭಾರತ ಸ್ವಾತಂತ್ರ್ಯ ಸಂಧಾನ ಸಮಯದಲ್ಲಿ ಇವರು ಮುಖ್ಯಪಾತ್ರವನ್ನು ವಹಿಸಿದ್ದರು.

ಪಂಡಿತ ನೆಹರೂರವರ ಆಪ್ತ ಸ್ನೇಹಿತರಲ್ಲಿ ಇವರೊಬ್ಬರು.

ಮುಖ್ಯಮಂತ್ರಿಗಳು ಶಾಸನಸಭೆಗೆ

ಲೆಜಿಸ್ಲೇಟಿವ್ ಅಸೆಂಬ್ಲಿಗೆ ಬೊಂಬಾಯಿ ಮುಖ್ಯಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರ ನಾಮಕರಣ ಪತ್ರವನ್ನು ಅಲಹಾಬಾದ್ ಕ್ಷೇತ್ರದಲ್ಲಿ ಖಾಲಿಯಾದ ಸ್ಥಾನಕ್ಕೆ ಸ್ಪರ್ಧಿಸಲು ನಿನ್ನೆಯದಿನ ರಿಟರ್ನಿಂಗ್ ಅಧಿಕಾರಿಗಳಿಗೆ ಸಲ್ಲಿಸಲಾಯಿತು.

ಸಾಮಾಜಿಕ ಕೃಷಿ ಶಿಕ್ಷಣಾ ಕೇಂದ್ರ

ಭಾರತದಲ್ಲಿ ೨೫ ಸಾಮಾಜಿಕ ಕೃಷಿ ಶಿಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ ಪ್ರಾರಂಭದಲ್ಲಿ ಫೋರ್ಡ್ ನಿಧಿಯಿಂದ ಈ ಕೇಂದ್ರಗಳ ಸ್ಥಾಪನೆಗಾಗಿ ೮೬ ಲಕ್ಷ ರೂ ಗಳ ಗ್ರ್ಯಾಂಟ್ ದೊರೆಯುತ್ತದೆ.

ಈ ಕೇಂದ್ರಗಳನ್ನು ಭಾರತ ಅಮೇರಿಕಾ ಸಹಾಯನಿಧಿಯಿಂದ ನಡೆಸಲಾಗುತ್ತೆ.

೫ ವರ್ಷಗಳನಂತರ ಭಾರತವೇ ಪೂರ್ಣ ವೆಚ್ಚವನ್ನು ವಹಿಸಿಕೊಳ್ಳುವುದು.

ಅಯುಧ ಪರಿಶೋಧನಾ ಸಂಸ್ಥೆ

ಪೂನಾದಲ್ಲಿ ಆಯುಧ ಪರಿಶೋಧನಾ ಸಂಸ್ಥೆಯೊಂದನ್ನು ಭಾರತ ರಕ್ಷಣಾಶಾಖೆಯು ಸ್ಥಾಪಿಸಲಿದೆಯೆಂದು ಹೇಳಲಾಗಿದೆ.

ಕೊಚ್ಚಿನ್‌ನಲ್ಲಿ ನೌಕಾ ವಿಮಾನ ಕೇಂದ್ರ

ಭಾರತದಲ್ಲಿ ಪ್ರಥಮವಾಗಿ ನೌಕಾ ವಿಮಾನದಲ್ಲಿ ಶಿಕ್ಷಣಕೊಡಲು ಅನುಕೂಲವಾಗುವಂತೆ ಕೊಚ್ಚಿನ್‌ನಲ್ಲಿ ಒಂದು ನೌಕಾ ಕೇಂದ್ರವನ್ನು ಸ್ಥಾಪಿಸಲಾಗುತ್ತದೆಯೆಂದು ಭಾರತ ನೌಕಾ ಮುಖ್ಯಾಧಿಕಾರಿಗಳು ಹೇಳಿರುವರು.

ಯುದ್ಧ ಭಯವಿಲ್ಲದಿದ್ದಾಗ್ಯೂ ನವೀನ ಶಾಂತಿಕ ಯುಗಕ್ಕನುಗುಣವಾಗಿ ಏರ್‌ಕ್ರಾಫ್ಟ್‌ಕ್ಯಾರಿಯರ್ ಮುಂತಾದುವನ್ನು ನಡೆಸಲು ತಕ್ಕ ಶಿಕ್ಷಣವನ್ನು ಪಡೆದವರು ಬೇಕಾಗುವುದರಿಂದ ಈ ಕೇಂದ್ರವನ್ನು ಸ್ಥಾಪಿಸಲಾಗುತ್ತದೆಯೆಂದು ಅವರು ಹೇಳಿರುವರು.

ಭಾರತ ಉಪರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಉಮೇದುವಾರಿಕೆ ಪತ್ರಗಳನ್ನು ಕೊಡುವ ಕೊನೆಯದಿನ ನಿನ್ನೆಯಾಗಿತ್ತು. ಡಾ॥ ರಾಧಾಕೃಷ್ಣನ್‌ರವರ ಉಮೇದುವಾರಿಕೆ ಪತ್ರವಿನಹ ಇನ್ನಾವ ಉಮೇದುವಾರಿಕೆಯೂ ಬಂದಿಲ್ಲ ಸ್ಪರ್ಧೆಯಿಲ್ಲದೆ ಡಾ॥ ರಾಧಾಕೃಷ್ಣನ್‌ರವರು ಭಾರತ ಉಪರಾಷ್ಟ್ರಾಧ್ಯಕ್ಷರಾಗಲಿದ್ದಾರೆ.

ಭಾರತ ಸ್ತ್ರೀಯರ ಪಾತ್ರ

ರೋಗಿಗಳ ಶುಶ್ರೂಷೆ ಕಲೆಯಲ್ಲಿ ಭಾರತಸ್ತ್ರೀಯರು ಪಾತ್ರವನ್ನು ವಹಿಸಿಕೊಳ್ಳಬೇಕು. ರೋಗಿಗಳಿಗೆ ಉಪಚಾರಮಾಡುವ ಕಾರ್ಯದಲ್ಲಿ ಸ್ತ್ರೀಯರು ಸೇವೆಗೈಯಲು ಉನ್ನತ ಕ್ಷೇತ್ರವಾಗಿರುತ್ತದೆ ಈಗಾಗಲೇ ಭಾರತದಲ್ಲಿರುವ ರೆಡ್‌ಕ್ರಾಸ್ ಸಂಸ್ಥೆ ಮತ್ತು ಸೆಂಟ್ ಜಾನ್'ಸ್ ಅಂಬುಲೆನ್ಸ್ ಸಂಸ್ಥೆಯು ಬಿಹಾರ, ಮದರಾಸು ಮುಂತಾದ ಪ್ರದೇಶಗಳಲ್ಲಿ ಅನೇಕರೀತಿ ಸೇವೆಗೈದಿದೆಯೆಂದು ನಿನ್ನೆ ರೆಡ್‌ಕ್ರಾಸ್ ಸಂಸ್ಥೆ ಮತ್ತು ಸೆಂಟ್‌ಜಾನ್ಸ್ ಅಂಬುಲೆನ್ಸ್ ಸಂಸ್ಥೆಯ ವಾರ್ಷಿಕೋತ್ಸವದಲ್ಲಿ ಮಾತನಾಡುತ್ತಾ, ರಾಷ್ಟ್ರಾಧ್ಯಕ್ಷರು ಹೇಳಿರುವರು.

ತಾಂಡನ್ ಪಾರ್ಲಿಮೆಂಟಿಗೆ

ಮದರಾಸಿನ ಗೌರ್ನರ್ ಶ್ರೀ ಶ್ರೀಪ್ರಕಾಶರವರು ರಾಜೀನಾಮೆಯಿತ್ತ, ಅಲಹಾಬಾದ್ ಕ್ಷೇತ್ರದಿಂದ ಪಾರ್ಲಿಮೆಂಟಿಗೆ ಮಾಜಿ ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ್ ತಾಂಡನ್‌ರವರು ಉಮೇದುವಾರಿಕೆ ಸಲ್ಲಿಸಿರುವರು. ಸೋಷಲಿಸ್ಟ್ ಪಕ್ಷದ ಉಮೇದುವಾರನ ಪತ್ರವು ತಿರಸ್ಕೃತವಾದುದರಿಂದ ಶ್ರೀ ತಾಂಡನ್ನರು ಚುನಾಯಿತರಾಗಿರುವರು.

ರಾಣಿಯ ವರ್ಧಂತಿ

ಬ್ರಿಟನ್ ರಾಣಿ ಎಲಿಜಬೆತ್‌ರವರು ೨೬ನೇ ವರ್ಷ ವರ್ಧಂತಿಯು ನಿನ್ನೆ ಲಂಡನ್ನಿನಲ್ಲಿ ನಡೆಯಿತು.

ಅಧಿಕೃತವಾಗಿ ವರ್ಧಂತಿಯು ಮುಂದಿನ ಮಾಹೆ ೫ನೇ ತಾ॥ ನಡೆಯಲಿದೆ.

ಜಾಮೀನು ಬಿಡುಗಡೆಯಿಲ್ಲ

ಲಂಡನ್ನಿನಲ್ಲಿದ್ದ ಸ್ವಗಿರಿ ಭಾರತಕ್ಕೆ ಕರೆತರಲಾದ ಮಿ॥ ಮುಬಾರಕ್ ಅಲಿಯವರಿಗೆ ಜಾಮೀನ ಮೇಲೆ ಬಿಡುಗಡೆಮಾಡಲು ಬೊಂಬಾಯಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ನಿರಾಕರಿಸಿದ್ದಾರೆ.

ಬೊಂಬಾಯಿನಲ್ಲಿ ಹೊಸ ಮಂತ್ರಿಮಂಡಲ

ಮುಂಬೈನಲ್ಲಿ ಮೊರಾರ್ಜಿ ದೇಸಾಯಿಯವರ ನಾಯಕತ್ವದಲ್ಲಿ ಒಂಭತ್ತು ಸಚಿವರಿರುವ ಮಂತ್ರಿಮಂಡಲವನ್ನು ಪ್ರಸಿದ್ಧಿಸಲಾಗಿದೆ.

ಮಂತ್ರಿಮಂಡಲದಲ್ಲಿ ಮೊರಾರ್ಜಿ ದೇಸಾಯಿ, ಬಿ. ಎಸ್. ಹಿರೆ, ದಿನಕರರಾವ್ ದೇಸಾಯಿ, ಡಾ|| ಜೀವರಾಜಮೆಹತಾ, ಎಂ. ಪಿ. ಪಾಟೀಲ್, ಜಿ ಡಿ ತಪಾಸೆ, ನಾಯಿಕ್ ನಿಂಬಾಳ್ಕರ್ ವೈ. ಬಿ ಚಾವನ್, ಮತ್ತು ಶಾಂತಿಲಾಲ್ ಷಾ ಇರುವರು

ಮಂತ್ರಿಮಂಡಲ ನಿನ್ನೆ ಪ್ರಾತಃಕಾಲ ರಾಜಭವನದಲ್ಲಿ ಪ್ರಮಾಣವಚನ ಸ್ವೀಕರಿಸಿತು

'ನನ್ನ ಮಂತ್ರಿ ಮಂಡಲ ದಕ್ಷತೆ ಮತ್ತು ಪ್ರಾಮಾಣಿಕತೆಯ ಆಧಾರದ ಮೇಲೆ ರೂಪಿಸಲ್ಪಟ್ಟಿದೆ' ಎಂದು ಮೊರಾರ್ಜಿ ದೇಸಾಯಿಯವರು ತಿಳಿಸಿರುವರು.

ಮೊರಾರ್ಜಿ ದೇಸಾಯರ ಮಂತ್ರಿಮಂಡಲ ತೀರಚಿಕ್ಕ ಕಾಂಗ್ರೆಸ್ ಮಂತ್ರಿಮಂಡಲ ಎನ್ನಬಹುದು

ಹೊಸ ಮಂತ್ರಿಮಂಡಲದಲ್ಲಿ ಮಹಾರಾಷ್ಟ್ರ ೪, ಕರ್ನಾಟಕ ಒಂದು, ಗುಜರಾತ್ ೩, ಗ್ರೇಟರ್ ಬಾಂಬೆ ೧ ರಂತೆ ಸದಸ್ಯರಿರುವರು.

ಅಗ್ನಿಅನಾಹುತಕ್ಕೆ ಎರಡು ಸಾವಿರ ಮನೆಗಳು ನಾಶ ಹೊಂದಿದವು

ನಾಗಪುರ ಚಾಂದಾ ಜಿಲ್ಲೆಯ ಕವವಾಸಿ ಎಂಬ ಹಳ್ಳಿಯಲ್ಲಿ ಉಂಟಾದ ಭಾರಿ ಅಗ್ನಿಅನಾಹುತಕ್ಕೆ ೨೦೦೦ ಮನೆಗಳು ಈಡಾದವು ಸುಮಾರು ೧ ಸಾವಿರ ಜನಕ್ಕೆ ನಿಲ್ಲಲು ನೆಲೆಯಿಲ್ಲವಾಯಿತೆಂದು ತಿಳಿಯಬರುತ್ತದೆ. ಒಂದು ಲಕ್ಷ ರೂಪಾಯಿ ನಷ್ಟವಾಗಿದೆಯೆಂದು ಹೇಳಲಾಗಿದೆ

ನ್ಯೂಸ್‌ಪ್ರಿಂಟ್ ಕಾಗದದ ಸರಬರಾಜು ಉತ್ತಮವಾಗುತ್ತದೆ

ವಾಷಿಂಗ್ಟನ್ ಏ ೧೬

ನ್ಯೂಸ್‌ಪ್ರಿಂಟ್ ಕಾಗದದ ಸರಬರಾಜು ೧೯೫೨ನೇ ಇಸವಿಯಲ್ಲಿ ಇನ್ನೂ ಸುಲಭವಾಗಿ ಆಗಬಹುದೆಂದು ಅಂತರರಾಷ್ಟ್ರೀಯ ಮೆಟೀರಿಯಲ್ಸ್ ಸಮ್ಮೇಳನವು ಅಭಿಪ್ರಾಯಪಟ್ಟಿದೆ.

ಸ್ವತಂತ್ರ ದೇಶಗಳ ಒಟ್ಟು ನ್ಯೂಸ್ ಪ್ರಿಂಟ್ ಉತ್ಪತ್ತಿ ೮,೯೩೮,೦೦೦ ಮೆಟ್ರಿಕ್ ಟನ್ನುಗಳು ೧೯೫೨ ರಲ್ಲಿ ಆಯಿತು. ಒಂದು ವರ್ಷಕ್ಕೆ ೮,೯೨೦,೦೦೦ ಮೆಟ್ರಿಕ್ ಟನ್ನುಗಳು ಉಪಯೋಗಿಸಬೇಕೆಂದು ತಿಳಿಯಲಾಗಿದೆ

ಹೆಚ್ಚು ಉತ್ಪತ್ತಿಗೆ ಕಾರಣ, ಮಿಲ್ಲುಗಳು ಜಾಸ್ತಿಯಾಗಿ ಯುಕ್ತಿಯಾಗಿ ಕೆಲಸ ಮಾಡುತ್ತಿರುವುದೇ ಎಂದು ಹೇಳಲಾಗಿದೆ

ಮುಖ್ಯಮಂತ್ರಿಗಳ ಭವನದ ಬಳಿ ಪ್ರದರ್ಶನ

ಬೆಂಗಳೂರು ಏ. ೨೦

ಸೋಷಲಿಸ್ಟ್ ಪಾರ್ಟಿ ಆಶ್ರಯದಲ್ಲಿ ಈ ದಿನ ಆಹಾರಬೆಲೆ ಪ್ರತಿಭಟನಾ ದಿನಾಚರಣೆಯನ್ನಾಚರಿಸಲಾಯಿತು. ಸುಮಾರು ೨೦೦ ಮಂದಿ ಕಾರ್ಮಿಕರು ಘೋಷಣೆ ಮಾಡುತ್ತಾ, ದಂಡಿನ ವಿವಿಧ ಮಾರ್ಗಗಳಲ್ಲಿ ಮೆರವಣಿಗೆ ಹೊರಟು ಸುಮಾರು ೧೨-೩೦ರ ವೇಳೆಗೆ ಕುಮಾರಾ ಪಾರ್ಕ್ ಬಳಿ ಬಂದರು ಮೈಸೂರು ಸೋಷಲಿಸ್ಟ್ ಪಾರ್ಟಿ ಅಧ್ಯಕ್ಷರಾಗಿದ್ದ ಶ್ರೀ ಸಿ. ಜಿ ಕೆ. ರೆಡ್ಡಿಯವರು ಮೆಮೊರ್ಯಾಂಡಂ ಒಪ್ಪಿಸಲು ಮುಖ್ಯಮಂತ್ರಿಗಳ ಭೇಟಿ ಮಾಡಬೇಕೆಂದಿರುವುದಾಗಿ ತಿಳಿಸಿದರು ಶ್ರೀ ರೆಡ್ಡಿಯವರ ಪ್ರಾರ್ಥನೆಯನ್ನು ಮುಖ್ಯಮಂತ್ರಿಗಳಿಗೆ ತಿಳಿಸಲು ಅವರು ನಾಳೆ ಪ್ರಾತಃಕಾಲ ೯ ಗಂಟೆಗೆ ಭೇಟಿ ಮಾಡಬಹುದೆಂದು ಹೇಳಿಕಳುಹಿಸಿದರು. ತಮಗೆ ಭೇಟಿಕೊಟ್ಟ ಹೊರತು ಚಲಿಸುವುದಿಲ್ಲವೆಂದು ಪ್ರದರ್ಶನಕಾರರು ಗೇಟಿನ ಬಳಿಯೇ ಕುಳಿತರು

ರಾತ್ರಿ ಸುಮಾರು ೯-೩೦ ರ ವೇಳೆಯಲ್ಲಿ ಶ್ರೀ ಸಿ ಜಿ ಕೆ ರೆಡ್ಡಿಯವರು ಒಬ್ಬ ಮಹಿಳೆ ಮತ್ತು ಮತ್ತಿಬ್ಬರೊಡನೆ ಹೋಗಿ ಮುಖ್ಯಮಂತ್ರಿಗಳ ಭೇಟಿಮಾಡಿದರು.

ಭೇಟಿ ಕಾಲದಲ್ಲಿ ಶ್ರೀ ರೆಡ್ಡಿಯವರು ಮುಖ್ಯಮಂತ್ರಿಗಳಿಗೆ ಆಹಾರ ಬೆಲೆ ಹೆಚ್ಚಿರುವುದರಿಂದ, ಸಾಮಾನ್ಯರಿಗೆ ತುಂಬಾ ತೊಂದರೆಯಾಗಿದೆಯೆಂದು ಹೇಳಿ ಕೂಡಲೇ ಬೆಲೆಗಳನ್ನು ಕಡಮೆಮಾಡಬೇಕೆಂದು ಒತ್ತಾಯಪಡಿಸಿದರೆಂದೂ ಗೊತ್ತಾಗಿದೆ

ಶ್ರೀ ಹನುಮಂತಯ್ಯನವರು ತೊಂದರೆಯಾಗಿರುವ ವಿಷಯ ತಮ್ಮ ಗಮನದಲ್ಲಿದ್ದು ಅದನ್ನು ಪರಿಹರಿಸುವುದಕ್ಕಾಗಿಯೇ ದೆಹಲಿಯೊಡನೆ ವ್ಯವಹಾರ ನಡೆಸಿ ಸಹಾಯವನ್ನು ಒದಗಿಸುವಂತೆ ಒತ್ತಾಯಪಡಿಸುತ್ತಿರುವುದಾಗಿ ತಿಳಿಸಿದರೆಂದೂ ಆದಕ್ಕೆ ಶ್ರೀ ರೆಡ್ಡಿಯವರು ಇಂತಹ ಪ್ರದರ್ಶನಗಳು, ಮನವಿಗಳು ದೆಹಲಿ ಸರ್ಕಾರದೊಡನೆ ಹೋರಾಡಲು ಸಹಾಯ ಮಾಡುವುದೆಂದೂ ಇಲ್ಲಿ ನಡೆಯುವುದನ್ನು ದೆಹಲಿಯವರಿಗೆ ತಿಳಿಸುವುದರಿಂದ ಶ್ರೀ ಹನುಮಂತಯ್ಯನವರ ಪ್ರಯತ್ನ ಸುಲಭವಾಗುವುದೆಂದೂ ಹೇಳಿದರೆಂದು ಗೊತ್ತಾಗಿದೆ.

ಈ ಭೇಟಿ ನಡೆದನಂತರ ಪ್ರದರ್ಶನಕಾರರು ಅಲ್ಲಿಂದ ಹೊರಟರು. ಭೇಟಿ ಸುಮಾರು ಹದಿನೈದು ನಿಮಿಷಗಳ ಕಾಲ ನಡೆಯಿತು.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಚಿನ್ನದಗಣಿ ಶಿಲಾ ಸ್ಫೋಟನೆ

ಚಿನ್ನದಗಣಿ ಏ. ೨೦

ನಿನ್ನೆ ಕೆ. ಜಿ. ಎಫ್.ನ ಚಾಂಪಿಯನ್ ರೀಫ್ ಗಣಿಯಲ್ಲಿ ಶಿಲಾ ಸ್ಫೋಟನೆ ನಡೆದ ಫಲವಾಗಿ ಟನ್ನುಗಟ್ಟಲೆ ಶಿಲಾರಾಶಿಯಲ್ಲಿ ಹೂತುಹೋದ ೨೦ ಮಂದಿ ಕೆಲಸಗಾರರನ್ನು ಸಜೀವಿತರನ್ನಾಗಿ ರಕ್ಷಿಸುವ ಆಶೆ ಇಲ್ಲದಾಯಿತು.

ಸ್ಫೋಟನೆ 'ವೈಟ್‌ಶಾಪ್ಸ್'ನಲ್ಲಿ ಸುಮಾರು ಎಂಟು ಸಹಸ್ರ ಅಡಿ ಆಳದಲ್ಲಿ, ಗಣಿಯ ಸಟ್ಟನಡುವೆ ಆಗಿದೆ.

ಸ್ಫೋಟನೆಯಾದಾಗ ಪ್ರಾತಃಕಾಲ ೧೦ ಗಂಟೆ.

ಆಕಸ್ಮಿಕ ನಡೆದ ಸ್ಥಳಕ್ಕೆ ತೀರ ಹತ್ತಿರದಲ್ಲೆ ಬಹುಮಂದಿ ಕೆಲಸಗಾರರು ಇದ್ದರು. ಒಂಬತ್ತುಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಶೋಧನೆ ನಡೆಸುತ್ತಿರುವ ತಂಡದವರು ನಿನ್ನೆಯಿಂದ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ಇಂದುಸಂಜೆ ಆರುಗಂಟೆ ವೇಳೆಗೆ ಸ್ಫೋಟನೆಯಾದ ಸ್ಥಳದವರೆಗೆ ಮುಟ್ಟಲು ಅವರಿಗೆ ಸಾಧ್ಯವಾಯಿತು.

ಸ್ಫೋಟನೆಯಾದ ೩೨ ಗಂಟೆಗಳ ರುವಾಯ ಭೂಗರ್ಭದಲ್ಲಿನ ಎಂಜಿನಿಯರು, ಭಗ್ನಗೊಂಡಿರುವ ಶಿಲಾರಾಶಿಯಲ್ಲಿ ಮಾಡಿರುವ ಕಂಡಿಯಲ್ಲಿ ಒಬ್ಬನ ಮೃತದೇಹ ಕಾಣಬರುತ್ತಿದೆಯೆಂದು ತಿಳಿಸಿದ್ದಾರೆ. ದೊಡ್ಡ ದೊಡ್ಡ ಕಲ್ಲಿನ ರಾಶಿ ಅಡ್ಡವಿರುವುದರಿಂದ ಮೃತದೇಹದ ಬಳಿ ಹೋಗಲು ಇನ್ನು ಸಾಧ್ಯವಾಗದೆ ಇದೆಯೆಂದು ತಿಳಿಸಿದ್ದಾರೆ. ಅಲ್ಲದೆ ಉಳಿದ ಕೆಲಸಗಾರರು ಜೀವದಿಂದ ಇರುವ ಬಗ್ಗೆ ಸೂಚನೆ ಸಹ ಇಲ್ಲವೆಂದು ಅವರು ತಿಳಿಸಿದ್ದಾರೆ

ಅಮೆರಿಕ-ಭಾರತ ಸ್ತ್ರೀಯರ ಸಮಸ್ಯೆ

ವಾಷಿಂಗ್ಟನ್ ಏ ೧೫

ಮಕ್ಕಳನ್ನು ಸಾಕುವುದರಲ್ಲಿ, ಸಂಸಾರ ನಿರ್ವಹಣೆ ಮಾಡಿಕೊಂಡು ಹೋಗುವುದರಲ್ಲಿ, ಅಮೆರಿಕ ಮತ್ತು ಭಾರತದ ಸ್ತ್ರೀಯರ ಸಮಸ್ಯೆಗಳೆಲ್ಲಾ ಒಂದೇ, ಎಂಬುದಾಗಿ ನವದೆಹಲಿ ಗೃಹಶಾಸ್ತ್ರಶಾಲೆಯ ಪ್ರಿನ್ಸಿಪಾಲ್ ಕುಮಾರಿ ಏರಿನ್ ಎ ವಿಲಿಯಮ್ಸ್‌ರು ತಿಳಿಸಿದ್ದಾರೆ.

ನಾಲ್ಕು ಅಂತರ್ಯೋಜನೆಯ ವಿಧಿಪ್ರಕಾರ ಅಮೇರಿಕಕ್ಕೆ ಬಂದ ಕುಮಾರಿ ಏರಿನ್‌ರು ಅಮೇರಿಕದ ಮಹಿಳೆಯರ ಬಗ್ಗೆ ತಮ್ಮ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಂಡಿದ್ದಾರೆ. ಅಮೇರಿಕದಲ್ಲಿ ಐದು ತಿಂಗಳ ಕಾಲ ಅಮೆರಿಕದ ಮಹಿಳೆಯರ ಕೂಡ ಕಲೆತುದೇ ಇದಕ್ಕೆ ಕಾರಣ.

ತಮ್ಮ ಪ್ರವಾಸ ಕಾಲದಲ್ಲಿ ಅಮೇರಿಕದ ಮಹಿಳೆಯರು ತುಂಬಾ ಕಷ್ಟಪಟ್ಟು ಕೆಲಸ ಮಾಡುವವರೆಂದು ಅರಿತಿದ್ದಾರೆ. ಆಹಾರಮಾಡುವ ವಿಧಾನದ ಕಾರ್ಖಾನೆಗಳನ್ನೂ, ವೃತ್ತಿಶಿಕ್ಷಣಶಾಲೆಗಳನ್ನೂ, ಗೃಹಶಾಸ್ತ್ರದ ಕಾಲೇಜುಗಳನ್ನೂ ಅವರು ಭೇಟಿ ಮಾಡಿದ್ದಾರೆ ಕೆಂಟುಕಿ, ನಾರ್ತ್ ಕೆರೊಲೀನಾ, ಟೆನ್ನಸಿ, ಮೇರಿಲ್ಯಾಂಡ್, ಡಿಲಾವೇರ್, ನ್ಯೂಜರ್ಸಿ ಮುಂತಾದ ಸಂಸ್ಥಾನದ ಮಹಿಳೆಯರೊಡನೆ ಬೆರೆತು, ಮಹಿಳೆಯರ ಸಮಸ್ಯೆಗಳನ್ನು ಚರ್ಚಿಸಿದ್ದಾರೆ

ಅಮೇರಿಕದ ವೃತ್ತಿ, ಶಿಕ್ಷಣ ವಿಧಾನಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ, ಭಾರತದಲ್ಲಿ ಕೆಲವನ್ನಾದರೂ ಜಾರಿಗೆ ತರಬಹುದೆಂದು ಸೂಚಿಸಿದ್ದಾರೆ.

ಕುಮಾರಿ ವಿಲಿಯಮ್ಸ್‌ರು ಜೂನ್ ವರೆಗೆ ಅಮೇರಿಕದಲ್ಲಿರುತ್ತಾರೆ.

ಪೇಟೆ ಧಾರಣೆ

ಮೈಸೂರು ತಾ|| 21-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಕ್ಕೆ		11-8	18-12
ಹೊಂಗೆಬೀಜ	,,	10-2	11-8
ಹುರುಳಿ	,,	30-2	31-14
ಮೆ. ಕಾಯಿ ಮಣಕ್ಕೆ		10-0	13-12
ಹುಣಸೇಹಣ್ಣು	,,	2-10	2-11
ಸೀಗೆಕಾಯಿ	,,	2-14	3-7
ತೆಂಗಿನಕಾಯಿ 1100ಕ್ಕೆ		81	200

ಚಿನ್ನ ಬೆಳ್ಳಿ ದರಗಳು

21-4-52	ರೂ.
ಸವರನ್	65-12
,,	65-14
ಚಿನ್ನ ತೊಲ	92-4
,, ಮೂಸ	91-0
ಬೆಳ್ಳಿ 100 ತೊಲ	162-8
,, ತೊಲ	1-12

ನ್ಯೂ ಅಪೇರ
ಜನಭರಿತವಾದ
೨೦-೪-೫೨ ರಿಂದ ಎರಡನೇ ವಾರ
* ಕುಮಾರಿ *
(ತಮಿಳು)
ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜನಿ (ಜೂ), ತಾಮ, ದೊರೆರಾಜ್, ಪುಳಿಮೂಟ್ಟೆ.

ವುಡ್ ಲ್ಯಾಂಡ್ಸ್
೧೮—೪—೫೨ ರಿಂದ
ಜನಭರಿತವಾದ ೨ನೇ ವಾರ
ದಿನವೂ ೩ ಆಟಗಳು
- ಬೇತಾಬ್ -
(ಹಿಂದಿ)
ಪಾತ್ರ:—ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.
ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ೩ ವಾರ ಮನ್ನಾ ಮಾಡಿರುತ್ತೆ.

ಫೋನ್ ೫೭೪ (ಲಂಚ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೩-೪—೧೯೫೨ನೇ ಬುಧವಾರ [ಸಂಚಿಕೆ ೧೯೯

ಪಾನನಿರೋಧ ಶಾಸನವನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರಲಾಗುತ್ತದೆ

೨ ಲಕ್ಷ ರೂಪಾಯಿ ಬೆಲೆಯ ೪ ಮಣ ಅಫೀಮು ಪತ್ತೆ

ಪಾನನಿರೋಧ ವಿಷಯದಲ್ಲಿ ಬೊಂಬಾಯಿಯ ಹೊಸ ಮಂತ್ರಿಮಂಡಲ ನೀತಿಯೇನೆಂಬುದನ್ನು ಪತ್ರಿಕೋದ್ಯೋಗಿಗಳು ಮುಖ್ಯಮಂತ್ರಿ, ಶ್ರೀ ಮುರಾರ್ಜಿಯವರನ್ನು ಕೇಳಲಾಗಿ ಪಾನನಿರೋಧ ನೀತಿಯಲ್ಲಿ ಏನೂ ಬದಲಾವಣೆಯಿಲ್ಲವೆಂದೂ ಆದರೆ ಶಾಸನವನ್ನು ಇನ್ನೂ ಕಟ್ಟುನಿಟ್ಟಾಗಿ ಆಚರಣೆಗೆ ತರಲಾಗುತ್ತದೆಯೆಂದು ಶ್ರೀ ಮುರಾರ್ಜಿಯವರು ಹೇಳಿರುವರು.

೨ ಲಕ್ಷ ರೂ. ಅಫೀಮು ಪತ್ತೆ

ನೆಲ್ಲೂರಿನಲ್ಲಿ ಅಬ್ಕಾರಿ ಇಲಾಖೆಯವರು ಒಂದೆಡೆ ೨ ಲಕ್ಷ ರೂಪಾಯಿ ಬೆಲೆ ಬಾಳುವ ೪ ಮಣ ಅಫೀಮನ್ನು ಪತ್ತೆಹಚ್ಚಿರುವರು. ದಕ್ಷಿಣ ಭಾರತದಲ್ಲಿ ಇಷ್ಟು ಪ್ರಮಾಣದಲ್ಲಿ ಅಫೀಮನ್ನು ಪತ್ತೆಹಚ್ಚಿರುವುದು ಇದೇ ಮೊದಲು.

ರೆವಿನ್ಯೂ ಮಂತ್ರಿಗಳ ಪ್ರವಾಸ

ಬೆಂಗಳೂರು ಏ ೨೨

ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಇದೇ ೨೮ ಮತ್ತು ೨೯ ತಾರೀಖುಗಳ ನುಗು, ಕೃಷ್ಣರಾಜಸಾಗರ ಮತ್ತು ಕಪಿನಿ ಜಲಾಶಯಗಳ ಪರಿಶೀಲನೆ ನಡೆಸುವರು.

'ಕುಮಾರಾಪಾರ್ಕ್' 'ಕುಮಾರ ಕೃಪಾ'

ಬೆಂಗಳೂರು ಏ ೨೨

ಮುಖ್ಯಮಂತ್ರಿಗಳ ಅಧಿಕೃತನಿವಾಸವಾದ ಕುಮಾರಾ ಪಾರ್ಕ್‌ನ ಹೆಸರನ್ನು ಕುಮಾರ ಕೃಪಾ ಎಂದು ಬದಲಾಯಿಸಿ ಸರ್ಕಾರದ ಪ್ರಕಟಣೆ ಹೊರಬಿದ್ದಿದೆ.

ಮುಖ್ಯಮಂತ್ರಿಗಳ ಸಂತಾಪ

ಬೆಂಗಳೂರು ಏ ೨೨

ಕೋಲಾರ ಚಿನ್ನದಗಣಿಯಲ್ಲಿ ಆದ ಆಸ್ಫೋಟನೆಯಲ್ಲಿ ಮರಣ ಹೊಂದಿದವರ ಸಂಸಾರದವರಿಗೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಮ್ಮ ಅನುತಾಪವನ್ನು ಕೋಲಾರ ಜಿಲ್ಲಾಧಿಕಾರಿಗಳ ಮೂಲಕ ಕಳುಹಿಸಿರುವರು

ನೊಂದವರ ಸಂಸಾರಗಳಿಗೆ ಕೂಡಲೇ ಪರಿಹಾರದ್ರವ್ಯವನ್ನು ಕೊಡುವಂತೆ ಜಿಲ್ಲಾಧಿಕಾರಿಗಳು ಪ್ರಯತ್ನ ಮಾಡಬೇಕೆಂದು ಸೂಚನೆಯಿತ್ತಿರುವರು.

ಕೊರಿಯಾದಲ್ಲಿ ಯುದ್ಧ ಪ್ರಾರಂಭ

ಕಳೆದ ೪೮ ಗಂಟೆಗಳಲ್ಲಿ ಕೊರಿಯಾದಲ್ಲಿ ವಿಮಾನ ಮತ್ತು ನೌಕಾಯುದ್ಧ ಮತ್ತೆ ಪ್ರಾರಂಭವಾಗಿದೆ ಕಮ್ಯುನಿಸ್ಟರ ನೆಲೆಗಳ ಮೇಲೆ ಮತ್ತು ಸಂಬರಾಜಿನ ಮೇಲೆ ಬ್ರಿಟಿಷ ಮತ್ತು ಆಸ್ಟ್ರೇಲಿಯ ವಿಮಾನಗಳು ಧಾಳಿ ಮಾಡಿದವು.

ಅಮೇರಿಕದ ಆರು ವಿಮಾನಗಳನ್ನು ನಾಶಮಾಡಿದುದಾಗಿ ಕಮ್ಯುನಿಸ್ಟರು ತಿಳಿಸಿದ್ದಾರೆ.

ಪಹರೆ ಸಿಬ್ಬಂದಿ ಹೆಚ್ಚಿಸಲಾಗಿದೆ

ಭಾರತ ಫ್ರೆಂಚ್ ಗಡಿಗಳಲ್ಲಿ ಇತ್ತೀಚಿಗೆ ಕೆಲವು ಘಟನೆಗಳು ನಡೆಯಲಾರಂಭವಾಗಿರುವುದರಿಂದ ಭಾರತ ಪಹರೆ ಸಿಬ್ಬಂದಿಯನ್ನು ಹೆಚ್ಚಿಸಲಾಗಿದೆಯೆಂದು ತಿಳಿದುಬಂದಿದೆ.

ಶಾಸನಸಭಾಧಿವೇಶನ

ಬೊಂಬಾಯಿನಲ್ಲಿ ಉಭಯ ಶಾಸನಸಭೆಗಳ ಅಧಿವೇಶನವು ಮೇ ೩ನೇ ತಾರೀಖು ಬೊಂಬಾಯಿನಲ್ಲಿ ನಡೆಯುತ್ತದೆ. ಅದೇ ದಿನ ಉಭಯ ಸಭೆಗಳ ಅಧ್ಯಕ್ಷರ ಚುನಾವಣೆ ನಡೆಯುತ್ತದೆ.

ಪುನಃ ಸಭೆಯು ಬಡ್ಜೆಟ್ ಪರಿಶೀಲನೆಗಾಗಿ ಜೂನ್ ಮಧ್ಯಭಾಗದಲ್ಲಿ ಪೂನಾದಲ್ಲಿ ಸೇರಲಿದೆಯೆಂದು ಗೊತ್ತಾಗಿದೆ.

ಜನತೆ ಸಹಕಾರ ಅಗತ್ಯ

ಜನತೆಯ ಸಹಕಾರ, ವಿಶ್ವಾಸ ಮತ್ತು ಬೆಂಬಲಗಳು ಎಂದಿನಂತೆ ಇದ್ದರೆ ಮಾತ್ರ ತಮ್ಮ ಜವಾಬ್ದಾರಿಯುತ ಕೆಲಸಗಳನ್ನು ನಿರ್ವಹಿಸುವುದು ಸಾಧ್ಯವಾಗುವುದಾಗಿ ಮದರಾಸಿನ ಮುಖ್ಯಮಂತ್ರಿ ಶ್ರೀ ರಾಜಾಜಿಯವರು ಸೇಲಂನಲ್ಲಿ ಮಾತನಾಡುತ್ತಾ ತಿಳಿಸಿರುವರು

ಚಂದ್ರನಾಗೂರ್ ಭಾರತಕ್ಕೆ

ಫ್ರೆಂಚ್ ವಶಾಹತಾದ ಚಂದ್ರನಾಗೂರ್ ಭಾರತಕ್ಕೆ ಸೇರಿಸುವ ಬಗ್ಗೆ ಶೀಘ್ರವೇ ಭಾರತ ಸರ್ಕಾರ ಆಜ್ಞೆ ಹೊರಡಿಸಲಿದೆ

ಚಂದ್ರನಾಗೂರನ್ನು ಭಾರತಕ್ಕೆ ಹಿಂದಕ್ಕೆ ಕೊಡಲು ಫ್ರೆಂಚ್ ಶಾಸನಸಭೆ ಏಪ್ರಿಲ್ ೧೧ ರಂದು ನಿರ್ಧರಿಸಿತು.

ಉಪಮಂತ್ರಿಗಳ ನೇಮಕ

ಬೊಂಬಾಯಿ ಪ್ರಾಂತ್ಯದಲ್ಲಿ ಈಗ ಹೊಸದಾಗಿರುವ ೯ ಮಂತ್ರಿಗಳ ಜೊತೆಗೆ ಕೆಲವು ಉಪಮಂತ್ರಿಗಳನ್ನು ನೇಮಿಸಿಕೊಳ್ಳಲು ಮುಖ್ಯಮಂತ್ರಿ ಶ್ರೀ ಮುರಾರ್ಜಿಯವರು ನಿರ್ಧರಿಸಿರುವರು.

ಅಕ್ಕಿ ಗಿರಣಿಗಳ ಮೇಲೆ ಕಾರ್ಯಕ್ರಮ

ಬತ್ತ, ಕಲ್ಲು, ಮಣ್ಣು, ನುಚ್ಚು ಸೇರದ ಸ್ವಚ್ಛವಾದ ಅಕ್ಕಿಯನ್ನು ಸರ್ಕಾರಕ್ಕೆ ಸರಬರಾಜು ಮಾಡಲಿಲ್ಲವೆಂದು ಶಿವಮೊಗ್ಗಾ ಜಿಲ್ಲಾಧಿಕಾರಿಗಳು ಶಿವಮೊಗ್ಗದಲ್ಲಿರುವ ೫ ಅಕ್ಕಿ ಗಿರಣಿಗಳ ಮೇಲೆ ಕಾರ್ಯಕ್ರಮ ತೆಗೆದುಕೊಂಡು ಅವುಗಳನ್ನು ಸಸ್ಪೆಂಡು ಮಾಡಿರುವರು

ಮತ್ತೆ ಕೆಲವು ಗಿರಣಿಗಳು ಇದೇ ರೀತಿ ಮಾಡಿದ್ದಕ್ಕೆ ಗಿರಣಿಗಳ ಖರ್ಚಿನಲ್ಲಿ ಅವುಗಳನ್ನು ಶುದ್ಧಗೊಳಿಸಿದುದಲ್ಲದೆ ಅವರಿಂದ ಒಂದಕ್ಕೆ ನಾಲ್ಕರಂತೆ ದಂಡ ವಸೂಲ್ಮಾಡಲು ಆಜ್ಞೆ ಮಾಡಿರುವರು.

ನಗರಾರೋಗ್ಯ

ಮೈಸೂರು ಏ ೨೨

ಏಪ್ರಿಲ್ ೧೯ಕ್ಕೆ ಮುಕ್ತಾಯವಾದ ಪಕ್ಷದ ನಗರಾರೋಗ್ಯವನ್ನು ಮೈಸೂರು ಆರೋಗ್ಯಾಧಿಕಾರಿಗಳು ಪ್ರಕಟಿಸಿರುವರು

ಪ್ಲೇಗು ರೋಗವೆಲ್ಲೂ ಇರಲಿಲ್ಲ. ೧೨೨೮ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಗಿದೆ

ಲಷ್ಕರ್ ಮೊಹಲ್ಲಾದಲ್ಲಿ ಸಿಡುಬು ರೋಗದಿಂದ ಒಂದು ಮರಣವಾಗಿದೆ- ೪೪೪ ಪ್ರೈಮರಿ ೪೪೧೩ ರಿವ್ಯಾಕ್ಸಿನೇಷನ್ ಮಾಡಲಾಗಿದೆ-

ಡಿಫ್ತೀರಿಯಾ ರೋಗವು ೫ ಜನಕ್ಕೆ ತಗುಲಿದೆ- ಟೈಫಾಯಿಡ್‌ನಿಂದ ಒಂದು ಮರಣವಾಗಿದೆ- ಡಿಫ್ತೀರಿಯಾ ನಿರೋಧ ಇನಾಕ್ಯುಲೇಷನ್ ೨೦, ಟೈಫಾಯಿಡ್ ನಿರೋಧ ಇನಾಕ್ಯುಲೇಷನ್ ೧೪ ಮಾಡಲಾಯಿತು

ಕಾಲರಾ ರೋಗವೆಲ್ಲೂ ಇರಲಿಲ್ಲ. ಕಾಲರಾ ನಿರೋಧಕ್ಕೆ ೨೭ ಇನಾಕ್ಯುಲೇಷನ್ ಮಾಡಲಾಗಿದೆ-

ಕಾಫಿ ಬೀಜದ ಸಾಗಾಣಿಕೆಗೆ ಪ್ರತಿಬಂಧಕ

ಮೈಸೂರು ಏ ೨೨

ಮೈಸೂರು ಜಿಲ್ಲೆಯ ಯಾವ ಭಾಗದಿಂದ ಅಥವಾ ಭಾಗಕ್ಕಾಗಲಿ ಕಾಫಿ ಬೀಜ ಮತ್ತು ಪುಡಿಯನ್ನು ಅನಧಿಕಾರಯುತವಾಗಿ ಸಾಗಿಸುವುದನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಿಸಿರುತ್ತಾರೆ.

ಪತ್ರಿಕಾ ಗೋಷ್ಠಿ

ಬೆಂಗಳೂರು ಏ. ೨೨

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಾಳೆ ಬೆಳಗ್ಗೆ ೧೨-೩೦ ಗಂಟೆಗೆ ಪತ್ರಿಕಾಗೋಷ್ಠಿಯನ್ನು ನಡೆಸಲಿದ್ದಾರೆ.

ಪೆಪ್ಸು ಹೊಸ ಸಂಪುಟ

ಪೆಪ್ಸುವಿನಲ್ಲಿ ಹೊಸದಾಗಿ ಯುನೈಟೆಡ್ ಫ್ರಂಟಿನ ನಾಯಕ ಸರ್ದಾರ್ ಗ್ಯಾನ್ ಸಿಂಗ್ ರಾರೇವಾಲಾರವರ ಮಂತ್ರಿಮಂಡಲವು ನಿನ್ನೆ ಮಧ್ಯಾಹ್ನ ಅಧಿಕಾರ ಸ್ವೀಕರಿಸಿತು. ಮಂತ್ರಿ ಸಂಪುಟದಲ್ಲಿ ೪ ಮಂತ್ರಿಗಳಿರುವರು.

ಹೊಗೆಸೊಪ್ಪಿನ ಸಂಶೋಧನಾ ಕೇಂದ್ರ

ಹೈದರಾಬಾದಿನ ಮದಿರಾ ಎಂಬಲ್ಲಿ ಸರ್ಕಾರವು ಒಂದು ಹೊಗೆಸೊಪ್ಪಿನ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಿದೆ

ಪ್ರಭಾ* 25-4-52 ರಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಆಟಗಳು
ಹರಿಶ್ಚಂದ್ರ, ಪೃಥ್ವಿರಾಜ್‌ರವರ ಅತ್ಯುತ್ತಮ ಸಂಗೀತದಿಂದ ಕೂಡಿದ ಸಾಂಸಾರಿಕ ಹಿಂದಿಚಿತ್ರ, ಪ್ರತಿಯೊಬ್ಬರೂ ತಪ್ಪದೇ ನೋಡಬೇಕಾದ ಚಿತ್ರ.
ಆಪ್‌ನಿ-
-ಇಜ್ಜತ್
ಪಾತ್ರ:- ಸುಲೋಚನಾ ಚಟರ್ಜಿ, ಮೋತಿಲಾಲ್, ಮುನಾವರ್ ಸುಲ್ತಾನಾ, ಯಾಕುಬ್, ಆಘಾ, ಗೋಪ್ ಮತ್ತು ಡೇವಿಡ್.
ಬೆಳಗಿನ ಪ್ರದರ್ಶನ 25—4—52 ರಿಂದ ಮೂರುದಿನಗಳು
ನೂರ್‌ಜಹಾನ್ ನಟಿಸಿರುವ
—: ದಿಲ್ :—

ನೌಕರರು ಪ್ರಾಮಾಣಿಕತೆಯಿಂದ ವರ್ತಿಸಬೇಕು

ಬೆಂಗಳೂರು ಏ. ೨೨

ಸರ್ಕಾರಿ ಉದ್ಯೋಗಸ್ಥರು ಗಣ್ಯ ಹುದ್ದೆಯಲ್ಲಿರುವವರಾಗಲೀ ಅಥವಾ ಕೆಳದರ್ಜೆ ನೌಕರರಾಗಲೀ ಪ್ರಾಮಾಣಿಕತೆಯಿಂದ ವರ್ತಿಸುವುದು ಅತ್ಯಗತ್ಯವೆಂಬುದಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀ ಇ. ವಿ. ಗಣಪತಿ ಅಯ್ಯರ್‌ರವರು ಶಾಸನಸಭಾ ಭವನದಲ್ಲಿ ಮೈಸೂರು ಸಿವಿಲ್ ಸರ್ವೀಸ್ ಸಂಘದ ೨೧ನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಭಾಷಣಮಾಡುತ್ತಾ ನಿನ್ನೆ ದಿನ ತಿಳಿಸಿದರು.

ಚುನಾವಣೆ ತಕರಾರು ಅರ್ಜಿಗಳು

ಬೆಂಗಳೂರು ಏ. ೨೨

ಭಾರತ ಕಮೀಷನ್ನಿನ ಅಸಿಸ್ಟೆಂಟ್ ಕಾರ್ಯದರ್ಶಿ ಶ್ರೀ ಪಿ. ಎನ್. ಕೃಷ್ಣಮಣಿಯವರಿಗೆ ಚುನಾವಣೆ ತಕರಾರು ಅರ್ಜಿಗಳನ್ನು ಸ್ವೀಕರಿಸಲು ಅಧಿಕಾರ ಕೊಡಲಾಗಿದೆ ಎಂದು ನಿನ್ನೆ ಹೊರಟ ಸರ್ಕಾರಿ ಪ್ರಕಟಣೆಯೊಂದು ತಿಳಿಸುತ್ತದೆ. ಅರ್ಜಿಗಳೊಡನೆ, ಒಂದು ಸಾವಿರ ರೂ ಪಾವತಿ ಮಾಡಿರುವ ಟ್ರೆಜರಿ ರಸೀತಿ ಕಳುಹಿಸಬೇಕು

ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ

ಸರ್ವೋದಯ ಸಮ್ಮೇಳನದ ಮಹಾಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್, ಈ ವರ್ಷ ತಮ್ಮ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವವನ್ನು ಮುಂದುವರಿಸುವುದಿಲ್ಲವೆಂದು ತಿಳಿಸಿರುವರು 'ಸರ್ವೋದಯ ಚಳುವಳಿಯಲ್ಲೇ' ಸಂಪೂರ್ಣವಾಗಿ ಸೇವೆ ಸಲ್ಲಿಸುವುದಾಗಿ ಶ್ರೀ ದೇವ್ ತಿಳಿಸಿದರು ಈಗಾಗಲೇ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ರಾಜೀನಾಮೆಯಿತ್ತಿದ್ದಾರೆ.

ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ದಸ್ತಗಿರಿ

ಹೆಚ್. ಎಸ್. ಸಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಹೊರಗೆಡಹಿದರೆಂಬ ಅಪಾದನೆ ಮೇಲೆ ಪೋಲೀಸರು, ಉಪಾಧ್ಯಾಯರೂ ಮತ್ತು ವಿದ್ಯಾರ್ಥಿಗಳು ಸೇರಿ, ೬ ಮಂದಿಯನ್ನು ಹೈದರಾಬಾದಿನಲ್ಲಿ ದಸ್ತಗಿರಿಮಾಡಿದ್ದಾರೆಂದು ತಿಳಿದುಬಂದಿದೆ

ನಿಷೇಧಾಜ್ಞೆ ರದ್ದು

ಹೈದರಾಬಾದ್ ಸಂಸ್ಥಾನದಲ್ಲಿ ಮೂರು ವರೆ ವರುಷಗಳಿಂದ ಕಮ್ಯೂನಿಸ್ಟ್ ಪಕ್ಷದ ಮೇಲಿದ್ದ ನಿಷೇಧವನ್ನು ತೆಗೆದುಹಾಕಿ ಈ ಬಗ್ಗೆ ಅಧಿಕೃತ ಪ್ರಕಟಣೆ ಹೊರಬಿದ್ದಿದೆ.

ಅಂಥ ಮಹಾಸಭೆ ಮತ್ತಿತರ ಸಂಬಂಧದ ಸಂಸ್ಥೆಗಳ ಮೇಲಿನ ನಿಷೇಧವೂ ರದ್ದಾಗಿದೆ.

ಸರ್ ಸ್ಟಾಫರ್ಡ್ ಕ್ರಿಪ್ಸ್‌ರ ನಿಧನ

ಬ್ರಿಟನ್ನಿನ ಮಾಜಿ ಅರ್ಥಿಕ ಸಚಿವ ಸರ್ ಸ್ಟಾಫರ್ಡ್ ಕ್ರಿಪ್ಸ್‌ರವರು ಸೋಮವಾರ ರಾತ್ರಿ ನಿಧನರಾದರು. ಕಳೆದ ೧೮ ತಿಂಗಳುಗಳಿಂದ ಇವರು ಬೆನ್ನುಮೂಳೆ ಕ್ಷಯರೋಗದಿಂದ ನರಳುತ್ತಲಿದ್ದರು.

ಇವರ ನಿಧನದ ಬಗ್ಗೆ ತಮ್ಮ ಅನುತಾಪವನ್ನು ವ್ಯಕ್ತಪಡಿಸುತ್ತಾ ಲೇಡಿ ಕ್ರಿಪ್ಸ್‌ರವರಿಗೆ ಭಾರತ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರವರೂ ಪ್ರಧಾನಿ ನೆಹರೂರವರೂ ಭಾರತವು ತನ್ನ ಮಿತ್ರರಲ್ಲೊಬ್ಬರನ್ನು ಕಳೆದುಕೊಂಡರೆಂದು ಹೇಳಿರುವರು.

೧೯೪೭ ಮತ್ತು ೧೯೪೬ ರಲ್ಲಿ ಭಾರತದಲ್ಲಿಯ ರಾಜಕೀಯ ಸುಧಾರಣೆಗಳ ಪರ್ವಕಾಲದಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು.

ಪರೀಕ್ಷಾ ಸಮಯ

ಸಿಲೋನ್‌ನಲ್ಲಿ ನೆಲಸಿರುವ ಭಾರತೀಯರ ಮೂಲಭೂತ ಹಕ್ಕುಗಳ ಪುನರುದ್ಧಾರಕ್ಕಾಗಿ ಸತ್ಯಾಗ್ರಹ ಹೋರಾಟ ಹೂಡಲಿರುವ ಸಿಲೋನ್ ಭಾರತೀಯ ಕಾಂಗ್ರೆಸ್ ಅಧಿವೇಶನದಲ್ಲಿ ನಿಯುಕ್ತವಾಗಲಿರುವ ಅಧ್ಯಕ್ಷ ಶ್ರೀ ರಾಮಲಿಂಗಂರವರು ಮಾತನಾಡುತ್ತಾ, ಸಿಲೋನ್ ಭಾರತೀಯರಿಗೊಂದು ಪರೀಕ್ಷಾ ಸಮಯ ಒದಗಿದೆಯೆಂದು ಎಚ್ಚರಿಸಿರುವರು



ಪ್ರಪಂಚದಲ್ಲೆಲ್ಲಾ ಅತ್ಯಂತ ವೇಗವಾಗಿ ಹೋಗುವ ಫೈಟರ್ ವಿಮಾನವಾದ 'ಹಾಕರ್' ಇದು ರಾಯಲ್ ವಿಮಾನದಳದ ಉಪಯೋಗಕ್ಕಾಗಿ ತಯಾರಾಗುತ್ತಲಿದೆ.

ಉಮೇದುವಾರ ಪತ್ರ ಅಂಗೀಕಾರ

ಭಾರತ ಉಪರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಡಾ|| ಎಸ್ ರಾಧಾಕೃಷ್ಣನ್‌ರವರ ಉಮೇದುವಾರ ಪತ್ರವನ್ನು ರಿಟರ್ನಿಂಗ್ ಅಧಿಕಾರಿಗಳು ಅಂಗೀಕರಿಸಿರುವರು. ಇವರೊಬ್ಬರೇ ಉಮೇದುವಾರರಾದುದರಿಂದ ಅವಿರೋಧವಾಗಿ ಇವರು ಚುನಾಯಿತರಾಗುವರು. ತಮ್ಮ ನೂತನ ಹುದ್ದೆಯನ್ನು ಡಾ|| ರಾಧಾಕೃಷ್ಣನ್‌ರವರು ಮುಂದಿನ ವಾರ ೧೩ನೇ ತಾ|| ವಹಿಸಿಕೊಳ್ಳಲಿರುವರೆಂದು ಹೇಳಲಾಗಿದೆ.

ಕಾಶ್ಮೀರ ಭಾರತಕ್ಕೆ ಸೇರಬೇಕು

ಭಾರತದ ಇತರ ಸಂಸ್ಥಾನಗಳ ಸೇರ್ಪಡೆಯಂತೆಯೇ ಜಮ್ಮು ಮತ್ತು ಕಾಶ್ಮೀರಗಳ ಸೇರ್ಪಡೆಯನ್ನು ಭಾರತ ಸರ್ಕಾರವು ಗಣಿಸಬೇಕೆಂದು ಅಖಿಲಭಾರತ ಹಿಂದೂ ಮಹಾಸಭಾಧ್ಯಕ್ಷ ಡಾ|| ಎನ್. ಬಿ ಖಾರೆ ಹೇಳಿರುವರು.

ಬಿರುಗಾಳಿಯಿಂದ ಇಬ್ಬರ ಮರಣ

ಪ್ರಚಂಡಮಾರುತವೊಂದು ಅಮೆರಿಕ ನಾಕಾಧಿಕಾರಿಯೊಬ್ಬರನ್ನು ಮತ್ತು ಒಬ್ಬ ನಾಗರೀಕನನ್ನು ೧೨೩೮ರ ಅಡಿ ಎತ್ತರದ ಪ್ಯಾಡೆ ಶಿಖರದಿಂದ ಕೆಳಕ್ಕೆ ತಳ್ಳಿ ಸಾವಿಗೆ ಈಡುಮಾಡಿತು.

ಮುಖ್ಯ ಮಂತ್ರಿಗಳೊಡನೆ ಭೇಟಿ

ಬೆಂಗಳೂರು ಏ ೨೧

ಕೊಡಗಿನ ಚೀಫ್ ಕಮಿಷನರ್‌ರವರಾದ ಕ|| ಬೇಡಿಯವರು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರನ್ನು ನಿನ್ನೆ ದಿನ ಕುಮಾರಾ ಪಾರ್ಕ್ ಭವನದಲ್ಲಿ ಭೇಟಿ ಮಾಡಿದರು.

ಕೊಡಗಿಗೆ ಮೈಸೂರಿನಿಂದ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಮತ್ತು ಕೊಡಗಿನಿಂದ ಸಂಸ್ಥಾನಕ್ಕೆ ಅಕ್ಕಿ ಕಳುಹಿಸುವ ಬಗ್ಗೆ ಮಾತುಕತೆ ನಡೆಯಿತೆಂದು ತಿಳಿದು ಬಂದಿದೆ.

ಎಂ. ಪಿ. ಸಿ. ಸಿ. ಸಭೆ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಸಭೆಯು ಮೇ ೭ ಮತ್ತು ೮ ರಂದು ಕೃಷ್ಣರಾಜನಗರ ಅಥವ ಚಾಂಡ ನಕಟ್ಟೆಯಲ್ಲಿ ನಡೆಯುವ ನಿರೀಕ್ಷೆಯಿದೆ.

ಪೇಟೆ ಧಾರಣೆ

ಮೈಸೂರು ತಾ|| 22-4-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	11-8	18-12
ಹೊಂಗೆಬೀಜ ,,	10-10	11-0
ಹುರುಳಿ ,,	30-12	32-0
ಮೆ. ಕಾಯಿ ಮಣಕ್ಕೆ	7-8	16-2
ಹುಣಸೇಹಣ್ಣು ,,	2-10	3-6
ಸೀಗೆಕಾಯಿ ,,	2-14	3-8
ತೆಂಗಿನಕಾಯಿ 1100ಕ್ಕೆ	103	196

ಚಿನ್ನ ಬೆಳ್ಳಿ ದರಗಳು

22-4-52	ರೂ.
ಸವರನ್	65-10
,,	65-14
ಚಿನ್ನ ತೊಲ	94-0
,, ಮೂಸ	90-12
ಬೆಳ್ಳಿ 100 ತೊಲ	162-8
,, ತೊಲ	1-12

ವುಡ್ ಲ್ಯಾಂಡ್ಸ್

೧೮—೪—೫೨ ರಿಂದ ಜನಭರಿತವಾದ ೨ನೇ ವಾರ

ದಿನವೂ ೩ ಆಟಗಳು

- ಬೇ ತಾ ಬ್ -
(ಹಿಂದಿ)

ಪಾತ್ರ:—ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ಕಾಂಪ್ಲಿಮೆಂಟ್ ಮತ್ತು ಫ್ರೀ ಪಾಸುಗಳನ್ನು ೩ ವಾರ ಮನ್ನಾ ಮಾಡಿಯಿತ್ತೆ.

ಪ್ರಕಾಶಕರು:—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್. ಮೈಸೂರು

ಫೋನ್ ೫೭೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೪ ೪—೧೯೫೨ನೇ ಗುರುವಾರ [ಸಂಚಿಕೆ ೨೦೦

ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ಪಾನನಿರೋಧ ನೀತಿಯ ಚರ್ಚೆ

ಹಿರಿಯ ಶಾಸನಸಭೆ ಚುನಾವಣೆನಂತರ ಉಪಸಚಿವರ ನೇಮಕ ಪರಿಶೀಲನೆ

ಬೆಂಗಳೂರು ಏ. ೨೩

ಮೇ ೨ನೇ ತಾರೀಖಿನಲ್ಲಿ ಶಾಸನಸಭೆಯ ಕಾಂಗ್ರೆಸ್ ಪಕ್ಷದವರ ಸಭೆಯು ನಡೆಯುತ್ತದೆ ಆಗ ಸರ್ಕಾರದ ಪಾನನಿರೋಧ ನೀತಿಯನ್ನು ಚರ್ಚಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈದಿನ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಉಪಮಂತ್ರಿಗಳ ನೇಮಕದಬಗ್ಗೆ ಮಾತನಾಡುತ್ತಾ, ಉಪಮಂತ್ರಿಗಳ ನೇಮಕ ವಿಷಯವನ್ನು ತ್ಯಜಿಸಿಲ್ಲ ಹಿರಿಯ ಶಾಸನ ಸಭೆಯ ಚುನಾವಣೆಯಾನಂತರ ಯೋಚಿಸಲಾಗುತ್ತದೆಯೆಂದು ಶಾಸನಸಭಾ ಸದಸ್ಯರ ಅಭಿಪ್ರಾಯವೂ ಹಾಗೆಯೇ ಇದೆಯೆಂದು ಮುಖ್ಯಮಂತ್ರಿಗಳು ಹೇಳಿದರು.

ಈ ಸಭೆಯಲ್ಲಿ ಸಂಸ್ಥಾನದ ಎಲ್ಲಾ ಮಂತ್ರಿಗಳು ಇದ್ದರು.

ಕೋಲಾರ ಜಿಲ್ಲೆಯಲ್ಲಿ ನೀರಿನ ಅಭಾವ ಪ್ರದೇಶಗಳಿಗೆ ಭೇಟಿಯಿತ್ತು, ಹಿಂತಿರುಗಿದ ಆಹಾರ ಮಂತ್ರಿಗಳು ಅಲ್ಲುಂಟಾಗಿರುವ ನೀರಿನ ಅಭಾವವನ್ನು ತಿಳಿಸಿ ಪರಿಹಾರಕ್ಕಾಗಿ ತೆಗೆದುಕೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿದರು

ಆಹಾರ ಡಿಪೋವಿನಲ್ಲಿ ೧೩ ಸಾವಿರ ರೂಪಾಯಿ ದುರುಪಯೋಗ

ಮೈಸೂರು ಏ ೨೩

ಮೈಸೂರು ನಗರ ಚಾಮುಂಡೇಶ್ವರಿ ಬಸ್ತಿಯಲ್ಲಿರುವ ಚಾಮರಾಜ ಸರ್ಕಾರಿ ಆಹಾರ ಡಿಪೊ (ಹೊಯ್ಸಳ ಕರ್ನಾಟಕ ಹಾಸ್ಟಲ್ ಪಕ್ಕ) ದಲ್ಲಿ ಬಿಲ್‌ಕ್ಲಾರ್ಕ್ ಶ್ರೀ ವೇದಾಂತ ದೇಶಿಕರ್ ಎಂಬುವರು ಸುಮಾರು ೧೩೦೦೦ ರೂಪಾಯಿಗಳ ಹಣವನ್ನು ದುರುಪಯೋಗ ಪಡಿಸಿಕೊಂಡಿರುವರೆಂದು ನಿನ್ನೆ ದಿನ ಲಕ್ಷ್ಮೀಪುರಂ ಪೋಲೀಸಿನವರು ದಸ್ತಗಿರಿಮಾಡಿ ಈದಿನ ಸಿಟಿ ಮ್ಯಾಜಿಸ್ಟ್ರೇಟರಮುಂದೆ ಹಾಜರ್ಪಡಿಸಿದರು. ೩೦ ನೇ ತಾರೀಖಿನವರೆಗೆ ಜೈಲಿನಲ್ಲಿ ರಿಮ್ಯಾಂಡಿನಲ್ಲಿಡಲಾಗಿದೆ.

ಶ್ರೀ ದೇಶಿಕರ್‌ರವರು ಕೇವಲ ೬-೭ ತಿಂಗಳುಗಳಿಗೆ ರೇಷನ್ ಕಛೇರಿಯ ಗುಮಾಸ್ತರಾಗಿದ್ದು ಅನಂತರ ಈ ಡಿಪೋವಿಗೆ ಬಿಲ್‌ಕ್ಲಾರ್ಕ್ ಆಗಿ ವರ್ಗಾಯಿಸಲಾಯಿತೆಂದೂ ಮೊನ್ನೆ ಆರನೂರುಚಿಲ್ಲರೆ ರೂಪಾಯಿಗಳ ಹಣವನ್ನು ಮೈಸೂರುಬ್ಯಾಂಕಿಗೆ ಕಟ್ಟಲು ಕೊಟ್ಟಾಗ, ಅವರು ಚಿಲ್ಲರೇಹಣವನ್ನು ಮಾತ್ರ ಕಟ್ಟಿ ೬೦೦ ರೂ. ಕಟ್ಟಲಿಲ್ಲವೆಂದೂ ತನಿಖೆಯಲ್ಲಿ ಇದು ತಿಳಿದೊಡನೆಯೇ ಉಳಿಕೆ ೬೦೦ ರೂ ಕಟ್ಟಿದರೆಂದು, ಹಿಂದಿನ ಲೆಖ್ಖಗಳನ್ನು ತನಿಖೆ ಮಾಡಲು ೧೯-೧೨ ೫೧ ರಿಂದ ಇದೇರೀತಿ ಮಾಡುತ್ತಾ ಬಂದುದು ಕಂಡುಬಂದು ಇಲ್ಲಿಯವರೆಗೆ ಸುಮಾರು ೧೩೦೦೦ ರೂ ಗಳ ದುರುಪಯೋಗವಾಗಿದೆಯೆಂದು ಗೊತ್ತಾಗಿದೆ ಈಗಾಗಲೇ ಅರ್ಧಕ್ಕಿಂತ ಹೆಚ್ಚಿಗೆ ಹಣವು ವಸೂಲ್ಮಾಡಲಾಗಿದೆ ಒಟ್ಟೆ, ಒಡವೆ, ಜಮೀನು ಮುಂತಾದುವುಗಳ ಮೇಲೆ ಈ ಹಣವು ವ್ಯಯವಾಗಿರುವಂತೆ ಕಾಣಬರುತ್ತದೆ. ಇವರ ಮೇಲೆ ಫೋರ್ಜರಿ, ಹಣದ ದುರುಪಯೋಗ ಮತ್ತು ಅಕ್ರಮ ನಡತೆಗೆ ಈ ಮೂರು ವಿಧದಲ್ಲೂ ಮೊಕದ್ದಮೆಹೂಡಲಾಗಿದೆ. ಮುಂದಿನತನಿಖೆ ನಡೆಯುತ್ತಲಿದೆ.

ಅಧ್ಯಕ್ಷರ ವೇತನ

ರಾಜಾಸ್ಥಾನ ಶಾಸನಸಭೆಯ ಅಧ್ಯಕ್ಷರಿಗೆ ಮಾಹೆಯಾನಾ ೧೦೦೦ ರೂಪಾಯಿ ವೇತನ, ಸಭಾಸದಸ್ಯರಿಗೆ ೨೦೦ ರೂ ವೇತನ; ಸಭಾಧಿವೇಶನ ಕಾಲದಲ್ಲಿ ದಿನ ೧೨ ರೂ ಅಲೋಯನ್ಸ್ ಕೊಡಲು ನಿರ್ಧರಿಸಿದೆ.

ಟಿಕೇಟಿಲ್ಲದೆ ಪ್ರಯಾಣ ಮಾಡಿದವರಿಂದ ೩ ಲಕ್ಷ ರೂ. ದಂಡ ವಸೂಲಿ

೧೯೫೨ನೇ ಜನವರಿಯಲ್ಲಿ ಒಂದು ಲಕ್ಷ ೭೦ ಸಾವಿರ ಜನರು ಟಿಕೆಟ್ ಇಲ್ಲದೆ ಪ್ರಯಾಣ ಮಾಡುತ್ತಿದ್ದವರನ್ನು ಕೇಂದ್ರ ಸರ್ಕಾರವು ಪತ್ತೆಹಚ್ಚಿ ೩ ಲಕ್ಷ ೨ ಸಾವಿರ ರೂಪಾಯಿಗಳ ದಂಡವನ್ನು ವಸೂಲ್ಮಾಡಿದೆ.

ಲಂಡನ್--ಕಲ್ಕತ್ತಾ ವಿಮಾನ ಪ್ರಯಾಣ

ಲಂಡನ್ನಿನಿಂದ ಸಿಂಗಪುರ, ಕರಾಚಿ, ದೆಹಲಿ ಮೂಲಕ ಕಲ್ಕತ್ತಾಕ್ಕೆ ವಿಮಾನ ಪ್ರಯಾಣವನ್ನು ಕೇವಲ ೨೦ ಗಂಟೆಗಳಲ್ಲಿ ಮಾಡಲು ಮುಂದಿನ ಆಗಸ್ಟಿನಿಂದ ಏರ್ಪಾಡು ನಡೆಯಲಿದೆಯೆಂದು ಹೇಳಲಾಗಿದೆ.

ಶಾಂತಿ ಸಮ್ಮೇಳನ

ಏಷ್ಯಾ ಮತ್ತು ಪೆಸಿಫಿಕ್ ಪ್ರಾದೇಶಿಕ ರಾಷ್ಟ್ರಗಳ ಶಾಂತಿಸಮ್ಮೇಳನವೊಂದು ಈ ವರ್ಷ ಪೀಕಿಂಗ್‌ನಲ್ಲಿ ನಡೆಯಲಿರುವುದೆಂದು ಅಖಿಲ ಭಾರತ ಶಾಂತಿಸಮಿತಿಯ ಪ್ರಕಟಣೆಯೊಂದು ತಿಳಿಸಿದೆ.

ಚೀಣ- ಭಾರತ ಮತ್ತು ವಿಶ್ವದ ಇತರ ರಾಷ್ಟ್ರಗಳ ಶಾಂತಿಸಮಿತಿಗಳೇ ಈ ಕ್ರಮಕ್ಕೆ ಮುಂದೆ ಬಂದಿವೆಯೆಂದು ಪ್ರಕಟಣೆ ತಿಳಿಸುತ್ತದೆ

ನಿಷೇಧಾಜ್ಞೆ ರದ್ದು

ಕಮ್ಯೂನಿಸ್ಟರ ಮೇಲಿದ್ದ ಎಲ್ಲಾ ನಿಷೇಧಾಜ್ಞೆಗಳನ್ನು ಹೈದರಾಬಾದ್ ಸರ್ಕಾರವು ನಿನ್ನೆಯದಿನ ರದ್ದುಗಳಿಸಿ ಪ್ರಕಟಣೆಯಿತ್ತಿದೆ

ಹೈಕೋರ್ಟಿನಲ್ಲಿ ಅಪೀಲು

ಬೆಂಗಳೂರು ಏ ೨೨

ಮುಖ್ಯ ನ್ಯಾಯಾಧೀಶರಿಗೆ ವಿಷಪ್ರಯೋಗ ಯತ್ನ ಸಂಬಂಧ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾಗಿರುವ ದಾಸಪ್ಪನಾಯಿಡುರವರ ಜಾಮೀನು ಬಿಡುಗಡೆ ಅರ್ಜಿಯನ್ನು ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ ಎನ್. ಬಾಲಕೃಷ್ಣಯ್ಯನವರು ಇಂದು ತಿರಸ್ಕರಿಸಿದರು. ದಾಸಪ್ಪನಾಯಿಡುರವರು ಎರಡುವರ್ಷ ಕಠಿಣ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ.

ದಾಸಪ್ಪನಾಯಿಡು ಮತ್ತು ಅಷ್ಟೇ ಶಿಕ್ಷೆ ಅನುಭವಿಸುತ್ತಿರುವ ಇನ್ನೊಬ್ಬ ಅಪಾದಿತರಾದ ಅಗ್ನಿಸ್, ಸೆಷನ್ಸ್ ನ್ಯಾಯಾಧೀಶರ ತೀರ್ಪಿನ ವಿರುದ್ಧ ಹೈಕೋರ್ಟಿನಲ್ಲಿ ಅಪೀಲ್ ಹಾಕಿದ್ದಾರೆ

ಶ್ರೀ ಶಂಕರಜಯಂತಿ ಮಹೋತ್ಸವ

ಮೈಸೂರು ಏ ೨೩

ಇದೇ ೨೫ನೇ ತಾರೀಖಿನಿಂದ ಮೇ ೫ನೇ ತಾರೀಖಿನವರೆಗೆ ಶ್ರೀ ತ್ರಿನೇಶ್ವರ ಸ್ವಾಮಿದೇವಸ್ಥಾನ ಮತ್ತು ಶ್ರೀಮನ್ಮಹಾರಾಜ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ಶಂಕರ ಭಗವತ್ಪಾದಾಚಾರ್ಯರವರ ಜಯಂತ್ಯುತ್ಸವವು ನಡೆಯುತ್ತದೆ. ಪ್ರತಿದಿನ ಸಂಜೆ ಉಪನ್ಯಾಸ, ಹರಿಕಥೆ, ಸಂಗೀತ ಮುಂತಾದ ಕಾರ್ಯಕ್ರಮಗಳು ನಡೆಯುತ್ತದೆ.

ಭಾರತೀಯನಿಗೆ ಮರಣದಂಡನೆ

ಸಿಂಗಪುರದ ರಬ್ಬರ್ ತೋಟದಲ್ಲಿ ಕೆಲಸ ಮಾಡುತ್ತಿದ್ದ ರಾಮನ್ ಎಂಬ ೧೮ ವರ್ಷದ ಭಾರತೀಯ ಯುವಕನಿಗೆ ಇಪೋದಲ್ಲಿ ಮರಣದಂಡನೆಯ ಶಿಕ್ಷೆ ವಿಧಿಸಲಾಯಿತು. ಈತನು ರಹದಾರಿಯಿಲ್ಲದೆ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಂಡಿದ್ದರ ಜೊತೆಗೆ ಪೆರಾಕ್‌ನಲ್ಲಿ ಕಮ್ಯೂನಿಸ್ಟರೊಡನೆ ಸಂಬಂಧವಿಟ್ಟುಕೊಂಡಿದ್ದನೆಂಬುದೇ ಈತನ ಮೇಲಿನ ಆಪಾದನೆ.

ಪರೀಕ್ಷಾರ್ಥವಾಗಿ ಆಸ್ಫೋಟನೆ

ಅಮೆರಿಕಾದಲ್ಲಿ ತಯಾರಾದ ದೊಡ್ಡ ಆಟಂಬಾಂಬೊಂದನ್ನು ನಿವೇಡಾ ಎಂಬಲ್ಲಿ ಪರೀಕ್ಷಾರ್ಥವಾಗಿ ಆಸ್ಫೋಟನೆ ಮಾಡಲಾಯಿತು. ಸುಮಾರು ೧೫೦೦ ಜನರು ಈ ಪ್ರಯೋಗದಲ್ಲಿ ಭಾಗವಹಿಸಿದ್ದರು.

ಅಹಿಂಸಾತ್ಮಕ ಚಳುವಳಿ

ಮತದಾನ ನೀಡಲು ಓಟಿನ ಹಕ್ಕನ್ನು ಮೊಕಟುಗೊಳಿಸಿರುವುದರಿಂದ ಸಿಂಹಳ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಂದು ಜರೂರು ಸಭೆ ನಡೆಸಿ ಅಹಿಂಸಾತ್ಮಕ ಚಳುವಳಿ ನಡೆಸಲು ನಿರ್ಧರಿಸಿರುವುದಾಗಿ ಹೇಳಲಾಗಿದೆ. ಚಳುವಳಿ ಹೂಡುವುದೊಂದೇ ಮಾರ್ಗ ಉಳಿದಿರುವುದಾಗಿ ರೊಬ್ಬರು ಹೇಳಿರುವರು.

ಸಮಾಜಸೇವಾ ಸಮ್ಮೇಳನ

ಇದೇ ಡಿಸೆಂಬರ್‌ನಲ್ಲಿ ಮದ್ರಾಸಿನಲ್ಲಿ ಅಂತರಾಷ್ಟ್ರೀಯಸಮಾಜಸೇವಾಸಮ್ಮೇಳನವು ನಡೆಯುತ್ತದೆ ಜನತೆಯಆರೋಗ್ಯ, ಜೀವನಮಟ್ಟ, ಜನಪದ ಕ್ಷೇಮಾಭ್ಯುದಯಕ್ಕೆ ಸಂಬಂಧಪಟ್ಟ ಭಾಷಣ ಮತ್ತು ಚರ್ಚೆ ನಡೆಯುತ್ತದೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ
ಶ್ರೀ ನೃತ್ಯ ಕಲಾಮಂದಿರ ಮೈಸೂರು

(ಸೀತಾವಿಲಾಸಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೀಯವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಜಿಲ್ಲಾ ಪೋಲೀಸ್ ಅಧಿಕಾರಿಗಳ ವರ್ಗಾವರ್ಗಿ

ಬೆಂಗಳೂರು ಏ ೨೩

ಲಂಚನಿರೋಧ ಮತ್ತು ದಕ್ಷತೆ ಆಡಿಟ್ ಇಲಾಖೆ ಡಿ- ಎಸ್- ಪಿ- ಶ್ರೀ ಪಿ- ಎಸ್- ನರಸಿಂಹಾಚಾರ್ ಶಿವಮೊಗ್ಗ ಜಿಲ್ಲೆ ಡಿ- ಎಸ್- ಪಿ.

ಶ್ರೀ ಎ- ಪಿ- ರತ್ನರಾಜಯ್ಯ ಕೋಲಾರ ಜಿಲ್ಲೆ ಡಿ- ಎಸ್- ಪಿ.

ಐ- ಜಿ- ಪಿ- ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಶ್ರೀ ಇ- ದೇವರಾಜರಾವ್ ರೈಲ್ವೆ ಸೂಪರಿಂಟೆಂಡೆಂಟ್ (ಬೆಂಗಳೂರು.)

ರೈಲ್ವೆ ಸೂ॥ ಶ್ರೀ ಎಂ. ಮಹಾದೇವಪ್ಪ ಮಂಡ್ಯ ಜಿಲ್ಲೆ ಡಿ- ಎಸ್- ಪಿ.

ಮಂಡ್ಯ ಜಿಲ್ಲೆ ಡಿ- ಎಸ್- ಪಿ- ಶ್ರೀ ಆರ್- ಡಿ- ಅಂಡರ್‌ಸನ್ ಐ- ಜಿ- ಪಿ- ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್.

ಚಿತ್ರದುರ್ಗ ಜಿಲ್ಲೆ ಡಿ- ಎಸ್- ಪಿ- ಶ್ರೀ ಆಲ್ಬರ್ಟ್ ಮನೋರಾಜ್, ಸ್ಪೆಷಲ್ ಸೂಪರಿಂಟೆಂಡೆಂಟ್, ಕೆ- ಜಿ- ಎಫ್.

ಕೆ- ಜಿ- ಎಫ್, ಸ್ಪೆಷಲ್ ಸೂ॥ ಜನಾಬ್ ಎಂ- ಕಾದಿರ್ ಆಲಿ, ಚಿತ್ರದುರ್ಗ ಜಿಲ್ಲೆ ಡಿ- ಎಸ್- ಪಿ.

ಕೋಲಾರ ಜಿಲ್ಲೆ, ಡಿ- ಎಸ್- ಪಿ- ಶ್ರೀ ಎಂ- ನರಸಿಂಹಯ್ಯ ಲಂಚನಿರೋಧ ಶಾಖೆಯ ಸೂಪರಿಂಟೆಂಡೆಂಟ್.

ಹಾಸನ ಜಿಲ್ಲೆ ಡಿ- ಎಸ್- ಪಿ- ಶ್ರೀ ಎಲ್- ಸುಬ್ರಹ್ಮಣ್ಯರಾವ್, ಕೃಷ್ಣರಾಜಪುರಂ, ಪೋಲೀಸ್ ಟ್ರೈನಿಂಗ್ ಸ್ಕೂಲ್ ಸೂ॥.

ಟ್ರೈನಿಂಗ್ ಸ್ಕೂಲ್ ಸೂ॥ ಜನಾಬ್ ಮಹಮದ್ ದಸ್ತಗೀರ್, ಹಾಸನ ಜಿಲ್ಲೆ ಡಿ- ಎಸ್- ಪಿ.

ಹೂ ಕಿತ್ತಿದ್ದಕ್ಕೆ ಶಿಕ್ಷೆ

ಬೆಂಗಳೂರು ಏ ೨೨

ಲಾಲ್‌ಬಾಗಿನಲ್ಲಿ ಅನುಮತಿಯಿಲ್ಲದೆ ಹೂವನ್ನು ಕಿತ್ತುದ್ದಕ್ಕೆ ನಗರದ ದ್ವಿತೀಯ ನ್ಯಾಯಾಧೀಶರು ನರಸಿಂಹಯ್ಯ ಎಂಬಾತನಿಗೆ ೧ ವಾರ ಕಠಿಣ ಶಿಕ್ಷೆಯನ್ನು ಕಬ್ಬನ್ ಪಾರ್ಕಿನಲ್ಲಿ ಮಂದಕೊಂಬೆಯೊಂದನ್ನು ಕತ್ತರಿಸಿದ ಆರ್ಮುಘಂ ಮತ್ತು ಸುಸೈ ಎಂಬುವರಿರ್ವರಿಗೆ ತಲಾ ೨ ವಾರ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿದರು.

೧೫ ತಿಂಗಳು ಕಠಿಣ ಸಜ

ಪ್ರಧಾನಿ ನೆಹರುರವರ ಉಪ ಆಪ್ತ ಕಾರ್ಯದರ್ಶಿ ಶ್ರೀ ಸೂರಜ್‌ಪ್ರಕಾಶ ಖನ್ನರವರನ್ನು ಚೂರಿಯಿಂದ ಗಾಯಗೊಳಿಸಿದ ಅಪಾದನೆಯಿಂದ ವೇದಪ್ರಕಾಶನೆಂಬ ೩೨ ವರ್ಷ ದವನನ್ನು ೧೫ ತಿಂಗಳ ಕಠಿಣಶಿಕ್ಷೆಗೆ ಗುರಿಪಡಿಸಲಾಯಿತು ಈ ನ. ತಪ್ಪನ್ನು ಒಪ್ಪಿಕೊಂಡ.

ಸರ್ಕಾರಿ ಅಧಿಕಾರಿಗಳ ಪಿತೂರಿ

ಭಾರತ ಸರ್ಕಾರದ ೪ ಮಂದಿ ಉನ್ನತಾಧಿಕಾರಿಗಳನ್ನು ಮತ್ತು ದೆಹಲಿ ಮತ್ತು ಉತ್ತರ ಪ್ರದೇಶಗಳ ೧೧ ಮಂದಿ ದೊಡ್ಡ ವರ್ತಕರನ್ನು ದೆಹಲಿಯ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ೨ ಕೋಟಿ ರೂ ಗಳ ಬೆಲೆಯ ಹಾಲು ಮತ್ತು ತುಪ್ಪವನ್ನು ಸರಬರಾಜು ಮಾಡುವ ಗುತ್ತಿಗೆಯನ್ನು ಪಡೆಯುವುದಕ್ಕಾಗಿ ಪಿತೂರಿ ನಡೆಸಿದರು ಎಂಬ ಅಪಾದನೆಯಿಂದ ಪ್ರಶ್ನಿಸಲ್ಪಟ್ಟಿದ್ದಾರೆ.

ಈ ಪಿತೂರಿಯನ್ನು ವಿಶೇಷ ಪೋಲೀಸರು ೧ ವರ್ಷದಿಂದ ಕಂಡುಹಿಡಿಯುತ್ತಿದ್ದರು.

ಶ್ರೀ ಮುರಾರ್ಜಿ ವಿರುದ್ಧ ಶ್ರೀ ಜಾಧವಾರಾ ಸ್ಪರ್ಧೆ

ಮುಂಬೈ ಲೆಜಿಸ್ಲೆಟಿವ್ ಅಸೆಂಬ್ಲಿಗೆ ಅಹಮ್ಮದಾಬಾದ್ ನಗರ ಕ್ಷೇತ್ರದಿಂದ ನಡೆಯುವ ಉಪಚುನಾವಣೆಯಲ್ಲಿ ಲಕ್ಷ್ಮೀಚಂದ್ ಮಾಧವಜಿ ಜಾಧವಾರಾರವರು ಮುಂಬೈನ ಮುಖ್ಯಮಂತ್ರಿ ಶ್ರೀ ಮುರಾರ್ಜಿ ದೇಸಾಯಿರ ವಿರುದ್ಧ ಸ್ಪರ್ಧಿಸಲಿರುವರು

ಪತ್ರವ್ಯವಹಾರ

ಸ್ವಾಮಿ,—

ರಾಜಧಾನಿಯ ಬಸುಮಯ್ಯನವರ ಹೈಸ್ಕೂಲಿನ ಒಂದು ಮತ್ತು ಎರಡನೆಯ ತರಗತಿಗಳ ಈ ಸಾಲಿನ ಪರೀಕ್ಷೆಯಲ್ಲಿ ಸುಮಾರು ಶೇ॥ ೩೦-೪೦ ವಿದ್ಯಾರ್ಥಿಗಳಿಗೆ ಪ್ರಮೋಷನ್ ಸಿಕ್ಕದೆ ಪೇಚಾಡುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಪೋಷಕರಿಗೆ ಅತ್ಯಂತ ತೊಂದರೆಯೂ ಮತ್ತು ವೃಥಾ ಹಣದ ವ್ಯಯವೂ ಆಗಿದೆ. ಈ ಕಷ್ಟಕಾಲದಲ್ಲಿ ವಿದ್ಯಾರ್ಥಿಗಳನ್ನು ಮತ್ತೊಂದು ವರ್ಷ ಅದೇ ಕ್ಲಾಸಿನಲ್ಲಿ ಓದಿಸಬೇಕಾದರೆ ವಿದ್ಯಾರ್ಥಿಗಳ ಪೋಷಕರಿಗೆ ಅತ್ಯಂತ ಕಷ್ಟವಾಗುವುದು. ಈ ವರ್ಷ ಮಾತ್ರ ಇಷ್ಟು ಹುಡುಗರು ಉತ್ತೀರ್ಣರಾಗದೆ ಇರುವುದಕ್ಕೆ ಕಾರಣಕರ್ತರು ಯಾರು? ವಿದ್ಯಾರ್ಥಿಗಳೋ ಅಥವಾ ಉಪಾಧ್ಯಾಯರೋ? ಉಪಾಧ್ಯಾಯರುಗಳು ಮೊದಲಿನಿಂದಲೂ ಹುಡುಗರ ವಿಷಯದಲ್ಲಿ ಸರಿಯಾಗಿ ಮೇಲ್ವಿಚಾರಣೆ ನೋಡಿಕೊಂಡಿದ್ದ ಪಕ್ಷದಲ್ಲಿ ಇಷ್ಟು ವಿದ್ಯಾರ್ಥಿಗಳು ಫೇಲಾಗುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಈಗಲೂ ಸಹ ಸಂಬಂಧಪಟ್ಟ ಅಧಿಕಾರಿಗಳು ವಿದ್ಯಾರ್ಥಿಗಳ ವಿಷಯದಲ್ಲಿ ಇಷ್ಟು ಕ್ರೂರತನದಿಂದ ವರ್ತಿಸದೆ ಪ್ರಮೋಷನ್‌ಲಿಸ್ಟನ್ನು ಪುನರ್ವಿಮರ್ಶೆ ಮಾಡುತ್ತಾರೆಂದು ನಂಬಲಾಗಿದೆ. ವಿದ್ಯಾಇಲಾಖೆಯವರೂ ಸಹ ಕೂಡಲೇ ತಕ್ಕ ತನಿಖೆ ನಡೆಸುವರೆಂದು ನಂಬಿಕೆ.

ನೊಂದ ಒಬ್ಬ ಪೋಷಕ.

ಮೈಸೂರು ಜಿಲ್ಲಾ ಸಹಕಾರ ಸಮ್ಮೇಳನ

ಮೈಸೂರು ಏ. ೨೩

ಮೈಸೂರು ಜಿಲ್ಲೆಯ ನಾಲ್ಕನೆಯ ಸಮ್ಮೇಳನವು ತಾ॥ ೧-೫-೫೨ನೇ ಗುರುವಾರ ಬೆಳಿಗ್ಗೆ ೯ ಗಂಟೆಗೆ ನಂಜನಗೂಡು ರೆಸಿಡೆನ್ಸಿ ಬಂಗಲೆಯಲ್ಲಿ ನಡೆಯುವುದು.

ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಬಿ ವಾಸುದೇವಮೂರ್ತಿಯವರು ಉದ್ಘಾಟನೋತ್ಸವವನ್ನು ನೆರವೇರಿಸುವರು.

ಮೈಸೂರು ಗೌರ್ನಮೆಂಟ್ ಪ್ಲೀಡರ್ ಶ್ರೀ ಎಸ್. ಚಿನ್ನಸ್ವಾಮಿಶೆಟ್ಟರು ಅಧ್ಯಕ್ಷತೆ ವಹಿಸುವರು.

ಮೈಸೂರು ಜಿಲ್ಲೆಯ ಸಹಕಾರ ಸಂಘಗಳ ಪ್ರತಿನಿಧಿಗಳೆಲ್ಲರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದೆ. ಒಂದು ವೇಳೆ ಎಮ ಸಕಾಲಕ್ಕೆ ತಲಪದೇ ಇದ್ದರೂ ಈ ಪ್ರಕಟಣೆಯನ್ನೇ ಆಹ್ವಾನವೆಂದು ಭಾವಿಸಿ ಸಮ್ಮೇಳನಕ್ಕೆ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

ಸಮ್ಮೇಳನದಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ತಾ॥ ೨೮-೪-೫೨ರ ಒಳಗಾಗಿ ತಲುಪುವಂತೆ ಪ್ರತಿನಿಧಿಗಳು ಪಿ ಗೋಪಾಲಕೃಷ್ಣಶೆಟ್ಟಿ, ಗೌರವ ಕಾರ್ಯದರ್ಶಿ ಮೈಸೂರು ಜಿಲ್ಲಾ ಸಹಕಾರ ಸಂಘ ನರಸಿಂಹರಾಜ ಸ್ಮಾರಕ ಭವನ ಚಾಮರಾಜ ರಸ್ತೆ ಮೈಸೂರು, ಇವರಿಗೆ ಕಳುಹಿಸಬೇಕು.

ಸ್ವಾಗತ

ಹೈದರಾಬಾದಿನಲ್ಲಿ ಕಮ್ಯೂನಿಸ್ಟರ ಮೇಲಿನ ನಿಷೇಧಾಜ್ಞೆಗಳನ್ನೆಲ್ಲಾ ತೆಗೆದು ಹಾಕಿದ್ದಕ್ಕೆ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶ್ರೀ ರಮಾನಂದ ತೀರ್ಥರವರು ಸರ್ಕಾರ ನಿರ್ಧಾರವನ್ನು ಸ್ವಾಗತಿಸುತ್ತಾ, ಕಮ್ಯೂನಿಸ್ಟರು ಕೂಡಲೇ ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನೆಲ್ಲಾ ಸರ್ಕಾರಕ್ಕೆ ವಹಿಸಿ ತಮ್ಮ ಕೃತಜ್ಞತೆಯನ್ನು ತೋರಿಸಬೇಕೆಂದು ಹೇಳಿರುವರು.

ಅಂಚೆ ಬ್ಯಾಲೆಟ್ ಪೇಪರಿಗೆ ರಾಜು

ತಮ್ಮದಲ್ಲದ ಪೋಸ್ಟಲ್ ಬ್ಯಾಲೆಟ್ ಪೇಪರಿಗೆ ಸಹಿಹಾಕಲು ಸಂಸ್ಥಾನದ ಗೆಜೆಟೆಡ್ ಅಧಿಕಾರಿಗಳಿಗೆ ಅಧಿಕಾರ ಕೊಡಲಾಗಿದೆಯಷ್ಟೆ. ಪ್ರತಿ ಅಧಿಕಾರಿಯೂ ತನ್ನ ಸಹಿ ಕೆಳಗೆ ತನ್ನ ಅಧಿಕೃತ ಸ್ಟಾಂಪನ್ನು ಮುದ್ರಿಸಬೇಕೆಂಬ ನಿಯಮವಿದೆ ಆದರೆ ಅನೇಕ ಮಂದಿ ಅಸಿಸ್ಟೆಂಟ್ ಸೆಕ್ರೆಟರಿಗಳು, ಅಂಡರ್ ಸೆಕ್ರೆಟರಿಗಳು- ಅ॥ ಪ್ರೊಫೆಸರುಗಳು ರಜದಮೇಲಿದ್ದು ಅವರಿಗೆ ಅಧಿಕೃತ ಸ್ಟಾಂಪ್ ಇಲ್ಲದಿರುವುದರಿಂದ ಸ್ಟಾಂಪ್ ಬದಲು ಅಧಿಕಾರಿಯ ಹುದ್ದೆಯ ಹೆಸರನ್ನು ಒಪ್ಪಬೇಕೆಂದು ಮೈಸೂರು ಸರ್ಕಾರ ಸಲಹೆಗೆ ಕೇಂದ್ರ ಚುನಾವಣಾಧಿಕಾರಿಗಳು ಒಪ್ಪಿದ್ದಾರೆ.

ಮಾಜಿ ಸೈನಿಕರ ದಳ

ಸುಮಾರು ೧೦೦ ಜನ ಮಾಜಿ ಸೈನಿಕರಿಗೆ ವ್ಯವಸಾಯ ಶಿಕ್ಷಣವನ್ನು ಕೊಟ್ಟು ವಿಶ್ವವಿದ್ಯಾನಿಲಯಗಳಲ್ಲಿ ವ್ಯವಸಾಯ ಶಿಕ್ಷಣ ಕೊಡಲು ಇವರ ನೆರವನ್ನು ಪಡೆಯಲಾಗುವುದೆಂದು ಆಹಾರಮಂತ್ರಿ ಹೇಳಿರುವರು. ಎಲ್ಲಾ ಕಾಲೇಜುಗಳಲ್ಲೂ ವ್ಯವಸಾಯ ಶಿಕ್ಷಣವನ್ನು ಕೊಡಲು ಭಾರತದ ಎಲ್ಲಾ ವಿಶ್ವವಿದ್ಯಾಲಯಗಳಿಗೂ ಸಲಹೆ ಕೊಡಲಾಗಿದೆ.

ಪೇಟೆ ಧಾರಣೆ

ಮೈಸೂರು ತಾ॥ 23-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		11-8	18-12
ಹೊಂಗೆಬೀಜ	,,	8-4	11-8
ಹುರುಳಿ	,,	30-14	32-0
ಹೆಸರು	,,	58-8	——
ಮೆ. ಕಾಯಿ ಮಣಕ್ಕೆ		12-2	12-6
ಹುಣಸೇಹಣ್ಣು	,,	2-11	3-4
ಸೀಗೆಕಾಯಿ	,,	3-3	3-6
ತೆಂಗಿನಕಾಯಿ 1100ಕ್ಕೆ		110	193

ಚಿನ್ನ ಬೆಳ್ಳಿ ದರಗಳು

23-4-52	ರೂ.
ಸವರನ್	66-0
,,	66-2
ಚಿನ್ನ ತೊಲ	92-10
,, ಮುಹ	91-4
ಬೆಳ್ಳಿ 100 ತೊಲ	165-0
,, ತೊಲ	1-12

ನ್ಯೂ ಅಪೇರ
ಜನಭರಿತವಾದ
೨೦-೪-೫೨ ರಿಂದ ಎರಡನೇ ವಾರ
* ಕುಮಾರಿ *
(ತಮಿಳು)
ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜಿನಿ (ಜೂ), ಶಾಮು, ದೊರೆರಾಜ್, ಪುಳಿಮೊಟ್ಟೈ.
ರಣಜಿತ್
೧೮-೪-೫೨ರಿಂದ ಪ್ರತಿದಿನ ೩ ಆಟಗಳು
- ಸಂಯ್ಯೋಗ -
ಪಾತ್ರ:-ಮಧುಬಾಲ, ಸಜ್ಜನ್, ಅಜಿತ್, ಲೀಲಾಚಿಟ್ನಿಸ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೩] ೨೫-೪—೧೯೫೨ನೇ ಶುಕ್ರವಾರ [ಸಂಚಿಕೆ ೨೦೧

ಗಡಿನಾಡು ಗಾಂಧಿಯವರಿಗೆ ಶಸ್ತ್ರಚಿಕಿತ್ಸೆ

ಮಧ್ಯಭಾರತದ ೪೦೦ ಗ್ರಾಮಗಳಲ್ಲಿ ಭೀಕರಕ್ಷಾಮ

ಕೈಗೆಬಂದಿದ್ದು ಬಾಯಿಗೆ ಯಿಲ್ಲ

ಪೆಪ್ಸುವಿನಲ್ಲಿ ನೂತನವಾಗಿ ಮಂತ್ರಿಮಂಡಲ ಸ್ಥಾಪನೆಗೆ ಏಪ್ರಿಲ್ ೨೨ನೇ ತಾರೀಖು ಯುನೈಟೆಡ್ ಫ್ರಂಟ್ ಪಕ್ಷದ ನಾಯಕ ಸರ್ದಾರ್ ಗ್ಯಾನ್‌ಸಿಂಗ್ ರಾರೇವಾಲಾರವರು ತಮ್ಮ ಸಹೋದ್ಯೋಗಿಗಳೊಡನೆ ರಾಜಪ್ರಮುಖರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಲು ಅರಮನೆಗೆ ತೆರಳಿದರು. ಅವರ ಜೊತೆಯಲ್ಲಿ ಕೆಲವು ಪ್ರೇಕ್ಷಕರೂ ಇದ್ದರು.

ಪ್ರಮಾಣಸ್ವೀಕಾರಮುನ್ನ ಇಲಾಖೆಗಳ ವಿಭಾಗದ ಪ್ರಶ್ನೆಯಲ್ಲಿ ಒಮ್ಮತ ಬರಲಿಲ್ಲ. ಸಚಿವರಾಗಿ ಪ್ರಮಾಣ ಸ್ವೀಕರಿಸಲು ಬಂದಿದ್ದ ಚೌಧುರಿ ಇಂದ್ರಸಿಂಗ್‌ರವರು ಗೃಹಶಾಖೆಯನ್ನು ತಮಗೆ ವಹಿಸಬೇಕೆಂದು ಕೇಳಲು ಮುಖ್ಯಮಂತ್ರಿ ಸರ್ದಾರ್ ಗ್ಯಾನ್‌ಸಿಂಗ್‌ರವರು ಒಪ್ಪಲಿಲ್ಲ. ಚೌಧುರಿ ಇಂದ್ರಸಿಂಗ್‌ರವರು ಕಾಂಗ್ರೆಸ್ಸನ್ನು ತ್ಯಜಿಸಿದವರಲ್ಲೊಬ್ಬರು. ಇವರು ಉಪಪ್ರಧಾನಿಯಾಗಿ ಪ್ರತಿಜ್ಞೆ ಸ್ವೀಕಾರ ಮಾಡಬೇಕಾಗಿತ್ತು. ಇವರಿಗೆ ಗೃಹಶಾಖೆ ಕೊಡಲು ಒಪ್ಪಲಿಲ್ಲವಾಗಿ ಅವರು ಸಚಿವಸ್ಥಾನವನ್ನು ಪ್ರಮಾಣಸ್ವೀಕಾರ ಸಮಯದಲ್ಲಿ ನಿರಾಕರಿಸಿದರು.

ಪ್ರೇಕ್ಷಕರಾಗಿ ಬಂದಿದ್ದವರಲ್ಲಿ ಶ್ರೀ ರಾಮಸಿಂಗ್ ಎಂಬುವರನ್ನು ಚೌಧುರಿ ಇಂದ್ರಸಿಂಗ್‌ರವರಸ್ಥಾನದಲ್ಲಿ ಮಂತ್ರಿಯನ್ನಾಗಿ ಅಲ್ಲಿಯೇ ನೇಮಿಸಿ ಪ್ರಮಾಣ ಸ್ವೀಕರಿಸಲು ನಿರ್ಧಾರವಾಯಿತು.

ಶ್ರೀ ರಾಮದಾಸ್‌ರವರು ತಾವು ಸಚಿವರಾಗುವರೆಂದು ತಿಳಿದೇಯಿರಲಿಲ್ಲವಾಗಿ ಸಚಿವರಾಗಿ ಪ್ರಮಾಣ ಸ್ವೀಕರಿಸಲು ತಕ್ಕ ಉಡುಪಿನಲ್ಲಿ ಇರಲಿಲ್ಲವಾಗಿ ಚೌಧುರಿ ಇಂದ್ರಸಿಂಗ್‌ರವರು ತಾವುಹಾಕಿಕೊಂಡು ಬಂದಿದ್ದ ಉಡುಪನ್ನು ಅವರು ಹಾಕಿಕೊಳ್ಳಲು ಕೊಟ್ಟರು ಅನಂತರ ಪ್ರಮಾಣಸ್ವೀಕಾರ ಸಮಾರಂಭ ಜರುಗಿತೆಂದು ಹೇಳಲಾಗಿದೆ.

ಶಾಸನಸಭಾಸದಸ್ಯ

ಪಶ್ಚಿಮಬಂಗಾಳದಲ್ಲೆಲ್ಲಾ ಪಾಸನ ನಿರೋಧವನ್ನು ಜಾರಿಗೆತರಲು ಸಿದ್ಧವಿಲ್ಲವೆಂದು ಸರ್ಕಾರವು ಅಭಿಪ್ರಾಯಪಟ್ಟಿರುವುದಾಗಿ ಹೇಳಲಾಗಿದೆ.

ಪೋಲೀಸ್ ಇನ್ಸ್‌ಪೆಕ್ಟರ ದಸ್ತಗಿರಿ

ಲಂಚ ತಿಂದರೆಂಬ ಅಪಾದನೆ ಮೇಲೆ ಧರ್ಮಾಪುರದ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರು ಜ॥ ಇಬ್ರಾಹಿಂಖಾನ್ ಸಾಹೇಬ್‌ರೆಂಬುವವರನ್ನು ಡೆಪ್ಯುಟೀ ಪೋಲೀಸ್ ಸೂಪರಿಂಟೆಂಡೆಂಟರು ದಸ್ತಗಿರಿ ಮಾಡಿರುವರು.

ಐತಿಹಾಸಿಕ ಸ್ಮಾರಕ

ಮಹಾತ್ಮ ಗಾಂಧಿಯವರು ೩ ನೇ ರೌಂಡ್ ಸಮ್ಮೇಳನಕ್ಕೆ ಲಂಡನ್ನಿಗೆ ಹೋಗಿದ್ದಾಗ ತಂಗಿದ್ದ ಕಿಂಗ್‌ಸ್ಲೀಹಾಲ್ ಭವನವನ್ನು ಅಲ್ಲಿಯ ಜನತೆಯ ಇಷ್ಟಪ್ರಕಾರ ಒಂದು ಐತಿಕ ಸ್ಮಾರಕವನ್ನಾಗಿ ಮಾರ್ಪಡಿಸಲು ಕೌಂಟಿ ಕೌನ್ಸಿಲ್ ಸಮಿತಿಯು ನಿರ್ಧರಿಸಿದೆ

ಪ್ರತಿಬಂಧಕ ರದ್ದು

ಮೈಸೂರು ಸರ್ಕಾರದವರು ಈದಿನ ಹೊರಡಿಸಿದ ಪ್ರಕಟಣೆಯಲ್ಲಿ ಸಂಸ್ಥಾನದಿಂದ ಕಚ್ಚಾ ಮೂಳೆಯನ್ನು ರಫ್ತುಮಾಡಲು ಇರುವ ಪ್ರತಿಬಂಧಕವನ್ನು ತೆಗೆದುಹಾಕಲಾಗಿದೆಯೆಂದೂ ಯಾವ ಅನುಮತಿಯಿಲ್ಲದೆ ಕಚ್ಚಾ ಮೂಳೆಯನ್ನು ರಫ್ತು ಮಾಡಬಹುದೆಂದೂ ತಿಳಿಸಿದ್ದಾರೆ.

ಉತ್ಕಟವಾದ ಕ್ಷಾಮ

ಮಧ್ಯಭಾರತದ ಝಾಬಿ ಜಿಲ್ಲೆಯ ೪೦೦ ಗ್ರಾಮಗಳಲ್ಲಿ ಆಹಾರ, ನೀರು ಇವುಗಳ ಅಭಾವವುಂಟಾಗಿ ಸುಮಾರು ಒಂದು ಲಕ್ಷ ಜನರು ತೊಂದರೆಗೀಡಾಗಿದ್ದಾರೆ.

ಅಲ್ಲಿಯ ಜನರು ಹಣ್ಣು, ಎಲೆ, ಹುಣಸೆಬೀಜ, ಮಂದಬೇರು ಮುಂತಾದುವನ್ನು ತಿನ್ನುತ್ತಿದ್ದಾರೆ. ಅವರು ಅಲ್ಲಿಯ ಮುಖ್ಯಮಂತ್ರಿ ಶ್ರೀ ಮಿಶ್ರಿಲಾಲ್ ಸಂಗವಾಲ್‌ರವರು ನೋಡಿಕೊಂಡು ಬಂದರು ಪರಿಹಾರ ಕಾರ್ಯ ನಡೆಯುತ್ತಿದೆ.

ನರಿಗಳ ನಾಶಕ್ಕೆ ಸೈನ್ಯ ಸಹಾಯ

ನವದೆಹಲಿಯಲ್ಲಿ ಗುಳ್ಳೆ ನರಿಗಳ ಕಾಟದಿಂದಾಗಿ ನಿವಾಸಿಗಳಿಗೆ ಮತ್ತು ಕೋಳಿ ಸಾಕುವವರಿಗೆ ಬಹಳ ತೊಂದರೆಯಾಗಿದೆ ಇವುಗಳ ನಾಶಕ್ಕೆ ಸೈನ್ಯದ ಸಹಾಯ ಕೊಡುವುದಾಗಿ ಜ॥ ಕಾರಿಯಪ್ಪ ತಿಳಿಸಿದ್ದಾರೆ.

೧೧,೦೦೦ ರೂಪಾಯಿ ವಸೂಲಿ

ಮೈಸೂರು ಏ. ೨೪

ಆಹಾರ ಡಿಪೋನಲ್ಲಿ ೧೩೦೦೦ ರೂ ದುರುಪಯೋಗ ಪಡಿಸಿಕೊಂಡರೆಂಬ ಅಪಾದನೆಯಿಂದ ದಸ್ತಗಿರಿಯಾಗಿರುವ ವೇದಾಂತ ದೇಶಿಕರ್‌ರಿಂದ ಇಲ್ಲಿಯವರೆಗೆ ಸುಮಾರು ೧೧೦೦೦ ರೂಪಾಯಿಗಳನ್ನು ವಸೂಲ್ಮಾಡಲಾಗಿದೆಯೆಂದೂ ಗೊತ್ತಾಗಿದೆ. ಇದರ ಪೈಕಿ ನಗದು ೬೦೦೦ ರೂ, ಒಟ್ಟೆ ಒಡವೆ ರೂಪದಲ್ಲಿ ೫೦೦೦ ರೂ ಎಂದು ತಿಳಿಯಬರುತ್ತದೆ.

ಸಂಗೀತ ಕಛೇರಿ

ವರಲಕ್ಷ್ಮಿ ಸಂಗೀತ ಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ನಾಳೆ ಸಂಜೆ ೬-೩೦ ಘಂಟೆಗೆ ವಿದ್ವಾನ್ ಶ್ರೀ ಟಿ. ಪುಟ್ಟಸ್ವಾಮಯ್ಯನವರಿಂದ ಸಂಗೀತವನ್ನು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಡಿಸಲಾಗಿದೆ. ಕಲಾಭಿಮಾನಿಗಳು ದಯಮಾಡಬೇಕೆಂದು ಮೈಸೂರು ಸಹೋದರರು ಕೋರುತ್ತಾರೆ.

ಪ್ರಮಾಣಸ್ವೀಕಾರ ತಪ್ಪಿಸಲು ಪ್ರಯತ್ನ

ಹೊಸ ಪಾರ್ಲಿಮೆಂಟ್ ಅಧಿವೇಶನವು ಪ್ರಾರಂಭವಾಗುವಾಗ ಕಮ್ಯೂನಿಸ್ಟ್ ಪಕ್ಷದ ಶಾಸನಸಭಾ ಸದಸ್ಯರು ಹೇಗಾದರೂಮಾಡಿ ಪ್ರಮಾಣಸ್ವೀಕಾರ ಮಾಡುವುದನ್ನು ತಪ್ಪಿಸಲು ಪ್ರಯತ್ನಿಸುತ್ತಿರುವುದಾಗಿ ಹೇಳಲಾಗಿದೆ.

ಶಾಸನಸಭಾಧಿವೇಶನ ಪ್ರಾರಂಭವಾಗಿ ಪ್ರಮಾಣಸ್ವೀಕಾರ ಮಾಡುವಮುನ್ನ ಅವರುಸೇರಿ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ನಡೆಸಲು ಏರ್ಪಾಡು ನಡೆದಿದೆ. ಆದ್ದರಿಂದ ಪ್ರಮಾಣಸ್ವೀಕಾರಕ್ಕೆಮುನ್ನವೇ ಸದಸ್ಯರಾಗಿ ಕೆಲಸಮಾಡುವುದರಿಂದ ಪ್ರಮಾಣ ಸ್ವೀಕಾರ ಅನಗತ್ಯವೆಂದು ಅವರು ಯೋಚಿಸುತ್ತಲಿರುವರು ರಾಜ್ಯಾಂಗದ ನಿಪುಣರ ಸಲಹೆಯನ್ನು ಅವರು ಪಡೆಯಲು ಪ್ರಯತ್ನಿಸುತ್ತಿರುವರೆಂದು ತಿಳಿದುಬಂದಿದೆ.

ಚಂದ್ರಲೋಕಕ್ಕೆ ವಿಮಾನಯಾನ

ಚಂದ್ರಲೋಕಕ್ಕೆ ಹೋಗಲು ರಾಕೆಟ್ ವಿಮಾನಗಳನ್ನು ಆಸ್ಟ್ರೇಲಿಯಾ ವಿಜ್ಞಾನಿಗಳು ಎಲ್ಲಾ ವಿಜ್ಞಾನಿಗಳಿಗಿಂತ ಮುಂಚೆ ತಯಾರಿಸುವರೆಂದು ಹೇಳಲಾಗಿದೆ.

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರಿಗೆ ನಿನ್ನೆಯದಿನ ಲಾಹೋರ್ ಮೇಯೋ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ನಡೆಯಿತು ದೇಹಸ್ಥಿತಿಯಲ್ಲಿ ಏನೂ ಬದಲಾವಣೆಯಿಲ್ಲವೆಂದು ಹೇಳಲಾಗಿದೆ.

ಅವರನ್ನು ನೋಡಲು ಅವರ ಸಹೋದರ ಮಾಜಿ ಪ್ರಧಾನಿ ಖಾನ್‌ಸಾಹೇಬರು ನಿನ್ನೆಯದಿನ ಅಬಟಾಬಾದಿನಿಂದ ಪೋಲೀಸ್‌ಪಹರೆಯೊಡನೆ ಲಾಹೋರಿಗೆ ಆಗಮಿಸಿದರು

ಗುಜರಾತ್ ಕಾಂಗ್ರೆಸ್ ಸಮಿತಿಯು ಸಭೆಸೇರಿ ಖಾನ್ ಅಬ್ದುಲ್ ಗಫಾರ್‌ಖಾನರವರ ದೇಹಸ್ಥಿತಿಯು ಉತ್ತಮಗೊಳ್ಳಲೆಂದು ಭಗವಂತನನ್ನು ಪ್ರಾರ್ಥಿಸಿದರು.

ಅಂಬಾಲಾದಲ್ಲಿ ಒಂದು ಸಭೆನಡೆದು ಕೂಡಲೇ ಅವರ ಬಿಡುಗಡೆಯಾಗಬೇಕೆಂದು ತೀರ್ಮಾನಿಸಿತು. ಗುಜರಾತಿನ ಮುಖ್ಯಮಂತ್ರಿ ಭೀಮಸೇನಸಾಚಾರ್ ಮತ್ತಿತರ ಇಬ್ಬರು ಸಚಿವರು ಹಾಜರಿದ್ದರು.

ಗೌರವ ಪ್ರಶಸ್ತಿ

ಭಾರತದ ಆಹಾರ ಮಂತ್ರಿ ಶ್ರೀ ಕೆ ಎಂ ಮುನಿಷಿಯವರಿಗೆ ಉಸ್ಮಾನಿಯಾ ವಿಶ್ವವಿದ್ಯಾಲಯದ ಕೌನ್ಸಿಲ್ ಡಾಕ್ಟರ್ ಆಫ್ ಲಿಟ್ರೇಚರ್ ಗೌರವ ಪ್ರಶಸ್ತಿಯನ್ನು ಕೊಡಲು ನಿರ್ಧರಿಸಿದೆ.

ಮುಂದಿನ ಪದವೀದಾನ ಸಮಾರಂಭಕ್ಕೆ ಅವರನ್ನೇ ಅಧ್ಯಕ್ಷರಾಗುವಂತೆ ಕೌನ್ಸಿಲ್ ಪ್ರಾರ್ಥಿಸಿಕೊಳ್ಳಲಿದೆ.

ಸದಸ್ಯತ್ವ ರದ್ದು

ಚುನಾವಣಾ ವೆಚ್ಚದ ಪಟ್ಟಿಯನ್ನು ಸಕಾಲದಲ್ಲಿ ಸಲ್ಲಿಸಲಿಲ್ಲವೆಂದು ಮದ್ರಾಸಿನ ಸ್ಥಳೀಯ ಆಡಳಿತ ಸಚಿವ ಶ್ರೀ ಎನ್. ಶಂಕರರೆಡ್ಡಿ ಮತ್ತು ಇನ್ನಿಬ್ಬರ ಮದ್ರಾಸ್ ಶಾಸನಸಭೆಯ ಸದಸ್ಯತ್ವವನ್ನು ಚುನಾವಣಾಧಿಕಾರಿಗಳು ರದ್ದುಗೊಳಿಸಿರುವರು.

ಮಳೆಗಾಗಿ ಪ್ರಾರ್ಥನೆ

ಮದ್ರಾಸಿನಲ್ಲಿ ಒಂದು ಬಹಿರಂಗ ಸಭೆ ನಡೆದು ಮಳೆ ಬರಿಸಲು ಭಗವಂತನನ್ನು ಪ್ರಾರ್ಥಿಸಿತು. ಮದ್ರಾಸಿನ ಮುಜರಾಯಿ ಶಾಖಾ ಸಚಿವ ಶ್ರೀ ಕೆ. ವೆಂಕಟಸ್ವಾಮಿ ನಾಯ್ಡುರವರು ಅಧ್ಯಕ್ಷತೆ ವಹಿಸಿದ್ದರು

ಕೋಲಾರ ಜಿಲ್ಲೆಯ ಅಭಾವ ಪರಿಸ್ಥಿತಿ

ಬೆಂಗಳೂರು ಏ ೨೩

ಕೋಲಾರ ಜಿಲ್ಲೆಯ ಅಭಾವ ಪ್ರದೇಶಗಳಿಗೆ ಗೃಹಸಚಿವ ಶ್ರೀ ಸಿದ್ಧವೀರಪ್ಪನವರು ಭೇಟಿಯಿತ್ತ ವಿಷಯವನ್ನು ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

ಪರಿಸ್ಥಿತಿಯನ್ನು ಪರಿಶೀಲಿಸಲು ಸಚಿವರು ೬೫ ಗ್ರಾಮಗಳಿಗೆ ಭೇಟಿಯಿತ್ತರು. ಪ್ರವಾಸ ಕಾಲದಲ್ಲಿ ಕೋಲಾರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಲಿಂಗಾರೆಡ್ಡಿಯವರೂ ಸಚಿವರೊಡನೆಯಿದ್ದರು.

ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕಿನಲ್ಲಿ ಜನರಿಗೆ ಅತ್ಯಂತ ತೊಂದರೆಯಾಗಿದೆಯೆಂದು ಸಚಿವರು ಹೇಳಿದರು. ಮಳೆ ಬಾರದೆ ತೊಂದರೆಗೀಡಾಗಿರುವ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಲಾಗಿದೆ. ಅವಶ್ಯಕ ಕಂಡುಬಂದರೆ ಇನ್ನೂ ಹಣ ಒದಗಿಸಲಾಗುತ್ತದೆ.

ಕೋಲಾರ ಜಿಲ್ಲೆಯ ಈ ಅಭಾವ ಪ್ರದೇಶಗಳಲ್ಲಿ ಕೆರೆ, ಬಾವಿ ಮುಂತಾದ ಕಾಮಗಾರಿ ಕೆಲಸಗಳನ್ನು ಆರಂಭಿಸಿ, ೪೦೬೩ ಜನರಿಗೆ ಕೆಲಸವನ್ನು ಕೊಡಲಾಗಿದೆ.

ಈ ಪ್ರದೇಶಗಳಲ್ಲಿ ಅನೇಕ ಆಹಾರ ಡಿಪೋಗಳನ್ನು ತೆರೆಯಲಾಗಿದೆ. ರಾಗಿ, ಜೋಳ ಪ್ರಮಾಣವನ್ನು ಅಕ್ಕಿ ಗೋಧಿ ಬದಲು ಹೆಚ್ಚಿಸಲಾಗಿದೆ.

ಮಳೆ ಅಭಾವವಾಗಿರುವ ಪ್ರದೇಶಗಳಲ್ಲಿ ತರೀ ಜಮೀನಿನ ಕಂದಾಯದಲ್ಲಿ ಅರ್ಧವನ್ನು ಮಾಫಿ ಮಾಡಿರುವುದಲ್ಲದೆ ಉಳಿದುದನ್ನು ತೆಗೆದುಕೊಳ್ಳಲು ಕಾಲವಕಾಶ ಕೊಟ್ಟಿದೆ. ಕೆಲವೆಡೆ ಕೊಟ್ಟ ಹಣವನ್ನು ಹಿಂದಕ್ಕೆ ಕೊಡಲು ಆಜ್ಞೆ ಮಾಡಲಾಗಿದೆ.

ದಿನಗೂಲಿಯನ್ನು ಈ ಪ್ರದೇಶಗಳಲ್ಲಿ ಗಂಡಸಿಗೆ ೧೦ ಆಣೆಯಿಂದ ೧೨ ಆಣೆ, ಹೆಂಗಸಿಗೆ ೮ ಆಣೆಯಿಂದ ೧೦ ಆಣೆಗೆ ಹೆಚ್ಚಿಸಲಾಗಿದೆ.

ಕೆಲವೆಡೆ ದನದ ಮೇವಿನ ಅಭಾವವು ಉತ್ಕಟವಾಗಿರುವುದರಿಂದ ಮಂಡ್ಯ, ಮೈಸೂರು, ಅಜ್ಜಂಪುರ ಮುಂತಾದ ಪ್ರದೇಶಗಳಿಂದ ಮೇವನ್ನು ಸರಬರಾಜು ಮಾಡಲು ಪ್ರಯತ್ನಗಳು ನಡೆಯುತ್ತಿವೆ. ಎಂಬುದಾಗಿ ಗೃಹಸಚಿವರು ವಿವರಣೆಯಿತ್ತರು.

ಪ್ರಶ್ನೆಪತ್ರಿಕೆ ಕಠಿಣವೆಂದು ವಿದ್ಯಾರ್ಥಿಗಳ ಸಭಾತ್ಯಾಗ

ದೆಹಲಿ ವಿಶ್ವವಿದ್ಯಾನಿಲಯದ ಬಿ ಎಸ್ ಸಿ (ಆನರ್ಸ್) ಕೆಮಿಸ್ಟ್ರಿ ವಿಭಾಗದ ಕಡೇ ವರ್ಷದ ೪೮ ಮಂದಿ ವಿದ್ಯಾರ್ಥಿಗಳು, ವಿಶ್ವವಿದ್ಯಾನಿಲಯದ ಹಾಲ್ ನಿಂದ ಹೊರಗೆದ್ದು ಹೋದರು. ಪ್ರಶ್ನೆ ಪತ್ರಿಕೆ ಬಹಳ ಕಠಿಣವಾಗಿದ್ದುದೇ ಇದರ ಕಾರಣವೆಂದು ವರದಿ ಮಾಡಿರುವರು.

ಮೇ ೧ನೇ ತಾ॥ ಕಾರ್ಮಿಕರಿಗೆ ರಜ

ಮೇ ೧ನೇ ತಾ॥ ನಡೆಯಲಿರುವ ಮೇ ದಿನಾಚರಣೆಯ ದಿನ ಕಾರ್ಮಿಕರಿಗೆ ರಜಾ ಕೊಡಬಹುದೆಂದೂ, ಆದರೆ ಕಾರ್ಮಿಕರು ಮತ್ತೊಂದು ದಿನ ಕೆಲಸ ಮಾಡಬೇಕೆಂದೂ ಇಂಡಿಯಾ ಸರ್ಕಾರವು ಕೈಗಾರಿಕಾ ಸಂಸ್ಥೆಗಳಿಗೆ ಸೂಚನೆ ಕೊಡಲಿರುವರೆಂದು ಕಾರ್ಮಿಕ ಶಾಖೆಯ ಪ್ರಕಟಣೆಯೊಂದೂ ತಿಳಿಸುತ್ತದೆ.

೨೭ನೇ ತಾ॥ ಕಾರ್ಮಿಕರು ಕೆಲಸ ಮಾಡಬಹುದೆಂದು ಸಲಹೆ ಕೊಡಲಾಗಿದೆ.

ಭಾರತದ ವಿಷಾದ

ಸಿಲೋನ್ ಭಾರತೀಯರ ವೋಟಿನ ಹಕ್ಕನ್ನು ಕಸಿದುಕೊಂಡಿದ್ದರಿಂದ ಭಾರತ ಸರ್ಕಾರ ತನ್ನ ತೀವ್ರ ವಿಷಾದವನ್ನು ಅಧಿಕೃತವಾಗಿ ವ್ಯಕ್ತಪಡಿಸಿದೆ.

ಭಾರತ ಸರ್ಕಾರಕ್ಕೆ ಈಗ ಅಲ್ಲಿನ ಪೂರ್ಣ ವರದಿಗಳು ರಾಯಭಾರಿಯ ಕಡೆಯಿಂದ ಬಂದು ತಲುಪಿದೆ. ಇದು ಅನ್ಯಾಯ ಮಾತ್ರವಲ್ಲದೆ ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿಯೂ ಇಲ್ಲ ಎಂದು ತಿಳಿಸಿದೆ.

ಹೆಸರಘಟ್ಟದಲ್ಲಿ 'ಕಿಫಾರಂ' ಸೆಂಟರ್

ಕೇಂದ್ರ ಆಹಾರ ಶಾಖಾ ಸಚಿವ ಶ್ರೀ ಕೆ ಎಂ ಮುನ್ಷಿಯವರು ಹೆಸರಘಟ್ಟದಲ್ಲಿ ಏ ೨೭ ರಂದು ಸಂಜೆ ೬ ಗಂಟೆಗೆ 'ಕಿ ಫಾರಂ ಸೆಂಟರಿನ ಆರಂಭೋತ್ಸವವನ್ನು ನೆರವೇರಿಸುವರು. ಮುಖ್ಯಮಂತ್ರಿ, ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು ಪಶುವೈದ್ಯ ಶಾಖೆ ಚಟುವಟಿಕೆಯ ಬಗ್ಗೆ ಪ್ರದರ್ಶನ ಒಂದು ನಡೆಯುವುದು ದನಗಳ ಪ್ರದರ್ಶನವನ್ನೂ ಏರ್ಪಡಿಸಲಾಗುವುದು.

MYSORE CITY MUNICIPALITY

NOTIFICATION

Sealed tenders with be received by the undersigned on the 28th April 1952 till 4 P.M. for the works (1) Providing burnt stone slabs curbing to Narayanasastry Rad from Viceroy road up to south end Bus road Cement Block Chaundipuram (2) Providing separate mains and meter boards for the individual blocks of V. D. Rajaram Agrahar (3) Repaircing the broken sewer line running in the betel leaf garden Fort Mohalla. Tenders should be accompanied with challans for having remitted in the Mnnicipal treasury a sum of Rs. 80/-, 50/-, and Rs. 38/- respectively as earnest money. For full particulars please see the notification on the office notice board.

(Sd) V.K. MUKUNDAM
Municipal Engineer.

ಹಸಿವಿನಿಂದ ಯಾರೂ ಸತ್ತಿಲ್ಲ

ಬೆಂಗಳೂರು ಏ ೨೩

ಕೋಲಾರ ಜಿಲ್ಲೆಯ ಅಭಾವ ಪ್ರದೇಶಗಳಲ್ಲಿ ೨ ದಿನಗಳಕಾಲ ಪ್ರವಾಸಮಾಡಿ ಪರಿಸ್ಥಿತಿಯನ್ನು ತಿಳಿದುಬಂದಿರುವ ಗೃಹಸಚಿವ ಶ್ರೀ ಹೆಚ್ ಸಿದ್ಧವೀರಪ್ಪನವರು ಈದಿನ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ಕೋಲಾರ ಜಿಲ್ಲೆಯಲ್ಲಿ ಹಸಿವಿನಿಂದ ಯಾರೂ ಸತ್ತಿಲ್ಲವೆಂದೂ ಅಲ್ಲಿ ಆಹಾರದ ಕೊರತೆಯಿಲ್ಲವೆಂದೂ ತಿಳಿಸಿರುವರು.

ಸರ್ಕಾರಿ ಸುದ್ದಿಗಳು

ಬಿಲ್ಡಿಂಗ್ ಡಿವಿಜನ್ ಎಕ್ಸಿಕ್ಯೂಟಿವ್ ಎಂಜನಿಯರ್ ಶ್ರೀ ಎ ವಿ ಜಯರಾಂರವರಿಗೆ ಕೆಲಸದಿಂದ ನಿವೃತ್ತರಾಗುವ ಮುನ್ನ ಇದೇ ೨೫ ರಿಂದ ೬ ತಿಂಗಳ ಕಾಲ ರಜ ಕೊಡಲಾಗಿದೆ.

ಅಸಿಸ್ಟೆಂಟ್ ಕಮೀಷನರ್ ಶ್ರೀ ಎಂ ಗುಂಡಪ್ಪನವರಿಗೆ ನಿವೃತ್ತರಾಗುವ ಮುನ್ನ ಮಾರ್ಚ್ ೨೦ ರಿಂದ ೫ ತಿಂಗಳ ಕಾಲ ರಜ ಕೊಡಲಾಗಿದೆ.

ಶ್ರೀ ಬಿ. ಬೀರಪ್ಪ

ಮಂಡ್ಯ ಜಿಲ್ಲಾಧಿಕಾರಿಗಳಾಗಿ ವರ್ಗಾಯಿಸಲ್ಪಟ್ಟಿದ್ದ ಶ್ರೀ ಬಿ. ಬೀರಪ್ಪನವರನ್ನು ಮತ್ತೆ ಕೈಗಾರಿಕೆ ಮತ್ತು ವಾಣಿಜ್ಯಶಾಖೆ ಅಡಿಷನಲ್ ಡೈರೆಕ್ಟರನ್ನಾಗಿ ನೇಮಿಸಲಾಗಿದೆ.

ಸಕ್ಕರೆ ಮಾರಾಟ

ಸಾಮಾನ್ಯ ಮಾರುಕಟ್ಟೆಯಲ್ಲಿ ಮಾರಲು ಭಾರತ ಸರ್ಕಾರವು ಇನ್ನೂ ೩೨೦೦೦ ಟನ್ ಸಕ್ಕರೆಯನ್ನು ಮಂಜೂರ್ಮಾಡಿದೆ. ಈ ಸಾಲಿನಲ್ಲಿ ಈಗಾಗಲೇ ೧,೧೩,೦೦೦ ಟನ್ ಸಕ್ಕರೆಯನ್ನು ಮಾರಲು ಅನುಮತಿ ನೀಡಿದೆ

ಉಡುಪಿನಲ್ಲಿ ಬದಲಾವಣೆ

ಪಾಶ್ಚಿಮಾತ್ಯ ಪದ್ಧತಿಪ್ರಕಾರ ಆಸ್ಪತ್ರೆಗಳಲ್ಲಿ ನರ್ಸ್‌ಗಳು ಧರಿಸುತ್ತಲಿದ್ದ ಉಡುಪುಪದ್ಧತಿಯನ್ನು ನಮ್ಮ ದೇಶಕ್ಕೆ ಒಪ್ಪುವಂತೆ ಬದಲಾಯಿಸಲು ಸರ್ಕಾರವು ನಿರ್ಧರಿಸಿದೆ. ಇನ್ನು ಮುಂದೆ ಅವರು ಸೀರೆ ಮತ್ತು ಟೋಪಿಯನ್ನು ಧರಿಸಬಹುದಾಗಿದೆ.

ಪೇಟೆ ಧಾರಣೆ

ಮೈಸೂರು ತಾ॥ 24-4-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	12-4	19-0
ಹುರುಳಿ ,,	30-8	32-0
ಹೆಸರು ,,	46-0	50-12
ಮೆ. ಕಾಯಿ ಮಣಕ್ಕೆ	9-8	15-2
ಹುಣಸೇಹಣ್ಣು ,,	2-10	2-13
ಸೀಗೆಕಾಯಿ ,,	3-4	3-5
ತೆಂಗಿನಕಾಯಿ 1100ಕ್ಕೆ	99	210

ಚಿನ್ನ ಬೆಳ್ಳಿ ದರಗಳು

24-4-52	ರೂ.
ಸವರನ್	65-12
,,	65-14
ಚಿನ್ನ ತೊಲ	92-6
,, ಮೂಸ	91-4
ಬೆಳ್ಳಿ 100 ತೊಲ	163-9
,, ತೊಲ	1-11

ರಾಜಕಮಲ್
25—4—52ರಿಂದ
ಜನಭರಿತವಾದ 7ನೇ ವಾರ
ವಿಜಯಾರವರ—
ಮದುವೆ ಮಾಡಿ ನೋಡು
(ತೆಲುಗು)
ಪಾತ್ರ:— ಎನ್. ಟಿ. ರಾಮರಾವ್, ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎಸ್.ವಿ.ರಂಗರಾವ್, ಜೋಗ್‌ರಾವ್.

ವುಡ್ ಲ್ಯಾಂಡ್ಸ್
೨೫—೪—೫೨ ರಿಂದ
ಜನಭರಿತವಾದ ೩ನೇ ವಾರ
ದಿನವಹಿ ೩ ಆಟಗಳು
- ಬೇತಾಬ್ -
(ಹಿಂದಿ)
ಪಾತ್ರ:—ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು.
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೬ ೪—೧೯೫೨ನೇ ಶನಿವಾರ [ಸಂಚಿಕೆ ೨೦೨

ರಾಯಲುಸೀಮೆಯಲ್ಲಿ ಪರಿಹಾರಕ್ಕಾಗಿ ಮತ್ತೊಂದು ಲಕ್ಷ ರೂಪಾಯಿ

ಚೈನಾಕ್ಕೆ ಭಾರತದಿಂದ ಅಧಿಕೃತ ನಿಯೋಗ ಹೊರಟಿತು

ಟ್ರೂಮನ್ನರನ್ನು ವಿಚಾರಣೆಗೆ ಗುರಿಪಡಿಸಬೇಕು

ಉಕ್ಕಿನ ಕೈಗಾರಿಕೆಯನ್ನು ಸರ್ಕಾರವು ವಹಿಸಿಕೊಳ್ಳುವಂತೆ ಮಾಡಿದ್ದಕ್ಕಾಗಿ ಅಮೆರಿಕಾ ಅಧ್ಯಕ್ಷ ಟ್ರೂಮನ್ನರನ್ನು ವಿಚಾರಣೆಗೆ ಗುರಿಪಡಿಸಬೇಕೆಂದು ಮಿ॥ ರಾಚಕ್ ಹೇಲ್ ಎಂಬ ಸದಸ್ಯರು ಪ್ರತಿನಿಧಿ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿರುವರು.

ದುರ್ಭಿಕ್ಷದಿಂದ ಆರು ಲಕ್ಷ ಕಾರ್ಮಿಕರಿಗೆ ತೊಂದರೆ

ರಾಯಲು ಸೀಮೆಯ ಪೈಕಿ ಕಡಪಾ ಜಿಲ್ಲೆಯಲ್ಲಿ ಅಭಾವವು ವಿಪರೀತವಾಗಿರುವುದೆಂದೂ. ಆರು ಲಕ್ಷ ವ್ಯವಸಾಯ ಕಾರ್ಮಿಕರು ದುರ್ಭಿಕ್ಷ ಸ್ಥಿತಿಯಲ್ಲಿ ತೊಳಲುತ್ತಿರುವರೆಂದೂ ವರದಿಯಾಗಿದೆ. ೧೦ ಲಕ್ಷ ಎಕರೆ ತರಿ ಮತ್ತು ೮ ಲಕ್ಷ ಎಕರೆ ಖುಷ್ಕಿ ಜಮೀನಿನಲ್ಲಿ ಬೇಸಾಯದ ಕೆಲಸವೇ ಕಾಣಬರುತ್ತಿಲ್ಲವೆಂದೂ, ವರ್ಷಕ್ಕೆ ಸರಾಸರಿ ೮ ಲಕ್ಷ ರೂ. ವರಮಾನ ಬರುತ್ತಿದ್ದ ಕಿತ್ತಳೆ ತೋಟಗಳು ಒಣಗುತ್ತಿವೆಯೆಂದೂ ಹೇಳಲಾಗಿದೆ.

ಸ್ವಯಂ ಆಡಳಿತ

ವಿದೇಶೀಯರ ಆಳ್ವಿಕೆಯಲ್ಲಿರುವ ರಾಷ್ಟ್ರಗಳ ಜನತೆಯು ಸ್ವಯಂ ಆಡಳಿತವನ್ನು ಕೇಳುವ ಕಡೆ ಜನಾಭಿಪ್ರಾಯವನ್ನು ಪಡೆಯಲು ಎಲ್ಲಾ ರಾಷ್ಟ್ರಗಳಿಗೂ ಹಕ್ಕಿರಬೇಕೆಂದು ಜನಾಭಿಪ್ರಾಯವನ್ನು ವಿಶ್ವಸಂಸ್ಥೆ ಆಶ್ರಯದಲ್ಲಿ ಪಡೆಯಬೇಕೆಂದು ವಿಶ್ವಸಂಸ್ಥೆಯ ಹಕ್ಕು ಭಾಧ್ಯತಾ ಸಮಿತಿಯು ನಿರ್ಣಯ ಮಾಡಿ ಶಿಫಾರಸ್ಸು ಮಾಡಿದೆ.

ಭಾರತವು ಈ ನಿರ್ಣಯವನ್ನು ಸಭೆಯಲ್ಲಿ ಮಂಡಿಸಿತು.

ನಿರ್ಣಯವು ೧೧-೫ ಓಟುಗಳಿಂದ ಅಂಗೀಕೃತವಾಯಿತು.

ಬ್ರಿಟನ್, ಅಮೆರಿಕಾ. ಫ್ರಾನ್ಸ್, ಬೆಲ್ಜಿಯಂ ಮತ್ತು ಆಸ್ಟ್ರೇಲಿಯಾಗಳು ವಿರುದ್ಧ ಓಟು ಮಾಡಿದವು.

ಭಾರತ ರಾಜ್ಯಾಂಗ ಜಾರಿಗೆ ಬರಬೇಕು

ಭಾರತ ರಾಜ್ಯಾಂಗವು ಪೂರ್ಣವಾಗಿ ಕಾಶ್ಮೀರದಲ್ಲಿ ಜಾರಿಗೆ ಬರಲು ತಾವು ಒತ್ತಾಯಪಡಿಸುವುದಾಗಿ ಜಮ್ಮು ಪ್ರಜಾ ಪರಿಷತ್ತು ತಿಳಿಸಿರುವುದಾಗಿ ವರದಿಯಾಗಿದೆ.

ಬಹಿರಂಗ ಸಭೆ

ಮೈಸೂರು ಏ ೨೫

ತಾ॥ ೨೮-೪-೫೨ನೇ ಸೋಮವಾರ ಸಂಜೆ ೬ ಗಂಟೆಗೆ ಟೌನ್ ಹಾಲ್ ಆವರಣದಲ್ಲಿ ನಗರದ ರೇಷನ್ ದಾರರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ.

ಸಭೆಯ ಉದ್ದೇಶ— ತಾ॥ ೧೮-೪-೫೨ ರಲ್ಲು ನಡೆದ ಬಹಿರಂಗ ಸಭೆಯಲ್ಲಿ, ರೇಷನ್ ಪದಾರ್ಥಗಳ ಬೆಲೆಯನ್ನು ಇಳಿಸಬೇಕು ಮತ್ತು, ರೇಷನ್ ಜಾರಿಯಲ್ಲಿರುವ ಪಟ್ಟಣಗಳಲ್ಲಿ ಕಡಮೆ ಬೀಳುವ ಪಡಿತರವನ್ನು ಫ್ರೀ ಮಾರ್ಕೆಟ್ಟಿನಲ್ಲಿ ಕೊಳ್ಳುವುದಕ್ಕೆ ಅವಕಾಶ ಕೊಡಬೇಕು- ಎಂಬುವ ಬಗ್ಗೆ ಅದ ತೀರ್ಮಾನಕ್ಕೆ ಸರ್ಕಾರದಿಂದ ಬರುವ ಉತ್ತರವನ್ನು ಪರಿಶೀಲಿಸುವುದು, ಸಮಾಧಾನಕರವಾದ ಉತ್ತರ ಬಾರದಿದ್ದಲ್ಲಿ 'ಬೆಂಗಳೂರು ಚಲೋ ಜಾತಾ' ವನ್ನು ಕೈಕೊಳ್ಳಲು ಸಲಹೆ ಪಡೆಯುವುದು ಮತ್ತು ಸ್ವರ ಸಹಕಾರ, ಸಹಾಯಗಳನ್ನು ಅಪೇಕ್ಷಿಸುವುದು ಇತ್ಯಾದಿ

ಎಂ. ಪಿ. ಸಿ. ಸಿ. ಸಭೆ

ಕೃಷ್ಣರಾಜನಗರದಲ್ಲಿ ಎಂ. ಪಿ. ಸಿ.ಸಿ. ಸಭೆಯು ಮುಂದಿನ ತಿಂಗಳು ೬ ಮತ್ತು ೮ನೇ ತಾ॥ ನಡೆಯುತ್ತದೆಯೆಂದು ಮೊದಲು ತಿಳಿಸಲಾಗಿತ್ತು. ಕಾಂಗ್ರೆಸ್ ಅಧ್ಯಕ್ಷರು ಎಂ. ಪಿ. ಸಿ. ಸಿ. ಸಭೆಯನ್ನು ೮ ಮತ್ತು ೯ ನೇ ತಾ॥ ನಡೆಸಬೇಕೆಂದು ತಿಳಿಸಿದುದರಿಂದ ಅದರಂತೆ ಎಂ ಪಿ ಸಿ ಸಿ ಸಭೆಯನ್ನು ೮ ಮತ್ತು ೯ನೇ ತಾ॥ ನಡೆಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎಂ. ಎಲ್. ನಂಜರಾಜೇ ಅರಸುರವರು ತಿಳಿಸುತ್ತಾರೆ.

೩೮೮ನೇ ವಾರ್ಷಿಕೋತ್ಸವ

ವಿಶ್ವದ ಪ್ರಸಿದ್ಧ ಕವಿಯಾದ ವಿಲಿಯಂ ಷೇಕ್ಸ್ಪಿಯರ್‌ರವರ ೩೮೮ ನೇ ವಾರ್ಷಿಕೋತ್ಸವವನ್ನು ಸ್ಟ್ರಾಟ್‌ಫರ್ಡ್‌ನಲ್ಲಿ ವಿಶ್ವದ ೪೬ ರಾಷ್ಟ್ರಗಳು ಸೇರಿ ನಡೆಸಿದುವು.

ರಣಜಿತ್
೨೫-೪-೫೨ರಿಂದ ಅಮೋಘ ೨ನೇ ವಾರ
- ಸಂಯೋಗೀ -
ಪಾತ್ರ:-ಮಧುಬಾಲ, ಸಜ್ಜನ್, ಅಜಿತ್, ಲೀಲಾಚಿಟ್ನೀಸ್.

ಡಾ॥ ರಾಧಾಕೃಷ್ಣನ್ ಚುನಾಯಿತರಾದರು

ಡಾ॥ ಸರ್ವೇಪಲ್ಲಿ ರಾಧಾಕೃಷ್ಣನ್‌ರವರು ಭಾರತ ಉಪರಾಷ್ಟ್ರಾಧ್ಯಕ್ಷರಾಗಿ ಅವಿರೋಧವಾಗಿ ಚುನಾಯಿತರಾಗಿದ್ದಾರೆಂದು ಅಧಿಕೃತವಾಗಿ ನಿನ್ನೆಯದಿನ ದೆಹಲಿಯಲ್ಲಿ ಪ್ರಕಟಿಸಲಾಗಿದೆ

ಫ್ರಾನ್ಸ್ ಭಾರತವನ್ನು ಬಿಡಬೇಕು

ವಿಶ್ವದಲ್ಲೆಲ್ಲಾ ಅತ್ಯಂತ ನಾಗರೀಕ ರಾಷ್ಟ್ರವೆಂದು ಹೇಳಿಕೊಳ್ಳುವ ಫ್ರಾನ್ಸ್ ರಾಷ್ಟ್ರವು ಭಾರತದಲ್ಲಿರುವ ಫ್ರೆಂಚ್ ಸ್ವತ್ತುಗಳ ವಿಷಯದಲ್ಲಿ ನ್ಯಾಯಬಾಹಿರವಾದ ನೀತಿಯನ್ನನುಸರಿಸುವುದು ಆಶ್ಚರ್ಯವೆಂದು ಫ್ರಾನ್ಸ್‌ನಲ್ಲಿರುವ ಭಾರತ ರಾಯಭಾರಿ ಸರ್ದಾರ್ ಮಲ್ಲಿಕ್‌ರವರು ಹೇಳಿರುವರು

ನೇಪಾಳಕ್ಕೆ ಆರ್ಥಿಕ ಸಹಾಯ

ನೇಪಾಳಕ್ಕೆ ಆರ್ಥಿಕ ಸಹಾಯವನ್ನು ನೀಡಲು ಕಳೆದ ಒಂದುವಾರದಿಂದ ನೇಪಾಳದ ಕೆಲವು ಮಂತ್ರಿಗಳಿಗೂ ಭಾರತಸರ್ಕಾರದ ಆರ್ಥಿಕಶಾಖಾ ಉನ್ನತಾಧಿಕಾರಿಗಳಿಗೂ ಮಾತುಕತೆ ನಡೆದು ಭಾರತಸರ್ಕಾರವು ಆರ್ಥಿಕಸಹಾಯ ನೀಡಲು ಪ್ರಗತಿಪರವಾಗಿ ಸಂಧಾನ ನಡೆದಿದೆ.

ಭಾರತಸರ್ಕಾರದ ಆರ್ಥಿಕಶಾಖೆಯ ಕೆಲವು ಅಧಿಕಾರಿಗಳು ಸದ್ಯದಲ್ಲೇ ನೇಪಾಳಕ್ಕೆ ಹೋಗಿ ಬರಲಿರುವರೆಂದು ಹೇಳಲಾಗಿದೆ. ನೇಪಾಳ ನಿಯೋಗದವರು ನಿನ್ನೆಯದಿನ ಕಾಟ್ಮಂಡುವಿಗೆ ಹಿಂತಿರುಗಿದರು.

ಚೈನಾಕ್ಕೆ ಭಾರತದ ಅಧಿಕೃತ ನಿಯೋಗ

ಭಾರತ ಸರ್ಕಾರದ ಅಧಿಕೃತ ನಿಯೋಗವು ಈದಿನ ಶ್ರೀಮತಿ ವಿಜಯಲಕ್ಷ್ಮಿಯವರ ನಾಯಕತ್ವದಲ್ಲಿ ಚೈನಾಕ್ಕೆ ವಿಮಾನ ಮೂಲಕ ತೆರಳಿತು. ಈ ನಿಯೋಗದಲ್ಲಿ ೧೪ ಜನ ಸದಸ್ಯರಿರುವರು. ಇವರು ಒಂದುತಿಂಗಳಕಾಲ ಚೈನಾದಲ್ಲಿ ಪ್ರವಾಸ ಮಾಡಲಿರುವರೆಂದು ಹೇಳಲಾಗಿದೆ.

ರಾಯಲುಸೀಮೆಯಲ್ಲಿ ಪರಿಹಾರಕಾರ್ಯಕ್ಕಾಗಿ ಪ್ರಧಾನಿಯವರ ಪರಿಹಾರನಿಧಿಯಿಂದ ಮತ್ತೊಂದುಲಕ್ಷ ರೂಪಾಯಿಗಳನ್ನು ಪ್ರಧಾನಿ ನೆಹರೂರವರು ಮಂಜೂರ್ಮಾಡಿರುವರೆಂದು ಗೊತ್ತಾಗಿದೆ.

ಗೋರಕ್‌ಪುರದಲ್ಲಿ ಗೋಳಿಬಾರು

ಗೋರಕ್‌ಪುರದಲ್ಲಿ ಸುಮಾರು 2000 ರೈಲ್ವೆ ಕಾರ್ಮಿಕರು ನಿನ್ನೆಯದಿನ ಮುಷ್ಕರ ಹೂಡಿ ಗಲಾಟೆ ಮಾಡಿದುದರ ಪರಿಣಾಮವಾಗಿ ಪೋಲೀಸಿನವರು ಗುಂಡು ಹಾರಿಸಿದರು. ಕೆಲವರಿಗೆ ಘಾಯಗಳಾಗಿವೆಯೆಂದು ಹೇಳಲಾಗಿದೆ

ವೈದ್ಯ ಪಡೆ ರಾಯಲು ಸೀಮೆಗೆ

ರಾಯಲುಸೀಮೆಯಲ್ಲಿ ಕ್ಷಾಮಭೀತಿಯಿರುವ ಪ್ರದೇಶಗಳಲ್ಲಿ ವೈದ್ಯ ಸಹಾಯ ನೀಡಲು ಒಂದು ವೈದ್ಯಕೀಯ ಪಡೆಯೊಂದು ರಾಯಲುಸೀಮೆಗೆ ನಿನ್ನೆಯ ದಿನ ಹೊರಟಿದೆ.

ಬ್ರಿಟನ್ನಿನ ಮನ್ನಣೆ

ಈಜಿಪ್ಟ್ ದೊರೆ ಫರೂಕ್‌ರವರನ್ನು ಸುಡಾನಿನ ದೊರೆ ಮತ್ತು ಈಜಿಪ್ಟಿನ ದೊರೆಯೆಂದು ಮನ್ನಣೆಯಿತ್ತಿರುವುದಾಗಿ ತಿಳಿದುಬಂದಿದೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ
ಶ್ರೀ ನೃತ್ಯ ಕಲಾಮಂದಿರ ಮೈಸೂರು.
(ಸೀತಾವಿಲಾಸಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ರಾಷ್ಟ್ರಾಧ್ಯಕ್ಷರ ಚುನಾವಣೆ

ಬೆಂಗಳೂರು ಏ ೨೫

ಮೇ ೨ನೇ ತಾ|| ನಡೆಯುವ, ಭಾರತ ರಾಷ್ಟ್ರಾಧ್ಯಕ್ಷರ ಚುನಾವಣೆಗೆ ಮೈಸೂರು ಶಾಸನಸಭಾ ಭವನವು ಒಂದು ಓಟು ಮಾಡುವ ಕೇಂದ್ರ, ಚುನಾವಣೆ ಬೆಳಗ್ಗೆ ೧೦ ರಿಂದ ೫ ಗಂಟೆಯವರೆಗೆ ನಡೆಯುವುದು. ಮೈಸೂರಿನ ಲೋಕ ಸಭೆ ಸದಸ್ಯರು ಇಲ್ಲಿಯಾದೂ ಅಥವಾ ದೆಹಲಿಯಲ್ಲಾದರೂ ಓಟುಮಾಡಬಹುದು.

ವೋಟರುಗಳಿಗೆ ಸೂಚನೆ

ಬೆಂಗಳೂರು ಏ ೨೫

ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲ್ಲಿಗೆ ಪದವೀಧರರ ಕ್ಷೇತ್ರ, ಅಧ್ಯಾಪಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳಿಂದ ಸ್ಪರ್ಧಿಸುವ ೨೫ ಜನ ಉಮೇದುವಾರರನ್ನಾರಿಸಲು ಬ್ಯಾಲೆಟ್ ಪೇಪರುಗಳನ್ನು ಕಳಿಸಲು ಈ ತಿಂಗಳು ೨೮ನೇ ತಾರೀಖು ಕೊನೆಯ ತಾರೀಖಿಗೆ ಎಲ್ಲಾ ವೋಟುದಾರರೂ ತಪ್ಪದೆ ತಮ್ಮ ಬ್ಯಾಲೆಟ್ ಪೇಪರುಗಳನ್ನು ರಿಟರ್ನಿಂಗ್ ಆಫೀಸರಿಗೆ ಕಳಿಸಬೇಕು.

ಕೈಗಾರಿಕಾ ಸಚಿವರ ಪ್ರವಾಸ

ಕೈಗಾರಿಕಾ ಸಚಿವ ಶ್ರೀ ಟಿ ಸಿದ್ಧಲಿಂಗಯ್ಯನವರು ಏಪ್ರಿಲ್ ೨೭ ರಂದು ರಾತ್ರಿ ರೈಲಿನಲ್ಲಿ ಭದ್ರಾವತಿಗೆ ಹೊರಟು ೨೮ನೇ ತಾರೀಖು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಪರಿಶೀಲನೆ ನಡೆಸುವರು. ೨೯ ರಂದು ಕೆಮ್ಮಣ್ಣುಗುಂಡಿಗೆ ತೆರಳಿ ಹಿಂತಿರುಗಿ ಕಾಗದದ ಕಾರ್ಖಾನೆಗೆ ಭೇಟಿಯಿತ್ತು, ಕಬ್ಬಿಣ ಕಾರ್ಖಾನೆ ಕೆಲಸಗಾರರ ಪ್ರತಿನಿಧಿ ನಿಯೋಗದೊಂದಿಗೆ ಮಾತುಕತೆ ನಡೆಸುವರು. ೩೦ನೇ ತಾರೀಖು ಬೆಂಗಳೂರಿಗೆ ಹಿಂತಿರುಗುವರು.

ರಜಾ

ರಜದ ಮೇಲಿರುವ ಜಿಲ್ಲಾಧಿಕಾರಿಗಳಾದ ಶ್ರೀ ಎಲ್. ಮುನಿಸ್ವಾಮಿಯವರಿಗಿತ್ತಿರುವ ರಜವನ್ನು ಮೇ ೧೫ ರವರೆಗೆ ಮುಂದುವರಿಸಲಾಗಿದೆ.

ಬೆಂಗಳೂರಿನಲ್ಲಿ ಕುದುರೆ ಜೂಜು

ಬೆಂಗಳೂರಿನಲ್ಲಿ ಕುದುರೆ ಪಂದ್ಯಗಳು ಈ ವರ್ಷ ಮೇ ೨೫ನೇ ತಾರೀಖಿನಿಂದ ಜುಲೈ ೭ನೇ ತಾರೀಖಿನವರೆಗೆ ನಡೆಯಲಿವೆ. ಜೂನ್ ೨೨ನೇ ತಾರೀಖು ಮಹಾರಾಜರ ಚಿನ್ನದ ಕಪ್ಪಿನ ಪಂದ್ಯ ನಡೆಯಲಿದೆ.

ಕಾಂಗ್ರೆಸ್ಸಿನಿಂದ ಹೊರಹೂಡಲ್ಪಟ್ಟರು

ಯುನೈಟೆಡ್ ಫ್ರಂಟ್ ಸೇರಿದ್ದರಿಂದ ಮಾಜಿ ಸಚಿವ ಸರ್ದಾರ್ ಭಕ್ತ್ ಸಿಂಗರ ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವವನ್ನು ಪೆಪ್ಸು ಕಾಂಗ್ರೆಸ್ ಅಧ್ಯಕ್ಷರು ರದ್ದುಗೊಳಿಸಿದರು.

೧೦೦ ದಿನಗಳಲ್ಲಿ ೧೫೦೦ ಮೈಲಿ

ಕಲ್ಕತ್ತೆಯಿಂದ ಮುಂಬೈಗೆ ವಿದ್ಯಾರ್ಥಿಯ ಕಾಲ್ನಡಿಗೆ ಪ್ರವಾಸ

ಕಲ್ಕತ್ತೆಯ ಸ್ಕಾಟಿಷ್ ಚರ್ಚ್ ಕಾಲೇಜಿನ ೨೨ ವಯಸ್ಸಿನ ವಿದ್ಯಾರ್ಥಿ ಪ್ರಾಣಕೋಷ್ ನಾಗ್‌ರು ಕಲ್ಕತ್ತೆಯಿಂದ ಮುಂಬಯಿಗೆ ೧೫೦೦ ಮೈಲಿಯ ಕಾಲ್ನಡಿಗೆಯ ಪ್ರವಾಸವನ್ನು ಮುಕ್ತಾಯಗೊಳಿಸಿದ್ದಾರೆ.

ಅರ್ಥಶಾಸ್ತ್ರ ವಿದ್ಯಾರ್ಥಿಯಾದ ಶ್ರೀ ನಾಗ್, 'ದೇಶದ ಹಳ್ಳಿಗಳ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯನ್ನು ಪರಿಶೀಲಿಸಲು' ಕಾಲ್ನಡಿಗೆಯ ಪ್ರವಾಸವನ್ನು ಕೈಗೊಂಡಿದ್ದಾರೆ

ಕೇವಲ ೫ ರೂಪಾಯಿ, ಸಣ್ಣದೊಂದು ಗಂಟೊಂದನ್ನು ಹೊತ್ತ ನಾಗ್, ದಿನಕ್ಕೆ ೧೫ ಮೈಲಿಯಂತೆ ನಡೆದು, ೧೦೦ ದಿನಗಳಲ್ಲಿ ಮುಂಬಯಿ ಸೇರಿದ್ದಾರೆ. ಪಶ್ಚಿಮ ಬಂಗಾಳ, ಉತ್ತರ, ಒರಿಸ್ಸಾ, ಬಿಹಾರ್, ಮಧ್ಯಪ್ರದೇಶ, ಹೈದರಾಬಾದ್ ಪ್ರಾಂತ್ಯಗಳ ಮೂಲಕ ನಡೆದಿದ್ದಾರೆ.

ಮುಂದಿನ ವರ್ಷ ತಮ್ಮ ಬಿ-ಎ-ಪರೀಕ್ಷೆಯನ್ನು ಮುಗಿಸಿದ ನಂತರ, ಇಡೀ ಭಾರತವನ್ನು ನಾಲ್ಕು ಘಟ್ಟಗಳಲ್ಲಿ ಕಾಲ್ನಡಿಗೆಯಲ್ಲಿ ಸುತ್ತಿ ನೋಡಬೇಕೆಂದು ನಾಗ್ ಯೋಚಿಸಿದ್ದಾರೆ.

ಪೋರ್ಚುಗೀಸ್ ದಬ್ಬಾಳಿಕೆಗೆ ವಿರೋಧ ಪ್ರದರ್ಶನ

'ಗೋವಾದಲ್ಲಿ ಪೋರ್ಚುಗೀಸರ ದಬ್ಬಾಳಿಕೆ' ವಿರುದ್ಧ ಸಂಯುಕ್ತರಂಗ ೨೦ ಮಂದಿ ಗೋವನ್ನರು ಬೊಂಬಾಯಿ ಪೋರ್ಚುಗೀಸ್ ಪ್ರತಿನಿಧಿಯ ಕಛೇರಿಯ ಮುಂದೆ ಪ್ರದರ್ಶನ ನಡೆಸಿದರು.

ಪೋರ್ಚುಗೀಸರು ಗೋವ ಕೈಬಿಡಬೇಕೆಂದೂ, ಗೋವಾದಲ್ಲಿರುವ ಭಾರತೀಯರನ್ನು ಭಾರತ ಸರ್ಕಾರ ರಕ್ಷಿಸಬೇಕೆಂದೂ ಬರೆಯಲ್ಪಟ್ಟ ಪ್ಲಕಾರ್ಡುಗಳನ್ನು ಪ್ರದರ್ಶಿಸಲಾಯಿತು. ಪ್ರದರ್ಶನವು ಶಾಂತಿಯುತವಾಗಿತ್ತು.

ಡಾ|| ಗ್ರಹಾಂ ವರದಿ ಪ್ರಕಟಣೆ

ಡಾ|| ಗ್ರಹಾಂರವರು ತಮ್ಮ ವರದಿಯಲ್ಲಿ ಜುಲೈ ೧೫ನೇ ತಾರೀಖಿನ ವೇಳೆಗೆ ಭಾರತ ಪಾಕಿಸ್ತಾನಗಳೆರಡು ಕಾಶ್ಮೀರದಲ್ಲಿರುವ ತಮ್ಮ ಸೈನ್ಯದ ಪ್ರಮಾಣವನ್ನು ಕಡಿಮೆಮಾಡಬೇಕೆಂದೂ ಈ ಮಧ್ಯೆ ಸಂಯುಕ್ತ ರಾಷ್ಟ್ರ ಸಂಸ್ಥೆಯ ಸಂಧಾನಕಾರರು ತಮ್ಮ ಕೆಲಸವನ್ನು ಮುಂದುವರಿಸಿಕೊಂಡು ಹೋಗಬೇಕೆಂದೂ ಶಿಫಾರಸ್ಸು ಮಾಡಿ ತಮ್ಮ ವರದಿಯನ್ನು ಪ್ರಕಟಿಸಿರುವರು.

'ವಿವೇಕಿಗಳಿಗೆಲ್ಲ ಶಾಂತಿ ಬೇಕು'

ಡಾ|| ಸರ್ವಪಲ್ಲಿ ರಾಧಾಕೃಷ್ಣನ್‌ರವರು ವಾರ್ತಾ ಪ್ರತಿನಿಧಿಯೊಂದಿಗೆ ಮಾತನಾಡುತ್ತ, ಲೋಕದ ವಿವೇಚನಾಯುಕ್ತ ಜನರು ಅವರು ಪೂರ್ವದಲ್ಲೇ ಇರಲಿ, ಪಶ್ಚಿಮದಲ್ಲೇ ಇರಲಿ ಶಾಂತಿ ಬಯಸುವರೆಂದರು.

'ಇಂದು ಜಗತ್ತಿಗೆ ದೊಡ್ಡ ವಿಪತ್ತೆಂದರೆ ಯುದ್ಧ ಅದರ ಸೇನಾ ಹಾಗೂ ರಾಜಕೀಯ ಪರಿಣಾಮಗಳು ಮಹತ್ತರವಾದುದು. ಆದುದರಿಂದ ವಿವೇಚನಾಯುತರೆಲ್ಲರೂ ಅದನ್ನು ತಪ್ಪಿಸಲು ಪ್ರಯತ್ನಪಡಬೇಕು' ಎಂದು ರಾಧಾಕೃಷ್ಣನ್ ನುಡಿದರು.

ನಿನ್ನೆ ಬೆಳಿಗ್ಗೆ ಮದರಾಸಿಗೆ ಡಾ|| ರಾಧಾಕೃಷ್ಣನ್ ತೆರಳಿದರು. ಅಲ್ಲಿ ೧೦ ದಿನವಿದ್ದು ಅಲ್ಲಿಂದ ನವದೆಹಲಿಗೆ ಮರಳಿ ತಮ್ಮ ಆಯ್ಕೆಯ ಘೋಷಣೆಯಾದ ಬಳಿಕ ಭಾರತ ಲೋಕರಾಜ್ಯದ ಉಪಾಧ್ಯಕ್ಷರ ಹುದ್ದೆಯನ್ನು ಸ್ವೀಕರಿಸುವರು.

ಪ್ರಪಂಚದ ಜನಸಂಖ್ಯೆ

ವಿಶ್ವಸಂಸ್ಥೆ ಏ ೨೧

ಮುಂಬರುವ ೩೦ ವರ್ಷಗಳಲ್ಲಿ ಪ್ರಪಂಚದ ಜನ ಸಂಖ್ಯೆಯು ಶೇ|| ೨೫ ರಷ್ಟು ಹೆಚ್ಚುವುದೆಂದು ವಿಶ್ವಸಂಸ್ಥೆಯು ಅಂದಾಜು ಮಾಡಿದೆ.

೧೯೮೦ ನೇ ಇಸ್ವಿಗೆ ಪ್ರಪಂಚದ ಜನಸಂಖ್ಯೆಯು ೨,೯೭೬ ರಿಂದ ೩,೬೩೬ ಮಿಲಿಯನ್‌ವರೆಗೆ ಏರಬಹುದು. ೧೯೫೦ ರಲ್ಲಿ ಪ್ರಪಂಚದಲ್ಲಿ ೨೪೦೦ ಮಿಲಿಯನ್ ಜನರಿದ್ದರು.

ಈ ಹೆಚ್ಚಳವು ಏಷ್ಯಾ ರಾಷ್ಟ್ರಗಳ ಬೆಳವಣಿಗೆಯ ಮೇಲೆ ನಿಂತಿದೆ. ಆಧುನಿಕ ವೈದ್ಯಜ್ಞಾನದಿಂದ, ರೋಗ ಕಡಿಮೆಯಾಗಿ ಸಾವು ಕಡಿಮೆಯಾಗಿ, ಹೆಚ್ಚು ಆಹಾರ ಬೆಳೆದದ್ದೇ ಆದರೆ ಈ ಹೆಚ್ಚಳವು ಇನ್ನೂ ಅಧಿಕವಾಗಬಹುದೆಂದು ಅಂದಾಜು ಮಾಡಲಾಗಿದೆ.

ತಕರಾರು ಅರ್ಜಿ

ಮಾಜೀ ನ್ಯಾಯಾಂಗ ಸಚಿವ ಡಾ|| ಬಿ ಆರ್ ಅಂಬೇಡ್ಕರ್ ಮತ್ತು ಸೋಷಲಿಸ್ಟ್ ನಾಯಕ ಶ್ರೀ ಅಶೋಕ ಮೆಹ್ತಾರವರು ಮುಖ್ಯ ಚುನಾವಣಾಧಿಕಾರಿಗೆ ಜಂಟಿ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಿ ಮುಂಬೈ ನಗರದ ಉತ್ತರದ ಪಾರ್ಲಿಮೆಂಟ್ ಕ್ಷೇತ್ರದಿಂದ ಲೋಕ ಸಭೆಗೆ ನಡೆದ ಚುನಾವಣೆಯನ್ನು ತಳ್ಳಿಹಾಕಿ, ಅದು ರದ್ದೆಂದು ಘೋಷಿಸಬೇಕೆಂದು ಮನವಿಮಾಡಿಕೊಂಡಿದ್ದಾರೆ.

ಈ ಚುನಾವಣೆಯನ್ನು ರದ್ದುಮಾಡಲು ಅನೇಕ ಕಾರಣಗಳನ್ನು ಅರ್ಜಿಯಲ್ಲಿ ತಿಳಿಸಲಾಗಿದೆ.

ಐ. ಪಿ. ಎಸ್. ಗೆ ಮತ್ತೆ ಕೆಲವರು

ಬೆಂಗಳೂರು ಏ ೨೫

ಇಂಡಿಯನ್ ಪೋಲೀಸ್ ಸರ್ವಿಸ್‌ಗೆ ಈಗಾಗಲೇ ಕೆಲವು ಮೈಸೂರು ಪೋಲೀಸ್ ಅಧಿಕಾರಿಗಳನ್ನು ಆರಿಸಲಾಗಿದೆಯಷ್ಟೆ. ಮತ್ತೆ ಈಗ ಕೆಳಗಿನ ಅಧಿಕಾರಿಗಳನ್ನು ೧-೪-೫೨ ರಿಂದ ಐ. ಪಿ. ಎಸ್-ಗೆ ಆರಿಸಲಾಗಿದೆಯೆಂದು ತಿಳಿದುಬಂದಿದೆ.

ಡಿ. ಐ- ಪಿ- ಯವರಾದ ಶ್ರೀ ವೆಂಕೋಜಿರಾವ್ ಸಿಂಧ್ಯ, ಬೆಂಗಳೂರು ನಗರ ಡಿ. ಎಸ್. ಪಿ. ಗಳಾದ ಶ್ರೀ ಹೆಬ್ಬಾರ್, ದಂಡಿನ ಪ್ರದೇಶದ ಡಿ.ಎಸ್ ಪಿ. ಗಳಾದ ಶ್ರೀ ಆನಂದ್, ಬೆಂಗಳೂರು ಜಿಲ್ಲಾ ಸೂಪರಿಂಟೆಂಡೆಂಟರಾದ ಶ್ರೀ ಜಯಸಿಂಗ್ ಎ- ಎಸ್- ಪಿ- ಗಳಾದ ಶ್ರೀ ಹೆಚ್- ವೀರಭದ್ರಯ್ಯ ಮತ್ತು ಶ್ರೀ ವಿಜಯದೇವರಾಜ ಅರಸ್.

ಪೇಟೆ ಧಾರಣೆ

ಮೈಸೂರು ತಾ|| 25-4-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಕ್ಕೆ	12-4	19-0
ಹುರುಳಿ „	30-8	32-0
ಹೆಸರು „	46-0	50-12
ಮೆ. ಕಾಯಿ ಮಣಕ್ಕೆ	9-8	15-2
ಹುಣಸೇಹಣ್ಣು „	2-10	2-13
ಸೀಗೆಕಾಯಿ „	3-4	3-5
ತೆಂಗಿನಕಾಯಿ 1100ಕ್ಕೆ	99	210

ಚಿನ್ನ ಬೆಳ್ಳಿ ದರಗಳು

25-4-52	ರೂ.
ಸವರನ್	65-12
„	65-14
ಚಿನ್ನ ತೊಲ	92-6
„ ಮೂಸ	91-4
ಬೆಳ್ಳಿ 100 ತೊಲ	163-9
„ ತೊಲ	1-11

ನ್ಯೂ ಅಪೇರ
ಜನಭರಿತವಾದ
೨೦-೪-೫೨ ರಿಂದ ಎರಡನೇ ವಾರ
* ಕುಮಾರಿ *
(ತಮಿಳು)
ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜನಿ (ಜೂ), ಶಾಮ, ದೊರೆರಾಜ್, ಪುಳಿಮೂಟ್ಟೆ.

ಪ್ರಕಾಶಕರು:—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೭ ೪—೧೯೫೨ನೇ ಭಾನುವಾರ [ಸಂಚಿಕೆ ೨೦೩

ಆಡಳಿತ ವೆಚ್ಚ ಖೋತಾ ಮಾಡಲು ಕಾರ್ಯಕ್ರಮ

ಸರ್ಕಾರಿ ಅಧಿಕಾರಿಗಳ ಮಕ್ಕಳಿಗೆ ಪಾಠಶಾಲೆಗಳಲ್ಲಿ ರಿಯಾಯಿತಿ

ಬೆಂಗಳೂರು ಏ ೨೬

ರೆವೆನ್ಯೂ, ಮರಾಮತ್ತು, ಮತ್ತು ಆಹಾರ ಇಲಾಖೆಗಳಲ್ಲಿ ಸಿಬ್ಬಂದಿಯನ್ನು ಕಡಮೆ ಮಾಡಲು ಮಂತ್ರಿಮಂಡಲವು ೫ ದಿನಗಳಿಂದ ನಡೆಸಿದ ಸಭೆಯಲ್ಲಿ ತೀರ್ಮಾನಿಸಿದೆಯೆಂದೂ ಅಲ್ಲದೆ ಕೆಲವು ಇಲಾಖೆಗಳನ್ನು ರದ್ದುಗೊಳಿಸಬೇಕೆಂದು ಆಲೋಚಿಸುತ್ತಲಿರುವುದಾಗಿ ಗೊತ್ತಾಗಿದೆ.

ಅರಣ್ಯ ಶಾಖೆಯ ವೆಚ್ಚದಲ್ಲಿ ೨ ಲಕ್ಷ ರೂಪಾಯಿಗಳ ಖೋತಾ ಮಾಡುವ ಯೋಜನೆಯನ್ನು ಈಗಾಗಲೇ ಅರಣ್ಯ ಶಾಖಾ ಮುಖ್ಯಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿರುವುದಾಗಿ ಹೇಳಲಾಗಿದೆ.

ಸೋಷಲಿಸ್ಟರು ಕಾಂಗ್ರೆಸ್ ಸೇರಿದರು

ಕಲ್ಕತ್ತಾದಲ್ಲಿ ೧೬ ಜನ ಸೋಷಲಿಸ್ಟರು ತಮ್ಮ ಪಕ್ಷಕ್ಕೆ ರಾಜೀನಾಮೆಯಿತ್ತು ಕಾಂಗ್ರೆಸ್ ಸೇರಲು ನಿರ್ಧರಿಸಿರುವರು. ಪಂ|| ನೆಹರೂರವರ ನಾಯಕತ್ವದಲ್ಲಿ ಜನತೆಯ ಮತ್ತು ರಾಷ್ಟ್ರದ ಸೇವೆ ಸಲ್ಲಿಸುತ್ತಲಿರುವ ಸಂಸ್ಥೆಯು ಕಾಂಗ್ರೆಸ್ ವಿನಹ ಮತ್ತಾವ ಸಂಸ್ಥೆಯೂ ಅಲ್ಲ ಆದ್ದರಿಂದ ತಾವು ಕಾಂಗ್ರೆಸ್ ಸೇರುವುದಾಗಿ ಅವರು ಹೇಳಿಕೆಯಿತ್ತಿರುವರು.

೫ ಲಕ್ಷ ಟನ್ ಧಾನ್ಯ ಭಾರತಕ್ಕೆ

ಭಾರತಕ್ಕೆ ಇತರದೇಶಗಳಿಂದ ೩ ಹಡಗುಗಳಲ್ಲಿ ೫ ಲಕ್ಷ ಟನ್ ಧಾನ್ಯ ಬೊಂಬಾಯಿಗೆ ಹೋದ ತಿಂಗಳಲ್ಲಿ ಬಂದಿದೆ. ಬೊಂಬಾಯಿ, ಮದರಾಸು, ಉತ್ತರಪ್ರದೇಶ, ತಿರುವಾಂಕೂರು ಮತ್ತು ಕೊಚ್ಚಿನ್ ಈ ಪ್ರದೇಶಗಳಿಗೆ ಈ ೫ ಲಕ್ಷ ಧಾನ್ಯವನ್ನು ಕೇಂದ್ರಸರ್ಕಾರವು ಕಳುಹಿಸಿದೆ

ಮದ್ದು ಸಿಡಿತದಿಂದ ಅಮೆರಿಕನ್ನರ ಮರಣ

ಕೊರಿಯಾದಲ್ಲಿ ಕಮ್ಯೂನಿಸ್ಟ್ ಸ್ಥಾನಗಳನ್ನು ನಾಶಮಾಡುತ್ತಿದ್ದ ಅಮೆರಿಕಾದ ಹಡಗೊಂದರಲ್ಲಿ ಮದ್ದು ಇದ್ದಕ್ಕಿದ್ದಂತೆಯೇ ಸಿಡಿದು ೩೦ ಜನ ಅಮೆರಿಕನ್ನರು ಮರಣ ಹೊಂದಿದರು

ಪರಿಹಾರನಿಧಿ ಹಂಚಿಕೆ

ಮದ್ರಾಸಿನಲ್ಲಿ ಕ್ಷಾಮಕ್ಕೀಡಾಗಿರುವ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ಕಾಗಿ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರ ಅಧ್ಯಕ್ಷತೆಯಲ್ಲಿ ಪರಿಹಾರ ಸಮಿತಿ ಸಭೆನಡೆಸಿ, ಹಣವನ್ನು ಹಂಚಲು ತೀರ್ಮಾನಿಸಿತು. ಕಡಪ, ಕರ್ನೂಲ್ ಜಿಲ್ಲೆಗೆ ೬೦೦೦೦ ರೂ, ಅನಂತಪುರ ೪೦೦೦೦ ರೂ, ಚಂಗಲ್ಪೇಟೆ, ಉತ್ತರ ಆರ್ಕಾಟು ಜಿಲ್ಲೆಗಳಿಗೆ ೨೦೦೦೦ ರೂ, ಕೊಯಮತ್ತೂರು ಜಿಲ್ಲೆಗೆ ೧೫೦೦೦ ರೂ, ಉಳಿದಭಾಗಗಳಿಗೆ ೧೦೦೦೦ ರೂಗಳನ್ನು ನಿಗದಿಮಾಡಿದೆ

ಎಲಕ್ಟ್ರಿಕ್ ಕರೆಂಟ್ ಇಲ್ಲ

ಮೈಸೂರು ಏ ೨೬

ಈದಿನ ಬೆಳಗ್ಗೆ ೮-೩೦ ಗಂಟೆಯಿಂದ ಮಧ್ಯಾಹ್ನ ಒಂದು ಗಂಟೆ ವರೆಗೆ ಎಲಕ್ಟ್ರಿಕ್ ಕರೆಂಟ್ ಇರುವುದಿಲ್ಲವೆಂದು ಮೈಸೂರು ಪವರ್ ಮತ್ತು ಲೈಟು ಸೂಪರಿಂಟೆಂಡೆಂಟರವರು ಪ್ರಕಟಿಸಿರುತ್ತಾರೆ.

ಭಾರತಕ್ಕೆ ಚೈನಾ ಅಕ್ಕಿ

ಈ ಸಾಲಿನಲ್ಲಿ ಭಾರತಕ್ಕೆ ಚೈನಾವು ಅಕ್ಕಿಯನ್ನು ಸರಬರಾಜು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿತ್ತು. ಆದರೆ ಈಚೆಗೆ ಉಭಯರಾಷ್ಟ್ರಗಳಿಗೆ ನಡೆದ ಮಾತುಕತೆ ಪರಿಣಾಮವಾಗಿ ಚೈನಾವು ಈ ಸಾಲಿನಲ್ಲಿ ೨೦,೦೦೦ ಟನ್ ಅಕ್ಕಿಯನ್ನು ಸರಬರಾಜು ಮಾಡುವುದೆಂದು ಹೇಳಲಾಗಿದೆ.

೧೯೫೧ ರಲ್ಲಿ ಚೈನಾವು ಭಾರತಕ್ಕೆ ೪೫೦,೦೦೦ ಟನ್ ಮೈಲೋ ಮತ್ತು ೬೦,೦೦೦ ಟನ್ ಅಕ್ಕಿಯನ್ನು ಒದಗಿಸಿತ್ತು. ಅದರ ಬೆಲೆಯಲ್ಲಿ ಸ್ವಲ್ಪ ಭಾಗವನ್ನು ಹಣದ ರೂಪದಲ್ಲೂ ಉಳಿದುದನ್ನು ಸೆಣಬು ಪದಾರ್ಥಗಳ ರೂಪದಲ್ಲೂ ತೆಗೆದುಕೊಂಡಿತ್ತು.

೧೯೫೨ ರಲ್ಲಿ ಭಾರತವು ಬರ್ಮಾದಿಂದ ೩೫೦,೦೦೦ ಟನ್, ಥೈಲಾಂಡಿನಿಂದ ೧೬೦,೦೦೦ ಟನ್ ಅಕ್ಕಿಯನ್ನು ಕೊಳ್ಳಲಿದೆಯೆಂದು ಗೊತ್ತಾಗಿದೆ.

ಈ ಸಾಲಿನಲ್ಲಿ ಭಾರತವು ಸುಮಾರು ೫೦ ಲಕ್ಷ ಟನ್ ಆಹಾರ ಧಾನ್ಯಗಳನ್ನು ಹೊರಗಿನಿಂದ ತರಿಸಿಕೊಳ್ಳಲೇರ್ಪಾಡು ಮಾಡಿದೆ.

ಅಭಿವೃದ್ಧಿ ಯೋಜನಾ ಕೇಂದ್ರದ ಆರಂಭೋತ್ಸವ

ಫೋರ್ಡ್ ಫೌಂಡೇಷನ್ನಿನ ಸ್ಕೀಮಿನ ಅಂಗವಾಗಿ ಕಟ್ಟಿರುವ ಅಭಿವೃದ್ಧಿ ಯೋಜನಾಕೇಂದ್ರದ ಆರಂಭೋತ್ಸವವನ್ನು ನಾಳೆ ಬೆಳಿಗ್ಗೆ ೧೦-೩೦ ಘಂಟೆಗೆ ಶ್ರೀ ಕೆ ಎಂ. ಮುನಿಷಿಯವರು ಮಂಡ್ಯ ಹತ್ತಿರ ವಿಶ್ವೇಶ್ವರಯ್ಯ ನಾಲಾ ಫಾರಂನಲ್ಲಿ ನೆರವೇರಿಸುವರು.

ಸಚಿವರಿಗೆ ೧೦೦೦ ರೂ. ವೇತನ

ಕಾಂಗ್ರೆಸ್ ಹೈ-ಕಮ್ಯಾಂಡಿನ ಉಪಸಮಿತಿಯೊಂದು ಪ್ರಾಂತ್ಯಗಳಲ್ಲಿ ಸಚಿವರ ಸಂಬಳವು ವಹಿಹೆಯಾನಾ ೧೦೦೦ ರೂಗಳಿಗೆ ಕಡಿಮೆಯಿಲ್ಲದಂತಿರಬೇಕೆಂದು ನಿರ್ಧರಿಸಿರುವುದರಿಂದ ಬೊಂಬಾಯಿಯಲ್ಲಿಯ ನೂತನ ಮಂತ್ರಿಗಳ ಸಂಬಳವು ಈಗಿರುವ ೮೫೦ ರೂ. ಗಳಿಂದ ೧೦೦೦ ರೂ. ಗಳಿಗೇರುತ್ತದೆಯೆಂದು ಹೇಳಲಾಗಿದೆ. ಜೀವನ ಮಟ್ಟವು ಏರಿಯುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಶ್ರೀ ಮುನಿಷಿ ಬೆಂಗಳೂರಿಗೆ

ಬೆಂಗಳೂರು ಏ.೨೬

ಕೇಂದ್ರ ಆಹಾರಸಚಿವ ಶ್ರೀ ಮುನಿಷಿಯವರು ಇಂದು ಮಧ್ಯಾಹ್ನ ವಿಮಾನದಲ್ಲಿ ೩-೩೫ ಗಂಟೆಗೆ ಬೆಂಗಳೂರಿಗೆ ಆಗಮಿಸುವರು.

ವಿದ್ಯಾಸಚಿವರ ಪ್ರವಾಸ

ಬೆಂಗಳೂರು ಏ ೨೬

ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಮೇ ೪ ನೇ ತಾರೀಖಿನಿಂದ ೮ ನೇ ತಾ|| ವರೆಗೆ ಹಾಸನ ಮೈಸೂರು ಮತ್ತು ಮಂಡ್ಯಾಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳಲಿರುವರು

ಪಶು ಅಭಿವೃದ್ಧಿ ಕೇಂದ್ರ

ಕೇಂದ್ರದ ಭೂ ಪರಿವರ್ತನೆ ಯೋಜನೆ ಪ್ರಕಾರ ಬೆಂಗಳೂರು ಬಳಿ ಹೆಸರಘಟ್ಟದಲ್ಲಿ ಕೇಂದ್ರ ಆಹಾರ ಸಚಿವ ಶ್ರೀ ಮುನಿಷಿಯವರು ಒಂದು ಪಶು ಅಭಿವೃದ್ಧಿ ಕೇಂದ್ರವನ್ನು ಉದ್ಘಾಟನೆಯನ್ನು ಈ ದಿನ ನಡೆಸುವರು.

ನೂತನ ಮಂತ್ರಿಮಂಡಲ

ಬಿಹಾರಿನಲ್ಲಿ ಹೊಸ ಮಂತ್ರಿಮಂಡಲವು ಶ್ರೀ ಕೃಷ್ಣಸಿನ್ಹರವರ ನಾಯಕತ್ವದಲ್ಲಿ ನಾಳೆ ಅಧಿಕಾರ ಸ್ವೀಕರಿಸುವುದೆಂದು ಹೇಳಲಾಗಿದೆ.

ಈ ಮಂತ್ರಿಮಂಡಲದಲ್ಲಿ ೧೩ ಮಂತ್ರಿಗಳಿರುವರೆಂದು ತಿಳಿಯಬರುತ್ತದೆ.

ಶ್ರೀ ನೆಹರೂ ಪ್ರವಾಸ

ಪ್ರಧಾನಿ ನೆಹರೂರವರು ಡಾರ್ಜಿಲಿಂಗ್, ಸಿಕ್ಕಿಂ ಮತ್ತು ಕಾಲಿಂಪಾಂಗ್‌ಗಳಲ್ಲಿ ೩ ದಿನ ಪ್ರವಾಸಕ್ಕಾಗಿ ನಿನ್ನೆ ದೆಹಲಿಯಿಂದ ವಿಶೇಷ ವಿಮಾನದಲ್ಲಿ ಹೊರಟರು.

ಕಾರ್ಯಾಚರಣ ಸಮಿತಿ ನೇಮಕ

ಸಿಂಹಳದಲ್ಲಿರುವ ಭಾರತೀಯರಿಗೆ ಓಟಿನ ಹಕ್ಕನ್ನು ಕೊಡದಿರುವುದರಿಂದ ಸತ್ಯಾಗ್ರಹವನ್ನಾರಂಭಿಸಲು ಅಲ್ಲಿಯ ಭಾರತ ಕಾಂಗ್ರೆಸ್ ನಿರ್ಧರಿಸಿ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳಲು ೫ ಸದಸ್ಯರನ್ನೊಳಗೊಂಡ ಕಾರ್ಯಾಚರಣ ಸಮಿತಿಯನ್ನು ನೇಮಿಸಿದೆ. ಎಲ್ಲಾರೀತಿಯ ಸಂಧಾನಗಳು ಫಲಿಸಲಿಲ್ಲವಾಗಿ ಕೊನೆಯದಾಗಿ ಸತ್ಯಾಗ್ರಹವನ್ನು ಆಚರಿಸಲು ಕಾಂಗ್ರೆಸ್ ನಿರ್ಧರಿಸಿದೆ.

ಈ ಸತ್ಯಾಗ್ರಹದಲ್ಲಿ ಭಾಗವಹಿಸಲು ಸಿಂಹಳಾದ್ಯಂತವಿರುವ ಎಲ್ಲಾ ಭಾರತೀಯರು ಸಿದ್ಧವಿರಬೇಕೆಂದು ಈ ವಿಷಯ ಸಭೆಗಳು ನಡೆಸಿ ಜನರಿಗೆ ತಿಳಿಸಬೇಕೆಂದೂ ಸೂಚನೆಯಿತ್ತಿದೆ. ಸಿಂಹಳೀಯರೂ ಸಹ ಈ ಚಳುವಳಿಗೆ ತಮ್ಮ ಪೂರ್ಣ ಸಹಕಾರವನ್ನು ನೀಡಬೇಕೆಂದು ಕಾಂಗ್ರೆಸ್ ಕೋರಿದೆ.

ರಿಯಾಯಿತಿ

೩೦೦ ರೂ. ಗಳಿಗಿಂತ ಕಡಿಮೆಸಂಬಳ ಪಡೆಯುತ್ತಲಿರುವ ಸರ್ಕಾರಿ ಮತ್ತು ಲೋಕಲ್ ಬೋರ್ಡುಗಳಲ್ಲಿರುವ ನಾನ್ ಗೆಜೆಟೆಡ್ ನೌಕರರ ಮಕ್ಕಳು ಎಲಿಮೆಂಟರಿ ಸ್ಕೂಲ್‌ಗಳಲ್ಲೂ ಸೆಕೆಂಡರಿ ಸ್ಕೂಲ್‌ಗಳ ೩ ನೇ ಫಾರಂನಲ್ಲಿ ಓದುವವರೆಗೂ ಫೀಯನ್ನು ಕೊಡಬೇಕಾಗಿಲ್ಲ ೪ ಫಾರಂನಿಂದ ೬ ನೇ ಫಾರಂವರೆಗೆ ಅರ್ಧ ಫೀ ಕೊಡಬೇಕೆಂದು ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮದ್ರಾಸ್ ಸರ್ಕಾರ ಆಜ್ಞೆಯಿತ್ತಿರುವುದಾಗಿ ತಿಳಿಸಿರುವರು ಲೈಬ್ರರಿ ಸೈನ್ಸ್ ಮುಂತಾದ ಸ್ಪೆಷಲ್ ಫೀ ಗಳಿಗಿದು ಅನ್ವಯಿಸುವುದಿಲ್ಲ.

ಉಚಿತವಾಗಿ ನೀರಿನ ಸರಬರಾಜು

ನೀರಿನ ಅಭಾವವಿರುವ ಪ್ರದೇಶಗಳಲ್ಲಿ ಕುಡಿಯುವ ನೀರನ್ನು ರೈಲುಗಳ ಮೂಲಕ ಜನರಿಗೆ ಉಚಿತವಾಗಿ ಹಂಚಲು ದಕ್ಷಿಣ ರೈಲ್ವೆಯು ನಿರ್ಧರಿಸಿ ಮದ್ರಾಸ್ ಸರ್ಕಾರಕ್ಕೆ ತಿಳಿಸಿದೆ. ಈಗಾಗಲೇ ಅನೇಕ ರೈಲ್ವೆಸ್ಟೇಷನ್‌ಗಳಲ್ಲಿ ನೀರಿನ ಹಂಚಿಕೆ ಪ್ರಾರಂಭವಾಗಿದೆ.

ಅಪರಾಧಿತರ ಚಿಕಿತ್ಸೆಗೆ ಕೋರ್ಟಿನ ಅನುಮತಿಗಾಗಿ ಅರ್ಜಿ

ಬೆಂಗಳೂರು ಏ ೨೮

ಮಾಜಿ ಸಚಿವ ಶ್ರೀ ಹೆಚ್ ಸಿ ದಾಸಪ್ಪನವರನ್ನು ಕೊಲ್ಲಲು ಯತ್ನಿಸಿದರೆಂದು ಅಪಾದಿಸಿ ಶ್ರೀ ಹನುಮಂತರೆಡ್ಡಿ ಎಂಬುವರ ಮೇಲೆ ಹೂಡಲಾಗಿರುವ ಮೊಕದ್ದಮೆಯಲ್ಲಿ ನಿನ್ನೆ ಅಪಾದಿತರ ಪರವಾಗಿ ಅವರ ವಕೀಲರಾದ ಶ್ರೀ ಎ ಕೆ ಗೋವಿಂದರಾಜುಲುರವರು ಅರ್ಜಿಯೊಂದನ್ನು ಸಲ್ಲಿಸಿ ಅಪಾದಿತರಿಗೆ ಹುಚ್ಚರ ಆಸ್ಪತ್ರೆಯಲ್ಲಿ ಚಿಕಿತ್ಸೆ ಮಾಡಿಸಲು ಕೋರ್ಟಿನ ಅನುಮತಿಬೇಕೆಂದು ಪ್ರಾರ್ಥಿಸಿ ಈ ಬಗ್ಗೆ ಆಸ್ಪತ್ರೆಯ ಸೂಪರಿಂಟೆಂಡೆಂಟರನ್ನು ಕಂಡಾಗ ಆ ರೀತಿ ಅನುಮತಿ ಬೇಕೆಂದು ಕೇಳಿದರೆಂದು ತಿಳಿಸಿದರು.

ನ್ಯಾಯಾಧೀಶರು ಈ ವಿಷಯದ ಬಗ್ಗೆ ಆರ್ಡರಿಗಾಗಿ ವಿಚಾರಣೆಯನ್ನು ಏ ೨೮ಕ್ಕೆ ಮುಂದುವರಿಸಿದರು.

ಅಭಿವೃದ್ಧಿ ಯೋಜನಾ ಕೇಂದ್ರ

ಫೋರ್ಡ್ ಫೌಂಡೇಷನ್ ಸ್ಕೀಮಿನ ಅಂಗವಾಗಿ ಏರ್ಪಟ್ಟಿರುವ ಅಭಿವೃದ್ಧಿ ಯೋಜನಾ ಕೇಂದ್ರದ ಪ್ರಾರಂಭೋತ್ಸವವನ್ನು ವಿಶ್ವೇಶ್ವರಯ್ಯನಾಲಾ ಫಾರಮ್ಮಿನಲ್ಲಿ ನಾಳೆ ಬೆಳಗ್ಗೆ ೧೦-೩೦ಕ್ಕೆ ಕೇಂದ್ರ ಸರ್ಕಾರದ ವ್ಯವಸಾಯ ಮತ್ತು ಆಹಾರ ಶಾಖಾ ಸಚಿವ ಶ್ರೀ ಕೆ ಎಂ ಮುನ್ಷಿಯವರು ನೆರವೇರಿಸುತ್ತಾರೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸುತ್ತಾರೆ.

ಚಿನ್ನದ ಪತ್ತೆ

ಮುಂಬೈಗೆ ಗೋವಾದಿಂದ ಬಂದ ಪ್ರಯಾಣಿಕರಲ್ಲಿ ರಹದಾರಿಯಿಲ್ಲದ ಸುಮಾರು ೧೮೦ ತೊಲ ಚಿನ್ನವನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ. ಇದರ ಬೆಲೆ ಸುಮಾರು ೨೫,೦೦೦ ರೂ ಗಳಾಗುತ್ತದೆ.

ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕೆಲಸ ಕಳೆದುಕೊಂಡ ಉಪಾಧ್ಯಾಯರಿಗೆ ಕೆಲಸ

ಪೂನಾದ ವಿದ್ಯಾ ಇಲಾಖೆಯ ಡೈರೆಕ್ಟರು ಕೊಟ್ಟಿರುವ ಪ್ರಕಟಣೆಯಂತೆ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಕೆಲಸ ಕಳೆದುಕೊಂಡ ಅಲ್ಲಿನ ಎಲ್ಲಾ ಪ್ರೈಮರಿ ಶಾಲೆಗಳ ಉಪಾಧ್ಯಾಯರನ್ನು ಮತ್ತೆ ಕೆಲಸದ ಮೇಲೆ ತೆಗೆದುಕೊಳ್ಳುವುದಾಗಿಯೂ ಮತ್ತು ಇದುವರೆವಿಗೂ ಅಂದಿನಿಂದ ಕೆಲಸದ ಮೇಲೆ ಹಾಜರಿಯಿಲ್ಲದ ಕಾಲವನ್ನು ಸಂಬಳವಿಲ್ಲದ ರಜಾದಂತೆ ಪರಿಗಣಿಸಿ ಸರ್ವೀಸ್ ಲೆಖ್ಖ ಕೊಡುವರೆಂದೂ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಕ್ಕಳ ಸಮಿತಿಯ ಚಟುವಟಿಕೆಗಳು

ನ್ಯೂಯಾರ್ಕ್ ಏ ೨೨

ವಿಶ್ವಸಂಸ್ಥೆಯ ಮಕ್ಕಳ ನಿಧಿ ಸಮಿತಿಯು ತನ್ನ ಕಾರ್ಯವನ್ನು ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಹೆಚ್ಚಾಗಿ ವಿಸ್ತರಿಸಲು ಯೋಚಿಸಿದೆ ಎಂದು ಆ ಸಮಿತಿಯ ಅಧ್ಯಕ್ಷರಾದ ಮಾರಿಸ್‌ಪೇಟ್‌ರು ತಿಳಿಸಿದರು.

ಮಿ|| ಪೇಟ್‌ರವರು ತಮ್ಮ ವರದಿಯನ್ನು ಒಪ್ಪಿಸುತ್ತಾ, ಏಷ್ಯಾದಲ್ಲಿ, ಕ್ಷಯರೋಗ ನಿವಾರಣೆ, ಹೆಂಗಿ ಕೇಂದ್ರಗಳನ್ನು ತೆರೆಯುವುದು, ಮಲೇರಿಯ ರೋಗ ನಿವಾರಣೆ ಮುಂತಾದ ಯೋಜನೆಗಳ ಬಗ್ಗೆ ವಿಶೇಷವಾದ ಬೆಳೆವಣಿಗೆಯಾಗಿದೆ ಎಂದು ಪೇಟ್‌ರವರು ತಿಳಿಸಿದರು. ಈ ಆರೋಗ್ಯ ಪ್ರಚಾರವು ಬಹಳ ಜನರಿಗೆ ಮುಟ್ಟಿ ಅನುಕೂಲವಾಯಿತು ಎಂದರು.

ಆಫ್ರಿಕಾಕ್ಕೆ ಈ ಸಲ ೧,೦೦೦,೦೦೦ ಡಾಲರುಗಳನ್ನು ಕೊಡುವುದಾಗಿಯೂ ಇದು ತುಂಬಾ ಮಹತ್ತರವಾದದ್ದೆಂದೂ ತಿಳಿಸಿದರು.

ಸದಸ್ಯ ರಾಷ್ಟ್ರಗಳು ಈ ನಿಧಿಗೆ ಇನ್ನೂ ಹೆಚ್ಚು ಸಹಾಯ ಮಾಡುವುದರಿಂದ, ಕೆಲಸವು ಇನ್ನೂ ಅತ್ಯುತ್ತಮವಾಗುವುದೆಂದೂ, ಈ ವರ್ಷದ ಅಂದಾಜು ಖರ್ಚು ೧೦ ಮಿಲಿಯನ್ ಹೋದ ವರ್ಷಕ್ಕಿಂತ ಜಾಸ್ತಿಯಾಗುವುದೆಂದೂ ತಿಳಿಸಿದರು.

ಈ ನಿಧಿಗೆ ಇಟಲಿಯು ೧೦೦,೦೦೦ ಡಾಲರು, ಇರಾಕ್ ೫೦೦೦, ದಿನಾರಸ್, ಇಸ್ರೇಲ್ ೯,೦೦೦ ಪೌಂಡು, ಸಿಲೋನ್ ೭೫೦೦ ಡಾಲರು ಕೊಡುವುದಾಗಿ ತಿಳಿಸಿದವು.

ಸಂಧಾನ ಮುಂದುವರಿಸಬೇಕು

ವಿಶ್ವಸಂಸ್ಥೆಯ ಕಾಶ್ಮೀರ ಪ್ರತಿನಿಧಿ ಡಾ|| ಗ್ರಹಾಂರವರು ತಮ್ಮ ಕಾಶ್ಮೀರ ಮಧ್ಯಸ್ಥಿಕೆ ನಿಯೋಗದ ಮೂರನೆ ವರದಿಯನ್ನು ಒಪ್ಪಿಸುತ್ತಾ, ಭಾರತ ಪಾಕಿಸ್ತಾನಗಳೊಂದಿಗೆ ತಾವು ಸಂಧಾನವನ್ನು ಮುಂದುವರಿಸುವುದು ಅಗತ್ಯವೆಂದು ಶಿಫಾರಸ್ಸು ಮಾಡಿದ್ದಾರೆಂದು ಹೇಳಲಾಗಿದೆ.

ಡಾ|| ಪ್ರಸಾದರಿಗೆ ಮತ ನೀಡಿ

ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಡಾ|| ರಾಜೇಂದ್ರ ಪ್ರಸಾದರ ಹೆಸರನ್ನು ಸೂಚಿಸಿದ್ದು ಅವರು ಪಕ್ಷದ ಸದಸ್ಯರಾದರೆಂದಲ್ಲವೆಂದೂ ಈ ಉನ್ನತ ಪದವಿ ವಹಿಸಲು ಅರ್ಹರಾದ ರಾಷ್ಟ್ರೀಯ ವ್ಯಕ್ತಿಯೆಂದು ತಾವು ಗಣಿಸಿರುವುದೇ ಇದಕ್ಕೆ ಕಾರಣವೆಂದೂ 'ಮತದಾರರು ಡಾ|| ರಾಜೇಂದ್ರ ಪ್ರಸಾದರಿಗೆ ಮತನೀಡಿ ಅವರನ್ನೇ ನಮ್ಮ ಲೋಕರಾಜ್ಯದ ಗೌರವಾನ್ವಿತ ನಾಯಕರನ್ನಾಗಿ ಆಯುವರೆಂದು ನಾನು ಹೃತ್ಪೂರ್ವಕವಾಗಿ ಆಶಿಸುತ್ತೇನೆ' ಎಂದು ಶ್ರೀ ನೆಹರೂ ಹೇಳಿರುವರು.

ವಿಚಿತ್ರ ವಾದ

ಕಾಂಗ್ರೆಸ್ಸು ಪಾಕಿಸ್ತಾನದ ವಿಚಾರದಲ್ಲಿ ಪಕ್ಷಪಾತ ವಹಿಸುತ್ತಿದೆ. ಮತ್ತು ಮುಸ್ಲಿಮರನ್ನು ತೃಪ್ತಿಪಡಿಸುವ ನೀತಿಯನ್ನು ಅನುಸರಿಸುತ್ತಿದೆ ಎಂಬುದಾಗಿ ಅಖಿಲ ಭಾರತ ಹಿಂದೂ ಮಹಾಸಭಾ ಅಧ್ಯಕ್ಷ ಡಾ|| ಎನ್. ಬಿ. ಖಾರೆಯವರು ಹೇಳಿರುವರು.

ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನು ಖಂಡಿಸಿ ವಾಸ್ತವವಾಗಿ ದೇಶದಲ್ಲಿ ಆಹಾರಾಭಾವವಿಲ್ಲವೆಂದೂ ಕಾಳಸಂತೆಕೋರರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಹಸಿಕೋಟೆಗಳನ್ನು ಇಟ್ಟುಕೊಳ್ಳಲಾಗಿದೆಯೆಂದೂ ಹೇಳಿರುವರು.

ಸಿಡಿಲು ಹೊಡೆದು ಮರಣ

ಹೌರಾ ನಗರದ ಸಿನಿಮಾ ಮಂದಿರವೊಂದಕ್ಕೆ ಸಿಡಿಲು ಬಡಿದು ಮೂವರು ಸತ್ತು ೩೭ ಮಂದಿಗೆ ಗಾಯವಾಗಿದೆಯೆಂದು ವರದಿ ಬಂದಿದೆ.

‡ ಅಮೆರಿಕದ ಅಧ್ಯಕ್ಷರೂ ಯಾರೇ ಆಗಲಿ, ಅಮೆರಿಕದ ವಿದೇಶಾಂಗ ನೀತಿಯಲ್ಲಿ ಬದಲಾವಣೆಯಾಗಲು ಸಾಧ್ಯವಿಲ್ಲವೆಂದು, ಅಮೆರಿಕದ ಶಾಸನಸಭಾ ಸದಸ್ಯರಾದ ಸೆನೆಟರ್ ಜಾನ್‌ಸ್ಪಾರ್ಕ್‌ಮನ್ನರು ಮತ್ತು ಜಾನ್ ಎಂ. ವೋರಿಸ್‌ರವರು ತಿಳಿಸಿದ್ದಾರೆ.

ಪಾರ್ಲಿಮೆಂಟಿಗೆ ಟಂಡನ್

ಶ್ರೀ ಪ್ರಕಾಶರು ಮದರಾಸ್ ಗವರ್ನರಾಗಿ ನೇಮಿತರಾದ್ದರಿಂದ ತೆರವಾದ ಅಲಹಾಬಾದ್ ಕ್ಷೇತ್ರದ ಪಾರ್ಲಿಮೆಂಟ್ ಸ್ಥಾನಕ್ಕೆ ಮಾಜಿ ಕಾಂಗ್ರೆಸ್ ಅಧ್ಯಕ್ಷ ಪುರುಷೋತ್ತಮದಾಸ್ ಟಂಡನ್ ಅವಿರೋಧ ಆಯ್ಕೆಯಾಗಿದ್ದಾರೆ.

ರಿಡ್ಜ್‌ವೇ-ಹೀರೊ ಹಿಟೋ ಭೇಟಿ

ಜಪಾನು ಶಾಂತಿಕರಾರು ಸದ್ಯದಲ್ಲೇ ಆಚರಣೆಗೆ ಬರಲಿರುವುದರಿಂದ ಸುಪ್ರೀಂ ಕಮ್ಯಾಂಡರಾಗಿರುವ ರಿಡ್ಜ್‌ವೇಯವರು ಅಸ್ಥಾನಗೌರವದಿಂದ ಜಪಾನ್ ಚಕ್ರವರ್ತಿ ಹಿರೋ ಹಿಟೋರವರನ್ನು ಕೊನೆಯಬಾರಿ ನಿನ್ನೆ ಭೇಟಿಮಾಡಿದ್ದರೆಂದು ಗೊತ್ತಾಗಿದೆ.

ಚೈನಾ ನಿಯೋಗ

ಭಾರತದಿಂದ ಚೈನಾಕ್ಕೆ ಹೊರಟಿರುವ ಸಾಂಸ್ಕೃತಿಕ ನಿಯೋಗವು ನಿನ್ನೆರಾತ್ರಿ ಬ್ಯಾಂಕಾಕನ್ನು ಸೇರಿದೆ.

ಚಿನ್ನ ಬೆಳ್ಳಿ ದರಗಳು

26-4-52	ರೂ.
ಸವರನ್	65–12
"	65–14
ಚಿನ್ನ ತೊಲ	94–0
" ಮೂಸ	92–8
ಬೆಳ್ಳಿ 100 ತೊಲ	164–0
" ತೊಲ	1–12

ವುಡ್ ಲ್ಯಾಂಡ್ಸ್

೨೫—೪—೫೨ ರಿಂದ ಜನಭರಿತವಾದ ೩ನೇ ವಾರ

ದಿನವೂ ೩ ಆಟಗಳು

- ಬೇತಾಬ್ -
(ಹಿಂದಿ)

ಪಾತ್ರ:—ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ನ್ಯೂ ಅಪೇರ ಶ್ರೀ

ಜನಭರಿತವಾದ ೨೭-೪-೫೨ ರಿಂದ ಮೂರನೇ ವಾರ

* ಕುಮಾರಿ *
(ತಮಿಳು)

ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜನಿ (ಜೂ), ತಾಮು, ದೊರೆರಾಜ್, ಪುಳಿಮೂಟ್ಟೈ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,500 or near

No brokers Immediate possession—No encumbrences

Enquire at :— M. SUBBARAMAIAH & Co., Lansdowne Buildings. Mysore.

ಫೋನ್ ೫೭೪ (೮೦೯) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೯ ೪—೧೯೫೨ನೇ ಮಂಗಳವಾರ [ಸಂಚಿಕೆ ೨೦೪

ಆಹಾರ ಅಭಾವಕ್ಕಿಂತಲೂ ನೀರಿನ ಅಭಾವ ಹೆಚ್ಚಾಗಿದೆ

ಹೊಸ ಆಹಾರ ನೀತಿಗೆ ಎಲ್ಲೆಡೆಯಲ್ಲಿಯೂ ಸ್ವಾಗತ

ಮೈಸೂರು ಏ ೨೮

ಕಂದಾಯ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ನಿನ್ನೆದಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಕೋಲಾರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಲಿಂಗಾರೆಡ್ಡಿ ಮತ್ತು ಶ್ರೀ ಕೃಷ್ಣಪ್ಪನವರೊಡನೆ ಕೋಲಾರ ಜಿಲ್ಲೆಯ ಕೆಲವು ಅಭಾವ ಪ್ರದೇಶಗಳಿಗೆ ಭೇಟಿಯಿತ್ತು, ಅಲ್ಲಿಯ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ನೋಡಿಕೊಂಡು ಇಂದು ಮೈಸೂರಿಗೆ ಆಗಮಿಸಿದರು.

ಬೌರಿಂಗಪೇಟೆ ತಾಲ್ಲೂಕುಗಳ ಸುಮಾರು ೩೫-೪೦ ಗ್ರಾಮಗಳಿಗೆ ಭೇಟಿಯಿತ್ತು, ಅಲ್ಲಿಯ ಜನರೊಡನೆ ಸ್ಥಿತಿಗತಿಗಳನ್ನು ಚರ್ಚಿಸಿದರೆಂದು ಸಚಿವರು ನಮ್ಮ ವಿಶೇಷ ಪ್ರತಿನಿಧಿಗೆ ತಿಳಿಸಿದರು.

ಈ ಪ್ರದೇಶಗಳಲ್ಲಿ ಅಭಾವ ಪರಿಸ್ಥಿತಿಯು ಈಗ ಉದ್ಭವಿಸಿಲ್ಲ. ಕಳೆದ ಮೂರು ನಾಲ್ಕು ವರ್ಷಗಳಿಂದ ಈ ಭಾಗಗಳಲ್ಲಿ ಮಳೆಯೇ ಇಲ್ಲ ಯಾವರೀತಿಯಾದ ಬೆಳೆಯೂ ಆಗಿಲ್ಲ. ಆದ್ದರಿಂದ ಆಹಾರಪದಾರ್ಥಗಳು ದೊರೆತರೂ ಜನರಲ್ಲಿ ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಅಲ್ಲದೆ ಆಹಾರಕ್ಕಿಂತ ನೀರಿನ ಅಭಾವ ಹೆಚ್ಚಾಗಿದೆ. ಅದಕ್ಕಾಗಿ ಸರ್ಕಾರವು ಅನೇಕ ಪರಿಹಾರ ಕಾರ್ಯಗಳನ್ನು ಕೈಗೊಂಡಿದೆ. ಆಹಾರವಸ್ತುಗಳನ್ನೂ, ದನಕರುಗಳ ಮೇವನ್ನೂ, ಜನರಿಗೆ ಕೆಲಸವನ್ನು ಒದಗಿಸಲು ತಕ್ಕ ವ್ಯವಸ್ಥೆ ಮಾಡಿರುವುದಲ್ಲ; ಅನೇಕಕಡೆ ನೀರಿನ ಭಾವಿಗಳನ್ನು ತೋಡಿಸಲು ಏರ್ಪಾಡು ಮಾಡಲಾಗಿದೆ ಕಂದಾಯ ರಿಯಾಯಿತಿ ಕೊಡಲಾಗಿದೆಯೆಂದು ಸಚಿವರು ಹೇಳಿದರು.

ಜನರಾಗಲೀ ಜಾನುವಾರುಗಳಾಗಲೀ ಈ ಪ್ರದೇಶದಲ್ಲಿ ಸತ್ತಿವೆಯೆಂಬುದು ನಿಜವಲ್ಲವೆಂದು ಸಚಿವರು ತಿಳಿಸಿದರು.

ಹೊಸ ಆಹಾರನೀತಿಯ ಬಗ್ಗೆ ಜನರಭಿಪ್ರಾಯ ಆಪ್ರಾಂತದಲ್ಲಿ ಹೇಗಿದೆಯೆಂದು ಕೇಳಲಾಗಿ ಸರ್ಕಾರದ ಹೊಸ ಆಹಾರ ನೀತಿಗೆ ಎಲ್ಲೆಲ್ಲೂ ಸ್ವಾಗತ ದೊರೆಯುತ್ತದೆಂದು ಸಾಗಾಣಿಕೆಗೆ ಇರುವ ಕಡೆ ಗ್ರಾಮಾಂತರಗಳಲ್ಲಿ ರೇಷನ್‌ಪರ್ಮಿಟ್ ಮುಂತಾದುವು ಹೋಗುವುದೆಂದು ಜನರು ಉತ್ಸಾಹಶಾಲಿಗಳಾಗಿರುವುದಾಗಿ ಸಚಿವರು ತಿಳಿಸಿದರು. ಸಚಿವರು ನಾಳೆ ನುಗು, ಕೃಷ್ಣರಾಜಸಾಗರ ಜಲಾಶಯಗಳಿಗೆ ಭೇಟಿ ಕೊಡಲಿರುವರು.

ಎಂ. ಪಿ. ಸಿ. ಸಿ. ಗೆ ಉಪಚುನಾವಣೆ

ಮೈಸೂರು ಏ ೨೮

ಇದೇ ತಿಂಗಳು ೩೦ನೇ ತಾ|| ಎಂ ಪಿ ಸಿ ಸಿ ಗೆ ನಡೆಯುವ ಉಪಚುನಾವಣೆಯಲ್ಲಿ ಕೆಳಗೆ ಕಂಡವರು ಸ್ಪರ್ಧಿಸಿದ್ದಾರೆ—

ಹೆಗ್ಗಡದೇವನಕೋಟೆ ಕ್ಷೇತ್ರದಿಂದ ಶ್ರೀಗಳಾದ ಹೆಚ್ ಎಂ ಚನ್ನಬಸಪ್ಪ ಮತ್ತು ಕೆ ಪುಟ್ಟಸ್ವಾಮಿ.

ಮೈಸೂರು ತಾಲ್ಲೂಕು ಕ್ಷೇತ್ರದಿಂದ ಶ್ರೀಗಳಾದ ಎಂ ಎಸ್ ನಂಜರಾಜೆ ಅರಸು, ಹೆಚ್ ಸಿ ದಾಸಪ್ಪ ಮತ್ತು ಚಿನ್ನಸ್ವಾಮಿ.

ಚಾಮರಾಜನಗರ ಕ್ಷೇತ್ರದಿಂದ ಶ್ರೀಗಳಾದ ಹೆಚ್ ಎಂ ಚನ್ನಬಸಪ್ಪ, ಎಂ ಎಸ್ ನಂಜರಾಜೆ ಅರಸು ಮತ್ತು ನಾಗರಾಜ್.

ಉದ್ಘಾಟನೆ

ನಿನ್ನೆ ಬೆಳಗ್ಗೆ ಕೇಂದ್ರ ಸರ್ಕಾರದ ಆಹಾರ ಮತ್ತು ವ್ಯವಸಾಯ ಶಾಖಾ ಮಂತ್ರಿಗಳಾದ ಶ್ರೀ ಮುನ್ಷಿಯವರು ಮಂಡ್ಯದ ಬಳಿ ಇರುವ ವಿ. ಸಿ. ಫಾರಂನಲ್ಲಿ ಫೋರ್ಡ್ ಫೌಂಡೇಷನ್ ಸಹಾಯಕ ನಿಧಿಯ ವ್ಯವಸಾಯ ವಿಸ್ತರಣಾ ಕೇಂದ್ರದ ಉದ್ಘಾಟನೆ ಮಾಡಿದರು. ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಸೌಹಾರ್ದ-ಸಹಕಾರ

'ತನ್ನ ಗಡಿಯಲ್ಲಿರುವ ಎಲ್ಲಾ ರಾಷ್ಟ್ರಗಳೊಡನೆ ಮುಖ್ಯವಾಗಿ ಚೀನಾ, ಟಿಬೆಟ್‌ಗಳೊಡನೆ ಮೈತ್ರಿ, ಸೌಹಾರ್ದಗಳನ್ನಿಟ್ಟುಕೊಂಡಿರುವುದೇ ಭಾರತದ ವಿದೇಶಾಂಗ ನೀತಿ' ಎಂದು ಪ್ರಧಾನಿ ಪಂಡಿತ ಜವಹರಲಾಲ ನೆಹರೂರವರು ಡಾರ್ಜಿಲಿಂಗ್ ಪ್ರಭುತ್ವ ಭವನದ ಬಯಲಿನಲ್ಲಿ ೧೦,೦೦೦ ಜನರನ್ನುದ್ದೇಶಿಸಿ ಮಾತನಾಡುತ್ತಾ ಹೇಳಿರುವರು.

ವಿಶ್ವದ ಯಾವುದೇ ರಾಷ್ಟ್ರದ ಬಗ್ಗೆಯೂ ಭಾರತಕ್ಕೆ ಅಕ್ರಮಣಾತ್ಮಕ ಉದ್ದೇಶವಿಲ್ಲವೆಂದೂ, ಅಲ್ಲದೆ ಇನ್ಯಾವ ರಾಷ್ಟ್ರಕ್ಕೂ ಭಾರತದ ಬಗ್ಗೆ ಅಕ್ರಮಣೋದ್ದೇಶವಿಲ್ಲವೆಂದೂ ಪ್ರಧಾನಿ ನುಡಿದರು.

ಹೊಸ ಮಂತ್ರಿಮಂಡಲ

೧೨ ಜನರ ಬಿಹಾರದ ಮಂತ್ರಿಮಂಡಲವು ನಿನ್ನೆಯದಿನ ಪಾಟ್ನಾದಲ್ಲಿ ಪ್ರಮಾಣ ಸ್ವೀಕಾರಮಾಡಿತು. ಶ್ರೀ ಕೃಷ್ಣಸಿನ್ಹರವರು ಮುಖ್ಯಮಂತ್ರಿ.

ಅಂತರರಾಷ್ಟ್ರೀಯ ಗೋಧಿ ಸಮ್ಮೇಳನ

ಅಂತರರಾಷ್ಟ್ರೀಯ ಗೋಧಿ ಸಮ್ಮೇಳನವು ಏಪ್ರಿಲ್ ೧೭ನೇ ತಾ|| ನಿಂದ ಲಂಡನ್ನಿನಲ್ಲಿ ಪ್ರಾರಂಭವಾಗಿದೆ. ಈ ಸಮ್ಮೇಳನವು ೩ ವಾರ ಕಾಲ ನಡೆಯುತ್ತದೆ. ಭಾರತವೂ ಸೇರಿ ೪೭ ರಾಷ್ಟ್ರಗಳ ೧೭೦ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಲಿರುವರು. ಭಾರತದ ಪರವಾಗಿ ಕೇಂದ್ರ ಮತ್ತು ವ್ಯವಸಾಯ ಸಚಿವ ಶಾಖೆಯ ಶ್ರೀಗಳಾದ ಸಿ ಎ ಗೋಪಾಲಕೃಷ್ಣನ್ ಎಲ್ ಆರ್ ಎಸ್ ಸಿಂಗ್ ಮತ್ತು ಎಸ್ ಕೆ ಬಾಸುರವರಿರುವರು.

ಜಪಾನು ಶಾಂತಿಕರಾರು

ಜಪಾನಿನೊಡನೆ ಯುದ್ಧಪರಿಸ್ಥಿತಿ ಮುಕ್ತಾಯವಾಗಿ ಜಪಾನಿನ ಶಾಂತಿಕರಾರು ನಿನ್ನೆಯಿಂದ ಜಾರಿಗೆ ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಅಧ್ಯಕ್ಷ ಟ್ರೂಮನ್ನರು ಒಂದು ಘೋಷಣೆಯನ್ನು ಹೊರಡಿಸಿರುವರು.

ಐಸನ್ ಹೋವರ್ ಅಮೆರಿಕಕ್ಕೆ

ಜ|| ಐಸನ್ ಹೋವರ್ ಜೂನ್ ೧ನೇ ತಾ|| ಅಮೆರಿಕಕ್ಕೆ ಹಿಂತಿರುಗುವುದಾಗಿ ತಿಳಿಸಿರುತ್ತಾರೆ.

ಅಷ್ಟು ಹೊತ್ತಿಗೆ ತಮ್ಮ ಯೂರೋಪ್ ದಂಡನಾಯಕ ಪದವಿಯಿಂದ ಬಿಡುಗಡೆಮಾಡಬೇಕೆಂದು ಕೇಳಿರುವುದಾಗಿಯೂ ಸಹ ತಿಳಿಸಿದ್ದಾರೆ.

ಡಾ|| ಗ್ರಹಾಂ ವರದಿ ಪರಿಶೀಲನೆ

ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ|| ಗ್ರಹಾಂರವರ ವರದಿಯನ್ನು ಪರಿಶೀಲಿಸಲು ತ್ವರಿತವಾಗಿ ಸೆಕ್ಯೂರಿಟಿ ಕೌನ್ಸಿಲ್ ಸಭೆಯನ್ನು ಕರೆಸಲೋಸುಗ ಒತ್ತಾಯಪಡಿಸಲು ಪಾಕಿಸ್ಥಾನ ಸರ್ಕಾರವು ವಿಶ್ವಸಂಸ್ಥೆಯಲ್ಲಿರುವ ತನ್ನ ಪ್ರತಿನಿಧಿಗೆ ಸೂಚನೆ ಕೊಡುವುದಾಗಿ ಹೇಳಲಾಗಿದೆ.

ಕಾಂಗ್ರೆಸ್ ಪಕ್ಷಕ್ಕೆ ನೆರವು

ಮದ್ರಾಸ್ ಶಾಸನಸಭೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರದ ೫೦ ಜನ ಸದಸ್ಯರು ಕಾಂಗ್ರೆಸ್ ಪಕ್ಷಕ್ಕೆ ತಮ್ಮ ಪೂರ್ಣ ಬೆಂಬಲನೀಡುವರೆಂದು ಆಂಧ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎನ್. ಸಂಜೀವರೆಡ್ಡಿಯವರು ಹೇಳಿರುವರು.

ಭಾರತಕ್ಕೆ ಸಹಾಯ

ಏಷ್ಯಾ ಮತ್ತು ಮಧ್ಯಪ್ರಾಚ್ಯದ ೧೨ ರಾಷ್ಟ್ರಗಳಲ್ಲಿ ಮಕ್ಕಳ ಮತ್ತು ತಾಯಂದಿರ ಆರೋಗ್ಯವನ್ನು ಉತ್ತಮಗೊಳಿಸಲು ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ನಿಧಿಯಿಂದ ೧೮ ಯೋಜನೆಗಳು ತಯಾರಾಗಿವೆ ಈ ಯೋಜನೆಯಪ್ರಕಾರ ಕ್ಷಯರೋಗ, ಮಲೇರಿಯಾ ಮುಂತಾದ ರೋಗ ನಿವಾರಣ ಕಾರ್ಯಗಳು ನಡೆಯುತ್ತಿವೆ. ಕ್ಷಯರೋಗ ನಿರೋಧ ವ್ಯಾಕ್ಸಿನೇಷನ್‌ಗಳಿಗೆ ೧೩೫,೦೦೦ ಡಾಲರು, ಕ್ಷಯರೋಗ ಹತೋಟಿಮಾಡಲು ೩೧,೦೦೦ ಡಾಲರು ಮಲೇರಿಯಾ ಪ್ರದೇಶಗಳಲ್ಲಿ ಡಿ. ಡಿ. ಟಿ. ಉಪಯೋಗಿಸಲು ೪೨೪,೦೦೦ ಡಾಲರುಗಳನ್ನು ಭಾರತವು ಪಡೆಯುತ್ತದೆ.

ಇದೇರೀತಿಯಾದ ಸಹಾಯವು ಪಾಕೀಸ್ತಾನ, ಬರ್ಮ, ಈಜಿಪ್ಟ್, ಇರಾಕ್ ಮುಂತಾದ ರಾಷ್ಟ್ರಗಳೂ ಪಡೆಯುತ್ತವೆ.

ಮುಷ್ಕರ ಮುಕ್ತಾಯ

ಗೋರಕ್‌ಪುರದಲ್ಲಿ ರೈಲ್ವೆ ಕಾರ್ಮಿಕರು ನಾಲ್ಕುದಿನಗಳಿಂದ ನಡೆಸುತ್ತಲಿದ್ದ ಮುಷ್ಕರವು ನಿನ್ನೆಯದಿನ ಮುಕ್ತಾಯವಾಯಿತೆಂದು ತಿಳಿಯಬರುತ್ತದೆ.

ಸತ್ಯಾಗ್ರಹಿಗಳ ದಸ್ತಗಿರಿ

ತಮಗೆ ಓಟಿನ ಹಕ್ಕನ್ನು ಕೊಡಬೇಕೆಂದು ಸಿಂಹಳದಲ್ಲಿಯ ಭಾರತೀಯ ಕಾಂಗ್ರೆಸ್‌ನವರು ನಿನ್ನೆಯಿಂದ ಸತ್ಯಾಗ್ರಹವನ್ನು ಆರಂಭಿಸಿದರು. ೪೧ ಜನರ ಪ್ರಥಮ ತಂಡವು ಶ್ರೀ ತೊಂಡಮನ್ ನಾಯಕತ್ವದಲ್ಲಿ ಪ್ರಧಾನಿ ಸೇನಾನಾಯಕೆ ಮತ್ತು ಗೌರ್ನರ್ ಜನರಲ್‌ರವರ ನಿವಾಸಗಳಿಗೆ ಮೆರವಣಿಗೆ ಹೊರಟವು ಈ ೪೧ ಜನರ ತಂಡರನ್ನು ಪೋಲೀಸಿನವರು ದಸ್ತಗಿರಿಮಾಡಿರುವರು.

ಕೆ. ಟಿ. ಷಾರವರಿಗೆ ಬೆಂಬಲನೀಡಿ

ಬರಲಿರುವ ಅಧ್ಯಕ್ಷರ ಚುನಾವಣಾ ಸಂದರ್ಭದಲ್ಲಿ ಶಾಸನಸಭಾ ಮತ್ತು ಪಾರ್ಲಿಮೆಂಟಿನ ಸೋಷಲಿಸ್ಟ್ ಸದಸ್ಯರು ಪ್ರೊ|| ಕೆ. ಟಿ. ಷಾರವರಿಗೆ ತಮ್ಮ ಮತವನ್ನು ನೀಡಬೇಕೆಂಬುದಾಗಿ ಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಸೂಚನೆಯಿತ್ತಿರುವುದಾಗಿ ಪ್ರಕಟಿಸಿದ್ದಾರೆ.

ಪರಿಶೀಲನೆ

ಹೈದರಾಬಾದಿನಲ್ಲಿರುವ ಕಮ್ಯೂನಿಸ್ಟ್ ಸ್ಥಾನಬದ್ಧ ಖೈದಿಗಳನ್ನು ಬಿಡುಗಡೆ ಮಾಡುವ ವಿಷಯವನ್ನು ಅಲ್ಲಿಯ ಸರ್ಕಾರವು ಪರಿಶೀಲಿಸುತ್ತಲಿದೆ.

ಮೈಸೂರು ಪ್ರಗತಿಪರ ಸಂಸ್ಥಾನ

ಬೆಂಗಳೂರು ಏ ೨೮

ಭಾರತೀಯರಾದ ನಾವು ಪಶುವನ್ನು ಕೊಲ್ಲುವುದಿಲ್ಲ, ತಿನ್ನುವುದಿಲ್ಲ, ಆದರೆ ರಕ್ಷಿಸಿ ಅಭಿವೃದ್ಧಿಯನ್ನೂ ಪಡಿಸುವುದಿಲ್ಲ. ಪರಿಸ್ಥಿತಿ ಹೀಗೇ ಮುಂದುವರಿದರೆ ಅನುಪಯುಕ್ತ ಪಶುಗಳು ಹೆಚ್ಚಿ ಮಾನವಕುಲವನ್ನೇ ನಾಶಮಾಡೀತು ಎಂದು ಹೆಸರಘಟ್ಟದಲ್ಲಿ ಗೋಸಂಪತ್ ಸಂವರ್ಧನಾ ಕೇಂದ್ರವನ್ನು ನಿನ್ನೆದಿನ ಸಂಜೆ ಆರಂಭಗೊಳಿಸುತ್ತಾ ಶ್ರೀ ಮುರ್ತಿಯವರು ತಿಳಿಸಿದರು.

ಸಂಸ್ಥಾನದ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಈ ಮುರ್ತಿಯವರು ತಮ್ಮ ಭಾಷಣದಲ್ಲಿ 'ಈ ಕೇಂದ್ರದ ಆರಂಭೋತ್ಸವವನ್ನು ನೆರವೇರಿಸಲು ನನಗೆ ತುಂಬಾ ಸಂತೋಷವಾಗುತ್ತದೆ. ಮೈಸೂರು ಸಂಸ್ಥಾನ ಉಳಿದ ವಿಚಾರಗಳಲ್ಲಿ ಮುಂದುವರಿದಂತೆ ಪಶು ಸಂರಕ್ಷಣೆಯಲ್ಲಿಯೂ ಭಾರತದ ಉಳಿದ ಭಾಗಗಳಿಗಿಂತ ಮುಂದುವರಿದಿದೆಯೆಂದು ಹೇಳುವುದರಲ್ಲಿ ನನಗೆ ಯಾವ ಸಂಕೋಚವೂ ಇಲ್ಲ. ಬಹುಶಃ ಲಿಲಿತ್‌ಗೋರವರ ವರದಿಗನುಗುಣವಾಗಿ ಪಶುವೈದ್ಯಶಾಲೆಗಳ ಸಂಖ್ಯೆಯನ್ನು ಬೆಳೆಸಿರುವುದು ಮೈಸೂರು ಸಂಸ್ಥಾನ ಒಂದೇ' ಎಂದರು.

ಷಾಕ್ ಹೊಡೆದು ಮರಣ ದುರಂತ ಪ್ರಸಂಗ

ಬೆಂಗಳೂರು ಏ ೨೮

ನಿನ್ನೆ ದಿನ ಬೆಳಗ್ಗೆ ಸುಮಾರು ಹನ್ನೊಂದೂವರೆ ಗಂಟೆ ಸಮಯದಲ್ಲಿ ವಿದ್ಯುಚ್ಛಕ್ತಿ ಇಲಾಖೆಯ ಕೆಲಸಗಾರನೊಬ್ಬನು ಬೆಂಗಳೂರು ಸಿವಿಲ್ ಪ್ರದೇಶದ ವಿಲಿಯಂಸ್ ಟೌನಿನಲ್ಲಿ, ರಿಪೇರಿಗಾಗಿ ರಸ್ತೆ ಕಂಬವೊಂದನ್ನು ಹತ್ತಿ, ಭಾರೀ ಕರೆಂಟಿನ 'ತಾಕ' ಬಡಿದು ದುರಂತ ಮರಣಕ್ಕೀಡಾದ ಪ್ರಸಂಗ ವರದಿಯಾಗಿದೆ.

ಖಂಡೂಬಾಯ್ ದೇಶಾಯರ ಎಚ್ಚರಿಕೆ

ಬೆಂಗಳೂರು ಏ ೨೮

ದೇಶದ ಹಿತದ ವಿರುದ್ಧ ವರ್ತಿಸುವ ಮಾಲೀಕರ ಮೇಲೆ ಸರ್ಕಾರ ತನ್ನ ಅಧಿಕಾರವನ್ನು ಪಯೋಗಿಸಿ ಕ್ರಮ ಕೈಗೊಳ್ಳಬೇಕು. ಸರ್ಕಾರ ತನ್ನ ಕರ್ತವ್ಯ ಮಾಡದಿದ್ದರೆ ಅದು ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಒತ್ತಾಯಪಡಿಸುವುದು ನಮ್ಮ ಕರ್ತವ್ಯವಾಗುತ್ತದೆಂದು ಈ ದಿನ ಐ ಎನ್ ಟಿ ಯು ಸಿ ಅಧ್ಯಕ್ಷ ಶ್ರೀ ಖಂಡೂಬಾಯ್ ದೇಶಾಯಿಯವರು ಎಚ್ಚರಿಸಿದ್ದಾರೆ.

ನಿನ್ನೆಯಿಂದ ಸತ್ಯಾಗ್ರಹ ಆರಂಭ

ಸಿಂಹಳ ಭಾರತೀಯ ಕಾಂಗ್ರೆಸ್ಸಿನ ಕ್ರಿಯಾ ಸಮಿತಿಯು ನಿನ್ನೆಯಿಂದ ಸತ್ಯಾಗ್ರಹ ಹೂಡಲು ನಿರ್ಧರಿಸಿ ಸತ್ಯಾಗ್ರಹ ಪ್ರಾರಂಭವಾಗಿದೆ.

ಸಿಂಹಳದಲ್ಲಿರುವ ಭಾರತೀಯರಿಗೆ ಓಟಿನ ಹಕ್ಕನ್ನು ಗಳಿಸುವುದೇ ಈ ಸತ್ಯಾಗ್ರಹದ ಉದ್ದೇಶ- ಸಿಂಹಳದಲ್ಲಿರುವ ಪ್ರಜಾಸಂಖ್ಯೆಯಲ್ಲಿ ಮೂರನೇ ಒಂದು ಭಾಗ ಭಾರತೀಯರಿರುವರು.

ವ್ಯಾಪಾರಿಯ ದಸ್ತಗಿರಿ

'ಗೊಬ್ಬರದ ಗೊಂದಲ' (ಫರ್ಟಿಲೈಸರ್ ಸ್ಕ್ಯಾಂಡಲ್) ವೆಂದು ಪ್ರಸಿದ್ಧವಾಗಿರುವ ಕಳ್ಳ ವ್ಯವಹಾರದ ಸಂಬಂಧದಲ್ಲಿ ಮುಂಬಯಿನ 'ಭಾರತ ವ್ಯಾಪಾರಿಗಳ ಪರಿಷತ್ತಿ'ನ ಉಪಾಧ್ಯಕ್ಷರೂ, ಮುಂಬೈನ ಪ್ರಸಿದ್ಧ ವ್ಯಾಪಾರಿಗಳೂ ಆದ ಶ್ರೀ ರತಿಲಾಲ್ ಎಂ. ನಾನಾವತಿಯವರನ್ನು ದಸ್ತಗಿರಿ ಮಾಡಲಾಗಿದೆ.

ಶ್ರೀ ನಾನಾವತಿಯವರು 'ಭಾರತ ವ್ಯಾಪಾರಿಗಳ ಪರಿಷತ್ತಿ'ನ ಉಪಾಧ್ಯಕ್ಷರಾಗಿದ್ದು ಕಳೆದ ಶುಕ್ರವಾರ ರಾಜೀನಾಮೆಯಿತ್ತರು-

ಅಂತರರಾಷ್ಟ್ರೀಯ ಸಮ್ಮೇಳನ

ಭಾರತದ ಇನಸ್ಟಿಟ್ಯೂಟ್-ಆಫ್-ಛಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ೨೭ ಸದಸ್ಯರು ಮತ್ತು ಕಾಸ್ಟ್ ಮತ್ತು ವರ್ಕ್ಸ್ ಅಕೌಂಟ್ಸ್ ಸಂಸ್ಥೆಯ ೪ ಸದಸ್ಯರು ಜೂನ್ ೧೦ ರಿಂದು ೨೦ ರವರೆಗೆ ಲಂಡನ್ನಿನಲ್ಲಿ ನಡೆಯುವ ೬ನೇ ಅಂತರರಾಷ್ಟ್ರೀಯ ಅಕೌಂಟಿಂಗ್ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಹೋಗಲಿರುವರು- ಬ್ರಿಟನ್, ಐರಿಷ್ ರಿಪಬ್ಲಿಕ್‌ಗಳ ವಿವಿಧ ಸಂಸ್ಥೆಗಳ ೧೦೦೦ ಸದಸ್ಯರಲ್ಲದೆ ೨೭ ವಿವಿಧ ರಾಷ್ಟ್ರಗಳಿಂದ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುವರೆಂದು ಗೊತ್ತಾಗಿದೆ.

೬ ತಿಂಗಳೂ ಉಳಿಯುವುದಿಲ್ಲ

ಮದರಾಸ್ ಮತ್ತು ತಿರುವಾಂಕೂರ್ ಕೊಚ್ಚಿನ್‌ನಲ್ಲಿ ಹೊಸದಾಗಿ ರಚಿತವಾದ ಮಂತ್ರಿಮಂಡಲಗಳು ೬ ತಿಂಗಳ ಮೇಲೆ ಉಳಿಯಲಾರವೆಂದು ಕಮ್ಯೂನಿಸ್ಟ್ ನಾಯಕ ಶ್ರೀ ಎ ಕೆ ಗೋಪಾಲನ್ ತಿಳಿಸಿರುವರು.

ಹೈದರಾಬಾದಿನ ಮಂತ್ರಿಮಂಡಲ ಸಹ ದೀರ್ಘಕಾಲ ಉಳಿಯದು. 'ಹೈದರಾಬಾದ್ ಕಾಂಗ್ರೆಸ್ಸಿಗರಲ್ಲಿ ಒಳಜಗಳ ಅಧಿಕವಾಗುತ್ತಿರುವುದೇ ಇದಕ್ಕೆ ಕಾರಣ' ಎಂದೂ ಅವರು ತಿಳಿಸಿರುವರು.

ವುಡ್ ಲ್ಯಾಂಡ್ಸ್

೨೫—೪—೫೨ ರಿಂದ ಜನಭರಿತವಾದ ೩ನೇ ವಾರ

ದಿನವಹಿ ೩ ಆಟಗಳು

- ಬೇತಾಬ್ - (ಹಿಂದಿ)

ಪಾತ್ರ:- ಅಶೋಕ್‌ಕುಮಾರ್, ನಾಸಿಂ, ಮೋತಿಲಾಲ್.

ರೇಷನ್ ಆಫೀಸರ ಕಛೇರಿ ಮೈಸೂರು ನಗರ

ನಂ. ಎ ೨. ೧೪/ ೫೨-೫೩ ತಾ|| ೨೩ನೇ ಏಪ್ರೆಲ್ ೧೯೫೨

ಪ್ರಕಟಣೆ

ಮೈಸೂರು ನಗರದಲ್ಲಿರುವ ಎಲ್ಲಾ ರೇಷನ್ ಡಿಪೋಗಳು, ಸರ್ಕಾರಿ ಸ್ಟೋರ್ಸ್, ಪರಸ್ಪರ ಸಹಾಯ ಸಂಘಗಳು ಮತ್ತು ಮೊಹಲ್ಲಾ ಸಬ್ ಗೋಡೌನ್‌ಗಳು ಆಹಾರ ಧಾನ್ಯವನ್ನ ಕೊಳ್ಳುವವರ ಸೌಕರ್ಯಕ್ಕಾಗಿ, ೧೯೫೨ನೇ ಮೇ ಒಂದನೇ ತಾ|| ನಿಂದ ಭಾನುವಾರದ ಬದಲು ಸೋಮವಾರ ದಿನ ವಾರದ ರಜಾವನ್ನು ಪಡೆಯುತ್ತವೆಯೆಂದು ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

(ಸಹಿ) ಹೆಚ್.ಜಿ. ವಿಜಯರಾಘವರೆಡ್ಡಿ
ರೇಷನ್ ಆಫೀಸರ್ ಮೈಸೂರು ನಗರ.

ಹತೋಟಿಬೆಲೆಗಿಂತ ಕಡಿಮೆ ಬೆಲೆಯಲ್ಲಿ ಬಟ್ಟೆ ಸಿಕ್ಕುತ್ತೆ

ಈ ರಿಯಾಯಿತಿ ಒಂದುವಾರ ಮಾತ್ರ

ಇದೇ 28ನೇ ತಾ|| ಸೋಮವಾರದಿಂದ ಬಿನ್ನಿ ಕೋಟಿಂಗ್, ಲಾಂಗ್ ಕ್ಲಾತ್, ಡಾಂಬಿ, ಅಹಮದಾಬಾದ್ ಮುಂತಾದ ಮತ್ತು ಲೋಕಲ್ ಮಿಲ್ಲುಗಳ ಬಟ್ಟೆಗಳು ದೊರೆಯುತ್ತವೆ.

ಕೆ. ಎಸ್. ಸತ್ಯನಾರಾಯಣರಾವ್
ಕ್ಲಾತ್ ಮರ್ಚೆಂಟ್,
ಚಾಮುಂಡೇಶ್ವರಿ ಟಾಕೀಸ್ ಕೆಳಭಾಗ, ಸಯ್ಯಾಜಿರಾವ್ ರಸ್ತೆ, ಮೈಸೂರು.

ಭಾರತಕ್ಕೆ ಹೋಗುತ್ತೇವೆ

ಪಾಕಿಸ್ಥಾನ ಇಲ್ಲಿಯ ಪ್ರಜೆಗಳಿಗೆ ಅನ್ನಾಹಾರ ಮತ್ತು ಬಟ್ಟೆಯನ್ನು ಕೂಡಲೇ ಸರಬರಾಜು ಮಾಡದಿದ್ದರೆ ನಾವು ಸ್ವತಂತ್ರರೆಂದು ಘೋಷಿಸುತ್ತೇನೆ ಅಥವಾ ಭಾರತಕ್ಕೆ ಎಲ್ಲರೂ ಹೊರಟುಹೋಗುತ್ತೇವೆಂದು ಪಾಕಿಸ್ಥಾನವು ಆಕ್ರಮಿಸಿರುವ ಕಾಶ್ಮೀರ ಪ್ರಾಂತ್ಯದಲ್ಲಿರುವ ನಾಯಕರು ಪಾಕ್ ಸರ್ಕಾರಕ್ಕೆ ಎಚ್ಚರಿಸಿರುವುದಾಗಿ ಹೇಳಲಾಗಿದೆ.

ಪೇಟೆ ಧಾರಣೆ

ಮೈಸೂರು ತಾ|| 28-4-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	12-12	18-12
ಹೊಂಗೆಬೀಜ	,,	8-14	11 8
ಹುರುಳಿ	,,	31-12	33-2
ಹೆಸರು	,,	55-12	60-8
ಮೆ. ಕಾಯಿ	ಮಣಕ್ಕೆ	10-0	14-12
ಹುಣಸೇಹಣ್ಣು	,,	2-14	3-6
ಸೀಗೆಕಾಯಿ	,,	2-15	3-5
ತೆಂಗಿನಕಾಯಿ	1100ಕ್ಕೆ	177	217

ಚಿನ್ನ ಬೆಳ್ಳಿ ದರಗಳು

28-4-52	ರೂ.
ಸವರನ್	65-14
,,	66-0
ಚಿನ್ನ ತೊಲ	95-4
,, ಮೂಸ	94-4
ಬೆಳ್ಳಿ 100 ತೊಲ	168-0
,, ತೊಲ	1-12

ನ್ಯೂ ಆಪೇರ

ಜನಭರಿತವಾದ ೨೭-೪-೫೨ ರಿಂದ ಮೂರನೇ ವಾರ

* ಕುಮಾರಿ * (ತಮಿಳು)

ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜಿನಿ (ಜೂ), ಶಾಮು, ದೊರೆರಾಜ್, ಪುಳಿಮೊಟ್ಟೈ.

ರಣಜಿತ್

೨೫-೪-೫೨ರಿಂದ ಅಮೋಘ ೨ನೇ ವಾರ

- ಸಂಯ್ಯಾ -

ಪಾತ್ರ:-ಮಧುಬಾಲ, ಸಜ್ಜನ್, ಅಜಿತ್, ಲೀಲಾಚಿಟ್ನಿಸ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೮೦೫) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨]೩೦-೪—೧೯೫೨ನೇ ಬುಧವಾರ [ಸಂಚಿಕೆ ೨೦೫

ಮಧ್ಯಮ ಮತ್ತು ಒರಟು ಬಟ್ಟೆ ಬೆಲೆಯಲ್ಲಿ ಇಳಿತಾಯ

ಕೇಂದ್ರ ಸಚಿವ ಗಾಡ್ಗಿಲ್‌ರ ಮೇಲೆ ಆಕ್ರಮಣ ಯತ್ನ

ಕೆಲವು ವಿಧದ ಮಧ್ಯಮ ಮತ್ತು ಮತ್ತು ಒರಟು ಬಟ್ಟೆಗಳ ಬೆಲೆಯನ್ನು ಶೇಕಡ ೫ ರಿಂದ ೨೪ ರವರೆಗೆ ಇಳಿಸಿ ಭಾರತ ಸರ್ಕಾರವು ಒಂದು ಪ್ರಕಟಣೆಯಿತ್ತಿದೆ. ಈ ಇಳಿತಾಯವು ಮೇ ಒಂದನೇ ತಾರೀಖಿನಿಂದ ಒಂದು ತಿಂಗಳು ಕಾಲ ಜಾರಿಯಲ್ಲಿರುತ್ತದೆ. ಮೇ ಮಾಹೆಯಾದನಂತರ ಪುನಃ ಬೆಲೆ ಪರಿಶೀಲನೆ ನಡೆಯುತ್ತದೆ.

ಕಾಂಗ್ರೆಸ್ ಪ್ರತಿನಿಧಿಗಳ ಉಪಚುನಾವಣೆ

ಮೈಸೂರು ಏ ೩೦

ಈದಿನ ೧೧ ಘಂಟೆಯಿಂದ ಮಧ್ಯಾಹ್ನ ೪ ಘಂಟೆಯ ವರೆಗೆ ದೊಡ್ಡಗಡಿಯಾರದ ಚೌಕದ ಬಳಿ ಇರುವ ಜಿಲ್ಲಾ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ನಡೆಯುವ ಉಪಚುನಾವಣೆಗೆ ಸ್ಪರ್ಧಿಸಿದ್ದ ಶ್ರೀ ಹೆಚ್. ಸಿ. ದಾಸಪ್ಪನವರು ಮೈಸೂರು ತಾಲ್ಲೂಕಿನಿಂದಲೂ, ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಹೆಗ್ಗಡದೇವನಕೋಟೆಯಿಂದಲೂ, ಶ್ರೀ ಎಂ. ಎಲ್ ಸಂಜರಾಜೆ ಅರಸಿನವರು ಚಾಮರಾಜನಗರದಿಂದಲೂ ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿರುತ್ತಾರೆ ಉಳಿದ ಕ್ಷೇತ್ರಗಳಲ್ಲಿ ಅವರು ಸ್ಪರ್ಧಿಸಿರುವರು.

ಡಾ|| ಬಿ. ಕೆ. ರಾಮಕೃಷ್ಣ ರಾಯರ ನಿಧನ

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಕೆಲವು ವರ್ಷಗಳಿಂದ ಡಾಕ್ಟರಾಗಿದ್ದ ಡಾ|| ಬಿ. ಕೆ. ರಾಮಕೃಷ್ಣರಾಯರು ನಿನ್ನೆ ರಾತ್ರಿ ಹೃದಯಕ್ರಿಯೆ ನಿಂತು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಅವರು ನಿನ್ನೆ ರಾತ್ರಿ ಎರಡನೇ ಸಿನಿಮಾ ಪ್ರದರ್ಶನಕ್ಕೆ ಹೋಗಿಬಂದು ಮಲಗಿದರೆಂದೂ ಹಠಾತ್ತನೆ ಹೃದಯವೇದನೆಯು ಪ್ರಾರಂಭವಾಗಿ ನಿಧನರಾದರೆಂದು ತಿಳಿದುಬರುತ್ತದೆ.

ನಗರದಲ್ಲಿರುವ ಅವರ ಮಿತ್ರರೆಲ್ಲರೂ ಅವರ ಭವನಕ್ಕೆ ತೆರಳಿ ಅಂತ್ಯಗೌರವವನ್ನು ಸಲ್ಲಿಸಿದರು. ಅವರ ಆತ್ಮಕ್ಕೆ ಶಾಂತಿಯಾಗಲೆಂದು ಕೋರುತ್ತೇವೆ.

ನುಗುಜಲಾಶಯ ಪರಿಶೀಲನೆ

ಮೈಸೂರು ಏ ೨೯

ಮೈಸೂರು ಸಂಸ್ಥಾನದ ಮರಾಮತ್ ಶಾಖೆಯ ತಾಂತ್ರಿಕ ಸಲಹಾಸಮಿತಿಯ ಸದಸ್ಯರು ಮತ್ತು ಸಮಿತಿಯ ಅಧ್ಯಕ್ಷರಾದ ಮರಾಮತ್ ಶಾಖಾಸಚಿವ ಶ್ರೀ ಕಡಿದಾಳ ಮಂಜಪ್ಪನವರು ಈದಿನ ಬೆಳಗ್ಗೆ ಕಪಿನಿನದಿಗೆ ಹೊಸದಾಗಿ ಅಣೆಕಟ್ಟು ಕಟ್ಟಬೇಕಾಗಿರುವ ಸ್ಥಳವ ಮತ್ತು ನುಗು ಜಲಾಶಯದಲ್ಲಿ ನಡೆಯುತ್ತಲಿರುವ ಕಾರ್ಯಕಲಾಪಗಳನ್ನು ಪರಿಶೀಲಿಸಿಕೊಂಡು ಬಂದರು.

ನಾಳೆ ಬೆಳಗ್ಗೆ ಅವರು ಕೃಷ್ಣರಾಜಸಾಗರಕ್ಕೆ ಭೇಟಿಕೊಡಲಿರುವರು.

ಸಚಿವರ ಮೇಲೆ ಆಕ್ರಮಣ

ಕೇಂದ್ರ ಸರ್ಕಾರದ ಉದ್ಯಮ ಮತ್ತು ಉತ್ಪಾದನಾ ಶಾಖಾ ಸಚಿವ ಶ್ರೀ ಎನ್. ವಿ ಗಾಡ್ಗಿಲ್‌ರವರು ಮೊನ್ನೆ ರಾತ್ರಿ, ಬೊಂಬಾಯಿನಿಂದ ಹೈದರಾಬಾದಿಗೆ ಮದ್ರಾಸ್ ಮೇಲ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾಗ, ಬೊಂಬಾಯಿಗೆ ೨೦೦ ಮೈಲಿ ದೂರದಲ್ಲಿ ಆಗುಂತುಕರಿಬ್ಬರು ಇವರ ಗಾಡಿಯೊಳಕ್ಕೆ ಪ್ರವೇಶಿಸಿ ಮಲಗಿದ್ದವರನ್ನು ಕೆಳಗೆಳೆದು ಹಣ ಕೇಳಿದರೆಂದೂ ಅವರು ಕೊಡಲು ನಿರಾಕರಿಸಲು ಅವರಿಗೆ ಚಾಕು ತೋರಿಸಿ ಮುಂಗೈ ಗಾಯವಾಗಿ, ಕೈಕಾಲು ಕಟ್ಟಿ ಅವರ ಬಳಿಯಿದ್ದ ಕೈಗಡಿಯಾರ, ಪೋರ್ಟ್‌ಫೋಲಿಯೋ ಮತ್ತು ಸ್ವಲ್ಪ ಹಣವನ್ನು ಕಸಿದುಕೊಂಡು ರೈಲು ನಿಧಾನವಾಗಿ ಹೋಗುತ್ತಿದ್ದಾಗ ರೈಲಿನಿಂದ ಹಾರಿ ಹೊರಟುಹೋದರೆಂದೂ, ಕುರುದುವಾಡಿ ಎಂಬ ರೈಲ್ವೆ ನಿಲ್ದಾಣದಲ್ಲಿ ಶ್ರೀ ಗಾಡ್ಗಿಲ್‌ರವರಿಗೆ ಚಿಕಿತ್ಸೆ ನಡೆದ ಮೇಲೆ ಅವರು ಸುರಕ್ಷಿತವಾಗಿ ಪ್ರಯಾಣ ಮಾಡಿದರೆಂದು ಗೊತ್ತಾಗಿದೆ. ಈ ಘಟನೆಯಿಂದ ರೈಲು ಎರಡುಗಂಟೆ ಕಾಲ ನಿಲ್ಲಿಸಲಾಗಿತ್ತು.

ಎರಡನೇ ತಂಡದ ದಸ್ತಗಿರಿ

ಸಿಂಹಳದಲ್ಲಿ ನಿನ್ನೆಯದಿನ ಸತ್ಯಾಗ್ರಹ ಪ್ರಾರಂಭವಾದ ಎರಡನೇ ದಿನ. ೫೦ ಜನರ ಎರಡನೇ ತಂಡವು ನಿನ್ನೆ ಸತ್ಯಾಗ್ರಹಾರಂಭಿಸಿ ಮುಖ್ಯಮಂತ್ರಿಗಳ ಅಧಿಕೃತ ಕಛೇರಿ ಕಡೆ ಹೊರಡಲು ಅವರನ್ನೆಲ್ಲಾ ಪೋಲೀಸಿನವರು ದಸ್ತಗಿರಿ ಮಾಡಿ ಎಲ್ಲಿಗೋ ತಿಳಿಯದ ಸ್ಥಳಕ್ಕೆ ಕರೆದೊಯ್ದರೆಂದು ಹೇಳಲಾಗಿದೆ.

ಸಿಂಹಳದಲ್ಲಿ ಭಾರತದ ರಾಯಭಾರಿಯಾಗಿದ್ದ ಶ್ರೀ ವಿ. ವಿ ಗಿರಿಯವರು ಈ ವಿಷಯದಲ್ಲಿ ಮಾತನಾಡುತ್ತಾ, ಸಿಂಹಳದಲ್ಲಿರುವ ಭಾರತೀಯರಿಗೆಲ್ಲಾ ಅಲ್ಲಿಯ ಸರ್ಕಾರವು ಮತದಾನ ನೀಡುವ ಹಕ್ಕನ್ನು ಕಲ್ಪಿಸಿಕೊಡಬೇಕು. ಅವರಿಗಿರುವ ಹಕ್ಕನ್ನು ಮೊಟುಕು ಮಾಡಬಾರದು. ಈ ವಿಷಯದಲ್ಲಿ ಭಾರತ, ಸಿಂಹಳ ಸರ್ಕಾರದ ಪ್ರತಿನಿಧಿಗಳು ಒಟ್ಟಿಗೆ ಸೇರಿ ಕೂಡಲೇ ಒಂದು ತೀರ್ಮಾನಕ್ಕೆ ಬರುವುದು ಉತ್ತಮವೆಂದು ಹೇಳಿರುವರು.

ಹೊಡೆದಾಟ

ಜಾವಾದಲ್ಲಿ ೨೦೦ ಮಂದಿ ಸಶಸ್ತ್ರ ದಂಗೇಕೋರ ಗುಂಪಿನವರಿಗೂ ಸೈನಿಕರಿಗೂ ನಡೆದ ಹೊಡೆದಾಟದಲ್ಲಿ ೫೦ ಜನ ಸತ್ತರೆಂದು ಸೈನ್ಯದ ವಕ್ತಾರರು ತಿಳಿಸಿದ್ದಾರೆ.

ಜಪಾನಿನೊಡನಿದ್ದ ಸಂಗ್ರಾಮ ರದ್ದು

ಭಾರತಸರ್ಕಾರ ಒಂದು ವಿಶೇಷಪ್ರಭುತ್ವಾಜ್ಞೆ ಹೊರಡಿಸಿ ನಿನ್ನೆಯಿಂದ ಜಪಾನಿನೊಡನಿದ್ದ ಸಂಗ್ರಾಮ ಪರಿಸ್ಥಿತಿಯನ್ನು ಕೊನೆಗಾಣಿಸಿದೆ. ಇದೇ ಪ್ರಕಟಣೆಯಲ್ಲಿ ತಾನು ಜಪಾನಿನೊಡನೆ ಆದಷ್ಟು ಶೀಘ್ರವಾಗಿ ಒಂದು ಪ್ರತ್ಯೇಕ ಶಾಂತಿ ಒಪ್ಪಂದ ಮಾಡಿಕೊಳ್ಳಲಿರುವುದಾಗಿ ಭಾರತಸರ್ಕಾರ ತಿಳಿಸಿದೆ ಈ ಒಪ್ಪಂದವಾದನಂತರಸಂಗ್ರಾಮಪರಿಸ್ಥಿತಿ ಘೋಷಣೆಯ ಪೂರ್ವ ಭಾರತೀಯ ಮತ್ತು ಜಪಾನೀಯರಲ್ಲಿದ್ದ ಸ್ನೇಹ ಸೌಹಾರ್ದತೆ ನೆಲೆಗೊಳ್ಳುತ್ತದೆ.

ಜ|| ರಿಡ್ಜ್‌ವೇ ಯೂರೋಪಿನ ಮಹಾ ದಂಡನಾಯಕ

ಯೂರೋಪಿನಲ್ಲಿ ಮಿತ್ರರಾಷ್ಟ್ರಗಳ ಮಹಾ ದಂಡನಾಯಕರನ್ನಾಗಿ ಜ|| ರಿಡ್ಜ್‌ವೇಯವರನ್ನು ಅಧ್ಯಕ್ಷ ಟ್ರೂಮನ್ನರು ಜ|| ಐಸನ್ ಹೋವರ್‌ರವರ ಸ್ಥಾನದಲ್ಲಿ ನೇಮಿಸಿದ್ದಾರೆ.

ಜ|| ರಿಡ್ಜ್‌ವೇಯವರ ಸ್ಥಾನದಲ್ಲಿ ಜ|| ಮಾರ್ಕ್‌ಕ್ಲಾರ್ಕ್‌ರವರನ್ನು ಕೊರಿಯಾದಲ್ಲಿ ವಿಶ್ವಸೈನ್ಯಗಳ ದಂಡನಾಯಕರನ್ನಾಗಿ ನೇಮಿಸಲಾಗಿದೆ

೩ ಕೋಟಿ ರೂ. ಸಬ್ಸಿಡಿ

ತಿರುವಾಂಕೂರು-ಕೊಚ್ಚಿ ಸರ್ಕಾರಕ್ಕೆ ೧೯೫೨-೫೩ ನೇ ಸಾಲಿಗೆ ಭಾರತ ಸರ್ಕಾರವು ೩ ಕೋಟಿ ರೂ ಆಹಾರ ಸಬ್ಸಿಡಿ ಮಂಜೂರು ಮಾಡಿದೆ.

ಎನ್. ಜಿ. ಓ. ಗಳಿಗೆ ಸೌಲಭ್ಯ

ನಾನ್ ಗಜೆಟೆಡ್ ನೌಕರರಿಗೆ ಉಚಿತ ವೈದ್ಯಕೀಯ ಸೌಲಭ್ಯ ಕಲ್ಪಿಸಿಕೊಡುವ ವಿಷಯ ಮದ್ರಾಸ್ ಸರ್ಕಾರದ ಪರ್ಯಾಲೋಚನೆಯಲ್ಲಿದೆ ಎಂದು ತಿಳಿದುಬಂದಿದೆ.

ಚುನಾವಣಾ ತಕರಾರು

ಪ್ರಾಂತ್ಯ ಶಾಸನಸಭೆಗಳಿಗೆ ಸಂಬಂಧಪಟ್ಟಂತೆ ೧೯೩, ಕೇಂದ್ರ ಶಾಸನಸಭೆಗೆ ಸಂಬಂಧಪಟ್ಟಂತೆ ೨೩ ತಕರಾರು ಅರ್ಜಿಗಳು ಇಲ್ಲಿಯವರೆಗೆ ಹಾಜರ್ಪಡಿಸಲಾಗಿದೆ-

ಇವುಗಳ ತೀರ್ಮಾನಕ್ಕಾಗಿ ಈಗಾಗಲೇ ೧೬ ನ್ಯಾಯಾಲಯಗಳನ್ನು ವಿವಿಧ ಪ್ರದೇಶಗಳಲ್ಲಿ ನೇಮಿಸಲಾಗಿದೆ. ಇನ್ನೂ ಕೆಲವು ನೇಮಕವಾಗಲಿದೆಯೆಂದು ಗೊತ್ತಾಗಿದೆ.

ಬಟ್ಟೆ ಹತೋಟಿಯಲ್ಲಿ ಸಡಿಲ

ಮೈಸೂರು ಸಂಸ್ಥಾನದ ಸಿವಿಲ್ ಸಪ್ಲೈಸ್ ಕಂಟ್ರೋಲರ್‌ರವರು, ಸಂಸ್ಥಾನದಲ್ಲಿರುವ ಹೋಲ್‌ಸೇಲ್ ಬಟ್ಟೆ ವರ್ತಕರು ಮೈಸೂರು ಮತ್ತು ಮಿನರ್ವಮಿಲ್ಸ್‌ನ ಬಟ್ಟೆಗಳನ್ನು ಪ್ರಮಾಣ ನಿರ್ಬಂಧವಿಲ್ಲದಂತೆ ಚಿಲ್ಲರೆ ವ್ಯಾಪಾರಿಗಳಿಗೆ ಹಂಚಲು ಅನುಮತಿ ಇತ್ತಿದ್ದಾರೆ.

ಶ್ರೀ ಮುನ್ಷಿ ಬೊಂಬಾಯಿಗೆ

ಬೆಂಗಳೂರು ಏ. ೨೮

ಭಾರತ ಆಹಾರ ಸಚಿವ ಶ್ರೀ ಮುನ್ಷಿಯವರು ಬೆಂಗಳೂರಿನಲ್ಲಿ ತಮ್ಮ ಕಾರ್ಯಕಲಾಪಗಳನ್ನು ಮುಗಿಸಿಕೊಂಡು ಬೊಂಬಾಯಿಗೆ ತೆರಳಿದರು.

ರೇಸ್ ಕ್ಲಬ್ಬಿನ ಕಾರ್ಯದರ್ಶಿ

ಬೆಂಗಳೂರು ರೇಸ್ ಕ್ಲಬ್ಬಿನ ಪೂರ್ಣಕಾಲದ ಕಾರ್ಯದರ್ಶಿಯಾಗಿ [ಹೋಲ್ ಟೈಂ ಸೆಕ್ರಟರಿ] ಕರ್ನಲ್ ಡಿ. ಸಿ. ನಂಜರಾಜ ಬಹದ್ದೂರ್‌ರವರು ನಿನ್ನೆಯಿಂದ ಅಧಿಕಾರ ವಹಿಸಿಕೊಂಡಿದ್ದಾರೆ.

ಓಟಿನ ಎಣಿಕೆ

ಮೈಸೂರು ಏ. ೨೯

ಮೈಸೂರು ಹಿರಿಯ ಶಾಸನಸಭೆಗೆ ಪದವೀಧರ ಕ್ಷೇತ್ರದ ಓಟಿನ ಎಣಿಕೆಯು ೩೦ ದಿನದಿಂದ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರಿಂದ ಪ್ರಾರಂಭವಾಗಿದೆ. ನಾಳೆಯೂ ಎಣಿಕೆ ನಡೆದು ಸಂಜೆ ವೇಳೆಗೆ ಫಲಿತಾಂಶ ಹೊರಬೀಳುವುದು- ಶ್ರೀಗಳಾದ ಟಿ. ಎಸ್. ರಾಜಗೋಪಾಲಯ್ಯಂಗಾರ್, ಗಾಂಜಿ ವೀರಪ್ಪನವರುಗಳೂ, ಶ್ರೀಮತಿ ತ್ರಿಪುರಸುಂದರಮ್ಮ ಅಥವಾ ಶ್ರೀ ಎ. ಎನ್. ಸುಬ್ಬರಾವ್‌ರವರು ಜಯಗಳಿಸುವರೆಂದು ಊಹಿಸಲಾಗಿದೆ.

"ಬೆಂಗಳೂರು ಚಲೋ"

ಮೈಸೂರು ಏ. ೨೯

ತಾ|| ೨೮-೪-೫೨ನೇ ಸೋಮವಾರ ಮೈಸೂರು ಟೌನ್‌ಹಾಲಿನಲ್ಲಿ ನಡೆದ 'ಮೈಸೂರು ರೇಷನ್‌ದಾರರ ಸಂಘ' ದ ಬಹಿರಂಗ ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕೃತವಾದ ನಿರ್ಣಯ ಮತ್ತು ಮನವಿ—

ಸರ್ಕಾರದವರು ರೇಷನ್ ಧಾನ್ಯಗಳ ಬೆಲೆಯನ್ನು ಏರಿಸಿರುವುದರಿಂದ ಇಡೀ ಸಂಸ್ಥಾನದ ಬಡಪ್ರಜೆಗೆ ಅತಿ ಕಷ್ಟಪ್ರಾಪ್ತವಾಗಿದೆಯಾಗಿ ಈ ಸಂಘದವರು ತಾ|| ೧೫-೪-೫೨ರ ರಾತ್ರಿ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿಮಾಡಿ ರೇಷನ್ ಧಾನ್ಯಗಳ ಬೆಲೆಯನ್ನು ಇಳಿಸಬೇಕೆಂದು ಪ್ರಾರ್ಥಿಸಿದೆವು. ಅನಂತರ ತಾರೀಖು ೧೮-೪-೫೨ರ ಬಹಿರಂಗ ಸಭೆಯಲ್ಲಿ ರೇಷನ್ ಧಾನ್ಯಗಳ ಬೆಲೆಯನ್ನು ಇಳಿಸಬೇಕು ಮತ್ತು ಪಡಿತರಪದ್ಧತಿ ಜಾರಿಯಲ್ಲಿರುವ ನಗರಗಳ್ಲೂ ಸರ್ಕಾರವು ಕೊಡುತ್ತಿರುವ ಪಡಿತರದಲ್ಲಿ ಕಡಮೆಬೀಳುವುದನ್ನು ಫ್ರೀಮಾರ್ಕೆಟ್ಟಿನಲ್ಲಿ ಕೊಳ್ಳಲು, ಮಾಂಸಾಟವಾಗಲು ಅವಕಾಶಕಲ್ಪಿಸಬೇಕೆಂದು ನಿರ್ಣಯವನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿದೆವು. ಸದರಿ ನಿರ್ಣಯದಲ್ಲಿ ಸೂಚಿಸಿದ್ದಂತೆ ಒಂದುವಾರ ಕಳೆದರೂ ಸರ್ಕಾರದಿಂದ ಯಾವ ಉತ್ತರವೂ ಬಾರದೆ ಇರುವುದರಿಂದ, ಈ ವಿಚಾರದಲ್ಲಿ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡಲು ತಾರೀಖು ೨-೫-೫೨ನೇ ಶುಕ್ರವಾರ ಬೆಳಗ್ಗೆ 'ಚಾಮುಂಡಿ ಎಕ್ಸ್‌ಪ್ರೆಸ್' ರೈಲಿನಲ್ಲಿ 'ಬೆಂಗಳೂರು ಚಲೋಜಾತ' ವನ್ನು ಕೈಕೊಳ್ಳಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತೆ. ಈ ಕಾರ್ಯಕ್ರಮಕ್ಕೆ ಮೈಸೂರು ನಗರದವರೂ ಮತ್ತು ಸಂಸ್ಥಾನದ ಎಲ್ಲಾ ಪಕ್ಷದವರೂ, ಪ್ರಜಾ ಮುಖಂಡರೂ, ಪ್ರತಿನಿಧಿಗಳೂ, ಬಡವರೂ, ರೈತರೂ, ಕೂಲಿಕಾರರೂ ಮತ್ತಿತರ ಸಾರ್ವಜನಿಕರೂ ಸಹಕರಿಸಬೇಕಾಗಿ ಸಂಘದ ಕಾರ್ಯದರ್ಶಿಯವರು ಕೋರುತ್ತಾರೆ.

೧೭೬ ಮಂದಿ ಪತ್ತೆಯಿಲ್ಲ

ಅಮೆರಿಕಾದ ಯುದ್ಧಶಾಖೆಗೆ ಸೇರಿದ 'ಹಾಪ್‌ಸನ್' ಎಂಬ ಯುದ್ಧ ಹಡಗೊಂದು ಅಟ್ಲಾಂಟಿಕ್ ಸಾಗರದಲ್ಲಿ ಇನ್ನೊಂದು ಹಡಗಿಗೆ ಡಿಕ್ಕಿಹೊಡೆದು 'ಹಾಪ್‌ಸನ್' ಎಂಬ ಯುದ್ಧ ಹಡಗು ಮುಳುಗಿಹೋಯಿತು. ಅದರಲ್ಲಿದ್ದ ೧೭೬ ಜನರು ಪತ್ತೆಯಿಲ್ಲವೆಂದು ಹೇಳಲಾಗಿದೆ.

ಸ್ವತಂತ್ರ ರಾಷ್ಟ್ರವಾಯಿತು

ಯುದ್ಧಸಂಸ್ಥಿತಿ ಮುಕ್ತಾಯವಾದುದರಿಂದ ಮೊನ್ನೆಯಿಂದ ಜಪಾನ್‌ರಾಷ್ಟ್ರವು ಒಂದು ಸ್ವತಂತ್ರರಾಷ್ಟ್ರದ ಸ್ಥಾನವನ್ನು ಪಡೆಯಿತು.

ಧ್ಯೇಯವನ್ನು ಸಾಧಿಸಲು ಸಹಕಾರ ಅವಶ್ಯಕ

ಫಿಲಡೆಲ್ಫಿಯ ಏ ೨೭

ಸ್ವತಂತ್ರ ಜನಾಂಗಗಳು ತಮ್ಮ ಧ್ಯೇಯವನ್ನು ಸಾಧಿಸಲು ಇತರ ದೇಶಗಳೊಂದಿಗೆ ಸಹಕಾರ ಮನೋಭಾವನೆಯನ್ನು ತೋರಿಸಬೇಕು, ಅವರ ಶಕ್ತಿಯಲ್ಲಿ ಅವರಿಗೆ ನಂಬಿಕೆ ಇರಬೇಕು, ಎಂದು ಅಮೆರಿಕನ್ ಅಕ್ಯಾಡೆಮಿ ಆಫ್ ಪೊಲಿಟಿಕಲ್ ಸೈನ್ಸಿನ ೫೬ನೇ ವಾರ್ಷಿಕ ಸಮ್ಮೇಳನದಲ್ಲಿ ರಾಜಕೀಯ ತಜ್ಞರು ಅಭಿಪ್ರಾಯಪಟ್ಟರು.

ಪರಸ್ಪರ ರಕ್ಷಣೆಯ ತತ್ವದಲ್ಲಿ ಅಮೆರಿಕವು ನಂಬಿಕೆಯನ್ನಿಟ್ಟಿರುವುದರಿಂದ, ಅಮೆರಿಕವು ರಾಷ್ಟ್ರೀಯ ಮತ್ತು ಸೇವಾ ಮನೋಭಾವದಿಂದ ಸಹಾಯ ಮಾಡುತ್ತಿದೆ, ಎಂದು ಅಂಬಾಮಾದ ಸೆನೆಟರ್ ಜಾನ್ ಸ್ಪಾರ್ಕ್‌ಮನ್ನರು ತಿಳಿಸಿದರು

ಅಮೆರಿಕದಲ್ಲಿ ಐರ್ಲೆಂಡಿನ ರಾಯಭಾರಿಗಳಾದ ಸರ್ ಸಿ. ಸ್ಪೆಂಡರ್‌ರವರು ಮಾತನಾಡುತ್ತಾ, ಉತ್ತರ ಅಟ್ಲಾಂಟಿಕ್ ಒಪ್ಪಂದ ಸಮ್ಮೇಳನ ಪ್ರಪಂಚದ ರಕ್ಷಣೆಯ ತಳಲಕ್ಕೆ ಆಗಿದೆ, ಎಂದರು.

ಬೆಲ್ಜಿಯಂ ಮಾಜಿ ಮುಖ್ಯಮಂತ್ರಿ, ಪಾಲ್‌ಹೆನ್ರಿಸ್ಪಾಕ್‌ರು, ಇರಾನಿನ ಡಾ|| ಎನ್. ಸಾಯಿ'ಘೋರ' ಫಾತೆಮಿಂವರು ಡಾ|| ನಾರ್ಮನ್ ಥಾಮಸ್ ಮುಂತಾದವರು ಪರಸ್ಪರ ರಕ್ಷಣೆಯ ಕುರಿತು ಮಾತನಾಡಿದರು.

ಭಾರತದ ರಾಯಭಾರಿಗಳಾದ ಶ್ರೀ ಬಿನಯರಂಜನ ಸೇನರು ಈ ಸಮ್ಮೇಳನದಲ್ಲಿ ಭಾಗವಹಿಸಿ ಮಾತನಾಡಿದರು.

ಮುಖ್ಯಮಂತ್ರಿಗಳ ಸತ್ಕಾರಕೂಟ

ಬೆಂಗಳೂರು ಏ ೨೯

ಏ ಐ ಟಿ ಯು ಸಿ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಿನ್ನೆದಿನ ಸಂಜೆ ರೆಸಿಡೆನ್ಸಿ ಭವನದಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು (ಸೀತಾವಿಲಾಸ ಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. **ವ್ಯವಸ್ಥಾಪಕ.**

ರಾಜೀನಾಮೆ

ಮದರಾಸ್ ತಮಿಳುನಾಡು ಟಾಯಿಲರ್ಸ್ ಪಕ್ಷದವರ ಶಾಸನಸಭೆಗೆ ಚುನಾಯಿತರಾಗಿರುವ ಶ್ರೀ ಸಿ. ಸುಬ್ರಹ್ಮಣ್ಯಂರವರು ಆ ಪಕ್ಷಕ್ಕೆ ರಾಜೀನಾಮೆಯಿತ್ತಿದ್ದಾರೆ.

ಪೇಟೆ ಧಾರಣೆ

ಮೈಸೂರು ತಾ|| 29-4-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	13-12	18-85
ಹೊಂಗೆಬೀಜ ,,	10-0	11.4
ಹುರುಳಿ ,,	31-14	33-2
ಹಸರು ,,	55-0	——
ಮೆ. ಕಾಯಿ ಮಣಕ್ಕೆ	10-2	14-0
ಹುಣಸೇಹಣ್ಣು ,,	2-14	3-6
ಸೀಗೆಕಾಯಿ ,,	2-15	3-6
ತೆಂಗಿನಕಾಯಿ 1100ಕ್ಕೆ	79	201

ಚಿನ್ನ ಬೆಳ್ಳಿ ದರಗಳು

29-4-52	ರೂ.
ಸವರನ್	66-4
,,	66-6
ಚಿನ್ನ ತೊಲ	96-8
,, ಮೂಸ	94-0
ಬೆಳ್ಳಿ 100 ತೊಲ	172-0
,, ತೊಲ	1-13

ರೇಷನ್ ಅಫೀಸರ ಕಛೇರಿ ಮೈಸೂರು ನಗರ

ನಂ. ಎ ೨. ೧೪/ ೫೨-೫೩ ತಾ|| ೨೩ನೇ ಏಪ್ರಿಲ್ ೧೯೫೨

ಪ್ರಕಟಣೆ

ಮೈಸೂರು ನಗರದಲ್ಲಿರುವ ಎಲ್ಲಾ ರೇಷನ್ ಡಿಪೋಗಳು, ಸರ್ಕಾರಿ ಸ್ಟೋರ್ಸ್, ಪರಸ್ಪರ ಸಹಾಯ ಸಂಘಗಳು ಮತ್ತು ಮೊಹಲ್ಲಾ ಸಬ್ ಗೋಡೌನ್‌ಗಳು ಆಹಾರಧಾನ್ಯವನ್ನ ಕೊಳ್ಳುವವರ ಸೌಕರ್ಯಕ್ಕಾಗಿ ೧೯೫೨ನೇ ಮೇ ಒಂದನೇ ತಾ|| ನಿಂದ ಭಾನುವಾರದ ಬದಲು ಸೋಮವಾರ ವಾರದ ರಜಾವನ್ನು ಪಡೆಯುತ್ತವೆಯೆಂದು ಈ ಮೂಲಕ ಸರ್ವರಿಗೂ ತಿಳಿಸಲಾಗಿದೆ.

(ಸಹಿ) ಹೆಚ್. ಜಿ. ವಿಜಯರಾಘವರೆಡ್ಡಿ

ರೇಷನ್ ಆಫೀಸರ್ ಮೈಸೂರು ನಗರ

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.

ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.

*

ಹೆಚ್ಚಿನ ವಿವರಗಳಿಗೆ ಬರೆಯಿರಿ—

ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

ವುಡ್ ಲ್ಯಾಂಡ್ಸ್

2—5—52ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವಹಿ 3 ಆಟಗಳು

"ಲಕ್ಷ್ಮೀ ನಾರಾಯಣ್" (ಹಿಂದಿ)

ಪಾತ್ರ:—ಮೀನಾಕುಮಾರಿ ಮಹಿಪಾಲ್

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮ ಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೮೦೯) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧-೫-೧೯೫೨ನೇ ಗುರುವಾರ [ಸಂಚಿಕೆ ೨೦೩

ರಾಯಲು ಸೀಮೆಯಲ್ಲಿ ಪರಿಹಾರ ಕಾರ್ಯಕ್ಕಾಗಿ ಒಂದು ಕೋಟಿ ೭೩ ಲಕ್ಷ ರೂಪಾಯಿ

ರಾಯಲುಸೀಮೆಯಲ್ಲಿ ಸುಮಾರು ಒಂದುಕೋಟಿ ೭೯ ಲಕ್ಷ ರೂಪಾಯಿಗಳನ್ನು ಪರಿಹಾರಕಾರ್ಯಕ್ಕಾಗಿ ಸರ್ಕಾರದಿಂದಲೂ ಪ್ರಧಾನಿಯವರ ಪರಿಹಾರನಿಧಿಯಿಂದ ಸುಮಾರು ೪ ಲಕ್ಷ ರೂಗಳನ್ನೂ ವೆಚ್ಚಮಾಡಲಾಗಿದೆ. ಈಗಾಗಲೇ ಸುಮಾರು ಒಂದುಲಕ್ಷ ವ್ಯವಸಾಯಕಾರ್ಮಿಕರಿಗೆ ರಸ್ತೆರಚನೆ ಮುಂತಾದ ಕಾರ್ಯಗಳಲ್ಲಿ ಕೆಲಸ ಒದಗಿಸಲಾಗಿದೆ. ಸುಮಾರು ೩ ಲಕ್ಷ ಜನರಿಗೆ ಉಚಿತವಾಗಿ ಗಂಜಿಯನ್ನು ಹಂಚಲಾಗುತ್ತಿದೆಯೆಂದು ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ತಿಳಿಸಿರುವರು.

ಉಪಚುನಾವಣೆ

ಮೈಸೂರು ಏ. ೩೦

ಪ್ರದೇಶ ಕಾಂಗ್ರೆಸ್ ಸಮಿತಿಯ ಚೆಲಿಗೇಟಾಗಿ ಹೆಗ್ಗಡದೇವನಕೋಟೆಯಿಂದ ಶ್ರೀ ಹೆಚ್. ಸಿ. ದಾಸಪ್ಪನವರೂ, ಚಾಮರಾಜನಗರದಿಂದ ಶ್ರೀ ನಾಗರಾಜ್‌ರೂ ಅವಿರೋಧವಾಗಿ ಚುನಾಯಿತರಾದರು. ಅಲ್ಲಿ ಸ್ಪರ್ಧಿಸಿದ್ದ ಶ್ರೀಗಳಾದ ಪುಟ್ಟಸ್ವಾಮಿ ಮತ್ತು ಹೆಚ್. ಎಂ. ಚನ್ನಬಸಪ್ಪನವರು ತಮ್ಮ ಉಮೇದುವಾರಿಕೆಗಳನ್ನು ಹಿಂದಕ್ಕೆ ತೆಗೆದುಕೊಂಡರು.

ಮೈಸೂರು ತಾಲ್ಲೂಕಿನಿಂದ ಶ್ರೀ ಎಂ. ಎಲ್. ಸಂಜೀವರಾಜೇ ಅರಸಿನವರು ಚುನಾಯಿತರಾದರು.

"ಮೇ ದಿನಾಚರಣೆ"

ಹಿಂದೀ ಕಮ್ಯೂನಿಸ್ಟ್ ಪಾರ್ಟಿಯ ಮೈಸೂರು ಜಿಲ್ಲಾ ಸಂಘಟನಾ ಸಮಿತಿಯ ಆಶ್ರಯದಲ್ಲಿ ಆದಿನ 'ಮೇ ದಿನಾಚರಣೆ'ಯನ್ನು ಆಚರಿಸಲಾಗುವುದು- ಈ ಸಂಬಂಧದಲ್ಲಿ ಬೆಳಗ್ಗೆ ಪ್ರಭಾತಭೇರಿ ಮತ್ತು ಧ್ವಜವಂದನೆಯೂ, ಮಧ್ಯಾಹ್ನ ೧೦-೩೦ ಗಂಟೆಗೆ ಸೈಕಲ್ ಮೆರವಣಿಗೆಯೂ, ಸಂಜೆ ೬-೩೦ ಘಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗಸಭೆಯೂ ನಡೆಯುವುವು. ಮೈಸೂರುನಗರದ ಕೆಲಸಗಾರರೂ ಮತ್ತು ನಾಗರಿಕರೂ ದಯಮಾಡಿ ಸಹಕರಿಸಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ.

ವರ್ಧಂತಿ ಮಹೋತ್ಸವ

ಶ್ರೀ ಕನ್ಯಕಾಪರಮೇಶ್ವರೀ ವರ್ಧಂತಿ ಮಹೋತ್ಸವವು ಮೇ ೪ ನೇ ತಾರೀಖಿನಿಂದ ೭ ನೇ ತಾ|| ವರೆಗೆ ಮೈಸೂರು ಅಶೋಕಾರಸ್ತೆಯಲ್ಲಿರುವ ಕನ್ಯಕಾಪರಮೇಶ್ವರೀ ದೇವಸ್ಥಾನದಲ್ಲಿ ನಡೆಯುತ್ತದೆ. ಇದರ ಅಂಗವಾಗಿ ಅಮ್ಮನವರಿಗೆ ಅಭಿಷೇಕ, ಉತ್ಸವ, ವಿವಿಧ ಅಲಂಕಾರ ಮುಂತಾದುವುಗಳನ್ನು ಏರ್ಪಡಿಸಲಾಗಿದೆ.

ವಿವಾಹಮಹೋತ್ಸವ

ರಾಜಕಮಲ್ ಟಾಕೀಸ್ ಪ್ರೊಪ್ರೈಟರೂ, ಪ್ರಸಿದ್ಧ ಕಬ್ಬಿಣವ್ಯಾಪಾರಿಗಳೂ ಆದ ಶ್ರೀ ಜೆ. ಕೆ. ಡಿ. ಭರಮಯ್ಯನವರ ಪುತ್ರಿ ಶ್ರೀಮತಿ ಸುವರ್ಣಾರವರಿಗೂ ಶ್ರೀ ವೈ. ಪಿ. ಭರಮಯ್ಯನವರ ಪುತ್ರ ಶ್ರೀ ಧರ್ಮರಾಜ್‌ರವರಿಗೂ ಇದೇ ೭ನೇ ತಾ|| ಎಂ. ಎಲ್. ಜೈನ್ ಬೋರ್ಡಿಂಗ್‌ಹೋಂನಲ್ಲಿ ವಿವಾಹಮಹೋತ್ಸವ ನಡೆಯಲಿದೆ.

ಡಾ|| ಪಿ. ಸುಬ್ಬರಾಯನ್ ತಮಿಳುನಾಡು ಕಾಂಗ್ರೆಸ್ ಸಮಿತಿ ಅಧ್ಯಕ್ಷರು

ತಮಿಳುನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಡಾ|| ಪಿ. ಸುಬ್ಬರಾಯನ್‌ರವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ. ಮದ್ರಾಸಿನ ಮಾಜಿ ಮುಖ್ಯಮಂತ್ರಿ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾರವರು ಅಧ್ಯಕ್ಷಸ್ಥಾನಕ್ಕೆ ಡಾ|| ಸುಬ್ಬರಾಯನ್‌ರವರನ್ನು ಸೂಚಿಸಿದರು. ನಿವೃತ್ತರಾಗಲಿರುವ ಅಧ್ಯಕ್ಷ ಶ್ರೀ ರಾಮರಾಜ ನಾಡಾರ್‌ರವರು ಅನುಮೋದಿಸಿದರು. ಸರ್ವಾನುಮತದಿಂದ ಚುನಾವಣೆಯಾಯಿತು.

ಸಿಂಹಳದಲ್ಲಿ ಸತ್ಯಾಗ್ರಹ ನಡೆಸುತ್ತಿರುವ ಸಿಂಹಳ ಭಾರತೀಯರಿಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ ಒಂದು ನಿರ್ಣಯವೂ, ಶಸ್ತ್ರಚಿಕಿತ್ಸೆ ಪಡೆದು ಆಸ್ಪತ್ರೆಯಲ್ಲಿರುವ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್‌ಖಾನರವರು ಬೇಗ ಗುಣಮುಖರಾಗಲೆಂಬ ಮತ್ತೊಂದು ನಿರ್ಣಯವೂ ಈ ಸಭೆಯಲ್ಲಿ ಮಾಡಲಾಯಿತು.

ಭಾರತದ ೨೫೦ ಇಂಜನಿಯರುಗಳಿಗೆ ಜರ್ಮನಿಯಲ್ಲಿ ಶಿಕ್ಷಣ

ಭಾರತದ ೨೫೦ ಇಂಜನಿಯರುಗಳಿಗೆ ವಿವಿಧ ಕೈಗಾರಿಕೆಗಳಲ್ಲಿ ಪಶ್ಚಿಮಜರ್ಮನಿ ಯುಶಿಕ್ಷಣಕೊಡಲು ಒಪ್ಪಿರುವುದಾಗಿ ಪಶ್ಚಿಮಜರ್ಮನಿಯ ಭಾರತದ ರಾಯಭಾರಿ ಶ್ರೀ ಸುಬಿಮಲ್‌ದತ್‌ರವರು ಹೇಳಿರುವರು.

ಹಿರಿಯ ಶಾಸನಸಭೆಗೆ

ಬೆಂಗಳೂರು ಏ ೩೦

ಉಪಾಧ್ಯಾಯರ ಕ್ಷೇತ್ರದಿಂದ ಶಾಸನಸಭೆಗೆ ಸ್ಪರ್ಧಿಸಿದ್ದವರ ಓಟು ಎಣಿಕೆ ಇಂದು ಪ್ರಾರಂಭವಾಯಿತು. ಒಂದು ಸ್ಥಾನವು ಶ್ರೀ ಎಂ. ಪಿ. ಎಲ್. ಶಾಸ್ತ್ರಿಯವರಿಗೆ ದೊರೆತಿದೆ ಉಳಿದವು ಎಣಿಕೆ ನಾಳೆ ನಡೆಯುತ್ತದೆ

ಪದವೀಧರರ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದವರ ಪೈಕಿ ಶ್ರೀಗಳಾದ ಗಾಂಜಿ ವೀರಪ್ಪ ಮತ್ತು ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರುಗಳಿಗೂ ಸ್ಥಾನ ದೊರೆತಿದೆ. ಇನ್ನೊಂದು ಸ್ಥಾನದ ಫಲಿತಾಂಶ ನಾಳೆ ಹೊರಬೀಳುತ್ತದೆ.

ಪ್ರಸಿದ್ಧ ಕಮ್ಯೂನಿಸ್ಟರ ಮೇಲಿನ ಆಜ್ಞೆ ರದ್ದು

ಹೈದ್ರಾಬಾದಿನಲ್ಲಿ ಪ್ರಸಿದ್ಧ ಕಮ್ಯೂನಿಸ್ಟ್ ನಾಯಕರಾದ ರವಿನಾರಾಯಣರೆಡ್ಡಿ, ಚಾದರ್ನ್ ಎಲ್ಲಾರೆಡ್ಡಿ, ಮಗದುಮ್ ಮೊಹಿಯುದ್ದೀನ್‌ರವರ ಮೇಲಿನ ಬಂಧನದಾಜ್ಞೆಯನ್ನು ಹೈದರಾಬಾದ್ ಸರ್ಕಾರವು ರದ್ದುಗೊಳಿಸಿದೆಯೆಂದು ಹೇಳಲಾಗಿದೆ.

ಕಾಂಗ್ರೆಸ್ ಸದಸ್ಯರ ಸಭೆ

ಕೇಂದ್ರ ಶಾಸನ ಸಭೆಗಳಲ್ಲಿರುವ ಕಾಂಗ್ರೆಸ್ ಪಕ್ಷದವರ ಸಭೆಯು ಹೊಸ ದೆಹಲಿಯಲ್ಲಿ ಮೇ ೧೧ನೇ ತಾ|| ೪ ಗಂಟೆಗೆ ನಡೆಯುತ್ತದೆ. ನಾಯಕರನ್ನು ಚುನಾಯಿಸುವುದೇ ಈ ಸಭೆಯ ಕಾರ್ಯಕ್ರಮ.

ಡಾ|| ರಾಜೇಂದ್ರಪ್ರಸಾದರಿಗೆ ಮತನೀಡಿ

ದೆಹಲಿಯ ಕೆಲವು ಸ್ವತಂತ್ರ, ಪಾರ್ಲಿಮೆಂಟ್ ಮತ್ತು ಶಾಸನಸಭೆ ಸದಸ್ಯರು, ರಾಷ್ಟ್ರೀಯ ಪ್ರಮುಖ ವ್ಯಕ್ತಿಯಾದ ಡಾ|| ರಾಜೇಂದ್ರ ಪ್ರಸಾದರಿಗೆ ರಾಷ್ಟ್ರಾಧ್ಯಕ್ಷರಾಗಲು ಎಲ್ಲಾ ಪಾರ್ಲಿಮೆಂಟ್ ಮತ್ತು ಶಾಸನಸಭಾ ಸದಸ್ಯರು ಮತನೀಡಬೇಕೆಂದು ಮನವಿಮಾಡಿಕೊಂಡಿರುವರು.

ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೊಪ್ಪಿಸಲು ಸಿದ್ಧ

ಸರ್ಕಾರವು ಈಗ ಬಂಧನದಲ್ಲಿರುವ ಕಮ್ಯೂನಿಸ್ಟ್ ಖೈದಿಗಳನ್ನೆಲ್ಲಾ ಬಿಡುಗಡೆ ಮಾಡಿ ಅವರ ಮೇಲೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಿಲ್ಲವೆಂದು ಆಜ್ಞೆ ಮಾಡಿದರೆ ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನೆಲ್ಲಾ ಸರ್ಕಾರಕ್ಕೆ ಒಪ್ಪಿಸಲು ತಮ್ಮ ಪಕ್ಷವು ಸಿದ್ಧವಿರುವುದಾಗಿ ಹೈದರಾಬಾದ್ ಕಮ್ಯೂನಿಸ್ಟ್ ನಾಯಕರು ತಿಳಿಸಿರುವರು.

ಆರೂವರೆ ಲಕ್ಷ ಕಾರ್ಮಿಕರ ಮುಷ್ಕರ

ಅಮೆರಿಕಾದಲ್ಲಿ ಆರೂವರೆ ಲಕ್ಷ ಉಕ್ಕಿನ ಕಾರ್ಮಿಕರು ನಿನ್ನೆಯಿಂದ ಪುನಃ ಮುಷ್ಕರವನ್ನು ಹೂಡಿರುವರು.

ಉಕ್ಕಿನ ಕೈಗಾರಿಕೆಯನ್ನು ಸರ್ಕಾರವು ವಹಿಸಿಕೊಳ್ಳಲು ಅಧ್ಯಕ್ಷ ಟ್ರೂಮನ್ನರ ಆಜ್ಞೆಯು ಕಾನೂನು ವಿರುದ್ಧವೆಂದು ಅಮೆರಿಕಾ ಶ್ರೇಷ್ಠನ್ಯಾಯಾಲಯವು ತೀರ್ಮಾನಿಸಿದೆ- ಇದೇ ಮುಷ್ಕರಕ್ಕೆ ಕಾರಣವಾಗಿದೆ-

೯೦ ಸಾವಿರ ಜನರ ಮುಷ್ಕರ

ಸಂಬಳ ವಿಷಯದಲ್ಲಿ ೯೦ ಸಾವಿರ ಎಣ್ಣೆ ಕಾರ್ಮಿಕರು ನಿನ್ನೆಯಿಂದ ಅಮೆರಿಕಾದಲ್ಲಿ ಮುಷ್ಕರವನ್ನು ಹೂಡಿರುವರು.

ಪೂರ್ಣ ಸಹಕಾರ

ಬೊಂಬಾಯಿಯಲ್ಲಿ ಎರಡುದಿನಗಳಿಂದ ಅಧಿವೇಶನ ನಡೆಸಿದ ಹಿಂದ್ ಮಜ್ದೂರ್ ಸಭೆಯು ಭಾರತಸರ್ಕಾರದ ಪಂಚವಾರ್ಷಿಕಯೋಜನೆಗೆ ಪೂರ್ಣ ಸಹಕಾರನೀಡಲು ನಿರ್ಧರಿಸಿದೆ.

ಈ ಸಂದರ್ಭದಲ್ಲಿ ಶ್ರೀ ಅಶೋಕಮೆಹ್ತಾರವರು ಮಾತನಾಡುತ್ತಾ ಈ ಯೋಜನೆಯಲ್ಲಿ ಕೈಗಾರಿಕೆಗಿಂತಲೂ ವ್ಯವಸಾಯಾಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆಕೊಟ್ಟಿವೆಯೆಂದುಹೇಳಿರುವರು.

ಸಿಂಹಳ ಸರ್ಕಾರಕ್ಕೆ ಭಾರತ ಸರ್ಕಾರದ ಪತ್ರ

ನವದೆಹಲಿಯಲ್ಲಿರುವ ಸಿಂಹಳ ಹೈಕಮೀಷನರನ್ನು ಭಾರತಸರ್ಕಾರದ ವಿದೇಶಾಂಗಶಾಖೆಯು ಬರಮಾಡಿಕೊಂಡು ಒಂದು ಪತ್ರವನ್ನು ಸಲ್ಲಿಸಿದೆ.

ಸೋಮವಾರ ಸಿಂಹಳದ ಗೃಹಸಚಿವರು ಭಾಷಣಮಾಡುತ್ತಾ, ಕಾಂಗ್ರೆಸ್ಸಿನ ಸತ್ಯಾಗ್ರಹಸಮಯದಲ್ಲಿ ಪೋಲೀಸಿನವರು ಕಾರ್ಯನಿರತರಾಗಬೇಕಾಗಿದೆ. ಆದ್ದರಿಂದ ಕಾಂಗ್ರೆಸ್ಸಿಗರ ರಕ್ಷಣೆಗೆ ಸರ್ಕಾರ ಹೊಣೆಯಲ್ಲ ಎಂದು ಹೇಳಿದಬಗ್ಗೆ ಸತ್ಯಾಗ್ರಹವು ಅಹಿಂಸಾತ್ಮಕವಾಗಿರುವಾಗ ಪೋಲೀಸಿನವರಿಗೆ ಲ್ಲಿ ಎಡೆಯಿಲ್ಲವೆಂದು ಭಾರತಸರ್ಕಾರವು ಸಿಂಹಳಕ್ಕೆ ಈ ಪತ್ರದಲ್ಲಿ ತಿಳಿಸಿರುವುದಾಗಿ ಹೇಳಲಾಗಿದೆ.

ಮೈಸೂರಿಗೆ ಕೇಂದ್ರದ ಆಹಾರ ಧಾನ್ಯ

೧೯೫೨ರ ಮೇ ತಿಂಗಳ ಕೋಟಾಕ್ಕಾಗಿ ಕೇಂದ್ರ ಸರ್ಕಾರವು ಮೈಸೂರು ಸಂಸ್ಥಾನಕ್ಕೆ ೨೫೦೦ ಟನ್ ಮೈಲೋ ಮತ್ತು ೫೦೦೦ ಟನ್ ಗೋಧಿಯನ್ನು ನಿಗದಿ ಮಾಡಿದೆಯೆಂದು ತಿಳಿದುಬಂದಿದೆ.

ಹಿರಿಯ ಶಾಸನಸಭೆಯ ಚುನಾವಣೆ ಫಲಿತಾಂಶ

ಬೆಂಗಳೂರು ಏ ೩೦

ಮೈಸೂರು ಲೆಜಿಸ್ಲೆಟಿವ್ ಕೌನ್ಸಿಲಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ನಡೆದ ಚುನಾವಣೆಯ ಓಟುಗಳ ಎಣಿಕೆ ನಿನ್ನೆ ದಿನ ನಡೆದು ಆರು ಜಿಲ್ಲೆಗಳ ೯ ಸ್ಥಾನಗಳ ಫಲಿತಾಂಶಗಳು ಪ್ರಕಟಿಸಲ್ಪಟ್ಟವು.

ಇವುಗಳಲ್ಲಿ ಮೂರು ಕಾಂಗ್ರೆಸ್ಸಿಗೂ ಮೂರು ಕೆ. ಎಂ. ಪಿ. ಪಕ್ಷಕ್ಕೂ ಮೂರು ಸ್ವತಂತ್ರರಿಗೂ ಬಂದಿವೆ.

ನಿನ್ನೆ ದಿನ ಪ್ರಕಟವಾದ ಫಲಿತಾಂಶಗಳು ಹೀಗಿವೆ:—

ಬೆಂಗಳೂರು—ಶ್ರೀ ಎಸ್. ಆರ್. ಗುರು (ಕಾಂ) ಮತ್ತು ಶ್ರೀ ಆರ್. ಸುಬ್ಬಣ್ಣ (ಕಾಂ)

ಮೈಸೂರು—ಶ್ರೀ ಪಾಲಹಳ್ಳಿ ಸೀತಾರಾಮಯ್ಯ (ಕಾಂ) ಮತ್ತು ಶ್ರೀ ಆರ್. ಪಿ. ರೇವಣ್ಣ [ಕೆ. ಎಂ. ಪಿ.]

ಕೋಲಾರ—ಶ್ರೀ ಸಿ. ಹೆಚ್. ವೆಂಕಟರಮಣಪ್ಪ [ಸ್ವ] ಮತ್ತು ಶ್ರೀ ಡಿ. ವೆಂಕಟರಾಮಯ್ಯ [ಸ್ವ.]

ತುಮಕೂರು—ಶ್ರೀ ಟಿ. ಕೆಂಪಹೊನ್ನಯ್ಯ (ಕೆ. ಎಂ. ಪಿ.)

ಹಾಸನ—ಶ್ರೀ ವೈ. ಧರ್ಮಪ್ಪ (ಕೆ. ಎಂ. ಪಿ.)

ಚಿಕ್ಕಮಗಳೂರು—ಶ್ರೀ ಎಚ್. ಟಿ. ಗೌಡ (ಸ್ವ.)

ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಎಲ್ಲಾ ಹದಿಮೂರು ಸ್ಥಾನಗಳಿಗೂ ಕಾಂಗ್ರೆಸ್ಸು ಉಮೇದುವಾರರನ್ನು ನಿಲ್ಲಿಸಿತ್ತು. ಈಗ ಪ್ರಕಟವಾಗಿರುವ ಒಂಭತ್ತರಲ್ಲಿ ೩ ಸ್ಥಾನಗಳು ಮಾತ್ರ ಕಾಂಗ್ರೆಸ್ಸಿಗೆ ಬಂದಿವೆ.

ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಒಟ್ಟು ಓಟುಗಳು ೨೧೫೧, ಚಲಾಯಿಸಲಾಗಿರುವ ಓಟುಗಳು ೨೦೭೦.

೬ ತಿಂಗಳ ಕಠಿಣ ಶಿಕ್ಷೆ

ಬೆಂಗಳೂರು ಏ ೨೯

ಸೆಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಕಳೆದ ಮಾರ್ಚಿ ೨೦ ರಿಂದ ೨೭ನೆಯ ತಾರೀಖಿನವರೆಗೆ ನಡೆದ ಮೆಟ್ರಿಕ್ ಪರೀಕ್ಷೆಯಲ್ಲಿ ಅಲೆಪ್ಪಿಯ ಶ್ರೀ ಟಿ. ಎಲ್. ರಮಣಿ ಎಂಬ ವಿದ್ಯಾರ್ಥಿಯಂತೆ ನಟಿಸಿ ಕಳ್ಳತನದಲ್ಲಿ ಪರೀಕ್ಷೆಯಲ್ಲಿ ಬರೆದ ಟಿ. ಟಿ. ಜೋಸೆಫ್ ಎಂಬುವನ ಮೇಲೆ ಕಬ್ಬನ್ ಪಾರ್ಕ್ ಪೋಲೀಸರು ಮೊಕದ್ದಮೆ ಹೂಡಿದ್ದರು. ಶುಕ್ರವಾರದ ದಿನ ಅಡಿಷನಲ್ ಪ್ರಥಮ ತರಗತಿಯ ಮ್ಯಾಜಿಸ್ಟ್ರೇಟರಾದ ಜನಾಬ್ ಸಿ. ಅಬ್ದುಲ್ ಹಕ್ಕರವರು ಸದರಿ ಜೋಸೆಫ್ ಎಂಬುವರಿಗೆ ೬ ತಿಂಗಳ ಕಠಿಣ ಸಜಾ ವಿಧಿಸಿದರು.

ಆಹಾರ ಸಬ್ಸಿಡಿ ಇಲ್ಲ

ಭಾರತ ಸರ್ಕಾರದವರು ಈಗ ನಿಲ್ಲಿಸಿರುವ ಆಹಾರ 'ಸಬ್ಸಿಡಿ' ವಿಷಯದಲ್ಲಿ ತಮ್ಮ ಮನಸ್ಸು ಬದಲಾಯಿಸುವ ಸಂಭವವೇ ಇಲ್ಲವೆಂದೂ ಶ್ರೀ ಮುನ್ಷಿ ತಿಳಿಸಿರುವರು. ಆಹಾರದ ಅವಶ್ಯಕತೆಯಲ್ಲಿ ಶೇಕಡಾ ೨೫ ಭಾಗವನ್ನು ಮಾತ್ರ ಬೆಳೆಯುವ ತಿರುವಾಂಕೂರು ಕೊಚ್ಚಿ ಸಂಸ್ಥಾನವೊಂದನ್ನು ಬಿಟ್ಟು ಮಿಕ್ಕಾವ ಸಂಸ್ಥಾನಕ್ಕೂ 'ಸಬ್ಸಿಡಿ' ಕೊಡಕೂಡದೆಂಬುದನ್ನು ಕೇಂದ್ರ ಸರ್ಕಾರವು ಬಹಳ ಹಿಂದೆಯೇ ನಿರ್ಧರಿಸಿತ್ತೆಂದೂ ಶ್ರೀ ಮುನ್ಷಿ ಹೇಳಿರುವರು

ಉತ್ತಮ ಆರೋಗ್ಯ, ಹೆಚ್ಚು ಆಹಾರ

'ಉತ್ತಮ ಆರೋಗ್ಯ ಮತ್ತು ಹೆಚ್ಚು ಆಹಾರ' ಭವಿಷ್ಯ ಪ್ರಪಂಚದ ಜೀವನದ ಗುರುತು, ಎಂದು ಅಮೆರಿಕದ ವಿಜ್ಞಾನಿಯೊಬ್ಬರು ತಿಳಿಸಿದ್ದಾರೆ.

ಇಲಿನಾಯ್ ವಿಶ್ವವಿದ್ಯಾನಿಲಯದ ಡಾ|| ಹ್ಯಾಡಮ್ಸ್‌ರು ಮುಂಬರುವ ಹತ್ತಾರು ವರ್ಷಗಳ ಜೀವನದ ರೀತಿಯ ಬಗ್ಗೆ ಭವಿಷ್ಯ ನುಡಿದಿದ್ದಾರೆ.

ಡಾ|| ಹ್ಯಾಡಮ್ಸ್‌ರ ತರ್ಕ ಈ ರೀತಿ ಇದೆ.

(೧) ನೆಗಡಿ, ಪಾರ್ಶ್ವವಾಯು, ಮೆನಂಜೈಟಿಸ್, ಸಿನೋಸಿಯ ಮುಂತಾದ ರೋಗಗಳನ್ನು ವಾಸಿಮಾಡಲು ಔಷಧಿಯನ್ನು ಕಂಡು ಹಿಡಿಯಲಾಗುವುದು.

(೨) ಕ್ಯಾನ್ಸರ್, ಹೃದಯ ರೋಗ ಮುಂತಾದ ರೋಗಗಳನ್ನು ಸಂಪೂರ್ಣವಾಗಿ ಗುಣಪಡಿಸಲು ಸಾಧ್ಯವಾಗದಿದ್ದರೂ, ಅವುಗಳ ಮುನ್ನಡೆ ತಡೆ ಹಿಡಿಯಬಹುದಾಗಿದೆ

(೩) ಆಹಾರೋತ್ಪತ್ತಿಯನ್ನು ಜಾಸ್ತಿ ಮಾಡಲು ಭೂಮಿಯನ್ನು ಉಳಲಾಗುತ್ತಿದೆ. ಹೆಚ್ಚು ಆಹಾರ ಬೆಳೆಯುವ ಸುಧಾರಣೆಗಳನ್ನು ಮಾಡಲಾಗುತ್ತಿದೆ

(೪) ಸಮುದ್ರದಲ್ಲಿ ಸಿಕ್ಕುವ ವಿಪುಲ ಆಹಾರವನ್ನು ಹೆಚ್ಚಾಗಿ ಶೇಖರಿಸಲಾಗುವುದು.

(೫) ಕುಲುವಿನಾಶಕ ಔಷಧಿಯೊಂದನ್ನು ಕಂಡು ಹಿಡಿಯಲಾಗುವುದು.

(೬) ಸೂರ್ಯನ ಶಕ್ತಿಯನ್ನು ಅಡಿಗೆ ಮಾಡಲು ಉಪಯೋಗಿಸಿಕೊಳ್ಳಲಾಗುವುದು.

(೭) ಅಣುಶಕ್ತಿಯನ್ನು ವ್ಯವಸಾಯ, ಔಷಧಿ, ಕೈಗಾರಿಕಾ ಸಂಶೋಧನೆಗಳಿಗೆ ಉಪಯೋಗಿಸಲಾಗುವುದು

ಈ ತರ್ಕಗಳ ಮೇಲೆ ಡಾ|| ಹ್ಯಾಡಮ್ಸ್‌ರು ಮೇಲ್ಕಂಡಂತೆ ನುಡಿದಿದ್ದಾರೆ. ಅವರ ಭವಿಷ್ಯವೆಲ್ಲ ರಸಾಯನ ಶಾಸ್ತ್ರಕ್ಕೆ ಸಂಬಂಧಪಟ್ಟಿದ್ದಾಗಿದೆ.

ಪೌರಸಭಾಧಿವೇಶನ

ಮೈಸೂರು ಏ. ೩೦

ಮೈಸೂರು ಪುರಸಭೆಯ ಮಾಹೆವಾರಿ ಅಧಿವೇಶನವು ನಿನ್ನೆಯ ದಿನ ಶ್ರೀ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಶಾಲೆಗಳಲ್ಲಿ ಬಾಲಕ ಬಾಲಕಿಯರಿಗೆ ಬಿ. ಸಿ. ಜಿ. ವ್ಯಾಕ್ಸಿನೇಷನ್ ಮಾಡಿದುದರ ವಿಷಯವಾಗಿ ಶ್ರೀ ಟಿ ನರಸಿಂಹಯ್ಯಂಗಾರ್‌ರವರು ಪ್ರಸ್ತಾಪಿಸಿ, ನಗರಾರೋಗ್ಯವನ್ನು ಕಾಪಾಡುತ್ತಲಿರುವ ಪುರಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ವಿಷಯವನ್ನು ತಿಳಿಸದೆಯೇ, ಸಂಚಿಕಾ [illegible] ಅಥವಾ ಪೋಷಕರಿಗೂ ಸಹ ಈ ವಿಷಯದಲ್ಲಿ ಅರಿವಿಲ್ಲದೆ ಶಾಲೆಗಳನ್ನು ಈ ವ್ಯಾಕ್ಸಿನೇಷನ್ ಹಾಕಿದ ಬಗ್ಗೆ ನಾನಾ ಕಡೆಗಳಿಂದ ದೂರುಗಳು ಬಂದಿವೆ. ಆರೋಗ್ಯ ಇಲಾಖೆಯವರು ಹೀಗೆ ಮಾಡಿದುದು ಸರಿಯಲ್ಲವೆಂದರು

ಅಧ್ಯಕ್ಷರು ಮತ್ತು ಪುರಸಭಾ ಕಮಿಷನರು ಉತ್ತರವೀಯುತ್ತ ಈ ವಿಷಯದಲ್ಲಿ ತಾವುಗಳು ಸಂಬಂಧಪಟ್ಟವರೊಡನೆ ಮಾತುಕತೆ ನಡೆಸಿದರೆಂದು. ಇದರಿಂದ ಗಾಬರಿಪಟ್ಟುಕೊಳ್ಳಬೇಕಾದ ಪ್ರಮೇಯವೇನೂ ಇಲ್ಲ. ಬೇಸಿಗೆ ಕಳೆದ ನಂತರ ಪುನಃ ಈ ವ್ಯಾಕ್ಸಿನೇಷನ್ ಕಾರ್ಯವನ್ನು ಕೈಗೆತ್ತುಕೊಂಡಾಗ ಪೌರಸಭೆಗೆ ತಿಳಿಸಿಕೊಡಲಾಗುತ್ತದೆಯೆಂದೂ ಅವರು ಹೇಳಿದರು.

ದಾವಣಗೆರೆ ಪೌರಸಭಾಧ್ಯಕ್ಷ ಶ್ರೀ ಶ್ರೀ ಗಾಂಜಿ ವೀರಪ್ಪನವರು ಪೌರಸಭಾಧಿವೇಶನದಲ್ಲಿ ವಿಶೇಷ ಆಹ್ವಾನದ ಮೇಲೆ ದಯಮಾಡಿಸಿದ್ದರು.

ಆಹಾರ ಸಬ್ಸಿಡಿ ತಿರುವಾಂಕೂರು ಕೊಚ್ಚಿನ್‌ಗೆ ಯಾಕೆ?

ಬೆಂಗಳೂರು ಏ ೨೯

ಕೇಂದ್ರ ಆಹಾರ-ಸಚಿವ ಶ್ರೀ ಕೆ ಎಂ ಮುನ್ಷಿಯವರು ಬೆಂಗಳೂರಿಗೆ ಭೇಟಿಯಿತ್ತಾಗ ಮೈಸೂರು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಶ್ರೀ ಮುನ್ಷಿಯವರೊಡನೆ ಮೈಸೂರಿನ ಆಹಾರಪರಿಸ್ಥಿತಿಯನ್ನು ಚರ್ಚಿಸಿ ಇನ್ನು ಹೆಚ್ಚಿಗೆ ಆಹಾರವನ್ನು ಕೇಂದ್ರವು ಸರಬರಾಜು ಮಾಡಬೇಕೆಂದೂ ತಿರುವಾಂಕೂರು-ಕೊಚ್ಚಿನ್‌ಗೆ ಕೊಟ್ಟಿರುವಂತೆ ನಮ್ಮ ಪ್ರಾಂತ್ಯದಲ್ಲಿ ಆಹಾರ ಸಬ್ಸಿಡಿ ಕೊಡಬೇಕೆಂದು ಒತ್ತಾಯಪಡಿಸಿದರೆಂದು ಗೊತ್ತಾಗಿದೆ.

ತಿರುವಾಂಕೂರ್-ಕೊಚ್ಚಿನ್ ಪ್ರಾಂತ್ಯದಲ್ಲಿ ರಬ್ಬರ್ ಮತ್ತು ಟೀ ಮೇಲಿನ ಎಕ್ಸೈಜು ತೆರಿಗೆಯಿಂದ ಕೇಂದ್ರಕ್ಕೆ ವಿಶೇಷವಾಗಿ ಹಣ ಬರುತ್ತಿರುವುದರಿಂದ ಅದಕ್ಕೆ ಮಾತ್ರ ಆಹಾರ ಸಬ್ಸಿಡಿ ಕೊಡಲಾಗಿದೆಯೆಂದೂ ಇತರ ಪ್ರಾಂತ್ಯಗಳನ್ನು ಈ ಪ್ರಾಂತ್ಯಗಳೊಡನೆ ಹೋಲಿಸಬಾರದೆಂದು ಶ್ರೀ ಮುನ್ಷಿ ಹೇಳಿರುವುದಾಗಿ ತಿಳಿದುಬಂದಿದೆ.

ಕನಿಷ್ಠ ಬೆಲೆಯಲ್ಲಿ ಬದಲಾವಣೆಯಿಲ್ಲ

ಸದ್ಯದ ಹತ್ತಿ ಸುಗ್ಗಿ ಅವಧಿಯ ಮಧ್ಯದಲ್ಲಿ ಹತ್ತಿಯ ಕನಿಷ್ಠ ಬೆಲೆಯನ್ನು ಬದಲಾಯಿಸಲು ಭಾರತ ಸರ್ಕಾರಕ್ಕೆ ಸಾಧ್ಯವಿಲ್ಲವೆಂಬುದಾಗಿ ಕೇಂದ್ರದ ಹಣಕಾಸಿನ ಸಚಿವ ಶ್ರೀ ಸಿ. ಡಿ. ದೇಶಮುಖ್‌ರವರು ತಿಳಿಸಿದರೆಂದು ವರದಿಯಾಗಿದೆ.

ಪೇಟೆ ಧಾರಣೆ

ಮೈಸೂರು ತಾ|| 30-4-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	12-8	18-12
ಹೊಂಗೆಬೀಜ ,,	11-0	11-8
ಹುರುಳಿ ,,	33-0	33-14
ಮೆ. ಕಾಯಿ ಮಣಕ್ಕೆ	9-10	15-0
ಹುಣಸೇಹಣ್ಣು ,,	2-14	3-5
ತೆಂಗಿನಕಾಯಿ 1100ಕ್ಕೆ	123	205

ಚಿನ್ನ ಬೆಳ್ಳಿ ದರಗಳು

30-4-52	ರೂ.
ಸವರಿನ್	66-8
,,	66-0
ಚಿನ್ನ ತೊಲ	96-0
,, ಮೂಸ	94-8
ಬೆಳ್ಳಿ 100 ತೊಲ	171-4
,, ತೊಲ	1-12

ನ್ಯೂ ಅಪೇರ

ಜನಭರಿತವಾದ

೨೭-೪-೫೨ ರಿಂದ ಮೂರನೇ ವಾರ

* ಕುಮಾರಿ *

(ತಮಿಳು)

ಪಾತ್ರ:- ಎಂ. ಜಿ. ರಾಮಚಂದ್ರನ್, ಮಾಧುರಿದೇವಿ, ಶ್ರೀರಂಜಿನಿ (ಜೂ), ಶಾಮು, ದೊರೆರಾಜ್, ಪುಳಿಮೂಟೈ.

ರಣಜಿತ್

೨೫-೪-೫೨ ರಿಂದ ಅಮೋಘ ೨ನೇ ವಾರ

- ಸಂಯೋಗ್ -

ಪಾತ್ರ:-ಮಧುಬಾಲ, ಸಜ್ಜನ್, ಅಜಿತ್, ಲೀಲಾಚಿಟ್ನಿಸ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯುಟೋರಿಯಲ್ ಬ್ಯೂರೋ ಮೈಸೂರು ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೮ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨-೫—೧೯೫೨ನೇ ಶುಕ್ರವಾರ [ಸಂಚಿಕೆ ೨೦೭

ಭಾರತಾದ್ಯಂತ ಈ ದಿನ ನೂತನ ರಾಷ್ಟ್ರಾಧ್ಯಕ್ಷರ ಚುನಾವಣೆ

'ಮೇ ಡೇ' ಅಂಗವಾಗಿ ಎರಡೂವರೆ ಲಕ್ಷ ಜನರ ದಂಗೆ

ಕೇಂದ್ರ ನೂತನ ಮಂತ್ರಿಮಂಡಲ ರಚನೆ

ಇಷ್ಟರಲ್ಲೇ ಕೇಂದ್ರ ಸರ್ಕಾರದ ಮಂತ್ರಿಮಂಡಲದ ರಚನೆಯಾಗಲಿರುವುದು ಮಂತ್ರಿಮಂಡಲದಲ್ಲಿ ಎಷ್ಟು ಜನರಿರುವರು ಎಂಬ ವಿಚಾರವಾಗಿ ಊಹಾಪೋಹ ರಾಜಕೀಯ ವಲಯಗಳಲ್ಲಿ ನಡೆಯುತ್ತಿದೆ. ಹಳಬರಿಗೆ ಗೌರ್ನರ್ ಪದವಿಕೊಟ್ಟು, ಹೊಸ ಯುವಕರನ್ನು ನೂತನ ಮಂತ್ರಿಮಂಡಲದಲ್ಲಿ ಸೇರಿಸುವ ಸಂಭವವಿದೆಯೆಂದು ಹೇಳಲಾಗಿದೆ.

ಶ್ರೀಯುತರಾದ ಹರೆಕೃಷ್ಣ ಮೆಹತಾಬ್. ಗಾಡ್ಗಿಲ್ ಮತ್ತು ಶ್ರೀಮತಿ ರಾಜಕುಮಾರಿ ಅಮೃತ್‌ಕೌರ್ ಅವರನ್ನು ಗೌರ್ನರ್‌ಗಳಾಗಿ ಕಳುಹಿಸಲಾಗುವುದೆಂದು ಊಹಿಸಲಾಗಿದೆ.

ಈಗಿನ ಮಂತ್ರಿಮಂಡಲದಲ್ಲಿರುವ ಇತರ ಮಂತ್ರಿಗಳ ಪೈಕಿ ಶ್ರೀ ಆರ್. ಆರ್. ದಿವಾಕರರು ಮುಂದಿನ ಮಂತ್ರಿಮಂಡಲದಲ್ಲೂ ಇರುವ ಸಂಭವವಿದೆ. ಶ್ರೀ ಬಿ ಶಿವರಾಯರಿಗೆ ವಾರ್ತಾ ಇಲಾಖೆ ಕೊಡುವ ಸಂಭವವಿದೆಯೆಂದೂ ತಿಳಿದು ಬಂದಿದೆ. ಮಾಜಿ ಸಿಲೋನ್ ಹೈಕಮಿಷನರಾದ ಶ್ರೀ ವಿ. ವಿ. ಗಿರಿಯವರಿಗೆ ಮುಂದಿನ ರೈಲ್ವೆ ಮತ್ತು ಸಂಪರ್ಕ ಶಾಖಾ ಸಚಿವತ್ವವೂ ಶ್ರೀಯುತರಾದ ಎ. ಪಿ. ಜೈನ್‌ರವರಿಗೆ ಆಹಾರ ಶಾಖಾ ಸಚಿವತ್ವವೂ ಕೊಡುವರೆಂದೂ ಊಹಿಸಲಾಗಿದೆ. ಈ ಕೆಲವು ಬದಲಾವಣೆಯನ್ನು ಬಿಟ್ಟರೆ ಹೆಚ್ಚು ಬದಲಾವಣೆಯಾಗದೆಂದೂ ಹೇಳಲಾಗಿದೆ. ಅಂತು ನೂತನ ಮಂತ್ರಿಮಂಡಲ ರಚನೆ ಇನ್ನು ಎರಡು ವಾರಗಳಲ್ಲಿ, ನೂತನ ಪಾರ್ಲಿಮೆಂಟ್ ಅಧಿವೇಶನಕ್ಕೆ ಮೊದಲೇ ಆಗಲಿದೆಯೆಂದೂ ಖಚಿತವಾಗಿ ತಿಳಿದುಬಂದಿದೆ.

ಪ್ರಭಾ * 2-5-52 ರಿಂದ ಜಯಪ್ರದ 2ನೇ ವಾರ

ಹರಿಶ್ಚಂದ್ರ ಪಿಕ್ಚರ್ಸ್‌ರವರ ಅತ್ಯುತ್ತಮ ಸಾಂಸಾರಿಕ ಹಿಂದಿಚಿತ್ರ. ಪ್ರತಿಯೊಬ್ಬರೂ ತಪ್ಪದೇ ನೋಡಬೇಕಾದ ಚಿತ್ರ.

ಆಪ್‌ನಿ-ಇಜ್ಜತ್

ಪಾತ್ರ:- ಸುಲೋಚನಾ ಚಟರ್ಜಿ, ಮೋತಿಲಾಲ್, ಮುನಾವರ್ ಸುಲ್ತಾನಾ, ಗೋಪ್ ಮತ್ತು ಯಾಕೂಬ್.

ಹೈದರಾಬಾದ್ ಬಳಿ ವಿಮಾನ ಅಪಘಾತ

ನಿನ್ನೆ ಬೆಳಗ್ಗೆ ಭಾರತ ವಿಮಾನದಳದ ಒಂದು ಶಿಕ್ಷಣ ವಿಮಾನ ಅಪಘಾತಕ್ಕೀಡಾಗಿ ಸುಟ್ಟುಹೋಯಿತು. ಚಾಲಕನೊಬ್ಬನೇ ಆ ವಿಮಾನದಲ್ಲಿದ್ದನು. ಆತನು ಪ್ಯಾರಾಚೂಟ್ ಸಹಾಯದಿಂದ ಇಳಿದು ಅಪಘಾತದಿಂದ ಪಾರಾದನು.

ದೆಹಲಿಯ ಬಳಿ ವಿಮಾನ ಅಪಘಾತ

ಮದ್ರಾಸು ಬೆಂಗಳೂರು ಮತ್ತು ಹೈದರಾಬಾದ್ ಮಾರ್ಗವಾಗಿ ನವದೆಹಲಿಗೆ ಬುಧವಾರ ಪ್ರಾತಃಕಾಲ ಹೊರಟ ಡೆಕ್ಕನ್ ಏರ್‌ವೇಸ್ ವಿಮಾನವು ಸಂಜೆ ದೆಹಲಿಯ ಬಳಿ ಅಪಘಾತಕ್ಕೀಡಾಗಿ ೮ ಜನರು ಸತ್ತು, ಒಬ್ಬರಿಗೆ ಗಾಯಗಳಾಯಿತು. ಅವರನ್ನು ಆಸ್ಪತ್ರೆಗೆ ಸೇರಿಸಿದ ಮೇಲೆ ಅವರೂ ಸತ್ತುಹೋದರು. ಇದರಲ್ಲಿ ೫ ಮಂದಿ ಪ್ರಯಾಣಿಕರೂ ೪ ಮಂದಿ ವಿಮಾನ ಚಾಲಕ ವರ್ಗದವರೂ ಇದ್ದರು.

ಮಡಿದವರಲ್ಲಿ ಮೈಸೂರಿನ ಕೈಗಾರಿಕೆ ಮತ್ತು ವಾಣಿಜ್ಯ ಶಾಖೆ ಡೈರೆಕ್ಟರ್ ಶ್ರೀ ಆರ್ ರಾಮಕೃಷ್ಣರವರು ಒಬ್ಬರು.

ವಿಲ್ಲಿಂಗ್ಡನ್ ವಿಮಾನನಿಲ್ದಾಣದಲ್ಲಿ ಇಳಿಯಲು ಸಂಜೆ ೬-೩೦ ರಲ್ಲಿ ಪ್ರಯತ್ನಪಟ್ಟಾಗ ಅಪಘಾತವು ಸಂಭವಿಸಿತು.

ಈ ಅಪಘಾತ ವಿಚಾರಣೆ ನಡೆಸಲು ಸರ್ಕಾರವು ಒಂದು ನ್ಯಾಯಾಲಯ ನೇಮಿಸಿದೆ. ಫೆಡರಲ್ ಕೋರ್ಟಿನ ನ್ಯಾಯಮೂರ್ತಿಯವರಾದ ಶ್ರೀ ಎನ್. ಚಂದ್ರಶೇಖರಯ್ಯರ್‌ರವರು ವಿಚಾರಣೆ ನಡೆಸುವರು.

ಮೇ ಡೇ ಘರ್ಷಣೆ

ಮೇ ಡೇ ಅಂಗವಾಗಿ ನಿನ್ನೆಯ ದಿನ ಜಪಾನಿನಲ್ಲಿ ಸುಮಾರು ೨|| ಲಕ್ಷ ಕಾರ್ಮಿಕರು ಟೋಕಿಯೋ ನಗರದಲ್ಲಿ ಅಮೆರಿಕಾ ವಿರೋಧ ಘೋಷಣೆಗಳೊಡನೆ ಮೆರವಣಿಗೆ ಹೊರಟರು. ಜಪಾನ್ ಚಕ್ರವರ್ತಿಯ ಅರಮನೆಗೆ ಪ್ರವೇಶಿಸಲು ಇವರು ಪ್ರಯತ್ನಿಸಿದರು. ಘರ್ಷಣೆಗಳು ಅನೇಕ ಕಡೆ ನಡೆದುವು. ಪೋಲೀಸಿನವರು ಗುಂಡುಹಾರಿಸಿದರು. ೪ ಜನರು ಸತ್ತು, ೧೦೦೦ ಜನಕ್ಕೆ ಗಾಯಗಳಾಗಿವೆಯೆಂದು ಹೇಳಲಾಗಿದೆ. ಈ ಸಮೂಹದಲ್ಲಿ ಉತ್ತರ ಕೊರಿಯನ್ನರೇ ಹೆಚ್ಚಾಗಿದ್ದರೆಂದು ಹೇಳಲಾಗಿದೆ.

ಮೈಸೂರು ಜಿಲ್ಲಾ ಸಹಕಾರ ಸಮ್ಮೇಳನ

ಮೈಸೂರು ಮೇ ೧

ನಮ್ಮ ಸಂಸ್ಥಾನದ ಹಿಂದಿನ ಮಂತ್ರಿಮಂಡಲವು ಜನತೆಯ ಅಭಿವೃದ್ಧಿಗಾಗಿ ವಿವಿಧೋದ್ದೇಶ ಸಹಕಾರಸಂಘಗಳನ್ನು ಸ್ಥಾಪಿಸಿತು. ಮಂತ್ರಿಮಂಡಲವು ಅದರಲ್ಲೂ ಮಾನ್ಯಮಂತ್ರಿಗಳಾಗಿದ್ದ ಶ್ರೀ ಟಿ. ಮರಿಯಪ್ಪನವರು ಸ್ತುತ್ಯಾರ್ಹರು. ಈ ಸಂಘಗಳು ಗ್ರಾಮಾಂತರ ಜನತೆಗೆ ವಿಶೇಷ ಉಪಯುಕ್ತವಾಗಿವೆ ಎಂದು ಮೈಸೂರು ಜಿಲ್ಲಾ ೪ನೇ ಸಹಕಾರ ಸಮ್ಮೇಳನದ ಪ್ರಾರಂಭೋತ್ಸವವನ್ನು ಮಾಡುತ್ತಾ ಮೈಸೂರು ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಬಿ. ವಾಸುದೇವಮೂರ್ತಿಯವರು ನುಡಿದರು.

ಗ್ರಾಮಾಂತರಗಳಲ್ಲಿ ಜನರು ತಮ್ಮ ನಿತ್ಯ ಉಪಯುಕ್ತ ವಸ್ತುಗಳಿಗೆಲ್ಲಾ ನಗರದಲ್ಲಿರುವ ವರ್ತಕರನ್ನೇ ನೋಡಬೇಕಾಗಿದೆ. ಆದಾಗ್ಯೂ ಅವುಗಳಲ್ಲಿ ಕೆಲವು ವಸ್ತುಗಳ ಅಭಾವವಿರುವುದರಿಂದ ಕಾಳಸಂತೆಯೂ ಪ್ರಾರಂಭವಾಗಿದೆ. ಗ್ರಾಮಾಂತರ ಜನರು ತಮಗೆ ಬೇಕಾದ ವಸ್ತುಗಳನ್ನೆಲ್ಲಾ ನೇರವಾಗಿ ತಯಾರಿಕಾಗಾರರಿಂದ ತರಿಸಿಕೊಂಡಲ್ಲಿ ಈ ಕಾಳಸಂತೆಯೂ ಮಾಯವಾಗುತ್ತದೆ. ಈ ಕೆಲಸವನ್ನು ಮಾಡಬೇಕಾದರೆ ವಿವಿಧೋದ್ದೇಶ ಸಹಕಾರ ಸಂಘಗಳಿಗೆ ಅನೇಕ ಸಾಮಾನುಗಳನ್ನು ಸೆಂಟ್ರಲ್ ಪ್ರೊವಿನ್ಷಿಯಲ್ ಮಾರ್ಕೆಟಿಂಗ್ ಸೊಸೈಟಿಯು ಒದಗಿಸಬೇಕಾಗಿದೆ. ಈ ಕೇಂದ್ರ ಸಂಘವು ಯಾವ ರೀತಿ ಕಾರ್ಯವೆಸಗಬೇಕೆನ್ನುವುದನ್ನು ಈಗ ನಡೆಯಲಿರುವ ಸಹಕಾರ ಸಮ್ಮೇಳನದಲ್ಲಿ ಚರ್ಚಿಸಿ ನಿರ್ಧರಿಸಬಹುದಾಗಿದೆ.

ಇದರ ಜೊತೆಗೆ ಗೃಹನಿರ್ಮಾಣ ಪರಸ್ಪರ ಸಂಘಗಳ ಅವಶ್ಯಕತೆಯೊಂದು ಪ್ರಾಮುಖ್ಯವಾಗಿದೆ. ಪ್ರಾಂತಗಳು ಈ ಗೃಹನಿರ್ಮಾಣ ಸಂಘಗಳಿಗೆ ಮನೆಕಟ್ಟಲು ಬೇಕಾಗುವ ಸಾಮಾನುಗಳನ್ನು ಒದಗಿಸಿ ಅವುಗಳ ಮೂಲಕ ಜನತೆಗೆ ಸುಲಭವಾಗಿ ಅವು ದೊರೆಯುವಂತೆ ಮಾಡಬೇಕಾದುದು ಮುಖ್ಯ ಕರ್ತವ್ಯವಾಗಿದೆ. ಸಹಕಾರ ಇಲಾಖೆಯು ಈಗಾಗಲೇ ಕೇಂದ್ರ ಗೃಹನಿರ್ಮಾಣ ಸಂಸ್ಥೆಯನ್ನೂ ಸ್ಥಾಪಿಸಿದೆ. ಈ ಸಂಸ್ಥೆಯು ಕಾಲವನ್ನೆತ್ತಿ ತನ್ನ ಕಾರ್ಯವನ್ನು ಸ್ವಂತವಾಗಿ ಪ್ರಾರಂಭವಾದರೆ ಜನತೆಗೆ ವಿಶೇಷ ಪ್ರಯೋಜನವಾಗುತ್ತದೆಂದು ಶ್ರೀ ವಾಸುದೇವಮೂರ್ತಿಯವರು ಭಾಷಣದಲ್ಲಿ ಹೇಳಿದರು.

ಮೈಸೂರು ಗೃಹಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಎಸ್. ಚಿನ್ನಸ್ವಾಮಿ ಚೆಟ್ಟಿಯವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು.

ಭಾರತ ರಾಷ್ಟ್ರಾಧ್ಯಕ್ಷರ ಚುನಾವಣೆಯು ಭಾರತದ ೨೪ ಕ್ಷೇತ್ರಗಳಲ್ಲಿ ಈದಿನ ಬೆಳಗ್ಗೆ ೧೦ ಗಂಟೆಯಿಂದ ೫ ಗಂಟೆಯವರೆಗೆ ನಡೆಯುತ್ತದೆ. ಎಲ್ಲಾ ಪ್ರಾಂತ್ಯ ಶಾಸನಸಭಾ ಸದಸ್ಯರು ಮತ್ತು ಕೇಂದ್ರ ಶಾಸನಸಭಾ ಸದಸ್ಯರು ಮತದಾರರು ಪ್ರಾಂತ್ಯ ಶಾಸನ ಸಭಾಸದಸ್ಯರು ಆಯಾ ಪ್ರಾಂತ್ಯಗಳಲ್ಲಿ, ಕೇಂದ್ರ ಶಾಸನಸಭಾಸದಸ್ಯರು ತಮ್ಮ ಪ್ರಾಂತ್ಯ ಅಥವಾ ನವದೆಹಲಿಯಲ್ಲಿ ಮತದಾನಮಾಡುವರು. ಮತದಾನವಾದೊಡನೆಯೇ ಪೆಟ್ಟಿಗೆಗಳನ್ನು ನವದೆಹಲಿಯಲ್ಲಿರುವ ಕೇಂದ್ರ ರಿಟರ್ನಿಂಗ್ ಅಧಿಕಾರಿಗಳಿಗೆ ತಲುಪುವಂತೆ ಕಳುಹಿಸಲಾಗುತ್ತದೆ. ಮಂಗಳವಾರ ಬೆಳಗ್ಗೆ ೧೧ ಗಂಟೆಗೆ ಎಣಿಕೆ ಪ್ರಾರಂಭವಾಗುತ್ತದೆ.

ಬೆಲೆ ಇಳಿತಾಯಕ್ಕೆ ವಿರುದ್ಧ ಕ್ರಮವಿಲ್ಲ

ಮುಂದಿನ ವರ್ಷಾರ್ಧದ ಆಮದು ನೀತಿಯನ್ನು ನಿರ್ಧರಿಸುವುದರಲ್ಲಿ ಈಗಿನ ಬೆಲೆಗಳ ಇಳಿತಾಯದ ಧೋರಣೆಯನ್ನು ಪ್ರತಿರೋಧಗೊಳಿಸುವ ಯಾವ ಕ್ರಮವನ್ನೂ ಸರ್ಕಾರ ಕೈಗೊಳ್ಳುವುದಿಲ್ಲವೆಂದು ಕೇಂದ್ರ ವಾಣಿಜ್ಯ ಹಾಗೂ ಕೈಗಾರಿಕಾ ಸಚಿವ ಶ್ರೀ ಹರೆಕೃಷ್ಣ ಮೆಹತಾಬ್ ಘೋಷಿಸಿರುವರು.

ಶಾಸನಸಭೆಗೆ ಪದವೀಧರರ ಕ್ಷೇತ್ರದಿಂದ

ಮೈಸೂರು ಮೇ ೧

ಹಿರಿಯ ಶಾಸನಸಭೆಗೆ ಪದವೀಧರ ಕ್ಷೇತ್ರದಿಂದ ಶ್ರೀಗಳಾದ ಗಾಂಜೀ ವೀರಪ್ಪ, ಟಿ ಎಸ್. ರಾಜಗೋಪಾಲಯ್ಯಂಗಾರ್ ಮತ್ತು ಎ.ಎಚ್. ರಾಮರಾಯರು ಚುನಾಯಿತರಾಗಿದ್ದಾರೆ.

ನ್ಯೂ ಅಪೇರಾ

೩—೫—೫೨ ರಿಂದ

—: ಆರ್ಯಮಾಲಾ :—

(ತಮಿಳು)

ಪಾತ್ರ—ಚಿನ್ನಪ್ಪ, ಎಂ. ಎಸ್. ಸರೋಜಿನಿ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.

—ಮುಂದಿನ ಬದಲಾವಣೆ—

ಜೂಪಿಟರ್‌ರವರ— "ರಾಣಿ"

ಜಾತಿಮತ ಗೊಂದಲಬೇಡ

ಬೆಂಗಳೂರು ಏ. ೩೦

'ನಮ್ಮ ದೇಶದಲ್ಲಿ ಜಾತಿ ಮತಗಳ ಗೊಂದಲ ಮೊದಲಿನಿಂದಲೂ ಇದೆ. ಇದರ ಜೊತೆಗೆ ನಾನಾ ವರ್ಗಗಳ ಗೊಂದಲ ಬೇರೆ ತಲೆಹಾಕಿ ಹೆಚ್ಚುತ್ತಿದೆ. ಕೂಲಿಗಾರರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಅವುಗಳನ್ನು ಈಡೇರಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಕೈಗಾರಿಕೋದ್ಯಮಿಗಳಾದವರು ತಮ್ಮ ಹಿತವನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ರೀತಿ ಪ್ರತಿಯೊಂದು ವರ್ಗದವರೂ ತಮ್ಮ ತಮ್ಮ ಹಿತಗಳನ್ನು ಮಾತ್ರವೇ ರಕ್ಷಿಸಿಕೊಳ್ಳಲು ಪ್ರಯತ್ನಿಸುವುದಾದರೆ, ನಾನಾ ವರ್ಗಗಳ ವರಿಗೆ ದೇಶದಲ್ಲಿ ಭಯಂಕರ ಘರ್ಷಣೆ ಉಂಟಾಗುವುದು, ಅದರ ಫಲಿತಾಂಶವು ಭೀಕರವಾಗಿರುವುದು. ನಮ್ಮ ದೇಶದಲ್ಲಿ ಇಂದು ಪ್ರತಿಯೊಬ್ಬ ಪ್ರಜೆಗೂ ಪೂರ್ಣ ಪಂಪಾದಿಕಾರದ ಹಕ್ಕು ಲಭ್ಯವಾಗಿದೆ. ವೈಯಕ್ತಿಕ ಸ್ವಾತಂತ್ರವು ದೊರೆತಿದೆ, ಆದ್ದರಿಂದ ಈ ಹಕ್ಕನ್ನು ಇಡೀ ದೇಶದ ಅಭಿವೃದ್ಧಿಗಾಗಿ ವಿನಿಯೋಗಿಸಿಕೊಳ್ಳಬೇಕು. ತನ್ನ ಅಭಿವೃದ್ಧಿಯ ಜೊತೆಗೆ ದೇಶದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಎಲ್ಲರೂ ಸಾಧಿಸಲು ಪ್ರಯತ್ನಿಸಬೇಕು. ಆದರೆ, ದೇಶದ ಹಿತವನ್ನು ಮರೆತು, ಸ್ವಪ್ರಯೋಜನಕ್ಕಾಗಿ, ತನ್ನ ಹಿತಕ್ಕಾಗಿ ನಮ್ಮ ದೇಶದಲ್ಲಿ ಕೆಲಸಮಾಡುತ್ತಿರುವುದನ್ನು ನೋಡಿ ನನಗೆ ಬಹಳ ವ್ಯಸನವಾಗಿದೆ.' ಎಂಬುದಾಗಿ ಮೈಸೂರಿನ ಮುಖ್ಯಮಂತ್ರಿ, ಶ್ರೀ ಕೆ. ಹನುಮಂತಯ್ಯನವರು ಇದಿನ ಮೈಸೂರು ವಾಣಿಜ್ಯ ಸಂಘದ ಭವನದಲ್ಲಿ ಭಾಷಣ ಮಾಡುತ್ತಾ ಹೇಳಿದರು.

೧೩ ಸ್ಥಾನಗಳಲ್ಲಿ ೭ ಕಾಂಗ್ರೆಸ್ಸಿಗೆ

ಬೆಂಗಳೂರು ಏ ೩೦

ಇಂದು ಪ್ರಕಟವಾದ ಮತ್ತೆ ಮೂರು ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ನಾಲ್ಕು ಸ್ಥಾನಗಳಿಗೂ ಕಾಂಗ್ರೆಸ್ಸಿಗರೇ ಚುನಾಯಿತರಾಗಿದ್ದಾರೆ.

ಫಲಿತಾಂಶ ಈ ರೀತಿ ಇದೆ—

ಶಿವಮೊಗ್ಗ—ಶ್ರೀ ಯು. ಪಿ. ಶಂಕರರಾವ್ (ಕಾಂ)

ಚಿತ್ರದುರ್ಗ—ಶ್ರೀ ಟಿ. ವೀರಣ್ಣ (ಕಾಂ) ಮತ್ತು ಜಿ ಕೃಷ್ಣರಾವ್ (ಕಾಂ)

ಮಂಡ್ಯ—ಶ್ರೀ ಜಿ. ದೇವಯ್ಯ (ಕಾಂ)

ಒಟ್ಟು ೧೩ ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ೭, ಕೆ. ಎಂ. ಪಿ. ಗೆ ೩(ಮತ್ತು ಸ್ವತಂತ್ರರಿಗೆ ೩ ಸ್ಥಾನಗಳು ದೊರೆತಿವೆ.

ರಜಾ

ಕಾರ್ಮಿಕ ಶಾಖೆಯ ಅಂಡರ್ ಸೆಕ್ರಟರಿ ಹಂಗಾಮಿ ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಶ್ರೀ ಎ. ಎಸ್. ರಾಮಚಂದ್ರರವರಿಗೆ ಮೇ ಒಂದನೇ ತಾರೀಖಿನಿಂದ ೧೫ದಿನ ರಜಾ ಕೊಡಲಾಗಿದೆ.

ನಗರ ರೇಷನ್ ಸಂಘದ ಕಾರ್ಯದರ್ಶಿಯ ರಾಜೀನಾಮೆ

ಮೈಸೂರು ಮೇ ೧

ಮೈಸೂರು ರೇಷನ್ ದಾರರ ಸಂಘದ ಕಾರ್ಯದರ್ಶಿ ಶ್ರೀ ಕೆ. ಅನಂತಸುಬ್ಬರಾಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ಯಿತ್ತು, ಈ ಹೇಳಿಕೆಯಿತ್ತಿರುವರು.

ಹಲವು ವರ್ಷಗಳಿಂದಲೂ ಅನಧಿಕೃತ ರೀತಿಯಲ್ಲಿ ನಡೆಯುತ್ತಿದ್ದ ಮೈಸೂರು ನಗರದ ರೇಷನ್‌ದಾರರ ಸಂಘವನ್ನು ಒಂದು ಗೊತ್ತಾದ ರೀತಿನೀತಿಯಲ್ಲಿ ನಡೆಸುವಂತೆ ಮಾಡುವ ಕಾರ್ಯಕ್ರಮದಲ್ಲಿ ಕಳೆದ ಒಂದು ವರ್ಷದಿಂದಲೂ ನಾನು ನನ್ನ ಕೈಲಾದ ಸೇವೆ ಸಲ್ಲಿಸಿರುತ್ತೇನೆ.

ಆದರೆ ಇತ್ತೀಚಿಗೆ ಕೆಲವರು ಸಂಘದ ಸ್ಥಾನಮಾನಗಳನ್ನು ತಮ್ಮ ರಾಜಕೀಯ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದುದರಿಂದಲೂ, ಈ ಹಿಂದೆ ಧಾರಣೆವಾಸಿಗಳು ಒಂದಕ್ಕೊಂದರಷ್ಟು ಎಂದಾಗ ಯಾವ ವಿಧವಾದ ಸರಿಯಾದ ಕಾರ್ಯಕ್ರಮಗಳನ್ನು ಕೆಗೆದುಕೊಳ್ಳಲು ಅವಕಾಶ ಕೊಡದೆ ಇದ್ದುದಲ್ಲದೆ, ಈಗ ಧಾರಣೆವಾಸಿ ಎಂದಾಗ ಅದನ್ನು ಇಳಿಸಬೇಕೆಂದು ಕೇಳಿಕೊಳ್ಳುವ ಚಳುವಳಿಯಲ್ಲಿ ಸಂಘದ ನೀತಿನಿಯಮ ಧ್ಯೇಯೋದ್ದೇಶಗಳಿಗೂ, ಸ್ವಾತಂತ್ರ್ಯದಾತರಾದ ಪೂಜ್ಯ ಮಹಾತ್ಮಾ ಗಾಂಧೀಜಿಯವರ ತತ್ವಗಳಿಗೂ, ದೇಶದ ಹಿತದೃಷ್ಟಿಗೂ ವಿರೋಧವಾದ ವಿಷಯಗಳನ್ನು ಮನಸ್ವೇಚ್ಛೆ ಸೇರಿಸಿಕೊಂಡು ಪೂರ್ವಾಪರ ಪರಿಶೀಲನೆ ಮಾಡದೆ, ಕೇವಲ ಪ್ರಭಾವಶಾಲಿ ವ್ಯಕ್ತಿಗಳ ಕೈವಾಡಕ್ಕೆ ಒಳಗಾಗಿ ಸರ್ವಾಧಿಕಾರತ್ವ ನಡೆಸುತ್ತಾ ಬಂದುದರಿಂದಲೂ ಈ ಬಗ್ಗೆ ನಾನು ಇದುವರೆಗೂ ಮೂರು ಸಲ ಸೂಚನೆ ಕೊಟ್ಟು ಪ್ರಯತ್ನಿಸಿದರೂ ಸಾಧ್ಯವಿಲ್ಲದೆ, ಸಹ್ಯಸೇವೆ ಮಾಡಲು ಅವಕಾಶವಿಲ್ಲದೆ, ಅನಿವಾರ್ಯವಾಗಿ ಸಂಘಕ್ಕೆ ರಾಜೀನಾಮೆಯನ್ನು ಕೊಟ್ಟಿರುತ್ತೇನೆಂದು ಈ ಮೂಲಕ ಅರಿಕೆ ಮಾಡಿಕೊಂಡಿರುತ್ತೇನೆ.

ಮತ್ತು, ಈ ಬಗ್ಗೆ ಮೊನ್ನೆ (30-4-52ರಲ್ಲಿ) 'ಬೆಂಗಳೂರು ಚಲೋ' ಚಳುವಳಿಯ ಸಂಬಂಧವಾಗಿ ಮುಖ್ಯಮಂತ್ರಿಗಳಿಗೆ ಮನವಿಯೊಂದನ್ನು ಒಪ್ಪಿಸುವ ಸಲುವಾಗಿ ಸದಸ್ಯರ ಸಲಹೆಗಳನ್ನು ಕೇಳುವುದಕ್ಕಾಗಿಯೇ ಕಾರ್ಯಕಾರಿ ಸಮಿತಿಯನ್ನು ಕರೆದಿದ್ದೂ ಸಹ, ಕಾರ್ಯದರ್ಶಿಯಾದ ನನಗೆ ಯಾವ ಸಾಧಕಬಾಧಕ ವಿಚಾರದಲ್ಲೂ ಮಾತನಾಡುವುದಕ್ಕೂ ಸಹ ಅವಕಾಶ ಕೊಡದೆ ಸದಸ್ಯರೊಬ್ಬರು ಕೊಟ್ಟ ಸೂಚನೆಗಳನ್ನೇ 'ಎಲ್ಲರೂ ಒಪ್ಪಿಕೊಳ್ಳುತ್ತೀರೋ ? ಇಲ್ಲವೋ' ಎಂದು ಒತ್ತಾಯದ ಸರ್ವಾಧಿಕಾರತ್ವವನ್ನು ನಡೆಸಿದುದರಿಂದ, ಇನ್ನು ಹಾನು ಇದನ್ನು ಸಹಿಸಲಾರದೆ ಕಟ್ಟಕಡೆಯದಾಗಿ ಸುಭಾಶ್ಯಾಗ ಮಾಡಿ ಸಹ ನನ್ನ ಪ್ರತಿಭಟನೆಯನ್ನು ಸೂಚಿಸಿರುತ್ತೇನೆ.

ಆಹಾರ ಧಾನ್ಯಗಳ ಸಾಗಾಣಿಕೆ ನಿರ್ಬಂಧ ರದ್ದು ವ್ಯಾಪಾರಕ್ಕಿಲ್ಲ

ಬೆಂಗಳೂರು ಏ ೩೦

'ಸಾಗಾಣಿಕೆಯ ಸೌಕರ್ಯ ಜನಗಳ ಸಾಂಸಾರಿಕ ಹಾಗೂ ಸ್ವಜಿ ಬಳಕೆಗೆ ಮಾತ್ರವೇ ಹೊರತು, ವ್ಯಾಪಾರ ಮಾಡುವುದಕ್ಕಲ್ಲ' ಎಂಬುದಾಗಿ ಆಹಾರ ಧಾನ್ಯಗಳ ಸಾಗಾಣಿಕೆ ಮೇಲಿನ ನಿರ್ಬಂಧವನ್ನು ರದ್ದುಗೊಳಿಸಿದ ಬಗ್ಗೆ ಸರ್ಕಾರದವರು ಈ ದಿನ ಪ್ರಕಟಣೆಯೊಂದನ್ನು ಹೊರಡಿಸಿ, ಸ್ಪಷ್ಟಪಡಿಸಿದ್ದಾರೆ.

ಮೇ ೧ರಿಂದ ಸಾಗಾಣಿಕೆ ಹಕೋಟೆಯನ್ನು ರದ್ದುಗೊಳಿಸಿದ ಬಗ್ಗೆ ಮೈಸೂರು ಸರ್ಕಾರದವರು ಈವರೆಗೆ ಹೊರಡಿಸಿದ ಪ್ರಕಟನ ಪತ್ರಗಳ ಅರ್ಥ ಮತ್ತು ವ್ಯಾಪ್ತಿಯನ್ನು ಇಂದಿನ ಪ್ರಕಟಣೆ ಸ್ಪಷ್ಟಪಡಿಸಿದೆ.

ಶಾಸನಬದ್ಧ ಪಡಿತರವಿರುವ ಪ್ರದೇಶಗಳನ್ನು ಬಿಟ್ಟು ಉಳಿದ ಕಡೆಗಳಲ್ಲಿ ಜನಗಳು ತಮ್ಮ ಸಾಂಸಾರಿಕ ಹಾಗೂ ಸ್ವಜಿ ಉಪಯೋಗಕ್ಕಾಗಿ ಆಹಾರ ಧಾನ್ಯ ಸಾಗಿಸಿಕೊಳ್ಳಲು ಅನುಕೂಲ ಮಾಡಿಕೊಡುವ ಸಲುವಾಗಿಯೇ ಹೊರತೂ ವ್ಯಾಪಾರಕ್ಕಲ್ಲ, ಎಂದು ಸರ್ಕಾರ ಸ್ಪಷ್ಟಪಡಿಸಬಯಸುತ್ತದೆ.

ಧಾನ್ಯರೂಪದ ಕಂದಾಯ ವಸೂಲಿ ಆಜ್ಞೆ ಮುಂದಿನ ಸುಗ್ಗಿಯಿಂದ ಜಾರಿಗೆ ಬಂದ ಮೇಲೂ ಅನಿರ್ಬಂಧ ವ್ಯಾಪಾರಕ್ಕೆ ಅವಕಾಶವಿಂದ ರಹದಾರಿ ಪಡೆದ ವರ್ತಕರ ಮೂಲಕ ಮಾತ್ರವೇ ವ್ಯಾಪಾರಕ್ಕೆ ಅವಕಾಶವಿರುವುದುನ್ನೆ ಜನಾಣ ಒಳಿತಿಗಲ್ಲದೆ ಬೇರೆ ಉದ್ದೇಶಗಳಿಗಾಗಿ ಆಹಾರ ಧಾನ್ಯಗಳನ್ನು ಸಾಗಿಸುವುದು. ಅಕ್ರಮವಾದುದು ಮತ್ತು ಅಂತಹವರು ಸಂಸ್ಥಾನದಲ್ಲಿ ಜಾರಿಯಲ್ಲಿರುವ ಆಹಾರ ಧಾನ್ಯಗಳ ಸಂಗ್ರಹಣ (ಸುಗ್ಗಿ) ಆಜ್ಞೆಯ ರೀತ್ಯ ಶಿಕ್ಷೆಗೆ ಗುರಿಯಾಗುವರೆಂದು ಜ್ಞಾಪಿಸಬೇಕಾಗಿದೆ. ಆಹಾರ ಧಾನ್ಯಗಳ ಅನಿರ್ಬಂಧ ಮಾರಾಟಕ್ಕೆ ಅವಕಾಶವಿಲ್ಲ. ಏಕೆಂದರೆ ಆಹಾರ ಧಾನ್ಯಗಳ ಮಾರಾಟವನ್ನು ನಿಷೇಧಿಸುವ ಆಹಾರ ಸಂಗ್ರಹಣದ ಆಜ್ಞೆ ಯ ಕ ತ್ಯಂ ಬಂಧ ವಿಧಿ ಇನ್ನೂ ಜಾರಿಯಲ್ಲಿದೆ.

ಪೇಟೆ ಧಾರಣೆ

ಮೈಸೂರು ತಾ|| 1-5-52

ಅಧಿಕೃತವಾದವು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	13-0	18-12
ಹೊಂಗೆಬೀಜ „	11-5	11.10
ಹುರುಳಿ „	32-6	34-0
ಹಸರು „	52-10	—
ಮೈ. ಕಾಯಿ ಮಣಕ್ಕೆ	6-6	15-0
ಹುಣಸೇಹಣ್ಣು „	2-10	3-6
ತೆಂಗಿನಕಾಯಿ 1100ಕ್ಕೆ	134-5	217-5

ಭಾಷಾವಾರು ಪ್ರಾಂತ್ಯ ರಚನೆ

ಭಾರತ ಸರ್ಕಾರದ ಮರಾಮತ್ ಶಾಖಾ ಸಚಿವ ಶ್ರೀ ಗಾಡ್ಗಿಲ್‌ರವರು ಮಹಾರಾಷ್ಟ್ರ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ, ಭಾಷಾವಾರು ಪ್ರಾಂತ್ಯ ನಿರ್ಮಾಣ ಸುಲಭ ಸಾಧ್ಯವಲ್ಲ. ಶಾಸನ ಮಾರ್ಗದಲ್ಲಿ ಈ ಕಾರ್ಯವಾಗಬೇಕು. ರಾಷ್ಟ್ರದ ಮುಂದಿರುವ ಅತ್ಯಂತ ಮುಖ್ಯ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಮುನ್ನ ಭಾಷಾವಾರು ವಿಭಜನೆ ಪ್ರಶ್ನೆ ಪ್ರಸ್ತಾಪಿಸುವುದು ವಿವೇಚನೆಯಲ್ಲವೆಂದು ಹೇಳಿರುವರು.

ಮದ್ರಾಸಿನ ಮುಖ್ಯಮಂತ್ರಿ, ಶ್ರೀ ರಾಜಾಜಿಯವರು ಮದ್ರಾಸಿನಲ್ಲಿ ಮಾತನಾಡುತ್ತಾ, ಭಾಷಾವಾರು ಪ್ರಾಂತ್ಯ ಒಳ್ಳೆಯದೆಂದು ಬಹುಕಾಲದಿಂದಲೂ ತಮ್ಮ ಅಭಿಪ್ರಾಯವೆಂದೂ ವಿಭಾಗ ಮಾಡುವುದರಲ್ಲಿ ವಿಳಂಬ ಮಾಡಿದಷ್ಟೂ ಕಷ್ಟಗಳು ಹೆಚ್ಚಾಗುತ್ತವೆ ಎಂದು ಹೇಳಿರುವರು.

ಚಿನ್ನ ಬೆಳ್ಳಿ ದರಗಳು

1-5-52		ರೂ.
ಸವರನ್		66-4
„		66-6
ಚಿನ್ನ	ತೊಲ	94-12
„	ಮೂಸ	93-4
ಬೆಳ್ಳಿ 100	ತೊಲ	170-0
„	ತೊಲ	1-12

ರಾಜಕಮಲ್

2—5—1952ರಿಂದ

ಜನಭರಿತವಾದ 8ನೇ ವಾರ

ವಿಜಯವಾರವ—

ಮದುವೆ ಮಾಡಿ ನೋಡು

(ತೆಲುಗು)

ಪಾತ್ರ:— ಎನ್. ಟಿ. ರಾಮರಾವ್, ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎಸ್.ವಿ.ರಂಗರಾವ್, ಜೋಗ್‌ರಾವ್.

ವುಡ್ ಲ್ಯಾಂಡ್ಸ್

2—5—52ನೇ ಶುಕ್ರವಾರದಿಂದ

ಆಮೋಘ ಪ್ರಾರಂಭ

ದಿನವೂ 3 ಆಟಗಳು

"ಲಕ್ಷ್ಮೀ ನಾರಾಯಣ್"

(ಹಿಂದಿ)

ಪಾತ್ರ:—ಮೀನಾಕುಮಾರಿ ಮಹಿಪಾಲ್

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೭೪ (ರಿಂಗ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೫ | ೩-೫-೧೯೫೨ನೇ ಶನಿವಾರ | ಸಂಚಿಕೆ ೨೦೮

ಉಸ್ಮೇನಿಯ ವಿಶ್ವವಿದ್ಯಾನಿಲಯ ಕೇಂದ್ರಕ್ಕೆ ಸೇರುವುದು

ಹಿಂದಿ ಪ್ರಧಾನ ಬೋಧನಾ ಭಾಷೆಯಾಗುತ್ತದೆ

ಹೈದರಾಬಾದಿನಲ್ಲಿರುವ ಉಸ್ಮೇನಿಯಾ ವಿಶ್ವವಿದ್ಯಾನಿಲಯವನ್ನು ಕೇಂದ್ರ ವಿಶ್ವವಿದ್ಯಾನಿಲಯವನ್ನಾಗಿ ಪರಿವರ್ತಿಸಿ ಕೇಂದ್ರ ಸರ್ಕಾರದ ಆಡಳಿತಕ್ಕೆ ತೆಗೆದುಕೊಂಡು ರಾಷ್ಟ್ರೀಯ ಭಾಷೆಯಾದ ಹಿಂದಿಯನ್ನು ಅಭಿವೃದ್ಧಿಗೊಳಿಸಲು ಭಾರತ ಮತ್ತು ಹೈದರಾಬಾದ್ ಸರ್ಕಾರಗಳು ಸಮಾಲೋಚನೆ ನಡೆಸಿ ತೀರ್ಮಾನಿಸಿವೆ. ಮುಂದಿನ ಕಾರ್ಯಕ್ರಮವನ್ನ ನಡೆಸಲು ಒಂದು ಸಮಿತಿಯನ್ನು ನೇಮಿಸಲಾಗಿದೆ.

ಇಲ್ಲಿ ಹಿಂದಿಯನ್ನು ಶಿಕ್ಷಣ ಮಾಧ್ಯಮವಾಗಿ ಮಾಡಲಾಗುತ್ತದೆ. ಉತ್ತರ ದಕ್ಷಿಣ ಭಾರತಗಳ ಸಾಂಸ್ಕೃತಿಕ ಸಂಬಂಧವನ್ನು ಹೆಚ್ಚಿಸಲು ಈ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ ಈ ವಿಶ್ವವಿದ್ಯಾನಿಲಯದ ವೆಚ್ಚವನ್ನು ಇಲ್ಲಿಯವರೆಗೆ ಹೈದರಾಬಾದ್ ಸರ್ಕಾರವು ವಹಿಸಿಕೊಳ್ಳುತ್ತಲಿತ್ತು. ಇನ್ನುಮುಂದೆ ಕೇಂದ್ರ ವಹಿಸಿಕೊಳ್ಳಬೇಕೆಂದು ಕೇಂದ್ರ ಸರ್ಕಾರ ಪ್ರಕಟಣೆ ಹೊರಡಿಸಿದೆ.

ಸಹಕಾರ ಪ್ರಚಾರ ಸಂಘದ ಅಧಿಕಾರವರ್ಗ

ಮೈಸೂರು ಮೇ ೩

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ವಾರ್ಷಿಕ ಮಹಾಸಭೆಯು ತಾ|| ೧—೫—೫೨ನೇ ಗುರುವಾರ ಶ್ರೀಯುತ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಂಜನಗೂಡು ರಸ್ತೆ ಬಂಗಲೆಯಲ್ಲಿ ನಡೆಯಿತು. ಪ್ರಸಕ್ತ ಸಾಲಿಗೆ ಈ ಕೆಳಗಿನಂತೆ ಮಹನೀಯರುಗಳು ಕಾರ್ಯಕಾರಿ ಸಮಿತಿಗೆ ಚುನಾಯಿತರಾಗಿರುವರು.

ಶ್ರೀಗಳಾದ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು (ಅಧ್ಯಕ್ಷರು), ಪಿ. ಗೋಪಾಲಕೃಷ್ಣಶೆಟ್ಟಿ, ಚಿನ್ನಸ್ವಾಮಿಶೆಟ್ಟಿ (ಗೌರವ ಕಾರ್ಯದರ್ಶಿಗಳು), ಸದಸ್ಯರುಗಳು—ಜಿ. ನಂಜುಂಡಪ್ಪ, ಸಿ. ಎಸ್. ಸುಬ್ರಮಣ್ಯಶಾಸ್ತ್ರಿ, ಟಿ. ಆರ್. ಜಗನ್ನಾಥರಾವ್, ಸಿ. ಡಿ. ನಾಗರಾಜರಾಯರಾವ್, ಹೆಚ್. ಟಿ. ರಂಗಣ್ಣ, ಪಿ. ನಾರಾಯಣಸ್ವಾಮಿ, ಹೆಚ್. ಎಸ್. ನಾರಾಯಣಶೆಟ್ಟಿ, ಎ. ಕೃಷ್ಣಮೂರ್ತಿರಾವ್, ಎಂ. ಆರ್. ಸಿ. ಬಸಪ್ಪ, ಜಿ. ಎ. ದೇಶಿಕಾಚಾರ್ಯ, ಬಿ. ಎಸ್. ರುದ್ರಪ್ಪ, ಎಸ್. ಶ್ರೀನಿವಾಸಯ್ಯಂಗಾರ್.

ವಾರ್ಷಿಕೋತ್ಸವ

ನಾಟ್ಯ ಕಲಾಚಾರ್ಯ ಶ್ರೀ ಎಂ. ಸಿ. ವೀರರ ನೇತೃತ್ವದಲ್ಲಿ ನಾಟ್ಯಕಲಾ ಸೇವೆಯನ್ನು ಮಾಡುತ್ತಿರುವ ಮೈಸೂರಿನ ಶ್ರೀ ನಟರಾಜ ನಾಟ್ಯಕಲಾ ಮಂಡಲಿಯವರು ನಾಳೆ ಮೈಸೂರು ಪುರಭವನದಲ್ಲಿ ತಮ್ಮ ಮಂಡಲಿಯ ೧೦ನೇ ವಾರ್ಷಿಕೋತ್ಸವವನ್ನೂ ಭರತನಾಟ್ಯ ಸ್ಥಾಪನಾಚಾರ್ಯ ಭರತ ಮುನಿಯ ಜಯಂತಿಯನ್ನೂ ಆಚರಿಸುತ್ತಾರೆ.

ಈ ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಮುನಿಸಿಪಲ್ ಕಮಿಷನರ್ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ವಹಿಸಲಿದ್ದಾರೆ.

ಶ್ರೀ ಬಿ. ಬೀರಪ್ಪ

ಬೆಂಗಳೂರು ಮೇ ೨

ವಾಣಿಜ್ಯ ಮತ್ತು ಕೈಗಾರಿಕಾ ಶಾಖಾ ಅಡಿಷನಲ್ ಡೈರೆಕ್ಟರ್ ಶ್ರೀ ಬಿ. ಬೀರಪ್ಪನವರನ್ನು ದಿವಂಗತ ಶ್ರೀ ಆರ್. ರಾಮಕೃಷ್ಣರವರ ಸ್ಥಾನದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಡೈರೆಕ್ಟರಾಗಿ ನೇಮಿಸಲಾಗಿದೆ.

ಕಾರ್ಯಕಾರಿ ಸಮಿತಿ ಸಭೆ

ಮೈಸೂರು ಮೇ ೩

೩೦-೪-೫೨ನೇ ಬುಧವಾರ ಸಾಯಂಕಾಲ ಸಂಘದ ಅಧ್ಯಕ್ಷರಾದ ಶ್ರೀ ಸಿ. ಜಿ. ದೇವನಾಥಾಚಾರ್ಯರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಕಾರ್ಯಕಾರಿ ಸಮಿತಿ ಸಭೆ ಸೇರಿ ಈ ನಿರ್ಣಯವನ್ನು ಮಾಡಿತು-

'ಸರ್ಕಾರದವರು ಮೋಟಾರು ಕೆಲಸಗಾರರಿಗೆ ಬಸ್ಸು ಲೈಸನ್ಸುಗಳನ್ನು ಕೊಡಬೇಕೆಂದು ಅನೇಕ ಸಾರಿ ಕೇಳಿಕೊಂಡಾಗ್ಯೂ ಲೈಸನ್ಸುಗಳನ್ನು ಬೇರೆಯವರಿಗೆ ಕೊಟ್ಟು, ಕೆಲಸಗಾರರಿಗೆ ಕೊಡದೆ ಇದ್ದುದಕ್ಕಾಗಿ ತನ್ನ ವ್ಯಸನವನ್ನು ಸೂಚಿಸಿ, ಸರ್ಕಾರದವರು ಈ ಗಲಾದರೂ ಕೆಲಸಗಾರರಿಗೆ ಬಸ್ಸು ಲೈಸನ್ಸುಗಳನ್ನು ಕೊಡಬೇಕು.'

ಎಂ. ಪಿ. ಸಿ. ಸಿ. ಅಧಿವೇಶನ

ಕೃಷ್ಣರಾಜನಗರ ಮೇ ೨

ಎಂ ಪಿ ಸಿ ಸಿ ಅಧಿವೇಶನದ ಸ್ವಾಗತ ಸಮಿತಿಯ ಕಾರ್ಯಕಾರಿ ಸಮಿತಿಯ ಸಭೆಯು ನೆನ್ನೆದಿನ ಕೃಷ್ಣರಾಜನಗರದಲ್ಲಿ ಶ್ರೀ ವೈ. ಎನ್. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಇಲ್ಲಿಯವರೆಗೆ ನಡೆದ ಕಾರ್ಯಕಲಾಪಗಳನ್ನು ಪರಿಶೀಲಿಸಿ ಪೆಂಡಾಲ್, ಪಾಕಶಾಲೆ, ವಸತಿ, ಸ್ವಯಂಸೇವಕ, ಸಂಚಾರಿಯ ಆರೋಗ್ಯ, ಮೆರವಣಿಗೆ, ಕಾರ್ಯಾಲಯ ಉಪಸಮಿತಿಗಳನ್ನು ರಚಿಸಿತು.

ಎಂ. ಪಿ. ಸಿ. ಸಿ. ಸದಸ್ಯರು, ವಿಶೇಷ ಆಹ್ವಾನಿತರು ಮತ್ತು, ಪತ್ರಿಕಾ ಪ್ರತಿನಿಧಿಗಳಿಗೆ ಉಚಿತ ಊಟ ವಸತಿ ಏರ್ಪಡಿಸಲು ನಿರ್ಧರಿಸಿತು. ಹೊರಗಡೆಯಿಂದ ಬರುವ ಪ್ರೇಕ್ಷಕರಿಗೆ ಉಚಿತ ವಸತಿಮಾತ್ರ ಕೊಡಲಾಗುತ್ತದೆ ಊಟ ಒಂದಕ್ಕೆ ೦-೧೦-೦ ಮತ್ತು ತಿಂಡಿಗೆ ೦-೪-೦ ಕೊಡಬೇಕೆಂದು ತೀರ್ಮಾನವಾಯಿತು.

ಸಮಾಧಾನ ಪತ್ರ

ಸಿಂಹಳ ಗೃಹಮಂತ್ರಿ ಭಾಷಣವನ್ನು ಪ್ರತಿಭಟಿಸಿ ಭಾರತಸರ್ಕಾರವು ಕಳುಹಿಸಿದ್ದ ಪತ್ರಕ್ಕೆ ಸಿಂಹಳಸರ್ಕಾರವು ಭಾರತಕಾರಯ ಭಾರಂಭ ರೂಪೂಲಕ ,ಸಮಾಧಾನ ಪತ್ರವನ್ನು ಕಳುಹಿಸಿದೆ. ಮತದಾನಪಡೆಯಲು ಸಿಂಹಳ ಭಾರತ ಕಾಂಗ್ರೆಸ್ಸಿನವರು ಶಾಂತ ರೀತಿಯಿಂದ ಸತ್ಯಾಗ್ರಹ ನಡೆಸುತ್ತಲಿರುವಾಗ ಅವರಿಗೆ ತೊಂದರೆಯಾದರೆ ಸಿಂಹಳ ಸರ್ಕಾರವು ಅವರ ನೆರವಿಗೆ ಬರಬೇಕೆಂದು ತನ್ನ ಪತ್ರದಲ್ಲಿ ತಿಳಿಸಿತ್ತು.

ಒಂದುಕೋಟಿ ರೂ. ಬೆಲೆಯ ತಾಂತ್ರಿಕ ನೆರವು

ಕೊಲಂಬೋ ಯೋಜನೆಯ ಸದಸ್ಯ ರಾಷ್ಟ್ರವಾದ ಭಾರತವು ಯೋಜನೆಯ ತಾಂತ್ರಿಕ ಸಹಕಾರ ಕಮಿಟಿಗೆ ತನ್ನ ಕಾಣಿಕೆಯಾಗಿ ಒಂದುಕೋಟಿ ರೂ. ಬೆಲೆಯಷ್ಟು ತಾಂತ್ರಿಕ ಸಹಾಯ ನೀಡಬೇಕೆಂದು ಭಾರತ ಸರ್ಕಾರ ನಿರ್ಧರಿಸಿದೆ.

ವಿದ್ಯುಚ್ಛಕ್ತಿ ವಿಸ್ತೀರ್ಣ ಯೋಜನೆ

ಮದ್ರಾಸಿನಲ್ಲಿ ೧೩ ವಿದ್ಯುಚ್ಛಕ್ತಿ ವಿಸ್ತೀರ್ಣ ಯೋಜನೆಗಳನ್ನು ಸರ್ಕಾರವು ತಯಾರಿಸಿದೆ. ಇದಕ್ಕಾಗಿ ೧೮ ಲಕ್ಷ ರೂಪಾಯಿಗಳು ವೆಚ್ಚವಾಗುತ್ತದೆ.

ಎಣ್ಣೆ ರಫ್ತಿಗೆ ತಡೆ

ಅಮೇರಿಕಾದಲ್ಲಿ ಸುಮಾರು ೯೦ ಸಾವಿರ ಎಣ್ಣೆ ಕಾರ್ಮಿಕರು ಮುಷ್ಕರ ಹೂಡಿರುವುದರಿಂದ ಪೆಟ್ರೋಲ್ ಮುಂತಾದ ಎಣ್ಣೆಗಳನ್ನು ಅಮೇರಿಕಾದಿಂದ ಕೆನಡಾವಿನ ಹೊರತು ಇನ್ನಾವ ದೇಶಕ್ಕೂ ಕಳುಹಿಸಕೂಡದೆಂದು ಅಧ್ಯಕ್ಷ ಟ್ರೂಮನ್ನರು ಆಜ್ಞೆ ಮಾಡಿರುವರು.

ಮತದಾನ

ಭಾರತಾದ್ಯಂತ ೨೪ ಕ್ಷೇತ್ರಗಳಲ್ಲಿ ನೆನ್ನೆಯದಿನ ಭಾರತ ರಾಷ್ಟ್ರಾಧ್ಯಕ್ಷರನ್ನು ಚುನಾಯಿಸಲು ಮತದಾನ ನಡೆಯಿತು-

ಕೇಂದ್ರ, ಪ್ರಾಂತ್ಯ ಸರ್ಕಾರಗಳ ಸಚಿವರುಗಳು, ಹಿರಿಯ ಮತ್ತು ಕಿರಿಯ ಶಾಸನಸಭೆಯ ಸದಸ್ಯರುಗಳು ಮತದಾನ ನೀಡಿದರು- ಮಂಗಳವಾರ ಎಣಿಕೆ ನಡೆಯುತ್ತದೆ.

ಚೀಣದಿಂದ ಒಂದು ಲಕ್ಷ ಟನ್ ಅಕ್ಕಿ

ಭಾರತಕ್ಕೆ ಚೀಣ ಒಂದು ಲಕ್ಷ ಟನ್ ಅಕ್ಕಿ ರಫ್ತುಮಾಡಲು ಸಮ್ಮತಿಸಿದೆ. ಈ ಬಗ್ಗೆ ಅಗತ್ಯವಾದ ಒಪ್ಪಂದಗಳಿಗೆ ಶೀಘ್ರದಲ್ಲೇ ಪೀಕಿಂಗಿನಲ್ಲಿ ಸಹಿ ಮಾಡಲಾಗುವುದು. ಇದರ ಬೆಲೆ ಬಹಳ ಮಟ್ಟಿಗೆ ಸರಿಯಾಗಿರುವುದೆಂದು ಹೇಳಲಾಗಿದೆ.

ಮಂತ್ರಿಗಳಿಗೆ ಸೆಕ್ಯೂರಿಟಿ ಅಧಿಕಾರಿಗಳು

ಎಲ್ಲಾ ಪ್ರಾಂತ್ಯ ಸಚಿವರುಗಳಿಗೆ ಸೆಕ್ಯೂರಿಟಿ ಅಧಿಕಾರಿಗಳನ್ನು ನೇಮಿಸಬೇಕೆಂದು ಕೇಂದ್ರಸರ್ಕಾರವು ಪ್ರಾಂತ್ಯ ಸರ್ಕಾರಗಳಿಗೆ ಸೂಚನೆಯಿತ್ತಿರುವುದಾಗಿ ಗೊತ್ತಾಗಿದೆ.

೨೦ ಜನರ ದಸ್ತಗಿರಿ

ಮೇ ದೇಯ ಆಚರಣೆದಿನ ಜವಾನಿನಲ್ಲಿ ನಡೆದ ಗಲಾಟೆಯ ಅಂಗವಾಗಿ ಸುಮಾರು ೫೦ ಜನರನ್ನು ದಸ್ತಗಿರಿಮಾಡಿರುವರು.

ಬೆಂಗಳೂರು ಚಲೋ

ಮೈಸೂರು ಮೇ ೨

ಆಹಾರವಸ್ತುಗಳ ಬೆಲೆ ಹೆಚ್ಚಿಸಿರುವುದನ್ನು ನಿಲ್ಲಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳಬೇಕೆಂದು ಮೈಸೂರುನಗರ ರೇಷನ್ ಸಂಘದ ಆಶ್ರಯದಿಂದ ಶ್ರೀಗಳಾದ ಎ. ಆರ್. ಸಿ. ಬಸಪ್ಪ, ಬಿ. ಜಿ. ದಾಸ್, ಎ. ಪಿ. ತಿಮ್ಮಯ್ಯ, ಜಿ. ಸ್ವಾಮಿದಾಸ್, ಹೆಚ್ಚಿಗೆ ವೇದಾಂತ, ಶಿವಸಿಂಹಯ್ಯನವರುಗಳು ಇದಿನ ಬೆಳಿಗ್ಗೆ ರೈಲಿನಲ್ಲಿ ಬೆಂಗಳೂರಿಗೆ ತೆರಳಿದರು.

ಈ ನಿಯೋಗದವರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಭೇಟಿಮಾಡಿ ದರ ಹೆಚ್ಚಿಸಿರುವುದರಿಂದ ಜನರಿಗಾಗಿರುವತೊಂದರೆಯನ್ನು ವಿವರಿಸಿ, ಮೊದಲಿನದರದಲ್ಲಿಯೇ ಆಹಾರವಸ್ತುಗಳನ್ನು ಮಾರಬೇಕೆಂದು ಮನವಿಕೊಂಡರು. ಮುಖ್ಯಮಂತ್ರಿಗಳು ಸಾವಧಾನದಿಂದ ಅವರ ಮನವಿಯೇ ದೀರ್ಘವಾಗಿ ಪರಿಶೀಲಿಸಿ ಈರೀತಿ ಬೆಲೆಹೆಚ್ಚಿಸುವುದಾಗಿ ಸಮಾಧಾನ ಕಾರಣವನ್ನಿತ್ತರು.

ಭಾರತದ ಉತ್ಪತ್ತಿ ಸಮಸ್ಯೆಗಳಿಗೆ ಪರಿಹಾರ

ಕೈಗಾರಿಕಾಭಿವೃದ್ಧಿ ಮತ್ತು ಯಾಂತ್ರಿಕ ಹೊಲ ಸಾಗುವಳಿ, ಇವೆರಡೇ ಭಾರತದ ಉತ್ಪತ್ತಿಯನ್ನು ಹೆಚ್ಚು ಮಾಡುವುವು ಎಂದು ಅಮೇರಿಕಕ್ಕೆ ವ್ಯವಸಾಯವಿಧಾನಗಳನ್ನು ಅಭ್ಯಾಸಿಸಲು ಬಂದ ಭಾರತ ಸರ್ಕಾರದ ಅಧಿಕಾರಿಗಳೊಬ್ಬರು ವ್ಯಕ್ತಪಡಿಸಿದ್ದಾರೆ.

ನಾಲ್ಕು ಅಂಶಗಳ ಯೋಜನೆಯ ಪ್ರಕಾರ ಆಹಾರ ಇಲಾಖೆಯಲ್ಲಿ ಬೆಣ್ಣೆ ಮತ್ತು ವನಸ್ಪತಿ ಎಣ್ಣೆಯ ಇನ್ಸ್‌ಪೆಕ್ಟರ್ ಆದ ಶ್ರೀ ಬಾಲಚಂದ್ರ ಎಸ್. ದಾನೆಯವರು ತಮ್ಮ ನಾಲ್ಕು ತಿಂಗಳ ಅಭ್ಯಾಸವನ್ನು ಮುಗಿಸಿಕೊಂಡು ನವದೆಹಲಿಗೆ ಪ್ರಯಾಣ ಬೆಳೆಸುವರು.

ಕೇವಲ ಯಾಂತ್ರಿಕ ಸಾಧನೆಗಳನ್ನು ವ್ಯವಸಾಯಕ್ಕೆ ಉಪಯೋಗಿಸುವುದರಿಂದ ಉತ್ಪತ್ತಿ ಹೆಚ್ಚಾಗುವುದಿಲ್ಲ. ಅದರಿಂದ ನಿರುದ್ಯೋಗವು ತಲೆದೋರುತ್ತದೆ. ಆದರೆ ಅದರ ಜೊತೆಗೆ ಕೈಗಾರಿಕಾಭಿವೃದ್ಧಿಯನ್ನೂ ಮಾಡಿದ್ದೇ ಆದರೆ, ಬಹು ಶೀಘ್ರದಲ್ಲಿಯೇ ನಮ್ಮ ಆರ್ಥಿಕ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಬಹುದು ಎಂದು ಶ್ರೀ ದಾನೆಯವರು ನುಡಿದರು.

ಭಾರತವು ಹಾಲು ಮತ್ತು ಅದಕ್ಕೆ ಸಂಬಂಧಪಟ್ಟ ಆಹಾರವಸ್ತುಗಳನ್ನು ಅಮೇರಿಕದಂತೆ ಹೆಚ್ಚು ಹೆಚ್ಚಾಗಿ ತಯಾರು ಮಾಡುವಂತೆ ನೋಡಿಕೊಳ್ಳಬೇಕು.

ಶ್ರೀ ದಾನೆಯವರಿಗೆ ಅಮೇರಿಕಾದಲ್ಲಿ ಅದ್ಭುತವಾಗಿ ಕಂಡದ್ದು ನ್ಯೂಯಾರ್ಕ್ ನಗರದ ರಚನೆ ಮತ್ತು ಅಮೇರಿಕನ್ನರ ಸಹಕಾರ ಮನೋಭಾವ.

ಅಮೇರಿಕನ್ನರು ನನ್ನ ಬಗ್ಗೆ ಯಾವ ಕೆಟ್ಟ ಅಭಿಪ್ರಾಯವನ್ನೂ ಹೊಂದಲಿಲ್ಲ ಎಂದು ಅವರು ತಿಳಿಸಿದರು.

ಯುರೋಪಿನ ಮುಖಾಂತರವಾಗಿ ಶ್ರೀ ದಾನೆಯವರು ಭಾರತಕ್ಕೆ ಮರಳುವರು.

ಅಪ್ಪಣೆಯಿಲ್ಲದೆ ಪ್ರವೇಶವಿಲ್ಲ

ಅಮೇರಿಕದ ನಾಗರಿಕರು ನಿರ್ದಿಷ್ಟ ಅಪ್ಪಣೆಯಿಲ್ಲದೆ ಕಮ್ಯೂನಿಸ್ಟ್ ರಾಷ್ಟ್ರಗಳಿಗೆ ಪ್ರವೇಶಿಸಕೂಡದೆಂದು ಎಲ್ಲಾ ರೀತಿಯ ಪ್ರಯಾಣದ ಮೇಲೆ ಸ್ಟೇಟ್ ಇಲಾಖೆಯು ನಿರ್ಬಂಧವನ್ನು ಹಾಕಿದೆ.

ಗೃಹಸಚಿವರ ಎಚ್ಚರಿಕೆ

ಸಿಲೋನ್ ಕಾಂಗ್ರೆಸ್ಸಿನ ಈಗಿನ ಅನುಚಿತ ವರ್ತನೆಯು ಭಾರತದ ಜವಾಬ್ದಾರಿ ನಾಯಕರಿಗೂ, ಸಿಲೋನಿನವರಿಗೂ ಅಪಾಯ ಸಂಭವಿಸುವಂತಹುದು. ಎಂದು ಸಿಲೋನಿನ ಗೃಹಸಚಿವ ಸರ್ ಆಲಿವರ್ ಗುಣತಿಲಕೆ ಎಚ್ಚರಿಕೆ ಇತ್ತಿದ್ದಾರೆ.

ಬಟ್ಟೆಬೆಲೆ ಇನ್ನೂ ಇಳಿಯಬೇಕು

ಬಟ್ಟೆ ಬೆಲೆಗಳ ಇಳಿವು ಸಾಲದು ಇನ್ನೂ ಇಳಿಯಬೇಕು ಎಂಬುದಾಗಿ ಸೋಷಲಿಸ್ಟ್ ಪಕ್ಷದ ಮಹಾ ಕಾರ್ಯದರ್ಶಿ ಅಶೋಕ ಮೆಹ್ತಾರವರು ಭಾಷಣ ಒಂದರಲ್ಲಿ ಹೇಳಿರುವರು.

ಬಂಜರು ಅಭಿವೃದ್ಧಿ ಬೋರ್ಡ್

ರಾಷ್ಟ್ರದಲ್ಲಿನ ಬಂಜರು ಭೂಮಿಯ ಅಭಿವೃದ್ಧಿಗೆ, ಭಾರತ ಸರ್ಕಾರದವರು ಬೇಗನೆ ಭೂ ಅಭಿವೃದ್ಧಿ ಬೋರ್ಡೊಂದನ್ನು ರಚಿಸುವುದಾಗಿ ಗೊತ್ತಾಗಿದೆ. ಆಹಾರ ಸಚಿವರೇ ಬೋರ್ಡಿನ ಅಧ್ಯಕ್ಷರು. ಕೇಂದ್ರ ಟ್ರಾಕ್ಟರ್ ಸಂಸ್ಥೆಯ ಅಧ್ಯಕ್ಷ ಶ್ರೀ ಸಿ. ಪಿ. ಸಿಂಘಾನಿಯವರು ಕಾರ್ಯದರ್ಶಿಗಳು.

ಎರಡಾವರ್ತಿ ವೋಟು ಮಾಡಿದ್ದಕ್ಕೆ ಶಿಕ್ಷೆ

ಚನ್ನಪಟ್ಟಣದ ಫೋಟೋಸಾಬ್ ಉರುಫ್ ಸತ್ ಎಂಬಾತನು ಜನವರಿ ೨೧ನೇ ತಾರೀಖು ನಡೆದ ಮಹಾಚುನಾವಣೆಯಲ್ಲಿ ೨ ಸಾರಿ ವೋಟು ಮಾಡಿದನೆಂಬ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರು ಆತನಿಗೆ ಒಂದು ತಿಂಗಳು ಸಾಧಾರಣ ಶಿಕ್ಷೆಯನ್ನೂ ೨೦ ರೂಗಳ ದಂಡವನ್ನು ವಿಧಿಸಿದ್ದಾರೆ.

ಭಾರತಕ್ಕೆ ರಸಾಯನಿಕ ಗೊಬ್ಬರ

ಅಮೇರಿಕವು ಭಾರತಕ್ಕೆ ೧,೦೦,೦೦೦ ಟನ್ ರಸಾಯನಿಕ ಗೊಬ್ಬರವನ್ನೊದಗಿಸಲಿರುವ ಸಂಬಂಧದ ಒಪ್ಪಂದವೊಂದಕ್ಕೆ ದೆಹಲಿಯಲ್ಲಿ ಉಭಯರಾಷ್ಟ್ರಗಳ ಸಹಿಯಾಗಿದೆ.

ನಿಜವಲ್ಲ

ಏಪ್ರಿಲ್ ೨೮ನೇ ತಾ|| ನ ಭಾರತದ ಕೆಲವು ಪತ್ರಿಕೆಗಳಲ್ಲಿ ಷೇಕ್ ಅಬ್ದುಲ್ಲಾರವರ ಹೇಳಿಕೆಯೆಂಬುದಾಗಿ ಪ್ರಕಟವಾಗಿರುವ ಲೇಖನ ಅಧಿಕೃತವಾದುದಲ್ಲವೆಂದೂ ಕೃತಕ ಸೃಷ್ಟಿಯದೆಂದೂ ಭಾರತ ಮತ್ತು ಕಾಶ್ಮೀರದ ಬಗ್ಗೆ ಸದಾಶಯವಿಲ್ಲದವರಾರೋ ಈ ಕಾರ್ಯಮಾಡಿದರೆಂದೂ ಕಾಶ್ಮೀರ ಮತ್ತು ಜಮ್ಮು ಸಂಸ್ಥಾನ ಸರ್ಕಾರದ ಪ್ರಕಟನೆಯೊಂದು ತಿಳಿಸುತ್ತದೆ.

ವಿದೇಶಗಳಿಂದ ಮೋಟಾರು ತರಲು ಷರತ್ತು

ಸಾಫ್ಟ್‌ಕರೆನ್ಸಿ ದೇಶಗಳಿಂದ ಭಾರತಕ್ಕೆ ಮೋಟಾರು ಕಾರುಗಳನ್ನು ತರಲು ಭಾರತ ಸರ್ಕಾರವು ಷರತ್ತುಗಳನ್ನು ಹಾಕಿ ಅವಕಾಶ ಕೊಟ್ಟಿದೆ. ಆ ಷರತ್ತುಗಳ ಪ್ರಕಾರ ಭಾರತಕ್ಕೆ ಅದು ಆಮದಾಗುವ ಮುನ್ನ ಆ ಕಾರು ಪ್ರಯಾಣಿಕರಿಗೇ ೬ ತಿಂಗಳಿಂದ ಸೇರಿ ಅವರಿಂದ ಉಪಯೋಗಿಸಲ್ಪಟ್ಟಿರಬೇಕು, ಭಾರತಕ್ಕೆ ಆಮದಾದ ನಂತರ ಒಂದು ವರ್ಷಕಾಲ ಆತನು ಅದನ್ನು ಯಾರಿಗೂ ಮಾರಬಾರದು.

"ಮೈಸೂರಿನ ಹಿತದೃಷ್ಟಿ ನಿಮ್ಮ ಗುರಿಯಾಗಿರಲಿ"

ಬೆಂಗಳೂರು ಮೇ ೨

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಮತ್ತು ಮುಖ್ಯಮಂತ್ರಿಗಳೂ ಆದ ಶ್ರೀ ಕೆ ಹನುಮಂತಯ್ಯನವರು ನಿನ್ನೆ ದಿನ ಸಂಜೆ ಕಾರ್ಲ್‌ಟನ್ ಭವನದಲ್ಲಿ ಮೈಸೂರಿನಿಂದ ಪಾರ್ಲಿಮೆಂಟಿಗೂ ಮತ್ತು ಕೌನ್ಸಿಲ್-ಆಫ್-ಸ್ಟೇಟ್ಸ್‌ಗೂ ಚುನಾಯಿತರಾಗಿರುವ ಕಾಂಗ್ರೆಸ್ ಸದಸ್ಯರನ್ನು ಕಂಡು ಮಾತುಕತೆ ನಡೆಸಿದರು.

ದೆಹಲಿಯಲ್ಲಿ ಮೈಸೂರಿನ ಬಗ್ಗೆ ಈ ಸದಸ್ಯರ ಕರ್ತವ್ಯವನ್ನು ವಿವರಿಸಿ ಸಂಸ್ಥಾನದ ಮತ್ತು ರಾಷ್ಟ್ರೀಯ ಹಿತವನ್ನು ಪುರೋಭಿವೃದ್ಧಿಗೊಳಿಸಬೇಕೆಂದೂ ತಿಳಿಸಿದರು. ಈ ಸದಸ್ಯರು ಓರ್ವ ಚಾಲಕರನ್ನು ನೇಮಿಸಿ ಅವರ ಮೂಲಕ ಸಂಸ್ಥಾನಕ್ಕೆ ಸಂಬಂಧಪಟ್ಟ ಸರ್ವ ವಿಷಯಗಳನ್ನೂ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆಯಬಹುದೆಂದೂ, ಯಾವ ವಿಷಯವನ್ನು ಬೇಕಾದರೂ ಸರ್ಕಾರ ಈ ಸದಸ್ಯರಿಗೆ ತಿಳಿಸುವ ಬಗ್ಗೆ ಭರವಸೆ ನೀಡಿದರು.

ಉಪಾಧ್ಯಾಯ ಕ್ಷೇತ್ರದ ಫಲಿತಾಂಶ

ಬೆಂಗಳೂರು ಮೇ ೨

ಉಪಾಧ್ಯಾಯ ಕ್ಷೇತ್ರದಿಂದ ಲೆಜಿಸ್ಲೆಟಿವ್ ಕೌನ್ಸಿಲ್‌ಗೆ ಶ್ರೀಗಳಾದ ಎಂ. ಪಿ. ಎಲ್. ಶಾಸ್ತ್ರಿ, ಕೆ. ಸಂಪದ್ಗಿರಿರಾವ್, ಜ|| ಹೆಚ್. ಆರ್-ಅಬ್ದುಲ್‌ಗಫಾರ್‌ರವರು ಆರಿಸಿ ಬಂದಿದ್ದಾರೆ.

ಮುಖ್ಯಮಂತ್ರಿಗಳ ಸಂತಾಪ

ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮತ್ತು ಕೈಗಾರಿಕಾ ಸಚಿವ ಶ್ರೀ ಟಿ ಸಿದ್ದಲಿಂಗಯ್ಯನವರು ವಿಮಾನ ಅಪಘಾತದಲ್ಲಿ ಮಡಿದ ಶ್ರೀ ರಾಮಕೃಷ್ಣರವರ ಮನೆಗೆ ಹೋಗಿ ಶ್ರೀಮತಿ ರಾಮಕೃಷ್ಣರವರನ್ನು ಸಮಾಧಾನಪಡಿಸಿ ತಮ್ಮ ಅಗಾಧ ಅನುತಾಪವನ್ನು ಸೂಚಿಸಿದರು.

ಪೇಟೆ ಧಾರಣೆ

ಮೈಸೂರು ತಾ|| 2-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	12-0	18-14
ಹೊಂಗೆಬೀಜ	,,	9-10	10-12
ಹುರುಳಿ	,,	34-4	34-12
ಸೀಗೆಕಾಯಿ	,,	2-15	3-6
ಮೆ. ಕಾಯಿ, ಮಣಕ್ಕೆ		7-10	15-0
ಹುಣಸೇಹಣ್ಣು	,,	2-11	3-6
ತೆಂಗಿನಕಾಯಿ	1100ಕ್ಕೆ	110	252

ವಿವಾಹ ಮಹೋತ್ಸವ

ಮೈಸೂರು ಮೇ ೩

ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ ಶ್ರೀ ಎನ್. ಕೃಷ್ಣಯ್ಯಂಗಾರ್‌ರವರ ಪುತ್ರ ಶ್ರೀ ಬಿ. ಕೆ. ಸತ್ಯಾರವರಿಗೆ ನೀಲಗಿರಿ ವೆಲ್ಲಿಂಗ್‌ಟನ್‌ನಲ್ಲಿರುವ ಮಿಲಿಟರಿ ಅಕೌಂಟ್ಸ್ ಆಫೀಸರ್ ಶ್ರೀ ರಾವ್ ಸಾಹೇಬ್ ಎಸ್. ವಿ. ಅಯ್ಯರ್‌ರವರ ಪುತ್ರಿ ಶ್ರೀಮತಿ ರಾಜಲಕ್ಷ್ಮಿಯನ್ನು ತಂದುಕೊಂಡು ವಿವಾಹವು ೭ನೇ ತಾ|| ಬುಧವಾರ ಮತ್ತು ಶ್ರೀ ಕೃಷ್ಣಯ್ಯಂಗಾರ್‌ರ ಪುತ್ರಿ ಶ್ರೀಮತಿ ಭಾಗ್ಯಲಕ್ಷ್ಮಿಯನ್ನು ಹೈದರಾಬಾದಿನಲ್ಲಿರುವ ಶ್ರೀ ಕೆ. ವಿ. ಐಯ್ಯಂಗಾರ್‌ರ ಪುತ್ರ ಶ್ರೀ ಕೃಷ್ಣಯ್ಯಂಗಾರ್‌ರಿಗೆ ಕೊಟ್ಟು ವಿವಾಹವು ೧೨ನೇ ತಾ|| ಶ್ರೀ ಕೃಷ್ಣಯ್ಯಂಗಾರರ ಗೃಹದಲ್ಲಿ ನಡೆಯುತ್ತದೆ.

ಭಾರತಕ್ಕೆ ಗೋಧಿ

ಅಂತರರಾಷ್ಟ್ರೀಯ ಗೋಧಿ ಒಪ್ಪಂದ ಪ್ರಕಾರ ೧೯೫೨ನೇ ವರ್ಷದ ಉತ್ತರಾರ್ಧದಲ್ಲಿ ಭಾರತಕ್ಕೆ ಅಮೇರಿಕಾ, ಕೆನಡಾಗಳಿಂದ ೮ ಲಕ್ಷ ಟನ್ ಗೋಧಿ ಬರಲಿದೆ. ಒಟ್ಟು ಈ ವರ್ಷ ೩೨ ಲಕ್ಷ ಟನ್ ಗೋಧಿ ಬಂದಂತಾಗುತ್ತದೆ.

ಚಿನ್ನ ಬೆಳ್ಳಿ ದರಗಳು

2-5-52	ರೂ.
ಸವರನ್	66-0
,,	66-2
ಚಿನ್ನ ತೊಲ	94-0
,, ಮೂಸ	92-8
ಬೆಳ್ಳಿ 100 ತೊಲ	168-8
,, ತೊಲ	1-12

ನ್ಯೂ ಅಪೇರಾ
೩—೫—೫೨ ರಿಂದ
—: ಜಗತಲಪ್ರತಾಪನ್ :—
(ತಮಿಳು)
ಪಾತ್ರ—ಚಿನ್ನಪ್ಪ, ಎಂ. ಎಸ್. ಸರೋಜಿನಿ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.
—ಮುಂದಿನ ಬದಲಾವಣೆ—
ಜೂಪಿಟರ್‌ರವರ— "ರಾಣಿ"

ರಣಜಿತ್
೨—೫—೫೨ರಿಂದ ಅಮೋಘ ಪ್ರಾರಂಭ
ಹಂಲೋಗ್
ಪಾತ್ರ:—ನೂತನ್, ಶ್ಯಾಮ, ಸಜ್ಜನ್, ಬಾಲ್‌ರಾಜ್, ದುರ್ಗಾಕೋಟೆ.

ಪ್ರಕಾಶಕರು:—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೪-೫-೧೯೫೨ನೇ ಭಾನುವಾರ [ಸಂಚಿಕೆ ೨೦೯

ಕೋಲಾರ ಜಿಲ್ಲೆಯಲ್ಲಿ ನಿರ್ಗತಿಕರಿಗೆ ಉಚಿತ ಆಹಾರ

ಸರ್ಕಾರ ಆಹಾರನೀತಿಗೆ ಕಾಂಗ್ರೆಸ್ ಪಕ್ಷದ ಅನುಮೋದನೆ

ಬೆಂಗಳೂರು ಮೇ ೩

ಕೋಲಾರಜಿಲ್ಲೆಯಲ್ಲಿ ಪರಿಸ್ಥಿತಿ ಹದಗೆಟ್ಟಿರುವ ಭಾಗಗಳಲ್ಲಿ ನಿರ್ಗತಿಕರ ಪಟ್ಟಿಯೊಂದು ಕೂಡಲೇ ತಯಾರಿಸಲು ಮೈಸೂರು ಸರ್ಕಾರವು ವ್ಯವಸ್ಥೆಮಾಡಿದೆ. ಈ ನಿರ್ಗತಿಕರಿಗೆ ವಾರಕ್ಕೆ ೨ ಸೇರು ಆಹಾರ ಪದಾರ್ಥಗಳನ್ನು ಉಚಿತವಾಗಿ ಹಂಚಲು ಏರ್ಪಾಡುಮಾಡಲಾಗಿದೆ. ವಯಸ್ಸಾದವರು ಅಶಕ್ತರು, ಮುಂತಾದವರು ಈ ಪಟ್ಟಿಯಲ್ಲಿ ಸೇರುತ್ತಾರೆಂದು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿರುವರು.

ಸತ್ಯಾಂಶವನ್ನು ಎಷ್ಟು ಕಠೋರವಾದರೂ ಎತ್ತಿ ಹಿಡಿಯಬೇಕು

ಬೆಂಗಳೂರು ಮೇ ೩

ಬೆಂಗಳೂರು ಕಾರ್ಪೋರೇಷನ್ ಆಫೀಸಿನಲ್ಲಿ ಒಂದು ಪತ್ರಿಕಾಗೃಹ ಆರಂಭೋತ್ಸವವನ್ನು ಸಂಸ್ಥಾನವಾರ್ತಾ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಈದಿನ ನೆರವೇರಿಸಿದರು.

ಈ ಸಂದರ್ಭದಲ್ಲಿ ಶ್ರೀ ರಾಮಚಂದ್ರರಾಯರು ಸ್ವಾತಂತ್ರ್ಯ ಯುಗದಲ್ಲಿ ಪತ್ರಿಕೆಗಳ ಪಾತ್ರವನ್ನು ವಿವರಿಸುತ್ತಾ, ಪತ್ರಿಕೆಗಳು ಸತ್ಯಾಂಶವನ್ನು ಎಷ್ಟು ಕಠೋರವಾದರೂ ಎತ್ತಿಹಿಡಿಯಬೇಕೆಂದು ತಿಳಿಸಿದರು.

ಬೇಡಿಕೆಗಳಿಗೆ ಮನ್ನಣೆಯಿಲ್ಲ

ಬೆಂಗಳೂರು ಮೇ ೨

ಆಹಾರ ಬೆಲೆ ಏರಿಕೆ ಬಗ್ಗೆ ಪ್ರತಿಭಟನೆ ಸೂಚಿಸಿ ಕೂಡಲೇ ಹಿಂದಿನ ದರದಂತೆಯೇ ಮಾಡಬೇಕೆಂದು ಮನವಿ ಮಾಡಿಕೊಳ್ಳಲು ಮೈಸೂರು ರೇಷನ್‌ದಾರರ ಸಂಘದ ಅಧ್ಯಕ್ಷ ಶ್ರೀ ಬಿ. ಜಿ. ದಾಸ್‌ರವರ ನಾಯಕತ್ವದಲ್ಲಿ ಬೆಂಗಳೂರಿಗೆ ತೆರಳಿದ್ದ ಜಾಥಾವು ಈದಿನ ಮಧ್ಯಾಹ್ನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಭೇಟಿಮಾಡಿ ತನ್ನ ಮನವಿಯನ್ನು ಸಲ್ಲಿಸಿತು.

ಮುಖ್ಯಮಂತ್ರಿಗಳು ಅವರ ಮನವಿ ಸ್ವೀಕರಿಸಿ ಜಾಥಾದವರನ್ನು ಬಡವರ ಪ್ರತಿನಿಧಿಗಳೆಂದು ತಾವು ಪರಿಗಣಿಸುದಾಗುವುದಿಲ್ಲ. ವೈಯುಕ್ತಿಕ ವಿನಯಕ್ಕಾಗಿ ಭೇಟಿ ಕೊಡಲಾಗಿದೆ. ರಚನಾತ್ಮಕ ರೀತಿಯ ಸಲಹೆಗಳನ್ನು ನೀಡಿದಲ್ಲಿ ಪರಿಗಣಿಸಲಾಗುತ್ತದೆ. ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿರುವುದರಿಂದ ಪಕ್ಷದ ತೀರ್ಮಾನಕ್ಕೆ ತಾವು ತಲೆಬಾಗಬೇಕಾಗಿದೆ. ಪಕ್ಷವು ಸರ್ಕಾರಕ್ಕೆ ಎಲ್ಲಾ ವಿಷಯಗಳನ್ನು ಗಮನಿಸಿ ತಕ್ಕ ಸಲಹೆ ಕೊಡುತ್ತದೆ.

ಜನರಿಗೆ ಉತ್ತಮ ಆಹಾರಕೊಡಲು ಈಗಾಗಲೇ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗಿದೆ. ಪಾನನಿರೋಧವನ್ನು ತೆಗೆದುಹಾಕುವುದಕ್ಕಾಗುವುದಿಲ್ಲ. ಈ ರೀತಿಯಾದ ಪ್ರದರ್ಶನಗಳಿಂದ ಜನತೆಗೆ ಏನೂ ಪ್ರಯೋಜನವಾಗುವುದಿಲ್ಲವೆಂದು ಮುಖ್ಯಮಂತ್ರಿಗಳು ತಿಳಿಸಿದರು.

ವಾಣಿಜ್ಯ ಒಪ್ಪಂದ

ಭಾರತ ಸ್ವೀಡನ್ ನಡುವೆ ನಡೆದುಹೊಸ ವಾಣಿಜ್ಯ ಒಪ್ಪಂದ ಸೋಮವಾರ ಸಹಿಯಾಗಲಿದೆಯೆಂದು ಗೊತ್ತಾಗಿದೆ.

ಆಹಾರನೀತಿಗನುಮೋದನೆ

ಬೆಂಗಳೂರು ಮೇ ೩

ಉಭಯ ಶಾಸನಸಭಾ ಸದಸ್ಯರ ಸಭೆಯೊಂದು ಈ ದಿನ ಕಾರಲ್‌ಟನ್ ಭವನದಲ್ಲಿ ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಸರ್ಕಾರದ ಹೊಸ ಆಹಾರ ನೀತಿಯ ಬಗ್ಗೆ ವಿಪುಲ ಚರ್ಚೆ ನಡೆದು ಸಭೆಯು ತನ್ನ ಅನುಮೋದನೆಯನ್ನಿತ್ತಿದೆ.

ಶ್ರೀಮನ್ಮಹಾರಾಜರ ಅನುತಾಪ

ಬೆಂಗಳೂರು ಮೇ ೩

ಬುಧವಾರ ದೆಹಲಿ ಬಳಿಯ ವಿಮಾನ ಅಪಘಾತದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಶಾಖಾ ಡೈರೆಕ್ಟರ್ ಶ್ರೀ ಆರ್. ರಾಮಕೃಷ್ಣರವರು ನಿಧನರಾದುದಕ್ಕೆ ಶ್ರೀಮನ್ಮಹಾರಾಜರು ತಮ್ಮ ಅನುತಾಪವನ್ನು ವ್ಯಕ್ತಪಡಿಸಿರುವರು.

ಕರ್ತವ್ಯನಿಷ್ಠೆ ದಕ್ಷ ಅಧಿಕಾರಿಗಾರರ ಮರಣದಿಂದ ಸಂಸ್ಥಾನಕ್ಕೆ ವಿಶೇಷ ನಷ್ಟವಾಗಿದೆಯೆಂದು ಈ ದಿನ ಹೊರಬಿದ್ದ ಸರ್ಕಾರಿ ಪ್ರಕಟಣೆಯೊಂದು ತಿಳಿಸುತ್ತದೆ.

ನಿಮ್ನವರ್ಗದ ಕೇಂದ್ರ ಸಮಿತಿ

ಸಂಸ್ಥಾನದಲ್ಲಿ ನಿಮ್ನವರ್ಗದವರ ಪ್ರಗತಿಗಾಗಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕೇಂದ್ರ ಸಮಿತಿಯನ್ನು ರಚಿಸಲಾಗಿದೆ.

ಶಿಲ್ಪಿಸಿದ್ಧಾಂತಿ ಶ್ರೀ ಸಿದ್ದಲಿಂಗಸ್ವಾಮಿಯವರ ನಿರ್ಯಾಣ

ಮೈಸೂರು ಮೇ ೩

ಉತ್ತಮಕಲಾವಿದರೂ, ಶಿಲ್ಪಿಸಿದ್ಧಾಂತಿಗಳೂ ಆಗಿದ್ದ ಶ್ರೀ ಸಿದ್ದಲಿಂಗಸ್ವಾಮಿಯವರು ನಿನ್ನೆ ಮಧ್ಯಾಹ್ನ ಮೂರುಗಂಟೆಗೆ ನಿರ್ಯಾಣಹೊಂದಿದರು ಎಂದು ತಿಳಿಸಲು ವಿಷಾದಿಸುತ್ತೇವೆ.

ಈ ದಿನ ಬೆಳಗ್ಗೆ ರಾಜಮರ್ಯಾದೆಗಳೊಂದಿಗೆ ಶ್ರೀ ಸ್ವಾಮಿಯವರ ಮೆರವಣಿಗೆಯನ್ನು ಪ್ರಮುಖ ಬೀದಿಗಳಲ್ಲಿ ಮಾಡಲಾಯಿತು. ಶ್ರೀ ಸಿದ್ದಲಿಂಗಸ್ವಾಮಿಯವರಭೌತಿಕ ಶರೀರವನ್ನು ಅವರು ಕಟ್ಟಿಸಿರುವ ನಾಗಲಿಂಗ ಮಠದಲ್ಲಿ ಸಮಾಧಿಮಾಡಲಾಯಿತು.

ದರೋಡೆಗಾರರ ಪತ್ತೆಸುಳಿವು

ಪೂನಾದಿಂದ ಹೈದರಾಬಾದಿಗೆ ತೆರಳುತ್ತಿದ್ದಾಗ ಕೇಂದ್ರ ಸಚಿವ ಶ್ರೀ ಗಾಡ್ಗಿಲರ ಮೇಲೆ ಬಿದ್ದು, ಗಾಯಪಡಿಸಿ ಅವರ ಕೆಲವು ಸಾಮಾನುಗಳನ್ನು ದೋಚಿಕೊಂಡು ಹೋದುದರಲ್ಲಿ ಪ್ರಥಮವಾಗಿ ಅವರ ಕೈಗಡಿಯಾರವು ಪೂನಾ ಜೈಲಿನಲ್ಲಿ ದೊರೆತಿದೆ. ಇದರ ಮೇಲೆ 'ಎನ್. ವಿ. ಜಿ.' ಎಂಬ ಅಕ್ಷರಗಳಿವೆ. ಈ ಕೈಗಡಿಯಾರವು ಜೈಲು ಕಛೇರಿಯ ಒಂದು ಬೀರುವಿನ ಕೆಳಗೆ ದೊರಕಿದೆ. ಪೂನಾ-ಷೋಲಾಪುರ ನಡುವೆ ರೈಲ್ವೆ ಟಿಕೇಟುಗಳಿಲ್ಲದೆ ಪ್ರಯಾಣ ಮಾಡಿದರೆಂಬ ಅಪಾದನೆ ಮೇಲೆ ಅದೇ ದಿನ ಶಿಕ್ಷಿತರಾದ ೨೦ ಜನರನ್ನು ಜೈಲಿಗೆ ದಾಖಲ್ಮಾಡಲಾಯಿತು. ಆಗಲೇ ಈ ಕೈಗಡಿಯಾರವು ದೊರಕಿರುವುದರಿಂದ ಈ ೨೦ ಜನರಲ್ಲೊಬ್ಬನಾದರೂ ಈ ದರೋಡೆಗೆ ಸಂಬಂಧಪಟ್ಟವನಿರಬೇಕೆಂದು ಊಹಿಸಲಾಗಿದೆ. ಸಿ-ಐ-ಡಿ. ಪೋಲೀಸಿನವರು ಮುಂದಿನ ತನಿಖೆ ನಡೆಸುತ್ತಲಿರುವರು.

ಉಪವಾಸ ಮುಷ್ಕರ ಪ್ರಾರಂಭ

ಓಟಿನ ಹಕ್ಕನ್ನು ಪಡೆಯಲು ಸತ್ಯಾಗ್ರಹವನ್ನು ಪ್ರಾರಂಭಿಸಿರುವ ಸಿಂಹಳ ಭಾರತ ಕಾಂಗ್ರೆಸ್‌ನವರು ಉಪವಾಸ ಮುಷ್ಕರವನ್ನು ಹೂಡಲು ನಿರ್ಧರಿಸಿರುವರು ಪ್ರತಿ ಕಾಂಗ್ರೆಸ್ ನಾಯಕನೂ ೫ ದಿನ ಉಪವಾಸ ಮುಷ್ಕರ ಮಾಡುವನು ಇದರಜೊತೆಯಲ್ಲಿ ಒಂದು ದಿನ ಉಪವಾಸ ಮಾಡುವ ಸ್ವಯಂಸೇವಕ ತಂಡವಾಗಿರುತ್ತದೆ.

ಸರ್ಕಾರಿ ಡಿಪೋದಲ್ಲಿ ಅಕ್ಕಿ ಕೇಳುವವರೇ ಇಲ್ಲ

ಆಹಾರ-ಧಾನ್ಯಗಳ ಸಾಗಾಣಿಕೆ ಮೇಲೆ ಕಂಟ್ರೋಲ್ ಹೋದ್ದರಿಂದ ಮಂಡ್ಯ ದಸಂತೆಯಲ್ಲಿ ಪಾಲಿಷ್ ಆದ ಸಣ್ಣಕ್ಕಿಯು ರೂ. ಗೆ ಒಂದೂವರೆ ಸೇರಿನಂತೆ ಮಾರಾಟವಾಗುತ್ತಿತ್ತು. ಎರಡನೇ ದರ್ಜೆ ಅಕ್ಕಿ ರೂ-ಗೆ ಒಂದೂಮುಕ್ಕಾಲು ಸೇರಿನಂತೆ ಮಾರಾಟವಾಗುತ್ತಿತ್ತು. ಅನಿರ್ಬಂಧ ಆಗಿ ಎಷ್ಟುಬೇಕಾದರೂ ಅಕ್ಕಿಯನ್ನು ಬಹಿರಂಗವಾಗಿ ಕೊಳ್ಳಬಹುದಾಗಿತ್ತು.

ಹೀಗಾಗಿ ಸರ್ಕಾರಿ ಮತ್ತು ಸೊಸೈಟಿ ಡಿಪೋಗಳಲ್ಲಿ ಅಕ್ಕಿಯನ್ನು ಕೇಳುವವರೇ ಇಲ್ಲದಂತಾಗಿತ್ತು. ತಿಂಗಳ ಮೊದಲನೇ ದಿನವಾದರೂ ಅಕ್ಕಿಯನ್ನು ಕೇಳುವವರೇ ಇರಲಿಲ್ಲ.

ಭಾರತೀಯರ ಸತ್ಯಾಗ್ರಹ ಸಾಧುವಲ್ಲ

ಸಿಲೋನ್ ಸರ್ಕಾರದ ತೊಂದರೆಗಳನ್ನು ಎಚ್ಚರದಿಂದ ಪರಿಶೀಲಿಸಿದಲ್ಲಿ ಭಾರತೀಯ ಕಾಂಗ್ರೆಸ್ ನಾಯಕರು ಆರಂಭಿಸಿರುವ ಈ ಸತ್ಯಾಗ್ರಹ 'ತಪ್ಪು ತಿಳುವಳಿಕೆಯನ್ನು ಕೊಡುವ ಮತ್ತು ತೊಂದರೆ ಕೊಡುವಂತಹದಾಗಿ ಭಾರತ-ಸಿಲೋನ್ ಮೈತ್ರಿಯನ್ನು ಕೆಡಿಸುವಂತಹುದಾಗಿದೆ' ಎಂದು ತಿಳಿಯಬರುವುದು ಎಂದು ಭಾರತದಲ್ಲಿ ಸಿಲೋನ್ ಹೈಕಮಿಷನರ್ ಆದ ಶ್ರೀ ಸಿ. ಕುಮಾರಸ್ವಾಮಿಯವರು ಹೇಳಿಕೆಯೊಂದನ್ನು ಕೊಡುತ್ತಾ ತಿಳಿಸಿರುವರು.

ಸಚಿವರ ಅನುತಾಪ

ಕೇಂದ್ರ ಸಂಚಾರ ಶಾಖಾ ಸಚಿವ ಶ್ರೀಮತಿ ರಾಜಕುಮಾರಿ ಅಮೃತಕೌರ್‌ರವರು ದೆಹಲಿಯ ವಿಮಾನಾಪಘಾತದಲ್ಲಿ ಮಡಿದ ಶ್ರೀ ಆರ್. ರಾಮಕೃಷ್ಣನ್‌ರವರ ಬಂಧುವರ್ಗದವರಿಗೆ ವೈಯುಕ್ತಿಕವಾಗಿ ಭಾರತಸರ್ಕಾರದ ತಮ್ಮ ಪರವಾಗಿ ಅನುತಾಪವನ್ನು ಮೈಸೂರಿನ ಮುಖ್ಯಮಂತ್ರಿಗಳ ಮೂಲಕ ಕಳುಹಿಸಿದ್ದಾರೆ.

ನ್ಯೂಸ್‌ಪ್ರಿಂಟ್ ಹಂಚಿಕೆ

ನ್ಯೂಸ್‌ಪ್ರಿಂಟ್ ಹಂಚಿಕೆಯನ್ನು ಮುಂದುವರಿಸಲು ಕೇಂದ್ರಸರ್ಕಾರವು ನಿರ್ಧರಿಸಿ ಆಜ್ಞೆಯಿತ್ತಿದೆ.

† ಭಾರತ ಸರ್ಕಾರವು ಪುನಃ ಸಿಂಹಳ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದು ಅಲ್ಲಿ ಶಾಂತರೀತಿಯಿಂದ ಸತ್ಯಾಗ್ರಹ ನಡೆಸುತ್ತಲಿರುವ ಸಿಂಹಳ ಭಾರತ ಕಾಂಗ್ರೆಸ್ಸಿನವರ ಮೇಲೆ ಹಿಂಸಾತ್ಮಕ ಬೆದರಿಕೆಗಳಿಂದ ಸರ್ಕಾರವು ರಕ್ಷಿಸಬೇಕೆಂದು ತಿಳಿಸಿರುವುದು.

ಗ್ರಾಮಾಭಿವೃದ್ಧಿ ಸಮಿತಿ ಗಳನ್ನು ರದ್ದುಗೊಳಿಸಿ

ಬೆಂಗಳೂರು ಮೇ ೩

ಮೈಸೂರು ಲೆಜಿಸ್ಲೆಟಿವ್ ಅಸೆಂಬ್ಲಿ ಮತ್ತು ಲೆಜಿಸ್ಲೆಟಿವ್ ಕೌನ್ಸಿಲ್ಲಿನ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆ ನಿನ್ನೆ ಸಂಜೆ ಕಾರ್ಲಟನ್ ಭವನದಲ್ಲಿ ನಡೆಯಿತು. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು.

೯೧ ಮಂದಿ ಕಾಂಗ್ರೆಸ್ ಸದಸ್ಯರಲ್ಲಿ ೮೫ ಮಂದಿ ಸಭೆಗೆ ಆಗಮಿಸಿದ್ದರು. ಪ್ರಥಮವಾಗಿ ಪಾನನಿರೋಧ ಪ್ರಶ್ನೆಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

ಈ ವಿಷಯವಾಗಿ ಮಾತನಾಡಿದ ಬಹು ಮಂದಿ ಸದಸ್ಯರು ಈಗಿನ ಹಣಕಾಸಿನ ಪರಿಸ್ಥಿತಿಯಿಂದ ಉಳಿದ ಜಿಲ್ಲೆಗಳಿಗೆ ಪಾನನಿರೋಧವನ್ನು ವಿಸ್ತರಿಸಲು ಸಾಧ್ಯವಿಲ್ಲದಿದ್ದರೂ ಈಗಿರುವ ನೀತಿಯನ್ನೇ ಮುಂದೆಯೂ ಅನುಸರಿಸಿಕೊಂಡು ಬರಬೇಕೆಂದು ಅಭಿಪ್ರಾಯಪಟ್ಟರೆಂದು ತಿಳಿದುಬಂದಿದೆ.

ಎರಡನೆಯದಾಗಿ ಗ್ರಾಮಾಭಿವೃದ್ಧಿ ವಿವಿಧ ಸಮಿತಿಗಳನ್ನು ರದ್ದುಗೊಳಿಸುವ ವಿಷಯ ಸಭೆಯ ಮುಂದೆ ಪರಿಶೀಲನೆಗೆ ಬಂದು ಬಹುಮಂದಿ ಸದಸ್ಯರು ಸಮಿತಿಗಳನ್ನು ಕೂಡಲೇ ರದ್ದುಗೊಳಿಸಬೇಕೆಂದು ಅಭಿಪ್ರಾಯಪಟ್ಟರೆಂದೂ ಕೇವಲ ೬-೭ ಮಂದಿ ಇದನ್ನು ಉಳಿಸಿಕೊಳ್ಳುವ ಪರವಾಗಿ ಮಾತನಾಡಿದರೆಂದೂ ತಿಳಿದುಬಂದಿದೆ.

ರಾಷ್ಟ್ರಾಧ್ಯಕ್ಷರ ಚುನಾವಣೆ

ಬೆಂಗಳೂರು ಮೇ ೩

ರಾಷ್ಟ್ರಾಧ್ಯಕ್ಷರ ಚುನಾವಣೆಗೆ ನಿನ್ನೆ ಬೆಂಗಳೂರಿನಲ್ಲಿ ಮತದಾನ ನಡೆಯಿತು. ಲೆಜಿಸ್ಲೆಟಿವ್ ಅಸೆಂಬ್ಲಿ ಹಾಲ್ ಆವರಣದಲ್ಲಿ ಪೋಲಿಂಗ್‌ಗೆ ವ್ಯವಸ್ಥೆ ಮಾಡಲಾಗಿತ್ತು. ಮೈಸೂರು ಶಾಸನಸಭೆ ಕಾರ್ಯದರ್ಶಿ ಶ್ರೀ ಜಿ. ಎಸ್. ವೆಂಕಟರಮಣ ಅಯ್ಯರ್‌ರವರು ಚುನಾವಣಾಧಿಕಾರಿಗಳಾಗಿದ್ದರು,

ಪ್ರಾತಃಕಾಲ ೧೦ ಗಂಟೆಯಿಂದ ಸಂಜೆ ೫ ಗಂಟೆವರೆಗೆ ಮತದಾನ ನಡೆಯಿತು. ಮೈಸೂರು ಲೆಜಿಸ್ಲೆಟಿವ್ ಅಸೆಂಬ್ಲಿಯ ೯೯ ಮಂದಿಯಲ್ಲಿ ೯೭ ಮಂದಿಯೂ ಮೈಸೂರಿನಿಂದ ಲೋಕಸಭೆಗೆ ಆರಿಸಲ್ಪಟ್ಟಿರುವ ಹನ್ನೊಂದು ಮಂದಿಯಲ್ಲಿ ಹತ್ತು ಮಂದಿ ಕೌನ್ಸಿಲ್ ಆಫ್ ಸ್ಟೇಟ್ಸಿನ ಆರು ಮಂದಿ ಸದಸ್ಯರೂ ಮತವಿತ್ತರು.

ಬ್ಯಾಲಟ್ ಪೆಟ್ಟಿಗೆಯನ್ನು ಈದಿನವೇ ದೆಹಲಿಗೆ ಕಳುಹಿಸಲಾಯಿತು.

‡ ಇದೇ ೬ನೇ ತಾ|| ಟಿ ನರಸೀಪುರದಲ್ಲಿ ನಡೆಯಲಿರುವ ಕೆ. ಎಂ. ಪಿ. ಪಿ ಯ ಅಧಿವೇಶನಕ್ಕೆ ಪಕ್ಷದ ಸದಸ್ಯರೂ ಮತ್ತು ಹಿತೈಷಿಗಳು ಆಗಮಿಸಿ ಸಮಾರಂಭ ಯಶಸ್ವಿಯಾಗಿ ನಡೆಯಲು ನೆರವಾಗಬೇಕೆಂದು ಸ್ವಾಗತಸಮಿತಿ ಅಧ್ಯಕ್ಷರಾದ ಶ್ರೀ ಮಹಂತದೇವರು ಪ್ರಾರ್ಥಿಸುತ್ತಾರೆ.

ಇಂಡಿಯನ್ ಎಕ್ಸ್‌ಚೇಂಜ್ ಕಾನೂನು ಬದಲಾವಣೆ

ಭಾರತದ ವ್ಯಾಪಾರಕಟ್ಟೆಗಳ ಪರಿಮಿತರಾದ ಶ್ರೀ ಬಿ. ಪ್ರಸಾದರು ೪ ಅಂಶ ಯೋಜನೆಯ ಪ್ರಕಾರ ಅಮೇರಿಕಕ್ಕೆ ತೆರಳಿ ಅಲ್ಲಿ ಅಮೇರಿಕದ ವ್ಯಾಪಾರಕಟ್ಟೆಯ ಬಗ್ಗೆ ಅಭ್ಯಾಸಮಾಡಿದ್ದಾರೆ.

ಅದರ ಅಭ್ಯಾಸದ ಫಲವಾಗಿ ಇಂಡಿಯನ್ ಎಕ್ಸ್‌ಚೇಂಜ್ ಕಾನೂನುಗಳಲ್ಲಿ ಕೆಲವು ಬದಲಾವಣೆ ಮಾಡಲು ಭಾರತಕ್ಕೆ ಸಲಹೆ ಕೊಡುವುದಾಗಿ ತಿಳಿಸಿದ್ದಾರೆ.

ಭಾರತದ ವ್ಯಾಪಾರಕಟ್ಟೆಗಳ ಮೇಲೆ 'ಸ್ವಾಭಾವಿಕ ಹತೋಟಿ' ಇಡುವುದು ಅವಶ್ಯಕವೆಂಬ ನಿರ್ಧಾರಕ್ಕೆ ಶ್ರೀ ಪ್ರಸಾದರು ಬಂದಿದ್ದಾರೆ. ಅಮೇರಿಕದ ವ್ಯಾಪಾರಕಟ್ಟೆಗಳ ಜಯವು ಅಲ್ಲಿಯ ಸುದ್ದಿ ಸಂಚಾರ ಸೌಲಭ್ಯಗಳಿಂದಾಗಿ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಭಾರತದಲ್ಲಿ ಅಮೇರಿಕದ ಈ ವಿಧಾನಗಳನ್ನು ಜಾರಿಗೆ ತರಲು ಇನ್ನೂ ವರ್ಷಾರು ತಿಂಗಳಾಗಬಹುದು, ಅಥವಾ ಹಲವು ವರ್ಷಗಳೇ ಬೇಕಾದೀತು ಎಂದಿದ್ದಾರೆ.

ಭಾರತದ ವ್ಯಾಪಾರಕಟ್ಟೆಗಳ ವಿಷಯದಲ್ಲಿ ಶ್ರೀ ಪ್ರಸಾದರು ಅಮೇರಿಕನ್ನರಿಗೆ ಮಾಹಿತಿ ನೀಡಿಕೊಟ್ಟು ಅಮೇರಿಕನ್ನರ ಭಾರತದ ಎಕ್ಸ್‌ಚೇಂಜ್ ಬಗ್ಗೆ ತುಂಬಾ ಕುತೂಹಲವುಳ್ಳವರಾಗಿದ್ದಾರೆ ಎಂದು ಶ್ರೀ ಪ್ರಸಾದರ ಅಭಿಪ್ರಾಯ.

ಶ್ರೀ ಪ್ರಸಾದರೂ ಸಹಿತ ಅಮೇರಿಕನ್ನರ ಬಗ್ಗೆ ಮುಕ್ತಕಂಠದಿಂದ ಹೊಗಳಿದರು. ಅಮೇರಿಕನ್ನರು ಮೈತ್ರಿಭಾವನೆಯಿಂದ ನಡೆದುಕೊಳ್ಳುವ ಜನ ಎಂದು ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

ಅಂತರರಾಷ್ಟ್ರೀಯ ರೈತ ಸಂಘ

ವಾಷಿಂಗ್ಟನ್ ಮೇ ೧

ಸ್ವಾತಂತ್ರ್ಯ ಮತ್ತು ಪ್ರಜಾ ಸರ್ಕಾರ ಸೋವಿಯೆಟ್ ಕೈಗೊಂಬೆಯಾಗಿರುವ ಸರ್ಕಾರಗಳಿಗೆ ಮತ್ತು ದೇಶಕ್ಕೆ ಬೇಕು, ಎನ್ನುವುದೇ ಅಂತರರಾಷ್ಟ್ರೀಯ ರೈತ ಸಂಘದ ಉದ್ದೇಶ ಎಂದು ೪ ದಿನಗಳಿಂದ ಇಲ್ಲಿ ಸಭೆಸೇರಿದ್ದ ೩೦೦ ರೈತರ ಪ್ರತಿನಿಧಿಗಳು ಘೋಷಿಸಿದರು. ಈ ಸಮ್ಮೇಳನದಲ್ಲಿ ೧೧ ದೇಶದ ರೈತರು ಪ್ರತಿನಿಧಿಸಿದ್ದರು.

ಸೋವಿಯೆಟ್‌ರ ಭಯೋತ್ಪಾದಕ ಬೆದರಿಕೆಯನೀತಿಯನ್ನು ಈ ಸಮ್ಮೇಳನವು ಖಂಡಿಸಿ ನಿರ್ಣಯಮಾಡಿತು.

ಆ ಸಮ್ಮೇಳನದಲ್ಲಿ ಅಂಗೀಕೃತವಾದ ನಿರ್ಣಯಗಳು.

(೧) ಸೋವಿಯೆಟ್ ಕೈಗೊಂಬೆಯಾಗಿರುವ ದೇಶಗಳನ್ನು ಗುಲಾಮಗಿರಿಯಿಂದ ಮುಕ್ತಗೊಳಿಸುವುದು.

(೨) ರೈತರಿಗೆ ತಮ್ಮ ಹಿಂದಿನ ಭೂಮಿಯ ದೇಶಗಳಲ್ಲಿ ವಾಪಸು ಕೊಡಿಸುವುದು.

(೩) ಪ್ರಜಾ ಸರ್ಕಾರವನ್ನೇರ್ಪಡಿಸಿ, ಸ್ವತಂತ್ರ ಚುನಾವಣೆ ವೈಯುಕ್ತಿಕ ಸ್ವಾತಂತ್ರ್ಯಗಳಿಸಿಕೊಡುವುದು.

(೪) ಸ್ವಾತಂತ್ರ್ಯ ಹೊಂದಿದ ರಾಷ್ಟ್ರಗಳು ಐಕ್ಯ ಯುರೋಪಿನೊಂದಿಗೆ ಸಹಕಾರಮಾಡುವಂತೆ ಪ್ರಯತ್ನಿಸುವುದು.

ಈ ಸಂಘವು ೧೯೪೦ ರಲ್ಲಿ ರೈತರ ಆರ್ಥಿಕ ಮತ್ತು ರಾಜಕೀಯ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸ್ಥಾಪಿತವಾಯಿತು.

ರಣಜಿತ್

೨—೫—೫೨ರಿಂದ ಅಮೋಘ ಪ್ರಾರಂಭ

ಹಂಲೋಗ್

ಪಾತ್ರ:–ನೂತನ್, ಶ್ಯಾಮ, ಸಜ್ಜನ್, ಬಾಲ್‌ರಾಜ್, ದುರ್ಗಾಖೋಟೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

(ಸೀತಾವಿಲಾಸ ಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು.

ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಪ್ರಕಾಶಕರು:—ಜಿ.ಎಲ್. ಸ್ವಾಮಿ

ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ

ಜೈಹಿಂದ್ ಪ್ರೆಸ್, ಮೈಸೂರು

ಗೋಧಿ ಬೇಡ

ಭಾರತಾದ್ಯಂತ ಇತ್ತೀಚೆಗೆ ಆಹಾರ ವಸ್ತುಗಳ ಬೆಲೆಯನ್ನು ಏರಿಸಿರುವುದರಿಂದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಗೋಧಿಯನ್ನು ಕೊಳ್ಳುವವರೇ ವಿಶೇಷವಾಗಿ ಕಡಿಮೆಯಾಗಿರುವುದಾಗಿ ಹೇಳಲಾಗಿದೆ.

ಬೊಂಬಾಯಿ, ಮದ್ರಾಸ್ ಪ್ರಾಂತ್ಯಗಳಲ್ಲಿ ಅಧಿಕ ದಾಸ್ತಾನು ಉಳಿದುಹೋಗಿ ಮುಂದಿನ ಸರಬರಾಯಿಯನ್ನು ತಡಮಾಡಬೇಕೆಂದು ಕೇಂದ್ರವನ್ನು ಕೋರಿರುವುದಾಗಿ ಗೊತ್ತಾಗಿದೆ.

§ ಆಹಾರ ಸಂಗ್ರಹ ಸ್ಥಾನಗಳನ್ನು ಲೂಟಿ ಮಾಡಲು ಯಾರಾದರೂ ಪ್ರಯತ್ನಿಸಿದಲ್ಲಿ ತೀವ್ರ ಕ್ರಮ ತೆಗೆದುಕೊಳ್ಳಲಾಗುವುದೆಂದು ಮುಂಬೈ ಪೋಲೀಸ್ ಕಮಿಷನರ್ ಎಚ್ಚರಿಸಿದ್ದಾರೆ.

ಚಿನ್ನ ಬೆಳ್ಳಿ ದರಗಳು

3–5–52	ರೂ.
ಸವರನ್	66–0
"	66–2
ಚಿನ್ನ ತೊಲ	94–14
" ಮೂಡ	92–4
ಬೆಳ್ಳಿ 100 ತೊಲ	162–0
" ತೊಲ	1–12

ವುಡ್ ಲ್ಯಾಂಡ್ಸ್

2—5—52ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವಹಿ 3 ಆಟಗಳು

"ಲಕ್ಷ್ಮೀನಾರಾಯಣ್" (ಹಿಂದಿ)

ಪಾತ್ರ:—ಮೀನಾಕುಮಾರಿ ಮಹಿಪಾಲ್

ನ್ಯೂ ಅಪೇರಾ

೩—೫—೫೨ ರಿಂದ

—: ಜಗತಲಪ್ರತಾಪನ್ :— (ತಮಿಳು)

ಪಾತ್ರ—ಚಿನ್ನಪ್ಪ, ಎಂ. ಎಸ್. ಸರೋಜಿನಿ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.

—ಮುಂದಿನ ಬದಲಾವಣೆ—

ಜೂಪಿಟರ್‌ರವರ— "ರಾಣಿ"

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/– per month.

Rs. 16,500 or near offer

No brokers—Immediate possession—No encumbrence

Enquire at :— M. SUBBARAMAIAH & Co., Lansdowne Buildings, Mysore.

ಫೋನ್ ೫೭೪ (ಲೈನ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೬—೫—೧೯೫೨ನೇ ಮಂಗಳವಾರ [ಸಂಚಿಕೆ ೨೧೦

ಪೂನಾದಲ್ಲಿ ೧೪ ಸೋಷಲಿಸ್ಟರ ದಸ್ತಗಿರಿ

ಶಾಸನಸಭೆಗೆ ಸೋಷಲಿಸ್ಟ್ ಮತ್ತು ಕಮ್ಯೂನಿಸ್ಟ್ ಸದಸ್ಯರ ಬಹಿಷ್ಕಾರ

ಬೊಂಬಾಯಿ ಸರ್ಕಾರವು ಆಹಾರ ವಸ್ತುಗಳ ಬೆಲೆಯನ್ನು ಏರಿಸಿದ್ದಕ್ಕೆ ಪ್ರತಿಭಟಿಸಿ ಪೋಲೀಸ್ ಆಜ್ಞೆಯನ್ನು ಮುರಿದಿದ್ದಕ್ಕಾಗಿ ಪೂನಾದಲ್ಲಿ ಪೋಲೀಸಿನವರು ೧೪ ಜನ ಸೋಷಲಿಸ್ಟರನ್ನು ನಿನ್ನೆಯದಿನ ದಸ್ತಗಿರಿಮಾಡಿರುವರೆಂದು ಗೊತ್ತಾಗಿದೆ.

ನಿನ್ನೆ ಬೊಂಬಾಯಿನಲ್ಲಿ ನಡೆದ ಶಾಸನಸಭಾಧಿವೇಶನಕ್ಕೆ ಇಬ್ಬರು ಸೋಷಲಿಸ್ಟ್ ಒಬ್ಬ ಕಮ್ಯೂನಿಸ್ಟ್ ಸದಸ್ಯರು ಹಾಜರಾಗದೆ ಬಹಿಷ್ಕರಿಸಿದರೆಂದು ಗೊತ್ತಾಗಿದೆ.

ಎಂ. ಪಿ. ಸಿ. ಸಿ.ಗೆ ಬರುವವರಿಗೆ ಸೂಚನೆ

ಮೈಸೂರು ಮೇ ೫

ಕೃಷ್ಣರಾಜನಗರದಲ್ಲಿ ಇದೇ ತಿಂಗಳು ೯ನೇ ತಾ|| ನಡೆಯಲಿರುವ ಎಂ. ಪಿ. ಸಿ. ಸಿ. ವ್ಯವಸ್ಥೆಗಳೆಲ್ಲವೂ ಸ್ವಾಗತಸಮಿತಿಯ ನೇತೃತ್ವದಲ್ಲಿ ಸಾಗುತ್ತಲಿದೆ. ಸದಸ್ಯರುಗಳಿಗೆ ಟಿ ಬಿ, ಪುರಪ್ರಾಥಶಾಲೆ, ಸರಕಾರಿ ಮಾಧ್ಯಮಿಕ ಶಾಲೆಗಳಲ್ಲಿ ಬಿಡಾರದ ವ್ಯವಸ್ಥೆ ಮಾಡಲಾಗಿದೆ. ಹೈಸ್ಕೂಲ್ ಆವರಣದಲ್ಲಿ ಅಡಿಗೆ ಊಟಗಳಿಗೆ ಏರ್ಪಡಿಸಲಾಗಿದೆ. ಸಭೆ ನಡೆಯಲು ದೊಡ್ಡ ಚಪ್ಪರ ನಿರ್ಮಾಣಕಾರ್ಯ ಸಾಗುತ್ತಲಿದೆ.

ಬೆಂಗಳೂರು ಕಡೆಯಿಂದ ಬರುವವರು ಮೈಸೂರಿನಲ್ಲಿ ಇಳಿದು ಅರಸೀಕೆರೆಗೆ ಹೋಗುವ ಗಾಡಿಯಲ್ಲಿ ಪ್ರಯಾಣಮಾಡಬೇಕಾಗಿದೆ ಮೈಸೂರಿಂದ ಬೆಳಗ್ಗೆ ೭-೩೦ ಮಧ್ಯಾಹ್ನ ೧೨-೩೦ ಸಂಜೆ ೫-೧೫ ರಾತ್ರಿ ೮-೧೦ ಹೀಗೆ ೪ ಟ್ರೈನುಗಳಿವೆ.

ಅಲ್ಲದೆ ಅನೇಕ ಬಸ್ಸುಗಳೂ, ಹೋಗುತ್ತವೆ. ಹಾಗೆಯೇ ಶಿವಮೊಗ್ಗಾದಿಂದ ಹಾಸನ, ಕಡೆಯವರು ಅರಸೀಕೆರೆಯಿಂದ ಬಂದು ಅಲ್ಲೇ ಇಳಿಯಬಹುದು. ೭ ನೇ ತಾರೀಖು ಸಂಜೆಯಿಂದ ಕೃಷ್ಣರಾಜನಗರ ರೈಲ್ವೇನಿಲ್ದಾಣದಲ್ಲಿ ಸದಸ್ಯರನ್ನು ಸ್ವಾಗತಿಸಲು ಸ್ವಯಂಸೇವಕರು ಹಾಜರಿರುತ್ತಾರೆ.

ಒಂದೇ ದಿನ ಸಭೆ

ಮೇ ೮ ಮತ್ತು ೯ನೇ ತಾರೀಖು ಎರಡು ದಿನ ಎಂ ಪಿ. ಸಿ. ಸಿ. ಸಭೆ ಕೃಷ್ಣರಾಜನಗರದಲ್ಲಿ ನಡೆಯುವುದೆಂದು ಮೊದಲು ನಿರ್ಧರಿಸಲಾಗಿತ್ತಷ್ಟೆ. ಈಗ ಕೇವಲ ೯ನೇ ತಾರೀಖು ಮಾತ್ರ ಸಭೆ ನಡೆಯುವುದೆಂದು ನಿರ್ಧರಿಸಲಾಗಿದೆ.

ಪ್ರಭಾ * ಅಮೋಘ ಪ್ರಾರಂಭ 9—5—52 ರಿಂದ

ದಿನವಹಿ 3 ಆಟಗಳು

ಗುಡ್‌ಲಕ್ ಪಿಕ್ಚರ್ಸ್‌ರವರ ಅತ್ಯುತ್ತಮ ಸಂಗೀತದಿಂದ ಕೂಡಿದ ಸಾಮಾಜಿಕ ಹಿಂದಿ ಚಿತ್ರ.

* ಸಲೋನಿ *

ಪಾತ್ರ:–ಅಶೋಕ್‌ಕುಮಾರ್, ನಳಿನಿಜಯವಂತ್, ಪೂರ್ಣಿಮಾ, ಮೋಹನ ಮತ್ತು ರಣಧೀರ್.

ಉಭಯ ಶಾಸನಸಭಾ ಅಧಿವೇಶನ

ಮದ್ರಾಸಿನ ಹಿರಿಯ ಮತ್ತು ಕಿರಿಯ ಶಾಸನಸಭೆಗಳ ಸಂಯುಕ್ತ ಅಧಿವೇಶನವು ಈದಿನ ನಡೆಯುತ್ತದೆ. ಗವರ್ನರ್ ಶ್ರೀ ಶ್ರೀಪ್ರಕಾಶರವರು ಪ್ರಾರಂಭ ಭಾಷಣ ಮಾಡುತ್ತಾರೆ.

ಕಾಶ್ಮೀರ ಶಾಸನಸಭಾ ಅಧಿವೇಶನ

ಶ್ರೀನಗರದಲ್ಲಿ ಕಾಶ್ಮೀರ ಶಾಸನಸಭೆಯ ಪ್ರಥಮ ಅಧಿವೇಶನವು ನಿನ್ನೆ ಪ್ರಾರಂಭವಾಯಿತು. ಯುವರಾಜ ಕರಣಸಿಂಗ್‌ರವರು ಪ್ರಾರಂಭ ಭಾಷಣಮಾಡಿದರು.

ಇನಾಂ ರದ್ದು

ಬೊಂಬಾಯಿ ಪ್ರಾಂತ್ಯದಲ್ಲಿರುವ ಎಲ್ಲಾ ಇನಾಂತಿಗಳನ್ನು ಸರ್ಕಾರವು ರದ್ದುಗೊಳಿಸಲು ನಿರ್ಧರಿಸಿದೆ. ಆ ಇನಾಮತಿಗಳಿಂದ ವರ್ಷಕ್ಕೆಬರುತ್ತಿರುವ ಉತ್ಪತ್ತಿಯ ಏಳರಷ್ಟನ್ನು ಪರಿಹಾರವಾಗಿ ಕೊಡಲಾಗುತ್ತದೆಯೆಂದು ಹೇಳಲಾಗಿದೆ.

ಶ್ರೀ ಡಿ. ಕೆ. ಕುಂಟೆ

ಶ್ರೀ ಡಿ ಕೆ. ಕುಂಟೆಯವರು ಬೊಂಬಾಯಿನ ಶಾಸನಸಭೆಯ ಸ್ಪೀಕರ್‌ರಾಗಿ ನಿನ್ನೆಯದಿನ ಚುನಾಯಿತರಾದರು. ಇವರು ಕಾಂಗ್ರೆಸ್ ಪರ ಸ್ಪರ್ಧಿಸಿದ್ದರು.

ಹೊಸ ಸಂಶೋಧನೆ

ಮೈಸೂರು ಮೇ ೫

ಮದರಾಸ್‌ಪ್ರಾಂತ್ಯದಲ್ಲಿ ಸಾಮಾನ್ಯವಾಗಿ ಸೆಪ್ಟಂಬರ್‌ನಿಂದ ಡಿಸೆಂಬರ್‌ವರೆಗೆ ದೊರೆಯುವ ಸಾತಕಾಡು ಕಿತ್ತಳೆಹಣ್ಣುಗಳನ್ನು ಇನ್ನೂ ೫-೬ ತಿಂಗಳವರೆಗೂ ಉಪಯೋಗಿಸಲು ಅರ್ಹವಾಗುವಂತೆ ಇಡಲು, ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಸಂಸ್ಥೆಯು ಹೊಸ ಸಂಶೋಧನೆ ನಡೆಸಿ, ಕಂಡುಹಿಡಿದಿದೆ

ಇದೇರೀತಿಯಾಗಿ ಕೊಡಗಿನ ಕಿತ್ತಳೆ ಹಣ್ಣುಗಳನ್ನು ಅವುಗಳಕಾಲದಲ್ಲಲ್ಲದೆ ಇತರ ಕಾಲಗಳಲ್ಲೂ ಶೇಖರಿಸಿಟ್ಟು ಸುಲಭ ದರದಲ್ಲಿ ದೊರೆಯುವಂತೆ ಮಾಡಲು ಸಂಶೋಧನೆಗಳು ನಡೆದಿವೆ

ಪ್ರವಾಸ ರದ್ದು

ವಿದ್ಯಾಸಚಿವ ಶ್ರೀ ಎ. ಜಿ ರಾಮಚಂದ್ರ ರಾಯರು ಈದಿನ ಮೈಸೂರಿಗೆ ಬರಬೇಕಾಗಿದ್ದ ಪ್ರವಾಸವು ರದ್ದಾಗಿದೆಯೆಂದು ಗೊತ್ತಾಗಿದೆ.

ಕೊಡಗಿನ ಮಂತ್ರಿಗಳ ಸಂಬಳ ೩೫೦ ರೂ.

ಕೊಡಗಿನ ಮುಖ್ಯಮಂತ್ರಿ ಶ್ರೀ ಪೂನಾಚಾ ಮತ್ತು ಸಚಿವ ಶ್ರೀ ಮಲ್ಲಪ್ಪನವರುಗಳು ಕೇವಲ ೩೫೦ ರೂಪಾಯಿ ಸಂಬಳವನ್ನು ಮಾತ್ರ ಪಡೆಯುವರು. ಕಾಂಗ್ರೆಸ್ ಹೈಕಮ್ಯಾಂಡಿನಿಂದ ಇವರು ೭೫೦ ರೂ. ಸಂಬಳ ಪಡೆಯಲು ಸೂಚನೆ ಬಂದಿದ್ದಾಗ್ಯೂ ಇವರು ತಮ್ಮ ವೇತನವನ್ನು ಹೆಚ್ಚಿಸಿಕೊಳ್ಳುವುದಿಲ್ಲವೆಂದು ತಿಳಿಸಿರುವರು

ಉಪವಾಸ

ಸಿಂಹಳದಲ್ಲಿರುವ ೩ ಲಕ್ಷ ಜನರಿಗೆ ಮತದಾನ ಹಕ್ಕನ್ನು ಪಡೆಯಲು ಸಿಂಹಳ ಭಾರತ ಕಾಂಗ್ರೆಸ್ ಆಚರಿಸುತ್ತಲಿರುವ ಸತ್ಯಾಗ್ರಹದ ಅಂಗವಾಗಿ ಮಾಜಿ ಅಧ್ಯಕ್ಷರುಗಳಾದ ಮಿ|| ಅಜೀಜ್ ಮತ್ತು ತೊಂಡಮಾನ್‌ರವರು ೫ ದಿನ ಉಪವಾಸ ಮುಷ್ಕರವನ್ನು ಪೂರೈಸಿರುವರು.

ಶ್ರೀ ಕೆ. ರಾಮಲಿಂಗಂರವರು ನಿನ್ನೆಯಿಂದ ಉಪವಾಸ ಪ್ರಾರಂಭಿಸಿರುವರು.

ಅನೇಕ ಸ್ವಯಂಸೇವಕರು ಒಂದುದಿನ ಉಪವಾಸವನ್ನು ಮಾಡುತ್ತಲಿರುವರು.

ಅಧ್ಯಕ್ಷರ ಚುನಾವಣೆ

ಬೊಂಬಾಯಿಯ ಹಿರಿಯ ಶಾಸನಸಭೆಗೆ ಕಾಂಗ್ರೆಸ್ ಸ್ಪರ್ಧಿಗಳಾದ ಶ್ರೀ ಹುಕ್ಕೇರಿಯವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ವಾಮನರಾವ್‌ರವರನ್ನು ಉಪಾಧ್ಯಕ್ಷರನ್ನಾಗಿಯೂ ಆರಿಸಲಾಗಿದೆ ಶ್ರೀ ಎಸ್ ಆರ್. ಕಂಠಿಯವರು ಕಿರಿಯಸಭೆಯ ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಮತದಾನದ ಎಣಿಕೆ

ಭಾರತ ರಾಷ್ಟ್ರಾಧ್ಯಕ್ಷರ ಮತದಾನ ಎಣಿಕೆಯು ಈದಿನ ೧೧ ಗಂಟೆಗೆ ಪ್ರಾರಂಭವಾಗುವುದು. ಭಾರತಾದ್ಯಂತ ಮತದಾನ ನಡೆದು ೩೪ ಪೆಟ್ಟಿಗೆಗಳು ದೆಹಲಿಗೆ ಬಂದಿವೆ.

ಬೇಧಗಳು ಹೋಗುವುವು

ಈಗಿನ ಆಡಳಿತಕ್ಕೆ ತಕ್ಕಂತೆ ಭಾರತದಲ್ಲಿ ಪ್ರಾಂತ್ಯಗಳನ್ನು ಎ. ಬಿ. ಸಿ. ಎಂಬ ಭಾಗಗಳನ್ನಾಗಿ ಮಾಡಲಾಗಿದೆ.

ಈ ಬೇಧ ಭಾವವು ಬಹಳ ಬೇಗ ರದ್ದಾಗುತ್ತವೆ ಎಂಬುದೇ ನನ್ನ ಆಶಯ ಎಂದು ಕೇಂದ್ರ ಗೃಹಸಚಿವ ಶ್ರೀ ಕೆ. ಎನ್. ಖಟ್ಜುರವರು ದೆಹಲಿ ಶಾಸನಸಭೆಯ ಉದ್ಘಾಟನೆಮಾಡುತ್ತಾ ಹೇಳಿರುವರು.

ಸಭಾಧ್ಯಕ್ಷರ ಚುನಾವಣೆ

ಮದ್ರಾಸಿನಲ್ಲಿ ಹಿರಿಯ ಮತ್ತು ಕಿರಿಯ ಶಾಸನಸಭೆಗಳಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯು ಈದಿನ ನಡೆಯಲಿದೆ.

ನೈಜಾಮರು ಬೊಂಬಾಯಿಗೆ

ಹೈದರಾಬಾದ್ ನೈಜಾಮರು ನಿನ್ನೆಯ ದಿನ ಬೊಂಬಾಯಿಗೆ ಪ್ರಯಾಣಮಾಡಿದರು. ಅಲ್ಲಿ ಅವರು ಮೂರು ವಾರಗಳಕಾಲ ಇರುವರೆಂದು ಹೇಳಲಾಗಿದೆ.

ರಾಯಲುಸೀಮೆ ಪರಿಹಾರಕ್ಕೆ

ರಾಯಲು ಸೀಮೆಯ ಪರಿಹಾರ ಕಾರ್ಯಕ್ಕಾಗಿ ಹೈದರಾಬಾದ್ ೫೦ ಸಾವಿರ ರೂಪಾಯಿಗಳನ್ನು ಕೊಡಲಿದೆಯೆಂದು ಅಲ್ಲಿಯ ಮುಖ್ಯಮಂತ್ರಿಗಳು ಹೇಳಿರುವರು.

ಮಿ|| ಲಿಯಾನ್ ಸ್ಟೇನಿಂಗ್

ವಿಶ್ವಸಂಸ್ಥೆಯ ತಾಂತ್ರಿಕ ಸಹಾಯ ಬೋರ್ಡಿನ ರೆಸಿಡೆಂಟ್‌ರೆಪ್ರೆಸೆಂಟಟಿವ್ ಆಗಿ ಭಾರತದಲ್ಲಿ ಮಿ|| ಲಿಯಾನ್ ಸ್ಟೇನಿಂಗ್‌ರವರನ್ನು ನೇಮಿಸಲಾಗುತ್ತದೆ. ಅವರು ಪ್ರಕೃತದಲ್ಲಿ ವಿಶ್ವಸಂಸ್ಥೆಯ ಸೋಷಿಯಲ್ ಅಫೇರ್ಸ್ ಡಿವಿಜನ್ನಿನಲ್ಲಿ ಪ್ರಧಾನ ಪ್ರಿನ್ಸಿಪಾಲ್‌ರಾಗಿರುವರು,

ಪಾಸ್‌ಪೋರ್ಟ್ ವ್ಯವಸ್ಥೆ

ಭಾರತ–ಪಾಕಿಸ್ಥಾನಗಳ ನಡುವೆ ಪ್ರವಾಸಕ್ಕೆ ಪಾಸ್‌ಪೋರ್ಟ್‌ಗಳನ್ನು ಪಡೆಯಬೇಕೆಂಬ ವ್ಯವಸ್ಥೆಯನ್ನು ಪಾಕಿಸ್ಥಾನ ಸರ್ಕಾರವು ಸದ್ಯದಲ್ಲೇ ಜಾರಿಗೆ ತರಲಿರುವುದಾಗಿ ಹೇಳಲಾಗಿದೆ. ಇದಕ್ಕೆ ಸಂಬಂಧಪಟ್ಟ ಮಾತುಕತೆಗಳು ಭಾರತ ಪಾಕಿಸ್ಥಾನ ಪ್ರತಿನಿಧಿಗಳಲ್ಲಿ ಈಗಾಗಲೇ ನಡೆದಿರುವುದಾಗಿ ಗೊತ್ತಾಗಿದೆ.

ಅಂತರರಾಷ್ಟ್ರೀಯ ವ್ಯವಸಾಯ ಸಹಕಾರ ಸಮ್ಮೇಳನ

ವಾಷಿಂಗ್ಟನ್ ಮೇ ೨

ಆಗಸ್ಟ್ ೪ನೇ ತಾ|| ನಿಂದ ೧೦ ವಾರಗಳವರೆಗೆ ಅಮೇರಿಕದಲ್ಲಿ ಅಂತರರಾಷ್ಟ್ರೀಯ ವ್ಯವಸಾಯ ಸಹಕಾರ ಸಮ್ಮೇಳನವು ನಡೆಯುವುದು.

ಮೊದಲು ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಲ್ಲಿ ೫ ವಾರಗಳ ಅಧಿವೇಶನ ನಡೆದು, ಅಲ್ಲಿ ದೂರಪ್ರಾಚ್ಯ, ಆಫ್ರಿಕ, ಆಗ್ನೇಯ ಏಷ್ಯ ಮತ್ತು ಲ್ಯಾಟಿನ್ ಅಮೇರಿಕದಲ್ಲಿ ಗ್ರಾಮಾಂತರ ಸಹಕಾರ ಪದ್ಧತಿಯನ್ನು ಅಭಿವೃದ್ಧಿ ಮಾಡುವ ಬಗ್ಗೆ ಚರ್ಚಿಸಲಾಗುವುದು. ಚರ್ಚೆಯ ಕಾಲದಲ್ಲಿ ಸಮೀಪದಲ್ಲಿರುವ ಹಳ್ಳಿಗಳಿಗೆ ಭೇಟಿ ಕೊಟ್ಟು ಅಲ್ಲಿಯ ಸಹಕಾರ ಸಮಸ್ಯೆಗಳ ಬಗ್ಗೆ ಚರ್ಚಿಸುವರು.

ಅನಂತರ ೩ ವಾರಗಳಕಾಲ ಅಮೇರಿಕದ ಪಶ್ಚಿಮ ಮತ್ತು ದಕ್ಷಿಣದ ಸಂಸ್ಥಾನಗಳಿಗೆ ಭೇಟಿಕೊಟ್ಟು, ಅಭ್ಯಾಸದಿಂದ ಪ್ರಯೋಗಗಳನ್ನು ಮಾಡಿ ವಿಷಯ ಗ್ರಹಿಸುವರು. ರೈತರ ಸಹಕಾರ ಸಂಘಗಳನ್ನೂ ಮತ್ತು ಹೊಲಗಳನ್ನೂ ಸಂದರ್ಶಿಸಿ, ಅಲ್ಲಿ ಹಣ ಹೇಗೆ ಕೊಡುತ್ತಾರೆಂಬುದನ್ನು ತಿಳಿದುಕೊಳ್ಳುವರು. ಸಹಕಾರ ಸಂಘಗಳಲ್ಲಿ ಕೊಡಲಾಗುತ್ತಿರುವ ಅನೇಕ ಹಣದ ಸಹಾಯಗಳ ಬಗ್ಗೆಯೂ ಅಭ್ಯಾಸ ಮಾಡುವರು.

ಅಕ್ಟೋಬರ್ ೧೦ಕ್ಕೆ ಮುಗಿಯುವ ಕೊನೆಯವಾರವನ್ನು ರಾಜಧಾನಿ ವಾಷಿಂಗ್ಟನ್ನಿನಲ್ಲಿ ಕಳೆಯಲಾಗುವುದು. ಇಲ್ಲಿ ಅಮೇರಿಕ ಸರ್ಕಾರದ ವ್ಯವಸಾಯ ಮತ್ತು ಸಹಕಾರಶಾಖೆಗಳ ಅಧಿಕಾರಿಗಳೊಂದಿಗೆ ಸಮಸ್ಯೆಗಳನ್ನು ಚರ್ಚಿಸುವರು.

ಹೊಲಗಳಲ್ಲಿ ಹೆಚ್ಚು ಉತ್ಪತ್ತಿಮಾಡಲು ಬೇಕಾದ ಬಂಡವಾಳವನ್ನು ಸಹಕಾರಸಂಘಗಳಿಂದ ಹೇಗೆ ಪಡೆಯುವುದು ಎಂಬುದನ್ನು ಚರ್ಚಿಸುವುದೇ ಈ ಸಮ್ಮೇಳನದ ಮುಖ್ಯ ಉದ್ದೇಶ.

ಈ ಸಮ್ಮೇಳನದಲ್ಲಿ ಸುಮಾರು ೩೫ ದೇಶಗಳ ಪ್ರತಿನಿಧಿಗಳು ಭಾಗವಹಿಸುವರು. ಆಫ್ಘಾನಿಸ್ಥಾನ, ಈಜಿಪ್ಟ್, ಇಥಿಯೋಪಿಯ, ಇಂಡಿಯ, ಇರಾಕ್, ಇರಾನ್, ಇಸ್ರೇಲ್, ಜೋರ್ಡಾನ್, ಲೆಬನಾನ್, ಲೈಬೀರಿಯ, ಲಿಬಿಯ, ನೇಪಾಳ, ಪಾಕೀಸ್ಥಾನ, ಸೌದಿ ಅರೇಬಿಯ, ಭಾಗವಹಿಸುವ ದೇಶಗಳಲ್ಲಿ ಮುಖ್ಯವಾದುವು.

ಪರಸ್ಪರ ರಕ್ಷಣಾನಿಧಿ ಮತ್ತು ತಾಂತ್ರಿಕ ಸಹಾಯನಿಧಿಯಿಂದ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯವು ಈ ಸಮ್ಮೇಳನ ನಡೆಸುವ ಭಾರವನ್ನು ಹೊತ್ತಿದೆ.

ಹೊರಗಿನವರಿಗೆ ಪ್ರವೇಶವಿಲ್ಲ

ಸಿಂಹಳದಲ್ಲಿ ನಡೆಯುತ್ತಲಿರುವ ಸಿಂಹಳ ಭಾರತೀಯ ಕಾಂಗ್ರೆಸ್ಸಿನ ಸತ್ಯಾಗ್ರಹದಲ್ಲಿ ಭಾಗವಹಿಸಲು ತಿರುವಾಂಕೂರ್-ಕೊಚ್ಚಿನ್‌ಗೆ ಕಮ್ಯೂನಿಸ್ಟರು ಹೋಗಬೇಕೆಂದು ನಿರ್ಧರಿಸಿರುವುದನ್ನು ಸಿಂಹಳ ಸರ್ಕಾರ ತಿಳಿದು ಭಾರತದಿಂದ ಸಿಂಹಳಕ್ಕೆ ಯಾರೂ ಬರದಂತೆ ಭಾರತ ಸರ್ಕಾರ ತಡೆಯಬೇಕೆಂದು ಸಿಂಹಳ ಸರ್ಕಾರವು ಭಾರತಕ್ಕೆ ಮನವಿಮಾಡಿಕೊಂಡಿದೆ.

ಸಿಂಹಳದಲ್ಲಿರುವ ಭಾರತೀಯ ಕಾಂಗ್ರೆಸ್ ಕಾರ್ಯಾಚರಣ ಸಮಿತಿಯು ಸಹ ಸಿಂಹಳಕ್ಕೆ ಹೊರಗಿನಿಂದ ಯಾವ ಸ್ವಯಂಸೇವಕರೂ ಬರಬೇಕಾಗಿಲ್ಲವೆಂದು ಈಗಾಗಲೇ ತಿಳಿಸಿದೆ.

ಸಿಂಹಳಕ್ಕೆ ಡೆಪ್ಯುಟಿ ಹೈಕಮಿಷನರ್

ವಿದೇಶಾಂಗ ಶಾಖೆಯಲ್ಲಿ ಡೆಪ್ಯುಟಿ ಸೆಕ್ರೆಟರಿಯಾಗಿರುವ ಮಿ|| ಆರ್. ಟಿ. ಚಾರಿಯವರನ್ನು ಸಿಂಹಳದಲ್ಲಿ ಭಾರತ ಡೆಪ್ಯುಟಿ ಹೈಕಮಿಷನರಾಗಿ ನೇಮಿಸಲಾಗುತ್ತದೆಯೆಂದು ಹೇಳಲಾಗಿದೆ.

ಸಬ್ಸಿಡಿ ನಿಲ್ಲಿಸಿದ್ದಕ್ಕೆ ಸ್ವಾಗತ

ಹೈದರಾಬಾದಿನಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಹೆಚ್ಚಿಸುವುದರಲ್ಲಿ ಆದಷ್ಟು ಕನಿಷ್ಟ ಪ್ರಮಾಣವನ್ನೇ ಅನುಸರಿಸುವುದಾಗಿ ಸರಬರಾಜು ಮತ್ತು ವ್ಯವಸಾಯ ಮಂತ್ರಿ ಡಾ|| ಎಂ. ಚನ್ನರೆಡ್ಡಿಯವರು ತಿಳಿಸುತ್ತಾರೆ. ಶೇ. ೧೦ ರಿಂದ ೩೩ ರಷ್ಟು ಮಾತ್ರ ಹೆಚ್ಚಿಸುವುದಾಗಿಯೂ ಇದರಿಂದ ಪ್ರತಿಯೊಬ್ಬ ರೇಷನ್ ಕಾರ್ಡುದಾರರೂ ರೂ. ೧-೫-೩ ಗಿಂತ ಹೆಚ್ಚಿಗೆ ತಿಂಗಳಿಗೆ ವೆಚ್ಚ ಮಾಡಬೇಕಾಗಿಲ್ಲವೆಂದೂ ಹೇಳಿರುವರು.

ಕೇಂದ್ರವು ಆಹಾರ ಸಬ್ಸಿಡಿ ನಿಲ್ಲಿಸಿರುವುದನ್ನು ಸ್ವಾಗತಿಸುತ್ತಾ, ಪ್ರಾಂತ್ಯಗಳ ಸ್ವಾವಲಂಬಿಯಾಗಲು ಇದು ಮಾರ್ಗವೆಂದು ಅವರು ಹೇಳಿರುವರು.

ಶ್ರೀ ಎನ್. ಸಂಜೀವರೆಡ್ಡಿ

ಶ್ರೀ ನೀಲಂ ಸಂಜೀವರೆಡ್ಡಿಯವರು ಪುನಃ ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಅವಿರೋಧವಾಗಿ ಆರಿಸಿ ಬಂದಿದ್ದಾರೆ.

ಜೆಟ್ ವಿಮಾನ

ಬ್ರಿಟನ್ನಿನ ಹೊಸ ಮಾದರಿಯ ಜೆಟ್ ಏರ್‌ಲೈನರ್ ಲಂಡನ್ನಿನಿಂದ ಜೊಹಾನ್ಸ್‌ಬರ್ಗ್‌ನ ೬೭೨೪ ಮೈಲಿ ದೂರವನ್ನು ಕೇವಲ ೨೪ ಗಂಟೆಗಳಲ್ಲಿ ಪ್ರಯಾಣ ಮಾಡಿದೆ. ಈ ಕಾಮೆಟ್ ವಿಮಾನವು ಗಂಟೆಗೆ ೪೯೦ ಮೈಲಿ ವೇಗದಲ್ಲಿ ೩೫,೦೦೦ ದಿಂದ ೪೦೦೦೦ ಅಡಿ ಎತ್ತರದಲ್ಲಿ ಹಾರಿ ಹೋಗುತ್ತಿತ್ತು.

† ರೇಷನ್ ವಸ್ತುಗಳ ಮೇಲೆ ದರ ಇಳಿಸಬೇಕೆಂದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ಮೈಸೂರು ನಗರದ ರೇಷನ್‌ದಾರರ ಸಂಘದ ಕಾರ್ಯದರ್ಶಿ ಎಂ. ಸಿ. ನರಸಿಂಹಯ್ಯನವರು ಒಂದು ಹೇಳಿಕೆಯಿತ್ತು ಈ ರೀತಿ ಹೇಳಿರುವರು.

ಸರ್ಕಾರವು ರೇಷನ್ ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿರುವುದರಿಂದ ಬಡವರಿಗೆ ಉಂಟಾಗಿರುವ ತೊಂದರೆಯನ್ನು ನಿವಾರಿಸಬೇಕೆಂದು ಮೈಸೂರು ನಗರದ ರೇಷನ್‌ದಾರರ ಸಂಘದವರು ತಾರೀಖು ೨-೫-೫೨ರ ಬೆಳಿಗ್ಗೆ ಬೆಂಗಳೂರು ಚಲೋ ಜಾಥ ಹೊರಟು ಆದಿವಸ ಮಧ್ಯಾಹ್ನ ೩|| ಗಂಟೆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳನ್ನು ಅಠಾರಕಛೇರಿಯಲ್ಲಿ ಕೆಲವು ಪಕ್ಷದ ಮುಖಂಡರೊಡಗೂಡಿ ಭೇಟಿ ಮಾಡಿದರು.

ಮಾನ್ಯ ಮುಖ್ಯಮಂತ್ರಿಗಳು ಭೇಟಿ ಕೊಟ್ಟವರ ಮುಂದೆ ನೀವುಗಳು ಬಡಪ್ರಜೆಗಳ ಪ್ರತಿನಿಧಿಗಳೆಂದು ಭಾವಿಸಲಾಗುವುದಿಲ್ಲ. ಬಡವರ ಪ್ರತಿನಿಧಿಯಾದ್ದು ಕಾಂಗ್ರೆಸ್ ಸಂಸ್ಥೆ. ಬಡವರಿಗಾಗಿ ಮಾಡಬೇಕಾದ್ದನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಸರ್ಕಾರ ರೇಷನ್ ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿರುವುದು ಬಡವರಿಗೆ ಯಾವ ಭಾಗದಲ್ಲೂ ಅನ್ಯಾಯವಾಗಿಲ್ಲ. ಈ ಕಾರಣದಿಂದ ಹೆಚ್ಚಿಸಿರುವ ಬೆಲೆಯನ್ನು ಇಳಿಸಲು ಸಾಧ್ಯವಿಲ್ಲವೆಂದು ಸ್ಪಷ್ಟೋಕ್ತಿಯನ್ನು ನುಡಿದರು.

ದೇಶದ ಮುಖಂಡರೂ, ಪಡಿತರ ಪಡೆಯುವವರೂ, ಎಲ್ಲಾ ರಾಜಕೀಯ ಪಕ್ಷದವರೂ, ಕೂಲಿಕಾರರೂ, ಬಡವರೂ, ಸೇರಿ ಒಮ್ಮತದಿಂದ ಪ್ರಜಾ ಸರ್ಕಾರದ ಸ್ಥಿತಿಕವನ್ನೇ ಹಾಳುಮಾಡಿರುವ ಕಂಟ್ರೋಲುಗಳನ್ನು ತೆಗೆಯಬೇಕೆಂದೂ ಅಥವಾ ಬೆಲೆಯನ್ನು ಇಳಿಸಬೇಕೆಂದೂ ಸರ್ಕಾರದವರನ್ನು ಒತ್ತಾಯಪಡಿಸುವುದು ಫಲದಾಯಕವಾದುದೆಂದು ಭಾವಿಸಲಾಗಿದೆ.

ಭಾರತೀಯ ವೈದ್ಯ ನಿಯೋಗ

ಕೊಲಂಬೊ ಯೋಜನೆ ಪ್ರಕಾರ ಭಾರತೀಯ ವೈದ್ಯ ನಿಯೋಗವೊಂದು ಸದ್ಯದಲ್ಲೇ ಕೆನಡಾಕ್ಕೆ ಭೇಟಿ ಕೊಡಲಿದೆ.

ಪೇಟೆ ಧಾರಣೆ

ಮೈಸೂರು ತಾ|| 5-5-52

ಅಧಿಕೃತವಾದದ್ದು		ರೂ.	ರೂ.
ಕಡ್ಲೇಕಾಯಿ	ಪಲ್ಲಕ್ಕೆ	12-6	18-10
ಹೊಂಗೆಬೀಜ	"	12-0	12-14
ಹುರುಳಿ	"	33-8	35-0
ಸೀಗೆಕಾಯಿ	"	2-13	3-5
ಮೆ. ಕಾಯಿ	ಮಣಕ್ಕೆ	8-4	15-10
ಹುಣಸೇಹಣ್ಣು	"	3-0	3-4
ತೆಂಗಿನಕಾಯಿ	1100ಕ್ಕೆ	130	210

ಸಿ. ಐ. ಡಿ. ವೇಷಧಾರಿಗೆ ೨ ವರ್ಷ ಸಜಾ

ಕೇಂದ್ರ ಸಿ. ಐ. ಡಿ. ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರೆಂತಲೂ ಲಾಯಿಡ್ ಬ್ಯಾಂಕಿನ ದರೋಡೆ ಸಂಬಂಧದಲ್ಲಿ ವಿಶೇಷ ವಿಚಾರಣೆಗೆ ಬಂದಿರುವುದಾಗಿಯೂ ತಿಳಿಸಿ ಸೋಗಿನಿಂದ [illegible]ಗೆ ಎರಡು ವರ್ಷಗಳ ಶಿಕ್ಷೆ ವಿಧಿಸಲಾಗಿದೆ.

ಬಾಂಬುಗಳ ಪತ್ತೆ

ಬೆಂಗಳೂರು ಮೇ ೪

ಇತ್ತೀಚೆಗೆ ಹೆಬ್ಬಾಳ್ ಕೆರೆಯಲ್ಲಿ ಸ್ಫೋಟಕ ವಸ್ತುಗಳು ದೊರಕಿದ ಬಗ್ಗೆ ವರದಿಯಾಗಿತ್ತಷ್ಟೆ. ಮೊನ್ನೆಯದಿನ ಮಿಲಿಟರಿಯವರು ಕೆರೆಯನ್ನು ಮತ್ತೆ ಶೋಧಿಸಲು ಎರಡು ಅಂಗುಲದ ಮಾರ್ಟರ್ ಬಾಂಬುಗಳು, ಮೂರು ಅಂಗುಲದ ಕೆಲವು ಡಿಟೊನೇಟರುಗಳು ದೊರಕಿದವು ಎಲ್ಲವೂ ಅಪಾಯಕಾರಕ ಸಜೀವ ಸ್ಫೋಟಕ ವಸ್ತುಗಳು. ಪತ್ತೆಯಾದವನ್ನು ನಾಶಗೊಳಿಸಲಾಯಿತು.

ಚಿನ್ನ ಬೆಳ್ಳಿ ದರಗಳು

5–5–52	ರೂ.
ಸವರಿನ್	66–8
"	66–10
ಚಿನ್ನ ತೊಲ	96–0
" ಮೂಟ	95–0
ಬೆಳ್ಳಿ 100 ತೊಲ	174–8
" ತೊಲ	1–12

ವುಡ್ ಲ್ಯಾಂಡ್ಸ್
2—5—52ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ದಿನವೂ 3 ಆಟಗಳು
" ಲಕ್ಷ್ಮೀ ನಾರಾಯಣ್ "
(ಹಿಂದಿ)
ಪಾತ್ರ:—ಮೀನಾಕುಮಾರಿ ಮಹಿಪಾಲ್

ನ್ಯೂ ಅಪೇರಾ
೩—೫—೫೨ ರಿಂದ
—: ಜಗತಲಪ್ರತಾಪನ್ :—
(ತಮಿಳು)
ಪಾತ್ರ—ಚಿನ್ನಪ್ಪ, ಎಂ. ಎಸ್. ಸರೋಜಿನಿ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.
—ಮುಂದಿನ ಬದಲಾವಣೆ—
ಜೂಪಿಟರ್‌ರವರ— "ರಾಣಿ"

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೭-೫—೧೯೫೨ನೇ ಬುಧವಾರ [ಸಂಚಿಕೆ ೨೧೧

ಡಾ|| ರಾಜೇಂದ್ರಪ್ರಸಾದರು ಭಾರತ ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾದರು

ರಾಷ್ಟ್ರಾಧ್ಯಕ್ಷರ ಮತದಾನ ಎಣಿಕೆಯು ನಿನ್ನೆಯದಿನ ನಡೆಯಿತು. ಡಾ|| ರಾಜೇಂದ್ರಪ್ರಸಾದರು ಅಧಿಕ ಮತಗಳಿಸಿ ಚುನಾಯಿತರಾಗಿದ್ದಾರೆ. ಡಾ|| ರಾಜೇಂದ್ರಪ್ರಸಾದರವರು ಒಟ್ಟು ೩೫೯೯ ಓಟುಗಳಲ್ಲಿ ೨೮೯೬ ಅಗ್ರಮಾನ್ಯತೆ ಓಟುಗಳನ್ನು ಗಳಿಸಿರುವರು. ಪ್ರೊ|| ಕೆ. ಟಿ. ಷಾರವರು ೫೬೧, ಶ್ರೀ ಎಲ್. ಜಿ. ಥಟ್ಟೆ ೧೩, ಶ್ರೀ ಹರಿರಾಂ ೧೧, ಶ್ರೀ ಕೃಷ್ಣಕುಮಾರ್ ಚಟರ್ಜಿ ೫ ಓಟುಗಳನ್ನು ಪಡೆದರು.

ಫಲಿತಾಂಶವನ್ನು ಚುನಾವಣಾಧಿಕಾರಿಗಳು ಪ್ರಕಟಿಸಿದೊಡನೆಯೇ ಸಚಿವ ಮಂಡಲಿಯವರು, ಮತ್ತಿತರ ಗಣ್ಯವ್ಯಕ್ತಿಗಳು ಡಾ|| ರಾಜೇಂದ್ರಪ್ರಸಾದರಿಗೆ ಅಭಿನಂದಿಸಿದರು.

ಕೂಡಲೇ ಕಂಟ್ರೋಲ್ ರದ್ದಾಗಲಿ

ಮೈಸೂರು ಮೇ ೬

ಇಂದು ಮಧ್ಯಾಹ್ನ ಕೃಷಕ್ ಮಜದೂರ್ ಪ್ರಜಾಪಕ್ಷದ ಅಧಿವೇಶನವು ಟಿ ನರಸೀಪುರದಲ್ಲಿ ಶ್ರೀ ತುಚ್ಚೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧಿವೇಶನದಲ್ಲಿ ಈ ಕೆಳಗಿನ ನಿರ್ಣಯಗಳನ್ನು ಅಂಗೀಕರಿಸಲಾಯಿತು

೧) ನೂತನ ಶಾಸನಸಭಾ ಸದಸ್ಯರ ಒಪ್ಪಿಗೆಯಿಲ್ಲದೆ ಮೈಸೂರು ಸರ್ಕಾರವು ಆಹಾರ ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿರುವುದು ಖಂಡನೀಯ. ಜನರ ಆಹಾರ ಅಭಾವವನ್ನು ಹೋಗಲಾಡಿಸಲು ಕಂಟ್ರೋಲ್ ತೆಗೆಯಬೇಕು.

೨) ಸಿಲೋನಿನ ಭಾರತೀಯರಿಗೆ ಓಟಿನ ಹಕ್ಕನ್ನು ಕೊಡಲು ಆ ಸರ್ಕಾರವನ್ನು ಪ್ರಾರ್ಥಿಸಬೇಕು.

೩) ಮೈಸೂರು ದೇಶದಲ್ಲಿ ಉಚಿತ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ಪದ್ಧತಿಯನ್ನು ಸರ್ಕಾರವು ಜಾರಿಗೆ ತರಬೇಕು.

೪) ಕೇಂದ್ರದ ಕೇಂದ್ರೀಕರಣ ನೀತಿಯನ್ನು ಖಂಡಿಸಿ ಒಕ್ಕೂಟದಲ್ಲಿ ಅದು ಪ್ರವೇಶಿಸಕೂಡದು.

೫) ಕೊಳ್ಳೇಗಾಲವನ್ನು ಮದ್ರಾಸಿನಿಂದ ಮೈಸೂರಿಗೆ ಸೇರಿಸಬೇಕು.

೬) ರೇಷ್ಮೆ ಆಮದನ್ನು ಸರ್ಕಾರವು ನಿಲ್ಲಿಸಿ ಸಂಸ್ಥಾನದ ರೇಷ್ಮೆ ಕೈಗಾರಿಕೆಗೆ ಸರ್ಕಾರ ಉತ್ತೇಜನ ಕೊಡಬೇಕು.

೭) ಸಕ್ಕರೆ ಕಂಪೆನಿ ಅಧ್ಯಕ್ಷರು ೪೨೦೦೦ ಟನ್ ಕಬ್ಬನ್ನು ಟನ್ನಿಗೆ ೪೭—೧೦—೦ ರೂ. ನಂತೆ ಕೊಂಡು ಕಂಪೆನಿಗೆ ೮ ಲಕ್ಷ ರೂ. ನಷ್ಟ ಮಾಡಿದ್ದಾರೆ. ಇದನ್ನು ಪರಿಶೀಲಿಸಲು ಸರ್ಕಾರ ಸಮಿತಿಯೊಂದನ್ನು ರಚಿಸಬೇಕು.

ಸಿಲೋನ್ ಸತ್ಯಾಗ್ರಹಕ್ಕೆ ಭಾಗವಹಿಸಲು ಹೋಗಲವಕಾಶವಿಲ್ಲ

ಸಿಲೋನಿನಲ್ಲಿ ಸಿಲೋನಿನ ಭಾರತೀಯರಿಂದ ನಡೆಸಲಾಗುತ್ತಿರುವ ಸತ್ಯಾಗ್ರಹದಲ್ಲಿ ಭಾಗವಹಿಸಲು ಭಾರತ ಯೂನಿಯನ್ನಿನಿಂದ ಹೋಗುವವರಿಗೆ ಭಾರತ ಸರ್ಕಾರ ಅವಕಾಶಕೊಡುವುದಿಲ್ಲವೆಂದು ಗೊತ್ತಾಗಿದೆ.

ಕೃಷ್ಣರಾಜನಗರದಲ್ಲಿ ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆ

ಇದೇ ೯ನೇ ತಾರೀಖು ಕೃಷ್ಣರಾಜನಗರದಲ್ಲಿ ನಡೆಯಲಿರುವ ಎಂ. ಪಿ. ಸಿ. ಸಿ. ಅಧಿವೇಶನಕ್ಕೆ ಬರಲಿರುವ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರ ಮೆರವಣಿಗೆ ಏರ್ಪಡಿಸಲಾಗಿದೆ. ಅಧ್ಯಕ್ಷರು ತಾ|| ೮—೫—೫೨ನೇ ಸಂಜೆ ಮೈಸೂರಿನಿಂದ ಮೋಟಾರಿನಲ್ಲಿ ಬರುತ್ತಲೆ ಮಧ್ಯಾಹ್ನ ೪ ಗಂಟೆಗೆ ಅವರನ್ನು ಮೈಸೂರು ರಸ್ತೆ ಟೋಲ್‌ಗೇಟ್ ಪಕ್ಕದಲ್ಲಿ ಹಾಕಿರುವ ಚಪ್ಪರದಲ್ಲಿ ಸ್ವಾಗತಿಸಿ ಹತ್ತು ಜೊತೆ ಎತ್ತುಗಳನ್ನು ಕಟ್ಟಿರುವ ಸುಂದರವಾದ ಗಾಡಿಯಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಲಾಗುವುದು. ಮೆರವಣಿಗೆ ಟೋಲ್‌ಗೇಟಿನಿಂದ ಹೊರಟು ವಾಣಿವಿಲಾಸ ರಸ್ತೆ, ಪುರಸಭೆ ಕಛೇರಿ ಮಾರ್ಗವಾಗಿ ಚಂದ್ರಮೌಳಿ ರಸ್ತೆ, ರಾಮಮಂದಿರದ ಕ್ರಾಸ್ ರಸ್ತೆಯಿಂದ ೬ನೇ ಕ್ರಾಸ್ ರಸ್ತೆಗೆ ಹೋಗಿ ಬಸ್ ನಿಲ್ದಾಣದ ಮೈದಾನಕ್ಕೆ ಬರುವುದು.

ಬಹಿರಂಗ ಸಭೆ

ಬಸ್ ನಿಲ್ದಾಣದ ಮೈದಾನದಲ್ಲಿ ಅಧ್ಯಕ್ಷರು ಸಂಜೆ ೬-೩೦ ಗಂಟೆಗೆ ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು.

೯—೫—೫೨ನೇ ಬೆಳಿಗ್ಗೆ ೭—೩೦ಕ್ಕೆ ಅಧ್ಯಕ್ಷರು ಧ್ವಜಾರೋಹಣ ಮಾಡುವರು. ೯ ರಿಂದ ಎಂ. ಪಿ. ಸಿ. ಸಿ. ಸಭೆ ನಡೆಯುವುದು.

ಕೋರ್ಟ್‌ಗಳ ಅಧಿಕಾರ ವ್ಯಾಪ್ತಿ ಇರಕೂಡದು

ಕಾರ್ಮಿಕ ವಿವಾದ ಪಂಚಾಯಿತಿಗಳನ್ನು ಹೈಕೋರ್ಟುಗಳು ಮತ್ತು ಸುಪ್ರೀಂ ಕೋರ್ಟಿನ ಅಧಿಕಾರವ್ಯಾಪ್ತಿಯಿಂದ ದೂರವಾಗಿಡಬೇಕು ಎಂದು ಐ. ಎನ್. ಟಿ. ಯು. ಸಿ. ಯ ಪ್ರಧಾನ ಕಾರ್ಯದರ್ಶಿ ಶ್ರೀ ಹರಿಹರನಾಥಶಾಸ್ತ್ರಿಗಳು ತಿಳಿಸಿದ್ದಾರೆ.

ಡೆಪ್ಯುಟಿ ಹೈಕಮಿಷನರ್

ದಿವಂಗತ ಸರ್ದಾರ್ ಪಟೇಲರ ಆಪ್ತ ಕಾರ್ಯದರ್ಶಿಯಾಗಿದ್ದ ಹಾಲಿ ಸ್ಟೇಟ್ಸ್ ಮಿನಿಸ್ಟ್ರಿಯಲ್ಲಿ ಸಹಕಾರ್ಯದರ್ಶಿಯಾಗಿರುವ ಶ್ರೀ ವಿ ಶಂಕರ್‌ರವರನ್ನು ಲಂಡನ್ನಿನಲ್ಲಿ ಡೆಪ್ಯುಟಿ ಹೈಕಮೀಷನರಾಗಿ ನೇಮಿಸಲಾಗುತ್ತದೆಂದು ಹೇಳಲಾಗಿದೆ.

ಶಾಸನಸಭೆಗೆ ಬಹಿಷ್ಕಾರ

ಬೊಂಬಾಯಿನಲ್ಲಿ ಉಭಯ ಶಾಸನಸಭೆಗಳ ಅಧಿವೇಶನವು ನಿನ್ನೆ ಪ್ರಾರಂಭವಾಯಿತು. ಗೌರ್ನರ್ ಶ್ರೀಮಹಾರಾಜಸಿಂಗರವರು ಪ್ರಾರಂಭಭಾಷಣ ಮಾಡುತ್ತಾ, ಪಾನನಿರೋಧವು ಇನ್ನೂ ಯಶಸ್ವಿಯಾಗಲು ಹೆಚ್ಚಿಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

ಮದ್ರಾಸ್ ಉಭಯ ಶಾಸನಸಭೆಗಳ ಸಂಯುಕ್ತ ಅಧಿವೇಶನವೂ ನಿನ್ನೆ ಪ್ರಾರಂಭವಾಯಿತು. ಗೌರ್ನರ್ ಶ್ರೀ ಶ್ರೀಪ್ರಕಾಶರವರು ಪ್ರಾರಂಭಭಾಷಣಮಾಡುವಾಗ ಗೌರ್ನರ್ ರಾಜ್ಯಾಂಗಕ್ಕೆ ವಿರುದ್ಧವಾಗಿ ಹಂಗಾಮಿ ಅಧ್ಯಕ್ಷರನ್ನೂ ನೇಮಿಸಿದರೆಂದು ತಿಳಿಸಿ ಅವರು ಭಾಷಣಮಾಡಲು ಹಕ್ಕಿಲ್ಲವೆಂದು ಹೇಳಿ ತಮ್ಮ ಪಕ್ಷವು ಈ ಭಾಷಣವನ್ನು ಕೇಳುವುದಿಲ್ಲವೆಂದು ಯುನೈಟೆಡ್ ಡೆಮೋಕ್ರಾಟಿಕ್ ಫ್ರಂಟ್ ನಾಯಕ ಶ್ರೀ ಟಿ ಪ್ರಕಾಶಂರವರು ತಮ್ಮ ಪಕ್ಷದೊಡನೆ ಸಭಾತ್ಯಾಗಮಾಡಿದರು.

ಶಾಸನಸಭಾಧ್ಯಕ್ಷರ ಆಯ್ಕೆ

ಮದ್ರಾಸಿನ ಹಿರಿಯ ಶಾಸನಸಭೆಗೆ ಕಾಂಗ್ರೆಸ್ ಸಹಕಾರಪಡೆದ ಸ್ವತಂತ್ರ ಸದಸ್ಯ ಶ್ರೀ ಜೆ ಶಿವಷಣ್ಮುಗಂಪಿಳ್ಳೆಯವರು ಸ್ಪೀಕರರಾಗಿ ಚುನಾಯಿತರಾಗಿದ್ದಾರೆ. ಇವರು ೨೦೬ ಓಟುಗಳನ್ನು ಪರಾಜಿತರಾದ ಶ್ರೀ ಸ್ವಯಂಪ್ರಕಾಶಂ ೧೬೨ ಓಟುಗಳನ್ನು ಪಡೆದರು. ಶ್ರೀ ಭಕ್ತವತ್ಸಲಂನಾಯುಡು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಮದ್ರಾಸಿನ ಹಿರಿಯ ಶಾಸನಸಭೆಗೆ ಡಾ|| ಪಿ. ವಿ. ಚೆರಿಯನ್‌ರು ಚುನಾಯಿತರಾದರು. ಇವರು ಕಾಂಗ್ರೆಸ್ ಬೆಂಬಲ ಪಡೆದರು.

ಪ್ರಾಂತ್ಯಗಳಿಗೆ ಸೂಚನೆ

ಪ್ರಾಂತ್ಯಸರ್ಕಾರಗಳು ತಮ್ಮ ಬಜೆಟ್ಟನ್ನು ತಯಾರಿಸುವಾಗ ತಮ್ಮ ತಮ್ಮ ಪ್ರಾಂತ್ಯಗಳ ಆದಾಯವನ್ನೂ ಗಮನಿಸಬೇಕೇಹೊರತು ಕೇಂದ್ರದ ಸಹಾಯದ ನಿರೀಕ್ಷಣೆಯಿಂದ ಬಜೆಟ್ ತಯಾರಿಸಬಾರದೆಂದು ಸೂಚನೆಯಿತ್ತಿದೆ.

ಸರ್ಕಾರಿ ಪ್ರಕಟಣೆ

ಬೆಂಗಳೂರು ಮೇ ೬

ಮಾಜಿಸಚಿವ ಶ್ರೀ ಟಿ. ಮರಿಯಪ್ಪನವರು ಆಹಾರವಿಷಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ವಿಷಯವು ಸತ್ಯಾಂಶಕ್ಕೆ ದೂರವೆಂದು ಸರ್ಕಾರವು ಒಂದು ಪ್ರಕಟಣೆಯಿತ್ತಿದೆ.

ಹೈದರಾಬಾದ್ ಅಧಿಕಾರಿ ಪರಾರಿ

ಹೈದರಾಬಾದ್ ಸಂಸ್ಥಾನದ ಪೋಲೀಸ್ ಶಾಖೆಯ ವೈರ್‌ಲೆಸ್ ಅಧಿಕಾರಿ ಶ್ರೀ ಜಾರ್ಜ್ ಅನ್ವರ್‌ಲಾಲ್ ಕೆಲವು ದಿವಸಗಳಿಂದ ಕಣ್ಮರೆಯಾಗಿದ್ದರು. ಸರ್ಕಾರಕ್ಕೆ ಸೇರಿದ ೧೬,೦೦೦ ರೂ. ಸಹಿತ ಅವರು ಪಾಕೀಸ್ಥಾನಕ್ಕೆ ಪರಾರಿಯಾದರೆಂದು ಭಾವಿಸಲಾಗಿದೆ.

ಅವರ ಕುಟುಂಬದವರು ಜಾರ್ಜ್ ಅನ್ವರ್‌ಲಾಲ್‌ರವರು ಪತ್ತೆಯಿಲ್ಲದಿರುವುದಕ್ಕೆ ವಿಷಾದವನ್ನೂ ಮತ್ತು ಆಶ್ಚರ್ಯವನ್ನೂ ವ್ಯಕ್ತಪಡಿಸಿದರು. ಸರ್ಕಾರದ ಮೋಟಾರ್‌ಸೈಕಲ್ ಒಂದು ಮನೆಯಲ್ಲಿತ್ತು. ಗೋವಾಮೂಲಕ ಪಾಕೀಸ್ಥಾನಕ್ಕೆ ತೆರಳಿದರೆಂದು ಭಾವಿಸಲಾಗಿದೆ.

ಪತ್ರಿಕೆಗಳಿಗೆ ಸರ್ಕಾರದ ಸಹಕಾರ

ಮಧ್ಯದೇಶದ ಮುಖ್ಯಮಂತ್ರಿ ಪಂಡಿತ ರವಿಶಂಕರ ಶುಕ್ಲರವರು ಸರ್ಕಾರದ ಎಲ್ಲಾ ಶಾಖೆ ಮುಖ್ಯಾಧಿಕಾರಿಗಳಿಗೂ, ಕಾರ್ಯದರ್ಶಿಗಳಿಗೂ, ಸೂಚನೆಯಿತ್ತಿದ್ದು, ಅಧಿಕೃತ ಪತ್ರಿಕಾ ಪ್ರತಿನಿಧಿಗಳಿಗೆ ಅವರು ಕೇಳಿದ ಎಲ್ಲಾ ಅಂಶಗಳನ್ನು ನಿಜವಾದ ರೀತಿಯಲ್ಲಿ ತಿಳಿಸಬೇಕೆಂದು ತಿಳಿಸಿರುತ್ತಾರೆ.

ಅನಂತರ ಅವರು ಪತ್ರಿಕಾ ಪ್ರತಿನಿಧಿಗಳನ್ನು ಕುರಿತು, ಈಗ ನೀವು ಈ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳದೆ ಜನತೆಗೆ ಉಪಕಾರಮಾಡುವ ರೀತಿಯಲ್ಲಿ ರಚನಾತ್ಮಕವಾಗಿ ಉಪಯೋಗಿಸಿಕೊಳ್ಳಿ ಎಂದು ಹೇಳಿರುವರು.

ಹೊಸ ಆಹಾರ ಬೆಲೆಗೂ ದಾವಣಗೆರೆ ನಿರ್ಣಯಕ್ಕೂ ಸಂಬಂಧವಿಲ್ಲ

ಬೆಂಗಳೂರು ಮೇ ೫

ಮಾಜಿ ಗೃಹಸಚಿವ ಶ್ರೀ ಟಿ. ಮರಿಯಪ್ಪನವರು ಈದಿನ ಒಂದು ಪತ್ರಿಕಾ ಗೋಷ್ಠಿಯನ್ನು ನಡೆಸಿ ದಾವಣಗೆರೆಯಲ್ಲಿಯಾದ ನಿರ್ಣಯಕ್ಕೂ ಈಗಿನ ಹೊಸ ಆಹಾರ ಬೆಲೆಗೂ ಏನೂ ಸಂಬಂಧವಿಲ್ಲವೆಂದು ವಿವರಿಸಿದರು.

ಇವರ ವಿವರಣೆಯಲ್ಲಿ ಈ ಮುಖ್ಯಾಂಶಗಳು ಹೊರಬಿದ್ದಿವೆ.

ದಾವಣಗೆರೆ ಸಮ್ಮೇಳನ ಸಮಯದಲ್ಲಿ ಭಾರತ ಸರ್ಕಾರದ ಸಬ್ಸಿಡಿ ನಿಲ್ಲಿಸುವುದೆಂಬ ವಿಷಯವೇ ತಿಳಿದಿರಲಿಲ್ಲ.

ಆಹಾರ ಸಂಗ್ರಹಣೆ ಬೆಲೆ, ಉತ್ಪನ್ನದ ವೆಚ್ಚದ ಆಧಾರದಮೇಲಿರಬೇಕೆಂದು ತೀರ್ಮಾನಿಸಲಾಗಿತ್ತು.

ನಗರವಾಸಿಗಳಿಗೆ ಆಹಾರ ಹಂಚಲಾಗಿ ಮವಾಸಿಗಳ ಶೋಷಣೆಯೆಂಬುದರಲ್ಲಿ ಅರ್ಥವಿಲ್ಲ. ಕಾನೂನುರೀತ್ಯಾ ಪಡಿತರ ಪದ್ಧತಿಯಿರುವ ಪಟ್ಟಣಗಳಿಗಿಂತ ಅನಿರ್ಬಂಧ ರೇಷನ್ ಜಾರಿಯಲ್ಲಿರುವ ಪ್ರದೇಶಗಳಿಗೆ ಹೆಚ್ಚಿಗೆ ಆಹಾರ ಒದಗಿಸಲಾಗುತ್ತಿದೆ. ಸರ್ಕಾರಕ್ಕಾಗಿರುವ ೩॥ ಕೋಟಿ ರೂ. ನಷ್ಟ ಕೇವಲ ನಗರಗಳಿಂದಲ್ಲ. ಆದ್ದರಿಂದ ನಗರವಾಸಿ, ಗ್ರಾಮವಾಸಿ ಎಂಬ ಭೇದ ಅವಶ್ಯಕತೆಯಿಲ್ಲ. ಈ ನಷ್ಟವನ್ನು ಎಲ್ಲಾ ಭಾಗಗಳಿಗೂ ಸಮವಾಗಿ ಹಂಚಬೇಕು.

ಕಳೆದ ಶನಿವಾರ ನಡೆದ ಪಕ್ಷದ ಸಭೆಯಲ್ಲಿ ಹಣಕಾಸಿನ ಪರಿಸ್ಥಿತಿಯಿಂದ ಬೆಲೆ ಹೆಚ್ಚಿಸುವುದು ಅನಿವಾರ್ಯವೆಂದು ಮಾತ್ರ ಸಭೆ ಅಭಿಪ್ರಾಯಪಟ್ಟಿತು.

ಈಗಲೂ ಮಾರುವ ಬೆಲೆಗೂ ಸಂಗ್ರಹಣ ಬೆಲೆಗೂ ಸಂಬಂಧವಿಲ್ಲ. ಉತ್ಪನ್ನದ ವೆಚ್ಚ, ಸಂಗ್ರಹಣ ಬೆಲೆ ನಿರ್ಧರಿಸಿದೆ. ಮಾರುವ ಬೆಲೆಗೆ ಸಂಬಂಧಕಲ್ಪಿಸಲು ಸಾಧ್ಯವಿಲ್ಲ. ಪಕ್ಷವು ಉತ್ಪನ್ನದ ಆಧಾರದ ಮೇಲೆ ಮಾರುವ ಬೆಲೆ ಇರಬೇಕೆಂದು ಹೇಳಿಲ್ಲ.

ಗ್ರಾಮಾಂತರ ಪ್ರದೇಶಗಳಲ್ಲಿ ಈಗಿರುವ ಶಾಸನರೀತ್ಯಾ ಆಹಾರವನ್ನು ನಿರ್ಬಂಧವಿಲ್ಲದೆ ಮಾರಲು ಅವಕಾಶವಿಲ್ಲ. ರೇಷನಿಂಗ್ ಜಾರಿಯಲ್ಲಿಲ್ಲದ ಪ್ರದೇಶಗಳಲ್ಲಿ ಎಷ್ಟು ಆಹಾರಬೇಕಾದರೂ ಸಾಗಿಸಲು ಈಗ ಅವಕಾಶ ಕೊಡಲಾಗಿದೆ. ಆದರೆ ಅದನ್ನು ಪಡೆಯುವುದು ಹೇಗೆ? ಸ್ವತಂತ್ರವಾಗಿ ಕೊಂಡು ಮಾರಲು ಅವಕಾಶವಿರಬೇಕಾದರೆ ಕೇಂದ್ರ ಸರ್ಕಾರದ ಒಪ್ಪಿಗೆಯಿಂದ ಶಾಸನ ತಿದ್ದುಪಡಿಯಾಗಬೇಕಾಗಿದೆ.

ಸಂಗ್ರಹಣ ಕಾಲದಲ್ಲಿ ರೈತರು ಬೆಳೆ ಬೆಳೆಯಲಿ ಬೆಳೆಯದಿರಲಿ ನಿಗದಿಯಾದಷ್ಟು ಧಾನ್ಯಕೊಡಬೇಕೆಂದು ದಾವಣಗೆರೆ ಸಮ್ಮೇಳನದಲ್ಲಿ ನಿರ್ಧರಿಸಿಲ್ಲ. ಆದ್ದರಿಂದ ಆಹಾರ ಶಾಖಾ ಕಾರ್ಯದರ್ಶಿಗಳ ಪ್ರಕಟಣೆಗೆ ದಾವಣಗೆರೆ ಸಮ್ಮೇಳದ ಮಂಜೂರಾತಿಯಿಲ್ಲ.

ವಿಶ್ವವಾರ್ತೆ

ಮಾತೃ ದಿನ

ತಾಯಂದಿರಿಗೆ ತಮ್ಮ ಭಕ್ತಿ ವಿಶ್ವಾಸವನ್ನು ತೋರಿಸಲು ಅಮೆರಿಕಾದಲ್ಲಿ ಇದೇ ೧೧ನೇ ತಾರೀಖು 'ತಾಯಂದಿರ ದಿನ'ವನ್ನು ಆಚರಿಸಲಾಗುತ್ತದೆ. ಆ ದಿನ ಮಕ್ಕಳು ತಮ್ಮ ತಾಯಂದಿರ ಆರೋಗ್ಯ ಭಾಗ್ಯಕ್ಕಾಗಿ ವಿಶೇಷ ಪ್ರಾರ್ಥನೆಗಳನ್ನು ನಡೆಸುವುದಲ್ಲದೆ ಅವರಿಗೆ ತಮ್ಮ ಭಕ್ತಿವಿಶ್ವಾಸಪೂರ್ವಕ ಬಹುಮಾನಗಳನ್ನು ಶುಭಪತ್ರಗಳನ್ನು ಕಳುಹಿಸುವರು.

ಟ್ರಾಕ್ಟರುಗಳು

ಅಮೆರಿಕಾದಲ್ಲಿ ರೈತರು ೧೯೫೧ನೇ ವರ್ಷದಲ್ಲಿ ೩,೭೫೫,೦೦೦ ಟ್ರಾಕ್ಟರುಗಳನ್ನು ಉಪಯೋಗಿಸಿರುವರು.

ಯುವಕರ ವಿಶ್ವಸಂಸ್ಥೆ

ತಮಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚೆ ನಡೆಸಲು ವಿಶ್ವಯುವಕರ ಸಮ್ಮೇಳನವು ಆಗಸ್ಟ್ ಮಾಹೆಯ ಮೊದಲನೇ ಎರಡು ವಾರಗಳಲ್ಲಿ ಫ್ರೆಂಚ್ ಆಫ್ರಿಕಾದ ಡೇಕಾರ್ ಎಂಬಲ್ಲಿ ನಡೆಯುತ್ತದೆ.

ಉದಾರ ದಾನ

ಅಮೆರಿಕಾದಲ್ಲಿರುವ ಚರ್ಚುಗಳ ರಾಷ್ಟ್ರೀಯ ಸಮಿತಿಯು ಭಾರತ, ಕೊರಿಯ, ಜಪಾನ್ ಮುಂತಾದ ರಾಷ್ಟ್ರಗಳಿಗೆ ಸುಮಾರು ೪,೦೦೦,೦೦೦ ಪೌಂಡುಗಳ ಬಟ್ಟೆ, ಔಷಧಿ ಮುಂತಾದುವನ್ನು ಕಳುಹಿಸಿದೆ.

ಅಂತರರಾಷ್ಟ್ರೀಯ ರಕ್ತ ಸಮ್ಮೇಳನ

ಅಮೆರಿಕಾದಲ್ಲಿ ಇದೇ ೧೩—೧೬ ತಾರೀಖುಗಳಲ್ಲಿ ಅಂತರರಾಷ್ಟ್ರೀಯ ರಕ್ತ ಸಮ್ಮೇಳನವು ನಡೆಯುತ್ತದೆ. ಭಾರತ, ಪಾಕಿಸ್ತಾನಗಳೂ ಈ ಸಮ್ಮೇಳನದಲ್ಲಿ ಭಾಗವಹಿಸುತ್ತವೆ.

ಅಂತರರಾಷ್ಟ್ರೀಯ ಹತ್ತಿ ಸಮ್ಮೇಳನ

ವಾಷ್ಟಿಂಗ್ಟನ್ ಮತ್ತು ಲಂಡನ್‌ಗಳಲ್ಲಿ ಇದೇ ಸೆಪ್ಟಂಬರ್ ೧೭ ರಿಂದ ಒಂದು ವರ್ಷ ಕಾಲ ಅಂತರರಾಷ್ಟ್ರೀಯ ಹತ್ತಿ ಸಮ್ಮೇಳನವು ನಡೆಯುತ್ತದೆ. ಪ್ರಪಂಚದಲ್ಲೆಲ್ಲಾ ವಿಶೇಷವಾಗಿ ಹತ್ತಿ ಬೆಳೆಯುವ ರಾಷ್ಟ್ರಗಳಾದ ಭಾರತ, ಅಮೆರಿಕಾ ಮತ್ತು ಜಪಾನುಗಳು ಈ ಸಮ್ಮೇಳನದಲ್ಲಿ ಭಾಗವಹಿಸಲು ಸಮ್ಮತಿಸಿವೆ.

ಪ್ರಸಾರ ಶಾಖಾಧಿಕಾರಿಗಳು ಬ್ರಿಟನ್ನಿಗೆ

ಬಿ. ಬಿ. ಸಿ. ಆಶ್ರಯದಲ್ಲಿ ಮೂರು ತಿಂಗಳು ಕಾಲ ತರಪೇತು ಪಡೆಯಲು ಭಾರತ, ಪಾಕಿಸ್ತಾನಗಳಿಂದ ಪ್ರಸಾರ ಶಾಖಾಧಿಕಾರಿಗಳೊಬ್ಬೊಬ್ಬರು ಲಂಡನ್ನಿಗೆ ಹೋಗುವರು. ಈ ಶಿಕ್ಷಣ ಕ್ರಮವನ್ನು ಬ್ರಿಟನ್ನಿನಲ್ಲಿರುವ ಇಂಪೀರಿಯಲ್ ರಿಲೇಷನ್ಸ್ ಟ್ರಸ್ಟಿನವರು ಏರ್ಪಡಿಸುತ್ತಾರೆ. ಇದರ ವೆಚ್ಚವನ್ನೆಲ್ಲಾ ಇವರೇ ಕೊಟ್ಟು ೩ ತಿಂಗಳು ಕಾಲ ಶಿಕ್ಷಣ ಕೊಡುವರು.

ಕಾಮನ್‌ವೆಲ್ತ್ ಕ್ಷಯರೋಗ ಸಮ್ಮೇಳನ

ಜುಲೈ ೮ನೇ ತಾರೀಖು ಲಂಡನ್ನಿನಲ್ಲಿ ಕಾಮನ್ವೆಲ್ತ್ ಮತ್ತು ಎಂಪೈರ್ ಆರೋಗ್ಯ ಮತ್ತು ಕ್ಷಯರೋಗ ಸಮ್ಮೇಳನವು ನಡೆಯುತ್ತದೆ. ಅನೇಕ ರೋಗಗಳನ್ನು ತಡೆಗಟ್ಟುವ ವಿಧಾನಗಳನ್ನು ಅರಿತುಕೊಳ್ಳಲು ಈ ಸಮ್ಮೇಳನವನ್ನು ಏರ್ಪಡಿಸಲಾಗಿದೆ.

ಇದರಲ್ಲಿ ಆಸಕ್ತಿಯಿರುವ ಎಲ್ಲಾ ಡಾಕ್ಟರುಗಳು, ಪಶುವೈದ್ಯರು, ನರ್ಸ್‌ಗಳು, ಸಮಾಜಕ ಕೆಲಸಗಾರರು ಎಲ್ಲರೂ ಭಾಗವಹಿಸಬಹುದಾಗಿದೆ.

ಭಾರತದ ಕ್ಯಾಡೆಟ್

ಭಾರತ ನೌಕಾ ಕ್ಯಾಡೆಟ್ ಶ್ರೀ ಆರ್. ಸ್ವಾಮಿನಾಥನ್‌ರವರು ಡಾರ್ಟ್‌ಮೊತ್‌ನಲ್ಲಿರುವ ರಾಯಲ್ ನೇವಲ್ ಅಕಡೆಮಿಯಲ್ಲಿ ನಡೆದ ನೌಕಾ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ.

ಪೇಟೆ ಧಾರಣೆ

ಮೈಸೂರು ತಾ॥ 6-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	11-0	18-4
ಹೊಂಗೆಬೀಜ	"	10-8	12-8
ಹುರುಳಿ	"	32-12	34-6
ಸೀಗೆಕಾಯಿ	"	2-12	3-6
ಮೆ. ಕಾಯಿ	ಮಣಕ್ಕೆ	11-8	15-14
ಹುಣಸೇಹಣ್ಣು	"	2-12	3-7
ತೆಂಗಿನಕಾಯಿ	1100ಕ್ಕೆ	139	189

ಚಿನ್ನ ಬೆಳ್ಳಿ ದರಗಳು

6-5-52

	ರೂ.
ಸವರನ್	66-8
"	66-10
ಚಿನ್ನ ತೊಲ	96-0
" ಮೂಕ	95-0
ಬೆಳ್ಳಿ 100 ತೊಲ	174-8
" ತೊಲ	1-12

ನ್ಯೂ ಆಪೇರ

೯—೫—೫೨ ರಿಂದ

ಜೂಪಿಟರ್ಸ್‌ರವರ—

* ರಾಣಿ *
(ತಮಿಳು)

ಪಾತ್ರ—ಭಾನುಮತಿ, ಬಾಲಚಂದರ್, ವಹಾಬ್ ಕಾಶ್ಮೀರಿ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಗಾಡ್ಗಿಲರ ಮೇಲೆ ಕೈಮಾಡಿದವರು ಬಂಧನದಲ್ಲಿ

ಥುರವಾಡಾ ಜೈಲಿನಲ್ಲಿ ಬಂಧನದ ಶಿಕ್ಷೆ ಅನುಭವಿಸುತ್ತಿರುವ ಇಬ್ಬರು ಬಂದಿಗಳು ಕಳೆದ ತಿಂಗಳು ೨೯ ರಂದು ಶ್ರೀ ಎನ್. ವಿ. ಗಾಡ್ಗಿಲರ ಮೇಲೆ ತಾವು ಕೈಮಾಡಿದರೆಂದು ಒಪ್ಪಿಕೊಂಡಿದ್ದಾರೆಂದು ನಂಬಲರ್ಹವಾದ ವಲಯದಿಂದ ವರದಿ ಬಂದಿದೆ.

ಶ್ರೀ ಗಾಡ್ಗಿಲರ ಮೇಲೆ ಕೈಮಾಡಿದ ಘಟನೆಯಾದ ೨೦ ಗಂಟೆಗಳಲ್ಲಿ ಕೈಮಾಡಿದವರು ಕರ್ಕಿಯಲ್ಲಿ ಮನ್ಮಾಡ್ ಪ್ಯಾಸೆಂಜರ್ ಟ್ರೈನಿನ ಪ್ರಥಮದರ್ಜೆಯ ಮಹಿಳೆಯರ ಗಾಡಿಯಲ್ಲಿ, ಟಿಕೆಟ್‌ಯಿಲ್ಲದೆ ಪ್ರಯಾಣಮಾಡುತ್ತಿದ್ದರೆಂದು ಸಿಕ್ಕಿಬಿದ್ದರು. ಅವರುಗಳನ್ನು ಅನಂತರ ಥುರವಾಡಾ ಜೈಲಿಗೆ ತರಲಾಯಿತು. ಅಲ್ಲಿ ಶ್ರೀ ಗಾಡ್ಗಿಲರ ಕೈಗಡಿಯಾರ ಇವರುಗಳಲ್ಲಿ ಸಿಕ್ಕಿತು.

ತಾವು ಕೈಮಾಡಿದುದು ಕೇಂದ್ರ ಸಚಿವರ ಮೇಲೆಂಬುದು ಅವರುಗಳಿಗೆ ಗೊತ್ತಿಲ್ಲವೆಂದು ಆ ವರದಿ ತಿಳಿಸುತ್ತದೆ.

೭೧ ಮಂದಿಗೆ ಅನರ್ಹತೆ

ಬೆಂಗಳೂರು ಮೇ ೫

ಸಾರ್ವತ್ರಿಕ ಚುನಾವಣೆಗಳಲ್ಲಿ ಸಂಸ್ಥಾನದ ಹಲವು ಕ್ಷೇತ್ರಗಳಿಂದ ಸ್ಪರ್ಧಿಸಿದ್ದ ಉಮೇದುವಾರರು ಕೆಲವರು ತಮ್ಮ ಚುನಾವಣಾ ಲೆಕ್ಕಪತ್ರಗಳನ್ನು ಸಕಾಲದಲ್ಲಿ ಮತ್ತು ಸರಿಯಾದ ರೀತಿಯಲ್ಲಿ ಒಪ್ಪಿಸಲಿಲ್ಲವೆಂದು ಚುನಾವಣೆ ಕಮಿಷನ್ನಿನಿಂದ ೭೧ ಜನರು ಚುನಾವಣಾ ಅನರ್ಹತೆಗೆ ಗುರಿಪಡಿಸಲ್ಪಟ್ಟಿದ್ದಾರೆ.

ಫೋ೯ ೫೭೪ (೮೮) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೮-೫-೧೯೫೨ನೇ ಗುರುವಾರ [ಸಂಚಿಕೆ ೨೦೨

ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕೊಟ್ಟುಬಿಡೋಣ

ಮೈಸೂರು ಮೇ ೭

ನಿನ್ನೆ ಯದಿನ ಟಿ. ನರಸೀಪುರದಲ್ಲಿ ಕಿಸಾನ್ ಮಜದ್ದೂರ್ ಪ್ರಜಾಸಂಘದ ಪ್ರಥಮ ವಾರ್ಷಿಕೋತ್ಸವದಲ್ಲಿ ಪಾರ್ಲಿಮೆಂಟ್ ಮೆಂಬರು ಶ್ರೀ ಗುರುಪಾದಸ್ವಾಮಿಯವರು ಮಾತನಾಡುತ್ತಾ, ನಮಗೆ ಸರಿಯಾದ ಪ್ರಜಾಪ್ರಭುತ್ವ ಬಂದಿಲ್ಲ. ಹಿಂದೆ ಅಧಿಕಾರಿ ಶಾಹಿಯಿತ್ತು. ಈಗ ಕಾಂಗ್ರೆಸ್ ಶಾಹಿ ಇದೆ. ಪಂಚವಾರ್ಷಿಕ ಯೋಜನೆ ಒಂದು ಭ್ರಾಂತಿ ಇದು ಜನರನ್ನು ಮಂಕು ಹಿಡಿಸುವ ನೀತಿ. ಕಾಂಗ್ರೆಸ್‌ನ ಕ್ವಾಳ್ವಿಗಳ, ಕಾಳಸಂತೆಕೋರರ ಒಂದು ಕೂಟ, ಕಾಂಗ್ರೆಸ್ ಬಂದ ಮೇಲೆ ಕಂಟ್ರೋಲ್ ಜಾಸ್ತಿಯಾಯಿತು. ಈಗ ಕಾಂಗ್ರೆಸ್ಸನ್ನು ಕಂಟ್ರೋಲ್ ಮಾಡಬೇಕಾಗಿದೆ ಕಾಶ್ಮೀರವನ್ನು ಭಾರತಕ್ಕೆ ಸೇರಿಸಲು ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕೊಟ್ಟುಬಿಟ್ಟು ಪೂರ್ವ ಬಂಗಾಳವನ್ನು ನಾವು ಪಡೆಯಬೇಕು.

ಸರ್ಕಾರವು ಸೈನ್ಯಕ್ಕಾಗಿ ೧೮೦ ಕೋಟಿ ವೆಚ್ಚ ಮಾಡುತ್ತಲಿದೆ. ಇದು ಬಹಳ ಅನ್ಯಾಯ ಇದನ್ನು ತಡೆಯಲು ಒಂದು ಪ್ರತಿಪಕ್ಷ ಸ್ಥಾಪಿಸಬೇಕು. ಕೆ. ಎಂ. ಪಿ ಪಕ್ಷವು ಈ ಕಾರ್ಯಗಳನ್ನೆಸಗಲು ಹುಟ್ಟಿದೆ ಎಲ್ಲರೂ ಈ ಪಕ್ಷಕ್ಕೆ ಬೆಂಬಲನೀಡಬೇಕೆಂದು ಹೇಳಿದರು.

ಕೂಡಲೇ ಕಂಟ್ರೋಲ್‌ಗಳನ್ನು ತೆಗೆದುಹಾಕಿ ಜನರ ಕಷ್ಟವನ್ನು ಹೋಗಲಾಡಿಸಲು ಈಗಿನ ಸರ್ಕಾರಕ್ಕೆ ಸಾಧ್ಯವಾಗದಿದ್ದರೆ ಕೂಡಲೇ ರಾಜೀನಾಮೆ ಕೊಡಲಿ ಎಂದೂ ಶ್ರೀಯುತರು ತಿಳಿಸಿದರು.

ಆಕಾಶವಾಣಿ ರಿಕ್ರಿಯೇಷನ್ ಕ್ಲಬ್ ವಾರ್ಷಿಕೋತ್ಸವ

ಮೈಸೂರು ಮೇ ೭

ಮೈಸೂರು ಎ. ಐ. ಆರ್. ಸಂಸ್ಥೆಯ ಆಕಾಶವಾಣಿ ರಿಕ್ರಿಯೇಷನ್ ಕ್ಲಬ್‌ನ ವಾರ್ಷಿಕೋತ್ಸವವು ನಿನ್ನೆಯದಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಅತ್ಯಂತ ವೈಭವದಿಂದ ನೆರವೇರಿತು.

ಸಂಘದ ಅಧ್ಯಕ್ಷರಾದ ಶ್ರೀ ತಾತಾಚಾರ್ಯರು ಮುಖ್ಯಮಂತ್ರಿಗಳನ್ನು ಸ್ವಾಗತಿಸಿದರು. ಶ್ರೀಮತಿ ನಾಗಮ್ಮನವರಿಂದ ಶುಶ್ರಾವ್ಯ ಸಂಗೀತ, ರೇಡಿಯೋಕೇಂದ್ರದ ವಾದ್ಯಗೋಷ್ಠಿ, ಫ್ಯಾನ್ಸಿಡ್ರೆಸ್‌ಪ್ರದರ್ಶನ ನಡೆಯಿತು.

ಕಾರ್ಯದರ್ಶಿಗಳಾದ ಶ್ರೀ ಕೃಷ್ಣಮೂರ್ತಿಯವರು ಸಂಘದ ವರದಿಯನ್ನು ಓದಿದರು. ಮುಖ್ಯಮಂತ್ರಿಗಳು ಸಂಘದ ಚಟುವಟಿಕೆಗಳಿಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾ, ಅಧಿಕಾರಿಗಳು, ನೌಕರರು ಎಂಬ ಭೇದಭಾವವಿಲ್ಲದೆ ಹೀಗೆಕಲೆತು ತಮ್ಮ ವಿಹಾರಕಾಲವನ್ನು ಕಳೆಯುವುದು ಇತರರಿಗೆಮಾದರಿಯಾಗಿದೆ.

ಇತರ ಆಫೀಸು ಮತ್ತು ಸಂಸ್ಥೆಗಳಿಗೆ ಇದನ್ನು ಕಲಿಯಬೇಕೆಂದು ಮುಖ್ಯಮಂತ್ರಿಗಳು ತಿಳಿಸಿದರು. ಎ. ಐ. ಆರ್. ಕೇಂದ್ರದ ಅಸಿಸ್ಟೆಂಟ್ ಡೈರೆಕ್ಟರ್ ಡಾ॥ ನಟೇಶನ್‌ರವರು ಮುಖ್ಯಮಂತ್ರಿಗಳಿಗೆ, ಅತಿಥಿಗಳಿಗೆ ಸಂಘದ ಪರವಾಗಿ ವಂದನೆಗಳನ್ನರ್ಪಿಸಿದರು.

ಅಧಿಕ ಉಷ್ಣಾಂಶ

ನಿನ್ನೆ ಯದಿನ ಮದರಾಸಿನಲ್ಲಿ ಉಷ್ಣಾಂಶವು ೧೦೭.೪ ಡಿಗ್ರಿಗಳಿದ್ದವು. ಆದರೆ ಕಡಪಾದಲ್ಲಿ ೧೧೮ ಡಿಗ್ರಿಗಳು ರಿಕಾರ್ಡಾಗಿದೆ.

ಪ್ರಭಾ * ಅಮೋಘ ಪ್ರಾರಂಭ

9—5—52 ರಿಂದ

ದಿನವಹಿ 3 ಆಟಗಳು

ಗುಡ್‌ಲಕ್ ಪಿಕ್ಚರ್ಸ್‌ರವರ ಅತ್ಯುತ್ತಮ ಸಂಗೀತದಿಂದ ಕೂಡಿದ ಸಾಮಾಜಿಕ ಹಿಂದಿ ಚಿತ್ರ.

* ಸಲೋನಿ *

ಪಾತ್ರ:—ಅಶೋಕ್‌ಕುಮಾರ್, ಶಶಿಕಲಾ(?) ನಲಿನಿಜಯವಂತ್, ಪೂರ್ಣಿಮಾ, ಮೋಹನ ಮತ್ತು ರಣಧೀರ್.

ಹತ್ತಿ ರವಾನೆ ಮೇಲಣ ನಿರ್ಬಂಧ ರದ್ದು

ಲಂಚನಿರೋಧ ಮಂಡಲಿಯ ನೇಮಕ

ಬೆಂಗಳೂರು ಮೇ ೭

ಮೈಸೂರು ಸರ್ಕಾರದ ದಕ್ಷತೆ ತನಿಖೆಯ ಇಲಾಖೆಯನ್ನು ರದ್ದುಗೊಳಿಸಿ, ಲಂಚನಿರೋಧ ಇಲಾಖೆಯನ್ನು ಮುಂದುವರಿಸಿ ಲಂಚನಿರೋಧ ಅಧಿಕಾರಿಗಳೊಡನೆ ಇಬ್ಬರು ಸದಸ್ಯರುಳ್ಳ ಒಂದು ನ್ಯಾಯ ಮಂಡಲವನ್ನು ಸರ್ಕಾರ ನೇಮಿಸಲು ಪರ್ಯಾಲೋಚಿಸುತ್ತಿರುವುದಾಗಿ ಹೇಳಲಾಗಿದೆ.

ಒಂದುಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ರಹದಾರಿಯಿಲ್ಲದೆ ಹತ್ತಿ ರವಾನೆಯ ನಿರ್ಬಂಧವನ್ನು ಸರ್ಕಾರವು ತೆಗೆದುಹಾಕಿದೆ. ಅಲ್ಲದೆ ಟೆಕ್ಸ್‌ಟೈಲ್ಸ್‌ಗೆ ಹತ್ತಿಯನ್ನು ಅಂಚೆದ್ವಾರಾ ಕಳುಹಿಸಲು ಇದ್ದ ಎಲ್ಲಾ ನಿರ್ಬಂಧಗಳನ್ನು ಸಹ ಈಗ ತೆಗೆದುಹಾಕಲಾಗಿದೆ. ರಾಷ್ಟ್ರದಲ್ಲಿ ಈಗ ಎಲ್ಲಿಗೆಬೇಕಾದರೂ ರವಾನೆಮಾಡಬಹುದು.

ಮುಖ್ಯಮಂತ್ರಿಗಳ ಪ್ರವಾಸ

ಮೈಸೂರು ಮೇ ೮

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ಸಂಜೆ ೪ ಗಂಟೆಗೆ ಕೃಷ್ಣರಾಜನಗರಕ್ಕೆ ತೆರಳಿ ನಾಳೆ ರಾತ್ರಿ ಮೈಸೂರಿಗೆ ಹಿಂತಿರುಗಿ ಶನಿವಾರ ಬೆಳಗ್ಗೆ ೭ ಗಂಟೆಗೆ ಬೆಂಗಳೂರಿಗೆ ತೆರಳುವರು.

ಭಾನುವಾರ ಬೆಳಗ್ಗೆ ಅವರು ನಾಗಮಂಗಲಕ್ಕೆ ಭೇಟಿಯಿತ್ತು, ಅಲ್ಲಿ ಮುನಿಸಿಪಲ್ ಹೈಸ್ಕೂಲ್ ಕಟ್ಟಡ ಪ್ರಾರಂಭೋತ್ಸವವನ್ನು ನೆರವೇರಿಸಿ, ತುಮಕೂರಿಗೆ ಭೇಟಿಯಿತ್ತು, ಬೆಂಗಳೂರಿಗೆ ಹಿಂತಿರುಗಿ ಮಧ್ಯಾಹ್ನ ಗೊಟ್ಟಿಗೆರೆಗೆ ಹೋಗಿಬರುವರು.

ಪುರಸಭಾಧಿವೇಶನ

ಮೈಸೂರು ಮೇ ೭

ಮೈಸೂರು ಪುರಸಭೆಯ ಮುಂದುವರಿದ ಅಧಿವೇಶನವು ೧೦ನೇ ತಾರೀಖು ಶನಿವಾರ ಸೇರಲಿದೆ.

ಡಾ॥ ಮೇರಿಯಾಮಾಂಟಿ ಸೋರಿಯವರ ನಿಧನ

ಪ್ರಪಂಚ ವಿಖ್ಯಾತ ಮಕ್ಕಳ ಶಿಕ್ಷಣ ಪ್ರವೀಣರಾದ ಡಾ॥ ಮೇರಿಯಾಮಾಂಟಿ ಸೋರಿಯವರು ತಮ್ಮ ೮೧ನೇ ವಯಸ್ಸಿನಲ್ಲಿ ಹಾಲೆಂಡಿನಲ್ಲಿ ನಿಧನ ಹೊಂದಿದರು. ೬ ವರ್ಷದ ವರೆಗೆ ಮಕ್ಕಳ ಶಿಕ್ಷಣಕ್ಕೆ ಸಂಬಂಧಪಟ್ಟಂತೆ 'ಮಾಂಟಿಸೋರಿ ಪದ್ಧತಿ'ಯೆಂದು ನೂತನ ಕ್ರಮವನ್ನು ಆಕೆಯು ಕಂಡುಹಿಡಿದರು. ವಿಶ್ವಕ್ಕೆಲ್ಲಾ ಈ ಶಿಕ್ಷಣ ಪದ್ಧತಿಯು ಹರಡಿದೆ.

ಆಹಾರ ಧಾನ್ಯ ಬೆಳೆಗೆ ಬೆಂಕಿ

ನವಾಬ್‌ಗಂಜಿಗೆ ಸೇರಿದ ತಿಣಿಮಿಣಿ ಎಂಬ ಹಳ್ಳಿಯಲ್ಲಿ ೬೦೦ ಎಕರೆಗಳಿಗೆ ಬೆಂಕಿಬಿದ್ದು ಆಹಾರದ ಬೆಳೆ ನಾಶವಾಗಿದೆ. ಇದು ಉದ್ದೇಶಪೂರ್ವಕವಾಗಿ ನಡೆಸಿದ ಕೃತ್ಯವೆಂದು ಪೋಲೀಸರು ತಿಳಿಸಿದ್ದಾರೆ.

ಈ ಸಂಬಂಧದಲ್ಲಿ ೩೦ ಜನರ ದಸ್ತಗಿರಿಯಾಗಿದೆ.

ನೆಹ್ರೂ ಮಂತ್ರಿಮಂಡಲದ ರಾಜೀನಾಮೆ

ನೆಹ್ರೂರವರ ಮಂತ್ರಿಮಂಡಲ ಮೇ ೧೩ನೇ ತಾ॥ ಪ್ರಾತಃಕಾಲ ರಾಜೀನಾಮೆ ಸಲ್ಲಿಸುವುದು ಆ ದಿನ ಸಂಜೆಯೇ ಹೊಸ ಮಂತ್ರಿಮಂಡಲ ಪ್ರಮಾಣವಚನ ಸ್ವೀಕರಿಸುವುದು.

ಪ್ರಮಾಣ ಸ್ವೀಕಾರ

ರಾಷ್ಟ್ರಾಧ್ಯಕ್ಷರಾಗಿ ಆರಿಸಲ್ಪಟ್ಟ ಡಾ॥ ರಾಜೇಂದ್ರಪ್ರಸಾದರು ಮೇ ೧೩ನೇ ತಾ॥ ಮಂಗಳವಾರ ಪ್ರಾತಃಕಾಲ ೮-೩೦ಗಂಟೆ ಪ್ರಮಾಣವಚನ ಸ್ವೀಕರಿಸುವರು(?)ದ್ದಾರೆ.

ಪಾರ್ಲಿಮೆಂಟ್ ಸದಸ್ಯರಿಗೆ ವೇತನ

ಪಾರ್ಲಿಮೆಂಟ್ ಸದಸ್ಯರಿಗೆ ಈಗ ಅಧಿವೇಶನ ಕಾಲದಲ್ಲಿ ದಿನಒಂದಕ್ಕೆ ೪೫ ರೂಪಾಯಿಗಳ ಅಲೋಯನ್ಸ್ ಮಾತ್ರ ಕೊಡಲಾಗುತ್ತದೆ. ಇನ್ನುಮುಂದೆ ಅವರಿಗೆ ತಿಂಗಳಿಗೆ ೪೦೦ ರೂಪಾಯಿ ವೇತನ ಮತ್ತು ಸ್ವಲ್ಪ ದಿನವಹಿ ಅಲೋಯನ್ಸ್ ಕೊಡುವ ವಿಷಯವು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

ನೈಜಾಮರಿಗೆ ನಿತ್ಯವೂ ಹೈದರಾಬಾದಿನಿಂದ ನೀರು ಸರಬರಾಜು

ಹೈದರಾಬಾದ್ ನೈಜಾಮರು ಈಗ ಬೊಂಬಾಯಿಗೆ ಪ್ರಯಾಣ ಮಾಡಿರುವರು. ಅಲ್ಲಿ ೩ ವಾರ ಕಾಲ ಇರುವರೆಂದು ಹೇಳಲಾಗಿದೆ. ಆ ಕಾಲದಲ್ಲಿ ಪ್ರತಿದಿನವೂ ಅವರಿಗೆ ಹೈದರಾಬಾದಿನ ಮೀರ್‌ಆಲಾಂ ಕೆರೆಯಿಂದ ವಿಮಾನ ಮೂಲಕ ನೀರು ಸರಬರಾಜು ಮಾಡಲೇರ್ಪಡಿಸಲಾಗಿದೆಯೆಂದು ಹೇಳಲಾಗಿದೆ. ರಕ್ಷಣಾ ವ್ಯವಸ್ಥೆಗಾಗಿ ಈ ರೀತಿ ಮಾಡಲಾಗುತ್ತದೆಯೆಂದು ತಿಳಿಯಬರುತ್ತದೆ.

ಸಂಸ್ಥಾನದಲ್ಲಿ ಎಲ್ಲಾ ವರ್ಗದವರೂ ಒಂದೇ

ಅನಿರ್ಬಂಧ ಮಾರಾಟಕ್ಕೆ ಅವಕಾಶವಿಲ್ಲ

ಬೆಂಗಳೂರು ಮೇ ೭

ಸರ್ಕಾರದ ಹೊಸ ಆಹಾರ ನೀತಿಯ ಬಗ್ಗೆ ಸಂದೇಹಗಳನ್ನು ಹೋಗಲಾಡಿಸಲು ಸರ್ಕಾರವು ಈದಿನ ಒಂದು ಪತ್ರಿಕಾ ಪ್ರಕಟಣೆ ಹೊರಡಿಸಿದೆ.

ಈ ಪ್ರಕಟಣೆಯ ಮುಖ್ಯಾಂಶಗಳು

೧೦-೪-೫೨ನೇ ಪತ್ರಿಕಾ ಪ್ರಕಟಣೆಯಲ್ಲಿ ಎರಡು ಭಾಗಗಳಿವೆ. ಒಂದು ಆಹಾರ ಬೆಲೆ ಪುನರ್‌ಪರಿಶೀಲನೆ. ಇನ್ನೊಂದು ಆಹಾರ ನೀತಿಗೆ ಸಂಬಂಧಪಟ್ಟದ್ದು.

ಬೆಲೆಯ ವಿಷಯದಲ್ಲಿ ದಾವಣಗೆರೆ ಸಮ್ಮೇಳನದ ನಿರ್ಣಯಗಳ ಪ್ರಸ್ತಾಪನೆಯಿಲ್ಲ. ಬೆಲೆ ಹೆಚ್ಚಿಸಲು ದಾವಣಗೆರೆ ನಿರ್ಣಯ ಸರ್ಕಾರಕ್ಕೆ ಅಧಿಕಾರ ಕೊಟ್ಟಿದೆಯೆನ್ನುವುದು ನಿಜವಲ್ಲ. ಅನಿವಾರ್ಯವಾಗಿ ಬೆಲೆಗಳನ್ನು ಹೆಚ್ಚಿಸಲಾಗಿದೆ. ಧಾನ್ಯ ಸಂಗ್ರಹಣ ಬೆಲೆಗೂ ಮಾರುವ ಬೆಲೆಗೂ ಸಂಬಂಧವಿಲ್ಲ ಇವೆರಡಕ್ಕೂ ಸಂಬಂಧ ಕಲ್ಪಿಸಬಾರದು.

ಹಳ್ಳಿಗಾಡಿನ ಜನರ ವೆಚ್ಚದಲ್ಲಿ ಪಟ್ಟಣಿಗರಿಗೆ ಆಹಾರ ಒದಗಿಸಲಾಗುತ್ತಲಿದೆಯೆನ್ನುವುದು ಸರ್ಕಾರಿ ಪ್ರಕಟಣೆಯಲ್ಲಿಲ್ಲ. ಎಲ್ಲಾ ವರ್ಗದ ಜನರಿಗೂ ಕೊಳ್ಳುವ ಬೆಲೆಯು ಒಂದೇ ರೀತಿಯದೆ. ಭೇದ ಕಲ್ಪಿಸುವುದು ಸರಿಯಲ್ಲ.

ಬೆಳೆಯುವವರು ಅಥವಾ ಬಂಡುವರ್ಗದ ಬೆಳಸುವವರು ಇತರ ವರ್ಗದವರಿಗೆ ಸಬ್ಸಿಡಿ ಒದಗಿಸುತ್ತಾಲಿದ್ದಾರೆಂಬುದು ಸರಿಯಲ್ಲ.

೧-೫-೫೨ ರಿಂದ ಸಂಸ್ಥಾನದ ಗ್ರಾಮ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ಮೇಲೆ ಹತೋಟಿಯಿಲ್ಲವೆನ್ನುವುದು ತಪ್ಪು.

೩೦-೪-೫೨ ರಲ್ಲಿ ವಿಶದ ಪಡಿಸುವ ಪ್ರಕಟಣೆಯಂತೆ ಆಹಾರ ಸಾಗಾಣಿಕೆಯ ನಿರ್ಬಂಧಗಳನ್ನು ಸಡಿಲಿಸಲಾಗಿದೆ. ಇದರಲ್ಲಿ ಹಿಂದಿನ ನೀತಿಯನ್ನೇ ಅನುಸರಿಸಲಾಗಿದೆ.

ಅನಿರ್ಬಂಧ ಸಾಗಾಣಿಕೆಗೆ ಅವಕಾಶ ಕೊಟ್ಟಿರುವುದರಿಂದ ಅನಿರ್ಬಂಧವಾಗಿ ಆಹಾರ ಮಾರಾಟ, ಬೆಲೆ ನಿಗದಿ ಹತೋಟಿ ರದ್ದು ಆಗಿಲ್ಲ. ಕ್ರಮಬದ್ಧ ಪಡಿತರವಿರುವ ಮತ್ತು ಶಾಸನಬದ್ಧವಲ್ಲದ ಪಡಿತರ ಪದ್ಧತಿಯಿರುವ ಪ್ರದೇಶಗಳಿಗೆಲ್ಲಾ ಆಹಾರ ಒದಗಿಸುವ ಜವಾಬ್ದಾರಿ ಸರ್ಕಾರಕ್ಕಿಲ್ಲವೆಂಬುದು ತಪ್ಪು.

ಲೆವಿ ಪದ್ಧತಿ ಪ್ರಕಾರ ಆಹಾರ ವಸೂಲಿ ಬಗ್ಗೆ ಆಹಾರ ಶಾಖಾ ಕಾರ್ಯದರ್ಶಿಯವರ ಪ್ರಕಟಣೆಯಲ್ಲಿ ಮುಂದಿನ ನೀತಿಯ ತಿಳಿವಳಿಕೆ ಕೊಡಲಾಗಿದೆಯೇ ವಿನಃ ಸರ್ಕಾರಿ ಆಜ್ಞೆ ಹೊರಬಿದ್ದಿಲ್ಲ. ಪ್ರಶ್ನೆಯು ಎಲ್ಲಾ ವಿಷಯಗಳ ಪರಿಶೀಲನೆಯಾದ ಮೇಲೆ ಸರ್ಕಾರಿ ಆಜ್ಞೆ ಹೊರಬೀಳುತ್ತದೆ.

ಈಗಿನ ಸರ್ಕಾರದ ಪರಿಸ್ಥಿತಿಯಲ್ಲಿ ಯಾರಿದ್ದರೂ ಕೇಂದ್ರ ಸಬ್ಸಿಡಿ ನಿಲ್ಲಿಸಿರುವುದರಿಂದಲೂ ಆಮದು ಧಾನ್ಯಗಳ ಬೆಲೆ ವಿಪರೀತವಾಗಿರುವುದರಿಂದ ಈ ನೀತಿಯನ್ನೇ ಅನುಸರಿಸಬೇಕಾಗಿದೆ.

ಪಕ್ಷದ ಶಿಸ್ತು ಭಂಗ ಮಾಡಿದ್ದಾರೆ

ಬೆಂಗಳೂರು ಮೇ ೭

ಮೈಸೂರು ಪ್ರದೇಶ ಕಾಂಗ್ರೆಸ್ ಸಹ ಕಾರ್ಯದರ್ಶಿ ಹುಚ್ಚಮಾಸ್ತಿಗೌಡರು ಒಂದು ಪ್ರಕಟಣೆಯನ್ನು ಹೊರಡಿಸಿ, ಮಾಜಿ ಸಚಿವ ಶ್ರೀ ಟಿ. ಮರಿಯಪ್ಪನವರು ಹೊಸ ಮಂತ್ರಿಮಂಡಲದ ಆಹಾರ ನೀತಿಯನ್ನು ಟೀಕಿಸಿ ಶಿಸ್ತುಭಂಗ ಮಾಡಿದ್ದಾರೆಂದು ತಿಳಿಸಿರುವರು.

ಭಾರತ ರಾಷ್ಟ್ರೀಯ ಕಾರ್ಯ ಸಮಿತಿಯ ನಿರ್ಣಯಕ್ಕೆ ಇವರು ವಿರೋಧವಾಗಿ ನಡೆದಿದ್ದಾರೆ. ತಮ್ಮ ಅಭಿಪ್ರಾಯವನ್ನು ಶ್ರೀ ಟಿ. ಮರಿಯಪ್ಪನವರು ಮೇ ೨ ಮತ್ತು ೩ನೇ ತಾ॥ ಗಳಲ್ಲಿ ನಡೆದ ಪಕ್ಷದ ಸಭೆಯಲ್ಲಿ ತಿಳಿಸಬೇಕಾಗಿತ್ತು. ಇವರ ಹೇಳಿಕೆ ಕಾಂಗ್ರೆಸ್ಸಿನ ಐಕ್ಯತೆ ಮತ್ತು ಶಿಸ್ತು ರಕ್ಷಣೆಗೆ ಸಹಾಯವಾಗುವುದಿಲ್ಲ ಮತ್ತು ಅದು ಸಾರ್ವಜನಿಕರ ಅಭಿಪ್ರಾಯಕ್ಕನುಗುಣವಾಗಿಲ್ಲವೆಂದು ಆ ಪ್ರಕಟಣೆಯಲ್ಲಿ ಶ್ರೀ ಮಾಸ್ತಿಗೌಡರು ತಿಳಿಸಿರುವರು.

ಆಹಾರಬೆಲೆ ಸತ್ಯಾಗ್ರಹಕ್ಕೆ ಕಾಂಗ್ರೆಸ್ಸಿಗರ ನೆರವು

ಸರ್ಕಾರದ ಆಹಾರ ಬೆಲೆ ಏರಿಕೆ ನೀತಿ ಪ್ರತಿಭಟಿಸಿ ಸೋಷಲಿಸ್ಟರು ಪೂನಾದಲ್ಲಿ ಸತ್ಯಾಗ್ರಹದ ೩ನೆಯ ದಿನ ಸತ್ಯಾಗ್ರಹಿಗಳ ಮೆರವಣಿಗೆ ಆರಂಭವಾದೊಡನೆ ಹೊರಟ ೧೫ ಜನರನ್ನು ಬಂಧಿಸಲಾಯಿತು. ಮಾರನೆ ದಿನ ಗಾಡ್ಗಿಲ್ಲರ ಚುನಾವಣಾ ಏಜೆಂಟರಾಗಿದ್ದ ಫುಲಂದ್ರಿಕಾರ್ ಎಂಬ ಕಾಂಗ್ರೆಸ್ ನಾಯಕರೂ ಸೇರಿದ್ದರು. ಶ್ರೀ ಫುಲಂದ್ರಿಕಾರ್ ತಮ್ಮಂತೆಯೇ 'ಸರ್ಕಾರದ ಆಹಾರ ನೀತಿ ಪ್ರತಿಭಟಿಸುವ ಕಾಂಗ್ರೆಸ್ಸಿಗರು ಅನೇಕರಿದ್ದಾರೆ' ಎಂದರು. ಮೇ ೧೩ ರಂದು ಸತ್ಯಾಗ್ರಹದಲ್ಲಿ ಸೇನಾಪತಿ ಬಾಪಟ್ ಸೇರಲಿದ್ದಾರೆ.

ಜಹಗೀರು ಪದ್ಧತಿ ರದ್ದು

ಜಹಗೀರುಪದ್ಧತಿಯನ್ನು ರದ್ದುಗೊಳಿಸಬೇಕೆಂದು ಭೂಪಾಲ್ ಶಾಸನಸಭೆ ನಿರ್ಣಯಿಸಿದೆ.

೩೩ ದಿನಗಳು ಸಮುದ್ರದಲ್ಲಿ ತೇಲಿಬಂದ ಧೀರರು

ದಕ್ಷಿಣ ಚೀನಾ ಸಮುದ್ರದಲ್ಲಿ ಬಿರುಗಾಳಿಯಿಂದ ನಾಶವಾದ ನೌಕೆಯಿಂದ ಸಮುದ್ರದಲ್ಲಿ ಸಿಕ್ಕಿಹೋಗಿ ತೊಲೆಯೊಂದನ್ನು ಹಿಡಿದುಕೊಂಡು ಹಸಿ ಮೀನುಗಳನ್ನು ತಿಂದು ಜೀವಿಸಿಕೊಂಡು ೩೩ ದಿನಗಳ ಕಾಲದನಂತರ ಸಿಂಗಪುರಕ್ಕೆ ಬರುತ್ತಿದ್ದ ಟ್ಯಾಂಕರ್ ಹತ್ತಿ ಬಂದು ಸೇರಿದ ೯ ಮಂದಿ ಸಾಹಸೀ ಫಿಲಿಪ್ಪಿನೊ ದೇಶೀಯರನ್ನು ಆದರಿಸಿ ಅವರ ದೇಶಕ್ಕೆ ಕಳುಹುವ ವ್ಯವಸ್ಥೆಯನ್ನು ಮಾಡಲಾಗಿದೆ.

ಹತೋಟಿ ರದ್ದು

ವಸ್ತುಗಳ ಮೇಲೆ ಹತೋಟಿಗಳನ್ನು ರದ್ದುಮಾಡಬೇಕಾದರೆ ಉತ್ಪಾದನೆ ಹೆಚ್ಚಾಗಿದೆಯೆಂದು ಕಂಡು ಬಂದಮೇಲೆ ಮಾತ್ರ ಸಾಧ್ಯ. ಈಗಿನ ಪಂಚವಾರ್ಷಿಕ ಯೋಜನೆಯ ಪ್ರಕಾರ ಉತ್ಪನ್ನವು ಅಷ್ಟು ಜಾಗ್ರತೆ ಹೆಚ್ಚುವುದೆಂದು ಕೇಂದ್ರ ಸಚಿವ ಶ್ರೀ ಸುಂದರಂರವರು ಹೇಳಿರುವರು.

ಪೇಟೆ ಧಾರಣೆ

ಮೈಸೂರು ತಾ॥ 7-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	10-0	18-6
ಹೊಂಗೆಬೀಜ	,,	13-0	—
ಹುರುಳಿ	,,	31-12	33-8
ಸೀಗೆಕಾಯಿ	,,	3-1	—
ಮೆ. ಕಾಯಿ ಮಣಕ್ಕೆ		13-4	15-12
ಹುಣಸೇಹಣ್ಣು	,,	3-0	—
ತೆಂಗಿನಕಾಯಿ	1100ಕ್ಕೆ	132	205

ಚಿನ್ನ ಬೆಳ್ಳಿ ದರಗಳು

7-5-52	ರೂ.
ಸವರಿನ್	66-6
,,	66-8
ಚಿನ್ನ ತೊಲ	94-14
,, ಮೊಹರ	93-8
ಬೆಳ್ಳಿ 100 ತೊಲ	173-8
,, ತೊಲ	1-12

ವುಡ್ ಲ್ಯಾಂಡ್ಸ್

2—5—52ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ದಿನವೂ 3 ಆಟಗಳು

" ಲಕ್ಷ್ಮೀ ನಾರಾಯಣ್ " (ಹಿಂದಿ)

ಪಾತ್ರ:—ಮೀನಾಕುಮಾರಿ ಮಹಿಪಾಲ್

ರಣಜಿತ್

೨—೫—೫೨ರಿಂದ ಅಮೋಘ ಪ್ರಾರಂಭ

ಹಂಲೋಗ್

ಪಾತ್ರ:-ನೂತನ್, ಶ್ಯಾಮ, ಸಜ್ಜನ್, ಜಾಲ್‌ರಾಜ್, ದುರ್ಗಾಕೋಟೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.

ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.

*

ಹೆಚ್ಚಿನ ವಿವರಗಳಿಗೆ ಬರೆಯಿರಿ—

ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

ಫೋನ್ ೫೭೪೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೯-೫-೧೯೫೨ನೇ ಶುಕ್ರವಾರ [ಸಂಚಿಕೆ ೨೦೩

ಶಾಸನಸಭಾಧಿವೇಶನದಲ್ಲಿ ಕಾಂಗ್ರೆಸ್ ಸದಸ್ಯರ ಸಭಾತ್ಯಾಗ

ಚುನಾವಣೆ ಅನರ್ಹತೆಗೊಳಗಾದವರಿಗೆ ಸೂಚನೆ

ಬೆಂಗಳೂರು ಮೇ ೮

ಮೈಸೂರು ಸರ್ಕಾರದವರು ಚುನಾವಣೆ ಲೆಕ್ಕವನ್ನು ಸರಿಯಾದ ಕಾಲದಲ್ಲಿ ನಿಯಮಿತ ರೀತಿಯಲ್ಲಿ ಕೊಡಲಿಲ್ಲವೆಂಬ ಕಾರಣದಿಂದ ಚುನಾವಣೆ ಅನರ್ಹತೆಗೊಳಗಾದವರ ಗಮನವನ್ನು ಪ್ರಜಾಪ್ರಾತಿನಿಧ್ಯ ಶಾಸನದ ೧೧೪ನೇ ರೂಲಿನ ಸಬ್‌ರೂಲ್ (೬) ಅತ್ತ ಸೆಳೆದಿದ್ದಾರೆ.

ಸಬ್‌ರೂಲ್‌ರೀತ್ಯ ಅನರ್ಹತೆಗೊಳಗಾದವರು ತಮ್ಮ ಹೆಸರು ಗೆಜೆಟ್‌ನಲ್ಲಿ ಪ್ರಕಟಣೆಯಾದ ೧೫ ದಿನದೊಳಗೆ ಭಾರತ ಚುನಾವಣಾ ಕಮಿಷನರ್‌ರವರಿಗೆ ಅರ್ಜಿ ಸಲ್ಲಿಸಿ ಅನರ್ಹತೆಯನ್ನು ತೆಗೆದುಹಾಕುವಂತೆ ಪ್ರಾರ್ಥಿಸಬಹುದು ಪ್ರಾರ್ಥನಾ ಪತ್ರದಲ್ಲಿ ಸರಿಯಾದ ಕಾಲದಲ್ಲಿ ಏಕೆ ಕಳುಹಿಸಲಾಗಲಿಲ್ಲ ಮತ್ತು ನಿಯಮಿತ ರೀತಿಯಲ್ಲಿ ಕಳುಹಿಸುವುದರಲ್ಲಿ ಏಕೆ ತಪ್ಪಾಯಿತೆಂಬುದಕ್ಕೆ ವಿವರಣೆಯನ್ನಿತ್ತು, ಅದರ ಪ್ರತಿಯನ್ನು ಸ್ಥಳೀಯ ಚುನಾವಣಾಧಿಕಾರಿಗಳಿಗೆ ಕಳುಹಿಸಬೇಕು ಇದುವರೆವಿಗೂ ಕೊಡದಿದ್ದರೆ ಈ ಪತ್ರದೊಂದಿಗೆ ಚುನಾವಣಾ ವೆಚ್ಚದ ಪಟ್ಟಿಯನ್ನು ಕಳುಹಿಸಬೇಕು.

ಸಂಸ್ಥಾನದಲ್ಲಿ ರೈಫಲ್ ಕ್ಲಬ್‌ಗಳು

ಬೆಂಗಳೂರು ಮೇ ೮

ಶಸ್ತ್ರಗಳ ಉಪಯೋಗದಲ್ಲಿ ತರಪೇತು ಮಾಡಲು ಖಾಸಗಿ ರೈಫಲ್ ಕ್ಲಬ್ ನಡೆಸಲು ಅನುಮತಿಯನ್ನು ಕೊಡುವ ವಿಷಯವನ್ನು ಸರ್ಕಾರ ಪರಿಶೀಲಿಸಿ ರೈಫಲ್ ಕ್ಲಬ್‌ಗಳಿಗೆ ಪ್ರೋತ್ಸಾಹ ಕೊಡಲು ತೀರ್ಮಾನಿಸಲಾಗಿದೆಯೆಂದೂ ಆರೀತಿ ರೈಫಲ್‌ಕ್ಲಬ್ ಆರಂಭಿಸಲು ಇಷ್ಟವುಳ್ಳವರು ಐ ಜಿ ಪಿ ಯವರಿಂದಾಗಲೀ ಜಿಲ್ಲಾ ನ್ಯಾಯಾಧೀಶರಿಂದಾಗಲೀ ವಿವರವನ್ನು ಪಡೆಯಬಹುದೆಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಆಸಫ್ ಆಲಿ

ಒರಿಸ್ಸಾದಲ್ಲಿ ಗೌರ್ನರ್‌ಆಗಿರುವ ಮಿ॥ ಆಸಫ್‌ಅಲಿಯವರನ್ನು ಸ್ವಿಟ್ಸರ್‌ಲೆಂಡ್‌ನಲ್ಲಿ ಭಾರತದ ರಾಯಭಾರಿಯಾಗಿ ನೇಮಕಮಾಡಲಾಗುತ್ತದೆಯೆಂದು ಹೇಳಲಾಗಿದೆ.

೧೯೪೮ ರಿಂದ ಶ್ರೀ ಆಸಫ್‌ಅಲಿಯವರು ಒರಿಸ್ಸಾದಲ್ಲಿ ಗೌರ್ನರ್‌ಆಗಿರುವರು ಅಮೆರಿಕಾದಲ್ಲಿ ಅವರು ಭಾರತದ ಪ್ರಥಮ ರಾಯಭಾರಿಯಾಗಿದ್ದರು.

ಸಚಿವರಿಂದ ಹೋಟೆಲುಗಳ ಪರಿಶೀಲನೆ

ಮೈಸೂರು ಮೇ ೮

ಸ್ಥಳೀಯ ಸಂಸ್ಥೆಗಳ ಸಚಿವರು ನಿನ್ನೆ ದಿವಸ ರಾತ್ರಿ ೮ ಗಂಟೆ ಸಮಯದಲ್ಲಿ ಮೈಸೂರು ನಗರ ಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಮತ್ತು ಪೌರಸಭಾ ಕಮೀಷನರ್ ಶ್ರೀ ಎಂ. ಎಸ್. ಸ್ವಾಮಿನಾಥರವರೊಡನೆ ಹಠಾತ್ತನೆ ಕೆಲವು ಹೋಟಲುಗಳನ್ನು ಪರಿಶೀಲಿಸಿದರು ಮಕ್ಕಾಜಿಚೌಕದ ಆನಂದಭವನ ಹೋಟಲಿನಲ್ಲಿ ತಿಂಡಿ ಮಾಡುವವರು ಏಪ್ರನ್ ಇಲ್ಲದೆಯೂ, ಸ್ಟರಲೈಸ್‌ಮಾಡಲು ಬಿಸಿನೀರು ಇಡದೆಯೂ, ಇದ್ದುದು ಕಂಡುಬಂದು, ಸಚಿವರು ಸದರೀ ಹೋಟಲನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಅಪ್ಪಣೆಮಾಡಿ ಆದರಂತೆ ಒಂದುವಾರಕಾಲ ನಿಲ್ಲಿಸಿರುತ್ತೆ. ಹೋಟಲುಗಳಲ್ಲಿ ಶುಚಿ, ಸೈರ್ಮಲ್ಯ ಕಾಪಾಡಲು ಕೆಲವು ಸಲಹೆಗಳನ್ನು ಕೊಟ್ಟು ಅಧಿಕಾರಿಗಳು ಮತ್ತು ಅಧ್ಯಕ್ಷರು ಹೆಚ್ಚು ಶ್ರಮವಹಿಸಬೇಕೆಂದು ತಿಳಿಸಿದರು.

ವೃತ್ತಿ ಶಿಕ್ಷಣಶಾಲೆಗೆ ಭೇಟಿ

ಮೈಸೂರು ಮೇ ೮

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇಂದು ಬೆಳಗ್ಗೆ ಚಾಮರಾಜೇಂದ್ರ ವೃತ್ತಿ ಶಿಕ್ಷಣಶಾಲೆಗೆ ಭೇಟಿಯನ್ನಿತ್ತು ಅಲ್ಲಿಯ ಕೆಲಸಕಾರ್ಯಗಳನ್ನು ಪರಿಶೀಲಿಸಿದರು.

ಕೈಗಾರಿಕಾಸಚಿವರಾದ ಶ್ರೀ ಟಿ, ಸಿದ್ದಲಿಂಗಯ್ಯನವರೂ ಸಹ ಇಲ್ಲಿಗೆ ಭೇಟಿಯಿತ್ತು, ಸುಮಾರು ಒಂದು ಗಂಟೆಕಾಲವಿದ್ದು ನಾನಾ ಭಾಗಗಳನ್ನು, ಕಛೇರಿಯನ್ನು ಪರಿಶೀಲಿಸಿ, ಅನೇಕವರ್ಷಗಳಿಂದ ಈ ವೃತ್ತಿ ಶಿಕ್ಷಣಶಾಲೆಯು ವಿಖ್ಯಾತಿಗಳಿಸಿರುವುದನ್ನು ಇನ್ನೂ ಉತ್ತಮಕಾರ್ಯಗಳು ಮಾಡಿ ಕಾಪಾಡಿಕೊಂಡು ಬರಬೇಕೆಂದು ತಿಳಿಸಿದರೆಂದ ಗೊತ್ತಾಗಿದೆ.

ಕಳ್ಳತನ

ಮೈಸೂರು ಚಾಮರಾಜ ಅಗ್ರಹಾರದ ಸುತ್ತಮುತ್ತಲೂ ಇತ್ತೀಚಿಗೆ ಕಳ್ಳತನ ವಿಶೇಷವಾಗಿದೆಯೆಂದು ತಿಳಿಯಬರುತ್ತದೆ.

(ಪೊಲೀಸ್ ಇಲಾಖೆಯವರು ಕೂಡಲೇ ತಕ್ಕ ವ್ಯವಸ್ಥೆ ಮಾಡಿ, ಕಳ್ಳತನವನ್ನು ತಪ್ಪಿಸುವರೆಂದು ನಂಬಿದೆ—ಸಂ)

ಅಕ್ಕಿ ರೇಷನ್ ಹೆಚ್ಚುವುದು

ಮುಂದಿನವಾರದಿಂದ ಹೈದರಾಬಾದಿನಲ್ಲಿ ಅಕ್ಕಿ ರೇಷನ್ ೩ ರಿಂದ ೪ ಔನ್ಸಿಗೆ ಹೆಚ್ಚುವುದೆಂದು ಸರಬರಾಜು ಶಾಖಾ ಮಂತ್ರಿ ಡಾ॥ ಚನ್ನರೆಡ್ಡಿ ತಿಳಿಸಿರುವರು.

ನಗರಾಭಿವೃದ್ಧಿ ಸಮಿತಿ ಕಾರ್ಯಕಲಾಪಗಳ ಪರಿಶೀಲನೆ

ಮೈಸೂರು ಮೇ ೮

ನಗರಾಭಿವೃದ್ಧಿಶಾಖೆಯ ಸಚಿವರಾದ ಶ್ರೀ ಟಿ. ಚನ್ನಯ್ಯನವರು ಇಂದು ಬೆಳಗ್ಗೆ ಮೈಸೂರುನಗರದಲ್ಲಿ ನಗರಾಭಿವೃದ್ಧಿ ಸಮಿತಿಯವರು ಕಟ್ಟಿಸಿರುವ ಮಾದರಿಮನೆಗಳು ಹೊಸ ಸ್ಟಾಚ್ಯೂಸ್ಕ್ವೇರ್ ಮತ್ತು ಪುರಸಭಾ ಕಚೇರಿಗಳನ್ನು ಪರಿಶೀಲಿದರು. ಅವರೊಡನೆ ನಗರಾಭಿವೃದ್ಧಿಸಮಿತಿ ಅಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿ ಮತ್ತು ಇಂಜನಿಯರ್ ಬಿ. ಎಸ್. ನಾರಾಯಣ ಸ್ವಾಮಿಗಳಿದ್ದು ಎಲ್ಲವನ್ನು ವಿವರಿಸಿದರು,

ಪುರಸಭಾ ಕಛೇರಿಗೆ ಬಂದಾಗ ಸಚಿವರನ್ನು ಪುರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾವ್ ಮತ್ತು ಕಮೀಷನರ್ ಶ್ರೀ ಎಂ. ಎಸ್. ಸ್ವಾಮಿನಾಥರವರು ಸ್ವಾಗತಿಸಿದರು. ಪರಿಶೀಲನಾ ಕಾಲದಲ್ಲಿ ಅವರೂ ಸಚಿವರೊಡನಿದ್ದರು.

ಕಾಂಗ್ರೆಸ್ ಅಧ್ಯಕ್ಷರ ಮೆರವಣಿಗೆ

ಕೃಷ್ಣರಾಜನಗರ ಮೇ ೮

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಈಸಂಜೆ ಕೃಷ್ಣರಾಜನಗರಕ್ಕೆ ಆಗಮಿಸಿದರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರೂ, ಎಂ. ಪಿ. ಸಿ. ಸಿ. ಸದಸ್ಯರೂ ಪುರಪ್ರಮುಖರೂ ಟೋಲ್‌ಗೇಟ್ ಬಳಿ ಅಧ್ಯಕ್ಷರಿಗೆ ಅಭೂತಸ್ವಾಗತವನ್ನಿತ್ತರು ಅನಂತರ ಅತ್ಯಂತ ಸುಂದರವಾಗಿ ಅಲಂಕೃತವಾದ ೮ ಜೊತೆ ಎತ್ತಿನಗಾಡಿಯಲ್ಲಿ ಅವರನ್ನು ಕುಳ್ಳಿರಿಸಿ ಮೆರವಣಿಗೆಯು ಟೋಲ್‌ಗೇಟಿನಿಂದ ಹೊರಟು ವಾಣಿವಿಲಾಸರಸ್ತೆ-ಪುರಸಭೆಕಛೇರಿ, ಚಂದ್ರಮೌಳಿ ರಸ್ತೆ ಮಾರ್ಗವಾಗಿ ಬಸ್‌ನಿಲ್ದಾಣಕ್ಕೆ ತೆರಳಿತು. ಮೆರವಣಿಗೆಯನ್ನು ನೋಡಲು ಸಹಸ್ರಾರು ಜನರು ಸೇರಿದ್ದರು. ಅನಂತರ ಬಹಿರಂಗ ಸಭೆ ನಡೆಯಿತು. ಪೌರಸಭಾ ಪರವಾಗಿ ಬಿನ್ನವತ್ತಳೆಯನ್ನರ್ಪಿಸಲಾಯಿತು.

ಗೌರ್ನರ್ ಭಾಷಣದ ಮೇಲೆ ಚರ್ಚೆ

ಮದ್ರಾಸ್ ಕೆಳಗಿನ ಶಾಸನಸಭೆಯಲ್ಲಿ ಗೌರ್ನರರ ಭಾಷಣದ ಮೇಲೆ ನಿನ್ನೆ ಚರ್ಚೆ ಪ್ರಾರಂಭವಾಗಿದೆ. ಶ್ರೀ ಪಿ ಎಸ್. ವೆಂಕಟಸ್ಬ್ಬರೆಡ್ಡಿಯವರು ಗೌರ್ನರಿಗೆ ವಂದನೆಯ ನಿರ್ಣಯವನ್ನು ಮಂಡಿಸಿದ್ದಾರೆ. ಸಭೆಯಲ್ಲಿಯೂ ಅವಿಶ್ವಾಸ ನಿರ್ಣಯದಂತೆ ಯಾವ ನಿರ್ಣಯವನ್ನು ಮಂಡಿಸಕೂಡದೆಂದು ಸಭಾಧ್ಯಕ್ಷರು ತಿಳಿಸಿರುವರು.

ಸಭಾಧ್ಯಕ್ಷರ ತೀರ್ಮಾನವನ್ನು ಪ್ರತಿಭಟಿಸಿ ಕಾಂಗ್ರೆಸ್ ಪಕ್ಷದ ೨೩ ಸದಸ್ಯರು ನಿನ್ನೆಯದಿನ ಪೆಪ್ಸು ಶಾಸನಸಭೆಯಲ್ಲಿ ೫ ನಿಮಿಷ ಕಾಲ ಸಭಾತ್ಯಾಗ ಮಾಡಿದರು.

ಸಾರ್ವಜನಿಕ ಲೆಕ್ಕಾಚಾರಕ್ಕೆ ಸಂಬಂಧಪಟ್ಟಂತೆ ಒಂದು ಸಮಿತಿಯನ್ನು ರಚಿಸಬೇಕಾಗಿತ್ತು. ಅದಕ್ಕೆ ಉಮೇದುವಾರಿಕೆ ಪಡೆಯುವ ತಾರೀಖನ್ನು ಮುಂದುವರಿಸಿದುದೇ ಸಭಾತ್ಯಾಗಕ್ಕೆ ಕಾರಣ.

ಜಯಂತ್ಯುತ್ಸವ

ವಿಶ್ವವಿಖ್ಯಾತ ಕವೀಂದ್ರ ಶ್ರೀ ರವೀಂದ್ರನಾಥ ಟಾಗೂರರ ಜಯಂತ್ಯುತ್ಸವವು ಕಲ್ಕತ್ತಾನಗರದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ನಗರದ ಅನೇಕಭಾಗಗಳಲ್ಲಿ ಸಭೆಗಳು,ಶಾಲಾಕಾಲೇಜು ಮತ್ತು ಇತರ ಸಂಸ್ಥೆಗಳಲ್ಲಿ ಸಂಗೀತ, ಭಾಷಣ, ನಾಟಕ ಮುಂತಾದುವು ನಡೆದುವು.

ಡಾಲರ್ ಮುದ್ರಕ ಯಂತ್ರದ ಪತ್ತೆ

ಅಮೇರಿಕದ ಡಾಲರ್ ನೋಟುಗಳನ್ನು ಮುದ್ರಿಸುವ ಯಂತ್ರವೊಂದನ್ನು ಪೋಲೀಸಿನವರು ಬೊಂಬಾಯಿಯಲ್ಲಿ ಪತ್ತೆ ಹಚ್ಚಿದ್ದಾರೆ.

ಪೋಲೀಸರು ೧೨ ಕ್ಕಿಂತ ಹೆಚ್ಚು ಕಡೆ ಶೋಧನೆನಡೆಸಿದ ಫಲವಾಗಿ, ಅನೇಕ ಪಡಿಯಚ್ಚುಗಳು,ನೆಗೆಟಿವ್ ಪ್ರತಿಗಳು,ಡಾಲರ್ ನೋಟುಗಳು ಸಿಕ್ಕಿದವು.

ಕಳೆದ ಮಾರ್ಚಿ ಅಂತ್ಯದಲ್ಲಿ ಟರ್ಕಿ ಜನಾಂಗದ ಡಾ॥ ಎಸ್. ಹೆಚ್. ಅಪರಾಣ್ ಮತ್ತು ಅವರ ನಾಲ್ವರು ಸಹೋದ್ಯೋಗಿಗಳು ೫೦ ಮತ್ತು ೧೦೦ ರ ಡಾಲರ್ ಬೆಲೆಯ ಖೋಟಾ ನೋಟುಗಳ ಚಲಾವಣೆ ನಡೆಸುತ್ತಿದ್ದಾಗ ಬಂಧಿಸಲ್ಪಟ್ಟರು.

ಖೋಟಾ ಡಾಲರ್ ನೋಟುಗಳ ಮುದ್ರಣಯಂತ್ರದ ಸಂಬಂಧದಲ್ಲಿ ಐವರ ಬಂಧನವಾಗಿದೆ, ಮ್ಯಾಜಿಸ್ಟ್ರೇಟರು ಅವರನ್ನೆಲ್ಲಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

೫೨೪ ರೇಷನ್ ಕಾರ್ಡ್ ಇಟ್ಟಿದ್ದ ಮಹಿಳೆ

ಅಜ್ಮೀರ್‌ನಲ್ಲಿ ೫೨೪ ಸುಳ್ಳು ರೇಷನ್ ಕಾರ್ಡುಗಳನ್ನು ಪಡೆದಿದ್ದ ಸ್ತ್ರೀಯೊಬ್ಬಳನ್ನು ಪೋಲೀಸರು ಬಂಧಿಸಿದರು. ಕೆಲವು ಕಳವಾದ ಮಾಲಿಗಾಗಿ ಈಕೆಯ ಮನೆಯನ್ನು ಶೋಧಿಸುತ್ತಿದ್ದಾಗ ಈ ಅಂಶ ವ್ಯಕ್ತವಾಯಿತು. ಪೋಲೀಸರ ವಿವರಣೆ ರೀತ್ಯ ಈ ಕಾರ್ಡುಗಳ ಆಧಾರದ ಮೇಲೆ ನಗರದ ನಾನಾ ಅಂಗಡಿಗಳಿಂದ ಆಕೆ ರೇಷನ್ ಪಡೆಯುತ್ತಿದ್ದಳಂತೆ.

೨,೫೨,೬೦೦ ರೂ. ಗಳ ದುರುಪಯೋಗದ ಆಪಾದನೆ

ಮುಂಬಯಿಯ ರಾಸಾಯನಿಕ ಸಂಸ್ಥೆಯೊಂದರ ಕ್ಯಾಷಿಯರ್ ಒಬ್ಬರು ೧೯೪೬ರ ಆಗಸ್ಟ್ ತಿಂಗಳಿಂದ ೧೯೫೧ರ ಮಾರ್ಚಿವರೆಗೆ ೨,೫೨,೬೦೦ ರೂ. ಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆಂಬ ಆಪಾದನೆ ಮೇಲೆ ದಸ್ತಗಿರಿ ಮಾಡಲ್ಪಟ್ಟರು. ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ೫,೦೦೦ ರೂ. ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಿದ್ದಾರೆ.

ರೈಲ್ವೆ ಪುನರ್ವರ್ಗೀಕರಣಕ್ಕೆ ಪ್ರತಿಭಟನೆ

ಇತ್ತೀಚಿನ ರೈಲ್ವೆ ಪುನರ್ವರ್ಗೀಕರಣದ ಬಗ್ಗೆ ಜನತೆಯ ಅಸಮ್ಮತಿಯನ್ನು ಸೂಚಿಸುವ ಸಲುವಾಗಿ ನಾಗರೀಕರ ಪ್ರತಿಭಟನಾ ಸಮಿತಿಯವರಿಂದ ಆಚರಿಸಲಾದ ಸಾರ್ವತ್ರಿಕ ಮುಷ್ಕರದಿಂದಾಗಿ ಮೊನ್ನೆ ಕಲ್ಕತ್ತ ಮತ್ತು ಸುತ್ತಿನ ಪ್ರದೇಶಗಳಲ್ಲಿ ಜನರ ದಿನಚರಿ ವ್ಯಾಪಾರ ನಿಂತುಹೋಗಿದ್ದಿತು. ಡಾ|| ಶಾಮಪ್ರಸಾದ ಮುಖರ್ಜಿಯವರು ಈ ಮುಷ್ಕರದ ನಾಯಕತ್ವ ವಹಿಸಿದ್ದರು.

ರೈಲ್ವೆ ಮತ್ತಿತರ ವಾಹನಸಂಚಾರಗಳನ್ನೆಲ್ಲ ನಿಲ್ಲಿಸಲಾಗಿದ್ದಿತು. ಅಂಗಡಿ ಮತ್ತು ಮಾರುಕಟ್ಟೆಗಳನ್ನು ಮುಚ್ಚಲಾಗಿತ್ತು. ಕಚೇರಿಗಳನ್ನು ತೆರೆದಿದ್ದರೂ ಸಹ ನೌಕರರ ಹಾಜರಿ ಬಹಳ ಕಡಿಮೆಯಿದ್ದಿತು.

ಸತ್ಯಾಗ್ರಹ

ಶೇಕಡ ೫೦ ರಷ್ಟು ಏರಿಸಿರುವ ಆಹಾರ ಧಾನ್ಯದ ಬೆಲೆಯಷ್ಟು ಇಳಿಸಬೇಕೆಂದು ಒತ್ತಾಯಪಡಿಸಲು ಸತ್ಯಾಗ್ರಹ ಹೂಡಬೇಕೆಂದು ಮುಂಬಯಿಯ ಸೋಷಿಯಲಿಸ್ಟ್ ಪಕ್ಷದ ಕಾರ್ಯಕಾರೀ ಸಮಿತಿಯು ನಿರ್ಧರಿಸಿದೆ.

ಸತ್ಯಾಗ್ರಹವು ಜೂನ್ ಮೊದಲನೆ ವಾರದಲ್ಲಿ ಪ್ರಾರಂಭವಾಗಲಿದೆ.

ಸಚಿವರ ರಾಜೀನಾಮೆ

ಬ್ರಿಟನ್ನಿನ ಟ್ರಾನ್ಸ್‌ಪೋರ್ಟ್ ಮಂತ್ರಿ ಜಾನ್ ಮೆಕ್ಲೀನ್ ಅವರು ಅನಾರೋಗ್ಯದ ನಿಮಿತ್ತ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟರು.

ಪ್ರಧಾನಿ ಚರ್ಚಿಲ್‌ರವರು ಅವರ ರಾಜೀನಾಮೆಯನ್ನು 'ವಿಷಾದ'ದಿಂದ ಅಂಗೀಕರಿಸಿದ್ದಾರೆ.

ಡಾ|| ರಾಧಾಕೃಷ್ಣನ್

ಭಾರತದ ಉಪರಾಷ್ಟ್ರಪತಿಗಳಾಗಿ ಚುನಾಯಿತರಾದ ಡಾ|| ಎಸ್. ರಾಧಾಕೃಷ್ಣನ್‌ರವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ತಮ್ಮ 'ಪ್ರೊಫೆಸರ್' ಹುದ್ದೆಗೆ ರಾಜೀನಾಮೆ ಕೊಟ್ಟಿದ್ದಾರೆ.

ಮೈಸೂರು ಸಂಸ್ಥಾನದ ಹೆಲ್ತ್ ಇನ್‌ಸ್ಪೆಕ್ಟರುಗಳ ಸಮ್ಮೇಳನ

ಬೆಂಗಳೂರು ಮೇ ೮

ಸಂಘದ ೬ನೇ ವಾರ್ಷಿಕ ಸಮ್ಮೇಳನವು ಇದೇ ಮಾಹೆ ೧೯ ಮತ್ತು ೨೦ನೇ ತಾರೀಖುಗಳಲ್ಲಿ ಬೆಂಗಳೂರು ಸಿಟಿ ಆನಂದರಾವ್ ಸರ್ಕಲ್ ಬಳಿ ಇರುವ 'ಬಸಪ್ಪ–ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ' ನಡೆಯಲೇರ್ಪಡಿಸಲಾಗಿದೆ. ಸಂಸ್ಥಾನದ ಜನಾರೋಗ್ಯ ಮತ್ತು ಸ್ಥಳೀಯ ಸಂಸ್ಥೆಗಳ ಶಾಖೆಗಳ ಸಚಿವರಾದ ಶ್ರೀ ಟಿ. ಚನ್ನಯ್ಯನವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಲು ಒಪ್ಪಿರುವರು.

ಆರೋಗ್ಯ ಇಲಾಖೆಯ ಮುಖ್ಯಾಧಿಕಾರಿಗಳಾದ ಡಾಕ್ಟರ್ ಟಿ. ಚಂದ್ರಶೇಖರಯ್ಯನವರು ಅಗ್ರಾಸನವನ್ನು ವಹಿಸುವರು.

ಮತ್ತೆ ೩೦ ಮಂದಿಗೆ ಅನರ್ಹತೆ

ಬೆಂಗಳೂರು ಮೇ ೮

ನಿಯಮಿತ ರೀತಿಯಲ್ಲಿ ಮತ್ತು ಕಾಲದಲ್ಲಿ ಚುನಾವಣೆ ಲೆಕ್ಕವನ್ನು ಒಪ್ಪಿಸಲಿಲ್ಲವೆಂಬ ಕಾರಣದ ಮೇಲೆ ಚುನಾವಣೆ ಶಾಸನದ ರೀತ್ಯಾ ಮೊನ್ನೆ ೩೦ ಮಂದಿ ಅನರ್ಹತೆ ಪಡೆದಿದ್ದಾರೆ. ಅವರಲ್ಲಿ ಜ|| ಮಹಮದ್ ಇಮಾಂ, ಶ್ರೀ ಎಸ್. ಸಿ. ಮಲ್ಲಯ್ಯ, ಶ್ರೀಮತಿ ತಾಯಮ್ಮ ವೀರಣ್ಣಗೌಡ ಇರುವರು.

ವೃತ್ತಿ ಶಿಕ್ಷಣ

ದೇಶದ ಎಲ್ಲಾ ವೃತ್ತಿ ಶಿಕ್ಷಣ ಶಾಲೆಗಳ ಪಾಠ ಪ್ರವಚನಗಳ ಪಟ್ಟಿಯನ್ನೂ, ಪರೀಕ್ಷೆಗಳನ್ನೂ ತೀವ್ರವಾಗಿ ಮಾರ್ಪಾಟುಮಾಡಬೇಕಾಗಿದೆ.

ವೃತ್ತಿ ಶಿಕ್ಷಣ ವಿದ್ಯಾಭ್ಯಾಸವನ್ನು ಕೂಲಂಕಷವಾಗಿ ಪರಿಶೀಲಿಸಿ ಸಲಹೆ ಕೊಡಲು ಮೈಸೂರು ಪ್ರಾಂತ್ಯಕ್ಕೆ ಒಂದು ಸಮಿತಿ ನೇಮಕ ಮಾಡಲಾಗುವುದು, ಎಂದು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಹಾಸನದಲ್ಲಿ ವೃತ್ತಿ ಶಿಕ್ಷಣ ಶಾಲೆಯ ಸಮಾರಂಭದಲ್ಲಿ ಮಾತನಾಡುತ್ತಾ, ಹೇಳಿರುವರು.

ಎಂ. ಪಿ. ಸಿ. ಸಿ. ಕಾರ್ಯಕ್ರಮ

ಕೃಷ್ಣರಾಜನಗರ ಮೇ ೮

೯ನೇ ತಾ|| ಬೆಳಿಗ್ಗೆ ೭|| ಗಂಟೆಗೆ ಎಂ ಪಿ ಸಿ ಸಿ ಅಧ್ಯಕ್ಷರಿಂದ ಧ್ವಜಾರೋಹಣ, ೯ ರಿಂದ ೧೨ ಎಂ ಪಿ ಸಿ ಸಿ ಸಭೆ ಪ್ರಾರ್ಥನೆ, ಸ್ವಾಗತ ಭಾಷಣ, ಅಧ್ಯಕ್ಷ ಭಾಷಣ, ಅಧಿಕೃತ ನಿರ್ಣಯಗಳು.

ಮಧ್ಯಾಹ್ನ ೨ ರಿಂದ ೭ ಎಂ ಪಿ ಸಿ ಸಿ ಸಭೆ ನಿರ್ಣಯಗಳು, ಅಧ್ಯಕ್ಷರ ಭಾಷಣ, ವಂದನಾರ್ಪಣೆ ರಾಷ್ಟ್ರಗೀತೆ.

ವಿವಿಧ ವಾರ್ತೆಗಳು

* ಸ್ವಾತಂತ್ರವನ್ನು ಕೊಟ್ಟು ಶಾಂತಿಯನ್ನು ಸಾಧಿಸಲು ಸಾಧ್ಯವಿಲ್ಲ ಎಂದು, ಸಮಾಜವಾದಿ ಕಾರ್ಯಕರ್ತರೂ, ಅಮೆರಿಕದ ಅಧ್ಯಕ್ಷ ಪದವಿಗೆ ೫ ಬಾರಿ ಸಮಾಜವಾದಿ ಪಕ್ಷದಿಂದ ಉಮೇದುವಾರರಾಗಿ ನಿಂತವರೂ ಆದ ನಾರ್ಮನ್ ಥಾಮಸ್‌ರು, ಜಪಾನಿನಲ್ಲಿ ಕಮ್ಯೂನಿಸ್ಟರು ನಡೆಸಿದ ಹಿಂಸಾಕೃತ್ಯವನ್ನು ಖಂಡಿಸಿ ಹೇಳಿದರು.

* ಎರಡು ಮಿಲಿಯನ್ ಎಕರೆ ಭೂಮಿಯನ್ನು ಟರ್ಕಿಯಲ್ಲಿ ೧೯೪೯ ರಿಂದ ಸಾಗುವಳಿ ಮಾಡಲಾಗಿದ್ದು, ಪುನಃ ಇನ್ನೊಂದು ಮಿಲಿಯನ್ ಎಕರೆ ಭೂಮಿಯನ್ನು ಸಾಗುವಳಿ ಮಾಡಲಾಗುವುದು, ವ್ಯವಸಾಯ ವಿಸ್ತರಣ ಕಾರ್ಯಕ್ರಮವನ್ನು ಮಾರ್ಷಲ್ ಯೋಜನೆ ಮತ್ತು ಪರಸ್ಪರ ಸಹಕಾರ ನಿಧಿ ಪರವಾಗಿ ಕೈಗೊಳ್ಳಲಾಗಿದೆ.

* ಅಂತರರಾಷ್ಟ್ರೀಯ ಸಂಬಂಧ ಮತ್ತು ಸಮಾಜ ಸೇವೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದುಕೊಳ್ಳಲು ಭಾರತ, ಪಾಕಿಸ್ತಾನ, ಸಿಲೋನ್ ಮುಂತಾದ ೨೦ ದೇಶಗಳಿಂದ ಮಹಿಳೆಯರು ಅಮೆರಿಕಕ್ಕೆ ಬರುವರು ಈ ಯೋಜನೆಗಾಗಿ ಫೋರ್ಡ್ ನಿಧಿಯವರು ೧೦೦,೦೦೦ ಡಾಲರುಗಳನ್ನು ಕೊಡುವರು.

* ಭಾರತದಲ್ಲಿ ಅಮೆರಿಕದ ರಾಯಭಾರಿಗಳಾಗಿರುವ ಚೆಸ್ಟರ್ ಬೌಲ್ಸ್‌ರು, ಅಂತರರಾಷ್ಟ್ರೀಯ ಕಲಾ ಸ್ಪರ್ಧೆಯಲ್ಲಿ ಬಹುಮಾನ ಪಡೆದ ನ್ಯೂಯಾರ್ಕಿನ ಬಾಲಕಿ ಬಾರ್ಬಾರಾಫೋಲಿಗೆ ಕಾಗದವೊಂದನ್ನು ಬರೆದು ಭಾರತದ ಪ್ರಧಾನಿ ನೆಹರು ಕೊಟ್ಟ ಪೂಮಾಲೆ ಮತ್ತು ಬೆಳ್ಳಿಯ ತಪ್ಪನ್ನು ಶೀಘ್ರದಲ್ಲಿಯೇ ಕಳುಹಿಸಿಕೊಡುವುದಾಗಿ ತಿಳಿಸಿದ್ದಾರೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕರ್‌ರವರ ಶ್ರೀ ನೃತ್ಯ ಕಲಾಮಂದಿರ ಮೈಸೂರು (ಸೀತಾವಿಲಾಸ ಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ಪಿಪಾಸ್ಥಾಪಕ.

ಬಿಹಾರಿನಲ್ಲಿ ಜಮೀನ್ದಾರಿ ಸರ್ಕಾರ ವಶಕ್ಕೆ

ಬಿಹಾರ್ ಪ್ರಾಂತ್ಯದಲ್ಲಿ ವರ್ಷಕ್ಕೆ ಒಟ್ಟು ೫೦ ಸಹಸ್ರ ಮತ್ತು ಅದಕ್ಕಿಂತ ಹೆಚ್ಚು ವರಮಾನ ಬರುವ ಜಮೀನ್ದಾರಿಗಳನ್ನೆಲ್ಲಾ ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ನಿಯೋಜಿಸಿದೆ.

ಪೇಟೆ ಧಾರಣೆ

ಮೈಸೂರು ತಾ|| 8-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		11-14	17-14
ಹೊಂಗೆಬೀಜ	,,	12-8	13-4
ಹುರುಳಿ	,,	52-14	——
ಸೀಗೆಕಾಯಿ	,,	—	—
ಮೆ. ಕಾಯಿ-ಮಣಕ್ಕೆ		11-14	1-48
ಹುಣಸೇಹಣ್ಣು	,,	—	—
ತೆಂಗಿನಕಾಯಿ	1100ಕ್ಕೆ	132	184

ಚಿನ್ನ ಬೆಳ್ಳಿ ದರಗಳು

8-5-52	ರೂ.
ಸವರನ್	66-6
,,	66-8
ಚಿನ್ನ ತೊಲ	94-0
,, ಮೂಠ	93-3
ಬೆಳ್ಳಿ 100 ತೊಲ	170-8
,, ತೊಲ	1-12

ರಾಜಕಮಲ್
9—5—1952ರಿಂದ
ಜನಭರಿತವಾದ 9ನೇ ವಾರ
ವಿಜಯಾರವರ—
ಮದುವೆ ಮಾಡಿ ನೋಡು
(ತೆಲುಗು)
ಪಾತ್ರ:— ಎನ್. ಟಿ. ರಾಮರಾವ್, ವರಲಕ್ಷ್ಮಿ, ಸಾವಿತ್ರಿ, ಪುಷ್ಪಲತಾ, ಎಸ್.ವಿ.ರಂಗರಾವ್, ಜೋಗ್‌ರಾವ್.

ನ್ಯೂ ಅಪೇರ
೯—೫—೫೨ ರಿಂದ
ಜೂಪಿಟರ್‌ರವರ—
* ರಾಣಿ *
(ತಮಿಳು)
ಪಾತ್ರ–ಭಾನುಮತಿ, ಬಾಲಚಂದರ್, ವಹಾಬ್ ಕಾಶ್ಮೀರಿ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೮೦೯) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೦—೫—೧೯೫೨ನೇ ಶನಿವಾರ [ಸಂಚಿಕೆ ೨೧೪

ಸಬ್ಸಿಡಿ ನಿಲ್ಲಿಸಿರುವುದು ಕಂಟ್ರೋಲ್ ತೆಗೆಯುವುದಕ್ಕೆ

ಕೇಂದ್ರವು ದಕ್ಷಿಣ ಭಾರತವನ್ನು ಮರೆತಿರುವಂತೆ ಕಾಣುತ್ತದೆ

ಡಾ|| ಪ್ರಸಾದರಿಗೆ ಪಾಕ್ ಗೌರ್ನರ್ ಜನರಲ್‌ರ ಅಭಿವಂದನೆ

ಡಾ|| ರಾಜೇಂದ್ರಪ್ರಸಾದರವರು ಭಾರತದ ಅಧ್ಯಕ್ಷರಾಗಿ ಚುನಾಯಿತರಾಗಿರುವುದನ್ನು ಸ್ವಾಗತಿಸಿ ಪಾಕೀಸ್ಥಾನದ ಗೌರ್ನರ್ ಜನರಲ್ ಮಿ|| ಖ್ವಾಜಾ ನಾಜಿಮುದ್ದೀನ್‌ರವರು ತಮ್ಮ ಸಂದೇಶವನ್ನು ಕಳುಹಿಸಿದ್ದಾರೆ.

ಡಾ|| ಪ್ರಸಾದರ ಅಧ್ಯಕ್ಷತೆಯಲ್ಲಿ ಭಾರತವು ಮತ್ತಷ್ಟು ಅಭಿವೃದ್ಧಿಹೊಂದಲು ಸಹಾಯವಾಗುವುದೆಂದೂ, ಭಾರತ ಪಾಕೀಸ್ಥಾನದ ಸ್ನೇಹವು ಮತ್ತಷ್ಟು ಹೆಚ್ಚುವುದೆಂದೂ ತಿಳಿಸಿದ್ದಾರೆ.

ಹಾಗೆಯೇ ನೇಪಾಳದ ಪ್ರಧಾನಿಯವರಾದ ಕೊಯಿರಾಲಾರವರೂ ಡಾ|| ಪ್ರಸಾದರಿಗೆ ಶುಭಾಶಯ ಸಂದೇಶವನ್ನು ಕಳುಹಿಸಿ ನಿಮ್ಮ ನಾಯಕತ್ವದಲ್ಲಿ ಭಾರತ, ನೇಪಾಳ ಸ್ನೇಹವು ಹೆಚ್ಚಲಿ ಎಂದು ತಿಳಿಸಿದ್ದಾರೆ.

ಸದಸ್ಯರ ವಿರೋಧ

ಹೈದರಾಬಾದ್ ಶಾಸನಸಭೆಯ ಪೀಪಲ್ಸ್ ಡೆಮೋಕ್ರಾಟಿಕ್ ಫ್ರಂಟ್ ಸದಸ್ಯರು ಉಸ್ಮಾನಿಯಾ ವಿಶ್ವವಿದ್ಯಾನಿಲಯವನ್ನು ಭಾರತ ಸರ್ಕಾರ ವಶಪಡಿಸಿಕೊಳ್ಳುವುದಕ್ಕೆ ವಿರೋಧವಾಗಿರುವರು.

ಗಿಡದ ಕೆಳಗೆ ಕೋರ್ಟು

ಕಟಕ್ಕಿನ ಕೋರ್ಟಿನಲ್ಲಿ ಕೊಲೆ ಅಪರಾಧದ ವಿಚಾರಣೆಯನ್ನು ನಡೆಸಲು ಕೋರ್ಟಿನ ಆವರಣದಲ್ಲಿ ಸ್ಥಳಸಾಲದೆ ಜಡ್ಜರು ಪಕ್ಕದ ಗಿಡದಡಿಯಲ್ಲಿ ವಿಚಾರಣೆ ನಡೆಸಿದರು. ಕೋರ್ಟಿನ ಆವರಣವು ಬಹಳ ಚಿಕ್ಕದಾಗಿ ಎಲ್ಲಾ ಅಪರಾಧಿಗಳನ್ನೂ ವಿಚಾರಿಸಲಾಗದೆ ಈ ರೀತಿ ಮಾಡಲಾಯಿತು.

ರಾಜಕಮಲ್
9-5-52 ರಿಂದ ಅಮೋಘ ಪ್ರಾರಂಭ
ದಿನವೂ ಮೂರು ಪ್ರದರ್ಶನಗಳು
ಆಡ ಬ್ರತುಕು
(ಹೆಂಗಸಿನ ಬಾಳು)
(ತೆಲುಗು)
ಭೂಮಿಕೆ— ರಘುರಾಮಯ್ಯ, ಟ್ಯಾ.ಶ್ರೀರಂಜನಿ, ಕನಕಂ, ಲಕ್ಷ್ಮಿಕಾಂತಂ

ಜೂನ್ ಮೊದಲನೇ ವಾರದಲ್ಲಿ ಸತ್ಯಾಗ್ರಹ

ಬೊಂಬಾಯಿಯಲ್ಲಿ ಶೇಕಡ ೫೦ರಷ್ಟು ಆಹಾರ ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ಜೂನ್ ಮೊದಲನೇ ವಾರದಿಂದ ಸತ್ಯಾಗ್ರಹ ಹೂಡಲು ಸೋಷಿಯಲಿಸ್ಟ್ ಪಾರ್ಟಿ ನಿರ್ಧರಿಸಿದೆ. ಆಹಾರ ಧಾನ್ಯಗಳ ಡಿಪೋಗಳಿಗೆ ಮೆರವಣಿಗೆಯ ಮೂಲಕ ತೆರಳಿ ಅಲ್ಲಿಯ ಆಹಾರ ಪದಾರ್ಥಗಳನ್ನು ಕೊಡಬೇಕೆಂದು ಶಾಂತರೀತಿಯಿಂದ ಕೇಳುವುದು. ನಂತರ ಅದನ್ನು ಜನರಿಗೆ ಮೊದಲಿನ ಬೆಲೆಗೆ ಹಂಚುವುದು ಎಂದು ಪಾರ್ಟಿ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ.

ಸತ್ಯಾಗ್ರಹಿಗಳಿಗೆ ಸಹಾಯ

ಆಹಾರಪದಾರ್ಥಗಳ ಬೆಲೆಯನ್ನು ಹೆಚ್ಚಿಸಿರುವುದನ್ನು ಪ್ರತಿಭಟಿಸಲು ಸತ್ಯಾಗ್ರಹ ಹೂಡಿರುವ ಪೂನಾದ ಸೋಷಲಿಸ್ಟರಿಗೆ ಸಹಾಯವಾಗಿ ರೈತರು ಮತ್ತು ಕಾರ್ಮಿಕರ ಪಕ್ಷ, ಕಮ್ಯೂನಿಸ್ಟ್ ಪಾರ್ಟಿ. ಮತ್ತು ಲೆಫ್ಟ್ ಸೋಷಲಿಸ್ಟ್ ಪಕ್ಷದವರೂ ಸೇರಿದ್ದಾರೆ. ಬೇರೆ ಜಾಗಗಳಿಗೂ ಈ ಸತ್ಯಾಗ್ರಹವನ್ನು ಹಬ್ಬಲು ಪ್ರಯತ್ನಿಸಲಾಗುತ್ತಿದೆ.

ಜ|| ಡಾಡ್ ಬಂಧನ

ವಿಶ್ವಸಂಸ್ಥೆಯ ಶಿಬಿರ ನಾಯಕ ಜನರಲ್ ಫ್ರಾಂಸಿಸ್ ಡಾಡ್‌ರವರನ್ನು ಕೋಜೆ ದ್ವೀಪದ ಕಮ್ಯೂನಿಸ್ಟ್ ಯುದ್ಧ ಬಂದಿಗಳು ಬುಧವಾರ ಬಲವಂತವಾಗಿ ಸೆರೆಹಿಡಿದಿದ್ದಾರೆ ಅವರನ್ನು ಬಿಡಿಸಲು ಜ|| ರಿಡ್ಜ್‌ವೇಯವರು ಕೊರಿಯಾ ಶಾಂತಿಸಮಾವೇಶದಲ್ಲಿ ಪ್ರಯತ್ನಪಟ್ಟರೆಂದೂ, ಕಮ್ಯೂನಿಸ್ಟರು ಇದನ್ನು ನಿರಾಕರಿಸಿದರೆಂದೂ ಹೇಳಲಾಗಿದೆ.

ಸರ್ ಎ. ಮೊದಲಿಯಾರ್ ಜಿನೀವಾಕ್ಕೆ

ಅಂತರರಾಷ್ಟ್ರೀಯ ಸಿವಿಲ್‌ಸರ್ವಿಸ್ ಬೋರ್ಡಿನ ಸದಸ್ಯರಾಗಿರುವ ಸರ್ ಎ. ಮೊದಲಿಯಾರ್‌ರವರು ಜಿನೀವಾಕ್ಕೆ ಹೊರಟು ಮಧ್ಯೆ ಒಂದುದಿನ ಲಂಡನ್ನಿನಲ್ಲಿ ತಂಗಿದ್ದರು. ಮೇ ೧೨ ರಂದು ಬೋರ್ಡಿನ ಸಭೆಯಲ್ಲಿ ಭಾಗವಹಿಸಲು ಲಂಡನ್ನಿನಿಂದ ಜಿನೀವಾಕ್ಕೆ ತೆರಳಿದರು.

ನಾರ್ವೆಯ ಸಹಾಯ

ನಾರ್ವೆಯು ಪ್ರಪಂಚಸಂಸ್ಥೆಯ ಮೂಲಕ ಭಾರತದ ಅಭಿವೃದ್ಧಿಗಾಗಿ ಸಹಾಯ ಮಾಡಲು ಯೋಚಿಸಿದೆ.

ಕೇಂದ್ರವು ೨೫ ಲಕ್ಷ ರೂ. ಕೊಡಬೇಕು

ಕೃಷ್ಣರಾಜನಗರ ಮೇ ೯

ತುಮಕೂರು,-ಕೋಲಾರ, ಚಿತ್ರದುರ್ಗ ಬೆಂಗಳೂರು ಜಿಲ್ಲೆಗಳ ಅಭಾವಪ್ರದೇಶಗಳಲ್ಲಿ ಪರಿಹಾರಕಾರ್ಯಕ್ಕಾಗಿ ಕೇಂದ್ರಸರ್ಕಾರವು ೨೫ ಲಕ್ಷ ರೂಪಾಯಿಗಳನ್ನು ಕೊಡಬೇಕು. ಅಲ್ಲದೆ ಪ್ರಧಾನಿಯವರ ಕ್ಷಾಮ ಪರಿಹಾರನಿಧಿಯಿಂದ ನಮ್ಮ ಸಂಸ್ಥಾನಕ್ಕೆ ನೆರವು ಕೊಡಬೇಕೆಂಬ ನಿರ್ಣಯವನ್ನು ಇಂದಿನ ಎಂ. ಪಿ. ಸಿ. ಸಿ. ಅಧಿವೇಶನದಲ್ಲಿ ಶ್ರೀ ಕೆ. ಸಿ. ರೆಡ್ಡಿಯವರು ಮಂಡಿಸಿದರು. ಶ್ರೀ ತುಚ್ಚವನಸ್ಸಿಗೌಡರು ಅನುಮೋದಿಸಿದರು. ಸರ್ವಾನುಮತದಿಂದ ಅಂಗೀಕೃತವಾಯಿತು.

ಈ ಸಂದರ್ಭದಲ್ಲಿ ಆಹಾರಸಚಿವ ಶ್ರೀ ಸಿದ್ದವೀರಪ್ಪನವರು ತಾವು ಆ ಪ್ರದೇಶದಲ್ಲಿ ಮಾಡಿದ ಪ್ರವಾಸ ಮತ್ತು ಸರ್ಕಾರವು ಕೈಗೊಂಡಿರುವ ಪರಿಹಾರಕಾರ್ಯಗಳನ್ನು ವಿವರಿಸಿದರು.

ಪಂಚವಾರ್ಷಿಕ ಯೋಜನೆಯಲ್ಲಿ ದಕ್ಷಿಣ ಭಾರತವನ್ನು ಮರೆಯಲಾಗಿದೆ

ಕೇಂದ್ರ ಸರ್ಕಾರವು ಉತ್ತರ ಭಾರತದಲ್ಲಿ ಹಿರೇಕುಡ್, ನಾಂಗಲ್, ಭಾಕರ, ದಾಮೋದರ ವ್ಯಾಲಿ ಮುಂತಾದ ಬೃಹತ್ ಯೋಜನೆಗಳನ್ನು ಕೈಗೊಂಡಿದೆ ದಕ್ಷಿಣ ಭಾರತದಲ್ಲಿ ಯಾವ ಯೋಜನೆಯನ್ನು ಸೇರಿಸದಿರುವುದು ವಿಷಾದಕರ ಮೈಸೂರಿನಲ್ಲಿ ಸರ್ಕಾರವು ಕೈಗೊಂಡಿರುವ ಲಕ್ಕವಳ್ಳಿ ನೀರಾವರಿ ಯೋಜನೆ ಮತ್ತು ಹೊನ್ನೆಮರಡು ವಿದ್ಯುಚ್ಛಕ್ತಿ ಯೋಜನೆಗೆ ಯೋಜನೆಯಲ್ಲಿ ಸೇರಿಸಬೇಕೆಂದು ಕೇಂದ್ರವನ್ನು ಒತ್ತಾಯಪಡಿಸಬೇಕೆಂಬ ಶ್ರೀ ಹೆಚ್. ಸಿ. ದಾಸಪ್ಪನವರು ಮಂಡಿಸಿ ಶ್ರೀ ಟಿ. ಮರಿಯಪ್ಪನವರು ಅನುಮೋದಿಸಿದರು ನಿರ್ಣಯವು ಅಂಗೀಕಾರವಾಯಿತು.

ಮೈಲೋ ಬೆಲೆಯನ್ನು ಇಳಿಸಲಾಯಿತು

ಈ ತಿಂಗಳಿನಲ್ಲಿ ಸರಬರಾಜಾಗಿರುವ ಮೈಲೋದ ಬೆಲೆಯನ್ನು ಭಾರತ ಸರ್ಕಾರವು ಮಣಕ್ಕೆ ೧೫ ರೂ. ನಿಂದ ೧೩ ರೂ.ಗೆ ಇಳಿಸಿದೆ. ಈ ಸಾಲಿನಲ್ಲಿ ಸುಮಾರು ೮ ಲಕ್ಷ ಟನ್ ಮೈಲೋವನ್ನು ಆಮದು ಮಾಡಲಾಗುವುದೆಂದೂ ತಿಳಿಸಲಾಗಿದೆ.

ಕೇಂದ್ರಸರ್ಕಾರವು ಸಬ್ಸಿಡಿ ನಿಲ್ಲಿಸಿರುವುದು ಕಂಟ್ರೋಲ್ ತೆಗೆದುಹಾಕಲು ಸಹಾಯವಾಗುತ್ತದೆ. ಸಬ್ಸಿಡಿ ಕೊಡುತ್ತಿರುವುದರಿಂದ ಎಲ್ಲಾ ಪ್ರಾಂತ್ಯಗಳೂ ಕೇಂದ್ರವನ್ನು ಆಹಾರಸರಬರಾಜಿಗೆ ಬೇಡಿಕೆಗಳನ್ನು ಸರಾಗವಾಗಿ ಕಳುಹಿಸಲಾಗುತ್ತಲಿವೆ. ಈಗ ಈ ಬೇಡಿಕೆ ಕಡಿಮೆಯಾಗುತ್ತದೆ. ಆದ್ದರಿಂದ ವಿದೇಶಗಳಿಂದ ಭಾರತಸರ್ಕಾರವು ಆಹಾರವನ್ನು ತರಿಸುವುದು ಕಡಿಮೆಯಾಗುವುದು. ವಿದೇಶಗಳಿಗೆ ಆಗುತ್ತಿರುವ ಹೊನ್ನಿನ ಹೊಳೆ ಹರಿಯುವುದು ನಿಲ್ಲುತ್ತದೆ.

ಕಂಟ್ರೋಲ್‌ಗಳನ್ನು ತೆಗೆಯುವುದೇ ನಮ್ಮ ಸರ್ಕಾರದ ನೀತಿ ಜನತೆಯು ಬೆಂಬಲ ನೀಡಿದರೆ ಇದು ಸಾಧ್ಯವೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಎಂ. ಪಿ. ಸಿ. ಸಿ. ಯ ಮುಕ್ತಾಯ ಭಾಷಣದಲ್ಲಿ ತಿಳಿಸಿದರು.

ಭಾರತ ನಿಯೋಗಕ್ಕೆ ಅಪೂರ್ವ ಸ್ವಾಗತ

ಪೀಕಿಂಗ್‌ನಲ್ಲಿ ಅಲ್ಲಿಯ ಮೇಯರ್‌ರ ಅಧ್ಯಕ್ಷತೆಯಲ್ಲಿ ಭಾರತದ ಸಾಂಸ್ಕೃತಿಕ ನಿಯೋಗವನ್ನು ಸ್ವಾಗತಿಸಲು ಸಭೆಯೊಂದು ನಡೆಯಿತು. ಸುಮಾರು ಹತ್ತು ಸಾವಿರ ಜನಸೇರಿದ್ದರು. ಸಭೆಯಲ್ಲಿ ಭಾರತ ನಿಯೋಗದ ನಾಯಕರಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಮಾತನಾಡುತ್ತಾ, ತಮ್ಮನ್ನು ಚೀನಾದ ಎಲ್ಲಾ ಭಾಗಗಳಲ್ಲಿಯೂ ಅಪೂರ್ವವಾಗಿ ಸ್ವಾಗತಿಸುತ್ತಿರುವುದಾಗಿಯೂ, ತಾವು ಚೀನಾಕ್ಕೆ ಇದೇ ಮೊದಲನೆ ಬಾರಿ ಭೇಟಿ ಕೊಡುತ್ತಿದ್ದರೂ ಪರಕೀಯರಂತೆ ಕಾಣುವುದಿಲ್ಲವೆಂದೂ ತಿಳಿಸಿದರು.

ಇಂಡೋನೇಷ್ಯಾದ ಶುಭಾಶಯಗಳು

ಭಾರತದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡಾ|| ರಾಜೇಂದ್ರಪ್ರಸಾದರಿಗೆ ಇಂಡೋನೇಷ್ಯಾದ ಅಧ್ಯಕ್ಷ ಡಾ|| ಸೂಕಾರ್ನೋರವರು ತಮ್ಮ ಶುಭಾಶಯಗಳನ್ನು ಕಳುಹಿಸಿ ಇಂಡೋನೇಷ್ಯಾದ ಜನರ ಪರವಾಗಿ, ತಮ್ಮ ಪರವಾಗಿ ಶುಭಾಶಯಗಳನ್ನು ಸ್ವೀಕರಿಸಬೇಕೆಂದು ಕೋರಿದ್ದಾರೆ.

ವಿದ್ಯಾರ್ಥಿಗಳ ದಸ್ತಗಿರಿ

ನಿನ್ನೆ ಪೋಲೀಸರಿಗೂ ವಿದ್ಯಾರ್ಥಿಗಳಿಗೂ ಘರ್ಷಣೆ ನಡೆದು ಟೋಕಿಯೋ ಪೋಲೀಸರು ೨೬ ಜನ ವಿದ್ಯಾರ್ಥಿಗಳನ್ನು ಮತ್ತು ಒಬ್ಬ ಪ್ರೊಫೆಸರನ್ನೂ ದಸ್ತಗಿರಿ ಮಾಡಿರುವರು.

ಹೊಸ ಮಂತ್ರಿಮಂಡಲ ಉರುಳಿಸಲು ಪ್ರಯತ್ನಿಸಬೇಡಿ

ಕಾಂಗ್ರೆಸ್ ಸಂಸ್ಥೆಯ ಶಿಸ್ತು ಕಾಪಾಡಬೇಕು

ಎಂ. ಪಿ. ಸಿ. ಸಿ. ಯಲ್ಲಿ ಶ್ರೀ ಕೆ. ಹನುಮಂತಯ್ಯನವರ ಭಾಷಣ

ಕೃಷ್ಣರಾಜನಗರ ಮೇ ೯

ಮೈಸೂರು ಸಂಸ್ಥಾನ ಮತ್ತು ಕಾಂಗ್ರೆಸ್ ಚರಿತ್ರೆಯಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗಿದೆ. ಚುನಾವಣೆ ಪೂರ್ವ ಅನೇಕ ಟೀಕೆಗಳು ಆರೋಪಣೆಗಳು ಇದ್ದವು. ಆದರಿಂದ ಕಾಂಗ್ರೆಸ್ಸಿಗೆ ಜಯಗಳಿಸಿ ಬರುವ ಅನುಮಾನವಿತ್ತು. ಆದರೆ ಕಾಂಗ್ರೆಸ್ ಸಂಸ್ಥೆಯ ಸುವ್ಯವಸ್ಥೆ, ಒಗ್ಗಟ್ಟು, ದಿಟ್ಟತನದಿಂದ ಕಾಂಗ್ರೆಸ್‌ಗೆ ಜಯ ದೊರೆಯಿತು. ಅದಕ್ಕಾಗಿ ನಾವು ಹೆಮ್ಮೆ ಮತ್ತು ಸಂತೋಷಪಡಬೇಕಾಗಿದೆ. ಆದರೆ ಇದರಲ್ಲಿ ಸ್ವಲ್ಪ ಲೋಪವುಂಟಾಗಿದೆ ಅನೇಕ ನಿಸ್ಪೃಹರಾದ, ನಿಷ್ಠರಾದ ಕಾಂಗ್ರೆಸ್ಸಿಗರು ಅಪಜಯ ಹೊಂದಿರುವರು. ಸೋತವರ ಯೋಗ್ಯತೆ, ದೇಶಾಭಿಮಾನಕ್ಕೆ ಅನುಮಾನಾಸ್ಪದವೇ ಇಲ್ಲ. ಅವರ ಅವರ ಸೋಲಿಗೆ ನಾವು ವ್ಯಸನಪಡಬೇಕಾಗಿದೆ ಕಾಂಗ್ರೆಸ್ಸಿನಲ್ಲಿ ಸ್ವಲ್ಪ ಅಶಿಸ್ತು, ದ್ರೋಹಚಿಂತನೆ ಪ್ರಾರಂಭವಾದುದೇ ಇದಕ್ಕೆ ಕಾರಣವಾಗಿದೆ. ತಮಗೆ ಸದಸ್ಯತ್ವ ದೊರೆಯಲಿಲ್ಲ- ಅಥವಾ ತಮ್ಮ ಕಡೆಯವರಿಗೆ ಆಯ್ಕೆ ಆಗಲಿಲ್ಲವೆಂದು ಅಧಿಕೃತ ಸದಸ್ಯರಿಗೆ ವ್ಯತಿರಿಕ್ತವಾಗಿ ನಿಂತು ಕೆಲವು ಕಾಂಗ್ರೆಸ್ಸಿನವರು ಹೋರಾಡಿದ್ದಾರೆ- ಇದು ದೊಡ್ಡಗೊಂದಲವನ್ನುಂಟುಮಾಡಿತು. ಈ ರೀತಿ ದ್ರೋಹಿಗಳು ಯಾವ ಸಂಸ್ಥೆಯಲ್ಲಿದ್ದರೂ ಸಂಸ್ಥೆ ಮಾಯವಾಗುತ್ತದೆ. ಈಗಾಗಲೇ ವಿರೋಧವಾಗಿ ಉಮೇದುವಾರರಾಗಿ ೩೩ ಜನರ ಮೇಲೆ ೬ ವರ್ಷಕಾಲ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆ. ಉಮೇದುವಾರರ ಗತಿ ಈ ದ್ರೋಹಚಿಂತನೆ ಕಾರ್ಯ ಮಾಡಿದವರನ್ನು ಕಂಡು ಹಿಡಿಯುವುದು ಕಷ್ಟ. ಅದನ್ನು ಕಂಡು ಹಿಡಿಯಲು ಉಪಸಮಿತಿ ಕೆಲಸ ಮಾಡುತ್ತಿದೆ

ಶಿಸ್ತು ಕಾಪಾಡಿ ಇಲ್ಲವೇ ಸಂಸ್ಥೆಯನ್ನು ತ್ಯಜಿಸಿ

ಆದರೆ ಅಧಿಕಾರ ಮೋಹ, ಲೋಭದಿಂದ ನೈತಿಕ ಕಟ್ಟಿಲ್ಲದೆ ಕೆಲಸ ಮಾಡುವುದು ಸಂಸ್ಥೆಯ ನಾಶಕ್ಕೆ ಕಾರಣ. ಭಿನ್ನಾಭಿಪ್ರಾಯವಿದ್ದಾಗ್ಯೂ, ಶಿಸ್ತು ಕಾಪಾಡಿಕೊಂಡು ಬಂದು ನಮ್ಮಲ್ಲಿಯೇ ಸಂಪಾದಿಸಿಕೊಳ್ಳಬೇಕಾಗಿದೆ- ಮಾತಾ-ಪಿತೃಗಳನ್ನು ಬಿಟ್ಟು ಒಳಗೊಳಗೇ ವ್ಯತಿರಿಕ್ತ ಕೆಲಸ ಮಾಡುವಂಥವರು ಈ ಸಂಸ್ಥೆಯನ್ನು ಬಿಟ್ಟು ಬೇರೆ ಸಂಸ್ಥೆಗೆ ಹೋಗುವುದು ಕ್ಷೇಮಕರ ಎಂದು ಅಧ್ಯಕ್ಷ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧಿವೇಶನದಲ್ಲಿ ಮಾತನಾಡುತ್ತಾ ಹೇಳಿದರು-

ಅನಂತರ ಹೊಸ ಮಂತ್ರಿಮಂಡಲದ ಕಾರ್ಯವನ್ನು ವಿವರಿಸುತ್ತಾ, ಹೊಸಮಂತ್ರಿಮಂಡಲವು ಬಂದು ಇನ್ನೂ ಒಂದು ತಿಂಗಳಾಗಿಲ್ಲ. ದಾವಣಗೆರೆ ನಿರ್ಣಯಗಳಿಗನುಗುಣವಾಗಿ ನಾವು ನಮ್ಮ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇವೆ ಅದು ನಮ್ಮ ಕರ್ತವ್ಯವಾಗಿದೆ- ಕೆಲವನ್ನು ಜಾರಿಗೆ ತರಲು ಸಾಧ್ಯವಾಗಿಲ್ಲ. ಅದು ಮಂತ್ರಿಮಂಡಲದ ತಪ್ಪಲ್ಲ. ಮುಖ್ಯವಾಗಿ ಆಹಾರ ವಿಷಯ, ಅದರಲ್ಲೂ ಶೇಖರಣೆ ವಿಷಯದಲ್ಲಿ ನಾವು ಈಗ ಏನು ಮಾಡಲಾಗುವುದಿಲ್ಲ. ಮುಂದಿನ ವರ್ಷದ ಧಾನ್ಯ ಸಂಗ್ರಹಣೆ ಕಾಲಕ್ಕೆ ದಾವಣಗೆರೆ ನೀತಿಗನುಗುಣವಾಗಿ ಶಾಸನ ಮಾಡಲಾಗುತ್ತದೆ.

ಮಂತ್ರಿಮಂಡಲ ಬದಲಾವಣೆಯಿಂದ ಘರ್ಷಣೆ

ಈಗಾಗಲೇ ಅವುಗಳ ವಿಷಯದಲ್ಲಿ ಈ ನಮ್ಮ ಕಾರ್ಯವನ್ನು ಕೆಲವರು ಅಲಗಳೆಯುತ್ತಲಿರುವರು- ಆದರಿಂದ ಪ್ರಯೋಜನವಿಲ್ಲ. ಮಂತ್ರಿಮಂಡಲವನ್ನು ತಪ್ಪಿಸಿ ಬೇರೇ ಮಂತ್ರಿಮಂಡಲವನ್ನು ಸ್ಥಾಪಿಸಲೆತ್ನಿಸುವುದು ಪ್ರಯೋಜನವಿಲ್ಲ. ಆಗ ನಾವು ಸುಮ್ಮನೆ ಕುಳಿತಿರುವುದಿಲ್ಲ. ಮಂತ್ರಿಮಂಡಲ ಬದಲಾವಣೆಯಲ್ಲಿ ಘರ್ಷಣೆ ಹೆಚ್ಚಾಗುತ್ತದೆಯೇ ವಿನಃ ಮತ್ತೇನೂ ಇಲ್ಲ. ನಮ್ಮ ಲೋಪದೋಷಗಳಿದ್ದರೆ ಕ್ಷಮಿಸಿ ತಕ್ಕ ಪ್ರತಿವಾದನೆ ದೃಷ್ಟಿಯಿಂದ ಅನೇಕರಿಗೆ ಮನಸ್ಸು ನೊಂದಿರಬಹುದು ಅದನ್ನು ಮರೆತು ಕಾಂಗ್ರೆಸ್ ಸಂಸ್ಥೆ ಹಿತದೃಷ್ಟಿಯಿಂದ ಎಲ್ಲರೂ ಕೆಲಸ ಮಾಡಬೇಕೆಂದು ಕೈಜೋಡಿಸಿ ಬೇಡಿಕೊಳ್ಳುತ್ತೇನೆ.

ಆಹಾರ ಸಾಗಾಣಿಕೆ

ಆಹಾರ ಸಾಗಾಣಿಕೆ ವಿಷಯದಲ್ಲಿ ಅನೇಕರಿಗೆ ಸಂತೋಷವುಂಟಾಗಿದೆ- ಹತೋಟಿ ಸಡಿಲಿಸಿರುವುದು ವ್ಯಾಪಾರದೃಷ್ಟಿಯಿಂದಲ್ಲ- ವರ್ತಕರಿಗೆ ಅಧಿಕಲಾಭವಾಗಲೆಂತಲ್ಲ. ಅಧಿಕ ಆಹಾರ ಶೇಖರಣೆಗೆ ಈಗ ಅವಕಾಶಕೊಡುವುದಿಲ್ಲ. ಮನೆಗಳಲ್ಲಿ ಉಪಯೋಗಕ್ಕೆ ಬೇಕಾದಷ್ಟನ್ನು ಸಾಗಿಸಬಹುದು. ಪೋಲೀಸಿನವರು ಜನರಿಗೆ ಕಿರುಕುಳ ಕೊಡದಂತೆ ಕಟ್ಟಪ್ಪಣೆ ಮಾಡಲಾಗಿದೆ- ಅದರಲ್ಲಿ ಜನತೆಯೂ ಸಹಕರಿಸಬೇಕಾಗಿದೆ- ಲಾರಿ, ಬಸ್ಸು ಮುಂತಾದುವುಗಳಲ್ಲಿ ನೂರಾರು ಮೈಲು ಆಹಾರವನ್ನು ಕೊಂಡೊಯ್ಯಲು ಯಾರೂ ಅವಕಾಶಕೊಡಬಾರದು. ಒಂದೆರಡು ಗಾಡಿ ಸಾಗಿಸಿ ತಮ್ಮ ಸ್ವಂತ ಉಪಯೋಗಕ್ಕೆ ಉಪಯೋಗಿಸಿಕೊಳ್ಳಬೇಕು.

ಅಧ್ಯಕ್ಷರ ರಾಜೀನಾಮೆ

ಕೇಂದ್ರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಿಂದ ಎಲ್ಲಾ ಕಾಂಗ್ರೆಸ್ ಸಮಿತಿಗಳ ಪುನಃರಚನೆಗೆ ನಿರೂಪ ಬಂದಿದೆ. ಅದರಂತೆ ನಾನು ರಾಜೀನಾಮೆ ಕೊಡುತ್ತೇನೆ. ಅಧಿಕಾರಿವರ್ಗದವರೂ ರಾಜೀನಾಮೆ ಕೊಡುವರು ಕಾಂಗ್ರೆಸ್ ಸದಸ್ಯರನ್ನು ಕೂಡಿಸುವ ಕಾರ್ಯವು ನಡೆಯಬೇಕಾಗಿರುವುದರಿಂದ ಜಿಲ್ಲಾ ಸಮಿತಿಗಳು ಇನ್ನೂ ೨-೩ ತಿಂಗಳು ಇರುತ್ತವೆ. ಆದರೆ ಪ್ರಾದೇಶಿಕ ಸಮಿತಿಯ ಅಧ್ಯಕ್ಷ ಕಾರ್ಯಕಾರಿ ಸಮಿತಿಯವರು ಮತ್ತು ಅಧಿಕಾರಿ ವರ್ಗದವರು ಮಾತ್ರ ಈಗ ರಾಜೀನಾಮೆಕೊಡುತ್ತಾರೆಂದು ಶ್ರೀ ಕೆ. ಹನುಮಂತಯ್ಯನವರು ತಿಳಿಸಿದರು.

ಸಹೋದ್ಯೋಗಿಗಳ ಅಭಿವಂದನೆ

ಅನಂತರ ತಮ್ಮ ಸಹೋದ್ಯೋಗಿಗಳಾಗಿ ಕೆಲಸಮಾಡಿದ ಕಾರ್ಯದರ್ಶಿಗಳಾದ ಶ್ರೀ ಎ. ಜಿ. ರಾಮಚಂದ್ರರಾವ್, ಹುಚ್ಚಮಾಸ್ತಿಗೌಡರು, ಖಜಾಂಚಿ ಶ್ರೀ ಸುಬ್ಬಣ್ಣ ಮತ್ತು ಕಾರ್ಯದರ್ಶಿ ಶ್ರೀ ಎಂ. ವಿ. ಗೋಪಾಲಸ್ವಾಮಯ್ಯಂಗಾರ್‌ರಿಗೆ ಮತ್ತು ಪ್ರಚಾರ ಕಾರ್ಯದಲ್ಲಿ ಕೆಲಸ ಮಾಡಿದ ನಾನಾ ಕಾರ್ಯಕರ್ತರಿಗೆ ತಮ್ಮ ಪ್ರೀತಿವಿಶ್ವಾಸಪೂರ್ವಕ ವಂದನೆಯನ್ನರ್ಪಿಸಿದರು.

ನಿರ್ಣಯಗಳು

ನಂತರ ಈ ಕೆಳಗಿನ ಕಾರ್ಯಕಾರಿ ಸಮಿತಿಯ ನಿರ್ಣಯಗಳನ್ನು ಮಂಡಿಸಲಾಯಿತು.

೧) ಗಡಿನಾಡು ಗಾಂಧಿ ಖಾನ್ ಬಹದ್ದೂರ್ ಅಬ್ದುಲ್‌ಗಫಾರ್ ಖಾನ್‌ರವರಿಗೆ ಆರೋಗ್ಯ ಭಾಗ್ಯವುಂಟಾಗಲೆಂದೂ ಕೂಡಲೇ ಪಾಕಿಸ್ತಾನ ಸರ್ಕಾರವು ಅವರನ್ನು ಬಿಡುಗಡೆ ಮಾಡಲೆಂದು ನಿರ್ಣಯ ಮಾಡಿತು. ಶ್ರೀ ಕೆ. ಹನುಮಂತಯ್ಯನವರು ಈ ನಿರ್ಣಯವನ್ನು ಮಂಡಿಸಿದರು. ಸರ್ವಾನುಮತದಿಂದ ಅಂಗೀಕಾರವಾಯಿತು

೨) ಪಾನನಿರೋಧವನ್ನು ಮುಂದುವರಿಸಬೇಕೆಂಬ ನಿರ್ಣಯವನ್ನು ಶ್ರೀ ಹೆಚ್. ಸಿದ್ದಯ್ಯನವರು ಮಂಡಿಸಿ ಶ್ರೀ ಎಸ್. ನಾರಾಯಣರಾಯರು ಅನುಮೋದಿಸಿದರು. ಪಾನನಿರೋಧವನ್ನು ಎಲ್ಲಾ ಜಿಲ್ಲೆಗಳಿಗೂ ಅನ್ವಯಿಸಬೇಕೆಂಬ ತಿದ್ದುಪಡಿಯನ್ನು ಶ್ರೀ ನಾಗವಾಳ್‌ದ ಮಂಜಪ್ಪನವರು ಸೂಚಿಸಿದರು. ಈಗಿನ ಪರಿಸ್ಥಿತಿಯಲ್ಲಿ ಪಾನನಿರೋಧ ಜಾರಿಯಲ್ಲಿರುವ ಪ್ರದೇಶಗಳಲ್ಲಿ ಮಾತ್ರ ಮುಂದುವರಿಸುವುದು ಸೂಕ್ತವೆಂದು ಅಧ್ಯಕ್ಷರು ತಿಳಿಸಿದ ಮೇಲೆ ತಿದ್ದುಪಡಿ ವಾಪಸ್ಸಾಗಿ ಮೂಲ ನಿರ್ಣಯವು ಅಂಗೀಕಾರವಾಯಿತು.

ಅಧಿವೇಶನವು ಕೃಷ್ಣರಾಜನಗರದ ಬಸ್ ನಿಲ್ದಾಣದಲ್ಲಿ ಕಟ್ಟಿರುವ ಚಪ್ಪರದಲ್ಲಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಸಭೆಯಲ್ಲಿ ಎಲ್ಲಾ ಈಗಿನ ಮಂತ್ರಿಗಳೂ ಮತ್ತು ಮಾಜಿ ಮಂತ್ರಿಗಳೂ (ಶ್ರೀ ಭಾಷ್ಯಂರವರನ್ನು ಬಿಟ್ಟು) ಹಾಜರಿದ್ದರು- ೭೧ ಜನ ಡೆಲಿಗೇಟುಗಳಿಗೆ ೪೬ ಜನ ಆಗಮಿಸಿದ್ದರು- ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರೂ ಹಾಜರಿದ್ದರು. ಸುಮಾರು ಸಾವಿರ ಜನ ಪ್ರೇಕ್ಷಕರು ಸೇರಿದ್ದರು

ಪೇಟೆ ಧಾರಣೆ

ಮೈಸೂರು ತಾ॥ 9-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		10-1	18-2
ಹೊಂಗೆಬೀಜ	,,	12-0	13-0
ಹುರುಳಿ	,,	33-2	—
ಸೀಗೆಕಾಯಿ	,,	3-2	—
ಮೆ. ಕಾಯಿ ಮಣಕ್ಕೆ		5-12	15-4
ಹುಣಸೇಹಣ್ಣು	,,	—	—
ತೆಂಗಿನಕಾಯಿ	1100ಕ್ಕೆ	130	181

ಚಿನ್ನ ಬೆಳ್ಳಿ ದರಗಳು

	9-5-52	ರೂ.
ಸವರನ್		66-6
,,		66-8
ಚಿನ್ನ ತೊಲ		94-0
,, ಮೂಸ		93-3
ಬೆಳ್ಳಿ 100 ತೊಲ		170-0
,, ತೊಲ		1-12

ವುಡ್ ಲ್ಯಾಂಡ್ಸ್

9—5—52ನೇ ಶುಕ್ರವಾರದಿಂದ ಅಮೋಘ 2ನೇ ವಾರ

ದಿನವಹಿ 3 ಆಟಗಳು

" ಲಕ್ಷ್ಮೀ ನಾರಾಯಣ್ " (ಹಿಂದಿ)

ಪಾತ್ರ:—ಮೀನಾಕುಮಾರಿ ಮಹಿಪಾಲ್

ರಣಜಿತ್

೯—೫—೫೨ರಿಂದ ಅಮೋಘ ೨ನೇ ವಾರ

ಹಂಲೋಗ್

ಪಾತ್ರ:-ನೂತನ್, ಶ್ಯಾಮ, ಸಜ್ಜನ್, ಬಾಲ್‌ರಾಜ್, ದುರ್ಗಾಕೋಟೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ

ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ

ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪೪ (೮೦೫) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೧-೫-೧೯೫೨ನೇ ಭಾನುವಾರ [ಸಂಚಿಕೆ ೨೬೮

ಆಕ್ರಾಯಿ ವಿಧಿಸುತ್ತಲಿರುವ ವಸ್ತುಗಳ ಮೇಲೆ ಸೇಲ್‌ಟ್ಯಾಕ್ಸ್ ಕೂಡದು

ಮೈಸೂರು ಪುರಸಭೆಯ ನಿರ್ಣಯ

ಮೈಸೂರು ಮೇ ೧೦

ಮೈಸೂರು ಪುರಸಭಾಧಿವೇಶನದ ಮುಂದುವರಿದ ಅಧಿವೇಶನವು ಈದಿನ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರುನಗರದಲ್ಲಿ ಆಕ್ರಾಯಿ ವಿಧಿಸುತ್ತಲಿರುವ ವಸ್ತುಗಳ ಮೇಲೆ ಸೇಲ್ಸ್ ಟ್ಯಾಕ್ಸ್ ವಿಧಿಸುತ್ತಲಿರುವುದರಿಂದ ಜನರಿಗೆ ವಿಶೇಷ ತೊಂದರೆಯುಂಟಾಗಿದೆ. ಈವಸ್ತುಗಳ ಮೇಲೆ ಸೇಲ್ಸ್‌ಟ್ಯಾಕ್ಸ್ ವಿಧಿಸದಂತೆ ಸರ್ಕಾರವನ್ನು ಕೋರಬೇಕೆಂದು ಶ್ರೀ ಮುದ್ದಯ್ಯನವರು ಮಂಡಿಸಿದ್ದ ನಿರ್ಣಯವು ಅಂಗೀಕಾರವಾಯಿತು-

ಭಾರತದ ಹೊಸ ಮಂತ್ರಿಮಂಡಲ

ಪಂಡಿತ ಜವಹರಲಾಲ್ ನೆಹರೂ ತಮ್ಮ ಮಂತ್ರಿ ಮಂಡಲದಲ್ಲಿರುವವರ ಪಟ್ಟಿಯನ್ನು ಸಿದ್ಧಗೊಳಿಸಿರುವರೆಂದೂ ಅವರೆಲ್ಲಾ ೧೩ನೇ ತಾ॥ ಸಂಜೆ ಪ್ರಮಾಣವಚನ ಸ್ವೀಕಾರಮಾಡಲಿರುವರೆಂದೂ ಗೊತ್ತಾಗಿದೆ.

ಪಂಡಿತ ನೆಹರೂರವರ ನೂತನ ಮಂತ್ರಿಮಂಡಲದಲ್ಲಿ ಈಗಿನ ಸಚಿವರಾದ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಶ್ರೀ ಸಿ. ಡಿ. ದೇಶಮುಖ್, ಮೌಲಾನಾ ಆಜಾದ್, ಶ್ರೀ ಜಗಜೀವನರಾಂ, ರಾಜಕುಮಾರಿ ಅಮೃತಕೌರ್, ಶ್ರೀ ಗುಲ್‌ಜಾರಿಲಾಲ್‌ನಂದ ಮತ್ತು ಸರದಾರ್ ಬಲದೇವಸಿಂಗ್ ಇರುವುದು ಖಚಿತವೆಂದು ವರದಿಯಾಗಿದೆ.

ಒರಿಸ್ಸಾ ಗೌರ್ನರ್

ಕೇಂದ್ರ ಪಾರ್ಲಿಮೆಂಟಿನ ಡೆಪ್ಯೂಟಿ ಸ್ಪೀಕರಾಗಿದ್ದ ಅನಂತಶಯನಂ ಅಯ್ಯಂಗಾರ್‌ರನ್ನು ಒರಿಸ್ಸಾ ಗೌರ್ನರರಾಗಿ ನೇಮಿಸಲಾಗುವುದೆಂದು ವದಂತಿಗಳು ಹರಡಿವೆ-

ಆಹಾರ ಶಾಖಾ ಡೈರೆಕ್ಟರ್ ರಾಗಿ ಶ್ರೀ ಹಿರಣ್ಣಯ್ಯ

ಬೆಂಗಳೂರು ಮೇ ೧೦

ಬೆಂಗಳೂರು ಕಾರ್ಪೋರೇಷನ್ ಕಮೀಷನರನ್ನು ಶ್ರೀ ಹಿರಣ್ಣಯ್ಯನವರನ್ನು ಆಹಾರ ಸರಬರಾಜು ಶಾಖಾ ಡೈರೆಕ್ಟರಾಗಿಯೂ, ತುಮಕೂರು ಡಿ.ಸಿ. ಜನಾಬ ಅಬೂಬಾಕರ್‌ರವರನ್ನು ಕಾರ್ಪೋರೇಷನ್ ಕಮೀಷನರಾಗಿಯೂ ವರ್ಗಾಗಿದೆ.

ಅಧಿಕಾರಿಗಳ ವರ್ಗಾವಣೆ

ಬೆಂಗಳೂರು ಮೇ ೧೦

ಹಾಸನ ಜಿಲ್ಲಾಧಿಕಾರಿಗಳಾಗಿ ವರ್ಗವಾಗಿದ್ದ ಶ್ರೀ ಕೆ ಶೇಷಗಿರಿರಾವ್ ಅವರ ವರ್ಗವನ್ನು ರದ್ದುಗೊಳಿಸಲಾಗಿದೆಯೆಂದು ತಿಳಿದುಬಂದಿದೆ.

ಹಾಸನ ಜಿಲ್ಲಾಧಿಕಾರಿಗಳಾಗಿ ಶ್ರೀ ಎಂ. ಎ. ಎಸ್. ರಾಜನ್‌ರವರನ್ನು ವರ್ಗಾಯಿಸಲಾಗಿದೆಯೆಂದು ಖಚಿತವಾಗಿ ತಿಳಿದುಬಂದಿದೆ

ಮಂಡ್ಯ ಜಿಲ್ಲಾಧಿಕಾರಿಗಳಾಗಿ ಶ್ರೀ ಬಿ. ವೀರಪ್ಪನವರನ್ನು ವರ್ಗ ಮಾಡಿದ್ದು, ಆ ವರ್ಗ ರದ್ದಾಗಿದ್ದುದು ಸರಿಯಷ್ಟೆ. ಪುನಃ ಶ್ರೀ ಬಿ. ವೀರಪ್ಪನವರನ್ನೇ ಮಂಡ್ಯದ ಜಿಲ್ಲಾಧಿಕಾರಿಗಳಾಗಿ ವರ್ಗಾಯಿಸಲಾಗಿದೆಯೆಂದು ಅಧಿಕೃತ ವಲಯಗಳಿಂದ ತಿಳಿದುಬಂದಿದೆ.

ಕೈಗಾರಿಕಾ ಕೇಂದ್ರ ಸಲಹಾ ಸಮಿತಿ

ಕೈಗಾರಿಕಾ ಅಭಿವೃದ್ಧಿಗಾಗಿ ಹೊರಟಿಸಿರುವ ಕೈಗಾರಿಕಾ ಹತೋಟಿ ಶಾಸನಕ್ರಮದಂತೆ ನೇಮಿಸಿದ್ದ ಕೈಗಾರಿಕಾ ಕೇಂದ್ರ ಸಲಹಾಸಮಿತಿಯ ಸಭೆಯು ನಿನ್ನೆಯದಿನ ಕೈಗಾರಿಕಾ ಸಚಿವ ಶ್ರೀ ಮೆಹತಾಬ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು

ಪಂಡಿತ ನೆಹರೂರವರು ಪ್ರಾರಂಭಭಾಷಣಮಾಡುತ್ತಾ, ಕೈಗಾರಿಕಾಭಿವೃದ್ಧಿಗಾಗಿ ಹತೋಟಿ ಶಾಸನ ಜಾರಿಗೆ ತರಲಾಗಿದೆಯೆಂದೂ ಜನರೆಲ್ಲರೂ ಸರ್ಕಾರದೊಡನೆ ಸಹಕರಿಸಬೇಕೆಂದು ಹೇಳಿದರು.

ಈ ಸಮಿತಿಯಲ್ಲಿ ಕೈಗಾರಿಕೋದ್ಯಮಿಗಳು, ಕಾರ್ಮಿಕರು, ಗ್ರಾಹಕರು, ಮುಂತಾದ ೨೬ ಜನ ಸದಸ್ಯರಿರುವರು.

ಜನೋಪಯುಕ್ತ ಸರ್ವಿಸ್

ಭದ್ರಾವತಿಯಲ್ಲಿರುವ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಇದೇ ಮೇ ೧೫ನೇ ತಾ॥ ನಿಂದ ೬ ತಿಂಗಳವರೆಗೆ ಜನೋಪಯುಕ್ತ ಸರ್ವೀಸು (ಪಬ್ಲಿಕ್ ಯುಟಲಿಟಿ ಸರ್ವೀಸ್) ಎಂದು ಪರಿಗಣಿಸಲಾಗಿದೆ ಎಂದು ಸರ್ಕಾರ ಪ್ರಕಟನೆ ಇತ್ತಿದೆ.

ಮಾ॥ ಸ್ಟಾಲಿನ್ನರ ಸಂದೇಶ

ಮಾ॥ ಸ್ಟಾಲಿನ್ನರು ಪೂರ್ವ ಜರ್ಮನಿಯವರಿಗೆ ಸಂದೇಶವನ್ನು ಕಳುಹಿಸುತ್ತಾ, ಜರ್ಮನಿಯ ಶಾಂತಿ ಒಪ್ಪಂದದಿಂದಲೂ, ಜರ್ಮನಿಯಲ್ಲಿರುವ ವಿದೇಶಿ ಸೈನ್ಯಗಳನ್ನು ಹಿಂದಕ್ಕೆ ಕರೆಯಿಸುವುದರಿಂದಲೂ ಪ್ರಪಂಚದ ಶಾಂತಿಯನ್ನು ಕಾಪಾಡಬಹುದೆಂದು ತಿಳಿಸಿದ್ದಾರೆ.

ಮುಂಬೈಗೆ ಆಹಾರ ಸಬ್ಸಿಡಿ

ಮುಂಬಯಿ ಸರ್ಕಾರಕ್ಕೆ ಸಾಕಷ್ಟು ಪ್ರಮಾಣದಲ್ಲಿ ಆಹಾರ ಸಬ್ಸಿಡಿಯನ್ನು ಕೊಡಲು ಕೇಂದ್ರ ಸರ್ಕಾರವು ನಿರ್ಧರಿಸಿದೆ, ಎಂದು ತಿಳಿದುಬಂದಿದೆ-

ಈ ಸಬ್ಸಿಡಿ ದಾನದಿಂದ, ಈಗ ಶೇ॥ ೫೦ ರಷ್ಟು ಹೆಚ್ಚಾಗಿರುವ ಆಹಾರ ಬೆಲೆಗಳನ್ನು ಶೇ॥ ೩೦ ರಷ್ಟು ಕಡಿಮೆಮಾಡುವುದಾಗಿ ಗೊತ್ತಾಗಿದೆ.

ಬಿಡುಗಡೆ

ಶತ್ರುಗಳು ಕೈಸೆರೆ ಹಿಡಿದಿದ್ದ ವಿಶ್ವಸಂಸ್ಥೆಯ ಶಿಬಿರ ನಾಯಕ ಬ್ರಿಗೇಡಿಯರ್ ಜನರಲ್ ಡಾಡ್‌ರವರನ್ನು ಕಮ್ಯೂನಿಸ್ಟರು ಬಿಡುಗಡೆ ಮಾಡಿರುವರು.

ವಿಂಧ್ಯ ಪ್ರದೇಶವನ್ನು ಎ ಪ್ರಾಂತ್ಯ ಮಾಡಬೇಕು

ವಿಂಧ್ಯಪ್ರದೇಶವನ್ನು ಎ ಪ್ರಾಂತ್ಯವನ್ನಾಗಿ ಪರಿಗಣಿಸಬೇಕೆಂದು ನಿನ್ನೆಯದಿನ ಅಲ್ಲಿಯ ಶಾಸನಸಭೆಯಲ್ಲಿ ಮಂಡಿಸಿದ ನಿರ್ಣಯವು ಅಂಗೀಕಾರವಾಯಿತು. ಸೋಷಲಿಸ್ಟರು ಈ ನಿರ್ಣಯಕ್ಕೆ ಬೆಂಬಲನೀಡಿದರು.

ಮುಖ್ಯಮಂತ್ರಿಗಳ ಪ್ರವಾಸ

ಬೆಂಗಳೂರು ಮೇ ೧೦

ಈ ತಿಂಗಳು ೧೭ ನೇ ತಾ॥ ಶ್ರೀ ಕೆ. ಹನುಮಂತಯ್ಯನವರು ನೀಲಗಿರಿಗೆ ತೆರಳಿ ಅಲ್ಲಿ ೨೧ ನೇ ತಾ॥ ನವರೆಗೂ ಇರುವರು ೨೨ ನೇ ತಾ॥ ರಾಜಧಾನಿಗೆ ಹಿಂತಿರುಗಿ ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದ ಸಭೆಯಲ್ಲಿ ಭಾಗವಹಿಸಿ ಮಾರನೆ ದಿನ ಮಧ್ಯಾಹ್ನ ಬೆಂಗಳೂರಿಗೆ ಹಿಂತಿರುಗುವರು-

ಚಾರ್ಜ್‌ಶೀಟ್ ಹಾಕಲಾಯಿತು

ಮೈಸೂರು ಮೇ ೧೦

ಚಾಮರಾಜಮೊಹಲ್ಲಾ ಆಹಾರದ ಸೆಟ್‌ಗೋಡೌನಿನಲ್ಲಿ ಬಿಲ್ ಗುಮಾಸ್ತೆ ವೇದಾಂತ ದೇಶಿಕ ಎಂಬುವರು ಇಲಾಖೆಯ ೧೨೯೮೮ ರೂ. ಗಳ ದುರುಪಯೋಗಪಡಿಸಿಕೊಂಡರೆಂಬುದಾಗಿ ಬಿ ಡಿವಿಜನ್ನಿನ ಪೋಲೀಸರು ಅವರ ಮೇಲೆ ನಗರದ ೧ ನೇ ನ್ಯಾಯಾಧೀಶರ ಕೋರ್ಟಿನಲ್ಲಿ ಐ. ಪಿ. ಸಿ. ೪೦೯, ೪೬೮ ಮತ್ತು ೪೭೭ ಎ ಪ್ರಕಾರ ಚಾರ್ಜ್‌ಷೀಟ್ ಹಾಕಿರುತ್ತಾರೆ-

ಸಂಬಳ ಖೋತಾ

ರಾಷ್ಟ್ರಾಧ್ಯಕ್ಷರಿಗೆ ಮಾಹೆಯಾನ ಕೊಡಲಾಗುತ್ತಿರುವ ೧೦೦೦೦ ಮತ್ತು ಗೌರ್ನರುಗಳಿಗೆ ಕೊಡುವ ೫೫೦೦ ರೂ. ಸಂಬಳವನ್ನು ೫॥ ಸಾವಿರಕ್ಕೂ ಮತ್ತು ೪॥ ಸಾವಿರಕ್ಕೂ ಇಳಿಸುವ ವಿಷಯವು ಭಾರತಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಗೊತ್ತಾಗಿದೆ-

ಚೈನಾ ನಿಯೋಗಕ್ಕೆ ಭೇಟಿ

ಚೈನಾ ರಾಷ್ಟ್ರಾಧ್ಯಕ್ಷರು ನಿನ್ನೆಯ ದಿನ ಭಾರತದಿಂದ ಚೈನಾಕ್ಕೆ ಶ್ರೀಮತಿ ವಿಜಯಲಕ್ಷ್ಮಿಯವರ ನಾಯಕತ್ವದಲ್ಲಿ ಹೋಗಿರುವ ಸಾಂಸ್ಕೃತಿಕ ನಿಯೋಗಕ್ಕೆ ಭೇಟಿಯಿತ್ತರು-

ನಗರಾರೋಗ್ಯ

ಮೈಸೂರು ಮೇ ೯

ಮೈಸೂರು ನಗರ ಆರೋಗ್ಯಾಧಿಕಾರಿಗಳು ಏಪ್ರಿಲ್ ಮಾಹೆಗೆ ಮುಕ್ತಾಯವಾದ ನಗರಾರೋಗ್ಯವನ್ನು ಪ್ರಕಟಿಸಿರುವರು,

ಪ್ಲೇಗ್ ಉಪದ್ರವವೆಲ್ಲೂ ಇರಲಿಲ್ಲ ಆದಾಗ್ಯೂ ೧೯೫೩ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು. ನಗರದಲ್ಲೆಲ್ಲಾ ಸಿಡುಬು ಇರಲಿಲ್ಲ ೪೯೪ ಪ್ರೈಮರಿ ೨೮೬೬ ರಿವ್ಯಾಕ್ಸಿನೇಷನ್ ಮಾಡಲಾಗಿದೆ. ಡಿಫ್ತೀರಿಯ ಅಕ್ಕೆ ತಗುಲಿದೆ ೨೬ ಡಿಫ್ತೀರಿಯಾ ನಿರೋಧ, ೭೩ ಟೈಫಾಯಿಡ್ ನಿರೋಧ ಇನಾಕ್ಯುಲೇಷನ್ ಮಾಡಲಾಗಿದೆ.

ಕಾಲರಾ ಎಲ್ಲೂ ಇರಲಿಲ್ಲ ೮೧ ಕಾಲರಾನಿರೋಧ ಇನಾಕ್ಯುಲೇಷನ್ ಮಾಡಲಾಯಿತು-

ಶ್ರೀ ಆರ್. ಸಿ. ಚಾರಿ

ಸಿಂಹಳದಲ್ಲಿ ಭಾರತದ ಡೆಪ್ಯುಟಿ ಹೈಕಮೀಷನರಾಗಿ ನೇಮಕವಾಗಿರುವ ಶ್ರೀ ಆರ್. ಸಿ. ಚಾರಿಯವರು ತಮ್ಮ ಹುದ್ದೆಯನ್ನು ವಹಿಸಿಕೊಳ್ಳಲು ಕೊಲಂಬೋ ಸೇರಿರುವರು-

ಸತ್ಕಾರಕೂಟ

ಉತ್ತರ ಅಟ್ಲಾಂಟಿಕ್‌ನ ಪ್ರಧಾನ ದಂಡನಾಯಕರಾಗಿ ಜ॥ ಐಸನ್‌ಹೋವರ್‌ರವರ ಸ್ಥಾನದಲ್ಲಿ ನೇಮಕವಾಗಿರುವ ಜ॥ ರಿಡ್ಜ್‌ವೇಯವರಿಗೆ ಟೋಕಿಯೋದಲ್ಲಿ ಜಪಾನ್ ಚಕ್ರವರ್ತಿ ಹಿರೋಹಿಟೋರವರು ನಿನ್ನೆಯ ದಿನ ಬೀಳ್ಕೊಡುವ ಸತ್ಕಾರಕೂಟವನ್ನು ಏರ್ಪಡಿಸಿದ್ದರು-

ಕೇಂದ್ರ ಮತ್ತು ಪ್ರಾದೇಶಿಕ ಸಂಚಾರ ಸಮಿತಿಗಳ ನೇಮಕ

ಬೆಂಗಳೂರು ಮೇ ೯

ಮೈಸೂರು ಸರ್ಕಾರದವರು ಅಧಿಕೃತ ಕೇಂದ್ರ ಸಂಚಾರ ಸಮಿತಿಯೊಂದನ್ನು ಒಂಬತ್ತು ಜಿಲ್ಲಾ ಸಮಿತಿಗಳನ್ನು ರಚಿಸಿದ್ದಾರೆ.

ಜಿಲ್ಲಾ ಸಮಿತಿಗೆ ಕೆಳಕಂಡ ಅಧಿಕಾರವಿರುವುದು.

ಆಯಾ ಪ್ರದೇಶಗಳಲ್ಲಿ ಓಡಾಡುವ ಬಸ್ಸುಗಳನ್ನು (ಸ್ಟೇಜ್ ಕ್ಯಾರೇಜ್) ಮಿತಿಗೊಳಿಸುವುದು.

ಬಸ್ಸುಗಳ ಆಗಮನ ಮತ್ತು ನಿರ್ಗಮನ ವೇಳೆಗಳನ್ನು ನಿರ್ದಿಷ್ಟಗೊಳಿಸುವುದು.

ಪರ್ಮಿಟ್‌ಗೆ ಶಾಸನದ ರೀತ್ಯ ಅಗತ್ಯ ಕಂಡುಬಂದ ಷರತ್ತುಗಳನ್ನು ವಿಧಿಸುವುದು.

ಕಂಟ್ರಾಕ್ಟ್ ಬಂಡಿಗಳ ಸಂಖ್ಯೆಯನ್ನು ಮಿತಿಗೊಳಿಸಿ ಅದರಂತೆ ಪರ್ಮಿಟ್ ಕೊಡುವುದು.

ಮೋಟಾರ್ ಬಂಡಿಗೆ ಸಂಬಂಧಿಸಿದ ದರವನ್ನು ನಿಗದಿ ಮಾಡುವುದು.

ಶಾಸನದ ರೀತ್ಯ ಖಾಸಗಿ ಬಂಡಿಗಳಿಗೆ ಪರ್ಮಿಟ್ ಕೊಡುವುದು.

ಇನ್ನು ಮುಂದೆ ಅರ್ಜಿಗಳನ್ನು ಮೊದಲು ಪ್ರಾದೇಶಿಕ ಸಮಿತಿಗಳಿಗೆ ಕಳುಹಿಸಬೇಕೆಂದು ತಿಳಿಸಲಾಗಿದೆ.

ಕೇಂದ್ರ ಸಂಚಾರ ಸಮಿತಿ

ಕೇಂದ್ರ ಸಂಚಾರ ಸಮಿತಿಗೆ 'ಗೃಹಶಾಖೆ ಕಾರ್ಯದರ್ಶಿಗಳು, ಅಧ್ಯಕ್ಷರು, ಐ. ಜಿ. ಪಿ. ಮತ್ತು ಕಟ್ಟಡ ಮತ್ತು ರಸ್ತೆಗಳ ಚೀಫ್ ಎಂಜನಿಯರ್ ಸರ್ಕಾರಿ ಸದಸ್ಯರನ್ನಾಗಿ ನೇಮಿಸಲಾಗಿದೆ. ಖಾಸಗಿ ಸದಸ್ಯರು-

ಶ್ರೀಗಳಾದ ಎಂ. ಎಲ್. ನಂಜರಾಜ ಅರಸು, ಎಚ್. ಜಿ. ರುದ್ರಪ್ಪ, ಎಂ. ಹುಚ್ಚೇಗೌಡ, ಕೆ. ಪಟ್ಟಾಭಿರಾಮನ್, ಎಸ್. ವಾಸುದೇವರಾವ್, ಮಳವಳ್ಳಿ ವೀರಪ್ಪ, ಡಿ. ಗೋವಿಂದದಾಸ ಮತ್ತು ಎಲ್. ಕಾಂತರಾಜ ಅರಸು.

ಪ್ರಾದೇಶಿಕ ಸಮಿತಿಗಳು

ಪ್ರಾದೇಶಿಕ ಸಮಿತಿಗಳಿಗೆ ಆಯಾ ಜಿಲ್ಲಾಧಿಕಾರಿಗಳು ಅಧ್ಯಕ್ಷರು ಡಿ-ಎಸ್-ಪಿ- ಎಕ್ಸಿಕ್ಯೂಟಿವ್ ಎಂಜಿನಿಯರ್ ಮತ್ತು ಜಿಲ್ಲಾಬೋರ್ಡ್ ಅಧ್ಯಕ್ಷರು ಸರ್ಕಾರಿ ಸದಸ್ಯರಾಗಿರುವರು.

ಖಾಸಗಿ ಸದಸ್ಯರು

ಮೈಸೂರು ಜಿಲ್ಲೆ—ಶ್ರೀಗಳಾದ ಎಂ. ಮಾದಯ್ಯ, ಶ್ರೀನಿವಾಸಅಯ್ಯಂಗಾರ್, ಟಿ. ಎಸ್. ಸುಬ್ಬಣ್ಣ, ಡಿ. ಎಂ. ಸಿದ್ದಯ್ಯ, ಎಸ್. ನಾರಾಯಣರಾವ್, ಶಿವನಂಜೇಗೌಡ, ಡಿ. ದೇವರಾಜ ಅರಸು.

ಪ್ರಕಾಶಕರು:—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಧಾನ್ಯ ಸಂಗ್ರಹ ಮತ್ತು ಹಂಚಿಕೆ ಪರಿಶೀಲನೆ

ಬೆಂಗಳೂರು ಮೇ ೯

ಈಗ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿರುವ ಆಹಾರಧಾನ್ಯ ಸಂಗ್ರಹಣೆ ಮತ್ತು ಹಂಚಿಕೆಯ ಕಾರ್ಯಕ್ರಮವನ್ನು ಪರಿಶೀಲಿಸಿ ಏನಾದರೂ ಬದಲಾವಣೆ ಮಾಡುವುದಿದ್ದರೆ ಸಲಹೆ ಮಾಡಲು ಮೈಸೂರು ಸರ್ಕಾರವು ಸಮಿತಿಯೊಂದನ್ನು ಸ್ಥಾಪಿಸಿದೆ. ಈ ಸಮಿತಿಯಲ್ಲಿ ಹಣಕಾಸಿನ ಶಾಖಾ ಕಾರ್ಯದರ್ಶಿಗಳೂ ಆಹಾರ ಸಂಬರಾಜು ಶಾಖಾ ಡೈರೆಕ್ಟರೂ ಆಹಾರ ಮತ್ತು ವ್ಯವಸಾಯಶಾಖಾ ಕಾರ್ಯದರ್ಶಿಗಳೂ ಮತ್ತು ರೆವಿನ್ಯೂ ಕಮೀಷನರರೂ ಸದಸ್ಯರಾಗಿದ್ದಾರೆ.

ಅಮೇರಿಕ್ ಕಚೇರಿಯ ಶತಮಾನೋತ್ಸವ

ಬೊಂಬಾಯಿ ಮೇ ೮

೮ನೇ ತಾರೀಖು ಬೊಂಬಾಯಿನ ಅಮೇರಿಕನ್ ಕಚೇರಿಯು ತನ್ನ ಶತಮಾನೋತ್ಸವವನ್ನು ನೆರವೇರಿಸಿತು.

೧೮೫೨ನೇ ಇಸವಿ ಮೇ ೮ನೇ ತಾ॥ ಮಿ॥ ಎಡ್ವರ್ಡ್ ಇಲಿ ಎಂಬುವರು ಪ್ರಥಮ ಅಮೇರಿಕನ್ ಕಾನ್ಸಲ್‌ರಾಗಿ ಬೊಂಬಾಯಿನಲ್ಲಿ ಅಧಿಕಾರಸೂತ್ರ ವಹಿಸಿಕೊಂಡರು. ಅಂದರೆ ಬೊಂಬಾಯಿಗೂ ಅಮೇರಿಕಕ್ಕೂ ಸೌಹಾರ್ದ ಬೆಳೆದು ಒಂದುನೂರು ವರ್ಷವಾಯಿತು.

ಮಿ॥ ಇಲಿಯವರು ಬಂದೊಡನೆ ಜಾಹಿತಿ ಬಿದ್ದದರಿಂದ ತಮ್ಮ ಅಧಿಕಾರವನ್ನು ಭಾರತೀಯರಾದ ದಾಸಾಭಾಯಿ, ಮೆಕದಾಂಜಿಯವರಿಗೆ ವಹಿಸಿಕೊಟ್ಟು ಅಮೇರಿಕಕ್ಕೆ ಅಲ್ಲಿ ಅಮೇರಿಕನ್ನರೇ ಇರಲಿಲ್ಲ. ಈಗ ಬೊಂಬಾಯಿನಲ್ಲಿ ೪೫೦ ಅಮೇರಿಕದ ನಾಗರೀಕರಿದ್ದಾರೆ. ಬೊಂಬಾಯಿ ಕೌನ್ಸಿಲರ್ ಪ್ರದೇಶದಲ್ಲಿ ೧೪೫೦ ಅಮೇರಿಕನ್ನರಿದ್ದಾರೆ. ಭೂಪಾಲ್, ಹೈದರಾಬಾದ್, ಕಚ್, ಮಧ್ಯಭಾರತ, ಮಧ್ಯಪ್ರದೇಶ್, ಸೌರಾಷ್ಟ್ರ, ವಿಂಧ್ಯಪ್ರದೇಶ ಮತ್ತು ಪೋರ್ಚುಗೀಸ್ ಇಂಡಿಯಾ ಬೊಂಬಾಯಿ ಕಾನ್ಸುಲರ್ ಪ್ರದೇಶಕ್ಕೆ ಸೇರಿವೆ.

ಒಂದು ಶತಮಾನದ ಹಿಂದೆ ಕೇವಲ ೧೦-೧೨ ಅಮೇರಿಕದ ಹಡಗುಗಳು ಬೊಂಬಾಯಿಗೆ ಬರುತ್ತಿದ್ದವು. ಆಗ ಸುಮಾರು ೨೦೦ ಹಡಗುಗಳು (೧೯೫೧ರಲ್ಲಿ) ಬಂದು ಹೋಗಿವೆ.

ಈಗ ಭಾರತದಿಂದ ಅಮೇರಿಕಕ್ಕೆ ಮುಖ್ಯವಾಗಿ ಸೆಣಬು, ಮೆಣಸು, ಮ್ಯಾಂಗನೀಸ್ ಲೋಹಗಳು ಹೋಗುತ್ತಿವೆ. ಅಲ್ಲಿಂದ ಭಾರತಕ್ಕೆ ವಿದ್ಯುಚ್ಛಕ್ತಿ ಸಾಮಾನುಗಳು, ರಸಾಯನಿಕಗಳು, ವಾಹನಗಳು, ಔಷಧಿ ಸಾಮಾನುಗಳು, ಹತ್ತಿ, ಆಹಾರ ಸಾಮಾನುಗಳು ವರ್ಷಂಪ್ರತಿ ೬೮೦ ಮಿಲಿಯನ್ ಡಾಲರಿನಷ್ಟು ಬರುತ್ತಿದೆ.

ನಾನು ನಿಮ್ಮ ಶತ್ರು

'ನಾನು ನಿಮ್ಮ ಶತ್ರು, ನಂ. ೧ ನೀವು ನನ್ನ ಶತ್ರು, ನಂ. ೧ ಕಮ್ಯುನಿಸ್ಟರ ಬಗ್ಗೆ ಅದ್ಯಂತವಾಗಿ ಇದೇ ನನ್ನ ಧೋರಣೆ.' ಹೀಗೆಂದು ಮದ್ರಾಸ್ ಮುಖ್ಯಮಂತ್ರಿ ರಾಜಗೋಪಾಲಾಚಾರಿ ಕಮ್ಯೂನಿಸ್ಟರಿಗೆ ಎಚ್ಚರಿಕೆ ಇತ್ತರು.

ಗೌರ್ನರರಿಗೆ ವಂದನೆ ಅರ್ಪಿಸುವ ನಿರ್ಣಯ ಶಾಸನಸಭೆಯಲ್ಲಿ ಅಂಗೀಕೃತವಾಯಿತು. ವಿರೋಧ ಪಕ್ಷದ ಎಲ್ಲ ತಿದ್ದುಪಡಿಗಳೂ ತಿರಸ್ಕೃತವಾದವು.

ತುಟ್ಟೀಭತ್ಯ ಸಂಬಳಕ್ಕೆ ಸೇರಿತು.

ಕೇಂದ್ರ ಸರ್ಕಾರದ ನೌಕರರಿಗೆ ಸಲ್ಲಿಸಲಾಗುತ್ತಿರುವ ತುಟ್ಟಿಭತ್ಯದ ಕೊಂಚಭಾಗವನ್ನು ಖಾಯಂ ಸಂಬಳದಲ್ಲಿ ಸೇರಿಸಬೇಕೆಂದು ಸಲ್ಲಿಸಲಾದ ಮನವಿಯನ್ನು ಭಾರತ ಸರ್ಕಾರ ಒಪ್ಪಿದೆ ಮತ್ತು ಅದನ್ನು ಸಂಬಳವೆಂದೇ ಪರಿಗಣಿಸಲಾಗುವುದು ಎಂದು ಸರ್ಕಾರದ ಪ್ರಕಟನೆಯೊಂದು ತಿಳಿಸುತ್ತದೆ.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು
(ಸೀತಾವಿಲಾಸ ಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು.
ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಮೈಸೂರಿನ ಆಹಾರ ನೀತಿಗೆ ನೆಹರೂ ಪ್ರಶಂಸೆ

ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರ ಧಾನ್ಯಗಳ ನಿರಾತಂಕ ಸಾಗಾಣಿಕೆಗೆ ಅವಕಾಶವಿತ್ತ ಮೈಸೂರು ಸರ್ಕಾರದ ಪುನರ್ವಿಮರ್ಶಿತ ಆಹಾರ ಧೋರಣೆಯನ್ನು, ಧಾನ್ಯ ಬೆಲೆ ಏರಿಳಿತವನ್ನು ದಿಟ್ಟ ಕ್ರಮವೆಂದು ಪ್ರಧಾನಿ ಪಂಡಿತ ನೆಹರೂ ಮೆಚ್ಚಿಗೆ ಸೂಚಿಸಿದ್ದಾರೆ.

† ಅಮೆರಿಕಾದ ಕಾಂಗ್ರೆಸ್ಸು ಸಂಪೂರ್ಣವಾಗಿ ಸರ್ಕಾರದ ಪುನಶ್ಶಸ್ತ್ರೀಕರಣಕಾರ್ಯಕ್ರಮಕ್ಕೆ ಸಹಾಯವಾಗಲು ಸರ್ಕಾರಕ್ಕೆ ಎಲ್ಲಾ ಅಧಿಕಾರವನ್ನೂ ಕೊಟ್ಟಲ್ಲಿ ಪ್ರಪಂಚದಲ್ಲಿ ಇನ್ನೊಂದು ಯುದ್ಧ ನಡೆಯುವುದಿಲ್ಲವೆಂದು ಅಧ್ಯಕ್ಷ ಟ್ರೂಮನ್ನರು ತಿಳಿಸಿದ್ದಾರೆ.

ಚಿನ್ನ ಬೆಳ್ಳಿ ದರಗಳು

10-5-52

	ರೂ.
ಸವರನ್	66-6
"	66-8
ಚಿನ್ನ ತೊಲ	94-0
" ಮೂಷ	93-3
ಬೆಳ್ಳಿ 100 ತೊಲ	170-0
" ತೊಲ	1-12

ನ್ಯೂ ಅಪೇರ

೯—೫—೫೨ ರಿಂದ
ಜೂಪಿಟರ್ಸ್ ರವರ—
* **ರಾಣಿ** *
(ತಮಿಳು)
ಪಾತ್ರ-ಭಾನುಮತಿ, ಬಾಲಚಂದರ್, ವಹಾಬ್ ಕಾಶ್ಮೀರಿ.

ವುಡ್ ಲ್ಯಾಂಡ್ಸ್

9—5—52ನೇ ಶುಕ್ರವಾರದಿಂದ
ಅಮೋಘ 2ನೇ ವಾರ
ದಿನವೂ 3 ಆಟಗಳು
" ಲಕ್ಷ್ಮೀ ನಾರಾಯಣ್ "
(ಹಿಂದಿ)
ಪಾತ್ರ:—ಮೀನಾಕುಮಾರಿ ಮಹಿಪಾಲ್

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,500 or near offer

No brokers—Immediate possession—No encumbrence,

Enquire at :— M. SUBBARAMAIAH & Co.,
Lansdowne Buildings, Mysore.

ಫೋನ್ ೫೭೪೪ (೮೦೯) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೩ -೫—೧೯೫೨ನೇ ಮಂಗಳವಾರ [ಸಂಚಿಕೆ ೨೪೬

೧೫೭ ಸದಸ್ಯರು ಸದಸ್ಯತ್ವ ಕಳೆದುಕೊಂಡಿರುವರು

ನೂರಾರು ಜನರಿಗೆ ಮತದಾನ ಹೋಯಿತು

ಕೇಂದ್ರ ಪಾರ್ಲಿಮೆಂಟ್ ಮತ್ತು ಶಾಸನಸಭೆಗಳ ಒಟ್ಟು ೧೫೭ ಸದಸ್ಯರುಗಳು ಚುನಾವಣಾ ಲೆಕ್ಕಗಳನ್ನು ಕ್ರಮಬದ್ಧ ರೀತಿಯಲ್ಲಿ ಸಲ್ಲಿಸದಿರಲು ಸಭೆಗಳಲ್ಲಿ ತಮ್ಮ ಸದಸ್ಯತ್ವವನ್ನು ಕಳೆದುಕೊಂಡಿರುವರು. ಇವರಲ್ಲಿ ಪಾರ್ಲಿಮೆಂಟಿಗೆ ಚುನಾಯಿತರಾದವರು ೧೨ ಜನರಿರುವರು. ಚುನಾವಣೆಗೆ ನಿಂತು ಸೋತ ಮತ್ತು ಅವರ ಏಜಂಟರುಗಳಾಗಿದ್ದ ನೂರಾರು ಜನರು ಲೆಕ್ಕಗಳನ್ನು ಒಪ್ಪಿಸದಿರಲು ತಮ್ಮ ಮತದಾನದ ಹಕ್ಕನ್ನು ಕಳೆದುಕೊಂಡಿರುವರು.

ಸರ್ಕಾರಿ ಅಧಿಕಾರಿಗಳಿಗೆ ಪ್ರಯಾಣ ಭತ್ಯ

ಬೆಂಗಳೂರು ಮೇ ೧೨

ಇದೇ ಸಾಲು ಏಪ್ರಿಲ್ ಒಂದನೇ ತಾರೀಖಿನಿಂದ ಜಾರಿಗೆ ಬರುವಂತೆ ಸರ್ಕಾರಿ ಅಧಿಕಾರಿಗಳ ಪ್ರಯಾಣ ಭತ್ಯದ ದರವನ್ನು ತಿಳಿಸಿ ಸರ್ಕಾರದವರು ಒಂದು ಆಜ್ಞೆ ಹೊರಡಿಸಿರುವರು.

ರೈಲ್ವೆ ದರ—ಮೈಸೂರು ಸರ್ವಿಸ್ ರೆಗ್ಯುಲೇಷನ್ ಪ್ರಕಾರ.

ದಿನಭತ್ಯ—ಬೊಂಬಾಯಿ, ಮದರಾಸ್, ದೆಹಲಿ, ಕಲ್ಕತ್ತಾ ಮತ್ತು ಸಿಮ್ಲಾಗಳಲ್ಲಿ—

೨೫೦ ರೂಗಿಂತ ಹೆಚ್ಚಾಗಿ ಬರುವವರಿಗೆ—ಮೈಸೂರು ಸರ್ವಿಸ್ ರೆಗ್ಯುಲೇಷನ್ ಪ್ರಕಾರ ದೊರೆಯುವ ಭತ್ಯದ ಎರಡೂವರೆಯಷ್ಟು (ಕನಿಷ್ಠ ೧೦ ರೂ), ೧೦೦ ರೂನಿಂದ ೨೫೦ ರೂವರೆಗೆ—ಎರಡೂವರೆಯಷ್ಟು (ಕನಿಷ್ಠ ೬ ರೂ), ಇತರ ಅಧಿಕಾರಿಗಳಿಗೆ—ಎರಡೂವರೆಯಷ್ಟು (ಕನಿಷ್ಠ ೪ ರೂ), ಕೆಳದರ್ಜೆ ನೌಕರರಿಗೆ—ಒಂದೂವರೆಯಷ್ಟು (ಕನಿಷ್ಠ ೫ ರೂ), ಉಳಿದ ಕಡೆಗಳಲ್ಲಿ ಎಲ್ಲಾ ದರ್ಜೆ ನೌಕರರಿಗೂ ಸರ್ವಿಸ್ ರೆಗ್ಯುಲೇಷನ್ ನಿಯಮದ ಒಂದೂವರೆಯಷ್ಟು (ಕನಿಷ್ಠ ರೂ ೧-೧೨-೦)

ಪ್ರವಾಸ

ಬೆಂಗಳೂರು ಮೇ ೮

ಗೃಹ ಮತ್ತು ಆಹಾರ ಶಾಖಾ ಸಚಿವ ಶ್ರೀ ಸಿದ್ದವೀರಪ್ಪನವರು ೧೭ ನೇ ತಾ॥ ನಿಂದ ೨೧ನೇ ತಾ॥ ವರೆಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸಮಾಡುವರು.

ಮೈಸೂರಿನಲ್ಲಿ ಮಂತ್ರಿಗಳ ಅಧಿಕೃತ ನಿವಾಸಗಳು

ಮಂತ್ರಿಗಳು ಮೈಸೂರುನಗರದಲ್ಲಿರುವಾಗ್ಗೆ ಅವರ ಅಧಿಕೃತ ನಿವಾಸಗಳನ್ನು ಈ ರೀತಿ ನಿಗದಿ ಮಾಡಲಾಗಿದೆ.

ಕೈಗಾರಿಕಾ ಮಂತ್ರಿಗಳಿಗೆ (ಶ್ರೀ ಟಿ. ಸಿದ್ದಲಿಂಗಯ್ಯ) ಕೃಷ್ಣಾ ದಿ ಭವನ, ನ್ಯಾಯಾಂಗ ಮತ್ತು ವಿದ್ಯಾಮಂತ್ರಿಗಳಿಗೆ (ಶ್ರೀ ಎ. ಜಿ. ರಾಮಚಂದ್ರರಾವ್) ವೆಸ್ಟ್ ಲೇಕ್ ಭವನ ಸ್ಥಳೀಯ ಸಂಸ್ಥೆಗಳ ಮಂತ್ರಿಗಳಿಗೆ (ಶ್ರೀ ಟಿ. ಚನ್ನಯ್ಯ) ಪದ್ಮಾಲಯ, ರೆವಿನ್ಯೂ ಮತ್ತು ಪಬ್ಲಿಕ್‌ವರ್ಕ್ಸ್ (ಶ್ರೀ ಕಡಿದಾಳ್ ಮಂಜಪ್ಪ) ಮತ್ತು ಹೋಂ ಮತ್ತು ವ್ಯವಸಾಯ ಮಂತ್ರಿಗಳಿಗೆ (ಶ್ರೀ ಹೆಚ್. ಸಿದ್ದವೀರಪ್ಪ) ಸರ್ಕಾರಿಭವನ.

ರಾಷ್ಟ್ರಾಧ್ಯಕ್ಷರ ಪ್ರಮಾಣ ಸ್ವೀಕಾರ

ಭಾರತದ ನೂತನ ರಾಷ್ಟ್ರಾಧ್ಯಕ್ಷರಾದ ಡಾ॥ ರಾಜೇಂದ್ರಪ್ರಸಾದ್‌ರವರು ಈ ದಿನ ಬೆಳಗ್ಗೆ ಪ್ರಮಾಣ ಸ್ವೀಕಾರ ಮಾಡುತ್ತಾರೆ. ಅನಂತರ ಉಪರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗಿರುವ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು ಪ್ರಮಾಣ ಸ್ವೀಕಾರ ಮಾಡುತ್ತಾರೆ.

ಪ್ರಮಾಣ ಸ್ವೀಕಾರವಾದನಂತರ ಪಂಡಿತ ನೆಹರೂರವರು ತಮ್ಮ ಈಗಿನ ಮಂತ್ರಿಮಂಡಲದ ರಾಜೀನಾಮೆಯನ್ನಿತ್ತು, ಹೊಸ ಮಂತ್ರಿಮಂಡಲದ ರಚಿಸಿ ಸಂಜೆ ಹೊಸ ಮಂತ್ರಿಮಂಡಲದ ಪ್ರಮಾಣ ಸ್ವೀಕಾರ ಸಮಾರಂಭ ನಡೆಯುತ್ತದೆ.

ಬೆಳಗ್ಗೆ ೮-೧೫ ಗಂಟೆ ವೇಳೆಗೆ ಈ ಸಮಾರಂಭವನ್ನು ಎಲ್ಲಾ ಎ ಐ ಆರ್, ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರಸಾರ ಮಾಡಲಾಗುತ್ತದೆ.

೩೦ ಜನರ ದಸ್ತಗಿರಿ

ಮದ್ರಾಸಿನಲ್ಲಿ ೬ನೇ ತಾರೀಖು ಶಾಸನಸಭಾ ಭವನದ ಬಳಿ ಪೋಲೀಸ್ ಕಮಿಷನರ ಆಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ೩೦ ಜನರ ದಸ್ತಗಿರಿಯಾಗಿದೆಯೆಂದು ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರ್ಯರವರು ಶಾಸನಸಭೆಯಲ್ಲಿ ತಿಳಿಸಿರುವರು.

ಆಹಾರ ಸಬ್ಸಿಡಿ ನಿಲ್ಲಿಸಿದ್ದು ತಪ್ಪು

ಪ್ರಾಂತೀಯ ಸರ್ಕಾರಗಳಿಗೆ ಕೇಂದ್ರ ಆಹಾರ ಸಬ್ಸಿಡಿಯನ್ನು ನಿಲ್ಲಿಸಿರುವುದು ತಪ್ಪೆಂದು ಮಾಜಿ ಕೇಂದ್ರ ನ್ಯಾಯಾಂಗ ಸಚಿವ ಡಾ॥ ಅಂಬೇಡ್ಕರರು ತಿಳಿಸಿದರು.

ಜನತಾ ವಿದ್ಯಾಸಂಸ್ಥೆಯ ಸಲಹಾ ಸಮಿತಿಯ ಸಭೆಯಲ್ಲಿ ಭಾಗವಹಿಸಲು ಬಂದಿದ್ದ ಡಾ॥ ಅಂಬೇಡ್ಕರರು ದೆಹಲಿಗೆ ಪ್ರಯಾಣ ಮಾಡಿದರು.

ಮುಂದಿನ ಯೋಜನೆಗಳ ಸಾಧನೆಗೆ ಹಣ ಕೂಡಿಸಲು ಆಹಾರ ಸಬ್ಸಿಡಿಗಳನ್ನು ನಿಲ್ಲಿಸಿರುವುದರ ಔಚಿತ್ಯವನ್ನು ಡಾ॥ ಅಂಬೇಡ್ಕರ್ ಪ್ರಶ್ನಿಸಿದರು. ಭವಿಷ್ಯವನ್ನು ನಿರ್ಲಕ್ಷಿಸದೆ ಇರಬೇಕಾದರೂ, ಪ್ರಸ್ತುತ ಜನಾಂಗ ಉಳಿಯಬೇಕಾದುದು ಅಗತ್ಯ ಎಂದೂ ತಿಳಿಸಿದರು.

ರಾಜೀನಾಮೆ ಕೊಡಲು ಸಿದ್ಧ

ಪೆಪ್ಸು ಶಾಸನಸಭೆಯಲ್ಲಿ ಅಲ್ಲಿಯ ಮುಖ್ಯಮಂತ್ರಿಯವರು ಮಾತನಾಡುತ್ತಾ, ತಮ್ಮ ಸರ್ಕಾರವು ಜಮೀನ್ದಾರಿ ರದ್ದು ಮಾಡಲು ಕಾತುರವಾಗಿದೆ. ಅದಕ್ಕಾಗಿ ಭೂ ಸುಧಾರಣಾ ಸಮಿತಿಯನ್ನು ನೇಮಿಸಿ ಅದರ ವರದಿಯನ್ನು ಕಾಯಲಾಗಿದೆ ತಮ್ಮ ಸರ್ಕಾರಕ್ಕೆ ಸುಧಾರಣೆ ತರಲು ಅಸಾಧ್ಯವಾದರೆ ತಾವು ರಾಜೀನಾಮೆ ಕೊಡುವುದಾಗಿ ಅವರು ಹೇಳಿರುವರು.

ರಾಜಕುಮಾರರು ಸೆಷನ್ನಿಗೆ

ಭಾವನಗರದ ಮಹಾರಾಜರ ಸಹೋದರರಾದ ರಾಜಕುಮಾರ ನಿರ್ಮಲ ಕುಮಾರರನ್ನು ಮಧ್ಯಸೌರಾಷ್ಟ್ರದ ಹಳ್ಳಿಯೊಂದರಲ್ಲಿ ಡಕಾಯಿತಿ ಮಾಡಿದರೆಂಬ ಆಪಾದನೆಯ ಮೇಲೆ ಸೆಷನ್ಸ್ ವಿಚಾರಣೆಗೆ ಗುರಿಪಡಿಸಲಾಗಿದೆ.

ರಾಜಕುಮಾರ ನಿರ್ಮಲಕುಮಾರರನ್ನು ಭಾವನಗರದಲ್ಲಿ ೩ ತಿಂಗಳ ಹಿಂದೆ ದಸ್ತಗಿರಿ ಮಾಡಲಾಯಿತು. ಗೊಂಡಾಲಿನ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರು ಅವರನ್ನು ವಿಚಾರಣೆ ಮಾಡಿ, ಸೆಷನ್ನಿಗೆ ಗುರಿಮಾಡಿದರು.

ನೆಹರೂ ನಾಯಕರು

ಪಾರ್ಲಿಮೆಂಟ್ ಭವನದಲ್ಲಿ ಸೇರಿದ್ದ ಹೊಸ ಪಾರ್ಲಿಮೆಂಟ್ ಕಾಂಗ್ರೆಸ್ ಪಕ್ಷದ ಸಭೆ ಪಂಡಿತ ಜವಹರಲಾಲ್ ನೆಹರೂರವರನ್ನು ಪಕ್ಷದ ನಾಯಕರನ್ನಾಗಿ ಸರ್ವಾನುಮತದಿಂದ ಆರಿಸಿದೆ.

ಕಾಂಗ್ರೆಸ್ ಪಕ್ಷದ ಉಪನಾಯಕರಾಗಿರುವ ಮೌಲಾನಾ ಆಜಾದರೇ ಈಗಲೂ ಉಪನಾಯಕರಾಗಿ ಮುಂದುವರಿಯುವರೆಂದು ಖಚಿತವಾಗಿ ಗೊತ್ತಾಗಿದೆ.

ಪಕ್ಷದ ಅಂಗರಚನೆಯನ್ನೂ ವಿಧಿನಿಯಮಗಳನ್ನೂ ರೂಪಿಸಲು ಸಣ್ಣ ಉಪಸಮಿತಿಯನ್ನು ನೇಮಿಸಲಾಯಿತು. ಶ್ರೀ ಹರೇಕೃಷ್ಣ ಮೆಹತಾಬ್, ಎನ್. ವಿ. ಗಾಡ್ಗಿಲ್, ಸತ್ಯನಾರಾಯಣಸಿನ್ಹಾ, ಮೌಲಾನಾ ಮೊಹಮದ್ ಸಯೀದ್, ಬಿ. ಜಿ. ಖೇರ್ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರು ಉಪಸಮಿತಿಯ ಸದಸ್ಯರಾಗಿರುವರು.

ಲಾರ್ಡ್ ಮೌಂಟ್‌ಬ್ಯಾಟನ್

ವೈಸ್ ಅಡ್ಮಿರಲ್ ಲಾರ್ಡ್ ಮೌಂಟ್ ಬ್ಯಾಟನ್ ಲಂಡನ್ನಿನಿಂದ ಮಾಲ್ಟಾಕ್ಕೆ ತೆರಳಿದರು, ಅಲ್ಲಿ ಮೆಡಿಟರೇನಿಯನ್ ನೌಕಾ ದಳದ ಮುಖ್ಯ ದಂಡನಾಯಕರಾಗಿ ಅಧಿಕಾರ ವಹಿಸಿಕೊಳ್ಳುವರು.

ಕಾಂಗ್ರೆಸ್ ಅಧ್ಯಕ್ಷತೆಗೆ

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಚುನಾವಣೆ ಇದೇ ಜೂನ್ ೧ ನೇ ತಾ॥ ನಡೆಯಲಿದೆಯಷ್ಟೆ. ಈ ಸ್ಥಾನಕ್ಕೆ ಮಾಜಿ ಅಧ್ಯಕ್ಷರುಗಳಾದ ಶ್ರೀ ಹೆಚ್. ಸಿ. ದಾಸಪ್ಪನವರೂ, ಶ್ರೀ ಟಿ. ಸುಬ್ರಮಣ್ಯಂರವರೂ ಸ್ಪರ್ಧಿಸುವರೆಂದು ತಿಳಿದುಬಂದಿದೆ.

ಪ್ರಪಂಚ ಅಂಚೆ ಸಮ್ಮೇಳನ

ಅತ್ಯಂತ ಹಳೇ ಪ್ರಪಂಚ ಸಂಸ್ಥೆಯಾದ ಯೂನಿವರ್ಸಲ್ ಪೋಸ್ಟಲ್ ಯೂನಿಯನ್‌ನ ಮಹಾಧಿವೇಶನ ಇದೇ ೧೪ ನೇ ತಾ॥ ಬ್ರಸಲ್ಸ್‌ನಲ್ಲಿ ಸೇರಲಿದೆ ಈ ಸಂಸ್ಥೆಯು ೧೮೭೪ರಲ್ಲಿ ಸ್ಥಾಪನೆಯಾದುದು.

ನೆಹರೂ ಸಂದೇಶ

ಭಾರತ ಪ್ರಧಾನಿ ನೆಹರೂರವರು ನಾಳೆ ದಿನ ರಾತ್ರಿ ೮-೩೦ ಗಂಟೆಗೆ ರಾಷ್ಟ್ರವನ್ನುದ್ದೇಶಿಸಿ ಎ ಐ ಆರ್. ನಲ್ಲಿ ಪ್ರಸಾರ ಭಾಷಣ ಮಾಡಲಿರುವರು.

ಡಾ॥ ಯು. ರಾಮರಾವ್ ನಿಧನ

ಮದ್ರಾಸಿನ ಸಚಿವರಾದ ಡಾ॥ ಯು. ಕೃಷ್ಣರಾವ್‌ರವರ ತಂದೆ ಡಾ॥ ಯು. ರಾಮರಾವ್‌ರವರು ತಮ್ಮ ೮೦ ನೇ ವಯಸ್ಸಿನಲ್ಲಿ ನಿನ್ನೆ ನಿಧನರಾದರು. ಇವರು ಮದ್ರಾಸಿನ ಶಾಸನಸಭೆಯ ಮಾಜಿ ಅಧ್ಯಕ್ಷರು ನಿನ್ನೆಯದಿನ ಶಾಸನಸಭೆಯಲ್ಲಿ ಅವರ ಗೌರವಾರ್ಥವಾಗಿ ಸಭೆಯು ವಿಷಾದಸೂಚಕವಾಗಿ ಮೌನವನ್ನಾಚರಿಸಿದರು.

† ೬೦೦,೦೦೦ ಅಮೆರಿಕಾ ಡಾಲರುಗಳ ಬೆಲೆಬಾಳುವ ಎಲೆಕ್ಟ್ರಿಕ್ ಟ್ರೈನುಗಳನ್ನು ಜಪಾನ್ ಭಾರತಕ್ಕೆ ಸದ್ಯದಲ್ಲೇ ಸರಬರಾಜು ಮಾಡುವುದಾಗಿ ಗೊತ್ತಾಗಿದೆ. ಇವುಗಳನ್ನು ಮದ್ರಾಸ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಉಪಯೋಗಿಸಲಾಗುತ್ತದೆ.

ಬೆಲೆ ಇಳಿತಾಯಕ್ಕೆ ಸತ್ಯಾಗ್ರಹ

ಮೈಸೂರು ಮೇ ೧೨

ನಿನ್ನೆ ದಿನ ರಾಜಧಾನಿಯ ರೇಷನ್ ದಾರರ ಸಂಘದ ಬಹಿರಂಗ ಸಭೆಯಲ್ಲಿ ಆಹಾರ ಬೆಲೆ ಇಳಿತಾಯಕ್ಕೆ ಸತ್ಯಾಗ್ರಹ ಮಾಡಲು ಈ ನಿರ್ಣಯವು ಅಂಗೀಕಾರವಾಯಿತು.

"ತಾ|| ೨೮-೪-೧೯೫೨ರ ಬಹಿರಂಗ ಸಭೆಯಲ್ಲಿ ತೀರ್ಮಾನಿಸಿದಂತೆ, ತಾರೀಖು ೨-೫-೧೯೫೨ನೇ ಶುಕ್ರವಾರ ರಾಜಧಾನಿಯ ರೇಷನ್ ದಾರರ ಸಂಘದ ಅಧ್ಯಕ್ಷ ಮತ್ತು ಕಾರ್ಯಕಾರೀ ಸಮಿತಿಯ ಸದಸ್ಯರ ಮುಂದಾಳತ್ವದಲ್ಲಿ ಬೆಂಗಳೂರಿಗೆ ಹೋಗಿದ್ದ ಜಾತಾದ ಪರವಾಗಿ ಒಪ್ಪಿಸಿದ ಮನವಿಗೆ, ಆಹಾರ ಪದಾರ್ಥಗಳ ಬೆಲೆಯನ್ನು ಇಳಿಸುವ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಂದ ಸಮರ್ಪಕವಾದ ಉತ್ತರ ಅಥವಾ ಭರವಸೆ ದೊರೆಯದೇ ಹೋದುದರಿಂದಲೂ, ಇತ್ತೀಚೆಗೆ ಕೇಂದ್ರ ಸರ್ಕಾರದವರು ತಿರುವಾಂಕೂರು-ಕೊಚ್ಚಿ ಸಂಸ್ಥಾನದಂತೆ ಬೊಂಬಾಯಿ ಸರ್ಕಾರಕ್ಕೂ ಸಬ್ಸಿಡಿ ಕೊಟ್ಟು, ಬೊಂಬಾಯಿನಲ್ಲಿ ಆಹಾರ ಪದಾರ್ಥಗಳ ಬೆಲೆಯನ್ನು ಇಳಿಸಿರುವುದರಿಂದಲೂ, ಮೈಸೂರು ಸರ್ಕಾರದವರೂ ಸಹ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸಿ, ಆಹಾರ ಸಬ್ಸಿಡಿಯನ್ನು ಪಡೆದು ಆಹಾರ ಪದಾರ್ಥಗಳ ಬೆಲೆಯನ್ನು ಹಿಂದಿನ ಮಟ್ಟಕ್ಕೆ ಇಳಿಸಬೇಕೆಂದು ಈ ಸಭೆಯು ಮೈಸೂರು ಸರ್ಕಾರದವರನ್ನು ಮತ್ತೊಮ್ಮೆ ಒತ್ತಾಯಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತದೆ. ಆದರೆ ಸರ್ಕಾರದವರು ಈ ಮನವಿಗೂ ಗಮನಕೊಡದೆ ಈ ಲಾಗಾಯ್ತು ಹದಿನೈದು ದಿನಗಳೊಳಗಾಗಿ ಆಹಾರ ಪದಾರ್ಥಗಳ ಬೆಲೆಯನ್ನು ಇಳಿಸದೇಹೋದಲ್ಲಿ ಆಹಾರ ಧಾನ್ಯಗಳ ಡಿಪೋಗಳ ಮುಂದೆ ರಾಜಧಾನಿಯ ರೇಷನ್ ದಾರರ ಸಂಘದ ಕಾರ್ಯಕಾರೀ ಸಮಿತಿಯವರ ನೇತೃತ್ವದಲ್ಲಿ ಸುವ್ಯವಸ್ಥಿತವಾದ ರೀತಿಯಲ್ಲಿ ಸತ್ಯಾಗ್ರಹವನ್ನು ಆಚರಿಸಬೇಕೆಂದೂ ಈ ಸಭೆಯು ಸರ್ವಾನುಮತದಿಂದ ತೀರ್ಮಾನಿಸುತ್ತವೆ."

ಭಾರತಕ್ಕೆ ಬರ್ಮಾ ಅಕ್ಕಿ

ಈ ವರ್ಷದ ಮೊದಲ ಅರ್ಧಭಾಗದ ಅವಧಿಯಲ್ಲಿ ಬರ್ಮಾದಿಂದ ಭಾರತಕ್ಕೆ ೬೦ ಸಾವಿರ ಟನ್ ಅಕ್ಕಿಯನ್ನು ಖಾಸಗಿಯಾಗಿ ರಫ್ತು ಮಾಡಲು ಗೊತ್ತುಮಾಡಲಾಗಿದೆಯೆಂದು ಅಧಿಕೃತವಾಗಿ ತಿಳಿದುಬಂದಿದೆ.

ಪ್ರಕಾಶಕರು :—ಜಿ ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಉನ್ನತ ಹುದ್ದೆಗಳಿಗೆ ನೇಮಕ

ಈಗಿನ ವಾರ್ತಾ ಮತ್ತು ಪ್ರಸಾರ ಶಾಖಾ ಸಚಿವ ಶ್ರೀ ಆರ್. ಆರ್. ದಿವಾಕರ್‌ರವರನ್ನು ಬಿಹಾರ್‌ನ ಗವರ್ನರಾಗಿ ನೇಮಕವಾಗಿ ದೇಹಲಿಯಿಂದ ತಿಳಿಯಬಂದಿದೆ.

ಶ್ರೀಗಳಾದ ಕೆ. ಎಂ. ಮುನ್ಷಿ ಮತ್ತು ಗಿರಿಜಾಶಂಕರ ಬಾಜಪೈರವರನ್ನು ಉತ್ತರ ಪ್ರದೇಶ ಮತ್ತು ಬೊಂಬಾಯಿ ಗವರ್ನರ್ ಆಗಿ ನೇಮಕವಾಗಿ ಸಧ್ಯದಲ್ಲೆ ಪ್ರಕಟಣೆ ಹೊರಬೀಳಲಿದೆ.

ಒರಿಸ್ಸಾದಲ್ಲಿ ಹಾಲಿ ಗವರ್ನರ್ ಆಗಿರುವ ಎಂ|| ಅಸಫ್ ಅಲಿಯವರನ್ನು ಗವರ್ನರ್ ಹುದ್ದೆಗೆ ನೇಮಿಸಿ ಅವರ ಸ್ಥಾನಕ್ಕೆ ಭಾರತ ಶ್ರೇಷ್ಠ ನ್ಯಾಯಾಲಯದಲ್ಲಿರುವ ನ್ಯಾಯಮೂರ್ತಿ ಫಜಿಲ್ ಅಲಿಯವರನ್ನು ಒರಿಸ್ಸಾಕ್ಕೆ ಗವರ್ನರಾಗಿ ನೇಮಿಸಲಾಗುವುದೆಂದೂ ಶ್ರೇಷ್ಠ ನ್ಯಾಯಾಲಯಕ್ಕೆ ಡಾ|| ಸೈಯದ್ ಮಹಮದ್‌ರವರ ಹೆಸರನ್ನು ಸೂಚಿಸಲಾಗಿದೆ.

ಮಧ್ಯ ಪ್ರದೇಶದ ಗವರ್ನರ್ ಹುದ್ದೆಗೆ ಶ್ರೀಗಳಾದ ಹರೇಕೃಷ್ಣ ಮೆಹತಾಬ್, ಸರ್ದಾರ್ ಬಲದೇವಸಿಂಗ್, ಎನ್. ವಿ. ಗಾಡ್ಗಿಲ್‌ರವರಲ್ಲೊಬ್ಬರನ್ನು ನೇಮಿಸಲಾಗುವುದೆಂದು ಹೇಳಲಾಗಿದೆ.

ಶ್ರೀ ನೆಹರೂರವರ ಹೊಸ ಮಂತ್ರಿಮಂಡಲದಲ್ಲಿ ೧೪ ಸಚಿವರಿರುವರೆಂದೂ ಹೇಳಲಾಗಿದೆ. ಇವರಲ್ಲದೆ ರಾಜ್ಯ ಸಚಿವರು, ಉಪಸಚಿವರನ್ನು ನೇಮಿಸಿಕೊಂಡು ಸಚಿವ ಸಂಘಟದಲ್ಲಿ ಒಟ್ಟು ೩೦ ಮಂದಿ ಸಚಿವರಿರುವರೆಂದು ಹೇಳಲಾಗಿದೆ.

ಈಗಿನ ಸಂಪುಟದಲ್ಲಿರುವ ಶ್ರೀ ಸಿ. ಬಿಸ್ವಾಸ್, ಎ. ಪಿ. ಜೈನ್‌ರವರೂ ಮುಂದೆ ಸಚಿವರಾಗಿರುವರು.

ಶ್ರೀಗಳಾದ ಟಿ. ಟಿ. ಕೃಷ್ಣಮಾಚಾರಿ, ವಿ. ವಿ. ಗಿರಿ, ಲಾಲ್‌ಬಹದೂರ್‌ಶಾಸ್ತ್ರಿ, ರಫಿ ಅಹಮದ್ ಕಿದ್ವಾಯಿ, ಸ್ವರ್ಣಸಿಂಗ್ ಮತ್ತು ಬಿ. ಶಿವರಾಯರು ಹೊಸಸಂಪುಟದಲ್ಲಿರುವರೆಂದೂ ಹೇಳಲಾಗಿದೆ.

ಶ್ರೀ ಶಿವರಾಯರಿಗೆ ಪ್ರಕಾಶ ಮತ್ತು ಪ್ರಚಾರ ಶಾಖೆಯನ್ನು, ಎಂ|| ರಫಿ ಅಹಮದ್ ಕಿದ್ವಾಯಿಯವರಿಗೆ ಆಹಾರಶಾಖೆಯನ್ನು ಕೊಡಲಾಗುವುದೆಂದು ತಿಳಿಯಬರುತ್ತದೆ.

ಈ ಸಂಜೆ ಮಂತ್ರಿಮಂಡಲದ ಸದಸ್ಯರ ಹೆಸರು ಹೊರಬಿದ್ದು ಎಲ್ಲರೂ ಪ್ರಮಾಣ ಸ್ವೀಕಾರಮಾಡುತ್ತಾರೆ.

† ಕಂದಾಯವನ್ನು ಧಾನ್ಯರೂಪದಲ್ಲಿ ಕೊಡಬೇಕೆಂದು ಹೈದರಾಬಾದ್ ಸರ್ಕಾರವು ಆಜ್ಞೆ ಹೊರಡಿಸಿದೆ.

ನ್ಯೂ ಅಪೇರ ಟಾಕೀಸ್

9—5—52 ರಿಂದ ಅಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

ಜೂಪಿಟರ್ಸ್‌ರವರ—

* ರಾಣಿ * (ತಮಿಳು)

ಪಾತ್ರ:—ಭಾನುಮತಿ ‡‡ ಬಾಲಚಂದರ್ ‡‡ ವಹಾಬ್ ಕಾಶ್ಮೀರಿ ‡‡

೮ ತಿಂಗಳಲ್ಲಿ ೨೫೦೦ ಮೈಲಿಗಳ ಕಾಲ್ನಡಿಗೆ ಪ್ರವಾಸ

ಕಳೆದ ೮ ತಿಂಗಳ ಅವಧಿಯಲ್ಲಿ ಎಳೆಯ ವಯಸ್ಸಿನ ಒಬ್ಬ ಹುಡುಗ ಮತ್ತು ಒಬ್ಬ ಹುಡುಗಿಯು ೨೫೦೦ ಮೈಲಿ ದೂರವನ್ನು ನಡೆದಿರುತ್ತಾರೆ. ಗೌತಮ್‌ಬಜಾಜ್ ಮತ್ತು ಮೃದುಳಾ ಎಂಬ ೧೩ ವರ್ಷ ವಯಸ್ಸಿನ ಇವರೀರ್ವರೂ ಆಚಾರ್ಯ ವಿನೋಬಾ ಭಾವೆಯವರ ಭೂದಾನಯಜ್ಞ ನಿಯೋಗದ ಸದಸ್ಯರಾಗಿ ದೇಶದಲ್ಲೆಲ್ಲ ಸಂಚರಿಸುತ್ತಿದ್ದಾರೆ.

ಇವರ ಪೈಕಿ ಗೌತಮ್‌'ಬಜಾಜ್' ಎಂಬ ಬಾಲಕನು ದಿವಂಗತ ಜಮ್ನಾಲಾಲ್ ಬಜಾಜರ ಮೊಮ್ಮಗನು. ಮೃದುಳಾ ವಿನೋಬಾರವರ ಕಾರ್ಯದರ್ಶಿ, ಶ್ರೀ ದಾಮೋಧರದಾಸರ ಪುತ್ರಿ. ಆಚಾರ್ಯ ವಿನೋಬಾ ಭಾವೆಯವರ ಹೈದರಾಬಾದ್ ಪ್ರವಾಸದ ಕಾಲದಲ್ಲಿ ಮೃದುಳಾ ಅವರ ಜೊತೆಯಲ್ಲಿ ಪ್ರವಾಸ ಮಾಡಿದಳು. ಆಗ ಆಕೆ ೧೨೦೦ ಮೈಲಿ ಕಾಲುನಡಿಗೆ ಪ್ರವಾಸಮಾಡಿದ್ದಳು.

ಪೇಟೆ ಧಾರಣೆ

ಮೈಸೂರು: ತಾ|| 12-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		12-10	18-4
ಹೊಂಗೆಬೀಜ	,,	8-0	12-8
ಹುರುಳಿ	,,	32-4	33-12
ಸೀಗೆಕಾಯಿ	,,	3-2	—
ಮೆ. ಕಾಯಿ ಮಣಕ್ಕೆ		7-8	15-6
ಹುಣಸೇಹಣ್ಣು	,,	2-2	6-3
ತೆಂಗಿನಕಾಯಿ	1100ಕ್ಕೆ	124	186

ಚಿನ್ನ ಬೆಳ್ಳಿ ದರಗಳು

12-5-52	ರೂ.
ಸವರನ್	66-6
,,	66-8
ಚಿನ್ನ ತೊಲ	94-0
,, ಮೂಸ	93-3
ಬೆಳ್ಳಿ 100 ತೊಲ	170-0
,, ತೊಲ	1-12

ವುಡ್ ಲ್ಯಾಂಡ್ಸ್

9—5—52ನೇ ಶುಕ್ರವಾರದಿಂದ
ಅಮೋಘ 2ನೇ ವಾರ
ದಿನವಹಿ 3 ಆಟಗಳು
" ಲಕ್ಷ್ಮೀ ನಾರಾಯಣ್ "
(ಹಿಂದಿ)
ಪಾತ್ರ:—ಮೀನಾಕುಮಾರಿ
ಮಹಿಪಾಲ್

ಫೋನ್ ೫೭೪ (೮೦೫) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೪ ೫—೧೯೫೨ನೇ ಬುಧವಾರ [ಸಂಚಿಕೆ 47

ಹೊಸ ಮಂತ್ರಿಮಂಡಲದ ಅಧಿಕಾರ ಸ್ವೀಕಾರ

ಮಂತ್ರಿಮಂಡಲದಲ್ಲಿ ೫ ಜನ ಹೊಸ ಮಂತ್ರಿಗಳಿರುವರು

ನಿನ್ನೆ ಸಂಜೆ ೬ ಗಂಟೆ ಸಮಯದಲ್ಲಿ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರ ಸಮ್ಮುಖದಲ್ಲಿ ಕೇಂದ್ರ ಹೊಸಮಂತ್ರಿಮಂಡಲವು ಪ್ರಮಾಣವಚನ ಸ್ವೀಕಾರಮಾಡಿತು. ಹೊಸ ಮಂತ್ರಿಮಂಡಲದಲ್ಲಿ ೧೫ ಕ್ಯಾಬಿನೆಟ್ ಮಂತ್ರಿಗಳು, ೪ ಜನ ಕ್ಯಾಬಿನೆಟ್ ಸ್ಥಾನವಿದ್ದು ಅದರಲ್ಲಿ ಸದಸ್ಯತ್ವವಿಲ್ಲದಿರುವ ಮಂತ್ರಿಗಳು, ೨ ಉಪಮಂತ್ರಿಗಳು ಇರುವರು.

ಮಂತ್ರಿಮಂಡಲದಲ್ಲಿರುವವರು:–

ಶ್ರೀಗಳಾದ

ನೆಹರೂ	ವಿದೇಶಾಂಗ-
ಮೌಲಾನಾ ಆಜಾದ್	ವಿದ್ಯಾ, ನೈಸರ್ಗಿಕ-
ಎನ್. ಜಿ. ಅಯ್ಯಂಗಾರ್	ರಕ್ಷಣೆ-
ಸಿ. ಡಿ. ದೇಶಮುಖ್	ಆರ್ಥಿಕ-
ರಫಿ ಅಹಮದ್‌ಕಿದ್ವಾಯಿ	ಆಹಾರ-
ಲಾಲ್‌ಬಹದೂರ್‌ಶಾಸ್ತ್ರಿ	ರೈಲ್ವೆ ಮತ್ತು ರವಾನೆ-
ಕೈಲಾಸನಾಥಕಟ್ಜು	ಗೃಹ ಮತ್ತು ಸಂಸ್ಥಾನ-
ಜಗ್‌ಜೀವನರಾಂ,	ಸಂಪರ್ಕ-
ಗುಲ್ಜಾರಿಲಾಲ್‌ನಂದ	ಪ್ರಣಾಳಿಕ ಮತ್ತು ನದೀಕಣಿವೆ ಯೋಜನೆ ಶಾಖೆ-
ಟಿ. ಟಿ. ಕೃಷ್ಣಮಾಚಾರಿ	ವಾಣಿಜ್ಯ ಮತ್ತು ಕೈಗಾರಿಕೆ-
ಸಿ. ಸಿ. ಬಿಸ್ವಾಸ್	ನ್ಯಾಯ ಮತ್ತು ಅಲ್ಪಸಂಖ್ಯಾತ-
ಶ್ರೀಮತಿ ರಾಜಕುಮಾರಿ ಅಮೃತಕೌರ್	ಸಾರ್ವಜನಿಕ ಆರೋಗ್ಯ
ಸರ್ದಾರ್ ಸ್ವರ್ಣಸಿಂಗ್	ನಿರ್ಮಾಣ ಮತ್ತು ಸರಬರಾಜು-
ವಿ. ವಿ. ಗಿರಿ	ಕಾರ್ಮಿಕ-
ಕೆ. ಸಿ. ರೆಡ್ಡಿ	ಉತ್ಪಾದನೆ

ಕ್ಯಾಬಿನೆಟ್ ಸ್ಥಾನವಿರುವವರು

ಎ. ಪಿ. ಜೈನ್	ಪುನರ್ವ್ಯವಸ್ಥೆ
ಸತ್ಯನಾರಾಯಣಸಿನ್ಹ	ಪಾರ್ಲಿಮೆಂಟರಿ ಶಾಖೆ-
ಬಿ. ವಿ. ಕೇಸ್ಕರ್	ಸಮಾಚಾರ ಮತ್ತು ಪ್ರಸಾರ-
ಮಹಾವೀರತ್ಯಾಗಿ	ಅರ್ಥ ಶಾಖೆ.

ಉಪ ಮಂತ್ರಿಗಳು

ಬಿ. ಪಿ. ಕರಮಾರಕರ್
ಸುರೇಂದ್ರನಾಥ್.

ಶ್ರೀ ಕೆ. ಸಿ. ರೆಡ್ಡಿ ಉತ್ಪಾದನಾ ಶಾಖಾ ಸಚಿವರು

ಬೆಂಗಳೂರು ಮೇ ೧೫

ಮೈಸೂರು ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಕೇಂದ್ರ ಸರ್ಕಾರದ ಉತ್ಪಾದನಾ ಶಾಖಾ ಸಚಿವರಾಗಿ ನೇಮಕವಾಗಿದ್ದಾರೆ.

ನಿನ್ನೆಬೆಳಗ್ಗೆ ಪ್ರಧಾನಿ ನೆಹರೂರವರಿಂದ ಶ್ರೀ ರೆಡ್ಡಿಯವರಿಗೆ ತಂತೀ ಮೂಲಕ ದೆಹಲಿಗೆ ಬರಲು ಆಹ್ವಾನ ಬಂದಿತು. ಅವರು ಕೂಡಲೇ ವಿಮಾನದಲ್ಲಿ ದೆಹಲಿಗೆ ತೆರಳಿದರು. ಶ್ರೀ ರೆಡ್ಡಿಯವರು ಈ ದಿನ ಪ್ರಮಾಣವಚನ ಸ್ವೀಕಾರ ಮಾಡುವ ನಿರೀಕ್ಷೆಯಿದೆ.

ಶ್ರೀಮನ್ಮಹಾರಾಜರ ಆಪ್ತ ಕಾರ್ಯದರ್ಶಿ

ಬೆಂಗಳೂರು ಮೇ ೧೩

ಸ್ಪೆಷಲ್ ಡ್ಯೂಟಿ ಮೇಲಿರುವ ಶ್ರೀ ಕೆ. ಶೇಷಗಿರಿರಾಯರನ್ನು ಶ್ರೀ, ಮನ್ಮಹಾರಾಜರ ಆಪ್ತಕಾರ್ಯದರ್ಶಿಯಾಗಿ ನೇಮಕ ಮಾಡಲಾಗುವುದೆಂದು ಹೇಳಲಾಗಿದೆ.

ವಿದ್ಯಾ ಇಲಾಖಾ ಮುಖ್ಯಾಧಿಕಾರಿ

ರಜದ ಮೇಲಿರುವ ಶ್ರೀ ಎನ್. ಮಾಧವರಾಯರನ್ನು ನಿವೃತ್ತರಾಗಲಿರುವ ವಿದ್ಯಾ ಇಲಾಖಾ ಮುಖ್ಯಾಧಿಕಾರಿ ಶ್ರೀ ಗುರುದತ್‌ರವರ ಸ್ಥಾನದಲ್ಲಿ ನೇಮಿಸಲಾಗುವುದೆಂದು ಗೊತ್ತಾಗಿದೆ.

ಆಹಾರ ಬೆಲೆ ಇಳಿತಾಯಕ್ಕೆ ಪಾರ್ಲಿಮೆಂಟ್ ಮುಂದೆ ಪ್ರದರ್ಶನ

ನಿನ್ನೆಯದಿನ ಪಾರ್ಲಿಮೆಂಟ್ ಭವನದ ಮುಂದೆ ಕಮ್ಯೂನಿಸ್ಟ್, ಸೋಷಲಿಸ್ಟ್ ಮತ್ತಿತರ ಪಕ್ಷದವರು ಆಹಾರ ವಸ್ತುಗಳ ಬೆಲೆಯನ್ನು ಇಳಿಸಬೇಕೆಂದು ಕೋರಿ ಶಾಂತರೀತಿಯಲ್ಲಿ ಒಂದು ಪ್ರದರ್ಶನವನ್ನು ಸುಮಾರು ಒಂದೂವರೆ ಗಂಟೆ ಕಾಲ ನಡೆಸಿದರು.

ಪ್ರದರ್ಶನಗಾರರನ್ನುದ್ದೇಶಿಸಿ ಪಾರ್ಲಿಮೆಂಟ್ ಸದಸ್ಯ ಕಮ್ಯೂನಿಸ್ಟ್ ಪಕ್ಷದ ಶ್ರೀ ಎ. ಕೆ. ಗೋಪಾಲನ್‌ರವರು ಹಿತನುಡಿ ನುಡಿದರು.

ಜಿಲ್ಲಾಧಿಕಾರಿಗಳ ವರ್ಗಾವರ್ಗಿ

ಬೆಂಗಳೂರು ಮೇ ೧೩

ಜಿಲ್ಲಾಧಿಕಾರಿಗಳ ವರ್ಗಾವರ್ಗಿಯನ್ನು ಈ ರೀತಿ ಮಾಡಲಾಗಿದೆ—

ಸ್ಥಳೀಯಸಂಸ್ಥೆ ಕಾರ್ಯದರ್ಶಿ ಶ್ರೀ ಕೆ. ಬಾಲಸುಬ್ರಹ್ಮಣ್ಯಂ ಹಾಸನದ ಜಿಲ್ಲಾಧಿಕಾರಿಗಳಾಗಿ, ರಸ್ತೆ ಸಂಚಾರದ ಜನರಲ್ ಮ್ಯಾನೇಜರ್ ಜ|| ಎ. ಎಸ್. ಖಲೀಲ್‌ರವರು ಸ್ಥಳೀಯ ಸಂಸ್ಥೆ ಕಾರ್ಯದರ್ಶಿ, ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಾದ ಶ್ರೀ ಕೆ. ಎನ್. ಅನಂತರಾಮಯ್ಯ ರಸ್ತೆ ಸಂಚಾರದ ಜ|| ಮ್ಯಾನೇಜರ್, ಶ್ರೀ ಸಫಿ ದಾರಾಷಾ ಚಿಕ್ಕಮಗಳೂರು ಜಿಲ್ಲಾಧಿಕಾರಿ, ಬೆಂಗಳೂರಿನ ಪೌರಸಭಾ ಕಮೀಷನರ್ ಎನ್. ಎಸ್. ಹಿರಣ್ಣಯ್ಯ ಆಹಾರ ಇಲಾಖಾ ಡೈರೆಕ್ಟರ್, ತುಮಕೂರು ಜಿಲ್ಲಾಧಿಕಾರಿ ಜ|| ಅಬೂಬೇಕರ್ ಬೆಂಗಳೂರು ಪೌರಸಭಾ ಕಮೀಷನರ್, ರೆವಿನ್ಯೂ ಕಾರ್ಯದರ್ಶಿ ಶ್ರೀ ಬಿ. ಟಿ. ಕೆಂಪಣ್ಣ ತುಮಕೂರು ಜಿಲ್ಲಾಧಿಕಾರಿ, ಮೈಸೂರು ಪೌರಸಭಾ ಕಮೀಷನರ್ ಶ್ರೀ ಎಂ. ಎಸ್. ಸ್ವಾಮಿನಾಥನ್ ರೆವಿನ್ಯೂ ಕಾರ್ಯದರ್ಶಿ, ಮೈಸೂರು ಸಬ್ ಡಿವಿಜನ್ ಅಧಿಕಾರಿಗಳಾದ ಜ|| ಎಸ್. ಎಂ. ಅಬ್ದುಲ್ ರಹೀಂ ಮೈಸೂರು ಪೌರಸಭಾ ಕಮೀಷನರ್, ಶ್ರೀ ಬಿ. ಬೀರಪ್ಪ ಮಂಡ್ಯದ ಜಿಲ್ಲಾಧಿಕಾರಿ.

ಕೈಗಾರಿಕಾ ಇಲಾಖಾ ಡೈರೆಕ್ಟರ್

ಶ್ರೀ ಜೆ ಬಿ ಮಲ್ಲಾರಾಧ್ಯರು ವಾಣಿಜ್ಯ ಮತ್ತು ಕೈಗಾರಿಕಾ ಶಾಖಾ ಡೈರೆಕ್ಟರಾಗುವರೆಂದು ಹೇಳಲಾಗಿದೆ.

೨೦ ರಷ್ಟು ವಿದ್ಯುಚ್ಛಕ್ತಿ ಖೋತಾ

ಮೇ ೧೫ನೇ ತಾ|| ನಿಂದ ಶಿವನಸಮುದ್ರ ಮತ್ತು ಶಿಂಷಾದಿಂದ ಸರಬರಾಜಾಗುತ್ತಿರುವ ವಿದ್ಯುಚ್ಛಕ್ತಿಯಲ್ಲಿ ಶೇ|| ೨೦ ರಷ್ಟನ್ನು ಖೋತಾ ಮಾಡಲಾಗುವುದು.

ಸತ್ಕಾರಕೂಟ

ಡಾ|| ರಾಜೇಂದ್ರಪ್ರಸಾದ್‌ರವರು ನಿನ್ನೆ ಸಂಜೆ ಹೊಸ ಮಂತ್ರಿಗಳ ಮತ್ತು ಶಾಸನ ಸಭಾಸದಸ್ಯರ ಗೌರವಾರ್ಥವಾಗಿ ಒಂದು ಸತ್ಕಾರಕೂಟವನ್ನೇರ್ಪಡಿಸಿದ್ದರು.

ಸತ್ಕಾರಕೂಟಕ್ಕೆ ಉನ್ನತಾಧಿಕಾರಿಗಳು ವಿದೇಶೀ ರಾಯಭಾರಿಗಳು ಮುಂತಾದವರು ಆಗಮಿಸಿದ್ದರು.

ಸಂತಾಪಸೂಚಕ ನಿರ್ಣಯ

ನಿನ್ನೆ ಮದ್ರಾಸ್ ಶಾಸನಸಭೆಯಲ್ಲಿ ಶ್ರೀ ರಾಜಗೋಪಾಲಚಾರಿಯವರು ಡಾ|| ಯು. ರಾಮರಾವ್‌ರವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವೊಂದನ್ನು ತಂದರು. ಸಭೆಯು ಅಂಗೀಕರಿಸಿತು.

ಪಂಡಿತ ನೆಹರೂ ಭಾಷಣ ಮುಂದುವರೆಯಿತು

ಈದಿನ ರಾತ್ರಿ ೮-೩೦ ಗಂಟೆಗೆ ಪ್ರಧಾನಿ ನೆಹರೂರವರು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಬೇಕಾಗಿದ್ದುದು ಮುಂದುವರಿಸಲಾಗಿದೆಯೆಂದು ಗೊತ್ತಾಗಿದೆ.

ಗೋಧಿಯ ಬೆಲೆ

ಪಾಕಿಸ್ಥಾನದಲ್ಲಿ ಗೋಧಿಯ ಬೆಲೆಯು ಮಣ ಒಂದಕ್ಕೆ ರೂ ೧೧—೧—೦ ಯಂತೆ ಅಲ್ಲಿಯ ಸರ್ಕಾರವು ನಿರ್ಧರಿಸಿದೆ.

ಪಾರ್ಲಿಮೆಂಟ್ ಸ್ಪೀಕರು

ನಾಳೆಯದಿನ ಪಾರ್ಲಿಮೆಂಟಿನ ಸ್ಪೀಕರರ ಚುನಾವಣೆಯು ನಡೆಯಲಿದೆ. ಈಗ ಸ್ಪೀಕರರಾಗಿರುವ ಶ್ರೀ ಜಿ. ವಿ. ಮಾವಲಂಕರ್‌ರವರೇ ಮುಂದೆಯೂ ಸ್ಪೀಕರಾಗಿರುವಂತೆ ಪಂಡಿತ ನೆಹರೂರವರು ಅವರ ಹೆಸರನ್ನು ಸೂಚಿಸುವರು. ಶ್ರೀ ಸತ್ಯನಾರಾಯಣಸಿನ್ಹರವರು ಅನುಮೋದಿಸುವರೆಂದು ಗೊತ್ತಾಗಿದೆ.

ವುಡ್ ಲ್ಯಾಂಡ್ಸ್

9—5—52ನೇ ಶುಕ್ರವಾರದಿಂದ
ಅಮೋಘ 2ನೇ ವಾರ
ದಿನವಹಿ 3 ಆಟಗಳು
" ಲಕ್ಷ್ಮೀ ನಾರಾಯಣ್ "
(ಹಿಂದಿ)
ಪಾತ್ರ:—ಮೀನಾಕುಮಾರಿ
ಮಹಿಪಾಲ್

ರಾಷ್ಟ್ರಾಧ್ಯಕ್ಷರ ಅಧಿಕಾರ ಸ್ವೀಕಾರ

ನೂತನ ರಾಜ್ಯಾಂಗವು ಜಾರಿಗೆ ಬಂದು ವಯಸ್ಕರ ಮತದಾನ ಪದ್ಧತಿಯ ಪ್ರಕಾರ ದೇಶಾದ್ಯಂತ ಮಹಾಚುನಾವಣೆಗಳು ನಡೆದು, ಕೇಂದ್ರ ಮತ್ತು ಪ್ರಾಂತ್ಯ ಶಾಸನಸಭೆಗಳು ರಚಿತವಾದನಂತರ ಭಾರತ ರಾಷ್ಟ್ರಾಧ್ಯಕ್ಷರ ಮತ್ತು ಉಪರಾಷ್ಟ್ರಾಧ್ಯಕ್ಷರ ಚುನಾವಣೆಗಳು ನಡೆದು, ನಿನ್ನೆಯದಿನ ನೂತನ ರಾಷ್ಟ್ರಾಧ್ಯಕ್ಷ ಮತ್ತು ಉಪರಾಷ್ಟ್ರಾಧ್ಯಕ್ಷರುಗಳು ಪ್ರಮಾಣ ಸ್ವೀಕಾರ ಮಾಡಿ ತಮ್ಮ ನೂತನ ಅಧಿಕಾರವನ್ನು ವಹಿಸಿಕೊಂಡರು.

ನವದೆಹಲಿಯಲ್ಲಿ ನಿನ್ನೆ ಭಾರತ ಚರಿತ್ರೆಯಲ್ಲಿ ಅತ್ಯಂತ ವೈಭವಯುತವಾದ ಸಮಾರಂಭಗಳು ನಡೆದುವು.

ಬೆಳಗ್ಗೆ ಎದ್ದೊಡನೆಯೇ ಬಾಬು ರಾಜೇಂದ್ರ ಪ್ರಸಾದ್ ಮತ್ತಿತರು ಮಹಾತ್ಮರ ಸಮಾಧಿಗೆ ಭೇಟಿಯಿತ್ತು, ಪುಷ್ಪಗಳನ್ನು ಅರ್ಪಿಸಿ ಬಂದರು.

ಸುಮಾರು ೮-೧೫ ವೇಳೆಗೆ ರಾಷ್ಟ್ರಾಧ್ಯಕ್ಷರು ಸಮಸ್ತ ಗೌರವಗಳೊಡನೆ ೬ ಕುದುರೆಗಳನ್ನು ಕಟ್ಟಿದ ಗಾಡಿಯಲ್ಲಿ ತಮ್ಮ ಅಂಗರಕ್ಷಕರೊಡನೆ ಮೆರವಣಿಗೆಯಲ್ಲಿ ಪಾರ್ಲಿಮೆಂಟು ಭವನಕ್ಕೆ ರಾಷ್ಟ್ರ ಭವನದಿಂದ ಆಗಮಿಸಿದರು. ದಾರಿಯುದ್ದಕ್ಕೂ ಸಹಸ್ರಾರು ಜನರು ಸೇರಿ ಹರ್ಷೋದ್ಗಾರಗಳನ್ನು ಮಾಡುತ್ತಾ, ವೈಭವದಿಂದ ಕೂಡಿದ್ದರು ಸೈನ್ಯ ದಳದವರೂ ಸಹ ರಸ್ತೆಯ ಇಕ್ಕೆಡೆಯಲ್ಲಿಯೂ ಇದ್ದರು.

ಡಾ|| ರಾಜೇಂದ್ರ ಪ್ರಸಾದರು ಪಾರ್ಲಿಮೆಂಟು ಭವನಕ್ಕೆ ಬಂದೊಡನೆಯೇ ಸೈನ್ಯದವರು ಗೌರವವಂದನೆಯನ್ನು ಸಲ್ಲಿಸಿದರು. ಪ್ರಧಾನಿ ನೆಹರೂ, ಪಾರ್ಲಿಮೆಂಟ್ ಸ್ಪೀಕರು ಉನ್ನತಾಧಿಕಾರಿಗಳು ಅಧ್ಯಕ್ಷರನ್ನು ಸ್ವಾಗತಿಸಿ ಅಧ್ಯಕ್ಷ ವೇದಿಕೆಗೆ ಕರೆದೊಯ್ದರು.

ಡಾ|| ರಾಜೇಂದ್ರ ಪ್ರಸಾದರು ಆಸನಾರೂಢರಾದೊಡನೆಯೇ ಅವರು ರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾದ ಎಲೆಕ್ಷನ್ ಕಮಿಷನ್ ಘೋಷಣೆಯನ್ನು ಗೃಹ ಕಾರ್ಯದರ್ಶಿ ಶ್ರೀ ಹೆಚ್. ವಿ. ಐಯ್ಯಂಗಾರ್‌ರವರು ಓದಿದರು.

ನಂತರ ಭಾರತ ಶ್ರೇಷ್ಠ ನ್ಯಾಯಾಧೀಶರಾದ ನ್ಯಾಯಮೂರ್ತಿ ಪತಂಜಲಿಶಾಸ್ತ್ರಿಯವರು ಡಾ|| ರಾಜೇಂದ್ರ ಪ್ರಸಾದರಿಗೆ ಪ್ರಮಾಣ ವಚನವನ್ನು ಹಿಂದಿ ಭಾಷೆಯಲ್ಲಿ ಉಪದೇಶಿಸಿದರು. ಈ ಸಮಾರಂಭವು ೮-೩೫ ಗಂಟೆಗೆ ನಡೆಯಿತು.

ನೂತನ ರಾಷ್ಟ್ರಾಧ್ಯಕ್ಷರು ಪ್ರಮಾಣ ಸ್ವೀಕರಿಸಿದೊಡನೆಯೇ ಪುಟ್ಟ ಭಾಷಣವನ್ನು ಮಾಡಿದರು ಅನಂತರ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರಿಗೆ ಪ್ರಮಾಣ ಉಪದೇಶವನ್ನು ಮಾಡಿದರು

೮-೪೫ ವೇಳೆಗೆ ಸಮಾರಂಭವು ಮುಕ್ತಾಯವಾಯಿತು.

ಮುಕ್ತಾಯವಾಗುವ ಮುನ್ನ ಡಾ|| ರಾಜೇಂದ್ರಪ್ರಸಾದ್‌ರವರು ಅಧಿಕಾರ ಸ್ವೀಕಾರ ಘೋಷಣೆಯನ್ನು ಭಾರತಾದ್ಯಂತ ಪ್ರಸಿದ್ಧಪಡಿಸಬೇಕೆಂಬ ಆಜ್ಞೆಯನ್ನಿತ್ತರು.

ಗಳಿಸಿದ ಸ್ವಾತಂತ್ರ್ಯ ಉಳಿಸಬೇಕು

ಭಾರತದ ಚರಿತ್ರೆಯಲ್ಲಿ ಹೊಸ ರಾಜ್ಯಾಂಗ ಪ್ರಕಾರ ರಾಷ್ಟ್ರಾಧ್ಯಕ್ಷರನ್ನಾಗಿ ೧೭ ಕೋಟಿ ಜನ ಚುನಾಯಿಸಿದ ಸದಸ್ಯರು, ಚುನಾಯಿಸಿರುವರು. ಅದಕ್ಕಾಗಿ ನಾನು ಅತ್ಯಂತ ಋಣಿಯಾಗಿದ್ದೇವೆ. ನಾವು ಗಳಿಸಿರುವ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬರುವುದು ನಮ್ಮೆಲ್ಲರ ಪ್ರಥಮಕರ್ತವ್ಯವಾಗಿದೆ. ನೂರಾರು ವರ್ಷಗಳಿಂದ ಹೋರಾಡಿ ಸ್ವಾತಂತ್ರ್ಯಗಳಿಸಿದ್ದೇವೆ. ಈ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದು ಜಾತಿ, ಮತ, ಹಿರಿಯ, ಕಿರಿಯ ಎಂಬ ಬೇಧಭಾವವಿಲ್ಲದೆ ಸಮಾನತೆಯಿಂದ ಎಲ್ಲರನ್ನೂ ಕಾಣುವುದು ನನ್ನ ಕರ್ತವ್ಯವಾಗಿದೆ. ವಿಶ್ವದಾದ್ಯಂತ ಎಲ್ಲಾ ರಾಷ್ಟ್ರಗಳೊಡನೆ ಸ್ನೇಹಭಾವದಿಂದ ನಡೆದು ಎಲ್ಲರ ಸಹಕಾರವನ್ನು ಪಡೆಯಬೇಕಾಗಿದೆ. ಈ ಕರ್ತವ್ಯವನ್ನೆಲ್ಲಾ ನಾನು ನಡೆಸಲು ದೇವರು ನನಗೆ ಬುದ್ಧಿ ಮತ್ತು ದೇಹಶಕ್ತಿಯನ್ನು ಕೊಡಲೆಂದು ನೂತನ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್‌ರವರು ಪ್ರಮಾಣ ಸ್ವೀಕಾರದನಂತರ ಮಾಡಿದ ತಮ್ಮ ಭಾಷಣದಲ್ಲಿ ತಿಳಿಸಿದರು.

ನೂತನ ಮಂತ್ರಿಮಂಡಲ

ರಾಷ್ಟ್ರಾಧ್ಯಕ್ಷರ ಆಹ್ವಾನವನ್ನು ಸ್ವೀಕರಿಸಿ ಪಂ|| ನೆಹರೂ ತಮ್ಮ ಹೊಸ ಮಂತ್ರಿಮಂಡಲ ಸದಸ್ಯರ ಪಟ್ಟಿಯನ್ನು ಒಪ್ಪಿಸಿದರು.

ಸಂಜೆ ೬ ಗಂಟೆಗೆ ಹೊಸ ಮಂತ್ರಿಗಳು ಪ್ರಮಾಣ ಸ್ವೀಕಾರ ಮಾಡಿ ಅಧಿಕಾರ ವಹಿಸಿಕೊಂಡರು.

ರಾಜೀನಾಮೆ

ಪ್ರಧಾನಿ ಪಂ|| ನೆಹರೂರವರು ನಿನ್ನೆ ಬೆಳಗ್ಗೆ ೧೦ ಗಂಟೆ ವೇಳೆಗೆ ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ನೂತನ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರಿಗೆ ಒಪ್ಪಿಸಿದರು

ಪಾರ್ಲಿಮೆಂಟಿನಲ್ಲಿ ಅಧಿಕ ಸಂಖ್ಯೆ ಬಲವಿರುವ ಕಾಂಗ್ರೆಸ್ ಪಕ್ಷದ ನಾಯಕರಾಗಿ ಪುನಃ ಪಂ|| ನೆಹರೂರವರೇ ಚುನಾಯಿತರಾಗಿರುವುದರಿಂದ ಪ್ರಧಾನಿ ಸ್ಥಾನವನ್ನು ಸ್ವೀಕರಿಸಿ ಹೊಸ ಮಂತ್ರಿಮಂಡಲವನ್ನು ರಚಿಸುವಂತೆ ಅಧ್ಯಕ್ಷರು ಪಂ|| ನೆಹರೂರವರಿಗೆ ಆದೇಶವನ್ನಿತ್ತರು.

ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ

ಬೆಂಗಳೂರು ಮೇ ೧೩

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಆರಿಸಲು ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಸಭೆಯು ಮೇ ೩೧ ರಂದು ಬೆಂಗಳೂರಿನ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದೆಂದು ಕಾಂಗ್ರೆಸ್ ಕಛೇರಿಯ ಪ್ರಕಟಣೆಯು ತಿಳಿಸುತ್ತದೆ.

ಸಭೆಯು ಅಂದು ಮಧ್ಯಾಹ್ನ ೩ ಗಂಟೆಗೆ ನಡೆಯುವುದು.

ಎ. ಐ. ಸಿ. ಸಿ. ಕಛೇರಿಯ ಸರ್ಕ್ಯುಲರ್‌ನಂತೆ ಈ ಚುನಾವಣೆ ನಡೆಯುವುದು.

ಪ್ರಧಾನ ಕಾರ್ಯದರ್ಶಿಗಳು ಮಂತ್ರಿಯಾಗಿರುವವರಾರೂ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರಾಗುವ ಹಾಗಿಲ್ಲವೆಂಬ ಅಂಶದತ್ತ ಗಮನ ಸೆಳೆದು ನಾಮಕರಣ ಪ್ರತಿಗಳು ಮೇ ೨೬ನೇ ತಾರೀಖು ಸಂಜೆ ಐದು ಗಂಟೆಯೊಳಗೆ ತಮಗೆ ತಲುಪಬೇಕೆಂದು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಪತ್ರಿಕೋದ್ಯಮಿಗಳ ಫೆಡರೇಷನ್

ಪತ್ರಿಕಾ ಮತ್ತು ಪತ್ರಿಕೋದ್ಯಮಿಗಳ ಸ್ವಾತಂತ್ರ್ಯವನ್ನು ಕಾಪಾಡುವುದೇ ಹೊಸದಾಗಿ ಸ್ಥಾಪಿತವಾಗಿರುವ ಅಂತರರಾಷ್ಟ್ರೀಯ ಪತ್ರಿಕೋದ್ಯಮಿಗಳು ಫೆಡರೇಷನ್ನಿನ ಉದ್ದೇಶ.

೧೭ ದೇಶದ ಪ್ರತಿನಿಧಿಗಳು ಸೇರಿ ಈ ಸಂಘವನ್ನು ಪುನಃ ಸ್ಥಾಪಿಸಿದರು. ಈ ಹೊಸ ಸಂಸ್ಥೆಯ ರಚನೆ ಮತ್ತು ಉದ್ದೇಶವನ್ನು ಒಪ್ಪಲಾಯಿತು.

೧೯೪೯ರಲ್ಲಿ ಇದು ಕಮ್ಯೂನಿಸ್ಟರ ಪ್ರಚಾರ ಸಂಸ್ಥೆಯೆಂದು, ಸಂಸ್ಥೆಯನ್ನು ಬಿಟ್ಟ ಮಿ|| ಆರ್ಚಿಬಾಲ್ಡ್ ಕೆನಿಯನ್ನರು ಪುನಃ ಈಗ ಭಾಗವಹಿಸಿದ್ದಾರೆ.

ಇದು ರಾಜಕೀಯ ಸಂಸ್ಥೆಯಲ್ಲ. ತಾತ್ವಿಕಭಿನ್ನಾಭಿಪ್ರಾಯಗಳನ್ನು ರಾಜಕೀಯ ದೃಷ್ಟಿಯಿಂದ ಚರ್ಚಿಸಲು ಇಲ್ಲಿ ಸಾಧ್ಯವಿಲ್ಲ. ಈ ಸಂಸ್ಥೆಯ ಮುಖ್ಯ ಉದ್ದೇಶಗಳು ಹೀಗಿವೆ.

(೧) ಪತ್ರಿಕಾ ಸ್ವಾತಂತ್ರ್ಯ, (೨) ಪತ್ರಿಕೋದ್ಯಮಿಗಳ ಹಿತರಕ್ಷಣೆ. (೩) ಅಂತರರಾಷ್ಟ್ರೀಯ ನಿಯಮಾವಳಿಯನ್ನು ರಚಿಸುವುದು. (೪) ಅಂತರ ಪ್ರಾದೇಶಿಕ ಸಂಘಗಳೊಂದಿಗೆ ಪರಸ್ಪರ ಸೌಹಾರ್ದತೆ (೫) ವೃತ್ತಿಯ ಶುದ್ಧಿಯನ್ನು ತೆಗೆಯುವುದು (೬) ಪತ್ರಿಕೋದ್ಯಮಿಗಳ ಸಮಸ್ಯೆ ಪರ್ಯಾಲೋಚನೆ.

ಪ್ರಕಾಶಕರು :—ಜೆ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಮೈಸೂರು ರಾಜಪ್ರಮುಖರಲ್ಲಿ ಪಾರ್ಲಿಮೆಂಟ್ ಸದಸ್ಯರ ಮನವಿ

ಕಾಶ್ಮೀರದಿಂದ ವಿಶೇಷ ವಿಮಾನದಲ್ಲಿ ಮೈಸೂರಿಗೆ ರಾಜಪ್ರಮುಖ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ಬರುವ ಹಾದಿಯಲ್ಲಿ ದೆಹಲಿಯಲ್ಲಿಳಿದಾಗ, ವಿಮಾನ ನಿಲ್ದಾಣದಲ್ಲಿ ಅವರನ್ನು ಮೈಸೂರಿನ ಪಾರ್ಲಿಮೆಂಟ್ ಸದಸ್ಯರುಗಳಾದ ಶ್ರೀ ಎಂ ವಿ ಕೃಷ್ಣಪ್ಪ, ಶ್ರೀ ಎಂ ಕೆ ಶಿವನಂಜಪ್ಪ ಮತ್ತು ರಾಜ್ಯಪರಿಷತ್ ಸದಸ್ಯ ಎಸ್ ಗೋವಿಂದರೆಡ್ಡಿಯವರುಗಳು ಭೇಟಿಮಾಡಿದರು. ರಾಜಪ್ರಮುಖರು ತಮ್ಮ ಕಾಶ್ಮೀರಪ್ರವಾಸದ ಅನುಭವಗಳನ್ನು ಮಾನ್ಯ ಸದಸ್ಯರುಗಳಿಗೆ ವಿವರಿಸಿದರು.

ಮೈಸೂರಿಗೆ ಹಿಂತಿರುಗಿದನಂತರ, ತೀವ್ರ ಆಹಾರ ಅಭಾವಕ್ಕೆ ಸಿಕ್ಕಿರುವ ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಿಗೆ ರಾಜಪ್ರಮುಖರು ಭೇಟಿ ಕೊಡಬೇಕೆಂದು ಸದಸ್ಯರುಗಳು ಮನವಿಮಾಡಿಕೊಂಡರು.

ಸದಸ್ಯರುಗಳೊಡನೆ ಉಪಹಾರ ಮತ್ತು ೧ ಗಂಟೆಯ ಚರ್ಚೆಯನಂತರ ರಾಜಪ್ರಮುಖರು ಬೆಂಗಳೂರಿಗೆ ತೆರಳಿದರು.

ಪೇಟೆ ಧಾರಣೆ

ಮೈಸೂರು ತಾ|| 13-5-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	11-4	17-4
ಹೊಂಗೆಬೀಜ ,,	11-12	—
ಹುರುಳಿ ,,	32-2	34-1
ಸೀಗೆಕಾಯಿ ,,	3-5	—
ಮೆ. ಕಾಯಿ ಮಣಕ್ಕೆ	8-14	16-6
ಹುಣಸೇಹಣ್ಣು ,,	3-4	3-9
ತೆಂಗಿನಕಾಯಿ 1100ಕ್ಕೆ	128	191

ಚಿನ್ನ ಬೆಳ್ಳಿ ದರಗಳು

13–5–52	ರೂ.
ಸವರನ್	66-6
,,	66-8
ಚಿನ್ನ ತೊಲ	94-0
,, ಮೂಸ	93-3
ಬೆಳ್ಳಿ 100 ತೊಲ	170-0
,, ತೊಲ	1-12

ರಣಜಿತ್
೯—೫—೫೨ರಿಂದ ಅಮೋಘ ೨ನೇ ವಾರ
ಹಂಲೋಗ್
ಪಾತ್ರ:-ನೂತನ್, ಶ್ಯಾಮ, ಸಜ್ಜನ್, ಬಾಲ್‌ರಾಜ್, ದುರ್ಗಾಕೋಟೆ.

ಅಕ್ಕಿ ಸೇರಿಗೆ ಒಂದಾಣೆ ಹೆಚ್ಚಿತು

ಜೋಳ, ಬಾಜ್ರಾ, ಅಕ್ಕಿ ಮತ್ತು ಗೋಧಿಗಳ ಮಾರಾಟದ ಬೆಲೆಯನ್ನು ಹೆಚ್ಚಿಸಬೇಕೆಂದು ಹೈದರಾಬಾದ್ ಸಂಪುಟ ನಿರ್ಧರಿಸಿದೆ ಎಲ್ಲಾ ಬಗೆಯ ಜೋಳಗಳ ಬೆಲೆಯನ್ನು ಸೇರಿಗೆ ೬ ಕಾಸೂ, ಬಾಜ್ರಾ ಸೇರಿಗೆ ಒಂದಾಣೆಯೂ, ದಪ್ಪ ಅಕ್ಕಿ ಮತ್ತು ಕಿಚಡಿ ಅಕ್ಕಿ ಸೇರಿಗೆ ೧ ಆಣೆಯೂ, ಗೋಧಿಯನ್ನು ಸೇರಿಗೆ ೦-೨-೮ ಯಷ್ಟೂ ಹೆಚ್ಚಿಸಬೇಕೆಂದೂ ನಿರ್ಧರಿಸಿದಾರೆಂದು ತಿಳಿದುಬಂದಿದೆ

ಯಾವ ಪ್ರಾಂತ್ಯಕ್ಕೂ ಕೆಂಪುಜೋಳಕ್ಕೆ ಸಬ್ಸಿಡಿ ಕೊಟ್ಟಿಲ್ಲ

ಯಾವ ಪ್ರಾಂತ್ಯಕ್ಕೂ ಕೆಂಪು ಜೋಳಕ್ಕಾಗಿ ಕೇಂದ್ರ ಸಬ್ಸಿಡಿ ಕೊಟ್ಟಿಲ್ಲ ಎಂದು ಕೇಂದ್ರ ಸರ್ಕಾರದ ಆಹಾರ ಸಚಿವ ಶಾಖೆಯ ಪ್ರಕಟಣೆ ತಿಳಿಸುತ್ತದೆ.

ಭಾರತಕ್ಕೆ ಅಮೇರಿಕದಿಂದ ಕೆಂಪು ಜೋಳ-ಗೋಧಿ

೯,೬೫೦ ಟನ್ ಕೆಂಪು ಜೋಳವನ್ನುಳ್ಳ ನೌಕೆಯೊಂದು ಅಮೇರಿಕದಿಂದ ಮೇ ೧೦ ರಂದು ಮದರಾಸ್ ಬಂದರಿಗೆ ಆಗಮಿಸಿತು.

ಮೇ ೧೮ ರಂದು, ೧೦,೯೯೫ ಟನ್‌ಗಳಷ್ಟು ಗೋಧಿಯನ್ನುಳ್ಳ ಮತ್ತೊಂದು ನೌಕೆಯೂ ಆಗಮಿಸಲಿದೆ.

ಸೇನಾಪತಿ ಬಾಪಟ್‌ರವರ ದಸ್ತಗಿರಿ

ಆಹಾರ ಧಾನ್ಯಗಳ ಬೆಲೆಯೇರಿಸಿದ್ದನ್ನು ಪ್ರತಿಭಟಿಸಲು ಸೋಲಾಪುರದಲ್ಲಿ ನಡೆಸುತ್ತಿರುವ ಸತ್ಯಾಗ್ರಹದಲ್ಲಿ ಸೇನಾಪತಿ ಬಾಪಟ್ ಮತ್ತು ಶ್ರೀಮತಿ ಮಾಲತೀಬಾಯಿ ಬೆಡೇಕರ್‌ರವರು ಇತರ ೧೭ ಮಂದಿಯೊಂದಿಗೆ ಸತ್ಯಾಗ್ರಹವನ್ನು ಪೂನಾದಲ್ಲಿ ನಡೆಸಿ ದಸ್ತಗಿರಿಯಾದರು. ಸೇನಾಪತಿ ಬಾಪಟ್‌ರವರಿಗೆ ಈಗ ೭೫ ವರ್ಷ ವಯಸ್ಸು.

'ನಾನು ಸತ್ಯಾಗ್ರಹದಲ್ಲಿ ಭಾಗಿಯಾಗಿರುವುದರಿಂದ ಸಬ್ಸಿಡಿಯನ್ನು ಪಡೆಯಲು ಮುಂಬೈ ಸರ್ಕಾರಕ್ಕೆ ಸಹಾಯಮಾಡಿದಂತೆ, ಎಂದು ಭಾವಿಸುತ್ತೇನೆ, ಏಕೆಂದರೆ ಇದು ಜನತೆಯ ಒತ್ತಾಯವೆಂದು ಭಾವಿಸಬೇಕು, ಸಬ್ಸಿಡಿ ದೊರಕದಿದ್ದಲ್ಲಿ ಮುಂಬೈ ಸರ್ಕಾರ ರಾಜೀನಾಮೆ ಕೊಡಬೇಕು' ಎಂದು ಕಾಂಗ್ರೆಸ್ ಪಕ್ಷದ ಬಾಪಟ್ ತಿಳಿಸಿದರು.

ಪ್ರಕಾಶಕರು :—ಜೆ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಕಾಂಗ್ರೆಸ್ ಸದಸ್ಯತ್ವ ಸಂಗ್ರಹ ವಾರ

ಮೈಸೂರು ಪ್ರಾದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಹನುಮಂತಯ್ಯನವರು ಒಂದು ಹೇಳಿಕೆ ಹೊರಡಿಸಿ, ೧೯೫೨ರ ಮೇ ೩೧ ರೊಳಗಾಗಿ ಅಧಿಕ ಸಂಖ್ಯೆಯಲ್ಲಿ ಪ್ರಾಥಮಿಕ ಸದಸ್ಯರನ್ನು ಕಾಂಗ್ರೆಸ್ಸಿಗೆ ಸಂಗ್ರಹಿಸಲು ಮೇ ೨೫ನೇ ತಾ|| ನಿಂದ ಮೇ ೩೧ನೇ ತಾ|| ನವರಿಗೆ 'ಕಾಂಗ್ರೆಸ್ ಸದಸ್ಯತ್ವ ಸಂಗ್ರಹ ವಾರ' ವನ್ನು ಆಚರಿಸಬೇಕೆಂದು ಕೋರಿದ್ದಾರೆ

ವ್ಯವಸಾಯ ಪ್ರೊಬೇಷನರ್

ಬೆಂಗಳೂರು ಮೇ ೧೪

ವ್ಯವಸಾಯ ಪ್ರೊಬೇಷನರ್ ಶ್ರೀ ಪಿ. ಬಸವಯ್ಯನವರನ್ನು ಚಿಕ್ಕಮಗಳೂರು ಸರ್ಕಲಿಗೂ, ಶ್ರೀ ಹೆಚ್. ಎ. ಪುಟ್ಟನಾಯಕ್‌ರನ್ನು ತುಮಕೂರು ಸರ್ಕಲ್‌ಗೂ ವರ್ಗಾಯಿಸಲಾಗಿದೆ

ಶಾಸನಸಭಾ ನಿರ್ಮಾಣ ಸಮಿತಿ

ಶಾಸನಸಭಾ ಭವನ ನಿರ್ಮಾಣ ಸಮಿತಿಯೊಂದನ್ನು ಸರ್ಕಾರ ರಚಿಸಿದೆ. ಅದರಲ್ಲಿ ಮೈಸೂರಿನ ಚೀಫ್ ಎಂಜನಿಯರುಗಳು, ಡಾ|| ಕ್ರುಂಬಿಗಲ್ ಮತ್ತು ಪ್ರೊ|| ರಾಮಚಂದ್ರರಾವ್ ಸದಸ್ಯರಾಗಿರುವರು

ಸೆಂಟ್ರಲ್ ಸರ್ವಿಸ್ ಪರೀಕ್ಷೆಯಲ್ಲಿ ಸ್ಥಾನ

ಕೇಂದ್ರ ಸರ್ಕಾರದವರು ಕಳೆದ ಸೆಪ್ಟಂಬರ್ ಮತ್ತು ಅಕ್ಟೋಬರ ಮಾಹೆಯಲ್ಲಿ ನಡೆಸಿದ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ ನಡೆಸಿದ ಸೆಂಟ್ರಲ್ ಸರ್ವಿಸ್ ಪರೀಕ್ಷೆಯಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ದಿವಂಗತ ಟಿ. ರಾಮಯ್ಯನವರ ಪುತ್ರ ಶ್ರೀ ಟಿ. ಆರ್. ರಮೇಶಚಂದ್ರನ್ ಮತ್ತು ವಿದ್ಯಾ ಇಲಾಖೆಯಲ್ಲಿರುವ ಶ್ರೀ ಕೃಷ್ಣಮೂರ್ತಿಯವರ ಪುತ್ರ ಶ್ರೀ ಎಂ. ಕೆ. ವೆಂಕಟೇಶ್ವರರವರು ೧೯೯ ಸ್ಥಾನಗಳಲ್ಲಿ ೫ನೇ ಮತ್ತು ೧೬ನೇ ಸ್ಥಾನಗಳಿಸಿದ್ದಾರೆ.

ದಾವಣಗೆರೆ ಎಂಜನಿಯರಿಂಗ್ ಕಾಲೇಜ್ ಪ್ರಿನ್ಸಿಪಾಲರಾಗಿ ನೇಮಕ

ಬೆಂಗಳೂರು ಮೇ ೧೪

ಚೀಫ್ ಎಂಜನಿಯರ್ ಪರ್ಸನಲ್ ಅಸಿಸ್ಟೆಂಟರಾಗಿ ಕೆಲಸ ಮಾಡುತ್ತಿರುವ ಶ್ರೀ ಶೇಷಪ್ಪನವರನ್ನು ದಾವಣಗೆರೆ ಎಂಜನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ನೇಮಿಸಲಾಗಿದೆ.

ಚಿನ್ನ ಬೆಳ್ಳಿ ದರಗಳು

14–5–52	ರೂ.
ಸವರನ್	66-4
,,	66-6
ಚಿನ್ನ ತೊಲ	95-2
,, ಮೂಸ	94-0
ಬೆಳ್ಳಿ 100 ತೊಲ	169-0
,, ತೊಲ	1-12

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

(ಸೀತಾವಿಲಾಸ ಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ನ್ಯೂ ಅಪೇರ ಟಾಕೀಸ್
16—5—52 ರಿಂದ
ಅಮೋಘವಾದ
2ನೇ ವಾರ
ಪ್ರತಿದಿನ 3 ಆಟಗಳು
ಜೂಪಿಟರ್ಸ್‌ರವರ—
* ರಾಣಿ *
(ತಮಿಳು)
ಪಾತ್ರ:— ‡ ಭಾನುಮತಿ ‡
‡ ಬಾಲಚಂದರ್ ‡
‡ ವಹಾಬ್ ಕಾಶ್ಮೀರಿ ‡

ಇಂಗ್ಲೀಷು ಕಲಿಸಕೂಡದು

೧೯೫೨ರ ಜುಲೈ ತಿಂಗಳಿಂದ ಮುನಿಸಿಪಲ್ ಶಾಲೆಗಳಲ್ಲಿ ಇಂಗ್ಲೀಷನ್ನು ಕಲಿಸಕೂಡದೆಂದು ಒರ್ರಾದಲ್ಲಿ ನಿರ್ಧರಿಸಲಾಗಿ -

ರಂಗೂನ್ ಕಾರ್ಪೋರೇಷನ್ನಿನ ಶಿಕ್ಷಣ ಸಮಿತಿಯು ಇಂಗ್ಲೀಷ್ ಕಲಿಸುವ ಉಪಾಧ್ಯಾಯರ ಸೇವೆಯನ್ನು ರದ್ದುಗೊಳಿಸಬೇಕೆಂದು ನಿರ್ಧರಿಸಿದೆ.

ನಗರಾಭಿವೃದ್ಧಿ ಸಮಿತಿ ಕಛೇರಿ ಮೈಸೂರು

ಮಾದರಿ ಮನೆಗಳ ಮಾರಾಟ

ಪ್ರಕಟಣೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ಮೈಸೂರು ಸಿಟಿ ಲಷ್ಕರ್ ಮೊಹಲ್ಲಾ ಫೋರ್ಬ್ಸ್‌ಟ್ರಾನ್ಸ್‌ಫಾರ್ಮರ್ ಹೌಸ್ ಪೂರ್ವ ದಿಕ್ಕಿನಲ್ಲಿ ಇರುವ ಕರುಣಾಪುರದ ಬಡಾವಣೆಯಲ್ಲಿ ಹೊಸದಾಗಿ ಕಟ್ಟಿರುವ ೨೬ ಮಾದರಿ ಮನೆಗಳ ಬಿಲೆ ಬಗ್ಗೆ ೨೬—೫—೫೨ನೇ ಸೋಮವಾರ ಮಧ್ಯಾಹ್ನ ೪ ಗಂಟೆ ವರೆವಿಗೆ ೨೫೦ ರೂಪಾಯಿಗಳ ಠೇವಣಿ ಸಮೇತ ಮೈಸೂರು ಸಿಟಿಯಲ್ಲಿ ಮನೆ ಅಥವಾ ಸೈಟುಗಳಿಲ್ಲದವರಿಂದ ವಿಧಾಯಕವಾದ ನಮೂನೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ. ಮನೆ ಮಂಜೂರಾಗದ ಅರ್ಜಿದಾರರಿಗೆ ಠೇವಣಿ ಮೊಬಲಗು ವಾಪಸು ಮಾಡಲಾಗುತ್ತದೆ. ಪ್ರತಿ ಮನೆಯ ಬೆಲೆ ಕೆಳಗೆ ವಿವರಿಸಿರುವಂತೆ ೪,೮೦೦ ರೂ ಲಾಗಾಯ್ತು ೫,೫೦೦ ರೂಪಾಯಿಗಳು, ಮಂಜೂರಾದ ಅರ್ಜಿದಾರರು ತಮಗೆ ತಿಳಿವಳಿಕೆ ಕೊಟ್ಟಲಾಗಾಯಿತು ಒಂದು ತಿಂಗಳಲ್ಲಿ ಪೂರ್ತಾ ಮೊಬಲಗು ಪಾವತಿ ಮಾಡಿ ಮನೆ ಸ್ವಾಧೀನ ಪಡೆಯತಕ್ಕದ್ದು ತಪ್ಪಿದಲ್ಲಿ ಠೇವಣಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಠೇವಣಿ ಇಲ್ಲದೆ ಬರುವ ಅರ್ಜಿಗಳಿಗೂ, ಗೊತ್ತಾದ ನಮೂನೆಯಲ್ಲಿಲ್ಲದ ಮತ್ತು ಈಗಾಗಲೇ ಬಂದಿರುವ ಅರ್ಜಿಗಳಿಗೂ ನಿಗಾ ಕೊಡಲಾಗುವುದಿಲ್ಲ ಹೆಚ್ಚಿಗೆ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

(ಸಹಿ) ಪಿ. ಗೋಪಾಲಕೃಷ್ಣಶೆಟ್ಟಿ,

ಅಧ್ಯಕ್ಷರು.

ಪಶ್ಚಿಮದ ಕಡೆಯ ೪ ಕೊನೆ ಮನೆಗಳು ತಲಾ.... ೪೯೦೦-೦-೦

ಪೂರ್ವದ ಕಡೆಯ ೪ ಕೊನೆ ಮನೆಗಳು ತಲಾ.... ೫೦೦೦-೦-೦

ಪಾರ್ಕ್ ಎದುರಿಗಿರುವ ಪೂರ್ವದ ಕಡೆ ಬಾಗಿಲಿನ ಮೂರು ಮನೆಗಳು ತಲಾ.... ೫೫೦೦-೦-೦

ಉಳಿದ ೧೬ ಮನೆಗಳು.... ೪೮೦೦-೦-೦

ಫೋನ್ ೫೭೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೫-೫-೧೯೫೨ನೇ ಗುರುವಾರ [ಸಂಚಿಕೆ ೨೫೪

ಪ್ರಾಂತ್ಯಗಳಿಗೆ ನೂತನ ಗೌರ್ನರುಗಳ ನೇಮಕ

ಶ್ರೀ ಸಂಪದ್ಗಿರಿರಾಯರು ಹಿರಿಯ ಶಾಸನಸಭಾ ಹಂಗಾಮಿ ಅಧ್ಯಕ್ಷರು

ಹಿರಿಯ ಶಾಸನಸಭೆಗೆ ನಾಮಕರಣಗಳು

ಸ್ವಂ. ಸು. ಬೆಂಗಳೂರು ೧೩

ಮೈಸೂರಿನ ರಾಜಪ್ರಮುಖರು ಸಂಸ್ಥಾನದ ಹಿರಿಯ ಶಾಸನಸಭೆಗೆ ಕೆಳಕಂಡವರನ್ನು ನಾಮಕರಣಮಾಡಿರುತ್ತಾರೆ—

ಸಂಗೀತ ವಿಭಾಗಕ್ಕೆ ಟಿ. ಚೌಡಯ್ಯ ಮತ್ತು ಶ್ರೀ ಜಿ. ಹೆಚ್. ವೀರಣ್ಣ, ಪತ್ರಿಕೋದ್ಯಮ; ಅಲ್ಲ್ಯಲ್ಲಾಂ ಪತ್ರಿಕೆಯ ಜ॥ ಗೌಸ್ ಮೊಹಿಯುದ್ದೀನ್, ವಿಜ್ಞಾನ ನಿವೃತ್ತ ಚೀಫ್ ಇಂಜನಿಯರ್ ಶ್ರೀ ಕೆ. ಆರ್ ಶೇಷಾಚಾರ್, ಸಾಹಿತ್ಯ; ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಹಕಾರ; ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿ, ಸಮಾಜಸೇವೆ ಮತ್ತು ಚಿತ್ರಕಲೆ; ರುಮಾಲೆ ಚನ್ನಬಸವಯ್ಯ, ಸಮಾಜಸೇವೆ ಶ್ರೀ ಸಿ.ಜಿದೆ ವನಾಥ.

ವಿದ್ಯುಚ್ಛಕ್ತಿಯ ಖೋತಾ ಇಲ್ಲ

ಬೆಂಗಳೂರು ಮೇ ೧೪

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ ಕೆಳಗಿಳಿದಿದೆ ಎಂಬ ಕಾರಣದಿಂದ ಶಿವನಸಮುದ್ರ ಮತ್ತು ಶಿಂಷಾಪುರದಿಂದ ಬರುವ ವಿದ್ಯುಚ್ಛಕ್ತಿ ಸಂಬರಾಜಿನಲ್ಲಿ ಶೇಕಡ ೨೦ ರಷ್ಟನ್ನು ಖೋತಾಮಾಡುವುದಾಗಿ ಸರಕಾರ ಪ್ರಕಟಿಸಿತ್ತಷ್ಟೆ. ಈಗ ಮಳೆ ಬಂದು ಕೃಷ್ಣರಾಜಸಾಗರದಲ್ಲಿ ನೀರಿನಮಟ್ಟವು ಹೆಚ್ಚಿರುವುದರಿಂದ ವಿದ್ಯುಚ್ಛಕ್ತಿ ಸಂಬರಾಜಿನ ಖೋತಾವನ್ನು ಮಾಡಬೇಕಾಗಿಲ್ಲವೆಂದು ಈದಿನ ತೀರ್ಮಾನಿಸಲಾಯಿತು.

ಯಾವ ಸ್ಥಾನವೂ ಬೇಡ

ಕೈಗಾರಿಕಾ ಮತ್ತು ವಾಣಿಜ್ಯ ಶಾಖಾ ಸಚಿವರಾಗಿದ್ದ ಹರೇಕೃಷ್ಣ ಮೆಹತಾಬ್‌ರವರಿಗೆ ತಮ್ಮ ಸ್ವಸ್ಥಾನವಾದ ಒರಿಸ್ಸಾದಲ್ಲಿ ಯಾವ ಸ್ಥಾನವನ್ನು ಕೊಡಲಿಲ್ಲವೆಂಬ ಅಸಮಧಾನದ ಮೇಲೆ ಕಾಂಗ್ರೆಸ್ ಕಾರ್‍ಯದರ್ಶಿಗಳಾಗಬೇಕೆಂದು ಶ್ರೀ ನೆಹರೂರವರ ಕೋರಿಕೆಯನ್ನು ತಿರಸ್ಕರಿಸಿ ಒರಿಸ್ಸಾದಲ್ಲಿ ತಮಗೆ ಸ್ಥಾನಕೊಡದಿರಲು ಪ್ರತಿಭಟಿಸಿರುವುದಾಗಿ ಹೇಳಲಾಗಿದೆ.

ರಕ್ಷಣಾಸಚಿವರಾಗಿದ್ದ ಸರ್ದಾರ್ ಬಲದೇವಸಿಂಗ್‌ರವರು ತಮಗೆ ಯಾವಸ್ಥಾನವೂ ಬೇಡ ತಮ್ಮ ತಂದೆಯವರೊಡನೆ ಸೇರಿ ವ್ಯಾಪಾರೋದ್ಯಮದಲ್ಲಿ ತೊಡಗಲಿಚ್ಛಿಸಿರುವುದಾಗಿ ಹೇಳಲಾಗಿದೆ

ಮರುವಸತಿ ಯೋಜನೆ

ಬೆಂಗಳೂರು ಮೇ ೧೪

ನಿವೃತ್ತರಾದ ಸೈನಿಕರ ಮರುವಸತಿಯ ಮೈಸೂರು ಸರ್ಕಾರದ ಯೋಜನೆಗೆ ಕೇಂದ್ರ ಸರ್ಕಾರವು ಅಂಗೀಕಾರವಿತ್ತಿದೆ

ಹುಣಸೂರಿನ ಬಳಿ ಸಹಕಾರ ಪದ್ಧತಿ ಪ್ರಕಾರ ವ್ಯವಸಾಯ, ಆಟೋರಿಕ್ಷಾ ನಡೆಸುವುದು ಮುಂತಾದ ನಾನಾ ಕಾರ್‍ಯಗಳು ಈ ಯೋಜನೆಯಲ್ಲಿ ಅಡಕವಾಗಿದೆ.

ಹೆಮ್ಮೆ ವಿಷಯ

ಮೈಸೂರು ಮಾಜಿ ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ಕೇಂದ್ರದ ಸಚಿವರನ್ನಾಗಿ ನೇಮಕ ಮಾಡಿರುವುದು ಬಿ ಭಾಗದ ಸಂಸ್ಥಾನಗಳಿಗೂ, ಮೈಸೂರಿಗೂ ಹೆಮ್ಮೆ ವಿಷಯವಾಗಿದೆಯೆಂದು ಮುಖ್ಯಮಂತ್ರಿ, ಶ್ರೀ ಕೆ. ಹನುಮಂತಯ್ಯನವರು ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತಾ ಹೇಳಿರುವರು.

ಹಂಗಾಮಿ ಅಧ್ಯಕ್ಷರು

ಖಾಯಂ ಆಗಿ ಅಧ್ಯಕ್ಷರನ್ನು ನೇಮಕ ಮಾಡಿಕೊಳ್ಳುವವರೆಗೆ ಹಿರಿಯ ಶಾಸನಸಭೆಗೆ ಶ್ರೀ ಕೆ. ಸಂಪದ್ಗಿರಿರಾಯರನ್ನು, ಕಿರಿಯ ಶಾಸನಸಭೆಗೆ ಶ್ರೀ ವಿ. ವೆಂಕಟಪ್ಪನವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ಶ್ರೀ ಮನ್ಮಹಾರಾಜರು ನೇಮಿಸಿದ್ದಾರೆ.

ಕೇಂದ್ರಮಂತ್ರಿತ್ವ ನಿರಾಕರಣೆ

ಭಾರತಸರ್ಕಾರದ ವಾರ್ತಾ ಮತ್ತು ರೇಡಿಯೋ ಪ್ರಸಾರಗಳ ಮಂತ್ರಿ ಸ್ಥಾನವನ್ನು ಪಾರ್ಲಿಮೆಂಟ್ ಸದಸ್ಯರೂ ಪತ್ರಿಕೋದ್ಯೋಗಿಗಳೂ ಆದ ಶ್ರೀ ಬಿ. ಶಿವರಾಯರಿಗೆ ಕೊಡುವುದಾಗಿ ತಿಳಿಸಲಾಗಿತ್ತೆಂದೂ ಆದರೆ ಅದನ್ನು ಅವರು ನಿರಾಕರಿಸಿದರೆಂದೂ ಗೊತ್ತಾಗಿದೆ.

ಕಮ್ಯೂನಿಸ್ಟ್ ನಾಯಕರ ಬಿಡುಗಡೆ

ಹೈದರಾಬಾದಿನಲ್ಲಿ ಕಮ್ಯೂನಿಸ್ಟ್ ನಾಯಕರಾದ ಶ್ರೀ ರಾಜಬಹದ್ದೂರ್‌ಗೌಡರವರನ್ನು ಹೈದರಾಬಾದ್ ಸರ್ಕಾರವು ಬಿಡುಗಡೆ ಮಾಡಿದೆ. ಇವರು ಪಾರ್ಲಿಮೆಂಟು ಸದಸ್ಯರು.

ಪ್ರಮಾಣ ಸ್ವೀಕಾರ

ಬೊಂಬಾಯಿನಲ್ಲಿ ಹೊಸದಾಗಿ ನೇಮಕವಾದ ೯ ಜನ ಉಪಮಂತ್ರಿಗಳು ನಿನ್ನೆಯದಿನ ಗೌರ್ನರ್ ಶ್ರೀ ರಾಜಾಮಹಾರಾಜ್‌ಸಿಂಗ್‌ರವರ ಸಮ್ಮುಖದಲ್ಲಿ ಪದವಿ ಪ್ರಮಾಣ ಸ್ವೀಕರಿಸಿದರು.

ಪಾರ್ಲಿಮೆಂಟ್ ಸ್ಪೀಕರು

ಪಾರ್ಲಿಮೆಂಟಿನ ಸ್ಪೀಕರಾಗಿ ಹಾಲಿ ಸ್ಪೀಕರಾಗಿರುವ ಶ್ರೀ ಮಾವಲಂಕರ್‌ರವರನ್ನೇ ಪುನಃ ಚುನಾಯಿಸಲು ನಾಮಕರಣಪತ್ರವನ್ನು ನಿನ್ನೆಯದಿನ ಸಲ್ಲಿಸಲಾಗಿದೆ. ಸೋಷಲಿಸ್ಟ್ ಮತ್ತು ಕಮ್ಯೂನಿಸ್ಟ್ ಪಕ್ಷಗಳ ಬೆಂಬಲದಮೇಲೆ ರೈತ ಮತ್ತು ಕಾರ್ಮಿಕಪಕ್ಷದ ಶ್ರೀ ಎನ್. ಎಸ್. ಮೋರೆಯವರ ಹೆಸರನ್ನು ಸೂಚಿಸಲಾಗಿದೆ. ಈದಿನ ಸ್ಪೀಕರ ಚುನಾವಣೆ ನಡೆಯುತ್ತದೆ. ಹಿರಿಯ ಶಾಸನಸಭೆಯಲ್ಲಿ ಆಚಾರ್‍ಯ ನರೇಂದ್ರದೇವ್‌ರವರನ್ನು ಸೋಷಲಿಸ್ಟ್ ಪಕ್ಷದ ನಾಯಕ, ಮತ್ತು ಶ್ರೀ ಸಿ. ಜಿ. ಕೆ. ರೆಡ್ಡಿಯವರನ್ನು ಉಪನಾಯಕರನ್ನಾಗಿ ಪಕ್ಷದ ಸದಸ್ಯರು ಚುನಾಯಿಸಿಕೊಂಡಿರುವರು.

ಭಾರತದ ಪ್ರತಿಭಟನೆ

ಮಲಯಾ ಸರ್ಕಾರವು ಭಾರತೀಯರಾದ ಮೌಲಾನಾ ಮಹಮದ್ ಅಕ್ಬರ್ ಖಾನ್‌ರನ್ನು ದಸ್ತಗಿರಿ ಮಾಡಿದ್ದಕ್ಕಾಗಿ ಭಾರತ ಸರ್ಕಾರವು ಮಲಯಾ ಸರ್ಕಾರಕ್ಕೆ ತನ್ನ ಪ್ರತಿಭಟನೆಯನ್ನು ಸೂಚಿಸಿದೆಯೆಂದು ಹೇಳಲಾಗಿದೆ.

ರಾಜೀನಾಮೆ ಕೊಡಬೇಕು

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯ ಕಾಂಗ್ರೆಸ್ ಅಧ್ಯಕ್ಷರಾಗಿರುವ ಡಾ॥ ಡಾದೂರವರು ಕೂಡಲೇ ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡಬೇಕೆಂದು ಅಲ್ಲಿಯ ಸರ್ಕಾರವು ಸೂಚನೆಯಿತ್ತಿರುವುದಾಗಿ ಗೊತ್ತಾಗಿದೆ. ಕಮ್ಯೂನಿಸಂ ತತ್ವವನ್ನು ಮೊಲೋತ್ಪಾದನೆಮಾಡಲು ಕಾರ್‍ಯಾಚರಣೆಗೆ ತೊಡಗಿರುವುದಾಗಿ ಹೇಳಲಾಗಿದೆ.

ನಿರ್ಣಯ ಹಿಂದಕ್ಕೆ

ಮದ್ರಾಸ್ ಉಭಯ ಶಾಸನಸಭೆಗಳ ಸಂಯುಕ್ತ ಸಭೆಯಲ್ಲಿ ಗೌರ್ನರ್ ಭಾಷಣ ಸಮಯದಲ್ಲಿ, ವಿರೋಧಪಕ್ಷದ ನಾಯಕ ಶ್ರೀ ಟಿ. ಪ್ರಕಾಶಂರವರು ಮಾತನಾಡುತ್ತಾ, ಗೌರ್ನರ್ ಸಭೆಯಲ್ಲಿ ಭಾಷಣಮಾಡಲು ಹಕ್ಕಿಲ್ಲವೆಂದು ಹೇಳಿದುದರ ಮೇಲೆ ಮುಖ್ಯಮಂತ್ರಿಗಳು ಮೊನ್ನೆಯ ಸಭೆಯಲ್ಲಿ ಹಕ್ಕಿನ ಸಂಬಂಧವಾಗಿ ಒಂದು ನಿರ್ಣಯವನ್ನು ಮಂಡಿಸುತ್ತಾ, ಶ್ರೀ ಟಿ. ಪ್ರಕಾಶಂರವರು ತಮ್ಮ ಹಕ್ಕನ್ನು ವಿಶಾರಿರುವರೆಂದೂ ನಿನ್ನೆಯದಿನ ಈ ನಿರ್ಣಯವನ್ನು ಶ್ರೀ ಸಿ. ರಾಜಗೋಪಾಲಾಚಾರಿಯವರು ದೀರ್ಘ ಚರ್ಚೆ ನಡೆದ ಮೇಲೆ, ಹಿಂದಕ್ಕೆ ತೆಗೆದುಕೊಂಡಿರುತ್ತಾರೆ.

ಭಾರತಸರ್ಕಾರದವರು ನಿನ್ನೆ ಹೊರಡಿಸಿ ಪ್ರಕಟಿಸಿರುವ ಪ್ರಕಟಣೆಪ್ರಕಾರ ಬಿಹಾರಿಗೆ ಶ್ರೀ ಆರ್. ಆರ್ ದಿವಾಕರ್, ಬೊಂಬಾಯಿಗೆ ಶ್ರೀ ಗಿರಿಜಾಶಂಕರ್ ಬಾಜಪೈ, ಉತ್ತರಪ್ರದೇಶಕ್ಕೆ ಶ್ರೀ ಕೆ. ಎಂ. ಮುನ್ಷಿ ಮತ್ತು ಒರಿಸ್ಸಾಕ್ಕೆ ಜ॥ ಫಸಲ್ ಆಲಿಯವರನ್ನು ಗೌರ್ನರುಗಳಾಗಿ ನೇಮಿಸಲಾಗಿದೆ. ಪ್ರಕೃತದಲ್ಲಿ ಅಸ್ಸಾಂನಲ್ಲಿ ಶ್ರೀ ಜಯರಾಂದಾಸ್ ದೌಲತ್‌ರಾಂ, ಪಂಜಾಬಿನಲ್ಲಿ ಶ್ರೀ ಚಂದೂಲಾಲ್ ತ್ರಿವೇದಿ ಮತ್ತು ಪಶ್ಚಿಮ ಬಂಗಾಳದಲ್ಲಿ ಡಾ॥ ಹೆಚ್. ಸಿ. ಮುಖರ್ಜಿಯವರು ಗೌರ್ನರುಗಳಾಗಿ ಕೆಲಸಮಾಡುತ್ತಲಿರುವರು. ಇವರು ಈ ಗಾಗಲೇ ತಮ್ಮ ಸ್ಥಾನಗಳಿಗೆ ರಾಜೀನಾಮೆಯನ್ನಿತ್ತಿರುವರು.

ರಾಷ್ಟ್ರಾಧ್ಯಕ್ಷರು ಇವರುಗಳ ರಾಜೀನಾಮೆಯನ್ನು ಅಂಗೀಕರಿಸಿ ಪುನಃ ಅವರುಗಳನ್ನೇ ಆಯಾಪ್ರಾಂತ್ಯಗಳಲ್ಲಿ ಗೌರ್ನರ್‌ಆಗಿ ನೇಮಕಮಾಡಿದ್ದಾರೆ.

ಅವರೂ ಸಹ ಸದ್ಯದಲ್ಲೇ ಪುನಃ ಪದವಿಪ್ರಮಾಣವಚನವನ್ನು ತೆಗೆದುಕೊಳ್ಳಲಿರುವರು. ಮದ್ರಾಸಿನ ಗೌರ್ನರ್ ಬದಲಾವಣೆಯೇನೂ ಇಲ್ಲ

ಪರಿಹಾರಕಾರ್‍ಯ

ಅನಂತಪುರ ಜಿಲ್ಲೆಯಲ್ಲಿ ಪರಿಹಾರ ಕಾರ್‍ಯಗಳಿಗಾಗಿ ೩೦ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿರುವುದಾಗಿ ಕ್ಷಾಮ ಕಮೀಷನರ್ ತಿಳಿಸಿರುವರು.

ಪ್ರಭಾ * ಜಯಪ್ರದ 2ನೇ ವಾರ 16–5–52 ರಿಂದ

ದಿನವಹಿ 3 ಆಟಗಳು

ಗುಡ್‌ಲಕ್ ಪಿಕ್ಚರ್ಸ್‌ರವರ ಅತ್ಯುತ್ತಮ ಸಂಗೀತದಿಂದ ಕೂಡಿದ ಸಾಮಾಜಿಕ ಹಿಂದಿ ಚಿತ್ರ.

* ಸಲೋನಿ *

ಪಾತ್ರ:–ಅಶೋಕ್‌ಕುಮಾರ್, ನಳಿನಿಜಯವಂತ್, ಪೂರ್ಣಿಮಾ, ಮೋಹನ ಮತ್ತು ರಣಧೀರ್.

MORNING SHOWS
FROM 16-5-52 FOR 3 DAYS
Columbia Pictures
'RELENT LESS'
(in Technicolor)
STARRING-Robertyoung, Marquerite, Chapman.

ಫೋನ್ ೫೭೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೬-೫-೧೯೫೨ನೇ ಶುಕ್ರವಾರ [ಸಂಚಿಕೆ ೨೫೫

ಒಂದು ರೂಪಾಯಿಗೆ ಎರಡು ಸೇರು ಗೋಧಿ

ಭಾರತಾದ್ಯಂತ ಮೈಲೋ ಬೆಲೆ ಮಣಕ್ಕೆ ೧೩ ರೂಪಾಯಿ

ಆಹಾರಬೆಲೆ ಏರಿಕೆಗೆ ಪ್ರತಿಭಟನೆ

ಮೈಸೂರು ಮೇ ೧೫

ಆಹಾರ ಬೆಲೆಯ ಏರುವಿಕೆಯಿಂದ ಜನತೆಗೆ ಆಗಿರುವ ಅಸದಳ ದಾರುಣತೆಯನ್ನು ಮೈಸೂರು ಹಾಗು ಕೇಂದ್ರ ಸರ್ಕಾರಗಳ ಉದಾಸೀನತೆಯನ್ನು ಮೈಸೂರು ಜಿಲ್ಲಾ ಸೋಷಲಿಸ್ಟ್ ಪಕ್ಷ ಬಹು ಎಚ್ಚರಿಕೆಯಿಂದ ಪರಿಶೀಲಿಸುತ್ತಿದೆ. ಮತ್ತು ವಿವಿದ ರೀತಿಯ ಬೇಡಿಕೆಗಳಿಗೆ ಸರ್ಕಾರ ನಿರುತ್ತರವಾಗಿರುವುದು ಶೋಚನೀಯ ಮತ್ತು ಖಂಡನೀಯ.

ಬಳಲುತ್ತಿರುವ ಬಡಜನಗಳ ಕಡೆ ಗಮನವೀಯದೆ ಇರುವ ನೀತಿಯನ್ನು ಸರ್ಕಾರ ಅನುಸರಿಸುತ್ತಿರುವುದೇ ಅಲ್ಲದೆ ಅವರ ವಿರುದ್ಧ ಹೋರಾಡುವ ಕಾರ್‍ಯಕ್ರಮಗಳನ್ನು ಕೈಗೊಂಡಂತಿದೆ ಇದೆಲ್ಲದರ ವಿಷಯವಾಗಿ ಪೂರ್ಣ ಪರ್ಯಾಲೋಚನೆಯಿತ್ತು, ಸರ್ಕಾರದ ಈ ನೀತಿಯ ವಿರುದ್ಧ, ಜನತೆಯ ಸಂಘಟಿತ ಹೋರಾಟವನ್ನು ಹೂಡಬೇಕೆಂಬ ತೀರ್ಮಾನವನ್ನು ಮಾಡಿ ಪಕ್ಷ ಬಂದಿದೆ. ಈ ಕಾರ್‍ಯಕ್ಕಾಗಿ ಜನತೆ ತಮ್ಮ ಜೀವನದ ಈ ಸಂದಿಗ್ದ ಸಮಯದಲ್ಲಿ ಸೇರಬೇಕಾದ್ದು ಅವಶ್ಯಕ ಹಾಗೂ ಅನಿವಾರ್‍ಯ. ಇದಕ್ಕಾಗಿ ಸರಿಯಾದ ಕಾರ್‍ಯಕ್ರಮಗಳನ್ನು ಗೊತ್ತುಮಾಡಲಿಕ್ಕಾಗಿ ಜಿಲ್ಲೆಯ ಸೋಷಲಿಸ್ಟ್ ಕಾರ್‍ಯಕರ್ತರ ಸಭೆಯನ್ನು ದಿನಾಂಕ ತಾ॥ ೧೯-೫-೫೨ ನೇ ಸೋಮವಾರ ಸಂಜೆ ೬ ಘಂಟೆಗೆ ಮೈಸೂರಿನಗರ ಅಶೋಕಾರಸ್ತೆಯಲ್ಲಿರುವ ಪಕ್ಷದ ಕಛೇರಿಯಲ್ಲಿ ಕರೆಯಲಾಗಿದೆ. ಎಂದು ಕಾರ್‍ಯದರ್ಶಿಗಳು ತಿಳಿಸುತ್ತಾರೆ.

ಶ್ರೀ ಕೆ. ಸಿ. ರೆಡ್ಡಿಯವರಿಗೆ ಅಭಿನಂದನೆ

ಬೆಂಗಳೂರು ಮೇ ೧೫

ಇಂದು ನಡೆದ ಕಾರ್ಪೊರೇಷನ್ ಸಭೆ ಕೇಂದ್ರ ಮಂತ್ರಿಮಂಡಲದ ಸದಸ್ಯರಾಗಿ ನೇಮಕವಾಗಿರುವ ಶ್ರೀ ಕೆ. ಸಿ. ರೆಡ್ಡಿಯವರನ್ನು ಸರ್ವಾನುಮತದಿಂದ ಅಭಿವಂದಿಸಿ ನಿರ್ಣಯ ಮಾಡಿತು.

ಮುಖ್ಯಮಂತ್ರಿಯವರ ಪ್ರವಾಸ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತುಮಕೂರು ಮತ್ತು ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲು ನಿನ್ನೆ ಬೆಂಗಳೂರಿಂದ ತೆರಳಿದರು, ಇಂದು ಬೇಲೂರಿನಲ್ಲಿ ಕನ್ನಡ ಸಾಹಿತ್ಯೋತ್ಸವದ ಸಭೆಯನ್ನು ಉದ್ಘಾಟಿಸುವರು.

ಶ್ರೀ ಮಾವಲಂಕರ್ ಮತ್ತೆ ಸ್ಪೀಕರ್

ಹಾಲಿ ಪಾರ್ಲಿಮೆಂಟ್ ಸದಸ್ಯರಾಗಿದ್ದ ಶ್ರೀ ಜಿ. ವಿ. ಮಾವಲಂಕರು ಮತ್ತೆ ಸ್ಪೀಕರಾಗಿ ಚುನಾಯಿತರಾದರು. ಅವರ ಹೆಸರನ್ನು ಪ್ರಧಾನಿ ನೆಹರೂ ಸೂಚಿಸಿದರು. ಶ್ರೀ ಸತ್ಯನಾರಾಯಣ ಸಿನ್ಹರವರು ಸಮರ್ಥಿಸಿದರು.

ಸೋಷಲಿಸ್ಟ್ ಮತ್ತು ಕಮ್ಯೂನಿಸ್ಟ್ ಪಕ್ಷಗಳ ಬೆಂಬಲದಮೇಲೆ ರೈತ ಮತ್ತು ಕಾರ್ಮಿಕಪಕ್ಷದ ಶ್ರೀ ಎನ್. ಎಸ್. ಮೊರೆಯವರ ಹೆಸರನ್ನು ಶ್ರೀ ಎ. ಕೆ. ಗೋಪಾಲನ್ ಸೂಚಿಸಿದರು ಶ್ರೀ ಡಿ. ಶ್ರೀಕಂಠೇಶ್ವರನ್ ಸಮರ್ಥಿಸಿದರು. ಶ್ರೀ ಮಾವಲಂಕರು ೩೯೪ ಓಟುಗಳನ್ನು ಪಡೆದು ವಿಜಯಗಳಿಸಿದರು.

ಅನಂತರ ಅವರನ್ನು ಪಂಡಿತ್ ನೆಹರೂ, ಶ್ರೀ ಗೋಪಾಲನ್, ಶ್ರೀಮತಿ ಸುಚೇತ ಕೃಪಲಾನಿ, ಡಾ॥ ಶ್ಯಾಮಪ್ರಸಾದ್ ಮುಖರ್ಜಿ, ಶ್ರೀ ಹುಕುಂಸಿಂಗ್ ಮುಂತಾದವರು ಅಭಿವಂದಿಸಿದರು.

ಸ್ಪೀಕರರ ಕರ್ತವ್ಯ

ಈಗತಾನೆ ಭಾರತದಲ್ಲಿ ಜನಿಸಿರುವ ಪಾರ್ಲಿಮೆಂಟರಿ ಜೀವನದಲ್ಲಿ ಬ್ರಿಟನ್ನಿನಲ್ಲಿರುವಂತೆ ಭಾರತ ಪಾರ್ಲಿಮೆಂಟು ಅಧ್ಯಕ್ಷರಿರುವುದಕ್ಕಾಗುವುದಿಲ್ಲ. ತಾವು ಕಾಂಗ್ರೆಸ್‌ಪಕ್ಷದಲ್ಲಿಯೇ ಇದ್ದುಕೊಂಡು ಇರುವುದಾಗಿಯೂ ಆದರೆ ಎಲ್ಲಾ ಪಕ್ಷದ ಸದಸ್ಯರನ್ನು ಏಕಭಾವದಿಂದ ಕಾಣುತ್ತಾ ಬರುವುದು ತಮ್ಮ ಮುಖ್ಯ ಕರ್ತವ್ಯವೆಂದು ನೂತನವಾಗಿ ಭಾರತ ಪಾರ್ಲಿಮೆಂಟ್ ಅಧ್ಯಕ್ಷರಾಗಿ ಚುನಾಯಿತರಾದ ಶ್ರೀ ಮಾವಲಂಕರ್‌ರವರು ಹೇಳಿರುವರು.

ಮಿ॥ ಯೋಷಿದಾರ ಭೇಟಿ

ಜಪಾನಿನ ಪ್ರಧಾನಿ ಮಿ॥ ಯೋಷಿದಾರವರನ್ನು ನಿನ್ನೆ ಭಾರತದ ಪ್ರತಿನಿಧಿ ಶ್ರೀ ಚೆಟ್ಟೂರ್‌ರವರು ಭೇಟಿಮಾಡಿ ಭಾರತ ಜಪಾನಿನ ಸ್ನೇಹಬಾಂಧವ್ಯದಬಗ್ಗೆ ಚರ್ಚೆ ನಡೆಸಿದರು

ಕಾಂಗ್ರೆಸ್ ಸದಸ್ಯರ ಸಭಾತ್ಯಾಗ

ಪೆಪ್ಸು ರಾಜ್ಯವು ಪಂಜಾಬಿನೊಡನೆ ವಿಲೀನವಾಗಬೇಕೆಂಬ ನಿರ್ಣಯವನ್ನು ಅಸೆಂಬ್ಲಿ ಸ್ಪೀಕರ್ ತಿರಸ್ಕರಿಸಿದ್ದರಿಂದ ಪೆಪ್ಸು ಅಸೆಂಬ್ಲಿಯ ೨೩ ಜನ ಕಾಂಗ್ರೆಸ್ ಸದಸ್ಯರು, ೩ ಜನ ಕಮ್ಯೂನಿಸ್ಟರು, ೨ ಜನ ಸ್ವತಂತ್ರರು ನಿನ್ನೆ ಸಭಾತ್ಯಾಗಮಾಡಿದರು.

ಈಜಿಪ್ಟ್‌ಗೆ ಅಮೆರಿಕಾದ ಶಸ್ತ್ರಾಸ್ತ್ರ ಸಹಾಯ ?

ಈಜಿಪ್ಟ್‌ನಲ್ಲಿರುವ ಪೋಲೀಸ್‌ದಳಕ್ಕೆ ಬೇಕಾದ ಶಸ್ತ್ರಾಸ್ತ್ರ ಮುಂತಾದ ಸಲಕರಣೆಗಳನ್ನು ಅಮೆರಿಕಾ ಸರಬರಾಜುಮಾಡುವುದಲ್ಲದೆ ಅನೇಕ ಪೋಲೀಸ್ ಅಧಿಕಾರಿಗಳಿಗೆ ಅದು ಶಿಕ್ಷಣ ಕೊಡಲಿದೆಯೆಂದು ಹೇಳಲಾಗಿದೆ. ಈಜಿಪ್ಟಿನ ಪುನಶ್ಶಸ್ತ್ರೀಕರಣಕ್ಕೆ ಅಮೆರಿಕಾ ಸಹಾಯನೀಡಲು ಇದು ಮಾರ್ಗವೆಂದು ಊಹಿಸಲಾಗಿದೆ.

ರೈಲ್ವೆ ಅಧಿಕಾರಿಗಳ ಮೇಲೆ ಕಾರ್‍ಯಕ್ರಮ

ತುಂಗಭದ್ರಾ ಯೋಜನೆಯ ಕಾರ್‍ಯದಲ್ಲಿ ಕೆಲಸ ಮಾಡಲು ಬೆಂಗಳೂರಿನಿಂದ ಗುಂತಕಲ್ಲಿಗೆ ಹೋಗುತ್ತಲಿದ್ದ ೨೫೦ ಜನರಿಂದ ಅಲ್ಪಸ್ವಲ್ಪ ಹಣವನ್ನು ಪಡೆದು ಟಿಕೇಟಿಲ್ಲದೆ ಕರೆದುಕೊಂಡು ಹೋಗುತ್ತಲಿದ್ದ ಗಾರ್ಡ್ ಮತ್ತು ಅಂಡರ್ ಗಾರ್ಡ್‌ಗಳ ಚರ್ಯೆಯನ್ನು ಕಂಡುಹಿಡಿದು ಅವರ ಬಳಿಯಿದ್ದ ಸಾವಿರಾರು ರೂಪಾಯಿಗಳನ್ನು ವಶಪಡಿಸಿಕೊಂಡು ಅವರನ್ನು ಕೆಲಸದಿಂದ ಸಸ್ಪೆಂಡು ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತಲಿರುವುದಾಗಿ ಹೇಳಲಾಗಿದೆ.

ನಾಯಕರಾಗಿ ನೇಮಕ

ನಿನ್ನೆ ಕೇಂದ್ರ ಪಾರ್ಲಿಮೆಂಟಿನ ವಿರೋಧ ಪಕ್ಷವನ್ನು ಕಟ್ಟಲು ಕೆ. ಎಂ. ಪಿ. ಪಿ. ಸದಸ್ಯರು ಶ್ರೀಮತಿ ಸುಚೇತಾ ಕೃಪಲಾನಿಯವರನ್ನು ತಮ್ಮ ನಾಯಕರನ್ನಾಗಿ ಚುನಾಯಿಸಿರುವರು.

ಭಾರತಕ್ಕೆ ಪರ್ಷಿಯಾ ಎಣ್ಣೆ

ಭಾರತಕ್ಕೆ ಪರ್ಷಿಯಾದಿಂದ ಎಣ್ಣೆಯನ್ನು ಪಡೆಯಲು ನೂತನವಾಗಿ ಸ್ಥಾಪಿತವಾಗಿರುವ ಇಂಡೋ–ಇರಾನಿಯನ್ ಎಣ್ಣೆ ಕಂಪೆನಿಯ ಪ್ರತಿನಿಧಿ ಶ್ರೀ ಎಫ್. ಬಿ. ಶ್ರೀವತ್ಸವಾರವರು ಟೆಹರಾನಿನಲ್ಲಿ ಸಂಧಾನ ನಡೆಸುತ್ತಲಿರುವುದಾಗಿ ಹೇಳಲಾಗಿದೆ.

ಅರ್ಜಿ ತಿರಸ್ಕರಿಸಲಾಯಿತು

ಮದ್ರಾಸಿನ ಮುಖ್ಯಮಂತ್ರಿ ಶ್ರೀ ರಾಜಗೋಪಾಲಚಾರಿಯವರು ಯಾವ ಅಧಿಕಾರದ ಆಧಾರದ ಮೇಲೆ ಹಿರಿಯ ಶಾಸನ ಸಭೆಯ ಸದಸ್ಯರಾಗಿರುವರೆಂಬುದನ್ನು ಪ್ರಶ್ನಿಸಬೇಕೆಂದು ಹಿರಿಯ ಸದಸ್ಯರಾದ ಶ್ರೀ ಚಕ್ರಯ್ಯಶೆಟ್ಟಿಯವರ ಅರ್ಜಿಯನ್ನು ಹೈಕೋರ್ಟಿನ ನ್ಯಾಯಾಧೀಶ ಶ್ರೀ ಪಿ. ಚಂದ್ರರೆಡ್ಡಿಯವರು ತಿರಸ್ಕರಿಸಿದ್ದಾರೆ.

ಬೆಂಗಳೂರು ಮೇ ೧೫

ಮೈಸೂರು ಸರ್ಕಾರದವರು ಪತ್ರಿಕಾ ಪ್ರಕಟಣೆಯೊಂದನ್ನು ಹೊರಡಿಸಿ ಸರ್ಕಾರವು ಗೋಧಿಯ ಬೆಲೆಯನ್ನು ಸೇರಿಗೆ ೧೦ ಆಣೆ ೮ ಕಾಸಿನಿಂದ ೮ ಆಣೆಗೆ ಇಳಿಸಿ, ಅಂದರೆ ೧ ರೂ.ಗೆ ೧॥ ಸೇರಿನಿಂದ ೨ ಸೇರಿನಂತೆ ಇಂದಿನಿಂದ ಮಾರಲು ನಿರ್ಧರಿಸಿದೆ. ಸಾರ್ವಜನಿಕರು ಇದನ್ನು ಸ್ವಾಗತಿಸುವರು ಎಂದು ನಂಬಲಾಗಿದೆ ಎಂದು ತಿಳಿಸಿರುವರು.

ಮೈಲೋ ಬೆಲೆ

ಮೈಲೋ ಬೆಲೆಯನ್ನು ಮಣ ಒಂದಕ್ಕೆ ೧೫ ರೂಗಳಿಂದ ೧೩ ರೂಗಳಿಸಿರುವುದು ಭಾರದ್ಯಂತ ಎಲ್ಲಾ ಪ್ರದೇಶಗಳಿಗೂ ಅನ್ವಯಿಸುತ್ತದೆ.

ವಿಶ್ವಬ್ಯಾಂಕ್ ಅಧಿಕಾರಿಗಳು

ವಿಶ್ವಬ್ಯಾಂಕ್ ಅಧಿಕಾರಿಗಳು ಕಲ್ಕತ್ತಾದಲ್ಲಿ ಕೆಲವು ಕೈಗಾರಿಕಾ ಸಂಸ್ಥೆಗಳನ್ನು ಪರಿಶೀಲಿಸಲು ಅಲ್ಲಿಗೆ ತೆರಳಿರುವರು ಬ್ಯಾಂಕಿನಿಂದ ಭಾರತಕ್ಕೆ ಸಾಲವನ್ನು ಕೊಡುವ ಉದ್ದೇಶದಿಂದ ಇಲ್ಲಿ ಪ್ರವಾಸ ಮಾಡಿ ಹೋಗಲು ಭಾರತಕ್ಕೆ ಬಂದಿರುವರು.

ಮದ್ರಾಸಿಗೆ ಅಕ್ಕಿ

ಮಧ್ಯಪ್ರದೇಶದಿಂದ ೩೫೦೦೦ ಟನ್ ಅಕ್ಕಿಯನ್ನು ಮದ್ರಾಸಿಗೂ ೧೦೦೦೦ ಟನ್ ತಿರುವಾಂಕೂರು- ಕೊಚಿನ್‌ಗೆ ಕಳುಹಿಸಲು ಸಿದ್ಧಮಾಡಲಾಗಿದೆ.

ಕರಾಚಿಯಲ್ಲಿ ಚರ್ಚೆ

ಭಾರತ-ಪಾಕೀಸ್ಥಾನಗಳಿಗೆ ಓಡಾಡಲು ಪಾಸ್‌ಪೋರ್ಟ್ ಹೊಂದಬೇಕೆಂಬ ವಿಷಯವನ್ನು ಚರ್ಚಿಸಲು ಕರಾಚಿಯಲ್ಲಿ ಭಾರತವು ಮತ್ತು ಪಾಕ್ ಅಧಿಕಾರಿಗಳು ಸಭೆಸೇರಿದ್ದಾರೆ.

ಆಜಾದ್ ಉಪನಾಯಕರು

ಪಾರ್ಲಿಮೆಂಟಿನಲ್ಲಿ ಉಪನಾಯಕರನ್ನಾಗಿ ಮೌಲಾನಾ ಆಜಾದ್‌ರನ್ನೂ, ಹಿರಿಯ ಶಾಸನಸಭೆಯ ನಾಯಕರನ್ನಾಗಿ ಶ್ರೀ ಎನ್. ಜಿ. ಅಯ್ಯಂಗಾರ್‌ರವರನ್ನು ಕಾಂಗ್ರೆಸ್ ಪಕ್ಷವು ಚುನಾಯಿಸಿದೆ.

ತಮ್ಮ ಪಕ್ಷವನ್ನೇ ವಿರೋಧ ಪಕ್ಷವೆಂದು ಪರಿಗಣಿಸಿ

ಪಾರ್ಲಿಮೆಂಟಿನ ಕಮ್ಯೂನಿಸ್ಟ್ ಸದಸ್ಯ ಶ್ರೀ ಎ. ಕೆ. ಗೋಪಾಲನ್‌ರವರು ಸಭಾಧ್ಯಕ್ಷರಿಗೆ ಪತ್ರವೊಂದನ್ನು ಬರೆದು ಕಮ್ಯೂನಿಸ್ಟ್ ಪಕ್ಷದ ಸದಸ್ಯರ ಸಂಖ್ಯೆಯೇ ಜಾಸ್ತಿ ಇರುವುದರಿಂದ ಆ ಪಕ್ಷವನ್ನೇ ವಿರೋಧಪಕ್ಷವಾಗಿ ಪರಿಗಣಿಸಬೇಕೆಂದು ತಿಳಿಸಿದ್ದಾರೆ.

ಆಹಾರ ಶಾಖೆ ಇನ್ಸ್‌ಪೆಕ್ಟರ್ ದಸ್ತಗಿರಿ

ಬೆಂಗಳೂರು ಮೇ ೧೫

ಸಿವಿಲ್ ಪ್ರದೇಶದ ಆಹಾರಡಿಪೋ ಒಂದರಿಂದ ಧಾನ್ಯ ಅಕ್ರಮವಾಗಿ ಸಾಗಿ ಹೋಗುತ್ತಿದ್ದುದನ್ನು ಆಹಾರ ಸರಬರಾಜು ಇಲಾಖೆಯ ಸ್ಪೆಷಲ್ ಅಮಲ್ದಾರ್ ಪತ್ತೆ ಹಿಡಿದುದು ವರದಿಯಾಗಿದೆ.

ಸಿವಿಲ್ ಪ್ರದೇಶದ ವುದುಪರಜೇರಿ ಡಿಪೋವಿನಿಂದ ಧಾನ್ಯ ಅಕ್ರಮವಾಗಿ ಸಾಗುತ್ತಿರುವುದನ್ನು ಸಂದೇಹಿಸಿದ ಆಹಾರ ಸರಬರಾಜು ಇಲಾಖೆಯ ಸ್ಪೆಷಲ್ ಅಮಲ್ದಾರ್ ಶ್ರೀ ಎ. ಇ. ಎಡ್ವಿನ್‌ರವರು ಇಂದು ಬೆಳಿಗ್ಗೆ ಡಿಪೋ ಬಳಿ ಹೊಂಚು ಕಾಯುತ್ತ ನಿಂತಿದ್ದರು.

ಬೆಳಿಗ್ಗೆ ಸುಮಾರು ೧೦-೩೦ ರ ಸಮಯದಲ್ಲಿ ಧಾನ್ಯ ತುಂಬಿಕೊಂಡು ಲಾರಿಯೊಂದು ಡಿಪೋವನ್ನು ಬಿಟ್ಟಿತು. ಅದನ್ನು ನಿಲ್ಲಿಸಿ ಚೆಕ್ ಮಾಡಿದಾಗ, ಲಾರಿಯಲ್ಲಿ ಒಂದು ಚೀಲ ಹೆಚ್ಚಿಗೆ ಇರುವುದು ಪತ್ತೆ ಆಯಿತು. ಧಾನ್ಯವನ್ನು ವರ್ತಕರಾದ ಸೈಯ್ಯದ್ ಹುಸೇನ್‌ರವರಿಗೆ ಕೊಂಡೊಯ್ಯಲಾಗುತ್ತಿತ್ತು. ಲಾರಿಯನ್ನು ನಿಲ್ಲಿಸಿದಾಗ, ಲಾರಿಯಲ್ಲಿದ್ದ ಹುಸೇನರ ಮಗ ತಪ್ಪಿಸಿಕೊಂಡು ಹೊರಟುಹೋದರು.

ಲಾರಿ ಮತ್ತು ಡ್ರೈವರ್ ಮತ್ತು ಕೂಲಿಗಳೊಡನೆ ಡಿಪೋವಿಗೆ ವಾಪಸ್ ಹೋಗಿ, ಡಿಪೋವಿನಲ್ಲಿ ಚೆಕ್‌ಮಾಡಿದ ಮೇಲೆ ದಾಸ್ತಾನಿನಲ್ಲಿ ಒಂದು ಮೂಟೆ ಸಣ್ಣ ಅಕ್ಕಿ ಕಡಿಮೆ ಇದ್ದುದು ಪತ್ತೆಯಾಯಿತು.

ಆಹಾರ ಸರಬರಾಜಿನ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಕೆ. ಎಸ್. ಮಲ್ಲೇಗೌಡರು ಡಿಪೋವಿಗೆ ಭೇಟಿಯಿತ್ತು, ಪೋಲೀಸರನ್ನು ಕರೆಸಿದರು.

ಹುಸೇನರ ಮಗ ಮತ್ತು ಡಿಪೋ ಛಾರ್ಜಿನಲ್ಲಿರುವ ಇನ್ಸ್‌ಪೆಕ್ಟರ್ ಶ್ರೀ ವೆಂಕಟನರಸಿಂಹಾಚಾರ್‌ರವರನ್ನು ದಸ್ತಗಿರಿಮಾಡಲಾಯಿತು, ಮುಂದಿನ ತನಿಖೆ ನಡೆಯುತ್ತಿದೆ.

ಅರಣ್ಯದಿಂದ ಅಕ್ರಮ ಸಾಗಾಣಿಕೆ

ಬೆಂಗಳೂರು ಮೇ ೧೫

ಸಂಸ್ಥಾನದ 'ಅರಣ್ಯಗಳಲ್ಲಿರುವ ಮರಗಳ ಅಕ್ರಮ ಸಾಗಾಣಿಕೆಯಿರುವ ಬಗ್ಗೆ ತನಿಖೆ ನಡೆಸುವ, ಮತ್ತು, ತಡೆಗಟ್ಟುವ ವಿಶೇಷ ಅಧಿಕಾರವನ್ನು ಜಿಲ್ಲಾಧಿಕಾರಿ ಶ್ರೀ ಕೆ. ಶೇಷಗಿರಿರಾಯರಿಗೆ ವಹಿಸಲಾಗಿದೆ.

ಸಂಸ್ಥಾನಾದ್ಯಂತ ಅಧಿಕಾರವ್ಯಾಪ್ತಿಯುಳ್ಳ ಎಕ್ಸ್ ಅಫಿಷಿಯೋ ಕನ್ಸರ್‌ವೇಟರ್ ಆಗಿಯೂ ನೇಮಿಸಲಾಗಿದೆ.

ಭಾರತದ ಕಾಲೇಜೊಂದಕ್ಕೆ ನ್ಯೂಯಾರ್ಕ್ ನಗರವಾಸಿಗಳ ಸಹಾಯ

ನ್ಯೂಯಾರ್ಕಿನ ಇಂಡಿಯಾ ಹೌಸಿನಲ್ಲಿ ಸುಪ್ರಸಿದ್ಧ ಅಮೆರಿಕನ್ ಶಿಲ್ಪಿ ಮಿಲ್ಡ್ರೆಡ್ ಹೇವರ್ಡ್‌ನ ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ. ಈ ಪ್ರದರ್ಶನದಿಂದ ಬಂದ ಹಣವನ್ನು ಅಹಮದ್ ನಗರದ ಕಾಲೇಜಿಗೆ ಕೊಡಲಾಗುವುದು

ಭಾರತದ ಕೌನ್ಸಲ್‌ರಾದ ಶ್ರೀ ಆರ್ಥರ್ ಲಾಲ್‌ರು ಈ ಪ್ರದರ್ಶನ ಏರ್ಪಡಿಸಿದ್ದಾರೆ. ಮೇ ೨೧ ರವರೆಗೆ ಈ ಪ್ರದರ್ಶನ ನಡೆಯುವುದು.

ಅಮೇರಿಕನ್ ಬ್ರಾಡ್ ಕ್ಯಾಸ್ಟಿಂಗ್ ಕಂಪೆನಿ ಈ ಯೋಜನೆಯಲ್ಲಿ ಆಸಕ್ತಿ ತೋರಿಸಿದೆ. ಮೇ ೧೩ ರಲ್ಲಿ ಕೆಲವು ಪ್ರದರ್ಶನದ ಸಾಮಾನುಗಳನ್ನು ಟೆಲಿವಿಷನ್ ಮೂಲಕ ತೋರಿಸಲಾಯಿತು

ಅಹಮದ್ ನಗರ ಕಾಲೇಜಿನ ಪ್ರಿ॥ ಭಾಸ್ಕರ ಪಿ. ಹಿವಾಲೆಯವರು ಇಲ್ಲಿಗೆ ಬಂದಿದ್ದು ಅವರನ್ನು ಅಭೂತಪೂರ್ವವಾಗಿ ಸತ್ಕರಿಸಲಾಯಿತು. ಹಿವಾಲೆಯವರು ಅಮೇರಿಕನ್ನರ ಈ ಉದಾರಗುಣವನ್ನು ಪ್ರಕಟಿಸಿದರು.

ವಿಮಾನಗಳ ಪೆಟ್ರೋಲ್ ಬಳಕೆಯಲ್ಲಿ ಖೋತಾ

ಮೇ ೧೫ ರಿಂದ ವಿಮಾನಗಳ ಪೆಟ್ರೋಲಿನ ಬಳಕೆಯಲ್ಲಿ ಶೇ॥ ೩೫ರಷ್ಟು ಖೋತಾ ಮಾಡಲು ಕೇಂದ್ರ ಸರ್ಕಾರವು ನಿರ್ಧರಿಸಿದೆ. ಈ ನಿರ್ಬಂಧವು ಸಿವಿಲ್ ವಿಮಾನಗಳಿಗೆ ಅನ್ವಯಿಸುವುದಲ್ಲದೆ ಮೊದಲು ೨೦ ದಿನಗಳ ಕಾಲ ಜಾರಿಯಲ್ಲಿರುವುದು.

ದೇಶದಲ್ಲಿರುವ ಪೆಟ್ರೋಲಿನ ದಾಸ್ತಾನನ್ನು ಉಳಿಸಲೋಸುಗ, ಅಮೇರಿಕ ಮತ್ತು ಬ್ರಿಟನ್‌ಗಳ ಸರ್ಕಾರಗಳಂತೆಯೇ ಭಾರತ ಸರ್ಕಾರವು ಈ ನಿರ್ಧಾರವನ್ನು ಕೈಗೊಂಡಿದೆ

ಬ್ರಿಟನ್ನಿನ ಆಟಂ ಅಸ್ತ್ರ ಪ್ರಯೋಗ

ವಾಯುವ್ಯ ಆಸ್ಟ್ರೇಲಿಯಾದ ಕಡೆ ಇರುವ ಮಾಂಟೆಬೆಲೋ ದ್ವೀಪಗಳಲ್ಲಿ, ಬ್ರಿಟನ್ನು ತನ್ನ ಮೊಟ್ಟಮೊದಲ ಅಣು ಅಸ್ತ್ರ ಪ್ರಯೋಗವನ್ನು ನಡೆಸಲು ತೀರ್ಮಾನಿಸಿದೆ.

ಆಹಾರ ಬೆಲೆ ಏರಿಕೆಗೆ ವಿರೋಧ ಕೂಡದು

ಆಹಾರ ಬೆಲೆ ಹೆಚ್ಚಿಸಿದುದರ ಬಗ್ಗೆ ಪ್ರತಿಭಟನೆ ಸೂಚಿಸಲು ಯಾವ ಬಗೆಯ ಮೆರವಣಿಗೆ ಮೊದಲಾದವುಗಳನ್ನು ನಾಸಿಕ್ ಪ್ರದೇಶದಲ್ಲಿ ನಡೆಸಕೂಡದೆಂದು ನಾಸಿಕ್ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಹೊರಡಿಸಿದ್ದಾರೆ.

ಸಾಕಷ್ಟು ಮೈದಾ, ರವೆ ಸರಬರಾಜು

ಬೆಂಗಳೂರು ಮೇ ೧೫

ಸಾಕಷ್ಟು ಪ್ರಮಾಣದಲ್ಲಿ ಮೈದಾ ಮತ್ತು ರವೆಯನ್ನು ರೇಷನ್ ಡಿಪೋಗಳಲ್ಲಿ ಮಾರಲು ಏರ್ಪಡಿಸಲಾಗಿದೆಯೆಂದೂ, ಗೋಧಿ ಬದಲು ಪೂರ್ಣವಾಗಿ, ಈ ಪದಾರ್ಥಗಳನ್ನು ಕೊಳ್ಳಲು ಸಾರ್ವಜನಿಕರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕೆಂದೂ, ಮೈದಾ ಹಿಟ್ಟನ್ನು ಪೌಂಡಿಗೆ ೬ ಆಣೆ ಮತ್ತು ರವೆಯನ್ನು ಪೌಂಡಿಗೆ ೬ ಆಣೆ ೬ ಕಾಸಿನಂತೆ ಮಾರಲಾಗುವುದೆಂದೂ ನಗರ ರೇಷನಿಂಗ್ ಅಧಿಕಾರಿಗಳು ತಿಳಿಸುತ್ತಾರೆ.

ಶ್ರೀ ಕೆ. ಸಿ. ರೆಡ್ಡಿಯವರು ಪ್ರಮಾಣವಚನ ಸ್ವೀಕರಿಸಿದರು

ಕೇಂದ್ರ ಸರ್ಕಾರದಲ್ಲಿ ಉತ್ಪತ್ತಿ ಶಾಖೆ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಪ್ರಮಾಣವಚನವನ್ನು ಸ್ವೀಕರಿಸಿದರು. ಪ್ರಧಾನಿ ಮತ್ತು ಇತರ ಸಚಿವರು ಆಗ ಹಾಜರಿದ್ದರು.

ಮೈಸೂರು ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಯು ಮೇ ೩೧ ರಂದು ಕಾಂಗ್ರೆಸ್ ಕಚೇರಿಯಲ್ಲಿ ಸೇರುವ ಎಂ. ಪಿ. ಸಿ. ಸಿ. ಸಭೆಯಲ್ಲಿ ನಡೆಯುವುದು. ಅದೇ ದಿನ ಪ್ರತಿ ಕಾಂಗ್ರೆಸ್ ಜಿಲ್ಲಾ ಒಂದಕ್ಕೆ ಒಬ್ಬ ಪ್ರತಿನಿಧಿಯಂತೆ ಕಾರ್ಯಕಾರಿ ಸಮಿತಿಗೆ ಹನ್ನೊಂದು ಮಂದಿ ಸದಸ್ಯರನ್ನು ಆರಿಸಲಾಗುವುದು.

ಪೇಟೆ ಧಾರಣೆ

ಮೈಸೂರು ತಾ॥ 15-5-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	10-6	17-14
ಹೊಂಗೆಬೀಜ ,,	9-12	12-8
ಹುರುಳಿ ,,	33-2	34-0
ಸೀಗೆಕಾಯಿ ,,	3-4	3-5
ಮೆ. ಕಾಯಿ ಮಣಕ್ಕೆ	13-0	15-8
ಹುಣಸೇಹಣ್ಣು ,,	3-5	3-15
ತೆಂಗಿನಕಾಯಿ 1100ಕ್ಕೆ	119	187

ಚಿನ್ನ ಬೆಳ್ಳಿ ದರಗಳು

15-5-52	ರೂ.
ಸವರನ್	66-4
,,	66-6
ಚಿನ್ನ ತೊಲ	95-2
,, ಮೂಸ	94-0
ಬೆಳ್ಳಿ 100 ತೊಲ	169-0
,, ತೊಲ	1-12

ಅಂಚೆ ಮತ್ತು ತಂತಿ ಕೆಲಸಗಾರರ ಸಮ್ಮೇಳನ

ಬರೋಡದಲ್ಲಿ ಇದೇ ತಿಂಗಳು ೨೫ ರಿಂದ ೨೮ ರವರೆಗೆ ನಡೆಯಲಿರುವ ಅಖಿಲ ಭಾರತ ಅಂಚೆ ಮತ್ತು ತಂತಿ ಶಾಖೆಯ ಕೆಲಸಗಾರರ ಸಂಘಗಳ ಸಮ್ಮೇಳನದ ಸಾಲ್ಯನೆ ಅಧಿವೇಶನದ ಆರಂಭೋತ್ಸವವನ್ನು ಶ್ರೀಮತಿ ಸುಚೇತಾ ಕೃಪಲಾನಿಯವರು ನೆರವೇರಿಸಲಿದ್ದಾರೆ.

ಫ್ರೆಂಚ್ ಭಾರತದಲ್ಲಿ ಸತ್ಯಾಗ್ರಹ

ಫ್ರೆಂಚ್ ಭಾರತದಲ್ಲಿ ಮುಂದಿನ ಆಗಸ್ಟಿನಿಂದ ಅಹಿಂಸಾತ್ಮಕ ಸತ್ಯಾಗ್ರಹವನ್ನು ತಯಾರಿಸಬೇಕೆಂದು, ಕಾರೆಕಲ್ ಫ್ರೆಂಚ್ ವಸಾಹತಿನ ರಾಷ್ಟ್ರೀಯ ತರುಣ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಅದರ ಅಧಿಕಾರವನ್ನು ಕೊಟ್ಟಿದೆ.

ಯುದ್ಧದಲ್ಲಿ ನಷ್ಟ

ಕೊರಿಯ ಯುದ್ಧದಲ್ಲಿ ೧೦ ಲಕ್ಷಕ್ಕಿಂತ ಹೆಚ್ಚು ಮಂದಿ ದಕ್ಷಿಣ ಕೊರಿಯನ್ನರು ಸತ್ತರೆಂದೂ, ಸುಮಾರು ಒಂದು ಕೋಟಿ ಮಂದಿ ಮನೆಮಠ ಕಳೆದುಕೊಂಡರೆಂದೂ ಹೇಳಲಾಗಿದೆ.

‡ ಇದೇ ಸಾಲು ಜುಲೈ ಒಂದನೇತಾರೀಖಿನಿಂದ ಉತ್ತರಪ್ರದೇಶದಲ್ಲಿ ಜಮೀನ್ದಾರಿ ರದ್ದಿನ ಶಾಸನವನ್ನು ಜಾರಿಗೆತರಲು ಅಲ್ಲಿಯ ಸರ್ಕಾರವು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ರಾಜಕಮಲ್
16—5—1952 ರಿಂದ
ಅಮೋಘವಾದ 2ನೇ ವಾರ
ಆಡ ಬ್ರತುಕು
(ಹೆಂಗಸಿನ ಬಾಳು)
(ತೆಲುಗು)
ಭೂಮಿಕೆ— ರಘುರಾಮಯ್ಯ, ಜ್ಯೂ. ಶ್ರೀರಂಜನಿ, ಕನಕಂ, ಲಕ್ಷ್ಮೀಕಾಂತಂ

ವುಡ್ ಲ್ಯಾಂಡ್ಸ್
16—5—52ನೇ ಶುಕ್ರವಾರದಿಂದ
ಅಮೋಘ 3ನೇ ವಾರ
ದಿನವೂ 3 ಆಟಗಳು
" ಲಕ್ಷ್ಮೀ ನಾರಾಯಣ್ "
(ಹಿಂದಿ)
ಪಾತ್ರ:—ಮೀನಾಕುಮಾರಿ ಮಹಿಪಾಲ್

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ
ಸಂಪುಟ ೨] ೧೭-೫—೧೯೫೨ನೇ ಶನಿವಾರ [ಸಂಚಿಕೆ ೨೫೬

ದೇಶದಲ್ಲಿ ಬೇಕಾದಷ್ಟು ಆಹಾರ ದಾಸ್ತಾನಿದೆ

ಆಹಾರ ಶಾಖಾ ಕಾರ್ಯದರ್ಶಿ ಮತ್ತು ಲಂಡನ್ನಿನಲ್ಲಿರುವ ವಾಣಿಜ್ಯ ಪ್ರತಿನಿಧಿ ಸ್ಥಾನಗಳು ರದ್ದು

ಕನ್ನಡನಾಡು ನಾಟ್ಯ ಮತ್ತು ಸಂಗೀತ ಕೌಶಲ್ಯಗಳ ಕಲಾಬೀಡು

(ಹಿಂದಿನಪುಟದಿಂದ ಮುಂದುವರಿದಿದ್ದು)

ಗಬಾರದೆಂಬ ಶಂಕೆಯೂ ಸರ್ಕಾರದವರಿಗಿದೆ ಈಗ ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿವೃಂದದಲ್ಲಿ ಅನೇಕರು ಕನ್ನಡವನ್ನು ಬೋಧಕಭಾಷೆಯಾಗಿ ತೆಗೆದುಕೊಳ್ಳದೆ ಇಂಗ್ಲಿಷನ್ನೇ ಬೋಧಕ ಭಾಷೆಯಾಗಿ ಆರಿಸಿಕೊಳ್ಳುತ್ತಿದ್ದಾರೆ. ಇದು ಅವರವರ ಅಭಿರುಚಿಯನ್ನು ಮತ್ತು ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಸಾಧಕವಾಗುವುದನ್ನು ಅವಲಂಬಿಸಿರುವ ಸಂಗತಿ. ಕಲವು ವಿದ್ಯಾರ್ಥಿಗಳಿಗೆ ಇಂಗ್ಲೀಷು ಬೋಧಕಭಾಷೆಯಾಗಿರಬೇಕೆಂಬ ಅಭಿರುಚಿ ಅಲ್ಲದೆ ಇಂಗ್ಲೀಷ್ ಭಾಷೆಯು ಬೋಧಕ ಭಾಷೆಯಾಗಿದ್ದರೆ, ಮುಂದೆ ತಮಗೆ ಇಡೀ ಭಾರತದಲ್ಲಿ ವ್ಯವಹರಿಸುವ ಮತ್ತು ವಿದೇಶಗಳಲ್ಲಿ ವ್ಯಾಸಂಗ ಮಾಡುವ ಸಂಬಂಧದ ಪುರೋಭಿವೃದ್ಧಿ ಸಾಧನೆಗೆ ಅನುಕೂಲವೆಂಬ ಭಾವನೆ. ಆದಕಾರಣ, ಅನೇಕ ವಿದ್ಯಾರ್ಥಿಗಳು ಹೈಸ್ಕೂಲುಗಳಲ್ಲಿ ಇಂಗ್ಲೀಷನ್ನೇ ಬೋಧಕ ಭಾಷೆಯಾಗಿ ತೆಗೆದುಕೊಂಡು ವ್ಯಾಸಂಗ ಮಾಡುತ್ತಿದ್ದಾರೆ. ಇಲ್ಲಿ ನೆರೆದಿರುವ ತಮ್ಮಂಥ ಭಾಷಾಭಿಮಾನಿಗಳೂ ದೇಶಾಭಿಮಾನಿಗಳೂ ಅವರ ಬಲವನ್ನೂ ಅಭಿರುಚಿಯನ್ನೂ ಕನ್ನಡದ ಕಡೆಗೆ ತಿರುಗಿಸಿ, ಅವರು ಕನ್ನಡವನ್ನೇ ಬೋಧಕ ಭಾಷೆಯಾಗಿ ಆರಿಸಿಕೊಳ್ಳುವಂತೆ ಮಾಡುವ ವಿಚಾರವಾಗಿ ಬಹಳ ಕೆಲಸ ಮಾಡುವುದು ಸಾಧ್ಯವಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರ ಮತ್ತು ಅವರ ತಾಯಿತಂದೆಗಳ ಅಭಿರುಚಿಯನ್ನು ಕನ್ನಡದ ಕಡೆಗೆ ತಿರುಗಿಸಬೇಕಾದುದು ಭಾಷಾಭಿಮಾನಿಗಳಾದ ತಮ್ಮ ಕೆಲಸ ತಾವು ಅದನ್ನು ಆ ರೀತಿ ಕನ್ನಡದ ಕಡೆಗೆ ತಿರುಗಿಸಿದ ಮೇಲೆ, ಕನ್ನಡವನ್ನೇ ಸಮಗ್ರ ವ್ಯಾಸಂಗ ಕ್ರಮದಲ್ಲಿ ಬೋಧಕ ಭಾಷೆಯಾಗಿ ಏರ್ಪಡಿಸಿ ಪ್ರೋತ್ಸಾಹಿಸುವುದು ಸರ್ಕಾರದವರಾದ ನಮ್ಮ ಕೆಲಸ ಎಂದು ಹೇಳಿದರು

ಮೈಸೂರು ಸಂಸ್ಥಾನದ ಮುಖ್ಯ ಭಾಷೆಯಾದ ಕನ್ನಡಕ್ಕೆ ಸಾಧ್ಯ ಕಂಡಷ್ಟು ಮಟ್ಟಿಗೂ ಪ್ರೋತ್ಸಾಹ ಕೊಡಬೇಕೆಂದು ಸರ್ಕಾರ ಸಂಕಲ್ಪ ಮಾಡಿದ್ದಾರೆ. ಸಾಹಿತ್ಯ ಸೇವೆ ಮಾಡಿರುವ ವಿದ್ವಾಂಸರುಗಳಿಗೆ ತಕ್ಕ ರೀತಿ ಗೌರವಿಸಿ, ಉತ್ತೇಜನ ಕೊಡುವ ಒಂದು ವ್ಯವಸ್ಥೆಯು ಸರ್ಕಾರದ ಪರ್ಯಾಲೋಚನೆಯಲ್ಲಿದೆ. ದೇಹಪೋಷಣೆಗೆ ಉತ್ತಮವಾದ ಆಹಾರವು ಅಗತ್ಯವಾಗಿ ಬೇಕಾಗಿರುವಂತೆಯೇ ಮನಸ್ಸಿನ ಬೆಳವಣಿಗೆಗೂ ಶ್ರೇಷ್ಠವಾದ ಸಾಹಿತ್ಯವೂ ಕಲೆಗಳೂ ಅವಶ್ಯಕ. ಸಾಹಿತ್ಯಾಭಿವೃದ್ಧಿ ಮತ್ತು ಕಲಾಪೋಷಣೆಗೆ ಎಲ್ಲರೂ ನೆರವಾಗಬೇಕು. ಸರ್ಕಾರವು ಸಾಧ್ಯವಾದುದನ್ನೆಲ್ಲಾ ಮಾಡುವುದೆಂದು ಮುಖ್ಯಮಂತ್ರಿಗಳು ಹೇಳಿದರು.

ಗೋಧಿ, ಜೋಳ ಬೇಡ

ಬೆಂಗಳೂರು ಮೇ ೧೬

ಸಂಸ್ಥಾನದ ಹೋಟಲುಗಳಲ್ಲಿ ಊಟದಲ್ಲಿ ಒದಗಿಸುವ ಅಕ್ಕಿ ಪ್ರಮಾಣವನ್ನು ಶೇಕಡ ಅರ್ಧದಷ್ಟು ಕಡಿಮೆಮಾಡಬೇಕೆಂದು ಸರ್ಕಾರ ಆಜ್ಞೆಯಿತ್ತಿದೆ.

ಈ ಖೋತಾವನ್ನು ಗೋಧಿ ಬಳಕೆಯ ಪ್ರಮಾಣದಲ್ಲಿ ಹೆಚ್ಚಿಸಿ, ಒಟ್ಟು ೧೨ ಔನ್ಸ್‌ಗಳ ಪ್ರಮಾಣವನ್ನು ಹಾಗೆಯೇ ಉಳಿಸಲಾಗಿದೆ ಎಂದು ಆಹಾರ ಮಂತ್ರಿ ಶ್ರೀ ಸಿದ್ದವೀರಪ್ಪನವರು ಪತ್ರಿಕಾಪ್ರತಿನಿಧಿಗಳಿಗೆ ನಿನ್ನೆ ತಿಳಿಸಿದರು. ಅಕ್ಕಿದಾಸ್ತಾನನ್ನು ಉಳಿಸಿ, ಗೋಧಿ ಬಳಕೆಗೆ ಉತ್ತೇಜನ ಕೊಡಲು ಈರೀತಿ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಈಗಿನ ಆಹಾರಧಾನ್ಯಗಳ ಉಪಯೋಗದಂತೆ, ಈ ವರ್ಷಾಂತ್ಯದ ಮುಂದಿನ ಸುಗ್ಗಿಯವರೆಗೂ ಸಾಕಷ್ಟು ದಾಸ್ತಾನು ಸರ್ಕಾರದ ವಶದಲ್ಲಿದೆಯೆಂದು ಹೇಳಿದರು. ಶೇಖರಿಸಲು ಗೋಡೌನುಗಳಿಲ್ಲದ ಪ್ರಯುಕ್ತ, ಮೇ ತಿಂಗಳಿಗೆ ನಿಗದಿಯಾದ ಗೋಧಿ ಮತ್ತು ಮೈಲೋವನ್ನು ರವಾನಿಸಕೂಡದೆಂದು ಕೇಂದ್ರಸರ್ಕಾರವನ್ನು ಪ್ರಾರ್ಥಿಸಲಾಗಿದೆ ಎಂದರು.

ಅಕ್ಕಿ ಸರಬರಾಜಿನ ಪರಿಸ್ಥಿತಿ ಇನ್ನೂ ಉತ್ತಮಗೊಂಡಿಲ್ಲವಾದ್ದರಿಂದ ಈಗಲೇ ೧೨ ಔನ್ಸ್ ಪಡಿಯಲ್ಲಿ ಅಕ್ಕಿ ಪ್ರಮಾಣವನ್ನು ಹೆಚ್ಚಿಸಲು ಸಾಧ್ಯವಿಲ್ಲವೆಂದರು. ಪರಿಸ್ಥಿತಿಯು ಉತ್ತಮಗೊಂಡಾಗ, ಈ ಅನುಕೂಲವನ್ನು ಕೊಳ್ಳುವವರಿಗೆ ಒದಗಿಸಲಾಗುವುದೆಂದು ಶ್ರೀ ಸಿದ್ದವೀರಪ್ಪನವರು ತಿಳಿಸಿದರು.

ಮಿತವ್ಯಯ

ಬೆಂಗಳೂರು ಮೇ ೧೬

ಸಂಸ್ಥಾನ ಆರ್ಥಿಕ ಮಿತವ್ಯಯದೃಷ್ಟಿಯಿಂದ ಆಹಾರ ಮತ್ತು ಸಿವಿಲ್‌ಸಪ್ಲೈ ಶಾಖಾ ಕಾರ್ಯದರ್ಶಿ ಮತ್ತು ಲಂಡನ್ನಿನಲ್ಲಿರುವ ಮೈಸೂರಿನ ವಾಣಿಜ್ಯ ಪ್ರತಿನಿಧಿ ಸ್ಥಾನಗಳನ್ನು ಸರ್ಕಾರವು ರದ್ದುಗೊಳಿಸಿದೆ.

ಹಂಗಾಮಿ ಅಧ್ಯಕ್ಷರುಗಳ ಪ್ರಮಾಣಸ್ವೀಕಾರ

ಬೆಂಗಳೂರು ಮೇ ೧೬

ಮೈಸೂರು ಲೆಜಿಸ್ಲೆಟೀವ್ ಕೌನ್ಸಿಲ್ ಮತ್ತು ಲೆಜಿಸ್ಲೆಟಿವ್ ಅಸೆಂಬ್ಲಿಯ ಹಂಗಾಮಿ ಅಧ್ಯಕ್ಷರುಗಳಾದ ಶ್ರೀ ಸಂಪದ್ಗಿರಿರಾಯರು ಮತ್ತು ಶ್ರೀ ವಿ. ವೆಂಕಟಪ್ಪನವರು ಈದಿನ ೧೦ ಗಂಟೆಗೆ ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸುವರು.

ಪ್ರಧಾನ ಕಾರ್ಯದರ್ಶಿ

ಬೆಂಗಳೂರು ಮೇ ೧೬

ಆಹಾರಶಾಖಾ ಕಾರ್ಯದರ್ಶಿ ಶ್ರೀ ಶ್ರೀ ಪುಟ್ಟರಂಗಸ್ವಾಮಿಯವರು ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾಗಿ ಸರ್ಕಾರಿ ಆಜ್ಞೆ ಹೊರಬಿದ್ದಿದೆ.

ಶ್ರೀ ಇ. ವಿ. ಗಣಪತಿಅಯ್ಯರ್‌ರವರನ್ನು ಕೈಗಾರಿಕಾಶಾಖಾ ಡೈರೆಕ್ಟರ್, ಶ್ರೀ ಜಿ. ಬಿ. ಮಲ್ಲಾರಾಧ್ಯರವರನ್ನು ವಿದ್ಯಾಇಲಾಖಾಡೈರೆಕ್ಟರನ್ನಾಗಿ ವರ್ಗಾಯಿಸಲಾಗಿದೆ. ಶ್ರೀ ಕೆ. ಗುರುದತ್‌ರವರಿಗೆ ನಿವೃತ್ತಿಮುನ್ನ ೬ ತಿಂಗಳ ರಜಾ ಕೊಡಲಾಗಿದೆ.

ಅವಸರ ನಿಲುವಳಿ ಸೂಚನೆ

ಕೇಂದ್ರದ ಉಭಯ ಶಾಸನಸಭೆಗಳು ಒಟ್ಟಿಗೆ ಸೇರಿ ರಾಷ್ಟ್ರಾಧ್ಯಕ್ಷರ ಭಾಷಣ ಮುಗಿದನಂತರ ಎರಡು ಸಭೆಗಳೂ ಪ್ರತ್ಯೇಕವಾಗಿ ದೆಹಲಿಯಲ್ಲಿ ಸೇರಿದುವು. ಸೋಮವಾರದದಿನ ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಚರ್ಚೆ ನಡೆಯುತ್ತದೆ.

ಪ್ರಾಂತ್ಯಗಳಿಗೆ ಆಹಾರ ಸಬ್ಸಿಡಿಯನ್ನು ನಿಲ್ಲಿಸಿದ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಸೋಷಲಿಸ್ಟ್‌ಪಕ್ಷದ ಶ್ರೀ ಕೆ. ಸುಬ್ರಮಣ್ಯಂ ಮತ್ತು ಕಮ್ಯೂನಿಸ್ಟ್ ಪಕ್ಷದ ಶ್ರೀ ಎ. ಕೆ. ಗೋಪಾಲನ್‌ರವರು ಅವಸರ ನಿಲುವಳಿ ಸೂಚನೆಯನ್ನು ಮಂಡಿಸಿದರು

ರಾಷ್ಟ್ರಾಧ್ಯಕ್ಷರ ಭಾಷಣವನ್ನು ಸೋಮವಾರ ಚರ್ಚಿಸುವಾಗ ಈ ವಿಷಯವನ್ನು ತೆಗೆದುಕೊಳ್ಳಬಹುದೆಂದು ಸ್ಪೀಕರು ತಿಳಿಸಿದರು.

§ ತಾವು ಯಾವ ಪಕ್ಷಕ್ಕೂ ಸೇರಿಲ್ಲ ಎಲ್ಲಾ ಪಕ್ಷವು ತಮ್ಮದು ಎಂದು ಭಾರತ ಉಪರಾಷ್ಟ್ರಪತಿಯವರು ಹಿರಿಯ ಶಾಸನಸಭೆಯಲ್ಲಿ ಹೇಳಿರುವರು.

ನಾವುಗಳೆಲ್ಲರೂ ಯಾವ ಪಕ್ಷಕ್ಕೆ ಸೇರಿದ್ದರೂ ಐಕ್ಯತೆಯಿಂದ ಎಲ್ಲರೂ ಕೆಲಸ ಮಾಡುತ್ತಾ, ನಾವು ಗಳಿಸಿರುವ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬರುವುದಲ್ಲದೆ ಜನತೆಯ ಆರ್ಥಿಕಮಟ್ಟವನ್ನು ಹೆಚ್ಚಿಸಿ ಸುಖ ಶಾಂತಿಯನ್ನು ಕಲ್ಪಿಸಬೇಕು. ಎಂದು ರಾಷ್ಟ್ರಾಧ್ಯಕ್ಷರು ನಿನ್ನೆ ಭಾರತ ಉಭಯ ಶಾಸನಸಭಾಧಿವೇಶನ ಪ್ರಾರಂಭೋತ್ಸವ ಮಾಡುತ್ತಾ, ತಮ್ಮ ಭಾಷಣದಲ್ಲಿ ತಿಳಿಸಿದರು.

ಆಹಾರ ವಿಷಯವಾಗಿ ಪ್ರಸ್ತಾಪಿಸುತ್ತಾ, ವಸ್ತುಗಳ ಬೆಲೆಯನ್ನು ಸ್ಥಿರಪಡಿಸಲು ತಕ್ಕ ವ್ಯವಸ್ಥೆಮಾಡಲಾಗುತ್ತದೆ. ಮಳೆಯಿಲ್ಲದೆ ಕ್ಲಿಷ್ಟ ಪರಿಸ್ಥಿತಿಯುಂಟಾದೆಡೆ ಪರಿಹಾರಕಾರ್ಯಗಳಾಗುತ್ತಲಿವೆ. ಎಂಥ ಪರಿಸ್ಥಿತಿ ಬಂದರೂ ಎದುರಿಸಲು ಸಾಕಾದಷ್ಟು ಆಹಾರ ದಾಸ್ತಾನಿದೆಯೆಂದು ಹೇಳಿದರು.

ಪತ್ರಿಕೆಗಳಿಗೆ ಸಂಬಂಧಪಟ್ಟ ವಿಷಯ ಪರಿಶೀಲಿಸಲು ಪ್ರೆಸ್ ಕಮೀಷನ್ ನೇಮಿಸಲಾಗುತ್ತದೆಯೆಂದೂ ಹಿಂದೂಕೋಡ್ ಬಿಲ್ಲಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಶಾಸನ ತರಲಾಗುವುದೆಂದು ತಿಳಿಸಿದರು.

ಪರಿಹಾರ ಕಾರ್ಯಗಳು

ಮದ್ರಾಸಿನ ರಾಯಲಸೀಮೆ ಪ್ರದೇಶಗಳಲ್ಲಿ ಪರಿಹಾರಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿದೆ. ಸುಮಾರು ೧೫೦೦೦ ಕುಡಿಯುವನೀರಿನ ಬಾವಿಗಳನ್ನು ತೋಡಲು ನಿರ್ಧರಿಸಿದೆ ಇದಕ್ಕಾಗಿ ಒಂದು ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆಯೆಂದು ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೇಳಿರುವರು.

ಗೋಧಿ ೧॥ ಸೇರಿನಂತೆಯೇ ಮಾರಾಟ

ಮೈಸೂರು ೧೬

ರೂಪಾಯಿಗೆ ೨ ಸೇರು ಗೋಧಿ ೧೫ನೇ ತಾರೀಖಿನಿಂದಲೇ ಮಾರಲು ಸರ್ಕಾರ ಆಜ್ಞೆ ಮಾಡಿದ್ದರೂ ಮೈಸೂರು ಆಹಾರ ಡಿಪೋಗಳಲ್ಲಿ ನಿನ್ನೆ ಮೊನ್ನೆಯಲ್ಲಾ ೧॥ ಸೇರಿನಂತೆಯೇ ಮಾರುತ್ತಾರೆ.

ರೂಗೆ ೨ ಸೇರು ಮಾಡಿರುವುದರ ಬಗ್ಗೆ ಜನರಲ್ಲಿ ಸುದ್ದಿಯೇ ಹುಟ್ಟಿಲ್ಲ.

ಆಹಾರ ಶಾಖೆ ಇನ್ಸ್‌ಪೆಕ್ಟರ್ ದಸ್ತಗಿರಿ

ಬೆಂಗಳೂರು ಮೇ ೧೫

ಸಿವಿಲ್ ಪ್ರದೇಶದ ಆಹಾರ ಡಿಪೋ ಒಂದರಿಂದ ಧಾನ್ಯ ಅಕ್ರಮವಾಗಿ ಸಾಗಿ ಹೋಗುತ್ತಿದ್ದುದನ್ನು ಆಹಾರ ಸರಬರಾಜು ಇಲಾಖೆಯ ಸ್ಪೆಷಲ್ ಅಮಲ್ದಾರ್ ಪತ್ತೆ ಹಿಡಿದುದು ವರದಿಯಾಗಿದೆ.

ಸಿವಿಲ್ ಪ್ರದೇಶದ ಪುದುಪರಚೇರಿ ಡಿಪೋವಿನಿಂದ ಧಾನ್ಯ ಅಕ್ರಮವಾಗಿ ಸಾಗುತ್ತಿರುವುದನ್ನು ಸಂದೇಹಿಸಿದ ಆಹಾರ ಸರಬರಾಜು ಇಲಾಖೆಯ ಸ್ಪೆಷಲ್ ಅಮಲ್ದಾರ್ ಶ್ರೀ ಎ. ಇ. ಎಡ್ವಿನ್‌ರವರು ಇಂದು ಬೆಳಿಗ್ಗೆ ಡಿಪೋ ಬಳಿ ಹೊಂಚು ಕಾಯುತ್ತ ನಿಂತಿದ್ದರು.

ಬೆಳಿಗ್ಗೆ ಸುಮಾರು ೧೦-೩೦ ರ ಸಮಯದಲ್ಲಿ ಧಾನ್ಯ ತುಂಬಿಕೊಂಡು ಲಾರಿಯೊಂದು ಡಿಪೋವನ್ನು ಬಿಟ್ಟಿತು. ಅದನ್ನು ನಿಲ್ಲಿಸಿ ಚೆಕ್ ಮಾಡಿದಾಗ, ಲಾರಿಯಲ್ಲಿ ಒಂದು ಚೀಲ ಹೆಚ್ಚಿಗೆ ಇರುವುದು ಪತ್ತೆ ಆಯಿತು. ಧಾನ್ಯವನ್ನು ವರ್ತಕರಾದ ಸೈಯ್ಯದ್ ಹುಸೇನರವರಿಗೆ ಕೊಂಡೊಯ್ಯಲಾಗುತ್ತಿತ್ತು. ಲಾರಿಯನ್ನು ನಿಲ್ಲಿಸಿದಾಗ, ಲಾರಿಯಲ್ಲಿದ್ದ ಹುಸೇನರ ಮಗ ತಪ್ಪಿಸಿಕೊಂಡು ಹೊರಟುಹೋದರು.

ಲಾರಿ ಮತ್ತು ಡ್ರೈವರ್ ಮತ್ತು ಕೂಲಿಗಳೊಡನೆ ಡಿಪೋವಿಗೆ ವಾಪಸ ಹೋಗಿ, ಡಿಪೋವಿನಲ್ಲಿ ಚೆಕ್‌ಮಾಡಿದ ಮೇಲೆ ದಾಸ್ತಾನಿನಲ್ಲಿ ಒಂದು ಮೂಟೆ ಸಣ್ಣ ಅಕ್ಕಿ ಕಡಿಮೆ ಇದ್ದುದು ಪತ್ತೆಯಾಯಿತು.

ಆಹಾರ ಸರಬರಾಜಿನ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಕೆ. ಎಸ್. ಮಲ್ಲೇಗೌಡರು ಡಿಪೋವಿಗೆ ಭೇಟಿಯಿತ್ತು, ಪೋಲೀಸರನ್ನು ಕರೆಸಿದರು.

ಹುಸೇನರ ಮಗ ಮತ್ತು ಡಿಪೋ ಛಾರ್ಜಿನಲ್ಲಿರುವ ಇನ್ಸ್‌ಪೆಕ್ಟರ್ ಶ್ರೀ ವೆಂಕಟನರಸಿಂಹಾಚಾರ್‌ರವರನ್ನು ದಸ್ತಗಿರಿಮಾಡಲಾಯಿತು, ಮುಂದಿನ ತನಿಖೆ ನಡೆಯುತ್ತಿದೆ.

ಅರಣ್ಯದಿಂದ ಅಕ್ರಮ ಸಾಗಾಣಿಕೆ

ಬೆಂಗಳೂರು ಮೇ ೧೫

ಸಂಸ್ಥಾನದ 'ಅರಣ್ಯಗಳಲ್ಲಿರುವ ಮರಗಳ ಅಕ್ರಮ ಸಾಗಾಣಿಕೆಯಿರುವ ಬಗ್ಗೆ ತನಿಖೆ ನಡೆಸುವ ಮತ್ತು ತಡೆಗಟ್ಟುವ ವಿಶೇಷ ಅಧಿಕಾರವನ್ನು ಜಿಲ್ಲಾಧಿಕಾರಿ ಶ್ರೀ ಕೆ. ಶೇಷಗಿರಿರಾಯರಿಗೆ ವಹಿಸಲಾಗಿದೆ.

ಸಂಸ್ಥಾನಾದ್ಯಂತ ಅಧಿಕಾರವ್ಯಾಪ್ತಿಯುಳ್ಳ ಎಕ್ಸ್ ಆಫಿಷಿಯೋ ಕನ್ಸರ್‌ವೇಟರ್ ಆಗಿಯೂ ನೇಮಿಸಲಾಗಿದೆ.

ಭಾರತದ ಕಾಲೇಜೊಂದಕ್ಕೆ ನ್ಯೂಯಾರ್ಕ್ ನಗರ ವಾಸಿಗಳ ಸಹಾಯ

ನ್ಯೂಯಾರ್ಕಿನ ಇಂಡಿಯಾ ಹೌಸಿನಲ್ಲಿ ಸುಪ್ರಸಿದ್ಧ ಅಮೆರಿಕನ್ ಶಿಲ್ಪಿ ಮಿಲ್ಡ್ರೆಡ್ ಹೇವರ್ಡ್‌ನ ಕಲಾಕೃತಿಗಳನ್ನು ಪ್ರದರ್ಶಿಸಲಾಗಿದೆ. ಈ ಪ್ರದರ್ಶನದಿಂದ ಬಂದ ಹಣವನ್ನು ಅಹಮದ್ ನಗರದ ಕಾಲೇಜಿಗೆ ಕೊಡಲಾಗುವುದು

ಭಾರತದ ಕೌನ್ಸಿಲ್‌ರಾದ ಶ್ರೀ ಆರ್ಥರ್ ಲಾಲ್‌ರು ಈ ಪ್ರದರ್ಶನ ಏರ್ಪಡಿಸಿದ್ದಾರೆ. ಮೇ ೨೧ ರವರೆಗೆ ಈ ಪ್ರದರ್ಶನ ನಡೆಯುವುದು.

ಅಮೇರಿಕನ್ ಬ್ರಾಡ್‌ಕ್ಯಾಸ್ಟಿಂಗ್ ಕಂಪೆನಿ ಈ ಯೋಜನೆಯಲ್ಲಿ ಆಸಕ್ತಿ ತೋರಿಸಿದೆ. ಮೇ ೧೩ ರಲ್ಲಿ ಕೆಲವು ಪ್ರದರ್ಶನದ ಸಾಮಾನುಗಳನ್ನು ಟೆಲಿವಿಷನ್ ಮೂಲಕ ತೋರಿಸಲಾಯಿತು

ಅಹಮದ್ ನಗರ ಕಾಲೇಜಿನ ಪ್ರಿ॥ ಭಾಸ್ಕರ ಪಿ. ಹಿವಾಳೆಯವರು ಇಲ್ಲಿಗೆ ಬಂದಿದ್ದು ಅವರನ್ನು ಅಭೂತಪೂರ್ವವಾಗಿ ಸತ್ಕರಿಸಲಾಯಿತು. ಹಿವಾಳೆಯವರು ಅಮೇರಿಕನ್ನರ ಈ ಉದಾರಗುಣವನ್ನು ಪ್ರಕಟಿಸಿದರು.

ವಿಮಾನಗಳ ಪೆಟ್ರೋಲ್ ಬಳಕೆಯಲ್ಲಿ ಖೋತಾ

ಮೇ ೧೫ ರಿಂದ ವಿಮಾನಗಳ ಪೆಟ್ರೋಲಿನ ಬಳಕೆಯಲ್ಲಿ ಶೇ|| ೩೫ರಷ್ಟು ಖೋತಾ ಮಾಡಲು ಕೇಂದ್ರ ಸರ್ಕಾರವು ನಿರ್ಧರಿಸಿದೆ. ಈ ನಿರ್ಬಂಧವು ಸಿವಿಲ್ ವಿಮಾನಗಳಿಗೆ ಅನ್ವಯಿಸುವುದಲ್ಲದೆ ಮೊದಲು ೨೦ ದಿನಗಳ ಕಾಲ ಜಾರಿಯಲ್ಲಿರುವುದು

ದೇಶದಲ್ಲಿರುವ ಪೆಟ್ರೋಲಿನ ದಾಸ್ತಾನನ್ನು ಉಳಿಸಲೋಸುಗ, ಅಮೇರಿಕ ಮತ್ತು ಬ್ರಿಟನ್‌ಗಳ ಸರ್ಕಾರಗಳಂತೆಯೇ ಭಾರತ ಸರ್ಕಾರವು ಈ ನಿರ್ಧಾರವನ್ನು ಕೈಗೊಂಡಿದೆ

ಬ್ರಿಟನ್ನಿನ ಆಟಂ ಅಸ್ತ್ರ ಪ್ರಯೋಗ

ವಾಯುವ್ಯ ಆಸ್ಟ್ರೇಲಿಯಾದ ಕಡೆ ಇರುವ ಮಾಂಟೆಬೆಲ್ಲೋ ದ್ವೀಪಗಳಲ್ಲಿ, ಬ್ರಿಟನ್ನು ತನ್ನ ಮೊಟ್ಟಮೊದಲ ಅಣು ಅಸ್ತ್ರ ಪ್ರಯೋಗವನ್ನು ನಡೆಸಲು ತೀರ್ಮಾನಿಸಿದೆ.

ಆಹಾರ ಬೆಲೆ ಏರಿಕೆಗೆ ವಿರೋಧ ಕೂಡದು

ಆಹಾರ ಬೆಲೆ ಹೆಚ್ಚಿಸಿದುದರ ಬಗ್ಗೆ ಪ್ರತಿಭಟನೆ ಸೂಚಿಸಲು ಯಾವ ಬಗೆಯ ಮೆರವಣಿಗೆ ಮೊದಲಾದವುಗಳನ್ನು ನಾಸಿಕ್ ಪ್ರದೇಶದಲ್ಲಿ ನಡೆಸಕೂಡದೆಂದು ನಾಸಿಕ್ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಹೊರಡಿಸಿದ್ದಾರೆ.

ಸಾಕಷ್ಟು ಮೈದಾ, ರವೆ ಸರಬರಾಜು

ಬೆಂಗಳೂರು ಮೇ ೧೫

ಸಾಕಷ್ಟು ಪ್ರಮಾಣದಲ್ಲಿ ಮೈದಾ ಮತ್ತು ರವೆಯನ್ನು ರೇಷನ್ ಡಿಪೋಗಳಲ್ಲಿ ಮಾರಲು ಏರ್ಪಡಿಸಲಾಗಿದೆಯೆಂದೂ, ಗೋಧಿ ಬದಲು ಪೂರ್ಣವಾಗಿ, ಈ ಪದಾರ್ಥಗಳನ್ನು ಕೊಳ್ಳಲು ಸಾರ್ವಜನಿಕರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕೆಂದೂ, ಮೈದಾ ಹಿಟ್ಟನ್ನು ಪೌಂಡಿಗೆ ೬ ಆಣೆ ಮತ್ತು ರವೆಯನ್ನು ಪೌಂಡಿಗೆ ೬ ಆಣೆ ೬ ಕಾಸಿನಂತೆ ಮಾರಲಾಗುವುದೆಂದೂ ನಗರ ರೇಷನಿಂಗ್ ಅಧಿಕಾರಿಗಳು ತಿಳಿಸುತ್ತಾರೆ.

ಶ್ರೀ ಕೆ. ಸಿ. ರೆಡ್ಡಿಯವರು ಪ್ರಮಾಣವಚನ ಸ್ವೀಕರಿಸಿದರು

ಕೇಂದ್ರ ಸರ್ಕಾರದಲ್ಲಿ ಉತ್ಪತ್ತಿ ಶಾಖೆ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಪ್ರಮಾಣವಚನವನ್ನು ಸ್ವೀಕರಿಸಿದರು ಪ್ರಧಾನಿ ಮತ್ತು ಇತರ ಸಚಿವರು ಆಗ ಹಾಜರಿದ್ದರು.

ಮೈಸೂರು ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಯು ಮೇ ೩೧ ರಂದು ಕಾಂಗ್ರೆಸ್ ಕಚೇರಿಯಲ್ಲಿ ಸೇರುವ ಎಂ. ಪಿ. ಸಿ. ಸಿ. ಸಭೆಯಲ್ಲಿ ನಡೆಯುವುದು. ಅದೇ ದಿನ ಪ್ರತಿ ಕಾಂಗ್ರೆಸ್ ಜಿಲ್ಲಾ ಒಂದಕ್ಕೆ ಒಬ್ಬ ಪ್ರತಿನಿಧಿಯಂತೆ ಕಾರ್ಯಕಾರಿ ಸಮಿತಿಗೆ ಹನ್ನೊಂದು ಮಂದಿ ಸದಸ್ಯರನ್ನು ಆರಿಸಲಾಗುವುದು.

ಪೇಟೆ ಧಾರಣೆ

ಮೈಸೂರು: ತಾ|| 15-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಕ್ಕೆ		10-6	17-14
ಹೊಂಗೆಬೀಜ	,,	9-12	12-8
ಹುರುಳಿ	,,	33-2	34-0
ಸೀಗೆಕಾಯಿ	,,	3-4	3-5
ಮೆ. ಕಾಯಿ ಮಣಕ್ಕೆ		13-0	15-8
ಹುಣಸೇಹಣ್ಣು	,,	3-5	3-15
ತೆಂಗಿನಕಾಯಿ	1100ಕ್ಕೆ	119	187

ಚಿನ್ನ ಬೆಳ್ಳಿ ದರಗಳು

15-5-52	ರೂ.
ಸವರನ್	66-4
,,	66-6
ಚಿನ್ನ ತೊಲ	95-2
,, ಮೂಷ	94-0
ಬೆಳ್ಳಿ 100 ತೊಲ	169-0
,, ತೊಲ	1-12

ಅಂಚೆ ಮತ್ತು ತಂತಿ ಕೆಲಸಗಾರರ ಸಮ್ಮೇಳನ

ಬರೋಡದಲ್ಲಿ ಇದೇ ತಿಂಗಳು ೨೫ ರಿಂದ ೨೮ ರವರೆಗೆ ನಡೆಯಲಿರುವ ಅಖಿಲ ಭಾರತ ಅಂಚೆ ಮತ್ತು ತಂತಿ ಶಾಖೆಯ ಕೆಲಸಗಾರರ ಸಂಘಗಳ ಸಮ್ಮೇಳನದ ನಾಲ್ಕನೆ ಅಧಿವೇಶನದ ಆರಂಭೋತ್ಸವವನ್ನು ಶ್ರೀಮತಿ ಸುಚೇತಾ ಕೃಪಲಾನಿಯವರು ನೆರವೇರಿಸಲಿದ್ದಾರೆ.

ಫ್ರೆಂಚ್ ಭಾರತದಲ್ಲಿ ಸತ್ಯಾಗ್ರಹ

ಫ್ರೆಂಚ್ ಭಾರತದಲ್ಲಿ ಮುಂದಿನ ಆಗಸ್ಟಿನಿಂದ ಅಹಿಂಸಾತ್ಮಕ ಸತ್ಯಾಗ್ರಹವನ್ನು ತಯಾರಿಸಬೇಕೆಂದು, ಕಾರೆಕಲ್ ಫ್ರೆಂಚ್ ವಸಾಹತಿನ ರಾಷ್ಟ್ರೀಯ ತರುಣ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಅದರ ಅಧಿಕಾರವನ್ನು ಕೊಟ್ಟಿದೆ.

ಯುದ್ಧದಲ್ಲಿ ನಷ್ಟ

ಕೊರಿಯ ಯುದ್ಧದಲ್ಲಿ ೧೦ ಲಕ್ಷಕ್ಕಿಂತ ಹೆಚ್ಚು ಮಂದಿ ದಕ್ಷಿಣ ಕೊರಿಯನ್ನರು ಸತ್ತರೆಂದೂ, ಸುಮಾರು ಒಂದು ಕೋಟಿ ಮಂದಿ ಮನೆಮಠ ಕಳೆದುಕೊಂಡರೆಂದೂ ಹೇಳಲಾಗಿದೆ.

‡ ಇದೇ ಸಾಲು ಜುಲೈ ಒಂದನೇತಾರೀಖಿನಿಂದ ಉತ್ತರಪ್ರದೇಶದಲ್ಲಿ ಜಮೀನ್‌ದಾರಿ ರದ್ದಿನ ಶಾಸನವನ್ನು ಜಾರಿಗೆತರಲು ಅಲ್ಲಿಯ ಸರ್ಕಾರವು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ರಾಜಕಮಲ್

16—5—1952 ರಿಂದ

ಅಮೋಘವಾದ 2ನೇ ವಾರ

ಆಡ ಬ್ರತುಕು

(ಹೆಂಗಸಿನ ಬಾಳು)

(ತೆಲುಗು)

ಭೂಮಿಕೆ— ರಘುರಾಮಯ್ಯ, ಜ್ಯೂ. ಶ್ರೀರಂಜನಿ, ಕನಕಂ, ಲಕ್ಷ್ಮೀಕಾಂತಂ

ವುಡ್ ಲ್ಯಾಂಡ್ಸ್

16—5—52ನೇ ಶುಕ್ರವಾರದಿಂದ

ಅಮೋಘ 3ನೇ ವಾರ

ದಿನವಹಿ 3 ಆಟಗಳು

" ಲಕ್ಷ್ಮೀ ನಾರಾಯಣ್ "

(ಹಿಂದಿ)

ಪಾತ್ರ:—ಮೀನಾಕುಮಾರಿ ಮಹಿಪಾಲ್

ಪ್ರಕಾಶಕರು:—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಬಿ. ಸಿ. ಬ್ರಹ್ಮನೊರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೬೪ (ಲಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೭-೫-೧೯೫೨ನೇ ಶನಿವಾರ [ಸಂಚಿಕೆ ೨೫೭

ದೇಶದಲ್ಲಿ ಬೇಕಾದಷ್ಟು ಆಹಾರ ದಾಸ್ತಾನಿದೆ

ಆಹಾರ ಶಾಖಾ ಕಾರ್ಯದರ್ಶಿ ಮತ್ತು ಲಂಡನ್ನಿನಲ್ಲಿರುವ ವಾಣಿಜ್ಯ ಪ್ರತಿನಿಧಿ ಸ್ಥಾನಗಳು ರದ್ದು

ಕನ್ನಡನಾಡು ನಾಟ್ಯ ಮತ್ತು ಸಂಗೀತ ಕೌಶಲ್ಯಗಳ ಕಲಾಬೀಡು

(ಹಿಂದಿನಪುಟದಿಂದ ಮುಂದುವರಿದುದ್ದು)

ಗಲಾರದೆಂಬ ಶಂಕೆಯೂ ಸರ್ಕಾರದವರಿಗಿದೆ ಈಗ ಹೈಸ್ಕೂಲುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿವೃಂದದಲ್ಲಿ ಅನೇಕರು ಕನ್ನಡವನ್ನು ಬೋಧಕಭಾಷೆಯಾಗಿ ತೆಗೆದುಕೊಳ್ಳದೆ ಇಂಗ್ಲಿಷನ್ನೇ ಬೋಧಕ ಭಾಷೆಯಾಗಿ ಆರಿಸಿಕೊಳ್ಳುತ್ತಿದ್ದಾರೆ. ಇದು ಅವರವರ ಅಭಿರುಚಿಯನ್ನು ಮತ್ತು ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಸಾಧಕವಾಗುವುದನ್ನು ಅವಲಂಬಿಸಿರುವ ಸಂಗತಿ. ಹಲವು ವಿದ್ಯಾರ್ಥಿಗಳಿಗೆ ಇಂಗ್ಲೀಷು ಬೋಧಕಭಾಷೆಯಾಗಿರಬೇಕೆಂಬ ಅಭಿರುಚಿ ಅಲ್ಲದೆ ಇಂಗ್ಲೀಷ್ ಭಾಷೆಯು ಬೋಧಕ ಭಾಷೆಯಾಗಿದ್ದರೆ, ಮುಂದೆ ತಮಗೆ ಇಡೀ ಭಾರತದಲ್ಲಿ ವ್ಯವಹರಿಸುವ ಮತ್ತು ವಿದೇಶಗಳಲ್ಲಿ ವ್ಯಾಸಂಗ ಮಾಡುವ ಸಂಬಂಧದ ಪುರೋಭಿವೃದ್ಧಿ ಸಾಧನೆಗೆ ಅನುಕೂಲವೆಂಬ ಭಾವನೆ. ಆದಕಾರಣ, ಅನೇಕ ವಿದ್ಯಾರ್ಥಿಗಳು ಹೈಸ್ಕೂಲುಗಳಲ್ಲಿ ಇಂಗ್ಲೀಷನ್ನೇ ಬೋಧಕ ಭಾಷೆಯಾಗಿ ತೆಗೆದುಕೊಂಡು ವ್ಯಾಸಂಗ ಮಾಡುತ್ತಿದ್ದಾರೆ. ಇಲ್ಲಿ ನೆರೆದಿರುವ ತಮ್ಮಂಥ ಭಾಷಾಭಿಮಾನಿಗಳೂ ದೇಶಾಭಿಮಾನಿಗಳೂ ಅವರ ಬಲವನ್ನೂ ಅಭಿರುಚಿಯನ್ನೂ ಕನ್ನಡದ ಕಡೆಗೆ ತಿರುಗಿಸಿ, ಅವರು ಕನ್ನಡವನ್ನೇ ಬೋಧಕ ಭಾಷೆಯಾಗಿ ಆರಿಸಿಕೊಳ್ಳುವಂತೆ ಮಾಡುವ ವಿಚಾರವಾಗಿ ಬಹಳ ಕೆಲಸ ಮಾಡುವುದು ಸಾಧ್ಯವಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಅವರ ತಾಯಿತಂದೆಗಳ ಅಭಿರುಚಿಯನ್ನು ಕನ್ನಡದ ಕಡೆಗೆ ತಿರುಗಿಸಬೇಕಾದುದು ಭಾಷಾಭಿಮಾನಿಗಳಾದ ತಮ್ಮ ಕೆಲಸ ತಾವು ಅದನ್ನು ಆ ರೀತಿ ಕನ್ನಡದ ಕಡೆಗೆ ತಿರುಗಿಸಿದ ಮೇಲೆ, ಕನ್ನಡವನ್ನೇ ಸಮಗ್ರ ವ್ಯಾಸಂಗಕ್ರಮದಲ್ಲಿ ಬೋಧಕ ಭಾಷೆಯಾಗಿ ಏರ್ಪಡಿಸಿ ಪ್ರೋತ್ಸಾಹಿಸುವುದು ಸರ್ಕಾರದವರಾದ ನಮ್ಮ ಕೆಲಸ ಎಂದು ಹೇಳಿದರು

ಮೈಸೂರು ಸಂಸ್ಥಾನದ ಮುಖ್ಯ ಭಾಷೆಯಾದ ಕನ್ನಡಕ್ಕೆ ಸಾಧ್ಯ ಕಂಡಷ್ಟು ಮಟ್ಟಿಗೂ ಪ್ರೋತ್ಸಾಹ ಕೊಡಬೇಕೆಂದು ಸರ್ಕಾರ ಸಂಕಲ್ಪ ಮಾಡಿದ್ದಾರೆ. ಸಾಹಿತ್ಯ ಸೇವೆ ಮಾಡುತಿರುವ ವಿದ್ವಾಂಸರುಗಳಿಗೆ ತಕ್ಕ ರೀತಿ ಗೌರವಿಸಿ, ಉತ್ತೇಜನ ಕೊಡುವ ಒಂದು ವ್ಯವಸ್ಥೆಯು ಸರ್ಕಾರದ ಪರ್ಯಾಲೋಚನೆಯಲ್ಲಿದೆ, ದೇಹಪೋಷಣೆಗೆ ಉತ್ತಮವಾದ ಆಹಾರವು ಅಗತ್ಯವಾಗಿ ಬೇಕಾಗಿರುವಂತೆಯೇ ಮನಸ್ಸಿನ ಬೆಳವಣಿಗೆಗೂ ಶ್ರೇಷ್ಠವಾದ ಸಾಹಿತ್ಯವೂ ಕಲೆಗಳೂ ಅವಶ್ಯಕ. ಸಾಹಿತ್ಯಾಭಿವೃದ್ಧಿ ಮತ್ತು ಕಲಾಪೋಷಣೆಗೆ ಎಲ್ಲರೂ ನೆರವಾಗಬೇಕು. ಸರ್ಕಾರವು ಸಾಧ್ಯವಾದುದನ್ನೆಲ್ಲಾ ಮಾಡುವುದೆಂದು ಮುಖ್ಯಮಂತ್ರಿಗಳು ಹೇಳಿದರು.

ಗೋಧಿ, ಜೋಳ ಬೇಡ

ಬೆಂಗಳೂರು ಮೇ ೧೬

ಸಂಸ್ಥಾನದ ಹೋಟಲುಗಳಲ್ಲಿ ಊಟದಲ್ಲಿ ಒದಗಿಸುವ ಅಕ್ಕಿ ಪ್ರಮಾಣವನ್ನು ಶೇಕಡ ಅರ್ಧದಷ್ಟು ಕಡಿಮೆಮಾಡಬೇಕೆಂದು ಸರ್ಕಾರ ಆಜ್ಞೆಯಿತ್ತಿದೆ.

ಈ ಖೋತಾವನ್ನು ಗೋಧಿ ಬಳಕೆಯ ಪ್ರಮಾಣದಲ್ಲಿ ಹೆಚ್ಚಿಸಿ, ಒಟ್ಟು ೧೨ ಔನ್ಸ್‌ಗಳ ಪ್ರಮಾಣವನ್ನು ಹಾಗೆಯೇ ಉಳಿಸಲಾಗಿದೆ ಎಂದು ಆಹಾರ ಮಂತ್ರಿ ಶ್ರೀ ಸಿದ್ದವೀರಪ್ಪನವರು ಪತ್ರಿಕಾಪ್ರತಿನಿಧಿಗಳಿಗೆ ನಿನ್ನೆ ತಿಳಿಸಿದರು. ಅಕ್ಕಿದಾಸ್ತಾನನ್ನು ಉಳಿಸಿ, ಗೋಧಿ ಬಳಕೆಗೆ ಉತ್ತೇಜನ ಕೊಡಲು ಈರೀತಿ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಈಗಿನ ಆಹಾರಧಾನ್ಯಗಳ ಉಪಯೋಗದಂತೆ, ಈ ವರ್ಷಾಂತ್ಯದ ಮುಂದಿನ ಸುಗ್ಗಿಯವರೆಗೂ ಸಾಕಷ್ಟು ದಾಸ್ತಾನು ಸರ್ಕಾರದ ವಶದಲ್ಲಿದೆಯೆಂದು ಹೇಳಿದರು. ಶೇಖರಿಸಲು ಗೋಡೌನುಗಳಿಲ್ಲದ ಪ್ರಯುಕ್ತ ಮೇ ತಿಂಗಳಿಗೆ ನಿಗದಿಯಾದ ಗೋಧಿ ಮತ್ತು ಮೈಲೋವನ್ನು ರವಾನಿಸಕೂಡದೆಂದು ಕೇಂದ್ರಸರ್ಕಾರವನ್ನು ಪ್ರಾರ್ಥಿಸಲಾಗಿದೆ ಎಂದರು.

ಅಕ್ಕಿ ಸರಬರಾಜಿನ ಪರಿಸ್ಥಿತಿ ಇನ್ನೂ ಉತ್ತಮಗೊಂಡಿಲ್ಲವಾದ್ದರಿಂದ ಈಗಲೇ ೧೨ ಔನ್ಸ್ ಪಡಿಯಲ್ಲಿ ಅಕ್ಕಿ ಪ್ರಮಾಣವನ್ನು ಹೆಚ್ಚಿಸಲು ಸಾಧ್ಯವಿಲ್ಲವೆಂದರು. ಪರಿಸ್ಥಿತಿಯು ಉತ್ತಮಗೊಂಡಾಗ, ಈ ಅನುಕೂಲವನ್ನು ಕೊಳ್ಳುವವರಿಗೆ ಒದಗಿಸಲಾಗುವುದೆಂದು ಶ್ರೀ ಸಿದ್ದವೀರಪ್ಪನವರು ತಿಳಿಸಿದರು.

ಮಿತವ್ಯಯ

ಬೆಂಗಳೂರು ಮೇ ೧೬

ಸಂಸ್ಥಾನ ಆರ್ಥಿಕ ಮಿತವ್ಯಯದೃಷ್ಟಿಯಿಂದ ಆಹಾರ ಮತ್ತು ಸಿವಿಲ್‌ಸಪ್ಲೈ ಶಾಖಾ ಕಾರ್ಯದರ್ಶಿ ಮತ್ತು ಲಂಡನ್ನಿನಲ್ಲಿರುವ ಮೈಸೂರಿನ ವಾಣಿಜ್ಯ ಪ್ರತಿನಿಧಿ ಸ್ಥಾನಗಳನ್ನು ಸರ್ಕಾರವು ರದ್ದುಗೊಳಿಸಿದೆ.

ಹಂಗಾಮಿ ಅಧ್ಯಕ್ಷರುಗಳ ಪ್ರಮಾಣಸ್ವೀಕಾರ

ಬೆಂಗಳೂರು ಮೇ ೧೬

ಮೈಸೂರು ಲೆಜಿಸ್ಲೇಟೀವ್ ಕೌನ್ಸಿಲ್ ಮತ್ತು ಲೆಜಿಸ್ಲೆಟಿವ್ ಅಸೆಂಬ್ಲಿಯ ಹಂಗಾಮಿ ಅಧ್ಯಕ್ಷರುಗಳಾದ ಶ್ರೀ ಸಂಪದ್ಗಿರಿರಾಯರು ಮತ್ತು ಶ್ರೀ ವಿ. ವೆಂಕಟಪ್ಪನವರು ಈದಿನ ೧೦ ಗಂಟೆಗೆ ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸುವರು.

ಪ್ರಧಾನ ಕಾರ್ಯದರ್ಶಿ

ಬೆಂಗಳೂರು ಮೇ ೧೬

ಆಹಾರಶಾಖಾ ಕಾರ್ಯದರ್ಶಿ ಶ್ರೀ ಶ್ರೀ ಪುಟ್ಟರಂಗಸ್ವಾಮಿಯವರು ಪ್ರಧಾನ ಕಾರ್ಯದರ್ಶಿಯಾಗಿ ನೇಮಕವಾಗಿ ಸರ್ಕಾರಿ ಆಜ್ಞೆ ಹೊರಬಿದ್ದಿದೆ.

ಶ್ರೀ ಇ. ವಿ. ಗಣಪತಿಅಯ್ಯರ್‌ರವರನ್ನು ಕೈಗಾರಿಕಾಶಾಖಾ ಡೈರೆಕ್ಟರ್, ಶ್ರೀ ಜಿ. ಬಿ. ಮಲ್ಲಾರಾಧ್ಯರವರನ್ನು ವಿದ್ಯಾಇಲಾಖಾಡೈರೆಕ್ಟರನ್ನಾಗಿ ವರ್ಗಾಯಿಸಲಾಗಿದೆ. ಶ್ರೀ ಕೆ. ಗುರುದತ್‌ರವರಿಗೆ ನಿವೃತ್ತಿಮುನ್ನ ೬ ತಿಂಗಳ ರಜಾ ಕೊಡಲಾಗಿದೆ.

ಅವಸರ ನಿಲುವಳಿ ಸೂಚನೆ

ಕೇಂದ್ರದ ಉಭಯ ಶಾಸನಸಭೆಗಳು ಒಟ್ಟಿಗೆ ಸೇರಿ ರಾಷ್ಟ್ರಾಧ್ಯಕ್ಷರ ಭಾಷಣ ಮುಗಿದನಂತರ ಎರಡು ಸಭೆಗಳೂ ಪ್ರತ್ಯೇಕವಾಗಿ ದೆಹಲಿಯಲ್ಲಿ ಸೇರಿದುವು. ಸೋಮವಾರದದಿನ ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಚರ್ಚೆ ನಡೆಯುತ್ತದೆ.

ಪ್ರಾಂತ್ಯಗಳಿಗೆ ಆಹಾರ ಸಬ್ಸಿಡಿಯನ್ನು ನಿಲ್ಲಿಸಿದರ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ಸೋಷಲಿಸ್ಟ್‌ಪಕ್ಷದ ಶ್ರೀ ಕೆ. ಸುಬ್ರಮಣ್ಯಂ ಮತ್ತು ಕಮ್ಯೂನಿಸ್ಟ್ ಪಕ್ಷದ ಶ್ರೀ ಎ. ಕೆ. ಗೋಪಾಲನ್‌ರವರು ಅವಸರ ನಿಲುವಳಿ ಸೂಚನೆಯನ್ನು ಮಂಡಿಸಿದರು

ರಾಷ್ಟ್ರಾಧ್ಯಕ್ಷರ ಭಾಷಣವನ್ನು ಸೋಮವಾರ ಚರ್ಚಿಸುವಾಗ ಈ ವಿಷಯವನ್ನು ತೆಗೆದುಕೊಳ್ಳಬಹುದೆಂದು ಸ್ಪೀಕರು ತಿಳಿಸಿದರು.

§ ತಾವು ಯಾವ ಪಕ್ಷಕ್ಕೂ ಸೇರಿಲ್ಲ ಎಲ್ಲಾ ಪಕ್ಷವು ತಮ್ಮದು ಎಂದು ಭಾರತ ಉಪರಾಷ್ಟ್ರಪತಿಯವರು ಹಿರಿಯ ಶಾಸನಸಭೆಯಲ್ಲಿ ಹೇಳಿರುವರು.

ನಾವುಗಳೆಲ್ಲರೂ ಯಾವ ಪಕ್ಷಕ್ಕೆ ಸೇರಿದ್ದರೂ ಐಕ್ಯತೆಯಿಂದ ಎಲ್ಲರೂ ಕೆಲಸ ಮಾಡುತ್ತಾ, ನಾವು ಗಳಿಸಿರುವ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬರುವುದಲ್ಲದೆ ಜನತೆಯ ಆರ್ಥಿಕಮಟ್ಟವನ್ನು ಹೆಚ್ಚಿಸಿ ಸುಖ ಶಾಂತಿಯನ್ನು ಕಲ್ಪಿಸಬೇಕು. ಎಂದು ರಾಷ್ಟ್ರಾಧ್ಯಕ್ಷರು ನಿನ್ನೆ ಭಾರತ ಉಭಯ ಶಾಸನಸಭಾಧಿವೇಶನ ಪ್ರಾರಂಭೋತ್ಸವ ಮಾಡುತ್ತಾ, ತಮ್ಮ ಭಾಷಣದಲ್ಲಿ ತಿಳಿಸಿದರು.

ಆಹಾರ ವಿಷಯವಾಗಿ ಪ್ರಸ್ತಾಪಿಸುತ್ತಾ, ವಸ್ತುಗಳ ಬೆಲೆಯನ್ನು ಸ್ಥಿರಪಡಿಸಲು ತಕ್ಕ ವ್ಯವಸ್ಥೆಮಾಡಲಾಗುತ್ತದೆ. ಮಳೆಯಿಲ್ಲದೆ ಕ್ಲಿಷ್ಟ ಪರಿಸ್ಥಿತಿಯಿರುವೆಡೆ ಪರಿಹಾರಕಾರ್ಯಗಳಾಗುತ್ತಲಿವೆ. ಎಂಥ ಪರಿಸ್ಥಿತಿ ಬಂದರೂ ಎದುರಿಸಲು ಸಾಕಾದಷ್ಟು ಆಹಾರ ದಾಸ್ತಾನಿದೆಯೆಂದು ಹೇಳಿದರು.

ಪತ್ರಿಕೆಗಳಿಗೆ ಸಂಬಂಧಪಟ್ಟ ವಿಷಯ ಪರಿಶೀಲಿಸಲು ಪ್ರೆಸ್ ಕಮೀಷನ್ ನೇಮಿಸಲಾಗುತ್ತದೆಯೆಂದೂ ಹಿಂದೂಕೋಡ್ ಬಿಲ್ಲಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಶಾಸನ ತರಲಾಗುವುದೆಂದು ತಿಳಿಸಿದರು.

ಪರಿಹಾರ ಕಾರ್ಯಗಳು

ಮದ್ರಾಸಿನ ರಾಯಲುಸೀಮೆ ಪ್ರದೇಶಗಳಲ್ಲಿ ಪರಿಹಾರಕಾರ್ಯಗಳು ಸಮರ್ಪಕವಾಗಿ ನಡೆಯುತ್ತಿದೆ. ಸುಮಾರು ೧೫೦೦೦ ಕುಡಿಯುವನೀರಿನ ಭಾವಿಗಳನ್ನು ತೋಡಲು ನಿರ್ಧರಿಸಿದೆ ಇದಕ್ಕಾಗಿ ಒಂದು ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆಯೆಂದು ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೇಳಿರುವರು.

ಗೋಧಿ ೧|| ಸೇರಿನಂತೆಯೇ ಮಾರಾಟ

ಮೈಸೂರು ೧೬

ರೂಪಾಯಿಗೆ ೨ ಸೇರು ಗೋಧಿ ೧೫ನೇ ತಾರೀಖಿನಿಂದಲೇ ಮಾರಲು ಸರ್ಕಾರ ಆಜ್ಞೆ ಮಾಡಿದ್ದರೂ ಮೈಸೂರು ಆಹಾರ ಡಿಪೋಗಳಲ್ಲಿ ನಿನ್ನೆ ಮೊನ್ನೆಯೆಲ್ಲಾ ೧|| ಸೇರಿನಂತೆಯೇ ಮಾರಿರುತ್ತಾರೆ.

ರೂಗೆ ೨ ಸೇರು ಮಾಡಿರುವುದರ ಬಗ್ಗೆ ಜನರಲ್ಲಿ ಸೂಚನೆಯೇ ಹುಟ್ಟಿಲ್ಲ.

ಕನ್ನಡನಾಡು ನಾಟ್ಯ ಮತ್ತು ಸಂಗೀತ ಕೌಶಲ್ಯಗಳ ಕಲಾಬೀಡು

ಕನ್ನಡ ಸಾಹಿತ್ಯ ಮತ್ತು ಕಲಾ ಅಭಿವೃದ್ಧಿಗೆ ತಕ್ಕ ನೆರವುಬೇಕು

ಬೇಲೂರು ಮೇ ೧೬

ಕನ್ನಡ ಭಾಷೆಯು ನಮ್ಮ ದೇಶದ ಪ್ರಾಚೀನ ಭಾಷೆಗಳಲ್ಲೊಂದಾಗಿದೆ.

ಕನ್ನಡ ನಾಡಿನಲ್ಲಿ ಇತರ ಪ್ರಾಂತ್ಯಗಳಿಗಿಂತ ಮುಂಚಿತವಾಗಿಯೇ ರಸವತ್ತಾದ ಕಾರ್ಯಗಳು ಹುಟ್ಟಿದುವು. ಕನ್ನಡ ನಾಡಿನಲ್ಲಿ ಬಹಳ ಮುಂಚಿತವಾಗಿಯೇ ಬಹುಮುಖ್ಯವಾದ ವಿಕಾಸವುಂಟಾಯಿತು. ಅದು ಸಾಹಿತ್ಯದ ಕೃತಿರತ್ನಗಳ ರೂಪದಲ್ಲಿ ಮಾತ್ರವೇ ಅಲ್ಲದೆ, ಅಮೋಘವಾದ ಶಿಲ್ಪಿ ಅದ್ಭುತವಾದ ಚಿತ್ರಲೇಖನ, ಚಿತ್ತಾಕರ್ಷವಾದ ನಾಟ್ಯಕೌಶಲ್ಯ, ಮನೋಹರವಾದ ಕರ್ಣಾಟಕ ಸಂಗೀತ, ಅಸಾಧಾರಣವಾದ ವಾಣಿಜ್ಯ ಮತ್ತು ರಾಜಕೀಯವ್ಯವಸ್ಥೆ ಮುಂತಾದ ರೂಪಗಳಲ್ಲೂ ಪರಿಸ್ಫುಟವಾಯಿತು.

ಕನ್ನಡನಾಡು ನಾಟ್ಯ ಮತ್ತು ಸಂಗೀತ ಕೌಶಲ್ಯಗಳ ಭಂಡಾರ ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈದಿನ ಸಂಜೆ ಬೇಲೂರಿನಲ್ಲಿ ೩೫ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಮಾಡುತ್ತಾ, ತಮ್ಮ ಭಾಷಣದಲ್ಲಿ ತಿಳಿದರು.

ಇಂಗ್ಲೀಷ್ ಭಾಷೆಯ ಪಾತ್ರವೇನು

ಮುಖ್ಯಮಂತ್ರಿಗಳು ಸ್ವತಂತ್ರ ಭಾರತದಲ್ಲಿ ಇಂಗ್ಲೀಷ್ ಭಾಷೆಯ ಪಾತ್ರವೇನೆಂಬ ವಿಷಯವಾಗಿ ಪ್ರಸ್ತಾಪಿಸಿ ಈ ರೀತಿ ಹೇಳಿದರು—

ಯಂತ್ರಯುಗದ ನೂತನ ಸೃಷ್ಟಿಗಳಾದ ವಿಮಾನಗಳೇ ಮುಂತಾದ ಸೌಕರ್ಯಗಳ ಪ್ರಭಾವದಿಂದ ಕಾಲ ಮತ್ತು ದೂರದ ಪ್ರಯಾಸವೆಂಬ ಅನುಭವವೇ ನಮ್ಮ ಮನಸ್ಸಿಗೆ ಬರದಂತಾಗಿದೆ. ಜನತೆಯಲ್ಲಿ ಬಲವನ್ನೂ ಒಗ್ಗಟ್ಟನ್ನೂ ವೃದ್ಧಿಗೊಳಿಸಿ ಶಾಂತಿ ಸೌಹಾರ್ದಗಳನ್ನು ನೆಲೆಗೊಳಿಸಲು ಹತ್ತಾರು ಪ್ರಪಂಚ ಸಂಸ್ಥೆಗಳು ಈಗ ಕೆಲಸಮಾಡುತ್ತಿವೆ. ಇದರ ಫಲಿತಾಂಶವಾಗಿ, ಒಟ್ಟು ಪ್ರಪಂಚವೇ ಒಂದು ಕುಟುಂಬವೆಂಬ ಭಾವನೆಯು ಬಲಿಯುತ್ತಿದೆ. ಪ್ರಪಂಚದ ಆಗುಹೋಗುಗಳನ್ನು ರೂಪಿಸುವ ಅಗೋಚರವಾದ ದಿವ್ಯಶಕ್ತಿಗಳು, ಒಟ್ಟು ಪ್ರಪಂಚಕ್ಕೇ ಒಂದು ಸಂಯುಕ್ತ ಸರ್ಕಾರವು ಏರ್ಪಡುವ ವ್ಯವಸ್ಥೆಯ ಕಡೆಗೆ ನಮ್ಮನ್ನು ಸೆಳೆಯುತ್ತಿವೆ. ಮಾನವವರ್ಗವು ಸುಖಶಾಂತಿಗಳ ಸಿರಿಬೀಡಾಗಿ ಬಾಳುವಂತೆ ಮಾಡಲಿಚ್ಛಿಸುವ ಅನೇಕ ಮಹನೀಯರ ಮನಸ್ಸು ಈ ಉದಾತ್ತ ಧ್ಯೇಯಸಾಧನೆಗಾಗಿ ಹಾತೊರೆಯುತ್ತಿದೆ. ಮಹಾತ್ಮಾ ಗಾಂಧಿಯವರ ಆಶಯವೂ ಇದೇ ಆಗಿದ್ದಿತು. ಪ್ರಧಾನಿ ನೆಹರೂರವರೂ ಈ ಧ್ಯೇಯವನ್ನೇ ಪ್ರತಿಪಾದಿಸುತ್ತಿದ್ದಾರೆ. ಹೀಗೆ, ಒಟ್ಟು ಪ್ರಪಂಚಕ್ಕೇ ಒಂದು ಸಂಯುಕ್ತ ಸರ್ಕಾರವೇರ್ಪಡಬೇಕೆಂಬ ಆಸೆಯು ಅಂಕುರಿಸಿದೊಡನೆಯೇ, ಒಟ್ಟು ಪ್ರಪಂಚದ ವ್ಯವಹಾರಗಳಿಗಾಗಿ ಪ್ರಪಂಚವ್ಯಾಪಿಯಾದೊಂದು ಭಾಷೆಯಿರಬೇಕಾದ ಅಗತ್ಯವೂ ತಲೆದೋರುತ್ತದೆ. ಇಂದು ಪ್ರಪಂಚದಲ್ಲೇ ನಾಯಕಸ್ಥಾನಮಾನಗಳನ್ನು ಪಡೆದಿರುವ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಭಾಷೆಯು ಇಂಗ್ಲಿಷ್ ಭಾಷೆ. ಬಹಳವಾಗಿ ಅರಿತ ಸುರಿತ ಜನಾಂಗವೆಂದು ಪ್ರಸಿದ್ಧವಾದ ಇಂಗ್ಲೀಷರ ಭಾಷೆಯೂ ಇದೇ ಆಗಿದೆ. ಮಿಕ್ಕೆಲ್ಲ ಭಾಷೆಗಳಿಗಿಂತ ಮಿಗಿಲಾದ ಸಾಹಿತ್ಯಸಂಪತ್ತನ್ನು ಪಡೆದಿರುವ ಭಾಷೆಯೂ ಇದು. ಈ ರೀತಿ ಉತ್ತಮ ಸ್ಥಾನದಲ್ಲಿರುವ ಇಂಗ್ಲೀಷ್ ಭಾಷೆಯು ಈಗಾಗಲೇ ಪ್ರಪಂಚದ ಭಾಷೆಯಾಗಿ ಪರಿಗಣಿಸಲ್ಪಡುವ ಸ್ಥಿತಿಗೆ ಏರಿಯೇ ಇದೆ. ಅದರ ಯೋಗ್ಯತೆಯ ದೃಷ್ಟಿಯಿಂದ ತೂಗಿ ನೋಡಿದರೆ, ಅದು ಆ ಸ್ಥಿತಿಗೆ ಏರುವುದು ಯುಕ್ತವೂ ಹೌದು. ಆದಕಾರಣ, ನಾವು ಇಂಗ್ಲಿಷ್ ಭಾಷೆಯನ್ನು ಕಲಿಯುವುದು ಅಗತ್ಯವೆಂಬುದನ್ನು ಹೇಳಬೇಕಾದ ಅವಶ್ಯಕತೆಯೇ ಇಲ್ಲವೆಂದರು.

ಪ್ರಾದೇಶಿಕ ಭಾಷೆಗಳ ಸ್ಥಾನಮಾನವೇನು

ಪ್ರಾದೇಶಿಕ ಭಾಷೆ ವಿಷಯವಾಗಿ ಮಾತನಾಡುತ್ತಾ, ಅಖಿಲ ಭಾರತದ ವ್ಯವಹಾರದ ಉದ್ದೇಶಗಳಿಗಾಗಿ ಹಿಂದಿ ಭಾಷೆಯಲ್ಲಿ ಮಾತನಾಡುವವರು ಮತ್ತು ಹಿಂದಿ ಭಾಷೆಯನ್ನು ಬಲ್ಲವರು ಭಾರತದಲ್ಲಿ ಬಹು ಸಂಖ್ಯಾತರಿರುವರು. ಆದಕಾರಣ ಭಾರತದ ಸರ್ಕಾರಿ ಭಾಷೆ ಹಿಂದಿಯು ಇರಬೇಕಾದುದು ಅಪೇಕ್ಷಣೀಯವೆಂದು ಅಂಗೀಕೃತವಾಗಿದೆ.

ಹಿಂದೀ ಭಾಷೆ ಮಾತನಾಡದವರು ವಾಸವಾಗಿರುವ ಪ್ರದೇಶಗಳಲ್ಲಿ ವ್ಯವಹಾರ ಮಟ್ಟಿಗೆ ಮಾತ್ರವೇ ಹಿಂದೀ ಭಾಷೆ ನಿಯೋಜಿಸಬೇಕು. ಜನಜೀವನದ ಉಳಿದ ಸಮಸ್ತ ವ್ಯವಹಾರಗಳೂ ಪ್ರಾದೇಶಿಕ ಭಾಷೆಯಲ್ಲೇ ಇರಬೇಕು. ಪ್ರಾದೇಶಿಕ ಭಾಷೆಗೆ ತಕ್ಕ ಸ್ಥಾನಮಾನಗಳಿರಲೇಬೇಕು. ಅಷ್ಟೇ ಅಲ್ಲ. ಹಿಂದೀ ಭಾಷೆಯು ಮಾತೃಭಾಷೆಯಾಗಿರುವವರುಕೂಡ ಪ್ರಾದೇಶಿಕ ಭಾಷೆಗಳಲ್ಲೊಂದನ್ನು ಕಲಿಯಬೇಕೆಂದುಹೇಳಿದರು.

ಬೋಧಕಭಾಷೆ ಯಾವುದಾಗಬೇಕು ?

ಕನ್ನಡ ಬೋಧಕಭಾಷೆಯಾಗುವ ವಿಷಯವಾಗಿ ಪ್ರಸ್ತಾಪಿಸಿ—ಕನ್ನಡವು ಬೋಧಕ ಭಾಷೆಯಾಗಬೇಕೆಂಬ ಆಶಯವೇನೋ ಸರ್ಕಾರದವರಿಗಿದೆ. ಆದರೆ, ಅದನ್ನು ವಿದ್ಯಾರ್ಥಿಗಳ ಮೇಲೆ ಒತ್ತಾಯಪೂರ್ವಕವಾಗಿ ಉಪಯೋಗಿಸುವುದು ನ್ಯಾಯವಾ

(ಮುಂದಿನಪುಟ ನೋಡಿ)

ಪೇಟೆ ಧಾರಣೆ

ಮೈಸೂರು ತಾ|| 16-5-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ	12-4	17-4
ಹೊಂಗೆಬೀಜ ,,	12-0	——
ಹುರುಳಿ ,,	34-4	——
ಸೀಗೆಕಾಯಿ ,,	3-4	——
ಮೆ. ಕಾಯಿ ಮಣಕ್ಕೆ	14-10	——
ಹುಣಸೇಹಣ್ಣು ,,	3-5	3-15
ತೆಂಗಿನಕಾಯಿ 1100ಕ್ಕೆ	147	185

ಚಿನ್ನ ಬೆಳ್ಳಿ ದರಗಳು

16-5-52	ರೂ.
ಸವರನ್	66-4
,,	66-6
ಚಿನ್ನ ತೊಲ	94-0
,, ಮೂಸ	92-14
ಬೆಳ್ಳಿ 100 ತೊಲ	166-0
,, ತೊಲ	1-11

ನ್ಯೂ ಅಪೇರ

16—5—52 ರಿಂದ

ಅಮೋಘವಾದ

2ನೇ ವಾರ

ಪ್ರತಿದಿನ 3 ಆಟಗಳು

ಜೂಪಿಟರ್ಸ್‌ರವರ—

* ರಾಣಿ *

(ತಮಿಳು)

ಪಾತ್ರ:— ‡ ಭಾನುಮತಿ ‡

‡ ಬಾಲಚಂದರ್ ‡

‡ ವಹಾಬ್ ಕಾಶ್ಮೀರಿ ‡

ರಣಜಿತ್

೧೬-೫-೫೨ ರಿಂದ ಅಮೋಘಪ್ರಾರಂಭ

* ಘುಂಗ್ರು *

ಪಾತ್ರ:—ಸುಮಿತ್ರಾ, ಓಂಪ್ರಕಾಶ್, ಕುಲ್‌ದೀಪ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ

ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ

ಜೈಹಿಂದ್ ಪ್ರೆಸ್, ಮೈಸೂರು

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು

ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.

ಇತರ ಪಿಂಗಾಣಿ ಸಾಧನೋಪಕರಣಗಳ

ಕೇಳ್ವಿಕೆಗಳು ವಹಿಸಲ್ಪಡುವುವು.

*

ಹೆಚ್ಚಿನ ವಿವರಗಳಿಗೆ ಬರೆಯಿರಿ—

ಗೌರ್ನಮೆಂಟ್ ಪೋರ್ಸಲೇನ್

ಫ್ಯಾಕ್ಟರಿ, ಮಲ್ಲೇಶ್ವರಂ

ಬೆಂಗಳೂರು ೩.

ಫೋನ್ ೫೭೪ (ಲೈನ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೮—೫—೧೯೫೨ನೇ ಭಾನುವಾರ [ಸಂಚಿಕೆ ೨೫೭

ಭಾರತೀಯರ ಸಮಸ್ಯೆ ನ್ಯಾಯ ಮತ್ತು ಮೈತ್ರಿಹಿತವಾಗಿ ಪರಿಹಾರವಾಗಲಿ

೪೦ ಕೋಟಿ ರೂಪಾಯಿ ಬೆಲೆಬಾಳುವ ಹತ್ತಿ ನಿರಾಕರಣೆ

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ರಾಜಪ್ರಮುಖರ ಸಂದೇಶ

ಬೇಲೂರು ಮೇ ೧೭

ಬೇಲೂರಿನಲ್ಲಿ ಸಮಾವೇಶಗೊಳ್ಳಲಿರುವ ಮೂವತ್ತೈದನೆಯ ಸಾಹಿತ್ಯ ಸಮ್ಮೇಳನಕ್ಕೆ ನಮಗೆ ಆಹ್ವಾನವಿತ್ತಿರುವುದಕ್ಕೆ ನಾವು ಬಹಳ ಹರ್ಷರಾಗಿದ್ದೇವೆ.

ನಮ್ಮ ನಾಡಿನ ಪವಿತ್ರ ನದಿಯಾದ ಕಾವೇರಿಯಿಂದ ಗೋದಾವರಿಯವರೆಗೂ ಪ್ರಸರಿಸಿದ್ದ ಕನ್ನಡನಾಡಿನಲ್ಲೆಲ್ಲಿಯೂ ಕನ್ನಡಮಾತೆಯ ಗಾಂಭೀರ್ಯಪೂರಿತ ಮಧುರ ವಚನಗಳು ಅಂದು ಕೇಳಿಬರುತ್ತಿದ್ದವೋ ಅಂತೆಯೇ ಈಗಲೂ ನಾಡ್ನಾಣೆ ಕಟ್ಟು ಎಲ್ಲೆಡೆಗಳಲ್ಲೂ ತನ್ನ ಗಾಂಭೀರ್ಯವನ್ನು ವನ್ನು ಬೀರಲೆಂಬ ಆಕಾಂಕ್ಷೆಯಿಂದಲೂ ಮತ್ತು ಕನ್ನಡ ಸಾಹಿತ್ಯವೂ ಹಲವು ತೆರನಾಗಿ ಬೇಗ ಶೋಭಿಸಲೆಂಬ ಮಹತ್ವಾಕಾಂಕ್ಷೆಯಿಂದಲೂ ಕೂಡಿ ಹಾಗೆ ಸಾಧನಗೊಳಿಸಲು ಪ್ರಯತ್ನಿಸುತ್ತಿರುವ ಕನ್ನಡ ಭಾಷಾಭಿಮಾನಿಗಳಾದ ನಿಮ್ಮೆಲ್ಲರಿಗೂ ಸಮ್ಮೇಳನದಲ್ಲಿ ಭಾಗವಹಿಸುವ ಸದಸ್ಯರಿಗೂ ಪ್ರೇಕ್ಷಕವರ್ಗಕ್ಕೂ ನಮ್ಮ ಚಲುವು ಕನ್ನಡನಾಡಿನ ಪ್ರಜೆಗಳಿಗೂ ಸಮಸ್ತ ಸನ್ಮಂಗಳಗಳು ಉಂಟಾಗಲೆಂದೂ ಕೈಗೊಂಡಿರುವ ನಿಮ್ಮ ಕಾರ್ಯವು ಯಶಸ್ವಿಯಾಗಲೆಂದೂ ಹಾರೈಸುತ್ತೇವೆ ಎಂದು ಮೈಸೂರಿನ ರಾಜಪ್ರಮುಖರು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕಳುಹಿಸಿದ ಸಂದೇಶದಲ್ಲಿ ತಿಳಿಸಿದ್ದಾರೆ.

ಸಿಂಗಪುರ ಸರ್ಕಾರದ ಕ್ಷಮೆ

ಫಕ್ತೂನ್ ಜಿರ್ಗಾ ಎ ಹಿಂದ್ ಸಂಸ್ಥೆಯ ಅಧ್ಯಕ್ಷರಾದ ಮೌಲಾನಾ ಮಹಮದ್ ಅಕ್ಬರ್ ಖಾದರವರು ಇಂಡೋನೇಷಿಯಾಕ್ಕೆ ತೆರಳುವ ಸಂದರ್ಭದಲ್ಲಿ ಸಿಂಗಪುರಕ್ಕೆ ಭೇಟಿಕೊಟ್ಟಾಗ ಸಿಂಗಪುರ ಸರ್ಕಾರವು ಅವರನ್ನು ದಸ್ತಗಿರಿ ಮಾಡಿದ ಅಪರಾಧಕ್ಕಾಗಿ ಭಾರತ ಸರ್ಕಾರದ ಕ್ಷಮಾಪಣೆಯನ್ನು ಕೇಳಿಕೊಂಡಿದೆ.

ಚೈನಾದಿಂದ ಮೈಲೋ

ಚೈನಾದಿಂದ ಮದ್ರಾಸಿಗೆ ೧೦ ಸಾವಿರ ಟನ್ ಮೈಲೊ ಬಂದಿದೆ.

ವಿವಾಹ ಮಹೋತ್ಸವ

ಮಾಜಿ ಅರ್ಥಿಕ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರ ಜ್ಯೇಷ್ಠಪುತ್ರ ಶ್ರೀ ರಾಮದಾಸ್ ಮತ್ತು ಹುಬ್ಬನಹಳ್ಳಿಯಲ್ಲಿರುವ ಶ್ರೀ ಸಿಂಗೇಗೌಡರ ಪುತ್ರಿ ಶ್ರೀಮತಿ ೧೦ ಚಾರವರ ವಿವಾಹವು ಹುಬ್ಬನಹಳ್ಳಿಯಲ್ಲಿ ನಾಳೆ ಜರುಗಲಿದೆ.

ಆಂಧ್ರಪ್ರಾಂತ್ಯ ರಚನೆಗಾಗಿ ಪುನಃ ಉಪವಾಸ

ಆಂಧ್ರಪ್ರಾಂತ್ಯರಚನೆಗಾಗಿ ಜೂನ್ ಮಾಹೆಯಲ್ಲಿ ಸತ್ಯಾಗ್ರಹವನ್ನು ಆಚರಿಸುವ ಮುನ್ನ ಸ್ವಾಮಿ ಸೀತಾರಾಂರವರು ಇದೇ ೨೫ನೇ ತಾ|| ನಿಂದ ಧೀವಮಾವರಂನಲ್ಲಿ ಉಪವಾಸವನ್ನು ಪ್ರಾರಂಭಮಾಡಲಿರುವರು.

ಸ್ವಾಮಿ ಸೀತಾರಾಂ ಮತ್ತು ತಮ್ಮ ಭೇಟಿಯ ವಿಷಯವಾಗಿ ಮದ್ರಾಸು ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾತನಾಡುತ್ತಾ ತಾವು ಈಗ ಅವರನ್ನು ಭೇಟಿಮಾಡಲು ಅವಕಾಶಹೊಂದಿಲ್ಲವೆಂದೂ ಆದಾಗ್ಯೂ ಆಂಧ್ರಪ್ರಾಂತ್ಯ ರಚನೆಯಬಗ್ಗೆ ತಮ್ಮ ಅಭಿಪ್ರಾಯವನ್ನು ಈಗಾಗಲೇ ತಿಳಿಸಿರುವುದಾಗಿ ಹೇಳಿರುವರು. ಸಮಯ ಕಳೆದಂತೆಲ್ಲಾ ಆಂಧ್ರಪ್ರಾಂತವನ್ನು ಪ್ರತ್ಯೇಕಿಸಿ ರಚಿಸುವುದು ಕಷ್ಟವೆಂಬುದೇ ತಮ್ಮ ಅಭಿಪ್ರಾಯ, ಕೇಂದ್ರ ಸರ್ಕಾರವು ಈ ವಿಷಯವನ್ನೂ ಮನಗಂಡು ತಕ್ಕ ಕಾರ್ಯಕ್ರಮವೆಸಗುತ್ತಲಿರುವುದಾಗಿ ಇದರಲ್ಲಿ ಅನೇಕ ತೊಡಕುಗಳಿವೆಯೆಂದು ರಾಜಾಜಿಯವರು ಹೇಳಿರುವರು

ಮೈಸೂರಿನಿಂದ ಕೊಡಗಿಗೆ ವಿದ್ಯುಚ್ಛಕ್ತಿ

ಮೈಸೂರು ಸಂಸ್ಥಾನದಿಂದ ಕೊಡಗಿಗೆ ವಿದ್ಯುಚ್ಛಕ್ತಿಯನ್ನು ತರಲು ಸಂಧಾನ ಮುಕ್ತಾಯವಾಗಿದೆಯೆಂದು ಕೊಡಗಿನ ಗೃಹಸಚಿವ ಶ್ರೀ ಕೆ. ಮಲ್ಲಪ್ಪನವರು ನುಡಿದು, 'ಈಗ ಈ ವಿಷಯದ ಬಗ್ಗೆ ನಿರ್ಧಾರ, ಯೋಜನಾ ಸಮಿತಿ ಹಾಗೂ ಭಾರತ ಸರ್ಕಾರಗಳಿಗೆ ಸೇರಿದ್ದು' ಎಂದರು.

ಮೈಸೂರು ರಾಜಪ್ರಮುಖರು ಮೇ ೨೫ ರಂದು ಕೊಡಗಿಗೆ ಭೇಟಿಯಿತ್ತಾಗ ಈ ಬಗ್ಗೆ ಅವರ ಸಚಿವರುಗಳಿಗೆ ಸೂಚನೆ ಕೊಡಲು ಕೊಡಗು ಸರ್ಕಾರ ಪ್ರಾರ್ಥಿಸುವುದೆಂದು ಶ್ರೀ ಮಲ್ಲಪ್ಪನವರು ಹೇಳಿದರು.

ಕೊಡಗಿಗೆ ಜ|| ಕಾರಿಯಪ್ಪನವರ ಭೇಟಿ

ಭಾರತದ ಮಹಾ ದಂಡನಾಯಕ ಜನರಲ್ ಕಾರಿಯಪ್ಪನವರು ಒಂದುವಾರದ ಕಾಲತಮ್ಮೂರಾದ ಕೊಡಗಿಗೆ ಭೇಟಿಕೊಡುವರೆಂದು ತಿಳಿದುಬಂದಿದೆ.

ಮೇ ೨೬ ರಂದು ಕೊಡಗಿಗೆ ಆಗಮಿಸಿ ಜ|| ಕಾರಿಯಪ್ಪನವರು ದೆಹಲಿಗೆ ಹಿಂತಿರುಗುತ್ತಾ ಮಾರ್ಗದಲ್ಲಿ ಮೈಸೂರಿಗೆ ಜೂನ್ ಒಂದರಂದು ಬರಲಿರುವರು.

ಮಾಜಿ ಸೈನೀಕರ ಪುನರ್ ವ್ಯವಸ್ಥೆ

ಬೆಂಗಳೂರು ಮೇ ೧೭

ಮೈಸೂರಿನಲ್ಲಿ ನಿವೃತ್ತರಾದ ಸೈನಿಕರಿಗೆ ಪುನರ್‌ವ್ಯವಸ್ಥೆಗಾಗಿ ಕೇಂದ್ರವು ಈ ಯೋಜನೆಗಳನ್ನೊಪ್ಪಿದೆ

೧ ಹುಣಸೂರು ತಾಲ್ಲೋಕಿನಲ್ಲಿ ಸುಮಾರು ೧,೨೬,೦೦೦ ರೂ. ವೆಚ್ಚದಲ್ಲಿ ೩೫೦ ಜನರಿಗೆ ಆಗುವಷ್ಟು ಕೋಆಪರೇಟಿವ್ ಲ್ಯಾಂಡ್ ಕಾಲೋನಿಯನ್ನು ಒದಗಿಸುವುದು.

೨ ಸುಮಾರು ೯೦ ಜನರಿಗೆ ಕೆಲಸ ಒದಗಿಸಲು ಬೆಂಗಳೂರಿನಲ್ಲಿ ಆಟೋರಿಕ್ಷಾ, ಲಾರಿ ಮತ್ತು ಆಟೋ-ವರ್ಕ್‌ಷಾಪ್ ಯೋಜನೆ.

೩. ಸುಮಾರು ೩೦೦ ಜನರಿಗೆ ೬ ತಿಂಗಳಿಂದ ಒಂದುವರ್ಷದವರೆಗೆ ಟೆಕ್ನಿಕಲ್ ಶಿಕ್ಷಣ ಕೊಡುವುದು. ಆಗ ೨೫ ರೂಗಳಂತೆ ಸಂಭಾವನೆ ಕೊಡುವುದು.

೪. ವ್ಯಕ್ತಿಗೆ ಸರಾಸರಿ ೫೦೦ ರೂ.ಗಳಂತೆ ಸುಮಾರು ೫೦೦ ಜನರಿಗೆ ಜಮೀನುಗಳಲ್ಲಿ ನೆಲಸಲು ಧನ ಕೊಡುವುದು.

ಲಕ್ಷಾಧಿಪತಿ ಭಿಕ್ಷು ವಾದ

ಬೊಂಬಾಯಿಯಲ್ಲಿ ಇಂದ್ರವದನ್ ಎಂಬ ೧೯ ವರ್ಷದ ಲಕ್ಷಾಧಿಪತಿಯು ಇಹಲೋಕದ ಸುಖಸಂಪತ್ತು ಭೋಗ್ಯಗಳನ್ನೆಲ್ಲಾ ತೊರೆದು ಜೈನ ಭಿಕ್ಷು ದೀಕ್ಷೆಯನ್ನು ತೆಗೆದುಕೊಂಡನು. ಆತನಿಗೆ ತಾಯಿ ಮತ್ತು ಇಬ್ಬರು ಸಹೋದರರು ಇಬ್ಬರು ಸಹೋದರಿಯರಿರುವರು.

ಈ ಸಮಾರಂಭ ನಡೆದದಿನ ಸಾವಿರಾರುಜನರು ಸೇರಿದ ಮೆರವಣಿಗೆಯು ಆತನ ಮನೆಯಿಂದ ಜೈನ ದೇವಾಲಯಕ್ಕೆ ನಡೆಯಿತು. ಬೊಂಬಾಯಿನ ಮೇಯರ್ ಶ್ರೀ ಎಸ್. ದೇಸಾಯಿ, ಖ್ಯಾತ ಕೈಗಾರಿಕೋದ್ಯಮಿ ಶ್ರೀ ಕಸ್ತೂರಿಬಾಯ್ ಲಾಲ್‌ಬಾಯ್ ಮುಂತಾದವರೆಲ್ಲರೂ ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಈ ಸಮಾರಂಭದ ಅಂಗವಾಗಿ ಬೊಂಬಾಯಿನ ಪ್ರಮುಖ ವ್ಯಾಪಾರಸಂಸ್ಥೆಗಳ ಅಂಗಡಿಗಳನ್ನೂ ಮುಚ್ಚಲಾಗಿತ್ತು.

೪೧ ಮಸೂದೆಗಳು

ಪ್ರಸಕ್ತ ಪಾರ್ಲಿಮೆಂಟು ಅಧಿವೇಶನದಲ್ಲಿ ೪೧ ಮಸೂದೆಗಳನ್ನು ಮಂಡಿಸಲಾಗುತ್ತದೆಯೆಂದು ಗೊತ್ತಾಗಿದೆ.

ಸಿಂಹಳ ಭಾರತೀಯರ ಸಮಸ್ಯೆಯು ನ್ಯಾಯವಾಗಿ ಮತ್ತು ಮೈತ್ರಿಯುತವಾಗಿ ಪರಿಹಾರವಾಗಲೆಂಬುದೇ ಭಾರತದ ಉದ್ದೇಶ. ಪರಿಸ್ಥಿತಿಯನ್ನು ತೀವ್ರಗೊಳಿಸುವುದು ಭಾರತದ ಉದ್ದೇಶವಲ್ಲ. ಭಾರತೀಯರ ಹಿಟನ ಬೇಡಿಕೆಗಳು ತೀರ್ಮಾನವಾಗಲು ವಿಳಂಬವುಂಟಾಗುತ್ತಲಿರುವುದಕ್ಕೆ ಭಾರತ ತನ್ನ ವಿಷಾದವನ್ನು ಮಾತ್ರ ಸೂಚಿಸಿದೆಯೆಂದು ಭಾರತವು ತಿಳಿಸಿ ಮತ್ತೊಂದು ಪತ್ರವನ್ನು ಸಿಂಹಳ ಸರ್ಕಾರಕ್ಕೆ ಕಳುಹಿಸಿರುವುದಾಗಿ ಹೇಳಲಾಗಿದೆ.

ಹತ್ತಿ ನಿರಾಕರಣೆ

ಅಮೆರಿಕಾವು ಭಾರತಕ್ಕೆ ಸರಬರಾಜು ಮಾಡಿರುವ ೪೦ ಕೋಟಿ ರೂಪಾಯಿ ಬೆಲೆಬಾಳುವ ಹತ್ತಿಯು ಕೆಟ್ಟುಹೋಗಿರುವುದರಿಂದ ಭಾರತ ಗಿರಣಿಗಳು ಆ ಹತ್ತಿಯನ್ನು ತೆಗೆದುಕೊಳ್ಳಲು ನಿರಾಕರಿಸಿದೆ. ಈ ಹತ್ತಿಯು ಬೊಂಬಾಯಿ ಬಂದರು ಮತ್ತು ಉಗ್ರಾಣಗಳಲ್ಲಿ ಬಿದ್ದಿವೆ. ಅಮೆರಿಕಾ ವ್ಯಾಪಾರ ಪ್ರತಿನಿಧಿಗಳು ಮತ್ತು ಭಾರತ ಗಿರಣಿಯವರು ಈ ಹತ್ತಿಯನ್ನು ಪರಿಶೀಲಿಸಿದುವು. ಕ್ಯಾಲಿಫೋರ್ನಿಯಾದಲ್ಲಿ ಬಿದ್ದ ಮಳೆಯೇ ಈ ನಷ್ಟಕ್ಕೆ ಕಾರಣವೆಂದು ಅಮೆರಿಕಾ ಪ್ರತಿನಿಧಿಗಳು ಅಭಿಪ್ರಾಯಪಟ್ಟಿದ್ದಾರೆ.

‡ ಭಾರತ ಮತ್ತು ಚೀನಾಗಳ ಸ್ನೇಹ ಸಂಬಂಧವನ್ನು ಹೆಚ್ಚಿಸಲು ಪೀಕಿಂಗ್‌ನಲ್ಲಿ ಚೀನಾ-ಭಾರತ ಸ್ನೇಹ ಸಂಘವೊಂದನ್ನು ಸ್ಥಾಪಿಸಲಾಗಿದೆಯೆಂದು ಗೊತ್ತಾಗಿದೆ.

ಟೋಪಿಯೋಕಾ ವಸ್ತುಗಳು

ಮೈಸೂರು ಮೇ ೧೭

ಮೈಸೂರು ಆಹಾರ ಸಂಶೋಧನಾ ಕೇಂದ್ರದಲ್ಲಿ ಇತ್ತೀಚಿಗೆ ನಡೆದ ಸಂಶೋಧನೆಗಳಿಂದ ಟೋಪಿಯೋಕಾದ ಪದಾರ್ಥಗಳನ್ನು ಆಹಾರವಾಗಿ ಉಪಯೋಗಿಸುವುದರಲ್ಲಿ ಯಾವ ತೊಂದರೆಯೂ ಇಲ್ಲವೆಂಬುದು ಧೃಢಪಟ್ಟಿರುವುದಾಗಿ ಕೇಂದ್ರವು ಪ್ರಕಟಿಸಿದೆ.

ಪ್ರಮಾಣ ಸ್ವೀಕಾರ

ಮೈಸೂರು ಮೇ ೧೭

ಈ ದಿನ ಬೆಳಿಗ್ಗೆ ೧೦-೩೦ ಗಂಟೆಯಲ್ಲಿ ಶಾಸನಸಭೆಗಳ ಹಂಗಾಮಿ ಅಧ್ಯಕ್ಷರುಗಳಾದ ಶ್ರೀ ಸಂಪದ್ಗಿರಿರಾಯರು ಮತ್ತು ಶ್ರೀ ಎ. ವೆಂಕಟಪ್ಪನವರು ಶ್ರೀಮನ್ಮಹಾರಾಜರ ಸಮ್ಮುಖದಲ್ಲಿ ಪ್ರಮಾಣ ಸ್ವೀಕಾರಮಾಡಿದರು. ಪ್ರಧಾನ ಕಾರ್ಯದರ್ಶಿ, ಹುಜೂರ್ ಸೆಕ್ರೆಟರಿಗಳು ಹಾಜರಿದ್ದರು.

ರೆಡ್‌ಕ್ರಾಸ್ ಸಂಸ್ಥೆಯ ಸ್ತುತ್ಯಾಕಾರ್ಯ

ಪ್ರಪಂಚದಲ್ಲಿರುವ ರೆಡ್‌ಕ್ರಾಸ್ ಸಂಸ್ಥೆಗಳು ಮತ್ತು ರೆಡ ಕ್ರಿಸೆಂಟ್ ಸೊಸೈಟಿಗಳು ಮಾನವನ ಹಿತಕ್ಕಾಗಿ ಮಾಡುವ ಸೇವಾಕಾರ್ಯವನ್ನು ವಿಶ್ವ ಸಂಸ್ಥೆಯ ಮಹಾಕಾರ್ಯದರ್ಶಿ ಟ್ರೈಗೀವ್‌ಲೈಂವರು ಮುಕ್ತಕಂಠದಿಂದ ಹೊಗಳಿದ್ದಾರೆ.

ಇಂದು ಪ್ರಪಂಚದಲ್ಲಿ ೬೮ ದೇಶಗಳಲ್ಲಿ ರೆಡ್‌ಕ್ರಾಸ್ ಸಂಸ್ಥೆಗಳಿವೆ. ಸುಮಾರು ೧೦೦ ಮಿಲಿಯನ್ ಸದಸ್ಯರಿದ್ದಾರೆ ರಾಜಕೀಯ ಅಥವಾ ಧರ್ಮದ ಸೋಂಕಿಲ್ಲದೆ ಮಾನವ ಹಿತಸಾಧನೆಗಾಗಿ ಕೆಲಸ ಮಾಡುತ್ತಿದ್ದಾರೆ.

ರೆಡ್‌ಕ್ರಾಸ್ ಸಂಸ್ಥೆಯು ಪ್ಯಾಲೆಸ್ಟೈನಿನ ನಿರಾಶ್ರಿತರಿಗೂ, ಕೊರಿಯಾದ ಯುದ್ಧದಲ್ಲಿ ನೊಂದವರಿಗೂ ಮಾಡಿದ ಕೆಲಸವು ಪ್ರಶಂಸನಾರ್ಹವಾಗಿದೆ ಎಂದು ಲೈಂವರು ನುಡಿದರು

ಪ್ರಪಂಚದ ಉತ್ಪತ್ತಿಯ ಬಗ್ಗೆ ವಿಶ್ವಸಂಸ್ಥೆಯ ವರದಿ

ಸ್ವತಂತ್ರ ದೇಶಗಳಲ್ಲಿ ಈ ವರ್ಷದ ಉತ್ಪತ್ತಿಯು ನಾಗರಿಕ ಮತ್ತು ಮಿಲಿಟರಿ ಜನಸಂಖ್ಯೆಗೆ ಪೂರೈಸುವಷ್ಟು ಆಗಿದೆ ಎಂದು ವಿಶ್ವಸಂಸ್ಥೆಯ ಆರ್ಥಿಕವರದಿಯಲ್ಲಿ ತಿಳಿಸಲಾಗಿದೆ.

ಉಕ್ಕಿನ ಪರದೆಯ ರಾಷ್ಟ್ರಗಳಾದ ರಷ್ಯಾ, ಚೈನಾ ದೇಶಗಳಲ್ಲಿಯೂ ಉತ್ಪತ್ತಿ ಜಾಸ್ತಿಯಾಗಿದೆಯೆಂಬುದನ್ನು ವರದಿಯು ಒಪ್ಪುತ್ತದೆ.

ಕೊರಿಯಾ ಯುದ್ಧದಿಂದ ಕಲೆಕೆಳಕಾದರೂ, ಸ್ವತಂತ್ರ ದೇಶಗಳು ಆರ್ಥಿಕ ಮತ್ತು ಉತ್ಪತ್ತಿಯಲ್ಲಿ ಚೇತರಿಸಿಕೊಂಡಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಹಿಂದುಳಿದ ರಾಷ್ಟ್ರಗಳಿಗೆ ಬಂಡವಾಳ, ತಾಂತ್ರಿಕ ಸಹಾಯ ನೀಡಬೇಕೆಂದು ವರದಿಯಲ್ಲಿ ಸಲಹೆ ಮಾಡಲಾಗಿದೆ.

ಅಂತರರಾಷ್ಟ್ರೀಯ ಪತ್ರಿಕಾ ಸಂಸ್ಥೆ

ಸ್ವತಂತ್ರ ಪ್ರಪಂಚದಿಂದ ಬರುವ ನೂರಕ್ಕಿಂತ ಹೆಚ್ಚು ಪತ್ರಿಕಾ ಸಂಪಾದಕರುಗಳು ಅಂತರರಾಷ್ಟ್ರೀಯ ಪತ್ರಿಕಾ ಸಂಸ್ಥೆಯ ಸಭೆಗಳಲ್ಲಿ ಭಾಗವಹಿಸುವರು.

ಈ ಸಂಸ್ಥೆಯು ೧೯೫೧ರಲ್ಲಿ ಸ್ಥಾಪಿತವಾಯಿತು. ಈಗ ೩೨ ದೇಶಗಳ ೪೪೫ ಸಂಪಾದಕರುಗಳು ಈ ಸಂಸ್ಥೆಯ ಸದಸ್ಯರಿದ್ದಾರೆ.

ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡುವುದು, ಪತ್ರಿಕೋದ್ಯಮಿಗಳಲ್ಲಿ ಪರಸ್ಪರ ಸಹಕಾರ ಉಂಟುಮಾಡುವುದು, ಖಚಿತ ಸುದ್ದಿ ಪ್ರಕಟಿಸುವುದು ಮುಂತಾದುವುಗಳು, ಈ ಸಂಸ್ಥೆಯ ಮುಖ್ಯ ಉದ್ದೇಶ.

ಸುದ್ದಿ ಪ್ರಸಾರ, ರಷ್ಯಾದ ಸುದ್ದಿಗಳು ಮತ್ತು ವಿದೇಶ ಸುದ್ದಿಗಾರರ ಬಗ್ಗೆಯೂ ನಡೆಯುವುದು.

ವಿಮಾನ ಚಾಲಕನ ಸಾಹಸ

ಪೂರ್ವ ಆಫ್ರಿಕದ ಏಂ'ವೇಸ'ನ ಪ್ರಯಾಣಿಕರ ವಿಮಾನವೊಂದು ದಾರ್‌ಎಸ್ ಸಲಾಂನಿಂದ ಹೊರಟ ಕೂಡಲೇ ಆ ವಿಮಾನದ ಸಾರಥಿ ಮತ್ತು ರೇಡಿಯೋ ಆಫೀಸರ್ ಆಕಾಶದಲ್ಲಿ ಬಹಳ ಅಪಾಯಕರವಾದ ಹಸಿರು ಹಾವಿನೊಡನೆ ತೀವ್ರವಾಗಿ ಹೋರಾಡಬೇಕಾಯಿತೆಂದು 'ಡೈಲಿ ಎಕ್ಸ್‌ಪ್ರೆಸ್' ಸುದ್ದಿಗಾರರು ವರದಿಮಾಡಿದ್ದಾರೆ.

ತನ್ನ ಕತ್ತನ್ನು ಸುತ್ತಿಕೊಂಡು ಹಿಂಸಿಸುತ್ತಿದ್ದ ಹಾವನ್ನು ಕಂಡು ರೇಡಿಯೋ ಆಫೀಸರ್ ಧೈರ್ಯದಿಂದ ವರ್ತಿಸಿ ವಿಮಾನ ಸಾರಥಿಯ ಸಹಾಯದಿಂದ ಹಾವನ್ನು ಕಿತ್ತು ಒಗೆದನು

ರೇಗಿದ ಆ ಹಾವು ತಾನು ಬಿದ್ದ ಸ್ಥಳದಿಂದ ತನ್ನ ಹೆಡೆಯನ್ನು ಎತ್ತಿ ರೇಡಿಯೊ ಆಫೀಸರನ್ನು ಹೊಡೆಯಲು ಪ್ರಯತ್ನಿಸಿತು. ವಿಮಾನ ಸಾರಥಿಯೂ ಮತ್ತು ರೇಡಿಯೋ ಆಫೀಸರೂ ಈ ಅಪಾಯದಿಂದ ಪಾರಾಗಲು ಮತ್ತು ಆ ಹಾವನ್ನು ಎದುರಿಸಲು ತೊಡಗಿದರು. ಅದು ಆ ಸ್ಥಳದಿಂದ ಚಲಿಸಿ ವಿಮಾನದ ಮುಖ್ಯ ಯಂತ್ರದ ಬೋರ್ಡಿನ ಮೇಲೆ ಸಾಗಿ ಎಲ್ಲಿಯೋ ಮಾಯವಾಯಿತು.

ಅದು ಎಲ್ಲಿಯೋ ಅಡಗಿದ್ದು ಮತ್ತೆ ಕಾಣಿಸಿಕೊಂಡು ತನ್ನ ಕಾಲನ್ನು ಕಚ್ಚಬಹುದೆಂದು ವಿಮಾನದ ಸಾರಥಿ ಭಯಪಟ್ಟು ವಿಮಾನವನ್ನು ಕೆಳಗೆ ಇಳಿಸಿದ.

ಹಾವಿನೊಡನೆ ವಿಮಾನದ ಸಾರಥಿ ಮತ್ತು ರೇಡಿಯೋ ಆಫೀಸರ್ ಹೋರಾಡಿದ ಕಾಲದಲ್ಲಿ ಅಂತರಿಕ್ಷದಲ್ಲಿ ವಿಮಾನ ಹಾರಾಡುತ್ತಿತ್ತು. ಅದರಲ್ಲಿ ಪ್ರಯಾಣಿಕರು ಇದ್ದರು. ಕಡೆಗೆ ಆ ಹಾವು ವಿಮಾನದ 'ಲಾಕರ್' ನಲ್ಲಿ ಪತ್ತೆಯಾಯಿತು. ಪೈಲೆಟ್ ಎಂಜಿನಿಯರ್ ಸುತ್ತಿಗೆಯಿಂದ ಹೊಡೆದು ಆ ಹಾವನ್ನು ಕೊಂದುಹಾಕಿದ ವಿಮಾನ ಪ್ರಯಾಣವನ್ನು ಮುಂದುವರಿಸಿತು

ಪೇಟೆ ಧಾರಣೆ

ಮೈಸೂರು ತಾ|| 17-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		12-4	17-4
ಹೊಂಗೆಬೀಜ	,,	12-0	——
ಹುರುಳಿ	,,	34-4	——
ಸೀಗೆಕಾಯಿ	,,	3-4	——
ಮೆ. ಕಾಯಿ ಮಣಕ್ಕೆ		14-10	——
ಹುಣಸೇಹಣ್ಣು	,,	3-5	3-15
ತೆಂಗಿನಕಾಯಿ	1100ಕ್ಕೆ	147	185

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಸರ್ಕಾರಿ ಪ್ರಕಟಣೆ

ಬೆಂಗಳೂರು ಮೇ ೧೭

ಸರ್ಕಾರಕ್ಕೆ ಬರೆದುಕೊಂಡ ಅರ್ಜಿ ಅಥವಾ ಪತ್ರಗಳಿಗೆ ಎಂಡಾರ್ಸ್‌ಮೆಂಟ್ ಅಥವಾ ಉತ್ತರವನ್ನು ನಿರೀಕ್ಷಿಸುವವರು ಜೊತೆಯಲ್ಲಿ ೨ ಆಣೆ ೫ಂಚೆ ಚೀಟಿಯನ್ನು ಕಳುಹಿಸದಿದ್ದಲ್ಲಿ ಅಂತಹವರಿಗೆ ಜವಾಬು ಕಳುಹಿಸಲಾಗುವುದಿಲ್ಲವೆಂದೂ, ಕಾರ್ಡಿನಲ್ಲಿ ಉತ್ತರವನ್ನಪೇಕ್ಷಿಸುವವರು ೯ ಕಾಸಿನ ಸ್ಟಾಂಪು ಕಳುಹಿಸಿದರೆ ಸಾಕೆಂದೂ ಅಧಿಕೃತ ಹೇಳಿಕೆಯ ಪ್ರಕಟಣೆಯೊಂದರಲ್ಲಿ ತಿಳಿಸಲಾಗಿದೆ. ಈ ಕಾನೂನು ಮಂತ್ರಿಗಳಿಗೆ ಎಲ್ಲಾ ಸರ್ಕಾರೀ ಅಧಿಕಾರಿಗೆ ಮತ್ತು ಸ್ಥಳೀಯ ಸಂಸ್ಥೆ ಅಧಿಕಾರಿಗಳಿಗೆ ಕಳುಹಿಸುವ ಅರ್ಜಿ ಅಥವಾ ಪತ್ರಗಳಿಗೆ ಅನ್ವಯಿಸುತ್ತದೆ.

ಕೇಂದ್ರ ಸಚಿವರ ಸಂಬಳ

ಕೇಂದ್ರಸಚಿವರಿಗೆ೩೦೦೦ ರೂ.ಸಂಬಳ ೫೦೦ ರೂ ಅಲೋಯನ್ಸ್. ರಾಜ್ಯ ಮಂತ್ರಿಗಳಿಗೆ (ಮಿನಿಸ್ಟರ್ ಆಫ್ ಸ್ಟೇಟ್) ೩೦೦೦ ರೂ ಸಂಬಳ, ಉಪಮಂತ್ರಿಗಳಿಗೆ ೨೦೦೦ ರೂ. ಸಂಬಳ ದೊರೆಯುತ್ತೆ. ಈ ಸಂಬಳವನ್ನು ಕಡಿಮೆಮಾಡಲು ಪ್ರಧಾನಿ ನೆಹರೂರವರು ಯೋಚಿಸುತ್ತಿದ್ದಾರೆ

ನ್ಯೂ ಅಪೇರ ಟಾಕೀಸ್
ಶ್ರೀ
16—5—52 ರಿಂದ
ಅಮೋಘವಾದ
2ನೇ ವಾರ
ಪ್ರತಿದಿನ 3 ಆಟಗಳು
ಜೂಪಿಟರ್‌ರವರ—
* ರಾಣಿ *
(ತಮಿಳು)
ಪಾತ್ರ:— ‡ ಭಾನುಮತಿ ‡
‡ ಬಾಲಚಂದರ್ ‡
‡ ವಹಾಬ್ ಕಾಶ್ಮೀರಿ ‡

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,500 or near offer

No brokers—Immediate possession—No encumbrence,

Enquire at :— M. SUBBARAMAIAH & Co., Lansdowne Buildings, Mysore.

ವುಡ್‌ಲ್ಯಾಂಡ್ಸ್
16—5—52ನೇ ಶುಕ್ರವಾರದಿಂದ
ಅಮೋಘ 3ನೇ ವಾರ
ದಿನವೂ 3 ಆಟಗಳು
" ಲಕ್ಷ್ಮೀ ನಾರಾಯಣ್ "
(ಹಿಂದಿ)
ಪಾತ್ರ:—ಮೀನಾಕುಮಾರಿ
ಮಹಿಪಾಲ್

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ
ಶ್ರೀ ನೃತ್ಯ ಕಲಾಮಂದಿರ ಮೈಸೂರು
(ಸೀತಾವಿಲಾಸಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಫೋನ್ ೫೭೪೪ (ಲಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೦-೫-೧೯೫೨ನೇ ಮಂಗಳವಾರ [ಸಂಚಿಕೆ ೨೫೮

ರೈಲ್ವೆ ಅಪಘಾತದಲ್ಲಿ ೪೨ ಜನರ ಮರಣ

ಭಾನುವಾರ ರಾತ್ರಿ ಹನ್ನೊಂದು ಗಂಟೆಯಲ್ಲಿ ಉತ್ತರ ರೈಲ್ವೆಯ ಜೋಧಪುರ ಬಿಕನೀರ್ ಲೈನಿನಲ್ಲಿ ಬಿಕನೀರಿಗೆ ೭ ಮೈಲಿ ದೂರದಲ್ಲಿ ಬಿಕನೀರ್ ಮತ್ತು ವಲನ ರೈಲ್ವೆ ನಿಲ್ದಾಣಗಳ ನಡುವೆ ಪ್ಯಾಸೆಂಜರ್ ಗಾಡಿಯೊಂದು ಗೂಡ್ಸ್‌ಗಾಡಿಗೆ ತಗುಲಿ ಎಂಜಿನ್ನು ಮುಂದಿನ ೩ ಬೋಗಿಗಳು ಪುಡಿಪುಡಿಯಾಗಿ ೪೨ ಜನರು ಸತ್ತು, ಅನೇಕರಿಗೆ ಗಾಯಗಳಾದುವು. ವರ್ತಮಾನ ಬಂದೊಡನೆಯೇ ರಿಲೀಫ್ ರೈಲು ಬಂದು ಪ್ರಯಾಣಿಕರನ್ನು ಕರೆದೊಯ್ಯಿತು. ವಿಷಯ ತಿಳಿದೊಡನೆಯೇ ಬಿಕನೀರು ಮಹಾರಾಜರು, ರೈಲ್ವೆ ಜನರಲ್ ಮ್ಯಾನೇಜರ್ ಮುಂತಾದ ರೈಲ್ವೆ ಅಧಿಕಾರಿಗಳು ದೆಹಲಿಯಿಂದ ಅಪಘಾತ ನಡೆದ ಜಾಗಕ್ಕೆ ಭೇಟಿಯಿತ್ತು, ಪರಿಹಾರ ಕಾರ್ಯಕ್ರಮವನ್ನು ಕೈಗೊಳ್ಳಲು ಏರ್ಪಾಡು ಮಾಡಿದರು.

ತಪ್ಪು ಕ್ಲಿಯರ್ ಕೊಟ್ಟದ್ದೇ ಈ ಅಪಘಾತಕ್ಕೆ ಕಾರಣವೆಂದು ಹೇಳಲಾಗಿದೆ.

ರೈಲ್ವೆ ಸಚಿವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ, ರಾಷ್ಟ್ರಾಧ್ಯಕ್ಷ ಮುಂತಾದವರು ನೊಂದವರಿಗೆ ತಮ್ಮ ಅನುತಾಪವನ್ನು ಕಳುಹಿಸಿರುವರು.

ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಚರ್ಚೆ

ಭಾರತ ಉಭಯ ಶಾಸನಸಭಾಧಿವೇಶನದಲ್ಲಿ ರಾಷ್ಟ್ರಾಧ್ಯಕ್ಷರು ಮಾಡಿದ ಭಾಷಣದ ಮೇಲೆ ಪ್ರತ್ಯೇಕವಾಗಿ ಸಭೆಗಳು ನಿನ್ನೆಯದಿನ ಪ್ರಾರಂಭವಾಗಿ ಚರ್ಚೆಯು ಪ್ರಾರಂಭವಾಯಿತು.

ಆಹಾರ ಪರಿಸ್ಥಿತಿಯ ವಿಷಯವಾಗಿ ತೀವ್ರ ಚರ್ಚೆ ನಡೆಯಿತು. ಪ್ರಾಂತ್ಯಗಳಿಗೆ ಪುನಃ ಸಹಾಯದ್ರವ್ಯ ನೀಡುವುದು, ನೀರಾವರಿ ಕಾರ್ಯಗಳನ್ನು ಇನ್ನೂ ಬೆಳೆಸುವುದು, ಇನ್ನಷ್ಟು ಹೆಚ್ಚಿಗೆ ಧಾನ್ಯದ ಅಂಗಡಿಗಳನ್ನು ತೆಗೆಯಬೇಕೆಂಬ ಸಲಹೆಗಳನ್ನು ಅನೇಕ ಸದಸ್ಯರು ನೀಡಿದರು

ಟ್ಯುನೀಷಿಯಾದ ವಿಷಯದಲ್ಲಿ ವಿಶ್ವಸಂಸ್ಥೆಯ ನೀತಿಯ ಬಗ್ಗೆ, ಕಳವಳ, ಸಿಂಹಳ ದಕ್ಷಿಣ ಆಫ್ರಿಕಾಗಳಲ್ಲಿ ಭಾರತೀಯರ ವಿಷಯದಲ್ಲಿಯ ಪರಿಸ್ಥಿತಿಯ ಬಗ್ಗೆ ಆತಂಕವನ್ನು ಸಭೆಯಲ್ಲಿ ವ್ಯಕ್ತಪಡಿಸಲಾಯಿತು.

ಭಾರತವು ಕಾಮನ್‌ವೆಲ್ತ್‌ನಿಂದ ಹೊರಕ್ಕೆ ಬರಬೇಕು, ಕೊರಿಯಾದಲ್ಲಿ ಕ್ರಿಮಿಯುದ್ಧ ವಿಷಯ ಪರಿಶೀಲಿಸಲು ಪಾರ್ಲಿಮೆಂಟ್ ನಿಯೋಗವೊಂದನ್ನು ಅಲ್ಲಿಗೆ ಕಳುಹಿಸಬೇಕೆಂದು ಕಮ್ಯೂನಿಸ್ಟ್ ಸದಸ್ಯ ಶ್ರೀ ಎ. ಕೆ. ಗೋಪಾಲನ್ ತಿಳಿಸಿದರು.

ಭಾಷಾವಾರು ಪ್ರಾಂತ್ಯಗಳನ್ನು ಜಾಗ್ರತೆಯಾಗಿ ರಚಿಸುವುದು ಪ್ರಾಂತ್ಯಗಳನಾನಾ ಭಾಷೆಗಳಿಗೆ ಸಮನಾದ ಸ್ಥಾನ ಕೊಟ್ಟು ಅವುಗಳನ್ನು ಅಭಿವೃದ್ಧಿಪಡಿಸಬೇಕೆಂದು ಸಲಹೆಯನ್ನು ಮಾಡಲಾಯಿತು.

ಚರ್ಚೆಯು ಈದಿನವೂ ನಡೆಯುತ್ತದೆ.

ವಿಶ್ವಸಂಸ್ಥೆಗೆಹೋಗುವುದಿಲ್ಲ

ಸಿಂಹಳದಲ್ಲಿರುವ ಭಾರತೀಯರ ಓಟಿನ ಹಕ್ಕನ್ನು ಕೊಡುವ ವಿಷಯದಲ್ಲಿ ಭಾರತವು ವಿಶ್ವಸಂಸ್ಥೆಗೆ ಹೋಗುವುದಿಲ್ಲವೆಂದು ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಶ್ರೀ ಕೆ. ಸಿ. ರೆಡ್ಡಿಯವರು ಮೈಸೂರಿಗೆ

ಬೆಂಗಳೂರು ಮೇ ೨೦

ಕೇಂದ್ರ ಸರ್ಕಾರದ ಉತ್ಪಾದನಾ ಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಈ ಸಂಜೆ ಮೈಸೂರಿಗೆ ಗಮಿಸುವರು. ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿಕೊಂಡು ರೆಡ್ಡಿಯವರು ನಾಳೆ ಬೆಂಗಳೂರಿಗೆ ಹಿಂತಿರುಗುವರೆಂದು ಗೊತ್ತಾಗಿದೆ.

ಬಟ್ಟೆ ಹತೋಟಿ ಹೋಗುವುದಿಲ್ಲ

ಸದ್ಯಕ್ಕೆ ಬಟ್ಟೆ ಮತ್ತು ನೂಲಿನಮೇಲಣ ಹತೋಟಿಯನ್ನು ರದ್ದುಗೊಳಿಸುವುದಿಲ್ಲವೆಂದು ಕೇಂದ್ರ ವಾಣಿಜ್ಯಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುವರು

ಅಮೆರಿಕಾದಿಂದ ಭಾರತಕ್ಕೆ

೧೯೫೧ ನೇ ಸಾಲಿನಲ್ಲಿ ಅಮೆರಿಕಾವು ಭಾರತಕ್ಕೆ ೪೭೬೪ ಲಕ್ಷ ಡಾಲರುಗಳ ವಸ್ತುಗಳನ್ನು ಸರಬರಾಜುಮಾಡಿದೆ. ಭಾರತವು ಅಮೆರಿಕಾಕ್ಕೆ ೨೯೭೫ ಲಕ್ಷ ಡಾಲರುಗಳ ಬೆಲೆಯ ವಸ್ತುಗಳನ್ನು ಕೊಟ್ಟಿದೆ.

ಅಮೆರಿಕಾವು ಕಳುಹಿಸಿರುವ ವಸ್ತುಗಳ ಪೈಕಿ ೧೭೬೦ ಲಕ್ಷಡಾಲರುಗಳ ಗೋಧಿ, ೨೬೦ ಲಕ್ಷ ಡಾಲರುಗಳ ಮೈಲೋ, ೪೨೦ ಲಕ್ಷ ಡಾಲರುಗಳ ಯಂತ್ರಸಾಮಗ್ರಿ, ೧೨೦ ಲಕ್ಷ ಡಾಲರುಗಳ ಹತ್ತಿ, ಸೇರಿವೆ

ಭಾರತವು ಕಳುಹಿಸಿರುವ ವಸ್ತುಗಳಲ್ಲಿ ಮುಖ್ಯವಾದುವು ೯೦೫ ಲಕ್ಷ ಡಾಲರುಗಳ ಸೆಣಬು ಪದಾರ್ಥಗಳು, ೩೪೨ ಲಕ್ಷ ಡಾಲರುಗಳ ಮೆಣಸು, ೧೫೭ ಲಕ್ಷ ಡಾಲರುಗಳ ಟೀಸೊಪ್ಪು, ೧೬೫ ಲಕ್ಷ ಡಾಲರುಗಳ ಮೈಕಾ ಸೇರಿವೆ.

ಇಂಜನಿಯರಿಂಗ್ ವಿದ್ಯಾರ್ಥಿಗಳು

ಅಮೆರಿಕಾದಲ್ಲಿ ವ್ಯಾಸಂಗಮಾಡುತ್ತಲಿರುವ ೧೧೩೮ ವಿದ್ಯಾರ್ಥಿಗಳಪೈಕಿ ೩೫೨ ವಿದ್ಯಾರ್ಥಿಗಳು ಇಂಜನಿಯರಿಂಗ್ ಶಾಖೆಯಲ್ಲಿ ವ್ಯಾಸಂಗ ಮಾಡುತ್ತಲಿರುವರು. ಅಮೆರಿಕಾದಲ್ಲಿ ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳನ್ನು ಕಳುಹಿಸುತ್ತಲಿರುವ ದೇಶಗಳಲ್ಲಿ ಭಾರತವು ೬ ನೇಸ್ಥಾನಗಳಿಸಿದೆ.

ಮದರಾಸಿನಲ್ಲಿ ಎರಡೂಕಾಲಂಗುಲಮಳೆ

ಮದರಾಸಿನಲ್ಲಿ ನಿನ್ನೆಬೆಳಗ್ಗೆ ಎರಡೂಕಾಲು ಅಂಗುಲ ಮಳೆಯಾಯಿತು. ಸೆಕೆಯು ಸ್ವಲ್ಪಕಡಮೆಯಾಗಿ ಹವಾ ಹಿತವಾತಕರವಾಗಿದೆಯೆಂದು ಗೊತ್ತಾಗಿದೆ.

ಹವಾಮಾನ

ಮದ್ರಾಸ್ ಪ್ರಾಂತ್ಯದಲ್ಲಿ ನೆಲ್ಲೂರು, ರೆಂಟಚಿಂತಾಲುಗಳಲ್ಲಿ ನಿನ್ನೆದಿನ ಉಷ್ಣವು ೧೧೦ ಡಿಗ್ರಿಯಿತ್ತು. ಮದ್ರಾಸಿನಲ್ಲಿ ೮೭-೨ ಡಿಗ್ರಿಯಿತ್ತು.

ಪಾತಕ ಡಕಾಯಿತಿಗಳಿಗೆ ಸಿನಿಮಾ ಕಾರಣ?

ಪಾತಕಗಳೂ ಮತ್ತು ಡಕಾಯಿತಿಗಳೂ ದೇಶದಲ್ಲಿ ಹೆಚ್ಚಿರುವುದಕ್ಕೆ ಕೆಲವು ಚಿತ್ರಗಳೇ ಕಾರಣವೆಂಬ ಟೀಕೆಗಳು ಸರಿಯಿದ್ದಕ್ಕಲ್ಲ ಕೆಟ್ಟ ನಿರ್ದೇಶನವೇ ಕಾರಣವೆಂದೂ, ಜನತಾ ಶಿಕ್ಷಣದ ಸಾಧನವಾದ ಈ ಕೈಗಾರಿಕೆ ರಾಷ್ಟ್ರೀಕರಣವಾಗಿ, ಸರ್ಕಾರಕ್ಕೆ ಹತೋಟಿಯ ಆಸಕ್ತಿ ಇದ್ದರೆ ದೇಶಕ್ಕೆ ಲಾಭವಿದೆಯೆಂದೂ. ಅದರಿಂದ ಪ್ರತಿಭಾವಂತರಿಗೆ ಯೋಗ್ಯಸ್ಥಾನ ದೊರಕುವುದೆಂದೂ ಭಾರತ ಸುಪ್ರಸಿದ್ಧ ಸಿನಿಮಾ ನಟ ಶ್ರೀ ವಿ. ನಾಗಯ್ಯನವರು ಹೇಳಿರುವರು

ಆಡಳಿತ ಉತ್ತಮಗೊಂಡಿದೆ

ರಾಜಾಜಿಯವರು ಸರ್ಕಾರದ ಆಡಳಿತವನ್ನು ವಹಿಸಿಕೊಂಡ ಮೇಲೆ, ಆಡಳಿತ ನೀತಿಯಲ್ಲಿ ಅಭಿವೃದ್ಧಿಯ ಚಿಹ್ನೆಗಳು ಕಂಡುಬರುತ್ತಿವೆಯೆಂದು ಮದ್ರಾಸ್ ಜಸ್ಟಿಸ್ ಪಕ್ಷದ ನಾಯಕರಾದ ಶ್ರೀ ಪಿ. ಟಿ. ರಾಜನ್‌ರವರು ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ಸಿನವರು ರಾಜಾಜಿಯವರನ್ನು ಆಹ್ವಾನ ಮಾಡಿದ್ದಕ್ಕೆ ಅಭಿನಂದನೆಗಳನ್ನು ತಿಳಿಸಿದ್ದಾರೆ.

ಮಹಾರಾಜರಿಗೆ ಬಹುಮಾನ

ಹೆಚ್ಚು ಬೆಳೆ ಪಂದ್ಯದಲ್ಲಿ ಬುಂದಿ ಮಹಾರಾಜರಿಗೆ ೩೦೦ ರೂಗಳ ಪ್ರಥಮ ಬಹುಮಾನ ದೊರೆತಿದೆ.

ಇವರು ತಮ್ಮ ಖಾಸಗಿ ಫಾರಮ್ಮಿನಲ್ಲಿ ಎಕರೆಯೊಂದರಲ್ಲಿ ೫೨ ಮಣ ೨೨ ಸೇರುಗಳಷ್ಟು ಗೋಧಿ ಬೆಳೆ ಮಾಡಿ ರಿಕಾರ್ಡ್ ಸ್ಥಾಪಿಸಿದರು.

ಜಹಗೀರ್‌ದಾರರ ಬಂಧನ

ರಾಜಾಸ್ಥಾನದ ಶಾಸನಸಭೆಯ ಸದಸ್ಯರೂ ಉದಯಪುರದ ಜಹಗೀರುದಾರರೂ ಆದ ಶ್ರೀ ಠಾಕೂರ್‌ಬಿಜಯ್‌ಸಿಂಗರನ್ನು ಧಕಾಯಿತಿ ಮತ್ತು ಅಪರಾಧಿಗಳಿಗೆ ನೆರವು ನೀಡಿದ ಆಪಾದನೆಗಳಿಗಾಗಿ ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

ರೂಪನಗರದ ಪ್ರಮುಖರಾದ ಈ ಠಾಕೂರರು ಬೂಪಾತ್ ಸನೆಂಬ ಪ್ರಸಿದ್ಧ ಧಕಾಯಿತನಿಂದ ೨೧ ತೊಲ ಚಿನ್ನವನ್ನು ಪಡೆದು ಅದಕ್ಕೆ ಪ್ರತಿಯಾಗಿ ಬಂದೂಕಗಳನ್ನು ಕೊಟ್ಟರೆಂದು ಪೋಲೀಸಿನವರು ಆಪಾದನೆ ಹೊರಿಸಿದ್ದಾರೆ.

ಪೆಪ್ಸುವಿನಿಂದ ಆಹಾರ

ಆಹಾರ ಅಭಾವವಿರುವ ಪ್ರದೇಶಗಳಿಗೆ ಪೆಪ್ಸುವು ೧೦ ಸಾವಿರ ಟನ್ ಆಹಾರವನ್ನು ಒದಗಿಸಲಿದೆಯೆಂದು ಗೊತ್ತಾಗಿದೆ.

ಬಿರುದುಗಳ ನಿಷೇಧ

ಭಾರತಸರ್ಕಾರದ ಗೃಹಶಾಖೆಯು ಒಂದು ಪ್ರಕಟಣೆಯನ್ನು ಹೊರಡಿಸಿ ಪಾರ್ಲಿಮೆಂಟ್ ಸದಸ್ಯರು, ಸಚಿವರುಗಳು ಮತ್ತು ಪ್ರಧಾನಿ ಇವರುಗಳನ್ನು ಸಂಬೋಧಿಸುವಾಗ 'ಆನರ್‌ಬಲ್' ಎಂಬ ಪದವನ್ನು ಇನ್ನುಮುಂದೆ ಉಪಯೋಗಿಸುವುದಿಲ್ಲವೆಂದು ತಿಳಿಸಿದೆ. ಅಲ್ಲದೆ ಮಹಾರಾಜರುಗಳು ಮತ್ತು ಭಾರತಸರ್ಕಾರಕ್ಕಾಗಿರುವ ಒಪ್ಪಂದಪ್ರಕಾರ 'ಹಿಸ್ ಹೈನೆಸ್' ಎಂಬ ಸಂಬೋಧನೆವಿನಹ ಮಿಕ್ಕ ಬಿರುದುಗಳನ್ನೆಲ್ಲಾ ರದ್ದುಗೊಳಿಸಲಾಗಿದೆ ಎಂದು ಪ್ರಕಟಿಸಿದೆ.

ರಾಯಭಾರಿಗಳು ತಮ್ಮ ಹುದ್ದೆಯಲ್ಲಿದ್ದಾಗ ಮಾತ್ರ ಹಿಸ್ ಎಕ್ಸ್‌ಲೆನ್ಸಿ ಎಂದು ಸಂಬೋಧಿಸಬೇಕೆಂದು ತಿಳಿಸಿದೆ

ಬಟ್ಟೆ ರಫ್ತಿಗೆ ನಿರಾತಂಕ ರಹದಾರಿ

ಒರಟು ಮತ್ತು ಮಧ್ಯಮ ದರ್ಜೆಯ ಬಟ್ಟೆಯನ್ನು ರಫ್ತುಮಾಡಲು ನಿರಾತಂಕವಾಗಿ ರಹದಾರಿಯನ್ನು ಕೊಡಲಾಗುತ್ತದೆಯೆಂದು ಭಾರತಸರ್ಕಾರವು ಪ್ರಕಟಣೆಯಿತ್ತಿದೆ

ಅಂಧರಿಗೆ ನೆರವು

ಭಾರತ ಮತ್ತು ಮಧ್ಯಪ್ರಾಚ್ಯದಲ್ಲಿರುವ ಅಂಧರಿಗೆ ಯಾವರೀತಿ ನೆರವುನೀಡಲು ಸಾಧ್ಯವೆಂಬುದನ್ನು ವಿಶ್ವಸಂಸ್ಥೆಯ ಸಮಾಜಸಂಘವು ಪರಿಶೀಲಿಸುತ್ತಲಿವೆ.

ಅಮೇರಿಕದಲ್ಲಿ ಭಾರತದ ಲೋಹತಜ್ಞರು

ವಾಷಿಂಗ್ಟನ್ ಮೇ ೧೮

ಭಾರತದಲ್ಲಿ ಹೇರಳವಾಗಿ ಸಿಕ್ಕುವ ಕಚ್ಚಾ ವಸ್ತುಗಳನ್ನು ಇನ್ನೂ ಹೆಚ್ಚು ಹೆಚ್ಚಾಗಿ ಉಪಯೋಗಿಸಬಹುದು ಎಂದು ಭಾರತದ ಲೋಹತಜ್ಞರಾದ ಡಾ॥ ಡಿ ಆರ್ ಮಲ್ಹೋತ್ರರವರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಎರಕಹೊಯ್ಯುವ ಕಾರ್ಖಾನೆಯ ಕಾಂಗ್ರೆಸ್ ಅಧಿವೇಶನಕ್ಕೆ ಡಾ॥ ಮಲ್ಹೋತ್ರರವರು, ಭಾರತದ ಪ್ರತಿನಿಧಿಗಳಾಗಿ ಬಂದಿದ್ದಾರೆ.

'ನಾವು ಅಮೇರಿಕದಲ್ಲಿ ಬೇಕಾದಷ್ಟನ್ನು ಕಲಿತುಕೊಂಡಿದ್ದೇವೆ' ಎಂದರು ಶ್ರೀ ಮಲ್ಹೋತ್ರರವರು.

ಅಮೇರಿಕದ ತಾಂತ್ರಿಕ ಸಹಾಯನಿಧಿಯ ಪರವಾಗಿ ಭಾರತದ ಪ್ರತಿನಿಧಿಮಂಡಲವು ೩ ತಿಂಗಳ ಕಾಲ ಅಮೇರಿಕದ ಎರಕಹೊಯ್ಯುವ ಕಾರ್ಖಾನೆಗಳ ಕೆಲಸವನ್ನು ಪರಿಶೀಲಿಸುವುದು. ಡಾ॥ ಮಲ್ಹೋತ್ರರವರೊಂದಿಗೆ, ಶ್ರೀ ಎಚ್ ಹೆಚ್ ಚಕ್ರವರ್ತಿ, ಶ್ರೀ ಅರ್ಜುನವಾಸ್ವಾನಿ ಮತ್ತು ಶ್ರೀ ಎಸ್ ಎನ್ ಚಕ್ರವರ್ತಿಯವರೂ ಹೋಗುವರು.

ಅಮೇರಿಕದಲ್ಲಿ ತಿಳಿದುಕೊಂಡದ್ದೆಲ್ಲವನ್ನೂ ಭಾರತದಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲ ಆದರೆ ಬಹುಭಾಗವನ್ನೂ ಅನುಕರಿಸಬಹುದು. ಮತ್ತು ವಿದೇಶಗಳಿಂದ ಬಂದ ಇತರ ಲೋಹತಜ್ಞರ ಪರಸ್ಪರ ಭೇಟಿಯಿಂದ ವಿಚಾರವಿನಿಮಯ ಮಾಡಲು ಬಹಳ ಅನುಕೂಲವಾಗಿದೆ ಎಂದರು ಡಾ॥ ಮಲ್ಹೋತ್ರ.

ಭಾರತದ ಪ್ರತಿನಿಧಿಗಳು ಭಾರತಕ್ಕೆ ಹಿಂತಿರುಗಿದ ಕೂಡಲೇ ಅಮೇರಿಕದಲ್ಲಿ ಕಲಿತ ಹೊಸ ವಿಧಾನಗಳನ್ನು ಪ್ರಯೋಗ ಮಾಡಿ ತೋರಿಸುವರು.

ತುಂಡು ಸುದ್ದಿಗಳು

ಮಾಸ್ಕೋ ಆರ್ಥಿಕ ಪರಿಷತ್ತಿಗೆ ತೆರಳಿದ್ದ ಇನ್ನೊಬ್ಬ ಪ್ರತಿನಿಧಿಗಳಾದ ಶ್ರೀ ಬಿ. ನಾರಾಯಣರವರು, ಕಮ್ಯೂನಿಸ್ಟರೊಂದಿಗೆ ವ್ಯಾಪಾರಮಾಡುವುದು ಬಗ್ಗೆ ತಮ್ಮ ಹೆದರಿಕೆಯನ್ನು ವ್ಯಕ್ತಪಡಿಸಿದ್ದಾರೆ. ರಷ್ಯಾದಲ್ಲಿನ ಸಾಮಾನುಗಳಿಗೆ ಇತರ ಎಲ್ಲಾ ದೇಶಗಳ ಸಾಮಾನುಗಳಿಗಿಂತ ಹೆಚ್ಚು ಬೆಲೆ ಎಂದು ಅವರು ತಿಳಿಸಿದರು.

* * * *

ಎಲ್ ವಿಶ್ವವಿದ್ಯಾನಿಲಯದ ಪ್ರೊ॥ ಎಮರಿಟಸ್‌ರವರಿಗೆ ವಿಶ್ವಸಂಸ್ಥೆಯ ಆರೋಗ್ಯಸಮಿತಿಯವರು, 'ಸೋಷಿಯಲ್ ಮೆಡಿಸನ್' ನಲ್ಲಿ ನಡೆಸಿದ ಅದ್ಭುತ ಸಂಶೋಧನೆಗಾಗಿ ಒಂದು ಪಾರಿತೋಷಕವನ್ನು ಕೊಟ್ಟಿದ್ದಾರೆ.

ಮುಖ್ಯಮಂತ್ರಿಗಳ ಸಭೆ

ಬೆಂಗಳೂರು ಮೇ ೧೯

'ರಾಷ್ಟ್ರದಲ್ಲಿಯ ಕೈಗಾರಿಕೋತ್ಪನ್ನಕ್ಕೆ ಭಾರತ ಸರ್ಕಾರ ಬಹು ಪ್ರಾಮುಖ್ಯತೆಯನ್ನು ಕೊಟ್ಟಿದೆ; ಆದರಿಂದಲೇ ಅದೊಂದಕ್ಕೇ ಪ್ರತ್ಯೇಕ ಸಚಿವ ಶಾಖೆಯನ್ನು ರಚಿಸಿದೆ' ಎಂಬುದಾಗಿ ಭಾರತ ಸರ್ಕಾರದ ಉತ್ಪನ್ನ ಶಾಖಾ ಸಚಿವರಾದ ಶ್ರೀ ಕೆ. ಸಿ. ರೆಡ್ಡಿಯವರು ಭಾನುವಾರ ಬೆಂಗಳೂರಿನಲ್ಲಿ ನುಡಿದರು.

ಆಹಾರದ ಸಮಸ್ಯೆಗಳನ್ನು ಅದರಲ್ಲೂ ಮಾರಾಟದ ಬೆಲೆ ಮತ್ತು ಸಬ್ಸಿಡಿ ವಿಚಾರಗಳನ್ನು ಚರ್ಚಿಸುವ ಸಲುವಾಗಿ ಜೂನ್ ತಿಂಗಳ ಆದಿಯಲ್ಲಿ ಎಲ್ಲಾ ಸಂಸ್ಥಾನಗಳ ಮುಖ್ಯ ಸಚಿವರುಗಳ ಸಮ್ಮೇಳನವನ್ನು ಕೇಂದ್ರದ ಆಹಾರ ಸಚಿವರು ಕರೆಯಬಹುದೆಂದು ಶ್ರೀ ಕೆ ಸಿ. ರೆಡ್ಡಿಯವರು ಇಂದು ಸೂಚಿಸಿದರು.

ಶ್ರೀ ರೆಡ್ಡಿ ಬೆಂಗಳೂರಿನಲ್ಲಿ

ಭಾರತ ಸರ್ಕಾರದ ಉತ್ಪತ್ತಿ ಶಾಖಾ ಸಚಿವರಾದ ಮೈಸೂರಿನ ಮಾಜಿ ಮುಖ್ಯ ಸಚಿವ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ಭಾನುವಾರ ಮಧ್ಯಾಹ್ನ ದೆಹಲಿಯಿಂದ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಭಾರಿ ಸ್ವಾಗತ ನೀಡಲಾಯಿತು. ಶ್ರೀ ರೆಡ್ಡಿಯವರು ಸಂಸ್ಥಾನದಲ್ಲಿ ನಾಲ್ಕು ದಿನ ಇದ್ದು ತಮ್ಮ ಊರಾದ ಕ್ಯಾಸಂಬಳ್ಳಿಗೆ ಭೇಟಿಕೊಡುವರು.

ಚಿನ್ನ ಬೆಳ್ಳಿ ದರಗಳು

19–5–52	ರೂ.
ಸವರನ್	65–12
„	65–14
ಚಿನ್ನ ತೊಲ	93–8
„ ಮೂಸ	92–4
ಬೆಳ್ಳಿ 100 ತೊಲ	164–0
„ ತೊಲ	1–11

ನ್ಯೂ ಅಪೇರ ಟಾಕೀಸ್

16—5—52 ರಿಂದ

ಅಮೋಘವಾದ

2ನೇ ವಾರ

ಪ್ರತಿದಿನ 3 ಆಟಗಳು

ಜೂಪಿಟರ್ಸ್‌ರವರ—

* ರಾಣಿ *

(ತಮಿಳು)

ಪಾತ್ರ:— ‡ ಭಾನುಮತಿ ‡

‡ ಬಾಲಚೆಂದರ್ ‡

‡ ವಹಾಜ್ ಕಾಶ್ಮೀರಿ ‡

ಬಿ. ಟಿ, ಲಾ. ಎಲ್. ಎಂ. ಪಿ. ಫಲಿತಾಂಶ ನಾಳೆ ಬೆಳಗ್ಗೆ ಪ್ರಕಟಣೆ

ಬೆಂಗಳೂರು ಮೇ ೧೯

ಕಳೆದ ಮಾರ್ಚಿ—ಏಪ್ರಿಲ್ ತಿಂಗಳಲ್ಲಿ ನಡೆದ, ಬಿ. ಟಿ, ಲಾ. ಮತ್ತು ಎಲ್ ಎಂ ಪಿ ಪರೀಕ್ಷೆ ಫಲಿತಾಂಶಗಳು ಮೇ ೨೦ನೇ ಮಂಗಳವಾರ ಪ್ರಾತಃಕಾಲ ೧೦ ಗಂಟೆಗೆ ಬೆಂಗಳೂರು ಲಾ ಕಾಲೇಜು, ಮೆಡಿಕಲ್ ಸ್ಕೂಲ್, ಮೈಸೂರಿನ ಟೀಚರ್ಸ್ ಕಾಲೇಜ್ ಮತ್ತು ಯೂನಿವರ್ಸಿಟಿ ಕಚೇರಿಯಲ್ಲಿ ಪ್ರಕಟಿಸಲಾಗುವುದು.

ಆಹಾರ ಬೆಲೆ ಇಳಿಸುತ್ತೇನೆ

ಆಹಾರ ಧಾನ್ಯಗಳ ಬೆಲೆಯನ್ನು ಕೂಡಲೇ ಇಳಿಸಬೇಕೆಂದೂ, ಆಹಾರ ಸಬ್ಸಿಡಿಯನ್ನು ಪುನಃ ಜಾರಿಗೆ ತರಬೇಕೆಂದೂ ದೆಹಲಿಯ ಸಂಯುಕ್ತ ಪ್ರಜಾ ಆಹಾರ ಸಮಿತಿ ನಿಯೋಗ ಕೇಂದ್ರ ಆಹಾರ ಸಚಿವ ರಫಿ ಅಹಮದ್ ಕಿದ್ವಾಯಿರವರನ್ನು ಪ್ರಾರ್ಥಿಸಿತು.

ತಮ್ಮ ವಿಷಯ ಹೇಳುವುದಾದರೆ ತಾವು ಈ ಆಹಾರ ಬೆಲೆಯನ್ನು ಇಳಿಸಲು ನಿರ್ಧರಿಸಿರುವುದಾಗಿಯೂ, ಆದರೆ ಈ ಸಮಸ್ಯೆಯ ಸರ್ವರೂಪಗಳನ್ನು ತಾವು ಪರಿಶೀಲಿಸುತ್ತಿರುವುದಾಗಿ ಆಹಾರ ಸಚಿವರು ನಿಯೋಗಕ್ಕೆ ತಿಳಿಸಿದರೆಂದು ಹೇಳಲಾಗಿದೆ.

ಪೇಟೆ ಧಾರಣೆ

ಮೈಸೂರು ತಾ॥ 19-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		11-4	17-6
ಹೊಂಗೆಬೀಜ	„	10-0	——
ಹುರುಳಿ	„	34-0	35-2
ಹೆಸರು	„	56-8	57-14
ಸೀಗೆಕಾಯಿ	„	3-3	——
ಮೆ. ಕಾಯಿ ಮಣಕ್ಕೆ		8-2	16-2
ಹುಣಸೇಹಣ್ಣು	„	2-0	3-9
ತೆಂಗಿನಕಾಯಿ 1100ಕ್ಕೆ		115	177

ಪಾರ್ಲಿಮೆಂಟಿನಲ್ಲಿ ಹಿಂದಿಯ ಬಳಕೆಗೆ ಸಂಘದ ಸ್ಥಾಪನೆ

ಪಾರ್ಲಿಮೆಂಟಿನಲ್ಲಿ ಆದಷ್ಟು ಹೆಚ್ಚು ಹಿಂದಿಯನ್ನು ಉಪಯೋಗಿಸುವಂತೆ ಪ್ರಚಾರಮಾಡಲು ಪಾರ್ಲಿಮೆಂಟಿನ ಸುಮಾರು ೬೦ ಸದಸ್ಯರು 'ಪಾರ್ಲಿಮೆಂಟರಿ ಹಿಂದಿ ಅಸೋಸಿಯೇಷನ್' ಎಂಬ ಸಂಘವನ್ನು ಸ್ಥಾಪಿಸಿದ್ದಾರೆ.

ಟೆಂಡರ್ ನೋಟಿಫಿಕೇಷನ್

ಮೈಸೂರು ಜಿಲ್ಲಾ ಬೋರ್ಡು ಅಧ್ಯಕ್ಷರವರ ಆಫೀಸಿನಿಂದ:—

ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೈಸೂರು ಜಿಲ್ಲಾ ಬೋರ್ಡ್ ಆಫೀಸಿಗೆ ಬೇಕಾಗಿರುವ ಸೀಮೆಂಟು ಮತ್ತು ಕಬ್ಬಿಣ ಸಲಾಕಿ, ಹಂಡು ಮತ್ತು ಇತರ ಸಾಮಾನುಗಳನ್ನು ಮೈಸೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ವ್ಯಾಗನ್ನಿನಿಂದ ಅನ್‌ಲೋಡ್ ಮಾಡಿ ಅವುಗಳನ್ನು ಜಿಲ್ಲಾ ಬೋರ್ಡ್ ಆಫೀಸಿಗೆ ಸಾಗಿಸಿ ಅಲ್ಲಿ ಜೋಡಿಸುವುದಕ್ಕೆ ಟೆಂಡರನ್ನು ಇದೇ ಮಾಹೆ ತಾರೀಖು ೨೮ನೇ ಬುಧವಾರದವರೆವಿಗೂ ಜಿಲ್ಲಾ ಬೋರ್ಡ್ ಅಧ್ಯಕ್ಷರವರ ಆಫೀಸಿನಲ್ಲಿ ಸ್ವೀಕರಿಸಲಾಗುತ್ತೆ. ರೇಟನ್ನು ಸಾಮಾನಿನ ಮೇಲಿನ ತೂಕದ ಮೇಲಾಗಲೀ ಸಂಬರಿನ ಮೇಲಾಗಲೀ ನಮೂದಿಸತಕ್ಕದ್ದು. ಸಾಮಾನು ಸಾಗಿಸುವಾಗ ಆಗತಕ್ಕ ನಷ್ಟಕ್ಕೆ ಕಂಟ್ರಾಕ್ಟರು ಜವಾಬುದಾರರಾಗಿರತಕ್ಕದ್ದು. ಈ ರೇಟನ್ನು ೧೯೫೩ನೇ ಮಾರ್ಚ್ ೩೧ನೇ ತಾರೀಖಿನವರಿಗೆ ಜಾರಿಯಲ್ಲಿರುತ್ತದೆ.

ಉತ್ತೀರ್ಣರಾದ ಟೆಂಡರುದಾರರು ೧೦ ಆಣೆ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರೆದುಕೊಡತಕ್ಕದ್ದು. ಸಾಮಾನು ರೈಲಿನಲ್ಲಿ ಬಂದೊಡನೆ ಸಾಗಿಸದೆ ತಡಮಾಡಿದಲ್ಲಿ ರೈಲ್ವೆ ಇಲಾಖೆಗೆ ಕೊಡಬೇಕಾಗಿರುವ ಡೆಮರೇಜಿಗೆ ಕಂಟ್ರಾಕ್ಟುದಾರರನ್ನು ಜವಾಬ್ದಾರರನ್ನಾಗಿ ಮಾಡುತ್ತದೆ.

ಹೆಚ್. ಎಂ. ಚೆನ್ನಬಸಪ್ಪ,

ಪ್ರೆಸಿಡೆಂಟ್

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್.

ವುಡ್ ಲ್ಯಾಂಡ್ಸ್

16—5—52ನೇ ಶುಕ್ರವಾರದಿಂದ

ಅಮೋಘ 3ನೇ ವಾರ

ದಿನವಹಿ 3 ಆಟಗಳು

" ಲಕ್ಷ್ಮೀ ನಾರಾಯಣ್ "

(ಹಿಂದಿ)

ಪಾತ್ರ:—ಮೀನಾಕುಮಾರಿ

ಮಹಿಪಾಲ್

ಪ್ರಕಾಶಕರು:—ಜಿ.ಎಲ್. ಸ್ವಾಮಿ

ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ

ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೭೪ (೮೦೮) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೧—೫—೧೯೫೨ನೇ ಬುಧವಾರ [ಸಂಚಿಕೆ ೨೯೯

ಸಬ್ಸಿಡಿ ನಿಲ್ಲಿಸಿದ್ದರಿಂದ ಬಚ್ಚಿಟ್ಟಿದ್ದ ಧಾನ್ಯ ಹೊರಕ್ಕೆ ಬಂತು

ಆಹಾರ ವಸ್ತುಗಳ ಬೆಲೆಯನ್ನಿಳಿಸಲು ಪ್ರಯತ್ನ ನಡೆಯುತ್ತಿದೆ

ಭಾರತದಲ್ಲಿ ನಾನಾ ಪ್ರಾಂತ್ಯಗಳಿಗೆ ಕೊಡುತ್ತಿದ್ದ ಆಹಾರ ಸಬ್ಸಿಡಿಯನ್ನು ನಿಲ್ಲಿಸಿದ್ದರಿಂದ ಬಚ್ಚಿಟ್ಟಿದ್ದ ಆಹಾರವೆಲ್ಲಾ ಹೊರಕ್ಕೆ ಬರಲಾರಂಭವಾಗಿದೆ. ಇದರಿಂದ ಆಹಾರವಸ್ತುಗಳ ಬೇಡಿಕೆಯು ಪ್ರಾಂತ್ಯಗಳಿಂದ ಕಡಿಮೆಯಾಗಿದೆ. ಕೊಳ್ಳುವವರಿಗೆ ಅಷ್ಟು ತೊಂದರೆ ಇದ್ದಂತೆ ಕಾಣುವುದಿಲ್ಲ ಹೊರಗಿನಿಂದ ತರಿಸಿಕೊಳ್ಳುವ ಪ್ರಮಾಣದಲ್ಲಿ ಈಗಾಗಲೇ ೫ ಲಕ್ಷ ಟನ್ ಆಹಾರವನ್ನು ಕಡಿಮೆಮಾಡಲಾಗಿದೆ. ಎಂದು ಕೇಂದ್ರ ಆರ್ಥಿಕಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ತಿಳಿಸುತ್ತಾ, ಆಹಾರಸಬ್ಸಿಡಿ ನಿಲ್ಲಿಸಿರುವುದನ್ನು ಸಮರ್ಥಿಸಿರುವರು.

ವಿದ್ಯಾಸಚಿವರ ಭೇಟಿ

ಮೈಸೂರು ಮೇ ೨೧

ವಿದ್ಯಾಮಂತ್ರಿಗಳಾದ ಶ್ರೀ ಎ. ಜಿ ರಾಮಚಂದ್ರರಾಯರು ನಿನ್ನೆ ಸಂಜೆ ಮೈಸೂರು ಶಿಶುಸಾಹಿತ್ಯಸಂಘ, ವನಿತಾಸದನ ಮತ್ತು ಮಕ್ಕಳ ಆಟದ ಕೇಂದ್ರಗಳಿಗೆ ಭೇಟಿಯಿತ್ತು, ಅಲ್ಲಿಯ ಕಾರ್ಯಕಲಾಪಗಳನ್ನು ಪರಿಶೀಲಿಸಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಪೌರ ಸನ್ಮಾನ

ಮೈಸೂರಿನಲ್ಲಿ ಮುಖ್ಯಮಂತ್ರಿಗಳಾಗಿದ್ದು ಈಗ ಕೇಂದ್ರದ ಉತ್ಪನ್ನ ಶಾಖಾ ಸಚಿವರಾಗಿರುವ ಶ್ರೀ ಕೆ. ಸಿ ರೆಡ್ಡಿಯವರಿಗೆ ಮೈಸೂರು ಪೌರಸಭೆಯವರು ಈದಿನ ಸಂಜೆ ೬-೧೫ಕ್ಕೆ ಪೌರಸನ್ಮಾನ ನೀಡಲಿರುವರು.

ಪೌರಸಭೆಗೆ ಮನರಂಜನೇ ತೆರಿಗೆ

ಸಂಸ್ಥಾನದ ರೆವಿನ್ಯೂ ಸಚಿವರಾದ ಶ್ರೀ ಕಡಿದಾಳ್ ಮಂಜಪ್ಪನವರು ಕಡೂರಿಗೆ ಭೇಟಿ ಇತ್ತಿದ್ದ ಸಂದರ್ಭದಲ್ಲಿ ಅಲ್ಲಿನ ಪೌರಸಭಾಸದಸ್ಯರು ಸಚಿವರನ್ನು ಭೇಟಿಮಾಡಿ ಅಲ್ಲಿನ ಕುಂದುಕೊರತೆಗಳನ್ನು ನಿವೇದಿಸಿಕೊಂಡರು.

ಸಚಿವರು ಇದಕ್ಕೆ ಉತ್ತರಕೊಡುತ್ತಾ, ಸರ್ಕಾರದವರು ಇನ್ನು ಮುಂದೆ ಪೌರಸಭೆಗಳಿಗೆ ಯಾವ ಬಗೆಯ ಗ್ರಾಂಟುಗಳನ್ನೂ ಕೊಡುವುದಿಲ್ಲವೆಂದು ನಿರ್ಧರಿಸಿರುವರು. ಪೌರಸಭೆಯವರು ಸ್ವಾವಲಂಬಿಗಳಾಗಿ ಮಾಡಿಕೊಳ್ಳಲು, ಹೆಚ್ಚಿನ ಹಣ ಹೊಂದಲು, ಹೊಸ ತೆರಿಗೆ ಹಾಕುವುದರಮೂಲಕ ಪಡೆಯಬೇಕೆಂದು ತಿಳಿಸಿದರು. ಸರ್ಕಾರದವರು ಮುಂದೆ ಮನರಂಜನಾ ತೆರಿಗೆಯನ್ನು ಆಯಾ ಊರಿನ ಪೌರಸಭೆಗಳೇ ಪಡೆಯಲು ಬಿಡುವರು ಎಂದು ತಿಳಿಸಿದರು.

ವಿಶೇಷ ಸಭೆ

ಮೈಸೂರು ನಗರದ ಪತ್ರಿಕೋದ್ಯಮಿಗಳ ಸಂಘದ ವಿಶೇಷ ಸಭೆಯನ್ನು ಮೇ ೨೪ನೇ ತಾರೀಖು ಬೆಳಗ್ಗೆ ೯ ಗಂಟೆಗೆ ಸಂಘದ ಕಾರ್ಯಾಲಯದಲ್ಲಿ ನಡೆಸಲೇರ್ಪಡಾಗಿದೆ. ಸದಸ್ಯರೆಲ್ಲರೂ ದಯಮಾಡಿಬರಬೇಕಾಗಿ ಸಂಚಾಲಕರುಗಳಾದ ಶ್ರೀಗಳಾದ ಎಸ್-ಎಸ್-ಶಾಸ್ತ್ರಿ, ಎ. ರಾಮಣ್ಣ ಮತ್ತು ಬಿ-ಬಾಲಯ್ಯನವರುಗಳು ಪ್ರಾರ್ಥಿಸುತ್ತಾರೆ.

ಆಹಾರ ಬೆಲೆ ಇಳಿಸಲು ಪ್ರಯತ್ನ

ಆಹಾರ ವಸ್ತುಗಳ ಬೆಲೆಯು ವಿಪರೀತವಾಗಿದೆಯೆನ್ನುವುದು ಭಾರತ ಸರ್ಕಾರದ ಗಮನಕ್ಕೆ ಬಂದಿದೆ. ಈ ಬೆಲೆಯನ್ನು ಇಳಿಸಲು ಭಾರತವು ಪ್ರಯತ್ನಗಳನ್ನು ಮಾಡುತ್ತಿರುವುದಾಗಿ ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವುದಾಗಿ ಗೊತ್ತಾಗಿದೆ.

ಶ್ರದ್ಧಾಂಜಲಿ

ಭಾನುವಾರ ರಾತ್ರಿ ಬಿಕ್ನೀರ್ ಬಳಿ ಆದ ರೈಲ್ವೆ ಅಪಘಾತದಲ್ಲಿ ಸತ್ತವರಸಂಖ್ಯೆ ೪೬. ಇನ್ನೂ ೫೦ ಜನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಲಿರುವರು. ಮೃತಪಟ್ಟವರಿಗೆ ಭಾರತ ಶಾಸನಸಭೆಯು ನಿನ್ನೆ ತನ್ನ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಾ ೨ ನಿಮಿಷ ಮೌನವನ್ನಾಚರಿಸಿತು.

ಯುದ್ಧ ಖೈದಿ ಶಿಬಿರದಲ್ಲಿ ಘರ್ಷಣೆ

ಕೊರಿಯಾದಲ್ಲಿಯ ಪೂಸಾನ್‌ನಲ್ಲಿರುವ ಯುದ್ಧ ಖೈದಿಗಳ ಶಿಬಿರದಲ್ಲಿ ವಿಶ್ವಸಂಸ್ಥೆ, ಚೈನಾ ಮತ್ತು ಉತ್ತರ ಕೊರಿಯಾ ಖೈದಿಗಳಲ್ಲಿ ಘರ್ಷಣೆಯುಂಟಾಗಿ ಒಬ್ಬನು ಸತ್ತು, ೮೦ ಜನರಿಗೆ ಗಾಯಗಳಾಗಿವೆಯೆಂದು ಹೇಳಲಾಗಿದೆ.

ಆಹಾರಶಾಖೆಯ ಉಪ ಸಚಿವರು

ಪ್ರಧಾನ ಮಂತ್ರಿಗಳ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿರುವಶ್ರೀ ಸತೀಶಚಂದ್ರ, ರನ್ನು ಕೇಂದ್ರದ ಆಹಾರಶಾಖೆಯ ಉಪ ಸಚಿವರನ್ನಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

ಅಂಚೆ ಮತ್ತು ತಂತಿ ಕೆಲಸಗಾರರ ಸಮ್ಮೇಳನ

ಅಖಿಲ ಭಾರತ ಅಂಚೆ ಮತ್ತು ತಂತಿ ಕೆಲಸಗಾರರ ಚತುರ್ಥ ಸಮ್ಮೇಳನ ಮೇ ೨೫ ರಂದು ಬರೋಡಾದಲ್ಲಿ ನಡೆಯಲಿದೆ. ಶ್ರೀಮತಿ ಸುಚೇತಾ ಕೃಪಲಾನಿಯವರು ಉದ್ಘಾಟನೆ ನಡೆಸಲಿದ್ದಾರೆ.

ವಿಚಾರಣೆ ಮುಕ್ತಾಯ

ಏಪ್ರಿಲ್ ೩೦ನೇ ತಾ॥ ದೆಹಲಿಯ ಬಳಿ ನಡೆದ ವಿಮಾನ ಅಪಘಾತದಬಗ್ಗೆ ವಿಚಾರಣೆ ನಡೆಸಲು ಭಾರತ ಶ್ರೇಷ್ಠ ನ್ಯಾಯಾಲಯದ ಶ್ರೀ ಚಂದ್ರಶೇಖರಯ್ಯರ್‌ರವರ ವಿಚಾರಣಾಸಮಿತಿಯು ತನ್ನ ವಿಚಾರಣೆಯನ್ನೆಲ್ಲಾ ಪೂರೈಸಿ ಇನ್ನೊಂದು ವಾರದೊಳಗೆ ತನ್ನ ವರದಿಯನ್ನು ಒಪ್ಪಿಸಲಿರುವುದಾಗಿ ಗೊತ್ತಾಗಿದೆ.

ಕಾಶ್ಮೀರ ಪ್ರಶ್ನೆ ಹಿಂದಕ್ಕೆ ತೆಗೆದುಕೊಳ್ಳಬೇಕು

ಪಾರ್ಲಿಮೆಂಟಿನಲ್ಲಿ ನಿನ್ನೆಯದಿನ ಶ್ರೀ ಎನ್ ಸಿ ಚಟರ್ಜಿಯವರು ಮಾತನಾಡುತ್ತಾ, ಕಾಶ್ಮೀರ ಪ್ರಶ್ನೆಯನ್ನು ವಿಶ್ವಸಂಸ್ಥೆಯಿಂದ ಹಿಂದಕ್ಕೆ ತೆಗೆದುಕೊಳ್ಳಬೇಕೆಂದೂ ಈಗಾಗಲೇ ಕಾಶ್ಮೀರವು ಭಾರತಕ್ಕೆ ಸೇರಿರುವುದರಿಂದ ಅದೇ ಕೊನೆಯ ನಿರ್ಧಾರವೆಂದು ಪರಿಗಣಿಸಬೇಕೆಂದು ಹೇಳಿರುವುದಾಗಿ ಗೊತ್ತಾಗಿದೆ.

ಜೀಪ್ ಟ್ಯಾಕ್ಸಿಗಳು

ಉತ್ತರ ಆರ್ಕಾಟು ಮತ್ತು ಮಲಬಾರ್ ಜಿಲ್ಲೆಗಳಲ್ಲಿ ಸದ್ಯದಲ್ಲಿಯೇ ಜೀಪ್ ಟ್ಯಾಕ್ಸಿಗಳು ಕೆಲಸ ಮಾಡಲಾರಂಭಿಸುವುವು.

ಈ ಎರಡು ಜಿಲ್ಲೆಗಳಲ್ಲಿಯೂ ಪ್ರಾಯೋಗಿಕವಾಗಿ ಅಂತಹ ಎರಡೆರಡು ಟ್ಯಾಕ್ಸಿಗಳಿಗೆ ಕೆಲಸ ಮಾಡಲು ಮದ್ರಾಸು ಸರ್ಕಾರ ಅನುಮತಿಯಿತ್ತಿದೆ.

೬ ತಿಂಗಳನಂತರ ಸರ್ಕಾರವು ಪರಿಸ್ಥಿತಿಯನ್ನು ಪುನಃ ಪರಿಶೀಲಿಸುವುದು. ಅಷ್ಟುಹೊತ್ತಿಗೆ ಆ ವಾಹನಗಳು ಜನಪ್ರಿಯವಾದಲ್ಲಿ ಅಂತಹ ವಾಹನಗಳಿಗೆ ಹೆಚ್ಚು ಹೆಚ್ಚಾಗಿ ಲೈಸೆನ್ಸುಗಳನ್ನೂ ಕೊಡಲಾಗುವುದು.

ಕಾಶ್ಮೀರ ಸಂಧಾನ

ವಿಶ್ವಸಂಸ್ಥೆಯ ಕಾಶ್ಮೀರ ಪ್ರತಿನಿಧಿ ಡಾ॥ ಫ್ರಾಂಕ್ ಗ್ರಹಾಂರವರು ಬೇಗನೆ ನ್ಯೂಯಾರ್ಕ್‌ನಲ್ಲಿ ಭಾರತ ಮತ್ತು ಪಾಕಿಸ್ತಾನ ಪ್ರತಿನಿಧಿಗಳೊಡನೆ ಸಂಧಾನವನ್ನು ಆರಂಭಿಸುವರೆಂದು ಪಾಕಿಸ್ತಾನ್ ಮೂಲಗಳಿಂದ ತಿಳಿದುಬಂದಿದೆ.

ನಾಮಕರಣಕ್ಕೆ ಪ್ರತಿಭಟನೆ

ಪಶ್ಚಿಮಬಂಗಾಳದ ಪ್ರಾಂತ್ಯದ ಮೇಲ್ಮನೆಗೆ ಗವರ್ನರು ೯ ಜನರನ್ನು ನಾಮಕರಣ ಮಾಡಿರುವುದನ್ನು ಪ್ರತಿಭಟಿಸಿ ಕಲ್ಕತ್ತಾ ಹೈಕೋರ್ಟಿನಲ್ಲಿ ರಾಜ್ಯಾಂಗದ ೨೨೬ನೇ ವಿಧಿಯನ್ವಯ ಅರ್ಜಿಯೊಂದನ್ನು ಸಲ್ಲಿಸಲಾಗಿದೆ.

ಶ್ರೀ ತಂಬೂಚೆಟ್ಟರ ನಿಧನ

ಶ್ರೀಮನ್ಮಹಾರಾಜರಿಗೆ ಹುಜೂರು ಸೆಕ್ರೆಟರಿಗಳಾಗಿದ್ದು ನಿವೃತ್ತಿಹೊಂದಿದ್ದ ಶ್ರೀ ಟಿ. ತಂಬೂಚೆಟ್ಟರು ಮೊನ್ನೆ ಬೆಂಗಳೂರಿನಲ್ಲಿ ನಿಧನರಾದರು. ಶ್ರೀಯುತರ ಗೌರವಾರ್ಥವಾಗಿ ಈದಿನ ಅರಮನೆಕಛೇರಿಗೆ ರಜಾಕೊಡಲಾಗಿದೆ.

ಭಗವಂತನು ಮೃತರ ಆತ್ಮಕ್ಕೆ ಶಾಂತಿನೀಡಲಿ.

ಚೈನಾಕ್ಕೆ ನೂತನ ರಾಯಭಾರಿ ನೇಮಕ

ಸ್ವಿಟ್ಸರ್‌ಲೆಂಡಿನಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಎನ್. ರಾಘವನ್‌ರವರನ್ನು ಚೈನಾದಲ್ಲಿ ಭಾರತ ರಾಯಭಾರಿಯಾಗಿ ನೇಮಕಮಾಡಲಾಗಿದೆ

ಒರಿಸ್ಸಾದಲ್ಲಿ ಗವರ್ನರ್ ಆಗಿದ್ದ ಎಂ॥ ಆಸಫ್ ಆಲಿಯವರು ಸ್ವಿಟ್ಸರ್‌ಲೆಂಡಿನಲ್ಲಿ ರಾಯಭಾರಿಯಾಗಿ ನೇಮಕವಾಗಿದ್ದಾರೆ.

ನದೀ ಕಣಿವೆ ಯೋಜನೆ

ನದೀ ಕಣಿವೆ ಯೋಜನೆಗಳಿಂದ ಆಹಾರ ಸಮಸ್ಯೆಯನ್ನು ಪರಿಹರಿಸಲು ಮಾತ್ರ ಸಾಧ್ಯವೆಂದು ಕೇಂದ್ರ ಆರ್ಥಿಕ ಸಚಿವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಹೇಳಿರುವರು.

ಪ್ರಭಾ * ಅಮೋಘ ಪ್ರಾರಂಭ

23–5–52 ರಿಂದ

ದಿನವಹಿ 3 ಆಟಗಳು

ಲೋಕಮಾನ್ಯ ಪ್ರೊಡಕ್ಷನ್ಸ್‌ರವರ ಸಂಗೀತದಿಂದ ಕೂಡಿದ ಅತ್ಯುತ್ತಮ ಹಿಂದಿ ಚಿತ್ರ

ಗರ್ಲ್ಸ್‌ಸ್ಕೂಲ್

ಪಾತ್ರ:—ಗೀತಾಬಾಲಿ, ಸೋಹನ್, ಸಜ್ಜನ್, ಶಶಿಕಲಾ, ಮುಂತಾದವರು

ಸಂಗೀತ—ಸಿ. ರಾಮಚಂದ್ರ,

ಅನೀಲ್ ಬಿಶ್ವಾಸ್.

ದಿಗ್ದರ್ಶನ—ಅಮಿಯಚಕ್ರವರ್ತಿ

MORNING SHOWS FROM 23-5-52. COLUMBIA PICTURES' FOR 3 DAYS

GILDA

Starring:- Rita Hayworth, Glenn Ford.

ಶ್ರೀ ಸುಧೀರಘೋಷರು

ವಾಷಿಂಗ್ಟನ್ ಮೇ ೧೮

ಫರೀದಾಬಾದ್ ನಗರವನ್ನು ಕಟ್ಟಿ ಅಭಿವೃದ್ಧಿಮಾಡಿ ಕೀರ್ತಿಗಳಿಸಿದ ಶ್ರೀ ಸುಧೀರಘೋಷರು ಅಮೆರಿಕದ ಜನರ ಮೇಲೆ, ಕಾಂಗ್ರೆಸ್ಸಿನ ಸಭಾಸದಸ್ಯರ ಮೇಲೆ ಭಾರತೀಯರು ತಮ್ಮ ಹಳ್ಳಿಗಳನ್ನು ತಾವೇ ಉದ್ಧಾರಮಾಡಿಕೊಳ್ಳಬಲ್ಲರು ಎಂಬ ಪ್ರಭಾವವನ್ನು ಬೀರಿದ್ದಾರೆ.

ಪರದೇಶದ ದಾಸ್ಯತ್ವವಿಲ್ಲದೆ ಭಾರತೀಯರು ಆರ್ಥಿಕ ಪ್ರಗತಿಯನ್ನೈದಬಹುದೆಂದು, ಶ್ರೀ ಘೋಷರು ತಮ್ಮ ಅಂಕಿ ಅಂಶಗಳ ಯೋಜನೆಯಿಂದ ಎಲ್ಲರನ್ನೂ ಮನದಟ್ಟು ಮಾಡಿಸುತ್ತಿದ್ದಾರೆ.

ಶ್ರೀ ಘೋಷರ ಮುಖ್ಯೋದ್ದೇಶದ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಲೇಖನವೊಂದು ಪ್ರಕಟವಾಗಿದ್ದು, ಆ ಲೇಖನವು ಈ ರೀತಿ ಇದೆ.

'ಶ್ರೀ ಘೋಷರ ಉದ್ದೇಶವು ಫರೀದಾಬಾದ್ ಯೋಜನೆಯಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದೇ ಆಗಿದೆ- ಅಲ್ಲಿ ಸ್ವಾಭಾವಿಕ ಸಂಪತ್ತನ್ನೂ, ಮನುಷ್ಯರ ಶಕ್ತಿಯನ್ನೂ ಉಪಯೋಗಿಸಿ ಸ್ವಸಂಪೂರ್ಣತೆಯನ್ನು ಪಡೆದುಕೊಂಡ ನಿದರ್ಶನವಿದೆ- ಫರೀದಾಬಾದಿನಂತಹ ಸಾವಿರ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಹಂಬಲ ಶ್ರೀ ಘೋಷರಿಗಿದೆ.'

ಅದೇ ಪತ್ರಿಕೆಯು ತನ್ನ ಅಗ್ರಲೇಖನದಲ್ಲಿ ಈ ರೀತಿ ಹೇಳಿದೆ.

ಪರದೇಶದ ಅಭಿವೃದ್ಧಿಕಾರ್ಯಗಳಿಗೆ ಹಣ ಒದಗಿಸಿದ್ದಕ್ಕೆ ಕಾಂಗ್ರೆಸ್ಸನ್ನು ಬಹಳಜನ ಅಮೆರಿಕನ್ನರು ಟೀಕಿಸುತ್ತಾರೆ. ಆದರೆ ಭಾರತದ ಬಗ್ಗೆ ಮಾತ್ರ, ಅಮೆರಿಕದ ಸಾಮಾನ್ಯ ಜನರು, ಶಾಸನಸಭಾ ಸದಸ್ಯರು ತುಂಬಾ ಆಸಕ್ತಿಯನ್ನು ತೋರಿಸುತ್ತಿದ್ದಾರೆ ಇದು ಶುಭ ಚಿಹ್ನೆ.

'ಭಾರತಕ್ಕೆ ಈಗಲೇ ಸಹಾಯನೀಡಬೇಕು- ಫರೀದಾಬಾದಿನಂತಹ ಹಳ್ಳಿಗಳಲ್ಲಿ ಈ ಯೋಜನೆಗಳ ಕಾರ್ಯರೂಪಕ್ಕೆ ಬರಬೇಕು. ಶ್ರೀ ಸುಧೀರ್ ಘೋಷರು, ತಮ್ಮ ಪ್ರಾಮಾಣಿಕತೆ ಮತ್ತು ಶ್ರದ್ಧೆ ಯಿಂದ, ೫-೬ ವರ್ಷಗಳಲ್ಲಿ ಭಾರತವನ್ನು ಅಭಿವೃದ್ಧಿಗೊಳಿಸಬಹುದೆಂಬ ಪ್ರಭಾವವನ್ನು ಬೀರಿದ್ದಾರೆ. ಅವರಿಗೆ ಸರ್ವರೂ ಸಹಾಯನೀಡಬೇಕು-'

ಆಕಾಶವಾಣಿಯಲ್ಲಿ ಸುದ್ದಿವಿಮರ್ಶಕರಾದ ಎರಿಕ್ ಸೆವೇರ್ಡ್‌ರವರು ಮಾತನಾಡುತ್ತಾ, ಶ್ರೀ ಸುಧೀರ್ ಘೋಷರಂತಹ ಕಾರ್ಯಧುರಂಧರರನ್ನು ಪಡೆದ ಭಾರತವು ಶೀಘ್ರದಲ್ಲಿಯೇ ಅಭಿವೃದ್ಧಿಯ ತುಟ್ಟ ತುದಿಯನ್ನು ಮುಟ್ಟಬಹುದು. ಆದರೆ ಅವರಿಗೆ, ಭಾರತಕ್ಕೆ ಸರ್ವಸಹಾಯವನ್ನು ನೀಡಿದರೆ ಮಾತ್ರ ಅದು ಸಾಧ್ಯ ಎಂದು ತಿಳಿಸಿ ಏಷ್ಯಾದಲ್ಲಿ ಭಾರತವು ಮುಖ್ಯ ರಾಷ್ಟ್ರವೆಂದು ಹೇಳಿದ್ದಾರೆ.

ಶ್ರೀಬಾಲರತ್ನಂ ಮೊಕದ್ದಮೆ ೨೬ನೇ ತಾ|| ತೀರ್ಪು

ಬೆಂಗಳೂರು ಮೇ ೨೦

ಅಡ್ವೊಕೇಟ್ ಶ್ರೀ ವಿ ಬಾಲರತ್ನಂ ಮತ್ತು ಇನ್ನಿಬ್ಬರು ಲಾಯರ್ ಶ್ರೀ ವಿ. ರಾಮಕೃಷ್ಣಯ್ಯನವರ ಕೊಲೆಗೆ ಪ್ರಯತ್ನಿಸಿದರೆಂಬ ಆಪಾದನೆ ಬಗ್ಗೆ ಸೆಷನ್ಸ್ ವಿಚಾರಣೆಗೆ ಗುರಿಯಾಗಿದ್ದುದು ಸರಿಯಷ್ಟೆ ಸದರಿ ಮೊಖದ್ದಮೆಯಲ್ಲಿ ಮೇ ೨೬ರಂದು ತೀರ್ಪು ಕೊಡುವುದಾಗಿ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಕೆ. ಎನ್. ಪದ್ಮನಾಭಯ್ಯನವರು ತಿಳಿಸಿದರು.

ಜಡ್ಜರು ಮೊಕದ್ದಮೆ ಸಾರಾಂಶ ಓದಿದನಂತರ ಅಸೆಸರುಗಳಾದ ಶ್ರೀ ಪುಟ್ಟಯ್ಯ ಮತ್ತು ಶ್ರೀ ಮಲ್ಲಿಕಾರ್ಜುನಪ್ಪನವರು ಶ್ರೀ ಬಾಲರತ್ನಂ ಮತ್ತು ಇನ್ನಿಬ್ಬರು ಅಪಾದಿತರು ತಪ್ಪಿತಸ್ಥರೆಂದು ಅಭಿಪ್ರಾಯಪಟ್ಟರು.

ಕೇಂದ್ರ ಸಚಿವರಿಗೆ ಮುಖ್ಯಮಂತ್ರಿ ಸತ್ಕಾರ

ಬೆಂಗಳೂರು ಮೇ ೧೯

ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಭಾರತ ಸರ್ಕಾರದ ಉತ್ಪನ್ನ ಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರಿಗೆ ರೆಸಿಡೆನ್ಸಿಯಲ್ಲಿ ಈ ಸಂಜೆ ಸತ್ಕಾರನೀಡಿದರು.

ಲೌಕಿಕಾದರ್ಶಗಳನ್ನು ಕಾರ್ಯರೂಪಕ್ಕೆ ತನ್ನಿ

ಬೆಂಗಳೂರು ಮೇ ೨೦

ಕೇಂದ್ರದ ಉತ್ಪನ್ನ ಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ರಾತ್ರಿ, ದಂಡಿನ ರಸೆಲ್ ಮಾರ್ಕೆಟ್ ಚೌಕದಲ್ಲಿ ಸೇರಿದ್ದ ೧೦ ಸಹಸ್ರ ಮಂದಿಯ ಸಭೆಯಲ್ಲಿ ಬೆಂಗಳೂರು ಯುವಜನ ಸಂಘದ ಆರಂಭೋತ್ಸವವನ್ನು ನೆರವೇರಿಸುತ್ತಾ, ಯುವಜನರು ಹಿಂದಿನ ಕಹಿ ಪ್ರಸಂಗಗಳನ್ನು ಮರೆತು ರಾಜ್ಯಾಂಗದಲ್ಲಿ ಸೇರ್ಪಡಿಸಲಾಗಿರುವ ಲೌಕಿಕ ರಾಷ್ಟ್ರದ ಆದರ್ಶಗಳನ್ನು ಕಾರ್ಯರೂಪಕ್ಕೆ ಇಳಿಸಬೇಕೆಂದರು. ಅಡ್ವೊಕೇಟರೂ ಮಾಜಿ ಶಾಸನಸಭಾ ಸದಸ್ಯರೂ ಆದ ಸೈಯದ್ ಅಬ್ದುಲ್ ರಹಮಾನ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮೊಹಮದ್ ಷರೀಫ್‌ರವರು ಶ್ರೀ ರೆಡ್ಡಿಯವರಿಗೆ ಹಾರ ಹಾಕಿದರು. ಪಾಸ್ಬಾನ್ ಪತ್ರಿಕಾ ಸಂಪಾದಕರಾದ ಮೊಹಮದ್ ಇಸ್ಮೈಲ್ ಷರೀಫ್‌ರವರು ವಂದನಾರ್ಪಣೆ ಮಾಡಿದರು.

ಶ್ರೀ ಗಿರಿ ಮದ್ರಾಸಿನಲ್ಲಿ

ಕೇಂದ್ರ ಕಾರ್ಮಿಕ ಮಂತ್ರಿ ಶ್ರೀ ವಿ. ವಿ. ಗಿರಿಯವರು ಮದ್ರಾಸಿಗೆ ಆಗಮಿಸಿರುವರು.

ಗ್ರಾಮಾಧಿಕಾರಿಗಳ ಒಕ್ಕೂಟ ಸಮ್ಮೇಳನ

ಬೆಂಗಳೂರು ಮೇ ೨೦

ದಕ್ಷಿಣ-ಭಾರತದ ಗ್ರಾಮಾಧಿಕಾರಿಗಳ ಸಂಘಗಳ ಒಮ್ಮತದ ಅಭಿಪ್ರಾಯನುಸಾರವಾಗಿ ದಕ್ಷಿಣ ಭಾರತ ಗ್ರಾಮಾಧಿಕಾರಿಗಳ ಒಕ್ಕೂಟ ಸಮ್ಮೇಳನವನ್ನು ಬೆಂಗಳೂರು ನಗರದಲ್ಲಿ ಇದೇ ಜೂನ್ ಮಾಹೆ ೧೯, ೨೦ನೇ ತಾರೀಖುಗಳಲ್ಲಿ ಜರುಗಿಸುವಂತೆ ಗೊತ್ತುಮಾಡಲಾಗಿದೆ

ಸಲಹಾಗಾರರು

ಬಿ ಪ್ರಾಂತ್ಯಗಳಿಗೆ ಸಲಹೆಗಾರರನ್ನು ನೇಮಿಸುವ ವಿಷಯದಲ್ಲಿ ಪಾರ್ಲಿಮೆಂಟಿನಲ್ಲಿ ಗೃಹಸಚಿವರು ಮಾತನಾಡುತ್ತಾ, ಆಯಾ ಪ್ರಾಂತ್ಯಗಳ ಮುಖ್ಯಮಂತ್ರಿ ಮತ್ತು ಸಲಹೆಗಾರರು ಯಾವ ವಿಷಯಗಳಲ್ಲಿ ಸಲಹೆಪಡೆಯಬೇಕೆಂಬ ವಿಷಯವನ್ನು ನಿರ್ಧರಿಸಿಕೊಳ್ಳುವರು. ತಿರುವಾಂಕೂರ್-ಕೊಚ್ಚಿನ್ ಪ್ರಾಂತ್ಯಕ್ಕೆ ಇನ್ನೂ ಸಲಹೆಗಾರರನ್ನು ನೇಮಿಸಿಲ್ಲವೆಂದು ಹೇಳಿರುವರು-

ಪದವೀ ಪ್ರಮಾಣ

ಉತ್ತರ ಪ್ರದೇಶದಲ್ಲಿ ಶ್ರೀ ಗೋವಿಂದ ವಲ್ಲಭಪಂತರವರ ನಾಯಕತ್ವದಲ್ಲಿ ಹೊಸ ಮಂತ್ರಿಮಂಡಲದ ಪದವೀಪ್ರಮಾಣ ನಡೆಯಿತು. ಮಂತ್ರಿಮಂಡಲದಲ್ಲಿ ೧೧ ಜನ ಹಳಬರು, ೩ ಜನ ಹೊಸಬ ಸಚಿವರುಗಳಿರುವರು.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ
ಶ್ರೀ ನೃತ್ಯ ಕಲಾಮಂದಿರ ಮೈಸೂರು
(ಸೀತಾವಿಲಾಸಅಗ್ರಹಾರದ ಹಿಂಭಾಗ)



ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಚಂಡಮಾರುತ ಹಾವಳಿ

ಸೋಮವಾರ ವಿಜಯವಾಡದ ಮೇಲೆ ಭಾರಿ ಬಿರುಗಾಳಿ ಬೀಸಿತು. ಮರಗಳು, ಗುಡಿಸಲುಗಳು ಬುಡಮೇಲಾದವು. ಟೆಲಿಗ್ರಾಫ್ ಮತ್ತು ಫೋನ್ ತಂತಿಗಳಿಗೆ ಸ್ವಲ್ಪ ನಷ್ಟ ಸಂಭವಿಸಿದೆ ಓರ್ವ ಮುದುಕಿ ವಿದ್ಯುತ್ ತಂತಿಯ ಮೇಲೆ ನಡೆದು ತಕ್ಷಣ ಮೃತಪಟ್ಟಳು-

ಸತ್ಯಾಗ್ರಹ

ಆಹಾರ ಬೆಲೆಯನ್ನು ಹೆಚ್ಚಿಸಿದುದರ ವಿರುದ್ಧವಾಗಿ ಪೂನಾದಲ್ಲಿ ಸತ್ಯಾಗ್ರಹ ಹೂಡಿರುವ ಸೋಷಿಯಲಿಸ್ಟ್ ಪಾರ್ಟಿಯ ವಕ್ತಾರರೊಬ್ಬರು, 'ಈ ಚಳುವಳಿಯು, ಸರ್ಕಾರವು ಆಹಾರದ ಬೆಲೆಯನ್ನು ಮೊದಲಿನಷ್ಟಕ್ಕೆ ಇಳಿಸುವವರೆಗೆ ನಡೆಯಲಿದೆ ಎಂದು ತಿಳಿಸಿದ್ದಾರೆ.

ಪೇಟೆ ಧಾರಣೆ

ಮೈಸೂರು ತಾ|| 20-5-52

ಅಧಿಕೃತವಾಗದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		8-0	17-8
ಹೊಂಗೆಬೀಜ	,,	10-12	——
ಹುರುಳಿ	,,	34-10	35-12
ಹೆಸರು	,,	57-12	——
ಸೀಗೆಕಾಯಿ	,,	3-1	3-6
ಮೆ. ಕಾಯಿ ಮಣಕ್ಕೆ		8-6	——
ಹುಣಸೇಹಣ್ಣು	,,	2-0	3-9
ತೆಂಗಿನಕಾಯಿ	1100ಕ್ಕೆ	110	163

ಚಿನ್ನ ಬೆಳ್ಳಿ ದರಗಳು

20-5-52	ರೂ.
ಸವರನ್	65-12
,,	65-14
ಚಿನ್ನ ತೊಲ	92-12
,, ಮೂಸ	92-4
ಬೆಳ್ಳಿ 100 ತೊಲ	165-0
,, ತೊಲ	1-11

ವುಡ್ ಲ್ಯಾಂಡ್ಸ್
16—5—52ನೇ ಶುಕ್ರವಾರದಿಂದ
ಅಮೋಘ 3ನೇ ವಾರ
ದಿನವಹಿ 3 ಆಟಗಳು
"ಲಕ್ಷ್ಮೀ ನಾರಾಯಣ್"
(ಹಿಂದಿ)
ಪಾತ್ರ:—ಮೀನಾಕುಮಾರಿ
ಮಹಿಪಾಲ್

ರಣಜಿತ್
೧೬-೫-೫೨ ರಿಂದ ಅಮೋಘಪ್ರಾರಂಭ
* ಘುಂಗ್ರು *
ಪಾತ್ರ:-ಸುಮಿತ್ರಾ, ಓಂಪ್ರಕಾಶ್,
ಕುಲ್‌ದೀಪ್.

ಫೋನ್ ೫೭೪ (ಲಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೨-೫—೧೯೫೨ನೇ ಗುರುವಾರ [ಸಂಚಿಕೆ ೨೬೦

ಸ್ವಾತಂತ್ರ ಸಂಪಾದನೆಯಲ್ಲಿ ಮೈಸೂರಿಗೆ ಹಿರಿಯ ಸ್ಥಾನ ದೊರೆತಿದೆ

ಮೈಸೂರಿನಲ್ಲಿ ಕ್ಷಾಮ ಪರಿಹಾರ ನಿಧಿ ಸ್ಥಾಪಿಸಬೇಕು

ಮೈಸೂರು ಮೇ ೨೧

ಭಾರತದಲ್ಲಿ ಸ್ವಾತಂತ್ರಗಳಿಸಲು ಮೈಸೂರು ಜನತೆಯ ಪಾತ್ರವನ್ನು ಅಲ್ಲಗಳೆಯತಕ್ಕದ್ದಲ್ಲ- ಮೈಸೂರು ರಾಜಕೀಯದಲ್ಲಿ ದೊಡ್ಡ ಕೀರ್ತಿ, ಸ್ಥಾನ ಪಡೆದಿದೆ- ಮೈಸೂರು ಜನರು ದೇಶಭಕ್ತರು, ಸದ್ಗುಣಸಂಪನ್ನರು, ಸುಸಂಸ್ಕೃತರು ದುಡಿತವವರಲ್ಲ ಎಂಬ ಕೀರ್ತಿಯಿದೆಯೆಂದು ಹೆಮ್ಮೆಯಿಂದ ಹೇಳುತ್ತೇನೆ ಎಂದು ಕೇಂದ್ರ ಉತ್ಪನ್ನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮೈಸೂರು ಪುರಸಭೆಯ ಸನ್ಮಾನಕ್ಕೆ ಉತ್ತರವೀಯುತ್ತಾ ಹೇಳಿದರು-

ಪೌರಸಭೆಯ ಪರವಾಗಿ ಅಧ್ಯಕ್ಷ ಶ್ರೀ ಕೃಷ್ಣಮೂರ್ತಿಯವರು ಶ್ರೀ ರೆಡ್ಡಿಯವರ ಸೇವೆಯನ್ನು ವಿವರಿಸಿ ಅವರನ್ನು ವಂದಿಸಿದರು-

ವಿದೇಶಾಂಗನೀತಿ ಲಾಭದಾಯಕವಾಗಿದೆ

ರಾಷ್ಟ್ರಪತಿಯವರ ಭಾಷಣದ ಬಗ್ಗೆ ಅಭಿನಂದನೆಯನ್ನು ಸಲ್ಲಿಸುವ ನಿರ್ಣಯದ ಚರ್ಚೆಯಲ್ಲಿ ಪ್ರಧಾನಿ ನೆಹರೂರವರು ಮಾತನಾಡುತ್ತಾ ಭಾರತದ ವಿದೇಶಾಂಗ ನೀತಿಯು ಬಹಳ ಲಾಭದಾಯಕವಾಗಿದೆಯೆಂದೂ, ಭಾರತವು ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಎಂದು ಹೇಳಿದರು- ಕಾಮನ್ವೆಲ್ತ್‌ನಲ್ಲಿರುವುದರಿಂದ ಭಾರತದ ಪ್ರಗತಿಗೆ ಯಾವ ತೊಂದರೆಯಿಲ್ಲವೆಂದೂ ತಿಳಿಸಿದರು.

ಸಿಂಹಳವು ಭಾರತೀಯರ ಬಗ್ಗೆ ತನ್ನ ಈಗಿನ ನೀತಿಯನ್ನು ಬದಲಾಯಿಸುವುದೆಂದು ಭಾರತನಂಬಿದೆ ಡಾ|| ಮಲಾನ್ ಸರ್ಕಾರವು ತನ್ನ ನೀತಿಯನ್ನು ಬದಲಾಯಿಸುವುದು ಒಳ್ಳೆಯದೆಂದು ಇದರಿಂದ ಎರಡು ರಾಷ್ಟ್ರದ ಸ್ನೇಹತೆ ಹೆಚ್ಚುವುದೆಂದು ಹೇಳಿದ್ದಾರೆ ಚೈನಾವನ್ನು ಅಗ್ರರಾಜ್ಯಗಳು ಗುರುತಿಸದಿರುವುದು ಬಹಳ ಶೋಚನೀಯವೆಂದೂ, ಚೀನಾಕ್ಕೆ ಪ್ರಪಂಚ ಸಂಸ್ಥೆಯಲ್ಲಿ ಸ್ಥಾನ ಕೊಡದಿರುವುದು ಸಂಸ್ಥೆಯ ನೀತಿಗೆ ಕಳಂಕವೆಂದೂ ತಿಳಿಸಿದರು.

೧ ಗ್ಯಾಲನ್ ನೀರಿಗೆ ೪ ಆಣೆ

ಅಕೋಲಾ ತಾಲ್ಲೋಕಿನ ಖಟಾಸಾ ಮತ್ತು ಪುರತಾಗ್ರಾಮಗಳಲ್ಲಿ ೧ ಗ್ಯಾಲನ್ ಕುಡಿಯುವ ನೀರಿಗೆ ೪ ಆಣೆ ಶುಲ್ಕವನ್ನು ವಸೂಲುಮಾಡಲಾಗುತ್ತಿದೆ ಅಕೋಲಾ ಜಿಲ್ಲೆಯ ಡೆಪ್ಯುಟಿಕಮೀಷನರು ಈ ಪ್ರದೇಶಗಳಿಗೆ ಭೇಟಿಯಿತ್ತರು. ಗ್ರಾಮಗಳಲ್ಲಿ ಭಾವಿಗಳೆಲ್ಲಾ ಬತ್ತಿಹೋಗಿವೆಯೆಂದರು.

೨೩ ರಂದು ಬಡ್ಜೆಟ್ ಮಂಡಿಸಲಾಗುವುದು

ಈವರ್ಷದ ಬಡ್ಜೆಟನ್ನು ಶುಕ್ರವಾರ ಸಂಜೆ ೫ ಘಂಟೆ ಹೊತ್ತಿಗೆ ಆರ್ಥಿಕಸಚಿವ ಶ್ರೀ ಚಿಂತಾಮಣಿದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ಮಂಡಿಸುವರು ನಂತರ ಶ್ರೀ ಗೋಪಾಲಸ್ವಾಮಿಅಯ್ಯಂಗಾರ್‌ರವರು ಹಿರಿಯ ಸಭೆಯಲ್ಲಿ ಬಡ್ಜೆಟ್ಟನ್ನು ಮಂಡಿಸುವರು ಬಡ್ಜೆಟ್ ಮೇಲೆ ಚರ್ಚೆ ಅನಂತರ ಪ್ರಾರಂಭವಾಗುವುದು.

ನಾನು ಮಂತ್ರಿಯಾಗುವೆನೆಂದು ಕನಸಿನಲ್ಲೂ ತಿಳಿದಿರಲಿಲ್ಲ

ಮೈಸೂರು ಮೇ ೨೧

ಈ ಸಂಜೆ ಮೈಸೂರುನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್- ಚನ್ನಯ್ಯನವರು ಕೇಂದ್ರ ಉತ್ಪಾದನ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರನ್ನು ಸತ್ಕರಿಸಿದರು.

ಶ್ರೀ ಎಸ್. ಚನ್ನಯ್ಯನವರು ಮಾತನಾಡುತ್ತಾ, ಕೇಂದ್ರ ಸರ್ಕಾರವು ದಕ್ಷಿಣ ಭಾರತವನ್ನೂ ಮರೆತಿರುವುದೆಂದು ನಾವು ಅನೇಕಸಲ ಹೇಳುತ್ತಲಿದ್ದೆವು ಆದರೆ ಈಗ ಅದಕ್ಕೆ ತಕ್ಕ ಸ್ಥಾನಕೊಟ್ಟು ಮೈಸೂರಿನವರನ್ನು ಕೇಂದ್ರಸಚಿವರನ್ನಾಗಿ ತೆಗೆದುಕೊಂಡಿದ್ದು ಮೈಸೂರಿಗೆ ಹೆಮ್ಮೆಯೆಂದು ಹೇಳಿದರು.

ಶ್ರೀ ಕೆ. ಸಿ ರೆಡ್ಡಿಯವರು ಮಾತನಾಡುತ್ತಾ, ಕೇಂದ್ರಸಚಿವನಾಗುವನೆಂದು ಸ್ವಪ್ನದಲ್ಲೂ ತಿಳಿದಿರಲಿಲ್ಲ ಶ್ರೀ ನೆಹರೂರವರಿಂದ ಕರೆ ಬಂದೊಡನೆಯೇ ನನ್ನನ್ನು ಕಾಂಗ್ರೆಸ್ ಕಾರ್ಯದರ್ಶಿಯನ್ನಾಗಿ ನೇಮಿಸಲು ಅಥವಾ ಮೈಸೂರಿನ ರಾಜಕೀಯ ವಿಷಯದಲ್ಲಿ ಮಾತುಕಥೆ ನಡೆಸಲು ಬರಹೇಳಿರುವುದಾಗಿ ಭಾವಿಸಿದ್ದೆ ಅಲ್ಲಿ ಹೋದಮೇಲೆ ನನ್ನನ್ನೂ ಸಚಿವ ಸ್ಥಾನಕ್ಕೆ ತೆಗೆದುಕೊಳ್ಳುವುದಾಗಿ ತಿಳಿಸಿದರು. ರಾಷ್ಟ್ರದ ಹಿರಿಯನಾಯಕರು ಕಾಂಗ್ರೆಸ್ ಅಧ್ಯಕ್ಷರ ಆಜ್ಞೆಯನ್ನೂ ಕಾಂಗ್ರೆಸ್ ಸೇವಕನಾಗಿ ನಾನು ಒಪ್ಪಿಕೊಂಡೆ.

ಈ ಹೊಸ ಕಾರ್ಯದಲ್ಲಿ ನನ್ನ ಸೇವೆಯನ್ನು ಮಾಡಲು ಮೈಸೂರು, ಭಾರತ ಜನತೆಯಸಹಕಾರ ಅತ್ಯಾವಶ್ಯಕವೆಂದು ಹೇಳಿದರು-

೭೧ ಕೋಟಿ ರೂ ಬಾಕಿ

ಬರ್ಮಾದಿಂದ ಭಾರತಕ್ಕೆ ೭೧ ಕೋಟಿ ರೂ ಬಾಕಿಬರಬೇಕೆಂದೂ ಇದರ ಬಗ್ಗೆ ಚರ್ಚಿಸಲು ಬರ್ಮಾಕ್ಕೆ ಭಾರತ ಸರ್ಕಾರವು ಪತ್ರವೊಂದನ್ನು ಬರೆದು ಅದಕ್ಕೆ ಇನ್ನೂ ಜವಾಬು ಬಂದಿಲ್ಲವೆಂದು ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿದರು.

ದೇಶದಲ್ಲಿ ಉತ್ಪಾದನೆ ಹೆಚ್ಚಿಸಬೇಕು

ಮೈಸೂರು ಮೇ ೨೧

ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡಿಕೊಳ್ಳುವುದು ಭಾರತ ಸರ್ಕಾರದ ನೀತಿ ಆದರೆ ಪ್ರಕೃತದಲ್ಲಿ ದೇಶದಲ್ಲಿ ನಾನಾ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಬೇಕಾಗಿದೆ. ಅದಕ್ಕೆ ತನ್ನ ಪ್ರಥಮ ಗಮನ ಕೊಡಲಿದೆ. ಹೆಚ್ಚಾಗಿ ಉಕ್ಕು, ಕಬ್ಬಿಣ ಮುಂತಾದ ವಸ್ತುಗಳಲ್ಲ ಅವುಗಳೆಲ್ಲವೂ ಹೆಚ್ಚಾಗಿ ಉತ್ಪತ್ತಿಯಾದರೆ ವ್ಯವಸಾಯಕ್ಕೆ ಅನುಕೂಲವಾಗುತ್ತದೆಯೆಂದು ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈ ಬೆಳಗ್ಗೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಹೇಳಿದರು.

ಶ್ರೀಮನ್ಮಹಾರಾಜರೊಡನೆ ಭೇಟಿ

ಶ್ರೀಮನ್ಮಹಾರಾಜರೊಡನೆ ತಾವು ಮಾಡಿದ ಭೇಟಿಯ ವಿಷಯವಾಗಿ ಪ್ರಸ್ತಾಪಿಸಿ, ಕ್ಷಾಮಪೀಡಿತ ಪ್ರದೇಶಗಳ ಸ್ಥಿತಿಯನ್ನು ತಮ್ಮ ಪ್ರವಾಸದಲ್ಲಿ ನೋಡಿಕೊಂಡು ಬಂದದ್ದನ್ನು ಶ್ರೀಮನ್ಮಹಾರಾಜರ ಗಮನಕ್ಕೆ ತಂದು ಕೂಡಲೇ ಪರಿಹಾರ ನಿಧಿಯನ್ನು ಸ್ಥಾಪಿಸಬೇಕೆಂದೂ ಅದಕ್ಕೆ ಶ್ರೀಮನ್ಮಹಾರಾಜರು ಸಹಾಯನೀಡಬೇಕೆಂದು ಮನವಿ ಮಾಡಿದುದಾಗಿ ತಿಳಿಸಿದರು.

ಜಾನುವಾರುಗಳಿಗೆ ಮೇವಿಲ್ಲ

ಕೋಲಾರ ಜಿಲ್ಲೆಯ ಅಭಾವ ಪರಿಸ್ಥಿತಿ ವಿಷಯವಾಗಿ ಮಾತನಾಡುತ್ತಾ, ಆ ಪ್ರದೇಶಗಳಲ್ಲಿ ಜಾನುವಾರು ಮೇವಿಲ್ಲದೆ ಸಾಯುತ್ತಿವೆ ಕೂಡಲೇ ಅಲ್ಲಿಗೆ ಹುಲ್ಲನ್ನು ಕಳುಹಿಸಬೇಕು, ರೈಲಿನಲ್ಲಿ ರವಾನೆ ಮಾಡಲು ಸಾಧ್ಯವಿಲ್ಲದಿದ್ದರೆ ಮಿಲಿಟರಿಯವರ ಸಹಾಯದೊಡನೆ ಕಳುಹಿಸಬೇಕೆಂದು ತಿಳಿಸಿದರು.

ರಷ್ಯ-ಚೀಣಾಗಳ ಧಾನ್ಯ ಸಹಾಯ ತಿರಸ್ಕರಿಸಿಲ್ಲ

ರಷ್ಯ ಮತ್ತು ಚೀಣದಿಂದ ಬಂದ ಆಹಾರ ಧಾನ್ಯ ಸಹಾಯವನ್ನು ಭಾರತ ಸರ್ಕಾರ ನಿರಾಕರಿಸಿಲ್ಲ ಎಂದು ಭಾರತ ಸರ್ಕಾರದ ಆಹಾರ ಶಾಖಾ ಸಚಿವರಾದ ಶ್ರೀ ರಫಿ ಅಹಮದ್ ಕಿದ್ವಾಯಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಮದ್ರಾಸಿನಲ್ಲಿ ೭ ಅಂಗುಲ ಮಳೆ

ಕಳೆದ ೨೪ ಘಂಟೆಗಳಲ್ಲಿ ಮದ್ರಾಸಿನಲ್ಲಿ ೭ ಅಂಗುಲ ಮಳೆಯಾಗಿದೆ, ಇದರಿಂದ ರೈಲು ಓಡಾಟ, ಮತ್ತು ವಿಮಾನ ಇಳಿಯಲು ಬಹಳ ತೊಂದರೆಯಾಗಿದೆ ಮದ್ರಾಸಿನಿಂದ ಡೆಲ್ಲಿಗೆ ಹೋಗಬೇಕಾಗಿ ಡೆಕನ್ ಏರ್‌ವೇಸ್ ವಿಮಾನ ಪ್ರಯಾಣವನ್ನು ನಿಲ್ಲಿಸಲಾಯಿತು. ವಿಮಾನ ನಿಲ್ದಾಣದಲ್ಲಿ ನೀರು ತುಂಬಿರುವುದೇ ಇದಕ್ಕೆ ಕಾರಣ ೨ ರೈಲುಗಳು ಪ್ರಯಾಣಮಾಡಲು ಅಡಚಣೆಯಾಗಿದೆ ಈರೀತಿ ಇನ್ನೂ ಸ್ವಲ್ಪಕಾಲವಿರುವುದೆಂದು ಹೇಳಲಾಗಿದೆ ರಂಗೂನಿಗೆ ನಿನ್ನೆ ಹೋಗಬೇಕಾಗಿದ್ದ ಹಡಗು ಹೊರಡಲಿಲ್ಲ ಇನ್ನೂ ಮಳೆ ಬಹಳ ಬರುವುದೆಂದೂ ಹೇಳಲಾಗಿದೆ

ಅಭಿವಂದನೆ

ರಾಷ್ಟ್ರಾಧ್ಯಕ್ಷರ ಭಾಷಣದ ಬಗ್ಗೆ ಅವರನ್ನು ಅಭಿವಂದಿಸುವ ನಿರ್ಣಯವನ್ನು ನಿನ್ನೆ ಲೋಕಸಭೆಯು ಅಂಗೀಕರಿಸಿತು. ಕೆ. ಎಂ. ಪಿ. ಮತ್ತು ಕಮ್ಯೂನಿಸ್ಟರ ಎರಡು ತಿದ್ದುಪಡಿ ನಿರ್ಣಯಗಳನ್ನು ಸಭೆಯು ತಿರಸ್ಕರಿಸಿತು.

* ಭಾರತದ ಪ್ರಣಾಳಿಕ ಸಂಘದ ಪಂಚವಾರ್ಷಿಕ ಯೋಜನೆಯಲ್ಲಿ ಕೋಸಿ ನದಿ ಯೋಜನೆಗೆ ಪ್ರಾಮುಖ್ಯತೆ ಕೊಡಲಾಗಿದೆ-

ಕೈಗಾರಿಕಾಭಿವೃದ್ಧಿ ನೀತಿ

ಬೆಂಗಳೂರು ಮೇ ೨೧

ರಾಷ್ಟ್ರದಲ್ಲಿ ಕೈಗಾರಿಕೆಗಳನ್ನು ವೃದ್ಧಿಗೊಳಿಸುವ ತನ್ನ ನೀತಿಯನ್ನು ಕೇಂದ್ರ ಸರ್ಕಾರ ಕಾರ್ಯರೂಪಕ್ಕೆ ತರುವ ಕಾರ್ಯದಲ್ಲಿ ಧೃಢದಿಂದ ಸಾಗಲು ನಿರ್ಧರಿಸಿದೆಯೆಂದು ಕೇಂದ್ರ ಸರ್ಕಾರದ ಉತ್ಪತ್ತಿ ಶಾಖೆ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಇಲ್ಲಿ ತಿಳಿಸಿದರು.

ನಗರದ ಪೌರ ಮುಖಂಡರ ಸಮಿತಿಯೊಂದು ಅವರ ಗೌರವಾರ್ಥವಾಗಿ ಸಂಜೆ ಲಾಲ್‌ಬಾಗಿನಲ್ಲಿ ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ ಶ್ರೀ ಕೆ. ಸಿ. ರೆಡ್ಡಿಯವರು ಮಾತನಾಡುತ್ತಾ, ಉತ್ಪತ್ತಿ ಹೆಚ್ಚಿದೆ ದೇಶದ ಪ್ರಗತಿ ಸಾಧಿಸಲು ಸಾಧ್ಯವಿಲ್ಲವೆಂದೂ, ಎಲ್ಲ ಕ್ಷೇತ್ರಗಳಲ್ಲೂ ಉತ್ಪತ್ತಿ ಹೆಚ್ಚಿಸುವುದು ಈಗ ಮಾಡಬೇಕಾದ ಕೆಲಸವೆಂದೂ ತಿಳಿಸಿದರು.

ಸಚಿವರುಗಳು, ಹೈಕೋರ್ಟ್ ಮುಖ್ಯ ನ್ಯಾಯಾಧೀಶ ಮತ್ತಿತರ ನ್ಯಾಯಾಧೀಶರು, ಶಾಸನಸಭಾ ಸದಸ್ಯ ಮತ್ತಿತರ ಆಹ್ವಾನಿತರೂ ಸೇರಿ ಸುಮಾರು ೬೦೦ ಮಂದಿ ಸತ್ಕಾರಕೂಟಕ್ಕೆ ಆಗಮಿಸಿದ್ದರು.

ತಮ್ಮ ೪॥ ವರ್ಷಗಳ ಆಡಳಿತ ಕಾಲದಲ್ಲಿ ಸಂಸ್ಥಾನದ ಹಾಗೂ ರಾಷ್ಟ್ರ ಹಿತ ಸಾಧನೆಗೆ ಎಲ್ಲ ಪ್ರಯತ್ನಗಳನ್ನು ಮಾಡಿದುವಾಗಿಯೂ, ಆ ಕಾಲದಲ್ಲಿ ರಾಷ್ಟ್ರ ಎದುರಿಸಬೇಕಾದ ಅಗಾಧ ಸಮಸ್ಯೆಗಳನ್ನು ಸ್ಮರಿಸಿಕೊಂಡಲ್ಲಿ, ತಮ್ಮ ಮಂತ್ರಿಮಂಡಲದ ಕೆಲಸವನ್ನು ಜನತೆ ಮೆಚ್ಚದೆ ಇರಲು ಸಾಧ್ಯವಿಲ್ಲವೆಂದೂ, ತಮ್ಮ ಮಂತ್ರಿಮಂಡಲದ ಕೆಲಸವನ್ನು ಚರಿತ್ರಕಾರರು ಸುವರ್ಣಾಕ್ಷರಗಳಲ್ಲಿ ಬರೆಯುವರೆಂದೂ ತಿಳಿಸಿದರು

ನೆಹರೂ ನಾಯಕತ್ವವನ್ನು ಪ್ರಶಂಸಿಸಿ ತಮ್ಮ ತಾಯಿ ಸಂಸ್ಥಾನವನ್ನು ಎಂದೂ ಮರೆಯುವುದಿಲ್ಲವೆಂದರು

ನರಸಿಂಹರಾಜ ಕಾಲೋನಿ ಮಹಿಳಾ ಸಂಘದ ಪರವಾಗಿ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು ಸಚಿವರಿಗೆ ಬಿನ್ನವತ್ತಳೆಯನ್ನರ್ಪಿಸಿದರು.

ಹಿಂದಿ ಶೀಘ್ರಲಿಪಿಯ ಬಗ್ಗೆ ಸಮಿತಿ

ಇಲ್ಲಿ ಯುವಕರಿಗೆ ರಚಿಸಲಾಗಿರುವ ಹಿಂದೀ ಶೀಘ್ರಲಿಪಿಗಳಲ್ಲಿ ಅತಿ ಉತ್ತಮವಾದುವನ್ನು ಗೊತ್ತುಮಾಡಿ, ಭಾರತ ಸರ್ಕಾರಕ್ಕೂ, ಸಾರ್ವಜನಿಕರಿಗೂ ಶಿಫಾರಸು ಮಾಡಲೋಸುಗ, ಅಖಿಲಭಾರತ ವಾಣಿಜ್ಯ ಮತ್ತು ವ್ಯಾಪಾರದ ಆಡಳಿತದ ತಾಂತ್ರಿಕ ಅಧ್ಯಯನದ ಸಮಿತಿಯು ಕಾಕಾ ಸಾಹೇಬ್ ಕಾಲೇಲ್ಕರರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿದೆ.

ಅಮೇರಿಕದ ರೈತರು ವಿದೇಶಗಳಲ್ಲಿ

ವಾಷಿಂಗ್ಟನ್ ಮೇ ೧೯

ಯುರೋಪು ಮತ್ತು ಮಧ್ಯಪ್ರಾಚ್ಯಗಳಲ್ಲಿ ೬೦ ತರುಣ ಅಮೇರಿಕದ ರೈತರು ರಜಾ ಕಾಲದಲ್ಲಿ ತಮ್ಮ ದಿನಗಳನ್ನು ಕಳೆದು ಅಂತರರಾಷ್ಟ್ರೀಯ ಸೌಹಾರ್ದತೆಯನ್ನು ಹೆಚ್ಚು ಮಾಡುವರು.

ಅಂತರರಾಷ್ಟ್ರೀಯ ತರುಣ ರೈತರ ಪರಸ್ಪರ ವಿನಿಮಯ ಯೋಜನೆಯ ಪ್ರಕಾರ ೨೨ ದೇಶಗಳಿಂದ ೬೫ ರೈತರು ಅಮೇರಿಕದ ರೈತರೊಂದಿಗೆ ಜೀವಿಸಲು ಅಮೇರಿಕಕ್ಕೆ ಬರುವರು.

ಅಮೇರಿಕದ ರೈತರ ಗುಂಪು ಯುರೋಪು ಮತ್ತು ಮಧ್ಯಪ್ರಾಚ್ಯದ ದೇಶಗಳಲ್ಲಿ ಸುಮಾರು ಮೂರು ತಿಂಗಳ ಕಾಲ, ಕಾಲಕಳೆಯುವರು. ಈ ರೀತಿ ಪರಸ್ಪರ ವಿಚಾರವಿನಿಮಯ ಯೋಜನೆಯ ಪ್ರಕಾರ ರೈತರು ವಿದೇಶಗಳಿಗೆ ಹೋಗುತ್ತಿರುವುದು ಎರಡನೆಯ ಸಲ. ಈ ಕಾರ್ಯಕ್ರಮವನ್ನು ಅಮೇರಿಕದ ರಾಷ್ಟ್ರೀಯ ವ್ಯವಸಾಯ ಸಂಸ್ಥೆಯಾದ ಹೆಚ್‌ಕ್ಲಬ್ ಸಂಸ್ಥೆ ಅಮೇರಿಕ ಸರ್ಕಾರದ ಸಹಕಾರ ಸಂಘ ಮತ್ತು ಲ್ಯಾಂಡ್‌ಗ್ರ್ಯಾಂಟ್ ಕಾಲೇಜ್ ವತಿಯಿಂದ ಜಾರಿಗೆ ತರಲಾಗಿದೆ.

ನೀರು ಕಾಯಿಸಲು ಸೂರ್ಯ ರಶ್ಮಿ

ಸೋವಿಯಟ್ ವಿಜ್ಞಾನಿಗಳು ಸೂರ್ಯನಿಂದ ನೀರು ಕಾಯಿಸಲ್ಪಡುವ ಸ್ನಾನ ಮನೆಗಳನ್ನು ಕಟ್ಟಿದ್ದಾರೆಂದು ತಿಳಿದುಬಂದಿದೆ. ೪೦ ರಿಂದ ೫೦ ಡಿಗ್ರಿಗಳ ಸೆಂಟಿಗ್ರೇಡಿನಷ್ಟು ಕಾವಿರುವ ನೀರನ್ನು ಇದರಿಂದ ಸರಬರಾಜು ಮಾಡಬಹುದು.

ವಿಜ್ಞಾನಿಗಳ ತಂಡ ಎರಲ್ ಮತ್ತು ಕ್ಯಾಸ್ಪಿಯನ್ ಸಮುದ್ರದ ಬಳಿ ಸೂರ್ಯಶಾಖದ ವಿಷಯದಲ್ಲಿ ಪ್ರಯೋಗ ನಡೆಸುತ್ತಿವೆ.

ನ್ಯೂ ಅಪೇರ ಟಾಕೀಸ್
ಶ್ರೀ
16—5—52 ರಿಂದ
ಅನೋಘವಾದ
2ನೇ ವಾರ
ಪ್ರತಿದಿನ 3 ಆಟಗಳು
ಜೂಪಿಟರ್‌ರವರ—
* ರಾಣಿ *
(ತಮಿಳು)
ಪಾತ್ರ:— ‡ ಭಾನುಮತಿ ‡
‡ ಬಾಲಚಂದರ್ ‡
‡ ವಹಾಬ್ ಕಾಶ್ಮೀರಿ ‡

ತುಂಡು ಸುದ್ದಿಗಳು

ಅಮೇರಿಕವು ವಿಶ್ವಸಂಸ್ಥೆಗೆ ಈಗಾಗಲೇ ತಾಂತ್ರಿಕ ಸಹಾಯ ನಿಧಿಗೆ ೬೦೦೦,೦೦೦ ಡಾಲರುಗಳನ್ನು ಕೊಟ್ಟಿದೆ. ಈ ವರ್ಷಕ್ಕೆ ೧೧೪ ಮಿಲಿಯನ್ ಡಾಲರುಗಳನ್ನು ಕೊಡಲು ವಚನ ಒಪ್ಪಿದೆ. ಒಟ್ಟು ಎಲ್ಲಾ ದೇಶಗಳು ಕೊಡುವ ೧೯ ಮಿಲಿಯನ್ ಡಾಲರಿನ ಶೇಕಡ ೬೦ ರಷ್ಟು ಅಮೇರಿಕಾವೇ ಕೊಡುವುದು.

○ ○ ○

ಟಿ. ವಿ. ಎ. ಸಂಸ್ಥೆಯು ಮೇ ೧೮ನೇ ತಾರೀಖು ತನ್ನ ೧೯ನೇ ವಾರ್ಷಿಕ ದಿನಾಚರಣೆಯನ್ನು ಆಚರಿಸಿತು. ಅದು ೨೦೦೦೦ ಮಿಲಿಯನ್ ಕಿಲೋವ್ಯಾಟ್ ವಿದ್ಯುಚ್ಛಕ್ತಿಯನ್ನು ಹೋದ ವರ್ಷ ಒದಗಿಸಿದೆ.

○ ○ ○

ರಾಕ್‌ಫೆಲರ್ ಫೌಂಡೇಷನ್ ಸಂಸ್ಥೆಯು ಮೇ ೧೪ ರಂದು ತನ್ನ ೩೯ನೇ ವಾರ್ಷಿಕ ದಿನಾಚರಣೆಯನ್ನು ಆಚರಿಸಿತು. ಈಗಾಗಲೇ ಅದು ೪೫೦ ಮಿಲಿಯನ್ ಡಾಲರ್‌ಗಳನ್ನು ಧರ್ಮ ಕೊಟ್ಟಿದೆ.

ಪಾಕಿಸ್ತಾನಕ್ಕೆ ಭಾರತದಿಂದ ಗೋಧಿ!

ಈಗಿನ ಗೋಧಿಯ ಅಭಾವವನ್ನು ನಿವಾರಿಸಲೋಸುಗ ಗೋಧಿಯ ಸರಬರಾಜಿಗಾಗಿ ಪಾಕ್ ಸರ್ಕಾರವು ಮಾಡಿದ ಪ್ರಾರ್ಥನೆಗೆ ಭಾರತ ಸರ್ಕಾರವು ಅನುಕೂಲಕರವಾಗಿಯೇ ಉತ್ತರವಿತ್ತಿದೆಯೆಂದು ಗೊತ್ತಾಗಿದೆ.

ಭಾರತಕ್ಕೆ ಗೋಧಿಗೆ ಪ್ರತಿಯಾಗಿ ಪಾಕಿಸ್ತಾನವು ಅಕ್ಕಿ ಅಥವಾ ಇನ್ಯಾವ ಪದಾರ್ಥವನ್ನಾದರೂ ಕಳುಹಬೇಕೆ ಎಂಬ ಬಗ್ಗೆ ಕರಾಚಿ ಮತ್ತು ದೆಹಲಿಗಳ ನಡುವೆ ಈಗ ಪತ್ರವ್ಯವಹಾರ ನಡೆಯುತ್ತಿದೆ.

ಕೃತಕ ಮಳೆಗೆ ಪ್ರಯೋಗ

ಈ ವರ್ಷ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೃತಕ ಮಳೆ ಬಗ್ಗೆ ತಮ್ಮ ಪ್ರಯೋಗಗಳನ್ನು ಮುಂದುವರಿಸಲು ಮುಂಬೈ ಸರ್ಕಾರ ನಿರ್ಧರಿಸಿದೆಯೆಂದು ತಿಳಿದುಬಂದಿದೆ.

ಪುಣೆಯ ರಾಷ್ಟ್ರೀಯ ರಾಸಾಯನಿಕ ಪ್ರಯೋಗ ಶಾಲೆಯ ಡೈರೆಕ್ಟರ್ ಆದ ಪ್ರೊಫೆಸರ್ ಜೇಮ್ಸ್ ಮೆಕ್‌ಬೇನ್‌ರ ಉಸ್ತುವಾರಿಯಲ್ಲಿ ಈ ಪ್ರಯೋಗಗಳು ನಡೆಯುತ್ತವೆ.

ಈ ವರ್ಷದ ಪ್ರಯೋಗಗಳಿಗೆ ಅನೇಕ ವಿಮಾನಗಳನ್ನು ಬಳಸಲಾಗುತ್ತದೆ. ಬೊಂಬಾಯಿ ಬಳಿ ವಿದ್ಯುದುತ್ಪಾದಕ ವ್ಯವಸ್ಥೆಯಲ್ಲಿ ಮಳೆ ಬಿದ್ದ ನೀರು ಸರಿಯುವ ಇಳಿಜಾರು ಪ್ರದೇಶದಲ್ಲಿ ಸರ್ಕಾರಕ್ಕೆ ಹೆಚ್ಚಿನ ಆಸಕ್ತಿ ಇದೆಯೆಂದು ಹೇಳಲಾಗುತ್ತಿದೆ ಕಳೆದ ವರ್ಷ ಇಲ್ಲಿ ಮಳೆ ವಿಫಲವಾದಾಗ ಬೊಂಬಾಯಿ ಪುಣೆ ಪ್ರದೇಶದಲ್ಲಿ ವಿದ್ಯುತ್‌ಭಾವ ತಲೆದೋರಿತ್ತು.

ಈ ಪ್ರಯತ್ನಕ್ಕೆ ಅಗತ್ಯವಾದ ಧನವನ್ನು ಸರ್ಕಾರ ಒದಗಿಸುವುದು. ಆದರೆ ಇದಕ್ಕೆಂದು ನಿಗದಿಯಾಗಿ ಯಾವ ಮೊಬಲಗನ್ನು ವಿನಾಸಲು ಮಾಡಿಲ್ಲವೆಂದು ತಿಳಿದುಬಂದಿದೆ.

ಮೋಡಗಳ ಮೇಲೆ ಒಣಮಂಜು ಅಥವಾ ಸಿಲ್ವರ್ ಐಯೋಡೈಡ್ ಹಾಕುವುದಕ್ಕೆ ಬದಲಾಗಿ, ನೀರನ್ನು ಎರಚಬೇಕೆಂದು ಪ್ರೊಫೆಸರ್ ಮೆಕ್‌ಬೇನ್ ಸೂಚಿಸಿದ್ದಾರೆ. ಇದು ಅಗ್ಗ ಹಾಗೂ ಪರಿಣಾಮಕಾರಿಯಾಗಿದೆಯೆಂದು ಹೇಳಲಾಗಿದೆ.

ಪೇಟೆ ಧಾರಣೆ

ಮೈಸೂರು ತಾ॥ 21-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		6-8	17-6
ಹೊಂಗೆಬೀಜ	,,	11-2	——
ಹುರುಳಿ	,,	35-14	36-4
ಹೆಸರು	,,	56-2	——
ಸೀಗೆಕಾಯಿ	,,	3-4	——
ಮೆ. ಕಾಯಿ ಮಣಕ್ಕೆ		11-2	13-0
ಹುಣಸೇಹಣ್ಣು	,,	3-14	3-9
ತೆಂಗಿನಕಾಯಿ	1100ಕ್ಕೆ	136	169

ಚಿನ್ನ ಬೆಳ್ಳಿ ದರಗಳು

21—5—52	ರೂ.
ಸವರನ್	65—12
,,	65—14
ಚಿನ್ನ ತೊಲ	92—12
,, ಮೂಸ	92—4
ಬೆಳ್ಳಿ 100 ತೊಲ	165—0
,, ತೊಲ	1—11

ಪ್ರಕಾಶಕರು:—ಜಿ.ಎಲ್. ಸ್ವಾಮಿ
ಟೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೮೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೩-೫—೧೯೫೨ನೇ ಶುಕ್ರವಾರ [ಸಂಚಿಕೆ ೨೬೧

ರೈಲ್ವೆ ಕಾರ್ಮಿಕರ ಯೋಗಕ್ಷೇಮಕ್ಕಾಗಿ ೮॥ ಕೋಟಿ ರೂಪಾಯಿಗಳು

ರೈಲ್ವೆ ಮಂತ್ರಿ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ೫೨ ೫೩ ನೇ ಸಾಲಿನ ರೈಲ್ವೆ ಬಡ್ಜೆಟ್ಟನ್ನು ಮಂಡಿಸಿದರು. ಈ ಸಾಲಿನಲ್ಲಿ ರೈಲ್ವೆ ಕಾರ್ಮಿಕರ ಯೋಗಕ್ಷೇಮಕ್ಕಾಗಿ ಎಂಟೂವರೆಕೋಟಿ ರೂಪಾಯಿಗಳನ್ನು ವೆಚ್ಚಮಾಡಲು ಹಣವನ್ನು ಒದಗಿಸಲಾಗಿದೆಯೆಂದು ಮಂತ್ರಿಗಳು ತಿಳಿಸಿದರು;

ಸೋಮವಾರ ಈ ರೈಲ್ವೆ ಬಡ್ಜೆಟ್ಟಿನಮೇಲೆ ಚರ್ಚೆ ನಡೆಯಲಿದೆಯೆಂದು ಗೊತ್ತಾಗಿದೆ.

ಆಹಾರ ಡಿಪೋಗಳಿಗೆ ಮುಖ್ಯಮಂತ್ರಿಗಳ ಭೇಟಿ

ಮೈಸೂರು ಮೇ ೨೨

ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈದಿನ ಮಧ್ಯಾಹ್ನ ನಗರದ ಕೆಲವು ಆಹಾರ ಡಿಪೋಗಳಿಗೂ ಗೋಡೌನ್‌ಗಳಿಗೂ ಭೇಟಿಯಿತ್ತು, ಆಹಾರ ಧಾನ್ಯಗಳ ಪರಿಶೀಲನೆ ನಡೆಸಿದರು.

ರೈಸ್‌ಮಿಲ್ಲುಗಳಿಂದ ಇನ್ನುಮುಂದೆ ಅಕ್ಕಿಯು ಸರಬರಾಜು ಆಗುವಾಗ ಭತ್ತವಿಲ್ಲದೆ ಶುದ್ಧವಾದ ಅಕ್ಕಿಯನ್ನು ಸರಬರಾಜುಮಾಡುವಂತೆ ಜಿಲ್ಲಾಧಿಕಾರಿಗಳಿಗೆ ತಿಳುವಳಿಕೆಕೊಟ್ಟಿರುವುದಾಗಿಯೂ ರೇಷನ್ ಅಧಿಕಾರಿಗಳು ಆಹಾರವನ್ನು ತೆಗೆದುಕೊಳ್ಳುವಾಗ ಅದನ್ನು ಗಮನಿಸಬೇಕೆಂದು ತಿಳಿಸಿದರೆಂದು ಗೊತ್ತಾಗಿದೆ.

ಮುಖ್ಯಮಂತ್ರಿಗಳ ಪರಿಶೀಲನಾಸಮಯದಲ್ಲಿ ಆಹಾರಶಾಖಾ ಡೈರೆಕ್ಟರ್ ಶ್ರೀ ಎನ್. ಎಸ್. ಹಿರಣ್ಣಯ್ಯ, ಚೀಫ್ ರೇಷನ್ ಆಫೀಸರ್ ಮಿ॥ ರಹೀಂ, ರೇಷನ್ ಆಫೀಸರ್ ಶ್ರೀ ವಿಜಯರಾಘವರೆಡ್ಡಿ ಮುಂತಾದವರಿದ್ದರು

ಶ್ರೀ ಮನ್ ಮಹಾರಾಜರವರೊಡನೆ ಭೇಟಿ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ಬೆಳಗ್ಗೆ ಮಹಾರಾಜರನ್ನು ಭೇಟಿಮಾಡಿದ್ದರು. ನಾಳೆಬೆಳಗ್ಗೆ ಅವರು ಊಟಿಗೆ ತೆರಳುವರು.

ಕನ್ನಡ ಟೈಪುರೈಟರು ತಯಾರಿಕೆ

ಮೈಸೂರು ಮೇ ೨೦

ಕನ್ನಡ ಟೈಪುರೈಟರ್ ಕಂಡುಹಿಡಿದಿರುವವರಲ್ಲೊಬ್ಬರಾದ ಶ್ರೀಯುತ ಎಸ್. ಸುಬ್ಬರಾಯರು ನಿನ್ನೆಯದಿನ ವಿದ್ಯಾಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರನ್ನು ಭೇಟಿಮಾಡಿ ತಾವು ತಯಾರಿಸಿರುವ ಯಂತ್ರದ ವಿಷಯವಾಗಿ ವಿವರಗಳನ್ನು ತಿಳಿಸಿದರು.

ಇತ್ತೀಚೆಗೆ ಕನ್ನಡಸಾಹಿತ್ಯ ಪರಿಷತ್ತಿನವರು ಏರ್ಪಡಿಸಿದ್ದ ಕನ್ನಡ ಟೈಪುರೈಟರ್ ನಿರ್ಮಾಣಕರ ಸಭೆಯಲ್ಲಿ ಶ್ರೀ ಸೀತಾರಾಮಯ್ಯನವರು ಮತ್ತು ಇನ್ನೊಬ್ಬರು ಮೈಸೂರು ಸರ್ಕಾರದ ಸಹಕಾರ ಮತ್ತು ಭರವಸೆ ಪಡೆದು ತಾವು ತಯಾರಿಸಿರುವ ಕೀಬೋರ್ಡಿನ ಪ್ರಕಾರ ೧೦೦ ಕನ್ನಡ ಟೈಪುರೈಟರುಗಳಿಗೆ ವಿದೇಶಕ್ಕೆ ಆರ್ಡರು ಕೊಟ್ಟಿರುವುದಾಗಿ ಹೇಳಿದ ವಿಷಯವನ್ನು ವಿದ್ಯಾ ಸಚಿವರ ಗಮನಕ್ಕೆ ತರಲು ಸರ್ಕಾರವು ಈ ರೀತಿಯಾದ ಭರವಸೆ ಅಥವಾ ನೆರವು ಯಾರಿಗೂ ನೀಡಿಲ್ಲ. ಇನ್ನು ಎಲ್ಲಾ ವಿಷಯಗಳೂ ಪರಿಶೀಲನೆಯಲ್ಲಿಯೇ ಇರುವುದಾಗಿ ಸಚಿವರು ತಿಳಿಸಿದರೆಂದು ಗೊತ್ತಾಗಿದೆ.

ಪತ್ರಿಕಾಗೋಷ್ಠಿ

ಬೆಂಗಳೂರು ಮೇ ೨೨

ಕೇಂದ್ರ ಉತ್ಪಾದನಾಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಈದಿನ ಬೆಳಗ್ಗೆ ಮೈಸೂರಿನಿಂದ ಬೆಂಗಳೂರಿಗೆ ಆಗಮಿಸಿದನಂತರ ಪತ್ರಿಕಾಗೋಷ್ಠಿಯನ್ನು ನಡೆಸಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಅಭಾವಪರಿಸ್ಥಿತಿಯನ್ನು ವಿವರಿಸಿದರು. ಪ್ರಧಾನಮಂತ್ರಿಯವರ ಕ್ಷಾಮಪರಿಹಾರನಿಧಿಯಿಂದ ಇಲ್ಲಿಗೆ ಹಣವನ್ನು ಒದಗಿಸಲು ತಾವು ಶ್ರಮಿಸುವುದಾಗಿಯೂ ಮುಖ್ಯಮಂತ್ರಿಗಳು ಈ ವಿಷಯವನ್ನು ಕೇಂದ್ರ ಸರ್ಕಾರಕ್ಕೆ ಪತ್ರಬರೆಯಲು ತಾವು ಸಲಹೆ ನೀಡಿರುವುದಾಗಿ ತಿಳಿಸಿದರು.

ಮದ್ರಾಸಿನಲ್ಲಿ ೯೬ ಗಂಟೆಗಳಲ್ಲಿ ೧೮.೬ ಅಂಗುಲ ಮಳೆ

ಆಂಧ್ರಪ್ರದೇಶದಲ್ಲಿ ಇನ್ನೂ ಮಳೆ ಬೀಳುವ ಸಂಭವವಿದೆ

ಮದ್ರಾಸಿನಲ್ಲಿ ಪ್ರಚಂಡಮಾರುತವು ಬೀಸುದುದರ ಪರಿಣಾಮವಾಗಿ ಸೋಮವಾರದಿಂದ ಒಂದೇಸಮನೆ ಮಳೆಬಿದ್ದು ಸಂಚಾರ ಸೌಕರ್ಯಗಳೆಲ್ಲಾ ನಿಂತು ಹೋಗಿತ್ತು. ನಿನ್ನೆ ಮಧ್ಯಾಹ್ನದಿಂದ ಪರಿಸ್ಥಿತಿಯು ಸ್ವಲ್ಪ ಉತ್ತಮಗೊಂಡಿರುವುದಾಗಿ ಗೊತ್ತಾಗಿದೆ. ಮಳೆ ಬಿದ್ದಿಲ್ಲ ಆದರೆ ಗಾಳಿ ಇನ್ನೂ ಬೀಸುತ್ತದೆ ೧೯ ನೇ ತಾರೀಖಿನವರೆಗೆ ೪ ದಿನಗಳಲ್ಲಿ ಒಟ್ಟು ೧೮.೬ ಅಂಗುಲ ಮಳೆಯು ಮದ್ರಾಸಿನಲ್ಲಿ ಬಿದ್ದಿದೆ.

ಲಂಚ ನಿರೋಧಶಾಖೆ ಪೋಲೀಸ್ ಮುಖ್ಯಾಧಿಕಾರಿಗಳಿಗೆ

ಬೆಂಗಳೂರು ಮೇ ೨೨

ಲಂಚನಿರೋಧ ಶಾಖೆಯನ್ನು ರದ್ದುಗೊಳಿಸಿ ಆ ಕಾರ್ಯಗಳನ್ನೆಲ್ಲಾ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರವರಿಗೆ ವಹಿಸಲು ಸರ್ಕಾರವು ಆಲೋಚಿಸುತ್ತಲಿರುವುದಾಗಿ ಗೊತ್ತಾಗಿದೆ. ಲಂಚನಿರೋಧ ಶಾಖಾಧಿಕಾರಿಗಳಾದ ಶ್ರೀ ಹೆಂಜಾರಪ್ಪನವರನ್ನು ನಿವೃತ್ತರಾಗಲಿರುವ ನ್ಯಾಯಾಂಗ ಕಾರ್ಯದರ್ಶಿ ಶ್ರೀ ಎನ್. ಆರ್. ಜಯರಾಯರ ಸ್ಥಾನದಲ್ಲಿ ನೇಮಿಸಲಾಗುವುದೆಂದು ಹೇಳಲಾಗಿದೆ.

ರಾಜಪ್ರಮುಖರ ಕಾರ್ಯದರ್ಶಿ

ಬೆಂಗಳೂರು ಮೇ ೨೨

ಶ್ರೀಮನ್ಮಹಾರಾಜರವರ ಆಪ್ತ ಮತ್ತು ಹುಜೂರ್ ಕಾರ್ಯದರ್ಶಿಗಳ ಹುದ್ದೆಗಳನ್ನು ರದ್ದುಗೊಳಿಸಲು ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ಹೇಳಲಾಗಿದೆ. ಆ ಎರಡು ಕೆಲಸವನ್ನೂ ಒಟ್ಟುಗೂಡಿಸಿ ರಾಜಪ್ರಮುಖರ ಕಾರ್ಯದರ್ಶಿಗಳೆಂಬ ಹೆಸರಿನಿಂದ ಪ್ರತ್ಯೇಕ ಕಾರ್ಯದರ್ಶಿಗಳ ಸ್ಥಾನ ಕಲ್ಪಿಸಲಾಗುವುದಾಗಿ ಗೊತ್ತಾಗಿದೆ.

ಆಕಾಶವಾಣಿ ನೌಕರರ ಅಭಿವಂದನೆ

ಮೈಸೂರು ಮೇ ೨೩

ಕೇಂದ್ರ ಉತ್ಪಾದನ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ರಾತ್ರಿ ಮೈಸೂರು ಜನತೆಯನ್ನುದ್ದೇಶಿಸಿ ಎ ಐ ಆರ್. ಮೈಸೂರು ಕೇಂದ್ರದಲ್ಲಿ ಪ್ರಸಾರ ಭಾಷಣವನ್ನು ಮಾಡುತ್ತಾ, ಹೊಸದಾಗಿ ಸ್ಥಾಪಿಸಿರುವ ಉತ್ಪಾದನಾಶಾಖೆ ಮತ್ತು ತಮ್ಮನ್ನೂ ಆ ಶಾಖೆಯ ಮಂತ್ರಿಗಳನ್ನಾಗಿ ಪ್ರಧಾನಿ ನೆಹರೂರವರು ಚುನಾಯಿಸಿದ ವಿಷಯವಾಗಿ ವಿವರಗಳನ್ನು ಆ ಶಾಖೆಯ ಕಾರ್ಯಕಲಾಪಗಳೇನೆಂಬುದನ್ನು ವಿವರಿಸಿದರು.

ಭಾಷಣದನಂತರ ಎ. ಐ. ಆರ್. ಸಂಸ್ಥೆಯ ಅಧಿಕಾರಿವರ್ಗದವರು ಶ್ರೀ ರೆಡ್ಡಿಯವರನ್ನು ತಮ್ಮ ಕ್ಲಬ್ಬಿಗೆ ಆಹ್ವಾನಿಸಿ ಸತ್ಕರಿಸಿ. ಶ್ರೀ ರೆಡ್ಡಿಯವರು ಕೇಂದ್ರದಲ್ಲಿ ಸಚಿವಸ್ಥಾನ ಪಡೆದುದಕ್ಕಾಗಿ ಅವರನ್ನು ಅಭಿವಂದಿಸಿದರು.

ವಿಚಾರಣಾಸಮಿತಿ ನೇಮಿಸಿ

ತೆಲಂಗಾಣದಲ್ಲಿ ಕಮ್ಯೂನಿಸ್ಟರು ಅಕೃತ್ಯಗಳನ್ನು ನಡೆಸಿದರೇ ಅಥವಾ ಸರ್ಕಾರವು ಅಲ್ಲಿ ನಡೆದ ಅಕೃತ್ಯಗಳಿಗೆ ಕಾರಣವೇ ಎಂಬುದನ್ನು ವಿಮರ್ಶಿಸಲು ಪಾರ್ಲಿಮೆಂಟ್ ಸದಸ್ಯರನ್ನೊಳಗೊಂಡ ಅಥವಾ ಬೇರೆರೀತಿಯಾದ ಸಮಿತಿಯೊಂದನ್ನು ರಚಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಸದಸ್ಯರಾದ ಶ್ರೀ ಹಿರೇಂದ್ರನಾಥ್ ಚಟರ್ಜೀಯವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಸಲಹೆಮಾಡಿರುವರು.

ಅರ್ಥರಹಿತವಾದುದು

ರಾಷ್ಟ್ರಾಧ್ಯಕ್ಷರನ್ನು ಅವರ ಭಾಷಣಕ್ಕಾಗಿ ವಂದಿಸುವ ನಿರ್ಣಯವು ಅಂಗೀಕಾರವಾಗುವ ಮುನ್ನಾ ಚರ್ಚೆಯನ್ನು ಮುಕ್ತಾಯಮಾಡಿ ಪ್ರಧಾನಿ ನೆಹರೂರವರು ಮಾತನಾಡುತ್ತಾ ರಾಷ್ಟ್ರದ ಸಂಘಟನೆಗೆ ವಿರೋಧವಾಗಿ ಕಾರ್ಯವೆಸಗದಿರುವ ಪಕ್ಷಗಳ ಸಹಕಾರವನ್ನು ಮತ್ತೆ ಪಡೆಯುವುದಾಗಿಯೂ, ಚರ್ಚೆ ಸಮಯದಲ್ಲಿ ರಾಷ್ಟ್ರಾಧ್ಯಕ್ಷರ ಭಾಷಣವು ಭಾರತೀಯರಮೇಲೆ ಯುದ್ಧ ಪ್ರಕಟಣೆಯಂತಿದೆಯೆಂದು ಕಮ್ಯೂನಿಸ್ಟ ಪಕ್ಷದ ಶ್ರೀ ಎ. ಕೆ. ಗೋಪಾಲನ್‌ರು ಹೇಳಿರುವರು ಅರ್ಥರಹಿತವಾದುದು ಹಾಗೇನಾದರೂ ಅವರು ಪ್ರತಿಪಾದಿಸಿದಲ್ಲಿ ಅವರಿಗೂ ತಮಗೂ ಯುದ್ಧವಾಗುವುದೆಂದು ಹೇಳಿದರು.

ಭಾರತಕ್ಕೆ ಅಮೇರಿಕಾ ಆರ್ಥಿಕಸಹಾಯ

ಭಾರತಕ್ಕೆ ಅಮೇರಿಕಾ ಆರ್ಥಿಕನೆರವು ಕೊಡಲು ಮಾತುಕತೆ ನಡೆಸಲು ಅಮೇರಿಕಾಕ್ಕೆ ಭಾರತದಲ್ಲಿರುವ ಅಮೇರಿಕಾರಾಯಭಾರಿ ಮಿ॥ ಚೆಸ್ಟರ್‌ಬೌಲ್ಸ್‌ರವರು ತೆರಳಿರುವರು. ಆಹಾರಧಾನ್ಯಗಳಿಗಾಗಿ ೧೨೫೦ ಲಕ್ಷ ಡಾಲರು ಮತ್ತು ಅಭಿವೃದ್ಧಿಕಾರ್ಯಗಳಿಗೆ ೧೦೦೦ ಲಕ್ಷ ಡಾಲರುಗಳ ಸಹಾಯಮಾಡಲು ಮಿ॥ ಚೆಸ್ಟರ್ ಬೌಲ್ಸ್‌ರವರು ಆಶಿಸುವರು.

ಸ ಮಾ ಚಾ ರ

ತಾ|| ೨೩—೫—೫೨ನೇ ಶುಕ್ರವಾರ

ಮೈಸೂರು ಸರ್ಕಾರದ ಆಹಾರ ನೀತಿ

ಮೈಸೂರು ಸರ್ಕಾರದವರ ಹೊಸ ಆಹಾರನೀತಿಯ ಬಗ್ಗೆ ಈಗಾಗಲೇ ನಾನಾ ರೀತಿಯ ಅಭಿಪ್ರಾಯಗಳು ಹೊರಬಿದ್ದಿವೆ.

ಆಹಾರ ಸಾಗಾಣಿಕೆಯ ಮೇಲೆ ತೆಗೆದಿರುವ ನಿರ್ಬಂಧವನ್ನು ಗ್ರಾಮಾಂತರ ಜನರು ವಿಶೇಷವಾಗಿ ಸ್ವಾಗತಿಸಿರುವರು.

ಮುಂದಿನ ಸುಗ್ಗಿಯ ವೇಳೆಗೆ ಹೊಸ ಆಹಾರನೀತಿಯೆನೆಂಬುದರ ಬಗ್ಗೆ ಸರ್ಕಾರಿ ಆಜ್ಞೆ ಹೊರಬೀಳದಿದ್ದರೂ ಅದರ ನೀತಿಯೇನೆಂಬುದರ ವಿಷಯದಲ್ಲಿ ಸರ್ಕಾರೀ ಪ್ರಕಟನೆಗಳು ಈಗಾಗಲೇ ಹೊರಬಿದ್ದಿವೆ. ಈ ವಿಷಯಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ತಕ್ಕ ಸಲಹೆಗಳನ್ನು ನೀಡಲು ಒಂದು ಸಮಿತಿಯನ್ನು ನೇಮಿಸಿದೆ. ಅದರ ವರದಿ ಬಂದನಂತರ ಸರ್ಕಾರದ ಹೊಸ ನೀತಿಯು ಪೂರ್ಣವಾಗಿ ರೂಪಗೊಳ್ಳುವುದು.

ಆಹಾರ ಸಾಗಾಣಿಕೆ ನಿರ್ಬಂಧವನ್ನು ತೆಗೆದುಹಾಕಿದ ಮೇಲೆ ಆಹಾರ ಧಾನ್ಯಗಳ ಮಾರಾಟ ಪರಿಸ್ಥಿತಿಯನ್ನು ವಿಮರ್ಶಿಸಿದರೆ ಈ ಆಜ್ಞೆ ಹೊರಬಿದ್ದೊಡನೆಯೇ ಅಕ್ಕಿ ಮುಂತಾದ ವಸ್ತುಗಳನ್ನು ಸಂತೆಯಲ್ಲಿ ಮತ್ತು ಇತರೆಡೆ ಕಂಟ್ರೋಲ್ ದರಕ್ಕೆ ಮಾರಲು ಪ್ರಾರಂಭವಾಗಿದೆ. ರೇಷನ್ ಡಿಪೋಗಳಲ್ಲಿ ದೊರೆಯುವ ಪದಾರ್ಥಗಳಿಗಿಂತ ಉತ್ತಮ ವಸ್ತುಗಳು ಸುಲಭವಾಗಿ ದೊರೆಯುತ್ತಿವೆ. ಸಾಗಾಣಿಕೆಗೆ ನಿರ್ಬಂಧವನ್ನು ತೆಗೆದುಹಾಕಿದೆಯೇ ವಿನಹ ಮಾರಾಟ ಮಾಡಕೂಡದೆಂದು ಸರ್ಕಾರವು ತಿಳಿಸಿದೆ. ಆದಾಗ್ಯೂ ಮಾರಾಟವಾಗುತ್ತಲೇ ಇದೆ. ಇದರಿಂದ ರೇಷನ್ ಡಿಪೋಗಳಲ್ಲಿ ವ್ಯಾಪಾರ ಕಡಿಮೆಯಾಗಿದೆ. ಕೇಂದ್ರ ಸಚಿವರು ನಮ್ಮ ಮೈಸೂರು ಸಚಿವರುಗಳಿಗೆ ಈ ವಿಷಯವು ತಿಳಿದಿಯಿದೆ. ನಮ್ಮ ಕೈಗಾರಿಕಾ ಮಂತ್ರಿಗಳು ಭದ್ರಾವತಿಯ ಪ್ರವಾಸಕಾಲದಲ್ಲಿ ಸಂತೆಗಳಲ್ಲಿ ಅಕ್ಕಿ ಮಾರುತ್ತಿದ್ದುದನ್ನು ಕಂಡದುದಾಗಿ ಹೇಳಿರುವರು.

ಸಾಗಾಣಿಕೆಗೆ ನಿರ್ಬಂಧವಿಲ್ಲದಿರುವಾಗ ಮಾರಾಟ ನಿರ್ಬಂಧವಿದೆಯೆನ್ನುವುದರಲ್ಲಿ ಅರ್ಥವಿಲ್ಲ. ಕೊಳ್ಳದೆ ಸಾಗಾಣಿಕೆಯು ಅಸಾಧ್ಯ. ಯಾರೂ ಉಚಿತವಾಗಿ ಒಬ್ಬರಿಗೊಬ್ಬರು ಕೊಡುವುದಿಲ್ಲ. ಈ ವಿಷಯದಲ್ಲಿ ಕೃಷ್ಣರಾಜನಗರದಲ್ಲಿ ನಡೆದ ಎಂ.ಪಿ.ಸಿ.ಸಿ. ಸಭೆಯಲ್ಲಿಯೂ ಚರ್ಚೆ ನಡೆಯಿತು. ಒಂದೆರಡು ಗಾಡಿ ಧಾನ್ಯವನ್ನು ಸಾಗಿಸಿದರೆ ಸರ್ಕಾರದ ಆಕ್ಷೇಪಣೆಯಿಲ್ಲ. ಲಾರಿಗಳಲ್ಲಿ ಸಾಗಿಸಬಾರದೆಂದು ಮುಖ್ಯಮಂತ್ರಿಗಳು ತಮ್ಮ ಭಾಷಣವೊಂದರಲ್ಲಿ ಹೇಳಿದರು. ಅಂದರೆ ಗಾಡಿಯಲ್ಲಿ ಸಾಗಿಸಲು ಧಾನ್ಯ ಎಲ್ಲಿಂದ ಬರುತ್ತದೆಯೆನ್ನುವ ಪ್ರಶ್ನೆಗೆ ಉತ್ತರವಿಲ್ಲ.

ಇತ್ತೀಚೆಗೆ ನಮ್ಮ ನೆರೆ ಪ್ರಾಂತ್ಯವಾದ ಮದ್ರಾಸ್ ಸರ್ಕಾರವು ರಾಗಿ, ಜೋಳ ಮುಂತಾದುವುಗಳ ಮೇಲೆ ಹತೋಟಿಯನ್ನು ತೆಗೆದುಹಾಕಿರುವರು. ಕೊನೆಗೆ ಈ ಹಸುಗಳ ಮೇಲೆ ಬೆಲೆ ಹತೋಟಿಯೂ ಇಲ್ಲ.

ಆದ್ದರಿಂದ ನಮ್ಮ ಸರ್ಕಾರದವರು ಕೂಡಲೇ ಕಣ್ಣಿಗೆ ಕಂಡರೂ ಇಲ್ಲವೆಂದು ಹೇಳುವ ರೀತಿಯಲ್ಲಿ ಧಾನ್ಯಗಳ ಮಾರಾಟವಾಗುವುದಕ್ಕೆ ಬದಲಾಗಿ ಆಹಾರ ಸಾಗಾಣಿಕೆಗೆ ಹೇಗೆ ನಿರ್ಬಂಧ ತೆಗೆದುಹಾಕಲಾಗಿದೆಯೋ ಅದೇ ರೀತಿ ಈ ಪ್ರದೇಶಗಳಲ್ಲಿ ಮಾರಾಟಕ್ಕೆ ಇರುವ ನಿರ್ಬಂಧವನ್ನು ಆಜ್ಞೆ ಮೂಲಕ ತೆಗೆದುಹಾಕಿ ನಿರ್ಭಯವಾಗಿ ಮಾರಾಟ ನಡೆಯುವಂತೆ ಮಾಡುವುದು ಸೂಕ್ತ.

ಹೊಸ ಸರ್ಕಾರವು ಅಧಿಕಾರಕ್ಕೆ ಬಂದೊಡನೆಯೇ ಆಹಾರಕ್ಕೆ ಸಂಬಂಧಪಟ್ಟಂತೆ ಬೆಲೆ ಏರಿಕೆ ಮತ್ತು ಸಾಗಾಣಿಕೆಗಿದ್ದ ನಿಷೇಧರದ್ದಿನ ಆಜ್ಞೆಗಳನ್ನು ಮಾಡಿತು. ರೇಷನ್ ವ್ಯವಸ್ಥೆಯಿರುವ ಪ್ರದೇಶಗಳಿಗೆ ರಹದಾರಿಯಿಲ್ಲದೆ ತರುವ ಆಹಾರ ವಸ್ತುಗಳ ಪ್ರಮಾಣವನ್ನು ೨ ಸೇರಿನಿಂದ ೧೦ ಸೇರಿಗೆ ಹೆಚ್ಚಿಸಬೇಕೆಂಬ ವಿಷಯವನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿದರು. ಪರಿಶೀಲನೆಯು ಇನ್ನೂ ಎಷ್ಟುಕಾಲ ನಡೆಯಬೇಕು ? ಈ ವಿಷಯದಲ್ಲಿ ಇನ್ನೂ ತಡೆ, ತಾತ್ಸಾರ ಮಾಡದೆ, ಕೂಡಲೇ ಆಜ್ಞೆಯನ್ನೀಯುವುದು ಅತ್ಯವಶ್ಯಕವಾಗಿದೆ.

—ಜೈಹಿಂದ್

ಅಮೆರಿಕದ ನೆರವು ಬೇಡ

ಅಮೆರಿಕಾದಿಂದ ಭಾರತ ಆರ್ಥಿಕ ನೆರವನ್ನು ಪಡೆಯಬಾರದೆಂದೂ, ಅಮೆರಿಕಾ ಅಥವಾ ರಷ್ಯಾ ರಾಷ್ಟ್ರಗಳ ಕಡೆ ಸೇರಬೇಕೇ ಇಲ್ಲ ಸರ್ವೋದಯ ಮಾರ್ಗವನ್ನು ಹಿಡಿಯಬೇಕೇ ಎಂಬುದೇ ಭಾರತದ ಮುಂದಿರುವ ಪ್ರಶ್ನೆಯೆಂದೂ, ಸರ್ವೋದಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್‌ರವರು ಮೊನ್ನೆ ಪತ್ರಿಕಾ ಸಮ್ಮೇಳನವೊಂದನ್ನುದ್ದೇಶಿಸಿ ಭಾಷಣಮಾಡುತ್ತಾ ತಿಳಿಸಿದರು.

ಧಾನ್ಯಗಳ ಹತೋಟಿ ರದ್ದು

ಮದ್ರಾಸು ಪ್ರಾಂತ್ಯದಲ್ಲಿ ಬೆಳೆಯುವ ರಾಗಿ, ಸಜ್ಜೆ ಇತ್ಯಾದಿಗಳ ಮೇಲೆ ಪ್ರಾಂತ್ಯಾದ್ಯಂತ ಹತೋಟಿಯನ್ನು ಮತ್ತು ಬೆಲೆ ಹತೋಟಿಯನ್ನು ರದ್ದುಗೊಳಿಸಲು ಮದ್ರಾಸು ಸರ್ಕಾರ ನಿರ್ಧರಿಸಿದೆ. ಇದನ್ನು ತಿಳಿಸುತ್ತಾ ಅಕ್ಕಿಯ ಮೇಲಿನ ಹತೋಟಿಯನ್ನೂ ರದ್ದುಗೊಳಿಸಲು ಪರಿಶೀಲನೆ ನಡೆಯುತ್ತಿರುವುದಾಗಿ ಶ್ರೀ ಸಿ. ರಾಜಗೋಪಾಲಾಚಾರಿಯವರು ತಿಳಿಸಿರುವರು.

ಸಹಕಾರವಿಲ್ಲ

ಪ್ರಗತಿಪರ ಸಂಯುಕ್ತ ಪಂಥವನ್ನು ರಚಿಸಲು ಸೋಷಲಿಸ್ಟ್ ಮತ್ತು ಕಮ್ಯೂನಿಸ್ಟ್ ಪಕ್ಷದವರ ಸಹಕಾರ ಸಾಧ್ಯವಿಲ್ಲವೆಂದು ಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಶೋಕ ಮೆಹ್ತಾರವರು ತಿಳಿಸಿರುವರು.

ಕಮ್ಯೂನಿಸ್ಟರಿಂದ ಪ್ರಚೋದಿತವಾದ ಸಂಯುಕ್ತ ಪಂಥಗಳಲ್ಲಿ ಕಾಂಗ್ರೆಸ್ ವಿರೋಧಕ್ಕಿಂತ, ಸೋವಿಯಟ್ ಪರ ನೀತಿಯೇ ಹೆಚ್ಚಾಗಿದೆಯೆಂದೂ, ೧೯೪೫-೪೭ರಲ್ಲಿ ಕಮ್ಯೂನಿಸ್ಟರೊಡನೆ ಸಹಕರಿಸಿ ಕಹಿ ಅನುಭವವನ್ನು ಪಡೆದ ಮೇಲೆ ಅವರ ಬಲೆಗಳಿಗೆ ಬೀಳದಂತೆ ಬಹಳ ಜಾಗರೂಕತೆಯಿಂದಿರಬೇಕೆಂದು ಸೋಷಲಿಸ್ಟ್ ಸಮ್ಮೇಳನಕ್ಕೆ ವರದಿ ಮಾಡಿದ್ದಾರೆ.

ಇತರ ವಾಮ ಪಕ್ಷಗಳು ಸಂಯುಕ್ತ ಪಂಥದ ರಚನೆಗೆ ಶ್ರಮಿಸುತ್ತಿವೆಯೆಂದೂ, ಆದರೆ ಅವುಗಳೊಡನೆ ಸಹಕರಿಸುವುದಕ್ಕೆ ಒಂದು ದೊಡ್ಡ ಅಡಚಣೆಯೆಂದರೆ ಕಮ್ಯೂನಿಸ್ಟರನ್ನು ಸೇರಿಕೊಳ್ಳಬೇಕೆಂಬ ವಾದವೊಂದೇ ಎಂದು ಶ್ರೀ ಮೆಹ್ತಾ ತಿಳಿಸಿದರು.

ಕಮ್ಯೂನಿಸ್ಟರ ಒಲೋದ್ಬಂಧಗಳಿಗೆ ಬೆದರದ ಕೆಲವು ವಾಮ ಪಕ್ಷಗಳು, ನಮ್ಮ ಸಹಕಾರದೊಡನೆ ಆ ಅಪಾಯವನ್ನು ನಿವಾರಿಸಲು ಸಿದ್ಧವಿದೆ ಎಂದು ಸೋಷಲಿಸ್ಟ್ ಪಕ್ಷದ ಕಾರ್ಯದರ್ಶಿಗಳು ತಿಳಿಸಿದರು.

ವಚನ ಸ್ವೀಕಾರ

ಪ್ರಧಾನಿ ನೆಹರೂರವರ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ನೇಮಿತರಾಗಿರುವ ಶ್ರೀ ಸತೀಶ್‌ಚಂದ್ರರವರು ಪ್ರಧಾನಿ ನೆಹರೂರವರ ಸಮ್ಮುಖದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಪೇಟೆ ಧಾರಣೆ

ಮೈಸೂರು ತಾ|| 22-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		8-2	16-12
ಹೊಂಗೆಬೀಜ	,,	10-10	11-2
ಹುರುಳಿ	,,	35-4	36-8
ಹೆಸರು	,,	58-8	——
ಸೀಗೆಕಾಯಿ	,,	3-3	——
ಮೆ. ಕಾಯಿ ಮಣಕ್ಕೆ		6-12	14-2
ಹುಣಸೇಹಣ್ಣು	,,	4-1	——
ತೆಂಗಿನಕಾಯಿ	1100ಕ್ಕೆ	136	153

ಚಿನ್ನ ಬೆಳ್ಳಿ ದರಗಳು

22-5-52	ರೂ.
ಸವರನ್	65-8
,,	65-10
ಚಿನ್ನ ತೊಲ	91-0
,, ಮೂಸ	89-12
ಬೆಳ್ಳಿ 100 ತೊಲ	160-0
,, ತೊಲ	1-11

ಪ್ರಧಾನಿಯ ೨೦,೦೦೦ ರೂ. ಕಾಣಿಕೆ

ಸೌರಾಷ್ಟ್ರದಲ್ಲಿ ಕ್ಷಾಮ ಪರಿಹಾರ ಕಾರ್ಯಕ್ಕೆಂದು ಪ್ರಧಾನಿ ನೆಹರೂ ೨೦,೦೦೦ ರೂ ಗಳನ್ನು ಕಳುಹಿಸಿದ್ದಾರೆ.

ಸೌರಾಷ್ಟ್ರ ಮುಖ್ಯಮಂತ್ರಿ ಶ್ರೀ ಯು. ಎನ್. ಧೇಬಾರರಿಗೆ ಕಳುಹಿಸಿರುವ ಈ ಕಾಣಿಕೆಯು ಮುಖ್ಯ ಸಚಿವರ 'ಆಹಾರ ನಿಧಿ'ಯಿಂದ ತೆಗೆದುದು. ಇದನ್ನು ಕ್ಷಾಮ ಪ್ರದೇಶದಲ್ಲಿ ಆಹಾರ ಪರಿಹಾರ ನೀಡಲು ಬಳಸಲಾಗುವುದು.

ತೆರಿಗೆ ಹೆಚ್ಚಿತು

ಬೆಂಗಳೂರು ಮೇ ೨೨

ಸರ್ಕಾರ ಜೂಜು ತೆರಿಗೆ ದರವನ್ನು ಶೇ ೨|| ರಷ್ಟು ಹೆಚ್ಚಿಸಿದೆ. ನಿನ್ನೆ ಹೊರಟ ಸರ್ಕಾರಿ ಪ್ರಕಟಣೆ ಜೂಜಿನ ತೆರಿಗೆಯನ್ನು ಶೇ ೧೫ರಂತೆ ವಿಧಿಸಲಾಗುವಂತೆ ತಿಳಿಸುತ್ತದೆ. ಇಲ್ಲಿಯವರೆಗೆ ತೆರಿಗೆ ದರ ಶೇ ೧೨|| ಇತ್ತು.

ರಾಜಕಮಲ್

ಮೈಸೂರು

23—5—1952 ರಿಂದ

ಅಮೋಘ ಪ್ರಾರಂಭ

ದಿನವಹಿ 3 ಆಟಗಳು

ಭಕ್ತ ಕುಂಬಾರ

(ಕನ್ನಡ)

ಭೂಮಿಕೆ— ‡ ಹೊನ್ನಪ್ಪಭಾಗವತರ್ ‡ ‡ ಮಹಾಬಲರಾವ್ ‡ ಲಕ್ಷ್ಮೀಬಾಯಿ ‡ ‡ ಪಂಡರಿಬಾಯಿ ‡

ವುಡ್ ಲ್ಯಾಂಡ್ಸ್

23—5—52ನೇ ಶುಕ್ರವಾರದಿಂದ

ಅಮೋಘಪ್ರಾರಂಭ

ದಿನವಹಿ 3 ಆಟಗಳು

ಹಮಾರಿಷಾನ್

(ಹಿಂದಿ)

ಪಾತ್ರ—ಭಾರತ್‌ಭೂಷಣ್, ಯಾಕೂಬ್, ದುರ್ಗಾಖೋಟೆ ಮುಂತಾದವರು

ರಣಜಿತ್

೨೩-೫-೫೨ರಿಂದ ಅಮೋಘ ೨ನೇ ವಾರ

* ಘುಂಗ್ರು *

ಪಾತ್ರ:-ಸುಮಿತ್ರಾ, ಓಂಪ್ರಕಾಶ್, ಕುಲ್‌ದೀಪ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (೮೦ಕ) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೪—೫—೧೯೫೨ನೇ ಶನಿವಾರ [ಸಂಚಿಕೆ ೩೩೨

ಆಹಾರ ಸಬ್ಸಿಡಿ ಪುನಃ ಕೊಡುವ ಭರವಸೆಯಿಲ್ಲ

ಪಾರ್ಲಿಮೆಂಟಿನಲ್ಲಿ ಬಡ್ಜೆಟ್ ಮಂಡಿಸುತ್ತ ಆರ್ಥಿಕ ಸಚಿವರ ವಿವರಣೆ

ಭಾರತ ಸರ್ಕಾರದ ಆರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ಭಾರತ ರಾಜ್ಯಾಂಗ ಪ್ರಕಾರ ನಿನ್ನೆ ಸಂಜೆ ಪಾರ್ಲಿಮೆಂಟಿನಲ್ಲಿ ಪ್ರಥಮ ಬಡ್ಜೆಟ್ಟನ್ನು ಮಂಡಿಸಿದರು.

ಹೊಸ ತೆರಿಗೆಗಳಿಲ್ಲ

ಆ ಸಮಯದಲ್ಲಿ ಮಾತನಾಡುತ್ತಾ, ಈಸಾಲಿನಲ್ಲಿ ಹೊಸ ತೆರಿಗೆಗಳನ್ನೇನೂ ವಿಧಿಸುವುದಿಲ್ಲ ಈಗಿನ ತೆರಿಗೆ ವಿಧಾನದಲ್ಲಿ ಏನೂ ಬದಲಾವಣೆಯಿಲ್ಲವೆಂದರು.

ಆದಾಯ ವ್ಯಯ

ಈ ಸಾಲಿನಲ್ಲಿ ೪೦೪ ಕೋಟಿ ೯೮ ಲಕ್ಷ ರೂಪಾಯಿಗಳ ಉತ್ಪತ್ತಿ, ೪೦೧ ಕೋಟಿ ೨೫ ಲಕ್ಷ ರೂಪಾಯಿಗಳ ವೆಚ್ಚವನ್ನು ಅಂದಾಜು ಮಾಡಲಾಗಿದೆ ೩ ಕೋಟಿ ೭೩ ಲಕ್ಷ ರೂ ಉಳಿತಾಯ ಕಂಡುಬರುತ್ತದೆ

ಆಹಾರ ಸಬ್ಸಿಡಿ ಕೊಡುವ ಆಸೆಯಿಲ್ಲ

ಶ್ರೀ ದೇಶಮುಖ್‌ರವರು ದೇಶದ ಆಹಾರ ಪರಿಸ್ಥಿತಿ ವಿಷಯವಾಗಿ ಪ್ರಸ್ತಾಪಿಸಿದರು. ಈಗ ಪ್ರಾಂತ್ಯಗಳಿಗೆಲ್ಲಾ ಸಬ್ಸಿಡಿ ಕೊಡುವುದನ್ನು ನಿಲ್ಲಿಸಲಾಗಿದೆ ಇದರಿಂದ ವಿದೇಶಗಳಿಂದ ಆಹಾರಕೊಳ್ಳುವುದು ಕಡಿಮೆಯಾಗಿದೆ. ಮೈಲೋಗೆ ಸಬ್ಸಿಡಿಕೊಡಲಾಗಿದೆ. ಎಲ್ಲಾ ಪದಾರ್ಥಗಳಿಗೂ ಸಬ್ಸಿಡಿಯನ್ನು ಕೈಗಾರಿಕಾಪಟ್ಟಣಗಳಿಗೆಕೊಟ್ಟರೆ ೭೦ ಕೋಟಿ ರೂ ಗಳು ಎಲ್ಲಾ ಪ್ರದೇಶಗಳಿಗೂ ಕೊಟ್ಟರೆ ೯೦ ಕೋಟಿ ರೂಪಾಯಿಗಳು ಬೇಕಾಗುತ್ತದೆ ದೇಶದಲ್ಲಿ ಇನ್ನು ಅನೇಕ ಪ್ರಗತಿಕಾರ್ಯಗಳನ್ನು ಮಾಡಬೇಕಾಗುವುದರಿಂದ ಸಬ್ಸಿಡಿಯನ್ನು ಹಾಗೆ ಕೊಡುತ್ತಾಹೋಗಲು ಸಾಧ್ಯವಿಲ್ಲವೆಂದು ಪುನಃ ಸಬ್ಸಿಡಿ ಕೊಡುವ ಆಸೆಯನ್ನು ತಾವು ಕೊಡುವುದಿಲ್ಲವೆಂದೂ ಪ್ರಕೃತ ಆಹಾರಸಬ್ಸಿಡಿಯನ್ನು ಈ ಸಾಲಿನಲ್ಲಿ ೨೫ ಕೋಟಿಯಿಂದ ೧೫ ಕೋಟಿಗೆ ಇಳಿಸಲಾಗಿದೆಯೆಂದು ಆರ್ಥಿಕ ಸಚಿವರು ಹೇಳಿರುವರು.

ಚೋರರ ಪ್ರದರ್ಶನ

ಕೇಂದ್ರ ಸರ್ಕಾರದ ಮಾಜಿ ಸಚಿವ ಶ್ರೀ ಗಾಡ್ಗಿಲ್ಲರ ಮೇಲೆ ಬಿದ್ದು ರೈಲಿನಲ್ಲಿ ಅವರ ಗಡಿಯಾರ ಮುಂತಾದುವನ್ನು ಹೇಗೆ ಅಪಹರಿಸಿದರೆಂಬುದನ್ನು ಆ ದರೋಡೆಗಾರರು ರೈಲಿನೊಳಕ್ಕೆ ಹೇಗೆ ನುಗ್ಗಿದರೆಂಬುದನ್ನು ಪ್ರದರ್ಶನ ಮಾಡಿ ತೋರಿಸಿರುವರು.

ಎಸ್ ಎಸ್ ಎಲ್ ಸಿ ಬದಲು ಮೆಟ್ರಿಕ್ಯುಲೇಷನ್

ಬೆಂಗಳೂರು ಮೇ ೨೩

ಈಗಿರುವ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಬದಲಾಗಿ ಮೆಟ್ರಿಕ್ಯುಲೇಷನ್ ಪರೀಕ್ಷಾ ಪದ್ಧತಿಯನ್ನು ಜಾರಿಗೆತರಲು ಪರಿಶೀಲಿಸುತ್ತಲಿರುವುದಾಗಿ ಮುಖ್ಯಮಂತ್ರಿಗಳು ತಿಳಿಸಿರುವರು.

ಡಾ|| ಸಿ. ಆರ್. ರೆಡ್ಡಿ ಮತ್ತು ಡಾ|| ರಾಧಾಕೃಷ್ಣನ್‌ರವರ ವರದಿಯನ್ನು ಅವಲೋಕಿಸಿ ವಿಶ್ವವಿದ್ಯಾನಿಲಯದ ಶಿಕ್ಷಣ ಕ್ರಮದಲ್ಲೂ ಬದಲಾವಣೆಗಳನ್ನು ಮಾಡಲು ಸರ್ಕಾರವು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಿದೆಯೆಂದು ಅವರು ಹೇಳಿರುವರು.

ಅಪ್ಪಾಜಿಗೌಡರು ಲಂಚ ನಿರೋಧಾಧಿಕಾರಿ

ಬೆಂಗಳೂರು ಮೇ ೨೩

ನಿವೃತ್ತ ಸಚಿವ ಶ್ರೀ ಜಿ. ಅಪ್ಪಾಜಿಗೌಡರನ್ನು ಮೈಸೂರುಸರ್ಕಾರವು ಲಂಚನಿರೋಧ ಮತ್ತು ದಕ್ಷತೆ ತನಿಖೆ ಡೈರೆಕ್ಟರಾಗಿ ನೇಮಕಮಾಡಿದೆ. ಇವರು ಗೌರ್ನಮೆಂಟ್ ಇನ್ಷೂರೆನ್ಸ್ ಇಲಾಖೆಯ ಜನರಲ್ ಮ್ಯಾನೇಜರಾಗಿಯೂ ಇರುತ್ತಾರೆ

ಶ್ರೀ ಕೆ. ಹೊಂಬಾರಪ್ಪನವರು ಬೆಂಗಳೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ನೇಮಕವಾಗಿದ್ದಾರೆ.

ವಯಸ್ಕರ ಶಿಕ್ಷಣ ಸಮಿತಿ ರದ್ದಿಲ್ಲ

ಬೆಂಗಳೂರು ಮೇ ೨೩

ವಯಸ್ಕರ ಶಿಕ್ಷಣಸಮಿತಿಯನ್ನು ಸರ್ಕಾರವು ರದ್ದುಗೊಳಿಸುವುದಿಲ್ಲ ಆದರೆ ಅದಕ್ಕೆ ದ್ರವ್ಯಸಹಾಯವನ್ನು ಕಡಿಮೆಮಾಡಲಾಗುತ್ತಿದೆಯೆಂದು ವಿದ್ಯಾಮಂತ್ರಿಗಳು ಹೇಳಿರುವರು.

ಸಲಹಾಪತ್ರ

ಸೈನ್ಯ ವಿಸರ್ಜನೆ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಒಮ್ಮತಕ್ಕಾಗಿ ಶ್ರಮಿಸುತ್ತಲಿರುವ ಡಾ|| ಗ್ರಹಾಂರವರಿಗೆ ನೆರವಾಗಬೇಕೆಂದು ಬ್ರಿಟನ್ ಮತ್ತು ಅಮೆರಿಕಾಗಳು ಭಾರತ ಪಾಕೀಸ್ಥಾನಗಳಿಗೆ ಪತ್ರ ಬರೆದಿರುವುದಾಗಿ ಹೇಳಲಾಗಿದೆ

§ ಭಾರತದಲ್ಲಿ ವಿದ್ಯಾಭಿವೃದ್ಧಿ ಯೋಜನೆಗಳ ವೆಚ್ಚಕ್ಕಾಗಿ ಸರ್ಕಾರವು ೪,೩೭,೧೯,೦೦೦ ರೂಪಾಯಿಗಳನ್ನು ತೆಗೆದಿರಿಸಿರುವುದಾಗಿ ಗೊತ್ತಾಗಿದೆ.

ನಗರಾಭಿವೃದ್ಧಿ ಸಮಿತಿಗೆ ಶ್ರೀ ಗೋಪಾಲಕೃಷ್ಣಶೆಟ್ಟರ ರಾಜೀನಾಮೆ

ಮೈಸೂರು ಮೇ ೨೩

ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ಮೈಸೂರು ಹಿರಿಯ ಶಾಸನಸಭೆಗೆ ನಾಮಕರಣವಾಗಿರುವುದರಿಂದ ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯಿತ್ತಿರುವುದಾಗಿ ಗೊತ್ತಾಗಿದೆ. ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಿಗೆ ಸರ್ಕಾರವು ಸಂಭಾವನೆ ಕೊಡುತ್ತಲಿರುವುದರಿಂದ, ಸರ್ಕಾರಿ ಸಂಭಾವನೆ ಪಡೆಯುತ್ತಲಿರುವವರು ಶಾಸನಸಭಾ ಸದಸ್ಯರಾಗಲು ಕಾನೂನಿನಲ್ಲಿ ಅವಕಾಶವಿಲ್ಲವಾಗಿ ಶ್ರೀಯುತರು ರಾಜೀನಾಮೆಯನ್ನಿತ್ತಿರುವರು. ರಾಜೀನಾಮೆಯ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ತಿಳಿಯಬಂದಿದೆ.

ಜನರ ಆಹಾರ ನೀತಿ ಬದಲಾವಣೆಯಾಗಬೇಕು

ಜನರು ತಮ್ಮ ಆಹಾರ ಪದ್ಧತಿಗಳನ್ನು ಬದಲಾಯಿಸಿಕೊಳ್ಳಬೇಕು. ಈ ಬಗ್ಗೆ ವಿಜ್ಞಾನಿಗಳ ಜನತೆಯ ನೆರವಿಗೆ ಬರಬೇಕು ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಆಹಾರಸಂಶೋಧನಾ ಕೇಂದ್ರದಲ್ಲಿ ಮಾತನಾಡುತ್ತಾ ಹೇಳಿರುವರು

ನಿನ್ನೆಯದಿನ ಆಹಾರಸಂಶೋಧನಾಸಂಸ್ಥೆಯ ಸಲಹಾಸಮಿತಿಯು ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿವಿಧ ಆಹಾರಗಳಬಗ್ಗೆ ಪ್ರಯೋಗನಡೆಸಲು ಪ್ರತ್ಯೇಕ ಟೆಕ್ನಾಲಾಜಿಕಲ್ ಬ್ಲಾಕನ್ನು ಇಡಬೇಕೆಂದೂ ನಿರ್ಣಯ ಮಾಡಿತು.

ಈ ಪ್ರಯೋಗಶಾಲೆಗೆ ಮತ್ತು ಸಂಶೋಧನಾಸಂಸ್ಥೆಯಿರುತ್ತಲಿರುವ ಪ್ರದೇಶದಲ್ಲಿಗೆ ಕುಕ್ಕರಹಳ್ಳಿ ಕೆರೆಯಿಂದ ನೀರನ್ನು ಸರ್ಕಾರ ಒದಗಿಸುವುದಾಗಿ ಸಚಿವರು ತಿಳಿಸಿದರು.

ಡೈರೆಕ್ಟರ್ ಡಾ|| ಸುಬ್ರಮಣ್ಯಂರವರು ಮಾತನಾಡುತ್ತಾ ಆಹಾರ ಸಂಶೋಧನೆ ನಡೆಸುವುದು ಸಂಸ್ಥೆಯ ಕಾರ್ಯವಾದರೂ ಅದನ್ನು ಬಳಕೆಗೆ ತರಲು ಸರ್ಕಾರವು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ರೇಷನ್ ಡಿಪೋಗಳಲ್ಲಿ ಟೋಪಿಯೋಕಾ ವಸ್ತುಗಳನ್ನು ಮಾರುವಂತೇರ್ಪಡಿಸಬೇಕೆಂದು ತಿಳಿಸಿದರು.

ಬಸ್ ಡ್ರೈವರಿನ ಮೇಲೆ ಮೊಖದ್ದಮೆ

ಆಹಾರ ಮಂತ್ರಿಗಳಾದ ಶ್ರೀ ಸಿದ್ದವೀರಪ್ಪನವರು ೨೧ನೇ ತಾ|| ಬೆಳಿಗ್ಗೆ ದಾವಣಗೆರೆಯಿಂದ ಹರಿಹರಕ್ಕೆ ಬರುತ್ತಿದ್ದಾಗ ಅವರ ಕಾರಿನ ಮುಂದೆ ಓಡುತ್ತಿದ್ದ ಮೇಲ್ ಸರ್ವೀಸ್‌ನ ಬಸ್ ಡ್ರೈವರ್ ಪಕ್ಕದಲ್ಲಿ ದಾರಿಬಿಟ್ಟುಕೊಡದೆ ಹೋದುದಕ್ಕಾಗಿ ಆತನ ಮೇಲೆ ಮೊಖದ್ದಮೆ ಹೂಡಲಾಗಿದೆಯೆಂದು ಗೊತ್ತಾಗಿದೆ

ರೆವಿನ್ಯೂ ಸಚಿವರ ಎಚ್ಚರಿಕೆ

ರೆವಿನ್ಯೂ ಸಚಿವರಾದ ಶ್ರೀ ಕಡಿದಾಳ್ ಮಂಜಪ್ಪನವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಂಚರಿಸಿದಾಗ ಹಲವು ತಾಲ್ಲೂಕುಕಛೇರಿಗಳಿಗೆ ಭೇಟಿ ಇತ್ತು, ಅಲ್ಲಿ ಅನೇಕಮಂದಿ ನೌಕರರು ನಿಷ್ಕಾರಣವಾಗಿ ಅನೇಕ ರೆಕಾರ್ಡುಗಳನ್ನು ವಿಲೇವಾರಿಮಾಡದೆ ಹಾಗೆಯೇ ಇಟ್ಟುಕೊಂಡಿದ್ದುದನ್ನು ಗಮನಿಸಿ ಅನೇಕಮಂದಿ ಗುಮಾಸ್ತರಿಗೆ ದಂಡ ವಿಧಿಸಿದರು

ಸರ್ಕಾರಿ ನೌಕರರು ನಿಸ್ಪೃಹತೆಯಿಂದ ಕೆಲಸಮಾಡಬೇಕೆಂದೂ ಸ್ವಲ್ಪವೂ ಸಾವಕಾಶ ಮಾಡದಂತೆ ಸರ್ಕಾರಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬರಬೇಕೆಂದೂ ಎಚ್ಚರಿಸಿದರೆಂದು ತಿಳಿದುಬಂದಿದೆ.

ಇಂಜನಿಯರಿಂಗ್ ಶಾಖೆಯವರಿಗೆ ಸೂಚನೆ

ಸಚಿವರು ಚಿಕ್ಕಮಗಳೂರಿನಲ್ಲಿ ಮರಾಮತ್ ಶಾಖೆಯ ಕಛೇರಿಗೂ ಭೇಟಿ ಇತ್ತಿದ್ದರು. ಈ ಶಾಖೆಯಲ್ಲಿ ಸರ್ಕಾರ ಹಣ ವೃಹೆಚ್ಚಾಗಿ ವೆಚ್ಚವಾಗುತ್ತಿದ್ದರೂ ರಸ್ತೆಗಳ ಸ್ಥಿತಿ ತೀರಾ ಶೋಚನೀಯವಾಗಿದೆಯೆಂದೂ ಮರಾಮತ್ ಶಾಖೆಯವರು ಕೆಲಸಗಳನ್ನು ಮಿತವ್ಯಯದಿಂದ ನಿರ್ವಹಿಸಬೇಕೆಂದು ಸೂಚಿಸಿದರು.

ಹಿಂದಿ ಅಭಿವೃದ್ಧಿಗೆ ಪಂಚವಾರ್ಷಿಕ ಯೋಜನೆ

ಭಾರತಾದ್ಯಂತ ಹಿಂದಿ ಭಾಷೆಯನ್ನು ಅಭಿವೃದ್ಧಿಗೊಳಿಸಲು ಭಾರತಸರ್ಕಾರದ ವಿದ್ಯಾಸಚಿವಶಾಖೆಯು ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿದೆ

ಈ ಸಂದರ್ಭದಲ್ಲಿ ಹಿಂದೀ ಶಿಕ್ಷಣಸಮಿತಿಯನ್ನು ನೇಮಿಸಿದೆ ಹಿಂದೀ ನಿಘಂಟೊಂದನ್ನು ತಯಾರಿಸಲು ಕಾರ್ಯಕ್ರಮವಿಟ್ಟಿದೆ.

ನೂತನ ಆಹಾರನೀತಿ ಬಡವರಿಗೆ ಅನುಕೂಲವಾಗಿದೆ

ದಾವಣಗೆರೆ ಮೇ ೨೨

'ಚರಿತ್ರಾರ್ಹ ದಾವಣಗೆರೆ ರಾಜಕೀಯ ಸಮ್ಮೇಳನದಲ್ಲಿ ಒಪ್ಪಿಗೆಯಾದ ನೀತಿಯಂತೆ ಸರ್ಕಾರ ಆಹಾರನೀತಿಯನ್ನು ಬದಲಾವಣೆ ಮಾಡಿದೆ. ಮೇ ೧ ರಿಂದ ಅನಿರ್ಬಂಧ ಸಾಗಾಣಿಕೆಗೆ ಅವಕಾಶವಿತ್ತ ಕಾರಣ ಚಿತ್ರದುರ್ಗ ಜಿಲ್ಲೆಯಲ್ಲಿ ಎಲ್ಲಿ ಹೋದರೂ ಬಡವರಿಗೆ ತುಂಬಾ ಅನುಕೂಲವಾಗಿದೆ ಎಂದು ಎಲ್ಲರೂ ಮುಕ್ತಕಂಠದಿಂದ ಹೊಗಳುತ್ತಿದ್ದಾರೆ' ಎಂದು ಮೈಸೂರು ಸಂಸ್ಥಾನದ ಗೃಹಸಚಿವರಾದ ಶ್ರೀ ಹೆಚ್ ಸಿದ್ದವೀರಪ್ಪನವರು ದಾವಣಗೆರೆ ನಗರ ಸಭೆಯವರ ಬಿನ್ನವತ್ತಳೆಗೆ ಉತ್ತರ ಕೊಡುತ್ತ ತಿಳಿಸಿದ್ದಾರೆ.

ಸರ್ಕಾರದ ಈಗಿನ ನೀತಿಯಿಂದ ಆಹಾರದ ಕೃತಕ ಅಭಾವ ಹೋಗತೊಡಗಿದೆ. ಆರು ತಿಂಗಳ ದಾಸ್ತಾನು ನಮ್ಮಲ್ಲಿದೆ. ಧಾರಣೆ ಜಾಸ್ತಿಯಾಗಿರುವುದರಿಂದ ಕೊಳ್ಳುವವರು ಕಡಿಮೆ ಎಂದು ಒಂದು ವಾದ. ಸರ್ಕಾರದ ನೀತಿ, 'ಎಳ್ಳು ಕೊಂಡಂತೆ ಎಣ್ಣೆ ಮಾರಬೇಕೆಂದಿದ್ದೇವೆ.' ಜಾಸ್ತಿ ಬೆಲೆಯಾಗಿರುವುದು ಬಡವರಿಗೆ ಹೊರೆ ಎಂದು ಸರ್ಕಾರಕ್ಕೆ ಗೊತ್ತಿಲ್ಲದೆ ಇಲ್ಲ. ರಿಯಾಯಿತಿಗಾಗಿ ಕೇಂದ್ರದವರನ್ನು ಕೇಳುತ್ತಿದ್ದೇವೆ. ಕೇಂದ್ರದಿಂದ ಸಹಾಯಧನ ಬಂದ ತಕ್ಷಣವೇ ಆಹಾರದ ಬೆಲೆಯನ್ನೂ ತಕ್ಷಣವೇ ಇಳಿಸುತ್ತೇವೆ. ಅದೇ ರೀತಿ ಈಗ ಗೋಧಿ ಬೆಲೆಯನ್ನು ಕಡಿಮೆಮಾಡಿದ್ದೇವೆ. ಒಂದು ವಿಧಾನದಿಂದ ಇನ್ನೊಂದು ವಿಧಾನಕ್ಕೆ ಬರುವಾಗ ತೊಂದರೆಗಳು ಬರುತ್ತವೆ. ಅದಕ್ಕಾಗಿ ಆಹಾರದ ಕಾನೂನನ್ನು ಅದೇ ರೀತಿಯಲ್ಲಿ ಇಟ್ಟಿದ್ದೇವೆ. ಒಂದೇ ಕಡೆ ಆಹಾರ ಶೇಖರಣೆಯಾದರೆ, ಕಾನೂನು ತನ್ನ ಹೆಡೆ ಚಾಚುವುದು. ಸಾರ್ವಜನಿಕರು ವರ್ತಕರು ಸರ್ಕಾರಕ್ಕೆ ಪ್ರೋತ್ಸಾಹ ಹಾಗೂ ಸಹಕಾರ ಕೊಡಬೇಕೆಂದು ಕೋರಿದರು.

ರೈತರ ಬಗ್ಗೆ ಮಾತನಾಡುತ್ತಾ, 'ರೈತರಿಲ್ಲದೂ, ಈ ಕಂಟ್ರೋಲ್ ಸಂಕೋಲೆಗಳನ್ನು ತಪ್ಪಿಸಬೇಕು' ಎಂದು ಹೇಳಿದರು. ಈಗ ಅವರು ಬೆಲೆ ಕೊಡುವ ಬೆಳೆಗಳನ್ನು ಬೆಳೆಯದೇ, ಆಹಾರ ಧಾನ್ಯಗಳನ್ನು ಹೆಚ್ಚು ಹೆಚ್ಚಾಗಿ ಈ ಸಾಲಿನಲ್ಲಿ ಬೆಳೆಯಬೇಕೆಂದು ಅವರ ಮನವಿ ಎಂದು ತಿಳಿಸಿದ್ದಾರೆ.

ಚಿನ್ನ ಬೆಳ್ಳಿ ದರಗಳು

23–5–52	ರೂ.
ಸವರನ್	65–2
,,	65–4
ಚಿನ್ನ ತೊಲ	90–8
,, ಮೂಸ	89–4
ಬೆಳ್ಳಿ 100 ತೊಲ	158–0
,, ತೊಲ	1–11

ಪರ್ಶಿಯಾ ಎಣ್ಣೆ

ಪರ್ಶಿಯಾವು ತನ್ನಲ್ಲಿರುವ ಎಣ್ಣೆಯನ್ನು ಅಂತರರಾಷ್ಟ್ರೀಯದ ದರದಲ್ಲಿ ಮಾರುವುದಾಗಿ ೨೯ ರಾಷ್ಟ್ರಗಳಿಗೆ ತಿಳಿಸಿದೆ. ಯಾರಿಂದಲೂ ಏನೂ ಉತ್ತರ ಬಂದಿಲ್ಲವೆಂದು ಹೇಳಲಾಗಿದೆ.

ರಸ್ತೆ ನಿರ್ಮಾಣ

ಭಾರತದಿಂದ ಖಟ್ಮಂಡುವಿಗೆ ರಸ್ತೆಯನ್ನು ನಿರ್ಮಿಸಲು ನೇಪಾಳ ಸರ್ಕಾರಕ್ಕೆ ನೆರವಾಗಲು ಭಾರತ ಸರ್ಕಾರ ಒಪ್ಪಿದೆಯೆಂದು ಶ್ರೀ ಬಿ ಆರ್ ಭಗತ್‌ರವರಿಗೆ ಪ್ರಧಾನಿ ನೆಹರು ಲೋಕಸಭೆಯಲ್ಲಿ ತಿಳಿಸಿರುವರು.

ಬಟ್ಟೆ ಹತೋಟಿ ತೆಗೆವ ಬಗ್ಗೆ ಅನಿಶ್ಚಿತ ಧೋರಣೆ

ಬಟ್ಟೆ ನಿಯಂತ್ರಣ ತೆಗೆದುಹಾಕುವ ಬಗ್ಗೆ ಧೋರಣೆಯನ್ನು ಸರ್ಕಾರ ನಿರ್ಧರಿಸಿಲ್ಲವೆಂದು ವಾಣಿಜ್ಯಶಾಖಾ ಸಚಿವ ಶ್ರೀ ಟಿ ಟಿ ಕೃಷ್ಣಮಾಚಾರಿಯವರು ಶ್ರೀ ಅನಂತಶಯನಮ್ ಅಯ್ಯಂಗಾರ್ಯರ ಪ್ರಶ್ನೆಗೆ ಉತ್ತರವಾಗಿ ಹೇಳಿದರು.

ಶಿಕ್ಷಣವೆಚ್ಚ

೧೯೫೨-೫೩ನೇ ಸಾಲಿಗೆ ಕೇಂದ್ರ ವಿದ್ಯಾಸಚಿವ ಶಾಖೆ ೪,೩೭,೧೯,೦೦೦ ರೂಗಳ ವೆಚ್ಚದ ಅಂದಾಜು ಮಾಡಿದೆ ಎಂದು ಶ್ರೀ ಗುಲ್ಜಾರಿಲಾಲ್ ನಂದಾರವರು ಪ್ರಶ್ನೆಯೊದಕ್ಕೆ ಉತ್ತರವಿತ್ತಿರುವರು.

ನಗರಾರೋಗ್ಯ

ಮೈಸೂರು ಮೇ ೨೨

ಮೈಸೂರು ನಗರದಲ್ಲಿ, ಮೇ ೧೫ಕ್ಕೆ ಮುಕ್ತಾಯವಾಗುವ ಪಕ್ಷದ ಆರೋಗ್ಯವನ್ನು ಆರೋಗ್ಯಾಧಿಕಾರಿಗಳು ಪ್ರಕಟಿಸಿರುವರು.

ಪ್ಲೇಗು ರೋಗ ವೆಲ್ಲೂ ಇರಲಿಲ್ಲ. ೧೦೭೧ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು.

ಸಿಡುಬುರೋಗವೆಲ್ಲೂ ಇರಲಿಲ್ಲ. ೨೩೩೫ ಪ್ರೈಮರಿ ೧,೧೦೪ ರಿವ್ಯಾಕ್ಸಿನೇಷನ್ ಮಾಡಲಾಗಿದೆ.

ಡಿಫ್ತೀರಿಯಾರೋಗವು ೧೦ ಜನಕ್ಕೆ ತಗುಲಿ ಒಂದು ಸಾವು ಆಗಿದೆ. ೯೯ ಡಿಫ್ತೀರಿಯಾ ನಿರೋಧ ಮತ್ತು ೨೬೭ ಟೈಫಾಯಿಡ್ ನಿರೋಧ ಇನಾಕ್ಯುಲೇಷನ್‌ಗಳನ್ನು ಮಾಡಲಾಗಿದೆ.

ರಾಷ್ಟ್ರಾಧ್ಯಕ್ಷರು ಪಾಟ್ನಾದಲ್ಲಿ

ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು ಪಾಟ್ನಾದ ಹಿಂದಿ ಸಾಹಿತ್ಯ ಸಮ್ಮೇಳನಭವನಕ್ಕೆ ಭೇಟಿ ಕೊಟ್ಟರು. ಅವರನ್ನೂ ಬಿಹಾರದ ವಿದ್ಯಾಸಚಿವ ಶ್ರೀ ಬದರೀನಾಥವರ್ಮ ಮತ್ತು ಸಮ್ಮೇಳನದ ಅಧಿಕಾರಿವರ್ಗದವರು ಸ್ವಾಗತಿಸಿದರು.

ಬಿಹಾರದಲ್ಲಿ ಪ್ರಕಟವಾಗಿದ್ದು, ತಮ್ಮ ಭೇಟಿಯ ಸಂದರ್ಭದಲ್ಲಿ ಪ್ರದರ್ಶಿಸಲ್ಪಟ್ಟಿದ್ದ ಸುಮಾರು ೧೫,೦೦೦ ಪುಸ್ತಕಗಳನ್ನೂ ಅವರು ವೀಕ್ಷಿಸಿದರು.

ವಿವಿಧವಾರ್ತೆಗಳು

ಟಿಬೆಟ್ಟಿನಲ್ಲಿ ಚೈನೀ ಕಮ್ಯೂನಿಸ್ಟರು ಹೊಸ ಆಡಳಿತ ಸಮಿತಿಯೊಂದನ್ನು ರಚಿಸಿ, ಟಿಬೆಟ್ಟನ್ನು ಕಮ್ಯೂನಿಸ್ಟ್ ಹತೋಟಿಯಲ್ಲಿಟ್ಟುಕೊಂಡಿದ್ದಾರೆ. ದಲಾಯಲಾಮಾರವರ ಮಂತ್ರಿಮಂಡಲವನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಆದರೆ ಈ ಆಡಳಿತ ಸಮಿತಿಯಲ್ಲಿ ದಲಾಯಲಾಮ ಮತ್ತು ಪಂಚನ್‌ಲಾಮರವರು ಸದಸ್ಯರಾಗಿದ್ದಾರೆ. ಅಲ್ಲದೆ ಸಮಿತಿಯಲ್ಲಿ ಕೆಲವು 'ದೇಶಭಕ್ತರು' ಇದ್ದಾರೆ. ಇವರೆಲ್ಲರನ್ನೂ ಕಮ್ಯೂನಿಸ್ಟರೇ ಆರಿಸಿದ್ದಾರೆ, ಎಂಬ ಸುದ್ದಿ ಭಾರತದ ಕಾಲಿಂಪಾಂಗಿಗೆ ಬಂದಿದೆ.

ೱ ೱ ೱ

ಪ್ರಪಂಚದ ಸುದ್ದಿಯು ಸರಾಗವಾಗಿ ಹರಿದುಬರುವಂತೆ ಸಹಾಯಮಾಡಲು ಪತ್ರಿಕೋದ್ಯಮದ ನಾಲ್ಕು ಅಂಶದ ಯೋಜನೆಯನ್ನು ಪ್ರಾರಂಭ ಮಾಡಬೇಕೆಂಬ ಠರಾವನ್ನು ಅಂತರರಾಷ್ಟ್ರೀಯ ಪ್ರೆಸ್ ಸಂಸ್ಥೆಯಲ್ಲಿ ತೀರ್ಮಾನವಾಯಿತು.

ೱ ೱ ೱ

ವಿಶ್ವಸಂಸ್ಥೆಯ ಕಟ್ಟಡದ ಮುಂಭಾಗದಲ್ಲಿ ಶಾಂತಿಯ ಸಾಧನೆಗಾಗಿ ವರ್ನೀಜ್ ನಿಧಿಯಿಂದ ಕಟ್ಟುವ ಕಟ್ಟಡವು ಅಂತರರಾಷ್ಟ್ರೀಯ ಕೇಂದ್ರವಾಗುವುದು. ಶಾಂತಿ ಸಾಧನೆಗಾಗಿ ಹೆಣಗುವ ಎಲ್ಲರೂ ಈ ಕಟ್ಟಡದ ಉಪಯೋಗ ಮಾಡಿಕೊಳ್ಳಬಹುದು.

ೱ ೱ ೱ

'ಊಸವೆಲ್ಟ್ ಮತ್ತು ಅವನ ಪ್ರಭಾವ' ಎಂಬ ಪುಸ್ತಕವನ್ನು ಬರೆಯಲು ೨೫,೦೦೦ ಡಾಲರ್ ನಿಧಿಯನ್ನು ಫಿಲಡೆಲ್ಫಿಯಾ ವ್ಯಾಪಾರಸ್ಥನೊಬ್ಬನು ಕೊಟ್ಟಿದ್ದಾನೆ. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯದ ಪ್ರೊ|| ಎಡ್ಗರ್ ರಾಬಿನ್‌ಸನ್ನರು ಈ ಪುಸ್ತಕ ಬರೆಯುತ್ತಾರೆ.

ಕೊಲಂಬೋ ಹೈದರಾಬಾದ್ ಆದೀತು

ಸಿಂಹಳದಲ್ಲಿರುವ ಭಾರತೀಯರು ಸ್ವದೇಶಕ್ಕೆ ತಾವು ಸಂಪಾದಿಸಿದ ಸಂಪತ್ತನ್ನೆಲ್ಲಾ ಸಾಗಿಸದೆ, ಸಾಯುವವರೆಗೆ ಸಿಂಹಳದಲ್ಲಿಯೇ ಇದ್ದರೆ, ಆಗ ಅವರಿಗೆ ಪೌರತ್ವ ಒದಗಿಸಬಹುದು. ಅದಕ್ಕೆ ನಾವು ಸಿದ್ಧ. ಈ ವಲಸೆಗಾರರನ್ನು ಸುಮ್ಮನೆ ಬಿಡುತ್ತ ಬಂದರೆ ಕೊಲಂಬೋವಿಗೆ ಹೈದರಾಬಾದಿಗಾದ ಗತಿಯೇ ಆಗುತ್ತದೆ ಎಂದು ಸಿಂಹಳದ ಟ್ರಾನ್ಸ್‌ಪೋರ್ಟ್ ಮಂತ್ರಿ ಹೇಳಿರುವುದಾಗಿ ಗೊತ್ತಾಗಿದೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟೌನ್‌ಹಾಲ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್. ಮೈಸೂರು

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,500 or near offer

No brokers Immediate possession—No encumbrence,

Enquire at :— M. SUBBARAMAIAH & Co., Lansdowne Buildings, Mysore.

ನ್ಯೂ ಅಪೇರ ಟಾಕೀಸ್

16—5—52 ರಿಂದ
ಅನೋಘವಾದ
2ನೇ ವಾರ
ಪ್ರತಿದಿನ 3 ಆಟಗಳು
ಜೂಪಿಟರ್‌ರವರ—
* ರಾಣಿ *
(ತಮಿಳು)
ಪಾತ್ರ:- ‡ ಭಾನುಮತಿ ‡
‡ ಬಾಲಚಂದರ್ ‡
‡ ವಹಾಬ್ ಕಾಶ್ಮೀರಿ ‡

ಫೋನ್ ೫೭೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೫ ೫—೧೯೫೨ನೇ ಭಾನುವಾರ [ಸಂಚಿಕೆ ೨೩೩

ಕರ್ಣಾಟಕ ಪ್ರಾಂತ್ಯ ರಚನೆಗೆ ಪಾರ್ಲಿಮೆಂಟ್ ಸದಸ್ಯರ ಒತ್ತಾಯ

ಸೋಷಲಿಸ್ಟರು ಕಮ್ಯೂನಿಸ್ಟರೊಡನೆ ಸಹಕರಿಸುವುದಿಲ್ಲ

ಕನ್ನಡ ಟೈಪ್ ರೈಟರ್‌ಗೆ ಆರ್ಡರ್ ಕೊಡುವ ಸೂಚನೆ

ಬೆಂಗಳೂರು ಮೇ ೨೪

ನೂರು ಕನ್ನಡ ಟೈಪ್‌ರೈಟರ್‌ಗೆ ಆರ್ಡರ್ ಕೊಡುವಂತೆ ಪ್ರಿಂಟಿಂಗ್ ಶಾಖೆ ಡೈರೆಕ್ಟರ್‌ರವರಿಗೆ ಸೂಚಿಸಿರುವುದಾಗಿ ನಿನ್ನೆ ದಿನ ಪತ್ರಿಕಾಪ್ರತಿನಿಧಿಗಳಿಗೆ ಶಿಕ್ಷಣ ಸಚಿವರು ತಿಳಿಸಿದರು.

ಸಚಿವರು ಮುಂದುವರಿದು ಮತ್ತೊಬ್ಬ ವ್ಯಾಪಾರಿಯವರು ನೂರು ಟೈಪ್‌ರೈಟರನ್ನು ಅಮೇರಿಕದಿಂದ ಆಮದು ಮಾಡಲು ಅನುಮತಿ ಬೇಡಿರುವರೆಂದೂ ಅದನ್ನು ಅವರಿಗೆ ಕೊಡಲಾಗುವುದೆಂದೂ ತಿಳಿಸಿ ಎರಡು ರೀತಿಯ ಟೈಪ್‌ರೈಟರ್‌ಗೂ ಸ್ಪರ್ಧೆಗೆ ಬಿಡುವುದೇ ಸರ್ಕಾರದ ನೀತಿಯೆಂದೂ ಯಾವುದು ಅತ್ಯಂತ ಉಪಯುಕ್ತವಾಗಿ ಕಂಡುಬರುವುದೋ, ಅದು ಕೊನೆಗೆ ಉಳಿದುಕೊಳ್ಳುವುದೆಂದೂ ತಿಳಿಸಿದರು. ಸರ್ಕಾರವಾದರೋ ತರ್ಮ ಸಮಿತಿಯ ವರದಿಗನುಸಾರವಾಗಿ ಟೈಪ್‌ರೈಟರನ್ನು ಮಾಡಿಸುವುದೆಂದರು.

ಅಸಿಸ್ಟೆಂಟ್ ಕಮೀಷನರ ವರ್ಗಾವರ್ಗಿ

ಬೆಂಗಳೂರು ಮೇ ೨೪

ಮೈಸೂರು ಸಬ್‌ಡಿವಿಜನ್ ಅಧಿಕಾರಿಯಾಗಿರುವ ಶ್ರೀ ಎನ್ ಸಿದ್ದಯ್ಯನವರನ್ನು ಮೈಸೂರು ಸರ್ಕಲ್ ವ್ಯಾಪಾರ ತೆರಿಗೆ ಅಧಿಕಾರಿಯನ್ನಾಗಿಯೂ, ಮೈಸೂರು ಸರ್ಕಲ್ ವ್ಯಾಪಾರ ತೆರಿಗೆ ಅಧಿಕಾರಿಗಳಾದ ಜ|| ಎಂ ಸಯ್ಯದ್ ಮಹಿಯೂದ್ದೀನ್‌ರವರನ್ನು ಮೈಸೂರು ಸಬ್‌ಡಿವಿಜನ್ ಅಧಿಕಾರಿಗಳನ್ನಾಗಿ ವರ್ಗಾಯಿಸಲಾಗಿದೆ.

ರೇವುಗಳ ಅಭಿವೃದ್ಧಿ ಕಾರ್ಯ

ಬೊಂಬಾಯಿ, ಕೊಚ್ಚಿನ್, ಮದ್ರಾಸ್, ಕಲ್ಕತ್ತಾ, ವಿಶಾಖಪಟ್ಟಣ ರೇವುಗಳನ್ನು ಸುಮಾರು ೨೭ ಕೋಟಿ ರೂಪಾಯಿಗಳ ವೆಚ್ಚದಿಂದ ಅಭಿವೃದ್ಧಿಗೊಳಿಸಲು ಕೇಂದ್ರ ಸರ್ಕಾರವು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಶಿಕ್ಷಣ ಶಾಖೆ ಕಾರ್ಯದರ್ಶಿ

ನೈಸರ್ಗಿಕ ವಸ್ತುಮೂಲ ಮತ್ತು ವೈಜ್ಞಾನಿಕ ಸಂಶೋಧನೆ ಶಾಖೆ ಕಾರ್ಯದರ್ಶಿಯಾದ ಡಾ|| ಎಸ್ ಎಸ್ ಭಟ್‌ನಗರ್‌ರವರು ಭಾರತ ಸರ್ಕಾರದ ಶಿಕ್ಷಣ ಶಾಖೆ ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟಿದ್ದಾರೆ.

ಗಡಿಯಾಚೆ ಧಾನ್ಯ ಸಾಗಿಸಿದರೆ ಗುಂಡಿನೇಟು

ಪತ್ತೆಹಚ್ಚುವವರಿಗೆ ಶಸ್ತ್ರಾಸ್ತ್ರ ಸಹಾಯ

ಧಾನ್ಯ ಸಾಗಿಸುವವರನ್ನು ಹಿಡಿದುಕೊಡುವುದರಲ್ಲಿ ನಾಗರೀಕರೂ ಸಹಕರಿಸಬೇಕು ಹಾಗೆ ಹಿಡಿದುಕೊಡುವವರ ರಕ್ಷಣೆಗೆ ಬೇಕಾದರೆ ಶಸ್ತ್ರಾಸ್ತ್ರಗಳ ಸಹಾಯ ಒದಗಿಸಲಾಗುವುದು. ಅಲ್ಲದೆ ಬಹುಮಾನಗಳನ್ನೂ ಸಹ ಕೊಡಲಾಗುವುದು.

ಗಡಿ ಕಾವಲಿಗಾಗಿ ಸಶಸ್ತ್ರ ಪೋಲೀಸ್ ಕಾವಲನ್ನು ಹಾಕಲಾಗಿದೆ. ಅಲ್ಲದೆ ಧಾನ್ಯ ಸಾಗಿಸುವವರು ಲೆ ಸಂದರ್ಭ ಒದಗಿದರೆ ಗುಂಡಿಕ್ಕಿ ಹೊಡೆಯಲೂ ಸಹ ಅಪ್ಪಣೆಕೊಡಲಾಗಿದೆ ಸರ್ಕಾರ ಇಷ್ಟೆಲ್ಲಾ ಮಾಡಿದಾಗ್ಯೂ, ಪ್ರಜೆಗಳ ಸಹಕಾರ ಸರ್ಕಾರಕ್ಕೆ ಬೇಕೇಬೇಕು. ಆಹಾರಧಾನ್ಯ ಸಾಗಿಸುವವರನ್ನು ಹಿಡಿದುಕೊಡಲು ಜನತೆ ಮುಂದೆ ಬರಬೇಕು, ಎಂದು ಆಹಾರ ಸಚಿವ ಶ್ರೀ ಸಿದ್ದವೀರಪ್ಪನವರು ಹರಿಹರದಲ್ಲಿ ಮಾತನಾಡುತ್ತಾ, ಹೇಳಿರುವರು.

ಮಹಾಚುನಾವಣೆ ಪ್ರಾರಂಭ

ಸಿಂಹಳದ ಮಹಾಚುನಾವಣೆಯು ನಿನ್ನೆ ಆರಂಭವಾಯಿತು. ೨,೯೯೦,೯೦೪ ವೋಟರರು ೧೦೧ ಸ್ಥಾನಗಳ ಪ್ರತಿನಿಧಿ ಸಭೆಯಲ್ಲಿ ೯೫ ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ೯ ರಾಜಕೀಯ ಪಕ್ಷಗಳಿಂದ ೩೦೭ ಸ್ಪರ್ಧಿಗಳಿದ್ದಾರೆ, ಎಲ್ಲಾ ಸ್ಥಾನಗಳಿಗೆ ತೀವ್ರ ಸ್ಪರ್ಧೆಯಿದೆ. ಅಲ್ಪಸಂಖ್ಯಾತರಿಗೆ ೬ ಸ್ಥಾನಗಳನ್ನು ವಿಶೇಷವಾಗಿರಿಸಿದೆ.

ಸಿಂಹಳದ ಮುಂದಿನ ಐದುವರ್ಷಗಳ ರಾಜಕೀಯ ಚಕ್ರವನ್ನು ನಿರ್ಧರಿಸುವುದು. ಸಾರ್ವತ್ರಿಕವಯಸ್ಕರ ಮತದಾನ ಜಾರಿಗೆ ಬಂದಮೇಲೆ ತಮ್ಮ ಕಾಮನ್‌ವೆಲ್ತ್‌ನಲ್ಲಿ ಸ್ವತಂತ್ರ ರಾಜ್ಯವಾದಮೇಲೆ ಸಿಂಹಳದಲ್ಲಿ ಚುನಾವಣೆಗಳು ನಡೆದಿವೆ.

ಮಾವಿನ ಫಸಲು ನಷ್ಟ

ಭಾರತದಲ್ಲೆಲ್ಲಾ ವಿಶೇಷವಾಗಿ ಮಾವಿನ ಹಣ್ಣುಗಳು ಬೆಳೆಯುವ ಬಿಹಾರ ಪ್ರಾಂತ್ಯದಲ್ಲಿ ವಿಶೇಷವಾಗಿ ಮಳೆಯಾದುದರಿಂದ ಫಸಲೆಲ್ಲವೂ ಹಾಳಾಗಿ ವಿಶೇಷ ನಷ್ಟವಾಯಿತೆಂದು ತಿಳಿಯಬರುತ್ತದೆ.

ಕಮ್ಯೂನಿಸ್ಟ್ ಪಕ್ಷದೊಡನೆ ಸೇರುವುದಿಲ್ಲ

ಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಅಶೋಕಮೆಹ್ತಾರವರು ಮಾತನಾಡುತ್ತಾ, ತಮ್ಮ ಪಕ್ಷದ ಪಾರ್ಲಿಮೆಂಟ್ ಸದಸ್ಯರು ಕೆ. ಎಂ. ಪಿ. ಮುಂತಾದ ಪಕ್ಷದೊಡನೆ, ವಿರೋಧಪಕ್ಷ ರಚನೆಗಾಗಿ, ವ್ಯವಹರಿಸುತ್ತಿರುವುದಾಗಿ ತಿಳಿಸಿದರು. ಕಮ್ಯೂನಿಸ್ಟ್ ಪಕ್ಷದ ಸದಸ್ಯರೊಡನೆ ತಮ್ಮ ಪಕ್ಷವು ಸೇರುವ ಪ್ರಶ್ನೆಯೇ ಇಲ್ಲವೆಂದು ಅವರು ಹೇಳಿರುವರು.

ಅಮೇರಿಕಾ ಇಂಜನಿಯರು

ಭಾರತದಲ್ಲಿ ನಡೆಯಬೇಕಾಗಿರುವ ವ್ಯವಸಾಯ, ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಗಳಲ್ಲಿ ಸಲಹೆನೀಡಲು ಅಮೇರಿಕಾದಿಂದ ದೆಹಲಿಗೆ ಮತ್ತಿಬ್ಬರು ಅಮೇರಿಕಾ ಇಂಜನಿಯರುಗಳು ಆಗಮಿಸಿರುವರು.

ಬಡ್ಜೆಟ್ ಚರ್ಚೆ

ಮೊನ್ನೆಯದಿನ ಅರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ಮಂಡಿಸಿರುವ ಬಡ್ಜೆಟ್ ಗುರುವಾರ ದಿನ ಚರ್ಚೆಗೆ ಬರಲಿದೆ.

ಹಿರಿಯ ಶಾಸನದಲ್ಲಿ ಬಡ್ಜೆಟ್ ಚರ್ಚೆಯು ಸೋಮವಾರ ಪ್ರಾರಂಭವಾಗಲಿದೆ.

ರೈಲ್ವೆ ದುರಂತದಲ್ಲಿ ನೊಂದವರಿಗೆ ಪರಿಹಾರ

ಏಪ್ರಿಲ್‌ನಲ್ಲಿ ನಡೆದ ರೈಲ್ವೆ ದುರಂತದಲ್ಲಿ ನೊಂದವರಿಗೆ ಪರಿಹಾರವನ್ನು ಕೊಡುವ ವಿಷಯವನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ಒಬ್ಬ ಅಧಿಕಾರಿಗಳನ್ನು ನೇಮಿಸಿದೆ.

ಪೇಟೆ ಧಾರಣೆ

ಮೈಸೂರು ತಾ|| 25-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		12-0	16-2
ಹೊಂಗೆಬೀಜ	,,	11-2	11-10
ಹುರುಳಿ	,,	34-12	36-0
ಹೆಸರು	,,	57-2	57-4
ಸೀಗೆಕಾಯಿ	,,	2-15	3-7
ಮೆ. ಕಾಯಿ ಮಣಕ್ಕೆ		9-2	14-2
ಹುಣಸೇಹಣ್ಣು	,,	1-8	4-0
ತೆಂಗಿನಕಾಯಿ	1100ಕ್ಕೆ	106	115

ಪಾರ್ಲಿಮೆಂಟಿನಲ್ಲಿರುವ ಮೈಸೂರು, ಹೈದರಾಬಾದ್ ಬೊಂಬಾಯಿ ಪ್ರಾಂತ್ಯಗಳ ಸದಸ್ಯರುಗಳು ಪ್ರಧಾನಿ ನೆಹರೂರವರನ್ನು ನಿನ್ನೆ ಭೇಟಿಮಾಡಿ ಸಂಯುಕ್ತ ಕರ್ಣಾಟಕ ಪ್ರಾಂತ್ಯ ರಚನೆಗಾಗಿ ಒತ್ತಾಯಪಡಿಸಿದರೆಂದೂ, ಕೂಡಲೇ ಗಡಿ ನಿರ್ಧಾರಸಮಿತಿ ನೇಮಕವಾಗಬೇಕೆಂದು ತಿಳಿಸಿದರೆಂದು ತಿಳಿದುಬಂದಿದೆ.

ಬೊಂಬಾಯಿ ಹೊಸ ಗೌರ್ನರ್

ಬೊಂಬಾಯಿಯ ಗೌರ್ನರಾಗಿ ನೇಮಕವಾಗಿರುವ ಶ್ರೀ ಗಿರಿಜಾಶಂಕರ ಬಾಜಪೈರವರು ವಿದೇಶಾಂಗ ಶಾಖಾ ಕಾರ್ಯದರ್ಶಿ ಸ್ಥಾನದಿಂದ ನಿನ್ನೆ ಯದಿನ ನಿವೃತ್ತರಾದರು. ಬೊಂಬಾಯಿನಲ್ಲಿ ಗೌರ್ನರ್ ಹುದ್ದೆಯನ್ನು ಸ್ವೀಕರಿಸಲು ಅವರು ಬುಧವಾರ ದಿನ ಬೊಂಬಾಯಿಗೆ ತೆರಳುವರು.

ಪತ್ರಿಕೋದ್ಯೋಗಿಗಳ ಸಭೆ

ಮೈಸೂರು ಮೇ ೨೪

ಪತ್ರಿಕೋದ್ಯೋಗಿಸಂಘದ ಕೆಲವು ಸದಸ್ಯರು ಈದಿನ ಬೆಳಿಗ್ಗೆ ಸಮಾಚಾರ ಕಾರ್ಯಾಲಯದಲ್ಲಿ ಸಭೆಸೇರಿ, ಇತ್ತೀಚೆಗೆ ಸಂಘದ ಕಾರ್ಯಕಲಾಪಗಳು ತಟಸ್ಥವಾಗಿ ಹೋಗಿ ಪತ್ರಿಕೋದ್ಯೋಗಿಗಳಿಗೆ ವಿಶೇಷ ತೊಂದರೆಯಾಗಿರುವುದನ್ನು ಪರಿಶೀಲಿಸಿ, ಒಂದುವಾರದೊಳಗೆ ಸರ್ವಸದಸ್ಯರ ಸಭೆಯನ್ನು ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ಕರೆಯಬೇಕೆಂದು ಕೋರುವ ನಿರ್ಣಯಮಾಡಲಾಯಿತು. ಮೈಸೂರುಪತ್ರಿಕೆ ಸಂಪಾದಕರಾದ ಶ್ರೀ ಟಿ. ನಾರಾಯಣರವರು ಅಧ್ಯಕ್ಷತೆ ವಹಿಸಿದ್ದರು.

ಮಹಾರಾಜರ ಪ್ರವಾಸ

ಮೈಸೂರು ಮೇ ೨೪

ಶ್ರೀಮನ್ಮಹಾರಾಜರವರು ನಾಳೆ ಬೆಳಿಗ್ಗೆ ಕೊಡಗಿನಲ್ಲಿ ಪ್ರವಾಸ ಕೈಗೊಳ್ಳಲು ಮಡಕೇರಿಗೆ ತೆರಳುವರು. ಜೂನ್ ಒಂದನೇ ತಾರೀಖಿನವರೆಗೆ ಅಲ್ಲಿ ಪ್ರವಾಸಮಾಡಿ ಬಂದೀಪುರಕ್ಕೆ ಹಿಂತಿರುಗುವರು.

ಪ್ರವಾಸ ರದ್ದು

ಮೈಸೂರು ಮೇ ೨೪

ಭಾರತ ಶ್ರೇಷ್ಠ ಸೇನಾನಿ ಜನರಲ್ ಕಾರಿಯಪ್ಪನವರ ಕೊಡಗಿನ ಪ್ರವಾಸ ರದ್ದಾಗಿದೆಯೆಂದು ಅವರು ಮೈಸೂರಿಗೆ ಬರುವುದಿಲ್ಲವೆಂದು ಗೊತ್ತಾಗಿದೆ.

ಶಿಕ್ಷಣ ಸುಧಾರಣೆ

ಬೆಂಗಳೂರು ಮೇ ೨೪

ನಿನ್ನೆ ಮಧ್ಯಾಹ್ನ ಶಿಕ್ಷಣ ಶಾಖೆ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಪತ್ರಿಕಾಗೋಷ್ಠಿಯಲ್ಲಿ ಸಂಸ್ಥಾನದಲ್ಲಿ ಆಗಬೇಕಾಗಿರುವ ಶಿಕ್ಷಣ ಸುಧಾರಣೆ ಬಗ್ಗೆ ವಿವರಣೆಯನ್ನೀಯುತ್ತಾ, ಶಿಕ್ಷಣ ಸುಧಾರಣೆಯಲ್ಲಿ ವಿಶ್ವವಿದ್ಯಾನಿಲಯ ಮತ್ತೊಂದು ಸೆಕೆಂಡರಿ ಶಿಕ್ಷಣ ಹೀಗೆ ಎರಡು ಭಾಗವಿದೆ. ವಿಶ್ವವಿದ್ಯಾನಿಲಯದ ವಿಷಯದಲ್ಲಿ ನಾನು ಇತ್ತೀಚೆಗೆ ವೈಸ್‌ಛಾನ್ಸಲರ್ ಡಾ|| ಬಿ. ಎಲ್. ಮಂಜುನಾಥ್‌ರವರೊಡನೆ ಮಾತುಕತೆ ನಡೆಸಿದೆ ಅದರ ಫಲವಾಗಿ ಕೆಲವು ಸೂಚನೆಗಳನ್ನು ಮಂತ್ರಿಮಂಡಲದ ಮುಂದಿಡುವೆನು. ಈಗ ವಿಶ್ವವಿದ್ಯಾನಿಲಯದ ೧೯೩೩ನೇ ಸಾಲಿನ ಶಾಸನದ ರೀತ್ಯಾ ನಡೆಯುತ್ತಿದೆ ಈಗಿನ ಪರಿಸ್ಥಿತಿಗೆ ಅದು ಸರಿಹೋಗದು ಶಾಸನದ ತಿದ್ದುಪಡಿ ಅಗತ್ಯವಾಗಿ ತರಬೇಕಾಗಿದೆ. ಡಾ|| ಸಿ. ಆರ್. ರೆಡ್ಡಿ ಮತ್ತು ಡಾ|| ರಾಧಾಕೃಷ್ಣನ್‌ರವರ ಶಿಫಾರಸು ಎರಡು ವರ್ಷದ ಹಿಂದೆಯೇ ಆಗಿದ್ದು ಈಗ ಪರಿಶೀಲಿಸಬೇಕಾಗಿದೆ. ಶಾಲಾ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಸೇರಿಸುವ ವಿಧಾನವನ್ನು ರಾಜ್ಯಾಂಗಕ್ಕನುಗುಣವಾಗಿ ಮದ್ರಾಸ್ ಸರ್ಕಾರ ಬದಲಾಯಿಸಿದಾಗ ಮೈಸೂರು ಸರ್ಕಾರವೂ ಒಂದು ಹೊಸ ವಿಧಾನವನ್ನು ಪ್ರಕಟಿಸಿತು. ತಾತ್ಕಾಲಿಕವೆಂದು ತಿಳಿಸಿತ್ತು. ಈಗ ರಾಜ್ಯಾಂಗಕ್ಕನುಗುಣವಾಗಿ ಒಂದು ನಿರ್ಧಾರಕ್ಕೆ ಬರಬೇಕಾಗಿದೆ ಎಂದರು.

ಮೂಲ ಶಿಕ್ಷಣ

ಸುಧಾರಿತ ಶಿಕ್ಷಣ ಕ್ರಮದಲ್ಲಿ ಮೂಲ ಶಿಕ್ಷಣಕ್ಕೇನು ಸ್ಥಾನವೆಂದು ಕೇಳಲು ಆ ವಿಷಯ ಅಖಿಲಭಾರತಕ್ಕೆ ಸಂಬಂಧಿಸಿದ್ದಾದ್ದರಿಂದ ಮೊದಲು ಕೇಂದ್ರ ಸರ್ಕಾರ ಒಂದು ತೀರ್ಮಾನಕ್ಕೆ ಬರಬೇಕೆಂದು ತಮ್ಮ ಅಭಿಪ್ರಾಯವೆಂದರು.

ರಜಾದಿನ ಕಡಿಮೆಯಾಗಬೇಕು

ಕಾಲೇಜುಗಳು ನಡೆಯುತ್ತಿರುವ ದಿನಗಳು ಬಹಳ ಕಡಿಮೆಯಾಗಿವೆಯೆಂದೂ ಒಂದು ಸಾಲಿನಲ್ಲಿ ಕೇವಲ ೮೦ ದಿನ ಕಾಲೇಜು ನಡೆದಿದೆಯೆಂದೂ ಹೇಳಿ ಕಾಲೇಜಿನ ರಜಾದಿನಗಳು ಕಡಿಮೆಯಾಗಬೇಕೆಂದು ಅಭಿಪ್ರಾಯಪಟ್ಟು ಕೊಡುವ ರಜಾ ದಿನಗಳು ಕೂಡ ಸಮಯೋಚಿತವಾಗಿದ್ದು ಸುಗ್ಗಿ ಮುಂತಾದ ಉಪಯುಕ್ತ ಸಮಯದಲ್ಲಿ ದೊರಕುವಂತಾಗಬೇಕೆಂದು ಅಭಿಪ್ರಾಯಪಟ್ಟರು.

ಸಮಾಜಸೇವೆ

ವಿದ್ಯಾರ್ಥಿ ಜೀವನದಲ್ಲಿ ಒಂದು ವರ್ಷ ಕಾಲ ಸಮಾಜಸೇವೆಯಲ್ಲಿ ನಿರತರಾಗಿರುವಂತೆ ಮಾಡಬೇಕೆಂದು ಹೇಳಿ ಜರ್ಮನಿಯ ಸಮಾಜ ಸೇವಾ ಕೇಂದ್ರದ ಮತ್ತು ನಮ್ಮ ಸಂಸ್ಥಾನದಲ್ಲಿಯೇ ಕೆಲವೆಡೆ ನಡೆಯುತ್ತಿರುವ ಸೇವಾ ಶಿಬಿರಗಳ ಉದಾಹರಣೆಯನ್ನಿತ್ತರು.

ಶ್ರೀ ಅಪ್ಪಾಜಿಗೌಡರ ನೇಮಕವೇಕೆ?

ಬೆಂಗಳೂರು ಮೇ ೨೪

ವಿಮೆ ಇಲಾಖೆ ಕಾರ್ಯ ಹೆಚ್ಚು ತೃಪ್ತಿಕರವಾಗಿ ನಡೆಯುತ್ತಿಲ್ಲ. ಸಂಸ್ಥಾನದಿಂದ ವರ್ಷ ಒಂದಕ್ಕೆ ಸುಮಾರು ೮-೫ ಕೋಟಿ ರೂ ಜನರ ವಿಮೆ ಹಣ ಸಂಸ್ಥಾನದಿಂದ ಹೊರಕ್ಕೆ ಹೋಗುತ್ತಿರುವುದಾಗಿಯೂ (ಬೇರೆ ಕಂಪೆನಿಗಳಿಗೆ) ಸುಮಾರು ೭೦.೮೦ ಲಕ್ಷ ರೂ ಮಾತ್ರ, ಸರ್ಕಾರದ ವಿಮೆ ಶಾಖೆಗೆ ಬರುತ್ತಿರುವುದಾಗಿಯೂ ಲೆಕ್ಕ ಹಾಕಲಾಗಿದೆ. ಸರ್ಕಾರದ್ದೇ ವಿಮೆಯಿಲಾಖೆಯಿದ್ದು, ಬೇರೆಯವರೊಡನೆ ಸ್ಪರ್ಧಿಸಲಾಗದ ಪರಿಸ್ಥಿತಿಯಿದೆ ಆದ್ದರಿಂದಾಗಿ ಅದನ್ನು ಸರಿಪಡಿಸಲು, ಜನಸಂಪರ್ಕ ಅಧಿಕಾರಿಗಳಂತ ಹಾಗೂ ಆ ಇಲಾಖೆಯ ಸಂಪರ್ಕ ಹಿಂದೆ ಇದ್ದು ಎಲ್ಲ ವಿಷಯಗಳನ್ನು ಬಲ್ಲವರೊಬ್ಬರು ಬೇಕಾಗಿತ್ತು. ಈ ನೇಮಕದಿಂದ ಇಲಾಖೆ ವ್ಯವಸ್ಥೆಗೊಳ್ಳುವುದೆಂದು ಆಶಿಸುತ್ತೇವೆ. ಅವರ ನೇಮಕದ ಅವಧಿ ಸದ್ಯಕ್ಕೆ ೨ ವರ್ಷ.

ಉ—ಅವರ ವಿಶ್ರಾಂತಿ ವೇತನವೂ ಸೇರಿ ೧,೫೦೦ ರೂ ಸಂಬಳ. ಇಲಾಖೆ ಮುಖ್ಯಾಧಿಕಾರಿಗಿರುವ ಕಟ್ಟುಪಟ್ಟು ಇತ್ಯಾದಿ ಎಂದು ವಿದ್ಯಾಸಚಿವರು ಶ್ರೀ ಅಪ್ಪಾಜಿಗೌಡರ ನೇಮಕಬಗ್ಗೆ ವಿವರಿಸಿರುವರು.

ಕುಟುಂಬ ಯೋಜನೆ

ಕ್ಲಿಪ್ತಸಂತಾನ ಕುಟುಂಬ ಯೋಜನೆಯ ವ್ಯವಸ್ಥೆಯ ಪ್ರಚಾರಕ್ಕೆ ದೆಹಲಿಯಲ್ಲಿ ಎರಡು, ಮೈಸೂರಿನಲ್ಲಿ ಒಂದು ಕೇಂದ್ರವನ್ನು ಏರ್ಪಡಿಸುವ ಆಲೋಚನೆ ಇದೆಯೆಂದು ಆರೋಗ್ಯ ಶಾಖಾ ಸಚಿವ ರಾಜಕುಮಾರಿ ಅಮೃತಕೌರ್ ಲೋಕಸಭೆಯಲ್ಲಿ ತಿಳಿಸಿರುವರು.

ಚಿನ್ನ ಬೆಳ್ಳಿ ದರಗಳು

24–5–52	ರೂ.
ಸವರನ್	65–0
"	65–2
ಚಿನ್ನ ತೊಲ	91–6
" ಮೂಸ	90–0
ಬೆಳ್ಳಿ 100 ತೊಲ	159–0
" ತೊಲ	1–11

ಮುಂಗಡವಾಗಿ ಗೋಧಿ ತೆಗೆದುಕೊಳ್ಳಬಹುದು

ಬೆಂಗಳೂರು ಮೇ ೨೪

ಗೋಧಿ ಅಥವಾ ಅದರ ಪದಾರ್ಥಗಳ ನಾಲ್ಕು ತಿಂಗಳ ಪಡಿತರವನ್ನು ಮುಂಗಡವಾಗಿ ಕೊಡಲಾಗುತ್ತದೆಂದೂ, ಬಯಸುವ ಕಾರ್ಡುದಾರರು ತಮ್ಮ ಡಿಪೋಗಳಲ್ಲಿ ಮುಂಗಡವಾಗಿ ಪಡೆಯಬಹುದೆಂದೂ ಬೆಂಗಳೂರಿನ ನಗರ ರೇಷನಿಂಗ್ ತಿಳಿಸುತ್ತಾರೆ.

ವಿಶೇಷ ಸಮಾರಂಭಗಳಿಗಾಗಿ ಹೆಚ್ಚು ಗೋಧಿ ಬೇಕಾದವರು ಆಯಾ ಸರ್ಕಲಿನ ಅಸಿಸ್ಟೆಂಟ್ ರೇಷನಿಂಗ್ ಅಧಿಕಾರಿಗಳನ್ನು ಕಾಣಬೇಕೆಂದೂ ತಿಳಿಸುತ್ತಾರೆ.

'ಬಡವರ ಬಡ್ಜೆಟ್ ಅಲ್ಲ'

'ಈ ಬಡ್ಜೆಟ್ಟಿಗೂ, ಹಳೆಯ ನೌಕರಶಾಹಿ ಬಡ್ಜೆಟ್ಟಿಗೂ ಏನೂ ವ್ಯತ್ಯಾಸವಿಲ್ಲ. ಮಧ್ಯವರ್ಗದ ನೌಕರರಿಗೆ, ರೈತರಿಗೆ, ಕಾರ್ಮಿಕರಿಗೂ ಏನೂ ಪರಿಹಾರವಿಲ್ಲ' ಎಂದು ಕಮ್ಯೂನಿಸ್ಟ್ ನಾಯಕ ಎ. ಕೆ. ಗೋಪಾಲನ್ ಪಾರ್ಲಿಮೆಂಟಿನಲ್ಲಿ ಟೀಕಿಸಿದರು.

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು (ಸೀತಾವಿಲಾಸ ಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ಕಿಕ್ಕಿರಿದ ಜನಸಂದಣಿಗೆ ಪ್ರದರ್ಶಿತವಾಗುತ್ತಿದೆ

ಪ್ರಭಾ * 23—5—52 ರಿಂದ

ಲೋಕಮಾನ್ಯರವರ—

* ಗರ್ಲ್ಸ್ ಸ್ಕೂಲ್ * (ಹಿಂದಿ)

ಪಾತ್ರ: ಗೀತಾಬಾಲಿ, ಸಜ್ಜನ್, ಸೋಹನ್, ಶಶಿಕಲಾ, ಮಂಗಲ ಮುಂತಾದವರು

ಸಂಗೀತ—ಸಿ. ರಾಮಚಂದ್ರ ಮತ್ತು ಅನಿಲ್ ಬಿಶ್ವಾಸ್.

ದಿಗ್ದರ್ಶನ—ಅಪೂರ್ವ ಚಕ್ರವರ್ತಿ

ಜಮೀನಿನ ಅಭಿವೃದ್ಧಿ ಸಂಸ್ಥೆಯ ಸ್ಥಾಪನೆ

ಸರ್ಕಾರವು ಜಮೀನಿನ ಅಭಿವೃದ್ಧಿ ಸಂಸ್ಥೆಯೊಂದನ್ನು ಸ್ಥಾಪಿಸುವ ಸಂಭವವಿದೆಯೆಂದು ಲೋಕಸಭೆಯಲ್ಲಿ ಕೇಂದ್ರ ಆಹಾರ ಸಚಿವ ರಫಿ ಅಹಮದ್ ಕಿದ್ವಾಯಿಯವರು ಹೇಳಿಕೆಯಿಂದ ಗೊತ್ತಾಗಿದೆ.

ಹರೇಕೃಷ್ಣ ಮೆಹ್ತಾಬ್

ಶ್ರೀ ಹರೇಕೃಷ್ಣ ಮೆಹ್ತಾಬರವರು ಪಾರ್ಲಿಮೆಂಟು ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿ ಸರ್ವಾನುಮತದಿಂದ ಚುನಾಯಿತರಾಗಿದ್ದಾರೆ. ಮೆಹ್ತಾಬರವರ ಹೆಸರನ್ನು ಮೌಲಾನಾ ಆಜಾದರು ಸೂಚಿಸಿದರು ಶ್ರೀ ಸತ್ಯನಾರಾಯಣ ಸಿನ್ಹರವರು ಅನುಮೋದಿಸಿದರು.

ಶ್ರೀಮತಿ ಬಲವಂತ ಮೆಹ್ತಾ, ಶ್ರೀ ಬಿ. ಶಿವರಾವ್, ಶ್ರೀ ಅಮರನಾಥ ಅಗರ್‌ವಾಲ ಇವರುಗಳನ್ನು ಕಾರ್ಯದರ್ಶಿಗಳನ್ನಾಗಿಯೂ ಶ್ರೀ ಹೆಚ್. ಸೀತಾರಾಮರೆಡ್ಡಿಯವರನ್ನು ಖಜಾಂಚಿಗಳನ್ನಾಗಿಯೂ ಚುನಾಯಿಸಲಾಯಿತು.

ನಿಷೇಧ ಶಾಸನ

ಭೂಪಾಲ್ ಸಂಸ್ಥಾನದಲ್ಲಿ ಗೋವುಗಳ ಹಾಗೂ ಕರುಗಳ ಹತ್ಯೆಯನ್ನು ನಿಷೇಧಿಸುವ ಶಾಸನವೊಂದು ಭೂಪಾಲ್ ಶಾಸನಸಭೆಯಲ್ಲಿ ಪ್ರಧಾನಿ ಡಾ|| ಶಂಕರದಯಾಳ ಶರ್ಮರಿಂದ ಮಂಡಿಸಲ್ಪಟ್ಟು ಅಂಗೀಕೃತವಾಯಿತು.

ವುಡ್ ಲ್ಯಾಂಡ್ಸ್

23—5—52ನೇ ಶುಕ್ರವಾರದಿಂದ ಅಮೋಘಪ್ರಾರಂಭ

ದಿನವೂ 3 ಆಟಗಳು

ಹಮಾರಿ ಷಾನ್ (ಹಿಂದಿ)

ಪಾತ್ರ—ಭಾರತ್ ಭೂಷಣ್, ಯಾಕೂಬ್, ದುರ್ಗಾಖೋಟೆ ಮುಂತಾದವರು

ರಣಜಿತ್

೨೩–೫–೫೨ರಿಂದ ಅಮೋಘ ೨ನೇ ವಾರ

* ಘುಂಗ್ರು

ಪಾತ್ರ:—ಸುಮಿತ್ರಾ, ಓಂಪ್ರಕಾಶ್, ಕುಲ್‌ದೀಪ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಲಕ್ಷ್ಮಿನಾರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪೪ (೮೦೯) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೬ ೫—೧೯೫೨ನೇ ಸೋಮವಾರ [ಸಂಚಿಕೆ ೨೬೪

ಅನಧಿಕೃತವಾಗಿ ಅರಣ್ಯ ಸಂಪತ್ತು ಸಾಗಾಣಿಕೆ?

ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟ

(ನಮ್ಮ ವಿಶೇಷ ಪ್ರತಿನಿಧಿಯಿಂದ)

ಮೈಸೂರು. ಮೇ ೨೬

ಹುಣಸೂರು, ಪಿರಿಯಾಪಟ್ಟಣ ಮುಂತಾದ ತಾಲ್ಲೂಕುಗಳಲ್ಲಿರುವ ಸರ್ಕಾರಿ ಅರಣ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಮತ್ತಿ, ಹೊನ್ನೆ, ಸಾಗುವಾನಿ ಮತ್ತು ನಾನಾ ವಿಧದ ಬೆಲೆಬಾಳುವ ಮರಗಳು ಅನಧಿಕೃತವಾಗಿ ಕಡಿದು ಅವುಗಳ ಸಾಗಾಣಿಕೆಯಾಗಿರುವುದಾಗಿ ಸರ್ಕಾರಕ್ಕೆ ತಿಳಿದುಬಂದೊಡನೆಯೇ ಈ ವಿಷಯವನ್ನು ಪರಿಶೀಲಿಸಲು ಶ್ರೀ ಕೆ. ಶೇಷಗಿರಿರಾಯರನ್ನು ವಿಶೇಷಾಧಿಕಾರಿಗಳಾಗಿ ನೇಮಿಸಿತು. ಕಳೆದ ೧೫ ದಿನಗಳಿಂದ ಅವರು ಈ ಅರಣ್ಯ ಪ್ರದೇಶದಲ್ಲಿ ಸಂಚಾರ ಮಾಡಿ ಈ ಕಳ್ಳತನವನ್ನು ಪತ್ತೆ ಹಚ್ಚಿರುವರು.

ಅರಣ್ಯ ಶಾಖಾ ಸಚಿವರಾದ ಶ್ರೀ ಟಿ. ಚನ್ನಯ್ಯನವರು ಈ ದಿನ ಬೆಳಗ್ಗೆ ಬೆಂಗಳೂರಿನಿಂದ ಆಗಮಿಸಿ ಪಿರಿಯಾಪಟ್ಟಣದ ಕಚ್ಚುವಳ್ಳಿ ಸ್ಟೇಟ್ ಫಾರೆಸ್ಟಿನ ಮಧ್ಯದ ನಾಗಳ್ಳಿ ಬ್ಲಾಕು ಮುಂತಾದೆಡೆ ಭೇಟಿಯಿತ್ತು, ಕಳ್ಳತನದಿಂದ ಗಿಡಗಳನ್ನು ಕಡಿದಿರುವುದನ್ನು ನೋಡಿದರು

ಈ ಬ್ಲಾಕಿನಲ್ಲಿ ಸುಮಾರು ೬೨೦ ಎಕರೆ ಸ್ಟೇಟ್ ಫಾರೆಸ್ಟಿದೆ ಇದರಲ್ಲಿ ಸುಮಾರು ೧೨೫ ಎಕರೆಯಲ್ಲಿ ಈ ಕಳ್ಳತನವು ನಡೆದಿದೆ. ನಮ್ಮ ವಿಶೇಷ ಪ್ರತಿನಿಧಿಯು ಸಚಿವರೊಡನೆ ಇಲ್ಲಿಗೆ ಭೇಟಿಯಿತ್ತಾಗ ಎಲ್ಲೆಲ್ಲೂ ಕಡಿದ ಮರಗಳ ಬುಡಗಳೇ ಕಾಣಬರುತ್ತಲಿದ್ದವು. ಕೇವಲ ೧೫-೨೦ ದಿನಗಳ ಕೆಳಗೂ ಸಹ ಕಡಿದಿರುವಂತೆ ತೋರಿತು.

ಈ ಸಂದರ್ಭದಲ್ಲಿ ಅರಣ್ಯಶಾಖೆ, ರೆವಿನ್ಯೂಶಾಖೆ ಅಧಿಕಾರಿಗಳ ಕಾನೂನುರೀತ್ಯಾ ನಡೆಯದೆ ಈರೀತಿ ಕಳ್ಳತನಕ್ಕೆ ಅವಕಾಶವಿತ್ತು, ದೇಶಕ್ಕೆ ಅಪಾರ ನಷ್ಟವನ್ನುಂಟುಮಾಡಿರುವಂತೆ ಕಾಣಬರುತಿತ್ತು. ಈಗಾಗಲೇ ಸುಮಾರು ೩ ಸಾವಿರ ಘನಅಡಿ ಮರವನ್ನು ಕೃಷ್ಣರಾಜನಗರ, ಪಿರಿಯಾಪಟ್ಟಣ ಮತ್ತು ಹುಣಸೂರುಗಳಲ್ಲಿ ಅನೇಕಗ್ರಾಮಗಳಲ್ಲಿ ಪತ್ತೆಹಚ್ಚಿ ಸರ್ಕಾರ ವಶಪಡಿಸಿಕೊಂಡಿದೆ ಕಡಿದಿರುವ ಮರಗಳೆಲ್ಲಾ ಪತ್ತೆಹಚ್ಚಿ ಅವುಗಳೆಷ್ಟೆಂದು ತಿಳಿಯಲು ಸಿಬ್ಬಂದಿಯನ್ನು ನೇಮಿಸಲಾಗಿದೆ. ಕಡಿದಿರುವ ಗಿಡಗಳಲ್ಲಿ ಕೆಲವು ಇನ್ನೂ ಅಲ್ಲೇಬಿದ್ದಿವೆ ಕಾಡಿನಲ್ಲೇ ಅವುಗಳನ್ನು ಕತ್ತರಿಸಿ, ಹಲಗೆ ಮುಂತಾದುವನ್ನು ಮಾಡಲು ಹಳ್ಳಗಳನ್ನು ತೋಡಿರುವುದು ಸಹ ಕಂಡುಬರುವುದು. ಈ ಕಳ್ಳತನದಿಂದ ಸರಕಾರಕ್ಕೆ ಸುಮಾರು ೨ ಲಕ್ಷ ರೂಪಾಯಿ ನಷ್ಟವಾಗಿರುವಂತೆ ಕಾಣಬರುತ್ತದೆ ಸಚಿವರ ಈ ಭೇಟಿಕಾಲದಲ್ಲಿ ವಿಶೇಷಾಧಿಕಾರಿ ಶ್ರೀ ಕೆ. ಶೇಷಗಿರಿರಾಯರು, ಜಿಲ್ಲಾ ಅರಣ್ಯಾಧಿಕಾರಿ ಶ್ರೀ ಗುಲಾಬ್‌ಸಿಂಗ್, ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್.ಎಂ.ಚನ್ನಬಸಪ್ಪ, ಶಾಸನಸಭಾಸದಸ್ಯ ಶ್ರೀ ದೇವರಾಜೆ ಅರಸು ಅವರೆಲ್ಲರೂ ಇದ್ದರು

ಸಚಿವರು ತಮ್ಮ ಭೇಟಿಯನ್ನು ಮುಗಿಸಿ ಕೂಡಲೇ ಬೆಂಗಳೂರಿಗೆ ತೆರಳಿದರು.

ರಾಷ್ಟ್ರ ಹಿತ ಗಮನಿಸಬೇಕು

ಬರೋಡಾದಲ್ಲಿ ಶ್ರೀಮತಿ ಸುಚೇತಾ ಕೃಪಲಾನಿಯವರು ಅಂಚೆ ಮತ್ತು ತಂತಿ ನೌಕರರ ಸಂಘದ ಸಮ್ಮೇಳನವನ್ನು ಪ್ರಾರಂಭಿಸುತ್ತಾ, ನೌಕರರು ತಮ್ಮ ಹಕ್ಕುಗಳಿಗೆ ಹೋರಾಡುವಾಗ ರಾಷ್ಟ್ರಹಿತವನ್ನು ಮುಖ್ಯವಾಗಿ ಗಮನಿಸಬೇಕೆಂದು ಹೇಳಿರುವರು

ಪಾಕಿಸ್ತಾನದಿಂದ ಅಕ್ಕಿ

ಪಾಕಿಸ್ತಾನದ ಗೋಧಿ ಅಭಾವವನ್ನು ಹೋಗಲಾಡಿಸಲು ಭಾರತವು ಗೋಧಿಯನ್ನು ಪಾಕೀಸ್ತಾನಕ್ಕೆ ಕೊಡಲು ಸಿದ್ಧವಾಗಿರುವುದಾಗಿಯೂ ಅದರ ಬದಲು ಪಾಕಿಸ್ತಾನವು ತನ್ನ ಅಕ್ಕಿಯನ್ನು ಕಳುಹಿಸಬೇಕೆಂದು ಪಾಕಿಸ್ತಾನಕ್ಕೆ ತಿಳಿಸಲಾಗಿದೆ. ಇದರ ವಿಷಯವಾಗಿ ಚರ್ಚೆ ನಡೆಯುತ್ತಿದೆ ಎಂದು ಶ್ರೀ ಕರಮರ್ಕರ್ ರಾಜ್ಯ ಸಭೆಯಲ್ಲಿ ನಿನ್ನೆ ತಿಳಿಸಿದ್ದಾರೆ.

ಆಹಾರ ಸತ್ಯಾಗ್ರಹ

ಸೋಷಲಿಸ್ಟ್ ಪಕ್ಷದ ಮಹಾಕಾರ್ಯದರ್ಶಿ ಶ್ರೀ ಅಶೋಕಮೆಹ್ತಾರವರು, ಜೂನ್ ಒಂದರಿಂದ ಮುಂಬೈ ನಗರದಲ್ಲಿ ಆಹಾರಧಾನ್ಯಗಳ ಬೆಲೆ ಏರಿಕೆ ವಿರುದ್ಧ ಸತ್ಯಾಗ್ರಹವನ್ನು ಹೂಡುವುದಾಗಿ ತಿಳಿಸಿದ್ದಾರೆ.

ಚಳುವಳಿಯ ಈ ಘಟ್ಟದಲ್ಲಿ ಸಾರ್ವತ್ರಿಕ ಮುಷ್ಕರ ಹೂಡುವುದನ್ನು ಖಂಡಿತ ಅನುಮೋದಿಸುವುದಿಲ್ಲವೆಂದು ಶ್ರೀ ಮೆಹ್ತಾ ಹೇಳಿದ್ದಾರೆ

ಕಬ್ಬಿಣ, ಕಲ್ಲಿದ್ದಲು ಅದುರು

ಉತ್ತರಪ್ರದೇಶದಲ್ಲಿ ಕಬ್ಬಿಣ, ಕಲ್ಲಿದ್ದಲು ಅದುರುಗಳು ಹೇರಳವಾಗಿ ಇರುವುದಾಗಿ ತಿಳಿಯಬಂದಿದೆ. ಸುಣ್ಣಕಲ್ಲು ಸಹ ದೊರೆತಿದೆ

ವಿಶ್ವಶಾಂತಿ ಸ್ಥಾಪನೆ

ವಿಶ್ವಶಾಂತಿಯು ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚಾಗಿ ಸ್ಥಾಪನೆಯಾದಂತೆ ಕಾಣುವುದಾಗಿ ಅಧ್ಯಕ್ಷ ಟ್ರೂಮನ್ನರು ಹೇಳಿರುವುದಾಗಿ ವರದಿಯಾಗಿದೆ.

ಬೆರಕೆ ಹಾಲು ಪತ್ತೆ ಹಚ್ಚುವ ಕ್ರಮ

ಬೆಂಗಳೂರು ಡೈರಿ ಇನ್‌ಸ್ಟಿಟ್ಯೂಟಿನಲ್ಲಿ ಪರಿಶೋಧನೆಗಳನ್ನು ನಡೆಸಿ ಹಾಲಿನೊಡನೆ ಕೊನೆಗೆ ಶೇ|| ೩ರಷ್ಟು ನೀರನ್ನು ಬೆರೆಸಿದರೂ ಸಹ ಕಂಡು ಹಿಡಿಯುವ ಕ್ರಮವನ್ನು ಪತ್ತೆ ಹಚ್ಚಿರುವರು.

ಪಾನನಿರೋಧ ರದ್ದಿಲ್ಲ

ಮದ್ರಾಸಿನಲ್ಲಿ ಪಾನನಿರೋಧವನ್ನು ರದ್ದುಗೊಳಿಸುವುದಿಲ್ಲ. ರದ್ದುಗೊಳಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ಮದ್ರಾಸ್ ಮುಖ್ಯಮಂತ್ರಿ, ಶ್ರೀ ಸಿ ರಾಜಗೋಪಾಲಾಚಾರಿಯವರು ಕೊಯಮತ್ತೂರಿನಲ್ಲಿ ಮಹಾತ್ಮ ಗಾಂಧಿ ಸ್ಮಾರಕ ಪುಸ್ತಕ ಭಂಡಾರ ಪ್ರಾರಂಭೋತ್ಸವವನ್ನು ನಡೆಸುತ್ತಾ ಹೇಳಿರುವರು.

ತೃಪ್ತಿಕರವಾಗಿದೆ

ಕೇಂದ್ರ ಪಾರ್ಲಿಮೆಂಟಿನಲ್ಲಿ ಶ್ರೀ ದೇಶಮುಖ್‌ರವರು ಮಂಡಿಸಿದ ಬಡ್ಜೆಟ್ಟಿನ ಚರ್ಚೆಯು ನಿನ್ನೆ ಆರಂಭವಾಯಿತು. ಬಡ್ಜೆಟ್ಟಿನ ಬಗ್ಗೆ ಸದಸ್ಯರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಪಟ್ಟಿಯು ತೃಪ್ತಿಕರವಾಗಿದೆ ಎಂದು ಚತುರ್ವೇದಿಯವರೂ, ಶ್ರೀ ಭೂಪೇಶ್‌ಗುಪ್ತರು (ಕಮ್ಯೂನಿಸ್ಟ್) ಇದು ಜನರ ಬಡ್ಜೆಟ್ಟಲ್ಲ ಎಂದೂ ಶ್ರೀ ಎನ್. ಜಿ. ರಂಗಾ (ಕೃಷಿಕರ ಲೋಕ ಪಾರ್ಟಿ) ನೀರಾವರಿ ಯೋಜನೆಗೆ ವೆಚ್ಚ ಮಾಡದೆ, ಹೆಚ್ಚಿಗೆ ಧಾನ್ಯ ಬೆಳೆಯುವುದಕ್ಕೆ ಗಮನಕೊಡಬೇಕೆಂದು, ಶ್ರೀ ಶ್ಯಾಮಪ್ರಸಾದ ಮುಖರ್ಜಿಯವರು ಕೇಂದ್ರ ಆಡಳಿತಕ್ಕೆ ಬಹಳವಾಗಿ ಹಣ ವೆಚ್ಚ ಮಾಡಲಾಗುತ್ತಿದೆ ಎಂದು ತಿಳಿಸಿದರು.

ರೈಲು ದರಗಳನ್ನು ಇಳಿಸಿ

ಪಾರ್ಲಿಮೆಂಟಿನಲ್ಲಿ ರೈಲ್ವೇ ಬಡ್ಜೆಟ್ ಮೇಲೆ ಚರ್ಚೆ ನಿನ್ನೆ ಆರಂಭವಾಯಿತು ರೈಲುಕೆಲಸಗಾರರ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕೆಂದೂ, ಮೂರನೇ ತರಗತಿಯ ರೈಲುದರಗಳನ್ನು ಇಳಿಸಬೇಕೆಂದೂ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ

ಕೃತಕ ಮಳೆ

ಕಲ್ಕತ್ತಾ ಬಳಿ ಕೃತಕ ಮಳೆ ಬರಿಸಲು ಪ್ರಯೋಗಗಳು ನಡೆಯುತ್ತಲಿವೆ. ಈ ಪ್ರಯೋಗಗಳು ಸೆಪ್ಟೆಂಬರ್‌ವರೆಗೆ ನಡೆಯುತ್ತವೆ. ಮೋಡಗಳ ಮೇಲೆ ಕಾರ್ಬನ್-ಡೈ-ಆಕ್ಸೈಡ್ ಮತ್ತು ಸಿಲ್ವರ್ ಅಯೋಡೈಡ್‌ಗಳನ್ನು ಎರಚಲಾಗುತ್ತಲಿದೆ.

ಕೃಷ್ಣಾನದಿಯಲ್ಲಿ ಪ್ರವಾಹ

ಕೃಷ್ಣಾನದಿಯಲ್ಲಿ ಪ್ರವಾಹ ಜಾಸ್ತಿಯಾಗಿ ೧೫ ಅಡಿ ನೀರು ಬಂದಿದೆ. ಹಲವಾರು ಹಳ್ಳಿಗಳು ನೀರಿನಲ್ಲಿ ಮುಳುಗಿವೆ ಹೈದರಾಬಾದಿನಲ್ಲಿ ವಿಪರೀತ ಮಳೆಯಾದುದೇ ಇದಕ್ಕೆ ಕಾರಣ ತುಂಗಭದ್ರಾನದಿಯಲ್ಲೂ ಪ್ರವಾಹ ಜಾಸ್ತಿಯಾಗಿ ಬರುತ್ತಿದೆ.

೧೧೬೧ ಡೆಟಿನ್ಯೂಗಳ ಬಿಡುಗಡೆ

ಇದೇಮಾಹೆ ೧ ರಿಂದ ೧೦ ನೇತಾರೀಖುವರೆಗೆ ೧೧೬೧ ಡೆಟಿನ್ಯೂಗಳನ್ನು ಬಿಡುಗಡೆಮಾಡಲಾಗಿದೆ. ಈಗ ೯೩೧ ಜನ ಡೆಟಿನ್ಯೂಗಳು ಬಂದಿಗಳಾಗಿದ್ದಾರೆ. ಇದರಲ್ಲಿ ೫೩೭ ಮಂದಿ ರಾಜಕೀಯ ಬಂದಿಗಳು ಎಂದು ಪ್ರಧಾನಮಂತ್ರಿಯವರ ಪಾರ್ಲಿಮೆಂಟು ಕಾರ್ಯದರ್ಶಿಯವರು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಭೂಕಂಪ

ಅಸ್ಸಾಮಿನ ದಿಬ್ರೂಘರ್‌ನಲ್ಲಿ ನಿನ್ನೆ ಬೆಳಗ್ಗೆ ಸುಮಾರು ೯೦ ಸೆಕೆಂಡುಗಳಕಾಲ ಭೂಕಂಪವಾಯಿತು.

† ಕೊಚ್ಚಿನ್ ವಿಮಾನ ಕೇಂದ್ರವನ್ನು ಕೇಂದ್ರ ಸರ್ಕಾರವೇ ವಹಿಸಿಕೊಂಡು, ಅಲ್ಲಿಯ ನೌಕಾ ಶಿಕ್ಷಣ ಕೇಂದ್ರವನ್ನು ಉತ್ತಮಪಡಿಸಲು ಕೇಂದ್ರವು ನಿರ್ಧರಿಸಿದೆ.

ಮಯೂರಾಕ್ಷಿ ಅಣೆಕಟ್ಟೆಗೆ

ಕೆನಡಾದಿಂದ ಬಂದ ಗೋಧಿಯನ್ನು ಮಾರಿ ಅದರಿಂದ ಬಂದ ಹಣವನ್ನು ಮಯೂರಾಕ್ಷಿ ಅಣೆಕಟ್ಟನ್ನು ಕಟ್ಟಲು ಉಪಯೋಗಿಸಲಾಗುವುದು. ಅಮೆರಿಕಾವು ಭಾರತಕ್ಕೆ ಸಾಲದರೂಪದಲ್ಲಿ ಕೊಟ್ಟಿರುವ ಗೋಧಿಯಿಂದ ಬಂದ ಹಣವನ್ನು ಕೊಲಂಬೋ ಯೋಜನೆಯಂತೆ ಪ್ರಾಂತ್ಯಗಳ ಅಭಿವೃದ್ಧಿ ಯೋಜನೆಗೆ ಉಪಯೋಗಿಸಲಾಗುವುದು.

ಸ್ವಾಸ್ತ್ಯಗಳನ್ನು ಪಡೆಯಬೇಕು

ಭಾರತದಲ್ಲಿರುವ ವಿದೇಶಿ ಸ್ವಾಸ್ತ್ಯಗಳನ್ನು ಯಾವ ಷರತ್ತೂ ಇಲ್ಲದೆ ಕೂಡಲೇ ವಶಪಡಿಸಿಕೊಳ್ಳಬೇಕೆಂದು ಪಾರ್ಲಿಮೆಂಟಿನ ಕಮ್ಯೂನಿಸ್ಟ್ ಸದಸ್ಯರು ಹೇಳಿದ್ದಾರೆ

† ಪೂರಿ, ಜಗನ್ನಾಥ ದೇವಸ್ಥಾನಗಳನ್ನು ಕಾಪಾಡುವ ಬಗ್ಗೆ ನಿರ್ಣಯವೊಂದನ್ನು ಒರಿಸ್ಸಾ ಸರ್ಕಾರವು ನಿನ್ನೆ ಅಸೆಂಬ್ಲಿಯಲ್ಲಿ ಮಂಡಿಸಿತು.

ಅಂಬೇಡ್ಕರರಿಗೆ ವಿಶ್ವವಿದ್ಯಾನಿಲಯದ ಪ್ರಶಸ್ತಿ

ಜೂನ್ ೫ ರಂದು ನಡೆಯುವ ಕೊಲಂಬಿಯ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಭಾರತದ ಮಾಜಿ ನ್ಯಾಯಾಂಗ ಸಚಿವ ಡಾ|| ಬಿ ಆರ್ ಅಂಬೇಡ್ಕರರಿಗೆ ಡಾ|| ಆಫ್ ಲಾಸ್ ಪ್ರಶಸ್ತಿಯನ್ನು ನೀಡಲಾಗುವುದು.

ಭಾರತದ ರಾಜ್ಯಾಂಗ ರಚನೆಯ ಕಾರ್ಯದಲ್ಲಿ ಅವರು ಸಲ್ಲಿಸಿದ ಕಾರ್ಯಕ್ಕಾಗಿ ಅವರಿಗೆ ಈ ಪ್ರಶಸ್ತಿಯನ್ನು ಕೊಡಲಾಗುವುದು. ಅವರು ಕೊಲಂಬಿಯ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿದ್ದರಲ್ಲದೆ, ಅರ್ಥಶಾಸ್ತ್ರ ಹಾಗೂ ಹಣಕಾಸಿನ ವಿಷಯದಲ್ಲಿ ವಿಶೇಷ ಪಾಂಡಿತ್ಯ ಪಡೆಯಲೋಸುಗ ಅವರನ್ನು ಬರೋಡದ ದಿವಂಗತ ಸಯಾಜಿರಾವ್ ಗಾಯಕವಾಡರು ಅಲ್ಲಿಗೆ ಕಳುಹಿಸಿದ್ದರು.

ಅಂಬೇಡ್ಕರರು ಈ ಮಾಸಾಂತ್ಯದಲ್ಲಿ ನ್ಯೂಯಾರ್ಕಿಗೆ ತೆರಳುವರು.

ಮೈತ್ರಿಗೆ ಯತ್ನ

ಪಾರ್ಲಿಮೆಂಟಿನಲ್ಲಿ ಸಹಕರಿಸಲು ಸೋಷಲಿಸ್ಟ್ ಮತ್ತು ಕೆ. ಎಂ. ಪಿ ಪಕ್ಷಗಳು ಹೆಚ್ಚುಕಡಿಮೆ ಒಪ್ಪಿವೆ. ಮತ್ತು ಪಾರ್ಲಿಮೆಂಟಿನ ಹೊರಗೂ ಕಲೆತು ಕೆಲಸ ಮಾಡುವ ಬಗ್ಗೆ ಉಭಯ ಪಕ್ಷಗಳ ನಾಯಕರು ಸಧ್ಯದಲ್ಲಿಯೇ ಮಾತುಕತೆ ನಡೆಸುವರು ಎಂದು ಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಶೋಕಮೆಹ್ತಾ ಹೇಳಿದ್ದಾರೆ.

ಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶ ನಾರಾಯಣರು ಕೆ. ಎಂ. ಪಿ ನಾಯಕ ಆಚಾರ್ಯ ಜೆ ಬಿ. ಕೃಪಲಾನಿಯವರನ್ನು ಮೇ ೨೯ ರಂದು ನವದೆಹಲಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸುವರೆಂದೂ ಅವರು ಹೇಳಿದರು.

ಇತರ ಪಕ್ಷಗಳ ಪ್ರತಿನಿಧಿಗಳನ್ನೂ ಅವರು ಭೇಟಿಮಾಡುವರಾಗಿ ಶ್ರೀ ಅಶೋಕ ಮೆಹ್ತಾ ಸೂಚಿಸಿದರಾದರೂ ಯಾವ ಪಕ್ಷಗಳ ಪ್ರತಿನಿಧಿಗಳೆಂಬುವುದನ್ನು ತಿಳಿಸಲು ನಿರಾಕರಿಸಿದರು.

ವಿದೇಶ ರಕ್ಷಣಾ ಸಹಾಯ

ವಿದೇಶ ರಕ್ಷಣಾ ಸಹಾಯಕ್ಕಾಗಿ ಅಧ್ಯಕ್ಷ ಟ್ರೂಮನ್ನರು ೬೯೦ ಕೋಟಿ ಡಾಲರುಗಳ ಮಂಜೂರಾತಿ ಕೇಳಲು ಪ್ರತಿನಿಧಿ ಸಭೆಯು ೬೧೬ ಕೋಟಿ ಡಾಲರುಗಳನ್ನು ಮಂಜೂರ್ಮಾಡಿದೆ.

ನೈಜಾಮರು ಹೈದ್ರಾಬಾದಿಗೆ

ಕಳೆದ ೩-೪ ವಾರಗಳಿಂದ ಬೊಂಬಾಯಿನಲ್ಲಿ ವಿಶ್ರಾಂತಿ ಪಡೆಯುತ್ತಲಿದ್ದ ಹೈದರಾಬಾದ್ ನೈಜಾಮರು ಹೈದರಾಬಾದಿಗೆ ಹಿಂತಿರುಗಿರುವರು.

ಭಾರತಕ್ಕೆ ಆರ್ಥಿಕ ಸಹಾಯ

ವ್ಯವಸಾಯ, ಕೈಗಾರಿಕಾ ಯಂತ್ರ ಮರ ಮುಟ್ಟುಗಳಿಗಾಗಿ ಒಂದೂವರೆ ಕೋಟಿ ಡಾಲರುಗಳು, ಕೈಗಾರಿಕಾಭಿವೃದ್ಧಿಗಾಗಿ ಆಹಾರರೂಪದಲ್ಲಿ ಎರಡೂವರೆ ಕೋಟಿ ಡಾಲರುಗಳ ಆರ್ಥಿಕ ಸಹಾಯವನ್ನು ಭಾರತಕ್ಕೆ ಕೊಡಸಲೋಸುಗ ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಮಿ|| ಚೆಸ್ಟರ್ ಬೌಲ್ಸ್‌ರವರು ಅಮೆರಿಕಾಕ್ಕೆ ಪ್ರಯಾಣ ಬೆಳಸಿದರು.

ಭಾರತದಲ್ಲಿ ಸಧ್ಯದಲ್ಲೇ ಇನ್ನೂ ೫೫ ಹೊಸ ಯೋಜನೆಗಳು ಪ್ರಾರಂಭವಾಗಲಿವೆ. ಕೃತಕ ಗೊಬ್ಬರ ತಯಾರಿಕೆಯು ಯಶಸ್ವಿಯಾಗಿ ನಡೆಯುತ್ತಲಿದೆ ಎಂದವರು ಹೇಳಿರುವರು.

ಭಾರತವೇ ಗೋಸಂಪತ್ತಿನಲ್ಲಿ ಮುಂದು

ಭಾರತವು ಪ್ರಪಂಚದ ಇತರ ರಾಷ್ಟ್ರಗಳಿಗಿಂತ ಜಾಸ್ತಿ ಗೋಸಂಪತ್ತನ್ನು ಹೊಂದಿದೆ. ಭಾರತದಲ್ಲೀಗ 260,000,000 ಗೋವುಗಳಿವೆ. ಈಗ ಪ್ರಪಂಚದಲ್ಲಿ (ರಷ್ಯಾವನ್ನು ಬಿಟ್ಟು) ೧೭೬ ಕೋಟಿ ಗೋವುಗಳಿವೆ.

ವರ್ಣಚಿತ್ರ ಪ್ರದರ್ಶನ

ಭಾರತ ವರ್ಣಚಿತ್ರಗಳ ಪ್ರದರ್ಶನವನ್ನು ಬರ್ಮಾ ಕಲಾ ಸಂಘದವರ ಆಶ್ರಯದಲ್ಲಿ ರಂಗೂನಿನಲ್ಲಿ ಪ್ರಾರಂಭವಾಗಿದೆ. ಈ ರೀತಿ ಭಾರತ ಚಿತ್ರಗಳ ಪ್ರದರ್ಶನವು ಬರ್ಮಾದಲ್ಲಿ ನಡೆಯುವುದು ಇದೇ ಪ್ರಥಮವೆಂದು ಹೇಳಲಾಗಿದೆ.

ಪೌರಸಭೆಯವರು ಗಮನಿಸುವರೇ ?

ತಾ|| ೨೫ನೇ ಭಾನುವಾರ ಸಂಜೆ ೪ ಗಂಟೆಯಲ್ಲಿ ಸೂರಿ ರಸ್ತೆಯಲ್ಲಿರುವ ಮೋರ್ಚ್ ವೈದ್ಯಶಾಲೆಯ ಮುಂಭಾಗದಲ್ಲಿರುವ ಕಾಲುವೆ (ಸ್ಟಾರಂವಾಟರ್ ಡ್ರೈನ್) ಒಳಕ್ಕೆ ಸುಮಾರು ೧೫ ಅಡಿ ಎತ್ತರದಿಂದ ೬೦ ವರ್ಷ ವಯಸ್ಸಿನ ಶ್ರೀ ಜಿ ಕೃಷ್ಣರಾವ್ ಎಂಬ ಮುದುಕರು ಬಿದ್ದು ತುಂಬಾ ಗಾಯವಾಗಿ ಹಲ್ಲು ಮುರಿದುಹೋಗಿದೆ. ಮನೆಯ ಮುಂಭಾಗದಲ್ಲಿರುವ ಈ ಭಾರಿ ಕಾಲುವೆಯ ಮೇಲೆ ಕಲ್ಲುಹಾಸಿ ಮುಚ್ಚಿಸಲು ಪುರಸಭೆಯವರನ್ನು ೨ ವರ್ಷಗಳಿಂದಲೂ ಕೇಳಿಕೊಂಡಾಗ್ಯೂ ಏನೂ ಪ್ರಯೋಜನವಾಗಿಲ್ಲ. ಇದೇ ರೀತಿ ಪದೇಪದೇ ಜನ ಹಾಗೂ ಜಾನುವಾರುಗಳು ಅನಾಹುತಕ್ಕೀಡಾಗುತ್ತಿದ್ದಾರೆ. ಮಾದರಿ ಪುರಸಭೆಯವರು ಈ ಬಗ್ಗೆ ಕೂಡಲೇ ಗಮನ ಕೊಡುವರೇ ? ಪ್ರೇಕ್ಷಕ.

ನ್ಯೂ ಅಪೇರ ಟಾಕೀಸ್

23—5—52 ರಿಂದ ಅಮೋಘವಾದ 3ನೇ ವಾರ

ಪ್ರತಿದಿನ 3 ಆಟಗಳು

ಜೂಪಿಟರ್‌ರವರ—

* ರಾಣಿ *

(ತಮಿಳು)

ಪಾತ್ರ:— ‡ ಭಾನುಮತಿ ‡ ‡ ಬಾಲಚಂದರ್ ‡ ‡ ವಹಾಬ್ ಕಾಶ್ಮೀರಿ ‡

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.

ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ಕಿಕೆಗಳು ವಹಿಸಲ್ಪಡುವುವು.

*

ಹೆಚ್ಚಿನ ವಿವರಗಳಿಗೆ ಬರೆಯಿರಿ—

ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

ಪೇಟೆ ಧಾರಣೆ

ಮೈಸೂರು ತಾ|| 27-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		8-0	17-6
ಹೊಂಗೆಬೀಜ	,,	11-10	——
ಹುರುಳಿ	,,	35 2	35-4
ಹೆಸರು	,,	56 8	57-4
ಸೀಗೆಕಾಯಿ	,,	3-4	3-6
ಮೆ. ಕಾಯಿ ಮಣಕ್ಕೆ		10-0	15-0
ಹುಣಸೇಹಣ್ಣು	,,	3-10	4-2
ತೆಂಗಿನಕಾಯಿ	1100ಕ್ಕೆ	100	117

ಚಿನ್ನ ಬೆಳ್ಳಿ ದರಗಳು

27-5-52	ರೂ.
ಸವರನ್	64-2
,,	65-0
ಚಿನ್ನ ತೊಲ	91-0
,, ಮೂಸ	89-12
ಬೆಳ್ಳಿ 100 ತೊಲ	161-8
,, ತೊಲ	1-11

ವುಡ್ ಲ್ಯಾಂಡ್ಸ್

23—5—52ನೇ ಶುಕ್ರವಾರದಿಂದ ಅಮೋಘಪ್ರಾರಂಭ

ದಿನವು 3 ಆಟಗಳು

ಹಮಾರಿಷಾನ್

(ಹಿಂದಿ)

ಪಾತ್ರ—ಭಾರತಭೂಷಣ್, ಯಾಕೂಬ್, ದುರ್ಗಾಖೋಟೆ ಮುಂತಾದವರು

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂ) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೮ ೫—೧೯೫೨ನೇ ಬುಧವಾರ [ಸಂಚಿಕೆ ೨೬೫

ಹೆಚ್ಚುವರಿ ಆಹಾರ ಬೆಳೆಯುವೆಡೆ ಆಹಾರ ಕಂಟ್ರೋಲ್ ರದ್ದು?

ಪ್ರಾಂತ್ಯಗಳಿಗೆ ಆಹಾರ ಸಬ್ಸಿಡಿ ಕೊಡುವುದಿಲ್ಲ

ನಿಷ್ಠೆಯಿಂದ ಕರ್ತವ್ಯ ನಿರ್ವಹಿಸಿ

ಭಾನುವಾರ ಬೆಳಿಗ್ಗೆ ಒಳಾಡಳಿತ ಸಚಿವರಾದ ಶ್ರೀ ಹೆಚ್. ಸಿದ್ದವೀರಪ್ಪನವರು ಗೆಜೆಟೆಡ್ ಪೋಲೀಸ್ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡುತ್ತಾ, ಪೋಲೀಸ್ ಅಧಿಕಾರಿಗಳು ನಿಷ್ಠೆ ಮತ್ತು ಶ್ರದ್ಧಾಭಕ್ತಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕೆಂದೂ, ಶಾಂತಿ ಮತ್ತು ಭದ್ರತೆಯ ರಕ್ಷಣೆಯ ಜವಾಬ್ದಾರಿಯಲ್ಲಿ ಪೋಲೀಸ್ ಅಧಿಕಾರಿಗಳು ಪಾಲುದಾರರು ಎಂದು ತಿಳಿಸಿದರು. ಸಭೆಯಲ್ಲಿ ಐ. ಜಿ. ಪಿ. ಶ್ರೀ ಬಾಬುರೆಡ್ಡಿ, ಶ್ರೇಷ್ಠ ಕಾರ್ಯದರ್ಶಿ ಶ್ರೀ ಪುಟ್ಟರಂಗಸ್ವಾಮಿ, ಡಿ. ಐ. ಜಿ. ಪಿ. ಮತ್ತು ಜಿಲ್ಲಾ ಸೂಪರಿಂಟೆಂಡೆಂಟರೂ ಎ. ಎಸ್. ಪಿ. ಗಳೂ ಹಾಜರಿದ್ದರು.

ಕಾಂಗ್ರೆಸ್ ಅಧ್ಯಕ್ಷ ಚುನಾವಣೆ

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಚುನಾವಣೆಯು ೩೧ನೇ ತಾ|| ನಡೆಯುವುದಷ್ಟೆ. ಅದಕ್ಕಾಗಿ ಉಮೇದುವಾರಿಕೆ ಸಲ್ಲಿಸಲು ನಿನ್ನೆ ಸಂಜೆ ೫ ಗಂಟೆ ಕಡೆಯಕಾಲವಾಗಿತ್ತು. ಅಧ್ಯಕ್ಷತೆಗೆ ೫ ಜನ ಸ್ಪರ್ಧಿಸಿದ್ದಾರೆ— ಶ್ರೀಗಳಾದ ಟಿ. ಸುಬ್ರಹ್ಮಣ್ಯಂ, ಹೆಚ್. ಸಿ. ದಾಸಪ್ಪ, ಹೆಚ್. ಎಸ್. ರುದ್ರಪ್ಪ, ಹೆಚ್. ಕೆ. ವೀರಣ್ಣಗೌಡ, ಎಂ. ಎಲ್. ಸಂಜೀವರಾಜೇ ಅರಸ್. ಕಾರ್ಯಕಾರೀ ಸಮಿತಿಯ ೧೧ ಸ್ಥಾನಗಳಿಗೆ ೨೪ ಮಂದಿ ಸ್ಪರ್ಧಿಸಿದ್ದಾರೆ.

ಗೊಬ್ಬರ ತಯಾರಿಕೆ

ಇದೇ ಮಾಹೆ ೨೧ ರವರೆವಿಗೆ ಭಾರತದ ಸಿಂಧ್ರಿ ಕಾರ್ಖಾನೆಯಲ್ಲಿ ೫೨೦೦೦ ಟನ್ ಅಮೋನಿಯಂ ಸಲ್ಫೇಟನ್ನು ತಯಾರಿಸಲಾಗಿದೆ ಎಂದು ಉತ್ಪಾದನಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಕಳ್ಳತನದಿಂದ ಸಾಗಾಣಿಕೆ ಆಗಿಲ್ಲ

ಮೈಸೂರು ಮೇ ೨೭

ನಿನ್ನೆಯದಿನ ಸಚಿವ ಶ್ರೀ ಟಿ. ಚೆನ್ನಯ್ಯನವರು ಭೇಟಿಯಿತ್ತ, ಪಿರಿಯಾಪಟ್ಟಣದ ಕಚ್ಚುವಳ್ಳಿ ಸ್ಟೇಟ್ ಫಾರೆಸ್ಟಿನ ಪ್ರದೇಶಕ್ಕೆ ಪಿರಿಯಾಪಟ್ಟಣ ತಾಲ್ಲೂಕಿನಿಂದ ಶಾಸನಸಭೆಗೆ ಚುನಾಯಿತರಾಗಿರುವ ಶ್ರೀ ಎಸ್. ಎಂ. ಮರಿಯಪ್ಪನವರು ಅದಿನ ಕೆಲವು ಪತ್ರಿಕೋದ್ಯೋಗಿಗಳನ್ನು ಕರೆದೊಯ್ದರು.

ಪುನಃ ಈ ಪ್ರದೇಶಕ್ಕೆ ಹೋಗಿ ವಿದ್ಯಮಾನಗಳನ್ನು ಗ್ರಾಮಸ್ಥರಿಂದ ತಿಳಿದುಕೊಂಡುಬರುವಂತೆ ಮಾಜಿ ಗೃಹಸಚಿವ ಶ್ರೀ ಟಿ. ಮರಿಯಪ್ಪನವರು ಮತ್ತು ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚೆನ್ನಯ್ಯನವರು ಪತ್ರಿಕೋದ್ಯೋಗಿಗಳನ್ನು ಕೋರಿದ್ದರು.

ಶ್ರೀ ಎಸ್. ಎಂ. ಮರಿಯಪ್ಪನವರು ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತಾ, ಈ ಪ್ರಾಂತ್ಯದಲ್ಲಿ ಅನೇಕವಿಧದ ಉತ್ತಮ ಜಾತಿಯ ಮರಗಳನ್ನು ಕಡಿದುಕೊಳ್ಳಲಾಗಿದೆಯೆಂಬ ದೂರು ಇತ್ತೀಚೆಗೆ ಹೊರಟಿತು. ತಾವು ಈ ಕಾರ್ಯದಲ್ಲಿ ನಿರತರಾದವರೆಂದು ನಮ್ಮ ಮೇಲೆ ಇಲ್ಲದ ಆರೋಪಣೆಗಳನ್ನು ಮಾಡಿ ಸರ್ಕಾರವು ಅನೇಕವಿಧದ ಕಾರ್ಯಕ್ರಮವನ್ನು ಪ್ರಾರಂಭಿಸಿರುವರು.

ನಿನ್ನೆಯದಿನ ಸಚಿವರು ಭೇಟಿಯಿತ್ತ ಪ್ರದೇಶದ ಹೆಚ್ಚುಭಾಗವೆಲ್ಲವೂ ತಮ್ಮ ಸ್ವಂತ ಜಮೀನು. ಈ ಜಮೀನಿನಲ್ಲಿ ರಹದಾರಿ ಪಡೆದು ತಮಗೆ ಸೇರಿದ ಮರಗಳನ್ನು ಕಡಿದು ಅವುಗಳ ಸಾಗಾಣಿಕೆಯಾಗಿದೆಯೇ ವಿನಃ ಅನಧಿಕೃತವಾಗಲ್ಲ, ಸರ್ಕಾರಕ್ಕೆ ಸೇರಿದ ಪ್ರದೇಶಗಳಲ್ಲಿ ಇಲಾಖೆಯವರು ಇತರ ಖಾಸಗಿಯವರು ಕಡಿದಿರುವರು ಅದು ತಮ್ಮ ಕಾರಣವಲ್ಲವೆಂದು ಹೇಳಿದರು.

ಈಗತಾನೆ ನಡೆದ ಮಹಾಚುನಾವಣೆಯಲ್ಲಿ ತಾವು ಕಾಂಗ್ರೆಸ್ ಪಕ್ಷದ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರ ವಿರೋಧವಾಗಿ ಸ್ಪರ್ಧಿಸಿ ಜಯಹೊಂದಿದುದರಿಂದ ತಮ್ಮ ಮೇಲೆ ಈ ಇಲ್ಲದ ಸಲ್ಲದ ಆರೋಪಣೆ ಮಾಡಿ ತಮಗೆ ಅವಮಾನವನ್ನುಂಟುಮಾಡುವುದಲ್ಲದೆ, ತಮ್ಮ ಶಾಸನಸಭಾ ಸದಸ್ಯತ್ವಕ್ಕೆ ಧಕ್ಕೆ ತರುವುದಕ್ಕೆ ನಾನಾ ವ್ಯಕ್ತಿಗಳು ಸರ್ಕಾರದ ಸಹಕಾರದೊಡನೆ ಈ ರೀತಿ ನಡೆಯುತ್ತಿದೆಯೆಂದೂ ತಮ್ಮ ಮೇಲಿನ ಆರೋಪಣೆಗಳಲ್ಲಿ ಸ್ವಲ್ಪವೂ ಸತ್ಯಾಂಶವಿಲ್ಲವೆಂದು ಹೇಳಿದರು.

ತಾವು ಈ ೩೦೦ ಎಕರೆ ಜಮೀನನ್ನು ಕೊಂಡುಕೊಂಡು ಅನೇಕವರ್ಷಗಳಾಯಿತೆಂದೂ ತಾವು ಹೆಚ್ಚಿಗೆ ಆಹಾರಬೆಳೆ ಯೋಜನೆಪ್ರಕಾರ ಹಣವ ಜಮೀನನ್ನೂ ಪಡೆದಿದ್ದೇವೆಂದೂ ಹೇಳಿದರು.

ಈ ಸಂದರ್ಭದಲ್ಲಿ ಅರಣ್ಯ ಇಲಾಖೆಯವರು ಈ ಸುತ್ತಮುತ್ತಲಿನ ನಾನಾ ಗ್ರಾಮಗಳಲ್ಲಿ ಶೋಧನೆ ನಡೆಸುತ ನೆಪದಿಂದ ಜನರಿಗೆ ವಿಶೇಷ ತೊಂದರೆಮಾಡುತ್ತಿರುವರೆಂದೂ ಹತ್ತಾರುವರ್ಷಗಳಿಂದ ಅವರಲ್ಲಿದ್ದ ಮರಮುಟ್ಟುಗಳನ್ನೆಲ್ಲಾ ಸರ್ಕಾರ ವಶಪಡಿಸಿಕೊಂಡಿರುವರೆಂದೂ ಹೇಳಿದರು. ಕೆಲವು ಗ್ರಾಮಸ್ಥರು ಇದನ್ನು ಸಮರ್ಥಿಸಿದರು.

ರಕ್ಷಣಾಖರ್ಚನ್ನು ಕಡಿಮೆಮಾಡಿ

ಪಾರ್ಲಿಮೆಂಟಿನಲ್ಲಿ ಡಾ|| ಅಂಬೇಡ್ಕರ್‌ರವರು ಸಾಮಾನ್ಯ ಬಡ್ಜೆಟ್ಟಿನ ಮೇಲೆ ಮಾತನಾಡುತ್ತಾ, ರಕ್ಷಣಾಖರ್ಚು ವಿಪರೀತವೆಂದೂ ಅದನ್ನು ಕಡಿಮೆಮಾಡಿ ಆ ಹಣವನ್ನು ನೀರಾವರಿ ಯೋಜನೆಗೆ ಖರ್ಚುಮಾಡಬೇಕೆಂದು ತಿಳಿಸಿದರು.

ಇದನ್ನು ವಿರೋಧಿಸುತ್ತಾ, ಕಾಂಗ್ರೆಸ್ ಸದಸ್ಯ ರಾಮಮೂರ್ತಿಯವರು ರಕ್ಷಣಾಬಜೆಟ್ ಪಟ್ಟಿಯು ಸರಿಯಾಗಿದೆಯೆಂದು ಖರ್ಚನ್ನು ಇಳಿಸಬಾರದೆಂದು ತಿಳಿಸಿದರು.

ಕೇಂದ್ರದ ಆಹಾರಸಚಿವ ರಫಿ ಅಹಮದ್ ಕಿದ್ವಾಯಿಯವರು ನಿನ್ನೆಯ ದಿನ ಬೊಂಬಾಯಿನಲ್ಲಿ ಅಹಾರಸಮಸ್ಯೆ ಯನ್ನುವಾಗಿ ಮಾತನಾಡುತ್ತಾ, ಆಹಾರ ಹೆಚ್ಚುವರಿಯಿರುವ ಪ್ರದೇಶಗಳಲ್ಲೆಲ್ಲಾ ಆಹಾರಕಂಟ್ರೋಲನ್ನು ರದ್ದುಮಾಡುವುದನ್ನು ತಾವು ಸಮರ್ಥಿಸುವುದಾಗಿ ತಿಳಿಸಿದ್ದಾರೆ. ಆಹಾರ ಸಬ್ಸಿಡಿಯನ್ನು ಪ್ರಾಂತ್ಯಗಳಿಗೆ ಕೊಡುವ ವಿಷಯವು ಪುನರ್ವಿಮರ್ಶೆಗೆ ಬರುವುದಿಲ್ಲ. ಆದರೆ ಹೇಗಾದರೂಮಾಡಿ ಆಹಾರ ವಸ್ತುಗಳ ಬೆಲೆಯನ್ನು ಕಡಿಮೆಮಾಡಬೇಕೆಂದು ಸರ್ಕಾರ ಮಾರ್ಗಗಳನ್ನು ಹುಡುಕುತ್ತಲಿದೆ. ಆಹಾರ ಹೊಸನೀತಿಯು ಇನ್ನು ಒಂದುತಿಂಗಳೊಳಗೆ ಪ್ರಕಟಿಸಲಾಗುವುದೆಂದೂ ಹೇಳಿರುವರು.

ಪ್ರತಿನಿಧಿಗಳೊಡನೆ ಚರ್ಚೆ

ಕಾಶ್ಮೀರದ ಪ್ರತಿನಿಧಿ ಮಿ|| ಗ್ರಹಾಂರವರು ಕಾಶ್ಮೀರದ ಸಮಸ್ಯೆಯನ್ನು ಬಿಡಿಸಲು ಹೊಸ ಯೋಜನೆಯನ್ನು ತಯಾರಿಸಿದ್ದಾರೆ. ಇದನ್ನು ಭಾರತ ಮತ್ತು ಪಾಕ್ ಪ್ರತಿನಿಧಿಗಳೊಡನೆ ೨೯ ರಂದು ಚರ್ಚಿಸಲಿರುವರು.

ಮದರಾಸಿಗೆ ಕಿದ್ವಾಯಿ

ಕೇಂದ್ರ ಆಹಾರ ಸಚಿವ ಶ್ರೀ ರಫಿ ಅಹಮದ್ ಕಿದ್ವಾಯಿಯವರು ಇಂದು ಮದರಾಸಿಗೆ ಬರಲಿರುವರು. ಅವರು ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರನ್ನು ಮತ್ತು ಆಹಾರಸಚಿವರನ್ನೂ ಭೇಟಿ ಮಾಡಲಿರುವರು.

೧೧ ಸ್ಥಾನ ಗಳಿಸಿದರು

ಸಿಂಹಳದ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಧಾನಿ ಸೇನಾನಾಯಕರವರ ಸಂಯುಕ್ತ ರಾಷ್ಟ್ರೀಯ ಪಕ್ಷವು ಪ್ರಜಾ ಪ್ರತಿನಿಧಿ ಸಭೆಯಲ್ಲಿ ೨೩ ಸ್ಥಾನಗಳಲ್ಲಿ ೧೧ ಸ್ಥಾನಗಳಿಸಿದೆ.

ಇಂಡಿಯಾದೇಶದಲ್ಲಿ ಜರುಗಿದ "ಫಿಲಂಫೆಸ್ಟಿವಲ್" ಪ್ರದರ್ಶನದಲ್ಲಿ ಪ್ರಪಂಚದನಾನಾ ಮೂಲೆಗಳಿಂದ ಆಗಮಿಸಿದ್ದ ನಿಪುಣರ ಸಮಕ್ಷಮದಲ್ಲಿ ಪ್ರದರ್ಶಿಸಲು ಚುನಾಯಿಸಲ್ಪಟ್ಟ ಏಕಮಾತ್ರ ಪ್ರಥಮ ಮರಾಠಿಭಾಷಾ ಚಿತ್ರ.

ರಾಜ್‌ಕಮಲ್ ಕಲಾಮಂದಿರ್ ರವರ ಸಂಗೀತಮಯ ಕಲಾಕೃತಿ

* ಅಮರ್ ಭೂಪಾಲಿ *

ತಾರಾಗಣ:— ಸಂಧ್ಯಾ, (ಲೋಕಮಾನ್ಯ ನವತಾರೆ ಪ್ರಕಾಶ) ಪಂಡಿತರಾವ್, ನಗರ್‌ಕರ್ ಮತ್ತು ಲಲಿತಾಪವಾರ್.

ತಯಾರಿಕೆ ಮತ್ತು ದಿಗ್ದರ್ಶನ ಶ್ರೀ ವಿ. ಶಾಂತಾರಾಂ

30-5-52ನೇ ಶುಕ್ರವಾರದಿಂದ ಪ್ರಾರಂಭ

ಮೈಸೂರು ಪ್ರಭಾ ಚಿತ್ರಮಂದಿರದಲ್ಲಿ

ದಿನವು ಮೂರು ಆಟಗಳು ಫೋನ್ 569

MORNING SHOWS FROM 30-5-52 FOR 3 DAYS

J. Arthur Rank Presents

PERFECT WOMAN

Starring:-Patricia Roe, Stanley Holloway.

ಬಹಿರಂಗ ಸಭೆ ನಿಷೇಧ

ಮುಸ್ಲಿಂ ವರನಿಗೂ ಹಿಂದೂ ವಧುವಿಗೂ ನಡೆಯಬೇಕಾಗಿದ್ದ ವಿವಾಹ ಪ್ರಯತ್ನವನ್ನು ಪ್ರತಿಭಟಿಸಲು ದೆಹಲಿಯ ಸುಮಾರು ೫ ಸಾವಿರ ಜನ ಪ್ರದರ್ಶನ ನಡೆಸಿದರು. ಬ್ರಾಹ್ಮಣ ಯುವತಿ ವಿಮಲ ರಾಜಶರ್ಮ ಮತ್ತು ಸಿಕಂದರ್ ಬಖ್ತ್ ಎಂಬ ಮುಸ್ಲಿಂ ಯುವಕನಿಗೆ ವಿವಾಹ ನಡೆಯಬೇಕಾಗಿತ್ತು. ವಧುವಿನ ತಂದೆ ಕೋರ್ಟಿಗೆ ಅರ್ಜಿಯನ್ನು ಸಲ್ಲಿಸಿ ಆಕೆಗೆ ೨೧ ವರ್ಷ ತುಂಬಿಲ್ಲವೆಂದು ಇದಕ್ಕೆ ಮಾತಾಪಿತೃಗಳ ಅನುಮತಿ ಅಗತ್ಯವೆಂದೂ ಕೇಳಿದ್ದರು. ಸಬ್ ಜಡ್ಜರ ಮುಂದೆ ಚರ್ಚೆ ಆರಂಭವಾದಾಗಲೇ ಪ್ರದರ್ಶನ ನಡೆಯಿತು. ದೆಹಲಿಯ ಮುಖ್ಯಮಂತ್ರಿಯ ಕಾರಿಗೆ ಕಲ್ಲೇಟು ಬಿತ್ತು. ೧೭ ಮಂದಿಗೆ ಗಾಯಗಳಾದವು. ಒಂದು ಇರಿತ ಪ್ರಸಂಗವೂ ನಡೆಯಿತು. ೨೪ ದಸ್ತಗಿರಿಯಾಗಿದೆ. ದೆಹಲಿಯಲ್ಲಿ ಬಹಿರಂಗ ಸಭೆಗಳನ್ನೂ ಮೆರವಣಿಗೆ ಪ್ರದರ್ಶನಗಳನ್ನು ೧೫ ದಿನಗಳ ಕಾಲ ಜಿಲ್ಲಾ ನ್ಯಾಯಾಧೀಶರು ನಿಷೇಧಿಸಿದ್ದಾರೆ.

ಕೆಲವು ರಾಜಕೀಯ ಪಕ್ಷಗಳು ದುರುದ್ದೇಶದಿಂದ ಈ ಪ್ರಸಂಗವನ್ನು ತಮ್ಮ ಗುರಿ ಸಾಧನೆಗೆ ಉಪಯೋಗಿಸುತ್ತಿದ್ದಾರೆ ಎಂದು ದೆಹಲಿಯ ಮುಖ್ಯಮಂತ್ರಿ ಹೇಳಿದ್ದಾರೆ.

ವಾಣಿಜ್ಯ ಸಾಮಾನುಗಳ ಪ್ರದರ್ಶನ

ಭಾರತ, ಸಿಲೋನ್ ಮತ್ತು ಪಾಕೀಸ್ಥಾನಗಳ ದಂತ, ಮ್ಯಾಂಗನೀಸ್ ಮತ್ತು ಜ್ಯೂಟ್ ವಾಣಿಜ್ಯ ಸಾಮಾನುಗಳನ್ನು ಅಮೇರಿಕದಲ್ಲಿ ನಡೆದ ಪ್ರಪಂಚವಾಣಿಜ್ಯವಾರದಲ್ಲಿ ಪ್ರದರ್ಶಿಸಲಾಗಿತ್ತು. ಭಾರತವು ಅಮೇರಿಕಾಕ್ಕೆ ಶೇ|| ೯೩ ರಷ್ಟು ಮೆಣಸಿನಕಾಯಿ ಮತ್ತು ಶೇ|| ೯೫ ರಷ್ಟು ಗೋಡಂಬಿಯನ್ನು ಒದಗಿಸುತ್ತದೆ. ವಿದೇಶದ ಅನೇಕ ಪ್ರತಿನಿಧಿಗಳು ಆಮದು ಕಾಚೇರಿ ಮಾರಾಟದಲ್ಲಿ ಪ್ರದರ್ಶಿತವಾದ ಈ ಸಾಮಾನುಗಳನ್ನು ನೋಡಿಕೊಂಡು ಹೋದರು.

ಉಕ್ಕಿನ ತಯಾರಿಕೆಗೆ ಬೇಕಾದ ಮ್ಯಾಂಗನೀಸ್, ವಿದ್ಯುಚ್ಛಕ್ತಿಯ ಸಾಮಾನುಗಳ ತಯಾರಿಕೆಗೆ ಬೇಕಾದ ಮೈಕಾ, ಗೋಣಿ ಸಾಮಾನುಗಳು, ಬಣ್ಣ, ರಬ್ಬರ್ ಮತ್ತು ಕಾಗದದ ತಯಾರಿಕಾ ಕೈಗಾರಿಕೆಗಳನ್ನು ಪ್ರದರ್ಶಿಸಲಾಗಿತ್ತು.

ಮಿಡತೆ ಹಾವಳಿ

ರಾಜಸ್ಥಾನದ ಜೋಧಪುರ ವಿಭಾಗದಲ್ಲಿ ಕಳೆದವಾರ ಮಿಡತೆಗಳು ತಂಡೋಪತಂಡವಾಗಿ ಪ್ರವೇಶಿಸಿತು. ಈ ತಿಂಗಳ ಆದಿಭಾಗದಲ್ಲೂ ಇದರ ಹಾವಳಿ ಜಾಸ್ತಿಯಾಗಿದ್ದಿತು. ಈ ಮಿಡತೆಗಳ ಹಾವಳಿಯನ್ನು ತಡೆಯಲು ಸರ್ಕಾರವು ತಕ್ಕ ಕಾರ್ಯಕ್ರಮ ಕೈಗೊಂಡಿದೆ.

ಮಸೀದಿ ಕಟ್ಟಲು ಸೌಲಭ್ಯಗಳು

ಅಮೇರಿಕಾದ ರಾಜಧಾನಿಯಾದ ವಾಷಿಂಗ್ಟನ್ನಿನಲ್ಲಿ ಕಟ್ಟಲಾಗುತ್ತಿರುವ ಮುಸ್ಲಿಂ ಮಸೀದಿಯೊಂದಕ್ಕೆ ಎಲ್ಲಾ ಕಟ್ಟಡದ ಸಾಮಾನುಗಳನ್ನು ಒದಗಿಸಬೇಕೆಂದು ಅಮೇರಿಕದ ರಾಷ್ಟ್ರೀಯ ಉತ್ಪತ್ತಿ ಅಧಿಕಾರಿಗಳು ವಿಶೇಷ ಆಜ್ಞೆಯನ್ನು ಹೊರಡಿಸಿದ್ದಾರೆ.

ಜೂನ್ ೨೭ ರಂದು ಶಾಸನ ಸಭಾಧಿವೇಶನ

ಮದ್ರಾಸ್ ಗೌರ್ನರು ಈಗ ನಡೆಯುತ್ತಿರುವ ಮದ್ರಾಸು ಶಾಸನಸಭೆಯ ಮತ್ತು ಮೇಲ್ಮನೆಯ ಅಧಿವೇಶನವನ್ನು ಮೇ ೨೪ ರಿಂದ ಮುಕ್ತಾಯವಾಗಬೇಕೆಂದು ಆಜ್ಞೆಯಿತ್ತಿರುವರು. ಜೂನ್ ೨೭ ರಿಂದ ಪುನಃ ಅಧಿವೇಶನ ಆರಂಭವಾಗಬಹುದೆಂದು ಹೇಳಲಾಗಿದೆ.

ಶ್ರೀ ದೇಶಪಾಂಡೆಯವರ ದಸ್ತಗಿರಿ

ಹಿಂದೂ ಮಹಾಸಭೆಯ ಕಾರ್ಯದರ್ಶಿ ಶ್ರೀ ದೇಶಪಾಂಡೆಯವರು ನಿನ್ನೆ ಬೆಳಗ್ಗೆ ದೆಹಲಿಯಲ್ಲಿ ದಸ್ತಗಿರಿಯಾದರು. ಇವರು ಪಾರ್ಲಿಮೆಂಟ್ ಸದಸ್ಯರು. ಇವರ ದಸ್ತಗಿರಿ ಬಗ್ಗೆ ಪಾರ್ಲಿಮೆಂಟ್ ಸದಸ್ಯರ ಪ್ರತ್ಯೇಕ ಹಕ್ಕು ಸೌಕರ್ಯಗಳ ಸಮಿತಿಯನ್ನು ಪರಿಶೀಲಿಸಬೇಕೆಂದು ಸ್ಪೀಕರ್ ಶ್ರೀ ಮಾವಲಂಕರ್ ಕೇಳಿದ್ದಾರೆ.

ಭತ್ತ ಬೆಳೆಯಲು ಕೇಂದ್ರಗಳ ಸ್ಥಾಪನೆ

ಹೆಚ್ಚು ಭತ್ತ ಬೆಳೆಯಲು ಎರಡು ಕರಬೇತು ಕೇಂದ್ರಗಳನ್ನು ಭಾರತದಲ್ಲಿ ತೆರೆಯಲಾಗುವುದೆಂದು, ಅಂತರರಾಷ್ಟ್ರೀಯ ರೈಸ್ ಕಮಿಷನ್ನಿನವರು ತೀರ್ಮಾನಿಸಿದ್ದಾರೆ.

ಒಂದು ಕೇಂದ್ರವನ್ನು ಭತ್ತವನ್ನು ಬೆಳೆಯಲು ಜಮಾವಣೆ ಮಾಡುವ ಕರಬೇತನ್ನೂ ಇನ್ನೊಂದು ಕೇಂದ್ರದಲ್ಲಿ ಭತ್ತಕ್ಕೆ ಪುಷ್ಟಿಕತ್ವವನ್ನು ಕೊಡುವ ತರಬೇತನ್ನು ಕೊಡಲಿದ್ದಾರೆ.

ಈ ನಿರ್ಧಾರವನ್ನು ಮೊರನೆಯ ಅಂತರರಾಷ್ಟ್ರೀಯ ರೈಸ್ ಕಮಿಷನ್ ಸಭೆಯಲ್ಲಿ ಮಾಡಲಾಯಿತು.

೫೬ ಜನ ಕೆಲಸಗಾರರ ವಜಾ

ಹಾಸನ ಇಂಪ್ಲಿಮೆಂಟ್ಸ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ೫೬ ಜನರನ್ನು ಮುನ್ಸೂಚನೆ ಕೊಡದೆ ನಿನ್ನೆಯಿಂದ ಕೆಲಸದಿಂದ ವಜಾಮಾಡಿದ್ದಾರೆ. ಇದರ ಬಗ್ಗೆ ಆ ಕೆಲಸಗಾರರು ವಿದ್ಯಾಸಚಿವರಿಗೆ ಒಂದು ಮೆಮೊರ್ಯಾಂಡಂ ಒಪ್ಪಿಸಿರುವರು.

ರಾಜೀನಾಮೆಯ ಬಗ್ಗೆ ಹೇಳಿಕೆ

ಮೈಸೂರು ರೇಷ್ಮೆದಾರರ ಸಂಘದ ಕಾರ್ಯಾಡಳಿತದ ಮೇಲಿನ ಅಧಿಕಾರಿಗಳು ಸ್ವಪ್ರತಿಷ್ಠೆಯ ಕೆಲವು ವ್ಯಕ್ತಿಗಳ ದಾಕ್ಷಿಣ್ಯಕ್ಕೋಸ್ಕರ ಸಂಘಕ್ಕೆ ಬೆಲೆ ಬಾರದ ಅವರ ಅಭಿಪ್ರಾಯಗಳಿಗೆ ಕೆಲವರ ಬೆಂಬಲದಿಂದ ನಿಯಮಕ್ಕೆ ವಿರೋಧವಾಗಿ ಅವಕಾಶಕೊಡುತ್ತಾ ಬಂದುದರ ಬಗ್ಗೆ ಸಂಘದ ಹಿತದೃಷ್ಟಿಗಾಗಿ ತಾ|| ೯-೫-೫೨ ರಲ್ಲಿ ಸಂಘಕ್ಕೆ ನನ್ನ ರಾಜೀನಾಮೆಯನ್ನು ಸಲ್ಲಿಸಿರುತ್ತೇನೆ.

ಇತ್ತೀಚೆಗೆ ತಾ|| ೧೧-೫-೫೨ ರಲ್ಲಿ ನಡೆದ ಸಂಘದ ಬಹಿರಂಗ ಸಭೆಯಲ್ಲಿ ಸರ್ಕಾರವು ಈ ಲಾಗಾಯಿತು ೧೫ ದಿವಸದೊಳಗಾಗಿ ರೇಷ್ಮೆ ಪದಾರ್ಥಗಳ ಬೆಲೆಯನ್ನು ಇಳಿಸದೇ ಹೋದಲ್ಲಿ ರೇಷ್ಮೆ ಡಿಪೋಗಳ ಮುಂದೆ ಸತ್ಯಾಗ್ರಹ ಮಾಡಲಾಗುತ್ತೆ ಎಂದು ನಿರ್ಧರಿಸಿರುವುದು ಕ್ರಮಬದ್ಧವಾದುದು, ದೂರದೃಷ್ಟಿಯಿಂದ ಕೂಡಿದುದು ಮತ್ತು ಬೆಲೆಯುಳ್ಳವಾದುದು ಅಲ್ಲವೆಂದು ಅಭಿಪ್ರಾಯಪಡುತ್ತೇನೆ.

ಸಂಘದ ಸ್ಥಾಪನೆಯ ಕಾಲದಿಂದಲೂ ಇಲ್ಲಿಯವರೆಗೆ ನನ್ನ ಕಾರ್ಯಾಡಳಿತಕ್ಕೆ ನೆರವು ನೀಡಿದ ಸರ್ವರಿಗೂ ನನ್ನ ಆನಂತ ಧನ್ಯವಾದಗಳು.

ಎಂ. ಸಿ. ನರಸಿಂಹಯ್ಯ.

ಪ್ರಕಾಶಕರು :—ಜಿ. ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮ ಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್ ರವರ
ಶ್ರೀ ನೃತ್ಯ ಕಲಾಮಂದಿರ ಮೈಸೂರು
(ಸೀತಾವಿಲಾಸ ಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೀಯವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

೬೦೦೦ ಪಶುಗಳು ನಾಶವಾದವು

ರಾಯಲು ಸೀಮೆಯ ಹಲವು ಪ್ರದೇಶಗಳು ಕಳೆದ ೫ ವರ್ಷಗಳಿಂದ ಮಳೆಯೇ ಇಲ್ಲದೆ ಈಗ ವಿಪರೀತ ಮಳೆಯಿಂದ ಹೊಸ ಸಮಸ್ಯೆಗಳು ಉದ್ಭವಿಸಿವೆ. ಕಡಪ ಜಿಲ್ಲೆಯಲ್ಲಿ ತಣ್ಣಗಿರುವ ಗಾಳಿ ಬೀಸಿ ಸುಮಾರು ೬೦೦೦ ಪಶು, ಕುಕ್ಕುಟಗಳು ಪ್ರಾಣಬಿಟ್ಟಿವೆ. ಮಳೆಯಿಂದ ಬೇಸಾಯಗಾರರಿಗೆ ಕೆಲಸ ಕಾರ್ಯಗಳೇ ಇಲ್ಲವಾಗಿದೆ.

ಕೆಂಪು ಚೌಕ

ದೆಹಲಿಯಲ್ಲಿರುವ ವಿಂಡ್ಸರ್ ಪ್ಲೇಸ್ ಚೌಕವನ್ನು ಪಾರ್ಲಿಮೆಂಟಿನ ಕಮ್ಯೂನಿಸ್ಟ್ ಸದಸ್ಯರು ಕೆಂಪು ಚೌಕ ಎಂದು ನಾಮಕರಣ ಮಾಡಿದ್ದಾರೆ.

ಚಿನ್ನ ಬೆಳ್ಳಿ ದರಗಳು

27–5–52	ರೂ.
ಸವರನ್	64–2
,,	65–0
ಚಿನ್ನ ತೊಲ	91–[illegible]
,, ಮೊಹರ	89–12
ಬೆಳ್ಳಿ 100 ತೊಲ	161–8
,, ತೊಲ	1–11

ಪೇಟೆ ಧಾರಣೆ

ಮೈಸೂರು ತಾ|| 27-5-52

ಅಧಿಕೃತವಾದದ್ದು

	ರೂ.	ರೂ.
ಕಡ್ಲೇಕಾಯಿ ಪಲ್ಲಕ್ಕೆ	10-0	12-9
ಹೊಂಗೆಬೀಜ ,,	——	——
ಹುರುಳಿ ,,	34-0	36-2
ಹೆಸರು ,,	54-4	56-4
ಸೀಗೆಕಾಯಿ ,,	3-4	3-6
ಮೆ. ಕಾಯಿ ಮಣಕ್ಕೆ	5-0	15-2
ಹುಣಸೇಹಣ್ಣು ,,	3-14	4-4
ತೆಂಗಿನಕಾಯಿ 1100ಕ್ಕೆ	105	168

ವುಡ್ ಲ್ಯಾಂಡ್ಸ್
23—5—52ನೇ ಶುಕ್ರವಾರದಿಂದ ಅಮೋಘಪ್ರಾರಂಭ
ದಿನವು 3 ಆಟಗಳು
ಹಮಾರಿಷಾನ್
(ಹಿಂದಿ)
ಪಾತ್ರ—ಭಾರತಭೂಷಣ್, ಯಾಕೂಬ್ ದುರ್ಗಾಖೋಟೆ ಮುಂತಾದವರು.

ರಣಜಿತ್
೨೩–೫–೫೨ರಿಂದ ಅಮೋಘ ೨ನೇ ವಾರ
* ಘುಂಗ್ರು
ಪಾತ್ರ:–ಸುಮಿತ್ರಾ, ಓಂಪ್ರಕಾಶ್, ಕುಲ್‌ದೀಪ್.

ಫೋನ್ ೫೭೪ (ಲೀನ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೨೯-೫-೧೯೫೨ನೇ ಗುರುವಾರ [ಸಂಚಿಕೆ ೨೩೩

ಭಾರತಾದ್ಯಂತ ಸಕ್ಕರೆ ಪಡಿತರ ಹೆಚ್ಚಿಸಲಾಗುವುದು

ಭಾರತ ಸರ್ಕಾರದ ಹೊಸ ಆಹಾರ ನೀತಿ ಸದ್ಯದಲ್ಲೇ ಹೊರಬೀಳಲಿದೆ

ಸಾಧಾರಣ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯು ಕಡಿಮೆಯಾಗುವ ಉದ್ದಿಶ್ಯದಿಂದ ಭಾರತಾದ್ಯಂತ ಸಕ್ಕರೆ ಪಡಿತರ ಪ್ರಮಾಣವನ್ನು ಹೆಚ್ಚಿಸಲಾಗುವುದೆಂದು ಆಹಾರ ಸಚಿವ ಮಿ|| ಕಿದ್ವಾಯಿಯವರು ಮದ್ರಾಸಿನಲ್ಲಿ ಹೇಳಿರುವರು.

ಚೈನಾ ಆಹಾರ ವಿಷಯವಾಗಿ ಮಾತನಾಡುತ್ತಾ, ಅಲ್ಲಿಂದ ಬರುವ ಅಕ್ಕಿಯನ್ನೆಲ್ಲಾ ಅಕ್ಕಿ ಉಪಭೋಗಿಸುವ ಪ್ರಾಂತ್ಯಗಳಿಗೆ ಮಾತ್ರ ಸರಬರಾಜುಮಾಡಲಾಗುತ್ತದೆಯೆಂದು ಅವರು ಹೇಳಿರುವರು.

ಸಚಿವರಿಗೆ ಮೋಸ ಮಾಡಲು ಯತ್ನ

ಕೇಂದ್ರ ಉತ್ಪಾದನೆ ಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರ ಮಗನೆಂದು ಹೇಳಿಕೊಂಡು ಜೆನ್ನಾಗಿ ಉಡುಪುಧರಿಸಿಕೊಂಡು ಒಬ್ಬ ಯುವಕನು ಹೈದರಾಬಾದಿನ ಅರ್ಥಿಕಸಚಿವ ಡಾ|| ಮೇಲುಕೋಟೆಯವರ ಬಳಿಗೆ ಹೋಗಿ ಸ್ವಲ್ಪ ಹಣವನ್ನು ಕೇಳಲು ಸಚಿವರು ಕೂಡಲೆ ಅವನನ್ನು ಪೋಲೀಸರ ವಶಕ್ಕೆ ಕೊಟ್ಟರು.

ಇದೇರೀತಿ ಸಯ್ಯದ್ ಅಲ್ತಾಫ್ ಎಂಬುವನು ಪ್ರಧಾನಿಯವರ ಗುಪ್ತ ಅಧಿಕಾರಿಯೆಂದು ಹೈದರಾಬಾದ್ ವಿದ್ಯಾಮಂತ್ರಿ ಶ್ರೀ ಪೂಲ್‌ಚಂದ್ ಗಾಂಧಿಯವರ ಬಳಿಗೆ ಹೋಗಿ ಪೋಲೀಸರ ವಶನಾದನು.

ಕಾರ್ಮಿಕರಿಗೆ ಹೆಚ್ಚಿನ ತುಟ್ಟೀಭತ್ಯ

ಆಹಾರ ಧಾನ್ಯಗಳ ಬೆಲೆ ಏರಿರುವುದರ ಪರಿಣಾಮವಾಗಿ ಬೊಂಬಾಯಿ ಮತ್ತು ಅಹಮದಾಬಾದುಗಳಲ್ಲಿ ಕಾರ್ಮಿಕರ ತುಟ್ಟಿಭತ್ಯವನ್ನು ಹೆಚ್ಚಿಸಲಾಗಿದೆ. ಅಹಮದಾಬಾದಿನಲ್ಲಿ ನರಾಸರಿ ೯–೧೦ ರೂ.ಹೆಚ್ಚಾಗಿ ಪಡೆಯುವರು. ಬೊಂಬಾಯಿಯಲ್ಲಿ ೫೩-೧೦-೦ಯಿಂದ ತುಟ್ಟಿಭತ್ಯವು ೬೧-೧೨-೦ಕ್ಕೆ ಏರಿದೆ.

ಇರಾನಿನಿಂದ ಎಣ್ಣೆಯಿಲ್ಲ

ಭಾರತ ಇರಾನಿನಿಂದ ಕ್ರೂಡ್ ಆಯಿಲ್ ತರಿಸಲು ಸಾಧ್ಯವಾಗಿಲ್ಲ. ಅದನ್ನಿಡಲು ಸಂಗ್ರಹಸ್ಥಾನ ಮತ್ತು ಉಪಕರಣಗಳಿಲ್ಲದಿರುವುದೇ ಮುಖ್ಯ ಕಾರಣವಾಗಿದೆಯೆಂದು ಪ್ರಧಾನಿ ನೆಹರೂ ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಚೆನ್ನಪಟ್ಟಣ ಸಿಲ್ಕ್ ಕಾರ್ಖಾನೆ ಬಗ್ಗೆ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ

ಭಾರತದಲ್ಲಿರುವ ಏಕೈಕ ಸ್ಪನ್‌ಸಿಲ್ಕ್ ಕಾರ್ಖಾನೆಯಾದ ಮೈಸೂರಿನ ಚನ್ನಪಟ್ಟಣದ ಸ್ಪನ್‌ಸಿಲ್ಕ್ ಕಾರ್ಖಾನೆಯು ತಾತ್ಕಾಲಿಕ ಕ್ರಮವಾಗಿ ಉತ್ಪಾದನೆಯನ್ನು ಸ್ವಲ್ಪ ಕಡಿಮೆ ಮಾಡಿದೆಯೆಂದೂ ಈಗ ಸಂಗ್ರಹವಾಗಿರುವ ಸ್ಪನ್‌ಸಿಲ್ಕಿನ ದಾಸ್ತಾನು ಮುಗಿದ ತಕ್ಷಣವೇ ಕಾರ್ಖಾನೆಯು ಪುನಃ ಎಂದಿನಂತೆ ಕೆಲಸವಾರಂಭಿಸುವ ನಿರೀಕ್ಷೆಯಿದೆಯೆಂದೂ ವಾಣಿಜ್ಯ ಮತ್ತು ಕೈಗಾರಿಕಾಶಾಖೆಯ ಉಪಸಚಿವ ಶ್ರೀ ಡಿ. ಪಿ. ಕರಮರಕರ್ ರಾಷ್ಟ್ರಪರಿಷತ್ತಿನಲ್ಲಿ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರಿಗೆ ತಿಳಿಸಿರುವರು.

ಜಪಾನ್ ಪ್ರಧಾನಿ ಪ್ರತಿನಿಧಿ ಭಾರತದಲ್ಲಿ

ಜಪಾನ್ ಪ್ರಧಾನಿಯವರ ಪ್ರತಿನಿಧಿ ಮಿ|| ಒಗಾಸಾರವರು ದೆಹಲಿಯಲ್ಲಿ ಮಾತನಾಡುತ್ತಾ, ಕಳೆದ ಕೆಲವು ವರ್ಷಗಳಿಂದ ಜಪಾನಿಗೂ ಇತರ ರಾಷ್ಟ್ರಗಳಿಗೂ ಸಂಪರ್ಕ ಕಡಿದುಹೋಗಿತ್ತು. ಜಪಾನಿನ ಈಗಿನ ಸ್ಥಿತಿಯೇನೆಂಬುದನ್ನು ಭಾರತಕ್ಕೆ ತಿಳಿಸಿ ಭಾರತ ಜಪಾನ್ ರಾಷ್ಟ್ರಗಳ ಸಂಬಂಧಕ್ಕೆ ಸ್ನೇಹ ವಾತಾವರಣವನ್ನು ಕಲ್ಪಿಸುವುದೇ ತಮ್ಮ ಈಗಿನ ಪ್ರಥಮ ಕರ್ತವ್ಯವೆಂದೂ ಅದಕ್ಕಾಗಿ ತಾವು ಈಗ ಭಾರತಕ್ಕೆ ಆಗಮಿಸಿರುವುದಾಗಿ ಹೇಳಿರುವರು.

ಆಹಾರ ಸಚಿವರು ಮದ್ರಾಸಿನಲ್ಲಿ

ಕೇಂದ್ರ ಆಹಾರ ಸಚಿವ ಶ್ರೀ ರಫಿ ಅಹಮದ್ ಕಿದ್ವಾಯಿಯವರು ನಿನ್ನೆಯ ದಿನ ಬೊಂಬಾಯಿನಿಂದ ವಿಮಾನದಲ್ಲಿ ಮದರಾಸಿಗೆ ಆಗಮಿಸಿದರು. ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ಆಹಾರ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರವರೊಡನೆ ಪ್ರಾಂತ್ಯ ಆಹಾರ ವಿಷಯದಲ್ಲಿ ಮಾತುಕತೆ ನಡೆಸಲಿರುವರು.

ಮದ್ರಾಸಿನಲ್ಲಿ ನೀರಿನ ಸರಬರಾಜು

ಮದ್ರಾಸ್ ನಗರ ಮತ್ತು ಸುತ್ತಮುತ್ತಲೂ ವಿಶೇಷವಾಗಿ ಮಳೆ ಬಂದುದರ ಪರಿಣಾಮವಾಗಿ ಮದ್ರಾಸ್ ನಗರದಲ್ಲಿ ಮಾಮೂಲಿನಂತೆ ನೀರಿನ ಸರಬರಾಜು ಪ್ರಾರಂಭವಾಗಿದೆ. ಮುಂದಿನ ಜನವರಿವರೆಗೆ ಇನ್ನು ಯಾವ ತೊಂದರೆಯೂ ಬರುವಂತಿಲ್ಲವೆಂದು ಹೇಳಲಾಗಿದೆ.

ಪುನಃ ಸಂಧಾನ

ಕಾಶ್ಮೀರ ಪ್ರತಿನಿಧಿ ಡಾ|| ಗ್ರಹಾಂರವರು ಇಂದಿನಿಂದ ಪುನಃ ಭಾರತ ಪಾಕೀಸ್ಥಾನ ಪ್ರತಿನಿಧಿಗಳೊಡನೆ ನ್ಯೂಯಾರ್ಕ್‌ನಲ್ಲಿ ಸಂಧಾನ ಪ್ರಾರಂಭಿಸಿರುವರು.

ಪೌರಸಭಾಧಿವೇಶನ

ಮೈಸೂರು ಮೇ ೨೮

ಮೈಸೂರು ನಗರ ಪುರಸಭೆಯ ಮಾಹೆಯಾನಾಧಿವೇಶನವು ನಾಳೆ ಮಧ್ಯಾಹ್ನ ನಡೆಯುತ್ತದೆ.

ಮುಖ್ಯಮಂತ್ರಿಗಳು

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಜೂನ್ ಒಂದನೇ ತಾರೀಖು ಮೈಸೂರಿಗೆ ಆಗಮಿಸಲಿರುವರು.

ಭೀಕರ ಕ್ಷಾಮದ ಹೆದರಿಕೆ

ಸರ್ಕಾರವು ಕೂಡಲೇ ಪರಿಹಾರ ಕಾರ್ಯಗಳನ್ನು ಕೈಗೊಳ್ಳದಿದ್ದರೆ ಪಶ್ಚಿಮ ಬಂಗಾಳದಲ್ಲಿ ೧೯೪೩ ರಲ್ಲಿ ಬಂದಿದ್ದಂತೆ ಭೀಕರ ಕ್ಷಾಮವು ತಲೆದೋರುವ ಹೆದರಿಕೆ, ಈಗಿನ ಪರಿಸ್ಥಿತಿಯಲ್ಲಿಯೇ ಜನರಲ್ಲಿ ಮೂಡಿದೆ. ಈಗಾಗಲೇ ಕಲ್ಕತ್ತಾ ನಗರಕ್ಕೆ ನೂರಾರು ಜನರು ನಿತ್ಯವೂ ಬಂದು ಸಿಕ್ಕಿದ ಸ್ಥಳದಲ್ಲೆಲ್ಲಾ ನೆಲಸುತ್ತಿರುವುದಾಗಿ ಹೇಳಲಾಗಿದೆ. ಆಹಾರ ಬೆಲೆ ವಿಶೇಷವಾಗಿ ಹೆಚ್ಚಿರುವುದರಿಂದ ೧೦ ಲಕ್ಷಕ್ಕಿಂತ ಹೆಚ್ಚಾಗಿ ರೈತರು, ಕಾರ್ಮಿಕರು ಕೆಲಸವಿಲ್ಲದಿರುವರೆಂದು ಹೇಳಲಾಗಿದೆ.

ಸಿಂಹಳದಲ್ಲಿ ಭಾರತೀಯರು

ಸಿಂಹಳದಲ್ಲಿ ಸುಮಾರು ಏಳೂವರೆ ಲಕ್ಷ ಭಾರತೀಯರಿರುವರು. ಕಳೆದ ಆಗಸ್ಟ್ ವೇಳೆಗೆ ಸುಮಾರು ೨ ಲಕ್ಷ ೩೭ ಸಾವಿರ ಜನರು ಪೌರತ್ವಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಎಲ್ಲಾ ಅರ್ಜಿಗಳು ಇನ್ನೂ ಇತ್ಯರ್ಥವಾಗಿಲ್ಲ. ಕೇವಲ ೯೦೪೦ ಭಾರತೀಯರಿಗೆ ಮಾತ್ರ ಪೌರತ್ವ ದೊರೆತಿದೆಯೆಂದು ಪ್ರಧಾನಿಯವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಫಿಲಿಫೈನ್ಸ್‌ನೊಡನೆ ಒಪ್ಪಂದ

ಭಾರತ ಫಿಲಿಫೈನ್ಸ್ ನಡುವೆ ನಿನ್ನೆಯ ದಿನ ಮನಿಲಾದಲ್ಲಿ ಒಪ್ಪಂದವು ರುಜು ಆಯಿತೆಂದು ಗೊತ್ತಾಗಿದೆ.

ಡಾ|| ಮುಸಾದಿಕ್

ಹೇಗ್‌ನಲ್ಲಿ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ಬ್ರಿಟನ್ ಮತ್ತು ಪರ್ಷಿಯಾಗಳೆರಡರ ವಿವಾದ ವಿಷಯದಲ್ಲಿ ನಡೆಯಲಿರುವ ಮೊಕದ್ದಮೆ ವಿಚಾರಣೆಯಲ್ಲಿ ಭಾಗವಹಿಸಲು ಪರ್ಷಿಯಾ ಪ್ರಧಾನಿ ಡಾ|| ಮುಸಾದಿಕ್‌ರವರು ಟೆಹರಾನ್‌ನಿಂದ ಹೇಗ್‌ಗೆ ಹೊರಟಿರುವರು.

ದೆಹಲಿಯಲ್ಲಿ ನಿಮ್ನ ಪಂಗಡದ ಸಮ್ಮೇಳನ

ನಿಮ್ನ ಪಂಗಡಗಳಿಗೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ಪರೀಕ್ಷಿಸಲು ಜೂನ್ ತಿಂಗಳ ೭ನೇ ತಾ|| ದೆಹಲಿಯಲ್ಲಿ ಒಂದು ಸಮ್ಮೇಳನ ಸೇರಲಿದೆ. ರಾಷ್ಟ್ರಾಧ್ಯಕ್ಷರು ಈ ಸಮ್ಮೇಳನವನ್ನು ಪ್ರಾರಂಭಿಸುವರು. ಪ್ರಧಾನಿ ನೆಹರೂ ಅಧ್ಯಕ್ಷತೆ ವಹಿಸಿ, ಗೃಹಸಚಿವ ಶ್ರೀ ಕಟ್ಜುರವರು ಸಮ್ಮೇಳನವನ್ನುದ್ದೇಶಿಸಿ ಭಾಷಣ ಮಾಡುತ್ತಾರೆ.

ಸೈನ್ಯ ವೆಚ್ಚ ಅರ್ಧಕ್ಕಿಳಿಸಿ

ಭಾರತ ಹಿರಿಯ ಶಾಸನಸಭೆಯಲ್ಲಿ ಬಡ್ಜೆಟ್ ವಿಷಯವಾಗಿ ಚರ್ಚೆ ನಡೆಯುವಾಗ ಕಮ್ಯೂನಿಸ್ಟ್ ಸದಸ್ಯರೊಬ್ಬರು ಸೈನ್ಯ ವೆಚ್ಚವನ್ನು ಶೇಕಡ ೫೦ ರಷ್ಟು ಕಡಮೆಮಾಡಬೇಕೆಂದು ಹೇಳಿದರು. ಸಭಾನಾಯಕರಾದ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್‌ರವರು ಮಾತನಾಡುತ್ತಾ, ವಿದೇಶಗಳಲ್ಲಿಯೂ ಅಕ್ಕಪಕ್ಕದ ರಾಷ್ಟ್ರಗಳಲ್ಲಿಯೂ ಸೈನ್ಯಕ್ಕೆ ವಿಶೇಷ ಹಣ ವ್ಯಯಮಾಡುತ್ತಾ, ಹೆಚ್ಚಿಗೆ ಸೈನ್ಯವನ್ನು ಸಿದ್ಧಪಡಿಸುಕೊಳ್ಳುವಾಗ ನಾವು ನಮ್ಮಲ್ಲಿಯ ಸೈನ್ಯ ವೆಚ್ಚವನ್ನೆಲ್ಲಾ ಕಡಿಮೆಮಾಡಲು ಸಾಧ್ಯವಿಲ್ಲ. ನಮ್ಮ ರಕ್ಷಣೆಗೆ ಎಷ್ಟು ಸೈನ್ಯ ಬೇಕೋ ಅಷ್ಟನ್ನು ಮಾತ್ರ ನಾವು ಹೊಂದಿರುತ್ತೇವೆಂದು ಹೇಳಿರುವರು.

ನಿಲುವಳಿ ಸೂಚನೆಗೆ ಅವಕಾಶವಿಲ್ಲ

ಆಂಧ್ರ ಪ್ರಾಂತ್ಯ ರಚನೆ ಬಗ್ಗೆ ಸ್ವಾಮಿ ಸೀತಾರಾಂರವರು ನಡೆಸುತ್ತಲಿರುವ ಉಪವಾಸ ವಿಷಯವಾಗಿ ಭಾರತ ಪಾರ್ಲಿಮೆಂಟಿನಲ್ಲಿ ಬಂದ ಒಂದು ನಿಲುವಳಿ ಸೂಚನೆಯನ್ನು ಸ್ಪೀಕರ್ ಶ್ರೀ ಮಾವಲಂಕರ್‌ರವರು ತಳ್ಳಿಹಾಕಿರುವರು.

ಆಂಧ್ರ ಪ್ರಾಂತ್ಯ ರಚನೆಯ ವಿಷಯವನ್ನು ಪ್ರತ್ಯೇಕವಾಗಿ ಚರ್ಚಿಸಬೇಕೆಂದೂ ಒಬ್ಬ ವ್ಯಕ್ತಿಯು ಉಪವಾಸವನ್ನು ಮಾಡುತ್ತಿರುವುದು ಪಾರ್ಲಿಮೆಂಟಿನಲ್ಲಿ ಚರ್ಚಿಸಬೇಕಾದಂಥಹ ಜರೂರು ವಿಷಯವಲ್ಲವೆಂದು ಸ್ಪೀಕರು ಅಭಿಪ್ರಾಯಪಟ್ಟಿದ್ದಾರೆ.

೨೫೪ ಕೋಟಿರೂಪಾಯಿಗಳ ಆಹಾರ

ಕಳೆದಸಾಲಿನಲ್ಲಿ ವಿವಿಧರಾಷ್ಟ್ರಗಳಿಂದ ೫೪ ಲಕ್ಷ ಟನ್ ಆಹಾರವನ್ನು ತರಿಸಲಾಗಿದೆ. ಇದರ ಬೆಲೆಯು ಸುಮಾರು ೨೫೪ ಕೋಟಿ ರೂಪಾಯಿಗಳೆಂದು ಗೊತ್ತಾಗಿದೆ.

ಹಿಂದೂಮಹಾಸಭಾ ಸದಸ್ಯ ದೇಶಪಾಂಡೆ ಬಂಧನ

ಪಾರ್ಲಿಮೆಂಟಿನ ಹಿಂದೂಮಹಾಸಭಾ ಸದಸ್ಯ ಪ್ರೊ|| ವಿ. ಜಿ. ದೇಶಪಾಂಡೆ, ದೆಹಲಿ ಶಾಸನಸಭಾ ಸದಸ್ಯ ಪ್ರೊ|| ರಾಂಸಿಂಗ್ ಮತ್ತು ೯ ಮಂದಿಯನ್ನು ಹಿಂದೂ ಮುಸ್ಲಿಂ ಅಂತರ್ವಿವಾಹದ ವಿರುದ್ಧ ನಡೆದ ಪ್ರತಿಭಟನೆಯ ಸಂಬಂಧದಲ್ಲಿ, ಮುನ್ನೆಚ್ಚರದ ಸ್ಥಾನಬದ್ಧತೆ ಶಾಸನದ ರೀತ್ಯಾ ದೆಹಲಿ ಪೋಲೀಸರು ಬಂಧಿಸಿದ್ದಾರೆ.

ನೇಪಾಳದಲ್ಲಿ ಭಾರತ ಮಿಲಿಟರಿ

ನೇಪಾಳಕ್ಕೆ ತೆರಳಿರುವ ಭಾರತದ ಮಿಲಿಟರಿ ನಿಯೋಗವು ತನ್ನ ಕಾರ್ಯಕಲಾಪಗಳನ್ನು ಮುಕ್ತಾಯಗೊಳಿಸಲು ಈಗಿನ ಅಂದಾಜಿನ ಪ್ರಕಾರ ಇನ್ನೆರಡು ವರ್ಷಗಳಕಾಲ ತೆಗೆದುಕೊಳ್ಳುವುದೆಂಬುದಾಗಿ ಪ್ರಧಾನಿ ನೆಹರೂ ಪಾರ್ಲಿಮೆಂಟಿನಲ್ಲಿ ಡಾ|| ರಾಮ್‌ಸುಭಾಗ್ ಸಿಂಗ್‌ರವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿರುವರು

ನೇಪಾಳದ ಸೇನಾ ಪಡೆಗಳ ಪುನರ್ವ್ಯವಸ್ಥೆಗಾಗಿ ಈ ನಿಯೋಗವನ್ನು ಕಳುಹಿಸಲಾಯಿತು.

ಮಂತ್ರಿಗಳ ವೇತನ

ಉತ್ತರಪ್ರದೇಶದ ಅಸೆಂಬ್ಲಿಗೆ ಡೆಪ್ಯುಟಿ ಸ್ಪೀಕರಾಗಿ ಕಾಂಗ್ರೆಸ್‌ಪಾರ್ಟಿಯ ಶ್ರೀ ಹರಗೋವಿಂದ ಪಂತರವರು ಚುನಾಯಿತರಾಗಿರುವರು. ಶಾಸನಸಭೆಯಲ್ಲಿ ಮಂತ್ರಿಗಳ ವೇತನವನ್ನು ನಿರ್ಧರಿಸಿ ನಿರ್ಣಯವೊಂದನ್ನು ಮಂಡಿಸಲಾಯಿತು. ಮಂತ್ರಿಗಳಿಗೆ ತಿಂಗಳಿಗೆ ೧೨೦೦ ರೂ. ಗಳು ಮತ್ತು ಉಚಿತ ಮೋಟಾರು, ವಾಸದ ಮನೆ, ಉಪಮಂತ್ರಿಗಳಿಗೆ ೬೫೦ ರೂ. ಮತ್ತು ೨೫೦ ರೂ. ಭತ್ಯವನ್ನು ಕೊಡಬೇಕೆಂದು ನಿರ್ಣಯದಲ್ಲಿ ಸೂಚಿಸಲಾಗಿದ್ದಿತು. ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು. ಈಗ ಅದನ್ನು ಮೇಲ್ಮನೆಯಲ್ಲಿ ಮಂಡಿಸಲಾಗುವುದು

ಕ್ಷಾಮಪ್ರದೇಶಕ್ಕೆ ಸಹಾಯ

ಗುಜರಾತಿನ ಕ್ಷಾಮಪ್ರದೇಶದಲ್ಲಿ ೧ ಲಕ್ಷ ರೂ. ಗಳನ್ನು ಕ್ಷಾಮಪರಿಹಾರಕ್ಕಾಗಿ ಗುಜರಾತ್ ಕ್ಷಾಮನಿವಾರಣಾ ಸಮಿತಿ ಖರ್ಚುಮಾಡಲಿದೆ,

ಜೂನ್ ೬ ರಿಂದ ಸತ್ಯಾಗ್ರಹ

ಬೊಂಬಾಯಿನಲ್ಲಿ ಆಹಾರಪದಾರ್ಥಗಳ ಬೆಲೆಯನ್ನು ಹೆಚ್ಚಿಸಿರುವುದನ್ನು ಖಂಡಿಸಲು ಜೂನ್ ೬ ರಿಂದ ಹರತಾಳ ಮತ್ತು ಸತ್ಯಾಗ್ರಹವನ್ನು ಹೂಡಬೇಕೆಂದು ಅಲ್ ಟ್ರೇಡ್ ಯೂನಿಯನ್ ಸಂಸ್ಥೆಗಳ ಪ್ರತಿನಿಧಿಗಳು ನಿರ್ಧರಿಸಿದ್ದಾರೆ.

ಆಹಾರ ರವಾನೆ ನಿರ್ಬಂಧ ರದ್ದು ?

ಪ್ರಾಂತಗಳ ನಡುವೆ ಆಹಾರ ರವಾನೆಯ ಮೇಲೆ ಹಾಕಲಾಗಿರುವ ನಿರ್ಬಂಧಗಳನ್ನು ಸದ್ಯದಲ್ಲಿಯೇ ತೆಗೆದುಹಾಕಲಾಗುವುದೆಂದು ಗೊತ್ತಾಗಿದೆ.

ಕೇಂದ್ರದ ಆಹಾರ ಸಚಿವ ರಫಿ ಅಹಮದ್ ಕಿದ್ವಾಯಿಯವರು ಈ ವಿಷಯದಲ್ಲಿ ಪ್ರಾಂತೀಯ ಸರ್ಕಾರಗಳೊಡನೆ ಈಗಾಗಲೇ ಖಾಸಗಿಯಾಗಿ ಚರ್ಚಿಸಿರುವರೆಂದು ಗೊತ್ತಾಗಿದೆ. ನಿರ್ಬಂಧಗಳನ್ನು ತೆಗೆದುಹಾಕಲು ಕೆಲವು ಪ್ರಾಂತಗಳು ಒಪ್ಪಿವೆಯೆಂದೂ ವರದಿಯಾಗಿದೆ.

ಮುಂದಿನ ತಿಂಗಳ ಮಧ್ಯಭಾಗದ ಹೊತ್ತಿಗೆ ಪ್ರಾಂತ್ಯಗಳ ಮುಖ್ಯಮಂತ್ರಿಗಳ ಮತ್ತು ಆಹಾರ ಸಚಿವರ ಸಮ್ಮೇಳನವನ್ನು ಆಹಾರ ಸಚಿವರು ಕರೆಯುವ ನಿರೀಕ್ಷೆಯಿದೆಯೆಂದೂ ಅವರು ತಿಳಿಸಿರುವರು.

ಚೀನಾದಿಂದ ೧ ಲಕ್ಷ ಟನ್ ಅಕ್ಕಿ

ಚೀನಾವು ಭಾರತಕ್ಕೆ ಈ ವರ್ಷದ ಸಾಲಿನಲ್ಲಿ ೧ ಲಕ್ಷ ಟನ್ ಅಕ್ಕಿಯನ್ನು ಕಳುಹಿಸಲು ಪೀಕಿಂಗ್‌ನಲ್ಲಿ ಭಾರತದ ರಾಯಭಾರಿ ಶ್ರೀ ಕೆ. ಎಂ. ಪಣಿಕ್ಕರ್‌ರವರಿಗೂ, ಚೀನಾದ ಆಹಾರ ಮಂತ್ರಿಯವರಿಗೂ ಒಪ್ಪಂದವಾಗಿದೆ. ಹೋದ ಸಾಲಿನಲ್ಲಿ ಚೀನಾವು ಭಾರತಕ್ಕೆ ೪ ಲಕ್ಷ ಟನ್ ಮೈಲೋವನ್ನು, ೬೫,೦೦೦ ಟನ್ ಅಕ್ಕಿಯನ್ನು ಭಾರತಕ್ಕೆ ಕಳುಹಿಸಿತ್ತು.

ಸೇವಾದಳದ ಮಹಿಳಾ ಶಿಬಿರದ ಮುಕ್ತಾಯ

ಮೈಸೂರು ಮೇ ೨೮

ಭಾರತ ಸೇವಾದಳದ ಮಹಿಳಾ ಶಿಬಿರದ ಮುಕ್ತಾಯ ಸಮಾರಂಭವು ಭಾನುವಾರ ಸಂಜೆ ೬|| ಗಂಟೆ ಮೈಸೂರು ಪುರಭವನದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆ ನಡೆಯುತ್ತದೆ.

ನ್ಯೂ ಅಪೇರ ಟಾಕೀಸ್
23—5—52 ರಿಂದ
ಅಮೋಘವಾದ
3ನೇ ವಾರ
ಪ್ರತಿದಿನ 3 ಆಟಗಳು
ಜೂಪಿಟರ್ಸ್‌ರವರ—
* ರಾಣಿ *
(ತಮಿಳು)
ಪಾತ್ರ:— ‡ ಭಾನುಮತಿ ‡
‡ ಬಾಲಚಂದರ್ ‡
‡ ವಹಾಬ್ ಕಾಶ್ಮೀರಿ ‡

ಕ್ಷಾಮ ಪರಿಹಾರಕ್ಕೆ ನಿರಾಕರಣೆ

ಬೆಂಗಳೂರು ಮೇ ೨೮

ಸಂಸ್ಥಾನದ ಕೋಲಾರ ಜಿಲ್ಲೆ ಮತ್ತಿತರ ಕ್ಷಾಮ ಪರಿಸ್ಥಿತಿಯಿರುವ ಪ್ರದೇಶಗಳಲ್ಲಿ ಪರಿಹಾರ ಒದಗಿಸಲು ಮೈಸೂರು ಸರ್ಕಾರಕ್ಕೆ ಸಹಾಯ ಕೋರಿ ಮಾಡಿದ್ದ ಪ್ರಾರ್ಥನೆಯನ್ನು ಕೇಂದ್ರ ಸರ್ಕಾರ ನಿರಾಕರಿಸಿದೆ ಯೆಂದು ಹೇಳಲಾಗಿದೆ.

ಅವಶ್ಯ ಪರಿಹಾರ ಒದಗಿಸುವುದು ಸ್ವಕೀಯ ಸರ್ಕಾರದ ಪ್ರಾಥಮಿಕ ಕರ್ತವ್ಯವೆಂದೂ ಮತ್ತು ಆ ಪ್ರದೇಶಗಳಲ್ಲಿರುವ ಈಗಿನ ಪರಿಸ್ಥಿತಿಗೆ ತಮ್ಮ ಸಹಾಯ ಅವಶ್ಯಕವಾಗಿಲ್ಲವೆಂದೂ ಕೇಂದ್ರ ಸರ್ಕಾರ ತಿಳಿಸಿದೆಯೆಂದು ಗೊತ್ತಾಗಿದೆ

ವಿಶೇಷಾಧಿಕಾರಿ

ಸರ್ಕಾರದ ಅಸಿಸ್ಟೆಂಟ್ ಕಾರ್ಯದರ್ಶಿ ಶ್ರೀ ಪಿ. ಹೊನ್ನಪ್ಪನವರನ್ನು ಶಾಸನಸಭಾಧಿವೇಶನದ ವ್ಯವಸ್ಥೆ ಸಂಬಂಧದಲ್ಲಿ ವಿಶೇಷಾಧಿಕಾರಿಯಾಗಿ ನೇಮಿಸಲಾಗಿದೆ.

ಸಾಂಸ್ಕೃತಿಕ ನಿಯೋಗ ಕಳುಹಿಸುವುದಿಲ್ಲ

ರಷ್ಯಾಕ್ಕೆ ಸದ್ಯದಲ್ಲಿ ಯಾವ ಸಾಂಸ್ಕೃತಿಕ ನಿಯೋಗವನ್ನು ಕಳುಹಿಸುವ ಸಂಭವವಿಲ್ಲವೆಂದು ಪ್ರಧಾನಿ ಪಂಡಿತ ನೆಹರೂರವರು ನಿನ್ನೆ ಪಾರ್ಲಿಮೆಂಟಿನಲ್ಲಿ ಪ್ರಶ್ನೆಯೊಂದಕ್ಕೆ ತಿಳಿಸಿದ್ದಾರೆ.

ಮಹಿಳೆಯರಿಗೆ ಪುರುಷರಷ್ಟೇ ರಾಜಕೀಯ ಹಕ್ಕುಬಾಧ್ಯತೆ

ಮಹಿಳೆಯರಿಗೆ ಪುರುಷರಷ್ಟೇ ರಾಜಕೀಯ ಹಕ್ಕುಬಾಧ್ಯತೆಗಳನ್ನು ಕಲ್ಪಿಸಿಕೊಡುವ ಭರವಸೆನೀಡುವ ಬಗ್ಗೆ ಸಂಸ್ಥೆಯೊಂದನ್ನು ರಚಿಸಲು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯು ಶಿಫಾರ್ಸು ಮಾಡಿದೆ.

ಸಿಂಹಳದ ಪ್ರಧಾನಿಯ ಜಯ

ಸಿಂಹಳದ ಪ್ರಧಾನಿ ಡಡ್ಲಿ ಸೇನಾನಾಯಕೆಯವರು ಮಹಾ ಚುನಾವಣೆಯಲ್ಲಿ ಟ್ರಾಟ್‌ಸ್ಕೈಟ್ ನವಲಂಕಾ ಸಮ ಸಮಾಜಪಕ್ಷದ ಹೆಕ್ಟರ್ ವಿಜಯ ತುಂಗಿಯವರನ್ನು ಸೋಲಿಸಿ ಪ್ರಜಾಪ್ರತಿನಿಧಿಸಭೆಯಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ.

ಚಿನ್ನ ಬೆಳ್ಳಿ ದರಗಳು

	28–5–52 ರೂ.
ಸವರನ್	64-1-2
"	64–13
ಚಿನ್ನ ತೊಲ	90–10
" ಮೂಸ	89–8
ಬೆಳ್ಳಿ 100 ತೊಲ	161–8
" ತೊಲ	1–11

ಪೇಟೆ ಧಾರಣೆ

ಮೈಸೂರು ತಾ|| 28-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ	ಪಲ್ಲಾಕ್ಕೆ	10-8	14-12
ಹೊಂಗೆಬೀಜ	"	——	——
ಹುರುಳಿ	"	35-12	37-8
ಹೆಸರು	"	56-4	56–10
ಸೀಗೆಕಾಯಿ	"	3–5	—
ಮೆ. ಕಾಯಿ	ಮಣಕ್ಕೆ	13-9	—
ಹುಣಸೇಹಣ್ಣು	"	1-7	4–7
ತೆಂಗಿನಕಾಯಿ	1100ಕ್ಕೆ	90	132

ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣೆ

೧೯೫೨ನೇ ಮಾರ್ಚಿ-ಏಪ್ರಿಲ್‌ನ ವಿಶ್ವವಿದ್ಯಾನಿಲಯದ ಈ ಕೆಳಗೆ ನಮೂದಿಸಿರುವ ಪರೀಕ್ಷೆಗಳ ಫಲಿತಾಂಶವು ೧೯೫೨ನೇ ಜೂನ್ ೧ನೇ ತಾ|| ಬೆಳಗ್ಗೆ ೯ ಗಂಟೆಗೆ ಪ್ರಕಟಿಸಲಾಗುತ್ತದೆ-

೧. ಇಂಟರ್‌ಮೀಡಿಯಟ್ ಇನ್ ಆರ್ಟ್ಸ್, ೨. ಇಂಟರ್‌ಮೀಡಿಯಟ್ ಇನ್ ಸೈನ್ಸ್, ೩. ಇಂಟರ್‌ಮೀಡಿಯಟ್ ಇನ್ ಕಾಮರ್ಸ್, ೪. ಬಿ.ಎ. ಡಿಗ್ರಿ, ೫. ಬಿ.ಎಸ್‌ಸಿ. ಡಿಗ್ರಿ, ೬. ಬಿ. ಕಾಂ, ೭. ಬಿ.ಎ. (ಆನರ್ಸ್) ಪ್ರಿಲಿಮಿನರಿ, ೮. ಬಿ. ಎಸ್‌ಸಿ. (ಆನರ್ಸ್) ಪ್ರಿಲಿಮಿನರಿ, ೯. ಬಿ. ಎಸ್‌ಸಿ. ಟೆಕ್ಸ್‌ಟೈಲ್, ೧೦. ಬಿ ಎಸ್. ಸಿ. ಅಗ್ರಿಕಲ್ಚರ್, ೧೧. ಇಂಜನಿಯರಿಂಗ್-

ಅಪ್ಪಣೆ ಮೇರೆ,
ಸಿ. ರಂಗಾಚಾರ್, ರಿಜಿಸ್ಟ್ರಾರ್.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂಟರ್ಸ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೬೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ
ಸಂಪುಟ ೨] ೩೦ ೫—೧೯೫೨ನೇ ಶುಕ್ರವಾರ [ಸಂಚಿಕೆ ೨೬೭

ರೇಷನ್ ಡಿಪೋಗಳಲ್ಲಿ ಎಷ್ಟು ಸಕ್ಕರೆ ಬೇಕಾದರೂ ತೆಗೆದುಕೊಳ್ಳಬಹುದು

ಬೆಂಗಳೂರು ಮೇ ೨೯

ಇತ್ತೀಚೆಗೆ ಸಕ್ಕರೆ ಉತ್ಪನ್ನವು ಹೆಚ್ಚಾಗಿರುವುದರಿಂದ ಸಕ್ಕರೆ ಪಡಿತರ ಪದ್ಧತಿಯನ್ನು ಭಾರತ ಸರ್ಕಾರವು ರದ್ದುಗೊಳಿಸಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಆದರೆ ಬೆಲೆ ಹತೋಟಿ ಮತ್ತು ಕಾರ್ಖಾನೆಗಳಿಂದ ಸರಬರಾಜು ಹತೋಟಿ ಮಾತ್ರ ಮುಂದುವರಿಯುತ್ತದೆ

ಕೇಂದ್ರ ಸರ್ಕಾರದ ಈ ನೀತಿಯನ್ನು ಮೈಸೂರು ಸರ್ಕಾರವೂ ಅನುಸರಿಸಿ ಸಂಸ್ಥಾನದಲ್ಲಿ ಸಕ್ಕರೆ ಪಡಿತರವನ್ನು ಕೂಡಲೇ ರದ್ದುಗೊಳಿಸಿದೆ. ರೇಷನ್‌ದಾರರು ತಮ್ಮ ರೇಷನ್‌ಕಾರ್ಡುಗಳನ್ನು ತಮ್ಮ ರೇಷನ್ ಡಿಪೋಗಳಿಗೆ ತೆಗೆದುಕೊಂಡು ಹೋಗಿ ತಮಗೆ ಬೇಕಾದಷ್ಟು ಸಕ್ಕರೆಯನ್ನು ಸರ್ಕಾರಿ ದರದಲ್ಲಿ ಕೊಳ್ಳಬಹುದೆಂದು ಆಹಾರ ಶಾಖಾ ಡೈರೆಕ್ಟರು ಒಂದು ಪ್ರಕಟಣೆ ಹೊರಡಿಸಿರುವರು.

ಕೊಲೆ ಅಪಾದನೆಗಾಗಿ ಸೆಷನ್ಸಿಗೆ

ಮೈಸೂರು ಮೇ ೨೯

ತಲಕಾಡಿನ ಪುಟ್ಟೇಗೌಡ ಮತ್ತು ಸಂಜೀಗೌಡ ಎಂಬುವರನ್ನು ಎರಡುವರ್ಷಗಳಹಿಂದೆ ಕೊಲೆಮಾಡಿ ಸದರಿಯವರ ಮನೆಗೆ ಬೆಂಕಿ ಹಾಕಿದರೆಂಬ ಅಪಾದನೆಮೇಲೆ ಅಲ್ಲಿನ ಚಿಕ್ಕರಂಗೇಗೌಡ ಮತ್ತು ಇತರ ೨೯ ಜನ ಅಪಾದಿತರಪೈಕಿ ಕುಳ್ಳನರಸ ಎಂಬುವವನನ್ನು ಬಿಟ್ಟು ಉಳಿದವರೆಲ್ಲರನ್ನೂ ವಿಶೇಷ ನ್ಯಾಯಾಧೀಶರಾದ ಶ್ರೀ ಡಿ-ಆರ್. ನರಸಿಂಗರಾಯರು ಸೆಷನ್ಸ್ ವಿಚಾರಣೆಗೆ ಈದಿನ ಗುರಿಪಡಿಸಿರುವರು.

ವಿಶ್ವವಿದ್ಯಾನಿಲಯದ ಪರೀಕ್ಷಾ ಫಲಿತಾಂಶ

ಮೈಸೂರು ಮೇ ೨೯

ಮಾರ್ಚಿ, ಏಪ್ರಿಲ್ ತಿಂಗಳುಗಳಲ್ಲಿ ನಡೆದ ವಿಶ್ವವಿದ್ಯಾನಿಲಯದ ನಾನಾ ಪರೀಕ್ಷೆಗಳ ಫಲಿತಾಂಶಗಳು ಜೂನ್ ಒಂದನೇ ತಾರೀಖು ಬೆಳಗ್ಗೆ ಒಂಭತ್ತುಗಂಟೆಗೆ ಪ್ರಕಟವಾಗುತ್ತದೆ

ಖುಲಾಸೆ

ರಾಜಧಾನಿಯ ಪೂರ್ಣಿಮಾ ಪಿಕ್ಚರ್ಸ್‌ರವರಲ್ಲಿ ಕೆಲಸ ಕೊಡಿಸುವುದಾಗಿ ಹೇಳಿ ಹಲವರಿಂದ ದುಡ್ಡು ಪಡೆದು ಮೋಸಮಾಡಿದರೆಂದು ವಿಚಾರಣೆಗೆ ಗುರಿಯಾಗಿದ್ದ ಶ್ರೀ. ಎಂ. ಎಸ್. ಬೋರಯ್ಯನವರು ತಪ್ಪಿತಸ್ಥರಲ್ಲವೆಂದು ಈದಿನ ನಗರದ ನ್ಯಾಯಾಧೀಶರು ಖುಲಾಸೆ ಮಾಡಿದರು.

Rajakamal
MYSORE
FROM 30-5-52
Daily 3 Shows
ZORRO'S
FIGHTING
LEGION
A Thrilling full Republic's
Serial

ಅಕ್ಕಿ ಪಡಿತರ ನಿಗದಿಯಿಲ್ಲ

ಮದ್ರಾಸಿನಲ್ಲಿ ಅಕ್ಕಿ ಪಡಿತರವನ್ನು ಹೆಚ್ಚಾಗಿ ಕೊಡುವ ವಿಷಯದಲ್ಲಿ ಕೇಂದ್ರ ಆಹಾರಸಚಿವ ಮಿ|| ಕಿದ್ವಾಯಿಯವರು ಪತ್ರಿಕಾಪ್ರತಿನಿಧಿಗಳೊಡನೆ ಮಾತನಾಡುತ್ತಾ, ಅಕ್ಕಿ ಪಡಿತರವನ್ನು ಇಷ್ಟೇ ಕೊಡಬೇಕೆಂದು ನಿಗದಿಮಾಡಿಲ್ಲ ಸರ್ಕಾರವು ಇನ್ಯಾವ ಆಹಾರವಸ್ತುವನ್ನೂ ಕೊಡದೆ ಪೂರ್ತಿ ಅಕ್ಕಿಯನ್ನೇ ಕೊಟ್ಟರೆ ತಮಗೆ ಪರಮ ಸಂತೋಷವೆಂದು ಹೇಳಿರುವರು.

ರೇಷನ್‌ದಾರ ಸಂಘದ ಸಭೆ

ಮೈಸೂರು ರೇಷನ್‌ದಾರರ ಸಂಘದ ಕಾರ್ಯಕಾರಿ ಸಮಿತಿಸಭೆಯು ೨೮ ನೇ ತಾ|| ನಡೆದು ಶ್ರೀ ಎಂ ಸಿ. ನರಸಿಂಹಯ್ಯನವರು ಕಾರ್ಯದರ್ಶಿಗಳಸ್ಥಾನಕ್ಕೆ ಸಲ್ಲಿಸಿದ್ದ ರಾಜೀನಾಮೆಯನ್ನು ಅಂಗೀಕರಿಸಿತು.

ಆಹಾರಬೆಲೆ ಹೆಚ್ಚಿದಪರಿಣಾಮ ವಿಶೇಷವಾಗಿ ಆಹಾರ ವಸ್ತುಗಳು ಖರ್ಚಾಗದೆ ಕೆಟ್ಟುಹೋಗುತ್ತಿರುವುದರಿಂದ ಅವನ್ನು ಹಿಂದಿನದರಕ್ಕೆ ಮಾರಬೇಕೆಂದೂ, ಗೋಧಿಯನ್ನು ರೂಗೆ ೩ ಸೇರು ಹಿಟ್ಟನ್ನು ರೂಗೆ ೬ ಪೌಂಡುಗಳಂತೆ ಮಾರಬೇಕೆಂದು ಸಭೆ ತೀರ್ಮಾನಿಸಿದೆ.

ಶ್ರೀ ಎಲ್. ಎಸ್. ರಾಜುರ ಅಪೀಲು ಮೊಕದ್ದಮೆ ಬೊಂಬಾಯಿಗೆ ವರ್ಗ

ಭಾರತ ಸುಪ್ರೀಂ ಕೋರ್ಟಿನ ಆಜ್ಞೆ

ಬೆಂಗಳೂರು ಮೇ ೨೯

ಮೈಸೂರು ಶ್ರೇಷ್ಠ ನ್ಯಾಯಮೂರ್ತಿ ಶ್ರೀ ಮೇದಪ್ಪನವರ ವಿಷಪ್ರಯೋಗ ಅಪಾದನೆ ಮೊಕದ್ದಮೆಯಲ್ಲಿ ವಿಶೇಷ ನ್ಯಾಯಾಲಯ ಇತ್ತಿದ್ದ ತೀರ್ಪಿನ ಮೇಲೆ ಶ್ರೀ ರಾಜುರವರು ಅಪೀಲು ಹಾಕಿ, ಅಪೀಲು ವಿಚಾರಣೆಯು ಮೈಸೂರಿನಿಂದ ಹೊರಗಿನ ನ್ಯಾಯಾಲಯವೊಂದರಲ್ಲಿ ನಡೆಯುವಂತೆ ಆಜ್ಞೆ ಮಾಡುವಂತೆ ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದರು.

ಈ ಅಪೀಲ್ ಮೊಕದ್ದಮೆಯು ಬೊಂಬಾಯಿ ಮುಖ್ಯ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುವಂತೆ ಭಾರತ ಶ್ರೇಷ್ಠ ನ್ಯಾಯಾಲಯವು ಈ ಮೊಕದ್ದಮೆಯನ್ನು ಮೈಸೂರು ಹೈಕೋರ್ಟಿನಿಂದ ಬೊಂಬಾಯಿಯ ಹೈಕೋರ್ಟಿಗೆ ವರ್ಗಾಯಿಸಿ ಈ ದಿನ ಆಜ್ಞೆಯಿತ್ತಿದೆ.

ಈ ವಿಷಪ್ರಾಶನ ಮೊಕದ್ದಮೆಯನ್ನು ವಿಶೇಷ ನ್ಯಾಯಾಲಯದಲ್ಲಿ ಬೊಂಬಾಯಿನ ಶ್ರೀ ಹೊನ್ನಾವರ್‌ರವರು ವಿಚಾರಿಸುವಂತೆ ಸರ್ಕಾರ ಏರ್ಪಡಿಸಿತ್ತು. ವಿಚಾರಣೆ ನಡೆಸಿ ಹೊನ್ನಾವರ್‌ರವರು ಶ್ರೀ ಎಲ್. ಎಸ್. ರಾಜುರವರಿಗೆ ೨ ವರ್ಷ ಸಾದಾ ಸಜ, ೨೦೦೦ ರೂ. ಜುಲ್ಮಾನೆ ವಿಧಿಸಿದರು. ಆ ತೀರ್ಪಿನ ಮೇಲೆ ಶ್ರೀ ಎಲ್. ಎಸ್. ರಾಜು ಅಪೀಲ್ ಹೂಡಿದ್ದಾರೆ.

ಯಾರಿಗೆಬೇಕಾದರೂ ಅಕ್ಕಿ ತರಿಸಲು ರಹದಾರಿ

ವಿದೇಶಗಳಿಂದ ಅಕ್ಕಿಯನ್ನು ತರಿಸಿ ಮಾರಲು ಯಾರಾದರೂ ಮುಂದೆ ಬಂದರೆ ಎಷ್ಟುಬೇಕಾದರೂ ಅಕ್ಕಿಯನ್ನು ತರಿಸಲು ಅವರಿಗೆ ಅನಾಯಾಸವಾಗಿ ರಹದಾರಿಯನ್ನು ಕೊಡಲಾಗುತ್ತದೆಯೆಂದು ಕೇಂದ್ರ ಆಹಾರ ಮಂತ್ರಿ ಕಿದ್ವಾಯಿಯವರು ಮದ್ರಾಸಿನಲ್ಲಿ ಹೇಳಿರುವುದಾಗಿ ವರದಿಯಾಗಿದೆ

ಹಾಗೆ ಹೆಚ್ಚಿನ ಬೆಲೆಯಲ್ಲಿ ತರಿಸಿದ ಅಕ್ಕಿಯನ್ನು ಕೊಳ್ಳುವವರಿರುವರೇ ಎಂಬುದೇ ಮುಖ್ಯ ಪ್ರಶ್ನೆ ಎಂದೂ ಅವರು ಹೇಳಿರುವರು.

ಹಿಂದೂ- ಮುಸ್ಲಿಂ ವಿವಾಹ ಘಟನೆ

ಜನ ಸಂಘದ ಅಧ್ಯಕ್ಷರಾದ ಡಾ|| ಶ್ಯಾಮಪ್ರಸಾದ್ ಮುಖರ್ಜಿಯವರು ಹೇಳಿಕೆಯೊಂದನ್ನಿತ್ತು. ಕಳೆದ ಶನಿವಾರದಂದು ಹಿಂದೂ-ಮುಸ್ಲಿಂ ವಿವಾಹ ಪ್ರಯತ್ನದ ಸಂಬಂಧದಲ್ಲಿ ನಡೆದ ಘಟನೆಗಳ ಸಂದರ್ಭ ಕುರಿತು ವಿಚಾರಣೆ ನಡೆಸಲು ನಿಷ್ಪಕ್ಷಪಾತ ವಿಚಾರಣಾ ಸಮಿತಿಯೊಂದನ್ನು ಕೂಡಲೇ ನೇಮಿಸಬೇಕೆಂದು ತಿಳಿಸಿದ್ದಾರೆ.

ಟೆಕ್ಸ್‌ಟೈಲ್ ಕೇಂದ್ರ

ಕೊಯಮತ್ತೂರಿನಲ್ಲಿ ೩೬ ಲಕ್ಷರೂಪಾಯಿಗಳ ವೆಚ್ಚದಲ್ಲಿ ಒಂದು ಟೆಕ್ಸ್‌ಟೈಲ್ ಸಂಶೋಧನಾಕೇಂದ್ರವನ್ನು ಸ್ಥಾಪಿಸಲಾಗುತ್ತದೆ. ಇದಕ್ಕಾಗಿ ಮದರಾಸ್ ಸರ್ಕಾರಕ್ಕೆ ಕೇಂದ್ರಸರ್ಕಾರವು ನೆರವು ನೀಡಲಿದೆ.

ಮಹಾರಾಜರ ಪ್ರವಾಸ ರದ್ದು

ಮೈಸೂರು ಮೇ ೨೯

ತಿರುವಾಂಕೂರು ಕೊಚ್ಚಿನ್ ಪ್ರಾಂತ್ಯಗಳಲ್ಲಿ ನಡೆಯಬೇಕಾಗಿದ್ದ ಶ್ರೀಮನ್ಮಹಾರಾಜರವರ ಪ್ರವಾಸ ರದ್ದಾಗಿದೆ ಜೂನ್ ಒಂದನೇ ತಾರೀಖಿನಿಂದ ೩ ದಿನಗಳಕಾಲ ಬಂಡೀಪುರದಕಾರ್ಯಕ್ರಮವನ್ನಿಟ್ಟುಕೊಂಡಿರುವರು.

ಮೈಸೂರಿನಲ್ಲಿ ಮಳೆ

ಮೈಸೂರು ಮೇ ೨೯

ನಿನ್ನೆರಾತ್ರಿ ಮೈಸೂರುನಗರದಲ್ಲಿ ಭಾರಿ ಮಳೆಯಾಯಿತು. ಸುಮಾರು ೨ ಗಂಟೆ ಕಾಲ ಧಾರಾಕಾರವಾಗಿ ಸುಮಾರು ೧.೩೫ ಅಂಗುಲ ಮಳೆಯಾಗಿದೆ.

ಗೋಧಿ ಪಡಿತರ ರದ್ದುಗೊಳಿಸಲು ಮಾತುಕತೆ

ಗೋಧಿ ಮತ್ತು ಇತರ ಆಹಾರವಸ್ತುಗಳಪಡಿತರವನ್ನು ರದ್ದುಗೊಳಿಸುವ ವಿಷಯವನ್ನು ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಕೇಂದ್ರದ ಆಹಾರಸಚಿವ ಮಿ|| ಕಿದ್ವಾಯಿಯವರೊಡನೆ ಮಾತುಕತೆ ನಡೆಸುತ್ತಲಿರುವುದಾಗಿ ಗೊತ್ತಾಗಿದೆ.

ಕೆ.ಎಂ.ಪಿ-ಸೋಷಲಿಸ್ಟ್

ಶಾಸನಸಭೆಗಳಲ್ಲೂ ಹೊರಗೂ ಕೆ. ಎಂ. ಪಿ- ಮತ್ತು ಸೋಷಲಿಸ್ಟ್ ಪಕ್ಷಗಳು ಒಟ್ಟುಗೂಡಿ ಕೆಲಸಮಾಡಲು ನಿರ್ಧರಿಸಿವೆ. ಶಾಸನಸಭೆಗಳಲ್ಲಿ ಈ ಎರಡು ಪಕ್ಷಕ್ಕೆ ಒಂದೇ ಪಾರ್ಲಿಮೆಂಟರಿ ಪಕ್ಷ ಮತ್ತು ಒಬ್ಬ ನಾಯಕರು ಇರುತ್ತಾರೆ.

ದೆಹಲಿಯಲ್ಲಿ ಕೆ. ಎಂ. ಪಿ. ನಾಯಕ ಆಚಾರ್ಯ ಕೃಪಲಾನಿ ಮತ್ತು ಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶ ನಾರಾಯಣರವರು ೩ ಗಂಟೆಕಾಲ ಮಾತುಕತೆ ನಡೆಸಿ ಈರೀತಿ ತೀರ್ಮಾನಕ್ಕೆ ಬಂದಿರುವರು.

ಮುಖ್ಯ ಮಂತ್ರಿಗಳ ಬಳಿಗೆ ಎನ್. ಜಿ. ಓ. ಸಂಘದ ನಿಯೋಗ

ಬೆಂಗಳೂರು ಮೇ ೨೮

ಸಂಸ್ಥಾನದ ನಾನ್‌ಗೆಜೆಟೆಡ್ ಅಧಿಕಾರಿಗಳ ಸಂಘದ ನಿಯೋಗವೊಂದು ಈ ಬೆಳಿಗ್ಗೆ ಮುಖ್ಯ ಮಂತ್ರಿಗಳನ್ನು ಅವರ ನಿವಾಸವಾದ 'ಕುಮಾರ ಕೃಪಾ'ದಲ್ಲಿ ಭೇಟಿ ಮಾಡಿ, ಸಂಸ್ಥಾನದ ನಾನ್‌ಗೆಜೆಟೆಡ್ ನೌಕರರ ಸಂಬಳ ಮತ್ತು ಭತ್ಯಗಳನ್ನು ಕೇಂದ್ರ ಸರ್ಕಾರದ ನೌಕರರ ಸಂಬಳ-ಸಾರಿಗೆಗಳ ಮಟ್ಟದಲ್ಲಿಯೇ ಗೊತ್ತುಮಾಡಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿತು.

ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದ ಕಡಿಮೆ ಸಂಬಳ ಪಡೆಯುತ್ತಿರುವ ಸಂಸ್ಥಾನದ ನೌಕರರು ಅನುಭವಿಸುತ್ತಿರುವ ಕಷ್ಟಕಾರ್ಪಣ್ಯಗಳನ್ನು ನಿಯೋಗದವರು ಮುಖ್ಯ ಮಂತ್ರಿಗಳಿಗೆ ವಿವರಿಸಿ, ವಿಶೇಷ ಅಲೋಯನ್ಸನ್ನು ತಮಗೆ ಕೊಟ್ಟು ಈ ವಿಷಯದಲ್ಲಿ ಸ್ವಲ್ಪ ಪರಿಹಾರ ಒದಗಿಸಬೇಕೆಂದು ಪ್ರಾರ್ಥಿಸಿದರು. ಸರ್ಕಾರವು ಜಾರಿಗೆ ತರಬೇಕೆಂದಿರುವ ರಟ್ರೆಂಚ್‌ಮೆಂಟ್ ನೀತಿಯಲ್ಲಿ ಸಾವಧಾನ ನೀತಿಯನ್ನು ಅನುಸರಿಸಬೇಕೆಂದೂ ಅವರು ಕೋರಿದರು.

ಮುಖ್ಯ ಮಂತ್ರಿಗಳು ಸಂಸ್ಥಾನದ ನೌಕರರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿ, ತಮ್ಮ ಕುಂದುಕೊರತೆಗಳ ನಿವಾರಣೆ ಬಗ್ಗೆ ಸ್ಪಷ್ಟವಾದ ಹಾಗೂ ರಚನಾತ್ಮಕವಾದ ಸಲಹೆಗಳನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸಲಹೆ ನೀಡಿದರು. ಅಂತಹ ಸಲಹೆಗಳು ಮಂಡಿಸಲ್ಪಟ್ಟಲ್ಲಿ ಸಂಸ್ಥಾನದ ಎನ್. ಜಿ. ಓ. ಗಳ ಸ್ಥಿತಿಯು ಉತ್ತಮಗೊಳ್ಳಲು ಸರ್ಕಾರವು ತನ್ನ ಕೈಲಾದುದೆಲ್ಲವನ್ನೂ ಮಾಡುವುದಾಗಿ ಅವರು ತಿಳಿಸಿದರು.

ಪೋಲೀಸ್ ಮುಖ್ಯಾಧಿಕಾರಿಗಳ ಪರಿಶೀಲನೆ

ಮೈಸೂರು ಮೇ ೨೯

ಪೋಲೀಸ್ ಮುಖ್ಯಾಧಿಕಾರಿ ಶ್ರೀ ಎಸ್. ವಿ. ಬಾಬುರೆಡ್ಡಿಯವರು ಈದಿನ ನಗರದಲ್ಲಿರುವ ನಾನಾ ಪೋಲೀಸ್‌ಕೇಂದ್ರಗಳನ್ನು ಪರಿಶೀಲಿಸಿದರು. ಬೆಂಗಳೂರಿನಲ್ಲಿರುವ ಪೋಲೀಸ್ ಟ್ರೇನಿಂಗ್ ಸ್ಕೂಲನ್ನು ಮೈಸೂರಿನಲ್ಲಿ ಮಹಾರಾಜರವರ ಸ್ವಂತ ದಳವಿದ್ದ ಸ್ಥಾನಕ್ಕೆ ಬದಲಿಸಿದೆ.

ಚಿನ್ನ ಬೆಳ್ಳಿ ದರಗಳು

29–5–52	ರೂ.
ಸವರನ್	64-1-2
,,	64–14
ಚಿನ್ನ ತೊಲ	90–8
,, ಮೂಸ	89–0
ಬೆಳ್ಳಿ 100 ತೊಲ	159–8
,, ತೊಲ	1–11

ಒದಗಿಸುವುದಾದರೆ ಎಷ್ಟು ಬೇಕಾದರೂ ಕೊಡಿ

ಮದ್ರಾಸ್ ಜನರಿಗೆ ಅಕ್ಕಿ ಪಡಿತರ ೬ ಔನ್ಸುಗಳಿಗಿಂತ ಹೆಚ್ಚಾಗಿ ಬೇಕೆಂದು ಹೇಳಲಾಗಿ ಮದ್ರಾಸ್ ಸರ್ಕಾರವು ೧೦ ಔನ್ಸ್ ಅಕ್ಕಿಯನ್ನು ಕೊಡಲು ಸಾಧ್ಯವಾದರೆ ತಮ್ಮ ಅಭ್ಯಂತರವೇನೂ ಇಲ್ಲವೆಂದು ಹೇಳಿರುವರು.

ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್ ಉಪಾಧ್ಯಕ್ಷ ಸ್ಥಾನಕ್ಕೆ

ಪಾರ್ಲಿಮೆಂಟಿಗೆ ಡೆಪ್ಯುಟಿ ಸ್ಪೀಕರಾಗಿ ಶ್ರೀ ಎಂ. ಅನಂತಶಯನ ಅಯ್ಯಂಗಾರ್ ಮತ್ತು ಕೌನ್ಸಿಲ್‌ಆಫ್ ಸ್ಟೇಟಿಗೆ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರನ್ನು ಡೆಪ್ಯುಟಿ ಚೇರ್ಮನ್ನಾಗಿ ನಿಲ್ಲಿಸಲು ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷವು ನಿರ್ಧರಿಸಿದೆ.

ಕಾಂಗ್ರೆಸ್ಸಿನಲ್ಲಿ ಪ್ರತಿಪಕ್ಷ

ನೇಪಾಳ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಅಲ್ಲಿಯ ಮಾಜಿ ಗೃಹಸಚಿವ ಶ್ರೀ ಬಿ. ಪಿ. ಕೊಯಿರಾಲಾರವರು ಚುನಾಯಿತರಾಗಿದ್ದಾರೆ. ಈ ಚುನಾವಣೆಯನ್ನು ಪ್ರತಿಭಟಿಸಿ ಸಂಚಾರ ಖಾತಾ ಸಚಿವ ಶ್ರೀ ಭದ್ರಕಾಳಿ ಮಿಶ್ರರವರು ೩೦ ಜನ ಅನುಯಾಯಿಗಳು ಪ್ರತಿ ಕಾಂಗ್ರೆಸ್ ಪಕ್ಷ ರಚಿಸುವುದಾಗಿ ಹೇಳಿರುವರು.

೮೦೦೦ ಕಾರ್ಮಿಕರ ಪ್ರತಿಭಟನೆ

ಇಂದೂರು ಬಟ್ಟೆ ಗಿರಣಿಯೊಂದನ್ನು ಮುಚ್ಚಿರುವುದರ ವಿರುದ್ಧ ಸುಮಾರು ೮,೦೦೦ ಮಂದಿ ಕಾರ್ಮಿಕರು ಸ್ವತಂತ್ರ ಮಜದೂರ್ ಪಂಚಾಯತ್ ಮತ್ತು ಮಜದೂರ್ ಸಭಾ ಆಶ್ರಯದಲ್ಲಿ ಭಾರಿ ಪ್ರತಿಭಟನಾ ಪ್ರದರ್ಶನ ನಡೆಸಿದರು.

UNIVERSITY OF MYORE.

Notification

It is hereby notified for the information of candidates, who appeared for the marginally noted Examinations of March–April 1952, that the Marks Cards will be sent to the Heads of Colleges concerned, from which the candidates appeared for the Examination.

Candidates may obtain their marks cards from the Heads of the Colleges concerned on or after Wednesday, the 4th June 1952.

I.A., I.Sc., I.Com., B.Com., B.A., B.Sc., B.A.Hons. Preliminary, B.Sc.Hons. Preliminary, L.M.P., F.L., B.L., B.T., B.Sc.(Agri.) B.Sc.(Text.) Engineering.

By Order,
Sd/- C. RANGACHAR,
Registrar.

ಭೂಮಿಯಿಲ್ಲದವರಿಗೆ ಭೂಮಿ ಹಂಚಲು ಚಳುವಳಿ

ಭೂಮಿಯಿಲ್ಲದವರಿಗೆ ಭೂಮಿಯು ಹಂಚಲ್ಪಡುವಂತೆ ದೇಶದಾದ್ಯಂತ ಶಾಂತರೀತಿಯ ಚಳುವಳಿಯನ್ನು ನಡೆಸಲು ಸೋಷಲಿಸ್ಟ್ ಪಕ್ಷದ ಕಾರ್ಯಕಾರಿ ಸಮಿತಿಯು ಶ್ರೀ ಜಯಪ್ರಕಾಶ ನಾರಾಯಣ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ.

ಪಕ್ಷದ ಸದಸ್ಯರು ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚಾದ ಭೂಮಿಯನ್ನು ಹೊಂದಿದ್ದಲ್ಲಿ ಅದನ್ನು ಭೂಮಿಯಿಲ್ಲದ ರೈತರಿಗೆ ಹಂಚಬೇಕೆಂದು ತಿಳಿಸಿರುವುದಾಗಿಯೂ ಸಹ ಜಯಪ್ರಕಾಶರು ತಿಳಿಸಿ ಈ ಪ್ರಮಾಣ ೩೦ ರಿಂದ ೫೦ ಎಕರೆಗಳಷ್ಟು ಆಗಬಹುದೆಂದು ಹೇಳಿರುವರು.

ಅಲ್ಲದೆ ಚಳುವಳಿಯ ಪ್ರಥಮ ಅಂಗವಾಗಿ ಈಗ ಸಾಗುವಳಿಯಾಗದ ಭೂಮಿಯನ್ನು ಸರ್ಕಾರದಿಂದ ಪಡೆಯುವ ಪ್ರಯತ್ನವನ್ನು ಮಾಡಲಾಗುವುದೆಂದೂ ಸಹ ತಿಳಿಸಿದ್ದಾರೆ.

ಕೊಡಗಿನ ಅಕ್ಕಿ ಮೈಸೂರಿಗೆ

ಮೈಸೂರಿಗೆ ಕೊಡಗಿನಿಂದ ಸದ್ಯದಲ್ಲಿಯೇ ೩೦೦ ಟನ್ ಅಕ್ಕಿ ದೊರೆಯುವುದೆಂದು ಗೊತ್ತಾಗಿದೆ.

ಈ ಅಕ್ಕಿಯಲ್ಲಿ ಮೊದಲನೆಯ ಕಂತಾದ ೩೦ ಟನ್ ಅಕ್ಕಿಯು ಎಂಟು ಲಾರಿಗಳಲ್ಲಿ, ತಮ್ಮ ಕೊಡಗಿನ ಪ್ರವಾಸವನ್ನು ಮುಗಿಸಿ ಮೈಸೂರಿಗೆ ಹಿಂದಿರುಗಿದ ಮೈಸೂರಿನ ರಾಜಪ್ರಮುಖರೊಡನೆ ಮೈಸೂರಿನ ಗಡಿಯನ್ನು ಪ್ರವೇಶಿಸಿತು.

ಒಪ್ಪಂದ ವಿಫಲ

ಭಾರತ ಪಾಕಿಸ್ಥಾನಗಳು ಮಾಡಿಕೊಳ್ಳಬೇಕೆಂದಿದ್ದ ಗೋಧಿ ಅಕ್ಕಿ ವಿನಿಮಯ ಒಪ್ಪಂದವು ಕಾರ್ಯಗತವಾಗಲಿಲ್ಲವೆಂದು ಪಾಕಿಸ್ಥಾನದ ಸರ್ಕಾರವು ಪ್ರಕಟಿಸಿದೆ.

ಕಾಂಗ್ರೆಸ್ ಸದಸ್ಯರಾಗಲು ಕಾಲಾವಕಾಶ ಹೆಚ್ಚಿತು

ಕಾಂಗ್ರೆಸ್ಸಿಗೆ ಪ್ರಾಥಮಿಕ ಸದಸ್ಯರಾಗುವ ಕಾಲಾವಕಾಶವನ್ನು ಜೂನ್ ೩೦ ರವರೆಗೆ ಹೆಚ್ಚಿಸಲಾಗಿದೆಯೆಂದು ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶ್ರೀ ಲಾಲ್‌ಬಹದ್ದೂರು ಶಾಸ್ತ್ರಿಗಳು ತಿಳಿಸಿರುವರು.

ಮಿಲಿಟರಿ ಕಾರ್ಯದರ್ಶಿ ಹುದ್ದೆ ವಜಾ

ಮದ್ರಾಸ್ ಗೌರ್ನರರ ಮಿಲಿಟರಿ ಕಾರ್ಯದರ್ಶಿಗಳ ಹುದ್ದೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿ ಅವರ ಸ್ಥಾನದಲ್ಲಿ 'ಹೌಸ್ ಹೋಲ್ಡ್ ಕಂಟ್ರೋಲರ್' ಎಂಬ ಹುದ್ದೆಯನ್ನು ಸ್ಥಾಪಿಸಿರುವರು.

ರೇಷನ್ ಕಾರ್ಡುದಾರರ ಸಂಘದ ಕಾರ್ಯದರ್ಶಿ ರಾಜೀನಾಮೆ

ಮೈಸೂರು ನಗರದ ರೇಷನ್‌ಕಾರ್ಡುದಾರರ ಸಂಘದ ಕಾರ್ಯದರ್ಶಿಸ್ಥಾನಕ್ಕೆ ಶ್ರೀ ಎಂ. ಸಿ. ನರಸಿಂಹಯ್ಯನವರು ರಾಜೀನಾಮೆ ಸಲ್ಲಿಸಿದ್ದಾರೆ.

ಪೇಟೆ ಧಾರಣೆ

ಮೈಸೂರು ತಾ|| 29-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಕ್ಕೆ		8-0	16-4
ಹೊಂಗೆಬೀಜ	,,	10-14	11-14
ಹುರುಳಿ	,,	36-4	37-8
ಹೆಸರು	,,	48-0	52–8
ಸೀಗೆಕಾಯಿ	,,	3–5	3-6
ಮೆ. ಕಾಯಿ ಮಣಕ್ಕೆ		9–10	15-6
ಹುಣಸೇಹಣ್ಣು	,,	3-12	3–12
ತೆಂಗಿನಕಾಯಿ	1100ಕ್ಕೆ	90	135

ವುಡ್ ಲ್ಯಾಂಡ್ಸ್

23—5—52ನೇ ಶುಕ್ರವಾರದಿಂದ
ಅಮೋಘವಾದ 2ನೇ ವಾರ
ದಿನವೂ 3 ಆಟಗಳು

ಹಮಾರಿ ಷಾನ್
(ಹಿಂದಿ)
ಪಾತ್ರ—ಭಾರತ್‌ಭೂಷಣ್, ಯಾಕೂಬ್, ದುರ್ಗಾಖೋಟೆ ಮುಂತಾದವರು

ರಣಜಿತ್
೩೦—೫—೫೨ರಿಂದ ಪ್ರತಿದಿನ ೩ ಆಟ

ಅಜೀಬ್ ಲಡ್ಕಿ
(ಹಿಂದಿ)
ಪಾತ್ರ— ನಾಸೀಂ ರೆಹಮಾನ್, ಶಶಿಕಲ

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪೪ (೮೦) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೩೧ -೫—೧೯೫೨ನೇ ಶನಿವಾರ [ಸಂಚಿಕೆ ೨೬೮

ಎಸ್. ಎಸ್. ಎಲ್. ಸಿ. ಮತ್ತು ಎಂ. ಎಸ್. ಪರೀಕ್ಷೆ ಶುಲ್ಕ ಹೆಚ್ಚುವುದೇ ?

ಸೆಕೆಂಡರಿ ಶಿಕ್ಷಣ ಸಮಿತಿಯ ಸಲಹೆಗಳು

ಎ.ಐ.ಆರ್.ನಲ್ಲಿ ಪ್ರತಿದಿನ ೬೨ ವಾರ್ತಾಪ್ರಸಾರ ನಡೆಯುತ್ತಿದೆ

ಭಾರತ ವಾರ್ತಾ ಮತ್ತು ರೇಡಿಯೋ ಶಾಖೆಯ ೧೯೫೧-೧೯೫೨ ನೇ ವಾರ್ಷಿಕ ವರದಿಯು ಹೊರಬಿದ್ದಿದೆ. ರೇಡಿಯೋ ಶಾಖೆಯ ವರದಿಯಲ್ಲಿ ಎ. ಐ. ಆರ್. ಕೇಂದ್ರವು ೧೬ ಸ್ವದೇಶ ಭಾಷೆಗಳಲ್ಲಿ ಭಾರತದಲ್ಲಿರುವ ಶ್ರೋತೃಗಳಿಗೆ ೧೩ ಭಾಷೆಗಳಲ್ಲಿ ವಿದೇಶಗಳಲ್ಲಿರುವ ಶ್ರೋತೃಗಳಿಗೆ ಪ್ರಸಾರ ನಡೆಸುತ್ತಲಿದೆ.

ಪ್ರತಿದಿನ ೬೨ ವಾರ್ತಾಪ್ರಸಾರಗಳು ನಡೆಯುತ್ತಲಿವೆ. ಇವುಗಳಲ್ಲಿ ೪೩ ಪ್ರಸಾರಗಳು ದೇಶದೊಳಗಿರುವ ಶ್ರೋತೃಗಳಿಗಾಗಿ ಉಳಿದುದು ವಿದೇಶದಲ್ಲಿರುವವರಿಗಾಗಿ.

ಈ ಸಾಲಿನಲ್ಲಿ ೧೦೦೦ ಸಾರ್ವತ್ರಿಕ ರೇಡಿಯೊ ಸೆಟ್ಟುಗಳನ್ನು ಸ್ಥಾಪಿಸಲಾಗಿದೆ. ಈಗ ಒಟ್ಟು ೪೬೦೦ ಸಾರ್ವತ್ರಿಕ ರೇಡಿಯೊ ಸೆಟ್ಟುಗಳಿವೆ. ಅವುಗಳಲ್ಲಿ ಕೈಗಾರಿಕಾ ಕ್ಷೇತ್ರಗಳಲ್ಲಿಯೇ ೧೫೦ ಇವೆ.

ಈ ಸಾಲಿನಲ್ಲಿ ಒಟ್ಟು ೩೬ ಡಾಕ್ಯುಮೆಂಟರಿ ಫಿಲಂಗಳನ್ನು ತಯಾರಿಸಲಾಗಿದೆಯೆಂಬುದು ಚಲನಚಿತ್ರ ವಿಭಾಗದ ವರದಿಯಿಂದ ತಿಳಿಯಬರುತ್ತದೆ ಇವುಗಳನ್ನು ವಿದೇಶಗಳಿಗೂ ಕಳುಹಿಸಲಾಗಿದೆ. ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಈ ಸಾಲಿನಲ್ಲಿ ನಡೆಸಿದುದು ಒಂದು ಮುಖ್ಯವಾದ ವಿಷಯವೆಂದೂ ವರದಿ ತಿಳಿಸುತ್ತದೆ.

ವಿಶೇಷ ಸೆನೆಟ್ ಸಭೆ

ಮೈಸೂರು ಮೇ ೩೦

ಮೈಸೂರು ವಿಶ್ವವಿದ್ಯಾನಿಲಯದ ವಿಶೇಷ ಸೆನೆಟ್ ಅಧಿವೇಶನವು ವೈಸ್‌ಛಾನ್ಸಲರ್ ಡಾ|| ಮಂಜುನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

೧೯೫೦-೫೧ ನೇ ಸಾಲಿನ ವಾರ್ಷಿಕ ವರದಿಯನ್ನು ಅಂಗೀಕರಿಸಲು ಮತ್ತಿತರ ಮುಖ್ಯ ವಿಷಯಗಳನ್ನು ಪರಿಶೀಲಿಸಲು ಸಭೆ ಸೇರಿತ್ತು.

ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗುವಮುನ್ನ ಶ್ರೀ ಕೆ. ಸಿ. ರೆಡ್ಡಿಯವರು ಕೇಂದ್ರದಲ್ಲಿ ಉತ್ಪಾದನಾ ಸಚಿವ ಶ್ರೀ ಕೆ. ಹನುಮಂತಯ್ಯನವರು ಮೈಸೂರಿನ ಮುಖ್ಯಮಂತ್ರಿ, ಶ್ರೀ ಕೆ. ಕಡಿದಾಳ್ ಮಂಜಪ್ಪನವರು ಮೈಸೂರಿನಲ್ಲಿ ಸಚಿವರಾದುದಕ್ಕೆ ಅಭಿನಂದಿಸುವ ನಿರ್ಣಯವು ಅಂಗೀಕಾರವಾಯಿತು.

ಅನಂತರ ವಾರ್ಷಿಕವರದಿಯು ಪರಿಶೀಲನೆಗೆ ಬಂದು ಚರ್ಚೆನಡೆದು ಅಂಗೀಕೃತವಾಯಿತು.

ಡೆಪ್ಯುಟಿ ಸ್ಪೀಕರ್

ಶ್ರೀ ಎಂ. ಅನಂತಶಯನಂ ಅಯ್ಯಂಗಾರ್‌ರವರು ಪಾರ್ಲಿಮೆಂಟಿನ ಡೆಪ್ಯುಟಿ ಸ್ಪೀಕರರಾಗಿ ಸರ್ವಾನುಮತದಿಂದ ಚುನಾಯಿತರಾಗಿದ್ದಾರೆ.

ಶ್ರೀ ಸತ್ಯನಾರಾಯಣಸಿನ್ಹರವರು ಈ ಸ್ಥಾನಕ್ಕೆ ಶ್ರೀ ಅನಂತಶಯನಂ ಅಯ್ಯಂಗಾರ್‌ರವರ ಹೆಸರನ್ನು ಸೂಚಿಸಿದರು.

ಪ್ರಧಾನಿ ನೆಹರೂ, ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಹೊಸ ಡೆಪ್ಯುಟಿ ಸ್ಪೀಕರರ ಸೇವೆಯನ್ನು ಪ್ರಶಂಸಿಸಿ ಮಾತನಾಡಿದರು.

ಬಜೆಟ್ ಅಧಿವೇಶನ

ಮದ್ರಾಸಿನಲ್ಲಿ ಶಾಸನಸಭೆಯ ಬಜೆಟ್ ಅಧಿವೇಶನವು ಜೂನ್ ೨೬ ನೇ ತಾರೀಖಿನಿಂದ ಪ್ರಾರಂಭವಾಗುತ್ತದೆ. ಅದಿನ ಗೌರ್ನರ್‌ರವರು ಅಧಿವೇಶನದ ಪ್ರಾರಂಭ ಭಾಷಣ ಮಾಡಲಿರುವರು. ಪ್ರತಿದಿನವೂ ಸಭಾಧಿವೇಶನವು ಬೆಳಿಗ್ಗೆ ೮-೩೦ ಗಂಟೆಯಿಂದ ಮಧ್ಯಾಹ್ನ ಒಂದುಗಂಟೆವರೆಗೆ ನಡೆಯುತ್ತದೆಯೆಂದು ಗೊತ್ತಾಗಿದೆ.

ಆಹಾರ ನೀತಿ ಪರಿಶೀಲನೆ

ಮದ್ರಾಸ್ ಮಂತ್ರಿಮಂಡಲಿಯು ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು ಪ್ರಾಂತ್ಯದ ಆಹಾರನೀತಿ ಪರಿಶೀಲಿಸಿತೆಂದು ಗೊತ್ತಾಗಿದೆ. ಸರ್ಕಾರಿ ನೌಕರರ ಮತ್ತು ಉಪಾಧ್ಯಾಯರುಗಳ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ವಿಷಯದಲ್ಲಿ ತೆಗೆದುಕೊಳ್ಳಬೇಕಾದ ಕ್ರಮವನ್ನು ಪರಿಶೀಲಿಸಿತೆಂದು ಹೇಳಲಾಗಿದೆ.

ಕೊರಿಯಾದಲ್ಲಿ ಭಾರತದ ವೆಚ್ಚ

ಕೊರಿಯಾದಲ್ಲಿ ಭಾರತ ಒಂದು ಮಿಲಿಟರಿ ವೈದ್ಯ ಪಡೆಯನ್ನಿಟ್ಟಿದೆಯಷ್ಟೆ. ಅದಕ್ಕಾಗಿ ಭಾರತವು ೪೨೦೦೦ ತಿಂಗಳಿಗೆ ರೂಗಳನ್ನು ವೆಚ್ಚಮಾಡುತ್ತಿರುವುದಾಗಿ ಹೇಳಲಾಗಿದೆ.

ಪಾಕ್ ಹೈಕಮಿಷನರ ಮೇಲೆ ವಾರೆಂಟು

ಸೈನ್ಯಗಳ ಸರಪಂರಾಜಿನ ಬಗ್ಗೆ ಭಾರತ ಸರ್ಕಾರವನ್ನು ಮೋಸಗೊಳಿಸಲು ಪಿತೂರಿ ನಡೆಸಿದ ಆಪಾದನೆಗಾಗಿ ಈಗ ಆಸ್ಟ್ರೇಲಿಯಾದಲ್ಲಿ ಪಾಕಿಸ್ಥಾನದ ಹೈಕಮಿಷನರ್ ಆಗಿರುವ ಯೂಸುಫ್ ಅಬ್ದುಲ್ಲಾ ಹರೂನ್‌ರವರ ಮೇಲೆ ಹೊರಡಿಸಲ್ಪಟ್ಟ ವಾರೆಂಟನ್ನು ಅವರಿಗೆ ತಲುಪಿಸಲು ಸಾಧ್ಯವಾಗಲಿಲ್ಲವೆಂದು ಹಿಂತಿರುಗಿಸಲ್ಪಟ್ಟಿದೆ.

ಈಗ ಪಶ್ಚಿಮ ಪಂಜಾಬಿನಲ್ಲಿ ಐ ಜಿ ಪಿ ಆಗಿರುವ ಖಾನ್‌ಖುರ್ಬನ್ ಅಲಿಖಾನರ ಮೇಲೆ ಹೊರಡಿಸಿದ್ದ ವಾರೆಂಟೂ ಸಹ ತಲುಪಿಸಲ್ಪಡದೆ ಹಿಂತಿರುಗಿಸಲ್ಪಟ್ಟಿದೆ.

ಅಣುಶಕ್ತಿ ತಯಾರಿಕೆಗೆ ೩೩೩೧,೦೦೦,೦೦೦ ಡಾಲರು

ಅಣು ಸಂಬಂಧ ತಯಾರಿಕೆಯನ್ನು 'ಬಹಳ ಹೆಚ್ಚಾಗಿ ವಿಸ್ತರಿಸಲು' ಅಧ್ಯಕ್ಷ ಟ್ರೂಮನ್ನರು ಕಾಂಗ್ರೆಸ್ಸನ್ನು ಮತ್ತೆ ೩೩೩೧,೦೦೦,೦೦೦ ಡಾಲರುಗಳನ್ನು ಕೇಳಿರುವರು.

ಪೌರ ಚುನಾವಣೆ

ಪೌರ ಚುನಾವಣೆಯು ಮದ್ರಾಸ್ ನಗರದಲ್ಲಿ ಈವರ್ಷದ ಮಧ್ಯಭಾಗದಲ್ಲಿ ನಡೆಯುವುದಾಗಿಯೂ, ನವಂಬರ್‌ವೇಳೆಗೆ ಮುಕ್ತಾಯವಾಗುವುದಾಗಿಯೂ ಗೊತ್ತಾಗಿದೆ.

ಆಜ್ಞೆಗಳು ಹಿಂದೀ ಭಾಷೆಯಲ್ಲಿ

ಪ್ರಾಂತೀಯ ಗವರ್ನರುಗಳ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟುಗಳ ನ್ಯಾಯಾಧೀಶರುಗಳು ನೇಮಕಗಳ ಸರ್ಕಾರೀ ಆಜ್ಞೆಗಳಲ್ಲಿ, ಇಂಗ್ಲೀಷಲ್ಲದೆ ಹಿಂದಿಯನ್ನೂ ಸಹ ಬಳಸಬಹುದೆಂದು ರಾಷ್ಟ್ರಾಧ್ಯಕ್ಷರು ಆಜ್ಞೆ ಹೊರಡಿಸಿದ್ದಾರೆ.

ಈಗ ಉಪಯೋಗದಲ್ಲಿರುವ ಅಂತರರಾಷ್ಟ್ರೀಯ ಭಾರತೀಯ ಸಂಖ್ಯೆಗಳೊಂದಿಗೆ, ದೇವನಾಗರಿ ಸಂಖ್ಯೆಗಳನ್ನು ಉಪಯೋಗಿಸಬಹುದೆಂದು ಆಜ್ಞೆಯಲ್ಲಿ ತಿಳಿಸಲಾಗಿದೆ.

ರೈಲ್ವೆಯಲ್ಲಿ ವಿವಿಧ ತರಗತಿಗಳಿರಕೂಡದು

ಹಿರಿಯ ಶಾಸನಸಭೆಯಲ್ಲಿ ಶ್ರೀ ಬಿ. ಜಿ. ಖೇರ್‌ರವರು ರೈಲ್ವೆ ಬಜೆಟ್ಟಿನ ಮೇಲೆ ಮಾತನಾಡುತ್ತಾ, ರೈಲಿನಲ್ಲಿ ಒಂದು, ಎರಡು, ಮೂರು ಮುಂತಾದ ಪ್ರತ್ಯೇಕ ತರಗತಿಗಳಿರಕೂಡದೆಂದು ಹೇಳಿರುವರು.

ಬೆಂಗಳೂರು ಮೇ ೩೦

ಮೈಸೂರು ಸಂಸ್ಥಾನದ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಈ ದಿನ ಒಂದು ಪತ್ರಿಕಾಗೋಷ್ಠಿಯನ್ನು ನಡೆಸಿ, ಪ್ರೈಮರಿ, ಮಿಡಲ್ ಮತ್ತು ಸೆಕೆಂಡರಿ ವಿದ್ಯಾಭ್ಯಾಸ ಕ್ರಮದಲ್ಲಿ ಮಾಡಬೇಕಾದ ಪುನರ್ವ್ಯವಸ್ಥೆ ವಿಷಯವಾಗಿ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಮೈಸೂರು ಸೆಕೆಂಡರಿ ಸಮಿತಿಯು ಸಭೆಸೇರಿ ಸರ್ವಾನುಮತದಿಂದ ತೀರ್ಮಾನಿಸಿ ಸರ್ಕಾರಕ್ಕೆ ಸೂಚಿಸಿರುವ ವಿಷಯಗಳು ಸರ್ಕಾರದ ತೀವ್ರ ಗಮನದಲ್ಲಿದೆಯೆಂದು ತಿಳಿಸಿದರು.

ಇವುಗಳಲ್ಲಿ ಮುಖ್ಯವಾದುವು, ಸೆಕೆಂಡರಿ ವಿದ್ಯಾಕ್ರಮದಲ್ಲಿ ಟೀಚಿಂಗ್, ನೆಯ್ಗೆ, ಸಂಗೀತ ಮುಂತಾದ ಉದ್ಯೋಗಿಕ ಶಿಕ್ಷಣವನ್ನೇರ್ಪಡಿಸುವುದು.

ಮಿಡಲ್ ಸ್ಕೂಲಿನಲ್ಲಿ ಎರಡನೆ ತರಗತಿಯಿಂದ ಹಿಂದೀ ಅಥವಾ ಹಿಂದೂಸ್ಥಾನಿ ಬೋಧನೆಗೆ ಅವಕಾಶ ಕಲ್ಪಿಸುವುದು.

ಈಗಿರುವ ಮಿಡಲ್ ಮತ್ತು ಸೆಕೆಂಡರಿ ಶಿಕ್ಷಣ ಕಾಲವನ್ನು ೬ ವರ್ಷಗಳಿಂದ ೫ ವರ್ಷಕ್ಕಿಳಿಸುವುದು.

ಮಿಡಲ್ ಸ್ಕೂಲ್ ಪರೀಕ್ಷಾ ಶುಲ್ಕವನ್ನು ೫ ರೂಪಾಯಿಗಳಿಂದ ೮ ರೂಪಾಯಿಗೇರಿಸುವುದು.

ಎಸ್. ಎಸ್. ಎಲ್. ಸಿ. ಪರೀಕ್ಷಾ ಶುಲ್ಕವನ್ನು ೧೨ ರೂ. ನಿಂದ ೧೫ ರೂಪಾಯಿಗೆ ಹೆಚ್ಚಿಸುವುದು.

ಎಲ್ಲಾ ದರ್ಜೆಯ ಪಾಠಶಾಲೆಗಳಲ್ಲಿರುವ ಉಪಾಧ್ಯಾಯರಮಟ್ಟವನ್ನು ಉತ್ತಮಗೊಳಿಸುವುದು.

ರೈಲ್ವೇ ಬಜೆಟ್ ಚರ್ಚೆ

ಭಾರತ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ರೈಲ್ವೇ ಬಜೆಟ್ ಚರ್ಚೆಯು ನಡೆಯುತ್ತಲಿದೆ.

ರೈಲ್ವೇ ಪ್ರಯಾಣ ಮತ್ತು ಸಾಮಾನುಗಳ ರವಾನೆ ದರ ಕಡಿಮೆಮಾಡಬೇಕು, ಪ್ರಯಾಣಿಕರಿಗೆ ಹೆಚ್ಚಿಗೆ ಸೌಕರ್ಯಗಳನ್ನು ಕಲ್ಪಿಸಬೇಕು, ದೇಶದಲ್ಲಿ ಇನ್ನೂ ಹೆಚ್ಚಿಗೆ ರೈಲ್ವೇ ಲೈನುಗಳನ್ನು ಹಾಕಬೇಕು. ಎಂಬುವು ಚರ್ಚೆಯಲ್ಲಿ ಮುಖ್ಯ ವಿಷಯಗಳು.

ವಿಶ್ವವಿದ್ಯಾನಿಲಯದ ಫಲಿತಾಂಶ

ಮೈಸೂರು ಮೇ ೩೦

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷೆ ಫಲಿತಾಂಶಗಳು ಜೂನ್ ಒಂದನೇ ತಾರೀಖು ಬೆಳಗ್ಗೆ ೯ ಗಂಟೆಗೆ ಬದಲಾಗಿ ೧೧ ಗಂಟೆಗೆ ಹೊರಬೀಳುತ್ತದೆ.

ಮುಖ್ಯಮಂತ್ರಿಗಳ ಪ್ರವಾಸ

ಬೆಂಗಳೂರು ಮೇ ೩೦

ಮೈಸೂರು ಮುಖ್ಯಮಂತ್ರಿ, ಶ್ರೀ ಕೆ. ಹನುಮಂತಯ್ಯನವರು ಜೂನ್ ಒಂದನೇ ತಾರೀಖು ರಾಮನಗರಕ್ಕೆ ಭೇಟಿ ಕೊಡುವರು. ೨ನೇ ತಾ|| ಅವರು ಮೈಸೂರಿಗೆ ತೆರಳಿ ಅಲ್ಲಿಂದ ಬಂಡೀಪುರಕ್ಕೆ ಪ್ರಯಾಣ ಮಾಡಿ ಅಲ್ಲಿ ಎರಡು ದಿವಸವಿರುವರು. ಜೂನ್ ೮ನೇ ತಾರೀಖಿನಿಂದ ಕೋಲಾರ ಜಿಲ್ಲೆಯಲ್ಲಿ ಮುಖ್ಯಮಂತ್ರಿಗಳು ಪ್ರವಾಸ ಮಾಡಲಿದ್ದಾರೆ.

ಧರ್ಮಾರ್ಥ ಕಣ್ಣು ಆಪರೇಷನ್ ಕ್ಯಾಂಪ್

ಬೆಂಗಳೂರು ಮೇ ೩೦

ಡಾ|| ಮೋದಿಯವರ ಧರ್ಮಾರ್ಥ ಕಣ್ಣಿನ ಆಪರೇಷನ್ ಕ್ಯಾಂಪ್‌ನಲ್ಲಿ ನೇತ್ರ ಚಿಕಿತ್ಸೆ ಪಡೆಯಲು ಸುಮಾರು ೧೩೦೦ ಜನರು ತಮ್ಮ ಹೆಸರುಗಳನ್ನು ರಿಜಿಸ್ಟರ್ ಈಗಾಗಲೇ ಮಾಡಿಸಿಕೊಂಡಿರುತ್ತಾರೆ. ನೇತ್ರ ಪರೀಕ್ಷೆಯನ್ನು ಜೂನ್ ತಿಂಗಳು ೪, ೫ ಮತ್ತು ೬ನೇ ತಾರೀಖುಗಳಲ್ಲಿ ನಡೆಯಲು ಸಿದ್ಧತೆಗಳಾಗಿವೆ. ಆಪರೇಷನ್ ೬ನೇ ತಾರೀಖು ಆರಂಭವಾಗುತ್ತದೆ. ಹೆಚ್ಚಿನ ವಿವರಗಳಿಗೆ ಸಿಟಿ ಕಾಂಗ್ರೆಸ್ ಆಫೀಸಿನಲ್ಲಾಗಲೀ, ಕ್ಯಾಂಪ್ ಆಗುವ ಜಯದೇವ ಹಾಸ್ಟಲ್, ಶೇಷಾದ್ರಿರಸ್ತೆ, ಬೆಂಗಳೂರು ಸಿಟಿಯಲ್ಲಾಗಲೀ ತಿಳಿಯಬಹುದು.

ಸಹಕಾರ ಸಂಘಗಳಿಗೆ ಷಾಪ್ ಅಸಿಸ್ಟೆಂಟ್ ಆಕ್ಟ್ ಇಲ್ಲ

ಮೈಸೂರು ಸರ್ಕಾರದವರು ಆಜ್ಞೆಯೊಂದನ್ನು ಹೊರಡಿಸಿ ಸಂಸ್ಥಾನದ ಸಹಕಾರ ಸಂಘಗಳಿಗೆ ಮತ್ತು ಸಂಸ್ಥೆಗಳಿಗೆ ಮೈಸೂರು ಅಂಗಡಿ ಕೆಲಸಗಾರರ ಶಾಸನವು ಅನ್ವಯಿಸುವುದಿಲ್ಲವೆಂದು ತಿಳಿಸಿದ್ದಾರೆ.

ನಿಷೇಧಾಜ್ಞೆ

ಆಹಾರ ಧಾನ್ಯಗಳ ಬೆಲೆ ಏರಿಕೆ ವಿರುದ್ಧ ನಡೆಯುತ್ತಿರುವ ಚಳುವಳಿಯ ಸಂದರ್ಭದಲ್ಲಿ ಮೆರವಣಿಗೆಗಳನ್ನೂ, ಪ್ರದರ್ಶನಗಳನ್ನೂ ನಡೆಸಕೂಡದೆಂದು ಅಹಮದಾಬಾದ್ ಜಿಲ್ಲಾ ಮ್ಯಾಜಿಸ್ಟ್ರೇಟರು ನಿಷೇಧಾಜ್ಞೆ ಹೊರಡಿಸಿದ್ದಾರೆ. ಸೋಷಲಿಸ್ಟ್ ಪಕ್ಷವು ಸದ್ಯದಲ್ಲೇ ಸತ್ಯಾಗ್ರಹ ಹೂಡಲು ನಿರ್ಧರಿಸಿತು. ಈ ನಿಷೇಧಾಜ್ಞೆಯು ೧೫ ದಿನಗಳ ಕಾಲ ಜಾರಿಯಲ್ಲಿರುವುದು.

ಸಭಾತ್ಯಾಗ

ಭಾರತ ಲೋಕಸಭೆಯಲ್ಲಿ ಮೊನ್ನೆ ರೈಲ್ವೆ ಸಚಿವರು ಮೊದಲು ಹಿಂದಿಯಲ್ಲಿ ಉತ್ತರ ಕೊಡಲು ಆರಂಭಿಸಲು ಕೆಲವು ಹಿಂದ ಮಾತನಾಡದ ಸದಸ್ಯರುಗಳು ಸಭೆಯಿಂದೆದ್ದು ಹೊರಗೆಹೋದರು.

ಗೋಲಿಬಾರಿನಲ್ಲಿ ಸಾವಿರಾರು ಜನರಿಗೆ ಗಾಯ

ಜ|| ರಿಡ್ಜ್‌ವೇ ಯೂರೋಪಿನ ದಂಡನಾಯಕರಾಗಿ ನೇಮಕವಾದುದನ್ನು ಪ್ರತಿಭಟಿಸಲು ಕಮ್ಯೂನಿಸ್ಟರು ಪ್ಯಾರಿಸ್ ನಗರದಾದ್ಯಂತ ಪ್ರದರ್ಶನ ನಡೆಸಲು ಪೋಲೀಸರು ಗುಂಡುಹಾರಿಸಿದ ಪರಿಣಾಮವಾಗಿ ೨೦೦ ಮಂದಿ ಪೋಲೀಸರು ಅಸಂಖ್ಯಾತ ಪ್ರದರ್ಶನಕಾರರೂ ಗಾಯಗೊಂಡಿದ್ದಾರೆ ಒಬ್ಬನ ಸ್ಥಿತಿ ಚಿಂತಾಜನಕವಾಗಿದೆ.

ಸರ್ಕಾರದ ಪ್ರಕಟಣೆಯಪ್ರಕಾರ ಗುಂಡು ಗಾಳಿಗೆ ಹಾರಿಸಲ್ಪಟ್ಟಿತೆಂದು ಇದೆ. ಆದರೆ ಕಮ್ಯೂನಿಸ್ಟರು ನಗರದ ನಾನಾ ಭಾಗಗಳಲ್ಲಿ ಪ್ರದರ್ಶನಕಾರರ ಮೇಲೆಯೇ ಹಾರಿಸಲ್ಪಟ್ಟಿತೆಂದು ಹೇಳಿದ್ದಾರೆ.

ಪೇಟೆ ಧಾರಣೆ

ಮೈಸೂರು ತಾ|| 30-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		12-0	16-6
ಹೊಂಗೆಬೀಜ	,,	12-0	12-4
ಹುರುಳಿ	,,	36-6	37-8
ಹೆಸರು	,,	56-10	58-8
ಸೀಗೆಕಾಯಿ	,,	3-2	3-6
ಮೆ. ಕಾಯಿ ಮಣಕ್ಕೆ		12-10	15-8
ಹುಣಸೇಹಣ್ಣು	,,	3-12	3-12
ತೆಂಗಿನಕಾಯಿ	1100ಕ್ಕೆ	79	166

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,500 or near offer

No brokers—Immediate possession—No encumbrence,

Enquire at :— M SUBBARAMAIAH & Co.,
Lansdowne Buildings, Mysore.

ನ್ಯೂ ಅಪೇರ ಟಾಕೀಸ್

30—5—52 ರಿಂದ
ಅಮೋಘವಾದ
4ನೇ ವಾರ
ಪ್ರತಿದಿನ 3 ಆಟಗಳು
ಜೂಪಿಟರ್ಸ್‌ರವರ—
* ರಾಣಿ *
(ತಮಿಳು)
ಪಾತ್ರ:— ಭಾನುಮತಿ
ಬಾಲಚಂದರ್
ವಹಾಬ್ ಕಾಶ್ಮೀರಿ

ಕ್ರಿಮಿಯುದ್ಧ

ಕಮ್ಯೂನಿಸ್ಟ್ ಕೊರಿಯ ಮತ್ತು ಚೈನಾದಲ್ಲಿ, ವಿಶ್ವಸಂಸ್ಥೆಯ ಪಡೆಗಳು ಕ್ರಿಮಿಯುದ್ಧವನ್ನು ಪ್ರಾರಂಭಮಾಡಿದವು ಎಂಬುದನ್ನು ಅಗ್ನೇಯ ಏಷ್ಯಾದವರು ನಂಬಿಲ್ಲ. ಮೊದಲನೆಯದಾಗಿ ಈ ಅಪವಾದನೆಗೆ ರುಜುವಾತಿಲ್ಲ. ಎರಡನೆಯದಾಗಿ ತನಿಖೆಗೆ ಕಮ್ಯೂನಿಸ್ಟರ ನಿರಾಕರಣೆ.

ರೋಗದ ಅಟ್ಲಾಸು

ಅಮೆರಿಕ ಭೂವಿವರಣೆ ಸಂಘದವರು ಪ್ರಪಂಚದಲ್ಲಿರುವ ರೋಗರುಜನಾದಿಗಳನ್ನು ತೋರಿಸಲು 'ರೋಗದ ಅಟ್ಲಾಸ್' ಒಂದನ್ನು ತಯಾರಿಸಿದ್ದಾರೆ.

ಸಮತೆ

'ಸಮತೆ' ಎಂದು ಕೇಳಿಕೊಂಡು ರಷ್ಯವು ಮಹಿಳೆಯರ ಹೆಸರನ್ನು ಕೆಡಿಸುತ್ತಿದ್ದಾರೆ ಎಂದು ಅಮೆರಿಕದ ಪ್ರತಿನಿಧಿ ವಾಲ್ಟರ್ ಕೋಟ್‌ಪಿಂಗ್‌ರು ವಿಶ್ವಸಂಸ್ಥೆಯ ಸಮಾಜ ಸಮಿತಿಯಲ್ಲಿ ತಿಳಿಸಿದರು.

ಚಿನ್ನ ಬೆಳ್ಳಿ ದರಗಳು

	30—5—52	ರೂ.
ಸವರನ್		64-1-2
,		64-14
ಚಿನ್ನ ತೊಲ		91-8
,, ಮೂಸ		90-8
ಬೆಳ್ಳಿ 100 ತೊಲ		159-12
,, ತೊಲ		1-11

ಭಾರತಕ್ಕೆ ಅಮೆರಿಕದ ಖಾಸಗಿ ಜನರಿಂದ ಆಹಾರ ಸಹಾಯ

ಕೇವಲ ಎರಡು ತಿಂಗಳಲ್ಲಿ ಭಾರತಕ್ಕೆ ಅಮೆರಿಕದ ಖಾಸಗೀ ಜನರಿಂದ ೪೫ ಆಹಾರ ಸಹಾಯ ಮೂಟೆಗಳನ್ನು ಕಳುಹಿಸಿಕೊಟ್ಟಿದ್ದಾರೆ. ಅದು ೨-೮೯೪,೭೪೪ ಪೌಂಡುಗಳಿದ್ದು, ಕೆಲವು ಮಿಲಿಯನ್ ಡಾಲರು ಬೆಲೆಯುಳ್ಳದ್ದಾಗಿದೆ.

ಸರ್ಕಾರದ ಸಹಾಯವಿಲ್ಲದೆ ಸಾಧಾರಣ ಅಮೆರಿಕದ ನಾಗರಿಕರು ಬೊಂಬಾಯಿ, ಮದರಾಸು, ಕಲ್ಕತ್ತ, ನಗರಗಳಿಗೆ ಆಹಾರ ಸಾಮಗ್ರಿಗಳನ್ನು ಕಳುಹಿಸಿಕೊಟ್ಟಿದ್ದಾರೆ. ಒಟ್ಟಿಗೆ ವೈಯಕ್ತಿಕವಾಗಿ ೩೫ ಜನರು ಹಡಗಿನ ಮೂಲಕ ನಾನಾ ಸಂಸ್ಥೆಗಳ ಮುಖಾಂತರವಾಗಿ ಕಳುಹಿಸಿಕೊಟ್ಟಿದ್ದಾರೆ.

ಮೇ ೯ನೇ ತಾ|| ೬೨,೪೮೯ ಪೌಂಡು ಒಣಗಿದ ಮೊಟ್ಟೆಗಳನ್ನು ಬೊಂಬಾಯಿಗೆ ಕಳುಹಿಸಲಾಯಿತು.

ಮೇ ೮ನೇ ತಾ|| ೪೬,೮೦೦ ಪೌಂಡು ಆಹಾರ ಪ್ಯಾಕೆಟ್ಟುಗಳು ಮದ್ರಾಸಿಗೆ ರವಾನಿಸಲ್ಪಟ್ಟವು. ಅಂದೇ ೨೬,೦೦೦ ಪೌಂಡು ಆಹಾರ ಸಾಮಗ್ರಿಗಳು ಕಲ್ಕತ್ತಾಕ್ಕೆ ಸಾಗಿಸಲ್ಪಟ್ಟವು.

ಇದಕ್ಕೆ ಮುಂಚೆ ಮಾರ್ಚಿ ೨೬ರಂದು ಮದರಾಸಿಗೆ ಆಹಾರ ಸಾಮಗ್ರಿಗಳನ್ನೂ, ೨೮ರಂದು ವೈದ್ಯಕೀಯ ಸಲಕರಣೆಗಳನ್ನೂ, ಕಳುಹಿಸಿಕೊಡಲಾಯಿತು- ಬೊಂಬಾಯಿ ಮತ್ತು ಕಲ್ಕತ್ತ ನಗರಗಳಿಗೂ, ಹಾಗೆಯೇ ಕಳುಹಿಸಿಕೊಡಲಾಗಿದೆ.

ಕ್ಷಾಮ ಪರಿಹಾರಕ್ಕೆ ಕಾಣಿಕೆ

ಗುಲ್ಬರ್ಗಾ ಕೇಂದ್ರ ಜೈಲಿನಲ್ಲಿರುವ ೪೦ ಮಂದಿ ರಾಜಕೀಯ ಸ್ಥಾನಬದ್ಧರೂ, ಬಂದಿಗಳೂ ಮೇ ೧೨ರಂದು ಉಪವಾಸವನ್ನಾಚರಿಸಿ, ಉಳಿಸಿದ ಆಹಾರ ಧಾನ್ಯವನ್ನು ರಾಯಲು ಸೀಮೆಯ ಕ್ಷಾಮ ಪರಿಹಾರಕ್ಕಾಗಿ ಕಾಣಿಕೆಯಿತ್ತರು.

ಸಚಿವರಿಗೆ ಸತ್ಕಾರ

ಬೆಂಗಳೂರು ಮೇ ೩೦

ಮೈಸೂರು ಚಲನಚಿತ್ರ ವಾಣಿಜ್ಯ ಸಂಘದವರು ಮೈಸೂರಿನ ಸಚಿವರ ಗೌರವಾರ್ಥವಾಗಿ ಈದಿನ ಸಂಘದ ಆವರಣದಲ್ಲಿ ಸತ್ಕಾರಕೂಟ ಏರ್ಪಡಿಸಿದ್ದರು.

ಶ್ರೀ ಜಿ. ಗಿರಿಯಪ್ಪ

ಸಹಕಾರ ಸಂಘಗಳ ಶಾಖೆಯಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿರುವ ಶ್ರೀ ಗಿರಿಯಪ್ಪನವರಿಗೆ ಸೀನಿಯರ್ ಅಸಿಸ್ಟೆಂಟ್ ರಿಜಿಸ್ಟ್ರಾರ್ ಆಗಿ ಬಡ್ತಿ ಕೊಡಲಾಗಿದೆ.

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ರೂಯಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನಂ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧ ೬—೧೯೫೨ನೇ ಭಾನುವಾರ [ಸಂಚಿಕೆ ೨೬೯

ಭಾರತದ ಜನಸಂಖ್ಯೆ ೩೫ ಕೋಟಿ ೬೮ ಲಕ್ಷ

ಮದ್ರಾಸಿನಲ್ಲಿ ಕ್ಷಯರೋಗ ಶಿಕ್ಷಣಾ ಕೇಂದ್ರ

ವಿಶ್ವಆರೋಗ್ಯ ಸಂಸ್ಥೆಯ ಆಶ್ರಯದಲ್ಲಿ ಮದ್ರಾಸಿನಲ್ಲಿ ಒಂದು ಕ್ಷಯರೋಗ ಶಿಕ್ಷಣಾ ಕೇಂದ್ರವನ್ನು ಸ್ಥಾಪಿಸುವ ವಿಷಯದಲ್ಲಿ ವಿಶ್ವಆರೋಗ್ಯ ಸಂಸ್ಥೆಯ ಪ್ರತಿನಿಧಿಗೂ ಮದ್ರಾಸ್ ಆರೋಗ್ಯ ಸಚಿವರಿಗೂ ಮಾತುಕತೆ ಪ್ರಾರಂಭವಾಗಿದೆ. ಮದ್ರಾಸಿನಲ್ಲಿರುವ ಕ್ಷಯರೋಗ ಸಂಸ್ಥೆಯನ್ನು ಶಿಕ್ಷಣ ಕೇಂದ್ರವನ್ನಾಗಿ ಪರಿವರ್ತಿಸಿ ವೈದ್ಯರಿಗೆ ಉನ್ನತ ಶಿಕ್ಷಣ ಕೊಡಲೇರ್ಪಾಡು ನಡೆಯುತ್ತದೆ. ಈ ಕೇಂದ್ರಕ್ಕೆ ಬೇಕಾದ ಸೌಕರ್ಯ, ಸಲಕರಣೆಗಳನ್ನು ವಿಶ್ವಆರೋಗ್ಯ ಸಂಸ್ಥೆಯು ಒದಗಿಸುತ್ತದೆ. ಆದರೆ ನಡೆಸಿಕೊಂಡು ಬರಬೇಕಾದ ಕರ್ತವ್ಯವು ಮದ್ರಾಸ್ ಸರ್ಕಾರಕ್ಕೆ ಸೇರಿರುತ್ತದೆ

ಮಿ|| ಹೋಮಿ ಮೋದಿ

ಉತ್ತರಪ್ರದೇಶದ ಗೌರ್ನರಾದ ಮಿ|| ಹೋಮಿ ಮೋದಿಯವರು ಸೋಮವಾರ ತಮ್ಮ ಅಧಿಕಾರವನ್ನು ವಿಸರ್ಜಿಸುವರು. ಅವರ ಗೌರವಾರ್ಥವಾಗಿ ನಿನ್ನೆಯದಿನ ಲಕ್ನೋದಲ್ಲಿ ಒಂದು ಮಿಲಿಟರಿ ಪೆರೇಡ್ ನಡೆಯಿತು.

ಶಾಂತಿ ಸಮ್ಮೇಳನ

ಚೈನಾದ ಪೀಕಿಂಗ್‌ನಲ್ಲಿ ಸದ್ಯದಲ್ಲೇ ಶಾಂತಿ ಸಮ್ಮೇಳನವು ಪ್ರಾರಂಭವಾಗಲಿದೆ. ೧೫ ರಾಷ್ಟ್ರಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುವರು. ಭಾರತ, ಬರ್ಮಾ ಸಿಂಹಳ ಮತ್ತು ಅಮೆರಿಕಾ ಪ್ರತಿನಿಧಿಗಳೂ ಈ ಸಮ್ಮೇಳನದಲ್ಲಿ ಭಾಗವಹಿಸುವರು.

ಕಾನೂನುಭಂಗ ಚಳುವಳಿ

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಗೆ ವಿರೋಧವಾಗಿ ಹೂಡಬೇಕೆಂದಿರುವ ಕಾನೂನುಭಂಗ ಚಳುವಳಿಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಲು ದಕ್ಷಿಣ ಆಫ್ರಿಕಾ ಕಾಂಗ್ರೆಸ್ ಮತ್ತು ಇಂಡಿಯನ್ ಕಾಂಗ್ರೆಸ್ ಪ್ರತಿನಿಧಿಗಳು ನಿನ್ನೆಯದಿನ ಸಭೆಸೇರಿ ಚರ್ಚೆಗಳನ್ನು ಪ್ರಾರಂಭಿಸಿರುವರು.

೧೯೫೧ ನೇ ಮಾರ್ಚಿಯಲ್ಲಿ ನಡೆದ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆಯು ೩೫,೬೮,೨೯,೪೮೫ ಇದೆಯೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ. ಪುರುಷರಸಂಖ್ಯೆ ೧೮,೩೩,೦೫,೦೦೬ ಮಹಿಳೆಯರು ೧೭,೩೫,೨೩,೮೦೦ ಈ ಸಂಖ್ಯೆಯಲ್ಲಿ ಕಾಶ್ಮೀರ ಮತ್ತು ಅಸ್ಸಾಂನ ಗುಡ್ಡಗಾಡುಜನರ ಜನಗಣತಿ ಸೇರಿಲ್ಲ ಸಿಕ್ಕಿಂ ಪ್ರಾಂತ್ಯ ಸೇರಿದೆ.

ಭಾರತದಲ್ಲಿ ಮೋಟಾರು ಭಾಗಗಳ ತಯಾರಿ

೧೯೫೬ರ ವೇಳೆಗೆ ಭಾರತದ ಮೋಟಾರು ಕೈಗಾರಿಕೆಯಿಂದ ಕಾರಿನ ಭಾಗಗಳ ಶೇ|| ೬೫ರಷ್ಟನ್ನು ತಯಾರಿಸಲು ಸಾಧ್ಯವಿದೆಯೆಂದು ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಪಾರ್ಲಿಮೆಂಟಿನಲ್ಲಿ ಡಾ|| ಪಿ. ಎಸ್. ದೇಶಮುಖ್‌ರವರ ಪ್ರಶ್ನೆಗೆ ಉತ್ತರಕೊಡುತ್ತ ತಿಳಿಸಿದರು.

ಭಾರತಕ್ಕೆ ಅಮೆರಿಕಾ ಆಹಾರ

ಕಳೆದ ೧೦ ತಿಂಗಳಲ್ಲಿ ಅಮೆರಿಕಾವು ಭಾರತಕ್ಕೆ ಒಟ್ಟು ೩,೦೩೧,೦೦೦ ಟನ್ ಆಹಾರ ಪದಾರ್ಥಗಳನ್ನು ರವಾನಿಸಿದೆ.

ಸಭಾತ್ಯಾಗ

ಬಜೆಟ್ಟಿನಮೇಲೆ ಮಾತನಾಡಲು ತಮಗೆ ಅವಕಾಶ ದೊರೆಯಲಿಲ್ಲವೆಂದು ಬೀಹಾರ್ ಶಾಸನಸಭೆಯ ವಿರೋಧಪಕ್ಷದ ೬೦ ಸದಸ್ಯರು ಸಭಾತ್ಯಾಗ ಮಾಡಿದರು

ಭಾರತಕ್ಕೆ ನಾರ್ವೆ ಸಹಾಯ

ಭಾರತಕ್ಕೆ ನಾರ್ವೆಯು ಟೆಕ್ನಿಕಲ್ ಸಹಾಯವನ್ನು ನೀಡಲು ೫ ಲಕ್ಷ ಡಾಲರುಗಳ ಒಂದು ನಿಧಿಯನ್ನು ಏರ್ಪಡಿಸಲಿದೆ. ಈ ಯೋಜನೆಪ್ರಕಾರ ನಾರ್ವೆಯು ಭಾರತಕ್ಕೆ ಡಾಕ್ಟರುಗಳೂ, ಇಂಜನಿಯರುಗಳು ಮುಂತಾದ ತಜ್ಞರ ಸಹಾಯನೀಡುವುದಲ್ಲದೆ ಭಾರತೀಯರಿಗೆ ಈ ಭಾಗಗಳಲ್ಲಿ ಉನ್ನತ ಶಿಕ್ಷಣವನ್ನು ಕೊಡುವುದು. ಈ ಸಹಾಯವನ್ನು ಪಡೆಯಲು ಭಾರತವು ಒಪ್ಪಿರುವುದಾಗಿ ಗೊತ್ತಾಗಿದೆ.

ಶ್ರೀ ಹೆಚ್. ಸಿ. ದಾಸಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿ ಚುನಾಯಿತರಾದರು

ಬೆಂಗೂರು ಮೇ ೩೧

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದ ೫ ಜನರಲ್ಲಿ ಶ್ರೀಗಳಾದ ಟಿ. ಸುಬ್ರಹ್ಮಣ್ಯಂ, ಹೆಚ್. ಎಸ್ ರುದ್ರಪ್ಪ, ಹೆಚ್. ಕೆ. ವೀರಣ್ಣ ಗೌಡ ಮತ್ತು ಎಂ- ಎಲ್. ಸಂಜರಾಜೇ ಅರಸಿನವರು ತಮ್ಮ ಉಮೇದುವಾರಿಕೆಯನ್ನು ವಾಪಸ್ಸು ಪಡೆದುದರಿಂದ ಶ್ರೀ ಹೆಚ್. ಸಿ- ದಾಸಪ್ಪನವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಕಾರ್ಯಕಾರಿ ಸಮಿತಿಗೆ ಚುನಾಯಿತರಾಗಿರುವವರು——

ಆರ್. ಸುಬ್ಬಣ್ಣ. (ಬೆಂಗಳೂರು ಸಿಟಿ)
ಕೆ- ಸುಬ್ಬರಾವ್. (ಬೆಂಗಳೂರು ಜಿಲ್ಲೆ)
ಹೆಚ್. ಸಿ. ಲಿಂಗಾರೆಡ್ಡಿ. (ಕೋಲಾರ)
ಹೆಚ್. ಕೆ. ವೀರಣ್ಣಗೌಡ. (ಮಂಡ್ಯ)
ಎಸ್. ಚೆನ್ನಯ್ಯ. (ಮೈಸೂರು ಸಿಟಿ)
ಪಿ. ಮಹದೇವಯ್ಯ.(ಮೈಸೂರುಜಿಲ್ಲೆ)
ಮೂಲಿ ಮರಿಯಪ್ಪ, (ತುಮಕೂರು)
ಜಿ- ಎ. ತಿಮ್ಮಪ್ಪಗೌಡ. (ಹಾಸನ)
ಟಿ. ಸಿ. ಬಸಪ್ಪ. (ಚಿಕ್ಕಮಗಳೂರು)
ಹೆಚ್.ಎಸ್.ರುದ್ರಪ್ಪ. (ಶಿವಮೊಗ್ಗಾ)
ಎಸ್. ವಾಸುದೇವರಾವ್.(ಚಿತ್ರದುರ್ಗ)

ಶ್ರೀ ಶೇಷಗಿರಿರಾಯರು ಮಹಾರಾಜರ ಆಪ್ತ ಕಾರ್ಯದರ್ಶಿ

ಬೆಂಗಳೂರು ಮೇ ೩೧

ಜಿಲ್ಲಾಧಿಕಾರಿ ಶ್ರೀ ಕೆ. ಶೇಷಗಿರಿರಾಯರನ್ನು ಮಹಾರಾಜರ ಆಪ್ತ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ. ಶ್ರೀಯುತರು ಈಗ ಅರಣ್ಯದಲ್ಲಿ ನಡೆದಿರುವ ಸಾಗುವಾನಿ ಕಳ್ಳತನ ಪತ್ತೆಹಚ್ಚಲು ವಿಶೇಷಾಧಿಕಾರಿಗಳಾಗಿರುವರು.

ಗಾಂಧಿ ಸ್ಮಾರಕ ಕ್ಷಯ ಆಸ್ಪತ್ರೆ

ಕಲ್ಕತ್ತ ಸೆಣಬಿನ ಗಿರಣಿ ಸಂಘದವರು ೪೦೦ ಹಾಸಿಗೆಗಳ ಗಾಂಧಿ ಸ್ಮಾರಕ ಕ್ಷಯರೋಗದಆಸ್ಪತ್ರೆಯ ನಿರ್ಮಾಣಕ್ಕೆ ಕೊಟ್ಟ ೩೨ ಲಕ್ಷ ರೂ. ಗಳನ್ನು ಗಾಂಧೀಸ್ಮಾರಕ ಸಂಘ ಅಂಗೀಕರಿಸಿದೆ.

ಅಧಿವೇಶನ ಮುಂದು ವರಿಯಿತು

ಕೌನ್ಸಿಲ್ ಆಫ್‌ಸ್ಟೇಟ್ ಸಭೆಯು ನಿನ್ನೆಯದಿನ ರೈಲ್ವೆಬಜೆಟ್ ಚರ್ಚೆಮುಕ್ತಾಯವಾಗಿ ತನ್ನ ಅಧಿವೇಶನವನ್ನು ಜುಲೈ ೧೪ ಕ್ಕೆ ಮುಂದುವರೆಯಿತು.

ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾಯರು ಉಪಾಧ್ಯಕ್ಷರು

ಭಾರತ ಹಿರಿಯ ಶಾಸನಸಭೆಗೆ (ಕೌನ್ಸಿಲ್ ಆಫ್ ಸ್ಟೇಟ್) ಶ್ರೀ ಎಸ್- ವಿ- ಕೃಷ್ಣಮೂರ್ತಿರಾಯರು ಉಪಾಧ್ಯಕ್ಷರಾಗಿ ಅವಿರೋಧವಾಗಿ ನಿನ್ನೆ ಚುನಾಯಿತರಾಗಿದ್ದಾರೆ ಶ್ರೀ ಬಿ- ಜಿ- ಖೇರ್‌ರವರು ಶ್ರೀಯುತರ ಹೆಸರನ್ನು ಈ ಸ್ಥಾನಕ್ಕೆ ಸೂಚಿಸಿದರು- ಶ್ರೀ ಅಮೂಲ್ ಚಂದ್‌ರವರು ಅನುಮೋದಿಸಿದರು.

ಫಸಲಿನ ಸ್ಪರ್ಧೆ

ಭಾರತಾದ್ಯಂತ ಈದಿನದಿಂದ ಒಂದು ಪಕ್ಷಕಾಲ ಫಸಲಿನ ಸ್ಪರ್ಧೆ ನಡೆಯುತ್ತದೆ. ಗ್ರಾಮ, ರಾಜ್ಯ ಮತ್ತು ಅಖಿಲ ಭಾರತ ಮಟ್ಟದಲ್ಲಿ ಈ ಸ್ಪರ್ಧೆ ನಡೆಯುವುದು. ಬತ್ತ, ರಾಗಿ, ಬಜ್ರಿ, ಗೋಧಿ ಜೋಳ ಆಲೂಗಡ್ಡೆ ಈ ಬೆಳೆಗಳು ಈ ಸ್ಪರ್ಧೆಯಲ್ಲಿ ಸೇರಿವೆ.

ಅಖಿಲಭಾರತ ಮಟ್ಟದಲ್ಲಿ ೫೦೦೦ ರೂಪಾಯಿಗಳ ೬ ವಾರ್ಷಿಕ ಬಹುಮಾನಗಳಿವೆ.

ಸೋಷಲಿಸ್ಟ್ ಪ್ರಜಾಪಕ್ಷ

ಶಾಸನಸಭೆಗಳ ಕಿಸಾನ್ ಮಜ್ದೂರ್ ಪ್ರಜಾಪಕ್ಷ ಮತ್ತು ಸೋಷಲಿಸ್ಟ್‌ಪಕ್ಷದ ಸದಸ್ಯರ ಸಂಯುಕ್ತ ಸಭೆಯನ್ನು ಸೋಷಲಿಸ್ಟ್ ಪ್ರಜಾಪಕ್ಷವೆಂದು ಕರೆಯಲಾಗುತ್ತದೆ. ಪಾರ್ಲಿಮೆಂಟಿನಲ್ಲಿ ಈ ಪಕ್ಷದ ನಾಯಕ ಶ್ರೀಮತಿ ಸುಚೇತ ಕೃಪಲಾನಿ ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ಆಚಾರ್ಯ ನರೇಂದ್ರದೇವ್ ನಾಯಕರು.

ರಾಷ್ಟ್ರಾಧ್ಯಕ್ಷರಿಗೆ ಪೌರ ಸನ್ಮಾನ

ದೆಹಲಿ ಪುರಜನರು ನಿನ್ನೆಯದಿನ ರಾಷ್ಟ್ರಾಧ್ಯಕ್ಷರಿಗೆ ಪೌರ ಸನ್ಮಾನವನ್ನಿತ್ತರು. ನಗರದಲ್ಲಿ ಅತ್ಯಂತ ವೃದ್ಧ ಮತ್ತು ವೃದ್ಧೆಯರು ರಾಷ್ಟ್ರಾಧ್ಯಕ್ಷರಿಗೆ ಪುಷ್ಪಹಾರ ಹಾಕಿದರು.

ವರ್ಷಕ್ಕೆ ನಾಲ್ಕುವರೆ ಲಕ್ಷ ಬೈಸಿಕಲ್‌ಗಳು

ಈ ವರ್ಷದಿಂದ ಭಾರತದಲ್ಲಿರುವ ಬೈಸಿಕಲ್‌ಗಳ ಕಾರ್ಖಾನೆಗಳಲ್ಲೆಲ್ಲಾ ಒಟ್ಟು ನಾಲ್ಕುವರೆ ಲಕ್ಷ ಬೈಸಿಕಲ್‌ಗಳನ್ನು ತಯಾರಿಸುವಂತಾಗುವುದೆಂದು ತಿಳಿಯಬರುತ್ತದೆ. ಸರಪಣಿ ಮತ್ತು ಫ್ರೀವೀಲ್ ತಯಾರಿಸಲು ಒಂದು ಕಾರ್ಖಾನೆಯು ಸದ್ಯದಲ್ಲೇ ಭಾರತದಲ್ಲಿ ಸ್ಥಾಪಿಸಲಾಗುತ್ತದೆ.

ಶಿಕ್ಷಣ ಸುಧಾರಣೆ

ಬೆಂಗಳೂರು ಮೇ ೩೧

ಸೆಕೆಂಡರಿ ಎಜುಕೇಷನ್ ಬೋರ್ಡ್ ಸರ್ಕಾರಕ್ಕೆ ಸರ್ವಾನುಮತದಿಂದ ಮಾಡಿರುವ ಮುಖ್ಯ ಶಿಫಾರಸುಗಳೀರೀತಿಯಿವೆ—

(೧) ಹೈಸ್ಕೂಲುಗಳಲ್ಲಿ ಈಗಿರುವ ಐಚ್ಛಿಕ ವಿಷಯಗಳ ಬದಲು ಟೀಚಿಂಗ್, ಸೈನ್ಸ್, ಸಂಗೀತ, ವ್ಯವಸಾಯ ಇತ್ಯಾದಿ. ವೃತ್ತಿ ಶಿಕ್ಷಣ ಸಂಬಂಧ ವಿಷಯುಗಳಿರಬೇಕು ಐಚ್ಛಿಕ ವಿಷಯುಗಳ ಶಿಕ್ಷಣ ಹೈಸ್ಕೂಲಿನ ಮೊದಲನೇ ವರ್ಷದಿಂದ ಆರಂಭವಾಗಬೇಕು.

(೨) ಮಾಧ್ಯಮಿಕ ಹಾಗೂ ಹೈಸ್ಕೂಲುಗಳಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಾಗಿರಬೇಕು.

(೩) ಹಿಂದಿ ಶಿಕ್ಷಣ ಮಾಧ್ಯಮಿಕ ಶಾಲೆಯ ಮೊದಲನೇ ವರ್ಷದಿಂದಲೂ, ಇಂಗ್ಲೀಷ್ ಶಿಕ್ಷಣ ಮಾಧ್ಯಮಿಕ ಶಾಲೆಯ ೩ನೇ ವರ್ಷದಿಂದಲೂ ಆರಂಭವಾಗಬೇಕು.

(೪) ಮಾಧ್ಯಮಿಕ ಹಾಗೂ ಹೈಸ್ಕೂಲು ಪಬ್ಲಿಕ್ ಪರೀಕ್ಷೆ ಫೀ ಹೆಚ್ಚಬೇಕು. [೮ ಮತ್ತು ೧೫ ರೂ. ಆಗಬೇಕು]

(೫) ಉಪಾಧ್ಯಾಯರಿಗೆ ಶಿಕ್ಷಣ ಕೊಡಬೇಕು.

(೬) ಪರೀಕ್ಷೆಗಳು ಹೆಚ್ಚು ಕಠಿಣವಾಗಿರಬೇಕು.

(೭) ತರಗತಿಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ನಿಗದಿ ಮಾಡಬೇಕು.

(೮) ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು ದಿನಕ್ಕೆ ೪ ಗಂಟೆ ಮತ್ತು, ಹೈಸ್ಕೂಲುಗಳು ದಿನಕ್ಕೆ ೫ ಗಂಟೆ ಕಾಲ ಕೆಲಸ ಮಾಡಿದರೆ ಸಾಕು.

(೯) ಶಾಲೆಗಳು ಬೆಳಿಗ್ಗೆ ವೇಳೆ ಕೆಲಸ ಮಾಡಬೇಕು.

(೧೦) ಶಾಲೆಗಳು ಹೆಚ್ಚು ದಿನಗಳು ಕೆಲಸ ಮಾಡಬೇಕು. ಶಾಲೆಗಳ ರಜವನ್ನು ಒಮ್ಮೆ ದೀರ್ಘವಾಗಿ ಕೊಡುವ ಬದಲು, ಋತುಮಾನಗಳನ್ನನುಸರಿಸಿ, ಭಾಗಗಳಲ್ಲಿ ಕೊಡುವುದು ಒಳ್ಳೆಯದು.

(೧೧) ಮಾಧ್ಯಮಿಕ ಶಾಲೆಯ ಪಬ್ಲಿಕ್ ಪರೀಕ್ಷೆಗೆ ಕೂರಲು ವಿದ್ಯಾರ್ಥಿಗಳಿಗೆ ೧೨ ವರ್ಷ ತುಂಬಿರಬೇಕು.

(೧೨) ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ೧೫ ವರ್ಷ ತುಂಬಿರಬೇಕು.

ಹೋಟೇಲು ಕಾರ್ಮಿಕರ ಬೇಡಿಕೆ

ಬೆಂಗಳೂರು ಮೇ ೩೧

ಬೆಂಗಳೂರು ನಗರದ ೨೮ ಪ್ರಮುಖ ಹೋಟೇಲು ಕೆಲಸಗಾರರಿಗೂ ಮಾಲೀಕರಿಗೂ ಕೆಲಸಗಾರರ ಬೇಡಿಕೆಗಳ ವಿಷಯದಲ್ಲಿ ವಿವಾದ ಉಂಟಾಗಿ ಅದನ್ನು ಇತ್ಯರ್ಥಪಡಿಸಲು ಎರಡನೆಯ ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ನ ಅಜ್ಜುಡಿಕೇಟರ್‌ಗೆ ಶ್ರೀ ಮನ್ನಹಾರಾಜರು ಒಪ್ಪಿಸಿದ್ದಾರೆ. ಅವರ ಬೇಡಿಕೆಗಳು—

ಸಂಬಳ—ಸಿಹಿತಿಂಡಿ ಮಾಡುವ ಮುಖ್ಯ ಅಡಿಗೆಯವನಿಗೆ ರೂ. ೧೨೫-೫-೧೫೦.

ಇತರ ತಿಂಡಿಗಳನ್ನು ಮಾಡುವ ಮುಖ್ಯ ಅಡಿಗೆಯವನಿಗೆ ರೂ. ೮೦-೪-೧೨೦.

ಸಹಾಯ ಅಡಿಗೆಯವರಿಗೆ ರೂ. ೬೦-೩-೯೦.

ಸರ್ವರ್‌ಗಳಿಗೆ ಮತ್ತು ಅರೆಯುವವರಿಗೆ ರೂ. ೪೦-೨-೬೦.

ಕ್ಲೀನರ್‌ಗಳಿಗೆ ರೂ. ೩೦-೨-೫೦

ಉಗ್ರಾಣ ಮುಂತಾದವುಗಳನ್ನು ನೋಡಿಕೊಳ್ಳುವವರಿಗೆ ರೂ. ೫೦-೨-೮೦.

ಸಂಬಳದ ಶೇ|| ೨೫ ರಷ್ಟಾದರೂ ೧೦ ರೂ. ಗಳಿಗೆ ಕಮ್ಮಿಯಿಲ್ಲದಂತೆ ತುಟ್ಟೀಭತ್ಯ ಕೊಡಬೇಕು.

ಷಾಪ್ ಅಸಿಸ್ಟೆಂಟ್ ಆಕ್ಟ್ ಪ್ರಕಾರ ಕೊಡುವ ರಜಾ ಅಲ್ಲದೆ ದೀಪಾವಳಿ, ಪೊಂಗಲ್, ಮುಂತಾದ ೧೩ ದಿನಗಳಲ್ಲಿ ರಜಾ. ವರ್ಷಕ್ಕೆ ೧೫ ದಿನ ಪೂರ್ತಾ ಸಂಬಳ ರಜಾ ೧೫ ದಿನ ಅರ್ಧ ಸಂಬಳದ ರಜಾ.

ವರ್ಷಕ್ಕೆ ೩ ತಿಂಗಳ ಬೋನಸ್ಸು, ೧ ತಿಂಗಳ ಗ್ರ್ಯಾಚ್ಯುಟಿ ಮತ್ತು ಸಮಾನ ಹಣದ ಪ್ರಾವಿಡೆಂಟ್ ಫಂಡು.

ಸರ್ವೀಸಿನ ಧರವ ಸೆ ಕೊಡಬೇಕು. ರಜಾಕಾಲವನ್ನು ಕೆಲಸವೆಂದು ಪರಿಗಣಿಸಬೇಕು.

ಪಬ್ಲಿಕ್ ಪ್ರಾಸಿಕ್ಯೂಟರಿಗೆ ೧,೦೦೦ ರೂ. ಸಂಭಾವನೆ

ಬೆಂಗಳೂರು ಮೇ ೩೧

ಶ್ರೀ ಮೇದಪ್ಪನವರಿಗೆ ವಿಷಪಾನ ಮಾಡಿಸುವ ಪ್ರಯತ್ನ ನಡೆಸಿದರೆಂಬ ಅಪಾದನೆ ಮೇಲೆ ಶ್ರೀ ಎಲ್. ಎಸ್. ರಾಜು ಮತ್ತಿತರ ಮೂವರ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಪರ ಕೇಸ್ ನಡೆಸಲು ಸ್ಪೆಷಲ್ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ನೇಮಿಸಲ್ಪಟ್ಟಿದ್ದ ಶ್ರೀ ಎ. ಎಸ್. ನರಸಿಂಹಮೂರ್ತಿಯವರಿಗೆ ಸರ್ಕಾರ ಒಂದು ಸಾವಿರ ರೂ. ವಿಶೇಷ ಸಂಭಾವನೆ ಕೊಟ್ಟಿದೆ.

ಜನರಲ್ ರಿಜ್ವ್‌ವೇಗೆ ದಂಡನಾಯಕತ್ವ

'ಇನ್ನು ಮುಂದೆ ನಿಮ್ಮ ಕೆಲಸ' ಎಂದು ಹಸ್ತಲಾಘವಮಾಡುತ್ತಾ, ಜನರಲ್ ಐಸನ್‌ಹೋವರ್ ಜನರಲ್ ರಿಜ್ವೇಯವರಿಗೆ ಮಿತ್ರರಾಷ್ಟ್ರಗಳ ಶ್ರೇಷ್ಠ ಕಮಾಂಡಿನ ಮಹಾದಂಡನಾಯಕತ್ವವನ್ನು ಮೇ ೩೦ ರಲ್ಲಿ ವಹಿಸಿಕೊಟ್ಟರು.

ಬಲಾತ್ಕಾರವಾಗಿ 'ಹಿಂದಿ' ಬೇಡ

'ಬಲಾತ್ಕಾರವಾಗಿ' ಇತರರ ಮೇಲೆ ಹಿಂದಿ ಭಾಷೆಯನ್ನು ಹೊರಿಸುವ ಪ್ರಯತ್ನ ನಡೆಸಿದರೆ, ವಿಫಲವಾಗುವುದು ಖಂಡಿತವೆಂದು ಪ್ರಧಾನಿ ಪಂಡಿತನೆಹರೂ ಹಿಂದಿವಾದಿಗಳಿಗೆ ಎಚ್ಚರಿಕೆಯಿತ್ತರು. ಆದರೆ ಭಾರತೀಯರೆಲ್ಲರೂ ಹಿಂದಿ ಕಲಿಯಬೇಕೆಂದು ಅವರು ಹೇಳಿರುವರು.

ಕಪೂರ್ಥಲಾ ಮಹಾರಾಜರಿಗೆ ಗೌರವ

ಕಪೂರ್ಥಲಾ ಮಹಾರಾಜರಿಗೆ ಪ್ಯಾರಿಸ್ ನಗರದ ಪೌರಸಭೆಯು ಗೌರವ ಸದಸ್ಯತ್ವವನ್ನು ಅರ್ಪಿಸಲಾಯಿತು.

ಪಾರ್ಲಿಮೆಂಟ್ ಹೈಕೋರ್ಟ್

ದಕ್ಷಿಣ ಆಫ್ರಿಕಾ ಪಾರ್ಲಿಮೆಂಟಿನ ಹೈಕೋರ್ಟ್ ರಾಜ್ಯಾಂಗದ ವಿಚಾರದಲ್ಲಿ ಅಪ್ಪೆಲು ನ್ಯಾಯದ ಸ್ಥಾನವೆಂದು ಮಸೂದೆಗೆ ದಕ್ಷಿಣ ಆಫ್ರಿಕದ ಶಾಸನ ಸಭೆ ಅನುಮತಿ ಕೊಟ್ಟಿದೆ.

ಪೇಟೆ ಧಾರಣೆ

ಮೈಸೂರು ತಾ|| 31-5-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		10-6	16-4
ಹೊಂಗೆಬೀಜ	,,	12-10	13-12
ಹುರುಳಿ	,,	36-14	37-2
ಹೆಸರು	,,	57-0	59-2
ಸೀಗೆಕಾಯಿ	,,	3-3	3-8
ಮೆ. ಕಾಯಿ ಮಣಕ್ಕೆ		15-0	15-8
ಹುಣಸೇಹಣ್ಣು	,,	2-10	4-6
ತೆಂಗಿನಕಾಯಿ	1100ಕ್ಕೆ	—	—

ಚಿನ್ನ ಬೆಳ್ಳಿ ದರಗಳು

31-5-52	ರೂ.
ಸವರನ್	64-12
,,	64-13
ಚಿನ್ನ ತೊಲ	92-0
,, ಮೂಸ	90-8
ಬೆಳ್ಳಿ 100 ತೊಲ	160-0
,, ತೊಲ	1-11

ನೃತ್ಯ ಕಲಾಚಾರ್ಯ ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕಾರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು (ಸೀತಾವಿಲಾಸಅಗ್ರಹಾರದ ಹಿಂಭಾಗ).

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ. ವ್ಯವಸ್ಥಾಪಕ.

ನ್ಯೂ ಅಪೇರ ಟಾಕೀಸ್

30—5—52 ರಿಂದ ಅಮೋಘವಾದ 4ನೇ ವಾರ

ಪ್ರತಿದಿನ 3 ಆಟಗಳು

ಜೂಪಿಟರ್‌ರವರ—

* ರಾಣಿ *

(ತಮಿಳು)

ಪಾತ್ರ:— ‡ ಭಾನುಮತಿ ‡ ‡ ಬಾಲಚಂದರ್ ‡ ‡ ವಹಾಬ್ ಕಾಶ್ಮೀರಿ ‡

ವುಡ್ ಲ್ಯಾಂಡ್ಸ್

23—5—52ನೇ ಶುಕ್ರವಾರದಿಂದ ಅಮೋಘವಾದ 2ನೇ ವಾರ

ದಿನವೂ 3 ಆಟಗಳು

ಹಮಾರಿಷಾನ್

(ಹಿಂದಿ)

ಪಾತ್ರ—ಭಾರತ್‌ಭೂಷಣ್, ಯಾಕೂಬ್, ದುರ್ಗಾಖೋಟೆ ಮುಂತಾದವರು

ರಣಜಿತ್

೩೦—೫—೫೨ರಿಂದ ಪ್ರತಿದಿನ ೩ ಆಟ

ಅಜೀಬ್ ಲಡ್ಕಿ

(ಹಿಂದಿ)

ಪಾತ್ರ,— ನಾಸೀಂ ರೆಹಮಾನ್, ಶಶಿಕಲ,

ಪ್ರಕಾಶಕರು :—ಜಿ.ಎಲ್. ಸ್ವಾಮಿ ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೪ (ಲಿಂಕ್) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೩—೬—೧೯೫೨ನೇ ಮಂಗಳವಾರ [ಸಂಚಿಕೆ ೨೩೦

ಆಗಸ್ಟು ೩೧ನೇ ತಾರೀಖು ಇಂದೂರಿನಲ್ಲಿ ಎ. ಐ. ಸಿ. ಸಿ.

ಹೈದರಾಬಾದಿನ ೬ ಕಮ್ಯೂನಿಸ್ಟರ ಬಿಡುಗಡೆಗೆ ಸುಪ್ರೀಂ ಕೋರ್ಟಿನ ಆಜ್ಞೆ

ಸೇವಾದಳಕ್ಕೆ ಜನತೆಯ ನೆರವು ಬೇಕು

ಮೈಸೂರು ಜೂನ್ ೨

ಸೇವಾದಳದಿಂದ ರಾಷ್ಟ್ರಕ್ಕೆ ಅನೇಕ ಒಳ್ಳೆಯ ಕೆಲಸಗಳಾಗುತ್ತವೆ ಈ ದಳಕ್ಕೆ ಜನತೆಯು ತನ್ನ ಪೂರ್ಣ ನೆರವನ್ನು ನೀಡಬೇಕೆಂದು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಿನ್ನೆಯ ದಿನ ಭಾರತ ಸೇವಾದಳದ ಮಹಿಳಾಶಿಬಿರದ ಮುಕ್ತಾಯಸಮಾರಂಭದಲ್ಲಿ ಭಾಷಣಮಾಡುತ್ತಾ, ಹೇಳಿದರು.

ವಿದ್ಯಾರ್ಥಿನಿಯರಿಂದ ಕವಾಯಿತು ಪ್ರದರ್ಶನವಾದಮೇಲೆ ಸಂಚಾಲಕಿಯವರಾದ ಶ್ರೀಮತಿ ಸುನಂದಮ್ಮನವರೂ, ಶ್ರೀ ರುಮಾಲೆ ಚೆನ್ನಬಸಪ್ಪನವರೂ, ಭಾಷಣ ಮಾಡಿ ಸೇವಾದಳದ ಧ್ಯೇಯಧೋರಣೆಗಳನ್ನು ವಿವರಿಸಿ ಎಲ್ಲರೂ ಈ ದಳಕ್ಕೆ ಸಹಾಯಮಾಡಬೇಕೆಂದು ಪ್ರಾರ್ಥಿಸಿದರು.

ಶ್ರೀಮತಿ ಉಮಾಬಾಯಿ ಕುಂದಾಪುರರವರು ಭಾಷಣಮಾಡಿ ಸೇವಾದಳವು ಸ್ವಾತಂತ್ರ್ಯ ಹೋರಾಟ ಸಮಯದಲ್ಲಿ ಪಾತ್ರವಹಿಸಿದ ರೀತಿನೀತಿಗಳನ್ನೂ, ಸೇವಾದಳದ ಕಾರ್ಯಕ್ರಮಗಳಿಂದ ಜನರು ಸ್ವಲ್ಪ ಮಾರ್ಪಾಡು ಹೊಂದುತ್ತಿರುವುದನ್ನು ವಿವರಿಸಿ ಸರ್ಕಾರದವರು ಸೇವಾದಳಕ್ಕೆ ಇನ್ನೂ ಹೆಚ್ಚಿನ ಸಹಾಯವನ್ನು ನೀಡಬೇಕೆಂದು ತಿಳಿಸಿದರು.

ಸಭೆಯಲ್ಲಿ ಭಾಗವಹಿಸಬೇಕಾಗಿದ್ದ ಶ್ರೀ ನಾ. ಸು. ಹಾರ್ಡೀಕರ್‌ರವರು ಅನಿವಾರ್ಯಪ್ರಯುಕ್ತ ಆಗಮಿಸಿರಲಿಲ್ಲ. ಸಮಾರಂಭಕ್ಕೆ ಸಚಿವರುಗಳಾದ ಶ್ರೀ ಎ. ಜಿ. ರಾಮಚಂದ್ರರಾವ್, ಶ್ರೀ ಟಿ ಚನ್ನಯ್ಯನವರು, ಶ್ರೀ ಟಿ ಸಿದ್ದಲಿಂಗಯ್ಯನವರು ಇತರ ಗಣ್ಯ ವ್ಯಕ್ತಿಗಳೂ ಆಗಮಿಸಿದ್ದರು.

೩ ರೂಪಾಯಿಗೆ ಒಂದು ಕಪ್ ಕಾಫಿ

ಸಿಯೋಲ್ ನಲ್ಲಿ ಹೋಟೇಲಿನಲ್ಲಿ ಒಂದು ಕಪ್ ಕಾಫಿಗೆ ೩ ಸಾವಿರ ವೊನ್ ಅಂದರೆ ೩ ರೂಪಾಯಿ ಬೆಲೆಯಾಗಿದೆ. ಒಂದು ಒಳ್ಳೆಯ ಊಟಕ್ಕೆ ೩-೪ ಪೌಂಡುಗಳ ಬೆಲೆಯಾಗುತ್ತದೆ.

ಕಮ್ಯೂನಿಸ್ಟರ ಬಿಡುಗಡೆ

ಹೈದರಾಬಾದಿನಲ್ಲಿ ಸ್ಥಾನಬದ್ಧ ಕೈದಿಗಳಾಗಿದ್ದ ೬ ಜನ ಕಮ್ಯೂನಿಸ್ಟರನ್ನು ಬಿಡುಗಡೆ ಮಾಡಲು ಭಾರತ ಸುಪ್ರೀಂ ಕೋರ್ಟ್ ಆಜ್ಞೆ ಮಾಡಿದೆ.

ಡಾ|| ಅಂಬೇಡ್ಕರ್ ಅಮೆರಿಕಾಕ್ಕೆ

ಕೇಂದ್ರದ ಮಾಜಿ ನ್ಯಾಯಸಚಿವ ಡಾ|| ಅಂಬೇಡ್ಕರ್‌ರವರು ಅಮೆರಿಕಾದ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರೇಟ್ ಪ್ರಶಸ್ತಿಯನ್ನು ಸ್ವೀಕರಿಸಲು ಅಲ್ಲಿಗೆ ತೆರಳಿರುವರು. ಡಾ|| ಅಂಬೇಡ್ಕರ್‌ರವರು ಇತ್ತೀಚೆಗೆ ಸಚಿವಸ್ಥಾನಕ್ಕೆ ರಾಜೀನಾಮೆಯಿತ್ತಮೇಲೆ ಸರ್ಕಾರದ ವಿರೋಧಗಾಮಿಗಳಾಗಿ ವರ್ತಿಸುತ್ತಲಿರುವುದರಿಂದ ಇವರ ಅಮೆರಿಕಾ ಪ್ರವಾಸದಲ್ಲಿ ಈಗಿನ ಸರ್ಕಾರವನ್ನು ಟೀಕಿಸಿ ಭಾಷಣಗಳೇನಾದರೂ ಮಾಡಿದರೆ ದೇಶಕ್ಕೆ ಅಹಿತವನ್ನುಂಟುಮಾಡುವುದೆಂಬ ಹೆದರಿಕೆ ಅನೇಕರಲ್ಲಿ ಮೂಡಿತು. ಅವರು ಪ್ರವಾಸ ಕೈಗೊಳ್ಳುವ ಮುನ್ನ ಈ ವಿಷಯವಾಗಿ ಪ್ರಸ್ತಾಪಿಸಿ, ಭಾರತದ ಹಿತರಕ್ಷಣೆ ಮಾಡುವುದರಲ್ಲಿ ತಾನೊಬ್ಬ ಅಗ ಗಣ್ಯರು ಆದರಿಂದ ಭಾರತದ ಹಿತಕ್ಕೆ ಧಕ್ಕೆ ಒಂದುತೆ ತಾವು ನೋಡಿಕೊಳ್ಳುವುದಾಗಿ. ಸರ್ಕಾರದೊಡನೆ ತಮ್ಮ ಭಿನ್ನಾಭಿಪ್ರಾಯವಿರಬಹುದು ಆದರೆ ದೇಶದಮೇಲಲ್ಲವೆಂದು ಅವರು ಹೇಳಿ ಜನರಲ್ಲಿ ಮೂಡಿದ್ದ ಭೀತಿಯನ್ನು ನಿವಾರಿಸಿರುವರು.

ಒರಿಸ್ಸಾದ ನೂತನ ಗೌರ್ನರು

ಭಾರತ ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಮಿ|| ಸಯ್ಯದ್ ಫಸಲ್ ಅಲಿಯವರು ತಮ್ಮ ಹುದ್ದೆಗೆ ರಾಜೀನಾಮೆಯಿತ್ತು ಪಾಟ್ನಾಕ್ಕೆ ತೆರಳಿದರು. ಅವರು ಅಲ್ಲಿ ಇದೇ ೭ನೇ ತಾರೀಖು ಒರಿಸ್ಸಾದ ಗೌರ್ನರ್ ಹುದ್ದೆಯನ್ನು ಸ್ವೀಕರಿಸುವರು.

ಶ್ರೀ ಕೆ. ಎಂ. ಮುನಿಷಿ

ಉತ್ತರಪ್ರದೇಶದ ಗೌರ್ನರಾಗಿ ಶ್ರೀ ಕೆ. ಎಂ. ಮುನಿಷಿಯವರು ಲಕ್ನೋದಲ್ಲಿ ನಿನ್ನೆಯದಿನ ಅಲಹಾಬಾದ್ ಶ್ರೀಷ್ಠ ನ್ಯಾಯಾಲಯದ ಶ್ರೇಷ್ಠ ನ್ಯಾಯಮೂರ್ತಿಯವರ ಸಮ್ಮುಖದಲ್ಲಿ ಅಧಿಕಾರಸ್ವೀಕಾರ ಮಾಡಿದರು.

ರೈಲು ಇಂಜಿನ್ ತಯಾರಿ

ಪ್ರಕೃತದಲ್ಲಿ ಚಿತ್ತರಂಜನ ರೈಲ್ವೆವರ್ಕ್ಸ್ ಷಾಪಿನಲ್ಲಿ ರೈಲ್ವೆ ಇಂಜನ್ನಿನ ಭಾಗಗಳಲ್ಲಿ ಶೇಕಡ ೭೦ ರಷ್ಟು ತಯಾರಿಸುತ್ತಲಿದೆ. ಇನ್ನು ೨ ವರ್ಷಗಳೊಳಗಾಗಿ ಎಲ್ಲಾ ಭಾಗಗಳನ್ನು ತಯಾರಿಸಲು ಸಾಧ್ಯವೆಂದು ಹೇಳಲಾಗಿದೆ.

ಮಾಲೀಕರ ಮತ್ತು ಕಾರ್ಮಿಕರ ಸಲಹೆ

ಅಖಿಲಭಾರತ ತಯಾರಿಕೆಗಾರರ ಸಂಘದಲ್ಲಿ ಮಾತನಾಡುತ್ತಾ, ಕೇಂದ್ರ ಕಾರ್ಮಿಕಸಚಿವ ಶ್ರೀ ವಿ. ವಿ ಗಿರಿಯವರು ಕಾರ್ಮಿಕ ಮತ್ತು ಮಾಲೀಕರಲ್ಲಿ ಒಮ್ಮತ ಏರ್ಪಡಬೇಕಾದುದು ಅತ್ಯವಶ್ಯಕ ಕೈಗಾರಿಕಾ ಪ್ರಗತಿಗಾಗಿ ಕಾರ್ಮಿಕರ ಮತ್ತು ಮಾಲೀಕರ ಸಲಹೆಗಳನ್ನು ಪಡೆಯಲಾಗುತ್ತದೆ ಎಂದು ಹೇಳಿದರು.

ಭಾರತಕ್ಕೆ ಆಹಾರ

ಭಾರತವು ಕಳೆದ ವರ್ಷ ೨೧ ಲಕ್ಷ ಟನ್ ಆಹಾರವನ್ನು ಆಮದುಮಾಡಿಕೊಂಡಿದೆ. ೨೨ ಲಕ್ಷ ಟನ್ ಆಹಾರವನ್ನು ಸಂಗ್ರಹಣೆಮಾಡಿದೆ.

ಈ ಸಾಲಿನಲ್ಲಿ ೩೦|| ಲಕ್ಷ ಟನ್ ಆಹಾರವನ್ನು ಸಂಗ್ರಹಣೆಮಾಡುವುದು. ವಿದೇಶಗಳಿಂದ ಖಾಸಗಿ ಜನರು ಆಹಾರವಸ್ತುಗಳನ್ನು ತರಿಸಲು ಅನುಮತಿಕೊಡುವ ವಿಷಯ ಪರಿಶೀಲನೆಯಲ್ಲಿದೆಯೆಂದು ಆಹಾರಸಚಿವ ಮಿ|| ಕಿದ್ವಾಯಿಯವರು ಹೇಳಿರುವರು.

ಉಚಿತ ವಿದ್ಯಾಭ್ಯಾಸ

ಎನ್. ಜಿ. ಓ. ಗಳ ಮಕ್ಕಳಿಗೆ ಮದ್ರಾಸ್ ಪ್ರಾಂತ್ಯದಲ್ಲಿ ಏಡೆಡ್ ಸ್ಕೂಲುಗಳಲ್ಲೂ ಸಹ ಎಲಿಮೆಂಟರಿ ಮತ್ತು ಸೆಕೆಂಡರಿ ವಿದ್ಯಾಭ್ಯಾಸಗಳಲ್ಲಿ ಉಚಿತವಾಗಿಯೂ ಹೈಸ್ಕೂಲುಗಳಲ್ಲಿ ಅರ್ಧ ಫೀ ಯನ್ನು ತೆಗೆದುಕೊಂಡು ಶಿಕ್ಷಣ ಕೊಡಬೇಕೆಂದು ಮದ್ರಾಸ್ ಸರ್ಕಾರವು ಆಜ್ಞೆಯಿತ್ತಿದೆ.

ಈ ನೀತಿಯಿಂದ ಏಡೆಡ್ ಸ್ಕೂಲ್‌ಗಳಿಗುಂಟಾಗುವ ನಷ್ಟವನ್ನು ಸರ್ಕಾರವು ಪೂರಾ ಕೊಡುತ್ತದೆ. ಲೋಕಲ್ ಬೋರ್ಡುಗಳಿಗುಂಟಾಗುವ ನಷ್ಟದಲ್ಲಿ ಅರ್ಧವನ್ನು ಸರ್ಕಾರ ಕೊಡುತ್ತದೆ.

ಈ ಸೌಲಭ್ಯವು ಎನ್. ಜಿ. ಓ. ಗಳ ಮಕ್ಕಳಿಗೆ ಮಾತ್ರ ಅನ್ವಯಿಸುತ್ತದೆ. ಅವರ ಸಂಬಂಧಿಗಳಿಗಾಗಲೀ ಅವರ ಪೋಷಣೆಯಲ್ಲಿರುವವರಿಗಾಗಲೀ ಅನ್ವಯಿಸುವುದಿಲ್ಲ.

ಐಶ್ವರ್ಯವಂತರಿಗೆ ಹೆಚ್ಚಿನ ತೆರಿಗೆ

ನಿನ್ನೆ ಪಾರ್ಲಿಮೆಂಟಿನಲ್ಲಿ ನಡೆದ ಚರ್ಚೆಗಳಲ್ಲಿ ಕೂಡಲೇ ಮರಣತೆರಿಗೆ ವಿಧಿಸಬೇಕು, ಐಶ್ವರ್ಯವಂತರಿಗೆ ಹೆಚ್ಚಿನತೆರಿಗೆ ಹಾಕಬೇಕು ಎಂಬ ವಿಷಯ ಮುಖ್ಯವಾದುದೆಂದು ಗೊತ್ತಾಗಿದೆ.

ಎ. ಐ. ಸಿ. ಸಿ. ಯನ್ನು ಆಗಸ್ಟ್ ೩೧ನೇ ತಾರೀಖಿನ ದಿನ ಇಂದೂರಿನಲ್ಲಿ ನಡೆಸಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಕಾರ್ಯಕಾರಿ ಸಮಿತಿಯ ಸಭೆಯು ನಿನ್ನೆ ದೆಹಲಿಯಲ್ಲಿ ಮುಕ್ತಾಯವಾಯಿತು. ಭಾಷಾವಾರು ಪ್ರಾಂತ್ಯರಚನೆ ವಿಷಯವನ್ನು ಪರಿಶೀಲಿಸಿತೆಂದು ಹೇಳಲಾಗಿದೆ.

ಬಂದರು ಅಭಿವೃದ್ಧಿ

ಮಂಗಳೂರು ಬಂದರನ್ನು ಅಭಿವೃದ್ಧಿಗೊಳಿಸಲು ಪೂನಾ ಬಳಿ ಇರುವ ಸಂಶೋಧನಾ ಕೇಂದ್ರದಲ್ಲಿ ಮಾದರಿ ಪ್ರಯೋಗಗಳು ನಡೆಯುತ್ತಿರುವುದಾಗಿ ಗೊತ್ತಾಗಿದೆ.

ರಾಷ್ಟ್ರೀಯ ರಂಗಭೂಮಿ

ಭಾರತದಲ್ಲಿ ಸಾಂಸ್ಕೃತಿಕ ಪ್ರಗತಿಗಾಗಿ ಶ್ರಮಿಸಬೇಕು. ರಾಷ್ಟ್ರೀಯ ರಂಗಭೂಮಿಯನ್ನು ರಚಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರವರು ಹೇಳಿರುವರು.

ಹೊಸ ವಿಮಾನ ನಿಲ್ದಾಣಗಳು

ಈ ಸಾಲಿನಲ್ಲಿ ಇನ್ನೂ ಮೂರು ಹೊಸ ವಿಮಾನನಿಲ್ದಾಣಗಳನ್ನು ಏರ್ಪಡಿಸಲಾಗುತ್ತದೆಯೆಂದು ಗೊತ್ತಾಗಿದೆ.

ಸಬ್ಸಿಡಿ ನಿಲ್ಲಿಸಿದ್ದರ ಫಲ

ಭಾರತದ ನಾನಾ ಪ್ರಾಂತ್ಯಗಳಿಗೆ ಆಹಾರ ಸಬ್ಸಿಡಿಯನ್ನು ನಿಲ್ಲಿಸಿದುದರ ಪರಿಣಾಮವಾಗಿ ಹುದುಗಿಟ್ಟಿದ್ದ ಆಹಾರವೆಲ್ಲ ಹೊರಕ್ಕೆ ಬರುತ್ತಿದೆ. ಪ್ರಾಂತ್ಯಗಳಿಂದ ಆಹಾರ ಬೇಡಿಕೆಯು ಕಡಿಮೆಯಾಗಿದೆ ಎಂದು ಆಹಾರಮಂತ್ರಿ ಶ್ರೀ ಕಿದ್ವಾಯಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಹೆಚ್ಚಿಗೆ ಆಹಾರ ಬೆಳೆಯಬೇಕು

ಹೆಚ್ಚಿಗೆ ಆಹಾರವನ್ನು ಬೆಳೆದು ಪ್ರಾಂತ್ಯದಲ್ಲಿರುವ ಆಹಾರ ಬಿಕ್ಕಟ್ಟನ್ನು ಪರಿಹಾರ ಮಾಡಬೇಕಾಗಿದೆ. ಅದಕ್ಕೆ ಸರ್ಕಾರವು ಪೂರ್ಣ ನೆರವುನೀಡುವುದಾಗಿ ಮದರಾಸ್ ಆಹಾರ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂರವರು ಹೇಳಿರುವರು.

ಸೋಷಲಿಸ್ಟರ ದಸ್ತಗಿರಿ

ಅಹಮದಾಬಾದಿನಲ್ಲಿ ಸರ್ಕಾರದ ಆಹಾರದ ಗೋಡೌನ್‌ಗಳಬಳಿ ಸತ್ಯಾಗ್ರಹಕ್ಕೆ ಹೊರಟ ೬ ಜನ ಸೋಷಲಿಸ್ಟರು ದಸ್ತಗಿರಿಯಾಗಿದ್ದಾರೆ.

ಪಾರ್ಲಿಮೆಂಟ್ ಸದಸ್ಯರಿಗೆ ಪೋಲೀಸ್ ನೆರವು

ಪಾರ್ಲಿಮೆಂಟಿನ ಸದಸ್ಯರ ಸೌಕರ್ಯಕ್ಕಾಗಿ ಕೇಂದ್ರ ಸರ್ಕಾರವು ಒಂದು ವಿಶೇಷ ಪೋಲೀಸು ಪಡೆಯನ್ನು ರಚಿಸಲು ಯೋಚಿಸುತ್ತಿದೆ. ಈ ಪಡೆಯಲ್ಲಿ ಎಲ್ಲಾ ಸಂಸ್ಥಾನಗಳಿಂದ ಆರಿಸಿ ತೆಗೆದುಕೊಂಡ ೫೦೦ ಮಂದಿಯನ್ನಿಡಲಾಗುವುದು. ಈಗ ಈ ಕಾರ್ಯಕ್ಕೆ ಇರುವ ದೆಹಲಿಯ ಪೋಲೀಸು ಪಡೆಯಲ್ಲಿ ಆಗಾಗ್ಗೆ ವರ್ಗಾವಣೆ ಆಗುತ್ತಿರುವುದರಿಂದ ಪಾರ್ಲಿಮೆಂಟ್ ಸದಸ್ಯರಿಗೆ ಅನವಶ್ಯಕವಾದ ತೊಂದರೆಯಾಗುತ್ತಿದೆ. ಈ ನೂತನ ಪಡೆಗೆ ಪಾರ್ಲಿಮೆಂಟ್ ಹೌಸಿನಲ್ಲೇ ಸ್ಥಳಾವಕಾಶ ಮಾಡಿಕೊಡಲಾಗುವುದು. ಒಬ್ಬ ಸೀನಿಯರ್ ಪೋಲೀಸ್ ಸೂಪರಿಂಟೆಂಡೆಂಟರು ಈ ಪಡೆಯ ನಾಯಕರಾಗಿ ಕೆಲಸ ಮಾಡುವರು.

ಸಚಿವರುಗಳಿಗೆ ಹಾವಿನ ಹಾರ!

ಹೈದರಾಬಾದ್ ಗೃಹಸಚಿವ ಶ್ರೀ ಡಿ. ಜಿ. ಬಿಂದು ಮತ್ತು ಅಸೆಂಬ್ಲಿ ಸ್ಪೀಕರ್ ಶ್ರೀ ಕಾಶೀನಾಥ'ರಾವ್' ವೈದ್ಯರುಗಳು ಹೈದ್ರಾಬಾದಿಗೆ ೨೪ ಮೈಲಿ ದೂರದಲ್ಲಿರುವ ಪಾಂಜ್ಲೆಗಾವೊನ್' ಗ್ರಾಮಕ್ಕೆ ಸಾಮಾಜಿಕ ಸೇವಾ ಸಮ್ಮೇಳನ ಹಾಗೂ ಕೃಷಿಯಜ್ಞಕ್ಕೆ ಭಾಗವಹಿಸಲು ತೆರಳಿದಾಗ ಅವರಿಗೆ 'ಹಾವಿನ ಹಾರ' ಹಾಕಲಾಯಿತು.

ಈ ಸಮ್ಮೇಳನ ನಡೆಸಿದ ಪಾಂಜ್ಲೆಗಾವೊನ' ಮಹಾರಾಜರು ಧಾರ್ಮಿಕ, ಬೋಧಕ, ಸಾಮಾಜಿಕ ಕಾರ್ಯಕರ್ತ ಹಾಗೂ ವೈದ್ಯರು. ಈ ಸಮ್ಮೇಳನಕ್ಕೆ ಜಿಂತೂರು ತಾಲ್ಲೂಕಿನ ೨೮ ಗ್ರಾಮಗಳಿಂದ ೫೦,೦೦೦ ಮಂದಿಗೂ ಮೀರಿ ಜನ ಬಂದಿದ್ದರು.

ದುಷ್ಟ ಮೃಗಗಳು ಹಾಗೂ ವಿಷಪೂರಿತ ಸರ್ಪಗಳು, ನಾಗರ ಹಾವುಗಳು ಈ ಮಹಾರಾಜರ ಅಧೀನಕ್ಕೊಳಗಾಗುತ್ತವೆ.

ಜನರನ್ನು ರೋಗವಿಮುಕ್ತರನ್ನಾಗಿ ಮಾಡುವ ಈ ಮಹಾರಾಜರು, ತಮ್ಮ ಕಾರ್ಯ ಚಟುವಟಿಕೆಗಳಿಗಾಗಿ ಎಂಗಡಿಸಿರುವ ೨೫ ಗ್ರಾಮಗಳಲ್ಲಿ ಪ್ರತಿ ಗ್ರಾಮದಲ್ಲೂ ಆಸ್ಪತ್ರೆಯೊಂದನ್ನು ತೆಗೆಯಲು ಉದ್ದೇಶಿಸಿದ್ದಾರೆ.

ಸಮ್ಮೇಳನಾಧ್ಯಕ್ಷತೆ ವಹಿಸುತ್ತ, ಶ್ರೀ ವೈದ್ಯರು, ಮಾನವತೆಗೆ ಮಹಾರಾಜರ ಸೇವೆಗೆ ಹೆಚ್ಚಿನ ಪ್ರಶಂಸೆ ನೀಡಿದರು.

ಸಮ್ಮೇಳನವನ್ನು ಉದ್ಘಾಟಿಸುತ್ತಾ, ಶ್ರೀ ಬಿಂದುರವರು ಮಹಾರಾಜರ ಕಾರ್ಯವು ಅನುಕರಣ ಯೋಗ್ಯವೆಂದರು.

ಪ್ರಕಾಶಕರು :—ಜಿ.ಎಲ್'. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

ಲೈಸನ್ಸಿಲ್ಲದೆ ರೇಡಿಯೋ ಹೊಂದಿರುವವರಿಗೆ ಎಚ್ಚರಿಕೆ

ಅನೇಕರು ಲೈಸೆನ್ಸ್ ಇಲ್ಲದೆಯೇ ರೇಡಿಯೊಗಳನ್ನು ಹೊಂದಿರುವರೆಂದೂ ಇಂಥವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದೂ ಅಂಚೆ ಮತ್ತು ತಂತಿ ಇಲಾಖೆಯ ಡೈರೆಕ್ಟರ್-ಜನರಲ'ರವರ ಪ್ರಕಟಣೆಯೊಂದು ತಿಳಿಸುತ್ತದೆ. ಆದರೆ ಇಂಥವರೆಲ್ಲ ಹೆಚ್ಚಿನ ಚಾರ್ಜಿಲ್ಲದೆಯೇ ಲೈಸನ್ಸ್ ಪಡೆಯಲು ಜುಲೈ ೩೧ ರವರೆಗೆ ಅವಕಾಶ ಕೊಡಲಾಗಿದೆ.

ಮಂತ್ರಿಗಳ ಮೇಲೆ ತೀವ್ರ ಕಾರ್ಯಕ್ರಮ

ನೇಪಾಳ ಕಾಂಗ್ರೆಸ್‌ನ ಪ್ರಮುಖರಾಗಿದ್ದು ಮಂತ್ರಿ ಆಗಿದ್ದ ಶ್ರೀ ಭದ್ರಕಾಳಿ ಮಿಶ್ರರವರು ದಂಗೆಕಾರರೊಡನೆ ಸೇರಿಕೊಂಡ ಕಾರಣ ಅವರನ್ನು ಕಾಂಗ್ರೆಸ್ಸಿನಿಂದ ಹೊರಗೆ ಹಾಕಲಾಗಿತ್ತು. ಭದ್ರಕಾಳಿ ಮಿಶ್ರರು ಮಂತ್ರಿಮಂಡಲದ ಸಭೆಗಳಲ್ಲಿ ಭಾಗವಹಿಸಕೂಡದೆಂದು ನೇಪಾಳದ ಪ್ರಧಾನಿ ಶ್ರೀ ಎಂ. ಪಿ. ಕೊಯಿರಾಲಾರವರು ಆಜ್ಞೆ ಹೊರಡಿಸಿದ್ದಾರೆ.

ಅಣು ಆಸ್ಫೋಟನೆ

ಅಮೆರಿಕಾದ ಪ್ರಯೋಗ ಕ್ಷೇತ್ರದಲ್ಲಿ ೧೯ನೆಯ ಅಣು ಸ್ಫೋಟನೆಯಾದ ಕೆಲವು ಸೆಕೆಂಡುಗಳಲ್ಲೇ ಅವಿತಿದ್ದ ಸ್ಥಳಗಳಿಂದ ಟ್ಯಾಂಕುಗಳು, ಯೋಧರು ಮುಂದೆ ನಡೆದರು. ಅಣುಶಸ್ತ್ರವು ಗೋಪುರವೊಂದರಿಂದ ಸಿಡಿಯಿತು.

ಆಸ್ಫೋಟನದ ಪ್ರಕಾಶ ೭೦ ಮೈಲಿ ದೂರದ ಲಾಸ್'ವೇಗಾಸ್'ನಲ್ಲಿ ಕಾಣಬಂತು. ಕಳೆದ ವಾರದಷ್ಟು ಪ್ರಕಾಶಮಾನವಾಗಿರಲಿಲ್ಲವೆಂದು ವೀಕ್ಷಕರ ಹೇಳಿಕೆ.

ಭಾರತದ ಜನಸಂಖ್ಯೆ

೧೯೫೧ರ ಜನಗಣತಿ ಲೆಕ್ಕ ಪತ್ರಗಳನ್ನು ಭಾರತದ ರಿಜಿಸ್ಟ್ರಾರ್ ಜನರಲ್ಲರೂ ಸೆನ್ಸಸ್ ಕಮಿಷನರೂ ಹೊರಗೆಡಹಿದ್ದಾರೆ.

ಭಾರತದ ಜನಸಂಖ್ಯೆ ಒಟ್ಟು ೩೫,೬೮,೨೯,೪೮೫ ಹತ್ತು ವರ್ಷಗಳಲ್ಲಿ ಶೇಕಡ ೧೨ ವರೆ ಹೆಚ್ಚಿದಂತಾಯಿತು.

ಈ ಸಂಖ್ಯೆಯನ್ನು ಮುಖ್ಯವಾಗಿ ಎರಡು ಭಾಗ ಮಾಡಲಾಗಿದೆ. ಒಂದನೆಯ ವ್ಯವಸಾಯಗಾರರು ಒಟ್ಟು ೨೪,೯೧.೨೨,೪೯೯ ಜನ ವ್ಯವಸಾಯಗಾರರಲ್ಲದವರು ೧೦-೬೫,೬೧,೯೪೦ ಜನ.

ಗಂಡಸು ಸಂಖ್ಯೆ ೮೧,೩೩,೦೫,೬೫೪ ಹೆಂಗಸು ಸಂಖ್ಯೆ ೧೭,೩೫,೨೩,೮೩೧. ಒಂದು ಸಾವಿರ ಜನ ಗಂಡಸರಿಗೆ ೯೪೭ ಜನ ಸ್ತ್ರೀಯರಾದಂತಾಯಿತು.

ಉತ್ತರ ಭಾರತದಲ್ಲಿ ಶೇಕಡ ೧೧-೨ ಮಾತ್ರ ಹೆಚ್ಚಿದೆ. ದಕ್ಷಿಣ ಭಾರತದಲ್ಲಿ ಜನಸಂಖ್ಯೆ ಶೇಕಡ ೧೫.೩ ರಷ್ಟು ಹೆಚ್ಚಿದೆ. ಕೊಡಗಿನಲ್ಲಿ ೩೦-೩ ರಷ್ಟು ಹೆಚ್ಚಿದೆ. ಭಾರತದ ಶೇಕಡ ೮೨.೮ ರಷ್ಟು ಜನಸಂಖ್ಯೆ ಹಳ್ಳಿಗಾಡಿನಲ್ಲಿದ್ದಾರೆ.

ಅಧಿಕಾರ ಸ್ವೀಕಾರ

ಬೆಂಗಳೂರು ಜೂನ್ ೧

ಲಂಚನಿರೋಧ ಮತ್ತು ದಕ್ಷತೆ ಆಡಿಟ್ ಇಲಾಖೆಯ ಡೈರೆಕ್ಟರ್ ಮತ್ತು ಸರ್ಕಾರದ ಜೀವವಿಮೆ ಇಲಾಖೆ ಜನರಲ್ ಮ್ಯಾನೇಜರ್ ಆಗಿ ನೇಮಕವಾಗಿರುವ ಶ್ರೀ ಜೆ. ಅವ್ವಾಜಿಗೌಡರು ಇಂದು ಅಧಿಕಾರ ಸ್ವೀಕರಿಸಿದರು.

ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಯಾಗಿ ಶ್ರೀ ಜಿ. ಬಿ. ಮಲ್ಲಾರಾಧ್ಯರು ಮೊನ್ನೆ ಅಧಿಕಾರ ಸ್ವೀಕಾರ ಮಾಡಿದರು.

ಡಿ. ಪಿ. ಐ. ಆಗಿದ್ದ ಶ್ರೀ ಕೆ. ಗುರುದತ್'ರವರು ನಿವೃತ್ತಿ ಮುನ್ನ ೬ ತಿಂಗಳ ಕಾಲ ರಜಾ ತೆಗೆದುಕೊಂಡಿದ್ದಾರೆ.

ಪ್ರತಿಭಟನಾ ಚಳುವಳಿ

ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿ ಹಾಗೂ ದಕ್ಷಿಣ ಆಫ್ರಿಕಾ ಭಾರತ ಕಾಂಗ್ರೆಸಗಳ ಜಂಟಿ ಸಭೆಯು, ದಕ್ಷಿಣ ಆಫ್ರಿಕಾದಲ್ಲಿ ಅನ್ಯಾಯ ಕಾನೂನುಗಳ ಪ್ರತಿಭಟನೆಗೆ ರಾಷ್ಟ್ರೀಯ ಚಳವಳಿಯು ಜೂನ್ ೨೬ ರಂದು ಆರಂಭವಾಗುವುದೆಂದು ತಿಳಿಸಿದೆ.

ಸತ್ಯಾಗ್ರಹಿಗಳ ಬಂಧನ

ಸೋಷಲಿಸ್ಟ್ ನಾಯಕ ಮೊಯಿನುದ್ದೀನ' ಹ್ಯಾರಿಸ್'ರವರ ನಾಯಕತ್ವದಲ್ಲಿ ಸತ್ಯಾಗ್ರಹ ನಡೆಸಿದ ೧೧ ಮಂದಿ ಸೋಷಲಿಸ್ಟರನ್ನು (ಒಬ್ಬ ಹೆಂಗಸು ಸೇರಿ) ಬೊಂಬಾಯಿನಲ್ಲಿ ಸರ್ಕಾರಿ ಆಹಾರ ಧಾನ್ಯಗಳ ಗಡಂಗಿನ ಬಳಿ ದಸ್ತಗಿರಿ ಮಾಡಲಾಯಿತು.

ಪೇಟೆ ಧಾರಣೆ

ಮೈಸೂರು ತಾ|| 2-6-52

ಅಧಿಕೃತವಾದದ್ದು

		ರೂ.	ರೂ.
ಕಡ್ಲೇಕಾಯಿ ಪಲ್ಲಾಕ್ಕೆ		10-0	16-4
ಹೊಂಗೆಬೀಜ	,,	11-10	11-14
ಹುರುಳಿ	,,	—	—
ಹೆಸರು	,,	56-0	58-14
ಸೀಗೆಕಾಯಿ	ಮಣಕ್ಕೆ	2-11	3-8
ಮೆ. ಕಾಯಿ	,,	6-14	14-12
ಹುಣಸೇಹಣ್ಣು	,,	3-14	4-6
ತೆಂಗಿನಕಾಯಿ	1100ಕ್ಕೆ	85	157

ಚಿನ್ನ ಬೆಳ್ಳಿ ದರಗಳು

2-6-52	ರೂ.
ಸವರನ್	64-12
,,	64-13
ಚಿನ್ನ ತೊಲ	91-6
,, ಮೂಸ	90-0
ಬೆಳ್ಳಿ 100 ತೊಲ	161-8
,, ತೊಲ	1-11

ನ್ಯೂ ಅಪೇರ ಟಾಕೀಸ್
30—5—52 ರಿಂದ
ಅಮೋಘವಾದ
4ನೇ ವಾರ
ಪ್ರತಿದಿನ 3 ಆಟಗಳು
ಜೂಪಿಟರ್'ರವರ—
* ರಾಣಿ *
(ತಮಿಳು)
ಪಾತ್ರ— ‡ ಭಾನುಮತಿ ‡
‡ ಬಾಲಚಂದರ್ ‡
‡ ವಹಾಬ್ ಕಾಶ್ಮೀರಿ ‡

ವುಡ್ ಲ್ಯಾಂಡ್ಸ್
30—5—52ನೇ ಶುಕ್ರವಾರದಿಂದ
ಅಮೋಘವಾದ 3ನೇ ವಾರ
ದಿನವು 3 ಆಟಗಳು
ಹಮಾರಿಷಾನ್
(ಹಿಂದಿ)
ಪಾತ್ರ—ಭಾರತ'ಭೂಷಣ್, ಯಾಕೂಬ್,
ದುರ್ಗಾಖೋಟೆ ಮುಂತಾದವರು

ರಣಜಿತ್
೩೦—೫—೫೨ರಿಂದ ಪ್ರತಿದಿನ ೩ ಆಟ
ಅಜೀಬ್ ಲಡ್ಕಿ
(ಹಿಂದಿ)
ಪಾತ್ರ— ನಾಸೀರ ಬೇಗಮ್, ತಶೀಲ,

ಫೋ: ೯ ೫೭೪ (೮೦೪) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ
ಸಂಪುಟ ೨] ೫ ೬—೧೯೫೨ನೇ ಗುರುವಾರ [ಸಂಚಿಕೆ ೨೭೨

ಮದ್ರಾಸಿಗೆ ಕೇಂದ್ರದಿಂದ ಆರು ಕೋಟಿ ರೂಪಾಯಿಗಳ ಸಾಲ

ಬೊಂಬಾಯಿ ಮುಖ್ಯಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರು ಕಿರಿಯ ಶಾಸನಸಭೆಗೆ ಚುನಾಯಿತರಾದರು

ಸಿಡಿಲಿನಿಂದ ಯುವಕನ ಮರಣ

ಮೈಸೂರು ಜೂನ್ ೪

ರಾಜಧಾನಿಯ ಚಾಮುಂಡಿ ಬಡಾವಣೆಯಲ್ಲಿರುವ ಎಲೆತೋಟದಲ್ಲಿ ಮಂಚಯ್ಯ ಎಂಬುವನಿಗೆ ನಿನ್ನೆ ಮಧ್ಯಾಹ್ನ ೩ ಗಂಟೆ ಸಮಯದಲ್ಲಿ ಸಿಡಿಲು ಹೊಡೆದು ಮೃತನಾದನೆಂದು ವರದಿಯಾಗಿದೆ. ಅವನ ಪಕ್ಕದಲ್ಲಿದ್ದ ಎಮ್ಮೆಯೂ ಸಹ ಮರಣ ಹೊಂದಿತೆಂದು ವರದಿಯಾಗಿದೆ.

ಮಂತ್ರಿಗಳ ಪ್ರವಾಸ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮತ್ತು ವಿದ್ಯಾಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರು ಸ್ಥಳೀಯಸಂಸ್ಥೆಯ ಸಚಿವರಾದ ಶ್ರೀ ಟಿ. ಚನ್ನಯ್ಯನವರು ಈದಿನ ಮಧ್ಯಾಹ್ನ ಬಂಡೀಪುರದಿಂದ ಇಲ್ಲಿಗೆ ಆಗಮಿಸಿ ಬೆಂಗಳೂರಿಗೆ ಪ್ರಯಾಣ ಬೆಳಸಿದರು.

ಸಚಿವರ ಆಗಮನ

ಕೈಗಾರಿಕಾ ಸಚಿವರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಈದಿನ ಮಧ್ಯಾಹ್ನ ಬಂಡೀಪುರದಿಂದ ಇಲ್ಲಿಗೆ ಆಗಮಿಸಿದರು. ಅವರು ನಾಳೆ ಸಂಜೆ ಬೆಳಗೊಳದ ಕಾರ್ಖಾನೆಯ ಕ್ಲಬ್ಬಿನ ವಾರ್ಷಿಕೋತ್ಸವದ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಪತ್ರಿಕೋದ್ಯೋಗಿಗಳ ಸಭೆ

ಮೈಸೂರು ಜೂನ್ ೪

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಸರ್ವ ಸದಸ್ಯರ ಸಭೆಯು ಇದೇ ೮ ನೇ ತಾ|| ಭಾನುವಾರ ಬೆಳಗ್ಗೆ ೯ ಗಂಟೆಗೆ ನಡೆಯುತ್ತದೆ.

ಪೇಟೆ ಧಾರಣೆ

ಮೈಸೂರು ತಾ|| 4—6—52

ಅಧಿಕೃತವಾದದ್ದು

		ರೂ.	ರೂ.
ಕಡಲೆಕಾಯಿ ಪಲ್ಲಾಕ್ಕೆ		6-12	16-14
ಹೊಂಗೆಬೀಜ	,,	12.6	12.8
ಹುರುಳಿ	,,	36-2	36-12
ಹೆಸರು	,,	56-10	58-4
ಮೆ|| ಕಾಯಿ ಮಣಕ್ಕೆ		—	—
ಹುಣಸೇಹಣ್ಣು	,,	3-0	3-11
ಸೀಗೆಕಾಯಿ	,,	3-0	3.7
ತೆಂಗಿನಕಾಯಿ	100	82	187

ಚಿನ್ನ ಬೆಳ್ಳಿ ದರಗಳು

ತಾ|| 4—6—52	ರೂ.
ಸವರನ್	64-12
,,	64-14
ಚಿನ್ನ ತೊಲ	90-6
,, ಮೂಸ	89-0
ಬೆಳ್ಳಿ 100 ತೊಲ	160-0
,, ತೊಲ	1-11

ಪಾರ್ಲಿಮೆಂಟಿನಲ್ಲಿ ಬಡ್ಜೆಟ್ ಚರ್ಚೆ ಮುಕ್ತಾಯ

ಭಾರತದ ಪಾರ್ಲಿಮೆಂಟ್ ಸಭೆಯಲ್ಲಿ ನಾಲ್ಕು ದಿನಗಳಿಂದ ನಡೆಯುತ್ತಿದ್ದ ಬಡ್ಜೆಟ್'ಮೇಲೆ ಚರ್ಚೆಯು ನಿನ್ನೆ ಮುಕ್ತಾಯವಾಯಿತು.

ಅರ್ಥಿಕಸಚಿವ ಶ್ರೀ ಚಿಂತಾಮಣಿಯವರು ಚರ್ಚೆಗೆ ಉತ್ತರವಿತ್ತು ಆಹಾರಧಾನ್ಯಗಳಬಗ್ಗೆ ಕೇಂದ್ರಸರ್ಕಾರವು ಸಬ್ಸಿಡಿ ಕೊಡುವುದಿಲ್ಲವೆಂದೂ, ಆ ದರ ಹೆಚ್ಚು ಬೆಳೆಯುವುದು ಮತ್ತು ಸಂಗ್ರಹಣೆ ವಿಚಾರಗಳಲ್ಲಿ ಇನ್ನೂ ಹೆಚ್ಚಿನ ಆಸಕ್ತಿ ವಹಿಸಲಾಗುವುದೆಂದೂ ತಿಳಿಸಿರುತ್ತಾರೆ.

ರೈತರ ಮೇಲೆ ವಿಶೇಷ ಅಭಿವೃದ್ಧಿ ತೆರಿಗೆ

ಮದರಾಸ್ ಪ್ರಾಂತ್ಯದಲ್ಲಿ ನೀರಾವರಿ ಯೋಜನೆಯಿಂದ ಪ್ರಯೋಜನ ಹೊಂದುವ ರೈತರ ಮೇಲೆ ವಿಶೇಷ ತೆರಿಗೆಯನ್ನು ಹಾಕಲು ಅಲ್ಲಿನ ಸರ್ಕಾರದವರು ಯೋಚಿಸುತ್ತಿದ್ದಾರೆ. ಇದರಿಂದ ಒನೇ ವರ್ಷದಿಂದ ೩ ಕೋಟಿ ರೂ. ವರಮಾನ ಬರುವುದೆಂದು ಹೇಳಲಾಗಿದೆ.

ಡಾ|| ಗ್ರಹಾಂರೊಡನೆ ಭೇಟಿ

ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ|| ಗ್ರಹಾಂರವರನ್ನು ಮೊನ್ನೆಯದಿನ ಭಾರತ ಮತ್ತು ಪಾಕೀಸ್ಥಾನ ಪ್ರತಿನಿಧಿಗಳು ಭೇಟಿ ಮಾಡಿದರು.

ಈದಿನ ಡಾ|| ಗ್ರಹಾಂರವರನ್ನು ಉಭಯ ದೇಶದ ಪ್ರತಿನಿಧಿಗಳು ಪ್ರತ್ಯೇಕವಾಗಿ ಭೇಟಿ ಮಾಡಲಿರುವರು.

ಮೊರಾರ್ಜಿ ದೇಸಾಯ್'ರವರು ಚುನಾಯಿತರಾದರು

ಬೊಂಬಾಯಿನ ಮುಖ್ಯಮಂತ್ರಿ ಶ್ರೀ ಮೊರಾರ್ಜಿ ದೇಸಾಯ್'ರವರು ಅಹಮದಾಬಾದ್ ಕ್ಷೇತ್ರದಿಂದ ಬೊಂಬಾಯಿನ ಕಿರಿಯ ಶಾಸನಸಭೆಗೆ ನಡೆದ ಉಪಚುನಾವಣೆಯಲ್ಲಿ ಚುನಾಯಿತರಾಗಿದ್ದಾರೆ.

ಅನ್ನ ಸತ್ಯಾಗ್ರಹ

ಮೈಸೂರು ಜೂನ್ ೪

ಸರ್ಕಾರದವರು ಆಹಾರಧಾನ್ಯಗಳ ಬೆಲೆಯನ್ನು ಏರಿಸಿರುವುದನ್ನು ಪ್ರತಿಭಟಿಸಲು ನಗರದ ಸೋಷಿಯಲಿಸ್ಟ್ ಪಕ್ಷದವರು ಇದೇ ೭ ನೇ ತಾ|| ಬೆಳಗ್ಗೆ ಸರ್ಕಾರದ ಉಗ್ರಾಣದ ಮುಂದೆ ಸತ್ಯಾಗ್ರಹವನ್ನು ಪ್ರಾರಂಭಿಸಲಿದ್ದಾರೆ. ಈ ಅನ್ನಸತ್ಯಾಗ್ರಹಕ್ಕಾಗಿ ನಗರದ ಅನೇಕ ಭಾಗದಲ್ಲಿ ಅವರು ಪ್ರಚಾರ ಕಾರ್ಯವನ್ನು ನಡೆಸುತ್ತಿದ್ದಾರೆ. ಸತ್ಯಾಗ್ರಹದಲ್ಲಿ ಭಾಗವಹಿಸಲಿಚ್ಛಿಸುವರು ಇದೇ ೫ ನೇ ತಾ|| ವೊಳಗಾಗಿ ಸಂಘದ ಕಛೇರಿಗೆ ಹೆಸರುಗಳನ್ನು ಕೊಡಬೇಕೆಂದು ಕೋರಿದ್ದಾರೆ.

ಬಂಗಾಳದಲ್ಲಿ ತೀವ್ರ ಕ್ಷಾಮ

ಪಶ್ಚಿಮಬಂಗಾಳದ ಕ್ಷಾಮ ಪೀಡಿತ ಪ್ರದೇಶಗಳಿಗೆ ತತ್‌ಕ್ಷಣ ಪರಿಹಾರ ಕಳಿಸದಿದ್ದಲ್ಲಿ ೧೯೪೩ರ ಕ್ಷಾಮದ ಪರಿಸ್ಥಿತಿ ಮತ್ತೆ ಸಂಭವಿಸಬಹುದು ಎಂಬುದಾಗಿ ಎಚ್ಚರಿಕೆನೀಡುವ ಮನವಿ ಪತ್ರವೊಂದನ್ನು ಪಶ್ಚಿಮಬಂಗಾಳದ ಕಮ್ಯೂನಿಸ್ಟ್ ಸದಸ್ಯರು ಆಹಾರಸಚಿವ ರಫಿ ಅಹಮದ್ ಕಿದ್ವಾಯರಿಗೆ ಒಪ್ಪಿಸಿದರು. ತಾವು ಆ ಪ್ರದೇಶದಲ್ಲಿ ಸಂಚರಿಸುವುದಾಗಿಯೂ ಸಹಾನುಭೂತಿಯುಂದ ಸೂಕ್ತಗಮನನೀಡುವುದಾಗಿಯೂ ತಿಳಿಸಿದರು.

ರಕ್ಷಣಾವೆಚ್ಚ ಶೇಕಡ ೨೦

ಭಾರತದಲ್ಲಿ ರಕ್ಷಣಾವೆಚ್ಚವು ಹೆಚ್ಚಾಗಿಲ್ಲ. ರಕ್ಷಣೆಯು ಕೇಂದ್ರಕ್ಕೊಂದೇ ಅಲ್ಲ ಪ್ರಾಂತ್ಯಗಳಿಗೆಲ್ಲಾ ಅನ್ವಯಿಸುತ್ತದೆ.

ಕೇಂದ್ರ ಮತ್ತು ಪ್ರಾಂತ್ಯಗಳ ಉತ್ಪತ್ತಿಯಲ್ಲಿ ಕೇವಲ ಶೇಕಡ ೨೦ ರಷ್ಟು ಮಾತ್ರ ಇದೆಯೆಂದು ರಕ್ಷಣಾಸಚಿವರು ಪಾರ್ಲಿಮೆಂಟಿನಲ್ಲಿ ಹೇಳಿದರು.

ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ರಕ್ಷಣಾವೆಚ್ಚವನ್ನು ಸಮರ್ಥಿಸಿದರು.

ಆಶ್ಚರ್ಯಸೂಚನೆ

ದಕ್ಷಿಣ ಕೊರಿಯಾ ಅಧ್ಯಕ್ಷ ಮಿ|| ಸಿಂಗ್‌ಮನ್ ರಿಯವರಿಗೆ ಅಮೇರಿಕಾ ಅಧ್ಯಕ್ಷ ಟ್ರೂಮನ್ ಮತ್ತು ಬ್ರಿಟನ್ ವಿದೇಶಾಂಗ ಸಚಿವ ಮಿ|| ಈಡನ್ ರವರು ಪ್ರತ್ಯೇಕವಾಗಿ ಸಂದೇಶಪತ್ರಗಳನ್ನು ಕಳುಹಿಸಿ ಅಲ್ಲಿಯ ರಾಜಕೀಯ ಪರಿಸ್ಥಿತಿಯು ತಮಗೆ ವಿಸ್ಮಯವನ್ನುಂಟು ಮಾಡಿದೆಯೆಂದು ತಿಳಿಸಿದ್ದಾರೆ.

ಶ್ರೀ ಖಾರೆಯವರ ಚುನಾವಣೆ

ಹಿಂದೂಮಹಾಸಭೆಯಪರವಾಗಿ ಸ್ಪರ್ಧಿಸಿದ್ದ ಡಾ|| ಎನ್. ಬಿ. ಖಾರೆಯವರು ಭಾಣರ್'ಪುರದಲ್ಲಿ ಕಾಂಗ್ರೆಸ್ ಸ್ಪರ್ಧೆಯನ್ನು ಇಲಲ ಓಟುಗಳಿಂದ ಸೋಲಿಸಿ ಪಾರ್ಲಿಮೆಂಟಿಗೆ ಚುನಾಯಿತರಾಗಿದ್ದಾರೆ.

ಭಾವಚಿತ್ರಅನಾವರಣ

ಕೇಂದ್ರ ರಕ್ಷಣಾಸಚಿವ ಶ್ರೀ ಎನ್. ಗೋಪಾಲಸ್ವಾಮಿಯ್ಯಂಗಾರ್'ರವರ ಹಿರಿಯ ಸಹೋದರ ದಿವಂಗತ ಶ್ರೀ ರಂಗಸ್ವಾಮಿಯ್ಯಂಗಾರ್'ರವರ ಭಾವಚಿತ್ರವನ್ನು ರಾಷ್ಟ್ರಾಧ್ಯಕ್ಷರು ನಿನ್ನೆಯದಿನ ದೆಹಲಿಯ ಪುಂಭವನದಲ್ಲಿ ಅನಾವರಣಮಾಡಿದರು.

ಪರೋಕ್ಷ ತೆರಿಗೆ ಹೆಚ್ಚಿಲ್ಲ

ಕೇಂದ್ರ ಅರ್ಥಿಕಸಚಿವ ಶ್ರೀ ಚಿಂತಾಮಣಿ ದೇಶಮುಖ್ ರವರು ಭಾರತದಲ್ಲಿ ಪರೋಕ್ಷ ತೆರಿಗೆ ಹೆಚ್ಚಾಗಿಲ್ಲವೆಂದು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಮದ್ರಾಸಿನಲ್ಲಿ ತುಂಗಭದ್ರಾ ಮತ್ತು ಕೆಳಗಿನ ಭವಾನಿ ಯೋಜನೆಗಳನ್ನು ಕಾರ್ಯಗತಮಾಡಲು ಕೇಂದ್ರವು ಮದ್ರಾಸ್‌ಸರ್ಕಾರಕ್ಕೆ ೬ ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದಾರೆಂದು ಗೊತ್ತಾಗಿದೆ.

ಲಂಡನ್ನಿಗೆ ಬಿ. ಜಿ. ಖೇರ್

ಶ್ರೀ ವಿ. ಕೆ. ಕೃಷ್ಣಮೆನನ್'ರವರ ಸ್ಥಾನದಲ್ಲಿ ಬ್ರಿಟನ್ನಿನಲ್ಲಿ ಭಾರತದ ರಾಯಭಾರಿಯಾಗಿ ನೇಮಕವಾಗಲಿರುವ ಮಾಜಿ ಮುಂಬೈ ಮುಖ್ಯಮಂತ್ರಿ ಶ್ರೀ ಬಿ. ಜಿ. ಖೇರ್ ಜೂನ್‌ತಿಂಗಳ ಮೂರನೇವಾರದಲ್ಲಿ ಮುಂಬೈನಿಂದ ಹಡಗುಹತ್ತಿ ಜುಲೈ ಮಧ್ಯದಹೊತ್ತಿಗೆ ಶ್ರೀ ಮೆನನ್'ರಿಂದ ಅಧಿಕಾರವನ್ನು ವಹಿಸಿಕೊಳ್ಳುವರೆಂದುತಿಳಿದು ಬಂದಿದೆ. ಹಾಲಿಸದಸ್ಯರಾಗಿರುವ ಕೇಂದ್ರದ ಮೇಲ್ಮನೆಯ ಸ್ಥಾನಕ್ಕೆ ಸದ್ಯದಲ್ಲೇ ರಾಜೀನಾಮೆ ಸಲ್ಲಿಸುವರು.

ಮೈಸೂರಿನಲ್ಲಿ ಚೀಣಿ ಭತ್ತ

ಭಾರತದಲ್ಲಿ ಚೀಣಿ ಭತ್ತವನ್ನು ಅತಿ ಸುಲಭವಾಗಿ ಬೆಳೆಯಬಹುದೆಂದು ಕಾಶ್ಮೀರದಲ್ಲಿ ನಡೆಸಿದ ಪ್ರಯೋಗದಿಂದ ಕಂಡುಬಂದಿದೆ. ಒಂದು ಎಕರೆಗೆ ೫ ಸಾವಿರ ಪೌಂಡ್ ಭತ್ತವನ್ನು ಅಲ್ಲಿ ಬೆಳೆಯಲಾಗಿದೆ. ಈಗ ಚೀಣಿ ಭತ್ತವನ್ನು ಮೈಸೂರು, ಮದರಾಸು, ಹೈದರಾಬಾದ್ ಮತ್ತು ಇತರ ಸಂಸ್ಥಾನಗಳಲ್ಲೂ ಬೆಳೆಯಲು ಯೋಜನೆಯನ್ನು ಕೇಂದ್ರಸರ್ಕಾರದವರು ತಯಾರಿಸಿದ್ದಾರೆಂದು ತಿಳಿದುಬಂದಿದೆ.

ಪೆಸಿಫಿಕ್‌ನಲ್ಲಿ ನೂತನ ದ್ವೀಪ

ಉತ್ತರ ಪೆಸಿಫಿಕ್ ಸಮುದ್ರ ಭಾಗದಲ್ಲಿ ನೂತನ ದ್ವೀಪವೊಂದು ಕಂಡು ಬಂದಿರುವುದಾಗಿ ವರದಿಯಾಗಿದೆ.

ಭಾರತದಲ್ಲಿ ವಿದೇಶಿ ಸ್ವಾಸ್ಥ್ಯಗಳಿಗೆ ಸ್ಥಾನವಿಲ್ಲ

ಭಾರತದಲ್ಲಿ ವಿದೇಶಿ ಸ್ವಾಸ್ಥ್ಯಗಳಿಗೆ ಸ್ಥಾನವಿಲ್ಲ. ಅಧಿಕಾರದಲ್ಲಿರುವ ಪಕ್ಷದ ದುರ್ದಾಕ್ಷಿಣ್ಯತೆಯು ಹೆಚ್ಚಾಗಿದೆ. ಅದನ್ನು ಭಾರತಸರ್ಕಾರವು ತಡೆಯುವುದಿಲ್ಲ. ಗೋವಾವು ಭಾರತದ ಒಂದುಭಾಗವೆಂಬುದನ್ನು ಯಾರೂ ಮರೆಯಲಾರರೆಂಬು ಪ್ರಧಾನಿ ನೆಹರೂ ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಮಂಕಡ್ ಆಟವಾಡುವುದಿಲ್ಲ

ಬ್ರಿಟನ್ನಿನಲ್ಲಿ ಪ್ರವಾಸ ಮಾಡುತ್ತಲಿರುವ ಭಾರತ ಕ್ರಿಕೆಟ್ ಆಟಗಾರರಲ್ಲಿ ಮಿ|| ಮಂಕಡ್'ರವರು ಲಂಡನ್ನಿನಲ್ಲಿ ಆಟವಾಡುವುದಿಲ್ಲವೆಂದು ಹೇಳಲಾಗಿದೆ.

ಭಾಷಾವಾರು ಪ್ರಾಂತ್ಯ ರಚನೆ ತಡವಾಗುವುದಿಲ್ಲ

ಪ್ರಧಾನಿ ನೆಹರೂರವರಿಗೆ ಭಾಷಾವಾರು ಪ್ರಾಂತ್ಯ ವಿಷಯದಲ್ಲಿ ತಡಮಾಡಲು ಇಷ್ಟವಿಲ್ಲವಾಗಿ ಕಾಂಗ್ರೆಸ್ ಸದ್ಯದಲ್ಲೇ ಈ ವಿಷಯವಲ್ಲಿ ತೀರ್ನ ಗಮನವೀಯುವುದಾಗಿ ಬೊಂಬಾಯಿನ ರೆವಿನ್ಯೂಮಂತ್ರಿ ಶ್ರೀ ಬಿ. ಎಸ್. ಹಿರೆಯವರು ಹೇಳಿರುವರು.

ಮುಂಬರುವ ಎ. ಐ. ಸಿ. ಸಿ. ಯಲ್ಲಿ ಬೊಂಬಾಯಿನ ಗಡಿ ನಿರ್ಧಾರ ಸಮಿತಿ ನೇಮಕವಾಗುವುದೆಂದೂ ಅವರು ಹೇಳಿರುವರು.

ಮದ್ರಾಸ್‌ನಗರದ ವಿವಾದ ಪರಿಹಾರವಾದರೆ ಆಂಧ್ರಪ್ರಾಂತ್ಯ ರಚನೆ

ಭಾಷಾವಾರು ಪ್ರಾಂತ್ಯ ರಚನೆ ವಿಷಯವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಚರ್ಚೆ ನಡೆಸಿತು. ಯಾವ ತೀರ್ಮಾನಕ್ಕೂ ಬರಲಿಲ್ಲ. ಆದಾಗ್ಯೂ ವಸ್ತುಶಃ ಭಾಷಾವಾರು ಪ್ರಾಂತ್ಯ ರಚನೆಗೆ ಎಲ್ಲಾ ಸದಸ್ಯರ ಒಪ್ಪಿಗೆಯಿದೆ. ಆದರೆ ಕಾರ್ಯರೂಪಕ್ಕೆ ತರುವ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಮದ್ರಾಸ್ ನಗರದ ವಿಷಯವಲ್ಲಿ ತಮಿಳರಿಗೂ ಆಂಧ್ರರಿಗೂ ಒಂದು ಒಪ್ಪಂದವಾದರೆ ಆಂಧ್ರಪ್ರಾಂತ್ಯ ರಚನೆ ಕಾರ್ಯ ತೀವ್ರವಾಗಿ ನಡೆಯುತ್ತದೆ ಎಂದು ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎನ್. ಸಂಜೀವರೆಡ್ಡಿಯವರು ಹೇಳಿರುವರು.

ಮೋಟಾರು ಅಪಘಾತ ನಿಲ್ಲಿಸಲು ರಾಜಾಜಿ ಸಲಹೆ

ಮದ್ರಾಸಿನಲ್ಲಿರುವ ಸರ್ಕಾರದ ರೋಡ್‌ಟ್ರಾನ್ಸ್‌ಪೋರ್ಟ್ ಸರ್ವಿಸ್ಸಿನಲ್ಲಿರುವ ಬಸ್ ಡ್ರೈವರುಗಳು ಕಳೆದ ವಾರದಲ್ಲಿ ಯಾವ ಅಪಘಾತಗಳನ್ನು ಮಾಡಲಿಲ್ಲವೆಂದು ೫೫ ಜನಕ್ಕೆ ೫ ರೂಪಾಯಿ ಬಹುಮಾನವನ್ನು ಕೊಡುತ್ತಾ, ವಿಮಾ ಕಂಪೆನಿಯವರು ಅಪಘಾತ ನಿಲ್ಲಿಸಲು ಯೋಜನೆಯನ್ನು ತಯಾರಿಸುವುದು ಸೂಕ್ತವೆಂದು ಮದ್ರಾಸ್ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಸಲಹೆಯಿತ್ತಿದ್ದಾರೆ.

ಸತ್ತವನು ದಹನ ಸಮಯದಲ್ಲಿ ಬದುಕಿದ

"ಸತ್ತ" ವನಿಗೆ ಅವನ ದಹನಕ್ರಿಯೆ ನಡೆಯುವ ಹೊತ್ತಿನಲ್ಲಿ ಜೀವಬಂದ ಘಟನೆ ನಡೆಯಿತು.

ಕ್ಷಯರೋಗದಿಂದ ನರಳುತ್ತಿದ್ದ ಅಲಗುಂಧಿನಾರ್ ಎಂಬ ೪೦ ವರ್ಷದವನೊಬ್ಬ ದೀರ್ಘ ವಿಶ್ರಾಂತಿ ಪಡೆದಾಗ, ಅವನ ಬಂಧುಗಳು ಅವನು ಸತ್ತನೆಂದು ಭಾವಿಸಿ, ನರ್ಮದಾ ತಟದಲ್ಲಿ ದಹನಕ್ರಿಯೆಗೆ ಏರ್ಪಾಡು ಮಾಡುತ್ತಿದ್ದರು.

ಚಿತೆಗೆ ಅಗ್ನಿಸ್ಪರ್ಶ ಮಾಡುವಾಗ ಆತ ಜೀವಿತನಾಗಿರುವ ಚಿಹ್ನೆ ತೋರಿಸಿ ನಿಜವಾದ ಮೃತ್ಯುವಿನಿಂದ ಪಾರಾದ.

ಸೆಕೆಂಡರಿ ಎಜ್ಯುಕೇಷನ್ ಬೋರ್ಡ್‌ಗೆ ನಾಮಕರಣ

ಬೆಂಗಳೂರು ಜೂನ್ ೩

ಸೆಕೆಂಡರಿ ಎಜ್ಯುಕೇಷನ್ ಬೋರ್ಡಿಗೆ ಶ್ರೀಗಳಾದ ಎಂ. ವಿ. ರಾಮರಾವ್ ಡಿ. ಆರ್. ನಾರಾಯಣರಾವ್ ಎಸ್. ಸುಬ್ರಹ್ಮಣ್ಯಂ ಮತ್ತು ಟಿ. ಎಸ್. ರಾಜರತ್ನಂರವರನ್ನು ಸರ್ಕಾರ ನಾಮಕರಣ ಮಾಡಿದೆ.

ಸ್ವಾಮಿ ಸೀತಾರಾಮರ ಉಪವಾಸ ದಿನ

ಆದಷ್ಟು ಬೇಗ ಆಂಧ್ರಪ್ರಾಂತ್ಯ ನಿರ್ಮಾಣವಾಗಬೇಕೆಂದು ಸ್ವಾಮಿ, ಸೀತಾರಾಂರವರು ಉಪವಾಸ ವ್ರತ ಕೈಕೊಂಡಿದ್ದಾರೆ. ಈದಿನ ಅವರ ಉಪವಾಸದ ೧೧ನೇ ದಿನ.

ಸ್ವಾಮಿ ಸೀತಾರಾಮರು ಗೆಲುವಾಗಿದ್ದು, ಸಮಯವನ್ನೆಲ್ಲಾ ಪ್ರಾರ್ಥನೆಯಲ್ಲಿ ಕಳೆಯುತ್ತಲಿದ್ದಾರೆ.

೨ ತಿಂಗಳಲ್ಲಿ ೩೬ ಅಗ್ನಿ ಅನಾಹುತ

ಉತ್ತರ ಪ್ರದೇಶದಲ್ಲಿ ಕಳೆದ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸಂಭವಿಸಿದ ೩೬ ಬೆಂಕಿ ಅಪಘಾತದಲ್ಲಿ ಹೆಂಗಸರೂ ಮಕ್ಕಳೂ ಸೇರಿ ಒಟ್ಟು ೫೬ ಜನರು ಜೀವಂತರಾಗಿ ಬೆಂದುಹೋದರು. ಸುಮಾರು ೩,೬೧,೦೦೦ ರೂ. ಗಳ ಬೆಲೆ ಬಾಳುವ ಆಸ್ತಿ ಈ ಬೆಂಕಿಯಲ್ಲಿ ನಾಶವಾಗಿದೆ.

ಪರ್ಷಿಯಾ ಪತ್ರಿಕೋದ್ಯೋಗಿಗಳಿಗೆ ಆಹ್ವಾನ

ಭಾರತ ಸರ್ಕಾರವು ಪರ್ಷಿಯಾದ ಕೆಲವು ಪತ್ರಿಕೋದ್ಯೋಗಿಗಳಿಗೆ ಭಾರತಕ್ಕೆ ಬರಲು ಆಹ್ವಾನವನ್ನಿತ್ತಿದೆಯೆಂದು ಗೊತ್ತಾಗಿದೆ. ಈ ನಿಯೋಗವು ಭಾರತಕ್ಕೆ ನವೆಂಬರ್ ವೇಳೆಗೆ ಬರಲಿದೆ.

ಏಷ್ಯಾದಲ್ಲಿ ಪಾರ್ಶ್ವವಾಯು ತಡೆಗಟ್ಟಲು ಯೋಜನೆ

ಏಷ್ಯಾದೇಶಗಳಲ್ಲಿ ಅಂಗವೀನ ಮಾಡುವ ಪಾರ್ಶ್ವವಾಯು ರೋಗವನ್ನು ತಡೆಗಟ್ಟಲು ಪ್ರಪಂಚದ ಆರೋಗ್ಯ ಸಮಿತಿಯು ಒಂದುಯೋಜನೆಯನ್ನು ತಯಾರಿಸಿದೆ. ಕಬ್ಬಿಣದ ಶ್ವಾಸಕೋಶದ ಬ್ಯಾಂಕನ್ನು ಟೋಕಿಯೋ, ಬ್ಯಾಂಕಾಕ್, ಮತ್ತು ಕೈರೋ ನಗರಗಳಲ್ಲಿ ಸ್ಥಾಪಿಸಲಾಗುವುದು ಈ ಕೇಂದ್ರಗಳು ಸುತ್ತುಮುತ್ತಲಿರುವ ದೇಶಗಳಿಗೆಲ್ಲಾ ಸಹಾಯಮಾಡುವುವು. ಯಾವುದಾದರೂ ದೇಶದಲ್ಲಿ ಪೋಲಿಯೋ ರೋಗವು ಹರಡಿದರೆ, ಸ್ಥಾಪಿತವಾದ ಕೇಂದ್ರಗಳಿಂದ ರೆಸ್ಪಿರೇಟರ್ಸ್‌ನ್ನು ಮತ್ತು ನುರಿತ ಜನರನ್ನು ಅಲ್ಲಿಗೆ ಕಳುಹಿಸಿಕೊಡಲಾಗುವುದು. ಈ ಯೋಜನೆಯಿಂದ ಸಹಾಯ ಹೊಂದುವ ದೇಶಗಳು, ಅಫ್‌ಘಾನಿಸ್ಥಾನ, ಬರ್ಮಾ, ಸಿಲೋನ್, ಈಜಿಪ್ಟ್, ಇಂಡೋಚೈನಾ, ಇಂಡಿಯಾ, ಇಂಡೋನೇಷ್ಯಾ, ಜಪಾನ್, ಪಾಕಿಸ್ಥಾನ್, ನೇಪಾಳ್ ಮತ್ತು ಥೈಲ್ಯಾಂಡ್.

ಕಮ್ಯೂನಿಸ್ಟರ ಹಾವಳಿ ನಿಂತಿಲ್ಲ

ನೆಲಗೊಂಡ ಜಿಲ್ಲೆಯಲ್ಲಿ ಕಮ್ಯೂನಿಸ್ಟರ ಹಾವಳಿ ಇನ್ನೂ ನಿಂತಿಲ್ಲವೆಂದು ಹೈದರಾಬಾದಿನ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಹೇಳಿರುವರು.

ವೈದ್ಯಲಿಂಗಂ ನಾಮಕರಣಕ್ಕೆ ವಿರೋಧ

ಸಿಂಹಳದ ಮಾಜಿ ಕಾಂಗ್ರೆಸ್ ಸದಸ್ಯ ಶ್ರೀ ವೈದ್ಯಲಿಂಗಂರವರನ್ನು ಇಲ್ಲಿಯ ಶಾಸನ ಸಭೆಗೆ ನಾಮಕರಣ ಮಾಡಿರುವುದನ್ನು ಸಿಂಹಳದಲ್ಲಿರುವ ಭಾರತೀಯ ಕಾಂಗ್ರೆಸ್ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿ, ಅವರು ಆ ಸ್ಥಾನವನ್ನು ತಿರಸ್ಕರಿಸಬೇಕೆಂದು ಕೋರಿದೆ.

ಪೌರಸಭೆಗಳ ಬಡ್ಜೆಟ್‌ಗೆ ಕಂಟ್ರೋಲರ ಒಪ್ಪಿಗೆ

ಬೆಂಗಳೂರು ಜೂನ್ ೩

ಸಂಸ್ಥಾನದ ಪೌರಸಭೆಗಳು [೧೬ ವಿನಾ] ತಮ್ಮ ಬಡ್ಜೆಟ್ ಅಂದಾಜುಗಳನ್ನು ಪರಿಶೀಲನೆಗಾಗಿ ಸರ್ಕಾರದ ಅಕೌಂಟ್ಸ್ ಇಲಾಖೆಯ ಕಂಟ್ರೋಲರಿಗೆ ಕಳುಹಿಸಬೇಕೆಂದು ಸರ್ಕಾರ ಸೂಚನೆ ಇತ್ತಿದೆ ಕಂಟ್ರೋಲರ್ ರವರು ಪರಿಶೀಲನೆಯ ನಂತರ ಮಂಜೂರಾತಿಗಾಗಿ ಸ್ಥಳೀಯ ಸಂಸ್ಥೆಗಳ ಕಮೀಷನರ್ ರವರಿಗೆ ಕಳುಹಿಸುವರು.

ಆಯ್ಕೆ ಸಮಿತಿ ರಚನೆ

ಬೆಂಗಳೂರು ಜೂನ್ ೩

ಐ. ಪಿ. ಎಸ್. ಗೆ ಆರಿಸಲ್ಪಡದಿರುವ ಪೋಲೀಸ್ ಇಲಾಖೆಯ ಅಧಿಕಾರಿಗಳಲ್ಲಿ ಆಯ್ಕೆ ನಡೆಸಲು ಸರ್ಕಾರಿ ಸಮಿತಿಯೊಂದನ್ನು ನೇಮಿಸಿದೆ. ಒಳಾಡಳಿತ ಸಚಿವರು ಸಮಿತಿ ಅಧ್ಯಕ್ಷರು ಐ. ಜಿ. ಪಿ., ಒಳಾಡಳಿತ ಶಾಖೆ ಕಾರ್ಯದರ್ಶಿ, ಮುಖ್ಯಕಾರ್ಯದರ್ಶಿ, ಪಬ್ಲಿಕ್ ಸರ್ವಿಸ್ ಕಮೀಷನ್ ಅಧ್ಯಕ್ಷರು ಸಮಿತಿ ಸದಸ್ಯರು.

೬೬೦೦ ಹಡಗುಗಳಲ್ಲಿ ಆಹಾರ

೧೯೫೦ ರಲ್ಲಿ ವಿದೇಶಗಳಿಂದ ತರಿಸಿದ ಧಾನ್ಯಗಳ ಸಾರಿಗೆ ಭಾರತ ಸರಕಾರದ ೪೦ ಕೋಟಿ ರೂಪಾಯಿ ವೆಚ್ಚಮಾಡಿದೆಯೆಂದು ಗೊತ್ತಾಗಿದೆ. ಆಹಾರಧಾನ್ಯಗಳನ್ನು ೬೬೦೦ ಹಡಗುಗಳಲ್ಲಿ ತರಲಾಯಿತು.

೨೮೬ ಕೋಟಿ ರೂ. ಗಳ ಬೆಲೆಯು ೪೭.೨೫ ಲಕ್ಷಟನ್ ಧಾನ್ಯಗಳನ್ನು ೫೧ರಲ್ಲಿ ಆಮದುಮಾಡಲಾಯಿತು. ಇದರಲ್ಲಿ ಅಕ್ಕಿ ೭.೪೯ ಲಕ್ಷಟನ್ ಮೈಲೋ ಇತ್ಯಾದಿ ೯.೬೧ ಲಕ್ಷಟನ್. ೧೯೫೨ ರಲ್ಲಿ ೫೦ ಲಕ್ಷಟನ್ನು ತರಿಸಬೇಕೆಂದು ಮುಂಚೆ ಯೋಚಿಸಲಾಗಿತ್ತು. ಆದರೆ ಮೋತಾಸಂಸ್ಥಾನಗಳ ಬೇಡಿಕೆ ಇಳಿದಿದ್ದರಿಂದ ೫ ಲಕ್ಷಟನ್ ಕಮ್ಮಿಮಾಡಲಾಗಿದೆ.

ಕಾಂಗ್ರೆಸ್‌ಗೆ ಸದಸ್ಯರನ್ನು ಸೇರಿಸುವುದು ಶಾಸನಸಭಾ ಸದಸ್ಯರಕರ್ತವ್ಯ

ಪ್ರತಿಯೊಬ್ಬ ಕಾಂಗ್ರೆಸ್ ಶಾಸನಸಭಾ ಸದಸ್ಯ ಕನಿಷ್ಠಪಕ್ಷ ೨೦೦ ಪ್ರಾಥಮಿಕ ಸದಸ್ಯರನ್ನಾದರೂ ಕೂಡಿಸಬೇಕೆಂದು ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿಯು ಶಾಸನ ಸಭಾಸದಸ್ಯರಿಗೆ ಸೂಚನೆಯಿತ್ತಿದೆ.

ನ್ಯೂ ಅಪೇರ ಟಾಕೀಸ್

30—5—52 ರಿಂದ
ಅಮೋಘವಾದ
4ನೇ ವಾರ
ಪ್ರತಿದಿನ 3 ಆಟಗಳು
ಜೂಪಿಟರ್ಸ್‌ರವರ—
* ರಾಣಿ *
(ತಮಿಳು)
ಪಾತ್ರ:— ‡ ಭಾನುಮತಿ ‡
‡ ಬಾಲಚಂದರ್ ‡
‡ ವಹಾಬ್ ಕಾಶ್ಮೀರಿ ‡

ರಣಜಿತ್

೩೦—೫—೫೨ರಿಂದ ಪ್ರತಿದಿನ ೩ ಆಟ
ಅಜೀಬ್ ಲಡ್ಕಿ
(ಹಿಂದಿ)
ಪಾತ್ರ — ನರ್ಗೀಸ್ ರೆಹಮಾನ್, ಶಶಿಕಲ,

ಸಂಪಾದಕರು:—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ,
ಜೈಹಿಂದ್ ಪ್ರೆಸ್, ಮೈಸೂರು

ಫೋನ್ ೫೭೭೪ (ಲೀನ್)   ದಿನಪತ್ರಿಕೆ   ರಿ. ನಂ. ಎಂ. ೫೪೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨]   ೭-೬-೧೯೫೨ನೇ ಶನಿವಾರ   [ಸಂಚಿಕೆ ೨೭೪

ದೇಶದ ನಾನಾ ಪ್ರಾಂತ್ಯಗಳಲ್ಲಿ ಆಹಾರ ಧಾನ್ಯ ಬೆಲೆ ಇಳಿತ

ದೆಹಲಿ, ಉತ್ತರಪ್ರದೇಶ ಮತ್ತು ಬೊಂಬಾಯಿಪ್ರಾಂತ್ಯಗಳಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಇಳಿಸಲು ಅಲ್ಲಿನ ಸರ್ಕಾರಗಳು ನಿರ್ಧರಿಸಿವೆಯೆಂದು ಕೇಂದ್ರ ಆಹಾರ ಸಚಿವರು ಹೇಳುತ್ತಾರೆ.

ಸೌರಾಷ್ಟ್ರ ಪ್ರಸಿದ್ಧ ಢಕಾಯಿತ ಭೂಪತ್‌ನ ದಸ್ತಗಿರಿ

ಪ್ರಸಿದ್ಧ ಢಕಾಯಿತನ ದಸ್ತಗಿರಿ

ಸೌರಾಷ್ಟ್ರದಲ್ಲಿ ನಾನಾ ರೀತಿಯ ಅಕೃತ್ಯಗಳನ್ನೂ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಕೃತ್ಯಗಳನ್ನೂ, ನಡೆಸಿದ ಪ್ರಸಿದ್ಧ ಢಕಾಯಿತ ಭೂಪತ್‌ನನ್ನು ಪಾಕಿಸ್ಥಾನ ಸರ್ಕಾರವು ಸಿಂಧ್ ಪ್ರಾಂತ್ಯದಲ್ಲಿ ದಸ್ತಗಿರಿ ಮಾಡಿದೆಯೆಂದು ಹೇಳಲಾಗಿದೆ.

ಈ ಢಕಾಯಿತನು ಪರ್ಮಿಟ್ಟಿಲ್ಲದೆ ಪಾಕಿಸ್ಥಾನವನ್ನು ಪ್ರವೇಶಿಸಿದುದು ಮತ್ತು ಲೈಸನ್ಸ್ ಇಲ್ಲದೆ ಬಂದೂಕವನ್ನು ಹೊಂದಿದ್ದುದು ಈ ದಸ್ತಗಿರಿಗೆ ಕಾರಣವೆಂದು ಗೊತ್ತಾಗಿದೆ. ಇವನನ್ನು ದಸ್ತಗಿರಿ ಮಾಡಲು ಸಹಾಯಮಾಡುವವರಿಗೆ ೧೦೦೦೦ ರೂ. ಬಹುಮಾನ ಕೊಡುವುದಾಗಿ ಸೌರಾಷ್ಟ್ರ ಸರ್ಕಾರವು ಘೋಷಿಸಿತ್ತು.

ಭತ್ತ ಮಿಲ್‌ಮಾಡಲು ತಾತ್ಕಾಲಿಕ ತಡೆ

ಬೆಂಗಳೂರು ಜೂನ್ ೬

ಮಿಲ್ಲುಗಳಲ್ಲಿ ಭತ್ತವನ್ನು ಅಕ್ಕಿ ಮಾಡುವುದನ್ನು ತಾತ್ಕಾಲಿಕವಾಗಿ ನಿಷೇಧಿಸಲು ಸರ್ಕಾರವು ಯೋಚಿಸುತ್ತಿರುವುದಾಗಿ ಗೃಹಸಚಿವರಾದ ಶ್ರೀ ಹೆಚ್. ಸಿದ್ದವೀರಪ್ಪನವರು ತಿಳಿಸಿರುತ್ತಾರೆ.

ಹೋಟಲುಗಳಲ್ಲಿ ಅಕ್ಕಿಯಿಂದ ತಯಾರಾದ ತಿಂಡಿಗಳನ್ನು ನಿಷೇಧಿಸುವ ಬಗ್ಗೆಯು ಪರ್ಯಾಲೋಚನೆ ನಡೆಯುತ್ತಿದೆಯೆಂದೂ ಅವರು ತಿಳಿಸಿರುತ್ತಾರೆ.

ಶಿವಮೊಗ್ಗಾ ಜಿಲ್ಲೆಯಲ್ಲಿ ಕಮ್ಯೂನಿಟಿ ಪ್ರಾಜೆಕ್ಟ್

೬೫ ಲಕ್ಷ ರೂ. ಖರ್ಚಿನಿಂದ ಶಿವಮೊಗ್ಗಾ ಜಿಲ್ಲೆಯ ಸೊರಬಾ ಮತ್ತು ಶಿಕಾರಿಪುರ ಜಿಲ್ಲೆಗಳಲ್ಲಿ ಬೇಸಿಕ್ ಕಮ್ಯೂನಿಟಿ ಪ್ರಾಜೆಕ್ಟ್ ಕೇಂದ್ರವನ್ನು ಭಾರತಸರ್ಕಾರದವರು ಸ್ಥಾಪಿಸಲು ನಿರ್ಧರಿಸಿದ್ದಾರೆ.

ಮೂರು ವರ್ಷಗಳಲ್ಲಿ ಈ ಹಣವನ್ನು ಈ ಕಾರ್ಯಕ್ಕಾಗಿ ಉಪಯೋಗಿಸಲು ಸಂಸ್ಥಾನದ ರೆವಿನ್ಯೂ ಸಚಿವರಾದ ಶ್ರೀ ಕಡಿದಾಳ್ ಮಂಜಪ್ಪ ನವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಗುವುದೆಂದೂ ತಿಳಿದುಬಂದಿದೆ.

ಕಣ್ಣು ಚಿಕಿತ್ಸೆ ಬಗ್ಗೆ ಚಲನಚಿತ್ರ

ಹುಬ್ಬಳ್ಳಿಯ ಸುಪ್ರಸಿದ್ಧ ಡಾ|| ಎಂ. ಸಿ. ಮೋದಿಯವರು ಇಲ್ಲಿ ನಡೆಸುತ್ತಿರುವ ಉಚಿತಕಣ್ಣು ಪರೀಕ್ಷೆ ಮತ್ತು ಶಸ್ತ್ರ ಚಿಕಿತ್ಸೆ ಕಾರ್ಯಕ್ರಮಗಳನ್ನು ಚಲನಚಿತ್ರ ತೆಗೆಯಲು ಸರ್ಕಾರದವರು ಏರ್ಪಾಡು ಮಾಡಿದ್ದಾರೆಂದು ಗೊತ್ತಾಗಿದೆ.

ಹೆಚ್ಚು ಆಹಾರ ಬೆಳೆ ಯೋಜನೆ

ಹೆಚ್ಚು ಆಹಾರ ಬೆಳೆ ಯೋಜನೆಗಾಗಿ ೧೯೫೧—೫೨ನೇ ಸಾಲಿನಲ್ಲಿ ಸರ್ಕಾರವು ೮೯೬೫೯೭೭ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ. ಆದರಲ್ಲಿ ಹೊಸ ಕೆರೆಗಳನ್ನು ಕಟ್ಟಲು ೨೦,೪೭,೪೫೪ ರೂ; ಮೈನರ್ ಕೆರೆಗಳು ದುರಸ್ತು ಮಾಡಲು ೧೬೧೯೬೪೭ ರೂ; ನದಿ, ಕೆರೆ ಮುಂತಾದುವುಗಳ ಕಾಲುವೆಗಳಿಗಾಗಿ ೪೭೩೯೫೬೯ ರೂಗಳು ಖರ್ಚಾಗಿದೆ.

ಚಿನ್ನ ಬೆಳ್ಳಿ ದರಗಳು

ತಾ|| 6—6—52	ರೂ.
ಸವರನ್	64-10
"	64-12
ಚಿನ್ನ ತೊಲ	89-4
" ಮೂಸ	88-4
ಬೆಳ್ಳಿ 100 ತೊಲ	158-8
" ತೊಲ	1-11

ನೇಪಾಳದಲ್ಲಿ ಪ್ರಚಂಡ ಹರಿತಾಳ

ನೇಪಾಳದ ಕಡಿಮೆ ಸಂಬಳದ ಸರ್ಕಾರಿ ನೌಕರರು ಹೂಡಿರುವ ಮುಷ್ಕರದ ಬಗ್ಗೆ ಸಹಾನುಭೂತಿ ತೋರಿಸಲು ಅಲ್ಲಿನ ವಿದ್ಯಾರ್ಥಿಗಳ ನಾಯಕತ್ವದಲ್ಲಿ ೪ ಸಾವಿರ ಮಂದಿ ಪ್ರಚಂಡ ಮೆರವಣಿಗೆ ಮತ್ತು ಪ್ರದರ್ಶನವನ್ನು ನಿನ್ನೆ ನಡೆಸಿದಾಗ, ಪೋಲೀಸರು ಅವರನ್ನು ಚದುರಿಸಲು ನಾಲ್ಕು ಬಾರಿ ಅಶ್ರುವಾಯುವನ್ನೂ ಮತ್ತು ಲಾಠಿಯನ್ನೂ ಪ್ರಯೋಗಿಸಿದರು. ಇದರಿಂದ ೫೦ ಮಂದಿಗೆ ಗಾಯವಾಗಿದೆ.

ಕೇಂದ್ರ ಶಾಸನಸಭಾಸದಸ್ಯರ ವೇತನ ಪರಿಶೀಲನೆ

ಪಾರ್ಲಿಮೆಂಟ್ ಮತ್ತು ಕೌನ್ಸಿಲ್ ಆಫ್ ಸ್ಟೇಟ್ ಸದಸ್ಯರಿಗೆ ಮಾಹೆಯಾನ ಸಂಬಳ ಕೊಡುವ ಬಗ್ಗೆ ಪರಿಶೀಲನೆ ನಡೆಸಿ ಸಲಹೆ ನೀಡಲು ಶ್ರೀ ಅನಂತಶಯನಂ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿದೆ. ಇದರಲ್ಲಿ ಎಲ್ಲಾ ಪಕ್ಷದ ಪ್ರತಿನಿಧಿಗಳೂ ಇರುವರು.

ಭಾರತಕ್ಕೆ ಅಮೆರಿಕದ ಸಹಾಯ

ಭಾರತವು ತನ್ನ ಆರ್ಥಿಕ ಅಭಿವೃದ್ಧಿಯಲ್ಲಿ ಮುಂದುವರಿದು ಆದರಿಂದ ಜನರು ಸಂತುಷ್ಟರಾಗಲೆಂಬ ಆಶೆಯಿಂದ ಅಮೆರಿಕ ದೇಶವು ಖಾಸಗಿ ಮತ್ತು ಸಾರ್ವಜನಿಕವಾಗಿ ಸಹಾಯ ನೀಡಬೇಕೆಂಬ ಅಭಿಪ್ರಾಯವನ್ನು ಅಲ್ಲಿನ ಶಾಸನ ಸಭೆಗಳ ಮುಂದೆ ಮಂಡಿಸಲಾಗುವುದೆಂದು ಹೇಳಲಾಗಿದೆ.

ಹಿಂದಿ ಶಿಕ್ಷಣಾ ಸಮಿತಿ

ಭಾರತದಲ್ಲಿ ಹಿಂದೀ ಭಾಷೆಯನ್ನು ಒಂದೇ ಕ್ರಮದಲ್ಲಿ ಶಿಕ್ಷಣಕೊಡುವ ಬಗ್ಗೆ ಕೇಂದ್ರವು ಪ್ರಾಂತೀಯ ಸರ್ಕಾರಗಳಿಗೆ ಒಂದು ಸೂಚನೆಯನ್ನು ಕೊಟ್ಟು, ಅದರ ಬಗ್ಗೆ ಈಗ ನೇಮಿತವಾಗಿರುವ ಹಿಂದಿ ಶಿಕ್ಷಣ ಪ್ರವೀಣ ಸಮಿತಿಯಿಂದ ತಕ್ಕ ಸಲಹೆಯನ್ನು ಪಡೆಯಬೇಕೆಂದು ತಿಳಿಸಿದೆ.

ಪೇಟೆ ಧಾರಣೆ

ಮೈಸೂರು ತಾ|| 6—6—52
ಅಧಿಕೃತವಾದದ್ದು

	ರೂ.	ರೂ.
ಕಡಲೆಕಾಯಿ ಪಲ್ಲಾಕ್ಕೆ	10-2	16-12
ಹೊಂಗೆಬೀಜ ,,	12-12	—
ಹುರುಳಿ ,,	36-12	37-7
ಹೆಸರು ,,	56-14	59-0
ಮೆ|| ಕಾಯಿ ಮಣಕ್ಕೆ	7-0	14-10
ಹುಣಿಸೇಹಣ್ಣು ,,	3-12	3-11
ಸೀಗೆಕಾಯಿ ,,	3-5	3-10
ತೆಂಗಿನಕಾಯಿ 100	104	191

ಸ್ವಾಮಿ ಸೀತಾರಾಂರವರ ಸ್ಥಿತಿ ಕಳವಳ

ಆಂಧ್ರಪ್ರಾಂತ್ಯ ರಚನೆಗಾಗಿ ಭೀಮಾವರದಲ್ಲಿ ಉಪವಾಸ ಮಾಡುತ್ತಿರುವ ಸ್ವಾಮಿ ಸೀತಾರಾಂ ರವರ ಸ್ಥಿತಿಯು ಕಳವಳವನ್ನುಂಟುಮಾಡಿದೆಯೆಂದು ವರದಿಯಾಗಿದೆ.

ಸಿಮೆಂಟ್ ಕಾಂಕ್ರೀಟ್ ಮನೆಗಳ ಬಗ್ಗೆ ಬಹುಮಾನ

ಸಿಮೆಂಟ್ ಕಾಂಕ್ರೀಟ್ ಮನೆಗಳನ್ನು ಸುಲಭ ಖರ್ಚಿನಲ್ಲಿ ಕಟ್ಟುವುದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಲು ಭಾರತದ ಕಾಂಕ್ರೀಟ್ ಸಂಸ್ಥೆಯು ೧೯೫೩ನೇ ಜನವರಿಯಲ್ಲಿ ನಡೆಸಲಿರುವ ಸಂಸ್ಥೆಯ ರಜತಮಹೋತ್ಸವ ಸಮಯದಲ್ಲಿ ಒಂದು ಚರ್ಚಾಕೂಟವನ್ನು ಏರ್ಪಡಿಸಿರುತ್ತದೆ.

ಇವೇ ವಿಷಯಕ್ಕೆ ಸಂಬಂಧಪಟ್ಟಂತೆ ಪ್ರಬಂಧಗಳ ಒಂದು ಸ್ಪರ್ಧೆಯನ್ನೂ ಏರ್ಪಡಿಸಿರುತ್ತದೆ. ೧೫೦೦ ರೂ. ೫೦೦ ರೂ. ೨೫೦ ರೂ. ಮತ್ತು ೧೦೦ ರೂಗಳ ಐದು ಬಹುಮಾನ ಉತ್ತಮ ಪ್ರಬಂಧಗಳಿಗೆ ಕೊಡಲಾಗುತ್ತದೆ.

ಹಿರಿಯ ಶಾಸನಸಭಾ ಸದಸ್ಯರಿಗೆ ಸಂಬಳ

ಬೆಂಗಳೂರು ಜೂನ್ ೬

ಮೈಸೂರು ಹಿರಿಯ ಶಾಸನಸಭಾ ಸದಸ್ಯರಿಗೆ ತಿಂಗಳಿಗೆ ೧೦೦ ರೂ. ಸಂಬಳ, ಅಧಿವೇಶನದ ಕಾಲದಲ್ಲಿ [illegible] ರೂ. ದಿನಭತ್ಯ ಮತ್ತು ಪ್ರಯಾಣಕ್ಕೆ ಎರಡು ಒಂದನೇ ತರಗತಿ ರೈಲ್ವೆದರ ಅಥವ ಮೈಲಿಗೆ ೮ ಆಣೆಯಂತೆ ಕೊಡಲಾಗುವುದೆಂದು ರಾಜಪ್ರಮುಖರ ಆಜ್ಞೆ ಹೊರಬಿದ್ದಿದೆ.

ಜಿಲ್ಲಾ ಬೋರ್ಡಿನ ಸಭೆ

ಮೈಸೂರು ಜೂನ್ ೬

ಮೈಸೂರು ಜಿಲ್ಲಾಬೋರ್ಡಿನ ಸಭೆಯು ಈದಿನ ಮಧ್ಯಾಹ್ನ ಉಪಾಧ್ಯಕ್ಷ ಶ್ರೀ ಟಿ. ಪಿ. ಬೋರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಬೋರ್ಡಿನ ಆಡಳಿತದಲ್ಲಿರುವ ಪ್ರೌಢಶಾಲೆಗಳಲ್ಲಿ ಪಬ್ಲಿಕ್ ಸರ್ವಿಸ್ ಕಮೀಷನ್ ಮೂಲಕ ನೇಮಕವಾಗಿದೆ ಇರುವ ಹಂಗಾಮಿ ಉಪಾಧ್ಯಾಯರುಗಳಿಗೆ ಬೇಸಿಗೆ ಕಾಲದ ಸಂಬಳವನ್ನು ಕೊಡುವುದಲ್ಲದೆ ಅವರುಗಳನ್ನು ಖಾಯಂ ಮಾಡಬೇಕೆಂದೂ ತೀರ್ಮಾನಿಸಲಾಯಿತು.

ಹೈಸ್ಕೂಲುಗಳಲ್ಲಿ ಓದುವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ತಮ್ಮ ಹತೋಟಿಯಲ್ಲಿರುವ ಎಲ್ಲ ಶಾಲೆಗಳಲ್ಲೂ ಕ್ಯಾಂಟೀನ್ ತೆರೆಯಬೇಕೆಂದೂ, ಉಪಾಧ್ಯಾಯರುಗಳ ವಾಸಕ್ಕಾಗಿ ಜಿಲ್ಲಾ ಬೋರ್ಡಿನಿಂದಲೇ ಮನೆಗಳನ್ನು ಕಟ್ಟಿಸಿ, ಅವರುಗಳಿಗೆ ಬಾಡಿಗೆಗೆ ಕೊಡಬೇಕೆಂದು ನಿರ್ಧರಿಸಲಾಯಿತು ಬೋರ್ಡಿನ ಹೈಸ್ಕೂಲಿನಲ್ಲಿ ವ್ಯವಸಾಯವನ್ನು ಒಂದು ಬೋಧಕ ಭಾಷೆಯನ್ನಾಗಿ ಮಾಡಬೇಕೆಂಬ ವಿಷಯ ಚರ್ಚೆ ಬಂದಾಗ, ಈಗಿನ ವಿದ್ಯಾಭ್ಯಾಸಕ್ರಮವನ್ನೇ ಬದಲಾಯಿಸಲು ಸರ್ಕಾರದವರು ಆಲೋಚಿಸುತ್ತಿರುವಾಗ, ಬೋರ್ಡಿನವರು ಈ ಬದಲಾವಣೆಯನ್ನು ಸೂಚಿಸುವುದು ಸೂಕ್ತವಲ್ಲವೆಂದು ಜಿಲ್ಲಾ ವಿದ್ಯಾಧಿಕಾರಿಗಳು ತಿಳಿಸಿದುದರಿಂದ, ಈ ವಿಷಯದ ಮೇಲೆ ಯಾವ ಇತ್ಯರ್ಥವನ್ನು ತೆಗೆದುಕೊಳ್ಳಲಿಲ್ಲ.

ಕಾಂಗ್ರೆಸ್ ಅಧ್ಯಕ್ಷರ ಭೇಟಿ

ಮೈಸೂರು ಜೂನ್ ೬

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಇದೇ ೮ನೇ ತಾ|| ಭಾನುವಾರ ಸಂಜೆ ೬-೩೦ ಗಂಟೆಗೆ ನಗರ ಕಾಂಗ್ರೆಸ್ ಸಮಿತಿಯ ಕಛೇರಿಗೆ ಭೇಟಿಕೊಟ್ಟು, ಅಲ್ಲಿ ಕಾಂಗ್ರೆಸ್ ಕಾರ್ಯಕರ್ತರೊಡನೆ ಮಾತುಕತೆ ನಡೆಸುವರು.

An Artistic Film for All Artists To Admire !

Another Flash of Shantaram's Genius
Rajkamal kalamandir's
— AMAR BHOOPALI —
(in Marathi)
Starring :- Sandhya & Pandit Rao Nagarkar
Produced & Directed by V. Shantaram ;
Now Running 2nd Week,
Daily 3 Shows:
AT PRABHA.   Phone ; 569
A Film you Should not miss

ಪೌರಸದಸ್ಯರಿಂದಲೇ ಪುರಸಭಾ ಕಾನೂನು ಉಲ್ಲಂಘನೆ

ವಿರೋಧ ಪಕ್ಷದವರ ಸಭಾಪರಿತ್ಯಾಗ

ಮೈಸೂರು ಜೂನ್ ೬

ರಾಜಧಾನಿಯ ಪೌರಸಭೆಯ ಮಾಜಿ ಉಪಾಧ್ಯಕ್ಷ ಶ್ರೀ ಎಂ. ಎಸ್. ನಂಜಪ್ಪನವರು ದೇವರಾಜ ಮಾರ್ಕೆಟ್ಟಿನಲ್ಲಿ ತಾವು ತೆಗೆದುಕೊಂಡಿದ್ದ ಅಂಗಡಿಯನ್ನು ಬೇರೆಯವರಿಗೆ ಬಾಡಿಗೆ ಕೊಟ್ಟು ಅದರಿಂದ ಪೌರಸಭೆಯ ಕಾನೂನು ಉಲ್ಲಂಘಿಸಿರುವರೆಂದು ಅದಕ್ಕಾಗಿ ಅವರ ಬಾಡಿಗೆ ಒಪ್ಪಂದವನ್ನು ರದ್ದುಮಾಡಿ ಅವರ ಮೇಲೆ ಕೋರ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಪುರಸಭೆಯ ನ್ಯಾಯ ಸಲಹಾ ಸಮಿತಿಯವರು ಸೂಚಿಸಿದ್ದ ಸಲಹೆಯನ್ನು, ನಿನ್ನೆ ನಡೆದ ಪುರಸಭೆಯ ಅಧಿವೇಶನದಲ್ಲಿ ಚರ್ಚಿಸಲಾಯಿತು.

ಶ್ರೀಗಳಾದ ಬಿ. ಕೆ. ರಾಮಕೃಷ್ಣಯ್ಯ ಎ. ವೆಂಕಟೇಶಯ್ಯ, ಬಿ. ಸುಬ್ಬಣ್ಣ ಮೊದಲಾದ ವಿರೋಧ ಪಕ್ಷದವರು ಮೇಲ್ಕಂಡ ಸಲಹೆಯನ್ನು ಪೌರಸಭೆಯು ಅಂಗೀಕರಿಸಬೇಕೆಂದು ತಿಳಿಸಿದರು. ೧೬ ವರ್ಷಗಳಿಂದ ಪುರಸಭಾಸದಸ್ಯರಾಗಿದ್ದು ಮತ್ತು ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಹಿರಿಯ ಸದಸ್ಯರೊಬ್ಬರೇ ಈ ರೀತಿ ಕಾನೂನು ಉಲ್ಲಂಘನೆ ಮಾಡಿರುವುದು ಪೌರಸಭೆಗೇ ಅವಮಾನವೆಂದೂ, ಅವರ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು, ಅಂಗಡಿಯನ್ನು ಪೌರಸಭೆಯ ವಶಕ್ಕೆ ತೆಗೆದುಕೊಂಡು ಅದನ್ನು ಮುಂದೆ ಹರಾಜಿನಲ್ಲಿ ವಿಲೇ ಮಾಡಬೇಕೆಂದೂ ಅವರುಗಳು ಸೂಚಿಸಿದರು.

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಒಂದು ತಿದ್ದುಪಡಿಯನ್ನು ಸೂಚಿಸಿ, ಶ್ರೀ ನಂಜಪ್ಪನವರ ಮೇಲೆ ಯಾವ ಕ್ರಮವನ್ನು ಕೈಗೊಳ್ಳಬಾರದೆಂದೂ ೧೫೫ ರೂ. ಮಾಹೆಯಾನ ಬಾಡಿಗೆ ಮೇಲೆ ಅವರಿಗೂ ಮತ್ತು ಅವರ ಪಾಲುದಾರರೊಬ್ಬರಿಗೂ ಅಂಗಡಿಯನ್ನು ಕೊಡಬೇಕೆಂದು ತಿಳಿಸಿದರು.

ಈ ತಿದ್ದುಪಡಿಯನ್ನು ಓಟಿಗೆ ಹಾಕಲಾಗಿ ೮-೪ ಓಟುಗಳಿಂದ ಅಂಗೀಕೃತವಾಯಿತು.

ಇದನ್ನು ಪ್ರತಿಭಟಿಸಿ, ಶ್ರೀಗಳಾದ ವೆಂಕಟೇಶಯ್ಯ, ರಾಮಕೃಷ್ಣಯ್ಯ, ಬಿ. ಸುಬ್ಬಣ್ಣ ಮತ್ತು ಟಿ. ನಾರಾಣಪ್ಪರವರುಗಳು ಸಭಾ ಪರಿತ್ಯಾಗ ಮಾಡಿದರು.

ಕೋಳಿಮೊಟ್ಟೆ ಮಾರ್ಕೆಟ್

ದೇವರಾಜಾ ಮಾರ್ಕೆಟ್ಟಿನಲ್ಲಿ ತರಕಾರಿ ಮಾರುವ ಸ್ಥಳದಲ್ಲೇ ಕೋಳಿಮೊಟ್ಟೆಯನ್ನು ಮಾರುವುದು ಸೂಕ್ತವಲ್ಲವೆಂದೂ, ಅದಕ್ಕಾಗಿಯೇ ಒಂದು ಪ್ರತ್ಯೇಕ ಮಾರ್ಕೆಟ್ಟನ್ನು ಏರ್ಪಡಿಸಬೇಕೆಂದೂ ಶ್ರೀ ಬಿ. ಸುಬ್ಬಣ್ಣನವರು ನಿನ್ನೆ ನಡೆದ ಪುರಸಭಾಧಿವೇಶನದಲ್ಲಿ ತಿಳಿಸಿದರು. ಕೋಳಿಮೊಟ್ಟೆಯನ್ನು ಪ್ರತ್ಯೇಕವಾಗಿ ಒಂದು ಕಡೆ ಮಾರಲು ಏರ್ಪಾಡು ಮಾಡಲಾಗುವುದೆಂದು ಅಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿರಾಯರು ಭರವಸೆ ಇತ್ತರು.

ದಕ್ಷಿಣ ಕೊರಿಯಾಕ್ಕೆ ಆಸ್ಟ್ರೇಲಿಯಾ ಎಚ್ಚರಿಕೆ

ಇತ್ತೀಚಿನ ದಕ್ಷಿಣ ಕೊರಿಯಾದ ರಾಜಕೀಯ ಬಗ್ಗೆ ಈಗಾಗಲೇ ಅಧ್ಯಕ್ಷ ಟ್ರೂಮನ್, ಬ್ರಿಟನ್ ವಿದೇಶಾಂಗ ಸಚಿವ ಮಿ|| ಈಡನ್ ಮುಂತಾದವರು ತಮ್ಮ ಆಶ್ಚರ್ಯವನ್ನು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಇದೇ ವಿಷಯದಲ್ಲಿ ಆಸ್ಟ್ರೇಲಿಯಾವು ದಕ್ಷಿಣಕೊರಿಯಾಕ್ಕೆ ಎಚ್ಚರಿಕೆಯನ್ನೀಯುತ್ತ ದಸ್ತಗಿರಿಯಾಗಿರುವ ಶಾಸನಸಭಾ ಸದಸ್ಯರನ್ನೆಲ್ಲಾ ಕೂಡಲೇ ಬಿಡುಗಡೆ ಮಾಡಬೇಕು, ದೇಶದಲ್ಲಿ ಘೋಷಿಸಿರುವ ಮಾರ್ಷಲ್‌ಲಾ ಹಿಂದಕ್ಕೆ ತೆಗೆದುಕೊಳ್ಳಬೇಕು.

ಈಗಿರುವ ಕಳವಳ ಪರಿಸ್ಥಿತಿಯು ತಪ್ಪಿ ದೇಶದಲ್ಲಿ ಶಾಂತಿ ಸ್ಥಾಪಿಸಲು ತಕ್ಕ ಕಾರ್ಯವೆಸಗಬೇಕೆಂದು ತಿಳಿಸಿದೆ.

ಭಾರತಕ್ಕೆ ರೈಲ್ವೆ ಇಂಜನ್ನುಗಳು

ವಿದೇಶಗಳಿಂದ ಭಾರತಕ್ಕೆ ೧೭೮ ರೈಲ್ವೆ ಇಂಜನ್ನುಗಳು ಈ ಸಾಲಿನಲ್ಲಿ ಬರಲಿದೆ.

ಭಾವಚಿತ್ರ ಅನಾವರಣ

ಬೆಂಗಳೂರು ಜೂನ್ ೬

ನಾಳೆಸಂಜೆ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕ್ರಿಕೆಟ್ ಪೆವಿಲಿಯನ್‌ನಲ್ಲಿ ಕಾಲೇಜಿನ ಹಳೇವಿದ್ಯಾರ್ಥಿಯಾದ ಶ್ರೀ ನವರತ್ನ ರಾಮರಾಯರು ಶ್ರೀ ಸಿ. ರಾಜಗೋಪಾಲಚಾರಿ ಮತ್ತು ಸರ್. ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರಗಳನ್ನು ಅನಾವರಣ ಮಾಡುವರು.

ನೇತ್ರಚಿಕಿತ್ಸೆ

ಕರ್ನಾಟಕ ಸುಪ್ರಸಿದ್ಧ ನೇತ್ರವೈದ್ಯ ಡಾ|| ಮೋದಿಯವರ ಚಿಕಿತ್ಸಾ ಶಿಬಿರದಲ್ಲಿ ಉಚಿತವಾಗಿ ನೇತ್ರ ಚಿಕಿತ್ಸೆಯು ಈ ದಿನದಿಂದ ಪ್ರಾರಂಭವಾಗಿದೆ ನೇತ್ರಪರೀಕ್ಷೆ ಮಾಡಿಕೊಳ್ಳಲು ಸುಮಾರು ೩,೦೦೦ ಜನರು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಂಡಿರುವರು. ಸ್ಥಳಾಭಾವದಿಂದ ಇನ್ನು ಹೆಸರುಗಳನ್ನು ರಿಜಿಸ್ಟರ್ ಮಾಡಿಕೊಳ್ಳುವುದು ನಿಲ್ಲಿಸಲಾಗಿದೆ.

ಜೂನ್ ೧೪ ನೇ ತಾ|| ರೇಸು

ಇದೇ ೧೫ ತಾ|| ನಡೆಯಬೇಕಾಗಿದ್ದ ಕುದುರೆ ಪಂದ್ಯವು ೧೪ ನೇ ತಾ|| ನಡೆಯುವುದೆಂದು ತಿಳಿಸಲಾಗಿದೆ.

ಪ್ರತಿಭಟನಾ ಸಭೆ

ಮೈಸೂರು ಜೂನ್ ೬

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜನ್ನು ಇಲ್ಲಿಂದ ಬೆಂಗಳೂರಿಗೆ ವರ್ಗಾಯಿಸುವುದನ್ನು ಪ್ರತಿಭಟಿಸಲು ಭಾನುವಾರ ಸಂಜೆ ೬ ಘಂಟೆಗೆ ರಾಜಕಾರ್ಯ ಪ್ರಸಕ್ತ ಅಂಬಳೆ ಸುಬ್ರಮಣ್ಯ ಅಯ್ಯರ್ ರವರ ಅಧ್ಯಕ್ಷತೆಯಲ್ಲಿ ಟೌನ್ ಹಾಲಿನಲ್ಲಿ ಬಹಿರಂಗ ಸಭೆ ಏರ್ಪಡಿಸಿದೆ.

ಉಡ್‌ಲ್ಯಾಂಡ್ಸ್

6—6—52 ರಿಂದ

ಅಮೋಘಪ್ರಾರಂಭ

ಸಂತೋಷಿಯವರ—

ಷಿನ್‌ಷಿನಾಕಿ-ಬೂಬ್ಲಾ ಬೂ (ಹಿಂದಿ)

ಪಾತ್ರ:—ರೆಹನಾ, ರಂಜನ್, ವೀರಾ

ಸಂಗೀತ:— ಶ್ರೀ C ರಾಮಚಂದ್ರ

ಪ್ರಕಾಶಕರು :—ಜಿ ಎಲ್. ಸ್ವಾಮಿ

ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಒ. ಸೂರಯ್ಯ

ಜೈಹಿಂದ್ ಪ್ರೆಸ್, ಮೈಸೂರು

ಮುಸ್ಲಿಂ ಯುವಕನೊಡನೆ ವಿವಾಹ ಬೇಡ

ದೆಹಲಿಯಲ್ಲಿ ಕೆಲವು ದಿನಗಳ ಹಿಂದೆ ಮುಸ್ಲಿಂ ಮತಾಂಗಕ್ಕೆ ಸೇರಿದ ಸಿಕಂದರ್ ಬಖ್ತ್ ಮತ್ತು ಹಿಂದೂ ಶ್ರೀಮತಿ ರಾಜಕುಮಾರಿ ಇವರಿಬ್ಬರ ಮದುವೆಯ ವಿಚಾರದಲ್ಲಿ ಅತಿಗೊಂದಲ ಮತ್ತು ಗಲಭೆ ನಡೆದು ಮದುವೆಯು ನಿಂತುಹೋಯಿತಷ್ಟೆ. ಈಗ ಆಕೆಯು ತನಗೆ ಈ ವಿವಾಹವು ಬೇಕಾಗಿಲ್ಲವೆಂದೂ, ತಾನು ಮನಸ್ಸನ್ನು ಬದಲಾಯಿಸಿರುವುದಾಗಿಯೂ ತಿಳಿಸಿರುತ್ತಾಳೆ.

ರೈಲಿನಲ್ಲಿ ಒಂದನೇ ತರಗತಿ ರದ್ದು

ಭಾರತ ರೈಲಿನಲ್ಲಿರುವ ಒಂದನೇ ತರಗತಿಯ ಗಾಡಿಗಳನ್ನು ಸದ್ಯದಲ್ಲಿಯೇ ರದ್ದು ಮಾಡುವುದಾಗಿ ಕೇಂದ್ರ ರೈಲ್ವೆ ಮಂತ್ರಿ ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ರಣಜಿತ್

೯-6-52ರಿಂದ 2ನೇ ವಾರ

ಅಜೀಬ್ ಲಡ್ಕಿ (ಹಿಂದಿ)

ಪಾತ್ರ— ನಾಸೀರ ರೆಹಮಾನ್, ಶಶಿಕಲ,

ನ್ಯೂ ಅಪೇರ ಟಾಕೀಸ್

6-6-52 ರಿಂದ ಅಮೋಘವಾದ 5ನೇ ವಾರ

ಜೂಪಿಟರ್ಸ್‌ರವರ * ರಾಣಿ * (ತಮಿಳು)

ಪಾತ್ರ:— ‡ ಭಾನುಮತಿ ‡ ಬಾಲಚಂದರ್ ‡ ವಹಾಬ್ ಕಾಶ್ಮೀರಿ ‡

ಮುಂದಿನ ಬದಲಾವಣೆ 13—6—52ರಿಂದ

★ ವೇಲೈಕ್ಕಾರನ್ ★ (ತಮಿಳು)

ಅಂದವಾದ ಮುದ್ರಣಕ್ಕೆ

ಕರ್ನಾಟಕ ಪ್ರಿಂಟರ್ಸ್

ಗಾಂಧಿಚೌಕ ಮೈಸೂರು.

(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)

For

NEAT & PROMT PRINTING

Contact :

Carnatak Printers

GANDHI SQUARE, MYSORE

Phone 892 or 574

ಫೋನ್ ೩೭೪ (?) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೮-೬-೧೯೫೨ನೇ ಭಾನುವಾರ [ಸಂಚಿಕೆ ೨೭೫

ಬೊಂಬಾಯಿನಲ್ಲಿ ಆಹಾರ ಹತೋಟಿ ಸದ್ಯಕ್ಕೆ ರದ್ದು ಮಾಡುವುದಿಲ್ಲ

ಆಹಾರ ಧಾನ್ಯಗಳ ಮಾರಾಟ ಹತೋಟಿ ರದ್ದು ?

ಭಾರತದಲ್ಲಿ ಈಗಿರುವ ಆಹಾರನೀತಿಯ ಬದಲಾವಣೆ ಬಗ್ಗೆ ಒಂದು ನೂತನ ಯೋಜನೆಯನ್ನು ಸದ್ಯದಲ್ಲಿಯೇ ಕೇಂದ್ರ ಸರ್ಕಾರದವರು ಜಾರಿಗೆ ತರಲಿರುವುದೆಂದೂ, ಅದರಂತೆ ಇನ್ನುಮುಂದೆ ಗೋಧಿ ಮತ್ತು ಇತರ ಆಹಾರಧಾನ್ಯಗಳ ಮಾರಾಟದ ಮೇಲಿರುವ ಪ್ರತಿಬಂಧಕವನ್ನು ತೆಗೆದುಹಾಕಲಾಗುವುದೆಂದೂ ತಿಳಿದುಬಂದಿದೆ.

ಕೈಗಾರಿಕಾ ಮತ್ತು ಇತರ ದೊಡ್ಡ ನಗರಗಳಲ್ಲಿರುವ ರೇಷನ್ ಡಿಪೋಗಳನ್ನು ಫೇರ್‌ಪ್ರೈಸ್ ಡಿಪೋಗಳನ್ನಾಗಿ ಪರಿವರ್ತಿಸಲಾಗುವುದು. ಈಗ ಆಹಾರ ಸಂಗ್ರಹಣೆ ಸಮರ್ಪಕವಾಗಿದ್ದು ಹೆಚ್ಚು ದಾಸ್ತಾನು ಇರುವುದರಿಂದ ಸಂಗ್ರಹಣಾಕಾರ್ಯವನ್ನು ತ್ವರೆಮಾಡಲಾಗುವುದಿಲ್ಲ ಗೋಧಿ ಮತ್ತು ಇತರ ಧಾನ್ಯಗಳ ಬೆಲೆಯನ್ನೂ ಸಹ ಕಡಿಮೆ ಮಾಡಲಾಗುವುದು.

ಡ್ರೈವರಿಲ್ಲದೆ ಎಂಜಿನ್ನಿನ ಪ್ರಯಾಣ

ಈಜಿಪ್ಟಿನ ರಾಜಧಾನಿಯಾದ ಕೈರೋವಿಗೆ ಡ್ರೈವರಿಲ್ಲದೆ ಒಂದು ರೈಲ್ವೆಎಂಜಿನ್ನು ೫೦ ಮೈಲಿಗಳ ಪ್ರಯಾಣ ಮಾಡಿತೆಂದು ವರದಿಯಾಗಿದೆ. ವರ್ಕ್‌ಷಾಪಿನಿಂದ ಹೊರಕ್ಕೆ ತೆಗೆದುಕೊಂಡುಬಂದಿದ್ದ ರೈಲ್ವೆ ಎಂಜನ್ನು ಡ್ರೈವರನು ಅದನ್ನು ಹತ್ತುವುದರೊಳಗಾಗಿ ಏಕಾಏಕಿ ಚಲಿಸಿ, ಯಾವ ಅಪಘಾತಕ್ಕೂ ಒಳಗಾಗದೆ ೫೦ ಮೈಲಿ ಪ್ರಯಾಣಮಾಡಿತೆಂದೂ, ಅದನ್ನು ಹಿಡಿಯಲು ಡ್ರೈವರನು ಒಂದು ಮೋಟಾರುಗಾಡಿಯಲ್ಲಿಪ್ರಯಾಣಮಾಡಿ, ಅದನ್ನು ನಿಲ್ಲಿಸಬೇಕಾಯಿತೆಂದೂ ಹೇಳಲಾಗಿದೆ.

ಕಡ್ಡಾಯ ಹಿಂದೀ ಶಿಕ್ಷಣ

ಶಾಲಾ ಮಕ್ಕಳಿಗೆ ಕಡ್ಡಾಯವಾಗಿ ಹಿಂದಿ ಶಿಕ್ಷಣವನ್ನು ಕೊಡುವಂತೆ ಸಂಸ್ಥಾನಗಳಿಗೆ ಸೂಚನೆ ಕೊಡಲಾಗುವುದೆಂದು ಕೇಂದ್ರ ವಿದ್ಯಾಸಚಿವರು ತಿಳಿಸಿರುತ್ತಾರೆ.

ಕಾಶ್ಮೀರದಲ್ಲಿ ರಾಜತ್ವ ರದ್ದು

ವಂಶಪಾರಂಪರ್ಯವಾಗಿ ಬಂದಿರುವ ರಾಜತ್ವವನ್ನು ಕಾಶ್ಮೀರದಲ್ಲಿ ರದ್ದುಗೊಳಿಸಲಾಗುವುದೆಂದೂ, ಈ ಬಗ್ಗೆ ಅಲ್ಲಿ ಸೇರಲಿರುವ ರಾಜ್ಯಾಂಗ ಸಭೆಯು ಒಂದು ಮಸೂದೆಯನ್ನು ತರಲಿರುವುದೆಂದೂ ಹೇಳಲಾಗಿದೆ. ಆದರೆ ಈಗಿರುವ ಯುವರಾಜರನ್ನೇ ಕಾಶ್ಮೀರದ ಪ್ರಥಮ ಚುನಾಯಿತ ಅಧಿಪತಿಯನ್ನಾಗಿ ನೇಮಿಸಲಾಗುವುದೆಂದೂ ತಿಳಿದುಬಂದಿದೆ.

ಹಿಂದೀ ಕಲಿಯಲು ಪ್ರೋತ್ಸಾಹ

ಹಿಂದೀ ಭಾಷೆಯನ್ನು ದೇಶದಲ್ಲಿ ಎಲ್ಲರೂ ಕಲಿಯಲುಪ್ರೋತ್ಸಾಹಕೊಡಲು ಭಾರತ ಸರ್ಕಾರದವರು ವಿಶೇಷ ಬಹುಮಾನಕೊಡಲು ೫೦೦ ರೂಪಾಯಿಗಳನ್ನು ಮಂಜೂರ್ಮಾಡಿರುವರು.

ಹಿಂದೀ ಲಿಪಿಯನ್ನು ಮತ್ತು ಅದೇ ಅಕ್ಷರವನ್ನು ಹೋಲುವ ಒಂದು ವಸ್ತುವನ್ನು ಸೂಚಿಸುವವರಿಗೆ ೧೦೦ ರೂ. ಗಳ ಬಹುಮಾನವನ್ನು ಕೊಡಲಾಗುತ್ತದೆ.

ಪೇಟೆ ಧಾರಣೆ

ಮೈಸೂರು ತಾ|| 7—6—52

ಅಧಿಕೃತವಾದದ್ದು

		ರೂ.	ರೂ.
ಕಡಲೆಕಾಯಿ ಪಲ್ಲಾಕ್ಕೆ		6-14	16-12
ಹೊಂಗೆಬೀಜ	,,	13-2	13,12
ಹುರುಳಿ	,,	36-0	37-8
ಹೆಸರು	,,	57-0	58-42
ಮೆ|| ಕಾಯಿ ಮಣಕ್ಕೆ		5-14	14-14
ಹುಣಿಸೇಹಣ್ಣು	,,	3-12	4-3
ಸೀಗೆಕಾಯಿ	,,	3-5	3-10
ತೆಂಗಿನಕಾಯಿ	1000	116	200

ಚಿನ್ನ ಬೆಳ್ಳಿ ದರಗಳು

ತಾ|| 7—6—52	ರೂ.
ಸವರನ್	64-10
,,	64-12
ಚಿನ್ನ ತೊಲ	89-12
,, ಮೂಸ	88-0
ಬೆಳ್ಳಿ 100 ತೊಲ	158-0
,, ತೊಲ	1-11

ತೆಲಗುಭಾಷೆ ಬಗ್ಗೆ ಸತ್ಯಾಗ್ರಹ

ತೆಲಗುಭಾಷೆಯಲ್ಲೇ ಸರ್ಕಾರಿ ವ್ಯವಹಾರವನ್ನು ನಡೆಸುವಂತೆ ಒತ್ತಾಯಪಡಿಸಲು ಭೀಮಾವರದ ಅನೇಕ ವಿದ್ಯಾರ್ಥಿಗಳು ಅಲ್ಲಿನ ಸರ್ಕಾರಿ ಕಛೇರಿಯ ಮುಂದೆ ಮೊನ್ನೆ ದಿನ ಸತ್ಯಾಗ್ರಹ ನಡೆಸಿದರು.

ಜಯಪ್ರಕಾಶರ ಉಪವಾಸ

ಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶರು ಈ ತಿಂಗಳ ಮಧ್ಯಭಾಗದಿಂದ ೨೧ ದಿನಗಳ ಉಪವಾಸವನ್ನು ಪ್ರಾರಂಭಿಸಲಿರುವರು.

ಸೋಷಿಯಲಿಸ್ಟರ ಅನ್ನ ಸತ್ಯಾಗ್ರಹ

ಮೈಸೂರು ಜೂನ್ ೭

ರಾಜಧಾನಿಯ ಸೋಷಿಯಲಿಸ್ಟ್ ಪಕ್ಷದವರ ಮುಖಂಡತ್ವದಲ್ಲಿ ಇದೇ ೮ನೇ ತಾ|| ಭಾನುವಾರ ಬೆಳಿಗ್ಗೆ ಸರ್ಕಾರಿ ಉಗ್ರಾಣದ ಮುಂದೆ ಸತ್ಯಾಗ್ರಹ ಪ್ರಾರಂಭವಾಗುವುದೆಂದು ತಿಳಿಸಲಾಗಿದೆ.

ಪಶ್ಚಿಮಬಂಗಾಳದಲ್ಲಿ ಆಹಾರ ಪಡಿತರ ರದ್ದು ?

ಮದ್ರಾಸಿನಲ್ಲಿ ಆಹಾರ ಪಡಿತರ ರದ್ದು ಮಾಡಿರುವುದನ್ನು ಸ್ವಾಗತಿಸುತ್ತಾ, ಪಶ್ಚಿಮಬಂಗಾಳ ಮುಖ್ಯಮಂತ್ರಿ ಡಾ|| ಬಿ. ಸಿ. ರಾಯ್‌ರವರು ತಮ್ಮ ಪ್ರಾಂತ್ಯದಲ್ಲೂ ಆಹಾರ ಪಡಿತರ ರದ್ದುಮಾಡಲು ಪರ್ಯಾಲೋಚಿಸುತ್ತಿರುವುದಾಗಿ ತಿಳಿಸಿದ್ದಾರೆ.

ಆಹಾರ ಧಾನ್ಯಗಳ ಮೇಲಿನ ಹತೋಟಿಯನ್ನು ಬೊಂಬಾಯಿನಲ್ಲಿ ಸದ್ಯಕ್ಕೆ ರದ್ದು ಮಾಡುವುದಿಲ್ಲವೆಂದು ಅಲ್ಲಿನ ಆಹಾರ ಸಚಿವರು ತಿಳಿಸಿರುತ್ತಾರೆ. ಮದರಾಸ್ ಸರ್ಕಾರದವರು ಕೈಗೊಂಡಿರುವ ನೂತನ ಆಹಾರ ಪದ್ಧತಿ ಪ್ರಯೋಗವನ್ನು ತಾವು ವೀಕ್ಷಿಸುವುದಾಗಿ ಅವರು ಹೇಳಿರುವರು.

ಛೋಟಾ ನಾಗಪುರ ಸರ್ಕಾರ ಆಡಳಿತಕ್ಕೆ

ಕಳೆದ ೩,೦೦೦ ವರ್ಷಗಳಿಂದ ಸ್ವತಂತ್ರ ರಾಜ್ಯವಾಗಿದ್ದು ಮಹಾರಾಜರವರ ಆಡಳಿತದಲ್ಲಿದ್ದ ಛೋಟಾ ನಾಗಪುರ ಸಂಸ್ಥಾನವನ್ನು ಈಗ ಬಿಹಾರಸರ್ಕಾರವು ತನ್ನ ವಶಕ್ಕೆ ತೆಗೆದುಕೊಂಡಿದೆ. ಜಮೀನ್‌ದಾರಿ ರದ್ದು ಶಾಸನ ಪ್ರಕಾರ ಜಮೀನ್‌ದಾರಿಯು ರದ್ದಾಗಿರುವುದು ಇದೇ ಪ್ರಥಮವಾಗಿದೆ. ಈ ಪ್ರಾಂತ್ಯವು ಸುಮಾರು ೮೦೦೦ ಎಕರೆ ವಿಸ್ತೀರ್ಣವಿದ್ದು ೭ ಲಕ್ಷ ರೂ. ವರ್ಷಾದಾಯ ಬರುತ್ತಿದೆ. ಈಗಿನ ಕೊನೆಯ ಮಹಾರಾಜರು ಆ ವಂಶದಲ್ಲಿ ೬೨ ನೇ ಯವರು.

ಈ ಆಡಳಿತವರ್ಗಾವಣೆ ಸಮಯದಲ್ಲಿ ಛೋಟಾನಾಗಪುರ ಮಹಾರಾಜರು ಮಾತನಾಡುತ್ತಾ, ಈ ವರ್ಗಾವಣೆಯಿಂದ ಇಲ್ಲಿಯ ರೈತ ಬಾಂಧವರಿಗೆ ಬಹಳ ಸುಖವಾಗುವುದೆಂದು ಹೇಳಿರುವರು.

ಬೊಂಬಾಯಿಗೆ ಆಹಾರ ಸಬ್ಸಿಡಿ ?

ಬೊಂಬಾಯಿ ಸರ್ಕಾರವು ಆಹಾರ ಬೆಲೆ ಇಳಿಸುವುದಕ್ಕಾಗಿ ೬ ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೇಳಿದೆ ಕೇಂದ್ರಸರ್ಕಾರವು ೪ ಕೋಟಿ ರೂಪಾಯಿಗಳನ್ನು ಕೊಡಬಹುದೆಂದು ಹೇಳಲಾಗಿದೆ.

ಭೂಪಟ್ಟನ ಕೃತ್ಯಗಳು

ಸೌರಾಷ್ಟ್ರದಲ್ಲಿ ಭಯಂಕರ ಕೃತ್ಯಗಳನ್ನೆಸಗಿರುವ ಭೂಪಟ್ಟನು ಇಲ್ಲಿಯವರೆಗೆ ೭೯ ಕೊಲೆ ಮತ್ತು ೫೫ ದರೋಡೆಗಳನ್ನು ಮಾಡಿರುವನು.

ಉಸ್‌ಮೇನಿಯಾ ವಿಶ್ವ ವಿದ್ಯಾನಿಲಯ

ಹೈದರಾಬಾದಿನಲ್ಲಿರುವ ಉಸ್‌ಮೇನಿಯಾ ವಿಶ್ವವಿದ್ಯಾನಿಲಯವನ್ನು ತಮ್ಮ ಆಡಳಿತಕ್ಕೆ ತೆಗೆದುಕೊಂಡು ಅದನ್ನು ಹಿಂದಿ ವಿಶ್ವವಿದ್ಯಾನಿಲಯವನ್ನಾಗಿ ಮಾಡುವ ಕೇಂದ್ರಸರ್ಕಾರದ ನಿರ್ಧಾರವನ್ನು ಸದ್ಯಕ್ಕೆ ಕಾರ್ಯರೂಪಕ್ಕೆ ತರಕೂಡದೆಂದು ಹೈದರಾಬಾದ್ ಸರ್ಕಾರವು ಕೇಂದ್ರಕ್ಕೆ ಮನವಿ ಮಾಡಿದೆಯೆಂದು ಹೇಳಲಾಗಿದೆ. ಸದ್ಯದಲ್ಲಿಯೇ ಅಲ್ಲಿನ ಮುಖ್ಯಮಂತ್ರಿ ದೆಹಲಿಗೆ ಭೇಟಿಯಿತ್ತು, ಈ ಬಗ್ಗೆ ಜನರ ವಿರೋಧವನ್ನು ಪಂಡಿತನೆಹರೂರವರಿಗೆ ತಿಳಿಸುವರೆಂದು ತಿಳಿದುಬಂದಿದೆ.

ವಿಮಾನ ಪೆಟ್ರೋಲ್ ನಿರ್ಬಂಧ ರದ್ದು

ಅಮೆರಿಕದಲ್ಲಿ ಪೆಟ್ರೋಲ್ ತಯಾರಿಕಾ ಕಾರ್ಖಾನೆಯ ಕೆಲಸಗಾರರು ಮುಷ್ಕರ ಹೂಡಿದ್ದುದರಿಂದ ಎಲ್ಲದೇಶಗಳಲ್ಲೂ ವಿಮಾನ ಪೆಟ್ರೋಲ್ ಸರಬರಾಜು ಬಗ್ಗೆ ಕೋತಾಮಾಡಲಾಗಿತ್ತು. ಈಗ ಪರಿಸ್ಥಿತಿಯು ಉತ್ತಮಗೊಂಡಿರುವುದರಿಂದ ಭಾರತದಲ್ಲಿ ಕೋತಾವನ್ನು ಸಂಪೂರ್ಣವಾಗಿ ಮುಂದಿನ ಗುರುವಾರದಿಂದ ರದ್ದುಮಾಡಲಾಗುವುದೆಂದು ಕೇಂದ್ರಸರ್ಕಾರ ತಿಳಿಸಿದೆ.

ಮೈಸೂರಿಗೆ ಕಿದ್ವಾಯರ ಭೇಟಿ

ಬೆಂಗಳೂರು ಜೂನ್ ೭

ಕೇಂದ್ರ ಆಹಾರ ಸಚಿವರಾದ ಶ್ರೀ ರಫಿ ಅಹಮದ್ ಕಿದ್ವಾಯರು ಈ ತಿಂಗಳು ಕೊನೆಯಭಾಗದಲ್ಲಿ ಸಂಸ್ಥಾನಕ್ಕೆ ಭೇಟಿಕೊಟ್ಟು, ಮುಖ್ಯಮಂತ್ರಿಗಳೊಡನೆ ಆಹಾರದ ವಿಷಯದಲ್ಲಿ ಮಾತುಕತೆ ನಡೆಸುವರೆಂದು ತಿಳಿದುಬಂದಿದೆ

ಎಸ್. ಎಸ್. ಎಲ್. ಸಿ. ಪ್ರಥಮದರ್ಜೆ ವಿದ್ಯಾರ್ಥಿಗಳು

ಈ ವರ್ಷ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳಲ್ಲಿ ರ್‍ಯಾಂಕ್ ಪಡೆದವರ ಪಟ್ಟಿ ಈ ರೀತಿ ಇದೆ:—

ಪ್ರಥಮಸ್ಥಾನ— ಬೆಂಗಳೂರಿನ ಸೆಂಟ್ ಜೊಸೆಫ್ಸ್ ಇಂಡಿಯನ್ ಹೈಸ್ಕೂಲಿನ ಭೂಪೇಂದ್ರನಾಥ ಸಾರಥಿ. ೨. ಪಾಸನದ್ದೆತಿನಂತರಾಮಯ್ಯ, ೩. ಬೆಂಗಳೂರು ಸೆಂಟ್ ಜೋಸೆಫ್ ಇಂಡಿಯನ್ ಹೈಸ್ಕೂಲಿನ ಹೆಚ್. ಎನ್. ಸುಂದರಮೂರ್ತಿ, ೪. ಅದೇ ಸ್ಕೂಲಿನ ಸಿ. ಆರ್. ಚಕ್ರವರ್ತಿ, ೫. ರಾಬರ್ಟ್‌ಸನ್ ಪೇಟೆಯ ಹೆಚ್. ಎಸ್ ವಿಶ್ವೇಶ್ವರಯ್ಯ ಮತ್ತು ಮೈಸೂರು ಬನುಮಯ್ಯ ಹೈಸ್ಕೂಲಿನ ಎ. ಎಸ್. ನಾಗರಾಜ್, ೬. ಮಹಾರಾಜಾ ಹೈಸ್ಕೂಲಿನ ಹೆಚ್. ಸಿ. ಕೃಷ್ಣಮೂರ್ತಿ, ೭. ಅದೇ ಸ್ಕೂಲಿನ ಜಿ. ಆರ್. ರಾಮಾನುಜಾಚಾರ್, ೮. ಬೆಂಗಳೂರು ಮಹಾರಾಣಿ ಮಹಿಳಾ ವಿದ್ಯಾಲಯದ ಶ್ರೀಮತಿ ಎನ್. ಶೀಲಾ.

ಮದರಾಸಿನಲ್ಲಿ ಆಹಾರ ಹತೋಟಿ ರದ್ದು

ಖಾಸಿಂ ರಜ್ವಿಯ ಬಿಡುಗಡೆಯೇ ?

ಹೈದರಾಬಾದಿನ ರಜಾಕರರ ನಾಯಕನಾಗಿದ್ದು ಈಗ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಖಾಸಿಂ ರಜ್ವಿಯನ್ನು ಬಿಡುಗಡೆ ಮಾಡುವ ವಿಚಾರವು ಅಲ್ಲಿನ ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಹೇಳಲಾಗಿದೆ. ರಜ್ವಿಯನ್ನು ರಾಜಕೀಯ ಅಪರಾಧಿಯೆಂದು ಪರಿಗಣಿಸಿ ಅತನನ್ನು ಬಿಡುಗಡೆಮಾಡಬೇಕೆಂದು ಅಲ್ಲಿನ ಇತ್ತೆಹಾದ್ ಉಲ್ ಮುಸ್ಲಿಮಿನ್ ಸಂಸ್ಥೆಯವರು ಸರ್ಕಾರಕ್ಕೆ ಒತ್ತಾಯ ಮಾಡಿದ್ದಾರೆ.

ಆಹಾರದ ಬೆಲೆ ಇಳಿಸಲು ೧೨ ಕೋಟಿ ರೂ. ಸಹಾಯ

ಭಾರತದ ಎಲ್ಲ ಪ್ರಾಂತ್ಯಗಳಲ್ಲೂ ಆಹಾರದ ಬೆಲೆಯನ್ನು ಇಳಿಸಲು ಕೇಂದ್ರ ಸರ್ಕಾರವು ಒಂದು ಯೋಜನೆಯನ್ನು ಸಿದ್ಧಗೊಳಿಸಿದೆ. ಇದಕ್ಕಾಗಿ ಭಾರತ ಸರ್ಕಾರದವರು ೧೨ ಕೋಟಿ ರೂ. ಖರ್ಚು ಮಾಡುವರೆಂದು ಹೇಳಲಾಗಿದೆ.

ಕೊಡಗಿನಲ್ಲೂ ಧಾನ್ಯ ಸಾಗಾಟ ಪ್ರತಿಬಂಧಕ ರದ್ದು

ಕೊಡಗು ಪ್ರಾಂತ್ಯದಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಆಹಾರ ಧಾನ್ಯಗಳನ್ನು ಸಾಗಿಸುವುದರ ಬಗ್ಗೆ ಇರುವ ಪ್ರತಿಬಂಧಕವನ್ನು ತೆಗೆದು ಹಾಕಲು ಅಲ್ಲಿನ ಸರ್ಕಾರವು ನಿರ್ಧರಿಸಿದೆ.

ಬೊಂಬಾಯಿನಲ್ಲಿ ಪ್ರಚಂಡ ಮುಷ್ಕರ

ಸರ್ಕಾರದವರು ಆಹಾರ ಮೇಲಿನ ದರವನ್ನು ಏರಿಸಿರುವುದನ್ನು ಪ್ರತಿಭಟಿಸಲು ಮೊನ್ನೆ ಬೊಂಬಾಯಿನ ನಗರದಲ್ಲಿ ಪ್ರಚಂಡ ಮುಷ್ಕರ ನಡೆಯಿತು. ಅದರಲ್ಲಿ ೫೦ ಸಾವಿರಕ್ಕಿಂತ ಹೆಚ್ಚಿಗೆ ಮಂದಿ ಕೆಲಸಗಾರರು ಭಾಗವಹಿಸಿದ್ದರು. ನಗರದ ೭೯ ಬಟ್ಟೆಕಾರ್ಖಾನೆಗಳ ಪೈಕಿ, ೬೪ ಮುಚ್ಚಿದ್ದವು. ಅನೇಕ ಅಂಗಡಿಯವರು ಹರಿತಾಳದಲ್ಲಿ ಭಾಗವಹಿಸಲು ತಮ್ಮ ವ್ಯಾಪಾರವನ್ನು ನಿಲ್ಲಿಸಿದ್ದರು. ಕೆಲವು ಕಡೆ ಸ್ವಲ್ಪ ಗಲಭೆ ನಡೆದು ಬಸ್ಸು ಮತ್ತು ಟ್ರಾಮುಗಳ ಮೇಲೆ ಕಲ್ಲುಗಳ ಸುರಿಮಳೆ ಆದವು. ಈ ಸಂಬಂಧದಲ್ಲಿ ೮೦ ಮಂದಿಯನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಚಾಮರಾಜನಗರ ಸತ್ಯಮಂಗಲ ರೈಲ್ವೆ

ಮೇಲ್ಕಂಡ ರೈಲ್ವೆಯನ್ನು ಶೀಘ್ರದಲ್ಲಿಯೇ ಕಾರ್ಯರೂಪಕ್ಕೆ ತರಲಾಗುವುದೆಂಬ ಭರವಸೆಯನ್ನು ಕೇಂದ್ರ ರೈಲ್ವೆ ಸಚಿವರು ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರಿಗೆ ಕೊಟ್ಟಿರುತ್ತಾರೆ.

ಅಕ್ಕಿ ಮತ್ತು ಇತರ ಆಹಾರಧಾನ್ಯಗಳ ಮೇಲಿನ ಹತೋಟಿಯನ್ನೂ ಮತ್ತು ಶಾಸನಬದ್ಧ ಪಡಿತರವನ್ನೂ ಸಂಪೂರ್ಣವಾಗಿ ಮದರಾಸ್‌ಪ್ರಾಂತ್ಯದಲ್ಲಿ ತೆಗೆದು ಹಾಕಲಾಗಿದೆ ಎಂದು ಅಲ್ಲಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ತಿಳಿಸಿರುತ್ತಾರೆ.

ಇನ್ನುಮುಂದೆ ರೈತರು ಯಾವ ಪ್ರತಿಬಂಧಕವೂ ಇಲ್ಲದೆ ಎಲ್ಲಿಬೇಕಾದರೂ ಆಹಾರ ಧಾನ್ಯಗಳನ್ನು ಸಾಗಿಸಬಹುದು ಮತ್ತು ಮಾರಾಟ ಮಾಡಬಹುದು.

ಹತೋಟಿ ಮತ್ತು ಪಡಿತರ ಪದ್ಧತಿಯು ಮದರಾಸಿನಲ್ಲಿ ಕಳೆದ ೧೦ ವರ್ಷಗಳಿಂದ ಜಾರಿಯಲ್ಲಿದ್ದುದನ್ನು ಈಗ ವಜಾಮಾಡಿರುವುದು ಎಲ್ಲರಿಗೂ ಸಂತೋಷ ಮತ್ತು ಆಶ್ಚರ್ಯವನ್ನುಂಟುಮಾಡಿದೆ.

ಶ್ರೀ ರಾಜಾಜಿಯವರು ಶುಕ್ರವಾರ ರಾತ್ರಿ ಮದರಾಸ್ ರೇಡಿಯೋ ಕೇಂದ್ರದಿಂದ ಭಾಷಣಮಾಡುತ್ತಾ, ತಮ್ಮ ಮೇಲ್ಕಂಡ ನಿರ್ಧಾರಕ್ಕೆ ಕೇಂದ್ರಸರ್ಕಾರದ ಸಂಪೂರ್ಣ ನೈತಿಕ ಬೆಂಬಲ ಮತ್ತು ಅನುಮತಿ ಇದೆಯೆಂದೂ, ಇದರಿಂದ ಇನ್ನುಮುಂದೆ ರೈತರಿಗೂ, ವರ್ತಕರಿಗೂ ಮತ್ತು ಜನಗಳಿಗೂ ಈಗಿರುವ ಕಿರುಕುಳ ಮತ್ತು ಕಷ್ಟ ಹೋಗಿ ಎಲ್ಲರಿಗೂ ಬೇಕಾದಷ್ಟು ಆಹಾರ ದೊರಕಲೆಂದೂ ಆಶಿಸಿದ್ದಾರೆ.

ಜರೂರು ಸಮಯಕ್ಕಾಗಿ ಸರ್ಕಾರದವರು ೪೫೦ ಸಾವಿರ ಟನ್ ಧಾನ್ಯವನ್ನು ದಾಸ್ತಾನಾಗಿ ಕೋಡಿ ಇಡುವರು. ಇದೂ ಅಲ್ಲದೆ ೧೫೦ ಸಾವಿರಟನ್ ಆಹಾರಧಾನ್ಯಗಳನ್ನು ಸಂಗ್ರಹಿಸಲಾಗುವುದು. ಕೆಲವು ಪಡಿತರದ ಅಂಗಡಿಗಳೂ ಮತ್ತು ಫೇರ್ ಪ್ರೈಸ್ ಡಿಪೋಗಳನ್ನು ಜನರ ಸೌಕರ್ಯಕ್ಕಾಗಿ ತೆರೆಯಲಾಗುವುದು.

ಹತೋಟಿ ರದ್ದು

ಕಡಲೆಕಾಯಿನ ಮೇಲಿರುವ ಹತೋಟಿಯನ್ನು ದೇಶಾದ್ಯಂತ ರದ್ದುಗೊಳಿಸಲಾಗುವುದೆಂದು ಗೊತ್ತಾಗಿದೆ.

ನೃತ್ಯ ಕಲಾಚಾರ್ಯ
ಶ್ರೀ ಕೆ. ಎಸ್. ರಾಜಗೋಪಾಲ್ ಉಡುಪಿಕರ್‌ರವರ
ಶ್ರೀ ನೃತ್ಯ ಕಲಾಮಂದಿರ ಮೈಸೂರು
(ಸೀತಾವಿಲಾಸ ಅಗ್ರಹಾರದ ಹಿಂಭಾಗ)
ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು.
ಇಂದೇ ವಿಚಾರಿಸಿ —ವ್ಯವಸ್ಥಾಪಕ

ರಣಜಿತ್
೬-೬-೫೨ರಿಂದ ೩ನೇ ವಾರ
ಅಜೀಬ್ ಲಡ್ಕಿ
(ಹಿಂದಿ)
ಪಾತ್ರ,— ನಾಸೀಂ ರೆಹಮಾನ್, ಶಶಿಕಲ.

ಲಿಪಿ ಸಂಸ್ಕರಣ ಟೈಪುರೇಟರ್ ಬೇಡ

ಈಗಾಗಲೇ ಲಿಪಿ ಸಂಸ್ಕರಣವಿಲ್ಲದೆ ಕನ್ನಡ ಟೈಪುರೈಟರುಗಳನ್ನು ಸಿದ್ಧಪಡಿಸಿ ತೋರಿಸಿರುವಾಗ ಮೈಸೂರಿನಲ್ಲಿ ಪ್ರಜಾಸರ್ಕಾರವು ಲಿಪಿಗಳ ಕೊಲೆ ಮಾಡಿ ಲಿಪಿ ಸಂಸ್ಕರಣ ಟೈಪುರೈಟರುಗಳಿಗೆ ಆರ್ಡರ್ ಕೊಟ್ಟಿರುವುದು ವಿಷಾದಕರ. ಲಿಪಿಗಾಗಿ ಯಂತ್ರವೇ ಹೊರತು, ಯಂತ್ರಕ್ಕಾಗಿ ಲಿಪಿಯಲ್ಲ ಇನ್ನೂ ಕಾಲವಿನಾರಿಲ್ಲ. ಲಿಪಿ ಬದಲಾವಣೆಯಿಲ್ಲದೆ ಕನ್ನಡ ಟೈಪುರೈಟರು ತಯಾರಿಕೆಗೆ ಸರ್ಕಾರ ಪ್ರಯತ್ನಿಸಲಿ ಎಂದು ಶ್ರೀ ಡಿ. ಕೆ. ಭಾರದ್ವಾಜರು ಹಿರಿಯೂರಿನಲ್ಲಿ ನಡೆದ ಪ್ರಗತಿಶೀಲ ಸಾಹಿತಿಗಳ ಪ್ರಥಮ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣಮಾಡುತ್ತಾ ಹೇಳಿರುವರು.

ಸಾಗಾಣಿಕೆಗೆ ನಿರ್ಬಂಧವಿಲ್ಲ

ಹೆಚ್ಚು ಆಹಾರ ಬೆಳೆಯುವ ಪ್ರದೇಶಗಳಿಂದ ಆಹಾರ ಅಭಾವವಿರುವ ಪ್ರದೇಶಗಳಿಗೆ ಆಹಾರಧಾನ್ಯವನ್ನು ಸಾಗಿಸಲು ಈಗಿರುವ ನಿರ್ಬಂಧವನ್ನು ತೆಗೆದುಹಾಕಲಾಗುವುದೆಂದು ಗೊತ್ತಾಗಿದೆ.

ವಿಶೇಷ ಕಾಲೇಜು ಶುಲ್ಕ ವಜಾ

ಒಂದು ಸಂಸ್ಥಾನದಿಂದ ಮತ್ತೊಂದು ಸಂಸ್ಥಾನಕ್ಕೆ ಹೋಗಿ ಅಲ್ಲಿನ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗಮಾಡುವ ವಿದ್ಯಾರ್ಥಿಗಳಿಗೆ ವಿಶೇಷ ಶುಲ್ಕವನ್ನು ವಸೂಲ್ಮಾಡುವ ಪದ್ಧತಿಯನ್ನು ವಜಾಮಾಡಬೇಕೆಂದು ಕೇಂದ್ರ ಶಿಕ್ಷಣ ಸಲಹಾ ಸಮಿತಿಯು ಶಿಫಾರಸು ಮಾಡಿದೆ

ಪೋಲೀಸ್ ಕಚೇರಿಯ ವರ್ಗ

ಮೈಸೂರು ಜೂನ್ ೭

ರಾಜಧಾನಿಯ ಅರಮನೆ ಕಚೇರಿಯಲ್ಲಿರುವ ಜಿಲ್ಲಾ ಪೋಲೀಸ್ ಕಚೇರಿಯನ್ನು ನರಸಿಂಹರಾಜ ಮೊಹಲ್ಲಾದಲ್ಲಿರುವ ಶ್ರೀಮನ್ಮಹಾರಾಜರವರ ಸ್ವಂತ ಪದಾತಿದಳವಿದ್ದ ಕಟ್ಟಡಕ್ಕೆ ಸದ್ಯದಲ್ಲಿಯೇ ವರ್ಗಾಯಿಸಲಾಗುವುದೆಂದು ತಿಳಿದುಬಂದಿದೆ.

ಈಗತಾನೇ ಮೇಲ್ಕಂಡ ಕಟ್ಟಡಕ್ಕೆ ವರ್ಗಾಯಿಸಲಾಗಿದ್ದ ಸಂಸ್ಥಾನದ ಪೋಲೀಸ್ ಶಿಕ್ಷಣಶಾಲೆಯನ್ನು ಇನ್ನು ಮುಂದೆ ಬಾಡಿಗಾರ್ಡ್ ಕಟ್ಟಡಕ್ಕೆ ವರ್ಗಾಯಿಸಲಾಗುವುದೆಂದೂ ಗೊತ್ತಾಗಿದೆ.

ಉಡ್‌ಲ್ಯಾಂಡ್ಸ್
6—6—52 ರಿಂದ
ಅಮೋಘಪ್ರಾರಂಭ
ಸಂತೋಷಿಯವರ—
ಶಿನ್‌ಶಿನಾಕಿ-ಬೂಬ್ಲಾ ಬೂ
(ಹಿಂದಿ)
ಪಾತ್ರ:—ರೆಹನಾ, ರಂಜನ್, ವೀರಾ
ಸಂಗೀತ:— ಶ್ರೀ C ರಾಮಚಂದ್ರ

ಪ್ರಕಾಶಕರು :—ಜಿ.ಎಲ್. ಸ್ವಾಮಿ
ಟ್ಯೂರಿಸ್ಟ್ ಬ್ಯೂರೋ ಮೈಸೂರು
ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ
ಜೈಹಿಂದ್ ಪ್ರೆಸ್, ಮೈಸೂರು

FOR SALE
A GOLDEN OPPOURTUNITY FOR BUYERS
Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.
Rs. 16,500 or near offer
No brokers—Immediate possession—No encumbrence,
Enquire at :— M. SUBBARAMAIAH & Co.,
Lansdowne Buildings, Mysore.

ನ್ಯೂ ಅಪೇರ ಟಾಕೀಸ್
6-6-52 ರಿಂದ ಅಮೋಘವಾದ 5ನೇ ವಾರ
ಜೂಪಿಟರ್ಸ್‌ರವರ * ರಾಣಿ * (ತಮಿಳು)
ಪಾತ್ರ:— ‡ ಭಾನುಮತಿ ‡ ಬಾಲಚಂದರ್ ‡ ವಹಾಬ್ ಕಾಶ್ಮೀರಿ ‡
ಮುಂದಿನ ಬದಲಾವಣೆ 13—6—52ರಿಂದ
★ ವೇಲೈಕ್ಕಾರನ್ ★ (ತಮಿಳು)

ಫೋನ್ ೫೭೭೪ (ಲೀ) ದಿನಪತ್ರಿಕೆ ರಿ. ನ. ಎಂ. ೫೩೧೮

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೦—೬—೧೯೫೨ನೇ ಮಂಗಳವಾರ [ಸಂಚಿಕೆ ೨೭೬

ಬೊಂಬಾಯಿನಲ್ಲಿ ಆಹಾರ ಧಾನ್ಯಗಳ ಬೆಲೆ ಇಳಿತಾಯ

ನಗರಾಭಿವೃದ್ಧಿ ಸಮಿತಿಯ ಕಾರ್ಯಕಲಾಪಗಳ ವಿವರಣೆ

ಮೈಸೂರು ಜೂನ್ ೯

ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ತಮ್ಮ ಅಧಿಕಾರವನ್ನು ವಹಿಸಿಕೊಡುವ ಮುನ್ನ ಪತ್ರಿಕಾಗೋಷ್ಠಿಯನ್ನು ಕರೆದು ಕಳೆದ ೩ ವರ್ಷಗಳ ಅವಧಿಯಲ್ಲಿ ನಡೆದ ಕಾರ್ಯಕಲಾಪಗಳನ್ನು ವಿವರಿಸಿದರು.

ಇವುಗಳಲ್ಲಿ ಮುಖ್ಯವಾದುವು- ನಗರದ ನಾನಾಭಾಗಗಳಲ್ಲಿ ಒಳಚರಂಡಿ ವ್ಯವಸ್ಥೆ, ರಸ್ತೆಗಳ ನಿರ್ಮಾಣ, ನಗರದಲ್ಲಿ ಕಬ್ಬಲಪ್ರದೇಶ ನಿವಾರಣೆ ಮತ್ತು ೫,೮೬, ೯೨೬ ರೂಗಳ ವೆಚ್ಚದಿಂದ ೨೦೮ ಮಾದರಿ ಮನೆಗಳನ್ನು ಕಟ್ಟಿರುವುದು ಮುಂತಾದುವನ್ನು ವಿವರಿಸಿದರು. ೫೨-೫೩ ನೇ ಸಾಲಿನಲ್ಲಿ ಸಮಿತಿಯು ಕೈಗೊಳ್ಳಲಿರುವ ಕಾರ್ಯಗಳನ್ನು ಅವರು ಈ ರೀತಿ ಹೇಳಿದರು.

ಸರ್ಕಾರಿ ನೌಕರಿಯಲ್ಲಿರುವ ಜವಾನರಿಗೆ ೯೦೦೦ ರೂ. ಬೆಲೆಬಾಳುವ ಮಾದರಿಮನೆಗಳು, ಪಡುವಾರಹಳ್ಳಿಯಲ್ಲಿ ೨೪೪೦ ರೂ. ಗಳ ೪೦ ಮನೆಗಳು, ಪ್ರಭುದೇವಾ ಚಿತ್ರಮಂದಿರದ ಬಳಿ ಅಂಗಡಿ ಮತ್ತು ಆಫೀಸುಗಳಿಗೆ ಕಟ್ಟಡ ನಿರ್ಮಾಣ. ನಗರದಲ್ಲಿ ಟ್ರಸ್ಟ್‌ಬೋರ್ಡಿಗೆ ಸೇರಿರುವ ನಿವೇಶನಗಳಲ್ಲೆಲ್ಲಾ ಸುಮಾರು ೨॥ ಲಕ್ಷ ರೂ. ವೆಚ್ಚದಿಂದ ಮಾದರಿ ಮನೆಗಳನ್ನು ಕಟ್ಟುವುದು, ೫,೨೬,೦೦೦ ರೂ. ಗಳ ವೆಚ್ಚದಲ್ಲಿ ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳಲ್ಲಿ ಒಳಚರಂಡಿ ವ್ಯವಸ್ಥೆ. ೧೯೫೩ ನೇ ಅಕ್ಟೋಬರ್‌ನಲ್ಲಿ ಸುವರ್ಣೋತ್ಸವವು ನಡೆಸಲಾಗುವುದೆಂದು ಅವರು ವಿವರಣೆಯಿತ್ತರು.

ಇದೇಸಮಯದಲ್ಲಿ ಅವರು ಮಾತನಾಡುತ್ತಾ 'ಇತ್ತೀಚೆಗೆ ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿಗಳಲ್ಲಿ ಭಿನ್ನಾಭಿಪ್ರಾಯ ಮೂಡಿದೆಯೆಂದು ಜನರು ಹೇಳುತ್ತಿರುವರು. ಅದು ನಿಜ. ಅದಕ್ಕೆ ನಾನಾಕಾರಣಗಳಿವೆ. ರೆವಿನ್ಯೂ ಇಲಾಖೆಯಿಂದ ಅನೇಕ ಕಾರ್ಯಗಳು ನಡೆಯಬೇಕಾಗಿರುವುದರಿಂದ ಕೆಲಸ ತಡವಾಗಿ ನಡೆಯುತ್ತಿದೆ.ಆದರೆ ಇದರಿಂದ ಜನರಿಗೇನೂ ತೊಂದರೆಯಿಲ್ಲ.ಕಳೆದ ವರ್ಷಗಳಲ್ಲಿ ತಮ್ಮ ಕೆಲಸಗಳನ್ನು ಮಾಡಲು ನೆರವುನೀಡಿದ ಮಾಜಿ ಹಣಕಾಸಿನ ಸಚಿವ ಶ್ರೀ ಹೆಚ್. ಸಿ. ದಾಸಪ್ಪ, ಟ್ರಸ್ಟ್‌ಬೋರ್ಡ್ ಇಂಜನಿಯರ್ ಶ್ರೀ ಬಿ. ಎಸ್. ನಾರಾಯಣಸ್ವಾಮಿ, ಸಮಿತಿ ಸದಸ್ಯರು ಮತ್ತು ನೌಕರರುಗಳಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸಿದರು.

ಪತ್ರಿಕೋದ್ಯೋಗಿ ಸಂಘ

ನಗರದ ಪತ್ರಿಕೋದ್ಯೋಗಿ ಸಂಘದ ವಾರ್ಷಿಕ ಸಭೆಯು ನಿನ್ನೆ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿಗಳಾದ ಶ್ರೀ ಕೆ. ಕಾಳಯ್ಯನವರು ವರದಿಯನ್ನು ಒಪ್ಪಿಸಿದ ನಂತರ ನೂತನ ಅಧಿಕಾರವರ್ಗದ ಚುನಾವಣೆ ನಡೆಯಿತು. ಶ್ರೀ ಆರ್. ಗೋಪಾಲಕೃಷ್ಣರಾಯರು ಅಧ್ಯಕ್ಷರಾಗಿಯೂ, ಶ್ರೀ ಎಸ್. ಎಸ್. ಶಾಸ್ತ್ರಿಗಳು ಕಾರ್ಯದರ್ಶಿಯಾಗಿಯೂ ಚುನಾಯಿತರಾದರು.

ಪಡಿತರ ಸಡಿಲಿಸುವುದೇ ಭಾರತ ಸರ್ಕಾರದ ನೀತಿ

ಮದ್ರಾಸು ಸರ್ಕಾರವು ಈಗ ಘೋಷಿಸಿರುವ ನೂತನ ಆಹಾರ ನೀತಿಯು ಭಾರತಸರ್ಕಾರದ ಹೊಸ ಆಹಾರನೀತಿಯ ಪ್ರಥಮ ಘಟ್ಟವಾಗಿದೆ. ಸಾಧ್ಯವಾದೆಡೆಯಲ್ಲೆಲ್ಲಾ ಪಡಿತರ ಪದ್ಧತಿಯನ್ನು ಸಡಿಲಗೊಳಿಸುವುದೇ ಸರ್ಕಾರದ ನೀತಿ.

ಮದ್ರಾಸ್‌ಸರ್ಕಾರದ ಹೊಸ ಆಹಾರ ನೀತಿಯು ಸಾಧುವಾಗಿದೆ. ಜನತೆಯನ್ನು ಯಾವ ತೊಂದರೆಗೊಳಪಡಿಸದೆ ಈ ಪ್ರಯೋಗವು ಉತ್ತಮರೀತಿಯಲ್ಲಿ ನಡೆಯುವುದರಲ್ಲಿ ಸಂದೇಹವಿಲ್ಲವೆಂದು ಕೇಂದ್ರದ ಆಹಾರ ಸಚಿವ ಮಿ॥ ರಫಿ ಅಹಮದ್ ಕಿದ್ವಾಯಿಯವರು ಹೇಳಿರುವರು.

ಮದ್ರಾಸಿನಲ್ಲಿ ಈಗ ಸಾಕಷ್ಟು ಆಹಾರ ಸುಮಾರು ೪॥ ಲಕ್ಷ ಟನ್ ದಾಸ್ತಾನು ಸರ್ಕಾರದ ವಶದಲ್ಲಿದೆ. ಜರೂರು ಪರಿಸ್ಥಿತಿಯೊದಗಿದರೆ ಅದನ್ನು ಅಂಗಡಿಗಳ ಮೂಲಕ ಮಾರಾಟಕ್ಕೆ ಕೊಡಲಾಗುತ್ತದೆ. ಈಗ ಗೋಧಿಯಬೆಲೆಯನ್ನು ಮಣಕ್ಕೆ ೨ ರೂ. ನಂತೆ ಇಳಿಸಿರುವುದು ಪರೋಕ್ಷವಾಗಿ ಸಬ್ಸಿಡಿಯನ್ನು ಕೊಟ್ಟಂತಾಗುತ್ತದೆಯೆಂದೂ ಅವರು ಹೇಳಿರುವರು.

ಸಣ್ಣ ಕಥೆಗಳಿಗೆ ಬಹುಮಾನ

ಕನ್ನಡ, ತೆಲುಗು, ಮರಾಠಿ,ಉರ್ದು, ಹಿಂದಿ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಸಣ್ಣ ಕಥೆಗಳನ್ನು ಬರೆಯುವವರಿಗೆ ಪ್ರೋತ್ಸಾಹ ಕೊಡಲು ಹೈದರಾಬಾದ್ ಸರ್ಕಾರದವರು ಉತ್ತಮಗ್ರಂಥಗಳಿಗೆ ಬಹುಮಾನ ಕೊಡಲು ನಿರ್ಧರಿಸಿದ್ದಾರೆ. ಇಂತಹ ಉತ್ತಮ ಗ್ರಂಥಗಳನ್ನು ಸರ್ಕಾರದವರೇ ಪ್ರಕಟಿಸಿ, ಅದರಿಂದ ಬಂದ ಹಣವನ್ನು ಗ್ರಂಥ ಕರ್ತರುಗಳ ಪ್ರೋತ್ಸಾಹಕ್ಕಾಗಿ ಕೊಡಲಿರುವರು.

ಸತ್ಯಾಗ್ರಹಿಗಳ ಬಿಡುಗಡೆ

ಮೈಸೂರು ಜೂನ್ ೯

ನಿನ್ನೆ ಬೆಳಿಗ್ಗೆ ಗಾಂಧೀ ಚೌಕದಲ್ಲಿರುವ ಸರ್ಕಾರಿ ಉಗ್ರಾಣದ ಹತ್ತಿರ ಸತ್ಯಾಗ್ರಹ ಮಾಡಿದ ಸೋಷಲಿಸ್ಟ್ ಪಕ್ಷದ ಕೆ. ಪಿ. ಶಾಂತಮೂರ್ತಿ, ಶ್ರೀನಿವಾಸರಾವ್, ವೇದಾಂತಂ, ಮತ್ತು ರಾಮದೇವ್‌ರವರುಗಳನ್ನು ಈ ದಿನ ಮಧ್ಯಾಹ್ನ ೧೨ ಗಂಟೆಗೆ ಬಿಡುಗಡೆ ಮಾಡಲಾಯಿತು.

ಬೊಂಬಾಯಿಯಲ್ಲಿ ಆಹಾರ ಧಾನ್ಯಗಳ ಬೆಲೆ ಇಳಿತಾಯ

ಬೊಂಬಾಯಿನಲ್ಲಿ ಆಹಾರ ಧಾನ್ಯಗಳ ಬೆಲೆಯನ್ನು ಇಳಿಸಲು ಕೇಂದ್ರ ಮತ್ತು ಪ್ರಾಂತ್ಯ ಆಹಾರ ಸಚಿವರುಗಳು ಕಲ್ಕತ್ತಾದಲ್ಲಿ ನಿನ್ನೆಯದಿನ ವಿಚಾರವಿನಿಮಯ ನಡೆಸಿ ತೀರ್ಮಾನಕ್ಕೆ ಬಂದಿರುವರು. ನಾಳೆಯದಿನ ಸರ್ಕಾರಿ ಪ್ರಕಟಣೆಯು ಹೊರಬೀಳುವುದಾಗಿ ಗೊತ್ತಾಗಿದೆ.

ಬೊಂಬಾಯಿ ಪ್ರಾಂತ್ಯವು ಆಹಾರ ಕೊರತೆ ಪ್ರದೇಶವಾದುದರಿಂದ ಆಹಾರ ನಿಯಂತ್ರಣವನ್ನು ತೆಗೆದು ಹಾಕಲಾಗುವುದಿಲ್ಲವೆಂದು ಆಹಾರ ಮಂತ್ರಿಗಳು ಹೇಳಿರುವರು.

ನಗರಾಭಿವೃಧಿ ಸಮಿತಿಯ ಹೊಸ ಅಧ್ಯಕ್ಷರು

ಮೈಸೂರು ನಗರಾಭಿವೃದ್ಧಿ ಸಮಿತಿಗೆ ಅಧ್ಯಕ್ಷರಾಗಿ ಹೊಸದಾಗಿ ನೇಮಕವಾಗಿರುವ ಶ್ರೀ ಎಸ್. ಲಿಂಗಣ್ಣನವರು ನಿನ್ನೆ ದಿನ ಮಧ್ಯಾಹ್ನ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರಿಂದ ಅಧಿಕಾರವನ್ನು ವಹಿಸಿಕೊಂಡರು.

ವೈದ್ಯರು ಹಳ್ಳಿಗಳನ್ನು ಸೇರಬೇಕು

ಕೇಂದ್ರ ಆರೋಗ್ಯಶಾಖಾ ಸಚಿವ ಶ್ರೀಮತಿ ರಾಜಕುಮಾರಿ ಅಮೃತಕೌರ್‌ರವರು ದೆಹಲಿಯ ಇಂಡಿಯಾ ರೇಡಿಯೋ ಕೇಂದ್ರದಿಂದ ಮಾತನಾಡುತ್ತಾ ಭಾರತದಲ್ಲಿ ಆರೋಗ್ಯ ವಿಚಾರವಾಗಿಯೂ ಕ್ಷಯರೋಗ, ಮಲೇರಿಯಾ ರೋಗ ನಿವಾರಣಾ ಕಾರ್ಯಗಳ ವಿಷಯವಾಗಿಯೂ ಮಾತನಾಡುತ್ತಾ ಇತ್ತೀಚೆಗೆವೈದ್ಯರುಗಳ ಸಂಖ್ಯೆಯು ಹೆಚ್ಚಾಗುತ್ತಲಿದ್ದಾಗ್ಯೂ ಅವರೆಲ್ಲರೂ ಪಟ್ಟಣಗಳಲ್ಲಿಯೇ ವಾಸಿಸಲು ಹೊರಟಿರುವರು. ಆದರೆ ಹಳ್ಳಿಗಳಲ್ಲಿ ಅವರು ನೆಲಸಿ ಅಲ್ಲಿಯ ಜನತೆಗೆ ಸೇವೆಗೈಯ್ಯಬೇಕೆಂದು ಹೇಳಿದರು.

ಶಂಕರರಾವ್ ದೇವ್‌ರವರ ನಡಿಗೆ ಪ್ರವಾಸ

ಆಗಸ್ಟ್ ೨೪ನೇ ತಾ॥ನಿಂದ ಸರ್ವೋದಯ ಪಕ್ಷದ ಕಾರ್ಯದರ್ಶಿ ಶಂಕರರಾವ್ ದೇವ್‌ರವರು ಭೂದಾನ ಯಜ್ಞ ಸಂಬಂಧವಾಗಿ ಹೈದರಾಬಾದಿನಲ್ಲಿ ನಡಿಗೆ ಪ್ರವಾಸ ಕೈಗೊಳ್ಳಲಿರುರೆಂದು ಗೊತ್ತಾಗಿದೆ.

ಆಹಾರ ನೀತಿ ಬದಲಾಯಿಸಲು ಸಂಸ್ಥಾನಗಳಿಗೆ ಸ್ವಾತಂತ್ರ್ಯ

ಆಹಾರದ ಸಮಸ್ಯೆ ಬಗ್ಗೆ ಕೇಂದ್ರ ಸರ್ಕಾರದವರು ಈಗ ಯಾವ ನೂತನ ನೀತಿಯನ್ನೂ ಘೋಷಿಸುವುದಿಲ್ಲವೆಂದೂ ಆದರೆ ಸಂಸ್ಥಾನಗಳು ಯಾವ ರೀತಿ ಆದರೂ ತಮ್ಮ ಆಹಾರ ಪದ್ಧತಿಯನ್ನು ಬದಲಾಯಿಸಲು ಸಂಪೂರ್ಣ ಸ್ವತಂತ್ರ ಕೊಡಲಾಗಿದೆಯೆಂದೂ ಹೇಳಲಾಗಿದೆ. ಮದರಾಸಿನ ಹೊಸ ಆಹಾರ ನೀತಿಯನ್ನು ಎಲ್ಲ ಸಂಸ್ಥಾನ ಸರ್ಕಾರಗಳು ಎಚ್ಚರಿಕೆಯಿಂದ ವೀಕ್ಷಿಸುತ್ತೀವೆಂದೂ, ಅದು ಫಲಪ್ರದವಾದರೆ, ಇತರ ಸಂಸ್ಥಾನಗಳೂ ಹತೋಟಿ ರದ್ದಾಗುವುದರಲ್ಲಿ ಸಂದೇಹವಿಲ್ಲವೆಂದೂ ಅಭಿಪ್ರಾಯ ಪಡಲಾಗಿದೆ.

ನಿರಾಶ್ರಿತರ ವಸತಿಗಾಗಿ ಸಹಾಯ

ಬೊಂಬಾಯಿ ನಗರದಲ್ಲಿರುವ ನಿರಾಶ್ರಿತರಿಗೆ ವಸತಿಗಳನ್ನು ಏರ್ಪಡಿಸಲು ಭಾರತ ಸರ್ಕಾರದವರು ಅಲ್ಲಿನ ಕಾರ್ಪೋರೇಷನ್ನಿಗೆ ೪೫ ಲಕ್ಷ ರೂ. ಸಾಲವನ್ನು ಕೊಡಲು ಒಪ್ಪಿರುವರು.

ಕುಶಲ ಕಲೆಗಳ ಶಾಲೆ

ಭಾರತೀಯ ನೃತ್ಯ, ಸಂಗೀತ ಮತ್ತು ನಾಟಕ ಮುಂತಾದ ಕುಶಲ ಕಲೆಗಳನ್ನು ಪ್ರೋತ್ಸಾಹಿಸಲು, ಕೇಂದ್ರ ಸರ್ಕಾರದವರು ಸದ್ಯದಲ್ಲಿಯೇ ಒಂದು ಶಾಲೆಯನ್ನು ದೆಹಲಿಯಲ್ಲಿ ತೆರೆಯಲಿರುವರೆಂದು ಗೊತ್ತಾಗಿದೆ.

ಪಾರ್ಲಿಮೆಂಟಿನ ಮುಂದೆ ಸತ್ಯಾಗ್ರಹ

ಸಿಂಹಳದಲ್ಲಿ ಹೊಸ ಪಾರ್ಲಿಮೆಂಟಿನ ಅಧಿವೇಶನವು ನಿನ್ನೆಯದಿನ ಪ್ರಾರಂಭವಾಯಿತು. ಸಿಂಹಳದ ಭಾರತ ಕಾಂಗ್ರೆಸ್ಸಿಗರು ಈ ಅಧಿವೇಶನದ ಮುಂದೆ ಸತ್ಯಾಗ್ರಹ ಮಾಡಲು ಹೋಗಲು ಅವರನ್ನು ಪೋಲೀಸಿನವರು ಚದುರಿಸಿ, ೧೧ ಜನರನ್ನು ದಸ್ತಗಿರಿಮಾಡಿ ಅನಿರ್ದಿಷ್ಟ ಪ್ರದೇಶಕ್ಕೆ ಕರೆದೊಯ್ಯರೆಂದು ಗೊತ್ತಾಗಿದೆ.

ರೈಲ್ವೆ ಬಡ್ಜೆಟ್

ಭಾರತ ಪಾರ್ಲಿಮೆಂಟಿನಲ್ಲಿ ನಿನ್ನೆಯ ದಿನ ೩ ದಿನಗಳಿಂದ ನಡೆಯುತ್ತಿದ್ದ ರೈಲ್ವೆ ಎಸ್ಟಿಮೇಟ್ ಚರ್ಚೆ ಮುಕ್ತಾಯವಾಗಿ ೨೪೮ ಕೋಟಿ ರೂಪಾಯಿಗಳು ಖರ್ಚು ಮಂಜೂರಾಯಿತು.

ಕೃಪಲಾನಿಯವರ ಸ್ವಾಗತ

ಮದ್ರಾಸಿನ ನೂತನ ಆಹಾರ ನೀತಿಯನ್ನು ಕೃಷಕ್ ಮಜದೂರ್ ಪಕ್ಷದ ನಾಯಕ ಆಚಾರ್ಯ ಕೃಪಲಾನಿಯವರು ಸ್ವಾಗತಿಸಿದ್ದಾರೆ.

ವ್ಯವಸಾಯ ಸಾಲಗಳು

ಮದ್ರಾಸ್ ಸರ್ಕಾರವು ವ್ಯವಸಾಯಾಭಿವೃದ್ಧಿಗೊಳಿಸಲು ೧೨ ಲಕ್ಷ ರೂಪಾಯಿಗಳ ವ್ಯವಸಾಯ ಸಾಲವನ್ನು ರೈತರಿಗೆ ಕೊಡಲಿದೆ. ಎಕರೆಯೊಂದಕ್ಕೆ ೨೫ ರೂ. ನಂತೆ, ೨೦೦ ರೂಪಾಯಿಗಳಿಗೆ ಮೀರದಂತೆ ಈ ಸಾಲವನ್ನು ಕೊಡುತ್ತದೆ.

ಕೆ.ಪಿ.ಸಿ.ಸಿ. ನೂತನ ಅಧ್ಯಕ್ಷರು

ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಪುನಃ ಶ್ರೀ ಎಸ್. ನಿಜಲಿಂಗಪ್ಪನವರು ಚುನಾಯಿತರಾಗಿದ್ದಾರೆ.

ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕು

ಶ್ರೀ ದಾಸಪ್ಪನವರ ಮನವಿ

ಮೈಸೂರು ಜೂನ್ ೯

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ನಿನ್ನೆ ಸಂಜೆ ನಗರ ಕಾಂಗ್ರೆಸ್ ಸಮಿತಿಯ ಕಛೇರಿಗೆ ಭೇಟಿ ಇತ್ತು ಕಾಂಗ್ರೆಸ್ ಕಾರ್ಯಕರ್ತರೊಡನೆ ಮಾತುಕತೆ ನಡೆಸಿದರು.

ನಗರ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷರನ್ನು ಸ್ವಾಗತಿಸಿ, ಮೈಸೂರು ನಗರದ ನಿವಾಸಿಗಳಾದ ಶ್ರೀ ದಾಸಪ್ಪನವರು ಕಾಂಗ್ರೆಸ್ ಅಧ್ಯಕ್ಷ ಪಟ್ಟಕ್ಕೆ ಬಂದಿರುವುದು ಒಂದು ಹೆಮ್ಮೆ ಎಂದು ಅವರನ್ನು ಪ್ರಶಂಸಿಸಿದರು. ಅನಂತರ ಶ್ರೀಗಳಾದ ಚನ್ನಯ್ಯ ಮತ್ತು ಎಂ ಆರ್. ಸಿ. ಬಸಪ್ಪನವರು ಹಾರಗಳನ್ನು ಅರ್ಪಿಸಿದರು.

ಅಧ್ಯಕ್ಷ ಶ್ರೀ ದಾಸಪ್ಪನವರು ಮಾತನಾಡಿ, ಸಂಸ್ಥಾನದಲ್ಲಿ ತಾವು ಈಗ ಕೈಗೊಂಡಿರುವ ಪ್ರವಾಸದ ಉದ್ದೇಶವನ್ನು ವಿವರಿಸಿ, ಜಿಲ್ಲಾ ಮತ್ತು ತಾ|| ಸಮಿತಿಗಳನ್ನು ಪುನರ್ರಚಿಸಬೇಕಾಗಿದೆಯೆಂದೂ ಮತ್ತು ಸಂಸ್ಥೆಗೆ ಹೆಚ್ಚು ಮಂದಿ ಸದಸ್ಯರನ್ನು ಸೇರಿಸಬೇಕಾಗಿದೆಯೆಂದೂ ತಿಳಿಸಿದರು.

ಪ್ರಜಾಪ್ರಭುತ್ವ ಅನುಗುಣವಾಗಿ ರಾಜಾಡಳಿತದಲ್ಲಿರುವ ಪಕ್ಷಕ್ಕೆ ಸಂಪೂರ್ಣ ಬೆಂಬಲನೀಡಬೇಕಾದ ಅಗತ್ಯವಿದೆ. ಎಲ್ಲರೂ ಇದನ್ನು ಗಮನಿಸಿ, ಕಾಂಗ್ರೆಸ್ ಸಂಸ್ಥೆಯನ್ನು ಸಂಘಟಿಸಿ, ಹೆಚ್ಚಿಗೆ ಸದಸ್ಯರನ್ನುಸೇರಿಸಬೇಕು ಈಗ ದೇಶದಲ್ಲಿಕಮ್ಯೂನಿಸ್ಟ್, ಕೆ. ಎಂ. ಪಿ. ಮತ್ತು ಇತರ ಪಕ್ಷಗಳು ತಲೆಯೆತ್ತಿವೆ. ದೇಶದ ಹಿತದೃಷ್ಟಿಯಿಂದ ನೆಹರೂ ಸರ್ಕಾರಕ್ಕೆ ಎಲ್ಲರೂ ಬೆಂಬಲನೀಡಬೇಕು. ತಮಗೆ ಕಾಂಗ್ರೆಸ್ ಶ್ರೇಷ್ಠ ಕಾರ್ಯದರ್ಶಿಗಳಿಂದ ಒಂದು ಪತ್ರ ಬಂದಿದೆ. ಅದರ ಪ್ರಕಾರ ಮೈಸೂರು ಸಂಸ್ಥಾನದಲ್ಲಿರುವ ಜನಸಂಖ್ಯೆ ಪೈಕಿ, ಒಂದನೇ ಹತ್ತು ಭಾಗವನ್ನಾದರೂ ಕಾಂಗ್ರೆಸ್ ಸದಸ್ಯರನ್ನಾಗಿ ಮಾಡಬೇಕು ಎಂದು ಅವರು ತಿಳಿಸಿರುತ್ತಾರೆ. ಅದಕ್ಕನುಗುಣವಾಗಿ ಮೈಸೂರು ನಗರದಲ್ಲಿ ೨೦ ಸಾವಿರ ಮಂದಿಯನ್ನು ಸದಸ್ಯರನ್ನಾಗಿ ಮಾಡಬೇಕು. ಈಗಾಗಲೇ ೫ ಸಾವಿರ ಜನರಿಗೆ ಪುಸ್ತಕ ಹಂಚಲಾಗಿದೆಯೆಂಬುದುದನ್ನು ಕೇಳಿ ಸಂತೋಷವಾಯಿತು. ಇನ್ನೂ ಹೆಚ್ಚಿಗೆ ಶ್ರಮವಹಿಸಿ, ಕಾಂಗ್ರೆಸ್ ಕರ್ತರುಗಳು ಈ ವಿಷಯದಲ್ಲಿ ಶ್ರಮವಹಿಸುವರೆಂದು ನಂಬಿದ್ದೇನೆ ಎಂದು ಶ್ರೀ ದಾಸಪ್ಪನವರು ಹೇಳಿದರು.

ಮದರಾಸಿನಲ್ಲಿ ಪಡಿತರ ಪದ್ಧತಿ ಮತ್ತು ಆಹಾರ ಹತೋಟಿಯನ್ನು ರದ್ದು ಮಾಡಿರುವ ಬಗ್ಗೆ ಶ್ರೀ ರಾಜಾಜಿಯವರನ್ನು ಪ್ರಶಂಸಿಸಿ, ಇದೇರೀತಿ ಮೈಸೂರು ಸರ್ಕಾರದವರೂ ಸಹ ಶೀಘ್ರದಲ್ಲಿಯೇ ಹತೋಟಿ ಮತ್ತು ಪಡಿತರವನ್ನು ರದ್ದು ಮಾಡುವರೆಂದು ತಾವು ಆಶಿಸುವುದಾಗಿ ತಿಳಿಸಿದರು.

ಮೈಸೂರು ಕಾಂಗ್ರೆಸ್ಸಿನ ಬಗ್ಗೆ ಗಾಂಧಿಜೀಯವರಿಗೂ ಮತ್ತು ಅಖಿಲ ಭಾರತ ಕಾಂಗ್ರೆಸ್ಸಿಗೂ ಹೆಚ್ಚಿನ ಮನ್ನಣೆ ಇತ್ತು. ಇದನ್ನು ಮೈಸೂರಿನವರು ಕಾಪಾಡಿಕೊಂಡು ಬರಬೇಕೆಂದು ಕೊನೆಯಲ್ಲಿ ಅಧ್ಯಕ್ಷರು ಮನವಿಮಾಡಿದರು.

ಕೆಲವು ಕಾಂಗ್ರೆಸ್ ಕಾರ್ಯಕರ್ತರುಗಳು ಮಾತನಾಡಿ, ಈಗ ಸರ್ಕಾರದವರು ಆಹಾರ ಬೆಲೆಯನ್ನು ಏರಿಸಿ ಜನಗಳಿಗೆ ಕಷ್ಟ ಉಂಟು ಮಾಡಿರುವುದರಿಂದ ತಾವುಗಳು ಜನರ ಮುಂದೆ ಹೋಗಿ ಕಾಂಗ್ರೆಸ್ಸಿಗೆ ಸೇರಿ ಎಂದು ಕೇಳುವುದು ತುಂಬಾ ಕಷ್ಟವಾಗಿರುವುದೆಂದೂ, ಕೂಡಲೇ ಪಡಿತರ ಪದ್ಧತಿಯನ್ನು ರದ್ದು ಮಾಡಿದರೆ, ಕಾಂಗ್ರೆಸ್ಸಿಗೆ ಹೆಚ್ಚು ಬೆಂಬಲ ದೊರೆಯುವುದೆಂದೂ ಅಭಿಪ್ರಾಯಪಟ್ಟರು.

ಶ್ರೀ ಚೆನ್ನಯ್ಯನವರು ಮಾತನಾಡಿ ಕಾಂಗ್ರೆಸ್ ಸದಸ್ಯರನ್ನು ಸೇರಿಸುವಿಕೆ ಬಗ್ಗೆ, ಪ್ರತಿ ಮೊಹಲ್ಲಾದಲ್ಲೂ ಒಂದು 'ವಾರ ದಿನಾಚರಣೆ' ನಡೆಸುವುದು ಸೂಕ್ತವೆಂದು ತಿಳಿಸಿದರು. ಅನಂತರ ಶ್ರೀ ಟಿ ವೆಂಕಟರಮಣಯ್ಯನವರು ವಂದನೆ ಅರ್ಪಿಸಿದರು.

ರಣಜಿತ್

6-6-52ರಿಂದ ೨ನೇ ವಾರ

ಅಜೀಬ್ ಲಡ್ಕಿ (ಹಿಂದಿ)

ಪಾತ್ರ— ನಾಸೀಂ ರೆಹಮಾನ್, ಶಶಿಕಲ,

ನಾಳೆ ದಿನ ಪುನಃ ಅನ್ನ ಸತ್ಯಾಗ್ರಹ

ಮೈಸೂರು ಜೂನ್ ೯

ಸರ್ಕಾರದವರು ಆಹಾರ ಬೆಲೆಯನ್ನು ಏರಿಸಿರುವುದನ್ನು ಪ್ರತಿಭಟಿಸಲು, ನಗರದ ಸೋಷಿಲಿಸ್ಟ್ ಪಕ್ಷದವರು ಕೈಗೊಂಡಿರುವ ಅನ್ನ ಸತ್ಯಾಗ್ರಹ ಸಂಬಧದಲ್ಲಿ ನಾಳೆ ಬೆಳಿಗ್ಗೆ (ಮಂಗಳವಾರ) ಮತ್ತೊಂದು ಸತ್ಯಾಗ್ರಹಿಗಳ ತಂಡ ಹೊರಡುವುದೆಂದು ತಿಳಿಸಲಾಗಿದೆ.

ಮದರಾಸ್ ಬಂದರ್ ಅಭಿವೃದ್ಧಿ

ಮದರಾಸ್ ಬಂದರನ್ನು ಅಭಿವೃದ್ಧಿಗೊಳಿಸಲು ಭಾರತ ಸರ್ಕಾರವು ಒಂದು ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಿದೆಯೆಂದು ಗೊತ್ತಾಗಿದೆ.

ಭಾರತ ಜಪಾನ್ ಶಾಂತಿ ಕರಾರು

ಭಾರತ ಜಪಾನ್ ರಾಷ್ಟ್ರಗಳ ಶಾಂತಿ ಕರಾರಿಗೆ ನಿನ್ನೆ ಉಭಯ ರಾಷ್ಟ್ರಗಳ ಪ್ರತಿನಿಧಿಗಳು ಸಹಿ ಹಾಕಿದರು.

ಕ್ಷಾಮ ಪರಿಹಾರಕ್ಕೆ ನೆಹ್ರೂರವರ ಸಹಾಯ

ಮೈಸೂರು ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ಉಂಟಾಗಿರುವ ಕ್ಷಾಮಪರಿಹಾರಕ್ಕಾಗಿ ಪ್ರಧಾನಿ ಪಂ|| ನೆಹರೂರವರ ಪರಿಹಾರ ನಿಧಿಯಿಂದ ೨೦ ಸಾವಿರ ರೂಗಳನ್ನು ಕೊಟ್ಟಿರುತ್ತಾರೆ ಅದರ ಪೈಕಿ, ಕೋಲಾರ ಜಿಲ್ಲೆಗೆ ೧೦ ಸಾವಿರ ರೂ. ಬಿಡುಗಡೆ ಗಡಲಾಗಿದೆ.

ಅನ್ನ ಸತ್ಯಾಗ್ರಹದಲ್ಲಿ ನಾಲ್ಕು ಜನರ ದಸ್ತಗಿರಿ

ಮೈಸೂರು ಜೂನ್ ೯

ನಗರದ ಸೋಷಲಿಸ್ಟ್ ಪಕ್ಷದವರು ಕೈಗೊಂಡಿರುವ ಅನ್ನಸತ್ಯಾಗ್ರಹದ ಸಂಬಂಧದಲ್ಲಿ ನಿನ್ನೆ ಬೆಳಿಗ್ಗೆ ಶ್ರೀಗಳಾದ ಮಿರ್ ಹುಸೇನ್, ಬಿ. ಶ್ರೀಕಂಠಪ್ಪ, ಬಿ. ಶ್ರೀನಿವಾಸರಾವ್, ವೇದಾಂತಂ ಮುಂತಾದವರು ಟೌನ್‌ಹಾಲ್ ಮೈದಾನದಿಂದ ತಮ್ಮ ಪಕ್ಷದ ಧ್ವಜವನ್ನು ಹಿಡಿದುಕೊಂಡು, 'ಸರ್ಕಾರ ಆಹಾರದ ಬೆಲೆ ಏರಿಸಿರುವುದರ ನೀತಿ ಬಗ್ಗೆ ಧಿಕ್ಕಾರ' ಎಂದು ಘೋಷಣೆ ಮಾಡಿಕೊಂಡು, ಗಾಂಧೀ ಚೌಕಕ್ಕೆ ಮೆರವಣಿಗೆಯಲ್ಲಿ ಹೊರಟರು. ಅನಂತರ ಅಲ್ಲಿರುವ ಆಹಾರ ಡಿಪೋವಿನ ಕಾಂಪೌಂಡಿನೊಳಗೆ ಶ್ರೀಗಳಾದ ಕೆ. ಪಿ. ಶಾಂತಮೂರ್ತಿ, ಶ್ರೀನಿವಾಸರಾವ್, ವೇದಾತಂ ಮತ್ತು ರಾಮದೇವ್ ರವರುಗಳು ಪ್ರವೇಶಿಸಿದಾಗ, ಅಲ್ಲಿದ್ದ ಪೊಲೀಸರು ಅವರನ್ನು ದಸ್ತಗಿರಿ ಮಾಡಿದರು.

ಈ ಸತ್ಯಾಗ್ರಹವನ್ನು ವೀಕ್ಷಿಸಲು ೧೦ ಸಾವಿರ ಜನರಿಗಿಂತ ಹೆಚ್ಚು ಮಂದಿ ಅಲ್ಲಿ ನೆರದಿದ್ದರು. ಈ ಸಂಬಂಧದಲ್ಲಿ ಪಕ್ಷದ ಕಾರ್ಯದರ್ಶಿಗಳು ಒಂದು ಹೇಳಿಕೆಯನ್ನಿತ್ತು, ತಮಗೆ ಬೆಂಬಲ ನೀಡಿದ ನಗರದ ನಾಗರೀಕರಿಗೂ ಮತ್ತು ರೇಷನ್ ಕಾರ್ಡ್‌ದಾರರ ಸಂಘದವರಿಗೂ ಕೃತಜ್ಞತಾ ವಂದನೆಗಳನ್ನು ಅರ್ಪಿಸಿರುತ್ತಾರೆ.

ಎಲ್. ಎಸ್. ಪರೀಕ್ಷೆ ಫಲಿತಾಂಶ

ಬೆಂಗಳೂರು ಜೂನ್ ೯

ಈ ವರ್ಷದ ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶವು ಇದೇ ೧೧ನೇ ತಾ|| ಗುರುವಾರ ಹೊರಬೀಳಲಿದೆ.

ನ್ಯೂ ಅಪೇರ ಟಾಕೀಸ್

6-6-52 ರಿಂದ ಅಮೋಘವಾದ 5ನೇ ವಾರ

ಜೂಪಿಟರ್‍ಸ್‌ರವರ * ರಾಣಿ * (ತಮಿಳು)

ಪಾತ್ರ:— ‡ ಭಾನುಮತಿ ‡ ಬಾಲಚಂದರ್ ‡ ವಹಾಬ್ ಕಾಶ್ಮೀರಿ ‡

13—6—52ರಿಂದ

ಮುಂದಿನ ಬದಲಾವಣೆ

★ ವೇಲೈಕ್ಕಾರನ್ ★ (ತಮಿಳು)

ಉಡ್‌ಲ್ಯಾಂಡ್ಸ್

6—6—52 ರಿಂದ ಅಮೋಘಪ್ರಾರಂಭ

ಸಂತೋಷಿಯವರ—

ಷಿನ್‌ಷಿನಾಕಿ-ಬೂಬ್ಲಾಬೂ (ಹಿಂದಿ)

ಪಾತ್ರ:—ರೆಹನಾ, ರಂಜನ್, ವೀರಾ

ಸಂಗೀತ:— ಶ್ರೀ C. ರಾಮಚಂದ್ರ

ಅಂದವಾದ ಮುದ್ರಣಕ್ಕೆ

ಕರ್ನಾಟಕ ಪ್ರಿಂಟರ್ಸ್

ಗಾಂಧಿಚೌಕ ಮೈಸೂರು.

(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)

For NEAT AND PROMPT PRINTING

Contact :

CARNATAK PRINTERS

GANDHI SQUARE, MYSORE

Phone 892 or 574

ನೃತ್ಯ ಕಲಾಚಾರ್ಯ

ಶ್ರೀ ಕೆ. ಎಸ್.ರಾಜಗೋಪಾಲ್ ಉಡುಪಿಕರ್‌ರವರ

ಶ್ರೀ ನೃತ್ಯ ಕಲಾಮಂದಿರ ಮೈಸೂರು

(ಸೀತಾವಿಲಾಸ ಅಗ್ರಹಾರದ ಹಿಂಭಾಗ)

ನಮ್ಮಲ್ಲಿ ಭಾರತೀಯ ನೃತ್ಯಗಳನ್ನು ಶಾಸ್ತ್ರೋಕ್ತವಾಗಿ ಕಲಿಸಲಾಗುವುದು. ಇಂದೇ ವಿಚಾರಿಸಿ —ವ್ಯವಸ್ಥಾಪಕ

ಪ್ರಕಾಶಕರು :—ಜಿ.ಎಲ್. ಸ್ವಾಮಿ

ಟ್ಯೂರಿಸ್ಟ್ ಬ್ಯೂರೋ ಮೈಸೂರು

ಮುದ್ರಕರು— ಟಿ. ಸಿ. ಬ್ರಹ್ಮಸೂರಯ್ಯ

ಜೈಹಿಂದ್ ಪ್ರೆಸ್, ಮೈಸೂರು

ಫೋನ್ 574 (ಲಿಂಕ್) ದಿನಪತ್ರಿಕೆ ರಿ. ನ. ಎಂ. 5318

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೧-೬-೧೯೫೨ನೇ ಬುಧವಾರ [ಸಂಚಿಕೆ ೨೩೭

ನಗರದ ರೇಷನ್ ಡಿಪೋಗಳಲ್ಲಿ ಮಾರಾಟ ಕಡಿಮೆ

ಮೈಸೂರು ಜೂನ್ ೧೦

ಆಹಾರದ ಬೆಲೆಯನ್ನು ಸರ್ಕಾರದವರು ಏರಿಸಿರುವುದರ ಪರಿಣಾಮವಾಗಿ ಮೈಸೂರು ನಗರದ ರೇಷನ್ ಡಿಪೋಗಳಲ್ಲಿ ಆಹಾರ ಪದಾರ್ಥಗಳನ್ನು ಕೊಳ್ಳುವ ಪ್ರಮಾಣವು ಕಡಿಮೆಯಾಗುತ್ತಿದೆ ಎಂದು ತಿಳಿದುಬಂದಿದೆ.

ಕಳೆದ ಮಾಹೆಯಲ್ಲಿ ಸುಮಾರು ಶೇಕಡ ೨೨ ರಷ್ಟು ಅಕ್ಕಿ ಮತ್ತು ಶೇಕಡ ೮೦ ರಷ್ಟು ಗೋಧಿ ಮಾರಾಟವಾಗದೆ ನಿಂತುಹೋಗಿದೆ ಎಂದು ಹೇಳಲಾಗಿದೆ.

ಅನ್ನ ಸತ್ಯಾಗ್ರಹದಲ್ಲಿ ೬ ಜನರ ಬಂಧನ

ಮೈಸೂರು ಜೂನ್ ೧೦

ನಗರದ ಸೋಷಲಿಸ್ಟ್ ಪಕ್ಷದ ಆಶ್ರಯದಲ್ಲಿ ಪ್ರಾರಂಭವಾಗಿರುವ ಅನ್ನಸತ್ಯಾಗ್ರಹದ ಸಂಬಂಧದಲ್ಲಿ ಈ ದಿನ ಬೆಳಿಗ್ಗೆ ೧೦-೩೦ ಗಂಟೆಯ ಸಮಯದಲ್ಲಿ ಶ್ರೀಗಳಾದ ಕೆ. ಪಿ. ಶಾಂತಮೂರ್ತಿ, ಶ್ರೀನಿವಾಸರಾವ್, ವೇದಾಂತಂ, ರಾಮದೇವ್, ಪ್ರಭಾಕರ್ ಮತ್ತು ಕುಮಾರ್‌ರವರುಗಳು ಗಾಂಧೀ ಚೌಕದಲ್ಲಿರುವ ಸರ್ಕಾರಿ ಆಹಾರದ ಉಗ್ರಾಣಕ್ಕೆ ಪ್ರವೇಶಮಾಡಲು ಹೋದಾಗ ಅವರನ್ನು ಪೊಲೀಸರು ತಡೆದು ವ್ಯಾನಿನಲ್ಲಿ ಕರೆದೊಯ್ದರು.

ಇದರ ಪೂರ್ವಭಾವಿಯಾಗಿ ಟೌನ್‌ಹಾಲ್ ಮೈದಾನದಲ್ಲಿ ಜನಾಬ್ ಮಿರ್ ನೂರ್ ಹುಸೇನರವರ ಅಧ್ಯಕ್ಷತೆಯಲ್ಲಿ ಪಕ್ಷದವರು ಬಹಿರಂಗ ಸಭೆ ಏರ್ಪಡಿಸಿದ್ದರು.

ನಾಳೆ ದಿನ ಪುನಃ ಬಹಿರಂಗ ಸಭೆ ಮತ್ತು ಸತ್ಯಾಗ್ರಹಗಳು ನಡೆಯುತ್ತವೆ.

ಈ ಸತ್ಯಾಗ್ರಹವನ್ನು ಆಹಾರ ಸಚಿವ ಶ್ರೀ ಸಿದ್ದವೀರಪ್ಪನವರು ಬೆಂಗಳೂರಿನಲ್ಲಿ ನಿನ್ನೆ ತೀವ್ರವಾಗಿ ಖಂಡಿಸಿ, ಚುನಾವಣೆಯಲ್ಲಿ ಪರಾಜಯ ಪಡೆದ ಸೋಷಲಿಸ್ಟ್ ಪಕ್ಷದವರು ಅತಿ ಅಗ್ಗದ ಪ್ರಚಾರಕ್ಕಾಗಿ ಸತ್ಯಾಗ್ರಹ ಪ್ರಾರಂಭಿಸಿರುವುದು ಸರಿಯಲ್ಲವೆಂದು ಟೀಕಿಸಿರುತ್ತಾರೆ. ಪ್ರಜಾಪ್ರಭುತ್ವದಲ್ಲಿ ಇತರ ಮಾರ್ಗಗಳಿರುವಾಗ ಸತ್ಯಾಗ್ರಹವನ್ನು ಹೂಡುವುದು ನ್ಯಾಯವಲ್ಲವೆಂದೂ ಅವರು ಹೇಳಿರುವರು.

ಅನ್ನ ಸತ್ಯಾಗ್ರಹಿಗಳ ಬಿಡುಗಡೆ

ಇಂದು ಬೆಳಿಗ್ಗೆ ಪೊಲೀಸಿನವರು ಬಂಧಿಸಿದ ಸೋಷಲಿಸ್ಟ್ ಪಕ್ಷದ ೬ ಜನ ಅನ್ನ ಸತ್ಯಾಗ್ರಹಿಗಳನ್ನು ೨ ಗಂಟೆ ವೇಳೆಗೆ ಬಿಡುಗಡೆ ಮಾಡಿದರು.

ಬಡ ಜಾನುವಾರುಗಳಿಗೆ ಆಶ್ರಯ

ಉಪಯೋಗವಿಲ್ಲದ ಬಡ ೭೫ ಸಾವಿರ ಜಾನುವಾರುಗಳಿಗೆ ಕಾಡುಗಳಲ್ಲಿ ಆಶ್ರಯ ದೊರಕಿಸಲು ಕೇಂದ್ರ ಸರ್ಕಾರದವರು ಒಂದು ಯೋಜನೆಯನ್ನು ಶೀಘ್ರದಲ್ಲಿಯೇ ಜಾರಿಗೆ ತರಲಿರುವರೆಂದು ತಿಳಿದು ಬಂದಿದೆ.

೧೯೫೪-೫೬ಕ್ಕೆ ಚಾಮರಾಜ ನಗರ-ಸತ್ಯಮಂಗಲ ರೈಲ್ವೆ

ರೇಷನ್ ರದ್ದಿನ ಬಗ್ಗೆ ಪೌರಸಭೆಯ ಅಭಿಪ್ರಾಯ

೧೨ ನೇ ತಾ|| ವಿಶೇಷ ಸಭೆ

ಮೈಸೂರು ಜೂನ್ ೧೦

ಮೈಸೂರು, ಬೆಂಗಳೂರು ಮುಂತಾದ ದೊಡ್ಡ ನಗರಗಳಲ್ಲಿ ರೇಷನ್ ಪದ್ಧತಿಯನ್ನು ಸಂಪೂರ್ಣವಾಗಿ ರದ್ದು ಮಾಡುವ ವಿಚಾರದಲ್ಲಿ ಪೌರಸಭೆಯವರು ತಮ್ಮ ಅಭಿಪ್ರಾಯವನ್ನು ಸೂಚಿಸಬೇಕೆಂದು ಸರ್ಕಾರದವರು ಪತ್ರ ಬರೆದಿರುವುದನ್ನು ಪರಿಶೀಲಿಸಲು, ಇದೇ ೧೨ ನೇ ತಾ|| ಗುರುವಾರ ಮಧ್ಯಾಹ್ನ ೪-೩೦ ಗಂಟೆಗೆ ಪೌರಸಭೆಯ ವಿಶೇಷ ಅಧಿವೇಶನವು ನಡೆಯಲಿದೆ.

ಲಂಡನ್ನಿಗೆ ಭಾರತದ ಉಪ ಹೈಕಮೀಷನರುಗಳು

ಬ್ರಿಟನ್ನಿನಲ್ಲಿ ಭಾರತದ ಹೈಕಮೀಷನರಾಗಿ ನೇಮಿತವಾಗಿರುವ ಶ್ರೀ ಬಿ. ಜಿ. ಖೇರ್‌ರವರ ಸಂಗಡ ಶ್ರೀಗಳಾದ ಶಂಕರ್ ಮತ್ತು ಧರ್ಮವೀರ ರವರುಗಳು ಉಪ ಹೈಕಮೀಷನರುಗಳಾಗಿ ಲಂಡನ್ನಿಗೆ ಹೋಗಲಿರುವರೆಂದು ಹೇಳಲಾಗಿದೆ.

ಈಗ ಲಂಡನ್ನಿನಲ್ಲಿ ಹೈಕಮೀಷನರಾಗಿರುವ ಶ್ರೀ ವಿ. ಕೆ ಕೃಷ್ಣಮೆನೆನ್‌ರವರು ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿರುವರು. ಅವರು ಕೆಲವು ಕಾಲ ಲಂಡನ್ನಿನಲ್ಲಿಯೇ ಇರುವರೆಂದೂ, ಅನಂತರ ಅವರು ಭಾರತಕ್ಕೆ ಬಂದ ಬೇರೆ ವಿಶೇಷ ಹುದ್ದೆಯನ್ನು ಸ್ವೀಕರಿಸುವರೆಂದೂ ಹೇಳಲಾಗಿದೆ.

ಪ್ರಧಾನಿ ಪಂಡಿತ ನೆಹರೂರವರ ವಿಶೇಷ ಸಲಹೆಗಾರರಾಗಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ನೇಮಿಸಲಾಗುವುದೆಂದೂ ತಿಳಿದು ಬಂದಿದೆ

ಕೊರಿಯಾ ಬಿಕ್ಕಟ್ಟು ಬಗೆ ಹರಿಯಬಹುದು

ಕೊರಿಯಾದಲ್ಲಿ ಯುದ್ಧ ಮುಕ್ತಾಯಗೊಳಿಸಿ ಶಾಂತಿ ಏರ್ಪಡಿಸಲು ಎರಡು ಪಕ್ಷದವರೂ ಕಾತುರರಾಗಿದ್ದಾರೆಂದೂ, ಈಗ ಉದ್ಭವಿಸಿರುವ ಶಾಂತಿ ಮಾತುಕಥೆಗಳ ಬಿಕ್ಕಟ್ಟು ಶೀಘ್ರದಲ್ಲಿಯೇ ಬಗೆ ಹರಿಯಬಹುದೆಂದು ತಾವು ನಂಬಿರುವುದಾಗಿಯೂ, ಬ್ರಿಟನ್ನಿನ ರಕ್ಷಣಾ ಮಂತ್ರಿ ಫೀಲ್ಡ್ ಮಾರ್ಷಲ್ ಅಲೆಕ್ಸಾಂಡರ್‌ರವರು ಕಲ್ಕತ್ತೆಯಲ್ಲಿ ತಿಳಿಸಿರುವರು. ಅವರು ಈಗ ಕೊರಿಯಾಕ್ಕೆ ಪ್ರಯಾಣ ಮಾಡಿರುವರು.

ಚಾಮರಾಜನಗರ-ಸತ್ಯಮಂಗಲ ರೈಲ್ವೆ ನಿರ್ಮಾಣ

ಮೈಸೂರು ಪ್ರಾಂತ್ಯದ ಕಡೆ ಉಪಯೋಗವಾಗಲಿರುವ ಚಾಮರಾಜನಗರ, ಸತ್ಯಮಂಗಲ-ಕೊಯಮುತ್ತೂರು ರೈಲ್ವೆ ನಿರ್ಮಾಣವನ್ನು ೧೯೫೪-೫೫ ಮತ್ತು ೧೯೫೫-೫೬ ರಲ್ಲಿ ನಡೆಸಲಾಗುತ್ತದೆಯೆಂದು ಗೊತ್ತಾಗಿದೆ.

ಮದ್ರಾಸಿನಲ್ಲಿ ನಿಂತುಹೋಗಿರುವ ೩ ರೈಲ್ವೆ ಲೈನುಗಳು, ಬೊಂಬಾಯಿನಲ್ಲಿ ನಿಂತುಹೋಗಿರುವ ೨ ರೈಲ್ವೆ ಲೈನುಗಳನ್ನು ಪುನಃ ಪ್ರಯಾಣಕ್ಕೆ ಉಪಯೋಗಕ್ಕೆ ಅನುಕೂಲವಾಗುವಂತೆ ಪ್ರಾರಂಭಿಸಲಾಗುತ್ತದೆ.

ಸಿಲೋನಿನಲ್ಲಿ ಭಾರತೀಯರ ಸತ್ಯಾಗ್ರಹ

ಸಿಂಹಳದ್ವೀಪದಲ್ಲಿರುವ ಭಾರತೀಯರಿಗೆ ಓಟಿನ ಹಕ್ಕನ್ನು ಅಲ್ಲಿನ ಸರ್ಕಾರದವರು ನಿರಾಕರಿಸಿರುವುದನ್ನು ಪ್ರತಿಭಟಿಸಲು ಭಾರತೀಯರ ತಂಡವೊಂದು ಅಲ್ಲಿನ ಭಾರತೀಯ ಹೈಕಮೀಷನರ ಭವನದ ಮುಂದೆ ಸತ್ಯಾಗ್ರಹ ನಡೆಸಿದಾಗ, ಅವರುಗಳ ಮೇಲೆ ಪೊಲೀಸರು ಲಾಠಿ ಪ್ರಯೋಗ ಮಾಡಿದರು. ೯ ಮಂದಿಗೆ ತೀವ್ರ ಗಾಯಗಳಾಗಿ, ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಈ ವಿಚಾರದಲ್ಲಿ ಭಾರತದ ಹೈಕಮೀಷನರು ಸಿಲೋನ್ ಸರ್ಕಾರಕ್ಕೆ ತೀವ್ರ ಪ್ರತಿಭಟನೆಯನ್ನು ಸೂಚಿಸಿದ್ದಾರೆ.

ಆಹಾರ ಬೆರಿಕೆ ನಿಷೇಧ ಮಸೂದೆ

ಆಹಾರ ಪದಾರ್ಥಗಳ ಬೆರಿಕೆ ಮಾಡುವವರ ಮೇಲೆ ಉಗ್ರ ಕಾರ್ಯಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರದವರು ಶೀಘ್ರದಲ್ಲಿಯೇ ಒಂದುಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಿರುವರೆಂದು ಆರೋಗ್ಯ ಸಚಿವ ಶ್ರೀ ಅಮೃತ್‌ಕೌರ್‌ರವರು ತಿಳಿಸಿರುತ್ತಾರೆ.

ಭೂಪಟನು ಭಾರತಕ್ಕೆ ವಶ

ಪಾಕೀಸ್ತಾನದಲ್ಲಿ ದಸ್ತಗಿರಿಯಾಗಿ ಈಗ ಶಿಕ್ಷೆಗೆ ಒಳಪಟ್ಟಿರುವ ಡಕಾಯಿತ ಭೂಪಟನನ್ನು ಸೌರಾಷ್ಟ್ರ ಸರ್ಕಾರಕ್ಕೆ ವಶಪಡಿಸಲು ಪಾಕಿಸ್ತಾನ್ ಸರ್ಕಾರವು ಒಪ್ಪಿದೆಯೆಂದು ವರದಿಯಾಗಿದೆ.

ಅಹಾರಾ ಕಛೇರಿ ಮುಂದೆ ಪ್ರದರ್ಶನ

ಬೆಂಗಳೂರು ಜೂನ್ ೧೦

ಶಿವನಸಮುದ್ರ ಮತ್ತು ಶಿಂಷಾ ಕೇಂದ್ರಗಳಿಂದ ಒದಗಿಸಲಾಗುತ್ತಿರುವ ವಿದ್ಯುಚ್ಛಕ್ತಿಯ ಬಳಿಕೆಯನ್ನು ಶೇಕಡ ೫೦ ರಷ್ಟು ಸರ್ಕಾರದವರು ಕಡಿಮೆಮಾಡಿರುವುದರಿಂದ ನಗರದಲ್ಲಿ ಅನೇಕ ಕೈಗಾರಿಕೆಗಳಿಗೆ ಧಕ್ಕೆ ಉಂಟಾಗಿ, ಅನೇಕ ಕೆಲಸಗಾರರನ್ನು ತೆಗೆದುಹಾಕಲಾಗಿದೆ.

ಕೆಲಸದಿಂದ ವಜಾ ಆದ ಅನೇಕ ಬಟ್ಟೆ ಉತ್ಪಾದನೆಯ ಕೆಲಸಗಾರರು ನಿನ್ನೆ ಆಹಾರ ಕಛೇರಿಗೆ ಮೆರವಣಿಗೆಯಲ್ಲಿ ಹೊರಟು ಅಲ್ಲಿ ಪ್ರದರ್ಶನ ನಡೆಸಿದರು.

ಭಾರತದಿಂದ ವಿದೇಶಗಳಿಗೆ ನಿಯೋಗ

ಕೈಮಗ್ಗದ ಬಟ್ಟೆ ಮತ್ತು ನೂಲಿನ ರಫ್ತನ್ನು ಉತ್ತಮಗೊಳಿಸಲು ಬರ್ಮಾ, ಸಿಂಹಳ, ಮಲೆಯಾ, ಇಂಡೋನೇಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳಿಗೆ ಒಂದು ನಿಯೋಗವನ್ನು ಕಳುಹಿಸಲು ಮದರಾಸು ಸರ್ಕಾರ ನಿರ್ಧರಿಸಿದೆ.

ಜನಸಂಖ್ಯಾ ನೀತಿ ಸಮಿತಿ

ಭಾರತದಲ್ಲಿ ಜನಸಂಖ್ಯೆಯನ್ನು ಹತೋಟಿಗೆ ತರುವ ವಿಚಾರದಲ್ಲಿ ಸಲಹೆ ನೀಡಲು ಕೇಂದ್ರ ಸರ್ಕಾರವು ಶೀಘ್ರದಲ್ಲಿಯೇ ಒಂದು ಸಮಿತಿಯನ್ನು ರಚಿಸಲಿದೆಯೆಂದು ತಿಳಿದು ಬಂದಿದೆ.

ಮದರಾಸಿನಲ್ಲಿ ಆಹಾರದ ಬೆಲೆ ಇಳಿಯುತ್ತಿದೆ

ಮದರಾಸಿನಲ್ಲಿ ರೇಷನ್ ಪದ್ಧತಿ ವಜಾ ಮಾಡಿರುವುದರಿಂದ ಅಲ್ಲಿ ಆಹಾರ ಇಲಾಖೆಯಲ್ಲಿರುವ ೧೦ ಸಾವಿರ ಹಂಗಾಮಿ ನೌಕರರನ್ನು ಕೆಲಸದಿಂದ ನಿವೃತ್ತಿ ಮಾಡಲಾಗುವುದೆಂದು ಹೇಳಲಾಗಿದೆ.

ಆಹಾರದ ಮೇಲಿನ ಹತೋಟಿಯನ್ನು ರದ್ದು ಮಾಡಿದುದರ ಪರಿಣಾಮವಾಗಿ ಆಹಾರದ ಬೆಲೆ ಇಳಿಯುತ್ತಿದೆಯೆಂದೂ, ಕೊಯಮುತ್ತೂರು ಮತ್ತು ಮಧುರೆಗಳಲ್ಲಿ ಈಗಾಗಲೇ ಶೇಕಡ ೧೦ ರಷ್ಟು ಆಹಾರದ ಬೆಲೆ ಇಳಿದಿದೆಯೆಂದೂ ಹೇಳಲಾಗಿದೆ. ೪೨ ರೂ. ಇದ್ದ ಭತ್ತದ ಬೆಲೆಯು ೩೭ ರೂ. ಇಳಿದಿದೆ.

ಇದೇ ೧೫ ನೇ ತಾ|| ಈ ಗಿರುವ ರೇಷನ್ ಡಿಪೋಗಳ ಪೈಕಿ, ಮುಕ್ಕಾಲು ಭಾಗವನ್ನು ಫೇರ್ ಪ್ರೈಸ್ ಡಿಪೋಗಳನ್ನಾಗಿ ಪರಿವರ್ತಿಸಿ, ಅಲ್ಲಿ ಆಹಾರ ಪದಾರ್ಥಗಳನ್ನು ಜನರಿಗೆ ಮಾರಲಾಗುವುದು.

ಗಾಂಧೀಜಿ ಪಾತ್ರ ವಹಿಸಲು ವಿದೇಶಿಯರ ನಿರಾಕರಣೆ

ಸುಪ್ರಸಿದ್ಧ ಸಿನಿಮಾಡೈರೆಕ್ಟರ್ ಲೀಬ್ರಿಯಲ್ ಪ್ಯಾಸ್‌ಕಲ್ಲರು ತಯಾರಿಸಲಿರುವ ಗಾಂಧೀಜೀಯವರ ಜೀವನ ಚಿತ್ರದಲ್ಲಿ ಅವರ ಪಾತ್ರವನ್ನು ವಹಿಸಲು ಬ್ರಿಟನ್ನಿನ ಪ್ರಸಿದ್ಧ ನಟ ಅಲೆಕ್ ಗಿನ್ನೇಯವರು ತಾವು ಪಾತ್ರವಹಿಸಲು ಭಾರತೀಯರನ್ನೇ ಆರಿಸಬೇಕೆಂದು ಅವರು ಸಲಹೆ ನೀಡಿದ್ದಾರೆ.

ರೇಷನ್ ವಜಾ ಬಗ್ಗೆ ಸರ್ಕಾರದ ಪರಿಶೀಲನೆ

ಬೆಂಗಳೂರು ಜೂನ್ ೧೦

ಸಂಸ್ಥಾನದಲ್ಲಿ ೬ ತಿಂಗಳಿಗಾಗುವಷ್ಟು ಆಹಾರ ಧಾನ್ಯಗಳ ದಾಸ್ತಾನು (೧೧,೯೪೭೨ ಪಲ್ಲ) ಇವೆಯೆಂದು ಆಹಾರ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ತಿಳಿಸಿರುತ್ತಾರೆ. ಸರ್ಕಾರದ ಭತ್ತವನ್ನು ಮಿಲ್ಲುಗಳಲ್ಲಿ ಅಕ್ಕಿ ಮಾಡುವುದನ್ನು ಈಗ ನಿಲ್ಲಿಸಿ, ಖಾಸಗಿ ಜನರು ತಮ್ಮ ಭತ್ತವನ್ನು ಯಾವ ನಿರ್ಬಂಧವೂ ಇಲ್ಲದೆ ಅಕ್ಕಿ ಮಾಡಿಸಲು ಅವಕಾಶ ಕೊಟ್ಟಿರುವುದರಿಂದ, ಅಕ್ಕಿಯು ಹೆಚ್ಚು ಪ್ರಮಾಣದಲ್ಲಿ ಜನರಿಗೆ ದೊರಕುವಂತೆ ಆಗುವುದೆಂದೂ ಅವರು ಹೇಳಿರುತ್ತಾರೆ.

ಗೋಧಿಯ ದಾಸ್ತಾನು ಹೆಚ್ಚಾಗಿರುವುದರಿಂದ ಕಳೆದ ತಿಂಗಳು ಕೇಂದ್ರದವರು ನಿಗದಿ ಮಾಡಿದ್ದ ೫ ಸಾವಿರ ಟನ್ ಗೋಧಿಯನ್ನು ತೆಗೆದುಕೊಳ್ಳಲಿಲ್ಲ. ಕೊಡಗಿನಿಂದ ಬರಲಿರುವ ೩೦೦೦ ಟನ್ ಅಕ್ಕಿಯ ಪೈಕಿ, ಈಗಾಗಲೇ ೨೦೦೦ ಟನ್ ಬಂದಿದೆ. ಆಹಾರ ಇಲಾಖೆಯಲ್ಲಿ ಈಗಾಗಲೇ ೧೦ ಲಕ್ಷ ರೂ. ಖರ್ಚಾಗುವಷ್ಟು ಸಿಬ್ಬಂದಿಯನ್ನು ಖೋತಾ ಮಾಡಲಾಗಿದೆಯೆಂದು ಮಂತ್ರಿಗಳು ತಿಳಿಸಿರುತ್ತಾರೆ.

ಮದರಾಸಿನಂತೆ ಸಂಸ್ಥಾನದಲ್ಲೂ ಹತೋಟಿ ಮತ್ತು ಪಡಿತರಗಳನ್ನು ರದ್ದು ಮಾಡುವ ಬಗ್ಗೆ ಸರ್ಕಾರದವರು ಎಚ್ಚರಿಕೆಯಿಂದ ಪರಿಶೀಲಿಸುತ್ತಿದ್ದಾರೆಂದೂ ಮತ್ತು ಕಾಂಗ್ರೆಸ್ ಪಕ್ಷದ ಅಭಿಮತ ಪಡೆದು ಒಂದು ಸ್ಪಷ್ಟ ನಿರ್ಧಾರಕ್ಕೆ ಬರಲಿದ್ದಾರೆಂದೂ ಸಚಿವರು ಹೇಳಿರುತ್ತಾರೆ. ಮೈಸೂರು, ಬೆಂಗಳೂರು ಮತ್ತು ಕೋಲಾರ ನಗರಗಳಲ್ಲಿ ರೇಷನ್ ಸಂಪೂರ್ಣವಾಗಿ ವಜಾಮಾಡುವ ಬಗ್ಗೆ ಅಲ್ಲಿನ ಪೌರಸಭೆಗಳ ಅಭಿಪ್ರಾಯಗಳನ್ನು ಕೇಳಲಾಗಿದೆಯೆಂದೂ ಅವರು ತಿಳಿಸಿರುತ್ತಾರೆ.

ರವೆ, ಮೈದಾ ಕೊಳ್ಳಲು ನಿರ್ಬಂಧವಿಲ್ಲ

ಸಂಸ್ಥಾನದಲ್ಲಿ ಜನರು ಎಷ್ಟುಬೇಕಾದರೂ ರವೆ ಮತ್ತು ಮೈದಾಹಿಟ್ಟನ್ನು ಕೊಳ್ಳಬಹುದೆಂದು ಆಹಾರ ಸಚಿವರು ತಿಳಿಸಿರುತ್ತಾರೆ.

ಸ್ವಂತ ಉಪಯೋಗಕ್ಕಾಗಿ ಜನರು ಆಹಾರಧಾನ್ಯ ತರಬಹುದು

ಜನರು ತಮ್ಮ ಸ್ವಂತ ಉಪಯೋಗಕ್ಕಾಗಿ ಸಂಸ್ಥಾನದಿಂದ ಎಲ್ಲಿಂದ ಬೇಕಾದರೂ, ಎಷ್ಟು ಬೇಕಾದರೂ ಆಹಾರ ಧಾನ್ಯಗಳನ್ನು ತರಬಹುದೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ. ಆದರೆ ದುರಾಸೆ ಮತ್ತು ಅಧಿಕಲಾಭದ ಆಸೆಯಿಂದ ಆಹಾರಧಾನ್ಯಗಳನ್ನು ಸಂಗ್ರಹಿಸಿ ವ್ಯಾಪಾರ ಮಾಡುವವರ ಮೇಲೆ ತೀವ್ರ ಕಾರ್ಯಕ್ರಮ ಕೈಕೊಳ್ಳಲಾಗುವುದೆಂದು ಅವರು ಎಚ್ಚರಿಕೆ ಕೊಟ್ಟಿರುತ್ತಾರೆ.

೨೩ ಕೋಟಿ ರೂ. ವೆಚ್ಚದಲ್ಲಿ ಹೊಸ ರೈಲು

ಭಾರತದ ನಾನಾ ಪ್ರಾಂತ್ಯಗಳಲ್ಲಿ ಕೇಂದ್ರ ಸರ್ಕಾರವು ೨೩ ಕೋಟಿ ರೂ. ಗಳ ವೆಚ್ಚದಿಂದ ಹೊಸ ರೈಲು ಲೈನುಗಳನ್ನು ಹಾಕುವುದೆಂದು ಗೊತ್ತಾಗಿದೆ.

ಆಂಧ್ರಪ್ರಾಂತ್ಯ ರಚನೆಗೆ ನೆಹರೂರವರ ಭರವಸೆ

ಆಂಧ್ರಪ್ರಾಂತ ರಚನೆಯ ಬಗ್ಗೆ ತಾವು ಕಾತುರರಾಗಿರುವುದಾಗಿಯೂ, ಈಗಿರುವ ಒಂದೆರಡು ಅಡಚಣೆಗಳು ನಿವಾರಣೆಯಾದರೆ, ಭಾರತ ಸರ್ಕಾರದವರು ಕೂಡಲೇ ಕಾರ್ಯಕ್ರಮ ಕೈಗೊಳ್ಳುವುದಾಗಿ ಪ್ರಧಾನಿ ಪಂ|| ನೆಹರೂರವರು ಭರವಸೆ ಇತ್ತಿದ್ದಾರೆ. ಸ್ವಾಮಿ ಸೀತಾರಾಂರವರ ಉಪವಾಸದ ಬಗ್ಗೆ ಪ್ರಸ್ತಾಪಿಸುತ್ತಾ, ಅವರ ಸ್ಥಿತಿಯು ಕಳವಳವನ್ನುಂಟುಮಾಡಿದೆಯೆಂದೂ, ಏನಾದರೂ ವಿಪತ್ತು ಸಂಭವಿಸಿದರೆ ಅದರಿಂದ ದೇಶಕ್ಕೆ ಕೆಡುಕುವುಂಟಾಗುವುದೆಂದೂ, ಆದ್ದರಿಂದ ಉಪವಾಸವನ್ನು ಮುಕ್ತಾಯಮಾಡಬೇಕೆಂದೂ ನೆಹರೂರವರು ಸೂಚಿಸಿದ್ದಾರೆ.

ಪಾರ್ಲಿಮೆಂಟ್ ಸದಸ್ಯರಿಗೆ ಹಿಂದೀ ಶಿಕ್ಷಣ

ದೆಹಲಿಯ ಹಿಂದಿ ಸಂಘದವರು ಪಾರ್ಲಿಮೆಂಟ್ ಸದಸ್ಯರಿಗೆ ಹಿಂದಿ ಶಿಕ್ಷಣ ಕೊಡಲು ಒಂದುಶಾಲೆಯನ್ನು ತೆರೆದಿದ್ದಾರೆ. ಅದರ ಪ್ರಾರಂಭೋತ್ಸವವನ್ನು ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ನೆರವೇರಿಸಿದರು.

ಮೈಸೂರುನಗರಕ್ಕೆ ೬೦೦ ಹೆಚ್ಚು ಟೆಲಿಫೋನು

ಭಾರತ ಸರ್ಕಾರದವರು ಈ ವರ್ಷ ೬೪೪೦ ಟೆಲಿಫೋನ್ ಲೈನುಗಳನ್ನು ಹೆಚ್ಚಾಗಿ ಹಾಕಲು ನಿರ್ಧರಿಸಿದ್ದಾರೆ. ಅದರ ಪೈಕಿ, ಮೈಸೂರು ನಗರದಲ್ಲಿ ೬೦೦ ಮತ್ತು ಬೆಂಗಳೂರಿನಲ್ಲಿ ೩೫೦೦ ಲೈನುಗಳನ್ನು ಹಾಕಲಾಗುವುದು.

ಆರತಕ್ಷತೆ

ರಾಜಧಾನಿಯ ರಾಜಕಮಲ್ ಟಾಕೀಸ್ ಮಾಲೀಕರೂ ಮತ್ತು ಪ್ರಸಿದ್ಧ ಕಬ್ಬಿಣ ವರ್ತಕರೂ ಆದ ಶ್ರೀ ಜಿ. ಕೆ. ಡಿ. ಧರ್ಮಯ್ಯನವರು ತಮ್ಮ ಪುತ್ರ ಶ್ರೀ ಭಾನುವರ್ಮ ಮತ್ತು ಶ್ರೀಮತಿ ಕಾಂತಮ್ಮರವರುಗಳ ವಿವಾಹದ ಸಂಭಂದದಲ್ಲಿ ನಿನ್ನೆ ಸಂಜೆ ತಮ್ಮ ಸಿನಿಮಾ ಮಂದಿರದಲ್ಲಿ ಒಂದು ಆರತಕ್ಷತೆಯನ್ನು ಏರ್ಪಡಿಸಿದ್ದರು. ನಗರದ ಅನೇಕ ಗಣ್ಯಮಹನೀಯರುಗಳು ಸಮಾರಂಭಕ್ಕೆ ಆಗಮಿಸಿ ವಧೂವರರನ್ನು ಆಶೀರ್ವದಿಸಿದರು.

ವಿವಾಹಮಹೋತ್ಸವ

ಮೈಸೂರು ಪತ್ರಿಕೆಯ ಸಂಪಾದಕರೂ ಮತ್ತು ಮಾಲೀಕರೂ ಆದ ಶ್ರೀ ಟಿ. ನಾರಾಯಣರವರು ತಮ್ಮ ಪುತ್ರ ಶ್ರೀ ಟಿ. ವೆಂಕಟರಾಂರವರಿಗೆ ಮೈಸೂರಿನ ದಿವಂಗತ ಶ್ರೀ ಕಿಕ್ಕೇರಿ ನಾರಾಯಣಭಟ್ಟರ ಪುತ್ರಿ ಶ್ರೀಮತಿ ಲಕ್ಷ್ಮೀನರಸಮ್ಮನನ್ನು ತಂದುಕೊಂಡು ವಿವಾಹವನ್ನು ನಿನ್ನೆ ಹೊಯಿಸಳ ಕರ್ಣಾಟಕ ಸಂಘದ ಕಟ್ಟಡದಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು.

ಭಾರತಕ್ಕೆ ಅಮೆರಿಕದ ಸಹಾಯ

ಭಾರತದ ಅಭಿವೃದ್ಧಿಗಾಗಿ ೧ ಸಾವಿರ ಮಿಲಿಯನ್ ಡಾಲರುಗಳ ಸಹಾಯವನ್ನು ಅಮೆರಿಕವು ಮಾಡಬೇಕೆಂಬ ಒಂದು ನೂತನ ಯೋಜನೆಯನ್ನು ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿರುವ ಬೌಲ್ಸ್‌ರವರು ತಯಾರಿಸಿದ್ದಾರೆಂದೂ, ಅವರು ಸಧ್ಯದಲ್ಲಿಯೇ ಅದನ್ನು ಅಲ್ಲಿನ ಶಾಸನ ಸಭೆಗಳ ಮುಂದೆ ಇಡಲಿರುವರೆಂದೂ ತಿಳಿದುಬಂದಿದೆ.

ಪತ್ರವ್ಯವಹಾರ

ನೀರಿನ ತೊಂದರೆ

ರಾಜಧಾನಿಯ ಕನ್ನೇಗೌಡನ;ಕೊಪ್ಪಲಿನಲ್ಲಿ ಸುಮಾರು ೧೬ ಸಾವಿರ ಜನಸಂಖ್ಯೆ ಮತ್ತು ೧೦ ಸಾವಿರ ಜಾನುವಾರುಗಳು ಇದ್ದರೂ, ಇಲ್ಲಿಗೆ ಸಾಕಾದಷ್ಟು ನೀರು ಸರಬರಾಜಾಗದೆ ತುಂಬಾ ಕಷ್ಟವಾಗಿದೆ. ಇದಕ್ಕೆಲ್ಲಾ ಬೀದಿಗಳಲ್ಲಿ ನೀರಿನ ಸಬ್‌ಲೈನ್ ಇಲ್ಲದಿರುವುದೇ ಕಾರಣವಾಗಿರುತ್ತದೆ. ಈ ಬಗ್ಗೆ ೫-೬ ವರ್ಷಗಳಿಂದ ಒತ್ತಾಯ ಮಾಡುತ್ತಿದ್ದರೂ, ಪೌರಸಭೆಯವರು ಯಾವ ಕಾರ್ಯಕ್ರಮವನ್ನೂ ಕೈಗೊಂಡದಿರುವುದು ವಿಷಾದಕರ. ಈ ಪ್ರದೇಶದಿಂದ ಬರುವಷ್ಟು ವರಮಾನ ನಗರದ ಮತ್ಯಾವ ಭಾಗದಿಂದಲೂ ಬರುವುದಿಲ್ಲ. ಆದರೂ ಕೇವಲ ಸ್ವಲ್ಪ ಖರ್ಚಿನಿಂದ ನೀರಿನ ಸರಬರಾಜನ್ನು ಸರಿಪಡಿಸಲು ಇಷ್ಟು ನಿಧಾನ ಮಾಡುತ್ತಿರುವುದು ಸರಿಯಲ್ಲ. ಪೌರಸಭೆಯವರು ಕೂಡಲೇ ಸಬ್‌ಲೈನ್ ಹಾಕಿಕೊಡಬೇಕೆಂದು ಕೋರುತ್ತೇನೆ– ಎನ್. ಎಸ್. ನಾರಾಯಣಸ್ವಾಮಿ.

ಕೃಷ್ಣರಾಜಸಾಗರದಲ್ಲಿ ಫಿಲಂ ತಯಾರಿಕಾ ಕಾರ್ಖಾನೆ

ಭಾರತದಲ್ಲಿ ಫಿಲಂ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ಪರ್ಯಾಲೋಚನೆಮಾಡುತ್ತಿರುವರೆಂದೂ, ಕೃಷ್ಣರಾಜಸಾಗರದಲ್ಲಿ ಅದನ್ನು ಸ್ಥಾಪಿಸಲು ಎಲ್ಲ ಸೌಕರ್ಯಗಳಿರುವುದರಿಂದ ಅವನ್ನು ಅಲ್ಲಿ ಸಧ್ಯದಲ್ಲಿಯೇ ಸ್ಥಾಪಿಸಲಾಗುವುದೆಂದೂ ತಿಳಿದುಬಂದಿದೆ.

ಉಸ್‌ಮೇನಿಯಾ ವಿಶ್ವವಿದ್ಯಾನಿಲಯ

ಹೈದರಾಬಾದಿನ ಉಸ್‌ಮೇನಿಯಾ ವಿಶ್ವವಿದ್ಯಾನಿಲಯವನ್ನು ಕೇಂದ್ರ ಸರ್ಕಾರದ ಆಡಳಿತಕ್ಕೆ ವಹಿಸಿಕೊಂಡು, ಅದನ್ನು ಹಿಂದಿ ವಿಶ್ವವಿದ್ಯಾನಿಲಯವನ್ನಾಗಿ ಮಾಡುವುದರಿಂದ, ಅಲ್ಲಿನ ಜನರಿಗೆ ಹೆಚ್ಚು ಸೌಕರ್ಯವುಂಟಾಗುವುದೆಂದು, ಅದೂ ಅಲ್ಲದೆ ಉತ್ತರ ಮತ್ತು ದಕ್ಷಿಣ ಭಾರತಗಳಿಗೆ ಇದರಿಂದ ಹೆಚ್ಚು ಸಾಂಸ್ಕೃತಿಕ ಸೌಹಾರ್ದ ಹೆಚ್ಚುವುದೆಂದೂ ಪ್ರಧಾನಿ ಪಂ|| ನೆಹರೂರವರು ಹೈದರಾಬಾದ್ ಮುಖ್ಯಮಂತ್ರಿಗಳ ಪ್ರತಿಭಟನೆಗೆ ಉತ್ತರವಾಗಿ ತಿಳಿಸಿರುವರೆಂದು ಹೇಳಲಾಗಿದೆ.

ಬೆಂಗಳೂರಿನಲ್ಲಿ ಮೆಷಿನ್ ಟೂಲ್ ಕಾರ್ಖಾನೆ

ಮುಂದಿನವರ್ಷ ಆಗಸ್ಟ್ ತಿಂಗಳಿನಿಂದ ಬೆಂಗಳೂರಿನ ಹತ್ತಿರವಿರುವ ಜಾಲಹಳ್ಳಿಯಲ್ಲಿ ಮೆಷಿನ್‌ಟೂಲ್ ಕಾರ್ಖಾನೆಯ ಕೆಲಸವು ಪ್ರಾರಂಭವಾಗುವುದೆಂದು ಕೇಂದ್ರ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಪಾರ್ಲಿಮೆಂಟ್ ಸಭೆಯಲ್ಲಿ ತಿಳಿಸಿರುತ್ತಾರೆ. ಇದಕ್ಕೆ ೮.೩೬ ಕೋಟಿ ರೂ. ಖರ್ಚಾಗುವುದೆಂದೂ, ಜರ್ಮನಿಯಿಂದ ಯುದ್ಧ ಪರಿಹಾರ ರೂಪದಲ್ಲಿ ದೊರೆತ ೬ ಮೆಷಿನ್‌ಗಳು ಈಗಾಗಲೇ ಬಂದಿವೆಯೆಂದೂ ಅವರು ಹೇಳಿರುತ್ತಾರೆ.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಭಿಕ್ಷುಕರ ಪರಿಹಾರ ಸಮಿತಿ ಛೇರ್‌ಮನ್ನರವರ ಕಚೇರಿ, ಮೈಸೂರು

ತಾ|| 9—6—1952

ಇದೇ ಮೈಸೂರು ನಂಜರಾಜಬಹದ್ದೂರ್ ಛತ್ರದ 3ನೇ ಬ್ಲಾಕಿನಲ್ಲಿ ಇರುವ ಭಿಕ್ಷುಕರ ವಸತಿ ಗೃಹಕ್ಕೆ ಬೇಕಾಗುವ ಆಹಾರ ವಗೈರೆ ಸಾಮಾನುಗಳನ್ನು ತಾ|| 1 7–1952ರಿಂದ 30–6–1953ನೇ ಆಖೈರುವರೆವಿಗೆ ಸಪ್ಲೈ ಮಾಡತಕ್ಕ ಬಗ್ಗೆ ಸೀಲುಮಾಡಿದ ಟೆಂಡರುಗಳನ್ನು, ತಾ|| 25–6–1952ನೇ ಬುಧವಾರ 4–30 ರಿಂದ 5–00 ರ ಒಳಗೆ ಸದರಿ ಭಿಕ್ಷುಕರ ಪರಿಹಾರ ಸಮಿತಿ ಛೇರ್‌ಮನ್ನರವರಾದ ಮುನಿಸಿಪಲ್ ಪ್ರೆಸಿಡೆಂಟರವರ ಆಫೀಸಿನಲ್ಲಿ ತೆಗೆದುಕೊಳ್ಳಲಾಗುತ್ತೆ. ವಿವರಗಳನ್ನು ಸದರಿ ಛೇರ್‌ಮನ್ನರವರ ಆಫೀಸಿನಲ್ಲಿ ಪಡೆಯಬಹುದು.

A. KrishnaMurthyRao
ಛೇರ್‌ಮನ್ನರು
ಭಿಕ್ಷುಕರ ಪರಿಹಾರ ಸಮಿತಿ, ಮೈಸೂರು.

ನ್ಯೂ ಅಪೇರ ಟಾಕೀಸ್
6-6-52 ರಿಂದ ಅಮೋಘವಾದ 5ನೇ ವಾರ
ಜೂಪಿಟರ್ಸ್‌ರವರ * ರಾಣಿ * (ತಮಿಳು)
ಪಾತ್ರ:— ‡ ಭಾನುಮತಿ ‡ ಬಾಲಚಂದರ್ ‡ ವಹಾಬ್ ಕಾಶ್ಮೀರಿ ‡
13—6—52 ರಿಂದ
ಮುಂದಿನ ಬದಲಾವಣೆ
★ ವೇಲೈಕ್ಕಾರನ್ ★ (ತಮಿಳು)

ಫೋನ್ 574 (ಲಿಂಕ್) ದಿನಪತ್ರಿಕೆ ರಿ. ನ. ಎಂ. 5318

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೨—೬—೧೯೫೨ನೇ ಗುರುವಾರ [ಸಂಚಿಕೆ ೨೬೪

ಬೊಂಬಾಯಿ ನಲ್ಲಿ ಗೋಧಿ ಬೆಲೆ ಮಾತ್ರ ಇಳಿಯಿತು

ಕಾಂಗ್ರೆಸ್ ಕೆಲಸ ತೃಪ್ತಿಕರವಾಗಿ ನಡೆದಿಲ್ಲ

ಕಳೆದ ೪|| ವರ್ಷಗಳಲ್ಲಿ ಮೈಸೂರು ಕಾಂಗ್ರೆಸ್ ಸಂಸ್ಥೆಯ ಕೆಲಸವು ತೃಪ್ತಿಕರವಾಗಿ ನಡೆದಿಲ್ಲವೆಂದು ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಬೆಂಗಳೂರಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುತ್ತಾರೆ.

ಕಾಂಗ್ರೆಸ್ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕರಲ್ಲಿ ಉತ್ಸಾಹ ತುಂಬಿ ಸರ್ಕಾರದ ಕಾರ್ಯವನ್ನು ಜನರು ಮೆಚ್ಚುವಂತೆ ಮಾಡದಿದ್ದರೆ ಏನೂ ಪ್ರಯೋಜನವಿಲ್ಲ ಮತ್ತು ಮುಂದುವರಿಯಲು ಸಾಧ್ಯವಿಲ್ಲ. ಈಗ ಕಾಂಗ್ರೆಸ್ಸನ್ನು ಪುನರ್ರಚಿಸಿ, ಅದನ್ನು ಬಲಪಡಿಸಬೇಕಾದುದು ಅತ್ಯಗತ್ಯ ಎಂದು ಅವರು ಹೇಳಿರುತ್ತಾರೆ.

ಆಹಾರ ಹತೋಟಿ ಬಗ್ಗೆ ವಿಚಾರವಿನಿಮಯ

ಮದ್ರಾಸಿನಲ್ಲಿ ಆಹಾರ ನಿಯಂತ್ರಣವನ್ನು ರದ್ದುಗೊಳಿಸಿರುವ ಬಗ್ಗೆ ವಿಷಯಗ್ರಹಣ ಮಾಡಬರಲು ಆಹಾರ ಇಲಾಖಾ ಡೈರೆಕ್ಟರಾಗಿದ್ದ ಶ್ರೀ ಎನ್. ಮಾಧವರಾಯರು ಮದ್ರಾಸಿಗೆ ಹೋಗಲಿರುವರೆಂದು ಗೊತ್ತಾಗಿದೆ.

ಚೀಣಾಮೇಲೆ ಬಾಂಬು ಹಾಕಲು ಸಿದ್ಧ

ಕೊರಿಯಾದಲ್ಲಿ ಶಾಂತಿ ಸಂಧಾನವನ್ನು ಚೀಣೆಯರು ಮುರಿದು ಪುನಃ ಯುದ್ಧ ಪ್ರಾರಂಭಿಸಿದರೆ, ಚೀಣಾ ಮೇಲೆ ಬಾಂಬುಗಳನ್ನು ಹಾಕಲಾಗುವುದೆಂದು ಕೊರಿಯಾದಲ್ಲಿ ವಿಶ್ವಸಂಸ್ಥೆಯ ಶ್ರೇಷ್ಠ ದಂಡನಾಯಕ ಜ|| ಕ್ಲಾರ್ಕ್‌ರವರು ಎಚ್ಚರಿಕೆ ಇತ್ತಿರುವರು.

ಆಂಧ್ರ ಪ್ರಾಂತ್ಯಕ್ಕೆ ಮದರಾಸ್ ರಾಜಧಾನಿ ?

ಮದರಾಸ್ ನಗರವು ಆಂಧ್ರಪ್ರಾಂತಕ್ಕೇ ಸೇರಿ, ಅದರ ರಾಜಧಾನಿಯಾಗಿರಬೇಕೆಂದು ಶ್ರೀಗಳಾದ ಟಿ. ಪ್ರಕಾಶಂ, ಬಲುಸು ಸಾಂಬಮೂರ್ತಿ ಮುಂತಾದ ೪೦ ಮಂದಿ ಆಂಧ್ರನಾಯಕರುಗಳು ಸಭೆ ಸೇರಿ ತೀರ್ಮಾನಿಸಿರುತ್ತಾರೆ. ಕೂಡಲೆ ಆಂಧ್ರಪ್ರಾಂತ್ಯ ರಚನೆಯಾಗಬೇಕೆಂದೂ ಅವರು ಒತ್ತಾಯ ಮಾಡಿರುತ್ತಾರೆ.

ಉಪವಾಸ ನಿಲ್ಲಿಸುವುದಿಲ್ಲ

ಆಂಧ್ರಪ್ರಾಂತ ರಚನೆಗಾಗಿ ಕಳೆದ ೧೬ ದಿನಗಳಿಂದಲೂ ಉಪವಾಸವ್ರತ ಕೈಗೊಂಡಿರುವ ಸ್ವಾಮಿ ಸೀತಾರಾಂರವರು ಒಂದು ಹೇಳಿಕೆಯನ್ನಿತ್ತು, ಯಾವ ಒತ್ತಾಯ ಮತ್ತು ಕಾರಣಗಳಿಂದಲೂ ತಮ್ಮ ಉಪವಾಸವನ್ನು ನಿಲ್ಲಿಸುವುದಿಲ್ಲವೆಂದು ತಿಳಿಸಿರುತ್ತಾರೆ.

ಕಾಶ್ಮೀರಕ್ಕೆ ಚುನಾಯಿತ ಅಧಿಪತಿ

ಈಗಿರುವ ವಂಶಪಾರಂಪರ್ಯ ರಾಜತ್ವವನ್ನು ಕಾಶ್ಮೀರದಲ್ಲಿ ರದ್ದು ಮಾಡಿ, ಚುನಾಯಿತ ಅಧಿಪತಿಯನ್ನು ನೇಮಿಸಬೇಕೆಂದು ಅಲ್ಲಿನ ರಾಜ್ಯಾಂಗ ಸಭೆಯ ಉಪಸಮಿತಿಯು ಶಿಫಾರಸುಮಾಡಿದೆ.

ಈಗಿರುವ ಯುವರಾಜ ಕುಮಾರರೇ ಚುನಾಯಿತ ಅಧಿಕಾರಿಗಳಾಗುವರೆಂದು ಹೇಳಲಾಗಿದೆ.

ಅಶ್ಲೀಲ ಪ್ರಕಟಣೆ ಆರೋಪಣೆ

ಬೆಂಗಳೂರು ಜೂನ್ ೧೧

ಬೆಂಗಳೂರು "ಶಾಕುಂತಲಾ" ಪತ್ರಿಕೆಯ ಸಂಪಾದಕರಾದ ಶ್ರೀ ಎಂ. ರಾಮಮೂರ್ತಿಯವರು ತಮ್ಮ ಪತ್ರಿಕೆಯಲ್ಲಿ ಅಶ್ಲೀಲ ಮತ್ತು ಲೈಂಗಿಕ ವಿಚಾರಗಳ ಬಗ್ಗೆ ಲೇಖನಗಳನ್ನು ಪ್ರಕಟಿಸಿದರೆಂಬ ಆರೋಪಣೆ ಮೇಲೆ ಪೋಲೀಸರು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ್ ಕೋರ್ಟಿನಲ್ಲಿ ಅವರಮೇಲೆ ಮೊಕದ್ದಮೆ ಹೂಡಿದ್ದಾರೆ.

ಸಂಸ್ಥಾನಾಧಿಕಾರಿಗಳ ಸಭೆ

ಸಂಸ್ಥಾನಕ್ಕೆ ಸಂಬಂಧಪಟ್ಟ ನಾನಾ ವಿಷಯಗಳನ್ನು ಚರ್ಚಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳಮತ್ತು ಇಲಾಖಾಮುಖ್ಯಾಧಿಕಾರಿಗಳ ಸಭೆಯೊಂದು ಈದಿನ ಮಧ್ಯಾಹ್ನ ಅಠಾರಾ ಕಛೇರಿಯಲ್ಲಿ ನಡೆಯಿತು.

ವಿದ್ಯಾ ಕಾರ್ಯದರ್ಶಿಯವರಿಗೆ ರಜಾ

ಮೈಸೂರು ಸರ್ಕಾರದ ವಿದ್ಯಾ ಇಲಾಖೆಯ ಕಾರ್ಯದರ್ಶಿ ಶ್ರೀ ಎಂ. ಎಸ್. ನರಸಿಂಹಶಾಸ್ತ್ರಿಯವರಿಗೆ ನಿವೃತ್ತರಾಗುವ ಮುನ್ನ ೬-೧೦-೫೨ ರವರೆಗೆ ರಜಾ ಕೊಡಲಾಗಿದೆ.

ವನಸ್ಪತಿ ಹಾನಿಕರವಲ್ಲ

ಜನರು ವನಸ್ಪತಿ ತುಪ್ಪವನ್ನು ಉಪಯೋಗಿಸುವುದರಿಂದ ಆರೋಗ್ಯವು ಕೆಡುವುದೆಂದೂ, ಅದನ್ನು ನಿಷೇಧಿಸಬೇಕೆಂದೂ ಪಾರ್ಲಿಮೆಂಟಿನಲ್ಲಿ ಸದಸ್ಯರು ಒತ್ತಾಯ ಮಾಡಿದಾಗ, ಅದರ ಬಗ್ಗೆ ನಡೆಸಿದ ಸಂಶೋಧನೆಯಿಂದ ಅದು ಹಾನಿಕರವಲ್ಲವೆಂದು ವೈಜ್ಞಾನಿಗಳು ತಿಳಿಸಿರುವರೆಂದೂ ಶೇ|| ೭೫ ರಷ್ಟು ಜನರು ಅದನ್ನು ಉಪಯೋಗಿಸುತ್ತಿರುವರೆಂದೂ, ಆದ್ದರಿಂದ ಅದರ ಮೇಲೆ ಯಾವ ತಡೆ ಹಾಕುವುದು ಸೂಕ್ತವಲ್ಲವೆಂದೂ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ.

ರಕ್ಷಣಾ ವೆಚ್ಚ

ಮೊನ್ನೆಯದಿನದಿಂದ ಭಾರತ ಪಾರ್ಲಿಮೆಂಟಿನಲ್ಲಿ ದೇಶದರಕ್ಷಣಾ ವೆಚ್ಚದ ವಿಷಯವಾಗಿ ಚರ್ಚೆಯು ನಡೆಯುತ್ತಿದೆ. ಈ ಸಾಲಿನಲ್ಲಿ ೧೯೭ ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಭೆಯ ಮುಂದೆ ಮಂಡಿಸಲಾಗಿದೆ.

ಮನುಷ್ಯರು ಗಾಳಿಗೆ ಹಾರಿದರು

ಜೂನ್ ೯ನೇ ತಾರೀಖು ನ್ಯೂಯಾರ್ಕ್‌ನಲ್ಲಿ ಚಂಡಮಾರುತವೊಂದು ಉದ್ಭವಿಸಿ, ವಿದ್ಯುತ್ ವ್ಯವಸ್ಥೆಯನ್ನೆಲ್ಲಾ ಅಲ್ಲೋಲ ಕಲ್ಲೋಲ ಮಾಡಿತು.

ಈ ಚಂಡ ಮಾರುತವು ಬೀಸುವಾಗ ನಾಲ್ಕನೇ ಅಂತಸ್ತಿನಲ್ಲಿ ನಿಂತಿದ್ದ ಒಬ್ಬನನ್ನು ಕೆಳಕ್ಕೆ ತಳ್ಳಿತು. ಆತನು ಕೂಡಲೆ ಮರಣಹೊಂದಿದನು. ಇನ್ನೊಬ್ಬನು ಗಾಳಿಯ ಹೊಡೆತಕ್ಕೆ ಹಾರಿಹೋಗಿ ಬಿದ್ದು ಗಾಯಗೊಂಡನೆಂದು ಹೇಳಲಾಗಿದೆ.

ವಿಚಾರ ವಿನಿಮಯಕ್ಕೆ ತಿರಸ್ಕಾರ

ಪುನಃ ಸಭೆ ಸೇರಿ ಕೊರಿಯಾ ಶಾಂತಿ ಸಂಧಾನಗಳನ್ನು ಪ್ರಾರಂಭಿಸಬೇಕೆಂಬ ಉತ್ತರ ಕೊರಿಯಾ ಮತ್ತು ಚೈನಾ ಸಲಹೆಯನ್ನು ಪ್ರಪಂಚಸಂಸ್ಥೆ ಸೈನ್ಯವು ತಿರಸ್ಕರಿಸಿರುವುದಾಗಿ ಹೇಳಲಾಗಿದೆ.

ಕೆ. ಎಂ. ಪಿ. ಸೋಷಲಿಸ್ಟ್ ಮಿಲನಕ್ಕೆ ಕಾಂಗ್ರೆಸ್ ಅಧ್ಯಕ್ಷರ ಸ್ವಾಗತ

ಸೋಷಲಿಸ್ಟ್ ಮತು ಕಿಸಾನ್ ಮಜ್ದೂರ್ ಪ್ರಜಾಪಕ್ಷಗಳು ಏಕ್ಯವಾಗಲು ನಿರ್ಧರಿಸಿರುವುದನ್ನು ಹೈದರಾಬಾದ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಸ್ವಾಮಿರಮಾನಂದ ತೀರ್ಥರವರು ಸ್ವಾಗತಿಸಿರುವುದಾಗಿ ವರದಿಯಾಗಿದೆ.

ಸಧ್ಯದಲ್ಲಿಯೇ ಪ್ರೆಸ್ ಕಮಿಷನ್ ನೇಮಕ

ಭಾರತದ ವೃತ್ತ ಪತ್ರಿಕೆಗಳ ಮತ್ತು ಪತ್ರಿಕೋದ್ಯೋಗಿಗಳ ಸ್ಥಿತಿಗಳನ್ನು ಉತ್ತಮ ಪಡಿಸುವ ಬಗ್ಗೆ ಸಲಹೆ ನೀಡಲು ಕೆಲವು ವಾರಗಳಲ್ಲೇ ಒಂದು ಪತ್ರಿಕಾ ಸಲಹಾಸಮಿತಿಯನ್ನು ಕೇಂದ್ರ ಸರ್ಕಾರವು ರಚಿಸಲಿದೆಯೆಂದು ಕೇಂದ್ರ ಗೃಹಸಚಿವರು ತಿಳಿಸಿರುತ್ತಾರೆ.

ಕಡ್ಡಾಯವಾಗಿ ಹಿಂದೀ ಶಿಕ್ಷಣ

ಅಸ್ಸಾಂನಲ್ಲಿ ಪ್ರಾಥಮಿಕ ಶಾಲೆಗಳ ೪ ನೇ ತರಗತಿಯಿಂದ ಹಿಂದಿಯನ್ನು ಕಡ್ಡಾಯವಾಗಿ ಬೋಧಿಸಲು ಸರ್ಕಾರವು ಆಜ್ಞೆ ಮಾಡಿದೆ.

ಬೊಂಬಾಯಿನಲ್ಲಿ ಆಹಾರ ಬೆಲೆ ಇಳಿತಾಯ

ಬೊಂಬಾಯಿಯಲ್ಲಿ ಗೋಧಿ ಬೆಲೆ ಶೇಕಡ ೧೫ ರಷ್ಟು ಇಳಿಸಲಾಗಿದೆ. ಅದು ಇದೇ ೧೫ ನೇ ತಾರೀಖಿನಿಂದ ಜಾರಿಗೆ ಬರಲಿದೆ.

ಈ ಇಳಿತಾಯಕ್ಕಾಗಿ ಕೇಂದ್ರ ಸರ್ಕಾರಕ್ಕೆ ೩ ಕೋಟಿ ರೂಗಳ ವೆಚ್ಚವು ತಗಲುತ್ತದೆಯೆಂದು ಹೇಳಲಾಗಿದೆ.

ಬೊಂಬಾಯಿನಲ್ಲಿ ಅಕ್ಕಿ ಬೆಲೆಯನ್ನು ಇಳಿಸುವುದಿಲ್ಲವೆಂದು ಆಹಾರ ಮಂತ್ರಿಗಳು ಹೇಳಿರುವರು.

ಆಹಾರ ಧಾನ್ಯಗಳ ಬಹಿರಂಗ ಮಾರಾಟ

ರಾಜಾಸ್ಥಾನದಲ್ಲಿ ಆಹಾರ ಹತೋಟಿ ಜಾರಿಯಲ್ಲಿದ್ದರೂ, ಧಾನ್ಯಗಳು ಬಹಿರಂಗವಾಗಿ ಮಾರಾಟವಾಗುತ್ತಿದೆಯೆಂದೂ, ಸರ್ಕಾರಿ ಬೆಲೆಗಿಂತ ಕಡಿಮೆಯಾಗಿ ಕೊಡಲಾಗುತ್ತಿದೆಯೆಂದೂ ವರದಿಯಾಗಿದೆ.

ಭಾರತದ ರಾಷ್ಟ್ರಾಧ್ಯಕ್ಷರು

ಭಾರತದ ರಾಷ್ಟ್ರಾಧ್ಯಕ್ಷರಾದ ಡಾ|| ರಾಜೇಂದ್ರಪ್ರಸಾದರು ನಿನ್ನೆ ದೆಹಲಿಯಿಂದ ನೈನಿಟಾಲಿಗೆ ಪ್ರಯಾಣ ಬೆಳೆಸಿದರು.

ಮನೆ ಬಾಗಿಲಿಗೆ ಬಂದು ಅಕ್ಕಿ ಮಾರಾಟ

ಆಹಾರ ಧಾನ್ಯಗಳ ನಿಯಂತ್ರಣವನ್ನು ತೆಗೆದುದರ ಪರಿಣಾಮವಾಗಿ ಮದ್ರಾಸಿನಲ್ಲಿ ಆಹಾರ ಧಾನ್ಯಗಳ ಬೆಲೆಯು ಕಡಿಮೆಯಾಗಿರುವುದಲ್ಲದೆ, ಮನೆಗಳ ಬಾಗಿಲಿಗೆ ಅಕ್ಕಿಯನ್ನು ಹೊತ್ತು ತಂದು ಮಾರುತ್ತಿರುವುದಾಗಿ ಗೊತ್ತಾಗಿದೆ.

ಅತಿಥಿಗಳ ಮೇಲಿದ್ದ ನಿಷೇಧ ಆಜ್ಞೆ ವಜಾ

ಮದ್ರಾಸಿನಲ್ಲಿ ಹೊಟೇಲು ಮತ್ತು ಇತರ ಕಡೆಗಳಲ್ಲಿ ಇಷ್ಟೇ ಅತಿಥಿಗಳನ್ನು ಆಹ್ವಾನಿಸಿ ಸತ್ಕರಿಸಬೇಕೆಂಬ ನಿಷೇಧ ಆಜ್ಞೆಯನ್ನು ಈಗ ಅಲ್ಲಿ ರದ್ದುಮಾಡಲಾಗಿದೆ.

ಮದರಾಸ್ ಸಂಸ್ಥಾನದಲ್ಲಿ ಆಹಾರ ಹತೋಟಿ ರದ್ದಾಗಿದ್ದರೂ, ಆಹಾರ ಕೊರತೆ ಇರುವ ಪ್ರದೇಶಗಳಿಗೆ ಧಾನ್ಯಗಳನ್ನು ಸಾಗಿಸುವ ಬಗ್ಗೆ ರೈಲ್ವೆಯವರು ಅಗ್ರಮಾನ್ಯತೆ ಕೊಡಲಿರುವರು.

ಎಂ. ಎಸ್. ಪರೀಕ್ಷೆ

ಬೆಂಗಳೂರು ಜೂನ್ ೧೧

ಈ ವರ್ಷ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಕುಳಿತಿದ್ದ ೪೧೫೫೧ ಮಂದಿ ಪೈಕಿ ೨೩೧೪೨ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ತುಮಕೂರಿನ ಉರ್ದು ಸ್ಕೂಲಿನ ನಜೀರ್ ಅಹಮದ್‌ಗೆ ಪ್ರಥಮಸ್ಥಾನ, ಹಾಸನದ ಸಿ. ಎಸ್. ಅನಂತರಾವ್ ೨ ನೇ ಸ್ಥಾನ, ತುಮಕೂರಿನ ಬಿ. ವಿ. ಸುಂದರಂ ೩ ನೇಸ್ಥಾನ, ಮೈಸೂರಿನ ಲಕ್ಷ್ಮೀಪುರಂ ಸ್ಕೂಲಿನ ವೆಂಕಟೇಶ ಅಯ್ಯಂಗಾರ್ ೪ ನೇ ಸ್ಥಾನ ಮತ್ತು ಅದೇ ಶಾಲೆಯ ರಾಮಕೃಷ್ಣ ಉಪಾಧ್ಯಾಯ ೫ ನೇ ಸ್ಥಾನ ಗಳಿಸಿದ್ದಾರೆ.

ಅನ್ನಸತ್ಯಾಗ್ರಹದ ಮುಕ್ತಾಯ

೯ ಜನರ ದಸ್ತಗಿರಿ—ಬಿಡುಗಡೆ

ಮೈಸೂರು ಜೂನ್ ೧೧

ನಗರದ ಸೋಷಲಿಸ್ಟ್ ಪಕ್ಷದ ಅನ್ನ ಸತ್ಯಾಗ್ರಹದ ಸಂಬಂಧದಲ್ಲಿ ಶ್ರೀಗಳಾದ ಟಿ. ವಿ. ಶಾಂತಮೂರ್ತಿ, ಬಿ. ಶ್ರೀಕಂಠಪ್ಪ, ವಿಶ್ವನಾಥ್, ರಾಮದೇವ್, ಪ್ರಭಾಕರ್, ಶ್ರೀನಿವಾಸಮೂರ್ತಿ, ವೇದಾಂತಂ, ಶ್ರೀನಿವಾಸರಾವ್, ಮಿರ್ಜಾಮಹಮದ್‌ರವರು ಈದಿನ ಬೆಳಿಗ್ಗೆ ೧೧ ಗಂಟೆಯ ಸಮಯದಲ್ಲಿ ಗಾಂಧೀ ಚೌಕದ ಹತ್ತಿರವಿರುವ ಸರ್ಕಾರಿ ಉಗ್ರಾಣಕ್ಕೆ ಮೆರವಣಿಗೆಯಲ್ಲಿ ಬಂದರು. ಅಲ್ಲಿ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳಾದ ಶ್ರೀ ಕೆ.ಎಸ್. ಕೃಷ್ಣಮೂರ್ತಿಗಳು, ನಗರದ ನ್ಯಾಯಾಧೀಶರಾದ ಶ್ರೀ ಶಿವನಂಜಪ್ಪನವರು ಮತ್ತು ಇತರ ಪೋಲೀಸ್ ಅಧಿಕಾರಿಗಳು ಸತ್ಯಾಗ್ರಹಿಗಳು ಉಗ್ರಾಣದ ಬಳಿಗೆ ಹೋಗುವುದನ್ನು ತಡೆದು ಅವರನ್ನು ದಸ್ತಗಿರಿ ಮಾಡಿ, ವ್ಯಾನಿನಲ್ಲಿ ಕರೆದೊಯ್ದರು. ಕೆಲವು ನಿಮಿಷಗಳ ಕಾಲ ಸತ್ಯಾಗ್ರಹಿಗಳಿಗೂ ಮತ್ತು ಅಧಿಕಾರಿಗಳಿಗೂ ಒಳಗೆ ಪ್ರವೇಶ ಮಾಡುದ ವಿಚಾರದಲ್ಲಿ ಮಾತುಕತೆ ಆಯಿತು. ತಾವುಗಳು ಆಹಾರ ಡಿಪೋವನ್ನು ವಶಪಡಿಸಿಕೊಂಡು, ಧಾನ್ಯಗಳನ್ನು ಸುಲಭ ಬೆಲೆಯಲ್ಲಿ ಮಾಡುವುದೇ ತಮ್ಮ ಸತ್ಯಾಗ್ರಹದ ಉದ್ದೇಶವೆಂದು ತಿಳಿಸಿದರು

ಈ ಸತ್ಯಾಗ್ರಹವನ್ನು ವೀಕ್ಷಿಸಲು ಸಹಸ್ರಾರು ಜನರು ಡಿಪೋವಿನ ಹತ್ತಿರ ನೆರೆದಿದ್ದರು.

ಇತರ ಪೂರ್ವಭಾವಿಯಾಗಿ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ಏರ್ಪಾಡಾಗಿ, ಸೋಷಲಿಸ್ಟ್ ಮುಖಂಡರುಗಳಾದ ಶ್ರೀಗಳಾದ ಮೀರ್‌ನೂರ್ ಹುಸೇನ್, ಶ್ರೀಕಂಠಪ್ಪ ಮುಂತಾದವರು ಮಾತನಾಡಿ, ಸರ್ಕಾರದವರು ಆಹಾರ ಪದಾರ್ಥಗಳ ಬೆಲೆಯನ್ನು ಏರಿಸಿ, ಸಾಮಾನ್ಯ ಜನರಿಗೆ ಕಷ್ಟವನ್ನುಂಟುಮಾಡಿರುವುದನ್ನು ಖಂಡಿಸಿದರು. ಸೋಷಲಿಸ್ಟ್ ಪಕ್ಷದವರು ಕೈಗೊಂಡಿರುವ ಸತ್ಯಾಗ್ರಹವು ಸರಿಯಲ್ಲವೆಂದು ಆಹಾರ ಸಚಿವರು ಟೀಕಿಸಿರುವುದನ್ನು ಭಾಷಣಗಾರರು ಪ್ರಸ್ತಾಪಿಸಿ, ಅವರು ಆರೀತಿ ಹೇಳಿರುವುದು ಔಚಿತ್ಯವಲ್ಲವೆಂದು ತಿಳಿಸಿದರು. ಸರ್ಕಾರದವರು ಪಡಿತರ ಮತ್ತು ಹತೋಟಿಗಳನ್ನು ತೆಗೆದುಹಾಕಿದರೂ, ಈಗ ಸರ್ಕಾರದಲ್ಲಿ ದಾಸ್ತಾನುವಿರುವ ಆಹಾರಧಾನ್ಯಗಳನ್ನು ಕಡಿಮೆ ಬೆಲೆಗೆ ಮಾರಬೇಕೆಂದೂ ಒತ್ತಾಯ ಮಾಡಿದರು.

ಸರ್ಕಾರದವರು ಆಹಾರ ಹತೋಟಿಯನ್ನು ತೆಗೆದು ಹಾಕುವ ವಿಚಾರದಲ್ಲಿ ಪರಿಶೀಲನೆ ನಡೆಸುತ್ತಿರುವುದರಿಂದ, ಅವರ ಮುಂದಿನ ನೀತಿ ಏನೆಂಬುದನ್ನು ಕಾಯಬೇಕಾಗಿದೆ. ತಮ್ಮ ಪಕ್ಷದ ಸತ್ಯಾಗ್ರಹದಿಂದ ಜನತೆಯ ಅಭಿಪ್ರಾಯವೇನೆಂಬುದನ್ನು ಸರ್ಕಾರದ ಗಮನಕ್ಕೆ ತರಲಾಗಿದೆ ಇಂದಿನಿಂದ ಈ ಸತ್ಯಾಗ್ರಹವನ್ನು ನಿಲ್ಲಿಸಿ ಜಾಗರೂಕತೆಯಿಂದ ಸರ್ಕಾರದ ಹೊಸ ನೀತಿಯನ್ನು ವೀಕ್ಷಿಸಿ, ಅನಂತರ ತಮ್ಮ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸುವುದಾಗಿ ಅವರುಗಳು ತಿಳಿಸಿದರು. ಕೊನೆಯಲ್ಲಿ ಸತ್ಯಾಗ್ರಹಕ್ಕೆ ಬೆಂಬಲವಿತ್ತ ಸಾರ್ವಜನಿಕರಿಗೆ ತಮ್ಮ ವಂದನೆಯನ್ನು ಅರ್ಪಿಸಿದರು.

ದಸ್ತಗಿರಿ ಮಾಡಲ್ಪಟ್ಟ ೯ ಜನರನ್ನು ಮಧ್ಯಾಹ್ನ ಬಿಡುಗಡೆ ಮಾಡಲಾಯಿತು.

ಕೇಂದ್ರ ಆಹಾರ ಸಚಿವರಿಗೆ ಆಹ್ವಾನ

ಮೈಸೂರು ಜೂನ್ ೧೧

ನಗರದ ರೇಷನ್‌ದಾರರ ಸಂಘದ ಸಭೆಯು ನಿನ್ನೆಯದಿನ ಡಾ|| ಬಿ. ಜಿ. ದಾಸ್‌ರವರ ಅಧ್ಯಕ್ಷತೆಯಲ್ಲಿ ನಡೆದು ಸಂಸ್ಥಾನದ ಆಹಾರ ನೀತಿಯನ್ನು ಪರಿಶೀಲಿಸಿತು. ಕೇಂದ್ರದ ಆಹಾರ ಸಚಿವ ಕಿದ್ವಾಯಿಯವರು ಆದಷ್ಟು ಬೇಗನೆ ಮೈಸೂರಿಗೆ ದಯಮಾಡಿಸಿ ಇಲ್ಲಿನ ಆಹಾರ ಸ್ಥಿತಿಗಳನ್ನು ಪರಿಶೀಲಿಸಬೇಕೆಂದು ಕೋರುವ ತಂತಿಯೊಂದನ್ನು ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಮೈಸೂರು ಕಾಂಗ್ರೆಸ್ಸಿನ ನೂತನ ಕಾರ್ಯದರ್ಶಿ

ಬೆಂಗಳೂರು ಜೂನ್ ೧೧

ಶ್ರೀ ಎಲ್. ಎಸ್. ವೆಂಕಾಜಿರಾಯರನ್ನು ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯನ್ನಾಗಿಯೂ, ಶ್ರೀ ಎಸ್. ರುದ್ರಪ್ಪನವರನ್ನು ಉಪಾಧ್ಯಕ್ಷರನ್ನಾಗಿಯೂ ಮತ್ತು ಶ್ರೀ ಆರ್. ಸುಬ್ಬಣ್ಣನವರನ್ನು ಸಹ ಕಾರ್ಯದರ್ಶಿ ಮತ್ತು ಖಜಾಂಚಿಯನ್ನಾಗಿಯೂ ಅಧ್ಯಕ್ಷ ಶ್ರೀ ಹೆಚ್.ಸಿ. ದಾಸಪ್ಪನವರು ನೇಮಿಸಿದ್ದಾರೆ.

ಕಾರ್ಯ ಕಾರಿ ಸಮಿತಿಗೆ ಶ್ರೀಗಳಾದ ಕೆ. ಹನುಮಂತಯ್ಯ, ಟಿ. ಸಿದ್ದಲಿಂಗಯ್ಯ, ಟಿ. ಸುಬ್ರಮಣ್ಯಂ, ಮತ್ತು ಆರ್. ಚೆನ್ನಿಗರಾಮಯ್ಯನವರನ್ನು ಸದಸ್ಯರನ್ನಾಗಿ ನಾಮಕರಣ ಮಾಡಲಾಗಿದೆ.

ಶಾಸನಸಭಾ ನಾಯಕರು

ಮೈಸೂರು ಕಿರಿಯ ಶಾಸನಸಭೆಗೆ ಶ್ರೀ ಕೆ. ಹನುಮಂತಯ್ಯನವರು, ಹಿರಿಯ ಶಾಸನಸಭೆಗೆ ಶ್ರೀ ಟಿ. ಸಿದ್ದಲಿಂಗಯ್ಯನವರು ಸಭಾ ನಾಯಕರಾಗಿರುವರು.

ಹೋಮಿ ಮೋದಿಯವರು ಅಮೆರಿಕದ ರಾಯಭಾರಿ

ಉತ್ತರ ಪ್ರದೇಶದ ಮಾಜಿ ಗವರ್ನರರಾದ ಶ್ರೀ ಹೋಮಿ ಮೋದಿಯವರನ್ನು ಅಮೆರಿಕದಲ್ಲಿ ಭಾರತದ ರಾಯಭಾರಿಯನ್ನಾಗಿ ನೇಮಿಸಲಾಗುವುದೆಂದು ಹೇಳಲಾಗಿದೆ.

ಬೆಂಗಳೂರಿನಲ್ಲಿ ಶಾಸನಸಭಾ ಅಧಿವೇಶನ

ಬೆಂಗಳೂರು ಜೂನ್ ೧೧

ಹೊಸ ಉಭಯ ಶಾಸನಸಭೆಗಳ ಅಧಿವೇಶನವು ಇಲ್ಲಿ ಜೂನ್ ೧೮ನೇ ತಾರೀಖು ಸೇರುತ್ತದೆ.

ಕಿರಿಯ ಶಾಸನಸಭೆಯು ೨೧ ದಿನ ಕಾಲ ನಡೆಯುತ್ತದೆ. ಮೊದಲನೆ ದಿನ ಸದಸ್ಯರ ಪ್ರಮಾಣ ಸ್ವೀಕಾರ, ಸ್ಪೀಕರರ ಆಯ್ಕೆ ನಡೆಯುವುದು. ಜೂನ್ ೧೯ ನೇ ತಾರೀಖು ಉಭಯ ಸಭೆಗಳ ಸಂಯುಕ್ತ ಅಧಿವೇಶನ ಪ್ರಾರಂಭವಾಗುವುದು. ಆಗ ಶ್ರೀಮನ್ಮಹಾರಾಜರು ಸಭೆಯನ್ನುದ್ದೇಶಿಸಿ ಭಾಷಣ ಮಾಡುವರು. ಅವರ ಭಾಷಣವಾದ ಮೇಲೆ ೨೧ ನೇ ತಾರೀಖಿನಿಂದ ಚರ್ಚೆ ನಡೆಯುವುದು.

ಕಾರ್ಯಕ್ರಮದ ಪಟ್ಟಿಯ ಪ್ರಕಾರ ೩೦೦ ಪ್ರಶ್ನೆಗಳು ೮೦ ಖಾಸಗಿ ನಿರ್ಣಯಗಳು ಚರ್ಚೆಗೆ ಬರಲಿವೆ. ಜೂನ್ ೩೦ ನೇ ತಾರೀಖು ೫೨-೫೩ ನೇ ಸಾಲಿನ ಬಡ್ಜೆಟ್ ಮಂಡಿಸಲಾಗುತ್ತದೆ. ಅದರ ಮೇಲೆ ಜೂನ್ ೩೧ ನೇ ತಾ|| ನಿಂದ ೬ ದಿನ ಚರ್ಚೆ ನಡೆಯುತ್ತದೆ.

ಮೈಸೂರಿನವರನ್ನು ಕರ್ನಾಟಕದವರು ಒಲಿಸಿಕೊಳ್ಳಬೇಕು

ಕನ್ನಡ ನಾಡಾದ ಮೈಸೂರು ಈಗಾಗಲೇ ಒಂದು ಅಸ್ತಿತ್ವವನ್ನು ಹೊಂದಿರುವುದರಿಂದ ಇತರ ಕನ್ನಡ ಪ್ರಾಂತ್ಯಗಳು ಅದರೊಡನೆ ಸೇರಬೇಕು ಈ ರೀತಿ ಕರ್ನಾಟಕ ಏಕೀಕರಣವನ್ನು ಸಾಧಿಸಬೇಕಾದರೆ ಪ್ರಜಾಪ್ರಭುತ್ವ ಯೋಗ್ಯವಾದ ಘಟನಾತ್ಮ ರೀತಿಯಿಂದ ನಡೆಯಬೇಕೇ ಹೊರತು ದೆಹಲಿಯಿಂದ ಮೈಸೂರಿನ ಮೇಲೆ ಒತ್ತಾಯ ತರುವುದರಲ್ಲಿ ಅರ್ಥವಿಲ್ಲ.

ಕರ್ನಾಟಕದವರು ತಮ್ಮ ಹೊಸ ಪ್ರಾಂತ್ಯರಚನೆಗಾಗಿ ಮೈಸೂರಿನವರನ್ನು ಬಳಿಸಿಕೊಳ್ಳಬೇಕು ಎಂದು ಬೊಂಬಾಯಿನ ವ್ಯವಸಾಯ ಸಚಿವ ಶ್ರೀ ಕೆ. ಎಫ್. ಪಾಟೀಲೀರವರು ತಿಳಿಸಿರುತ್ತಾರೆ.

ರೈಲಿನಲ್ಲಿ ಟಿಕೆಟ್ ಇಲ್ಲದೆ ೭೯ ಲಕ್ಷ ಜನರ ಪ್ರಯಾಣ

ಕಳೆದ ವರ್ಷ ಭಾರತದ ರೈಲ್ವೆಗಳಲ್ಲಿ ಒಟ್ಟು ೭೯ ಲಕ್ಷ ಜನರು ಟಿಕೇಟ್ ಇಲ್ಲದೆ ಪ್ರಯಾಣ ಮಾಡಿದರೆಂದು ಪಾರ್ಲಿಮೆಂಟನ್ನು ರೈಲ್ವೆ ಸಚಿವರು ತಿಳಿಸಿರುತ್ತಾರೆ. ಇಂತಹವರಿಂದ ದಂಡ ವಸೂಲಾದ ಮೊಬಲಗು ೧೬.೫ ಲಕ್ಷ ರೂಪಾಯಿ.

ನ್ಯೂ ಅಪೇರ ಟಾಕೀಸ್
13-6-52 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ಶ್ರೀನಲ್ಪಿ ಪ್ರೊಡಕ್ಷನ್ಸ್‌ರವರ....
★ ವೇಲೈಕ್ಕಾರನ್ ★
(ತಮಿಳು)
ಪಾತ್ರ:—ಟಿ. ಆರ್. ಮಹಾಲಿಂಗಂ, ಟಿ. ಎಸ್. ಬಾಲಯ್ಯ, ಮಾಧುರಿದೇವಿ, ಎಸ್. ವರಲಕ್ಷ್ಮಿ, ದ್ರೌಪದಿ.

ಅಂದವಾದ ಮುದ್ರಣಕ್ಕೆ
ಕರ್ನಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ಪಿ. ಆರ್. ಅಂತ್ ಬ್ರದರ್ಸ್, ವರ್ಕ್‌ಷಾಪ್)
For
NEAT AND PROMPT PRINTING
Contact:
CARNATAK PRINTERS
GANDHI SQUARE, MYSORE
Phone 892 or 574

ಉಡ್‌ಲ್ಯಾಂಡ್ಸ್
13—6—52 ರಿಂದ
ಅಮೋಘವಾದ 2ನೇ ವಾರ
ಸಂತೋಷಿಯವರ—
ಶಿನ್‌ಶಿನಾಕಿ-ಬೂಬ್ಲಾಬೂ
(ಹಿಂದಿ)
ಪಾತ್ರ:—ರೆಹನಾ, ರಂಜನ್, ವೀರಾ
ಸಂಗೀತ:— ಶ್ರೀ C ರಾಮಚಂದ್ರ

ಫೋನ್ 574 (ಲಿಂಕ್) ದಿನಪತ್ರಿಕೆ ರಿ. ನ. ಎಂ. 5318

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೩—೬—೧೯೫೨ನೇ ಶುಕ್ರವಾರ [ಸಂಚಿಕೆ ೨೭೯

ಆಹಾರಧಾನ್ಯಗಳ ಸಾಗಾಣಿಕೆ, ಮಾರಾಟ ನಿರ್ಬಂಧ ರದ್ದು

ಆಹಾರ ಧಾನ್ಯಗಳ ಸಾಗಾಣಿಕೆ ಮಾರಾಟ ನಿರ್ಬಂಧ ರದ್ದು

ಮೈಸೂರು ಜೂನ್ ೧೨

ಮದರಾಸ್ ಸಂಸ್ಥಾನದಲ್ಲಿ ಪಡಿತರ ಪದ್ಧತಿಯನ್ನು ವಜಾ ಮಾಡಿರುವುದರಿಂದ ಈಗ ಒಂದು ನೂತನ ಪರಿಸ್ಥಿತಿ ಒದಗಿದೆ. ಆದ್ದರಿಂದ ಮೈಸೂರು ಸಂಸ್ಥಾನದಲ್ಲೂ ಪಡಿತರ ಪದ್ಧತಿಯನ್ನು ವಜಾ ಮಾಡಬೇಕೇ ಎಂಬ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ಸೂಚಿಸಬೇಕು ಎಂದು ಸರ್ಕಾರದವರು ಕಳುಹಿಸಿರುವ ಪತ್ರವನ್ನು ಪರಿಶೀಲಿಸಲು, ಈದಿನ ಸಂಜೆ ಪೌರಸಭೆಯ ವಿಶೇಷ ಅಧಿವೇಶನವು ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಅಧ್ಯಕ್ಷರು ಸಭೆಯನ್ನು ಕರೆದಿರುವ ಉದ್ದೇಶವನ್ನು ವಿವರಿಸಿ, ಮದರಾಸಿನಲ್ಲಿ ರಾಜಾಜಿಯವರು ಪ್ರಾರಂಭಿಸಿರುವ ನೂತನ ಆಹಾರ ನೀತಿ ದೇಶದ ಎಲ್ಲ ಪಕ್ಷದವರ ಬೆಂಬಲ ಮತ್ತು ಸ್ವಾಗತ ದೊರೆತಿದೆಯೆಂದೂ, ಈಗ ನಮ್ಮ ಸಂಸ್ಥಾನದಲ್ಲೂ ಸಹ ಅದರಿಂದ ಒಂದು ಹೊಸ ಪರಿಸ್ಥಿತಿ ಉಂಟಾಗಿರುವುದರಿಂದ, ಅದನ್ನು ತಾವು ಜಾಗರೂಕತೆಯಿಂದ ಪರಿಶೀಲಿಸಿ, ತಮ್ಮ ಅಭಿಪ್ರಾಯಗಳನ್ನು ಸೂಚಿಸಬೇಕೆಂದೂ ಹೇಳಿದರು.

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು, ಮೊದಲು ಮಾತನಾಡಿ, ಇಂತಹ ಮುಖ್ಯವಾದ ವಿಷಯದಲ್ಲಿ ಪೂರ್ವಭಾವಿಯಾಗಿ ತಮ್ಮ ಅಭಿಪ್ರಾಯವನ್ನು ಸರ್ಕಾರದವರು ಕೇಳಿರುವುದಕ್ಕೆ ಅವರನ್ನು ಅಭಿನಂದಿಸಬೇಕೆಂದು ತಿಳಿಸಿ, ಕೆಳಗೆಕಂಡ ನಿರ್ಣಯಗಳನ್ನು ಮಂಡಿಸಿದರು.

ಸಂಸ್ಥಾನದಲ್ಲಿ ಈಗ ಆಹಾರ ಧಾನ್ಯಗಳ ಮೇಲೆ ಇರುವ ಸಾಗಾಣಿಕೆ ಮತ್ತು ಮಾರಾಟಗಳ ಪ್ರತಿಬಂಧಕವನ್ನು ತೆಗೆದು ಹಾಕಬೇಕು. ಆದರೆ ರೇಷನ್ ಕಾರ್ಡುದಾರರುಗಳಿಗೆ ಸಾಕಷ್ಟು ಆಹಾರ ಧಾನ್ಯಗಳನ್ನು ಫೇರ್‌ಪ್ರೈಸ್ ಡಿಪೋಗಳ ಮೂಲಕ ಮಾರಾಟಮಾಡಬೇಕು.—

ಶ್ರೀ ಸೀತಾರಾಮಯ್ಯನವರು ತಮ್ಮ ಭಾಷಣವನ್ನು ಮುಂದುವರಿಸಿ, ೧೯೪೩ರಲ್ಲಿ ಪಡಿತರ ಪದ್ಧತಿಯನ್ನು ಜಾರಿಗೆತಂದ ಕಾರಣವನ್ನು ವಿವರಿಸಿದರು. ಇದರಿಂದ ಅನೇಕ ಅನಾನುಕೂಲಗಳು ಮತ್ತು ಅನುಕೂಲಗಳೂ ಒದಗಿರುತ್ತವೆ. ಹತೋಟಿ ಎಲ್ಲಿಯವರೆಗೆ ಇರುವುದೋ ಅಲ್ಲಿಯವರೆಗೆ ಅನಿವಾರ್ಯಗಳು ಇರುತ್ತವೆ. ಆರ್ಥಿಕ ದೃಷ್ಟಿಯಿಂದ ದೇಶದಲ್ಲಿ ವ್ಯಾಪಾರಕ್ಕೆ ಯಾವ ಅಡಚಣೆಯೂ ಇರಕೂಡದು ಈಗ ಕಂಟ್ರೋಲ್ ಮತ್ತು ಇತರ ಅಡಚಣೆಗಳನ್ನು ರೇಷನ್ ಇಲ್ಲದ ಪ್ರದೇಶಗಳಲ್ಲಿ ಸರ್ಕಾರದವರು ತೆಗೆದುಹಾಕಿರುವುದರಿಂದ ಜನಗಳ ಕಷ್ಟವು ಕಡಿಮೆಯಾಗಿದೆ.

ರೇಷನ್ ಪ್ರದೇಶಗಳಲ್ಲೂ ಅಕ್ಕಿಯು ಹೆಚ್ಚಾಗಿ ಸಿಕ್ಕುತ್ತಿದೆ. ಸರ್ಕಾರಿ ಡಿಪೋಗಳಲ್ಲಿ ಕೊಳ್ಳುವುದರ ಪ್ರಮಾಣ ಕಡಿಮೆಯಾಗಿದೆ ಈಗ ಹತೋಟಿ ಇರಬೇಕೇ ಬೇಡವೇ ಎಂದು ಜನರ ಅಭಿಪ್ರಾಯ ಕೇಳಿದರೆ ಶೇಕಡ ೯೫ ರಷ್ಟು ಬೇಡವೆಂದು ಹೇಳುವರು ಆದ್ದರಿಂದ ಈ ಅಡಚಣೆಗಳನ್ನು ತೆಗೆದುಹಾಕಿ, ಸಾಮಾನ್ಯ ಜನರಿಗೆ ದೊಡ್ಡ ನಗರಗಳಲ್ಲಿ ಆಹಾರಪದಾರ್ಥ ಸುಲಭವಾಗಿ ಸಿಕ್ಕುವಂತೆ ಫೇರ್‌ಪ್ರೈಸ್ ಡಿಪೋಗಳನ್ನು ತೆರೆಯಬೇಕೆಂದು ಅವರು ತಿಳಿಸಿದರು. ನಿರ್ಣಯವನ್ನು ಶ್ರೀ ಚೌಡಯ್ಯನವರು ಅನುಮೋದಿಸಿದರು.

ಜನಾಬ್ ಮೀರ್‌ನೂರ್ ಹುಸೇನರವರು ಮಾತನಾಡಿ ಈಗ ಪಡಿತರ ಮತ್ತು ಹತೋಟಿಗಳನ್ನು ರದ್ದುಮಾಡಿದಪಕ್ಷದಲ್ಲಿ ವರ್ತಕರು ಲಾಭದ ಆಸೆಯಿಂದ ಎಲ್ಲ ಧಾನ್ಯಗಳನ್ನು ಸಂಗ್ರಹಿಸಿ, ಹೆಚ್ಚಿಗೆ ಬೆಲೆಗೆ ಮಾರುವ ಪರಿಸ್ಥಿತಿ ಒದಗಬಹುದು. ಅದನ್ನು ತಡೆಗಟ್ಟಲು ಸರ್ಕಾರದವರೇ ಸ್ವಲ್ಪ ಹಣ ನಷ್ಟವಾದರೂ ತಾವೇ ಆಹಾರಧಾನ್ಯಗಳನ್ನು ಡಿಪೋಗಳಮೂಲಕ ಮಾರಬೇಕೆಂದು ತಿಳಿಸಿದರು. ಕೇಂದ್ರದವರು ಸಬ್ಸಿಡಿಯನ್ನು ವಜಾಮಾಡಿರುವುದರಿಂದ ಸರ್ಕಾರವು ಆಹಾರಧಾನ್ಯಗಳ ಖರಿದಿನಿಂದ ತಮಗೆ ೩೦ ಲಕ್ಷ ರೂ. ನಷ್ಟವಾಗುತ್ತದೆಯೆಂದೂ ತಿಳಿಸಿದ್ದಾರೆ. ಈಗ ಅದನ್ನು ತಪ್ಪಿಸಿಕೊಳ್ಳಲು ಕಂಟ್ರೋಲ್ ಪದ್ಧತಿಯನ್ನೇ ವಜಾಮಾಡುವುದಾಗಿ ತಿಳಿಸಿರುತ್ತಾರೆ. ನಗರದ ಜನಗಳಮೇಲಿರುವ ಜವಾಬ್ದಾರಿಯನ್ನು ಸರ್ಕಾರದವರು ಏಕಾಏಕೀ ತಪ್ಪಿಸಿಕೊಳ್ಳುವುದು ಸರಿಯಲ್ಲ. ಸರ್ಕಾರದವರು ಕಂಟ್ರೋಲ್ ತೆಗೆದುಹಾಕಿದರೂ, ತಾವು ವರ್ತಕರಿಗೆ ಪ್ರತಿಸ್ಪರ್ಧಿಯಾಗಿ, ಕಮ್ಮಿದರದಲ್ಲಿ ಆಹಾರಧಾನ್ಯಗಳನ್ನು ಮಾರಬೇಕೆಂದು ತಿಳಿಸಿದರು.

ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಮಾತನಾಡಿ, ಈಗ ಸಭೆಯ ಮುಂದೆ ಇರುವುದು ಪಡಿತರ ರದ್ದಾಗಬೇಕೆ ಅಥವಾ ಬೇಡವೇ ಎಂಬುದು ಅದನ್ನುಬಿಟ್ಟು ಹತೋಟಿ ಮುಂತಾದ ವಿಷಯಗಳನ್ನು ಪರಿಶೀಲಿಸುವುದು ಸರಿಯಲ್ಲ ಎಂದು ಹೇಳಿದರು. ಈಗ ಸರ್ಕಾರದವರಲ್ಲಿ ೧೦ ಲಕ್ಷ ಪಲ್ಲ ಆಹಾರ ಧಾನ್ಯಗಳು ದಾಸ್ತಾನು ಇರುವುದರಿಂದ ಸಂಸ್ಥಾನದಲ್ಲಿ ಪಡಿತರ ರದ್ದುಮಾಡಿದರೆ ಯಾವ ವಿಪತ್ತೂ ಸಂಭವಿಸುವುದಿಲ್ಲವೆಂದೂ, ಆದ್ದರಿಂದ ಅದನ್ನು ರದ್ದುಮಾಡಬೇಕೆಂದೂ, ಅಭಿಪ್ರಾಯಪಟ್ಟರು.

ಶ್ರೀಗಳಾದ ಬಿ. ಕೆ. ರಾಮಕೃಷ್ಣಯ್ಯ ಎ. ವೆಂಕಟೇಶಯ್ಯ, ಪಿ. ಡಿ. ಕೃಷ್ಣಸ್ವಾಮಿ, ಬಿ. ಜಿ. ದಾಸ್ ಮುಂತಾದವರು ಸಹ ಮಾತನಾಡಿ, ದೇಶದಲ್ಲಿ ಕೂಡಲೇ ಪಡಿತರ ಪದ್ಧತಿ ರದ್ದಾಗಿ, ಜನರು ಯಾವ ಕಿರುಕಳವೂ ಇಲ್ಲದೆ ಆಹಾರಧಾನ್ಯಗಳನ್ನು ಕೊಳ್ಳಲು ಅನುಕೂಲವಾಗಬೇಕೆಂದು ತಿಳಿಸಿದರು.

ಶ್ರೀ ಎ. ವೆಂಕಟೇಶಯ್ಯನವರು ಮಂಡಿಸಿದ ಈ ತಿದ್ದುಪಡಿನಿರ್ಣಯವು ಬಹುಮತದಿಂದ ಅಂಗೀಕೃತವಾಯಿತು:—

ಸಂಸ್ಥಾನದೊಳಗೆ ಸಾಗಾಣಿಕೆ ಮತ್ತು ಆಹಾರಧಾನ್ಯಗಳ ಮಾರಾಟದ ಬಗ್ಗೆ ಇರುವ ಎಲ್ಲ ನಿರ್ಬಂಧಗಳನ್ನು ತೆಗೆದುಹಾಕಿ, ಆಹಾರಧಾನ್ಯಗಳು ಬಹಿರಂಗವಾಗಿ ಮಾರಾಟವಾಗುವಂತೆ ಮಾಡಬೇಕು ಆದರೆ ಸರ್ಕಾರವು ಸಾಕಷ್ಟು ಆಹಾರ ಧಾನ್ಯಗಳ ದಾಸ್ತಾನು ಇಟ್ಟುಕೊಂಡು ಅವುಗಳನ್ನು ಫೇರ್‌ಪ್ರೈಸ್ ಡಿಪೋಗಳ ಮೂಲಕ ಹಂಚಬೇಕು.

ಪ್ರಭಾ ★ 3ನೇ ಮತ್ತು ಕಡೇ ವಾರ
13—6—52 ರಿಂದ
ಪ್ರತಿಯೊಬ್ಬರೂ ತಪ್ಪದೆ ನೋಡಬೇಕಾದ ಚಿತ್ರ
ಅ ಮ ರ ಭೂ ಪಾ ಳಿ
ಮುಂದಿನ ಬದಲಾವಣೆ:—
ನವಕೇತನ್‌ರವರ 'ಆಂಧಿಯಾನ್'
—:MORNING SHOWS:—
From 13-6-52 for 3 days
BLANCHE FURY
(Technicolour)

ರಾಜಕಮಲ್ ಟಾಕೀಸ್, ಮೈಸೂರು
13-6-52ರಿಂದ ಅಮೋಘ ಪ್ರಾರಂಭ
ಪ್ರತಿದಿನ ೩ ಆಟಗಳು
ಮ್ಯಾಟಿನಿ 2-30ಕ್ಕೆ. 1ನೇ ಆಟ 6-15 ಘಂ. 2ನೇ ಆಟ 10 ಘಂ.
ನ ನ್ನ ತಂ ಗಿ
(ತಮಿಳು)
ಭೂಮಿಕೆಯಲ್ಲಿ:– ಮಾಧುರಿದೇವಿ, ಎಂ. ಜಿ. ರಾಮಚಂದ್ರನ್, ಡಿ. ಎಸ್. ಗೋವಿಂದನ್, ಮುಂತಾದವರು.

ಪವರ್‌ಲೂಂ ಕೆಲಸಗಾರರ ತೊಂದರೆ

ರಾಜಧಾನಿಯಲ್ಲಿ ಪವರ್‌ಲೂಂ ಕಾರ್ಖಾನೆಗಳಿದ್ದು, ಅದರಲ್ಲಿ ಸುಮಾರು ೩ ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಇತ್ತೀಚಿಗೆ ಒಟ್ಟೆ ಬೆಲೆಯು ಇಳಿಮುಖವಾದುದರಿಂದ ಸುಮಾರು ೪೦ ಕಾರ್ಖಾನೆಗಳಲ್ಲಿ ಕೆಲಸ ನಿಂತುಹೋಗಿ ೭೦೦-೪೦೦ ಕಾರ್ಮಿಕರಿಗೆ ಕೆಲಸವಿಲ್ಲದೆ ಕಷ್ಟಪಡುತ್ತಿದ್ದಾರೆ. ಕಾರ್ಖಾನೆಯ ಮಾಲೀಕರುಗಳೂ ಮತ್ತು ಸರ್ಕಾರದವರು ಕಾರ್ಮಿಕರ ಹಿತದೃಷ್ಟಿಯನ್ನು ಗಮನಿಸಿ, ಅವರ ಕುಂದುಕೊರತೆಗಳನ್ನು ನಿವಾರಿಸಬೇಕು ಎಂದು ನಗರದ ಪವರಲೂಂ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎಂ. ಎಸ್. ಶಿವಲಿಂಗಯ್ಯನವರು ಮನವಿ ಮಾಡಿದ್ದಾರೆ.

ಪರ್ಷಿಯಾ ಸರ್ಕಾರ ಉರುಳಿಸಲು ಪಿತೂರಿ

ಪರ್ಷಿಯಾದ ಪ್ರಧಾನಿ ಮುಸಾದಿಕ್ ಸರ್ಕಾರವನ್ನು ಉರುಳಿಸಲು ಯತ್ನಿಸಿದ ಪಿತೂರಿ ಸಂಚಿಕೆಯು ಬಹಿರಂಗವಾಗಿ, ಈಗ ೫ ಜನ ಮುಖ್ಯ ಸೈನ್ಯಾಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿದೆ.

ಮದರಾಸಿನಲ್ಲಿ ಇನಾಮುಗಳ ವಶ

ಮುಂದಿನ ತಿಂಗಳಿನಿಂದ ಮದ್ರಾಸ್ ಸಂಸ್ಥಾನದಲ್ಲಿರುವ ಇನಾಮು ಜಮೀನುಗಳ ಪೈಕಿ, ೨೫೦ ನ್ನು ಸರ್ಕಾರವು ತನ್ನ ವಶಕ್ಕೆ ಒಳಪಡಿಸಿಕೊಳ್ಳಲು ನಿರ್ಧರಿಸಿದೆ.

ಕಬ್ಬಿಣ ತಯಾರಿಕೆಗೆ ವಿಶ್ವಬ್ಯಾಂಕಿನಿಂದ ಸಾಲ

ಭಾರತದಲ್ಲಿ ಕಬ್ಬಿಣತಯಾರಿಕೆಯನ್ನು ವಿಶೇಷವಾಗಿ ಹೆಚ್ಚಿಸಲು, ವಿಶ್ವಬ್ಯಾಂಕಿನಿಂದ ಸಾಲಪಡೆಯಲು ಕೇಂದ್ರ ಸರ್ಕಾರದವರು ಯೋಚಿಸುತ್ತಿರುವರೆಂದೂ, ಮಧ್ಯದಲ್ಲಿಯೇ ಆ ಬ್ಯಾಂಕಿನ ಪ್ರವೀಣರು ಭಾರತಕ್ಕೆ ಬರಲಿರುವರೆಂದೂ ಹೇಳಲಾಗಿದೆ.

ದೆಹಲಿಯಲ್ಲಿ ನೂತನ ಸರ್ಕಾರಿ ಭವನ

೭೯ ಲಕ್ಷ ರೂ. ವೆಚ್ಚದಿಂದ ದೆಹಲಿಯಲ್ಲಿ ನೂತನ ಸರ್ಕಾರಿ ಕಛೇರಿಗಳ ಭವನವೊಂದನ್ನು ಕಟ್ಟಲಾಗುವುದೆಂದು ಹೇಳಲಾಗಿದೆ.

ಭಾರತದ ಸ್ವಾತಂತ್ರ್ಯ ಚಳುವಳಿ ಇತಿಹಾಸ

ಭಾರತದ ಚಳುವಳಿ ಇತಿಹಾಸವನ್ನು ಪ್ರಕಟಿಸುವ ಬಗ್ಗೆ ಒಂದು ಉನ್ನತಾಧಿಕಾರದ ಸಮಿತಿಯನ್ನು ರಚಿಸಲಾಗುವುದೆಂದು ಕೇಂದ್ರ ವಿದ್ಯಾಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ವಿಚಿತ್ರ ಮಗು ಜನನ

ನಾಲ್ಕು ಭುಜ ಮತ್ತು ನಾಲ್ಕು ಕಾಲುಗಳುಳ್ಳ ಗಂಡು ಮಗುವೊಂದು ಅಜಾಂಗರ್‌ನಲ್ಲಿ ಜನಿಸಿದೆಯೆಂದು ವರದಿಯಾಗಿದೆ ಆದಕ್ಕೆ ಒಂದುತಲೆ ಮಾತ್ರವಿದ್ದು ಹಿಂಬಾಗದಲ್ಲಿ ಎರಡುಕಣ್ಣು, ಒಂದುಮೂಗು ಮತ್ತು ಬಾಯಿ ಇದೆ. ಮುಂಭಾಗದಲ್ಲಿ ಎರಡು ಕಿವಿಗಳಿವೆ.

ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಅಡಚಣೆ

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರ ವಿವರಣೆ

ಮೈಸೂರು ಜೂನ್ ೧೩

೧೯೫೧ನೇ ಜಿಲ್ಲಾ ಬೋರ್ಡು ಹೊಸ ಕಾನೂನು ಶ್ರೀಮನ್ಮಹಾರಾಜರ ಘೋಷಣೆಪ್ರಕಾರ ೧೪-೨-೫೨ ರಿಂದ ಜಾರಿಗೆ ಬಂದಿತು. ಈ ಕಾನೂನುಪ್ರಕಾರ ಸಂಸ್ಥಾನದ ಜಿಲ್ಲಾ ಬೋರ್ಡುಗಳು ಮತ್ತು ಗ್ರಾಮ ಪಂಚಾಯತಿಗಳು ಮಾತ್ರ ಇರುತ್ತವೆ. ಹೊಸ ಚುನಾವಣೆಗಳಾಗಿ ಈ ಸಂಸ್ಥೆಗಳು ಪುನರ್ರಚಿತವಾಗುವವರೆಗೆ ಈಗಿರುವ ಸಂಸ್ಥೆಗಳೇ ಹೊಸ ಸಂಸ್ಥೆಗಳಂತೆ ಪರಿಗಣಿಸಲು ಈ ಶಾಸನದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಅದರಂತೆ ಸರ್ಕಾರವು ಪ್ರತ್ಯೇಕವಾಗಿ ಒಂದು ಆಜ್ಞೆಯನ್ನು ಹೊರಡಿಸಿತು. ಈ ಶಾಸನವು ಜಾರಿಗೆ ಬಂದೊಡನೆಯೇ ಸರ್ಕಾರದವರು ಹಿಂದೆ ರಚಿಸಿದ್ದ ಜಿಲ್ಲಾ ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳು ನಿರ್ಜೀವವಾದುವು. ಆದರೆ ಸರ್ಕಾರವು ಇದಕ್ಕೆ ಪ್ರತ್ಯೇಕ ಆಜ್ಞೆಯನ್ನು ಹೊರಿಗೆಡಲಿಲ್ಲ. ಈ ಸಂದಿಗ್ಧ ವಾತಾವರಣದಲ್ಲಿ ಜಿಲ್ಲಾಭಿವೃದ್ಧಿಕಾರ್ಯಗಳಾದ ರಸ್ತೆ ರಿಪೇರಿ, ಭಾವಿ ಕೆಲಸ ಮುಂತಾದ ಅನೇಕ ಉಪಯುಕ್ತ ಕೆಲಸಗಳೆಲ್ಲಾ ನಿಂತು ಹೋಗಿವೆ.

ಸರ್ಕಾರ ಈ ವಿಷಯಗಳನ್ನು ಕೂಡಲೇ ತಮ್ಮ ಅವಗಾಹನೆಗೆ ತೆಗೆದುಕೊಂಡು ಜಿಲ್ಲಾ ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳ ರದ್ದಿನ ಬಗ್ಗೆ ಆಜ್ಞೆಯಿತ್ತು, ಹೊಸಜಿಲ್ಲಾಬೋರ್ಡ್‌ಗಳಿಗೆ ನಿಗದಿಯಾಗಿರುವ ಹಣವನ್ನು ಕೊಟ್ಟು ಅಭಿವೃದ್ಧಿ ಕಾರ್ಯಗಳು ಮಾಮೂಲಿನಂತೆ ಸುಸೂತ್ರವಾಗಿ ನಡೆಯುವಂತೆ ಮಾಡಬೇಕೆಂದು ಮೈಸೂರು ಜಿಲ್ಲಾಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಈದಿನ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ವಿವರಿಸಿದರು.

ನಿಯಂತ್ರಣ ಹೋಗಬೇಕು

ಶ್ರೀ ಚೆನ್ನಬಸಪ್ಪನವರು ಆಹಾರ ವಿಷಯವಾಗಿ ಪ್ರಸ್ತಾಪಿಸುತ್ತ ಮದರಾಸಿನಲ್ಲಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಆಹಾರ ನಿಯಂತ್ರಣವನ್ನು ರದ್ದುಮಾಡಿ ದೇಶಕ್ಕೆ ಒಂದು ಸುಮಾರ್ಗವನ್ನು ತೋರಿಸಿಕೊಟ್ಟಿರುವರು ಈ ಮಾರ್ಗವನ್ನೇ ಎಲ್ಲರೂ ಅನುಸರಿಸ ಬೇಕಾದುದು ಅತ್ಯಗತ್ಯ ಇದರಿಂದ ಜನತೆಗೆ ಎಷ್ಟೋ ಕಷ್ಟಗಳು ತಪ್ಪುವುವು ಆದರೆ ಈ ನೀತಿಯನ್ನು ಯಶಸ್ವಿಯಾಗಿ ಕಾಪಾಡಿಕೊಂಡು ಬರಬೇಕಾದರೆ ಈಗ ಹುಟ್ಟುವ ಸಮಾಜದ್ರೋಹಿಗಳ ಮೇಲೆ ಕ್ರೂರ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಈಗಿರುವ ಶಾಸನಗಳು ಸಾಲವು. ರಾಷ್ಟ್ರಾಧ್ಯಕ್ಷರು ಒಂದು ವಿಶೇಷ ಶಾಸನವನ್ನು ಹೊರಡಿಸಿ ಈ ಸಮಾಜದ್ರೋಹಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ವಿಶೇಷ ಅಧಿಕಾರವನ್ನು ಕಲ್ಪಿಸಬೇಕೆಂದು ಹೇಳಿದರು.

ಸಬ್ಸಿಡಿ ಕೊಡುವುದು ಉಚಿತವಲ್ಲ

ಕೇಂದ್ರವು ಪ್ರಾಂತ್ಯಗಳಿಗೆ ಆಹಾರ ಸಬ್ಸಿಡಿ ಕೊಡುವ ವಿಷಯವಾಗಿ ಪ್ರಸ್ತಾಪಿಸಿ ಸಬ್ಸಿಡಿ ಕೊಡುವ ಪದ್ಧತಿಯು ಒಳ್ಳೆಯ ಮಾರ್ಗವಲ್ಲ ಸಬ್ಸಿಡಿಯ ಹೆಚ್ಚಿಗೆ ಭಾಗವೆಲ್ಲಾ ವೃಥಾನಷ್ಟ. ಹೆಚ್ಚು ಆಹಾರ ಬೆಳೆ ಯೋಜನೆ ಪ್ರಕಾರ ಭಾವಿ ತೋಡುವುದು ಮುಂತಾದುವುದಕ್ಕೆ ಸಬ್ಸಿಡಿ ಕೊಟ್ಟು ವೃಥಾ ಹಣವು ವ್ಯಯವಾಗಿದೆ. ಕೈಗಾರಿಕಾ ಸಂಸ್ಥೆಗಳು, ಹೆಚ್ಚಿಗೆ ಕೆಲಸಗಾರರನ್ನು ನೇಮಿಸಿಕೊಂಡಿರುವರು ತಮ್ಮಲ್ಲಿ ಕೆಲಸ ಮಾಡುವವರು ಜೀವನಕ್ಕೆ ಸಾಕಾಗುವಷ್ಟು ಹಣವನ್ನು ಮಾಲೀಕರೆ ಒದಗಿಸುವಂತೆ ಸಂಬಂಧಪಟ್ಟ ಶಾಸನಗಳನ್ನು ಮಾಡಬೇಕೆಂದರು.

ಬಂಡವಾಳವಿಲ್ಲದೆ ವ್ಯವಸಾಯ ಹಾಳಾಗುತ್ತಿದೆ

ಭಾರತದಲ್ಲಿ ವ್ಯವಸಾಯವು ದಿನೇ ದಿನೇ ಹಾಳಾಗುತ್ತಲಿರುವುದು ಬೆಳೆಯುವವರಲ್ಲಿ ಬಂಡವಾಳವಿಲ್ಲದಿರುವುದೇ ಮುಖ್ಯ ಕಾರಣವಾಗಿದೆ. ಬಂಡವಾಳ ಒದಗಿಸಲು ಬ್ಯಾಂಕ್ ವ್ಯವಹಾರ ರೀತ್ಯಾ, ಸಾಲ ಮುಂತಾದುವನ್ನು ಒದಗಿಸಲು 'ಅಗ್ರಿಕಲ್ಚರಲ್ ಕ್ರೆಡಿಟ್ ಕಾರ್ಪೊರೇಷನ್' ಸ್ಥಾಪಿಸಬೇಕೆಂದೂ ಜಮೀನುಗಳನ್ನು ಕೊಡುವಾಗ ಸ್ವಂತವಾಗಿ ಸಾಗುವಳಿ ಮಾಡುವವನಿಗೆ ಕೊಡಬೇಕೇ ವಿನಹ ಅದನ್ನು ಲಾಭ ಸಂಪಾದಿಸಲು ಉಪಯೋಗಿಸುವವರಿಗೆ ಕೊಡಕೂಡದೆಂದು ಹೇಳಿದರು.

ಶ್ರೀ ದಾಸಪ್ಪನವರ ಕಾರ್ಯ ಅತ್ಯಂತ ಗುರುತರವಾದುದು

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಮಾಜಿ ಅರ್ಥಿಕ ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಚುನಾಯಿತರಾಗಿರುವ ವಿಷಯವನ್ನು ಪ್ರಸ್ತಾಪಿಸಿ ಅತ್ಯಂತ ಹಿರಿಯ ಕಾಂಗ್ರೆಸ್ಸಿಗರಾದ ಶ್ರೀಯುತರು ಅಧ್ಯಕ್ಷರಾಗಿರುವುದರಿಂದ ಕಾಂಗ್ರೆಸ್ ಸಂಸ್ಥೆಯ ಪುನರುದ್ಧಾರ ಕಾರ್ಯವು ಯಶಸ್ವಿಯಾಗಿ ನಡೆಯುವುದರಲ್ಲಿ ಸಂದೇಹವಿಲ್ಲ ಇದರಿಂದ ಯಶಸ್ವಿಯಾಗಿ ನಡೆಯದಿದ್ದರೆ ಕಾಂಗ್ರೆಸ್ಸಿಗೆ ವಿಶೇಷ ನಷ್ಟವಾಗುವುದಲ್ಲದೆ ಶ್ರೀ ದಾಸಪ್ಪನವರ ರಾಜಕೀಯ ಜೀವನವು ಅಧೋಗತಿಗಿಳಿಯುವುದರಲ್ಲಿ ಸಂದೇಹವಿಲ್ಲ.

ರಾಜಕೀಯದಲ್ಲಿ ಅರಿತು ನುರಿತು ನಿಪುಣರಾದ ಶ್ರೀ ದಾಸಪ್ಪನವರಿಂದ ಅನೇಕ ಉತ್ತಮ ಕಾರ್ಯಗಳಾಗುವುದೆಂಬುದೇ ನಮ್ಮ ಆಶಯ. ಕಾಂಗ್ರೆಸ್ಸಿನಲ್ಲಿ ತಲೆದೋರಿರುವ ಕೋಮುವಾರು ಭಾವನೆ, ಸ್ವಕಾರ್ಯ ಸಾಧನೆ ಯತ್ನಗಳೆಲ್ಲವೂ ಇವರ ಕಾಲದಲ್ಲಿ ಮಾಯವಾಗಬೇಕಲ್ಲದೆ ಮಹಾಚುನಾವಣೆ ಕಾಲದಲ್ಲಿ ಕಾಂಗ್ರೆಸ್ ಉಮೇದುವಾರರ ವಿರುದ್ಧ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಕೆಲಸಮಾಡಿದವರ ಮೇಲೆ ತೀವ್ರ ಕಾರ್ಯಕ್ರಮವನ್ನು ಅವರು ತೆಗೆದುಕೊಂಡರೆ ಕಾಂಗ್ರೆಸ್ಸಿಗೆ ಕೀರ್ತಿ ಬರುವುದೆಂದು ಅವರುಹೇಳಿದರು.

ಮಂತ್ರಿಮಂಡಲದ ನೀತಿ

ಹೊಸ ಮಂತ್ರಿಮಂಡಲದ ವಿಷಯವಾಗಿ ಮಾತನಾಡುತ್ತಾ ಹೊಸ ಮಂತ್ರಿಮಂಡಲ ಆಹಾರ ನೀತಿಗೆ ಎಲ್ಲೆಲ್ಲೂ ಸ್ವಾಗತ ದೊರೆಯುತ್ತಲಿದೆ. ಅಧಿಕಾರಿಗಳ ನೇಮಕ, ಸಂಬಳಸಾರಿಗೆ ಮುಂತಾದ ವಿಷಯದಲ್ಲಿ ಜನತೆಯಿಂದ ಯಾವ ವಿಧವಾದ ಟೀಕೆಗಳೂ ಬರದಂತೆ ಅವರು ವರ್ತಿಸಬೇಕೆಂದು ಹೇಳಿದರು.

ಕಾಲೇಜುಗಳಲ್ಲಿ ಪ್ರವೇಶ ಸ್ಥಾನಗಳ ಹಂಚಿಕೆ

ಬೆಂಗಳೂರು ಜೂನ್ ೧೩

ಸಂಸ್ಥಾನದ ಕಾಲೇಜುಗಳಲ್ಲಿ ಶೇಕಡ ೫೦ ರಷ್ಟು ಸ್ಥಾನಗಳನ್ನು ಯೋಗ್ಯತೆ ಆಧಾರದ ಮೇಲೆ ನಿರ್ಧರಿಸಬೇಕೆಂದು, ಉಳಿದ ಸ್ಥಾನಗಳಲ್ಲಿ ಶೇಕಡ ೧೫ ರಷ್ಟು ನಿಮ್ನ ವರ್ಗದವರಿಗೂ, ಶೇಕಡ ೩೫ ರಷ್ಟು ಹಿಂದುಳಿದವರ್ಗದವರಿಗೂ ಕಾದಿರಿಸಬೇಕೆಂದೂ ಸರ್ಕಾರದವರು ನಿರ್ಧಾರಕ್ಕೆ ಬಂದಿದ್ದಾರೆಂದು ತಿಳಿದುಬಂದಿದೆ.

ಟೆಕ್ನಿಕಲ್ ಕಾಲೇಜುಗಳನ್ನು ಸೇರಲು ಐಚ್ಛಿಕ ಭಾಷೆಯಲ್ಲಿ ಶೇಕಡ ೪೫ ನಂಬರುಗಳೂ, ಬಂದಿರಬೇಕೆಂದೂ ಆನರ್ಸ್ ಶಿಕ್ಷಣಕ್ಕೆ ಸೇರಲು ಜಾತಿ ಮತ್ತು ಇನ್ನಾವ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳದೆ ಶೇಕಡ ೫೦ ನಂಬರುಗಳನ್ನು ಪಡೆದಿರಬೇಕೆಂದು ಸರ್ಕಾರದವರು ನಿಗದಿ ಮಾಡಿದ್ದಾರೆ.

ಟೆಕ್ನಿಕಲ್ ಕಾಲೇಜುಗಳಲ್ಲಿ ಪ್ರವೇಶ ಸಂಖ್ಯೆ ಕಡಿಮೆ

ಮೈಸೂರು ಜೂನ್ ೧೩

ಸಂಸ್ಥಾನದ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸಾಕಷ್ಟು ಸಾಧನೋಪಕರಣಗಳ ಅಭಾವದಿಂದ ಈ ವರ್ಷ ಕಡಿಮೆ ವಿದ್ಯಾರ್ಥಿಗಳನ್ನು ಸೇರಿಸಬೇಕೆಂದು ವಿಶ್ವ ವಿದ್ಯಾನಿಲಯದವರು ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆಂದು ತಿಳಿದುಬಂದಿದೆ ಬೆಂಗಳೂರಿನ ಸರ್ಕಾರಿ ಇಂಜನಿಯರಿಂಗ್ ಕಾಲೇಜಿನಲ್ಲಿ ೧೦೦, ಬಿ. ಎಂ. ಶ್ರೀನಿವಾಸಯ್ಯ ಕಾಲೇಜಿನಲ್ಲಿ ೮೦ ಮತ್ತು ಮೈಸೂರಿನ ನ್ಯಾಷನಲ್ ಇನ್ಸ್‌ಟಿಟ್ಯೂಟಿನಲ್ಲಿ ೮೦ ಅಷ್ಟಕ್ಕೆ ಇಳಿಸಬೇಕೆಂದು ಸಲಹೆ ಮಾಡಲಾಗಿದೆ.

ನೂತನ ಆಹಾರದ ನೀತಿಯ ಪರಿಶೀಲನೆ

ಬೆಂಗಳೂರು ಜೂನ್ ೧೩

ನಿನ್ನೆ ಅಠಾರಾಕಛೇರಿಯಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಮುಖ್ಯಾಧಿಕಾರಿಗಳ ಸಭೆಯಲ್ಲಿ ಇಂದಿನ ಆಹಾರದ ಪರಿಸ್ಥಿತಿಯನ್ನು ಪರಿಶೀಲಿಸಲಾಯಿತೆಂದೂ, ಹತೋಟಿ ಮತ್ತು ಪಡಿತರ ರದ್ದಿನ ಮೇಲೆ ಚರ್ಚೆನಡೆದು ನಿರ್ಧಾರಕ್ಕೂ ಬರಲಿಲ್ಲವೆಂದೂ ಸಂಪೂರ್ಣವಾಗಿ ಹತೋಟಿ ರದ್ದುಮಾಡುವ ವಿಚಾರದಲ್ಲಿ ನಿಧಾನವಾಗಿ ಮುಂದುವರಿಯಬೇಕೆಂದು ಕೆಲವು ಅಧಿಕಾರಿಗಳು ಸಲಹೆಮಾಡಿದರೆಂದೂ ತಿಳಿದು ಬಂದಿದೆ.

ಭಾರತದ ಸೇವಾ ಮತ್ತು ಸ್ಕೌಟ್ ದಳಗಳನ್ನು ಬಲಪಡಿಸಿ, ಸಮಾಜ ಸೇವೆಗಾಗಿ ಅವುಗಳನ್ನು ಭೊಸೈನ್ಯಗಳನ್ನಾಗಿ ಪರಿವರ್ತಿಸುವ ವಿಷಯವೂ ಚರ್ಚಿಸಲಾಯಿತೆಂದೂ ಗೊತ್ತಾಗಿದೆ.

ಮಾರಾಟ ತೆರಿಗೆಯಲ್ಲಿ ಬದಲಾವಣೆ ಕೂಡದು

ಸಂಸ್ಥಾನದಲ್ಲಿ ಈಗಿರುವ ಮಾರಾಟ ತೆರಿಗೆ ವಸೂಲಿ ಕ್ರಮದಲ್ಲಿ ಯಾವ ಬದಲಾವಣೆ ಅವಶ್ಯಕವಿಲ್ಲವೆಂದು ಅದರ ಬಗ್ಗೆ ನೇಮಿಸಲಾಗಿದ್ದ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ತರಕಾರಿ, ಮಾಂಸ ಮುಂತಾದ ಕೆಲವು ವಸ್ತುಗಳ ಮೇಲೆ ವಿನಾಯತಿಕೊಡಬೇಕೆಂದೂ, ಒಟ್ಟು ವ್ಯಾಪಾರದ ಮೇಲೆ ತೆರಿಗೆ ವಿಧಿಸುವ ಸಂದರ್ಭಗಳಲ್ಲಿ ಆ ವ್ಯಾಪಾರಿಗಳಿಗೆ ಲೈಸನ್ಸ್ ಕೊಡಬೇಕೆಂದೂ, ಕಮಿಷನ್ ಏಜೆಂಟರುಗಳ ಮೇಲೂ ಮಾರಾಟದ ತೆರಿಗೆ ಹಾಕಬೇಕೆಂದೂ ಸಲಹೆ ಮಾಡಲಾಗಿದೆ.

ಬಂಗಾಳದಲ್ಲಿ ಕ್ಷಾಮ

ಬಂಗಾಳ ಪ್ರಾಂತ್ಯದ ಸುಂದರಬನ್ಸ್, ಬರ್ದವಾನ್ ಮತ್ತು ಪಶ್ಚಿಮ ದಿನಾಜ್‌ಪುರ ಜಿಲ್ಲೆಗಳಲ್ಲಿ ಕ್ಷಾಮ ತಲೆದೋರಿ, ೫೦ ಲಕ್ಷ ಜನರು ಹೊಟ್ಟೆಗಿಲ್ಲದೆ ಕಷ್ಟಪಡುತ್ತಿದ್ದಾರೆಂದು ಹೇಳಲಾಗಿದೆ.

ಕಮ್ಯೂನಿಸ್ಟರ ಹಿಂಸಾಕೃತ್ಯ ಚಟುವಟಿಕೆ ರದ್ದು

ಹೈದರಾಬಾದಿನ ತೆಲಂಗಾಣದಲ್ಲಿ ಹಿಂಸಾಕೃತ್ಯ ಚಟುವಟಿಕೆಯನ್ನು ನಿಲ್ಲಿಸಿರುವುದಾಗಿಯೂ, ತಲೆ ಮರಿಸಿಕೊಂಡಿರುವ ೫೦೦ ಮಂದಿ ಕಮ್ಯೂನಿಸ್ಟರ ಮೇಲೆ ಯಾವಕಾರ್ಯಕ್ರಮಗಳನ್ನು ಕೈಗೊಳ್ಳುವುದಿಲ್ಲ ವೆಂದು ಸರ್ಕಾರದವರು ಭರವಸೆ ಇತ್ತಪಕ್ಷದಲ್ಲಿ, ಅವರುಗಳು ಬಹಿರಂಗವಾಗಿ ಹೊರಗೆ ಬಂದು ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ವಶಪಡಿಸುವುದಾಗಿಯೂ, ಅಲ್ಲಿನ ಕಮ್ಯೂನಿಸ್ಟ್ ನಾಯಕ ಶ್ರೀ ಎಲ್ಲರೆಡ್ಡಿಯವರು ತಿಳಿಸಿರುತ್ತಾರೆ.

ಜಯಪ್ರಕಾಶರ ಉಪವಾಸ

ಸೋಷಲಿಸ್ಟ್ ಮುಖಂಡರಾದ ಶ್ರೀ ಜಯಪ್ರಕಾಶರು ಇದೇ ೧೭ ನೇ ತಾರೀಖಿನಿಂದ ೨೧ ರ ವರೆಗೆ ಪೂನಾದಲ್ಲಿ ಉಪವಾಸವ್ರತ ಕೈಗೊಳ್ಳುವುದಕ್ಕೆ ಕೇಂದ್ರಸರ್ಕಾರದವರು ಹಿಂದೆ ಅಂಚೆ ಇಲಾಖಾ ನೌಕರರುಗಳ ಸಂಬಳ ವಗೈರೆ ಬಗ್ಗೆ ಇತ್ತ ಭರವಸೆಯನ್ನು ಈಡೇರಿಸದಿದ್ದುದನ್ನು ಪ್ರತಿಭಟಿಸುವುದಕ್ಕಾಗಿ ಎಂದು ತಿಳಿಸಲಾಗಿದೆ.

ರಣಜಿತ್

೧೪-೬-೫೨ ರಿಂದ

ಅಮೋಘ ಪ್ರಾರಂಭ

ಜೈಮಹಾಕಾಳಿ

ಪಾತ್ರ— ನಿರೂಪರಾಯ್, ಸಾಹು ಮೋದಕ್ ಮತ್ತು ಉಲ್ಲಾಸ್.

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574 (ಲಿಂಕ್) ದಿನಪತ್ರಿಕೆ ರಿ. ನ. ಎಂ. 3518

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೪—೬—೧೯೫೨ನೇ ಶನಿವಾರ [ಸಂಚಿಕೆ ೨೮೦

ಕೇಂದ್ರದ ನಾಲ್ಕು ಉನ್ನತ ಅಧಿಕಾರಿಗಳ ದಸ್ತಗಿರಿ

ಮೃತದೇಹದಲ್ಲಿ ಹಾಲು ಕುಡಿಯುತ್ತಿದ್ದ ಮಗು

ಪಾಟ್ನಾದ ಫೋಗಾಲ್‌ದಿ ರಸ್ತೆಯಲ್ಲಿ ಹೊಟ್ಟೆಗಿಲ್ಲದೆ ಮೃತಳಾಗಿ ಬಿದ್ದಿದ್ದ ತಾಯಿಯ ಮೃತದೇಹದಿಂದ ಮಗುವೊಂದು ಹಾಲನ್ನು ಕುಡಿಯಲು ಯತ್ನಿಸುತಿದ್ದ ಹೃದಯ ವಿದ್ರಾವಿಕ ದೃಶ್ಯವನ್ನು ನೋಡಲು ನೂರಾರು ಜನರು ಸೇರಿದ್ದರೆಂದು ವರದಿಯಾಗಿದೆ.

ಗದ್ವೋರಿಯ ಠಾಕೂರರ ದಸ್ತಗಿರಿ

ಗದ್ವೋರಿಯಾ ಠಾಕೂರ್ ಸಾಹೇಬರ ೧೯ ವರ್ಷದ ಪತ್ನಿ ಛಾಯಿಧಿಲಾಜ್‌ಕುವರಿರನ್ನು ಕಳೆದ ವರ್ಷ ಕೊಲೆ ಮಾಡಿದರೆಂಬ ಆಪಾದನೆಯ ಮೇಲೆ ಅಲ್ಲಿನ ಠಾಕೂರ್ ಸಾಹೇಬರು, ಅವರ ತಾಯಿ ಮತ್ತು ಇನ್ನೊಬ್ಬಸಂಬಂಧಿ ದೀಪ್‌ಚಂದ್‌ಕೋಠಾರಿರವರುಗಳನ್ನು ಹಿಂದೆ ಖುಲಾಸೆ ಮಾಡಲಾಗಿತ್ತು. ಈಗ ಪುನಃ ಅವರ ಬಂಧನದ ಬಗ್ಗೆ ಬೊಂಬಾಯಿ ಹೈಕೋರ್ಟಿನವರು ಆಜ್ಞೆ ಮಾಡಿದ್ದಾರೆ.

ಈಜಿಪ್ಟಿನ ಮಹಿಳೆಯರಿಗೆ ರಾಜಕೀಯ ಹಕ್ಕಿಲ್ಲ

ಈಜಿಪ್ಟಿನ ಮಹಿಳೆಯರಿಗೆ ರಾಜಕೀಯ ಹಕ್ಕು ಮತ್ತು ಪಾರ್ಲಿಮೆಂಟ್ ಸದಸ್ಯರಾಗಲು ಅವಕಾಶ ವಿಲ್ಲವೆಂದು ಅಲ್ಲಿನ ಪ್ರಾಚೀನ ವಿಶ್ವವಿದ್ಯಾನಿಲಯದವರು ಅಭಿಪ್ರಾಯ ಪಟ್ಟಿದ್ದಾರೆ.

ಕರ್ನಾಟಕ ಏಕೀಕರಣಕ್ಕೆ ವಿರೋಧ

ಮೈಸೂರು ಶಾಸನಸಭೆಯ ಕಾಂಗ್ರೆಸ್ ಸದಸ್ಯರಾದ ಶ್ರೀ ನಾಗಯ್ಯ ರೆಡ್ಡಿಯವರು ರಾಷ್ಟ್ರಾಧ್ಯಕ್ಷರೂ ಮತ್ತು ಪ್ರಧಾನಿ ನೆಹರೂರವರುಗಳಿಗೆ ಒಂದು ತಂತಿಯನ್ನು ಕಳುಹಿಸಿ ಜನ ಮತಗಣನೆಯಿಲ್ಲದೆ ಕರ್ನಾಟಕ-ಏಕೀಕರಣವನ್ನು ಮೈಸೂರಿನವರು ವಿರೋಧಿಸುವುದಾಗಿ ತಿಳಿಸಿರುತ್ತಾರೆ.

ಮೈಸೂರಿಗೆ ಕೇಂದ್ರದಿಂದ ೩ ಕೋಟಿ ರೂ. ಸಹಾಯ

ಸಂಸ್ಥಾನದಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿಯೋಜನೆಗಳಿಗಾಗಿ ಕಳೆದ ವರ್ಷ ಕೇಂದ್ರಸರ್ಕಾರದವರು ೧. ೫ ಕೋಟಿ ರೂ. ಗ್ರಾಂಟು ಮತ್ತು ೧. ೫ ಕೋಟಿ ರೂ. ಸಾಲಗಳನ್ನು ಕೊಡಲಾಯಿತೆಂದು ತಿಳಿಸಲಾಗಿದೆ

ಭಾರತ ಕಾಮನ್‌ವೆಲ್ತ್ ಬಿಡಬೇಕು

ಭಾರತವು ಕಾಮನ್‌ವೆಲ್ತ್‌ನ್ನು ತ್ಯಜಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಡಾ|| ಶಾಮಪ್ರಸಾದ್ ಮತ್ತು ಇತರ ವಿರುದ್ಧ ಪಕ್ಷಗಳ ಸದಸ್ಯರು ಮಂಡಿಸಿದ್ದ ನಿರ್ಣಯವು ಬಹುಮತದಿಂದ ತಿರಸ್ಕೃತವಾಯಿತು.

ಪುರಸಭಾಧ್ಯಕ್ಷರಿಗೆ ಜುಲ್ಮಾನೆ

ಪುದುಕೋಟೆ ಪೌರಸಭೆಯ ಅಧ್ಯಕ್ಷರಾದ ಶ್ರೀ ಎಸ್. ವಿ. ಶಿವಸ್ವಾಮಿ ಸದವೆಂಬುವರು ಪುರಸಭೆಯ ಸಹಕಾರ ಸಂಘದ ಹಣವನ್ನು ದುರುಪಯೋಗ ಪಡಿಸಿಕೊಂಡರೆಂದು ಅವರಿಗೆ ೨೦೦ ರೂ. ಜುಲ್ಮಾನೆಯನ್ನು ವಿಧಿಸಲಾಗಿದೆ.

ಚರ್ಚಿಲರ ಬಗ್ಗೆ ಸುಳ್ಳು ಕಳವಳ

ಚರ್ಚಿಲ್ ಎಂಬ ಲಂಡನ್ನಿನ ಸುಪ್ರಸಿದ್ಧ ಹೋಟೇಲ್ ವೊಂದರ ಹೆಸರನ್ನು ಅಧಿಕೃತರಿಜಿಸ್ಟರಿ ನಿಂದ ತೆಗೆದು ಹಾಕಲಾಗಿದೆ ಯೆಂಬ ವಾರ್ತೆಯನ್ನು ರೇಡಿಯೋ ಮೂಲಕ ಪ್ರಸಾರ ಮಾಡಿದಾಗ, ಅಮೆರಿಕದಲ್ಲಿ ಆ ಸುದ್ದಿಯನ್ನು ಜನರ ತಪ್ಪಾಗಿ ಭಾವಿಸಿಕೊಂಡು, ಪ್ರಧಾನಿ ಚರ್ಚಿಲರು ಮರಣ ಹೊಂದಿದರೆಂಬ ವಾರ್ತೆಯು ಎಲ್ಲೆಲ್ಲೂ ಹರಡಿತು. ವಾರ್ತಾ ಕಛೇರಿಗಳಿಗೆ ಬಿಡುವಿಲ್ಲದೆ ಫೋನುಗಳು ಬರಲು ಪ್ರಾರಂಭವಾದವು. ಕೊನೆಯಲ್ಲಿ ಚರ್ಚಿಲರು ಸೌಖ್ಯವಾಗಿದ್ದಾರೆಂದು ವಾರ್ತೆ ಬಂದಮೇಲೆ ಜನರು ಸಂತೋಷದಿಂದ ಸುಮ್ಮನಾದರು.

ನೆಹರೂರ ರೇಡಿಯೋ ಭಾಷಣ

ಪ್ರಧಾನಿ ನೆಹರೂರವರು ಈ ರಾತ್ರಿ ೮-೨೦ ಗಂಟೆಗೆ ಹೆಚ್ಚು ಪೈರು ಬೆಳೆಯುವ ಸ್ಪರ್ಧೆ ವಿಷಯವಾಗಿ ರೇಡಿಯೋ ಭಾಷಣವನ್ನು ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಾಡುವರು.

ವಿದ್ಯಾಭ್ಯಾಸ ವೆಚ್ಚ

ಭಾರತಪಾರ್ಲಿಮೆಂಟಿನಲ್ಲಿ ನಿನ್ನೆಯಿಂದ ರಾಷ್ಟ್ರದ ವಿದ್ಯಾಭ್ಯಾಸ ವೆಚ್ಚದ ವಿಷಯವಾಗಿ ಚರ್ಚೆಗಳು ಪ್ರಾರಂಭವಾಗಿವೆ.

ರಾಯಲು ಸೀಮೆ ಪ್ರವಾಸ

ಮದ್ರಾಸಿನ ಮುಖ್ಯಮಂತ್ರಿಶ್ರೀ ಸಿ ರಾಜಗೋಪಾಲಚಾರಿಯವರು ಮೂರುದಿನ ಕಾಲ ಪ್ರವಾಸವನ್ನು ಕೈಗೊಂಡಿರುವರು

ಜಾಲಿಮರದ ತೊಗಟೆಯಿಂದ ಕಾಗದ ತಯಾರಿ

ನೀಲಗಿರಿಯಲ್ಲಿ ಬೆಳೆಯುವ ವಿವಿಧ ಜಾಲಿ ಮರಗಳ ತೊಗಟೆಯಿಂದ ವೃತ್ತಪತ್ರಿಕೆಗಳು ಪ್ರಕಟವಾಗುವಂತಹ ಕಾಗದಗಳನ್ನು ತಯಾರಿಸಬಹುದೆಂದು ಅದರ ಸಂಶೋಧನೆಯಿಂದ ಕಂಡು ಹಿಡಿಯಲಾಗಿದೆ. ಇದಕ್ಕಾಗಿ ನೀಲಗಿರಿ ಪ್ರದೇಶದಲ್ಲಿ ೨೦ ಸಾವಿರ ಎಕರೆ ಭೂಮಿಯಲ್ಲಿ ಈ ಮರಗಳನ್ನು ಬೆಳೆಯಲು ಸಿದ್ಧತೆ ನಡೆಯುತ್ತಿದೆ. ಇನ್ನು ೮-೧೦ ವರ್ಷಗಳಲ್ಲಿ ಈ ಮರಗಳಲ್ಲಿ ೩ ಸಾವಿರ ಟನ್ ತೊಗಟೆಯು ಸಿಕ್ಕುವುದೆಂದೂ, ಅದನ್ನು ಕಾಗದತಯಾರಿಕೆಗಾಗಿ ಉಪಯೋಗಿಸಲಾಗುವುದೆಂದು ಹೇಳಲಾಗಿದೆ.

ಕೇಂದ್ರದ ನಾಲ್ಕು ಉನ್ನತ ಅಧಿಕಾರಿಗಳ ದಸ್ತಗಿರಿ

ಕೇಂದ್ರದ ಆಹಾರ ಮತ್ತು ವ್ಯವಸಾಯ ಶಾಖೆಯ ಉನ್ನತಾಧಿಕಾರಿಗಳಾದ ಶ್ರೀಗಳಾದ ಸಿ. ಎಸ್. ಡಿ. ಸ್ವಾಮಿ, ಎಸ್. ವೈ ಕೃಷ್ಣಸ್ವಾಮಿ, ಎ. ಕೆ. ಸಹಾ ಮುಂತಾದ ನಾಲ್ಕು ಜನರನ್ನು ದುರಾಚಾರ ಆಪಾದನೆ ಮೇಲೆ ದಸ್ತಗಿರಿಮಾಡಲಾಗಿದೆ, ಈ ಸಂಬಂಧದಲ್ಲಿ ಅನೇಕ ಲಕ್ಷ ರೂಪಾಯಿಗಳ ವ್ಯವಹಾರಗಳ ಪಟ್ಟಿ ಪೋಲೀಸಿನವರು ತನಿಖೆ ಕ್ರಮ ನಡೆಸುತ್ತಲಿರುವರೆಂದು ಗೃಹಸಚಿವರು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿರುವರು.

ಮಗುವನ್ನು ಬಿಟ್ಟುಹೋದ ಪ್ರಸಂಗ

ರಾನಘಡ ರೈಲ್ವೇ ನಿಲ್ದಾಣದ ಒಬ್ಬ ಯುವಕನು ರೈಲಿನಿಂದ ಇಳಿದು ತಾನು ಎತ್ತಿಕೊಂಡಿದ್ದ ಸುಂದರವಾದ ಆರುತಿಂಗಳಿನ ಮಗುವೊಂದನ್ನು ಅಲ್ಲಿ ನಿಂತಿದ್ದ ಪ್ರವಾಸಿಕ ಮಹಿಳೆಯೊಬ್ಬಳ ಕೈಗೆಕೊಟ್ಟು ತಾನು ಹಣ್ಣನ್ನು ತರುವುದಾಗಿ ಹೊರಟು ಹೋದವನು ಹಿಂತಿರುಗಲೇಇಲ್ಲವೆಂದೂ ಆಕೆಯು ಮಗುವನ್ನು ಪೊಲೀಸರ ವಶಕ್ಕೆ ಒಪ್ಪಿಸಿದಳೆಂದೂ ವರದಿಯಾಗಿದೆ.

ಡಾ|| ಮೋದಿಯವರ ಕಣ್ಣಿನ ಶಸ್ತ್ರಚಿಕಿತ್ಸೆ

ಬೆಂಗಳೂರು ಜೂನ್ ೧೩

ಬೆಂಗಳೂರಿನಲ್ಲಿ ಇತ್ತೀಚೆಗೆ ಡಾ|| ಮೋದಿಯವರು ನಡೆಸುತ್ತಿದ್ದ ಉಚಿತ ಕಣ್ಣಿಗೆ ಶಸ್ತ್ರ ಚಿಕಿತ್ಸೆಯು ನಿನ್ನೆಗೆ ಮುಕ್ತಾಯವಾಯಿತು. ಇಲ್ಲಿಯವರೆಗೆ ೪೦೦ ಕ್ಕೂ ಹೆಚ್ಚಿಗೆ ಮಂದಿಗೆ ಆಪರೇಷನ್ ಮಾಡಿದ್ದಾರೆ

ಆಸ್ಪತ್ರೆ ಕೆಲಸಗಾರರ ಸಂಘ

ಮೈಸೂರು ಜೂನ್ ೧೩

ನಗರದ ಸರ್ಕಾರಿ ಆಸ್ಪತ್ರೆಗಳ ನೌಕರರ ಸಂಘದ ಸಭೆಯು ಮೊನ್ನೆದಿನ ಶ್ರೀ ಎ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆಕಂಡ ಅಧಿಕಾರವರ್ಗವನ್ನು ಚುನಾಯಿಸಲಾಯಿತು:—

ಅಧ್ಯಕ್ಷರು ಶ್ರೀ ಎ. ರಾಮಣ್ಣ, ಉಪಾಧ್ಯಕ್ಷರು ಶ್ರೀ ಬಾಲಾಜಿಸಿಂಗ್, ಕಾರ್ಯದರ್ಶಿ ಶ್ರೀ ಟಿ. ಎಸ್. ಸುಬ್ಬಣ್ಣ, ಸಹ ಕಾರ್ಯದರ್ಶಿ ಶ್ರೀ ಚೌಡಯ್ಯನವರು ಮತ್ತು ಖಜಾಂಚಿ ಶ್ರೀ ರಂಗೇಗೌಡರು.

ಪಾರ್ಲಿಮೆಂಟ್ ಮೇಲೆ ವಿದೇಶಿ ಧ್ವಜ ಕೂಡದು

ಪಾರ್ಲಿಮೆಂಟ್ ಭವನದ ಮೇಲೆ ಇತ್ತೀಚೆಗೆ ಬ್ರಿಟಿಷ್ ಧ್ವಜವನ್ನು ಹಾರಿಸಿದುದು ತಪ್ಪೆಂದೂ, ಯಾವ ವಿದೇಶಿ ಧ್ವಜವು ಅದರಮೇಲೆ ಇರಕೂಡದೆಂದೂ ಪ್ರಧಾನಿ ಪಂಡಿತ ನೆಹರೂರವರು ತಿಳಿಸಿರುತ್ತಾರೆ.

ಮೆಡಿಕಲ್ ಕಾಲೇಜ್ ಸಮಿತಿ

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವ ಸಂಬಂಧದಲ್ಲಿ ಈ ಕೆಳಗೆಕಂಡ ಸಮಿತಿಯನ್ನು ಸರ್ಕಾರದವರು ರಚಿಸಿದ್ದಾರೆ. ಕಾಲೇಜಿನ ಪ್ರಿನ್ಸಿಪಾಲ್ ಡಾ|| ವೈ. ಅಪ್ಪಾಜಿ, ಪ್ರೊ|| ವಿ. ಆರ್. ನಾಯ್ಡು, ಡಾ|| ಸಿ. ಬಂದೀಗೌಡ, ಶ್ರೀಗಳಾದ ಎಸ್. ರಂಗರಾಮಯ್ಯ, ಹೆಚ್. ಎಸ್. ರುದ್ರಪ್ಪ, ಕೆ. ಪುಟ್ಟಸ್ವಾಮಿ ಮತ್ತು ಕೆ. ವೆಂಕಟಸುಬ್ಬಶೆಟ್ಟಿ.

ಹೆಚ್ಚು ಆಹಾರ ಬೆಳೆಗಾಗಿ ಬಹುಮಾನ

ಬೆಂಗಳೂರು ಶಾಖೆಯ ಸೈನ್ಯಕ್ಕೆ ಹೆಚ್ಚು ಆಹಾರ ಬೆಳೆಗಾಗಿ ೧ ಸಾವಿರ ರೂ. ಬಹುಮಾನವನ್ನು ಕೇಂದ್ರ ಸರ್ಕಾರವು ಕೊಟ್ಟಿದೆ. ೨೮ ಎಕರೆ ಜಮೀನುಗಳಲ್ಲಿ ೨೮ ಸಾವಿರ ರೂ. ಗಳಷ್ಟು ಆಹಾರ ಧಾನ್ಯಗಳನ್ನು ಬೆಳೆದು ೨೨ ಸಾವಿರ ರೂ. ಲಾಭ ಸಂಪಾದಿಸಲಾಯಿತೆಂದು ಹೇಳಲಾಗಿದೆ.

ದಕ್ಷಿಣ ಕೊರಿಯಾ ಅಧ್ಯಕ್ಷರ ವರ್ತನೆ ಖಂಡನೆ

ದ|| ಕೊರಿಯಾದಲ್ಲಿ ಮಾರ್ಷಲ್ ಲಾವನ್ನು ಜಾರಿಗೆತಂದು ಅದರ ಶಾಸನಸಭೆಯ ಕೆಲವು ಸದಸ್ಯರನ್ನು ಪ್ರಧಾನಿ ಪಂಡಿತ ನೆಹರೂರವರು ಖಂಡಿಸಿ: ಅವರ ಆಡಳಿತಕ್ಕೆ ಬೆಂಬಲ ಕೊಡುವುದು ಸರಿಯಲ್ಲವೆಂದು ಪಾರ್ಲಿಮೆಂಟಿನಲ್ಲಿ ತಿಳಿಸಿರುತ್ತಾರೆ.

ಕೋಠ್ಯಾಧೀಶರಿಗೆ ಶಿಕ್ಷೆ

ಬಿಕನೀರ್ ಕೋಠ್ಯಾಧೀಶರಾದ ಶ್ರೀ ಚುನ್ನೀಲಾಲ್ ಕೋಠಾರಿಯವರು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ ೧೦ ಸಾವಿರದ ಅತಿಥಿಗಳಿಗೆ ಸತ್ಕಾರಕೂಟವನ್ನು ಏರ್ಪಡಿಸಿದ್ದರೆಂದು ಅವರಿಗೆ ೬ ತಿಂಗಳು ಸಾದಾ ಸಜಾ ಮತ್ತು ೧ ಸಾವಿರ ರೂ. ದಂಡ ವಿಧಿಸಲಾಗಿದೆ.

ಕೆ. ಎಂ. ಪಿ. ಮತ್ತು ಸೋಷಲಿಸ್ಟ್ ಮಿಳನ

ಸಂಸ್ಥಾನದ ಕೆ. ಎಂ. ಪಿ. ಮತ್ತು ಸೋಷಲಿಸ್ಟ್ ಪಕ್ಷಗಳು ಒಂದಾಗಿ ಕೆಲಸಮಾಡುವ ವಿಚಾರವನ್ನು ಪರಿಶೀಲಿಸಲು ಕೆ. ಎಂ. ಪಿ. ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯು ನಿನ್ನೆದಿನ ಬೆಂಗಳೂರಿನಲ್ಲಿ ಸೇರಿತ್ತು. ಆದರೆ ಯಾವ ನಿರ್ಧಾರಕ್ಕೂ ಬರದೆ ಪರಿಶೀಲನೆಯನ್ನು ಇದೇ ೧೯ನೇ ತಾರೀಖಿಗೆ ಮುಂದುವರಿಸಲಾಯಿತು.

§ ಪಾರ್ಲಿಮೆಂಟಿನ ಸದಸ್ಯರಾದ ಧಶರಥದೇವ್‌ರವರನ್ನು ಮೊನ್ನೆಯದಿನ ತ್ರಿಪುರಾ ಸಂಸ್ಥಾನದ ಅಗರ್‌ತಲಾದಲ್ಲಿ ದಸ್ತಗಿರಿಗೆ ಸಂಬಂಧಪಟ್ಟ ಹಕ್ಕಿನ ಪ್ರಶ್ನೆಯು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಿತು. ಗೃಹಸಚಿವರು ಈ ವಿಷಯವನ್ನು ವಿಚಾರಣೆ ನಡೆಸುವುದಾಗಿ ತಿಳಿಸಿದರು.

ಬಡ ವಿದ್ಯಾರ್ಥಿಗಳಿಗೆ ಉಚಿತ ಭೋಜನ

ಮೈಸೂರು ಜೂನ್ ೧೩

ಮೈಸೂರು ಪೌರಸಭೆಯವರ ಆಶ್ರಯದಲ್ಲಿ ಪ್ರತಿವರ್ಷವೂ ಬಡವಿದ್ಯಾರ್ಥಿಗಳಿಗೆ ಉಚಿತ ಭೋಜನವನ್ನು ಏರ್ಪಡಿಸಲಾಗುತ್ತಿದೆಯಷ್ಟೆ. ಈ ಸಾಲಿನಲ್ಲೂ ಸಹ ೧೦೦ ಜನ ಬಡವಿದ್ಯಾರ್ಥಿಗಳಿಗೆ ಉಚಿತವಾಗಿ ಭೋಜನವನ್ನು ಏರ್ಪಡಿಸಲಾಗುವುದು. ಈ ಸೌಕರ್ಯವನ್ನು ಪಡೆಯಲು ಅಪೇಕ್ಷಿಸುವ ವಿದ್ಯಾರ್ಥಿಗಳು ಮುಂದಿನ ತಿಂಗಳು ೧೫ನೇ ತಾರೀಖಿನೊಳಗಾಗಿ ಪೌರಸಭಾ ಕಛೇರಿಗೆ ಅರ್ಜಿಗಳನ್ನು ಸಲ್ಲಿಸಬೇಕು ಎಂದು ಅಧ್ಯಕ್ಷರು ತಿಳಿಸಿರುತ್ತಾರೆ.

ಸಂಗೀತ

ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದಲ್ಲಿ ಇದೇ ೧೪-ನೇ ತಾರೀಖು ಶನಿವಾರ ಸಂಜೆ ೬ ಘಂಟೆಗೆ ಆ ಸ್ಥಾನ ಸಂಗೀತ ವಿದ್ವಾನ್ ಎಸ್. ಎನ್- ಮರಿಯಪ್ಪನವರ ಹಾಡುಗಾರಿಕೆ ಏರ್ಪಡಿಸಲಾಗಿದೆ.

ಹರಿಕಥೆ

ರಾಜಧಾನಿಯ ಮಂಡಿಮೊಹಲ್ಲಾ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಇದೇ ೧೪ ನೇ ತಾರೀಖು ಶನಿವಾರ ಮತ್ತು ೧೫ ನೇ ತಾರೀಖು ಭಾನುವಾರ ಸಂಜೆ ೭ ಘಂಟೆಗೆ ಬೆಂಗಳೂರಿನ ಕೀರ್ತನ ಶಿರೋಮಣಿ ಹರಿಕಥಾ ವಿದ್ವಾನ್ ಪಿ ರಾಮಸ್ವಾಮಿನಾಯ್ಡು ರವರ ಮಕ್ಕಳು ಶ್ರೀ ಗುರುರಾಜು ನಾಯ್ಡು ರವರಿಂದ ಕಬೀರ್ ಮತ್ತು ಇಂದ್ರಕೀಲ ಎಂಬ ಹರಿಕಥೆಗಳು ನಡೆಯುವುವು.

ಎಲ್. ಎಸ್. ಪರೀಕ್ಷೆ

ರಾಜಧಾನಿಯ ಮಾದರಿ ಶಾಲೆಯಲ್ಲಿ ಈಸಾರಿ ಮೇಲ್ಕಂಡ ಪರೀಕ್ಷೆಗೆಕುಳಿತ ೭೪ ವಿದ್ಯಾರ್ಥಿಗಳ ಪೈಕಿ, ೫೭ ಮಂದಿ ತೇರ್ಗಡೆ ಹೊಂದಿದ್ದಾರೆ. ಇವರಲ್ಲಿ ೯ ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಕೊರಿಯಾಕ್ಕೆ ತಟಸ್ಥ ರಾಷ್ಟ್ರಗಳ ವೀಕ್ಷಕರು

ಕೊರಿಯಾ ಯುದ್ಧದಲ್ಲಿ ಸೆರೆಹಿಡಿದ ಕಮ್ಯೂನಿಸ್ಟ್ ಖೈದಿಗಳ ಯೋಗಕ್ಷೇಮವನ್ನು ಯಾವ ರೀತಿ ನೋಡಕೊಳ್ಳಲಾಗುತ್ತಿದೆಯೆಂಬುದನ್ನು ಪರಿಶೀಲಿಸಲು ಭಾರತ, ಪಾಕಿಸ್ಥಾನ್, ಇಂಡೋನೇಷ್ಯ, ಸ್ವೀಡನ್ ಮತ್ತು ಸ್ವಿಟ್ಜರ್ಲೆಂಡ್ ರಾಷ್ಟ್ರಗಳಿಂದ ವೀಕ್ಷಕರನ್ನು ಕಳುಹಿಸಬೇಕೆಂದು ಅಮೆರಿಕ ಅಧ್ಯಕ್ಷ ಟ್ರೂಮನ್‌ರವರು ಆಹ್ವಾನವಿತ್ತಿದ್ದಾರೆ.

ಕಾಶ್ಮೀರದಲ್ಲಿ ರಾಜತ್ವ ರದ್ದು

ಕಾಶ್ಮೀರದಲ್ಲಿ ವಂಶಪಾರಂಪರ್ಯ ರಾಜತ್ವವನ್ನು ರದ್ದುಗೊಳಿಸಿ, ಪ್ರಜಾಪ್ರಭುತ್ವ ತತ್ವದ ಮೇಲೆ ರಾಷ್ಟ್ರಾಧಿಪತಿಯನ್ನು ಚುನಾಯಿಸಬೇಕೆಂದು ಅಲ್ಲಿನ ರಾಜ್ಯಾಂಗ ಸಭೆಯು ನಿರ್ಣಯಮಾಡಿದೆ.

ಕ್ಷಾಮ ಪೀಡಿತ ಪ್ರದೇಶಗಳಿಗೆ ಸಹಾಯ

ಬೆಂಗಳೂರು ಜೂನ್ ೧೩

ಸಂಸ್ಥಾನದ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಉಂಟಾಗಿರುವ ಕ್ಷಾಮ ಪರಿಹಾರಕ್ಕಾಗಿ ಸರ್ಕಾರದವರು ಅನೇಕ ಕೆಲಸಕಾರ್ಯಗಳನ್ನು ಕೈಕೊಂಡಿರುವುದಾಗಿ ತಿಳಿಸಲಾಗಿದೆ. ಕೋಲಾರ ಜಿಲ್ಲೆಯೊಂದಕ್ಕೆ ೫ ಲಕ್ಷ ರೂ ಮಂಜೂರ್ ಮಾಡಲಾಗಿದೆ. ಅಲ್ಲಿ ೧,೧೦,೪೧೧ ಜನರಿಗೆ ಉದ್ಯೋಗ ಕಲಿಸುವ ೭೮೮ ಕಾಮಗಾರಿಗಳನ್ನು ತೆರೆಯಲಾಗಿದೆ. ಈ ಬಗ್ಗೆ ಕಳೆದ ತಿಂಗಳಿನವರೆಗೆ ೨,೯೮,೫೪೯ ರೂ. ಖರ್ಚು ಮಾಡಲಾಗಿದೆ. ತುಮಕೂರು ಜಿಲ್ಲೆಯಲ್ಲಿ ೪೫೧೫ ಜನರಿಗೆ ಉದ್ಯೋಗ ಕಲ್ಪಿಸುವ ೪೧ ಕೆಲಸಗಳೂ, ಚಿತ್ರದುರ್ಗ ಜಿಲ್ಲೆಯಲ್ಲಿ ೭೭೮ ಮಂದಿಗೆ ಉದ್ಯೋಗ ಕಲ್ಪಿಸುವ ೩೫ ಕೆಲಸಗಳೂ ನಡೆಯುತ್ತಿವೆಯೆಂದು ತಿಳಿಸಲಾಗಿದೆ. ೭೫೪ ಟನ್ ಹುಲ್ಲನ್ನು ಮಂಡ್ಯದಿಂದ ಈ ಕ್ಷಾಮಪೀಡಿತ ಪ್ರದೇಶಗಳು ಕಳುಹಿಸಲು ಏರ್ಪಾಡಾಗಿದೆ. ೯ ಸಾವಿರ ಪೌಂಡು ಬ್ರೆಡ್ಡು, ೧೯೭೦ ಪೌಂಡ್ ಹಾಲಿನ ಪುಡಿ ಮತ್ತು ೫ ಸಾವಿರ ಪುಷ್ಟಿಕರ ಮಾತ್ರೆಗಳನ್ನು ಹಂಚಲಾಗಿದೆ.

—: ಪ್ರಕಾಶಕರು ಮತ್ತು ಮುದ್ರಕರು: —

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ನ್ಯೂ ಅಪೇರ ಟಾಕೀಸ್

13-6-52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಶ್ರೀವಳ್ಳಿ ಪ್ರೊಡಕ್ಷನ್ಸ್‌ರವರ....

★ ವೇಲೈಕ್ಕಾರನ್ ★ (ತಮಿಳು)

ಪಾತ್ರ:—ಟಿ. ಆರ್. ಮಹಾಲಿಂಗಂ, ಟಿ. ಎಸ್. ಬಾಲಯ್ಯ, ಮಾಧುರಿದೇವಿ, ಎಸ್. ವರಲಕ್ಷ್ಮಿ, ದ್ರೌಪದಿ.

ಅಂದವಾದ ಮುದ್ರಣಕ್ಕೆ

ಕರ್ನಾಟಕ ಪ್ರಿಂಟರ್ಸ್

ಗಾಂಧಿಚೌಕ ಮೈಸೂರು.

(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)

For NEAT AND PROMPT PRINTING

Contact: CARNATAK PRINTERS

GANDHI SQUARE, MYSORE

Phone 892 or 574

ಕಲ್ಕತ್ತಾ ನಗರಕ್ಕೆ ಕೇಂದ್ರದಿಂದ ಆಹಾರ

೪ ಲಕ್ಷ ಜನಸಂಖ್ಯೆ ಇರುವ ಕಲ್ಕತ್ತ ನಗರಕ್ಕೆ ಆಹಾರ ಧಾನ್ಯಗಳನ್ನು ನೇರವಾಗಿ ಒದಗಿಸಲು ಕೇಂದ್ರ ಸರ್ಕಾರವು ಒಪ್ಪಿದೆ. ಅಲ್ಲಿ ಕಾಳಸಂತೆಯನ್ನು ನಿರ್ಮೂಲ ಮಾಡಲು ಕಡಿಮೆ ದರದ ಆಹಾರ ಧಾನ್ಯಗಳ ಡಿಪೋಗಳನ್ನು ತೆರೆಯಲಾಗುವುದು

ಪಶ್ಚಿಮಬಂಗಾಳದ ಕ್ಷಾಮ ಪೀಡಿತ ಪ್ರದೇಶಗಳಿಗೆ ೧೦ ಸಾವಿರ ಟನ್ ಅಕ್ಕಿ ಮತ್ತು ೧೦ ಸಾವಿರ ಟನ್ ಗೋಧಿಯನ್ನು ಕೂಡಲೇ ಕಳುಹಿಸಲಾಗುವುದೆಂದು ಕೇಂದ್ರ ಆಹಾರ ಸಚಿವರು ತಿಳಿಸಿರುತ್ತಾರೆ.

ಕನ್ನಡಿ ಬದಲ. ದಾದಿಗಳು

ಬಂಗಾಳದ ಮೋತಿಹಾರಿಯ ವಕೀಲರೊಬ್ಬರು ತಮಗೆ ಎರಡು ಕನ್ನಡಿಗಳು ಬೇಕೆಂದು ಕಲ್ಕತ್ತದ ಸ್ನೇಹಿತರೊಬ್ಬರಿಗೆ ತಂತಿ ಕಳುಹಿಸಿದ್ದರೆಂದೂ, ಆದರೆ ತಂತಿ ಇಲಾಖೆಯವರು ಅದನ್ನು ತಲುಪಿಸುವಾಗ ಇಬ್ಬರು ನರ್ಸು (ದಾದಿ)ಗಳು ಎಂದು ಕಳುಹಿಸಿದ್ದರೆಂದೂ, ಅವರ ಪರಿಣಾಮವಾಗಿ, ಇಬ್ಬರು ನರ್ಸುಗಳು ಮೋತಿಹಾರಿಗೆ ಹೋದರೆಂದೂ, ಇದರಿಂದ ಆ ವಕೀಲರು ದಾದಿಗಳಿಗೆ ೫೦೦ ರೂ. ಕೊಟ್ಟು ಕಳುಹಿಸಬೇಕಾಯಿತೆಂದೂ ವರದಿಯಾಗಿದೆ. ಈಗ ತಂತೀ ಇಲಾಖೆಯ ಮೇಲೆ ಲಾಯರು ಮೊಕದ್ದಮೆ ಹೂಡಿದ್ದಾರೆ.

ವಿಶ್ವ ಸಂಸ್ಥೆ ಬಿಡಬೇಕಾದ ಕಾಲ ಬಂದಿದೆ

ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳ ತಂದ ವಿಷಯಗಳನ್ನು ಚರ್ಚಿಸಲು ಒಂದೆರಡು ರಾಷ್ಟ್ರಗಳು ಆಕ್ಷೇಪಿಸಬಹುದೆಂಬ ಕಾರಣಗಳಿಂದ ಅವುಗಳನ್ನು ಪರಿಶೀಲಿಸಲು ವಿಶ್ವಸಂಸ್ಥೆಯು ಅವಕಾಶಕೊಡದಿದ್ದ ಪಕ್ಷದಲ್ಲಿ ಏಷ್ಯಾ ಮತ್ತು ಆಫ್ರಿಕಾ ದೇಶಗಳು ಪ್ರಪಂಚ ಸಂಸ್ಥೆಯಲ್ಲಿ ಇರುವುದಕ್ಕಿಂತ ತಮ್ಮ ಪಾಡಿಗೆ ತಾವು ಇರಬೇಕೆಂದು ನಿರ್ಧರಿಸುವ ಕಾಲ ಬರುತ್ತಿದೆಯೆಂದು ಪ್ರಧಾನಿ ಪಂ|| ನೆಹರೂರವರು ಎಚ್ಚರಿಕೆ ಕೊಟ್ಟಿರುತ್ತಾರೆ.

ಗೇಣಿದಾರರ ಶಾಸನ

ಬಂಗಾರಪೇಟೆ, ಮುಳಬಾಗಲು, ಮೊಳಕಾಲ್ಮೂರು, ತೀರ್ಥಹಳ್ಳಿ, ಸಾಗರ, ಹೊಸನಗರ, ಕೊಪ್ಪ, ಶ್ರೀರಂಗಪಟ್ಟಣ ಮತ್ತು ಮಧುಗಿರಿ ತಾ|| ಗಳಲ್ಲಿ ಗೇಣಿದಾರರ ಶಾಸನವು ಜಾರಿಗೆ ಬರಲಿದೆಯೆಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ಹೈದರಾಬಾದಿನ ಖೋತಾ ಬಡ್ಜೆಟ್

ಹೈದರಾಬಾದಿನ ಆರ್ಥಿಕಸಚಿವ ಡಾ|| ಮೇಲುಕೋಟೆಯವರು ಸಂಸ್ಥಾನದ ಬಡ್ಜೆಟ್ಟನ್ನು ಮಂಡಿಸುತ್ತಾ, ಈ ವರ್ಷ ೨೮. ೯೧ ಕೋಟಿ ರೂ. ಆದಾಯ, ೩೧. ೯೨ ಕೋಟಿ ಖರ್ಚು ಇದ್ದು, ೩. ೦೧ ಕೋಟಿ ರೂ. ಖೋತಾ ಬೀಳುವುದೆಂದು ತಿಳಿಸಿರುತ್ತಾರೆ. ಅದನ್ನು ಸರಿತೂಗಿಸಲು, ಮಾರಾಟದ ತೆರಿಗೆಯನ್ನು ರೂಪಾಯಿಗೆ ಎರಡುಕಾಸಿನಿಂದ ನಾಲ್ಕು ಕಾಸಿಗೂ, ಎಣ್ಣೆ ಬೀಜಗಳು. ಹತ್ತಿ ಮತ್ತು ಕಬ್ಬು ಮೊದಲಾದ ವ್ಯಾಪಾರದ ಬೆಳೆಗಳ ಮೇಲೆ ವಿಶೇಷ ತೆರಿಗೆಯನ್ನು ವಿಧಿಸಲಾಗುವುದೆಂದು ಅವರು ಹೇಳಿರುತ್ತಾರೆ.

ಸನ್ಯಾಸಿಯ ಮೋಸ

ಕೋಲಾರದಲ್ಲಿ ಅನೇಕ ಜನರನ್ನು ಮೋಸಪಡಿಸಿ ೧೦ ಸಾವಿರ ರೂ. ಗಳೊಡನೆ ಪರಾರಿಯಾಗಿರುವ ಸನ್ಯಾಸಿಯೊಬ್ಬನ ಕುತಂತ್ರ ಈಗ ಬಹಿರಂಗವಾಗಿದೆ. ಶ್ರೀ ಅದ್ವೈತಾನಂತ ವೇಮನಯೋಗಿ ಎಂದು ಹೇಳಿಕೊಂಡ ಸಾಧುವೊಬ್ಬನು ಕಳೆದ ಒಂದೂವರೆ ತಿಂಗಳಿನಿಂದಲೂ ಕೋಲಾರ ಪಟ್ಟಣದಲ್ಲಿ ಇದ್ದು, ಪ್ರತಿಯೊಬ್ಬರಿಂದ ೫-೧೨-೦ ರೂ. ಹಣಪಡೆದು, ಅವರಿ. ಕಾಲಕ್ರಮೇಣ ೧೭ ಸಾವಿರ ರೂ ಕೊಡುವುದಾಗಿ ನಂಬಿಸಿ, ಈ ರೀತಿ ಸಾವಿರಾರು ಜನದಿಂದ ಹಣಪಡೆದು ಈಗ ಓಡಿ ಹೋಗಿರುವನೆಂದು ವರದಿಯಾಗಿದೆ.

ಉಡ್‌ಲ್ಯಾಂಡ್ಸ್

13—6—52 ರಿಂದ

ಅಮೋಘವಾದ 2ನೇ ವಾರ

ಸಂತೋಷಿಯವರ—

ಶಿನ್ ಶಿನಾಕಿ-ಬೂಬ್ಲಾಬೂ

(ಹಿಂದಿ)

ಪಾತ್ರ:—ರೆಹನಾ, ರಂಜನ್, ವೀರಾ

ಸಂಗೀತ:— ಶ್ರೀ C. ರಾಮಚಂದ್ರ

ಕಾಳಸಂತೆ ನಡೆಸದಂತೆ ಮಾಲೀಕರಿಂದ ಕರಾರು

ಮದರಾಸಿನಲ್ಲಿ ಈಗಿರುವ ರೇಷನ್ ಡಿಪೋಗಳನ್ನೆಲ್ಲಾ ಫೇರ್‌ಪ್ರೈಸ್ ಡಿಪೋಗನ್ನಾಗಿ ಪರಿವರ್ತಿಸಲಾಗುವುದು. ಖಾಸಗಿ ಫೇರ್ ಪ್ರೈಸ್ ಡಿಪೋಗಳ ಮಾಲೀಕರುಗಳು ಆಹಾರ ಧಾನ್ಯಗಳನ್ನು ತಾವೇ ಕಾಳಸಂತೆಯಲ್ಲಿ ಮಾರುವುದಿಲ್ಲವೆಂಬ ಬರವಸೆ ಕರಾರನ್ನು ಅವರುಗಳಿಂದ ತೆಗದುಕೊಳ್ಳಲಾಗಿದೆಯೆಂದು ಹೇಳಲಾಗಿದೆ.

ಮಾವಿನ ಹಣ್ಣಿನ ಪ್ರದರ್ಶನ

ಅಖಿಲಭಾರತ ಮಾವಿನ ಹಣ್ಣಿನ ಪ್ರದರ್ಶನದ ಆರಂಭೋತ್ಸವವು ನಿನ್ನೆ ಬೆಂಗಳೂರಿನ ಲಾಲ್‌ಬಾಗಿನಲ್ಲಿ ನಡೆಯಿತು. ವಿವಿಧ ಮಾವಿನ ಹಣ್ಣುಗಳು, ಮಾವಿನ ಕಾಯಿನಿಂದ ತಯಾರಾದ ಉಪ್ಪಿನಕಾಯಿ, ಚಟ್ನಿ ಚಿಪ್ಸ್, ಮೊರಬ್ಬಾ, ಮುಂತಾದ ವಸ್ತುಗಳನ್ನು ಪ್ರದರ್ಶಿಸಲಾಗಿತ್ತು. ಶ್ರೀರಂಗದ ಶ್ರೀ ತಾತಾಚಾರಿಯವರು ಸುಮಾರು ೫೦ ಜಾತಿಯ ಮಾವಿನ ಹಣ್ಣುಗಳನ್ನು ಪ್ರದರ್ಶಿಸಿದ್ದರು.

ಕೋಜೆ ದ್ವೀಪದಲ್ಲಿ ಪುನಃ ಗಲಭೆ

ಉತ್ತರ ಕೊರಿಯಾ ಖೈದಿಗಳಿರುವ ಕೋಜೆ ದ್ವೀಪದಲ್ಲಿ ನಿನ್ನೆದಿನ ಪುನಃ ಗಲಭೆ ನಡೆದು ೪೦ ಮಂದಿ ಸತ್ತರೆಂದು ವರದಿಯಾಗಿದೆ. ವಿಶ್ವಸಂಸ್ಥೆ ಸೈನ್ಯಾಧಿಕಾರಿಗಳ ಆಜ್ಞೆಯನ್ನು ಪಾಲಿಸಲಿಲ್ಲವೆಂದು ಖೈದಿಗಳ ಮೇಲೆ ಟಿಯರ್ ಗ್ಯಾಸನ್ನು ಪ್ರಯೋಗಿಸಿಸಲಾಯಿತು.

ತುಂಗಭದ್ರ ಆಣೆಕಟ್ಟು

೧೯೫೩ ರ ಅಂತ್ಯದಲ್ಲಿ ತುಂಗಭದ್ರ ಆಣೆಕಟ್ಟಿನ ಕೆಲಸವು ಮುಗಿಯುವುದೆಂದೂ ಆ ಯೋಜನೆಗೆ ಈಗಾಗಲೇ ೫ ಕೋಟಿ ರೂ. ವೆಚ್ಚವಾಗಿದೆಯೆಂದೂ ಹೈದರಾಬಾದ್ ಸಚಿವರು ತಿಳಿಸಿರುತ್ತಾರೆ.

ಪರೀಕ್ಷೆಯಲ್ಲಿ ಫೇಲಾಗಿದ್ದಕ್ಕೆ ಆತ್ಮಹತ್ಯ

ಕಡೂರು ತಾಲ್ಲೋಕಿನ ಲಕ್ಷ್ಮೀಪುರ ಹಳ್ಳಿಯ ೨೨ ವರ್ಷದ ಶ್ರೀ ಆರ್. ಹನುಮಂತಪ್ಪ ಎಂಬ ವಿದ್ಯಾರ್ಥಿಯು ಈ ಸಲದ ಎಲ್. ಎಸ್. ಪರೀಕ್ಷೆಯಲ್ಲಿ ತೇರ್ಗಡೆಯಾಗದಿದ್ದುದರಿಂದ ರೈಲಿಗೆ ಸಿಕ್ಕಿ ಮೃತನಾದನೆಂದು ವರದಿಯಾಗಿದೆ.

ರೈತರುಗಳಿಗೆ ಸಬ್‌ಸಿಡಿ

ದೇಶದಲ್ಲಿ ಹೆಚ್ಚು ಆಹಾರ ಬೆಳೆ ಯೋಜನೆಯನ್ನು ಇನ್ನೂ ವಿಶೇಷವಾಗಿ ಮುಂದುವರಿಸಲು ರೈತರುಗಳಿಗೆ ಕೇಂದ್ರಸರ್ಕಾರದವರು ಸಬ್‌ಸಿಡಿಯನ್ನು ಕೊಡಲು ನಿರ್ಧರಿಸಿದ್ದಾರೆ ನೀರಾವರಿ ಕೆಲಸಕಾರ್ಯಗಳಿಗೆ ತಗಲುವ ಖರ್ಚಿನಲ್ಲಿ ಶೇಕಡ ೨೫ ರಷ್ಟನ್ನು ರೈತರುಗಳಿಗೆ ಕೊಡಲಾಗುವುದು.

ಅಧಿಕ ಸೈನ್ಯಕ್ಕೆ ವೆಚ್ಚ

ಅಮೆರಿಕಾ ಮತ್ತು ಇತರ ಸಮುದ್ರ ಪ್ರದೇಶಗಳಲ್ಲಿ ಸೇನಾ, ನೌಕಾ ಮತ್ತು ವಿಮಾನ ನೆಲೆಗಳನ್ನು ರಚಿಸಲು ಪ್ರತಿನಿಧಿ ಸಭೆಯು ೩,೭೫,೮೩,೩೧೭,೦೦೦ ಡಾಲರುಗಳ ವೆಚ್ಚದ ಕೋರಿಕೆಯನ್ನು ಅಂಗೀಕರಿಸಿದೆ.

ಫೋನ್ 574 (ಲಿಂಕ್) ದಿನಪತ್ರಿಕೆ ರಿ. ನ. ಎಂ. 5318

ಸಮಾಚಾರ

ಸಂಪಾದಕ: ಜಿ. ಎಲ್. ಸ್ವಾಮಿ

ಸಂಪುಟ ೨] ೧೫-೬-೧೯೫೨ನೇ ಭಾನುವಾರ [ಸಂಚಿಕೆ ೨೮೧

ಭಾರತಾದ್ಯಂತ ಆಹಾರ ಹತೋಟಿರದ್ದುಮಾಡುವುದಿಲ್ಲ

ಮಂಚೂರಿಯಾ ಮೇಲೆ ಬಾಂಬು ಹಾಕುವುದು ಸರಿಯಲ್ಲ

ಮಂಚೂರಿಯಾ ಮತ್ತು ಇತರ ಚೀಣಿ ಪ್ರದೇಶಗಳ ಮೇಲೆ ಈಗ ಬಾಂಬುಗಳನ್ನು ಹಾಕುವುದು ಸೂಕ್ತವೆಂದು ಅಮೆರಿಕದ ಅಧ್ಯಕ್ಷ ಚುನಾವಣೆಗೆ ನಿಂತಿರುವ ಐಸನ್‌ಹೊವರ್‌ರವರು ತಿಳಿಸುತ್ತಾರೆ. ಅಮೆರಿಕ ಮತ್ತು ಇತರಸೈನ್ಯಗಳನ್ನು ಬಲಪಡಿಸದೆ ಹೊರತು ಈ ಕಾರ್ಯ ಯಶಸ್ವಿಯಾಗುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಜೈಲಿನಲ್ಲಿ ಸತ್ಯಾಗ್ರಹಿಗಳ ಉಪವಾಸ

ಬೊಂಬಾಯಿನಲ್ಲಿ ಅನ್ನ ಸತ್ಯಾಗ್ರಹದಲ್ಲಿ ದಸ್ತಗಿರಿಯಾಗಿ ಶಿಕ್ಷೆಗೆ ಒಳಪಟ್ಟ ೯ ಮಂದಿ ಮಹಿಳಾ ಸತ್ಯಾಗ್ರಹಿಗಳು ತಮಗೆ ಜೈಲಿನಲ್ಲಿ ಕೊಡುತ್ತಿರುವ ಆಹಾರವು ಸರಿಯಾಗಿಲ್ಲವೆಂದು ಉಪವಾಸ ಪ್ರಾರಂಭಿಸಿದ್ದಾರೆ. ಅಲ್ಲಿರುವ ಇತರ ೧೬೦ ಮಂದಿ ಸತ್ಯಾಗ್ರಹಿಗಳೂ ಸಹ ಉಪವಾಸ ಮಾಡಲಿದ್ದಾರೆಂದು ಹೇಳಲಾಗಿದೆ. ಈ ಬಗ್ಗೆ ಸಮತಾವಾದಿ ನಾಯಕರಾದ ಶ್ರೀ ಅಶೋಕ ಮೆಹತಾರವರು ಅಲ್ಲಿನ ಮುಖ್ಯಮಂತ್ರಿಗಳನ್ನು ಕಂಡು ಮಾತನಾಡಿದ ಫಲವಾಗಿ, ಜೈಲಿನಲ್ಲಿ ಉತ್ತಮ ಆಹಾರವನ್ನು ಅವರಿಗೆ ಕೊಡುವುದಾಗಿ ಸಚಿವರು ಭರವಸೆ ಇತ್ತಿದ್ದಾರೆ.

೧೭-೬-೧೯೫೨ನೇ ಮಂಗಳವಾರದಿಂದ ಸಮಾಚಾರ ಪತ್ರಿಕೆಯು ಪ್ರತಿ ದಿನ ಸಂಜೆ ಪ್ರಕಟವಾಗುತ್ತದೆ. —ವ್ಯವಸ್ಥಾಪಕ

ನಿರಾಶ್ರಿತರಿಗಾಗಿ ಸಹಾಯ

ಭಾರತದಲ್ಲಿರುವ ನಿರಾಶ್ರಿತರ ಸಹಾಯಕ್ಕಾಗಿ ಈ ವರ್ಷ ಮಂಜೂರಾಗಿರುವ ೩೩ ಕೋಟಿ ರೂ. ಗಳ ಪೈಕಿ, ಮೈಸೂರಿಗೆ ೧,೮೯೧,೦೦೦ ರೂ.ಗಳನ್ನು ಕೇಂದ್ರ ಸರ್ಕಾರವು ಕೊಡಲು ನಿರ್ಧರಿಸಿದೆ. ಈ ಹಣದಿಂದ ನಿರಾಶ್ರಿತ ವ್ಯಾಪಾರ ಉದ್ಯಮ, ವಿದ್ಯಾಭ್ಯಾಸ ಮತ್ತು ಇತರ ಬಾಬ್ತುಗಳಿಗೆ ಖರ್ಚು ಮಾಡಲಾಗುವುದು.

ಮುಖ್ಯಮಂತ್ರಿಗಳಿಗೆ ಕಾಂಗ್ರೆಸ್ ಅಧ್ಯಕ್ಷ ಪದವಿಯಿಲ್ಲ

ಸಂಸ್ಥಾನಗಳ ಮುಖ್ಯಮಂತ್ರಿಗಳಿಗೆ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಕೊಡಲು ಹೈಕಮ್ಯಾಂಡಿನವರು ಯೋಚಿಸುತ್ತಿರುವುದಾಗಿ ತಾವು ಭೂಪಾಲಿನಲ್ಲಿ ತಿಳಿಸಿದರೆಂದು ಪ್ರಕಟವಾಗಿರುವ ಸುದ್ದಿಗೆ ಯಾವ ಆಧಾರವೂ ಇಲ್ಲವೆಂದೂ, ತಾವು ಆ ರೀತಿ ಹೇಳಿಲ್ಲವೆಂದೂ ಲಾಲ್ ಬಹದ್ದೂರ್ ಶಾಸ್ತ್ರಿಗಳು ನಿನ್ನೆದಿನ ತಿಳಿಸಿದರು

ಪುನರ್ವಸತಿಗೆ ಸಹಾಯ

ಮೈಸೂರು ಮಧ್ಯಪ್ರದೇಶ್, ಪೆಪ್ಸು, ದೆಹಲಿ ಮುಂತಾದ ೧೦ ಪ್ರಾಂತ್ಯಗಳಲ್ಲಿ ಪುನರ್ವಸತಿ ಮತ್ತು ಪರಿಹಾರ ಕಾರ್ಯಗಳಿಗಾಗಿ ಕೇಂದ್ರವು ೧ ಕೋಟಿ ೬೦ ಲಕ್ಷ ರೂಪಾಯಿಗಳನ್ನು ೫೨-೫೩ ನೇ ಸಾಲಿಗೆ ಮಂಜೂರ್ಮಾಡಿದೆ.

ವಿಶ್ವಬ್ಯಾಂಕು ನಿಯೋಗ

ಜಾರ್ಜ್ ಫೂಟ್ಸ್ ಎಂಬುವರ ನಾಯಕತ್ವದಲ್ಲಿ ದೆಹಲಿಗೆ ವಿಶ್ವಬ್ಯಾಂಕಿನ ನಿಯೋಗವೊಂದು ಬಂದಿದೆ. ನಾಡ ಕಬ್ಬಿಣದ ಬಗ್ಗೆ ಕೇಳಿರುವ ಸಾಲದ ವಿಷಯವನ್ನು ಪರಿಶೀಲಿಸಲು ಈ ನಿಯೋಗವು ಆಗಮಿಸಿದೆ.

ಹತೋಟಿ ಪುನಃ ಬಂದರೆ ಅಧಿಕಾರ ಬಿಡುತ್ತೇನೆ

ಮದ್ರಾಸಿನಲ್ಲಿ ಹತೋಟಿಗಳು ಪುನಃ ಬರುವುದಿಲ್ಲ. ಹಾಗೇನಾದರೂ ಬಂದರೆ ನಾನು ಅಧಿಕಾರವನ್ನು ಬಿಟ್ಟು ಹೋಗುತ್ತೇನೆ. ವರ್ತಕರು, ರೈತರು ವ್ಯಾಪಾರ ಸ್ವಾತಂತ್ರ್ಯವನ್ನು ನೈಜರೂಪಕ್ಕೆ ತಂದು ಅವನ್ನು ಸದುಪಯೋಗಪಡಿಸಿ ಕೊಳ್ಳಬೇಕೆಂದು ಮದ್ರಾಸಿನ ಮುಖ್ಯಮಂತ್ರಿ ಶ್ರೀ ರಾಜಗೋಪಾಲಚಾರಿಯವರು ಹೇಳಿರುವರು.

ಕ್ಷಾಮ ಪ್ರದೇಶದಲ್ಲಿ ಕಂದಾಯ ರಿಯಾಯಿತಿ

ಮೈಸೂರು ಸಂಸ್ಥಾನದ ಕ್ಷಾಮಪೀಡಿತ ಪ್ರದೇಶಗಳಲ್ಲಿ ಕಂದಾಯದಲ್ಲಿ ಅರ್ಧಭಾಗವನ್ನು ಮಾಫಿ ಮಾಡಿ, ಉಳಿದ ಭಾಗದ ವಸೂಲಿಯನ್ನು ಮುಂದುವರಿಸುವಂತೆ ಸರ್ಕಾರದವರು ಆಜ್ಞೆಮಾಡಿರುತ್ತಾರೆ.

ಭಾರತಾದ್ಯಂತ ಆಹಾರ ಹತೋಟಿ ರದ್ದು ಮಾಡುವುದಿಲ್ಲ

ಭಾರತಾದ್ಯಂತ ಆಹಾರ ಹತೋಟಿಯನ್ನು ರದ್ದುಗೊಳಿಸುವುದಿಲ್ಲ ಆದರೆ ಆಹಾರ ಸಾಗಾಣಿಕೆಗೆ ಅವಕಾಶವನ್ನು ಕೊಡುವುದಲ್ಲದೆ ಆಹಾರ ಶೇಖರಣೆ ವಿಷಯದಲ್ಲಿ ಹಲವಾರು ಹತೋಟಿಗಳನ್ನು ಸಡಲಿಸಲಾಗುತ್ತದೆ. ದೇಶದಲ್ಲಿರುವ ಆಹಾರ ಬೆಳೆಯುವವರು, ಮಾರುವವರು, ಉಪಯೋಗಿಸುವವರು ಎಲ್ಲರೂ ಸಹಕಾರಮನೋಭಾವದಿಂದ ವರ್ತಿಸಿ ಆಹಾರ ಸಮಸ್ಯೆಯನ್ನು ಉತ್ತಮ ರೀತಿಯಲ್ಲಿ ಪರಿಹರಿಸಬೇಕೆಂದು ಪ್ರಧಾನಿ ನೆಹರೂ ನಿನ್ನೆ ರಾತ್ರಿ ಎ. ಐ. ಆರ್. ನಲ್ಲಿ ಆಹಾರ ವಿಷಯವಾಗಿ ಮಾತನಾಡುತ್ತಾ ಹೇಳಿದರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಕೆಲವು ಕಾಲದಿಂದ ನಾವು ಕ್ಷಾಮ, ಆಹಾರ ಅಭಾವವನ್ನು ಎದುರಿಸಬೇಕಾಯಿತು. ಕೊನೆಗೆ ನೀರಿನ ಅಭಾವವೂ ಇದ್ದಿತು. ದೇವರ ಕೃಪೆಯಿಂದ ಅವು ಕಡಿಮೆಯಾಗುತ್ತಲಿವೆ. ಈ ವರ್ಷಾರಂಭದಲ್ಲಿ ನಮ್ಮಲ್ಲಿ ೧೪-೩ ಲಕ್ಷ ಟನ್ ಆಹಾರ ದಾಸ್ತಾನಿತ್ತು. ಈಗ ೩೬ ಲಕ್ಷ ಟನ್ನು ಇದೆ. ಕೇಂದ್ರದ ಹತೋಟಿಯಲ್ಲಿ ೩.೫ ಲಕ್ಷ ಟನ್ ಇದೆ. ಹೊರಗಿನಿಂದ ಆಹಾರ ಪಡೆಯುತ್ತಿರುವುದರಿಂದ ಬೆಲೆಯು ಏರಿದೆ. ನಮ್ಮಲ್ಲಿ ಗೋಧಿ ಮೈಲೋ ಹೆಚ್ಚಾಗಿದೆ. ಅಕ್ಕಿ ಇಲ್ಲ ಅದನ್ನು ಪಡೆಯಲು ಪ್ರಯಾಸಮಾಡುತ್ತಿದ್ದೇವೆ. ಆದರೆ ದೇಶಾದ್ಯಂತ ಆಹಾರ ಬೆಲೆಯು ಸರ್ಕಾರಿ ಬೆಲೆಗಿಂತ ಕಡಿಮೆಯಾಗುತ್ತಿದೆ. ಎಂತಹ ಉತ್ಕಟ ಪರಿಸ್ಥಿತಿ ಬಂದರೂ ಎದುರಿಸಲು ಸಿದ್ಧರಿದ್ದೇವೆ.

ಪೂರ್ತಿ ಹತೋಟಿಯನ್ನು ತೆಗೆದರೆ ಉಗ್ರ ಪರಿಸ್ಥಿತಿ ಉಂಟಾಗುವುದು ದೇಶಾದ್ಯಂತ ಆಹಾರ ಸಚಿವರು ಪ್ರವಾಸ ಮಾಡುತ್ತಿರುವರು. ಎಲ್ಲಾ ಪರಿಸ್ಥಿತಿಯನ್ನು ಪರಿಶೀಲಿಸಿ ತಕ್ಕ ಸುವ್ಯವಸ್ಥೆ ಮಾಡಲಾಗುವುದೆಂದು ಪ್ರಧಾನಿ ಹೇಳಿದರು.

ವ್ಯವಸಾಯ ಸಂಘಗಳು

ಹಳ್ಳಿಗಳಲ್ಲಿ ವ್ಯವಸಾಯ ಸಂಘವನ್ನು ಸ್ಥಾಪಿಸಲು ಮದರಾಸ್ ಸರ್ಕಾರದವರು ಯೋಜನೆ ತಯಾರಿಸಿದ್ದಾರೆ. ಇದರಿಂದ ರೈತರಿಗೂ ಮತ್ತು ಇತರರಿಗೂ ಮಧುರ ಬಾಂಧವ್ಯ ಏರ್ಪಡಿಸಲು ಸಹಕಾರಿಯಾಗುವುದೆಂದೂ, ಮತ್ತು ಹೆಚ್ಚು ಆಹಾರ ಬೆಳೆಯಲು ಅನುಕೂಲವಾಗುವುದೆಂದೂ ಹೇಳಲಾಗಿದೆ.

ಬರ್ಮಾಕ್ಕೆ ಭಾರತದಿಂದ ವೈದ್ಯರುಗಳು

ಭಾರತದಿಂದ ೨೦೦ ಮಂದಿ ವೈದ್ಯರುಗಳನ್ನು ನೇಮಕಮಾಡಿಕೊಳ್ಳಲು ಈಗ ಬೊಂಬಾಯಿಗೆ ವೈದ್ಯ ಪ್ರವೀಣರನಿಯೋಗವೊಂದು ಬಂದಿದೆ. ಅದಕ್ಕಾಗಿ ೨೫೦ ಅರ್ಜಿಗಳು ಬಂದಿವೆಯೆಂದು ಹೇಳಲಾಗಿದೆ.

ನೆಹರೂಗೆ ಟ್ಯುನೀಷಿಯಾ ಕೃತಜ್ಞತೆ

ಅನೇಕ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆಯಾಗಬೇಕೆಂದು ಪಂಡಿತ ನೆಹರೂರವರು ಭಾರತ ಪಾರ್ಲಿಮೆಂಟಿನಲ್ಲಿ ಇತ್ತೀಚೆಗೆ ಮಾಡಿದ ಭಾಷಣಕ್ಕೆ ಟ್ಯೂನೀಷಿಯಾವು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದೆ.

ಇಟಲಿಯಲ್ಲಿ ಆಶ್ಚರ್ಯ ಕೊಲೆಗಳು

ಇಟಲಿಯ ರಾಜಧಾನಿಯಾದ ರೋಮಿನಲ್ಲಿನ ಒಂದು ಚರ್ಚಿನ ಗೋಡೆಯೊಂದರ ಮೇಲೆ ೩೬ ಜನರ ಹೆಸರನ್ನು ಯಾರೋ ಬರೆದು ಅವರು ದೇಶದ್ರೋಹಿಗಳೆಂದೂ ಅವರೆಲ್ಲರೂ ಕೊಲೆಯಾಗುವರೆಂದೂ ಒಂದುವರ್ಷದ ಹಿಂದೆ ಬರೆಯಲಾಗಿತ್ತು. ಅಂದಿನಿಂದ ಇಲ್ಲಿಯವರೆಗೆ ಯಾರಿಗೂ ಗೊತ್ತಾಗದಂತೆ ಚೂರಿ ಇರಿತದಿಂದ ೨೨ ಮಂದಿ ಕೊಲೆಯಾಗಿದ್ದಾರೆಂದೂ, ಅದನ್ನು ಪತ್ತೆ ಹಚ್ಚಲು ಪೋಲೀಸರು ವಿಫಲವಾಗಿದ್ದಾರೆಂದೂ ವರದಿಯಾಗಿದೆ.

ಭಾರತಕ್ಕೆ ಅಮೆರಿಕದ ಸಹಾಯ ಕೂಡಲೇ ಆಗಬೇಕು

ಭಾರತದ ಜನಸಂಖ್ಯೆಯು ವಿಶ್ವದ ಪ್ರಜಾ ಸಂಖ್ಯೆಯಲ್ಲಿ ಆರನೆಯ ಒಂದುಭಾಗವಿದ್ದರೂ, ಅದಕ್ಕೆ ಭಾರತವು ಕೊಡುತ್ತಿರುವ ಗಮನವು ಇತರ ರಾಷ್ಟ್ರಗಳಿಗೆ ಕೊಡುತ್ತಿರುವುದಕ್ಕಿಂತಲೂ ವಿಶೇಷ ಕಡಿಮೆಯಾಗಿದೆಯೆಂದು ಭಾರತದಲ್ಲಿ ಅಮೆರಿಕ ರಾಯಭಾರಿ ಚೆಸ್ಟರ್‌ಬೌಲ್ಸ್‌ರವರು ವಾಷಿಂಗ್‌ಟನ್ನಿನಲ್ಲಿ ತಿಳಿಸಿರುತ್ತಾರೆ. ಭಾರತಕ್ಕೆ ಅಮೆರಿಕದ ನೆರವು ಅತ್ಯಂತ ತ್ವರಿತವಾಗಿದೆಯೆಂದು, ಕಾಲಮಿಾರಿದ ಮೇಲೆ ಕೋಟ್ಯಾಂತರ ಡಾಲರುಗಳ ಸಹಾಯ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದೂ ಅವರು ಹೇಳಿರುತ್ತಾರೆ. ನೆಹರೂ ಸರ್ಕಾರದವರು ಎಚ್ಚರಿಕೆಯಿಂದ ಇಲ್ಲದಿದ್ದ ಪಕ್ಷದಲ್ಲಿ ಕಮ್ಯೂನಿಸ್ಟರು ಅಧಿಕಾರವನ್ನಾಕ್ರಮಿಸುವ ಸಂಭವವಿದೆಯೆಂದೂ ಅವರು ಎಚ್ಚರಿಕೆ ಇತ್ತಿದ್ದಾರೆ.

ಭಾರತದಲ್ಲಿ ೧೨ ಲಕ್ಷ ಕುಷ್ಠರೋಗಿಗಳು

ಭಾರತದಲ್ಲಿ ೧೨ ಲಕ್ಷ ಕುಷ್ಠರೋಗಿಗಳಿರುವರೆಂದೂ, ಇಡೀ ಜಗತ್ತಿನಲ್ಲೇ ೪೦ ಲಕ್ಷ ಕುಷ್ಠರೋಗಿಗಳಿದ್ದು, ಅವರ ಪೈಕಿ ಹತ್ತರಲ್ಲಿ ಒಂಭತ್ತು ಜನಕ್ಕೆ ವೈದ್ಯ ಚಿಕಿತ್ಸೆಯ ಸೌಲಭ್ಯವೇ ಇಲ್ಲವಾಗಿದೆಯೆಂದು ಅಧಿಕೃತ ವರದಿ ತಿಳಿಸಿದೆ.

ಮುಖ್ಯಮಂತ್ರಿಗಳಿಗೇ ಕಾಂಗ್ರೆಸ್ ಅಧ್ಯಕ್ಷ ಪಟ್ಟೆ

ಆಯಾ ಪ್ರಾಂತಗಳ ಮುಖ್ಯಸಚಿವರುಗಳೇ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ವಹಿಸಿಕೊಳ್ಳುವ ವಿಷಯವು ಕಾಂಗ್ರೆಸ್ ಹೈಕಮ್ಯಾಂಡಿನ ಪರಿಶೀಲನೆಯಲ್ಲಿದೆಯೆಂದು ಪ್ರಧಾನ ಕಾರ್ಯದರ್ಶಿ ಲಾಲ್ ಬಹದ್ದೂರ್ ಶಾಸ್ತ್ರಿಗಳು ತಿಳಿಸಿರುತ್ತಾರೆ

ಸ್ವಾಮಿ ಸೀತಾರಾಮರ ಉಪವಾಸ ಮುಕ್ತಾಯ

ಕಳೆದ ೩೦ ದಿನಗಳಿಂದ ಆಂಧ್ರ ಪ್ರಾಂತ್ಯ ನಿರ್ಮಾಣಕ್ಕಾಗಿ ಉಪವಾಸ ಕೈಗೊಂಡಿರುವ ಸ್ವಾಮಿಸೀತಾರಾಂರವರು ಇದೇ ೧೫ನೇ ತಾರೀಖು ಭಾನುವಾರ ತಮ್ಮ ಉಪವಾಸವನ್ನು ಮುಕ್ತಾಯಗೊಳಿಸುವರು.

ಸಮಾಜ ಸೇವಾ ಶಿಬಿರದ ಆರಂಭ

ಮೈಸೂರು ಜೂ॥ ೧೪

ಮೈಸೂರು ಜಿಲ್ಲಾ ಸೋಷಲಿಸ್ಟ್ ಪಕ್ಷದ ಆಶ್ರಯದಲ್ಲಿ ನಿನ್ನೆ ಸಂಜೆ ರೈಲ್ವೆ ವರ್ಕ್‌ಷಾಪಿನ ಬಳಿ ಇರುವ ನಾಚನಹಳ್ಳಿ ಪಾಳ್ಯದಲ್ಲಿ ಸಮಾಜಸೇವಾ ಶಿಬಿರದ ಆರಂಭೋತ್ಸವವು ಜನಾಬ್ ಮಿಾರ್ ನೂರ್ ಹುಸೇನರವರಿಂದ ನೆರವೇರಿಸಲ್ಪಟ್ಟಿತು.

ಪ್ರಾರಂಭದಲ್ಲಿ ಅಲ್ಲಿನ ಪಂಚಾಯಿತಿ ಅಧ್ಯಕ್ಷರಾದ ಶ್ರೀ ಲಕ್ಷ್ಮಿಬೋಯಿರವರು ಸ್ವಾಗತ ಭಾಷಣ ಮಾಡಿ, ತಮ್ಮ ಹಳ್ಳಿಯ ಪರಿಸ್ಥಿತಿಯನ್ನು ವಿವರಿಸಿದರು. ಹಳ್ಳಿಯ ಜನರು ಜಮಿಾನುಗಳನ್ನು ಕಳೆದುಕೊಂಡು ಬಹಳ ಹೀನ ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆಂದು ತಿಳಿಸಿದರು.

ಮಿಾರ್‌ನೂರ್ ಹುಸೇನರವರು ಭಾಷಣಮಾಡಿ, ಜನರು ವಿದ್ಯಾವಂತರಾದರೆ ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳಲು ಅವಕಾಶವಾಗುವುದೆಂದೂ, ಅದರಿಂದ ತಮ್ಮ ಜೀವನವನ್ನೂ ಉತ್ತಮಪಡಿಸಿಕೊಳ್ಳಬಹುದೆಂದೂ ಒತ್ತಿ ಹೇಳಿದರು. ಸೋಷಲಿಸ್ಟ್ ಪಕ್ಷದವರು ಈ ಕೈಗೊಂಡಿರುವ ಸಮಾಜಸೇವೆಯ ಉದ್ದೇಶವನ್ನು ವಿವರಿಸಿ, ಹಳ್ಳಿಯ ಅವಿದ್ಯತೆಯನ್ನು ನಿರ್ಮೂಲನಮಾಡಲು ಒಂದು ರಾತ್ರಿಶಾಲೆಯನ್ನು ತೆರೆಯಲಾಗುವುದೆಂದೂ ಅದಕ್ಕೆ ಹಳ್ಳಿಯ ಜನರೆಲ್ಲರೂ ಸೇರಿ ವಿದ್ಯಾವಂತರಾಗಬೇಕೆಂದೂ ಕೋರಿದರು. ಅವರ ಕುಂದುಕೊರತೆಗಳನ್ನು ನಿವಾರಿಸಲು ತಮ್ಮ ಪಕ್ಷದವರು ಸ್ವಲ್ಪ ಸಹಾಯವನ್ನು ನೀಡಿ ಸರ್ಕಾರದ ಮುಂದೆ ಇಡುವುದಾಗಿ ಭರವಸೆ ಇತ್ತರು.

೨೦೦ ಮಂದಿ ಪೋಲೀಸರ ರಾಜೀನಾಮೆ

ನೇಪಾಳದಲ್ಲಿರುವ ರಾಮ ದಳವನ್ನು ಕಾಂಗ್ರೆಸ್ಸಿನ ರಕ್ಷಾ ದಳದೊಂದಿದೆ ಸೇರಿಸಿರುವುದನ್ನು ಪ್ರತಿಭಟಿಸಿ, ಅಲ್ಲಿನ ೨೦೦ ಮಂದಿ ರಾಜೀನಾಮೆ ಇತ್ತಿದ್ದಾರೆ.

ಮದರಾಸ್ ಗವರ್ನರರವರ ಭೇಟಿ

ಇದೇ ೨೨ನೇ ತಾ॥ ಮದರಾಸ್ ಗವರ್ನರ್ ಶ್ರೀ ಪ್ರಕಾಶರು ರಾಜಧಾನಿಗೆ ಭೇಟಿಕೊಟ್ಟು ೨ ದಿನಗಳು ರಾಜಪ್ರಮುಖರ ಅತಿಥಿಗಳಾಗಿ ಇರುವರು.

ಸರ್ಕಾರಿ ಸುದ್ಧಿ

ಬೆಂಗಳೂರು ಜೂ॥ ೧೪

ಮೈಸೂರುಜಿಲ್ಲಾ ಸರ್ವೆ ಅಧಿಕಾರಿಗಳಾದ ಶ್ರೀ ಎಂ. ಸಚ್ಚಿದಾನಂದ ಮೂರ್ತಿಯವರನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರಾಗಿಯೂ, ಅಲ್ಲಿ ಅ॥ ಡೈರೆಕ್ಟರಾದ ಜನಾಬ್ ಸೈಯದ್ ಅಬ್ದುಲ್‌ಗನಿಯವರನ್ನು ಅವರ ಸ್ಥಾನಕ್ಕೂ ವರ್ಗಾಯಿಸಲಾಗಿದೆ.

ಶ್ರೀಗಳಾದ ವೇದಾತಂ, ಶ್ರೀನಿವಾಸರಾವ್, ಎ. ಎ. ಶಾಸ್ತ್ರಿ ಮುಂತಾದವರು ಭಾಷಣ ಮಾಡಿ, ಹಳ್ಳಿಯ ಆರ್ಥಿಕ ಸಮಾಜ ಉನ್ನತಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ವರ್ತಿಸಬೇಕೆಂದು ತಿಳಿಸಿದರು.

ಕೊನೆಯಲ್ಲಿ ಲಕ್ಷ್ಮಿಬೋಯಿರವರನ್ನು ಹಳ್ಳಿಯ ನಾಯಕರನ್ನಾಗಿ ನೇಮಿಸಲು ಅಲ್ಲಿದ್ದ ಜನರೆಲ್ಲರೂ ಒಪ್ಪಿಗೆ ಇತ್ತರು.

ಮಾಜಿ ಉಪಸಚಿವರ ದಸ್ತಗಿರಿ

ಪಾಟಿಯಾಲದಲ್ಲಿ ಮಾಜಿ ಉಪಮಂತ್ರಿಯಾಗಿದ್ದ ಚೌಧರಿ ಇಂದ್ರಸಿಂಗ್ ಮಾಲಿಕ್‌ರನ್ನು ಅಲ್ಲಿನ ಜಿಂದ್‌ಬ್ಯಾಂಕ್‌ದರೋಡೆಯ ಸಂಬಂಧದಲ್ಲಿ ದಸ್ತಗಿರಿ ಮಾಡಲಾಗಿದೆ.

ಕ್ಷಾಮ ಪರಿಹಾರಕ್ಕೆ ಡಚ್ಚರ ಸಹಾಯ

ಭಾರತದ ಕ್ಷಾಮ ಪರಿಹಾರನಿಧಿಗಾಗಿ ಡಚ್ ಸಹಾಯ ಸಮಿತಿಯವರು ೨೭೫೦೦೦ ಗಿಲ್ಡರುಗಳನ್ನು ಕೊಟ್ಟಿದ್ದಾರೆ.

ಲಂಡನ್ನಿಗೆ ಬಿ. ಜಿ. ಖೇರೆಯವರ ಪ್ರಯಾಣ

ಬ್ರಿಟನ್ನಿನಲ್ಲಿ ಭಾರತದ ರಾಯಭಾರಿಯಾಗಿ ನೇಮಿತವಾಗಿರುವ ಶ್ರೀ ಬಿ. ಜಿ. ಖೇರೆಯವರು ಇದೇ ೨೬ನೇ ತಾ॥ ಲಂಡನ್ನಿಗೆ ಪ್ರಯಾಣ ಬೆಳೆಸುವರೆಂದು ಹೇಳಲಾಗಿದೆ.

ದಕ್ಷಿಣ ಅಮೆರಿಕದಲ್ಲಿ ಭಾರಿ ಭೂಕಂಪ

ದಕ್ಷಿಣ ಅಮೆರಿಕದ ಸಾ-ಹೂ-ಅ ಪ್ರಾಂತ್ಯದಲ್ಲಿ ಅತಿ ಭಯಂಕರ ಭೂಕಂಪವಾಗಿ ಅನೇಕ ಪ್ರದೇಶಗಳು ನಾಶವಾಗಿ ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆಂದು ವರದಿಯಾಗಿದೆ. ಅಲ್ಲಿ ಒಬ್ಬನು ಸತ್ತು ೪೪ ಮಂದಿಗೆ ತೀವ್ರ ಗಾಯಗಳಾಗಿವೆ. ನಗರದ ಅನೇಕ ಭವನಗಳು ಕುಸಿದುಬಿದ್ದಿವೆ.

ಮೂರನೇ ತರಗತಿ ಜನಸಂದಣಿ ನಿವಾರಿಸಲು ಸಾಧ್ಯವಿಲ್ಲ

ಭಾರತದ ರೈಲ್ವೆಗಳಲ್ಲಿ ೩ ನೇ ತರಗತಿ ಪ್ರಯಾಣಿಕರ ಸಂಖ್ಯೆ ದಿನೇ ದಿನಕ್ಕೂ ಹೆಚ್ಚುತಿದ್ದು, ಅಲ್ಲಿನ ಜನಸಂದಣಿ ವಿಪರೀತವಾಗಿ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವ ಅಂಶವು ತಮ್ಮ ಗಮನಕ್ಕೆ ಬಂದಿದೆಯೆಂದೂ, ಆದರೆ ಈಗಿನ ಗಾಡಿಗಳ ಅಭಾವದಿಂದ ಅದನ್ನು ಸರಿಪಡಿಸಲು ಸಾಧ್ಯವಿಲ್ಲವೆಂದೂ, ಇನ್ನು ಮೂರು ವರ್ಷಗಳಲ್ಲಿ ಭಾರತದಲ್ಲಿ ಗಾಡಿಗಳ ತಯಾರಿಕೆ ಹೆಚ್ಚಾದ ನಂತರ, ಈ ಸಮಸ್ಯೆಯನ್ನು ಬಗೆ ಹರಿಸಲು ಅವಕಾಶವಾಗುವುದೆಂದೂ ಕೇಂದ್ರ ರೈಲ್ವೆ ಸಚಿವರು ತಿಳಿಸಿರುತ್ತಾರೆ.

ನ್ಯೂ ಅಪೇರ ಟಾಕೀಸ್

13-6-52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಶ್ರೀವಳ್ಳಿ ಪ್ರೊಡಕ್ಷನ್ಸ್‌ರವರ....

★ ವೇಲೈಕ್ಕಾರನ್ ★ (ತಮಿಳು)

ಪಾತ್ರ:—ಟಿ. ಆರ್. ಮಹಾಲಿಂಗಂ, ಟಿ. ಎಸ್. ಬಾಲಯ್ಯ, ಮಾಧುರಿದೇವಿ, ಎಸ್. ವರಲಕ್ಷ್ಮಿ, ದ್ರೌಪದಿ.

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,500 or near offer

No brokers—Immediate possession—No encumbrence,

Enquire at :— M. SUBBARAMAIAH & Co., Lansdowne Buildings, Mysore.

ಉಡ್‌ಲ್ಯಾಂಡ್ಸ್

13—6—52 ರಿಂದ

ಅಮೋಘವಾದ 2ನೇ ವಾರ

ಸಂತೋಷಿಯವರ—

ಶಿರ್ಷಿನಾಕಿ-ಬೂಬ್ಲಾ ಬೂ (ಹಿಂದಿ)

ಪಾತ್ರ:—ರೆಹನಾ, ರಂಜನ್, ವೀರಾ

ಸಂಗೀತ:— ಶ್ರೀ C. ರಾಮಚಂದ್ರ

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.









ಫೋನ್ ೫೭೪ [ಲಿಂಕ್] ದಿನಪತ್ರಿಕೆ ರಿ ನ. ಎ೧. ೫೩೧೮

ಸಮಾಚಾರ

ಸಂಪಾದಕ: ಜಿ. ಎಚ್ ಸ್ವಾಮಿ

ಸಂಪುಟ ೩] ೨—೯—೧೯೫೨ ನೇ ಮಂಗಳವಾರ [ಸಂಚಿಕೆ ೧೪

ಭಾರತ ಪಾಕೀಸ್ಥಾನ ನಡುವೆ ಯುದ್ಧವೆ?

ವೈಶ್ಯಪತ್ರಿಕೆಯ ವಾರ್ಷಿಕೋತ್ಸವ

ಮೈಸೂರು ಸೆ. ೧

ಮೈಸೂರು ವೈಶ್ಯಪತ್ರಿಕೆಯ ೧೨ನೇ ವಾರ್ಷಿಕೋತ್ಸವವು ನಿನ್ನೆ ಸಂಜೆ ಟೌನಹಾಲಿನಲ್ಲಿ ಶ್ರೀ ಪಾಮಡಿ ಸುಬ್ಬರಾಮಶೆಟ್ಟಿಯವರ ಆಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರ್ಥನೆಯಾದನಂತರ, ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ಸ್ವಾಗತ ಬಯಸಿದರು. ಸಾಧ್ವಿ ಪತ್ರಿಕೆಯ ಶ್ರೀ ಅಗರಂ ರಂಗಯ್ಯನವರಿಂದ ಭಾಷಣ, ಮತ್ತು ಸಂಗೀತ ನಾಟಕಗಳಾದನಂತರ ಅಧ್ಯಕ್ಷರು ಭಾಷಣಮಾಡಿ, ವೈಶ್ಯಪತ್ರಿಕೆಯ ಸೇವೆಯನ್ನು ಪ್ರಶಂಸಿಸಿದರು.

ಸತ್ಕಾರಕೂಟ

ಮೈಸೂರು ಶಾಸನಸಭೆ, ಫಲವಾರು ಪುರಸಭೆಯ ಅಧ್ಯಕ್ಷರ ಮತ್ತು ಉಪಾಧ್ಯಕ್ಷರಾಗಿ ಚುನಾಯಿತರಾಗಿರುವ ವೈಶ್ಯಜನಾಂಗದ ಮಹನೀಯರುಗಳನ್ನು ಬರಮಾಡಿಕೊಂಡು ನಿನ್ನೆ ಮೈಸೂರು ವೈಶ್ಯಜನಾಂಗ ಮಹಾಸಭೆಯವರು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಬಹಿರಂಗಸಭೆ

ಮೈಸೂರು ರೈಲ್ವೆ ವರ್ಕ್‌ಶಾಪಿನ ಸಮೀಪದಲ್ಲಿರುವ ನಾಚನಹಳ್ಳಿಯ ಕೈತರಮೇಲೆ ಅಲ್ಲಿನ ಜಮೀನುದಾರರು ನಡೆಸುತ್ತಿರುವ ಕಿರುಕುಳವನ್ನು ಖಂಡಿಸಲು, ನಾಳೆ ಸಂಜೆ ೬ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗಸಭೆ ಏರ್ಪಡಿಸಲಾಗಿದೆಯೆಂದು ನಾಚನಹಳ್ಳಿ ಕಿಸಾನ್ ಪಂಚಾಯಿತಿಯ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಸರ್ಕಾರಿ ಗೆಜಿಟೆಡ್ ಅಧಿಕಾರಿಗೆ ಶಿಕ್ಷೆ

ಬೆಂಗಳೂರು ಸೆ. ೨

ಮೈಸೂರು ವಿದ್ಯುಚ್ಛಕ್ತಿ ಇಲಾಖೆಯ ಅಸಿಸ್ಟೆಂಟ್ ಆಡಿಟ್‌ರ್ ಗೆಜಿಟೆಡ್‌ಅಧಿಕಾರಿಶ್ರೀ ಅಬ್ದುಲ್‌ಹೈದರ್‌ರು ೧೯೪೯ನೇ ಜುಲೈ ೨೧ ನೇ ತಾ॥ ಬಾಡಿಗೆಗೆ ಸೈಕಲ್ಲನ್ನು ತೆಗೆದುಕೊಂಡು ೭೦ ರೂಪಾಯಿಗಳಿಗೆ ಮಾರಿ ಮೋಸಮಾಡಿದರೆಂಬ ಅಪಾದನೆಮೇಲೆ ನಗರ ನ್ಯಾಯಧೀಶರು ೧೦೦ ರೂ ಜುಲ್ಮಾನೆ ವಿಧಿಸಿದ್ದರು. ಅಡಿಷನಲ್ ಸೆಷನ್ಸ್ ಜಡ್ಜರು ಅಪಾದಿತರನ್ನು ಬಿಡುಗಡೆಮಾಡಿದ್ದರು. ಅದರಮೇಲೆ ಅಪೀಲಿನಲ್ಲಿ ಹೈಕೋರ್ಟಿನಲ್ಲಿ ನ್ಯಾಯಮೂರ್ತಿಗಳಾದ ಶ್ರೀ ಆರ್. ವೆಂಕಟರಾಮಯ್ಯ ಮತ್ತು ಶ್ರೀ ಎ. ಬಾಲಕೃಷ್ಣಯ್ಯನವರು ಪಾದಿತರಿಗೆ ೨ ತಿಂಗ ಸಾದಾಶಿಕ್ಷೆ, ೧೦೦ ರೂ. ಜುಲ್ಮಾನೆ ವಿಧಿಸಿದ್ದಾರೆ.

ಹೊಸ ವ್ಯವಸ್ಥೆಯ ದಸರಾ

ಮೈಸೂರಿನಲ್ಲಿ ಈವರ್ಷದಿಂದ ದಸರಾ ಮಹೋತ್ಸವವು ವಿಶೇಷರೀತಿಯಲ್ಲಿ ಮಾರ್ಪಟ್ಟು ನಡೆಯುತ್ತದೆ. ಇಲ್ಲಿಯವರೆಗೂ ನಡೆಯುತ್ತಲಿದ್ದ ದರ್ಬಾರಿಗೆ ರಾಜಸಭೆಯೆಂಬ ಹೊಸ ಹೆಸರಿನಿಂದ ಕರೆಯಲಾಗುತ್ತದೆ. ಕಾರ್ಯರಚನೆ, ಸಣ್ಣ ಕಥೆ,ಹಾಸ್ಯ,ಸಾಹಿತ್ಯ, ಲಾವಣಿ, ಭಾರತ ರಾಮಾಯಣ ವಾಚನ, ಸಂಗೀತ, ಭರತನಾಟ್ಯ, ಚಿತ್ರಕಲೆ ಮುಂತಾದುವುಗಳಲ್ಲಿ ಉತ್ತಮವಾದವುಗಳಿಗೆ ಈ ಸಭೆಯ[illegible] ಸನ್ಮಾನ ದೊರೆಯುತ್ತದೆ.

ಸಾರ್ವಜನಿಕ ಸೇವೆ, ವಿಶೇಷರೀತಿಯಲ್ಲಿ ದಾನಧರ್ಮಮಾಡಿರುವವರಿಗೂ ಉಚಿತ ಬಹುಮಾನವು[illegible]

ಮಾಮೂಲನಂತೆ [illegible]ಯ ದಿನ ಮೆರವಣಿಗೆ ನಡೆಯುತ್ತದೆ.

ದಸರಾ ಸಮಯದಲ್ಲಿ ಶಾಸನಸಭಾಧಿವೇಶನವು ನಡೆಯುವುದಿಲ್ಲ. ಆದರೆ ಶಾಸನಸಭಾ ಸದಸ್ಯರಿಗೆಲ್ಲಾ ದಸರಾ ಮಹೋತ್ಸವಕ್ಕೆ ಆಹ್ವಾನವುಂಟು ಅವರೂಸಹ ಮೈಸೂರಿನಲ್ಲಿರಲು ವ್ಯವಸ್ಥೆ ತಾವೇ ಮಾಡಿಕೊಳ್ಳಬೇಕಾಗಿದೆ.

೬ ಸಾವಿರ ರೂಪಾಯಿ ಇನ್‌ಷೂರೆನ್ಸ್ ಕವರು ಕಳವು

ಬೆಂಗಳೂರು ಸೆ. ೧

ಶನಿವಾರದಿನ ದಂಡಿನ ಪೋಸ್ಟಾಫೀಸೊಂದರಿಂದ ನಗರದ ಆರ್. ಎಂ. ಎಸ್. ಗೆ ಟಪಾಲು ಸಾಗುತ್ತಿದ್ದಾಗ ೬ ಸಾವಿರ ರೂ. ಬೆಲೆಯ ೧೭ ಇನ್‌ಷೂರ್ ಕವರುಗಳು ಮಾಯವಾಗಿವೆಯೆಂದು ಗೊತ್ತಾಗಿದೆ. ರೈಲ್ವೆ ಪೋಲೀಸಿನವರು ತನಿಖೆ ನಡೆಸುತ್ತಿದ್ದಾರೆ.

§ ಲಾಟರಿ ಟಿಕೇಟ್ಟುಗಳನ್ನು ಅಂಚೆ ಮೂಲಕ ಭಾರತದಲ್ಲಿ ರವಾನಿಸಲು ಪ್ರತಿಬಂಧಿಸಲಾಗಿದೆಯೆಂದು ಕೇಂದ್ರ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಕಾಲೇಜ್ ಶುಲ್ಕ ಹೆಚ್ಚಬೇಕು

ಮೈಸೂರು ಸೆ. ೧

ರಾಜಧಾನಿಯ ಶಾರದಾವಿಲಾಸ ಕಾಲೇಜಿನಲ್ಲಿ ಬಿ. ಎಸ್. ಸಿ. ತರಗತಿಯ ಪ್ರಾರಂಭೋತ್ಸವವನ್ನು ನಿನ್ನೆ ಬೆಳಿಗ್ಗೆ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನೆರವೇರಿಸಿದರು.

ಕಾಲೇಜಿನ ಅಧ್ಯಕ್ಷರಾದ ಶ್ರೀ ಅಂಬಳೆ ಸುಬ್ರಹ್ಮಣ್ಯಅಯ್ಯರ್ ಸ್ವಾಗತಭಾಷಣಮಾಡಿದರು ಕಾರ್ಯದರ್ಶಿ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ವರದಿಯನ್ನು ಓದಿದರು.

ನಂತರ ಸಚಿವರು ಭಾಷಣಮಾಡಿ, ದೇಶದಲ್ಲಿ ವಿದ್ಯಾಭ್ಯಾಸ ಪ್ರಗತಿ ಆಗಬೇಕಾದುದು ಅತ್ಯಗತ್ಯ ಆದರೆ ಅದಕ್ಕೆ ಸರ್ಕಾರದವರ ಸಹಾಯದಿಂದಲೇ ನಡೆಯಬೇಕಾದರೆ ಕಷ್ಟವಾಗುವುದು ಅದರಲ್ಲೂ ವಿಶ್ವವಿದ್ಯಾನಿಲಯಗಳು ನಮ್ಮ ದೇಶದಲ್ಲಿ ಸರ್ಕಾರದವರಿಂದಲೇ ನಡೆಯುತ್ತಿವೆ. ಹೊರದೇಶಗಳಂತೆ ನಮ್ಮಲ್ಲೂ ಖಾಸಗೀ ಸಂಸ್ಥೆಗಳು ಮುಂದೆ ಬಂದು ವಿಶ್ವವಿದ್ಯಾನಿಲಯಗಳನ್ನು ನಡೆಸಬೇಕು ಈಗ ಸರ್ಕಾರಕ್ಕೆ ಹಣದ ಅಭಾವವಿರುವುದರಿಂದ ಕಾಲೇಜು ಶಿಕ್ಷಣ ಮತ್ತು ಲೆಬೋರೇಟರಿ ಶುಲ್ಕವನ್ನು ಹೆಚ್ಚಿಸಬೇಕು-ಎಂದು ತಿಳಿಸಿದರು.

ಈಗ ವಿಶ್ವವಿದ್ಯಾನಿಲಯದ ಶಿಕ್ಷಣವು ವೃಥಾಪೋಲಾಗುತ್ತಿದೆ. ಅನೇಕ ವಿದ್ಯಾರ್ಥಿಗಳು ಹೆಚ್ಚುಹಣ ಖರ್ಚುಮಾಡಿ ವಿಜ್ಞಾನ ಮತ್ತು ಇತರ ಭಾಗಗಳಲ್ಲಿ ಉತ್ತೀರ್ಣರಾಗಿ ಕೇವಲ ಗುಮಾಸ್ತರಾಗಿ ಕೆಲಸಕ್ಕೆ ಸೇರುತ್ತಿದ್ದಾರೆ ಇದು ನಿಲ್ಲಬೇಕು. ಪಬ್ಲಿಕ್ ಸರ್ವೀಸ್ ಕಮೀಷನವರು ಪದವೀಧರರನ್ನು ಕೆಲಸಕ್ಕೆ ನೇಮಿಸುವಾಗ ಸರಿಯಾದ ಗಮನಕೊಡಬೇಕು-ಎಂದು ಸಚಿವರು ತಿಳಿಸಿದರು.

ಕಾಶ್ಮೀರದಮೇಲೆ ಪಾಕೀಸ್ತಾನದ ಧಾಳಿಯೇ

ಕಾಶ್ಮೀರದ ಮೇಲೆ ಪಾಕೀಸ್ತಾನವು ಹೊಸ ಧಾಳಿಯನ್ನು ನಡೆಸಬೇಕೆಂಬ ವಿಷಯದಲ್ಲಿ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ಇತ್ತೀಚಿಗೆ ಪ್ರಕಟಿಸಿರುವ ವಿಷಯದ ಬಗ್ಗೆ ದೆಹಲಿ ಅಧಿಕಾರಿ ವೃತ್ತಗಳಲ್ಲಿ ಜಾಗರೂಕತೆಯಲ್ಲಿ ಪರಿಶೀಲನೆ ನಡೆಯುತ್ತಿದೆ. ಹಾಗೇನಾದರೂ ಕಾಶ್ಮೀರದ ಮೇಲೆ ಪಾಕಿಸ್ತಾನ ಧಾಳಿ ನಡೆಸಿದರೆ ಉಭಯ ರಾಜ್ಯಗಳ ನಡುವೆ ಯುದ್ಧ ಪ್ರಾರಂಭವಾದಂತೆ ಯೆಂದು ಹೇಳಲಾಗಿದೆ.

ಪಾಕೀಸ್ತಾನವು ಮಾಡಿರುವ ಬೆದರಿಕೆಯಿದೆಂದೂ ಕೆಲವೆಡೆ ಹೇಳಲಾಗುತ್ತಲಿದೆ.

ಕಾಶ್ಮೀರದ ಮೇಲೆ ಧಾಳಿಯು ನಡೆ ಭಾರತಮೇಲೆ ಧಾಳಿಯಾದಂತೆ ಆದರಿಂದ ಉಭಯರಾಷ್ಟ್ರಗಳ ನಡುವೆ ಯುದ್ಧವಾದಂತೆ ಎಂದು ಭಾರತವು ಈ ಗಾಗಲೇ ಪಾಕೀಸ್ತಾನಕ್ಕೆ ಅನೇಕ ವೇಳೆ ಎಚ್ಚರಿಕೆಯಿತ್ತಿದೆ.

ಕಾಂಗ್ರೆಸ್ ಕಾರ್ಯಸಮಿತಿ ಸಭೆ

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿಸಮಿತಿಯ ಸಭೆಯು ಸೆಪ್ಟೆಂಬರ್ ೪ ನೇ ತಾ॥ ಬೆಂಗಳೂರಿನಲ್ಲಿ ನಡೆಯುತ್ತದೆ.

ರೆವಿನ್ಯೂ ಕಾರ್ಯದರ್ಶಿ ಹುದ್ದೆ ರದ್ದು

ಮೈಸೂರು ಸರ್ಕಾರದವರು ರೆವೆನ್ಯೂ ಕಾರ್ಯದರ್ಶಿಯ ಹುದ್ದೆಯನ್ನು ರದ್ದುಗೊಳಿಸಿ ಆ ಕೆಲಸವನ್ನು ಗೃಹಶಾಖಾ ಕಾರ್ಯದರ್ಶಿಗಳಿಗೇ ವಹಿಸಿರುವರು.

ಸೂಚನೆ

ಮುದ್ರಣಯಂತ್ರದ ತೊಂದರೆಯಿಂದ ನಿನ್ನೆ ಪತ್ರಿಕೆ ಪ್ರಕಟವಾಗಲಿಲ್ಲ ಯಂತ್ರವು ಸರಿಹೋಗುವವರೆಗೆ ಪತ್ರಿಕೆಯ ಆಕಾರವನ್ನು ಬದಲಾಯಿಸಿದೆ. ಎಲ್ಲರೂ ಸಹಕರಿಸಬೇಕಾಗಿ ಕೋರಿದೆ.

ಸಂಪಾದಕ.

ಬೆನಿಫಿಟ್

ಮೈಸೂರು ಬಿಸ್ಲೆನೂಹಲ್ಲಾ ವಿನಾಯಕ ದೇವಸ್ಥಾನದ ಕಟ್ಟಡ ಸಹಾಯಕ್ಕಾಗಿ

ಸಂಪೂರ್ಣ ಶ್ರೀಕೃಷ್ಣಲೀಲಾ

೬-೯-೫೭ನೇ ರಾತ್ರಿ ೧೦-೩೦ಕ್ಕೆ ಮೈಸೂರು ಟೌನ್ ಹಾಲಿನಲ್ಲಿ

ಪಾತ್ರ :—ಲಕ್ಷ್ಮಮ್ಮ, ಸುಮತಿ, ಸರೋಜ ಕಲಾವತಿ, ಚೌಡಮ್ಮ, ಎಂ. ಎನ್. ಮಾಧವರಾವ್ ಎಂ.ಎಸ್. ಮಾಧವರಾವ್, ಇತ್ಯಾದಿ

ಉಪಾಧ್ಯಾಯರ ಶಿಕ್ಷಣಕ್ಕೆ ವಿಶೇಷ ಪ್ರಾಮುಖ್ಯತೆ ಕೊಡಬೇಕು

ವಿಶ್ವವಿದ್ಯಾನಿಲಯದ ಉಪಾಧ್ಯಾಯರ ಕಾಲೇಜಿನ ರಜತ ಮಹೋತ್ಸವವು ರಾಜಧಾನಿಯಲ್ಲಿ ನಡೆಯಿತು.

ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಉತ್ಸವದ ಆರಂಭೋತ್ಸವವನ್ನು ನಡೆಸಿದರು. ದೇಶವು ಪ್ರಗತಿ ಹೊಂದಬೇಕಾದರೆ ವಿದ್ಯಾಭ್ಯಾಸ ಪದ್ಧತಿ ಮಾರ್ಪಾಡಾಗಿ, ಶಿಕ್ಷಣ ಪಡೆದ ಉಪಾಧ್ಯಾಯರುಗಳ ಸಂಖ್ಯೆ ಹೆಚ್ಚಬೇಕು. ಈಗ ದೇಶದಲ್ಲಿರುವ ಹಲವಾರು ಯೋಜನೆಗಳಲ್ಲಿ ಉಪಾಧ್ಯಾಯರುಗಳ ಶಿಕ್ಷಣಕ್ಕೆ ಪ್ರಥಮ ಸ್ಥಾನವನ್ನು ಕೊಡಬೇಕಾದುದು ಅತ್ಯಗತ್ಯ. ಮೈಸೂರಿನಲ್ಲೂ ಸಹ ವಿದ್ಯಾಭ್ಯಾಸ ಸುಧಾರಣೆ ಬಗ್ಗೆ ಸರ್ಕಾರದವರು ತೀವ್ರ ಆಸಕ್ತಿ ಹೊಂದಿದ್ದಾರೆ.

ಶಿಕ್ಷಣ ಪಡೆದ ಉಪಾಧ್ಯಾಯರುಗಳ ಸಂಖ್ಯೆ ಹೆಚ್ಚಬೇಕು. ಆದರೆ ಅದಕ್ಕೆ ಈಗ ಸಾಕಷ್ಟು ಹಣವಿಲ್ಲ. ಆದ್ದರಿಂದ ಈಗ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಉಪಾಧ್ಯಾಯರ ಶಿಕ್ಷಣವನ್ನು ಒಂದು ಐಚ್ಛಿಕಭಾಷೆಯನ್ನಾಗಿ ಮಾಡಬೇಕು. ಇದರಿಂದ ವಿದ್ಯಾರ್ಥಿಗಳು ಉಪಾಧ್ಯಾಯರಾಗಿರಲು ಅನುಕೂಲವಾಗುವುದು.

ದೇಶದ ಉಪಾಧ್ಯಾಯರುಗಳ ಸ್ಥಿತಿಗಳನ್ನು ಅಭಿವೃದ್ಧಿ ಪಡಿಸಬೇಕಾದುದು ಅಗತ್ಯ. ಆದರೆ ಈಗಿನ ಹಣದ ಅಭಾವದಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಕೆಲವು ಎಕರೆ ಜಮೀನುಗಳನ್ನು ಮೀಸಲಾಗಿಟ್ಟು, ಅದರಿಂದ ಬರುವ ಉತ್ಪತ್ತಿಯನ್ನು ಉಪಾಧ್ಯಯರುಗಳಿಗೆ ಕೊಡಬೇಕು. ವಿದ್ಯಾರ್ಥಿಗಳೂ ಸಹ ರಚನಾತ್ಮಕ ಕಾರ್ಯಗಳನ್ನು ಕೈಗೊಂಡು ಅವುಗಳಿಂದ ಬರುವ ಹಣವನ್ನು ಸಹ ಉಪಾಧ್ಯಾಯರ ವೇತನದ ಜೊತೆಗೆ ಕೂಡಿಸಿ ಕೊಡಬೇಕು–ಎಂದು ಸಲಹೆ ಮಾಡಿದರು.

ಉಪಸ್ಥಾನಪತಿಗಳ ಭಾಷಣ

ಮೊನ್ನೆ ಸಂಜೆ ಸಮಾರಂಭವು ವಿಶ್ವವಿದ್ಯಾನಿಲಯದ ಉಪಸ್ಥಾನಪತಿ ಡಾ॥ ಬಿ. ಎಲ್. ಮಂಜುನಾಥ್‌ರ ಅಧ್ಯಕ್ಷತೆಯಲ್ಲಿ ಮುಕ್ತಾಯಗೊಂಡಿತು.

ದೇಶದಲ್ಲಿ ಸರಿಯಾದ ವಿದ್ಯಾಪ್ರಗತಿಯಾಗಬೇಕಾದರೆ ಶಿಕ್ಷಣಪಡೆದ ಉಪಾಧ್ಯಾಯರುಗಳು ಹೆಚ್ಚಬೇಕು. ಆದರೆ ಮಾದರಿ ಮೈಸೂರು ಸಂಸ್ಥಾನದಲ್ಲಿ ಕೇವಲ ಒಂದು ಉಪಾಧ್ಯಾಯರ ಶಿಕ್ಷಣ ಕಾಲೇಜುಇರುವುದು ಶೋಚನೀಯ. ಮದರಾಸಿನಲ್ಲೂ ಇಂತಹ ಕಾಲೇಜುಗಳಿವೆ. ವ್ಯವಸ್ಥಿತ ಶಿಕ್ಷಣ ಪಡೆದ ಉಪಾಧ್ಯಾಯರುಗಳು ಬೇಕಾದರೆ ಇಂತಹ ಕಾಲೇಜುಗಳು ಸಂಖ್ಯೆ ಸಂಸ್ಥಾನದಲ್ಲೂ ಹೆಚ್ಚಬೇಕು. ಇದರ ಸಂಗಡ ಔದ್ಯೋಗಿಕ ಉಪಾಧ್ಯಾಯರ ಶಿಕ್ಷಣ ವ್ಯವಸ್ಥೆಯೂ ಆಗಬೇಕು. ಅಂತಹ ಯೋಜನೆಯೊಂದನ್ನು ವಿಶ್ವವಿದ್ಯಾನಿಲಯದವರು ಪರಿಶೀಲಿಸುತ್ತಿದ್ದಾರೆ. ಅಂತಹ ಔದ್ಯೋಗಿಕ ಉಪಾಧ್ಯಾಯರ ಶಿಕ್ಷಣವನ್ನು ಮೈಸೂರುನಗರದಲ್ಲಿ ಸದ್ಯದಲ್ಲಿಯೇ ತೆರೆಯಲಾಗುವುದು.

ಈಗಿನ ಉಪಾಧ್ಯಾಯರ ಶಿಕ್ಷಣ ಕಾಲಾವಧಿಯನ್ನು ಎರಡುವರ್ಷಕ್ಕೆ ಹೆಚ್ಚಿಸಬೇಕು. ಇದಕ್ಕೆ ಹಣ ಹೆಚ್ಚಾಗುವುದೆಂದು ಉಪಾಧ್ಯಾಯರು ಮತ್ತು ಸರ್ಕಾರದಿಂದ ಪ್ರತಿಭಟನೆ ಬರಬಹುದು. ಆದರೂ ಸರಿಯಾದ ಶಿಕ್ಷಣ ಹೊಂದಬೇಕಾದರೆ ಇದು ಅಗತ್ಯ ಎಂದು ಡಾ॥ ಮಂಜುನಾಥ್‌ರವರು ತಿಳಿಸಿದರು.

ಸಂಗೀತ, ನಾಟಕ, ಬಹುಮಾನ ಹಂಚಿಕೆ ಮತ್ತು ಹಳೆಯ ಮತ್ತು ನೂತನ ವಿದ್ಯಾರ್ಥಿಗಳಿಂದ ಭಾಷಣಗಳಾದನಂತರ ಸಮಾರಂಭ ಮುಕ್ತಾಯವಾಯಿತು.

ಮುಖ್ಯ ಮಂತ್ರಿಗಳಿಗೆ ಪ್ರಧಾನಿ ಸೂಚನೆ

ತಾವು ಸೇವೆಮಾಡುತ್ತಿರುವ ಪ್ರಜೆಗಳ ಹಿತಾಸಕ್ತಿಗಳನ್ನು ಕಾಪಾಡುವುದನ್ನೇ ಧ್ಯೇಯವಾಗಿಟ್ಟುಕೊಂಡು ಮುಖ್ಯ ಮಂತ್ರಿ ಮತ್ತು ಇತರ ಮಂತ್ರಿಗಳು ಕೆಲಸಮಾಡಬೇಕು. ತಮ್ಮ ಅಂತಃಕರಣಕ್ಕೆ ಬದ್ಧವಾಗಿ ಅಲ್ಪ ಸಂಖ್ಯಾತರ ಹಿತವನ್ನು ಮರೆಯಬಾರದು. ಚುನಾವಣೆಯಲ್ಲಿ ತಮ್ಮ ವಿರೋಧ ಸ್ಪರ್ಧಿಸಿದರೆಂದು ಯಾರನ್ನೂ ತೊಂದರೆಗೀಡುಮಾಡಬಾರದು. ರಾಜ್ಯಾಡಳಿತ ನಡೆಸುವಾಗ ಕಾಂಗ್ರೆಸ್ ಧ್ಯೇಯಗಳನ್ನು ಪಾಲಿಸಬೇಕಾದರೂ ಎಲ್ಲಾ ಪಂಗಡ ಜನರ ಹಿತರಕ್ಷಣೆಯಾಗಬೇಕೆಂದು ಪ್ರಧಾನಿ ನೆಹರೂ ಪ್ರಾಂತ್ಯದ ಎಲ್ಲಾ ಮುಖ್ಯ ಮಂತ್ರಿಗಳಿಗೆ ಸೂಚನೆಯಿತ್ತಿರುವರು.

ಮೇಲ್ಕಂಡ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಇಷ್ಟವುಳ್ಳವರು ತಾರೀಖು 4-9-52 ರ ಒಳಗಾಗಿ ತಲುಪುವಂತೆ ಈ ಕೆಳಗೆ ಕಂಡ ವಿಳಾಸಕ್ಕೆ ತಮ್ಮ ಅರ್ಜಿಗಳನ್ನು ಕಳುಹಿಸಬಹುದು.

ಕಾರ್ಯದರ್ಶಿ
ದಸರಾ ವಸ್ತುಪ್ರದರ್ಶನಸಮಿತಿ
ಮೈಸೂರು.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಮೈಸೂರು ದಸರಾ ವಸ್ತುಪ್ರದರ್ಶನ—1952

ತಾ॥ 20-9-52 ರಿಂದ 5-10-52ರವರೆಗೆ

ಕಲಾಪ್ರೇಮಿಗಳಲ್ಲಿ ವಿನಂತಿ:—

ಇದೇ 1952ನೇ ಸೆಪ್ಟಂಬರ್ ಮಾಹೆ 20ನೇ ತಾರೀಖಿನಿಂದ ರಾಜಧಾನಿಯಲ್ಲಿ ನಡೆಯಲಿರುವ ದಸರಾ ವಸ್ತುಪ್ರದರ್ಶನದಲ್ಲಿ ಈ ಕೆಳಗೆ ಕಂಡ ಮನರಂಜನೆ ಕಾರ್ಯಕ್ರಮಗಳನ್ನು ನಡೆಸಲು ಏರ್ಪಡಿಸಿರುತ್ತೆ.

ಸಂಗೀತ, ನೃತ್ಯ, ನಾಟಕ, ಕಾವ್ಯವಾಚನ, ಯಕ್ಷಗಾನ, ಸೂತ್ರದ ಬೊಂಬೆಯಾಟ, ಮಕ್ಕಳಿಂದ ಪ್ರದರ್ಶನ, ಹರಿಕಥೆ, ಶಿವಕಥೆ, ನಾಗಸ್ವರ, ಹಳ್ಳಿಯ ಹಾಡುಗಳು, ವ್ಯಾಯಾಮ ಪ್ರದರ್ಶನ, ಕುಸ್ತಿ ಮತ್ತು ಇತರ ಎಲ್ಲಾ ವಿಧವಾದ ಕಲೆಗೆ ಸಂಬಂಧಪಟ್ಟ ಪ್ರದರ್ಶನಗಳನ್ನು ಛಿನಶಿಯಲ್ಲಿ ಕಲೆಗೆ ಹೆಚ್ಚಿನ ಪ್ರೋತ್ಸಾಹ ದೊರಕಬೇಕೆಂಬ ಉದ್ದೇಶದಿಂದ ಏರ್ಪಡಿಸಿರುವ ಮೇಲ್ಕಂಡ ಕಾರ್ಯಕ್ರಮದಲ್ಲಿ ಪರಿಸ್ರಸು ವುಳ್ಳವರು ಸಹಕರಿಸಿ ಭಾಗವಹಿಸಬೇಕಾಗಿ ಕೋರುತ್ತೇನೆ.

ಹಿಂದಿನ ವರ್ಷಗಳಲ್ಲಿ ನಡೆದಂತೆ ಈ ಪ್ರದರ್ಶನದ ಅಂಗವಾಗಿ ಈ ಕೆಳಗೆ ಕಂಡ ಸ್ಪರ್ಧೆಗಳನ್ನು ಬಾಲಕ ಬಾಲಕಿಯರಿಗಾಗಿ ಏರ್ಪಡಿಸಲಾಗಿದೆ.

(ಸ್ಪರ್ಧೆಗಳಿಗೆ ಪ್ರವೇಶವಿಲ್ಲ.)

(1) ಸಂಗೀತ (ಹಾಡುಗಾರಿಕೆ ಮತ್ತು ವಾದ್ಯಸಂಗೀತ) (2) ದೇವರನಾಮ. (3) ಭಾರತ ವಾಚನ. (4) ಆಧುನಿಕ ಗೀತೆ. (5) ಸಿನಿಮಾಗೀತೆ. (6) ವಿವಿಧ ವೇಷಗಳು. FancyDress compe-ticion)

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು
ನಿಮ್ಮ ಸದರುಗಳನ್ನು ಅಲಂಕರಿಸಲಿ
ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.
★
ಹೆಚ್ಚಿನ ವಿವರಗಳಿಗೆ ಬರೆಯಿರಿ:—
ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ
ಬೆಂಗಳೂರು ೩.

ಉಡ್‌ ಲ್ಯಾಂಡ್ಸ್
ತಾ॥ ೨೯-೮-೫೨ ರಿಂದ
ಅಮೋಘಪ್ರಾರಂಭ
ಪ್ರತಿದಿನ 3 ಪ್ರದರ್ಶನಗಳು
* ಕಾಶ್ಮೀರ್ *
(ಹಿಂದಿ)
ಪಾತ್ರ:—ವೀಣ, ಅರುಣ್, ಕುಲ್‌ದೀಪ್, ಅಲ್ ನಜೀರ್, ನಿರೂಪರಾಯ್.

PRABHA: From 2-9-52. Daily 3 Shows
Bold–Powerful–Amazing
You will laugh, cry and learn facts
★ Secrets of Life ★
(With all Star Hollywood cast)
iss it is a S
From:
5-9-52 for 4 days,
PANDORAL
THE FLYING DUTCHMAN.
(Technicolour)

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 15

೩-೯-೧೯೫೨ ನೇ ಬುಧವಾರ]

ಸಂಪಾದಕರು: ಜಿ. ಎಲ್. ಸ್ವಾಮಿ

ನಾಚೇನಹಳ್ಳಿ ಜಮೀನುದಾರರ ಕಿರುಕುಳ

ತಪ್ಪಿಸಲು ಸತ್ಯಾಗ್ರಹ

ಮೈಸೂರು ಸೆ. ೩

ಮೈಸೂರು ರೈಲ್ವೆ ವರ್ಕ್‌ಷಾಪಿನ ಸಮೀಪದಲ್ಲಿರುವ ನಾಚೇನಹಳ್ಳಿಯ ಕಿಸಾನ್ ಪಂಚಾಯಿತಿ ಆಶ್ರಯದಲ್ಲಿ ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಶ್ರೀ ವಿಜಾರ್ ನೂರ್ ಹುಸೇನ್‌ರ ಅಧ್ಯಕ್ಷತೆಯಲ್ಲಿ ಬಹಿರಂಗಸಭೆ ನಡೆಯಿತು.

ನಗರದ ಸೋಷಲಿಸ್ಟ್ ಪಕ್ಷದ ಶ್ರೀ ಬಿ. ಶ್ರೀಕಂಠಪ್ಪನವರು ಭಾಷಣಮಾಡಿ, ಸಭೆಯ ಉದ್ದೇಶವನ್ನು ತಿಳಿಸಿದರು.

ಮಾದರಿ ಮೈಸೂರುನಗರದ ಸಮೀಪದಲ್ಲಿರುವ ಹಳ್ಳಿಯಲ್ಲಿ ಅದರ ಜಮೀನ್‌ದಾರರಾದ ಶ್ರೀ ವೀರರಾಜೇಅರಸಿನವರು ಅಲ್ಲಿನ ಗ್ರಾಮಸ್ಥರಿಗೆ ಅನೇಕ ವಿಧದಲ್ಲಿ ಕಿರುಕುಳ ಕೊಟ್ಟು ಅನ್ಯಾಯವಾಗಿ ವರ್ತಿಸಿ, ಜನರನ್ನು ಗುಲಾಮರನ್ನಾಗಿ ಮಾಡಿರುವುದು ಅತಿಶೋಚನೀಯ. ಅವರು ರಾಜಮನೆತನಕ್ಕೆ ಸೇರಿದವರೆಂದು ಹೇಳಿಕೊಂಡು, ಶ್ರೀಮನ್ಮಹಾರಾಜರವರ ಹೆಸರನ್ನು ದುರುಪಯೋಗಪಡಿಸುತ್ತಿದ್ದಾರೆ. ಹಳ್ಳಿಯವರು ಅವರ ಕಿರುಕುಳಕ್ಕೆ ಸಿಕ್ಕಿ ಜಮೀನುಗಳನ್ನು ಕಳೆದುಕೊಂಡು ಪಾಪರ್‌ಗಳಾಗಿದ್ದಾರೆ. ಇತ್ತೀಚೆಗೆ ಹಳ್ಳಿಯರ ಜಾನುವಾರುಗಳು ತಮ್ಮ ಹೊಲದಲ್ಲಿ ಮೇಯುತ್ತಿದ್ದವೆಂಬ ನೆಪದಲ್ಲಿ ಅವುಗಳನ್ನು ತಮ್ಮ ದೊಡ್ಡಿಯಲ್ಲಿ ಕೂಡಿ ೩-೪ದಿನಗಳು ಅವುಗಳಿಗೆ ನೀರು ಮೇವು ಹಾಕದೆ ಕಷ್ಟಕೊಟ್ಟರು. ಅದರಲ್ಲಿ ಒಂದು ಗೋವು ಸತ್ತುಹೋಯಿತು. ಅದನ್ನು ಜನರ ವಶಕ್ಕೆ ಕೊಡದೆ ತಾವೇ ಹೂಳಿಸಿಬಿಟ್ಟರು.

೧೫೦ ಸಂಸಾರಗಳಿರುವ ಆ ಹಳ್ಳಿಯಲ್ಲಿ ಸರ್ಕಾರವೇ ಇಲ್ಲದಂತಾಗಿದೆ. ಜನರಿಗಾಗಿ ಸರ್ಕಾರವಿದೆಯೆಂಬುದನ್ನು ಅವರು ಅರಿಯಬೇಕು. ಜನರ ಹಕ್ಕುಬಾಧ್ಯತೆಯನ್ನು ಜಮೀನುದಾರರು ಕಿತ್ತುಕೊಂಡಿದ್ದಾರೆ. ಅದನ್ನು ನಿಲ್ಲಿಸಲು ಸೋಷಲಿಸ್ಟ್ ಪಕ್ಷದವರು ಸತ್ಯಾಗ್ರಹ ಹೂಡಬೇಕಾಗಬಹುದು ದಕ್ಕೆ ಮಹಾಜನರ ಸಹಕಾರ ಮತ್ತು ಬೆಂಬಲಬೇಕು. ಅಲ್ಲಿ ಒಂದು ಗೋಮಾಳೆ, ದಳವಾಯಿಕೆರೆಗೆ ಒಂದು ರಸ್ತೆ ಮತ್ತು ಗ್ರಾಮಪಂಚಾಯಿತಿ ಕೆಲಸಗಳು ಜಮೀನುದಾರರ ಕೈವಾಡವಿಲ್ಲದೆ, ಜನರಿಂದಲೇ ನಡೆಯುವಂತೆ ಸರ್ಕಾರದವರು ಕೂಡಲೇ ಏರ್ಪಡಿಸಬೇಕು ಎಂದು ಶ್ರೀಕಂಠಪ್ಪನವರು ತಿಳಿಸಿದರು.

ಶ್ರೀ ವೇದಾಂತಂ ಮತ್ತು ಅಧ್ಯಕ್ಷರ ಸಹ ಮಾತನಾಡಿ ಜಮೀನುದಾರರ ಕಿರುಕುಳವನ್ನು ಖಂಡಿಸಿದರು.

ಆಕಾಶದಲ್ಲಿ ವಿಚಿತ್ರ ವಸ್ತುವಿನ ಹಾರಾಟ

ರಾಜಧಾನಿಯ ಜನರಲ್ಲಿ ಆಶ್ಚರ್ಯ

ಮೈಸೂರು ಸೆ. ೩

ಮೈಸೂರು ನಗರದಲ್ಲಿ ನಿನ್ನೆ ಸಂಜೆ ಸುಮಾರು ೫ ಗಂಟೆ ಸಮಯದಲ್ಲಿ ಕಾರ್ಡ್‌ಹಾಲಿನಕಡೆಯಿಂದ ಬೆಟ್ಟದಕಡೆಗೆ ವಿಚಿತ್ರವಾದ ವಸ್ತುವೊಂದು ಹೊಗೆಯನ್ನು ಉಗುಳುತ್ತಾ ಅತಿವೇಗದಲ್ಲಿ ಆಕಾಶದಲ್ಲಿ ಹೋಗುತ್ತಿದ್ದ ವಿಚಿತ್ರ ದೃಶ್ಯವನ್ನು ರಾಜಧಾನಿಯ ಸಾವಿರಾರುಜನರು ನೋಡಿ ಚಕಿತರಾದರು. ಹೆಚ್ಚಿಗೆ ಶಬ್ದವಿಲ್ಲದೆ, ಅತಿ ಉದ್ದದ ಆಕಾರದಲ್ಲಿ ಬಿಳಿಯ ಹೊಗೆಯನ್ನು ಉಗುಳುತ್ತಾ ಅದು ಸಂಚರಿಸುತ್ತಿತ್ತು. ಇದು ಕೇವಲ ೨-೩ ನಿಮಿಷಮಾತ್ರ ಕಾಣಿಸಿಕೊಂಡು ನಂತರ ಮೋಡದಲ್ಲಿ ಮಾಯವಾಯಿತು.

ಹಲವರು ಇದು ರಾಕೆಟ್ ಎಂದೂ ಮತ್ತೆ ಕೆಲವರು ಹಾರಾಡುವ ತಟ್ಟೆ ಅಥವ ಸ್ಪೇಸ್ ಷಿಪ್ ಎಂದು ಜನರ ಅಭಿಪ್ರಾಯ ಪಡುತ್ತಿದ್ದಾರೆ. ಇದರ ವಿಚಾರವಾಗಿ ಇಲ್ಲಿನ ವಿಮಾನನಿಲ್ದಾಣ ಅಧಿಕಾರಿಗಳನ್ನು ಕೇಳಲಾಗಿ, ಅದು ಜೆಟ್ ವಿಮಾನ. ಅವುಗಳು ವಿಶೇಷವಾಗಿ ಉಗುಳಿಕೊಂಡು ಹೋಗುತ್ತವೆಂದು ತಿಳಿಸಿದರು.

ಅಖಿಲಭಾರತ ಗಾಂಧಿ ಸ್ಮಾರಕ ನಿಧಿ ಸಮಿತಿ

ಅಖಿಲಭಾರತ ಗಾಂಧಿ ಸ್ಮಾರಕನಿಧಿ ಸಮಿತಿಯನ್ನು ಪುನರ್ರಚಿತವಾಗಿದೆ.

ಪಾರ್ಲಿಮೆಂಟಿನ ಅಧ್ಯಕ್ಷ ಶ್ರೀ ಮಾವಲಂಕರ್‌ರವರು ಈ ಸಮಿತಿಯ ಅಧ್ಯಕ್ಷರು ಶ್ರೀ ದೇವದಾಸ್ ಗಾಂಧಿ ಉಪಾಧ್ಯಕ್ಷರು ಶ್ರೀಗಳಾದ ನೆಹರು, ಕೃಷ್ಣದಾಸ್ ಜಾಜು ಶಂಕರರಾವ್ ದೇವ್, ಶ್ರೀರಾಂ, ಮಂಗದಾಸ್ ಪಕ್ವಾಸ, ಮತ್ತು ಶ್ರೀಮತಿಗಳಾದ ಯಶೋಧರದಾಸಪ್ಪ, ಸುಚೇತಾ ಕೃಪಲಾನಿ, ಆಶಾದೇವಿ ಆರ್ಯನಾಯಕಂ ರವರುಗಳು ಸದಸ್ಯರು ಈ ಸಮಿತಿಯು ೨ ವರ್ಷಕಾಲ ಕೆಲಸಮಾಡುತ್ತದೆ.

ಜನರ ಘರ್ಷಣೆಯಲ್ಲಿ ಒಬ್ಬನ ಮರಣ

ಜಯಪುರಕ್ಕೆ ಸಮೀಪದಲ್ಲಿರುವ ಕೃಷ್ಣಗರ್ ಎಂಬಲ್ಲಿನ ಗ್ರಾಮವೊಂದರಲ್ಲಿ ೨ ಪಕ್ಷದವರಿಗೆ ಘರ್ಷಣೆ ಉಂಟಾಗಿ, ಪೋಲೀಸರು ಗುಂಡುಹಾರಿಸಿ, ಜನರನ್ನು ಚದುರಿಸಿದರಿಂದೂ, ಅದರಲ್ಲಿ ಒಬ್ಬನು ಸತ್ತು, ೧೭ ಮಂದಿಗೆ ಗಾಯಗಳಾದವೆಂದೂ ವರದಿಯಾಗಿದೆ.

ಕ್ಷಾಮಪರಿಹಾರಕ್ಕೆ ೯ ಲಕ್ಷ ರೂ. ಸಹಾಯ

ಸಂಸ್ಥಾನದ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಕ್ಷಾಮಪರಿಹಾರ ಪ್ರದೇಶಗಳಿಗೆ ಆಹಾರಾಭಿವೃದ್ಧಿಯೋಜನೆಯ ಹಣದಿಂದ ೯ ಲಕ್ಷ ರೂ. ಸಹಾಯ ಮಾಡಬೇಕೆಂದು ರೆವಿನ್ಯೂ ಕಮೀಷನರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದೆ. ಪ್ರತಿ ಜಿಲ್ಲೆಗೂ ೩ ಲಕ್ಷ ರೂ. ಜೊತೆಗೆ ೭೫ ಸಾವಿರ ರೂ.ಗಳ ಅಧಿಕ ನೆರವು ಮತ್ತು ತಕಾವಿಸಾಲದ ರೂಪದಲ್ಲಿ ೫೦ ಸಾವಿರ ರೂ. ಒದಗಿಸಬೇಕೆಂದೂ ತೀರ್ಮಾನಿಸಲಾಗಿದೆ.

ರೈಲ್ವೆ ನಿಲ್ದಾಣಗಳ ಅಭಿವೃದ್ಧಿ

ಇನ್ನು ಮೂರು ವರ್ಷಗಳ ಕಾಲದಲ್ಲಿ ಭಾರತದ ಸಣ್ಣ ಪುಟ್ಟ ರೈಲ್ವೆ ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಲಾಗುವುದೆಂದೂ ಮುಂದಿನ ತಿಂಗಳಿನಿಂದ ಬ್ರಾಂಚು ಲೈನುಗಳಲ್ಲಿ ಮೊದಲನೆ ತರಗತಿ ಗಾಡಿಗಳನ್ನು ರದ್ದುಮಾಡಿ, ಮುಂದಿನ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ಎಲ್ಲಾಕಡೆಯಲ್ಲೂ ಅವನ್ನು ಸಂಪೂರ್ಣವಾಗಿ ರದ್ದುಮಾಡಲಾಗುವುದೆಂದು ಕೇಂದ್ರ ರೈಲ್ವೆ ಉಪಸಚಿವರು ತಿಳಿಸಿರುತ್ತಾರೆ.

ಕೃಷ್ಣರಾಜಸಾಗರದ ನೀರಿನಮಟ್ಟ

ಈದಿನ ಕೃಷ್ಣರಾಜಸಾಗರದ ನೀರಿನ ಮಟ್ಟವು ೯೯ ಅಡಿ ಇದೆ.

ಮಂತ್ರಿಮಂಡಲ ಸಭೆ

ಬೆಂ. ಸೆ. ೨

ನಿನ್ನೆ ಮಧ್ಯಾಹ್ನದಿಂದ ಮಂತ್ರಿಮಂಡಲ ಸಭೆಯು ಪ್ರಾರಂಭವಾಗಿದೆ. ೬ನೇ ತಾರೀಖಿನವರೆಗೆ ನಿತ್ಯ ಮಧ್ಯಾಹ್ನ ನಡೆಯುತ್ತದೆಯೆಂದು ಗೊತ್ತಾಗಿದೆ.

ಅಸೆಸರಿಗೆ ೧೦೦ ರೂ. ಜುಲ್ಮಾನೆ

ನಗರದ ಹಾರ್ಮೋನಿಯಂ ವ್ಯಾಪಾರಿಗಳಾದ ಶ್ರೀ ಎಂ. ಪುಟ್ಟಯ್ಯನವರು ಅಸೆಸರಾಗಿ ಮೊಕದ್ದಮೆಯೊಂದರಲ್ಲಿ ಹಾಜರಾಗದಿರಲು ಸೆಷನ್ಸ್ ನ್ಯಾಯಾಧೀಶರು ಅವರಿಗೆ ೧೦೦ ರೂ. ಜುಲ್ಮಾನೆ ವಿಧಿಸಿದ್ದಾರೆಂದು ವರದಿಯಾಗಿದೆ.

ಕಂಠೀರವ ನರಸಿಂಹರಾಜರ ಸ್ಮಾರಕ

ಬೆಂಗಳೂರಿನಲ್ಲಿ ಕ್ರೀಡಾ ಸ್ಟೇಡಿಯಂ ರಚನೆ

ಬೆಂಗಳೂರು. ನಗರದಲ್ಲಿ ೫ ಲಕ್ಷ ರೂ. ವೆಚ್ಚದಿಂದ ಅತ್ಯಾಧುನಿಕ ಸೌಲಭ್ಯಗಳಿಂದ ಕೂಡಿದ ಕಂಠೀರವ ಕ್ರೀಡಾ ಸ್ಟೇಡಿಯಂ ಒಂದನ್ನು ಕಟ್ಟಬೇಕೆಂದು ನಿನ್ನೆ ವಿದ್ಯಾಸಚಿವ ಶ್ರೀ ಎ. ಜಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದ ಶ್ರೀ ಕಂಠೀರವನರಸಿಂಹರಾಜ ಒಡೆಯರ ಸ್ಮಾರಕ ಸಮಿತಿಯ ಸಭೆಯಲ್ಲಿ ನಿರ್ಧರಿಸಲಾಯಿತು. ಈಗಿರುವ ೨,೧೭,೦೦೦ ನಿಧಿಯ ಜೊತೆಗೆ ಮಿಕ್ಕ ಹಣವನ್ನು ಸರ್ಕಾರದವರು ಕೊಟ್ಟು ಈ ಯೋಜನೆಯನ್ನು ಕಾರ್ಯಗತಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಲಾಯಿತು.

ಭಾರತಕ್ಕೆ ವಿಶ್ವ ನಾಯಕತ್ವ ಬೇಕಿಲ್ಲ

ಚೀಣಾದ ಭಾರತರಾಯಭಾರಿಯ ಹೇಳಿಕೆ

ಭಾರತವು ತನ್ನದೇ ಆದ ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸುತ್ತಲಿದೆ. ಈ ನೀತಿಯಂತೆ ಭಾರತವು ಯಾವ ರಾಷ್ಟ್ರದ ಕಡೆಗೂ ಸೇರುವುದಿಲ್ಲ. ಅಂದರೆ ಅದು ದುರ್ಬಲನೀತಿಯೇನಲ್ಲ. ಅದು ಸ್ವತಂತ್ರವೂ ಮತ್ತು ಪ್ರಭಾವಶಾಲಿಯಾದ ನೀತಿಯೂ ಆಗಿದೆ. ಪೂರ್ವ ಏಶಿಯ ರಾಷ್ಟ್ರಗಳಲ್ಲಿ ಭಾರತದ ವಿದೇಶಾಂಗ ನೀತಿಗೆ ಮೆಚ್ಚಿಗೆ ಇದೆ. ಇಷ್ಟಾದರೂ ಭಾರತಕ್ಕೆ ವಿಶ್ವನಾಯಕತ್ವ ಬೇಕೆಂಬ ಹಂಬಲಿಲ್ಲ ಎಂದು ಚೀಣಾಕ್ಕೆ ಹೊಸದಾಗಿ ನೇಮಕವಾಗಿರುವ ಭಾರತ ರಾಯಭಾರಿ ಶ್ರೀ ಎನ್. ರಾಘವನ್‌ರವರು ಹೇಳಿರುವರು.

ಬೆಂಗಳೂರಿಗೆ ಕಾರ್ಮಿಕ ಸಚಿವರ ಭೇಟಿ

ಕೇಂದ್ರ ಸರ್ಕಾರದ ಕಾರ್ಮಿಕ ಸಚಿವ ಶ್ರೀ ವಿ. ವಿ. ಗಿರಿಯವರು ೬ ನೇ ತಾರೀಖು ಬೆಂಗಳೂರಿಗೆ ಭೇಟಿಕೊಡುವರು.

೧೦೦ ಕಿಲೋವಾಟ್ ರೇಡಿಯೋ ನಿಲಯಗಳು

ಬೊಂಬಾಯಿ, ಮದ್ರಾಸ್ ಮತ್ತು ಕಲ್ಕತ್ತಗಳ ರೇಡಿಯೋ ಕೇಂದ್ರಗಳಲ್ಲಿ ೧೦೦ ಕಿಲೋವಾಟ್ ಶಕ್ತಿಯುಳ್ಳ ಟ್ರಾನ್ಸ್‌ಮಿಟರುಗಳನ್ನು ನಿರ್ಮಿಸಲಾಗುತ್ತದೆ.

ಬೆರಿಕೆ ಹಾಲು ಮಾರಿದ್ದಕ್ಕೆ ಶಿಕ್ಷೆ

ಮೈಸೂರು ಸೆ. ೩

ಬೆರಿಕೆಹಾಲು ಮಾರಿದ್ದಕ್ಕೆ ಪೌರಸಭೆಯು ಹೂಡಿದ್ದ ಮೊಕದ್ದಮೆಯಲ್ಲಿ ನ್ಯಾಯಾಧೀಶರು ಇವರಿಗೆಲ್ಲಾ ಶಿಕ್ಷೆ ವಿಧಿಸಿರುವರು.

ಅಶೋಕಾ ಸ್ಟ್ರೀಟ್‌ನಲ್ಲಿರುವ ಕೆ. ನಾರಾಯಣ, ಕನ್ನೇಗೌಡನಕೊಪ್ಪಲು ಬೋರಣ್ಣ, ದೇವಲಾಪುರದ ಲಿಂಗಯ್ಯ ಇವರಿಗೆ ತಲಾ ೧೦ ರೂ. ಜುಲ್ಮಾನೆ; ಶ್ರೀರಂಗಪಟ್ಟಣದ ಸಿದ್ದನ್ನ. ಇಲವಾಲದ ನಂಜೇಗೌಡ ಹಿನಕಲ್ ಜೆನ್ನಯ್ಯ, ಗುಡಮಾನಹಳ್ಳಿ ಭೀಮೇಗೌಡ ಇವರಿಗೆ ತಲಾ ೧೫ ರೂ. ಜುಲ್ಮಾನೆ; ಗೊಲಗೇರಿ ಮಹದೇವುವಿಗೆ ೨೦ ರೂ ಜುಲ್ಮಾನೆ, ಇಟ್ಟಿಗೆಗೂಡು ಅಮ್ಮಯ್ಯಮ್ಮನಿಗೆ ೨೫ ರೂ. ಜುಲ್ಮಾನೆ ಹಿನಕಲ್ ಜವರಯ್ಯನಿಗೆ ೫೦ ರೂ. ಜುಲ್ಮಾನೆ ವಿಧಿಸಲಾಗಿದೆ. ಬೆರಕೆ ಬೆಣ್ಣೆಯನ್ನು ಮಾರಿದ್ದಕ್ಕೆ ಹಳೇಅಗ್ರಹಾರ ಶ್ರೀನಿವಾಸಾಚಾರ್ ೩೩ ರೂ, ಬಂಡೀಕೇರಿ ನಿಂಗಯ್ಯ ೨೦ ರೂ. ನಾಚನಹಳ್ಳಿ ಶಿವಯ್ಯ ೨೫ ರೂ ಜುಲ್ಮಾನೆ.

ಗಣಪತಿ ಮಂಗಳಾರತಿ

ಈದಿನ ಸಂಜೆ ೬-೩೦ ಕ್ಕೆ ಶ್ರೀ ಗಣಪತಿಸ್ವಾಮಿಯವರ ಮಹಾಮಂಗಳಾರತಿಯು, ಶ್ರೀಮತಿ. ಸಂಗೀತ ವಿದುಷಿ. ಜಲಜಾಕ್ಷಮ್ಮನವರ ಹಾಡುಗಾರಿಕೆ ಸೂಕ್ತಪಕ್ಕವಾದ್ಯದೊಡನೆ ನಡೆಯುತ್ತೆ. ಕುಂಚಿಟಿಗರ ರಾಮಮಂದಿರದಲ್ಲಿ ನಡೆಯುತ್ತದೆ.

ಪೌರಸಭಾಧಿವೇಶನ

ಮೈಸೂರು ಪೌರಸಭೆಯ ಮುಂದುವರಿದ ಅಧಿವೇಶನವು ೫ ನೇ ತಾ|| ಸಂಜೆ ನಡೆಯುತ್ತದೆ.

ಏಕರೀತಿ ಅಂಗಡಿ ಕಾನೂನು

ದೇಶಾದ್ಯಂತ ಏಕರೀತಿಯಾದ ಅಂಗಡಿ ಕಾನೂನನ್ನು ರಚನೆಯಾಗಬೇಕಾಗಿದೆ ಈ ವಿಷಯವು ಸರ್ಕಾರದ ಗಮನಸೆಳೆದಿದೆ. ಎಂದು ಕಾರ್ಮಿಕ ಸಚಿವ ಶ್ರೀ ವಿ. ವಿ. ಗಿರಿಯವರು ಹೇಳಿರುವರು.

ಈ ಬಗ್ಗೆ ವಿವಿಧಪ್ರಾಂತ್ಯ ಸರ್ಕಾರಗಳೊಡನೆ ಈಗಾಗಲೇ ವ್ಯವಹಾರ ಪ್ರಾರಂಭವಾಗಿದೆಯೆಂದು ಅವರು ಹೇಳಿರುವರು.

೮೦ ಜನ ನೀರಿನಪಾಲು

ಗಂಗಾನದಿಯಲ್ಲಿ ಪ್ರಯಾಣ ಮಾಡುತ್ತಿದ್ದ ದೋಣಿಯೊಂದು ಮುಳುಗಿ ೮೦ ಜನರು ನೀರಿನಪಾಲಾದರೆಂದು ಗೊತ್ತಾಗಿದೆ.

ಈಜಿಪ್ಟಿನ ರಾಯಭಾರಿ

ಡಾ|| ಸರ್ದಾರ್ ಪಣೀಕರ್‌ರವರನ್ನು ಈಜಿಪ್ಟಿನ ರಾಯಭಾರಿಯಾಗಿ ನೇಮಿಸಿರುವ ಅಧಿಕೃತ ಪ್ರಕಟಣೆ ಹೊರಬಿದ್ದಿದೆ. ಅವರು ಗುರುವಾರ ಕೈರೋವಿಗೆ ತೆರಳುವರು.

ವಿಶ್ವವಿದ್ಯಾನಿಲಯಗಳ ಸಹಾಯಾರ್ಥ ನಿಧಿ

ಭಾರತ ವಿಶ್ವವಿದ್ಯಾನಿಲಯಗಳಿಗೆ ಇನ್ನೂ ಹೆಚ್ಚಿನ ಹಣಸಹಾಯ ಒದಗಿಸಲು ಕೇಂದ್ರಸರ್ಕಾರದ ವಿದ್ಯಾಸಚಿವ ಶಾಖೆಯವರು ವಿಶ್ವವಿದ್ಯಾನಿಲಯಗಳ ಸಹಾಯಾರ್ಥ ಪ್ರಧಾನಿ ನಿಧಿಯನ್ನು ರಚಿಸಿದ್ದಾರೆ. ಅದಕ್ಕೆ ಸಾರ್ವಜನಿಕರು ಮತ್ತು ಖಾಸಗೀ ಸಂಸ್ಥೆಗಳಿಂದ ಹಣ ಸಹಾಯ ಪಡೆಯಲಾಗುವುದು. ಮತ್ತು ನಿಧಿಗೆ ಕೇಂದ್ರ ವಿದ್ಯಾಸಚಿವರು ಅಧ್ಯಕ್ಷರಾಗಿಯೂ ಮತ್ತು ಒಬ್ಬರು ಅಧಿಕಾರಿಗಳು ಕಾರ್ಯದರ್ಶಿಯಾಗಿದ್ದು, ಅವಶ್ಯಕವಿರುವ ವಿಶ್ವವಿದ್ಯಾನಿಲಯಗಳ ಪುರೋಭಿವೃದ್ಧಿಗೆ ಹಣಸಹಾಯ ಮಾಡಲಾಗುವುದು.

ಕಾರ್ಮಿಕರಿಗೆ ಉಚಿತ ವೈದ್ಯ ಚಿಕಿತ್ಸೆ

ಕೋಲಾರ ಚಿನ್ನದಗಣಿ ಮೈನಿಂಗ್ ಆಸ್ಪತ್ರೆಯಲ್ಲಿ ೧೫೦ ರೂ ಮತ್ತು ಅದಕ್ಕೆ ಹೆಚ್ಚಿಗೆ ಸಂಬಳಬರುವ ಭಾರತೀಯ ನೌಕರರಿಗೆ ಉಚಿತ ವೈದ್ಯ ಚಿಕಿತ್ಸೆ ಏರ್ಪಡಿಸಲಾಗಿದೆ ಇದುವರೆಗೆ ಐರೋಪ್ಯ ಮತು ಆಂಗ್ಲೋ ಇಂಡಿಯನ್ನರಿಗೆ ಮಾತ್ರ ಇಲ್ಲಿ ಚಿಕಿತ್ಸೆ ನಡೆಯುತ್ತಿತ್ತು.

ಕಾಫಿಯ ಸುವಾಸನೆ

'ಕಾಫಿಯ ಸುವಾಸನೆ' ಬಗ್ಗೆ ಆಹಾರ ಸಂಶೋಧನೆ ಕೇಂದ್ರದಲ್ಲಿ ನಡೆದ ಪರಿಶೋಧನ ಪ್ರಕಾರ ಕಾಫಿಯನ್ನು ಗಾಜಿನ ವಸ್ತು ತುಕ್ಕುಹಿಡಿಯದಕಬ್ಬಿಣಪಾತ್ರೆಗಳಲ್ಲಿ ತಯಾರಿಸಿದರೆ ಕಾಫಿಯ ಸುವಾಸನೆ ಮತ್ತು ಅದರ ರುಚಿಯು ಕೆಟ್ಟುಹೋಗುವುದಿಲ್ಲ. ಹಿತ್ತಾಳೆಪಾತ್ರೆಗಳಲ್ಲಿ ಅದರ ಮಧುರವೆಲ್ಲಾ ಹೋಗುತ್ತದೆ. ಎಂದು ಸಂಶೋಧನೆ ನಡೆಸಿದ ಶ್ರೀ ಎಂ. ಕಾಂತರಾಜಅರಸುರವರು ಕೇಂದ್ರದಲ್ಲಿ ನಡೆದ ಚರ್ಚಾಕೂಟದಲ್ಲಿ ತಿಳಿಸಿರುವರು.

ಮೈಸೂರು ಪೇಟೆಧಾರಣೆ

ತಾ|| ೨೯ ೮ ೫೨

ಪಲ್ಲಕ್ಕೆ.	ರೂ-ಆ.	ರೂ-ಆ
ಕಡಲೇಕಾಯಿ	7- 2	16- 12
ಎಳ್ಳು	67- 4	74- 8
ಹರಳು	47- 8	50- 8
ಹುರುಳಿ	48- 8	51- 2
ಅವರೆ	76- 0	77- 8
ಮೆಣಸಿನಕಾಯಿ	12- 8	15- 10
ಹುಣಸೇಹಣ್ಣು	3- 5	5- 12
ಸೀಗೆಕಾಯಿ	5- 4	5- 3
ತೆಂಗಿನಕಾಯಿ 1100ಕ್ಕೆ	159-	218

ಕಂಪಲ್ಸರಿಂ ಹಿಂದಿ ಸರಳ ವ್ಯಾಕರಣ

ಮೈಸೂರು ಮಹಾರಾಜ ಹೈಸ್ಕೂಲಿನ ಹಿಂದಿ ಪ್ರಾಧ್ಯಾಪಕರಾದ ಶ್ರೀ ಚಿಕ್ಕನರಸಿಂಹಯ್ಯನವರಿಂದ ರಚಿಸಲ್ಪಟ್ಟಿರುವ 'ಕಂಪಲ್ಸರೀ ಹಿಂದಿ ಸರಳ ವ್ಯಾಕರಣ ಎಂಬ ಪುಸ್ತಕವು ನಮ್ಮ ಹಸ್ತಗತವಾಗಿದೆ ಹೈಸ್ಕೂಲುಗಳಲ್ಲಿ ಹಿಂದಿಯನ್ನು ಒತ್ತಾಯ ಪಾಠವಾಗಿ ಮಾಡುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಈ ಪುಸ್ತಕವು ಬಹಳ ಉಪಯುಕ್ತವಾಗಿದೆ. ಮೈಸೂರು ಪ್ರಾದೇಶಿಕ ಕಾಂಗ್ರೆಸ್‌ಸಮಿತಿ ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪನವರು ಮುನ್ನುಡಿ ಬರೆದು ಕಡಿಮೆ ಬೆಲೆಯಲ್ಲಿ (೬ ಆಣೆ) ಈ ವ್ಯಾಕರಣವು ಕನ್ನಡ ಭಾಷೆಯ ಬಳಕೆಯಲ್ಲಿರುವ ಪ್ರದೇಶಗಳಲ್ಲಿ ಹಿಂದಿ ಭಾಷೆಯ ಪ್ರಚಾರಕ್ಕೆ ಹೆಚ್ಚಿನ ಸಹಾಯವಾಗುವುದೆಂದು ಆಶಿಸಿರುತ್ತಾರೆ.

ಹರಿಜನ ಕಷ್ಟನಿವಾರಣೆಗೆ ಕಾಂಗ್ರೆಸ್ಸಿನವರ ಉಪವಾಸ

ಹರಿಜನರ ಕುಂದುಕೊರತೆಗಳನ್ನು ಸರ್ಕಾರವು ಇನ್ನೂ ನಿವಾರಣೆ ಮಾಡದಿರುವುದಕ್ಕೆ ಪ್ರತಿಭಟನೆ ಸೂಚಿಸಲು ಸೆಪ್ಟಂಬರ್ ೧೩ ರಿಂದ ಇಂದೂರಿನಲ್ಲಿ ನಡೆಯಲಿರುವ ಎ.ಐ.ಸಿ.ಸಿ. ಅಧಿವೇಶನದ ಮುಂದೆ ಮಧ್ಯಭಾರತದ ಕಾಂಗ್ರೆಸ್ ನಾಯಕ ಶ್ರೀ ಸ್ವಾಮಿರಮಾನಂದ್ ರವರು ಅಮರಣಾಂತ ಉಪವಾಸ ಮಾಡಲು ನಿರ್ಧರಿಸಿದ್ದಾರೆ. ಪ್ರಧಾನಿ ನೆಹರೂರವರಿಗೆ ಈ ವಿಷಯವನ್ನು ತಿಳಿಸಲಾಗಿದೆ.

ಹಣ ತಿಂದಿದ್ದಕ್ಕೆ ಮರಣ ದಂಡನೆ

೨೪,೫೦೦,೦೦೦ ಯುಗೋಸ್ಲಾವ್ ದಿನಾರುಗಳನ್ನು ದುರುಪಯೋಗಪಡಿಸಿಕೊಂಡರೆಂಬ ಅಪಾದನೆ ಮೇಲೆ ಗಣಿಗಳ ೪ ಮಂದಿ ಉನ್ನತಾಧಿಕಾರಿಗಳಿಗೆ ಮರಣ ದಂಡನೆಯನ್ನು ವಿಧಿಸಲಾಗಿದೆ.

ಇದೇ ಅಪಾದನೆಮೇಲೆ ಇತರ ೧೫ ಜನರಿಗೆ ವಿವಿಧ ಜೈಲುಶಿಕ್ಷೆಯಾಗಿದೆ.

ವಿಮಾನದಿಂದ ಆಹಾರ ಸರಬರಾಜು

ಉತ್ತರ ಪ್ರದೇಶದ ಕೆಲವು ಪ್ರವಾಹಕ್ಕೀಡಾದ ಪ್ರದೇಶಗಳಿಗೆ ವಿಮಾನಮೂಲಕ ಸುಮಾರು ೫೦೦೦ ಮಣ ಆಹಾರವನ್ನು ಒದಗಿಸಲಾಗಿದೆ.

ಪತ್ರವ್ಯವಹಾರ

ಬಡವಿದ್ಯಾರ್ಥಿಗಳ ಉಚಿತ ಭೋಜನವ್ಯವಸ್ಥೆ

ಸಮಾಚಾರಪತ್ರಿಕೆ ಸಂಪಾದಕರ ಸನ್ನಿಧಿಗೆ ಕ್ಷಮಕ್ಕೆ||

ಮೈಸೂರಿನ ಪುರಸಭೆಯ ಮೀಟಿಂಗಿನಲ್ಲಿ ಬಡ ವಿದ್ಯಾರ್ಥಿಗಳ ಉಚಿತ ಊಟ ವ್ಯವಸ್ಥೆ ವಿಚಾರದಲ್ಲಿ ನಡೆದ ಚರ್ಚೆಯಲ್ಲಿ ನನ್ನ ಸಂಬಂಧವಾಗಿ ನಿಮ್ಮ ಪತ್ರಿಕೆಯ ೨೯-೮-೫೨ನೇ ಸಂಚಿಕೆಯಲ್ಲಿಉಲ್ಲೇಖಿಸಿರುವ ಸಮಾಚಾರವು ವಾಸ್ತವಾಂಶಕ್ಕೆ ದೂರವಾಗಿದೆ ಎಂಬ ಅಂಶವನ್ನು ತಿಳಿಸಬಯಸುತ್ತೇನೆ. ಅದನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಪ್ರಾರ್ಥಿಸುತ್ತೇನೆ

ಪುರಸಭೆಯ ಮೀಟಿಂಗಿನಲ್ಲಿ ಬಡ ವಿದ್ಯಾರ್ಥಿಗಳ ಊಟವ್ಯವಸ್ಥಾ ಸಮಿತಿಯವರು ಹಾಜರ್ಪಡಿಸಿದ ಪಟ್ಟಿಯಲ್ಲಿ ವಿದ್ಯಾರ್ಥಿಗಳ ಆಯ್ಕೆಯು ಕೋಮುವಾರು ರೀತಿಯಲ್ಲಿ ವಿಂಗಡಿಸಿದ್ದುದರಿಂದಲೂ ಸದರೀ ವಿಂಗಡಣೆಯಲ್ಲಿ ಒಂದು ಕೋಮಿನವರಿಗೆ ವಿಶೇಷ ಪ್ರಾತಿನಿಧ್ಯವೂ ಮತ್ತೆ ಕೆಲವು ಕೋಮುಗಳಿಗೆ ಅವಕಾಶವಿಲ್ಲದಿರುವುದು ಕಂಡುಬಂದಿದ್ದರಿಂದಲೂ ಇಂಥಾವ್ಯವಸ್ಥೆ ರಾಜ್ಯಾಂಗದನಿಯಮಾವಳಿಗಳಿಗೆ ವಿರೋಧವಾಗಿದೆಯೆಂದು ನನ್ನ ಅಭಿಪ್ರಾಯವನ್ನು ಸೂಚಿಸಿದನೇ ಹೊರತು ಯಾರಮೇಲೂ ಕೋಮುವಾರು ಆರೋಪಣೆಮಾಡಲಿಲ್ಲ.

ಆಗ ನನ್ನ ಸೂಚನೆಯು ಸದಸ್ಯರಿಗೆ ಒಂದುವೇಳೆ ಮನ ನೋಯಿಸಿದ್ದರೆ ಅದನ್ನು ಅಲ್ಲಿಗೇ ಮುಕ್ತಾಯಗೊಳಿಸಿ ವಾಪಸು ಪಡೆಯಲು ಸಿದ್ಧ ಎಂದೆನು. ಇದರಲ್ಲಿ ಆರೋಪಣೆಯಾಗಲೀ, ಅಪಾದನೆಯ ವಾಪಸ್ ಎಂಬುದಾಗಲೀ ಕ್ಷಮಾಪಣೆಯ ಪ್ರಶ್ನೆಯಾಗಲೀ ಉದ್ಭವಿಸುವುದಿಲ್ಲ.

ಎ. ರಾಚಯ್ಯ-ಪೌರಸಭಾಉಪಾಧ್ಯಕ್ಷ.

ಅಲಿಘರ್ ವಿಶ್ವವಿದ್ಯಾನಿಲಯಕ್ಕೆ ನೆಹರು

ಪ್ರಧಾನಿ ನೆಹರುರವರನ್ನು ಅಲಿಘರ್ ಮುಸ್ಲಿಂ ವಿಶ್ವವಿದ್ಯಾನಿಲಯದ ಕೋರ್ಟಿಗೆ ಸದಸ್ಯರಾಗಿ ಚುನಾಯಿಸಲಾಗಿದ್ದಾರೆ. ಈ ವಿಶ್ವವಿದ್ಯಾನಿಲಯಕ್ಕೆ ಹಿಂದೂವನ್ನು ಚುನಾಯಿಸುವುದು ಇದೇ ಮೊದಲು.

ಬೆನಿಫಿಟ್ ಬೆನಿಫಿಟ್

ಮೈಸೂರು ಪಿಲ್ಲೆ ಶ್ರೀ ವಿನಾಯಕ ದೇವಸ್ಥಾನದ ಕಟ್ಟಡದ ಸಹಾಯಕ್ಕಾಗಿ

★ ಸಂಪೂರ್ಣ ಕೃಷ್ಣಲೀಲಾ ★

ತಾ|| 6-9-52 ನೇ ರಾತ್ರಿ 10-30ಕ್ಕೆ ಮೈಸೂರು ಟೌನ್‌ಹಾಲಿನಲ್ಲಿ

ಪಾತ್ರ:—ಲಕ್ಷ್ಮಮ್ಮ, ಸುಮತಿ, ಸರೋಜ, ಕಲಾವತಿ, ಚೌಡಮ್ಮ, ಎಂ. ಮಾಧವರಾವ್, ಎಂ. ಎಸ್. ಮಾಧವರಾವ್, ಕೆ. ಎಸ್. ರಾವ್, ವಿಶ್ವನಾಥ್, ನಾಗರಾಜ್, ಇತ್ಯಾದಿ

ನ್ಯೂ ಅಪೇರ

29-8-52 ರಿಂದ ೨ ನೇ ವಾರ

ಚಿನ್ನ ದೊರೈ [ತಮಿಳು]

ಪಾತ್ರ:— ಟಿ. ಆರ್. ಮಹಾಲಿಂಗಂ, ವರಲಕ್ಷ್ಮಿ.

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 16

೪-೯-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಭಾರತದ ಮೇಲೆ ಯುದ್ಧ ನಡೆಸಬೇಕು

ಅಜಾದ್ ಕಾಶ್ಮೀರ ನಾಯಕನ ಮೊರೆ

ಪಾಕೀಸ್ತಾನದ ಹತೋಟಿಯಲ್ಲಿರುವ ಅಜಾದ್ ಕಾಶ್ಮೀರದ ಜನರು ತಮ್ಮ ಸ್ವಾತಂತ್ರಕ್ಕಾಗಿ ಭಾರತದಮೇಲೆ ಕದನ ನಡೆಸಲು ಪಾಕೀಸ್ತಾನವು ಅನುಮತಿ ಕೊಡಬೇಕೆಂದು ಜಮ್ಮು ಮತ್ತು ಕಾಶ್ಮೀರ ಮುಸ್ಲಿಂಸಮ್ಮೇಳನದ ಅಧ್ಯಕ್ಷ ಸರ್ದಾರ್ ಇಬ್ರಾಹಿಂರವರು ತಿಳಿಸುತ್ತಾರೆ. ವಿಶ್ವಸಂಸ್ಥೆಯಿಂದ ಈ ಸಮಸ್ಯೆ ಬಗೆಹರಿಯುವುದೆಂದು ಆಶಾಭಾವನೆಯು ಈಗ ಎಳ್ಳಷ್ಟು ಇಲ್ಲವೆಂದೂ, ಇದೇ ಮುಂದುವರಿದರೆ, ಪಾಕೀಸ್ತಾನದಲ್ಲಿ ಗಲಾಟೆ ಆಗಬಹುದೆಂದು ಆದ್ದರಿಂದ ಅಜಾದ್ ಕಾಶ್ಮೀರಿಗಳು ತಮ್ಮ ಸ್ವಾತಂತ್ರ ಮತ್ತು ಹಕ್ಕುಬಾಧ್ಯತೆಗಳಿಗಾಗಿ ಭಾರತದಮೇಲೆ ಯುದ್ಧ ನಡೆಸಲೇಬೇಕೆಂದು ಅವರು ಎಚ್ಚರಿಕೆಯಿತ್ತಿದ್ದಾರೆ.

ಕಲಾಭಿವೃದ್ಧಿಗೆ ನೂತನ ಶಿಕ್ಷಣ ಯೋಜನೆ ಬೇಕು

ಮೈ ಸೆ. ೪

ಭಾರತದಲ್ಲಿ ಚಲನಚಿತ್ರಗಳ ಬೆಳವಣಿಗೆ ಹೆಚ್ಚಾಗಿ ನಾಟಕ ಕಲೆಯೇ ನಾಮಾವಶೇಷವಾಗುತ್ತಿದೆ. ಇಂತಹಕಾಲದಲ್ಲಿ ವಿಶ್ವವಿದ್ಯಾನಿಲಯದವರು ಅದನ್ನು ಬಿ. ಎ. ತರಗತಿಯಲ್ಲಿ ಐಚ್ಛಿಕ ವಿಷಯವನ್ನಾಗಿ ಬೋಧಿಸುವುದು ಗಮನಾರ್ಹವಾದುದು. ಆದರೆ ಅದರಿಂದ ವಿಶೇಷ ಹಣವ್ಯಯವಾಗಿ ಕೆಲವರಿಗೆ ಮಾತ್ರ ಪ್ರಯೋಜನವಾಗುವುದು. ಆದ್ದರಿಂದ ಕಲಾ ಶಿಕ್ಷಣವು ಮಿಡಲ್‌ಸ್ಕೂಲಿನಲ್ಲಿಯೇ ಪ್ರಾರಂಭಿಸಬೇಕೆಂದು ಶ್ರೀ ಎಂ. ಆರ್. ಸಿ. ಬಸಪ್ಪನವರು ಪ್ರಾರ್ಥಿಸುತ್ತಾರೆ.

ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ ಅಧ್ಯಾಪಕರಿಲ್ಲದೆ ತೊಂದರೆಯಾಗುತ್ತಿರುವುದು ತುಂಬಾ ವಿಷಾದದ. ಮೈಸೂರು ಬೆಂಗಳೂರುನಗರಗಳಲ್ಲಿ ಹತ್ತಾರುವರ್ಷಗಳಿಂದ ದುಡಿದು ನುರಿತ ಪತ್ರಿಕೋದ್ಯೋಗಿಗಳಿದ್ದಾರೆ. ಅವರಲ್ಲಿ ಕೆಲವರನ್ನು ಆರಿಸಿಕೊಂಡು ಪತ್ರಿಕೋದ್ಯಮದ ಅಭ್ಯಾಸಕರನ್ನಾಗಿ ನೇಮಿಸಬಹುದು. ಇದಕ್ಕೆ ಸರ್ಕಾರದವರು ಕೂಡಲೇ ಗಮನಕೊಡುವರೆಂದು ನಂಬಿದ್ದೇನೆ ಎಂದೂ ಶ್ರೀ ಎಂ. ಆರ್. ಸಿ ಬಸಪ್ಪನವರು ಪತ್ರದಲ್ಲಿ ಬರೆದಿರುತ್ತಾರೆ.

ಪಾಕೀಸ್ಥಾನ ಪ್ರವಾಸಕ್ಕೆ ರಹದಾರಿ

ಬೆಂಗಳೂರು ಸೆ. ೪

ಭಾರತ ಪಾಕೀಸ್ಥಾನಗಳ ನಡುವೆ ಪ್ರವಾಸಕ್ಕೆ ರಹದಾರಿ ಪದ್ಧತಿಯು ಅಕ್ಟೋಬರ್ ೧೫ ರಿಂದ ಪ್ರಾರಂಭವಾಗುತ್ತದೆ. ಇದಕ್ಕಾಗಿ ಮೈಸೂರು ಸರ್ಕಾರವು ೩ ರೂ ಶುಲ್ಕ ಪಡೆದು ಒಂದು ವರ್ಷಕಾಲದ ರಹದಾರಿಯನ್ನು ಕೊಡುತ್ತದೆ.

ಸೆಪ್ಟಂಬರ್ ೮ ನೇ ತಾರೀಖಿನಿಂದ ಈ ರಹದಾರಿಗಳು ಸೆಕ್ರೆಟರಿಯೇಟಿನ ಗೃಹ ಶಾಖೆಯಲ್ಲಿಯೂ, ಎಲ್ಲಾ ಜಿಲ್ಲಾಮ್ಯಾಜಿಸ್ಟ್ರೇಟರ ಕಛೇರಿಗಳಲ್ಲಿಯೂ ಸಿದ್ಧವಾಗಿರುತ್ತವೆ. ಸೆಪ್ಟಂಬರ್ ೧೧ ನೇ ತಾರೀಖು ಲಾಗಾಯ್ತು ಇದಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ ಎಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ.

ಕೇಂದ್ರದ ನೂತನ ಉಪಸಚಿವ

ಸಿಮ್ಲಾದ ಶ್ರೀ ಜೈಘುಕ್‌ಲಾಲ್‌ಹಥಿಯರವರನ್ನು ಕೇಂದ್ರಸರ್ಕಾರದ ಉಪಮಂತ್ರಿಯನ್ನಾಗಿ ನೇಮಿಸಲಾಗಿದೆ.

೩೬೫ ಮೈಲಿ ಕಾಲುನಡಿಗೆ ಸಂಚಾರ

ಬ್ರಿಟನ್ನಿನ ೩೯ ವರ್ಷದ ಜಾರ್ಜ್ ಡಿಕ್ಸನ್ ಎಂಬ ಇಂಜನಿಯರೊಬ್ಬರು ಬೆಲ್‌ವಿಕ್ಕಿನಿಂದ ಲಂಡನ್ನಿಗೆ ೩೬೫ ಮೈಲಿಯನ್ನು ಎಲ್ಲೂನಿಲ್ಲದೆ ಕಾಲು ನಡೆಗೆಯಲ್ಲಿ ೧೯ ಗಂಟೆ, ೪೨ ನಿಮಿಷಗಳಲ್ಲಿ ತಲುಪಿದರೆಂದು ವರದಿಯಾಗಿದೆ.

ಸೂರ್ಯ ಕಿರಣಗಳ ಶಕ್ತಿಯ ಉಪಯೋಗ

ರಷ್ಯದ ಉತ್ತರ ಪರ್ಷಿಯನ್ ಗಡಿಯ ಟರ್ಕಿಮಾನಿಯಾ ಪ್ರದೇಶದಲ್ಲಿವಿದ್ಯುಚ್ಛಕ್ತಿಕೇಂದ್ರಗಳನ್ನು ಸ್ಥಾಪಿಸಲು ಸೂರ್ಯಕಿರಣಗಳ ಶಕ್ತಿಯನ್ನು ಉಪಯೋಗಿಸಲಾಗುತ್ತಿದೆಯೆಂದೂ ಮತ್ತು ನೀರುಕಾಯಿಸುವುದು ಮತ್ತು ಇತರ ಬಾಬಿಂಗಳಿಗೂ ಅದನ್ನು ಉಪಯೋಗಿಸಲಾಗುತ್ತದೆಯೆಂದೂ ಹೇಳಲಾಗಿದೆ.

ಗಾಂಧೀಸ್ಮಾರಕ ಸ್ತೂಪದ ಅನಾವರಣೋತ್ಸವ

ರಾಜಧಾನಿಯ ಗಾಂಧೀ ಚೌಕದಲ್ಲಿ ನಿರ್ಮಿಸಿರುವ ಗಾಂಧೀಸ್ಮಾರಕ ಸ್ತೂಪದ ಅನಾವರಣೋತ್ಸವವನ್ನು ಇದೇ ೮ ನೇ ತಾರೀಖು ಸೋಮವಾರ ಬೆಳಗ್ಗೆ ೧೦ ಗಂಟೆಗೆ ಶ್ರೀಮನ್ಮಹಾರಾಜರವರು ನೆರವೇರಿಸಲು ಒಪ್ಪಿದ್ದಾರೆಂದು ತಿಳಿದುಬರುತ್ತದೆ.

ನಾಯಿಯು ಪ್ರಾಣತೆತ್ತು ಯಜಮಾನನ ರಕ್ಷಣೆ

ಕೂಚ್‌ಬಿಹಾರಿನಲ್ಲಿ ನಾಯಿಯೊಂದು ತನ್ನ ಪ್ರಾಣವನ್ನುಕೊಟ್ಟು ಯಜಮಾನನ ಸಂಸಾರವನ್ನು ಕಾಳಸರ್ಪದಿಂದ ಪಾರುಮಾಡಿದ ಘಟನೆಯೊಂದು ವರದಿಯಾಗಿದೆ.

ಯಜಮಾನನ ಸಂಸಾರದವರು ಮಲಗಿದ ಕೋಣೆಗೆ ಒಂದು ಭಾರಿ ಕಾಳಸರ್ಪವು ಪ್ರವೇಶಿಸಿದುದನ್ನು ಅಲ್ಲಿದ್ದ ನಾಯಿಯು ಕಂಡು ಕೂಡಲೇ ಅದರಮೇಲೆ ಬಿದ್ದಿತೆಂದೂ, ಅವೆರಡಕ್ಕೂ ಭಾರಿಕಾಳಗ ನಡೆದು, ಕೊನೆಯಲ್ಲಿ ನಾಯಿಯು ಸರ್ಪವನ್ನು ಕೊಂದುಹಾಕಿತೆಂದೂ, ಆದರೆ ವಿಷದಿಂದ ನಾಯಿಯು ಸಹ ಸತ್ತುಹೋಯಿತೆಂದು ಹೇಳಲಾಗಿದೆ.

ಅದರ ಉಪಕಾರಕ್ಕಾಗಿ ಯಜಮಾನನು ನಾಯಿಗೆ ಮರ್ಯಾದೆಮಾಡಿ ಶವಸಂಸ್ಕಾರಮಾಡಿದ.

ಚಿತ್ರದುರ್ಗದ ಕಷ್ಟವು ಪರಿಸ್ಥಿತಿ ಭೀಕರವಾಗಿದೆ

ಚಿತ್ರದುರ್ಗ ಜಿಲ್ಲೆಯಲ್ಲಿ ಈಗ ಮಳೆ ಸಂಪೂರ್ಣವಾಗಿ ನಿಂತು ಹೋಗಿದೆ. ಅನೇಕ ತಾಲ್ಲೂಕುಗಳಲ್ಲಿ ಪೈರು ಪೂರ್ಣವಾಗಿ ನಾಶವಾಗಿವೆ. ಇದರಿಂದ ಆಹಾರಧಾನ್ಯಗಳ ಬೆಲೆಯು ವಿಪರೀತವಾಗಿ ಏರಿದೆ. ಇದೇ ಪರಿಸ್ಥಿತಿಯು ಮುಂದುವರಿದರೆ ಜಿಲ್ಲೆಯ ಜನರು ಮುಂದೆ ವಿಶೇಷ ಕಷ್ಟಕ್ಕೀಡಾಗಬೇಕಾಗುವುದು. ಅನೇಕ ಪರಿಹಾರ ಕಾರ್ಯವನ್ನು ಈಗ ಕೈಗೊಳ್ಳಲಾಗುತ್ತಿದೆ-ಆದರೂ ಪರಿಸ್ಥಿತಿಯು ಭೀಕರವಾಗಿದೆ ಎಂದು ಅಲ್ಲಿನ ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಚಂಪಾರಣ್ಯದ ಪ್ರದೇಶದಲ್ಲಿ ಆಹಾರ ಕಷ್ಟವು

ಚಂಪಾರಣ್ಯದ ಥಾಲೋಕಟ್ ಮತ್ತು ಧನಗರ್ ಕ್ಷೇತ್ರದಲ್ಲಿ ಕಳೆದ ೩೫ ವರ್ಷಗಳಿಂದಲೂ ಕ್ಷಾಮಪರಿಸ್ಥಿತಿ ಉಂಟಾಗಿ ಈಗ ಒಂದೂವರೆಲಕ್ಷ ಜನರು ಭೀಕರ ಪರಿಸ್ಥಿತಿಗೆ ಬಂದಿದ್ದಾರೆಂದು ವರದಿಯಾಗಿದೆ ಪರಿಹಾರ ಕಾರ್ಯಕ್ಕಾಗಿ ಸರ್ಕಾರದವರು ಇಲ್ಲಿಯವರೆಗೆ ೮ ಲಕ್ಷ ರೂ. ಖರ್ಚುಮಾಡಿದ್ದಾರೆ.

ಇರಾನ್ ಎಣ್ಣೆ ರಾಷ್ಟ್ರೀಕರಣ ನೀತಿಗೆ ಒಪ್ಪಿಗೆ

ಇರಾನಿನ ಎಣ್ಣೆ ರಾಷ್ಟ್ರೀಕರಣ ನೀತಿಯನ್ನು ಬ್ರಿಟನ್ ಮತ್ತು ಅಮೇರಿಕ ಒಪ್ಪಿರುವುದರಿಂದ ಎಣ್ಣೆ ಸಮಸ್ಯೆಯನ್ನು ಬಗೆಹರಿಸಲು ಎರಡು ರಾಷ್ಟ್ರಗಳ ಜಂಟಿ ಸಲಹೆಯನ್ನು ಇರಾನಿನ ಪ್ರಧಾನಿ ಒಪ್ಪಬೇಕೆಂದು ಅಮೆರಿಕದ ಸೆಕ್ರೆಟರಿ ಆಫ್‌ಸ್ಟೇಟ್ ಡೀನ್ ಅಚೆಸನ್‌ರವರು ಮನವಿ ಮಾಡಿದ್ದಾರೆ

ಸರ್ಕಾರದ ಆಹಾರನೀತಿ ಬಗ್ಗೆ ವಿವರಣೆ ಬೇಕು

ಮೈಸೂರು ಸೆ. ೪

ಮೈಸೂರು ನಗರದಲ್ಲಿ ಅಪಾದಿತರವನ್ನು ತೆಗೆದುಹಾಕಿದ್ದರಿಂದ ರೇಷನ್ ಡಿಪೋಗಳಲ್ಲೇ ಆಹಾರ ಕೊಳ್ಳಬೇಕಾದುದರಿಂದ ಸಾಕಷ್ಟು ಆಹಾರಧಾನ್ಯಗಳುದೊರೆಯುವುದು ಕಷ್ಟವಾಗಿದೆ. ವರ್ತಕರಿಂದ ಆಹಾರಧಾನ್ಯಗಳ ಮಾರಾಟವಾಗದೆ ಪ್ರಜೆಗಳಿಗೆ ತೊಂದರೆಯಾಗಿರುವುದರಿಂದ ಮೈಸೂರು ನಗರ ಮತ್ತು ಜಿಲ್ಲೆಯಿಂದ ಶಾಸನಸಭೆಗೆ ಚುನಾಯಿತರಾಗಿರುವ ಶ್ರೀ ಬಿ ನಾರಾಯಣಸ್ವಾಮಿ, ಶ್ರೀ ಟಿ. ಮರಿಯಪ್ಪನವರು ಮತ್ತು ಪಾರ್ಲಿಮೆಂಟಿಗೆ ಚುನಾಯಿತರಾಗಿರುವ ಶ್ರೀಗಳಾದ ಎಂ. ಎಸ್. ಗುರುಪಾದಸ್ವಾಮಿ ಮತ್ತು ಎ. ರಾಚಯ್ಯನವರುಗಳು ಸಂಘದ ಆಶ್ರಯದಲ್ಲಿ ಏರ್ಪಡಿಸಲಿರುವ ಬಹಿರಂಗ ಸಭೆಯಲ್ಲಿ ತಮ್ಮ ಸರ್ಕಾರದ ಆಹಾರನೀತಿ ಬಗ್ಗೆ ವಿವರಣೆ ಕೊಡಬೇಕೆಂದು ಪ್ರಾರ್ಥಿಸಿ ಮೈಸೂರು ನಗರ ರೇಷನ್‌ಕಾರ್ಡುದಾರರ ಸಂಘದಸಭೆಯು ನಿರ್ಣಯ ಮಾಡಿದೆ.

ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ ಸರಬರಾಜು

ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಸರ್ಕಾರದವರು ಒಂದು ಪತ್ರಿಕಾ ಪ್ರಕಟಣೆ ಹೊರಡಿಸಿ, ಈ ಕಾರ್ಯಕ್ಕಾಗಿ ವಿನಿಯೋಗಿಸುವ ಹಣಕ್ಕೆ ಶೇಕಡ ೩ ರಷ್ಟು ಬಡ್ಡಿ ಬರುವಂತೆ ಉತ್ಪತ್ತಿ ಬರುವಂತಿರುವ ಪ್ರದೇಶಗಳಿಗೆ ಮಾತ್ರ ವಿದ್ಯುಚ್ಛಕ್ತಿ ಸರಬರಾಜಿನ ಕಾರ್ಯವನ್ನು ತೆಗೆದುಕೊಳ್ಳಲಾಗುವುದೆಂದು ತಿಳಿಸಿದ್ದಾರೆ.

ಕಂದಾಯ ರಿಯಾಯಿತಿ

ಮಳೆಯಿಲ್ಲದೆ ತೊಂದರೆಗೀಡಾಗಿರುವ ತುಮಕೂರುಜಿಲ್ಲೆಯ ಗುಬ್ಬಿತಾಲ್ಲೂಕಿನ ೮೮ಗ್ರಾಮಗಳಲ್ಲಿ ೮೮೬೮ರೂ. ಕೋಲಾರ ತಾಲ್ಲೂಕಿನ ೨೪ ಗ್ರಾಮಗಳಲ್ಲಿ ೪೨೭೬ ರೂ. ಗಳ ಕಂದಾಯದಲ್ಲಿ ಅರ್ಧ ಮಾಫಿ ಕೊಡಲಾಗಿದೆ.

ವಿದ್ಯಾರ್ಥಿಗಳ ಮೇಲೆ ಗುಂಡಿನೇಟು

ಇಬ್ಬರ ಮರಣ: ೪೦ ಜನಕ್ಕೆ ಗಾಯ

ಮುಖ್ಯಮಂತ್ರಿಗಳ ಕಾರಿಗೆ ಬೆಂಕಿ

ಹೊರಪ್ರಾಂತ್ಯದ ಜನರನ್ನು ಸರ್ಕಾರಿ ನೌಕರಿಗೆ ನೇಮಿಸಿಕೊಳ್ಳುವುದನ್ನು ಪ್ರತಿಭಟಿಸಿ ವಿದ್ಯಾರ್ಥಿಗಳ ಗುಂಪೊಂದು ನಿನ್ನೆ ಹೈದರಾಬಾದಿನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿತು. ಪೋಲೀಸಿನವರು ಗುಂಡು ಹಾರಿಸಿ ಗುಂಪನ್ನು ಚದುರಿಸಿದರು.

ಗುಂಪಿನಲ್ಲಿ ಒಬ್ಬನು ಸತ್ತು, ೧೦ ಜನರಿಗೆ ಗಾಯಗಳಾದುವು.

ವಿದ್ಯಾರ್ಥಿಗಳು ಹೈದರಾಬಾದ್ ಹೈಕೋರ್ಟಿನ ಬಳಿ ಪೋಲೀಸ್ ಠಾಣೆಗೆ ಬೆಂಕಿಯಿಟ್ಟರು.

ಈ ಸಂದರ್ಭದಲ್ಲಿ ಗುಂಪನ್ನು ಚದುರಿಸಲು ಪೋಲೀಸಿನವರು ಪುನಹ ಗುಂಡು ಹಾರಿಸಿದರು. ಕೋಪೋದ್ರೇಕಗೊಂಡ ಜನರು ಮುಖ್ಯಮಂತ್ರಿಗಳ ಮೋಟಾರು ಕೆಲವು ಬಸ್ಸು ಮತ್ತು ಲಾರಿಗಳಿಗೆ ಬೆಂಕಿಯಿಟ್ಟರು. ಪೋಲೀಸಿನವರಮೇಲೆ ಕಲ್ಲಿನ ಸುರಿಮಳೆ ನಡೆಸಿದರು. ಇದರಿಂದ ಪೋಲೀಸಿನವರೂ ಸೇರಿ ಒಟ್ಟು ೪೦ ಜನರಿಗೆ ಗಾಯಗಳಾಗಿವೆ. ತೀವ್ರಗಾಯಗೊಂಡ ೪ ಜನರಲ್ಲಿ ಒಬ್ಬನು ಆಸ್ಪತ್ರೆಯಲ್ಲಿ ಮಡಿದನು. ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಸಂಜೆ ರೇಡಿಯೋ ಭಾಷಣಮಾಡುತ್ತಾ ಈ ಘಟನೆಗಳಿಗೆ ತಮ್ಮ ವ್ಯಸನವನ್ನು ವ್ಯಕ್ತಪಡಿಸಿ, ಎಲ್ಲರೂ ಶಾಂತಿಯಿಂದ ವರ್ತಿಸಬೇಕೆಂದು ಕೋರಿದರು. ಈ ಗಲಾಟೆಯು ಆಜಾದ್ ಹೈದರಾಬಾದಿನ ಪ್ರತಿಧ್ವನಿಯೆಂದೂ ಪೋಲೀಸಿನವರು ಗುಂಡುಹಾರಿಸಿದ್ದಕ್ಕೆ ಸಮಿತಿ ನೇಮಿಸಿ ವಿಚಾರಣೆ-ನಡೆಸುವುದಾಗಿ ಹೇಳಿದರು.

ಹೈದರಾಬಾದ್ ಮತ್ತು ಸಿಕಂದರಾಬಾದ್‌ಗಳಲ್ಲಿ ನಿಷೇದಾಜ್ಞೆಗಳನ್ನು ಜಾರಿಮಾಡಲಾಗಿದೆ. ಶಾಲಾ ಕಾಲೇಜುಗಳನ್ನು ೩ ದಿನಕಾಲ ಮುಚ್ಚಲಾಗಿದೆ.

ಪಾಕೀಸ್ತಾನದ ನಾನಾ ಭಾಗಗಳಲ್ಲಿ ಆಹಾರ ಅಭಾವ

ಪಾಕೀಸ್ತಾನದ ಸಿಂಧ್, ಗಡಿನಾಡು ಪ್ರದೇಶ ಮುಂತಾದ ಎಲ್ಲಾ ಪ್ರಾಂತ್ಯಗಳಲ್ಲಿ ಆಹಾರ ಅಭಾವವು ವಿಶೇಷವಾಗಿ ಉಂಟಾಗಿದೆ. ಕೇಂದ್ರ ಸರ್ಕಾರವು ಈ ಅಭಾವ ಪ್ರಾಂತ್ಯಗಳಿಗೆಲ್ಲಾ ಸ್ವಲ್ಪ ಸಲ್ಪ ಆಹಾರ ವಸ್ತುಗಳನ್ನು ಕಳುಹಿಸುತ್ತಿದೆ. ಕರಾಚಿ ಮುಂತಾದೆಡೆ ಇರುವ ರೇಷನ್ ಡಿಪೋಗಳಲ್ಲಿ ದಿನ ಪಡಿತರವನ್ನು ಗೋಧಿ, ಆಟಾ ಮುಂತಾದುವನ್ನು ವಾರ ಕೊಮ್ಮೆ ಅಲ್ಪಪ್ರಮಾಣದಲ್ಲಿ ಕೊಡುತ್ತಿರುವುದಾಗಿ ವರದಿಯಾಗಿದೆ.

ಭಾರತ ನೀತಿಯ ಬಗ್ಗೆ ಈಜಿಪ್ಟಿಗೆ ಸಂತೋಷ

ಭಾರತವು ಸರ್ದಾರ್ ಫಣಿಕರನ್ನು ಈಜಿಪ್ಟಿನಲ್ಲಿ ತನ್ನ ರಾಯಭಾರಿಯಾಗಿ ನೇಮಿಸಿರುವ ಬಗ್ಗೆ ಈಜಿಪ್ಟಿನ ಅಧಿಕಾರ ವೃತ್ತಗಳಲ್ಲಿ ಸಂತೋಷವ್ಯಕ್ತಪಡಿಸಲಾಗುತ್ತಿದೆ. ಈಜಿಪ್ಟ ಅರಸರನ್ನು ಸೂಡಾನಿನ ರಾಜರೆಂದು ಭಾರತವು ಅಂಗೀಕರಿಸಿರುವ ನೀತಿಯ ಬಗ್ಗೆಯೂ ಆ ರಾಷ್ಟ್ರದಲ್ಲಿ ವಿಶೇಷ ಹರ್ಷವನ್ನುಂಟುಮಾಡಿದೆಯೆಂದು ಹೇಳಲಾಗಿದೆ.

ಮಕ್ಕಳೊಡನೆ ತಾಯಂದಿರ ದಸ್ತಗಿರಿ

ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇಧ ವಿರುದ್ಧ ನಡೆಯುತ್ತಿರುವ ಸತ್ಯಾಗ್ರಹ ಚಳುವಳಿಯಲ್ಲಿ ನಿನ್ನೆಯದಿನ ೨೨ ಜನರ ದಸ್ತಗಿರಿಯಾಗಿದೆ.

ಅವರಲ್ಲಿ ಮಕ್ಕಳೊಡನಿದ್ದ ೧೧ ಸ್ತ್ರೀಯರಿರುವರು ಚಳುವಳಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ದಸ್ತಗಿರಿಯಾದ ೩೨೫೫ ಜನರು ಜೈಲುವಾಸವನ್ನು ಅನುಭವಿಸುತ್ತಲಿರುವರು.

ಇಂಪೀರಿಯಲ್ ಬ್ಯಾಂಕಿನ ಕೆಲವು ಶಾಖೆ ಬಂದು

ಪಾಕೀಸ್ತಾನದಲ್ಲಿರುವ ಭಾರತಇಂಪೀರಿಯಲ್ ಬ್ಯಾಂಕುಗಳಲ್ಲಿ ೯ನ್ನು ಬಿಟ್ಟು ಉಳಿದುವನ್ನೆಲ್ಲಾ ಈ ತಿಂಗಳ ಅಖೈರಿನಿಂದ ಮುಚ್ಚಲಾಗುತ್ತದೆ.

ಮೋಟಾರು ಭಾಗಗಳ ಮೇಲೆ ಹತೋಟಿ

ಆಮದಾದ ಮೋಟಾರು ಭಾಗಗಳ ಮೇಲೆ ಪುನಃ ಹತೋಟಿಯನ್ನು ವಿಧಿಸುವ ವಿಷಯವನ್ನು ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ಕೇಂದ್ರ ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಹೇಳಿರುವರು.

ಚಿಕ್ಕಮಗಳೂರು-ಮಂಗಳೂರು ರೈಲು ಸದ್ಯಕ್ಕಿಲ್ಲ

ಆರ್ಥಿಕ ಅಡಚಣೆಯಿಂದ ಚಿಕ್ಕಮಗಳೂರು-ಮಂಗಳೂರು ರೈಲ್ವೆಯನ್ನು ಕೈಗೊಳ್ಳಲು ಸಾಧ್ಯವಿಲ್ಲವೆಂದು ಭಾರತ ಸರ್ಕಾರದವರು ಚಿಕ್ಕಮಗಳೂರು ಜಿಲ್ಲಾ ಬೋರ್ಡಿನವರಿಗೆ ಉತ್ತರವಿತ್ತಿರುವರು.

ಬ್ರಿಟಿಷ್ ಟ್ರೇಡ್‌ಯೂನಿಯನ್ ಖಂಡನೆ

ಬ್ರಿಟಿಷ್ ಟ್ರೇಡ್‌ಯೂನಿಯನ್ ಕಾಂಗ್ರೆಸ್ ದಕ್ಷಿಣ ಆಫ್ರಿಕಾ ವರ್ಣಬೇಧ ನೀತಿಯನ್ನು ತೀವ್ರವಾಗಿ ಖಂಡಿಸಿ ಅಲ್ಲಿಯ ಐರೋಪೇತರ ಚಳುವಳಿಗೆ ತನ್ನ ಪೂರ್ಣ ಸಹಕಾರವಿರುವುದಾಗಿ ತಿಳಿಸಿದೆ.

ಕಾಂಗ್ರೆಸ್ ಸದಸ್ಯತ್ವಕ್ಕೆ ಅವಧಿ ಹೆಚ್ಚಿತು

ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವ ಸಂಗ್ರಹಣೆಗೆ ಕಾಲಾವಧಿಯನ್ನು ಸೆಪ್ಟೆಂಬರ್ ೧೫ ನೇ ತಾರೀಖಿನವರೆಗೆ ಎ. ಐ. ಸಿ. ಸಿ. ಹೆಚ್ಚಿಸಿದೆ. ಸೆಪ್ಟೆಂಬರ್ ೩೦ರ ವೇಳೆಗೆ ಸದಸ್ಯರ ಪಟ್ಟಿಗಳನ್ನು ತಯಾರಿಸಿ ಎ. ಐ. ಸಿ. ಸಿ. ಕಛೇರಿಗೆ ಕಳುಹಿಸಬೇಕೆಂದು ಸೂಚನೆ ಕೊಡಲಾಗಿದೆ.

ಕ್ಷಾಮಪರಿಹಾರ ನಿಧಿಗೆ ಸಹಾಯಮಾಡಿ

ಮೈಸೂರು ಸೆ. ೪

ಸಂಸ್ಥಾನದ ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಆಹಾರ ಅಭಾವವು ಉಂಟಾಗಿ ಹೊಟ್ಟೆಗಿಲ್ಲದೆ ಕಷ್ಟಪಡುತ್ತಿರುವ ಜನರ ಸಹಾಯಕ್ಕಾಗಿ ಏರ್ಪಡಿಸಿರುವ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ರಾಜಧಾನಿಯ ಎಲ್ಲ ನಿವಾಸಿಗಳೂ ತಮ್ಮ ಕೈಲಾದಷ್ಟು ಧಾನ್ಯ ಧನಗಳನ್ನು ನೀಡಿ ಮೈಸೂರಿನ ಕೀರ್ತಿಯನ್ನು ಉಳಿಸಬೇಕೆಂದೂ, ಸಹಾಯ ದ್ರವ್ಯಗಳನ್ನು ಪುರಸಭಾ ಕಮೀಷನರಿಗೆ ಕಳುಹಿಸಕೊಡಬೇಕೆಂದೂ, ಸಮಿತಿಯ ಅಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಮನವಿ ಮಾಡಿದ್ದಾರೆ.

ಜಿಲ್ಲಾಪ್ರಿಂಟಿಂಗ್‌ಪ್ರೆಸ್ ಕೆಲಸಗಾರರ ಸಂಘ

ಮೇಲ್ಕಂಡ ಸಂಘದ ಸಭೆಯು ಇದೇ ೫ ನೇ ತಾರೀಖು ಸಂಜೆ ೭ ಘಂಟೆಗೆ ಸಂಘದ ಕಛೇರಿಯಲ್ಲಿ ನಡೆಯುವುದು.

ಬೆನಿಫಿಟ್ ಬೆನಿಫಿಟ್
ಮೈಸೂರು ಪಿಳ್ಳೆಮೊಹಲ್ಲಾ ಶ್ರೀ ವಿನಾಯಕದೇವಸ್ಥಾನದ ಕಟ್ಟಡದ ಸಹಾಯಕ್ಕೆ
★ ಸಂಪೂರ್ಣ ಕೃಷ್ಣಲೀಲಾ ★
ತಾ|| 6-9-52 ನೇ ರಾತ್ರಿ 10-30ಕ್ಕೆ ಮೈಸೂರು ಟೌನಹಾಲಿನಲ್ಲಿ
ಪಾತ್ರ:—ಲಕ್ಷ್ಮಮ್ಮ, ಸುಮತಿ, ಸರೋಜ, ಕಲಾವತಿ, ಚೌಡಮ್ಮ, ಎಂ. ಮಾಧವರಾವ್, ಎಂ. ಎಸ್. ಮಾಧವರಾವ್, ಕೆ. ಎಸ್. ರಾವ್, ವಿಶ್ವನಾಥ್, ನಾಗರಾಜ್, ಇತ್ಯಾದಿ

ವಿಶ್ವೇಶ್ವರಯ್ಯನವರ ವರ್ಧಂತ್ಯುತ್ಸವ

ಸರ್. ಎಂ. ವಿಶ್ವೇಶ್ವರಯ್ಯನವರ ೯೩ ನೇ ವರ್ಷ ವರ್ಧಂತ್ಯುತ್ಸವವು ಇದೇ ೧೫ ನೇ ತಾರೀಖು ಬೆಳಗ್ಗೆ ೧೦ ಗಂಟೆಗೆ ಬೆಂಗಳೂರಿನ ಪುಟ್ಟಣ್ಣಚೆಟ್ಟಿಭವನದಲ್ಲಿ ಶ್ರೀ ಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಮೈಸೂರು ಪೇಟೆಧಾರಣೆ

ತಾ|| ೩-೯-೫೨

ಪಲ್ಲಕ್ಕೆ.	ರೂ-ಆ.	ರೂ-ಆ
ಕಡಲೇಕಾಯಿ	11- 8	18- 12
ಎಳ್ಳು	70-	74- 10
ಹುರುಳಿ	49- 8	50- 0
ಮೆಣಸಿನಕಾಯಿ	7- 14	
ಹುಣಸೇಹಣ್ಣು	1- 12	5- 12
ತೆಂಗಿನಕಾಯಿ 1100ಕ್ಕೆ	130-	229

ರಾಜಕಮಲ್
೨೯-೮-೫೨ರಿಂದ ಅಮೋಘವಾದ ೩ನೇ ವಾರ ಪ್ರತಿದಿನ ೩ ಆಟಗಳು
(ಮಹಾತ್ಮ್ಯರವ)
ಶ್ರೀನಿವಾಸ ಕಲ್ಯಾಣ
(ಕನ್ನಡ)
ಪಾತ್ರ:—ಅಮೀರ್‌ಬಾಯಿ ಕರ್ನಾಟಕಿ, ಪ್ರತಿಮಾದೇವಿ, ಹರಿಣಿ, ಜಯಶ್ರೀ.

PRABHA: From 5-9-52 for 4 days
Daily 3 shows.
The woman of the year in the picture of the year
Romulus Presents:-
"PANDORA AND THE FLYING DUTCHMAN"
(in Technicolour)
With: James Mason and Ava Gardner
Last day: Secrets of Life.

ಉಡ್ ಲ್ಯಾಂಡ್ಸ್
ತಾ|| ೫-೯-೫೨ ರಿಂದ ಅಮೋಘವಾದ ೨ನೇ ವಾರ ಪ್ರತಿದಿನ 3 ಪ್ರದರ್ಶನಗಳು
* ಕಾಶ್ಮೀರ್ *
(ಹಿಂದಿ)
ಪಾತ್ರ:—ವೀಣ, ಅರುಣ್, ಕುಲ್‌ದೀಪ್, ಅಲ್ ನಜೀರ್, ನಿರೂಪರಾಯ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 17

೫-೯-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಮೈಸೂರಿಗೆ ಹತ್ತು ವರ್ಷದ ವಿದ್ಯಾಭ್ಯಾಸ ಯೋಜನೆ

ಮೈಸೂರಿಗೆ ೧೦ ವರ್ಷದ ವಿದ್ಯಾಭ್ಯಾಸ ಯೋಜನೆ

ಬೆಂಗಳೂರು. ಸೆ. ೫

ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಸುಧಾರಣೆಬಗ್ಗೆ ನೇಮಿಸಲಾಗಿರುವ ಪ್ರವೀಣ ಸಮಿತಿಯವರು ಹತ್ತು ವರ್ಷದ ಯೋಜನೆಯನ್ನು ತಯಾರಿಸಬೇಕೆಂದು ಅವರಿಗೆ ಸೂಚನೆ ಕೊಡಲಾಗಿದೆಯೆಂದು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ತಿಳಿಸಿರುತ್ತಾರೆ.

ಗ್ರಾಮಾಂತರ ಪ್ರದೇಶಗಳ ವಿದ್ಯಾಸಂಸ್ಥೆಗಳಿಗೆ ಸರ್ಕಾರದವರು ಹಣದ ಸಹಾಯ ಬದಲು ಜಮೀನನ್ನು ಕೊಟ್ಟು ಅದನ್ನು ವಿದ್ಯಾರ್ಥಿಗಳ ಸಹಾಯದಿಂದ ಉಪಾಧ್ಯಾಯರುಗಳು ಬೇಸಾಯಮಾಡಿ ಅದರಿಂದ ಬರುವ ಹಣವನ್ನು ಶಾಲಾ ಖರ್ಚಿಗೆ ಉಪಯೋಗಿಸಲು ಅನುಕೂಲವಾಗುವುದು ಸರ್ಕಾರಿ ಮತ್ತು ಇತರ ಖಾಸಗೀ ಶಾಲಾ ಉಪಾಧ್ಯಾಯರುಗಳಿಗೆ ಒಂದೇ ತರಹ ಸಂಬಳ ಸಾರಿಗೆ ಇರುವಂತೆ ಒಂದು ಯೋಜನೆ ತಯಾರಿಸಲು ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ-ಎಂದು ಸಚಿವರು ತಿಳಿಸಿದರು.

ಲಂಡನ್ನಿನಲ್ಲಿ ಟ್ರೇಡ್ ಏಜೆಂಟರ ಹುದ್ದೆ ರದ್ದು

ಬೆಂಗಳೂರು ಸೆ ೪

ಹಿಂದೆಯೇ ನಮ್ಮ ಪತ್ರಿಕೆಯಲ್ಲಿ ವರದಿಮಾಡಿದಂತೆ ಸರ್ಕಾರದವರು ಲಂಡನ್ನಿನಲ್ಲಿರುವ ಮೈಸೂರು ಟ್ರೇಡ್ ಏಜೆಂಟರ ಹುದ್ದೆಯನ್ನು ರದ್ದುಗೊಳಿಸಿದ್ದಾರೆ. ಅಲ್ಲಿರುವ ಜನರಲ್ ಆಫೀಸ್ ಮ್ಯಾನೇಜರ್ ಶ್ರೀ ಆರ್. ಕೆ. ಮೂರ್ತಿಯವರೇ ಆಗಸ್ಟ್ ೧೪ ರಿಂದ ತಮ್ಮ ಕೆಲಸದ ಜೊತೆಗೆ ಏಜೆಂಟರ ಕೆಲಸವನ್ನೂ ನೋಡಿಕೊಳ್ಳುವಂತೆ ಆಜ್ಞೆಯಾಗಿದೆ.

೩೫೦೦ಮಂದಿ ಸತ್ಯಾಗ್ರಹಿಗಳ ದಸ್ತಗಿರಿ

ದಕ್ಷಿಣ ಆಫ್ರಿಕಾ ವರ್ಣಬೇಧನೀತಿಯ ವಿರುದ್ಧ ಸತ್ಯಾಗ್ರಹ ಪ್ರಾರಂಭವಾದಗಲಿನಿಂದ ಇಲ್ಲಿಯವರೆಗೆ ಒಟ್ಟು ೩೫೦೦ ಮಂದಿಯನ್ನು ದಸ್ತಗಿರಿಮಾಡಲಾಗಿದೆ.

೨ ಸಾವಿರ ರೈತರಿಂದ ಅನ್ನ ಸತ್ಯಾಗ್ರಹ

ಮದನಪಲ್ಲಿಯ ಪುಂಗನೂರು ತಾಲ್ಲೂಕಿನಲ್ಲಿ ಕ್ಷಾಮ ಉಂಟಾಗಿ ಅಲ್ಲಿನ ೨ ಸಾವಿರ ಮಂದಿ ರೈತರು ಅಲ್ಲಿನ ತಾಲ್ಲೂಕು ಕಛೇರಿಯಮುಂದೆ ಅನ್ನ ಸತ್ಯಾಗ್ರಹ ಪ್ರಾರಂಭಿಸಿದ್ದಾರೆ.

ಆರ್ಥಿಕ ಸಾಮಾಜಿಕ ದಾಸ್ಯ ನಿವಾರಣೆ ಆಗಬೇಕು

ಭಾರತದಲ್ಲಿಆರ್ಥಿಕ ಮತ್ತು ಸಾಮಾಜಿಕಪ್ರಗತಿಯೂ ಆದಷ್ಟು ಮುಂದುವರಿಯದೆ ಜನರಲ್ಲಿ ಅತೃಪ್ತಿ ಹಬ್ಬುತ್ತಿದೆ. ರಾಜಕೀಯ ಸ್ವಾತಂತ್ರವನ್ನು ಗಳಿಸಿಕೊಟ್ಟಂತಹ ಕಾಂಗ್ರೆಸ್ಸಿನಲ್ಲಿ ಜನರಿಗಿದ್ದ ವಿಶ್ವಾಸವಾಗಲೀ ಪ್ರೀತಿಯಾಗಲೀ ಈಗ ಇಲ್ಲ. ದೇಶವನ್ನು ಬಂಧನಿಮುಕ್ತ ಮಾಡಿದುದರಿಂದ ತಮ್ಮ ಗುರಿಯ ಒಂದು ಭಾಗ ಮಾತ್ರ ಸಾಧಿತವಾಯಿತು. ಆದರೆ ಆರ್ಥಿಕ ಸಾಮಾಜಿಕ ದಾಸ್ಯ ವಿಮೋಚನೆಯಾಗಬೇಕಾದುದು ಅಷ್ಟೇ ಜರೂರಾಗಿದೆ. ದೇಶವು ನಿಜವಾಗಿ ಸ್ವಾತಂತ್ರಗೊಳ್ಳಬೇಕಾದರೆ ಎಲ್ಲಾ ದಾಸ್ಯವನ್ನು ತೊಡೆದುಹಾಕಬೇಕು-ಎಂದು ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣರವರು ಕಲ್ಕತ್ತೆಯಲ್ಲಿ ತಿಳಿಸಿರುತ್ತಾರೆ.

ದಕ್ಷಿಣ ಆಫ್ರಿಕ ವರ್ಣಬೇಧ ನೀತಿಯ ಖಂಡನೆ

ದಕ್ಷಿಣಆಫ್ರಿಕಾ ಸರ್ಕಾರದ ವರ್ಣಬೇಧ ನೀತಿಯನ್ನು ಬ್ರಿಟನ್ನಿನ ೮೦ ಲಕ್ಷ ಮಂದಿ ಕಾರ್ಮಿಕರ ಪ್ರತಿನಿಧಿಗಳ ಕಾಂಗ್ರೆಸ್ ಸಭೆಯು ಉಗ್ರವಾಗಿ ಖಂಡಿಸಿ ನಿರ್ಣಯಮಾಡಿದೆ. ದಸ್ತಗಿರಿಯಾಗಿರುವ ಪ್ರಮುಖ ಮುಖಂಡರುಗಳನ್ನು ಬಿಡುಗಡೆ ಮಾಡಬೇಕೆಂದೂ ಒತ್ತಾಯ ಮಾಡಲಾಗಿದೆ.

ಸಂಸ್ಥಾನದ ವಿದ್ಯಾ ಪ್ರಗತಿ

ಮೈಸೂರು ಸಂಸ್ಥಾನದ ೧೯೫೦-೫೧ ನೇ ವಿದ್ಯಾಭ್ಯಾಸದ ವರದಿ ಪ್ರಕಾರ, ಪ್ರತಿ ೨.೫೭ ಚದುರಮೈಲಿ ಮತ್ತು ೭೯೦ ಜನರಿಗೆ ಒಂದು ಶಾಲೆ ಇತ್ತೆಂದೂ, ಒಟ್ಟು ೧೩೬೭ ವಿದ್ಯಾ ಸಂಸ್ಥೆಗಳು ಇದ್ದುವೆಂದೂ ತಿಳಿಸಲಾಗಿದೆ. ಒಟ್ಟು ೯, ೧೯, ೩೨೦ ವಿದ್ಯಾರ್ಥಿಗಳಿದ್ದು, ಅದರ ಪೈಕಿ ೨, ೬೬ ೫೩೬ ಮಂದಿ ಮಹಿಳಾ ವಿದ್ಯಾರ್ಥಿಗಳಿದ್ದರು. ವಿದ್ಯಾಭ್ಯಾಸಕ್ಕಾಗಿ ಒಟ್ಟು ೩, ೧೧, ೪೩, ೫೨೦ ರೂ.ಗಳನ್ನು ಖರ್ಚುಮಾಡಲಾಯಿತು. ಅದರ ಪೈಕಿ ಕಾಲೇಜುಗಳಿಗೆ ವ್ಯಯವಾದ ಹಣ ೩೩ ಲಕ್ಷರೂ. ವಯಸ್ಕರ ಶಿಕ್ಷಣ ಶಾಖೆಯವರು ಒಟ್ಟು ೨೪೯೬ ತರಗತಿಗಳನ್ನು ತೆರೆದಿದ್ದರು.

ವಿದ್ಯುಚ್ಛಕ್ತಿ ಸರಬರಾಜು

ಮೈಸೂರು ಸೆ. ೫

ಮೈಸೂರುನಗರದ ವಿದ್ಯುಚ್ಛಕ್ತಿ ಸ್ಟೇಷನ್ ಮತ್ತು ಲೈನುಗಳ ರಿಪೇರಿ ಆಗಲಿರುವುದರಿಂದ ಇದೇ ೭ ನೇ ತಾರೀಖು ಬೆಳಗ್ಗೆ ೮-೩೦ ರಿಂದ ಮಧ್ಯಾಹ್ನ ೨-೩೦ ಗಂಟೆವರೆವಿಗೆ ನಗರದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಇರುವುದಿಲ್ಲವೆಂದು ತಿಳಿಸಲಾಗಿದೆ.

ಮಂಡ್ಯಕ್ಕೆ ಮಹಾರಾಜರ ಭೇಟಿ

ಮೈಸೂರು ಸೆ. ೫

ಸೆಪ್ಟೆಂಬರ್ ೧೭ ನೇ ತಾರೀಖು ಶ್ರೀ ಮನ್ಮಹಾರಾಜರು ಮಂಡ್ಯಕ್ಕೆ ಭೇಟಿಯಿತ್ತು ಕಬ್ಬಿನ ಮತ್ತು ಕೊಡನಹಳ್ಳಿ ಪರೀಕ್ಷಾಕ್ಷೇತ್ರಗಳನ್ನು ಪರಿಶೀಲಿಸುವರು.

ಪಬ್ಲಿಕ್‌ಸರ್ವಿಸ್ ಕಮಿಷನ್ ಸರ್ಕಾರಿ ಕೈಗಾರಿಕಾ ಸಂಸ್ಥೆಗಳಿಗೆ ಅನ್ವಯ

ಸರ್ಕಾರಿ ಆಡಳಿತದಲ್ಲಿರುವ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವಾಗ ಇತರ ಸರ್ಕಾರಿ ಇಲಾಖೆಗಳಲ್ಲಿ ಯಾವರೀತಿಯಿಂದ ಪಬ್ಲಿಕ್‌ಸರ್ವಿಸ್ ಕಮಿಷನರ್ ಮೂಲಕ ನೇಮಿಸಲಾಗುತ್ತಿದೆಯೋ ಅದೇರೀತಿ ನಡೆಯಬೇಕೆಂದು ಕೇಂದ್ರಸರ್ಕಾರವು ಸೂಚನೆಯಿತ್ತಿರುವುದಾಗಿ ಗೊತ್ತಾಗಿದೆ.

ಬ್ರೆಡ್ ಪಡಿತರರದ್ದು ಮುಂದುವರಿಯುತ್ತದೆ

೧೯೫೨ನೇ ಆಗಸ್ಟಿಗೆ ಮುಕ್ತಾಯವಾದ ಬ್ರೆಡ್ ರೇಷನಿಂಗ್‌ರದ್ದಿನ ಆಜ್ಞೆಯು ಇನ್ನೊಂದು ಆಜ್ಞೆಯು ಹೊರಬೀಳುವವರೆಗೆ ಮುಂದುವರಿಯುವುದಾಗಿ ಭಾರತ ಸರ್ಕಾರದ ಪ್ರಕಟಣೆ ಹೊರಬಿದ್ದಿದೆ.

'ರಾಷ್ಟ್ರೀಯ' ಪದದ ಉಪಯೋಗ

ಭಾರತಕ್ಕೆಲ್ಲಾ ಅನ್ವಯಿಸತಕ್ಕ ರೀತಿಯತರುವ ಸಂಸ್ಥೆಗಳಿಗೆ ಪ್ರಾಂತ್ಯಗಳಲ್ಲಿ 'ರಾಷ್ಟ್ರೀಯ' ಎಂಬ ಪದವನ್ನು ಉಪಯೋಗಿಸಬೇಕೆಂದು ಭಾರತ ಸರ್ಕಾರವು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ವಿನೊಬಾಭಾವೆಯವರಟೀಕೆ

ಕೈಮಗ್ಗದ ನೇಯ್ಗೆಯವರಿಗೆ ತಕ್ಕಷ್ಟು ಪ್ರಯಾಣದಲ್ಲಿ ಸಾಮಾನನ್ನು ಒದಗಿಸುವ ಬಗ್ಗೆ ಕೇಂದ್ರ ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರ ಭಾಷಣವನ್ನು ಆಚಾರ್ಯ ವಿನೋಭಾವೆಯವರು ಟೀಕಿಸುತ್ತಾ, ಗಿರಣಿಗಳಲ್ಲಿ ಹೆಚ್ಚಿಗೆ ಬಟ್ಟೆ ತಯಾರಾಗುತ್ತಲಿದ್ದಾಗ್ಯೂ ಕೈಮಗ್ಗದವರಿಗೆ ಸಾಮಾನನ್ನು ಒದಗಿಸಬೇಕೆಂಬ ಮದ್ರಾಸಿನ ಮುಖ್ಯಮಂತ್ರಿಗಳ ಸಲಹೆಗೆ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ತಕ್ಕ ಉತ್ತರವನ್ನು ಕೊಟ್ಟಿಲ್ಲ. ಗೃಹಕೈಗಾರಿಕೆಗಳಿಗೆ ಭಾರತ ಸರ್ಕಾರವು ಸಾಕಷ್ಟು ಪುರಸ್ಕಾರ ಕೊಡುವುದಿಲ್ಲವೆಂದು ಸಚಿವರ ಭಾಷಣದಿಂದ ವ್ಯಕ್ತವಾಗುತ್ತದೆಯೆಂದು ಹೇಳಿರುವರು

ಹೈದರಾಬಾದಿನ ಗಲಭೆಗಳಲ್ಲಿ ರಜಾಕರರ ಪಾತ್ರ

ಹೈದರಾಬಾದಿನಲ್ಲಿ ಕಳೆದ ಎರಡು ದಿನಗಳಿಂದ ಆಗುತ್ತಿರುವ ಗಲಭೆಗಳಲ್ಲಿ ರಜಾಕಾರರು ಮತ್ತು ಕಮ್ಯೂನಿಸ್ಟರು ಮುಖ್ಯ ಪಾತ್ರವನ್ನುವಹಿಸಿಕೊಂಡು, ವಿದ್ಯಾರ್ಥಿಗಳ ಸಹಾಯದಿಂದ ದುಂಡಾವೃತ್ತಿನಡೆಸುತ್ತಲಿರುವುದಾಗಿ ಹೇಳಲಾಗಿದೆ.

ಕೇಂದ್ರದಿಂದ ಬಂದಿರುವ ಎಲ್ಲಾ ಹೊರಗಿನ ಅಧಿಕಾರಿಗಳನ್ನು ಕಳುಹಿಸಿ, ಬಿಟ್ಟು ಆಸ್ಥಾನಗಳಿಗೆಲ್ಲಾ ಹೈದರಾಬಾದ್ ಜನಗಳು ನೇಮಿಸಿಕೊಳ್ಳಬೇಕೆಂದು ಕಮ್ಯೂನಿಸ್ಟ್‌ನಾಯಕರು ಹೇಳುತ್ತಿದ್ದಾರೆ.

ರಾಷ್ಟ್ರೀಯ ನಾಯಕರುಗಳ ಹೆಸರು ದುರುಪಯೋಗಕ್ಕೆ ನಿಷೇಧ

ರಾಷ್ಟ್ರೀಯ ನಾಯಕರುಗಳ ಹೆಸರುಗಳನ್ನು ಖಾಸಗೀ ವ್ಯಾಪಾರ ಸಂಸ್ಥೆಯವರು ದುರುಪಯೋಗ ಪಡಿಸದಂತೆ ಕೂಡಲೇ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರವು ಸಂಸ್ಥಾನ ಸರ್ಕಾರಗಳಿಗೆ ಸೂಚನೆ ಕೊಟ್ಟಿದೆ ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಿನಿಂದ ಜಾರಿಗೆ ಬಂದಿರುವ ಕಾನೂನಿನ ಪ್ರಕಾರ ಈ ಕಾರ್ಯಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿದೆ.

§ ಭಾರತದ ಹಲವಾರು ಶಾಲೆಗಳಲ್ಲಿ ಶಿಕ್ಷಣ ಪಡೆದ ಸಮಾಜ ಸೇವಾಕರ್ತರುಗಳಿಗೆ ಒಂದು ಪರೀಕ್ಷೆ ವ್ಯವಸ್ಥೆ ನಡೆಸಲು ಕೇಂದ್ರ ಸರ್ಕಾರದವರು ಯೋಚಿಸುತ್ತಿದ್ದಾರೆಂದೂ, ಇದರಿಂದ ಅವರುಗಳಿಗೆ ಸುಲಭವಾಗಿ ಉದ್ಯೋಗಸಿಕ್ಕಲು ಅನುಕೂಲ ವಾಗುವುದೆಂದೂ ಕೇಂದ್ರ ಕಾರ್ಮಿಕ ಸಚಿವ ಶ್ರೀ ಗಿರಿಯವರು ತಿಳಿಸಿರುತ್ತಾರೆ.

ಹೈದರಾಬಾದಿನಲ್ಲಿ ಪುನಃ ಗುಂಡಿನ ಸುರಿಮಳೆ

ಕರ್ಫ್ಯೂ ಆಜ್ಞೆ ಜಾರಿ

ಪುನಃ ನಿನ್ನೆಯದಿನವೂ ಅನೇಕ ವಿದ್ಯಾರ್ಥಿಗಳು ಮತ್ತು ಇತರರು ಹೈದರಾಬಾದಿನ ನಾನಾ ಭಾಗಗಳಲ್ಲಿ ಗಲಭೆ ಪ್ರದರ್ಶನ ಮುಂತಾದುದನ್ನು ನಡೆಸಿದರು. ಪೋಲೀಸಿನವರಮೇಲೆ ಕಲ್ಲುಗಳನ್ನು ಎಸೆದು ಉಸ್ಮೇನಿಯ ಆಸ್ಪತ್ರೆಯ ಬಳಿ ಅನೇಕ ಸ್ಥಳಗಳಲ್ಲಿಯೂ ಪೋಲೀಸ್ಟೇಷನ್ನೊಂದಕ್ಕೂ ಗಲಭೆಗಾರರು ಬೆಂಕಿಯಿಟ್ಟರು. ಪೋಲೀಸಿನವರು ಎರಡು ಬಾರಿ ಗುಂಡು ಹಾರಿಸಿದರು. ಗಲಭೆಗಾರರು ಹೆದರದೆ ಪೋಸ್ಟಾಫೀಸಿಗೆ ನುಗ್ಗಿ ಕಾಗದ ಪತ್ರಗಳನ್ನೆಲ್ಲಾ ಬೆಂಕಿಯಿಟ್ಟು ಹಾಳುಮಾಡಿದರು.

ನಿನ್ನೆಯ ಗಲಭೆಯ ಪರಿಣಾಮವಾಗಿ ೩ ಜನ ಸತ್ತು ೩೦-೪೦ರಿಗೆ ಗಾಯಗಳಾದವೆಂದು ಹೇಳಲಾಗಿದೆ.

ರಾತ್ರಿ ೯ ಗಂಟೆಯಿಂದ ಬೆಳಗ್ಗೆ ೫ ಗಂಟೆವರೆಗೆ ಕರ್ಫ್ಯೂ ವಿಧಿಸಲಾಗಿತ್ತು. ಈ ದಿನ ರಾತ್ರಿಯೂ ಕರ್ಫ್ಯೂ ವಿಧಿಸಲಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಶ್ರೀ ರಮಾನಂದ ತೀರ್ಥರು ನಿನ್ನೆ ರಾತ್ರಿ ಒಂದು ರೇಡಿಯೋ ಭಾಷಣಮಾಡುತ್ತ ಜನರು ಶಾಂತಿಯಿಂದಿರಬೇಕೆಂದು ಕೋರುತ್ತಾ ಹೈದರಾಬಾದ್ ಭಾರತದ ಒಂದು ಪ್ರಾಂತ್ಯವಾಗಿರುವುದರಿಂದ ಪ್ರತ್ಯೇಕತೆ ಮನೋಭಾವ ಕೂಡದು ಅದಕ್ಕೆ ವಿರೋಧ ಚಳುವಳಿ ಮಾಡಕೂಡದೆಂದು ಹೇಳಿದರು.

೬ ತಿಂಗಳಿನ ಮಗುವಿನ ಬಲಿ

ಹೈದರಾಬಾದ್ ಸಿಂಧಿನ ನವಾಬ್ ಷಹಾ ಗ್ರಾಮದ ಅಹಮದ್ ಎಂಬ ಆಗಸನು ತನ್ನ ೬ ತಿಂಗಳಿನ ಏಕಮಾತ್ರ ಹೆಣ್ಣುಮಗುವಿನ ಕತ್ತನ್ನು ಕುಯ್ದು ದೇವರಿಗೆ ಬಲಿಕೊಟ್ಟನೆಂದು ಈಗ ಆತನನ್ನು ದಸ್ತಗಿರಿ ಮಾಡಲಾಗಿದೆ. ತನ್ನ ಕನಸಿನಲ್ಲಿ ಪ್ರಿಯವಾದ ವಸ್ತುವನ್ನು ಅರ್ಪಿಸುವಂತೆ ದೇವರು ಹೇಳಿದುದರಿಂದ ಆರೀತಿ ಮಾಡಿದನೆಂದು ಆತನು ತಿಳಿಸಿರುತ್ತಾನೆ.

ಎ. ಐ. ಸಿ. ಸಿ. ಅಧಿವೇಶನ

ಇಂದೂರಿನಲ್ಲಿ ನಡೆಯಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಭಾಗವಹಿಸಲು ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪ, ಪ್ರಧಾನ ಕಾರ್ಯದರ್ಶಿ ಶ್ರೀ ಎಲ್. ಎಸ್. ವೆಂಕಾಜಿರಾಯರು, ಸಚಿವ ಶ್ರೀಗಳಾದ ಎ. ಜಿ. ರಾಮಚಂದ್ರರಾಯರು ಮತ್ತು ಹೆಚ್. ಸಿದ್ಧವೀರಪ್ಪನವರು ಇದೇ ೮ ನೇ ತಾ|| ಪ್ರಯಾಣಮಾಡುವರು.

ಇನ್ನೂ ಯುದ್ಧ ನಡೆಯುತ್ತಿದೆಯೆಂಬ ಭೀತಿ

ಎರಡನೇ ಮಹಾಯುದ್ಧವು ಇನ್ನೂ ನಡೆಯುತ್ತಿದೆ ಯೆಂದು ಜಪಾನಿನ ೩ ಜನರು ಫಿಲಿಪೈನ್ಸಿನ ಕಾಡಿನಲ್ಲಿ ಇನ್ನೂ ಅವಿತುಕೊಂಡಿದ್ದು ಹೊರಗೇ ಬಂದಿಲ್ಲ. ಯುದ್ಧ ಮುಕ್ತಾಯವಾಗಿ ಶಾಂತಿಸ್ಥಾಪನೆಯಾಗಿದೆಯೆಂದು ಅವರಿಗೆ ತಿಳಿಸಿ ಹೊರಕ್ಕೆ ಬರುವಂತೆ ಮಾಡಲು ಜಪಾನ್ ನಿಯೋಗವೊಂದು ಸಂಬಂಧಪಟ್ಟ ಕಾಗದಪತ್ರ ಚಿತ್ರಗಳನ್ನು ತೆಗೆದುಕೊಂಡು ಫಿಲಿಪೈನಿಗೆ ಹೋಗಲಿದೆ ಯೆಂದು ಗೊತ್ತಾಗಿದೆ.

ಸಲಹಾಸಮಿತಿ ರದ್ದು

೭೧ ಜನರನ್ನೊಳಗೊಂಡ ರಾಜ್ಯ ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದ ಸಮಿತಿಯನ್ನು ನೇಪಾಳ ರಾಜ ತ್ರಿಭುವನರು ರದ್ದು ಗೊಳಿಸುವರು.

ಶ್ರೀ ಎಂ.ಪಿ. ಕೊಯಿರಾಲಾ ಸರ್ಕಾರವು ರಾಜೀನಾಮೆಯಿತ್ತು, ಸಲಹಾ ಮಂಡಲಿಯ ಸಹಾಯದಿಂದ ರಾಜರೇ ಆಡಳಿತ ನಡೆಸುತ್ತಲಿರುವುದರಿಂದ ಈ ಸಲಹಾ ಸಮಿತಿ ಅನಾವಶ್ಯಕವೆಂದು ಹೇಳಲಾಗಿದೆ.

ಕೆ. ಎಂ. ಪಿ.-ಕಮ್ಯೂನಿಸ್ಟ್ ಐಕ್ಯತೆ

ಭಾರತಾದ್ಯಂತ ಕೆ. ಎಂ. ಪಿ. ಮತ್ತು ಸೋಷಲಿಸ್ಟ್ ಪಕ್ಷಗಳ ಐಕ್ಯತೆ ಆಗಬೇಕೆಂದು ನಿರ್ಧರಿಸಿರುವಾಗ್ಯೂ ಮದ್ರಾಸಿನಲ್ಲಿ ಶಾಸನಸಭೆಯ ಕಾರ್ಯಕಲಾಪಗಳಲ್ಲಿ ಕೆ. ಎಂ. ಪಿ. ಮತ್ತು ಕಮ್ಯೂನಿಸ್ಟ್ ಐಕ್ಯತೆ ಇರುವುದು ದೇಶದ ಹಿತಕ್ಕೆ ಧಕ್ಕೆ ತರುವುದೆಂದು ಸೋಷಲಿಸ್ಟ್ ನಾಯಕ ಶ್ರೀ ಜೈಪ್ರಕಾಶನಾರಾಯಣರವರು ಹೇಳಿರುವರು.

ಕೊರಿಯಾ ಯುದ್ಧದಲ್ಲಿ ಸಾವು ನೋವು

ಕೊರಿಯಾ ಯುದ್ಧದಲ್ಲಿ ಕಳೆದ ಆಗಸ್ಟ್ ತಿಂಗಳಿನ ಕೊನೆಯವಾರದಲ್ಲಿ ಕಮ್ಯೂನಿಸ್ಟ್ ಚೀಣಾಸೈನ್ಯವು ನಡೆಸಿದ ಕದನದ ಪರಿಣಾಮವಾಗಿ ಪ್ರಪಂಚ ಸೈನ್ಯ ೧೬೦೦ ಮಂದಿ ಸೈನಿಕರು ಸಾವು ನೋವುಗಳಿಗೀಡಾದರೆಂದೂ, ೧೯ ಟ್ಯಾಂಕು ೨೧ ವಿಮಾನಗಳು ನಾಶವಾದವೆಂದೂ ಹೇಳಲಾಗಿದೆ.

ಸಂಸ್ಥಾನದಲ್ಲಿ ಕಾಲರಾದಿಂದ ೭೦ ಜನರ ಮರಣ

ಕಳೆದತಿಂಗಳಿನ ಅಂತ್ಯದವಾರದ ಅವಧಿಯಲ್ಲಿ ಬೆಂಗಳೂರು, ಕೋಲಾರ, ಮುಳಬಾಗಿಲು, ಮೈಸೂರು ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಒಟ್ಟು ೪೪ ಮಂದಿ ಸತ್ತರು. ಎರಡು ಜಿಲ್ಲೆಗಳ ೭ ಹಳ್ಳಿಗಳಲ್ಲಿ ೨೩ ಜನರಿಗೆ ಪ್ಲೇಗು ತಗುಲಿ ೧೧ ಜನರು ಮರಣಹೊಂದಿದರು. ಬೆಂಗಳೂರು ಕುಣಿಗಲ್, ಹುಣಸೂರು, ಮದ್ದೂರು ಮತ್ತು ಮೂಡಿಗೆರೆ ತಾಲ್ಲೂಕುಗಳಲ್ಲಿ ೨೬ ಜನಕ್ಕೆ ಸಿಡುಬುತಗುಲಿ ಇಬ್ಬರು ಮೃತರಾದರು. ಬೆಂಗಳೂರು ನಗರದಲ್ಲಿ ಒಟ್ಟು ೨೫೫ ಮರಣಗಳು ಉಂಟಾದುವು ಎಂದು ಸಂಸ್ಥಾನದ ಆರೋಗ್ಯಶಾಖೆಯ ವರದಿಯು ತಿಳಿಸುತ್ತದೆ.

ಕ್ವಿಮಾರ್ಸೆಲ್ಸ್‌ನ ಎಣ್ಣೆ ಮತ್ತು ಸಾಬೂನಿನ ಕಾರ್ಖಾನೆಯಲ್ಲಿ ಭಾರೀ ಆಸ್ಫೋಟನೆಯಾಗಿ ೨೦ ಜನರು ಸತ್ತು, ನೂರಾರು ಮಂದಿಗೆ ತೀವ್ರಗಾಯಗಳಾಗಿವೆಯೆಂದು ವರದಿಯಾಗಿದೆ.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಸುಸಮಯ! ಸುಲಭಬೆಲೆ!! ಸುಸಮಯ!!!
ಮೈಸೂರು ಸಿಲ್ಕ್ ಫಿಲೇಚರ್ ಕಂಪನಿ
ಅಪ್ಪಟ ಸಿಲ್ಕ್ ಸೀರೆಗಳಿಗೆ ವಿಚಾರಿಸಿರಿ
ಶ್ರೀ ಕೆ. ಎಸ್. ಸತ್ಯನಾರಾಯಣರಾವ್,
ಜವಳಿ ವ್ಯಾಪಾರಿಗಳು.
203, ಸಯ್ಯಾಜಿರಾವ್ ರಸ್ತೆ,
ಶ್ರೀ ಚಾಮುಂಡೇಶ್ವರಿ ಟಾಕೀಸ್ ಕಟ್ಟಡ, ಮೈಸೂರು.

ಬೆನಿಫಿಟ್ ಬೆನಿಫಿಟ್
ಮೈಸೂರು ಬಿಲ್ಲೆ ಮೊಹಲ್ಲಾ ಶ್ರೀ ವಿನಾಯಕದೇವಸ್ಥಾನದ ಕಟ್ಟಡದ ಸಹಾಯಕ್ಕೆ
ಪುರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ,
★ ಸಂಪೂರ್ಣ ಕೃಷ್ಣಲೀಲಾ ★
ತಾ|| 6-9-52 ನೇ ರಾತ್ರಿ 10-30ಕ್ಕೆ ಮೈಸೂರು ಟೌನ್‌ಹಾಲಿನಲ್ಲಿ
ಪಾತ್ರ:—ಲಕ್ಷ್ಮಮ್ಮ, ಸುಮತಿ, ಸರೋಜ, ಕಲಾವತಿ,
ಚೌಡಮ್ಮ, ಎಂ. ಮಾಧವರಾವ್, ಎಂ. ಎಸ್. ಮಾಧವರಾವ್,
ಕೆ. ಎಸ್. ರಾವ್, ವಿಶ್ವನಾಥ್, ನಾಗರಾಜ್, ಇತ್ಯಾದಿ

ಅಪೇರ
೫-೯-೫೨ ರಿಂದ
ಅಮೋಘ ಪ್ರಾರಂಭ
ಪುಯಲ್
ಅಥವಾ
ಬಿರುಗಾಳಿ
[ತಮಿಳು]
—:ಪಾತ್ರ:—
ಎಂ. ವಿ. ರಾಜಮ್ಮ
ಮತ್ತು
ಬಷೀರ್

ಮಹಾತ್ಮರ ಉಪದೇಶ! ೮೨ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ!!!
ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ
★ ಸಂತಾನ ಸಿಂಧೂರ ★
† ಬಹಿಷ್ಠೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ † ಅಕ್ರಮಸೂತಕ, ಕ್ರಮತಪ್ಪಿ ಬಹಿಷ್ಠೆ ಆಗುವುದನ್ನು ನಿಲ್ಲಿಸುತ್ತದೆ † ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ † ಬಂಜೆತನವನ್ನು ಕೂಡ ನೀಗಿಸಿ ಸಂತಾನಕೊಡುವ ಸಿದ್ಧೌಷಧ ೨ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ ಟಪಾಲ್ ಖರ್ಚು ೧ ರೂ. —(ಸ್ತ್ರೀವ ಮಹಾರ ಗುಪ್ತ.)
ಅಡ್ರೆಸ್:—ಎ. ರಾಮಸ್ವಾಮಿ ಅಯ್ಯರ್ ಸನ್ "ಸಂತಾನಸಿಂಧೂರ" ಆಫೀಸ್, ೬೩೮ ನೂರಡಿರಸ್ತೆ ದಕ್ಷಿಣಕ್ರಾಸ್, (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು.
ವಿ.ಸೂ:—ಇದುವರೆಗೂ ಅಂಬಳೆ ಮತ್ತು ಮೈಸೂರು ಸೊಪ್ಪಿನಕೊಳದ ಬೀದಿಯಲ್ಲಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ನಮ್ಮ ಸ್ವಂತ ಕಟ್ಟಡಕ್ಕೆ ವರ್ಗಾಯಿಸಿರುತ್ತೆ.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 17

೬-೯-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ರಾಜಪ್ರಮುಖರ ಹುದ್ದೆ ರದ್ದಾಗಲಿ

ನವನಗರದ ಜಾಮ್ ಸಾಹೇಬರ ಮನವಿ

ರಾಜಪ್ರಮುಖರ ಹುದ್ದೆಯು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿದೆ. ಭಾರತದಲ್ಲಿರುವ ಎ. ಸಂಸ್ಥಾನಗಳಲ್ಲಿರುವ ಗವರ್ನರುಗಳಂತೆಯೇ ಸಂಸ್ಥಾನಗಳ ರಾಜಪ್ರಮುಖರು ರಾಷ್ಟ್ರಾಧ್ಯಕ್ಷರ ಆಜ್ಞೆಯ ಅವಧಿಯವರೆಗೆ ಮಾತ್ರ ಹುದ್ದೆಯಲ್ಲಿರಬೇಕು. ಆದುದರಿಂದ ಕೂಡಲೇ ರಾಜಪ್ರಮುಖರ ಹುದ್ದೆಯನ್ನು ರದ್ದುಮಾಡಬೇಕು ಎಂದು ಸೌರಾಷ್ಟ್ರದ ರಾಜಪ್ರಮುಖ ನವನಗರದ ಜಾಮ್ ಸಾಹೇಬರು ಪ್ರಧಾನಿ ನೆಹರೂರವರಿಗೆ ಒಂದು ಪತ್ರದಲ್ಲಿ ಮನವಿಮಾಡಿದ್ದಾರೆಂದು ತಿಳಿದುಬಂದಿದೆ.

ವಿದ್ಯಾರ್ಥಿನಿಯರ ಅಲಂಕಾರವಸ್ತುಗಳ ನಿಷೇಧ

ಮಹಿಳಾ ಶಾಲಾ ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರು ಮತ್ತು ಅಧ್ಯಾಪಕರುಗಳು ಲಿಪ್‌ಸ್ಟಿಕ್ ಪೌಡರ್ ಮುಂತಾದ ಅಲಂಕಾರ ವಸ್ತುಗಳನ್ನು ಉಪಯೋಗಿಸಿಕೊಂಡು ಬರಕೂಡದೆಂದು ಪಾಕಿಸ್ತಾನದ ಗಡಿನಾಡು ಸರ್ಕಾರವು ನಿಷೇಧಾಜ್ಞೆ ಮಾಡಿದೆ. ವಿದ್ಯಾರ್ಥಿನಿಯರು ಹೆಚ್ಚು ಬೆಲೆಯ ವಸ್ತುಗಳನ್ನು ಉಪಯೋಗಿಸದೆ ಸರಳರೀತಿಯ ಜೀವನ ಅಭ್ಯಾಸಮಾಡಬೇಕೆಂಬ ಅಭಿಲಾಷೆಯಿಂದ ಸರ್ಕಾರದವರು ಈರೀತಿ ಮಾಡಿದ್ದಾರೆಂದು ಹೇಳಲಾಗಿದೆ.

ಪುಂಡು ಕಂದಾಯ

ದರ್ಭಾಂಗ ಜಿಲ್ಲೆಯಲ್ಲಿ ಮಲಪಟ್ಟಿ, ಕನಾರ್ ಮತ್ತು ಬಹಾರ್ ಎಂಬ ಹಳ್ಳಿಗಳಲ್ಲಿ ಜನರು ಗಲಭೆನಡೆಸಿ ಶಾಂತಿಭಂಗವಾಗುವಂತೆ ನಡೆದರೆಂಬ ಆಪಾದನೆ ಮೇಲೆ ಈ ಗ್ರಾಮಗಳ ಜನರಮೇಲೆಲ್ಲಾ ೭೩೦೦ ರೂಪಾಯಿಗಳ ಪುಂಡು ಕಂದಾಯವನ್ನು ಬಿಹಾರ್ ಸರ್ಕಾರವು ವಿಧಿಸಿದೆ.

ರಾಜಧನದಲ್ಲಿ ಬದಲಾವಣೆ ಇಲ್ಲ

ಸಂಸ್ಥಾನದ ರಾಜರುಗಳಿಗೆ ಈಗ ಕೊಡುತ್ತಿರುವರಾಜಧನವನ್ನು ಕಡಿಮೆಮಾಡುವುದಾಗಲೀ ರದ್ದುಮಾಡುವುದಾಗಲೀ ಸರ್ಕಾರದ ಆಲೋಚನೆಯಲ್ಲಿಲ್ಲವೆಂದು ಕೇಂದ್ರ ಸರ್ಕಾರದ ಉಪಗೃಹಸಚಿವರು ತಿಳಿಸಿರುತ್ತಾರೆ.

ಮಂತ್ರಿಮಂಡಲ-ಕಾಂಗ್ರೆಸ್ ಸಂಸ್ಥೆ ಬಾಂಧವ್ಯ

ಪರಿಶೀಲಿಸಲು ಉಪಸಮಿತಿ

ಬೆಂಗಳೂರು ಸೆ. ೫

ಮಂತ್ರಿಮಂಡಲ, ಶಾಸನಸಭೆ ಮತ್ತು ಕಾಂಗ್ರೆಸ್ ಸಂಸ್ಥೆಗೆ ಇರಬೇಕಾದ ನಿಕಟ ಬಾಂಧವ್ಯ, ಸುಮಧುರತೆ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸಲು ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಂದು ಉಪಸಮಿತಿಯನ್ನು ನೇಮಿಸಿದೆ. ಈ ಉಪಸಮಿತಿಯ ಅಧ್ಯಕ್ಷರು ಶ್ರೀ ಹೆಚ್. ಸಿ. ದಾಸಪ್ಪನವರು ಶ್ರೀಗಳಾದ ಹೆಚ್. ಸಿದ್ಧಯ್ಯ, ಟಿ. ಸುಬ್ರಮಣ್ಯಂ, ಕೆ. ಹನುಮಂತಯ್ಯ, ಎಸ್. ಚನ್ನಯ್ಯ, ಆರ್. ಚನ್ನಿಗರಾಮಯ್ಯ, ಹೆಚ್. ಎಸ್. ರುದ್ರಪ್ಪ, ಕೆ. ಟಿ. ಭಾಷ್ಯಂ ಮತ್ತು ಎಲ್. ಎಸ್. ವೆಂಕೋಜಿರಾವ್ ಸದಸ್ಯರು.

ಸರ್ಕಾರಿ ಬಸ್ಸುಗಳ ಓಡಾಟ

ಬೆಂಗಳೂರು ಸೆ. ೫

ಅಕ್ಟೋಬರ್ ಒಂದನೇ ತಾರೀಖಿನಿಂದ ಸರ್ಕಾರಿ ಬಸ್ಸುಗಳು ಆರು ಮಾರ್ಗಗಳಲ್ಲಿ ಮಾತ್ರ ಓಡಾಡುತ್ತವೆ ಎಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಬೆಂಗಳೂರು-ಗುಂಡ್ಲುಪೇಟೆ [ಮೈಸೂರು ಮಾರ್ಗ]. ಬೆಂಗಳೂರು-ನೆಲಮಂಗಲ-ತುಮಕೂರು, ಬೆಂಗಳೂರು-ದೊಡ್ಡಬಳ್ಳಾಪುರ, ಬೆಂಗಳೂರು-ನೆಲಮಂಗಲ-ಬೇಲೂರು, ಬೆಂಗಳೂರು-ದೇವನಹಳ್ಳಿ ಮತ್ತು ಬೆಂಗಳೂರು-ಕೋಲಾರ-ಕೋಲಾರ ಚಿನ್ನದಗಣಿ.

ಮುಖ್ಯಮಂತ್ರಿಯೇ ಕಾಂಗ್ರೆಸ್ ಅಧ್ಯಕ್ಷರಾಗಿರಬೇಕೆಂಬ ತಿದ್ದುಪಡಿ ಬೇಡ

ಪ್ರಧಾನಿಯವರೇ ಕಾಂಗ್ರೆಸ್ ಅಧ್ಯಕ್ಷ, ಪ್ರಾಂತ್ಯ ಮುಖ್ಯಮಂತ್ರಿಗಳೇ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರಾಗಿರಬೇಕೆಂದು ಶ್ರೀ ಕೆ. ಹನುಮಂತಯ್ಯನವರು ಕಾಂಗ್ರೆಸ್ ನಿಯಮಾವಳಿ ತಿದ್ದುಪಡಿ ಸೂಚನೆಯನ್ನು ಮಂಡಿಸುವುದು ಬೇಡವೆಂದು ಎ.ಐ.ಸಿ.ಸಿ.ಯು ಶ್ರೀ ಹನುಮಂತಯ್ಯನವರಿಗೆ ತಿಳಿಸಿದೆ.

ಕಾಂಗ್ರೆಸ್ ಮಂತ್ರಿಮಂಡಲ ಮತ್ತು ಸಂಸ್ಥೆಗಳಿಗಿರಬೇಕಾದ ಸಂಬಂಧ ವಿಷಯ ಪರಿಶೀಲಿಸಲು ಎಂ. ಐ. ಸಿ. ಸಿ. ಯು. ಉಪಸಮಿತಿಯನ್ನು ರಚಿಸಿರುವುದರಿಂದ ಈ ತೀರ್ಮಾನಕ್ಕೆ ಬರಲಾಗಿದೆ ಯೆಂದು ತಿಳಿಸಲಾಗಿದೆ.

ಆಬ್ಕಾರಿ ರಹದಾರಿ ಸಮಿತಿವರ್ತನೆಯ ಖಂಡನೆ

ಪೌರಸಭಾ ಪ್ರತಿನಿಧಿಗಳ ವಾಪಸು

ಪುರಸಭೆಯಲ್ಲಿ ತೀರ್ಮಾನ

ಮೈಸೂರು ಸೆ. ೬

ನಗರದ ಪುರಸಭಾಧಿವೇಶನವು ನಿನ್ನೆ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸೇರಿತ್ತು. ಕುಂಬಾರಕೇರಿಯಲ್ಲಿರುವ ಸರಾಯಿ ಅಂಗಡಿಯನ್ನು ಬೇರೊಂದು ಸ್ಥಳಕ್ಕೆ ವರ್ಗಾಯಿಸಬೇಕೆಂದು ಪುರಸಭೆಯ ಪ್ರಾರ್ಥನೆ ವಿಚಾರದಲ್ಲಿ ಸರಿಯಾದ ಸ್ಥಳವಸತಿ ದೊರೆಯುವವರೆಗೂ ಅಂಗಡಿಯನ್ನು ಅಲ್ಲೇ ಇಡಬೇಕೆಂದೂ ಮತ್ತು ಪುರಸಭೆಯವರೇ ಬೇರೆಜಾಗವನ್ನು ಏರ್ಪಡಿಸಿಕೊಡಬೇಕೆಂದೂ ನಗರದ ಆಬ್ಕಾರಿ ರಹದಾರಿಸಮಿತಿಯವರು ಮಾಡಿರುವ ನಿರ್ಧಾರವು ಪರಿಶೀಲನೆಗೆ ಬಂದಾಗ ಶ್ರೀ ಕೆ. ಪುಟ್ಟಸ್ವಾಮಿಯವರು ಆದರ ಸಮಿತಿಯ ವರ್ತನೆಯನ್ನು ಖಂಡಿಸಿ, ಅನೇಕಬಾರಿ ಪುರಸಭೆಯವರು ಅಂಗಡಿ ವರ್ಗಾಯಿಸಬೇಕೆಂದು ಪ್ರಾರ್ಥಿಸುತ್ತಿದ್ದರೂ, ಅದಕ್ಕೆ ಗಮನಕೊಡುತ್ತಿಲ್ಲವೆಂದೂ, ತನ್ನ ಪ್ರತಿನಿಧಿಗಳು ಆ ಸಮಿತಿಯಲ್ಲಿದ್ದರೂ ಈರೀತಿ ನಡೆಯುತ್ತಿರುವುದು ಪುರಸಭೆಗೆ ಅಪಮಾನವೆಂದೂ ತಿಳಿಸಿದರು.

ಆದ್ದರಿಂದ ಸಮಿತಿಯ ವರ್ತನೆಯನ್ನು ಪ್ರತಿಭಟಿಸಲು ತನ್ನ ಪ್ರತಿನಿಧಿಗಳನ್ನು ಅದರಿಂದ ವಾಪಸು ಕರೆಸಬೇಕೆಂದೂ ಅವರು ನಿರ್ಣಯವೊಂದನ್ನು ಮಂಡಿಸಿದರು. ಅದು ಸರ್ವಾನುಮತದಿಂದ ಅಂಗೀಕೃತವಾಯಿತು.

ಮುಂದಿನ ಜನವರಿ ತಿಂಗಳಿನಲ್ಲಿ ಈಗಿನ ಪುರಸಭೆಯನ್ನು ಪುನರ್ರಚಿಸಿ, ೪೦ ಸದಸ್ಯರನ್ನು ಚುನಾಯಿಸಬೇಕೆಂದೂ, ಅದರಲ್ಲಿ ೪ ಸ್ಥಾನಗಳನ್ನು ಪರಿಗಣಿತ ಕೋಮಿಗೆ ಮೀಸಲಾಗಿಡಬೇಕೆಂದೂ ಸರ್ಕಾರದವರು ಆಜ್ಞೆ ಮಾಡಿರುವುದು ಮೈಸೂರು ಪೌರಸಭೆಯ ಕಾನೂನು ತಿದ್ದುಪಡಿ ಆಗಿರುವುದರಿಂದ ಅಕ್ರಮವೆಂದೂ, ಆದ್ದರಿಂದ ಈ ಬಗ್ಗೆ ಸೂಕ್ತ ಸೂಚನೆ ಕೊಡಬೇಕೆಂದೂ ಸರ್ಕಾರದವರನ್ನು ಪ್ರಾರ್ಥಿಸಲಾಯಿತು.

ದಸರಾ ಕಾಲದಲ್ಲಿ ಆರೋಗ್ಯ ಶಾಖೆಯವರು ಹೆಚ್ಚಿಗೆ ಜಾಡಮಾಲಿಗಳನ್ನು ನೇಮಿಸಿ ಕೊಳ್ಳಬೇಕೆಂದೂ ನಿರ್ಧರಿಸಲಾಯಿತು.

ಮೈಸೂರು ಧ್ವಜ ರದ್ದಿನ ಬಗ್ಗೆ ದಾಸಪ್ಪನವರ ಟೀಕೆ

ಬೆಂಗಳೂರು ಸೆ. ೫

ಮೈಸೂರು ಧ್ವಜವನ್ನು ತೆಗೆದು ಹಾಕಿದುದು ಒಂದು ನೀತಿಗೆ ಸಂಬಂಧಪಟ್ಟ ವಿಷಯವಾದಾಗ್ಯೂ ಈ ವಿಷಯವು ಎಂ. ಪಿ. ಸಿ. ಸಿ. ಕಾರ್ಯ ಸಮಿತಿಯ ಮುಂದೆ ತರದೇ ಸರ್ಕಾರವು ಅಂತ್ಯ ತೀರ್ಮಾನ ಮಾಡಿದುದು ಶೋಚನೀಯ. ಶ್ರೀ ಹನುಮಂತಯ್ಯನವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಹಿಂದಿನ ಸರ್ಕಾರದವರು ಇಂತಹ ಗುರುತರ ವಿಚಾರಗಳನ್ನು ಕಾರ್ಯಕಾರಿ ಸಮಿತಿಯ ಮುಂದೆ ತರುತ್ತಿದ್ದರು. ಈ ಸಂಪ್ರದಾಯ ಮುಂದುವರಿಯುವುದು ಅಗತ್ಯವೆಂದು ಪ್ರಾದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪನವರು ಪತ್ರಿಕಾ ಸಮ್ಮೇಳನದಲ್ಲಿ ಹೇಳಿರುವರು.

ಕ್ಷಾಮಪರಿಹಾರ ನಿಧಿಗೆ ಸಚಿವರ ಸಹಾಯ

ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿ ಕ್ಷಾಮಪರಿಹಾರ ನಿಧಿಗೆ ಮುಖ್ಯ ಮಂತ್ರಿ ಮತ್ತು ಇತರ ಸಚಿವರುಗಳು ತಲಾ ೫೦೦ ರೂ. ಸಹಾಯಮಾಡಿದ್ದಾರೆ.

ಕೇಂದ್ರಸಚಿವ ಶ್ರೀ ಕೆ. ಸಿ. ರೆಡ್ಡಿಯವರು ೧೦೦ ರೂ. ಕೊಟ್ಟಿದ್ದಾರೆ.

ಹರಿಕಥೆ

ಮೈಸೂರುನಗರದ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರಿ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಪಿ. ರಾಮಸ್ವಾಮಿನಾಯ್ಡುರವರಿಂದ ಲವಕುಶ ಎಂಬ ಹರಿಕಥೆಯು ದರ್ಬಾರ್‌ಬಕ್ಷಿ ಶ್ರೀ ಎಚ್. ಎಲ್. ದೇವರಾಜೇಅರಸಿನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಗಣಪತಿ ಉತ್ಸವ

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ಮಂದಿರದ ಕೃಷ್ಣಮೂರ್ತಿಪುರದ ಶಾಲೆಯಲ್ಲಿ ನಾಳೆದಿನ ಸಂಜೆ ೭ ಗಂಟೆಗೆ ಗಣಪತಿ ಉತ್ಸವದ ಅಂಗವಾಗಿ ವಿದ್ವಾನ್ ಆರ್. ವಿಶ್ವೇಶ್ವರನ್‌ರ ವೀಣಾವಾದನವು ನಡೆಯುವುದು.

ನಂದಿಬಸಪ್ಪನವರಿಗೆ ೧೦೦೦ ರೂ. ಜುಲ್ಮಾನೆ

ಮೈಸೂರು ಸೆ. ೬

ಹೆಚ್ಚಿಗೆ ಪ್ರಮಾಣದಲ್ಲಿ ಆಹಾರ ದಾಸ್ತಾನು ಮಾಡಿದ್ದರೆಂಬ ಅಪಾದನೆ ಮೇಲೆ ವರ್ತಕರಾದ ಶ್ರೀ ನಂದಿಬಸಪ್ಪನವರನ್ನು ಸೆ|| ಜಡ್ಜರು ಬಿಡುಗಡೆ ಮಾಡಿದ್ದರು. ಹೈಕೋರ್ಟಿನಲ್ಲಿ ಹೂಡಿದ್ದ ಅಪೀಲಿನಮೇಲೆ ವಿಚಾರಣೆ ನಡೆದು ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರು ಅವರಿಗೆ ೧೦೦೦ ರೂ. ಜುಲ್ಮಾನೆ ತಪ್ಪಿದರೆ ಒಂದು ತಿಂಗಳ ಸಾದಾ ಶಿಕ್ಷೆಯನ್ನು ವಿಧಿಸಿದರು. ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದುವಾರ ಸಜಾ ಮತ್ತು ೧೦೦೦ ರೂ. ಜುಲ್ಮಾನೆ ವಿಧಿಸಲಾಗಿತ್ತು. ಅದನ್ನು ಸೆಷನ್ಸ್ ಜಡ್ಜರು ರದ್ದುಗೊಳಿಸಿದ್ದರು.

§ ಆಹಾರಧಾನ್ಯದ ಅಭಾವ ತಲೆ ಹಾಕಿರುವ ಸಮಯದಲ್ಲಿ ಆಪಾದಿತರು. ಅನುಸರಿಸಿದ ನೀತಿಯಿಂದ ಸಾರ್ವಜನಿಕರ ಬಳಕೆಗೆ ಅತ್ಯವಶ್ಯಕವಾದ ಆಹಾರಧಾನ್ಯ ಒದಗದಂತೆ ಮಾಡಿರುವುದರಿಂದ ಸಮಾಜ ದ್ರೋಹವಾದಕಾರ್ಯವೆಸಗುವ ಸುಶಿಕ್ಷಿತ ಗಣ್ಯವ್ಯಕ್ತಿಗಳಿಗೆ ಉಗ್ರಶಿಕ್ಷೆ ವಿಧಿಸಬೇಕಾದದು ಅಗತ್ಯ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಪೇಟೆಧಾರಣೆ

ತಾ|| ೫-೯-೫೨

ಪಲ್ಲಕ್ಕೆ.	ರೂ-ಆ.	ರೂ-ಆ
ಕಡಲೇಕಾಯಿ	13- 4	21-
ಎಳ್ಳು	71- 2	77- 7
ಹೊಂಗೇಬೀಜ	20- 2	25- 4
ಹುರುಳಿ	47- 2	53- 14
ಅಲಸಂದೆ	66- 2	79- 10
ಹುಣಸೇಹಣ್ಣು	5- 13	0- 0
ಸೀಗೆಕಾಯಿ	5- 2	5- 8
ಬೆಲ್ಲ	2- 9	2. 10
ತೆಂಗಿನಕಾಯಿ 1100ಕ್ಕೆ	162-	219

ಹೊಟ್ಟೆಗಿಲ್ಲದೆ ಮಕ್ಕಳ ದಾನ

ಮಣಿಪುರಕ್ಕೆ ಸೇರಿದ ಮಂಗಸಂಗಿ ಎಂಬ ಹಳ್ಳಿಯ ವೃದ್ಧ [illegible] ತನ್ನ ೩, ೫ ಮತ್ತು ೭ ವರ್ಷದ ಮಕ್ಕಳನ್ನು ಸಾಕಲಾರದೆ ಅವುಗಳನ್ನು ವರ್ತಕರೊಬ್ಬರಿಗೆ ಕೊಟ್ಟ ಕರುಣಾಜನಕ ಪ್ರಸಂಗ ವರದಿಯಾಗಿದೆ. ಹೊಟ್ಟೆಗಿಲ್ಲದೆ ಮಕ್ಕಳನ್ನು ಮಾರ್ಕೆಟ್ ಮುಂಭಾಗದಲ್ಲಿ ನಿಲ್ಲಿಸಿಕೊಂಡು ಅವುಗಳನ್ನು ಯಾರಾದರೂ ಪೋಷಿಸಿ ಎಂಬ ಅಳುತ್ತಿರುವ ದೃಶ್ಯವನ್ನು ಕಂಡು ೩ ಜನ ವರ್ತಕರು ಒಬ್ಬೊಬ್ಬರನ್ನು ತೆಗೆದುಕೊಂಡುಹೋಗಲುಬಂದರೆಂದೂ, ಆಗ ಸಣ್ಣ ೨ ಮಕ್ಕಳು ಇನ್ನೊಬ್ಬನನ್ನು ಬಿಡಲು ಅಳುವುದಕ್ಕೆ ಪ್ರಾರಂಭಿಸಿದಾಗ, ಒಬ್ಬ ವರ್ತಕನೇ ಎಲ್ಲ ಮಕ್ಕಳನ್ನು ತಾನೇ ಕರೆದುಕೊಂಡು ಹೋದರೆಂದೂ ಹೇಳಲಾಗಿದೆ.

ರಾಷ್ಟ್ರಾಧ್ಯಕ್ಷರಲ್ಲಿ ಮನವಿ

ಕಾಶ್ಮೀರದ ಯುವರಾಜ ಕರಣಸಿಂಗ್ ತಂದೆಯವರಾದ ಮಹಾರಾಜ ಹರಿಸಿಂಗ್‌ರವರು ಭಾರತರಾಷ್ಟ್ರಾಧ್ಯಕ್ಷರಿಗೆ ಒಂದು ಪತ್ರಬರೆದು ತಮ್ಮ ರಾಜವಂಶದ ಮುಂದಿನ ಸ್ಥಿತಿ, ಸಂಸ್ಥಾನದ [illegible] ಇವುಗಳ ಬಗ್ಗೆ ಕೆಲವು ಮನವಿಗಳನ್ನು ಮಾಡಿಕೊಂಡಿರುವುದಾಗಿ ಹೇಳಲಾಗಿದೆ.

ಆತ್ಮಶುದ್ಧಿಗಾಗಿ ಉಪವಾಸ

ಆತ್ಮಶುದ್ಧಿಗಾಗಿ ದೆಹಲಿಯ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಟೆಕಂಚಂದ್ ಜೈನ್‌ರವರು ಕಳೆದ ೬೦ ದಿನಗಳಿಂದ ಉಪವಾಸಮಾಡಿ ಮೊನ್ನೆಯವಿನ ಮುಕ್ತಾಯಗೊಳಿಸಿರುವರು. ಅವರಿಗೆ ೬೫ ವರ್ಷ ವಯಸ್ಸು. ಉಪವಾಸಕಾಲದಲ್ಲಿ ಬಿಸಿನೀರನ್ನು ಮಾತ್ರ ಸೇವಿಸುತ್ತಲಿದ್ದರು. ಅವರು ಹರ್ಷಚಿತ್ತರಾಗಿಯೂ ಆರೋಗ್ಯವಾಗಿಯೂ ಇದ್ದಾರೆ.

ಭಾರಿ ಕಟ್ಟಡಗಳ ನಿರ್ಮಾಣಕ್ಕೆ ಕಬ್ಬಿಣ ಇಲ್ಲ

ಬೆಂಗಳೂರು ಸೆ. ೬

ಸಂಸ್ಥಾನಕ್ಕೆ ಕೊಡಲಿರುವ ಕಬ್ಬಿಣ ಪ್ರಮಾಣವು ಸಾಕಾದಷ್ಟು ಇಲ್ಲದಿರುವುದರಿಂದ, ಸಿನಿಮಾ, ನೃತ್ಯ ಶಾಲೆ, ಸ್ಟೂಡಿಯೋ ಮತ್ತು ಇತರ ಮನರಂಜನ ಕಟ್ಟಡಗಳನ್ನು ಕಟ್ಟಲು ಕಬ್ಬಿಣ ಸರಬರಾಜನ್ನು ನಿಲ್ಲಿಸಲಾಗಿದೆ. ಜನತೆಗೆ ಉಪಯುಕ್ತವಾದ ವಿದ್ಯಾಭ್ಯಾಸ, ವೈದ್ಯಕೀಯ, ಮುಂತಾದುದಕ್ಕಾಗಿ ಸರ್ಕಾರ ಅಥವ ಸ್ಥಳೀಯ ಸಂಸ್ಥೆಗಳು ಕಟ್ಟುವ ಕಟ್ಟಡಗಳಿಗೆ ಈ ಆಜ್ಞೆ ಅನ್ವಯಿಸುವುದಿಲ್ಲ ಎಂದು ಸರ್ಕಾರವು ಒಂದು ಪ್ರಕಟಣೆಯಿತ್ತಿದೆ.

ಕಾಫಿಬೀಜ ವ್ಯಾಪಾರದಲ್ಲಿ ಕಾಳಸಂತೆ

ಬೆಂಗಳೂರು ಸೆ. ೬

ಇತ್ತೀಚೆಗೆ ಕಾಫಿ ಬೋರ್ಡಿನವರು ಕಾಫಿಬೀಜದ ಬೆಲೆಯನ್ನು ಪೌಂಡು ಒಂದಕ್ಕೆ ೩ ಆಣೆಯಂತೆ ಹೆಚ್ಚಿಸಿರುವುದರಿಂದ ಕಾಫಿ ಬೋರ್ಡ್ ನಿರ್ಧರಿಸಿರುವ ಪೌಂಡ್‌ಗೆ ೨-೨-೬ ಬೆಲೆಗೆ ಎಲ್ಲಿಯೂ ಕಾಫಿ ಬೀಜ ದೊರೆಯುತ್ತಿಲ್ಲ. ಈಗಿನ ಬೆಲೆಯು ಕಾಳಸಂತೆ [illegible] ೨-೧೪-೦ ಗೆ ಏರಿದೆ.

ಕಂದಾಯ ರಿಯಾಯಿತಿ

ಬೆಂಗಳೂರು ಸೆ. ೬

ಮಳೆ ಬಾರದ ತೊಂದರೆಗೀಡಾದ ತುಮಕೂರು ತಾಲ್ಲೂಕಿನ ೫೦ ಗ್ರಾಮಗಳಲ್ಲಿ ೧೯೫೧-೫೨ ನೇ ಸಾಲಿನ ಜಮೀನಿನ ಕಂದಾಯವನ್ನು ಅರ್ಧ ಮಾಫಿಮಾಡಿ ಉಳಿದರ್ಧದ ವಸೂಲಿಯನ್ನು ಮುಂದಕ್ಕೆ ಹಾಕಲಾಗಿದೆ. ಈರೀತಿ ಮಾಫಿಕೊಟ್ಟ ಮೊಬಲಗು ಸುಮಾರು ೬೬೪೧ ರೂ.

ಭೋಜನಕೂಟ

ಮೈಸೂರು. ಸೆ. ೬

ಮೈಸೂರುನಗರದ ರೇಷನ್ ಅಧಿಕಾರಿಗಳಾದ ಶ್ರೀ ವಿಜಯರಾಘವರೆಡ್ಡಿಯವರು ನಿನ್ನೆ ಸಂಜೆ ಮೈಸೂರುಸಿಟಿ ಮಾಜಿ ಆಹಾರ ಸಮಿತಿ ಸದಸ್ಯರು ಮತ್ತು ಇತರ ಸ್ನೇಹಿತರನ್ನು ಆಹ್ವಾನಿಸಿ ಒಂದು ಭೋಜನಕೂಟವನ್ನು ಏರ್ಪಡಿಸಿದ್ದರು.

ಆನೆ ಕಟ್ಟಿ ಜಮೀನು ಉಳಿಮೆ

ಉತ್ತರ ಪ್ರದೇಶದಲ್ಲಿ ಸರ್ಕಾರದವರು ೧೦೦ ಎಕರೆಗಳಷ್ಟು ಅರಣ್ಯಭೂಮಿಯನ್ನು ಆನೆಗಳನ್ನು ಕಟ್ಟಿದ ಟ್ರಾಕ್ಟರುಗಳನ್ನು ಪಯೋಗಿಸಿ ಉಳಿಮೆಮಾಡಿ ಮರಗಳನ್ನು ನೆಡುವರೆಂದು ಗೊತ್ತಾಗಿದೆ. ಈ ಕಾರ್ಯಕ್ಕೆ ೨೯೦ ರೂ. ವೆಚ್ಚವಾಗುವುದೆಂದು ಹೇಳಲಾಗಿದೆ.

ಹೈದರಾಬಾದ್ ಪರಿಸ್ಥಿತಿ ಶಾಂತವಾಗಿದೆ

ನಿನ್ನೆಯ ದಿನದಿಂದ ಹೈದರಾಬಾದ್ ಪರಿಸ್ಥಿತಿಯು ಶಾಂತವಾಗಿದೆ. ಮುಲ್ಕಿ ವಿರೋಧ ಚಳುವಳಿಯನ್ನು ನಿಲ್ಲಿಸಲಾಗಿದೆ. ಸರ್ಕಾರದವರು ವಿಧಿಸಿದ್ದ ಕರ್ಫ್ಯೂ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಂಡು ಸಭೆ ಮೆರವಣಿಗೆ ಮುಂತಾದುವಕ್ಕೆ ಇನ್ನೂ ನಿಷೇಧಾಜ್ಞೆಯನ್ನು ಮುಂದುವರಿಸಲಾಗುತ್ತಿದೆ. ಇಲ್ಲಿಯವರೆಗೆ ಸುಮಾರು ೧೫೫ ಪೋಲೀಸ್ ಅಧಿಕಾರಿಗಳು ಮತ್ತು ನೌಕರರಿಗೆ ಗಾಯಗಳಾಗಿ ಅನೇಕರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದಾಗಿ ಗೊತ್ತಾಗಿದೆ.

ಕೋಲಾರ ಜಿಲ್ಲೆಯಲ್ಲಿ ಮಳೆ

ಕೋಲಾರಜಿಲ್ಲೆಯ ಕೆಲವು ಭಾಗಗಳಲ್ಲಿ ಕಳೆದವಾರ ೫ ಅಂಗುಲ ಮಳೆಯಾದುದರಿಂದ ಜಾನುವಾರು ಮೇವಿಗೆ ತೊಂದರೆ ಸ್ವಲ್ಪ ಕಡಿಮೆಯಾಗಿರುವುದಾಗಿ ಹೇಳಲಾಗಿದೆ.

ಉಡ್ ಲ್ಯಾಂಡ್ಸ್
ತಾ|| ೫-೯-೫೨ ರಿಂದ
ಅಮೋಘವಾದ ೨ನೇ ವಾರ
ಪ್ರತಿದಿನ 3 ಪ್ರದರ್ಶನಗಳು
* ಕಾಶ್ಮೀರ್ *
(ಹಿಂದಿ)
ಪಾತ್ರ:—ವೀಣ, ಅರುಣ್, ಕುಲ್‌ದೀಪ್, ಅಲ್ ನಜೀರ್, ನಿರೂಪರಾಯ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಬೆನಿಫಿಟ್ ಬೆನಿಫಿಟ್
ಮೈಸೂರು ಬಿಲ್ಲೆಮೊಹಲ್ಲಾ ಶ್ರೀ ವಿನಾಯಕದೇವಸ್ಥಾನದ ಕಟ್ಟಡದ ಸಹಾಯಕ್ಕೆ
ಪುರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ,
★ ಸಂಪೂರ್ಣ ಕೃಷ್ಣಲೀಲಾ ★
ತಾ|| 6-9-52 ನೇ ರಾತ್ರಿ 10-30ಕ್ಕೆ ಮೈಸೂರು ಟೌನ್ ಹಾಲಿನಲ್ಲಿ
ಪಾತ್ರ:—ಲಕ್ಷ್ಮಮ್ಮ, ಸುಮತಿ, ಸರೋಜ, ಕಲಾವತಿ,
ಚೌಡಮ್ಮ, ಎಂ. ಮಾಧವರಾವ್, ಎಂ. ಎಸ್. ಮಾಧವರಾವ್,
ಕೆ. ಎಸ್. ರಾವ್, ವಿಶ್ವನಾಥ್, ನಾಗರಾಜ್, ಇತ್ಯಾದಿ

MYSORE CITY MUNICIPALITY

NOTIFICATION

Sealed tenders will be received by the undersigned on 8th September 1952, till 4 P. M. for the works (1) Providing underground connection to Venkata Dasappa Agrahar with S. W. pipe line from Sewage farm Road up to the junction of the Park in Fort Mohalla. (2) Fixing curb stones to Ramanuja Road up to Yele Ooked in Fort Mohalla. (3) Providing B. S. curbing to Seetharama Rao Road K. R. Mohalla. Tenders should be accompanied with a challan for having remitted in the Municipal Treasury a sum of Rs. 66/-, Rs. 126/- and Rs. 84/- respectively as earnest money. For full particulars please see the notification on the office notice board.

sd. V. K. Mukundam.
Municipal Engineer.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 17

೮-೯-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ.

ಕೊರಿಯಾ ಯುದ್ಧ ಮುಕ್ತಾಯಸಂಧಾನವಿಫಲವೇ

ಮಹಾತ್ಮ ಗಾಂಧಿ ಸ್ಮಾರಕ ಸ್ತೂಪ ಅನಾವರಣಮಹೋತ್ಸವ

ಮೈಸೂರು ಸೆ. ೮

ರಾಷ್ಟ್ರಪಿತನಿಂದಲೇ ರಾಮರಾಜ್ಯವೆನಿಸಿಕೊಂಡ ಈ ರಾಜ್ಯದ ರಾಜಧಾನಿಯಾದ ಮೈಸೂರುನಗರದಲ್ಲಿ ಮಹಾತ್ಮರ ಸ್ಮಾರಕ ಸ್ತೂಪ ನಿರ್ಮಾಣವಾಗಿರುವುದು ನಮ್ಮ ಪುರಸಭೆಗೆ ಅತ್ಯಂತಹೆಮ್ಮೆತರುವಂತಹುದಾಗಿದೆ. ರಾಮರಾಜ್ಯವೆಂಬ ಪ್ರಖ್ಯಾತಿ ಮೈಸೂರುದೇಶಕ್ಕೆ ಲಭಿಸುವಂತೆ ಅಜೀವಪೂ ಶ್ರಮಿಸಿದ ಕೀರ್ತಿಶೇಷರಾದ ತಮ್ಮ ಪಿತೃಪಿತಾಮಹರಿಗೂ ಆಳುವ ಮಹಾಸ್ವಾಮಿಯವರಾದ ತಮಗೂ ಪುರಸಭೆಯು ಚಿರಋಣಿಯಾಗಿದೆ ಎಂದು ಮೈಸೂರು ಪುರಸಭಾಧ್ಯಕ್ಷ ಶ್ರೀ ಕೃಷ್ಣಮೂರ್ತಿಯವರು ಮಹಾತ್ಮಗಾಂಧಿಯವರ ಸ್ಮಾರಕ ಸ್ತೂಪವನ್ನು ಶ್ರೀಮನ್ಮಹಾರಾಜರು ಅನಾವರಣಮಾಡಿದಾಗ ಸಲ್ಲಿಸಿದ ಬಿನ್ನವತ್ತಳೆಯಲ್ಲಿ ತಿಳಿಸಿದರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಪುರಸಭೆಯ ಮಹಾತ್ಮ ಗಾಂಧೀ ಸ್ತೂಪಸ್ಥಾಪನೆಯನ್ನು ಕೈಗೊಂಡದ್ದು ಶ್ರೀ ರಂಗಯ್ಯಶ್ರೇಷ್ಠಿಯವರ ಪುತ್ರರಾದ ಶ್ರೀ ವೆಂಕಟಸುಬ್ಬಶ್ರೇಷ್ಠಿಯವರ ಉದಾರದಾನದ ಫಲವಾಗಿ. ಶ್ರೀಯುತರು ತಮ್ಮ ಮಾತೃ ಶ್ರೀ ಶ್ರೀಮತಿ ಮಹಾಲಕ್ಷ್ಮಮ್ಮನವರ ಹೆಸರಿನಲ್ಲಿ ರಾಷ್ಟ್ರಪಿತ ಸ್ವಾತಂತ್ರ್ಯಶಿಲ್ಪಿ ಮಹಾತ್ಮಗಾಂಧಿಯವರ ನಾಮಸ್ಮರಣೆ ಆಚಂದ್ರಾರ್ಕವಾಗಿ ಬೆಳಗುವಂತೆ ಮಾಡಲ್ಕೆ ಪುರಸಭೆಯನ್ನು ಪ್ರಾರ್ಥಿಸಿದರು.

ಪುರಸಭೆಯು ಅವರ ಪ್ರಾರ್ಥನೆಯನ್ನು ಪುರಸ್ಕರಿಸಿ ಅವರ ಉದಾರ ದಾನವನ್ನು ಸ್ವೀಕರಿಸಿದರು. ಘನಸರ್ಕಾರದ ಸಲಹೆ ಪಡೆದು ಈ ಸ್ತೂಪ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಸ್ತೂಪ ನಿರ್ಮಾಣಕ್ಕೆ ೨೫೦೦೦ ರೂಪಾಯಿಗಳು ವೆಚ್ಚವಾಗಿರುತ್ತದೆ ಶ್ರೀ ವೆಂಕಟಸುಬ್ಬಯ್ಯ ಶ್ರೇಷ್ಠಿಯವರು ಅರ್ಪಿಸಿದ ನಿಧಿಯ ಜೊತೆಗೆ ಸರ್ಕಾರದಿಂದ ೬೫೦೦ ರೂ ಸಹಾಯ ದೊರಕಿತು. ಪುರಸಭೆಯವರು ೬೫೦೦ ರೂಪಾಯಿಗಳನ್ನು ಸ್ತೂಪದ ವೆಚ್ಚಕ್ಕಾಗಿ ಕೊಟ್ಟಿರು ಎಂದು ತಿಳಿಸಿದರು.

ಶ್ರೀ ವೆಂಕಟಸುಬ್ಬಶೆಟ್ಟಿಯವರೂ ಸಹ ಒಂದು ಬಿನ್ನವತ್ತಳೆಯನ್ನು ಗಂಧದ ಕರಂಡದಲ್ಲಿ ಒಪ್ಪಿಸಿ, ಶ್ರೀಮನ್ಮಹಾರಾಜರಿಗೆ ಒಂದು ವಾಕಿಂಗ್ ಸ್ಟಿಕ್‌ನ್ನು ಅರ್ಪಿಸಿದರು.

ಈ ಸಮಾರಂಭಕ್ಕೆ ನಗರದ ಅನೇಕ ಗಣ್ಯವ್ಯಕ್ತಿಗಳು ಉನ್ನತಾಧಿಗಳು ಆಗಮಿಸಿದ್ದರು.

ಬಾಳೆಹಣ್ಣಿನಿಂದ ಪಿಷ್ಟಪದಾರ್ಥ ತಯಾರಿಕೆ

ಮೈಸೂರು ಸೆ. ೮

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದ ಕೇಂದ್ರ ಆಹಾರ ಸಂಶೋಧನಾಲಯ ಸಲಹಾ ಸಮಿತಿಯ ಸಭೆಯಲ್ಲಿ ಬಾಳೆಹಣ್ಣಿನ ಸಿಪ್ಪೆಯಿಂದ ಪಿಷ್ಟಹಿಟ್ಟನ್ನು ತಯಾರಿಸುವ ಯಂತ್ರವನ್ನು ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು. ಇದಕ್ಕೆಕೇವಲ ೪-೫ ಸಾವಿರ ರೂ. ಮಾತ್ರ ಖರ್ಚಾಗುವುದು. ಅಲ್ಲಿನ ಜನರು ಈ ಕೈಗಾರಿಕೆಯನ್ನು ಹೆಚ್ಚಿಗೆ ಹಣ ವ್ಯಯವಾಗದೆ ತಯಾರಿಸಲು ಸಂಶೋಧನಾಲಯದವರು ಪ್ರದರ್ಶನ ನಡೆಸುವರು.

ದನಕರುಗಳು ಮತ್ತು ಗೊಬ್ಬರಕ್ಕಾಗಿ ಈಗ ಉಪಯೋಗಿಸುತ್ತಿರುವ ಹಿಂಡಿಯಿಂದ ಸಂಪೂರ್ಣವಾಗಿ ಎಣ್ಣೆಯನ್ನು ತೆಗೆದು ಅದನ್ನು ಆಹಾರವಾಗಿ ಉಪಯೋಗಿಸಲು ಒಂದು ಪೈಲೆಟ್ ಯಂತ್ರವನ್ನು ೫೦ ಸಾವಿರ ರೂ. ಖರ್ಚಿನಿಂದ ಸಂಶೋಧನಾಲಯದಲ್ಲಿ ಸ್ಥಾಪಿಸಬೇಕೆಂದು ತೀರ್ಮಾನಿಸಲಾಯಿತು.

ಪರಿಹಾರ ಕಾರ್ಯಗಳಿಗಾಗಿ ಹೆಚ್ಚಿಗೆ ಹಣ

ಬೆಂಗಳೂರಿಗೆ ಸೆ. ೮

ಚಿತ್ರದುರ್ಗ, ಹಾಸನ, ತುಮಕೂರು, ಕೋಲಾರ ಮುಂತಾದ ಜಿಲ್ಲೆಗಳಲ್ಲಿ ಇನ್ನೂ ಹೆಚ್ಚಿಗೆ ಪರಿಹಾರಕಾರ್ಯಕ್ಕಾಗಿ ಹಣವನ್ನು ಒದಗಿಸುವ ವಿಷಯವನ್ನು ಕೇಂದ್ರದ ಸಹಾಯ ಬಂದೊಡನೇ ತೆಗೆದುಕೊಳ್ಳಲಾಗುವುದೆಂದು ಹೇಳಲಾಗಿದೆ.

ಹಳ್ಳಿಯ ಜನರಿಂದಲೇ ಸಾಮಾಜಿಕ ಸೇವೆ

ಹೈದರಾಬಾದ್ ಸಂಸ್ಥಾನದ ಬೀರ್‌ಜಿಲ್ಲೆಯಜನರು ಸ್ವಯಂ ಪ್ರೇರಿತರಾಗಿ ಲಕ್ಷಾಂತರ ರೂ. ಖರ್ಚಿನ ರಸ್ತೆ ಮತ್ತು ಕಾಲುವೆ ರಿಪೇರಿ ಕೆಲಸಗಳನ್ನು ನಡೆಸಿರುವರೆಂದು ಹೇಳಲಾಗಿದೆ.

ಬಟ್ಟೆ ವ್ಯಾಪಾರಿಗಳ ಹರಿತಾಳ

ನಾನಾಮುಖ ಮಾರಾಟತೆರಿಗೆ ವಿರುದ್ಧವಾಗಿ ಬೊಂಬಾಯಿಯ ಪ್ರಮುಖ ಬಟ್ಟೆ ಮಾರುಕಟ್ಟೆಗಳೆಲ್ಲವೂ ಶನಿವಾರ ಮುಚ್ಚಲಾಗಿತ್ತು.

ಕೊರಿಯಾ ಸಮರ ಮುಕ್ತಾಯವಿಲ್ಲವೇ

ಕೊರಿಯಾ ಸಮರ ಮುಕ್ತಾಯಕ್ಕಾಗಿ ಇಲ್ಲಿಯವರೆಗೆ ನಡೆದ ಸಂಧಾನ ವಿಫಲವಾಗುವುದೆಂದು ಅಮೇರಿಕಾ ಅಧಿಕಾರಿವೃತ್ತಗಳಲ್ಲಿ ಹೇಳಲಾಗುತ್ತದೆ. ಕೊರಿಯಾ ಯುದ್ಧವು ಅನಿಶ್ಚಿತವಾಗಿ ಮುಂದುವರಿಯುತ್ತದೆ.

ವಿಶ್ವಸಂಸ್ಥೆಯ ಸೈನ್ಯಗಳ ಸಂಖ್ಯೆಯನ್ನು ಈಗಾಗಲೇ ಹೆಚ್ಚಿಸಲು ಕಾರ್ಯಕ್ರಮ ನಡೆಯುತ್ತಿರುವುದಾಗಿ ಹೇಳಲಾಗಿದೆ.

ವಿದ್ಯಾಭ್ಯಾಸ ಸಾಕರ್ಯ

ನಿವೃತ್ತ ಸೈನ್ಯಕರಿಗೆ ವಿದ್ಯಾಭ್ಯಾಸ ಸಾಕರ್ಯಕ್ಕಾಗಿ ತೆಗೆದುಕೊಳ್ಳುತ್ತಲಿದ್ದ ಅರ್ಜಿಗಳನ್ನು ಇನ್ನುಮುಂದೆ ನಿಕ್ಷೆಸಲಾಗಿದೆಯೆಂದು ಕೇಂದ್ರಸರ್ಕಾರವು ಪ್ರಕಟಣೆಯಿತ್ತಿದೆ.

ಹೈದರಾಬಾದ್ ಪರಿಸ್ಥಿತಿ

ಹೈದರಾಬಾದ್ ಪರಿಸ್ಥಿತಿಯು ಈಗ ಶಾಂತವಾಗಿದೆ. ಇಲ್ಲಿಯವರೆಗೆ ಎಲ್ಲಿಯೂ ಯಾವ ಘಟನೆಗಳೂ ನಡೆದಿಲ್ಲ. ಆದಾಗ್ಯೂ ಮುನ್ನೆಚ್ಚರಿಕೆ ಕ್ರಮಗಳು ಮುಂದೆ ಸಾಗುತ್ತಿವೆ ಶಾಲಾಕಾಲೇಜುಗಳನ್ನು ಸಿಕಂದರಾಬಾದ್ ಮತ್ತು ಹೈದರಾಬಾದ್‌ಗಳಲ್ಲಿ ಇಂದಿನಿಂದ ಇನ್ನೂ ಒಂದು ವಾರ ಕಾಲ ಮುಚ್ಚಲು ಆಜ್ಞೆಯಾಗಿದೆ.

ಈಜಿಪ್ಟಿನಲ್ಲಿ ಮಿಲಿಟರಿ ಆಡಳಿತ

ಈಜಿಪ್ಟಿನ ಸರ್ವ ಸೇನಾನಿ ಜನರಲ್ ನಗೀಬ್‌ರವರು ಸರ್ಕಾರದ ಆಡಳಿತವನ್ನು ತಾವೇ ವಹಿಸಿಕೊಂಡು ಪ್ರಧಾನಿಯಾಗಿ ೧೭ ಜನರನ್ನುಳ್ಳ ಹೊಸಮಂತ್ರಿ ಮಂಡಲವನ್ನು ರಚಿಸಿದ್ದಾರೆ.

ನಿನ್ನೆಯದಿನ ಅನೇಕ ೫೨ ಪ್ರಮುಖ ವ್ಯಕ್ತಿಗಳ ದಸ್ತಗಿರಿಯಾಗಿ ಮಿಲಿಟರಿಯವರ ವಶದಲ್ಲಿದ್ದಾರೆ.

ಕಮ್ಯೂನಿಸ್ಟರ ಮೇಲೆ ಧಾಳಿ

ಹೈದರಾಬಾದಿನ ತೆಲಂಗಾಣ ಕ್ಷೇತ್ರದ ಮಿರಿಯಾಲ ಗುಡ್ಡ ತಾಲ್ಲೂಕಿನ ನಿಡಮನೂರು ಗ್ರಾಮದಲ್ಲಿ ಚುನಾವಣೆ ಪ್ರಚಾರ ಸಭೆಯಲ್ಲಿ ಭಾಷಣಮಾಡುತ್ತಿದ್ದ ಕಮ್ಯೂನಿಸ್ಟ್ ಪಕ್ಷದ ಪಿ. ಸುಂದರಯ್ಯ ಮತ್ತು ರವಿನಾರಾಯಣರೆಡ್ಡಿಯವರಮೇಲೆ ೮೦ ಜನರ ಗುಂಪುಬಿದ್ದು ತೀವ್ರ ಗಾಯಗೊಳಿಸಿದರೆಂದು ವಂದಿಯಾಗಿದೆ.

ಅಭಾವ ಪ್ರದೇಶಗಳಿಗೆ ಆಹಾರ ಸಂಶೋಧನಾಲಯದ ಸಹಾಯ

ಮೈಸೂರು ಸೆ. ೮

ಸಂಸ್ಥಾನದ ಅಭಾವ ಪ್ರದೇಶಗಳ ಜನರ ಸಹಾಯಕ್ಕಾಗಿ ಸಂಸ್ಥೆಯಲ್ಲಿ ಹೊಸದಾಗಿ ತಯಾರಿಸಿರುವ ಆಹಾರ ವಸ್ತುಗಳನ್ನು ಕೂಡಲೇ ಕಳುಹಿಸಬೇಕೆಂದು ಮತ್ತು ದಿನಕ್ಕೆ ೫೦೦ ಪೌಂಡುಗಳಷ್ಟು ಕಡಲೇಕಾಯಿನಿಂದ, ತಯಾರಾದ ಮಜ್ಜಿಗೆಯನ್ನೂ ಸರಬರಾಜು ಮಾಡಬೇಕೆಂದು ನಿನ್ನೆ ಇಲ್ಲಿ ನಡೆದ ಕೇಂದ್ರ ಆಹಾರ ಸಂಶೋಧನಾಲಯದ ಸಲಹಾ ಸಮಿತಿಯ ಸಭೆಯಲ್ಲಿ ತೀರ್ಮಾನಿಸಲಾಯಿತು. ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಸಂಶೋಧನಾಲಯದಲ್ಲಿ ತಯಾರಾದ ಆಹಾರ ಪದಾರ್ಥಗಳನ್ನು ಅಭಾವ ಪ್ರದೇಶದ ಜನರಿಗೆ ಒದಗಿಸುವುದಲ್ಲದೆ, ಆ ಪದಾರ್ಥಗಳನ್ನು ಹೆಚ್ಚು ಖರ್ಚಿಲ್ಲದೆ ಜನರೇ ತಯಾರಿಸುವ ವಿಧಾನವನ್ನು ಕೂಡ ಪ್ರದರ್ಶಿಸಲು ಅಲ್ಲಿಗೆ ಕೆಲವು ಪ್ರವೀಣರನ್ನು ಕಳುಹಿಸಬೇಕೆಂದೂ ನಿರ್ಧರಿಸಲಾಯಿತು. ಇದಕ್ಕೆ ತಗಲುವ ವೆಚ್ಚವನ್ನು ದೆಹಲಿಯ ಸುಪ್ರಸಿದ್ಧ ಕೈಗಾರಿಕಾ ಪ್ರವೀಣರೂ ಮತ್ತು ಸಲಹಾ ಸಮಿತಿಯ ಸದಸ್ಯರೂ ಆದ ಶ್ರೀ ಕೆ. ಕೆ. ಬಿರ್ಲಾರವರು ಕೊಡಲು ಒಪ್ಪಿದ್ದಾರೆ.

ಕ್ಷಾಮಪೀಡಿತ ಜನರ ಸಹಾಯಕ್ಕಾಗಿ ಶ್ರೀ ಬಿರ್ಲಾರವರು ೧ ಸಾವಿರ ರೂ. ಹಣದ ಸಹಾಯವನ್ನೂ ಸಹ ಮಾಡಿದ್ದಾರೆ. ಅದಕ್ಕಾಗಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಅವರನ್ನು ವಂದಿಸಿದರು. ಆಹಾರ ಸಂಶೋಧನಾಲಯದ ನೌಕರರೆಲ್ಲರೂ ಸೇರಿ ೪೫೦ ರೂ. ಸಹಾಯವನ್ನು ಮಾಡಿದ್ದಾರೆ.

ಮಳೆಗಾಗಿ ಅಜೀವ ಉಪವಾಸ

ಮಧ್ಯಭಾರತದಲ್ಲಿ [illegible] ವಯಸ್ಸಿನ ಯುವಕನೊಬ್ಬನು ದೇಶದಲ್ಲಿ ಮಳೆಯಾಗುವುದಕ್ಕಾಗಿ ಅಜೀವ ಉಪವಾಸವ್ರತವನ್ನು ಕೈಗೊಂಡಿದ್ದಾನೆ. ಆತನು ಆಹಾರ [illegible] ತೆಗೆದುಕೊಳ್ಳದೆ ದೇವರ ಮುಂದೆ ನಿಂತು ಮಳೆಗಾಗಿ ಧ್ಯಾನಿಸುತ್ತಿದ್ದಾನೆ. ಅದರ ಮೊರೆಗೆ ವರುಣದೇವರು ಮೆಚ್ಚಿ ಮಳೆ ಬರಿಸುವನೆಂದು ಆತನ ನಂಬಿಕೆ.

§ ಕಳೆದ ೧೭ ತಿಂಗಳುಗಳಿಂದ ನಡೆಯುತ್ತಿರುವ ಭೂದಾನಯಜ್ಞದ ಚಳುವಳಿಯ ಪರಿಣಾಮವಾಗಿ ಸುಮಾರು ೧೨೦೦೦ ಜನರು ಆಚಾರ್ಯ ವಿನೋಬಭಾವೆಯವರಿಗೆ ೩ ಲಕ್ಷ ೫೦ ಸಾವಿರ ಎಕರೆ ಜಮೀನನ್ನು ಉಚಿತವಾಗಿ ಕೊಟ್ಟಿರುವರು.

ಭಾರತವು ಯೂರೋಪು ಖಂಡದ ಗಾಂಧಿಯವರ ನಾಡು

ಗಾಂಧಿ ಸ್ಮಾರಕ ಸ್ತೂಪದ ಅನಾವರಣ ಸಮಯದಲ್ಲಿ

ಶ್ರೀಮನ್ಮಹಾರಾಜರ ಭಾಷಣ

ಮೈಸೂರು ಸೆ. ೮

ನಮ್ಮ ರಾಷ್ಟ್ರದ ತಂದೆಯೆನಿಸಿದ್ದ ಮಹಾತ್ಮಾ ಗಾಂಧಿಯವರು ಸಮಸ್ತರಲ್ಲೂ ಸಮದರ್ಶಿಗಳಾಗಿದ್ದ ಕರ್ಮಯೋಗಿಗಳು ಅಷ್ಟೇ ಅಲ್ಲ ಸ್ವಪಕ್ಷದವರೆಂಬ ಅಥವಾ ಪ್ರತಿಪಕ್ಷದವರೆಂಬ ಭೇದವನ್ನೇ ಅರಿಯದೆ ಎಲ್ಲರನ್ನೂ ನಿಷ್ಕಳಂಕ ಪ್ರೇಮದಿಂದ ಕಾಣುತ್ತಿದ್ದ ಮಹಾಪುರುಷರು. ಭಾರತವು ಯೂರೋಪುಖಂಡದ 'ಗಾಂಧಿಯವರ ನಾಡು' ಎಂದು ಪ್ರಸಿದ್ಧವಾಗಿದೆ.

ನಮ್ಮದೇಶದಲ್ಲಿರುವಂತೆಯೇ ಇತರ ದೇಶಗಳಲ್ಲಿಕೂಡ ಮಹಾತ್ಮ ಗಾಂಧಿಯವರ ವಿಚಾರದಲ್ಲಿ ಜನರಿಗೆ ಪೂಜ್ಯಬುದ್ಧಿಯಿದೆ. ಪವಿತ್ರವಾದ ನಮ್ಮೀ ಭಾರತದ ಮಹಾಮಹಿಮರ ಶ್ರೇಣಿಗೆ ಸೇರಿದ ಪೂಜ್ಯ ಮಹಾತ್ಮ ಗಾಂಧಿಯವರ ಆದರ್ಶವೂ, ಉಪದೇಶವೂ ಚಿರಕಾಲ ಜನತೆಯ ಮುಂದೆ ನಿಂತು ಆ ಜನತೆಯ ಜೀವನವನ್ನು ನೈತಿಕ ಮತ್ತು ನಿರ್ಮಲ ಮಾರ್ಗದಲ್ಲಿ ರೂಪುಗೊಳಿಸಲು ಸಾಧಕವಾಗುವಂತೆ ಅನೇಕ ರೀತಿ ಪ್ರಯತ್ನವಾಗುವುದು. ಈ ಮಹಾಪುರುಷರುಗಳಿಗೆ ಪ್ರಿಯವಾಗಿದ್ದ ಉದಾತ್ತ ತತ್ವಗಳಿಂದ ದೇಶಭಕ್ತರೆಲ್ಲರಿಗೂ ಚಿರಕಾಲ ಸ್ಫೂರ್ತಿಯು ದೊರೆತು ಅವರ ಕರ್ತವ್ಯ ನಿಷ್ಠೆಯು ಹೆಚ್ಚುವಂತೆ ಭಗವಂತನು ಅನುಗ್ರಹಿಸಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆಂದು ಈದಿನ ಮಹಾತ್ಮ ಗಾಂಧಿಯವರ ನಾಮಾಂಕಿತದಲ್ಲಿ ನಿರ್ಮಿತವಾಗಿರುವ ಸ್ಮಾರಕಸ್ತಂಭದ ಅನಾವರಣ ಮಹೋತ್ಸವ ನೆರವೇರಿಸುತ್ತಾ ಶ್ರೀಮನ್ಮಹಾರಾಜರು ಹೇಳಿದರು.

ವಿದೇಶಗಳಲ್ಲಿ ಗಾಂಧಿ ತತ್ವವನ್ನು ಅನುಸರಿಸಲಿರುವ ವಿಷಯವನ್ನು ಪ್ರಸ್ತಾಪಿಸಿ, ಮಹಾತ್ಮ ಗಾಂಧಿಯವರ ಪವಿತ್ರ ಜೀವನಕ್ಕೆ ಸಂಬಂಧಪಟ್ಟ ಸಂಗತಿಗಳನ್ನು ತಿಳಿದುಕೊಳ್ಳಲು ವಿದೇಶೀಯರಿಗೆ ತೀವ್ರ ಆಸಕ್ತಿಯಿದೆ. ಅಲ್ಲಿ ಪಂಡಿತ ಪಾಮರರೆಂಬ ಭೇದವಿಲ್ಲದೆ. ಧನಿಕ ದರಿದ್ರರೆಂಬ ಭೇದವಿಲ್ಲದೆ, ಚಿಕ್ಕವರು ದೊಡ್ಡವರೆಂಬ ಭೇದವಿಲ್ಲದೆ, ಸಮಸ್ತರಿಗೂ ಮಹಾತ್ಮ ಗಾಂಧಿಯವರ ಉದಾತ್ತ ತತ್ವಗಳನ್ನೂ ಜೀವನ ಚರಿತ್ರೆಯನ್ನೂ ಪರಿಚಯಮಾಡಿಕೊಳ್ಳುವ ಕುತೂಹಲವಿದೆ. ನಮ್ಮ ದೇಶ ಬಾಂಧವರಿಗಂತೂ, ಮಹಾತ್ಮ ಗಾಂಧಿಯವರ ವಿಷಯದಲ್ಲಿ ಅಮಿತ ಪ್ರೀತಿಭಕ್ತಿಗಳಿವೆ ಮಹಾತ್ಮ ಗಾಂಧಿಯವರು ಉದಾರಚರಿತರಾಗಿದ್ದುದೇ ಇದಕ್ಕೆ ಮುಖ್ಯಕಾರಣ ಎಲ್ಲಾ ಜಾತಿಪಂಗಡಗಳ, ಎಲ್ಲ ಸ್ಥಿತಿಗತಿಗಳ, ಎಲ್ಲ ಧರ್ಮಗಳ ಮತ್ತು ಎಲ್ಲ ಜನಾಂಗಗಳ ಜನರಲ್ಲೂ ಅವರಿಗೆ ಗಾಢವಾದ ಸಹಾನುಭೂತಿ, ಒಟ್ಟು ಮಾನವವರ್ಗಕ್ಕೆ ಮಂಗಳವಾಗಬೇಕೆಂದು ಬಯಸುತ್ತಿದ್ದವರು ಮಹಾತ್ಮ ಗಾಂಧಿಯವರು. ದೀನ ದಲಿತರಲ್ಲಂತೂ, ಅವರಿಗೆ ವಿಶೇಷ ಕರುಣೆ. ಪ್ರಾಣಿಮಾತ್ರದಲ್ಲಿ ದಯೆ ತೋರಿಸದೆಯೇ ಕುಟುಂಬ ಎಂಬ ಸೂಕ್ತಿಯು ಅವರಿಗೆ ಅಕ್ಷರಶಃ ಅನ್ವಯಿಸುವಂತಿದ್ದಿತೆಂದು ಧಾರಾಳವಾಗಿ ಹೇಳಬಹುದು.

ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟು ದೇಶೋನ್ನತಿ ಸಾಧನೆ ಮಾಡುವುದಕ್ಕೆ ದೀಕ್ಷೆಯನ್ನು ಕಳೆದು, ಮಹಾತ್ಮ ಗಾಂಧಿಯವರು ಎಷ್ಟು ಕಾರ್ಯಕ್ಷೇತ್ರಗಳಲ್ಲಿ ಎಷ್ಟು ಶ್ರದ್ಧೆಯಿಂದ ಶ್ರಮಿಸಿದರೆಂಬುದನ್ನೂ, ಹೊಸದಾಗಿ ವಿವರಿಸಬೇಕಾದ ಪ್ರಕೃತವೇ ಇಲ್ಲ. ಇದು ಭಾರತೀಯರಲ್ಲ ಸಮಸ್ತರಿಗೂ ತಿಳಿದಿರುವ ಸಂಗತಿ ಬಾಪು ಎಂಬ ಮಾತು ಭಾರತೀಯರ ಕಿವಿಗಳಿಗೆ ಅಮೃತವನ್ನೆರೆಯುತ್ತದೆ.

ಮಹಾತ್ಮಗಾಂಧಿಯವರು ಅಕಾಲದಲ್ಲಿ ನಮ್ಮನ್ನಗಲಿ ಹೋದರೆಂಬ ವಿಷಾದವೇನೋ ನಮ್ಮೆಲ್ಲರ ಹೃದಯದಲ್ಲೂ ತುಂಬಿದೆ. ಆದಾಗ್ಯೂ ನಮಗೆ ದಾರಿ ತೋರಿಸಲು ಅವರ ಉಪದೇಶ ವಾಣಿಗಳ ಬೆಳದೀವಿಗೆಗಳ ಅವಲಂಬನವಿದೆ. ಅವರ ಸಹವಾಸದ ಸುಯೋಗವನ್ನು ಪಡೆದು, ಅವರ ಸಹೋದ್ಯೋಗಿಗಳಾಗಿ ಕೆಲಸ ಮಾಡಿ, ಅವರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದ ನಾಯಕ ಶ್ರೇಷ್ಠರುಗಳ ಸಹಾಯವಿದೆ. ಈ ಸಹಾಯದ ಪೂರ್ಣ ಪ್ರಯೋಜನವನ್ನು ಪಡೆದು ಮಹಾತ್ಮ ಗಾಂಧಿಯವರಿಗೆ ಪ್ರಿಯವಾಗಿದ್ದ ಸತ್ಯ, ಅಹಿಂಸೆ ಮತ್ತು ದೇಶಭಕ್ತಿ ಎಂಬ ತ್ರಿವೇಣಿಯಲ್ಲಿ ಮಿಂದು ಶ್ರದ್ಧೆಯಿಂದ ಕರ್ತವ್ಯ ಪಾಲನ ಮಾಡಿದರೆ ಭಾರತದ ಭಾಗ್ಯಚಿತ್ರಯು ಮತ್ತಷ್ಟು ಮೇಲಕ್ಕೇರುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದರು.

ಕೊನೆಯಲ್ಲಿ ದಾನಿಗಳಾದ ವೆಂಕಲಸುಬ್ಬಯ್ಯಶೆಟ್ಟರನ್ನು ಅಭಿನಂದಿಸಿದರು.

ಮಹಾತ್ಮರ ಉಪದೇಶ! ೯೨ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ!!!

ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

★ ಸಂತಾನ ಸಿಂಧೂರ ★

† ಬಹಿಷ್ಠೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ † ಅಕ್ರಮಸೂತಕ, ಕ್ರಮತಪ್ಪಿ ಬಹಿಷ್ಠೆ ಆಗುವುದನ್ನು ನಿಲ್ಲಿಸುತ್ತದೆ, † ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ † ಬಂಜೆತನವನ್ನು ಕೊನೆಗಾಣಿಸಿ ಸಂತಾನಕೊಡುವ ಸಿದ್ಧೌಷಧ. ೨ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ ಟಪಾಲ್ ಖರ್ಚು ೧ ರೂ. —(ಸಕ್ರಮ್ಯಮಹಾರ ಗುಪ್ತ.)

ಅಡ್ರೆಸ್:—ಎ. ರಾಮಸ್ವಾಮಿ ಅಯ್ಯರ್ ಸನ್ "ಸಂತಾನಸಿಂಧೂರ" ಆಫೀಸ್, ೭೨೮ ನೂರಡಿರಸ್ತೆ ದಕ್ಷಿಣಕ್ರಾಸ್, (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು

ವಿ.ಸೂ:—ಇದುವರೆಗೂ ಅಂಬಳೆ ಮಠ, ಮೈಸೂರು ಸೊಪ್ಪಿನಕೋದ ಬೀದಿಯಲ್ಲಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ನಮ್ಮ ಸ್ವಂತ ಕಟ್ಟಡಕ್ಕೆ ವರ್ಗಾಯಿಸಿರುತ್ತೆ. ವಿಶೇಷ ಮಾಹಿತಿಗೆ ೨ ಆ. ಸ್ಟಾಂಪು ಕಳುಹಿಸಿ.

ಸಾದೆ ಸಮಸ್ಯೆ ಬಗೆಹರಿಸಲು ಸಮಿತಿ

ಬೆಂಗಳೂರು ಸೆ. ೮

ಮೈಸೂರು ಸಂಸ್ಥಾನದಲ್ಲಿ ಜನರಿಗೆ ಸಾಕಾಗುವಷ್ಟು ಸೌದೆಯಿಲ್ಲದೆ ಉಂಟಾಗಿರುವ ಸಿಗದೆ ಅಭಾವವನ್ನು ನೀಗಿಸಲು ಸಲಹೆ ನೀಡಲು ನೇಮಿಸಿದ್ದ ಸಮಿತಿಯು ಇತ್ತ ಸಲಹೆಗಳನ್ನು ಸರ್ಕಾರವು ಪರಿಶೀಲಿಸಿ ಪುನಃ ಅವುಗಳನ್ನು ವಿಶೇಷ ರೀತಿಯಿಂದ ಪರಿಶೀಲಿಸಿ ಸರ್ಕಾರಕ್ಕೆ ಇನ್ನೊಂದು ವರದಿ ಒಪ್ಪಿಸಲು ಇನ್ನೂ ಹೆಚ್ಚು ಸದಸ್ಯರುಳ್ಳ ಒಂದು ಸಮಿತಿಯನ್ನು ನೇಮಿಸಿದೆ.

ಅತ್ಯಂತ ಭಾರಿ ಯುದ್ಧ ಜೆಟ್ ವಿಮಾನ ದುರಂತ

ಗಂಟೆಗೆ ೭೦೦ ಮೈಲಿ ವೇಗದಲ್ಲಿ ಹಾರುತ್ತಿದ್ದಾಗ ಬ್ರಿಟನ್ನಿನ ಅತ್ಯಂತ ಹೊಸಜೆಟ್ ಯುದ್ಧ ವಿಮಾನವೊಂದು ಶನಿವಾರ ದಿನ ಆಕಾಶದಲ್ಲಿಯೇ ಸಿಡಿಯಿತು. ವಿಮಾನದಲ್ಲಿದ್ದ ಪ್ರಸಿದ್ಧ ಚಾಲಕ ಟೆಸ್ಟ್ ಪೈಲಟ್ ಜಾರಿಡೆರ್ರಿ ನುಚ್ಚುನೂರಾಗಿ ಹೋದರು. ವಿಮಾನ ಕೆಳಕ್ಕೆಬಿದ್ದಾಗ ೧೫ ಮಂದಿ ಪ್ರೇಕ್ಷಕರು ಸತ್ತರು ಪೈಲಟ್ ಜೊತೆಯಲ್ಲಿದ್ದ ಒಬ್ಬ ವೀಕ್ಷಕರು ಮರಣಹೊಂದಿದರು.

ಇಂಗ್ಲೀಷ್ ಭಾಷೆಯ ಉನ್ನತ ದರ್ಜೆಯನ್ನುಳಿಸಿ

ಇಂಗ್ಲೀಷು ಭಾಷೆಯು ಮಾಧ್ಯಮವಾಗಿ ತೆಗೆದುಹಾಕಿದನಂತರವೂ ದೇಶದಲ್ಲಿ ಇಂಗ್ಲೀಷಿನ ಉನ್ನತ ಮಟ್ಟವನ್ನು ಉಳಿಸಿಕೊಂಡು ಬರುವಂತೆ ಮಾಡಬೇಕೆಂದು ದೇಶದ ಹಿತದೃಷ್ಟಿಯಿಂದ ಇದು ಅಗತ್ಯವೆಂದು ೨೬ ಮಂದಿ ವಿಜ್ಞಾನಿಗಳೂ ಶಿಕ್ಷಣ ಪ್ರವೀಣರೂ ಪ್ರಧಾನಿ ನೆಹರೂರವರಿಗೂ ವಿದ್ಯಾ ಸಚಿವ ಮೌಲಾನ ಅಜಾದ್‌ರವರಿಗೂ ಸಂಯುಕ್ತ ಪತ್ರಗಳನ್ನು ಕಳುಹಿಸುವರು. ಡಾ|| ಸಿ. ವಿ. ರಾಮನ್, ಡಾ|| ಹೆಚ್. ಜೆಭಾಭಾ, ಎ. ಜೆ. ವಾಡಿಯ, ಜಸ್ಟಿಸ್ ಎ. ಹೆಚ್. ಭಗವತಿ, ಮುಂತಾದವರು ಈ ಪತ್ರಕ್ಕೆ ಸಹಿಹಾಕಿರುವರು.

ನಗರ ಆರೋಗ್ಯಾಧಿಕಾರಿಗಳ ವರ್ಗ

ಬೆಂಗಳೂರು ಸೆ. ೮

ಮೈಸೂರುನಗರ ಆರೋಗ್ಯಾಧಿಕಾರಿಗಳಾಗಿರುವ ಶ್ರೀ ಎಸ್. ಶೇಷಗಿರಿರಾಯರನ್ನು ಬೆಂಗಳೂರಿನಲ್ಲಿ ಸಾಂಕ್ರಾಮಿಕ ರೋಗಗಳ ಸೂಪರಿಂಟೆಂಡರುರಾಗಿಯೂ, ಶ್ರೀ ವೆಂಕಟಾಚಲಂರವರನ್ನು ಅವರಸ್ಥಾನಕೆ ಮೈಸೂರಿಗೆ ವರ್ಗಾಯಿಸಲಾಗಿದೆ.

ವೈಸ್‌ಛಾನ್ಸಿಲರ ಸಮ್ಮೇಳನ

ಭಾರತೀಯ ವಿಶ್ವವಿದ್ಯಾನಿಲಯಗಳ ಉಪಸ್ಥಾನಪತಿಗಳ ಸಭೆಯೊಂದು ನಿನ್ನೆ ಮದ್ರಾಸಿನಲ್ಲಿ ಪ್ರಾರಂಭವಾಯಿತು.

ಕೇಂದ್ರ ವಿಶ್ವವಿದ್ಯಾನಿಲಯದ ಮಸೂದೆಯ ಕರಡಿನ ಪರಿಶೀಲನೆಯು ಈ ಸಭೆಯಲ್ಲಿ ನಡೆಯುತ್ತದೆ. ವಿವಿಧ ವಿಶ್ವವಿದ್ಯಾನಿಲಯಗಳು ಶಿಕ್ಷಣ ದರ್ಜೆಗಳನ್ನು ಸರಿಹೊಂದಿಸುವುದಕ್ಕಾಗಿ ಕೇಂದ್ರ ಕೌನ್ಸಿಲ್ ಒಂದನ್ನು ನೇಮಕ ಮಾಡಲು ಈ ಮಸೂದೆಯನ್ನು ಸೂಚಿಸಲಾಗಿದೆ.

PRABHA: From 9-9-52 for 3 days Daily 3 shows.

Italian Picture Produced in Engiish by Decika, Producer of famous film Bycejle Thief.

BITTER RICE

With- Silvana Mangano, Vitterio Gossmann.

ಅಪೇರ ೫-೯-೫೨ ರಿಂದ ಅಮೋಘ ಪ್ರಾರಂಭ

ಪುಯಲ್

ಅಥವಾ

ಬಿರುಗಾಳಿ [ತಮಿಳು]

ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್

ವುಡ್‌ಲ್ಯಾಂಡ್ಸ್

೭-೯-೫೨ ರಿಂದ ಅಮೋಘ ಪ್ರಾರಂಭ

* ಗುಮಾಸ್ತೆ * (ಹಿಂದಿ)

ಪಾತ್ರ:—ನಿಗಾರ್, ಶಾಸ್ತ್ರಿ ಕುಲ್‌ದೀಪ್ ಮಿಜಾತಮುಷ್ರಾಪ್

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ

ಸಂಪುಟ 3

ಸಂಚಿಕೆ 17

೯-೯-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಗಾಂಧಿ ವಚನಾಮೃತ

ರಾಜಧಾನಿಯಲ್ಲಿ ನಿನ್ನೆ ಶ್ರೀಮನ್ಮಹಾರಾಜರವರು ಅನಾವರಣಮಾಡಿದ ಮಹಾತ್ಮಾಗಾಂಧೀ ಸ್ತೂಪದಲ್ಲಿ ಕೆತ್ತಿರುವ ಗಾಂಧಿಜೀಯವರ ಅಮೃತವಾಣಿ:—

ಸತ್ಯವೇ ದೇವರು, ಬೇರೆ ದೇವರಿಲ್ಲ,
ಸತ್ಯಸಾಧನೆಗೆ ಒಂದೇ ಮಾರ್ಗ
ಅಹಿಂಸೆ
ಕ್ಷಮೆ ದಯೆ, ಆತ್ಮದ ಗುಣ,
ಅಕ್ರೋಧವೇ ಕ್ಷಮೆ
ಪ್ರೀತಿಯಿದ್ದಲ್ಲಿ ಬಾಳು, ಹಗೆಯಿ
ದ್ದಲ್ಲಿ ಹಾಳು
ಹೆಂಣು ಅಹಿಂಸೆಯ ಅವತಾರ
ಪುತ್ಥಳಿ
ಸತ್ಯಾಗ್ರಹವೇ ಸತ್ಯಶೋಧನೆಯ
ದಾರಿ
ಸತ್ಯಾಗ್ರಹ ಧರ್ಮ ಯುದ್ಧ,
ಯುದ್ಧ ವಿರುದ್ಧ
ಎಲ್ಲ ಧರ್ಮಗಳೂ ಸತ್ಯ, ಸಮ
ಮನುಷ್ಯನಿಗೆ ಸ್ವಧರ್ಮವೇ ಶ್ರೇಯ
ಶ್ರೇಷ್ಠ
ಮನುಷ್ಯ ಮನುಷ್ಯರಲ್ಲಿ ಭೇದ
ಸಲ್ಲದು
ರಾಟೆಯೇ ರೈತನ ಕಾಮಧೇನು,
ಅನ್ನಪೂರ್ಣೆ
ನಾತವಗೆ ಬಟ್ಟೆ, ದುಡಿದವಗೆ
ಹೊಟ್ಟೆ
ಸ್ವಾವಲಂಬನ ಬಾಳು, ಪರಾವ
ಲಂಬನ ಸಾವು
ಕೈಗೆಲಸ ಕಲಿಸದ ವಿದ್ಯೆ ವ್ಯರ್ಥ
ಯಂತ್ರ ನರನ ಗುಲಾಮ, ನರ
ಯಂತ್ರದಾಳಲ್ಲ
ಗ್ರಾಮ ಸ್ವರಾಜ್ಯವೆ ನಿಜ ಸ್ವರಾಜ್ಯ
ಅರ್ಥಶಾಸ್ತ್ರದ ಗುರಿ ಹಣವಲ್ಲ—
ಶಾಂತಿ
ಹಸು ಭಾರತೀಯ ಜೀವನದ
ಆಧಾರ

ಮೈಸೂರಿಗೆ ಮದರಾಸಿನಿಂದ ಮೈಲೋ ಅಕ್ರಮ ಸಾಗಾಣಿಕ

ಮದರಾಸಿನಿಂದ ಮೈಸೂರಿಗೆ ಅಕ್ರಮವಾಗಿ ಮೈಲೋ ಸಾಗಿಸುತ್ತಿರುವುದನ್ನು ತಡೆಗಟ್ಟಲು ಗಡಿ ಪ್ರದೇಶಗಳಲ್ಲಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಕಲೆಕ್ಟರಿಗೆ ಸರ್ಕಾರದ ಸೂಚನೆ ಕೊಡಲಾಗಿದೆ.

ನಗರದಲ್ಲಿ ವಾಣೀವಿಲಾಸ ನೀರು ಸರಬರಾಜಿನ ಕೆಲಸಗಾರರ ಮುಷ್ಕರವೇ ?

ಮೈಸೂರು ಸೆ ೯

ರಾಜಧಾನಿಯ ವಾಣೀವಿಲಾಸ ನೀರು ಸರಬರಾಜು ಶಾಖೆಯ ಕೆಲಸಗಾರರ ಸಂಘದ ಸಭೆಯು ನಿನ್ನೆ ಶ್ರೀ ಮೀರ್‌ನೂರ್ ಹುಸೇನ್‌ರ ಅಧ್ಯಕ್ಷತೆಯಲ್ಲಿ ನಡೆಯಿತು.

ಅಲ್ಲಿನ ಕೆಲಸಗಾರರಿಗೆ ೧೯೪೭ ರಿಂದ ಸರ್ಕಾರದವರು ಭಡ್ತಿಕೊಟ್ಟಿಲ್ಲ. ಕೆಲಸಗಾರರು ನಿವೃತ್ತಿರಾದಮೇಲೆ ಅವರುಗಳಿಗೆ ಪೆನ್ಷನ್‌ಕೊಡಬೇಕೆಂದು ೪ ವರ್ಷಗಳ ಹಿಂದೆಯೇ ಸರ್ಕಾರದವರು ಆಜ್ಞೆಮಾಡಿದ್ದರೂ, ಅದು ಕಾರ್ಯರೂಪಕ್ಕೆ ತರದೆ ಇತ್ತೀಚಿಗೆ ಕೆಲಸದಿಂದ ನಿವೃತ್ತರಾದ ೧೧ ಮಂದಿಗೂ ಪೆನ್ಷನ್‌ಕೊಟ್ಟಿಲ್ಲ. ಮತ್ತು ಕೆಲಸಗಾರರಿಗೆ ಯೂನಿಫಾರಂಸಹ ಕೊಟ್ಟಿಲ್ಲ ಈ ಕುಂದುಕೊರತೆಗಳನ್ನು ಸರ್ಕಾರಕ್ಕೆ ಕಳೆದ ನಾಲ್ಕುವರ್ಷಗಳಿಂದ ತಿಳಿಸುತ್ತಿದ್ದರೂಕೂಡ ಅವರು ಯಾವ ಪರಿಹಾರವನ್ನೂ ಕೊಡದಿರುವುದು ಶೋಚನೀಯ. ಈ ಬೇಡಿಕೆಗಳನ್ನು ಇದೇ ೨೦ನೇ ತಾರೀಖಿನೊಳಗಾಗಿ ಸರ್ಕಾರದವರು ಈಡೇರಿಸದಿದ್ದ ಪಕ್ಷದಲ್ಲಿ, ಅದಿನ ಕೆಲಸಗಾರರು ಸಾಂಕೇತಿಕ ಮುಷ್ಕರಹೂಡಬೇಕು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಶ್ರೀಗಳಾದ ಶ್ರೀಕಂಠಪ್ಪ, ವೇದಾಂತ ಹೆಮ್ಮಿಗೆ ಮತ್ತು ಶ್ರೀಕಂಠಶರ್ಮರವರು ಭಾಷಣಮಾಡಿ, ಕೆಲಸಗಾರರು ಒಗ್ಗಟ್ಟಿನಿಂದಲೂ ಶಿಸ್ತಿನಿಂದಲೂ ವರ್ತಿಸಬೇಕೆಂದು ಸಲಹೆ ಮಾಡಿದರು

ನೂತನ ಅಧಿಕಾರವರ್ಗದ ಚುನಾವಣೆ ನಡೆದು, ಶ್ರೀ ಮೀರ್‌ನೂರ್ ಹುಸೇನ್‌ರು ಅಧ್ಯಕ್ಷರಾಗಿಯೂ, ಶ್ರೀ ಚಂದ್ರಶೇಖರಯ್ಯ ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ವೇದಾಂತ ಹೆಮ್ಮಿಗೆ ಮತ್ತು ರಾಮಶಾಸ್ತ್ರಿ ಕಾರ್ಯದರ್ಶಿಗಳಾಗಿಯೂ, ಶ್ರೀ ಕರಿಂಖಾನ್ ಖಜಾಂಚಿಯಾಗಿಯೂ ಚುನಾಯಿಸಲಾಯಿತು.

§ ಭಾರತದ ಬ್ಯಾಂಕ್‌ನೌಕರರು ದಿನಕ್ಕೆ ೭ ಗಂಟೆ ಮತ್ತು ಶನಿವಾರ ೪ ಗಂಟೆ ಕೆಲಸ ಮಾಡಬೇಕೆಂದು ಅಖಿಲ ಭಾರತ ಕೈಗಾರಿಕಾ ಟ್ರಿಬ್ಯುನಲ್‌ರವರು ತೀರ್ಪಿತ್ತಿದ್ದಾರೆ. ಈ ಕಾಲಾವಧಿಗಿಂತ ಹೆಚ್ಚಿಗೆ ಕೆಲಸ ಮಾಡಬೇಕಾದಲ್ಲಿ ಅಂತಹ ನೌಕರರಿಗೆ ಹೆಚ್ಚಿನಭತ್ಯ ಕೊಡಬೇಕೆಂದೂ ಆಜ್ಞೆಮಾಡಲಾಗಿದೆ.

ನಗರದ ಆರೋಗ್ಯ ವರದಿ

ಮೈಸೂರು ಸೆ. ೯

ಮೈಸೂರುನಗರದಲ್ಲಿ ಕಳೆದ ತಿಂಗಳಿನ ಅಂತ್ಯದ ೧೫ ದಿನಗಳಲ್ಲಿ ಸಿಡುಬಿನಿಂದ ಬಿಷ್ಕರ್‌ಮೊಹಲ್ಲಾದಲ್ಲಿ ಒಬ್ಬರು ಸತ್ತರು. ೫ ಡಿಫ್ತೀರಿಯಾ ಕೇಸುಗಳು ವರದಿಯಾಗಿದವು. ಟೈಫಾಯಿಡ್ ಖಾಯಿಲೆಯಿಂದ ಇಬ್ಬರು ಸತ್ತರು. ಪ್ಲೇಗಿನಕೇಸುಗಳು ಯಾವುವೂ ವರದಿಯಾಗಿಲ್ಲ.—ಎಂದು ಪುರಸಭಾ ಆರೋಗ್ಯಶಾಖೆಯ ಪ್ರಕಟಣೆ ತಿಳಿಸುತ್ತದೆ.

ಸೋಷಲಿಸ್ಟ್ ಪಕ್ಷದ ಸಭೆ

ಮೈಸೂರು ಜಿಲ್ಲಾ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರ ಸಭೆಯು ಇದೇ ೧೧ ನೇ ತಾರೀಖು ಸಂಜೆ ೭ ಘಂಟೆಗೆ ಪಕ್ಷದ ಕಛೇರಿಯಲ್ಲಿ ಶ್ರೀ ಸಿ. ಜಿ. ಕೆ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು ಕೆ ಎಂ.ಪಿ. ಸೋಷಲಿಸ್ಟ್ ಪಕ್ಷಗಳ ವಿಲೀನೀಕರಣ ಮತ್ತು ಮೈಸೂರುನಗರ ಪುರಸಭೆಯ ಚುನಾವಣೆ ಬಗ್ಗೆ ಪರಿಶೀಲನೆ ನಡೆಯುವುದು.

ಹೈದರಾಬಾದ್ ಜಿಲ್ಲೆಗಳಲ್ಲಿ ವಿರುದ್ಧ ಚಳುವಳಿ

ಹೈದರಾಬಾದಿನಲ್ಲಿ ಇತ್ತೀಚಿಗೆ ನಡೆದ ಹೈದರಾಬಾದಿ ... ವಿರುದ್ಧ ಚಳುವಳಿಯು ಈಗ ಜಿಲ್ಲೆಗಳಲ್ಲಿ ಹಬ್ಬುತ್ತಿದೆಯೆಂದು ವರದಿಯಾಗಿದೆ. ಗಲಗೊಂಡದಲ್ಲಿ ವಿರುದ್ಧ ಚಳುವಳಿಗಾರರು ಉಪಾಧ್ಯಾಯರು ಗುಮಾಸ್ತರು ಮತ್ತು ಕೇಂದ್ರಸರ್ಕಾರದ ನೌಕರರುಗಳಮೇಲೆ ಘರ್ಷಣೆನಡೆಸಿದರು. ೨೦ ಮಂದಿ ವಿದ್ಯಾರ್ಥಿಗಳು ಕಲೆಕ್ಟರ ಕಛೇರಿಯಲ್ಲಿರುವ ಗುಮಾಸ್ತರ ಮನೆಗೆ ನುಗ್ಗಿ ಅವರನ್ನು ಗಾಯಗೊಳಿಸಿದ್ದಾರೆ. ಇನ್ನೊಂದು ವಿದ್ಯಾರ್ಥಿಗಳ ತಂಡ ತಹಸಿಲ್‌ದಾರ್ ಮತ್ತು ಅವರೊಂದಿಗೆ ವಾಸವಾಗಿದ್ದ ಗುಮಾಸ್ತರನ್ನು ಮನೆಯಿಂದ ಹೊರಕ್ಕೆ ಎಳೆದು ಕರೆದುಕೊಂಡು ಹೋದರು. ಈಗ ಆ ನಗರದಲ್ಲಿ ಸಶಸ್ತ್ರ ಪೋಲೀಸ್‌ಪಡೆಯ ಕಾವಲನ್ನುಹಾಕಲಾಗಿದೆ.

ಹೈದರಾಬಾದ್ ಮತ್ತು ಸಿಕಂದರಾಬಾದುಗಳಲ್ಲಿ ಶಾಲಾ ಕಾಲೇಜುಗಳನ್ನು ಮುಚ್ಚಲಾಗಿದೆ.

ಆಂಧ್ರಪ್ರಾಂತ್ಯಕ್ಕಾಗಿ ನೂತನ ಚಳುವಳಿ

ಸ್ವಾಮಿ ಸೀತಾರಾಂರವರು ಆಂಧ್ರಪ್ರಾಂತ್ಯರಚನೆಯು ಶೀಘ್ರದಲ್ಲಿ ಈಡೇರುವಂತೆ ಸರ್ಕಾರದವರನ್ನು ಒತ್ತಾಯಪಡಿಸಲು ನೂತನ ಸತ್ಯಾಗ್ರಹ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಸ್ಥಳೀಯ ಸಂಸ್ಥೆ, ಸರ್ಕಾರಿ ಕಛೇರಿ ಮತ್ತು ವಿದ್ಯಾಸಂಸ್ಥೆಗಳ ಮುಂದೆ ಸತ್ಯಾಗ್ರಹಿಗಳು ಪ್ರದರ್ಶನ ನಡೆಸಿ ಅಲ್ಲಿನ ಕೆಲಸಕಾರ್ಯಗಳಿಗೆ ಅಡ್ಡಿ ತರುವುದು; ವಿರೋಧ ಸೂಚಿಸುವ ಆಂಧ್ರಶಾಸನ ಸಭಾಸದಸ್ಯರ ಮುಂದೆ ಪಿಕೆಟಿಂಗ್ ಆಹಾರಧಾನ್ಯಗಳು, ಆಂಧ್ರದಿಂದ ಹೊರಕ್ಕೆ ಹೋಗದಂತೆ ತಡೆಯುವುದು; ಆಹಾರ ಸಾಗಾಣಿಕೆ ನಿರ್ಬಂಧಗಳನ್ನು ಮುರಿಯುವುದು; ಮಹಾ ಪ್ರಧಾನರಿಗೆ ಬರೆಯುವ ಪತ್ರಗಳಿಗೆ ಅರ್ಧಾಣೆ ಅಂಚೆ ಸ್ಟಾಂಪನ್ನು ಮಾತ್ರ ಹಚ್ಚುವುದು. ಅದು ವಾಪಸಾದರೆ ಹೆಚ್ಚು ಅಂಚೆ ನೋಟಲಗನ್ನು ಕೊಡಲು ನಿರಾಕರಿಸುವುದು. ಈ ಕಾರ್ಯಗಳನ್ನು ಅಹಿಂಸಾಮಾರ್ಗಗಳಿಂದಲೇ ನಡೆಸಬೇಕೆಂದು ಕಟ್ಟಾಜ್ಞೆ ಮಾಡಲಾಗಿದೆ.

ಅಮೆರಿಕದ ಸೌಂದರ್ಯ ಯುವತಿ

ಅಮೆರಿಕ ಅಟ್ಲಾಂಟಿಕ್ ನಗರದ ೧೯ ವಯಸ್ಸಿನ ವಿದ್ಯಾರ್ಥಿನಿ ನೇವಜೀನೆ ಲಾಂಗ್ಲಿ ಎಂಬಾಕೆಯನ್ನು ೧೯೫೩ರ ಅಮೆರಿಕದ ಅತ್ಯಂತ ಸೌಂದರ್ಯಯುವತಿಯೆಂದು ಘೋಷಿಸಲಾಗಿದೆ. ಅಲ್ಲಿ ನಡೆದ ೫೩ ಮಂದಿ ಹುಡುಗಿಯರ ಸ್ಪರ್ಧೆಯಲ್ಲಿ ಆಕೆಯನ್ನು ಆರಿಸಲಾಯಿತು. ಸಂಗೀತಾಭ್ಯಾಸವನ್ನು ಮುಂದುವರಿಸಲು ಆಕೆಗೆ ೫ ಸಾವಿರ ಡಾಲರುಗಳ ವಿದ್ಯಾರ್ಥಿವೇತನ ಕೊಡಲಾಗುವುದು ಮತ್ತು ೪ ಸಾವಿರ ಡಾಲರು ಹಣ, ಉಡುಗೆರೆ ಮತ್ತು ಕಾರನ್ನೂ ಸಹ ಪಡೆಯುವಳು.

ಕಾಂಗ್ರೆಸ್ ಗದ್ದುಗೆಗೆ ನೆಹರೂ

ಇನ್ನೂ ಎರಡುವರ್ಷಕಾಲ ಕಾಂಗ್ರೆಸ್ ಅಧ್ಯಕ್ಷರಾಗಿ ಪ್ರಧಾನಿ ನೆಹರೂರವರೇ ಮುಂದುವರಿಯಬೇಕೆಂದು ಕಾಂಗ್ರೆಸ್ ಪ್ರಮುಖರು ಇತ್ತೀಚಿಗೆ ಚರ್ಚಿಸಿ ನಿರ್ಧರಿಸಿರುವುದಾಗಿ ಗೊತ್ತಾಗಿದೆ

ಸಂಸ್ಥೆಯ ಕಾರ್ಯಗಳನ್ನು ನೆರವೇರಿಸಲು ಉಪಾಧ್ಯಕ್ಷರ ನೇಮಕ ಪ್ರಶ್ನೆಯು ಪುನಃ ತಲೆದೋರಿರುವುದಾಗಿ ಹೇಳಲಾಗಿದೆ.

ಸ್ವಚ್ಛ ಭಾರತ ಚಳುವಳಿ

ಆಚಾರ್ಯ ವಿನೋಬಾಭಾವೆಯವರು ನಗರ ಮತ್ತು ಪಟ್ಟಣಗಳನ್ನು ಸ್ವಚ್ಛವಾಗಿಟ್ಟುಕೊಂಡಿರುವ ಬಗ್ಗೆ ಒಂದು ಚಳುವಳಿಯನ್ನು ಪ್ರಾರಂಭಿಸಿದ್ದಾರೆ. ನಿನ್ನೆ ದಿನ ಅವರ ನಾಯಕತ್ವದಲ್ಲಿ ನೂರಾರು ಮಂದಿ ಸಾಮಾಜಿಕ ಕೆಲಸಗಾರರೂ, ವಿದ್ಯಾರ್ಥಿಗಳೂ, ಉಪಾಧ್ಯಾಯರೂ, ಪೊರಕೆ, ಬುಟ್ಟಿ, ಗುದ್ದಲಿಗಳನ್ನು ಹಿಡಿದುಕೊಂಡು ಕಾಶಿ ನಗರದಲ್ಲಿ ನಿರ್ಮಲೀಕರಣ ಕಾರ್ಯದಲ್ಲಿ ತೊಡಗಿದ್ದರು. ಇತ್ತೀಚಿಗೆ ಭಾರತದ ನಗರಗಳಲ್ಲಿ ಗಲೀಜು ಹೆಚ್ಚಾಗುತ್ತಿರುವುದರಿಂದ ಈ ಚಳುವಳಿಯನ್ನು ಕೈಗೊಳ್ಳಬೇಕಾಯಿತೆಂದು ಅವರು ಹೇಳಿದ್ದಾರೆ

ಪಂಚೆ, ಸೀರೆ ತಯಾರಿಕೆ ಕೈಮಗ್ಗದವರಿಗೆ ಬಿಡಬೇಕು

ಪಂಚೆ ಮತ್ತು ಸೀರೆಗಳ ತಯಾರಿಕೆಯನ್ನು ಕೈಮಗ್ಗದವರಿಗೇ ಬಿಟ್ಟುಬಿಡಬೇಕು. ಈ ಕೈಗಾರಿಕೆಗೆಯಲ್ಲಿರುವ ಸುಮಾರು ೩೦ ಲಕ್ಷ ಸಂಸಾರಗಳ ಜೀವನಕ್ಕೆ ಸರ್ಕಾರವು ತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೇಳಿರುವರು.

ವರ್ಣಭೇದ ಚಳುವಳಿಯ ಮಟ್ಟ

ದಕ್ಷಿಣ ಆಫ್ರಿಕಾದಲ್ಲಿ ಮಲಾನ್ ಸರ್ಕಾರದ ವಿರುದ್ಧವಾಗಿ ಯೂರೋಪೇತ್ಯರು ಪ್ರಾರಂಭಿಸಿರುವ ಚಳುವಳಿಯನ್ನು ಮಟ್ಟ ಹಾಕುವುದಾಗಿ ದಕ್ಷಿಣ ಆಫ್ರಿಕ ಸರ್ಕಾರದ ಕಾರ್ಮಿಕ ಸಚಿವರು ಹೇಳಿರುವರು.

ದಕ್ಷಿಣ ಆಫ್ರಿಕಾ ನೀತಿ ಬಗ್ಗೆ ಖಂಡನೆ

ಡಾ|| ರಾಮಸ್ವಾಮಿ ಮೊದಲಿಯಾರ್‌ರವರು ಮದ್ರಾಸಿನಲ್ಲಿ ಮಾತನಾಡುತ್ತಾ ತಮ್ಮ ನೀತಿಯಬಗ್ಗೆ ವಿಶ್ವದ ಪರಿಣಾಮವೇನೆಂಬುದು ದಕ್ಷಿಣಆಫ್ರಿಕಾ ಪ್ರಧಾನಿ ಮಲಾನಿಗೆ ತಿಳಿಯದಾಗಿದೆ. ಅವರನೀತಿಯಿಂದ ವಿಶ್ವಶಾಂತಿಗೆ ಧಕ್ಕೆ ಬರುವಂತಿದೆ ಹಾಗಾಗದಂತೆ ವಿಶ್ವದ ಇತರ ರಾಷ್ಟ್ರಗಳೆಲ್ಲರೂ ಐಕ್ಯತೆಯಿಂದ ಕೆಲಸಮಾಡಬೇಕೆಂದು ಹೇಳಿದ್ದಾರೆ.

ಭಿಕ್ಷೆಯ ಬೆಲೆಯೂ ಏರಿದೆ

ಭಿಕ್ಷೆ ಮಾಡುವುದು ಒಂದು ಲಲಿತಕಲೆ ಇದ್ದ ಹಾಗೆ. ಹಿಂದೆ ಮೂರುಕಾಸು ಕೊಟ್ಟರೆ ಭಿಕ್ಷುಕನು ತೃಪ್ತನಾಗುತ್ತಿದ್ದ. ಆದರೆ ಈಗ ೧ ಆಣೆ ಕೇಳುತ್ತಾನೆ ಎಲ್ಲಾ ಬೆಲೆಗಳೂ ಏರಿರುವುದರಿಂದ ಭಿಕ್ಷೆಯ ಬೆಲೆಯೂ ಏರಿದೆ. ಭಿಕ್ಷುಕರ ಶಿಬಿರಗಳಲ್ಲಿ ಅವರಿಗೆ ಸರಿಯಾದ ಶಿಕ್ಷಣಕೊಟ್ಟು ಅವರಿಂದ ಸಮಾಜಕ್ಕೆ ಉಪಯೋಗವಾಗುವಂತೆ ಮಾಡಬೇಕು-ಎಂದು ಮದರಾಸಿನ ಗವರ್ನರಾದ ಶ್ರೀ ಶ್ರೀಪ್ರಕಾಶರು ತಿಳಿಸಿರುತ್ತಾರೆ.

ಭೂ ಸುಧಾರಣೆಗಾಗಿ ಮಿಲಿಟರಿ ಸರ್ಕಾರ

ದೇಶದಲ್ಲಿ ಅತ್ಯಂತ ತ್ವರಿತವಾಗಿ ಸಾಮಾಜಿಕ ಮತ್ತು ಭೂ ಸುಧಾರಣೆಗಳಾಗಬೇಕಾಗಿದೆ. ಈಗಿರುವ ಸಿವಿಲಿಯನ್ ಸರ್ಕಾರದಿಂದ ಇದು ಸಾಧ್ಯವಿಲ್ಲವಾದುದರಿಂದ ಪಾಷಾಗಿಯವರ ಸಹಕಾರದಿಂದ ಮಿಲಿಟರಿಯವರು ಈ ಸುಧಾರಣೆಗಳನ್ನು ಜಾರಿಗೆ ತರಲು ಈಗ ಸರ್ಕಾರ ಆಡಳಿತವನ್ನು ವಹಿಸಿಕೊಳ್ಳಬೇಕಾಯಿತು-ಎಂದು ಈಜಿಪ್ಟಿನ ನೂತನ ಪ್ರಧಾನಿ ಜ|| ನಗೀಬರು ತಿಳಿಸಿರುತ್ತಾರೆ.

ಮರುವಸತಿಗಾಗಿ ೧೮೨ ಕೋಟಿ ರೂ. ವೆಚ್ಚ

ಕೇಂದ್ರ ಸರ್ಕಾರದವರು ಪಾಕೀಸ್ತಾನದಿಂದ ಭಾರತಕ್ಕೆ ಬಂದಿರುವವರ ಮರುವಸತಿಗಾಗಿ ಕಳೆದ ವರ್ಷದ ಅಂತ್ಯದವರೆಗೆ ೧೮೨ ಕೋಟಿ ರೂಪಾಯಿಗಳನ್ನು ವೆಚ್ಚಮಾಡಿರುವುದಾಗಿ ಮರುವಸತಿ ಶಾಖಾ ಸಚಿವರು ಹೇಳಿರುವರು.

ವರ್ಣಭೇದ ನೀತಿ ಚರ್ಚೆ

ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ವರ್ಣಭೇದ ನೀತಿಯ ಬಗ್ಗೆ ಬೊಂಬಾಯಿನ ಮಾಜಿ ಗೌರ್ನರ್ ರಾಜಮಹಾರಾಜ್ ಸಿಂಗ್‌ರವರು ಬ್ರಿಟಿಷ್ ಪ್ರಧಾನಿ ಮಿ|| ಚರ್ಚಿಲ್‌ರೊಡನೆ ಮಾತುಕತೆ ನಡೆಸುವರೆಂದು ಹೇಳಲಾಗಿದೆ.

ಫರೂಕರ ಆಸ್ತಿಪಾಸ್ತಿಗಳು

ಈಜಿಪ್ಟಿ ಮಾಜಿ ದೊರೆ ಫರೂಕ್‌ರವರ ಸ್ವಂತ ಬೊಕ್ಕಸದಲ್ಲಿ ೩೦೦ರಿಂದ ೫೦೦ಲಕ್ಷ ಪೌಂಡ್ ಹಣವಿದೆಯೆಂದೂ, ಅವರು ಹಾಕಿದ ಬಂಡವಾಳದಿಂದ ವರ್ಷಕ್ಕೆ ೨,೩೯,೦೦೦ ಪೌಂಡ್ ಆದಾಯ ಅಂದರೆ ದಿನಕ್ಕೆ ೬೨೮ ಪೌಂಡು ಉತ್ಪತ್ತಿ ಎಂದು ಹೇಳಲಾಗಿದೆ. ಅವರ ಅರಮನೆಗಳ ಖರ್ಚಿಗಾಗಿ ಸರ್ಕಾರವು ೪೦ ಲಕ್ಷ ಪೌಂಡು ಕೊಡುತ್ತಿತ್ತು ಮತ್ತು ೧,೫೫,೦೦೦ ಎಕರೆ ಜಮೀನು ಅವರು ಹೊಂದಿದ್ದರು.

ಮೈಸೂರು ಪೇಟೆಧಾರಣೆ

ತಾ|| ೮-೯-೫೨

ಪಲ್ಲಕ್ಕೆ.	ರೂ-ಆ.	ರೂ-ಆ
ಕಡಲೇಕಾಯಿ	12- 8	20-4
ಎಳ್ಳು	68- 0	76- 0
ಹೊಂಗೇಬೀಜ	26- 0	——
ಹುರುಳಿ	50- 0	54-0
ಹೆಸರು	69. 0	——
ಹುಣಸೇಹಣ್ಣು	3- 2	5- 14
ಸೀಗೇಪುಡಿ	5- 8	——
ಬೆಲ್ಲ	2- 9	2- 10
ತೆಂಗಿನಕಾಯಿ 1100ಕ್ಕೆ	155-	220
ಅಲಸಂದೆ	67 2	77-0
ಉದ್ದು	75 12	78-0
ಮೆಣಸಿನಕಾಯಿ	14-12	
ಅವರೆ	79-10	
ಹುಚ್ಚೆಳ್ಳು	52-14	
ಬೆಲ್ಲ	3-10	

ಕಬ್ಬಿನ ಮೇಲೆ ಸೆಸ್ಸು

ಬೆಂಗಳೂರು ಸೆ. ೯

೧೯೫೨-೫೩ ನೇ ಸಾಲಿನಿಂದ ಮೈಸೂರು ಸಕ್ಕರೆಕಂಪನಿಯಲ್ಲಿ ಉಪಯೋಗಿಸುವ ಕಬ್ಬಿನ ಮೇಲೆ ಟನ್ನಿಗೆ ೬ ರೂಪಾಯಿನಂತೆ ಸೆಸ್ಸನ್ನು ವಿಧಿಸಲಾಗುವುದೆಂದು ಸರ್ಕಾರ ಪ್ರಕಟಣೆಯಿತ್ತಿದೆ.

ಆಹಾರಧಾನ್ಯ ಲೆವಿ ಪದ್ಧತಿ ಪರಿಶೀಲನೆ

ಬೆಂಗಳೂರು ಸೆ. ೯

ಆಹಾರಧಾನ್ಯ ಸಂಗ್ರಹಣೆಯಲ್ಲಿ ಲೆವಿ ಪದ್ಧತಿಯನ್ನು ಜಾರಿಗೆತರುವ ಬಗ್ಗೆ ಪರಿಶೀಲಿಸಲು ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷವು ಸೆಪ್ಟಂಬರ್ ೧೬ ನೇ ತಾರೀಖು ಸಭೆ ಸೇರಲಿದೆ.

ಶಿಕ್ಷಣ ಸುಧಾರಣಾಸಮಿತಿ ಆರಂಭೋತ್ಸವಕ್ಕೆ ೧೫೦೦ ರೂ. ವೆಚ್ಚ

ಬೆಂಗಳೂರು ಸೆ. ೯

ಸಂಸ್ಥಾನದ ಶಿಕ್ಷಣ ಸುಧಾರಣಾ ಸಮಿತಿಯ ಪ್ರಾರಂಭೋತ್ಸವವು ಮೈಸೂರಿನಲ್ಲಿ ಸರಸ್ವತಿಪೂಜೆಯ ದಿನ ನಡೆಯುವುದು. ಈ ಸಮಾರಂಭಕ್ಕೆ ೧೫೦೦ ರೂ. ವೆಚ್ಚ ಮಂಜೂರಾಗಿದೆ.

ಎಲ್ಲಾ ರಾಜಕಾರಣಿಗಳ ದಸ್ತಗಿರಿ

ಈಜಿಪ್ಟಿನ ಮಾಜಿ ಪ್ರಧಾನಿಗಳಾದ ಅಲಿ ಮೆಹರ್ ಮತ್ತು ಮುಸ್ತಫಾನಹಾಸ್‌ರು ವಿನಹಾ ದೇಶದಲ್ಲಿಯ ಎಲ್ಲಾ ಪ್ರಮುಖ ರಾಜಕಾರಣಿಗಳನ್ನು ಜ|| ನಗೀಬ್ ಸರ್ಕಾರವು ದಸ್ತಗಿರಿ ಮಾಡಿದೆ. ಪ್ರಮುಖ ವ್ಯಕ್ತಿಗಳ ದಸ್ತಗಿರಿಗಳು ಇನ್ನೂ ಮುಂದುವರಿಯುತ್ತಿವೆ. ಜ|| ನಗೀಬರು ಈ ಸಂದರ್ಭದಲ್ಲಿ ಜನತೆಗೆ ಒಂದು ಎಚ್ಚರಿಕೆಯನ್ನೀಯುತ್ತಾ ಯಾರೂ ಪ್ರತಿಭಟನಾಸಭೆ ಪ್ರದರ್ಶನಗಳಲ್ಲಿ ಭಾಗವಹಿಸಕೂಡದು ಸರ್ಕಾರಿ ಆಡಳಿತಕ್ಕೆ ಅಡಚಣೆ ತರಬಾರದು. ಅಧಿಕಾರಿಗಳು, ಮಂತ್ರಿಗಳನ್ನು ಅಭಿನಂದಿಸುತ್ತಾ ಕೂತಿರದೆ ಕರ್ತವ್ಯ ನಿಷ್ಠರಾಗಬೇಕು ಎಂದು ತಿಳಿಸಿದ್ದಾರೆ.

ಶಿಕ್ಷಣ ಸುಧಾರಣಾ ಸಲಹಾ ಸಮಿತಿ

ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಸುಧಾರಣಾ ಬಗ್ಗೆ ೪೦ ಜನ ಪ್ರವೀಣರನ್ನುಳ್ಳ ಒಂದು ಸಮಿತಿಯನ್ನು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿದೆ. ಅದರಲ್ಲಿ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು, ಉಪಸ್ಥಾನಪತಿ ಡಾ|| ಮಂಜುನಾಥ್, ವಿದ್ಯಾಶಾಖಾ ಮುಖ್ಯಾಧಿಕಾರಿ ಶ್ರೀ ಮಲ್ಲಾರಾಧ್ಯ, ಅಣ್ಣಾಮಲೆ ವಿಶ್ವವಿದ್ಯಾನಿಲಯದ ಡಾ|| ರತ್ನಸ್ವಾಮಿ, ಸರ್ ಸಾಮ್ಯಾಯಲ್ ರಂಗನಾಥರ್ ಮತ್ತು ಇತರರನ್ನು ಸದಸ್ಯರಾಗಿ ನೇಮಿಸಲಾಗಿದೆ.

ಸ್ವೀಕಾರ

ರಾಜಧಾನಿಯಲ್ಲಿ ಶ್ರೀ ಡಿ. ಎಲ್. ಅಶ್ವತ್ಥನಾರಾಯಣರಾಯರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಸುಧಾ' ಎಂಬ ಕನ್ನಡ ಮಾಸಪತ್ರಿಕೆಯನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ.

"ಅಖಂಡ ಕರ್ನಾಟಕದ ನಿರ್ಮಾಣ ನಮ್ಮ ಜನುಮಸಂಕಲ್ಪ, ಅದು ಸಾಧಿಸಲ್ಪಡುವತನಕ ನಾವು ವಿಶ್ರಮಿಸೆವು" ಎಂಬುದು ಅದರ ಧ್ಯೇಯ. ಕವನ, ಗೀತೆ, ಮತ್ತು ಇತರ ಉಪಯುಕ್ತ ಲೇಖನಗಳನ್ನೊಳಗೊಂಡ ಅವರ ನೂತನ ಉದ್ಯಮವು ಯಶಸ್ವಿಯಾಗಲೆಂದು ಹಾರೈಸುತ್ತೇವೆ. ಬೆಲೆ ೨ ಆಣೆ

ಸತ್ಕಾರಕೂಟ

ಮೈಸೂರು ಹಿರಿಯ ಶಾಸನಸಭೆಗೆ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರ ಗೌರವಾರ್ಥವಾಗಿ ಮೊನ್ನೆ ರಾತ್ರಿ ನಗರದ ಮಿತ್ರಮಂಡಲಿಯವರು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಶ್ರೀಗಳಾದ ಎ. ಕೃಷ್ಣಮೂರ್ತಿರಾಯರು ಮತ್ತು ಎ ರಾಮಣ್ಣನವರು ಅತಿಥಿಗಳ ಸೇವೆಯನ್ನು ಪ್ರಶಂಸಿಸಿದರು.

FOR SALE

American Factory STANDARD **Typewriters** (Secondhand) for particulars, please apply to:- S. Subba Rao, C. E. T. D. Typewriter Mechanic, c/o Bright College of Commerce, MYSORE.

ಅಪೇರ ೫-೯-೫೨ ರಿಂದ ಅನೋಘ ಪ್ರಾರಂಭ

ಪುಯಲ್ ಅಥವಾ ಬಿರುಗಾಳಿ [ತಮಿಳು]

ಪಾತ್ರ: ... ವಿ. ರಾಜಮ್ಮ ಮತ್ತು ಬಷೀರ್

This is the first time introducing on the Silver Screen the powerful drama of "St. Philomena and Martydom"

—:ಪ್ರಕಾಶಕರು ಮತ್ತು ಮುದ್ರಕರು:— ಜಿ. ಎಲ್. ಸ್ವಾಮಿ ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574 ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 18

೧೦-೯-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಬಹಿರಂಗಸಭೆ

ಮೈಸೂರು ಸೆ. ೧೦

ಮೈಸೂರಿನ ಧ್ವಜ, ದಸರಾಹಬ್ಬಕ್ಷಾಮಪರಿಹಾರನಿಧಿಗೆ ಶಾಸನಸಭಾ ಸದಸ್ಯರ ಕಾಣಿಕೆ, ಮಂತ್ರಿಗಳ ಸಂಬಳ ಇಳಿಸುವುದು, ವಿದ್ಯಾಭ್ಯಾಸಪದ್ಧತಿ ಮುಂತಾದ ವಿಷಯಗಳನ್ನು ಚರ್ಚಿಸಲು ನಾಳೆಸಂಜೆ ಮೈಸೂರು ಪುರಭವನದಲ್ಲಿ ಶ್ರೀ ಡಿ. ಎಲ್. ಕೃಷ್ಣಯ್ಯಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಬಹಿರಂಗಸಭೆ ನಡೆಯುತ್ತದೆ.

ಸಂಗೀತ ಕಛೇರಿ

ಮೈಸೂರು ಕೃಷ್ಣರಾಜಮೊಹಲ್ಲಾ ನಾಲಾಬೀದಿಯಲ್ಲಿರುವ ಶ್ರೀ ದೊಡ್ಡರಾಮದೇವಸ್ಥಾನದಲ್ಲಿ ಮಹಾಗಣಪತಿ ಪ್ರಯುಕ್ತ ಈ ದಿನ ಸಂಜೆ ೭ ಗಂಟೆಗೆ ಶ್ರೀ ಟಿ. ಆರ್. ಶ್ರೀನಿವಾಸರವರ ಹಾಡುಗಾರಿಕೆ, ವಿ|| ಎಲ್. ಮಹದೇವಪ್ಪನವರ ಪಿಟೀಲು ಮತ್ತು ಬಾಬೂರಾಯರ ಮೃದಂಗದೊಡನೆ ಸಂಗೀತಕಛೇರಿ ಏರ್ಪಡಿಸಿರುತ್ತೆ. ಸರ್ವರಿಗೂ ಆಹ್ವಾನವುಂಟು.

ಶಾಸನಸಭಾ ಕಾಂಗ್ರೆಸ್ ಪಕ್ಷ ನಾಯಕರಿಗೆ ಅಧ್ಯಕ್ಷಪದವಿ

ಹನುಮಂತಯ್ಯನವರ ಸೂಚನೆ

ಕಾಂಗ್ರೆಸ್‌ಸಂಸ್ಥೆಯ ವ್ಯವಹಾರ ನಡೆಸುವ ಸಮಿತಿ ಮತ್ತು ಪಾರ್ಲಿಮೆಂಟರಿ ವ್ಯವಹಾರ ನಡೆಸುವ ಶಾಸನಸಭಾ ಕಾಂಗ್ರೆಸ್ ಸಮಿತಿಗಳ ಐಕ್ಯತೆಯು ಸ್ವಾತಂತ್ರ‍್ಯಗಳಿಸಿದ ನಂತರ ಈಗ ಅತ್ಯಗತ್ಯವಾಗಿದೆ. ಇದಾಗಬೇಕಾದರೆ ಪಾರ್ಲಿಮೆಂಟಿನ ಕಾಂಗ್ರೆಸ್‌ಪಕ್ಷದ ನಾಯಕರೇ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿರಬೇಕು.

ಪ್ರಾಂತ್ಯಗಳಲ್ಲೂ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರೇ ಇರಬೇಕು. ಒಂದಕ್ಕಿಂತ ಹೆಚ್ಚಾಗಿ ಪ್ರದೇಶ ಕಾಂಗ್ರೆಸ್ ಸಮಿತಿಗಳು ಇರುವಕಡೆ ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರೇ ಎಲ್ಲಾ ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರಾಗಿರಬೇಕು. ಅವರಿಗೆ ಸಹಾಯ ನೀಡಲು ಉಪಾಧ್ಯಕ್ಷರಿರಬೇಕು. ಈರೀತಿಯಾಗಿ ಕಾಂಗ್ರೆಸ್ ನಿಯಮಾವಳಿಯನ್ನು ಬದಲಾಯಿಸಿಕೊಳ್ಳಬೇಕಾಗಿದೆ. ನೇಪಾಳದಲ್ಲಿ ಉಂಟಾಗಿರುವ ಕಾಂಗ್ರೆಸ್ ಬಿಕ್ಕಟ್ಟನ್ನು ನಾವು ಗಮನಿಸಿದರೆ ಈ ವಿಷಯಗಳು ಶೃತವಾಗುತ್ತದೆ ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ದೆಹಲಿಯಲ್ಲಿ ಹೇಳಿರುವರು.

ಈಜಿಪ್ಟಿನಲ್ಲಿ ಜ|| ನಗೀಬರ ಸರ್ವಾಧಿಕಾರತ್ವವೇ ?

ಚಂದ್ರಶೇಖರನಗರ

ಇದೇ ೧೭ ಮತ್ತು ೧೮ನೇ ತಾರೀಖು ಇಂದೂರಿನಲ್ಲಿ ನಡೆಯಲಿರುವ ಎ.ಐ.ಸಿ.ಸಿ. ಅಧಿವೇಶನವು ನೂತನವಾಗಿನಿರ್ಮಿಸಿರುವ ಚಂದ್ರಶೇಖರ ನಗರದಲ್ಲಿ ನಡೆಯುವುದು. ಸ್ವಾತಂತ್ರ ಸಮರದಲ್ಲಿ ಮಡಿದ ಚಂದ್ರಶೇಖರ ಅಜಾದ್‌ರ ಜ್ಞಾಪಕಾರ್ಥವಾಗಿ ಈ ಹೆಸರನ್ನು ಇಡಲಾಗಿದೆ.

ಅರವತ್ತು ಸಾವಿರ ಚದರ ಅಡಿ ವಿಸ್ತೀರ್ಣವುಳ್ಳ ಸಭಾಮಂದಿರದ ಚಪ್ಪರವನ್ನು ೫೦ ಸಾವಿರ ರೂ. ವೆಚ್ಚದಲ್ಲಿ ಕಟ್ಟಲಾಗುತ್ತಿದೆ. ಅದರಲ್ಲಿ ೧೫ ಸಾವಿರ ಜನಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗುವುದು. ನಗರದ ಮುಂಭಾಗದ ಮಹಾದ್ವಾರಕ್ಕೆ ಜಾನ್ಸಿರಾಣಿ ಲಕ್ಷ್ಮೀಬಾಯಿರವರ ಹೆಸರನ್ನು ಇಡಲಾಗಿದೆ. ೬೦ ಅಡಿ ಎತ್ತರದ ಧ್ವಜ ಸ್ತಂಭವನ್ನು ಏರ್ಪಡಿಸಲಾಗಿದೆ. ಆದಕ್ಕಾಗಿ ೧೦೮ ರೂ ಖರ್ಚಿನಿಂದ ೧೨-೮೮ಅಡಿಗಳ ಒಂದು ಕಾಂಗ್ರೆಸ್ ಧ್ವಜವನ್ನು ಬೊಂಬಾಯಿನಿಂದ ತರಿಸಲಾಗಿದೆ ಅಧಿವೇಶನಕ್ಕೆ ೩೦೦ ಮಂದಿ ಕಾಂಗ್ರೆಸ್ ಸದಸ್ಯರೂ, ೩೫೦ ಮಂದಿ ಶಾಸನ ಸಭಾ ಸದಸ್ಯ. ೧ ಸಾವಿರ ಮಂದಿ ಕಾಂಗ್ರೆಸ್ ಕೆಲಸಗಾರರು, ೧ ಸಾವಿರಮಂದಿ ಸ್ವಾಗತ ಸಮಿತಿ ಸದಸ್ಯರೂ ಮತ್ತು ೨೦೦ ಜನ ಪತ್ರಿಕಾಪ್ರತಿನಿಧಿಗಳೂ ಭಾಗವಹಿಸುವರು. ಉಸ್ತುವಾರಿಕೆ ಮತ್ತು ಇತರ ಕಾರ್ಯಗಳಿಗಾಗಿ ೩೦೦ ಮಂದಿ ಸ್ವಯಂಸೇವಕರಿಗೆ ತರಪೇತು ಕೊಡಲಾಗುತ್ತಿದೆ.

ಪೌರಸಭಾ ಕೆಲಸಗಾರರ ಸಭೆ

ಮೈಸೂರು ಸೆ ೧೦

ಮೈಸೂರುನಗರದ ಪುರಸಭೆಯ ಕೆಲಸಗಾರರ ಬಹಿರಂಗ ಸಭೆಯು ನಿನ್ನೆಸಂಜೆ ಶ್ರೀ ಸೋಮಸುಂದರಶರ್ಮರ ಅಧ್ಯಕ್ಷತೆಯಲ್ಲಿ ಜೀವನರಾಯನಕಟ್ಟೆಯಲ್ಲಿ ನಡೆದು ಮುನಿಸಿಪಲ್ ಕೆಲಸಗಾರರ ಸಂಘವನ್ನು ಸ್ಥಾಪಿಸಬೇಕೆಂದು ನಿರ್ಧರಿಸಲಾಯಿತು.

ಕೆಲಸಗಾರರು ತಮ್ಮ ಸಂಬಳ, ಮನೆ ಮತ್ತು ನೀರಿನ ಅಭಾವ ರೇಷನ್ ತೊಂದರೆ ಮುಂತಾದ ಕುಂದುಕೊರತೆಗಳನ್ನು ಈಡೇರಿಸಿಕೊಳ್ಳಲು ಸಂಘದ ಅವಶ್ಯಕತೆ ಕುರಿತು ಕೆಲಸಗಾರರು ಮತ್ತು ಶ್ರೀ ಎಂ.ಎಲ್ ಲಿಂಗಪ್ಪನವರು ತಿಳಿಸಿದರು. ಈ ಕಾರ್ಯಕ್ಕಾಗಿ ಶ್ರೀ ಬಿ. ಎ. ಬೆಳ್ಳಿಯಪ್ಪನವರ ಅಧ್ಯಕ್ಷತೆಯಲ್ಲಿ ೨೦ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು.

ಸ್ಟಾಲಿನ್ ೧೫೦ ವರ್ಷ ಬದುಕುವರಂತೆ!

ರಷ್ಯದ ಸ್ಟಾಲಿನರವರು ೧೫೦ ವರ್ಷದವರೆಗೆ ಬದುಕಬಹುದೆಂದು ಅಲ್ಲಿನ ವೈಜ್ಞಾನಿಗಳು ತಿಳಿಸುವರೆಂದು ಅಮೇರಿಕದ ಪತ್ರಿಕೆಯೊಂದು ಪ್ರಕಟಿಸಿದೆ. ಸೋಡಾಸ್ನಾನ ಮಾಡುವುದರಿಂದ ರಕ್ತಕಣಗಳು ಹೆಚ್ಚಿ ಮನುಷ್ಯನ ಜೀವನದ ಕಾಲವನ್ನು ವಿಶೇಷವಾಗಿ ಮುಂದುವರಿಸಬಹುದೆಂದು ಅವರು ತಿಳಿಸಿರುತ್ತಾರೆ.

ಪೆಟ್ರೋಲ್‌ದರ ಏರಿತು

ಬೊಂಬಾಯಿನಲ್ಲಿ ಪೆಟ್ರೋಲ್ ದರದನ್ನು ಅಕ್ಟೋಬರ್ ೧ ರಿಂದ ಗ್ಯಾಲನ್‌ಗೆ ೨-೧೧-೬ ಪೈಗೆ ಏರಿಸಲಾಗಿದೆ.

ಮೋಟಾರ್ ಸ್ಪಿರಿಟ್ ಮೇಲೆ ಮಾರಾಟತೆರಿಗೆ ದರವು ಗ್ಯಾಲನ್‌ಗೆ ೪ ಆಣೆಯಿಂದ ೬ ಆಣೆಗೆ ಹೆಚ್ಚಿಸಲಾಗಿದೆ.

ವಿಮಾನಗಳ ಪೆಟ್ರೋಲ್‌ಗೆ ತೆರಿಗೆಯು ಗ್ಯಾಲನ್‌ಗೆ ೨ ಆಣೆಯಿಂದ ೩ ಆಣೆಯಾಗುತ್ತದೆ.

೯೦ ಜನರು ನೀರುಪಾಲಾದರು

ಬೆಲ್‌ಗ್ರೇಡಿನಿಂದ ಜರ್ಮನಿಗೆ ಪ್ರಯಾಣಮಾಡುತ್ತಿದ್ದ ಹಡಗು ಭಾರಿ ಚಂಡಮಾರುತಕ್ಕೆ ಸಿಕ್ಕಿ ೯೦ ಜನರು ನೀರುಪಾಲಾದರೆಂದು ವದಂತಿಯಾಗಿದೆ.

ಒಟ್ಟಿಗೆ ಅಂಟಿಕೊಂಡಿರುವ ಅವಳಿಮಕ್ಕಳು

ಕೊಚ್ಚಿಯ ಎರ್ನಾಕುಲಂನಲ್ಲಿ ಒಂದೇ ಪಿತೃಕೋಶದಿಂದ ಹುಟ್ಟಿರುವ ಅವಳಿಮಕ್ಕಳನ್ನು ಬೇರ್ಪಡಿಸಲು ಈಗ ಮದರಾಸ್ ಆಸ್ಪತ್ರೆಗೆ ತರಲಾಗಿದೆ. ಬೆನ್ನಿನಲ್ಲೋ ಅಥವ ಪಕ್ಕದಲ್ಲೋ ಪರಸ್ಪರ ಅಂಟಿಕೊಂಡಿರುವ ಸಯಾಮಿಸ್ ಅವಳಿ ಮಕ್ಕಳಿರುವಂತೆ ಇಲ್ಲದೆ ಈ ಜೋಡಿ ಹೊಟ್ಟೆಯಲ್ಲಿ ಅಂಟಿಕೊಂಡಿದೆ. ಈ ಮಕ್ಕಳ ಜೀವ ಒಂದೇ ಪಿತೃಜನಕಾಂಗವನ್ನು ಸೇರಿರುವುದರಿಂದ ಶಸ್ತ್ರ ಚಿಕಿತ್ಸೆನಡೆಸಿದರೆ ಒಂದಾಗಲೀ ಎರಡು ಮಕ್ಕಳಾಗಲೀ ಸಾಯಬಹುದೆಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

§ ೫೦ ಸಾವಿರ ರೂ. ವೆಚ್ಚದಲ್ಲಿ ಜಾಡಮಾಲಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲು ಜಬ್ಬಲ್‌ಪುರದ ಕಾರ್ಪೊರೇಷನ್ ನಿರ್ಧರಿಸಿದೆ.

ಶ್ರೀಮನ್ಮಹಾರಾಜರ ಭೇಟಿ

ಮೈಸೂರು ಸೆ. ೧೦

ಈದಿನ ಬೆಳಗ್ಗೆ ಶ್ರೀಮನ್ಮಹಾರಾಜರು ನ್ಯಾಯವಿಧಾಯಕ ಸಭೆಯ ಉಪಾಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿ, ನಗರಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಪ್ರೊಫೆಸರ್ ಮತ್ತು ಕೇಂದ್ರಸರ್ಕಾರದ ವಿದ್ಯಾಸಮಿತಿಯ ನಿವೃತ್ತ ಕಾರ್ಯದರ್ಶಿ ಡಾ|| ಎಂ. ನರಸಿಂಹಯ್ಯನವರಿಗೆ ಭೇಟಿ ದಯಪಾಲಿಸಿದ್ದರೆಂದು ಗೊತ್ತಾಗಿದೆ.

[ಈ ಭೇಟಿಯ ಬಗ್ಗೆ ಶ್ರೀಮನ್ಮಹಾರಾಜರ ಆಪ್ತಕಾರ್ಯದರ್ಶಿಗಳ ಕಛೇರಿಯ ಮ್ಯಾನೇಜರನ್ನು ವಿಚಾರಿಸಲಾಗಿ, ಶ್ರೀಮನ್ಮಹಾಜರ ಭೇಟಿ ಬಗ್ಗೆ ಪತ್ರಿಕೆಯವರಿಗೆ ಸುದ್ದಿ ಕೊಡಕೂಡದೆಂಬ ಹೊಸಆಜ್ಞೆ ಆಗಿರುವುದೆಂದು ಹೇಳಿ ಸುದ್ದಿ ತಿಳಿಸಲು ನಿರಾಕರಿಸಿದರು. ಆದಾಗ್ಯೂ ನಮ್ಮ ಸ್ವಂತ ಸುದ್ದಿಗಾರರಿಗೆ ಈ ಭೇಟಿ ವಿಷಯವನ್ನು ಬೇರೇ ರೀತಿ ತಿಳಿದು ಪ್ರಕಟಿಸಲಾಗಿದೆ— ಸಂ.]

ಸಂಗೀತ ಮತ್ತು ಹರಿಕಥೆ

ರಾಜಧಾನಿಯ ಮಂಡಿಮೊಹಲ್ಲಾ ಕಾಳಮ್ಮನಗುಡಿಬೀದಿ ದೇವಾಂಗ ಸಂಘದ ಕಟ್ಟಡದಲ್ಲಿ ಈದಿನ ರಾತ್ರಿ ೮ ಗಂಟೆಗೆ ಶ್ರೀಮತಿ ಆರ್. ಲಕ್ಷ್ಮಮ್ಮನವರ ಸಂಗೀತ, ನಾಳೆ ರಾತ್ರಿ ೮ ಗಂಟೆಗೆ ಶ್ರೀ ಎಸ್. ಎಲ್. ಮರಿಯಪ್ಪನವರ ಹಾಡುಗಾರಿಕೆ ಮತ್ತು ೧೨ನೇ ತಾ|| ರಾತ್ರಿ ಶ್ರೀ ಪಿ. ರಾಮಸ್ವಾಮಿನಾಯ್ಡುರವರಿಂದ ಗಜಗೌರಿ ವ್ರತ ಎಂಬ ಹರಿಕಥೆ ನಡೆಯುವುವು.

೧೦ ಲಕ್ಷ ಜಮೀನು ಸರ್ಕಾರದ ವಶ

ಈಜಿಪ್ಟಿನ ಸರ್ವಾಧಿಕಾರಿ ಜ|| ನಗೀಬ್‌ರವರ ಮಂತ್ರಿಮಂಡಲವು ೧೦ ಲಕ್ಷ ಎಕರೆ ಜಮೀನುಗಳನ್ನು ಸರ್ಕಾರ ವಶಪಡಿಸಿಕೊಂಡು ಬಡ ರೈತರಿಗೆ ಕೊಡಲು ನಿರ್ಧರಿಸಿದೆ.

ಸರ್ಕಾರಕ್ಕೆ ನ್ಯಾಯಾಲಯದ ನೋಟೀಸ್

ಸ್ಥಾನಬದ್ಧ ಕೈದಿಗಳ ಬಿಡುಗಡೆ ವಿಷಯವಾಗಿ ಸಮರ್ಪಕವಾಗಿ ಉತ್ತರ ಕೊಟ್ಟಿಲ್ಲವಾಗಿ ಅವರನ್ನು ಯಾಕೆ ಬಿಡಬಾರದೆಂದು ಭಾರತ ಸರ್ವೋನ್ನತ ನ್ಯಾಯಾಲಯವು ಒಂದು ನೋಟೀಸ್ ಕೊಟ್ಟಿದೆ

ಗಾಂಧೀ ರಾಮರಾಜ್ಯ

ಮೈಸೂರು ನಗರದಲ್ಲಿ ಸ್ಥಾಪಿಸಲ್ಪಟ್ಟಿರುವ ಮಹಾತ್ಮರ ಸ್ಮಾರಕ ಸ್ಥೂಪದಲ್ಲಿ ಕೆತ್ತಲ್ಪಟ್ಟಿರುವ ಮಹಾವಾಕ್ಯಗಳು:—

ರಾಮರಾಜ್ಯವೆಂದರೆ ಪಾರಮಾರ್ಥಿಕವಾಗಿ ಭೂಸ್ವರ್ಗ.

ರಾಜಕೀಯವಾಗಿ ಪರಿಪೂರ್ಣ ಪ್ರಜಾತಂತ್ರ.

ಅದರಲ್ಲಿ ಭಾಗ್ಯವಂತರಿಲ್ಲ, ನಿರ್ಭಾಗ್ಯರಿಲ್ಲ.

ಜಾತಿಭೇದವಿಲ್ಲ, ಲಿಂಗಭೇದವಿಲ್ಲ.

ರಾಮರಾಜ್ಯದಲ್ಲಿ ಭೂಮಿ ರಾಷ್ಟ್ರ-ಎಲ್ಲವೂ ಜನತೆಯದು.

ನ್ಯಾಯವೂ ಸಿದ್ಧಾಂತ, ಪರಿಪೂರ್ಣ. ಅದರಲ್ಲಿ ವಾಕ್, ಪೂಜಾ ಸ್ವಾತಂತ್ರ್ಯವುಂಟು,

ಕಾರಣ ಅದು ಸ್ವಯಂ ಸ್ಥಾಪಿತ ಶಾಸನ ಪ್ರಭುತ್ವ.

ಅದರಲ್ಲಿ ನೈತಿಕ ಸಂಯಮವುಂಟು.

ಇಂಥ ರಾಷ್ಟ್ರಕ್ಕೆ ಅಸ್ಥಿಭಾರ ಸತ್ಯ ಅಹಿಂಸೆಗಳೇ.

ಅದರಲ್ಲಿ ಸುಖ ಸಂಪದ್ಯುಕ್ತ ಗ್ರಾಮಗಳೂ, ಗ್ರಾಮಕೂಟಗಳೂ ಇರಬೇಕು.

ಇದನ್ನು ಸಾಧಿಸಲು ಪ್ರಯತ್ನಿಸುವುದೇ ನನಗೆ ಆನಂದ.

ಹರಿಜನ ಪತ್ರಿಕಾ ಸಂಪಾದಕರ ನಿಧನ

ಮಹಾತ್ಮ ಗಾಂಧಿಯವರ ಅನುಯಾಯಿಗಳೂ ಅವರ ನೆಚ್ಚಿನೆಯ ಸಹೋದ್ಯೋಗಿಗಳೂ ಆದ ಶ್ರೀ ಮಶ್ರೂವಾಲಾರವರು ನಿನ್ನೆಯದಿನ ತಮ್ಮ ೬೧ ನೇ ವಯಸ್ಸಿನಲ್ಲಿ ಸೇವಾಗ್ರಾಮದಲ್ಲಿ ನಿಧನರಾದರು. ಶ್ರೀಯುತರು ಮಹಾತ್ಮ ಗಾಂಧಿಯವರು ಸ್ಥಾಪಿಸಿದ ಹರಿಜನ ಪತ್ರಿಕೆಯ ಸಂಪಾದಕರೂ ಆಗಿದ್ದರಲ್ಲದೆ ಅನೇಕ ರಾಜಕೀಯ ಆರ್ಥಿಕ ಗ್ರಂಥಗಳನ್ನು ರಚಿಸಿದ್ದಾರೆ. ಕಳೆದ ಕೆಲವು ದಿನಗಳಿಂದ ಅವರು ಶ್ಲೇಷ್ಮರೋಗದಿಂದ ನರಳುತ್ತಿದ್ದರು. ನಿನ್ನೆ ಬೆಳಗ್ಗೆ ಸಹ ಕಾಗದಪತ್ರಗಳನ್ನು ನೋಡಿ ಸಮಾಜಸೇವಕ ಸಂಘವನ್ನು ದ್ದೇಶಿಸಿ ಭಾಷಣಮಾಡಿದರು. ಸಂಜೆ ವಿಧಿವಶರಾದರು.

ಬ್ರಿಟಿಷ್ ಸರ್ಕಾರ ವಿರುದ್ಧ ಚಳುವಳಿ

ರಸ್ತೆ ಸಂಚಾರವ್ಯವಸ್ಥೆಯ ರಾಷ್ಟ್ರೀಕರಣವನ್ನು ರದ್ದುಗೊಳಿಸಲು ಬ್ರಿಟನ್ನಿನ ಸರ್ಕಾರವು ಮಾಡಿರುವ ಯೋಜನೆಯ ವಿರುದ್ಧವಾಗಿ ರಾಷ್ಟ್ರಾದ್ಯಂತ ಲೇಬರ್‌ಪಕ್ಷವು ಭಾನುವಾರದಿಂದ ಚಳುವಳಿಯನ್ನು ಆರಂಭಿಸಿದೆ.

೧೯೪೭-೪೮ ರಲ್ಲಿ ಲೇಬರ್ ಸರ್ಕಾರವು ಸಂಚಾರಸಂಸ್ಥೆಯ ರಾಷ್ಟ್ರೀಕರಣ ಮಾಡಿತ್ತು.

ದಸರಾ ವ್ಯವಸ್ಥೆಗಾಗಿ ಸಮಿತಿ ಸಭೆ

ಮೈಸೂರು ಸೆ. ೧೦

೨೦ ನೇ ತಾರೀಖಿನಿಂದ ಪ್ರಾರಂಭವಾಗಲಿರುವ ದಸರಾ ಮಹೋತ್ಸವಕ್ಕೆ ಸಂಬಂಧಪಟ್ಟ ವ್ಯವಸ್ಥೆಗಳನ್ನು ಮಾಡಲು ಗೃಹಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯಲ್ಲಿ ಪ್ರಧಾನ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಮಹಾರಾಜರ ಹುಜೂರ್ ಸೆಕ್ರೆಟರಿಗಳು ಸದಸ್ಯರು. ಸಮಿತಿಯ ಸದಸ್ಯರೆಲ್ಲರೂ ಈದಿನ ಮೈಸೂರಿನಲ್ಲಿ ಸಭೆ ಸೇರಿ ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆಸಿದರು. ಶ್ರೀಮನ್ಮಹಾರಾಜರೊಡನೆ ವ್ಯವಸ್ಥೆಗಳ ಬಗ್ಗೆ ಸಚಿವ ಶ್ರೀ ಸಿದ್ಧವೀರಪ್ಪನವರು ಮಾತುಕತೆ ನಡೆಸಿದರು.

ಈಜಿಪ್ಟಿನಲ್ಲಿ ಭೂ ಸುಧಾರಣೆ

ಈಜಿಪ್ಟಿನ ಜ|| ನಗೀಬರ ಹೊಸ ಮಂತ್ರಿಮಂಡಲವು ನೂತನ ಭೂ ಸುಧಾರಣೆಗಳನ್ನು ಒಪ್ಪಿದೆ. ಈ ಸುಧಾರಣೆಗಳಂತೆ ಯಾವ ಮನುಷ್ಯನೂ ೨೦೦ ಎಕರೆಗಳಿಗಿಂತ ಹೆಚ್ಚಾಗಿ ಜಮೀನನ್ನು ಹೊಂದಿರುವಂತಿಲ್ಲ. ಹೆಚ್ಚಿಗೆ ಇರುವುದನ್ನು ಸರ್ಕಾರವು ತಕ್ಕ ಪರಿಹಾರಕೊಟ್ಟು ತೆಗೆದುಕೊಳ್ಳುತ್ತದೆ. ೫ ಎಕರೆಗಳಿಗಿಂತ ಕಡಿಮೆ ಜಮೀನು ಹೊಂದಿರುವವರೆಲ್ಲರೂ ಸ್ವರಸಹಾಯ ಸಂಘಗಳನ್ನು ಸೇರಬೇಕು. ವ್ಯವಸಾಯ ಕಾರ್ಮಿಕರು ತಮ್ಮದೇ ಸಂಘಗಳನ್ನು ಸ್ಥಾಪಿಸಿಕೊಂಡು ತಮ್ಮ ಪ್ರಗತಿಯನ್ನು ತಾವೇ ಸಾಧಿಸಿಕೊಳ್ಳಬಹುದಾಗಿದೆ.

ಬೊಂಬಾಯಿಗೆ ಮರುವಸತಿ ಕಾರ್ಯಕ್ಕೆ ೨೮೬ ಲಕ್ಷ ರೂಪಾಯಿಗಳು

ಬೊಂಬಾಯಿ ಪ್ರಾಂತ್ಯದಲ್ಲಿ ಮರುವಸತಿ ಕಾರ್ಯಗಳನ್ನು ಕೈಗೊಳ್ಳಲು ಕಳೆದ ಸಾಲಿನಲ್ಲಿ ಕೇಂದ್ರವು ೨೮೬ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಇದರ ಪೈಕಿ ೨೦೦ ಲಕ್ಷ ರೂಪಾಯಿಗಳನ್ನು ವಸತಿ ನಿರ್ಮಾಣಕ್ಕಾಗಿ ಉಪಯೋಗಿಸಲಾಗಿದೆ.

ಮೈಸೂರು ಪೇಟೆಧಾರಣೆ

ತಾ|| ೯-೯-೫೨

ಪಲ್ಲಕ್ಕೆ.	ರೂ-ಆ.	ರೂ-ಆ
ಕಡಲೇಕಾಯಿ	8- 2	19- 6
ಎಳ್ಳು	61- 4	72- 8
ಹುಳು	53- 8	——
ಹುರುಳಿ	53- 2	54- 8
ಹೆಸರು	70- 4	——
ಅಲಸಂದೆ	72- 10	72- 10
ಮೆಣಸಿನಕಾಯಿ	14- 8	——
ಹುಣಸೇಹಣ್ಣು	4- 0	6- 8
ಸೀಗೇಪುಡಿ	5- 4	5- 11
ಬೆಲ್ಲ	4- 0	——
ತೆಂಗಿನಕಾಯಿ 1100ಕ್ಕೆ	129-	225

ಸಮಾಜ ಸೇವಕರಿಗೆ ಸಂಭಾವನೆ

ಸರ್ಕಾರದಿಂದ ಸಹಾಯವನ್ನು ಪಡೆಯಲು ಇಷ್ಟಪಡದೆ ಜೀವನಾಧಾರಕ್ಕೆ ಯೋನೂಇಲ್ಲದ ಸಮಾಜ ಸೇವಕರಿಗೆ ಸಂಭಾವನೆಕೊಡಲು ಉತ್ತರಪ್ರದೇಶದ ಗಾಂಧಿರಾಷ್ಟ್ರೀಯ ಸ್ಮಾರಕನಿಧಿಯಿಂದ ೧ ಲಕ್ಷ ರೂ. ಹಣವನ್ನು ಮೀಸಲಾಗಿಟ್ಟಿದೆ.

ಮಿರ್ಜಾಪುರ ಮತ್ತು ತೆಹಲಿಗರ್ವಾರ್ ಅಭಾವ ಪ್ರದೇಶಗಳಲ್ಲಿ ಪರಿಹಾರಕಾರ್ಯಕ್ಕಾಗಿ ೧೫ ಸಾವಿರ ರೂ. ಮತ್ತು ಕಸಗುಡಿಸಲು ಜಾಡಮಾಡಲಿಗಳು ಉಪಯೋಗಿಸುವ ವಸ್ತುಗಳ ಸಂಶೋಧನೆ ಬಗ್ಗೆ ೩ ಸಾವಿರ ರೂ. ಗಳನ್ನು ಸಮಿತಿಯು ಕೊಟ್ಟಿದೆ.

ಜ|| ನಗೀಬರು ಈಜಿಪ್ಟಿನ ಮಿಲಿಟರಿ ಗಾರ್ವ್ನರ್ ಜನರಲ್

ಈಜಿಪ್ಟಿನ ರಾಜ್ಯಾಡಳಿತವನ್ನು ವಹಿಸಿಕೊಂಡಿರುವ ಸರ್ವಸೇನಾನಿ ಜ|| ನಗೀಬರು ಗೌರ್ನರ್ ಜನರಲ್ಲರ ಹುದ್ದೆಯನ್ನು ವಹಿಸಿಕೊಂಡಿದ್ದಾರೆ. ಅವರು ಈಗ ಗೌರ್ನರ್ ಜನರಲ್, ಪ್ರಧಾನಿ, ಸರ್ವಸೇನಾನಿ ಮತ್ತು ರಕ್ಷಣಾ ಸಚಿವಪದವಿಗಳನ್ನೆಲ್ಲಾ ವಹಿಸಿಕೊಂಡು ಸರ್ವಾಧಿಕಾರಿಯಾಗಿದ್ದಾರೆ.

ವಿ. ಪಿ. ಮೆನನ್‌ರ ಸಹಾಯ

ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಭಾರತಸರ್ಕಾರದ ಮಾಜಿ ಸಂಸ್ಥಾನ ಶಾಖಾಕಾರ್ಯದರ್ಶಿ ಶ್ರೀ ವಿ. ಪಿ. ಮೆನನ್‌ರು ೫೧ [illegible] ಗಳನ್ನು ಕೊಟ್ಟಿದ್ದಾರೆ.

ಜಾನುವಾರುಮೇವಿನಮೇಲೆ ಸಾಗಾಣಿಕೆ ರದ್ದು

ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಜಾನುವಾರು ಮೇವನ್ನು ಸಾಗಿಸಲು ಇದ್ದ ಪ್ರತಿಬಂಧಕವನ್ನು ಇದೇ ೧೫ ನೇ ತಾರೀಖಿನಿಂದ ತೆಗೆದುಹಾಕಿರುವುದಾಗಿ ಭಾರತ ಸರ್ಕಾರ ಪ್ರಕಟಿಸಿದೆ.

ಆಹಾರಧಾನ್ಯಗಳಬಗ್ಗೆ ಎಲ್ಲಾ ಹತೋಟಿ ರದ್ದು

ಆಹಾರಧಾನ್ಯಗಳ ರವಾನೆ, ಮಾರಾಟ, ವಸೂಲಿ, ಸಂಗ್ರಹಣೆ ಪ್ರಮಾಣ ಮತ್ತು ಬೆಲೆಗಳ ಬಗ್ಗೆ ಇದ್ದ ಹತೋಟಿಯನ್ನು ಹೈದರಾಬಾದ್ ಸರ್ಕಾರವು ರದ್ದುಗೊಳಿಸಿ, ಆಜ್ಞೆಯನ್ನು ಕೂಡಲೇ ಜಾರಿಗೆ ಕೊಟ್ಟಿದೆ.

ಕಾಶ್ಮೀರಬಗ್ಗೆ ಮಾತುಕತೆ

ಕಾಶ್ಮೀರ ಬಗ್ಗೆ ನಿನ್ನೆಯದಿನ ಭಾರತ ಮತ್ತು ಕಾಶ್ಮೀರ ಪ್ರತಿನಿಧಿಗಳು ಸೇರಿ ಚರ್ಚೆ ನಡೆಸಿದರು. ಈದಿನವೂ ಉಭಯತ್ರರ ಭೇಟಿ ನಡೆಯುತ್ತದೆ.

ನಾಳೆಯದಿನ ಭಾರತ ಪ್ರತಿನಿಧಿ ಶ್ರೀ ಎನ್. ಜಿ. ಐಯ್ಯಂಗಾರ್‌ರವರು ಸ್ವದೇಶಕ್ಕೆ ಹಿಂತಿರುಗುವರು.

ಕೃಷ್ಣಾನದಿಯಲ್ಲಿ ದೋಣಿ ಮುಳಗಿ ೨೫ ಜನರ ಮರಣ

ಕೃಷ್ಣಾನದಿ ಅಣೆಕಟ್ಟಿನ ಕಾರ್ಯವನ್ನು ಪರಿಶೀಲಿಸಲು ತೆರಳುತ್ತಿದ್ದ ಅಧಿಕಾರಿಗಳ ೨ ದೋಣಿಗಳು ನದಿಯಲ್ಲಿ ಮುಳುಗಿ ೨೫ ಜನರು ಮಡಿದರೆಂದು ಗೊತ್ತಾಗಿದೆ.

ಅಕ್ರಮಪ್ರವೇಶ ಅಂಕಿ ಅಂಶಗಳು ಉತ್ಪ್ರೇಕ್ಷೆ

ಸಿಂಹಳಕ್ಕೆ ಭಾರತೀಯರ ಅಕ್ರಮ ಪ್ರವೇಶವನ್ನು ತಡೆಗಟ್ಟಲು ಭಾರತ ಸರ್ಕಾರವು ಸೂಕ್ತ ಕಾರ್ಯಕ್ರಮಗಳನ್ನೆಲ್ಲಾ ತೆಗೆದುಕೊಳ್ಳುತ್ತಿದೆ ಪೂರ್ಣವಾಗಿ ಅವನ್ನು ತಪ್ಪಿಸಲು ಭಾರತವು ಕಾತುರವಾಗಿ ಕ್ರಮವನ್ನು ಅನುಸರಿಸಲು ಸಂಬಂಧಪಟ್ಟವರಿಗೆ ಸೂಚನೆ ಕೊಡಲಾಗಿದೆ. ಸಿಂಹಳದಲ್ಲಿ ಈ ಬಗ್ಗೆ ಪ್ರಕಟಿಸಿರುವ ಅಂಕಿ ಅಂಶಗಳು ಉತ್ಪ್ರೇಕ್ಷೆಯಿಂದ ಕೂಡಿದೆ. ಸಿಂಹಳದಲ್ಲಿರುವ ಭಾರತೀಯರಿಗೆ ತೊಂದರೆ ಕೊಡುವುದೇ ಈ ಉತ್ಪ್ರೇಕ್ಷೆಗೆ ಕಾರಣ. ಸಿಂಹಳ ಆಕ್ರಮಣವನ್ನು ಮಾಡಲು ಭಾರತೀಯರು ವಲಸೆ ನಡೆಸುತ್ತಿದ್ದಾರೆಂಬುದು ಬರೀ ಭ್ರಮೆ ಎಂದು ದೆಹಲಿಯ ಅಧಿಕಾರ ವೃತ್ತಗಳಲ್ಲಿ ಹೇಳಲಾಗಿದೆ.

§ ಪ್ರಧಾನಿ ನೆಹರೂರವರು ನವಂಬರ್ ಒಂದನೇ ತಾರೀಖು ಸೇವಾಗ್ರಾಮದಲ್ಲಿ ಗ್ರಾಮ ವಿಶ್ವವಿದ್ಯಾನಿಲಯದ ಉದ್ಘಾಟನೆ ನಡೆಸುತ್ತಾರೆ.

FOR SALE

American-Factory Rebuilt STANDARD Typewriters

Apply to:-
S. Subba Rao, C. E. T. D.
Bright College of Commerce, MYSORE.

ವುಡ್‌ಲ್ಯಾಂಡ್ಸ್

೭-೯-೫೨ ರಿಂದ ಆವಿಷ್ಕಾರ ಪ್ರಾರಂಭ

* ಗುಮಾಸ್ತ *
(ಹಿಂದಿ)

ಪಾತ್ರ:- ನಿಗಾರ್. ವಾಸ್ತಿ. ಕುಲ್‌ದೀಪ್ ಮಿಜಾತಮುಷ್ರಾಫ್

—: ಪ್ರಕಾಶಕರು ಮತ್ತು ಮುದ್ರಕರು: —
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 19

೧೧-೯-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕೃಷ್ಣರಾಜನಗರದಲ್ಲಿ ಭೀಕರ ಕೊಲೆ

೪ ಮಂದಿ ಮರಣ ೪ ಜನರಿಗೆ ತೀವ್ರಗಾಯ

ಮೈಸೂರು ಸೆ. ೧೧

ಕೃಷ್ಣರಾಜನಗರದ ರೈಲ್ವೆ ಸ್ಟೇಷನ್ನಿನಬಳಿ ನಿನ್ನೆ ಸಂಜೆ ಘೋರಕೊಲೆಯ ಪ್ರಸಂಗವರದಿಯಾಗಿದೆ.

ಹೊಳೆನರಸೀಪುರದ ಮಾಜಿ ಸೈನಿಕ ಸಣ್ಣ ಎಂಬುವನು ರೈಲ್ವೆ ಗ್ಯಾಂಗ್‌ಮನ್ ಕೆಲಸಗಾರನಾದ ಚಿಕ್ಕನ ೩ ವರ್ಷದ ಮಗು ಜಯಮ್ಮ, ಪೋಲೀಸ್ ಕಾನ್ಸ್ಟೇಬಲ್ ಸುಬ್ಬಣ್ಣ, ಪರ್ಮನೆಂಟ್‌ವೇ ಇನ್ಸ್‌ಪೆಕ್ಟರ ಮಾವಿಂದರು ಖಾದರ್‌ಮೊಹಿದ್ದೀನರವರುಗಳನ್ನು ಮಚ್ಚಿನಿಂದ ಒಬ್ಬೊಬ್ಬರನ್ನಾಗಿ ಹೊಡೆದು ಕೊಲೆಮಾಡಿದನೆಂದು, ಇತರ ೫ ಮಂದಿಗೆ ತೀವ್ರಗಾಯಪಡಿಸಿದನೆಂದೂ ಹೇಳಲಾಗಿದೆ.

ಗಾಯಗೊಂಡ ಚಿಕ್ಕನ ಹೆಂಡತಿ ಸಣ್ಣಮ್ಮ, ಪೋಲೀಸ್ ಕಾನ್ಸ್ಟೇಬಲಿನ ಹೆಂಡತಿ ರತ್ನಮ್ಮ, ಟ್ರಾಲಿಮನ್ ರಂಗನಾಯಕ ವಾಚ್ ಅಂಡ್‌ವಾರ್ಡ್ ಸಿಪಾಯಿ ಲಿಂಗ ಮತ್ತು ಹನುಮರವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅವರ ಪೈಕಿ, ಟ್ರಾಲಿಮನ್ ರಂಗನಾಯಕ ಈದಿನ ಬೆಳಗ್ಗೆ ಮರಣಹೊಂದಿದನು. ಸಣ್ಣಮ್ಮ ಮತ್ತು ರತ್ನಮ್ಮನವರ ಸ್ಥಿತಿಯು ತುಂಬಾ ಚಿಂತಾಜನಕವಾಗಿದೆ.

ಕೊಲೆಯ ವಿವರಗಳು ಈರೀತಿ ಇವೆ:—

ಅಪರಾಧಿ ಸಣ್ಣ ಮತ್ತು ಗ್ಯಾಂಗ್‌ಮನ್ ಚಿಕ್ಕ ಸಂಬಂಧಿಗಳು. ಅಪರಾಧಿಯು ಹೊಳೆನರಸೀಪುರದಿಂದ ಬೆಳಗ್ಗೆ ರೈಲಿನಲ್ಲಿ ಬಂದನಂತರ ರೈಲ್ವೆಸ್ಟೇಷನ್ ಹತ್ತಿರವಿರುವ ಚಿಕ್ಕನ ಮನೆಗೆ ಹೋಗಿ ಇಬ್ಬರೂ ಒಟ್ಟಿಗೆ ಊಟಮಾಡಿದರು. ಅನಂತರ ಚಿಕ್ಕನು ತನ್ನ ಕೆಲಸಕ್ಕೆ ಹೊರಟುಹೋದನು. ಸ್ವಲ್ಪಕಾಲದನಂತರ ಸಣ್ಣನು ಇದ್ದಕ್ಕಿದ್ದಹಾಗೆ ಮನೆಯಲ್ಲಿದ್ದ ಮಚ್ಚನ್ನು ತೆಗೆದುಕೊಂಡು ಚಿಕ್ಕನ ಹೆಂಡತಿ ಸಣ್ಣಮ್ಮ ಮತ್ತು ಆಕೆಯ ಮಗು ಜಯಮ್ಮನವರಿಗೆ ಹೊಡೆದು ಮಗುವನ್ನು ಅಲ್ಲೇ ಕೊಲೆಮಾಡಿ, ಆಕೆಗೆ ತೀವ್ರ ಗಾಯಪಡಿಸಿದನು ತಾಯಿಯ ಕೂಗನ್ನು ಕೇಳಿ ಪೋಲೀಸ್ ಕಾನ್ಸ್ಟೇಬಲ್ ಸುಬ್ಬಣ್ಣ ಮತ್ತು ಖಾದರ್‌ಮೊಹಿದ್ದೀನ್ ಸ್ಥಳಕ್ಕೆ ಧಾವಿಸಲು ಅವರನ್ನೂ ಹೊಡೆದು ಸಾಯಿಸಿದನು. ಅನಂತರ ರಂಗನಾಯಕ, ಸಣ್ಣಮ್ಮ, ರತ್ನಮ್ಮ ಲಿಂಗ ಮತ್ತು ಹನುಮ ಅವರುಗಳು ಆಕೆಯ ಸಹಾಯಕ್ಕೆ ಹೋಗಲು ಅವರೆಲ್ಲರಿಗೂ ತೀವ್ರ ಗಾಯಪಡಿಸಿದನು ಅನಂತರ ಅಲ್ಲಿಂದ ಮಚ್ಚಿನಸಮೇತ ಪರಾರಿಯಾದನು. ಪಕ್ಕದ ಜಮೀನುಗಳಲ್ಲಿ ಕೆಲಸಮಾಡುತ್ತಿದ್ದ ರೈತರು ಅವನನ್ನು ಹಿಡಿದು ಪೋಲೀಸರಿಗೆ ವಶಪಡಿಸಿದರು ಈ ಕೊಲೆಗೆ ಕಾರಣ ಗೊತ್ತಾಗಿಲ್ಲ ಪೋಲೀಸಿನವರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಶಿಕ್ಷಣ ಸುಧಾರಣ ಸಮಿತಿ

ಬೆಂಗಳೂರು ಸೆ. ೧೧

ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಸುಧಾರಣೆಗೆ ಸೂಕ್ತ ಸಲಹೆನೀಡಲು ೪೦ ಜನರನ್ನೊಳಗೊಂಡ ಒಂದು ಸಮಿತಿಯನ್ನು ಸರ್ಕಾರದವರು ನೇಮಿಸಿರುವರು.

ಸಮಿತಿಯ ಕೆಲಸಕಾರ್ಯಗಳು ವಿಶೇಷವಾಗಿರುವುದರಿಂದ, ನಾನಾ ಉಪಸಮಿತಿಗಳನ್ನು ನೇಮಿಸಿ ಸುಧಾರಣೆಯನ್ನು ಕಾರ್ಯರೂಪಕ್ಕೆ ತರಲು ಹೆಚ್ಚುಜನರನ್ನೊಳಗೊಂಡ ಸಮಿತಿಯನ್ನು ನೇಮಿಸಲಾಗಿದೆಯೆಂದು ವಿದ್ಯಾಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಪತ್ರಿಕಾಸಮ್ಮೇಳನದಲ್ಲಿ ತಿಳಿಸಿದ್ದಾರೆ. ಈ ಸಮಿತಿಗೆ ಮುಖ್ಯಮಂತ್ರಿಗಳು ಅಧ್ಯಕ್ಷರು, ವಿದ್ಯಾಸಚಿವರು ಉಪಾಧ್ಯಕ್ಷರು.

ಶ್ರೀಗಳಾದ ಸ್ಯಾಮುಯಲ್ ರಂಗನಾಥ, ಡಾ|| ಎಂ. ರತ್ನಸ್ವಾಮಿ. ಪ್ರೊ|| ಎ. ಆರ್. ವಾಡಿಯಾ, ಡಾ|| ಬಿ. ಎಲ್. ಮಂಜುನಾಥ್, ಡಾ|| ಪಿ. ನರಸಿಂಹಯ್ಯ, ಡಾ|| ಎಂ. ವಿ. ಗೋವಿಂದಸ್ವಾಮಿ, ಪ್ರೊ|| ಎಂ. ಎಸ್. ಥ್ಯಾಕರ್, ಜೆ. ಮಹಮದ್‌ಇಮಾಂ, ಕೆ. ವಿ. ಪುಟ್ಟಪ್ಪ, ಎಂ. ಸಿ. ಶಿವಾನಂದಶರ್ಮ, ಡಿ. ಎಸ್. ವೆಂಕಣ್ಣ, ಪ್ರೊ|| ಎ. ಸಿ. ದ್ಯಾವೇಗೌಡ, ಡಾ|| ನಾಗೇಂದ್ರನ್, ಬಿ. ಎಸ್. ನರಸಿಂಗರಾವ್, ಎಂ. ಪಿ. ಎಲ್. ಶಾಸ್ತ್ರಿ, ಎನ್. ಭದ್ರಯ್ಯ. ಮುಲ್ಕಾ ಗೋವಿಂದರೆಡ್ಡಿ, ಎಂ. ಎಸ್. ಸ್ವಾಮಿನಾಥನ್, ಶ್ರೀಮತಿ ಇಂದಿರಮ್ಮ, ಮುಂತಾದವರು ಈ ಸಮಿತಿಯ ಸದಸ್ಯರು ಶ್ರೀ ಜಿ. ಬಿ. ಮಲ್ಲಾರಾಧ್ಯ ಕಾರ್ಯದರ್ಶಿ ಮತ್ತು ಟಿ. ಎನ್. ಕೃಷ್ಣರಾವ್ ಸಹ ಕಾರ್ಯದರ್ಶಿಗಳು.

ವಿಶ್ವವಿದ್ಯಾನಿಲಯಗಳ ಪಾಂಚವಾರ್ಷಿಕ ಅಭಿವೃದ್ಧಿ ಯೋಜನೆ

ಪೂಣೆ ವಿಶ್ವವಿದ್ಯಾನಿಲಯವನ್ನು ಅಭಿವೃದ್ಧಿ ಪಡಿಸಲು ೫ ವರ್ಷಗಳ ಯೋಜನೆಯನ್ನು ತಯಾರಿಸಬೇಕೆಂದು ಕೇಂದ್ರ ಸರ್ಕಾರದವರು ಆ ವಿಶ್ವವಿದ್ಯಾನಿಲಯಕ್ಕೆ ಸೂಚನೆ ಇತ್ತಿದ್ದಾರೆಂದು ತಿಳಿದು ಬಂದಿದೆ. ಅಮೆರಿಕಕ್ಕೆ ಭಾರತವು ಕೊಡಬೇಕಾದ ಗೋಧಿಯ ಹಣದ ನಿಧಿಯಿಂದ ಮೇಲ್ಕಂಡ ಯೋಜನೆಗೆ ಸಹಾಯ ನೀಡಲಾಗುವುದು. ಇಂತಹ ಯೋಜನೆಗಳನ್ನು ಭಾರತದ ಇತರ ವಿಶ್ವವಿದ್ಯಾನಿಲಯಗಳೂ ತಯಾರಿಸಬೇಕೆಂದು ಸೂಚನೆ ಕೊಡಲಾಗಿದೆ.

ಆರ್ಥಿಕ ಸಚಿವರ ಸಭೆ

ಪ್ರಾಂತೀಯ ಆರ್ಥಿಕ ಸಚಿವರ ಸಭೆಯೊಂದು ಮುಂದಿನ ತಿಂಗಳು ೧೪-೧೫ ನೇ ತಾ|| ಗಳಲ್ಲಿ ದೆಹಲಿಯಲ್ಲಿನಡೆಯಲಿದೆ.

ದಸರಾ ಕಾರ್ಯಕ್ರಮ

ಮೈಸೂರು ಸೆ. ೧೧

ದಸರಾ ಕಾರ್ಯಕ್ರಮ ವ್ಯವಸ್ಥೆಬಗ್ಗೆ ನಿನ್ನೆಯದಿನ ಮಧ್ಯಾನ್ಹವು ಬೆಂಗಳೂರಿನಲ್ಲಿ ಗೃಹಸಚಿವ ಶ್ರೀ ಸಿದ್ಧವೀರಪ್ಪನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುವ ಸಮಿತಿಯಸಭೆ ನಡೆದು ಅಂತ್ಯ ತೀರ್ಮಾನಗಳಾದುವೆಂದು ನಿನ್ನೆ ರಾತ್ರಿಯೇ ರಾಜಧಾನಿಗೆ ಹಿಂತಿರುಗಿದ ಮಹಾರಾಜರ ಹುಜೂರ್ ಕಾರ್ಯದರ್ಶಿ ಶ್ರೀ ಪಾಳೇಗಾರ್‌ರವರು ಶ್ರೀಮನ್ಮಹಾರಾಜರಿಗೆ ವಿವರಗಳನ್ನು ಒಪ್ಪಿಸಿರುವರೆಂದು ಗೊತ್ತಾಗಿದೆ. ಇಂದು ನಾಳೆಯೊಳಗೆ ವಿವರಗಳು ಹೊರಬೀಳುವ ಸಂಭವವಿದೆ.

ಕೃಷ್ಣಾನದಿಯಲ್ಲಿನ ದುರಂತ

ಕೃಷ್ಣಾನದಿಯಲ್ಲಿ ದೋಣಿಮುಳುಗಿ ಹೋದುದರ ಪರಿಣಾಮವಾಗಿ ಇತ್ತೀಚಿನ ಸುದ್ದಿ ಪ್ರಕಾರ ಸೂಪರಿಂಟೆಂಡಿಂಗ್ ಇಂಜಿನಿಯರ್ ಶ್ರೀ ವೇಮ ಕೃಷ್ಣಮೂರ್ತಿ ಎಗ್ಸಿಕ್ಯುಟಿವ್ ಇಂಜನಿಯರ್ ಶ್ರೀ ಬಿ. ಕೃಷ್ಣಮಾಚಾರಿ, ಅಣೆಕಟ್ಟು ಸೂಪರಿಂಟೆಂಡರಾದ ಶ್ರೀ ವಿ. ಸೀತಾರಾಮಯ್ಯ, ಶ್ರೀ ವೇಮ ಕೃಷ್ಣಮೂರ್ತಿಯವರ ಸಂಬಂಧಿ ಶ್ರೀ ಪ್ರಸಾದ್‌ರಾವ್ ಮತ್ತು ಇಬ್ಬರು ಕೆಲಸಗಾರರು ಇನ್ನೂ ಪತ್ತೆಯಾಗಿಲ್ಲ. ಅನಂತರ ಪತ್ತೆಹಚ್ಚಿದ ಶ್ರೀ ವಿ. ಜಿ. ಚಾರಿರವರು ಆಸ್ಪತ್ರೆಯಲ್ಲಿ ಮಡಿದರು.

೨೫ ಜನರ ಮತ್ತೊಂದು ದೋಣಿ ಮುಳಿಗಿದುದು ನಿಜವಲ್ಲವೆಂದು ಗೊತ್ತಾಗಿದೆ.

ಸಭೆ ಮೆರವಣಿಗೆಗಳಿಗೆ ತಡೆ

ದೆಹಲಿನಗರದಲ್ಲಿ ಇತ್ತೀಚೆಗೆ ಶಾಂತಿಭಂಗ ತರುವಂತಹ ಸಭೆಗಳು ನಡೆಯುತ್ತಿರುವುದರಿಂದ ಅದನ್ನು ತಡೆಗಟ್ಟಲು ದೆಹಲಿ ಜಿಲ್ಲಾ ಮ್ಯಾಜಿಸ್ಟ್ರೇಟರು ಸಿ. ಪಿ. ಸಿ. ೧೪೪ ನೇ ನಿಬಂಧನೆಯ ಪ್ರಕಾರ ಒಂದು ಆಜ್ಞೆಯನ್ನು ಹೊರಡಿಸಿ ಸಭೆ, ಮೆರವಣಿಗೆ, ೫ ಜನಕ್ಕಿಂತ ಹೆಚ್ಚಾಗಿ ಒಂದೆಡೆ ಸೇರುವುದನ್ನು ನಿಷೇಧಿಸಿದ್ದಾರೆ. ಈ ಆಜ್ಞೆ ಒಂದು ತಿಂಗಳುಕಾಲ ಜಾರಿಯಲ್ಲಿರುತ್ತದೆ.

ಮುಷ್ಕರವನ್ನು ನಿಲ್ಲಿಸಲು ಸರ್ಕಾರದ ಸೂಚನೆ

ಬೊಂಬಾಯಿನಗರದ ಗ್ಯಾಸ್ ಕೆಲಸಗಾರರು ತಮ್ಮ ಮುಷ್ಕರವನ್ನು ಕೂಡಲೇ ನಿಲ್ಲಿಸಬೇಕು. ಅವರ ಬೇಡಿಗಗಳನ್ನು ಅನಂತರ ಪಂಚಾಯಿತಿಗೆ ಒಪ್ಪಿಸುವ ತೀರ್ಮಾನವನ್ನು ಸರ್ಕಾರವುಮಾಡುವುದು—ಎಂದು ಬೊಂಬಾಯಿ ಕಾರ್ಮಿಕ ಸಚಿವರು ತಿಳಿಸಿರುವರು.

ಪ್ರಾದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಚುನಾವಣೆ

ಮಧ್ಯಪ್ರದೇಶದ ಮಾಜಿ ಗೌರ್ನರ್ ಶ್ರೀ ಮಂಗಲದಾಸ ಪಕ್ವಾಸರವರನ್ನು ನವಂಬರಿನಲ್ಲಿ ನಡೆಯುವ ಚುನಾವಣೆಯಲ್ಲಿ ಬೊಂಬಾಯಿ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆರಿಸಲಾಗುವುದೆಂದು ಗೊತ್ತಾಗಿದೆ. ಕಾಂಗ್ರೆಸ್ಸಿನ ಹೈಕಮ್ಯಾಂಡಿನ ಒಪ್ಪಿಗೆಯು ಇದಕ್ಕೆ ದೊರೆತಿದೆ.

ರೈಲಿನಲ್ಲಿ ೨೫೦೦೦ ರೂ. ವಸ್ತುಗಳ ಕಳವು

ಬೆಂಗಳೂರಿನಿಂದ ಬಂಗಾರುಪೇಟೆಗೆ ರೈಲುಮೂಲಕ ರವಾನಿಸಲಾಗಿದ್ದ ೨೫೦೦೦ ರೂ, ಬೆಲೆಬಾಳುವ ಬಟ್ಟೆ ಮತ್ತಿತರವಸ್ತುಗಳು ಕೋಲಾರ ರೈಲ್ವೆಸ್ಟೇಷನಲ್ಲಿ ನಿಂತಿದ್ದ ವ್ಯಾಗನುಗಳಲ್ಲಿಯೇ ಕಳುವಾಗಿದೆಯೆಂದು ವರದಿಯಾಗಿದೆ.

ಕಾಶ್ಮೀರ ಮಾಜಿ ಮಹಾರಾಜರಿಗೆ ವಿರಾಮ ವೇತನ

ಬೊಂಬಾಯಿನಲ್ಲಿರುವ ಕಾಶ್ಮೀರದ ಮಾಜಿ ಮಹಾರಾಜರಿಗೆ ವರ್ಷಕ್ಕೆ ೧೦ ಲಕ್ಷ ರೂಪಾಯಿಗಳ ವಿರಾಮ ವೇತನವನ್ನು ಕೇಂದ್ರಸರ್ಕಾರವು ಕೊಡಲಿದೆಯೆಂದು ಹೇಳಲಾಗಿದೆ. ವಂಶೀಯರಾಜ್ಯ ಆಡಳಿತವು ಕಾಶ್ಮೀರದಲ್ಲಿ ಮುಕ್ತಾಯವಾದರೂ ಈ ವೇತನವನ್ನು ಕೊಡಲಾಗುವುದೆಂದು ಗೊತ್ತಾಗಿದೆ. ಈ ಬಗ್ಗೆ ಸಂಸ್ಥಾನ ಶಾಖಾಸಚಿವ ಶ್ರೀ ವೆಂಕಟಾಚಾರಿಯವರು ಮಾಜಿ ಮಹಾರಾಜರನ್ನು ನೋಡಲು ಬೊಂಬಾಯಿಗೆ ಹೋಗಿರುವರು.

ವೃತ್ತಪತ್ರಿಕಾ ಕಾಗದ ನಿಯಂತ್ರಣ ರದ್ದು

ವೃತ್ತಪತ್ರಿಕೆಯ ಮೇಲೆ ಭಾರತ ಸರ್ಕಾರವು ವಿಧಿಸಿದ್ದ ಹತೋಟಿಯನ್ನು ಈ ದಿನದಿಂದರದ್ದುಗೊಳಿಸಲಾಗಿದೆ. ದೇಶದಲ್ಲಿ ನ್ಯೂಸ್‌ಪ್ರಿಂಟ್ ಪರಿಸ್ಥಿತಿ ಉತ್ತಮಗೊಂಡಿರುವುದರಿಂದ ಈ ಕ್ರಮವನ್ನು ಕೈಗೊಳ್ಳಲಾಗಿದೆಯೆಂದು ಭಾರತ ಸರ್ಕಾರವು ಪ್ರಕಟಣೆಯಿತ್ತಿದೆ.

ಕಾಂಗ್ರೆಸ್ಸಿಗರಲ್ಲಿ ಘರ್ಷಣೆ

ಪ್ರಾಂತ್ಯ ಕಾಂಗ್ರೆಸ್ ಕಮಿಟಿಯ ಕಾರ್ಯಕಲಾಪಗಳನ್ನು ಬಹಿರಂಗವಾಗಿ ಟೀಕಿಸಿದ್ದಕ್ಕಾಗಿ ಕಲ್ಕತ್ತಾದಲ್ಲಿ ಕೆಲವರ ಮೇಲೆ ಕ್ರಮ ತೆಗೆದುಕೊಂಡಿದ್ದನ್ನು ಖಂಡಿಸಲು ಸೇರಿದ್ದ ಕಾಂಗ್ರೆಸ್ಸಿಗರ ಸಭೆಯಲ್ಲಿ ಉಭಯ ಪಕ್ಷಗಳಲ್ಲಿ ಘರ್ಷಣೆಯುಂಟಾಯಿತೆಂದು ಗೊತ್ತಾಗಿದೆ.

ಕಾರ್ಮಿಕರ ಸಂಘಟನೆ ಅತ್ಯಗತ್ಯ

ದೇಶಾದ್ಯಂತ ಕಾರ್ಮಿಕರ ಸಂಘಟನೆ ಅತ್ಯಗತ್ಯ ಕಾರ್ಮಿಕರಿಗೂ ಮಾಲೀಕರಿಗೂ ಮಧುರ ಬಾಂಧವ್ಯವೇರ್ಪಟ್ಟರೆ ದೇಶದಲ್ಲಿ ಪ್ರಗತಿಯನ್ನು ಸಾಧಿಸಬಹುದಾಗಿದೆ ದೇಶದಲ್ಲಿರುವ ನಾನಾ ರೈಲ್ವೆ ಕಾರ್ಮಿಕ ಸಂಘಗಳು ಒಟ್ಟಾಗಬೇಕು. ಇದಕ್ಕೆ ತಕ್ಕ ಕಾರ್ಯಕ್ರಮ ಈಗಾಗಲೇ ನಡೆಯುತ್ತಿರುವುದಾಗಿ ಕೇಂದ್ರ ಕಾರ್ಮಿಕಸಚಿವ ಶ್ರೀ ವಿ. ವಿ. ಗಿರಿಯವರು ಹೇಳಿರುವರು.

ಸಹಕಾರ ಸಂಘಗಳ ರಿಜಿಸ್ಟ್ರಾರ್

ಬೆಂಗಳೂರು ಸೆ. ೧೧

ಸಹಕಾರ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರ್ ಶ್ರೀ ಆರ್. ಮರುದೇವೇಗೌಡರು ಗ್ರಾಮಾಭಿವೃದ್ಧಿ ಕಮಿಷನರ್, ಹಿಂದುಳಿದ ಪಂಗಡಗಳ ಮತ್ತು ಸ್ಥಳೀಯ ಸಂಸ್ಥೆ ಕಮಿಷನರ್, ಸಹಕಾರ ಸಂಘಗಳ ರಿಜಿಸ್ಟ್ರಾರ್ ಮತ್ತು ಚೀಫ್ ಮಾರ್ಕೆಟಿಂಗ್ ಆಫೀಸರಾಗಿ ಸೆಪ್ಟಂಬರ್ ಒಂದರಿಂದ ಹಂಗಾಮಿಯಾಗಿ ನೇಮಕರಾಗಿದ್ದಾರೆ

ಅನ್ನವಿಲ್ಲದ ಆದಿವಾಸಿ ಜನಗಳ ಕಷ್ಟ

ಸೂರತ್ತಿನ ಗುಡ್ಡಗಾಡಿನ ಜನಾಂಗದವರಾದ ೧ ಲಕ್ಷ ಮಂದಿ ಆದಿವಾಸಿಗಳು ಕಳೆದ ಎರಡು ತಿಂಗಳಿನಿಂದಲೂ ಹೊಟ್ಟೆಗಿಲ್ಲದೆ ನರಳುತ್ತಿರುವರೆಂದು ವರದಿಯಾಗಿದೆ. ರೇಷನ್ ಡಿಪೋಗಳಲ್ಲಿ ಬೇಕಾದಷ್ಟು ಆಹಾರ ಧಾನ್ಯ ಇದ್ದರೂ ಅವುಗಳನ್ನು ಕೊಳ್ಳಲು ಅಲ್ಲಿನ ಜನರಲ್ಲಿ ಹಣವಿಲ್ಲವೆಂದೂ, ಅನೇಕರು ಅನ್ನವಿಲ್ಲದೆ ಪ್ರಾಣ ಬಿಟ್ಟಿರುವರೆಂದೂ ಹೇಳಲಾಗಿದೆ.

§ದಕ್ಷಿಣ ಆಫ್ರಿಕಾದಲ್ಲಿ ಛಡಿ ಶಿಕ್ಷೆ ಕಾನೂನನ್ನು ಜಾರಿಗೆ ತಂದಿರುವುದು ತೀರಾ ಅನ್ಯಾಯ ಎಂದು ದಕ್ಷಿಣಆಫ್ರಿಕಾ ನ್ಯಾಯಮೂರ್ತಿ ಮಿ॥ ಬ್ಲಾಕ್‌ವೆಲ್‌ರವರು ಹೇಳಿದ್ದಾರೆ.

ಕಾಶ್ಮೀರ ಮಾತುಕತೆ ಮುಕ್ತಾಯ

ಕಾಶ್ಮೀರ ವಿವಾದ ಪರಿಹಾರಕ್ಕಾಗಿ ಕಳೆದ ಕೆಲವು ದಿನಗಳಿಂದ ನಡೆಯುತ್ತಲಿದ್ದ ಡಾ॥ ಗ್ರಹಾಂರವರ ಸಂಧಾನ ಮಾತುಕತೆಗಳು ಸಚಿವಮಟ್ಟದಲ್ಲಿ ಜಿನೀವಾದಲ್ಲಿ ಮುಕ್ತಾಯವಾದುವು. ಮಾತುಕತೆಗಳು ಭಾರತ, ಪಾಕೀಸ್ತಾನ ಪ್ರತಿನಿಧಿಗಳೊಡನೆ ಪ್ರತ್ಯೇಕವಾಗಿಯೂ, ಒಟ್ಟಿಗೂ ನಡೆದುವು- ಈಗ ಡಾ॥ ಗ್ರಹಾಂರವರು ತಮ್ಮ ವರದಿಯನ್ನು ವಿಶ್ವಸಂಸ್ಥೆಗೆ ಒಪ್ಪಿಸುವರು.

ಭಾರತ ಪ್ರತಿನಿಧಿ ಶ್ರೀ ಎನ್. ಜಿ. ಅಯ್ಯಂಗಾರ್‌ರವರು ಈದಿನ ಭಾರತಕ್ಕೆ ಹಿಂತಿರುಗುವರು.

ಕಚ್ಚಾ ಫಿಲಂ ತಯಾರಿಕೆ

ಮೈಸೂರಿನಲ್ಲಿ ಕಚ್ಚಾಫಿಲಂ ತಯಾರಿಕಾ ಕಾರ್ಖಾನೆಯನ್ನು ಶೀಘ್ರದಲ್ಲಿಯೇ ತೆರೆಯಲಾಗುವುದೆಂದು ಕೇಂದ್ರ ಉತ್ಪನ್ನ ಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿದ್ದಾರೆ

ಭಾರತದಲ್ಲಿರುವ ಜಪಾನ್ ಆಸ್ತಿಗಳು

ಭಾರತದಲ್ಲಿರುವ ಜಪಾನ್ ಆಸ್ತಿಗಳನ್ನು ಉಭಯರಾಷ್ಟ್ರಗಳ ನಡುವೆ ಸಾಂಸ್ಕೃತಿಕ ಪ್ರಗತಿಗಾಗಿ ಉಪಯೋಗಿಸಲಾಗುವುದೆಂದು ಜಪಾನ್ ಸರ್ಕಾರ ನಿರ್ಧರಿಸಿದೆ,

ಚಿಕ್ಕವಯಸ್ಸಿನ ಯುವತಿಯ ಸಹಗಮನ

ಜಯಪುರ ಜಿಲ್ಲೆಯ ಪುಲೆರಾ ಎಂಬ ಹಳ್ಳಿಯ ಸಣ್ಣವಯಸ್ಸಿನ ಯುವತಿಯೊಬ್ಬಳು ತನ್ನ ಪತಿಯ ಮರಣದ ದುಃಖವನ್ನು ತಾಳಲಾರದೆ ಅದೇ ಚಿತೆಯ ಮೇಲೆ ಬಿದ್ದು ಪ್ರಾಣವನ್ನು ಬಿಟ್ಟಳೆಂದು ವರದಿಯಾಗಿದೆ. ಈ ಸಹಗಮನವನ್ನು ನಿಲ್ಲಿಸದೆ ಹಳ್ಳಿಯ ಜನರು ಎಲ್ಲ ಸಹಾಯವನ್ನು ಮಾಡಿದರೆಂದೂ, ೭ ವರ್ಷದ ಬಾಲಕನಿಂದ ಚಿತೆಗೆ ಬೆಂಕಿ ಹಚ್ಚಿಸಲಾಯಿತೆಂದೂ ಹೇಳಲಾಗಿದೆ.

ಕಾಂಗ್ರೆಸ್ ನಿಯಮಾವಳಿ ತಿದ್ದುಪಡಿ

ಅಖಿಲಭಾರತ ಕಾಂಗ್ರೆಸ್ ನಿಯಮಾವಳಿ ತಿದ್ದುಪಡಿ ಬಗ್ಗೆ ದೆಹಲಿಯಲ್ಲಿ ಇತ್ತೀಚಿಗೆ ನಡೆದ ಮಾತುಕತೆ ಪರಿಣಾಮವಾಗಿ ಈ ತೀರ್ಮಾನಗಳಾದುವೆಂದು ಹೇಳಲಾಗಿದೆ:—

ಪ್ರಧಾನಿ ನೆಹರೂರವರೇ ಇನ್ನೆರಡು ವರ್ಷಕಾಲ ಕಾಂಗ್ರೆಸ್ ಅಧ್ಯಕ್ಷರಾಗಿರಬೇಕು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಅರ್ಧಮಂದಿ ಕೇಂದ್ರದಲ್ಲಾಗಲಿ ಪ್ರಾಂತ್ಯದಲ್ಲಾಗಲಿ ಮಂತ್ರಿಗಳಾಗಿರತಕ್ಕದ್ದು ಈಗಿನ ಸಮಿತಿಯ ಸದಸ್ಯರಲ್ಲಿ ಮೂರನೇ ಒಂದು ಭಾಗ ಮಂತ್ರಿಗಳಿಗೆ ಸ್ಥಾನವಾಗಿದೆ.

ಪಾರ್ಲಿಮೆಂಟಿನ ಕಾಂಗ್ರೆಸ್ ಸದಸ್ಯರೆಲ್ಲಾ ಓಟಿನ ಅಧಿಕಾರವಿಲ್ಲದೆ ಎ. ಐ. ಸಿ. ಸಿ. ಯ. ಸಹ ಸದಸ್ಯರಾಗಿರತಕ್ಕದ್ದು ಶಾಸನಸಭಾಸದಸ್ಯರೆಲ್ಲಾ ಆಯಾ ಪ್ರದೇಶ ಕಾಂಗ್ರೆಸ್ ಸಮಿತಿಗಳ ಸಹ ಸದಸ್ಯರಾಗಿರತಕ್ಕದ್ದು.

ರಾಜಕಮಲ್

೧೨-೯-೫೨ರಿಂದ ಅಮೋಘವಾದ ೪ನೇ ವಾರ ಪ್ರತಿದಿನ ೩ ಆಟಗಳು

(ಮಹಾತ್ಮಾರವರ)

ಶ್ರೀನಿವಾಸ ಕಲ್ಯಾಣ

(ಕನ್ನಡ)

ಪಾತ್ರ:—ಅಮೀರ್‌ಬಾಯಿ ಕರ್ನಾಟಕಿ, ಪ್ರತಿಮಾದೇವಿ, ಹರಿಣಿ, ಜಯಶ್ರೀ.

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕಛೇರಿ, ಮೈಸೂರು, 6-9-52

ನಂ. ಇಎಸ್. 3-378|52-53.

ಪ್ರಕಟಣೆ

1952ನೇ ಸೆಪ್ಟಂಬರ್ ಪರೀಕ್ಷೆಗಳಿಗೆ ಪ್ರವೇಶ ಟಿಕೆಟ್‌ಗಳು

1952ನೇ ಸೆಪ್ಟೆಂಬರ್ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಿಗೆ ಕಾಲೇಜು ಮೂಲಕ ಅಥವಾ ಪ್ರೈವೇಟ್‌ಆಗಿ ಕುಳಿತಿರುವ ವಿದ್ಯಾರ್ಥಿಗಳಿಗೆಲ್ಲಾ ಈಮೂಲಕ ತಿಳಿಸುವುದೇನೆಂದರೆ – ವಿದ್ಯಾರ್ಥಿಗಳಿಗೆ ಪ್ರವೇಶ ಟಿಕೆಟ್‌ಗಳು ಅವರುಗಳು ಪರೀಕ್ಷೆಗಳಿಗೆ ಯಾವ ಕಾಲೇಜುಗಳಿಂದ ಕಳುಹಿಸಿರುವರೋ ಆಯಾಯ ಕಾಲೇಜಿನ ಅಧಿಕಾರಿಗಳಿಂದ ಕೊಡಲಾಗುವುದು.

ಸೆಂಟರುಗಳನ್ನು ಬದಲಾಯಿಸಿರುವವರು ಸಂಬಂಧಪಟ್ಟ ಸೆಂಟರಿನ ಸೂಪರಿಂಟೆಂಡೆಂಟರವರಿಂದ ಪ್ರವೇಶ ಟಿಕೆಟ್‌ಗಳನ್ನು ಪಡೆಯುವುದು.

ಪ್ರವೇಶ ಟಿಕೆಟ್‌ಗಳನ್ನು ವಿಶ್ವವಿದ್ಯಾನಿಲಯದ ಕಛೇರಿಯಿಂದ ನೇರವಾಗಿ ವಿದ್ಯಾರ್ಥಿಗಳಿಗೆ ಕೊಡಲಾಗುವುದಿಲ್ಲ.

ಅಪ್ಪಣೆಮೇರೆ

(ಸಹಿ) ಸಿ. ರಂಗಾಚಾರ್,

ರಿಜಿಸ್ಟ್ರಾರ್.

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

PRABHA: 卐 from 12-9-52 Daily 3 Shows.

A Historical Documentary Film of the last and decisive battle in the Fascist Germany of the capture and fall of Berlin and the unconditional surrender of the Armed Forces:-

—BERLIN—

Directed by: Y. Raizman (Stalin's Prize Winner)

C. T. C. PUBLICATIONS (FOR S. S. L. C.)

Simplified Eng. Grammar	0 6 0
A Guide to Eng. Text. (Sept. 52)	1 4 0
Do. (March 53)	1 0 0
ಕನ್ನಡ ನೋಟ್ಸ್ [1952 ಸೆಪ್ಟೆಂಬರ್]	0 12 0
(1953 ಮಾರ್ಚ್)	0 12 0
ಆಧುನಿಕ ಮಾನವನ ಹೋರಾಟದ ನೋಟ್ಸ್	0 8 0
ಅಂಕಗಣಿತ-ಬೀಜಗಣಿತ-ರೇಖಾಗಣಿತ (ಪ್ರಶ್ನೋತ್ತರಗಳು-8 ಪರೀಕ್ಷೆಯವು)	1 8 0
Ele. Mathematics (English Medium)	1 10 0

CITY TUTORIAL COLLEGE, MYSORE.

(Agents:- Mr. J. Nanumal & Sons)

ಅಪೇರ ೫-೯-೫೨ ರಿಂದ ಅಮೋಘ ಪ್ರಾರಂಭ

ಪುಯಲ್

ಅಥವಾ

ಬಿರುಗಾಳಿ

[ತಮಿಳು]

ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್

This is the first time introducing on the Silver Screen the powerful drama of "St. Philumena and Mortydom"

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 20

೧೨-೯-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕೃಷ್ಣರಾಜನಗರದ ಕೊಲೆ ಪ್ರಕರಣ

ಕೊಲೆಪಾತಕನಿಂದ ತನ್ನ ಹೆಂಡತಿ, ಮಗುವಿನ ಹತ್ಯೆ

ಮೈಸೂರು ಸೆ. ೧೨

ಕೃಷ್ಣರಾಜನಗರದಲ್ಲಿ ಮೊನ್ನೆಯದಿನ ೪ ಜನರನ್ನು ಕೊಲೆಮಾಡಿ, ೪ ಜನರಿಗೆ ಗಾಯಗೊಳಿಸಿದ ಸಣ್ಣನು, ಕೃಷ್ಣರಾಜನಗರಕ್ಕೆ ಬರುವ ಪೂರ್ವ, ಹಿಂದಿನರಾತ್ರಿ, ಹೊಳೇನರಸೀಪುರಕ್ಕೆ ೪ ಮೈಲಿಯಲ್ಲಿರುವ ಗುಳ್ಳದಪುರದಲ್ಲಿ ತನ್ನ ೨೫ ವರ್ಷ ವಯಸ್ಸಿನ ಹೆಂಡತಿ ಸಣ್ಣಮ್ಮ ಮತ್ತು ಒಂದುವರ್ಷದ ಮಗುವನ್ನು ಸಹ ಕೊಂದಿರುವುದಾಗಿ ಗೊತ್ತಾಗಿದೆ.

ಆ ಎರಡು ಶವಗಳನ್ನು ಆ ಹಳ್ಳಿಯಲ್ಲಿ ತನ್ನ ಮನೆಯಲ್ಲಿಯೇ ಬಿಟ್ಟು ಬೀಗಹಾಕಿಕೊಂಡು ಬಂದಿರುವುದಾಗಿ ಕೊಲೆಪಾತಕನಾದ ಸಣ್ಣನೇ ಕೃಷ್ಣರಾಜನಗರ ಪೋಲೀಸಿನವರಿಗೆ ತಿಳಿಸಿದನೆಂದೂ, ಅದನ್ನು ಪರೀಕ್ಷಿಸಲು ಪೋಲೀಸಿನವರು ಅಪರಾಧಿಯೊಡನೆ ಗುಳ್ಳದಪುರಕ್ಕೆ ಹೋಗಿರುವುದಾಗಿ ಇತ್ತೀಚಿನ ಸುದ್ದಿಯಿಂದ ಗೊತ್ತಾಗಿದೆ.

ಸಣ್ಣನು ಸ್ವಸ್ಥಳದಿಂದ ನಿವೃತ್ತನಾಗಿ ೭ ವರ್ಷವಾಗಿ ಅಂದಿನಿಂದ ಗಳ್ಳರದಲ್ಲಿ ಮಾವಿನತೋಪೊಂದರಲ್ಲಿ ಕೆಲಸಮಾಡುತ್ತಾ ಆ ಗ್ರಾಮದಲ್ಲಿಯೇ ಸಂಸಾರ ಮಾಡಿಕೊಂಡಿದ್ದನೆಂದು ತಿಳಿದುಬಂದಿದೆ.

ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಿರುವ ೪ ಜನ ಗಾಯಗೊಂಡವರಲ್ಲಿ ರೈಲ್ವೆ ಗ್ಯಾಂಗ್‌ಮನ್ ಚಿಕ್ಕನಹೆಂಡತಿಗೆ ತಲೆಗೆ ವಿಶೇಷ ಗಾಯವಾಗಿ ಇಲ್ಲಿಯವರೆಗೂ ಪ್ರಜ್ಞೆಯೇ ಬಂದಿಲ್ಲವೆಂದು ಆಕೆಯಸ್ಥಿತಿಯು ತೀರಾ ಚಿಂತಾಜನಕವಾಗಿರುವುದಾಗಿ ಗೊತ್ತಾಗಿದೆ.

ಭಾರತಕ್ಕೆ ೪೦೦೦ ಲಕ್ಷ ಡಾಲರು ಸಾಲ

ಭಾರತದಲ್ಲಿ ಉಕ್ಕಿನ ಉತ್ಪತ್ತಿಯನ್ನು ವಿಸ್ತರಣಗೊಳಿಸಲು ವಿಶ್ವಬ್ಯಾಂಕಿನಿಂದ ೪೦೦೦ ಲಕ್ಷ ಡಾಲರು ಸಾಲವನ್ನು ಭಾರತವು ನಿರೀಕ್ಷಿಸುತ್ತಲಿರುವುದಾಗಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಹೇಳಿರುವರು.

ದೇಶದಲ್ಲಿ ಈಗ ೧೧ ಲಕ್ಷ ಟನ್ ಉಕ್ಕಿನ ಉತ್ಪತ್ತಿಯಿದೆ. ವಿಸ್ತರಣ ಯೋಜನೆ ಪ್ರಕಾರ ೭ ಕೋಟಿ ಟನ್ ಬೀಡು ಕಬ್ಬಿಣ ಉತ್ಪತ್ತಿಯಾಗುತ್ತದೆ.

ಸಚಿವರ ಸಂಬಳ ೫೦೦ ರೂ. ಇರಬೇಕು

ರಾಜಸಭೆ ಎಂದು ಕರೆಯುವುದು ಸರಿಯಲ್ಲ

ಪುರಜನರ ಸಭೆಯಲ್ಲಿ ನಿರ್ಣಯ

ಮೈಸೂರು ಸೆ. ೧೨

ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಪುರಜನರ ಬಹಿರಂಗಸಭೆಯು ಬೆಂಗಳೂರಿನ ಶ್ರೀ ಡಿ. ಎನ್. ಕೃಷ್ಣಯ್ಯಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀಗಳಾದ ಎಂ. ಆರ್. ಸಿ. ಬಸಪ್ಪ, ಜೆ. ಸ್ವಾಮಿದಾಸ್, ಬಿ. ಜಿ. ದಾಸ್, ಎಂ. ಎನ್. ತಿಮ್ಮಯ್ಯ, ಎಂ. ಸಿ. ಚಂದ್ರಶೇಖರಜೋಯಿಸ್, ಟಿ. ಪಿ. ಕೋದಂಡಪಿಳ್ಳೆ, ಮತ್ತು ಇತರರು ಭಾಷಣಮಾಡಿ, ಸರ್ಕಾರದವರು ಇತ್ತೀಚೆಗೆ ಮೈಸೂರುಧ್ವಜ ಮತ್ತು ಕಾಯೌ ಶ್ರೀಗೌರಿ ಗೀತೆಯನ್ನು ರದ್ದುಮಾಡಿರುವುದನ್ನೂ ಮತ್ತು ದಸರಾ ದರ್ಬಾರನ್ನು ರಾಜಸಭೆಯಾಗಿ ಪರಿವರ್ತಿಸಿರುವುದನ್ನೂ ತೀವ್ರವಾಗಿ ಖಂಡಿಸಿದರು.

ಅನಂತರ ಕೆಳಗಿನಕಂಡ ನಿರ್ಣಯಗಳು ಸಭೆಯಲ್ಲಿ ಅಂಗೀಕೃತವಾದವು:—

ಮೈಸೂರಿನ ಗಂಡಭೇರುಂಡ ಧ್ವಜ ಮತ್ತು ಕಾಯೌ ಶ್ರೀಗೌರಿ ಗೀತೆಯನ್ನು ತೆಗೆದುಹಾಕಿದುದು ಮೈಸೂರಿನ ಜನರಿಗೆ ತುಂಬಾ ಅನ್ಯಾಯಮಾಡಿದಂತಾಗಿದೆ. ದಸರಾಹಬ್ಬದಲ್ಲಿ ದರ್ಬಾರು ಕಳೆದ ನೂರಾರುವರ್ಷಗಳಿಂದ ಅನೂಚಾನವಾಗಿ ನಡೆದುಕೊಂಡು ಬಂದಿರುವುದರಿಂದಲೂ ಶಾಸ್ತ್ರೋಕ್ತವಾಗಿರುವುದರಿಂದಲೂ ಅದನ್ನು ರಾಜಸಭೆ ಎಂದು ಕರೆಯಲು ಏರ್ಪಡಿಸಿರುವುದು ಜನಾಭಿಪ್ರಾಯಕ್ಕೆ ವಿರೋಧವಾಗಿದೆ.

ಸಂಸ್ಥಾನದ ಆಯಾ ಜಿಲ್ಲೆಯ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಸದಸ್ಯರುಗಳು ತಮ್ಮ ಸಂಬಳಗಳನ್ನು ಆಯಾ ಜಿಲ್ಲಾ ಕ್ಷಾಮಪರಿಹಾರನಿಧಿಗೆ ಕೊಡಬೇಕು.

ಮಂತ್ರಿಗಳು ಕಾರು, ಬಂಗಲೆ, ಇತರ ಭತ್ಯಗಳೆಲ್ಲವನ್ನೂ ತೆಗೆದುಕೊಳ್ಳುತ್ತಿರುವುದರಿಂದ ತಮ್ಮ ಸಂಬಳಗಳನ್ನು ೯೦೦ರೂ. ನಿಂದ ೫೦೦ ರೂ ಗೆ ಇಳಿಸಿಕೊಳ್ಳಬೇಕು.

ಸಂಸ್ಥಾನದ ವಿದ್ಯಾಭ್ಯಾಸಪದ್ಧತಿಯಲ್ಲಿ ಅನೇಕ ಕುಂದುಕೊರತೆಗಳಿರುವುದರಿಂದ ದೇಶದ ಪ್ರಗತಿಗೆ ಅಡ್ಡಿಯಾಗಿದೆ. ಅದನ್ನು ಕೂಡಲೇ ಸರಿಪಡಿಸಬೇಕು.

ವಿವಿಧಘಟ್ಟ ಮಾರಾಟ ತೆರಿಗೆ ರದ್ದಾಗಬೇಕು

ಇಲ್ಲಿದಿದ್ದರೆ ಸತ್ಯಾಗ್ರಹ

ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಸೋಷಲಿಸ್ಟ್‌ಪಕ್ಷದ ಆಶ್ರಯದಲ್ಲಿ ನಡೆದ ಬಹಿರಂಗಸಭೆಯಲ್ಲಿ ಸರ್ಕಾರದವರು ವಿವಿಧಘಟ್ಟದಲ್ಲಿ ಮಾರಾಟತೆರಿಗೆಯನ್ನು ವಿಧಿಸಿರುವುದು ಬಡವರ ಶೋಷಣೆಗೆ ಕಾರಣವಾಗಿರುವುದರಿಂದ ಅದನ್ನು ಕೂಡಲೇ ರದ್ದುಮಾಡಬೇಕೆಂದೂ, ಇಲ್ಲವಾದಲ್ಲಿ ಸಾರ್ವಜನಿಕರ ಸಹಕಾರ ಮತ್ತು ಬೆಂಬಲದಿಂದ ಪಕ್ಷವು ಸತ್ಯಾಗ್ರಹ ಹೂಡಬೇಕಾಗುವುದೆಂದು ಸೂಚಿಸುವ ನಿರ್ಣಯವು ಅಂಗೀಕೃತವಾಯಿತು.

ಅಧ್ಯಕ್ಷತೆವಹಿಸಿದ್ದ ಶ್ರೀ ಸಿ. ಜಿ. ಕೆ. ರೆಡ್ಡಿ ಮತ್ತು ಶ್ರೀಗಳಾದ ಬಿ. ಶ್ರೀಕಂಠಪ್ಪ ಮತ್ತು ಮಿರ್ ನೂರ್ ಹುಸೇನರವರು ಭಾಷಣಮಾಡಿ, ತಮ್ಮ ಕಾರ್ಯಾಚರಣೆಗೆ ಸಾರ್ವಜನಿಕರ ಬೆಂಬಲವನ್ನು ಕೋರಿದರು.

ಮದರಾಸ್ ಕೊಲೆಪಾತಕನ ದಸ್ತಗಿರಿ

ಮದರಾಸಿನ ರೈಲ್ವೆಯಲ್ಲಿ ರುಂಡವಿಲ್ಲದ ದೇಹವೊಂದು ಟ್ರಂಕಿನಲ್ಲಿ ಕಳೆದ ತಿಂಗಳು ೩೧ ನೇ ತಾರೀಖು ಪತ್ತೆಯಾದ ವಿಚಾರದಲ್ಲಿ ಪಿ. ಪಿ. ಮೆನನ್ ಎಂಬಾತನನ್ನು ಬೊಂಬಾಯಿನಲ್ಲಿ ದಸ್ತಗಿರಿಮಾಡಲಾಗಿದೆ. ಪತ್ತೆಯಾದ ದೇಹವು ಅಲ್ಲಿನ ಆಳವಾಂಡರ್ ಎಂಬಾತನೆಂದೂ, ಅದರ ರುಂಡವು ಸಮುದ್ರತೀರದಲ್ಲಿ, ಬಿದ್ದಿತ್ತೆಂದೂ ಹೇಳಲಾಗಿದೆ.

ಕೊಲೆಯಾದ ಆಳವಾಂಡರ್ ಒಬ್ಬ ಫೌಂಟನ್‌ಪೆನ್ ವ್ಯಾಪಾರಿಯೆಂದೂ, ಆತನನ್ನು ಪತ್ರಿಕೆಗೆ ಜಾಹಿರಾತು ಕೇಳಲು ತಾನೂ ಮತ್ತು ತನ್ನ ಪತ್ನಿಯೂ ಹೋಗಿದ್ದರೆಂದೂ, ಆಗ ತನ್ನ ಪತ್ನಿಯ ಮೇಲೆ ಆಳವಾಂಡರ್ ಅತ್ಯಾಚಾರ ನಡೆಸಲು ಯತ್ನಿಸಿದುದರಿಂದ ಆತನನ್ನು ತಾನು ಕೊಲೆಮಾಡಿದುದಾಗಿಯೂ ಮೆನನ್ ಬೊಂಬಾಯಿನ ನ್ಯಾಯಾಧೀಶರ ಮುಂದೆ ತಿಳಿಸಿರುತ್ತಾನೆ.

೧೬ ವರ್ಷದ ಹುಡುಗಿಗೆ ಜೀವಾವಧಿ ಶಿಕ್ಷೆ

ಜುಲೈ ೩೧ ನೇ ತಾರೀಖಿನ ದಿವಸ ಚನ್ನಪಟ್ಟಣದ ತಾಲ್ಲೂಕು ಮಂಗಳವಾರಪೇಟೆ ಎಂಬ ಹಳ್ಳಿಯಲ್ಲಿ ೧೬ ವರುಷದ ಗೌರಮ್ಮ ಎಂಬುವಳು ನಿಂಗಮ್ಮನೆಂಬ ಮತ್ತೋರ್ವ ಕನ್ಯೆಯನ್ನು, ಒಂದುಭಾವಿಯಬಳಿಗೆ ಕರೆದೊಯ್ದು ಕಿವಿಯಲ್ಲಿ ಕಪ್ಪಲವನ್ನು ತೆಗೆಯುವ ನೆಪದಿಂದ ಆಕೆಯ ಓಲೆಯನ್ನು ಅಪಹರಿಸಿ, ಅವಳನ್ನು ಭಾವಿಗೆತಳ್ಳಿ ಕೊಲೆಮಾಡಿದಳೆಂಬ ಅಪರಾಧದ ಮೇಲೆ ಬೆಂಗಳೂರಿನ ಫಸ್ಟ್ ಅಡಿಷನಲ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರು ಗೌರಮ್ಮನಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿದ್ದಾರೆ.

ಭಾಷಾವಾರು ಪ್ರಾಂತ್ಯಕ್ಕೆ ಕಮ್ಯೂನಿಸ್ಟರ ಚಳುವಳಿ

ಭಾಷಾವಾರು ಪ್ರಾಂತ್ಯರಚನೆಗಾಗಿ ಚಳುವಳಿ ಹೂಡಬೇಕೆಂದು ಬೆಳಗಾಮಿನಲ್ಲಿ ನಡೆದ ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಸಭೆಯಲ್ಲಿ ನಿರ್ಧಾರವಾಗಿದೆ. ಹೈದರಾಬಾದಿನಲ್ಲಿ ವಿದ್ಯಾರ್ಥಿಗಳಮೇಲೆ ಗುಂಡುಹಾರಿಸಿದುದನ್ನು ಪ್ರತಿಭಟಿಸುವ ಮತ್ತು ಕ್ಷಾಮಪೀಡಿತ ಪ್ರದೇಶಗಳಲ್ಲಿ ಪರಿಹಾರಕಾರ್ಯವನ್ನು ಪ್ರಾರಂಭಿಸಬೇಕೆಂದು ಬೊಂಬಾಯಿ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯಗಳನ್ನು ಮಾಡಲಾಯಿತು.

ದಸರಾ ವಿಶೇಷಾಧಿಕಾರಿ

ಬೆಂಗಳೂರು ಸೆ. ೧೨

ಮೈಸೂರು ದಸರಾಹಬ್ಬದ ಸಂಬಂಧದಲ್ಲಿ ಅರಮನೆಕಛೇರಿಯ ರಿಜಿಸ್ಟ್ರಾರ್ ಶ್ರೀ ವಿ. ವೇಣುಗೋಪಾಲನಾಯ್ಡುರವರನ್ನು ವಿಶೇಷಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಗಿರಣಿಗಳಲ್ಲಿ ಪಂಚೆ, ಸೀರೆ ತಯಾರಿಕೆ ನಿಲ್ಲಿಸಲು ಸಾಧ್ಯವಿಲ್ಲ

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಕೈಮಗ್ಗದ ಕೈಗಾರಿಕೆ ಬಗ್ಗೆ ಮಾಡಿರುವ ಸಲಹೆಗಳಲ್ಲಿ ಪಂಚೆ, ಸೀರೆ ತಯಾರಿಕೆಯನ್ನು ಗಿರಣಿಗಳಲ್ಲಿ ಬಹಿಷ್ಕರಿಸಿ ಕೈಮಗ್ಗದ ಕೈಗಾರಿಕೆಗೆ ಬಿಡಬೇಕೆನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಕೇಂದ್ರ ಕೈಗಾರಿಕಾ ಸಚಿವರು ಹೇಳುತ್ತಾರೆ.

ದಸರಾ ನೂತನ ವ್ಯವಸ್ಥೆ

ಆಹ್ವಾನಿತರ ಉಡುಪಿನಲ್ಲಿ ಬದಲಾವಣೆಯಿಲ್ಲ

ಮೈಸೂರು ಸೆ. ೧೨

ಈ ಸಾರಿ ಮೈಸೂರಿನಲ್ಲಿ ದಸರಾ ಮಹೋತ್ಸವವು ಮಾಮೂಲಿನಂತೆ ಏರ್ಪಡಿಸಲಾಗಿದೆ. ಒಂಬತ್ತುದಿನಗಳು ಸಂಜೆ ದರ್ಬಾರು, ವಿಜಯದಶಮಿ ದಿನ ಜಂಬೂಸವಾರಿ ನಡೆಯುತ್ತದೆ.

ದರ್ಬಾರ್‌ಹಾಲಿನಲ್ಲಿ ಎಲ್ಲಾ ಆಹ್ವಾನಿತರಿಗೂ ಯಾವಭೇದವೂ ಇಲ್ಲದಂತೆ ಆಸನಗಳನ್ನು ಏರ್ಪಡಿಸಲಾಗುತ್ತದೆ. ಮೈಸೂರುನಗರದಲ್ಲಿ ಮಾಮೂಲಿನಂತೆ ಆಹ್ವಾನಹೋಗುತ್ತಿದ್ದವರಿಗೂ, ಸರ್ಕಾರದ ಉನ್ನತ ಅಧಿಕಾರಿಗಳು, ಬಿರುದಾಂಕಿತರು, ಶಾಸನಸಭಾ ಸದಸ್ಯರು ಕೆಲವು ಪ್ರಮುಖರುಗಳಿಗೆ ಆಹ್ವಾನವುಂಟು. ಆಹ್ವಾನಿತರ ಉಡುಪಿನಲ್ಲಿ ಯಾವಬದಲಾವಣೆಯೂ ಇಲ್ಲ. ಹಿಂದಿನಂತೆಯೇ ಇರುತ್ತದೆ.

ದೇಶದ ನಾನಾಭಾಗಗಳಿಂದ ಸುಮಾರು ೨೫ ಪ್ರಮುಖವ್ಯಕ್ತಿಗಳನ್ನು ಆಹ್ವಾನಿಸಿ, ಸರ್ಕಾರದ ಅತಿಥಿಗಳಾಗಿ ಸತ್ಕರಿಸಲಾಗುತ್ತದೆ. ಉಳಿದವರೆಲ್ಲಾ ತಮ್ಮ ಸ್ವಂತ ಖರ್ಚಿನಿಂದ ನಗರದಲ್ಲಿ ವ್ಯವಸ್ಥೆಮಾಡಿಕೊಳ್ಳಬೇಕಾಗಿದೆ.

ಶ್ರೀಗಳಾದ ಪ್ರಧಾನಿನೆಹರೂ, ಷೇಕ್ ಅಬ್ದುಲ್ಲಾ, ಸಿ. ರಾಜಗೋಪಾಲಾಚಾರಿ, ಭಾವನಗರ ಮಹಾರಾಜರು, ತಿರುವಾಂಕೂರುಮಹಾರಾಜರು, ಬ್ರಿಗೇಡಿಯರ್‌ದಿಲ್ಲಾ ಮುಂತಾದವರನ್ನು ಆಹ್ವಾನಿಸಲಾಗುವುದೆಂದು ಹೇಳಲಾಗಿದೆ.

ಸೂಯಜ್ ಕಾಲುವೆ ಈಜಿಪ್ಟಿಗೆ ಸೇರಿದ್ದು

ಕಾನೂನು ರೀತ್ಯಾ ಸೂಯಜ್ ಕಾಲುವೆಯು ನಮಗೆ ಸೇರಿದೆ ಎಂದು ಈಜಿಪ್ಟಿನ ಮುಖ್ಯಮಂತ್ರಿ ಮತ್ತು ಗೌರ್ನರ್ ಜನರಲ್ ಜ|| ನಗೀಬರು ಹೇಳಿರುತ್ತಾರೆ.

ಸಂಬಳದೊಡನೆ ತುಟ್ಟಿಭತ್ಯ ಐಕ್ಯ

ಜೀವನಮಟ್ಟವು ವಿಶೇಷವಾಗಿ ಏರಿಹೋಗಿರುವುದರಿಂದ ಕೆಲಸಗಾರರಿಗೆ ಕೊಡುತ್ತಿರುವ ತುಟ್ಟಿಭತ್ಯವನ್ನು ಸಂಬಳದೊಡನೆ ಸೇರಿಸುವ ಬಗ್ಗೆ ಹೈದರಾಬಾದ್ ಸರ್ಕಾರವು ತುಟ್ಟಿಭತ್ಯಸಮಿತಿಗೆ ತನ್ನ ಒಪ್ಪಿಗೆ ಸೂಚಿಸಿರುವುದಾಗಿ ಗೊತ್ತಾಗಿದೆ.

ಖಾಯಂ ಪರಿಹಾರ ಅತ್ಯಗತ್ಯ

ಕರ್ನಾಟಕದ ನಾನಾ ಭಾಗಗಳಲ್ಲೂ ಮೈಸೂರು ಸಂಸ್ಥಾನದಲ್ಲೂ ಕ್ಷಾಮದ ಹಾವಳಿ ತೀವ್ರವಾಗಿದೆ. ಈ ಸಮಸ್ಯೆ ಪರಿಹಾರಕ್ಕೆ ಏನಾದರೂ ಖಾಯಂ ಕಾರ್ಯಕ್ರಮಗಳು ಅತ್ಯಗತ್ಯ-ಎಂದು ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಹೇಳಿರುವರು.

ಸರ್ಕಾರಿ ಆಜ್ಞೆ

ಕಾವೇರೀ ಸರ್ಕಲ್ಲಿನ ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಕೃಷ್ಣಮೂರ್ತಿರಾಯರಿಗೆ ನಿವೃತ್ತರಾಗುವ ಮುನ್ನ ೩ ತಿಂಗಳ ರಜಾ ಕೊಡಲಾಗಿದೆ.

ಕೋಲಾರ ಚಿನ್ನದ ಗಣಿಗಳಲ್ಲಿ ನಡೆದ ಶಿಲಾಸ್ಫೋಟನೆಬಗ್ಗೆ ನೇಮಿಸಿರುವ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿ ಕೋಲಾರದಜಿಲ್ಲಾಧಿಕಾರಿ ಶ್ರೀ ಕೆ ಪಿ.ರಾಮನಾಥಯ್ಯನವರು ಕೆಲಸಮಾಡಬೇಕಾಗಿರುವುದರಿಂದ ಆ ಕಾಲದಲ್ಲಿ ಕೆ. ಜಿ. ಎಫ್ ಸ್ಪೆಷಲ್‌ಮ್ಯಾಜಿಸ್ಟ್ರೇಟ್ ಶ್ರೀ ಡಿ. ಜೆ. ಬಾಲರಾಜ್‌ರವರು ಜಿಲ್ಲಾಧಿಕಾರಿಗಳ ಕೆಲಸವನ್ನು ನೋಡಿಕೊಳ್ಳುವರು.

ದುರಂತಕ್ಕೀಡಾದವರ ಶವ ದೊರೆಯಿತು

ಕೃಷ್ಣಾನದಿ ದುರಂತದಲ್ಲಿ ಮರಣಕ್ಕೀಡಾದ ೩ ಜನ ಇಂಜನಿಯರುಗಳ ಮತ್ತು ಇತರ ಮೂವರ ಕಳೇಬರವು ನಿನ್ನೆಯದಿನ ಆಣೆಕಟ್ಟಿನ ಆಚೆ ದೊರೆತುವು. ಇನ್ನು ಒಂದು ದೇಹವು ಸಿಕ್ಕಿಲ್ಲ.

ಮೈಸೂರು ಪೇಟೆಧಾರಣೆ

ತಾ|| ೧೧-೯-೫೨

ಪಲ್ಲಕ್ಕೆ.	ರೂ-ಅ.	ರೂ-ಅ
ಕಡಲೇಕಾಯಿ	6- 4	20- 8
ಎಳ್ಳು	61-	73- 12
ಹರಳು	44- 0	
ಹುಚ್ಚೆಳ್ಳು	46-8	
ಹುರುಳಿ	53- 2	54- 8
ಹೆಸರು	61- 2	——
ಅಲಸಂದೆ	72- 0	76- 8
ಮೆಣಸಿನಕಾಯಿ	15- 12	——
ಹುಣಸೇಹಣ್ಣು	3- 9	5- 4
ಸೀಗೇಪುಡಿ	5- 1	5- 3
ಬೆಲ್ಲ	4- 0	4- 8
ತೆಂಗಿನಕಾಯಿ 1100ಕ್ಕೆ	159-	236

ಎಗ್. ಜಿ. ಐಯ್ಯಂಗಾರ್ ಭಾರತಕ್ಕೆ

ಜಿನೀವಾದಲ್ಲಿ ಡಾ|| ಗ್ರಹಾಂ ನಡೆಸುತ್ತಿದ್ದ ಕಾಶ್ಮೀರ ಸಮಸ್ಯೆ ಮಾತುಕತೆಗಳು ನಿನ್ನೆ ಮುಕ್ತಾಯವಾದುವು. ಭಾರತದ ಪ್ರತಿನಿಧಿ ಶ್ರೀ ಎಗ್. ಜಿ. ಐಯ್ಯಂಗಾರ್‌ರವರು ನಿನ್ನೆ ಜಿನೀವಾದಿಂದ ಭಾರತಕ್ಕೆ ಪ್ರಯಾಣಮಾಡಿರುವರು.

ಅಲ್ಲಿ ನಡೆದ ಚರ್ಚೆಗಳು ಸಮಾಧಾನವಾಗಿದ್ದುವೆಂದೂ ಆದರೆ ಉತ್ತಮ ತೀರ್ಮಾನಗಳಾಗದುದರಿಂದ ತಮಗೆ ನಿರಾಶೆಯುಂಟಾಗಿದೆಯೆಂದು ಶ್ರೀ ಎಗ್. ಜಿ. ಐಯ್ಯಂಗಾರ್ ತಿಳಿಸಿರುವುದಾಗಿ ಹೇಳಲಾಗಿದೆ.

ಭೂಸುಧಾರಣೆ ಜಾರಿಗೆ ತರಲು ಹೊಸ ಬ್ಯಾಂಕು ಸ್ಥಾಪನೆ

ಈಜಿಪ್ಟಿನಲ್ಲಿ ಹೊಸ ಸರ್ಕಾರವು ಭೂಸುಧಾರಣೆಗಳನ್ನು ಜಾರಿಗೆ ತರಲು ಹೊಸಕಾರ್ಯಕ್ರಮಗಳನ್ನು ಏರ್ಪಡಿಸಲಿವೆ. ಇದಕ್ಕೆ ಅಗತ್ಯವಾದ ಹಣಸಹಾಯ ಮಾಡಲು ಒಂದು ವಿಶೇಷ ವ್ಯವಸಾಯ ಬ್ಯಾಂಕನ್ನು ಸ್ಥಾಪಿಸುವುದು ಈ ಬ್ಯಾಂಕಿಗೆ ೩೦ ಲಕ್ಷ ಡಾಲರುಗಳ ಬಂಡವಾಳಬೇಕಾಗುತ್ತದೆ ಈ ಬಂಡವಾಳವನ್ನು ಹೇಗೆ ಪಡೆಯಬೇಕೆಂಬ ವಿಷಯ ಪರಿಶೀಲನೆಯಲ್ಲಿದೆ.

ಈಗಿನ ಜ|| ನಗೀಬರ ಸರ್ಕಾರವನ್ನು ಕ್ರಾಂತಿಕಾರಕ ಸರ್ಕಾರವೆಂದು ಕರೆಯಲಾಗಿದೆ. ಮಂತ್ರಿಗಳೆಲ್ಲರೂ ಬೆಳಗ್ಗೆಎದ್ದೊಡನೆಯೇ ೭-೩೦ಗಂಟೆ ಯಿಂದಲೇ ತಮ್ಮ ಕಾರ್ಯದಲ್ಲಿ ತೊಡಗಬೇಕಾಗಿದೆ.

ಡಾ|| ರಾಧಾಕೃಷ್ಣನ್ ಪ್ಯಾರಿಸ್ಸಿಗೆ

ಪ್ಯಾರಿಸ್ಸಿನಲ್ಲಿ ನವಂಬರ್‌ನಲ್ಲಿ ನಡೆಯುವ ವಿಶ್ವಸಂಸ್ಥೆಯ ಯುನೆಸ್ಕೋ ಅಧಿವೇಶನಕ್ಕೆ ಭಾರತ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರ ನಾಯಕತ್ವದಲ್ಲಿ ಒಂದು ನಿಯೋಗ ಹೋಗಲಿದೆಯೆಂದು ಗೊತ್ತಾಗಿದೆ.

§ ಪ್ರಪಂಚದಲ್ಲಿರುವ ಜನಸಂಖ್ಯೆಯಲ್ಲಿ ಶೇಕಡ ೫೦ ರಷ್ಟು ಓದಲುಬರೆಯಲುಬರದಾಗಿರುತ್ತಾರೆಂದುಯುನೆಸ್ಕೋವರದಿಯು ಪ್ರಕಟಿಸಿದೆ ಈ ಸಂಖ್ಯೆ ೧೨೦೦ ಲಕ್ಷವಿದೆ.

ಪರಿಹಾರ ನಿಧಿಗೆ ಸಹಾಯ

ಮೈಸೂರು ಸೆ. ೧೨

ಕ್ಷಾಮ ಪರಿಹಾರ ನಿಧಿಗೆ ಈ ಕೆಳಗೆ ಕಂಡಂತೆ ಮಹನೀಯರು ಧನಸಹಾಯ ಮಾಡಿರುತ್ತಾರೆ:—

ಶ್ರೀಗಳಾದ ಇ. ಪಿ. ನಂಜಪ್ಪ ೫೧ ರೂ ಇಂದ್ರಭವನ ೨೦೦ ರೂ. ಹೊಟೇಲು ಕೆಲಸಗಾರರ ಸಂಘದ ನಾಟಕದಿಂದ ೩೯೭ ರೂ. ಡಿ. ಪುಟ್ಟಯ್ಯ ೧೦೧ ರೂ, ಚಾಮುಂಡೇಶ್ವರಿ ಭವನದ ಶ್ರೀ ಪಿ. ವಿ. ರಾಮಯ್ಯರ್ ೨೦೦ ರೂ, ಪಿ. ವಿ. ಸುಬ್ರಹ್ಮಣ್ಯಅಯ್ಯರ್ ೫೦ ರೂ, ಬಾಂಬೆ ಆನಂದಭವನ ಮಾಲೀಕರು ೨೧ ರೂಪಾಯಿಗಳು.

ಪಾಕೀಸ್ಥಾನದಲ್ಲಿ ವಿಧ್ವಂಸಿಕ ಭಾವನೆ ಹೆಚ್ಚುತ್ತಿದೆ

ಜಿನ್ನಾರವರು ನಿಧನರಾಗಿ ನಿನ್ನೆಗೆ ೪ ವರ್ಷಗಳಾದವು ಅವರ ಸಮಾಧಿಗೆ ನಿನ್ನೆ ಸಹಸ್ರಾರು ಜನರು ತಮ್ಮ ಪ್ರಣಾಮವನ್ನು ಸಲ್ಲಿಸಿದರು. ಸಂಜೆ ಭಾರಿ ಬಹಿರಂಗ ಸಭೆ ನಡೆಯಿತು ಈ ಸಭೆಯಲ್ಲಿ ಪಾಕೀಸ್ಥಾನದ ಗೌರ್ನರ್ ಜನರಲ್‌ರವರು ಮಾತನಾಡುತ್ತಾ ಇತ್ತೀಚೆಗೆ ಪಾಕೀಸ್ಥಾನದಲ್ಲಿವಿಧ್ವಂಸಿಕ ಭಾವನೆಗಳು ಹೆಚ್ಚಾಗುತ್ತಿವೆ.ಇದರಿಂದ ರಾಷ್ಟ್ರದ ಸಂಘಟನೆಗೆ ವಿಶೇಷವಾಗಿ ಕುಂದುಕವನ್ನುಂಟುಮಾಡುತ್ತದೆ—ಎಂದು ಹೇಳಿರುವರು.

ಇಂಗ್ಲೀಷ್ ಪಾಠ ರದ್ದು

೧೯೫೫ನೇ ವರ್ಷದಿಂದ ಪಶ್ಚಿಮಬಂಗಾಳದ ಸೆಕೆಂಡರಿ ಪಾಠಶಾಲೆಗಳಲ್ಲಿ ಇಂಗ್ಲೀಷು ಪಾಠವನ್ನು ತೆಗೆದುಹಾಕಲಾಗುವುದಾಗಿ ಸರ್ಕಾರವು ಪ್ರಕಟಿಸಿದೆ.

೨೭೦೦೦ ರಕ್ಷಣಾ ವ್ಯವಸ್ಥೆಗಾರರ ಮುಷ್ಕರ

ಪೂನಾದಲ್ಲಿ ರಕ್ಷಣಾ ವ್ಯವಸ್ಥೆಯ ಮತ್ತೊಂದುಗುಂಪಿನ ೧೩೫೦೦ ಜನರು ನಿನ್ನೆಯಿಂದ ಮುಷ್ಕರ ಹೂಡಿದ್ದಾರೆ. ಒಟ್ಟು ೨೭೦೦೦ ರಕ್ಷಣಾವ್ಯವಸ್ಥೆಗಾರರುಮುಷ್ಕರವನ್ನು ಹೂಡಿದಂತಾಗಿದೆಯೆಂದು ಗೊತ್ತಾಗಿದೆ.

ಮಹಾತ್ಮರ ಉಪದೇಶ! ೯೨ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ!!!

ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

★ ಸಂತಾನ ಸಿಂಧೂರ ★

† ಬಹಿಷ್ಠೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ. † ಅಕ್ರಮಸೂತಕ, ಕ್ರಮತಪ್ಪಿ ಬಹಿಷ್ಠೆ ಆಗುವುದನ್ನು ನಿಲ್ಲಿಸುತ್ತದೆ † ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ † ಬಂಜೆತನವನ್ನು ಕೊನೆಗಾಣಿಸಿ ಸಂತಾನಕೊಡುವ ಸಿದ್ಧೌಷಧ. ೨ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ. ಟಪಾಲ್ ಖರ್ಚು ೧ ರೂ. —(ಪಥ್ಯವಿಹಾರ ಗುಪ್ತ.)

ಅಡ್ರೆಸ್:—ಎ. ರಾಮಸ್ವಾಮಿ ಅಯ್ಯರ್ ಸೆ "ಸಂತಾನಸಿಂಧೂರ" ಆಫೀಸ್, ೭೨೮ ಸೂಲಡಿರಸ್ತೆ ದಕ್ಷಿಣಕ್ರಾಸ್. (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು.

ವಿ.ಸೂ:—ಇದುವರೆಗೂ ಅಂಬಳೆ ಮತ್ತು ಮೈಸೂರು ಸೊಪ್ಪಿನಕೋಳದ ಬೀದಿಯಲ್ಲಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ನಮ್ಮ ಸ್ವಂತ ಕಟ್ಟಡಕ್ಕೆ ವರ್ಗಾಯಿಸಿರುತ್ತೆ. ವಿಶೇಷ ಮಾಹಿತಿಗೆ ೨ ಅ. ಸ್ಟಾಂಪು ಕಳುಹಿಸಿ.

ವುಡ್‌ಲ್ಯಾಂಡ್ಸ್

೭-೯-೫೨ ರಿಂದ ಅಮೋಘ ಪ್ರಾರಂಭ

ಗುಮಾಸ್ತ (ಹಿಂದಿ)

ಪಾತ್ರ:—ನಿಗಾರ್, ವಾಸ್ತಿ, ಕುಲ್‌ದೀಪ್ ಮಿಜಾತಮುಷ್ರಾಫ್

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 21

೧೩-೯-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ದಸರಾ ಮಹೋತ್ಸವ ನಿಲ್ಲಿಸಲು ನೆಹರೂಗೆ ತಂತಿ

ಮೈಸೂರು ಸೆ. ೧೩

ಮಳೆ ಬರದೆ ಪೈರು ಹಾಳಾಗುತ್ತಿದೆ. ಜಾನುವಾರು ನೀರು ಮೇವಿಲ್ಲದೆ ಸಾಯುತ್ತಿವೆ. ಪ್ರಾಂತ್ಯಾದ್ಯಂತ ಕ್ಷಾಮಪರಿಸ್ಥಿತಿ ತಲೆದೋರಿದೆ. ಆಹಾರವಿಲ್ಲದ ಕಾರ್ಮಿಕರು ಮಕ್ಕಳನ್ನು ಮಾರುತ್ತಿದ್ದಾರೆ ಇಂತಹ ಸಮಯದಲ್ಲಿ ನಮ್ಮ ಮಂತ್ರಿಗಳು ಜನತೆಯ ವಿರುದ್ಧವಾಗಿ ರಾಜಸಭೆಯನ್ನು ಏರ್ಪಡಿಸಿರುವರು. ಇದಕ್ಕೆ ತಮಗೂ ಆಹ್ವಾನವುಂಟೆಂದು ತಿಳಿಯಬರುತ್ತದೆ.

ರಾಜಸಭೆಯನ್ನು ಕೂಡಲೇ ನಿಲ್ಲಿಸಿ, ಸರ್ಕಾರೀ ಡಿಪೋಗಳಲ್ಲಿಯೂ ಆಹಾರ ದೊರೆಯದೆ ಕ್ಷಾಮಪೀಡಿತವಾದ ದೇಶವನ್ನು ಕಾಪಾಡಿ ಎಂದು ಎಂ. ಆರ್. ಸಿ. ಬಸಪ್ಪನವರು ಈದಿನ ಇಂದೂರಿನಲ್ಲಿ ಎ. ಐ. ಸಿ. ಸಿ. ಯಲ್ಲಿ ಭಾಗವಹಿಸುತ್ತಲಿರುವ ಪ್ರಧಾನಿ ನೆಹರೂರವರಿಗೆ ತಂತಿ ಕಳುಹಿಸಿರುತ್ತಾರೆ.

ದಕ್ಷಿಣಆಫ್ರಿಕವರ್ಣಭೇದ ನೀತಿ ವಿರುದ್ಧ ಚಳುವಳಿ

ಎ. ಐ. ಸಿ. ಸಿ. ಬೆಂಬಲ

ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯ ವಿರುದ್ಧ ಅಹಿಂಸಾತ್ಮಕ ಸತ್ಯಾಗ್ರಹವನ್ನು ಪ್ರಾರಂಭಿಸಿರುವ ಆಫ್ರಿಕನ್ನರಿಗೂ ಭಾರತೀಯರಿಗೂ ಶುಭಾಶಯವನ್ನು ಕೋರುವ ನಿರ್ಣಯವನ್ನು ನಿನ್ನೆಯದಿನ ಇಂದೂರಿನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆ ನಡೆಸಿ ಈದಿನ ನಡೆಯಲಿರುವ ಎ. ಐ. ಸಿ. ಸಿ. ಯಲ್ಲಿ ಮಂಡಿಸಲು ನಿರ್ಧರಿಸಿತು.

ಉತ್ತರ ಆಫ್ರಿಕಾ ಮತ್ತು ಟ್ಯುನೀಷಿಯಾದಲ್ಲಿ ಜನರ ಸ್ವಾತಂತ್ರ ಚಳುವಳಿಗೆ ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುವ ನಿರ್ಣಯ, ಭಾರತ ವಿದೇಶಾಂಗ ನೀತಿಗೆ ಕಾಂಗ್ರೆಸ್ಸಿನ ಅನುಮೋದನೆ ನಿರ್ಣಯ, ಹರಿಜನ ಪತ್ರಿಕೆ ಸಂಪಾದಕ ಆಚಾರ್ಯ ಮಶ್ರೂವಾಲಾರವರ ಮತ್ತು ಕೆಲವು ಕಾಂಗ್ರೆಸ್ಸಿಗರ ನಿಧನದಬಗ್ಗೆ ಸಂತಾಪ ಸೂಚಿಸುವ ನಿರ್ಣಯಗಳನ್ನು ಸಹ ಎ. ಐ. ಸಿ. ಸಿ. ಯಲ್ಲಿ ಮಂಡಿಸಲು ಕಾರ್ಯಕಾರಿ ಸಮಿತಿಯು ನಿರ್ಧರಿಸಿತು.

ಕಾಶ್ಮೀರ ಬಗ್ಗೆ ಮತ್ತೊಂದು ಸಂಧಾನ ಸಭೆಯೇ

ಭಾರತ ಪಾಕೀಸ್ತಾನಗಳ ಪ್ರತಿನಿಧಿಗಳು ಭೇಟಿಮಾಡಿ ಕಾಶ್ಮೀರ ಬಗ್ಗೆ ವಿಚಾರ ವಿನಿಮಯ ನಡೆಸಿದುದು ಇದೇ ಪ್ರಥಮಬಾರಿ. ಉಭಯತ್ರರಲ್ಲೂ ಸೌಹಾರ್ದಯುತ ಮಾತುಗಳು ನಡೆದುವು. ನಿರೀಕ್ಷಿಸಿದಷ್ಟು ಒಳ್ಳೆಯದಾಗಿಲ್ಲ. ಇನ್ನೂ ಮೂಲ ವಿಷಯಗಳು ನಿರ್ಧಾರವಾಗಬೇಕಾಗಿದೆ. ಮತ್ತೊಂದು ಸಭೆಯು ಡಾ|| ಗ್ರಹಾಂರವರದಿಯನ್ನು ಭದ್ರತಾಸಮಿತಿ ಪರಿಶೀಲಿಸಿದನಂತರ ಸೇರಬಹುದು ಅದರಲ್ಲಿ ಭಾಗವಹಿಸಲು ಸಿದ್ಧವಿದ್ದೇವೆಂದು ಜಿನೀವಾದಲ್ಲಿ ಕಾಶ್ಮೀರ ಬಗ್ಗೆ ಮಾತುಕತೆ ನಡೆಸಿ ಹಿಂತಿರುಗಿದ ಭಾರತ ಪ್ರತಿನಿಧಿ ಶ್ರೀ ಎಗ್. ಜಿ. ಅಯ್ಯಂಗಾರ್‌ರವರು ಹೇಳಿರುವರು.

ಬಹಿರಂಗ ವಿಚಾರಣೆ

ಕಳೆದವಾರ ಹೈದರಾಬಾದಿನಲ್ಲಿ ವಿದ್ಯಾರ್ಥಿಗಳಮೇಲೆ ಗೋಲೀಬಾರು ನಡೆಸಿದ ಪ್ರಕರಣವನ್ನು ತನಿಖೆಮಾಡಲು ಸರ್ಕಾರದವರು ನಿಯಮಿಸಿರುವ ಸಮಿತಿಯು ತನ್ನ ಕಾರ್ಯಕಲಾಪಗಳನ್ನು ಬರುವ ಶುಕ್ರವಾರದಿಂದ ಬಹಿರಂಗವಾಗಿ ಪ್ರಾರಂಭಿಸುವುದಾಗಿ ಗೊತ್ತಾಗಿದೆ.

ಅಫೀಮುತಯಾರಿಕೆ, ಸೇವನೆ ನಿರೋಧ

ಹೈದರಾಬಾದ್ ಪ್ರಾಂತ್ಯದಾದ್ಯಂತ ಅಫೀಮು ತಯಾರಿಕೆ, ಸೇವನೆಯನ್ನು ಅಲ್ಲಿಯ ಸರ್ಕಾರವು ನಿಶೇಧಿಸಿ ಆಜ್ಞೆ ಮಾಡಿದೆ.

ಕಾಲುನಡಗೆ ಪ್ರವಾಸ

ಭೂದಾನಯಜ್ಞ ಚಳುವಳಿ ನಡೆಸುತ್ತಲಿರುವ ಆಚಾರ್ಯ ವಿನೋಬಾಭಾವೆಯವರು ಕಾಶಿಯಿಂದ ಕಾಲುನಡಗೆ ಪ್ರವಾಸವನ್ನು ಪ್ರಾರಂಭಿಸಿದ್ದಾರೆ. ಉತ್ತರಪ್ರದೇಶದಲ್ಲಿ ಈ ಚಳುವಳಿಯ ಫಲವಾಗಿ ಮೂರೂವರೆ ಲಕ್ಷ ಎಕರೆ ಜಮೀನನ್ನು ಸಂಗ್ರಹಿಸಲಾಗಿದೆ.

ಗಣಪತಿ ಮಂಗಳಾರತಿ

ರಾಜಧಾನಿಯ ವರಲಕ್ಷ್ಮಿ ಸಂಗೀತ ಮಂದಿರದ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ನಾಳೆ ಸಂಜೆ ೫ ಗಂಟೆಗೆ ವಿದ್ಯಾಗಣಪತಿ ಮಹಾಮಂಗಳಾರತಿ ಪ್ರಯುಕ್ತ ಸಂಗೀತ ಏರ್ಪಡಿಸಲಾಗಿದೆ.

ಇದೇ ಸಂಜೆ ೭ ಗಂಟೆಗೆ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದವರು ತಮ್ಮ ಕಾರ್ಯಾಲಯದಲ್ಲಿ ಮಹಾಮಂಗಳಾರತಿಯನ್ನು ಶ್ರೀ ಕೆ. ವಿ. ಶಂಕರೇಗೌಡರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದಾರೆ.

ಹಿಂದೂಮುಸ್ಲಿಮರ ಸಂಘಟನೆಗೆ ಹೋರಾಡುತ್ತಿದ್ದೇವೆ

ಕಾಶ್ಮೀರ ಪ್ರಜೆಗಳು ಭಾರತದೊಡನೆ ಐಕ್ಯವಾಗಿ ಹಿಂದೂ ಮುಸ್ಲಿಮರ ಸಂಘಟನೆಗೆ ಹೋರಾಡುತ್ತಿದ್ದೇವೆ. ಇದರಲ್ಲಿ ಯಾರಿಗೂ ಲಾಭವಾಸೆಯಿಲ್ಲ ಭಾರತ ನ್ಯಾಯ, ಸಮಾನತೆಧ್ಯೇಯವೇ ಕಾಶ್ಮೀರವು ಭಾರತವನ್ನು ಸೇರುವಂತೆ ಮಾಡಿತು. ಅಲ್ಲದೆ ಭಾರತಕ್ಕೆ ಭೂ ವಿಸ್ತರಣೆ ಆಸೆಯಿಲ್ಲ. ಜಾತ್ಯಾತೀಯ ನೀತಿಯೇ ಭಾರತದ ಧೋರಣೆ ಅದನ್ನುನಾವು ಒಪ್ಪಿಕೊಂಡಿದ್ದೇವೆಂದು ಕಾಶ್ಮೀರ ಪ್ರಧಾನಿ ಷೇಕ್‌ಅಬ್ದುಲ್ಲಾರವರು ನಿನ್ನೆ ಇಂದೂರಿನ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಹೇಳಿರುವರು.

ಚುನಾಯಿತ ರಾಜ್ಯಾಧಿಪತಿ ಮತ್ತು ಧ್ವಜದ ವಿಷಯವಾಗಿ ಪ್ರಸ್ತಾಪಿಸಿ, ೩೩ ವರ್ಷಗಳಿಂದ ನಡೆಯುತ್ತಿದ್ದ ನಿರಂಕುಶಾಧಿಪತ್ಯವನ್ನು ತೊಡೆದು ಹಾಕಲು ಕಾಶ್ಮೀರಿಗಳು ಹೋರಾಡಿದ ಫಲವಾಗಿ ರಾಜ್ಯಾಂಗಸಭೆಯು ಚುನಾಯಿತ ರಾಜ್ಯಾಧಿಪತಿಯನ್ನು ಹೊಂದಲು ತೀರ್ಮಾನಿಸಿದೆ. ಇದರಲ್ಲಿ ಕೋಮುವಾರು ಭಾವನೆ ಯೇನೂ ಇಲ್ಲ.

ಕಾಶ್ಮೀರಿಗಳು ತಮ್ಮ ಧ್ವಜದ ಅಡಿಯಲ್ಲಿ ಹೋರಾಡಿರುವುದರಿಂದ ಆ ಮನಸ್ಸಿನ ಭಾವನೆಯನ್ನೂ ಹೋರಾಟ ನಿರ್ಧಾರದ ಸಂಕೇತವನ್ನು ಸದಾ ಸೂಚಿಸಲು ನಮ್ಮ ಧ್ವಜವನ್ನು ಉಳಿಸಿಕೊಂಡಿದ್ದೇವೆ. ಹಾಗೆಂದರೆ ಭಾರತ ಧ್ವಜಕ್ಕೆ ಯಾವ ಕುಂದುಕವಿರುವುದಿಲ್ಲ. ಭಾರತದ ಇತರ ಪ್ರದೇಶಗಳಲ್ಲಿ ಭಾರತ ಧ್ವಜಕ್ಕೆ ಯಾವ ರೀತಿ ಗೌರವವಿದೆಯೋ ಅದೇಗೌರವ ನಮ್ಮ ಪ್ರಾಂತ್ಯದಲ್ಲೂ ಇದೆ ಎಂದು ಷೇಕ್ ಅಬ್ದುಲ್ಲಾ ಹೇಳಿದರು.

ಬಂಗಾಳದ ಗಡಿಯಲ್ಲಿ ಪಾಕೀಸ್ಥಾನದ ಸೈನ್ಯ

ಬಂಗಾಳದ ಪೂರ್ವ ಮತ್ತು ಪಶ್ಚಿಮ ಗಡಿ ಭಾಗಗಳಲ್ಲಿ ಪಾಕೀಸ್ಥಾನವು ತನ್ನ ಸೈನ್ಯವನ್ನು ಜಮಾಯಿಸುತ್ತಿದೆಯೆಂದು ವರದಿಯಾಗಿದೆ.

ವಿಶ್ವಸಮಸ್ಯೆ ಬಗೆಹರಿಸಲು ಮಹಾರಾಷ್ಟ್ರಗಳು ಯತ್ನಿಸಬೇಕು

ಎ. ಐ ಸಿ. ಸಿ. ಯಲ್ಲಿ ನಿರ್ಣಯ

ಪ್ರಪಂಚದ ಭವಿಷ್ಯವನ್ನು ಇತ್ಯರ್ಥಪಡಿಸುವ ವಿಶೇಷ ಜವಾಬ್ದಾರಿಯು ಮಹಾರಾಷ್ಟ್ರಗಳ ಮೇಲೆ ಬಿದ್ದಿರುವುದರಿಂದ ಆ ರಾಷ್ಟ್ರಗಳ ನಾಯಕರು ಒಟ್ಟಿಗೆ ಕಲೆತು ಜನರಲ್ಲಿ ಉಂಟಾಗಿರುವ ಭಯವನ್ನು ಹೋಗಲಾಡಿಸಲು ಸೂಕ್ತಕಾರ್ಯಕ್ರಮಗಳನ್ನು ಕೂಡಲೆ ಕೈಗೊಳ್ಳಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಕಾಂಗ್ರೆಸ್ ಅಧ್ಯಕ್ಷ ನೆಹರೂರವರು ಈದಿನ ಇಂದೂರಿನಲ್ಲಿ ಸೇರಿರುವ ಎ. ಐ. ಸಿ. ಸಭೆಯಲ್ಲಿ ಮಂಡಿಸಿದರು.

೩ ನೇ ಮಹಾಯುದ್ಧ ನಡೆಯುವ ಸಂಭವವಿಲ್ಲ

ಅಮೆರಿಕವು ಮಿಲಟರಿ ದೃಷ್ಟಿಯಿಂದ ಅತಿಬಲವಾದ ರಾಷ್ಟ್ರವಾಗಿರುವುದರಿಂದ ಮತ್ತೊಂದು ಮಹಾಯುದ್ಧ ನಡೆಸಿದರೆ ತಮಗೂ ಮತ್ತು ಇತರರಿಗೂ ಮಹಾಹಾನಿ ಉಂಟಾಗುವುದೆಂದು ರಷ್ಯದ ಸ್ಟಾಲಿನ್‌ರವರು ತಿಳಿಸಿರುವರೆಂದೂ, ಆದ್ದರಿಂದ ಮೂರನೇ ಮಹಾಯುದ್ಧವು ನಡೆಯುವ ಸಂಭವವಿಲ್ಲವೆಂದೂ, ಅಮೆರಿಕದ ಸುಪ್ರಸಿದ್ಧ ಪತ್ರಿಕೊದ್ಯೋಗಿ ಲೂಯಿಫಿಷರ್‌ರವರು ಹೈದರಾಬಾದಿನಲ್ಲಿ ತಿಳಿಸಿರುತ್ತಾರೆ ವಿಶ್ವದಲ್ಲಿ ಇನ್ನೊಂದು ಯುದ್ಧ ನಡೆದರೆ, ಅದರಲ್ಲಿ ಯಾವ ರಾಷ್ಟ್ರವೂ ಜಯಗಳಿಸುವುದಕ್ಕೆ ಸಾಧ್ಯವಿಲ್ಲದೆ ಎಲ್ಲ ರಾಷ್ಟ್ರಗಳೂ ನಾಶವಾಗುವುದೆಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

೨ ಸಾವಿರ ರೂ. ಇನ್ಷೂರ್ಡ್ ಕವರಿನ ಅಪಹಾರ

ಬೆಂಗಳೂರು ನಗರದ ಮಾರ್ಕೆಟ್ ಅಂಚೆ ಕಛೇರಿಯಲ್ಲಿ ಹಣ್ಣಿನ ವರ್ತಕರಾದ ಹಾಜಿ ಮಹಮದ್ ಅಬ್ದುಲ್ಲಾ ಹುಸೇರವರ ಗುಮಾಸ್ತರು ೨ ಸಾವಿರ ರೂ. ಗಳುಳ್ಳ ಇನ್ಷೂರ್‌ಮಾಡಿದ ಕವರೊಂದನ್ನು ಕಳೆದುಕೊಂಡರೆಂದು ವರದಿಯಾಗಿದೆ. ಅವರು ಇನ್ಷೂರ್ಡ್ ಕವರಿಗೆ ಸ್ಟಾಂಪು ಹಚ್ಚುತ್ತಿದ್ದಾಗ, ಅವರ ಗಮನವನ್ನು ಒಬ್ಬ ವ್ಯಕ್ತಿಯು ಬೇರೆಕಡೆಗೆ ಎಳೆದು, ಕವರಿನೊಡನೆ ಪರಾರಿಯಾದನೆಂದು ಹೇಳಲಾಗಿದೆ.

ದಸರಾಕ್ಕೆ ರೇಷನ್ ಇಲ್ಲ

ಮೈಸೂರು ಸೆ. ೧೩

ಮಳೆಬಾರದೆ ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರಿ ಸಾಮಾನ್ಯ ಆಹಾರ ಬೇಡಿಕೆಗಳನ್ನು ಸಹಾ ಒದಗಿಸಲು ಕಷ್ಟವಾಗಿರುವುದರಿಂದ ಮೈಸೂರಿಗೆ ದಸರಾಮಹೋತ್ಸವಕ್ಕಾಗಿ ಬರುವವರಿಗೆ ರೇಷನ್ ಕೊಡಲು ಸಾಧ್ಯವಾಗುವುದಿಲ್ಲ ಆದ್ದರಿಂದ ಈ ಮಹೋತ್ಸವಕ್ಕೆ ಬರುವವರು ತಮ್ಮ ರೇಷನ್‌ಗೆ ತಾವೇ ತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕು.

ಮೈಸೂರುನಗರವು ಈಗ ರೇಷನ್ ರದ್ದುಗೊಳಿಸಿರುವ ಪ್ರದೇಶವಾದ್ದರಿಂದ ಆಹಾರ ಧಾನ್ಯ ತರಲು ಏನೂ ಅಡ್ಡಿಯಿಲ್ಲ ಎಂಬುದಾಗಿ ಮೈಸೂರು ಸರ್ಕಾರವು ಪ್ರಕಟಣೆಯಿತ್ತಿದೆ.

ದೇಶದಲ್ಲಿ ಗ್ರಾಮಾಭಿವೃದ್ಧಿ ಯೋಜನೆ ವಿಸ್ತರಣೆ

ಬೆಂಗಳೂರು ಸೆ. ೧೩

ಡಾ|| ಎಂ. ವಿಶ್ವೇಶ್ವರಯ್ಯನವರ ಗ್ರಾಮಾಭಿವೃದ್ಧಿ ಯೋಜನೆಯು ಮೈಸೂರಿನಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆಯೆಂಬುದನ್ನು ಪರಿಶೀಲಿಸಲು ಬೊಂಬಾಯಿ ಸರ್ಕಾರದ ಕೆಲವು ಅಧಿಕಾರಿಗಳು ಇಲ್ಲಿಗೆ ಬರಲಿರುವರು.

ಬೊಂಬಾಯಿ ಪ್ರಾಂತ್ಯದಲ್ಲಿ ಈ ಯೋಜನೆಯನ್ನು ಜಾರಿಗೆ ತರಲು ... ಯು ಸರ್ಕಾರ ಈ ಪರಿಶೀಲನೆ ನಡೆಸಲಿದೆ ಬಿಹಾರಿನ ಮತ್ತು ಮದರಾಸಿನ ಎರಡೆರಡು ಜಿಲ್ಲೆಗಳಲ್ಲೂ ಈ ಯೋಜನೆಯನ್ನು ಈಗಾಗಲೇ ಜಾರಿಗೆ ತರಲಾಗಿದೆ.

ಉಪಸ್ಥಾನಪತಿಗಳಮೇಲಿನ ಆಪಾದನೆ ವಿಚಾರಣೆ

ಬೆಂಗಳೂರು ೧೩

ಮೈಸೂರು ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾದ ಡಾ|| ಬಿ. ಎಲ್. ಮಂಜುನಾಥ್‌ರವರಮೇಲೆ ಬಂದಿರುವ ನಾನಾ ಆಕ್ಷೇಪಣೆಗಳನ್ನು ವಿಚಾರಣೆಮಾಡಲು ಸರ್ಕಾರವು ನಿರ್ಧರಿಸುವುದಾಗಿ ಹೇಳಲಾಗಿದೆ. ನಿವೃತ್ತ ಹೈಕೋರ್ಟ್ ನ್ಯಾಯಾಮೂರ್ತಿಯವರನ್ನು ಈ ಕಾರ್ಯಕ್ಕೆ ನೇಮಿಸಲಾಗುವುದೆಂದು ಹೇಳಲಾಗಿದೆ.

ಅಖಿಲ ಭಾರತ ಸಂಸ್ಕೃತ ಪರಿಷತ್ತು

ಅಖಿಲ ಭಾರತ ಸಂಸ್ಕೃತ ಪರಿಷತ್ತಿನ ಎರಡನೇ ಅಧಿವೇಶನವು ಕಾಶಿಯಲ್ಲಿ ನವಂಬರ್ ಮಧ್ಯಭಾಗದಲ್ಲಿ ನಡೆಯುತ್ತದೆ. ರಾಷ್ಟ್ರಾಧ್ಯಕ್ಷ ಡಾ| ರಾಜೇಂದ್ರಪ್ರಸಾದ್‌ರವರು ಅಧಿವೇಶನವನ್ನು ಆರಂಭಿಸುವರು.

ಕೌನ್ಸಿಲ್ ಆಫ್ ಸ್ಟೇಟ್ ಸಭೆ

ಭಾರತ ಕೌನ್ಸಿಲ್ ಆಫ್ ಸ್ಟೇಟ್ ಸಭೆಯು ನವಂಬರ್ ೨೫ನೇ ತಾರೀಖು ದೆಹಲಿಯಲ್ಲಿ ಪ್ರಾರಂಭವಾಗಿ ಡಿಸೆಂಬರ್ ೧೯ರ ವರೆಗೆ ನಡೆಯುತ್ತದೆ.

ವಿಶ್ವೇಶ್ವರಯ್ಯನವರ ಜನ್ಮೋತ್ಸವ

ಶಾಲಾ ಕಾಲೇಜುಗಳಲ್ಲಿ ಅವರ ಜೀವನ ಚರಿತ್ರೆ ಪಠಣ

ಮೈಸೂರು ಸಂಸ್ಥಾನದ ಎಲ್ಲಾ ಶಾಲಾ ಕಾಲೇಜುಗಳು ಸರ್. ಎಂ. ವಿಶ್ವೇಶ್ವರಯ್ಯನವರ ಜನ್ಮೋತ್ಸವವನ್ನು ಇದೇ ೧೫ ನೇ ತಾರೀಖು ಆಚರಿಸಬೇಕೆಂದು ಸರ್ಕಾರದವರು ಸೂಚನೆ ಇತ್ತಿರುವರೆಂದು ಕೈಗಾರಿಕಾ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ತಿಳಿಸಿರುತ್ತಾರೆ. ಆ ದಿನ ತರಗತಿಗಳು ಪ್ರಾರಂಭವಾಗುವುದಕ್ಕೆ ಮುನ್ನ ವಿಶ್ವೇಶ್ವರಯ್ಯನವರ ಜೀವನ ಚರಿತ್ರೆಯ ಸೂಕ್ತ ವಿವರಗಳನ್ನು ವಿದ್ಯಾರ್ಥಿಗಳಿಗೆ ಓದಿ ಹೇಳಲಾಗುವುದು. ಅವರ ಜೀವನಚರಿತ್ರೆಯ ವಿವರಗಳನ್ನು ಸಂಗ್ರಹಿಸಿ ಒಂದು ಘೋಷಣಾ ಪತ್ರಿಕೆಯಂತೆ ಮಾಡಿ ಅವುಗಳನ್ನು ಶಾಲಾಕಾಲೇಜುಗಳಿಗೆ ಸರ್ಕಾರದವರು ಕಳುಹಿಸುವರು ವಿಶ್ವೇಶ್ವರಯ್ಯನವರ ಉಜ್ವಲ ಆದರ್ಶವನ್ನು ವಿದ್ಯಾರ್ಥಿಗಳೆಲ್ಲರೂ ಅನುಸರಿಸಬೇಕೆಂಬ ಸ್ಫೂರ್ತಿಯನ್ನು ಹುಟ್ಟಿಸುವುದಕ್ಕಾಗಿ ಈ ಕಾರ್ಯಕ್ರಮ ಕೈಗೊಳ್ಳಲಾಗಿದೆಯೆಂದೂ, ಆದ್ದರಿಂದ ಈ ಉತ್ಸವವನ್ನು ಎಲ್ಲರೂ ಯಶಸ್ವಿಯಾಗಿ ಆಚರಿಸಬೇಕೆಂದೂ ಸಚಿವರು ಮನವಿ ಮಾಡಿದ್ದಾರೆ.

ಭಾರತ ಗಡಿಯಲ್ಲಿ ಪಾಕೀಸ್ಥಾನ ಸೈನ್ಯ ಜಮಾವಣೆ

ಪೂರ್ವ ಪಶ್ಚಿಮ ಬಂಗಾಳ ಗಡಿಪ್ರದೇಶದಲ್ಲಿ ಪಾಕೀಸ್ಥಾನ ಸೈನ್ಯದ ಜಮಾವಣೆಯು ಅತ್ಯಂತ ಬಿರುಸಾಗಿ ನಡೆಯುತ್ತಿರುವುದಾಗಿ ವರದಿಯಾಗಿದೆ. ಗಡಿಪ್ರದೇಶಗಳಲ್ಲಿರುವ ಜೌಡಾಂಗ ಮತ್ತು ಹೇಮನಗರ ಪ್ರದೇಶಗಳಲ್ಲಿರುವ ಎಲ್ಲಾ ಕಟ್ಟಡಗಳನ್ನು ಪಾಕೀಸ್ಥಾನ ಸೈನ್ಯವು ಸ್ವಾಧೀನಪಡಿಸಿಕೊಂಡು ಪ್ರತಿಯೊಂದರಲ್ಲೂ ೫೦೦ಕ್ಕೆ ಕಡಿಮೆಯಿಲ್ಲದೆ ಸೈನ್ಯವನ್ನಿಟ್ಟಿರುವುದಾಗಿ ಹೇಳಲಾಗಿದೆ. ಗಡಿಪ್ರದೇಶದ ಹಳ್ಳಿಗಳಲ್ಲಿರುವ ಪಾಠಶಾಲೆಗಳನ್ನು ಕೂಡಲೇ ಖಾಲಿಮಾಡುವಂತೆ ಪಾಕ್ ಸರ್ಕಾರ ಸೂಚನೆಯಿತ್ತಿದೆ. ಈ ಹಳ್ಳಿ ಪ್ರದೇಶಗಳಲ್ಲಿ ರಾತ್ರಿಕಾಲದಲ್ಲಿ ಸಂಚರಿಸುವವರನ್ನೆಲ್ಲಾ ಗುಂಡಿಟ್ಟು ಕೊಲ್ಲಲಾಗುವುದೆಂದು ಎಚ್ಚರಿಸಲಾಗಿದೆ. ಪೂರ್ವ ಬಂಗಾಳದ ದಿನೌಜಪುರದ ಒಂದೆಡೆ ಪಾಕೀಸ್ಥಾನದ ಸಹಸ್ರಾರು ಸೈನ್ಯಿಕರು ಬಂದಿರುವುದಾಗಿ ಹೇಳಲಾಗಿದೆ.

ಭೂದಾನ ಯಜ್ಞ

ದೇಶಾದ್ಯಂತ ಭೂದಾನ ಯಜ್ಞ ಚಳುವಳಿಯನ್ನು ನಡೆಸಲಾರಂಭಿಸಿರುವ ಶ್ರೀ ಶಂಕರರಾವ್‌ರವರಿಗೆ ಹೈದರಾಬಾದ್ ಶಾಸನಸಭಾಸದಸ್ಯ ಶ್ರೀ ಬಾಪೂರ್ ಸಾಹೇಬ್ ದೇಶಪಾಂಡೆಯವರು ೫೦೦ ಎಕರೆ ಜಮೀನನ್ನು ಕೊಟ್ಟಿರುವರು.

ಪ್ರಾರ್ಥನಾಸಭೆ

ಸರ್ವೋದಯ ಸಂಘದ ಪ್ರತಿಭಾವಂತ ಸೇವಕರೂ ಹರಿಜನ ಪತ್ರಿಕೆಯ ಸಂಪಾದಕರೂ ಆಗಿದ್ದು ಸೆಪ್ಟೆಂಬರ್ ೯ ರಲ್ಲಿ ನಿಧನರಾದ ಶ್ರೀ ಕಿಶೋರಿಲಾಲ್ ಮಶ್ರುವಾಲ ಅವರ ಸ್ಮರಣೆಗಾಗಿ ತಾರೀಖು ೧೪-೭-೫೨ನೇ ಭಾನುವಾರ ಬೆಳಗ್ಗೆ ೭-೩೦ ಗಂಟೆಗೆ ದೇವರಾಜ ಮೊಹಲ್ಲಾದ ಮಹಿಳಾಸದನದಲ್ಲಿ ಮೈಸೂರು ಸರ್ವೋದಯ ಸಮಾಜ ಆಶ್ರಯದಲ್ಲಿ ಸಾರ್ವಜನಿಕ ಪ್ರಾರ್ಥನಾಸಭೆ ನಡೆಯುತ್ತದೆ.

ವಿಶ್ವಸಂಸ್ಥೆ ಅಧಿವೇಶನಕ್ಕೆ ಶ್ರೀಮತಿ ವಿಜಯಲಕ್ಷ್ಮಿ

ಮುಂದಿನತಿಂಗಳು ೧೪ ನೇ ತಾರೀಖಿನಿಂದ ನಡೆಯಲಿರುವ ವಿಶ್ವಸಂಸ್ಥೆ ಅಧಿವೇಶನಕ್ಕೆ ಶ್ರೀಮತಿ ವಿಜಯಲಕ್ಷ್ಮಿಪಂಡಿತರ ನಾಯಕತ್ವದಲ್ಲಿ ಒಂದು ನಿಯೋಗ ಭಾರತದಿಂದ ಹೋಗಲಿದೆ.

ತಟ್ಟೆಯವರ ದಸ್ತಗಿರಿ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಚಪ್ಪರದ ಬಳಿ ಪ್ರದರ್ಶನವನ್ನು ನಡೆಸಲು ಗ್ವಾಲಿಯರಿನಿಂದ ಇಂದೂರಿಗೆ ಹೋಗುತ್ತಿದ್ದ ಶ್ರೀ ಎಲ್. ಜಿ. ತಟ್ಟೆಯವರನ್ನು ಇಂದೂರಿಗೆ ೧೫ ಮೈಲಿ ದೂರದಲ್ಲಿಯೇ ದಸ್ತಗಿರಿಮಾಡಲಾಗಿದೆ.

ವಿದ್ಯಾರ್ಥಿಗಳಿಗಾಗಿ ಕ್ಷಯ ರೋಗ ಆಸ್ಪತ್ರೆ

ವಿದ್ಯಾರ್ಥಿ ಮತ್ತು ಉಪಾಧ್ಯಾಯರುಗಳಿಗಾಗಿ ಲಕ್ನೋದಲ್ಲಿ ೧೦ ಲಕ್ಷ ರೂ. ವೆಚ್ಚದಲ್ಲಿ ಒಂದು ಕ್ಷಯರೋಗ ಆಸ್ಪತ್ರೆಯನ್ನು ನಿರ್ಮಿಸಲು ಸರ್ಕಾರ ನಿರ್ಧರಿಸಿದೆ.

ವುಡ್‌ಲ್ಯಾಂಡ್ಸ್

೭-೯-೫೨ ರಿಂದ ಅಮೋಘ ಪ್ರಾರಂಭ

* ಗುಮಾಸ್ತ *
(ಹಿಂದಿ)

ಪಾತ್ರ:–ನಿಗಾರ್. ವಾಸ್ತಿ, ಕುಲ್‌ದೀಪ್ ಮಿಜಾತಮುಷ್ರಾಫ್

ಅಪೇರ ೧೨-೯-೫೨ ರಿಂದ ೨ ನೇ ವಾರ

ಪುಯಲ್
ಅಥವಾ
ಬಿರುಗಾಳಿ

[ತಮಿಳು]

ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್

This is the first time introducing on the Silver Screen the powerful drama of "St. Philomena and Mortydom"

ಸ್ಥಾನಬದ್ಧ ಖೈದಿಗಳ ಬಿಡುಗಡೆ

ಹೈದರಾಬಾದ್ ಸರ್ಕಾರವು ಆ ರಾಜ್ಯದಲ್ಲಿರುವ ಸ್ಥಾನಬದ್ಧ ಖೈದಿಗಳಲ್ಲಿ ಅನೇಕರನ್ನು ಈ ಮಾಸಾಂತ್ಯದೊಳಗೆ ಬಿಡಲು ನಿರ್ಧರಿಸಿದೆ. ಒಟ್ಟು ೧೧೫ ಖೈದಿಗಳಿರುವರೆಂದು ಗೊತ್ತಾಗಿದೆ.

ಗೃಹಕೃತ್ಯದ ನೋಟೀಸು

ಈ ಕೆಳಗೆ ನಮೂದಿಸಿರುವ ಸ್ವತ್ತುಗಳು, ಕೃಷ್ಣರಾಜಪೇಟೆ ತಾಲ್ಲೂಕು ಭೂಕನಕೆರೆ ಹೋಬಳಿ ಮದನಕೋಡಿಯಲ್ಲಿ ಇದ್ದ ಹಾಲಿ ಫವತಿ ಜನ್ನುಸಾಬ್ ಉರುಫ್ ಖಾಸಿಂಪೀರ್ ಷರೀಫ್‌ರವರ ಮಕ್ಕಳು ನೆನ್ನಿ ಸಾಬ್, ಬಚ್ಚೀ ಸಾಬ್, ಮೊಸನ್‌ಬೀ, ಹಾಜರಾಂಬೀ, ಮತ್ತು ಜನ್ನೋಸಾಬರ ಸೊಸೆ, ಜ್ಯೆಬೂಸ್‌ಬೀ, ಇವರ ... ಮತ್ತು ಜೀವನಾಂಶದ ಹಕ್ಕು, ಇವರುಗಳಿಗೆ ಸೇರಿದ್ದಾಗಿರುತ್ತದೆ. ಜನ್ನುಸಾಬರ ಹೆಂಡತಿ ಹುಸೇನ್‌ಬೀ ಮತ್ತು ಇವರ ಮಗ ಬಚ್ಚೀಸಾಬ್ ಇವರುಗಳು, ಮೇಲೆ ಹೇಳಿದ ಬಾಕಿಹಕ್ಕುದಾರರಿಗ ಮೋಸಮಾಡಬೇಕೆಂಬ ಉದ್ದೇಶದಿಂದ ಷಡ್ಯೂಲ್ ಸ್ವತ್ತುಗಳನ್ನು ಪರಭಾರೆ ಮಾಡುವ ಪ್ರಯತ್ನದಲ್ಲಿರುತ್ತಾರೆ. ಅವರುಗಳು ಮಾಡುವ ಪರಭಾರೆಗಳು ಊರ್ಜಿತವಾಗತಕ್ಕವುಗಳಲ್ಲ. ಮತ್ತು ಪರಭಾರೆ ಮಾಡಿಕೊಳ್ಳುವವರಿಗೆ, ಯಾವ ಹಕ್ಕೂ ... ಬಾಗುವುದಿಲ್ಲವೆಂದು ಈಮೂಲಕ ಮೇಲೆ ಹೇಳಿದ ನನ್ನ ಕಕ್ಷಿಗಾರರ ಪರವಾಗಿ ಸರ್ವರಿಗೂ ತಿಳಿಯಪಡಿಸಿರುತ್ತೆ.

ಷಡ್ಯೂಲ್

ಕೃಷ್ಣರಾಜಪೇಟೆ ತಾಲ್ಲೂಕು ಭೂಕನಕೆರೆ ಹೋಬಳಿ, ಬೊಮ್ಮನಹಳ್ಳಿ ಗ್ರಾಮಕ್ಕೆ ಸೇರಿದ್ದು–ಸರ್ವೆ ನಂ. ೧೨೧|೧ನೇ ಕುಷ್ಕಿ ೪ ಎಕರೆ ೧೦ ಗುಂಟೆ, ಆಕಾರ ೪-೮೦ರೂ.ಮದನಕೋಡಿ ಗ್ರಾಮದಲ್ಲಿ ಸರ್ವೆ ನಂ. ೧೪೯|೮, ೩೮ ಗು. ಸರ್ವೆ ನಂ. ೧೪೯|೧೧ ಗುಂಟೆ. ಮಧಿಕ್ಯಾಚನಹಳ್ಳಿಯಲ್ಲಿ ಸರ್ವೆ ನಂ. ೮೮|೨ ತರಿ ೨೭ ಗುಂಟೆ ಸರ್ವೆ ೨೨೭|೮ ತರಿ ೧ ಎಕರೆ ೧೨ ಗು.

ಎಂ. ಕೆ. ರಾಮಸ್ವಾಮಿ
ಲಾಯರ್, ಮೈಸೂರು.

ರಣಜಿತ್

11–9–52 ರಿಂದ ನೇ 6 ವಾರ

* ಆನ್ *

ಪಾತ್ರ:— ದಿಲೀಪ್‌ಕುಮಾರ್, ನಿಮ್ಮಿ. ಪ್ರೇಮನಾಥ್, ನಾದಿರ

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 22

೧೫-೯-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ರಾಜಪ್ರಮುಖರ ರದ್ದಿನ ಪ್ರಶ್ನೆಯಿಲ್ಲ

ಕೇವಲ ೭-೮ ಮಂದಿಗೆ ಅನ್ವಯಿಸುವ ರಾಜಪ್ರಮುಖರ ರದ್ದಿನ ಪ್ರಶ್ನೆಯನ್ನು ನಾವು ಸಮಾಲೋಚನೆ ಮೂಲಕ ನಿರ್ಧರಿಸಬೇಕಾಗಿದೆ. ತಮ್ಮ ಸ್ಥಾನವನ್ನು ತಾವೇ ರಕ್ಷಿಸಿಕೊಳ್ಳಲಾರದ ರಾಜಪ್ರಮುಖರಮೇಲೆ ಸರ್ಕಾರ, ಕಾಂಗ್ರೆಸ್ ಮತ್ತು ಜನರು ಹೋರಾಟ ನಡೆಸಿದರು. ಅದು ಅಸಮರ್ಪಕ ಹೋರಾಟವಾಗುತ್ತದೆ. ಈ ರೀತಿ ಹೋರಾಟಕ್ಕೆ ಮನಸ್ಸುಕೊಡುವುದು ಭಾರತಸರ್ಕಾರ ಮತ್ತು ಘನತೆಗೆ ಉಚಿತವಲ್ಲ ಇಂತಹ ... ಗಳನ್ನು ಚಳುವಳಿಯಿಂದ ಬಿಡಿಸಲು ಸಾಧ್ಯವಿಲ್ಲ ಆದರೆ ನಿರ್ಣಯಮೂಲಕ ಈ ರದ್ದಿನ ಪ್ರಶ್ನೆಯನ್ನೆತ್ತಿದರೆ ಅದನ್ನು ವಿರೋಧಿಸಲೇಬೇಕಾಗುತ್ತದೆ. ಸಂಸ್ಥಾನಗಳು ಕೇಂದ್ರದೊಡನೆ ಐಕ್ಯವಾದಾಗ ಸರ್ದಾರ್ ಪಟೇಲರ ವ್ಯಕ್ತಿತ್ವದಿಂದ ಆ ಕೆಲಸ ಸಾಧಿಸಿದುದಾಯಿತು. ಆಗ ಕೊಟ್ಟ ವಚನವನ್ನು ತಪ್ಪುವುದು ಘನತೆಗೆ ತಕ್ಕುದಲ್ಲ. ಒಪ್ಪಂದವಾಗಿರುವುದು ರಾಜ್ಯಾಂಗಕ್ಕೆ ಸೇರಿದುದು. ಅದನ್ನು ಮುರಿಯುವುದೂ ತರವಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ಇಂದೂರಿನಲ್ಲಿ ನಡೆದ ಎ. ಐ. ಸಿ. ಸಿ. ಅಧಿವೇಶನದಲ್ಲಿ ಮಾತನಾಡಿದಮೇಲೆ ರಾಜಪ್ರಮುಖರ ಸ್ಥಾನ ಮತ್ತು ರಾಜಾದಾಯ ರದ್ದಿನ ನಿರ್ಣಯವನ್ನೂ ಹಿಂದಕ್ಕೆ ತೆಗೆದುಕೊಳ್ಳಲಾಯಿತು.

ಸರ್ವಾಧಿಕಾರಿ ನಗೀಬ್‌ರವರಿಗೇ ಜುಲ್ಮಾನೆ

ಈಜಿಪ್ಟಿನಲ್ಲಿ ಬಿರುದಾವಲಿಗಳನ್ನು ಯಾರೂ ಉಪಯೋಗಿಸಕೂಡದೆಂದು ಜ|| ನಗೀಬ್‌ರವರು ಕಾನೂನು ಮಾಡಿದ್ದನ್ನು, ಅವರೇ ಒಂದು ಭೋಜನ ಕೂಟದಲ್ಲಿ ಮಾಜಿ ಪ್ರಧಾನಿ ಅಲಿಮಹರ್‌ರವರನ್ನು "ಹಿಸ್ ಎಕ್ಸೆಲೆನ್ಸಿ" ಎಂದು ಕರೆದರೆಂದೂ, ಆದರಿಂದ ಅವರು ಕಾನೂನನ್ನು ಉಲ್ಲಂಘಿಸಿದರೆಂದು ಮತ್ತೊಬ್ಬ ಅಧಿಕಾರಿಗಳು ಅಲ್ಲಿ ತಿಳಿಸಲಾಗಿದೆ, ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ಈಜಿಪ್ಟಿನ ಸುಮಾರು ನಾಲ್ಕುವರೆ ಪೆನ್ನಿ ಹಣವನ್ನು ದಂಡವಾಗಿ ಕೊಟ್ಟರೆಂದು ವರದಿಯಾಗಿದೆ.

ಕೈಗಾರಿಕಾಭಿವೃದ್ಧಿಗೆ ಧಾರ್ಮಿಕ ನಿಧಿಗಳು

ಈಜಿಪ್ಟಿನ ಧಾರ್ಮಿಕ ನಿಧಿಗಳನ್ನು ದೇಶದ ಕೈಗಾರಿಕಾಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಬೇಕೆಂದು ಪ್ರಧಾನಿ ಜ|| ನಗೀಬರ ಸರ್ಕಾರ ಆಜ್ಞೆಮಾಡಿದೆ. ಇನ್ನು ಮುಂದೆ ಮಸೀದಿಗಳು ಮತ್ತು ಇತರ ದಾನಧರ್ಮ ಕಾರ್ಯಗಳನ್ನು ಸರ್ಕಾರದವರೇ ನೋಡಿಕೊಳ್ಳುವರು. ವಿದ್ಯಾರ್ಥಿ ವೇತನ ಮತ್ತು ಅನಾಥಾಲಯಗಳ ಪಾಲನೆಗೆ ಮೀಸಲಾಗಿಟ್ಟ ನಿಧಿಗಳನ್ನು ಮುಟ್ಟದೆ, ಖಾಸಗೀಯವರ ಉಪಯೋಗಕ್ಕೆಂದು ತೆಗೆದಿಡಲಾದ ಲಕ್ಷಾಂತರ ಫಂಡುಗಳನ್ನು ಇನ್ನುಮುಂದೆ ಕೈಗಾರಿಕೆ ಅಭಿವೃದ್ಧಿಗೆ ವ್ಯಯಮಾಡಲಾಗುವುದು.

ಸಂಬಳದಲ್ಲಿ ತುಟ್ಟಿಭತ್ಯ ಐಕ್ಯ

ಕೇಂದ್ರ ಸರ್ಕಾರದ ನೌಕರರಿಗೆ ಕೊಡುತ್ತಿರುವ ತುಟ್ಟಿಭತ್ಯದ ಶೇಕಡ ೩೦ ಅಥವ ೪೦ ರಷ್ಟು ಭಾಗವನ್ನು ಅವರ ಸಂಬಳದೊಡನೆ ಐಕ್ಯ ಮಾಡಬೇಕೆಂದು ತುಟ್ಟಿಭತ್ಯ ಸಮಿತಿಯವರು ಶಿಫಾರಸು ಮಾಡಿದ್ದಾರೆಂದು ತಿಳಿದು ಬಂದಿದೆ.

ಹಿಟ್ಲರನ ಉತ್ತರಾಧಿಕಾರಿ ಬಗ್ಗೆ ವ್ಯಾಜ್ಯ

ಹಿಟ್ಲರನು ತನ್ನ ಆಸ್ತಿಯ ಉತ್ತರಾಧಿಕಾರಿ ನಾಜಿ ಪಕ್ಷದ ಪ್ರಧಾನ ಕಾರ್ಯದರ್ಶಿ ಬೋರ್ಮ್ಯಾ ಎಂದು ತನ್ನ ಉಯಿಲಿನಲ್ಲಿ ಬರೆದಿದ್ದನೆಂದೂ, ಆದರೆ ಬೋರ್ಮ್ಯಾ ಮರಣ ಹೊಂದಿರುವುದರಿಂದ, ಹಿಟ್ಲರನ ಪುಸ್ತಕದ ಪ್ರಕಟಣೆಯಿಂದ ಬರುವ ಲಾಭದ ಹಣವನ್ನು ಬೋರ್ಮ್ಯಾ ಸಂಬಂಧಿಗಳಿಗೆ ಕೊಡಬೇಕೆಂದೂ ಕೋರ್ಟಿನಲ್ಲಿ ವ್ಯವಹಾರ ಹೂಡಲಾಗಿದೆ.

ಕೃಷ್ಣರಾಜನಗರ ಕೊಲೆ ಪ್ರಕರಣ

ಆಸ್ಪತ್ರೆಯಲ್ಲಿ ಚಿಕ್ಕನ ಹೆಂಡತಿಯ ಮರಣ

ಕೃಷ್ಣರಾಜನಗರದ ಕೊಲೆ ಪ್ರಕರಣದಲ್ಲಿ ತೀವ್ರಗಾಯಗೊಂಡು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿದ್ದ ನಾಲ್ಕುಜನರ ಪೈಕಿ, ಚಿಕ್ಕನ ಹೆಂಡತಿ ಸಣ್ಣಮ್ಮನು ನೊನ್ನೆ ರಾತ್ರಿ ಮರಣ ಹೊಂದಿದಳು.

ಈಜಿಪ್ಟ್ ರಿಪಬ್ಲಿಕ್ ಆಗಬೇಕೆಂದು ಚಳುವಳಿ

ಈಜಿಪ್ಟಿನಲ್ಲಿ ರಾಜಾಡಳಿತವನ್ನು ತಪ್ಪಿಸಿ, ಅದನ್ನು ರಿಪಬ್ಲಿಕ್ ಎಂದು ಘೋಷಿಸಬೇಕೆಂದು ಅಲ್ಲಿನ ಕಮ್ಯೂನಿಸ್ಟ್-ಸೋಷಲಿಸ್ಟ್ ಡೆಮೊಕ್ರಾಟಿಕ್ ಪಕ್ಷವು ಚಳುವಳಿ ಪ್ರಾರಂಭಿಸಿದೆಯೆಂದು ವರದಿಯಾಗಿದೆ

ಮನೆಕಂದಾಯ ಹೆಚ್ಚಿಸಿದುದಕ್ಕೆ ಪ್ರತಿಭಟನೆ

ನಗರ ಕಂದಾಯದಾರರ ಸಭೆಯಲ್ಲಿ ನಿರ್ಧಾರ

ಮೈಸೂರು ಸೆ. ೧೫

ಮೈಸೂರು ನಗರದ ಕಂದಾಯದಾರರ ಸಭೆಯು ಶ್ರೀ ಎಂ. ಸಿ. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆದು ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಬಡಕುಟುಂಬಗಳ ಜೀವನವೇ ಅತಿ ಕಷ್ಟಕ್ಕೆ ಸಿಕ್ಕಿರುವ ಈ ದುಷ್ಕಾಲದಲ್ಲಿ ನಗರ ಪೌರಸಭೆಯವರು ಮನೆ ಕಂದಾಯ ಮತ್ತು ಇತರ ಕಂದಾಯಗಳನ್ನು ಹೆಚ್ಚಿಸಿರುವುದನ್ನು ಸಭೆಯು ಖಂಡಿಸುವುದಲ್ಲದೆ ಅದನ್ನು ಕೂಡಲೇ ರದ್ದುಗೊಳಿಸಬೇಕೆಂದು ಮನವಿ ಮಾಡುತ್ತದೆ.

ಈ ನೂತನ ಕಂದಾಯಗಳನ್ನು ಜಾರಿಗೆ ತರುವುದಾದರೆ ಮುಂದೆ ಕಂದಾಯ ಪಾವತಿ ಬಗ್ಗೆ ತಾವುಗಳು ಪ್ರತಿಭಟನೆಯನ್ನು ಮಾಡಲು ಸಿದ್ಧರಾಗಬೇಕಾಗಿತ್ತೆಂದು ಈ ಸಭೆಯು ಪೌರಸಭೆಗೆ ಎಚ್ಚರಿಕೆಯನ್ನು ಕೊಡುತ್ತದೆ.

ಪೌರಸಭೆಯ ಅನ್ಯಾಯವನ್ನು ಬಡಪೌರರ ಹಿತ ದೃಷ್ಟಿಯಿಂದ ಪ್ರತಿಭಟಿಸಲು ಪೌರಸಭಾ ಸದಸ್ಯರು ರಾಜೀನಾಮೆ ಸಲ್ಲಿಸಬೇಕು.

ಪೌರಸಭೆಯು ತನ್ನ ಖರ್ಚಿನಲ್ಲಿ ಶೇಕಡ ೪೦ ರಷ್ಟನ್ನು ಇಳಿಸಬೇಕು ಮತ್ತು ಪುರಸಭಾಧ್ಯಕ್ಷತೆ ಮತ್ತು ನಗರಾಭಿವೃದ್ಧಿ ಸಭೆಯ ಚೇರ್ಮನ್‌ಗಳನ್ನು ಏಕೀಗೊಳಿಸಬೇಕು.

ಪೌರರ ಕುಂದುಕೊರತೆಗಳನ್ನು ನಿವಾರಣೆಮಾಡಲು ಮತ್ತು ಪೌರಸಭಾಸದಸ್ಯರನ್ನು ಹತೋಟಿಯಲ್ಲಿಡಲು ನಗರದಲ್ಲಿ ರಾಜಕೀಯಕ್ಕೆ ಸಂಬಂಧವಿಲ್ಲ ಒಂದು ನೂತನ ಪಕ್ಷವನ್ನು ಸ್ಥಾಪಿಸಬೇಕು.

ಹೈದರಾಬಾದ್ ಸಂಸ್ಥಾನದಲ್ಲಿ ಪಾನ ನಿರೋಧವನ್ನು ಜಾರಿಗೆ ತರುವುದರಿಂದ ೧೦ ಕೋಟಿ ರೂ. ನಷ್ಟವಾಗುವುದರಿಂದ ಆ ಯೋಜನೆಯನ್ನು ಕೈಗೊಳ್ಳುವುದಿಲ್ಲವೆಂದು ಸಚಿವ ಶ್ರೀ ರಂಗರೆಡ್ಡಿಯವರು ತಿಳಿಸಿರುತ್ತಾರೆ.

ಮುಷ್ಕರ ಹೂಡಲು ನೀರು ಸರಪರಾಜು ಕೆಲಸಗಾರರ ಸಂಕಲ್ಪ

ಮೈಸೂರು ಸೆ. ೧೫

ನಗರದ ವಾಣಿವಿಲಾಸ ನೀರು ಸರಪರಾಜು ಕೆಲಸಗಾರರ ಸಭೆಯು ನಿನ್ನೆ ಶ್ರೀ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದೇ ೩೦ ನೇ ತಾರೀಖು ಕೆಲಸಗಾರರು ಸಾಂಕೇತಿಕ ಮುಷ್ಕರ ಹೂಡಬೇಕೆಂಬುದರ ಬಗ್ಗೆ ಕೆಲಸಗಾರರು ಪ್ರತಿಜ್ಞೆಯನ್ನು ತೆಗೆದುಕೊಂಡರು. ಕಾರ್ಯದರ್ಶಿ ಶ್ರೀ ವೇದಾಂತಂರವರು ಭಾಷಣ ಮಾಡಿ, ಕೆಲಸಗಾರರು ತಮ್ಮ ಕುಂದುಕೊರತೆಗಳನ್ನು ನಿವಾರಿಸಲು ಐಕ್ಯತೆಯಿಂದ ವರ್ತಿಸಬೇಕೆಂದು ಸಲಹೆಮಾಡಿದರು.

ರೈಲಿನಲ್ಲಿ ಒಂದನೇ ತರಗತಿ ರದ್ದು

ಮೈಸೂರು ಸೆ. ೧೫

ಮೈಸೂರಿನಿಂದ ಬೆಳಿಗ್ಗೆ ಅರಸೀಕೆರೆಗೆ ಹೋಗುವ ಮತ್ತು ರಾತ್ರಿ ಅರಸೀಕೆರೆಯಿಂದ ಮೈಸೂರಿಗೆ ಬರುವ ರೈಲುಗಳಲ್ಲಿಯೂ, ಶನಿವಾರ ಭಾನುವಾರಗಳಲ್ಲಿ ಕೃಷ್ಣರಾಜನಗರ ನಡುವೆ, ಬೀರೂರು-ತಾಳಗುಪ್ಪನಡುವೆ ಓಡಾಡುವ ರೈಲುಗಳಲ್ಲಿ ಅಕ್ಟೋಬರ್ ಒಂದನೇ ತಾರೀಖಿನಿಂದ ೧ ನೇ ತರಗತಿ ರದ್ದುಗೊಳಿಸಲಾಗಿದೆ. ಮೈಸೂರು–ಚಾಮರಾಜನಗರ ಮತ್ತು ಚಿಕ್ಕಜಾಜೂರು-ಚಿತ್ರದುರ್ಗಗಳ ನಡುವೆ ಓಡಾಡುವ ರೈಲುಗಳ ೨ ನೇ ತರಗತಿ ಗಾಡಿಗಳನ್ನು ರದ್ದುಗೊಳಿಸಲಾಗಿದೆ.

ಮುನಿಸಿಪಲ್ ಕೆಲಸಗಾರರ ಸಭೆ

ನಗರದ ಮುನಿಸಿಪಲ್ ಕೆಲಸಗಾರರ ಸಭೆಯು ನಿನ್ನೆ ಸಂಜೆ ಬುಡುಬುಡಕೇರಿಯಲ್ಲಿ ಶ್ರೀ ಬಿ. ಎ ಬೆಳ್ಳಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಮುನಿಸಿಪಲ್ ಕೆಲಸಗಾರರಾದ ಕಂಪ ಎಂಬುವರನ್ನು ಅಲ್ಲಿನ ಅಮೀರ್ ಎಂಬುವರು ಹಲ್ಲು ಮುರಿಯುವಂತೆ ಹೊಡೆದು ಗಾಯಪಡಿಸಿರುವುದನ್ನು ತೀವ್ರವಾಗಿ ಖಂಡಿಸಿ, ಸರ್ಕಾರದವರು ಈ ಬಗ್ಗೆ ವಿಚಾರಣೆ ನಡೆಸಿ, ತಪ್ಪಿತಸ್ಥರನ್ನು ಶಿಕ್ಷೆಗ ಗುರಿಪಡಿಸಬೇಕೆಂದು ನಿರ್ಣಯ ಮಾಡಲಾಯಿತು.

ವರ್ತಕರ ಹರತಾಳ

ಸರ್ಕಾರದವರು ವಿಧಿಸಿರುವ ಮಾರಾಟ ತೆರಿಗೆ ಕಾನೂನನ್ನು ಪ್ರತಿಭಟಿಸಲು ಸಿಮ್ಲಾ, ಅಂಬಾಲಾ, ಅಮೃತಸರ್ ಮತ್ತು ಪಂಜಾಬಿನ ಇತರ ಪಟ್ಟಣಗಳಲ್ಲಿ ವರ್ತಕರೆಲ್ಲರೂ ಹರತಾಳವನ್ನು ಆಚರಿಸಿದರೆಂದೂ, ಎಲ್ಲ ಅಂಗಡಿಗಳೂ ಬಂಧಾಗಿತ್ತೆಂದೂ ಹೇಳಲಾಗಿದೆ.

ಸಿಂಹಳದಲ್ಲಿ ತಾತ್ಕಾಲಿಕವಾಗಿ ಸತ್ಯಾಗ್ರಹ ಮುಕ್ತಾಯ

ಪೌರ ಹಕ್ಕಿನ ಪ್ರಶ್ನೆ ಕೂಡಲೇ ಇತ್ಯರ್ಥಮಾಡಲು ಪ್ರಧಾನಿಯವರ ಭರವಸೆ

ಸಿಂಹಳದಲ್ಲಿರುವ ಭಾರತೀಯರು ತಮ್ಮ ಪೌರ ಹಕ್ಕಿಗಾಗಿ ಕಳೆದ ಕೆಲವು ತಿಂಗಳುಗಳಿಂದ ನಡೆಸುತ್ತಲಿರುವ ಸತ್ಯಾಗ್ರಹ ಚುಳುವಳಿಯನ್ನು ೨ ೩ ತಿಂಗಳು ಕಾಲ ತಾತ್ಕಾಲಿಕವಾಗಿ ನಿಲ್ಲಿಸಲು ಅಲ್ಲಿಯ ಭಾರತೀಯ ಕಾಂಗ್ರೆಸ್ ಕಾರ್‍ಯಕಾರಿ ಸಮಿತಿಯು ನಿರ್ಧರಿಸಿದೆ. ನಾಳೆಯಿಂದ ಈ ಸತ್ಯಾಗ್ರಹವನ್ನು ನಿಲ್ಲಿಸಲಾಗುತ್ತದೆ.

ಸಿಂಹಳ ಪ್ರಧಾನಿಯವರು ಭಾರತೀಯರ ಪೌರ ಹಕ್ಕಿನ ಪ್ರಶ್ನೆಯನ್ನು ಅದಷ್ಟುಜಾಗ್ರತೆಯಾಗಿ ನಿರ್ಧರಿಸಲು ತಕ್ಕ ವ್ಯವಸ್ಥೆಯನ್ನು ಮಾಡುವುದಾಗಿ ಭರವಸೆಯನ್ನಿತ್ತಿರುವುದಾಗಿ ಕಾರ್‍ಯಕಾರಿ ಸಮಿತಿ ತಿಳಿಸಿದೆ.

ಬ್ರಿಟನ್ನಿನ ಮೇಲೆ ಪಾಕೀಸ್ತಾನದ ಆರೋಪಣೆ

ಬ್ರಿಟನ್ನು ಭಾರತದೊಂದಿಗೆ ಸೇರಿಕೊಂಡು ಪಾಕೀಸ್ತಾನದ ಆರ್ಥಿಕ ಭದ್ರತೆಯನ್ನು ಉರುಳಿಸಲು ಯತ್ನಿಸುತ್ತಲಿದೆ. ಕಾಶ್ಮೀರ ಪ್ರಶ್ನೆಯನ್ನು ಬ್ರಿಟನ್ನು ಅಮೆರಿಕಾ ಕೈವಾಡವಿರುವ ವಿಶ್ವಸಂಸ್ಥೆಯಲ್ಲಿ ಇತ್ಯರ್ಥವಾಗುವುದಿಲ್ಲ ಎಂದು ಪಾಕೀಸ್ತಾನ ಪಂಜಾಬಿನ ಮುಖ್ಯಮಂತ್ರಿ ರಾವಲ್ಪಿಂಡಿಯಲ್ಲಿ ಮಾತನಾಡುತ್ತಾ ಹೇಳಿರುವರು.

ಬಟ್ಟೆ ಪರಿಸ್ಥಿತಿ ತೃಪ್ತಿಕರವಾಗಿದೆ

ಭಾರತದಲ್ಲಿ ಈ ಸಾಲಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಬಟ್ಟೆ ಮತ್ತು ನೂಲನ್ನು ತಯಾರಿಸಿರುವುದರಿಂದ ಬಟ್ಟೆ ಪರಿಸ್ಥಿತಿಯು ತೃಪ್ತಿಕರವಾಗಿದೆ ಯೆಂದು ಅಧಿಕೃತ ವಲಯಗಳಲ್ಲಿ ಹೇಳಲಾಗುತ್ತಲಿದೆ.

ಭಾರತದ ಪೂರ್ವಗಡಿಯಲ್ಲಿ ಪಾಕೀಸ್ತಾನ ಸೈನ್ಯ

ಭಾರತ-ಪೂರ್ವ ಪಾಕೀಸ್ತಾನದ ೮೦೦ ಮೈಲಿ ಯುದ್ಧವಿರುವ ಗಡಿ ಪ್ರದೇಶದಲ್ಲಿ ಪಾಕೀಸ್ಥಾನ ಸೈನ್ಯ ಮತ್ತು ಇತರ ಚಲನೆಗಳ ಸಂಗ್ರಹಣೆಯ ಕಾರ್‍ಯವು ಬಿರುಸಾಗಿ ನಡೆಯುತ್ತಿರುವುದಾಗಿ ವರದಿಯಾಗಿದೆ ಸೈನ್ಯಬಲ ಎಷ್ಟೆಂದು ತಿಳಿದಿಲ್ಲ. ಆದರೆ ಕನಿಷ್ಠಪಕ್ಷ ಒಂದುಲಕ್ಷ ಅನ್ಸಾರರ-ಮುಸ್ಲಿಂ ಸ್ವಯಂಸೇವಕರಿರುವರೆಂದು ಹೇಳಲಾಗಿದೆ ಅಕ್ರಮ ಸಾಗಾಣಿಕೆಯನ್ನು ತಡೆಗಟ್ಟಲು ಈ ಕಾರ್‍ಯಕ್ರಮವೆಂದು ಪಾಕೀಸ್ತಾನವು ಹೇಳಿಕೊಳ್ಳುತ್ತಲಿದೆ.

ಪೂರ್ವ ಪಾಕೀಸ್ಥಾನದ ಸೈನ್ಯಾಧಿಕಾರಿ ಮೇಜರ್ ಜನರಲ್ ಮೂಸರವರು ಈ ಕ್ಷೇತ್ರದ ಆಡಳಿತದಲ್ಲಿರುವುದಾಗಿ ಗೊತ್ತಾಗಿದೆ. ಈರೀತಿ ಸೈನ್ಯ ಜಮಾವಣೆಯನ್ನು ಭಾರತಕ್ಕೆ ಸೇರಿರುವ ಪಶ್ಚಿಮಬಂಗಾಳ ಸರ್ಕಾರವು ಅತ್ಯಂತ ಜಾಗರೂಕತೆಯಿಂದ ನಿರೀಕ್ಷಿಸುತ್ತಲಿರುವುದಾಗಿ ಗೊತ್ತಾಗಿದೆ.

ಹಣವ್ಯಯ ನಿಲ್ಲಿಸಲು ಗಡ್ಡಗಳನ್ನು ಬೆಳೆಸಿ

ಪ್ರತಿವರ್ಷವೂ ಕ್ಷೌರಕ್ಕಾಗಿ ಬ್ಲೇಡುಗಳನ್ನು ವಿದೇಶಗಳಿಂದ ತರಿಸಿಕೊಳ್ಳಲು ವೆಚ್ಚವಾಗುತ್ತಲಿರುವ ೩ ಕೋಟಿ ರೂಪಾಯಿಗಳನ್ನು ಉಳಿತಾಯಮಾಡಲು ಭಾರತದ ಜನರೆಲ್ಲರೂ ಗಡ್ಡಗಳನ್ನು ಬೆಳಿಸಿಕೊಳ್ಳಿ-ಎಂದು ಕಾಂಗ್ರೆಸ್ಸಿನ ಮಾಜಿ ಕಾರ್‍ಯದರ್ಶಿ ಶ್ರೀ ಕಳಾ ವೆಂಕಟರಾಯರು ಒಂದು ಭಾಷಣದಲ್ಲಿ ತಿಳಿಸಿದ್ದಾರೆ.

ನಿಮ್ನ ವರ್ಗದವರ ಅಭಿವೃದ್ಧಿಗೆ ೩ ಲಕ್ಷ ರೂ.

ಬೆಂಗಳೂರು ಸೆ. ೧೫

ಮೈಸೂರು ಸರ್ಕಾರದವರು ೧೯೫೨-೫೩ನೇ ಸಾಲಿನಲ್ಲಿ ನಿಮ್ನವರ್ಗದವರ ಅಭಿವೃದ್ಧಿಗಾಗಿ ೩ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲಿರುವರು. ಇದರ ಪೈಕಿ ಭಾರತಸರ್ಕಾರವು ಒಂದುಲಕ್ಷ ರೂಪಾಯಿಗಗಳನ್ನು ಕೊಡಲಿದೆ. ಕಾಡುಕುರುಬರು, ಜೇನುಕುರುಬರು, ಸೋಲಿಗರು ಮುಂತಾದವರ ಅಭಿವೃದ್ಧಿಗೆ ಈ ಹಣ ವಿನಿಸಲಾಗಿದೆ.

ಈ ಯೋಜನೆ ಪ್ರಕಾರ ಪ್ರಾಥಮಿಕ ಶಾಲೆಗಳು ವಯಸ್ಕರ ಶಿಕ್ಷಣ, ಆಸ್ಪತ್ರೆ, ಪ್ರಸವಗೃಹಗಳು, ಮಲೇರಿಯಾ ನಿರೋಧ, ಭಾವಿಗಳನ್ನು ತೋಡಿಸುವುದು, ವಾಸದಮನೆಗಳ ನಿರ್ಮಾಣ ಮುಂತಾದುವಕ್ಕೆ ಈ ಹಣವನ್ನು ಉಪಯೋಗಿಸಲಾಗುತ್ತದೆ.

ಖೈದಿಯ ಪರಾರಿ

ಬೆಂಗಳೂರು ಸೆ. ೧೫

ತುಮಕೂರಿನಿಂದ ಬೆಂಗಳೂರಿಗೆ ಪೋಲೀಸಿನವರು ಕರದೊಯ್ಯುತ್ತಲಿದ್ದ ಒಬ್ಬ ಖೈದಿಯು ಮಧ್ಯಮಾರ್ಗದಲ್ಲಿಯೇ ಪರಾರಿಯಾದನೆಂದು ಗೊತ್ತಾಗಿದೆ.

ಮೋಸದ ಮೊಕದ್ದಮೆಯಲ್ಲಿ ಇವನಿಗೆ ಒಂದುವರ್ಷ ಕಠಿಣಶಿಕ್ಷೆ ವಿಧಿಸಲಾಗಿತ್ತು.

ಅಪೇರ ೧೨-೯-೫೨ ರಿಂದ ೨ ನೇ ವಾರ

ಪುಯಲ್

ಅಥವಾ

ಬಿರುಗಾಳಿ

[ತಮಿಳು]

ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್

This is the first time introducing on the Silver Screen the powerful drama of "St, Philomena and Mortydom"

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ವುಡ್‌ಲ್ಯಾಂಡ್ಸ್

೭-೯-೫೨ ರಿಂದ ಅಮೋಘ ೨ನೇ ವಾರ

* ಗುಮಾಸ್ತ *
(ಹಿಂದಿ)

ಪಾತ್ರ: ನಿಗಾರ್. ವಾಸ್ತಿ, ಕುಲ್‌ದೀಪ್ ಮಿಜಾತಮುಷ್ರಾಫ್

PRABHA: ★ from 16-9-52 Daily 3 Shows.

Soviet Films Present:-

—THE RUSSIAN STORY—

(The History of Russia in English)

Directed by: V. Puduvokin

One of the Best Film Directors of Russia

Along with:

1.] SOVIET ART SERIES No. 1. [2. VICTORY PARADE

You cannot afford to miss this picture

P. S. Concession for School Students

C. T. C. PUBLICATIONS (FOR S. S. L. C.)

Simplified Eng. Grammar	...... 0 6 0
A Guide to Eng. Text. (Sept. 52)	...... 1 4 0
Do. (March 53)	...... 1 0 0
ಕನ್ನಡ ನೋಟ್ಸ್ [1952 ಸೆಪ್ಟೆಂಬರ್]	0 12 0
(1953 ಮಾರ್ಚ್)	0 12 0
ಆಧುನಿಕ ಮಾನವನ ಹೋರಾಟದ ನೋಟ್ಸ್	0 8 0
ಅಂಕಗಣಿತ-ಬೀಜಗಣಿತ-ರೇಖಾಗಣಿತ (ಪ್ರಶ್ನೋತ್ತರಗಳು-8 ಪರೀಕ್ಷೆಯವು)	1 8 0
Elc. Mathematics (English Medium)	...... 1 10 0

CITY TUTORIAL COLLEGE, MYSORE.

(Agents:- Mr. J. Nanumal & Sons)

ಮಹಾತ್ಮರ ಉಪದೇಶ! ೯೨ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ!!!

ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

★ ಸಂತಾನ ಸಿಂಧೂರ ★

† ಬಹಿಷ್ಠೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ. † ಅಕ್ರಮಸೂತಕ, ಕ್ರಮತಪ್ಪಿ ಬಹಿಷ್ಠೆ ಆಗುವುದನ್ನು ನಿಲ್ಲಿಸುತ್ತದೆ, † ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ † ಬಂಜೆತನವನ್ನು ಕೊನೆಗಾಣಿಸಿ ಸಂತಾನಕೊಡುವ ಸಿದ್ಧೌಷಧ ೨ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ ಟಪಾಲ್ ಖರ್ಚು ೧ ರೂ. —(ಪತ್ರವ್ಯವಹಾರ ಗುಪ್ತ.)

ಅಡ್ರೆಸ್:—ಎ. ರಾಮಸ್ವಾಮಿ ಅಯ್ಯರ್ ಸ್ಟೇ "ಸಂತಾನಸಿಂಧೂರ" ಆಫೀಸ್, ೭೨೮ ನೂರಡಿರಸ್ತೆ ದಕ್ಷಿಣಕಾ.ಸ. (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು.

ವಿ.ಸೂ:—ಇದುವರೆಗೂ ಅಂಬಳೆ ಮನೆ, ಮೈಸೂರು ಸೊಪ್ಪಿನಕೊಳದ ಬೀದಿಯಲ್ಲಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ಸಮ್ಮ ಸ್ವಂತ ಕಟ್ಟಡಕ್ಕೆ ಮಾರ್ಯಿಸಿರುತ್ತೆ. ವಿಶೇಷ ಮಾಹಿತಿಗೆ ೨ ಆ. ಸ್ಟಾಂಪು ಕಳುಹಿಸಿ

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 23

೧೬-೯-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕ್ಷಾಮನಿವಾರಣ ಸಲಹಾ ಸಮಿತಿ ನೇಮಕ

ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಸಂಸ್ಥಾನ ಕ್ಷಾಮಪರಿಹಾರ ಸಲಹಾಸಮಿತಿ ರಚಿಸಲಾಗಿದೆ. ಶ್ರೀಗಳಾದ ಎಲ್. ಎಸ್. ವೆಂಕೋಜಿರಾವ್, ರುಮಾಲೆ ಚನ್ನಬಸವಯ್ಯ, ಎ ಭೀಮಪ್ಪನಾಯಕ, ಎಸ್. ವೀರಪ್ಪ, ಮಾಲಿಮರಿಯಪ್ಪ, ಬಿ. ಸಿ. ನಂಜುಂಡಯ್ಯ, ಕೆ. ಪಟ್ಟಾಭಿರಾಮ್, ಹೆಚ್. ಸಿ. ಲಿಂಗಾರೆಡ್ಡಿ, ಹೆಚ್. ಎಸ್. ರುದ್ರಪ್ಪ, ಡಿ. ಆರ್. ಕರೀಗೌಡ. ಕೆ. ವಿ. ಶಂಕರೇಗೌಡ, ಬಿ. ಹುಚ್ಚೇಗೌಡ, ಹೆಚ್. ಎಂ. ಚನ್ನಬಸಪ್ಪ ಮತ್ತು ಎ. ಸಿ. ನಾಗಯ್ಯರೆಡ್ಡಿಯವರು ಅದರ ಸದಸ್ಯರು ಗೃಹಶಾಖಾ ಕಾರ್‍ಯದರ್ಶಿ ಶ್ರೀ ಜಿ. ಎನ್. ನಾಗರಾಜರಾಯರು ಸಮಿತಿಯ ಕಾರ್‍ಯದರ್ಶಿ

ಬೀಡಿ ಕೈಗಾರಿಕೆ ಮೇಲೆ ಮಾರಾಟತೆರಿಗೆ ಕೂಡದು

ಬೀಡಿ ತಯಾರಿಕರ ಮನವಿ

ಮೈಸೂರು ಸೆ. ೧೬

ಮೈಸೂರು ಸಂಸ್ಥಾನದ ಬೀಡಿ ತಯಾರಿಕರ ಸಂಘದ ವಾರ್ಷಿಕ ಸಭೆಯು ಮೊನ್ನೆ ಶ್ರೀರಂಗಪಟ್ಟಣದ ಗುಂಬಜ್‌ನಲ್ಲಿ ಶ್ರೀ ಹೆಚ್. ಮಹಮದ್‌ಖಾನರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀ ಷರೀಫ್‌ರವರು ವಾರ್ಷಿಕ ವರದಿಯನ್ನು ಒಪ್ಪಿಸಿದನಂತರ, ಸಂಘವನ್ನು ರಿಜಿಸ್ಟರು ಮಾಡಿಸಬೇಕೆಂದು ನಿರ್ಧರಿಸಲಾಯಿತು.

ಬೀಡಿ ಮಾರಾಟದ ಮೇಲೆ ಮಾರಾಟ ತೆರಿಗೆಯನ್ನು ವಿಧಿಸಕೂಡದೆಂದೂ, ಈ ಬಗ್ಗೆ ಅವರುಗಳಮೇಲೆ ಹೂಡಿರುವ ಮೊಕದ್ದಮೆಗಳನ್ನು ವಾಪಸು ಮಾಡಬೇಕೆಂದು ಕೇಂದ್ರ ಮತ್ತು ಸಂಸ್ಥಾನದ ಸರ್ಕಾರಗಳನ್ನು ಪ್ರಾರ್ಥಿಸುವ ನಿರ್ಣಯಮಾಡಲಾಯಿತು. ಈ ಬಗ್ಗೆ ಅವಶ್ಯಕವಿದ್ದರೆ ದೆಹಲಿಗೆ ನಿಯೋಗ ಹೋಗಬೇಕೆಂದೂ ನಿರ್ಧರಿಸಲಾಯಿತು.

ಬೀಡಿತಯಾರಿಕೆಯರಾಷ್ಟ್ರೀಯ ಗೃಹ ಕೈಗಾರಿಕೆಯಾಗಿರುವುದರಿಂದ ಅದರ ಬಗ್ಗೆ ಕಾರ್ಮಿಕ ಕಾನೂನುಗಳನ್ನು ಅನ್ವಯಿಸಕೂಡದೆಂದು ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳನ್ನು ಪ್ರಾರ್ಥಿಸಲಾಯಿತು ಸುಂಕವನ್ನು ವಸೂಲುಮಾಡುವಾಗ ಕೇಂದ್ರ ಅಬ್ಕಾರಿ ಅಧಿಕಾರಿಗಳು ಕೊಡುತ್ತಿರುವ ಸಣ್ಣ ಪುಟ್ಟ ಕಿರುಕುಳವನ್ನು ತಪ್ಪಿಸಬೇಕೆಂದೂ ಮನವಿ ಮಾಡಲಾಯಿತು.

ಉಪಾಧ್ಯಕ್ಷರಾದ ಶ್ರೀ ಎಂ. ಆರ್. ಸಿ. ಬಸಪ್ಪನವರಿಂದ ವಂದನಾರ್ಪಣೆಯೊಡನೆ ಸಭೆಯು ಮುಕ್ತಾಯಗೊಂಡಿತು.

ಸಹಕಾರ ಶಿಕ್ಷಣ

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ಮುಂದಿನತಿಂಗಳು ೧ನೇ ತಾರೀಖಿನಿಂದ ೨ ತಿಂಗಳಕಾಲ ಪ್ರತಿದಿನ ಸಂಜೆ ರಾಜಧಾನಿಯ ಸಹಕಾರ ಭವನದಲ್ಲಿ ಉಚಿತ ಸಹಕಾರ ಶಿಕ್ಷಣ ತರಗತಿಗಳನ್ನು ಏರ್ಪಡಿಸಲಾಗಿದೆ. ತರಗತಿಗಳಿಗೆ ಸೇರಲಿಚ್ಛಿಸುವವರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಇದೇ ೨೫ನೇ ತಾರೀಖಿನೊಳಗಾಗಿ ಅರ್ಜಿಗಳನ್ನು ಸಲ್ಲಿಸಬೇಕೆಂದು ಕೋರಲಾಗಿದೆ.

ಇಬ್ಬರ ಹಳ್ಳಿಯವರ ಕೊಲೆ

ಮೈಸೂರು ಸೆ. ೧೬

ಮೈಸೂರು ತಾಲ್ಲೂಕಿನ ಗೋಪಾಲಪುರ ಎಂಬ ಹಳ್ಳಿಯ ಚಲುವೇಗೌಡ ಮತ್ತು ಕರೀಗೌಡ ಎಂಬುವರನ್ನು ಇದೇ ೧೪ನೇ ತಾರೀಖು ರಾತ್ರಿ ಯಾರೋ ದುರಾತ್ಮರು ದೊಣ್ಣೆ ಮತ್ತು ಮಚ್ಚಿನಿಂದ ಹೊಡೆದು ಕೊಲೆಮಾಡಿರುವರೆಂದು ವರದಿಯಯಗಿದೆ. ಯಾವುದೋ ಜಮೀನು ವ್ಯವಹಾರದಲ್ಲಿ ಈ ಕೊಲೆ ನಡೆದಿರಬಹುದೆಂದು ಹೇಳಲಾಗಿದೆ. ಇಲ್ಲಿಯವರೆಗೆ ಕೊಲೆಪಾತಕರು ಪತ್ತೆಯಾಗಿಲ್ಲ. ತಾಲ್ಲೂಕು ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಪತ್ರಿಕೋದ್ಯೋಗಿ ಸಂಘ

ಮೈಸೂರು ಸೆ. ೧೬

ನಗರದ ಪತ್ರಿಕೋದ್ಯೋಗಿ ಸಂಘದ ಸಭೆಯು ಶ್ರೀ ಆರ್. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ನಡೆದು, ಸರ್ ಎಂ. ವಿಶ್ವೇಶ್ವರಯ್ಯನವರ ೯೨ ನೇ ವರ್ಧಂತ್ಯುತ್ಸವದ ಸಮಯದಲ್ಲಿ ಅವರಿಗೆ ಶುಭಾಶಯಗಳನ್ನು ಕೋರಲಾಯಿತು.

ಹರಿಜನ ಪತ್ರಿಕೆಯ ಸಂಪಾದಕರಾದ ಶ್ರೀ ಮಷ್ರುವಾಲಾರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು.

ದಸರಾ ವಸ್ತುಪ್ರದರ್ಶನ

ಮೈಸೂರು ದಸರಾ ವಸ್ತುಪ್ರದರ್ಶನದ ಆರಂಭೋತ್ಸವವನ್ನು ಇದೆ ೨೦ ನೇ ತಾ॥ ಸಂಜೆ ೫ ಗಂಟೆಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರುನೆರವೇರಿಸುವರು.

ಡಾ॥ ವಿ. ಆರ್. ನಾಯ್ಡು

ಮೈಸೂರು ಸೆ. ೧೬

ಕೃಷ್ಣರಾಜೇಂದ್ರ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿ ಡಾ॥ ವಿ. ಆರ್. ನಾಯ್ಡುರವರನ್ನು ನೇಮಿಸಲಾಗಿದೆ.

ಸರ್. ಎಂ. ವಿ. ಯವರ ವರ್ಧಂತಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಶ್ರೀ ಕೆ. ಎಸ್. ಬೋರೆಗೌಡರ ಅಧ್ಯಕ್ಷತೆಯಲ್ಲಿ ನಿನ್ನೆ ಸರ್.ಎಂ. ವಿ ಯವರ ವರ್ಧಂತ್ಯುತ್ಸವವನ್ನು ಆಚರಿಸಲಾಯಿತು.

ಭಾರತದಮೇಲೆ ಚೀಣಾದ ಆಕ್ರಮಣ?

ಚೀಣಾ ಭಾರತದಮೇಲೆ ಆಕ್ರಮಣ ನಡೆಸುವ ಸಂಭವವಿರುವುದರಿಂದ ಭಾರತವು ತನ್ನ ಸೈನ್ಯಬಲವನ್ನು ಅಧಿಕಪಡಿಸಿಕೊಳ್ಳಬೇಕೆಂದು ಅಮೇರಿಕ ಸುಪ್ರಸಿದ್ಧ ಪತ್ರಿಕೋದ್ಯೋಗಿ ಲೂಯಿಫಿಷರ್‌ರವರು ಮದರಾಸಿನಲ್ಲಿ ತಿಳಿಸಿದ್ದಾರೆ ಚೀಣಾ ಸೈನಿಕರು ಈಗಾಗಲೇ ಭಾರತದ ಮತ್ತು ನೇಪಾಳಗಡಿಗಳವರೆಗೆ ಬಂದಿದ್ದಾರೆ. ಅದರ ಫಲವಾಗಿ ಭಾರತವು ಉತ್ತರಗಡಿಯಲ್ಲಿ ತನ್ನ ಮಿಲಿಟರಿ ಕಾರ್‍ಯವನ್ನು ಬದಲಾಯಿಸಲೇ ಬೇಕಾಗಿದೆ ಯೆಂದೂ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಒಂದು ಸೀರೆಗಾಗಿ ಮಗುವಿನ ಮಾರಾಟ

ತರೀಕೆರೆ ತಾಲ್ಲೂಕು ತಿಮ್ಮಾಪುರದ ಕೂಲಿಮಾಡಿಕೊಂಡು ಜೀವನಮಾಡುತ್ತಿದ್ದ ಹನುಮಂತಪ್ಪನ ಪತ್ನಿ ಗೌರಮ್ಮ ಎಂಬಾಕೆಯು ಬಡತನದಿಂದ ಬಳಲಿ ೧ ಸೀರೆಗಾಗಿ ತನ್ನ ನಾಲ್ಕು ತಿಂಗಳ ಗಂಡುಮಗುವನ್ನು ಬಾಣಾವಾರದಲ್ಲಿ ಮಾರಿದಳೆಂದು ವರದಿಯಾಗಿದೆ.

ಗ್ಯಾಸ್ ಕೆಲಸಗಾರರ ಮುಷ್ಕರ ಮುಕ್ತಾಯ

ಕಳೆದತಿಂಗಳು ೩೦ನೇ ತಾರೀಖಿನಿಂದ ಮುಷ್ಕರಹೂಡಿದ್ದ ೧೪೦೦ ಮಂದಿ ಬೊಂಬಾಯಿನ ಗ್ಯಾಸ್ ಕೆಲಸಗಾರರು ನಿನ್ನೆಯಿಂದ ಕೆಲಸಕ್ಕೆ ಹಿಂತಿರುಗಿದ್ದಾರೆ.

ಭಾರತದ ಮಹಾ ತಾತಂದಿರಲ್ಲಿ ಸರ್. ಎಂ. ವಿ. ಪ್ರಮುಖರು

ಸರ್. ಎಂ. ವಿ. ಯವರು ಭಾರತದ ಮಹಾ ಮಹಿಮ ಪುರುಷರು ಭಾರತದ ಪುನರುಜ್ಜೀವನಕ್ಕಾಗಿ ಸೇವೆ ಸಲ್ಲಿಸುತ್ತಿದ್ದಾರೆ ಅವರು ನಮಗೆಲ್ಲರಿಗೂ ಪೂಜ್ಯರಾದ ಆದರ್ಶವ್ಯಕ್ತಿ ಅವರಂತೆ ನಾವೆಲ್ಲ ಕಾರ್‍ಯನಿರತರಾಗಬೇಕು ಭಾರತದ ಮಹಾತಾತಂದಿರಲ್ಲಿ ಅವರು ಪ್ರಮುಖರು ಎಂದು ಪ್ರಧಾನಿ ನೆಹರೂರವರು ಡಾ॥ ವಿಶ್ವೇಶ್ವರಯ್ಯನವರು ವರ್ಧಂತ್ಯುತ್ಸವಕ್ಕೆ ಕಳುಹಿಸಿರುವ ಶುಭಾಶಯದಲ್ಲಿ ತಿಳಿಸಿರುತ್ತಾರೆ.

ಕೊರಿಯಾ ಯುದ್ಧದಲ್ಲಿ ವಿಷಪ್ರಯೋಗ

ಕೊರಿಯಾ ಯುದ್ಧದಲ್ಲಿ ಅಮೆರಿಕನರು ವಿಷಪ್ರಯೋಗ ನಡೆಸಿದರೆಂಬುದನ್ನು ಅಲ್ಲಿ ತನಿಖೆನಡೆಸಿದ ಅಂತರರಾಷ್ಟ್ರೀಯ ವೈಜ್ಞಾನಿಕರ ವರದಿಯಿಂದ ದೃಢಪಟ್ಟಿದೆಯೆಂದು ಚೀಣಾ ವಾರ್ತಾಸಂಸ್ಥೆ ತಿಳಿಸಿದೆ.

ಅವಳಿಮಕ್ಕಳನ್ನು ಬೇರ್ಪಡಿಸಲಾಯಿತು

ಒಂದೇ ದೇಹದಲ್ಲಿ ಅಂಟಿಕೊಂಡಿದ್ದ ಅವಳಿಜವಳಿ ಮಕ್ಕಳನ್ನು ಈಗ ಮದರಾಸ್ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯಿಂದ ಬೇರ್ಪಡಿಸಲಾಗಿದೆ. ಎರಡು ಮಕ್ಕಳೂ ಈಗ ಹುಷಾರಾಗಿವೆಯೆಂದು ವೈದ್ಯರು ತಿಳಿಸಿರುತ್ತಾರೆ

ವಿಮಾನದಲ್ಲಿವಜ್ರಗಳ ಕಳವು

ಲಂಡನ್ನಿನಿಂದ ಬ್ಯಾಂಕಾಕಿಗೆ ವಿಮಾನದಲ್ಲಿ ರವಾನಿಸಲಾಗಿದ್ದ ವಜ್ರಗಳ ಪಾರ್ಸಲ್ ರಂಗೂನಿನಬಳಿ ಕಳುವಾಗಿದೆ. ಇದರ ಬೆಲೆಯು ೧೦೦೦೦ ಪೌಂಡುಗಳೆಂದು ಹೇಳಲಾಗಿದೆ. ಈ ಸಂಬಂಧದಲ್ಲಿ ಆಂಗ್ಲೋ ಬರ್ಮಾ ಅಧಿಕಾರಿ ಮತ್ತು ೪ ಕೂಲಿಯವರ ದಸ್ತಗಿರಿಯಾಗಿದೆ.

ದಕ್ಷಿಣಆಫ್ರಿಕಾ ಸತ್ಯಾಗ್ರಹ ಮುಂದುವರಿಯಬೇಕು

ದಕ್ಷಿಣಆಫ್ರಿಕಾದಲ್ಲಿ ವರ್ಣಭೇದ ನೀತಿ ವಿರುದ್ಧವಾಗಿಯು ವಿರೋಧೇತ್ಯರರ ಅಹಿಂಸಾತ್ಮಕ ಚಳುವಳಿಯು ಮುಂದುವರಿಯಲೇ ಬೇಕೆಂದು ಅಮೇರಿಕಾ ಮಾಜಿ ಅಧ್ಯಕ್ಷರ ಪತ್ನಿ ಶ್ರೀಮತಿ ರೂಸ್‌ವೆಲ್ಟ್ ರವರು ಹೇಳಿರುವರು.

ವಿಶ್ವೇಶ್ವರಯ್ಯನವರು ಜನಸಾಮಾನ್ಯರ ಮಿತ್ರರು

ಮಹಾರಾಜರ ಪ್ರಶಂಸೆ

ಬೆಂಗಳೂರು ಸೆ. ೧೭

ಡಾ|| ವಿಶ್ವೇಶ್ವರಯ್ಯನವರು ನಿಸ್ಸಂಶಯವಾಗಿಯೂ ನಮ್ಮಕಾಲದ ಶ್ರೇಷ್ಠ ಮಹಾ ಪುರುಷರಲ್ಲೊಬ್ಬರು. ಅದರಲ್ಲೂ ಮೈಸೂರಿನಲ್ಲಿ ಜನಿಸಿದವರಲ್ಲಂತೂ ಅತ್ಯಂತ ಶ್ರೇಷ್ಠ ವ್ಯಕ್ತಿಗಳಲ್ಲೊಬ್ಬರು ಈ ಬಗ್ಗೆ ಮೈಸೂರಿನವರೆಲ್ಲಾ ಹೆಮ್ಮೆಪಡಬೇಕಾಗಿದೆ. ಅವರ ಕಾರ್ಯನಿರತ ಜೀವನದ ೬೦ ವರ್ಷಗಳೂ ಸತತ, ಶೀಘ್ರ ಹಾಗೂ ಫಲದಾಯಕ ಚಟುವಟಿಕೆಯ ಒಂದು ಅಧ್ಯಾಯವಾಗಿದೆ.

ಕೈಗಾರಿಕೆ ಮತ್ತು ವಿದ್ಯಾಭ್ಯಾಸ ಕ್ಷೇತ್ರಗಳಲ್ಲಿ ಅವರು ಪಡೆದ ವಿಶಿಷ್ಟ ಸಾಧನೆಗಳಂತೂ ಪ್ರಸ್ತಾಪಿಸಲು ಸಾಧ್ಯವಿಲ್ಲದಷ್ಟು ಹೇರಳವಾಗಿದೆ ನಮ್ಮ ಸಂಸ್ಥಾನಕ್ಕೆ ಅವರ ಸೇವೆಯನ್ನು ಸಲ್ಲಿಸಿದ ಗಣನೀಯ ಕಾಲದಲ್ಲಿ ಅವರು ಸಂಸ್ಥಾನದ ಪ್ರಗತಿ ಮತ್ತು ಅಭ್ಯುದಯಕ್ಕಾಗಿ ಹಾಕಿದ ಅಡಿಪಾಯವು ಎಷ್ಟು ವಿಶಾಲವೂ ಭದ್ರವೂ ಆದುದೆಂಬುದನ್ನು ಸ್ಮರಿಸಿಕೊಳ್ಳಬೇಕಾಗಿದೆ.

ಇವರ ಜೀವನವು ಉತ್ಕಟ ಸಾರ್ವಜನಿಕ ಸೇವಾಬುದ್ಧಿಗೂ, ದೇಶಭಕ್ತಿಗೂ ಉಜ್ವಲ ನಿದರ್ಶನವಾಗಿದೆ. ಈ ಇಳಿವಯಸ್ಸಿನಲ್ಲೂ ಇವರಲ್ಲಿ ಜನಸೇವೆಯ ಕಾರ್ಯೋತ್ಸಾಹವೇ ತುಂಬಿ ತುಳುಕುತ್ತಿದೆ. ಜನಸಾಮಾನ್ಯರ. ಮಿತ್ರರು ಅವರ ಪ್ರತಿಯೊಂದು ಯೋಜನೆಯೂ ಜನಸಾಮಾನ್ಯರ ಉದ್ಧಾರಕ್ಕಾಗಿಯೇ ವಿಾಸಲಾದುದು ಅವರ ಸೇವೆಯು ನಮ್ಮ ದೇಶಕ್ಕೆ ಇನ್ನೂ ಬಹುಕಾಲ ದೊರೆಯುವಂತೆ ಭಗವಂತನು ಅವರಿಗೆ ಆಶೀರ್ವದಿಸಲೆಂದು ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯ ಉತ್ಕಟ ಹಾರೈಕೆಯಾಗಿದೆ. ಅವರಿಗೆ ಆರೋಗ್ಯ, ಯಶಸ್ಸು ಮತ್ತು ದೈವಾನುಗ್ರಹ ದೊರೆಯಲೆಂದು ನಾವೆಲ್ಲಾ ಆಶಿಸೋಣ ಎಂದು ಶ್ರೀಮನ್ಮಹಾರಾಜರು ನಿನ್ನೆಯದಿನ ಬೆಂಗಳೂರು ಟೌನ್‌ಹಾಲಿನಲ್ಲಿ ನಡೆದ ಡಾ|| ವಿಶ್ವೇಶ್ವರಯ್ಯನವರ ೯೨ ನೇ ಜನ್ಮದಿನೋತ್ಸವದ ಸಮಾರಂಭದಲ್ಲಿ ಭಾಷಣಮಾಡುತ್ತಾ ತಿಳಿಸಿದರು.

ದೀರ್ಘಾಯಸ್ಸಿಗೆ ಕಾರಣ

ಅರವತ್ತನೆ ವಯಸ್ಸಿಗೆ ಅನೇಕರು ಮುದುಕರು ಎನ್ನುವಂತಾಗಿದೆಯೆಂದೆ. ಆದರೆ ಇದುವರೆಯಿಲ್ಲ ಈಗ ಜನ ಮೊದಲಿಗಿಂತ ಹೆಚ್ಚು ವಯಸ್ಸಿನವರೆಗೆ ಬದುಕುತ್ತಿದ್ದಾರೆ ಪಾಶ್ಚಾತ್ಯದಲ್ಲಿ ೭೦-೮೦ ವರ್ಷಗಳಿಗೆ ಮೊದಲು ಮರಣ ಅಪರೂಪ ಯಾವಾಗಲೂ ಕಾರ್ಯ ಚಟುವಟಿಕೆಯಿಂದ ತೊಡಗಿದ್ದಾರೆ, ವೃದ್ಧಾಪ್ಯದಲ್ಲಿ ಕೂಡ ನಾವು ಧಾರ್ಢ್ಯದಿಂದಿರಬಹುದು ಪ್ರತಿದಿನ ನಿಯಮಿತವೇಳೆಗಳಲ್ಲಿ ಆಹಾರ, ಸಾಮಾನ್ಯವಾಗಿ ೬-೮ ಗಂಟೆಗಳ ನಿದ್ರೆ, ಮನೆಹೊರಗೋ ಅಥವಾ ಒಳಗೂ ದಿನಕ್ಕೆ ಸಾಮಾನ್ಯವಾಗಿ ೮ ಗಂಟೆಗಳ ಕೆಲಸ, ದಿನಕ್ಕೆ ೩-೪ ಮೈಲಿಗಳ ದೂರ ನಡೆಯುವುದರ ಮೂಲಕ ಅಂಗಸಾಧನೆ ಈ ಕಾರ್ಯಕ್ರಮದಿಂದ ತಾವು ೯೦ ವರ್ಷಕ್ಕೆ ಮೀರಿ ಬದುಕಲು ಸಹಾಯಕವಾಗಿದೆ. ಎಂದು ಡಾ|| ವಿಶ್ವೇಶ್ವರಯ್ಯನವರು ತಮ್ಮ ಭಾಷಣದಲ್ಲಿ ತಿಳಿಸಿರುತ್ತಾರೆ.

§ ದಕ್ಷಿಣಆಫ್ರಿಕದ ವರ್ಣಭೇದನೀತಿಯ ವಿಷಯವನ್ನು ವಿಶ್ವಸಂಸ್ಥೆಯಲ್ಲಿ ಚರ್ಚಿಸಬೇಕೆಂದು ಅರಬ್-ಏಷ್ಯಾರಾಷ್ಟ್ರಗಳು ನಿರ್ಧರಿಸಿವೆ.

ಆಯುರ್ವೇದ ಕಾಲೇಜು ಸಂಘ

ಮೈಸೂರು ಸೆ. ೧೭

ಮೈಸೂರು ಯುನಾನಿ ಮತ್ತು ಆಯುರ್ವೇದ ಕಾಲೇಜು ಸಂಘದ ಪ್ರಾರಂಭ ಭಾಷಣವನ್ನು ನಾಳೆಸಂಜೆ ಶಾಸನಸಭಾ ಸದಸ್ಯ ಶ್ರೀ ಕೆ. ವಿ. ಶಂಕರೇಗೌಡರ ಅಧ್ಯಕ್ಷತೆಯಲ್ಲಿ ಪ್ರೊ|| ಎಲ್. ಶ್ರೀಕಂಠಯ್ಯನವರು ನೆರವೇರಿಸುವರು.

ಉಪ್ಪಿನ ತಯಾರಿಕೆ ಹೆಚ್ಚಿಸಲು ಯೋಜನೆ

ಭಾರತದಲ್ಲಿ ಉಪ್ಪಿನ ತಯಾರಿಕೆಯನ್ನು ಹೆಚ್ಚಿಸಲು ದೇಶದ ನಾನಾ ಭಾಗಗಳಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸಲಾಗುವುದೆಂದು ಕೇಂದ್ರ ಉತ್ಪನ್ನಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿರುತ್ತಾರೆ

೨೪ ಗಂಟೆ ಉಪವಾಸ

ಕಳೆದ ಕೆಲವು ತಿಂಗಳುಗಳಿಂದ ಸಿಂಹಳದಲ್ಲಿ ಪೌರತ್ವಕ್ಕಾಗಿ ೩ ತಿಂಗಳುಕಾಲ ತಾತ್ಕಾಲಿಕವಾಗಿ ಚಳುವಳಿ ನಿಲ್ಲಿಸಲು ನಿನ್ನೆಯದಿನ ಸಿಂಹಳದಲ್ಲಿರುವ ಭಾರತ ಕಾಂಗ್ರೆಸ್‌ನವರು ೨೪ ಗಂಟೆಕಾಲ ಉಪವಾಸವನ್ನು ಪ್ರಾರಂಭಿಸಿ ಈ ಸಂಜೆ ಮುಕ್ತಾಯಗೊಳಿಸಿದರು.

ಮೈಸೂರು ಪೇಟೆಧಾರಣೆ

ತಾ|| ೧೫-೯-೫೨

ಪಲ್ಲ	ರೂ—ಆ	ರೂ—ಆ
ಕಡಲೇಕಾಯಿ	೧೩-೦	೨೨-೮
ಎಳ್ಳು	೫೦-೨	೭೦-೧೦
ಹರಳು	೫೨-೦	೫೪-೪
ಹುರುಳಿ	೫೩-೧೦	೫೩-೧೪
ಅಲಸಂದೆ	೭೪-೨	೭೭-೨
ಮೆಣಸಿನಕಾಯಿ	೨೨-೦	—
ಹುಣಸೆಹಣ್ಣು	೧-೧೩	೬-೭
ಸೀಗೇಕಾಯಿ	೫-೩	—
ಬೆಲ್ಲ	೩-೪	೪-೮
ತೆಂಗಿನಕಾಯಿ ೧,೧೦೦ ಕ್ಕೆ	೧೪೩	೨೦೪

ರಾಷ್ಟ್ರಾಧ್ಯಕ್ಷರ ಶುಭಾಶಯ

ಬೆಂಗಳೂರು ಸೆ. ೧೭

ಡಾ|| ಎಂ. ವಿಶ್ವೇಶ್ವರಯ್ಯನವರ ೯೨ ನೇ ವರ್ಧಂತಿ ಮಹೋತ್ಸವ ಸಮಾರಂಭದಲ್ಲಿ ಭಾರತ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್‌ರವರು ಶುಭಾಶಯವನ್ನು ಕಳುಹಿಸಿ, ಭಾರತಕ್ಕೆ ಇನ್ನೂ ಅನೇಕ ವರ್ಷದಕಾಲ ತಮ್ಮ ಅಮೂಲ್ಯಸೇವೆಯನ್ನು ಸಲ್ಲಿಸುವಂತೆ ಶ್ರೀ ಎಂ. ವಿಶ್ವೇಶ್ವರಯ್ಯನವರಿಗೆ ಭಗವಂತನು ಅನುಗ್ರಹಿಸಲೆಂದು ನನ್ನ ನಂಬಿಕೆ. ಅವರ ೯೩ ನೆಯ ಜನ್ಮದಿನೋತ್ಸವ ಸಮಾರಂಭಕ್ಕೆ ನನ್ನ ಸಂತಸದ ಶುಭಾಶಯಗಳು ಎಂದು ಹೇಳಿದ್ದಾರೆ.

ಭಾರತ ಉಪರಾಷ್ಟ್ರಾಧ್ಯಕ್ಷ ಡಾ|| ರಾಧಾಕೃಷ್ಣನ್, ಪ್ರಧಾನಿ ನೆಹರೂ, ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿ, ಉತ್ತರಪ್ರದೇಶ, ಬೊಂಬಾಯಿ, ಮಧ್ಯಪ್ರದೇಶ, ಬೀಹಾರ ಗೌರ್ನರುಗಳು ಅನೇಕ ಸಚಿವರು, ರಾಷ್ಟ್ರದ ಪ್ರಮುಖರು ಶ್ರೀ ಸರ್. ಎಂ. ವಿ ಯವರಿಗೆ ಪ್ರೀತಿಪೂರ್ವಕ ಶುಭಾಶಯಗಳನ್ನು ಕಳುಹಿಸಿರುವರು.

ನೂತನ ಸೀನಿಯರ್ ಸರ್ಜನ್

ಮೈಸೂರು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ಸೂಪರಿಂಟೆಂಡೆಂಟರಾದ ಶ್ರೀ ಬಿ. ಆರ್. ರಾಮಲಿಂಗರೆಡ್ಡಿಯವರು ಸೀನಿಯರ್ ಸರ್ಜನರಾಗಿ ನಿನ್ನೆಯದಿನ ಅಧಿಕಾರ ವಹಿಸಿಕೊಂಡರು.

೪೦೦೦ ಜನರ ದಸ್ತಗಿರಿ

ದಕ್ಷಿಣಆಫ್ರಿಕಾದಲ್ಲಿ ವರ್ಣಭೇದ ನೀತಿ ವಿರುದ್ಧ ಚಳುವಳಿ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ೪೦೦೦ ಜನರ ದಸ್ತಗಿರಿಯಾಗಿದೆ.

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು
ನಿಮ್ಮ ಸದರುಗಳನ್ನು ಅಲಂಕರಿಸಲಿ
ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.
★
ಹೆಚ್ಚಿನ ವಿವರಗಳಿಗೆ ಬರೆಯಿರಿ:—
ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

ರಣಜಿತ್
19-9-52ರಿಂದಯಶಸ್ವಿಯಾದ೭ನೇವಾರ
* ಆನ್ *
ಪಾತ್ರ:— ದಿಲೀಪ್‌ಕುಮಾರ್, ನಿಮ್ಮಿ. ಪ್ರೇಮನಾಥ್, ನಾದಿರ

ವುಡ್‌ಲ್ಯಾಂಡ್ಸ್
೧೪-೯-೫೨ರಿಂದ ಅಮೋಘ ೩ನೇ ವಾರ
* ಗುಮಾಸ್ತ * (ಹಿಂದಿ)
ಪಾತ್ರ:-ನಿಗಾರ್. ವಾಸ್ತಿ, ಕುಲ್‌ದೀಪ್ ಮಿಜಾತಮುಷ್ರಾಪ್

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 24

೧೭-೯-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಐ. ಎನ್. ಟಿ. ಯು. ಸಿ. ಜನರಲ್ ಕೌನ್ಸಿಲ್

ಮೈಸೂರು ಸೆ. ೧೭

ಐ. ಎನ್. ಟಿ. ಯು. ಸಿ. ಮೈಸೂರು ಪ್ರಾಂತೀಯ ಶಾಖೆಯ ಜನರಲ್ ಕೌನ್ಸಿಲ್ ಸಭೆಯು ಇದೇ ತಿಂಗಳ ೨೧ ನೇ ತಾರೀಖಿನ ದಿನ ಮೈಸೂರಿನಲ್ಲಿ ನಡೆಯಲಿದೆ.

ಸಭೆಯನ್ನು ಯಶಸ್ವಿಯಾಗಿ ನಡಸುವ ಸಲುವಾಗಿ ಮೈಸೂರು ನಗರದ ಐ. ಎನ್. ಟಿ ಯು. ಸಿ. ಗೆ ಸೇರಿದ ಸಂಘಗಳ ಪ್ರತಿನಿಧಿಗಳ ಸಭೆಯೊಂದು ನಿನ್ನೆ ಸಂಜೆ ಮೋಟಾರು ಕೆಲಸಗಾರರ ಸಂಘದ ಕಛೇರಿಯಲ್ಲಿ ಶ್ರೀ ಎಂ. ಮಾದಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು.

ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಸಭೆ ಕರೆದಿರುವ ಉದ್ದಿಷ್ಟವನ್ನು ವಿವರಿಸಿದನಂತರ ಜನರಲ್ ಕೌನ್ಸಿಲ್ ಸಭೆಯನ್ನು ವಿಜೃಂಭಣೆಯಿಂದ ನಡೆಸತಕ್ಕದ್ದೆಂದೂ ಅದಕ್ಕಾಗುವ ಖರ್ಚನ್ನು ನಗರದ ಎಲ್ಲಾ ಸಂಘಗಳು ವಹಿಸತಕ್ಕದ್ದೆಂದೂ ತೀರ್ಮಾನಿಸಲಾಯಿತು.

ಅದರ ವ್ಯವಸ್ಥೆಗಾಗಿ ಶ್ರೀಗಳಾದ ಟಿ. ಎಸ್. ಸುಬ್ಬಣ್ಣ, ಎ. ರಾಮಣ್ಣ, ವಗ್ಗಣ್ಣ, ಎಲ್. ರಾಮಯ್ಯ, ಎಂ. ಮಾದಯ್ಯ ಮತ್ತು ಮಹಮದ್ ಖಾಸಿಂರವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು.

ಜಾಲಹಳ್ಳಿ ಮಿಲಟರಿ ಇಂಜನಿಯರಿಂಗ್ ಕೇಂದ್ರದ ವರ್ಗ

ಬೆಂಗಳೂರಿನ ಸಮೀಪದಲ್ಲಿರುವ ಜಾಲಹಳ್ಳಿಯ ಮಿಲಟರಿ ಎಲೆಕ್ಟ್ರಿಕಲ್ ಮತ್ತು ಮೆಕ್ಯಾನಿಕಲ್ ಕೇಂದ್ರವನ್ನು ಹೈದರಾಬಾದಿಗೆ ವರ್ಗಾಯಿಸಲಾಗುವುದೆಂದು ಹೇಳಲಾಗಿದೆ.

ಅಕ್ಕಿಬೆಳೆ ಶಿಕ್ಷಣ ಕೇಂದ್ರ

ಕಟಕ್ ಅಕ್ಕಿ ಸಂಶೋಧನಾ ಕೇಂದ್ರದಲ್ಲಿ ಅಂತರಾಷ್ಟ್ರೀಯ ಅಕ್ಕಿಬೆಳೆ ಅಭಿವೃದ್ಧಿ ಶಿಕ್ಷಣಶಾಲೆಯೊಂದನ್ನು ವಿಶ್ವಸಂಸ್ಥೆಯ ಆಶ್ರಯದಲ್ಲಿ ತೆರೆಯಲಾಗಿದೆ. ಅದರ ಆರಂಭೋತ್ಸವವನ್ನು ನಿನ್ನೆ ಕೇಂದ್ರ ಹಣಕಾಸಿನ ಸಚಿವ ಶ್ರೀ ದೇಶ್‌ಮುಖ್‌ರವರು ನೆರವೇರಿಸಿದರು.

ಅವಳಿ ಮಕ್ಕಳ ಮರಣ

ಒಂದೇ ದೇಹದಲ್ಲಿ ಅಂಟಿಕೊಂಡಿದ್ದ ಅವಳಿ ಮಕ್ಕಳನ್ನು ಮದರಾಸ್ ಆಸ್ಪತ್ರೆಯಲ್ಲಿ ಬೇರ್ಪಡಿಸಲಾಗಿತ್ತಷ್ಟೆ. ಆದರೆ ಆ ಮಕ್ಕಳು ಕೆಲವು ಗಂಟೆಗಳನಂತರ ಮರಣ ಹೊಂದಿದವೆಂದು ವರದಿಯಾಗಿದೆ.

ಮೈಸೂರಿನ ಅಭಾವ ಪ್ರದೇಶಗಳಿಗೆ ನೆಹರೂ ಕಿದ್ವಾಯಿ ಭೇಟಿ

ಮೈಸೂರು ಸಂಸ್ಥಾನದ ಕೋಲಾರ. ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಉಂಟಾಗಿರುವ ಆಹಾರ ಅಭಾವ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಲು ಪ್ರಧಾನಿ ನೆಹರೂ ಮತ್ತು ಕೇಂದ್ರ ಆಹಾರಸಚಿವ ಕಿದ್ವಾಯ್‌ರವರು ಸಧ್ಯದಲ್ಲಿಯೇ ಆ ಪ್ರದೇಶಗಳಿಗೆ ಭೇಟಿ ಕೊಡಲಿರುವರೆಂದು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಬೊಂಬಾಯಿನಲ್ಲಿ ತಿಳಿಸಿರುತ್ತಾರೆ.

ತೀರ್ಥದ ರೂಪದಲ್ಲಿ ಹೆಂಡ

ಬೊಂಬಾಯಿ ಸಂಸ್ಥಾನದಲ್ಲಿ ಸಂಪೂರ್ಣ ಪಾನನಿರೋಧ ಜಾರಿಯಲ್ಲಿರುವುದರಿಂದ ಅಕ್ರಮ ಹೆಂಡ ತಯಾರಿಕೆಕಾರರು ಹಲವುರೀತಿಯಲ್ಲಿ ಅದನ್ನು ಜನಗಳಿಗೆ ಹಂಚಲು ಯತ್ನಿಸುತ್ತಿದ್ದಾರೆ. ಇತ್ತೀಚೆಗೆ ಬೊಂಬಾಯಿನ ಕಾಮಟಿಪುರದಲ್ಲಿ ಒಂದು ಪೂಜಾಮಂದಿರದಲ್ಲಿ ಹೆಂಡವನ್ನು ತೀರ್ಥ ರೂಪದಲ್ಲಿ ಭಕ್ತಾದಿಗಳಿಗೆ ಕೊಡುತ್ತಿದ್ದುದನ್ನು ಪತ್ತೆಹಚ್ಚಿ, ಹಲವರನ್ನು ದಸ್ತಗಿರಿ ಮಾಡಿ, ಮೂರು ಶೀಸೆ ಹೆಂಡವನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನಲ್ಲಿ ಇಂಗ್ಲೀಷು ರದ್ದುಮಾಡಲು ಕಷ್ಟ

ಮೈಸೂರು ಸಂಸ್ಥಾನದಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಾಗಿರಬೇಕಾದರೂ ವಿದ್ಯಾರ್ಥಿಗಳಲ್ಲಿಬಹುಸಂಖ್ಯೆ ಇಂಗ್ಲೀಷನ್ನು ಬಿಡಲು ಇಷ್ಟಪಡುತ್ತಿಲ್ಲ. ಆದ್ದರಿಂದ ಇಂಗ್ಲೀಷ್ ಭಾಷೆಯನ್ನು ಸಂಸ್ಥಾನದಲ್ಲಿ ರದ್ದುಮಾಡಲು ಸಾಧ್ಯ ಕಂಡುಬರುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಭಿಪ್ರಾಯಪಟ್ಟಿದ್ದಾರೆ.

೧೫ ತಿಂಗಳಹಿಂದೆ ಸತ್ತವನಿಗೆ ಈಗ ಆಸ್ಪತ್ರೆಯಲ್ಲಿ ಸ್ಥಾನ

ನಾಗಪುರದ ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ಸೇರಬೇಕೆಂದು ಹಿಂಗಿನಘಾಟ್ ತೆಹಸೀಲಿನ ತರೋಡ ಗ್ರಾಮದ ಯುವಕನ್ನೊಬ್ಬನು ೧೮ ತಿಂಗಳಹಿಂದೆ ಅರ್ಜಿಹಾಕಿಕೊಂಡಿದ್ದನು ಆದರೆ ಆತನು ಕ್ಷಯರೋಗದಿಂದ ನರಳುತ್ತಿದ್ದು ೧೫ ತಿಂಗಳ ಹಿಂದೆ ತನ್ನ ಹಳ್ಳಿಯಲ್ಲೇ ಮರಣ ಹೊಂದಿದನು ಆದರೆ ಆತನಿಗೆ ಆಸ್ಪತ್ರೆಯಲ್ಲಿ ಸ್ಥಾನ ದೊರಕಿದೆಯೆಂದು ಈಗ ಪತ್ರ ಕಳುಹಿಸಲಾಗಿದೆ.

ಲೆವಿಪದ್ಧತಿಗೆ ವಿರೋಧ

ಮೈಸೂರು ಸಂಸ್ಥಾನದಲ್ಲಿ ಧಾನ್ಯ ಸಂಗ್ರಹಣೆ ಬಗ್ಗೆ ಲೆವಿಪದ್ಧತಿ ಜಾರಿಗೆ ತರಬೇಕೆಂಬ ಲೆವಿ ಪದ್ಧತಿ ಸಮಿತಿಯ ಶಿಫಾರ್ಸನ್ನು ನಿನ್ನೆ ಬೆಂಗಳೂರಿನಲ್ಲಿ ನಡೆದ ಶಾಸನಾಸಭಾ ಕಾಂಗ್ರೆಸ್ ಪಕ್ಷದಸಭೆಯಲ್ಲಿ ಚರ್ಚಿಸಲಾಯಿತೆಂದೂ, ಅದಕ್ಕೆ ವಿಶೇಷ ವಿರೋಧ ಸೂಚಿಸಲಾಯಿತೆಂದೂ, ತಿಳಿದುಬಂದಿದೆ.

ಸಂಸ್ಥಾನಕ್ಕೆ ಬರುವ ವರ್ಷಕ್ಕೆ ೧, ೫೨, ೮೦೦ ಟನ್ ಆಹಾರಧಾನ್ಯ ಬೇಕಾಗುವುದೆಂದೂ, ಆದರಲ್ಲಿ ಕೇಂದ್ರದಿಂದ ೭೫ ಸಾವಿರ ಟನ್ ಬರುವುದೆಂದೂ, ಉಳಿದ ೮೦ ಸಾವಿರ ಟನ್ ಧಾನ್ಯಗಳನ್ನು ಲೆವಿ ಪದ್ಧತಿ ಮೂಲಕ ಸಂಗ್ರಹಿಸಬೇಕೆಂದೂ ಸಮಿತಿಯು ಸಲಹೆಮಾಡಿದೆ. ೬೦ ಸಾವಿರ ಟನ್ ಅಕ್ಕಿ ಮತ್ತು ೨೦ ಸಾವಿರ ಟನ್ ಜೋಳ ಸಂಗ್ರಹಿಸಬೇಕೆಂದು ಸೂಚಿಸಲಾಗಿದೆ. ಹಳೆಯ ನೀರಾವರಿ ಕಾಲುವೆಗಳ ಕೆಳಗಿನ ಗದ್ದೆಗಳಲ್ಲಿ ಎಕರೆಗೆ ೩ ಪಲ್ಲಾ, ಹೊಸನೀರಾವರಿ ಕಾಲುತಿಂಗಳ ಕೆಳಗಿನ ಗದ್ದೆಗಳಲ್ಲಿ ಎಕರೆಗೆ ೧ ಪಲ್ಲಾ, ಕೆರೆಗಳು ಮತ್ತು ಭಾವಿಗಳ ಆಸರೆಯ ಗದ್ದೆಗಳಿಂದ ಎಕರೆಗೆ ೩ ಪಲ್ಲಾ ಅಕ್ಕಿ, ಹೊಲಗಳಿಂದ ಎಕರೆಗೆ ೧೦ ಸೇರಿನಂತೆ ರಾಗಿ ಅಥವ ಜೋಳ ಸಂಗ್ರಹಿಸಬೇಕೆಂದು ಸಮಿತಿಯು ಸಲಹೆಮಾಡಿತ್ತು.

ಕುದುರೆಜೂಜು ರದ್ದಿಲ್ಲ

ದೇಶದಲ್ಲಿ ಕುದುರೆಜೂಜು ಇರುವುದರಿಂದ ನೀತಿಗೆಡುವುದೆಂದುದನ್ನು ತಾವು ಒಪ್ಪುವುದಿಲ್ಲವೆಂದೂ, ಆದರಿಂದ ಆರ್ಥಿಕ ಮುಗ್ಗಟ್ಟು ಕಡಿಮೆಯಾಗುವುದೆಂದೂ ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಬೊಂಬಾಯಿನಲ್ಲಿ ತಿಳಿಸಿರುತ್ತಾರೆ. ಮುಂದಿನ ವರ್ಷ ಸಂಸ್ಥಾನದ ಬಡ್ಜೆಟ್ಟಿನಲ್ಲಿ ೧ ಕೋಟಿ ರೂ. ಗಳ ಖೋತಾಬೀಳುವ ಸಂಭವವಿರುವುದೆಂದೂ ಅದನ್ನು ಕುದುರೆಜೂಜು ಮತ್ತು ಕ್ರಾಸ್‌ವರ್ಡ್ ಸ್ಪರ್ಧೆಗಳಿಂದ ಬರುವ ತೆರಿಗೆ ಹಣದಿಂದ ಸ್ವಲ್ಪ ಸರಿದೂಗಿಸಬಹುದೆಂದು ಅವರು ಹೇಳಿದ್ದಾರೆ.

ಸೂಚನೆ

ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಾಳೆ ಪತ್ರಿಕೆ ಪ್ರಕಟವಾಗುವುದಿಲ್ಲ.

ಸಂಪಾದಕ.

ದಸರಾ ರಾಜಸಭಾ ಕಾರ್ಯಕ್ರಮ

ಮೈಸೂರು ಸೆ. ೧೭

ಮೈಸೂರಿನಲ್ಲಿ ದಸರಾ ಮಹೋತ್ಸವವು ೨೦ ನೇ ತಾರೀಖು ಶನಿವಾರದಿಂದ ಪ್ರಾರಂಭವಾಗಿ ೨೯ ನೇ ತಾರೀಖು ಮುಕ್ತಾಯವಾಗುತ್ತದೆ.

೨೦ ನೇ ತಾರೀಖು ಬೆಳಗ್ಗೆ ೧೧ ಗಂಟೆಗೆ ಶ್ರೀಮನ್ಮಹಾರಾಜರು ಸಿಂಹಾಸನಾರೋಹಣ ಬೆಳಸುತ್ತಾರೆ. ಅನಂತರ ಸ್ಪೆಷಲ್‌ಕ್ಲಾಸ್ ಸರ್ಕಾರಿ ಅಧಿಕಾರಿಗಳು ಮತ್ತು ಸರದಾರರುಗಳಿಂದ ನಜರು.ಅದೇ ಸಾಯಂಕಾಲ ೬ ಗಂಟೆಗೆ ಪಟ್ಟದ ಆನೆ, ಕುದುರೆ, ಸೋಮೇಶ್ವರ ದೇವಸ್ಥಾನಕ್ಕೆ ಬಿಜಮಾಡುತ್ತದೆ. ೭ ಗಂಟೆಗೆ ರಾಜಸಭೆ ಸಿವಿಲ್ ಆಫೀಸರ್ ಮತ್ತು ಅರಸುಗಳಿಂದ ನಜರು.

ಭಾನುವಾರ ಬೆಳಗ್ಗೆ ೮ಗಂಟೆಗೆ, ಸಂಜೆ ೬ಗಂಟೆಗೆ ಪಟ್ಟದಆನೆ ಕುದುರೆ ಸೋಮೇಶ್ವರ ದೇವಸ್ಥಾನಕ್ಕೆ ಹೋಗುತ್ತವೆ. ಇದೇ ರೀತಿ ೨೮ ನೇ ತಾರೀಖಿನವರಿಗೆ ಬಾಜಮಾಡುತ್ತದೆ. ೨೧ ನೇ ತಾರೀಖು ಭಾನುವಾರ ದಿಂದ ಪ್ರತಿ ಸಂಜೆ ೭ ಗಂಟೆಗೆ ರಾಜಸಭೆ, ನಜರು ೨೮ ನೇ ತಾರೀಖು ಭಾನುವಾರು ಪೂರ್ತಾ ನಡೆಯುತ್ತದೆ.

೨೮ ನೇ ತಾರೀಖು ಭಾನುವಾರ ಬೆಳಗ್ಗೆ ೭ ಗಂಟೆಗೆ ಆಯುಧ, ಆನೆ, ಕುದುರೆ ಮುಂತಾದುವುಗಳ ಪೂಜೆ. ೨೮ ನೇ ತಾರೀಖು ಬೆಳಗ್ಗೆ ಜಟ್ಟಿಕಾಳಗಸಂಜೆ೪.೧೦ ಟಿಗೆಜಂಬೂಸವಾರಿ ಈ ಕಾರ್ಯಕ್ರಮವನ್ನು ರಾಜಸಭಾ ಬಕ್ಷೀಯವರಾದ ಶ್ರೀಎಚ್. ಎಲ್ ದೇವರಾಜೇಅರಸಿನವರುಹೊರಡಿಸಿರುವರು. ರಾಜಸಭೆಗೆ ಬರುವಆಹ್ವಾನಿತರ ಉಡುಪು, ನಜರ್ ಒಪ್ಪಿಸುವ ಕ್ರಮಗಳಲ್ಲಿ ಏನೂ ಬದಲಾವಣೆಗಳಿಲ್ಲ. ಮಾಮೂಲಿನಂತೆಯೇ ಇವೆ.

ಕಮ್ಯೂನಿಸ್ಟರಿಗೆ ನೆಹರೂ ಎಚ್ಚರಿಕೆ

ಪ್ರದರ್ಶನಗಳನ್ನು ನಡೆಸುವುದರ ಮೂಲಕ ಮತ್ತು ಶಾಂತಿ ಭಂಗಗೊಳಿಸುವುದರ ಮೂಲಕ ಭಾರತದಕಮ್ಯೂನಿಸ್ಟರು ತಮ್ಮ ಧ್ಯೇಯ ಸಾಧನೆಯಾಗುವುದೆಂದು ಭಾವಿಸಿದ್ದರೆ ಅವರು ತಮ್ಮ ಕೆಂಪು ಧ್ವಜಗಳೊಡನೆ ತಮ್ಮ ಕಮ್ಯೂನಿಸಮ್ಮಿನ ಮಾತೃಸ್ಥಾನಕ್ಕೆ ಹಿಂತಿರುಗಬೇಕು. ಗಲಭೆಯುಂಟುಮಾಡುವುದರ ಉದ್ದಿಶ್ಯದಿಂದ ಅರ್ಥವಿಲ್ಲದ ಕೂಗಾಟಗಳಿಗೂ ಮತ್ತು ಪ್ರದರ್ಶನಗಳಿಗೂ ತಲೆಬಾಗುವುದಿಲ್ಲವೆಂದು ಅವರು ಚೆನ್ನಾಗಿ ತಿಳಯಲಿ ಎಂದು ಪ್ರಧಾನಿ ಪಂಡಿತ ನೆಹರೂರವರು ಉಜ್ಜನಿಯ ಮಾಧವ ಕಾಲೇಜಿನಲ್ಲಿ ಭಾಷಣವಯಡುತ್ತಾ ತಿಳಿಸಿರುತ್ತಾರೆ,

ಮೈಸೂರು ಸಂಸ್ಥಾನದಲ್ಲಿ ಕೈಗಾರಿಕಾ ಪ್ರಗತಿ

ಅಖಿಲಭಾರತ ತಯಾರಿಕೆಗಾರರ ಸಮ್ಮೇಳನ ಆರಂಭೋತ್ಸವ

ಬೆಂಗಳೂರು ಸೆ. ೧೭

ಮೈಸೂರು ಸಂಸ್ಥಾನದಲ್ಲಿ ಕೈಗಾರಿಕಾ ಪ್ರಗತಿ ಉತ್ತಮ ರೀತಿಯಲ್ಲಿ ನಡೆಯುತ್ತಲಿದೆ. ಇಲ್ಲಿ ಕಬ್ಬಿಣ, ಉಕ್ಕು, ವಿಮಾನ ಶಾಖೆ, ವಿದ್ಯುಚ್ಛಕ್ತಿ ಯಂತ್ರೋಪಕರಣ, ರೇಡಿಯೋ, ಟೆಲಿಫೋನ್, ಬಟ್ಟೆ, ಸಕ್ಕರೆ, ಕಾಗದ, ಸೀಮೆಂಟು, ಸಾಬೂನು ಮುಂತಾದ ಕೈಗಾರಿಕೆಗಳಿವೆ. ಭಾರತದಲ್ಲೆಲ್ಲಾ ಮೈಸೂರು ಸಂಸ್ಥಾನವು ರೇಷ್ಮೆ ಕೈಗಾರಿಕೆಯಲ್ಲಿ ಮುಖ್ಯಕೇಂದ್ರವಾಗಿದೆ. ರಾಷ್ಟ್ರದಲ್ಲಿ ಚಿನ್ನದ ಉತ್ಪನ್ನವೆಲ್ಲಾ ನಮ್ಮಲ್ಲಿಯೇ ಆಗುತ್ತಲಿದೆ. ದೇಶದಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿಯು ಕೈಗಾರಿಕಾಭಿವೃದ್ಧಿಗೆ ಸಹಕಾರಿಯಾಗಿದೆ. ಕೃಷ್ಣರಾಜಸಾಗರ ನಿರ್ಮಾಣವು ನಾನಾಮುಖದಲ್ಲಿ ಉಪಯುಕ್ತವಾಗಿದೆ. ಕೇಂದ್ರಸರ್ಕಾರದವರೂ ಸಹ ಹಿರಿಯಕೈಗಾರಿಕೆಗಳನ್ನು ನಮ್ಮ ಪ್ರಾಂತ್ಯದಲ್ಲಿ ಸ್ಥಾಪಿಸಿರುವರು. ಆದರಿಂದ ಕೈಗಾರಿಕೋದ್ಯಮ ಮತ್ತು ವ್ಯಾಪಾರಸ್ಥರಿಗೆ ಆಸಕ್ತಿಯನ್ನುಂಟುಮಾಡುವ ಅನೇಕ ಕೇಂದ್ರಗಳು ಮೈಸೂರಿನಲ್ಲಿವೆ.

ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿ ಪ್ರಜೆಗಳ ವರಮಾನ ಹೆಚ್ಚುವಂತೆಮಾಡಿ, ಪುರೋಭಿವೃದ್ಧಿಯನ್ನು ಸಾಧಿಸುವುದೇ ನಿಮ್ಮ ಸಂಸ್ಥೆಯ ಉದ್ದೇಶವೆಂದು ಕೇಳಿ ಸಂತೋಷಪಡುತ್ತೇವೆ, ಈ ಸಂದರ್ಭದಲ್ಲಿ ಡಾ|| ಎಂ. ವಿಶ್ವೇಶ್ವರಯ್ಯನವರನ್ನು ನಮ್ಮ ವಿಶ್ವಾಸಪೂರ್ವಕ ಅಭಿವಂದನೆಗಳನ್ನು ಅರ್ಪಿಸುತ್ತೇವೆ.

ಅವರು ಭಾರತದಲ್ಲಿ ಅಗ್ರಗಣ್ಯ ವ್ಯಕ್ತಿಗಳಲ್ಲೊಬ್ಬರು, ಕೈಗಾರಿಕೆ, ನೀರಾವರಿ, ಎಂಜನಿಯರಿಂಗ್ ಮತ್ತು ಇತರ ದೇಶೋನ್ನತಿಯ ಕಾರ್ಯಗಳಲ್ಲಿ ಅವರು ಸಲ್ಲಿಸಿರುವ ಮಹತ್ವವಾದ ಸೇವೆ ಸರ್ವಜನಿತವಾದುದು. ನಿಮ್ಮ ಸಂಸ್ಥೆ ಸ್ಥಾಪಿತವಾದಾಗಿನಿಂದ ಅವರ ಸೇವಾಫಲವನ್ನು ಹೊಂದಿರುವುದು ನಿಮ್ಮ ಅದೃಷ್ಟವೇಸರಿ ಎಂದು ಶ್ರೀಮನ್ಮಹಾರಾಜರು ನಿನ್ನೆಯದಿನ ಅಖಿಲಭಾರತ ತಯಾರಿಕೆಗಾರರ ಸಂಘದ ದ್ವಿತೀಯ ತ್ರೈಮಾಸಿಕ ಸಮಾರಂಭವನ್ನು ಪ್ರಾರಂಭಿಸುತ್ತಾ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಡಾ|| ವಿಶ್ವೇಶ್ವರಯ್ಯನವರು ಮಾತನಾಡುತ್ತಾ ಎಲ್ಲಾ ಕ್ಷೇತ್ರದಲ್ಲೂ ಅಭಿವೃದ್ಧಿಸಾಧನೆಯು ಚೆನ್ನಾಗಿ ಆಲೋಚಿಸಲ್ಪಟ್ಟ ಯೋಜನೆಗಳ ಪ್ರಕಾರ ವಾಗಿಯೇ ನಡೆಯಬೇಕು ಈ ಯೋಜನೆಗಳನ್ನು ಕಾರ್ಯಗತಮಾಡಲು ಸತತ ಕರ್ತವ್ಯಶೀಲ ಉತ್ಸಾಹವನ್ನು ಬೆಳೆಸಿಕೊಂಡು ಬರಬೇಕುಎಂದು ತಿಳಿಸಿದರು. ಈ ಸಮಾರಂಭಕ್ಕೆ ಭಾರತದ ನಾನಾಭಾಗಗಳಿಂದ ಕೈಗಾರಿಕೋದ್ಯಮಿಗಳುಆಗಮಿಸಿದ್ದರು.

ಪ್ರಾರಂಭದಲ್ಲಿ ಮೈಸೂರು ಶಾಖೆಯ ಅಧ್ಯಕ್ಷರಾದ ಕೈಗಾರಿಕಾ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಸ್ವಾಗತ ಭಾಷಣ ಮಾಡಿದರು.

೨ ಸಾವಿರ ಮಂದಿ ಗ್ರಾಮಾಧಿಕಾರಿಗಳ ರಾಜೀನಾಮೆ

ಮಧ್ಯಭಾರತದ ಗ್ರಾಮಾಧಿಕಾರಿಗಳು ತಮ್ಮ ಸಂಬಳವನ್ನು ಹೆಚ್ಚಿಸಿ ಇತರ ಸರ್ಕಾರಿ ನೌಕರರ ಸ್ಥಾನ ಮಾನಗಳನ್ನು ತಮಗೂ ಕೊಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಂಡರೂ ಅವುಗಳು ಈಡೇರದಿರಲು, ಕೆಲಸಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದಾರೆಂದೂ, ಈಗಾಗಲೇ ೨ ಸಾವಿರ ಮಂದಿ ಈ ರೀತಿ ಮಾಡಿದ್ದಾರೆಂದೂ ಹೇಳಲಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ಮಹಿಳೆಯರಿಗೆ ಗಾಯ

ವರ್ಣಭೇದ ನೀತಿ ವಿರುದ್ಧ ನಿನ್ನೆ ಚಳುವಳಿ ನಡೆಸುತ್ತಲಿದ್ದವರಮೇಲೆ ದಕ್ಷಿಣ ಆಫ್ರಿಕಾ ಪೋಲೀಸಿನವರು ತಮ್ಮ ಬಂದೂಕಗಳ ಹಿಂಭಾಗದಿಂದ ಹೊಡೆದುದರ ಪರಿಣಾಮವಾಗಿ ೧೭ ಜನರಿಗೆ ಗಾಯಗಳಾಗಿವೆ. ಅದರಲ್ಲಿ ಮಹಿಳೆಯರೂ ಸೇರಿರುವರೆಂದು ಗೊತ್ತಾಗಿದೆ.

ಮೈಸೂರು ಪೇಟೆಧಾರಣೆ

ತಾ|| ೧೭-೯-೫೨

ಪಲ್ಲ	ರೂ—ಆ	ರೂ—ಆ
ಕಡಲೇಕಾಯಿ	೧೦-೨	೨೨-೬
ಎಳ್ಳು	೬೦-೦	೭೦-೧೦
ಹರಳು	೫೧-೦	೫೨-೨
ಹುರುಳಿ	೫೧-೪	೫೩-೮
ಅಲಸಂದೆ	೭೨-೬	೭೫-೦
ಮೆಣಸಿನಕಾಯಿ		—
ಹುಣಸೆಹಣ್ಣು	೪-೮	೬-೧೦
ಸೀಗೇಕಾಯಿ	೫-೩	೫-೮
ಬೆಲ್ಲ	೩-೮	—
ತೆಂಗಿನಕಾಯಿ ೧,೧೦೦ ಕ್ಕೆ	೧೩೩	೨೦೪

ಕಂದಾಯ ರಿಯಾಯಿತಿ

ಬೆಂಗಳೂರು ಸೆ. ೧೭

ಗುಬ್ಬಿತಾಲ್ಲೂಕು ನಿಟ್ಟೂರು ಅಮಾನಿಕೆರೆಯಾಶ್ರಯದಲ್ಲಿ ಬೆಳೆಯಾಗದೆ ಹೋದ ಪ್ರದೇಶದಲ್ಲಿ ೧೯೪೯-೫೦ ನೇ ಸಾಲಿಗೆ ೧೭೩ ರೂ, ಗುಬ್ಬಿತಾಲ್ಲೂಕಿನ ೧೩ ಕೆರೆಗಳ ಅಚಕಟ್ಟು ಪ್ರದೇಶದಲ್ಲಿ ೫೧-೫೨ ನೇ ಸಾಲಿನ ೮೩೬-೧೧-೦ ರೂ, ಪಿರಿಯಾಪಟ್ಟಣತಾಲ್ಲೂಕಿನ ಹರಿಲಾಪುರದ ಗ್ರಾಮದಲ್ಲಿ ೫೦-೫೧ ನೇ ಸಾಲಿನ ೩೫ ರೂ ಕಂದಾಯವನ್ನು ಮಾಫಿಮಾಡಲಾಗಿದೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ೧೫೬ ಗ್ರಾಮಗಳಲ್ಲಿನ ೧೯೫೧-೫೨ ನೇ ಸಾಲಿನ ಕಂದಾಯದಲ್ಲಿ ಅರ್ಧಭಾಗ ರೂ ೨೧೮೮೨ ಮಾಫಿಮಾಡಿ ಉಳಿದರ್ಧದ ವಸೂಲಿ ಮುಂದಕ್ಕೆ ಹಾಕಲಾಗಿದೆ.

ಪಾನನಿರೋಧ ಶಾಸನ ಕಟ್ಟುನಿಟ್ಟಾಗಿರಬೇಕು

ಪಾನನಿರೋಧ ಶಾಸನವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಹಾಗೆ ಸಾಧ್ಯವಿಲ್ಲದಿದ್ದರೆ ಅದನ್ನು ಪೂರ್ಣವಾಗಿ ರದ್ದುಗೊಳಿಸಬೇಕು ಅರಮನಸ್ಸಿನಿಂದ ಈ ಕಾರ್ಯವನ್ನು ಪ್ರಯತ್ನಿಸಿದರೆ ಸಫಲವಾಗುವುದಿಲ್ಲ. ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಪರವಾನ ಮೂಲಕ ಪಾನ ಸೇವಿಸಲು ಅನುಮತಿ ಕೊಡಬೇಕು ಎಂದು ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಬೊಂಬಾಯಿನಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಚಳುವಳಿ ನಿಲ್ಲಿಸಿದ್ದಕ್ಕೆ ಸರ್ಕಾರದ ಸ್ವಾಗತ

ಕಳೆದ ನಾಲ್ಕುವರೆ ತಿಂಗಳಿಂದ ಪೌರಹಕ್ಕಿಗಾಗಿ ಸಿಂಹಳದಲ್ಲಿ ಭಾರತೀಯರು ನಡೆಸುತ್ತಲಿದ್ದ ಸತ್ಯಾಗ್ರಹ ತಾತ್ಕಾಲಿಕ ನಿಲ್ಲಿಸಿದ್ದಕ್ಕೆ ಸಿಂಹಳ ಸರ್ಕಾರವು ಸ್ವಾಗತಿಸಿದೆ. ಸರ್ಕಾರವು ಎಲ್ಲಾ ಭಾರತೀಯರ ಅರ್ಜಿಗಳನ್ನು ಪರಿಶೀಲಿಸಿ ಇನ್ನು ೨ವರ್ಷಗಳೊಳಗಾಗಿ ಅವರ ಪೌರತ್ವ ಹಕ್ಕನ್ನು ನಿರ್ಧರಿಸಲಿದೆ. ಇದಕ್ಕೆ ಸತ್ಯಾಗ್ರಹ ನಿಲ್ಲಿಸಿದುದು ಸಹಕಾರಿಯಾಗುತ್ತದೆ ಎಂದು ಅಧಿಕಾರಿ ವೃತ್ತಗಳಲ್ಲಿ ಹೇಳಲಾಗಿದೆ.

ಮಗನಿಗೆ ರಾಜ್ಯಾಧಿಕಾರ

ತಾತ್ಕಾಲಿಕವಾಗಿ ಮಹಾರಾಜರಹುದ್ದೆಯನ್ನು ತ್ಯಜಿಸಿದ್ದ ಹರಿಸಿಂಗ್‌ರವರು ಶ್ರೀ ನೆಹರೂರವರ ಸಲಹೆಗೆ ಮನ್ನಣೆಯಿತ್ತು ಸಂಪೂರ್ಣವಾಗಿ ತಮ್ಮ ಅಧಿಕಾರವನ್ನು ತಮ್ಮ ಪುತ್ರ ಯುವರಾಜ ಕರಣಸಿಂಗ್‌ರವರಿಗಾಗಿ ಖಾಯಂ ಆಗಿ ತ್ಯಜಿಸಿರುವುದಾಗಿ ಹೇಳಲಾಗಿದೆ.

ವರ್ಗಾ

ಮೈಸೂರು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಂ. ಮುನಿಸ್ವಾಮಿಯವರನ್ನು ಶಿವಮೊಗ್ಗಾ ಡಿವಿಜನ್ ಅಡಿಷನಲ್ ನ್ಯಾಯಾಧೀಶರಾಗಿ ವರ್ಗಾಯಿಸಲಾಗಿದೆ

ಒಪ್ಪಂದವಾಗುವ ಭರವಸೆಯಿಲ್ಲ

ತಮಗೂ ಕಾಂಗ್ರೆಸ್‌ಪಕ್ಷಕ್ಕೂ ಒಪ್ಪಂದವಾಗುವ ಆಶಾಭಾವನೆ ತಮಗೆ ಇಲ್ಲವೆಂದು ನೇಪಾಳ ಮಾಜಿ ಪ್ರಧಾನಿ ಶ್ರೀ ಎಂ. ಪಿ. ಕೊಯಿರಾಲಾರವರು ಹೇಳಿರುವರು.

ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಎಣ್ಣೆ ಸರಪರಾಜಿಲ್ಲ

ಪಾಶ್ಚಿಮಾತ್ಯ ರಾಷ್ಟ್ರಗಳು ಎಣ್ಣೆಯನ್ನು ಕೊಂಡು, ಸಮರ ಕಾರ್ಯಗಳಿಗಾಗಿ ಉಪಯೋಗಿಸುವುದರಿಂದ ಆ ರಾಷ್ಟ್ರಗಳಿಗೆ ಎಣ್ಣೆಯನ್ನು ಸರಪರಾಜು ಮಾಡುವುದಿಲ್ಲವೆಂದು ಪರ್ಶಿಯಾ ಹೇಳಿದೆ.

ರಣಜಿತ್

19 9-52ರಿಂದಯಶಸ್ವಿಯಾದ೬ನೇವಾರ

* ಆನ್ *

ಪಾತ್ರ:— ದಿಲೀಪ್‌ಕುಮಾರ್, ನಿಮ್ಮಿ. ಪ್ರೇಮನಾಥ್, ನಾದಿರ

ಅಪೇರ ೧೨-೯-೫೨ ರಿಂದ ೨ ನೇ ವಾರ

ಪುಯಲ್

ಅಥವಾ

ಬಿರುಗಾಳಿ

[ತಮಿಳು]

ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್

This is the first time introducing on the Silver Screen the powerful drama of "St. Philomena and Mortydom"

ವುಡ್‌ಲ್ಯಾಂಡ್ಸ್

೧೪-೯-೫೭ರಿಂದ ಅಮೋಘ ೩ನೇ ವಾರ

* ಗುಮಾಸ್ತ *

(ಹಿಂದಿ)

ಪಾತ್ರ:-ನಿಗಾರ್. ವಾಸ್ತಿ, ಕುಲ್‌ದೀಪ್ ಮಿಜಾತಮುಷ್ರಾಫ್

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 25

೧೯-೯-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ನೀರಿನ ಕೆಲಸಗಾರರ ಮುಷ್ಕರವಿಲ್ಲ

ಮೈಸೂರು ಸೆ. ೧೯

ಮೈಸೂರು ವಾಣಿವಿಲಾಸ ನೀರುಸರಬರಾಜು ಶಾಖೆಯ ಕೆಲಸಗಾರರು ನಾಳೆಯಿಂದ ಮುಷ್ಕರ ಹೂಡಬೇಕೆಂಬ ತೀರ್ಮಾನವನ್ನು ಈಗ ರದ್ದುಮಾಡಿದ್ದಾರೆ. ಅವರ ಬೇಡಿಕೆಗಳನ್ನು ಈಡೇರಿಸುವುದಾಗಿ ಇಲಾಖೆಯವರು ಸೂಕ್ತಭರವಸೆ ಕೊಟ್ಟಿರುವುದರಿಂದ ಮುಷ್ಕರ ತಾತ್ಕಾಲಿಕವಾಗಿ ಮುಂದುವರಿಸಬೇಕೆಂದು ಅವರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಭಾರತ್ ಸ್ಕೌಟ್

ಮೈಸೂರು. ೧೯

ಭಾರತ್ ಸ್ಕೌಟ್ ಮತ್ತು ಗೈಡು ಸಂಸ್ಥೆಯ ಕೇಂದ್ರ ಕಮೀಷನರಾದ ಪಂಡಿತ ಸೀತಾರಾಂ ಬಾಜ್‌ಪಾಯ್‌ರವರ ಗೌರವಾರ್ಥವಾಗಿ ನಿನ್ನೆ ಸಂಜೆ ಮೈಸೂರು ಜಿಲ್ಲಾ ಸ್ಕೂಲ್ ಕೌನ್ಸಿಲ್‌ರವರು ಅರಸು ಬೋರ್ಡಿಂಗ್ ಶಾಲೆಯಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಪಂಡಿತ ಸೀತಾರಾಂರವರು ಈ ದಿನ ಬೆಳಿಗ್ಗೆ ಒಂದು ಪತ್ರಿಕಾ ಗೋಷ್ಠಿಯನ್ನು ನಡೆಸಿ, ಭಾರತ್ ಸ್ಕೌಟು ಸಂಸ್ಥೆಯ ವಿವರಗಳನ್ನು ಇತ್ತರು. ಭಾರತದಲ್ಲಿ ಹಿಂದೆ ಇದ್ದ ಬಾಯ್ ಸ್ಕೌಟು ಮತ್ತು ಗರ್ಲ್ ಗೈಡ್ ಸಂಸ್ಥೆಗಳು ಭಾರತ್ ಸ್ಕೌಟ್‌ನೊಡನೆ ೧೯೫೦ ರಲ್ಲಿ ಐಕ್ಯವಾಯಿತೆಂದೂ, ಅಲ್ಲಿಂದ ಸಂಸ್ಥೆಯನ್ನು ನೂತನ ಕಾಲಕ್ಕನುಗುಣವಾಗಿ ಪರಿವರ್ತಿಸಲು ಪ್ರಯತ್ನ ನಡೆಸಲಾಗುತ್ತಿದೆಯೆಂದು ಮೈಸೂರು ಭಾರತ್ ಸ್ಕೌಟ್ ಸಂಸ್ಥೆಯು ಯಾವ ರಾಜಕೀಯ ಸಂಸ್ಥೆಗೂ ಸೇರಿದೆ, ಕೇವಲ ಬೋಧಕ ಮತ್ತು ಸೇವಾ ಸಂಸ್ಥೆಯಾಗಿರುವುದೆಂದೂ, ಆದಕ್ಕೆ ಯಾವ ಯಾವ ಪಕ್ಷದವರಾದರೂ ರಾಜಕೀಯವನ್ನು ತರದೆ ಸೇರಬಹುದೆಂದೂ ಅವರು ಹೇಳಿದರು. ಮೈಸೂರು ಸರ್ಕಾರದವರು ಈಗ ಸ್ಕೌಟ್ ಸಂಸ್ಥೆಗೆ ಹಣದ ಸಹಾಯವನ್ನು ಬೋಕ ಮಾಡಿರುವುದು ಸರಿಯಲ್ಲವೆಂದೂ, ಇನ್ಯಾವ ಸಂಸ್ಥಾನಗಳಲ್ಲಿ ಈ ರೀತಿ ನಡೆದಿಲ್ಲವೆಂದೂ ಅವರು ನುಡಿದರು. ಈಗಿರುವ ಸ್ಕೂಲ್ ಉಡುಪು ದುಬಾರಿಯಾಗಿರುವುದರಿಂದ, ಹೆಚ್ಚಿಗೆ ಖರ್ಚಿಲ್ಲದ ಮತ್ತು ಭಾರತ ದೇಶಕ್ಕೆ ಅನುಗುಣವಾದ ಉಡುಪನ್ನು ಮಾರ್ಪಡಿಸುವುದು ಉತ್ತಮವೆಂದೂ, ಈ ವಿಚಾರವನ್ನು ಮುಂದಿನ ವರ್ಷ ಪರಿಶೀಲಿಸಲಾಗುವುದೆಂದು ಅವರು ಒಂದು ಪ್ರಶ್ನೆಗೆ ತಿಳಿಸಿದರು.

ಅಣುಬಾಂಬಿಗೆ ರಾಷ್ಟ್ರಹಣ ದುರ್ವ್ಯಯ

ಆಟಾಮಿಕ್ ಬಾಂಬನ್ನು ತಯಾರಿಸಲು ಬ್ರಿಟನ್ ತನ್ನ ರಾಷ್ಟ್ರ ಸಂಪತ್ತನ್ನೆಲ್ಲಾ ದುರ್ವ್ಯಯ ಮಾಡುತ್ತಿದೆ ಇದನ್ನು ಕೂಡಲೇ ತಡೆಗಟ್ಟಬೇಕು ಇದೇ ಹಣವನ್ನು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿದಲ್ಲಿ ಜನತೆಗೆ ಎಷ್ಟೋ ಪ್ರಯೋಜನವಾಗುತ್ತದೆ ಎಂದು ಲಂಡನ್ನಿನಲ್ಲಿ ೧೫೦೦ ವಿಜ್ಞಾನಪ್ರತಿನಿಧಿಗಳ ಸಮ್ಮೇಳನವು ಒಂದು ನಿರ್ಣಯಮಾಡಿ ಸರ್ಕಾರದ ನೀತಿಯನ್ನು ಖಂಡಿಸಿದೆ.

ಲಿಬಿನೆನ್‌ನಲ್ಲಿ ಮಿಲಿಟರಿ ಅಧಿಕಾರಿಯ ಆಡಳಿತ

ಲಿಬಿನೆನ್ ರಾಷ್ಟ್ರಾಧ್ಯಕ್ಷರು ರಾಜೀನಾಮೆಯಿತ್ತ ಪ್ರಯುಕ್ತ ಅಲ್ಲಿಯ ಮಿಲಿಟರಿ ಸರ್ವಸೇನಾನಿಯವರು ಹಂಗಾಮಿಯಾಗಿ ಅಧ್ಯಕ್ಷ ಮತ್ತು ಪ್ರಧಾನಿ ಅಧಿಕಾರಗಳನ್ನು ವಹಿಸಿಕೊಂಡಿರುವರು. ಕಳೆದ ೯ ವರ್ಷಗಳಿಂದಿದ್ದ ಅಧ್ಯಕ್ಷರ ನಿವೃತ್ತಿಗಾಗಿ ವಿರೋಧ ಪಕ್ಷದವರು ತೀವ್ರಕಾರ್ಯಕ್ರಮವನ್ನು ತೆಗೆದುಕೊಂಡಿದುದೇ ಇದರಫಲ.

ಮಹಾತ್ಮಗಾಂಧಿ ಜಯಂತಿ

ಮಹಾತ್ಮಗಾಂಧಿಯವರ ಜಯಂತ್ಯುತ್ಸವವು ಅಕ್ಟೋಬರ್ ೩ ನೇ ತಾರೀಖಿನಿಂದ ಪ್ರಾರಂಭವಾಗುತ್ತಿದೆ. ರಾಷ್ಟ್ರಾಧ್ಯಕ್ಷ ರಾಜೇಂದ್ರ 'ಪ್ರಸಾದ್'ರವರು ರೇಡಿಯೋ ಭಾಷಣದ ಮೂಲಕ ಕಾರ್ಯಕ್ರಮವು ಪ್ರಾರಂಭವಾಗುತ್ತದೆ. ಅದೇ ದಿವಸ ೭೫ ವಿವಿಧ ಪ್ರದೇಶಗಳಲ್ಲಿ ಸಾಮಾಜಿಕ ಅಭಿವೃದ್ಧಿ ಕಾರ್ಯಗಳು ಪ್ರಾರಂಭವಾಗುತ್ತವೆ. ಆಯಾ ಪ್ರಾಂತ್ಯ ಮುಖ್ಯಮಂತ್ರಿಗಳು ಈ ಕಾರ್ಯಗಳಲ್ಲಿ ಭಾಗವಹಿಸುವರು.

ಮುಲ್ಕಿ ಚಳುವಳಿ ಪರಿಸ್ಥಿತಿ ಪ್ರಧಾನಿಯವರಿಂದ ಪರಿಶೀಲನೆ

ಹೈದರಾಬಾದಿನಲ್ಲಿ ಕಳೆದ ೬ ತಿಂಗಳಿಂದ ಪ್ರಜಾಸರ್ಕಾರವು ಅಧಿಕಾರ ವಹಿಸಿದಾಗಿನಿಂದ ಅಲ್ಲಿಯ ಪರಿಸ್ಥಿತಿ ಮತ್ತು ಮುಲ್ಕಿ ಚಳುವಳಿ ಸ್ಥಿತಿಗತಿಗಳನ್ನು ಖುದ್ದಾಗಿ ಪರಿಶೀಲಿಸಲು ಪ್ರಧಾನಿ ನೆಹರೂರವರು ಇದೇ ಮಾಹೆ ಕೊನೆಯ ವಾರದಲ್ಲಿ ಹೈದರಾಬಾದಿಗೆ ೩ ದಿನಗಳ ಭೇಟಿ ಕೊಡಲಿರುವರೆಂದು ಹೇಳಲಾಗಿದೆ.

ದಸರಾ ವಸ್ತು ಪ್ರದರ್ಶನ

ಮೈಸೂರು, ಸೆ. ೧೯

ನಾಳೆಯಿಂದ ಪ್ರಾರಂಭವಾಗುವ ಮೈಸೂರು ದಸರಾ ವಸ್ತು ಪ್ರದರ್ಶನಕ್ಕೆ ಸಂಬಂಧಪಟ್ಟ ವಿವರಗಳನ್ನು ತಿಳಿಸಲು ಸಮಿತಿಯವರು ನಿನ್ನೆ ಒಂದು ಪತ್ರಿಕಾ ಗೋಷ್ಠಿಯನ್ನು ನಡೆಸಿದರು.

ಈ ಸಾಲಿನಲ್ಲಿ ಭಾರತದ ಅನೇಕ ಭಾಗಗಳಿಂದ ಪ್ರದರ್ಶನಕಾರರು ಭಾಗವಹಿಸುವರು. ಒರಿಸ್ಸಾ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳ ಕೈಗಾರಿಕಾ ಶಾಖೆಯವರು ಮೈಸೂರು ಸರ್ಕಾರದ ಅನೇಕ ಕೈಗಾರಿಕೆ ಮತ್ತು ವ್ಯವಸಾಯ ಶಾಖೆಯವರು ಪ್ರದರ್ಶನಗಳನ್ನು ನಡೆಸಲಿರುವರು. ಮೈಸೂರು ಸರ್ಕಾರಕ್ಕೆ ಜಪಾನ್ ಬಹುಮಾನವಾಗಿ ಕೊಟ್ಟಿರುವ ೧೫೦೦೦ ರೂ. ಬೆಲೆಬಾಳುವ ಯಂತ್ರ ಮತ್ತು ಇತರ ಉಪಯುಕ್ತ ಸಲಕರಣೆಗಳನ್ನು ಸಹ ಈ ಸಾರಿ ಪ್ರದರ್ಶಿಸಲಾಗುತ್ತದೆ.

ಮೊಟ್ಟಮೊದಲನೆಯದಾಗಿ ಈ ವರ್ಷ ಮೈಸೂರು ಸರ್ಕಾರದ ಫ್ಲೈಯಿಂಗ್ ಕ್ಲಬ್‌ನವರು ವಸ್ತುಪ್ರದರ್ಶನದ ಆವರಣದಲ್ಲಿ ಒಂದು ವಿಮಾನವನ್ನು ಇಟ್ಟು ಅದರ ವಿವರಗಳನ್ನು ಜನತೆಗೆ ತಿಳಿಯುವಂತೆ ಏರ್ಪಡಿಸುವರು.

ಅಖಿಲ ಭಾರತ ರೇಡಿಯೋದ ಮೈಸೂರು ಶಾಖೆಯವರು ಸಹ ತಮ್ಮ ಯಂತ್ರಸಾಧನೆಗಳನ್ನು ಪ್ರದರ್ಶಿಸುವುದಲ್ಲದೆ ವಿಶೇಷ ಪ್ರಸಾರ ಕಾರ್ಯಕ್ರಮ ಕೈಗೊಳ್ಳುವರು. ಮನರಂಜನೆ ಕಾರ್ಯಕ್ರಮದಲ್ಲಿ ನಾಟಕ, ನೃತ್ಯ, ಸಂಗೀತ ಇತ್ಯಾದಿಗಳಲ್ಲದೆ ಈ ವರ್ಷ ದೇಹ ಸೌಂದರ್ಯ ಸ್ಪರ್ಧೆ, ರಾತ್ರಿವೇಳೆ ವಿದ್ಯುಚ್ಛಕ್ತಿ ಸಹಾಯದಿಂದ ಕ್ರೀಡಾ ಸ್ಪರ್ಧೆ ಮುಂತಾದುವು ನಡೆಯುತ್ತವೆ.

ಪ್ರಥಮಬಾರಿಯಾಗಿ ಖಾಸಗಿಯಾಗಿ ಕಾರ್ಯದರ್ಶಿಗಳನ್ನಾಗಿ ನೇಮಿಸಲ್ಪಟ್ಟಿರುವ ಶ್ರೀಗಳಾದ ಪಿ. ಗೋಪಾಲಕೃಷ್ಣ ಶೆಟ್ಟಿ ಮತ್ತು ವಿ. ಎಸ್. ಕೃಷ್ಣಯ್ಯರ್‌ರವರು ಮೇಲ್ಕಂಡ ವ್ಯವಸ್ಥೆಗಳನ್ನು ತಿಳಿಸಿ, ವಸ್ತು ಪ್ರದರ್ಶನವು ಯಶಸ್ವಿಯಾಗಲು ಸಾರ್ವಜನಿಕರು ಮತ್ತು ಪತ್ರಿಕೆಯವರು ಸಹಕಾರನೀಡಬೇಕೆಂದು ಮನವಿ ಮಾಡಿದರು.

ರೊಟ್ಟಿ ಅಂಗಡಿಗಳಿಗೆ ಗೋಧಿ ಖೋತಾ

ಬೆಂಗಳೂರು ಸೆ. ೧೯

ಗೋಧಿ ಸರಪರಾಜು ಪರಿಸ್ಥಿತಿ ತೃಪ್ತಿಕರವಾಗಿಲ್ಲದಿರುವುದರಿಂದ ರೊಟ್ಟಿಅಂಗಡಿಯವರಿಗೆ ಕೊಡುತ್ತಿದ್ದ ಗೋಧಿ ಪ್ರಮಾಣವನ್ನು ಶೇ ೫೦ ರಷ್ಟು ಕಡಮೆ ಮಾಡಲಾಗಿದೆಯೆಂದು ಗೊತ್ತಾಗಿದೆ.

ಕೈರೋ ಸುಡಲು ಫರೂಕ್‌ರ ಯತ್ನ ?

ಕಳೆದ ಜನವರಿಯಲ್ಲಿ ಕೈರೋನಗರದಲ್ಲಿ ನಡೆದ ಗಲಭೆಗಳ ಸಂಬಂಧದಲ್ಲಿ ದಸ್ತಗಿರಿಯಾಗಿ ಅಪಾದನೆಗೆ ಗುರಿಯಾಗಿರುವ ಸೋಷಲಿಸ್ಟ್ ನಾಯಕ ಅಹಮ್ಮದ್ ಹುಸೇನ್ ಎಂಬುವರು ಕೋರ್ಟಿನಮುಂದೆ ಹೇಳಿಕೆಯನ್ನಿತ್ತು ಮಾಜಿದೊರೆ ಫರೂಕ್‌ರವರೂ ಮತ್ತು ಅವರ ಅನುಯಾಯಿಗಳೂ ಕೈರೋ ನಗರವನ್ನು ಸುಡಲು ಪ್ರಯತ್ನ ನಡೆಸಿದ್ದರೆಂದು ತಿಳಿಸಿದ್ದಾರೆ.

ಉಚಿತವಾಗಿ ಪೆನಿಸಿಲಿನ್ ಹಂಚಿಕೆ

ಪೂನಾಬಳಿ ಪಿಂಪ್ರಿ ಎಂಬಲ್ಲಿ ಸ್ಥಾಪಿತವಾಗಿರುವ ಪೆನಿಸಿಲಿನ್ ಕಾರ್ಖಾನೆಯಲ್ಲಿ ತಯಾರಿಕೆಯು ೧೯೫೩ ನೇ ಡಿಸೆಂಬರಿನಿಂದ ಪ್ರಾರಂಭವಾಗುತ್ತದೆ.

ಕಾರ್ಖಾನೆಯಲ್ಲಿ ತಯಾರಾಗುವ ಔಷಧಿಯಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ಸರಪರಾಜುಮಾಡಿದಮೇಲೆ ಉಳಿದುದನ್ನು ಲಾಭವಿಲ್ಲದೆ ಮಾರಾಟ ಮಾಡಲಾಗುವುದೆಂದೂ ಉತ್ಪನ್ನಶಾಖಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಹೇಳಿರುವರು ಈ ಕಾರ್ಖಾನೆಗೆ ವಿಶ್ವ ಆರೋಗ್ಯ ಸಂಸ್ಥೆಯವರು ಉಚಿತವಾಗಿ ಯಂತ್ರೋಪಕರಣಗಳನ್ನು ಒದಗಿಸುವಾಗ ತಯಾರಾದ ಔಷಧದಲ್ಲಿ ಸ್ವಲ್ಪಭಾಗವನ್ನು ಉಚಿತವಾಗಿ ಕೆಲವರಿಗೆ ಹಂಚಬೇಕೆಂದು ತೀರ್ಮಾನವಾಗಿರುವುದಾಗಿ ಅವರು ಹೇಳಿರುವರು.

ಜಪಾನಿಗೆ ಭಾರತ ಉಪ್ಪು ರವಾನೆ

ಈ ವರ್ಷದ ಅಂತ್ಯದೊಳಗೆ ಭಾರತವು ಜಪಾನಿಗೆ ೭೫ ಲಕ್ಷ ಟನ್ ಉಪ್ಪನ್ನು ರವಾನೆ ಮಾಡುವುದು. ಈಗಾಗಲೇ ೪೦ ಲಕ್ಷ ಟನ್ ಉಪ್ಪನ್ನು ಸರಬರಾಜು ಮಾಡಲಾಗಿದೆ.

ಮಧ್ಯ ಮತ್ತು ದೂರಪ್ರಾಚ್ಯಗಳಿಗೆ ಸಹ ಭಾರತದಿಂದ ಉಪ್ಪನ್ನು ಕಳುಹಿಸಲಾಗುವುದೆಂದು ಉತ್ಪನ್ನ ಶಾಖಾ ಸಚಿವರು ಹೇಳಿರುವರು.

ಬಾಲಕ ಸತ್ತಿದ್ದಕ್ಕೆ ಶಸ್ತ್ರ ಚಿಕಿತ್ಸೆಯಲ್ಲ ವೈದ್ಯರ ಮೇಲೆ ಕಾರ್ಯಕ್ರಮ.

ಲಕ್ನೋವಿನ ಮಹಾತ್ಮ ಗಾಂಧಿ ಸ್ಮಾರಕ ಆಸ್ಪತ್ರೆಯಲ್ಲಿ ಕಳೆದ ಸೆಪ್ಟಂಬರಿನಲ್ಲಿ ೭ ವರ್ಷದ ಬಾಲಕನ ಮರಣಕ್ಕೆ ಕಾರಣರೆಂಬ ಆಪಾದನೆ ಮೇಲೆ ಇಬ್ಬರು ವೈದ್ಯರು ಕೂಡಲೇ ರಾಜೀನಾಮೆ ಕೊಡಬೇಕೆಂದು ಲಕ್ನೊ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳು ಆಜ್ಞೆ ಮಾಡಿದ್ದರು.

ಈ ವಿಷಯವನ್ನು ಪರಿಶೀಲಿಸಲು ನೇಮಿಸಿದ್ದ ವಿಚಾರಣಾ ಸಮಿತಿಯವರ ದಿಯ ಮೇಲೆ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಯಿತು.

ಈ ಕಾರ್ಯಕ್ರಮವನ್ನು ಪ್ರತಿಭಟಿಸಿ ಆಸ್ಪತ್ರೆಯ ಸುಮಾರು ೪೦ ಜನ ಕೆಲಸಗಾರರು ಮತ್ತು ಅನೇಕ ವಿದ್ಯಾರ್ಥಿಗಳು ಮುಷ್ಕರ ಹೂಡಿ, ನಗರದಲ್ಲಿ ಮೆರವಣಿಗೆಯನ್ನು ನಡೆಸಿ ತಮ್ಮ ಪ್ರತಿಭಟನೆ ಸೂಚಿಸಿದರು.

ವಿಶ್ವ ವಿದ್ಯಾನ್ಯಾಯದವರು ಈ ವಿಷಯವನ್ನು ಪರಿಶೀಲಿಸಿ ಡಾಕ್ಟರುಗಳ ರಾಜೀನಾಮೆ ಅಂಗೀಕರಿಸಲು ಉಪಸ್ಥಾನಪತಿಗಳಿಗೆ ಅಧಿಕಾರ ಕೊಡಲಾಗಿದೆ. ಮುಷ್ಕರವು ನಿಂತಿದೆಯೆಂದು ಗೊತ್ತಾಗಿದೆ.

ಪ್ರಾಣಿಹಿಂಸೆಗಾಗಿ ದಸ್ತಗಿರಿ

ಅಮೆರಿಕಾಕ್ಕೆ ಭಾರತದಿಂದ ಕೋತಿಗಳನ್ನು ರವಾನೆಮಾಡಲು ಲಕ್ನೋದಿಂದ ಕಳುಹಿಸಿದ್ದ ಕೋತಿಗಳ ಗುಂಪೊಂದು ರೈಲಿನಲ್ಲಿ ಬೊಂಬಾಯಿಗೆ ಆಗಮಿಸಿತು. ಬೋನುಗಳಲ್ಲಿ ಅವುಗಳ ಅಧಿಕ ಸಂಖ್ಯೆಯಲ್ಲಿ ಆಹಾರವನ್ನು ಕೂಡ ಕೊಡದೆ ಇದ್ದುದರ ಪರಿಣಾಮವಾಗಿ ಅನೇಕ ಕೋತಿಗಳಿಗೆ ಘಾಯಗಳಾಗಿದ್ದುವು. ಪೋಲೀಸಿನವರು ಸಂಬಂಧಪಟ್ಟವರನ್ನು ದಸ್ತಗಿರಿಮಾಡಿ ನೂರಾರು ಕೋತಿಗಳ ಸಮೇತ ಬೊಂಬಾಯಿ ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ಪಡಿಸಿದರು. ವಿಚಾರಣೆಯನ್ನು ಅಕ್ಟೋಬರ್ ಎಂಟನೇ ತಾರೀಖಿಗೆ ಹಾಕಲಾಗಿದೆ. ಕೋತಿಗಳನ್ನೆಲ್ಲಾ ವಿಕ್ಟೋರಿಯಾ ಗಾರ್ಡನ್ಸ್‌ಗೆ ಕಳುಹಿಸಲಾಗಿದೆ.

ಕುಕಿಂಗ್ ಮೀಡಿಯಂ ತಯಾರಿಕೆಗೆ ಲೈಸನ್ಸ್

ಮೈಸೂರು ಪುರಸಭೆಯ ಮಾಹೆಯಾನಾಧಿವೇಶನವು ಇದೇ ೨೫ ನೇ ತಾರೀಖು ನಡೆಯುತ್ತದೆ.

ಮೈಸೂರು ಸಿಟಿಯಲ್ಲಿ ನಾನಾ ತರಹದ ಕುಕ್ಕಿಂಗ್ ಮೀಡಿಯಂ ಎಂಬ ತುಪ್ಪವನ್ನು ತಯಾರುಮಾಡತಕ್ಕವರು ಮುನಿಸಿಪಲ್ ಲೈಸನ್ಸ್ ಪಡೆಯದೇ ತಯಾರು ಮಾಡಲಾಗದೆಂದು ಬೈಲಾ ಬದಲಾವಣೆ ಮಾಡಬೇಕೆಂಬ ನಿರ್ಣಯವನ್ನು ಪೌರಸದಸ್ಯ ಶ್ರೀ ಚೌಡಯ್ಯನವರು ಮಂಡಿಸಿದ್ದಾರೆ

ಭಾರತೀಯರಿಗೆ ವಿದೇಶಿ ವಿದ್ಯಾರ್ಥಿವೇತನ

ಮೈಸೂರು ಸೆ. ೧೯

ಮೈಸೂರು ಆಹಾರ ಸಂಶೋಧನಾ ಕೇಂದ್ರದಲ್ಲಿರುವ ಶ್ರೀಗಳಾದ ನಾಗಿನಲಾಲ್ ಜೈನ್ ಮತ್ತು ಎಸ್. ಕುಪ್ಪುಸ್ವಾಮಿಯವರಿಗೆ ತಾಂತ್ರಿಕ ಸಹಕಾರ ಯೋಜನೆಪ್ರಕಾರ ಸಿಡ್ನಿಯಲ್ಲಿರುವ ಕಾಮನ್ವೆಲ್ತ್ ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾಸಮಿತಿಯಲ್ಲಿ ಶಿಕ್ಷಣಪಡೆಯಲು ಆಸ್ಟ್ರೇಲಿಯಾ ವಿದ್ಯಾರ್ಥಿವೇತನ ಮಂಜೂರಾಗಿದೆ. ಶ್ರೀ ಎನ್. ಎಲ್. ಜೈನ್‌ರವರ ಕಳೆದ ೧೩ ವರ್ಷಗಳಿಂದ ಹಣ್ಣು ಮತ್ತು ತರಕಾರಿಗಳಲ್ಲಿ ವಿವಿಧ ಸಂಶೋಧನೆಗಳನ್ನು ನಡೆಸಿರುವರು ಈ ಶಾಖೆಯಲ್ಲಿಯೇ ಇವರು ಉನ್ನತ ಶಿಕ್ಷಣವನ್ನು ಅಲ್ಲಿ ಪಡೆಯುವರು.

ಶ್ರೀ ಎಸ್. ಕುಪ್ಪುಸ್ವಾಮಿಯವರು ಕಳೆದ ೮ ವರ್ಷಗಳಿಂದ ಎಣ್ಣೆಬೀಜಗಳು, ಹಾಲಿನಪುಡಿ ಮುಂತಾದ ಬಾಬುಗಳಲ್ಲಿ ಸಂಶೋಧನೆ ನಡೆಸುತ್ತಲಿರುವರು.

ಅಕ್ಕಿಯ ತವುಡಿನ ರಫ್ತಿನ ಅನುಮತಿ

ಹೈದರಾಬಾದಿನಿಂದ ಯಾವ ಪ್ರದೇಶಕ್ಕೆ ಬೇಕಾದರೂ ಅಕ್ಕಿಯ ತವುಡನ್ನು ಕಳುಹಿಸಲು ಇದ್ದ ನಿಷೇಧವನ್ನು ಸರ್ಕಾರವು ತೆಗೆದುಹಾಕಿದೆ.

ವಾರ್ಷಿಕೋತ್ಸವ

ಮೈಸೂರು ಸೆ. ೧೯

ಶ್ರೀ ಕನ್ಯಕಾ ಪರಮೇಶ್ವರಿ ಪರಸ್ಪರ ಸಹಾಯ ಸಂಘದ ೨೧ ನೇ ವಾರ್ಷಿಕೋತ್ಸವವು ನಾಳೆ ಮಧ್ಯಾಹ್ನ ೩ ಗಂಟೆಗೆ ಮೈಸೂರು ಪುರಭವನದಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಮೈಸೂರು ವಿಧಾನ ಸಭೆಯ ಉಪಾಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿಯವರಿಗೆ ಸೊಸೈಟಿಯವರು ಬಿನ್ನವತ್ತಳೆಯನ್ನರ್ಪಿಸುವರು.

ಪಾಕಿಸ್ಥಾನಕ್ಕೆ ರಷ್ಯಾ ಗೋಧಿ

ರಷ್ಯಾ ಮತ್ತು ಪಾಕಿಸ್ಥಾನಗಳಿಗೆ ವಾಣಿಜ್ಯ ಒಪ್ಪಂದ ನಡೆದುದರ ಪರಿಣಾಮವಾಗಿ ರಷ್ಯಾವು ಪಾಕಿಸ್ಥಾನಕ್ಕೆ 1,50,000 ಟನ್ ಗೋಧಿಯನ್ನು ಕೊಟ್ಟು 20000 ಟನ್ ಸೆಣಬು ಮತ್ತು 1,150 ಟನ್ ಹತ್ತಿಯನ್ನು ಪಡೆಯುತ್ತದೆ.

ಸಾರ್ವಜನಿಕ ಬಸ್ಸಿನಲ್ಲಿ ರಾಜಪ್ರಮುಖರ ಪ್ರವಾಸ

ಟ್ರಾನ್ಸ್‌ಪೋರ್ಟ್ ಬಸ್ಸಿನಲ್ಲಿ, ಜನರಿಗೆ ಪ್ರಯಾಣ ಸೌಕರ್ಯಗಳು ಎಷ್ಟರ ಮಟ್ಟಿಗಿದೆ ಯೆಂಬುದನ್ನು ಪರಿಶೀಲಿಸಲು ತಿರುವಾಂಕೂರು ಕೊಚ್ಚಿ ರಾಜಪ್ರಮುಖರು ಸಾರ್ವಜನಿಕ ಬಸ್ಸಿನಲ್ಲಿ ಪ್ರಯಾಣ ಮಾಡಿದರೆಂದು ಗೊತ್ತಾಗಿದೆ.

ಹಸಿದ ಉಪಾಧ್ಯಾಯರಿಗೆ ಬಾಲಕರ ಸಹಾಯ

ಪಶ್ಚಿಮಬಂಗಾಳದ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರು ಮತ್ತು ಆತನಪತ್ನಿ, ೩ ವರ್ಷದ ಮಗುವು ೩ ದಿನಗಳಿಂದ ಆಹಾರವಿಲ್ಲದಿರುವ ವಿಷಯವು ಪಾಠಶಾಲೆಯಲ್ಲಿ ಬಾಲಕರಿಗೆ ತಿಳಿದೊಡನೆಯೇ ತಾವು ತಿಂಡಿಗಾಗಿ ತಂದಿದ್ದ ಹಣದಲ್ಲಿ ಸ್ವಲ್ಪಭಾಗವನ್ನು ಕೊಟ್ಟು ಉಪಾಧ್ಯಾಯರ ಹಸಿವನ್ನು ನೀಗಿಸಿದರು.

ಪರ್ಷಿಯಾಕ್ಕೆ ವಿಶ್ವಬ್ಯಾಂಕಿನ ನೆರವು

ಪರ್ಷಿಯಾ ಎಣ್ಣೆ ಕೈಗಾರಿಕೆ ಮುಖ್ಯಾಧಿಕಾರಿ ಮಿ| ಹುಸೇ ಮಕ್ಕೆಯವರು ವಿಶ್ವಬ್ಯಾಂಕಿನ ಅಧ್ಯಕ್ಷರನ್ನು ಭೇಟಿಮಾಡಿ ತಮ್ಮ ರಾಷ್ಟ್ರಕ್ಕೆ ವಿಶ್ವಬ್ಯಾಂಕಿನ ನೆರವಿನ ಬಗ್ಗೆ ಮಾತುಕತೆ ನಡೆಸಿದರು.

ಮಹಾತ್ಮರ ಉಪದೇಶ! ೯೩ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ!!!

ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

★ ಸಂತಾನ ಸಿಂಧೂರ ★

† ಬಹಿಷ್ಠೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ † ಅಕ್ರಮಸೂತಕ, ಕ್ರಮತಪ್ಪಿ ಬಹಿಷ್ಠೆ ಆಗುವುದನ್ನು ನಿಲ್ಲಿಸುತ್ತದೆ, † ಗರ್ಭಪಾತ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ † ಬಂಜೆತನವನ್ನು ಹೋಗಲಾಡಿಸಿ ಸಂತಾನಕೊಡುವ ಸಿದ್ಧೌಷಧ ೩ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ ಟಪಾಲ್ ಖರ್ಚು ೧ ರೂ. —(ಪಥ್ಯವಿಲ್ಲ ಆಹಾರ ಗುಪ್ತ.)

ಏಜೆನ್ಸ್:—ಎ. ರಾಮಸ್ವಾಮಿ ಅಯ್ಯರ್ ಸನ್ "ಸಂತಾನಸಿಂಧೂರ" ಆಫೀಸ್, ೬೨ಲ ಸೂರಡಿಂಪ್ಡೆ ದಕ್ಷಿಣಕಾಶ್ರಾಸ್, (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು

ವಿ.ಸೂ :—ಇದುವರೆಗೂ ಅಂಬಳೆ ಮತ್ತು ಮೈಸೂರು ಸೊಪ್ಪಿನಕೊಂದ ಬೀದಿಯಲ್ಲಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ನಮ್ಮ ಸ್ವಂತ ಕಟ್ಟಡಕ್ಕೆ ವರ್ಗಾಯಿಸಿರುತ್ತೆ. ವಿಶೇಷ ಮಾಹಿತಿಗೆ ೩ ಆ. ಸ್ಟಾಂಪು ಕಳುಹಿಸಿ.

C. T. C. PUBLICATIONS (FOR S. S. L. C.)

Simplified Eng. Grammar	0 6 0
A Guide to Eng. Text. (Sept. 52)	1 4 0
Do. (March 53)	1 0 0
ಕನ್ನಡ ನೋಟ್ಸ್ [1952 ಸೆಪ್ಟೆಂಬರ್]	0 12 0
(1953 ಮಾರ್ಚ್)	0 12 0
ಆಧುನಿಕ ಮಾನವನ ಹೋರಾಟದ ನೋಟ್ಸ್	0 8 0
ಅಂಕಗಣಿತ–ಬೀಜಗಣಿತ–ರೇಖಾಗಣಿತ (ಪ್ರಶ್ನೋತ್ತರಗಳು–8 ಪರೀಕ್ಷೆಯವು)	1 8 0
Ele. Mathematics (English Medium)	1 10 0

CITY TUTORIAL COLLEGE, MYSORE.

(Agents:- Mr. J. Nanumal & Sons)

ವುಡ್‌ಲ್ಯಾಂಡ್ಸ್

೧೯–೯–೫೨ರಿಂದ ಆಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

* ರಾಮಜನ್ಮ *

(ಹಿಂದಿ)

ಪಾತ್ರ:–

ನಿರೂಪರಾಯ್, ತ್ರಿಲೋಕ್ ಕಪೂರ್

ಅಪೇರ ೧೯-೯-೫೨ ರಿಂದ ೩ ನೇ ವಾರ

ಪುಯಲ್

ಅಥವಾ

ಬಿರುಗಾಳಿ

[ತಮಿಳು]

ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್

This is the first time introducing on the Silver Screen the powerful drama of "St. Philomena and Mortydom"

ಪ್ರಭಾ 19-9-52 ರಿಂದ ಪ್ರತಿದಿನ 3 ಪ್ರದರ್ಶನಗಳು

* ಸಜಾ *

ಪಾತ್ರ: ದೇವಾನಂದ್, ನಿಮ್ಮಿ, ಶ್ಯಾಮ, ಗೋಪ್.

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 26

೨೦-೯-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಮದರಾಸ್ ಸಂಸ್ಥಾನದಲ್ಲೆಲ್ಲಾ ಭೀಕರ ಕ್ಷಾಮಪರಿಸ್ಥಿತಿ

ಮದರಾಸ್ ಸಂಸ್ಥಾನದಲ್ಲಿ ಆರ್ಥಿಕ ಪರಿಸ್ಥಿತಿಯು ವಿಶೇಷವಾಗಿ ಹದಗೆಡುತ್ತಿರುವುದರಿಂದ ಇಡೀ ಸಂಸ್ಥಾನದಲ್ಲೇ ಕ್ಷಾಮ ಒದಗುವ ಸ್ಥಿತಿಉಂಟಾಗಬಹುದೆಂದು ಆಗ ಎಲ್ಲಾ ಕಡೆಯಲ್ಲೂ ಭೀಕರ ಕ್ಷಾಮ ಪರಿಸ್ಥಿತಿ ಎಂದು ಘೋಷಿಸಬೇಕಾದ ಪರಿಸ್ಥಿತಿ ಉಂಟಾಗುವುದೆಂದು ಮುಖ್ಯಮಂತ್ರಿ ಶ್ರೀ ರಾಜಾಜಿ ಎಚ್ಚರಿಕೆ ಇತ್ತಿದ್ದಾರೆ.

ಪ್ರತಿಯೊಂದು ಜಿಲ್ಲೆಯಲ್ಲೂ ಗಂಜಿ ಕೇಂದ್ರಗಳನ್ನು ತೆರೆಯಬೇಕೆಂದು ಮನವಿ ಬರುತ್ತಿದೆ ಫಲವತ್ತಾದ ತಂಜಾವೂರು ಪ್ರದೇಶದಲ್ಲೂ ಇದೇಸ್ಥಿತಿ ಉಂಟಾಗುತ್ತಿದೆ. ಎಲ್ಲ ಪ್ರದೇಶಗಳಲ್ಲೂ ಪರಿಹಾರ ಒದಗಿಸಲು ಹಣ ಎಲ್ಲಿಂದ ಬರಬೇಕೋ ದೇವರಿಗೇ ಗೊತ್ತು--ಎಂದು ಅವರು ಹೇಳಿದ್ದಾರೆ.

ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳ ಮೇಲೆ ತನಿಖೆ

ಮೈಸೂರು ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾದ ಡಾ|| ಬಿ ಎಲ್. ಮಂಜುನಾಥ್‌ರವರ ಮೇಲೆ ಬಂದಿರುವ ಹಲವಾರು ದೂರು ಮತ್ತು ಆರೋಪಣೆಗಳ ಬಗ್ಗೆ ತನಿಖೆ ನಡೆಸಲು ಸರ್ಕಾರ ನಿಶ್ಚಯಿಸಿದೆಯೆಂದೂ, ಅದು ಯಾವರೀತಿ ಇರಬೇಕೆಂಬುದನ್ನು ಪರ್ಯಾಲೋಚಿಸಲಾಗುತ್ತಿದೆಯೆಂದೂ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ. ಯಾವುದೇ ದೂರು ಮತ್ತು ಆರೋಪಣೆ ಬಂದಾಗ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತಿರಲು ಸಾಧ್ಯವಿಲ್ಲ. ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಸರ್ಕಾರದ ಪ್ರವೇಶಕ್ಕೆ ಅವಕಾಶವೇ ಇರಬಾರದೆಂಬ ವಾದಕ್ಕೆ ತಾವು ಒಪ್ಪುವುದಿಲ್ಲ-ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಅಭಾವ ಪರಿಹಾರ ವಿಶೇಷ ಕಮೀಷನರು

ಮೈಸೂರು ಸಂಸ್ಥಾನದ ಆಹಾರ ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಲು ಪೂರ್ಣಕಾಲದ ವಿಶೇಷ ಹುದ್ದೆಯೊಂದನ್ನು ಸರಕಾರದವರು ಕಲ್ಪಿಸಿ, ಕೋಲಾರ ಜಿಲ್ಲಾಧಿಕಾರಿಗಳಾದ ಶ್ರೀ ಕೆ. ರಾಮನಾಥಯ್ಯನವರನ್ನು ವಿಶೇಷ ಕಮೀಷನರಾಗಿ ನೇಮಿಸಿದ್ದಾರೆ.

ವೈಭವಪೂರಿತ ದಸರಾ ಮಹೋತ್ಸವಾರಂಭ

ಮೈಸೂರು. ಸೆ. ೨೦

ರಾಜಧಾನಿಯಲ್ಲಿ ದಸರಾ ಮಹೋತ್ಸವವು ಈ ದಿನ ಅತ್ಯಂತ ವೈಭವದಿಂದ ಪ್ರಾರಂಭವಾಯಿತು

ಶ್ರೀಮನ್ಮಹಾರಾಜರು ಮಂಗಳ ಸ್ನಾನ ಮಾಡಿ, ಶಾಸ್ತ್ರೋಕ್ತವಾದ ನಿತ್ಯ ಕರ್ಮಗಳನ್ನು ಮುಗಿಸಿಕೊಂಡು ಸಜ್ಜೆಗೆ ಆಗಮಿಸಿ, ಸಿಂಹಾಸನಕ್ಕೆ ಪೂಜೆಯನ್ನೆಸಗಿ ೧೧ ಗಂಟೆಗೆ ಸರಿಯಾಗಿ ಸಿಂಹಾಸನಾರೋಹಣ ಮಾಡಿದರು. ಅರಮನೆ ಬತೇರಿಯಿಂದ ೨೧ ಕುಶಾಲು ತೋಪುಗಳನ್ನು. ಈ ಶುಭ ಮಹೋತ್ಸವವನ್ನು ಸೂಚಿಸಲು, ಹಾರಿಸಲಾಯಿತು.

ಈ ಸಾಲಿನಲ್ಲಿ ಅರಮನೆಯಲ್ಲಿ ದಸರಾ ರಾಜ ಸಭೆಯನ್ನು ನೂತನ ರೀತಿಯಲ್ಲಿ ಏರ್ಪಡಿಸಲಾಗಿದೆ.

ಶ್ರೀಮನ್ಮಹಾರಾಜರ ಬಲಗಡೆಯಲ್ಲಿ ಸಚಿವರಿಗೆ ವಿಶೇಷ ಆಸನಗಳನ್ನು ಹಾಕಲಾಗಿತ್ತು. ಆಹ್ವಾನಿತರೆಲ್ಲರೂ ಹಿಂದೆ ನೆಲದಮೇಲೆ ಹಾಸಿದ್ದ ರತ್ನಗಂಬಳಿಗಳ ಮೇಲೆ ಕುಳಿತುಕೊಳ್ಳುವ ಬದಲು ಕುರ್ಚಿಗಳನ್ನು ಹಾಕಲಾಗಿತ್ತು.

ಈ ಬಾರಿಯ ಹೊಸ ವ್ಯವಸ್ಥೆಯಲ್ಲಿ ಶ್ರೀಮನ್ಮಹಾರಾಜರಿಗೆ ನಜರನ್ನು ಒಪ್ಪಿಸುವುದನ್ನು ಆಹ್ವಾನಿತರ ಇಷ್ಟಕ್ಕೆ ಬಿಡಲಾಗಿದೆ. ನಿರ್ಬಂಧವೇನೂ ಇಲ್ಲ.

ಕಾಲಾವಕಾಶವಿಲ್ಲದ ಕಾರಣ ಕಲಾವಿದರು ಮತ್ತು ಇತರರನ್ನು ಆಹ್ವಾನಿಸಿ ಮರ್ಯಾದಿಸುವ ವ್ಯವಸ್ಥೆಯನ್ನು ಈ ಸಾರಿ ಏರ್ಪಡಿಸಿಲ್ಲ.

ದಸರಾ ಮಹೋತ್ಸವ ಚರಿತ್ರೆಯಲ್ಲಿ ಮೊಟ್ಟ ಮೊದಲನೆಯದಾಗಿ ಪತ್ರಿಕಾ ಪ್ರತಿನಿಧಿಗಳಿಗೆ ಈ ಬಾರಿ ಆಹ್ವಾನವನ್ನು ಕೊಡಲಾಗಿದೆ. ಆದರೆ ಈ ಆಹ್ವಾನವು ೨೫ ನೇ ತಾರೀಖಿನವರೆಗೆ ಮಾತ್ರವಿದೆ.

ಅಭಾವ ಪರಿಹಾರಕ್ಕಾಗಿ ಪ್ರಮುಖರ ಸಮ್ಮೇಳನ

ಸಂಸ್ಥಾನದ ಆಹಾರ ಕ್ಷಾಮಪೀಡಿತ ಪ್ರದೇಶಗಳಲ್ಲಿ ತ್ವರಿತ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರಮುಖರ ಸಮ್ಮೇಳನವೊಂದು ರಾಜಧಾನಿಯಲ್ಲಿ ಇದೇ ೨೮ ನೇ ತಾರೀಖು ಮಧ್ಯಾಹ್ನ ೧-೩೦ ಗಂಟೆಗೆ ಟೌನ್‌ಹಾಲಿನಲ್ಲಿ ನಡೆಯಲು ಸರ್ಕಾರದವರು ಏರ್ಪಡಿಸಿದ್ದಾರೆ ಈ ಸಮ್ಮೇಳನದಲ್ಲಿ ಶಾಸನಸಭಾ ಸದಸ್ಯರು, ಪಾರ್ಲಿಮೆಂಟ್ ಸದಸ್ಯರು, ಪೌರಸಭೆ ಮತ್ತು ಜಿಲ್ಲಾಬೋರ್ಡುಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು ಖಾಸಗಿ ಪ್ರಮುಖ ಪ್ರತಿನಿಧಿಗಳು ಜಿಲ್ಲಾಧಿಕಾರಿಗಳು ಮತ್ತು ಇಲಾಖಾ ಮುಖ್ಯಾಧಿಕಾರಿಗಳು ಭಾಗವಹಿಸುವರು.

ಮಹಾರಾಜರ ಹಕ್ಕು ಬಾಧ್ಯತೆಗೆ ಚ್ಯುತಿ ಬರಕೂಡದು

ರೇಷನ್‌ದಾರರ ಸಂಘದವರ ಮನವಿ

ಮೈಸೂರು. ೨೦

ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ನಗರದ ರೇಷನ್‌ದಾರರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯು ನಡೆದು ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು.

ಶ್ರೀಮನ್ಮಹಾರಾಜರವರ ಸ್ಥಾನಮಾನಗಳು ಮತ್ತು ಹಕ್ಕು ಬಾಧ್ಯತೆಗಳನ್ನು ಕುಂಠಿತಗೊಳಿಸುವುದರಲ್ಲಿ ನಮ್ಮ ಮಂತ್ರಿಗಳು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸುತ್ತಿರುವುದರಿಂದ ಪ್ರಜಾವರ್ಗಕ್ಕೆ ಅತ್ಯಂತ ವ್ಯಸನ ವುಂಟು ಮಾಡಿದೆ. ರಾಜಪ್ರಮುಖರ ಸ್ಥಾನಮಾನಗಳನ್ನು ಬದಲಾಯಿಸುವುದು ಭಾರತ ಸರ್ಕಾರದ ಘನತೆಗೆ ತಕ್ಕುದಲ್ಲವೆಂದು ಪಂಡಿತ ನೆಹರೂರವರು ತಿಳಿಸಿರುವುದನ್ನು ಗಮನದಲ್ಲಿಟ್ಟುಕೊಂಡು ಮೈಸೂರು ಸರ್ಕಾರದವರು ಶ್ರೀಮನ್ಮಹಾರಾಜರವರ ವಿಷಯದಲ್ಲಿ ಕುಂದುಬಾರದಂತೆ ನಡೆಯಬೇಕೆಂದು ಹಾರೈಸುತ್ತೇವೆ.

ಮೈಸೂರಿನಲ್ಲಿ ಪಡಿತರ ರದ್ದಾಗಿದ್ದರೂ ಮಳೆಬಾರದೆ, ಬಡಜನರಿಗೆ ತುಂಬಾ ಕಷ್ಟವಾಗಿರುವುದರಿಂದ ಸರ್ಕಾರದವರು ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಯಲ್ಲಿ ಮಾರಬೇಕು.

ಕಮ್ಯೂನಿಸ್ಟರ ಕೇಂದ್ರ ಕಛೇರಿ ದೆಹಲಿಗೆ ವರ್ಗಾ

ಅಖಿಲಭಾರತ ಕಮ್ಯೂನಿಸ್ಟರ ಕೇಂದ್ರ ಕಛೇರಿಯನ್ನು ದೆಹಲಿಗೆ ವರ್ಗಾಯಿಸಲಾಗಿದೆ. ಪಾರ್ಲಿಮೆಂಟಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಈರೀತಿ ವರ್ಗಾಯಿಸಲಾಗಿದೆ ಎಂದು ಕಾರ್ಯದರ್ಶಿ ಶ್ರೀ ಅಜಾಯ್‌ಘೋಷ್ ತಿಳಿಸಿದ್ದಾರೆ.

ಮಾಜಿ ಹೈದರಾಬಾದಿನ ಸಚಿವರ ಪರಾರಿ

ಲಾಯಕ್‌ಅಲಿ ಮಂತ್ರಿಮಂಡಲದಲ್ಲಿ ಸಚಿವರಾಗಿದ್ದು ೩ ಜನರು ಹೈದರಾಬಾದಿನ ನೂತನ ಪೋಲೀಸ್ ಕಾರ್ಯಾಚರಣೆಯಾದ ಮೇಲೆ ಪತ್ತೆಯಿಲ್ಲದೆ ಪಾಕೀಸ್ಥಾನಕ್ಕೆ ಪರಾರಿಯಾಗಿರುವರೆಂದು ಹೇಳಲಾಗಿದೆ.

ಚೈನಾದಿಂದ ಸಹಾಯ

ಭಾರತದಲ್ಲಿ ಕ್ಷಾಮಪೀಡಿತ ಪ್ರದೇಶದಲ್ಲಿ ಉಪಯೋಗಿಸಲು ಚೈನಾ ೪೮,೦೧,೪೦ ರೂಗಳನ್ನು ಭಾರತ ಸರ್ಕಾರಕ್ಕೆ ಕೊಡಬೇಕೆಂದು, ಚೈನಾ ಸರ್ಕಾರವು ಚೀನಾ ರಾಯಭಾರಿ ಕಛೇರಿಗೆ ತಿಳಿಸಿದೆ ಭಾರತಸರ್ಕಾರದ ವಿದೇಶಾಂಗ ಕಾರ್ಯದರ್ಶಿ ಶ್ರೀ ನೆಹರೂರವರಿಗೆ ಚೀನಾ ರಾಯಭಾರಿಯವರು ಈ ಹಣವನ್ನು ಒಪ್ಪಿಸಿದರು.

ಪದಾರ್ಥಗಳ ಸಾಗಾಣಿಕೆಗೆ ಹೆಚ್ಚು ವ್ಯಾಗನ್‌ಗಳನ್ನು ಒದಗಿಸುವಂತೆ ಕೇಂದ್ರವನ್ನು ಒತ್ತಾಯಪಡಿಸಬೇಕು.

ಹೊರಗಿನಿಂದ ಬಂದು ನೆಲೆಸುವವರಿಗೆ ರೇಷನ್‌ಕಾರ್ಡುಗಳನ್ನು ಕೊಡಬೇಕು. ರಾಜಧಾನಿಯಲ್ಲಿ ಈಗ ದಸರಾ ಹಬ್ಬವನ್ನು ಸರ್ಕಾರದವರು ಏರ್ಪಡಿಸಿರುವುದರಿಂದ ಅದಕ್ಕಾಗಿ ಬರುವ ಪ್ರೇಕ್ಷಕರಿಗೆ ರೇಷನ್ ಕೊಡಬೇಕು.

ಒಲಂಪಿಯಾ ೧೯-೯-೫೨ ರಿಂದ ಪ್ರಾರಂಭ

ಪ್ರತಿದಿನ 3 ಪ್ರದರ್ಶನಗಳು

ಅಶೋಕ್‌ಕುಮಾರ್ ಪಾತ್ರವಹಿಸಿರುವ ಕೆ. ಆರ್ಟ್ಸ್‌ರವರ

★ ಪೂನಮ್ ★

ಸಹಾಯಕವರ್ಗ:—ಸಜ್ಜನ್, ಆಶಾಮಾಥುರ್

ಬೇಬಿ ಚುರ್ಮಾ, ಓಂ ಪ್ರಕಾಶ್

ಸಂಗೀತ—ಶಂಕರ್ ಜೈಕಿಷನ್) (ದಿಗ್ದರ್ಶನ—ಎಂ. ಸಾಧಿಕ್

ಪ್ರತಿದಿದ ಬೆಳಗ್ಗೆ 10-30 ಕ್ಕೆ ಫಿಲ್ಮಿಸ್ಥಾನ್‌ರವರ

ದಿಲೀಪ್‌ಕುಮಾರ್ ಪಾತ್ರವಹಿಸಿರುವ 卐 ಶಬನಂ 卐

ದಕ್ಷಿಣ ಭಾರತದಲ್ಲಿ ಅಸ್ಪೃಶ್ಯತೆ ಹೋಗಿಲ್ಲ

ಕೇಂದ್ರ ಸಚಿವಜಗಜೀವನರಾಂ ವಿವರಣೆ

ಭಾರತದಲ್ಲಿ ಅಸ್ಪೃಶ್ಯತೆ ನಿವಾರಣೆಗಾಗಿ ಕಾನೂನನ್ನು ಮಾಡಿದ್ದರೂ ಅದು ಕಾರ್ಯರೂಪಕ್ಕೆ ಬಂದಿಲ್ಲ. ಅದರಲ್ಲೂ ದಕ್ಷಿಣ ಭಾರತದ ಅನೇಕ ಗ್ರಾಮಗಳಲ್ಲಿ ಹರಿಜನರನ್ನು ಅಸ್ಪೃಶ್ಯರನ್ನಾಗಿಯೇ ಪರಿಗಣಿಸಲಾಗುತ್ತಿದೆ. ಹರಿಜನರು ಬಹಳ ಶಾಂತತೆಯಿಂದ ವರ್ತಿಸುತ್ತಲಿರುವರು ಈ ರೀತಿ ಶಾಂತತೆಯಿಂದ ಬಹಳಕಾಲ ಇರಲಾಗುವುದಿಲ್ಲವೆಂದು ಕೇಂದ್ರ ಸಂಚಾರ ಶಾಖಾ ಸಚಿವ ಜಗಜೀವನರಾಂ ಬೊಂಬಾಯಿನಲ್ಲಿ ಭಾಷಣಮಾಡುತ್ತಾ ಹೇಳಿರುವರು.

ಕೈಮಗ್ಗದ ಬಟ್ಟೆಗಳು ಧನಿಕರಿಗಾಗಿ

ಮಿಲ್ಲುಗಳಲ್ಲಿ ಉತ್ತಮ ಬಟ್ಟೆಗಳನ್ನು ಅಧಿಕ ಸಂಖ್ಯೆಯಲ್ಲಿ ತಯಾರಿಸುವುದರಿಂದ ಮಧ್ಯಮ ಮತ್ತು ಸಾಮಾನ್ಯ ಜನರಿಗೆ ಅತ್ಯಂತ ಉಪಯುಕ್ತವಾಗಿದೆ. ಇವುಗಳಲ್ಲಿ ಸೀರೆ, ಪಂಚೆ ಎಲ್ಲವೂ ಸೇರಿವೆ.

ಕೈಮಗ್ಗದವರಿಗೇ ಸೀರೆ, ಪಂಚೆ ತಯಾರಿಕೆಯನ್ನು ಬಿಟ್ಟರೆ ಜನರಿಗೆ ಅಷ್ಟು ಪ್ರಯೋಜನವಾಗುವುದಿಲ್ಲ. ಇವರು ತಯಾರಿಸುವ ಬಣ್ಣದ ಬಟ್ಟೆ ಅಲಂಕಾರ ಬಟ್ಟೆ ಮುಂತಾದುವು ಧನಿಕರಿಗೆ ಉಪಯೋಗವಾಗುವಂತಿರಬೇಕೆಂದು ಬೊಂಬಾಯಿನಲ್ಲಿ ಗಿರಣಿ ಮಾಲೀಕರ ಸಂಘವು ಅಭಿಪ್ರಾಯಪಟ್ಟಿದೆ.

ಮುಷ್ಕರ ಕೆಲಸಗಾರರ ಪ್ರದರ್ಶನ.

ಪೂನಾದಲ್ಲಿ ಮುಷ್ಕರ ಹೂಡಿರುವ ೧೧ ರಕ್ಷಣಾ ಸಂಸ್ಥೆಗಳ ಕಾರ್ಮಿಕರೆಲ್ಲರೂ ಪೂನಾದಲ್ಲಿ ನಾನಾ ಮೆರವಣಿಗೆಗಳನ್ನು ನಡೆಸಿದ್ದಾರೆ. ಈ ಮುಷ್ಕರವು ಆ. ೨೯ ರಿಂದ ಪ್ರಾರಂಭವಾಗಿ ಇನ್ನೂ ಮುಂದುವರಿಯುತ್ತಿದೆ. ಮೊನ್ನೆ ನಡೆದ ಮೆರವಣಿಗೆಯಲ್ಲಿ ೩೫೬೦೦ ಜನ ಭಾಗವಹಿಸಿದ್ದರು.

ಮಿರ್ಜಾ ಟೆಹರಾನಿಗೆ

ಬೆಂಗಳೂರು ಸೆ. ೨೦

ಮೈಸೂರಿನ ಮಾಜಿ ದಿವಾನ್ ಸರ್|| ಮಿರ್ಜಾರವರು ಮಧ್ಯಪ್ರಾಚ್ಯದಲ್ಲಿ ಪ್ರವಾಸ ಕೈಗೊಳ್ಳಲು ಟೆಹರಾನಿಗೆ ನಿನ್ನೆ ಪ್ರಯಾಣಮಾಡಿದರು.

ಉತ್ಕಟ ಆಹಾರ ಪರಿಸ್ಥಿತಿ

ಚಿತ್ತೂರು ಜಿಲ್ಲೆಗೆ ಪಕ್ಕದಲ್ಲಿರುವ ಮೈಸೂರಿನ ಪ್ರದೇಶಗಳಲ್ಲಿ ಉತ್ಕಟ ಆಹಾರ ಪರಿಸ್ಥಿತಿ ಇರುವುದಾಗಿ ಮದ್ರಾಸಿನ ಶಾಸನಸಭಾಸದಸ್ಯ ಶ್ರೀ ತಿಮ್ಮಾರೆಡ್ಡಿಯವರು ಹೇಳಿರುವರು.

ಪುನಃ ಆಹಾರವಸ್ತುಗಳ ಮೇಲೆ ಹತೋಟಿ

ಪ್ರಾಂತ್ಯದಲ್ಲಿ ಆಹಾರ ಪರಿಸ್ಥಿತಿ ಕೆಲವುಕಡೆ ಅಷ್ಟು ಸಮರ್ಪಕವಾಗಿಲ್ಲವಾಗಿ ಆ ಪ್ರದೇಶಗಳಲ್ಲಿ ಪುನಃ ಆಹಾರ ಹತೋಟಿಯನ್ನು ವಿಧಿಸಲಾಗುವುದೆಂದು ಹೈದರಾಬಾದ್ ಆಹಾರ ಸಚಿವ ಡಾ|| ಚೆನ್ನಾರೆಡ್ಡಿಯವರು ಹೇಳಿರುವರು.

ರವೆ, ಮೈದಾ ಅನಿರ್ಬಂಧ ಮಾರಾಟ

ರವೆ, ಮೈದಾ ಮುಂತಾದ ಹಿಟ್ಟುಗಳನ್ನು ಯಾವನಿರ್ಬಂಧವೂ ಇಲ್ಲದೆ ತಯಾರಿಸಿ ಮಾರಬಹುದೆಂದು ಬೊಂಬಾಯಿ ಸರ್ಕಾರವು ಆಜ್ಞೆಯಿತ್ತಿದೆ.

ನೇಪಾಳದಲ್ಲಿ ಭಾರತ ರಾಯಭಾರಿ

ಕೇಂದ್ರ ಸರ್ಕಾರದ ಗಣಿ ಮತ್ತು ಉತ್ಪನ್ನ ಶಾಖಾ ಕಾರ್ಯದರ್ಶಿ ಮತ್ತು ರಾಷ್ಟ್ರಾಧ್ಯಕ್ಷರ ಕಾರ್ಯದರ್ಶಿಗಳಾಗಿದ್ದ ಶ್ರೀ ಗೋಖಲೆಯವರನ್ನು ನೇಪಾಳದಲ್ಲಿ ಭಾರತ ರಾಯಭಾರಿಯಾಗಿ ನೇಮಕವಾಗಿದ್ದಾರೆ.

ಶಾಂತಿಸಮ್ಮೇಳನಕ್ಕೆ ಎ. ಕೆ. ಗೋಪಾಲ್

ಚೈನಾದಲ್ಲಿ ನಡೆಯಲಿರುವ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಲು ಭಾರತದಿಂದ ಶ್ರೀ ಗಳಾದ ಎ. ಕೆ. ಗೋಪಾಲ್, ಡಾ|| ಬಿಚ್ಚುಮುಂತಾದವರು ಚೈನಾಕ್ಕೆ ತೆರಳಿದರು.

ವಿದ್ಯಾರ್ಥಿಗಳಿಂದ ಶಾಲಾ ಕಟ್ಟಡ ನಿರ್ಮಾಣ

ಉತ್ತರಗುಜರಾತಿನ ಸಬರಕಾಂತ ಜಿಲ್ಲೆಯಒಂದು ಗ್ರಾಮದಲ್ಲಿ ೧೦೦ ವಿದ್ಯಾರ್ಥಿಗಳು ಒಂದು ಶಾಲಾಕಟ್ಟಡ ಮತ್ತು ಗ್ರಾಮರಸ್ತೆಯ ನಿರ್ಮಾಣವನ್ನು ೧೦ ದಿನಗಳನ್ನು ಮಾಡುವ ಕಾರ್ಯಕ್ರಮ ಕೈಗೊಂಡಿರುವರು.

ಅಪೇರ ೧೨-೯-೫೨ ರಿಂದ ೨ ನೇ ವಾರ

ಪುಯಲ್

ಅಥವಾ

ಬಿರುಗಾಳಿ

[ತಮಿಳು]

ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್

ಅಭಾವ ಪ್ರದೇಶಗಳ ಕ್ಷಾಮಪರಿಸ್ಥಿತಿ ಕಳವಳ

ಕೇಂದ್ರಸರ್ಕಾರ ಸಹಾಯಕ್ಕೆ ಬರಬೇಕು

ಮುಖ್ಯಮಂತ್ರಿ ಹನುಮಂತಯ್ಯನವರ ಹೇಳಿಕೆ

ಮೈಸೂರು. ೨೦

ಮೈಸೂರು ಸಂಸ್ಥಾನದ ಕೆಲವು ಪ್ರದೇಶಗಳ ಅಭಾವ ಪರಿಸ್ಥಿತಿಯು ವಿಷಮಗೊಂಡು ಕಳವಳಕ್ಕೀಡಾಗಿದೆಯೆಂದು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಿನ್ನೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿರುತ್ತಾರೆ. ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಕ್ಷಾಮಪರಿಸ್ಥಿತಿ ತೀವ್ರಗೊಳ್ಳುವುದರ ಜೊತೆಗೆ ಅದು ವಿಶಾಲವಾಗಿ ಹರಡುತ್ತಿರುವುದು ಕಳವಳ ಉಂಟುಮಾಡಿದೆ. ಈ ದುಃಸ್ಥಿತಿ ಉಂಟಾಗಿರುವುದು ನಮ್ಮ ಸಂಸ್ಥಾನಕ್ಕೆ ಮಾತ್ರ ಅಲ್ಲ ಹಲವು ಸಂಸ್ಥಾನಗಳಲ್ಲೂ ಕ್ಷಾಮಸ್ಥಿತಿ ತಲೆದೋರಿದೆ. ಗುಜರಾತಿನಿಂದ ಹಿಡಿದು ಕನ್ಯಾಕುಮಾರಿಯವರೆಗೆ ಕ್ಷಾಮಸ್ಥಿತಿ ತನ್ನ ಕರಾಳಛಾಯೆಯನ್ನು ಬೀರುತ್ತಿದೆ. ಆದ್ದರಿಂದ ಈ ಪರಿಸ್ಥಿತಿಯು ಅಂತರ ಪ್ರಾಂತೀಯ ಪ್ರಶ್ನೆಯಾಗಿ ವ್ಯಾಪಿಸಿದೆಯೆಂಬುದನ್ನು ಕೇಂದ್ರ ಸಚಿವರುಗಳ ಗಮನಕ್ಕೆ ತರಲಾಗಿದೆ. ಕೇಂದ್ರವು ಅದು ಪ್ರಾಂತಗಳ ಸ್ಥಳೀಯ ಪ್ರಶ್ನೆಯೆಂದು ಉದಾಸೀನ ಮಾಡುವಂತಿಲ್ಲವೆಂದು ಎಚ್ಚರಿಸಿದೆ. ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯ್‌ರವರು ಖುದ್ದಾಗಿ ಸಂಸ್ಥಾನಕ್ಕೆ ಭೇಟಿ ಕೊಡಬೇಕೆಂದು ಪ್ರಾರ್ಥಿಸಿ ಅವರುನ್ನೊಪ್ಪಿಸಲಾಗಿದೆ. ಇಂದೂರಿನ ಅಧಿವೇಶನದಲ್ಲಿ ಪ್ರಧಾನಿ ನೆಹರೂರವರನ್ನು ಕಂಡು ಅವರು ಖಂಡಿತವಾಗಿ ಒಂದುದಿನದ ಮಟ್ಟಿಗಾದರೂ ಅಭಾವಪ್ರದೇಶಗಳಿಗೆ ಭೇಟಿಕೊಡಬೇಕೆಂದು ಪ್ರಾರ್ಥಿಸಿದೆ.

ಅವರು ತಮ್ಮ ದಕ್ಷಿಣ ಭಾರತ ಪ್ರವಾಸ ಕೈಗೊಳ್ಳುವಾಗ ಇಲ್ಲಿಗೆ ಬರಲಿದ್ದಾರೆ. ಅವರ ಪ್ರತ್ಯಕ್ಷ ಪರಿಶೀಲನೆಯಿಂದ ಸೂಕ್ತ ನೆರವು ದೊರೆಕುವ ನಿರೀಕ್ಷೆಯಿದೆ ಮತ್ತು ಹೆಚ್ಚು ಆಹಾರಬೆಳೆ ಯೋಜನೆಗಾಗಿ ಹೆಚ್ಚಿನ ಸಹಾಯ ಕೇಂದ್ರದಿಂದ ಬರುವ ಭರವಸೆ ಇದೆ-ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಏಪ್ರಿಲ್ ತಿಂಗಳಿನಿಂದೀಚೆಗೆ ಸರ್ಕಾರವು ಇಲ್ಲಿಯವರೆಗೆ ೩೫ ಲಕ್ಷ ರೂ. ಗಳನ್ನು ಕೊಟ್ಟಿದೆ. ಅದರಲ್ಲಿ ಸುಮಾರು ೩೨ ಲಕ್ಷ ರೂ. ಪರಿಹಾರ ಕಾರ್ಯಗಳಿಗಾಗಿ ವಿನಿಯೋಗಿಸಲಾಗಿದೆ. ಪಬ್ಲಿಕ್ ವರ್ಕ್ಸ್ ಇಲಾಖೆಗೆ ಪರಿಹಾರ ಕಾಮಗಾರಿಗಳಿಗಾಗಿ ಪ್ರತ್ಯೇಕ ೭೬ ಲಕ್ಷ ರೂ. ಗಳನ್ನು ಕೊಡಲಾಗಿದ್ದು ಅದರಲ್ಲಿ ಸುಮಾರು ೨೧ ಲಕ್ಷ ರೂ. ವೆಚ್ಚವಾಗಿದೆ. ಇವುಗಳ ಜತೆಗೆ ೧೯೫೧-೫೨ ರ ಸಾಲಿಗೆ ಅಭಾವ ಪ್ರದೇಶಗಳಲ್ಲಿ ಕಂದಾಯ ಮಾಫಿ ಮಾಡಿರುವುದರ ಮೊಬಲಗು ೨.೬೫ ಲಕ್ಷ ರೂ. ಗಳು. ಈಗ ಪುನಃ ಪರಿಹಾರ ಕಾರ್ಯಕ್ಕಾಗಿ ೫|| ಲಕ್ಷ ರೂ. ಗಳನ್ನು ಕೊಡಲಾಗಿದೆ. ಇಲ್ಲಿಯವರೆಗೆ ಸಂಸ್ಥಾನದ ಪರಿಹಾರ ನಿಧಿಗೆ ೧ ಲಕ್ಷ ೭೦ ಸಾವಿರ ರೂ. ವಸೂಲಾಗಿದೆ. ಎಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ರಣಜಿತ್

19-9-52ರಿಂದ ಅಮೋಘ ಪ್ರಾರಂಭ

ಫಿಲ್ಮಿಸ್ತಾನ್‌ರವರ

ಬದ್‌ನಾಮ್

(BADNAM)

ಪಾತ್ರ:—ಶ್ಯಾಮ

ವುಡ್‌ಲ್ಯಾಂಡ್ಸ್

೧೯-೯-೫೨ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

* ರಾಮಜನ್ಮ *

(ಹಿಂದಿ)

ಪಾತ್ರ:-

ನಿರೂಪರಾಯ್. ತ್ರಿಲೋಕ್ ಕಪೂರ್

ವಿದ್ಯಾಭ್ಯಾಸ ಸುಧಾರಣೆ

ಮುಂದಿನ ವರ್ಷದಿಂದಲೇ ಜಾರಿ

ಮೈಸೂರು, ೨೦.

ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಸುಧಾರಣೆ ಬಗ್ಗೆ ಸರ್ಕಾರದವರು ನೇಮಿಸಿರುವ ಸಮಿತಿಯ ಸಲಹೆಗಳನ್ನು ಪರಿಶೀಲಿಸಿ, ಸೂಕ್ತ ಅಭಿಪ್ರಾಯಗಳನ್ನು ಸೂಚಿಸಲು ಭಾರತದ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರು ಒಂದು ವಾರ ಸಂಸ್ಥಾನಕ್ಕೆ ಭೇಟಿ ಕೊಡಲು ಒಪ್ಪಿರುವರೆಂದೂ, ನೂತನ ಸುಧಾರಣೆಗಳನ್ನು ಮುಂದಿನ ವರ್ಷದಿಂದಲೇ ಜಾರಿಗೆ ತರಬೇಕೆಂಬುದೇ ಸರ್ಕಾರದ ಇಷ್ಟವೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ.

—: ಪ್ರಕಾಶಕರು ಮತ್ತು ಮುದ್ರಕರು: —

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ

ಸಂಪುಟ 3

ಸಂಚಿಕೆ 27

೨೨-೯-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಮೈಸೂರು ಜಿಲ್ಲೆಯಲ್ಲೂ ಅಭಾವ ಪರಿಸ್ಥಿತಿ

ಗುರುಪಾದಸ್ವಾಮಿಯವರ ಹೇಳಿಕೆ

ಮೈಸೂರು ೨೨

ಮೈಸೂರುಜಿಲ್ಲೆಯ ಅನೇಕ ಭಾಗಗಳಲ್ಲಿ ಮಳೆಇಲ್ಲದೆ ಪೈರುಗಳು ಒಣಗಿಹೋಗಿ ದುಸ್ಥಿತಿ ಉಂಟಾಗಿದೆಯೆಂದೂ, ಆ ಪ್ರದೇಶಗಳು ಅಭಾವಪರಿಸ್ಥಿತಿ ಪ್ರದೇಶಗಳೆಂದು ಘೋಷಿಸಬೇಕೆಂದೂ ಇತ್ತೀಚೆಗೆ ಆ ಪ್ರದೇಶಗಳಿಗೆ ಭೇಟಿಕೊಟ್ಟು, ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿರುತ್ತಾರೆ.

ಯಳಂದೂರು, ಚಾಮರಾಜನಗರ, ಟಿ.ನರಸೀಪುರ, ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಪರಿಸ್ಥಿತಿಯು ತೀರಾ ಹದಗೆಟ್ಟಿದೆ. ಈ ಪ್ರದೇಶಗಳಲ್ಲಿ ಪೈರುಗಳು ಸಂಪೂರ್ಣವಾಗಿ ನಾಶವಾಗಿದೆ ಜನರಿಗೆ ಆಹಾರ ಕೊಳ್ಳಲು ಹಣವಿಲ್ಲ. ಕೂಡಲೇ ಸರ್ಕಾರದವರು ಪರಿಹಾರ ಕಾರ್ಯಗಳನ್ನು ಕೈಗೊಂಡು ಜನರ ದುಸ್ಥಿತಿಯನ್ನು ನಿವಾರಿಸಬೇಕು.

ಮೈಸೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಬಾವಿಗಳನ್ನು ತೆಗೆಯಲು ಕೊಟ್ಟಿರುವ ೧೦ ಸಾವಿರ ರೂ. ಗಳು ಗುಂಡ್ಲುಪೇಟೆ ತಾಲ್ಲೂಕಿಗೇ ಸಾಲದಾಗಿದೆ. ಈಗಿನ ಪರಿಸ್ಥಿತಿಯಲ್ಲಿ ೧ ಲಕ್ಷ ರೂಗಳಾದರೂ ಬೇಕಾಗಿದೆ. ಜಾನುವಾರುಗಳಿಗೆ ಬೇಕಾಗುವ ಮೇವಿನ ಪರಿಸ್ಥಿತಿಯು ಸ್ವಲ್ಪ ಉತ್ತಮವಾಗಿದ್ದರೂ ಅದನ್ನು ವಿಶೇಷ ಪ್ರಮಾಣದಲ್ಲಿ ಮದರಾಸ್ ಕಡೆಗೆ ಕೊಳ್ಳೇಗಾಲದವರು ಬಂದು ಸಾಗಿಸುತ್ತಿದ್ದಾರೆ. ಇದರಿಂದ ಮುಂದೆ ಮೇವಿನ ಅಭಾವವು ಉಂಟಾಗಬಹುದಾದರಿಂದ ಸರ್ಕಾರದವರು ಅದನ್ನು ತಡೆಗಟ್ಟಲು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು-ಎಂದು ಅವರು ತಿಳಿಸಿರುತ್ತಾರೆ.

ಮೈಸೂರು ನಗರದ ರೇಷನ್ ಡಿಪೋಗಳಲ್ಲಿ ರಾಗಿಯನ್ನು ಜನರಿಗೆ ಕೊಡುತ್ತಿಲ್ಲ. ಈಗ ಕೊಡುತ್ತಿರುವ ಕೆಂಪುಜೋಳವು ಕಸಕಡ್ಡಿಯಿಂದ ಕೂಡಿ ಸ್ವಚ್ಛವಾಗಿಲ್ಲ. ಈ ಕೊರತೆಯನ್ನು ಕೂಡಲೇ ನಿವಾರಿಸಬೇಕೆಂದೂ ಅವರು ಹೇಳಿರುತ್ತಾರೆ.

ಮೈಸೂರು ಜಿಲ್ಲೆಯಲ್ಲಿ ಸಚಿವರುಗಳ ಪ್ರವಾಸ

ಮೈಸೂರು ಸೆ. ೨೨

ಮೈಸೂರು ಜಿಲ್ಲಾ ಆಹಾರ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಲು ಆಹಾರ ಸಚಿವ ಶ್ರೀ ಸಿದ್ದವೀರಪ್ಪನವರು ಮತ್ತು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಆ ಪ್ರದೇಶಗಳಲ್ಲಿ ಇದೇ ೨೬ನೇ ತಾರೀಖುಗಳು ಪ್ರವಾಸಮಾಡುವರು.

ಅಂಚೆ ಇಲಾಖಾ ನೌಕರರ ಬೇಡಿಕೆಗಳು

ಮೈಸೂರು ಸೆ. ೨೨

ಮೈಸೂರು ಡಿವಿಜನ್ ಪೋಸ್ಟ್‌ಮನ್ ಮತ್ತು ಕೆಳದರ್ಜೆ ನೌಕರರ ಸಂಘದ ಸಭೆಯು ಶ್ರೀ ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಮೊನ್ನೆದಿನ ನಡೆದು, ಕೆಲಸದಿಂದ ತೆಗೆದುಹಾಕಿರುವ ಪೋಸ್ಟ್‌ಮನ್‌ಗಳನ್ನು ಕೆಲಸಕ್ಕೆ ಕೂಡಲೇ ತೆಗೆದುಕೊಳ್ಳಬೇಕೆಂದೂ ಮತ್ತು ಸರ್ವೀಸ್ ಆಗಿರುವ ಹಂಗಾಮಿ ಪೋಸ್ಟ್‌ಮನ್‌ಗಳನ್ನು ಖಾಯಂಮಾಡಬೇಕೆಂದೂ ಕೋರುವ ನಿರ್ಣಯಗಳನ್ನು ಮಾಡಲಾಯಿತು.

೧೯೪೬ ರಲ್ಲಿ ನಡೆದ ಮುಷ್ಕರಕಾಲದ ಸಂಬಳವನ್ನು ಕೆಲವು ನೌಕರರಿಗೆ ಇಲ್ಲಿಯವರೆಗೂ ಕೊಡದಿರುವುದನ್ನು ಸರ್ಕಾರದ ಗಮನಕ್ಕೆ ತರಲಾಯಿತು.

ರಾಮರಾಜ್ಯ ಸಾಧನೆಗೆ ಎಲ್ಲರಿಗೂ ಭೂಮಿಇರಬೇಕು

ರಾಮರಾಜ್ಯ ಸಾಧನೆಗೆ ದುಡಿಯುವ ಮತ್ತು ಖಾದಿ ಧರಿಸುವ ಧ್ಯೇಯಗಳನ್ನು ಸಾಧಿಸಲು ಎಲ್ಲರಿಗೂ ಕನಿಷ್ಠಪಕ್ಷದ ಭೂಮಿ ಇರಬೇಕು ಮತ್ತು ನಿರುದ್ಯೋಗ ಸಮಸ್ಯೆ ಬಿಡಿಸಲ್ಪಡಬೇಕು-ಎಂದು ಆಚಾರ್ಯ ವಿನೋಬಭಾವೆಯವರು ಹೇಳಿರುವರು.

ಉಕ್ಕಿನಬೆಲೆ ಏರಿತು

ಇಂದಿನಿಂದ ಉಕ್ಕಿನಬೆಲೆಯನ್ನು ಟನ್ ಒಂದಕ್ಕೆ ೫೦ ರೂಪಾಯಿಗಳಂತೆ ಹೆಚ್ಚಿಸಿ ಭಾರತ ಸರ್ಕಾರದವರು ಒಂದು ಪ್ರಕಟಣೆ ಹೊರಡಿಸಿರುವರು ಇದರಂತೆ ಬೆಲೆ ಟನ್ ಗೆ ೨೮೮ ರೂ ಆಗುತ್ತದೆ.

ಮಹಾರಾಜ ಹರಿಸಿಂಗರ ಷರತ್ತುಗಳು

ಕಾಶ್ಮೀರದ ಮಹಾರಾಜಾ ಹರಿಸಿಂಗ್‌ರವರು ತಮ್ಮ ಕುಮಾರ ಕರಣಸಿಂಗ್‌ರವರಿಗೆ ಸಿಂಹಾಸನವನ್ನು ಬಿಟ್ಟುಕೊಡುವ ಬಗ್ಗೆ ಕೆಲವು ಷರತ್ತುಗಳನ್ನು ಹಾಕಿರುವರೆಂದೂ ಅವುಗಳನ್ನು ಕೇಂದ್ರಸರ್ಕಾರದವರು ಪರ್ಯಾಲೋಚಿಸುತ್ತಿದ್ದಾರೆಂದೂ, ಗೊತ್ತಾಗಿದೆ. ರಾಜರಿಗೆಸಲ್ಲಬೇಕಾಗಿರುವ ಗೌರವ ಹಕ್ಕುಬಾಧ್ಯತೆ ಮತ್ತು ೧೫ ಲಕ್ಷ ರಾಜಧನ ಮತ್ತು ಎಲ್ಲ ತೆರಿಗೆ ರಿಯಾಯಿತಿ ಸೌಲಭ್ಯ ಇತ್ಯಾದಿ ವಿನಾಯಿತಿಗಳನ್ನು ಕೊಡಬೇಕೆಂದೂ ಅವರು ಹೇಳಿದ್ದಾರೆ.

೧೫ ಲಕ್ಷ ರೂ. ರಾಜಧನದ ಪೈಕಿ, ಕೇಂದ್ರಸರ್ಕಾರ ೯ ಲಕ್ಷ ರೂ. ಮತ್ತು ಕಾಶ್ಮೀರ ೬ ಲಕ್ಷ ರೂ. ಕೊಡುತ್ತಿದ್ದಾರೆ. ಇನ್ನುಮುಂದೆ ಕಾಶ್ಮೀರದಲ್ಲಿ ರಾಜತ್ವ ರದ್ದುಮಾಡಿರುವುದರಿಂದ, ಕೇಂದ್ರದವರೆ ಆ ರಾಜಧನವನ್ನು ಕೊಡಬೇಕಾಗುವುದೆಂದೂ ಆದ್ದರಿಂದ ೧೦ ಲಕ್ಷ ರೂ. ಹಣವನ್ನು ಅವರಿಗೆ ಕೊಡಬಹುದೆಂದೂ ಹೇಳಲಾಗಿದೆ. ತಾವು ಕಾಶ್ಮೀರಕ್ಕೆ ಕೊಟ್ಟ ೪೦ ಲಕ್ಷ ರೂ. ಸಾಲವನ್ನು ವಾಪಸು ಕೊಡಬೇಕೆಂದೂ ಅವರು ಕೇಳಿದ್ದಾರೆ.

೨ ಸಾವಿರ ಜನರಿರುವ ಪ್ರತಿ ಹಳ್ಳಿಗೂ ಪೋಸ್ಟಾಫೀಸು

ಮುಂದಿನ ಮಾರ್ಚಿ ತಿಂಗಳಿನೊಳಗಾಗಿ ಭಾರತದಲ್ಲಿ ೨ ಸಾವಿರ ಜನಕ್ಕಿಂತ ಹೆಚ್ಚಾಗಿರುವ ಪ್ರತಿ ಹಳ್ಳಿಯಲ್ಲೂ ಅಂಚೆ ಕಛೇರಿಯನ್ನು ತೆರೆಯಲಾಗುವುದೆಂದು ಕೇಂದ್ರಸಚಿವ ಶ್ರೀ ಜಗಜೀವನ್‌ರಾಮ್‌ರವರು ತಿಳಿಸಿರುತ್ತಾರೆ.

೪೦ ಮುಖ್ಯಕೈಗಾರಿಕೆಗಳ ಅಭಿವೃದ್ಧಿಯೋಜನೆ

ಭಾರತದಲ್ಲಿ ೪೦ ಪ್ರಮುಖ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಪಾಂಚವಾರ್ಷಿಕಯೋಜನೆಯೊಂದನ್ನು ಕೇಂದ್ರ ಪ್ಲಾನಿಂಗ್ ಕಮೀಷನ್ ತಯಾರಿಸಿದೆ.

ನಿರುದ್ಯೋಗಿಗಳಿಗೆ ಚರಕ ಒದಗಿಸಬೇಕು

ಸರ್ಕಾರದವರು ಪ್ರತಿಯೊಬ್ಬರಿಗೂ ಉದ್ಯೋಗ ಕಲ್ಪಿಸಲು ಸಾಧ್ಯವಿಲ್ಲದಿದ್ದರೂ ಪ್ರತಿನಿರುದ್ಯೋಗಿಗೂ ಚರಕಕೊಟ್ಟು ಖಾದಿ ಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕೆಂದು ಆಚಾರ್ಯವಿನೋಬಾಭಾವೆಯವರು ಸಲಹೆ ಮಾಡಿರುತ್ತಾರೆ.

ಭಾರತದಮೇಲೆ ಪಾಕೀಸ್ತಾನದ ಆರೋಪಣೆ

ಕಾಶ್ಮೀರ ಪರಿಹಾರಕ್ಕೆ ಭಾರತ ಅಡ್ಡಿಬರುತ್ತಿದೆ

ಎಂದು ಪಾಕ್ ಗೌರ್ನರ್ ಜನರಲ್

ಕಾಶ್ಮೀರ ಜನತೆಯು ತನಗೆ ಇಷ್ಟಬಂದಂತಹ ಸರ್ಕಾರವನ್ನು ರಚಿಸಿಕೊಳ್ಳಲು ಜನ್ಮಸಿದ್ಧ ಹಕ್ಕನ್ನು ಕಲ್ಪಿಸಿಕೊಡಲು ಪಾಕೀಸ್ಥಾನ ನಿರ್ಧರಿಸಿದೆ

ವಿಶ್ವಸಂಸ್ಥೆಯ ತೀರ್ಮಾನವೇನೆಂಬುದನ್ನು ನಾವು ಇನ್ನು ಕಾದುನೋಡಬೇಕಾಗಿದೆ. ಆದರೆ ಈಗಾಗಲೇ ನಮ್ಮ ಶಾಂತಿಯನ್ನು ಮಿತಿಮೀರಿ ಪರೀಕ್ಷಿಸುತ್ತಿದ್ದಾರೆಂದು ಪಾಕೀಸ್ಥಾನದ ಗೌರ್ನರ್ ಜನರಲ್ ಗುಲಾಮ್‌ಮಹಮ್ಮದ್‌ರವರು ಹೇಳಿರುವರು ಭಾರತ ಯಾವುದಕ್ಕೂ ಒಪ್ಪದ ನಿರಂತರವಾದ ತಿರಸ್ಕಾರಕ್ಕೆ ಬದಲು ಪಾಕೀಸ್ಥಾನವು ನ್ಯಾಯವಾದ ಪರಿಹಾರಕ್ಕೆ ಸಿದ್ಧವಾಗಿರುವುದೆಂದು ಜಗತ್ತಿಗೆ ತೋರಿಸಿಕೊಟ್ಟಿದೆ. ನ್ಯಾಯವಾದ ಮತ್ತು ಸ್ವತಂತ್ರವಾದ ಜನಮತಗಣನೆಯೇ ಪ್ರಜಾಪ್ರಭುತ್ವರೀತಿಯ ಏಕಮಾತ್ರ ಪರಿಹಾರಮಾರ್ಗ, ಈ ಮಾರ್ಗದಲ್ಲಿ ಪಾಕೀಸ್ಥಾನದ ಸಹನೆ, ನಂಬಿಕೆ ಅಥವ ನ್ಯಾಯಪರತೆ ಪರೀಕ್ಷೆಗೆ ಒಳಗಾಗಿಲ್ಲ ಆದರೆ ಭದ್ರತಾ ಸಮಿತಿಯ ಮೂಲಭೂತ ನೀತಿಪರೀಕ್ಷೆಗೆ ಒಳಗಾಗಿದೆ. ಭಾರತವು ಎಲ್ಲಾ ಸಲಹೆಗಳನ್ನು ನಿರಂತರವಾಗಿ ತಿರಸ್ಕರಿಸುತ್ತ ಬಂದಿರುವುದು ಪರಿಹಾರಕ್ಕೆ ಮಾರ್ಗವಿಲ್ಲದಾಗಿದೆ ಎಂದು ಅವರು ಹೇಳಿರುವರು.

ಸ್ಥಳಾಂತರದವರ ಆಸ್ತಿಪಾಸ್ತಿ ಹರಾಜು ಹಾಕಬೇಕು

ಮರುವಸತಿ ಶಾಖಾ ಅಧಿಕಾರಿಗಳ ಸಮ್ಮೇಳನದ ತೀರ್ಮಾನ

ದೆಹಲಿಯಲ್ಲಿ ಕಳೆದ ಎರಡು ದಿನಗಳಿಂದ ನಡೆಯುತ್ತಲಿದ್ದ ಮರುವಸತಿ ಶಾಖಾ ಅಧಿಕಾರಿಗಳ ಸಮ್ಮೇಳನವು ನಿನ್ನೆಯದಿನ ಮುಕ್ತಾಯವಾಯಿತು ಭಾರತದಿಂದ ಸ್ಥಳಾಂತರರಾಗಿರುವವರ ಆಸ್ತಿಪಾಸ್ತಿಗಳನ್ನೆಲ್ಲಾ ಹರಾಜುಹಾಕಿ ಬಂದಹಣವನ್ನು ಪಾಕೀಸ್ಥಾನದಲ್ಲಿ ತಮ್ಮ ಆಸ್ತಿಪಾಸ್ತಿಗಳನ್ನು ಬಿಟ್ಟುಬಂದು ಭಾರತದಲ್ಲಿ ನೆಲಸಿರುವವರಿಗೆ ಕೊಡಬೇಕೆಂದು ಸಮ್ಮೇಳನವು ತೀರ್ಮಾನಿಸಿರುವುದಾಗಿ ಹೇಳಲಾಗಿದೆ.

ಭಾರತಾದ್ಯಂತ ಒಂದೇ ಸಂಘವಿರಬೇಕು

ಅಂಚೇ ನೌಕರರ ಬೇಡಿಕೆಗಳನ್ನು ಸುಲಭವಾಗಿ ಸರ್ಕಾರವು ಈಡೇರಿಸಬೇಕಾದರೆ ಭಾರತಾದ್ಯಂತ ಅಂಚೇ ನೌಕರರ ಒಂದೇ ಸಂಘವಿರಬೇಕೆಂದು ಸಂಪರ್ಕ ಶಾಖಾಸಚಿವ ಶ್ರೀ ಜಗಜೀವನರಾಂರವರು ಹೇಳಿರುವರು.

ದಕ್ಷಿಣ ಆಫ್ರಿಕಾ ವರ್ಣಭೇದ ನೀತಿ

ದಕ್ಷಿಣ ಆಫ್ರಿಕಾ ವರ್ಣಭೇದ ನೀತಿಯಬಗ್ಗೆ ವಿವರಗಳನ್ನು ಕೇಳಿ ಪ್ರಪಂಚ ಸಂಸ್ಥೆಯ ಸೆಕ್ರೆಟರಿ ಜನರಲ್ ಟ್ರಿಗ್ವಿಲೈರವರು ದಕ್ಷಿಣ ಆಫ್ರಿಕಾ, ಭಾರತ ಮತ್ತು ಪಾಕೀಸ್ತಾನಗಳಿಗೆ ಪತ್ರಗಳನ್ನು ಬರೆದಿರುವುದಾಗಿ ಗೊತ್ತಾಗಿದೆ.

ಸಂಸ್ಥಾನ ಕ್ಷಾಮ ಪರಿಹಾರ ನಿಧಿಗೆ ಸಹಾಯ

ಪ್ರಧಾನಿ ನೆಹರೂರವರು ಪ್ರಧಾನ ಮಂತ್ರಿ ಪರಿಹಾರ ನಿಧಿಯಿಂದ ಮೈಸೂರಿನ ಕ್ಷಾಮಪೀಡಿತ ಪ್ರದೇಶಗಳ ಸಹಾಯಕ್ಕಾಗಿ ಪುನಃ ೧೫೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಹಿಂದೆ ಪ್ರಧಾನಿಯವರು ೫೦೦೦೦ ರೂಪಾಯಿಗಳನ್ನು ಕಳುಹಿಸಿದ್ದರು.

ಮಂಚೂರಿಯ ಗಡಿಪ್ರದೇಶದಲ್ಲಿ ಧಾಳಿ

ಯಾಲೂನದಿಯ ದಕ್ಷಿಣ ದಂಡೆಯಲ್ಲಿರುವ ಮಂಚೂರಿಯಾಗಡಿಗೆ ಕೇವಲ ೬೦೦ ಗಜಗಳ ದೂರದ ಪ್ರದೇಶದಮೇಲೆ ವಿಶ್ವಸಂಸ್ಥೆ ಫೈಟರ್ ವಿಮಾನಗಳು ಧಾಳಿ ನಡೆಸಿವೆ.

ಹರೇಕೃಷ್ಣ ಮೆಹತಾಬ್ ಅಮೆರಿಕಾಕ್ಕೆ

ಅಮೆರಿಕಾದಲ್ಲಿ ಪರಿಶೀಲನೆ ಮತ್ತು ಉಪನ್ಯಾಸ ಪ್ರವಾಸಕ್ಕಾಗಿ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಈದಿನ ಅಮೆರಿಕಾಕ್ಕೆ ತೆರಳಿದರು.

ವಿಶ್ವವಿದ್ಯಾನಿಲಯ ಕಾರ್ಯಕಲಾಪ ಹಿಂದಿಯಲ್ಲಿ

ಪಾಟ್ನಾ ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯು ಒಂದು ನಿರ್ಣಯವನ್ನು ಮಾಡಿ ಇನ್ನುಮುಂದೆ ವಿಶ್ವವಿದ್ಯಾನಿಲಯದ ಎಲ್ಲ ಕಾರ್ಯಗಳನ್ನು ಹಿಂದಿಯಲ್ಲೇ ನಡೆಸಬೇಕೆಂದು ತೀರ್ಮಾನಿಸಿದೆ.

ವಸ್ತುಪ್ರದರ್ಶನಗಳು ಬೋಧಪ್ರದವಾಗಿರಬೇಕು

ಮೈಸೂರು ಸೆ ೨೨

ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೊನ್ನೆಯದಿನ ಮೈಸೂರು ದಸರಾ ವಸ್ತುಪ್ರದರ್ಶನದ ರಂಗಮಂಟಪದಲ್ಲಿ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುತ್ತಾ ವಸ್ತು ಪ್ರದರ್ಶನಗಳು ಬೋಧಪ್ರದವಾಗಿರಬೇಕು ಮತ್ತು ಕೈಗಾರಿಕೆಗಳ ಹೆಚ್ಚಿನ ಉತ್ಪತ್ತಿಗೆ ಮಾರ್ಗ ತೋರಬೇಕು ಪ್ರದರ್ಶನಗಳು ಎಂದಿಗೂ ವಸ್ತು ಮಾರಾಟದಪೇಟೆಯಾಗಬಾರದು ಒಂದು ಪಕ್ಷ ಪೇಟೆಯಾದರೆ ಅದು ಸ್ವದೇಶಿ ವಸ್ತುಗಳಿಗೆ ಕೈಗಾರಿಕೆಗೆ ಪ್ರೋತ್ಸಾಹ ಕೊಡುವಂತಿರಬೇಕು ಎಂದು ಹೇಳಿದರು.

ಪ್ರಾರಂಭದಲ್ಲಿ ಸಮಿತಿಯ ಅಧ್ಯಕ್ಷರಾದ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಅತಿಥಿಗಳನ್ನು ಸ್ವಾಗತಿಸಿ, ಪ್ರದರ್ಶನದ ಧ್ಯೇಯಗಳು ಈಡೇರಲು ಉದಾರಿಗಳಾದ ಸಾರ್ವಜನಿಕರ ಸಹಕಾರ ಕೋರಿದರು.

ಅಸ್ಸಾಂನಲ್ಲಿ ಪ್ರವಾಹ

ಮೇಲಣ ಅಸ್ಸಾಂನಲ್ಲಿ ಪ್ರವಾಹದ ದೆಸೆಯಿಂದ ರೈಲುಮಾರ್ಗವೆಲ್ಲಾ ಆಪತ್ತಿಗೀಡಾಗಿರುವುದಾಗಿ ಗೊತ್ತಾಗಿದೆ.

ಪೂರ್ವಆಫ್ರಿಕಾದಲ್ಲಿ ಗಾಂಧಿ ಸ್ಮಾರಕ ವಿಶ್ವವಿದ್ಯಾನಿಲಯ

ಪೂರ್ವಆಫ್ರಿಕಾದಲ್ಲಿ ಮಹಾತ್ಮಗಾಂಧಿಯವರ ಸ್ಮಾರಕವಾಗಿ ೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಾಲೇಜೊಂದನ್ನು ನಿರ್ಮಿಸಬೇಕೆಂದು ಭಾರತದ ಶಿಕ್ಷಣತಜ್ಞರಾದ ಶ್ರೀ ಆರ್. ಕೆ. ರಜನಿಕ್ ಯೋಜಿಸುವುದಾಗಿ ಗೊತ್ತಾಗಿದೆ ಈ ಕಾರ್ಯಕ್ಕಾಗಿ ಪೂರ್ವ ಆಫ್ರಿಕಾ ಜನತೆಯು ೨,೫೦,೦೦೦ ರೂ. ಚಂದಾ ಕೊಡಲಿದೆ.

ಬ್ರಿಟನ್ನಿನಿಂದ ಈಜಿಪ್ಟಿಗೆ ಶಸ್ತ್ರಾಸ್ತ್ರ

ಈಜಿಪ್ಟಿನ ಶಸ್ತ್ರಾಸ್ತ್ರಗಳನ್ನು ಸರಬರಾಜುಮಾಡುವ ವಿಷಯವನ್ನು ಬ್ರಿಟನ್ ಪರಿಶೀಲಿಸುತ್ತಲಿರುವುದಾಗಿ ಗೊತ್ತಾಗಿದೆ.

ರಣಜಿತ್
19-9-52ರಿಂದ ಅಮೋಘ ಪ್ರಾರಂಭ
ಫಿಲ್ಮಿಸ್ತಾನ್‌ರವರ
ಬದ್‌ನಾಮ್
(BADNAM)
ಪಾತ್ರ:—ಶ್ಯಾಮ

ವುಡ್‌ಲ್ಯಾಂಡ್ಸ್
೧೯-೯-೫೨ರಿಂದ ಅಮೋಘ ಪ್ರಾರಂಭ
ಪ್ರತಿ ದಿನ ೩ ಆಟಗಳು
* ರಾಮಜನ್ಮ *
(ಹಿಂದಿ)
ಪಾತ್ರ:-
ನಿರೂಪರಾಯ್. ತ್ರಿಲೋಕ್ ಕಪೂರ್

ಅಪೇರ ೧೯-೯-೫೨ ರಿಂದ ೩ ನೇ ವಾರ
ಪುಯಲ್
ಅಥವಾ
ಬಿರುಗಾಳಿ
[ತಮಿಳು]
ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್
This is the first time introducing on the Silver Screen the powerful drama of "St. Philomena and Mortydom"

ಪ.ಹಾಕ್ಮರ ಉಪದೇಶ! ೯೦ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ!!!
ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ
★ ಸಂತಾನ ಸಿಂಧೂರ ★
† ಬಹಿಷ್ಟೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ † ಅಕ್ರಮಸೂತಕ, ಕ್ರಮತಪ್ಪಿ ಬಹಿಷ್ಟೆ ಆಗುವುದನ್ನು ನಿಲ್ಲಿಸುತ್ತದೆ, † ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ † ಬಂಜೆತನವನ್ನು ಹೋಗಲಾಡಿಸಿ ಸಂತಾನಕೊಡುವ ಸಿದ್ಧೌಷಧ ೩ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ ಟಪಾಲ್ ಖರ್ಚು ೧ ರೂ. —(ಪತ್ಯವ್ಯವಹಾರ ಗುಪ್ತ.)
ಅಡ್ರೆಸ್:—ಎ. ರಾಮಸ್ವಾಮಿ ಅಯ್ಯರ್ ಸನ್ "ಸಂತಾನಸಿಂಧೂರ" ಆಫೀಸ್, ೬೨೦ ಸೂರಡಿಂಪ್ಪೆ ದಕ್ಷಿಣ ಅಗ್ರಹಾರ, (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು.
ವಿ.ಸೂ:—ಇದುವರೆಗೂ ಅಂಬಳೆ ಮತ್ತು ಮೈಸೂರು ಸೊಪ್ಪಿನಕೋಳದ ಬೀದಿಯಲ್ಲಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ನಮ್ಮ ಸ್ವಂತ ಕಟ್ಟಡಕ್ಕೆ ವರ್ಗಾಯಿಸಿರುತ್ತೆ. ವಿಶೇಷ ಮಾಹಿತಿಗೆ ೨ ಅ. ಸ್ಟಾಂಪು ಕಳುಹಿಸಿ.

ಅಂದವಾದ ಮುದ್ರಣಕ್ಕೆ
ಕರ್ಣಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)
For
NEAT AND PROMPT PRINTING
Contact :
CANATAK PRINTERS
GANDHI SQUARE, MYSORE
Phone 892 or 574

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 28

೨೩-೯-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಮೈಸೂರಿನ ರೈಲ್ವೆ ಕೆಲಸಗಾರರಿಗೆ ನ್ಯಾಯ ದೊರೆಯಬೇಕು

ಸಂಬಳದೊಡನೆ ತುಟ್ಟಿಭತ್ಯ ಐಕ್ಯದವರದಿ ಮುಂದಿನವಾರ

ಗುರುಸ್ವಾಮಿಯವರ ಭಾಷಣ

ಮೈಸೂರು ೨೨

ಅಖಿಲಭಾರತ ರೈಲ್ವೆ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎಸ್. ಗುರುಸ್ವಾಮಿಯವರು ನಿನ್ನೆ ಸಂಜೆ ಇಲ್ಲಿನ ರೈಲ್ವೆ ಕೆಲಸಗಾರರನ್ನುದ್ದೇಶಿಸಿ ಭಾಷಣಮಾಡಿ, ಮೈಸೂರು ರೈಲ್ವೆಯು ಕೇಂದ್ರದೊಡನೆ ಐಕ್ಯವಾದ ಮೇಲೆ ಮೈಸೂರಿನ ಕೆಲಸಗಾರರಿಗೆ ಅನೇಕ ಕಿರುಕುಳ ಮತ್ತು ತೊಂದರೆಗಳು ಉಂಟಾಗಿ ಅವರಸ್ಥಿತಿ ಉತ್ತಮವಾಗದಿರುವುದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದರು. ಮೈಸೂರು ಸಂಘದ ಅಧ್ಯಕ್ಷರಾದ ಶ್ರೀ ರಾಘವರಾಜರವರು ಸ್ವಾಗತ ಬಯಸಿದರು.

ಶ್ರೀ ಗುರುಸ್ವಾಮಿಯವರು ಭಾಷಣ ಮಾಡಿ, ತಾವು ಹಿಂದಿನವರ್ಷ ಇಲ್ಲಿಗೆ ಭೇಟಿಕೊಟ್ಟಾಗ, ಸಂಘದ ಕೆಲಸವು ಸಮರ್ಕವಾಗಿತ್ತಿಲ್ಲವೆಂದೂ, ಆದರೆ ಈಗ ಅದು ಯಶಸ್ವಿಯಾಗಿ ಕೆಲಸ ನಡೆಸುತ್ತಿರುವುದು ಸಂತೋಷವಾದ ಸಂಗತಿಯೆಂದು ತಿಳಿಸಿದರು. ೧೯೪೯ ನೇ ಮುಷ್ಕರ ಚಳುವಳಿಯಲ್ಲಿ ಕೆಲಸದಿಂದ ವಜಾ ಆದ ೫ ಜನರ ಪೈಕಿ ಕೇವಲ ಇಬ್ಬರನ್ನು ಮಾತ್ರ ವಾಪಸು ಕೆಲಸಕ್ಕೆ ತೆಗೆದುಕೊಂಡು, ಇತರರನ್ನು ಬಿಟ್ಟಿರುವುದು ಮೈಸೂರು ಮತ್ತು ಕೇಂದ್ರ ಸರ್ಕಾರಗಳ ಘನತೆಗೆ ತಕ್ಕದಲ್ಲ. ಸರ್ಕಾರದವರು ಅವರನ್ನು ಪರಕೀಯರೆಂದು ಭಾವಿಸದೆ ಅವರಿಗೆ ನ್ಯಾಯದೊರಕಿಸಬೇಕು ಇದೂ ಅಲ್ಲದೆ ಮೈಸೂರಿನ ನೌಕರರಿಗೆ ಈಗ ಅನೇಕ ತೊಂದರೆಗಳು ಉಂಟಾಗಿರುವುದು ಶೋಚನೀಯ ಕೇಂದ್ರಕ್ಕೆ ಅವರು ಸೇರಿದಮೇಲೆ ಇತರ ರೈಲ್ವೆ ಕೆಲಸಗಾರರಿಗೆ ದೊರೆಯುತ್ತಿರುವ ಸಂಬಳ ಸಾರಿಗೆಗಳು ದೊರೆಯಬೇಕು ನ್ಯಾಯವಿಲ್ಲದೆ ಪ್ರವೀಣ ಕೆಲಸಗಾರರನ್ನು ಇಲ್ಲಿನ ವರ್ಕ್‌ಷಾಪಿನಲ್ಲಿ ರಿವರ್ಟ್ ಮಾಡುತ್ತಿರುವುದನ್ನು ಖಂಡನೀಯ ಇನ್ಷೂರೆನ್ಸ್ ಹಣವನ್ನು ಸಂಬಳದಲ್ಲಿ ಹಿಡಿಯಲು ಅವಕಾಶ ಕೊಡದಿರುವುದೂ ಸರಿಯಲ್ಲ. ರೈಲ್ವೆ ಅಧಿಕಾರಿಗಳು ತಮ್ಮ ಕೆಲಸಗಾರರ ಬಗ್ಗೆ ಹೆಚ್ಚು ಸಹಾನುಭೂತಿಯಿಂದ ವರ್ತಿಸಬೇಕು ಎಂದು ಅವರು ತಿಳಿಸಿದರು ಭಾರತದ ರೈಲ್ವೆಯು ಸಮರ್ಪಕವಾಗಿ ಕೆಲಸಮಾಡುತ್ತಿಲ್ಲ ರೈಲ್ವೆ ಕೆಲಸಗಾರರು ಆಡಳಿತದಲ್ಲಿ ಭಾಗಿಗಳಾಗಲು ಅವರುಗಳಿಗೆ ರೈಲ್ವೆ ಬೋರ್ಡಿನಲ್ಲಿ ಸ್ಥಾನವಿರಬೇಕು. ಸಂಬಳ ಸಾರಿಗೆ ಬಗ್ಗೆ ಈಗ ಉಂಟಾಗುತ್ತಿರುವ ... ಂದರೆ ಮತ್ತು ನಿಧಾನ ಮನೋಭಾವ ಹೋಗಬೇಕು

ಇನ್ನೊಂದುವಾರದಲ್ಲಿ ಸಂಬಳದಲ್ಲಿ ತುಟ್ಟಿಭತ್ಯವನ್ನು ಐಕ್ಯ ಮಾಡುವ ಸಮಿತಿಯ ವರದಿಯು ಹೊರಬೀಳಲಿದೆ. ಅದರ ಬಗ್ಗೆ ಕೆಲಸಗಾರರಿಗೆ ಅತೃಪ್ತಿ ಉಂಟಾದರೂ, ಅವರುಗಳು ಗಾಭರಿಗೊಂಡು ಮುಷ್ಕರ ಮುಂತಾದ ಕಾರ್ಯಗಳಲ್ಲಿ ತೊಡಗಬಾರದು.

ಸಂಬಳದಲ್ಲಿ ತುಟ್ಟಿಭತ್ಯ ಐಕ್ಯಮಾಡಿದರೆ ಪ್ರಾವಿಡೆಂಟ್ ಫಂಡು ಹೆಚ್ಚಾಗಿ ಬರುವುದು. ಆದರೆ ಈಗ ಅವರಿಗೆ ದೊರೆಯುತ್ತಿರುವ ಮನೆ ಬಾಡಿಗೆ ... ಬೀಳುವುದು. ಇನ್ನು ೩-೪ ವಾರಗಳಲ್ಲಿ ರೈಲ್ವೆ ಕೆಲಸಗಾರರಿಗೆ ಸಂಬಂಧಪಟ್ಟ ಅನೇಕ ಮಹತ್ತರ ಬದಲಾವಣೆ ಆಗಲಿದೆ. ಮುಂದಿನ ವರ್ಷ ಭಾರತ ರೈಲ್ವೆಯ ಶತಮಾನೋತ್ಸವನಡೆಯುವುದು ಎಂದು ಅವರು ಹೇಳಿದರು.

ಸಂಸ್ಥಾನದ ಕ್ಷಾಮಪೀಡಿತರಿಗೆ ಕಾರ್ಮಿಕರ ಸಹಾಯ

ಐ. ಎನ್. ಟಿ. ಯು. ಸಿ. ಸಭೆಯಲ್ಲಿ ನಿರ್ಧಾರ

ಮೈಸೂರು ೨೨

ಭಾರತದ ರಾಷ್ಟ್ರೀಯ ಟ್ರೇಡ್‌ಯೂನಿಯನ್ ಕಾಂಗ್ರೆಸ್ಸಿನ ಮೈಸೂರು ಶಾಖೆಯ ಸಭೆಯು ಮೊನ್ನೆದಿನ ಶ್ರೀ ಎನ್. ಕೇಶವ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ರಾಜಧಾನಿಯಲ್ಲಿ ನಡೆಯಿತು.

ಕಾರ್ಯದರ್ಶಿ ಶ್ರೀ ಕುಲಕರ್ಣಿಯವರಿಂದ ವರದಿ ಒಪ್ಪಿಸಿದನಂತರ ಶ್ರೀ ಮುಶ್ರುವಾಲಾರವರ ನಿಧನದ ಬಗ್ಗೆ ಸಂತಾಪಸೂಚಿಸಲಾಯಿತು.

ಮೈಸೂರು ಸಂಸ್ಥಾನದ ಅನೇಕ ಕಡೆಗಳಲ್ಲಿ ಆಹಾರ ಕ್ಷಾಮಉಂಟಾಗಿರುವುದರಿಂದ ಬಗ್ಗೆ ತಮ್ಮ ಅನುತಾಪವನ್ನು ವ್ಯಕ್ತಪಡಿಸಿ, ಈ ಬಗ್ಗೆ ಹಣ ಸಂಗ್ರಹಿಸಬೇಕೆಂದೂ ನಿರ್ಧರಿಸಲಾಯಿತು.

ಅನಂತರ ಕಾರ್ಮಿಕ ಪುರೋಭಿವೃದ್ಧಿಗೆ ಸಂಬಂಧಪಟ್ಟ ಅನೇಕ ನಿರ್ಣಯಗಳನ್ನು ಮಾಡಲಾಯಿತು.

ಮೈಸೂರು ಸರ್ಕಾರದವರು ಸಂಸ್ಥಾನದ ಆರು ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿರುವುದರಿಂದ ಆ ರಸ್ತೆಗಳಲ್ಲಿ ಓಡಾಡುತ್ತಿದ್ದ ಅನೇಕ ಬಸ್ಸು ಕೆಲಸಗಾರರಿಗೆ ಕೆಲಸವಿಲ್ಲದೆ ಹೋಗುವುದರಿಂದ ಅಂತಹವರನ್ನು ಸರ್ಕಾರಿಬಸ್ ಶಾಖೆಯಲ್ಲಿ ಸೇರಿಸಿ ಕೊಳ್ಳಬೇಕೆಂದೂ, ಸರ್ಕಾರಿ ಕೈಗಾರಿಕೆಗಳಲ್ಲಿರುವ ಕಾರ್ಮಿಕರಿಗೆ ಹೆಚ್ಚು ತುಟ್ಟಿಭತ್ಯವನ್ನು ಕೊಡಬೇಕೆಂದೂ, ಕಾರ್ಮಿಕ ಗೃಹನಿರ್ಮಾಣ ಕಾರ್ಯವು ತ್ವರಿತಗೊಂಡು, ಪ್ಲಾಂಟೇಷನ್ ಮತ್ತು ಕ್ಲೀನಿಂಗ್ ಕೆಲಸಗಾರರಿಗೂ ಅದು ಅನ್ವಯಿಸಬೇಕೆಂದೂ ಒತ್ತಾಯಪಡಿಸುವ ನಿರ್ಣಯಮಾಡಲಾಯಿತು.

ಕಾರ್ಮಿಕರಿಗೂ ಮತ್ತು ಮಾಲೀಕರಿಗೂ ಒದಗುವ ಭಿನ್ನಾಭಿಪ್ರಾಯಗಳನ್ನು ಪರಸ್ಪರ ಮಾತುಕತೆಗಳಿಂದ ಬಗೆಹರಿಸಲು ನಿರ್ಧರಿಸಿರುವ ಅಹಮದಾಬಾದ್ ಒಪ್ಪಂದವನ್ನು ಸ್ವಾಗತಿಸಿ, ಮೈಸೂರು ಮತ್ತು ಇತರ ಎಲ್ಲಕಡೆಗಳಲ್ಲೂ ಅದೇ ರೀತಿ ಸೌಹಾರ್ದ ಉಂಟಾಗಲೆಂದು ಪ್ರಾರ್ಥಿಸುವ ನಿರ್ಣಯಮಾಡಲಾಯಿತು.

§ ಭಾರತ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿ ಟ್ರಾಕ್ಟರುಗಳನ್ನು ತಯಾರಿಸಲು ಸಿದ್ಧತೆ ಮಾಡಲಾಗುತ್ತಿದೆಯೆಂದು ಕಾಮನ್‌ವೆಲ್ತ್ ಆರ್ಥಿಕ ಸಮಿತಿಯು ವರದಿಯು ತಿಳಿಸಿರುತ್ತದೆ.

ಕೈಗಾರಿಕಾ ಸಹಾಯ ಕಾರ್ಪೊರೇಷನ್

ಹೈದರಾಬಾದಿನಲ್ಲಿ ಸಣ್ಣಪುಟ್ಟ ಕೈಗಾರಿಕೆಗಳ ಅಭಿವೃದ್ಧಿಗಾಗಿ ಅಲ್ಲಿನ ಸರ್ಕಾರದವರು ಒಂದುಕೋಟಿ ರೂ. ಬಂಡವಾಳದ ಒಂದು ಕೈಗಾರಿಕಾ ಕಾರ್ಪೊರೇಷನನ್ನು ಸ್ಥಾಪಿಸಲು ಯೋಚಿಸಿದ್ದಾರೆ.

ಅಭಾವ ಪ್ರದೇಶಗಳಿಗೆ ರಷ್ಯ ಯುವಕರ ಸಹಾಯ

ರಷ್ಯದ ಕಮ್ಯೂನಿಸ್ಟ್ ಯುವಕ ಸಂಸ್ಥೆಯವರು ಭಾರತದ ಕ್ಷಾಮಪೀಡಿತ ಪ್ರದೇಶಗಳಿಕೆ ೧೦ ಸಾವಿರ ಟನ್ ಗೋಧಿ ೫ ಲಕ್ಷ ಟನ್ ಅಕ್ಕಿ ಮತ್ತು ೫ ಲಕ್ಷ ಟನ್ ಹಾಲು ಕಳುಹಿಸಿದ್ದಾರೆ.

ಅಪೀಲು ಹೋಗಲು ರಾಜೂರವರಿಗೆ ಅನುಮತಿ

ಮೈಸೂರಿನ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರಾಗಿದ್ದ ದಿವಂಗತ ಶ್ರೀ ಪರಮಶಿವಯ್ಯರ್‌ರವರ ಆಸ್ತಿ ವ್ಯವಹಾರದಲ್ಲಿ ಎಕ್ಸಿಕ್ಯೂಟರ್ ಆಗಿದ್ದ ರಾಜೂರವರು ಸುಳ್ಳು ಸಾಕ್ಷ್ಯವನ್ನಿತ್ತರೆಂದು ಅಪಾದನೆಯಲ್ಲಿ ೨ವರ್ಷ ಶಿಕ್ಷೆಗೊಳಗಾಗಿರುವ ಬಗ್ಗೆ ಅಪೀಲು ಹೋಗಲು ಸುಪ್ರೀಂಕೋರ್ಟ್ ವಿಶೇಷ ಅನುಮತಿ ಕೊಟ್ಟಿದೆ.

ಕಲ್ಕತ್ತೆಯಲ್ಲಿ ಭಾರಿ ದರೋಡೆ

ಕಲ್ಕತ್ತೆಯ ದಕ್ಷಿಣಭಾಗದ ಕಾರ್ಖಾನೆಯ ನೌಕರರಿಗೆ ಸಂಬಳದ ಹಣವನ್ನು ನಿನ್ನೆಮಧ್ಯಾಹ್ನ ಒಯ್ಯುತ್ತಿದ್ದಾಗ ನಾಲ್ಕು ಮಂದಿ ಸಶಸ್ತ್ರ ಯುವಕರು ಕಾರನ್ನು ನಿಲ್ಲಿಸಿ ಡ್ರೈವರನಕಡೆ ಗುಂಡುಹಾರಿಸಿ ೫೫ ಸಾವಿರ ರೂ. ಅಪಹರಿಸಿಕೊಂಡುಹೋದರೆಂದೂ, ಈ ಸಂಬಂಧದಲ್ಲಿ ಒಬ್ಬನ ದಸ್ತಗಿರಿಯಾಗಿದೆಯೆಂದೂ ವರದಿಯಾಗಿದೆ.

ಬೊಂಬಾಯಿನಲ್ಲಿ ಕೃತಕ ಮಳೆ

ಬೊಂಬಾಯಿನ ಅಭಾವ ಪ್ರದೇಶಗಳಲ್ಲಿ ಕೃತಕ ಮಳೆ ಉಂಟುಮಾಡಲು ಸರಕಾರ ಕಾರ್ಯಕ್ರಮ ಕೈಗೊಂಡಿದೆ. ಕಲ್ಕತ್ತೆಯಲ್ಲಿ ಕೃತಕ ಮಳೆ ಬಗ್ಗೆ ಪ್ರಯೋಗ ನಡೆಸಿದ ಡಾ|| ಬ್ಯಾನರ್ಜಿಯವರ ಸಹಾಯವನ್ನು ಪಡೆಯಲು ನಿರ್ಧರಿಸಲಾಗಿದೆ.

ಸತಿ ನಿರೋಧ ಶಾಸನಕ್ಕೆ ಒತ್ತಾಯ

ಇತ್ತೀಚೆಗೆ ಸತಿ ಸಹಗಮನಗಳು ಹೆಚ್ಚುತ್ತಿರುವುದಕ್ಕೆ ಕಾತುರತೆಯನ್ನು ವ್ಯಕ್ತಪಡಿಸಿ, ಎಲ್ಲಾ ಸಂಸ್ಥಾನಗಳಲ್ಲೂ ಸತಿನಿರೋಧ ಶಾಸನ ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರವನ್ನು ಬೊಂಬಾಯಿನ ಸಂಯುಕ್ತ ಮಹಿಳಾ ಸಂಘದವರು ಒತ್ತಾಯಮಾಡಿದ್ದಾರೆ.

ಆರೋಗ್ಯ ವಿಮಾ ಯೋಜನೆ

ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ಬೆಂಗಳೂರು, ಹೈದರಾಬಾದ್, ತಿರುಚನಾಪಳ್ಳಿ ಮತ್ತು ಕಲ್ಲಿಕೋಟೆಗಳಲ್ಲಿ ಮೇಲ್ವಿಚಾರಣಾ ಕೇಂದ್ರಗಳನ್ನು ಮುಂದಿನತಿಂಗಳಿನಲ್ಲಿ ತೆರೆಯಲಾಗುವುದು.

ಭೂದಾನಕ್ಕೆ ನಿಜಾಮರ ಸಹಾಯ

ಹೈದರಾಬಾದಿನ ನಿಜಾಮರು ತಮ್ಮ ೩,೦೫೦ ಎಕರೆ ಜಮೀನನ್ನು ಭೂದಾನ ಯಜ್ಞ ಸಮಿತಿಗೆ ದಾನಮಾಡಿದ್ದಾರೆ. ಈ ಬಗ್ಗೆ ಕಾಗದಪತ್ರಗಳನ್ನು ನಿನ್ನೆಯದಿನ ಶ್ರೀ ಶಂಕರರಾವ್ ಹೇವ್‌ರವರಿಗೆ ನಿಜಾಮರು ಕೊಟ್ಟರು.

ಮೀನುಗಳ ಸಂಗ್ರಹಾಲಯ

ಮೈಸೂರು ಸೆ. ೨೩

ಇಲ್ಲಿನ ಮೃಗ ಸಂಗ್ರಹಾಲಯದಲ್ಲಿ ಅಪರೂಪ ಮಾದರಿಯ ಮೀನುಗಳು ಮತ್ತು ಇತರ ಜಲಚರ ಪ್ರಾಣಿಗಳನ್ನು ಸಂಗ್ರಹಿಸಲು ವ್ಯವಸ್ಥೆ ಮಾಡಲಾಗುವುದು. ವಿದೇಶಗಳಿಂದ ಮುಖ್ಯವಾಗಿ ಜರ್ಮನಿ ಮತ್ತು ಇಟಲಿಗಳಿಂದ ಪ್ರಾಣಿ, ಹಕ್ಕಿಗಳನ್ನು ತರಿಸಿ ಇಲ್ಲಿಂದ ಆನೆ ಮತ್ತು ಹುಲಿ ಮರಿಗಳನ್ನು ಕಳುಹಿಸುವ ಯೋಜನೆಯನ್ನು ಸರ್ಕಾರದವರು ಯೋಚಿಸುತ್ತಿದ್ದಾರೆಂದು ಗೃಹಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ಮೊನ್ನೆ ಮೃಗಾಲಯಕ್ಕೆ ಭೇಟಿ ಇತ್ತಾಗ ತಿಳಿಸಿದರು.

ಕೇಂದ್ರ ಹಿರಿಯ ಶಾಸನ ಸಭಾ ಉಪಚುನಾವಣೆ

ಕೇಂದ್ರ ಹಿರಿಯ ಶಾಸನಸಭೆಗೆ ಮೈಸೂರಿನ ಶ್ರೀ ಎಲ್.ಹೆಚ್. ತಿಮ್ಮಾಬೋಯಿಯವರು ರಾಜೀನಾಮೆ ಸಲ್ಲಿಸಿರುವ ಸ್ಥಾನಕ್ಕೆ ಉಪ ಚುನಾವಣೆಯು ಮುಂದಿನ ಅಕ್ಟೋಬರ್ ೨೫ ನೇ ತಾರೀಖು ನಡೆಯುವುದು.

ಉಮೇದುವಾರಿಕೆ ಸಲ್ಲಿಸಲು ಇದೇ ೨೯ ನೇ ತಾರೀಖು ಕೊನೆಯದಿನ ಕೇಂದ್ರ ಉತ್ಪಾದನಾಶಾಖಾಸಚಿವ ಶ್ರೀ ಕೆ.ಸಿ. ರೆಡ್ಡಿಯವರು ಕೇಂದ್ರ ಶಾಸನಸಭೆಗೆ ಚುನಾಯಿತರಾಗಲು ಶ್ರೀ ತಿಮ್ಮಾಬೋಯಿಯವರು ರಾಜೀನಾಮೆ ಸಲ್ಲಿಸಿದ್ದಾರೆ.

ಜಾತಿದ್ವೇಷ ತೊಡೆಯಲು ಅಂತರ್ಜಾತಿ ವಿವಾಹ

ದಕ್ಷಿಣ ಭಾರತದ ಪ್ರಗತಿಗೆ ಆತಂಕವಾಗಿರುವ ಜಾತಿ ದ್ವೇಷವನ್ನು ನಿರ್ಮೂಲ ಮಾಡಬೇಕಾದರೆ ಅಂತರ್ಜಾತೀಯವಿವಾಹವೊಂದೇ ಮಾರ್ಗವೆಂದು ಮದರಾಸಿನ ಮುಖ್ಯಮಂತ್ರಿ ಶ್ರೀ ರಾಜಾಜಿಯವರು ತಿಳಿಸಿರುತ್ತಾರೆ.

ಮಿಲಿಟರಿ ನೌಕರರ ಮುಷ್ಕರ ಮುಕ್ತಾಯ

ಪೂಣೆಯ ಮಿಲಿಟರಿ ಇಲಾಖಾ ೩೯ ಸಾವಿರಮಂದಿ ನೌಕರರು ಕಳೆದ ೨೫ ದಿನಗಳಿಂದಲೂ ನಡೆಸುತ್ತಿದ್ದ ಮುಷ್ಕರವನ್ನು ಈದಿನದಿಂದ ಮುಕ್ತಾಯಗೊಳಿಸಲಾಗುವುದು. ಮುಷ್ಕರ ಮುಂದುವರಿಸುವುದರಿಂದ ಉಂಟಾಗಬಹುದಾದ ಕಷ್ಟಗಳನ್ನು ಗಮನಿಸಿ ಕೆಲಸಗಾರರು ಹಿಂತಿರುಗಬೇಕೆಂದು ಅವರ ನಾಯಕರು ಸಲಹೆಮಾಡಿದ್ದಾರೆ.

ಜನಪದ ಯೋಜನೆಯ ವಿದ್ಯಾರ್ಥಿ ಶಿಬಿರ

ಜನಪದ ಯೋಜನೆಗೆ ಕಾರ್ಯಕ್ರಮಗಳು ಎಲ್ಲರೂ ತಿಳಿದುಕೊಳ್ಳಲು ಅನುಕೂಲವಾಗುವಂತೆ, ಬೇಸಿಗೆ ರಜಾಕಾಲದಲ್ಲಿ ವಿದ್ಯಾರ್ಥಿ ಶಿಬಿರಗಳನ್ನು ಏರ್ಪಡಿಸಬೇಕೆಂದು ಜನಪದ ಯೋಜನೆಯ ಕೇಂದ್ರ ಕಛೇರಿಯ ಪ್ರಾಂತ್ಯ ಸರ್ಕಾರಗಳಿಗೆಸೂಚನೆಯನ್ನಿತ್ತಿದೆ.

ವುಡ್‌ಲ್ಯಾಂಡ್ಸ್

೧೯-೯-೫೨ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

* ರಾಮಜನ್ಮ *

(ಹಿಂದಿ)

ಪಾತ್ರ:-

ನಿರೂಪರಾಯ್. ತ್ರಿಲೋಕ್ ಕಪೂರ್

ಅಪೇರ ೧೯-೯-೫೨ ರಿಂದ ೩ ನೇ ವಾರ

ಪುಯಲ್

ಅಥವಾ

ಬಿರುಗಾಳಿ

[ತಮಿಳು]

ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್

This is the first time introducing on the Silver Screen the powerful drama of "St. Philomena and Mortydom"

ಪತ್ರಿಕೆಮಾರಲು ಪದವೀಧರರ ಅರ್ಜಿ

ಪುಣೆಯ ಸ್ಥಳೀಯ ಪತ್ರಿಕೆಯೊಂದು ಪತ್ರಿಕೆಗಳನ್ನು ಮಾರಲು ಹುಡುಗರು ಬೇಕೆಂದು ಹೊರಡಿಸಿದ ಜಾಹಿರಾತಿಗೆ ಬಿ. ಎಸ್. ಸಿ. ಮತ್ತು ಎಲ್. ಎಲ್. ಬಿ. ಎರಡು ಪದವಿಗಳನ್ನು ಪಡೆದವರೊಬ್ಬರು ಮತ್ತು ಅನೇಕ ಇಂಟರ್‌ಮೀಡಿಯೆಟ್ ವಿದ್ಯಾರ್ಥಿಗಳು ಅರ್ಜಿ ಹಾಕಿಕೊಂಡಿದ್ದಾರೆಂದ ವರದಿ ಆಗಿದೆ.

ರಣಜಿತ್

19-9-52ರಿಂದ ಅಮೋಘ ಪ್ರಾರಂಭ

ಫಿಲ್ಮಿಸ್ಥಾನ್‌ರವರ

ಬದ್‌ನಾಮ್

(BADNAM)

ಪಾತ್ರ:—ಶ್ಯಾಮ

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಭೂ ಸುಧಾರಣೆವಿರೋಧಿಗಳ ಮೇಲೆ ಕ್ರಮ

ಈಜಿಪ್ಟಿನಲ್ಲಿ ಕೈಗೊಂಡಿರುವ ಭೂ ಸುಧಾರಣೆಗಳನ್ನು ವಿರೋಧಿಸುವವರನ್ನು ಮಿಲಿಟರಿ ವಿಚಾರಣೆಗೆ ಗುರಿಪಡಿಸಲಾಗುವುದೆಂದು ಪ್ರಧಾನಿ ಜ|| ನಗೀಬ್ ಆಜ್ಞೆಮಾಡಿದ್ದಾರೆ. ರಹದಾರಿ ಪಡೆದಿರುವ ಮತ್ತು ಇಲ್ಲದಿರುವ ಎಲ್ಲಾ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಕೂಡಲೇ ಒಪ್ಪಿಸಬೇಕೆಂದು ಆಜ್ಞೆಮಾಡಲಾಗಿದೆ.

ಭಾಷಾವಾರು ಪ್ರಾಂತ್ಯಕ್ಕಾಗಿ ಚಳುವಳಿ

ಇಡೀ ದೇಶದಲ್ಲಿ ಭಾಷಾವಾರು ಪ್ರಾಂತ್ಯ ಚಳುವಳಿಯನ್ನು ನಡೆಸುವುದಕ್ಕಾಗಿ ಅಖಿಲ ಬಂಗಾಳ ಸಮ್ಮೇಳನವು ಒಂದು ಸರ್ವಪಕ್ಷ ಸಮಿತಿಯೊಂದನ್ನು ರಚಿಸಿದೆ.

ಮೈಸೂರು ದಸರಾ ವಸ್ತುಪ್ರದರ್ಶನ ೧೯೫೨

ಸೀಸನ್ ಟಿಕೆಟ್ ಪುಸ್ತಕಗಳ ಮಾರಾಟ

ಪ್ರಕಟಣೆ

೨೦ ಟಿಕೆಟ್ಟುಗಳ ಪುಸ್ತಕ ೧ ಕ್ಕೆ ರೂ ೩ ರಂತೆ ಮಾರಲು ಏರ್ಪಡಿಸಲಾಗಿದೆ. ಮಹಾಜನರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬೇಕಾಗಿ ಪ್ರಾರ್ಥನೆ.

ಪ್ರಧಾನ ಕಾರ್ಯದರ್ಶಿಗಳು.

ಅಂದವಾದ ಮುದ್ರಣಕ್ಕೆ

ಕರ್ನಾಟಕ ಪ್ರಿಂಟರ್ಸ್

ಗಾಂಧಿಚೌಕ ಮೈಸೂರು.

(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)

For

NEAT AND PROMPT PRINTING

Contact :

CARNATAK PRINTERS

GANDHI SQUARE, MYSORE

Phone 892 or 574

ಮೈಸೂರು ದಸರಾ ವಸ್ತುಪ್ರದರ್ಶನ 1952

ದಸರಾವಸ್ತು ಪ್ರದರ್ಶನದ ಮಹಿಳಾಶಾಖೆಯಲ್ಲಿ ಈ ಕೆಳಗೆ ಕಂಡ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ

1: COMPETITIONS IN COMMERCIAL FLORAL ART ..... [FOR MEN]

ಪುಷ್ಪಕಲೆ

To be held on 4-10-52,

೧. ಹಾರಗಳು (Garlands)

೨. ಬೊಕ್ಕೆ ಮತ್ತು ತುರಾಯಿ

Bowquet and Turoys

೩. ಮೇಜದ ಅಲಂಕಾರ

Table Decoration

೪. ಪುಷ್ಪಕರಂಡ ಅಲಂಕಾರ

Flower vase arrangement

೫. ಹೂವು, ಕಟ್ಟುವ ಸ್ಪರ್ಧೆ

2. Competition in FLORAL ART FOR WOMEN ONLY

To be held on 5-10-52

೧. ಮಕ್ಕಳಿಗೆ ಜಡೆ ಅಲಂಕಾರ

Hair style for Children

೨. ತುರುಬು ಶೃಂಗಾರ

೩. ಪೂಜಾಪುಷ್ಪ ಶೇಖರಣೆ ಹೆಸರು ಸಮೇತ

Collection of puja flowers with names

೪. ಪುಷ್ಪಕರಂಡ ಅಲಂಕಾರ

Flowers vase Arrangement

೫. ಹೂವು ಕಟ್ಟುವ ಸ್ಪರ್ಧೆ

ಮೇಲ್ಕಂಡ ಸ್ಪರ್ಧೆಗಳಿಗೆ ಸೇರಲು ಇಷ್ಟವುಳ್ಳ ಮಹಿಳೆಯರು ಮತ್ತು ಮಹನೀಯರು ತಮ್ಮ ಪೂರ್ಣ ವಿಳಾಸದೊಂದಿಗೆ ಈ ಕೆಳಗೆಕಂಡ ವಿಳಾಸಕ್ಕೆ ತಾ|| ೩೦-೯-೫೨ ರ ಒಳಗಾಗಿ ತಲಪುವಂತೆ ಅರ್ಜಿಗಳನ್ನು ಬರೆದುಕೊಳ್ಳಬೇಕಾಗಿ ವಿನಂತಿ. ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಸೂಕ್ತ ಬಹುಮಾನಗಳನ್ನು ಕೊಡಲಾಗುವುದು.

ಪಿ. ಗೋಪಾಲಕೃಷ್ಣಶೆಟ್ಟಿ
ಜನರಲ್‌ಸೆಕ್ರೆಟರಿ
ದಸರಾವಸ್ತುಪ್ರದರ್ಶನ ಸಮಿತಿ
ಮೈಸೂರು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 29

೨೪-೯-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಅಮೇರಿಕಾದಲ್ಲಿ ಭಾರತದ ಚಲನಚಿತ್ರ ನಿಯೋಗ

ಅಮೇರಿಕಾದ ಮಹಿಳಾ ನಾಯಕಿ ಶ್ರೀಮತಿ ರೂಸವೆಲ್ಟರು ಭಾರತದ ಚಲನಚಿತ್ರ ನಿಯೋಗದವರನ್ನು ಹೈಡ್‌ಪಾರ್ಕಿನಲ್ಲಿ ಸತ್ಕರಿಸಿದರು. ಚಲನಚಿತ್ರ ನಿಯೋಗದವರು ಶ್ರೀ ರೂಸವೆಲ್ಟರ ಸಮಾಧಿಯ ಮೇಲೆ ಪುಷ್ಪಹಾರವನ್ನರ್ಪಿಸಿದರು.

ನ್ಯೂಯಾರ್ಕಿಗೆ ಹಿಂತಿರುಗಿಬರುವಾಗ ವೆಸ್ಟ್‌ಪಾಯಿಂಟ್‌ನಲ್ಲಿ ಮಿಲಿಟರಿ ಅಕ್ಯಾಡೆಮಿಯನ್ನು ಸಂದರ್ಶಿಸಿದರು. ಚಲನಚಿತ್ರ ನಿಯೋಗದ ೧೪ ನಾಯಕರು ಅಮೇರಿಕದ ಟೆಲಿವಿಷನ್ ಕೈಗಾರಿಕೆಯನ್ನು ನೋಡಿದರು ಎನ್‌ಬಿಸಿಯವರ ರೇಡಿಯೋ ಸಿಟಿಯನ್ನನೋಡಲು ಹೋದಾಗ ಈ ಅವಕಾಶವನ್ನು ಉಪಯೋಗಿಸಿಕೊಂಡರು. ರೇಡಿಯೋ ಕಾರ್ಪೋರೇಷನ್ ಆಫ್ ಅಮೇರಿಕದ ಅಧ್ಯಕ್ಷರಾದ ಫ್ರಾಂಕ್ ಎಫ್ ಫಾಲ್‌ಸಮ್‌ರು ನಿಯೋಗವನ್ನು ಸ್ವಾಗತಿಸಿದರು.

ಭಾರತದ ಚಲನಚಿತ್ರ ತಾರೆಯರು ಎರಡುಸಲ ಎನ್‌ಬಿಸ್ ಆಟಗಳಲ್ಲಿ ಭಾಗವಹಿಸಿದರು ಸ್ಕೈಸ್ಕ್ರೇಪರ್ ಕಟ್ಟಡವನ್ನು ನೋಡಿಯಾದಮೇಲೆ ಹೋಟೆಲ್ ಸವಾಯ್‌ನಲ್ಲಿ ಈ ನಿಯೋಗದವರಿಗೆ ಆರ್ಪಿಸಿದ ಉಪಾಧ್ಯಕ್ಷರಾದ ಮಿ|| ಮೀಡ್ ಬ್ರೂನೆಟ್‌ರವರು ಭೋಜನವಿತ್ತು ಸತ್ಕರಿಸಿದರು ಈ ಭೋಜನಕ್ಕೆ ನ್ಯೂಯಾರ್ಕಿನಲ್ಲಿದ್ದ ಅಮೇರಿಕದ ಚಲನ ಚಿತ್ರೋದ್ಯಮಿಗಳೂ ಬಂದಿದ್ದರು.

ಗ್ರಾಮ ಬಾಲಕಿಯ ಸಾಹಸ

ಜೋಧಪುರ ಜಿಲ್ಲೆಯಲ್ಲಿ ಡಕಾಯಿತರನ್ನು ನಾಶಗೊಳಿಸುವುದರಲ್ಲಿ ಸಹಾಯ ನೀಡಿದವರಿಗೆ ರಾಜಾಸ್ಥಾನದ ಪೋಲೀಸ್ ಮುಖ್ಯಾಧಿಕಾರಿಗಳು ಸುಮಾರು ೮೦೦೦ ರೂಪಾಯಿಗಳ ಬಹುಮಾನವನ್ನು ಹಂಚಿದರು.

ಬಹುಮಾನಪಡೆದವರಲ್ಲಿ ಸಿರಿಯಾಬಾಯಿ ಎಂಬ ಹುಡಗಿಯು ೫೦೦ ರೂ ಬಹುಮಾನವನ್ನು ಪಡೆದಳು ಡಕಾಯಿತರಿಗೂ ಪೋಲೀಸರಿಗೂ ಘರ್ಷಣೆಯಾಗುತ್ತಿರುವಾಗ ಈ ಬಾಲಕಿಯ ಡಕಾಯಿತರ ಗುಪ್ತನಿವಾಸಗಳೆಗೆಲ್ಲಾ ಬೆಂಕಿಯಿಟ್ಟು ಅವರ ನಾಶಕ್ಕೆ ಕಾರಣಳಾದಳು.

ರಷ್ಯಾ ವಿಶ್ವಯುದ್ಧ ಮಾಡುವುದಿಲ್ಲ

ರಷ್ಯಾವು ಪ್ರಪಂಚ ಮೂರನೇ ಯುದ್ಧವನ್ನು ಮಾಡುವುದಿಲ್ಲ ಎಂದು ಇಟಲಿಯ ಸೋಷಲಿಸ್ಟ್‌ಪಕ್ಷದ ನಾಯಕ ಮಿ|| ಪೀಟ್ರೋ ನೆನ್ನಿಯವರು ಹೇಳಿರುವರು.

ವಿದ್ಯಾರ್ಥಿಗಳಿಗೆ ಕಡ್ಡಾಯ ವ್ಯಾಯಾಮ-ದೇಹದುಡಿಮೆ

ಪ್ರಾಂತ್ಯ ಸರ್ಕಾರಗಳಿಗೆ ಕೇಂದ್ರದ ಸೂಚನೆ

ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ದೇಹದುಡಿಮೆಯನ್ನು ಕಡ್ಡಾಯವಾಗಿ ಏರ್ಪಡಿಸುವಂತೆ ಕೇಂದ್ರ ಸರ್ಕಾರದವರು ಒಂದು ಹೊಸ ಯೋಜನೆಯನ್ನು ತಯಾರಿಸಿರುವರು ಈ ಕಾರ್ಯವು ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅಂಗವಾಗಿ ಇರುತ್ತದೆ.

ಹೊಸಯೋಜನೆಗಳ ಪ್ರಕಾರ ಗೊಬ್ಬರ ತಯಾರಿಸುವುದು ಪ್ರಥಮ ಕಾರ್ಯವಾಗಿರುತ್ತದೆ. ಇದರಿಂದ ಅಧಿಕ ಆಹಾರೋತ್ಪತ್ತಿಗೆ ಸಹಾಯಕವಾಗುತ್ತದೆ. ಗ್ರಾಮದಲ್ಲಿ ರಸ್ತೆಗಳನ್ನು ಏರ್ಪಡಿಸುವುದು ಈ ಯೋಜನೆಯ ಒಂದು ಕೆಲಸವಾಗಿರುತ್ತದೆ. ನೀರಿನ ಜಲಾಶಯಗಳಿಂದ ಕಾಲುವೆಗಳನ್ನು ತೆಗೆದು ವ್ಯವಸಾಯ ಭೂಮಿಗೆ ನೀರನು ಒದಗಿರುವ ಕಾರ್ಯವೂ ಸೇರಿರುತ್ತದೆ. ವರ್ಷಕ್ಕೆ ಒಂದು ಅಥವ ಎರಡು ಬಾರಿಯಾದರೂ ವಿದ್ಯಾರ್ಥಿಗಳು ಈ ದೇಹದುಡಿಮೆ ಕಾರ್ಯದಲ್ಲಿ ೨ ವಾರಕಾಲವಾದರೂ ತೊಡಗಬೇಕಾಗಿದೆ. ಈ ಕಾರ್ಯದಲ್ಲಿ ಉತ್ತಮವರ್ಗದವರಿಗೆ ಸನ್ಮಾನ ಕೊಡಲಾಗುತ್ತದೆ.

ಇದಲ್ಲದೆ ವಿದ್ಯಾರ್ಥಿಗಳ ದೇಹಧಾರ್ಢ್ಯವನ್ನು ಉತ್ತಮಗೊಳಿಸುವುದೂ ಅತಿ ಮುಖ್ಯವಾದುದರಿಂದ ಅದಕ್ಕೂ ಸಹ ಹೆಚ್ಚಿಗೆ ಗಮನಕೊಡುವುದೂ ಈ ಯೋಜನೆಯಲ್ಲಿ ಅಡಕವಾಗಿದೆ. ವ್ಯಾಯಾಮವನ್ನು ಕಡ್ಡಾಯವಾಗಿ ಮಾಡಿ ಮುಂದಿನ ತರಗತಿಗೆ ತೇರ್ಗಡೆಕಾಲದಲ್ಲಿ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕೆಂದು ಕೇಂದ್ರ ವಿದ್ಯಾಶಾಖೆಯು ಪ್ರಾಂತ್ಯಗಳಿಗೆ ಸೂಚಿಸಿದೆ.

ತೋಟಕೆಲಸ, ಗೇಟ್‌ಮನ್, ಲೈಬ್ರರಿ ಕೆಲಸ ಮುಂತಾದುವಕ್ಕೆ ಹಣಕೊಟ್ಟು ಬೇರೆಯವರನ್ನು ನೇಮಿಸಿಕೊಳ್ಳುವುದಕ್ಕೆ ಬದಲಾಗಿ ವಿದ್ಯಾರ್ಥಿಗಳನ್ನೇ ನೇಮಿಸಿಕೊಳ್ಳಬೇಕೆಂದೂ ಇದರಿಂದ ದುಡಿಮೆಯ ಗೌರವಹೆಚ್ಚುವುದಲ್ಲದೆ ಬಡವಿದ್ಯಾರ್ಥಿಗಳಿಗೆ ಸಹಾಯವಾಗುವುದೆಂದೂ ಸೂಚಿಸಲಾಗಿದೆ

ಬಸ್ಸು ರಾಷ್ಟ್ರೀಕರಣ ಬಗ್ಗೆ ಸಚಿವರ ವಿವರಣೆ

ಮೈಸೂರು ಸೆ. ೨೪

ಸಾಮಾನ್ಯ ಕೆಲಸಗಾರರ ಹಿತಕ್ಕೆ ಯಾವರೀತಿಯ ಧಕ್ಕೆಯೂ ಬಾರದೋಪಾದಿಯಲ್ಲಿ ವರ್ತಿಸಬೇಕೆಂಬುದೇ ಸರ್ಕಾರದ ಮುಖ್ಯ ಉದ್ದಿಶ್ಯವೆಂದು ಸಂಸ್ಥಾನದ ಗೃಹಸಚಿವರಾದ ಶ್ರೀ ಹೆಚ್. ಸಿದ್ದವೀರಪ್ಪನವರು ಮೋಟಾರು ರಾಷ್ಟ್ರೀಕರಣದ ಅಂಗವಾಗಿ ೧-೧೦-೫೨ ರಿಂದ ಜಾರಿಗೆಬರಲಿರುವ ೬ ರಸ್ತೆ ಮನಾಪಲಿಯಿಂದಾಗಿ ಕೆಲಸಗಾರರು ನಿರುದ್ಯೋಗಿಗಳಾಗದಂತೆ ನೋಡಿಕೊಳ್ಳಬೇಕೆಂದು ಒತ್ತಾಯಪಡಿಸಲು ಹೋಗಿದ್ದ ಐ. ಎನ್. ಟಿ. ಯು. ಸಿ. ಮೈಸೂರು ಶಾಖೆಯ ನಿಯೋಗಕ್ಕೆ ಭರವಸೆಕೊಡುತ್ತಾ ತಿಳಿಸಿದರು.

ಕೆಲವು ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದ್ದಾಗ್ಯೂ ಕಾರ್ಮಿಕರ ಹಿತದೃಷ್ಟಿಯಿಂದ ಮಧ್ಯವರ್ತಿ ಮಾರ್ಗವನ್ನು ಸರಕಾರವು ಅನುಸರಿಸುತ್ತದೆ. ಈ ಬದಲಾವಣೆಯ ಕಾಲದಲ್ಲಿ ಯಾವ ಮೂಲೆಯಲ್ಲೂ ಅಸಮಾಧಾನ ವಾತಾವರಣವಿರಬಾರದೆಂಬುದು ಸರ್ಕಾರದ ನೀತಿಯೆಂದೂ ಸರ್ಕಾರದ ಈ ಘನ ಉದ್ದೇಶ ಸಾಧನಾ ಮಾರ್ಗದಲ್ಲಿ ದೇಶದ ಜನತೆಯ ಸಹಕಾರ ಅಗತ್ಯವೆಂದರು. ಐ. ಎನ್. ಟಿ. ಯು. ಸಿ. ಪ್ರತಿನಿಧಿಗಳು ಈ ಉದ್ದಿಶ್ಯ ಸಫಲತೆಯತ್ತ ಸಾರ್ವಜನಿಕ ಅಭಿಪ್ರಾಯ ಅನುಕೂಲವಾಗುವಂತೆ ಮಾಡಲು ಸಹಕರಿಸಬೇಕೆಂದೂ ಮನವಿಮಾಡಿದರು. ಖಾಸಗಿ ಬಸ್ ಮಾಲೀಕರೂ ಸಹಕಾರ ನೀಡಬೇಕೆಂದು ಸಚಿವರು ಆಶಿಸಿದರು.

ಮುಸ್ಲಿಂಲೀಗಿಗೆ ಭಾರತದಲ್ಲಿ ಸ್ಥಾನವಿಲ್ಲ

ಭಾರತದಲ್ಲಿ ಮುಸ್ಲಿಂಲೀಗಿಗೆ ಸ್ಥಾನವಿಲ್ಲ. ಮುಸ್ಲಿಂಲೀಗಿನೊಡನೆ ನಮ್ಮ ಭಿನ್ನತೆಯೇ ವಿನಹ ಮುಸ್ಲಿಂ ನವರೊಡನಲ್ಲ ಎಂದು ಮದ್ರಾಸ್ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮದ್ರಾಸಿನ ಪೌರ ಚುನಾವಣಾಪ್ರಚಾರ ಭಾಷಣವೊಂದರಲ್ಲಿ ಹೇಳಿರುವರು.

ಭಾರತದ ನಾನಾ ಭಾಗಗಳಲ್ಲಿ ಕ್ಷಾಮ ಪರಿಸ್ಥಿತಿ

ಭಾರತಾದ್ಯಂತ ನಾನಾಭಾಗಗಳಲ್ಲಿ ಆಹಾರ ಅಭಾವ ಪರಿಸ್ಥಿತಿ ತಲೆದೋರಿ, ಜನರು ವಿಶೇಷ ತೊಂದರೆಗಳಿಗೀಡಾಗುತ್ತಲಿರುವರು. ದಕ್ಷಿಣ ಭಾರತದ ಮದರಾಸ್, ತಿರುವಾಂಕೂರು-ಕೊಚ್ಚಿನ್, ಹೈದರಾಬಾದ್, ಮೈಸೂರಿನ ಹಲವಾರು ಭಾಗಗಳಲ್ಲಿ ಅಭಾವ ತಲೆದೋರಿ ಪ್ರಾಂತ್ಯಸರ್ಕಾರಗಳು ಸಾಧ್ಯವಾದಷ್ಟು ಪರಿಹಾರ ಕಾರ್ಯವನ್ನು ನಡೆಸುತ್ತಲಿವೆ. ಇಲ್ಲಿಯಪರಿಸ್ಥಿತಿಗಳನ್ನು ಸ್ವತಃ ಅರಿತುಕೊಂಡು ಹೋದ ಕೇಂದ್ರ ಉಪಸಚಿವರೂಸಹ ತಮ್ಮ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದರಮೇಲೆ ಈ ಪ್ರಾಂತ್ಯಗಳಿಗೆ ಇನ್ನೂ ಹೆಚ್ಚಿಗೆ ನೆರವುನೀಡಲು ತಕ್ಕ ವ್ಯವಸ್ಥೆಯಾಗುತ್ತಿರುವುದಾಗಿ ಗೊತ್ತಾಗಿದೆ. ಪ್ರಾಂತ್ಯ ಸರ್ಕಾರಗಳೂಸಹ ಸ್ಥಿತಿಯನ್ನು ಕೇಂದ್ರದ ಗಮನಕ್ಕೆ ತಂದು ಹೆಚ್ಚಿಗೆ ದ್ರವ್ಯಸಹಾಯವನ್ನು ಕೋರಿರುವರು.

ಇದೇರೀತಿಯಾಗಿ ಉತ್ತರಭಾರತದ ಗುಜರಾತ್, ಬಿಹಾರ್ ಮುಂತಾದ ಪ್ರದೇಶಗಳಲ್ಲೂ ಇತ್ತೀಚೆಗೆ ಕ್ಷಾಮಪರಿಸ್ಥಿತಿ ತಲೆದೋರಿ ಅಲ್ಲಿಯೂ ಜನರ ವಿಶೇಷತೊಂದರೆಗೀಡಾಗಿದ್ದಾರೆ. ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ಪರಿಹಾರಕಾರ್ಯಗಳನ್ನು ತ್ವರಿತವಾಗಿ ಮಾಡುತ್ತಲಿರುವರೆಂದು ಗೊತ್ತಾಗಿದೆ.

೧೦ ರೂಪಾಯಿಗೆ ಒಂದು ಮಗು

ಕೋಲಾರದ ಆಹಾರ ಡಿಪೋ ಬಳಿ ಮಗುವನ್ನು ಎತ್ತಿಕೊಂಡು ಬಂದತಾಯಿಯೊಬ್ಬಳು ಮಗುವನ್ನು ಸಾಕಿಕೊಳ್ಳುವವರಿಗೆ ರಿಯಾಯಿತಿ ದರದಲ್ಲಿ ಮಾರಲು ಸಿದ್ಧವಿರುವುದಾಗಿ ಬಹಿರಂಗವಾಗಿ ಎಷ್ಟು ಕಿರಚಿಕೊಂಡರೂ ಯಾರೂ ಕೊಳ್ಳಲು ಬರಲಿಲ್ಲ ಕೊನೆಗೆ ಆಕೆಯು ಬೇಸತ್ತು ಸ್ಥಳೀಯ ಮಿಷನ್ ಆಸ್ಪತ್ರೆಗೆ ಹೋಗಿ ಆ ಮಗುವನ್ನು ೧೦ ರೂಪಾಯಿಗಳಿಗೆ ಮಾರಿದುದಾಗಿ ವರದಿಯಾಗಿದೆ.

ಭಾರತ ರೈಲ್ವೆ ನಿಪುಣರ ವಿಶ್ವ ಪರ್ಯಟನೆ

ಏಷ್ಯಾ ಮತ್ತು ದೂರದ ಪೂರ್ವ ಸಂಯುಕ್ತ ರಾಷ್ಟ್ರ ಪರಿಷತ್ತಿನ ಆರ್ಥಿಕ ಸಮಿತಿ ಮತ್ತು ಸಂಯುಕ್ತ ರಾಷ್ಟ್ರ ಪರಿಷತ್ತಿನ ತಾಂತ್ರಿಕ ಸಹಾಯ ಸಂಸ್ಥೆಗಳ ಆಹ್ವಾನದಮೇಲೆ ಭಾರತದ ಇಬ್ಬರು ರೈಲ್ವೆ ನಿಪುಣರು ೪ ತಿಂಗಳಕಾಲ ವಿಶ್ವ ಪರ್ಯಟನಕ್ಕಾಗಿ ಅಕ್ಟೋಬರ್ ಆದಿಯಲ್ಲಿ ಹೊರಡಲಿರುವರೆಂದು ಗೊತ್ತಾಗಿದೆ.

ಪತ್ರಿಕಾ ಸಲಹಾಸಮಿತಿ

ನೇಮಕ

ಪತ್ರಿಕೆಗಳ ಅಭಿವೃದ್ಧಿ ಬಗ್ಗೆ ಪರಿಶೀಲನೆ

ಸಮಿತಿಯಲ್ಲಿ ದೇಶದ ಪ್ರಮುಖ ವ್ಯಕ್ತಿಗಳಿರುವರು

ಬೊಂಬಾಯಿನ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶ ಶ್ರೀ ರಾಜಾಧ್ಯಕ್ಷರವರ ಅಧ್ಯಕ್ಷತೆಯಲ್ಲಿ ಭಾರತ ಸರ್ಕಾರವು ೧೦ ಜನ ಸದಸ್ಯರನ್ನೊಳಗೊಂಡ ಪತ್ರಿಕಾ ಮಂಡಲಿಯನ್ನು ನೇಮಿಸಿದೆ. ಈ ಸಮಿತಿಯಲ್ಲಿ ಭಾರತದ ಪ್ರಮುಖ ವ್ಯಕ್ತಿಗಳು ಪತ್ರಿಕಾಕರ್ತರು ಇದ್ದಾರೆ.

ಶ್ರೀಗಳಾದ ಸಿ. ಪಿ. ರಾಮಸ್ವಾಮಿಅಯ್ಯರ್, ಆಚಾರ್ಯ ನರೇಂದ್ರದೇವ್ ಡಾ|| ಜಕೀರ್‌ಹುಸೇನ್, ಡಾ|| ವಿ. ಕೆ. ಆರ್. ವಿ. ರಾವ್, ಪಿ. ಹೆಚ್. ಪಟ್ವರ್ಧನ್, ಟಿ. ಎನ್. ಸಿಂಗ್, ಜಯಪಾಲಸಿಂಗ್, ನಟರಾಜನ್, ಎ. ಆರ್. ಭಟ್, ಎಂ. ಚಲಪತಿರಾವ್ ಇವರುಗಳು ಸದಸ್ಯರು.

ಅಖಿಲಭಾರತ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷ ಶ್ರೀ ಎ. ವಿ. ಮಣಿಯವರು ವಿದೇಶದಿಂದಹಿಂತಿರುಗಿದಮೇಲೆ ಅವರೂ ಸದಸ್ಯರಾಗಿರುತ್ತಾರೆ.

ಪತ್ರಿಕೆಗಳ ಈಗಿನ ಪರಿಸ್ಥಿತಿ ಮುಂದಿನ ಅಭಿವೃದ್ಧಿ ವಿಷಯ, ವಾರ್ತಾಸಂಸ್ಥೆಗಳು ಕಾರ್ಯನಿರತ ಪತ್ರಿಕೋದ್ಯೋಗಿಗಳಸಂಬಳ ಸಾರಿಗೆ ದೇಶದಲ್ಲಿ ಪತ್ರಿಕೋದ್ಯಮ ಅಭಿವೃದ್ಧಿ, ಪತ್ರಿಕಾಶಾಸನವಿಷಯ ಮುಂತಾದ ನಾನಾ ವಿಷಯಗಳನ್ನು ಈ ಸಮಿತಿಯು ಪರಿಶೀಲಿಸಿ ಸರ್ಕಾರಕ್ಕೆ ೧೯೫೩ನೆ ಮಾರ್ಚಿ ಒಂದನೇತಾರೀಖಿನೊಳಗೆ ವರದಿ ಒಪ್ಪಿಸಬೇಕಾಗಿದೆ.

ವಿಷಯ ಸಂಗ್ರಹಣೆ ಮುಂತಾದ ಕಾರ್ಯಕ್ರಮಗಳು ಸುಗಮವಾಗಿ ನಡೆಯಲು ಈ ಸಮಿತಿಗೆ ಸಿವಿಲ್‌ಕೋರ್ಟಿನ ಅಧಿಕಾರವನ್ನು ಕೊಡಲಾಗಿದೆ.

ಭಾರತಕ್ಕೆ ಟ್ರೂಮನ್ನರ ಭೇಟಿ

ಅಮೆರಿಕಾ ವೈಟ್‌ಹೌಸಿನಲ್ಲಿ ಭಾರತೀಯ ಚಲನಚಿತ್ರ ನಿಯೋಗಕ್ಕೆ ನಡೆದ ಸತ್ಕಾರಕೂಟಕ್ಕೆ ಆಗಮಿಸಿದ್ದ ಅಧ್ಯಕ್ಷ ಟ್ರೂಮನ್ನರು ನಿಯೋಗದವರೊಡನೆ ಮಾತನಾಡುತ್ತಾ ತಾವು ಸದ್ಯದಲ್ಲೇ ಭಾರತಕ್ಕೆ ಭೇಟಿಕೊಡಲು ಸಾಧ್ಯವಾದೀತೆಂದು ಹೇಳಿದರು. ಅಮೆರಿಕಾ ಭಾರತಗಳ ಸ್ನೇಹ ಎಂದೆಂದಿಗೂ ಮುಂದುವರಿಯುವುದೆಂಬ ನಂಬಿಕೆಯೊಂದಿಗೆ ನಿಯೋಗವು ಭಾರತಕ್ಕೆ ಹಿಂತಿರುಗುವುದೆಂದು ತಮ್ಮ ನಂಬಿಕೆಯೆಂದು ಟ್ರೂಮನ್ನರು ತಿಳಿಸಿದರು.

ನಿಯೋಗದವರು ಮಿ|| ಟ್ರೂಮನ್ನರಿಗೆ ಮಹಾತ್ಮಗಾಂಧಿಯವರ ದಂತದ ಪ್ರತಿಮೆಯೊಂದನ್ನು ಒಪ್ಪಿಸಿದರು.

ಸ್ಥಾನಬದ್ಧ ಖೈದಿಯನ್ನು ಕೋರ್ಟಿಗೆ ಹಾಜರ್ಪಡಿಸಲು ಆಜ್ಞೆ

೧೯೫೦ ರಿಂದ ಪತ್ತೆಯಿಲ್ಲವೆಂದು ಹೇಳಲಾಗಿರುವ ಕಮ್ಯೂನಿಸ್ಟ್ ಸ್ಥಾನಬದ್ಧ ಖೈದಿ ಶ್ರೀ ಜನಾರ್ಧನಾಚಾರಿಯವರನ್ನು ನ್ಯಾಯಾಸ್ಥಾನದಮುಂದೆ ಹಾಜರ್ಪಡಿಸಬೇಕೆಂದು ಭಾರತ ಶ್ರೇಷ್ಠ ನ್ಯಾಯಾಲಯವು ಹೈದರಾಬಾದು ಮತ್ತು ಮದರಾಸಿನ ಸರ್ಕಾರಗಳಿಗೆ ಆಜ್ಞೆಯಿತ್ತಿದೆ.

ಶ್ರೀ ಜನಾರ್ದನಚಾರಿಯವರು ಇರುವ ಸ್ಥಳವನ್ನು ಸರಿಯಾಗಿ ತಿಳಿಸಲಿಲ್ಲವೆಂದು ಅವರ ಸಹೋದರರು ಸುಪ್ರೀಂಕೋರ್ಟಿನಲ್ಲಿ ಅರ್ಜಿ ಸಲಿಸಿದ್ದಾರೆ.

ಚರಕದಿಂದ ೨೦೦ ಕೌಂಟಿನ ನೂಲಿನ ತಯಾರಿಕೆ

ಈವರ್ಷದ ದಸರಾ ವಸ್ತುಪ್ರದರ್ಶನದ ಗೃಹಕೈಗಾರಿಕಾ ವಿಭಾಗದ ಆರ್ ಬ್ಲಾಕ್‌ನಲ್ಲಿ ದೇವಕೋಟೆಯ ಶ್ರೀ ಕೆ. ವಿ. ಶ್ರೀನಿವಾಸ ಐಯ್ಯಂಗಾರ್, ಎಂಬ ೭೫ ವರ್ಷದ ವೃದ್ಧರು ಸಾಧಾರಣ ಚರಕದಲ್ಲಿ ೨೦೦ನೇ ನಂಬರ್ (200 Counts) ನೂಲನ್ನು ತೆಗೆಯುವ ಚಮತ್ಕಾರವನ್ನು ಎಲ್ಲರೂ ನೋಡಬೇಕಾದ ಪ್ರಮುಖ ಪ್ರದರ್ಶನವಾಗಿದೆ. ಮಹಾತ್ಮಗಾಂಧಿ ರಾಜಾಜಿ ಮುಂತಾದ ಮಹನೀಯರು ಇದನ್ನು ನೋಡಿ ಸಂತೋಷಪಟ್ಟಿರುತ್ತಾರೆ.

'ಸಾಹುಕಾರ' ನಾಟಕ ಪ್ರದರ್ಶನ

ಮೈಸೂರು ೨೪

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಮಂಡಲಿಯವರ ಸುಪ್ರಸಿದ್ದ ಸಾಹುಕಾರ ನಾಟಕ ಪ್ರಾರಂಭೋತ್ಸವವನ್ನು ರತ್ನಾವಳಿಥಿಯೇಟರಿನಲ್ಲಿ ಈದಿನ ರಾತ್ರಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆರವೇರಿಸುವರು.

ಕೆ. ಪಿ. ರಾಮನಾಥಯ್ಯ ಆಹಾರ ಇಲಾಖಾ ಡೈರೆಕ್ಟರ್

ಬೆಂಗಳೂರು ಸೆ. ೨೪

ಕೋಲಾರ ಜಿಲ್ಲಾಧಿಕಾರಿಗಳಾಗಿರುವ ಶ್ರೀ ಕೆ. ಪಿ. ರಾಮನಾಥಯ್ಯನವರನ್ನು ಆಹಾರ ಇಲಾಖೆಯ ಡೈರೆಕ್ಟರ್ ಮತ್ತು ಅಭಾವಪರಿಹಾರಕಾರ್ಯದ ಕಮಿಷನರಾಗಿ ನೇಮಿಸಲಾಗಿದೆ.

ವಿಶ್ವಸಂಸ್ಥೆ ಪ್ರಸಾರ ಕೇಂದ್ರವಾಗುತ್ತಿದೆ

ಪ್ರಪಂಚಸಂಸ್ಥೆಯು ಇತ್ತೀಚೆಗೆ ಪ್ರಚಾರಕೇಂದ್ರವಾಗುತ್ತಿದೆ. ಇಲ್ಲಿ ಕೆಲವು ರಾಷ್ಟ್ರಗಳ ಇತರ ರಾಷ್ಟ್ರಗಳ ವಿಷಯವನ್ನು ಟೀಕೆಮಾಡುವುದೇ ಕಾಣಬರುತ್ತದೆ ದಿನೇದಿನೇ ಇದು ಹೆಚ್ಚುತ್ತಲಿದೆ. ಇದು ತಪ್ಪಬೇಕು ಅದಕ್ಕಾಗಿ ನಾವು ಶ್ರಮಿಸುತ್ತೇವೆ-ಎಂದು ಬ್ರಿಟನ್ನಿನ ವಿದೇಶಾಂಗ ಶಾಖಾ ರಾಜ್ಯಸಚಿವ ಮಿ|| ಸೆಲ್ವಿನ್‌ಲಾಯ್ಡ್‌ರವರು ಹೇಳಿರುವರುನ್ಯೂಯಾರ್ಕ್‌ನಲ್ಲಿ ಪ್ರಾರಂಭವಾಗಲಿರುವ ವಿಶ್ವಸಂಸ್ಥೆ ಅಧಿವೇಶನಕ್ಕೆ ಇವರು ಹೋಗುವರು.

ಮುಷ್ಕರ ಮುಕ್ತಾಯ

ಪೂನಾದಲ್ಲಿ ಕಳೆದ ೨೫ ದಿನಗಳಿಂದ ಮುಷ್ಕರ ಹೂಡಿದ್ದ ರಕ್ಷಣಾ ಶಾಖೆಯವರು ನಿನ್ನೆಯದಿನ ಮುಷ್ಕರವನ್ನು ಮುಕ್ತಾಯಗಳಿಸಿ ತಮ್ಮ ನಿತ್ಯಕಾರ್ಯಗಳಿಗೆ ತೊಡಗಿದ್ದಾರೆ.

§ ಭಾರತದಲ್ಲಿ ೧೦ ಕೋಟಿಜನ ಮಲೇರಿಯಾದಿಂದ ನರಳುತ್ತಿದ್ದಾರೆಂದು ಹೇಳಲಾಗಿದೆ.

ವುಡ್‌ಲ್ಯಾಂಡ್ಸ್

೧೯-೯-೫೨ರಿಂದ ಅಮೋಘ ಪ್ರಾರಂಭ
ಪ್ರತಿ ದಿನ ೩ ಆಟಗಳು

* ರಾಮುಜನ್ನ *
(ಹಿಂದಿ)

ಪಾತ್ರ:-
ನಿರೂಪರಾಯ್. ತ್ರಿಲೋಕ್ ಕಪೂರ್

—: ಪ್ರಕಾಶಕರು ಮತ್ತು ಮುದ್ರಕರು: —
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಅಂದವಾದ ಮುದ್ರಣಕ್ಕೆ
ಕರ್ನಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)

For
NEAT AND PROMPT PRINTING
Contact:
CARNATAK PRINTERS
GANDHI SQUARE, MYSORE
Phone 892 or 574

ಮದ್ರಾಸಿನ ಆಹಾರ ಅಭಾವ ಪ್ರದೇಶಗಳಿಗೆ ಪ್ರಧಾನಿ ನೆಹರೂ ಭೇಟಿ

ಈ ಭಾಗಗಳಲ್ಲಿ ಒಂದುವಾರಕಾಲ ಪ್ರವಾಸ

ಪ್ರಧಾನಿ ನೆಹರೂರವರು ಮದ್ರಾಸಿನ ಕ್ಷಾಮಪೀಡಿತ ಪ್ರದೇಶಗಳಿಗೆ, ಅದರಲ್ಲೆಲ್ಲಾ ರಾಯಲುಸೀಮೆಯ ಭಾಗಗಳಿಗೆ ಭೇಟಿಕೊಟ್ಟು, ಅಲ್ಲಿಯ ಪರಿಸ್ಥಿತಿಗಳನ್ನು ಸ್ವತಹ ಅರಿತುಕೊಳ್ಳಲು ಅಕ್ಟೋಬರ್ ಒಂದನೇ ತಾರೀಖಿನ ದಿವಸ ಮದ್ರಾಸಿಗೆ ಬರುವ ನಿರೀಕ್ಷೆಯಿದೆ. ಅವರು ಒಂದು ವಾರಕಾಲ ಪ್ರವಾಸವನ್ನು ಈ ಭಾಗದಲ್ಲಿ ಕೈಗೊಳ್ಳುವರು

ಆಂಧ್ರದಲ್ಲಿ ಕಮ್ಯೂನಿಸ್ಟರ ಪ್ರಭಾವಕಡಿಮೆಯಾಗುತ್ತಿದೆ

ಆಂಧ್ರದಲ್ಲಿ ಈಗ ನಡೆಯುತ್ತಲಿರುವ ಪೌರ ಚುನಾವಣಾ ಫಲಿತಾಂಶಗಳನ್ನು ವೀಕ್ಷಿಸಿದರೆ ಈ ಪ್ರಾಂತ್ಯದಲ್ಲಿ ಕಮ್ಯೂನಿಸ್ಟರ ಪ್ರಭಾವವು ಕ್ಷಯಿಸುತ್ತಲಿರುವುದಾಗಿ ಧೃಡವಾಗಿ ಹೇಳಬಹುದೆಂದು ಆಂಧ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎನ್. ಸಂಜೀವರೆಡ್ಡಿಯವರು ಹೇಳಿರುವರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 30

೨೫-೯-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣಾ ಸಮಿತಿ

ಅಮೆರಿಕಾ, ಇಂಗ್ಲೆಂಡಿನ ಇಬ್ಬರು ವಿದ್ಯಾಪ್ರವೀಣರು ಸಮಿತಿಯಲ್ಲಿರುವರು

ಭಾರತಾದ್ಯಂತ ಸೆಕೆಂದರಿ ವಿದ್ಯಾಭ್ಯಾಸಕ್ರಮವನ್ನು ಕೂಲಂಕುಶವಾಗಿ ಪರಿಶೀಲಿಸಿ ಅದರ ಬದಲಾವಣೆಗೆ ತಕ್ಕ ಸಲಹೆಗಳನ್ನು ನೀಡಲು ಮದ್ರಾಸ್ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾದ ಡಾ|| ಎ. ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ೯ ಜನರ ಸಮಿತಿಯನ್ನು ಭಾರತ ಸರ್ಕಾರವು ನೇಮಿಸಿದೆ. ಈ ಸಮಿತಿಯಲ್ಲಿ ವಿದೇಶಿಯ ಇಬ್ಬರು ತಜ್ಞರು ಇರುವರು.

ಆಕ್ಸ್‌ಫರ್ಡ್ ಜೀಸಸ್ ಕಾಲೇಜಿನ ಪ್ರಿನ್ಸಿಪಾಲ್ ಜಾನ್ ಕ್ರಿಸ್ಟಿ, ಅಮೆರಿಕಾ ಏರ್ ವಿಶ್ವವಿದ್ಯಾನಿಲಯದ ಡಾ|| ಕೇನೆತ್‌ರಾಸ್‌ವಿಲಿಯಮ್, ಬರೋಡಾ ವಿಶ್ವವಿದ್ಯಾನಿಲಯದ ವೈಸ್‌ಛಾನ್ಸಿಲರ್ ಶ್ರೀಮತಿ ಹಸನ್‌ಮೆಹ್ತಾ, ಬೊಂಬಾಯಿಟೆಕ್ನಿಕಲ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ತಾರಾಪೊರಿವಾಲಾ, ಉದಯಪುರದ ವಿದ್ಯಾಭವನ ಉಪಾಧ್ಯಾಯ ಶಿಕ್ಷಣ ಕಾಲೇಜಿನ ಪ್ರಿನ್ಸಿಪಾಲ್ ಡಾ|| ಶ್ರೀಮತಿ, ಬೊಂಬಾಯಿ ನ್ಯೂಇರಾ ಸ್ಕೂಲಿನ ಪ್ರಿನ್ಸಿಪಾಲ್ ಶ್ರೀ ಎಂ. ವಿ. ವ್ಯಾಸ್, ಕೇಂದ್ರ ವಿದ್ಯಾಶಾಖೆಯ ಸಹಕಾರ್ಯದರ್ಶಿ ಶ್ರೀ ಕೆ. ಜಿ. ಸದೀನ್, ದೆಹಲಿ ಕೇಂದ್ರ ವಿದ್ಯಾಶಾಖೆಯ ಪ್ರಿನ್ಸಿಪಾಲ್ ಶ್ರೀ ಎ. ಎನ್. ಬಾಸು ಇವರುಗಳು ಸಮಿತಿಯ ಸದಸ್ಯರಾಗಿದ್ದಾರೆ

ನಗರ ಪರಿಶೀಲನೆ

ಮೈಸೂರು ಸೆ. ೨೫

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆಯದಿನ ಸ್ಥಳೀಯ ಸಂಸ್ಥೆ ಸಚಿವ ಶ್ರೀ ಟಿ. ಚನ್ನಯ್ಯನವರೊಡನೆ ಮೈಸೂರು ನಗರದ ನಾನಾ ಭಾಗಗಳಿಗೆ ತೆರಳಿ, ಅಲ್ಲಿ ರಸ್ತೆ, ನೈರ್ಮಲ್ಯ ಮುಂತಾದುವನ್ನು ಪರಿಶೀಲಿಸಿದರು. ಅನೇಕಕಡೆ ಕಾಲ್ನಡಿಗೆಯಲ್ಲಿಯೇ ಹೋಗಿ ಎಲ್ಲವನ್ನು ವೀಕ್ಷಿಸಿದರು. ಒಂಟಿಕೊಪ್ಪಲಿನಲ್ಲಿ ಕಟ್ಟುತ್ತಿರುವ ಶ್ರೀ ಶಂಕರಶೆಟ್ಟಿ ಕಂಬೈನ್‌ಡ್ ಆಸ್ಪತ್ರೆ, ಬಡುಬುಡಿಕೆಕೇರಿಯಬಳಿ ಪೌರಸಭೆಯರ್ಝಾಡಮಾಲಿಗಳಿಗೆಮನೆಕಟ್ಟಲು ನಿಯೋಜಿಸಿರುವ ಸೈಟುಗಳು ಮುಂತಾದುವನ್ನು ಸಚಿವರುಗಳು ಪರಿಶೀಲಿಸಿದರು.

ಮಂತ್ರಿಗಳೊಡನೆ ಪುರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು, ಕಮಿಷನರ್ ಶ್ರೀ ಅಬ್ದುಲ್ ರಹಿಂ ಮುಂತಾದವರಿದ್ದರು.

ಮುಖ್ಯಮಂತ್ರಿಗಳಲ್ಲಿಮನವಿ

ಮೈಸೂರು ಸೆ. ೨೪

ಮೈಸೂರುನಗರ ರೇಷನ್‌ಕಾರ್ಡ್‌ದಾರರ ಸಂಘದವರು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರಿಗೆ ಒಂದು ಪತ್ರವನ್ನು ಬರೆದು, ಪುರಭವನದಲ್ಲಿ ಇದೇ ೩೦ನೇ ತಾರೀಖು ಸಂಜೆ ಶ್ರೀ ಗುರುಪಾದಸ್ವಾಮಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುವ ಬಹಿರಂಗಸಭೆಗೆ ಆಗಮಿಸಿ, ಸಂಸ್ಥಾನದ ಆಹಾರನೀತಿಯ ಬಗ್ಗೆ ವಿವರಣೆಯನ್ನು ಕೊಟ್ಟು ಜನರಲ್ಲಿ ಮೂಡಿರುವ ಸಂಶಯವನ್ನು ಪರಿಹಾರ ಮಾಡಬೇಕೆಂದು ಕೋರಿದ್ದಾರೆ.

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮೈಸೂರಿನ ಶಾಖೆಯ ಉದ್ಘಾಟನ ಮಹೋತ್ಸವವನ್ನು ನಾಳೆ ಸಂಜೆ ಶ್ರೀ ಎಂ. ಇ. ಭರತರಾಜ್ ಸಿಂಗ್‌ರವರ ಅಧ್ಯಕ್ಷತೆಯಲ್ಲಿ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮಗಾಂಧಿ ಸೇವಾಸಂಘದಲ್ಲಿ ನಡೆಯುತ್ತದೆ. ಪರಿಷತ್ತಿನ ಆಶ್ರಯದಲ್ಲಿ ಸಂಸ್ಕೃತ ತರಗತಿಯ ಆರಂಭೋತ್ಸವವನ್ನು ಶ್ರೀ ಹರಿಯಪ್ಪನವರು ನೆರವೇರಿಸತ್ತಾರೆ.

ಒಂದುಲಕ್ಷ ರೂ. ಫಿಲಂನಾಶ

ಬೊಂಬಾಯಿನ ಮಹಾಲಕ್ಷ್ಮಿಯಲ್ಲಿರುವ ಕೇಂದ್ರಸರ್ಕಾರಕ್ಕೆ ಸೇರಿದ ಸುಮಾರು ಒಂದುಲಕ್ಷರೂಪಾಯಿ ಬೆಲೆಬಾಳುವ ಡಾಕ್ಯುಮೆಂಟರಿ ಫಿಲಂಗಳು ಫಿಲಂಲ್ಯಾಬೋರೇಟರಿಗೆ ಬೆಂಕಿತಗುಲಿ ಪೂರ್ಣವಾಗಿ ನಾಶವಾದುವು.

ಸತ್ಯಾಗ್ರಹವೆಂದರೆ ಪ್ರತಿಸರ್ಕಾರ ಸ್ಥಾಪಿಸಿದಂತೆ

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಸ್ವಾಮಿ ಸೀತಾರಾಂರವರಿಗೆ ಒಂದು ರಹಸ್ಯ ಪತ್ರ ಬರೆದು ಆಂಧ್ರಪ್ರಾಂತ್ಯಕ್ಕಾಗಿ ಸತ್ಯಾಗ್ರಹ ನಿಲ್ಲಿಸಬೇಕೆಂದೂ, ಆಗಲೇ ತಾವು ಪ್ರಾಂತ್ಯಕ್ಕಾಗಿ ಏನಾದರೂ ಮಾಡುವುದು ಸಾಧ್ಯವೆಂದೂ ತಿಳಿಸಿರುವುದಾಗಿ ಗೊತ್ತಾಗಿದೆ ಸತ್ಯಾಗ್ರಹವೆಂದರೆ ಪ್ರತಿಸರ್ಕಾರ ಸ್ಥಾಪಿಸಿದಂತೆ ಇದನ್ನೆಂದಿಗೂ ಸಹಿಸುವುದಕ್ಕಾಗುವುದಿಲ್ಲವೆಂದು ಮುಖ್ಯಮಂತ್ರಿ ತಿಳಿಸಿದಾರೆಂದು ಹೇಳಲಾಗಿದೆ.

ರಷ್ಯಾಧಾನ್ಯ ಮೈಸೂರಿಗೆ

ರಷ್ಯದಿಂದ ಬಂದಿರುವ ಆಹಾರ ಸಹಾಯವನ್ನು ಮದ್ರಾಸಿನ ಮತ್ತು ಮೈಸೂರಿನ ಆಹಾರ ಅಭಾವ ಪ್ರದೇಶಗಳಲ್ಲಿ ಹಂಚಿಕೆ ಮಾಡುವ ಬಗ್ಗೆ ಮಾತುಕತೆ ನಡೆಸುವ ಸಲುವಾಗಿ ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಸೆಕ್ರೆಟರಿ ಜನರಲ್‌ರನ್ನು ಭೇಟಿಮಾಡಲು ಸಂಸ್ಥಾನದ ರೆಡ್‌ಕ್ರಾಸ್ ಶಾಖೆಯ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀ ಪಿ. ಕೃಷ್ಣಪ್ಪನವರು ಮದ್ರಾಸಿಗೆ ಹೋಗಿದ್ದಾರೆ.

ಕೋರ್ಟಿನಲ್ಲಿ ಬೀಡಿ ಸೇದಿದ್ದಕ್ಕೆ ೧ ತಿಂಗಳುಸಜಾ

ಮದ್ರಾಸಿನ ೮ನೇ ಪ್ರಸಿಡೆನ್ಸಿ ಮ್ಯಾಜಿಸ್ಟ್ರೇಟರ ನ್ಯಾಯಾಸ್ಥಾನದಲ್ಲಿ ಪೊನ್ನಯ್ಯ ಎಂಬ ಪ್ರೇಕ್ಷಕನು ಅಲ್ಲೆ ಬೀಡಿಯನ್ನು ಹತ್ತಿಸಿ ಸೇದಲು ಪ್ರಾರಂಭಿಸಿದನು. ನ್ಯಾಯಾಲಯದ ಘನತೆ ಗೌರವಗಳನ್ನು ಅಲಕ್ಷಿಸಿ ಆತನು ಬೀಡಿ ಸೇದಿದನೆಂದೂ ನ್ಯಾಯಾಧೀಶರು ಅವನಿಗೆ ಒಂದುತಿಂಗಳ ಕಠಿಣಸಜಾ ವಿಧಿಸಿದರು.

ಭಾರತಕ್ಕೆ ಬರ್ಮಾ ಅಕ್ಕಿ

ಭಾರತವು ಬರ್ಮಾದಿಂದ ೨೫೦೦೦೦ ಟನ್ ಅಕ್ಕಿ ತರಿಸಲು ನಿರ್ಧರಿಸಿದೆ. ಈವರ್ಷದಲ್ಲಿ ಬರ್ಮಾದಿಂದ ೩,೧೦,೦೦೦ಟನ್‌ಗಳಷ್ಟು ಅಕ್ಕಿಯನ್ನು ಆಮದುಮಾಡಲು ನಿರ್ಧರಿಸಲಾಗಿತ್ತು. ಅದರಪೈಕಿ ಒಂದು ಲಕ್ಷದಷ್ಟು ಬರಬೇಕಾಗಿದೆ.

ಜನತೆಯ ಅವಿಶ್ವಾಸಕ್ಕೆ ಕಾಂಗ್ರೆಸ್‌ಸರ್ಕಾರ ಕಾರಣ

ದೇಶದ ಯಾವಭಾಗದಲ್ಲೇಆಗಲಿ ಜನತೆಯ ವಿಶ್ವಾಸವನ್ನು ಕಾಂಗ್ರೆಸ್ ಕಳೆದುಕೊಂಡಿದ್ದರೆ ಅದಕ್ಕೆ ಕಾಂಗ್ರೆಸ್‌ಸಂಸ್ಥೆ ಕಾರಣವಲ್ಲ. ಕಾಂಗ್ರೆಸ್ ಸರ್ಕಾರಗಳ ಲೋಪದೋಷಗಳೇ ಕಾರಣ ಎಂದು ಕೇಂದ್ರ ಸಂಚಾರಶಾಖಾಸಚಿವ ಶ್ರೀ ಜಗಜೀವನರಾಂರವರು ಬೊಂಬಾಯಿನಲ್ಲಿ ಮಾತನಾಡುತ್ತಾ ಹೇಳಿರುವರು.

ಅಮೆರಿಕಕ್ಕೆ ಏಷ್ಯನ್ ರೈಲ್ವೆ ತಜ್ಞರು

ಭಾರತದಿಂದ ಇಬ್ಬರು ಮತ್ತು ಪಾಕೀಸ್ಥಾನದಿಂದ ಇಬ್ಬರು, ರೈಲ್ವೆ ತಜ್ಞರು ವಿಶ್ವಸಂಸ್ಥೆಯ ಪರವಾಗಿ ಪ್ರಪಂಚವನ್ನು ಸುತ್ತುವರು ಆಗ ಅವರು ಅಮೇರಿಕದಲ್ಲಿ ೩೦ ದಿನಗಳು ಪ್ರವಾಸ ಮಾಡುವರು.

ಈ ರೈಲ್ವೆ ತಜ್ಞರ ತಂಡದಲ್ಲಿ ಏಷ್ಯದ ಸುಪ್ರಸಿದ್ಧ ೧೫ ರೈಲ್ವೆ ತಜ್ಞರಿರುವರು. ಅಕ್ಟೋಬರ್‌ನಲ್ಲಿ ಹೊರಟು ಒಟ್ಟು ನಾಲ್ಕು ತಿಂಗಳಕಾಲ ಪ್ರಪಂಚವನ್ನು ಸುತ್ತುವರು ಕೈಗಾರಿಕೆಯು ಉಚ್ಛ್ರಾಯಸ್ಥಿತಿಯಲ್ಲಿರುವ ದೇಶಗಳಲ್ಲಿ ನವೀನ ರೈಲ್ವೆ ಮಾದರಿಗಳನ್ನು ನೋಡುವುದೇ ಈ ಪ್ರವಾಸದ ಮುಖ್ಯ ಉದ್ದೇಶ ೧೯೫೪ ರಲ್ಲಿ ವಿಶ್ವಸಂಸ್ಥೆಯ ಕೇಂದ್ರ ರೈಲ್ವೆ ನಿರ್ಮಾಣದ ಯೋಜನೆಗೆ ಈ ಪ್ರವಾಸವು ಸಂಬಂಧಿಸಿದುದಾಗಿದೆ.

ಈ ನಿಯೋಗವು ಒಟ್ಟು ಏಳುದೇಶಗಳನ್ನು ಸುತ್ತುವುದು ಯುರೋಪನ್ನು ಸುತ್ತಿ ಅಮೆರಿಕಕ್ಕೆ ಹೋಗಿ ಜಪಾನ್ ಮತ್ತು ಬ್ಯಾಂಕಾಕ್ ಮುಖಾಂತರವಾಗಿ ಸ್ವದೇಶಕ್ಕೆ ಮರಳುವುದು. ಹಿಂದಿರುಗಿ ಬಂದಮೇಲೆ ತಜ್ಞರು ನವೀನ ರೈಲ್ವೆ ಸುಧಾರಣೆಗಳ ಮೇಲೆ ತಮ್ಮ ತಮ್ಮ ಸರ್ಕಾರಗಳಿಗೆ ಸಲಹೆ ಕೊಡುವುದು ಹಾಗೂ ವಿಶ್ವಸಂಸ್ಥೆಯತರ ಬೇರೆ ಕೇಂದ್ರದ ಶಾಲೆಗೆ ಪಾಠಪ್ರವಚನಗಳ ಪಟ್ಟಿಯನ್ನು ತಯಾರಿಸುವರು.

ಕಂದಾಯ ರಿಯಾಯತಿ

ಮಳೆಬಾರದ ಪ್ರಯುಕ್ತ ಕೃಷ್ಣರಾಜನಗರದ ೩ ಕೆರೆಗಳ ಆಶ್ರಯದಲ್ಲಿರುವ ಜಮೀನುಗಳ ೧೯೫೦-೫೧ ನೇ ಸಾಲಿನ ೩೦೭ ರೂ, ೫೧-೫೨ ನೇ ಸಾಲಿನ ೩೦೭ ರೂಗಳ ಅರ್ಧ ಕಂದಾಯವನ್ನು, ಪಾವಗಡ ತಾಲ್ಲೂಕಿನ ೬೯ ಕೆರೆಗಳ ಆಶ್ರಯದಲ್ಲಿರುವ ಜಮೀನುಗಳ ಕಂದಾಯದಲ್ಲಿ ಅರ್ಧವನ್ನು [೮೫೫೪ ರೂ] ಮಾಫಿ ಮಾಡಲಾಗಿದೆ.

ಬಾಗೇಪಲ್ಲಿ ತಾಲ್ಲೂಕಿನಲ್ಲಿ ೩೯೫ ಕೆರೆಗಳ ಜಮೀನುಗಳ ಕಂದಾಯದಲ್ಲಿ ಅರ್ಧ ೨೭೨೫೦ ರೂ. ಶ್ರೀನಿವಾಸಪುರದಲ್ಲಿ ೩೦೫ ಕೆರೆಗಳ ಜಮೀನುಗಳ ಕಂದಾಯದಲ್ಲಿ ಅರ್ಧ ೧೪೦೬೧ ರೂ. ತುಮಕೂರು ತಾಲ್ಲೂಕಿನ ೪೮ ಕೆರೆಗಳಲ್ಲಿಯ ಜಮೀನುಗಳ ಕಂದಾಯದಲ್ಲಿ ಅರ್ಧ, ೧೧೭೬೮ ರೂಗಳ ಮಾಫಿ ಮಾಡಿ ಉಳಿದರ್ಧದ ವಸೂಲಿಯನ್ನು ಮುಂದಕ್ಕೆ ಹಾಕಲಾಗಿದೆ.

ಆಹಾರ ಮತ್ತು ಉದ್ಯೋಗಕ್ಕೆ ಅಗ್ರಮಾನ್ಯತೆ ಕೊಡಬೇಕು

ಪ್ರಧಾನಿ ನೆಹರೂರವರ ಮನವಿ

ದೊಡ್ಡದೊಡ್ಡ ನಗರಗಳಲ್ಲಿ ಹಿರಿಯದಾದ ಆಸ್ಪತ್ರೆಗಳನ್ನು ಕಟ್ಟುವುದಕ್ಕಿಂತ ಗ್ರಾಮಾಂತರಗಳಲ್ಲಿ ಹೆಚ್ಚಿಗೆ ಆಸ್ಪತೆಗಳನ್ನು ಕಟ್ಟುವುದು ಉತ್ತಮ ಆದರೆ ಔಷಧಿಗಳಿಗೆ ಹೆಚ್ಚಿಗೆ ಪ್ರಾಮುಖ್ಯತೆ ಕೊಡುವ ಸಮಯವಲ್ಲ. ಆಹಾರ ಮತ್ತು ಉದ್ಯೋಗಕ್ಕೆ ದೇಶಾದ್ಯಂತ ಅಗ್ರಮಾನ್ಯತೆಯನ್ನು ಕೊಡಬೇಕು-ಎಂದು ಪ್ರಧಾನಿ ನೆಹರೂರವರು ನಿನ್ನೆಯದಿನ ಹೈದರಾಬಾದ್ ಬಳಿ ಕ್ಷಯರೋಗ ಆಸ್ಪತ್ರೆಯಲ್ಲಿ ಮಾತನಾಡುತ್ತಾ ಹೇಳಿರುವರು.

ಮಿರ್ಜಾ-ಮುಸಾದಿಕ್ ಭೇಟಿ

ಮೈಸೂರಿನ ಮಾಜಿ ದಿವಾನ್ ಸರ್ ಎಂ. ಇಸ್ಮಾಯಿಲ್‌ರವರು ಮೊನ್ನೆದಿನ ಟೆಹರಾನಿನಲ್ಲಿ ಪರ್ಶಿಯಾ ಪ್ರಧಾನಿ ಮುಸಾದಿಕ್‌ರವರನ್ನು ಭೇಟಿಮಾಡಿ ಎಣ್ಣೆಯ ವಿಷಯವಾಗಿ ಅನಧಿಕೃತವಾಗಿ ಮಾತುಕತೆ ನಡೆಸಿದರೆಂದು ಗೊತ್ತಾಗಿದೆ.

ಮಿ|| ಮಿರ್ಜಾರವರು ತಮ್ಮ ಪೂರ್ವ ಸ್ನೇಹಿತರಾದ ಅಮೆರಿಕಾ ರಾಯಭಾರಿ ಮಿ|| ಲೇ ಆಂಡ್ರುಸ್ ಮತ್ತು ಭಾರತದ ರಾಯಭಾರಿ ಡಾ|| ತಾರಾಚಂದ್‌ರವರನ್ನು ಭೇಟಿಮಾಡಿದ್ದರು. ಇನ್ನೂ ಕೆಲವು ಪ್ರಮುಖ ವ್ಯಕ್ತಿಗಳನ್ನು ಅವರು ಭೇಟಿಮಾಡಲಿರುವರು. ಪ್ರಧಾನಿ ಡಾ|| ಮುಸಾದಿಕ್ ಮತ್ತು ಉಪಪ್ರಧಾನಿಯವರನ್ನು ಅವರು ಪುನಃ ಭೇಟಿಮಾಡುವರೆಂದು ಹೇಳಲಾಗಿದೆ.

ಪ್ರಾಂತ್ಯ ನಾಯಕರಿಗೆ ನೆಹರೂ ಪತ್ರ

ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸರಕಾರಕ್ಕೂ ಕಾಂಗ್ರೆಸ್ ಸಮಿತಿಗಳಿಗೂ ಯಾವ ರೀತಿಯಾಗಿ ಸೌಹಾರ್ದ್ಯ ಹೆಚ್ಚಾಗಿ ಆಡಳಿತ ನೀತಿಯಲ್ಲಿ ಉಭಯತ್ರರು ಸೇರಿ ಸಮಾಲೋಚನೆ ನಡೆಸಬಹುದೆಂಬ ಬಗ್ಗೆ ಪ್ರಧಾನಿ ನೆಹರೂರವರು ಎಲ್ಲಾ ಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷರಿಗೆ ಮುಖ್ಯ ಮಂತ್ರಿಗಳಿಗೆ ಪತ್ರವನ್ನು ಬರೆದಿರುವುದಾಗಿ ಗೊತ್ತಾಗಿದೆ.

ಕೆನಡಾದಿಂದ ಗೋಧಿ

ಭಾರತವು ಕೆನಡಾದಿಂದ ಗೋಧಿಯನ್ನು ಕೊಳ್ಳಲು ಅನುಕೂಲವಾಗುವಂತೆ ಕೊಲಂಬೋ ಯೋಜನೆಯ ನಿಧಿಯಿಂದ ಈ ವರ್ಷ ಕೆನಡಾ ೫೦ ಲಕ್ಷ ಡಾಲರುಗಳನ್ನು ಕೊಡಲಿದೆ.

ಉಪರಾಷ್ಟ್ರಾಧ್ಯಕ್ಷರ ವಿದೇಶ ಪ್ರವಾಸ

ಭಾರತ ಉಪರಾಷ್ಟ್ರಾಧ್ಯಕ್ಷ ಡಾ|| ಸರ್ವಪಲ್ಲಿ ರಾಧಾಕೃಷ್ಣನ್‌ರವರು ೮ ವಾರ ಕಾಲದ ವಿದೇಶೀಪ್ರವಾಸವನ್ನು ನಿನ್ನೆಯ ದಿನ ಪ್ರಾರಂಭಿಸಿದರು ಅವರು ಇಟಲಿ, ಫ್ರಾನ್ಸ್, ಸ್ವಿಟ್ಸರ್‌ಲೆಂಡ್, ಜರ್ಮನಿ, ಬ್ರಿಟನ್ ಮುಂತಾದ ರಾಷ್ಟ್ರಗಳಿಗೆ ಭೇಟಿ ಕೊಡಲಿರುವರು ಈಜಿಪ್ಟ್‌ನಲ್ಲಿ ಜ|| ನಗೀಬ್‌ರನ್ನು ಅವರು ಸಂದರ್ಶಿಸುವರು.

ಅವರು ಬೊಂಬಾಯಿನ ಮಾರ್ಗವಾಗಿ ಪ್ರಯಾಣಮಾಡುವಾಗ ತಮಗೆ ಅಮೆರಿಕಾಕ್ಕೆ ಬರಲು ಆಹ್ವಾನಬಂದಿದೆಯೆಂದೂ ಅದರಬಗ್ಗೆ ಇನ್ನೂ ನಿರ್ಧಾರವಾಗಿಲ್ಲವೆಂದೂ ಅವರು ತಿಳಿಸಿದರು.

ದೇವರ ವಿನಹ ಯಾರೂ ತಮ್ಮನ್ನು ಕದಲಿಸಲಾರರೆಂದು ಮುಸ್ತಫಾನಹಾಸ್

ಈಜಿಪ್ಟ್‌ನಲ್ಲಿರುವ ಪ್ರಮುಖ ರಾಜಕೀಯ ಪಕ್ಷದ ನಾಯಕ ಮಿ|| ಮುಸ್ತಫಾನಹಾಸ್‌ರವರು ಮಾತನಾಡುತ್ತಾ ತಮ್ಮನ್ನು ಪಕ್ಷದಿಂದ ಕದ ದೇವರು ವಿನಹ ಇನ್ಯಾರೂ ಕದಲಿಸಲಾರರೆಂದು ಜನರಲ್ ನಗೀಬ್‌ರವರು ತಿಳಿಸಿರುವರು. ನಹಾಸ್‌ರವರು ಕೂಡಲೇ ಪಕ್ಷದನಾಯಕತ್ವ ತ್ಯಜಿಸಬೇಕೆಂದು ಸೂಚಿಸಿದ್ದಾರೆ.

ಶ್ರೀ ಬಿ. ಎನ್. ರಾವ್ ಭಾರತಕ್ಕೆ

ಅಂತರ ರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಬಿ. ಎನ್. ರಾವ್‌ರವರು ಸದ್ಯದಲ್ಲೇ ಭಾರತಕ್ಕೆ ಬರಲಿರುವರು.

ಏಷ್ಯಾ ಸೋಷಲಿಸ್ಟ್ ಸಮ್ಮೇಳನಕ್ಕೆ ಮೈಸೂರಿನವರು

ಬೆಂಗಳೂರು ಸೆ. ೨೪

ರಂಗೂನಿನಲ್ಲಿ ನವಂಬರ್ ತಿಂಗಳಿನಲ್ಲಿ ನಡೆಯಲಿರುವ ಏಷ್ಯಾ ಸೋಷಲಿಸ್ಟ್ ಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರಿನಿಂದ ಶ್ರೀಗಳಾದ ಖಾದ್ರಿಶಾಮಣ್ಣ, ಕೆ. ಕಣ್ಣನ್, ಮಿನ್ಸೂರ್ ಹುಸೇನ್, ಬಿ. ಶ್ರೀಕಂಠಪ್ಪ. ಎ. ಹೆಚ್. ಶಿವಾನಂದಸ್ವಾಮಿ ಮತ್ತು ಎಸ್. ಗೋಪಾಲಗೌಡರನ್ನು ಮೈಸೂರು ಸೋಷಲಿಸ್ಟ್ ಪಕ್ಷದ ಕಾರ್ಯಕಾರಿ ಸಮಿತಿಯು ಚುನಾಯಿಸಿದೆ. ಈ ಸಮ್ಮೇಳನಕ್ಕೆ ಭಾರತದಿಂದ ೧೫ ಮಂದಿ ಪ್ರತಿನಿಧಿಗಳು ಹೋಗುವರು.

ರಾಜಕಮಲ್

೨೬-೯-೫೨ರಿಂದ ರಿಂದ ೭ನೇವಾರ
ಪ್ರತಿದಿನ ೩ ಆಟಗಳು
(ಮಹಾತ್ಮಾರವರ)
ಶ್ರೀನಿವಾಸ ಕಲ್ಯಾಣ
(ಕನ್ನಡ)
ಪಾತ್ರ:—ಅಮೀರ್‌ಬಾಯಿ ಕರ್ಣಾಟಕಿ, ಪ್ರತಿಮಾದೇವಿ, ಹರಿಣಿ, ಜಯಶ್ರೀ.

ಅಪೇರ

೧೯-೯-೫೨ ರಿಂದ ೩ ನೇ ವಾರ

ಪುಯಲ್
ಅಥವಾ
ಬಿರುಗಾಳಿ
[ತಮಿಳು]
ಪಾತ್ರ:—ಎಂ. ವಿ. ರಾಜಮ್ಮ ಮತ್ತು ಬಷೀರ್

This is the first time introducing on the Silver Screen the powerful drama of "St. Philomena and Mortydom"

ನಗರಾರೋಗ್ಯ

ಮೈಸೂರು ಸೆ. ೨೫

ಕಳೆದ ೧೫ ನೇ ತಾ|| ಮುಕ್ತಾಯವಾದ ೧೫ ದಿನದಲ್ಲಿ ಕಾಲರಾ, ಪ್ಲೇಗು ಮತ್ತು ಸಿಡುಬಿನ ವ್ಯಾಧಿಯು ಕಾಣಿಸಿಕೊಳ್ಳಲಿಲ್ಲ. ಪ್ಲೇಗು ಬಾರದಂತೆ ೧೫೩ ಮನೆಗಳಿಗೆ ಸೈನೋಗ್ಯಾಸ್ ಮಾಡಿಸಲಾಯಿತು. ೨೩೬ ಹೊಸದಾಗಿ ಮತ್ತು ೮೮೬ ಹಳಬರಿಗೆ ದೇವಿ ಹಾಕಿಸಲಾಯಿತು.

ಐದು ಜನರಿಗೆ ಡಿಫ್ತೀರಿಯಾ ಮತ್ತು ಮೂವರಿಗೆ ಟೈಫಾಡ್ ತಗಲಿ ಟೈಫಾಡ್‌ನಿಂದ ಒಬ್ಬರು ಮೃತಪಟ್ಟರು. ಈ ವ್ಯಾಧಿಯು ಹರಡದಂತೆ ಚುರುಕಾದ ಕಾರ್ಯಕ್ರಮ ಕೈಕೊಂಡಿದ್ದು ೧೧೫ ಟೈಫಾಯಿಡ್ ವಿರುದ್ಧ ಇನಾಕ್ಯುಲೇಷನ್ ಮಾಡಲಾಯಿತು ಎಂದು ಪುರಸಭೆಯು ಹೆಲ್ತಾಫೀಸರ್ ತಿಳಿಸಿರುತ್ತಾರೆ.

ಭಿಕ್ಷುಕರ ದಸ್ತಗಿರಿ

ಪೌರಸಭೆಯವರು ಪೋಲೀಸರ ಸಹಾಯದಿಂದ ಮೊನ್ನೆ ೩೫ ಜನ ಭಿಕ್ಷುಕರನ್ನು ದಸ್ತಗಿರಿಮಾಡಿ ಭಿಕ್ಷುಕರ ಕಾಲೋನಿಗೆ ಕಳುಹಿಸಿರುವರು. ಈ ಕಾಲೋನಿಯು ಈಗ ಭಿಕ್ಷುಕರಿಂದ ತುಂಬಿದೆಯೆಂದು ಗೊತ್ತಾಗಿದೆ.

ಪ್ರಭಾ ಬೆಳಗಿನ ಪ್ರದರ್ಶನ

24-9-52 ರಿಂದ ಪ್ರತಿದಿನ 10--30 ಕ್ಕೆ
ವಿ. ಶಾಂತಾರಾಂರವರ
卐 ದಹೇಜ್ 卐 ಹಿಂದಿ
ಪಾತ್ರ:-ಜಯಶ್ರೀ, ಪೃಥ್ವಿರಾಜ್, ಕರಣದಿವಾನ್ ಮತ್ತು ಲಲಿತಾಪವರ್

ರೇಷನಿಂಗ್ ಆಫೀಸರವರ ಕಛೇರಿ

ಮೈಸೂರು ನಗರ

ನೋಟಿಫಿಕೇಷನ್ ನಂ ಎ|-೮೨|೫೨-೫೩.

ತಾರೀಖು ೧೩-೯-೫೨

ಮೆಮೊ

ದಸರಾ ಮತ್ತು ಮೊಹರಂಗಳಿಗಾಗಿ ಮೈಸೂರುನಗರದಲ್ಲಿರುವ ರೇಷನ್ ಡಿಪೋಗಳು ಮತ್ತು ಮೊಹಲ್ಲಾ ಗೋಡೌನ್‌ಗಳು ಈ ಕೆಳಗೆ ನಮೂದಿಸಿರುವಂತೆ ಮುಚ್ಚಲಾಗುತ್ತದೆ.

೨೯ ನೇ ತಾರೀಖು ಸೋಮವಾರ—ವಿಜಯದಶಮಿ—ಪೂರ್ತಾ ರಜಾ

೩೦ ನೇ ತಾರೀಖು ಮಂಗಳವಾರ—ಮೊಹರಂ ಕೊನೆದಿನ.-ಕಾರ್ಡುದಾರರಿಗೆ ಮೊದಲೇ ತಿಳಿಸಿ ಮುಸ್ಲಿಂಡಿಪೋಗಳಿಗೆ ಮಾತ್ರ ಮಧ್ಯಾಹ್ನ ರಜಾ.

(ಸಹಿ) ಹೆಚ್. ಜಿ. ವಿಜಯರಾಘವರೆಡ್ಡಿ
ರೇಷನಿಂಗ್ ಆಫೀಸರ್.

ಮಹಾತ್ಮರ ಉಪದೇಶ! ೯೨ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ !!!

ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

★ ಸಂತಾನ ಸಿಂಧೂರ ★

† ಬಹಿಷ್ಠೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ † ಅಕ್ರಮಸೂತಕ, ಕ್ರಮತಪ್ಪಿ ಬಹಿಷ್ಠೆ ಆಗುವುದನ್ನು ನಿಲ್ಲಿಸುತ್ತದೆ, † ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ † ಬಂಜೆತನವನ್ನು ಕೊನೆಗಾಣಿಸಿ ಸಂತಾನಕೊಡುವ ಸಿದ್ಧೌಷಧ. ೨ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ ಟಪಾಲ್ ಖರ್ಚು ೧ ರೂ. —(ಪತ್ರವ್ಯವಹಾರ ಗುಪ್ತ.)

ಅಡ್ರೆಸ್:—ಎ. ರಾಮಸ್ವಾಮಿ ಅಯ್ಯರ್ ಸನ್ "ಸಂತಾನಸಿಂಧೂರ" ಆಫೀಸ್, ೬೨೮ ನೂರಡಿರಸ್ತೆ ದಕ್ಷಿಣಕ್ರಾಸ್. (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು.

ವಿ.ಸೂ:—ಇದುವರೆಗೂ ಅಂಬಳೆ ಮತ್ತು ಮೈಸೂರು ಸೊಪ್ಪಿನಕೋಳದ ಬೀದಿಯಲ್ಲಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ನಮ್ಮ ಸ್ವಂತ ಕಟ್ಟಡಕ್ಕೆ ವರ್ಗಾಯಿಸಿರುತ್ತೆ. ವಿಶೇಷ ಮಾಹಿತಿಗೆ ೨ ಆ. ಸ್ಟಾಂಪು ಕಳುಹಿಸಿ.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 31

೨೬-೯-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಇಂಗ್ಲಿಷನ್ನು ರದ್ದುಮಾಡುವುದು ಸರಿಯಲ್ಲ

ಇಂಗ್ಲೀಷು ಕನ್ನಡ ಎರಡು ಬೋಧಕ ಭಾಷೆ ಯಾಗಿರಬೇಕು

ಮುಖ್ಯಮಂತ್ರಿಗಳ ಹೇಳಿಕೆ

ಮೈಸೂರು ಸೆ. ೨೬

ಸಂಸ್ಥಾನದ ಶಿಕ್ಷಣ ಸುಧಾರಣಾ ಸಮಿತಿಯ ಆರಂಭೋತ್ಸವವನ್ನು ಈದಿನ ಬೆಳಗ್ಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕ್ರಾಫರ್ಡ್‌ಹಾಲಿನಲ್ಲಿ ನೆರವೇರಿಸಿದರು. ಸಮಾರಂಭಕ್ಕೆ ಕೇಂದ್ರ ಸರ್ಕಾರದ ವಿದ್ಯಾಶಾಖಾ ಉಪಸಚಿವ ಶ್ರೀಮಾಳವೀಯ, ಶ್ರೀಗಳಾದ ಎ. ಆರ್. ವಾಡಿಯಾ, ರತ್ನಸ್ವಾಮಿ, ರಂಗನಾಥ್‌. ಸಚಿವರು ಮತ್ತು ಇತರ ಪ್ರಮುಖ ಮಹನೀಯರು ದಯಮಾಡಿಸಿದ್ದರು.

ಪ್ರಾರ್ಥನೆಯಾದನಂತರ, ಸಮಿತಿಯ ಕಾರ್ಯದರ್ಶಿ ಶ್ರೀ ಮಲ್ಲಾರಾಧ್ಯರವರು ಶ್ರೀಮನ್ಮಹಾರಾಜರವರಿಂದ ಬಂದ ಶುಭ ಸಂದೇಶವನ್ನು ಓದಿದರು. ರಾಷ್ಟ್ರಹಿತಕ್ಕೆ ವಿರುದ್ಧವಾಗಿರುವ ಈಗಿನ ವಿದ್ಯಾಭ್ಯಾಸ ಕ್ರಮವು ನಮ್ಮ ಅನೇಕ ಕಷ್ಟಗಳಿಗೆ ಕಾರಣವಾಗಿದೆ. ವಿದ್ಯಾಭ್ಯಾಸದ ಉದ್ದೇಶ, ಕ್ರಮ, ವ್ಯವಸ್ಥೆ ಇವುಗಳನ್ನು ಪರಿಶೀಲಿಸಿ ಸದ್ಯದ ಪರಿಸ್ಥಿತಿಗಳಿಗೆ ಅನ್ವಯಿಸುವಂತೆ ರೂಪಗೊಳಿಸುವುದು ಭಾರತದಲ್ಲಿ ಅತ್ಯಾವಶ್ಯಕವಾದ ಕಾರ್ಯವಾಗಿದೆ ಎಂದು ರಾಜಪ್ರಮುಖರು ತಿಳಿಸಿರುತ್ತಾರೆ ವಿದ್ಯಾಸಚಿವರಾದ ಶ್ರೀ ಎ. ಜಿ. ರಾಮಚಂದ್ರರಾಯರು ಸ್ವಾಗತಭಾಷಣ ಮಾಡಿ. ವಿದ್ಯಾಭ್ಯಾಸ ಪದ್ಧತಿಯಲ್ಲಿ ಇದುವರೆವಿಗೂ ನಮ್ಮ ಅಭಿಪ್ರಾಯಗಳು ಯೋಗ್ಯರೀತಿಯಲ್ಲಿ ರೂಪಗೊಳ್ಳಲು ನಮಗೆ ಸ್ವಾತಂತ್ರ್ಯವಿಲ್ಲದೆ ನಮ್ಮ ಕೋರಿಕೆಯು ಆಗಾಗ್ಗೆ ರೋದನವಾಗಿ ಪರಿಣಮಿಸಿತ್ತು. ಆದರೆ ಈಗಿನ ನೂತನ ವಾತಾವರಣದಲ್ಲಿ ನಮಗೆ ಬೇಕಾಗಿದ್ದ ಒಂದು ನಿರ್ದಿಷ್ಟವಾದ ಮತ್ತು ಸಾಧಿಸಬಹುದಾದ ಕಾರ್ಯಕ್ರಮವನ್ನು ಕೈಗೊಳ್ಳಲು ಈ ಸಮಿತಿಯನ್ನು ರಚಿಸಲಾಗಿದೆ ಅದು ದೇಶದ ಸಂಸ್ಕೃತಿಯನ್ನು ಮತ್ತು ಪ್ರಗತಿಗಳನ್ನು ಗಮನದಲ್ಲಿಟ್ಟುಕೊಂಡು ನಾನಾ ಜನಾಂಗಗಳ ಕೂಟದಲ್ಲಿ ಭಾರತವು ಪುನಃ ತನ್ನ ಮುಂದಾಳತ್ವವನ್ನು ಪಡೆಯುವಂತೆ ವಿದ್ಯಾಭ್ಯಾಸಕ್ರಮ ಪುನರ್‌ರಚಿತವಾಗಲೆಂದು ಆಶಿಸಿದರು.

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಮ್ಮ ಭಾಷಣದಲ್ಲಿ ವಿದ್ಯಾಭ್ಯಾಸ ಸುಧಾರಣೆಯ ಸಮಿತಿಯ ಕಾರ್ಯಗಳನ್ನು ವಿವರಿಸಿ, ಇಂತಹಕಾರ್ಯವು ಸರಸ್ವತಿ ಪೂಜೆಯ ಶುಭದಿನದಲ್ಲಿ ಪ್ರಾರಂಭವಾಗುವುದರಿಂದ ಅದು ಸಫಲವಾಗುವುದರಲ್ಲಿ ಸಂದೇಹವಿಲ್ಲವೆಂದು ತಿಳಿಸಿದರು.

ಈಗಿನ ವಿದ್ಯಾಭ್ಯಾಸ ಕ್ರಮವು ದೇಶದ ಪ್ರಗತಿಗೆ ಅಡಚಣೆ ಉಂಟುಮಾಡಿದೆ. ವಿದ್ಯಾಭ್ಯಾಸವು ಯುವಕ ಮತ್ತು ಯುವತಿಯರ ಮತ್ತು ದೇಶದ ಪ್ರಗತಿಗೆ ಉಪಯೋಗವಾಗುವಂತಿರಬೇಕು. ಆದರೆ ಅದನ್ನು ಸಾಧಿಸಲು ಹಿಂದೆ ಪರಕೀಯರ ದಾಸ್ಯದಲ್ಲಿ ಸಿಕ್ಕಿಬಿದ್ದುದರಿಂದ ಸಾಧ್ಯವಿಲ್ಲವಾಗಿತ್ತು. ಈಗ ಸ್ವತಂತ್ರ ದೇಶವಾಗಿರುವಾಗ ನಾವುಗಳು ಅದಕ್ಕೆ ಅನುಗುಣವಾಗಿ ಬದಲಾವಣೆ ಆಗಬೇಕು. ವಿದ್ಯಾಭ್ಯಾಸಸುಧಾರಣೆಗಳಬಗ್ಗೆ ಈಗ ೨೫ ವರ್ಷಗಳಲ್ಲಿ ಅನೇಕ ಸಲಹೆ ಮತ್ತು ವರದಿಗಳು ಬಂದಿವೆ. ಆದರೆ ಅವುಗಳು ದೇಶದ ಜನರ ಅರಿವನ್ನು ತಿಳಿದು ಅದರಿಂದ ದೇಶಕ್ಕೆ ಪ್ರಗತಿಗೆ ಸಾಧಕವಾಗಿಲ್ಲ. ಆದುದರಿಂದ ಈಗಿನ ಸಮಿತಿಯವರು ಕೆಳಗೆಕಂಡಬದಲಾವಣೆಮಾಡಿ ಸುಧಾರಣೆಗಳನ್ನು ನೀಡುವರೆಂದು ತಾವು ಆಶಿಸುತ್ತೇವೆ ಎಂದು ತಿಳಿಸಿದರು.

ನಮ್ಮ ಪ್ರಥಮ ಕರ್ತವ್ಯ ಜನರನ್ನು ವಿದ್ಯಾವಂತರಾಗಿ ಮಾಡುವುದು. ಅದಕ್ಕಾಗಿ ೧೪ ವರ್ಷದ ವರೆಗೂ ಬಲಾತ್ಕಾರ ವಿದ್ಯಾಭ್ಯಾಸಜಾರಿಗೆ ಬರಬೇಕು. ಇದರ ಜೊತೆಗೆ ವಿದ್ಯಾರ್ಥಿಗಳುಕೈಮಣ್ಣು ಮಾಡಿಕೊಂಡು ಉದ್ಯಮದಲ್ಲಿ ತೊಡಗುವಂತೆ ಏರ್ಪಾಡಾಗಬೇಕು. ಈಗಿನ ವಿದ್ಯಾವಂತ ಯುವಕರು ಕೆಲಸವಿಲ್ಲದೆ ನಿರುದ್ಯೋಗಿತನ ಹೆಚ್ಚಾಗಿ ದೇಶಕ್ಕೆ ಹಾನಿಉಂಟಾಗುವುದು. ಆದುದರಿಂದ ವಿದ್ಯಾ[illegible] ಯು[illegible] ಆಕಾಶದಿಂದ ಕೆಳಕ್ಕೆ [illegible] ದು ಭೂಮಿ ಮತ್ತು ಕಾರ್ಖಾನೆಗಳಲ್ಲಿ ಕೆಲಸಮಾಡಬೇಕು ಈಗಿರುವ ಕಾಲಾ[illegible] ಶಿಕ್ಷಣ ಕಾಲಾವಧಿ [illegible] ಜಾದಿನಗಳಲ್ಲಿ ಮಾರ್ಪಾಡಾಗಿ, ವಿದ್ಯಾರ್ಥಿಗಳು ಬೇಸಾಯ ಮತ್ತು ಇತರ ಕಾರ್ಯಗಳಲ್ಲಿ ನೆರವು ನೀಡಲು ಕಾಲಾವಕಾಶವಿರಬೇಕು.

ಈಗಿನ ಮಹಿಳಾ ವಿದ್ಯಾಭ್ಯಾಸ ಅತ್ಯಾವಶ್ಯಕವಾಗಿ ಮಾರ್ಪಾಡಾಗಿ, ಅವರು ಪ್ರಥಮವಾಗಿ ಗೃಹಣಿಯಾಗಲು ಶಿಕ್ಷಣ ಕೊಡಬೇಕು ಯುವತಿಯವರಿಗೆ ಕಾಲೇಜು ಶಿಕ್ಷಣದಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಅವರುಸ ಮಾಜದಲ್ಲಿ ಉತ್ತಮದರ್ಜೆಯನ್ನು ಪಡೆದು ಅದಕ್ಕೆ ಸಹಾಯಕವಾಗುವಂತೆ ವಿದ್ಯಾಭ್ಯಾಸಕ್ರಮ ನಡೆಯಬೇಕು. ಕುಶಲಕಲೆ, ದೇಹಾಧಾರಢ್ಯಮತ್ತು ಮಿಲಟರಿ ಶಿಕ್ಷಣಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಉಪಾಧ್ಯಾಯರುಗಳ ಸಂಖ್ಯೆ ವಿಶೇಷವಾಗಿ ಬೇಕಾಗುವುದರಿಂದ ಅವರುಗಳನ್ನೇ ತರಪೇತುಮಾಡಲು ಸೂಕ್ತ ಶಿಕ್ಷಣ ಕೊಡಬೇಕು ಅವರುಗಳ ಜೊತೆಗೆ ನಿವೃತ್ತರಾದ ಸರ್ಕಾರಿ ನೌಕರರನ್ನು ಸಹಾಯವನ್ನು ಉಪಾಧ್ಯಾಯರ ಕೆಲಸಕ್ಕೆ ಸೇರಿಸಿಕೊಳ್ಳುವುದು ಉತ್ತಮ.

ಬೋಧಕಭಾಷೆ ವಿಚಾರದಲ್ಲಿ ಹಿಂದಿಯು ರಾಷ್ಟ್ರಭಾಷೆಯಾಗಿದ್ದರೂ, ಇಂಗ್ಲೀಷನ್ನು ರದ್ದುಮಾಡಲು ಸಾಧ್ಯವಿಲ್ಲ ಅದು ಇದ್ದೇಇರಬೇಕು ಆದರೆ ಜೊತೆಗೆ ಆಯಾ ಪ್ರಾಂತ ಭಾಷೆಗಳಿಗೆ ಉತ್ತೇಜನ ಕೊಡಬೇಕು. ಮೈಸೂರಿನಲ್ಲಿ ಇಂಗ್ಲೀಷನ್ನು ಬಿಟ್ಟು ಕನ್ನಡ ಮಾಧ್ಯಮ ಮಾಡಲು ಅಷ್ಟು ಸಾಧುವಲ್ಲ. ಕೆಲವು ವಿಷಯಗಳನ್ನು ಮತ್ತು ಇನ್ನುಕೆಲವನ್ನು ಬೋಧಿಸುವುದು ಸೂಕ್ತ ವಿಶ್ವವಿದ್ಯಾನಿಲಯಗಳು ಸಂಪೂರ್ಣವಾಗಿ ಸ್ವಂತವಾಗಿದ್ದು ಸರ್ಕಾರದ ಹತೋಟಿಯಲ್ಲಿರಕೂಡದೆಂದು ಹೇಳುವುದನ್ನು ಒಪ್ಪುವುದಕ್ಕೆ ಆಗುವುದಿಲ್ಲ-ಎಂದು ತಿಳಿಸಿದರು.

ಬಸ್ಸಿಗೂ ಪೆಟ್ರೋಲ್ ಬಂಕಿಗೂ ಬೆಂಕಿ

ಈದಿನ ಬೆಳಗ್ಗೆ ಹಲಗೂರಿಗೆ ಹೋಗುವ ಗಂಗಾಧರ ಬಸ್ ಸರ್ವೀಸ್ ರೈಲ್ವೆಸ್ಟೇಷನ್‌ಬಳಿ ಯಿರುವ ಪೆಟ್ರೋಲ್ ಬಂಕಿನಲ್ಲಿ ಪೆಟ್ರೋಲ್ ಹಾಕಿಸಿಕೊಳ್ಳುತ್ತಲಿರುವಾಗ ಯಾರೋ ಬೀಡಿ ಸೇದಿ ಕಡ್ಡಿ ಎಸೆದಾಗ ಬಸ್ಸು ಮತ್ತು ಬಂಕಿಗೆ ಬೆಂಕಿತಗುಲಿ ಬಸ್ಸುಹತ್ತಿಕೊಂಡುಉರಿದುಹೋಯಿತು.

ವಸ್ತುಪ್ರದರ್ಶನದಲ್ಲಿದ್ದ ಫೈರ್‌ಬ್ರಿಗೇಡ್ ನವರು ಸ್ಥಳಕ್ಕೆ ಧಾವಿಸಿ ಬೆಂಕಿಯನ್ನು ಹತೋಟಿಗೆ ತಂದರು. ಬಸ್ಸಿಗೆಸುಮಾರು ೪-೫ಸಾವಿರ ರೂ, ಪೆಟ್ರೋಲ್‌ಬಂಕಿಗೆ ೧ ಸಾವಿರ ರೂವರೆಗೆ ನಷ್ಟವಾಗಿದೆ ಬಸ್ಸಿನಲ್ಲಿದ್ದ ೧೫ ಜನ ಪ್ರಯಾಣಿಕರಲ್ಲಿ ೩ ಜನಕ್ಕೆ ಸುಟ್ಟಗಾಯಗಳಾಗಿ ಕೂಡಲೇ ಆಸ್ಪತ್ರೆಯಲ್ಲಿ ಚಿಕಿತ್ಸೆನಡೆಯಿತು ದೇವರಾಜ ಪೋಲೀಸರು ತನಿಖೆ ನಡೆಸುತ್ತಲಿದ್ದಾರೆ.

ಶಿಕ್ಷಣ ಸುಧಾರಣ ಸಮಿತಿ ಆರಂಭೋತ್ಸವದಲ್ಲಿ ವಿದ್ಯಾರ್ಥಿಗಳ ಗಲಭೆ

೧೦ ಜನಗಳ ದಸ್ತಗಿರಿ

ಮೈಸೂರು, ಸೆ. ೨೬

ಶಿಕ್ಷಣ ಸುಧಾರಣಾ ಸಮಿತಿಯ ಪ್ರಾರಂಭೋತ್ಸವವು ಈದಿನ ಬೆಳಗ್ಗೆ ಪ್ರಾರಂಭವಾದಾಗ ಸಮಿತಿಯ ಕಾರ್ಯದರ್ಶಿ ಮತ್ತು ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳು ಶ್ರೀ|| ಜೆ. ಬಿ. ಮಲ್ಲಾರಾಧ್ಯರವರು ಶ್ರೀಮನ್ಮಹಾರಾಜರ ಸಂದೇಶವನ್ನು ಇಂಗ್ಲೀಷಿನಲ್ಲಿ ಓದುವಾಗ್ಗೆ ಮತ್ತು ವಿದ್ಯಾಸಚಿವ ಶ್ರೀಎ ಜಿ. ರಾಮಚಂದ್ರರಾಯರು ಮತ್ತು ಮುಖ್ಯಮಂತ್ರಿ ಶ್ರೀ|| ಕೆ. ಹನುಮಂತಯ್ಯನವರು ಇಂಗ್ಲೀಷಿನಲ್ಲಿ ಭಾಷಣ ಮಾಡಿದಾಗ ಪ್ರೇಕ್ಷಕರ ಗುಂಪಿನಲ್ಲಿದ್ದ ವಿದ್ಯಾರ್ಥಿಗಳು ಕನ್ನಡದಲ್ಲಿಯೇ ಭಾಷಣ ಮುಂತಾದುವು ಜರುಗಬೇಕೆಂದು ಕೂಗಿಕೊಂಡು ಗಲಾಟೆ ಮಾಡಿದರು. ಕನ್ನಡಿಗರಲ್ಲದೆ ಇತರರು ಈ ಸಮಾರಂಭದಲ್ಲಿರುವುದರಿಂದ ಅದು ಸಾಧ್ಯವಿಲ್ಲವೆಂದು ಎಷ್ಟು ತಿಳಿಸಿದಾಗ್ಯೂ, ಗಲಭೆಯು ಎಲ್ಲೆ ಮೀರಿತು.

ಇದರ ಪರಿಣಾಮವಾಗಿ ಶ್ರೀಗಳಾದ ಬಿ. ಶ್ರೀಕಂಠಪ್ಪ, ವಿಶ್ವನಾಥ್, ಟಿ. ವಿ. ಶ್ರೀನಿವಾಸರಾವ್, ಶಾಂತಮೂರ್ತಿ, ಶ್ರೀನಿವಾಸಮೂರ್ತಿ, ಶಿವಯ್ಯ, ಎಸ್. ಸುಬ್ಬರಾವ್ ಮುಂತಾದ ೧೦ ಜನರನ್ನು ಪೋಲೀಸಿನವರು ದಸ್ತಗಿರಿ ಮಾಡಿದರು.

ಸಮಿತಿಯ ಆರಂಭೋತ್ಸವವು ಮುಗಿದ ಮೇಲೆ ವಿದ್ಯಾರ್ಥಿಗಳು ಕ್ರಾಫರ್ಡ್ ಭವನದ ಮುಂಭಾಗದಲ್ಲಿ ಬಹಿರಂಗ ಸಭೆ ನಡೆಸಿ ಸರ್ಕಾರದ ನೀತಿಯನ್ನು ಖಂಡಿಸಿ, ದಸ್ತಗಿರಿಯಾದವರೆಲ್ಲಾ ಕೂಡಲೇ ಬಿಡುಗಡೆ ಮಾಡಬೇಕೆಂದು ನಗರದ ನಾನಾಭಾಗಗಳಲ್ಲಿ ಮೆರವಣಿಗೆ ನಡೆಸಿದರು.

ಇದಕ್ಕೆ ಪೂರ್ವ ಕನ್ನಡ ಮಾಧ್ಯಮವಾಗಲಿ ಎಂಬ ಹಸ್ತಪತ್ರಿಕೆಗಳನ್ನು ಸಮಿತಿ ಆ[illegible]ಭೋತ್ಸವ ಕಾಲದಲ್ಲಿ ಈ ವಿದ್ಯಾರ್ಥಿಗಳು ಹಂಚಿದ್ದರು.

ಸ್ಯಾನಿಟೋರಿಯಂ ಸಹಕಾರ ಸಂಘದ ಸರ್ವಸದಸ್ಯರ ಸಭೆ

ರಾಜಕುಮಾರಿ ಕೃಷ್ಣಾಜಮ್ಮಣ್ಣಿ ಕ್ಷಯರೋಗ ಆಸ್ಪತ್ರೆಯ ಸಹಕಾರಸ ಭೆಯ ೭ನೇ ವಾರ್ಷಿಕೋತ್ಸವವು ನಾಳೆಬೆಳಗ್ಗೆ ೧೧ ಗಂಟೆಗೆ ಗೃಹ ಮತ್ತು ಸಹಕಾರಸಚಿವ ಶ್ರೀ ಸಿದ್ದವೀರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಆರೋಗ್ಯಸಚಿವ ಶ್ರೀ ಟಿ. ಚನ್ನಯ್ಯನವರು ಸಭೆಯನ್ನು ಉದ್ಘಾಟಿಸುವರು.

ಹಿಂದಿ ಭಾಷೆಯಿಂದ ಪ್ರಾದೇಶಿಕ ಭಾಷೆಗಳಿಗೆ ಚ್ಯುತಿಯಿಲ್ಲ

ಜನತೆಯಲ್ಲಿ ಶಿಸ್ತು ಅತ್ಯಗತ್ಯ

ಹೈದರಾಬಾದಿನಲ್ಲಿ ಪ್ರಧಾನಿ ನೆಹರೂರವರ ಭಾಷಣ

ದೇಶದ ಪ್ರಗತಿಗಾಗಿ ಜನತೆಯು ಸ್ವತಃ ಪ್ರೇರಿತರಾಗಿ ಪ್ರಯತ್ನಿಸಬೇಕು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿಗೆ ಗಮನವನ್ನು ಕೊಡಬೇಕು. ಸಾರ್ವಜನಿಕ ಜೀವನದಲ್ಲಿ ಶಿಸ್ತು, ಕೋಮುವಾರು ಸೌಹಾರ್ದ್ಯವು ಅತ್ಯಗತ್ಯ. ಮಿಲಿಟರಿಯಲ್ಲಿನಂತೆಯೇ ಸಾರ್ವಜನಿಕ ಜೀವನದಲ್ಲೂ ಶಿಸ್ತು ಇರಬೇಕು. ಯಾವ ವಿಷಯದಲ್ಲಿ ಪ್ರತಿಭಟನೆ ಸೂಚಿಸಬೇಕಾದರು ಶಿಸ್ತಿನಿಂದಲೇ ನಡೆಯಬೇಕು. ಎಂದು ಶ್ರೀ ನೆಹರೂರವರು ಹೈದರಾಬಾದ್ ಮತ್ತು ಸಿಕಂದರಾಬಾದ್ ಕಾರ್ಪೋರೇಷನ್‌ಗಳು ಇತ್ತ ಬಿನ್ನವತ್ತಳೆಗೆ ಉತ್ತರವೀಯುತ್ತಾ ತಿಳಿಸಿದರು.

ಉಸ್ಮಾನಿಯಾ ವಿಶ್ವವಿದ್ಯಾನಿಲಯವನ್ನು ಕೇಂದ್ರ ಸರ್ಕಾರವು ತನ್ನ ಆಡಳಿತಕ್ಕೆ ತೆಗೆದುಕೊಳ್ಳುವ ವಿಷಯವಾಗಿ ಪ್ರಸ್ತಾಪಿಸಿ, ಇದಕ್ಕೆ ವಿರೋಧ ತೋರಿಸುವುದರ ತಮಗರ್ಥವಾಗುವುದಿಲ್ಲ

ಹೈದರಾಬಾದ್‌ನಗರವು ದಖ್ಖಿನ ಪ್ರಮುಖ ನಗರವಾಗಿದೆ ದಖ್ಖಿನ ಮೇಲೆಲ್ಲಾ ಪ್ರಭಾವಯುತವಾದ ಚೈತನ್ಯವನ್ನು ಈ ವಿಶ್ವವಿದ್ಯಾನಿಲಯವು ಬೀರಲು ತಕ್ಕದ್ದಾಗಿದೆ.

ಈ ವಿಶ್ವವಿದ್ಯಾನಿಲಯವನ್ನು ಕೇಂದ್ರವು ವಹಿಕೊಳ್ಳುವುದರಿಂದ ಹೈದರಾಬಾದಿಗೆ ಲಾಭವೇ ಹೊರತು ನಷ್ಟವಿಲ್ಲ. ವಿಶ್ವವಿದ್ಯಾನಿಲಯಮಟ್ಟ, ಆರ್ಥಿಕಸ್ಥಿತಿ ಉತ್ತಮಗೊಳ್ಳುತ್ತದೆ. ಆಡಳಿತವೆಲ್ಲವೂ ಹೈದರಾಬಾದಿನವರೇ ನಡೆಸುವರು ಕೇಂದ್ರದಿಂದ ಇಬ್ಬರು ಅಧಿಕಾರಿಗಳನ್ನು ಮಾತ್ರ ಇಲ್ಲಿಗೆ ಕಳುಹಿಸಲಾಗುತ್ತದೆ.

ಇದಲ್ಲದೆ ಹಿಂದೀ ವಿಶ್ವವಿದ್ಯಾನಿಲಯವನ್ನಾಗಿ ಮಾರ್ಪಡಿಸಿದ ಮಾತ್ರಕ್ಕೆ ಪ್ರಾದೇಶಿಕ ಭಾಷೆಗಳಿಗೆ ಯಾವಚ್ಯುತಿಯೂ ಉಂಟಾಗುವುದಿಲ್ಲ ಹಿಂದಿಯನ್ನು ಇಲ್ಲಿ ಜಾರಿಗೆ ತರಲು ಯೋಚಿಸಲಾಗಿದೆ. ಆದರೆ ಹಠಾತ್ತಾಗಿ ಹಾಗೆ ಮಾಡಲಾಗುವುದಿಲ್ಲ ಕ್ರಮಕ್ರಮವಾಗಿ ಜಾರಿಗೆ ತರಲಾಗುತ್ತದೆ. ಅಗತ್ಯವಾದಷ್ಟು ಕಾಲ ಇಂಗ್ಲೀಷನ್ನು ಉಳಿಸಿಕೊಳ್ಳಬೇಕೆಂಬುದೇ ತಮ್ಮ ಅಭಿಪ್ರಾಯ ಈಭಾಷೆಯಲ್ಲಿರುವ ಜ್ಞಾನಭಂಡಾರವನ್ನು ಕಳೆದು ಕೊಳ್ಳಬಾರದೆಂದು ಪ್ರಧಾನಿ ನೆಹರೂ ತಿಳಿಸಿದರು.

ಶ್ರೀ ಕೆ. ಡಿ. ಮಾಳವೀಯರ ಭಾಷಣ

ಕೇಂದ್ರ ಸರ್ಕಾರದ ವಿದ್ಯಾ, ವಿಜ್ಞಾನ ಪರಿಶೋಧನಾ ಶಾಖೆಯ ಉಪಮಂತ್ರಿಗಳಾದ ಶ್ರೀ ಕೆ. ಡಿ. ಮಾಳವೀಯರವರು ಈ ಮಧ್ಯಾಹ್ನ ಆಹಾರ ಸಂಶೋಧನಾ ಕೇಂದ್ರಕ್ಕೆ ಭೇಟಿಯಿತ್ತು ಅಲ್ಲಿಯ ಅಧಿಕಾರಿವರ್ಗದವರನ್ನುದ್ದೇಶಿಸಿ ಭಾಷಣ ಮಾಡಿದರು.

ಮಲ್ಲೇಶ್ವರಿ ಚಿತ್ರಪ್ರದರ್ಶನ

ಮೈಸೂರು ಸೆ. ೨೬

ವಾಹಿನಿ ಪ್ರೊಡಕ್ಷನ್ಸ್‌ರವರು ತಯಾರಿಸಿರುವ ತಮ್ಮ ನೂತನ ಚಲನಚಿತ್ರವಾದ "ಮಲ್ಲೀಶ್ವರಿ" ಯನ್ನು ಈದಿನ ಮಧ್ಯಾಹ್ನ ಗಾಯತ್ರಿಟಾಕೀಸ್‌ನಲ್ಲಿ ಪ್ರಥಮಬಾರಿ ಪ್ರದರ್ಶನ ಪ್ರಾರಂಭಿಸಿದರು ಈ ಸಮಾರಂಭಕ್ಕೆ ಕಂಪೆನಿಯ ಡೈರೆಕ್ಟರಾದ ಶ್ರೀ ಬಿ. ಎನ್. ರೆಡ್ಡಿಯವರು ಮೈಸೂರುನಗರದ ಪುರಪ್ರಮುಖರು ಅನೇಕ ಅಧಿಕಾರಿಗಳು ಮುಂತಾದವರನ್ನು ಆಹ್ವಾನಿಸಿ ಸತ್ಕರಿಸಿದರು.

ಮತದಾನ ಪೆಟ್ಟಿಗೆಯಲ್ಲಿ ಹಣ

ಮದರಾಸಿನಲ್ಲಿ ನಡೆಯುತ್ತಲಿರುವ ಪೌರಚುನಾವಣೆಯ ಮತದಾನದ ಚೀಟಿಗಳನ್ನು ಎಣಿಕುವಾಗ ಒಂದು ಚೀಟಿಯ ಜೊತೆಯಲ್ಲಿ ಒಂದು ರೂಪಾಯಿನ ನೋಟು ಇದ್ದುದು ಕಂಡುಬಂದಿತು.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಅಪೇರ ೨೬-೯-೫೨ ರಿಂದ ಪ್ರತಿದಿನ ೩ ಆಟಗಳು
ವಿಜಯಾರವರ
ಕಲ್ಯಾಣಂ‌— ಪಣ್ಣಿಪಾರ್
[ತಮಿಳು]
ಪಾತ್ರ:—ವರಲಕ್ಷ್ಮಿ, ಸಾವಿತ್ರಿ
ಎನ್. ಟಿ. ರಾಮರಾವ್

ರಣಜಿತ್
26-9-52ರಿಂದ ಅಮೋಘ ಪ್ರಾರಂಭ
ನೀಲಮ್‌ಪಾರಿ
NEELAMPARI
ಪಾತ್ರ:--ಗೀತಾಬಾಲಿ, ಸಜ್ಜನ್, ಸಪ್ರು, ಗೋಪ್, ಕುಲ್‌ದೀಪ್

ರೇಷನಿಂಗ್ ಆಫೀಸರವರ ಕಛೇರಿ

ಮೈಸೂರು ನಗರ

ನೋಟಿಫಿಕೇಷನ್ ನಂ ಎ|-೮೨|೫೨-೫೩. ತಾರೀಖು ೧೩-೯-೫೨

ಮೆಮೊ

ದಸರಾ ಮತ್ತು ಮೊಹರಂಗಳಿಗಾಗಿ ಮೈಸೂರುನಗರದಲ್ಲಿರುವ ರೇಷನ್ ಡಿಪೋಗಳು ಮತ್ತು ಮೊಹಲ್ಲಾ ಗೋಡೌನ್‌ಗಳು ಈ ಕೆಳಗೆ ನಮೂದಿಸಿರುವಂತೆ ಮುಚ್ಚಲಾಗುತ್ತದೆ.

೨೯ ನೇ ತಾರೀಖು ಸೋಮವಾರ—ವಿಜಯದಶಮಿ—ಪೂರ್ತಾ ರಜಾ

೩೦ ನೇ ತಾರೀಖು ಮಂಗಳವಾರ—ಮೊಹರಂ ಕೊನೆದಿನ--ಕಾರ್ಡುದಾರರಿಗೆ ಮೊದಲೇ ತಿಳಿಸಿ ಮುಸ್ಲಿಂಡಿಪೋಗಳಿಗೆ ಮಾತ್ರ ಮಧ್ಯಾನ್ಹ ರಜಾ.

(ಸಹಿ) ಹೆಚ್. ಜಿ. ವಿಜಯರಾಘವರೆಡ್ಡಿ
ರೇಷನಿಂಗ್ ಆಫೀಸರ್.

ಕಾಶ್ಮೀರ ಸಂಧಾನ ವಿಫಲವೆಂದು ಗ್ರಹಾಂರವರ ವರದಿ

ಭಾರತ ಪಾಕೀಸ್ಥಾನಗಳೊಡನೆ ಕಾಶ್ಮೀರ ಸಂಧಾನ ಬಗ್ಗೆ ತಾವು ನಡೆಸಿದ ಮಾತುಕತೆಗಳೆಲ್ಲವೂ ಫಲದಾಯಕವಾಗದೆ ಸಂಧಾನ ಮುರಿದುಬಿತ್ತೆಂದು ವಿಶ್ವಸಂಸ್ಥೆಯ ಕಾಶ್ಮೀರ ಮಧ್ಯಸ್ಥಿಕೆಗಾರರಾದ ಡಾ|| ಗ್ರಹಾಂರವರು ವಿಶ್ವಸಂಸ್ಥೆಗೆ ವರದಿ ಮಾಡಿರುವುದಾಗಿ ಗೊತ್ತಾಗಿದೆ.

'ಫ್ಲಡ್‌ಲೈಟ್' ಸ್ಪರ್ಧೆ

ಮೈಸೂರು ದಸರಾವಸ್ತು ಪ್ರದರ್ಶನಾಶ್ರಯದಲ್ಲಿ ೨೬ ನೇ ತಾರೀಖು ಸಂಜೆ ೭ ಗಂಟೆಗೆ ಪುರುಷರ ಮತ್ತು ಅಕ್ಟೋಬರ್ ೪ ನೇ ತಾರೀಖು ಮಹಿಳೆಯರ ಫ್ಲಡ್‌ಲೈಟ್ ಸ್ಪರ್ಧೆ ನಡೆಯುತ್ತದೆ.

ಅಂದವಾದ ಮುದ್ರಣಕ್ಕೆ
ಕರ್ನಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)
For
NEAT AND PROMPT PRINTING
Contact:
CARNATAK PRINTERS
GANDHI SQUARE, MYSORE
Phone 892 or 574

ವುಡ್‌ಲ್ಯಾಂಡ್ಸ್
೨೬-೯-೫೨ರಿಂದ ಅಮೋಘ ೨ನೇ ವಾರ
ಪ್ರತಿ ದಿನ ೩ ಆಟಗಳು
* ರಾಮಜನ್ಮ *
(ಹಿಂದಿ)
ಪಾತ್ರ:
ನಿರೂಪರಾಯ್. ತ್ರಿಲೋಕ್ ಕಪೂರ್

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 32

೨೭-೯-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಮೈಸೂರು ಜಿಲ್ಲೆಯ ಆಹಾರ ಪರಿಸ್ಥಿತಿ

ಗುಂಡ್ಲುಪೇಟೆ, ಯಳಂದೂರು ತಾಲ್ಲೂಕುಗಳಲ್ಲಿ

ಪರಿಸ್ಥಿತಿ ಹದಗೆಟ್ಟಿದೆ

ಮೈಸೂರು ಸೆ. ೨೬

ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪ ಮತ್ತು ಆಹಾರ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ಬುಧವಾರ ಮತ್ತು ಗುರುವಾರ ಮೈಸೂರು ಜಿಲ್ಲೆಯ ಹಲವಾರು ಪ್ರದೇಶಗಳಲ್ಲಿ ಪ್ರವಾಸಮಾಡಿ ಆಹಾರ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಿದರು.

ನಂಜನಗೂಡು, ಯಳಂದೂರು, ಚಾಮರಾಜನಗರ, ಗುಂಡ್ಲುಪೇಟೆ, ಹುಣಸೂರು ಮತ್ತು ಪಿರಿಯಾಪಟ್ಟಣಗಳು ಮತ್ತು ಅಲ್ಲಿನ ಅನೇಕ ಹಳ್ಳಿಗಳಿಗೆ ಭೇಟಿ ಇತ್ತು, ಅಲ್ಲಿನ ಜನರ ಕುಂದು ಕೊರತೆಗಳನ್ನು ವಿಚಾರಿಸಿದರು.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ದುಸ್ಥಿತಿ ಉಂಟಾಗಿ ಜನಗಳು ಹೊಟ್ಟೆಗಿಲ್ಲದೆ ಅತಿ ಕಷ್ಟಪಡುತ್ತಿರುವುದು ಕಂಡುಬಂದಿತು. ಜೊತೆಗೆ ಜನರಿಗೂ ಮತ್ತು ಜಾನುವಾರುಗಳಿಗೂ ಸಹ ಕುಡಿಯುವ ನೀರಿನ ಅಭಾವ ವುಂಟಾಗಿದೆ. ಮಳೆ ಇಲ್ಲದೆ ಪೈರುಗಳೆಲ್ಲಾ ಸಂಪೂರ್ಣವಾಗಿ ನಾಶವಾಗಿದೆ ಕೂಡಲೇ ಪರಿಹಾರ ಕಾರ್ಯವನ್ನು ಕೈಗೊಂಡು ಬಡಜನರಿಗೆ ಉದ್ಯೋಗ ಕಲ್ಪಿಸಿಕೊಡಬೇಕೆಂದು ಜನರು ಮನವಿ ಮಾಡಿಕೊಂಡರು ಖಾಸಗೀ ಕಂಟ್ರಾಕ್ಟರುಗಳಿಗೆ ಕೊಡದೆ ಇಂಜನಿಯರಿಂಗ್ ಶಾಖೆಯವರೇ ಪರಿಹಾರ ಕಾರ್ಯವನ್ನು ಕೂಡಲೇ ಪ್ರಾರಂಭಿಸಬೇಕೆಂದೂ ಮತ್ತು ವಾರಕ್ಕೆ ಒಂದಾವರ್ತಿ ಜನರಿಗೆ ಕೂಲಿಯನ್ನು ಕೊಡಬೇಕೆಂದೂ ರೆವಿನ್ಯೂ ಸಚಿವರು ಎಕ್ಸಿಕ್ಯೂಟಿವ್ ಇಂಜನಿಯರಿಗೆ ಸೂಚನೆ ಕೊಟ್ಟರು.

ಯಳಂದೂರಿಗೆ ಸಚಿವರುಗಳು ಭೇಟಿ ಇತ್ತಾಗ, ಅಲ್ಲಿನ ತಾಲ್ಲೂಕು ಜನರು ತಮ್ಮ ದುಸ್ಥಿತಿಯನ್ನು ವಿವರಿಸಿದರು ಕಳೆದ ೩-೪ ವರ್ಷಗಳಿಂದ ಮಳೆ ಇಲ್ಲದೆ ತಾಲ್ಲೂಕಿನಲ್ಲಿ ಪೈರು ಒಣಗಿ ಹೋಗಿದೆ. ೧೪ ಸಾವಿರ ಎಕರೆ ಜಮೀನು ಪೈಕಿ, ಕೇವಲ ೧ ಸಾವಿರ ಎಕರೆಯಲ್ಲಿ ಮಾತ್ರ ಸ್ವಲ್ಪ ಪೈರು ಬೆಳೆಯಲಾಗಿದೆ. ಅದೂ ಕೂಡ ಈಗ ಒಣಗಿ ಹೋಗುತ್ತಿದೆ. ತಾಲ್ಲೂಕಿನಲ್ಲಿ ಕೆರೆಗಳು ಬತ್ತಿ ಹೋಗಿವೆ ಈ ಪ್ರದೇಶವನ್ನು ಕೂಡಲೇ ಕ್ಷಾಮ ಪ್ರದೇಶವೆಂದು ಸಾರಿ ಕೆರೆಗಳನ್ನು ರಿಪೇರಿ ಮಾಡಿಸಿ, ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಜನರು ಪ್ರಾರ್ಥಿಸಿಕೊಂಡರು.

ಸಂಸ್ಥಾನದ ಮುಕ್ಕಾಲು ಪ್ರದೇಶಗಳಲ್ಲಿ ಆಹಾರ ದುಸ್ಥಿತಿ ಉಂಟಾಗಿದೆ. ೫೦ ವರ್ಷಗಳಲ್ಲಿ ಒದಗಿದ್ದ ಕ್ಷಾಮ ಪರಿಸ್ಥಿತಿ ಸಂಸ್ಥಾನದಲ್ಲಿ ಈಗ ಉಂಟಾಗಿದೆ. ಜನರು ಧೈರ್ಯಗೆಡದೆ ಸರ್ಕಾರದೊಡನೆ ಸಹಕರಿಸಿ ಈ ಪರಿಸ್ಥಿತಿಯನ್ನು ಎದುರಿಸಬೇಕು. ಒಬ್ಬ ಪ್ರಜೆಯೂ ಹೊಟ್ಟೆಗಿಲ್ಲದೆ ಸಾಯದಂತೆ ಸರ್ಕಾರದವರು ನೋಡಿಕೊಳ್ಳುವರು. ಆದರೆ ಈ ಕಾರ್ಯದಲ್ಲಿ ಜನರ ಸಹಕಾರ ಅತ್ಯಗತ್ಯ ಎಲ್ಲಿ ಅಗತ್ಯವೋ ಅಲ್ಲೆಲ್ಲಾ ಪರಿಹಾರ ಕಾರ್ಯ ಕೈಗೊಳ್ಳಲಾಗುವುದು. ಅವಶ್ಯಕವಿದ್ದ ಕಡೆ ಆಹಾರ ಡಿಪೋಗಳನ್ನು ತೆರೆಯಲು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಎಂದು ಸಚಿವರು ತಿಳಿಸಿದರು.

ಇಂತಹ ದುಸ್ಥಿತಿಯಲ್ಲೂ ಕೆಲವರು ಹಣದ ಆಶೆಗಾಗಿ ಕಾಳಸಂತೆಯಲ್ಲಿ ಆಹಾರಧಾನ್ಯಗಳನ್ನು ಹೊರಕ್ಕೆ ಸಾಗಿಸುತ್ತಿರುವರೆಂದು ತಮಗೆ ದೂರು ಬರುತ್ತಿರುವುದನ್ನು ನೋಡಿದರೆ ಅವರುಗಳು ಮನುಷ್ಯರೇ ಅಲ್ಲವೆಂದು ಕಾಣುತ್ತದೆ. ಅಂತಹವರನ್ನು ಜನರು ಹಿಡಿದು ಕೊಡಬೇಕು. ಮತ್ತು ಅವರ ಮೇಲೆ ಉಗ್ರ ಕಾರ್ಯಕ್ರಮ ಕೈಗೊಳ್ಳಲಾಗುವುದು.

ಚಾಮರಾಜನಗರದ ತಾಲ್ಲೂಕಿನಲ್ಲಿ ಲ್ಲಾ ಸಹ ಮಳೆ ನಿಂತು ಪೈರುಗಳು ಹಾಳಾಗಿವೆ. ಅಲ್ಲೂ ಕೂಡ ಪರಿಹಾರ ಕಾರ್ಯ ಕೈಗೊಳ್ಳಬೇಕೆಂದು ಜನರು ಪ್ರಾರ್ಥಿಸಿಕೊಂಡರು. ಈ ಪ್ರದೇಶದ ಆಲೂರು ಮುಂತಾದ ಹಳ್ಳಿಗಳಲ್ಲಿ ಸೆಣಬು ಹೂವುಗಳನ್ನು ಜನರು ತಿಂದು ಜೀವಿಸುತ್ತಿದ್ದಾರೆ.

ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ ಪೈರುಗಳು ಒಣಗಿ ಹೋಗುತ್ತಿದೆ. ಆದರೆ ಈ ಪ್ರದೇಶಗಳಲ್ಲಿ ಆಹಾರ ದುಸ್ಥಿತಿ ಅಷ್ಟು ಇಲ್ಲದೆ, ಜನರಿಗೂ ಮತ್ತು ಜಾನುವಾರುಗಳಿಗೂ ಕುಡಿಯುವ ನೀರು ಇಲ್ಲ. ಎಲ್ಲಾ ಕಡೆಗಳಲ್ಲೂ ಬಾವಿಗಳನ್ನು ತೆಗೆಸಬೇಕೆಂದು ಜನರು ಮನವಿ ಮಾಡಿಕೊಂಡರು.

ಸಂಸ್ಥಾನ ಕ್ಷಾಮ ಪರಿಹಾರ ನಿಧಿಗೆ ೨ ಸಾವಿರ ರೂ.

ಮೈಸೂರು ಸೆ. ೨೬

ಮೈಸೂರು ಕ್ಷಾಮಪರಿಹಾರ ನಿಧಿಗೆ ಪುರಸಭೆಯು ೨ ಸಾವಿರ ರೂಪಾಯಿಗಳನ್ನು ಕೊಡಲು ತೀರ್ಮಾನಿಸಿದೆ.

ಡಾ|| ವಿಶ್ವೇಶ್ವರಯ್ಯನವರಿಗೆ ಪೌರಸನ್ಮಾನ

ರಾಜಧಾನಿಯ ಪೌರಸಭೆಯ ಸಾಮಾನ್ಯ ಅಧಿವೇಶನವು ಮೊನ್ನೆ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆದು ಮಾಜಿದಿವಾನ್ ಡಾ|| ಎಂ. ವಿಶ್ವೇಶ್ವರಯ್ಯನವರು ಶ್ರೀ ಕೃಷ್ಣರಾಜಒಡೆಯರ ಶಿಲಾಪ್ರತಿಮೆಯನ್ನು ಅನಾವರಣ ಮಾಡಲು ನಗರಕ್ಕೆ ಆಗಮಿಸಿದಾಗ ಅವರನ್ನು ಸನ್ಮಾನಿಸಲು ಒಂದು ಸಮಾರಂಭವನ್ನು ಏರ್ಪಡಿಸಬೇಕೆಂದು ತೀರ್ಮಾನಿಸಿತು. ಇದಕ್ಕಾಗಿ ೫೦೦ ರೂ. ವೆಚ್ಚವನ್ನು ಮಂಜೂರ್‌ಮಾಡಿದೆ.

ಗಲಭೆಮಾಡಿದವಿದ್ಯಾರ್ಥಿಗಳ ಮೇಲೆ ಮೊಕದ್ದಮೆ

ಮೈಸೂರು ೨೬

ನಿನ್ನೆಬೆಳಿಗ್ಗೆ ಕ್ರಾಫರ್ಡ್‌ಹಾಲಿನಲ್ಲಿ ಶಿಕ್ಷಣ ಸುಧಾರಣಾ ಸಮಿತಿಯ ಆರಂಭೋತ್ಸವ ಕಾಲದಲ್ಲಿ ನಡೆದ ಸಂಬಂಧದಲ್ಲಿ ದಸ್ತಗಿರಿಯಾದ ೧೩ ಜನ ವಿದ್ಯಾರ್ಥಿಗಳ ಮೇಲೆ ನಗರದ ದ್ವಿತೀಯ ನ್ಯಾಯಾಧೀಶರ ಮುಂದೆ ೫೬ ನೇ ಪೊಲೀಸ್ ಕಾನೂನು ಪ್ರಕಾರ ಮೊಕದ್ದಮೆ ಹೂಡಲಾಯಿತು. ಅವರುಗಳು ತಲಾ ೧೦೦ ರೂನಂತೆ ಜಾಮೀನುಮೇಲೆ ಬಿಡುಗಡೆ ಮಾಡಬಹುದೆಂದು ನ್ಯಾಯಾಧೀಶರು ಆಜ್ಞೆ ಮಾಡಿದರು ಆದರೆ ವಿದ್ಯಾರ್ಥಿಗಳು ಜಾಮೀನು ಕೊಡಲು ನಿರಾಕರಿಸಿದುದರಿಂದ ಅವರುಗಳನ್ನು ಮೈಸೂರು ಜೈಲಿಗೆ ಕಳುಹಿಸಲಾಯಿತು. ಮೊಕದ್ದಮೆಯನ್ನು ಅಕ್ಟೋಬರ್ ೧ ನೇ ತಾರೀಖಿಗೆ ಹಾಕಲಾಗಿದೆ.

ಜಿಲ್ಲಾಧಿಕಾರಿಗಳ ಆಜ್ಞೆಪ್ರಕಾರ ನಿನ್ನೆ ರಾತ್ರಿ ಎಲ್ಲರನ್ನೂ ಸ್ವಂತ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಸೂಚನೆ

ವಿಜಯದಶಮಿ ಪ್ರಯುಕ್ತ ಸೋಮವಾರ ಪತ್ರಿಕೆಗೆ ರಜಾ.

ಸಂಪಾದಕ.

ಆದಿಕರ್ಣಾಟಕರ ಕುಂದು ಕೊರತೆಗಳು

ಮೈಸೂರು ಸೆ. ೨೬

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಗರದ ಆದಿಕರ್ಣಾಟಕ ಪುರಕ್ಕೆ ಮೊನ್ನೆ ದಿನ ಭೇಟಿಇತ್ತಾಗ ಅಲ್ಲಿನ ನಿವಾಸಿಗಳು ಬಿನ್ನವತ್ತಳೆಯನ್ನು ಅರ್ಪಿಸಿ ತಮ್ಮ ಕುಂದುಕೊರತೆಗಳನ್ನು ತಿಳಿಸಿದರು ಈ ಪ್ರದೇಶದಲ್ಲಿ ೧೫೦೦ ಸಂಸಾರಗಳಿದ್ದು ಕೇವಲ ೮೦೦ ಮನೆಗಳು ಇದೆ ಜನರು ವಿಶೇಷ ಕಷ್ಟಪಡುತ್ತಿದ್ದಾರೆ. ಕೂಡಲೇ ಇನ್ನೂ ೭೦೦ ಮನೆಗಳನ್ನು ಕಟ್ಟಲು ಸಹಾಯಮಾಡಬೇಕು ತಮಗೆ ಸೇರಿದ ವಿಳ್ಳೇದೆಲೆ ತೋಟಗಳನ್ನು ಟ್ರಸ್ಟ್‌ಬೋರ್ಡಿನವರು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಮುಂಚೆ ಅವರುಗಳಿಗೆ ಸೂಯೆಜ್‌ಫಾರಂ ಮತ್ತು ಅದರ ಪಕ್ಕದಲ್ಲಿರುವ ಜಮೀನುಗಳನ್ನು ಸಾಗುವಳಿಗೆ ಬಿಟ್ಟುಕೊಡಬೇಕು ದಸರಾಮಹೋತ್ಸವಕಾಲದಲ್ಲಿ ಅರಮನೆಮುಂದೆ ಕುಸ್ತಿ ವಗೈರೆಗಳಲ್ಲಿ ತಮ್ಮ ಜನಾಂಗದವರು ಭಾಗವಹಿಸಲು ಅವಕಾಶಕೊಡಬೇಕು. ಎಂದು ಪ್ರಾರ್ಥಿಸಿಕೊಂಡರು.

ಅನಂತಪುರ-ಬಳ್ಳಾರಿ ಜಿಲ್ಲೆಗಳಲ್ಲಿ ಜನರು ಎಲೆಗಳನ್ನು ತಿನ್ನುತ್ತಿದ್ದಾರೆ

ಅನಂತಪುರ ಮತ್ತು ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಕಳೆದ೩೦ ವರ್ಷಗಳಿಂದಲೂ ಬಾರದಂತಹ ಉಗ್ರ ಕ್ಷಾಮ ತಲೆದೋರಿರುವುದಾಗಿ ಆ ಭಾಗಗಳಲ್ಲಿ ಪ್ರವಾಸಮಾಡಿ ಮದ್ರಾಸಿಗೆ ಹಿಂತಿರುಗಿದ ಗ್ರಾಮಾಭಿವೃದ್ಧಿಶಾಖಾಸಚಿವ ಶ್ರೀ ಎಸ್. ಬಿ. ಪಿ. ಪಟ್ಟಾಭಿರಾಮರಾಯರು ಹೇಳಿರುವರು ಈ ಜಿಲ್ಲೆಗಳಲ್ಲಿ ಕೆಲವು ಭಾಗಗಳಲ್ಲಿ ಜನರು ಮರದ ಎಲೆಗಳನ್ನು ತಿಂದು ಜೀವಿಸುತ್ತಲಿದ್ದಾರೆಂದು ಹೇಳಲಾಗಿದೆ.

ಸೈನ್ಯದ ಅನೇಕ ಅಧಿಕಾರಿಗಳ ನಿವೃತ್ತಿ

ಈಜಿಪ್ಟಿನಲ್ಲಿ ಜ|| ನಗೀಬರ ಸರ್ಕಾರವು ನೂರಾರು ಉನ್ನತ ಸೈನ್ಯಾಧಿಕಾರಿಗಳನ್ನು ನಿವೃತ್ತಗೊಳಿಸಿರುವುದಲ್ಲದೆ, ಆಡಳಿತ ಮುಖ್ಯಾಧಿಕಾರಿಗಳ ಅನೇಕ ಹುದ್ದೆಗಳಿಗೆ ಸೈನ್ಯಾಧಿಕಾರಿಗಳನ್ನು ನೇಮಿಸಿದೆ.

ಮಾರಾಟ ತೆರಿಗೆ ವಿರುದ್ಧ

ವ್ಯಾಪಾರ ಹರತಾಳ

ಬೊಂಬಾಯಿ ವರ್ತಕರ ಮತ್ತು ವ್ಯಾಪಾರಸ್ಥರ

ನಿರ್ಧಾರ

ಬಹುಮುಖ್ಯ ಮಾರಾಟ ತೆರಿಗೆ ನೀತಿಯನ್ನು ವಿರೋಧಿಸಲು ಮತ್ತು ಮೋಟಾರು ಸಂಚಾರ ಆಪರೇಟರುಗಳಿಗೆ ಸಹಾನುಭೂತಿಯನ್ನು ವ್ಯಕ್ತಪಡಿಸಲು ಅಕ್ಟೋಬರ್ ಒಂದನೇ ತಾರೀಖಿನದಿನ ಬೊಂಬಾಯಿಲ್ಲಿರುವ ಎಲ್ಲಾ ವರ್ತಕರು ಮತ್ತು ಇತರ ವ್ಯಾಪಾರಸ್ಥರು ಹರತಾಳವನ್ನು ಆಚರಿಸಲು ನಿರ್ಧರಿಸಿದ್ದಾರೆ.

ಅದೇ ದಿನದಲ್ಲಿ ಬೊಂಬಾಯಿಪ್ರಾಂತ್ಯದಾದ್ಯಂತ ಮೋಟಾರು ಸಂಚಾರ ಆಪರೇಟರುಗಳು ಅನಿರ್ದಿಷ್ಟಕಾಲದ ಮುಷ್ಕರವನ್ನು ಪ್ರಾರಂಭಿಸುವರು ಸರ್ಕಾರವು ಮೋಟಾರು ವೆಹಿಕಲ್‌ಟ್ಯಾಕ್ಸ್‌ಕಾನೂನಿ ಬಗ್ಗೆ ಅವರ ತೊಂದರೆಗಳನ್ನು ನಿವಾರಿಸುವವರೆಗೂ ಅವರುಗಳು ಮೋಟಾರು ಸಂಚಾರವನ್ನು ನಿಲ್ಲಿಸಲಿದ್ದಾರೆಂದು ಗೊತ್ತಾಗಿದೆ.

ಭಾರತಕ್ಕೆ ವಿಶ್ವಬ್ಯಾಂಕಿನ ಸಾಲ

ಭಾರತಕ್ಕೆ ವಿಶ್ವಬ್ಯಾಂಕಿನಿಂದ ಸಾಲ ಕೊಡುವ ವಿಷಯದಲ್ಲಿ ಮಾತುಕತೆ ನಡೆಸಲು ಅಮೆರಿಕಾಕ್ಕೆ ತೆರಳಿದ್ದ ಭಾರತ ಕೈಗಾರಿಕಾ ಕಾರ್ಪೊರೇಷನ್ನಿನ ಡೈರೆಕ್ಟರು ಸಧ್ಯಕ್ಕೆ ಹಿಂತಿರುಗಿದರು.

ವಿಶ್ವಬ್ಯಾಂಕಿನ ಇಬ್ಬರು ಅಧಿಕಾರಿಗಳು ಭಾರತಕ್ಕೆಬಂದಿರುವರು. ಈ ಸಾಲಕ್ಕೆ ಸಂಬಂಧಪಟ್ಟ ವಿಷಯಗಳು ಸದ್ಯದಲ್ಲೇ ಅಂತ್ಯತೀರ್ಮಾನಕ್ಕೆ ಬರುವುದಾಗಿ ಗೊತ್ತಾಗಿದೆ.

ರೆವಿನ್ಯೂ ಕಮಿಷನರ್ ಮದ್ರಾಸಿಗೆ

ರಷ್ಯಾದಿಂದ ಬಂದಿರುವ ಆಹಾರಪದಾರ್ಥಗಳ ಹಂಚಿಕೆಯ ಬಗ್ಗೆ ರೆಡ್‌ಕ್ರಾಸ್‌ಸಂಸ್ಥೆಯ ಸೆಕ್ರೆಟರಿ ಜನರಲ್‌ರವರೊಡನೆ ಸಮಾಲೋಚನೆ ನಡೆಸಲು ರೆವಿನ್ಯೂ ಕಮಿಷನರ್ ಶ್ರೀ ಎ. ಮಾಧವರಾಯರು ಮದ್ರಾಸಿಗೆ ಹೋಗಿರುವರು.

ಶ್ರೀ ಕೆ. ಸಿ. ರೆಡ್ಡಿ ಮೈಸೂರಿಗೆ

ಬೆಂಗಳೂರು ಸೆ. ೨೭

ಕೇಂದ್ರಸರ್ಕಾರದ ಉತ್ಪಾದನಾಶಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ನಾಳೆ ಬೆಳಗ್ಗೆ ಬೆಂಗಳೂರಿಗೆ ಆಗಮಿಸಿ ನವರಾತ್ರಿಮಹೋತ್ಸವದಲ್ಲಿ ಭಾಗವಹಿಸಲು ಅಂದೇ ಮೈಸೂರಿಗೆ ಆಗಮಿಸುವರು.

ರಾಜಸಭೆ ವಿಶೇಷ ಆಹ್ವಾನಕ್ಕೆ ನಿರಾಕರಣೆ

ಮೈಸೂರಿನ ಘನತೆಗಳು ದಿನೇದಿನೇ ಪ್ರಜಾಸರ್ಕಾರದಲ್ಲಿ ನಶಿಸುತ್ತಿರುವುದಲ್ಲದೆ ಅರಮನೆ ದರ್ಬಾರನ್ನು ರಾಜಸಭೆಎಂದು ಕರೆದು, ದೇವಸಿಂಹಾಸನೆದುರಿನಲ್ಲಿ ಬೆಂಚುಗಳಲ್ಲಿ ಕೂಡಿ ರಾಜಭಕ್ತಿಯನ್ನು ವ್ಯಕ್ತಪಡಿಸಲು ತಮಗೆ ವಿಶೇಷ ಆಹ್ವಾನ ಬಂದಿದ್ದರೂ ಭಾಗವಹಿಸಲು ನಿರಾಕರಿಸಿರುವುದಾಗಿ ಬೆಂಗಳೂರಿನ ಶ್ರೀ ಡಿ. ಎ. ಕೃಷ್ಣಯ್ಯಶೆಟ್ಟಿಯವರು ತಿಳಿಸಿರುತ್ತಾರೆ.

ಪಿ. ಬಿ. ಶ್ರೀನಿವಾಸನ್ ಟ್ರೂಮನ್ ಭೇಟಿ

ತಾಯಿನಾಡು ಪತ್ರಿಕಾ ಸಂಪಾದಕರಾದ ಶ್ರೀ ಪಿ. ಬಿ. ಶ್ರೀನಿವಾಸನ್‌ರವರಿಗೆ ಅಮೆರಿಕಾ ಅಧ್ಯಕ್ಷ ಟ್ರೂಮನ್ನರು ತಮ್ಮ ಅಧಿಕೃತ ನಿವಾಸವಾದ ವೈಟ್‌ಹೌಸಿನಲ್ಲಿ ಕಳೆದವಾರ ಭೇಟಿ ನೀಡಿದ್ದರು.

ಭಾರತದ ಭಾಷಾ ಪತ್ರಿಕೆಯೊಂದರ ಸಂಪಾದಕರನ್ನು ಭೇಟಿಮಾಡಿದುದು ತುಂಬಾ ಹರ್ಷದಾಯಕವಾಗಿದೆ-ಎಂದು ಅಧ್ಯಕ್ಷ ಟ್ರೂಮನ್ನರು ತಿಳಿಸಿದರು.

ವಿಶೇಷ ಆಹ್ವಾನದಮೇಲೆ ಶ್ರೀ ಪಿ. ಬಿ. ಶ್ರೀನಿವಾಸನ್‌ರವರು ಅಧ್ಯಕ್ಷ ಟ್ರೂಮನ್ನರ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಮಿ|| ಡೀನ್ ಏಚಿಸನ್‌ರ ಪತ್ರಿಕಾ ಸಮ್ಮೇಳನದಲ್ಲಿ ಹಾಜರಿದ್ದರು.

ಕೇರಳದಲ್ಲಿ ವಿರೋಧ ಪಕ್ಷದವರ ಉಗ್ರಕಾರ್ಯಕ್ರಮ

ತಿರುವಾಂಕೂರು-ಕೊಚ್ಚಿ ಪ್ರಾಂತ್ಯದಲ್ಲಿ ನಿರುದ್ಯೋಗವನ್ನು ಪರಿಹಾರಮಾಡಲು ಸರ್ಕಾರವು ಕೂಡಲೇ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತೆ ಬಲವಂತಮಾಡಲು ಯುನೈಟೆಡ್‌ಫ್ರಂಟ್ ಪಕ್ಷವು ಉಗ್ರಕಾರ್ಯಕ್ರಮವನ್ನು ತೆಗೆದುಕೊಳ್ಳಲುನಿರ್ಧರಿಸಿರುವುದಾಗಿ ಪಕ್ಷದನಾಯಕ ಪಾರ್ಲಿಮೆಂಟ್ ಸದಸ್ಯ ಶ್ರೀ ಆರ್. ಶ್ರೀಕಂಠನ್ ನಾಯರ್‌ರವರು ಹೇಳಿಕೆಯಿತ್ತಿದ್ದಾರೆ.

ಪ್ರಾಂತ್ಯದಲ್ಲಿ ಅನೇಕಕಡೆ ಅಭಾವ ಪರಿಸ್ಥಿತಿ ತಲೆದೋರಿ ಬಹಳ ಕಾಲವಾದಾಗ್ಯೂ ಸರ್ಕಾರವು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಪರಿಹಾರ ಕಾರ್ಯಗಳನ್ನು ನಡೆಸಲು ಖಾಸಗಿ ಸಮಿತಿಗಳನ್ನು ನೇಮಿಸಲಾಯಿತು. ಸರ್ಕಾರವು ಕ್ಷಾಮಪರಿಸ್ಥಿತಿಯನ್ನು ಈಗ ಮನಗಂಡು ತಾವು ಪರಿಹಾರ ಕಾರ್ಯವನ್ನು ಎಸಗುವುದಾಗಿ ಹೇಳುತ್ತಾ ಈಗಿರುವ ಖಾಸಗಿ ಪರಿಹಾರ ಸಮಿತಿಗಳನ್ನು ಜನರು ಬಹಿಷ್ಕರಿಸುವಂತೆ ಬೋಧಿಸುತ್ತಲಿದ್ದಾರೆ. ಅಲ್ಲದೆ ದೇಶದಲ್ಲಿರುವ ಎಲ್ಲಾ ಕಾರ್ಮಿಕ ಸಂಘಗಳನ್ನು ಸದೆಬಡಿಯಲು ಪ್ರಯತ್ನಿಸುತ್ತಲಿದ್ದಾರೆ. ವಿವೇಚನೆಯಿಲ್ಲದೆ ಅನೇಕ ಕಾರ್ಮಿಕರ ದಸ್ತಗಿರಿಯಾಗಿದೆ.

ಈ ಸಂಬಂಧದಲ್ಲಿ ಅಕ್ಟೋಬರ್ ೩೦ನೇ ತಾರೀಖು ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಆದಿನ ದೇಶಾದ್ಯಂತ ಪ್ರದರ್ಶನಗಳನ್ನು ನಡೆಸಲಾಗುತ್ತದೆ ಎಂದು ಶ್ರೀ ಶ್ರೀಕಂಠನ್ ನಾಯರ್‌ರವರು ಹೇಳಿರುತ್ತಾರೆ.

ರಣಜಿತ್

೨೬-೯-೫೨ರಿಂದ ಅಮೋಘ ಪ್ರಾರಂಭ

ನೀಲಮ್‌ಪಾರಿ

NEELAMPARI

ಪಾತ್ರ:--ಗೀತಾಬಾಲಿ, ಸಜ್ಜನ್, ಸಪ್ರು, ಗೋಪ್, ಕುಲ್‌ದೀಪ್

ವೈಜ್ಞಾನಿಕ ರೀತಿಯ ವ್ಯವಸಾಯ

ಭೂಪಾಲಿನಲ್ಲಿ ಪ್ರಯೋಗಾರ್ಥವಾಗಿ ೧೦,೦೦೦ ಎಕರೆ ಭೂಮಿಯನ್ನೆಲ್ಲಾ ವೈಜ್ಞಾನಿಕ ರೀತಿಯಲ್ಲಿ ಯಂತ್ರಗಳ ಸಹಾಯದಿಂದ ವ್ಯವಸಾಯಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.

ಅಪೇರ ೨೬-೯-೫೨ ರಿಂದ ಪ್ರತಿದಿನ ೩ ಆಟಗಳು

ವಿಜಯಾರವರ

ಕಲ್ಯಾಣಂ—ಪಣ್ಣಿಪಾರ್

[ತಮಿಳು]

ಪಾತ್ರ:—ವರಲಕ್ಷ್ಮಿ, ಸಾವಿತ್ರಿ ಎನ್. ಟಿ. ರಾಮರಾವ್

ವುಡ್‌ಲ್ಯಾಂಡ್ಸ್

೨೬-೯-೫೨ರಿಂದ ಅಮೋಘ ೨ನೇ ವಾರ

ಪ್ರತಿ ದಿನ ೩ ಆಟಗಳು

* ರಾಮ್‌ಜನ್ಮ *

(ಹಿಂದಿ)

ಪಾತ್ರ:-

ನಿರೂಪರಾಯ್, ತ್ರಿಲೋಕ್ ಕಪೂರ್

ರೇಷನಿಂಗ್ ಆಫೀಸರವರ ಕಛೇರಿ

ಮೈಸೂರು ನಗರ

ನೋಟಿಫಿಕೇಷನ್ ನಂ ಎ|-೮೨|೫೨-೫೩

ತಾರೀಖು ೧೩-೯-೫೨

ಮೆಮೊ

ದಸರಾ ಮತ್ತು ಮೊಹರಂಗಳಿಗಾಗಿ ಮೈಸೂರುನಗರದಲ್ಲಿರುವ ರೇಷನ್ ಡಿಪೋಗಳು ಮತ್ತು ಮೊಹಲ್ಲಾ ಗೋಡೌನ್‌ಗಳು ಈ ಕೆಳಗೆ ನಮೂದಿಸಿರುವಂತೆ ಮುಚ್ಚಲಾಗುತ್ತದೆ.

೨೯ ನೇ ತಾರೀಖು ಸೋಮವಾರ— ವಿಜಯದಶಮಿ—ಪೂರ್ತಾ ರಜಾ

೩೦ ನೇ ತಾರೀಖು ಮಂಗಳವಾರ— ಮೊಹರಂ ಕೊನೆದಿನ.-ಕಾರ್ಡುದಾರರಿಗೆ ಮೊದಲೇ ತಿಳಿಸಿ ಮುಸ್ಲಿಂಡಿಪೋಗಳಿಗೆ ಮಾತ್ರ ಮಧ್ಯಾಹ್ನ ರಜಾ.

(ಸಹಿ) ಹೆಚ್. ಜಿ. ವಿಜಯರಾಘವರೆಡ್ಡಿ
ರೇಷನಿಂಗ್ ಆಫೀಸರ್.

ಮಹಾತ್ಮರ ಉಪದೇಶ! ೯೨ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ!!!

ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

★ ಸಂತಾನ ಸಿಂಧೂರ ★

† ಬಹಿಷ್ಠೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ. † ಅಕ್ರಮಸೂತಕ, ಕ್ರಮತಪ್ಪಿ ಬಹಿಷ್ಠೆ ಆಗುವುದನ್ನು ನಿಲ್ಲಿಸುತ್ತದೆ, † ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ. † ಬಂಜೆತನವನ್ನು ಕೊನೆಗಾಣಿಸಿ ಸಂತಾನಕೊಡುವ ಸಿದ್ಧೌಷಧ. ೨ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ ಟಪಾಲ್ ಖರ್ಚು ೧ ರೂ. —(ಪತ್ಯ್ಮಮಹಾರ ಗುಪ್ತ.)

ಅಡ್ರೆಸ್ :—ಎ. ರಾಮಸ್ವಾಮಿ ಅಯ್ಯರ್ ಸನ್ "ಸಂತಾನಸಿಂಧೂರ" ಆಫೀಸ್, ೬೨ಲ ನೂರಡಿರಸ್ತೆ ದಕ್ಷಿಣಕ್ರಾಸ್, (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು.

ವಿ.ಸೂ :—ಇದುವರೆಗೂ ಅಂಬಳೆ ಮತ್ತು ಮೈಸೂರು ಸೊಪ್ಪಿನಕೊಳದ ಬೀದಿಯುಳ್ಳಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ನಮ್ಮ ಸ್ವಂತ ಕಟ್ಟಡಕ್ಕೆ ವರ್ಗಾಯಿಸಿರುತ್ತೆ. ವಿಶೇಷ ಮಾಹಿತಿಗೆ ೨ ಅ. ಸ್ಟಾಂಪು ಕಳುಹಿಸಿ.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 33

೩೦-೯-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ವಿಶ್ವವಿದ್ಯಾನಿಲಯಗಳಲ್ಲಿ ಸೊಗಸಿನ ಠೀವಿಗಾರರ ತಯಾರಿಕೆ ಬೇಕಿಲ್ಲ

ಜಲಂಧರದಲ್ಲಿ ರಾಷ್ಟ್ರಾಧ್ಯಕ್ಷರ ಭಾಷಣ

ಈಗಿನ ವಿದ್ಯಾಭ್ಯಾಸ ಪದ್ಧತಿಯನ್ನು ಮಾರ್ಪಾಡು ಮಾಡಲು ದೇಶದ ಪ್ರಗತಿಯ ಕಡೆ ಹೆಚ್ಚು ಗಮನವನ್ನು ಕೊಟ್ಟು ಬಹಳ ಜಾಗರೂಕತೆಯಿಂದ ವರ್ತಿಸಬೇಕಾಗಿದೆ. ವಿಶ್ವವಿದ್ಯಾನಿಲಯಗಳಲ್ಲಿ ಈಗಿರುವಂತೆ ಉದ್ಯೋಗಪಡೆಯುವ ಸೊಗಸಿನ ಠೀವಿಗಾರರ ತಯಾರಿಕೆ ಬೇಕಿಲ್ಲ. ದೇಶದ ಪ್ರಗತಿಗಾಗಿ ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸುವ ರೀತಿಯ ತರಪೇತು ಪಡೆದ ವಿದ್ಯಾರ್ಥಿಗಳು ನಮಗೆ ಬೇಕಾಗಿದೆ. ಎಂದು ರಾಷ್ಟ್ರಾಧ್ಯಕ್ಷರು ಜಲಂಧರ್‌ನಲ್ಲಿ ವಿಶ್ವವಿದ್ಯಾನಿಲಯದಲ್ಲಿ ಮಾತನಾಡುತ್ತಾ ಹೇಳಿದರು.

ಮಹಿಳೆಯರ ವಿಷಯವಾಗಿ ಪ್ರಸ್ತಾಪಿಸಿ ಮಹಿಳೆಯರಿಗೆ ಕಾರ್ಖಾನೆ, ಕಛೇರಿಗಳಿಗಿಂತ ಮನೆಯಲ್ಲಿಯೇ ಹೆಚ್ಚು ಕೆಲಸವಿದೆ. ಅವರು ಗೃಹಕೃತ್ಯದ ಜೊತೆಗೆ ಸಾಮಾಜಿಕ ಚಟುವಟಿಕೆಯಲ್ಲಿ ಪ್ರವೇಶಿಸಿ ದೇಶಸೇವೆಯನ್ನು ಮಾಡಬೇಕಾಗಿಗೆ ಎಂದು ರಾಷ್ಟ್ರಾಧ್ಯಕ್ಷರು ಹೇಳಿದರು.

ಇನ್ಷೂರ್ಡ್ ಕವರಿನಲ್ಲಿ ಖಾಲಿ ಕಾಗದ

ಅಂಚೆ ಗುಮಾಸ್ತನ ದಸ್ತಗಿರಿ

ಬೆಂಗಳೂರು, ಸೆ. ೩೦

ಬೆಂಗಳೂರಿನ ವರ್ತಕರೊಬ್ಬರು ೨೫-೯-೫೨ ನೇ ತಾ|| ದಿನ ಹೊರ ಪ್ರದೇಶದ ಮಿತ್ರೊಬ್ಬ ವರ್ತಕರಿಗೆ ೨೦೦೦ ರೂ.ಗಳ ನೋಟನ್ನುಳ್ಳ ಇನ್ಷೂರ್ಡ್ ಕವರನ್ನು ಕಳುಹಿಸಿದರು. ವಿಳಾಸದಾರರು ಅದನ್ನು ಪಡೆದು ನೋಡಲಾಗಿ ಖಾಲಿ ಕಾಗದ ಮಾತ್ರವಿತ್ತು. ಈ ದೂರಿನ ಮೇಲೆ ಬೆಂಗಳೂರುಸಿಟಿ ಪೋಸ್ಟಾಫೀಸಿನ ರಿಸೀವಿಂಗ್ ಕ್ಲಾರ್ಕ್ ಪಿ. ಎಸ್. ಕೋದಂಡರಾಮಯ್ಯನವರನ್ನು ಕೆಂಗೇರಿಗೇಟ್ ಪೋಲೀಸ್‌ನವರು ದಸ್ತಗಿರಿ ಮಾಡಿ ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಮೋಟಾರು ಸೈಕಲ್ ಅಪಘಾತದಲ್ಲಿ ಒಬ್ಬನ ಮರಣ

ಬೆಂಗಳೂರು, ಸೆ. ೩೦

ದಸರಾ ಮಹೋತ್ಸವಕ್ಕಾಗಿ ಮೊನ್ನೆ ಬೆಂಗಳೂರಿನಿಂದ ಮೈಸೂರಿಗೆ ಮೋಟಾರು ಸೈಕಲ್ ಮೇಲೆ ಕುಳಿತು ಉಜ್ಜನಪ್ಪ ಮತ್ತು ಜೈರಾಮ್ ಎಂಬುವವರು ಚನ್ನಪಟ್ಟಣದ ಬಳಿ ಬರುತ್ತಿದ್ದಾಗ ಎಮ್ಮೆಗೆ ಡಿಕ್ಕಿ ಹೊಡೆಯಿತು. ಕೂಡಲೇ ಇಬ್ಬರು ಬಿಟ್ಟು ವಿಶೇಷ ಗಾಯಗಳಾದುವು. ಉಜ್ಜನಪ್ಪ ಎಂಬುವರು ನಿನ್ನೆಯದಿನ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಡಿದರು ಜೈರಾಂ ಚನ್ನಪಟ್ಟಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಪರ್ಷಿಯಾ ಎಣ್ಣೆ ಕೊಳ್ಳಲು ಅಮೆರಿಕಾ ಒಪ್ಪಿಗೆ

ದಿನ ಒಂದಕ್ಕೆ ೧೦ ಸಾವಿರಟನ್ ಎಣ್ಣೆಯನ್ನು ಕೊಳ್ಳಲು ತಾವು ಪರ್ಷಿಯಾ ಪ್ರಧಾನಿ ಡಾ|| ಮುಸಾದಿಕ್‌ರೊಡನೆ ಒಪ್ಪಂದಕ್ಕೆ ಬಂದಿರುವುದಾಗಿ ಅಮೆರಿಕದ ಸಿಟೀಸ್ ಸರ್ವಿಸ್ ಆಯಿಲ್ ಕಂಪೆನಿಯ ಡೈರೆಕ್ಟರ್ ಮಿ|| ವಿಲಿಯಂ ಆಲ್ಬರ್‌ರವರು ಹೇಳಿದ್ದಾರೆ.

ಪರ್ಷಿಯಾ ಆರ್ಥಿಕ ಬಲಾತ್ಕಾರಕ್ಕೆ ಒಳಪಡಿಸುವ ಮೂಲಕ ಶರಣಾಗತವಾಗುವಂತೆಬ್ರಿಟನ್‌ನೀತಿಫಲಕಾರಿಯಾಗುವುದಿಲ್ಲ ಅದು ತಪ್ಪುನೀತಿ ಯಾವರಾಷ್ಟ್ರವನ್ನೂ ಈರೀತಿ ನಾಶಮಾಡಲು ಸಾಧ್ಯವಿಲ್ಲವೆಂದು ಅವರು ಹೇಳಿರುವುದಾಗಿ ವರದಿಯಾಗಿದೆ.

ಕನ್ನಡ ಶಿಕ್ಷಣ ಮಾಧ್ಯಮವಾಗಿಬೇಕು

ಮೈಸೂರು, ಸೆ. ೩೦

ರಾಜಧಾನಿಯ ಕನ್ನಡ ಮಾಧ್ಯಮ ಸಮಿತಿಯ ಆಶ್ರಯದಲ್ಲಿ ಮೊನ್ನೆ ಟೌನ್‌ಹಾಲಿನಲ್ಲಿ "ವಿದ್ಯಾಭ್ಯಾಸದಲ್ಲಿ ಕನ್ನಡ ಮಾಧ್ಯಮ" ಎಂಬ ವಿಷಯವಾಗಿ ಸಾರ್ವಜನಿಕ ವಿಚಾರಗೋಷ್ಠಿಯೊಂದು ಶ್ರೀ|| ಕೆ. ಸಂಪದ್ಗಿರಿರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಗಳಾದ ನಾ. ಭದ್ರಯ್ಯ, ಕೆ. ಪುಟ್ಟಸ್ವಾಮಿ, ಬಿ. ಎಲ್. ಸುಬ್ಬಮ್ಮ, ಎಂ. ಪಿ. ಎಲ್. ಶಾಸ್ತ್ರಿ, ಎಚ್. ಎಸ್. ದೊರೆಸ್ವಾಮಿ, ರಾಮಸ್ವಾಮಿ ಮತ್ತು ಇತರರು ಕನ್ನಡ ಮಾಧ್ಯಮದ ಅವಶ್ಯಕತೆಯನ್ನು ಕುರಿತು ಭಾಷಣ ಮಾಡಿದರು. ಶಿಕ್ಷಣದ ಪದ್ಧತಿಯ ಎಲ್ಲ ಮಟ್ಟಗಳಲ್ಲೂ ಕನ್ನಡ ಮಾಧ್ಯಮವಾಗಿರಬೇಕು ಎಂಬ ನಿರ್ಣಯವಾಯಿತು.

ಜಿಲ್ಲಾಬೋರ್ಡು ಸಭೆ

ಮೈಸೂರು, ಸೆ. ೩೦

ಮೈಸೂರು ಜಿಲ್ಲಾ ಬೋರ್ಡು ಸಾಮಾನ್ಯ ಅಧಿವೇಶನವು ಅಕ್ಟೋಬರ್ ೯ ನೇ ತಾರೀಖು ಮಧ್ಯಾಹ್ನ ಒಂದು ಗಂಟೆಗೆ ಜಿಲ್ಲಾ ಭವನದಲ್ಲಿ ನಡೆಯುತ್ತದೆ.

ಮೈಸೂರು ರೇಸ್

ನಾಳೆ ನಡೆಯಬೇಕಾಗಿದ್ದ ಕುದುರೆ ಪಂದ್ಯವು ೨ನೇ ತಾರೀಖು ನಡೆಯುತ್ತದೆ.

§ ಕೈಮಗ್ಗದ ನೆಯ್ಗೆಯವರ ಬಗ್ಗೆ ಮಿಲ್ಲ ಗಿರಣಿ ಮಾಲೀಕರು ಸಹಾನುಭೂತಿಯಿಂದ ವರ್ತಿಸಬೇಕೆಂದು ಕೇಂದ್ರ ಕೈಗಾರಿಕಾ ಸಚಿವರು ಹೇಳಿರುವರು.

ಹೈದರಾಬಾದ್ ಪ್ರವಾಸ ಮುಕ್ತಾಯ

ಪ್ರಧಾನಿ ನೆಹರೂರವರು ಹೈದರಾಬಾದ್‌ನಲ್ಲಿ ೬ ದಿನ ಪ್ರವಾಸವನ್ನು ಮುಕ್ತಾಯಗೊಳಿಸಿ ದೆಹಲಿಗೆ ಹಿಂತಿರುಗಿದರು. ಅದಕ್ಕೆ ಮುನ್ನ ಪ್ರಧಾನಿ ನೆಹರೂರವರು ತುಂಗಾಭದ್ರಾ ಜಲಾಶಯಕ್ಕೆ ಭೇಟಿಯನ್ನಿತ್ತಿದ್ದರು.

ರೆವಿನ್ಯೂ ಸಚಿವರಲ್ಲಿ ನಿಯೋಗ

ನಾಚನಹಳ್ಳಿ ಕಿಸಾನ್ ಪಂಚಾಯಿತಿಯವರು ಶ್ರೀ ಮೀರ್‌ನೂರ್ ಹುಸೇನರವರ ನಾಯಕತ್ವದಲ್ಲಿ ರೆವಿನ್ಯೂ ಮಂತ್ರಿಗಳಾದ ಶ್ರೀ ಕಡಿದಾಳರವರನ್ನು ಭೇಟಿಮಾಡಿ ತಮ್ಮ ಕುಂದು ಕೊರತೆಗಳನ್ನು ವಿವರಿಸಿದರು. ಮಂತ್ರಿಗಳು ಹಳ್ಳಿಗರ ಶೋಚನೀಯ ಪರಿಸ್ಥಿತಿಗಾಗಿ ಅನುತಾಪ ವ್ಯಕ್ತಪಡಿಸಿ ಕೂಡಲೇ ತಕ್ಕ ಕಾರ್ಯಕ್ರಮ ಕೈಗೊಳ್ಳುವುದಾಗಿ ಭರವಸೆಯಿತ್ತರು.

ಜಿಲ್ಲಾಧಿಕಾರಿಗಳಿಗೆ ಅಪಘಾತ

ಮೈಸೂರು ಸೆ. ೩೦

ನಿನ್ನೆ ಜಂಬೂಸವಾರಿಯು ಹಿಂತಿರುಗುತ್ತಿದ್ದಾಗ, ಸೆಂಟ್‌ಫಿಲೋಮಿನಾ ಕಾಲೇಜುಬಳಿ ಆನೆಮರಿಗಳ ಗಲಾಟೆಗೆ ಮೈಸೂರು ಜಿಲ್ಲಾಧಿಕಾರಿ ಶ್ರೀ ಮಹಮದ್ ಅಹಮದ್‌ರವರು ಸವಾರಿಮಾಡಿಕೊಂಡು ಬರುತ್ತಿದ್ದ ಕುದುರೆಯು ಹೆದರಿ ಮೇಲಕ್ಕೆ ಹಾರಿತು. ಕಡಿವಾಣವು ಕಡಿದು, ಆಯತಪ್ಪಿ ಶ್ರೀ ಮಹಮದ್ ಅಹಮದ್‌ರವರು ಕೆಳಗೆ ಬಿದ್ದರು. ಕುದುರೆಯು ಅವರ ಮೇಲೆ ಬಿದ್ದು ಶ್ರೀಯುತರಿಗೆ ವಿಶೇಷ ಗಾಯಗಳಾಗಿ ಅಂಬುಲೆನ್ಸಿನಲ್ಲಿ ಕೂಡಲೇ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸಾಗಿಸಲಾಯಿತು. ರಾತ್ರಿಯಿಂದ ವಿಶೇಷ ಚಿಕಿತ್ಸೆ ನಡೆಯುತ್ತಿದೆ. ಅವರು ಜ್ಞಾನ ಅಜ್ಞಾನದಿಂದ ಕೂಡಿರುವರು. ಸ್ಥಿತಿ ಇನ್ನೂ ಚಿಂತಾಜನಕವಾಗಿದೆಯೆಂದು ಹೇಳಲಾಗುತ್ತಿದೆ.

ನಿನ್ನೆ ರಾತ್ರಿಯಿಂದ ಮುಖ್ಯಮಂತ್ರಿ ಮತ್ತು ಇತರ ಮಂತ್ರಿಗಳು, ಅನೇಕ ಅಧಿಕಾರಿಗಳು, ಸಹಸ್ರಾರುಜನರು ಆಸ್ಪತ್ರೆಗೆ ಭೇಟಿಯಿತ್ತು ಅವರ ಆರೋಗ್ಯದಬಗ್ಗೆ ತವಕಪಡುತ್ತಿದ್ದಾರೆ.

ಕೇಂದ್ರ ಕ್ಷಾಮ ಪರಿಹಾರ ಸಮಿತಿ ರಚನೆ

ಮೈಸೂರು, ಸೆ. ೩೦

ಕ್ಷಾಮ ಪರಿಸ್ಥಿತಿಯನ್ನು ಚರ್ಚಿಸಲು ಸಮಾವೇಶಗೊಂಡಿದ್ದ ಮಹಾ ಸಮ್ಮೇಳನದಲ್ಲಿ ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ೩೦ ಜನರನ್ನೊಳಗೊಂಡ ಸಮಿತಿಯೊಂದನ್ನು ರಚಿಸಿ ಮಾಡಲಾಯಿತು.

ಸಮ್ಮೇಳನವು ೬ನಿರ್ಣಯಗಳನ್ನು ಅಂಗೀಕರಿಸಿತು. ಕ್ಷಾಮ ನಿವಾರಣಾ ಕಾರ್ಯಕ್ಕೆ ಕೇಂದ್ರವು ಹಣ ಮತ್ತು ಧಾನ್ಯ ಸಹಾಯ ನೀಡಬೇಕು. ಜಾಯಿಂಟ್ ಸ್ಟಾಕು ಕಂಪೆನಿ, ಪೇರುದಾರರು ಕ್ಷಾಮ ಪರಿಹಾರನಿಧಿಗೆ ಹಣ ಸಹಾಯ ನೀಡಲು ಅನುಕೂಲವಾಗುವಂತೆ ಕೇಂದ್ರ ಸರ್ಕಾರವು ಒಂದು ಆರ್ಡಿನೆನ್ಸ್ ಹೊರಡಿಸಬೇಕು, ಭದ್ರ, ತುಂಗಾ ಮತ್ತು ನುಗು ಜಲಾಶಯಗಳ ನಿರ್ಮಾಣ ಕಾರ್ಯ ಪೂರ್ಣಗೊಳಿಸಬೇಕು ಎಂಬ ನಿರ್ಣಯಗಳಾದುವು.

ಸಂಸ್ಥಾನದಲ್ಲಿ ೫೦ ಲಕ್ಷ ಜನ ಕಷ್ಟಪರಿಸ್ಥಿತಿಯಲ್ಲಿರುವರು

ಕೇಂದ್ರಸರ್ಕಾರ ಧನ, ಧಾನ್ಯ ಇತರ ಸಹಾಯ ಒದಗಿಸಬೇಕು

ಮೈಸೂರಿನಲ್ಲಿ ನಡೆದ ವಿಶೇಷ ಸಭೆಯ ತೀರ್ಮಾನ

ಮೈಸೂರು ಸೆ. ೩೦

ಈಸಾರಿ ಮಳೆ ಬಾರದ ಪ್ರಯುಕ್ತ ಸಂಸ್ಥಾನದಲ್ಲಿ ಮೂರನೇ ಒಂದುಭಾಗಕ್ಕಿಂತಲೂ ಹೆಚ್ಚಿನ ಪ್ರದೇಶದಲ್ಲಿ ಆಹಾರ ಕಷ್ಟ ತಲೆದೋರಿದೆ. ಸುಮಾರು ೩೦-೩೫ ಲಕ್ಷ ಜನರು, ಅಸಂಖ್ಯಾತ ಜಾನುವಾರುಗಳು ಅದರ ಪೀಡೆಗೆ ಗುರಿಯಾಗಿರುವುದುನನ್ನು ದುರಾದೃಷ್ಟ. ಮೂರುಜಿಲ್ಲೆಗಳಲ್ಲಿ ಅಭಾವ ತಲೆದೋರಿ ಇತರ ಜಿಲ್ಲೆಗಳಿಗೂ ಹರಡುತ್ತಿದೆ. ೧೫೦೦೦ ಚದುರ ಮೈಲಿಗಿಂತಲೂ ಹೆಚ್ಚಿಗೆ ವಿಸ್ತಾರವಾಗಿದ್ದು ೫೫ ಲಕ್ಷ ಜನರನ್ನೊಳಗೊಂಡ ೪೩ ತಾಲ್ಲೂಕುಗಳಲ್ಲಿ ಈ ದುಸ್ಥಿತಿ ಒದಗಿದೆ. ಇಂತಹ ಪರಿಸ್ಥಿತಿ ಹಿಂದೆ ಯಾವಾಗಲೂ ಸಂಭವಿಸಿದ್ದಂತೆ ಕಾಣುವುದಿಲ್ಲ.

ಭಾರತ ಪ್ರಧಾನಿ ನೆಹರೂರವರು ಈ ಪರಿಸ್ಥಿತಿಯನ್ನು ಪರಿಶೀಲಿಸಲು ಒಂದು ವಾರಕಾಲ ಈ ಪ್ರದೇಶಗಳಿಗೆ ಭೇಟಿಕೊಡಲು ಬರುವರು.

ಈ ಅಭಾವ ಪರಿಸ್ಥಿತಿ ಸಮಸ್ಯೆ ಪರಿಹಾರ ಕಾರ್ಯವು ಕೇಂದ್ರದ ಜವಾಬ್ದಾರಿಯೂ ಆಗಿರುವುದರಿಂದ ಸಾಕಷ್ಟು ಸಹಾಯನೀಡುವಂತೆ ಅವರನ್ನು ಪ್ರಾರ್ಥಿಸಲಾಗುತ್ತದೆ. ಕೇಂದ್ರವು ಹೆಚ್ಚಿನ ಸಹಾಯ ನೀಡದಿದ್ದರೆ ಸಂಸ್ಥಾನಸರ್ಕಾರಕ್ಕೆ ಈ ಪರಿಸ್ಥಿತಿಯನ್ನು ಎದುರಿಸಲು ಕಷ್ಟವಾಗುತ್ತದೆ. ಕೇಂದ್ರಸರ್ಕಾರವು ಇಲ್ಲಿಯುವರೆಗೆ ಯಾವ ಸಹಾಯವನ್ನೂ ನೀಡಿಲ್ಲ. ಕಷ್ಟಪೀಡಿತ ಪ್ರದೇಶಗಳಿಗೆ ಸಹಾಯ ಒದಗಿಸುದು ತನ್ನ ಜವಾಬ್ದಾರಿಯೆಂದು ಭಾರತ ಸರ್ಕಾರವು ಆಲೋಚಿಸುತ್ತಿಲ್ಲ. ರಾಜ್ಯಾಂಗಪ್ರಕಾರ ಪ್ರಜೆಗಳೆಲ್ಲರೂ ಭಾರತ ಪ್ರಜೆಗಳೇವಿನಹ ಯಾವುದೊಂದು ನಿರ್ದಿಷ್ಟ ಪ್ರಾಂತ್ಯದ ಪ್ರಜೆಗಳಲ್ಲ. ಈ ಭಾವನೆಯು ಕೇಂದ್ರದ ಆರ್ಥಿಕ ಮಂತ್ರಿಗಳಿಗೆ ಅಷ್ಟಾಗಿ ಹಿಡಿಸದೇ ಇರುವುದು ಅತ್ಯಂತ ವ್ಯಥೆಯನ್ನುಂಟುಮಾಡುತ್ತಿದೆ. ಕೇವಲ ಮಾನವೀಯತೆ ದೃಷ್ಟಿಯಿಂದ ಕೂಡ ಜನಗಳು ಸಂಕಟಪಡುತ್ತಿರುವಾಗ ರಾಜ್ಯಾಂಗ ರಚನೆಯ ಗ್ರಂಥಸ್ಥ ನಿಯಮಗಳನ್ನೆಲ್ಲಾ ಒಟ್ಟಿಗೆ ತೊಡೆದುಹಾಕಬೇಕು ಮತ್ತು ಸಂಸ್ಥಾನದ ಸರ್ಕಾರಗಳೂ ಕೇಂದ್ರ ಸರಕಾರವೂ ಒಟ್ಟಿಗೆ ಸೇರಿ ಪ್ರಯತ್ನಮಾಡಿ ಕಷ್ಟಪೀಡಿತರಾದ ಪ್ರಜೆಗಳಿಗೆ ಸಾಕಷ್ಟು ಸಹಾಯ ನೀಡಬೇಕಾಗಿದೆ-ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೊನ್ನೆ ಯದಿನ ಪುರಭವನದಲ್ಲಿ ಸಂಸ್ಥಾನದ ಆಹಾರ ಪರಿಸ್ಥಿತಿಯಬಗ್ಗೆ ಚರ್ಚಿಸಲು ಏರ್ಪಡಿಸಿದ್ದ ಗಣ್ಯ ಪ್ರಮುಖರ ವಿಧಾನಸಭೆ ಮತ್ತು ಇತರ ಸ್ಥಳೀಯ ಸಂಸ್ಥೆಗಳ ಸದಸ್ಯರ ಸಮ್ಮೇಳನದಲ್ಲಿ ಮಾತನಾಡುತ್ತಾ ಹೇಳಿದರು.

ಶ್ರೀ ರೆಡ್ಡಿಯವರ ಅವಿರೋಧ ಚುನಾವಣೆ

ಬೆಂಗಳೂರು, ಸೆ. ೩೦

ಕೇಂದ್ರ ಸರ್ಕಾರದ ಉತ್ಪನ್ನಶಾಖಾ ಸಚಿವ ಶ್ರೀ|| ಕೆ. ಸಿ. ರೆಡ್ಡಿಯವರು ಕೇಂದ್ರ ಕೌನ್ಸಿಲ್ ಆಫ್ ಸ್ಟೇಟಿಗೆ ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಶ್ರೀ|| ತಿಮ್ಮಾಬೋವಿಯವರ ರಾಜೀನಾಮೆ ಕೊಟ್ಟ ಸ್ಥಾನಕ್ಕೆ ಶ್ರೀ|| ರೆಡ್ಡಿಯವರೊಬ್ಬರೇ ಅರ್ಜಿಯನ್ನು ಸಲ್ಲಿಸಿದ್ದಾರೆ.

ಲೇಕ್ ವ್ಯೂ ಭವನಕ್ಕೆ ನೂತನ ನಾಮಧೇಯ

ಮೈಸೂರು, ಸೆ. ೩೦

ಮುಖ್ಯಮಂತ್ರಿಯವರ ಮೈಸೂರಿನ ಅಧಿಕೃತ ನಿವಾಸವಾದ 'ಲೇಕ್ ವ್ಯೂ' ಭವನಕ್ಕೆ ವಿಜಯದಶಮಿ ದಿನ 'ಜಲದರ್ಶಿನಿ' ಎಂಬ ಹೊಸ ನಾಮಕರಣವನ್ನು ಮಾಡಲಾಗಿದೆ.

೫ನೇ ತಾ|| ನೆಹರೂರವರ ಆಗಮನ

ಮೈಸೂರು, ೩೦

ಭಾರತ ಸರ್ಕಾರದ ಪ್ರಧಾನ ಮಂತ್ರಿ ಪಂ|| ನೆಹರೂರವರು ಬರುವ ತಿಂಗಳು ೫ ನೇ ತಾರೀಖು ಪೆನುಗೊಂಡದಿಂದ ಸಂಸ್ಥಾನಕ್ಕೆ ಆಗಮಿಸಿ ಕ್ಷಾಮದಿಂದ ಕಷ್ಟಕ್ಕೀಡಾಗಿರುವ ಕೋಲಾರ, ತುಮಕೂರು, ಚಿಕ್ಕಮಗಳೂರು, ಬಾಗೆಪಲ್ಲಿ ಮೊದಲಾದ ಪ್ರದೇಶಗಳಲ್ಲಿ ಪ್ರವಾಸಮಾಡಿ ಪರಿಶೀಲನೆ ನಡೆಸಿ ಮಾರನೇ ದಿನ ವಾಪಸು ತೆರಳುವರು.

ಮಹಾತ್ಮರ ಉಪದೇಶ! ೯೨ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ!!

ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

★ ಸಂತಾನ ಸಿಂಧೂರ ★

† ಬಹಿಷ್ಠೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ † ಅಕ್ರಮಸೂತಕ, ಕ್ರಮತಪ್ಪಿ ಬಹಿಷ್ಠೆ ಆಗುವುದನ್ನು ನಿಲ್ಲಿಸುತ್ತದೆ, † ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ † ಬಂಜೆತನವನ್ನು ಹೋಗಲಾಡಿಸಿ ಸಂತಾನಕೊಡುವ ಸಿದ್ಧೌಷಧ. ೨ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ ಟಪಾಲ್ ಖರ್ಚು ೧ ರೂ. —(ಸಕ್ರಮ್ಮಮಹಾರ ಗುಪ್ತ.)

ಅಡ್ರೆಸ್:—ಎ. ರಾಮಸ್ವಾಮಿ ಅಯ್ಯರ್ ಸನ್ "ಸಂತಾನಸಿಂಧೂರ" ಆಫೀಸ್, ೬೭೦ ಸೂರಡಿಂಗ್ಸ್ ನಕ್ಷಿಣಕ್ರಾಸ್, (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು.

ವಿ.ಸೂ:—ಇದುವರೆಗೂ ಅಂಬಳೆ ಮತ್ತು ಮೈಸೂರು ಸೊಪ್ಪಿನಕೊಳದ ಬೀದಿಯಲ್ಲಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ನಮ್ಮ ಸ್ವಂತ ಕಟ್ಟಡಕ್ಕೆ ವರ್ಗಾಯಿಸಿರುತ್ತೆ. ವಿಶೇಷ ಮಾಹಿತಿಗೆ ೨ ಆ. ಸ್ಟಾಂಪು ಕಳುಹಿಸಿ.

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು

ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.

ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.

★

ಹೆಚ್ಚಿನ ವಿವರಗಳಿಗೆ ಬರೆಯಿರಿ:—

ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

ಅಪೇರ ೨೬-೯-೫೨ ರಿಂದ ಪ್ರತಿದಿನ ೩ ಆಟಗಳು

ವಿಜಯಾರವರ

ಕಲ್ಯಾಣಂ-ಪಣ್ಣಿಪಾರ್

[ತಮಿಳು]

ಪಾತ್ರ:—ವರಲಕ್ಷ್ಮಿ, ಸಾವಿತ್ರಿ ಎನ್. ಟಿ. ರಾಮರಾವ್

ರೇಷನಿಂಗ್ ಆಫೀಸರವರ ಕಛೇರಿ ಮೈಸೂರು ನಗರ

ನೋಟಿಫಿಕೇಷನ್ ನಂ ಎ೧|೮೫|೫೨-೫೩. ತಾರೀಖು ೨೪-೯-೫೨

ಮೈಸೂರು ನಗರದ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:- ಮಹಾತ್ಮ ಗಾಂಧಿ ಜನ್ಮದಿನ ಪ್ರಯುಕ್ತ ಮೈಸೂರು ನಗರದಲ್ಲಿರುವ ಎಲ್ಲ ರೇಷನ್ ಡಿಪೋಗಳು ಮತ್ತು ಮೊಹಲ್ಲಾ ಸಬ್‌ಗೋಡೌನ್‌ಗಳು ೧೯೫೨ ನೇ ಅಕ್ಟೋಬರ್ ೨ನೇ ಗುರುವಾರಪೂರ್ತಾ ಮುಚ್ಚಲ್ಪಡುತ್ತವೆ—

(ಸಹಿ) ಹೆಚ್. ಜಿ. ವಿಜಯರಾಘವರೆಡ್ಡಿ, ರೇಷನಿಂಗ್ ಆಫೀಸರ್.

ವುಡ್‌ಲ್ಯಾಂಡ್ಸ್

೨೬-೯-೫೨ರಿಂದ ಅಮೋಘ ೨ನೇ ವಾರ ಪ್ರತಿ ದಿನ ೩ ಆಟಗಳು

* ರಾಮಜನ್ಮ * (ಹಿಂದಿ)

ಪಾತ್ರ:- ನಿರೂಪರಾಯ್. ತ್ರಿಲೋಕ್ ಕಪೂರ್

—:ಪ್ರಕಾಶಕರು ಮತ್ತು ಮುದ್ರಕರು:— ಜಿ. ಎಲ್. ಸ್ವಾಮಿ ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574 ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 34

೧-೧೦-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಆರು ಮಾರ್ಗಗಳಲ್ಲಿ ಸರ್ಕಾರಿ ಬಸ್ ಸದ್ಯಕ್ಕೆ ಇಲ್ಲ

ಮೈಸೂರು ೧

ಈದಿನದಿಂದ ಸಂಸ್ಥಾನದ ೬ ಮಾರ್ಗಗಳಲ್ಲಿ ಸರ್ಕಾರಿ ಬಸ್ಸುಗಳನ್ನು ಮಾತ್ರ ಓಡಿಸುವ ವ್ಯವಸ್ಥೆಯನ್ನು ಇನ್ನು ೩ ತಿಂಗಳಕಾಲ ಮುಂದಕ್ಕೆ ಹಾಕಲಾಗಿದೆ. ಈ ಯೋಜನೆಯಿಂದ ಖಾಸಗೀ ಬಸ್ ಮಾಲೀಕರುಗಳಿಗೆ ತುಂಬಾ ತೊಂದರೆ ಉಂಟಾಗುವುದೆಂಬ ಮನವಿಯನ್ನು ಪರಿಶೀಲಿಸಿ ಈ ರೀತಿ ಸರ್ಕಾರದವರು ನಿರ್ಧಾರಕ್ಕೆ ಬಂದಿದ್ದಾರೆ. ಆದರೆ ಈ ಅವಧಿಯೊಳಗೆ ಖಾಸಗೀ ಮಾಲೀಕರುಗಳು ಬೇರೆ ವ್ಯವಸ್ಥೆ ಮಾಡಿಕೊಳ್ಳಬೇಕೆಂದೂ, ಅವರುಗಳಿಗೆ ಬೇರೆ ಲೈನುಗಳನ್ನು ಕೊಡುವ ವಿಷಯ ಪರಿಶೀಲಿಸಲಾಗುವುದೆಂದೂ, ಈ ಷರತ್ತುಗಳಿಗೆ ಒಪ್ಪುವವರಿಗೆ ಮಾತ್ರ ಈ ದಿನದಿಂದ ಮಾಮೂಲಿನಂತೆ ಅವರುಗಳು ಈ ಆರು ಮಾರ್ಗದಲ್ಲಿ ಬಸ್ಸುಗಳು ಓಡಿಸಲು ರಹದಾರಿ ಕೊಡಲಾಗುವುದೆಂದೂ ಹೇಳಲಾಗಿದೆ.

ಮಹಮುದ್‌ಅಹಮುದ್‌ರವರ ದೇಹಸ್ಥಿತಿ

ಮೈಸೂರು, ಅ. ೧

ವಿಜಯದಶಮಿದಿನ ಕುದುರೆ ಅಪಘಾತಕ್ಕೀಡಾದ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಮಹಮುದ್ ಅಹಮುದ್‌ರವರು ನಿನ್ನೆರಾತ್ರಿ ಯಾವತೊಂದರೆಯುಲ್ಲದೆ ಕಳೆದು, ಸ್ಥಿತಿಯು ಉತ್ತಮಗೊಳ್ಳುತ್ತಿರುವುದಾಗಿ ಆಸ್ಪತ್ರೆಯ ಅಧಿಕಾರಿಗಳಿಂದ ತಿಳಿದುಬರುತ್ತಿದೆ. ಅವರಿಗೆ ಪ್ರಜ್ಞೆಬಂದು ಜನರನ್ನು ಗುರ್ತಿಸುತ್ತಿರುವರೆಂದೂ ಗಾಬರಿಗೆ ಕಾರಣವೇನೂ ಇಲ್ಲವೆಂದು ಹೇಳಲಾಗಿದೆ. ನಿನ್ನೆ ಸಂಜೆ ಶ್ರೀಮನ್ಮಹಾರಾಜರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಭೇಟಿಯಿತ್ತು ೧೦ ನಿಮಿಷಕಾಲ ಶ್ರೀಯುತರ ಬಳಿಯಲ್ಲಿದ್ದು ಅವರ ದೇಹಸ್ಥಿತಿ ವಿಚಾರಿಸಿಕೊಂಡು ಹೋದರು.

ಮಹಾತ್ಮಗಾಂಧಿ ಜಯಂತಿ

ಮಹಾತ್ಮಗಾಂಧಿ ಜಯಂತಿಯ ಪ್ರಯುಕ್ತ ನಾಳೆಬೆಳಗ್ಗೆ ಪುರಭವನ ಮೈದಾನದಲ್ಲಿ ಧ್ವಜಾರೋಹಣ, ಸೂತ್ರಯಜ್ಞ ಸಂಜೆ ಬಹಿರಂಗಸಭೆ ಏರ್ಪಡಿಸಲಾಗಿದೆ

ದಸರಾವಸ್ತು ಪ್ರದರ್ಶನಾಶ್ರಯದಲ್ಲಿಯೂ ಬೆಳಗ್ಗೆ ಧ್ವಜಾರೋಹಣ ಸಂಜೆ ಪ್ರಾರ್ಥನಾಸಭೆ ನಡೆಯುತ್ತದೆ.

ಕ್ಷಾಮ ಪರಿಹಾರಕ್ಕಾಗಿ ೩ ಕೋಟಿ ರೂ ಸಾಲ ಎತ್ತಬೇಕು

ಸರ್ಕಾರಕ್ಕೆ ರೇಷನ್‌ದಾರರ ಮನವಿ

ಮೈಸೂರು ಅ. ೧

ಮೈಸೂರು ನಗರದ ರೇಷನ್‌ದಾರರ ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಟೌನ್ ಹಾಲ್ ಮೈದಾನದಲ್ಲಿ ಶ್ರೀ ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ಬಹಿರಂಗಸಭೆ ನಡೆಯಿತು.

ಶ್ರೀಗಳಾದ ಎಂ. ಆರ್. ಸಿ. ಬಸಪ್ಪ. ಕೃಷ್ಣಮೂರ್ತಿ, ಬಿ ಜಿ ದಾಸ್ ಮುಂತಾದವರು ಈಗಿನ ಆಹಾರ ಪರಿಸ್ಥಿತಿಬಗ್ಗೆ ಭಾಷಣ ಮಾಡಿ ಸರ್ಕಾರದವರು ಕೂಡಲೇ ಆಹಾರ ಧಾನ್ಯಗಳನ್ನು ಒದಗಿಸಲು ಕಾರ್ಯಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು ನಂತರ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದವು.

ಮಳೆಬೆಳೆಗಳು ಹಾಳಾಗಿ ಸಂಸ್ಥಾನದ ೯ ಜಿಲ್ಲೆಗಳಲ್ಲೂ ಕ್ಷಾಮ ತಲೆದೋರಿರುವುದರಿಂದ ಸರ್ಕಾರದವರು ಈಗಿನಿಂದಲೂ ಆಹಾರವನ್ನು ಕೇಂದ್ರದಿಂದ ತರಿಸಿ, ೯೦ ಲಕ್ಷ ಜನರಿಗೆ ಸುವ್ಯವಸ್ಥಿತವಾದ ರೀತಿಯಲ್ಲಿ ಎಲ್ಲರಿಗೂ ಸಾಕಷ್ಟು ಆಹಾರವನ್ನು ಹಂಚಬೇಕೆಂದೂ, ಕ್ಷಾಮ ಪ್ರದೇಶದಲ್ಲಿ ದುಡಿಯಲಾರದವರಿಗೆ ಅರ್ಧಬೆಲೆಯಲ್ಲಿ ಮಾರಬೇಕೆಂದೂ, ಕ್ಷಾಮಪರಿಹಾರಕ್ಕಾಗಿ ೩ ಕೋಟಿ ರೂ ಸಾಲವನ್ನು ಸರ್ಕಾರದವರು ಎತ್ತಬೇಕೆಂದು ಪ್ರಾರ್ಥಿಸಲಾಯಿತು.

ಸಂಸ್ಥಾನದ ಕೆಲವು ಕಡೆಗಳಲ್ಲಿ ಕಡಿತರ ರದ್ದಾಗಿದ್ದರೂ ಡಿಪೋಗಳಲ್ಲಿ ಸರಿಯಾದ ಆಹಾರ ಧಾನ್ಯಗಳು ಸಿಗುತ್ತಿಲ್ಲವಾದುದರಿಂದ, ಸರ್ಕಾರದವರು ಕೂಡಲೆ ಸ್ವಚ್ಛವಾದ ಮತ್ತು ಸಾಕಷ್ಟು ಆಹಾರಧಾನ್ಯಗಳನ್ನು ಮಾರಲು ಏರ್ಪಾಡು ಮಾಡಬೇಕು.

ವಿವಿಧ ಘಟ್ಟಗಳ ಮಾರಾಟ ತೆರಿಗೆಯಿಂದ ಜನರಿಗೆ ಕಷ್ಟವಾಗುತ್ತಿರುವುದರಿಂದ ಅದನ್ನು ಕೂಡಲೇ ರದ್ದುಮಾಡಬೇಕು. ಗಲಭೆಮಾಡಿದರೆಂದು ೧೩ ಜನ ವಿದ್ಯಾರ್ಥಿಗಳಮೇಲೆ ಹೂಡಲಾಗಿರುವ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು.

ಕಾರ್ಮಿಕ ಸಂಘಗಳಿಂದ ದೂರ

ರೈತಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ತಮ್ಮ ಕಾಲವನ್ನು ಉಪಯೋಗಿಸಲೋಸುಗ ಇನ್ನು ಮುಂದೆ ಕಾರ್ಮಿಕರ ಸಂಘಗಳಲ್ಲಿ ಪಾತ್ರವಹಿಸುವುದಿಲ್ಲ. ಮುಂದಿನ ವರ್ಷದಿಂದ ತಾವು ಅಂಚೆ ಮತ್ತು ತಂತಿ ಕೆಳದರ್ಜೆ ನೌಕರರ ಸಂಘದ ಅಧ್ಯಕ್ಷತೆವಹಿಸುವುದಿಲ್ಲವೆಂದು ಶ್ರೀ ಜಯಪ್ರಕಾಶ್ ನಾರಾಯಣರವರು ಹೇಳಿರುತ್ತಾರೆ.

ಹೈದರಾಬಾದಿನ ಹೊಸ ಶ್ರೇಷ್ಠನ್ಯಾಯಾಧೀಶರು

ಅಲಹಾಬಾದ್ ಶ್ರೇಷ್ಠನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಲಕ್ಷ್ಮೀಶಂಕರ ಮಿಶ್ರಾರವರನ್ನು ರಾಷ್ಟ್ರಾಧ್ಯಕ್ಷರು ಹೈದರಾಬಾದಿನ ಶ್ರೇಷ್ಠ ನ್ಯಾಯಾಧೀಶರನ್ನಾಗಿ ನೇಮಿಸಿದ್ದಾರೆ.

ಸುಳ್ಳುಪತ್ರವೆಂಬ ಆಪಾದನೆ

ಬ್ಲಿಟ್ಸ್ ಪತ್ರಿಕೆಯ ಸಂಪಾದಕರಾದ ಶ್ರೀ ಕಾರಂಜಿಯಾರವರಿಗೆ ಭಾರತದಲ್ಲಿರುವ ಅಮೆರಿಕಾ ರಾಯಭಾರಿಯವರು ಬರೆದ ಪತ್ರವೆಂದು ಪ್ರತಿಯನ್ನು ಬೊಂಬಾಯಿನ ಕರೆಂಟ್ ಎಂಬ ವಾರಪತ್ರಿಕೆಯಲ್ಲಿ ಪ್ರಕಟಿಸಿರುವುದು ಕೃತಕ ಪತ್ರವೆಂದೂ ಅದರ ಬಗ್ಗೆ ಕೂಡಲೇ ತನಿಖೆ ನಡೆಸಬೇಕೆಂದು ಅಮೆರಿಕಾ ರಾಯಭಾರಿ ಕಛೇರಿಯ ಕೋರಿಕೆಯಮೇಲೆ ಭಾರತ ಸರ್ಕಾರವು ವಿಚಾರಣೆ ನಡೆಸುತ್ತಿರುವುದಾಗಿ ವರದಿಯಾಗಿದೆ.

ರಷ್ಯಾಕ್ಕೆ ಹೋಗಲು ರಹದಾರಿಯಿಲ್ಲ

ಅಕ್ಟೋಬರ್ ಮೊದಲನೇ ವಾರದಲ್ಲಿ ರಷ್ಯಾದಲ್ಲಿ ನಡೆಯಲಿರುವ ರಷ್ಯಾ ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನಕ್ಕೆ ಹೋಗಲು ಭಾರತ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಎ. ಕೆ. ಘೋಷ್‌ರವರಿಗೆ ಸರ್ಕಾರವು ರಹದಾರಿಯನ್ನು ನಿರಾಕರಿಸಿದೆಎಂದು ಹೇಳಲಾಗಿದೆ.

§ ಭಾರತದಲ್ಲಿ ಬಿ. ಸಿ. ಜಿ. ದೇವೀ ಹಾಕುವ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದಾಗಿನಿಂದ ಆಗಸ್ಟು ಮಾಹೆಯಾಖೈರಿನವರೆಗೆ ಮೂವತ್ತೆರಡೂವರೆ ಲಕ್ಷ ಜನರಿಗೆ ದೇವಿಹಾಕಲಾಗಿದೆಯೆಂದು ಹೇಳಲಾಗಿದೆ.

ವುಡ್‌ಲಾಂಡ್ಸ್

ದುಪ್ಪಟ

ತಾರೀಖು 3-10-52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಪ್ರದರ್ಶನ

ಪಾತ್ರ—ನೂರ್‌ಜಹಾನ್, ಅಜಯಕುಮಾರ್, ಗುಲಾಮ್ ಮಹಮುದ್

ಕೆಲವು ನಮೂನೆ ಬಟ್ಟೆಯ ಮೇಲೆ ಹತೋಟಿ ಪೂರ್ತಾ ವಜಾ

ಹೊಸಆಜ್ಞೆ ಈದಿನದಿಂದ ಜಾರಿಗೆ ಬರುತ್ತದೆ

ಈದಿನದಲ್ಲಿ ಧೋತಿ, ಸೀರೆ, ವಾಯಿಲ್, ಮಲ್, ಹಾಸಿಗೆಬಟ್ಟೆ ಮುಂತಾದ ೭ ತರಹದ ಬಟ್ಟೆಯಮೇಲೆ ಬೆಲೆ ಮತ್ತು ಹಂಚಿಕೆ ಹತೋಟಿಯನ್ನು ವಜಾಮಾಡಿ ಕೇಂದ್ರ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ. ಇತರ ಬಟ್ಟೆಗಳಮೇಲೆ ಈಗಿರುವಂತೆಯೇ ಹತೋಟಿ ಮುಂದುವರಿಯುತ್ತದೆ.

ದೇಶದಲ್ಲಿ ಬಟ್ಟೆಯ ಉತ್ಪತ್ತಿಯು ಕ್ರಮೇಣ ಹೆಚ್ಚುತ್ತಬಂದು ನಿಗದಿಯಾದ ಬೆಲೆಗಿಂತ ಕಡಿಮೆ ದರದಲ್ಲಿ ಮಾರಾಟವಾಗುತ್ತಿರುವುದರಿಂದ ಈ ಕ್ರಮವನ್ನು ಕೈಗೊಳ್ಳಲಾಗಿದೆ.

ಉತ್ತಮ ಮತ್ತು ಮಧ್ಯಮವರ್ಗದ ಬಟ್ಟೆಗಳಲ್ಲಿ ಶೇಕಡ ೫೦ ರಷ್ಟನ್ನು ತಮ್ಮಿಷ್ಟಬಂದವರಿಗೆ ಮಾರಲುಸಹ ಅನುಮತಿಯನ್ನು ಕೊಡಲಾಗಿದೆ.

ನೂಲಿನ ಪರಿಸ್ಥಿತಿಯು ಇನ್ನೂ ಉತ್ತಮಗೊಳ್ಳುತ್ತಲಿಲ್ಲವಾದ್ದರಿಂದ ನೂಲಿನ ಮೇಲಿನ ಬೆಲೆ ಮತ್ತು ಹಂಚಿಕೆಯನ್ನು ಸದ್ಯಕ್ಕೆ ತೆಗೆದುಹಾಕುವುದಿಲ್ಲವೆಂದು ಆಜ್ಞೆಯು ವಿವರಣೆಯನ್ನಿತ್ತಿದೆ.

೩ ಬಾಟಾ ಕಾರ್ಖಾನೆ ಬಂದು

ಭಾರತದಲ್ಲಿ ಪ್ರಮುಖ ಪಾದರಕ್ಷೆಗಳ ತಯಾರಿಕೆಗಾರರಾದ ಬಾಟಾಸೂಕಂಪೆನಿಯವರಿಗೆ ವ್ಯಾಪಾರವು ಕಡಿಮೆಯಾಗಿ ದಾಸ್ತಾನು ಹೆಚ್ಚಾಗಿ ಉಳಿದು ಹೋಗಿರುವುದರಿಂದ ತಮ್ಮ ಮೂರು ಕಾರ್ಖಾನೆಗಳನ್ನು ಅಕ್ಟೋಬರ್ ೬ ನೇ ತಾರೀಖಿನಿಂದ ೧೫ ದಿನಕಾಲ ಮುಚ್ಚಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಮೈಸೂರಿಗೆ ರಕ್ಷ್ಯಾ ಆಹಾರ

ಭಾರತ ಅಭಾವ ಪ್ರದೇಶಗಳಿಗೆ ಒದಗಿಸಲು ರಷ್ಯಾ ದಾನಮಾಡಿರುವ ಆಹಾರದ ಪೈಕಿ ಮೈಸೂರಿಗೆ ೩೦೦೦ ಟನ್ ಗೋಧಿ, ೧೦೦೦ ಟನ್ ಅಕ್ಕಿ ಒಂದು ಲಕ್ಷಟನ್ ಧನಿ ರೂಪದ ಹಾಲನ್ನು ನಿಗದಿಮಾಡಲಾಗಿದೆ.

ಆಂಧ್ರಪ್ರಾಂತ್ಯ ಸತ್ಯಾಗ್ರಹ ಸಂಬಂಧದಲ್ಲಿ ದಸ್ತಗಿರಿ

ಆಂಧ್ರಪ್ರಾಂತ್ಯ ಸತ್ಯಾಗ್ರಹ ಸಂಬಂಧದಲ್ಲಿ ಮೊನ್ನೆಯದಿನ ವಿಜಯವಾಡದಲ್ಲಿ ೯ ಜನರ ದಸ್ತಗಿರಿಯಾಗಿ ಸೆರೆಮನೆಗೆ ಕಳುಹಿಸಲಾಗಿದೆ ಯೆಂದು ವರದಿಯಾಗಿದೆ.

ಪಾಕೀಸ್ಥಾನದಲ್ಲಿ ಹಿಂದುಗಳು ಮುಸ್ಲಿಮರಾಗುತ್ತಿದ್ದಾರೆ

ಪಶ್ಚಿಮಬಂಗಾಳದಲ್ಲಿ ನಿರಾಶ್ರಿತರಿಗೆ ಸರಿಯಾದ ವ್ಯವಸ್ಥೆಯಿಲ್ಲ ಬಹಳ ಕಷ್ಟಕ್ಕೀಡಾಗಿದ್ದಾರೆ. ಬೊಮಗ್ರಾಶಿಬಿರದಲ್ಲಿ ವ್ಯವಸ್ಥೆ ಸಮರ್ಪಕವಾಗಿಲ್ಲದೆ ಅನೇಕ ಹಿಂದುಗಳು ಪೂರ್ವ ಬಂಗಾಳಕ್ಕೆ(ಪಾಕೀಸ್ಥಾನ) ಹಿಂತಿರುಗಿ ಮುಸ್ಲಿಂರಾಗಲಿದ್ದಾರೆ ಎಂದು ಡಾ॥ ಶ್ಯಾಮಪ್ರಸಾದ ಮುಖರ್ಜಿಯವರು ಕಾಶಿಯಲ್ಲಿ ಮಾತನಾಡುತ್ತಾ ಹೇಳಿರುವರು.

ಕಾಶ್ಮೀರಸಮಸ್ಯೆ ಪರಿಹಾರಕ್ಕೆ ಯುದ್ಧವೇ ಮಾರ್ಗ

ವಿಶ್ವಸಂಸ್ಥೆಯು ಕಾಶ್ಮೀರ ವಿವಾದವನ್ನು ಬಗೆಹರಿಸುವುದೆಂಬ ನಂಬಿಕೆ ಹೋಯಿತು. ಪ್ರಯೋಜನವಿಲ್ಲಗ ೫ ವರ್ಷಗಳಕಾಲ ಕಾದು ಸಾಕಾಗಿದೆ. ಈ ಸಮಸ್ಯೆ ಬಗೆಹರಿಯಬೇಕಾದರೆ ಯುದ್ಧವೇ ಉಳಿದಿರುವ ಮಾರ್ಗ ಅದಕ್ಕೆ ಸಿದ್ಧವಾಗಬೇಕಾಗಿದೆ-ಎಂದು ಆಜಾದ್ ಸರ್ಕಾರದ ಅಧ್ಯಕ್ಷರು ಹೇಳಿದ್ದಾರೆ.

ಪ್ರಜಾ ಸೋಷಲಿಸ್ಟ್ ಪಕ್ಷ

ಕೆ.ಎಂ. ಪಿ. ಮತ್ತು ಸೋಷಲಿಸ್ಟ್ ಮಿಳಿತದಿಂದ ಹೊಸದಾಗಿ ಸ್ಥಾಪಿಸಿರುವ ಪ್ರಜಾ-ಸೋಷಲಿಸ್ ಪಕ್ಷದ ಅಧ್ಯಕರನ್ನಾಗಿ ಆಚಾರ್ಯ ಕೃಪಲಾನಿಯವರನ್ನು ಕಾರ್ಯದರ್ಶಿಯಾಗಿ ಅಶೋಕ ಮೊಹ್ತಾರವರನ್ನು ಆರಿಸಲಾಗಿದೆ.

ಮದ್ರಾಸಿನಲ್ಲಿ ಕೆ. ಎಂ. ಪಿ. ಪಕ್ಷವು ಯುನೈಟೆಡ್ ಡೆಮೊಕ್ರಾಟಿಕ್ ಫ್ರಂಟ್‌ನೊಡನೆ ಸೇರಿರುವುದರಿಂದ ಅಲ್ಲಿಯ ಶಾಸನಸಭೆಯಲ್ಲಿ ಮಾತ್ರ ಸೋಷಲಿಸ್ಟರು ಪ್ರತ್ಯೇಕ ನಾಯಕರನ್ನು ಹೊಂದಿರುತ್ತಾರೆ ಇತರ ಪ್ರಾಂತ್ಯಗಳಲ್ಲಿ ಈ ಎರಡು ಪಕ್ಷದ ಸದಸ್ಯರು ಒಬ್ಬನಾಯಕರನ್ನೇ ಆರಿಸಿಕೊಳ್ಳಬೇಕೆಂದು ಸೂಚನೆ ಕೊಡಲಾಗಿದೆ.

ನಾಳೆ ಅಂಚೆ ಮತ್ತು ತಂತಿ ರಜಾ

ಮೈಸೂರು ಅ. ೧

ನಾಳೆ ಮಹಾತ್ಮಗಾಂಧಿಯವರ ವರ್ಧಂತಿಪ್ರಯುಕ್ತ ಅಂಚೆ ಮತ್ತು ತಂತಿ ಇಲಾಖೆಗೆ ರಜಾಕೊಡಲಾಗಿದೆ.

ದಾನಿಗಳ ಭಾವಚಿತ್ರ ಅನಾವರಣ

ಮೈಸೂರು ಅ. ೧

ಕೈಗಾರಿಕಾ ಸಚಿವ ಶ್ರೀ ಟಿ. ಸಿದ್ಧಲಿಂಗಯ್ಯನವರು ನಿನ್ನೆ ಸಂಜೆ ಬಸಮಯ್ಯನವರ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಶ್ರೀಮತಿ ದೇವಿ ಸಾಕಮ್ಮ, ಶ್ರೀಗಳಾದ ಕೆ. ನರಸಿಂಹಯ್ಯ ಮತ್ತು ಎಂ. ಸಿ. ನರಸಿಂಹಯ್ಯನವರ ಭಾವಚಿತ್ರಗಳ ಅನಾವರಣಮಾಡಿದರು. ಕುಂಚಿಟಿಗರ ಸಂಘದ ಸದಸ್ಯರು ಮೇಲ್ಕಂಡ ದಾನಿಗಳನ್ನು ಅಭಿನಂದಿಸಿ ಮಾನಪತ್ರವನ್ನು ಅರ್ಪಿಸಿದರು.

ದುಸ್ಥಿತಿ ಪ್ರದೇಶಕ್ಕೆ ಸಚಿವರ ಭೇಟಿ

ಮೈಸೂರು ಅ. ೧

ಕೇಂದ್ರಸರ್ಕಾರದ ಉತ್ಪಾದನಾಶಾಖಾ ಸಚಿವ ಶ್ರೀ ಕೆ, ಸಿ. ರೆಡ್ಡಿಯವರು ನಿನ್ನೆ ಮಧ್ಯಾಹ್ನ ಗುಂಡ್ಲುಪೇಟೆಗೆ ಭೇಟಿಇತ್ತು ಅಲ್ಲಿ ಉಂಟಾಗಿರುವ ಆಹಾರ ದುಸ್ಥಿತಿ ಬಗ್ಗೆ ಖುದ್ದಾಗಿ ಪರಿಶೀಲನೆ ನಡೆಸಿದರು.

ಪುರಸಭಾಧಿವೇಶನ

ಮೈಸೂರು ಪುರಸಭೆಯ ಮುಂದುವರಿದ ಅಧಿವೇಶನವು ಇದೇಮಾಹೆ ೭ ನೇ ತಾರೀಖು ಸಂಜೆ ೪ ಗಂಟೆಗೆ ಪುರಸಭಾ ಕಛೇರಿಯಲ್ಲಿ ನಡೆಯುತ್ತದೆ.

ವಾರ್ಷಿಕೋತ್ಸವ

ಮೈಸೂರು ಗಂಧದ ಎಣ್ಣೆ ಕಾರ್ಖಾನೆಯ ಕೆಲಸಗಾರರ ಸಂಘದ ವಾರ್ಷಿಕೋತ್ಸವವು ನಿನ್ನೆ ಬೆಳಿಗ್ಗೆ ಕೈಗಾರಿಕಾಸಚಿವ ಶ್ರೀ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಕೆಲಸಗಾರರನ್ನುದ್ದೇಶಿಸಿ ಭಾಷಣಮಾಡಿದರು.

ಬಹಿರಂಗಸಭೆ

ಮೈಸೂರು. ಅ. ೧

ರಾಜಧಾನಿಯಲ್ಲಿರುವ ಭಾರತ ಚೀನಾ ಸ್ನೇಹ ಸಂಘದ ಆಶ್ರಯದಲ್ಲಿ ಈದಿನ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಚೀನಾ ಜನತಾ ಪ್ರಭುತ್ವದ ೩ ನೇ ವಾರ್ಷಿಕೋತ್ಸವವು ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು.

ಅಭಿನಂದನಾಸಭೆ

ಭಾರತ ಸೇವಾದಳದ ವ್ಯವಸ್ಥಾಪಕರೂ ಆದ ಶ್ರೀ ರುಮಾಲೆ ಚೆನ್ನಬಸವಯ್ಯನವರನ್ನು ಅಭಿನಂದಿಸಲು ನಿನ್ನೆ ಸಂಜೆ ವಿದ್ಯಾ ಇಲಾಖಾ ಮುಖ್ಯಾಧಿಕಾರಿ ಶ್ರೀ ಜೆ. ಬಿ, ಮಲ್ಲಾರಾಧ್ಯರವರ ಅಧ್ಯಕ್ಷತೆಯಲ್ಲಿ ಶ್ರೀ ವರಲಕ್ಷ್ಮಿ ಸಂಗೀತ ಮಂದಿರದವರು ಒಂದುಸಮಾರಂಭವನ್ನುಏರ್ಪಡಿಸಿದ್ದರು.

ವಸ್ತುಪ್ರದರ್ಶನಕಾರರ ಸಂಘ

ಅಖಿಲಭಾರತ ವಸ್ತುಪ್ರದರ್ಶನ ಕಾರರ ಸಂಘದ ಸರ್ವ ಸದಸ್ಯರ ಸಭೆಯು ಮೊನ್ನೆ ಭಾನುವಾರ ನಡೆದು ೫೨-೫೩ನೇ ಸಾಲಿಗೆ ಕೆಳಗೆ ಕಂಡ ನೂತನ ಅಧಿಕಾರಿ ವರ್ಗವನ್ನು ಚುನಾಯಿಸಲಾಯಿತು. ಶ್ರೀ ಮಹದೇವಸ್ವಾಮಿ ಅಧ್ಯಕ್ಷರು, ಶ್ರೀ ಕೆ. ಎಸ್. ಗುರುಮೂರ್ತಿ ಉಪಾಧ್ಯಕ್ಷರು, ಮತ್ತು ಸಿ ಎ. ಜಾನ್ ಕಾರ್ಯದರ್ಶಿ.

ವಿವಿಧ ಘಟ್ಟಗಳಲ್ಲಿ ಮಾರಾಟ ತೆರಿಗೆ ವಿನಾಯತಿ

ತಿರುವಾಂಕೂರು.ಕೊಚ್ಚಿ ಪ್ರಾಂತ್ಯದಲ್ಲಿ ಕೊಬ್ಬರಿ, ಅಡಿಕೆ, ಮೆಣಸು, ಶುಂಠಿ, ಹುಣಸೇಹಣ್ಣು, ನಿಂಬೆಹಣ್ಣು, ಹುಲ್ಲು, ಎಣ್ಣೆ, ಟೀ, ರಬ್ಬರ್, ಏಲಕ್ಕಿಗಳಮೇಲೆ ವಿವಿಧ ಘಟ್ಟಗಳಲ್ಲಿ ಹಾಕುತ್ತಲಿದ್ದ ಮಾರಾಟ ತೆರಿಗೆಗೆ ವಿನಾಯತಿ ಕೊಡಲಾಗಿದೆ.

ಅಮೆರಿಕಾಕ್ಕೆ ಹೋಗಲು ರಹದಾರಿ ಇಲ್ಲ

ಕಲ್ಕತ್ತೆಯ ಸ್ಟೇಟ್ಸ್‌ಮನ್ ಪತ್ರಿಕೆಯ ವರದಿಗಾರರಾಗಿದ್ದ ಶ್ರೀರಣಜಿತ್‌ರಾಯ್ ಚೌಧುರಿಯವರು ಅಮೆರಿಕಾದ ಹೆರ್ಟ್ಫೋರ್ಡ್ ಟೈಂಸ್ ಪತ್ರಿಕೆಯ ಆಹ್ವಾನದಮೇಲೆ ಅಲ್ಲಿಗೆ ಹೋಗಲು ಭಾರತಸರಕಾರವು ಅನುಮತಿ ನೀಡಿಲ್ಲ.

§ ಪ್ರಧಾನಿ ನೆಹರೂರವರು ಅಕ್ಟೋಬರ್ ೫ ರಿಂದ ಪ್ರಾರಂಭಿಸಲಿರುವ ೪ ದಿನ ಮೈಸೂರು ಪ್ರವಾಸದಲ್ಲಿ ಕೋಲಾರ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯ ಅನೇಕ ಅಭಾವ ಪ್ರದೇಶಗಳಿಗೆ ಭೇಟಿ ಕೊಡಲಿರುವರು.

ರಣಜಿತ್

26-9-52ರಿಂದ ಅಮೋಘ ಪ್ರಾರಂಭ

ನೀಲಮ್‌ಪಾರಿ

NEELAM PARI

ಪಾತ್ರ:--ಗೀತಾಬಾಲಿ, ಸಜ್ಜನ್, ಸಪ್ರು, ಗೋಪ್, ಕುಲ್‌ದೀಪ್

ರೇಷನಿಂಗ್ ಆಫೀಸರವರ ಕಛೇರಿ

ಮೈಸೂರು ನಗರ

ನೋಟಿಫಿಕೇಷನ್ ನಂ ಎ|-೮೫|೫೨-೫೩

ತಾರೀಖು ೨೪-೯-೫೨

ಮೈಸೂರು ನಗರದ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಮಹಾತ್ಮಗಾಂಧಿಜನ್ಮದಿನ ಪ್ರಯುಕ್ತ ಮೈಸೂರು ನಗರದಲ್ಲಿರುವ ಎಲ್ಲ ರೇಷನ್ ಡಿಪೋಗಳು ಮತ್ತು ಮೋಹಲ್ಲಾ ಸಬ್ ಗೋಡೌನ್‌ಗಳು ೧೯೫೨ ನೇ ಅಕ್ಟೋಬರ್ ೨ ನೇ ಗುರುವಾರ ಪೂರ್ತಾ ಮುಚ್ಚಲ್ಪಡುತ್ತವೆ—

[ಸಹಿ] ಹೆಚ್. ಜಿ. ವಿಜಯರಾಘವರೆಡ್ಡಿ
ರೇಷನಿಂಗ್ ಆಫೀಸರ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 35

೨-೧೦-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಸರ್ಕಾರಿ ಕಾರ್ಖಾನೆಗಳ ಸ್ಥಾಪನೆಯಿಂದ ಖಾಸಗಿಯವರೊಡನೆ ಪೈಪೋಟಿಯಿಲ್ಲ

ಭಾರತ ಯಂತ್ರಸಾಮುಗ್ರಿ ತಯಾರಿಕೆಗಾರರ ಸಂಘದ ಸಮ್ಮೇಳನದಲ್ಲಿ ಶ್ರೀ ಕೆ. ಸಿ. ರೆಡ್ಡಿ ಭಾಷಣ

ಸರ್ಕಾರ ತನ್ನದೇಆದ ಕಾರ್ಖಾನೆಯಲ್ಲಿ ಸ್ಥಾಪಿಸಿದ ಮಾತ್ರಕ್ಕೆ ಈ ಕೈಗಾರಿಕೆಯಲ್ಲಿ ಈಗಾಗಲೇ ತೊಡಗಿರುವ ಖಾಸಗೀ ಸಂಸ್ಥೆಗಳೊಡನೆ ಪೈಪೋಟಿ ನಡೆಸುವುದೆಂಬ ಅರ್ಥವಲ್ಲ ಕೈಗಾರಿಕೆಯು ಇನ್ನು ಅಭಿವೃದ್ಧಿಯಾಗಬೇಕೆಂಬುದೇ ಸರ್ಕಾರದ ಆಶಯ ಎಲ್ಲಾ ಸರ್ಕಾರಗಳಿಗೆ ಬೇಕಾಗುವ ಯಂತ್ರಸಾಮುಗ್ರಿಗಳನ್ನೆಲ್ಲಾ ಈ ಸರ್ಕಾರಿ ಕಾರ್ಖಾನೆ ಒದಗಿಸುವುದಿಲ್ಲ ಖಾಸಗಿಸಂಸ್ಥೆಗಳಿಂದಲೂ ಸರ್ಕಾರಗಳು ಕೊಳ್ಳುತ್ತವೆ.ಒಟ್ಟಿನಲ್ಲಿ ಸರ್ಕಾರ ಮತ್ತು ಖಾಸಗಿಯವರು ಐಕ್ಯತೆಯಿಂದ ಕೂಡಿ ಕೈಗಾರಿಕಾಭಿವೃದ್ಧಿಗೆ ಶ್ರಮಿಸಬೇಕು ಎಂದು ಕೇಂದ್ರ ಉತ್ಪನ್ನಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆಯದಿನ ಭಾರತದ ಯಂತ್ರಸಾಮುಗ್ರಿಗಳ ತಯಾರಿಕೆಗಾರರ ಸಂಘದ ಸಮ್ಮೇಳನದಲ್ಲಿ ಮಾತನಾಡುತ್ತಾ ಹೇಳಿದರು.

ಯಂತ್ರಸಾಮುಗ್ರಿಗಳ ತಯಾರಿಕೆಯು ಅತ್ಯಂತಪ್ರಮುಖವಾದುದು ಅದರ ಅಭಿವೃದ್ಧಿ ಬಗ್ಗೆ ಗಮನ ಕೊಡದೆ ಹೋದರೆ ಪಾರತಂತ್ರ್ಯದಿಂದಲೂ ಅಪಾಯದಿಂದಲೂ ಪಾರಾಗುವುದು ಕಷ್ಟವಾಗುತ್ತದೆ. ಈ ದೃಷ್ಟಿಯಿಂದಲೇ ಈ ಯಂತ್ರಗಾರವನ್ನು ಭಾರತ ಸರ್ಕಾರವು ಸ್ಥಾಪಿಸಿದೆ. ಈ ಉದ್ಯಮದಿಂದ ಶಾಂತಿ ಮತ್ತು ಯುದ್ಧಕಾಲದ ಚಟುವಟಿಕೆಗಳೆರಡರಲ್ಲೂ ಸಹಾಯವಾಗುವುದಲ್ಲದೆ ರಕ್ಷಣಾವ್ಯವಸ್ಥೆಗೂ ಸಹಕಾರಿಯಾಗುತ್ತದೆ ಎಂದು ಶ್ರೀ ರೆಡ್ಡಿಯವರು ತಿಳಿಸಿದರು.

ಈ ಕಾರ್ಖಾನೆಯ ಕೆಲಸಗಾರರ ವಿಷಯವಾಗಿ ಪ್ರಸ್ತಾಪಿಸಿ ೧೯೫೩ ನೇ ಇಸವಿಯಲ್ಲಿ ೩೩ ಜನ ಐರೋಪ್ಯ ಪ್ರಮುಖಾಧಿಕಾರಿಗಳನ್ನು ೧೫೩ ಮಂದಿ ಭಾರತೀಯ ಪ್ರಮುಖಾಧಿಕಾರಿಗಳನ್ನು ಈ ಸಂಸ್ಥೆಯಲ್ಲಿ ನೇಮಿಸಿಕೊಳ್ಳಲಾಗುತ್ತದೆ ಕಾರ್ಖಾನೆಯು ತನ್ನ ಪೂರ್ಣಕೆಲಸವನ್ನು ಆರಂಭಿಸುವ ವೇಳೆಗೆ ೬೧ ಐರೋಪ್ಯರು, ೬೪೫ ಭಾರತೀಯ ಅಧಿಕಾರಿಗಳಿರುತ್ತಾರೆ.ಭಾರತೀಯರು ಶಿಕ್ಷಣ ಪಡೆದಂತೆಲ್ಲಾ ಐರೋಪ್ಯರ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತದೆ ಎಂದು ಶ್ರೀ ರೆಡ್ಡಿಯವರು ತಿಳಿಸಿದರು.

ರಷ್ಯಾದಲ್ಲಿ ಯುದ್ಧ ಪ್ರಚಾರ ಅಪರಾಧ

ರಷ್ಯಾದಲ್ಲಿ ಯುದ್ಧ ಪ್ರಚಾರವನ್ನು ಮಾಡುವುದು ಕಾನೂನು ರೀತ್ಯ ಅಪರಾಧವೆಂದು ಪರಿಗಣಿಸಲಾಗಿದೆ. ರಷ್ಯವು ಯಾವಾಗಲೂ ಶಾಂತಿಸಾಧನೆಗಾಗಿ ಪ್ರಯತ್ನಿಸುತ್ತಲಿದೆ-ಎಂದು ಮದರಾಸ್ ಮತ್ತು ಮೈಸೂರು ಕ್ಷಾಮ ಪ್ರದೇಶಗಳಿಗೆ ಸಹಾಯಮಾಡಲು ಮದರಾಸಿಗೆ ಆಗಮಿರುವ ರಷ್ಯಾದ ಕಾರ್ಮಿಕ ನಿಯೋಗದ ನಾಯಕರು ತಿಳಿಸುತ್ತಾರೆ.

ರಷ್ಯಾದ ಕೆಲಸಗಾರರು ತಿಂಗಳಿಗೆ ೬೦೦ ರೂ. ಸಂಪಾದಿಸುತ್ತಾರೆ. ೬೦ ವರ್ಷಗಳಿಗೆ ಮೇಲ್ಪಟ್ಟ ಪ್ರತಿಯೊಬ್ಬ ಗಂಡಸು ಮತ್ತು ೫೫ ವರ್ಷದ ಪ್ರತಿಯೊಬ್ಬ ಹೆಂಗಸೂ ನಿವೃತ್ತಿ ವೇತನ ಪಡೆಯುವುದರ ಜೊತೆಗೆ ನಿಗದಿ ಸಂಬಳ ಪಡೆಯುತ್ತಾರೆಂದು ಅವರು ಹೇಳುತ್ತಾರೆ.

ಗಾಂಧೀ ಜಯಂತಿ

ಮೈಸೂರು, ಅ. ೨

ಮಹಾತ್ಮಾ ಗಾಂಧಿಜೀ ಜಯಂತಿಯ ಪ್ರಯುಕ್ತ, ಈದಿನ ಬೆಳಿಗ್ಗೆ ಟೌನ್‌ಹಾಲ್ ಮೈದಾನದಲ್ಲಿ ಪುರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಧ್ವಜಾರೋಹಣ ಮಾಡಿದರು. ಟೌನ್‌ಹಾಲ್ ಒಳಭಾಗದಲ್ಲಿ ಅಖಂಡ ಪ್ರಾರ್ಥನೆ ಮತ್ತು ಸೂತ್ರಯಜ್ಞ ಏರ್ಪಡಿಸಲಾಗಿದೆ.

ಜೀವನರಾಯನ ಕಟ್ಟೆಯಲ್ಲಿ ಶ್ರೀ ಪಾಲಹಳ್ಳಿಸೀತಾರಾಮಯ್ಯನವರಿಂದ ಧ್ವಜಾರೋಹಣ ನಡೆಯಿತು. ಸಂಜೆ ೬ ಗಂಟೆಗೆ ಬಹಿರಂಗಸಭೆ ನಡೆಯುವುದು.

ದಸರಾ ವಸ್ತುಪ್ರದರ್ಶನ

ಮೈಸೂರು, ಅ. ೨

ಇದೇ ೫ನೇ ತಾರೀಖು ಮುಕ್ತಾಯವಾಗಬೇಕಾಗಿದ್ದ ದಸರಾ ವಸ್ತುಪ್ರದರ್ಶನವನ್ನು ಇನ್ನೂ ಒಂದುದಿನ ಮುಂದುವರಿಸಲಾಗುವುದೆಂದು ತಿಳಿದುಬಂದಿದೆ.

ದೆಹಲಿಯಲ್ಲಿ ಮಹಾತ್ಮರ ಜನ್ಮದಿನ ಸಮಾರಂಭ

ಈದಿನ ಬೆಳಿಗ್ಗೆ ದೆಹಲಿಯಲ್ಲಿ ಮಹಾತ್ಮರ ಜನ್ಮದಿನ ಸಮಾರಂಭವು ರಾಷ್ಟ್ರಾಧ್ಯಕ್ಷ, ಪ್ರಧಾನಿ ಮತ್ತಿತರ ಪ್ರಮುಖರು ನಗರದ ಲಕ್ಷಾಂತರ ಜನರು ರಾಜಘಾಟಿಗೆ ಭೇಟಿಯಿತ್ತು ಮಹಾತ್ಮರ ಸಮಾಧಿಗೆ, ಪುಷ್ಪಾಂಜಲಿಯನ್ನರ್ಪಿಸಿ, ಸಮಾಧಿಯಮುಂದೆ ಸೂತ್ರಯಜ್ಞದಿಂದ ಪ್ರಾರಂಭವಾಯಿತು.

ಅಖಂಡ ಸೂತ್ರಯಜ್ಞ

ಮಹಾತ್ಮಗಾಂಧಿಯವರ ಜನ್ಮದಿನೋತ್ಸವದ ಸಂಬಂಧದಲ್ಲಿ ಕಳೆದ ೮೪ ದಿನಗಳಿಂದ ಸೂರತ್ತಿನಲ್ಲಿ ಅಖಂಡ ಸೂತ್ರಯಜ್ಞ ಸುಮಾರು ೧೦೦೦೦ ವಿದ್ಯಾರ್ಥಿಗಳು ಉಪಾಧ್ಯಾಯರು ಮತ್ತಿತರರು ಭಾಗವಹಿಸಿ ನಡೆಸಿ ಈದಿನ ಮುಕ್ತಾಯಗೊಳಿಸಿದರು. ಈ ಕಾಲದಲ್ಲಿ ೪೫೦ ಮಣ ಖಾದಿ ನೂಲನ್ನೂ ತೆಗೆದಿರುವರು.

ಬೊಂಬಾಯಿನಲ್ಲಿ ಮೋಟಾರು ವಾಹನಗಳ ಮುಷ್ಕರ

ಮೋಟಾರು ವಾಹನಗಳ ಹೆಚ್ಚಿನ ತೆರಿಗೆಯನ್ನು ಪ್ರತಿಭಟಿಸಿ ಬೊಂಬಾಯಿನಗರದ ೯ ಸಾವಿರ ಮೋಟಾರು ವಾಹನಗಳು ನಿನ್ನೆ ಯಿಂದ ಮುಷ್ಕರ ಹೂಡಿದ್ದಾರೆ.

ಪಂಚವಾರ್ಷಿಕ ಯೋಜನೆಗೆ ವಿಶೇಷ ತೆರಿಗೆ

ಆಯೋಜನಾ ಸಮಿತಿಯು ತಯಾರಿಸಿರುವ ೨೦೦೦ ಕೋಟಿ ರೂಪಾಯಿಗಳ ಪಂಚವಾರ್ಷಿಕ ಯೋಜನೆಯ ವರದಿಯನ್ನು ಪಾರ್ಲಿಮೆಂಟಿಗೆ ಮತ್ತು ರಾಷ್ಟ್ರಕ್ಕೆ ನವಂಬರ್ ೭ನೇ ತಾರೀಖಿನದಿವಸ ಹೊರಗೆಡಹಲಾಗುವುದೆಂದು ಗೊತ್ತಾಗಿದೆ ಈ ವರದಿಯನ್ನು ಮುಕ್ತಾಯಗೊಳಿಸಲು ಸಮಿತಿಯು ಎಲ್ಲಾ ವಿಷಯಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗುತ್ತಿದೆ.

ರೈಲ್ವೆ, ವ್ಯವಸಾಯ, ವಿದ್ಯುಚ್ಛಕ್ತಿ ಮುಂತಾದ ಬಾಬುಗಳಲ್ಲಿಯೂ ವೆಚ್ಚವನ್ನು ಅಧಿಕಗೊಳಿಸಲಾಗಿದೆ. ಹೊಸದಾಗಿ ಭಾರತದಲ್ಲಿ ಜಾರಿಗೆ ತಂದಿರುವ ಕಮ್ಯೂನಿಟಿ ಪ್ರಾಜೆಕ್ಟ್ ಯೋಜನೆಗಾಗಿ ೧೦೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

ವಿದ್ಯಾಭ್ಯಾಸ ಮತ್ತು ಜನಾರೋಗ್ಯ ಬಾಬುಗಳಿಗೂ ಹೆಚ್ಚಿಗೆ ಹಣವನ್ನು ಒದಗಿಸಲಾಗಿದೆ.

ಈ ಆರ್ಥಿಕ ವೆಚ್ಚಗಳನ್ನೆಲ್ಲಾ ಸರಿದೂಗಿಸಲು ದೇಶಾದ್ಯಂತ ಕೆಲವು ಬಾಬುಗಳಲ್ಲಿ ವಿಶೇಷ ತೆರಿಗೆಯನ್ನು ವಿಧಿಸಬೇಕೆಂದು ಆಯೋಜನಾ ಸಮಿತಿಯು ಶಿಫಾರ್ಸುಮಾಡಲಿದೆಯೆಂದು ಗೊತ್ತಾಗಿದೆ.

ಕಾಶ್ಮೀರ ಬಗ್ಗೆ ಮಾತುಕತೆ ಮುಕ್ತಾಯವೆ ?

ಡಾ॥ ಗ್ರಹಾಂರವರು ಕಾಶ್ಮೀರಬಗ್ಗೆ ನಡೆಸಿದ ಸಂಧಾನಗಳು ಇನ್ನು ಮುಂದುವರಿಯುವುದಕ್ಕೆ ಪಾಕೀಸ್ಥಾನವು ಒಪ್ಪಿಗೆಯನ್ನು ಕೊಡುವುದಿಲ್ಲವೆಂದೂ, ವಿಶ್ವಸಂಸ್ಥೆಯು ಇನ್ನು ತಡಮಾಡದೆ ತನ್ನ ನಿರ್ದಿಷ್ಟತೀರ್ಮಾನವನ್ನು ಕೊಡುವಂತೆ ಪಾಕೀಸ್ತಾನವು ಕೇಳುವುದಾಗಿ ಪಾಕೀಸ್ಥಾನ ವೃತ್ತಗಳಲ್ಲಿ ಹೇಳಲಾಗುತ್ತಲಿದೆ.

ಮೈಸೂರು ದಸರಾ ವಸ್ತುಪ್ರದರ್ಶನ- ೧೯೫೨

ಅಮೋಘ ಸಂಗೀತ ಕಛೇರಿ

ತಾ॥ ೩-೧೦-೫೨ ನೇ ಶುಕ್ರವಾರ ಸಂಜೆ ೫-೩೦ ಗಂಟೆಗೆ ತೇರಳಂದೂರು ಸಂಗೀತವಿದ್ವಾನ್ ಶ್ರೀ: ಶ್ರೀನಿವಾಸಾಚಾರ್ ಮದ್ರಾಸ್ ಇವರ ಪಾರ್ಟಿಯವರಿಂದ ಜೀವನರಾಯನಕಟ್ಟೆ ರಂಗಮಂಟಪದಲ್ಲಿ ಏರ್ಪಡಿಸಿರುವ ಅಮೋಘ ಸಂಗೀತ ಕಛೇರಿಯನ್ನು ಕೇಳುವ ಸಂದರ್ಭವನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಬೇಕಾಗಿ ವಿನಂತಿ.

ಮೈಸೂರಿಗೆ ಕೇಂದ್ರದಿಂದ ೫೦ ಲಕ್ಷ ರೂಪಾಯಿ ಸಾಲ

ವಿದ್ಯುಚ್ಛಕ್ತಿ ಅಭಿವೃದ್ಧಿಗಾಗಿ ಹಣ ಉಪಯೋಗ

ಬೆಂಗಳೂರು ಅ. ೨

ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯ ಉತ್ಪನ್ನವನ್ನು ಹೆಚ್ಚಿಸಿ ವ್ಯವಸಾಯಾಭಿವೃದ್ಧಿಗೆ ಹೆಚ್ಚು ಸಹಕಾರಿಯಾಗಲು ಕೇಂದ್ರಸರ್ಕಾರವು ೫೦ ಲಕ್ಷ ರೂಪಾಯಿಗಳ ಸಾಲವನ್ನು ಮಂಜೂರ್ಮಾಡಿರುವುದಾಗಿ ಗೊತ್ತಾಗಿದೆ.

ಜ|| ಐಸೆನ್‌ಹೋವರ್ ಮೇಲೆ ಟ್ರೂಮನ್ನರ ಆರೋಪಣೆ

ಯೂರೋಪಿನಲ್ಲಿ ಸರ್ವಸೇನಾನಿಯಾಗಿದ್ದಾಗ ಜನರಲ್ ಐಸೆನ್‌ಹೋವರ್‌ರವರು ರಷ್ಯಾಬಗ್ಗೆ ಸರಿಯಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಿಲ್ಲ. ಅದರಿಂದ ಅಮೇರಿಕಾಕ್ಕೆ ವಿಶೇಷ ಹಾನಿಯುಂಟಾಯಿತು ರಷ್ಯಾಸ್ನೇಹ ಬಯಸುವರ ರೀತಿ ಅವರು ಮಾತನಾಡಿದರು ಹಾಗೆ ಹೇಳದಿದ್ದರೆ ನನಗೆ ಈಗಾಗಿರುವಷ್ಟು ಕಷ್ಟವಾಗುತ್ತಿರಲಿಲ್ಲವೆಂದು ಅಧ್ಯಕ್ಷಟ್ರೂಮನ್ನರು ಹೇಳಿರುವರು.

ಮೈಸೂರಿಲ್ಲದೆಯೇ ಕರ್ಣಾಟಕ ರಚನೆ

ಮೈಸೂರು ಕರ್ಣಾಟಕ ಪ್ರಾಂತ್ಯಕ್ಕೆ ಸೇರಲು ಇಷ್ಟವಿಲ್ಲದಿದ್ದರೆ ಇತರ ಭಾಗಗಳನ್ನೆಲ್ಲಸೇರಿಸಿಪ್ರತ್ಯೇಕ ಕರ್ಣಾಟಕಪ್ರಾಂತ್ಯರಚನೆಯನ್ನು ಕೂಡಲೇ ಮಾಡಬೇಕೆಂದು ಬೊಂಬಾಯಿನ ಶಾಸನಸಭೆಯ ಉಪಾಧ್ಯಕ್ಷ ಶ್ರೀ ಎಸ್. ಆರ್. ಕಂಠಿಯವರು ಹೇಳಿರುವರು.

ನಿಧನ

ಬೆಂಗಳೂರು, ಅ. ೨

ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ದೇವಡು ನರಸಿಂಹ ಶಾಸ್ತ್ರಿಗಳವರ ಪುತ್ರ ಕೋಲಾರ ಇಂಟರ್‌ಮಿಡಿಯೆಟ್ ಕಾಲೇಜು ಕನ್ನಡ ಲೆಕ್ಚರರ್ ಆಗಿದ್ದ ಶ್ರೀ ಟಿ. ಎನ್. ರಾಮುರವರು ಟೈಫಾಯಿಡ್ ಖಾಯಿಲೆಯಿಂದ ಶನಿವಾರ ಕೋಲಾರದಲ್ಲಿ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ರೆವಿನ್ಯೂ ಮಂತ್ರಿಗಳ ಪ್ರವಾಸ

ಮಾರಾಟಕೆರೆಗೆ ಬಗ್ಗೆ ನಡೆಯುವ ಸಭೆಯಲ್ಲಿ ಭಾಗವಹಿಸಲು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಇದೇ ೧೩ ನೇ ತಾರೀಖು ಹೊಸದೇಹಲಿಗೆ ಪ್ರಣಮಾಡುವರು.

ಕೃಷ್ಣರಾಜ ಒಡೆಯರ ಪ್ರತಿಮೆಯ ಅನಾವರಣ

ರಾಜಧಾನಿಯ ಲ್ಯಾನ್ಸ್‌ಡೌನ್‌ಬಜಾರ್ ಬಳಿ ನಿರ್ಮಿಸಲ್ಪಟ್ಟಿರುವ ಮಂಟಪದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರತಿಮೆಯ ಅನಾವರಣ ಮಹೋತ್ಸವವನ್ನು ಮಾಜಿ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರು ೧೬ ನೇ ತಾರೀಖು ಗುರುವಾರ ನೆರವೇರಿಸುವರು.

ಅಂದವಾದ ಮುದ್ರಣಕ್ಕೆ
ಕರ್ನಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)
For
NEAT AND PROMPT PRINTING
Contact :
CARNATAK PRINTERS
GANDHI SQUARE, MYSORE
Phone 892 or 574

ವುಡ್‌ಲಾಂಡ್ಸ್
ದುಪ್ಪಟ
ತಾರೀಖು 3-10-52 ರಿಂದ
ಅಮೋಘ ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನ
ಪಾತ್ರ—ನೂರ್‌ಜಹಾನ್,
ಅಜಯಕುಮಾರ್, ಗುಲಾಮ್
ಮಹಮದ್

ಖಾದಿಗೆ ಪ್ರೋತ್ಸಾಹ ಕೊಡಿ

ಪ್ರಧಾನಿ ನೆಹರೂರವರು ಗಾಂಧೀಜಯಂತಿಯ ಅಂಗವಾಗಿ ದೇಶಕ್ಕೆಒಂದು ಸಂದೇಶವನ್ನು ಕೊಡುತ್ತಾ, ಖಾದಿಯು ಸ್ವಾತಂತ್ರ್ಯ ಹೋರಾಟದ ಹೆಗ್ಗುರುತು. ಅದನ್ನು ಯಾರೂ ಮರೆಯಬಾರದು. ಖಾದಿಯು ಬಡವರ ಆಧಾರವಾದ ಗೃಹ ಕೈಗಾರಿಕೆ. ಈ ಕೈಗಾರಿಕೆಯು ಮಹಾತ್ಮಗಾಂಧಿಯವರಿಗೆ ಅತ್ಯಂತ ಪ್ರೇಮವಾಗಿತ್ತು. ಖಾದಿಯ ಬೆಳವಣಿಗೆಗೆ ಎಲ್ಲರೂ ಶ್ರಮಿಸಬೇಕೆಂದು ಹೇಳಿರುವರು.

ಭಾರತದಲ್ಲಿ ವಿದೇಶಿ ಬಂಡವಾಳ

ದೇಶದ ಆರ್ಥಿಕ ಸ್ಥಿತಿಗೆ ಭಂಗತರುವಂತಹ ರೀತಿಯಲ್ಲಿ ಕಂಡುಬರುವ ವಿದೇಶೀ ಬಂಡವಾಳಕ್ಕೆ ಭಾರತದಲ್ಲಿ ಅವಕಾಶ ಕೊಡುವುದಿಲ್ಲವೆಂದು ಕೈಗಾರಿಕಾಸಚಿವ ಶ್ರೀ ಕೃಷ್ಣಮಾಚಾರಿಯವರು ಹೇಳಿರುವರು.

ವಿಶ್ವವಿದ್ಯಾನಿಲಯದಲ್ಲಿ ಮಾತ್ರ ಇಂಗ್ಲೀಷ್‌ಮಾಧ್ಯಮ

ಇಂಟರ್‌ಮೀಡಿಯೆಟ್ ತರಗತಿಗಳವರೆಗೆ ಶಿಕ್ಷಣವನ್ನು ಕನ್ನಡದಲ್ಲಿಯೇ ಕೊಡಬೇಕೆಂದೂ, ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಇಂಗ್ಲೀಷು ಶಿಕ್ಷಣ ಮಾಧ್ಯಮವಾಗಬೇಕೆಂದೂ ಸಂಸ್ಥಾನದ ವಿದ್ಯಾಭ್ಯಾಸ ಸುಧಾರಣ ಸಮಿತಿಯ ಉಪಸಮಿತಿಯು ಸಲಹೆಮಾಡಿರುವುದೆಂದು ಗೊತ್ತಾಗಿದೆ.

ಟೆಕ್ನಿಕಲ್ ಶಿಕ್ಷಣಕ್ಕಾಗಿ ಪಾಶ್ಚಾತ್ಯ ದೇಶಗಳಲ್ಲಿರುವಂತೆ ಕೈಗಾರಿಕೆ ಮತ್ತು ವ್ಯಾಪಾರಗಳಮೇಲೆ ತೆರಿಗೆಯನ್ನು ವಿದ್ಯಾಸುಧಾರಣಾ ಸಮಿತಿಯವರುಪರಿಶೀಲಿಸಬಹುದುದೆಂದು ವರದಿಯಾಗಿದೆ.

ಎಲ್ಲಾ ರಾಜಕೀಯ ಪಂಗಡಗಳೊಡನೆ ಆಯೋಜನಾ ಸಮಿತಿಯ ಸಮಾಲೋಚನೆ

ತಾವು ತಯಾರಿಸಿರುವ ಪಂಚವಾರ್ಷಿಕ ಯೋಜನೆಯ ವಿಷಯದಲ್ಲಿ ನಾನಾಭಿಪ್ರಾಯಗಳನ್ನು ಪಡೆಯಲೋಸುಗ ಆಯೋಜನಾಮಂಡಲಿಯು ಭಾರತದಲ್ಲಿರುವ ಕಾಂಗ್ರೆಸ್, ಪ್ರಜಾ ಸೋಷಲಿಸ್ಟ್ ಮತ್ತು ಕಮ್ಯೂನಿಸ್ಟ್ ಪಕ್ಷಗಳ ನಾಯಕರೊಡನೆ ಇದೇ ಮಾಹೆ ೩ ನೇ ವಾರದಲ್ಲಿ ಸಮಾಲೋಚನೆ ನಡೆಸುವುದಾಗಿ ಗೊತ್ತಾಗಿದೆ. ಈ ಪಕ್ಷಗಳೊಡನಲ್ಲದೆ ನಾನಾ ಪ್ರಮುಖ ವ್ಯಕ್ತಿಗಳೊಡನೆಯೂ ಸಹ ಸಮಾಲೋಚನೆ ನಡೆಸಲು ವ್ಯವಸ್ಥೆ ಮಾಡಲಾಗಿದೆ.

ಮೈಸೂರು ಪೇಟೆಧಾರಣೆ

ತಾ|| ೧-೧೦-೫೨

ಪಲ್ಲ	ರೂ–ಆ	ರೂ–ಆ
ಕಡಲೇಕಾಯಿ	೫-೦	೧೯-೬
ಎಳ್ಳು	೬೨-೨	೭೨-೧೪
ಹರಳು	೫೫-೪	೪೭-೦
ಅಲಸಂದೆ	೬೭-೬	
ಮೆಣಸಿನಕಾಯಿ	೯-೦	೨೧-೬
ಹುಣಸೆಹಣ್ಣು	೬-೪	
ಸೀಗೇಕಾಯಿ	೫-೩	೫-೮
ಬೆಲ್ಲ	೪-೪	೪-೮
ತೆಂಗಿನಕಾಯಿ ೧,೧೦೦ ಕ್ಕೆ	೧೪೭	೧೯೩

ಅಪೇರ ೨೬-೯-೫೨ ರಿಂದ ಪ್ರತಿದಿನ ೩ ಆಟಗಳು
ವಿಜಯಾರವರ
ಕಲ್ಯಾಣಂ–ಪಣ್ಣಿಪಾರ್
[ತಮಿಳು]
ಪಾತ್ರ:—ವರಲಕ್ಷ್ಮಿ, ಸಾವಿತ್ರಿ,
ಎನ್. ಟಿ. ರಾಮರಾವ್

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 36

೪-೧೦-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ರಷ್ಯಾ ಮತ್ತು ಚೀಣಾ ಆಹಾರ ಸಹಾಯ

ಮೈಸೂರು ಕ್ಷಾಮಪ್ರದೇಶಗಳಲ್ಲಿ ಉಚಿತ ಹಂಚಿಕೆ

ರಷ್ಯ ಮತ್ತು ಚೀಣಾದಿಂದ ಮೈಸೂರಿಗೆ ಬಂದಿರುವ ೨ ಸಾವಿರ ಟನ್ ಗೋಧಿ, ೧ ಸಾವಿರ ಟನ್ ಅಕ್ಕಿ ಮತ್ತು ೧ ಲಕ್ಷ ಟನ್ ಹಾಲು ಡಬ್ಬಗಳನ್ನು ಸಂಸ್ಥಾನದ ಕ್ಷಾಮಪೀಡಿತ ಪ್ರದೇಶಗಳಿಗೆ ಹಂಚಲಾಗುವುದು. ಕೊಳ್ಳಲು ದುಡ್ಡಿಲ್ಲದೆ ದುಸ್ಥಿತಿಗೆ ಒಳಗಾದವರಿಗೆ ಈ ಆಹಾರವನ್ನು ಉಚಿತವಾಗಿ ಕೊಡಲಾಗುವುದು.

ಕೋಲಾರ ಜಿಲ್ಲೆಗೆ ೮೦೦ ಟನ್‌ಗೋಧಿ, ೨೫೦ ಟನ್ ಅಕ್ಕಿ ಮತ್ತು ೨೫೦೦೦ ಡಬ್ಬ ಹಾಲು. ತುಮಕೂರು ಜಿಲ್ಲೆಗೆ ೩೦೦ ಟನ್ ಗೋಧಿ, ೨೫೦ ಟನ್ ಅಕ್ಕಿ ಮತ್ತು ೧೨ ಸಾವಿರ ಡಬ್ಬ ಹಾಲು. ಚಿತ್ರದುರ್ಗಜಿಲ್ಲೆಗೆ ೫೦೦ ಟನ್ ಗೋಧಿ, ೧೦೦ ಟನ್ ಅಕ್ಕಿ ಮತ್ತು ೧೮೦೦೦ ಡಬ್ಬ ಹಾಲು. ಶಿವಮೊಗ್ಗ ಜಿಲ್ಲೆಗೆ ೫೦ ಟನ್ ಗೋಧಿ, ೧೦೦ ಟನ್ ಅಕ್ಕಿ ಮತ್ತು ೧೦ ಸಾವಿರ ಡಬ್ಬ ಹಾಲು. ಮೈಸೂರು ಜಿಲ್ಲೆಗೆ ೫೦ ಟನ್ ಗೋಧಿ ಮತ್ತು ೫ ಸಾವಿರ ಡಬ್ಬ ಹಾಲು. ಹಾಸನ ಜಿಲ್ಲೆಗೆ ೫೦ ಟನ್ ಗೋಧಿ, ೨೫ ಟನ್ ಅಕ್ಕಿ, ಮತ್ತು ೬೫೦೦ ಡಬ್ಬ ಹಾಲು ಚಿಕ್ಕಮಗಳೂರು ಜಿಲ್ಲೆಗೆ ೫೦ ಟನ್ ಗೋಧಿ ೨೫ ಟನ್ ಅಕ್ಕಿ ಮತ್ತು ೬೫೦೦ ಡಬ್ಬ ಹಾಲು. ಬೆಂಗಳೂರು ಜಿಲ್ಲೆಗೆ ೧೫೦ ಟನ್ ಗೋಧಿ, ೧೫೦ ಟನ್ ಅಕ್ಕಿ ಮತ್ತು ೧೦ ಸಾವಿರ ಡಬ್ಬ ಹಾಲು. ಮಂಡ್ಯ ಜಿಲ್ಲೆಗೆ ೫೦ ಟನ್ ಗೋಧಿ, ಮತ್ತು ೫ ಸಾವಿರ ಡಬ್ಬ ಹಾಲು ಕೊಡಲಾಗಿದೆ.

ಅಣುಶಸ್ತ್ರ ಆಸ್ಫೋಟನೆ

ಅಣುಶಸ್ತ್ರ ತಯಾರಿಸಿ ಅದನ್ನು ಸ್ಫೋಟಿಸಿ ಪರೀಕ್ಷೆ ನಡೆಸಿದುದರ ಬಗ್ಗೆ ವಿಶ್ವವಿಜ್ಞಾನಿ ಡಾ|| ಸಿ. ವಿ. ರಾಮನ್‌ರವರು ಮಾತನಾಡುತ್ತ ಇದರಿಂದ ನಮಗೆ ಸಂತೋಷವೇನೂ ಇಲ್ಲ. ಈ ರೀತಿಯ ಅಸ್ತ್ರಗಳ ತಯಾರಿಕೆಯಿಂದ ಮಾನವೀಯತೆಗೇನೂ ಪ್ರಯೋಜನವಿಲ್ಲ. ನಾಶಕ್ಕೆ ಕಾರಣವೆಂದು ಹೇಳಿದ್ದಾರೆ.

ಇದರಬಗ್ಗೆ ಮತ್ತೊಬ್ಬ ವಿಜ್ಞಾನಿ ಡಾ|| ಮೇಘನಾಥ ಸಹಾರವರೂ ಸಹ ಇದೇ ಅಭಿಪ್ರಾಯಪಟ್ಟು ಈ ರೀತಿಯ ಶಸ್ತ್ರಗಳ ತಯಾರಿಕೆಗೆ ವಿಜ್ಞಾನಿಗಳು ಸಹಾಯ ನೀಡಬಾರದೆಂದು ಹೇಳಿದ್ದಾರೆ.

ಸೈನ್ಯಾಧಿಕಾರಿಗಳಿಗೆ ಕರೆ

ರಜದಮೇಲಿದ್ದ ಎಲ್ಲಾ ಬ್ರಿಟಿಷ್ ಸೈನ್ಯಾಧಿಕಾರಿಗಳು ಕೂಡಲೇ ಹಿಂತಿರುಗಿ ಕೇಂದ್ರ ಕಛೇರಿಗೆ ವರದಿಮಾಡಿಕೊಳ್ಳಬೇಕೆಂದು ಬ್ರಿಟಿಷ್ ಸರ್ಕಾರವು ಸೂಚನೆಯನ್ನಿತ್ತಿದೆ. ಇವರನ್ನೆಲ್ಲಾ ಸೂಯೇಜ್ ಕಾಲುವೆ ಪ್ರದೇಶಕ್ಕೆ ಕಳುಹಿಸುವ ಅವಶ್ಯಕತೆಯೊದಗಿರುವುದಾಗಿ ಹೇಳಲಾಗಿದೆ.

ಎಲ್. ಎಸ್. ರಾಜು ಬೊಂಬಾಯಿಗೆ

ಬೆಂಗಳೂರು, ಅ. ೪

ವಿಷಪ್ರಾಶನ ಪ್ರಯತ್ನದ ಮೊಕದ್ದಮೆಯ ಅಪೀಲು ವಿಚಾರಣೆಯು ಇದೇ ೬ನೇ ತಾರೀಖಿನಿಂದ ಬೊಂಬಾಯಿ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಾರಂಭವಾಗುವುದರಿಂದ ಅಪರಾಧಿ ಎಲ್. ಎಸ್. ರಾಜುರವರನ್ನು ಮೊನ್ನೆ ರಾತ್ರಿ ಬೆಂಗಳೂರಿನಿಂದ ಬೊಂಬಾಯಿಗೆ ಕರೆದೊಯ್ಯಲಾಯಿತು.

ಮೈಸೂರು, ಅ. ೪

ಬಹುಮಾನ ವಿನಿಯೋಗ

ದಸರಾ ವಸ್ತುಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭವು ತಾ|| ೫-೧೦-೫೨ ಭಾನುವಾರ ಸಂಜೆ ೪ ಗಂಟೆಗೆ ಜೀವನರಾಯನಕಟ್ಟೆ ಥಿಯೇಟರಿನಲ್ಲಿ ನೆರವೇರುತ್ತದೆ. ಮೈಸೂರು ಸರ್ಕಾರದ ಕೈಗಾರಿಕೆ ಸಚಿವರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಬಹುಮಾನ ವಿನಿಯೋಗ ಮಾಡಲು ಒಪ್ಪಿರುತ್ತಾರೆ.

ವಸ್ತುಪ್ರದರ್ಶ ಮಹಿಳೆಯರಿಗೆ ಮಾತ್ರ

ವಸ್ತುಪ್ರದರ್ಶನದ ಕಡೇದಿನ ಅಕ್ಟೋಬರ್ ೬ ನೇ ತಾರೀಖು ಆದಿನ ಬೆಳಗ್ಗೆ ಸಾರ್ವಜನಿಕರೆಲ್ಲರಿಗೂ ಮತ್ತು ಸಂಜೆ ಮಹಿಳೆಯರಿಗೆ ಮಾತ್ರ ಪ್ರವೇಶವುಂಟು.

ಬ್ರಿಟನ್ನಿನ ಅಣುಶಸ್ತ್ರ ಆಸ್ಫೋಟನೆ

ಉತ್ತರ ಆಸ್ಟ್ರೇಲಿಯಾ ತೀರದಾಚೆ ಮಾಂಟೆ ಬೆಲ್ಲೋ ದ್ವೀಪಗಳಲ್ಲಿ ಬ್ರಿಟಿಷ್ ಆಟಾಮಿಕ್ ಶಸ್ತ್ರವನ್ನು ಯಶಸ್ವಿಯಾಗಿ ನಿನ್ನೆಯದಿನ ಆಸ್ಫೋಟಿಸಲಾಯಿತೆಂದು ಪ್ರಕಟಿಸಲಾಗಿದೆ.

ಈ ಶಸ್ತ್ರದ ಪರಿಣಾಮ ಮತ್ತು ವ್ಯಾಪ್ತಿಯನ್ನು ತಿಳಿಯಲು ಒಂದು ಕೃತಕ ನಗರವನ್ನೇ ಕಟ್ಟಲಾಗಿತ್ತೆಂದು ಹೇಳಲಾಗಿದೆ. ಈ ಆಸ್ಫೋಟನೆಯು ಸೂರ್ಯನ ಮೇಲ್ಭಾಗದಷ್ಟು ಪ್ರಕಾಶಮಾನವಾಗಿತೆಂದು ಹೇಳಲಾಗಿದೆ.

ಈ ಆಸ್ಫೋಟನೆ ಯಶಸ್ವಿಯಾದುದಕ್ಕೆ ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಇದಕ್ಕೆ ನೆರವಿತ್ತವರಿಗೆಲ್ಲಾ ಅಭಿನಂದಿಸಿದ್ದಾರೆ.

೧೦೦೦೦ ಕಾರ್ಮಿಕರಿಗೆ ನಿರುದ್ಯೋಗ

ಕ್ವಿಲಾನಿನಲ್ಲಿ ೨೦ ಗೇರು ಬೀಜದ ಕಾರ್ಖಾನೆಗಳನ್ನು ಒಂದು ವಾರದಿಂದ ಮುಚ್ಚಿದುದರ ಪರಿಣಾಮವಾಗಿ ೧೦೦೦೦ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ. ಇನ್ನು ಕೆಲವು ಕಾರ್ಖಾನೆಗಳನ್ನು ಮುಚ್ಚುವ ಸಂಭವವಿದೆಯೆಂದು ಹೇಳಲಾಗುತ್ತಿದೆ. ಆಫ್ರಿಕಾದಲ್ಲಿ ಈ ವಸ್ತುವಿನ ಬೆಳೆಯು ಕಡಮೆಯಾಗಿ ಈಗಿರುವ ದಾಸ್ತಾನಿಗೆ ಬೊಂಬಾಯಿನ ವರ್ತಕರು ವಿಪರೀತ ಬೆಲೆ ಹೇಳುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ವಿವಿಧ ಘಟ್ಟಗಳ ಮಾರಾಟಕ್ಕೆ ತೆರಿಗೆ ಕಾನೂನು

ಬೊಂಬಾಯಿ ಪ್ರಾಂತ್ಯದಲ್ಲಿ ವಿವಿಧ ಘಟ್ಟಗಳಲ್ಲಿ ಮಾರಾಟ ತೆರಿಗೆ ವಿಧಿಸಲು ಮಾಡಿರುವ ಮಸೂದೆಗೆ ರಾಷ್ಟ್ರಾಧ್ಯಕ್ಷರು ಒಪ್ಪಿಗೆಯನ್ನಿತ್ತಿರುವರು. ಅದು ನವಂಬರ್ ಒಂದನೇ ತಾರೀಖಿನಿಂದ ಜಾರಿಗೆ ಬರಲಿದೆ.

ದೆಹಲಿಗೆ ರಾಜಾಜಿ

ವಿವಿಧ ಪ್ರಾಂತ್ಯಗಳ ಆರ್ಥಿಕ ಮಂತ್ರಿಗಳಸಭೆಯಲ್ಲಿಭಾಗವಹಿಸಲು ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರು ದೆಹಲಿಗೆ ಹೋಗುವರು.

ಕಾಂಗ್ರೆಸ್ ಸರ್ಕಾರ ಆಡಳಿತದಲ್ಲಿ ಖಾದಿ ಕೊಳ್ಳುವವರಿಲ್ಲವೇ ?

ಭಾರತದಲ್ಲಿ ಈಗ ೬೫ ಲಕ್ಷ ರೂಪಾಯಿಗಳಷ್ಟು ಬೆಲೆಬಾಳುವ ಶುದ್ಧ ಖಾದಿ ಬಟ್ಟೆ ಮತ್ತು ೩೦ ಲಕ್ಷ ರೂಪಾಯಿ ಬೆಲೆಯ ಖಾದಿ ನೂಲು ಖರ್ಚಾಗದೆ ನಿಂತಿದೆ ಇದರಿಂದ ಒಂದೂವರೆಲಕ್ಷ ನೂಲುವವರು ಉದ್ಯೋಗವಿಲ್ಲದೆ ಇದ್ದಾರೆಂದು ವಾರ್ಧಾದಲ್ಲಿರುವ ಸರ್ವಸೇವಾಸಂಘ ಪ್ರಕಟಿಸಿದೆ.

ಪ್ರೆಸ್ ಕಮಿಷನ್ ಸಭೆ

ಭಾರತ ಸರ್ಕಾರವು ನ್ಯಾಯಮೂರ್ತಿ ರಾಜ್ಯಾಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಿರುವ ಪ್ರೆಸ್ ಕಮಿಷನ ಪ್ರಥಮ ಸಭೆಯು ದೆಹಲಿಯಲ್ಲಿ ೧೧ ನೇ ತಾರೀಖು ಸೇರಲಿದೆ.

ಸಹಕಾರ ಶಿಕ್ಷಣ ತರಗತಿ

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ನಡೆಯುವ ಸಹಕಾರ ಶಿಕ್ಷಣ ತರಗತಿಗಳು ಮೈಸೂರು ನೂರಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ಇದೇ ಅಕ್ಟೋಬರ್ ಮಾಹೆ ೬ ನೇ ತಾರೀಖು ಸೋಮವಾರ ಸಾಯಂಕಾಲ ೬ ಗಂಟೆಗೆ ಪ್ರಾರಂಭಿಸಲ್ಪಡುತ್ತವೆ. ತರಗತಿಗಳಿಗೆ ಸೇರಲು ಅರ್ಜಿಹಾಕಿಕೊಂಡಿರುವವರು ಆ ತಾರೀಖು ಸಾಯಂಕಾಲ ೬ ಗಂಟೆಗೆ ಸರಿಯಾಗಿ ಹಾಜರಾಗಬೇಕಾಗಿದೆ.

ಅಧಿಕಾರಿಗಳಿಗೆ ಅವಮಾನ ಮಾಡಿದ್ದಕ್ಕೆ ಕಠಿಣ ಸಜಾ

ಮಾಗಡಿ ತಾಲ್ಲೂಕು ಕುದೂರು ಹೋಬಳಿ ನಾರಸಂದ್ರ ಗ್ರಾಮದ ಶ್ರೀ ಚನ್ನವೀರಶೆಟ್ಟರ ಮಗ ಶ್ರೀ ರುದ್ರಪ್ಪನವರು ದವಸವನ್ನು ಸಕಾಲದಲ್ಲಿ ಸರ್ಕಾರಕ್ಕೆ ಕೊಡದೆ, ಅದನ್ನು ವಸೂಲಿ ಮಾಡಲು ಬಂದ ತಾಲ್ಲೂಕು ಶಿರಸ್ತೇದಾರ ಮತ್ತು ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರಿಗೆ ಹೀನಾಮಾನ ಬೈದು ಹೊಡೆಯಲು ಹೋಗಿ ಅಸಭ್ಯರೀತಿಯಿಂದ ವರ್ತಿಸಿದರೆಂಬ ಅಪಾದನೆಮೇಲೆ ರಾಮನಗರ ಮ್ಯಾಜಿಸ್ಟ್ರೇಟರು ಒಂದು ತಿಂಗಳ ಕಠಿಣ ಸಜಾ ೫೦ ರೂ. ಜುಲ್ಮಾನೆ ವಿಧಿಸಿದ್ದಾರೆ.

ಅಗ್ಗದ ಮತ್ತು ಉತ್ತಮ ವಸ್ತು ತಯಾರಿಸಬೇಕು

ದೇಶದಲ್ಲಿ ಕೈಗಾರಿಕಾಭಿವೃದ್ಧಿಗೆ ಕೈಗಾರಿಕೋದ್ಯಮಿಗಳೆಲ್ಲರೂ ತಮ್ಮ ಶಕ್ತಿಮೀರಿ ಶ್ರಮಿಸಬೇಕು ವಸ್ತುಗಳನ್ನು ತಯಾರಿಸುವಾಗ್ಗೆ ಎಲ್ಲರಿಗೂ ಪ್ರಯೋಜನವಾಗುವಂತೆ ಉತ್ತಮರೀತಿಯ ಅಗ್ಗವಾದವುಗಳನ್ನು ತಯಾರಿಸಬೇಕೆಂದು ಕೇಂದ್ರಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಹೇಳಿರುವರು.

ಪೈಪುಗಳ ಅನಿರ್ಬಂಧ ಮಾರಾಟ

ಸಂಸ್ಥಾನಗಳಲ್ಲಿ ಕೊಳಾಯಿಗಳನ್ನು ರಿಜಿಸ್ಟರ್ ಆದ ಮಾರಾಟ ಮಾಡತಕ್ಕವರು ೬ ತಿಂಗಳಿಗಿಂತಲೂ ಹೆಚ್ಚಾಗಿ ಮಾರಾಟವಾಗದೆ ನಿಂತಿರುವ ಕೊಳಾಯಿಗಳನ್ನು ಅನುಮತಿ ಪಡೆಯದೆ ಯಾರಿಗೆ ಬೇಕಾದರೂ ಮಾರಾಟ ಮಾಡಬಹುದೆಂದು ಭಾರತ ಸರ್ಕಾರ ಆಜ್ಞೆಯಿತ್ತಿದೆ.

೧೯೫೩ರಲ್ಲಿಚ ರ್ಚಿಲ್ ನಿವೃತ್ತಿ

೧೯೫೩ ರಲ್ಲಿ ಬ್ರಿಟನ್ ಪ್ರಧಾನಿ ಚರ್ಚಿಲ್‌ರವರು ತಮ್ಮ ಸ್ಥಾನದಿಂದ ನಿವೃತ್ತರಾಗುವರೆಂದು ಬರ್ಮಾದ ಜ್ಯೋತಿಷ್ಯರೊಬ್ಬರು ಭವಿಷ್ಯ ನುಡಿದಿದ್ದಾರೆ. ನವಂಬರ್ ೨೬ ರಿಂದ ಡಿಸೆಂಬರ್ ೨೫ ರ ನಡುವೆ ಅವರು ಮಹಾ ಖಾಯಿಲೆಗೆ ಒಳಗಾಗುವರೆಂದು ಅವರು ಹೇಳಿರುವರು.

ಬೈಸಿಕಲ್ಲು ಮತ್ತು ಅದರ ಭಾಗಗಳಮೇಲೆ ಹತೋಟಿ ರದ್ದು

ಆಜ್ಞೆಯು ಕೂಡಲೇ ಜಾರಿಗೆ ಬರಲಿದೆ

ಬೈಸಿಕಲ್ಲುಗಳು, ಅದರ ಭಾಗಗಳು, ಟೈರು, ಟ್ಯೂಬು, ಎಲಕ್ಟ್ರಿಕ್ ಬಲ್ಬುಗಳ ಮೇಲೆ ಬೆಲೆ ಮತ್ತು ಇತರ ಹತೋಟಿಗಳನ್ನೆಲ್ಲಾ ಭಾರತ ಸರ್ಕಾರವು ರದ್ದುಗೊಳಿಸಿದೆ. ಈ ಆಜ್ಞೆಯು ಕೂಡಲೇ ಜಾರಿಗೆ ಬರಲಿದೆ.

ದಕ್ಷಿಣಆಫ್ರಿಕಾಬಗ್ಗೆ ಮಧ್ಯಸ್ಥಿಕೆಗಾರರ ನೇಮಕ

ಕಳೆದ ೬ ವರ್ಷಗಳಿಂದಲೂ ನಡೆಯುತ್ತಲಿರುವ ದಕ್ಷಿಣ ಆಫ್ರಿಕಾವರ್ಣಭೇದ ನೀತಿಯ ತೀರ್ಮಾನಕ್ಕಾಗಿ ವಿಶ್ವಸಂಸ್ಥೆಯ ಒಬ್ಬ ಮಧ್ಯಸ್ಥಿಕೆಗಾರರನ್ನು ನೇಮಿಸಬೇಕೆಂದು ಭಾರತ-ಪಾಕೀಸ್ತಾನಗಳು ವಿಶ್ವಸಂಸ್ಥೆಗೆ ತಿಳಿಸಿವೆ.

ಮಹಮದ್ ಅಹಮದ್‌ರವರ ದೇಹಸ್ಥಿತಿ

ಮೈಸೂರು, ಅ. ೨

ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಜಿಲ್ಲಾಧಿಕಾರಿ ಶ್ರೀ ಮಹಮದ್ ಅಹಮದ್‌ರವರ ದೇಹಸ್ಥಿತಿಯು ನಿನ್ನೆಗಿಂತ ಈಗಿನ ಉತ್ತಮಗೊಂಡಿರುವುದಾಗಿ ವೈದ್ಯರುತಿಳಿಸಿರುವರು.

ಕಬ್ಬಿನ ಸಿಪ್ಪೆಯಿಂದ ನ್ಯೂಸ್‌ಪ್ರಿಂಟ್ ಕಾಗದ

ಕಬ್ಬಿನ ಸಿಪ್ಪೆಯಿಂದ ನ್ಯೂಸ್‌ಪ್ರಿಂಟ್ ಕಾಗದವನ್ನು ತಯಾರಿಸಲು ಮಾಡಿದ ಪರಿಶೋಧನೆಬಗ್ಗೆ ಅಮೇರಿಕಾ ವಿಜ್ಞಾನಿಯೊಬ್ಬರು ಮಾತನಾಡುತ್ತಾ, ಬೊಂಬಿನ ತಿರುಳಿಗಿಂತಲೂ ಅಗ್ಗವಾದ ಉತ್ತಮವಾದ ಕಾಗದವನ್ನು ಕಬ್ಬಿನ ಸಿಪ್ಪೆಯಿಂದ ತಯಾರಿಸಬಹುದೆಂದು ಹೇಳಿರುವರು.

ಹಿಂದೀ ಶೀಘ್ರಲಿಪಿಗೆ ಸರ್ಕಾರಿ ಮನ್ನಣೆಯಿಲ್ಲ

ಹಿಂದೀ ಶೀಘ್ರಲಿಪಿಯಲ್ಲಿ ಇನ್ನೂ ಅನೇಕ ಬದಲಾವಣೆಗಳಾಗಿ ಉತ್ತಮರೀತಿಯಲ್ಲಿರಬೇಕಾಗುವುದರಿಂದ ಈಗಿರುವ ಶೀಘ್ರ ಲಿಪಿಗಳಲ್ಲಿ ಯಾವುದಕ್ಕೂ ಸರ್ಕಾರವು ಮನ್ನಣೆಕೊಡುವುದಿಲ್ಲವೆಂದುಕೇಂದ್ರ ಸರ್ಕಾರವು ಪ್ರಕಟಿಸಿದೆ. ಇದರ ಬಗ್ಗೆ ಇನ್ನೂ ಅನೇಕ ಪರಿಶೋಧನೆಗಳಿಗೆ ಅವಕಾಶಕೊಡುವುದೇ ಇದರ ಉದ್ದೇಶ.

§ ದೇಶದ ಆರ್ಥಿಕ ಪರಿಸ್ಥಿತಿ ಬಹಳ ಕೆಟ್ಟಿರುವುದರಿಂದ ಬೀಹಾರ ಗವರ್ನರ್ ಶ್ರೀ ಆರ್. ಆರ್. ದಿವಾಕರ್‌ರವರು ತಮ್ಮ ಸಂಬಳದಲ್ಲಿ ಶೇ|| ೧೫ರಷ್ಟನ್ನು ಕಡಿಮೆ ಮಾಡಿಕೊಂಡಿದ್ದಾರೆ.

ಅಂದವಾದ ಮುದ್ರಣಕ್ಕೆ

ಕರ್ನಾಟಕ ಪ್ರಿಂಟರ್ಸ್

ಗಾಂಧಿಚೌಕ ಮೈಸೂರು.

(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)

For NEAT AND PROMPT PRINTING

Contact :

CARNATAK PRINTERS

GANDHI SQUARE, MYSORE

Phone 892 or 574

ಅಪ್ಸರ ೨-೧೦-೫೨ ರಿಂದ ೨ನೇವಾರ

ವಿಜಯಾರವರ

ಕಲ್ಯಾಣಂ—ಪಣ್ಣಿಪಾರ್

[ತ ಮಿ ಳು]

ಪಾತ್ರ:—ವರಲಕ್ಷ್ಮಿ, ಸಾವಿತ್ರಿ ಎನ್. ಟಿ. ರಾಮರಾವ್

ರಣಜಿತ್

2-10-52ರಿಂದ ಅಮೋಘ ೨ನೇವಾರ

ನೀಲಮ್‌ಪಾರಿ

NEELAM PARI

ಪಾತ್ರ:--ಗೀತಾಬಾಲಿ, ಸಜ್ಜನ್, ಸಪ್ರು, ಗೋಪ್, ಕುಲ್‌ದೀಪ್

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ವುಡ್‌ಲಾಂಡ್ಸ್

ದು ಪ್ಪ ಟ

ತಾರೀಖು 3-10-52 ರಿಂದ

ಅಮೋಘ ಪ್ರಾರಂಭ

ಪ್ರತಿದಿನ ಮೂರು ಪ್ರದರ್ಶನ

ಪಾತ್ರ—ನೂರ್‌ಜಹಾನ್, ಅಜಯಕುಮಾರ್, ಗುಲಾಮ್ ಮಹಮದ್

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,500 or near offer

No brokers–Immediate possession—No encumbrence,

Enquire at :— M. NARAYANA RAO, Co., c/o Tourist Bureau, Lansdowne Buildings, Mysore

ಮಹಾತ್ಮರ ಉಪದೇಶ! ೯೨ ವರ್ಷಗಳ ಚಾಲ್ತಿ!! ಅನೇಕ ಪ್ರಶಂಸೆ!!!

ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ಸುಪ್ರಸಿದ್ಧ

★ ಸಂತಾನ ಸಿಂಧೂರ ★

† ಬಹಿಷ್ಠೆ (ಮುಟ್ಟು) ಸಂಬಂಧದ ಹೊಟ್ಟೆನೋವನ್ನು ನಿರ್ಮೂಲ ಮಾಡುತ್ತದೆ † ಅಕ್ರಮಸೂಚಕ, ಕ್ರಮತಪ್ಪಿ ಬಹಿಷ್ಠೆ ಆಗುವುದನ್ನು ನಿಲ್ಲಿಸುತ್ತದೆ; † ಗರ್ಭಪತನ, ಗರ್ಭಸ್ರಾವ ಇತ್ಯಾದಿಗಳನ್ನು ನಿವಾರಿಸುತ್ತದೆ † ಬಂಜೆತನವನ್ನು ಕೊನೆಗಾಣಿಸಿ ಸಂತಾನಕೊಡುವ ಸಿದ್ಧೌಷಧ. ೨ ಔಷಧಿಗಳ ೧ ಸೆಟ್ಟನ್ನು ಸೇವಿಸಿರಿ. ಕ್ರಯ ೧ ಸೆಟ್‌ಗೆ ೫ ರೂ ಟಪಾಲ್ ಖರ್ಚು ೧ ರೂ. —(ಪತ್ರವ್ಯವಹಾರ ಗುಪ್ತ.)

ಅಡ್ರೆಸ್:—ಎ. ರಾಮಸ್ವಾಮಿ ಅಯ್ಯರ್ ಸನ್ "ಸಂತಾನಸಿಂಧೂರ" ಆಫೀಸ್, ೬೨ಲ ನೂರಡಿರಸ್ತೆ ದಕ್ಷಿಣಕ್ರಾಸ್, (ಕೃಷ್ಣ ರೈಸ್‌ಮಿಲ್ ಪಕ್ಕ) ಮೈಸೂರು.

ವಿ.ಸೂ:—ಇದುವರೆಗೂ ಅಂಬಳೆ ಮತ್ತು ಮೈಸೂರು ನೊಪ್ಪಿನಕೋಳದ ಬೀದಿಯಲ್ಲಿದ್ದ ಆಫೀಸುಗಳನ್ನು ವಜಾ ಮಾಡಿ ಮೇಲ್ಕಂಡ ನಮ್ಮ ಸ್ವಂತ ಕಟ್ಟಡಕ್ಕೆ ವರ್ಗಾಯಿಸಿರುತ್ತೆ. ವಿಶೇಷ ಮಾಹಿತಿಗೆ ೨ ಅ. ಸ್ಟಾಂಪು ಕಳುಹಿಸಿ.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 37

೬-೧೦-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಸ್ವದೇಶಿವಸ್ತುಗಳಿಗೆಹೆಚ್ಚು ಪ್ರಾಮುಖ್ಯತೆ ಕೊಡಬೇಕು

ವಸ್ತುಪ್ರದರ್ಶನದ ಮುಕ್ತಾಯ ಸಮಾರಂಭದಲ್ಲಿ ಸಚಿವರ ಸಲಹೆ

ಮೈಸೂರು. ಅ. ೬

ದಸರಾ ವಸ್ತುಪ್ರದರ್ಶನದ ಮುಕ್ತಾಯ ಸಮಾರಂಭವು ನಿನ್ನೆ ಸಂಜೆ ಜೀವನರಾಯನ ಕಟ್ಟೆಯ ಥಿಯೇಟರಿನಲ್ಲಿ ಕೈಗಾರಿಕಾಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರದರ್ಶನ ಸಮಿತಿಯ ಅಧ್ಯಕ್ಷರಾದ ಶ್ರೀ ಎ. ಜಿ. ರಾಮಚಂದ್ರರಾಯರು ಸ್ವಾಗತಭಾಷಣಮಾಡಿ ಹಳೇಕಾಲದ ಮಾದರಿಯಲ್ಲಿರುವಂತೆ ವಸ್ತುಪ್ರದರ್ಶನವನ್ನು ನಡೆಸುವುದು ಸರಿಯಲ್ಲವೆಂದೂ, ಈಗಿನ ಸ್ವಾತಂತ್ರ್ಯ ವಾತಾವರಣದಲ್ಲಿ ದೇಶದ ಅಭಿವೃದ್ಧಿಗೆ ಸಹಾಯವಾಗುವಂತೆ ಏರ್ಪಡಿಸಬೇಕೆಂದೂ ತಿಳಿಸಿದರು. ವಸ್ತುಪ್ರದರ್ಶನಕ್ಕೆ ಜನರು ತಮಾಷೆಗಾಗಿ ಬರುವುದು ನಿಂತು, ಅಲ್ಲಿಗೆ ಬಂದವರು ದೇಶದ ಉನ್ನತಿಗೆ ಉಪಯೋಗವಾಗುವುದನ್ನು ಕಲಿತು ಅದನ್ನು ಕಾರ್ಯಗತವಾಗಿ ಮಾಡಬೇಕೆಂದು ಸಲಹೆಮಾಡಿದರು. ಕಾರ್ಯದರ್ಶಿ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ವರದಿಯನ್ನು ಒಪ್ಪಿಸಿದರು. ಕಳೆದವರ್ಷ ಬಾಡಿಗೆರೂಪದಲ್ಲಿ ೩೯ ಸಾವಿರ ರೂಪಾಯಿಗಳು ಬಂದು ಈವರ್ಷ ೪೮,೩೬೦ ರೂ ಬಂದಿತೆಂದೂ, ಪ್ರೇಕ್ಷಕರಿಂದ ಕಳೆದವರ್ಷ ೪೮,೦೦೦ ರೂ, ಬಂದು, ಈವರ್ಷ ೩೭,೭೦೦ ರೂ. ವಸೂಲಾಯಿತೆಂದೂ ತಿಳಿಸಿದರು.

ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಬಹುಮಾನಗಳನ್ನು ವಿನಿಯೋಗಿಸಿ, ವಸ್ತುಪ್ರದರ್ಶನಗಳು ಯಾವರೀತಿಕ್ರೀಡಾರಂಗವಾಗಿ ಬೋಧಕವಾಗಿರಬೇಕೆಂಬುದರ ಬಗ್ಗೆ ಒತ್ತಿ ಹೇಳಿದರು. ಇಂತಹ ವಸ್ತುಪ್ರದರ್ಶನಗಳಲ್ಲಿ ಸ್ವದೇಶಿವಸ್ತುಗಳಿಗೆ ಹೆಚ್ಚುಪ್ರಾಮುಖ್ಯತೆಇರಬೇಕು.ಮತ್ತುಒಂದುಉದ್ದೇಶವಿದ್ದು,ಅದರಮೂಲಕ ದೇಶ ಉನ್ನತಿಗೆ ಕಾರಣವಾಗುವಂತಿರಬೇಕು-ಎಂದು ತಿಳಿಸಿದರು.

ಈಗ ವಸ್ತುಪ್ರದರ್ಶನವು ಪ್ರಾರಂಭವಾಗುವುದಕ್ಕೆ ೨-೩ ತಿಂಗಳ ಮುಂಚೆ, ಸಮಿತಿಯನ್ನು ನೇಮಿಸಿ, ಅದನ್ನು ಪ್ರದರ್ಶನ ಮುಗಿದನಂತರ ವಿಸರ್ಜಿಸುವುದರಿಂದ ಅವರ ಅನುಭವಮುಂದೆ ಸಿಕ್ಕುವಂತಿಲ್ಲ ಆದ್ದರಿಂದ ಒಂದು ಖಾಯಂ ಸಮಿತಿಯನ್ನು ಸ್ಥಾಪಿಸಲು ಸರ್ಕಾರ ಯೋಚಿಸುತ್ತಿದೆಯೆಂದು ಸಚಿವರು ತಿಳಿಸಿದರು.

ಕಾರ್ಯದರ್ಶಿ ಶ್ರೀ ವಿ. ಎಸ್. ಕೃಷ್ಣ ಅಯ್ಯರ್ ವಂದನೆಯನ್ನು ಅರ್ಪಿಸಿದರು.

ಬೆಂಕಿ ಅನಾಹುತದಿಂದ ಒಂದು ಕೋಟಿರೂ ನಷ್ಟ

ಕಲ್ಕತ್ತಾನಗರ ಪೋಲೀಸ್ ಸ್ಕ್ವೇರ್ ಎದುರಿಗಿರುವ ೪ ಅಂತಸ್ತಿನ ಮನೆಗೆ ಬೆಂಕಿತಗುಲಿ ಬಟ್ಟೆ, ಟಾರ್ಚ್ ಮುಂತಾದುವೆಲ್ಲಾ ಸುಟ್ಟು ಭಸ್ಮವಾದ ಪ್ರಕರಣವು ನಿನ್ನೆ ವರದಿಯಾಗಿದೆ. ಒಂದು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ನಷ್ಟ ಸಂಭವಿಸಿದೆಯೆಂದು ಊಹಿಸಲಾಗಿದೆ.

ಅಗ್ನಿಶಮನ ಯಂತ್ರಗಳು ಸುಮಾರು ೧೨ ಗಂಟೆಕಾಲ ಕೆಲಸಮಾಡಿಅಗ್ನಿಯನ್ನು ಆರಿಸಿದವು.

ಬೆಂಕಿಯು ೨೦೦ ಅಡಿಗಳಿಗಿಂತಲೂ ಎತ್ತರವಾಗಿ ಕಾಣುಬರುತ್ತಿತ್ತು, ಕೂಡಲೆ ಮನೆಯ ೨ ಅಂತಸ್ತುಗಳು ಬಿದ್ದುಹೋದವು ಕೆಳಗಿನ ಅಂತಸ್ತಿನಲ್ಲಿಟ್ಟಿದ್ದ ಪೆಟ್ರೋಲ್‌ಗೆ ದೈವವಶಾತ್ ಬೆಂಕಿ ತಗಲಲಿಲ್ಲ.

ಈ ಬೆಂಕಿಗೆ ಕಾರಣವೇನೆಂಬುದು ತಿಳಿಯದಾಗಿದೆ.

ವಸ್ತುಪ್ರದರ್ಶನಕಾರರ ಕೋರಿಕೆ

ಅಖಿಲಭಾರತ ವಸ್ತುಪ್ರದರ್ಶನಕಾರರ ಸಂಘದವರು ನಿನ್ನೆ ದಸರಾ ವಸ್ತುಪ್ರದರ್ಶನ ಸಮಿತಿಯವರಿಗೆ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಪ್ರದರ್ಶನಕಾರರಿಗೆ ಖಾಯಂ ವಾಸಸ್ಥಳ, ಹೆಚ್ಚಿನ ಸಾಗಾಣಿಕೆ ಸೌಲಭ್ಯ ಮತ್ತು ಪ್ರದರ್ಶನ ವಸ್ತುಗಳಮೇಲೆ ಸುಂಕರದ್ದು-ಮುಂತಾದ ಸೌಲಭ್ಯಕಲ್ಪಿಸಿಕೊಡಬೇಕೆಂದು ಅಧ್ಯಕ್ಷ ಶ್ರೀ ಮಹದೇವಸ್ವಾಮಿ ಅರಿಕೆ ಮಾಡಿಕೊಂಡರು ಅಧ್ಯಕ್ಷತೆ ವಹಿಸಿದ್ದ ಶ್ರೀ ಎ. ಜಿ. ರಾಮಚಂದ್ರರಾಯರು ವಸ್ತುಪ್ರದರ್ಶನಕಾರರಿಗೆ ಇನ್ನೂ ಹೆಚ್ಚಿನ ಸೌಲಭ್ಯ ಒದಗಿಸುವ ವಿಚಾರ ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಭರವಸೆ ಇತ್ತರು. ಶ್ರೀಗಳಾದ ಯು. ಎಲ್. ರಾಮಚಂದ್ರರಾವ್ ಮತ್ತು ಬಿ. ಎಸ್. ಸುಬ್ಬರಾಯರ ಭಾವಚಿತ್ರಗಳನ್ನು ಅನಾವರಣ ಮಾಡಿದರು.

ಭಾರತದಲ್ಲಿ ೨ ಕೋಟಿ ಜನರು ದುಸ್ಥಿತಿಗೆ ಈಡಾಗಿದ್ದಾರೆ

ಭಾರತದ ನಾನಾ ಭಾಗಗಳಲ್ಲಿ ಕ್ಷಾಮದ ಪರಿಸ್ಥಿತಿಯಿಂದ ಒಟ್ಟು ೨ ಕೋಟಿ ಜನರು ದುಸ್ಥಿತಿಗೆ ಒಳಗಾಗಿದ್ದಾರೆಂದು ಅಂದಾಜು ಮಾಡಲಾಗಿದೆ. ಮದರಾಸ್, ಬೊಂಬಾಯಿ, ಮೈಸೂರು, ಅಜ್ಮೀರ್, ಪೂರ್ವ ಯು. ಪಿ. ಮತ್ತು ರಾಜಸ್ಥಾನಗಳಲ್ಲಿ ಕ್ಷಾಮ ಉಂಟಾಗಿದೆ ಇಲ್ಲಿಯವರೆಗೆ ಕ್ಷಾಮ ಪರಿಹಾರಕ್ಕಾಗಿ ಒಟ್ಟು ೫ ಕೋಟಿ ರೂಗಳನ್ನು ಖರ್ಚು ಮಾಡಲಾಗಿದೆ ಒಂದು ಲಕ್ಷ ಜನರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆ. ೩೪ ಲಕ್ಷ ರೂ. ವೆಚ್ಚದಿಂದ ೨೮೩ ಗಂಜಿಕೇಂದ್ರಗಳನ್ನು ತೆರೆಯಲಾಗಿದೆ.

ಇರಾನ್ ಷಾ ರೊಡನೆ ಮಿರ್ಜಾರ ಭೇಟಿ

ಮೈಸೂರು ಮಾಜಿ ದಿವಾನ್ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ನಿನ್ನೆ ದಿನ ಇರಾನ್ ಷಾ ರವರನ್ನು ಭೇಟಿಮಾಡಿದ್ದರೆಂದು ಗೊತ್ತಾಗಿದೆ. ಅನಂತರ ಅವರು ಇರಾನಿನ ವಿದೇಶಾಂಗ ಸಚಿವರನ್ನೂ ನೋಡಿದ್ದರೆಂದು ತಿಳಿಯಬರುತ್ತದೆ.

ನೇಪಾಳದಲ್ಲಿ ಕಾಂಗ್ರೆಸ್ ಸತ್ಯಾಗ್ರಹವೇ

ನೇಪಾಳದಲ್ಲಿ ರಾಜ ತ್ರಿಭುವನರವರ ಸಲಹೆಗಾರರ ಸರ್ಕಾರದಮೇಲೆ ನೇಪಾಳ ಕಾಂಗ್ರೆಸ್ ಸತ್ಯಾಗ್ರಹಹೂಡಬಹುದೆಂದು ಮಾಜಿ ಆಹಾರ ಸಚಿವ ಶ್ರೀ ಗಣೇಶರ್ಮಾ ಸಿಂಗ್‌ರವರು ಕಾಶಿಯಲ್ಲಿ ಹೇಳಿದ್ದಾರೆ.

ಹಿಂದಿನ ಮಂತ್ರಿಮಂಡಲವು ತಂದಿದ್ದ ಜಮೀನು ಶಾಸನವನ್ನು ಈಗ ಸರ್ಕಾರವು ಜಾರಿಗೆ ತಂದಿಲ್ಲ. ನೇಪಾಳ ಕಾಂಗ್ರೆಸ್‌ಸರ್ಕಾರವು ಮಾಡಿದ ಕಾರ್ಯಗಳಿಗೆಲ್ಲಾ ಈಗಿನ ಸರ್ಕಾರವು ವ್ಯತಿರಿಕ್ತವಾಗಿ ನಡೆಯುತ್ತಿದೆ-ಎಂದು ಅವರು ಆರೋಪಿಸಿದ್ದಾರೆ.

ವಸ್ತುಪ್ರದರ್ಶನ ಮುಕ್ತಾಯ

ಮೈಸೂರು, ಅ. ೬

ಈದಿನಮುಕ್ತಾಯವಾಗಬೇಕಾಗಿದ್ದ ವಸ್ತುಪ್ರದರ್ಶನವನ್ನು ನಾಳೆಯೊಂದುದಿನಮಾತ್ರ ಹೆಚ್ಚಿಸಲಾಗಿದೆಯೆಂದು ಅಧಿಕೃತವಾಗಿ ತಿಳಿಯಬರುತ್ತದೆ. ೧೦ ನೇ ತಾರೀಖಿನವರೆಗೆ ಮುಂದುವರಿಸಬೇಕೆಂಬ ಮನವಿಗೆ ಮನ್ನಣೆ ದೊರೆತಂತೆ ಕಾಣುವುದಿಲ್ಲ.

ಬಂಧನದಲ್ಲಿರುವ ಗಡಿನಾಡು ಗಾಂಧಿ ಹೇಳಿಕೆ

ರಾಷ್ಟ್ರದ್ರೋಹಿಯಾಗಿದ್ದರೆ ತಮ್ಮನ್ನು ವಿಚಾರಣೆಗೆ ಗುರಿಪಡಿಸಬೇಕಾಗಿತ್ತು. ಬ್ರಿಟಿಷರನ್ನು ಹೊರದೂಡಿಸಲು ತಾವು ಇಚ್ಛಿಸಿದ್ದಕ್ಕಾಗಿ ತಮ್ಮನ್ನು ಬಂಧನದಲ್ಲಿಟ್ಟಿರ್ರು ವಿವಿಧ ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಸಹಾಯಮಾಡಲು ಬಯಸುವ ತಮ್ಮನ್ನು ಪಾಕೀಸ್ತಾನದ ಈಗಿನ ಆಳರಸರು ನಿರ್ಬಂಧದಲ್ಲಿಟ್ಟಿರುವುದು ತಮಗೆ ಆಶ್ಚರಿಯನ್ನುಂಟುಮಾಡಿದೆ-ಎಂದು ಪಾಕೀಸ್ತಾನದ ಜೈಲಿನಲ್ಲಿ ಕಳೆದ೪ ವರ್ಷಗಳಿಂದ ಬಂಧನದಲ್ಲಿಟ್ಟಿರುವ ಗಡಿನಾಡು ಗಾಂಧಿ ಅಬ್ದುಲ್ ಗಫಾರ್‌ಖಾನರು ಪ್ರಪ್ರಥಮ ಪತ್ರಿಕಾ ಸಂದರ್ಶನದಲ್ಲಿ ತಿಳಿಸಿರುತ್ತಾರೆ.

ಪೂರ್ವಪಾಕೀಸ್ಥಾನದಿಂದ ಭಾರತಕ್ಕೆ ನಿರಾಶ್ರಿತರು

ಪೂರ್ವ ಪಾಕೀಸ್ಥಾನದಿಂದ ದಿನವೊಂದಕ್ಕೆ ೧ ಸಾವಿರ ಜನರಂತೆ ನಿರಾಶ್ರಿತರು ಕಲ್ಕತ್ತಕ್ಕೆ ಬರುತ್ತಿರುವರೆಂದು ವರದಿಯಾಗಿದೆ.

ಕಡ್ಡಾಯ ಖಾದಿ ಉಪಯೋಗ

ಪ್ರಜಾ ಸೋಷಲಿಸ್ಟ್ ಪಕ್ಷದವರೆಲ್ಲರೂ ಕಡ್ಡಾಯವಾಗಿ ಖಾದಿಯನ್ನೇ ಉಪಯೋಗಿಸಬೇಕೆಂದು ಪಕ್ಷದ ನಾಯಕ ಶ್ರೀ ಜಯಪ್ರಕಾಶ ನಾರಾಯಣರವರ ಅಭಿಪ್ರಾಯವೆಂದು ಪ್ರಜಾ ಸೋಷಲಿಸ್ಟ್ ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಹೇಳಿರುವರು.

ರಾಯಲುಸೀಮೆ ಪರಿಸ್ಥಿತಿ

ರಾಯಲುಸೀಮೆಯಲ್ಲಿ ಈಗ ಉಂಟಾಗಿರುವ ದುಃಸ್ಥಿತಿ ಬಗ್ಗೆ ಪ್ರಧಾನಿ ನೆಹ್ರೂರವರ ಮನಸ್ಸಿನಲ್ಲಿ ವಿಶೇಷ ಪರಿಣಾಮ ಉಂಟಾಗಿದೆಯೆಂದೂ ಇಲ್ಲಿಯವರೆಗೆ ಸರ್ಕಾರದ ಅನಾದರಣೆ ಒಳಗಾಗಿದ್ದ ಈ ಪ್ರದೇಶದ ಪರಿಸ್ಥಿತಿಯು ಅತ್ಯಲ್ಪಕಾಲದಲ್ಲಿಯೇ ಮಾರ್ಪಾಡಾಗುವುದೆಂದು ಹೇಳಲಾಗಿದೆ.

ವಿಶೇಷ ಧನ, ಧಾನ್ಯ ಹೊಂದಿರುವವರು ನೆರೆಯವರಿಗೆ ಸಹಾಯ ಮಾಡದಿದ್ದರೆ ಮಹಾಪರಾಧ

ರಾಯಲುಸೀಮೆ ಮತ್ತು ಮೈಸೂರು ಕ್ಷಾಮ ಪ್ರದೇಶಗಳಲ್ಲಿ ಪ್ರವಾಸಮಾಡುತ್ತಲಿರುವ ನೆಹರೂರ ಹೇಳಿಕೆ

ಪ್ರಧಾನಿ ನೆಹರೂರವರು ನಿನ್ನೆದಿನ ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಕೇಂದ್ರಸರ್ಕಾರದ ಉತ್ಪಾದನಾಖಾತಾಸಚಿವ ಶ್ರೀ ಕೆ. ಸಿ. ರೆಡ್ಡಿಯವರೊಡನೆ ಮೈಸೂರು ಸಂಸ್ಥಾನದ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಅಭಾವ ಪ್ರದೇಶಗಳಲ್ಲಿ ಅನೇಕ ಭಾಗಗಳಿಗೆ ಭೇಟಿಯಿತ್ತು ಅಲ್ಲಿಯ ಸ್ಥಿತಿಗತಿಗಳನ್ನು ಪ್ರತ್ಯಕ್ಷ ಪರಿಶೀಲಿಸಿದರು. ಚಳ್ಳಕೆರೆ ಬಹಿರಂಗಸಭೆಯೊಂದರಲ್ಲಿ ಮಾತನಾಡುತ್ತಾ, ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ತೊಂದರೆಗೀಡಾಗಿರುವ ಜನರಿಗೆಲ್ಲಾ ಸಾಧ್ಯವಾದಷ್ಟು ಸಹಾಯ ನೀಡುತ್ತದೆ. ಜನತೆಯೂ ಸರಕಾರದೊಡನೆ ಸಹಕರಿಸಿ ನಡೆಯಬೇಕು. ವಿಶೇಷ ಧನ, ಧಾನ್ಯ ಮುಂತಾದುವನ್ನು ಹೊಂದಿರುವವರು ತೊಂದರೆಗೀಡಾಗಿರುವ ತಮ್ಮ ನೆರೆಯವರಿಗೆ ತಮ್ಮ ಕೈಲಾದಷ್ಟು ಸಹಾಯವನ್ನು ನೀಡಬೇಕು. ಅದು ಅವರ ಕರ್ತವ್ಯ ಹಾಗೆ ಮಾಡದಿದ್ದರೆ ಮಹಾಪರಾಧವೆಂದು ಹೇಳಿದರು.

ಕೊಲೆ ಆಪಾದನೆಗೆ ಮೊಕದ್ದಮೆ

ಮೈಸೂರು ಅ ೬

ಕಳೆದಮಾಹೆ ೧೪ ನೇ ತಾರೀಖು ಮೈಸೂರು ತಾಲ್ಲೂಕಿನ ದಾರಿಪುರ ಮತ್ತು ಗೋಪಾಲಪುರಗಳಲ್ಲಿ ನಡೆದ ಇಬ್ಬರ ಕೊಲೆ ಸಂಬಂಧದಲ್ಲಿ ಪೋಲೀಸಿನವರು ಕೆಂಪೇಗೌಡ, ರಾಜೇಗೌಡ, ಕರಿಹನುಮೇಗೌಡ ಮತ್ತು ಇತರ ೮ ಜನರ ಮೇಲೆ ಮೊಕದ್ದಮೆ ಹೂಡಿದ್ದಾರೆ. ವಿಚಾರಣೆಯು ೧೫ ನೇ ತಾರೀಖು ನಡೆಯಲಿದೆ.

ಮಾರಾಟತೆರಿಗೆ ಬಗ್ಗೆ ಪರಿಶೀಲನೆಯಿಲ್ಲ

ಪ್ರಾಂತ್ಯದ ಇಂದಿನ ಆರ್ಥಿಕ ಪರಿಸ್ಥಿತಿಯಿಂದ ಈಗಿರುವ ಮಾರಾಟತೆರಿಗೆ ಕ್ರಮದ ವಿವರಣೆ ಬಗ್ಗೆ ಸರ್ಕಾರವು ಯಾವ ರೀತಿಯಾದ ಪರಿಶೀಲನೆಯನ್ನು ಸದ್ಯಕ್ಕೆ ನಡೆಸುವುದಿಲ್ಲವೆಂದು ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರು ಹೇಳಿರುವರು.

ಸೀತಾರಾಂರ ಆಂಧ್ರ ಪ್ರಾಂತ್ಯ ಸತ್ಯಾಗ್ರಹಕ್ಕೆ ಬೆಂಬಲವಿಲ್ಲ ಎಂದು ಶ್ರೀ ಟಿ. ಪ್ರಕಾಶಂ

ಸ್ವಾಮಿ ಸೀತಾರಾಂರವರು ಪ್ರಾರಂಭಿಸಿರುವ ಆಂಧ್ರಪ್ರಾಂತ್ಯ ಸತ್ಯಾಗ್ರಹವು ತಮಗೆ ಅರ್ಥವಾಗುವುದಿಲ್ಲ. ಸತ್ಯಾಗ್ರಹದ ಕ್ರಮವೇ ಅವರಿಗೆ ತಿಳಿಯದು. ಈ ಸತ್ಯಾಗ್ರಹಕ್ಕೆ ತಮ್ಮ ಒಪ್ಪಿಗೆ ಅಥವಾ ಬೆಂಬಲವಿಲ್ಲವೆಂದು ಆಂಧ್ರಪ್ರಾಂತ್ಯ ನಾಯಕ ಶ್ರೀ ಟಿ. ಪ್ರಕಾಶಂರವರು ವಿಜಯವಾಡದಲ್ಲಿ ಮಾತನಾಡುತ್ತಾ ಹೇಳಿರುವರು.

ಖೈದಿಗಳಿಂದ ನುಗು ಜಲಾಶಯ ಕೆಲಸ

ಉತ್ತಮ ನಡತೆಯಿಂದ ಕೂಡಿರುವ ೫೦ ಜನ ಖೈದಿಗಳನ್ನು ನುಗು ಜಲಾಶಯ ನಿರ್ಮಾಣ ಕಾರ್ಯಕ್ಕೆ ತೆಗೆದುಕೊಂಡು ಅಲ್ಲಿ ಅವರು ಸಂಸಾರಸಮೇತ ವಿರುವಂತೆ ವ್ಯವಸ್ಥೆಮಾಡಲು ಸರ್ಕಾರವು ಪರ್ಯಾಲೋಚಿಸುತ್ತಲಿರುವುದಾಗಿ ನ್ಯಾಯಾಂಗಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಖುಲಾಸೆಹೊಂದಿದ ಮೈಸೂರು ಸಂಸ್ಥಾನದ ಖೈದಿಗಳ ಸಹಕಾರಸಂಘದ ವಾರ್ಷಿಕಸಭೆಯಲ್ಲಿ ಮಾತನಾಡುತ್ತಾ ಹೇಳಿರುವರು.

ಸಂಬಳದೊಡನೆ ತುಟ್ಟಿಭತ್ಯ ಅರ್ಧ ಐಕ್ಯ

ಸರ್ಕಾರಿ ನೌಕರರ ತುಟ್ಟಿಭತ್ಯ ಮತ್ತು ಸಂಬಳವನ್ನು ಐಕ್ಯಗೊಳಿಸಲು ನೇಮಿಸಿದ್ದ ಗಾಡ್ಗಿಲ್ ಕಮಿಟಿಯು ಸರ್ಕಾರಕ್ಕೆ ಒಪ್ಪಿಸಿರುವ ತನ್ನ ವರದಿಯಲ್ಲಿ, ತುಟ್ಟಿಭತ್ಯದಲ್ಲಿ ಅರ್ಧದಷ್ಟನ್ನು ಸಂಬಳದೊಡನೆ ಐಕ್ಯಗೊಳಿಸಬೇಕೆಂದು ಸೂಚಿಸಿರುವುದಾಗಿ ಗೊತ್ತಾಗಿದೆ.

ಇದರಿಂದ ಕೇಂದ್ರಕ್ಕೆ ೬ ಕೋಟಿ ರೂಪಾಯಿಗಳು ವೆಚ್ಚವಾಗುವುದೆಂದು ಹೇಳಲಾಗಿದೆ.

ಪರ್ಶಿಯಾ-ಬ್ರಿಟನ್ ಎಣ್ಣೆ ವಿವಾದ

ಎಣ್ಣೆವಿವಾದ ಪರಿಹಾರಕ್ಕೆ ಪರ್ಶಿಯಾ ಪ್ರಧಾನಿ ಡಾ|| ಮುಸಾದಿಕ್‌ರವರು ಕಾಲನಿರ್ದಿಷ್ಟಮಾಡಿ ಬ್ರಿಟನ್ ತನ್ನ ಉತ್ತರವನ್ನು ಕೊಟ್ಟಿರುವುದಾಗಿ ವರದಿಯಾಗಿದೆ.

ಕಳೆದ ಆಗಸ್ಟಿನಲ್ಲಿ ಬ್ರಿಟನ್ ಮತ್ತು ಅಮೇರಿಕಾ ನೀಡಿದ್ದ ಸಂಯುಕ್ತ ಸಲಹೆಯನ್ನೇ ಪುನಃ ವಿವರಿಸಿ, ಈ ಸಲಹೆಗಳ ಬಗ್ಗೆ ಸಂದೇಹ ಪಡಬೇಕಾಗಿಲ್ಲವೆಂದು ಹೇಳಿದೆ

ಕೂಡಲೇ ೯ ಕೋಟಿ, ೪೦ ಲಕ್ಷ ಪೌಂಡುಗಳ ಹಣವನ್ನು ಬ್ರಿಟನ್ ಪರ್ಶಿಯಾಕ್ಕೆ ಕೊಡಬೇಕೆಂಬ ಡಾ|| ಮುಸಾದಿಕ್‌ರ ವಿಷಯದ ಬಗ್ಗೆ ಈ ಜವಾಬು ಪತ್ರದಲ್ಲಿ ಪ್ರಸ್ತಾಪವೇ ವಿಲ್ಲ. ಅದನ್ನು ನಿರಾಕರಿಸಿಯೂ ಇಲ್ಲವೆಂದು ಹೇಳಲಾಗಿದೆ.

ಈ ಪತ್ರದ ನಕಲನ್ನು ಅಮೆರಿಕಾ ಮತ್ತು ಬ್ರಿಟನ್ ಪ್ರತಿನಿಧಿಗಳಿಬ್ಬರೂ ಡಾ|| ಮುಸಾದಿಕ್‌ರವರಿಗೆ ಸಲ್ಲಿಸಿದ್ದಾರೆ.

ಬ್ರಿಟನ್ನಿನೊಡನೆ ತನ್ನ ಸಂಬಂಧವನ್ನು ಪೂರ್ಣವಾಗಿ ತೊಡೆದುಹಾಕುವ ವಿಷಯವು ನಾಳೆ ಟೆಹರಾನಿನಲ್ಲಿ ನಡೆಯುವ ಮಜ್ಲಿಸ್ ಸಭೆಯಲ್ಲಿ ನಿರ್ಧರಿಸಲಾಗುತ್ತದೆಯೆಂದು ಹೇಳಲಾಗಿದೆ.

ಪಾಕೀಸ್ತಾನಕ್ಕೆ ನೆಹ್ರೂರವರ ಎಚ್ಚರಿಕೆ

ಕಾಶ್ಮೀರದಮೇಲೆ ಗುಡ್ಡುಗಾಡಿನ ಜನರು ನಡೆಸಬಹುದಾದ ಧಾಳಿ ಪ್ರಯತ್ನಕ್ಕೂ, ಪಾಕೀಸ್ಥಾನದ ಸೈನ್ಯದ ಆಕ್ರಮಣ ಪ್ರಯತ್ನಕ್ಕೂ ಯಾವ ಭೇದವೆಂದೂ ಭಾರತ ಸರ್ಕಾರ ಪರಿಗಣಿಸುವುದಿಲ್ಲ. ಅವನ್ನು ಆಕ್ರಮಣವೆಂದು ತಿಳಿದು ಶಕ್ತಿಮೀರಿ ಅವನ್ನು ಎದುರಿಸಲಾಗುವುದು. ಕಾಶ್ಮೀರದಲ್ಲಿ ಒಬ್ಬ ಸೈನಿಕನನ್ನು ಇಡಲು ಪಾಕೀಸ್ಥಾನಕ್ಕೆ ಹಕ್ಕಿಲ್ಲ-ಎಂದು ಪ್ರಧಾನಿ ನೆಹರೂರವರು ಎಚ್ಚರಿಕೆ ಇತ್ತಿದ್ದಾರೆ.

ಕ್ಷಾಮವಎದುರಿಸಲು ಉನ್ನತ ಸಮಿತಿಯನೇಮಕ

ಭಾರತದ ನಾನಾ ಭಾಗಗಳಲ್ಲಿ ಉಂಟಾಗಿರುವ ಕ್ಷಾಮ ಪರಿಸ್ಥಿತಿಗಳನ್ನು ಖುದ್ದಾಗಿ ಪರಿಶೀಲಿಸಿ ಎದುರಿಸುವುದಕ್ಕೂ ಮತ್ತು ದೀರ್ಘಕಾಲಾವಧಿಯ ಯೋಜನೆಯನ್ನು ಸೂಚಿಸುವುದಕ್ಕೂ ಒಂದು ಉನ್ನತ ಸಮಿತಿಯನ್ನು ಕೇಂದ್ರ ಸರ್ಕಾರ ನೇಮಿಸಲಿದೆಯೆಂದು ಪ್ರಧಾನಿ ಪಂಡಿತ ನೆಹರೂರವರು ತಿಳಿಸಿರುತ್ತಾರೆ.

ರಣಜಿತ್

2-10-52ರಿಂದ ಅಮೋಘವಿನೇವಾರ

ನೀಲಮ್‌ಪಾರಿ

NEELAM PARI

ಪಾತ್ರ:--ಗೀತಾಬಾಲಿ, ಸರ್ಜ್ಜ, ಸಪ್ರು, ಗೋಪ್, ಕುಲ್‌ದೀಪ್

ಅಪೇರ ೩-೧೦-೫೨ ರಿಂದ ೩ನೇವಾರ

ವಿಜಯಾರವರ

ಕಲ್ಯಾಣಂ- ಪಣ್ಣಿಪಾರ್

[ತಮಿಳು]

ಪಾತ್ರ:—ವರಲಕ್ಷ್ಮಿ, ಸಾವಿತ್ರಿ ಎನ್. ಟಿ. ರಾಮರಾವ್

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ವುಡ್‌ಲಾಂಡ್ಸ್

ದುಪ್ಪಟ

ತಾರೀಖು 3-10-52 ರಿಂದ

ಅಮೋಘ ಪ್ರಾರಂಭ

ಪ್ರತಿದಿನ ಮೂರು ಪ್ರದರ್ಶನ

ಪಾತ್ರ—ನೂರ್‌ಜಹಾನ್, ಅಜಯಕುಮಾರ್, ಗುಲಾಮ್ ಮಹಮದ್

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 38

೭-೧೦-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕೇಂದ್ರದಿಂದ ಆರ್ಥಿಕ ನೆರವಿಗಾಗಿ ಸರ್ಕಾರದ ಒತ್ತಾಯ

ಸಂಸ್ಥಾನದ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿದೆ

ಬೆಂಗಳೂರು ಸೆ ೭

ಕಳೆದ ೩ ವರ್ಷಗಳಿಂದ ದೇಶದಲ್ಲಿ ಮಳೆಬೆಳೆಯಿಲ್ಲದೆ ಉಂಟಾಗಿರುವದುಃಸ್ಥಿತಿ ಬಗ್ಗೆ ಮೈಸೂರು ಸರ್ಕಾರದವರು ಪ್ರಧಾನಿ ನೆಹರೂರವರಿಗೆ ವಿವರಣೆಯನ್ನೊಳಗೊಂಡ ಒಂದು ಮನವಿಯನ್ನು ಸಲ್ಲಿಸಿದ್ದಾರೆ. ಮಲೆನಾಡಿನಲ್ಲಿ ಸಾಮಾನ್ಯವಾಗಿ ವರ್ಷಕ್ಕೆ ೫೦-೬೦ ಅಂಗುಲ ಮಳೆಯಾಗುತ್ತಿತು. ಈಗ ೧೮-೨೦ ಅಂಗುಲವಾಗುತ್ತಿದೆ. ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ ತುಂಬಾ ಕಡಿಮೆಯಾಗಿದೆ. ಮೈದಾನ ಪ್ರದೇಶಗಳಲ್ಲಿ ಮಳೆ ಅಭಾವ ವಿಪರೀತ ಜನತೆಗೆ ಕೊಳ್ಳುವ ಚೈತನ್ಯವೇ ಇಲ್ಲವಾಗಿದೆ. ಅಭಾವ ಪೀಡಿತವಾದ ಪ್ರದೇಶಗಳಲ್ಲಿ ದಿನಕ್ಕೆ ೩ ಲಕ್ಷ ಜನರಿಗೆ ಕೂಲಿಯನ್ನು ಸರ್ಕಾರದವರು ಒದಗಿಸಬೇಕಾಗಿದೆ. ಇದಕ್ಕಾಗಿ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆ. ಹೀಗಿರುವುದರಿಂದ ಕೇಂದ್ರದ ಆರ್ಥಿಕ ನೆರವು ಅತ್ಯಗತ್ಯವೆಂದು ಮನವಿಯಲ್ಲಿ ತಿಳಿಸಲಾಗಿದೆ.

ಜಮ್ಮೂಕೇಸರಿ ಪ್ರೇಮನಾಥ ಡೋಗ್ರಾ ಆಗಮನ

ಮೈಸೂರು ೭

ಕಾಶ್ಮೀರ ಮತ್ತು ಜಮ್ಮೂ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಜಮ್ಮೂಕೇಸರಿ ಶ್ರೀ ಪಂಡಿತ ಪ್ರೇಮನಾಥಡೋಗ್ರಾರವರು ಇದೇ ೯ ನೇ ತಾ|| ಬೆಳಗ್ಗೆ ೭-೧೫ ಗಂಟೆಗೆ ಅರಸೀಕೆರೆ ರೈಲಿನಲ್ಲಿ ರಾಜಧಾನಿಗೆ ಆಗಮಿಸುವರು ಅದೇ ದಿನ ಸಂಜೆ ೭. ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಅವರಿಗೆ ಸ್ವಾಗತ ಸಮಾರಂಭ ಏರ್ಪಡಿಸಲಾಗಿದೆ. ಅದಕ್ಕಾಗಿ ಶ್ರೀಗಳಾದ ಎಂ. ಆರ್. ಸಿ. ಬಸಪ್ಪ, ಬಿ. ಜಿ. ದಾಸ್, ಎಸ್. ರಾಮರಾವ್, ಎಂ. ಎನ್. ತಿಮ್ಮಯ್ಯ ಮುಂತಾದವರನ್ನೊಳಗೊಂಡ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ.

ಮುನ್ಸೀಫರುಗಳ ಸಂಬಳ ಹೆಚ್ಚಿತು

ಮೈಸೂರು ಸಂಸ್ಥಾನದ ಮುನ್ಸೀಫರುಗಳ ಸಂಬಳವನ್ನು ಅಸಿಸ್ಟೆಂಟ್ ಕಮೀಷನರುಗಳ ಸಂಬಳಕ್ಕೆ ಸರಿಯಾಗಿ ಹೆಚ್ಚಿಸಿ ಸರ್ಕಾರದವರು ಆಜ್ಞೆಮಾಡಿದ್ದಾರೆ. ಅದರಂತೆ ೩೦೦-೨೫-೫೦೦ ರೂಗಳ ಭತ್ತಿ ಅವರಿಗೆಲ್ಲಾ ೧೯೪೮ ನೇ ಅಕ್ಟೋಬರ್ ೧ ನೇ ತಾ|| ನಿಂದ ಸಲ್ಲುವುದು ಸಬ್‌ಜಡ್ಜಿಗಳ ಸಂಬಳವನ್ನು ೬೦೦ ರೂ ನಿಂದ ೭೦೦ ರೂಗಳಿಗೂ, ಜಿಲ್ಲಾಜಡ್ಜರ ಸಂಬಳವನ್ನು ೧೨೦೦ ರಿಂದಿ ೧೫೦೦ ರೂ ಗೂ, ಮತ್ತು ಹೈಕೋರ್ಟ್ ನ್ಯಾಯಾಧೀಶರುಗಳಿಗೂ ೩೦೦೦ ರೂ. ಭತ್ತಿಯನ್ನು ಕೊಡುವ ವಿಷಯ ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆಯೆಂದು ಹೇಳಲಾಗಿದೆ. ಮುನ್ಸೀಫರುಗಳ ತಮ್ಮ ಭತ್ತಿಯ ಸಂಬಳದಲ್ಲಿ ಸ್ವಲ್ಪ ಭಾಗವನ್ನು ಕ್ಷಾಮಪರಿಹಾರನಿಧಿಗೆ ಕೊಡಲು ಒಪ್ಪಿದ್ದಾರೆ.

ಪರಿಹಾರ ನಿಧಿಗೆ ಸಹಾಯ

ಮೈಸೂರು, ಅ ೭

ಪರಿಹಾರ ನಿಧಿಗೆ ಮೈಸೂರು ನಗರದಿಂದ ಸಹಾಯನೀಡಿದ ಮಹನೀಯರ ಹೆಸರನ್ನು ಪುರಸಭಾ ಕಮೀಷನರು ಪ್ರಕಟಿಸಿದ್ದಾರೆ,

ಸೆಪ್ಟೆಂಬರ್ ೧೦ ನೇ ತಾರೀಖಿನಿಂದ ಮಾಹೆಯಾಂತ್ಯದವರೆಗೆ ಸಹಾಯ ನೀಡಿರುವವರು.

ಶ್ರೀ ಸಯ್ಯದ್ ಯೂಸೂಫ್ ೫೦ ರೂ, ಮೆಸರ್ಸ್ ಬೋರಯ್ಯ ಬಸವಯ್ಯ ಮಕ್ಕಳು ೨೦೧ ರೂ, ಆರೋಗ್ಯಶಾಖಾ ಕಛೇರಿಯಿಂದ ೩೦೧ ರೂ, ಪವರ್‌ಲೂಂ ಸಂಘದಿಂದ ೪೦೧ ರೂ, ಶ್ರೀ ಅಬುಬೇಕರ್ ೫೦ ರೂ, ಗಾರ್ಡ್ನ ಹೋಟೆಲ್ ಮಾಲೀಕರು ಶ್ರೀ ಗುರುರಾಜಾಚಾರ್ಯರು ೫೦ ರೂ

ದಕ್ಷಿಣ ಆಫ್ರಿಕ ಸತ್ಯಾಗ್ರಹಿಗಳಿಗೆ ನಿಧಿ ಸಹಾಯ

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯನ್ನು ಪ್ರತಿಭಟಿಸಿ ಸತ್ಯಾಗ್ರಹ ಪ್ರಾರಂಭಿಸಿರುವ ಭಾರತೀಯ ಮತ್ತು ಆಫ್ರಿಕನರ ಸಹಾಯಕ್ಕಾಗಿ ಒಂದು ನಿಧಿಯನ್ನು ಸಂಗ್ರಹಿಸಬೇಕೆಂದೂ, ಅದಕ್ಕಾಗಿ ಭಾರತ ಜನರೆಲ್ಲರೂ ಸಹಕರಿಸಬೇಕೆಂದೂ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯವರ ಮನವಿ ಮಾಡಿದ್ದಾರೆ ಮುಂದಿನ ತಿಂಗಳು ವಿಶ್ವಸಂಸ್ಥೆಯಲ್ಲಿ ದಕ್ಷಿಣ ಆಫ್ರಿಕಪ್ರಶ್ನೆ ಪರಿಶೀಲಿಸುವದಿನವನ್ನು ದಕ್ಷಿಣ ಆಫ್ರಿಕ ದಿನವೆಂದು ಭಾರತದಲ್ಲೆಲ್ಲಾ ಆಚರಿಸಬೇಕೆಂದೂ ಮನವಿ ಮಾಡಲಾಗಿದೆ.

§ ಮೈಸೂರು ಜಿಲ್ಲಾಧಿಕಾರಿಗಳ ಹೆಡ್ ಅಸಿಸ್ಟೆಂಟ್‌ರಾದ ಶ್ರೀ ವಿ. ಬೈರಪ್ಪನವರನ್ನು ರೆವಿನ್ಯೂಕಮೀಷನರ ಅಸಿಸ್ಟೆಂಟ್‌ರಾಗಿಯೂ, ಅಲ್ಲಿನ ಶ್ರೀ ಹೆಚ್. ಎಲ್. ನಾಗೇಗೌಡರನ್ನು ಮೈಸೂರಿಗೂ ವರ್ಗಾಯಿಸಲಾಗಿದೆ.

ಪ್ರಜಾ ಸೋಷಲಿಸ್ಟರವರು ಖಾದಿ ಧರಿಸುವರು

ಭಾರತದಲ್ಲಿ ನೂತನವಾಗಿ ರಚಿಸಲ್ಪಟ್ಟಿರುವ ಪ್ರಜಾ-ಸೋಷಲಿಸ್ಟ್‌ಪಕ್ಷದ ಸದಸ್ಯರೆಲ್ಲರೂ ಖಾದಿಯನ್ನು ಧರಿಸಬೇಕೆಂದು ಅದರ ನಾಯಕ ಶ್ರೀ ಜೆ. ಪಿ. ನಾರಾಯಣ್‌ರವರು ತಿಳಿಸಿರುತ್ತಾರೆ. ಅದರಂತೆ ಪಕ್ಷದ ಕೆಲಸಗಾರರು ಖಾದಿಯನ್ನೇ ಧರಿಸಲಾಗುವುದೆಂದು ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಹೇಳಿರುತ್ತಾರೆ.

ನಗರದ ಆರೋಗ್ಯ

ಮೈಸೂರು ನಗರದಲ್ಲಿ ಕಳೆದತಿಂಗಳಿನ ಅಂತ್ಯದ ಅವಧಿಯಲ್ಲಿ ಡಿಫ್ತೀರಿಯಾದಿಂದ ೨ ಮತ್ತು ಟೈಫಾಯಿಡ್‌ನಿಂದ ೧ ಕೇಸುಗಳು ವರದಿಯಾಗಿದ್ದುವೆಂದೂ, ರೋಗಗಳು ಹರಡದಂತೆ ಮುಂಜಾಗ್ರತೆ ಕ್ರಮವನ್ನು ಕೈಗೊಂಡು ಇನಾಕ್ಯುಲೇಷನ್ ನಡೆಸಲಾಯಿತೆಂದೂ ತಿಳಿಸಲಾಗಿದೆ. ಈ ಅವಧಿಯಲ್ಲಿ ಯಾವ ಪ್ಲೇಗ್ ಅಥವ ಸಿಡುಬಿನ ಕೇಸುಗಳು ಇರಲಿಲ್ಲ. ಕಾಲರಾ ರೋಗವುಸಹ ತಲೆದೋರಿತ್ತಿಲ್ಲ-ಎಂದು ಗೌರಸಭೆಯ ಆರೋಗ್ಯ ಇಲಾಖೆಯ ವರದಿ ತಿಳಿಸಿರುತ್ತದೆ.

ಬೊಂಬಾಯಿ ದರೋಡೆಕಾರರಿಗೆ ಜೀವಾವಧಿ ಶಿಕ್ಷೆ

ಬೊಂಬಾಯಿನಲ್ಲಿ ಕಳೆದವರ್ಷ ಏಪ್ರಲ್ ತಿಂಗಳಿನಲ್ಲಿ ಲಾಯಡ್ಸ್ ಬ್ಯಾಂಕಿನಲ್ಲಿ ೨೦ ಲಕ್ಷರೂ ದರೋಡೆ ನಡೆಸಿ. ಟ್ಯಾಕ್ಸಿ ಡ್ರೈವರನ್ನು ಕೊಲೆಮಾಡಿದ ಆಪಾದನೆಮೇಲೆ ಅನೋಬಿಲಾಲ್ ರಣಜಿತ್‌ಸಿಂಗ್, ಹರನಾರಾಯಿಣ್ ನಾಗೇಶ್‌ಚಂದ್ ಮತ್ತು ರಾಮಕೃಷ್ಣ ಶರ್ಮ ಎಂಬ ಮೂರು ಮಂದಿಗೆ ಜೀವಾವಧಿಶಿಕ್ಷೆಯನ್ನು ವಿಧಿಸಲಾಗಿದೆ.

ಕೃತಕ ಅಕ್ಕಿ ಮತ್ತು ಹಾಲು ತಯಾರಿಕೆ

ಮೈಸೂರು ಆಹಾರ ಸಂಶೋಧನಾಲಯದಲ್ಲಿ ಈಚೆಗೆ ಕಂಡುಹಿಡಿದಿರುವ ಕೃತಕ ಅಕ್ಕಿ ಮತ್ತು ಹಾಲನ್ನು ಇನ್ನು ಕೆಲವು ತಿಂಗಳೊಳಗಾಗಿಯೇ ಅತ್ಯಧಿಕ ಪ್ರಮಾಣದಲ್ಲಿ ಭಾರತದಲ್ಲಿಯೇ ತಯಾರಿಸಲು ಸರ್ಕಾರವು ಯೋಜನೆಯನ್ನು ತಯಾರಿಸುತ್ತಲಿರುವುದಾಗಿ ಗೊತ್ತಾಗಿದೆ.

ಗೋಹತ್ಯ ನಿಶೇಧಕ್ಕಾಗಿ ಚಳುವಳಿ

ಭಾತದಲ್ಲಿ ಗೋಹತ್ಯವನ್ನು ನಿಷೇಧಿಸಬೇಕೆಂದು ಇದೇ ೨೬ನೇ ತಾರೀಖಿನಿಂದ ದೇಶಾದ್ಯಂತ ಚಳುವಳಿಯನ್ನು ಆರಂಭಿಸಲಾಗುವುದೆಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ನಾಯಕ ಶ್ರೀ ಗೋಲ್ವಾಲ್ಕರ್‌ರವರು ಹೈದರಾಬಾದಿನಲ್ಲಿ ತಿಳಿಸಿರುತ್ತಾರೆ.

೨೫೦ ಲಕ್ಷ ಡಾಲರುಗಳ ಅಣುಶಕ್ತಿ ಕೇಂದ್ರ

ಸ್ವಿಟ್ಜರ್ಲೆಂಡಿನಲ್ಲಿ ೨೫೦ ಲಕ್ಷ ಡಾಲರುಗಳ ಖರ್ಚಿನಿಂದ ಒಂದು ಸಂಯುಕ್ತ ಯೂರೋಪಿನ ಅಣುಶಕ್ತಿ ಸಂಶೋಧನಾಕೇಂದ್ರವನ್ನು ತೆರೆಯಲು ನಿರ್ಧರಿಸಲಾಗಿದೆ.

ವಿಶ್ವಸಂಸ್ಥೆಯ ಸೈನ್ಯ ರಚನೆ

ಆಕ್ರಮಣಕಾರರನ್ನು ಎದುರಿಸಲು ೬೦ ಸಾವಿರ ಮಂದಿಯ ಸ್ವಯಂದಳವೊಂದನ್ನು ವಿಶ್ವಸಂಸ್ಥೆಯು ರಚಿರಬೇಕೆಂದು ಅದರ ಸೆಕ್ರೆಟರಿ ಜನರಲ್‌ರವರು ಸಲಹೆಮಾಡಿರುತ್ತಾರೆ.

ಸಿಂಹಳಕ್ಕೆ ಚೈನಾ ಅಕ್ಕಿ

ಸಿಂಹಳಕ್ಕೆ ಚೈನಾವು ೮೦೦೦೦ ಟನ್ ಅಕ್ಕಿಯನ್ನು ಸರಬರಾಜು ಮಾಡಲು ಉಭಯ ರಾಷ್ಟ್ರಗಳಿಗೆ ಒಪ್ಪಂದವಾಗಿದೆ. ಸಿಂಹಳವು ಕೊಡುವಹಣದಿಂದ ಚೈನಾವು ತನಗೆ ಬೇಕಾದ ವಸ್ತುಗಳನ್ನು ಸಿಂಹಳದಿಂದ ಕೊಳ್ಳಬಹುದಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ದಸ್ತಗಿರಿಗಳು

ವರ್ಣಬೇಧ ನೀತಿಯ ವಿರುದ್ಧ ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಲಿರುವ ಅಹಿಂಸಾತ್ಮಕ ಚಳುವಳಿಯಲ್ಲಿ ಈ ಗಾಗಲೇ ೫೬೦೦ ಜನರು ದಸ್ತಗಿರಿಯಾಗಿ ಜೈಲುವಾಸವನ್ನು ಅನುಭವಿಸುತ್ತಲಿರುವುದಾಗಿ ಗೊತ್ತಾಗಿದೆ.

ಕ್ಷಾಮಪೀಡಿತ ಪ್ರದೇಶಗಳಿಗೆ ಶಕ್ತಿಮೀರಿ ಸಹಾಯ ನೀಡುವುದಾಗಿ ಪ್ರಧಾನಿ ಭರವಸೆ

ಪತ್ರಿಕಾಗೋಷ್ಠಿಯಲ್ಲಿ ನೆಹರೂರವರ ವಿವರಣೆ

ಮೈಸೂರು ಸಂಸ್ಥಾನದ ಅಭಾವ ಪ್ರದೇಶಗಳಿಗೆ ಕೇಂದ್ರವು ತನ್ನ ಶಕ್ತಿಮೀರಿ ಸಹಾಯಮಾಡುತ್ತದೆ. ಈ ಸಹಾಯದ ಬಗ್ಗೆ ದೆಹಲಿಗೆ ಹೋಗಿ ಸಹೋದ್ಯೋಗಿಗಳೊಡನೆ ವಿಚಾರ ವಿನಿಮಯಮಾಡಿ ನಿರ್ಧರಿಸಲಾಗುತ್ತದೆ ಈ ಪ್ರಾಂತ್ಯದಲ್ಲಿ ಮಾಡಬೇಕಾದ ಕೆಲಸಗಳು ವಿಶೇಷವಾಗಿವೆ. ಅವುಗಳೆಲ್ಲಾ ಒಂದೇಬಾರಿ ಮಾಡಲಾಗುವುದಿಲ್ಲ. ಅವುಗಳಲ್ಲಿ ಕೆಲವಕ್ಕೆ ಅಗ್ರಮಾನ್ಯತೆಯನ್ನು ಕೊಡಬೇಕಾಗಿದೆ. ಅವುಗಳಾವುದೆಂಬುದನ್ನು ನಿರ್ಧರಿಸಬೇಕಾಗಿದೆ. ಜನತೆಯಲ್ಲಿ ಸ್ವಯಂ ಸಹಾಯ ಅತ್ಯವಶ್ಯಕವಾಗಿದೆ. ಅದನ್ನು ಎಲ್ಲರೂ ಕಲಿಯಬೇಕಾಗಿದೆ. ರಾಜಕೀಯ ಗೊಂದಲದಿಂದ ದೂರವಾಗಿರುವ ಸಮಾಜಸೇವಕ ಪಕ್ಷವು ಅಭಾವ ಪ್ರದೇಶಗಳಲ್ಲಿ ತನ್ನ ಸಹಾಯನೀಡಲು ಉತ್ತಮ ಕಾರ್ಯವನ್ನು ನಡೆಸುತ್ತಲಿದೆ.

ಜನರು ಎದೆಗುಂದದೆ ಶಕ್ತಿಮೀರಿ ಶ್ರಮಿಸಿ ಈಗೊದಗಿರುವ ದಾರುಣ ಪರಿಸ್ಥಿತಿಯನ್ನು ಎದುರಿಸಬೇಕೆಂದು ಪ್ರಧಾನಿ ನೆಹರೂರವರು ಮೈಸೂರು ಸಂಸ್ಥಾನದಲ್ಲಿ ಅಭಾವ ಪೀಡಿತ ಪ್ರದೇಶಗಳ ಪ್ರವಾಸವನ್ನು ಪೂರೈಸಿ ಬಾಗೇಪಲ್ಲಿಯಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ತಿಳಿಸಿದರು.

ನಿನ್ನೆಯದಿನ ಪ್ರಧಾನಿಯವರು ಮೈಸೂರು ರಾಯಲು ಸೀಮೆಯ ಸುಮಾರು ೫೦೦ ಮೈಲಿಗಳಲ್ಲಿ ಪ್ರವಾಸಮಾಡಿ ಸುಮಾರು ೨ ಲಕ್ಷ ಜನರನ್ನುದ್ದೇಶಿಸಿ ಭಾಷಣಮಾಡಿದರು.

ನಾನ್‌ಗೆಜಿಟೆಡ್ ನೌಕರರ ಉಪವಾಸ ಸತ್ಯಾಗ್ರಹ

ನಾನ್‌ಗೆಜಿಟೆಡ್ ನೌಕರರ ಸಂಬಳ ಮತ್ತು ಭತ್ಯವನ್ನು ಉತ್ತಮಗೊಳಿಸಬೇಕೆಂಬ ಬೇಡಿಕೆಯನ್ನು ಸರ್ಕಾರವು ಇನ್ನೂ ಈಡೇರಿಸಲಿಲ್ಲವಾಗಿ ಅವುಗಳ ಪೂರೈಕೆಗಾಗಿ ನಾನ್‌ಗೆಜಿಟೆಡ್ ನೌಕರರು ಸಧ್ಯದಲ್ಲೇ ಮದ್ರಾಸ್ ಸರ್ಕಾರದ ಕಛೇರಿಯಮುಂದೆ ಉಪವಾಸ ಸತ್ಯಾಗ್ರಹ, ಸರ್ಕಾರಿ ನಿಯಮ ಉಲ್ಲಂಘನೆ ಮುಂತಾದುವನ್ನು ಆರಂಭಿಸುವುದಾಗಿ ಸಂಘದ ಅಧ್ಯಕ್ಷ ಶ್ರೀ ಕೆ. ಕಣ್ಣನ್‌ರವರು ಹೇಳಿರುವರು.

§ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇದೇ ೧೧ ನೇ ತಾರೀಖು ದೆಹಲಿಗೆ ಹೊರಟು ಒಂದು ದಿನ ನಾಗಪುರದಲ್ಲಿದ್ದು ೧೨ ನೇ ತಾರೀಖು ದೆಹಲಿಗೆ ಹೋಗಿ ಆರ್ಥಿಕಮಂತ್ರಿಗಳ ಸಮ್ಮೇಳನದಲ್ಲಿ ಭಾಗವಹಿಸುವರು ೧೭ ನೇ ತಾ|| ವೇಳೆಗೆ ಬೆಂಗಳೂರಿಗೆ ಹಿಂತಿರುಗುವರು.

ಅಂದವಾದ ಮುದ್ರಣಕ್ಕೆ
ಕರ್ಣಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)
For
NEAT AND PROMPT PRINTING
Contact :
CARNATAK PRINTERS
GANDHI SQUARE, MYSORE
Phone 892 or 574

ವುಡ್‌ಲಾಂಡ್ಸ್
ದುಪ್ಪಟ
ತಾರೀಖು 3-10-52 ರಿಂದ
ಅನೋಘ ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನ
ಪಾತ್ರ—ನೂರ್‌ಜಹಾನ್,
ಅಜಯಕುಮಾರ್, ಗುಲಾಬ್
ಮಹಮದ್

ಅಮೆರಿಕಾ ರಷ್ಯಾಮೇಲೆ ಯುದ್ಧಕ್ಕೆ ಸಿದ್ಧವಾಗುತ್ತಿದೆಯೆಂದು ರಷ್ಯಾ ಉಪಪ್ರಧಾನಿ

ಸಾಮ್ರಾಜ್ಯಶಾಯಿ ರಾಷ್ಟ್ರಗಳು ೩ನೇ ಮಹಾಯುದ್ಧಕ್ಕೆಸಿದ್ಧವಾಗುತ್ತಿರುವುದಾಗಿ ರಷ್ಯಾದ ಉಪಪ್ರಧಾನಿಯಾದ ಎಂ. ಮಲಟಾಫ್‌ರವರು ಕಮ್ಯೂನಿಸ್ಟ್ ಪಕ್ಷದ ಮಹಾಧಿವೇಶನದಲ್ಲಿ ಭಾಷಣಮಾಡುತ್ತಾ ತಿಳಿಸಿರುವುದಾಗಿ ವರದಿಯಾಗಿದೆ.

ಅಮೆರಿಕಾ ಶಾಂತಿಮಾರ್ಗವನ್ನು ಉಲ್ಲಂಘಿಸಿ, ರಷ್ಯಾದಮೇಲೆ ಯುದ್ಧ ಘೋಷಿಸಲು ನಿರ್ಧರಿಸಿರುವುದಾಗಿ ಅವರು ತಿಳಿಸಿದ್ದಾರೆ.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಕ್ಷಾಮಪೀಡಿತ ಪ್ರದೇಶಗಳಲ್ಲಿ ಪ್ರಧಾನಿಯ ಪ್ರವಾಸ

ಪ್ರಧಾನಿ ಪಂಡಿತ ಜವಹಿರಲಾಲ್ ನೆಹರೂರವರು ನಿನ್ನೆ ಕೋಲಾರಜಿಲ್ಲೆಯ ಮಧುಗಿರಿ, ಗೌರಿಬಿದನೂರು, ಗುಡಿಬಂಡೆ ಮುಂತಾದ ಅಭಾವ ಪ್ರದೇಶಗಳಿಗೆ ಭೇಟಿಯಿತ್ತು ನಿನ್ನೆ ಮಧ್ಯಾಹ್ನ ಬಾಗೇಪಲ್ಲಿಯಿಂದ ಮದರಾಸ್‌ಪ್ರಾಂತ್ಯಕ್ಕೆ ಹಿಂತಿರುಗಿದರು.

ಮೈಸೂರಿನ ಕ್ಷಾಮಪ್ರದೇಶಗಳ ಜನತೆಯ ಸಹಾಯಕ್ಕೆ ಕೇಂದ್ರಸರ್ಕಾರವು ತನ್ನ ಕೈಲಾದ ಎಲ್ಲಾ ಸಹಾಯವನ್ನೂ ನೀಡುವುದು. ಜನರು ಗಾಬರಿಯಾಗಬೇಕಾಗಿಲ್ಲ -ಎಂದು ಪ್ರಧಾನಿ ನೆಹರೂರವರು ಭರವಸೆ ಇತ್ತರು.

ಸೀರಾದಲ್ಲಿ ಪ್ರಧಾನಿಯವರು ಜನರನ್ನುದ್ದೇಶಿಸಿ ಭಾಷಣ ಪ್ರಾರಂಭಿಸಿದಾಗ ಮಳೆ ಪ್ರಾರಂಭವಾಯಿತು. 'ನನ್ನ ಭಾಷಣ ಇನ್ನು ಸಾಕು-ಮಳೆಯನ್ನು ನಿಮ್ಮೂರಿನಲ್ಲಿ ಬಿಟ್ಟು ನಾನಿನ್ನು ಮುಂದಕ್ಕೆ ಹೊರಡುತ್ತೇನೆ' ಎಂದು ನಗುತ್ತಾ ಹೇಳಿ ಮುಂದಕ್ಕೆ ಪ್ರಯಾಣ ಬೆಳೆಸಿದರು. ಮಧುಗಿರಿಯಲ್ಲಿ ೫೦ ಸಾವಿರ ಜನರು ನೆಹರೂರವರನ್ನು ಸ್ವಾಗತಿಸಿ, ಅವರ ಭಾಷಣವನ್ನು ಕೇಳಿದರು. ಜನರು ಗಾಭರಿಯಾಗದೆ, ಆತ್ಮಾವಲಂಬಿಗಳಾಗಬೇಕೆಂದು ನೆಹರೂರವರು ತಿಳಿಸಿದರು.

ಪಾವಗಡದಲ್ಲಿ ಪಂಡಿತ ನೆಹರೂರವರು ಭಾಷಣಮಾಡಿದಮೇಲೆ ತಮಗೆ ಹಾಕಿದ್ದ ಪುಷ್ಪಹಾರಗಳನ್ನು ಹಂಚಿದರು. ಆಗ ಒಂದು ಸಣ್ಣ ಬಾಲಕಿಯು ನೆಹರೂರವರಲ್ಲಿಗೆಬಂದು ರೀ ರೀ ನನಗೂ ಒಂದು ಹಾರಕೊಡಿ ಎಂದು ಕನ್ನಡದಲ್ಲಿ ಪ್ರಾರ್ಥಿಸಿದಳು ನೆಹರೂರವರಿಗೆ ಮಗು ಏನು ಕೇಳುತ್ತಿದ್ದೆ ಎಂಬುದು ಅರ್ಥವಾಗಲಿಲ್ಲ ಪಕ್ಕದಲ್ಲಿದ್ದ ಪತ್ರಿಕೋದ್ಯೋಗಿಯು ಅವರಿಗೆ ಅದನ್ನು ತಿಳಿಸಿದಾಗ ನೆಹರೂರವರು ತಮ್ಮ ಕತ್ತಿನಲ್ಲಿದ್ದ ಖಾದೀಹಾರವನ್ನೇ ತೆಗೆದು ಬಾಲಕಿಯ ಕೊರಳಿಗೆ ಹಾಕಿದರು.

ಮದಿಗಿರಿಯಲ್ಲಿ ಪ್ರಧಾನಿಯವರು ಗಂಜೀ ಕೇಂದ್ರದ ಕೆಲಸಕಾರ್‍ಯಗಳನ್ನು ಪರಿಶೀಲಿಸಿ, ಜನರ ಕಷ್ಟಗಳನ್ನು ಅರಿತುಕೊಂಡರು.

ರಾಯಲಸೀಮೆಯ ತಾಡಪತ್ರಿಯಲ್ಲಿ ಪ್ರಧಾನಿಯವರು ರೈಲ್ವೆ ನಿಲ್ದಾಣದಲ್ಲಿ ಇಳಿದಕೂಡಲೇ ಪಕ್ಕದಲ್ಲಿ ನಿಂತಿದ್ದ ಬಸ್ಸಿನ ಮೇಲೆ ಹತ್ತಿ ಸಹಸ್ರಾರುಜನರಿಗೆ ದರ್ಶನಕೊಟ್ಟರು. ಅವರನ್ನು ಸ್ವಾಗತಿಸಲು ಗೂಡ್‌ಷೆಡ್‌ಬಳಿ ನಿಂತಿದ್ದ ಅಧಿಕಾರಿಗಳು ಗಸ್ತುತಿಂದು ಬಸ್ಸಿನಹತ್ತಿರ ಬಂದು ಸ್ವಾಗತ ಕೊಡಬೇಕಾಯಿತು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 39

೮-೧೦-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಭಾರಿ ನೀರಾವರಿಯೋಜನೆ ಕೈಗೊಳ್ಳಲು ಸಮಿತಿ

ಅಭಾವ ಪ್ರದೇಶಗಳಿಗೆ ಕೇಂದ್ರದಿಂದ ಹೆಚ್ಚಿನ ಸಹಾಯ

ಸಚಿವ ಕೆ. ಸಿ. ರೆಡ್ಡಿಯವರ ಹೇಳಿಕೆ

ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ಮತ್ತು ಕೋಲಾರ ಜಿಲ್ಲೆಯ ಅಭಾವ ಪ್ರದೇಶಗಳಿಗೆ ಭೇಟಿ ಇತ್ತ ಕೇಂದ್ರ ಉತ್ಪನ್ನ ಶಾಖಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಅಲ್ಲಿನ ಪರಿಸ್ಥಿತಿಯನ್ನು ವಿವರಿಸಿ ಈ ರೀತಿ ಹೇಳಿದ್ದಾರೆ.

ಮಳೆಯಿಲ್ಲದೆ ಬೆಳೆಗಳೆಲ್ಲಾ ಕೆಟ್ಟು ಹೋಗಿ ಜನರಿಗೆ ಅನ್ನವಿಲ್ಲ ಇಂದಿನ ಅಭಾವ ಪರಿಸ್ಥಿತಿಯಲ್ಲಿ ಮುಖ್ಯವಾಗಿ ಜನರಿಗೆ ಕೆಲಸಗಳನ್ನು ಒದಗಿಸಬೇಕು ಬಾವಿ ಕೆಲಸಗಳನ್ನು ನಡೆಸಿ ನೀರಿನ ವ್ಯವಸ್ಥೆ ಏರ್ಪಡಿಸಬೇಕು. ಕಂದಾಯ ಮಾಫಿಯೂ ಆಗಬೇಕು ಈಚೆಗೆ ಮಳೆ ಬಂದಿರುವುದರಿಂದ ಜಾನುವಾರುಗಳಿಗೆ ಮೇವಿಗೆ ಅನುಕೂಲವಾಗುವುದೇ ಹೊರತು ಬೆಳೆಗೆ ಅಷ್ಟು ಅನುಕೂಲವಾಗುವುದಿಲ್ಲ. ಪರಿಹಾರ ಕಾರ್‍ಯ ಯೋಜನೆಗಳಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಯೋಜನೆಗಳನ್ನು ಕೈಗೊಳ್ಳಬೇಕಾಗಿದೆ.

ಕೇಂದ್ರ ಸರ್ಕಾರದವರು ರಾಯಲಸೀಮಾ ಮತ್ತು ಮೈಸೂರಿಗೆ ಸಂಬಂಧಪಟ್ಟಂತೆ ಮೂರು ಸದಸ್ಯರ ಸಮಿತಿಯೊಂದನ್ನು ನಿರ್ಮಿಸಿ, ಈ ಪ್ರದೇಶದಲ್ಲಿ ಅವಶ್ಯಕವಾಗಿ ಬೇಕಾದ ಭಾರಿ ನೀರಾವರಿ ಕಾಮಗಾರಿಗಳನ್ನು ನಿರ್ಧರಿಸುವರು ಕೇಂದ್ರವು ಮೈಸೂರಿಗೆ ಇನ್ನೂ ಹೆಚ್ಚು ಆಹಾರ ಕಳುಹಿಸುವುದು ಮತ್ತು ಪರಿಹಾರ ಕಾಮಗಾರಿಗಳಿಗೆ ಸಹಾಯ ಮಾಡುವುದು ಗಂಜೀಕೇಂದ್ರಗಳ ಅರ್ಧ ಖರ್ಚನ್ನು ಭಾರತ ಸರ್ಕಾರ ಕೊಡುವುದು ಈಚೆಗೆ ಕೊಟ್ಟಿರುವ ೫೦ ಲಕ್ಷ ರೂಗಳನ್ನು ಸಹ ಈ ಬಗ್ಗೆ ವೆಚ್ಚಮಾಡಲಾಗುವುದು.

ಅಕ್ಷರಸ್ಥರ ಚಳುವಳಿಗೆ ವಿದ್ಯಾರ್ಥಿಗಳ ಪ್ರತಿಜ್ಞೆ

ಮೂರುತಿಂಗಳಿನಲ್ಲಿ ಒಬ್ಬರನ್ನಾದರೂ ಅಕ್ಷರಸ್ಥರನ್ನಾಗಿ ಮಾಡುವುದಾಗಿ ಭೂಪಾಲಿನ ಹಮೀಡಿಯಾ ಹೈಸ್ಕೂಲಿನ ೨೫ ಮಂದಿ ವಿದ್ಯಾರ್ಥಿಗಳು ಪ್ರತಿಜ್ಞೆತೆಗೆದುಕೊಂಡಿದ್ದಾರೆ ಶಾಲೆಯ ಕಾಮಗಾರಿ ಕೆಲಸವನ್ನೆಲ್ಲಾ ವಿದ್ಯಾರ್ಥಿಗಳೇ ನಡೆಸಲು ಒಂದು ಸ್ವಯಂ ಕಾರ್ಮಿಕ ದಳವನ್ನೂ ಸಹಾಯ ನಿಧಿಯನ್ನೂ ಏರ್ಪಡಿಸಲು ನಿರ್ಧರಿಸಿದ್ದಾರೆ.

ರಾಜಪ್ರಮುಖರ ಸ್ಥಿರಸ್ವತ್ತುಗಳಮೇಲೆ ಕಂದಾಯ

ಪೌರಸಭೆಯಲ್ಲಿ ಚರ್ಚೆ

ಮೈಸೂರು, ಅ. ೮

ಮೈಸೂರು ನಗರದಲ್ಲಿ ಶ್ರೀಮನ್ಮಹಾರಾಜರವರಿಗೆ ಸೇರಿರುವ ಸ್ಥಿರ ಸ್ವತ್ತುಗಳ ಮೇಲೆ ಕಂದಾಯ ವಿಧಿಸುವ ವಿಚಾರದಲ್ಲಿ ನಿನ್ನೆಸಂಜೆ ಪೌರಸಭೆಯಲ್ಲಿ ವಿಶೇಷ ಚರ್ಚೆಯಾಗಿ, ಅದನ್ನು ಲೀಗಲ್‌ಸಮಿತಿಯ ಪರ್ಯಾಲೋಚನೆಗೆ ಬಿಡಲಾಯಿತು.

ರಾಜಪ್ರಮುಖರ ಸ್ವತ್ತುಗಳಮೇಲೆ ಪುರಸಭೆಯವರು ಕಂದಾಯ ವಿಧಿಸಬಹುದೆಂದು ಸರ್ಕಾರದವರು ಆಜ್ಞೆಮಾಡಿ ೨೫ ವರ್ಷಗಳಾದರೂ, ಆರೀತಿ ಏಕೆ ಮಾಡಿಲ್ಲವೆಂದು ಶ್ರೀ ಕೆ. ಪುಟ್ಟಸ್ವಾಮಿಯವರು ಕೇಳಿದರು.

ಈ ವಿಚಾರದಲ್ಲಿ ಪುರಸಭೆಯವರು ಕಾರ್‍ಯಕ್ರಮವನ್ನು ಕೈಗೊಂಡು ಸಧ್ಯಕ್ಕೆ ೧೩೬ ವಸ್ತುಗಳ ಪಟ್ಟಿಯೊಂದನ್ನು ರಚಿಸಲಾಗಿದೆಯೆಂದೂ ಮತ್ತು ಅದರಬಗ್ಗೆ ಎಷ್ಟು ಕಂದಾಯ ಹಾಕಬೇಕೆಂಬ ವಿಷಯ ಪರಿಶೀಲನೆ ನಡೆಯುತ್ತದೆಯೆಂದೂ ಅಧ್ಯಕ್ಷರು ತಿಳಿಸಿದರು.

ರಾಜಪ್ರಮುಖರ ವಿಷಯವನ್ನು ಪುರಸಭೆಯವರು ಪ್ರಸ್ತಾಪಿಸಲು ಸರ್ಕಾರದ ಅನುಮತಿ ಪಡೆಯಬೇಕಾಗಿಲ್ಲವೇ ಎಂದು ಶ್ರೀ ಬಿ. ಜಿ. ದಾಸರ ಪ್ರಶ್ನೆಗೆ ಆವಶ್ಯಕವಿಲ್ಲವೆಂದೂ ಭಾರತ ಸರ್ಕಾರಕ್ಕೂ ಮತ್ತು ರಾಜಪ್ರಮುಖರಿಗೂ ಆಗಿರುವ ಒಪ್ಪಂದದಪ್ರಕಾರ, ಅವರ ಸ್ಥಿರಸ್ವತ್ತುಗಳ ಮೇಲೆ ಕಂದಾಯ ಹಾಕಲು ಪುರಸಭೆಗೆ ಅಧಿಕಾರವಿದೆಯೆಂದೂ, ಅದಕ್ಕಾಗಿ ಪುರಸಭೆಯ ಕಾನೂನನ್ನು ಬದಲಾಯಿಸಬೇಕಾಗಿಲ್ಲವೆಂದೂ ಅಧ್ಯಕ್ಷರು ತಿಳಿಸಿದರು.

ಮೂರು ವರ್ಷಗಳಿಗಿಂತಲೂ ಹೆಚ್ಚಿಗೆ ಕಾಲ ಯಾವ ಅಧಿಕಾರಿ ಅಥವಾ ನೌಕರರು ಒಂದೇಸ್ಥಳದಲ್ಲಿ ಇರಕೂಡದೆಂದು ಪುರಸಭೆಯವರು ೧೯೪೭ ರಲ್ಲಿ ನಿರ್ಧರಿಸಿದ್ದರೂ ಅದನ್ನು ಏತಕ್ಕೆ ಕಾರ್‍ಯರೂಪಕ್ಕೆ ತಂದಿಲ್ಲವೆಂದು ಬಿ. ಜಿ. ದಾಸರು ಕೇಳಿದರು. ಈಗ ಪುರಸಭೆಯಲ್ಲಿ ಮೂರುವರ್ಷಗಳಿಂದ ಹೆಚ್ಚಿಗೆ ಕಾಲ ಮೀರಿರುವವರು ಕೇವಲ ಇಬ್ಬರು ಅಧಿಕಾರಿಗಳು ಮತ್ತು ೧೨೪ ಮಂದಿ ನೌಕರರುಮಾತ್ರ ಅದರಪೈಕಿ ಒಬ್ಬ ಅಧಿಕಾರಿಗಾಗಲೇ ವರ್ಗವಾಗಿದೆ. ಅಕ್ವಾಯ್ ಸೂಪರಿಂಟೆಂಡೆಂಟರು ವಿಶೇಷ ಅನುಭವಸ್ಥರಾಗಿರುವುದರಿಂದ ಅವರನ್ನು ವರ್ಗಮಾಡುವುದು ಸಾಧುವಲ್ಲ-ಎಂದು ಅಧ್ಯಕ್ಷರು ಉತ್ತರವಿತ್ತರು.

ಭಾರತಕ್ಕೆ ಟ್ರಿಗ್ವಿಲೀ ಭೇಟಿ

ವಿಶ್ವಸಂಸ್ಥೆಯ ಪ್ರಧಾನ ಕಾರ್‍ಯದರ್ಶಿ ಮಿ|| ಟ್ರಿಗ್ವಿಲೀಯವರುಮುಂದಿದ ವಸಂತ ಋತುವಿನಲ್ಲಿ ಭಾರತಕ್ಕೆ ಭೇಟಿ ಕೊಡುವರೆಂದು ಹೇಳಲಾಗಿದೆ. ಅಮೆರಿಕಾದಲ್ಲಿ ರಾಷ್ಟ್ರಾಧ್ಯಕ್ಷ ಚುನಾವಣೆಗಳಾದನಂತರ ನೂತನ ಅಧ್ಯಕ್ಷರು ಭಾರತಕ್ಕೆ ಬರುವರೆಂದೂ ಊಹಿಸಲಾಗಿದೆ. ಈಗಿರುವ ಅಧ್ಯಕ್ಷ ಟ್ರೂಮನ್ನರೂಸಹ ಭಾರತಕ್ಕೆ ಅಧಿಕಾರದಿಂದ ನಿವೃತ್ತರಾದಮೇಲೆ ಬರುವರೆಂದು ಹೇಳಲಾಗಿದೆ.

ಇನ್ನು ಆರುತಿಂಗಳಿನಲ್ಲಿ ಕೊರಿಯಾ ಯುದ್ಧ ಮುಕ್ತಾಯ ?

ಇನ್ನು ಆರುತಿಂಗಳಿನಲ್ಲಿ ಕೊರಿಯಾದಲ್ಲಿ ಯುದ್ಧನಿಂತು ಒಂದು ಒಪ್ಪಂದಕ್ಕೆ ಬರುವಸಂಭವವಿದೆಯೆಂದು ಕೊರಿಯಾದಲ್ಲಿನ ಕಾಮನ್‌ವೆಲ್ತ್ ಸೈನ್ಯದ ಮಾಜಿ ದಂಡನಾಯಕ ಮೇಜರ್ ಜ|| ಜೇಮ್ಸ್ ಕ್ಯಾಸೆಲ್ಸ್‌ರವರು ತಿಳಿಸಿರುತ್ತಾರೆ.

ಬೊಂಬಾಯಿನಲ್ಲಿ ಹರತಾಳ

ವಿವಿಧ ಘಟ್ಟಗಳ ಮಾರಾಟತೆರಿಗೆಯನ್ನು ವಿರೋಧಿಸಿ ಬೊಂಬಾಯಿ ಮತ್ತು ಅಲಹಾಬಾದಿನಲ್ಲಿ ಅನೇಕ ವರ್ತಕರು ತಮ್ಮ ಅಂಗಡಿಗಳನ್ನು ಮುಚ್ಚಿ ಹರತಾಳವನ್ನು ಮೊನ್ನೆ ಆಚರಿಸಿದರು.

ಭಾರತ ಸೇವಕ ಸಮಾಜದ ಆರಂಭೋತ್ಸವ

ಭಾರತ ಸೇವಕ ಸಮಾಜದ ಮೈಸೂರು ಕೊಡಗು, ಆಂಧ್ರ ಮತ್ತು ತಮಿಳುನಾಡು ಶಾಖೆಗಳ ಆರಂಭೋತ್ಸವವನ್ನು ಪ್ರಧಾನಿ ಪಂಡಿತ ನೆಹರೂರವರು ಇದೇ ೧೦ ನೇ ತಾರೀಖು ಬೆಳಗ್ಗೆ ೧೧-೫೫ ಗಂಟೆಗೆ ಮದರಾಸಿನಲ್ಲಿ ನೆರವೇರಿಸುವರು.

ಕಾವೇರಿ ವ್ಯಾಲಿ ಕಾಗದ ಕಾರ್ಖಾನೆ ಕೆಲಸಗಾರರ ಸಂಘ

ಮೈಸೂರು ೮

ನಂಜನಗೂಡು ಪಕ್ಕದಲ್ಲಿರುವ ಕಾವೇರಿ ವ್ಯಾಲಿ ಕಾಗದ ಕಾರ್ಖಾನೆ ಕೆಲಸಗಾರರ ಸಭೆಯು ನಿನ್ನೆ ಸಂಜೆ ಕಾರ್ಖಾನೆ ಮುಂಭಾಗದಲ್ಲಿ ಶ್ರೀ ಎ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಟಿ. ಎಸ್. ಸುಬ್ಬಣ್ಣನವರು ಭಾಷಣಮಾಡಿದರು ಅಧ್ಯಕ್ಷರು ಭಾಷಣಮಾಡಿ ಸಂಘ ಸ್ಥಾಪಿಸುವ ಆವಶ್ಯಕತೆಯನ್ನು ವಿವರಿಸಿದರು. ಕೆಲಸಗಾರರು ಸದಾಶಿಸ್ತಿನಿಂದ ವ್ಯವಸ್ಥಿತ ರೂಪದಲ್ಲಿ ನಡೆದುಕೊಂಡು ತಮ್ಮ ಅಭ್ಯುದಯವನ್ನು ಸಂಘದ ಮುಖೇನ ಸಾಧಿಸಬೇಕೆಂದೂ, ಕೆಲಸಗಾರರು ಮತ್ತು ಮಾಲೀಕರ ಮಧ್ಯೆ ಸೌಹಾರ್ದವಿದ್ದರೆ ಉತ್ಪತ್ತಿ ಹೆಚ್ಚಿ ಸಂಪತ್ತು ಹೆಚ್ಚುವುದೆಂದೂ ಹೇಳಿದರು.

ತಾತ್ಕಾಲಿಕವಾಗಿ ಈ ಕೆಳಗೆ ಕಂಡವರು ಸಂಘದ ಕಾರ್ಯಕಾರಿ ಸಮಿತಿಗೆ ಚುನಾಯಿಸಲ್ಪಟ್ಟರು.

ಶ್ರೀ ಎ. ರಾಮಣ್ಣ [ಅಧ್ಯಕ್ಷರು] ಶ್ರೀ ಕೆ. ಎಸ್. ರಾಜಾರಾವ್ (ಉಪಾಧ್ಯಕ್ಷ) ಶ್ರೀ ಟಿ ಎಸ್. ಸುಬ್ಬಣ್ಣ [ಕಾರ್‍ಯದರ್ಶಿ] ಶ್ರೀ ಡಿ.ಆರ್. ಕೃಷ್ಣಪ್ಪ(ಉಪಕಾರ್‍ಯದರ್ಶಿ) ಶ್ರೀ ಪೆರುಮಾಳ್‌ಪಿಳ್ಳೆ [ಖಜಾಂಚಿ].

ಮಾಜಿದೊರೆ ಫರೂಕರ ಮೇಲೆ ಕೊಲೆ ಅಪಾದನೆ

ಕಳೆದ ಮಾರ್ಚಿ ತಿಂಗಳಿನಲ್ಲಿ ಈಜಿಪ್ಟಿನ ಸೈನ್ಯಾಧಿಕಾರಿ ಅಬ್ದುಲ್‌ಕಬೀರ್ ತಹಾಂವರನ್ನು ಗುಂಡಿನಿಂದ ಹೊಡೆದು ಕೊಲೆಮಾಡಿದುದಕ್ಕೆ ಮಾಜಿದೊರೆ ಫರೂಕ್‌ರವರೇ ಕಾರಣರೆಂದೂ, ಅವರನ್ನು ಈಗ ಗೈರುಹಾಜರಿನಲ್ಲಿ ವಿಚಾರಣೆಗೆ ಗುರಿಪಡಿಸಲಾಗುವುದೆಂದೂ ಹೇಳಲಾಗಿದೆ.

ಧೂಮಪಾನದಿಂದ ಅಪಾಯವಿಲ್ಲ

ಧೂಮಪಾನದಿಂದ ಶ್ವಾಸಕೋಶಕ್ಕೆ ಯಾವ ಅಪಾಯವೂ ಇಲ್ಲವೆಂದು ಬೊಂಬಾಯಿನ ಬಿ. ಸಿ. ಜಿ. ವ್ಯಾಕ್ಸಿನೇಷನ್ ಸಮಿತಿಯ ಕಾರ್‍ಯದರ್ಶಿ ಡಾ|| ಬಾಸ್ಕರ್ ಪಟೇಲ್‌ರವರು ತಿಳಿಸಿರುತ್ತಾರೆ.

ಜೈನಾರಾಯಣವ್ಯಾಸ್

ಶ್ರೀ ಜೈನಾರಾಯಣ್‌ವ್ಯಾಸ್‌ರವರು ರಾಜಾಸ್ಥಾನದ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿತರಾಗಿದ್ದಾರೆ.

ಉಚಿತ ಪರಿಹಾರ ಪಡೆಯುವುದು ಆತ್ಮಗೌರವಕ್ಕೆ ಕುಂದು

ಪತ್ರಿಕಾ ಗೋಷ್ಠಿಯಲ್ಲಿ ನೆಹರೂ ವಿವರಣೆ

ಪ್ರಧಾನಿ ನೆಹರೂರವರು ರಾಯಲಸೀಮೆ ಮತ್ತು ಮೈಸೂರು ಪ್ರಾಂತ್ಯಗಳಲ್ಲಿ ಅಭಾವಪೀಡಿತ ಪ್ರದೇಶಗಳ ತಮ್ಮ ೯೦೦ ಮೈಲಿ ಪ್ರವಾಸವನ್ನು ಮುಕ್ತಾಯಗೊಳಿಸಿ ನಿನ್ನೆ ಸಂಜೆ ಚಿತ್ತೂರನ್ನು ಸೇರಿದರು ಈ ದಿನ ಅವರು ಮದ್ರಾಸಿಗೆ ತೆರಳಿದರು.

ಚಿತ್ತೂರಿನಲ್ಲಿ ಪ್ರಧಾನಿಯವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಈ ಅಭಾವ ಪ್ರದೇಶಗಳಲ್ಲಿ ಜನತೆಗೆ ಉದ್ಯೋಗವನ್ನು ಒದಗಿಸುವ ಕೆಲಸವನ್ನು ಮಾಡಬೇಕಾಗಿದೆ. ಜನತೆಯು ಉದ್ಯೋಗವನ್ನು ಮಾಡಿ ದೇಹದುಡಿಮೆಯಿಂದ ಸಂಪಾದನೆ ಮಾಡಬೇಕಾಗಿದೆ. ಉಚಿತಪರಿಹಾರವನ್ನು ಕೊಡುವುದು ತೆಗೆದುಕೊಳ್ಳುವುದು ಆತ್ಮಗೌರವಕ್ಕೆ ಕುಂದು ಆದರೆ ಅವಶ್ಯಕತೆಯಿರುವಕಡೆ ಸ್ವಲ್ಪಕಾಲ ಸಹಾಯ ನೀಡಬಹುದೇ ವಿನಹ ಹೆಚ್ಚು ಕಾಲ ಕೂಡದು ಸರ್ಕಾರದವರು ಈ ಭಾಗಗಳಲ್ಲಿ ಅಂಬಲಿಕೇಂದ್ರಗಳನ್ನು ಸ್ಥಾಪಿಸಿರುವುದರಿಂದ ಘೋರ ಪರಿಣಾಮತಪ್ಪಿದೆ. ಇಲ್ಲಿ ೫ ಲಕ್ಷ ಜನರಿಗೆ ಆಹಾರವನ್ನು ಒದಗಿಸುತ್ತಲಾಗಿದೆ ಈ ಕೇಂದ್ರಗಳಲ್ಲಿ ಅಂಬಲಿ ಕೊಡುವ ವಿಷಯದಲ್ಲಿ ಅನೇಕ ದೂರುಗಳು ಬಂದಿವೆ. ಸ್ವತಃ ಪರಿಶೀಲನೆಯಿಂದ ಉತ್ತಮ ಗಂಜಿಕೊಡಲಾ ಗುತ್ತಲಿದೆ. ಅನಾವಶ್ಯಕವಾದ ಆಪಾದನೆಗಳನ್ನು ಮಾಡಲಾಗಿದೆ ಎಂದು ಪ್ರಧಾನಿ ಹೇಳಿದರು.

ಈ ಪ್ರದೇಶಗಳಲ್ಲಿ ಭಾರತ ಸೇವಕ ಸಮಾಜವು ಮಾಡಬೇಕಾದ ಕೆಲಸ ವಿಶೇಷವಿದೆ ದೈಹಿಕದುಡಿಮೆ ಕಾರ್ಯಗಳನ್ನು ಹೆಚ್ಚಾಗಿ ಮಾಡಬೇಕಾಗಿದೆ ಭಾರತಸೇವಕ ಸಮಾಜದವರು, ಸ್ವಯಂ ಸೇವಕರು ಉಪಾಧ್ಯಾಯರು ಎಲ್ಲರೂ ಇನ್ನೂ ಹೆಚ್ಚಿಗೆ ಕೆಲಸಮಾಡಬೇಕಾಗಿದೆ ಎಂದು ಪ್ರಧಾನಿ ನೆಹರೂ ಹೇಳಿದರು.

ಮೈಸೂರಿಗೆ ವಲಸೆಗಾರರಬಗ್ಗೆ ಪ್ರಧಾನಿ ಪ್ರಸ್ತಾಪಿಸಿ ತಮಗೆ ಈ ಬಗ್ಗೆ ಪೂರ್ಣ ವಿವರಗಳು ತಿಳಿಯದಿದ್ದಾಗ್ಯೂ ಹೆಚ್ಚಿಗೆ ಪ್ರಮಾಣದಲ್ಲಿ ವಲಸೆ ನಡೆದಿಲ್ಲ ಇಂತಹ ಪ್ರಕರಣಗಳಲ್ಲಿ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಹೋಗುವುದು ಸಾಮಾನ್ಯವಾದುದೆಂದು ಹೇಳಿದರು.

ರಾಯಲುಸೀಮೆಯಲ್ಲಿ ಜನತೆಯು ಈ ಕಷ್ಟಸಮಯದಲ್ಲಿ ಎದೆಗುಂದದೆ ಇರುವುದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಎಲ್. ಎಸ್. ರಾಜೂರವರನ್ನು ಜಾಮೀನಿನಮೇಲೆ ಬಿಡಲು ಬೊಂಬಾಯಿ ಹೈಕೋರ್ಟ್ ಆಜ್ಞೆ

ಮೈಸೂರು ಶ್ರೇಷ್ಠ ನ್ಯಾಯಾಧೀಶರ ವಿಚಾರಣೆಯ ಆಪಾದನೆ ಮೊಕದ್ದಮೆಯಲ್ಲಿ ಶಿಕ್ಷೆ ಅನುಭವಿಸುತ್ತಲಿರುವ ಎಲ್. ಎಸ್. ರಾಜುರವರನ್ನು ೫೦.೨೦ ರೂಪಾಯಿಗಳ ವೈಯುಕ್ತಿಕ ಮತ್ತು ೨೫೦೦೦ ರೂ. ಗಳ ಮತ್ತೆರಡು ಜಾಮೀನಿನಮೇಲೆ ಬಿಡುಗಡೆಮಾಡಲು ಬೊಂಬಾಯಿ ಶ್ರೇಷ್ಠ ನ್ಯಾಯಾಲಯವು ಆಜ್ಞೆಮಾಡಿದೆ. ಈ ಮೊಕದ್ದಮೆಯಮೇಲೆ ಎಲ್. ಎಸ್. ರಾಜೂರವರ ಅಪೀಲನ್ನು ಬೊಂಬಾಯಿ ಹೈಕೋರ್ಟು ವಿಚಾರಣೆ ನಡೆಸಲಿದೆ.

ಮೈಸೂರಿನ ನೂತನ ಜಿಲ್ಲಾಧಿಕಾರಿಗಳು

ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮೈಸೂರು ಜಿಲ್ಲಾಧಿಕಾರಿ ಶ್ರೀ ಮಹಮದ್ ಅಹಮದ್‌ರವರ ಸ್ಥಾನದಲ್ಲಿ ಶ್ರೀ ಎಂ. ಎಸ್. ಸ್ವಾಮಿನಾರ್ಥರವರನ್ನು ನೇಮಿಸಲಾಗಿದೆ.

ಕೋಲಾರ ಜಿಲ್ಲಾಧಿಕಾರಿಗಳಾಗಿ ಶ್ರೀ ಬಿ. ಎಂ. ಅಬುಬೇಕರ್‌ರವರನ್ನೂ, ಶ್ರೀ ಕೆ. ಹೆಂಜಾರಪ್ಪನವರನ್ನು ಬೆಂಗಳೂರು ಕಾರ್ಪೊರೇಷನ್ ಕಮೀಷನರನ್ನಾಗಿಯು ಶ್ರೀ ಎಂ. ಎಸ್. ಮುನಿಸ್ವಾಮಿಯವರನ್ನು, ವಿದ್ಯಾಇಲಾಖಾ ಕಾರ್ಯದರ್ಶಿಯನ್ನಾಗಿಯೂ, ಶ್ರೀ ಹೆಚ್. ರಾಮರಾಜೇಅರಸಿನವರನ್ನು ಬೆಂಗಳೂರು ಡಿವಿಜನ್ ಮಾರಾಟಾತೆರಿಗೆ ಕಮೀಷನರನ್ನಾಗಿಯೂ ವರ್ಗಾಯಿಸಲಾಗಿದೆ.

ಮೈಸೂರು ಪೇಟೆಧಾರಣೆ

ತಾ|| ೭-೧೦-೫೨

ಪಲ್ಲ	ರೂ—ಆ	ರೂ—ಆ
ಕಡಲೇಕಾಯಿ	೧೦-೦	೧೮-೧೨
ಎಳ್ಳು	೫೯-೪	೬೯-೧೦
ಹರಳು	೪೦-೮	೪೩-೬
ಅಲಸಂದೆ	೬೨-೧೨	೬೩-೨
ಮೆಣಸಿನಕಾಯಿ	೧೪-೦	೨೧-೨
ಹುಣಸೆಹಣ್ಣು	೫-೧೩	೬-೯
ಸೀಗೇಕಾಯಿ	೪-೧	೫-೬
ಹುರುಳಿ	೬೦-೧೦	೬೧-೦
ತೆಂಗಿನಕಾಯಿ ೧,೧೦೦ ಕ್ಕೆ	೧೫೦	೨೦೬

ಕಾಶ್ಮೀರ ಪ್ರಾಂತ್ಯಾಧಿಪತಿ

ಕಾಶ್ಮೀರ ಮಹಾರಾಜ ಹರಿಸಿಂಗ್‌ರವರು ತಮ್ಮ ರಾಜತ್ವವನ್ನು ಬಿಟ್ಟುಕೊಡುವುದೂ, ಅವರ ಮಗ ರಾಜಕುಮಾರ ಕರಣಸಿಂಗ್‌ರವರು ಕಾಶ್ಮೀರದ ಅಧಿಪತಿಯಾಗಿ ಚುನಾಯಿತವಾಗುವುದೂ ತೀರ್ಮಾನವಾಗಿರುವುದಾಗಿ ಗೊತ್ತಾಗಿದೆ. ಇದನ್ನು ಜಾರಿಗೆತರಲು ಈಗಿರುವ ಶಾಸನದಲ್ಲಿ ಕೆಲವು ತೊಂದರೆಗಳಿರುವುದರಿಂದ ಈಗಿನ ರಾಜ್ಯಾಂಗಸಭೆಯು ಶಾಸನಸಭೆಯಾಗಿ ಸೇರಿ ಶಾಸನದಲ್ಲಿ ತಿದ್ದುಪಡಿಯನ್ನು ಮಾಡುವುದಾಗಿ ಗೊತ್ತಾಗಿದೆ.

ಅಪೇರ ೨-೧೦-೫೨ ರಿಂದ ಶನಿವಾರ
ಕಲ್ಯಾಣಂ-ಪಣ್ಣಿಪಾರ್
[ತಮಿಳು]
ಪಾತ್ರ:—ವರಲಕ್ಷ್ಮಿ, ಸಾವಿತ್ರಿ ಎನ್. ಟಿ. ರಾಮರಾವ್

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಅಂದವಾದ ಮುದ್ರಣಕ್ಕೆ
ಕರ್ನಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)
For NEAT AND PROMPT PRINTING
Contact :
CARNATAK PRINTERS
GANDHI SQUARE, MYSORE
Phone 892 or 574

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು ನಿಮ್ಮ ಸದರುಗಳನ್ನು ಅಲಂಕರಿಸಲಿ
ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.
★
ಹೆಚ್ಚಿನ ವಿವರಗಳಿಗೆ ಬರೆಯಿರಿ:—
ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318
ಸಮಾಚಾರ
ದಿನಪತ್ರಿಕೆ ಸಂಪುಟ 3 ಸಂಚಿಕೆ 40
೯-೧೦-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಅಭಾವ ಪ್ರದೇಶಗಳ ತ್ವರಿತ ಪರಿಹಾರ ಕಾರ್ಯ

ಕೇಂದ್ರದಿಂದ ೧೫೦ ಲಕ್ಷ ರೂ ಸಹಾಯಕ್ಕೆ ಮೈಸೂರಿನ ಮನವಿ

ಮುಖ್ಯಮಂತ್ರಿಗಳ ವಿವರಣೆ

ಬೆಂಗಳೂರು, ಅ. ೮

ಸಂಸ್ಥಾನ ಕ್ಷಾಮಪೀಡಿತ ಪ್ರದೇಶಗಳಲ್ಲಿ ಕೂಡಲೇ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ೧೫೦ ಲಕ್ಷ ರೂ. ಸಹಾಯ ಬೇಕೆಂದು ಕೇಂದ್ರ ಸರ್ಕಾರಕ್ಕೆ ಮೈಸೂರು ಮನವಿ ಮಾಡಿದೆಯೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ತಿಳಿಸಿರುತ್ತಾರೆ.

ಜನರಲ್ಲಿ ಭಿಕ್ಷಾಟನೆಯ ಭಾವನೆಯನ್ನುಂಟುಮಾಡುವುದು ಸರಿಯಲ್ಲ. ಆದ್ದರಿಂದ ಜನರು ಕಷ್ಟಪಟ್ಟು ಕೆಲಸಮಾಡಿ ಜೀವನ ನಡೆಸುವಂತೆ ಮಾಡುವುದೇ ಮೈಸೂರು ಸರ್ಕಾರದ ನೀತಿ.

ಕೆಲಸಗಾರರಿಗೆ ಕೂಲಿಯನ್ನು ಧಾನ್ಯದ ರೂಪದಲ್ಲಿ ಅಥವ ಹಣದ ರೂಪದಲ್ಲಿ ಕೊಡಲಾಗುವುದು. ಕೇಂದ್ರದಿಂದ ಬಂದಿರುವ ಆಹಾರ ಧಾನ್ಯಗಳನ್ನು ಅಭಾವ ಪ್ರದೇಶಗಳಲ್ಲಿ ಕೂಲಿ ರೂಪದಲ್ಲಿ ಕೊಡಲಾಗುವುದು. ಅಭಾವ ಪ್ರದೇಶಗಳ ಮುಖ್ಯ ರಸ್ತೆಗಳನ್ನು ಸಿಮೆಂಟ್ ಕಾಂಕ್ರೀಟ್ ಮಾಡುವುದು ಮತ್ತು ಸಣ್ಣಪುಟ್ಟ ಕೆರೆಗಳನ್ನು ಕಟ್ಟುವುದು ಮತ್ತು ಇತರ ಕಾಮಗಾರಿ ಕೆಲಸಗಳಿಂದ ಜನರಿಗೆ ಕೆಲಸ ಒದಗಿಸಲಾಗುವುದು ಎಂದು ಮುಖ್ಯಮಂತ್ರಿಗಳು ತಿಳಿಸಿರುತ್ತಾರೆ.

ವಿದ್ಯಾರ್ಥಿಗಳಮೇಲೆ ಮೊಕದ್ದಮೆ ವಾಪಸಿಲ್ಲ

ಮೈಸೂರು ಕ್ರಾಫರ್ಡ್ ಹಾಲಿನಲ್ಲಿ ನಡೆದ ವಿದ್ಯಾರ್ಥಿಗಳ ಗಲಾಟೆ ಸಂಬಂಧದಲ್ಲಿ ಅವರಮೇಲೆ ಹೂಡಿರುವ ಮೊಕದ್ದಮೆಗಳನ್ನು ವಾಪಸು ಪಡೆಯಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಲಾಗುತ್ತಿದೆ. ಆದರೆ ಅಂತಹ ಒತ್ತಾಯ ತೊಂದರೆಗೊಳಗಾಗಿರುವುದರಿಂದ ಸರ್ಕಾರ ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ-ಎಂದು ಅವರು ತಿಳಿಸಿರುತ್ತಾರೆ.

ಅಂಬಾರಿಯಲ್ಲಿ ಕೂಡಲು ಇಚ್ಛಿಸಲಿಲ್ಲ

ದಸರಾ ಮೆರವಣಿಗೆಯಲ್ಲಿ ಶ್ರೀಮನ್ಮಹಾರಾಜರವರೊಡನೆ ಅಂಬಾರಿಯಲ್ಲಿ ತಾವೂ ಕೂಡಬೇಕೆಂದು ಆಶೆಪಟ್ಟನೆಂಬ ಸುದ್ದಿಗೆ ಯಾವ ಆಧಾರವೂ ಇಲ್ಲ. ಈ ತರಹ ಊಹಾಪೋಹದ ಮಾತುಗಳಿಂದ ದೇಶಕ್ಕೆ ಕ್ಷೇಮಕರವಿಲ್ಲ. ಇದರಿಂದ ತಮ್ಮ ಮನಸ್ಸು ಬಹಳವಾಗಿ ನೊಂದಿರುವುದು. ನಾನು ಈ ರೀತಿ ಯಾವಗಲೂ ಅಪೇಕ್ಷೆಪಟ್ಟಿಲ್ಲ. ಎಂದು ಶ್ರೀ ಹನುಮಂತಯ್ಯನವರು ಹೇಳಿರುತ್ತಾರೆ.

ಕನ್ನಡ ಮಾಧ್ಯಮ

ಮೈಸೂರಿನಲ್ಲಿ ಕನ್ನಡ ಮಾಧ್ಯಮ ಭಾಷೆಯಾಗಿರಕೂಡದೆಂದು ನಾನು ಯಾವತ್ತು ಹೇಳಿಕೆಕೊಟ್ಟಿಲ್ಲ. ಸಂಸ್ಥಾನದಲ್ಲಿ ಕನ್ನಡ ಮಾಧ್ಯಮಕ್ಕಿಂತ ಇಂಗ್ಲೀಷ್ ಮಾಧ್ಯಮಕ್ಕೇ ವಿದ್ಯಾರ್ಥಿಗಳು ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆಂದು ಬೊಂಬಾಯಿನಲ್ಲಿ ತಾವು ಹೇಳಿಕೆಕೊಟ್ಟ ಮಾತ್ರಕ್ಕೆ ಅಪಾರ್ಥಮಾಡುವುದು ಸರಿಯಲ್ಲ. ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಶಿಕ್ಷಣ ಸುಧಾರಣಾ ಸಮಿತಿಯ ಆರಂಭ ಭಾಷಣದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಕೆಲವು ಪಾಠಪ್ರವಚನವನ್ನು ಕನ್ನಡದಲ್ಲಿ ಹೇಳಿ ಮಿಕ್ಕಿದುವನ್ನು ಇಂಗ್ಲೀಷಿನಲ್ಲಿಯೇ ಹೇಳಬೇಕೆಂಬುದೇ ತಮ್ಮ ಅಭಿಪ್ರಾಯ-ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ರೈಲ್ವೆ ದುರಂತದಲ್ಲಿ ೭೫ ಜನರ ಮರಣ

ಲಂಡನ್ನಿನ ವಾಯುವ್ಯದಲ್ಲಿರುವ ಹ್ಯಾರೋ ರೈಲ್ವೆ ನಿಲ್ದಾಣದಲ್ಲಿ ೩ ರೈಲು ಡಿಕ್ಕಿ ಹೊಡೆದುದರ ಪರಿಣಾಮವಾಗಿ ಸುಮಾರು ೭೫ ಜನರು ಸತ್ತು ೧೫೦ ಜನರಿಗೆ ಗಾಯಗಳಾಗಿರುವುದಾಗಿ ವರದಿಯಾಗಿದೆ.

ಲಕ್ಕವಳ್ಳಿ ಜಲಾಶಯ ಕೆಲಸದ ಬಗ್ಗೆ ಕೇಂದ್ರಕ್ಕೆ ಒತ್ತಾಯ

ಭಾರತದ ಪಾಂಚವಾರ್ಷಿಕ ಯೋಜನೆಯಲ್ಲಿ ಲಕ್ಕವಳ್ಳಿ ಜಲಾಶಯದ ಕಾರ್ಯವನ್ನು ಸೇರಿಸಿ ಕೂಡಲೇ ಅದನ್ನು ಪ್ರಾರಂಭಿಸಬೇಕೆಂದು ಪ್ರಧಾನಿಯವರಲ್ಲಿ ತಾವು ಒತ್ತಾಯ ಮಾಡಿರುವುದಾಗಿಯೂ ಈ ಬಗ್ಗೆ ಪುನಃ ದೆಹಲಿಯಲ್ಲಿ ಮಾತುಕತೆ ನಡೆಸುವುದಾಗಿಯೂ, ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ. ಮೈಸೂರು ಸಂಸ್ಥಾನದಿಂದ ಮಂಗಳೂರಿಗೆ ರೈಲ್ವೆ ಮಾರ್ಗ ಹಾಕುವುದನ್ನು ಸಹ ತಾವು ದೆಹಲಿಯಲ್ಲಿ ಒತ್ತಾಯಪಡಿಸುವುದಾಗಿ ಅವರು ಹೇಳಿರುತ್ತಾರೆ.

ಪೌರಸಭೆಗಳ ಅಭಿವೃದ್ಧಿ ಕಾರ್ಯಗಳು

ಸಂಸ್ಥಾನದ ಒಟ್ಟು ೧೧೦ ಪುರಸಭೆಗಳು ತಮ್ಮ ಅಭಿವೃದ್ಧಿ ಕಾರ್ಯಗಳಿಗಾಗಿ ಪಟ್ಟಿಗಳನ್ನು ತಯಾರಿಸಿವೆ. ಅದಕ್ಕೆ ಒಟ್ಟು ಐದುವರೆ ಕೋಟಿ ರೂ ಬೇಕಾಗುವುದು ಈ ವಿಷಯವನ್ನು ಶಾಸನಸಭೆ ಮುಂದೆ ಪರಿಶೀಲನೆಗೆ ಬಿಡಲಾಗುವುದು ಸರ್ಕಾರವು ಸಾಲವೆತ್ತಿ ಹಣ ಸಹಾಯಮಾಡುವುದೊಂದೇ ಈಗಿರುವ ಮಾರ್ಗ ಈಕಾರ್ಯಗಳಲ್ಲಿ ನೀರಿನ ವ್ಯವಸ್ಥೆಗೆ ಎರಡುಮುಕ್ಕಾಲು ಕೋಟಿ ರೂ ಬೇಕಾಗುವುದು ಅದಕ್ಕೆ ಪ್ರಥಮಪ್ರಾಧಾನ್ಯತೆ ಕೊಡಬೇಕು.ಎಂದು ಮುಖ್ಯಮಂತ್ರಿಗಳು ತಿಳಿಸಿರುತ್ತಾರೆ.

ಕ್ಷಾಮ ಪರಿಹಾರ ನಿಧಿಗೆ ಕಾಣಿಕೆ ಬೇಡ

ಬೆಂಗಳೂರು ಕಾರ್ಪೋರೇಷನ ಕಾಂಗ್ರೆಸ್ ಪಕ್ಷವು ದೇಶದ ಕ್ಷಾಮ ಪರಿಹಾರ ನಿಧಿಗೆ ಕಾಣಿಕೆ ಕೊಡುವುದು ಬೇಡವೆಂದು ತೀರ್ಮಾನಿಸಿರುವುದಾಗಿ ವರದಿಯಾಗಿದೆ.

ಕೆಲವು ಸದಸ್ಯರು ೫ ಸಾವಿರ ರೂ. ಧನ ಸಹಾಯ ಕೊಡಬೇಕೆಂದು ಮಂಡಿಸಿದ ನಿರ್ಣಯವನ್ನು ಅದೇ ಪಕ್ಷದ ಸದಸ್ಯರು ವಿರೋಧಿಸಿದರೆಂದು, ಮತ ತೆಗೆದುಕೊಳ್ಳಲು ವಿರುದ್ಧ ಬಹುಮತ ಬಂದಿತೆಂದು ಹೇಳಲಾಗಿದೆ.

ಈ ಬಗ್ಗೆ ಪಕ್ಷದ ಸದಸ್ಯರಲ್ಲೇ ಬಿಸಿಬಿಸಿ ಚರ್ಚೆ ನಡೆಯಿತೆಂದೂ ತಿಳಿಯಬರುತ್ತದೆ.

ಪಾಕೀಸ್ಥಾನದ ಮೇಲೆ ಯುದ್ಧ ಹೂಡಬೇಕು

ಕಾಶ್ಮೀರ ಪ್ರಜಾಪರಿಷತ್ತಿನ ಅಧ್ಯಕ್ಷರ ಅಭಿಪ್ರಾಯ

ಮೈಸೂರು, ಅ. ೮

ಕಾಶ್ಮೀರ ಪ್ರಶ್ನೆಯನ್ನು ಶಾಂತ ರೀತಿಯಿಂದ ಬಗೆಹರಿಸಲು ಪಟ್ಟ ಪ್ರಯತ್ನಗಳೆಲ್ಲಾ ನಿಷ್ಫಲವಾದುವು. ಕೂಡಲೇ ವಿಶ್ವಸಂಸ್ಥೆಯಿಂದ ಕಾಶ್ಮೀರ ಪ್ರಶ್ನೆಯನ್ನು ಹಿಂದಕ್ಕೆ ತೆಗೆದುಕೊಂಡು ಪಾಕಿಸ್ಥಾನದ ಮೇಲೆ ಯುದ್ಧ ಹೂಡಿ ಅದು ಕಾಶ್ಮೀರ ಜಮ್ಮು ಪ್ರಾಂತ್ಯದಲ್ಲಿ ಆಕ್ರಮಿಸಿಕೊಂಡಿರುವ ಪ್ರಾಂತ್ಯವನ್ನೆಲ್ಲಾ ವಶಪಡಿಸಿಕೊಂಡು, ಭಾರತದ ಇತರಸಂಸ್ಥಾನಗಳು ಐಕ್ಯವಾಗಿರುವಂತೆ ಪೂರ್ಣವಾಗಿ ಕಾಶ್ಮೀರವು ಭಾರತದೊಡನೆ ಸೇರಬೇಕೆಂದು ಈದಿನ ಮೈಸೂರಿಗೆ ಆಗಮಿಸಿದ ಜಮ್ಮು-ಕಾಶ್ಮೀರ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಶ್ರೀ ಪ್ರೇಮನಾಥ್ ಡೋಗ್ರಾರವರು ಪತ್ರಿಕಾ ಪ್ರತಿನಿಧಿಗಳೊಡನೆ ತಿಳಿಸಿದರು

ಕಾಶ್ಮೀರದಲ್ಲಿ ಷೇಕ್ ಅಬ್ದುಲಾ ಸರ್ಕಾರದ ವಿಷಯವಾಗಿ ಮಾತನಾಡುತ್ತಾ ಈ ಸರ್ಕಾರದ ಆಡಳಿತದಲ್ಲಿ ವಾಕ್ ಸ್ವಾತಂತ್ರ್ಯ ಮುಂತಾದುವೇನೂ ಇಲ್ಲವೇ ಇಲ್ಲ. ಕಾಶ್ಮೀರವನ್ನು ಪ್ರತ್ಯೇಕವಾಗಿರುವಂತೆ ಮಾಡುವುದೇ ಸರ್ಕಾರದ ನೀತಿ. ಕಾಶ್ಮೀರಕ್ಕೆ ವಂಶೀಕ ರಾಜತ್ವರಾಗಲೀ, ಚುನಾಯಿತ ಅಧ್ಯಕ್ಷರಾಗಲೀ ಬೇಕಾಗಿಲ್ಲ ಭಾರತದ ಇತರ ಪ್ರಾಂತ್ಯಗಳಲ್ಲಿರುವಂತೆ ರಾಜಪ್ರಮುಖರು ಅಥವಾ ಗೌರ್ನರು ಭಾರತ ರಾಷ್ಟ್ರಾಧ್ಯಕ್ಷರಿಂದ ನೇಮಿತವಾಗಿ ಇಲ್ಲಿಯೂ ಇರಬೇಕು. ಎಂದು ಅವರು ತಿಳಿಸಿದರು.

ಶ್ರೀಯುತರು ಈದಿನ ಬೆಳಿಗ್ಗೆ ಅರಸೀಕೆರೆ ರೈಲಿನಲ್ಲಿ ಮೈಸೂರಿಗೆ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಸ್ವಾಗತ ಸಮಿತಿ ಪರವಾಗಿ ಶ್ರೀ ಬಿ. ಜಿ. ದಾಸ್, ಎಂ. ಎನ್. ತಿಮ್ಮಯ್ಯ ಮುಂತಾದವರು ಸ್ವಾಗತಿಸಿದರು.

ಯಾವ ಷರತ್ತೂ ಇಲ್ಲದೆ ಶಸ್ತ್ರಾಸ್ತ್ರ ಒಪ್ಪಿಸಲು ಕಮ್ಯೂನಿಸ್ಟರ ನಿರ್ಧಾರ

ಪತ್ರಿಕಾಗೋಷ್ಠಿಯಲ್ಲಿ ಹೈದರಾಬಾದ್ ಮುಖ್ಯಮಂತ್ರಿಯ ವಿವರಣೆ

ಹೈದರಾಬಾದ್ ಪ್ರಾಂತ್ಯದಲ್ಲಿರುವ ಕಮ್ಯೂನಿಸ್ಟರು ಯಾವ ಷರತ್ತೂ ಇಲ್ಲದೆ ತಮ್ಮಲ್ಲಿರುವ ಶಸ್ತ್ರಾಸ್ತ್ರಗಳನ್ನೆಲ್ಲಾ ಸರ್ಕಾರಕ್ಕೆ ವಶಪಡಿಸಲು ಒಪ್ಪಿರುವುದಾಗಿ ಅಲ್ಲಿನ ಮುಖ್ಯಮಂತ್ರಿ ಶ್ರೀ ರಾಮಕೃಷ್ಣರಾಯರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಕೆಲವು ದಿನದ ಹಿಂದೆ ಷರತ್ತುಗಳಮೇಲೆ ಶಸ್ತ್ರಾಸ್ತ್ರ ಒಪ್ಪಿಸುವುದಾಗಿ ಹೇಳಿದ್ದರು. ಅದಕ್ಕೆ ಸರ್ಕಾರವು ಒಪ್ಪಲಿಲ್ಲ

ಆದರೆ ಶಸ್ತ್ರಾಸ್ತ್ರಗಳ ಪ್ರಮಾಣ ವಿಷಯದಲ್ಲಿ ಇನ್ನು ಉಭಯತ್ರರಲ್ಲೂ ಭಿನ್ನಾಭಿಪ್ರಾಯವಿದೆ. ಕಮ್ಯೂನಿಸ್ಟರು ಹೇಳುತ್ತಿರುವ ಪ್ರಮಾಣಕ್ಕಿಂತ ೫-೬ ರಷ್ಟು ಹೆಚ್ಚಾಗಿ ಅವರಲ್ಲಿ ಶಸ್ತ್ರಾಸ್ತ್ರಗಳು ಅವರ ಬಳಿ ಇದೆಯೆಂದು ಸರ್ಕಾರವು ಅಭಿಪ್ರಾಯಪಟ್ಟಿದೆ.

ಈಗ ಪಕ್ಷವು ಒಪ್ಪಿಸುವ ಶಸ್ತ್ರಾಸ್ತ್ರಗಳನ್ನೆಲ್ಲಾ ಪಡೆದು ಉಳಿದುವನ್ನು ವಶಪಡಿಸಿಕೊಳ್ಳಲು ಸರ್ಕಾರವು ಸೂಕ್ತಕ್ರಮ ತೆಗೆದುಕೊಳ್ಳುವುದಾಗಿ ಮುಖ್ಯಮಂತ್ರಿ ತಿಳಿಸಿದರು.

ಹೈದರಾಬಾದಿನ ಜನಸಂಖ್ಯೆ

ಹೊಸಜನಗಣತಿ ಪ್ರಕಾರ ಹೈದರಾಬಾದ್ ಪ್ರಾಂತ್ಯದ ಜನಸಂಖ್ಯೆಯು ೧,೮೬,೫೫,೦೦೦. ಕಳೆದ ಹತ್ತುವರ್ಷದಲ್ಲಿ ಈ ಪ್ರಾಂತ್ಯದ ಜನಸಂಖ್ಯೆ ಶೇಕಡ ೧೩.೩ ರಷ್ಟು ಹೆಚ್ಚಿದೆ.

ಕಾಶ್ಮೀರದಿಂದ ಸೈನ್ಯವನ್ನು ಹಿಂದಕ್ಕೆಕರೆಸಿಕೊಳ್ಳುವುದಿಲ್ಲವೆಂದು ಪಾಕ್‌ಪ್ರಧಾನಿ

ಕಾಶ್ಮೀರದಲ್ಲಿ ಪಾಕೀಸ್ಥಾನವು ಒಬ್ಬ ಸೈನ್ಯೀಕನನ್ನು ಸಹ ಇಡಲು ಭಾರತವು ಒಪ್ಪುವುದಿಲ್ಲವೆಂದು ಪ್ರಧಾನಿ ನೆಹರೂ ಹೇಳಿದಬಗ್ಗೆ ಪಾಕ್ ಪ್ರಧಾನಿ ನಾಜಿಮುದ್ದೀನರವರು ಕರಾಚಿಯಲ್ಲಿ ಮಾತನಾಡುತ್ತಾ, ಕಾಶ್ಮೀರದಿಂದ ಪಾಕೀಸ್ಥಾನ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳುವುದಿಲ್ಲವೆಂದು ಹೇಳಿದ್ದಾರೆ.

ದೇಶದಲ್ಲಿ ವಿದ್ಯುಚ್ಛಕ್ತಿ ಪ್ರಗತಿ

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ವಿಸ್ತರಣೆ ಯೋಜನೆಕಾರ್ಯಕ್ರಮಗಳು ಅತಿತೀವ್ರವಾಗಿ ನಡೆಯುತ್ತಲಿವೆ.

ಆಗಸ್ಟ್‌ಮಾಹೆಯಲ್ಲಿ ೧೧ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಹೊಸದಾಗಿ ಕೊಟ್ಟಿರುವುದಲ್ಲದೆ ೩೦೭ ಬೀದಿ ದೀಪಗಳನ್ನು ಹಾಕಿರುವರು ಅಲ್ಲದೆ ವ್ಯವಸಾಯಕ್ಕಾಗಿ ೮೬ ವಿದ್ಯುಚ್ಛಕ್ತಿ ಪಂಪುಗಳನ್ನು ಸಹ ಹಾಕಿರುತ್ತಾರೆ.

ಆಗಸ್ಟು ಕೊನೆಯವರಿಗೆ ದೇಶಾದ್ಯಂತ ೫೩೮ ಗ್ರಾಮಗಳು ವಿದ್ಯುಚ್ಛಕ್ತಿ ಸೌಕರ್ಯವನ್ನು ಹೊಂದಿವೆ. ೩೮೯೩೩ ಬೀದಿ ದೀಪಗಳು, ೩,೭೭೩ ವ್ಯವಸಾಯ ಪಂಪುಗಳು ೧,೦೯,೦೮೯ ಮನೆಗಳಿಗೆ ದೀಪ, ಅಡಿಗೆ ಮುಂತಾದುವಕ್ಕೆ ೬೪೦೬, ಕೈಗಾರಿಕೋದ್ಯಮಕ್ಕೆ ೭೧೯೬, ೧೯೮ ಸಿನಿಮಾಗಳಿಗೆ ವಿದ್ಯುಚ್ಛಕ್ತಿಯನ್ನು ಸರ್ಕಾರದವರು ಸರಬರಾಜು ಮಾಡುತ್ತಲಿರುವರು.

ಆಟದ ನಾಯಿಯ ಹೊಟ್ಟೆಯಲ್ಲಿ ೪೦೦೦ ರೂ ಆಭರಣ

ಪಶ್ಚಿಮ ಬಂಗಾಳದಿಂದ ರೈಲಿನ ಒಂದನೇ ತರಗತಿಯಲ್ಲಿ ಪ್ರಯಾಣಮಾಡುತ್ತಲಿದ್ದ ಒಬ್ಬ ಮುಸ್ಲಿಂ ಪ್ರಯಾಣಿಕನ ಬಳಿಯಲ್ಲಿ ಆಟದ ನಾಯಿಯ ಹೊಟ್ಟೆಯಲ್ಲಿ ೪ ಸಾವಿರ ರೂಪಾಯಿಗಳ ಆಭರಣವಿದ್ದುದನ್ನು ಸುಂಕದ ಅಧಿಕಾರಿಗಳು ಪತ್ತೆಹಚ್ಚಿ ಅದನ್ನು ವಶಪಡಿಸಿಕೊಂಡಿದ್ದಾರೆ

೧೩೦೦೦ ಪಾಕ್ ಸೈನ್ಯೀಕರಿಗೆ ಭಾರತ ತಾರತ್ವ

ಚಿಟ್ಟಗಾಂಗ್ ಮತ್ತು ಪೂರ್ವ ಬಂಗಾಳದಲ್ಲಿರುವ ೧೩೦೦೦ ಪಾಕೀಸ್ತಾನ ಸೈನೀಕರು ಭಾರತ ಪೌರತ್ವವನ್ನು ಕೇಳುತ್ತಿರುವುದು ಪಾಕೀಸ್ತಾನ ಸರ್ಕಾರಕ್ಕೆ ತಲೆನೋವನ್ನುಂಟುಮಾಡಿರುವುದಾಗಿ ಗೊತ್ತಾಗಿದೆ.

ಭೂದಾನ ವಾರ

ಇದೇ ಮಾಹೆ ೨೭ ನೇ ತಾರೀಖಿನಿಂದ ಹೈದರಾಬಾದಿನಲ್ಲಿ ಭೂದಾನವಾರವನ್ನು ಆಚರಿಸಲು ಪ್ರಾಂತೀಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ. ಈ ವಾರದಲ್ಲಿ ಕಾಂಗ್ರೆಸ್ ಕೆಲಸಗಾರರು ಎಲ್ಲಾ ಗ್ರಾಮಗಳಿಗೂ ಭೇಟಿಯಿತ್ತು ಭೂಮಿಯನ್ನು ಸಂಗ್ರಹಿಸುವರು.

ಭೂದಾನಯಜ್ಞ ಚಳುವಳಿ

ಆಚಾರ್ಯ ವಿನೋಬಭಾವೆಯವರ ಭೂದಾನಯಜ್ಞ ಚಳುವಳಿಯ ಪರಿಣಾಮವಾಗಿ ಹೈದರಾಬಾದಿನಲ್ಲಿ ೩೦೦೦೦ ಎಕರೆ, ಬೀಹಾರಿನಲ್ಲಿ ೭೮೦೦ ಎಕರೆ ಜಮೀನನ್ನು ದಾನವಾಗಿ ಜನರು ಕೊಟ್ಟಿರುವರು ಜಮೀನಿಲ್ಲದವರಿಗೆ ಈ ಭೂಮಿಯನ್ನು ಹಂಚಲಾಗುತ್ತದೆ.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ರಣಜಿತ್
10-9-52 ರಿಂದ
ಪ್ರತಿದಿನ ೩ ಆಟಗಳು
ಫಾಲ್ ಆಫ್-ಬರ್ಲಿನ್ [ಹಿಂದಿ]

ಅಪೇರ ೯-೧೦-೫೨ ರಿಂದ ೩ನೇವಾರ
ಕಲ್ಯಾಣಂ-ಪಣ್ಣಿಪಾರ್
[ತ ಮಿ ಳು]
ಪಾತ್ರ:—ವರಲಕ್ಷ್ಮಿ, ಸಾವಿತ್ರಿ
ಎ. ಟಿ. ರಾಮರಾವ್

ವುಡ್‌ಲಾಂಡ್ಸ್
ದುಪ್ಪಟ
ತಾರೀಖು 3-10-52 ರಿಂದ
ಅಮೋಘ ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನ
ಪಾತ್ರ—ನೂರ್‌ಜಹಾನ್, ಆಜಯಕುಮಾರ್, ಗುಲಾಮ್ ಮಹಮುದ್

ಅಂದವಾದ ಮುದ್ರಣಕ್ಕೆ
ಕರ್ನಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ವಿ. ಆರ್. ಅಂಡ್ ಬ್ರದರ್ಸ್ …)
For
NEAT AND PROMPT PRINTING
Contact:
CARNATAK PRINTERS
GANDHI SQUARE, MYSORE
Phone 892 or …

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 41

೧೦-೧೦-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕಾಶ್ಮೀರವು ಭಾರತದಿಂದ ದೂರವಾಗುತ್ತಿದೆ

ಷೇಕ್‌ಅಬ್ದುಲ್ಲಾ ಸರ್ಕಾರದ ಸನ್ನಾಹ

ಪ್ರಜಾಪರಿಷತ್ ನಾಯಕರ ಟೀಕೆ

ಮೈಸೂರು ೧೦

ಕಾಶ್ಮೀರ ಮತ್ತು ಜಮ್ಮು ಪ್ರಜಾಪರಿಷತ್ತಿನ ಅಧ್ಯಕ್ಷರಾದ ಪಂಡಿತ ಪ್ರೇಮನಾಥ್‌ಡೋಗ್ರಾರವರು ನಿನ್ನೆ ಸಂಜೆ ಟೌನ್‌ಹಾಲಿನ ಮೈದಾನದಲ್ಲಿ ಭಾಷಣಮಾಡಿ, ಷೇಕ್‌ಅಬ್ದುಲ್ಲಾ ಸರ್ಕಾರದವರು ಕಾಶ್ಮೀರ ಮತ್ತು ಜಮ್ಮುವನ್ನು ಪ್ರತ್ಯೇಕ ಸ್ವತಂತ್ರ ದೇಶವನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆಂದೂ.ಅದನ್ನು ತಡೆಗಟ್ಟಿ ಕಾಶ್ಮೀರವು ಭಾರತದಲ್ಲಿ ಸಂಪೂರ್ಣವಾಗಿ ಐಕ್ಯವಾಗಲು ಪ್ರಜಾಪರಿಷತ್ತು ಚಳುವಳಿ ಆರಂಭಿಸಿದೆಯೆಂದೂ ತಿಳಿಸಿದರು.

ಡಾ॥ ಬಿ. ಜಿ. ದಾಸ್‌ರವರು ಅಧ್ಯಕ್ಷತೆ ವಹಿಸಿದ್ದರು.

ಪ್ರಜಾಪರಿಷತ್ತಿನ ಕಾರ್ಯದರ್ಶಿಗಳಾದ ಶ್ರೀ ದುರ್ಗಾದಾಸ್‌ರವರು ಮೊದಲು ಭಾಷಣಮಾಡಿ, ಷೇಕ್‌ಅಬ್ದುಲ್ಲಾರವರ ಸುಳ್ಳು ಅಪಪ್ರಚಾರಕ್ಕೆ ಭಾರತದ ಜನರು ಮನಗೊಳ್ಳದೆ, ಕಾಶ್ಮೀರವನ್ನು ಭಾರತದೊಳಗೆ ಸೇರಿಸಲು ಸಹಾಯ ಮತ್ತು ಸಹಾನುಭೂತಿಯನ್ನು ನೀಡಬೇಕೆಂದು ಪ್ರಾರ್ಥಿಸಿದರು.

ಪಂಡಿತ ಪ್ರೇಮನಾಥ್ ಡೋಗ್ರಾರವರು ಭಾಷಣಮಾಡಿ, ೧೯೪೬ ರಲ್ಲಿ ರಚಿಸಲ್ಪಟ್ಟ ಪ್ರಜಾಪರಿಷತ್ತಿನ ಧ್ಯೇಯಗಳನ್ನು ವಿವರಿಸಿದರು ಕಾಶ್ಮೀರ ಮತ್ತು ಜಮ್ಮುವಿನಮೇಲೆ ಪಾಕೀಸ್ಥಾನವು ನಡೆಸಿದ ಧಾಳಿಯಲ್ಲಿ ಜಮ್ಮುಜನರುವಿಶೇಷ ಕಷ್ಟಗೀಡಾದಾಗ ಪ್ರಜಾಪರಿಷತ್ತಿನವರು ಅವರಿಗೆ ನೆರವು ನೀಡಿದರು ಮತ್ತು ಷೇಕ್‌ಅಬ್ದುಲ್ಲಾ ಸರ್ಕಾರಕ್ಕೂ ಸಹ ಶತ್ರುವನ್ನು ಓಡಿಸಲು ಸಹಕಾರ ಕೊಟ್ಟರು ಆದರೆ ಪ್ರಜಾಪರಿಷತ್ತಿನ ಚಟುವಟಿಕೆಗಳನ್ನು ಸಹಿಸಲಾರದೆ ಷೇಕ್‌ಅಬ್ದುಲ್ಲಾರವರು ಅದರ ನಾಯಕರುಗಳಿಗೆ ಇಲ್ಲದ ಸಲ್ಲದ ಕಷ್ಟಗಳನ್ನು ಕೊಟ್ಟು ಅನೇಕರನ್ನು ದಸ್ತಗಿರಿಮಾಡಿ ಜೈಲಿನಲ್ಲಿ ಇಟ್ಟರು ತಮ್ಮನ್ನೂ ಸಹ ಎಂಟೂವರೆ ತಿಂಗಳಕಾಲ ಕಾರಾಗೃಹದಲ್ಲಿಟ್ಟರು.

ಕಾಶ್ಮೀರವನ್ನು ಭಾರತದೊಳಗೆ ಐಕ್ಯಮಾಡುವುದಾಗಿ ಜನರಿಗೆ ಭರವಸೆ ಇತ್ತು. ಅಧಿಕಾರಕ್ಕೆ ಬಂದನೇಲೆ ಷೇಕ್ ಅಬ್ದುಲ್ಲಾರವರು ಅದನ್ನು ಮರೆತು ಭಾರತದಿಂದ ದೂರವಾಗಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಭರವಸೆಯನ್ನು ಕಾಶ್ಮೀರದಲ್ಲಿ ರಾಜ್ಯಾಂಗ ಸಭೆಯನ್ನು ರಚಿಸುವಾಗ ಕೊಟ್ಟಿದ್ದರು. ಆದರೆ ಕೊನೆಯಲ್ಲಿ ಪ್ರತ್ಯೇಕ ರಾಜ್ಯಾಂಗ ಧ್ವಜ ಇವೇ ಮುಂತಾದ ಪ್ರತ್ಯೇಕ ಹಕ್ಕುಗಳನ್ನು ಕಾಶ್ಮೀರಕ್ಕೆ ಇರಬೇಕೆಂದು ಘೋಷಿಸಿ ಜನರ ಮನಸ್ಸನ್ನು ಕೆಡಿಸಿದರು. ಆದರೆ ಅದನ್ನು ಪ್ರಜಾಪರಿಷತ್ತು ತೀವ್ರವಾಗಿ ವಿರೋಧಿಸಿ ಚಳುವಳಿ ಆರಂಭಿಸಿದೆ.

ಪ್ರಜಾಪರಿಷತ್ತು ಕೋಮುವಾರು ಭಾವನೆಯಿಂದ ಕೂಡಿದ್ದು ಮತ್ತು ಜಮೀನುದಾರರ ಕೈಗೊಂಬೆ ಎಂಬುದು ಷೇಕ್ ಅಬ್ದುಲ್ಲಾರವರ ಸುಳ್ಳುಪ್ರಚಾರ ಅದರಲ್ಲಿ ಸಾವಿರಾರುಮಂದಿ ಮುಸ್ಲಿಂ ಮತ್ತು ಇತರ ಕೋಮಿನವರು ಇದ್ದಾರೆ. ಜಮೀನುದಾರರಿಂದ ಭೂಮಿಗಳನ್ನು ತೆಗೆದುಕೊಂಡು ರೈತರಿಗೆ ಕೊಡಬೇಕೆಂಬುದೇ ಪ್ರಜಾಪರಿಷತ್ತಿನ ಧ್ಯೇಯ ಆದರೆ ಜಮೀನುದಾರರಿಗೆ ಪರಿಹಾರ ಕೊಡಬೇಕು.

ಷೇಕ್ ಅಬ್ದುಲ್ಲಾರವರಿಗೆ ಕಾಶ್ಮೀರದ ಜನರ ಸಂಪೂರ್ಣ ಬೆಂಬಲವಿದೆ ಎಂಬುದು ನಿಜಕ್ಕೆ ದೂರವಾದುದು. ಕಾಶ್ಮೀರಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ, ಸಾವಿರಾರುಜನರನ್ನು ಕಳೆದುಕೊಂಡು ಷೇಕ್ ಅಬ್ದುಲ್ಲಾರವರನ್ನು ಅಧಿಕಾರಕ್ಕೇರಿಸಿ ಕಾಶ್ಮೀರವನ್ನು ಪ್ರತ್ಯೇಕ ದೇಶವನ್ನಾಗಿ ಮಾಡುವುದಕ್ಕಾಗಿ ಭಾರತವು ಇಷ್ಟು ಕಷ್ಟಪಡುತ್ತಿಲ್ಲ. ಅಲ್ಲಿನ ಜನರು ಭಾರತದ ಜನರಂತೆ ಸ್ವತಂತ್ರವಾಗಿ ಭಾರತದೊಡನೆ ಸೇರಿ ಸುಖವಾಗಿರಬೇಕೆಂದು. ಅದನ್ನುಶೇಕ್ ಅಬ್ದುಲ್ಲಾರವರು ನಡೆಸುತ್ತಿಲ್ಲ.

ಆದ್ದರಿಂದ ಕಾಶ್ಮೀರವು ಸಂಪೂರ್ಣವಾಗಿ ಭಾರತದೊಡನೆ ಐಕ್ಯವಾಗಲು ಪ್ರಜಾಪರಿಷತ್ತಿನ ಚಳುವಳಿಗೆ ಭಾರತದ ಜನರು ಸಹಕಾರ ನೀಡಬೇಕು–ಎಂದು ಶ್ರೀ ಡೋಗ್ರಾರವರು ಕೋರಿದರು.

ಸಂಸ್ಥಾನದಲ್ಲಿ ಧಾನ್ಯ ವಸೂಲಿ ಬಗ್ಗೆ ಹೊಸನೀತಿ

ಬೆಂಗಳೂರು, ೮೯

ತಮಗಾಗಿ ಮಿಗುವಷ್ಟು ಧಾನ್ಯ ಬೆಳೆಯುವವರು ಇಲ್ಲಿಯವರೆಗೆ ಸರ್ಕಾರಕ್ಕೆ ಕೊಡುತ್ತಿದ್ದ ೫ ವರ್ಷದ ಸರಾಸರಿ ಲೆಕ್ಕವನ್ನು ತೆಗೆದುಕೊಂಡು ಅದರಲ್ಲಿ ಶೇಕಡ ೭೫ರಷ್ಟನ್ನು ಕೊಡಬೇಕು ಆದರೆ ೨೫ಸೇರಿಗಿಂತ ಕಡಿಮೆ ಪ್ರಮಾಣದಲ್ಲಿ ಭತ್ತ,೨೦ ಸೇರಿಗಿಂತ ಕಡಿಮೆಪ್ರಮಾಣದಲ್ಲಿ ರಾಗಿ ಕೊಡುತ್ತಿದ್ದ ಹಿಡುವಳಿದಾರರು ಇನ್ನುಮುಂದೆ ಏನನ್ನೂ ಕೊಡಬೇಕಾಗಿಲ್ಲ ಎಂಬುದಾಗಿ ಧಾನ್ಯ ವಸೂಲಿ ಕ್ರಮದ ಬಗ್ಗೆ ಸಲಹೆ ನೀಡಲು ಶಾಸನಸಭೆಯ ಕಾಂಗ್ರೆಸ್‌ಪಕ್ಷರಚಿಸಿದ್ದ ಉಪಸಮಿತಿಯು ಶಿಫಾರಸುಮಾಡಿರುವುದಾಗಿ ಗೊತ್ತಾಗಿದೆ.

ಕಳೆದತಿಂಗಳು ೧೬ನೇ ತಾರೀಖು ಶಾಸನಸಭೆಯ ಕಾಂಗ್ರೆಸ್‌ಪಕ್ಷವು ಸಭೆಸೇರಿ ಹೊಸ ನೀತಿಯನ್ನು ನಿರ್ಧರಿಸಲು ಶ್ರೀಗಳಾದ ಕಡಿದಾಳ್ ಮಂಜಪ್ಪ, ಹೆಚ್. ಎಸ್. ರುದ್ರಪ್ಪ, ಟಿ. ಮರಿಯಪ್ಪ,ಹುಚ್ಚಮಾಸ್ತಿಗೌಡ ಮತ್ತು ಎ. ವೆಂಕಟಪ್ಪನವರನ್ನೊಳಗೊಂಡ ಉಪಸಮಿತಿಯನ್ನು ನೇಮಿಸಿತ್ತು.

ಮೈಸೂರಿನಲ್ಲಿ ಕಚ್ಚಾಫಿಲಂ ತಯಾರಿಕೆ

ಮೈಸೂರು ಸಂಸ್ಥಾನದಲ್ಲಿ ೨ ಕೋಟಿ ರೂ. ಖರ್ಚಿನಿಂದ ಕಚ್ಚಾಫಿಲಂ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಲು ಮೈಸೂರು ಸರ್ಕಾರದವರು ನಿರ್ಧರಿಸಿದ್ದಾರೆಂದೂ, ಅದಕ್ಕೆ ಕೇಂದ್ರ, ಮತ್ತು ಖಾಸಗಿಯವರ ಸಹಾಯ ಪಡೆಯಲಾಗುವುದೆಂದೂ ತಿಳಿದುಬಂದಿದೆ.

ಇರಾನಿನ ಎಣ್ಣೆವಿವಾದಕ್ಕೆ ಹೊಸ ಸೂಚನೆ

ಇರಾನ್ ಮತ್ತು ಬ್ರಿಟನ್ ಎಣ್ಣೆವಿವಾದ ಸಂಬಂಧದಲ್ಲಿ ಕೂಡಲೇ ೨೦೦ ಲಕ್ಷ ಪೌಂಡುಗಳನ್ನು ಬ್ರಿಟನ್ನು ಕೊಟ್ಟು ಉಳಿದ ೨೯೦ ಲಕ್ಷ ಪೌಂಡುಗಳನ್ನು ಮಾತುಕತೆಗಳು ಮುಗಿದನಂತರ ಕೊಡಬೇಕೆಂದು, ಅದಕ್ಕಾಗಿ ಸಂಧಾನ ನಡೆಸಲು ಬ್ರಿಟನ್ನು ತಮ್ಮ ಸಲಹೆಗಾರರನ್ನು ಕಳುಹಿಸಬೇಕೆಂದೂ ಇರಾನು ಸೂಚನೆ ಕೊಟ್ಟಿದೆ.

ಆತುರಾತುರದಿಂದ ಆಂಧ್ರಪ್ರಾಂತ್ಯ ರಚಿಸಲು ಸರ್ಕಾರ ಸಿದ್ಧವಿಲ್ಲ

ಆಂಧ್ರಪ್ರಾಂತ್ಯ ರಚನೆಗಾಗಿ ಸಂಬಂಧಪಟ್ಟವರೆಲ್ಲಾ ನಿರ್ದಿಷ್ಟವಾದತೀರ್ಮಾನಕ್ಕೆ ಏಕೀಭಾವದಿಂದ ಬಂದು ಸರ್ಕಾರಕ್ಕೆ ಮಂಡಿಸಿದರೆ ತಡಮಾಡದೆ ಆಂಧ್ರಪ್ರಾಂತ್ಯ ರಚನೆಮಾಡಬಹುದು ಕೆಲವರನ್ನು ಸಂತೃಪ್ತಿಗೊಳಿಸಲೋಸುಗವಾಗಿ ಆತುರಾತುರದಿಂದ ಸರ್ಕಾರವು ಯಾವ ತೀರ್ಮಾನವನ್ನು ಕೈಗೊಳ್ಳಲು ಸಾಧ್ಯವಿಲ್ಲವೆಂದು ಪ್ರಧಾನಿ ನೆಹರೂರವರು ಮದ್ರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತಾ ಹೇಳಿರುವರು

ಸೋಷಲಿಸ್ಟ್ ಪಕ್ಷಕ್ಕೆ ೨೫ ಸದಸ್ಯರ ರಾಜೀನಾಮೆ

ಸೋಷಲಿಸ್ಟ್ ಮತ್ತು ಕೆ. ಎಂ. ಪಿ. ಪಕ್ಷಗಳಿಗೆ ಇತ್ತೀಚೆಗೆ ವಿಲಿನೀಕರಣವು ಕಾರ್ಮಿಕ ಮತ್ತು ರೈತ ವರ್ಗದ ಕ್ರಾಂತಿ ಪರಿಶೀಲನೆಗೆ ವಿರೋಧವಾಗಿದೆಯೆಂದು ಮೈಸೂರು ಸೋಷಲಿಸ್ಟ್ ಪಕ್ಷದ ೨೫ ಜನ ಜನ ಸದಸ್ಯರು ತಮ್ಮ ಪಕ್ಷಕ್ಕೆ ರಾಜೀನಾಮೆಯನ್ನಿತ್ತಿದ್ದಾರೆ.

ಅಮೆರಿಕಾಕ್ಕೆ ರಷ್ಯದ ಎಚ್ಚರಿಕೆ

ಶಾಂತಿ ಮತ್ತು ಪ್ರಜಾಪ್ರಭುತ್ವ ತತ್ವಗಳಿಗಾಗಿ ದುಡಿಯುತ್ತಿರುವ ರಷ್ಯದಮೇಲೆ ಅಮೆರಿಕ ಯುದ್ಧವನ್ನೇನಾದರೂ ಹೂಡಿದರೆ ಅದನ್ನೂ ಸದೆಬಡಿಯಲಾಗುವುದೆಂದು ರಷ್ಯದ ಕಮ್ಯೂನಿಸ್ಟ್‌ಪಕ್ಷದ ಸಮ್ಮೇಳನದಲ್ಲಿ ಅದರ ದಂಡನಾಯಕ ಬುಲ್ಗಾನಿನ್‌ರವರು ಎಚ್ಚರಿಕೆ ಇತ್ತಿದ್ದಾರೆ.

ಅಮೆರಿಕ-ಫ್ರಾನ್ಸ್ ಬಾಂಧವ್ಯ ಕೆಡುವುದೇ ?

ಟ್ಯೂನಿಸಿಯಾ ವಿಚಾರದಲ್ಲಿ ಕೈಹಾಕಬಾರದೆಂದು ವಿಶ್ವ… ಗೆ ಫ್ರಾನ್ಸ್ ಕೊಟ್ಟಿರುವ ಎಚ್ಚರಿಕೆಯಿಂದ ಫ್ರಾನ್ಸ್ ಮತ್ತು ಅಮೆರಿಕಗಳ ಬಾಂಧವ್ಯದಲ್ಲಿ ಉತ್ಕಟ ಪರಿಸ್ಥಿತಿ ಉಂಟಾಗಬಹುದೆಂದು ಹೇಳಲಾಗಿದೆ.

ರಾಜ್ಯಾಂಗ, ನ್ಯಾಯಾಂಗ ಮತ್ತು ಮಾನವನೀತಿ ದೃಷ್ಟಿಯಿಂದ ಕಾಶ್ಮೀರ ಬಗ್ಗೆ ಭಾರತ ನೀತಿ ನ್ಯಾಯವಾಗಿದೆ

ಭಾರತದಲ್ಲಿರುವ ವಿದೇಶೀ ಸೌಸ್ಥ್ಯಗಳೆಲ್ಲಾ ಭಾರತಕ್ಕೆ ಸೇರಿವೆ

ಬಹಿರಂಗ ಸಭೆಯಲ್ಲಿ ಪ್ರಧಾನಿ ಭಾಷಣ

ರಾಜ್ಯಾಂಗ, ನ್ಯಾಯಾಂಗ ಮತ್ತು ಮಾನವನೀತಿ ದೃಷ್ಟಿಯಿಂದ ಕಾಶ್ಮೀರ ಬಗ್ಗೆ ಭಾರತವು ಅನುಸರಿಸುತ್ತಲಿರುವ ನೀತಿಯು ನ್ಯಾಯವಾಗಿದೆ. ಆ ನೀತಿಯನ್ನು ನಾವು ಬದಲಾಯಿಸುವಂತೆಯೇ ಇಲ್ಲವೆಂದು ಪ್ರಧಾನಿ ನೆಹರೂರವರು ನಿನ್ನೆಯದಿನ ಮದ್ರಾಸಿನಲ್ಲಿ ಬಹಿರಂಗಸಭೆಯಲ್ಲಿ ಮಾತನಾಡುತ್ತಾ ಹೇಳಿದರು.

ಹಲವಾರು ವರ್ಷಗಳಿಂದ ಭಾರತದಲ್ಲಿ ವಿದೇಶೀ ಸ್ವಾಸ್ಥ್ಯಗಳಿವೆ. ವಿದೇಶೀಯವರಿಗೆ ಭಾರತದಲ್ಲಿ ಸ್ಥಾನವಿಲ್ಲದಿರುವುದಕ್ಕಾಗಿಯೇ ಕಾಂಗ್ರೆಸ್ ಹೋರಾಡಿದೆ ಸ್ವಾತಂತ್ರಗಳಿಸಿಯೂ ಆಯಿತು ಈಗ ಪಾಂಡುಚರಿ ಮುಂತಾದೆಡೆ ಇರುವ ವಿದೇಶೀ ಸ್ವಾಸ್ಥ್ಯಗಳು ಭಾರತಕ್ಕೆ ಸೇರಲೇಬೇಕೇ ವಿನಹ ವಿದೇಶೀಯರಿಗಿಲ್ಲ ಇದರ ಬಗ್ಗೆ ಬಿನ್ನಾಭಿಪ್ರಾಯವೇನೂ ಇಲ್ಲ. ಇದು ಚರ್ಚಿಸುವ ವಿಷಯವಲ್ಲ. ಅದನ್ನು ಭಾರತಕ್ಕೆ ಸೇರಿಸಿ ಕೊಳ್ಳಲು ತಡಮಾಡುವಂತೆಯೇ ಇಲ್ಲ ಇದರ ಬಗ್ಗೆ ಜನಾಭಿಪ್ರಾಯಪಡೆಯುವ ಪ್ರಶ್ನೆಯೇ ಇಲ್ಲವೆಂದು ಪ್ರಧಾನಿ ಹೇಳಿದರು.

ಈಚೆಗೆ ಭಾರತೀಯರಮೇಲೆ ಪುದುಚೇರಿಯ ಕಡೆಯಿಂದ ಧಾಳಿ ನಡೆಯುತ್ತಿದೆ. ಇದನ್ನು ಭಾರತವು ಸಹಿಲಾಸರದು.

ಅಲ್ಲಿ ಪುಂಡರ ಕಾಟ ಹೆಚ್ಚಾಗಿದೆ. ಅಲ್ಲಿಯ ಅಧಿಕಾರಿಗಳು ಅವರನ್ನು ತಡೆಗಟ್ಟದೆ ಸುಮ್ಮನಿರುವುದು ಆಶ್ಚರ್ಯವೆಂದು ಅವರು ಹೇಳಿದರು.

ದೇಶದ ಆರ್ಥಿಕ ವಿಷಯಯವಾಗಿ ಮಾತನಾಡುತ್ತಾ ಸರ್ಕಾರದ ಒಂದು ಆಜ್ಞೆಯಿಂದ ದೇಶದ ಆರ್ಥಿಕಸ್ಥಿತಿ ಉತ್ತಮಗೊಳ್ಳಲಾರದು. ಜನತೆಯು ಕಷ್ಟಪಟ್ಟು ದುಡಿದರೆ ಮಾತ್ರ ಸಾಧ್ಯ. ಈಗ ಸರ್ಕಾರದವರು ಕೈಗೊಂಡಿರುವ ಜನಪದ ಯೋಜನೆಯಲ್ಲಿ ಸುಮಾರು ಒಂದೂವರೆ ಲಕ್ಷ ಗ್ರಾಮಗಳಲ್ಲಿ ೫೦೦ ಕೈಗಾರಿಕೆಗಳನ್ನು ಸ್ಥಾಪಿಸಲಾಗುತ್ತದೆ ಜನರೆಲ್ಲರೂ ಇದಕ್ಕೆ ತಮ್ಮ ನೆರವು ನೀಡಬೇಕೆಂದು ನೆಹರೂ ಹೇಳಿದರು

ರಾಯಲುಸೀಮೆ ಮತ್ತು ಮೈಸೂರು ಮತ್ತಿತರ ಅಭಾವ ಪರಿಸ್ಥಿತಿಯ ವಿಷಯವಾಗಿ ಪ್ರಧಾನಿ ಪ್ರಸ್ತಾಪಿಸಿ, ಈ ಭಾಗಗಳಲ್ಲಿ ಪರಿಸ್ಥಿತಿ ಉತ್ಕಟವಾಗಿದೆ. ಇಲ್ಲಿಗೆ ಎಲ್ಲಾರೀತಿಯ ನೆರವು ಅತ್ಯಗತ್ಯವೆಂದು ಮನಗೊಳ್ಳಲಾಗಿದೆ. ಇದರಬಗ್ಗೆ ನೂರಾರು ಬೇಡಿಕೆಗಳು ಬಂದಿವೆ. ಬರೀ ಬೇಡಿಕೆಗಳಿಂದ ಪ್ರಯೋಜನವೇನೂ ಇಲ್ಲ. ಜನರೆಲ್ಲರೂ ತಾಳ್ಮೆಯಿಂದ ಶ್ರಮಿಸಿದರೆ ಮಾತ್ರ ಪರಿಸ್ಥಿತಿಯನ್ನು ಹತೋಟಿಗೆ ತರಬಹುದೆಂದು ಪ್ರಧಾನಿ ನುಡಿದರು.

ನೆಹರೂ-ರಾಜಾಜಿ ಭೇಟಿ

ಪ್ರಧಾನಿ ನೆಹರೂರವರು ನಿನ್ನೆಯದಿನ ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರೊಡನೆ ಎರಡು ಗಂಟೆಕಾಲ ಮಾತುಕತೆ ನಡೆಸಿದರೆಂದು ತಿಳಿಯಬರುತ್ತದೆ. ಈ ಸಮಯದಲ್ಲಿ ಪ್ರಾಂತ್ಯದ ಇತರ ಮಂತ್ರಿಗಳೂ ಹಾಜರಿದ್ದರು. ದೇಶದ ಆಹಾರ ಮತ್ತಿತರ ಪ್ರಶ್ನೆಗಳು ಚರ್ಚಿಸಲಾಯಿತೆಂದು ಹೇಳಲಾಗಿದೆ.

ರೈಲ್ವೆ ಶತಮಾನೋತ್ಸವ

ಭಾರತ ರೈಲ್ವೆಯ ಶತಮಾನೋತ್ಸವವು ಮುಂದಿನವರ್ಷ ಏಪ್ರಿಲ್ ೧೬ ನೇ ತಾರೀಖು ನಡೆಯುತ್ತದೆ. ಈ ಸಂದರ್ಭದಲ್ಲಿ ಭಾರತ ರೈಲ್ವೆ ಶಾಖೆಯ ಪ್ರದರ್ಶನವನ್ನು ಏರ್ಪಡಿಸಿರುವರು. ಪ್ರದರ್ಶನವು ಫೆಬ್ರವರಿ ೨೮ನೇ ತಾರೀಖಿನಿಂದ ಏಪ್ರಿಲ್ ೧೬ರವರೆಗೆ ನಡೆಯುತ್ತದೆ.

೩೫ ಸಾವಿರ ಕಾರ್ಮಿಕರ ಮುಷ್ಕರ

ಒಳಪ್ರದೇಶದ ಜಲಮಾರ್ಗದ ಕೆಲಸಗಾರರು ಸುಮಾರು ೩೫ ಸಾವಿರಮಂದಿ ಕಲ್ಕತ್ತಾದಲ್ಲಿ ಮುಷ್ಕರವನ್ನು ಹೂಡಿದುದರ ಫಲವಾಗಿ ಬಂಗಾಳ, ಬಿಹಾರ್, ಅಸ್ಸಾಂ ಮತ್ತು ಉತ್ತರಪ್ರದೇಶದ ಜಲಮಾರ್ಗಗಳ ಸಂಚಾರಕಾರ್ಯವು ಪೂರ್ಣವಾಗಿ ನಿಂತುಹೋಗಿದೆ.

ಈ ಮುಷ್ಕರಗಾರರ ಜೊತೆಗೆ ಪೂರ್ವ ಪಾಕೀಸ್ತಾನದ ನದಿಮಾರ್ಗಗಳ ೫ ಸಾವಿರಮಂದಿ ಕೆಲಸಗಾರರೂ ಸೇರಿಕೊಳ್ಳುವ ಸಂಭವವಿದೆಯೆಂದು ಹೇಳಲಾಗಿದೆ.

ಹೂಗ್ಲಿ ನದಿಯಲ್ಲಿ ಸಾಮಾನುತುಂಬಿದ ಅನೇಕ ಹಡಗುಗಳ ಪ್ರವಾಸ ನಿಂತು ಹೋಗಿದೆ. ಸಂಬಳ, ತುಟ್ಟಿಭತ್ಯ ಹೆಚ್ಚಿಸಿ ಹಡಗಿನ ಕೆಲಸಗಾರರ ಜೀವನ ಮಟ್ಟವನ್ನು ಸುಧಾರಿಸಬೇಕೆಂಬುದೇ ಮುಷ್ಕರ ಕಾರಣ ಬೇಡಿಕೆ

ವಿದ್ಯಾರ್ಥಿಗಳು ರಾಜಕೀಯಕ್ಕೆ ಪ್ರವೇಶಿಸಿದರೆ ಕಾರಾಗೃಹ ಶಿಕ್ಷೆ

ವಿದ್ಯಾರ್ಥಿಗಳು ಯಾವ ರಾಜಕೀಯ ಪಕ್ಷಗಳಲ್ಲಿಯಾಗಲೀ ಅಥವ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಕೂಡದೆಂದು ಈಜಿಪ್ಟಿನಲ್ಲಿ ಸರ್ಕಾರಿ ಶಾಸನವನ್ನು ಮಾಡಲಾಗಿದೆ.

ವಿಶ್ವವಿದ್ಯಾನಿಲಯಗಳ ಅಧಿಕಾರಿಗಳು, ವಿದ್ಯಾಸಚಿವರು ಸಭೆ ನಡೆಸಿ ವಿದ್ಯಾರ್ಥಿಗಳಿಗೆ ಬಹಿಷ್ಕಾರ ಹಾಕುವ ಈ ಶಾಸನವನ್ನು ಮಾಡಲಾಗಿದೆ. ಈ ಶಾಸನವನ್ನು ಉಲ್ಲಂಘಿಸಿದವರಿಗೆ ೩೦ ರಿಂದ ೫೦ ಪೌಂಡುಗಳ ಮತ್ತು ೬ ತಿಂಗಳ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲಾಗುತ್ತದೆ.

ಈ ಶಾಸನ ಪ್ರಕಾರ ವಿದ್ಯಾರ್ಥಿಗಳು ಸಭೆ, ಪ್ರದರ್ಶನಗಳನ್ನು ಸಹ ನಡೆಸುವಂತಿಲ್ಲ.

ರೈಲಿನ ದುರಂತ

ಲಂಡನ್ನಿನಬಳಿ ನಡೆದ ರೈಲಿನ ದುರಂತದಲ್ಲಿ ಮಡಿದವರ ಸಂಖ್ಯೆಯು ೮೫ ಕ್ಕೆ ಏರಿದೆ. ಗಾಯಗೊಂಡವರ ಸಂಖ್ಯೆಯು ೧೫೦ಕ್ಕೆ ಏರಿದೆ.

ಸುಂಕ ವಿಚಾರಣಾ ಸಮಿತಿ ಪ್ರಶ್ನೆ

ದೆಹಲಿಯಲ್ಲಿ ಮುಂದಿನವಾರ ನಡೆಯಲಿರುವ ಎಲ್ಲಾ ಆರ್ಥಿಕ ಸಚಿವರ ಸಮ್ಮೇಳನದಲ್ಲಿ ಸುಂಕ ವಿಚಾರಣಾ ಸಮಿತಿಯ ಪ್ರಶ್ನೆಯೂ ಬರಲಿದೆಯೆಂದು ಗೊತ್ತಾಗಿದೆ. ಎಲ್ಲಾ ಪ್ರಾಂತ್ಯಗಳಲ್ಲೂ ಒಂದೇ ರೀತಿಯ ಬಡ್ಜೆಟ್ ತಯಾರಿಕೆಯ ವಿಷಯವೂ ಚರ್ಚಿಸಲಾಗುವುದೆಂದು ಹೇಳಲಾಗಿದೆ.

ಸುಧಾ-ವಿಶೇಷ ಸಂಚಿಕೆ

ರಾಜಧಾನಿಯಿಂದ ಶ್ರೀ ಅಶ್ವತ್ಥನಾರಾಯಣರಾಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ "ಸುಧಾ" ಮಾಸಪತ್ರಿಕೆಯ ಬಾಪೂಜಿ ಜನ್ಮೋತ್ಸವದ ವಿಶೇಷ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಕನ್ನಡನಾಡಿನ ಧ್ಯೇಯಸಾಧನೆಗೆ ಸಂಬಂಧಪಟ್ಟ ಅನೇಕ ಉಯುಕ್ತ ಲೇಖನಗಳು ಇವೆ. ಇಂತಹ ಪ್ರಗತಿಶೀಲ ತರಣ ಸುಧಾ ಯಶಸ್ವಿಯಾಗಿ ಬಾಳಲೆಂದು ಹಾರೈಸುತ್ತೇವೆ.

§ ಭಾರತದ ಹರಿಜನರೆಲ್ಲರೂ ಬೌದ್ಧಮತಕ್ಕೆ ಸೇರಬೇಕೆಂದೂ, ಇದರಿಂದ ಅವರ ಸ್ಥಿತಿಗಳು ಉತ್ತಮವಾಗುವುದೆಂದೂ ಅಖಿಲಭಾರತ ನಿಮ್ನವರ್ಗದ ಫೆಡರೇಷನ್ ಕಾರ್ಯದರ್ಶಿ ಶ್ರೀ ಪಿ. ಎನ್. ರಾಜಭೋಜರವರು ಸಲಹೆ ಮಾಡಿರುತ್ತಾರೆ.

ಪ್ರಭಾ 10-10-52 ರಿಂದ
ಪ್ರತಿದಿನ 3 ಪ್ರದರ್ಶನಗಳು
ಜಯಪ್ರದ 3 ನೇ ವಾರ
ಪ್ರತಿಯೊಬ್ಬ ಹೆಂಗಸು ತಪ್ಪದೇ ನೋಡಬೇಕಾದ ಅತ್ಯುತ್ತಮ ಸಾಂಸಾರಿಕ ತೆಲುಗು ಚಿತ್ರ—
- ಸಂಕ್ರಾಂತಿ -
ಬೆಳಗಿನಪ್ರದರ್ಶನ:- ೧೦-೧೦-೫೨ ರಿಂದ ೩ ದಿನಗಳು ಮಾತ್ರ "ಲಾರಲಪ್ಪ" ಪ್ರಖ್ಯಾತಿ ಮೀನ ನಟಿಸಿರುವ
ಏಕ್-ಥಿ-ಲಡ್ಕಿ

ರಣಜಿತ್
10-10 52 ರಿಂದ
ಪ್ರತಿದಿನ ೩ ಆಟಗಳು
ಫಾಲ್ ಆಫ್-ಬರ್ಲಿನ್ [ಹಿಂದಿ]

ಅಪೇರ ೯-೧೦-೫೨ ರಿಂದ ೩ನೇವಾರ
ಕಲ್ಯಾಣಂ-ಪಣ್ಣಿಪಾರ್
[ತಮಿಳು]
ಪಾತ್ರ:— ವರಲಕ್ಷ್ಮಿ, ಸಾವಿತ್ರಿ
ಎನ್. ಟಿ. ರಾಮರಾವ್

—: ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 42

೧೧-೧೦-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ನೇಣಹಾಕಿಕೊಂಡು ಮಹಿಳೆಯ ಆತ್ಮಹತ್ಯ

ರಾಮಚಂದ್ರ ಅಗ್ರಹಾರದಲ್ಲಿ ರಾಜಮಣಿಎಂಬ ೧೯ ವರ್ಷ ಕೂಲಿಕೆಲಸದಿಂದ ಜೀವಿಸುತ್ತಲಿದ್ದ ಮಹಿಳೆಯೋರ್ವಳು ಹೊಟ್ಟೆನೋವು ಭಾಧೆಯನ್ನು ತಡೆಯಲಾರದೆ ನಿನ್ನೆ ಮಧ್ಯಾಹ್ನ ಗಂಡ ಮತ್ತು ತಾಯಿ ಮನೆಯಲ್ಲಿಲ್ಲದ ವೇಳೆಯಲ್ಲಿ ನೇಣುಹಾಕಿಕೊಂಡು ಸತ್ತುಹೋದಳೆಂದು ತಿಳಿಯಬಂದಿದೆ. ಕೃಷ್ಣರಾಜ ಪೊಲೀಸಿನವರು ಶವವನ್ನು ಪೋಸ್ಟ್‌ಮಾರ್ಟಂಗೆ ಕಳುಹಿಸಿ ಮುಂದಿನ ತನಿಖೆನಡೆಸುತ್ತಲಿದ್ದಾರೆ.

ಅಮೆರಿಕಾದಲ್ಲಿ ವಿದೇಶೀ ವಿದ್ಯಾರ್ಥಿಗಳು

ಅಮೆರಿಕಾ ವಿಶ್ವವಿದ್ಯಾನಿಲಯ ಮತ್ತು ಕಾಲೇಜುಗಳಲ್ಲಿ ವಿದೇಶಗಳಿಂದ ಬಂದಿರುವ ೩೦೦೦೦ ಕ್ಕೆ ಮೇಲ್ಪಟ್ಟು ವಿದ್ಯಾರ್ಥಿಗಳು ವಿವಿಧ ಶಿಕ್ಷಣವನ್ನು ಪಡೆಯುತ್ತಲಿದ್ದಾರೆ. ಈ ಸಂಖ್ಯೆಯಲ್ಲಿ ಅರ್ಧದಷ್ಟು ವಿದ್ಯಾರ್ಥಿ ವೇತನ ಪಡೆಯುತ್ತಲಿದ್ದಾರೆ. ಮೂರನೇಒಂದುಭಾಗದಷ್ಟು ಮಹಿಳೆಯರು[illegible].

ಅಮೆರಿಕಾದ ನಾನಾಭಾಗಗಳಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ಇವರು ಶಿಕ್ಷಣ ಪಡೆಯುತ್ತಲಿರುವರು ಆದರೆ ಕ್ಯಾಲಿಫೋರ್ನಿಯೊ, ನ್ಯೂಯಾರ್ಕ್ ಮತ್ತು ಕೊಲಂಬಿಯಾ ವಿಶ್ವವಿದ್ಯಾನಿಲಯಗಳಲ್ಲಿ ಇವರ ಸಂಖ್ಯೆ ಅಧಿಕವಾಗಿದೆ.

ದಕ್ಷಿಣ ಏಷ್ಯ ಮತ್ತು ಹತ್ತಿರ ಪ್ರಾಚ್ಯದ ವಿದ್ಯಾರ್ಥಿಗಳಲ್ಲಿ ಬಹು ಸಂಖ್ಯೆಯು ಇಂಜನಿಯರಿಂಗ್ ಶಾಖೆಯಲ್ಲಿ, ಯೂರೋಪಿನಿಂದ ಬಂದಿರುವ ವಿದ್ಯಾರ್ಥಿಗಳು ವಿಶೇಷವಾಗಿ ಸಮಾಜ ವಿಜ್ಞಾನ ಮುಂತಾದುವಲ್ಲಿ ಶಿಕ್ಷಣ ಪಡೆಯುತ್ತಿರುವರು.

ಬ್ರಿಟಿಷ್ ರಾಣಿಯ ಕಿರೀಟ ಧಾರಣೆ ಮಹೋತ್ಸವ

ಲಂಡನ್ನಿನಲ್ಲಿ ಮುಂದಿನತಿಂಗಳು ನಡೆಯುವ ಬ್ರಿಟಿಷ್ ರಾಣಿ ಎಲಿಜಬೆತ್‌ರ ಕಿರೀಟಧಾರಣೆಯ ಮೆರವಣಿಗೆಯನ್ನು ನೋಡಲು ೨೫೦ ರೂ. ನಿಂದ ೬೫೦ ರೂ. ವರೆಗೆ ಟಿಕೇಟ್ ಹಣ ಕೊಡಬೇಕಾಗಿದೆಯೆಂದೂ, ಅದಕ್ಕಾಗಿ ಈಗಾಗಲೇ ಸ್ಥಾನಗಳನ್ನು ಮೀಸಲಿರಿಸಲು ೪೦ ಸಾವಿರ ಅರ್ಜಿಗಳು ಬಂದಿವೆಯೆಂದೂ ಹೇಳಲಾಗಿದೆ.

ಅಧ್ಯಕ್ಷ ಟ್ರೂಮನ್ನರಿಗೆ ಕೋರ್ಟಿನಿಂದ ಸಮನ್ಸ್

ಅಮೆರಿಕಾ ಅಧ್ಯಕ್ಷ ಟ್ರೂಮನ್ನರು ನಿನ್ನೆಯದಿನ ಕ್ಲೀವಲ್ಯಾಂಡ್ ನಗರಕ್ಕೆ ಚುನಾವಣಾ ಪ್ರಚಾರಕ್ಕಾಗಿ ಆಗಮಿಸಿದಾಗ ಕೋರ್ಟಿನ ಒಂದು ಸಮನ್ಸನ್ನು ಅವರಿಗೆ ಜಾರಿಮಾಡಲಾಯಿತೆಂದು ತಿಳಿಯಬರುತ್ತದೆ. ಕಾಂಗ್ರೆಸ್ಸಿನ ಒಪ್ಪಿಗೆಯನ್ನು ಪಡೆಯದೆ ಅವರು ಅಮೆರಿಕಾವನ್ನು ಕೊರಿಯಾ ಯುದ್ಧಕ್ಕೆ ಎಳೆದರೆಂಬ ಆಪಾದನೆ ಮೇಲೆ ಮಿ॥ ವಿಲಿಯಂ, ಡಬ್ಲ್ಯು. ಕವನಾ ಎಂಬ ಲಾಯರು ಅಧ್ಯಕ್ಷ ಟ್ರೂಮನ್ನರ ಮೇಲೊಂದು ಮೊಕದ್ದಮೆಯನ್ನು ಹೂಡಿದ್ದಾರೆ೬೦ ದಿನಗಳೊಳಗಾಗಿ ಅಧ್ಯಕ್ಷರು ಇದಕ್ಕೆ ಉತ್ತರವನ್ನು ಕೊಡಬೇಕಾಗಿದೆ.

ಆಹಾರದಿಂದ ಸರ್ಕಾರಕ್ಕೆ ೨೫ ಲಕ್ಷ ರೂ. ನಷ್ಟ

ಹಿಂದಿನವರ್ಷ ಸಂಸ್ಥಾನದಲ್ಲಿ ಆಹಾರ ಹಂಚಿಕೆಯಿಂದ ಮೈಸೂರು ಸರ್ಕಾರಕ್ಕೆ ೨೯ ಲಕ್ಷ ರೂ. ನಷ್ಟ ಉಂಟಾಯಿತೆಂದು ಆಹಾರದ ಇಲಾಖಾ ವಾರ್ಷಿಕವರದಿಯು ತಿಳಿಸಿರುತ್ತದೆ. ೫೨೩ ಲಕ್ಷ ರೂ. ಗಳ ವೆಚ್ಚದಿಂದ ಆಹಾರ ಧಾನ್ಯಗಳನ್ನು ಸಂಸ್ಥಾನದಲ್ಲೇ ಕೊಳ್ಳಲಾಯಿತು ಮತ್ತು ೧,೧೫,೫೪೦ ಟನ್ ಆಹಾರವನ್ನು ಹೊರಗಿನಿಂದ ತರಿಸಲಾಯಿತು. ಅದಕ್ಕೆ ಕೇಂದ್ರ ಸರ್ಕಾರದವರು ೬೬ ಲಕ್ಷ ರೂ. ಸಬ್‌ಸಿಡಿ ಕೊಟ್ಟರು.

ಹೈದರಾಬಾದ್ ಭವನ ಕೊಳ್ಳುವವರೇ ಇಲ್ಲ

ಹೈದರಾಬಾದ್‌ನಲ್ಲಿ ಪೋಲೀಸ್ ಕಾರ್ಯಾಚರಣೆ ನಡೆಸಿದಾಗಿನಿಂದ ದೆಹಲಿಯಲ್ಲಿರುವ ಹೈದರಾಬಾದ್ ಭವನವನ್ನು ಮಾರಲು ಸಂಸ್ಥಾನ ಸರ್ಕಾರವು ಪ್ರಯತ್ನಿಸುತ್ತಲಿದೆ. ಈ ಭವನದ ಈಗಿನ ಬೆಲೆಯನ್ನು ೯೫-೯೬ ಲಕ್ಷ ರೂಗಳೆಂದು ಅಂದಾಜು ಮಾಡಲಾಗಿದೆ. ಇಷ್ಟು ಹಣವನ್ನು ಕೊಟ್ಟು ಕೊಳ್ಳುವವರು ಇಲ್ಲಿಯವರೆಗೂ [illegible] ಮುಂದೆಬಂದಿಲ್ಲ.

ಈ ಭವನದ ಮೂಲಬೆಲೆಯಾದ ೩೬ ಲಕ್ಷ ರೂಪಾಯಿಗಳಿಗೆ ತಾವೇ ಕೊಳ್ಳುವುದಾಗಿ ನಿಜಾಮರು ಸರ್ಕಾರಕ್ಕೆ ತಿಳಿಸಿರುವರು. ಈ ಬೆಲೆಗೆ ಅವರಿಗೆ ಕೊಡಲು ಸರಕಾರ ಇಷ್ಟವಿಲ್ಲ. ಈಗಿನ ಬೆಲೆಗೆ ಕೊಳ್ಳಲು [illegible] ಸರ್ಕಾರವೂ ಸಹ ಒಪ್ಪಿಲ್ಲವೆಂದು ಹೇಳಲಾಗಿದೆ.

ಜಿಲ್ಲಾಬೋರ್ಡು ಆಧ್ಯಕ್ಷರುಗಳ ಸಮ್ಮೇಳನ

ಮೈಸೂರು ೧೧

ಸ್ಥಳೀಯ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವ ವಿಚಾರವನ್ನು ಪರಿಶೀಲಿಸಲು ಇಜೇ ೧೪ ನೇ ತಾರೀಖು ಶಿವನಸಮುದ್ರದಲ್ಲಿ ಮೈಸೂರು ಸಂಸ್ಥಾನದ ಜಿಲ್ಲಾಬೋರ್ಡು ಅಧ್ಯಕ್ಷರುಗಳ ಸಮ್ಮೇಳವೊಂದು ನಡೆಯಲ್ಲಿದೆ. ಅದರಲ್ಲಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಭಾಗವಹಿಸಲು ನಿನ್ನೆ ನಡೆದ ಜಿಲ್ಲಾಬೋರ್ಡಿನ ಸಭೆಯಲ್ಲಿ ಅನುಮತಿ ಕೊಡಲಾಯಿತು.

ಟಿ. ನರಸೀಪುರದ ತಾಲ್ಲೂಕು ಬನ್ನೂರು ಹತ್ತಿರ ಕಾವೇರಿನದಿಗೆ ಸೇತುವೆಯನ್ನು ಕಟ್ಟಲು ತಗಲುವ ೬,೬೦,೦೦೦ ರೂ ವೆಚ್ಚದಲ್ಲಿ ಕಾಲುಭಾಗವನ್ನು ಬೋರ್ಡಿನವರು ಕೊಡಬೇಕೆಂದು ನಿರ್ಧರಿಸಲಾಯಿತು.

ಬಿಳಿಕೆರೆ ವಿದ್ಯುದ್ದೀಪೋತ್ಸವ

ಹುಣಸೂರು ತಾಲ್ಲೂಕು ಬಿಳಿಕೆರೆಗ್ರಾಮದ ವಿದ್ಯುದ್ದೀಪೋತ್ಸವವನ್ನು ಇದೇ ೧೩ನೇ ತಾ॥ ಸಂಜೆ ೬ ಗಂಟೆಗೆ ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪನವರು ನೆರವೇರಿಸುವರು ಅದೇ ಸಮಯದಲ್ಲಿ ಜಿಲ್ಲಾಬೋರ್ಡಿನ ಅಧ್ಯಕ್ಷ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಪಶುವೈದ್ಯಶಾಲಾ ಆರಂಭೋತ್ಸವವನ್ನು ನಡೆಸುವರು.

ರಾಜಾಸ್ಥಾನ ಮಂತ್ರಿ ಮಂಡಲದಮೇಲೆ ಅವಿಶ್ವಾಸ

ರಾಜಾಸ್ಥಾನದ ಕಾಂಗ್ರೆಸ್ ಮಂತ್ರಿಮಂಡಲದಮೇಲೆ ಅದರ ವಿರೋಧಪಕ್ಷದ ನಾಯಕರಾದ ಶ್ರೀ ಇಂದ್ರನಾಥ ಮೋದಿಯವರು ನಿನ್ನೆ ಶಾಸನಸಭೆಯಲ್ಲಿ ಒಂದು ಅವಿಶ್ವಾಸ ನಿರ್ಣಯವನ್ನು ಮಂಡಿಸಿರುರು ಈಗಾಗಲೇ ಶಾಸನಸಭೆಯ ಕಾಂಗ್ರೆಸ್ ಪಕ್ಷದ ೮ ಮಂದಿ ಸದಸ್ಯರು ರಾಜೀನಾಮೆ ಇತ್ತು ಪ್ರಜಾಪಕ್ಷ ಎಂಬ ನೂತನ ಪಕ್ಷವನ್ನು ರಚಿಸಿದ್ದಾರೆ.

ಅಭಾವಪ್ರದೇಶಗಳಲ್ಲಿ ೫೦ ಸಾವಿರ ರೂ ಪರಿಹಾರಕಾರ್ಯ

ಮೈಸೂರು ಜಿಲ್ಲಾ ಬೋರ್ಡಿನ ತೀರ್ಮಾನ

ಮೈಸೂರು ೧೧

ಮೈಸೂರುಜಿಲ್ಲೆಯ ನಾನಾ ಭಾಗಗಳಲ್ಲಿ ಅಭಾವ ಪರಿಸ್ಥಿತಿ ತಲೆದೋರಿರುವುದರಿಂದ ೫೦ ಸಾವಿರ ರೂಗಳ ಕಾಂಗಾರಿ ಕೆಲಸಗಳನ್ನು ಕೂಡಲೇ ಕೈಗೊಂಡು ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸಬೇಕೆಂದು ಮೊನ್ನೆದಿನ ನಡೆದ ಜಿಲ್ಲಾಬೋರ್ಡಿನ ಸಭೆಯಲ್ಲಿ ನಿರ್ಣಯಮಾಡಲಾಯಿತು ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಯಿತು.

ಸಂಸ್ಥಾನದಲ್ಲಿ ಆಹಾರದ ಬಗ್ಗೆ ಯಾವ ಹತೋಟಿಯೂ ಇರಕೂಡದೆಂದೂ, ಈಗ ರೇಷನ್ ಇರುವ ೩ ನಗರಗಳಲ್ಲಿ ಆಹಾರ ಸರಬರಾಜನ್ನು ಸರ್ಕಾರದವರು ಬಹಿರಂಗವಾಗಿ ಮಾರುಕಟ್ಟೆಯಲ್ಲಿ ಕೊಂಡುಕೊಡ ಬೇಕೇದೂ, ಕೈಗಾರಿಕಾ ಸಂಸ್ಥೆಗಳು ತಮ್ಮ ಕಾರ್ಮಿಕರಿಗೆ ತಾವೇ ಆಹಾರ ಪದಾರ್ಥಗಳನ್ನು ಕೊಂಡು ಹಂಚಬೇಕೆಂದೂ ಪ್ರಾರ್ಥಿಸಲಾಯಿತು.

ಲೆವಿ ಪದ್ಧತಿಯಿಂದ ರೈತರಿಗೆ ವಿಶೇಷ ತೊಂದರೆಯಾಗುವುದರಿಂದ ಈಗಿರುವ ಪದ್ಧತಿಯನ್ನೇ ಅನುಸರಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯಮಾಡಲಾಯಿತು. ಗುಂಡಪೇಟೆ ತಾಲ್ಲೂಕಿನಲ್ಲಿ ೫ ಸಾವಿರ ಮೈಲಿ ವೆಚ್ಚದಲ್ಲಿ ೫ ಮೈಲಿ ಉದ್ದದ ರಸ್ತೆ ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು.

೧೯೫೨-೫೩ ನೇ ಸಾಲಿನ ಆಯವ್ಯಯವನ್ನು ಜಿಲ್ಲಾಬೋರ್ಡು ಸರಿಯಾಗಿಯೇ ಪರಿಶೀಲಿಸಿ ತಯಾರಿಸಿರುವುದರಿಂದ ಅದನ್ನು ಕೂಡಲೇ ಒಪ್ಪಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯ ಅಂಗೀಕಾರವಾಯಿತು.

ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಪ್ರಾರಂಭದಲ್ಲಿ ಮಾತನಾಡಿ, ಸರ್ಕಾರದಿಂದ ಬೋರ್ಡಿಗೆ ೮,೮೩,೨೫೪ ರೂ ಬರಬೇಕಾಗಿದೆಯೆಂದೂ. ಅದನ್ನು ಕೊಡದೆ ಕೆಲಸಕ್ಕೆ ತುಂಬಾ ತೊಂದರೆಯಾಗಿದೆಯೆಂದೂ, ಟ್ರಿಜರಿಯಿಂದ ಒಂದೂವರೆ ಲಕ್ಷ ರೂ ಓವರ್‌ಡ್ರಾಫ್ಟ್, ಪಡೆಯಲು ಅನುಮತಿ ಕೇಳಿದ್ದಕ್ಕೂ ಸರ್ಕಾರ ಸಾಧ್ಯವಿಲ್ಲವೆಂದು ತಿಳಿಸಿದೆಯೆಂದೂ ಹೇಳಿದರು.

ಪಾಕೀಸ್ಥಾನದಲ್ಲಿ ಭಯೋತ್ಪಾದಕ ವಾತಾವರಣ

ದಿನಂಪ್ರತಿ ಸುಮಾರು ೯ ಸಾವಿರ ಮುಸ್ಲಿಮೇತರರು ಭಾರತಕ್ಕೆ ವಲಸೆ ಬರುತ್ತಿದ್ದಾರೆ

ಭಾರತ ಸರ್ಕಾರದ ತೀವ್ರ ಪರಿಶೀಲನೆ

ಕಳೆದ ಒಂದುವಾರದಿಂದ ಪೂರ್ವಬಂಗಾಳ (ಪಾಕೀಸ್ಥಾನ) ದಿಂದ ದಿನಂಪ್ರತಿ ಸುಮಾರು ೯ ಸಾವಿರ ಮುಸ್ಲಿಮೇತರರು ಒಂದೇ ಸಮನೆ ಭಾರತಕ್ಕೆ ವಲಸೆ ಬರುತ್ತಿರುವುದನ್ನು ಭಾರತ ಸರ್ಕಾರವು ಅತಿ ತೀವ್ರದೃಷ್ಟಿಯಿಂದ ಪರಿಶೀಲಿಸುತ್ತಲಿದೆ.

ಈ ಮಾಹೆ ೭ನೇ ತಾರೀಖಿಗೆ ಮುಕ್ತಾಯವಾದ ೮ ದಿನಗಳಲ್ಲಿಯೇ ಸುಮಾರು ೭೩೦೦೦ ಮುಸ್ಲಿಮೇತರರು ಭಾರತಕ್ಕೆ ಬಂದಿರುವರು.

ಪಾಸ್‌ಪೋರ್ಟ್ ವ್ಯವಸ್ಥೆ ಬಗ್ಗೆ ಮುಸ್ಲಿಮೇತರರಿಗೆ ಮುಸ್ಲಿಮರು ಭಯೋತ್ಪಾದಕ ವಾತಾವರಣವನ್ನು ಕಲ್ಪಿಸಿ, ಅನೇಕ ಕ್ಲೇಶಗಳಿಗೆ ಗುರಿಪಡಿಸುತ್ತಲಿರುವರು.

ಪಾಸ್‌ಪೋರ್ಟ್‌ವ್ಯವಸ್ಥೆ ನಿಧಾನಿಸುವುದಾಗಿ ಪಾಕ್‌ಪ್ರಧಾನಿ ಇತ್ತೀಚೆಗೆ ಇತ್ತ ಹೇಳಿಕೆಯಿಂದ ಇಲ್ಲಿಯವರೆಗೆ ಇದ್ದ ಸುಲಭ ಪ್ರಯಾಣಕ್ಕೆ ಅಡಚಣೆ ಯುಂಟಾಗುವುದೆಂದು ಜನರು ಪಾಕೀಸ್ತಾನವನ್ನು ಬಿಟ್ಟು ಭಾರತಕ್ಕೆ ಬರುತ್ತಲಿರುವರು ಈ ಬಗ್ಗೆ ಡಕ್ಕಾದಲ್ಲಿರುವ ಭಾರತ ಉಪ ಹೈಕಮಿಷನರು ಅಲ್ಲಿಯ ಸರ್ಕಾರದೊಡನೆ ವ್ಯವಹಾರ ನಡೆಸುತ್ತಲಿರುವರು ಭಾರತಸರ್ಕಾರವೂ ಪಾಕ್ ಸರ್ಕಾರದೊಡನೆ ವ್ಯವಹಾರ ನಡೆಸುತ್ತಲಿದೆ.

ವಲಸೆಗಾರರಿಗೆ ಸೌಕರ್ಯವನ್ನು ನೀಡಲು ಪಶ್ಚಿಮಬಂಗಾಳ ಸರ್ಕಾರ ಎಲ್ಲ ಕಾರ್ಯಗಳನ್ನು ನಡೆಸುತ್ತಲಿದೆ. ನೀರಾವರಿ, ರಸ್ತೆ ನಿರ್ಮಾಣ ಮುಂತಾದ ಕೆಲಸಗಳಲ್ಲಿ ಅವರನ್ನು ನೇಮಿಸಿಕೊಳ್ಳಲಾಗುತ್ತದೆ.

ಈ ವಲಸೆಗಾರರ ಬಗ್ಗೆ ಪರಿಶೀಲನೆ ನಡೆಸಲು ಸರ್ಕಾರದ ವಿದೇಶಾಂಗ ಶಾಖಾ ಉಪಸಚಿವ ಶ್ರೀ ನಂದಾರವರು ಕಲ್ಕತ್ತಾಗೆ ತೆರಳಿದ್ದಾರೆ ಕಮನ್‌ವೆಲ್ತ್ ಶಾಖಾಸಚಿವ ಶ್ರೀ ಎ. ಪಿ. ಜೈನ್‌ರವರು ಮುಂದಿನವಾರ ಶ್ರೀ ಪೂರ್ವಪಶ್ಚಿಮಬಂಗಾಳ ಮುಂತಾದ ಪ್ರದೇಶಗಳಲ್ಲಿ ೧೦ ದಿನ ಪ್ರವಾಸ ಕೈಗೊಳ್ಳಲಿರುವರು.

ಭಾರತೀಯ ಸೇವಕಸಮಾಜ ಪ್ರಾರಂಭೋತ್ಸವ

ಮದ್ರಾಸ್, ತಮಿಳುನಾಡು ಆಂಧ್ರ ಪ್ರಾಂತ್ಯ, ಮೈಸೂರು ಮತ್ತು ಕೊಡಗು ಪ್ರದೇಶಗಳಿಗೆ ಸಂಬಂಧಪಟ್ಟಂತೆ ಭಾರತೀಯ ಸೇವಕಸಮಾಜ ಪ್ರಾರಂಭೋತ್ಸವವನ್ನು ಪ್ರಧಾನಿ ನೆಹರೂರವರು ನಿನ್ನೆ ಮದ್ರಾಸಿನಲ್ಲಿ ನೆರವೇರಿಸಿದರು.

ಮೈಸೂರು ಪೇಟೆಧಾರಣೆ

ತಾ|| ೧೦-೧೦-೫೨

ಪಲ್ಲ	ರೂ—ಆ	ರೂ—ಆ
ಕಡಲೇಕಾಯಿ	೯-೨	೧೯-೦
ಎಳ್ಳು	೫೫-೦	೬೨-೪
ಹರಳು	೪೩-೨	೪೪-೧೨
ಆಲಸಂದೆ	೫೫-೦	
ಮೆಣಸಿನಕಾಯಿ	೯-೮	೨೦-೮
ಬೆಲ್ಲ	೩-೮	
ಸೀಗೇಕಾಯಿ	೪-೯	
ಹುರುಳಿ	೬೦-೪	೬೧-೬
ತೆಂಗಿನಕಾಯಿ ೧,೧೦೦ ಕ್ಕೆ	೧೬೬	೫೬

ಮಕ್ಕಳ ಹಿತದೃಷ್ಟಿಕಡೆ ಗಮನಕೊಡಿ

ಮದ್ರಾಸ್ ಕಾರ್ಪೊರೇಷನ್‌ಗೆ ಪ್ರಧಾನಿಯ ಹಿತನುಡಿ

ತಮ್ಮ ಪ್ರವಾಸದ ಕಾಲದಲ್ಲಿ ದಿನವೂ ರಾಜಭವನಕ್ಕೆ ಹೋಗುವಾಗ್ಗೆ ಇಕ್ಕೆಡೆಗಳಲ್ಲಿಯೂ ಸುಂದರ ಭವನಗಳ ದೃಶ್ಯವನ್ನು ನೋಡಲಾಗುತ್ತಲಿದೆ ರಸ್ತೆ ಪಕ್ಕಗಳಲ್ಲಿ ಸಾವಿರಾರು ಮಕ್ಕಳು ನಿರ್ಗತಿಕರಾಗಿರುವ ದೃಶ್ಯವು ಅತ್ಯಂತ ಬೇದವನ್ನುಂಟುಮಾಡುವುದಾಗಿದೆ.. ಅತಿ ಸುಂದರ ಕಟ್ಟಡಗಳನ್ನು ಕಟ್ಟಿದಮಾತ್ರಕ್ಕೆ ದೇಶದ ಹಿತ ಸಾಧಿಸಿದಂತಾಗಲಿಲ್ಲ. ದೀನದಲಿತ ಮಕ್ಕಳ ಹಿತದೃಷ್ಟಿಯನ್ನು ಗಮನಿಸಿ ಅವರನ್ನು ಉತ್ತಮರೀತಿಯಲ್ಲಿ ಪಾಲಿಸಬೇಕಾಗಿದೆ. ಅದೂ ಕಾರ್ಪೊರೇಷನ್ನಿನ ಪ್ರಥಮ ಕರ್ತವ್ಯವೆಂದು ಪ್ರಧಾನಿ ನೆಹರೂರವರು ನಿನ್ನೆ ದಿನ ಮದ್ರಾಸ್ ಕಾರ್ಪೊರೇಷನ್ ಇತ್ತ ಸತ್ಕಾರಸಮಾರಂಭದಲ್ಲಿ ಮಾತನಾಡುತ್ತಾ ಹೇಳಿದರು.

ರಾಷ್ಟ್ರಾಧ್ಯಕ್ಷರ ಭೂದಾನ

ಭಾರತದ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರವರು ವಿನೋಬಾಭಾವೆಯವರ ಭೂದಾನ ಯಜ್ಞಕ್ಕೆ ತಮ್ಮ ಸ್ವಂತ ಭೂಮಿಗಳನ್ನು ದಾನವಾಗಿ ಕೊಟ್ಟು, ಅದೇರೀತಿ ಜನರು ಭೂಮಿಗಳನ್ನು ದಾನ ಮಾಡಬೇಕೆಂದು ಕೋರಿದ್ದಾರೆ.

ಶಾಸನಸಭೆ ಕಾಂಗ್ರೆಸ್ ಸದಸ್ಯರ ರಾಜೀನಾಮೆ

ರಾಜಾಸ್ತಾನ ಶಾಸನಸಭೆ ಕಾಂಗ್ರೆಸ್ ಪಕ್ಷಕ್ಕೆ ೮ ಮಂದಿ ಸದಸ್ಯರು ರಾಜೀನಾಮೆ ಇತ್ತಿದ್ದಾರೆ.

೬೦ ವರ್ಷ ಮೇಲ್ಪಟ್ಟವರಿಗೆ ಪಾಠಶಾಲೆ

ವಿಶ್ರಾಂತಿ ಕಾಲದಲ್ಲಿ ೬೦ ವರ್ಷಕ್ಕೆ ಮೇಲ್ಪಟ್ಟವರು ತಮ್ಮ ಉಳಿದ ಜೀವಿತ ಕಾಲವನ್ನು ಸಂತೋಷವಾಗಿ ಕಳೆಯಲು ಅನುಕೂಲವಾಗುವಂತೆ ಅಮೇರಿಕಾದಲ್ಲಿ ಒಂದು ಹೊಸಶಾಲೆಯನ್ನು ಸ್ಥಾಪಿಸಲಾಗಿದೆ.

ಈ ಪಾಠಶಾಲೆಯಲ್ಲಿ ೩೫ ವಿದ್ಯಾರ್ಥಿಗಳಿರಬಹುದು ೬೦ ಎಕರೆ ಜಮೀನನ್ನೊಳಗೊಂಡ ಒಂದು ಪ್ರದೇಶದಲ್ಲಿ ಇದನ್ನು ಸ್ಥಾಪಿಸಲಾಗಿದೆ. ಇಲ್ಲಿ ಶಿಕ್ಷಣವನ್ನು ಪಡೆವೀಧರರಿಗೆ ಒಂದು ವರ್ಷಕಾಲಮಾತ್ರ ಕೊಡಲಾಗುತ್ತದೆ.

ಪ್ರತಿ ಶುಕ್ರವಾರ ಅಲ್ಲಿ ಭಾಷಣಗಳು ನಡೆಯುತ್ತವೆ ದೇಹಾರೋಗ್ಯ, ಬೆಳವಣಿಗೆ ಮುಂತಾದುವಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಚರ್ಚೆಗಳು ನಡೆಯುತ್ತವೆ. ಅಲ್ಲದೆ ಸಂಗೀತ, ಕಲೆ,ವಿಜ್ಞಾನ, ಅಂತರರಾಷ್ಟ್ರೀಯ ವಿಷಯಗಳ ಚರ್ಚೆಗಳೂ ಏರ್ಪಡಿಸಲಾಗುತ್ತವೆ. ಇದಕ್ಕೆ ಸೇರಿದಂತೆ ತೋಟ, ಕಾರ್ಖಾನೆ ಮುಂತಾದುವೂ ಇವೆ

ಲಂಡನ್ನಿನ ರೈಲು ದುರಂತ

ಮೊನ್ನೆ ಯದಿನ ಲಂಡನ್ನಿನಬಳಿ ನಡೆದ ರೈಲು ದುರಂತದಲ್ಲಿ ಸತ್ತವರ ಸಂಖ್ಯೆಯು ೧೧೦ ಕ್ಕೆ ಏರಿದೆ. ಗಾಯಗೊಂಡವರಲ್ಲಿ ಇನ್ನೂ ೯೦ ಜನರು ಚಿಕಿತ್ಸೆ ಪಡೆಯುತ್ತ ಆಸ್ಪತ್ರೆಯಲ್ಲಿಯೇ ಇರುತ್ತಾರೆ.

ಹೆಚ್ಚು ಶಸ್ತ್ರಾಸ್ತ್ರವಿಲ್ಲವೆಂದು ಕಮ್ಯೂನಿಸ್ಟರು

ಹೈದರಾಬಾದ್ ಕಮ್ಯೂನಿಸ್ಟರಲ್ಲಿ ಅವರು ತಿಳಿಸಿರುವುದಕ್ಕಿಂತಲೂ ಅಧಿಕಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳವೆಯೆಂದು ಮುಖ್ಯಮಂತ್ರಿ ಹೇಳಿರುವುದನ್ನು ಕಮ್ಯೂನಿಸ್ಟ್ ನಾಯಕರು ವಿರೋಧಿಸಿ, ತಮ್ಮಲ್ಲಿರುವ ಶಸ್ತ್ರಾಸ್ತ್ರಗಳ ವಿವರಗಳನ್ನೆಲ್ಲಾ ತಿಳಿಸಲಾಗಿದೆ. ಇನ್ನೂ ಶಸ್ತ್ರಾಸ್ತ್ರವಿದೆಯೆಂಬುದು ಉತ್ಪ್ರೇಕ್ಷೆಯದು. ಹೇಳಿದ್ದಾರೆ.

ವುಡ್‌ಲಾಂಡ್ಸ್

ದುಪಟ

ತಾರೀಖು 10-10-52 ರಿಂದ

ಅಮೋಘ ೨ನೇ ವಾರ

ಪ್ರತಿದಿನ ಮೂರು ಪ್ರದರ್ಶನ

ಪಾತ್ರ—ನೂರ್‌ಜಹಾನ್, ಅಜಯಕುಮಾರ್, ಗುಲಾಮ್ ಮಹಮದ್

ಅಪೇರ ೧೦-೧೦-೫೨ ರಿಂದ ಅಮೋಘಪ್ರಾರಂಭ

ಪ್ರತಿದಿನ ಮೂರು ಆಟಗಳು

ಸಾಹುಕಾರ

[ತೆಲಗು]

ಪಾತ್ರ:—ಎನ್. ಟಿ. ರಾಮರಾವ್, ಶಾಂತಕುಮಾರಿ, ಜಾನಕಿ.

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 43

೧೩-೧೦-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಭಾರತಕ್ಕೆ ನಾರ್ವೆಯಿಂದ ೬೮ ಲಕ್ಷ ರೂ. ಆರ್ಥಿಕ ನೆರವು

ಭಾರತದಲ್ಲಿ ನಡೆಯಲಿರುವ ಅನೇಕ ಪ್ರಗತಿಕಾರ್ಯಗಳಿಗಾಗಿ ತಾಂತ್ರಿಕ ಮತ್ತು ಆರ್ಥಿಕ ನೆರವು ನೀಡುವ ಉದ್ದೇಶದಿಂದ ನಾರ್ವೆ ರಾಷ್ಟ್ರವು ಭಾರತಕ್ಕೆ ೬೭ ಲಕ್ಷ ರೂಪಾಯಿಗಳ ಸಹಾಯ ನೀಡುವುದಾಗಿ ಗೊತ್ತಾಗಿದೆ.

ಮುಷ್ಕರಗಳ ಮುಕ್ತಾಯ

ಕಳೆದ ೧೧ ದಿನಗಳಿಂದ ಬೊಂಬಾಯಿನಲ್ಲಿ ಸಾಗಾಣಿಕೆ ಕೆಲಸಗಾರರು ಮಾಡುತ್ತಿದ್ದ ಮುಷ್ಕರವನ್ನು ಮುಕ್ತಾಯಗೊಳಿಸಿದ್ದಾರೆ. ಬೊಂಬಾಯಿ ಪ್ರಾದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರು ಕೆಲಸಗಾರರ ಸ್ಥಿತಿಗತಿ ಬಗ್ಗೆ ಕೆಲವು ಭರವಸೆಗಳನ್ನು ಇತ್ತಮೇಲೆ ಮುಷ್ಕರ ಮುಕ್ತಾಯವಾಯಿತು.

ಪಶ್ಚಿಮಬಂಗಾಳ, ಬಿಹಾರ್, ಅಸ್ಸಾಂ ಉತ್ತರಪ್ರದೇಶ ಮತ್ತು ಪೂರ್ವ ಪಾಕೀಸ್ತಾನದಲ್ಲಿ ಸುಮಾರು ೩೫೦೦ ಹಡಗು ಕೆಲಸಗಾರರು ತಮ್ಮ ಮುಷ್ಕರವನ್ನು ಮುಕ್ತಾಯಮಾಡಿದ್ದಾರೆ.

ಈ ಕೆಲಸಗಾರರ ಮತ್ತು ಕಂಪೆನಿಯ ವಿವಾದವನ್ನು ಪಂಚಾಯತಿ ತೀರ್ಮಾನಕ್ಕೆ ವಹಿಸುವುದಾಗಿ ಸರ್ಕಾರಗಳು ಭರವಸೆಯಿತ್ತನಂತರ ಮುಷ್ಕರ ಮುಕ್ತಾಯ ಮಾಡುವ ತೀರ್ಮಾನವಾಯಿತು.

ಭಾರತದೊಡನೆ ಐಕ್ಯತೆಗೆ ಚಳುವಳಿ

ಫ್ರೆಂಚ್ ಇಂಡಿಯಾ ಭಾಗಗಳನ್ನು ಭಾರತದೊಡನೆ ಐಕ್ಯತೆಗೆ ಹೋರಾಡಲು ಅಲ್ಲಿರುವ ೬ ಪ್ರಮುಖ ಪಕ್ಷಗಳು ಒಟ್ಟುಗೂಡಿ ಫ್ರೆಂಚ್ ಇಂಡಿಯಾ ಯುನೈಟೆಡ್ ಲಿಬರೇಷನ್ ಕೌನ್ಸಿಲ್ ಒಂದು ಹೊಸ ಪಕ್ಷವನ್ನು ಸ್ಥಾಪಿಸಿ ಅಲ್ಲಿಯ ನ್ಯಾಷನಲ್ ಕಾಂಗ್ರೆಸ್, ಕಮ್ಯೂನಿಸ್ಟ್‌ಪಕ್ಷ ಎಲ್ಲವೂ ಇದರಲ್ಲಿ ಐಕ್ಯಗೊಂಡಿವೆ.

ಕ್ವಿಲಾನ್-ಎರ್ನಾಕುಲಂ ರೈಲ್ವೆ

ತಿರುವಾಂಕೂರು,ಕೊಚ್ಚಿನ್ ಪ್ರಾಂತ್ಯದಲ್ಲಿ ಕ್ವಿಲಾನಿನಿಂದ ಎರ್ನಾಕುಲಂಗೆ ರೈಲ್ವೆ ಸಂಪರ್ಕವನ್ನು ಏರ್ಪಡಿಸಲು ಕೇಂದ್ರಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಮಂಜೂರ್ಮಾಡಿರುತ್ತಾರೆ. ಕೆಲಸ ಈ ತಿಂಗಳಿನಲ್ಲಿ ಪ್ರಾರಂಭವಾಗಲಿದೆ.

ಸರ್ಕಾರಿ ಉದ್ಯೋಗದಲ್ಲಿರುವ ವೈದ್ಯರಿಗೆ ಖಾಸಗೀ ವೃತ್ತಿ ಕೂಡದು

ಸರ್ಕಾರಿ ಆಸ್ಪತ್ರೆಗಳಲ್ಲಿರುವ ವೈದ್ಯರುಗಳು ಖಾಸಗಿ ವೃತ್ತಿಯಲ್ಲಿ ಪ್ರವರ್ತಿಸುವುದರಿಂದ ಆಸ್ಪತ್ರೆಗಳಲ್ಲಿದಕ್ಷತೆಯೇ ಕಡಿಮೆಯಾಗಿ ಹೋಗುತ್ತಿರುವುದರಿಂದ ಇನ್ನುಮುಂದೆ ಸರ್ಕಾರಿ ಉದ್ಯೋಗದಲ್ಲಿರುವ ವೈದ್ಯರು ಖಾಸಗೀ ವೃತ್ತಿಯನ್ನು ಮಾಡಲು ಅವಕಾಶವನ್ನು ಕೊಡಲಾಗುವುದಿಲ್ಲವೆಂದು ಕೇಂದ್ರ ಆರೋಗ್ಯ ಸಚಿವ ಶ್ರೀಮತಿ ರಾಜಕುಮಾರಿ ಅಮೃತಕೌರ್‌ರವರು ಹೇಳಿರುವರು ತಮ್ಮ ಉದ್ಯೋಗದಲ್ಲಿಯೇ ಹೆಚ್ಚು ಆಸಕ್ತಿ ವಹಿಸಿ ಕೆಲಸಮಾಡುವಂತೆ ಈ ವೈದ್ಯರಿಗೆ, ಇನ್ನು ಹೆಚ್ಚಿನ ಸಂಬಳವನ್ನು ಕೊಡುವಂತೆ ತಾವು ಸರ್ಕಾರಕ್ಕೆ ಸಲಹೆ ಮಾಡಿರುವುದಾಗಿ ಅವರು ಹೇಳಿರುವರು.

ವಿಶ್ವದ ಜನಸಂಖ್ಯೆ

೨ನೇ ಮಹಾಯುದ್ಧ ಆದನಂತರ ಇಲ್ಲಿಯವರೆಗೆ ವಿಶ್ವದ ಜನಸಂಖ್ಯೆಯು ಶೇ|| ೨೦ರಷ್ಟು ಅಂದರೆ ೩೦೦೦-೪೦೦೦ ಲಕ್ಷದಷ್ಟು ಹೆಚ್ಚಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆಯು ಪ್ರಕಟಿಸಿದೆ. ವಿಶ್ವದಜನಸಂಖ್ಯೆಯಲ್ಲಿ ಶೇಕಡ ೫೦ ಕ್ಕಿಂತ ಹೆಚ್ಚಾಗಿ ಏಷ್ಯಾಖಂಡದಲ್ಲಿಯೇ ಇದ್ದಾರೆ. (ಸುಮಾರು ೧೨೫೦ ಲಕ್ಷ) ಚೈನಾ ೪೭೬೦ ಮತ್ತು ಭಾರತವು ೩೫೭೦ ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಅತ್ಯಂತ ಹೆಚ್ಚಾದ ಪ್ರಜಾಸಂಖ್ಯೆಯುಳ್ಳ ರಾಷ್ಟ್ರಗಳಾಗಿವೆ. ಯೂರೋಪು ರಾಷ್ಟ್ರಗಳಲ್ಲೆಲ್ಲಾ ಮಹಿಳೆಯರ ಜನಸಂಖ್ಯೆ ವಿಶೇಷವಾಗಿದೆಯೆಂದು ವರದಿ ತಿಳಿಸುತ್ತದೆ.

ಸೂಚನೆ

ಸಮಾಚಾರ ಪತ್ರಿಕೆ ಕಾರ್ಯಾಲಯವನ್ನು ಲ್ಯಾನ್ಸ್‌ಡೌನ್ ಬಿಲ್ಡಿಂಗ್ ನಿಂದ ಜಗನ್ಮೋಹನಪ್ಯಾಲೇಸ್ ರಸ್ತೆಯಲ್ಲಿ ಮೋತೀಖಾನೆ ಕಟ್ಟಡಕ್ಕೆ [ಸರ್ಕಾರಿ ರೇಷನಿಂಗ್ ಡಿಪೋ ಮಹಡಿ] ಬದಲಾಯಿಸಲಾಗಿದೆ.

ಸಂಪಾದಕ.

ಉತ್ತನಹಳ್ಳಿಬಳಿ ಇಬ್ಬರಕೊಲೆ ೨ ಮಂದಿಗೆ ಗಾಯ

ಜಮೀನು ವ್ಯಾಜ್ಯದಲ್ಲಿ ಭಾರಿ ಗಲಭೆ

ಮೈಸೂರು ೧೪

ಮೈಸೂರು ಚಾಮುಂಡಿ ಬೆಟ್ಟದ ಹತ್ತಿರವಿರುವ ಲಲಿತಾದ್ರಿಪುರ ಮತ್ತು ಉತ್ತನಹಳ್ಳಿಗೆ ಮಧ್ಯ ಇರುವ ಜಮೀನು ಸಾಗುವಳಿ ವಿಷಯದಲ್ಲಿ ಎರಡು ಪಕ್ಷದವರಿಗೆ ಮೊನ್ನೆ ಶನಿವಾರ ಭಾರಿ ಘರ್ಷಣೆ ಉಂಟಾಗಿ,ಇಬ್ಬರು ಸತ್ತುಹೋದರೆಂದೂ ಮತ್ತಿಬ್ಬರಿಗೆ ತೀವ್ರಗಾಯವಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಯೆಂದೂ ವರದಿಯಾಗಿದೆ. ಈ ಸಂಬಂಧದಲ್ಲಿ ಪೊಲೀಸರು ೧೩ ಮಂದಿಯನ್ನು ದಸ್ತಗಿರಿಮಾಡಿ, ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಉತ್ತನಹಳ್ಳಿಯ ಯಲ್ಲಯ್ಯ ಎಂಬಾತನು ಮೇಲ್ಕಂಡ ಜಮೀನನ್ನು ಮೊದಲು ಸಾಗುವಳಿ ಮಾಡುತ್ತಿದ್ದನೆಂದೂ. ಮೊನ್ನೆ ಶುಕ್ರವಾರ ಅದನ್ನು ೧ ವರ್ಷಕಾಲ ಮುಂದುವರಿಸಲು ಕರಾರು ಆಯಿತೆಂದೂ, ಅದರ ಪ್ರಕಾರ ಶನಿವಾರ ಬೆಳಗ್ಗೆ ಆತನು ತನ್ನ ಸಂಸಾರದವರೊಡನೆ ಜಮೀನು ಉಳಲು ಹೋದನೆಂದು ಹೇಳಲಾಗಿದೆ.

ಇದಕ್ಕೆ ಮುಂಚೆ ಆದರೆ ಶುಕ್ರವಾರ ಸಂಜೆ ಜಮೀನುದಾರರು ಆ ಜಮೀನನ್ನು ಅದೇ ಉತ್ತನಹಳ್ಳಿಯ ಸಹಕಾರ ಸಂಘದ ಕಾರ್ಯದರ್ಶಿ ಪುಟ್ಟಮಾದಯ್ಯನವರಿಗೆ ಮಾರಿದರೆಂದೂ ಈ ವಿಷಯ ಯಲ್ಲಯ್ಯನಿಗೆ ಗೊತ್ತಿಲ್ಲವೆಂದೂ ಹೇಳಲಾಗಿದೆ. ಪುಟ್ಟಮಾದಯ್ಯನವರ ಕಡೆಯವರು ಜಮೀನನ್ನು ಉಳಲು ಯಲ್ಲಯ್ಯನಿಗೆ ಅವಕಾಶ ಕೊಡಲಿಲ್ಲವೆಂದೂ, ಇದರಿಂದ ಎರಡು ಪಕ್ಷದವರಿಗೂ ಮಾತು ಬೆಳೆದು, ವಿಶೇಷ ಜಗಳ ಮತ್ತು ಘರ್ಷಣೆಗೆ ಪರಿಣಾಮವಾಯಿತೆಂದೂ, ಹೇಳಲಾಗಿದೆ. ಈ ಜಗಳದಲ್ಲಿ ಯಲ್ಲಯ್ಯನ ಮಗ ಗೊಳಯ್ಯನಿಗೆ ದೊಣ್ಣೆ ಏಟುಗಳು ಬಿದ್ದು ಅಲ್ಲೇ ಸತ್ತುಹೋದನು ಯಲ್ಲಯ್ಯನಿಗೆ ತೀವ್ರ ಗಾಯಗಳಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಅದೇ ದಿನ ಮೃತಿ ಹೊಂದಿದನು ಆತನ ಹೆಂಡತಿ ನಿಂಗಮ್ಮ ಮತ್ತು ಇನ್ನೊಬ್ಬ ಮಗ ಶಿವಣ್ಣರವರಿಗೂ ತೀವ್ರ ಗಾಯಗಳಾದವು ಅವರಿಬ್ಬರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿದೆ.

ಕಾಶ್ಮೀರ ಪ್ರಶ್ನೆ ಇತ್ಯರ್ಥದ ಬಗ್ಗೆ ಸುಮ್ಮನಿರಲಾಗುವುದಿಲ್ಲ

ವಿಶ್ವಸಂಸ್ಥೆಯು ಕಾಶ್ಮೀರ ವಿವಾದದ ಬಗ್ಗೆ ಅಂತ್ಯತೀರ್ಮಾನವನ್ನು ಕೂಡಲೇ ಮಾಡದಿದ್ದಲ್ಲಿ ಪಾಕೀಸ್ತಾನವು ಇನ್ನು ಸುಮ್ಮನೆ ಕುಳಿತಿರುವುದಕ್ಕಾಗುವುದಿಲ್ಲ.

ಕಾಶ್ಮೀರ ಜನರಿಗೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟು ತನ್ನಿಷ್ಟಬಂದ ದೇಶದೊಡನೆ ಸೇರಿಕೊಳ್ಳುವಂತೆ ವಾತಾವರಣವನ್ನು ಕಲ್ಪಿಸುವುದೇ ಪಾಕೀಸ್ತಾನದ ಆಶಯ ಅದನ್ನು ಈಡೇರಿಸಲು ಮತ್ತು ಯಾವ ವಿಘ್ನಗಳು ಬಂದರೂ ಎದುರಿಸಲು ತನ್ನಶಕ್ತಿ ಸಾಮರ್ಥ್ಯಗಳನ್ನೆಲ್ಲಾ ಉಪಯೋಗಿಸಲಾಗುತ್ತದೆ. ಇದಕ್ಕಾಗಿ ಸೂಕ್ತಕಂಡ ವಿಧಾನಗಳನ್ನೆಲ್ಲಾ ಅನುಸರಿಸುವುದಾಗಿ ಪಾಕೀಸ್ತಾನದ ಪ್ರಧಾನಿ ನಾಜಿಮುದ್ದೀನರವರು ಮುಸ್ಲಿಂಲೀಗಿಗೆ ಪುನಃ ಅಧ್ಯಕ್ಷರಾಗಿ ಚುನಾಯಿತರಾದಾಗ ಮಾಡಿದ ಭಾಷಣದಲ್ಲಿ ಹೇಳಿರುವರು.

ಸತ್ಕಾರ

ಮೈಸೂರು ಅ. ೧೩

ಸಂತೇಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ಧರ್ಮದರ್ಶಿಗಳು ನಿನ್ನೆಯದಿನ ವರ್ಗವಾಗಿರುವ ಮೈಸೂರು ನಗರದ ಆರೋಗ್ಯಾಧಿಕಾರಿ ಶ್ರೀ ಎಸ್. ಶೇಷಗಿರಿರಾವ್, ರೇಷನ್ ಅಧಿಕಾರಿ ಶ್ರೀ ಹೆಚ್. ಜಿ. ವಿಜಯರಾಘವರೆಡ್ಡಿ ಮತ್ತು ಮೈಸೂರು ಜಿಲ್ಲಾ ಆಹಾರಾಧಿಕಾರಿ ಶ್ರೀ ಬೈರಪ್ಪನವರನ್ನು ದೇವಸ್ಥಾನಕ್ಕೆ ಬರಮಾಡಿಕೊಂಡು ವಿಶೇಷ ಪೂಜೆಗಳನ್ನು ನಡೆಸಿ ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಆಸ್ಥಾನವಿದ್ವಾನ್ ಶ್ರೀ ದೊರೆಸ್ವಾಮಿ ಅಯ್ಯಂಗಾರ್ ಮತ್ತು ಪಾರ್ಟಿಯಿಂದ ಸಂಗೀತವಾದನಂತರ ಶ್ರೀ ಬಿ. ಎಸ್. ಸುಬ್ಬರಾಯರು ಅಧ್ಯಕ್ಷತೆವಹಿಸಿದ್ದ ಮಹಾರಾಜರ ಆಪ್ತ ಕಾರ್ಯದರ್ಶಿ ಶ್ರೀ ಕೆ. ಶೇಷಗಿರಿರಾಯರು ಅತಿಥಿಗಳನ್ನು ಅಭಿನಂದಿಸಿದರು.

ಸರ್ಕಾರಕ್ಕೆ ಸಹಾಯವಿತ್ತ ಗೂಂಡಾಗಳಿಗೆ ೫೦೦ ರೂ. ಬಹುಮಾನ

ಭಾರತ ದೊಡನೆ ಫ್ರೆಂಚ್ ಸ್ವಾಸ್ಥ್ಯಗಳು ಐಕ್ಯವಾಗಬೇಕೆಂದು ಒಂದು ಮೆರವಣಿಗೆಯು ಹೊರಟಾಗ ಫ್ರೆಂಚ್ ಪೊಲೀಸ್ ಸಬ್‌ಇನ್ಸ್‌ಪೆಕ್ಟರೊಬ್ಬರು ಶಸ್ತ್ರಾಸ್ತ್ರಗಳೊಡನೆ ಬಂದಿದ್ದ ೨೫ ಜನಗೂಂಡಾಗಳ ಸಹಾಯದಿಂದ ಈ ಪ್ರದರ್ಶನಕಾರರ ಮೇಲೆ ಬಿದ್ದು ಗುಂಡುಹಾರಿಸಿದ ಪ್ರಕರಣವು ಹೊರಬಿದ್ದಿದೆ.

ಈ ಪ್ರಕರಣವು ಭಾರತ ಫ್ರೆಂಚ್ ಇಂಡಿಯಾ ಗಡಿಪ್ರದೇಶದಲ್ಲಿ ಭಾರತಕ್ಕೆ ಆಗಮಿಸಿದ್ದ ಕೆಲವು ನಿರಾಶ್ರಿತರು ನಡೆಸಿದಾಗ ಈ ಘಟನೆ ವರದಿಯಾಗಿದೆ. ವಿಷಯ ತಿಳಿದೊಡನೆಯೇ ರೆಡ್ಡಿ ಚಾವಡಿ ಗ್ರಾಮದ ಪೊಲೀಸಿನವರು ಸ್ಥಳಕ್ಕೆ ಧಾವಿಸಿದರು ಗೂಂಡಾಗಳೆಲ್ಲರೂ ಫ್ರೆಂಚ್ ಪ್ರಾಂತ್ಯಕ್ಕೆ ಪಲಾಯನ ಮಾಡಿದರು.

ಕಡೂರಿನ ಪೊಲೀಸ್ ಇನ್ಸ್‌ಪೆಕ್ಟರು ಮತ್ತು ಪೊಲೀಸ್ ಡೆಪ್ಯುಟಿಸೂಪರಿಂಟೆಂಡೆಂಟರು ತನಿಖೆ ನಡೆಸುತ್ತಲಿದ್ದಾರೆ.

ಈ ನಿರಾಶ್ರಿತರ ನಾಯಕ ಶ್ರೀ ದೊಡ್ಡಲಿಂಗಯ್ಯನವರನ್ನು ಹೇಗಾದರೂ ಮಾಡಿ ಫ್ರೆಂಚ್ ಪ್ರದೇಶಕ್ಕೆ ಕರೆದೊಯ್ಯಲು ಈ ಪ್ರಯತ್ನ ನಡೆಯಿತೆಂದು ಫ್ರೆಂಚ್ ಪೊಲೀಸಿನವರು ಈ ಗೊಂಡಾಗಳಿಗೆ ಸುಮಾರು ೫೦೦ ರೂ ಬಹುಮಾನವನ್ನು ಸಹ ಕೊಟ್ಟರೆಂದು ಹೇಳಲಾಗಿದೆ.

ಬೆಂಗಳೂರು ಕಾರ್ಪೊರೇಷನ್ ಕಮಿಷನರ ವರ್ಗಬಗ್ಗೆ ಪತ್ರಿಕಾ ವಿವರಣೆ

ಬೆಂಗಳೂರು ಕಾರ್ಪೊರೇಷನ್ನಿನಂತಹ ಪ್ರಮುಖ ಸಾರ್ವಜನಿಕ ಸೇವಾಕ್ಷೇತ್ರದ ಉನ್ನತಾಧಿಕಾರಿಗಳನ್ನು ಪದೇಪದೇ ಬದಲಾಯಿಸುವುದು ಅಲ್ಲಿಯ ಕಾರ್ಯಗಳಿಗೆ ತೊಂದರೆಯಾಗುವುದೆಂಬುದು ಸರ್ಕಾರ ಅರಿತಿದೆ ಸರ್ಕಾರದ ಕಾರ್ಯದರ್ಶಿಗಳ ಮತ್ತು ಜಿಲ್ಲಾಧಿಕಾರಿಗಳ ಸ್ಥಾನಗಳಿಗೆ ಐ. ಎ. ಎಸ್. ಅಧಿಕಾರಿಗಳನ್ನೇ ನೇಮಿಸಬೇಕಾಗಿರುವುದರಿಂದ ಖಾಲಿಬಿದ್ದ ಕೋಲಾರ ಜಿಲ್ಲಾಧಿಕಾರಿಗಳ ಸ್ಥಾನಕ್ಕೆ ಕಾರ್ಪೊರೇಷನ್ ಕಮೀಷನರ್ ಶ್ರೀ ಅಬ್ದುಲೇಕರರನ್ನು ವರ್ಗಮಾಡಬೇಕಾಯಿತು ಎಂದು ಸರ್ಕಾರದವರು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಇತ್ತೀಚೆಗೆ ಈ ವರ್ಗದ ಬಗ್ಗೆ ಪತ್ರಿಕೆಗಳಲ್ಲಿ ಟೀಕೆಗಳು ಬಂದುದರಿಂದ ಈ ಪ್ರಕಟಣೆ ಹೊರಬಿದ್ದಿದೆ.

ಎನ್. ಜಿ. ಓ. ಗಳ ಪರಿಸ್ಥಿತಿ

ಬೆಂಗಳೂರು ಅ. ೧೩

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಮೈಸೂರು ಎನ್. ಜಿ. ಓ. ಗಳ ಸಂಘದ ಕಾರ್ಯವರ್ಗದವರು ಭೇಟಿ ಮಾಡಿ ಹಿಂದೆ ಸಂಘವು ಸೂಚಿಸಿದ್ದ ಕೆಲವು ಸಲಹೆಗಳನ್ನು ಚರ್ಚಿಸಲಾಯಿತು.

ಈ ಸಲಹೆಗಳಲ್ಲಿ ಕೆಲವನ್ನು ಮುಖ್ಯಮಂತ್ರಿಗಳು ಒಪ್ಪಿಕೊಂಡು, ಅವರ ಸ್ಥಿತಿಗತಿ ಉತ್ತಮಗೊಳಿಸಲು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಮುಖ್ಯಮಂತ್ರಿಗಳು ಭರವಸೆ ಕೊಟ್ಟರೆಂದು ತಿಳಿಯಬರುತ್ತದೆ.

ಈ ಭೇಟಿ ಸಮಯದಲ್ಲಿ ರೆವಿನ್ಯೂ, ಗೃಹಸಚಿವರುಗಳೂ ಸರ್ಕಾರದ ಆರ್ಥಿಕ, ಗೃಹ ಮತ್ತು ಶ್ರಿಪ್ಸ ಕಾರ್ಯದರ್ಶಿಗಳೂ ಹಾಜರಿದ್ದರು.

ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಿ ನೌಕರರಿಗಿರುವ ಸಂಬಳ ಸಾರಿಗೆ ವ್ಯತ್ಯಾಸ ವಿಷಯದಲ್ಲಿ ದೆಹಲಿಯಲ್ಲಿ ಸೇರಲಿರುವ ಆರ್ಥಿಕಸಚಿವರ ಸಮ್ಮೇಳನದಲ್ಲಿ ಚರ್ಚೆ ನಡೆಸಿ ನಿವಾರಣೋಪಾಯವನ್ನು ಕಂಡು ಹಿಡಿಯಲು ಒತ್ತಾಯಮಾಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದರೆಂದು ಗೊತ್ತಾಗಿದೆ.

ಶಾಸನ ಸಭಾಧಿವೇಶನ

ಬೆಂಗಳೂರು ಅ ೧೩

ಶಾಸನಸಭೆ ಮತ್ತು ಕೌನ್ಸಿಲ್ ಅಧಿವೇಶನಗಳು ಇದೇ ೩೦ನೇ ತಾರೀಖಿನಿಂದ ೫ ದಿನಗಳಕಾಲ ನಡೆಯುತ್ತದೆ.

೨೨ನೇ ತಾರೀಖು ದೇಶದ ಆಹಾರ ಪರಿಸ್ಥಿತಿ ಮತ್ತು ಲೆವಿ ಪದ್ಧತಿ ಬಗ್ಗೆ ಶಿರಿಯಸಭೆಯಲ್ಲಿ ಚರ್ಚೆ ನಡೆಯುತ್ತದೆ. ಮಾರನೇದಿನ ಕೌನ್ಸಿಲ್‌ನಲ್ಲಿ ಚರ್ಚೆ ನಡೆಯುತ್ತದೆ.

ರೆವಿನ್ಯೂ ಸಚಿವರು ದೆಹಲಿಗೆ

ಬೆಂಗಳೂರು, ಅ. ೧೩

ದೆಹಲಿಯಲ್ಲಿ ನಡೆಯಲಿರುವ ಆರ್ಥಿಕ ಮಂತ್ರಿಗಳ ಸಭೆಯಲ್ಲಿ ಭಾಗವಹಿಸಲು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಈದಿನ ದೆಹಲಿಗೆ ಪ್ರಯಾಣ ಮಾಡಿದರು ಮುಖ್ಯಮಂತ್ರಿಗಳು ಇಲ್ಲಿಂದ ಮೊನ್ನೆಯೇ ಪ್ರಯಾಣ ಹೊರಟರು.

ಬಿರುದು ಪಡೆಯಲು ಅನುಮತಿ ನಿರಾಕರಣೆ

ನೇಪಾಳದಲ್ಲಿ ಭಾರತ ರಾಯಭಾರಿಯಾಗಿದ್ದ ಶ್ರೀ ಸಿ. ಪಿ. ಎನ್. ಸಿಂಗ್ ರವರಿಗೆ ನೇಪಾಳದ ದೊರೆ ರಾಜತ್ರಿಭುವನರವರು ಸುಪ್ರದೀಪಮಣಿ ಎಂದು ಬಿರುದನ್ನು ಕೊಡಲು ಭಾರತ ಸರ್ಕಾರದ ಅನುಮತಿಯನ್ನು ಕೇಳಿದ್ದರು ಪ್ರಶಸ್ತಿ ಕೊಡುವುದು ರಾಜ್ಯಾಂಗಕ್ಕೆ ವಿರುದ್ಧವಾದರಿಂದ ಭಾರತ ಸರ್ಕಾರವು ಅನುಮತಿಯನ್ನು ಕೊಡಲಿಲ್ಲ.

ನೆಹರೂ ದೆಹಲಿಗೆ

ಕಳೆದ ೧೦ ದಿನಗಳಿಂದ ದಕ್ಷಿಣ ಭಾರತ ಪ್ರವಾಸ ಕೈಗೊಂಡಿದ್ದ ಭಾರತ ಪ್ರಧಾನಿ ನೆಹರೂರವರು ಶನಿವಾರ ದೆಹಲಿಗೆ ಮದರಾಸಿನಿಂದ ಹಿಂತಿರುಗಿದರು.

ರೇಷನಿಂಗ್ ಅಧಿಕಾರಿಗಳ ವರ್ಗ

ಮೈಸೂರು ನಗರದ ರೇಷನಿಂಗ್ ಅಧಿಕಾರಿಗಳಾಗಿರುವ ಶ್ರೀ ಹೆಚ್. ಜಿ. ವಿಜಯರಾಘವರೆಡ್ಡಿಯವರನ್ನು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ಅಸಿಸ್ಟೆಂಟ್ ಡೈರೆಕ್ಟರಾಗಿ ವರ್ಗಮಾಡಲಾಗಿದೆ.

ಜನಮತಗಣನೆ ಸಾಧ್ಯವಿಲ್ಲ

ಈಗಿನ ಪರಿಸ್ಥಿತಿಯಲ್ಲಿ ಫ್ರೆಂಚ್ ಸ್ವಾಸ್ಥ್ಯಗಳಲ್ಲಿ ಜನಮತಗಣನೆ ಸಾಧ್ಯವಿಲ್ಲ. ನಡೆದರೂ ಉತ್ತಮರೀತಿ ನಡೆಯುವುದು ಅಸಾಧ್ಯವೆಂದು ಭಾರತಸರ್ಕಾರವು ಫ್ರೆಂಚ್ ಸರ್ಕಾರಕ್ಕೆ ಒಂದು ಪತ್ರವನ್ನು ಕಳುಹಿಸಿರುವುದಾಗಿ ವರದಿಯಾಗಿದೆ.

ಇತ್ತೀಚೆಗೆ ಈ ಸ್ವಾಸ್ಥ್ಯಗಳಲ್ಲಿ ನಡೆಯುತ್ತಿರುವ ಹಿಂಸಾಕೃತ್ಯ ಘಟನೆಗಳ ಬಗ್ಗೆ ಭಾರತವು ತೀವ್ರವಾಗಿ ತನ್ನ ಪ್ರತಿಭಟನೆಯನ್ನು ಈ ಪತ್ರದಲ್ಲಿ ವ್ಯಕ್ತಪಡಿಸಿರುವುದಾಗಿ ಗೊತ್ತಾಗಿದೆ.

ಮುಷ್ಕರ ನ್ಯಾಯಬಾಹಿರ

ಬಂಗಾಳದಲ್ಲಿ ಹಡಗು ಕೆಲಸಗಾರರು ಮುಷ್ಕರ ಹೂಡಿರುವುದು ನ್ಯಾಯಬಾಹಿರವೆಂದು ಪಶ್ಚಿಮಬಂಗಾಳ ಸರ್ಕಾರವು ತೀರ್ಮಾನಿಸಿದೆಯೆಂದು ಹೇಳಲಾಗಿದೆ.

ರಣಜಿತ್
10-10-52 ರಿಂದ
ಪ್ರತಿದಿನ ೩ ಆಟಗಳು
ಫಾಲ್ ಆಫ್—ಬರ್ಲಿನ್ [ಹಿಂದಿ]

ಅಪೇರ ೧೦-೧೦-೫೨ ರಿಂದ ಅಮೋಘಪ್ರಾರಂಭ
ಪ್ರತಿದಿನ ಮೂರು ಆಟಗಳು

ಸಾಹುಕಾರ
[ತೆಲುಗು]
ಪಾತ್ರ:—ಎನ್. ಟಿ. ರಾಮರಾವ್, ಶಾಂತಕುಮಾರಿ, ಜಾನಕಿ.

17-10-52 ರಿಂದ ಅಮೋಘ ಪ್ರಾರಂಭ
* ಮಾಪಿಳ್ಳೆ *
ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

ವುಡ್‌ಲಾಂಡ್ಸ್
ದುಪ್ಪಟ
ತಾರೀಖು 10-10-52 ರಿಂದ
ಅಮೋಘ ೨ನೇ ವಾರ
ಪ್ರತಿದಿನ ಮೂರು ಪ್ರದರ್ಶನ
ಪಾತ್ರ—ನೂರ್‌ಜಹಾನ್, ಅಜಯಕುಮಾರ್, ಗುಲಾಮ್ ಮಹಮದ್

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 44

೧೪-೧೦-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಭಾರತಕ್ಕೆ ಚೈನಾದಿಂದ ಪುನಃ ೫೦೦೦೦ ಟನ್ ಅಕ್ಕಿ

ಭಾರತಕ್ಕೆ ಚೈನಾವು ಪುನಃ ೫೦೦೦೦ ಟನ್ ಅಕ್ಕಿಯನ್ನು ಸರಬರಾಜುಮಾಡುವಂತೆ ಉಭಯ ರಾಷ್ಟ್ರಗಳ ಪ್ರತಿನಿಧಿಗಳು ನಿನ್ನೆಯದಿನ ಪೀಕಿಂಗ್‌ನಲ್ಲಿ ಒಪ್ಪಂದಪತ್ರಕ್ಕೆ ಸಹಿಹಾಕಿರುವುದಾಗಿ ಗೊತ್ತಾಗಿದೆ ಈ ಸಮಯದಲ್ಲಿ ವಿದೇಶಾಂಗ ಚೈನಾ ಉಪಸಚಿವರು ಮಾತನಾಡುತ್ತಾ ಉಭಯ ರಾಷ್ಟ್ರಗಳು ತಮ್ಮ ವಾಣಿಜ್ಯಾಭಿವೃದ್ಧಿ ಮಾಡಿಕೊಳ್ಳಲು ಇನ್ನೂ ಅನೇಕ ವಸ್ತುಗಳು ಕೊಂಡುಕೊಳ್ಳಲು ಅವಕಾಶವಿದೆ.

ಉಭಯ ದೇಶಗಳ ಸೌಹಾರ್ದವು ಹೆಚ್ಚಲು ತಮ್ಮಲ್ಲಿ ಹೆಚ್ಚಾಗಿ ದಾಸ್ತಾನು ಇಲ್ಲದಿದ್ದಾಗೂ ಚೈನಾ ಅಕ್ಕಿಯನ್ನು ಭಾರತಕ್ಕೆ ಸರಬರಾಯಿ ಮಾಡಲು ಒಪ್ಪಿರುವುದಾಗಿ ಅವರು ತಿಳಿಸಿದರು.

ಹಗಲಿನಲ್ಲಿ ೩೪೦೦ ರೂ. ದರೋಡೆ

ಮೈಸೂರು, ಅ. ೧೪

ರಾಜಧಾನಿಯ ಅಠಾರಾಕಛೇರಿಯ ಆವರಣದಲ್ಲಿ ನಿನ್ನೆ ಮಧ್ಯಾಹ್ನ ೩೪೦೦ ರೂ. ದರೋಡೆಯಾಯಿತೆಂದು ವರದಿಯಾಗಿದೆ.

ಕೃಷ್ಣರಾಜಸಾಗರದ ಸಹಕಾರಸಂಘದ ಗುಮಾಸ್ತರಾದ ಶ್ರೀ ರಘುನಾಥ ಅಯ್ಯಂಗಾರ್ಯರು ಆಹಾರಸರಬರಾಜು ಸಂಬಂಧದಲ್ಲಿ ಖಜಾನೆಗೆ ಕಟ್ಟಲು ೩೪೦೦ ರೂ. ತಂದು ಜಿಲ್ಲಾ ಫುಡ್ ಅಸಿಸ್ಟೆಂಟರ ಕಛೇರಿಯ ಮುಂಭಾಗದಲ್ಲಿ ಹಣದ ಚೀಲದ ಸಮೇತ ಕುಳಿತಿದ್ದರು. ಆ ಸಮಯದಲ್ಲಿ ಒಬ್ಬ ಅಪರಿಚಿತನು ಅವರಬಳಿಗೆಬಂದು ಅವರ ಕೋಟಿನ ಹಿಂಭಾಗದಲ್ಲಿ ಏನೋ ಅಂಟಿಕೊಂಡಿದೆಯೆಂದು ತಿಳಿಸಲು. ಗುಮಾಸ್ತರು ಕೋಟನ್ನು ಬಿಚ್ಚಲು ಪ್ರಯತ್ನಿಸುತ್ತಿದ್ದಾಗ, ಪಕ್ಕದಲ್ಲಿದ್ದ ಹಣದ ಚೀಲವನ್ನು ವ್ಯಕ್ತಿಯು ಎತ್ತಿಕೊಂಡು ಪರಾರಿಯಾದನು. ಕೂಡಲೇ ಲಕ್ಷ್ಮೀಪುರಂ ಪೋಲೀಸರು ಬಂದು ತನಿಖೆ ನಡೆಸಿದರು. ವ್ಯಕ್ತಿಯು ಇನ್ನೂ ಪತ್ತೆ ಆಗಿಲ್ಲ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೂ ಮುಖ್ಯಮಂತ್ರಿಗೂ ಬಾಂಧವ್ಯ ಇರಬೇಕು

ಮುಖ್ಯಮಂತ್ರಿಗಳಿಗೂ ಆಯಾ ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗಳಿಗೂ ಆಡಳಿತ ವಿಚಾರಗಳಲ್ಲಿ ಹೆಚ್ಚು ಸಂಪರ್ಕ ಮತ್ತು ಬಾಂಧವ್ಯ ಇರಬೇಕೆಂದೂ, ಪ್ರಮುಖ ಆಡಳಿತ ಪ್ರಶ್ನೆಗಳಲ್ಲಿ ಕಾಂಗ್ರೆಸ್ಸಿನ ಅಭಿಪ್ರಾಯವನ್ನು ಪಡೆಯಬೇಕೆಂದೂ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂರವರಿಗೆ ತಿಳಿಸಿರುವುದಾಗಿ ಶ್ರೀ ಹೆಚ್. ಸಿ. ದಾಸಪ್ಪನವರು ಹೇಳಿದ್ದಾರೆ.

ಚೀಣಾ ಮೇಲೆ ಆರ್ಥಿಕ ಬಹಿಷ್ಕಾರಕ್ಕೆ ವಿರೋಧ

ಕೊರಿಯಾದಲ್ಲಿ ಕೂಡಲೇ ಶಾಂತಿಸಂಧಾನಕ್ಕೆ ಒಪ್ಪದಿದ್ದ ಪಕ್ಷದಲ್ಲಿ ಚೀಣಾ ಮೇಲೆ ಆರ್ಥಿಕ ಬಹಿಷ್ಕಾರ ಹಾಕಬೇಕೆಂಬ ಅಮೆರಿಕದ ಸಲಹೆಗೆ ಬ್ರಿಟನ್ನು ವಿರೋಧಿಸಿದೆಯೆಂದೂ, ಆದ್ದರಿಂದ ಆ ವಿಷಯವನ್ನು ವಿಶ್ವಸಂಸ್ಥೆ ಮುಂದೆ ಅಮೆರಿಕವು ತರುವುದಿಲ್ಲವೆಂದೂ ಹೇಳಲಾಗಿದೆ.

ಫರೂಕರನ್ನು ವಾಪಸ್ ಕರೆಸಲು ಪ್ರಯತ್ನ

ಈ ಜಿಪ್ಟಿನ ಸೈನ್ಯಾಧಿಕಾರಿ ಅಬ್ದುಲ್ ಖಾದರ್ ಎಂಬುವರ ಕೊಲೆಗೆ ಮಾಜಿ ದೊರೆ ಫರೂಕ್‌ರವರು ಕಾರಣರೆಂದು ಅವರ ಆಪ್ತನೌಕರನಾಗಿದ್ದ ಮಹಮದ್ ಅಕಾನ್‌ ತಿಳಿಸಿರುವನೆಂದೂ, ಅದರ ಮೇಲೆ ಫರೂಕರನ್ನು ವಿಚಾರಣೆಗೆ ಗುರಿಪಡಿಸಲು ಈಜಿಪ್ಟ್ ಸರ್ಕಾರ ನಿರ್ಧರಿಸಿರುವುದೆಂದೂ ವರದಿಯಾಗಿದೆ ಈ ಸಂಬಂಧದಲ್ಲಿ ಇಟಲಿಯಿಂದ ಅವರನ್ನು ಈಜಿಪ್ಟಿಗೆ ವಾಪಸು ಕಳುಹಿಸುವಂತೆ ಇಟಲಿಯ ಸರ್ಕಾರವನ್ನು ಕೋರುವುದಾಗಿಯೂ ಹೇಳಲಾಗಿದೆ.

ಆಶ್ರಮದಲ್ಲಿ ಮಹಿಳೆಯರ ಮಾರಾಟ

ಇಂದೂರಿನ ಸನವಾಡ್ ಎಂಬಲ್ಲಿನ ಮಹಿಳೆಯ ಆಶ್ರಮವೊಂದರಲ್ಲಿ ವ್ಯಭಿಚಾರಕ್ಕಾಗಿ ಮಹಿಳೆಯರನ್ನು ಮಾರಾಟ ಮಾಡುತ್ತಿದ್ದರೆಂದು ಪೊಲೀಸರು ಅಲ್ಲಿನ ೧೨ ಮಂದಿ ಮಹಿಳೆಯರನ್ನು ವಶಪಡಿಸಿಕೊಂಡಿರುತ್ತಾರೆ. ಆಶ್ರಮವನ್ನು ಶೋಧಿಸಿದಾಗ ಬಂದೂಕಗಳು, ಬಾಕುಗಳು ಮತ್ತು ಇತರ ಶಸ್ತ್ರಾಸ್ತ್ರಗಳ ಪತ್ತೆ ಆದವು ಸಂಸ್ಥಾನದ ನಾನಾ ಭಾಗಗಳಿಂದ ಮಹಿಳೆಯರನ್ನು ಮರಳುಮಾಡಿ ಆಶ್ರಮಕ್ಕೆ ಕರೆತಂದು ಅನಂತರ ಅವರುಗಳನ್ನು ಉತ್ತರ ಪ್ರದೇಶದಲ್ಲಿ ಮಾರುತ್ತಿದ್ದರೆಂದೂ. ಆರೀತಿ ನಡೆಸುತ್ತಿದ್ದ ೬ ಮಂದಿ ಅಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿದೆಯೆಂದೂ ಹೇಳಲಾಗಿದೆ.

ಸೂಚನೆ

ಸಮಾಚಾರ ಪತ್ರಿಕೆ ಕಾರ್ಯಾಲಯವನ್ನು ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಿಂದ ಜಗನ್ಮೋಹನಪ್ಯಾಲೇಸ್ ರಸ್ತೆಯಲ್ಲಿ ಮೋತೀಖಾನೆ ಕಟ್ಟಡಕ್ಕೆ [ಸರ್ಕಾರಿ ರೇಷನ್‌ಡಿಪೊ ಮಹಡಿ] ಬದಲಾಯಿಸಲಾಗಿದೆ.

ಸಂಪಾದಕ.

ಸತ್ತಮೇಲೆಆಸ್ಪತ್ರೆಗೆ ಸೇರಲು ಅಪ್ಪಣೆ

ಮದ್ರಾಸ್‌ಪ್ರಾಂತ್ಯದ ತಿರುಪೂರಿನ ಶ್ರೀ ಎಂ. ಅರುಣಾಚಲಂ ಚೆಟ್ಟಿಯಾರ್ ಎಂಬುವರು ಕ್ಷಯರೋಗದಿಂದ ನರಳುತ್ತಿದ್ದು ನಾಲ್ಕುತಿಂಗಳಹಿಂದೆ ಆಸ್ಪತ್ರೆಗೆ ಸೇರಲು ಅರ್ಜಿ ಹಾಕಿಕೊಂಡಿದ್ದನು. ಆದರೆ ಆತನು ತನ್ನ ಮನೆಯಲ್ಲೇ ಸತ್ತು ನಾಲ್ಕುತಿಂಗಳಾದನಂತರ ಆತನು ಆಸ್ಪತ್ರೆಗೆ ಸೇರಲು ಅವಕಾಶ ಕೊಡಲಾಗಿದೆಯೆಂದು ಈಗ ಪತ್ರ ಬಂದಿದೆ.

ಆರ್ಥಿಕಸಚಿವರ ಸಮ್ಮೇಳನ

ಭಾರತದ ಎಲ್ಲಾ ಆರ್ಥಿಕ ಸಚಿವರುಗಳ ಸಮ್ಮೇಳನವು ಈದಿನ ಹೊಸದೇಹಲಿಯಲ್ಲಿ ಕೇಂದ್ರ ಆರ್ಥಿಕಸಚಿವ ಶ್ರೀ ಸಿ. ಡಿ. ದೇಶಮುಖ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ೩೫ ಜನ ಸಚಿವರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ. ಅವರಲ್ಲಿ ಮುಖ್ಯಮಂತ್ರಿಗಳೂ ಇದ್ದಾರೆ.

೪೭೨ ಪುಟಗಳ ವಾರಪತ್ರಿಕೆ

ಅಮೆರಿಕದ ನ್ಯೂಯಾರ್ಕ್ ಸಂಡೆ ನ್ಯೂಸ್ ದಿನಪತ್ರಿಕೆಯು ೪೭೨ ಪುಟಗಳನ್ನೊಳಗೊಂಡ ವಾರಪತ್ರಿಕೆಯನ್ನು ಮೊನ್ನೆದಿನ ಪ್ರಕಟಿಸಿದೆ.

ಸರ್ಕಾರಿ ನೌಕರರು ಖಾದಿಯನ್ನೇ ಧರಿಸಬೇಕು

೨೦೦ ರೂಪಾಯಿ ಮತ್ತು ಅದಕ್ಕಿಂತ ಕಡಿಮೆ ಸಂಬಳವನ್ನು ಪಡೆಯುತ್ತಿರುವ ಸರ್ಕಾರಿ ನೌಕರರೆಲ್ಲರೂ ಖಾದಿಬಟ್ಟೆಯನ್ನೇ ಕಡ್ಡಾಯವಾಗಿ ಧರಿಸಬೇಕೆಂದು ಉತ್ತರಪ್ರದೇಶ ಸರ್ಕಾರವು ಸದ್ಯದಲ್ಲೇ ಒಂದು ಆಜ್ಞೆಯನ್ನು ಹೊರಡಿಸುವುದಾಗಿ ಗೊತ್ತಾಗಿದೆ.

ಲೆವಿಪದ್ಧತಿ ಜಾರಿಗೆ ತರಕೂಡದು

ಮೈಸೂರು ಅ. ೧೪

ಸರ್ಕಾರದವರು ಆಹಾರಧಾನ್ಯಗಳ ಸಂಗ್ರಹಣೆ ಬಗ್ಗೆ ಹಿಂದಿನ ಪದ್ಧತಿಯನ್ನು ಬಿಟ್ಟು ನೂತನ ಲೆವಿ ಪದ್ಧತಿಯನ್ನು ಜಾರಿಗೆ ತರುವುದರಿಂದ ಬಡರೈತರಿಗೆ ತುಂಬಾ ಕಷ್ಟವಾಗುವುದೆಂದೂ, ಆದ್ದರಿಂದ ಅದನ್ನು ಜಾರಿಗೆ ತರಕೂಡದೆಂದೂ ಶ್ರೀ ಎಂ. ಆರ್. ಸಿ. ಬಸಪ್ಪನವರು ಮನವಿ ಮಾಡಿದ್ದಾರೆ. ಈ ನೂತನ ಪದ್ಧತಿಯಿಂದ ದೊಡ್ಡದೊಡ್ಡ ಜಮೀನುದಾರರಿಗೆ ಹೆಚ್ಚು ಲಾಭ ಉಂಟಾಗಿ ಕಾಳಸಂತೆಯಲ್ಲಿ ಆಹಾರಧಾನ್ಯಗಳನ್ನು ಮಾರಲು ಅನುಕೂಲವಾಗುವುದು. ರೈತರನ್ನು ಗೋಳಿಗೆಹಾಕಿ ಮೂರು ನಗರಗಳಿಗೆ ಆಹಾರ ಧಾನ್ಯಗಳನ್ನು ಹಂಚಲು ಈ ನೂತನ ಪದ್ಧತಿ ಏತಕ್ಕೆ ಜಾರಿಗೆ ಬರಬೇಕು. ಎಲ್ಲರಿಂದಲೂ ಅವರ ಸ್ವಂತ ಉಪಯೋಗಕ್ಕಾಗಿ ಬೇಕಾದುದನ್ನು ಬಿಟ್ಟು ಉಳಿಯುವ ದವಸವನ್ನೆಲ್ಲಾ ವಸೂಲುಮಾಡುವುದು ಸುಕ್ರಮವೆಂದು ಅವರು ತಿಳಿಸಿರುತ್ತಾರೆ.

ವಿಶ್ವಶಾಂತಿಗೆ ಪಂಚರಾಷ್ಟ್ರಗಳ ಸಮ್ಮೇಳನ

ಪಂಚರಾಷ್ಟ್ರಗಳ ಸಮ್ಮೇಳನವೊಂದನ್ನು ಏರ್ಪಡಿಸಿ ಅದರ ಮೂಲಕ ವಿಶ್ವದ ಪ್ರಮುಖ ಸಮಸ್ಯೆ ಮತ್ತು ಯುದ್ಧದ ಭೀತಿ ನಿವಾರಣೆಗಳು ಆಗಬೇಕೆಂದೂ ಮತ್ತು ಪ್ರಪಂಚ ಶಾಂತಿಗೆ ಸಾಧಕವಾಗುವಂತೆ ನಿಶ್ಶಸ್ತ್ರೀಕರಣ ಯೋಜನೆ ಜಾರಿಗೆ ಬರಬೇಕೆಂದೂ, ಜಗತ್ತಿನ ಎಲ್ಲ ರಾಷ್ಟ್ರಗಳ ಆರ್ಥಿಕ ಸಹಕಾರ ಆಗಬೇಕೆಂದೂ, ಚೀಣಾದ ಪಿಕಿಂಗ್‌ನಲ್ಲಿ ನಡೆದ ಏಷ್ಯಾ ರಾಷ್ಟ್ರಗಳ ಶಾಂತಿ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗಿದೆ.

ಪಾಸ್‌ಪೋರ್ಟ್ ವ್ಯವಸ್ಥೆ ಮುಂದುವರಿಸಲು ಭಾರತದ ನಿ ರಾ ಕ ರ ಣೆ

ಅಸಂಖ್ಯಾತವಾಗಿ ಭಾರತಕ್ಕೆ ವಲಸೆಗಾರರು ಬರುತ್ತಿರುವುದೇ ಮುಖ್ಯ ಕಾರಣ

ಇದೇ ೧೫ ನೇ ತಾರೀಖು ಭಾರತ-ಪಾಕೀಸ್ಥಾನನಡುವೆ ಜಾರಿಗೆಬರಬೇಕಾಗಿದ್ದ ಪಾಸ್ ಪೋರ್ಟ್ ವ್ಯವಸ್ಥೆಯನ್ನು ಇನ್ನು ಒಂದುತಿಂಗಳು ಮುಂದುವರಿಸಬೇಕೆಂದು ಪಾಕೀಸ್ಥಾನ ಸರ್ಕಾರವು ಭಾರತ ಸರ್ಕಾರಕ್ಕೆ ಮಾಡಿದ್ದ ಮನವಿಯನ್ನು ಭಾರತ ಸರ್ಕಾರವು ತಿರಸ್ಕರಿಸಿದೆ. ಪಾಸ್‌ಪೋರ್ಟ್ ವ್ಯವಸ್ಥೆಯನ್ನು ಮುಂದುವರಿಸಲಾಗುತ್ತದೆ ಎಂಬ ವಿಷಯ ಪಾಕೀಸ್ಥಾನದಲ್ಲಿ ಹೊರಬಿದ್ದೊಡನೆಯೇ ಭಾರತಕ್ಕೆ ವಲಸೆಗಾರರ ಸಂಖ್ಯೆಯು ವಿಪರೀತವಾಗಿ ಏರುತ್ತಿದೆ. ಅಲ್ಲದೆ ಕೆಲವು ವೃತ್ತಗಳಲ್ಲಿ ಜನರಲ್ಲಿ ಭಯೋತ್ಪಾದಕ ಕಾರ್ಯಗಳು ನಡೆಯುತ್ತಿವೆ. ಈ ಕಾರಣಗಳಿಗಾಗಿ ಪಾಸ್‌ಪೋರ್ಟ್ ವ್ಯವಸ್ಥೆಯನ್ನು ಮುಂದುವರಿಸಲಾಗುವುದಿಲ್ಲವೆಂದು ಭಾರತವು ಪಾಕೀಸ್ತಾನಕ್ಕೆ ತಿಳಿಸಿದೆ.

ಭಾರತ ಪ್ರದೇಶದಲ್ಲಿ ಈದಿನ ಮಧ್ಯರಾತ್ರಿಯಿಂದ ನೂತನ ಏರ್ಪಾಡು ಜಾರಿಗೆ ಬರಲಿದೆ.

ಇಲ್ಲಿಯವರೆಗೆ ಪಾಕೀಸ್ಥಾನದಿಂದ ಭಾರತಕ್ಕೆ ಬಂದಿರುವ ಅಸಂಖ್ಯಾತ ವಲಸೆಗಾರರ ಬಗ್ಗೆ ಕೇಂದ್ರಸರ್ಕಾರವು ಪಾಕೀಸ್ತಾನಕ್ಕೆ ಒಂದು ಪತ್ರವನ್ನು ಬರೆದು ಪರಿಸ್ಥಿತಿಯನ್ನು ಅವರಿಗೆ ವಿವರಿಸಿ, ವಲಸೆಗಾರರು ಬರುವುದನ್ನು ತಪ್ಪಿಸಬೇಕೆಂದೂ ಕೂಡಲೇ ಉಭಯರಾಷ್ಟ್ರಗಳ ಅಲ್ಪಸಂಖ್ಯಾತರ ಮಂತ್ರಿಗಳು ಸಭೆ ಸೇರಿ ವಿಷಯ ಪರಿಶೀಲಿಸಬೇಕೆಂದೂ ಸೂಚಿಸಿತ್ತು ಇನ್ನು ಇದಕ್ಕೆ ಉತ್ತರ ಬಂದಿಲ್ಲ.

ಪೂರ್ವ ಪಾಕೀಸ್ತಾನದಲ್ಲಿರುವ ಕೈಗಾರಿಕಾ ಪ್ರವೀಣರಲ್ಲಿ ಅನೇಕರು, ಈ ಹೊಸ ವ್ಯವಸ್ಥೆಯಿಂದ ತಮಗೆ ತೊಂದರೆಯಾಗುವುದೆಂದು ಪಾಕೀಸ್ತಾನವನ್ನೇ ಬಿಟ್ಟು ಭಾರತಕ್ಕೆ ಬರಲು ತಮ್ಮ ಹುದ್ದೆಗಳಿಗೆಲ್ಲಾ ರಾಜೀನಾಮೆ ಕೊಡುತ್ತಿರುವರೆಂದೂ ಇದರಿಂದ ದೇಶದ ಕಾರ್ಯಗಳಿಗೆ ಕಷ್ಟವಾಗುವುದರಿಂದ ಪಾಕೀಸ್ತಾನ ಸರಕಾರವು ಈ ವ್ಯವಸ್ಥೆಯನ್ನು ಮುಂದುವರಿಸಲು ಆಲೋಚಿಸಿ ಭಾರತಸರ್ಕಾರಕ್ಕೆ ಪತ್ರ ಬರೆದಿತ್ತು.

ಸರ್ ಮ್ಯಾರಿಸ್ ಗ್ವೈಯರ್‌ರವರ ನಿಧನ

ಭಾರತ ಶ್ರೇಷ್ಠ ನ್ಯಾಯಾಲಯದ ಪ್ರಥಮ ಮುಖ್ಯ ನ್ಯಾಯಾಧೀಶರಾಗಿದ್ದ ಸರ್ ಮ್ಯಾರಿಸ್‌ಗ್ವೈಯರ್‌ರವರು ಲಂಡನ್ನಿನಲ್ಲಿ ನಿಧನರಾದರು. ಇವರಿಗೆ ೭೪ ವರ್ಷ ವಯಸ್ಸು ಇವರು ಭಾರತದಲ್ಲಿ ೧೩ ವರ್ಷಕಾಲ ನ್ಯಾಯಾಶಾಖೆಯಲ್ಲಿ ಕೆಲಸಮಾಡಿದ್ದರು. ವಿಶ್ವದ ರಾಜ್ಯಾಂಗ ಪ್ರವೀಣರಲ್ಲಿ ಇವರೊಬ್ಬರಾಗಿದ್ದರು. ದೆಹಲಿ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾಗಿಯೂ ಇದ್ದರು.

ಸಲಹೆಗಾರರ ಹುದ್ದೆ ರದ್ದು

ಬಿ. ಸಂಸ್ಥಾನಗಳಿಗೆ ಸಲಹೆಗಾರರ ಮತ್ತು ಪ್ರಾದೇಶಿಕ ಕಮೀಷನರುಗಳ ಹುದ್ದೆಗಳನ್ನು ಕೇಂದ್ರ ಸರ್ಕಾರವು ರದ್ದುಗೊಳಿಸಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಬೀಹಾರ್, ಉತ್ತರಪ್ರದೇಶ ಮತ್ತು ಪಶ್ಚಿಮಬಂಗಾಳದಲ್ಲಿ ತಮ್ಮ ಆಸ್ತಿಪಾಸ್ತಿಗಳನ್ನು ಹೊಂದಿ ಪೂರ್ವಪಾಕೀಸ್ತಾನದಲ್ಲಿ ಕೆಲಸಮಾಡುತ್ತಿರುವ ೧೦೦೦೦ಕ್ಕೆ ಮೇಲ್ಪಟ್ಟ ಮುಸ್ಲಿಮರು ಈ ಹೊಸ ವ್ಯವಸ್ಥೆಗೆ ವಿರೋಧ ಸೂಚಿಸಿದ್ದಾಗ್ಯೂ ಪಾಕೀಸ್ತಾನ ಸರ್ಕಾರವು ಅದನ್ನು ಗಮನಿಸಲಿಲ್ಲವಾಗಿ ಇವರಲ್ಲಿ ಅನೇಕರು ಭಾರತಕ್ಕೆ ಬರಲು ಅನುವಾಗುತ್ತಿದ್ದಾರೆ.

ಕೈಗಾರಿಕಾ ಪ್ರವೀಣರೂ ರೈಲ್ವೆಯಲ್ಲಿ ಕೆಲಸಮಾಡುವ ಡ್ರೈವರುಗಳೂ ಮುಂತಾದ ಸುಮಾರು ೭೦೦ ಪರಿಣಿತರು ತಮ್ಮ ಹುದ್ದೆಗಳಿಗೆ ರಾಜೀನಾಮೆಕೊಟ್ಟು ಭಾರತಕ್ಕೆ ಬರುವುದಾಗಿ ತಿಳಿಸಿರುವುದು ಪಾಕ್ ಸರ್ಕಾರಕ್ಕೆ ವಿಶೇಷ ಭೀತಿಯನ್ನುಂಟುಮಾಡಿದೆ. ಈ ಪಾಸ್‌ಪೋರ್ಟ್ ವ್ಯವಸ್ಥೆಯು ಇರಕೂಡದೆಂಬುದೇ ಜನಾಭಿಪ್ರಾಯವಾಗಿದೆ.

ಮೈಸೂರಿನಲ್ಲಿ ಭೂದಾನ ಯಜ್ಞ

ಮೈಸೂರು ಸಂಸ್ಥಾನದಲ್ಲಿ ಆಚಾರ್ಯ ವಿನೋಬಾಭಾವೆಯವರ ಭೂದಾನಯಜ್ಞ ಕಾರ್ಯವನ್ನು ಕೈಗೊಳ್ಳುವ ವಿಷಯವನ್ನು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪರಿಶೀಲಿಸಿ, ಅದನ್ನು ಒಂದು ಸಂಯುಕ್ತ ಸಂಸ್ಥೆ ಕೈಗೊಳ್ಳುವುದು ಸೂಕ್ತವೆಂದೂ, ಸಧ್ಯಕ್ಕೆ ಎರಡುತಿಂಗಳಕಾಲ ಈಬಗ್ಗೆ ಪ್ರಚಾರ ಕ್ರಮವನ್ನು ಕೈಗೊಂಡು ಅನಂತರ ಒಂದು ಸಮ್ಮೇಳನನಡೆಸಬೇಕೆಂದು ನಿರ್ಧರಿಸಲಾಯಿತೆಂದೂ, ಅಧ್ಯಕ್ಷ ಶ್ರೀ ದಾಸಪ್ಪನವರು ತಿಳಿಸಿರುತ್ತಾರೆ.

ಜೀವನ ಪರಿಚಯ-ಧ್ಯೇಯಗಳ ಭಾಷಣ ಸ್ಪರ್ಧೆ

ಮೈಸೂರು ೧೪

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಮೊನ್ನೆ ಜೀವನ ಪರಿಚಯ ಮತ್ತು ಧ್ಯೇಯಗಳ ಭಾಷಣ ಸ್ಪರ್ಧೆಯು ಶ್ರೀ ಕೆ. ಕೃಷ್ಣಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು ನಿಲಯದ ೨೪ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು ಸ್ಪರ್ಧೆಯಲ್ಲಿ ಪ್ರಥಮಬಹುಮಾನವು ಶ್ರೀ ಕೆ. ಎಸ್. ಕೃಷ್ಣಮೂರ್ತಿ, ಎರಡನೇ ಬಹುಮಾನ ಶ್ರೀ ಬಲರಾಮ್. ಮತ್ತು ಮೂರನೇ ಬಹುಮಾನ ಶ್ರೀ ಹೆಚ್. ಸದಾಶಿವಯ್ಯನವರಿಗೂ ದೊರೆತವು ಶ್ರೀಗಳಾದ ಶಾಂತರಾಜು ಮತ್ತು ಕರುಣಾಕರ್‌ರವರುಗಳು ಪರೀಕ್ಷಕರಾಗಿದ್ದರು.

ಖದ್ದರ್‌ಪರಸ್ಪರ ಸಹಾಯ ಸಂಘ

ಮೈಸೂರು ಖದ್ದರ್ ಪರಸ್ಪರ ಸಹಕಾರಸಂಘದ ವಾರ್ಷಿಕಸಭೆಯು ಮೊನ್ನೆ ಬೆಳಗ್ಗೆ ಶ್ರೀ ಎಂ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಪುಸ್ತಕ ಸಾಲಿಗೆ ಶ್ರೀ ಎಸ್. ಶ್ರೀರಂಗಾಚಾರ್‌ರವರು ಅಧ್ಯಕ್ಷ, ಶ್ರೀ ಎಸ್.ಎಸ್. ಶಾಸ್ತ್ರಿಯವರು ಉಪಾಧ್ಯಕ್ಷ ಮತ್ತು ಶ್ರೀ ಆರ್. ಶ್ರೀನಿವಾಸಚಾರ್ಯರು ಗೌರವಕಾರ್ಯದರ್ಶಿಗಳಾಗಿ ಅವಿರೋಧವಾಗಿ ಚುನಾಯಿತರಾದರು.

ಹೆಚ್. ಜಿ ವಿ. ರೆಡ್ಡಿ

ಕೈಗಾರಿಕಾ ಮತ್ತು ವಾಣಿಜ್ಯ ಇಲಾಖಾ ಅಸಿಸ್ಟೆಂಟ್ ಡೈರೆಕ್ಟರಾಗಿ ವರ್ಗವಾಗಿರುವ ಮೈಸೂರಿನ ರೇಷನಿಂಗ್ ಆಫೀಸರಾದ ಶ್ರೀ ಹೆಚ್. ಜಿ. ವಿಜಯರಾಘವ ರೆಡ್ಡಿಯವರು ತಮ್ಮ ಅಧಿಕಾರವನ್ನು ಅಸಿಸ್ಟೆಂಟ್ ರೇಷನ್ ಆಫೀಸರ್ ಶ್ರೀ ಶ್ರೀಕಂಠಯ್ಯನವರಿಗೆ ನಿನ್ನೆ ಬೆಳಗ್ಗೆ ವಹಿಸಿಕೊಟ್ಟು ತಮ್ಮ ನೂತನ ಹುದ್ದೆಯನ್ನು ವಹಿಸಿಕೊಳ್ಳಲು ಬೆಂಗಳೂರಿಗೆ ತೆರಳಿದರು.

ಪದ್ಮಾಲಯಕ್ಕೆ ಸರ್ಕಾರಿ ಕಛೇರಿ ವರ್ಗ

ಹಲವಾರು ವರ್ಷಗಳಿಂದ ಸಚಿವರುಗಳ ಮೈಸೂರು ಅಧಿಕೃತ ನಿವಾಸವಾಗಿದ್ದ ಪದ್ಮಾಲಯಕ್ಕೆ ನಂಜನಗೂಡು ಡಿವಿಜನ್ನಿನ ಎಗ್ಜಿಕ್ಯುಟಿವ್ ಇಂಜನಿಯರ ಕಛೇರಿಯನ್ನು ವರ್ಗಾಯಿಸಲಾಗಿದೆ.

೭೦ ಸಾವಿರ ಮಂದಿ ಕಾಂಗ್ರೆಸ್ ಸದಸ್ಯರು

ಮೈಸೂರು ಪ್ರಾದೇಶಿಕ ಕಾಂಗ್ರೆಸ್‌ಗೆ ಇಲ್ಲಿಯವರೆಗೆ ೭೮೩೩೮ ಮಂದಿ ಪ್ರಾಥಮಿಕ ಸದಸ್ಯರಾಗಿದ್ದಾರೆಂದು ಅಧ್ಯಕ್ಷ ಶ್ರೀ ದಾಸಪ್ಪನವರು ತಿಳಿಸಿರುತ್ತಾರೆ.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ವುಡ್‌ಲಾಂಡ್ಸ್

ದು ಪ್ಪ ಟ

ತಾರೀಖು 10-10-52 ರಿಂದ

ಅಮೋಘ ೬ನೇ ವಾರ

ಪ್ರತಿದಿನ ಮೂರು ಪ್ರದರ್ಶನ

ಪಾತ್ರ—ನೂರ್‌ಜಹಾನ್, ಅಜಯಕುಮಾರ್, ಗುಲಾಮ್ ಮಹಮದ್

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 45

೧೫-೧೦-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ದಕ್ಷಿಣ ಆಫ್ರಿಕಾ ಒಳಾಡಳಿತದಲ್ಲಿ ಭಾರತ ಪ್ರವೇಶಿಸಿದರೆ ಯುದ್ಧ ಶತಃಸಿದ್ಧ

ದಕ್ಷಿಣ ಆಫ್ರಿಕಾದ ಪ್ರಧಾನಿ ಮಲಾನರ ಹೇಳಿಕೆ

ಶಾಂತಿಗೆ ಭಂಗತರದಂತೆ ವರ್ತಿಸುವುದೇ ತನ್ನ ನೀತಿಯೆಂದು ಭಾರತವು ಹೇಳುವುದರಲ್ಲಿ ಸತ್ಯಾಂಶವಿದ್ದರೆ ಇತರದೇಶದ ಒಳಾಡಳಿತದಲ್ಲಿ ಅದು ಪ್ರವೇಶಿಸದೆ ಇರುತ್ತದೆ. ಒಂದುದೇಶದಲ್ಲಿರುವ ಒಂದು ಪಕ್ಷದ ಹಿತರಕ್ಷಣೆಗೆಂದು ಮತ್ತೊಂದು ದೇಶವು ಪ್ರವೇಶಿಸಿದರೆ ಅದರಿಂದ ಯುದ್ಧವಾಗುವುದಕ್ಕೆ ಮಾರ್ಗ ಕಲ್ಪಿಸಿದಂತೆ ಆಗುತ್ತದೆ. ಭಾರತವು ದಕ್ಷಿಣ ಆಫ್ರಿಕಾ ದಶತ್ರುವೆಂದು ದಕ್ಷಿಣ ಆಫ್ರಿಕಾ ಪ್ರಧಾನಿ ಡಾ|| ಮಲಾನ್‌ರವರು ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಡಾ|| ಮಲಾನರ ನೀತಿಯನ್ನು ದಕ್ಷಿಣಆಫ್ರಿಕಾ ಪತ್ರಿಕೆಗಳನೇಕವು ತೀವ್ರವಾಗಿ ಖಂಡಿಸಿವೆ ಎಂದು ಗೊತ್ತಾಗಿದೆ.

ಹೆಚ್. ಸಿ. ದಾಸಪ್ಪನವರ ಕೊಲೆ ಪ್ರಯತ್ನದ ಮೊಕದ್ದಮೆ

ಸಂಸ್ಥಾನದ ಮಾಜಿ ಅರ್ಥಿಕಸಚಿವ ಶ್ರೀ ಹೆಚ್. ಸಿ. ದಾಸಪ್ಪನವರನ್ನು ತಾ|| ೨೪-೩-೫೨ನೇ ಬೆಳಗಿನಜಾವದಲ್ಲಿ ಬೆಂಗಳೂರು ವಿಶ್ವೇಶ್ವರಪುರದ ಅವರ ಗೃಹದಲ್ಲಿ ಕೊಲೆಮಾಡಲು ಪ್ರಯತ್ನಿಸಿದರೆಂಬ ಆಪಾದನೆಯ ಮೊಕದ್ದಮೆಯಲ್ಲಿ ಎಂ. ಹನುಮಂತರೆಡ್ಡಿಯವರನ್ನು ಅಲ್ಲಿನ ನಗರ ನ್ಯಾಯಾಧೀಶರು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿದ್ದಾರೆ.

ಪಾಕೀಸ್ತಾನಕ್ಕೆ ಹೋಗಲು ರಹದಾರಿ

ಬೆಂಗಳೂರು ಅ. ೧೫

ಪಾಕೀಸ್ಥಾನಕ್ಕೆ ಹೋಗಲು ಇಚ್ಛಿಸುವವರು ರಹದಾರಿ ಪಡೆಯಲು ಅರ್ಜಿಫಾರಂಗಳು ಎಲ್ಲಾ ಜಿಲ್ಲಾ ಮ್ಯಾಜಿಸ್ಟ್ರೇಟರ ಕಛೇರಿಯಲ್ಲಿ ದೊರೆಯುತ್ತವೆ. ಪ್ರತಿಯೊಂದು ಅರ್ಜಿಫಾರಂನ ಬೆಲೆ ೩ ಆಣೆಯೆಂದು ಸರ್ಕಾರದ ಪ್ರಕಟಣೆ ಹೊರಬಿದ್ದಿದೆ.

ಈಜಿಪ್ಟಿನ ರೀಜೆನ್ಸಿ ಸದಸ್ಯರ ಉಚ್ಚಾಟನೆ

ಈಜಿಪ್ಟಿನ ರೀಜೆನ್ಸಿ ಸದಸ್ಯರಾಗಿದ್ದ ಕ|| ರಾಷಾಮೆಹನಾರನ್ನು ಮುಖ್ಯಮಂತ್ರಿ ಜ|| ನಗೀಬ್ ವಜಾಮಾಡಿದ್ದಾರೆ. ಅವರು ರಾಜಕೀಯದಿಂದ ದೂರವಾಗಿರದೆ ತಮ್ಮ ಪ್ರಭಾವವನ್ನು ಮಂತ್ರಿಗಳು ಮತ್ತು ಸರಕಾರದಮೇಲೆ ಚಲಾಯಿಸಲು ಪ್ರಯತ್ನಿಸುತ್ತಿದ್ದರೆಂದು ಅವರನ್ನು ಉಚ್ಚಾಟನೆ ಮಾಡಲಾಯಿತೆಂದು ಹೇಳಲಾಗಿದೆ.

ಇರಾಕ್ ಸರ್ಕಾರ ಉರುಳಿಸಲು ಪಿತೂರಿ

ಇರಾಕ್ ಸರ್ಕಾರವನ್ನು ಉರುಳಿಸುವ ಪಿತೂರಿಯೊಂದನ್ನು ಪತ್ತೆಹಚ್ಚಿ, ಜ|| ಹೆಜಾಜಿ ಮತ್ತು ಅವರ ೩ ಮಂದಿ ಸಹೋದರರನ್ನು ದಸ್ತಗಿರಿ ಮಾಡಲಾಗಿದೆ. ವಿದೇಶೀ ರಾಯಭಾರಿ ಕಛೇರಿಯ ಪರವಾಗಿ ಕೆಲವು ಸೈನ್ಯಾಧಿಕಾರಿಗಳು ಮತ್ತು ಶಾಸನಸಭಾ ಸದಸ್ಯರು ಪಿತೂರಿ ನಡೆಸಿದ್ದರೆಂದು ಹೇಳಲಾಗಿದೆ.

ರಾಜ್ಯಪಾಲಕ ಮಂಡಲಿ

ಈಜಿಪ್ಟಿನಲ್ಲಿ ನೇಮಕವಾಗಿದ್ದ ೩ ಜನ ರೀಜಂಟ್ ಕೌನ್ಸಿಲನ್ನು ರದ್ದುಗೊಳಿಸಿ ಒಬ್ಬರೇ ಇರುವ ರೀಜಂಟ್ ಕೌನ್ಸಿಲನ್ನು ನೇಮಿಸಲಾಗಿದೆ.

ಭಾರತಕ್ಕೆ ಜಪಾನಿನ ಮತ್ತೊಂದು ವ್ಯಾಪಾರ ನಿಯೋಗ

ಭಾರತಕ್ಕೆ ಜಪಾನಿನಿಂದ ಬೈಸಿಕಲ್, ನೂಲುವ ಮತುತ್ತು ನೇಯುವ ಯಂತ್ರ, ಹೊಲಿಯುವ ಯಂತ್ರ, ಗಡಿಯಾರ ತಯಾರಿಸುವ ಯಂತ್ರ ಮುಂತಾದುವನ್ನು ರಫುಮಾಡುವ ವಿಚಾರವನ್ನು ಪರಿಶೀಲಿಸಲು ಇಲ್ಲಿಗೆ ಜಪಾನಿನಿಂದ ಒಂದು ವ್ಯಾಪಾರ ನಿಯೋಗವು ಬರಲಿದೆ.

ಜಪಾನಿನ ವಾಣಿಜ್ಯ ಸಂಸ್ಥೆಯು ಈ ಪ್ರವಾಸವನ್ನು ಸರ್ಕಾರದ ಬೆಂಬಲದಿಂದ ಏರ್ಪಡಿಸಿದೆ.

ರೈಲ್ವೆ ಅಪಘಾತದಲ್ಲಿ ೩ ಮಂದಿ ಮರಣ

ಉತ್ತರ ಪಾಕೀಸ್ತಾನದಲ್ಲಿರುವ ಜಕೋಬಾ ರೈಲ್ವೆ ನಿಲ್ದಾಣದಲ್ಲಿ ಕ್ವೆಟ್ಟಾ ಕರಾಚಿಯ ರೈಲ್ವೆಗಾಡಿಯು ಅಪಘಾತಕ್ಕೆ ಒಳಗಾಗಿ ೩ ಜನರು ಸತ್ತರೆಂದೂ, ಅನೇಕ ಮಹಿಳೆಯರು ಮತ್ತು ಮಕ್ಕಳಿಗೆ ಗಾಯವಾದುವೆಂದೂ ವರದಿಯಾಗಿದೆ.

ಡಾ|| ವಿಶ್ವೇಶ್ವರಯ್ಯನವರ ಆಗಮನ

ಮೈಸೂರು ೧೫

ನಾಳೆಯದಿನ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಶಿಲಾಪ್ರತಿಮಾ ಅವರಣಮಹೋತ್ಸವವನ್ನು ನಡೆಸಲು ಡಾ|| ಎಂ. ವಿಶ್ವೇಶ್ವರಯ್ಯನವರು ಈದಿನ ಮಧ್ಯಾಹ್ನ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. ಸರ್ಕಾರಿಭವನದಲ್ಲಿ ಅವರು ತಂಗಿದ್ದಾರೆ.

ಕೈಗಾರಿಕಾ ಸಚಿವ ಶ್ರೀ ಸಿದ್ದಲಿಂಗಯ್ಯನವರೂ ಈದಿನ ಮೈಸೂರಿಗೆ ಆಗಮಿಸಿದರು ಡಾ|| ವಿಶ್ವೇಶ್ವರಯ್ಯನವರು ಈ ಸಂಜೆ ಕೃಷ್ಣರಾಜಸಾಗರಕ್ಕೆ ಭೇಟಿಯಿತ್ತು ಅಲ್ಲಿಯ ಕೆಲಸ ಕಾರ್ಯಗಳನ್ನು ಪರಿಶೀಲಿಸಿದರು. ಚೀಫ್ ಇಂಜನಿಯರ್ ಶ್ರೀ ಡಿ. ಎಸ್. ವೆಂಕಣ್ಣನವರು ಅಲ್ಲಿ ಹಾಜರಿದ್ದು ಎಲ್ಲವನ್ನೂ ವಿವರಿಸಿದರೆಂದು ಗೊತ್ತಾಗಿದೆ.

ವಿಶ್ವೇಶ್ವರಯ್ಯನವರಿಗೆ ಪುರಸಭಾ ಮಾನಪತ್ರ

ಮೈಸೂರು ೧೫

ಆಳಿದ ಮಹಾಸ್ವಾಮಿಗಳಾದ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಶಿಲಾ ಪ್ರತಿಮೆಯ ಅನಾವರಣೋತ್ಸವವನ್ನು ನಾಳೆ ಬೆಳಗ್ಗೆ ೧೦ ಗಂಟೆಗೆ ಹೊಸಸ್ಟ್ಯಾಚುಸ್ಕ್ವೈರಿನಲ್ಲಿ ಡಾ|| ಎಂ. ವಿಶ್ವೇಶ್ವರಯ್ಯನವರು ನೆರವೇರಿಸುವರು ಇದೇ ಸಂಬಂಧದಲ್ಲಿ ಪೌರಸಭೆಯವರು ಅವರಿಗೆ ಮಾನಪತ್ರವನ್ನು ಒಪ್ಪಿಸುವರು.

ಬೀಹಾರಿನಲ್ಲಿ ೧೫೦೦೦ ವಲಸೆಗಾರರಿಗೆ ವಸತಿ

ಬಿಹಾರ್ ಸರ್ಕಾರವು ೧೫೦೦೦ ವಲಸೆಗಾರರಿಗೆ ವಸತಿ ಕಲ್ಪಿಸಲು ಒಪ್ಪಿರುವುದಾಗಿ ಮರುವಸತಿ ಶಾಖಾ ಸಚಿವರು ಹೇಳಿರುವರು.

ಆನಂದ ನಂಬಿಯಾರ್ ಆಗಮನ

ಮೈಸೂರು ೧೫

ಕಮ್ಯೂನಿಸ್ಟ್ ಪಕ್ಷದ ನಾಯಕ ಮತ್ತು ಪಾರ್ಲಿಮೆಂಟ್ ಸದಸ್ಯ ಶ್ರೀ ಕೆ. ಆನಂದ ನಂಬಿಯಾರ್‌ರವರು ಇದೇ ೧೭ನೇ ತಾರೀಖು ಮೈಸೂರು ನಗರಕ್ಕೆ ಆಗಮಿಸುವರು.

ಗೋಧಿಯ ಹೊಟ್ಟಿನಮೇಲೆ ಪ್ರತಿಬಂಧಕ ರದ್ದು

ಬೊಂಬಾಯಿಪ್ರಾಂತ್ಯದಲ್ಲಿ ಜಾರಿಯಲ್ಲಿದ್ದ ಗೋಧಿ ಹೊಟ್ಟಿನಮೇಲಿನ ಪ್ರತಿಬಂಧಕವನ್ನು ಸರ್ಕಾರವು ತೆಗೆದುಹಾಕಿದೆ. ಈಗ ಬೊಂಬಾಯಿನಿಂದ ಎಲ್ಲಿಗೆಬೇಕಾದರೂ ಗೋಧಿಯಹಿಟ್ಟನ್ನು ರವಾನಿಸಬಹುದು ಅಲ್ಲದೆ ತರಬಹುದು.

ಮಹದೇಶ್ವರಸ್ವಾಮಿ ಜಾತ್ರೆ

ಟಿ. ನರಸೀಪುರದ ತಾಲ್ಲೂಕು ಬನ್ನೂರುಹೋಬಳಿ ಕೊಡಗಹಳ್ಳಿ ಗ್ರಾಮದ ಅರವಟ್ಟಿಗೆ ಕೊಪ್ಪಲಿನಲ್ಲಿ ಶ್ರೀ ಮಹದೇಶ್ವರ ಸ್ವಾಮಿ ಕಾರ್ತೀಕಮಾಸದ ಜಾತ್ರೆಯು ಇದೇ ೧೭ ರಿಂದ ೨೧ ನೇ ತಾರೀಖಿನವರೆಗೆ ನಡೆಯುವುದು.

ಬಾಂಬುಆಸ್ಫೋಟನೆಯಿಂದ ಸೈನಿಕರ ಸಾವು

ಪಾಕೀಸ್ತಾನ ಸೈನಿಕರ ಸಿಯಲ್ ಕೋಟ್ ತರಬೇತು ಶಿಕ್ಷಣ ಶಿಬಿರದಲ್ಲಿ ಬಾಂಬು ಆಸ್ಫೋಟನೆಯಾಗಿ ೭ ಮಂದಿ ಸೈನಿಕರು ಸತ್ತು, ೩೦ ಮಂದಿಗೆ ಗಾಯವಾಗಿದೆಯೆಂದು ವರದಿಯಾಗಿದೆ.

ಬಿಹಾರಿಗೆ ೧೫ ಸಾವಿರ ನಿರಾಶ್ರಿತರು

ಇತ್ತೀಚಿಗೆ ಪಾಕೀಸ್ತಾನದಿಂದ ಕಲ್ಕತ್ತೆಗೆ ಆಗಮಿಸಿರುವ ನಿರಾಶ್ರಿತರ ಪೈಕಿ ೧೫ ಸಾವಿರ ಮಂದಿಯನ್ನು ಬಿಹಾರ್ ಸಂಸ್ಥಾನದಲ್ಲಿ ನೆಲೆಸಲು ಆದರ ಸರ್ಕಾರದವರು ಒಪ್ಪಿದ್ದಾರೆ. ಪ್ರಧಾನಿ ಪಂಡಿತ ನೆಹರೂರವರ ಖಾಸಗೀ ಅಪೇಕ್ಷೆಯಂತೆ ಈ ಏರ್ಪಾಡು ಮಾಡಲಾಗಿದೆ.

ಕೈಮಗ್ಗದ ಕೈಗಾರಿಕೆಗೆ ಪ್ರೋತ್ಸಾಹ

ಕೈಮಗ್ಗದ ಕೈಗಾರಿಕೆಗೆ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಮೈಸೂರು ಸಂಸ್ಥಾನದ ಕೈಗಾರಿಕಾ ಮತ್ತು ವಾಣಿಜ್ಯ ಶಾಖೆಯ ಟೆಕ್ಸ್‌ಟೈಲ್ ವಿಭಾಗದವರು ಮತ್ತೆ ೧೨ ಕೇಂದ್ರಗಳನ್ನು ಸಧ್ಯದಲ್ಲಿಯೇ ಆರಂಭಿಸಲಿರುವರು ಈಗಾಗಲೇ ೧೨ ಕೇಂದ್ರಗಳು ಕೆಲಸಮಾಡುತ್ತಿವೆ.

ಭಾರತದಲ್ಲಿ ಪಾಸ್‌ಪೋರ್ಟ್ ವ್ಯವಸ್ಥೆ ಜಾರಿಗೆ ಬಂದಿತು

ಪಾಕೀಸ್ತಾನದ ಕಡೆ ಶುಕ್ರವಾರ ರಾತ್ರಿಯಿಂದ ಜಾರಿಗೆ ಬರುತ್ತದೆ

ಭಾರತ-ಪಾಕೀಸ್ತಾನಗಳ ನಡುವೆ ನಿನ್ನೆ ರಾತ್ರಿಯಿಂದ ಭಾರತ ಸರ್ಕಾರವು ಪಾಸ್‌ಪೋರ್ಟ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಪೂರ್ವ ಪಾಕೀಸ್ತಾನದ ಕಡೆಯಿಂದ ಭಾರತಕ್ಕೆ ಬರುವವರೆಲ್ಲರೂ ಡಕ್ಕಾದಲ್ಲಿರುವ ಭಾರತ ಹೈಕಮೀಷನರಿಂದ ವಲಸೆ ಅನುಮತಿ ಪತ್ರ ಪಡೆದು ಭಾರತಕ್ಕೆ ಬರಬಹುದಾಗಿದೆ. ಈ ಬಗ್ಗೆ ತಕ್ಕ ವ್ಯವಸ್ಥೆಗಳನ್ನೆಲ್ಲಾ ಮಾಡಲಾಗಿದೆ. ಪಾಕ್ ಸರ್ಕಾರದ ಪತ್ರ ಬೇಕಾಗಿಲ್ಲ. ಪಾಕ್ ಸರ್ಕಾರದ ಕಡೆ ಶುಕ್ರವಾರ ರಾತ್ರಿಯಿಂದ ಜಾರಿಗೆಬರುವುದಾಗಿ ಡಕ್ಕಾದಲ್ಲಿ ಸರ್ಕಾರವು ಪ್ರಕಟಿಸಿದೆ. ವಲಸೆಗಾರರನ್ನು ತಡೆಯಲು ಭಾರತವು ಮಾಡಿದ್ದ ಸಲಹೆಗೆ ಪಾಕ್ ಸರ್ಕಾರವು ಇನ್ನೂ ಉತ್ತರವನ್ನು ಕೊಟ್ಟಿಲ್ಲ. ಪರಿಸ್ಥಿತಿಯನ್ನು ಭಾರತಸರಕಾರವು ತೀವ್ರದೃಷ್ಟಿಯಿಂದ ಪರಿಗಣಿಸುತ್ತಲಿದೆ.

ಫ್ರಾನ್ಸಿನ ಜೋನ್ ಆಫ್ ಆರ್ಕ್ ಸುಡಲ್ಪಡಲಿಲ್ಲ

ಫ್ರಾನ್ಸಿನ ಸುಪ್ರಸಿದ್ಧ ಸಂನ್ಯಾಸಿ ಮತ್ತು ದೇವಭೂತೆ ಯೆಂದು ಎನಿಸಲ್ಪಟ್ಟ ಜೋನ್‌ಆಫ್‌ಆರ್ಕ್‌ನ್ನು ಬ್ರಿಟಿಷರು ಸುಟ್ಟರೆಂಬ ಪ್ರಾಚೀನ ನಂಬಿಕೆಯು ಸುಳ್ಳೆಂದೂ, ಆಕೆಯು ಬದುಕಿದ್ದು ಮದುವೆಯಾದಳೆಂದೂ ಫ್ರೆಂಚ್ ಇತಿಹಾಸಜ್ಞರೊಬ್ಬರು ಇತ್ತೀಚೆಗೆ ಪ್ರಕಟಿಸಿರುವುದು ಫ್ರೆಂಚ್ ಧಾರ್ಮಿಕ ಜಗತ್ತಿನಲ್ಲಿ ಅತ್ಯಂತ ಕುತೂಹಲ ಮತ್ತು ವ್ಯಾಕುಲವನ್ನುಂಟುಮಾಡಿದೆ.

ಜೋನ್‌ಳು ೧೪೩೬ ರಲ್ಲಿ ಮದುವೆಯಾಗಿ ೫ ವರ್ಷಕಾಲ ಇಂಗ್ಲೆಂಡಿನಲ್ಲಿ ವಾಸವಾಗಿದ್ದಳೆಂದೂ, ಆಕೆಯ ಕೃತಕ ಪ್ರತಿ ಮೂರ್ತಿಯನ್ನು ಮಾತ್ರ ಸುಡಲಾಯಿತೆಂದೂ ಅವರು ತಿಳಿಸಿರುತ್ತಾರೆ. ಆಕೆಯು ದೊರೆ ಚಾರಲ್ಸ್‌ರವರ ಸಹೋದರರ ಜಾರಜ ಮಗಳೆಂದೂ ಹೇಳಲಾಗಿದೆ.

ಕಾಶ್ಮೀರ ಪ್ರಶ್ನೆ ಚರ್ಚೆ

ಸೆಕ್ಯೂರಿಟಿ ಕೌನ್ಸಿಲ್‌ನಲ್ಲಿ ಕಾಶ್ಮೀರ ಪ್ರಶ್ನೆ ಚರ್ಚೆಯು ನಾಳೆಯಿಂದ ಪ್ರಾರಂಭವಾಗಲಿದೆಯೆಂದು ಗೊತ್ತಾಗಿದೆ.

ಕ್ಷಾಮಪೀಡಿತರಿಗೆ ಸಹಾಯ

ಮೈಸೂರು, ಅ. ೧೫

ರಾಜಧಾನಿಯ ಆರ್. ಎಸ್. ಎಸ್. ಸಂಘದ ಸ್ವಯಂಸೇವಕರು ಕಳೆದತಿಂಗಳು ೨೫ರಿಂದ ಇದೇ ೫ನೇ ತಾರೀಖಿನವರೆಗೆ ಸಂಸ್ಥಾನದ ಕ್ಷಾಮಪೀಡಿತರ ಸಹಾಯಕ್ಕಾಗಿ ಮನೆಮನೆಗೂ ಹೋಗಿ ಎರಡೂವರೆ ಪಲ್ಲ ಅಕ್ಕಿ, ೧ ಪಲ್ಲ ಇತರಧಾನ್ಯ ಮತ್ತು ೩೫೦ ರೂ. ಸಂಗ್ರಹಮಾಡಿದ್ದಾರೆ. ಇದನ್ನು ತುಮಕೂರಿಗೆ ಆರ್. ಎಸ್. ಎಸ್. ಕ್ಷಾಮನಿವಾರಣಾ ಸಮಿತಿಯ ಅಧ್ಯಕ್ಷರವರಿಗೆ ಕಳುಹಿಸಲಾಗಿದೆ. ಇದಕ್ಕಾಗಿ ಸಹಾಯಮಾಡಿದ ಎಲ್ಲ ನಾಗರೀಕರಿಗೂ ಹೃತ್ಪೂರ್ವಕ ವಂದನೆಗಳು ಎಂದು ಸಂಘದ ಕಾರ್ಯದರ್ಶಿ ಶ್ರೀ ಎ. ಸಿ. ಜಯದೇವ್‌ರವರು ತಿಳಿಸಿರುತ್ತಾರೆ.

ಮೋಟಾರು ಕೆಲಸಗಾರರ ಮುಷ್ಕರ ನೋಟೀಸ್

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಮೊನ್ನೆದಿನ ಶ್ರೀ ಕೆ. ದೌಲತ್‌ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಕೈಗಾರಿಕಾ ಕೋರ್ಟಿನವರು ಕೊಟ್ಟ ತೀರ್ಪು ಗೆಜೆಟ್ಟಿನಲ್ಲಿ ಪ್ರಕಟವಾದ ಒಂದು ತಿಂಗಳೊಳಗಾಗಿ ಅದನ್ನು ಜಾರಿಗೆ ತರಬೇಕೆಂದು ಕಾನೂನಿನಲ್ಲಿದ್ದರೂ ಸಹ ಮಾಲೀಕರು ಅದನ್ನು ಜಾರಿಗೆ ತರದೇ ಇರುವುದಕ್ಕೆ ವ್ಯಸನವನ್ನು ಸೂಚಿಸಿ, ಒಂದು ವಾರದೊಳಗಾಗಿ ಅಂದರೆ ಇದೇ ೨೦ನೇ ತಾರೀಖಿನೊಳಗಾಗಿ ಕೋರ್ಟಿನ ತೀರ್ಮಾನವನ್ನು ಜಾರಿಗೆ ಕೊಡದೆ ಇದ್ದ ಪಕ್ಷದಲ್ಲಿ ಸಂಘವು ಕಾನೂನು ಬದ್ಧ ಕ್ರಮವನ್ನು ತೆಗೆದುಕೊಂಡು ಮುಷ್ಕರ ಹೂಡಬೇಕೆಂದು ತೀರ್ಮಾನಿಸಲಾಯಿತು.

೧೯೫೨ ನೇ ವಾರ್ಷಿಕೋತ್ಸವಕ್ಕೆ ಪ್ರಧಾನಿ ಪಂಡಿತ ನೆಹರೂರವರನ್ನು ಆಹ್ವಾನಿಸಬೇಕೆಂದು ನಿರ್ಧರಿಸಲಾಯಿತು.

ಸಿ. ಪಿ. ಸಿ. ಬಸ್ಸಿನ ಡ್ರೈವರ್ ಶ್ರೀ ಮಹಮದ್ ಲತೀಫರನ್ನು ಮೊನ್ನೆದಿನ ಮಾಚನಹಳ್ಳಿ ಜನರು ಹೊಡೆದು ಗಾಯಪಡಿಸಿ ಅವರ ಉಂಗುರವನ್ನು ಕಿತ್ತುಕೊಂಡಿದುದಕ್ಕೆ ವಿಷಾದ ಸೂಚಿಸಿ ಅಧಿಕಾರಿಗಳು ಕೂಡಲೇ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರಲಾಯಿತು.

ಆರ್ಥಿಕಸಚಿವರ ಸಮ್ಮೇಳನ

ದೇಶದ ನಾನಾಪ್ರಾಂತ್ಯಗಳ ಆರ್ಥಿಕ ಸಚಿವರ ಸಮ್ಮೇಳನವು ಕೇಂದ್ರ ಆರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರ ಅಧ್ಯಕ್ಷತೆಯಲ್ಲಿ ನಿನ್ನೆ ಪ್ರಾರಂಭವಾಯಿತು. ಸಭೆಯಲ್ಲಿ ಪ್ರಾಂತ್ಯಗಳ ೬ ಮುಖ್ಯಮಂತ್ರಿಗಳು ೨೮ ಆರ್ಥಿಕಸಚಿವರು ಕೇಂದ್ರ ಸರ್ಕಾರದ ಸಚಿವರು ಆಯೋಜನಾ ಸಮಿತಿ ಸದಸ್ಯರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಶ್ರೀ ದೇಶಮುಖ್‌ರವರು ಮಾತನಾಡುತ್ತಾ ದೇಶದ ಆರ್ಥಿಕ ಸ್ಥಿತಿಬಗ್ಗೆ ನಾನಾ ಪ್ರಾಂತ್ಯಗಳ ಅಭಿಪ್ರಾಯ ಸಂಗ್ರಹಣೆ ಮಾಡಲು ಈ ಸಮ್ಮೇಳನವನ್ನು ಸೇರಿಸಲಾಗಿದೆ. ಅಲ್ಲದೆ ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ವಿಷಯವನ್ನು ಪರಿಗಣಿಸಬೇಕಾಗಿದೆ. ಆದರೆ ಈಬಗ್ಗೆ ಕೇಂದ್ರದ ಆರ್ಥಿಕ ಸಹಾಯ ವಿಷಯವು ಆರ್ಥಿಕಮಂಡಲಿಯ ವರದಿ ಬಂದನಂತರ ಪರಿಶೀಲಿಸಬೇಕಾಗಿದೆ ಎಂದು ತಿಳಿಸಿದರೂ ಅನಂತರ ಮಾರಾಟತೆರಿಗೆ ವಿಷಯ ಮುಂತಾದ ಅನೇಕ ಆರ್ಥಿಕ ವಿಷಯಗಳ ಚರ್ಚೆಯು ಪ್ರಾರಂಭವಾಯಿತು.

ಇರಾನ್ ಎಣ್ಣೆ ಒಪ್ಪಂದಕ್ಕೆ ಬ್ರಿಟನ್ನಿನ ತಿರಸ್ಕಾರ

ಆಂಗ್ಲೊ-ಇರಾನಿಯನ್ ಎಣ್ಣೆ ವಿವಾದ ಬಗ್ಗೆ ಪರ್ಷಿಯಾ ಪ್ರಧಾನಿ ಡಾ|| ಮುಸಾದಿಕ್‌ರವರು ಬ್ರಿಟನ್ನಿಗೆ ಇತ್ತೀಚೆಗೆ ಮಾಡಿದ ಸಲಹೆಗಳನ್ನು ಸಹ ಬ್ರಿಟನ್ ನಿರಾಕರಿಸಿರುವುದಾಗಿ ಗೊತ್ತಾಗಿದೆ. ಆಂಗ್ಲೊ-ಇರಾನಿಯನ್ ಎಣ್ಣೆ ಕಂಪೆನಿಯು ಕೊಡಬೇಕಾಗಿರುವ ೪೯೦ಲಕ್ಷಪೌಂಡುಸ್ಟರ್ಲಿಂಗ್ ಪೈಕಿ ಕೂಡಲೇ ೨೦೦ ಲಕ್ಷ ಪೌಂಡು ಸ್ಟರ್ಲಿಂಗ್ ಕೊಟ್ಟು ಬಾಕಿಯನ್ನು ಪಂಚಾಯಿತಿ ತೀರ್ಮಾನವಾದ ಮೇಲೆ ಕೊಡಬಹುದೆಂದು ಡಾ|| ಮುಸಾದಿಕ್ ಸೂಚಿಸಿದ್ದರು. ಈ ಬ್ರಿಟನ್ನಿನ ನಿರಾಕರಣೆಗೆ ಅಮೆರಿಕಾ ಒಪ್ಪಿಗೆಯಿತ್ತಿದೆಯೆಂದು ಹೇಳಲಾಗಿದೆ.

ಮೈಸೂರು ಪೇಟೆಧಾರಣೆ

ತಾ|| ೧೪-೧೦-೫೨

ಪಲ್ಲ	ರೂ-ಆ	ರೂ-ಆ
ಕಡಲೇಕಾಯಿ	೧೦-	೨೦-೦
ಎಳ್ಳು	೬೮-೮	೬೨-
ಹರಳು	೪೨-೪	೪೩-೨
ಹುರುಳಿ	೫೬-೧೪	೫೭-
ಮೆಣಸಿನಕಾಯಿ	೬-	೧೯-೬
ಹುಣಸೆಹಣ್ಣು	೫-೧೩	
ಬೆಲ್ಲ		
ಸೀಗೇಪುಡಿ	೫-೧	೫-೪
ತೆಂಗಿನಕಾಯಿ ೧,೧೦೦ ಕ್ಕೆ	೧೫೦	೨೩೮

ಸೂಚನೆ

ಸಮಾಚಾರ ಪತ್ರಿಕೆ ಕಾರ್ಯಾಲಯವನ್ನು ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಿಂದ ಜಗನ್ಮೋಹನ ಪ್ಯಾಲೇಸ್ ರಸ್ತೆಯಲ್ಲಿ ಮೋತಿಖಾನೆ ಕಟ್ಟಡಕ್ಕೆ [ಸರ್ಕಾರಿ ರೇಷನ್ ಡಿಪೊ ಮಹಡಿ] ಬದಲಾಯಿಸಲಾಗಿದೆ.

ಸಂಪಾದಕ.

ಆಪೇರ ೧೬-೧೦-೫೨ ರಿಂದ ಆಮೋಘಪ್ರಾರಂಭ
ಪ್ರತಿದಿನ ಮೂರು ಆಟಗಳು
* ಮಾಪಿಳ್ಳೈ *
ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

10-10-52 ರಿಂದ
ಸಾಹುಕಾರ
[ತೆಲುಗು]
ಪಾತ್ರ:—ಎನ್. ಟಿ. ರಾಮರಾವ್, ಶಾಂತಕುಮಾರಿ, ಜಾನಕಿ.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಒಲಂಪಿಯಾ 卐 16—10—52 ರಿಂದ ಆಮೋಘ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ದೀಪಾವಳಿ ಹಬ್ಬದ ವಿಶೇಷ ಆಕರ್ಷಣೆ
ಸಂಸಾರಿಕ ನ್ಯೂನತೆಗಳಿಗೆ ಸಿದ್ಧೌಷಧವನ್ನು ಕೊಟ್ಟ ಲೇಡಿ ಡಾಕ್ಟರ್ ಪಾತ್ರದಲ್ಲಿ
ವೈಜಯಂತಿಮಾಲಾ ಮತ್ತು ಪ್ರೇಮ್‌ನಾಥ್ ಪಾತ್ರವಹಿಸಿರುವ
ಸನ್‌ರೈಸ್ ಪಿಕ್ಚರ್ಸ್‌ರವರ ಹಿಂದಿ ಚಿತ್ರ
★ ಅರ್ಜಾಮ್ ★
ಸಹಾಯಕ ವರ್ಗ:—ಕುಲದೀಪ್ ಕೌರ್ ಮತ್ತು ಯಾಕೂಬ್
ಬೆಳಗಿನ ಪ್ರದರ್ಶನ 16-10-52 ರಿಂದ 4 ದಿನಗಳು ಮಾತ್ರ
ನೂತನ್ ಪಾತ್ರವಹಿಸಿರುವ — ನಗೀನ —

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 46

೧೬-೧೦-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಅಲ್ಪಸಂಖ್ಯಾತರಲ್ಲಿ ವಿಶ್ವಾಸ ಹುಟ್ಟುವಂತೆ ವರ್ತಿಸಬೇಕೆಂದು ಮನವಿ

ಪಾಕೀಸ್ತಾನದ ಪ್ರಧಾನಿ ಮತ್ತು ಮುಸ್ಲಿಂಲೀಗಿನ ಅಧ್ಯಕ್ಷರಾದ ನಾಜಿಮುದ್ದೀನರವರು ಪಾಕೀಸ್ತಾನದಲ್ಲಿ ಬಹುಸಂಖ್ಯಾತರಾಗಿರುವ ತಮ್ಮ ಮುಸ್ಲಿಂ ಜನಾಂಗಕ್ಕೆ ಒಂದು ಪ್ರಾರ್ಥನೆಯನ್ನು ಕಳುಹಿಸಿ ಅಲ್ಪಸಂಖ್ಯಾತರಲ್ಲಿ ಹುಟ್ಟಿರುವ ಭಯ ಮುಂತಾದುವೆಲ್ಲ ಮಾಯವಾಗಿ ಬಹುಸಂಖ್ಯಾತರಲ್ಲಿ ವಿಶ್ವಾಸ ಹುಟ್ಟುವಂತೆ ವರ್ತಿಸಬೇಕೆಂದು ಮನವಿ ಮಾಡಿದ್ದಾರೆ.

ಹೊಸದಾಗಿಜಾರಿಗೆ ಬರುತ್ತಲಿರುವ ಪಾಸ್‌ಪೋರ್ಟ್ ವ್ಯವಸ್ಥೆಯಿಂದ ಯಾರಿಗೂ ತೊಂದರೆಯಾಗದಂತೆ ಸರ್ಕಾರವು ತಕ್ಕ ವ್ಯವಸ್ಥೆ ಮಾಡುತ್ತದೆ. ಅಲ್ಪಸಂಖ್ಯಾತ ನಾಯಕರ ಸಮಿತಿಯನ್ನು ನೇಮಿಸಿ ಈ ಈ ಹೊಸ ವ್ಯವಸ್ಥೆಯಿಂದ ತೊಂದರೆಯೇನಾದರೂ ಉಂಟಾಗುವುದೇ ಎಂಬುದನ್ನು ಪರಿಶೀಲಿಸಲಾಗುತ್ತದೆಯೆಂದು ಅವರು ಹೇಳಿರುವರು.

ಮುನಿಸಿಪಲ್ ಇಂಜನಿಯರ ವರ್ಗ

ಮೈಸೂರು ಪುರಸಭೆಯ ಇಂಜನಿಯರು ಶ್ರೀ ಮುಕುಂದರವರನ್ನು ಬೆಂಗಳೂರು ಕಾರ್ಪೊರೇಷನ್‌ಗೆ ಅಲ್ಲಿರುವ ಶ್ರೀ ಕೆ. ಎಸ್. ರಾಮಣ್ಣನವರನ್ನು ಮೈಸೂರು ಪುರಸಭೆಗೂ ವರ್ಗಮಾಡಲಾಗಿದೆ.

ನೆಹರೂ ಕಲ್ಕತ್ತಾಗೆ

ಇತ್ತೀಚೆಗೆ ಪಾಕೀಸ್ತಾನದಿಂದ ಭಾರತಕ್ಕೆ ವಿಶೇಷಪ್ರಮಾಣದಲ್ಲಿ ವಲಸೆಗಾರರು ಬರುತ್ತಿರುವುದರಿಂದ ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಲು ಪ್ರಧಾನಿ ನೆಹರೂರವರು ಕಲ್ಕತ್ತಾ ಮತ್ತಿತರ ಪ್ರಾಂತ್ಯಗಳಿಗೆ ಭೇಟಿ ಕೊಡಲಿರುವರು.

ನೇಪಾಳ ರಾಜರಿಗೆ ಭಾರತದ ಪ್ರಶಸ್ತಿ

ನೇಪಾಳ ರಾಜ ತ್ರಿಭುವನರಿಗೆ ಭಾರತ ಸೈನ್ಯದ ಜನರಲ್ ಮತ್ತು ಘೂರ್ಕಾಪಡೆಯ ಕರ್ನಲ್ ಎಂಬ ಗೌರವ ಪ್ರಶಸ್ತಿಯನ್ನು ಭಾರತವು ಕೊಡಲಿದೆ.

ನಾಲ್ವಡಿ ಕೃಷ್ಣರಾಜ ಒಡೆಯರು ಧರ್ಮರಾಜರು

ಡಾ|| ವಿಶ್ವೇಶ್ವರಯ್ಯನವರ ಪ್ರಶಂಸೆ

ಮೈಸೂರು ೧೬

ಪ್ರಗತಿ ಪರವಾದ ಆಧುನಿಕ ಮೈಸೂರು ಸಂಸ್ಥಾನದ ನಿರ್ಮಾಣಕ್ಕೂ, ಮತ್ತು ಬಹುಮುಖವಾದ ಅದರ ಪುರೋಭಿವೃದ್ಧಿಗೂ ಸಾಧಕವಾಗುವಂತೆ ಶ್ರೇಷ್ಠರೀತಿಯಲ್ಲಿ ಪಾತ್ರವಹಿಸಿ ಪ್ರಜೆಗಳ ಗಾಢವಾದ ಪ್ರೀತಿವಿಶ್ವಾಸಗಳನ್ನು ಗಳಿಸಿದ ಉದಾತ್ತಸ್ವಭಾವಸಂಪನ್ನರಾಗಿದ್ದ ಪ್ರಭುಗಳೊಬ್ಬರ ನೆನಪನ್ನು ಈ ಪ್ರತಿಮೆಯು ಮುಂದಿನ ತಲೆ ಮಾರುಗಳ ಜನರಿಗೆ ನಿರಂತರವೂ ತಂದು ಕೊಡುತ್ತ ಶಾಶ್ವತವಾಗಿ ವಿರಾಜಿಸುತ್ತದೆ. ಎಂದು ಡಾ|| ವಿಶ್ವೇಶ್ವರಯ್ಯನವರು ಹೇಳಿ ಆಳಿದ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜಒಡೆಯರವರ ಶಿಲಾ ಪ್ರತಿಮೆಯ ಅನಾವರಣ ಮಹೋತ್ಸವವನ್ನು ಈದಿನ ನೆರವೇರಿಸಿದರು.

ಡಾ|| ವಿಶ್ವೇಶ್ವರಯ್ಯನವರು ತಮ್ಮ ಭಾಷಣದಲ್ಲಿ ಆಳಿದ ಮಹಾಸ್ವಾಮಿಯವರ ರಾಜ್ಯಭಾರದಲ್ಲಿ ಕೈಗೊಂಡ ಮಹತ್ತರವಾದ ಪ್ರಗತಿ ಕಾರ್ಯಕ್ರಮಗಳನ್ನು ವಿವರಿಸಿದರು.

ಮಹಾಸ್ವಾಮಿಯವರ ಆದರ್ಶಶೀಲ ಸಂಪತ್ತು ಸಂಪನ್ನತೆ ಮತ್ತುಶಕ್ತಿ ಸಾಮರ್ಥ್ಯಗಳ ವಿಷಯವಾಗಿ ಮಾತನಾಡುತ್ತಾ ಆಳಿದ ಮಹಾಸ್ವಾಮಿಯವರು ಹಿಂದೂ ಧರ್ಮದಲ್ಲಿ ಅಚಲವಾದ ಶ್ರದ್ಧೆಯನ್ನು ವಹಿಸಿದ್ದರು. ಸಂಪ್ರದಾಯ, ಆಚಾರಗಳಲ್ಲಿ ಪೂರ್ಣ ನಿಷ್ಠೆಯನ್ನು ವಹಿಸಿದ್ದರು. ಧಾರ್ಮಿಕವಾದ ಅಥವಾ ಕೋಮುವಾರು ಸ್ವಭಾವದ ದುರಾಗ್ರಹಗಳ ಲವಲೇಶವೂ ಅವರಲ್ಲಿರಲಿಲ್ಲ.

ಆಳಿದ ಮಹಾಸ್ವಾಮಿಯವರು ಮಿತಭಾಷಿಗಳು, ಮಾತನಾಡುವಾಗಲೂ, ಬರೆಯುವಾಗಲೂ ಅವರು ಮಾತುಗಳನ್ನೂ ವಿಶೇಷ ಜಾಗರೂಕತೆಯಿಂದ ತೂಕಮಾಡಿ ಉಪಯೋಗಿಸುತ್ತಲಿದ್ದರು. ಆತುರವಾಗಲಿ ನಿಷ್ಠುರತೆಯಾಗಲಿ ಅಥವಾ ಒರಟುತನವಾಗಲಿ ಅವರಲ್ಲಿರಲಿಲ್ಲ. ಸೌಂದರ್ಯವನ್ನು ಹೆಚ್ಚಿಸುವುದರಲ್ಲಿ ಅವರಿಗೆ ತೀವ್ರ ಆಸಕ್ತಿ ಇದ್ದಿತು.

ಮುಖ್ಯವಾಗಿ ಅವರ ಸಚ್ಚಾರಿತ್ರ ಪ್ರಭಾವದಿಂದಲೂ, ಸರ್ಕಾರದ ಆಡಳಿತವು ದಕ್ಷತೆಯಿಂದ ನಡೆಯುತ್ತಿದ್ದುದರಿಂದಲೂ ಸಂಸ್ಥಾನದ ಪ್ರಜೆಗಳ ಹಿತಸಾಧನೆಮಾಡಿ ಅಭ್ಯುದಯ ಯೋಜನೆಗಳನ್ನು ನೆರವೇರಿಸುವ ಕಾರ್ಯದಲ್ಲಿ ಇತರ ಸಂಸ್ಥಾನಗಳಲ್ಲಿ ದೊರೆತಿದ್ದುದಕ್ಕಿಂತಲೂ ಹೆಚ್ಚಿನ ಸ್ವಾತಂತ್ರ್ಯವು ಮೈಸೂರಿನಲ್ಲಿ ಲಭಿಸಿದ್ದಿತು.

ಧರ್ಮರಾಜನೆಂದರೆ ಹಿಂದೂಗಳ ಭಾವನೆಯಲ್ಲಿ ಎಂಥ ಕಲ್ಪನೆಯುಂಟೊ ಅದಕ್ಕೆ ಸಮೀಪವರ್ತಿಯೆನಿಸುವ ಮೂರ್ತಿಯಂತಿದ್ದವರು ಹಿಂದಿನ ಮಹಾರಾಜರು ಎಂದು ಡಾ|| ವಿಶ್ವೇಶ್ವರಯ್ಯನವರು ಕೊಯಲ್ಲಿ ಹೇಳಿದರು.

ಪ್ರಾರಂಭದಲ್ಲಿ ಶ್ರೀಮತಿ ಶಾಂತಕಮಣಿ ಮತ್ತು ಶ್ರೀಮತಿ ರಾಜಮ್ಮ ಕಲ್ಲೋಲಿಮಠರವರುಗಳಿಂದ ಸ್ವಾಗತಗೀತೆಗಳು ಆದುವು.

ಮಲಾನ್ ಸರ್ಕಾರ ನೀತಿ ಬಗ್ಗೆ ವಿಶ್ವದಾದ್ಯಂತ ಖಂಡನೆ

ಬ್ರಿಟನ್, ಅಮೆರಿಕಾ, ರಷ್ಯಾ ಇಂಡೋನೇಷ್ಯಾ, ಬರ್ಮಾ ಪಾಕೀಸ್ತಾನ ಮುಂತಾದ ವಿಶ್ವದ ನಾನಾ ರಾಷ್ಟ್ರಗಳು ದಕ್ಷಿಣಆಫ್ರಿಕಾದಲ್ಲಿ ಮಲಾನ್‌ಸರ್ಕಾರವು ಅನುಸರಿಸುತ್ತಲಿರುವ ವರ್ಣಭೇದ ನೀತಿಯನ್ನೂ ಗದರಬಗ್ಗೆ ನಡೆಯುತ್ತಿರುವ ಅಹಿಂಸಾತ್ಮಕ ಚಳುವಳಿಯನ್ನೂ ತುಳಿಯಲು ಸರ್ಕಾರವು ಅನುಸರಿಸುತ್ತಲಿರುವ ನೀತಿಯನ್ನು ತೀವ್ರವಾಗಿ ಖಂಡಿಸಿವೆ.

ಲಂಡನ್ ಟೈಮ್ಸ್, ನ್ಯೂಯಾರ್ಕಿನ ಟೈಮ್ಸ್ ಮುಂತಾದ ಅನೇಕ ಪ್ರಮುಖ ವೃತ್ತಪತ್ರಿಕೆಗಳೂಸಹ ಮಲಾನ್‌ಸರ್ಕಾರವನ್ನು ತೀವ್ರವಾಗಿ ಖಂಡಿಸಿ ನ್ಯಾಯಪರಿಪಾಲನೆಗೇ ಕೆಡಕನ್ನುಂಟುಮಾಡಿದೆಯಲ್ಲದೆ ಈ ನೀತಿ ವಿಶ್ವಶಾಂತಿಗೆ ಭಂಗತರುವುದಾಗಿದೆಯೆಂದು ತಿಳಿಸಿ ಈರೀತಿಯ ಸರ್ಕಾರವು ಉಳಿಯುವುದು ದುಸ್ತರವೆಂದು ಹೇಳಿವೆ.

ಅಂಚೆ ಮತ್ತು ತಂತಿ ರಜಾ

ದೀಪಾವಳಿಪ್ರಯುಕ್ತ ೧೮ ನೇ ತಾರೀಖು ಶನಿವಾರ ಅಂಚೆ ಮತ್ತು ತಂತೀ ರಜಾ ಕೊಡಲಾಗಿದೆ.

ಭಾರತದ ಆಮದು ನೀತಿಯಲ್ಲಿ ಬದಲಾವಣೆ

ವಿದೇಶಗಳಿಂದ ಕೆಲವು ವಸ್ತುಗಳನ್ನು ತರಿಸಿಕೊಳ್ಳಲು ಅವಕಾಶವಿಲ್ಲ

ವಿದೇಶಗಳಿಂದ ಅನೇಕ ವಸ್ತುಗಳನ್ನು ತರಿಸಿಕೊಳ್ಳುವ ಬಗ್ಗೆ ಭಾರತಸರ್ಕಾರವು ತನ್ನ ಹೊಸ ನೀತಿಯನ್ನು ಪ್ರಕಟಿಸಿದೆ. ೬೧ ವಸ್ತುಗಳು ಈ ಪಟ್ಟಿಯಲ್ಲಿ ಅಡಕವಾಗಿವೆ.

ಬ್ಲೇಡುಗಳು, ರೇಡಿಯೋಸೆಟ್, ಬೈಸಿಕಲ್ ಮುಂತಾದುವನ್ನು ಹೊರಗಿನಿಂದ ತರಿಸಿಕೊಳ್ಳಲು ಅವಕಾಶವಿರುವುದಿಲ್ಲ.

ಕಾಗದ, ವನಸ್ಪತಿ ಮುಂತಾದ ಕೆಲವು ವಸ್ತುಗಳನ್ನು ತರಿಸಿಕೊಳ್ಳಲುಪ್ರಮಾಣವನ್ನು ಕಡಿಮೆಮಾಡಲಾಗುತ್ತದೆ.

ಬೆಂಚ್‌ಕೋರ್ಟುಗಳ ವಜಾ

ಸಂಸ್ಥಾನದಲ್ಲಿರುವ ಎಲ್ಲಾ ಬೆಂಚ್‌ಕೋರ್ಟುಗಳನ್ನು ವಜಾಮಾಡಿ ಸರ್ಕಾರವು ಆಜ್ಞೆಮಾಡಿದೆ. ಸಂಸ್ಥಾನದಲ್ಲಿ ಒಟ್ಟು ೧೧ ಬೆಂಚ್‌ಕೋರ್ಟುಗಳು ಇದ್ದುವು.

ಸೂಚನೆ

ದೀಪಾವಳಿ ಪ್ರಯುಕ್ತ ನಾಳೆ "ಸಮಾಚಾರ" ಪತ್ರಿಕೆಗೆ ರಜಾ ಕೊಡಲಾಗಿದೆ.

ಸಂಪಾದಕ.

ಶ್ರೀ ಕೃಷ್ಣರಾಜ ಒಡೆಯರ ಶಿಲಾ ಪ್ರತಿಮೆ ಅನಾವರಣ

ಡಾ|| ವಿಶ್ವೇಶ್ವರಯ್ಯನವರಿಗೆ ಪೌರ ಸನ್ಮಾನ

ಮೈಸೂರು ೧೭

ಈದಿನ ಬೆಳಗ್ಗೆ ಡಾ|| ವಿಶ್ವೇಶ್ವರಯ್ಯನವರು ಆಳಿದ ಮಹಾಸ್ವಾಮಿಯವರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಶಿಲಾ ಪ್ರತಿಮೆಯನ್ನು ಅನಾವರಣ ಮಾಡಿದರು ಪ್ರಾರ್ಥನೆಯಾದ ನಂತರ ಪುರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಡಾ|| ವಿಶ್ವೇಶ್ವರಯ್ಯನವರಿಗೆ ಪುರಸಭಾ ಮಾನಪತ್ರವನ್ನು ಒಪ್ಪಿಸಿ ಈ ರೀತಿ ಹೇಳಿದರು:—

ಆಳಿದ ಮಹಾಸ್ವಾಮಿಯವರ ಧವಳ ಕೀರ್ತಿಯನ್ನು ಬೆಳಗಿದ ಧೀಮಂತರಲ್ಲಿ ತಾವು ಪ್ರಮುಖರು. ಆಳಿದ ಮಹಾಸ್ವಾಮಿಯವರು ತಮ್ಮಲ್ಲಿ ನಿಶ್ಚಲವಾದ ವಿಶ್ವಾಸವಿಟ್ಟು, ತಮ್ಮ ಮೇಧಾಶಕ್ತಿಯೂ. ಕಾರ್ಯ ತತ್ಪರತೆಯೂ ದೇಶದ ಅಭಿವೃದ್ಧಿಗೆ ಸಾಧಕವಾಗುವಂತೆ ಅವಕಾಶವನ್ನೂ. ಸೌಲಭ್ಯಗಳನ್ನೂ ಕಲ್ಪಿಸಿಕೊಟ್ಟರು. ತಾವು ಸತತವಾಗಿ ದೇಶದ ಕಲ್ಯಾಣಕ್ಕಾಗಿ ಶ್ರಮಿಸಿ ಮೈಸೂರಿಗೆ ಆಳಿದ ಮಹಾಸ್ವಾಮಿಯವರಿಗೂ ಕೀರ್ತಿಯನ್ನು ಗಳಿಸಿಕೊಟ್ಟಿರಿ.

೧೯೧೮ ರಲ್ಲಿ ತಾಯ್ನಾಡಾದ ಮೈಸೂರಿನ ಆಹ್ವಾನವನ್ನು ಸ್ವೀಕರಿಸಿ, ಚೀಫ್ ಇಂಜನಿಯರಾಗಿಯೂ ಅನಂತರ ದಿವಾನರಾಗಿಯೂ, ಪ್ರಗತಿಪರ ಮೈಸೂರಿನ ತಳಹದಿಯನ್ನು ಹಾಕಿ, ಸರ್ವತೋಮುಖವಾದ ಅಭ್ಯುದಯವನ್ನು ಸಾಧಿಸಿದಿರಿ. ಇಪ್ಪತ್ತನೆಯ ಶತಮಾನದಲ್ಲಿ ಮೈಸೂರಿನ ಪ್ರಗತಿಯ ಯಾವ ಕ್ಷೇತ್ರವನ್ನು ಪರಿಶೀಲಿಸಿದರೂ ತಾವು ರಚಿಸಿದ ಯೋಜನೆ, ತಾವು ಹಾಕಿದ ಅಡಿಗಲ್ಲು, ತಾವು ನಿರ್ಮಿಸಿದ ಚೌಕಟ್ಟು, ತಮ್ಮ ದೂರದರ್ಶಿತ್ವ ಇವೇ ಕಾಣುತ್ತವೆ.

ಇಂದಿನ ಪ್ರಜಾಸರ್ಕಾರಕ್ಕೆ ಸಿದ್ಧತೆಯೋ ಎಂಬಂತೆ, ಮೈಸೂರಿನ ಪ್ರಜೆಗಳನ್ನು ಆಡಳಿತದಲ್ಲಿ ಜೊತೆಗೂಡಿಸಿಕೊಂಡು ಅಂದಿನಿಂದಲೇ ಕೆಲಸಮಾಡುವ ವಿಧಾನವನ್ನು ಪ್ರಾರಂಭಿಸಿದಿರಿ. ಅನೇಕ ಸಂಸ್ಥೆಗಳಲ್ಲೂ, ಸಮಿತಿಗಳಲ್ಲೂ ಪ್ರಜಾಮುಖಂಡರಿಗೆ ಅವಕಾಶ ಕೊಟ್ಟು ಕೆಲಸಮಾಡಿಸಿದಿರಿ. ಜನರು ದುಡಿಯಬೇಕು, ಜನರ ಬುದ್ಧಿಶಕ್ತಿ ಹೆಚ್ಚಬೇಕು, ಜನರ ಉದ್ಯೋಗದಕ್ಷತೆ ಬೆಳೆಯಬೇಕು, ಸರ್ಕಾರ ಜನತೆ ಒಂದುಗೂಡಿ ಕೆಲಸಮಾಡಬೇಕು ಎಂದು ಸಾರಿಸಾರಿ ಹೇಳಿ ಈ ಧ್ಯೇಯಗಳ ಅನುಷ್ಠಾನಕ್ಕೆ ಪ್ರಯತ್ನಮಾಡಿದಿರಿ.

ಅಧಿಕಾರದಿಂದ ವಿಶ್ರಾಂತಿ ಹೊಂದಿದ ಮೇಲೂ, ದೇಶದ ಏಳಿಗೆಗೆ ಅವಿಶ್ರಾಂತವಾಗಿ ದುಡಿಯುತ್ತಿರುವಿರಿ. ಭಾರತದೇಶದಲ್ಲಿ ಯೋಜನಾಬದ್ಧವಾದ ಆರ್ಥಿಕ ಅಭಿವೃದ್ಧಿಯ ಅವಶ್ಯಕತೆಗೆ ಗಮನವನ್ನು ಸೆಳೆದು ಯೋಜನಾ ಮನೋಭಾವವನ್ನು ಬೆಳೆಸಿದಿರಿ.

ಕಾರ್ಯತತ್ಪರತೆಯು ತಮ್ಮ ಜೀವನದ ಬಹು ಮುಖ್ಯವಾದ ಆದರ್ಶ. ಕೆಲಸ ಮಾಡಿರಿ, ದುಡಿಯಿರಿ, ದುಡಿತದಿಂದ ಯಾರೂ ಸಾಯುವುದಿಲ್ಲ ಎಂಬ ಹಿತೋಕ್ತಿಯನ್ನು ತಾವು ದಿವಾನ ಪದವಿಯನ್ನು ವಹಿಸಿದಾಗ ಎಲ್ಲರಿಗೂ ಹೇಳಿದಿರಿ. ಹೇಳಿದ್ದು ಮಾತ್ರವಲ್ಲ; ಅದನ್ನು ತಮ್ಮ ಜೀವನದಲ್ಲಿ ಅಕ್ಷರಶಃ ಅನುಷ್ಠಾನ ಮಾಡಿಕೊಂಡು ಬಂದಿದ್ದೀರಿ. ಇತ್ತೀಚೆಗೆ ಪ್ರಕಟವಾದ ತಮ್ಮ ಆತ್ಮಚರಿತ್ರೆಗೇ ನನ್ನ ಕಾರ್ಯ ಪ್ರವೃತ್ತಿ ಜೀವನದನೆನಪುಗಳು, ಎಂದು ಹೆಸರಿಟ್ಟಿರುವುದೇ ತಮ್ಮ ಮನೋಧರ್ಮ ಜೀವನಚರ್ಯೆಗಳಿಗನುಗುಣವಾಗಿದೆ. ಅತ್ಯಂತ ಮೇಧಾವಿಗಳೂ, ನಿಷ್ಕಲ್ಮಷ ದೇಶಪ್ರೇಮಿಗಳೂ, ಕರ್ತವ್ಯ ನಿಷ್ಠರೂ ಕಾರ್ಯತತ್ಪರರೂ ಆದ ತಮ್ಮಂಥ ಮಹಾವ್ಯಕ್ತಿಗಳನ್ನು ಪಡೆದ ಮೈಸೂರು ದೇಶವೂ ಮೈಸೂರು ಜನತೆಯೂ ಧನ್ಯರು,

ಅನಂತರ ಪುರಸಭಾಧ್ಯಕ್ಷರು ಭಿನ್ನವತ್ತಳೆಯನ್ನು ಡಾ|| ವಿಶ್ವೇಶ್ವರಯ್ಯನವರಿಗೆ ರಜತ ಕರಂಡದಲ್ಲಿ ಒಪ್ಪಿಸಿದರು.

ಪಾಕೀಸ್ತಾನದಲ್ಲಿ ಮಿಶ್ರ ಮಂತ್ರಿಮಂಡಳ ಬೇಕು

ಪಾಕೀಸ್ತಾನದಲ್ಲಿ ಮುಸ್ಲಿಂಲೀಗ್ ಪಕ್ಷ ಮತ್ತು ವಿವಿಧ ರಾಜಕೀಯ ಪಕ್ಷಗಳನ್ನೊಳಗೊಂಡ ಮಿಶ್ರಮಂತ್ರಿ ಮಂಡಳವನ್ನು ರಚಿಸಿ, ಕಾಶ್ಮೀರವನ್ನು ಪಾಕೀಸ್ತಾನಕ್ಕೆ ಸೇರಿಸಲು ಭಾರತವನ್ನು ಎದುರಿಸಬೇಕೆಂದು ಇಸ್ಲಾಂಲೀಗಿನ ಅಧ್ಯಕ್ಷರಾದ ಅಲ್ಲಾಮಮ. ಷ್ಕೀಕಿಯವರು ಅಲ್ಲಿನ ಪ್ರಧಾನಿಯವರನ್ನು ಕೋರಿದ್ದಾರೆ.

ನಿವೃತ್ತ ಅಧಿಕಾರಿಗೆ ಪುನಃ ಕೆಲಸ

ನಿವೃತ್ತ ಅಸಿಸ್ಟೆಂಟ್ ಕಮೀಷನರ್ ಶ್ರೀ ಎಂ. ಚಿನ್ನಾರೆಡ್ಡಿಯವರನ್ನು ಸರ್ಕಾರದವರು ಪುನಃ ಕೆಲಸಕ್ಕೆ ತೆಗೆದುಕೊಂಡು ಅವರನ್ನು ಬೆಂಗಳೂರು ಡಿವಿಜನ್ನಿನ ಅಡಿಷನಲ್ ಸಬ್‌ಡಿವಿಜನ್ ಅಧಿಕಾರಿಗಳಾಗಿ ನೇಮಿಸಲಾಗಿದೆ.

ಡಾ|| ವಿಶ್ವೇಶ್ವರಯ್ಯನವರು ಪೌರಸನ್ಮಾನಕ್ಕೆ ಉತ್ತರ ಕೊಡುತ್ತಾ ಪಾಶ್ಚಿಮಾತ್ಯ ದೇಶಗಳ ಪ್ರಗತಿಯನ್ನು ನಮ್ಮ ದೇಶದೊಡನೆ ಹೋಲಿಸಿದರೆ ನಾವು ವಿಶೇಷ ಹೀನ ಸ್ಥಿತಿಯಲ್ಲಿದ್ದೇವೆ ನಮ್ಮಲ್ಲಿ ಆರ್ಥಿಕ ಪರಿಸ್ಥಿತಿ ವಿಶೇಷ ಹದಗೆಟ್ಟಿದೆ ನಮ್ಮಲ್ಲಿ ಶಿಸ್ತಿಲ್ಲ ಅವ್ಯವಸ್ಥೆ ಹೆಚ್ಚಿದೆ ಜನಸಂಖ್ಯೆ ಹೆಚ್ಚುತ್ತಲಿದೆಯೇ ಹೊರತು ಕೈಗಾರಿಕೆ ಮತ್ತು ವ್ಯವಸಾಯೋತ್ಪನ್ನಗಳು ಹೆಚ್ಚಿಲ್ಲ ಇದೆಲ್ಲವನ್ನು ಜನತೆ ಗಮನಿಸಬೇಕು ಪ್ರಮುಖರು ಸೇರಿ ಸಮಿತಿಗಳನ್ನು ನೇಮಿಸಿಕೊಂಡು ಅಲ್ಲಿ ಈ ವಿಷಯಗಳನ್ನು ಅಂಕಿ ಅಂಶಗಳೊಡನೆ ಪರಿಶೀಲಿಸಿ ನಮ್ಮ ಆರ್ಥಿಕ ಮಟ್ಟವು ಹೆಚ್ಚುವಂತೆ ಮಾಡಬೇಕು ಅದಕ್ಕೆ ಸರ್ಕಾರ, ಜನರು ಎಲ್ಲರೂ ಶ್ರಮಿಸಬೇಕೆಂದು ಹೇಳಿದರು.

ಈಜಿಪ್ಟಿನಲ್ಲಿ ಏಕಮಾತ್ರ ರೀಜೆಂಟರು

ಈಜಿಪ್ಟಿನ ದೊರೆ ಫರೂಕ್‌ರವರು ಸಿಂಹಾಸನ ತ್ಯಜಿಸಿದ ಮೇಲೆ ಅವರ ೩ ವರ್ಷದ ಮಗುವಿನ ಪರವಾಗಿ ನೇಮಿಸಲಾಗಿದ್ದ ೩ ಮಂದಿಯ ರೀಜೆನ್ಸಿ ಕೌನ್ಸಿಲನ್ನು ಈಗ ರದ್ದುಮಾಡಿ, ಅಬ್ದುಲ್‌ಮೊನಿಮ್‌ರವರೊಬ್ಬರನ್ನು ಏಕಮಾತ್ರ ರೀಜೆಂಟರಾಗಿ ನೇಮಿಸಲಾಗಿದೆ.

ಸೂಚನೆ

ಸಮಾಚಾರ ಪತ್ರಿಕೆ ಕಾರ್ಯಾಲಯವನ್ನು ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಿಂದ ಜಗನ್ಮೋಹನ ಪ್ಯಾಲೇಸ್ ರಸ್ತೆಯಲ್ಲಿ ಮೋತೀಖಾನೆ ಕಟ್ಟಡಕ್ಕೆ [ಸರ್ಕಾರಿ ರೇಷ್ಮೆಡಿಪೋ ಮಹಡಿ] ಬದಲಾಯಿಸಲಾಗಿದೆ.

ಸಂಪಾದಕ.

ಪ್ರಭಾ 17-10-52 ರಿಂದ ಪ್ರತಿದಿನ 3 ಪ್ರದರ್ಶನಗಳು

ಜನಾಕರ್ಷಣೀಯವಾದ 4ನೇ ವಾರ ಕಿಕ್ಕಿರಿದ ಪ್ರೇಕ್ಷಕವೃಂದಕ್ಕೆ ಪ್ರದರ್ಶಿಸಲ್ಪಡುತ್ತಿರುವ ಸಾಂಸಾರಿಕ [ತೆಲುಗು ಚಿತ್ರ]

- ಸಂಕ್ರಾಂತಿ -

ಬೆಳಗಿನಪ್ರದರ್ಶನ:- ೧೭-೧೦-೫೨ ರಿಂದ ೩ ದಿನಗಳು ಮಾತ್ರ

ಸಂಗ್ರಾಮ್

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ವುಡ್‌ಲಾಂಡ್ಸ್

ದುಪ್ಪಟ

ತಾರೀಖು 10-10-52 ರಿಂದ

ಅಮೋಘ ೨ನೇ ವಾರ

ಪ್ರತಿದಿನ ಮೂರು ಪ್ರದರ್ಶನ

ಪಾತ್ರ—ನೂರ್‌ಜಹಾನ್, ಅಜಯಕುಮಾರ್, ಗುಲಾಮ್ ಮಹಮದ್

ರಾಜಕಮಲ್ ಮೈಸೂರು

ದೀಪಾವಳಿ ಹಬ್ಬದ ವಿಶೇಷ ಆಕರ್ಷಣೆ

17—10—52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು M. K. M. ರವರ

ಮರದಲು ಪೆಳ್ಳಿ (ನಾದನಿಯ ಮದುವೆ) ತೆಲುಗು

ಭೂಮಿಕೆ:—ಸೂರ್ಯಕುಮಾರಿ, ಲಕ್ಷ್ಮೀಕಾಂತಂ, ದೊರೆಸ್ವಾಮಿ, ಮುಕ್ಕಾಮಲ.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 47

೧೮-೧೦-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕ್ಷಾಮತಡೆಗಟ್ಟಲು ಎಲ್ಲ ಪಕ್ಷಗಳ ಸಹಕಾರ ಪಡೆಯಬೇಕು

ಸರ್ಕಾರಕ್ಕೆ ಕಮ್ಯೂನಿಸ್ಟ ನಾಯಕರ ಮನವಿ

ಮೈಸೂರು ೧೮

ಅಖಿಲಭಾರತ ಕಮ್ಯೂನಿಸ್ಟ್‌ಪಕ್ಷದ ನಾಯಕರೂ ಮತ್ತು ಪಾರ್ಲಿಮೆಂಟ್ ಸದಸ್ಯರೂ ಆದ ಶ್ರೀ ಕೆ. ಅನಂತ ನಂಬಿಯಾರ್‌ರವರು ನಿನ್ನೆದಿನ ರಾಜಧಾನಿಗೆ ಆಗಮಿಸಿದರು.

ಅವರು ಜೀವನರಾಮನ ಕಟ್ಟೆಯಲ್ಲಿ ಪುರಸಭಾ ಕೆಲಸಗಾರರ ಸಂಘದ ಆರಂಭೋತ್ಸವವನ್ನು ನಡೆಸಿ, ಕೆಲಸಗಾರರು ಸಂಘಟಿತರಾಗಿ ಸಂಸ್ಥೆ ಮುಖಾಂತರ ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಂಡು ಬರಬೇಕೆಂದು ತಿಳಿಸಿದರು.

ಪತ್ರಿಕೆಯವರೊಡನೆ ಚರ್ಚೆ

ಅನಂತರ ನಗರದ ಪತ್ರಿಕೋದ್ಯೋಗಿಗಳನ್ನು ಭೇಟಿಮಾಡಿ ಅನೇಕ ವಿಷಯಗಳನ್ನು ಚರ್ಚಿಸಿದರು ದಕ್ಷಿಣ ಭಾರತದಲ್ಲಿ ಆಹಾರ ಪರಿಸ್ಥಿತಿಯನ್ನು ಖುದ್ದಾಗಿ ಪರಿಶೀಲಿಸಲು ಮತ್ತು ರೈಲ್ವೆ ಕೆಲಸಗಾರರ ಕುಂದುಕೊರತೆಗಳನ್ನು ತಿಳಿಯಲು ತಾವು ಈ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡಿರುವುದಾಗಿ ತಿಳಿಸಿದರು.

ದಕ್ಷಿಣ ಭಾರತದಲ್ಲಿರುವ ಎಲ್ಲ ರೈಲುಗಳನ್ನು ಒಂದಾಗಿ ಕೂಡಿಸಿರುವುದರಿಂದ ಈಗಿರುವ ಅನೇಕ ರೈಲ್ವೆ ಕಾರ್ಮಿಕ ಸಂಘಗಳ ಸಂಘಟನೆ ಅವಶ್ಯಕವೆಂದೂ, ಈ ವಿಚಾರದಲ್ಲಿ ಮೈಸೂರಿನ ಕೆಲವು ರೈಲ್ವೆ ಕಾರ್ಮಿಕರ ಮುಖಂಡರುಗಳೊಡನೆ ಮಾತುಕತೆ ನಡೆಸಿದುದಾಗಿಯೂ ಅವರು ಹೇಳಿದರು. ಸಂಬಳದಲ್ಲಿ ಶೇಕಡ ೫೦ ರಷ್ಟು ತುಟ್ಟಿಭತ್ಯವನ್ನು ಐಕ್ಯಮಾಡಬೇಕೆಂದೂ ಕೇಂದ್ರಸರ್ಕಾರದ ಗಾಡ್ಗಿಲ್‌ಸಮಿತಿಯವರು ಮಾಡಿರುವ ಶಿಫಾರಸಿನಿಂದ ರೈಲ್ವೆ ಕೆಲಸಗಾರರಿಗೆ ಅಷ್ಟು ಪ್ರಯೋಜನವಾಗುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟರು.

ಸೋಷಲಿಸ್ಟ್- ಕೆ. ಎಂ. ಪಿ. ಪಕ್ಷಗಳ ಐಕ್ಯತೆ ವಿಚಾರವನ್ನು ಪ್ರಸ್ತಾಪಿಸಿ. ನೂತನಪಕ್ಷವು ಕಮ್ಯೂನಿಸ್ಟರನ್ನು ಸದೆಬಡಿಯುವುದಕ್ಕಾಗಿ ಹುಟ್ಟಿರುವುದೇಹೊರತು ಸಾರ್ವಜನಿಕರ ಉಪಯೋಗಕ್ಕಲ್ಲವೆಂದೂ ಇದರಿಂದ ಮುಂದೆ ಪ್ರಜಾ ಸೋಷಲಿಸ್ಟ್ ಪಕ್ಷವು ಜನಾದರಣೀಯವಾಗುವುದಿಲ್ಲವೆಂದೂ ಅವರು ತಿಳಿಸಿದರು.

ಬಹಿರಂಗಸಭೆ

ಸಂಜೆ ಟೌನ್‌ಹಾಲ್ ಮೈದಾನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಭಾಷಣಮಾಡಿದರು. ಸ್ಥಳೀಯ ಕಮ್ಯೂನಿಸ್ಟ್ ನಾಯಕ ಶ್ರೀ ಶರ್ಮರವರು ಅಧ್ಯಕ್ಷತೆ ವಹಿಸಿದ್ದರು.

ದಕ್ಷಿಣ ಭಾರತದಲ್ಲಿ ಈಗ ಉಂಟಾಗಿರುವ ಭೀಕರ ಕ್ಷಾಮಪರಿಸ್ಥಿತಿಯಬಗ್ಗೆ ಅವರು ಮಾತನಾಡಿ, ಸರ್ಕಾರದ ಧೋರಣೆಯಿಂದಲೇ ಅನೇಕರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆಂದು ಹೇಳಿದರು. ಮದರಾಸ್ ಸಂಸ್ಥಾನದಲ್ಲಿ ಆಹಾರದ ಹತೋಟಿಯನ್ನು ರಾಜಾಜಿಯವರು ರದ್ದುಮಾಡಿದುದರಿಂದ ಪರಿಸ್ಥಿತಿಯು ಬಿಗಡಾಯಿಸಿತು. ಇದರಿಂದ ಆಹಾರ ಧಾನ್ಯಗಳ ಬೆಲೆಯು ವಿಶೇಷವಾಗಿ ಏರಿ, ಸಾಮಾನ್ಯರಿಗೆ ಅದು ಸಿಕ್ಕದೆ ತೊಂದರೆಗೀಡಾದರು.

ಜಮೀನುದಾರರಿಗೂ ಮತ್ತು ಬಚ್ಚಿಟ್ಟುವಗೆರುವವರಿಗೂ ಇದರಿಂದ ವಿಶೇಷ ಪ್ರಯೋಜನವಾಯಿತು. ಈ ಕ್ಷಾಮ ಪರಿಸ್ಥಿತಿಯನ್ನು ಕೂಡಲೇ ತಡೆಗಟ್ಟಲು ವಿಶೇಷ ಜರೂರು ಕಾರ್ಯಕ್ರಮ ಕೈಗೊಳ್ಳಬೇಕೆಂದು ತಮ್ಮ ಪಕ್ಷದವರು ಹಿಂದಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ಸಲಹೆ ಇತ್ತಾಗ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದವರು ಯಾವ ಕ್ಷಾಮವೂ ಇಲ್ಲವೆಂದೂ ಕಮ್ಯೂನಿಸ್ಟರ ಪ್ರಚಾರವೆಂದೂ ತಮ್ಮನ್ನು ತುಚ್ಛವಾಗಿ ಕಂಡರು. ಆದರೆ ಈಗ ಪರಿಸ್ಥಿತಿಯು ವಿಷಮಗೊಂಡಿದೆ. ಪ್ರಧಾನಿಯವರೇ ಇತ್ತೀಚೆಗೆ ಪರಿಸ್ಥಿತಿಯನ್ನು ಖುದ್ದಾಗಿ ಕಂಡು ಅರಿತಿದ್ದಾರೆ. ತಾವೂಸಹ ತಮ್ಮ ಪ್ರವಾಸದ ವರದಿಯನ್ನು ನೆಹರೂರವರಿಗೆ ಕಳುಹಿಸಿ, ಕೂಡಲೇಆಹಾರಧಾನ್ಯಗಳನ್ನು ಕಳುಹಿಸುವ ಸಂಗಡ ಜರೂರು ಪರಿಹಾರ ಕಾರ್ಯಗಳನ್ನು ಕೈಗೊಂಡು ಜನರಿಗೆ ಕೆಲಸಗಳನ್ನು ಒದಗಿಸಬೇಕೆಂದೂ, ಮತ್ತು ಕೆರೆಗಳಲ್ಲಿ ನೀರನ್ನು ಸರಿಯಾಗಿ ಶೇಖರಿಸಿ ವ್ಯವಸಾಯಕ್ಕೆ ಅನುಕೂಲವಾಗುವಂತೆ ಮಾಡಬೇಕೆಂದು ಸಲಹೆಮಾಡಲಾಗಿದೆ ವಿಚಾರಗಳನ್ನು ಎಲ್ಲಾ ಕಲೆತು ಮುಂದಿನ ಪಾರ್ಲಿಮೆಂಟ್ ಸಭೆಯಲ್ಲಿ ಚರ್ಚಿಸಬಹುದೆಂದು ಪಂಡಿತ ನೆಹರೂರವರು ತಮಗೆ ಉತ್ತರ ಬರೆದಿದ್ದಾರೆ. ಎಂದು ತಿಳಿಸಿದ್ದಾರೆ.

ಈಗಿನ ಪರಿಸ್ಥಿತಿಯಲ್ಲಿ ಸರ್ಕಾರದವರು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು, ಎಲ್ಲ ಪಕ್ಷದವರ ಸಹಕಾರವನ್ನು ಪಡೆದು, ಆಹಾರವಿಲ್ಲದೆ ಯಾರೂ ಸಾಯದಂತೆ ತ್ವರಿತ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ಅವರು ಕೋರಿದರು

ಭಾರತ ರೈಲ್ವೆಯಿಂದ ಸರ್ಕಾರಕ್ಕೆ ೫೦ ೬೦ ಕೋಟಿ ರೂ ಲಾಭ ಬರುತ್ತಿದ್ದರೂ ಕೂಡ ರೈಲ್ವೆ ಕೆಲಸಗಾರರಿಗೆ ಸಾಕಷ್ಟು ವೇತನ ಕೊಡದಿರುವುದು ಶೋಚನೀಯ ಇದರಜೊತೆಗೆ ಪ್ರಯಾಣಿಕರಿಗೆ ಹೆಚ್ಚು ಸೌಲಭ್ಯ ಒದಗುತ್ತಿಲ್ಲ. ಈಗಲಾದರೂ ರೈಲ್ವೆಯ ಲಾಭ ಸಂಪಾದಿಸುವ ಶಾಖೆಯೆಂಬ ಮನೋಭಾವವನ್ನು ಮಾರ್ಪಡಿಸಿ ಸರ್ಕಾರದವರು ಅಲ್ಲಿ ಕೆಲಸಮಾಡುವವರಿಗೆ ಹೆಚ್ಚಿನ ಸೌಲಭ್ಯ ಒದಗಿಸಬೇಕೆಂದು ಹೇಳಿದರು. ಸ್ವಾತಂತ್ರ ಬಂದಮೇಲೆ ದೇಶದಲ್ಲಿ ನಿರುದ್ಯೋಗವಿಶೇಷವಾಗಿ ತಲೆದೋರಿದೆ. ಅದನ್ನು ಸರ್ಕಾರದವರು ತಡೆಗಟ್ಟಿ ಜನರಿಗೆ ಉದ್ಯೋಗ ಕಲ್ಪಿಸದಿದ್ದಲ್ಲಿ ಪರಿಸ್ಥಿತಿಯು ವಿಷಮಗೊಳ್ಳುವುದೆಂದು ಕೊನೆಯಲ್ಲಿ ತಿಳಿಸಿದರು.

ರಾಜಕುಮಾರಿ ಅಮೃತಕೌರ್ ಮೈಸೂರಿಗೆ

ಕೇಂದ್ರಸರ್ಕಾರದ ಆರೋಗ್ಯಶಾಖಾ ಸಚಿವರದ ಶ್ರೀಮತಿ ರಾಜಕುಮಾರಿ ಅಮೃತಕೌರ್‌ರವರು ೩೧ನೇತಾರೀಖು ಮೈಸೂರಿಗೆ ಆಗಮಿಸುವರೆಂದು ಗೊತ್ತಾಗಿದೆ; ಅಂದು ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಭೇಟಿ ಕೊಡಲಿರುವರು.

ವಿಮಾನದಲ್ಲಿ ಸಿನಿಮಾ ಪ್ರದರ್ಶನ

ಬಹುದೂರ ಪ್ರಯಾಣಮಾಡುವ ಪ್ರಯಾಣಿಕರಿಗೆ ವಿಮಾನದಲ್ಲಿ ಚಲನಚಿತ್ರಗಳನ್ನು ಪ್ರದರ್ಶಿಸುವ ಏರ್ಪಾಡನ್ನು ಬ್ರಿಟನ್ ವಿಮಾನ ಕಂಪೆನಿಗಳು ಮಾಡುವ ಯೋಜನೆಯಲ್ಲಿರುವುದಾಗಿ ವರದಿಯಾಗಿದೆ.

ಆಂಧ್ರಪ್ರಾಂತ್ಯ ಸತ್ಯಾಗ್ರಹ

ಆಂಧ್ರಪ್ರಾಂತ್ಯರಚನೆಗಾಗಿ ಸ್ವಾಮಿ ಸೀತಾರಾಂರವರು ಭೀಮಾವರಂನಲ್ಲಿ ನಡೆಸುತ್ತಲಿರುವ ತಮ್ಮ ಸತ್ಯಾಗ್ರಹ ಕೇಂದ್ರವನ್ನು ದೆಹಲಿಗೆ ಈ ಮಾಸಾಂತ್ಯದಲ್ಲಿ ಬದಲಾಯಿಸಿ ಪಾರ್ಲಿಮೆಂಟ್‌ಭವನ ಅಥವ ರಾಜಘಾಟಿನಲ್ಲಿ ಸತ್ಯಾಗ್ರಹ ನಡೆಸುವರೆಂದು ಹೇಳಲಾಗಿದೆ.

ಗೆಜೆಟೆಡ್ ಅಧಿಕಾರಿಯ ತಾಯಿ ಭಿಕ್ಷುಕಿ

ಕಳೆದವಾರ ದೆಹಲಿ ಪೋಲೀಸಿನವರು ಕೆಲವು ಭಿಕ್ಷುಕಿಗಳನ್ನು ದಸ್ತಗಿರಿಮಾಡಿದಾಗ ೬೦ ವರ್ಷದ ಮುದುಕಿಯೊಬ್ಬಳು ಬ್ಯಾಂಕಿನಲ್ಲಿ ೩೫೦೦ ರೂಗಳನ್ನು ಇಟ್ಟಿದುದಲ್ಲದೆ ಆಕೆ ಒಬ್ಬ ಗೆಜೆಟೆಡ್ ಅಧಿಕಾರಿಯ ತಾಯಿಯಾಗಿದ್ದಾಗ್ಯೂ ಭಿಕ್ಷುಕಿಯಾಗಿ ಜೀವಿಸುತ್ತಲಿರುವುದು ಗೊತ್ತಾಗಿದೆ.

ಮುದುಕಿಗೆ ೫೦ ರೂ ದಂಡಬಿತ್ತು ಆಕೆಯ ಪರಿಚಿತ ಶ್ರೀಮಂತನೋರ್ವನು ಈ ದಂಡವನ್ನು ಕೊಟ್ಟನು.

ಕೊರಿಯಾಮೇಲೆ ಅಣು ಬಾಂಬು ಪ್ರಯೋಗವೇ ?

ಕೊರಿಯಾಶಾಂತಿ ಸಂಧಾನಕ್ಕೆ ಚೀಣ ಕಮ್ಯೂನಿಸ್ಟರು ಒಪ್ಪದಿದ್ದಲ್ಲಿ ಅಲ್ಲಿ ಅಣು ಬಾಂಬು ಪ್ರಯೋಗಿಸಲು ಅಮೆರಿಕದ ಸೈನ್ಯಾಧಿಕಾರಿಗಳು ಅಧ್ಯಕ್ಷ ಟ್ರೂಮನ್‌ರಿಗೆ ಶಿಫಾರಸು ಮಾಡಬಹುದೆಂದು ಹೇಳಲಾಗಿದೆ.

ಶುಭಾಶಯ

ದೀಪಾವಳಿ ಹಬ್ಬದ ಸಂಬಂಧದಲ್ಲಿ ನಮ್ಮ ಚಂದಾದಾರರು ಜಾಹಿರಾತುದಾರರು ಮತ್ತು ಇತರ ಹಿತೈಷಿಗಳಿಗೆ ನಮ್ಮ ಹೃತ್ಪೂರ್ವಕ ಶುಭಾಶಯಗಳನ್ನು ಕೋರುತ್ತೇವೆ.

—ಸಂಪಾದಕ.

ಕೇಂದ್ರ ಅರಣ್ಯಮೃಗಗಳ ಸಲಹಾಸಮಿತಿ ಆರಂಭ

ಮೈಸೂರು ೧೮

ಭಾರತದಲ್ಲಿ ಅರಣ್ಯಮೃಗಗಳನ್ನು ಕಾಪಾಡುವ ಬಗ್ಗೆ ಕೇಂದ್ರಸರ್ಕಾರದವರು ರಚಿಸಿರುವ ಸಲಹಾಸಮಿತಿಯ ಪ್ರಾರಂಭೋತ್ಸವವನ್ನು ರಾಜಧಾನಿಯಲ್ಲಿ ಶ್ರೀಮನ್ಮಹಾರಾಜರವರು ಮುಂದಿನ ತಿಂಗಳ ಕೊನೆಯವಾರದಲ್ಲಿ ನೆರವೇರಿಸುವರು ಕೇಂದ್ರ ವ್ಯವಸಾಯ ಮಂತ್ರಿ ಶ್ರೀ ಪಂಜಾಬ್‌ರಾವ್ ದೇಶಮುಖ್‌ರವರು ಈ ಮಹೋತ್ಸವದಲ್ಲಿ ಭಾಗವಹಿಸಿ ಭಾಷಣ ಮಾಡುವರು.

ಪರ್ಷಿಯಾ ಬ್ರಿಟನ್ ಬಾಂಧವ್ಯ ಮುಕ್ತಾಯ

ಪರ್ಷಿಯಾದಲ್ಲಿ ಬ್ರಿಟಿಷ್ ರಾಯಭಾರಿ ಕಛೇರಿ ಮುಚ್ಚಲು ೧೦ ದಿನ ಅವಕಾಶ

ಪರ್ಶಿಯಾ ದೇಶವು ಬ್ರಿಟನ್ನಿನೊಡನೆ ರಾಜತಾಂತ್ರಿಕ ಬಾಂಧವ್ಯವನ್ನು ಕಡಿಸಿರುವುದಾಗಿ ಪ್ರಧಾನಿ ಡಾ|| ಮೊಸಾದಿಕ್‌ರವರು ಮೊನ್ನೆ ರಾಷ್ಟ್ರಕ್ಕೆ ಇತ್ತ ಒಂದು ರೇಡಿಯೋ ಭಾಷಣದಲ್ಲಿ ತಿಳಿಸಿದ್ದಾರೆ.

ಎಣ್ಣೆ ವಿವಾದ ಪರಿಹಾರಕ್ಕೆ ಇರಾಣ್ ಮಾಡಿರುವ ಎಲ್ಲಾ ಸಲಹೆಗಳನ್ನು ಬ್ರಿಟನ್ ತಿರಸ್ಕರಿಸಿದೆಯಾಗಿ ಈ ಅಂತ್ಯತೀರ್ಮಾನ ಮಾಡಲಾಗಿದೆ.

ಬ್ರಿಟಿಷ್ ಸರ್ಕಾರದೊಡನೆ ಭಿನ್ನಾಭಿಪ್ರಾಯವಿದೆಯೆಂದೊರತು ಬ್ರಿಟನ್ನಿನ ಜನತೆಯ ಬಾಂಧವ್ಯ ಚಿರಕಾಲ ನಿಲ್ಲಬೇಕು ಎಂದು ಡಾ|| ಮುಸಾದಿಕ್‌ರವರು ತಿಳಿಸಿರುವರು.

ಪರ್ಶಿಯಾದಲ್ಲಿ ಬ್ರಿಟಿಷ್ ರಾಯಭಾರಿ ಕಛೇರಿಯನ್ನು ಮುಚ್ಚಲು ೧೦ದಿನ ಕಾಲಾವಕಾಶವನ್ನು ಕೊಡಲಾಗಿದೆ.

ಬ್ಲಿಟ್ಸ್ ಪತ್ರಿಕಾ ಸಂಪಾದಕರ ದಸ್ತಗಿರಿ

ಬೊಂಬಾಯಿನ ಪ್ರಸಿದ್ಧ ವಾರಪತ್ರಿಕೆಯಾದ ಬ್ಲಿಟ್ಸ್ ಪತ್ರಿಕಾ ಸಂಪಾದಕರಾದ ಶ್ರೀ ಆರ್. ಕೆ. ಕಾರಂಜಿಯಾ ಮತ್ತು ಕರೆಂಟ್ ಎಂಬ ವಾರಪತ್ರಿಕೆ ಸಂಪಾದಕ ಶ್ರೀ ಡಿ ಎಫ್. ಕಾರಕಾರವರನ್ನು ಬೊಂಬಾಯಿನ ಪೋಲೀಸಿನವರು ಮೊನ್ನೆ ದಸ್ತಗಿರಿ ಮಾಡಿದರು.

ಅಕ್ಟೋಬರ್ ಒಂದನೇತಾರೀಖಿನ ಕರೆಂಟ್ ಪತ್ರಿಕೆಯಲ್ಲಿ ಭಾರತದಲ್ಲಿರುವ ಅಮೆರಿಕಾ ರಾಯಭಾರಿಯವರು ಶ್ರೀ ಕಾರಂಜಿಯಾರವರಿಗೆ ಬರೆದ ಪತ್ರವೊಂದು ಪ್ರಕಟಿಸಿದ್ದುದು ಕೃತಕವಾದುದೆಂಬುದೇ ಅಪಾದನೆಯಾಗಿದೆ. ಅಪಾದಿತರನ್ನು ಜಾಮೀನಿನಮೇಲೆ ಬಿಡುಗಡೆ ಮಾಡಲಾಗಿದೆ.

ಎಮ್ಮೆ ಹೊಟ್ಟೆಯಲ್ಲಿ ಕಪ್ಪೆ

ಭದ್ರಾಯೆಂಬ ಗ್ರಾಮದಲ್ಲಿ ಎಮ್ಮೆಯ ಹೊಟ್ಟೆಯಲ್ಲಿ ಕಪ್ಪೆಯೊಂದು ಹುಟ್ಟಿರುವ ಆಶ್ಚರ್ಯವನ್ನು ನೋಡಲು ಸಹಸ್ರಾರು ಜನರು ಆ ಗ್ರಾಮಕ್ಕೆ ಹೋಗಿ ಬರುತ್ತಿದ್ದಾರೆ. ಕಪ್ಪೆಯು ಹುಟ್ಟಿದ ೩ ದಿನಗಳ ನಂತರ ಸತ್ತುಹೋಯಿತು. ಅದರ ತೂಕವು ೫ ಸೇರುಗಳಷ್ಟಿದೆಯೆಂದು ಹೇಳಲಾಗಿದೆ.

ಲೆಫ್ಟಿನೆಂಟ್ ಜನರಲ್ಲಾಗಿ ಬಡ್ತಿ

ಮೇಜರ್ ಜನರಲ್ ಶಾಂತಸಿಂಗ್ ಮತ್ತು ಮೇಜರ್ ಜನರಲ್ ಕೆ. ಎಸ್. ತಿಮ್ಮಯ್ಯನವರನ್ನು ಲೆಫ್ಟಿನೆಂಟ್ ಜನರಲ್‌ಗಳನ್ನಾಗಿ ಬಡ್ತಿಮಾಡಲಾಗಿದೆ ಎಂದು ಕೇಂದ್ರಸರ್ಕಾರ ಪ್ರಕಟಣೆ ತಿಳಿಸುತ್ತದೆ.

ನೂತನ ಚೀಫ್ ಇಂಜನಿಯರು

ಚೀಫ್ ಇಂಜನಿಯರು ಶ್ರೀ ಡಿ.ಎಸ್. ವೆಂಕಣ್ಣನವರು ಇದೇ ಮಾಹೆ ೨೫ ನೇ ತಾರೀಖಿನಿಂದ ನಿವೃತ್ತರಾಗುವರೆಂದೂ ಅವರ ಸ್ಥಾನದಲ್ಲಿ ಮರಾಮತ್ ಶಾಖಾ ಕಾರ್ಯದರ್ಶಿ ಶ್ರೀ ಗಂಗಾಧರ್‌ರವರನ್ನು ನೇಮಿಸಲಾಗುವುದೆಂದು ಗೊತ್ತಾಗಿದೆ

ಜಮೀನ್ದಾರಿ ರದ್ದಿನ ನಿಧಿಗೆ ರೈತರಿಂದ ನೂರುಕಾಲು ಕೋಟಿ ರೂ

ಉತ್ತರಪ್ರದೇಶದ ಜಮಿನ್ದಾರಿ ರದ್ದಿನ ನಿಧಿಗೆ ಅಲ್ಲಿಯ ರೈತರೆಲ್ಲಾ ಸೇರಿ ೩ ಕೋಟಿ ೨೬ ಲಕ್ಷ ರೂಗಳ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಕೆರೆ ರಿಪೇರಿಗಳಿಗೆ ೭೩ ಲಕ್ಷ ರೂ ಸಾಲ

ಹೈದರಾಬಾದಿನಲ್ಲಿ ಕೆರೆಗಳ ದುರಸ್ತಿಗಾಗಿ ಕೇಂದ್ರ ಸರ್ಕಾರವು ೭೩ ಲಕ್ಷ ರೂಪಾಯಿಗಳ ಸಾಲವನ್ನು ಇಲ್ಲಿಯವರೆಗೆ ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಕಾಂಗ್ರೆಸ್ ಚುನಾವಣಾಧಿಕಾರಿ

ಅಖಿಲಭಾರತ ಕಾಂಗ್ರೆಸ್‌ಗೆ ಮೈಸೂರು ಸಂಸ್ಥಾನದಿಂದ ಪ್ರತಿನಿಧಿಗಳನ್ನು ಆರಿಸುವ ಸಂಬಂಧದಲ್ಲಿ ಶ್ರೀ ಕೆ. ಆರ್. ಮಾಧವರಾಯರನ್ನು ಚುನಾವಣಾಧಿಕಾರಿಯನ್ನಾಗಿ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನೇಮಿಸಿದೆ.

ಕೆ. ವೆಂಕಟರಾಮಪ್ಪ ಅ|| ಪ್ರೊಫೆಸರ್

ಧಾರವಾಡ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಎರವಲಾಗಿ ಹೋಗಿರುವ ಪ್ರೊ|| ಟಿ. ಎಸ್. ಶ್ರೀಕಂಠಯ್ಯನವರ ಸ್ಥಾನದಲ್ಲಿ ಶ್ರೀ ಕೆ.ವೆಂಕಟರಾಮಪ್ಪನವರನ್ನು ತಾತ್ಕಾಲಿಕ ಅ| ಪ್ರೊಫೆಸರಾಗಿ ನೇಮಿಸಲಾಗಿದೆ.

ಶ್ರೀ ನೀಲಕಂಠಶಾಸ್ತ್ರಿ

ಮದರಾಸ್ ವಿಶ್ವವಿದ್ಯಾನಿಲಯದ ಇತಿಹಾಸ ಪ್ರೊಫೆಸರ್ ಆಗಿದ್ದ ಶ್ರೀ ಕೆ. ನೀಲಕಂಠಶಾಸ್ತ್ರಿಯವರನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಡಾಲಜಿ ಪ್ರೊಫೆಸರಾಗಿ ೨ ವರ್ಷ ಕಾಲ ನೇಮಿಸಿ ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ

ಅಸ್ಸಾಂ ನದಿಗಳಲ್ಲಿ ಪ್ರವಾಹ

ಕಳೆದ ಒಂದುವಾರದಲ್ಲಿ ಅಸ್ಸಾಂನಲ್ಲಿರುವ ನದಿಗಳಲ್ಲಿ ಪ್ರವಾಹವು ವಿಶೇಷವಾಗಿ ಉಂಟಾಗಿ ಸುಮಾರು ೩೦೦೦೦ ಜನರು ತಮ್ಮ ಮನೆ ಮಠಗಳನ್ನು ಕಳೆದುಕೊಂಡಿರುತ್ತಾರೆ. ಸುಮಾರು ೮೦೦೦ ಎಕರೆ ಭತ್ತದ ಪೈರಿಗೆ ನಷ್ಟ ಸಂಭವಿಸಿದೆ. ಕಳೆದ ೧೮ ವರ್ಷಗಳಿಂದ ಈರೀತಿಯ ಪ್ರವಾಹ ಬಂದಿರಲಿಲ್ಲವೆಂದು ಹೇಳಲಾಗಿದೆ.

೩೦ ಸಾವಿರ ರೂಪಾಯಿ ನೋಟು ಗೆದ್ದಲಿಗೆ

ನಾಗಪುರದಬಳಿ ಮಂಡಲಾ ಟ್ರಿಜರಿಯಲ್ಲಿ ೫೦೦೦೦ ರೂಪಾಯಿಗಳ ನೋಟುಗಳನ್ನು ಗೆದ್ದಲುತಿಂದು ಹಾಳಾಗಿರುವುದಾಗಿ ವರದಿಯಾಗಿದೆ.

ಕಂದಾಯ ರಿಯಾಯಿತಿ

ಚಿಂತಾಮಣಿ ತಾಲ್ಲೂಕಿನ ೪೯೧ ಕೆರೆಗಳ ಆಶ್ರಯದಲ್ಲಿ ಅಚ್ಚುಕಟ್ಟುದಾರರಿಗೆ ತರಿಕಂದಾಯದಲ್ಲಿ ಅರ್ಧಭಾಗ,೧೯೫೧ ರೂ, ಮಾಫಿಮಾಡಿ ಉಳಿದರ್ಧದ ವಸೂಲಿಯನ್ನು ಮುಂದಕ್ಕೆ ಹಾಕಲಾಗಿದೆ.

ನಿರಾಶ್ರಿತರಪುನರ್ವ್ಯವಸ್ಥೆಗೆ ೫೦ ಲಕ್ಷ ರೂ

ಪೂರ್ವಬಂಗಾಳದಿಂದ ಬರುತ್ತಿರುವ ನಿರಾಶ್ರಿತರ ಮರುವಸತಿಗಾಗಿ ಕೇಂದ್ರ ಸರ್ಕಾರವು ೫೦ ಲಕ್ಷ ರೂ ಕೊಟ್ಟಿದೆ. ಇದರ ಪೈಕಿ ೩೫ ಲಕ್ಷ ರೂ ಪಶ್ಚಿಮಬಂಗಾಳಕ್ಕೆ ಕೊಡಲಾಗಿದೆ.

ಬ್ರಿಟನ್‌ಗೆ ರಷ್ಯಾ ಆಹಾರ

ಬ್ರಿಟನ್‌ಗೆ ರಷ್ಯಾವು ೨ ಲಕ್ಷ ಟನ್ ಆಹಾರಧಾನ್ಯಗಳನ್ನು ಸರಬರಾಜುಮಾಡಲು ಉಭಯ ರಾಷ್ಟ್ರಗಳಿಗೆ ಒಂದು ಒಪ್ಪಂದ ಸಹಿಯಾಗಿರುವುದಾಗಿ ಬ್ರಿಟನ್ ಆಹಾರ ಶಾಖಾ ಸಚಿವರ ಪಾರ್ಲಿಮೆಂಟರಿ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಸೂಚನೆ

ಸಮಾಚಾರ ಪತ್ರಿಕೆ ಕಾರ್ಯಾಲಯವನ್ನು ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಿಂದ ಜಗನ್ಮೋಹನ ಪ್ಯಾಲೇಸ್ ರಸ್ತೆಯಲ್ಲಿ ಮೋತೀಖಾನೆ ಕಟ್ಟಡಕ್ಕೆ [ಸರ್ಕಾರಿ ರೇಷನ್ ಡಿಪೋ ಮಹಡಿ] ಬದಲಾಯಿಸಲಾಗಿದೆ.

ಸಂಪಾದಕ.

ವುಡ್ ಲ್ಯಾಂಡ್ಸ್
17-10-52 ರಿಂದ ಅಮೋಘ ಪ್ರಾರಂಭ
ಪ್ರತಿದಿನ ೩ ಪ್ರದರ್ಶನಗಳು
ಬೇತಾಬ್
ಪಾತ್ರ:—ಅಶೋಕ್‌ಕುಮಾರ್ ನಾಸೀಂ, ಮೋತಿಲಾಲ್.

ರಣಜಿತ್
17-10-52 ರಿಂದ
ಅಮೋಘ ೨ ನೇ ವಾರ
ಫಾಲ್ ಆಫ್-ಬರ್ಲಿನ್ [ಹಿಂದಿ]

ಅಪೇರ ೧೭-೧೦-೫೨ ರಿಂದ ಅಮೋಘಪ್ರಾರಂಭ
ಪ್ರತಿದಿನ ಮೂರು ಆಟಗಳು
* ಮಾಪಿಳ್ಳೈ *
ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

FOR SALE
A GOLDEN OPPOURTUNITY FOR BUYERS
Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.
Rs. 16,000 or near offer
No brokers-Immediate possession—No encumbrence,
Enquire at :— M. NARAYANA RAO, Co.
c/o Tourist Bureau, Lansdowne Buildings, Mysore

—: ಪ್ರಕಾಶಕರು ಮತ್ತು ಮುದ್ರಕರು:— ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 48

೨೦-೧೦-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ನೇಪಾಳ ರಾಜಕುಮಾರನ ದಸ್ತಗಿರಿಯೇ?

ರಾಜ ತ್ರಿಭುವನರನ್ನು ಉಚ್ಚಾಟನೆಮಾಡಲು ಒಳಸಂಚು

ನೇಪಾಳದ ರಾಜ ತ್ರಿಭುವನರವರ ಉತ್ತರಾಧಿಕಾರಿಯಾದ ಅವರ ಹಿರಿಯ ಮಗ ಮಹೇಂದ್ರವೀರ ವಿಕ್ರಮಷಾರವರನ್ನು ದಸ್ತಗಿರಿಮಾಡಿ ಅರಮನೆಯಲ್ಲಿಯೇ ಇಡಲಾಗಿದೆಯೆಂಬ ಸುದ್ದಿ ಪ್ಯಾರಿಸ್ಸಿನಿಂದ ಬಂದಿದೆ. ರಾಜ ತ್ರಿಭುವನರನ್ನು ಪದಚ್ಯುತಿಮಾಡುವುದಕ್ಕೆ ರಾಜಕುಮಾರರು ಮತ್ತೆ ಕೆಲವರು ಒಳಸಂಚು ನಡೆಸುತ್ತಲಿದ್ದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ ಈ ಒಳಸಂಚು ನಡೆಸಲು ರಾಜಕುಮಾರರಿಗೆ ಹ... ಸಹಾಯಕರಿದ್ದ ರೆಂದೂ ತಿಳಿಯಬಂದಿದೆ.

ಪಾಕೀಸ್ತಾನದಿಂದ ಬಂಗಾಳಕ್ಕೆ ೨೫ ಲಕ್ಷ ಮಂದಿ ನಿರಾಶ್ರಿತರು

ಇತರ ಪ್ರಾಂತ್ಯಗಳಿಗೆ ಅವರನ್ನು ಕಳುಹಿಸಲು ಯೋಜನೆ

ಭಾರತವು ವಿಭಜನೆಯಾದಮೇಲೆ ಪಾಕೀಸ್ತಾನದಿಂದ ಪಶ್ಚಿಮಬಂಗಾಳಕ್ಕೆ ೨೫ ಲಕ್ಷಮಂದಿ ನಿರಾಶ್ರಿತರು ಬಂದರೆಂದೂ. ಇತ್ತೀಚಿನ ಆರುತಿಂಗಳಿನಲ್ಲಿ ೨ ಲಕ್ಷ ಜನರು ಬಂದಿರುವರೆಂದೂ ಹೇಳಲಾಗಿದೆ. ಅವರುಗಳ ಪೈಕಿ ೧೪ ಲಕ್ಷ ಮಂದಿ ನಿರಾಶ್ರಿತರ ಪುನರ್ವ್ಯವಸ್ಥೆಯನ್ನು ಪಶ್ಚಿಮ ಬಂಗಾಳ ಸರ್ಕಾರದವರು ಮಾಡಿದ್ದಾರೆ. ಉಳಿದ ೧೧ ಲಕ್ಷಮಂದಿ ಶಿಬಿರದಲ್ಲೂ ಮತ್ತು ರೈಲ್ವೆ ನಿಲ್ದಾಣಗಳಲ್ಲೂ ವಾಸ ಮಾಡುತ್ತಿರುವರೆಂದೂ, ಆರ್ಥಿಕದೃಷ್ಟಿಯಿಂದ ಅವರನ್ನು ಪಶ್ಚಿಮಬಂಗಾಳ ಸರಕಾರವು ಪುನರ್ವಸತಿಗೊಳಿಸಲು ಸಾಧ್ಯವಿಲ್ಲವಾಗಿರುವುದರಿಂದ ಇತರ ಪ್ರಾಂತ್ಯಗಳಿಗೆ ಕಳುಹಿಸಿಕೊಡಬೇಕೆಂದೂ ಅಲ್ಲಿನ ಸರ್ಕಾರದವರು ಪ್ರಧಾನಿ ಪಂಡಿತ ನೆಹರೂರವರಿಗೆ ಮನವಿಮಾಡಿದ್ದಾರೆ.

ಮೊನ್ನೆದಿನ ಪ್ರಧಾನಿಯವರು ಕಲ್ಕತ್ತೆಗೆ ಭೇಟಿಕೊಟ್ಟು ಪೂರ್ವಬಂಗಾಳದಿಂದ ಬಂದಿರುವ ನಿರಾಶ್ರಿತರುಗಳ ಪುನರ್ವಸತಿ ವಿಚಾರದಲ್ಲಿ ಮಾತುಕತೆ ನಡೆಸಿದರು. ಇತರ ಪ್ರಾಂತ್ಯಗಳಿಗೆ ಅವರನ್ನು ಕಳುಹಿಸಲು ಏರ್ಪಾಡುಮಾಡುವುದಾಗಿ ಆಶ್ವಾಸನೆ ಕೊಟ್ಟರೆಂದೂ ಹೇಳಲಾಗಿದೆ. ಪ್ರಧಾನಿಯವರು ಕಾಂಗ್ರೆಸ್‌ಕರ್ತರುಗಳನ್ನುದ್ದೇಶಿಸಿ ಭಾಷಣಮಾಡಿ, ಪಶ್ಚಿಮಬಂಗಾಳದ ನಿರಾಶ್ರಿತ ಸಮಸ್ಯೆಯು ಅಖಿಲಭಾರತ ಸಮಸ್ಯೆಯೆಂದೂ ಅದನ್ನು ಪರಿಶೀಲಿಸುವಾಗ ಸೇವಾಮನೋಭಾವದಿಂದ ವರ್ತಿಸಬೇಕೇಹೊರತು ಯಾವುದೇ ರಾಜಕೀಯ ಸಂಕುಚಿತ ದೃಷ್ಟಿಯಿಂದ ನೋಡಬಾರದೆಂದು ತಿಳಿಸಿದರು.

ನಿರಾಶ್ರಿತ ಸಮಸ್ಯೆಯನ್ನು ಅಂತ್ಯವಾಗಿ ಬಗೆಹರಿಸಬೇಕಾದರೆ ಪಾಕೀಸ್ತಾನದ ಮೇಲೆ ಭದ್ರವಾದಆರ್ಥಿಕ ಮುಗ್ಗಟ್ಟುಕ್ರಮಗಳನ್ನು ಅನುಸರಿಸುವುದೇಒಂದೇ ಮಾರ್ಗವೆಂದು ಜನಸಂಘದ ನಾಯಕ ಡಾ|| ಶಾಮಪ್ರಸಾದ ಮುಖರ್ಜಿಯವರು ಪ್ರಧಾನಿಯವರನ್ನು ಕಂಡು ಸಲಹೆ ಮಾಡಿದರೆಂದು ಹೇಳಲಾಗಿದೆ.

ಭಾರತಕ್ಕೆ ವಲಸೆಗಾರರು

ಪೂರ್ವ ಬಂಗಾಳ [ಪಾಕೀಸ್ತಾನ]ದಿಂದ ಭಾರತಕ್ಕೆ ಕಳೆದ ೩ ವಾರಗಳಲ್ಲಿ ಸುಮಾರು ಒಂದೂವರೆ ಲಕ್ಷ ವಲಸೆಗಾರರು ಬಂದಿರುವುದಾಗಿ ವರದಿಯಾಗಿದೆ.

ಸಂಸ್ಥಾನದಲ್ಲಿ ಕ್ಷಾಮಪರಿಹಾರ ಕಾರ್ಯಗಳು

೨೬೦೦ ಕಾಮಗಾರಿಕೆಗಳು ನಡೆದಿವೆ

ಮೈಸೂರು ಸಂಸ್ಥಾನದ ೫೧ ತಾಲ್ಲೂಕುಗಳಲ್ಲಿ ಸುಮಾರು ೫೦ ಲಕ್ಷ ಜನರು ಕ್ಷಾಮದ ಪರಿಸ್ಥಿತಿಗೆ ಗುರಿಯಾಗಿದ್ದಾರೆ. ಅವರಿಗೆಲ್ಲಾ ಸರ್ಕಾರವು ಶಕ್ತಿಮೀರಿ ಆಹಾರ ಒದಗಿಸಲು ಪ್ರಯತ್ನ ಮಾಡುತ್ತಿದೆ. ಅವರ ಪರಿಹಾರ ಕಾರ್ಯಗಳಿಗಾಗಿ ಇಲ್ಲಿಯವರೆವಿಗೆ ೬೨ ಲಕ್ಷ ರೂ. ಖರ್ಚುಮಾಡಲಾಗಿದೆ. ೨೬೦೦ ಕಾಮಗಾರಿಕೆಗಳನ್ನು ನಡೆಸಿದೆ ಹೆಚ್ಚು ಆಹಾರ ಬೆಳೆ ಚಳುವಳಿನಿಧಿಯ ಸುಮಾರು ೭೩ ಲಕ್ಷ ರೂಪಾಯಿಗಳನ್ನು ಕ್ಷಾಮದ ಪರಿಹಾರಕ್ಕೆ ಉಪಯೋಗಿಸಲು ನಿರ್ಧರಿಸಿ, ಅದರಪೈಕಿ ಈಗಾಗಲೇ ೨೧ ಲಕ್ಷ ರೂ. ಖರ್ಚಾಗಿದೆ

ಏಪ್ರಲ್ ತಿಂಗಳಿನಲ್ಲಿ ಸಂಸ್ಥಾನದಲ್ಲಿ ಅಪಾರವಾದ ಆಹಾರ ಸಂಗ್ರಹಣ ಇತ್ತು ಆದರೆ ಮುಂಗಾರು ಬೆಳೆ ಆಗದಿದ್ದುದರಿಂದ ತಮ್ಮಲ್ಲಿದ್ದ ಸಂಗ್ರಹಣೆ ಮುಗಿದು, ಕೇಂದ್ರದಿಂದ ಪುನಃ ೨೩ ಸಾವಿರ ಟನ್ ಗೋಧಿ ಮತ್ತು ೨೬ ಸಾವಿರ ಟನ್ ಮೈಲೋ ತರಿಸಲಾಯಿತು-ಎಂದು ಆಹಾರ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ತಿಳಿಸಿರುತ್ತಾರೆ.

೫ ಮಕ್ಕಳನ್ನು ಹೆತ್ತ ಅಮೆರಿಕದ ಮಹಿಳೆ

ಅಮೆರಿಕದ ಇರಾಗ್ರಿಸರ್ ಎಂಬಾಕೆಯು ಅವಳಿಜವಳಿ ಮಕ್ಕಳ ಜೊತೆಗೆ ಮೂರುಮಕ್ಕಳನ್ನು ಒಂದೇ ಬಾರಿ ಹೆತ್ತಿದ್ದಾಳೆಂದು ವರದಿಯಾಗಿದೆ. ಈಗ ಆಕೆಗೆ ಒಟ್ಟು ೨೦ ಮಕ್ಕಳಿದ್ದಾರೆ.

ಎ. ಐ. ಸಿ. ಸಿ. ಪ್ರತಿನಿಧಿಗಳ ಚುನಾವಣೆ

ಎ ಐ. ಸಿ. ಸಿ. ಗೆ ಪ್ರತಿನಿಧಿಗಳ ಚುನಾವಣೆಯು ನವಂಬರ್ ೧೬ ನೇ ತಾರೀಖು ನಡೆಯುತ್ತದೆ.

ಚರ್ಚಾಗೋಷ್ಠಿ

ಮೈಸೂರು. ೨೦

ಭಾರತ-ಚೀನಾ ಸ್ನೇಹಾದರ ಮೈಸೂರು ಸಮಿತಿಯ ಆಶ್ರಯದಲ್ಲಿ ನಿನ್ನೆಸಂಜೆ ನೂದರಿಶಾಲೆಯಲ್ಲಿ ಚರ್ಚಾಗೋಷ್ಠಿ ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಮೈಸೂರು ವಿಶ್ವವಿದ್ಯಾನಿಲಯದ ಶ್ರೀ ಯಮುನಾಚಾರ್ಯರು ಮತ್ತು ಡೆಕನ್ ಹೆರಾಲ್ಡ್ ಪತ್ರಿಕೆಯ ಬಾತ್ಮೀದಾರರಾದ ಶ್ರೀ ಬಿ. ಕೆ. ಗೌಡರು ಚೀನಾ ವಿಷಯವಾಗಿ ಭಾಷಣವನ್ನು ಮಾಡಿದರು.

ವ್ಯವಸಾಯ ಶೋಧಕ ಸಂಘ

ಮೈಸೂರು ೨೦

ಮೈಸೂರು ಜಿಲ್ಲಾ ವ್ಯವಸಾಯ ಶೋಧಕ ಸಂಘದ ವಾರ್ಷಿಕ ಸಭೆಯು ನಡೆದು ಮುಂದಿನ ಸಾಲಿಗೆ ಶ್ರೀ ಪುಟ್ಟಹೊನ್ನಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು. ಕೇಂದ್ರ ಸಮಿತಿಗೆ ಶ್ರೀಗಳಾದ ಕೊಡಗಳ್ಳಿ ರಾಮಸ್ವಾಮಿ ಮತ್ತು ಕುದೇರು ಕುಮಾರಸ್ವಾಮಿಗಳು ಚುನಾಯಿತರಾದರು.

ನಾಳೆ ಮಧ್ಯಾಹ್ನ ಜಿಲ್ಲಾ ಸಮಿತಿಯ ಸಭೆಯು ಟಿ. ನರಸೀಪುರದ ತಾಲ್ಲೂಕು ಕೊಡಗಳ್ಳಿಯಲ್ಲಿ ನಡೆಯುವುದು.

೫ ವರ್ಷದ ಸರಾಸರಿಯ ಆಧಾರದಮೇಲೆ ಧಾನ್ಯ ಸಂಗ್ರಹ

ಉಪಸಮಿತಿ ವರದಿ

ಬೆಂಗಳೂರು ೨೦

ಕಳೆದ ೫ ವರ್ಷದಲ್ಲಿ ಹೆಚ್ಚುವರಿ ಬೆಳೆದವರಿಂದ ವಸೂಲು ಮಾಡಿರುವ ಪ್ರಮಾಣದ ಸರಾಸರಿ ಆಧಾರದ ಮೇಲೆ ಧಾನ್ಯಸಂಗ್ರಹಣ ಮಾಡಬೇಕೆಂದು, ಅಗತ್ಯವಿರುವ ಸಂದರ್ಭಗಳಲ್ಲಿ ಶೇಕಡ ೨೫ರಷ್ಟು ಪ್ರಮಾಣವನ್ನು ಕಡಿಮೆ ಮಾಡಿ ರಿಯಾಯಿತಿ ತೋರಿಸಬಹುದೆಂದೂ ಸರ್ಕಾರದಿಂದ ನೇಮಿಸಲ್ಪಟ್ಟಿದ್ದ ಧಾನ್ಯಸಂಗ್ರಹ ಉಪಸಮಿತಿಯ ವರದಿಯ ಮೇಲೆ ನಿನ್ನೆ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಚರ್ಚೆ ನಡೆಯಿತೆಂದು ತಿಳಿದುಬಂದಿದೆ.

ಈಸಾರಿ ಮಳೆಆಗದೆ ಬೆಳೆ ತೃಪ್ತಿಕರವಾಗಿಲ್ಲದುದರಿಂದ ಈ ಹೊಸ ಧಾನ್ಯ ಸಂಗ್ರಹಣೆ ನೀತಿಯನ್ನು ಅನುಸರಿಸಕೂಡದೆಂದೂ, ಕೆಲವು ನಗರಗಳಲ್ಲಿರುವ ರೇಷನ್ ಪದ್ಧತಿಯನ್ನು ರದ್ದುಮಾಡಿ, ಹೊರಗಿನಿಂದ ಆಹಾರಧಾನ್ಯ ತರಿಸಿ ಫೇರ್‌ಪ್ರೈಸ್ ಡಿಪೋಗಳ ಮೂಲಕ ಹಂಚಬೇಕೆಂದು ಅನೇಕ ಸದಸ್ಯರು ಅಭಿಪ್ರಾಯ ಪಟ್ಟರೆಂದು ಹೇಳಲಾಗಿದೆ.

ಎ. ಐ ಸಿ. ಸಿ. ಪ್ರತಿನಿಧಿಗಳ ಚುನಾವಣಾ ಪಟ್ಟಿ

ಅಖಿಲಭಾರತ ಕಾಂಗ್ರೆಸ್ ಬಹಿರಂಗ ಅಧಿವೇಶನಕ್ಕೆ ಮೈಸೂರಿನ ಪ್ರತಿನಿಧಿಗಳನ್ನು ಚುನಾಯಿಸುವ ಬಗ್ಗೆ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಅದರ ಪ್ರಕಾರ ನಾಮಪತ್ರಗಳನ್ನು ಸ್ವೀಕರಿಸುವುದಿನ ನೆವಂಬರ್ ೧ ನೇ ತಾರೀಖು; ೬ ನೇ ತಾ|| ಸಂಜೆ ೫ ಗಂಟೆಒಳಗೆ ಮತದಾನ ಕಡೆಯದಿನ; ೧೬ ನೇ ತಾ|| ಎಣಿಕೆಯದಿನ; ೧೯ ನೇ ತಾ|| ಫಲಿತಾಂಶ ಪ್ರಕಟನೆ.

ಅಧ್ಯಕ್ಷ ಚುನಾವಣೆಗೆ ಡಿಸೆಂಬರ್ ೩ ನೇ ತಾ|| ನಾಮಪತ್ರ; ೨೬ ನೇ ತಾ|| ಚುನಾವಣೆ ಮತ್ತು ೨೯ ನೇ ತಾ|| ಫಲಿತಾಂಶ ಘೋಷಣೆ.

ಭಾರತಕ್ಕೆ ನಾರ್ವೆಸರ್ಕಾರದ ಸಹಾಯ

ಭಾರತದ ಅಭಿವೃದ್ಧಿಗಾಗಿ ನಾರ್ವೆ ಸರ್ಕಾರದವರು ಹದಿಮೂರುವರೆ ಲಕ್ಷ ಡಾಲರುಗಳ ಸಹಾಯ ಮಾಡಲು ನಿರ್ಧರಿಸಿ, ಅದರ ವಿನಿಯೋಗದ ಬಗ್ಗೆ ೩ ಜನ ಸಮಿತಿಯೊಂದನ್ನು ಈಗ ಭಾರತಕ್ಕೆ ಕಳುಹಿಸಿದ್ದಾರೆ.

ದೇಶಾದ್ಯಂತ ಆಹಾರ ಹತೋಟಿ ರದ್ದು ?

ಕೇಂದ್ರ ಸರ್ಕಾರದ ಪರಿಶೀಲನೆ

ದೆಹಲಿ ಕಲ್ಕತ್ತಾ ಮತ್ತು ಬೊಂಬಾಯಿ ನಗರಗಳನ್ನು ಬಿಟ್ಟು ದೇಶಾದ್ಯಂತ ಆಹಾರ ಹತೋಟಿಯನ್ನು ರದ್ದುಗೊಳಿಸುವ ವಿಷಯವನ್ನು ಕೇಂದ್ರ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ಹೇಳಲಾಗಿದೆ.

ಸುಮಾರು ೩೦ ಲಕ್ಷಟನ್ ಆಹಾರವನ್ನು ಹೊರಗಿನಿಂದ ತರಿಸಿಕೊಳ್ಳುವುದಲ್ಲದೆ ಈ ಸಾಲಿನಲ್ಲಿ ಉತ್ತಮ ಬೆಳೆಯಾಗುವ ನಿರೀಕ್ಷೆಯಿರುವುದರಿಂದ ಹತೋಟಿಯನ್ನು ರದ್ದುಗೊಳಿಸುವ ನೀತಿಯನ್ನು ಆದಷ್ಟು ಜಾಗ್ರತೆಯಾಗಿ, ಯಾರಿಗೂ ತೊಂದರೆಯಾಗದಂತೆಯೂ ಜಾರಿಗೆ ತರಲು ಕೇಂದ್ರ ಆಹಾರ ಸಚಿವರು ಯೋಚಿಸುತ್ತಲಿರುವುದಾಗಿ ಗೊತ್ತಾಗಿದೆ.

ಅಭಿವೃದ್ಧಿ ಕಾರ್ಯಗಳಿಗೆ ಭಾರತೀಯ ಕಾರ್ಮಿಕರ ನೇಮಕವಿಲ್ಲ

ದೇಶದಲ್ಲಿ ನಡೆಯಬೇಕಾಗಿರುವ ಯಾವ ಅಭಿವೃದ್ಧಿ ಕಾರ್ಯಕ್ಕೂ ಭಾರತೀಯ ಕಾರ್ಮಿಕರನ್ನು ನೇಮಿಸಿಕೊಳ್ಳಕೂಡದೆಂದು ಸಿಲೋನ್ ಸರ್ಕಾರವು ಆಜ್ಞೆಮಾಡಿದೆ. ಹಾಗೇನಾದರೂ ಕಂಟ್ರಾಕ್ಟರುಗಳು ನೇಮಿಸಿಕೊಂಡರೆ ಅಂತಹವರಿಗೆ ಕೊಟ್ಟಿರುವ ಕೆಲಸಗಳನ್ನೆಲ್ಲಾ ರದ್ದುಗೊಳಿಸಲಾಗುವುದೆಂದು ಎಚ್ಚರಿಕೆ ಕೊಡಲಾಗಿದೆ.

ಮೈಸೂರಿನ ಅಕೌಂಟೆಂಟ್ ಜನರಲ್ಲರ ಕಛೇರಿ

ಬೆಂಗಳೂರು ಆಕಾರಾಕಛೇರಿಯಲ್ಲಿರುವ ಮೈಸೂರಿನ ಅಕೌಂಟೆಂಟ್ ಜನರಲ್ಲರ ಕಛೇರಿಗಾಗಿ ಬೆಂಗಳೂರು ಟೆಲಿಫೋನ್ ಎಕ್ಸ್‌ಚೇಂಜಿನಬಳಿ ೧೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪ್ರತ್ಯೇಕ ಕಟ್ಟಡವನ್ನು ಕಟ್ಟಲಾಗುವುದೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೇಳಿರುವರು.

ವಲಸೆಗಾರರ ಮೇಲೆ ಪಾಕೀಸ್ಥಾನ ಪೊಲೀಸರ ಧಾಳಿ

ಭಾರತ ಪಾಕೀಸ್ಥಾನ ಗಡಿಪ್ರದೇಶದಲ್ಲಿ ಪಾಕೀಸ್ಥಾನ ಪೊಲೀಸಿನವರು ಸುಮಾರು ೧೫೦೦ ವಲಸೆಗಾರರ ಮೇಲೆ ಧಾಳಿನಡೆಸಿ, ಅವರಲ್ಲಿದ್ದ ಹಣ, ಒಡವೆವಸ್ತುಗಳನ್ನೆಲ್ಲಾ ಅಪಹರಿಸಿದರೆಂದು ವರದಿಯಾಗಿದೆ.

ಖಾದಿಗೆ ಪ್ರೋತ್ಸಾಹ ಕೊಡಿ

ದೇಶದಲ್ಲಿ ಸುಮಾರು ೭೫ ಲಕ್ಷ ರೂ ಬೆಲೆಬಾಳುವ ಖಾದಿಯ ಬಟ್ಟೆ ಮತ್ತು ೨೫ ಲಕ್ಷ ರೂ. ಬೆಲೆಯ ಖಾದಿಯನೂಲು ವ್ಯಾಪಾರವಾಗದೆ ಉಳಿದುಹೋಗಿದೆ. ಇದರಿಂದ ಒಂದೂವರೆಲಕ್ಷ ನೂಲುವವರಿಗೆ ಕೆಲಸವಿಲ್ಲದೆಹೋಗಿದೆ. ಅಖಿಲಭಾರತ ನೂಲುಸಂಘದ ಬಂಡವಾಳವೆಲ್ಲವೂ ಈಗ ವೆಚ್ಚವಾಗಿಹೋಗಿದೆ. ಪ್ರಾಂತೀಯ ಕಾಂಗ್ರೆಸ್ ಸಮಿತಿಗಳೆಲ್ಲವೂ ಜನರು ಖಾದಿಯನ್ನು ಉಪಯೋಗಿಸುವಂತೆ ಪ್ರೋತ್ಸಾಹಮಾಡಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಅಖಿಲಭಾರತ ಕಾಂಗ್ರೆಸ್ ಕಾರ್ಯದರ್ಶಿ ಡಾ|| ಅಗರ್‌ವಾಲಾರವರು ಪ್ರಾಂತೀಯ ಕಾಂಗ್ರೆಸ್ ಸಮಿತಿಗೆ ಸೂಚನೆಯಿತ್ತಿದ್ದಾರೆ.

೩೦೦೦ ಕೋಟಿ ರೂ. ವೆಚ್ಚದ ಪಂಚವಾರ್ಷಿಕ ಯೋಜನೆ

ಪಂಚವಾರ್ಷಿಕ ಯೋಜನೆಗೆ ೩೦೦೦ ಕೋಟಿ ರೂಪಾಯಿಗಳ ವೆಚ್ಚವಾಗುವ ಅಂದಾಜನ್ನು ಆಯೋಜನಾಮಂಡಲಿಯು ಇತ್ತೀಚೆಗೆ ತಯಾರಿಸಿ ಅದರಬಗ್ಗೆ ದೇಶದ ಪ್ರಮುಖ ಪಕ್ಷಗಳೊಡನೆ ವಿಚಾರ ವಿನಿಮಯ ನಡೆಸುತ್ತಲಿದೆ. ಮೊದಲು ೧೭೦೩ ಕೋಟಿ ರೂಪಾಯಿ ವೆಚ್ಚದ ಯೋಜನೆಯನ್ನು ತಯಾರಿಸಲಾಗಿತ್ತು. ಈಬಗ್ಗೆ ಆಯೋಜನಾ ಮಂಡಲಿಯು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯೊಡನೆ ಚರ್ಚೆನಡೆಸಿತು. ಈ ಯೋಜನೆಗೆ ಕಾಂಗ್ರೆಸ್‌ಸಮಿತಿಯ ಪೂರ್ಣ ಒಪ್ಪಿಗೆಯನ್ನಿತ್ತಿದೆ.

ಅನಂತರ ಆಯೋಜನಾಮಂಡಲಿಯು ಪ್ರಜಾ ಸೋಷಲಿಸ್ಟ್ ಮುಖಂಡರೊಡನೆ ವಿಚಾರ ವಿನಿಮಯ ನಡೆಸಿತು.

ಸಿವಿಲ್ ಕೋರ್ಟುಗಳಲ್ಲಿ ಹಾಜರಾಗಲು ವಿನಾಯಿತಿ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಸಚಿವರುಗಳಾದ ಶ್ರೀ ಎ. ಜಿ. ರಾಮಚಂದ್ರರಾವ್, ಶ್ರೀ ಟಿ. ಚನ್ನಯ್ಯ, ಶ್ರೀ ಕಡಿದಾಳ್ ಮಂಜಪ್ಪಮತ್ತು ಶ್ರೀ ಸಿದ್ದವೀರಪ್ಪನವರುಗಳು ತಮ್ಮ ಅಧಿಕಾರ ಅವಧಿಕಾಲದಲ್ಲಿ ಸಿವಿಲ್‌ಕೋರ್ಟುಗಳಿಗೆ ಹಾಜರಾಗಲು ಸರ್ಕಾರವು ವಿನಾಯಿತಿಕೊಟ್ಟಿದೆ.

೪ ವರ್ಷ ಮಗುವಿನ ಅದ್ಭುತಕಾರ್ಯ

ಮೈಸೂರಿನಿಂದ ಸೂರತ್‌ಗೆ ತನ್ನ ತಂದೆಯೊಡನೆ ೪ ವರ್ಷದ ಮಗುವೊಂದು ಹೋಗಿದೆ. ಆ ಮಗುವು ವೇದ, ಉಪನಿಷತ್ತು, ಬ್ರಹ್ಮಸೂತ್ರ ಮುಂತಾದ ಪವಿತ್ರ ಗ್ರಂಥಗಳ ಶ್ಲೋಕಗಳನ್ನು ಲೀಲಾಜಾಲವಾಗಿ ಹೇಳುತ್ತದೆ.

ಮಗುವು ಹಾಲನ್ನು ಮಾತ್ರ ಸ್ವೀಕರಿಸಿ ೪ ಗಂಟೆಕಾಲ ನಿದ್ರಿಸುತ್ತದೆ. ಇತರ ವೇಳೆಗಳಲ್ಲಿ ಶ್ಲೋಕಗಳನ್ನು ಹೇಳುತ್ತಲಿರುತ್ತದೆ. ಈ ಅದ್ಭುತ ಪಾಂಡಿತ್ಯ ಶಕ್ತಿಯನ್ನು ನೋಡಲು ಸಹಸ್ರಾರು ಜನರು ಆ ಮಗುವಿನ ಹತ್ತಿರವೇ ಇರುತ್ತಾರೆ. ಈ ಶಕ್ತಿಯು ಪ್ರಮುಖ ವಿದ್ವಾಂಸರನ್ನು ಸಹ ಮುಗ್ಧಗೊಳಿದೆ.

ಅಪೇರ ೧೭-೧೦-೫೨ ರಿಂದ ಅಮೋಘಪ್ರಾರಂಭ
ಪ್ರತಿದಿನ ಮೂರು ಆಟಗಳು
* ಮಾಪಿಳ್ಳೆ *
ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

ಖೈದಿಗಳು ಬಾಡಿಗೆಗೆ ?

ಯೂರೋಪಿಯನ್ನರಿಗೆ ಸೇರಿರುವ ಜಮೀನುಗಳಲ್ಲಿ ಕೆಲಸಮಾಡಲು ದಕ್ಷಿಣಆಫ್ರಿಕಾ ಸರ್ಕಾರವು ತನ್ನಲ್ಲಿರುವ ಖೈದಿಗಳನ್ನು ಬಾಡಿಗೆಗೆ ಕೊಡುತ್ತಿರುವುದಾಗಿ ಹೇಳಲಾಗಿದೆ. ದಿನವೊಂದಕ್ಕೆ ಒಂದು ಷಿಲಿಂಗ್ ೯ ಪೆನ್ನಿ ಬಾಡಿಗೆಗೆ ಅವರನ್ನು ಕೊಡಲಾಗುತ್ತಲಿದೆ. ಆಯಾಸ್ಥಳಗಳಿಗೆ ಖೈದಿಗಳನ್ನು ಕಬ್ಬಿಣದ ಬೋನುಗಳಲ್ಲಿ ಕರೆದೊಯ್ಯಲಾಗುತ್ತಿದೆ. ಕೆಲವು ಜಮೀನುಗಳ ಬಳಿ ಕಾರಾಗೃಹಗಳಾಗಿವೆ ಎಂಬುದಾಗಿ ಹೇಳಲಾಗಿದೆ.

ವುಡ್ ಲ್ಯಾಂಡ್ಸ್
17-10-52 ರಿಂದ ಅಮೋಘ ಪ್ರಾರಂಭ
ಪ್ರತಿದಿನ ೩ ಪ್ರದರ್ಶನಗಳು
ಬೇತಾಬ್
ಪಾತ್ರ:—ಅಶೋಕ್‌ಕುಮಾರ್ ನಾಸೀಂ, ಮೋತಿಲಾಲ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,000 or near offer

No brokers—Immediate possession—No encumbrence,

Enquire at :— M. NARAYANA RAO, Co. c/o Tourist Bureau, Lansdowne Buildings, Mysore

ಅಂದವಾದ ಮುದ್ರಣಕ್ಕೆ
ಕರ್ನಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ವಿ. ಆರ್. ಅಂಡ್ ಬ್ರದರ್ಸ್. ವರ್ಕ್‌ಷಾಪ್)

For NEAT AND PROMPT PRINTING
Contact :
CARNATAK PRINTERS
GANDHI SQUARE, MYSORE
Phone 892 or 574

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 49

೨೧-೧೦-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ನೇಪಾಳ ರಾಜಕುಮಾರರ ದಸ್ತಗಿರಿ ಯಿಲ್ಲ

ಸುದ್ದಿಯು ನಿರಾಧಾರವಾದುದೆಂದು ನೇಪಾಳ ಸರ್ಕಾರದ ಪ್ರಕಟಣೆ

ಫ್ರೆಂಚ್ ನ್ಯೂಸ್ ಏಜನ್ಸಿಯು ನೇಪಾಳದಲ್ಲಿ ರಾಜಕುಮಾರರ ದಸ್ತಗಿರಿಯಾಗಿದೆ ಎಂದು ಹೇಳಿರುವ ಸುದ್ದಿಯು ನಿರಾಧಾರವಾದುದು. ದಸ್ತಗಿರಿ ವಿಷಯವಾಗಲಿ ಅಥವ ಒಳಸಂಚು ವಿಷಯ ಯಾರಿಗೂ ತಿಳಿಯದೆಂದು ನೇಪಾಳ ಸರ್ಕಾರವು ಒಂದು ಪ್ರಕಟಣೆಯನ್ನಿತ್ತಿದೆ

ನಿನ್ನೆಯದಿನ ರಾಜಕುಮಾರರು ಮಾಮೂಲಿನಂತೆ, ಯಾವ ಅಂಗರಕ್ಷಕರೂ ಸಹ ಇಲ್ಲದೆ, ನೇಪಾಳ ರಾಜಧಾನಿ ಖಾಟ್ಮಂಡುವಿನಲ್ಲಿ ಮೋಟಾರು ನಡೆಸುತ್ತಲಿದ್ದರೆಂದು ತಿಳಿದುಬಂದಿದೆ.

ನಗರದಲ್ಲಿ ಕಳ್ಳತನತಪ್ಪಿಸಲು ಖಾಸಗೀ ಗಸ್ತು ಸಮಿತಿ

ಮೈಸೂರು ೨೧

ಕೃಷ್ಣರಾಜಮೊಹಲ್ಲಾ ಕಾಶೀಪತಿ ಅಗ್ರಹಾರದಲ್ಲಿರುವ ವಿದ್ಯಾಗಣಪತಿ ದೇವಸ್ಥಾನದಲ್ಲಿ ಮಹಾಜನರ ಸಭೆಯೊಂದು ನಿನ್ನೆರಾತ್ರಿ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು ಇತ್ತೀಚೆಗೆ ಸದರಿ ಪ್ರದೇಶಗಳಲ್ಲಿ ಅನೇಕ ಕಳ್ಳತನಗಳು ಜರುಗುತ್ತಿರುವುದನ್ನು ಪರಿಶೀಲಿಸಿ ರಾತ್ರಿವೇಳೆ ಸರದಿಮೇಲೆ ಗಸ್ತು ತಿರುಗುವ ಬಗ್ಗೆ ಖಾಸಗಿಯವರ ಒಂದು ದಳವನ್ನು ರಚಿಸಬೇಕೆಂದು ತೀರ್ಮಾನಿಸಿತು. ಕೃಷ್ಣಮೂರ್ತಿಪುರಂ ವಿಜಿಲೆನ್ಸ್ ಸಮಿತಿ ಅಧಿಕಾರಿ ವರ್ಗದವರು ತಮ್ಮ ಮೊಹಲ್ಲಾದಲ್ಲಿ ನಡೆಯುತ್ತಿರುವ ಕಾರ್ಯಕ್ರಮ ವಿವರಿಸಿದರು. ಕೃಷ್ಣರಾಜಮೊಹಲ್ಲಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ದಫೇದಾರರು, ಪೊಲೀಸ್ ಇಲಾಖೆಯ ಸಹಕಾರ ವ್ಯಕ್ತಪಡಿಸಿ, ಯಾವರೀತಿ ಕಾರ್ಯಕ್ರಮ ಅಗತ್ಯವೆಂಬುದನ್ನು ವಿವರಿಸಿದರು.

ನೂರಡಿರಸ್ತೆ, ತ್ಯಾಗರಾಜರಸ್ತೆ, ವಾಣಿವಿಲಾಸರಸ್ತೆ ಮತ್ತು ನಾರಾಯಣಶಾಸ್ತ್ರಿರಸ್ತೆ ಈ ಚೌಕಕ್ಕೆ ಸೇರಿದ ಪ್ರದೇಶದಲ್ಲಿ ಇನ್ನುಮುಂದೆ ರಾತ್ರಿ ಹನ್ನೊಂದೂವರೆಯಿಂದ ಬೆಳಗಿನಜಾವ ನಾಲ್ಕೂವರೆಗಂಟೆವರೆಗೆ ತಿರುಗಲು ಏರ್ಪಾಟು ಮಾಡಲು ಈ ಕೆಳಗೆಕಂಡ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀಗಳಾದ ಹೆಚ್. ಕೆ. ಕುಮಾರಸ್ವಾಮಿ(ಅಧ್ಯಕ್ಷರು) ಕೆ. ಪಿ. ಸ್ವಾಮಿ ಉಪಾಧ್ಯಕ್ಷರು, ವೆಂಕಟಾಚಾರ್ ಮತ್ತು ಎಸ್. ಕುಮಾರ್ ಕಾರ್ಯದರ್ಶಿಗಳು ನಂಜುಂಡಯ್ಯ ಖಜಾಂಚಿ ಬಿ. ಆರ್‌ನಾಯ್ಡು ಪೈ|| ಬೋರಲಿಂಗಯ್ಯ, ಯೂಸೂಫ್ ಸಾಹೇಬ್ ಮತ್ತು ಪೈ|| ಕೃಷ್ಣಸಿಂಗ್ ಸದಸ್ಯರುಗಳು.

ಕೃಷ್ಣರಾಜಸಾಗರದಲ್ಲಿ ಕಚ್ಚಾಫಿಲಂ ತಯಾರಿಕೆ

ಕೃಷ್ಣರಾಜಸಾಗರದಲ್ಲಿ ಕೇಂದ್ರಸರ್ಕಾರದವರು ಏರ್ಪಡಿಸಲಿರುವ ಕಚ್ಚಾಫಿಲಂ ತಯಾರಿಕಾ ಕಾರ್ಖಾನೆಗೆ ಒಟ್ಟು ಎರಡು ಕೋಟಿ ರೂ. ಖರ್ಚಾಗುವುದೆಂದೂ, ಅದನ್ನು ಮೂರುಘಟ್ಟಗಳಲ್ಲಿಪೂರೈಸಲಾಗುವುದೆಂದೂ ತಿಳಿದುಬಂದಿದೆ. ಕೇಂದ್ರಸರ್ಕಾರದವರು ಅದಕ್ಕೆ ೬೦ ಲಕ್ಷ ರೂ. ಮತ್ತು ಮೈಸೂರು ಸರ್ಕಾರ ೧೫ ಲಕ್ಷ ರೂ. ಬಂಡವಾಳ ಹಾಕಬಹುದೆಂದೂ ನಿರೀಕ್ಷಿಸಲಾಗಿದೆ. ಈಗ ಭಾರತವು ಪ್ರತಿವರ್ಷ ಒಂದೂವರೆಕೋಟಿ ರೂ. ನಷ್ಟು ಕಚ್ಚಾಫಿಲಂನನ್ನು ಪರದೇಶದಿಂದ ತರಿಸಲಾಗುತ್ತಿದೆ.

ವಿದ್ಯಾರ್ಥಿಗಳ ಪ್ರತಿಭಟನಾ ಸಭೆ

ಮೈಸೂರು ೨೧

ಕಳೆದತಿಂಗಳು ೨೬ ನೇ ತಾರೀಖು ಕ್ರಾಫರ್ಡ್‌ಹಾಲಿನ ಪ್ರಕರಣದ ಸಂಬಂಧವಾಗಿ ೧೩ ಮಂದಿ ವಿದ್ಯಾರ್ಥಿಗಳಮೇಲೆ ಸರ್ಕಾರದವರು ಹೂಡಿರುವ ಮೊಕದ್ದಮೆಯನ್ನು ಪ್ರತಿಭಟಿಸಿ, ಅದನ್ನು ಕೂಡಲೇ ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುವ ನಿರ್ಣಯವು ನಿನ್ನೆಬೆಳಗ್ಗೆ ಮಹಾರಾಜಾಕಾಲೇಜ್ ಮುಂಭಾಗದಲ್ಲಿ ನಡೆದ ವಿದ್ಯಾರ್ಥಿಗಳ ಸಭೆಯಲ್ಲಿ ಅಂಗೀಕೃತವಾಯಿತು. ಶ್ರೀಗಳಾದ ಗಂಗಾಧರ್, ವೇದಾಂತ ಹೆಮ್ಮಿಗೆ, ಶ್ರೀಕಂಠಪ್ಪ ಮತ್ತು ಮಿರ್‌ನೂರ್‌ಹುಸೇನ್‌ರವರುಗಳು ಭಾಷಣಮಾಡಿ ಸರ್ಕಾರದ ವರ್ತನೆಯನ್ನು ಖಂಡಿಸಿದರು.

ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆ

ಇಲ್ಲಿನ ದ್ವಿತೀಯ ನ್ಯಾಯಾಧೀಶರ ಕೋರ್ಟಿನಲ್ಲಿ ೧೩ ಮಂದಿ ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆಯು ನಿನ್ನೆ ಪ್ರಾರಂಭವಾಯಿತು.

ನಿಜಲಿಂಗಪ್ಪನವರ ಆಗಮನ

ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಈದಿನ ಬೆಳಗ್ಗೆ ಚಿತ್ರದುರ್ಗದಿಂದ ಇಲ್ಲಿಗೆ ಆಗಮಿಸಿ, ಮಡಕೇರಿಗೆ ಪ್ರಯಾಣ ಬೆಳೆಸಿದರು. ಅವರು ಕೊಡಗು ಮತ್ತು ಮಂಗಳೂರುಗಳಲ್ಲಿ ೩-೪ ದಿನಗಳ ಪ್ರವಾಸ ಕೈಗೊಂಡಿದ್ದಾರೆ.

ಮಹಿಳೆಯ ಆತ್ಮಹತ್ಯ

ನರಸಿಂಹರಾಜಮೊಹಲ್ಲಾ ಶ್ರೀ ಸುಬ್ಬರಾವ್ ಕೇಸ್ಕರ್ ಎಂಬುವರ ೨೦ ವರ್ಷದ ಪತ್ನಿ ಜಾನಕಿಬಾಯಿಎಂಬುವರು ಹೊಟ್ಟೆನೋವನ್ನು ತಾಳಲಾರದೆ ಮೊನ್ನೆದಿನ ತಮ್ಮ ಮನೆಯಲ್ಲಿ ನೇಣುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡರೆಂದು ಪೋಲೀಸರಿಗೆ ವರದಿಯಾಗಿದೆ

ಕೋಟ್ಯಾಂತರ ಜನರ ನಿರುದ್ಯೋಗತನದ ಸಮಸ್ಯೆ

ಏಷ್ಯಾ ಮತ್ತು ಆಫ್ರಿಕಾದೇಶಗಳಲ್ಲಿರುವ ಕೋಟ್ಯಾಂತರ ಜನರ ನಿರುದ್ಯೋಗತನವು ವಿಶ್ವಸಂಸ್ಥೆಗೆ ಒಂದು ಮಹತ್ತರವಾದ ಸಮಸ್ಯೆಯಾಗಿದೆಯೆಂದೂ, ಅದನ್ನು ಕೂಡಲೇ ನಿವಾರಿಸಬೇಕೆಂದೂ, ಅದಕ್ಕಾಗಿ ೧ ಸಾವಿರ ಮಿಲಿಯನ್ ಡಾಲರುಗಳು ಬೇಕೆಂದೂ ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್‌ರವರು ಮನವಿಮಾಡಿದ್ದಾರೆ.

ಸರ್ಕಾರ ಕೊಳ್ಳುವ ಧಾನ್ಯಗಳ ಬೆಲೆ ಪಲ್ಲಾಕ್ಕೆ ೨೫ ರೂ

ಸರ್ಕಾರವು ರೈತರಿಂದ ಪಡೆಯುವ ಭತ್ತ ಪಲ್ಲಾ ಒಂದಕ್ಕೆ ೨೫ ರೂ, ರಾಗಿ ಮತ್ತು ಜೋಳ ಸಹ ೨೫ ರೂಗಳಂತೆ ಬೆಲೆಇರಬೇಕೆಂದುಮೈಸೂರುಕಾಂಗ್ರೆಸ್ಪಕ್ಷದ ತೀರ್ಮಾನವಾಯಿತೆಂದು ಗೊತ್ತಾಗಿದೆ.

೩೫೦ಮಂದಿ ಸತ್ಯಾಗ್ರಹಿಗಳಿಗೆ ಶಿಕ್ಷೆ

ದಕ್ಷಿಣಆಫ್ರಿಕಾ ಸರ್ಕಾರದ ವರ್ಣನೀತಿಯ ಪ್ರತಿಭಟನಾ ಸತ್ಯಾಗ್ರಹದಲ್ಲಿ ನಿನ್ನೆದಿನ ೩೫೦ ಮಂದಿ ಆಫ್ರಿಕನರನ್ನು ದಸ್ತಗಿರಿಮಾಡಿ, ಅವರುಗಳಿಗೆ ಕಾರಾಗೃಹ ಶಿಕ್ಷೆ ವಿಧಿಸಲಾಗಿದೆ.

ಕಾರ್ಮಿಕರಿಗೆ ವಸತಿಗೃಹ

ಸಂಸ್ಥಾನದಲ್ಲಿ ಕಾರ್ಮಿಕರಿಗಾಗಿ ವಸತಿಗೃಹಗಳನ್ನು ಏರ್ಪಡಿಸಲು ಸರ್ಕಾರದವರು ೩೦ ಲಕ್ಷ ರೂ. ಸಾಲ ಕೊಟ್ಟಿರುತ್ತಾರೆ. ಅದರ ಜೊತೆಗೆ ಮೈಸೂರು ಸರಕಾರದವರು ೧೦ ಲಕ್ಷ ರೂ. ಒದಗಿಸಿದ್ದಾರೆ. ಅದರಪೈಕಿ ೬,೨೮,೦೦೦ ರೂ. ಗಳನ್ನು ಬೆಂಗಳೂರು ಟ್ರಸ್ಟ್‌ಬೋರ್ಡಿನವರು ಕಾರ್ಮಿಕರಿಗಾಗಿ ೨೪೦ ಮನೆಗಳನ್ನು ಕಟ್ಟಲು ವಿನಿಯೋಗಿಸಲಾಗುವುದು.

ವ್ಯವಸಾಯ ಕಾರ್ಮಿಕರಿಗೆ ಈ ಯೋಜನೆಯನ್ನು ಸೇರಿಸಲು ಸಾಧ್ಯವಿಲ್ಲವೆಂದು ಶಾಸನಸಭೆಯಲ್ಲಿ ಸರ್ಕಾರದವರು ತಿಳಿಸಿರುತ್ತಾರೆ.

ಆಫ್ರಿಕನರ ದೊಂಬಿಯಲ್ಲಿ ೧೧ ಜನರ ಮರಣ

ದಕ್ಷಿಣ ಆಫ್ರಿಕದ ನ್ಯೂಬ್ರೈಟನ್‌ನಗರದ ಸಮೀಪದಲ್ಲಿ ನರಿಯೋ ಎಂಬಲ್ಲಿ ಸಾವಿರಾರು ಮಂದಿ ಆಫ್ರಿಕನರು ಭಾರಿ ದೊಂಬಿನಡೆಸಿ ಅನೇಕ ಅಂಗಡಿ, ಪೋಸ್ಟಾಫೀಸ್ ಮತ್ತು ಸಿನಿಮಾ ಮಂದಿರಗಳನ್ನು ನಾಶಪಡಿಸಿದರೆಂದೂ ವರದಿಯಾಗಿದೆ. ಗುಂಪನ್ನು ಚದುರಿಸಲು ಪೊಲೀಸರು ಗುಂಡುಹಾರಿಸಿದರು ಅದರಿಂದ ೧೧ ಜನರು ಸತ್ತು ೨೭ ಮಂದಿಗೆ ಗಾಯವಾಗಿದೆ.

ಕ್ಷಾಮ ಪರಿಹಾರನಿಧಿಗೆ ಸಹಾಯ

ಮೈಸೂರು ಮುಖ್ಯಮಂತ್ರಿಗಳ ಕ್ಷಾಮ ಪರಿಹಾರ ಸಮಿತಿಗೆ ಸಂಸ್ಥಾನದ ಅಬ್ಕಾರಿ ಕಂಟ್ರಾಕ್ಟರುಗಳ ಸಂಘದವರು ೫ ಸಾವಿರ ರೂ. ಕೊಟ್ಟಿರುತ್ತಾರೆ.

ಸರ್ಕಾರಿ ವೈದ್ಯರಿಗೆ ಖಾಸಗಿ ವೃತ್ತಿ

ಕೇಂದ್ರ ಆರೋಗ್ಯಸಚಿವರು ಸರ್ಕಾರಕ್ಕೆ ಸಲಹೆಮಾಡಿರುವಂತೆ ಸರ್ಕಾರಿ ಆಸ್ಪತ್ರೆಗಳಲ್ಲಿರುವ ವೈದ್ಯರು ಖಾಸಗಿವೃತ್ತಿಯನ್ನು ನಡೆಸಕೂಡದೆಂಬುದಕ್ಕೆ ಸಮ್ಮತಿಸಿರುವರೆಂದೂ ಈ ಬಗ್ಗೆ ಸದ್ಯದಲ್ಲೇ ಆಜ್ಞೆ ಹೊರಬೀಳಲಿದೆಯೆಂದು ಹೇಳಲಾಗಿದೆ.

ಈ ಆಜ್ಞೆಯ ಪ್ರಕಾರ ಎ ತರಗತಿಯ ವೈದ್ಯರಿಗೆ ಈಗಿರುವ ಸಂಬಳದಲ್ಲಿ ಶೇಕಡ ೫೦ ರಷ್ಟನ್ನು ಹೆಚ್ಚಾಗಿ ಕೊಡಲಾಗುವುದೆಂದು ತಿಳಿಯಬರುತ್ತದೆ. ಈ ಹೊಸ ಯೋಜನೆಗೆ ಪ್ರಾಂತ್ಯ ಸರ್ಕಾರಗಳು ಒಪ್ಪಲಿಲ್ಲವೆಂದು ಹೇಳಲಾಗಿದೆ.

ಸರ್ಕಾರದ ಸಾಗುವಾನಿ ಅಕ್ರಮ ಸಾಗಾಣಿಕೆ

ಶಾಸನಸಭಾಸದಸ್ಯರೂ, ಇತರ ಆರುಮಂದಿಮೇಲೂ ಮೊಕದ್ದಮೆ

ಮೈಸೂರು ಅ. ೨೧

ಮೈಸೂರು ಶಾಸನಸಭೆಯ ಸದಸ್ಯರಾದ ಶ್ರೀ ಎಸ್. ಎಂ. ಮರಿಯಪ್ಪ ಅವರ ಸಹಾಯಕರಾಗಿದ್ದ ಬಿ. ಬೋರೇಗೌಡ ರೆವಿನ್ಯೂ ಇನ್ಸ್‌ಪೆಕ್ಟರಾದ ಬಾಲಪ್ಪಾಚಾರಿ ಮತ್ತು ಎಸ್. ಮಾದಯ್ಯ, ಶ್ಯಾನುಭೋಗರಾದ ಪುಟ್ಟಮಾದಯ್ಯ, ನಾಗಪ್ಪ ಮತ್ತು ಫಾರೆಸ್ಟರ್ ಟಿ. ವಿ. ಗೌಡರವರುಗಳು ೨೫-೫-೫೦ ರಿಂದ ೧೫-೪- ೫೨ ರ ಕಾಲಾವಧಿಯಲ್ಲಿ ಪಿರಿಯಾಪಟ್ಟಣತಾಲ್ಲೂಕು ಆಲೂರು ಮತ್ತು ಚಿಕ್ಕನುದ್ದನಹಳ್ಳಿ ಸರ್ಕಾರಿ ಕಾಡುಗಳಲ್ಲಿ ೧೬೫೦೦ ರೂಗಳ ಬೆಲೆಬಾಳುವ ಸಾಗುವಾನಿಯನ್ನು ಅಕ್ರಮವಾಗಿ ಸಾಗಿಸಿ ದುರುಪಯೋಗಪಡಿಸಿಕೊಂಡರೆಂಬ ಅಪಾದನೆಯಮೇಲೆ ಪೋಲೀಸರು ನಿನ್ನೆ ಮೊಕದ್ದಮೆ ಹೂಡಿದರು.

ಅಪಾದಿತರುಗಳು ಒಟ್ಟಿಗೆಸೇರಿ ಸರಕಾರಿ ರಹದಾರಿ ಮುಂತಾದ ಕಾಗದಪತ್ರಗಳನ್ನು ಪೋರ್ಜರಿಮಾಡಿ, ಸರ್ಕಾರದ ಸಾಗುವಾನಿ ಎಂದು ಗೊತ್ತಿದ್ದರೂ ಅದನ್ನು ಮೋಸಮಾಡಿ ಕಳ್ಳತನದಲ್ಲಿ ಸಾಗಿಸಿ ದುರುಪಯೋಗಪಡಿಸಿಕೊಂಡರೆಂದೂ ಆಪಾದಿಸಲಾಗಿದೆ.

(ಇಂಡಿಯನ್‌ಪೀನಲ್‌ಕೋಡ್ ೩೭೯ ೪೧೪, ೪೨೦, ೪೬೭, ೪೬೮,೪೭೧ ಮತ್ತು ೧೯೦ ಕಲಂಮೇಲೆ ಮೊಕದ್ದಮೆ ಹೂಡಲಾಗಿದೆ. ಸರ್ಕಾರದ ಪರವಾಗಿ ಸಾಕ್ಷಿಗಳನ್ನು ಕೊಡಲಾಗಿದೆ. ವಿಶೇಷ ತನಿಖಾಧಿಕಾರಿ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಅಂದ್ಯಪ್ಪನವರು ನಿನ್ನೆ ಮೊಕದ್ದಮೆಯನ್ನು ಹೂಡಿದರು. ಇದೇ ೩೦ನೇ ತಾರೀಖು ಮೊಕದ್ದಮೆಯನ್ನು ಮುಂದುವರಿಸಲಾಗಿದೆ.

ಪಟಾಕಿ ಮದ್ದು ಆಸ್ಫೋಟನೆಯಾಗಿ ೩ ಜನರ ಮರಣ

ರಾಜಧಾನಿಯ ಹಳೇ ಮಂಡಿ ಭಾಗದ ಅಬ್ದುಲ್ ಅಜೀಜ್ ಎಂಬಾತನ ಮನೆಯಲ್ಲಿ ಕಳೆದ ಶನಿವಾರ ಪಟಾಕಿಮದ್ದನ್ನು ಅರೆಯುತ್ತಿದ್ದಾಗ, ಅಕಸ್ಮಾತ್ ಬೆಂಕಿ ಬಿದ್ದಿಯು ಅದರಮೇಲೆ ಬಿದ್ದುದರಿಂದ ಆಸ್ಫೋಟನೆಯಾಗಿ ಅಬ್ದುಲ್ ಅಜೀಜ್ ಮತ್ತು ಅಮೀರ್‌ಪಾಷಾ ಎಂಬುವರು ಅಲ್ಲೇ ಮರಣಹೊಂದಿದರೆಂದೂ ೧೨ ವರ್ಷದ ಬಾಲಕ ಇನಾಯತ್ ಉಲ್ಲಾ ಎಂಬಾತನಿಗೆ ತೀವ್ರ ಗಾಯವಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲಾಗಿ, ಅತನು ಮಾರನೇದಿನ ಸತ್ತುಹೋದನೆಂದು ವರದಿಯಾಗಿದೆ.

ಮಂತ್ರಿಮಂಡಲ ಕಾಂಗ್ರೆಸ್ ಸಮಿತಿಗಳ ಬಾಂಧವ್ಯ

ಸಂಸ್ಥಾನದ ಮಂತ್ರಿಮಂಡಲಗಳಿಗೂ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೂ ನಿಕಟಸಂಬಂಧವಿರಬೇಕಾದುದು ಅತ್ಯವಶ್ಯಕವೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ಎಲ್ಲಾ ಸಂಸ್ಥಾನಗಳ ಮಂತ್ರಿಮಂಡಲ ಮತ್ತು ಕಾಂಗ್ರೆಸ್ ಸಮಿತಿಗಳಿಗೆ ಸೂಚನೆ ಕೊಡುವರೆಂದು ಹೇಳಲಾಗಿದೆ.

ಕೇಂದ್ರಸರ್ಕಾರವೂಸಹ ಪ್ರದೇಶ ಕಾಂಗ್ರೆಸ್ ಸಮಿತಿಗಳೊಡನೆ ಸಂಪರ್ಕವನ್ನಿಟ್ಟುಕೊಳ್ಳುವುದೆಂದೂ ಮತ್ತು ಆಗಾಗ್ಗೆ ಅವರನ್ನು ಕರೆಸಿಕೊಂಡು ವಿಚಾರ ವಿನಿಮಯ ಮಾಡಲು ಯತ್ನಿಸುವುದಾಗಿ ಶ್ರೀ ನೆಹರೂ ತಿಳಿಸಿರುವುದಾಗಿ ಗೊತ್ತಾಗಿದೆ.

೨೫೦೦ ವರ್ಷಗಳ ಹಿಂದೆ ಮಾರಾಟತೆರಿಗೆ

೨೫೦೦ ವರ್ಷಗಳ ಹಿಂದಿನ ಮೌರ್ಯಕಾಲದ ಭಾರತದಲ್ಲಿ ಮಾರಾಟತೆರಿಗೆ ವಿಧಿಸಲಾಗುತ್ತಿತ್ತೆಂದು ಯು. ಪಿ. ಶಾಸನ ಸಭೆಯಲ್ಲಿ ಶ್ರೀ ಪರಿಪೂರ್ಣಾನಂದ ಶರ್ಮರವರು ತಿಳಿಸಿರುತ್ತಾರೆ.

ವಿಶ್ವಶಾಂತಿಯೇ ಭಾರತದ ಗುರಿ

ವಿಶ್ವದಲ್ಲಿ ಈಗಿರುವ ಉದ್ರಿಕ್ತ ಪರಿಸ್ಥಿತಿಯನ್ನು ಕಡಿಮೆಮಾಡಿ, ಪರಸ್ಪರ ತಪ್ಪುತಿಳುವಳಿಕೆಗಳನ್ನು ಹೋಗಲಾಡಿಸಿ, ವಿಶ್ವಶಾಂತಿ ಸ್ಥಾಪನೆಗೆ ಭಾರತವು ಸದಾ ಶ್ರಮಿಸುವುದಾಗಿ ರಷ್ಯಾದಲ್ಲಿರುವ ಭಾರತದ ರಾಯಭಾರಿ ಶ್ರೀ ಕೆ. ಪಿ. ಎಸ್. ಮೆನನ್‌ರವರು ರಷ್ಯಾದೇಶದ ಅಧ್ಯಕ್ಷರಿಗೆ ತಮ್ಮ ಪರಿಚಯ ಪತ್ರಗಳನ್ನು ಸಲ್ಲಿಸುತ್ತಾ ಹೇಳಿರುವರು.

ಹಿಂದಿ ಮತ್ತು ಮರಾಠಿ ಅಧಿಕೃತ ಭಾಷೆ

ಪ್ರಾಂತ್ಯದಾದ್ಯಂತ ೧೯೫೩ ನೇ ಆಗಸ್ಟ್ ೧೫ ರಿಂದ ಇಂಗ್ಲೀಷಿಗೆ ಬದಲಾಗಿ ಹಿಂದಿ ಮತ್ತು ಮರಾಠಿಯನ್ನು ಅಧಿಕೃತ ಭಾಷೆಯನ್ನಾಗಿ ಮಾಡಲಾಗುತ್ತದೆಯೆಂದು ಮಧ್ಯಪ್ರದೇಶದ ಮುಖ್ಯಮಂತ್ರಿ ಶ್ರೀ ರವಿಶಂಕರ ಶುಕ್ಲರವರು ಹೇಳಿರುವರು.

ಕೊಂಕಣಿ ಭಾಷೆಯಲ್ಲಿ ಪ್ರಸಾರ

ಅಖಿಲ ಭಾರತ ರೇಡಿಯೋ ಕೇಂದ್ರದ ಬೊಂಬಾಯಿ ಶಾಖೆಯಿಂದ ನಿನ್ನೆಯಿಂದ ಕೊಂಕಣಿ ಭಾಷೆಯಲ್ಲಿ ಪ್ರಸಾರವನ್ನು ಪ್ರಾರಂಭಿಸಲಾಗಿದೆ. ಇದು ಸೇರಿ ಅಖಿಲಭಾರತ ರೇಡಿಯೋ ಕೇಂದ್ರದಿಂದ ೧೬ ಪ್ರಾದೇಶಿಕ ಭಾಷೆಗಳಲ್ಲಿ ಪ್ರಸಾರ ನಡೆಯುವಂತಾಯಿತು.

ಶಾಲೆಗಳಲ್ಲಿ ಇಂಗ್ಲೀಷಿನ ಮಟ್ಟವನ್ನು ಇಳಿಸುವುದು ತಪ್ಪು

ಭಾರತ ಸರ್ಕಾರದ ವಿದ್ಯಾಶಾಖೆಯ ಸಹಕಾರ್ಯದರ್ಶಿ ಶ್ರೀ ಹುಮಾಯೂನ್ ಕಬೀರ್‌ರವರು ಗೌಹತಿಯಲ್ಲಿ ಮಾತನಾಡುತ್ತಾ ಪಾಠಶಾಲೆಗಳಲ್ಲಿ ಇಂಗ್ಲೀಷ್ ಭಾಷೆಯ ಮಟ್ಟವನ್ನು ಇಳಿಸುವುದು ಬುದ್ಧಿವಂತಿಕೆಯಲ್ಲವೆಂದು ಹೇಳಿರುವರು.

ಆರೋಗ್ಯಾಧಿಕಾರಿಗಳ ವರ್ಗ

ವಿದೇಶೀ ಶಿಕ್ಷಣದಿಂದ ಹಿಂತಿರುಗಿರುವ ಆರೋಗ್ಯಾಧಿಕಾರಿಗಳಾದ ಡಾ|| ಎಸ್ ಕೃಷ್ಣಸ್ವಾಮಿರಾಯರನ್ನು ರಾಮನಗರ ಆರೋಗ್ಯ ಶಿಕ್ಷಣ ಕೇಂದ್ರಕ್ಕೂ.ಡಾ|| ಎ. ಆರ್. ಸುಂದರರಾಯರನ್ನು ಹಾಸನಜಿಲ್ಲೆಗೂ ವರ್ಗಾಯಿಸಲಾಗಿದೆ.

ಸ್ಪೇನಿನಲ್ಲಿ ವಾರ ಮತ್ತು ದಿನಪತ್ರಿಕೆಗಳು

ಸ್ಪೇನ್‌ದೇಶದಲ್ಲಿ ೧೦೪ ದಿನ ಪತ್ರಿಕೆಗಳು ೧೩೦೦ ವಾರ ಮತ್ತು ಮಾಸಪತ್ರಿಕೆಗಳು ಇವೆ. ದಿನಪತ್ರಿಕೆಗಳಲ್ಲಿಯೇ ೩೦ ಲಕ್ಷ ಪ್ರತಿಗಳು ದಿನವೂ ಹೊರಡುತ್ತವೆ. ಇದಕ್ಕಾಗಿ ತಿಂಗಳಿಗೆ ೫೦೦ ಟನ್ ನ್ಯೂಸ್ ಪ್ರಿಂಟ್ ಖರ್ಚಾಗುತ್ತದೆ.

ಮುಖ್ಯಮಂತ್ರಿ ದೆಹಲಿಗೆ

ಬೆಂಗಳೂರು ೨೧

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮುಂದಿನತಿಂಗಳು ೩,೪ ನೇ ತಾರೀಖುಗಳಲ್ಲಿ ದೆಹಲಿಯಲ್ಲಿ ನಡೆಯಲಿರುವ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಹೋಗುವರು.

ಭೂಕಂಪ

ಪೂನಾಕ್ಕೆ ೯೦೦ ಮೈಲಿ ದೂರದಲ್ಲಿ ಮೊನ್ನೆಯದಿನ ಸಂಜೆ ೪-೧೫ ಗಂಟೆ ಹೊತ್ತಿನಲ್ಲಿ ಸಾಧಾರಣ ಭೂಕಂಪವಾಗಿದೆ.

ಕೆ. ಎಸ್. ಗಂಗಾಧರ್

ಹಿಂದೆಯೇ ತಿಳಿಸಿದ್ದಂತೆ ಮರಾಮತ್ ಶಾಖಾಕಾರ್ಯದರ್ಶಿ ಶ್ರೀ ಕೆ. ಎಸ್. ಗಂಗಾಧರ್‌ರವರನ್ನು ಚೀಫ್ ಇಂಜನಿಯರಾಗಿ ಸರ್ಕಾರವು ನೇಮಿಸಿದೆ.

ತುಟ್ಟಿಭತ್ಯ ಸಂಬಳದೊಡನೆ ಐಕ್ಯ

ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಶಾಸನಸಭೆಯಲ್ಲಿ ಉತ್ತರ

ಬೆಂಗಳೂರು ೨೧

ಸರ್ಕಾರಿ ನೌಕರರ ತುಟ್ಟಿಭತ್ಯವನ್ನು ಸಂಬಳದ ಜೊತೆಗೆ ಸೇರಿಸುವ ಪ್ರಶ್ನೆಯನ್ನು ಸರ್ಕಾರವು ಪರಿಶೀಲಿಸುತ್ತಿದೆಯೆಂದು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನಿನ್ನೆ ಪ್ರಾರಂಭವಾದ ಹಿರಿಯ ಶಾಸನಸಭೆಯಲ್ಲಿ ತಿಳಿಸಿರುತ್ತಾರೆ.

ಸಂಸ್ಥಾನದ ಆರುಮಾರ್ಗಗಳಲ್ಲಿ ಬಸ್ ರಾಷ್ಟ್ರೀಕರಣ ಮಾಡುವುದರಿಂದ ನಿರುದ್ಯೋಗ ಸಮಸ್ಯೆ ಉದ್ಭವಿಸುವುದಿಲ್ಲವೆಂದೂ, ಇದರಿಂದ ಖಾಸಗೀ ೨೫೦ ಬಸ್ಸುಗಳ ಕೆಲಸಗಾರರನ್ನು ಸರ್ಕಾರದ ಬಸ್ ಸರ್ವೀಸಿನಲ್ಲಿ ಸೇರಿಸಿಕೊಳ್ಳುವ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿಯೂ ಗೃಹಸಚಿವ ಶ್ರೀ ಸಿದ್ದವೀರಪ್ಪನವರು ಒಂದು ಪ್ರಶ್ನೆಗೆ ಉತ್ತರ ಹೇಳಿದ್ದಾರೆ.

ದಸರಾ ದರ್ಬಾರನ್ನು ರಾಜಸಭೆಯೆಂದು ಬದಲಾಯಿಸಿದ್ದಕ್ಕಾಗಿ ಯಾರಿಂದಲೂ ಪ್ರತಿಭಟನೆ ಬಂದಿಲ್ಲವೆಂದೂ, ಅದರ ಖರ್ಚನ್ನು ಇಲ್ಲಿಯವರೆಗೆ ಸರ್ಕಾರವೇ ಕೊಡುತ್ತಿದೆಯೆಂದು ಮತ್ತೊಂದು ಪ್ರಶ್ನೆಗೆ ಸರ್ಕಾರದಿಂದ ಉತ್ತರಬಂತು.

ಪಾನನಿರೋಧವನ್ನು ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲೂ ಜಾರಿಗೆ ತರಲು ನಿರ್ದಿಷ್ಟ ತಾರೀಖನ್ನು ಗೊತ್ತುಮಾಡಲು ಸಾಧ್ಯವಿಲ್ಲ. ಕೇಂದ್ರಸರ್ಕಾರದವರ ಪಾನನಿರೋಧ ನೀತಿಯ ವಿಚಾರವಾಗಿ ಒಂದು ಸಮಿತಿ ನೇಮಿಸಿದ್ದಾರೆ.

ಅದರ ವರದಿ ಬಂದಮೇಲೆ ಭಾರತದಲ್ಲೆಲ್ಲಾ ಒಂದು ನೀತಿಯನ್ನು ಅನುಸರಿಸಬೇಕೆಂಬುದನ್ನು ನಿರ್ಧರಿಸಲಾಗುವುದು-ಎಂದು ಮುಖ್ಯಮಂತ್ರಿಗಳು ಕಿರಿಯಶಾಸನಸಭೆಯಲ್ಲಿ ತಿಳಿಸಿರುತ್ತಾರೆ.

ವುಡ್ ಲ್ಯಾಂಡ್ಸ್
17-10-52 ರಿಂದ ಅಮೋಘ ಪ್ರಾರಂಭ
ಪ್ರತಿದಿನ ೩ ಪ್ರದರ್ಶನಗಳು
ಬೇತಾಬ್
ಪಾತ್ರ:—ಅಶೋಕ್‌ಕುಮಾರ್ ನಾಸೀಂ, ಮೋತಿಲಾಲ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 50

೨೨-೧೦-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಪಾನನಿರೋಧ ಶಾಸನ ರದ್ದುಗೊಳಿಸಿ

ಕೇಂದ್ರ ಪಾರ್ಲಿಮೆಂಟ್ ಸದಸ್ಯರ ಸಲಹೆ

ಪಾನನಿರೋಧ ಶಾಸನವನ್ನು ಕೂಡಲೇ ರದ್ದುಗೊಳಿಸಿ. ಉಪ್ಪಿನಮೇಲೆ ಪುನಃ ಸುಂಕ ವಿಧಿಸಿ. ಲಾಟರಿಗಳು ಸರ್ಕಾರವನ್ನೇ ನಡೆಸುವಂತೇರ್ಪಾಡುಮಾಡಿ ಇದರಿಂದ ಸರ್ಕಾರಕ್ಕೆ ವಿಶೇಷ ಉತ್ಪತ್ತಿ ಬರುತ್ತದೆ ಅದನ್ನು ದೇಶದ ಪ್ರಗತಿಕಾರ್ಯಗಳಿಗೆ ಉಪಯೋಗಿಸಬಹುದು ಎಂದು ಆಯೋಜನಾಸಮಿತಿಯು ನಿನ್ನೆಯ ಪಾರ್ಲಿಮೆಂಟಿನ ಕೇಂದ್ರ ಸದಸ್ಯರನ್ನು ಭೇಟಿ ಮಾಡಿದಾಗ ಅವರು ಸಲಹೆ ಮಾಡಿದರೆಂದು ಗೊತ್ತಾಗಿದೆ.

ಈ ಭೇಟಿ ಸಮಯದಲ್ಲಿ ಪ್ರಧಾನಿ ವಿನಹ ಮಿಕ್ಕ ಆಯೋಜನಾ ಸಮಿತಿಯ ಸದಸ್ಯರೆಲ್ಲಾ ಇದ್ದರು.

೩ ನಗರಗಳಲ್ಲಿ ರೇಷನ್ ತೆಗೆಯುವುದಿಲ್ಲ

ಶಾಸನ ಸಭೆಯಲ್ಲಿ ಸಚಿವರ ಹೇಳಿಕೆ

ಬೆಂಗಳೂರು. ೨೨.

ಸಂಸ್ಥಾನದಲ್ಲಿ ಆಹಾರ ಹತೋಟಿಯನ್ನು ಸಂಪೂರ್ಣವಾಗಿ ರದ್ದುಮಾಡಬೇಕೆಂಬುದೇ ಸರ್ಕಾರದ ಸಂಕಲ್ಪ. ಆದರೆ ಈ ವಿಷಯದಲ್ಲಿ ಎಚ್ಚರಿಕೆಯಿಂದ ಮುಂದುವರಿಯಬೇಕಾಗಿದೆ. ಈಗ ೩ ನಗರಗಳಲ್ಲಿರುವ ರೇಷನನ್ನು ಸದ್ಯಕ್ಕೆ ರದ್ದುಮಾಡಲು ಸಾಧ್ಯವಿಲ್ಲ. ಎಂದು ಆಹಾರ ಸಚಿವ ಶ್ರೀ ಸಿದ್ದವೀರಪ್ಪನವರು ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ.

ಆಹಾರ ಹತೋಟಿ ತೆಗೆದಿರುವ ಪ್ರದೇಶಗಳಲ್ಲೆಲ್ಲಾ ಬೆಲೆ ಏರದಂತೆ ಪೇರ್‌ಪ್ರೈಸ್ ಡಿಪೋಗಳನ್ನು ಸರ್ಕಾರದವರು ತೆಗೆದು ಆಹಾರಧಾನ್ಯ ಮಾರಬೇಕೆಂದು ಮನವಿ ಬಂದಿದೆ. ಆದರೆ ಅವುಗಳಿಗೆ ಆಹಾರ ಧಾನ್ಯಗಳನ್ನು ಎಲ್ಲಿಂದ ತರಿಸಬೇಕೆಂಬುದೇ ಸಮಸ್ಯೆಯಾಗಿದೆ. ಈಗ ರೇಷನಿರುವ ೩ ನಗರಗಳಲ್ಲಿ ಆಹಾರ ಒದಗಿಸಲು ಮುಂದಿನವರ್ಷಕ್ಕೆ ೫೬೪೦೦ ಟನ್ ಅಕ್ಕಿ ೨೪೨೦೦ ಟನ್ ರಾಗಿ ಅಥವ ಜೋಳ ಮತ್ತು ೨೪೨೦೦ ಟನ್ ಗೋಧಿ ಬೇಕಾಗುತ್ತದೆ. ಅಲ್ಲದೆ ಎರಡುತಿಂಗಳಕಾಲಕ್ಕೆ ಬಫರ್ ದಾಸ್ತಾನಿಗಾಗಿ ಒಟ್ಟು ೪೦ ಸಾವಿರ ಟನ್ ಧಾನ್ಯ ಬೇಕಾಗುವುದು ಅಂದರೆ ಒಟ್ಟು ೧,೫೨.೮೦೦ ಟನ್ ಬೇಕಾಗುವುದು ಅದರಲ್ಲಿ ಹೊರಗಿನಿಂದ ೭೫ ಸಾವಿರಟನ್ ನಿರೀಕ್ಷಿಸಲಾಗಿದೆ. ಅಂದರೆ ೮೦ ಸಾವಿರ ಟನ್ ಸಂಸ್ಥಾನದಲ್ಲೇ ಸಂಗ್ರಹಿಸಬೇಕು ಈಗ ಮಳೆಬಾರದೆ ಪೈರು ಕೆಟ್ಟಿರುವುದರಿಂದ ಮುಂದಿನವರ್ಷ ಧಾನ್ಯ ಸಂಗ್ರಹಣೆ ಸಮರ್ಪಕವಾಗಿರುವುದಿಲ್ಲ. ಆದರೂ ಸರಕಾರದವರು ಹೆಚ್ಚಾಗಿ ಹೊರಗಿನಿಂದ ತರಿಸಲು ಪ್ರಯತ್ನ ಮಾಡುವರು. ಇದಕ್ಕೆ ಹೆಚ್ಚು ದರ ಕೊಡಬೇಕಾಗುವುದು

ಸಂಸ್ಥಾನದಲ್ಲಿ ಇದೇ ೨೦ ನೇ ತಾರೀಖಿನವರೆಗೆ ಆಹಾರಧಾನ್ಯಗಳ ದಾಸ್ತಾನು ಈರೀತಿ ಇದೆ:—ಭತ್ತ ೪,೮೭,೬೦೪ ಪಲ್ಲ, ಅಕ್ಕಿ ೭೬,೭೨೦ ಪಲ್ಲ, ರಾಗಿ ೧,೧೧೯೯೨ ಪಲ್ಲ, ಮೈಲೋ ೪೬, ೮೨೫ ಪಲ್ಲ, ಗೋಧಿ ೫೬೦೦೨ ಪಲ್ಲ, ಒಟ್ಟು ೫೩೩೭೩೫೦ ಪಲ್ಲ ಎಂದು ಸಚಿವರು ತಿಳಿಸಿದರು.

ಮಿತವ್ಯಯ

ಕಳೆದ ನಾಲ್ಕುತಿಂಗಳಲ್ಲಿ ಸರ್ಕಾರಿ ವೆಚ್ಚದಲ್ಲಿ ಸುಮಾರು ೩ ಲಕ್ಷ ರೂ. ವೆಚ್ಚವನ್ನು ಕಡಿಮೆಮಾಡಲಾಗಿದೆ-ಎಂದು ರೆವಿನ್ಯೂಸಚಿವರು ವಿಧಾನಪರಿಷತ್ತಿನಲ್ಲಿ ತಿಳಿಸಿರುವರು.

ಗೋವಧೆ ನಿರೋಧ ಚಳುವಳಿ

ಮೈಸೂರು ೨೨

ಭಾರತಾದ್ಯಂತ ಇದೇ ೨೬ ನೇ ತಾರೀಖಿನಿಂದ ಒಂದು ತಿಂಗಳಕಾಲ ನಡೆಯಲಿರುವ ಗೋಹತ್ಯನಿರೋಧ ಚಳುವಳಿಯ ಬಗ್ಗೆ ಸಂಸ್ಥಾನದ ಆರ್. ಎಸ್. ಎಸ್. ಸಂಘದ ಸಂಚಾಲಕರಾದ ಶ್ರೀ ಸೂರ್ಯನಾರಾಯಣರಾಯರು ಮಹಾರಾಜಾಕಾಲೇಜಿನ ಮುಂಭಾಗದ ಮೈದಾನದಲ್ಲಿ ಮೊನ್ನೆ ದಿನ ಏರ್ಪಡಿಸಿದ್ದ ಸಭೆಯಲ್ಲಿ ವಿವರವನ್ನಿತ್ತರು. ಪ್ರತಿಯೊಬ್ಬ ಸ್ವಯಂ ಸೇವಕನೂ ತನ್ನ ಶಕ್ತಿಮೀರಿ ಈ ಪವಿತ್ರಕಾರ್ಯದಲ್ಲಿ ತೊಡಗಿ ಪ್ರತಿವ್ಯಕ್ತಿಯ ಹಸ್ತಾಕ್ಷರವನ್ನು ಪಡೆಯ ಭಾರತಸರ್ಕಾರವು ದೇಶದಲ್ಲಿ ಗೋಹತ್ಯೆಯನ್ನು ನಿಲ್ಲಿಸುವಂತೆ ಒತ್ತಾಯ ಪಡಿಸಬೇಕೆಂದು ತಿಳಿಸಿದರು.

ಮೋಟಾರು ಕಲಸಗಾರರ ಮುಷ್ಕರವಿಲ್ಲ

ಬಸ್‌ಮಾಲೀಕರುಗಳಿಗೆ ಅಸಿಸ್ಟೆಂಟ್ ಲೇಬರ್ ಕಮೀಷನರು ಇದೇ ೧೫ ನೇ ತಾರೀಖು ಒಂದು ನೋಟೀಸನ್ನು ಕೊಟ್ಟು ಒಂದುವಾರದೊಳಗಾಗಿ ಕೈಗಾರಿಕಾ ಕೋರ್ಟಿನ ತೀರ್ಪನ್ನು ಜಾರಿಗೆ ತಂಬೇಕೆಂದು ತಿಳಿಸಿರುವುದರಿಂದ ಇದೇ ೨೦ನೇ ತಾರೀಖಿನಿಂದ ಹೂಡಬೇಕಾದ ಮುಷ್ಕರವನ್ನು ಮೈಸೂರು ಜಿಲ್ಲಾಮೋಟಾರು ಕೆಲಸಗಾರರ ಸಂಘದವರು ನಿಲ್ಲಿಸಬೇಕೆಂದು ಮೊನ್ನೆ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ಸರ್ಕಾರದವರು ಬಸ್ ರಾಷ್ಟ್ರೀಕರಣ ಮಾಡಲಿರುವ ಆರು ಮಾರ್ಗಗಳ ಪೈಕಿ ಬೆಂಗಳೂರಿನಿಂದ ಮೈಸೂರು ಗುಂಡ್ಲುಪೇಟೆ ಮಾರ್ಗವನ್ನು ಸರ್ಕಾರ ತೆಗೆದುಕೊಳ್ಳುವುದರಿಂದ ಕೆಲಸಗಾರರಿಗೆ ವಿಶೇಷ ತೊಂದರೆಯಾಗುವುದರಿಂದ ಅದನ್ನು ರದ್ದುಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯಮಾಡಲಾಯಿತು.

ಶ್ರೀ ಬಾಲಕೃಷ್ಣಯ್ಯನವರಿಂದ ವಿಶ್ವವಿದ್ಯಾನಿಲಯದ ಮೇಲಿನ ದೂರು ವಿಚಾರಣೆ

ಬೆಂಗಳೂರು ೨೨

ಮೈಸೂರು ವಿಶ್ವವಿದ್ಯಾನಿಲಯದ ಉತ್ತರಪತ್ರಿಕೆಗಳ ವಿಷಯದಲ್ಲಿ ಇತ್ತೀಚೆಗೆ ಬಂದಿರುವ ದೂರುಗಳ ವಿಚಾರಣೆ ನಡೆಸಲು ಮೈಸೂರು ಶ್ರೇಷ್ಠ ನ್ಯಾಯಾಲಯ ನ್ಯಾಯಮೂರ್ತಿ ಶ್ರೀ ಎನ್. ಬಾಲಕೃಷ್ಣಯ್ಯನವರನ್ನು ನೇಮಿಸಲು ರಾಷ್ಟ್ರಾಧ್ಯಕ್ಷರು ಅನುಮತಿಯನ್ನು ಕೊಟ್ಟಿರುವುದಾಗಿ ಹೇಳಲಾಗಿದೆ.

ಕೊಳ್ಳುವ ಬೆಲೆ ಏರಿಸಬೇಡಿ

ಮೈಸೂರು ೨೨

ಭತ್ತ, ರಾಗಿ ಮತ್ತು ಜೋಳದ ಕೊಳ್ಳುವ ಬೆಲೆಯನ್ನು ೨೫ ರೂಪಾಯಿಗೆ ನಿರ್ಧರಿಸಲು ಕಾಂಗ್ರೆಸ್ ಪಕ್ಷವು ತೀರ್ಮಾನಿಸಿರುವುದು ಜಮೀನ್ದಾರರಿಗೆ ಲಾಭದೊರಕಿಸದಂತಾಗುತ್ತದೆ. ಜನರಲ್ಲಿ ಕೊಳ್ಳುವ ಶಕ್ತಿಯೇ ಇಲ್ಲದೆ ಅರ್ಧ ಜನಸಂಖ್ಯೆ ಬಡತನದ ಬೇಗೆಯಿಂದ ನರಳುತ್ತಿದ್ದಾರೆ. ಈಗಿರುವ ಕೊಳ್ಳುವ ಬೆಲೆಯನ್ನು ಏರಿಸುವ ವಿಷಯವನ್ನು ಪುನರ್ವಿಮರ್ಶಿಸಿ ಎಂದು ಶ್ರೀ ಎಂ. ಆರ್. ಸಿ. ಬಸಪ್ಪನವರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪನವರಿಗೆ ಈದಿನ ತಂತಿ ಕಳುಹಿಸಿರುತ್ತಾರೆ.

ಆಹಾರ ಸಂಶೋಧನಾ ಕೇಂದ್ರಕ್ಕೆ ಆರೋಗ್ಯ ಸಚಿವರ ಭೇಟಿ

ಮೈಸೂರು, ಅ. ೨೨

ಕೇಂದ್ರ ಆರೋಗ್ಯ ಸಚಿವರಾದ ಶ್ರೀಮತಿ ರಾಜಕುಮಾರಿ ಅಮೃತಕೌರ್‌ರವರು ಈದಿನ ಮೈಸೂರಿನಲ್ಲಿರುವ ಆಹಾರ ಸಂಶೋಧನಾಕೇಂದ್ರಕ್ಕೆ ಭೇಟಿ ಇತ್ತಿದ್ದರು. ಕೇಂದ್ರದ ಡೈರೆಕ್ಟರ್ ಡಾ|| ಸುಬ್ರಮಣ್ಯಂರವರು ಅಲ್ಲಿಯ ಕಾರ್ಯಕಲಾಪಗಳನ್ನೆಲ್ಲಾ ವಿವರಿಸಿದರು.

ಅಲ್ಲಿಯ ನೌಕರರನ್ನುದ್ದೇಶಿಸಿ ಸಚಿವರು ಮಾತನಾಡುತ್ತಾ ದೇಶದಲ್ಲಿರುವ ಆಹಾರ ಅಭಾವ ಪರಿಸ್ಥಿತಿಯನ್ನು ನಿವಾರಿಸಲು ಈ ಕೇಂದ್ರವು ಸ್ತುತ್ಯಾರ್ಹವಾದ ಕಾರ್ಯಗಳನ್ನು ನಡೆಸುತ್ತಲಿದೆ. ವಿಜ್ಞಾನಿಗಳು ದೇಶದ ಆಹಾರ ಸಮಸ್ಯೆಯನ್ನು ತಾಳ್ಮೆಯಿಂದ ಕೆಲಸಮಾಡಿ ನೀಗಬೇಕಾಗಿದೆ. ದೇಶದಲ್ಲಿ ಈಗ ಪುಷ್ಟಿಕರವಾದ ಆಹಾರ ಬೇಕಾಗಿದೆ. ರೋಗಗಳು ಬಂದು ಔಷಧಿಗಳ ಸೇವನೆಯಿಂದ ಅದರ ನಿವಾರಣೆ ಮಾಡಿಕೊಳ್ಳುವುದಕ್ಕಿಂತ ರೋಗ ಬರದಂತೆ ಪುಷ್ಟಿಕರವಾದ ಆಹಾರವನ್ನು ಸೇವಿಸುವಂತಾಗಬೇಕು.

ಜನರ ಆಹಾರ ನೀತಿಯನ್ನು ಬೇಗ ಮಾರ್ಪಡಿಸುವುದು ಕಷ್ಟ. ಆದರೆ ಹೊಸ ಹೊಸ ಆಹಾರಗಳನ್ನು ಮಕ್ಕಳು ಮತ್ತು ಯುವಕರು ಸೇವಿಸಿ ಪದ್ಧತಿಗಳನ್ನು ಮಾರ್ಪಡಿಸಬೇಕಾಗಿದೆಯೆಂದು ಸಚಿವರು ಹೇಳಿದರು.

ಹುಟ್ಟಿದ ತಾರೀಖು ತಪ್ಪಿಗಾಗಿ ೩೦ ಅಧಿಕಾರಿಗಳ ನಿವೃತ್ತಿ

ಸರ್ಕಾರಿ ಅಧಿಕಾರಿಗಳು ತಮ್ಮ ಹುಟ್ಟಿದ ತಾರೀಖನ್ನು ತಿಳಿಸಬೇಕೆಂದು ಅವರುಗಳಿಗೆ ನೋಟೀಸ್ ಕೊಟ್ಟಮೇಲೆ ಅದರ ಪೈಕಿ ೩೦ ಮಂದಿ ಅಧಿಕಾರಿಗಳು ತಪ್ಪಾಗಿ ಕೊಟ್ಟಿದುದರಿಂದ ಅವರುಗಳನ್ನು ಕೆಲಸದಿಂದ ನಿವೃತ್ತಿಮಾಡಲಾಯಿತೆಂದು ರೆವಿನ್ಯೂ ಸಚಿವರು ನಿನ್ನೆದಿನ ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ

§ ಗಾಜಿನಿಂದ ಸಂಪೂರ್ಣವಾಗಿ ತಯಾರಿಸಲ್ಪಟ್ಟು ಗಂಟೆಗೆ ೨ ಸಾವಿರಮೈಲಿ ವೇಗದಲ್ಲಿ ಸಂಚರಿಸುವ ವಿಮಾನವನ್ನು ತಯಾರಿಸಲು ಅಮೇರಿಕದಲ್ಲಿ ಲಾಸ್‌ಏಂಜಲೀಸ್ ಕಾರ್ಖಾನೆಯೊಂದರಲ್ಲಿ ಪ್ರಯತ್ನಿಸಲಾಗುತ್ತಿದೆಯೆಂದು ತಿಳಿಸಲಾಗಿದೆ.

ಬೊಂಬಾಯಿ ಪ್ರಾಂತ್ಯದಲ್ಲಿ ಆಹಾರ ಹತೋಟಿ ರದ್ದೇ?

ನಾಲ್ಕು ಕೈಗಾರಿಕಾ ನಗರಗಳಲ್ಲಿ ಮಾತ್ರ ಇಲ್ಲ

ಬೊಂಬಾಯಿ, ಅಹಮದಾಬಾದ್, ಪೂನಾ ಮತ್ತು ಶೋಲಾಪುರಗಳಲ್ಲಿವಿನಹ ಮಿಕ್ಕೆಡೆಗಳಲ್ಲೆಲ್ಲಾ ಆಹಾರ ಹತೋಟಿಯನ್ನು ರದ್ದುಗೊಳಿಸಲು ಸಿದ್ಧವಿರುವುದಾಗಿ ಬೊಂಬಾಯಿ ಸರ್ಕಾರವು ಕೇಂದ್ರ ಸರ್ಕಾರಕ್ಕೆ ತಿಳಿಸಿರುವುದಾಗಿ ವರದಿಯಾಗಿದೆ.

ಕೇಂದ್ರಸರ್ಕಾರವು ಈಬಗ್ಗೆ ತನ್ನ ಒಪ್ಪಿಗೆಯನ್ನಿತ್ತರೆ ಕೂಡಲೇ ಜಾರಿಗೆ ತರಲಾಗುವುದೆಂದು ತಿಳಿಯಬರುತ್ತದೆ.

ಬೊಂಬಾಯಿನಲ್ಲಿರುವ ಕೇಂದ್ರ ಆಹಾರಸಚಿವ ಶ್ರೀ ಕಿದ್ವಾಯಿಯವರು ಬೊಂಬಾಯಿ ಆಹಾರಸಚಿವ ಶ್ರೀ ಚವ್ಹಾಣರೊಡನೆ ಪ್ರಾಂತ್ಯದ ಆಹಾರ ಪರಿಸ್ಥಿತಿಬಗ್ಗೆ ಮಾತುಕತೆ ನಡೆಸಿದರೆಂದು ಗೊತ್ತಾಗಿದೆ. ಆಹಾರ ಹತೋಟಿಯೇನಾದರೂ ರದ್ದಾದರೆ ಲೇವಿಪದ್ಧತಿ ಮತ್ತು ವಸೂಲಿ ಕ್ರಮವನ್ನು ಈ ಸುಗ್ಗಿಯಿಂದಲೇ ನಿಲ್ಲಿಸಲಾಗುತ್ತದೆ.

ಬಸ್ಸುಗಳ ರಾಷ್ಟ್ರೀಕರಣ ಬೇಡವೆಂದು ಬೇಡಿಕೆ

ನಿನ್ನೆಯ ದಿನ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸರ್ವಸದಸ್ಯರ ಸಭೆಯು ಶ್ರೀ ಕೆ. ವಿ. ಚಿನ್ನಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ನಿರ್ಣಯವನ್ನು ಮಾಡಿತು.

ಅಸಿಸ್ಟೆಂಟ್‌ಲೇಬರ್ ಕಮಿಷನರ್‌ರವರ ಆಫೀಸಿನಿಂದ ಮಾಲೀಕರುಗಳಿಗೆ ತಾ|| ೧೫-೧೦-೫೨ ರಲ್ಲಿ ಒಂದುವಾರ ಕಾಲಾವಕಾಶವನ್ನು ಕೊಟ್ಟು, ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಅವಾರ್ಡನ್ನು ಜಾರಿಗೆ ತರಲು ತಿಳಿಸಿರುವುದರಿಂದ ಆ ಪತ್ರದಂತೆ ೨೦ ನೇ ತಾರೀಖಿನಿಂದ ಹೂಡಬೇಕಾದ ಮುಷ್ಕರವನ್ನು ನಿಲ್ಲಿಸಲ್ಪಡಬೇಕೆಂದು ತೀರ್ಮಾನಿಸಲಾಯಿತು.

ಸರ್ಕಾರದವರು ಮನಾಪಲೈಸ್ ಮಾಡಲಿರುವ ಆರು ಮಾರ್ಗಗಳ ಪೈಕಿ ಬೆಂಗಳೂರಿಂದ ಮೈಸೂರು ಗುಂಡ್ಲುಪೇಟೆ ರೋಡನ್ನು ಮನಾಪಲೈಸ್ ಮಾಡಿಕೊಳ್ಳುವುದರ ಬಗ್ಗೆ ನಮ್ಮ ಕೆಲಸಗಾರರಿಗೆ ತೊಂದರೆಯಾಗುವುದರಿಂದ ಇದನ್ನು ರದ್ದುಪಡಿಸಬೇಕಾಗಿ ಸರ್ಕಾರವನ್ನು ಈ ಸಭೆಯು ಪ್ರಾರ್ಥಿಸುತ್ತದೆ.

ವಿದೇಶಗಳಿಗೆ ಭಾರತದಿಂದ ಪ್ರಾಣಿಗಳ ರವಾನೆ

ಭಾರತದಿಂದ ವಿದೇಶಗಳಿಗೆ ಪ್ರತಿವರ್ಷವೂ ಸುಮಾರು ೩೦ ಲಕ್ಷ ರೂಪಾಯಿ ಬೆಲೆಬಾಳುವ ವಿವಿಧ ಪ್ರಾಣಿಗಳನ್ನು ರವಾನೆ ಮಾಡಲಾಗುತ್ತದೆ.

ಅಮೆರಿಕಾ ಮತ್ತು ಬ್ರಿಟನ್ನಿನ ವಿವಿಧ ಪ್ರಯೋಗ ಶಾಲೆಗಳಿಗೇ ಸುಮಾರು ೧೦೦೦೦ ಕಪಿಗಳನ್ನು ಸರಬರಾಜು ಮಾಡಲಾಗುತ್ತಿರುವುದಾಗಿ ತಿಳಿಯಬಂದಿದೆ.

ಈ ಪ್ರಾಣಿಗಳಲ್ಲೆಲ್ಲಾ ವಿಶೇಷ ಬೆಲೆಬಾಳುವಂತಹ ಗೋರಿಲ್ಲಾಗಳು ಅವುಗಳ ಬೆಲೆ ಪ್ರತಿಯೊಂದಕ್ಕೂ ೩೫೦೦ ಡಾಲರುಗಳು.

ಇತರ ಪ್ರಾಣಿಗಳಲ್ಲಿ ಆನೆ, ಹುಲಿ ಮುಂತಾದುವು ಮುಖ್ಯವಾದುವು.

ಪ್ರತಿಯೊಂದು ಕೋತಿಯ ಬೆಲೆಯು ೨೬ ರೂಪಾಯಿಗಳು ಹೆಚ್ಚಿಗೆ ಬೆಲೆಯ ಕೋತಿಗಳನ್ನೆಲ್ಲಾ ಅಮೆರಿಕಾ ಕೊಳ್ಳುತ್ತಲಿದೆ.

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.

ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.

★

ಹೆಚ್ಚಿನ ವಿವರಗಳಿಗೆ ಬರೆಯಿರಿ:—

ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ ಬೆಂಗಳೂರು ೩.

ಆಯೋಜನಾ ಸಮಿತಿಯ ಸಮಾಲೋಚನೆ

ಆಯೋಜನಾ ಸಮಿತಿಯು ನಿನ್ನೆದಿನ ಡಾ|| ಶ್ಯಾಮಪ್ರಸಾದ ಮುಖರ್ಜಿ, ಸರ್ದಾರ್ ಹುಕಾಮ್‌ಸಿಂಗ್, ಡಾ|| ಕುಮಾರಪ್ಪ ಮುಂತಾದವರೊಡನೆ ಪಂಚವಾರ್ಷಿಕ ಯೋಜನೆಯಬಗ್ಗೆ ವಿಚಾರವಿನಿಮಯ ನಡೆಸಿತೆಂದು ಗೊತ್ತಾಗಿದೆ. ಈದಿನ ಕಮ್ಯೂನಿಸ್ಟ್ ಪಕ್ಷದ ನಾಯಕರೊಡನೆ ಮಾತುಕತೆ ನಡೆಸಿತು.

ವಿಶ್ವಸರ್ಕಾರಕ್ಕಾಗಿ ಏಷ್ಯಾ ಸಮ್ಮೇಳನ

ಜಪಾನಿನ ಹಿರೋಷಿಮಾ ನಗರದಲ್ಲಿ ಮುಂದಿನತಿಂಗಳು೩ ನೇ ತಾರೀಖು ನಡೆಯುವ ವಿಶ್ವಸರ್ಕಾರ ಸ್ಥಾಪನಾ ಪ್ರಥಮ ಏಷ್ಯಾ ಕಾಂಗ್ರೆಸ್ ಸಮ್ಮೇಳನಕ್ಕೆ ಭಾರತದಿಂದ ಡಾ|| ಹೆಚ್. ಎ. ಬರ್ಜ್ರಿ ಮತ್ತು ಡಾ|| ಎ. ಅಪ್ಪಾದೊರೆ ರವರನ್ನು ಆಹ್ವಾನಿಸಲಾಗಿದೆ.

ಅಗ್ನಿ ಅನಾಹುತ

ಬೊಂಬಾಯಿನಲ್ಲಿ ಭಾನುವಾರ ಒಂದು ದೊಡ್ಡ ಕೋಠಿಗೆ ಬೆಂಕಿತಗುಲಿ ಅದರಲ್ಲಿದ್ದ ಹತ್ತಿ ಮತ್ತು ರಸಾಯನಿಕ ವಸ್ತುಗಳೆಲ್ಲವೂ ನಾಶವಾದುವು. ೯ ಅಗ್ನಿಶಮನ ಯಂತ್ರಗಳು ಎರಡೂವರೆ ಗಂಟೆಗಳಕಾಲ ಶ್ರಮಿಸಿ ಬೆಂಕಿಯನ್ನು ಹತೋಟಿಗೆ ತಂದುವು. ಸುಮಾರು ೨ ಲಕ್ಷ ರೂಪಾಯಿಗಳು ನಷ್ಟವಾಗಿರುವುದಾಗಿ ಹೇಳಲಾಗಿದೆ

೧೦ ಲಕ್ಷ ಡಾಲರುಗಳ ಅಫೀಮು ಪತ್ತೆ

ಫಿಲಡಲ್‌ಫಿಯಾದಲ್ಲಿ ಬ್ರಿಟಿಷ್ ಎಣ್ಣೆ ಟ್ಯಾಂಕರ್‌ಒಂದು ಬಂದಿಳಿದಾಗ ಅದರಲ್ಲಿ ಕಳ್ಳತನದಲ್ಲಿ ಸಾಗಿಸುತ್ತಿದ್ದ ೧೦ ಲಕ್ಷ ಡಾಲರುಗಳ ಬೆಲೆಬಾಳುವ ಅಫೀಮನ್ನು ಪತ್ತೆಹಚ್ಚಲಾಗಿದೆಯೆಂದು ವರದಿಯಾಗಿದೆ.

ಅಲ್ಪಸಂಖ್ಯಾತ ಸಚಿವರ ಭೇಟಿ

ಭಾರತ ಮತ್ತು ಪಾಕೀಸ್ತಾನ ಸರ್ಕಾರಗಳ ಅಲ್ಪಸಂಖ್ಯಾತ ಸಚಿವರುಗಳು ಇದೇ ೨೪ನೇ ತಾರೀಖು ಢಕ್ಕಾದಲ್ಲಿ ಭೇಟಿಮಾಡಿ ಉಭಯ ಸಚಿವರೂ ಪಶ್ಚಿಮ ಮತ್ತು ಪೂರ್ವಬಂಗಾಳದಲ್ಲಿ ಪ್ರವಾಸಮಾಡುವರೆಂದು ಹೇಳಲಾಗಿದೆ

ಜನವರಿಯಲ್ಲಿ ಜಿಲ್ಲಾ ಬೋರ್ಡುಗಳ ಚುನಾವಣೆ

ಗ್ರಾಮಪಂಚಾಯಿತಿ ಮತ್ತು ಜಿಲ್ಲಾ ಬೋರ್ಡು ಶಾಸನ ತಿದ್ದುಪಡಿ ತಯಾರಾಗುತ್ತಿದೆ. ಅದರಂತೆ ಮುಂದಿನ ಜನವರಿ ತಿಂಗಳಿನಲ್ಲಿ ಜಿಲ್ಲಾ ಬೋರ್ಡುಗಳ ಚುನಾವಣೆ ನಡೆಯುವುದೆಂದುಸಚಿವರುಮೈಸೂರುವಿಧಾನಸಭೆಯಲ್ಲಿ ತಿಳಿಸಿರುತ್ತಾರೆ.

ರಾಜಾಸ್ತಾನ ಮಂತ್ರಿ ಮಂಡಲದ ಅವಿಶ್ವಾಸ ನಿರ್ಣಯಕ್ಕೆ ಸೋಲು

ರಾಜಾಸ್ಥಾನದ ಕಾಂಗ್ರೆಸ್ ಮಂತ್ರಿ ಮಂಡಲದ ಮೇಲೆ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯವು ನಿನ್ನೆದಿನ ಅಲ್ಲಿನ ಶಾಸನ ಸಭೆಯಲ್ಲಿ ಬಿದ್ದುಹೋಯಿತು. ನಿರ್ಣಯ ಪ್ರಾರಂಭವಾಗುವುದಕ್ಕೆ ಮುಂಚೆ ವಿರೋಧಪಕ್ಷದ ಉಪನಾಯಕ ಶ್ರೀ ಇಂದ್ರನಾಥಮೋದಿಯವರು ಮಾತನಾಡಿ ಈ ಬಗ್ಗೆ ಅಧ್ಯಕ್ಷರು ನಿಗದಿ ಮಾಡಿದ್ದ ವೇಳಾಮಿತಿಯನ್ನು ಮಂತ್ರಿಮಂಡಲದವರು ಲಂಬಿಸಿಕೊಂಡು ಹೋಗಿದ್ದಾರೆಂದು ಪ್ರತಿಭಟಿಸಿ ೭೭ ಮಂದಿ ಸಭಾ ಪರಿತ್ಯಾಗ ಮಾಡಿದರು.

ಅಪೇರ ೧೭-೧೦-೫೨ ರಿಂದ ಆಮೋಘಪ್ರಾರಂಭ

ಪ್ರತಿದಿನ ಮೂರು ಆಟಗಳು

* ಮಾಪಿಳ್ಳೈ *

ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 51

೨೩-೧೦-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಮೈಸೂರು ಪುರಸಭೆಗೆ ಜೀವದಾನ

★

ಮೈಸೂರು ಪುರಸಭೆಯ ಅವಧಿಯನ್ನು ೧೯೫೩ ನೇ ಫೆಬ್ರವರಿ ತಿಂಗಳ ಕೊನೆಯವರೆವಿಗೂ ಹೆಚ್ಚಿಸಲಾಗಿದೆಯೆಂದೂ, ನಂತರ ಚುನಾವಣೆ ನಡೆಸಲು ಕ್ಷೇತ್ರನಿರ್ಧಾರ ಮತ್ತು ಮತದಾರರಪಟ್ಟಿ ತಯಾರಿಕೆಗಳನ್ನು ಕೂಡಲೇ ಕೈಗೊಳ್ಳಬೇಕೆಂದು ಕಮೀಷನರಿಗೆ ಸೂಚನೆ ಕೊಡಲಾಗಿದೆಯೆಂದೂ ವಿಧಾನಸಭೆಯಲ್ಲಿ ಸ್ಥಳೀಯ ಸಂಸ್ಥೆಯ ಸಚಿವರು ತಿಳಿಸಿರುತ್ತಾರೆ.

ನೇತಾಜಿ ಬೋಸರು ಬದುಕಿದ್ದಾರಂತೆ

ನೇತಾಜಿಸುಭಾಷ್ ಚಂದ್ರಬೋಸರು ಬದುಕಿದ್ದು ಚೀಣಾ ಅಥವ ರಷ್ಯದಲ್ಲಿ ಇದ್ದಾರೆಂದು ಅಖಿಲಭಾರತ ಫಾರ್ವರ್ಡ್ ಬ್ಲಾಕ್ ಪಕ್ಷದ ಉಪಾಧ್ಯಕ್ಷ ಶ್ರೀ ಶೀಲಭದ್ರ ಯಾಜಿಯವರು ನಾಗಪುರದಲ್ಲಿ ತಿಳಿಸಿರುತ್ತಾರೆ. ಬೋಸರು ಶೀಘ್ರದಲ್ಲಿಯೇ ತಮ್ಮಅಜ್ಞಾತವಾಸದಿಂದ ಹೊರಕ್ಕೆಬರಲಿದ್ದಾರೆಂದೂ, ಫಾರ್ವರ್ಡ್ ಬ್ಲಾಕಿನ ಪ್ರಮುಖರೊಬ್ಬರೊಡನೆ ಬೋಸರು ಇತ್ತೀಚೆಗೆ ಮಾತುಕತೆ ನಡೆಸಿದರೆಂದೂ ಅವರು ಹೇಳುತ್ತಾರೆ.

ಗೃಹ ಕೈಗಾರಿಕಾಭಿವೃದ್ಧಿ ಸಲಹಾಸಮಿತಿ

ಬೆಂಗಳೂರು ೨೨

ಗೃಹ ಕೈಗಾರಿಕಾಭಿವೃದ್ಧಿಯ ಬಗ್ಗೆ ಸಲಹೆ ನೀಡಲು ಮೈಸೂರು ಸರ್ಕಾರದವರು ಸಮಿತಿಯನ್ನು ಪುನರ್ರಚಿಸಿರುವರು. ಕೈಗಾರಿಕಾ ಸಚಿವರು (ಅಧ್ಯಕ್ಷರು) ಕೈಗಾರಿಕಾ ಮತ್ತು ವಾಣಿಜ್ಯ ಡೈರೆಕ್ಟರು, ಸಹಕಾರಸಂಘಗಳ ರಿಜಿಸ್ಟ್ರಾರ್, ಹಣಕಾಸಿನ ಶಾಖೆ ಕಾರ್ಯದರ್ಶಿ, ಅಭಿವೃದ್ಧಿ ಶಾಖಾ ಕಾರ್ಯದರ್ಶಿ, ಶ್ರೀಮತಿಪಾರ್ವತಮ್ಮ ಹುಚ್ಚೇಗೌಡ, ಶ್ರೀಗಳಾದ ಪಿ. ರಾಮಸ್ವಾಮಿ ಆರ್. ಎಸ್. ಆರಾಧ್ಯ, ಎಸ್. ರಾಮರಾವ್, ಪಿ. ಹರಿಹರ್, ಎಸ್. ಎಸ್. ಕಾಕಡೆಯವರು ಸದಸ್ಯರು ವಾಣಿಜ್ಯ ಮತ್ತು ಕೈಗಾರಿಕೆ ಶಾಖಾ ಡೆಪ್ಯುಟಿಡೈರೆಕ್ಟರ್ ಸಮಿತಿಯ ಕಾರ್ಯದರ್ಶಿಗಳು.

ವಿದ್ಯುಚ್ಛಕ್ತಿಗಾಗಿ ಕೇಂದ್ರದಿಂದ ೧ ಕೋಟಿ ರೂ.

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಯೋಜನೆಗಾಗಿ ಕೇಂದ್ರಸರ್ಕಾರದವರು ಈವರ್ಷ ೧ ಕೋಟಿ ರೂ. ಕೊಡುವ ನಿರೀಕ್ಷೆ ಇದೆಯೆಂದೂ, ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಪುನಃ ೫೦ ಲಕ್ಷ ರೂ ಕೇಂದ್ರವು ಸಾಲದ ರೂಪದಲ್ಲಿ ಕೊಡಲಿದೆಯೆಂದು ಮುಖ್ಯಮಂತ್ರಿಗಳು ವಿಧಾನ ಸಭೆಯಲ್ಲಿ ತಿಳಿಸಿರುತ್ತಾರೆ.

ಕ್ಷಾಮಪರಿಹಾರನಿಧಿ

ಮುಖ್ಯಮಂತ್ರಿಗಳ ಕ್ಷಾಮಪರಿಹಾರ ನಿಧಿಗೆ ಇಲ್ಲಿಯವರೆಗೆ ಸಂಸ್ಥಾನದಲ್ಲಿ ೨,೦೬,೦೦೦ ರೂ. ವಸೂಲಾಗಿದೆ-ಎಂದು ತಿಳಿಸಲಾಗಿದೆ.

ಆಹಾರ ಸಂಗ್ರಹಣೆಗೆ ಸಮಿತಿ ನೇಮಿಸಿ

ಮೈಸೂರು ೨೨

ಆಹಾರ ಸಂಗ್ರಹಣೆ ಕಾಲದಲ್ಲಿ ರೈತರಿಗಾಗುತ್ತಿರುವ ತೊಂದರೆ ಮುಂತಾದುವನ್ನು ತಪ್ಪಿಸಲು ಅನುಕೂಲವಾಗುವಂತೆ ಪ್ರತಿ ತಾಲ್ಲೂಕಿನಲ್ಲೂ ಒಂದು ಸಮಿತಿ ನೇಮಿಸಬೇಕೆಂದು ಮೈಸೂರ್ ತಾಲ್ಲೂಕು ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಚಿನ್ನಸ್ವಾಮಿಯವರು ಒಂದು ಹೇಳಿಕೆಯಿತ್ತಿದ್ದಾರೆ.

ಶಾಲಾ ಪ್ರವೇಶೋತ್ಸವ

ಮೈಸೂರು ತಾಲ್ಲೂಕು ಜಯಪುರದ ಹೋಬಳಿ ಬ್ಯಾತಹಳ್ಳಿ ಗ್ರಾಮದಲ್ಲಿ ಜಿಲ್ಲಾಬೋರ್ಡಿನವರು ನೂತನವಾಗಿ ಕಟ್ಟಿಸಿರುವ ಪ್ರಾಥಮಿಕ ಶಾಲಾ ಕಟ್ಟಡದ ಪ್ರವೇಶೋತ್ಸವವನ್ನು ಮೈಸೂರು ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಇದೇ ೨೬ ನೇ ತಾ|| ನಡೆಸುತ್ತಾರೆ.

ಬಹಿರಂಗ ಸಭೆ

ರಾಜಧಾನಿಯ ರೇಷ್ಮೆದಾರರಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಟೌನ್‌ಹಾಲಿನಲ್ಲಿ ಪಾರ್ಲಿಮೆಂಟ್ ಸದಸ್ಯ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರ ಅಧ್ಯಕ್ಷತೆಯಲ್ಲಿ ಬಹಿರಂಗವಾಗಿ ನಡೆಯುವುದು.

ಎ. ಐ. ಸಿ. ಸಿ. ಪ್ರತಿನಿಧಿಗಳ ಚುನಾವಣೆ

ಮೈಸೂರುಜಿಲ್ಲೆಯಿಂದ ಎ ಐ ಸಿ ಸಿ. ಗೆ ೧೧ ಮಂದಿ ಪ್ರತಿನಿಧಿಗಳ ಚುನಾವಣೆಯು ಮುಂದಿನತಿಂಗಳು ೧೭ ನೇ ತಾ|| ನಡೆಯಬೇಕಾದುದು ತಲಕಾಡಿನಲ್ಲಿ ಪಂಚಲಿಂಗದರ್ಶನ ಜಾತ್ರೆ ಪ್ರಯುಕ್ತ, ನವೆಂಬರ್ ೧೫ನೇ ತಾರೀಖು ನಡೆಯುವುದೆಂದು ಚುನಾವಣಾಧಿಕಾರಿಗಳು ತಿಳಿಸಿರುತ್ತಾರೆ.

ಶ್ರೀಮನ್ಮಹಾರಾಜರು ದೆಹಲಿಗೆ

ಬೆಂಗಳೂರು ೨೨.

ಶ್ರೀಮನ್ಮಹಾರಾಜರು ಈ ಸಂಜೆ ತಮ್ಮ ಆಪ್ತ ಕಾರ್ಯದರ್ಶಿ ಶ್ರೀ ಕೆ. ಶೇಷಗಿರಿರಾವ್, ಹುಜೂರು ಕಾರ್ಯದರ್ಶಿ ಶ್ರೀ ಹೆಚ್. ಎ. ಪಾಳೇಗಾರ್ ಮತ್ತು ಇತರ ಪರಿವಾರದೊಡನೆ ಮೋಟಾರಿನಲ್ಲಿ ಬೆಂಗಳೂರಿಗೆ ದಯಮಾಡಿಸಿದರು. ರಾತ್ರಿ ಗುಂತಕಲ್ ಮಾರ್ಗವಾಗಿ ದೆಹಲಿಗೆ ತೆರಳುವರು. ೩೧ ನೇ ತಾರೀಖಿನ ವೇಳೆಗೆ ರಾಜಧಾನಿಗೆ ಹಿಂತಿರುಗುವರೆಂದು ಗೊತ್ತಾಗಿದೆ.

ನಗರದ ಆರೋಗ್ಯ

ರಾಜಧಾನಿಯಲ್ಲಿ ೧೫-೧೦-೫೨ ರ ಅಂತ್ಯದ ವಾರದಲ್ಲಿ ೯ ಡಿಫ್ತೀರಿಯಾಕೇಸುಗಳು ವರದಿಯಾಗಿದ್ದು ಅದು, ಹರಡದಂತೆ ಎಲ್ಲ ಮುಂಜಾಗ್ರತೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಮತ್ತು ೬೫ ಇನಾಕ್ಯುಲೇಷನ್ ಹಾಕಲಾಯಿತು. ಕಾಲರಾರೋಗ, ಸಿಡುಬು, ರೋಗಗಳ ಯಾವ ಕೇಸುಗಳೂ ವರದಿಯಾಗಿಲ್ಲ. ಪ್ಲೇಗ್ ಹರಡದಂತೆ ೧೧೦೦ ಮನೆಗಳಲ್ಲಿ ಸೈನೋಫ್ಯುಮಿನೇಟ್ ಮಾಡಲಾಯಿತು-ಎಂದು ಪೌರಸಭೆಯ ಆರೋಗ್ಯ ಇಲಾಖೆಯು ತಿಳಿಸುತ್ತದೆ.

ಪುರಸಭೆಗಳ ನೀರಿನವ್ಯವಸ್ಥೆಗೆ ೫೦ ಲಕ್ಷ ರೂಪಾಯಿಗಳು

ನೀರು ಸರಬರಾಜನ್ನು ಉತ್ತಮಪಡಿಸಲು ಈವರ್ಷ ಪುರಸಭೆಗಳಿಗೆ ಸರ್ಕಾರದವರು ೫೦ ಲಕ್ಷ ರೂ. ಗಳನ್ನು ಕೊಡಲು ನಿರ್ಧರಿಸಿದ್ದಾರೆ. ಈ ಹಣವನ್ನು ಒಂದು ಬ್ಯಾಂಕಿನಿಂದ ಸಾಲವಾಗಿ ಪಡೆಯಲಾಗುವುದು.

ಭಾರತದಲ್ಲಿ ವಿದೇಶೀ ಬಂಡವಾಳ ಬೇಡ

ಕಮ್ಯೂನಿಸ್ಟ್ ಸದಸ್ಯರ ಸಲಹೆ

ಆಯೋಜನಾ ಸಮಿತಿಯ ಸದಸ್ಯರು ನಿನ್ನೆಯದಿನ ಕಮ್ಯೂನಿಸ್ಟ್ ಪಕ್ಷದ ನಾಯಕರನ್ನು ಭೇಟಿಮಾಡಿ ಪಂಚವಾರ್ಷಿಕ ಯೋಜನೆಬಗ್ಗೆ ವಿಚಾರ ವಿನಿಮಯ ನಡೆಸಿದರು

ಆಯೋಜನಾಮಂಡಲಿಯ ಭೂ ಮಾಲೀಕತ್ವ ನೀತಿಯಬಗ್ಗೆ ಕಮ್ಯೂನಿಸ್ಟ್ ನಾಯಕರು ತಮ್ಮ ಒಪ್ಪಿಗೆ ಸೂಚಿಸಿ, ಪರಿಹಾರವನ್ನು ಕೊಡದೆ ಎಲ್ಲಾ ಭೂಮಿಯನ್ನ ಸರ್ಕಾರದವರು ವಶಪಡಿಸಿಕೊಂಡು ಜಮೀನಿಲ್ಲದ ರೈತರಿಗೆ ಕೊಡಬೇಕೆಂದು ಸೂಚಿಸಿದರು. ಅಲ್ಪಪ್ರಮಾಣದಲ್ಲಿ ಜಮೀನುಹೊಂದಿರುವವರಿಂದ ವಶಪಡಿಸಿಕೊಂಡರೆ ಅವರ ಪುನರ್ವಸತಿಗೆ ಸಹಾಯನೀಡಬೇಕೆಂದು ಅವರು ಸಲಹೆನೀಡಿದರು.

ಬ್ರಿಟಿಷ್ ಬಂಡವಾಳವನ್ನು ಭಾರತದಲ್ಲಿ ಹೆಚ್ಚಿಸಲು ಸರ್ಕಾರವು ತಕ್ಕ ಹತೋಟಿಯನ್ನು ವಿಧಿಸಬೇಕೆಂದೂ ವಿದೇಶೀ ಬಂಡವಾಳವನ್ನು ಭಾರತದಲ್ಲಿ ಹೆಚ್ಚಾಗಿ ಉಪಯೋಗಿಸಲು ಸರ್ಕಾರವು ಒಪ್ಪಿಗೆ ಕೊಡಕೂಡದೆಂದೂ ಈ ಪಕ್ಷದ ನಾಯಕರು ಅಭಿಪ್ರಾಯಪಟ್ಟರೆಂದು ಹೇಳಲಾಗಿದೆ. ಕಮ್ಯೂನಿಸ್ಟ್ ಪಕ್ಷದೊಡನೆ ಮಾತುಕತೆಗಳು ಸೌಹಾರ್ದವಾಗಿದ್ದುವೆಂದು ಸಮಿತಿಯ ಸದಸ್ಯರಾದ ಆರ್ಥಿಕಸಚಿವ ಶ್ರೀ ದೇಶಮುಖ್‌ರವರು ಸಭೆ ಮುಕ್ತಾಯವಾದಮೇಲೆ ತಿಳಿಸಿದರೆಂದು ಗೊತ್ತಾಗಿದೆ.

ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆ

ಮೈಸೂರು ೨೨

ಕ್ರಾಫರ್ಡ್ ಹಾಲ್‌ಪ್ರಕರಣದಲ್ಲಿ ವಿದ್ಯಾರ್ಥಿಗಳಮೇಲೆ ಹಾಕಿರುವ ಮೊಕದ್ದಮೆಯು ಈದಿನ ವಿಚಾರಣೆಗೆ ಬಂದು ಮುಂದಿನವಾರ ಒಂದನೇ ತಾರೀಖಿಗೆ ಮುಂದುವರಿಸಲಾಗಿದೆ.

ಈ ಮಧ್ಯಾಹ್ನ ಕಾಲೇಜಿನಬಳಿ ವಿದ್ಯಾರ್ಥಿಗಳ ಸಭೆ ನಡೆದು ಸರ್ಕಾರನೀತಿಯನ್ನು ಖಂಡಿಸಿತು.

ಸರ್ಕಾರಿ ರಸ್ತೆ ಸಂಚಾರ ವ್ಯವಸ್ಥೆ ಸಮ್ಮೇಳನ

ಭಾರತದ ನಾನಾ ಪ್ರಾಂತ್ಯಗಳ ಸರ್ಕಾರಿಬಸ್ ಸಂಚಾರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ ದೆಹಲಿಯಲ್ಲಿ ಇದೇ ೨೮ ನೇ ತಾ|| ಕೇಂದ್ರ ಡೆಪ್ಯುಟಿ ಟ್ರಾನ್ಸ್‌ಪೋರ್ಟ್ ಸಚಿವ ಶ್ರೀ ಓ. ವಿ. ಅಲಗೇಶನರವರ ಅಧ್ಯಕ್ಷತೆಯಲ್ಲಿ ಸಮ್ಮೇಳನ ಏರ್ಪಡಿಸಲಾಗಿದೆ.

ಮಿತಸಂತಾನಕ್ಕೆ ಬಲಾತ್ಕಾರ ಮಾಡಲು ಸಾಧ್ಯವಿಲ್ಲ

ಶಾಸನ ಸಭೆಯಲ್ಲಿ ಸರ್ಕಾರದ ಉತ್ತರ

ಬೆಂಗಳೂರು ೨೩

ಸಂಸ್ಥಾನದಲ್ಲಿ ಮಿತಸಂತಾನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಎಲ್ಲ ಆಸ್ಪತ್ರೆಗಳಲ್ಲಿಯೂ ಚಿಕಿತ್ಸಾ ಶಾಖೆಯನ್ನು ಸರ್ಕಾರದವರು ಏರ್ಪಡಿಸಬೇಕೆಂಬ ನಿರ್ಣಯವು ನಿನ್ನೆ ದಿನ ಹಿರಿಯ ಶಾಸನ ಸಭೆಯಲ್ಲಿ ದೀರ್ಘ ಚರ್ಚೆಯಾಗಿ, ಸರ್ಕಾರದ ಭರವಸೆ ನಂತರ ಅದನ್ನು ವಾಪಸು ತೆಗೆದು ಕೊಳ್ಳಲಾಯಿತು.

ಮೈಸೂರು ಸರ್ಕಾರದವರು ೧೯೩೦ ರಲ್ಲಿಯೇ ಮಿತ ಸಂತಾನದ ಚಿಕಿತ್ಸೆ ಶಾಖೆಗಳನ್ನು ಪ್ರಾರಂಭಮಾಡಿದರು. ಆಗ ಸಲಕರಣೆಗಳನ್ನು ಮುಫತ್ತಾಗಿ ಒದಗಿಸಲಾಗುತ್ತಿತ್ತು. ಆದರೆ ಸಲಕರಣೆಗಳ ಬೆಲೆಯು ವಿಪರೀತ ಏರಿದುದರಿಂದ ಆ ಕಾರ್ಯಗಳನ್ನು ನಿಲ್ಲಿಸಲಾಯಿತು. ಈಗ ರಾಮನಗರದಲ್ಲಿ ಒಂದು ಕೇಂದ್ರವನ್ನು ತೆರೆಯಲಾಗಿದೆ. ಈ ಯೋಜನೆಯನ್ನು ಬಲಾತ್ಕಾರವಾಗಿ ಯಾರಮೇಲೂ ಹೊರಿಸಲು ಸಾಧ್ಯವಿಲ್ಲ.

ಇಂತಹ ಪ್ರಯೋಜನಗಳನ್ನು ಜನರೇ ಮುಂದೆ ಬಂದು ಪಡೆಯಬೇಕು. ಯಾರು ಆದರ ಸಹಾಯಪಡೆಯಲು ಮುಂದುಬರುವರೊ ಅವರಿಗೆ ಸಹಾಯಮಾಡುವುದು ಸರ್ಕಾರದ ಕರ್ತವ್ಯವೆಂದು ತಿಳಿಯಲಾಗಿದೆ ಈಗ ಪ್ರಯೋಗ ರೂಪದಲ್ಲಿ ಕೈಗೊಳ್ಳಲಾಗಿರುವ ಈ ಕಾರ್ಯವನ್ನು ಸರ್ಕಾರದವರು ಮುಂದಕ್ಕೂ ಮುಂದುವರಿಸಿಕೊಂಡುಬರುವರು-ಎಂದು ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಉತ್ತರವಿತ್ತರು.

ಲಂಚ ಪಡೆದಿದ್ದಕ್ಕೆ ಮಾಜಿ ಸಚಿವರಿಗೆ ಶಿಕ್ಷೆ

ಜಪಾನಿನ ಮಾಜಿ ಹಣಕಾಸಿನ ಸಚಿವ ಶ್ರೀ ಟಕೆಯೊ ಕೊಕುಸುರವರಿಗೆ ಲಂಚ ಪಡೆದರೆಂಬ ಅಪಾದನೆಮೇಲೆ ಒಂದೂವರೆ ವರ್ಷ ಕಠಿಣಶಿಕ್ಷೆ ಮತ್ತು ೩೫೦೦ ಯೆನ್ [ಜಪಾನ್ ನಾಣ್ಯ] ದಂಡವಿಧಿಸಲಾಗಿದೆ.

ಸರ್ಕಾರದಿಂದ ಲಂಚಪಡೆಯುವ ಉದ್ದೇಶ್ಯದಿಂದ ಸುಮಾರು ೫೦ ಆರ್ಥಿಕ ಧುರೀಣರು ಸುಮಾರು ೨ ಕೋಟಿ ೭೦ ಲಕ್ಷ ಯೆನ್ ಹಣವನ್ನು ಲಂಚರೂಪದಲ್ಲಿ ಪಡೆದರೆಂದು ಅಪಾದಿಸಲಾಗಿದೆ.

ಮಾಜಿ ಪ್ರಧಾನಿ ಯಶೋಷಿ ಆಶೀದಾರವರ ಮೇಲೆ ಪ್ರತ್ಯೇಕ ತೀರ್ಪು ಕೊಡಲಾಗುತ್ತದೆ.

ಅಧಿಕ ಪ್ರಮಾಣದಲ್ಲಿ ಕೃತಕ ಅಕ್ಕಿತಯಾರಿಕೆ

ಮೈಸೂರು ಆಹಾರ ಸಂಶೋಧನಾ ಕೇಂದ್ರದಲ್ಲಿ ಕಂಡುಹಿಡಿದಿರುವ ಕೃತಕ ಅಕ್ಕಿಯನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಲು ತಕ್ಕ ವ್ಯವಸ್ಥೆ ಮಾಡಲು ಭಾರತ ಸರ್ಕಾರವು ನೈಸರ್ಗಿಕ ಮತ್ತು ವಿಜ್ಞಾನಶಾಖಾ ಉಪಮಂತ್ರಿ ಶ್ರೀ ಕೆ.ಟಿ. ಮಾಳವೀಯಾರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ.

ಡಾ|| ಮೋದಿಯವರ ಚಿಕಿತ್ಸೆಗೆ ಸರ್ಕಾರದ ಸಹಾಯ

ಬೆಂಗಳೂರು ೨೩

ಬಡತನದ ದೆಸೆಯಿಂದ ತಮ್ಮ ರೋಗ ನಿವಾರಣೆಗಾಗಿ ಸರ್ಕಾರಿ ವೈದ್ಯಶಾಲೆಗಳಿಗೆ ಬರಲಾರದಂತಹ ಜನರೂ ನಮ್ಮಲ್ಲಿ ಅನೇಕರಿದ್ದಾರೆ. ಅಂತಹ ರೋಗಿಗಳ ಬಳಿಗೆ ವೈದ್ಯನೇ ಹೋಗಬೇಕೆಂದು ಡಾ|| ಮೋದಿಯವರು ತಿಳಿಸಿದ್ದಾರೆ.

ಡಾ|| ಮೋದಿಯವರು ಸಂಸ್ಥಾನದ ನಾನಾಭಾಗಗಳಲ್ಲಿ ಸುತ್ತಿ ಬಡ ನೇತ್ರ ರೋಗಿಗಳ ಚಿಕಿತ್ಸೆಮಾಡಲು ಸಿದ್ಧರಿದ್ದಾರೆ ಬೆಂಗಳೂರಿನಲ್ಲಿ ಅವರು ನೇತ್ರ ಚಿಕಿತ್ಸೆಯನ್ನು ನಡೆಸಿದಾಗ ಸರ್ಕಾರ ಅವರಿಗೆ ಸಹಕಾರವಿತ್ತಂತೆ ಮುಂದೆ ಅವರು ಸಂಸ್ಥಾನದಲ್ಲಿ ನಡೆಸುವ ನೇತ್ರಚಿಕಿತ್ಸಾ ಶಿಬಿರಗಳಲ್ಲಿ ಅವರಿಗೆ ನೆರವೀಯಬೇಕೆಂದು ಕೋರಿ ಸರ್ಕಾರದ ಗೃಹ ಶಾಖಾ ಕಾರ್ಯದರ್ಶಿಗಳು ಸಂಸ್ಥಾನದ ಸೀನಿಯರ್ ಸರ್ಜನ್, ಸಾರ್ವಜನಿಕ ಆರೋಗ್ಯ ಶಾಖಾ ಡೈರೆಕ್ಟರಿಗೆ ಸೂಚನೆಯನ್ನಿತ್ತು ಪತ್ರದ ಪ್ರತಿಗಳನ್ನು ಜಿಲ್ಲಾಧಿಕಾರಿಗಳಿಗೆ ಕಳುಹಿಸಿರುತ್ತಾರೆ.

ಮೈಸೂರು ಪೇಟೆಧಾರಣೆ

ತಾ|| ೨೨-೧೦-೫೨

ಪಲ್ಲ	ರೂ–ಅ	ರೂ–ಅ
ಕಡಲೇಕಾಯಿ	೧೦-೨	೨೦-೧೦
ಎಳ್ಳು	೬೯-೧೦	೭೨-೦
ಹರಳು	೪೩-೧೨	೪೪-೦
ಹುರುಳಿ	೫೬-೧೨	
ಮೆಣಸಿನಕಾಯಿ	೯-೨	೧೪-೮
ಬೆಲ್ಲ	೩-೪	೩-೮

ತೆಂಗಿನಕಾಯಿ ೧,೧೦೦ ಕ್ಕೆ ೨೧೮

ರಾಜಕಮಲ್
ಎಂಡನೇವಾರ
ಮರದಲುಪೆಳ್ಳಿ
(ತೆಲುಗು)
ಪಾತ್ರ: ಸೂರ್ಯಕುಮಾರಿ, ಲಕ್ಷ್ಮೀಕಾಂತಂ

ಪ್ರಭಾ ೨೪-೧೦-೫೨ ರಿಂದ ಪ್ರತಿದಿನ ೩ ಪ್ರದರ್ಶನಗಳು
"ಬರ್ಸಾತ್" ಚಿತ್ರದ ಜೋಡಿ
ರಾಜ್‌ಕಪೂರ್ ನಿಮ್ಮಿ ಪಾತ್ರವಹಿಸಿರುವ
ಬವರಾ
ಪೋಷಕವರ್ಗ: ಕೆ. ಎನ್. ಸಿಂಗ್ ಲಲಿತಾಪವರ್, ಹೀರಾಲಾಲ್, ಸುಂದರ್.
ಬೆಳಗಿನಪ್ರದರ್ಶನ:- ೨೪-೧೦-೫೨ ರಿಂದ ೩ ದಿನಗಳು ಮಾತ್ರ
ಪರ್ಮಾಫಿಲಂಸ್‌ರವರ ಪತಂಗ

ರಣಜಿತ್
24-10 52 ರಿಂದ
ಅಮೋಘ ಪ್ರಾರಂಭ
ಹೈದ್ರಾಬಾದ್-ಕಿ-ನಾಜನೀನ್ [ಹಿಂದಿ]
ನಿಗಾರ್, ವಾಸ್ತಿ, ಮನಹರ್‌ದೇಸಾಯಿ ಮತ್ತು ದುರ್ಗಾಕೋಟೆ

ವುಡ್‌ಲ್ಯಾಂಡ್ಸ್
24-10-52 ರಿಂದ ಅಮೋಘ ಪ್ರಾರಂಭ
ಪ್ರತಿದಿನ ೩ ಪ್ರದರ್ಶನಗಳು
ರಂಗೀಲಿ (ಹಿಂದಿ)
ಪಾತ್ರ: ರೆಹೆನಾ, ಯಾಕೂಬ್, ರಾಜಕುಮಾರ್.

ಆಹಾರ ನಿಯಂತ್ರಣ ತೆಗೆಯಲು ಪರಿಸ್ಥಿತಿ ಸರಿಯಾಗಿದೆ

ಕೇಂದ್ರ ಆಹಾರ ಸಚಿವರ ವಿವರಣೆ

ವಿಷಯ ಪರಿಶೀಲಿಸಲು ಆಹಾರಸಚಿವರ ಸಭೆ

ದೇಶಾದ್ಯಂತ ಆಹಾರ ನಿಯಂತ್ರಣವನ್ನು ತೆಗೆದುಹಾಕಲು ಪರಿಸ್ಥಿತಿಯು ಚೆನ್ನಾಗಿದೆ. ಉತ್ತರಪ್ರದೇಶ, ಮಧ್ಯಭಾರತ ಮುಂತಾದ ಉತ್ತರಭಾರತ ಪ್ರಾಂತ್ಯಗಳಲ್ಲಿ ಆಹಾರ ಧಾನ್ಯಗಳ ಬೆಳೆಯು ಉತ್ತಮವಾಗಿದೆ. ಈಪ್ರಾಂತ್ರಗಳಿಂದ ಕೇಂದ್ರಕ್ಕೆ ಅಕ್ಕಿಯ ಸರಬರಾಜನ್ನು ಪಡೆಯಬಹುದಾಗಿದೆ. ನಿಯಂತ್ರಣ ತೆಗೆಯುವ ಬಗ್ಗೆ ನಿರ್ದಿಷ್ಟ ನೀತಿಯನ್ನು ಅನುಸರಿಸಲು ಇನ್ನು ೫-೬ ದಿನಗಳಲ್ಲಿಯೇ ಎಲ್ಲಾ ಆಹಾರಸಚಿವರ ಸಮ್ಮೇಳನವನ್ನು ಕರೆದು ಚರ್ಚಿಸಲಾಗುತ್ತದೆ-ಎಂದು ಕೇಂದ್ರ ಆಹಾರಸಚಿವ ಶ್ರೀ ಕಿದ್ವಾಯಿಯವರು ಬೊಂಬಾಯಿನಲ್ಲಿ ಹೇಳಿರುವರು

ಆಹಾರ ಆಮದಿನ ವಿಷಯವಾಗಿ ಪ್ರಸ್ತಾಪಿಸಿ ಸಾಮಾನ್ಯವಾಗಿ ೧೯ ಲಕ್ಷ ಟನ್ ಗೋಧಿ ಮತ್ತು ೫ ಲಕ್ಷಟನ್ ಅಕ್ಕಿಯನ್ನು ವಿದೇಶಗಳಿಂದ ತರಿಸಿಕೊಳ್ಳಲಾಗುತ್ತದೆ. ಇದಲ್ಲದೆ ಈ ಸಾಲಿನಲ್ಲಿ ೪೦ ಲಕ್ಷ ಟನ್ ಆಹಾರವನ್ನು ಅಧಿಕವಾಗಿ ವಿದೇಶಗಳಿಂದ ತರಿಸಿಕೊಳ್ಳಲಾಯಿತು. ಮುಂದಿನಸಾಲಿನಲ್ಲಿ ಕೇವಲ ೨೮ ಲಕ್ಷ ಟನ್‌ಗಳನ್ನು ತರಿಸಿಕೊಳ್ಳಲಾಗುತ್ತದೆ. ಕ್ರಮೇಣ ಆಮದನ್ನು ಕಡಮೆಮಾಡಲಾಗುತ್ತದೆ. ಮೈಲೊ ಮತ್ತು ಇತರ ಧಾನ್ಯಗಳಿಗೆ ಅಷ್ಟು ಅಪೇಕ್ಷೆಯಿಲ್ಲದಿರುವುದರಿಂದ ಮುಂದಿನಸಾಲಿನಲ್ಲಿ ಮೈಲೋ ಮತ್ತು ಇತರ ಧಾನ್ಯಗಳನ್ನು ತರಿಸಿಕೊಳ್ಳುವುದಿಲ್ಲವೆಂದು ಹೇಳಿದರು.

ಬೊಂಬಾಯಿಪ್ರಾಂತ್ಯದಲ್ಲಿ ಆಹಾರ ಹತೋಟಿ ರದ್ದಿನ ಬಗ್ಗೆ ಮಾತನಾಡುತ್ತಾ ಅಲ್ಲಿಯ ಸರ್ಕಾರವು ಶಿಪಾರಸುಮಾಡಿರುವಂತೆ ಆಹಾರ ಹತೋಟಿಯನ್ನು ೪ ಕೈಗಾರಿಕಾ ನಗರಗಳಲ್ಲಿ ವಿನಹ ಮಿಕ್ಕೆಡೆ ರದ್ದುಗೊಳಿಸಲಾಗುತ್ತದೆ. ಇತರ ಪ್ರಾಂತ್ಯಗಳಲ್ಲಿ ಒತ್ತಾಯದಿಂದ ನಿಯಂತ್ರಣ ರದ್ದುಗೊಳಿಸಲಾಗುವುದಿಲ್ಲ. ಪರಿಸ್ಥಿತಿಗನುಗುಣವಾಗಿ ಆಯಾ ಸರ್ಕಾರಗಳು ನಿಯಂತ್ರಣ ತೆಗೆಯುವ ನೀತಿಯನ್ನು ಅನುಸರಿಸುತ್ತವೆ-ಎಂದು ಸಚಿವರು ಹೇಳಿರುವರು.

—: ಪ್ರಕಾಶಕರು ಮತ್ತು ಮುದ್ರಕರು: —
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 52

೨೪-೧೦-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಜನರಲ್ ಕಾರಿಯಪ್ಪ ನವರಿಗೆ ಪಂಜಾಬ್ ಗೌರ್ನರ್ ಹುದ್ದೆ?

ಭಾರತ ಸರ್ವಸೇನಾನಿ ಜ|| ಕಾರಿಯಪ್ಪನವರು ಮುಂದಿನ ಜನವರಿಯಲ್ಲಿ ನಿವೃತ್ತರಾದಮೇಲೆ ಪಂಜಾಬಿನ ಗೌರ್ನರ್ ಆಗುವರೆಂದು ಹೇಳಲಾಗಿದೆ. ಪಂಜಾಬಿನ ಮುಖ್ಯಮಂತ್ರಿಗಳು ಈ ಬಗ್ಗೆ ನೆಹರೂರವರನ್ನು ಪ್ರಾರ್ಥಿಸುವುದಾಗಿ ತಿಳಿಯಬರುತ್ತದೆ.

ವಿದ್ಯಾರ್ಥಿಗಳ ಪ್ರತಿಭಟನಾ ಮುಷ್ಕರ

ಮೈಸೂರು ೨೪

ರಾಜಧಾನಿಯ ಕ್ರಾಫರ್ಡ್‌ಹಾಲಿನಲ್ಲಿ ನಡೆದ ಪ್ರಕರಣದಲ್ಲಿ ೧೩ ಮಂದಿ ವಿದ್ಯಾರ್ಥಿಗಳಮೇಲೆ ಸರ್ಕಾರದವರು ಹೂಡಿರುವ ಮೊಕದ್ದಮೆಯನ್ನು ಪ್ರತಿಭಟಿಸಲು, ನಿನ್ನೆ ಮಹಾರಾಜಾಕಾಲೇಜಿನ ೩೦೦ ಮಂದಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರು. ಕಾಲೇಜಿನ ಮುಂಭಾಗದಲ್ಲಿ ಬಹಿರಂಗ ಸಭೆ ನಡೆಸಿ, ಅಲ್ಲಿಂದ ವಿದ್ಯಾರ್ಥಿಗಳು ಕೋರ್ಟಿನ ಮುಂದೆ ಪ್ರದರ್ಶನ ನಡೆಸಿದರು.

ಪ್ರಜಾ–ಸೋಷಲಿಸ್ಟ್ ಸಭೆ

ಮೈಸೂರು ಜಿಲ್ಲಾ ಮತ್ತು ನಗರಗಳ ಪ್ರಜಾ. ಸೋಷಲಿಸ್ಟ್‌ಪಕ್ಷದ ಸಭೆಯು ನಾಳೆ ಸಂಜೆ ೪-೩೦ ಗಂಟೆಗೆ ನಗರದ ಈವಿನಿಂಗ್‌ಬಜಾರ್ ಮಹಡಿಯ ಮೇಲೆ ನಡೆಯುವುದೆಂದೂ ಪಕ್ಷದ ಸದಸ್ಯರೆಲ್ಲರೂ ದಯಮಾಡಿಸಬೇಕೆಂದೂ ಪಕ್ಷದ ಸಂಚಾಲಕರು ಪ್ರಾರ್ಥಿಸಿರುತ್ತಾರೆ

ಮೈಸೂರು ಹಳ್ಳಿಯಮೇಲೆ ಮದ್ರಾಸ್ ಪೋಲೀಸರು ಧಾಳಿ

ಕೋಲಾರಜಿಲ್ಲೆ ಮುಳಬಾಗಿಲು ತಾಲ್ಲೂಕಿನ ತಿಪ್ಪದೊಡ್ಡಿ ಗ್ರಾಮದಮೇಲೆ ಕಳೆದವಾರ ಮದರಾಸ್ ಸಂಸ್ಥಾನದ ಚಿತ್ತೂರುಜಿಲ್ಲಾ ಫಲಮನೇರು ತಾಲ್ಲೂಕಿನ ತಹಸಿಲ್‌ದಾರ್ ಪೋಲೀಸ್ ದಳದೊಡನೆ ಅತಿಕ್ರಮ ಪ್ರವೇಶಮಾಡಿ ಒಂದು ಮನೆಯ ಬೀಗ ಒಡೆದು ಒಳಗಿದ್ದ ಆಹಾರಧಾನ್ಯಗಳನ್ನು ಲಾರಿಯಲ್ಲಿ ಹಾಕಿಕೊಂಡು ಹೋದರೆಂದೂ, ಅಲ್ಲಿದ್ದ ೬ ಜನ ಹಳ್ಳಿಯವರನ್ನು ಪೋಲೀಸರು ಹೊಡೆದರೆಂದ ವರದಿಯಾಗಿದೆ. ಈಬಗ್ಗೆ ಕೋಲಾರ ಜಿಲ್ಲಾಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ.

ದಕ್ಷಿಣಆಫ್ರಿಕಾ ಸತ್ಯಾಗ್ರಹಿಗಳಿಗೆ ಸಹಾಯ

ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ವರ್ಣೀಯ ಪ್ರತಿಭಟನಾ ಸತ್ಯಾಗ್ರಹಿಗಳ ಕುಟುಂಬದವರಿಗೆ ಸಹಾಯ ಮಾಡಲು ಸಾರ್ವಜನಿಕರು ಉದಾರವಾಗಿ ಹಣ ಸಹಾಯ ಮಾಡಬೇಕೆಂದು ಭಾರತದ ಪ್ರಮುಖ ೩೬ ಮಂದಿ ನಾಯಕರು ಒಂದು ಮನವಿಯನ್ನು ಹೊರಡಿಸಿರುತ್ತಾರೆ.

ಕೆರೆ ದುರಸ್ತಿಗಾಗಿ ೨೦ ಲಕ್ಷ ರೂ. ಸಾಲ

ಹೈದರಾಬಾದಿನ ಮೆಹಬೂಬ್‌ನಗರ ಜಿಲ್ಲೆಯಲ್ಲಿ ೫೧೦ ಕೆರೆಗಳನ್ನು ದುರಸ್ತು ಮಾಡಲು ಕೇಂದ್ರ ಸರ್ಕಾರವು ೨೦ ಲಕ್ಷ ರೂ ಸಾಲವನ್ನು ಕೊಟ್ಟಿದೆ. ಇದರಿಂದ ೩೮ ಸಾವಿರ ಎಕರೆ ಜಮೀನು ಸಾಗುವಳಿಗೆ ಬರಲಿದೆ.

ಚೀನಾ ಮೇಲೆ ಕೈಷೇಕರ ದಂಡೆಯಾತ್ರೆಯೇ?

ಈಗಿನ ಕಮ್ಯೂನಿಸ್ಟ್ ಚೀನಾ ಮೇಲೆ ತಮ್ಮ ರಾಷ್ಟ್ರೀಯ ಸರ್ಕಾರವು ದಂಡೆಯಾತ್ರೆ ನಡೆಸಲು ಸಂಕಲ್ಪ ಮಾಡಿದೆಯೆಂದೂ, ಅದಕ್ಕೆ ಅಮೆರಿಕಾವು ಅನುಮತಿ ಕೊಡಬೇಕೆಂದು ಅದರ ನಾಯಕ ಚಿಯಾಂಗ್ ಕೈಷೇಕ್‌ರವರು ತಿಳಿಸಿರುತ್ತಾರೆ.

ಇಂಗ್ಲೆಂಡಿಗೆ ಭಾರತ ವಿದ್ಯಾರ್ಥಿಗಳು

ಭಾರತ ಮತ್ತು ಇಂಗ್ಲೆಂಡಿನ ವಿಶ್ವವಿದ್ಯಾನಿಲಯದ ನಡುವೆ ಚರ್ಚಾಕೂಟವನ್ನು ನಡೆಸಲು ಭಾರತದಿಂದ ಅಲೀಘರ್ ವಿಶ್ವವಿದ್ಯಾನಿಲಯದ ಶ್ರೀ ಸುಲ್ತಾನ್‌ನಾಯಿಜಿ, ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಸಂತೋಷ್ ಕೆ. ಮುಖರ್ಜಿ ಮತ್ತು ಕಲ್ಕತ್ತಾ ವಿಶ್ವವಿದ್ಯಾನಿಲಯದ ಶ್ರೀ ವಿ. ನಾರಾಯಣಸ್ವಾಮಿ ಎಂಬ ಮೂವರು ವಿದ್ಯಾರ್ಥಿಗಳು ಲಂಡನ್ನಿಗೆ ಹೋಗಿರುವರು. ಅಲ್ಲಿ ೩ ತಿಂಗಳಕಾಲ ಪ್ರವಾಸಮಾಡಿ ಸುಮಾರು ೩೦ ವಿಶ್ವವಿದ್ಯಾನಿಲಯ ಕಾಲೇಜುಗಳಲ್ಲಿ ಅತಿಥಿಗಳಾಗಿರುತ್ತಾರೆ.

ನಾಲ್ಕು ಭಾಷೆ ಮಾತನಾಡುವ ಮಗು

ದೆಹಲಿಯ ಶ್ರೀ ಪಿ. ಎಲ್. ಪ್ರೋಕ್ ಎಂಬ ಪತ್ರಿಕೋದ್ಯೋಗಿಗಳ ಮೂರು ವರ್ಷದ ಮಗುವೊಂದು ಇಂಗ್ಲೀಷ್, ಸಂಸ್ಕೃತ, ಹಿಂದಿ ಮತ್ತು ಮರಾಠಿಭಾಷೆಗಳಲ್ಲಿ ಚೆನ್ನಾಗಿ ಮಾತನಾಡುವುದು. ಮೊನ್ನೆ ಆ ಮಗುವನ್ನು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಕರೆಸಿಕೊಂಡು, ಸಂಭಾಷಣೆ ನಡೆಸಿ ನಂತರ ಸಿಹಿ ತಿಂಡಿಯನ್ನು ಕೊಟ್ಟುಕಳುಹಿಸಿದರೆಂದು ವರದಿಯಾಗಿದೆ.

ಗೊಬ್ಬರಕ್ಕೆ ಹಿಂಡಿ ಉಪಯೋಗಿಸಬಾರದು

ಕಡಲೇಕಾಯಿ ಹಿಂಡಿಯನ್ನು ದನಕರುಗಳಿಗೆ ಆಹಾರವಾಗಿ ಉಪಯೋಗಿಸಬೇಕೇವಿನಹ ಗೊಬ್ಬರಕ್ಕೆ ಉಪಯೋಗಿಸಬಾರದು. ಅತ್ಯಧಿಕ ಆಹಾರ ಬೆಳೆಯ ಉತ್ಸಾಹದಲ್ಲಿ ಜಾನುವಾರುಗಳ ಆಹಾರಕ್ಕೆ ಚ್ಯುತಿ ತರಬಾರದು-ಎಂದು ಕೇಂದ್ರ ಸಚಿವ ಶ್ರೀ ದೇಶಮುಖ್‌ರವರು ಹೇಳಿರುವರು.

ಡಾ|| ಉದಯರಾವ್ ಭಾರಧ್ವಾಜ

ಆಗ್ರಾ ವೈದ್ಯಕೀಯ ಕಾಲೇಜಿನ ಆರೋಗ್ಯಶಾಸ್ತ್ರ ಬೋಧಕರಾದ ಡಾ|| ಉದಯರಾವ್ ಭಾರಧ್ವಾಜರವರು ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ೩ ವರ್ಷಕಾಲ ಉನ್ನತ ಶಿಕ್ಷಣವನ್ನು ಪಡೆಯಲು ಹೋಗಿರುವರು.

ಹೆಚ್ಚುಬೆಲೆಗೆ ಮಾರಿದ್ದಕ್ಕೆ ೩ ತಿಂಗಳ ಶಿಕ್ಷೆ

ಹೆಚ್ಚುಬೆಲೆಗೆ ಸೀಮೆ ಎಣ್ಣೆ ಮಾರಿದರೆಂಬ ಅಪಾದನೆಯಮೇಲೆ ಬೆಂಗಳೂರಿನ ವರ್ತಕರಾದ ಸಂಪಂಗಿರಾಮಯ್ಯ ಎಂಬುವರಿಗೆ ಹೈಕೋರ್ಟಿನವರು ೩ ತಿಂಗಳ ಕಠಿಣಶಿಕ್ಷೆ ಮತ್ತು ೧ ಸಾವಿರ ರೂ. ದಂಡವನ್ನು ವಿಧಿಸಿರುತ್ತಾರೆ.

ಹೈದರಾಬಾದಿನಲ್ಲಿ ಕಡ್ಡಾಯ ಸಂಸ್ಕೃತ ಶಿಕ್ಷಣ

ಹೈದರಾಬಾದ್ ಸಂಸ್ಥಾನದ ಎಲ್ಲಾ ವಿದ್ಯಾ ಸಂಸ್ಥೆಗಳಲ್ಲೂ ಕಡ್ಡಾಯವಾಗಿ ಸಂಸ್ಕೃತ ಶಿಕ್ಷಣವನ್ನು ಮುಂದಿನ ವರ್ಷದಿಂದ ಜಾರಿಗೆ ತರಲು ಸರ್ಕಾರವು ಯೋಚಿಸುತ್ತಿದೆಯೆಂದು ಅಲ್ಲಿನ ವಿದ್ಯಾಸಚಿವರು ತಿಳಿಸಿರುತ್ತಾರೆ.

ಮುನ್ನೆಚ್ಚರಿಕೆ ಬಂಧನ ಶಾಸನ ಸಲಹಾಸಮಿತಿ

ಮುನ್ನೆಚ್ಚರಿಕೆ ಬಂಧನ ಶಾಸನದ ಸಲಹಾಸಮಿತಿಯ ಅಧ್ಯಕ್ಷರನ್ನಾಗಿ ನಿವೃತ್ತ ಹೈಕೋರ್ಟ್ ನ್ಯಾಯಾಧೀಶ ಶ್ರೀ ನಾಗೇಶ್ವರಅಯ್ಯರ್‌ರವರನ್ನು ಸರ್ಕಾರದವರು ನೇಮಿಸಿದ್ದಾರೆ

ಎಂ. ಪಿ. ಸಿ. ಸಿ. ಕಾರ್ಯಕಾರಿ ಸಮಿತಿ ಸಭೆ

ಎಂ.ಪಿ.ಸಿ.ಸಿ. ಕಾರ್ಯಕಾರಿ ಸಮಿತಿ ಸಭೆಯು ೨೬ ನೇ ತಾರೀಖಿಗೆ ಬದಲಾಗಿ ೩೦ ನೇ ತಾರೀಖು ಬೆಂಗಳೂರಿನಲ್ಲಿ ನಡೆಯುತ್ತದೆ. ಪಾರ್ಲಿಮೆಂಟರಿ ಉಪಸಮಿತಿಯ ಸಭೆಯು ೨೯ ನೇ ತಾರೀಖು ಸಂಜೆ ನಡೆಯುತ್ತದೆ.

ಬೊಂಬಾಯಿಗೆ ಆಹಾರ ಸಚಿವರು

ಕೇಂದ್ರ ಆಹಾರ ಸಚಿವರೊಡನೆ ಸಂಸ್ಥಾನದ ಆಹಾರದ ವಿಷಯವನ್ನು ಚರ್ಚಿಸಲು ಸಚಿವ ಶ್ರೀ ಹೆಚ್ ಸಿದ್ದವೀರಪ್ಪನವರು ಇದೇ ೨೬ನೇ ತಾ|| ಬೊಂಬಾಯಿಗೆ ಪ್ರಯಾಣ ಮಾಡುವರು.

ವಿಧಾನಸಭೆ ನಿಯಮಾವಳಿ ಸಮಿತಿ

ವಿಧಾನಸಭೆಯ ನಿಯಮಾವಳಿ ಸಮಿತಿಗೆ ಶ್ರೀಗಳಾದ ಕೆ ಹನುಮಂತಯ್ಯ, ಟಿ ಮರಿಯಪ್ಪ, ಹೆಚ್. ಎಸ್. ರುದ್ರಪ್ಪ ಎಂ. ವಿ. ರಾಮರಾವ್, ಎಗ್. ಹುಚ್ಚಮಾಸ್ತಿಗೌಡ, ಎಲ್ ಸಿದ್ದಪ್ಪನವರು ಚುನಾಯಿತರಾಗಿದ್ದಾರೆ. ವಿಧಾನಸಭೆಯ ಉಪಾಧ್ಯಕ್ಷರು ಈ ಸಮಿತಿಯ ಸದಸ್ಯರು ಅಧ್ಯಕ್ಷರು ಈ ಸಮಿತಿಗೂ ಅಧ್ಯಕ್ಷರಾಗಿರುತ್ತಾರೆ.

ಪ್ರೊಬೆಷನರಿ ಅಸಿಸ್ಟೆಂಟ್ ಇಂಜನಿಯರು

ಪ್ರೊಬೆಷನರಿ ಅಸಿಸ್ಟೆಂಟ್ ಇಂಜನಿಯರುಗಳನ್ನು ನೇಮಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಗೊತ್ತಾಗಿದೆ.

ಸಂಸ್ಥಾನದಲ್ಲಿ ಆಹಾರದ ಹ ತೋ ೯ ಟಿ ರ ದ್ದು?

ಸರ್ಕಾರದ ಪರಿಶೀಲನೆಯಲ್ಲಿದೆಯೆಂದು

ಸ ಚಿ ವ ರ ಹೇ ೪ ಕೆ

ಬೆಂಗಳೂರು ೨೪

ಮೈಸೂರು ಸಂಸ್ಥಾನದಲ್ಲಿ ಆಹಾರ ಹತೋಟಿಯನ್ನು ಮುಂದುವರಿಸಿಕೊಂಡು ಬರಲು ಸರ್ಕಾರಕ್ಕೆ ಮನಸ್ಸಿಲ್ಲ. ಆ ದರೆ ಮುಂದಿನವರ್ಷ ಆಹಾರ ಪರಿಸ್ಥಿತಿಯು ಕಷ್ಟವಾಗಬಹುದು ಆದ್ದರಿಂದ ಧಾನ್ಯ ಸಂಗ್ರಹ ಮಾಡಿಕೊಂಡು ಫೇರ್‌ಪ್ರೈಸ್ ಡಿಪೋಗಳ ಮೂಲಕ ಧಾನ್ಯಗಳನ್ನು ಮಾರಲು ಏರ್ಪಾಡು ಮಾಡಲಾಗುವುದು ಇದೇ ೨೭ ನೇ ತಾ|| ಬೊಂಬಾಯಿನಲ್ಲಿ ನಡೆಯುವಕೇಂದ್ರ ಆಹಾರ ಸಚಿವರ ಸಮ್ಮೇಳನದಲ್ಲಿ ತೀರ್ಮಾನವನ್ನು ಪರಿಶೀಲಿಸಿದ ನಂತರ ಸರ್ಕಾರವು ಒಂದು ಅಂತ್ಯ ತೀರ್ಮಾನಕ್ಕೆ ಬರುವುದು-ಎಂದು ಆ ಹಾ ರ ಸಚಿವ ಶ್ರೀ ಸಿದ್ದವೀರಪ್ಪನವರು ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ.

ಪಾನನಿರೋಧ ಪರಿಶೀಲನಾ ಸಮಿತಿ

ಮೈಸೂರು ಸಂಸ್ಥಾನದಲ್ಲಿ ಪಾನನಿರೋಧ ಜಾರಿಯಲ್ಲಿರುವ ಪ್ರದೇಶಗಳಲ್ಲಿ ಅದು ಎಷ್ಟರಮಟ್ಟಿಗೆ ಯಶಸ್ವಿಯಾಗಿದೆಯೆಂಬುದನ್ನು ಪರಿಶೀಲಿಸಲು ಆಯಾ ಜಿಲ್ಲೆಗಳಲ್ಲಿ ಸಮಿತಿಗಳನ್ನು ಏರ್ಪಡಿಸಲಾಗಿದೆ. ಪೂರ್ಣ ಪಾನನಿರೋಧ ಜಾರಿಯಲ್ಲಿರುವ ಮದರಾಸ್ ಮತ್ತು ಬೊಂಬಾಯಿ ಪ್ರಾಂತ್ಯಗಳಿಗಿಂದ ವರದಿ ಮತ್ತು ಇತರ ವಿಷಯಗಳನ್ನು ಪಡೆಯಲು ಒಂದು ಉನ್ನತಾಧಿಕಾರದ ಸಮಿತಿಯನ್ನು ರಚಿಸಲಾಗಿದೆ. ಆದರೆ ಸಂಸ್ಥಾನದಾದ್ಯಂತ ಸಂಪೂರ್ಣವಾಗಿ ಪಾನನಿರೋಧ ಜಾರಿಗೆತರಲು ಸರ್ಕಾರವು ಉದ್ದೇಶಪಟ್ಟಿಲ್ಲ-ಎಂದು ಸ್ಥಳೀಯ ಸಚಿವರು ಮೈಸೂರು ಶಾಸನಸಭೆಯಲ್ಲಿ ತಿಳಿಸಿರುತ್ತಾರೆ.

ಫ್ರೆಂಚ್ ಭಾರತದಲ್ಲಿ ಹಿಂಸಾಕೃತ್ಯ ನಿಂತಿಲ್ಲ

ಫ್ರೆಂಚ್ ಭಾರತದ ಗಡಿಯಲ್ಲಿ ಇನ್ನೂ ಗೂಂಡಾಕೃತ್ಯಗಳು ನಡೆಯುತ್ತಲೇಇವೆ. ಅಲ್ಲಿನ ಸ್ವಾರ್ಥ ಹಿತಸಾಧಕರು ಫ್ರೆಂಚ್ ಭಾರತದ ಪ್ರಶ್ನೆ ಇತ್ಯರ್ಥವಾಗಲು ಅಡ್ಡಿಯಾಗಿದ್ದಾರೆ. ಆದರೆ ಭಾರತದಲ್ಲಿ ವಿದೇಶೀ ಸ್ವಾಸ್ಥ್ಯಗಳು ಉಳಿದಿರಲು ಸಾಧ್ಯವಿಲ್ಲವೆಂಬುದನ್ನು ಫ್ರೆಂಚ್ ಸರ್ಕಾರದವರು ಇಂದಿಲ್ಲ ನಾಳೆ ಅರಿಯುವರು ಎಂದು ಮದರಾಸಿನ ಮುಖ್ಯಮಂತ್ರಿ ಶ್ರೀ ರಾಜಾಜಿಯವರು ತಿಳಿಸಿರುತ್ತಾರೆ.

ಮದ್ರಾಸಿನ ಆಹಾರಪರಿಸ್ಥಿತಿ ಉತ್ತಮಗೊಳ್ಳುತ್ತಿದೆ

ಮದ್ರಾಸ್‌ಪ್ರಾಂತ್ಯದಲ್ಲಿ ಆಹಾರ ನಿಯಂತ್ರಣವನ್ನು ರದ್ದುಗೊಳಿಸುವ ಕ್ರಮವು ಸಮರ್ಪಕವಾಗಿ ನಡೆಯುತ್ತಿದೆ. ಕಳೆದ ಕೆಲವು ದಿನಗಳಿಂದ ಮಳೆಯು ಬರುತ್ತಿರುವುದರಿಂದ ಪರಿಸ್ಥಿತಿ ಉತ್ತಮಗೊಳ್ಳುತ್ತಲಿದೆ-ಎಂದು ಮದರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರು ಮಾತನಾಡುತ್ತಾ ಹೇಳಿದರು.

ಅಭಾವ ಪ್ರದೇಶಗಳಲ್ಲಿ ನಡೆಯುತ್ತಲಿರುವ ಪರಿಹಾರಕಾರ್ಯಗಳ ಬಗ್ಗೆ ಮಾತನಾಡುತ್ತಾ ಪರಿಹಾರಕಾರ್ಯಕ್ಕಾಗಿ ಈಗಾಗಲೇ ೨ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಾಗಿದೆ. ೨ ಕೋಟಿ ರೂಪಾಯಿಗಳಷ್ಟು ಸಾಲವನ್ನು ಕೊಡಲಾಗಿದೆ. ಜಿಲ್ಲಾಬೋರ್ಡುಗಳು ಅಭಿವೃದ್ಧಿಕಾರ್ಯಗಳನ್ನು ಮಾಡಲು ಅವುಗಳಿಗೆ ೨೨ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಪರಿಹಾರಕಾರ್ಯಗಳಲ್ಲಿ ೫ ಲಕ್ಷ ಜನರಿಗೆ ಕೆಲಸವನ್ನು ಒದಗಿಸಲಾಗಿದೆ-ಎಂದು ಹೇಳಿದರು

ಕೈಮಗ್ಗದಿಂದ ಪಂಚೆ ಮತ್ತು ಸೀರೆ ತಯಾರಿಯನ್ನು ಮೀಸಲಾಗಿರಿಸುವ ವಿಷಯವಾಗಿ ಪ್ರಸ್ತಾಪಿಸಿ, ಪ್ರಮುಖ ವ್ಯಕ್ತಿಗಳಿಂದ ತಮ್ಮ ಈ ಸಲಹೆಗೆ ವಿಶೇಷ ಪ್ರೋತ್ಸಾಹ ದೊರೆತಿದೆ. ಇನ್ನೆರಡುವಾರಗಳಲ್ಲಿ ಕೇಂದ್ರಸರ್ಕಾರದ ಆಜ್ಞೆಯನ್ನು ತಾವು ನಿರೀಕ್ಷಿಸುವುದಾಗಿ ಹೇಳಿದರು.

§ ಕೋಲಾರಜಿಲ್ಲೆಯಲ್ಲ ಕ್ಷಾಮಪರಿಹಾರ ಕಾರ್ಯಕ್ಕಾಗಿ ಅಲ್ಲಿನ ಜಿಲ್ಲಾಬೋರ್ಡಿನವರು ಇನ್ನೆರಡು ಲಕ್ಷ ರೂಗಳನ್ನು ಕೊಡಲು ಸರ್ಕಾರ ಅನುಮತಿ ಕೊಟ್ಟಿದೆ.

ವಿಶ್ವೇಶ್ವರಯ್ಯನವರ ಯೋಜನೆ

ಕ್ರಮೇಣ ಸಂಸ್ಥಾನದಲ್ಲೆಲ್ಲಾ ಜಾರಿಗೆ ತರಲಾಗುವುದು

ಬೆಂಗಳೂರು ೨೪

ಡಾ|| ಎಂ. ವಿಶ್ವೇಶ್ವರಯ್ಯನವರ ಗ್ರಾಮಕೈಗಾರಿಕಾ ಯೋಜನೆಯು ಈಗ ಬೆಂಗಳೂರು ಮತ್ತು ಕೋಲಾರಜಿಲ್ಲೆಗಳಲ್ಲಿ ಜಾರಿಯಲ್ಲಿದೆ. ಅದಕ್ಕಾಗಿ ಇದುವರೆಗೆ ಆರುಕಾಲು ಲಕ್ಷ ರೂ ವೆಚ್ಚವಾಗಿದೆ ಬೆಂಗಳೂರು ಜಿಲ್ಲೆಯಲ್ಲಿ ೮ ಸಾವಿರ ಜನರಿಗೂ, ಕೋಲಾರಜಿಲ್ಲೆಯಲ್ಲಿ ೫೭೦೦ ಮಂದಿಗೂ ಇದರಿಂದ ಕೆಲಸ ದೊರೆತಿದೆ. ಇನ್ನೂ ಹೆಚ್ಚುಮಂದಿಗೆ ಕೆಲಸ ಒದಗಿಸಲು ಪ್ರಯತ್ನಿಸಲಾಗುತ್ತಿದೆ. ಈ ಯೋಜನೆಯು ಯಶಸ್ವಿಯಾದಲ್ಲಿ ಕ್ರಮೇಣಸಂಸ್ಥಾನದಲ್ಲೆಲ್ಲಾ ಜಾರಿಗೆ ತರಲಾಗುವುದೆಂದು ವಿಧಾನಸಭೆಯಲ್ಲಿ ನಿನ್ನೆ ಕೈಗಾರಿಕಾ ಸಚಿವರು ತಿಳಿಸಿರುತ್ತಾರೆ.

ಸಂಸ್ಥಾನದಲ್ಲಿ ಭಿಕ್ಷುಕರು ಹೆಚ್ಚಾಗುತ್ತಿದ್ದಾರೆ

ಇತ್ತೀಚಿಗೆ ಭಿಕ್ಷುಕರ ಸಂಖ್ಯೆ ಸಂಸ್ಥಾನದಲ್ಲಿ ಹೆಚ್ಚಾಗಿದೆ. ಅಭಾವ ಪರಿಸ್ಥಿತಿ ಉಂಟಾದಮೇಲಂತೂ ಅ ವರ ಸಂಖ್ಯೆ ವಿಶೇಷವಾಗಿದೆ ಸಂಸ್ಥಾನದ ಎಲ್ಲ ಪ್ರದೇಶಗಳಲ್ಲೂ ಭಿಕ್ಷುಕರ ತೊಂದರೆಗಳನ್ನು ನಿಷ್ಕ್ರಿಸುವಬಗ್ಗೆ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳಲು ಯೋಚಿಸಿದ್ದಾರೆ. ಮತ್ತು ಭಿಕ್ಷುಕ ನಿರೋಧದ ಯೋಜನೆಯು ಪುನರ್ವ್ಯವಸ್ಥಿತವಾಗಲು ಸರ್ಕಾರವು ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು ಎಂದು ರೆವಿನ್ಯೂಸಚಿವರು ಶಾಸನಸಭೆಯಲ್ಲಿ ತಿಳಿಸಿರುತ್ತಾರೆ.

ಮೈಸೂರು ಪೇಟೆಧಾರಣೆ

ತಾ|| ೨೩-೧೦-೫೨

ಪಲ್ಲ	ರೂ-ಆ	ರೂ-ಆ
ಕಡಲೇಕಾಯಿ	೮-	೨೧-೪
ಎಳ್ಳು	೬೫-	೭೦-೬
ಹರಳು	೪೫-	೪೬-
ಹುರುಳಿ	೫೭-೮	
ಮೆಣಸಿನಕಾಯಿ	೧೦-	೧೮-
ಬೆಲ್ಲ	೩-೪	೩-೮

ತೆಂಗಿನಕಾಯಿ ೧,೦೦೦ ಕ್ಕೆ ೧೬೭-೨೦೩

ನೂತನ ಮತದಾರರ ಪಟ್ಟಿ

ಸಂಸ್ಥಾನದ ಹೊಸ ಮತದಾರರ ಪಟ್ಟಿಯನ್ನು ಇದೇ ೨೦ ನೇ ತಾರೀಖು ಪ್ರಕಟಿಸಲಾಗಿದೆ. ಅವುಗಳನ್ನು ಪುರಸಭೆ, ರಿಜಿಸ್ಟ್ರೇರ್ ಅಧಿಕಾರಿಗಳ ಕಛೇರಿ, ಮೊಹಲ್ಲಾ ಬಹಿರಂಗ ಸ್ಥಳಗಳಲ್ಲಿ ಇಡಲಾಗಿದೆ. ಭಾರತದೇಶದ ಪ್ರತಿಯೊಬ್ಬಪ್ರಜೆಯೂ ೧೯೫೨ನೇಮಾ|| ೧೫ನೇ ತಾ||೨೧ವರ್ಷ ವಯಸ್ಸಾಗಿದ್ದರೆ ಮತದಾರರ ಪಟ್ಟಿಗೆ ಸೇರಲು ಅರ್ಹತೆ ಪಡೆದಿರುತ್ತಾನೆ. ಅಂತಹವರು ಆಯಾ ಕ್ಷೇತ್ರದಲ್ಲಿ ೧೯೫೨ನೇ ಜನವರಿ ೧ ರಿಂದ ೩೧ನೇ ಡಿಸೆಂಬರ್‌ವರೆಗಿನ ಅವಧಿಯಲ್ಲಿ ೧೮೦ ದಿನಗಳಕಾಲ ಖಾಯಂ ನಿವಾಸಿಯಾಗಿರಬೇಕು. ಈಗ ಪ್ರಕಟವಾಗಿರುವ ಪಟ್ಟಿಗಳಲ್ಲಿ ಹೆಸರುಗಳು ಬಿಟ್ಟುಹೋಗಿರುವ ಅರ್ಹತೆ ಪಡೆದಿರುವವರು ಸಮಾಧಾನದ ಅರ್ಜಿ ಫಾರಂಗಳನ್ನು ತೆಗೆದುಕೊಂಡು ೧೦-೧೧-೫೨ರ ಪೊಳಗಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳುಹಿಸಬೇಕು-ಎಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಪರ್ಶಿಯಾ ಬ್ರಿಟನ್ ರಾಯಭಾರಿ ಸಂಬಂಧ ಮುಕ್ತಾಯ

ಪರ್ಶಿಯಾವು ಬ್ರಿಟನ್ನಿನೊಡನೆ ರಾಯಭಾರಿ ಸಂಬಂಧವನ್ನು ಮುಕ್ತಾಯಗೊಳಿಸಿ ಅಧಿಕೃತವಾಗಿ ಟೆಹರಾನಿನಲ್ಲಿರುವ ಬ್ರಿಟನ್ ರಾಯಭಾರಿಗೆ ಡಾ|| ಮುಸಾದಿಕ್‌ರವರ ಪತ್ರವನ್ನು ಮೊನ್ನೆಯದಿನ ಒಪ್ಪಿಸಿದೆ.

ಉಭಯರಾಷ್ಟ್ರಗಳ ಸ್ನೇಹವು ಮುಂದುವರಿಯಲು ಪರ್ಶಿಯಾ ಎಷ್ಟು ಶ್ರಮಿಸಿದರೂ ಆಂಗ್ಲೋ ಇರಾನಿಯನ್ ಎಣ್ಣೆ ಕಂಪೆನಿಗೆ ಬೆಂಬಲವೀಯುತ್ತಾ ಬ್ರಿಟನ್ ಸರ್ಕಾರವು ಪರ್ಶಿಯಾ ಹಿತಸಾಧನೆಗೆ ವ್ಯತಿರಿಕ್ತವಾಗಿ ನಡೆಯುತ್ತಿರುವುದರಿಂದ ಅತಿ ವಿಷಾದದಿಂದ ಸ್ನೇಹ ಸಂಬಂಧವನ್ನು ಕಡಿದುಹಾಕಬೇಕಾಗಿದೆ. ನ್ಯಾಯ ಸಮ್ಮತವಾಗಿ ಬ್ರಿಟನ್ ತನ್ನ ರೀತಿಯನ್ನು ಬದಲಾಯಿಸಿಕೊಂಡಲ್ಲಿ ಪುನಃ ಉಭಯದೇಶಗಳ ಸ್ನೇಹವು ಬೆಳೆಯುತ್ತದೆ ಹಾಗೆ ಆಗಲೆಂದು ಆಶಿಸುತ್ತೇನೆಂದು ಡಾ|| ಮುಸಾದಿಕ್‌ರವರ ತಮ್ಮ ಪತ್ರದಲ್ಲಿ ಸೂಚಿಸಿರುವುದಾಗಿ ಗೊತ್ತಾಗಿದೆ.

ಅಪೇರ ೨೪-೧೦-೫೨ ರಿಂದ ಅನೋಘ ೨ನೇವಾರ
ಪ್ರತಿದಿನ ಮೂರು ಆಟಗಳು
* ಮಾಪಿಳ್ಳೈ *
ಪಾತ್ರ:— ಪಿ. ಕೆ. ಸರಸ್ವತಿ,
ರಾಮಚಂದ್ರ

FOR SALE
A GOLDEN OPPOURTUNITY FOR BUYERS
Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/– per month.
Rs. 16,000 or near offer
No brokers–Immediate possession—No encumbrence,
Enquire at :— M. NARAYANA RAO, Co.
c/o Tourist Bureau, Lansdowne Buildings, Mysore

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 53

೨೫-೧೦-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಮದ್ರಾಸ್ ನಗರವನ್ನು ಪ್ರತ್ಯೇಕಿಸಕೂಡದು

ನಮ್ಮ ದೇಶದಲ್ಲಿ ಸರ್ಕಾರ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ವೆಚ್ಚಮಾಡುತ್ತಿದೆ. ಈ ವೆಚ್ಚದಿಂದ ನಡೆಸಿದ ವಿದ್ಯೆಯಿಂದ ಜನಸಾಮಾನ್ಯರ ಜ್ಞಾನಭಂಡಾರ ಹೆಚ್ಚಬೇಕು.

ಆದರೆ ಆ ಅಭಿವೃದ್ಧಿ ಕಾಣಬರುತ್ತಿಲ್ಲ. ಆದರಿಂದ ವಯಸ್ಕರ ಶಿಕ್ಷಣಕ್ಕೆ ಕುಂದುಂಟಾಗಿದೆ ಸಾವಿರಾರು ವಿದ್ಯಾರ್ಥಿಗಳು ತಾವು ಕಲಿತ ಜ್ಞಾನದ ಫಲದಿಂದ ತಮ್ಮ ನೆರೆಹೊರೆಯವರು ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕು. ಇದೂ ಅಲ್ಲದೆ ಆರ್ಥಿಕ ಮುಗ್ಗಟ್ಟಿನಿಂದ ಸಮಿತಿಯ ಬೆಳವಣಿಗೆ ಉಸಿರು ಕಟ್ಟಿದಂತಾಗಿದೆ ಆದರೆ ಈ ಮುಗ್ಗಟ್ಟು ಮುಗಿಯಬೇಕಾಗಿದ್ದರೆ ಜನರ ಸಾಹಸದಿಂದ ಹಣದ ಅಭಾವಕ್ಕಿಂತಲೂ ಹೆಚ್ಚಾಗಿ ನಮ್ಮ ದೇಶದಲ್ಲಿ ಮುಂದಾಳುಗಳೆನಿಸಿಕೊಂಡಿರುವವರು ಈ ಕೆಲಸದಲ್ಲಿ ಹೆಚ್ಚು ಆಸಕ್ತಿ ವಹಿಸಿದೆ, ಅಲ್ಲಗೆಳೆದು ಕೆಲಸಗಾರರ ಮುಖ ಮುರಿದು ಜನರಲ್ಲಿ ಅಪನಂಬಿಕೆ ಹುಟ್ಟಿಸಲು ಪ್ರಯತ್ನಿಸುತ್ತಿರುವುದು ವಯಸ್ಕರ ಶಿಕ್ಷಣದ ಮಾರ್ಗದಲ್ಲಿ ಮಾಡಿರುವ ಎರಡು ತೊಡರುಗಳು ಆದ್ದರಿಂದ ಮಹಾಜನರು ಈ ದಾರಿಯನ್ನು ಬಿಟ್ಟು, ಸಂಸ್ಥಾನದಲ್ಲಿ ಅನಕ್ಷರತೆಯನ್ನು ನಿರ್ಮೂಲ ಮಾಡಲು ಸರ್ವ ಸಹಾಯ ಮಾಡಬೇಕು-ಎಂದು ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಸ. ಭದ್ರಯ್ಯನವರು ವರದಿಯಲ್ಲಿ ಪ್ರಾರ್ಥಿಸಿಕೊಂಡಿರುತ್ತಾರೆ.

ಆಂಧ್ರರಿಗೆ ಪ್ರತ್ಯೇಕ ಪ್ರಾಂತ್ಯ ಬೇಕಾದರೆ ಮದ್ರಾಸನ್ನು ಅವರು ಆಶಿಸದಿದ್ದರೆ ಮಾತ್ರ ಸಾಧ್ಯ ಆದರೆ ತಮಿಳರು ಅಥವಾ ಆಂಧ್ರರಿಗೆ ಸೇರದಂತೆ ಮದ್ರಾಸನ್ನು ಪ್ರತ್ಯೇಕಿಸುವುದು ಸರಿಯಲ್ಲವೆಂದು ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೇಳಿರುವರು

ವಯಸ್ಕರ ಶಿಕ್ಷಣದಿಂದಲೇ ದೇಶದ ಅಭಿವೃದ್ಧಿ

ಆದಕ್ಕೆ ಮಹಾಜನರ ನೆರವು ಅಗತ್ಯ

ವಯಸ್ಕರ ಶಿಕ್ಷಣ ಸಮಿತಿಯ ಮನವಿ

ಮೈಸೂರು ೨೫

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ೧೯೫೧-೫೨ ನೇ ಸಾಲಿನ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ.

ಅದರ ಪ್ರಕಾರ ಒಟ್ಟು ೨೧೯೬ ಅಕ್ಷರ ತರಗತಿಗಳನ್ನು ತೆರೆಯಲಾಯಿತು ಮತ್ತು ೪೬೨೪೧ ಮಂದಿ ವಯಸ್ಕರ ಅಕ್ಷರಸ್ಥರಾದರು. ಒಟ್ಟು ೨೧೧೬ ಗ್ರಾಮಪುಸ್ತಕ ಭಂಡಾರಗಳಿದ್ದವು. ಕಳೆದವರ್ಷ ೮೫ ಹೊಸ ಪುಸ್ತಕ ಭಂಡಾರಗಳನ್ನು ತೆರೆಯಲಾಯಿತು ಸಮಿತಿಯ ಪ್ರಕಟನ ಶಾಖೆಯು ಎಂದಿನಂತೆ ಅಕ್ಷರ ಕಲಿಯುವ ತರಗತಿಗಳಿಗೆ ಬೇಕಾಗುವ ಪಠ್ಯಪುಸ್ತಕಗಳು ವಯಸ್ಕರ ಶಿಕ್ಷಣ ಪುಸ್ತಕ ಮಾಲೆಯ ಪುಸ್ತಕಗಳು ಮತ್ತು ಪುಸ್ತಕಭಂಡಾರ ಮಾಲೆಯ ಹೊಸ ಪುಸ್ತಕಗಳನ್ನು ಅಚ್ಚುಹಾಕಿಸಿತು ತಮ್ಮ ಬೆಳಕ ವಾರಪತ್ರಿಕೆಗೆ ತುಂಬಾ ಪ್ರೋತ್ಸಾಹ ದೊರೆಯುತ್ತಿದೆ

ನಂಜನಗೂಡಿನ ವಿದ್ಯಾಪೀಠದಲ್ಲಿ ವೃತ್ತಿ ಶಿಕ್ಷಣ,ವ್ಯವಸಾಯ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಲಾಯಿತು. ೨೧ ವಿದ್ಯಾರ್ಥಿಗಳು ಶಿಕ್ಷಣ ಪಡೆದರು ಅಂದರೆ ಒಟ್ಟು ೧೪೯ ಮಂದಿ ವಿದ್ಯಾರ್ಥಿಗಳು ಇಲ್ಲಿಯವರೆಗೆ ಶಿಕ್ಷಣ ಹೊಂದಿದ್ದಾರೆ. ವಯಸ್ಕರ ಶಿಕ್ಷಣ ಕಾರ್ಯತೃಪ್ತಿಕರವಾಗಿ ನೆರವೇರಲು ಸ್ವಯಂಸೇವಕರ ಸಹಕಾರ ಅತ್ಯಗತ್ಯವಾದುದರಿಂದ ಸಮಗ್ರ ವಯಸ್ಕರ ಶಿಕ್ಷ ಯೋಜನೆಯನ್ನು ಕಾರ್ಯರೂಪಕ್ಕೆ ತಂದು ಮಂಡ್ಯಜಿಲ್ಲೆಯಲ್ಲಿ ೧೩ ಕೇಂದ್ರಗಳನ್ನು ತೆರೆಯಲಾಯಿತು. ೧೩ ಗ್ರಾಮ ಸೇವಾ ಶಿಬಿರಗಳನ್ನು ನಡೆಸಲಾಯಿತು. ಜನತಾ ಶಿಕ್ಷಣ ಕೇಂದ್ರ, ಶಿಕ್ಷಣ ಚಲನಚಿತ್ರ ಪ್ರದರ್ಶನ ಮುಂತಾದ ಕಾರ್ಯಗಳನ್ನೂ ಕೈಗೊಳ್ಳಲಾಯಿತು.

ವಯಸ್ಕರ ಶಿಕ್ಷಣ ನಾನಾ ಮುಖದಲ್ಲಿ ಯಶಸ್ವಿಯಾಗಿ ನಡೆದಾಗ ದೇಶದ ಅಭಿವೃದ್ಧಿ ಸಾಧನೆಯಾಗುತ್ತದೆ. ಆದಕ್ಕೆ ಸಾರ್ವಜನಿಕರ ಮತ್ತು ಸರ್ಕಾರದನೆರವು ಅತ್ಯಗತ್ಯ.

ಪಾಕೀಸ್ತಾನದ ಭಾರಿ ಡಕಾಯಿತನ ದಸ್ತಗಿರಿ

ಕಳೆದ ೧೦ ವರ್ಷಗಳಿಂದ ತಲೆಮರಿಸಿಕೊಂಡಿದ್ದ ಕರಾಚಿಯ ಭಾರಿ ಹರ್ ಡಕಾಯಿತ ಮತ್ತು ರಹೀಂ ಹಿಂಗರೋ ಈಗ ಪೋಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ. ಆತನು ಅನೇಕ ಕೊಲೆ ಮತ್ತು ಡಕಾಯಿತಿಗಳನ್ನು ಮಾಡಿದ್ದಾನೆ. ಆತನನ್ನು ಹಿಡಿದುಕೊಟ್ಟವರಿಗೆ ೨೫ ಸಾವಿರ ರೂಪಾಯಿಗಳು ಮತ್ತು ೨೫ ಎಕರೆ ಜಮೀನನ್ನು ಬಹುಮಾನ ಕೊಡಲಾಗುವುದೆಂದು ಸರಕಾರವು ತಿಳಿಸಿತ್ತು.

ಮಹಾರಾಜಾ ಕಾಲೇಜಿನ ಹಳೆ ವಿದ್ಯಾರ್ಥಿ ಸಂಘ

ಮೈಸೂರು ಮಹಾರಾಜಾ ಕಾಲೇಜಿನ ಹಳೇ ವಿದ್ಯಾರ್ಥಿಸಂಘದ ವಾರ್ಷಿಕಸಭೆಯು ಮುಂದಿನತಿಂಗಳು ೨ನೇ ತಾರೀಖು ಬೆಳಗ್ಗೆ ೯-೩೦ ಗಂಟೆಗೆ ಮಹಾರಾಜಾಕಾಲೇಜಿನ ಜೂನಿಯರ್ ಬಿ. ಎ. ಹಾಲಿನಲ್ಲಿ ನಡೆಯುವುದು. ಕಾಲೇಜಿನ ಶತಮಾನೋತ್ಸವದ ಲೆಕ್ಕಾಚಾರವನ್ನು ಮಂಜೂರು ಮಾಡುವುದು ಮತ್ತು ಇತರ ವಿಷಯಗಳನ್ನು ಪರಿಶೀಲಿಸಲಾಗುವುದು.

ಬಹಿರಂಗ ಸಭೆ

ಈ ಸಂಜೆ ೬-೩೦ ಕ್ಕೆ ಮೈಸೂರು ಟೌನ್‌ಹಾಲ್‌ನಲ್ಲಿ ಮೈಸೂರು ರೇಷ್ಮೆದಾರರ ಸಂಘದ ಬಹಿರಂಗ ಸಭೆ ನಡೆಯುತ್ತ ಲೋಕಸಭೆ ಸದಸ್ಯರಾದ ಶ್ರೀ ಎಂ.ಎಸ್ ಗುರುಪಾದಸ್ವಾಮಿಯವರು ಅಧ್ಯಕ್ಷತೆ ವಹಿಸುವರು ನಿನ್ನೆದಿನ ನಡೆಯಬೇಕಾಗಿದ್ದ ಈ ಸಭೆ ಮಳೆ ಬಂದದ್ದರಿಂದ ನಡೆಯಲಿಲ್ಲ.

ನೈಜಾಮರ ಪುತ್ರನ ವಿವಾಹ ವಿಚ್ಛೇದನ

ಹೈದರಾಬಾದ್ ನೈಜಾಮರ ದ್ವಿತೀಯಪುತ್ರ ಮುಜಾಂಜಾ ಬಹದ್ದೂರ್‌ರವರು ತಮ್ಮ ಪತ್ನಿ ರಾಜಕುಮಾರಿ ನಿಲಫರ್‌ರನ್ನು ವಿವಾಹ ವಿಚ್ಛೇದನಮಾಡಿದ್ದಾರೆ. ಟರ್ಕಿಯ ಶ್ರೀಮಂತರ ಮಗಳಾದ ಆಕೆಯನ್ನು ಅವರು ೧೯೩೧ರಲ್ಲಿ ಮದುವೆ ಆಗಿದ್ದರು. ಇಬ್ಬರ ಬಾಂಧವ್ಯದಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಆಕೆಯು ೧೯೪೮ ರಲ್ಲಿ ಯೂರೋಪಿಗೆ ಹೋಗಿದ್ದು ವಾಪಸು ಹಿಂತಿರುಗಲಿಲ್ಲ. ರಾಜಕುಮಾರರುಕೂಡ ಈಗ ಬೊಂಬಾಯಿನಲ್ಲೇ ನೆಲೆಸಿದ್ದಾರೆ.

ಅಕ್ಕಿ ಗೋಧಿ ಹತೋಟಿ ರದ್ದಿಲ್ಲ

ಭಾರತಾದ್ಯಂತ ಆಹಾರ ಹತೋಟಿ ರದ್ದುಮಾಡುವ ವಿಚಾರ ಪರಿಶೀಲನೆಯಲ್ಲಿ ಅಕ್ಕಿ ಮತ್ತು ಗೋಧಿ ಹತೋಟಿ ರದ್ದಿನ ವಿಷಯ ಬಂದಿಲ್ಲವೆಂದೂ. ಬೊಂಬಾಯಿನಲ್ಲಿ ಕೇಂದ್ರಸಚಿವ ಶ್ರೀ ಕಿದ್ವಾಯಿಯವರು ಮಾತುಕತೆ ನಡೆಸುತ್ತಿರುವುದು ಜೋಳ ಮತ್ತು ಇತರ ದ್ವಿದಳಧಾನ್ಯಗಳಿಗೆಮಾತ್ರ ಅನ್ವಯಿಸಿದೆಯೆಂದೂ ಹೇಳಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ಆಹಾರ ಹತೋಟಿ ರದ್ದು

ಪಶ್ಚಿಮ ಬಂಗಾಳದಲ್ಲಿ ಕಲ್ಕತ್ತಾನಗರವೊಂದನ್ನು ಬಿಟ್ಟು ಮಿಕ್ಕ ಪ್ರದೇಶಗಳಲ್ಲೆಲ್ಲಾ ಸಂಪೂರ್ಣವಾಗಿ ಆಹಾರ ಹತೋಟಿಯನ್ನು ಮುಂದಿನ ಜನವರಿ ತಿಂಗಳಿನಿಂದ ರದ್ದುಮಾಡಲು ಅದರ ಸರ್ಕಾರ ನಿರ್ಧರಿಸಿದೆಯೆಂದು ತಿಳಿದುಬಂದಿದೆ.

ಕಾರ್ಮಿಕ ಗೃಹನಿರ್ಮಾಣ ಯೋಜನೆ

ಭಾರತ ಸರ್ಕಾರದವರು ಎಲ್ಲ ಸಂಸ್ಥಾನಗಳಲ್ಲೂ ಕೈಗೊಂಡಿರುವ ಕಾರ್ಮಿಕ ಗೃಹನಿರ್ಮಾಣ ಯೋಜನೆಯನ್ನು ಇನ್ನು ಒಂದು ತಿಂಗಳಿನಲ್ಲಿ ಪ್ರಾರಂಭಿಸಬೇಕೆಂದು ಸೂಚನೆ ಕೊಡಲಾಗಿದೆ. ಈ ವರ್ಷ ೯ ಕೋಟಿ ರೂ. ಸಹಾಯವನ್ನು ಸಂಪೂರ್ಣವಾಗಿ ಪಡೆದರೆ, ಮುಂದಿನ ವರ್ಷ ಅದಕ್ಕೆ ಇನ್ನು ಹೆಚ್ಚು ಹಣವನ್ನು ಕೊಡಲಾಗುವುದೆಂದು ತಿಳಿಸಲಾಗಿದೆ

ಸೆಣಬಿನಿಂದ ಬಟ್ಟೆ

ಸೆಣಬಿನಿಂದ ಉತ್ತಮ ಮತ್ತು ಗಟ್ಟಿಯಾದ ಬಟ್ಟೆಯನ್ನು ತಯಾರಿಸಬಹುದೆಂದು ಬ್ರಿಟನ್ನಿನ ಲೀಡ್ಸ್ ವಿಶ್ವವಿದ್ಯಾನಿಲಯದಲ್ಲಿ ನಡೆದ ಸಂಶೋಧನೆಯಿಂದ ತಿಳಿದುಬಂದಿದೆ.

ಅಮೆರಿಕಾದ ವೈಜ್ಞಾನಿಗೆ ನೋಬೆಲ ಬಹುಮಾನ

ಅಮೆರಿಕಾ ಪ್ರೊಫೆಸರ್ ಸೆಲ್‌ಮನ್ ವಾಕ್ಸ್‌ಮನ್ ಎಂಬುವರಿಗೆ ವೈದ್ಯಕ್ಕಾಗಿ ವಿಶ್ವದ ನೋಬೆಲ್ ಬಹುಮಾನವನ್ನು ಕೊಡಲಾಗಿದೆ.

ವಿಶ್ವಸಂಸ್ಥೆಯ ದಿನಾಚರಣೆ

ಪ್ರಪಂಚದಲ್ಲಿ ಶಾಂತಿಸ್ಥಾಪನೆಗೆ ಒಗ್ಗಟ್ಟಿನಿಂದ ದುಡಿಯಬೇಕು

ರಾಷ್ಟ್ರಾಧ್ಯಕ್ಷರ ಸಂದೇಶ

ವಿಶ್ವಸಂಸ್ಥೆಯು ಎಲ್ಲರೂ ಅಪೇಕ್ಷಿಸಿದಷ್ಟು ಕೆಲಸವಾಡದಿದ್ದರೂ ವಿಶ್ವದಶಾಂತಿಸ್ಥಾಪನೆಗೆ ವಿಶ್ವಸಂಸ್ಥೆಯಿಂದ ಮಾತ್ರ ಸಾಧ್ಯ ವಿಶ್ವದಎಲ್ಲ ಜನತೆಯೂ ಒಗ್ಗಟ್ಟಿನಿಂದ ದುಡಿಯಬೇಕು. ಆಗಮಾತ್ರ ವಿಶ್ವಸಂಸ್ಥೆಯು ಪ್ರಪಂಚದಲ್ಲಿ ಶಾಂತಿ, ನ್ಯಾಯ ಮತ್ತು ಪ್ರಗತಿಸ್ಥಾಪಿಸಲು ಸಾಧ್ಯವಾಗುತ್ತದೆಂದು ಭಾರತ ರಾಷ್ಟ್ರಾಧ್ಯಕ್ಷರು ವಿಶ್ವಸಂಸ್ಥೆಯ ೭ ನೇ ವರ್ಷದ ದಿನಾಚರಣೆಯಾದ ನಿನ್ನೆ ಒಂದು ಸಂದೇಶವನ್ನು ಕೊಡುತ್ತಾ ಹೇಳಿರುವರು.

ಈ ಸಂದರ್ಭದಲ್ಲಿ ಬ್ರಿಟಿಷ್ ಪ್ರಧಾನಿ ಚರ್ಚಿಲ್, ಅಮೇರಿಕಾ ಅಧ್ಯಕ್ಷ ಟ್ರೂಮನ್ನರೂ ಸಹ ಸಂದೇಶವನ್ನು ಇತ್ತಿರುವರು.

ಚಂಡಮಾರುತದಿಂದ ೪೪೪ ಜನರ ಮರಣ

ಕಳೆದವಾರ ಚಂಡಮಾರುತ ಹಾವಳಿಯಿಂದ ಮಧ್ಯ ಫಿಲಿಪೈನಿನಲ್ಲಿ ೪೪೪ ಜನ ಮರಣಹೊಂದಿರುವರು ೩೦೦ ಜನರು ಪತ್ತೆಯಿಲ್ಲ. ಇಂಡೋ ಚೈನಾ ಬರ್ಮಾದಲ್ಲಿ ಸಹ ಚಂಡಮಾರುತವು ಹರಡಿದೆ. ಬರ್ಮಾದಲ್ಲಿ ಇಬ್ಬರು ಸತ್ತಿರುವ ವರದಿಯಾಗಿದೆ.

ಕಾಂಗ್ರೆಸ್ ಅಧ್ಯಕ್ಷರಿಗೆ ಅಧಿಕಾರ

ಆಚಾರ್ಯವಿನೋಬಾಭಾವೆಯವರ ಭೂದಾನಯಜ್ಞವನ್ನು ಮೈಸೂರು ಸಂಸ್ಥಾನದಲ್ಲೂ ಯಶಸ್ವಿಯಾಗುವಂತೆ ಕಾರ್ಯಕ್ರಮ ತೆಗೆದುಕೊಳ್ಳಲು ಕಾಂಗ್ರೆಸ್ ಅಧ್ಯಕ್ಷರಿಗೆ ಪ್ರದೇಶ ಕಾಂಗ್ರೆಸ್ ಸಮಿತಿಯು ಎಲ್ಲ ಅಧಿಕಾರಗಳನ್ನು ಕೊಟ್ಟಿದೆ.

ಕೆರೆಗಳ ಜೀರ್ಣೋದ್ಧಾರಕ್ಕಾಗಿ ೨೨ ಲಕ್ಷ ರೂ.

ಮೈಸೂರು ಸಂಸ್ಥಾನದಲ್ಲಿ ಒಟ್ಟು ೨೫೯೮ ಮೇಜರ್ ಕೆರೆಗಳೂ, ೧೯೯೩೭ ಮೈನರ್ ಕೆರೆಗಳೂ ಇದ್ದು, ಒಟ್ಟು ೬,೭೯೦೧೯ ಎಕರೆ ಜಮೀನು ನೀರಾವರಿಗೊಳಪಟ್ಟಿದೆ. ಅವುಗಳ ದುರಸ್ತು ಕೆಲಸಕ್ಕಾಗಿ ಕಳೆದವರ್ಷ ೨೨,೪೯,೩೫೭ ರೂ. ಖರ್ಚುಮಾಡಲಾಯಿತು.

೧೯೫೨-೫೩ ನೇ ಸಾಲಿಗೆ ೨೨ ಲಕ್ಷ ರೂ. ಮಂಜೂರು ಮಾಡಲಾಗಿದೆ. ಆದರೆ ಇದರಲ್ಲಿ ಕ್ಷಾಮ ಪರಿಹಾರ ನಿಧಿಯಿಂದ ಕೊಟ್ಟಿರುವ ಹಣ ಸೇರಿಲ್ಲ ಎಂದು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ವಿಧಾನಸಭೆಯಲ್ಲಿ ತಿಳಿಸಿರುತ್ತಾರೆ.

ಗೋವಧೆ ನಿರೋಧ ಚಳುವಳಿ

ಮೈಸೂರು ೨೫

ನಾಳೆ ಸಂಜೆ ೬ ಗಂಟೆಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ದೇಶಾದ್ಯಂತ ಕೈಗೊಂಡಿರುವಗೋವಧೆನಿರೋಧ ಚಳುವಳಿಯ ಆರಂಭೋತ್ಸವವು ರಾಜಧಾನಿಯ ಟೌನ್‌ಹಾಲ್ ಮೈದಾನದಲ್ಲಿ ನೆರವೇರಿಸಲ್ಪಡುತ್ತದೆ. ಅದೇದಿನ ಬೆಳಗ್ಗೆ ಪ್ರತಿ ಮೊಹಲ್ಲಾದಲ್ಲೂ ಸೈಕಲ್‌ಗಳಮೇಲೆ ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳಿವೆ. ಅಂದಿನಿಂದ ನವೆಂಬರ್ ೨೨ ನೇ ತಾರೀಖಿನವರೆಗೆ ಭಾರತಾದ್ಯಂತ ಲಕ್ಷಾಂತರಜನ ಸ್ವಯಂಸೇವಕರು ಭಾರತದಲ್ಲಿ ಗೋಹತ್ಯ ಮಾಡುವುದು ಗುರುತರ ಅಪರಾಧವಾಗಿ ಉಗ್ರಶಿಕ್ಷೆಗೆ ಗುರಿಪಡಿಸಲ್ಪಡುವ ಕಾನೂನನ್ನಾಗಿ ಮಾಡಲು ಕೋಟ್ಯಂತರಜನರ ಸಹಿಗಳನ್ನು ಸಂಗ್ರಹಿಸಿ ಕೇಂದ್ರ ಸರ್ಕಾರವನ್ನು ಒತ್ತಾಯಪಡಿಸುವ ಯೋಜನೆಯಿದೆ. ಅದಕ್ಕೆ ಸರ್ವರೂ ತನ ಮನ ಧನ ಪೂರ್ವಕ ಬೆಂಬಲ ನೀಡಬೇಕೆಂದು ಸಂಘದ ಸಂಚಾಲಕರು ಪ್ರಾರ್ಥಿಸುತ್ತಾರೆ.

ವಿಚಾರಗೋಷ್ಠಿ

ರಾಜಧಾನಿಯ ಮಾದರಿ ಶಾಲೆಯಲ್ಲಿ ನಾಳೆ ಸಂಜೆ ೫-೩೦ ಗಂಟೆಗೆ ಭಾರತ-ಚೀನಾ ಸ್ನೇಹಸಂಘದ ಆಶ್ರಯದಲ್ಲಿ ಚೀನಾ ಬಗ್ಗೆ ವಿಚಾರಗೋಷ್ಠಿಯು ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು. ಶ್ರೀಗಳಾದ ಎಲ್. ಶ್ರೀಕಂಠಯ್ಯ, ಎಂ. ವಿ. ಶ್ರೀನಿವಾಸಮೂರ್ತಿ ಮತ್ತು ಜಿ. ಹೆಚ್. ರಾಮರಾವ್‌ರವರು ಭಾಷಣ ಮಾಡುವರು.

ಪುರಸಭಾಧಿವೇಶನ

ಮೈಸೂರು, ಅ. ೨೫

ಮೈಸೂರುಪುರಸಭೆಯ ಮಾಹೆಯಾನ ಸಾಮಾನ್ಯಸಭೆಯು ಇದೇ ೩೦ನೇ ತಾ|| ಸಂಜೆ ನಡೆಯುತ್ತದೆ. ನರಸಿಂಹರಾಜ ಮೊಹಲ್ಲಾವನ್ನು ನಿರ್ಮಾಣಮಾಡಿ ೩೦ ವರ್ಷಗಳಾದಾಗ್ಯೂ ಅಲ್ಲಿಯ ನಿವಾಸಿಗಳಿಗೆ ರಸ್ತೆ, ಒಳಚರಂಡಿ ವ್ಯವಸ್ಥೆ ನೀರು ಮುಂತಾದ ಸೌಕರ್ಯ ಯಿಲ್ಲದೆ ಉಂಟಾಗುತ್ತಲಿರುವ ತೊಂದರೆಯನ್ನು ಕೂಡಲೇ ನಿವಾರಿಸುವಂತೆ ನಗರಾಭಿವೃದ್ಧಿ ಸಮಿತಿಯನ್ನು ಕೋರುವ ನಿರ್ಣಯವನ್ನು ಶ್ರೀ ಎಂ. ಆರ್. ಶ್ರೀನಿವಾಸಯ್ಯಂಗಾರ್‌ರವರು ಮಂಡಿಸಿದ್ದಾರೆ.

ಪ್ರಜಾಮಂತ್ರಿಗಳಿಗಾಗಿ ೯ ಲಕ್ಷ ರೂ. ಖರ್ಚು

ಬೆಂಗಳೂರು ೨೫

ಮೈಸೂರಿನಲ್ಲಿ ಪ್ರಜಾ ಮಂತ್ರಿಗಳಿಗೆ ೧೯೪೮-೪೯ ರಿಂದ ೧೯೫೨ ನೇ ಸೆಪ್ಟೆಂಬರ್‌ವರೆಗೆ ಸಂಬಳಸಾರಿಗೆ, ಭತ್ಯ, ನಿವಾಸ, ಕಾರು ಮತ್ತು ಇತರ ಬಾಬುಗಳಿಗಾಗಿ ಒಟ್ಟು ೯ ಲಕ್ಷ ರೂ. ಖರ್ಚುಮಾಡಲಾಗಿದೆಯೆಂದು ಮುಖ್ಯಮಂತ್ರಿಗಳು ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ. ಒಟ್ಟು ೧೬ ಮೋಟಾರು ಕಾರುಗಳಿಗೆ ೧,೯೨,೭೮೧ ರೂ. ವೆಚ್ಚವಾಗಿದೆ. ೧೯೫೧-೫೨ ರಲ್ಲಿ ಆರು ಕಾರುಗಳಿಗೆ ೧,೦೩,೯೭೧ ರೂ. ಮತ್ತು ೧೯೫೨-೫೩ ರಲ್ಲಿ ೨೦,೪೦೦ ರೂ. ಖರ್ಚುಮಾಡಲಾಯಿತು.

೧೯೫೧-೫೨ ರಲ್ಲಿ ಸಚಿವರುಗಳ ಸಂಬಳಕ್ಕಾಗಿ ೬೧ ಸಾವಿರರೂ. ಸಂಚಾರಭತ್ಯ ೨೫೦೩೭ ರೂ, ನಿವಾಸ ೨೨೭೦೫, ಆಸನಾದಿ ವೆಚ್ಚ ೩೫೫ ರೂ. ಮತ್ತು ಕಾರುಗಳಿಗಾಗಿ ೧೨,೦೦೦ ರೂ.

ಕಂದಾಯದಾರರು ಗಮನಿಸಬೇಕು

ಮೈಸೂರು ಪೌರಸಭೆಯವರು ಇತ್ತೀಚೆಗೆ ಕಟ್ಟಡ ಅಬಾದ್ ಖಡಿಸಿದೆ ಬಾಡಿಗೆಗೂ ಕೊಡದೆ ಇರುವ ವಾಸಮಾಡುವ ಮನೆಗಳ ಮೇಲೆ ಎರಡುವರ್ಷ ಅವಧಿವಳಗಾಗಿ ದುಭಾರಿ ಕಂದಾಯಗಳನ್ನು ಹಾಕಿರುವುದು ಮತ್ತು ಸಂಬಂಧಪಟ್ಟ ಎಲ್ಲಾ ಕಂದಾಯಗಳನ್ನು ಹೆಚ್ಚಿಸುವುದು ಕ್ರಮವಾದುದಲ್ಲವೆಂದೂ, ಅನ್ಯಾಯವಾದುದೆಂದೂ, ಅಪೀಲಿಗೆ ಅವಕಾಶವಾದುದೆಂದು ಹೇಳಲಾಗಿದೆ. ಈ ಬಗ್ಗೆ ಅಪೀಲ್ ಮಾಡಲು ಇಷ್ಟಉಳ್ಳವರು ಬಸುಮಯ್ಯನವರ ಪೌಢಶಾಲೆ ಹಿಂಭಾಗದಲ್ಲಿರುವ ೯೦ ನೇ ನಂಬರ್ ರೂಮಿನಲ್ಲಿ ಪ್ರತಿನಿತ್ಯವೂ ಸಂಜೆ ೪ ರಿಂದ ೬ ಘಂಟೆವರೆವಿಗೆ ಅಚ್ಚಾಗಿರುವ ಅರ್ಜಿ ಫಾರಂಗಳನ್ನು ಪಡೆಯಬಹುದೆಂದು ಶ್ರೀ ಎಂ.ಸಿ.ನರಸಿಂಹಯ್ಯನವರು ತಿಳಿಸುತ್ತಾರೆ.

ನಗರದ ರೇಷನ್ ಅಧಿಕಾರಿಗಳ ಹುದ್ದೆ ರದ್ದು

ಮೈಸೂರು ನಗರದಲ್ಲಿ ರೇಷನ್‌ವ್ಯವಸ್ಥೆ ರದ್ದಾಗಿರುವುದರಿಂದ ಚೀಫ್ ರೇಷನಿಂಗ್ ಮತ್ತು ರೇಷನಿಂಗ್ ಆಫೀಸರುಗಳ ಹುದ್ದೆಗಳನ್ನು ಸರ್ಕಾರವು ರದ್ದು ಮಾಡಿದೆ. ರೇಷನಿಂಗ್ ಅಧಿಕಾರ ಕೆಲಸವನ್ನು ಜಿಲ್ಲಾಧಿಕಾರಿಗಳ ಫುಡ್ ಅಸಿಸ್ಟೆಂಟರು ನೋಡಿಕೊಳ್ಳುವರು.

ಭೂದಾನದ ಜೊತೆಗೆ ಹಣದ ವಸೂಲಿ

ಭಾರತದಾದ್ಯಂತ ಭೂದಾನ ಯಜ್ಞಕ್ಕಾಗಿ ಪ್ರವಾಸಗೊಂಡಿರುವ ಆಚಾರ್ಯ ವಿನೋಬಾಭಾವೆಯವರು ಇನ್ನುಮುಂದೆ ಭೂಮಿಗಳ ಜೊತೆಗೆ ನಗದು ಹಣವನ್ನೂ ಸ್ವೀಕರಿಸಲು ನಿರ್ಧರಿಸಿದ್ದಾರೆ.

ಸಹಕಾರ ವ್ಯವಸಾಯ ಕೇಂದ್ರಗಳು

ಸಂಸ್ಥಾನದಲ್ಲಿ ೧೯ ಸಹಕಾರ ವ್ಯವಸಾಯ ಫಾರಂಗಳು ಕೆಲಸ ಮಾಡುತ್ತಿವೆ. ಈ ಯೋಜನೆ ಇನ್ನೂ ಪ್ರಯೋಗಾವಸ್ಥೆಯಲ್ಲಿದೆ ಈಗಾಗಲೇ ೩೩೭೮ ಎಕರೆ ಪ್ರದೇಶಗಳನ್ನು ಸಾಗುವಳಿಗೆ ತರಲಾಗಿದೆ ಫಾರಂಗಳು ಚೆನ್ನಾಗಿ ಕೆಲಸಮಾಡುತ್ತಿವೆ. ಮಲೆನಾಡಿನಲ್ಲೂ ಇಂತಹ ಕೇಂದ್ರಗಳನ್ನು ವಿಶೇಷವಾಗಿ ಸ್ಥಾಪಿಸುವುದನ್ನು ಸರ್ಕಾರ ಪರಿಶೀಲಿಸುವುದೆಂದು ವ್ಯವಸಾಯ ಸಚಿವ ಶ್ರೀ ಸಿದ್ದವೀರಪ್ಪನವರು ವಿಧಾನಸಭೆಯಲ್ಲಿ ತಿಳಿಸಿರುತ್ತಾರೆ.

ಕೊರಿಯಾಶಾಂತಿ ಸಂಧಾನಕ್ಕೆ ಭಾರತದ ಸಹಾಯ

ಕೊರಿಯಾದಲ್ಲಿ ಶಾಂತಿ ನೆಲೆಸುವಂತೆ ಭಾರತವು ಪ್ರಯತ್ನಿಸಬೇಕೆಂದು ಬ್ರಿಟನ್ ಮತ್ತು ಅಮೆರಿಕಗಳು ಮನವಿ ಮಾಡಿದೆಯೆಂದು ಹೇಳಲಾಗಿದೆ.

ರಣಜಿತ್

24-10 52 ರಿಂದ

ಅಮೋಘ ಪ್ರಾರಂಭ

ಹೈದ್ರಾಬಾದ್-ಕಿ-ನಾಜನೀನ್ [ಹಿಂದಿ]

ನಿಗಾರ್, ಶಾಸ್ತ್ರಿ, ಮನಹರ್‌ದೇಸಾಯಿ ಮತ್ತು ದುರ್ಗಾಕೋಟೆ

ವುಡ್ ಲ್ಯಾಂಡ್ಸ್

24-10-52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಪ್ರದರ್ಶನಗಳು

ರಂಗೀಲಿ (ಹಿಂದಿ)

ಪಾತ್ರ:ರೆಹೆನಾ, ಯಾಕೂಬ್, ರಾಜಕುಮಾರ್.

ಅಪೇರ ೨೪-೧೦-೫೨ ರಿಂದ ಅಮೋಘ ೩ನೇವಾರ

ಪ್ರತಿದಿನ ಮೂರು ಆಟಗಳು

* ಮಾಪಿಳ್ಳೈ *

ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ

ಸಂಪುಟ 3

ಸಂಚಿಕೆ 54

೨೭-೧೦-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಭಾರತದ ಫ್ರೆಂಚ್ ಸ್ವಾಧೀನಸ್ಥಳಗಳಲ್ಲಿ ಗೂಂಡಾ ನೆರವಿನ ಸರ್ಕಾರ

ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಇಲ್ಲಿಯವರೆಗೆ ಫ್ರೆಂಚ್ ಸ್ವಾಸ್ಥ್ಯಗಳಲ್ಲಿ ೩೫೦ ಗೂಂಡಾ ವರ್ತನೆಗಳು ನಡೆದಿವೆಯೆಂದೂ, ಪಾಂಡಿಚೇರಿಯೊಂದರಲ್ಲೇ ೨೨ ಅಕ್ರಮ ಘಟನೆಗಳು ಆಗಿವೆಯೆಂದೂ ಕೇಂದ್ರ ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ. ಈ ಗೂಂಡಾಗಳ ಹಿಂಸಾ ಕೃತ್ಯಗಳನ್ನು ತಡೆಯಲಾರದೆ ೧೦೫೧ ಮಂದಿ ಸಂಸಾರಿಗಳು ಭಾರತಕ್ಕೆ ವಲಸೆ ಬಂದಿದ್ದಾರೆ. ಅನೇಕಬಾರಿ ಈ ಘಟನೆಗಳು ಬಹಿರಂಗವಾಗಿದೆ. ಅಲ್ಲಿನ ಪೋಲೀಸರ ಕೈವಾಡ ಮೂಸಹ ಇದೆ. ಫ್ರೆಂಚ್ ಪೋಲೀಸರು ಈ ಗೂಂಡಾಸಹಾಯದಿಂದ ಭಾರತದ ಗಡಿಯಲ್ಲಿ ೨೬ ಸಲ ಧಾಳಿ ನಡೆಸಿದರು— ಎಂದು ಅಧಿಕೃತವಾಗಿ ತಿಳಿಸಲಾಗಿದೆ.

ಆಹಾರ ಹತೋಟಿ ರದ್ದಾಗಕೂಡದು

ಪ್ಲಾನಿಂಗ್ ಕಮಿಷನ್ ಸಲಹಾ ಸಮಿತಿಯ ಅಭಿಪ್ರಾಯ

ಈಗಿರುವ ಆಹಾರ ಹತೋಟಿಯನ್ನು ಮುಂದುವರಿಸಬೇಕಲ್ಲದೆ ಬೆಲೆಯ ವಿಷಯದಲ್ಲಿ ಇನ್ನೂ ಕಟ್ಟುನಿಟ್ಟಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ಲಾನಿಂಗ್ ಕಮೀಷನ್ನಿನ ಸಲಹಾಸಮಿತಿಯ ಅನೇಕಸದಸ್ಯರು ಅಭಿಪ್ರಾಯಪಟ್ಟಿರುವುದಾಗಿ ವರದಿಯಾಗಿದೆ.

ಆಹಾರ ಹತೋಟಿಯನ್ನು ರದ್ದುಗೊಳಿಸುವ ಹೊಸ ಆಹಾರ ನೀತಿ ಬಗ್ಗೆ ಸಚಿವ ಶ್ರೀ ಕಿದ್ವಾಯಿಯವರು ಇತ್ತೀಚೆಗೆ ಕೊಟ್ಟಿರುವ ಹೇಳಿಕೆಗಳ ವಿಷಯದಲ್ಲಿ ಈ ಸದಸ್ಯರು ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸುವುದಾಗಿ ಹೇಳಲಾಗಿದೆ.

ಅಭಾವ ಪ್ರದೇಶಗಳಲ್ಲಿ ಪರಿಹಾರ

ಇದೇ ಸಾಲು ಏಪ್ರಿಲ್ ನಿಂದ ಅಕ್ಟೋಬರ್ ೧೫ ರವರೆಗೆ ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ಕಾಗಿ ಕೋಲಾರಜಿಲ್ಲೆಗೆ ಕ್ಷಾಮಪರಿಹಾರ ನಿಧಿಯಿಂದ ೨೩,೯೩,೫೦೦ ರೂ ಮತ್ತು ಹೆಚ್ಚು ಆಹಾರಬೆಳೆ ನಿಧಿಯಿಂದ ೬೭೨,೦೦೦ರೂ ತುಮಕೂರುಜಿಲ್ಲೆಗೆ ೪,೧೧,೦೦೦ ರೂ ಮತ್ತು ೩,೭೫ ೦೦೦ ರೂ; ಚಿತ್ರದುರ್ಗ ಜಿಲ್ಲೆಗೆ ೩ ೭೪,೫೦೦ರೂ ಮತ್ತು 220,000 ರೂ; ಬೆಂಗಳೂರುಜಿಲ್ಲೆಗೆ ೮೫ ಸಾವಿರ ರೂ ಮತ್ತು ೨,೭೫,೦೦೦ ರೂ; ಮೈಸೂರುಜಿಲ್ಲೆಗೆ ೭೯ ಸಾವಿರ ರೂ: ಮತ್ತು ೧,೭೫,೦೦೦ ರೂ; ಮಂಡ್ಯ ಜಿಲ್ಲೆಗೆ ೩,೬೮,೦೦೦ ರೂ ಮತ್ತು ೧,೧೭,೦೦೦ ರೂ; ಹಾಸನಜಿಲ್ಲೆಗೆ ೮೦ ಸಾವಿರ ರೂ ಮತ್ತು ೧,೫೦,೦೦೦ ರೂ; ಶಿವಮೊಗ್ಗ ಜಿಲ್ಲೆಗೆ ೭೫ ಸಾವಿರ ರೂ ಮತ್ತು ೧,೨೫,೦೦೦ ರೂ; ಚಿಕ್ಕಮಂಗಳೂರು ಜಿಲ್ಲೆಗೆ ೩೭ ಸಾವಿರ ರೂ ಮತ್ತು ಒಂದು ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ ಎಂದು ಮುಖ್ಯಮಂತ್ರಿಗಳು ಶಾಸನ ಸಭೆಯಲ್ಲಿ ತಿಳಿಸಿರುವರು.

ವಿಶ್ವಸಂಸ್ಥೆ ಸೈನ್ಯ ನಾಶ

೬,೬೦,೦೦೦ ವಿಶ್ವಸಂಸ್ಥೆ ಸೈನ್ಯ ಮತ್ತು ೯೩೦ ವಿಶ್ವಸಂಸ್ಥೆ ವಿಮಾನಗಳನ್ನು ಕಳೆದ ೩ ವರ್ಷಗಳಲ್ಲಿ ಕೊರಿಯಾ ರಣರಂಗದಲ್ಲಿ ನಾಶಪಡಿಸಿರುವುದಾಗಿ ಉತ್ತರಕೊರಿಯಾ ಮತ್ತು ಚೀನಾ ಯುದ್ಧ ವರದಿ ತಿಳಿಸುತ್ತದೆ.

ವಸ್ತುಗಳ ಹತೋಟಿ ಪರಿಶೀಲನಾ ಸಮಿತಿ

ಕೇಂದ್ರ ಹಿರಿಯಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಅಧ್ಯಕ್ಷತೆಯಲ್ಲಿ ಭಾರತಸರ್ಕಾರವು ವಸ್ತುಗಳ ಹತೋಟಿ ಪರಿಶೀಲನಾ ಸಮಿತಿಯನ್ನು ನೇಮಿಸಿದೆ.

ಈಗಿರುವ ಅನೇಕ ವಸ್ತುಗಳ ಹತೋಟಿ ಆಜ್ಞೆ ಅವುಗಳು ಹೇಗೆ ಕೆಲಸಮಾಡುತ್ತಿವೆ ಮುಂತಾದುವನ್ನು ಈ ಸಮಿತಿ ಪರಿಶೀಲಿಸಿ ಜನವರಿ ಒಂದನೇ ತಾರೀಖಿನವೇಳೆಗೆ ತನ್ನ ವರದಿಯನ್ನು ಒಪ್ಪಿಸಬೇಕಾಗಿದೆ.

ವಿವಾಹ ಮಹೋತ್ಸವ

ಮೈಸೂರು ವಿಧಾನಸಭೆಯ ಉಪಾಧ್ಯಕ್ಷರಾದ ಶ್ರೀ ಸಿ. ಗೋಪಾಲಕೃಷ್ಣಶೆಟ್ಟರು ತಮ್ಮ ಪುತ್ರ ಶ್ರೀ ಲಕ್ಷ್ಮೀನಾರಾಯಣಶೆಟ್ಟಿಯವರಿಗೆ ಮದನಪಲ್ಲಿ ಮಾಕಂ ಸುಬ್ಬರಾಯಶೆಟ್ಟಿಯವರ ಪುತ್ರಿ ಚಿ|| ಸೌ|| ಶ್ರೀಮತಿ ದೇವಿಯವರನ್ನು ತಂದುಕೊಂಡು ವಿವಾಹ ಮಹೋತ್ಸವವನ್ನು ಈದಿನ ಮದನಪಲ್ಲಿಯಲ್ಲಿ ನೆರವೇರಿಸಿದರು.

ಖಾಸಗಿ ಕಾಲೇಜು ನೌಕರರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ

ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ನೌಕರವ್ಯಾನೇಜರುಗಳ ಮಕ್ಕಳಿಗೆಲ್ಲಾ ವಿದ್ಯಾಭ್ಯಾಸವನ್ನು ಉಚಿತವಾಗಿ ಕೊಡುವ ನೀತಿಯನ್ನು ಒಪ್ಪಿ ಅದನ್ನು ಜಾರಿಗೆತರುವಂತೆ ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಸೇರಿರುವ ಖಾಸಗಿ ಮತ್ತು ಏಡೆಡ್ ಕಾಲೇಜುಗಳನ್ನು ಕೋರುವ ನಿರ್ಣಯವನ್ನು ಅಲ್ಲಿಯ ಸೆನೆಟ್‌ಸಭೆಯು ಮಾಡಿದೆ.

ಐಸೆನ್ ಹೋವರರ ಪ್ರಚಾರ ಭಾಷಣ

ತಾವು ಅಮೆರಿಕಾ ಅಧ್ಯಕ್ಷರಾದಲ್ಲಿ ಕೊರಿಯಾ ಯುದ್ಧ ಮುಕ್ತಾಯಮಾಡಲೋಸುಗ ಕೊರಿಯಾಕ್ಕೆ ಹೋಗುವುದಾಗಿ ಅಧ್ಯಕ್ಷಸ್ಥಾನಕ್ಕೆ ಉಮೇದುವಾರರಾಗಿ ನಿಂತಿರುವ ಜನರಲ್ ಐಸನ್ ಹೋವರ್‌ರವರು ತಮ್ಮ ಪ್ರಚಾರಭಾಷಣವೊಂದರಲ್ಲಿ ಹೇಳಿದ್ದಾರೆ.

ಆಹಾರದ ಹತೋಟಿ ರದ್ದಾಗಬೇಕು

ಮೈಸೂರು, ಅ. ೨೬

ಮೊನ್ನೆ ಸಂಜೆ ಟೌನ್‌ಹಾಲಿನಲ್ಲಿ ನಗರದ ರೇಷನ್‌ಕಾರ್ಡುದಾರರ ಸಂಘದ ಆಶ್ರಯದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ದೇಶದಲ್ಲಿರುವ ಆಹಾರದಮೇಲಿನ ಹತೋಟಿಯನ್ನು ಸಂಪೂರ್ಣವಾಗಿ ರದ್ದುಮಾಡಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು.

ಪಾರ್ಲಿಮೆಂಟ್ ಸದಸ್ಯ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಬಿ. ಜಿ. ದಾಸ್ ಮತ್ತು ಕೊದಂಡರಾಮಪಿಳ್ಳೆಯವರು ಭಾಷಣಮಾಡಿ, ದೇಶದಲ್ಲಿ ಉಂಟಾಗಿರುವ ಅನೇಕ ಅನರ್ಥಗಳು ಹೋಗಬೇಕಾದರೆ ಆಹಾರದ ಹತೋಟಿ ರದ್ದಾಗಬೇಕೆಂದೂ, ರೈತ, ವರ್ತಕ ಮತ್ತು ಕೊಳ್ಳುವವರಿಗೇ ಹಾರಾಟ ಬಿಡಬೇಕೆಂದೂ ತಿಳಿಸಿದರು. ಭತ್ತ, ರಾಗಿ ಮತ್ತು ಜೋಳಗಳ ಕೊಳ್ಳುವ ಬೆಲೆಯನ್ನು ಹೆಚ್ಚಿಸಬೇಕೆಂದು ಕೆಲವು ಶಾಸನ ಸಭಾ ಸದಸ್ಯರು ಅಭಿಪ್ರಾಯಪಟ್ಟಿರುವುದನ್ನು ಖಂಡಿಸಿ ಅದರಿಂದ ಜಮೀನುದಾರರಿಗೆ ಉಪಯೋಗವಾಗುವುದೇ ಹೊರತು ಜನಸಾಮಾನ್ಯರಿಗಲ್ಲವೆಂದೂ, ಇನ್ನು ಮುಂದೆ ಶಾಸನಸಭಾ ಸದಸ್ಯರನ್ನು ಚುನಾಯಿಸುವಾಗ ಉಮೇದುವಾರರಿಂದ ಜನರ ಹಿತಸಾಧನೆ ಬಗ್ಗೆ ಪ್ರತಿಜ್ಞೆ ತೆಗೆದುಕೊಳ್ಳಬೇಕೆಂದು ಅವರು ಹೇಳಿದರು.

ಗೋವಧೆ ನಿರೋಧ ಚಳುವಳಿ

ಮೈಸೂರು ೨೬

ಭಾರತದಾದ್ಯಂತ ಆರ್.ಎಸ್.ಎಸ್ ಸಂಸ್ಥೆಯವರು ಕೈಗೊಂಡಿರುವ ಗೋವಧೆ ನಿರೋಧ ಚಳುವಳಿಯು ನಿನ್ನೆ ರಾಜಧಾನಿಯಲ್ಲಿ ಪ್ರಾರಂಭಿಸಲಾಯಿತು. ಬೆಳಗ್ಗೆ ಆರ್. ಎಸ್. ಎಸ್. ಸ್ವಯಂಸೇವಕರು ಪ್ರತಿ ಮೊಹಲ್ಲಾದಲ್ಲೂ ಮೆರವಣಿಗೆ ನಡೆಸಿದರು.

ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಡಾ|| ಬಿ ಜಿ. ದಾಸ್‌ರವರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗಸಭೆಯಲ್ಲಿ ದೇಶದಲ್ಲಿ ಗೋವಧೆಯನ್ನು ಸಂಪೂರ್ಣವಾಗಿ ನಿಷೇಧಿಸಲು ಕಾನೂನು ಮಾಡಬೇಕೆಂದು ಕೇಂದ್ರಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯ ಮಾಡಲಾಯಿತು. ಶ್ರೀಗಳಾದ ಕೆ. ಸೂರ್ಯನಾರಾಯಣರಾಯರು ಮತ್ತು ಚಂದ್ರಶೇಖರ ಜೋಯಿಸ್‌ರವರು ಭಾಷಣಮಾಡಿ, ಈ ಚಳುವಳಿಗೆ ಸಾರ್ವಜನಿಕರು ಸಹಕಾರ ನೀಡಬೇಕೆಂದು ಕೋರಿದರು.

ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಸಹಾಯ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದ ಸಂಘದ ಸಹಾಯಾರ್ಥವಾಗಿ ಪ್ರಭಾ ಚಿತ್ರಮಂದಿರದಲ್ಲಿ ನಿನ್ನೆ ಪತಂಗ ಎಂಬ ಚಿತ್ರಪ್ರದರ್ಶನ ನಡೆಯಿತು. ಮಂದಿರದ ಮಾಲೀಕರಾದ ಶ್ರೀ ರಟ್ಟಿಹಳ್ಳಿ ರಾಮಪ್ಪನವರು ದಯಮಾಡಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಡಾ|| ಎಂ. ವಿ. ಕೃಷ್ಣರಾಯರು ಸಾರ್ವಜನಿಕ ವಿದ್ಯಾರ್ಥಿನಿಲಯದ ಕಾರ್ಯಗಳನ್ನು ಪ್ರಶಂಸಿಸಿ ಇಂತಹ ಸಂಸ್ಥೆಗೆ ಸಾರ್ವಜನಿಕರು ಬೆಂಬಲ ನೀಡಬೇಕೆಂದು ತಿಳಿಸಿದರು ನಿಲಯದ ಕಾರ್ಯದರ್ಶಿ ಸಹಾಯ ನೀಡಿದ ಸಾರ್ವಜನಿಕರಿಗೂ ವಿದ್ಯಾರ್ಥಿಗಳಿಗೂ ಮತ್ತು ಮಂದಿರದವರಿಗೂ ವಂದನೆಯನ್ನು ಅರ್ಪಿಸಿದರು.

ಅಧ್ಯಕ್ಷರು ಮಾತನಾಡಿ, ಭಾರತ ಸರಕಾರದ ಈಗಿನ ಆಹಾರ ನೀತಿಯನ್ನು ಟೀಕಿಸಿದರು. ಕೋಟ್ಯಾಂತರ ರೂ. ಗಳನ್ನು ಖರ್ಚುಮಾಡಿದ್ದರೂ ಶೇಕಡ ೧೦ ರಷ್ಟು ಆಹಾರ ಕೊರತೆಯನ್ನು ದೇಶದಲ್ಲಿ ಇನ್ನು ಸರಿಪಡಿಸದಿರುವುದು ಸರ್ಕಾರದ ಅಸಮರ್ಥತೆ ಕಂಡುಬಂದಿದೆಯೆಂದೂ, ಇನ್ನುಮುಂದಾದರೂ, ಆಹಾರದ ಹತೋಟಿಯನ್ನು ರದ್ದುಮಾಡಿ, ರೈತರಿಗೆ ಇನ್ನೂ ಹೆಚ್ಚಿನ ಉತ್ಸಾಹ ಕೊಟ್ಟರೆ ಆಹಾರದ ಕೊರತೆ ಹೋಗುವುದೆಂದು ತಿಳಿಸಿದರು.

ಆ ಹಾ ರ ಸಾ ಗ ಣಿ ಕೆ ನಿರ್ಬಂಧ ರದ್ದು

ನವಂಬರ್ ಒಂದರಿಂದ ಜಾರಿಗೆ ಬರಲಿದೆ

ಅಕ್ಕಿ ಮತ್ತು ಗೋಧಿ ಬಿಟ್ಟು ಉಳಿದ ಆಹಾರವಸ್ತುಗಳ ಸಾಗಾಣಿಕೆಯ ಬಗ್ಗೆ ಇದ್ದ ನಿರ್ಬಂಧವನ್ನೆಲ್ಲಾ ದೇಶದ ಅನೇಕ ಭಾಗಗಳಲ್ಲಿ ನವಂಬರ್ ಒಂದನೇ ತಾರೀಖಿನಿಂದ ಭಾರತ ಸರ್ಕಾರವು ರದ್ದುಗೊಳಿಸಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ ಈಬಗ್ಗೆ ಸದ್ಯದಲ್ಲೆ ಒಂದು ಆಜ್ಞೆಯ ಹೊರಬೀಳಲಿದೆ.

ಮಾರ್ಚಿ ೧೯೫೩ ರ ವೇಳೆಗೆ ೩ ಪ್ರದೇಶಗಳು ಬಿಟ್ಟು ಉಳಿದೆಡೆ ಗೋಧಿ ಸಾಗಾಣಿಕೆ ಬಗ್ಗೆ ನಿರ್ಬಂಧ ತೆಗೆದು ಹಾಕಲಾಗುತ್ತದೆ.

ಅಕ್ಕಿ ಸಾಗಾಣಿಕೆ ಬಗ್ಗೆ ಹತೋಟಿಯನ್ನು ರದ್ದುಗೊಳಿಸುವುದಿಲ್ಲವೆಂದು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಹೇಳಿರುವರು.

ಸಿಂಹಳದಲ್ಲಿ ಭಾರತ ಹೈಕಮೀಷನರ್

ನೇಪಾಳ ಭಾರತ ರಾಯಭಾರಿಯಾಗಿದ್ದ ಶ್ರೀ ಸಿ. ಪಿ. ಎನ್. ಸಿಂಗ್‌ರವರನ್ನು ಸಿಂಹಳದಲ್ಲಿ ಭಾರತ ಹೈಕಮೀಷನರಾಗಿ ನೇಮಿಸಲಾಗಿದೆ.

ಕಾಗದ ಮತ್ತು ರೇಷ್ಮೆ ಕಾರ್ಖಾನೆಗಳು ಬಿರ್ಲಾರವರಿಗೆ

ಹೈದರಾಬಾದಿನಲ್ಲಿರುವ ಸಿ ರ ಪೂ ರು ಕಾಗದ ಕಾರ್ಖಾನೆ ಮತ್ತು ಸರ್ ಸಿಲ್ಕ್ ಕಂಪೆನಿಯ ಆಡಳಿತವನ್ನು ಬಿರ್ಲಾರವರಿಗೆ ಒಪ್ಪಿಸಲು ಹೈದರಾಬಾದ್ ಸರ್ಕಾರವು ಅಂತ್ಯ ತೀರ್ಮಾನ ಮಾಡಿರುವುದಾಗಿ ವರದಿಯಾಗಿದೆ. ಸರ್ಕಾರವು ಶೇ ಕ ಡ ೫೧ ರಷ್ಟು ಷೇರುಗಳನ್ನು ಹೊಂದಿರುತ್ತದೆ. ಈ ಕಾರ್ಖಾನೆಗಳನ್ನು ಉತ್ತಮಗೊಳಿಸಲು ಬೇಕಾಗುವ ಬಂಡವಾಳವನ್ನೆಲ್ಲಾ ಬಿರ್ಲಾರವರು ಹಾಕಲು ಸಿದ್ಧರಿದ್ದಾರೆ.

ಶ್ರೀ ಬಿ. ರಾಚಪ್ಪ

ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ಶ್ರೀ ಬಿ. ರಾಚಪ್ಪನವರನ್ನು ನಿಮ್ನ ವರ್ಗದ ಅಭಿವೃದ್ಧಿ ಶಾಖೆಯ ವಿಶೇಷಾಧಿಕಾರಿಗಳ ಜೊತೆಗೆ ಪರಸ್ಪರ ಸಹಾಯ ಸಂಘಗಳ ರಿಜಿಸ್ಟ್ರಾರಾಗಿ ನೇಮಕಮಾಡಲಾಗಿದೆ.

ಶ್ರೀ ಕೆ. ಆರ್. ಮರುದೇವೇಗೌಡರನ್ನು ಪರಸ್ಪರ ಸಹಾಯ ಸಂಘದ ಜಾಯಿಂಟ್ ರಿ ಜಿ ಸ್ಟ್ರಾ ರ್‍ರಾ ಗಿ ನೇಮಿಸಲಾಗಿದೆ.

ಮಹಾರಾಜರಿಗೆ ಸೇರಿರುವ ಜಮೀನುಗಳಮೇಲೆ ತೆರಿಗೆ

ಬೆಂಗಳೂರು ಅ ೨೭

ಶ್ರೀಮನ್ಮಹಾರಾಜರಿಗೆ ಹುಲ್ಲುಗಾವಲು ೩,೩೨೭ ಎಕರೆ ೩೮ ಗುಂಟೆ, ತರೀ ೨೪೬೭ ಎ ೨ ಗುಂ, ಖುಷ್ಕಿ ೧೩,೭೯೯ ಎ ೭ ಗುಂ ಬಾಗಾಯಿತು ೮೦೩ ಎ ೩೪ಗುಂ ಈರೀತಿ ಸೇರಿವೆ. ಅವುಗಳಿಗೆ ಕಂದಾಯವನ್ನು ಕೊಡಬೇಕೆಂದು ೧೯೫೧ನೇ ಫೆಬ್ರವರಿಯಲ್ಲಿಯೇ ವಿಧಾಯಕವಾಗಿದೆ. ಒಟ್ಟು ವಿಧಿಸಬೇಕಾಗಿರುವ ತೆರಿಗೆಯ ಮೊಬಲಗು ನಿಗದಿಮಾಡುವ ಕೆಲಸವು ನಡೆಯುತ್ತಿರುವುದಾಗಿ ಶಾಸನ ಸಭೆಯಲ್ಲಿ ಮುಖ್ಯಮಂತ್ರಿಗಳು ಹೇಳಿರುವರು.

ಜಾಯಿಂಟ್ ಸ್ಟಾಕ್ ಕಂಪೆನಿ ರಿಜಿಸ್ಟ್ರಾರು ಕೇಂದ್ರದಅಧೀನ

ಸಂಸ್ಥಾನಗಳಲ್ಲಿರುವ ಜಾ ಯಿಂ ಟ್ ಸ್ಟಾಕು ಕಂ ಪೆ ನಿ ಯ ರಿಜಿಸ್ಟ್ರಾರುಗಳು ಕೇಂದ್ರಸರ್ಕಾರದ ಅಧೀನದಲ್ಲಿರಲು ಸಲಹೆಯನ್ನು ಕೇಂದ್ರಸರ್ಕಾರವು ಪ್ರಾಂತ್ಯ ಸರ್ಕಾರಗಳಿಗೆ ಮಾಡಿರುವುದಾಗಿ ಗೊತ್ತಾಗಿದೆ.

೫೦೦೦ ಖೈದಿಗಳ ಬಿಡುಗಡೆ

ಮದ್ರಾಸ್‌ಪ್ರಾಂತ್ಯದಲ್ಲಿರುವ ವಿವಿಧ ಕಾರಾಗೃಹಗಳಲ್ಲಿ ಖೈದಿಗಳ ಸಂದಣಿ ಹೆಚ್ಚಾಗಿರುವುದರಿಂದ ಅಕ್ಟೋಬರ್ ೨೫ರ ವೇಳೆಗೆ ಒಂದು ತಿಂಗಳಿಗಿಂತ ಕಡಿಮೆಶಿಕ್ಷೆ ಅನುಭವಿಸಬೇಕಾಗಿರುವಖೈದಿಗಳನ್ನೆಲ್ಲಾ ಬಿಡುಗಡೆಮಾಡಲು, ಕೇಂದ್ರದ ಒಪ್ಪಿಗೆ ಪಡೆದು ಮದ್ರಾಸ್ ಸರ್ಕಾರವು ಆಜ್ಞೆಯಿತ್ತಿದೆ. ಇದರಿಂದ ಸುಮಾರು ೫೦೦೦ ಖೈದಿಗಳ ಬಿಡುಗಡೆಯಾದಗಿ.

ಕಾಂಗ್ರೆಸ್ಸಿಗರ ಮೇಲೆ ಕಾರ್ಯಕ್ರಮ

ಮಹಾಚುನಾವಣೆಗಳು ನ ಡೆ ದಾ ಗ ಕೆಲವು ಕಾಂಗ್ರೆಸ್ಸಿಗರ ಬಗ್ಗೆ ಕಾರ್‍ಯಕ್ರಮವೇನಾದರೂ ತೆಗೆದುಕೊಳ್ಳಬೇಕಾದರೆ ಅಖಿಲಭಾರತ ಕಾಂಗ್ರೆಸ್ ಸ ಮಿ ತಿ ಯ ಪೂರ್ವಭಾವಿ ಒಪ್ಪಿಗೆ ಪಡೆಯಬೇಕೆಂದು ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಅಗರವಾಲಾರವರು ತಿಳಿಸಿರುತ್ತಾರೆ.

ಭಾರತ-ಪಾಕೀಸ್ತಾನ ಗಡಿಯಲ್ಲಿ ೪ ಗಂಟೆಕಾಲ ಗೋಲಿಬಾರು

ಭಾರತಕ್ಕೆ ಸೇ ರಿ ರು ವ ಪಂಜಾಬ್ ಪಾಕೀಸ್ತಾನ ಪಂಜಾಬ್ ಗಡಿಪ್ರದೇಶದಲ್ಲಿ ಭಾರತ ಮರಾಮತ್ ಇಲಾಖೆಯವರು ಒಳಚರಂಡಿಗಾಗಿ ಸರ್ವೆ ನಡೆಸುತ್ತಿರುವಾಗ ಪಾಕೀಸ್ತಾನ ಪೋಲೀಸಿನವರು ಅಡ್ಡಬಂದು ಗುಂಡು ಹಾರಿಸಲಾಗಿ ಭಾರದಕಡೆಯಿಂದಲೂ ಪೋಲೀಸಿನವರು ಗುಂಡುಹಾರಿಸಿದರು. ಮಧ್ಯಾಹ್ನ ೨-೩೦ ಗಂಟೆಗೆ ಪ್ರಾರಂಭವಾದ ಈ ಗುಂಡುಗಳ ಸುರಿಮಳೆಯು ಸಂಜೆ ೬-೩೦ ರವರೆಗೂ ನಡೆದುವೆಂದು ಹೇಳಲಾಗಿದೆ.

ಮದ್ರಾಸಿಗೆ ಮೈಲೋ

ಆಹಾರ ಅಭಾವ ಪ್ರದೇಶಗಳ ಉಪಯೋಗಕ್ಕಾಗಿ ಹೆಚ್ಚಿಗೆ ಮೈಲೋ ಹೊಂದಿರುವ ಪ್ರಾಂತ್ಯಗಳೆಲ್ಲಾ ತಮ್ಮಲ್ಲಿರುವ ದಾಸ್ತಾನನ್ನು ಕೂಡಲೇ ಮದ್ರಾಸ್‌ಪ್ರಾಂತ್ಯಕ್ಕೆ ರವಾನಿಸಬೇಕೆಂದು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಪ್ರಾಂತ್ಯ ಸರ್ಕಾರಗಳಿಗೆ ಸೂಚನೆಯನ್ನಿತ್ತಿದ್ದಾರೆಂದು ಗೊತ್ತಾಗಿದೆ.

ಜಯಪ್ರಕಾಶ್ ಆಫ್ರಿಕಾಕ್ಕೆ

ಪೂರ್ವ ಮತ್ತು ಪಶ್ಚಿಮ ಆಫ್ರಿಕಾಗಳೊಡನೆ ಸಂಪರ್ಕವನ್ನು ಇಟ್ಟುಕೊಳ್ಳುವುದಕ್ಕಾಗಿ ಪ್ರಜಾ ಸೋಷಲಿಸ್ ಪಕ್ಷದ ನಾಯಕರಾದ ಶ್ರೀ ಜಯಪ್ರಕಾಶರು ಪ್ರವಾಸ ಕೈಗೊಳ್ಳಲಿರುವರೆಂದು ತಿಳಿದುಬಂದಿದೆ.

ರಾಜೇಂದ್ರ ಪ್ರಸಾದರ ಗ್ರಂಥಾವಳಿನಿಧಿ

ತಾವು ಬರೆದ ಗ್ರಂ ಥ ಗ ಳ ಉತ್ಪತ್ತಿಯಿಂದ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್‌ರವರು ೩ ಲಕ್ಷ ರೂಪಾಯಿನ ನಿಧಿಯನ್ನು ಸ್ಥಾಪಿಸಿರುವರು. ಭಾರತ ಮಹಿಳೆಯರ ಉದ್ಧಾರಕ್ಕಾಗಿ ಈ ಹಣವನ್ನು ಹೆಚ್ಚಾಗಿ ಉಪಯೋಗಿಸಲಾಗುತ್ತದೆ.

ವು ಡ್ ಲ್ಯಾ ೦ ಡ್ಸ್

24-10-52 ರಿಂದ ಆಮೋಘ ಪ್ರಾರಂಭ

ಪ್ರತಿದಿನ ೩ ಪ್ರದರ್ಶನಗಳು

ರಂಗೀಲಿ (ಹಿಂದಿ)

ಪಾತ್ರ: ರೆಹೆನಾ, ಯಾಕೂಬ್, ರಾಜಕುಮಾರ್.

ಅಪೇರ ೨೪-೧೦-೫೨ ರಿಂದ ಅಮೋಘ ೨ನೇವಾರ

ಪ್ರತಿದಿನ ಮೂರು ಆಟಗಳು

* ಮಾಪಿಳ್ಳೈ *

ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

—: ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಗಿರಣಿ ಬಟ್ಟೆಗಳಮೇಲೆ ಸೆಸ್ಸು

ಕೈಮಗ್ಗ ಬಟ್ಟೆಕೈಗಾರಿಕೆ ಬಗ್ಗೆ ಸಲಹಾಸಮಿತಿ ನೇಮಕ

ಕೈಮಗ್ಗದ ಬಟ್ಟೆ ಕೈಗಾರಿಕೆ ಯ ಪರಿಸ್ಥಿತಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡಲು ಭಾರತ ಸರ್ಕಾರವು ಒಂದು ಸ ಲ ಹಾ ಸಮಿತಿಯನ್ನು ನೇಮಿಸಿದೆ.

ಕೈ ಮ ಗ್ಗ ಕೈಗಾರಿಕೆ ಪ್ರೋತ್ಸಾಹ ಮತ್ತು ಸಹಾಯನೀಡಲು ಒಂದು ನಿಧಿಯನ್ನು ಸ್ಥಾಪಿಸಲು ಸರ್ಕಾರವು ಯೋಚಿಸಿದೆ. ಈ ನಿಧಿಗಾಗಿ ಗಿರಣಿ ಬಟ್ಟೆಗಳ ಮೇ ಲೆ ಗಜ ಒಂದಕ್ಕೆ ೩ ಕಾಸಿನಂತೆ ಸೆಸ್ಸು ವಿಧಿಸಲು ಯೋಚಿಸಿದೆ. ಇದರಿಂದ ವ ರ್ಷ ಕ್ಕೆ ೬ ಕೋಟಿ ರೂಪಾಯಿಗಳ ಉತ್ಪತ್ತಿ ಬರುವುದು-ಎಂದು ಗೊತ್ತಾಗಿದೆ.

ಪಾಕ್ ನಾಯಕರೊಡನೆ ಮಿರ್ಜಾರ ಭೇಟಿ

ವಿದೇಶ ಪ್ರವಾಸ ಮುಗಿಸಿಕೊಂಡು ಭಾರತಕ್ಕೆ ಹಿಂತಿರುಗುತ್ತಲಿರುವ ಮೈಸೂರಿನ ಮಾಜಿ ದಿವಾನರಾದ ಮಿ|| ಮಿರ್ಜಾರವರಿಗೆ ಕರಾಚಿಯಲ್ಲಿ ಭಾರತ ಡೆಪ್ಯುಟಿ ಹೈಕಮಿಷನರು ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಮಿ|| ಮಿರ್ಜಾರವರು ಕರಾಚಿಯಲ್ಲಿದ್ದಾಗ 'ಪಾಕೀಸ್ತಾನ ಗೌರ್ನರ್ ಜನರಲ್ ಮತ್ತು ಪ್ರಧಾನಿಯನ್ನು ಭೇಟಿ ಮಾಡಿದ್ದರೆಂದು ಗೊತ್ತಾಗಿದೆ.

ಫೋನ್ 574
ರಿ ಜಿ ಸ್ಟ ರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 55

೨೮-೧೦-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಡಿಸೆಂಬರಿನಿಂದ ಕಾಶ್ಮೀರಕ್ಕೆ ಚುನಾಯಿತ ಅಧಿಪತಿ

ಭಾರತ ರಾಜ್ಯಾಂಗದ ೩೭೦ ನೇ ವಿಧಿಯನ್ನು ರಾಷ್ಟ್ರಾಧ್ಯಕ್ಷರು ತಿದ್ದುಪಡಿಮಾಡಿ ಕಾಶ್ಮೀರ ಪ್ರಾಂತ್ಯಕ್ಕೆ ಒಬ್ಬ ಅ ಧಿ ಪ ತಿ ಯನ್ನು ಇದೇ ನವಂಬರ್ ಮಾಹೆಯಲ್ಲಿ ಚು ನಾ ಯಿ ಸಿಕೊಳ್ಳಲಾಗುತ್ತದೆಯೆಂದು ಹೇಳಲಾಗಿದೆ. ಡಿಸೆಂಬರ್‌ನಲ್ಲಿ ಹೊ ಸ ಅಧಿಪತಿಯ ಅ ಧಿ ಕಾ ರ ಸ್ವೀಕಾರವಾಗಬಹುದೆಂದು ತಿಳಿಯಬರುತ್ತದೆ.

ಈ ರಾ ಜ್ಯಾಂ ಗ ತಿದ್ದುಪಡಿಯನ್ನು ಪಾ ರ್ಲಿ ಮೆಂ ಟ್ ಮಾಡಬೇಕಾಗಿಲ್ಲ. ರಾಷ್ಟ್ರಾಧ್ಯಕ್ಷರೇ ಮಾಡಬಹುದಾಗಿದೆ. ನೂತನ ಅಧಿಪತಿಯನ್ನು 'ಸರ್ದಾರ್-ಇ-ರಿ ಸಾಯತ್' ಎಂದು ಕರೆಯಲಾಗುತ್ತದೆ.

ಈ ಚುನಾವಣೆಯಾದನಂತರ ಹಿಂದಿನ ಮಹಾರಾಜರಿಗೆ ಯಾವ ವಿರಾಮ ವೇತನವನ್ನು ಕಾಶ್ಮೀರ ಸರ್ಕಾರವು ಕೊಡಲು ಇಷ್ಟಪಟ್ಟಿಲ್ಲವೆಂದು ಹೇಳಲಾಗಿದೆ.

ಹೊಸ ಅಧಿಪತಿಗೆ ಭಾರತದ ಇತರ ಪ್ರಾಂತ್ಯದ ಗೌರ್ನರುಗಳಂತೆ ಸಂ ಬ ಳ ಮತ್ತು ಇತರ ಭತ್ಯಗಳನ್ನು ಕೊಡಲಾಗುತ್ತದೆ.

ಪ್ರಜಾಸಂಘದ ಪುನರ್ಜನ್ಮ

ಮೈಸೂರು ೨೮

ಮೊನ್ನೆ ಸಂಜೆ ಸಂತೇಪೇಟೆಯಲ್ಲಿರುವ ಶ್ರೀ ಎ. ವೆಂಕಟೇಶಯ್ಯನವರ ಆಫೀಸಿನಲ್ಲಿ ಸಭೆಯೊಂದು ಸೇ ರಿ ಮುಂಬರುವ ಪೌರಚುನಾವಣೆ ಬಗ್ಗೆ ಅನುಸರಿಸಬೇಕಾದ ನೀತಿನಿಯಮಗಳ ಬಗ್ಗೆ ಚರ್ಚೆನಡೆಯಿತು. ಕೆ. ಎಂ. ಪಿ. ಪಕ್ಷದೊಡನೆ, ವಿಲೀನವಾಗಿದ್ದ ಪ್ರಜಾಸಂಘಕ್ಕೆ ಪುನರ್ಜನ್ಮ ಕೊಟ್ಟು, ಆ ಹೆ ಸ ರಿ ನ ಲ್ಲಿ ಯೇ ಮೈಸೂರು ಪುರಸಭೆಯ ಚುನಾವಣೆಗಳಲ್ಲಿ ಭಾಗವಹಿಸಬೇಕೆಂದೂ ತೀರ್ಮಾನವಾಯಿತು. ಈ ಸಂಘದೊಡನೆ ಇತರ ಎಲ್ಲಾ ಕಾಂಗ್ರೆಸ್ ವಿರೋಧಪಕ್ಷ ಸದಸ್ಯರು ಏಕೀಭವಿಸಿ ಚುನಾವಣೆಗೆ ಉಮೇದುವಾರರನ್ನು ನಿಲ್ಲಿಸಲು ಏರ್ಪಾಡು ಮಾಡಬೇಕೆಂದೂ ತೀರ್ಮಾನವಾಯಿತೆಂದು ಗೊತ್ತಾಗಿದೆ.

ಗೀತಾ ಉಪನ್ಯಾಸ ಮಾಲೆ

ಮಹಾರಾಜಾ ಕಾಲೇಜ್ ಸಂಸ್ಕೃತ ಸಂಘದ ಆಶ್ರಯದಲ್ಲಿ ಕಾಶಿ ವಿಶ್ವ ವಿದ್ಯಾನಿಲಯದ ಗೀತಾ ಸಮಿತಿಯ ಪರೀಕ್ಷೆಗೆ ಕಟ್ಟಿರುವ ಮೈಸೂರು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಕಳೆದ ವಾರ ಒಂದು ಉಪನ್ಯಾಸಮಾಲೆ ಏರ್ಪಡಿಸಲಾಗಿತ್ತು. ಶ್ರೀಗಳಾದ ಎಂ. ಯಮುನಾಚಾರ್ಯ, ವಿ. ಟಿ. ತಿರುನಾರಾಯಣಯ್ಯಂಗಾರ್ ಮತ್ತು ಜಿ ಸೀತಾರಾಮಯ್ಯನವರುಗಳು ಗೀತಾ ವಿಚಾರದಲ್ಲಿ ಭಾಷಣ ಮಾಡಿದರು.

ಪಬ್ಲಿಕ್ ಲೈಬ್ರೆರಿ

ಮೈಸೂರು ಪಬ್ಲಿಕ್ ಲೈಬ್ರೇ ಕಾರ್ಯಕಾರಿ ಸ ಮಿ ತಿ ಗೆ ಶ್ರೀಗಳಾದ ಎಸ್. ಶಾಮಣ್ಣ, ಎಸ್. ರಾಮಸ್ವಾಮಿ, ಡಿ. ವಿ ನರಸಿಂಹರಾವ್, ಆದಿಕೇಶವಲು, ಎಸ್ ನರಸಿಂಹಮೂರ್ತಿ, ಅಯ್ಯಣ್ಣ, ಎಂ. ಗಂಗಾಧರಮೂರ್ತಿ, ಎಗ್. ತಮ್ಮಯ್ಯ, ವಿ. ಪ್ರಫುಲ್ಲಚಂದ್ರ ಮತ್ತು ಶ್ರೀಮತಿ ಸಿ. ಆರ್. ಶೇಷಮ್ಮರವರುಗಳು ಚುನಾಯಿತರಾಗಿದ್ದಾರೆ.

ನಾಲ್ಕು ಹುಲಿ ಮರಿಗಳ ವಶ

ಹಾಸನದ ಸಮೀಪದಲ್ಲಿರುವ ಶೀಗೆಗುಡ್ಡದ ಅಡಗೂರು ಎಂಬಲ್ಲಿ ಜಿಲ್ಲಾ ಬೋರ್ಡ್ ಸದಸ್ಯರಾದ ರ್‍ಯಾಟ್ಲಿಫ್‌ರವರು ಒಂದು ಭಾ ರಿ ಹುಲಿಯನ್ನು ಕೊಂದು, ಅದರ ೪ ಮ ರಿ ಗ ಳ ನ್ನು ತಂದಿದ್ದಾರೆ. ಹುಲಿಯು ನಾಲ್ಕು ಮರಿಗಳನ್ನು ಹಾಕಿರುವುದು ಆಶ್ಚರ್ಯಕರವಾದ ಸಂ ಗ ತಿ ಯೆಂದು ಹೇಳಲಾಗಿದೆ.

ಬ್ರಹ್ಮಪಾರಾಯಣ ಯಜ್ಞ

ವೇದಾಧ್ಯಯನ ಸಂಪನ್ನರಾದ ಬ್ರಾಹ್ಮಣರಿಗೆ ಉತ್ತೇಜನಕೊಡುವ ಸಲುವಾಗಿ ಬೊಂಬಾಯಿನಲ್ಲಿ ಒಂದು ಬ್ರಹ್ಮ ಪಾರಾಯಣ ಯಜ್ಞವನ್ನು ಭಾನುವಾರದಿಂದ ಪ್ರಾರಂಭಿಸಲಾಗಿದೆ.

ಭಾ ರ ತ ದ ನಾ ನಾ ಭಾಗಗಳಿಂದ ಸುಮಾರು ೧೫೦೦ ಪಂಡಿತರುಗಳು ಈ ಯಜ್ಞದಲ್ಲಿ ಭಾಗವಹಿಸುತ್ತಿದ್ದಾರೆ.

ಹೈದರಾಬಾದಿನ ಭೂದಾನ ಯಜ್ಞ

ಹೈದರಾಬಾದಿನ ಭೂದಾನ ಯಜ್ಞ ಸಮಿತಿಗೆ ಇದುವರೆಗೆ ೨೮,೮೫೦ ಎಕರೆ ಜಮೀನು ಬಂದಿದೆ. ಅದರ ಪೈಕಿ, ನಿಜಾಮರು ೩,೬೫೪ ಎಕರೆ, ವ್ಯವಸಾಯಗಾರರ ಸಂ ಘ ೧೯೫ ಎ ಕ ರೆ ಕೊಟ್ಟಿದ್ದಾರೆ. ಸಂಸ್ಥಾನದಲ್ಲಿ ಒಟ್ಟು ೧|| ಲಕ್ಷ ಎಕರೆ ಜ ಮೀ ನ ನ್ನು ಸಂಗ್ರಹಿಸಬೇಕೆಂದು ಸಮಿತಿ ನಿರ್ಧರಿಸಿದೆ.

ಟಿಕೆಟ್ಟಿಲ್ಲದ ಪ್ರಯಾಣಕ್ಕಾಗಿ ೯ ತಿಂಗಳ ಶಿಕ್ಷೆ

ಹಿಸ್ಸಾರ್ ಪ್ರಜಾಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಸೆಟ್‌ರಾಂ ಎಂಬುವರು ಟಿಕೆಟ್ಟಿಲ್ಲದೆ ಪ್ರಯಾಣಮಾಡಿ, ಟಿಕೆಟ್ ಕಲೆಕ್ಟರು ಕೆಲಸಕ್ಕೆ ಅಡ್ಡಿಮಾಡಿದರೆಂದು ಅವರಿಗೆ ೯ ತಿಂಗಳು ಕಠಿಣಶಿಕ್ಷೆ ಮತ್ತು ೫೦ ರೂ ಜು ಲ್ಮಾ ನೆ ವಿಧಿಸಲಾಗಿದೆ.

ದೆಹಲಿಗೆ ಮುಖ್ಯ ಮಂತ್ರಿಗಳು

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮುಂದಿನ ತಿಂಗಳು ಮೊದಲನೆಯ ವಾರದಲ್ಲಿ ದೆಹಲಿಗೆ ಭೇಟಿಕೊಟ್ಟು ಅಲ್ಲಿ ೮ ಮತ್ತು ೯ ನೇ ತಾರೀಖುಗಳಲ್ಲಿ ನಡೆಯುವ ಪ್ಲಾನಿಂಗ್ ಕಮೀಷನ್ನಿನ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯ ಸಭೆಯಲ್ಲಿ ಭಾಗವಹಿಸುವರು.

ರೇಷ್ಮೆ ಸಂಶೋಧನಾ ಕೇಂದ್ರ

ಚನ್ನಪಟ್ಟಣದಲ್ಲಿ ರೇಷ್ಮೆ ಸಂಶೋಧನಾ ಕೇಂದ್ರವೊಂದನ್ನು ಮೈ ಸೂ ರು ಸರ್ಕಾರವು ತೆರೆಯಲು ನಿರ್ಧರಿಸಿದೆ.

ದೂರಪ್ರಾಚ್ಯ ಆಹಾರ ಸಮ್ಮೇಳನ

ದೂರಪ್ರಾಚ್ಯ ದೇಶಗಳ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಲು ಮುಂದಿನ ಜುಲೈ ತಿಂಗಳಿನಲ್ಲಿ ಭಾರತದಲ್ಲಿ ವಿಶ್ವ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಆಶ್ರಯದಲ್ಲಿ ಒಂ ದು ಸ ಮ್ಮೇ ಳ ನ ನಡೆಯಲಿದೆ.

ಬರ್ಮಾ ರಾಜಕುಮಾರರುಗಳು ಅಧಿಕಾರ ಬಿಟ್ಟರು

ಬರ್ಮಾದ ಷಹಾ ಸಂಸ್ಥಾನ ಫೆಡರೇಷನ್ನಿನಲ್ಲಿರುವ ೧೮ ರಾಜ ಕುಮಾರರು ತಮ್ಮ ಆಡಳಿತ ಅಧಿಕಾರಗಳನ್ನು ಪ್ರಜೆಗಳಿಗೆ ಬಿಟ್ಟುಕೊಡಲು ನಿರ್ಧರಿಸಿದ್ದಾರೆ. ಬರ್ಮಾದ ಉತ್ತರ ಪ್ರದೇಶದಲ್ಲಿರುವ ಈ ಸಂಸ್ಥಾನಗಳ ೫೫ ಚದರು ಮೈಲಿಗಳ ವಿಸ್ತೀರ್ಣವಿದ್ದು, ನೂರಾರು ವರ್ಷಗಳಿಂದ ರಾಜಕುಮಾರರುಗಳ ಆಡಳಿತದಲ್ಲಿದ್ದವು.

ಗೋ ಸಂವರ್ಧನ ದಿನಾಚರಣೆ

ಭಾರತಾದ್ಯಂತ ಕಳೆದವಾರ ಆಚರಿಸಲ್ಪಟ್ಟ ಗೋ ಸಂವರ್ಧನ ದಿನಾಚರಣೆಯು ನಿನ್ನೆಗೆ ಮುಕ್ತಾಯವಾಯಿತು. ಈ ಸಂಬಂಧದಲ್ಲಿ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ಒಂದು ಸಂದೇಶವಿತ್ತು, ದೇಶದಲ್ಲಿ ಜಾನುವಾರುಗಳನ್ನು ಕಾಪಾಡುವ ಆಗತ್ಯೆಯನ್ನು ಹೇಳಿರುತ್ತಾರೆ. ವಯಸ್ಸಾದ ಮತ್ತು ಉಪಯೋಗವಿಲ್ಲದ ಜಾನುವಾರುಗಳನ್ನು ಅರಣ್ಯಗಳಿಗೆ ಕಳುಹಿಸಿ ರಕ್ಷಿಸುವ ಯೋಜನೆಯನ್ನು ಈಗ ಕೈಗೊಳ್ಳಲಾಗಿದೆಯೆಂದು ಅವರು ತಿಳಿಸಿರುತ್ತಾರೆ. ಭಾ ರ ತ ದ ಲ್ಲಿ ೧೫೦೦ ಲಕ್ಷ ಜಾನುವಾರುಗಳಿವೆ. ಅವುಗಳಲ್ಲಿ ಅನೇಕ ಉಪಯೋಗಕ್ಕೆ ಬರುತ್ತಿಲ್ಲ ಆದುದರಿಂದ ಜಾನುವಾರುಗಳನ್ನು ಅಭಿವೃದ್ಧಿಗೊಳಿಸಲು ಕೇಂ ದ್ರ ಸ ರ್ಕಾ ರ ಯೋಜನೆ ಕೈಗೊಂಡಿದೆ-ಎಂದು ಅವರು ಹೇಳಿರುತ್ತಾರೆ.

ಮೆಹತಾಬರ ಜಮೀನುದಾರಿ ಸರ್ಕಾರಕ್ಕೆ

ಅಖಿಲಭಾರತ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಹರಿಕೃಷ್ಣ ಮೆಹತಾಬ್‌ರವರು ಒರಿಸ್ಸಾದಲ್ಲಿರುವ ತಮ್ಮ ಜಮೀನುದಾರಿಯನ್ನು ಸರ್ಕಾರವು ವಶಪಡಿಸಿಕೊಳ್ಳುವಂತೆ ತಿಳಿಸಿರುತ್ತಾರೆ. ಈ ರೀತಿ ಜಯಪುರ, ಬೋದಿಕಂಡಿ, ಕಾಸಿಪುರ ಮುಂತಾದ ಆರು ಜಮೀನುದಾರರೂ ಸಹ ತಾವಾಗಿಯೇ ತಮ್ಮ ಜಮೀನುದಾರಿಗಳನ್ನು ಸ ರ್ಕಾ ರ ಕ್ಕೆ ವಶಪಡಿಸಿದ್ದಾರೆ.

ಭೂಮಿಯ ಗ್ರಾಂಟಿನಿಂದ ವಿದ್ಯಾ ಸಂಸ್ಥೆ

ಯು. ಪಿ. ಸಂಸ್ಥಾನದ ರುದ್ರಾಪುರ ಎಂಬಲ್ಲಿ ಭೂಮಿಯಿಂದ ಬರುವ ಉತ್ಪತ್ತಿಯಲ್ಲಿ ಶಾಲೆಯೊಂದನ್ನು ನಡೆಸಲು ಅಲ್ಲಿನ ಸರ್ಕಾರ ನಿರ್ಧರಿಸಿದೆ. ಅಲ್ಲಿನ ೫೦೦ ಎಕರೆ ಫಾರಂನಲ್ಲಿ ೧೦೦ ಮಂದಿ ವಿದ್ಯಾರ್ಥಿ ಮತ್ತು ಉಪಾಧ್ಯಾಯರುಗಳ ಸಹಾಯದಿಂದ ಬೇಸಾಯ ಮಾಡುವರು.

ಮಹಾ ಮಸ್ತಕಾಭಿಷೇಕ

ಶ್ರವಣಬೆಳಗೊಳದ ಗೋಮಟೇಶ್ವರ ಮಹಾ ಮಸ್ತಕಾಭಿಷೇಕ ಮ ಹೋ ತ್ಸ ವ ವು ಮುಂದಿನ ಫೆಬ್ರವರಿಯಲ್ಲಿ ನಡೆಯಬೇಕಾಗಿದ್ದನ್ನು ಮಾರ್ಚಿ ೫ ನೇ ತಾರೀಖು ನ ಡೆ ಸ ಲು ಆ ಸ ಮಿ ತಿ ಯು ನಿರ್ಧರಿಸಿದೆ.

ಹೊಸ ಆಹಾರ ನೀತಿಯ ಬಗ್ಗೆ ಸಚಿವ ಸಂಪುಟದಲ್ಲಿ ಭಿನ್ನಾಭಿಪ್ರಾಯವಿಲ್ಲ

ಊಹಾಪೋಹಗಳಿಗೆ ಎಡೆ ಗೊಡಬಾರದು

ಕೇಂದ್ರ ಆಹಾರಸಚಿವ ಕಿದ್ವಾಯಿಯವರ ಹೇಳಿಕೆ

ಆಹಾರ ಹೊಸನೀತಿಯ ಬಗ್ಗೆ ಇತ್ತೀಚಿಗೆ ನಾನಾ ಊಹಾಪೋಹಗಳು ಹೊರಬಿದ್ದಿವೆ. ಆಹಾರ ಹತೋಟಿಯನ್ನು ಸಾವಧಾನವಾಗಿ ತೆಗೆದುಹಾಕಬೇಕೆಂಬುದು ತಮ್ಮ ಆಶಯ ಮತ್ತು ಸರ್ಕಾರದ ನೀತಿ ಆದರೆ ಕೆಲವು ಆರ್ಥಿಕ ಪ್ರವೀಣರು ಆಹಾರ ಹತೋಟಿಯನ್ನು ಇನ್ನೂ ಬಲಪಡಿಸಬೇಕೆಂದು ಹೇಳುತ್ತಿದ್ದಾರೆ. ಇಂದಿನ ದೇಶದ ಆಹಾರ ಸಮಸ್ಯೆಯನ್ನು ದೀರ್ಘವಾಗಿ ಪರಿಶೀಲಿಸಿದಲ್ಲಿ ನಿಯಂತ್ರಣವನ್ನು ಆದಷ್ಟು ಬೇಗ ತೆಗೆದುಹಾಕುವುದು ಉತ್ತಮವೆಂದು ಕಾಣುತ್ತದೆ. ಕಳೆದ ಸಾಲುಗಳಿಗಿಂತ ಈ ಸಾಲಿನಲ್ಲಿ ಆಹಾರ ಉತ್ಪತ್ತಿಯು ದೇಶದಲ್ಲಿ ಹೆಚ್ಚಿದೆ. ವಿದೇಶಗಳಿಂದ ತರಿಸಿಕೊಳ್ಳುವ ಪ್ರಮಾಣವು ಕಡಮೆಯಾಗುತ್ತಿದೆ. ಇನ್ನು ಸ್ವಲ್ಪ ವರ್ಷಗಳಲ್ಲಿಯೇ ಆಮದನ್ನು ನಿಲ್ಲಿಸುವ ಸ್ಥಿತಿ ಬರುವುದರಲ್ಲಿ ಸಂಶಯವಿಲ್ಲ ಆದ್ದರಿಂದ ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಿ, ಎಲ್ಲಾ ಪ್ರಾಂತ್ಯ ಸರ್ಕಾರಗಳ ಅಭಿಪ್ರಾಯವನ್ನು ಪಡೆಯಬೋಸುವ ಆಹಾರ ಸಚಿವರುಗಳ ಭೇಟಿ ನಡೆಸಲಾಗಿದೆ. ಆಹಾರ ನಿಯಂತ್ರಣವನ್ನು ತೆಗೆದುಹಾಕಬೇಕೆಂಬುದೇ ಒಮ್ಮತವಾಗಿದೆ. ಈ ವಿಷಯ ಕೇಂದ್ರ ಸಚಿವ ಸಂಪುಟ ಪರಿಶೀಲಿಸಿ ತಕ್ಕ ಆಜ್ಞೆಯನ್ನು ಕೊಡುತ್ತದೆ ಎಂದು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಆಹಾರ ಹತೋಟಿ ಬಗ್ಗೆ ಬಂದಿರುವ ಭಿನ್ನಾಭಿಪ್ರಾಯಗಳ ವಿಷಯವಾಗಿ ಪ್ರಸ್ತಾಪಿಸುತ್ತ ಬೊಂಬಾಯಿನಲ್ಲಿ ಹೇಳಿರುವರು.

ವಿಷಯವನ್ನು ಇನ್ನೂ ವಿಶದೀಕರಿಸುತ್ತಾ, ಭಾರತದಲ್ಲಿ ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಪ್ರಜಾಸತ್ತಾತ್ಮಕ ಸರ್ಕಾರವಿದೆ. ಸಚಿವ ಮಂಡಲಿ ಸಂಯುಕ್ತ ಜವಾಬ್ದಾರಿಯಿಂದ ಕೆಲಸಗಳು ನಡೆಯಬೇಕಾಗಿದೆ. ಹಾಗಿರುವಲ್ಲಿ ಯಾವ ಸಚಿವರೂ ಇತರ ಸಹೋದ್ಯೋಗಿಗಳ ಅಭಿಪ್ರಾಯ ಪಡೆಯದೆ ಹೊಸನೀತಿಯನ್ನು ರೂಪಿಸುವುದಿಲ್ಲ ಮತ್ತು ಕಾರ್ಯರೂಪಕ್ಕೆ ತರುವುದಿಲ್ಲ ತಮ್ಮ ಹೊಸ ಆಹಾರ ನೀತಿಯ ಬಗ್ಗೆ ಈಗಾಗಲೇ ಸಹೋದ್ಯೋಗಿಗಳಲ್ಲಿ ಸಮಾಲೋಚನೆ ನಡಿಸಲಾಗಿದೆ.

ತಾವು ದೆಹಲಿಗೆ ಹಿಂತಿರುಗಿದನಂತರ ಪುನಃ ಅವರೊಡನೆ ವಿಷಯ ಚರ್ಚಿಸಿ ಒಂದು ಹೊಸ ನೀತಿಯನ್ನು ನಿರ್ಧರಿಸಲಾಗುತ್ತದೆ ಎಂದು ಅವರು ಹೇಳಿದರು.

ಚಕ್ರಬಂಧ ಸ್ಪರ್ಧೆಗೆ ನಿಷೇಧ

ಮದರಾಸ್ ಪ್ರಾಂತ್ಯದ ಮಧುರೆ ಮತ್ತು ದಿಂಡಿಗಲ್‌ಗಳಲ್ಲಿ ನಡೆಸುತ್ತಿರುವ ಕಪಟಚಕ್ರ ಸ್ಪರ್ಧೆಗಳ ಮೇಲೆ ಮದರಾಸ್ ಸರ್ಕಾರದವರು ಮೊಕದ್ದಮೆ ಹೂಡಿದ್ದಾರೆಂದೂ, ಅವುಗಳಿಗಾಗಿ ಕಳುಹಿಸುವ ಹಣವನ್ನು ತಡೆ ಹಿಡಿಯಲಾಗಿದೆ ಯೆಂದು ಮುಖ್ಯಮಂತ್ರಿ ಶ್ರೀ ರಾಜಾಜಿ ತಿಳಿಸಿರುತ್ತಾರೆ.

ಭಾರತ ಸೈನ್ಯಗಳ ರಕ್ಷಣಾ ವ್ಯವಸ್ಥೆಗೆ ಮಾತ್ರ

ಕೊರಿಯಾ ಯುದ್ಧದ ಬಗ್ಗೆ ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸಲು ಭಾರತವು ರಣರಂಗಕ್ಕೆ ಒಂದು ವೈದ್ಯಪಡೆಯನ್ನು ಮಾತ್ರ ಕಳುಹಿಸಿದೆ. ಅಲ್ಲಿ ಯುದ್ಧಮಾಡಲು ಭಾರತ ಸೈನ್ಯವನ್ನು ಕಳುಹಿಸುವ ಪ್ರಶ್ನೆಯೇ ಇಲ್ಲ. ಭಾರತ ಸೈನ್ಯವಿರುವುದು ರಕ್ಷಣಾ ವ್ಯವಸ್ಥೆಗೆ ಮಾತ್ರವೇ ವಿನಹ ಯುದ್ಧಮಾಡುವುದಲ್ಲವೆಂದು ವಿಶ್ವಸಂಸ್ಥೆ ಭಾರತ ಪ್ರತಿನಿಧಿ ಶ್ರೀಮತಿ ವಿಜಯಲಕ್ಷ್ಮಿಯವರು ಹೇಳಿರುವರು.

ಮೈಸೂರು ಪೇಟೆಧಾರಣೆ

ತಾ|| ೨೭-೧೦-೫೨

ಪಲ್ಲ	ರೂ—ಆ	ರೂ—ಆ
ಕಡಲೇಕಾಯಿ	೧೧-೧೪	೨೧-೧೨
ಎಳ್ಳು	೭೧-	೭೨-
ಹರಳು	೪೫-೮	೪೭-೧೪
ಹುರುಳಿ	೫೫-೬	
ಅಲಸಂದೆ	೫೫-೧೪	೫೯-
ಮೆಣಸಿನಕಾಯಿ	೬-೮	೧೪-೧೪
ಉದ್ದು	೫೭-	
ಬೆಲ್ಲ	೩-೮	

ತೆಂಗಿನಕಾಯಿ ೧,೧೦೦ ಕ್ಕೆ ೧೪೮-೨೫೭

ಪ್ರಭಾ ೨೧-೧೦-೫೨ ರಿಂದ ಪ್ರತಿದಿನ ೩ ಪ್ರದರ್ಶನಗಳು
ಒಂದು ವಾರ ಮಾತ್ರ
ಇದುವರೆವಿಗೂ ನೋಡದೆ ಇರುವಮತ್ತೊಮ್ಮೆ ನೋಡಲಿಚ್ಛಿಸುವವರ ಸಲುವಾಗಿ ಮತ್ತೊಮ್ಮೆ ಪ್ರದರ್ಶಿಸಲ್ಪಡುವ–
ವಿ. ಶಾಂತಾರಾಂರವರ
-- ಅಮರ್‌ಭೂಪಾಳಿ --
ಪಾತ್ರ:- ಸಂಧ್ಯಾ, ಪಂಡಿತರಾವ್ ನಾಗರ್‌ಕರ್, ಲಲಿತಾಪವರ್.
ಬೆಳಗಿನ ಪ್ರದರ್ಶನ ೨೧-೧೦-೫೨ ರಿಂದ ಮೂರು ದಿನಗಳು ನಳಿನಿಜಯವಂತ್, ಶೇಖರ್ ನಟಿಸಿರುವ ಆಂಖೆ

ವುಡ್ ಲ್ಯಾಂಡ್ಸ್
24-10-52 ರಿಂದ ಆರೋಭ ಪ್ರಾರಂಭ
ಪ್ರತಿದಿನ ೩ ಪ್ರದರ್ಶನಗಳು
ರಂಗೀಲಿ (ಹಿಂದಿ)
ಪಾತ್ರ:ರೆಹೆನಾ, ಯಾಕೂಬ್, ರಾಜಕುಮಾರ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಅಂದವಾದ ಮುದ್ರಣಕ್ಕೆ
ಕರ್ಣಾಟಕ ಪ್ರಿಂಟರ್ಸ್
ಗಾಂಧಿಚೌಕ ಮೈಸೂರು.
(ವಿ. ಆರ್. ಅಂಡ್ ಬ್ರದರ್ಸ್, ವರ್ಕ್‌ಷಾಪ್)
For
NEAT AND PROMPT PRINTING
Contact :
CARNATAK PRINTERS
GANDHI SQUARE, MYSORE
Phone 892 or 574

ಕಾಂಗ್ರೆಸ್ ಸರ್ಕಾರವಿರುವವರೆಗೂ ಪಾನನಿರೋಧ ನೀತಿ ಬದಲಾವಣೆಯಿಲ್ಲ

ಬೊಂಬಾಯಿ ಪ್ರಾಂತ್ಯದಲ್ಲಿ ಕಾಂಗ್ರೆಸ್ ಸರ್ಕಾರವು ಅಧಿಕಾರದಲ್ಲಿರುವವರೆಗೆ ಪಾನನಿರೋಧ ನೀತಿಯಲ್ಲಿ ಬದಲಾವಣೆಮಾಡಿ ಅದನ್ನು ಕೊಡೆದು ಹಾಕುವುದಿಲ್ಲ ಎಂದು ಬೊಂಬಾಯಿ ಮುಖ್ಯಮಂತ್ರಿ ಶ್ರೀ ಮುರಾರ್ಜಿ ದೇಸಾಯಿಯವರು ಸೂರತ್‌ನಲ್ಲಿ ಮಾತನಾಡುತ್ತ ಹೇಳಿರುವರು.

ಯಾವ ಸಮಿತಿಯನ್ನು ಈ ವಿಷಯ ಪರಿಶೀಲನೆಗೆ ನೇಮಿಸಿದರೂ ಪಾನನಿರೋಧವನ್ನು ಇನ್ನು ಬಲಪಡಿಸಲು ತನ್ನ ಸಲಹೆಯನ್ನು ನೀಡುತ್ತದೆಯೇ ವಿನಹ ಪಾನನಿರೋಧ ಶಾಸನವನ್ನು ತೆಗೆದುಹಾಕುವುದಕ್ಕಲ್ಲ ಎಂದು ಅವರು ತಿಳಿಸಿದರು.

ಪೆಪ್ಸು ರಾಜಪ್ರಮುಖರನ್ನು ತೆಗೆದುಹಾಕಬೇಕು

ಪೆಪ್ಸುವಿನ ರಾಜಪ್ರಮುಖರು ತಮ್ಮ ಹುದ್ದೆಯನ್ನು ದುರುಪಯೋಗಪಡಿಸಿಕೊಂಡು, ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಕೋಮುವಾರು ಮತ್ತು ಇತರ ಪ್ರಗತಿ ವಿರೋಧಿಗಳಿಗೆ ಬೆಂಬಲ ನೀಡುತ್ತಿರುವುದರಿಂದ ಅವರನ್ನು ಅಧಿಕಾರದಿಂದ ತೆಗೆದುಹಾಕಬೇಕೆಂದು ಅಲ್ಲಿನ ಕಾಂಗ್ರೆಸ್ ಸಮಿತಿಯು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದೆ.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 56

೨೯-೧೦-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ರಾಜಧಾನಿಗೆ ಮಕ್ಕಳ ತಂಡ

ಮೈಸೂರು, ೨೯.

ಬೊಂಬಾಯಿನ ಅಖಿಲ ಭಾರತ ಮಕ್ಕಳ ಸಂಘದ ಘೋಟಿಕ್‌ಪುರದ ಕೇಂದ್ರದ ಸುಮಾರು ೧೭೦ ಮಕ್ಕಳು ಬೆಂಗಳೂರಿನಿಂದ ಈ ದಿನ ಬೆಳಗ್ಗೆ ರಾಜಧಾನಿಗೆ ಆಗಮಿಸಿದರು. ಇಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಟ್ಟು, ನಾಳೆ ವಾಪಸು ಹಿಂತಿರುಗುವರು.

ಆಯುರ್ವೇದ ವೈಜ್ಞಾನಿಕ ರೀತಿಯಲ್ಲಿ ನಡೆಯಬೇಕು

ಭಾರತದ ಆಯುರ್ವೇದ ವೈದ್ಯರುಗಳು ತಮ್ಮ ಜ್ಞಾನವನ್ನೂ ಬುದ್ಧಿ ಕುಶಲವನ್ನು ಹೆಚ್ಚು ವೈಜ್ಞಾನಿಕ ರೀತಿಯಲ್ಲಿ ಸಾರ್ವಜನಿಕರ ಮುಂದೆ ಇಡುವ ಪದ್ಧತಿಯನ್ನು ಅನುಸರಿಸಬೇಕೆಂದು ಮಧ್ಯ ಭಾರತದ ರಾಜಪ್ರಮುಖರು ಇಂದೂರಿನಲ್ಲಿ ನಡೆದ ಅಖಿಲ ಭಾರತ ಆಯುರ್ವೇದ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ ಆಯುರ್ವೇದವನ್ನು ಅಭಿವೃದ್ಧಿ ಪಡಿಸಲು ಭಾರತದ ಎಲ್ಲ ಪ್ರಮುಖ ಸ್ಥಳಗಳಲ್ಲೂ ಅದರ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಅವರು ಸಲಹೆ ಮಾಡಿರುತ್ತಾರೆ.

ಭಾರತದ ಕೈಗಾರಿಕೆಗೆ ಜಪಾನಿನ ಸಹಾಯ

ಭಾರತದಲ್ಲಿ ಫೌಂಟೇನ್‌ಪೆನ್ ಮುಂತಾದ ಮಧ್ಯಮ ವರ್ಗದ ಕೈಗಾರಿಕೆಗಳನ್ನು ಸ್ಥಾಪಿಸಲು ಜಪಾನಿನ ಇಂಜನಿಯರುಗಳು ಸದ್ಯದಲ್ಲಿಯೇ ಭಾರತಕ್ಕೆ ಭೇಟಿಕೊಡಲಿರುವರೆಂದು ಹೇಳಲಾಗಿದೆ. ಭಾರತ ಮತ್ತು ಜಪಾನಿನ ಇಂಜನಿಯರುಗಳು ಪರಸ್ಪರ ಸಹಕಾರದಿಂದ ಈ ಕಾರ್ಯಗಳನ್ನು ಕೈಗೊಳ್ಳುವರೆಂದು ಭಾರತದಲ್ಲಿರುವ ಜಪಾನಿನ ರಾಯಭಾರಿ ತಿಳಿಸಿರುತ್ತಾರೆ.

ಪಾದರಕ್ಷೆಯ ಆಶೆಗಾಗಿ ೫೦ ರೂ. ದಂಡ

ಮದರಾಸ್-ಪೂರಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದವನೊಬ್ಬನು ಚತ್ರಾಪುರದ ಹತ್ತಿರ ತನ್ನ ಒಂದು ಪಾದರಕ್ಷೆಯು ರೈಲಿನ ಕೆಳಗೆ ಬೀಳಲು ಚೈನನ್ನು ಎಳೆದು ಗಾಡಿಯನ್ನು ನಿಲ್ಲಿಸಿದನು. ಪ್ರಯಾಣಿಕನು ತನ್ನ ಪಾದರಕ್ಷೆಯನ್ನು ವಾಪಸು ಪಡೆದನು. ಆದರೆ ಒಂದು ಸಣ್ಣ ವಸ್ತುವಿಗಾಗಿ ರೈಲಿನ ಚೈನು ಎಳೆದುದಕ್ಕಾಗಿ ೫೦ ರೂ. ದಂಡವನ್ನು ಕೊಡಬೇಕಾಯಿತು.

ವರ್ತಕರೇ ಆಹಾರಧಾನ್ಯ ತರಿಸಲು ಅನುಮತಿ

ಕೇಂದ್ರದ ಪರಿಶೀಲನೆಯಲ್ಲಿದೆ

ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರನ್ನು ಬೊಂಬಾಯಿನ ವರ್ತಕ ಸಂಘದವರು ಭೇಟಿಮಾಡಿ ವರ್ತಕರೇ ನೇರವಾಗಿ ವಿದೇಶಗಳಿಂದ ಆಹಾರಧಾನ್ಯಗಳನ್ನು ತರಿಸಿ ಮಾರಲು ಅನುಮತಿ ಕೊಡಬೇಕೆಂದು ಮನವಿಮಾಡಿಕೊಂಡರು ಹೀಗೆ ಮಾಡಿದರೆ ಕೊಳ್ಳುವವರಿಗೆ ಉತ್ತಮ ಆಹಾರಧಾನ್ಯಗಳು ಹೆಚ್ಚಿಗೆ ಬೆಲೆಯಿಲ್ಲದೆ ದೊರೆಯುವುವೆಂದು ಅವರ ಗಮನಕ್ಕೆ ತರಲಾಯಿತು.

ಕೇಂದ್ರ ಸರ್ಕಾರವು ಈ ವಿಷಯವನ್ನು ಪರಿಶೀಲಿಸಿ ತ್ವರಿತ ತೀರ್ಮಾನಕ್ಕೆ ಬರುವುದೆಂದು ಹೇಳಲಾಗಿದೆ.

ಮಾರಾಟ ತೆರಿಗೆ ವಿರುದ್ಧ ಹರತಾಳ

ಮಾರಾಟ ತೆರಿಗೆ ವಿರೋಧ ಮಂಡಲಿಯು ಬೊಂಬಾಯಿ ಪ್ರಾಂತ್ಯದಲ್ಲೆಲ್ಲಾ ನವಂಬರ್ ೧, ೨ ಮತ್ತು ೩ ನೇ ತಾರೀಖುಗಳಲ್ಲಿ ಹರತಾಳವನ್ನು ನಡೆಸಲು ನಿರ್ಧರಿಸಿದೆ.

ಸ್ಟೇಡಿಯಂ ಪ್ರಾರಂಭೋತ್ಸವ

ಭಾರತ ಶ್ರೇಷ್ಠ ದಂಡನಾಯಕರಾಗಿ ನೇಮಕವಾಗಿರುವ ದಕ್ಷಿಣ ಭಾರತ ಸೇನಾನಿ ಜನರಲ್ ರಾಜೇಂದ್ರ ಸಿನ್ಹಜಿಯವರು ೨ ನೇ ತಾರೀಖು ಬೆಂಗಳೂರಿಗೆ ಆಗಮಿಸಿ ವೆಲಿಂಗ್ಟನ್ನಿಗೆ ತೆರಳಿ ಪುನಃ ೫ ನೇ ತಾ|| ಬೆಂಗಳೂರಿಗೆ ಬರುವರು,

ಮಾರನೇ ದಿನ ಅವರು ಸ್ಟೇಡಿಯಂನ ಶಂಕುಸ್ಥಾಪನೆ ನಡೆಸುವರು.

ಮೋಟಾರು ಅಪಘಾತದಲ್ಲಿ ೭ ಜನರ ಮರಣ

ಕಲ್ಕತ್ತಕ್ಕೆ ೮ ಮೈಲಿ ಸಮೀಪದಲ್ಲಿರುವ ಬ್ಯಾರಕ್‌ಪುರದ ರಸ್ತೆಯಲ್ಲಿ ಎರಡು ಬಸ್ಸುಗಳು ಡಿಕ್ಕಿ ಹೊಡೆದು ೭ ಜನ ಪ್ರಯಾಣಿಕರು ಸತ್ತರೆಂದೂ, ೬೦ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ. ಅದರ ಪೈಕಿ ೪ ಜನರ ಸ್ಥಿತಿ ತುಂಬಾ ಚಿಂತಾಜನಕವಾಗಿದೆ.

ಗೋಹತ್ಯ ನಿರೋಧ ಚಳುವಳಿಗೆ ಬೆಂಬಲ ನೀಡಿ

ಗೋಮಾತೆಯು ಭಾರತದಲ್ಲಿ ಅತ್ಯಂತ ಪೂಜನೀಯ ವಸ್ತುವಾಗಿದ್ದರೂ ಇದುವರೆವಿಗೂ ದೇಶದಲ್ಲಿ ಅದರ ಸಭೆಯು ನಡೆಯುತ್ತಲೇ ಇದೆ. ಅದನ್ನು ನಿಲ್ಲಿಸಬೇಕೆಂದು ಸರ್ಕಾರದಲ್ಲಿ ಒತ್ತಾಯಪಡಿಸಲು ರಾಷ್ಟ್ರೀಯ ಸ್ವಯಂಸೇವಕ ಸಂಘವು ಶಾಂತವಾದ ಚಳುವಳಿಯನ್ನು ದೇಶಾದ್ಯಂತ ಪ್ರಾರಂಭಿಸಿದೆ. ಈ ಕಾರ್ಯವು ಅತ್ಯಂತ ಪವಿತ್ರವೂ ಮತ್ತು ಎಲ್ಲ ಪಕ್ಷ ಪಂಗಡಗಳಿಂದ ದೂರವೂ ಆಗಿದ್ದು ಅಸಂಖ್ಯಾತ ಜನರ ಹಾರ್ದಿಕ ಭಾವನೆಗಳ ಪ್ರತೀಕವಾಗಿದೆ. ಆದಕ್ಕಾಗಿ ಸಂಘದ ಸ್ವಯಂಸೇವಕರು ಮನೆಮನೆಗೂ ಹೋಗಿ ಹಸ್ತಾಕ್ಷರಗಳನ್ನು ಸಂಗ್ರಹಿಸುವವರಾಗಿದ್ದಾರೆ. ಅದಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕು-ಎಂದು ಸಂಘದ ಸಂಚಾಲಕರಾದ ಶ್ರೀ ಗುರುಜೀ ಎಂ. ಎಸ್. ಗೋಲ್ವಲ್ಕರ್ ಮನವಿ ಮಾಡಿದ್ದಾರೆ.

ಪರ್ಷಿಯಾದಲ್ಲಿ ಕಮ್ಯೂನಿಸ್ಟ್-ವಿದ್ಯಾರ್ಥಿಗಳ ಘರ್ಷಣೆ

ಪರ್ಷಿಯಾದ ಷಾರವರ ಜನ್ಮದಿನದ ಗೌರವಾರ್ಥವಾಗಿ ಟೆಹರಾನಿನಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿಗಳ ವ್ಯಾಯಾಮ ಪ್ರದರ್ಶನದಲ್ಲಿ ಕಮ್ಯೂನಿಸ್ಟರ ಗುಂಪೊಂದು ವಿದ್ಯಾರ್ಥಿಗಳ ಮೇಲೆ ಬಿದ್ದು, ಷಾರವರ ವಿರುದ್ಧ ಗಲಭೆ ನಡೆಸಿದರೆಂದೂ, ಈ ಸಂಬಂಧದಲ್ಲಿ ೧೪೭ ಮಂದಿಯನ್ನು ದಸ್ತಗಿರಿ ಮಾಡಲಾಯಿತೆಂದೂ ವರದಿಯಾಗಿದೆ.

ದಕ್ಷಿಣ ಆಫ್ರಿಕಾಕ್ಕೆ ಖಾಸಗೀ ನಿಯೋಗ

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ಪರಿಸ್ಥಿತಿಯನ್ನು ಪರಿಶೀಲಿಸಲು ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರ ನಾಯಕತ್ವದಲ್ಲಿ ಒಂದು ಭಾರತೀಯ ಸಾರ್ವಜನಿಕ ಪ್ರಮುಖರ ನಿಯೋಗವು ತೆರಳುವುದೆಂದು ಹೇಳಲಾಗಿದೆ.

ಮಹಿಳೆಯರ ಹಕ್ಕುಬಾಧ್ಯತೆ ಬಗ್ಗೆ ಸಮ್ಮೇಳನ

ಯುನೆಸ್ಕೋ ಸಂಸ್ಥೆಯ ಆಶ್ರಯದಲ್ಲಿ ಮುಂದಿನ ಡಿಸೆಂಬರ್ ೨೬ ನೇ ತಾರೀಖಿನಿಂದ ದೆಹಲಿಯ ವಿಶ್ವವಿದ್ಯಾನಿಲಯದಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳ ಮಹಿಳಾ ಸಮ್ಮೇಳನವೊಂದು ನಡೆಯಲಿದೆ. ಅಲ್ಲಿ ಅವರ ಹಕ್ಕು ಬಾಧ್ಯತೆ ಬಗ್ಗೆ ಗೋಷ್ಠಿ ನಡೆಯುವುದು.

ಚರ್ಚಿಲ್ಲರ ನಿವೃತ್ತಿಯೇ ?

ಬ್ರಿಟನ್ನಿನ ರಾಣಿ ಎಲಿಜಬೆತ್‌ರವರ ಪಟ್ಟಾಭಿಷೇಕ ಮಹೋತ್ಸವದೊಡನೆಯೇ ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ನಿವೃತ್ತರಾಗುವರೆಂದು ಲೇಬರ್ ಪಂಗಡದಲ್ಲಿ ರಕ್ಷಣಾ ಸಚಿವರಾಗಿದ್ದ ಮಿ|| ಷಿನ್‌ವೆಲ್‌ರವರು ಹೇಳಿದ್ದಾರೆ. ಅನಂತರ ಬ್ರಿಟನ್ನಿನಲ್ಲಿ ಪಕ್ಷದಲ್ಲಿ ನೂತನ ಚುನಾವಣೆಗಳಾಗುತ್ತವೆ.

ಶಾಸನ ಸಭೆಗಳಲ್ಲಿ ತೆಲುಗಿನಲ್ಲಿ ಮಾತಾಡಬೇಕು

ಮದ್ರಾಸ್ ಶಾಸನಸಭೆಯಲ್ಲಿರುವ ೭ ಆಂಧ್ರ ಸದಸ್ಯರೆಲ್ಲಾ ಇನ್ನು ಮುಂದೆ ಆಂಧ್ರ ಭಾಷೆಯಲ್ಲೇ ಶಾಸನ ಸಭೆಗಳಲ್ಲಿ ಮಾತನಾಡಬೇಕೆಂದು ಆಂಧ್ರ ಕಮ್ಯೂನಿಸ್ಟ್ ಪಕ್ಷವು ಮನವಿಮಾಡಿದೆ.

೭೨ ಗಂಟೆಗಳಲ್ಲಿ ನೇಪಾಳವನ್ನು ಬಿಡಲು ಸೂಚನೆ

ನೇಪಾಳ ರಾಜಕುಮಾರರ ವಿಷಯದಲ್ಲಿ ಸುಳ್ಳು ಸುದ್ದಿಯನ್ನು ಹರಡಿದರೆಂಬ ಅಪಾದದಮೇಲೆ ನೇಪಾಳ ಸರ್ಕಾರವು ಖಾಟ್ಮಾಂಡುವಿನಲ್ಲಿರುವ ಯು. ಪಿ. ಐ. ಬಾತ್ಮೀದಾರರಾದ ಶ್ರೀ ಮದನ್ ಮೋಹನ್ ಗುಪ್ತರವರಿಗೆ ೭೨ ಗಂಟೆಯೊಳಗೆ ನೇಪಾಳ ರಾಜ್ಯವನ್ನು ಬಿಟ್ಟು ಹೋಗಬೇಕೆಂದು ಸೂಚನೆಯನ್ನಿತ್ತಿದೆ.

ನೇಪಾಳ ರಾಜಕುಮಾರ ಶ್ರೀ ಮಹೇಂದ್ರ ವಿಕ್ರಮರು ದಸ್ತಗಿರಿಯಾಗಿರುವರೆಂದು ಸುಳ್ಳು ಸುದ್ದಿಗೆ ಇವರೇ ಕಾರಣವೆಂದು ಅಪಾದಿಸಲಾಗಿದೆ.

§ ವಯಸ್ಕರಿಗೇ ಪ್ರತ್ಯೇಕ ಚಲನ ಚಿತ್ರಗಳೆಂಬ ಭೇದಭಾವವು ಇರಕೂಡದೆಂದು ಕೇಂದ್ರ ಚಲನಚಿತ್ರ ಸೆನ್ಸಾರ್ ಸಮಿತಿ ಅಧ್ಯಕ್ಷರು ಹೇಳಿದ್ದಾರೆ.

ತಿರುವಾಂಕೂರು-ಕೊಚ್ಚಿನ್ ಸರ್ಕಾರದಮೇಲೆ ಅವಿಶ್ವಾಸ

ನಿರ್ಣಯ

ತಿರುವಾಂಕೂರ್-ಕೊಚ್ಚಿನ್ ಪ್ರಾಂತ್ಯ ಶಾಸನ ಸಭೆಯಲ್ಲಿ ಯುನೈಟೆಡ್ ಡೆಮೊಕ್ರಾಟಿಕ್ ಪಕ್ಷದವರು ನಿನ್ನೆಯದಿನ ಕಾಂಗ್ರೆಸ್ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ಮಂಡಿಸಿದರು. ೪೯ ಜನ ಸದಸ್ಯರು ಈ ನಿರ್ಣಯವನ್ನು ಸಮರ್ಥಿಸಿದ್ದಾರೆ. ಶಾಸನ ಸಭೆಯಲ್ಲಿ ಒಟ್ಟು ೧೦೮ ಸದಸ್ಯರಿರುತ್ತಾರೆ ಮುಂದಿನ ಗುರುವಾರ ನಿರ್ಣಯವು ಚರ್ಚೆಗೆ ಬರಲಿದೆ.

ಹೆಚ್ಚು ಆಹಾರ ಬೆಳೆಗೆ ೨೪ ಲಕ್ಷ ರೂ. ಸಹಾಯ

ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆ ಯೋಜನೆಗಾಗಿ ಈ ವರ್ಷ ಕೇಂದ್ರದಿಂದ ೨೪,೯೭,೪೪೪ ರೂ. ಗಳನ್ನು ಕೊಡಲಾಗಿದೆ. ಈ ಹಣವನ್ನು ಕೆರೆಗಳ ದುರಸ್ತು, ನೀರಾವರಿ ಕಾಮಗಾರಿಕೆ, ರೈತರುಗಳಿಗೆ ಪಂಪಿಂಗ್ ಸೆಟ್ಟುಗಳು ಮತ್ತು ಪರ್ಷಿಯನ್ ಗಾಲಿಗಳನ್ನು ಸಾಲದ ರೂಪದಲ್ಲಿ ಕೊಡುವುದು, ನೀರಾವರಿಗೆ ವಿದ್ಯುಚ್ಛಕ್ತಿ ಸರಬರಾಜು ಮುಂತಾದ ಕಾರ್ಯಗಳಿಗೆ ವಿನಿಯೋಗಿಸಲಾಗುವುದು

ರಾಷ್ಟ್ರಾಧ್ಯಕ್ಷ ರೊಡನೆ ಮಹಾರಾಜರ ಭೇಟಿ

ಮೈಸೂರಿನ ಶ್ರೀಮನ್ಮಹಾರಾಜರು ನಿನ್ನೆಯದಿನ ಪ್ರಧಾನಿ ನೆಹರೂ ಮತ್ತು ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರನ್ನು ದೆಹಲಿಯಲ್ಲಿ ಭೇಟಿಮಾಡಿದರು. ಪ್ರಧಾನಿಯವರೊಡನೆ ಊಟಮಾಡಿದರು ರಾಷ್ಟ್ರಾಧ್ಯಕ್ಷ ರೊಡನೆ ಉಪಹಾರ ಸ್ವೀಕರಿಸಿದರು.

ಅನಂತರ ಸಂಸ್ಥಾನದ ಕಾರ್ಯದರ್ಶಿ ಶ್ರೀ ವೆಂಕಟಾಚಾರ್ಯರು ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿದ್ದರೆಂದು ಗೊತ್ತಾಗಿದೆ.

ವಿಶ್ವವಿದ್ಯಾನಿಲಯ ಘಟಿಕೋತ್ಸವ

ಮುಂದಿನ ತಿಂಗಳು ಅಂತ್ಯವಾರದಲ್ಲಿ ನಡೆಯಲಿರುವ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಸಿಂಹಳ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಿಲರ್ ಮಿ|| ಇವಾರ್ ಜನ್ನಿಂಗ್ಸ್‌ರವರು ವಿದ್ಯಾರ್ಥಿಗಳನ್ನು ದ್ದೇಶಿಸಿ ಭಾಷಣ ಮಾಡುತ್ತಾರೆ.

ಹಂಪೆಯಲ್ಲಿ ವಸ್ತುಪ್ರದರ್ಶನದ ಕೇಂದ್ರ

ವಿಜಯನಗರ ಚಕ್ರಾಧಿಪತ್ಯದ ರಾಜಧಾನಿಯಾಗಿದ್ದ ಹಂಪೆಯಲ್ಲಿ ಒಂದು ವಸ್ತು ಪ್ರದರ್ಶನ ಕೇಂದ್ರವನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ನಿರ್ಧರಿಸಿದೆಯೆಂದು. ಅದರಲ್ಲಿ ರಾಯಲಸೀಮೆಯ ಕಲಾ ಮತ್ತು ಭೂಗರ್ಭ ಶಾಸ್ತ್ರ ವಸ್ತುಗಳನ್ನು ಇಡಲಾಗುವುದೆಂದೂ ಹೇಳಲಾಗಿದೆ.

ಹೆಚ್ಚು ಭತ್ತ ಬೆಳೆದುದಕ್ಕೆ ಬಹುಮಾನ

ಮದರಾಸಿನ ಸೇಲಂ ಜಿಲ್ಲೆಯ ಧರ್ಮಪುರಿ ತಾಲ್ಲೂಕು ಜಾನಪ್ಪನೂರಿನ ಶ್ರೀ ಆರ್. ಮಾಣಿಕ್ಕಂ ಎಂಬ ರೈತರು ಒಂದು ಎಕರೆಗೆ ೯೮೪೩ ಪೌಂಡ್ ಭತ್ತವನ್ನು ಬೆಳೆದು ಪ್ರಥಮ ಬಹುಮಾನ ಪಡೆದಿದ್ದಾರೆ.

ಪಟಾಕಿ ಅಂಗಡಿಯಲ್ಲಿ ಭಾರಿ ಆಸ್ಫೋಟನೆ

ಸೂರತ್ತಿನಲ್ಲಿ ಪಟಾಕಿ ಮಾರುವ ಅಂಗಡಿಯೊಂದರಲ್ಲಿ ಭಾರಿ ಆಸ್ಫೋಟನೆಯಾಗಿ ಒಂದು ಮಗುವು ಸತ್ತು, ಅನೇಕರಿಗೆ ಗಾಯ ಉಂಟಾಯಿತು ಆಕಸ್ಮಾತ್ ಬೆಂಕಿಬಿದ್ದು ೨೦ ನಿಮಿಷಕಾಲ ಆಸ್ಫೋಟನೆ ಆಯಿತೆಂದು ಹೇಳಲಾಗಿದೆ.

ಹೆಬ್ಬಾವಿಗೂ ಆನೆಯ ಮರಿಗೂ ಕಾಳಗ

ಅಸ್ಸಾಮಿನ ಅರಣ್ಯವೊಂದರಲ್ಲಿ ಒಂದು ದೊಡ್ಡ ಹೆಬ್ಬಾವಿಗೂ ಆನೆಯ ಮರಿಗೂ ಭಾರಿ ಕಾಳಗವೇ ನಡೆಯಿತೆಂದು ವರದಿಯಾಗಿದೆ. ಹೆಬ್ಬಾವು ಆನೆಯ ಕಾಲೊಂದನ್ನು ನುಂಗಿ ದೊಡ್ಡ ಮರವೊಂದನ್ನು ತನ್ನ ನೆರವಿಗಾಗಿ ಉಪಯೋಗಿಸುತ್ತಿದ್ದಾಗ, ಜನರು ಬಂದು ಹೆಬ್ಬಾವನ್ನು ಕೊಂದು ಆನೆಯನ್ನು ಬಿಡಿಸಿದರೆಂದು ಹೇಳಲಾಗಿದೆ.

ಅಹಾರ ಹತೋಟಿ ರದ್ದು

ಪಂಜಾಬಿನಲ್ಲಿ ಇನ್ನು ಒಂದುವಾರದೊಳಗಾಗಿ ಅಕ್ಕಿ ಮತ್ತು ಗೋಧಿ ವಿನಹ ಮಿಕ್ಕ ಆಹಾರ ವಸ್ತುಗಳಮೇಲೆಲ್ಲಾ ಹತೋಟಿಯನು ರದ್ದುಗೊಳಿಸಲಾಗುವುದೆಂದು ಗೊತ್ತಾಗಿದೆ

ಬರ್ಮಾ ಅಕ್ಕಿ ಭಾರತಕ್ಕೆ

ಬರ್ಮಾ ಸರ್ಕಾರವು ಭಾರತಕ್ಕೆ ೫೦ ಸಾವಿರ ಟನ್ ಅಕ್ಕಿಯನ್ನು ಸರಬರಾಜು ಮಾಡುವಂತೆ ಉಭಯಸರ್ಕಾರ ಪ್ರತಿನಿಧಿಗಳೊಡನೆ ಒಪ್ಪಂದವಾಗಿದೆ.

ಪಂಚವಾರ್ಷಿಕ ಯೋಜನೆ

ಪಂಚವಾರ್ಷಿಕ ಯೋಜನೆ ವೆಚ್ಚದಲ್ಲಿ ಬೊಂಬಾಯಿ ಪ್ರಥಮಸ್ಥಾನ ಸುಮಾರು ೧೪೬ ಕೋಟಿ ರೂ, ಮದ್ರಾಸ್ ದ್ವಿತೀಯಸ್ಥಾನ ೧೩೫ ಕೋಟಿರೂ ಪಡೆಯುವುದಾಗಿ ಗೊತ್ತಾಗಿದೆ.

ಮದ್ರಾಸಿಗೆ ೨೦೦೦೦ ಟನ್ ಜೋಳ

ಕೇಂದ್ರಸರ್ಕಾರವು ಮದ್ರಾಸಿಗೆ ೨೦೦೦೦ ಟನ್ ಜೋಳವನ್ನು ನಿಗದಿ ಮಾಡಿದೆ.

ಚಂದ್ರು ಸುಂದ್ರು

ರಾಜಧಾನಿಯ ಕೆ. ಎಂ. ಪುರದ ಶ್ರೀ ಬಿ. ಆರ್. ಶಂಕರ್‌ರವರು ಪ್ರಕಟಿಸಿರುವ "ಚಂದ್ರು ಸುಂದ್ರು" ಎಂಬ ಮಕ್ಕಳ ಕಥೆಯನ್ನು ಸಂತೋಷದಿಂದ ಸ್ವೀಕರಿಸಿದ್ದೇವೆ. ಚಿಕ್ಕದಾಗಿ ಮಕ್ಕಳಿಗೆ ಅರ್ಥವಾಗುವಂತ ಅವರ ಭಾಷೆಯಲ್ಲೇ ಪ್ರಕಟವಾಗಿರುವ ಈ ಹೊಸಪ್ರಯೋಗವು ಪ್ರಶಂಸನೀಯವಾದುದು ಇಂತಹ ಸಾಹಿತ್ಯವು ಬಾಲಕರಿಗೆ ತುಂಬಾ ಉಪಯುಕ್ತವಾಗಿದೆ. ಪ್ರಥಮಬಾರಿ ಶಿಶುಸಾಹಿತ್ಯದಲ್ಲಿ ಕೈಹಾಕಿರುವ ಅವರ ಉದ್ಯಮವು ಯಶಸ್ವಿಯಾಗಲೆಂದು ಹಾರೈಸುತ್ತೇವೆ [ಬೆಲೆ ೪ ಆಣೆ].

ಮೈಸೂರು ಪೇಟೆಧಾರಣೆ

ತಾ|| ೨೮—೧೦—೫೨

ಪಲ್ಲ	ರೂ—ಆ	ರೂ—ಆ
ಕಡಲೇಕಾಯಿ	೧೦-	೨೧-೪
ಎಳ್ಳು	೬೬-	೭೨-೮
ಹರಳು	೪೪-೨	೪೬-೧೨
ಹುರುಳಿ	೫೬-೧೨	೫೮-
ಹೆಸರು	೫೫-೧೪	೬೦-
ಅಲಸಂದೆ	೫೭-೮	೫೮-
ಹುಚ್ಚೆಳ್ಳು	೫೩-	
ಮೆಣಸಿನಕಾಯಿ	೬-೧೨	೭೨-೮
ಹುಣಸೆಹಣ್ಣು	೪-೯	೬-೯
ಸೀಗೇಪುಡಿ	೫-	೫-೪
ಬೆಲ್ಲ	೩-೪	

ತೆಂಗಿನಕಾಯಿ ೧,೧೦೦ ಕ್ಕೆ ೧೬೬-೨೩೬

§ ರಾಜಾಸ್ಥಾನದಲ್ಲಿ ಶ್ರೀ ಜೈನಾರಾಯಣ ವ್ಯಾಸರ ಮುಖಂಡತ್ವದ ನೂತನ ಮಂತ್ರಿಮಂಡಲವು ನವೆಂಬರ್ ೧ ನೇ ತಾರೀಖು ಅಧಿಕಾರ ವಹಿಸಿಕೊಳ್ಳುವುದು.

ರಣಜಿತ್

31-10-52 ರಿಂದ

ಅಮೋಘ ಪ್ರಾರಂಭ

ಮೋತಿಮಹಲ್

ಸುರಯ್ಯ, ಅಜಿತ್, ಜೀವ್ಞ, ಮೀರಾ

ಮೈಸೂರು ಸರ್ಕಾರ

ಸರ್ಕಾರಿ ಗಂಧದಯೆಣ್ಣೆ ಕಾರ್ಖಾನೆ, ಮೈಸೂರು.

೨೫-೯-೫೨ ನೇ ತಾರೀಖಿನ ಪ್ರಕಟಣೆ

ಈ ಕಾರ್ಖಾನೆಯ ಕಾರ್ಮಿಕರ ವಾಸಗೃಹಗಳಿಗೆ ಕೆಲವು ರಿಪೇರಿಗಳನ್ನು ಮತ್ತು ಮಾರ್ಪಾಡು ಮಾಡಲು ೧೯೫೨ ನೇ ಅಕ್ಟೋಬರ್ ೩೧ ನೇ ತಾ|| ಮಧ್ಯಾನ್ಹ ೩ ಗಂಟೆಯವರೆಗೆ ಮೊಹರಾದ ಕವರುಗಳಲ್ಲಿ ಈ ಕೆಳಗೆ ರುಜು ಮಾಡಿರುವವರು ಟೆಂಡರುಗಳನ್ನು ಸ್ವೀಕರಿಸುವರೆಂದು ಈ ಮೂಲಕ ತಿಳಿಸಲಾಗಿದೆ. ಟೆಂಡರಿನೊಡನೆ ೧೫೦ ರೂ.ಮುಂಗಡ ಹಣ ಕಳುಹಿಸದಿದ್ದರೆ ಟೆಂಡರುಗಳನ್ನು ಗಣನೆಗೆತೆಗೆದುಕೊಳ್ಳುವುದಿಲ್ಲ. ಹೆಚ್ಚಿನ ವಿಷಯಗಳನ್ನು ಕಛೇರಿ ನಡೆಯುವ ವೇಳೆಗಳಲ್ಲಿ ಪಡೆಯಬಹುದು.

(ಸಹಿ) ಜಿ. ತಿಪ್ಪೇಸ್ವಾಮಿ,
ಜನರಲ್ ಮ್ಯಾನೇಜರ್.

ಅಪೇರ ೨೪-೧೦-೫೨ ರಿಂದ ಅಮೋಘ ೨ನೇವಾರ

ಪ್ರತಿದಿನ ಮೂರು ಆಟಗಳು

* ಮಾಪಿಳ್ಳೈ *

ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

—: ಪ್ರಕಾಶಕರು ಮತ್ತು ಮುದ್ರಕರು: —

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಒಲಂಪಿಯಾ ಅಮೋಘ ಪ್ರಾರಂಭ ತಾ|| 30-10-52 ರಿಂದ

ಪ್ರತಿದಿನ 3 ಆಟಗಳು

ನ್ಯೂ ಥಿಯೇಟರ್ಸ್‌ರವರ ಪ್ರಖ್ಯಾತಿ ನಟಿ: ಸುಮಿತ್ರಾದೇವಿ ಮತ್ತು ಪ್ರೇಮ್ ಅದಿಬ್ ಪಾತ್ರವಹಿಸಿರುವ ಅತ್ಯುತ್ತಮ ಪೌರಾಣಿಕ ಚಿತ್ರ

* ರಾಜಾ ಹರಿಶ್ಚಂದ್ರ * [ಹಿಂದಿ]

ಸಹಾಯಕ ನಟವರ್ಗ:— ಲಲಿತಾ ಪವಾರ್, ಬೀಪಿನ್ ಗುಪ್ತ, ಮತ್ತು ಹಾಸ್ಯ ನಟ: ಕಲಾಕೋವಿದ ಗೋಪ್

೨೯-೧೦-೫೨ :-ಬೆಳಗಿನ ಪ್ರದರ್ಶನ ಚಂದ್ರಮೋಹನ ಪಾತ್ರವಹಿಸಿರುವ ರೋಟಿ

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 57

೩೦-೧೦-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕ್ಷಾಮಪೀಡಿತ ಪ್ರದೇಶಗಳಲ್ಲಿ ಉಚಿತ ಆಹಾರ ಹಂಚಿಕೆ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ೪ ದಿನಗಳ ಕಾಲ ಕೋಲಾರ ಜಿಲ್ಲೆಯ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಭೇಟಿಕೊಟ್ಟರು.

ನ್ಯಾಯಸಹಾಯಕ್ಕಾಗಿ ಈ ಭಾಗಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದಲ್ಲದೆ ಪರಿಹಾರ ಕಾರ್ಯಕ್ಕಾಗಿ ಬಿರಕೂರು ಗ್ರಾಮಕ್ಕೆ ೧೦,೦೦೦ ರೂಗಳನ್ನು ಮಂಜೂರ್ಮಾಡಿದರು ಅನಾಥರಿಗೆಲ್ಲಾ ಈ ಪ್ರಾಂತ್ಯದಲ್ಲಿ ಆಹಾರವನ್ನು ಉಚಿತವಾಗಿ ಹಂಚುವಂತೆ ಸೂಚನೆಯಿತ್ತರು.

ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಗಳ ಚುನಾವಣೆ

ಮೈಸೂರು ೨೦

ಅಖಿಲಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಮೈಸೂರುನಗರದ ಪ್ರತಿನಿಧಿಗಳ ಚುನಾವಣೆಯು ನಗರ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುತ್ತದೆ ಉಮೇದುವಾರಿಕೆ ಅರ್ಜಿನಮೂನೆಗಳು ಕಾಂಗ್ರೆಸ್ ಕಛೇರಿಯಲ್ಲಿ ದೊರೆಯುತ್ತವೆ. ಅರ್ಜಿ ಸ್ವೀಕರಿಸಲು ನವೆಂಬರ್ ೧ ಮತ್ತು ೩ ನೇ ತಾರೀಖು ಕಡೆಯದಿನಗಳೆಂದುನಗರ ಕಾಂಗ್ರೆಸ್ ಚುನಾವಣಾಧಿಕಾರಿಗಳು ತಿಳಿಸುತ್ತಾರೆ.

ಸಾರ್ವಜನಿಕ ವಿದ್ಯಾರ್ಥಿನಿಲಯ ರಸ್ತೆ

ರಾಜಧಾನಿಯ ಚಾಮುಂಡಿ ಬಡಾವಣೆಯಲ್ಲಿರುವ ಸಾರ್ವಜನಿಕ ವಿದ್ಯಾರ್ಥಿನಿಲಯದ ಮುಂಭಾಗದ ರಸ್ತೆಗೆ..ರೇಷ್ಮೆ ಕಾರ್ಖಾನೆ ಸರ್ಕಲ್ ನಿಂದ ಚಾಮುಂಡಿ ಬಡಾವಣೆ ವರೆಗೆ ಸಾರ್ವಜನಿಕ ವಿದ್ಯಾರ್ಥಿನಿಲಯ ರಸ್ತೆ ಎಂದು ಪೌರಸಭೆಯವರು ಹೆಸರನ್ನಿಟ್ಟಿದ್ದಾರೆ. ಅದಕ್ಕಾಗಿ ನಿಲಯದವರು ಪುರಸಭೆಗೆ ವಂದನೆ ಅರ್ಪಿಸಿದ್ದಾರೆ.

ಡಾ|| ಮೋದಿಯವರ ಆಗಮನ

ಮೈಸೂರು ೩೦

ಕರ್ನಾಟಕ ಸುಪ್ರಸಿದ್ಧ ನೇತ್ರ ಚಿಕಿತ್ಸಾ ಪ್ರವೀಣರಾದ ಡಾ|| ಮೋದಿಯವರು ರಾಜಧಾನಿಗೆ ನಿನ್ನೆ ರಾತ್ರಿ ಆಗಮಿಸಿದರು ಅವರು ಈದಿನ ಮಧ್ಯಾಹ್ನ ಮಡಕೇರಿಗೆ ಪ್ರಯಾಣ ಬೆಳೆಸಿದರು ಅಲ್ಲಿ ಅವರು ನಾಡಿದ್ದುನಿಂದ ಉಚಿತ ಚಿಕಿತ್ಸಾ ಕೇಂದ್ರವನ್ನು ತೆರೆಯಲಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧ ಸತ್ಯಾಗ್ರಹ ಮುರಿಯಲು ಯತ್ನ

ದಕ್ಷಿಣ ಆಫ್ರಿಕಾ ಸರ್ಕಾರದ ವರ್ಣಭೇದ ಶಾಸನ ವಿರುದ್ಧ ಸತ್ಯಾಗ್ರಹವು ಯಶಸ್ವಿಯಾಗಿ, ಈಗ ಅಲ್ಲಿನ ಪ್ರತಿಯೊಂದು ಹಳ್ಳಿಗಳಿಗೂ ಹಂಡುತ್ತಿರುವುದನ್ನು ಕಂಡು ಮಲಾನ್ ಸರ್ಕಾರಕ್ಕೆ ತುಂಬಾ ಗಾಬರಿಯಾಗಿದೆಯೆಂದೂ, ಅದನ್ನು ಮುರಿಯಲು ನೂತನ ಉಗ್ರ ಶಾಸನವನ್ನು ಜಾರಿಗೆತರಲು ಯತ್ನಿಸುತ್ತಿದೆಯೆಂದೂ ಹೇಳಲಾಗಿದೆ.

೧೦೦೦ ಉಪಹಾರ ಮಂದಿರಗಳಿಗೆ ರಹದಾರಿಯಿಲ್ಲ

ಬೊಂಬಾಯಿ ನಗರದಲ್ಲಿ ೧೫೦೦೦ ಕ್ಕಿಂತ ಹೆಚ್ಚಿಗೆ ಸಂಖ್ಯೆಯಲ್ಲಿ ಉಪಹಾರ ಮಂದಿರಗಳಿವೆ. ಅವುಗಳಲ್ಲಿ ೧೦೦೦ ಕ್ಕೆ ಬೊಂಬಾಯಿ ಕಾರ್ಪೊರೇಷನ್ ರಹದಾರಿಯನ್ನು ಕೊಡಲು ನಿರಾಕರಿಸಿದೆ. ಅವುಗಳು ಅನಾರೋಗ್ಯಸ್ಥಿತಿಯಲ್ಲಿರುವುದೇ ಇದಕ್ಕೆ ಕಾರಣವಾಗಿದೆ.

ಏಷ್ಯಾ ಯುವಕ ಸಮ್ಮೇಳನ

ದಕ್ಷಿಣ ಏಷ್ಯಾ ಯುವಕ ಸಮ್ಮೇಳನವು ನಿನ್ನೆಯದಿನ ಪೂನಬಳಿ ಕರ್ಕಿಯಲ್ಲಿ ಪ್ರಾರಂಭವಾಯಿತು. ಭಾರತ, ಬರ್ಮಾ, ಪಾಕೀಸ್ಥಾನ ಮತ್ತು ಸಿಂಹಳಗಳಿಂದ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಲಿರುವರು ೪ ದಿನಗಳಕಾಲ ಇದು ನಡೆಯುತ್ತದೆ.

ಪಾಕೀಸ್ತಾನದಮೇಲೆ ಆರ್ಥಿಕ ಮುಗ್ಗಟ್ಟೇ ?

ಪಾಕೀಸ್ತಾನದಿಂದ ಭಾರತಕ್ಕೆ ವಲಸೆಗಾರರ ಸಂಖ್ಯೆಯು ವಿಶೇಷ ಪ್ರಮಾಣದಲ್ಲಿ ಬರುತ್ತಿದೆ ಪಾಕೀಸ್ತಾನವೇ ಇದಕ್ಕೆ ಕಾರಣ ಪಾಕೀಸ್ತಾನದಮೇಲೆ ಭಾರತವು ಆರ್ಥಿಕ ಮುಗ್ಗಟ್ಟನ್ನು ಹಾಕಲು ಪ್ರಧಾನಿ ನೆಹರೂರವರು ಒಪ್ಪದಿದ್ದರೆ ಇನ್ಯಾವುದಾದರೂ ಒಂದು ಉಚಿತವಾದ ನೀತಿಯನ್ನು ಅವರು ಅನುಸರಿಸಬೇಕು-ಎಂದು ಡಾ|| ಶ್ಯಾಮಪ್ರಸಾದ ಮುಖರ್ಜಿಯವರು ಹೇಳಿರುವರು.

ಲಂಚತೆಗೆದುಕೊಂಡಿದುದಕ್ಕೆ ಅಧಿಕಾರಿಯ ದಸ್ತಗಿರಿ

ಬೊಂಬಾಯಿ ಸಿವಿಲ್‌ಸಪ್ಲೈಸ್‌ಶಾಖಾ ಉಪ ಸಚಿವರ ಆಪ್ತಕಾರ್ಯದರ್ಶಿ ಶ್ರೀ ಕೇಳ್ಕರ್ ಎಂಬುವರನ್ನು ಲಂಚದ ಅಪಾದನೆಯ ಮೇಲೆ ದಸ್ತಗಿರಿ ಮಾಡಲಾಗಿದೆ ಒಬ್ಬ ವ್ಯಾಪಾರಿಯ ರಹದಾರಿಯನ್ನು ಮುಂದುವರಿಯಲು ಅವರು ೩೦೦ ರೂ ಲಂಚ ಸ್ವೀಕರಿಸಿದರೆಂದು ಅಪಾದಿಸಲಾಗಿದೆ.

ರಹದಾರಿಯಿಲ್ಲದ ಅಮೆರಿಕಾದವನಿಗೆ ಶಿಕ್ಷೆ

ಯಾವ ರಹದಾರಿಯನ್ನೂ ಪಡೆಯದೆ ಭಾರತಕ್ಕೆ ಆಗಮಿಸಿದನೆಂಬ ಅಪಾದನೆ ಮೇಲೆ ಮಿ|| ಜೆ.ವಿ ಲಾಮೌಂಟ್ ಎಂಬ ಅಮೆರಿಕನನ್ನು ಕಲ್ಕತ್ತಾ ಹೊಟೇಲಿನಲ್ಲಿ ದಸ್ತಗಿರಿಮಾಡಲಾಯಿತು. ಭಾರತವಿದೇಶೀ ಕಾನೂನುರೀತ್ಯಾ ಅವನಿಗೆ ಕೋರ್ಟ್ ಏಳುವವರೆಗೆ ಸಜಾ ಮತ್ತು ೫೦೦ ರೂ. ದಂಡವನ್ನು ವಿಧಿಸಲಾಯಿತು ಆತನು ಕೂಡಲೇ ದಂಡವನ್ನು ಕೊಟ್ಟನು ೨೪ ಗಂಟೆಗಳೊಳಗಾಗಿ, ಅವನು ಭಾರತವನ್ನು ಬಿಟ್ಟು ಹೋಗಬೇಕೆಂದೂ ಸೂಚನೆ ಕೊಡಲಾಯಿತು

ತಲಕಾಡು ಪಂಚಲಿಂಗ ಜಾತ್ರೆ

ಟಿ. ನರಸೀಪುರ ತಾಲ್ಲೂಕು ತಲಕಾಡಿನಲ್ಲಿ ಮುಂದಿನ ತಿಂಗಳು ೧೬ ನೇ ತಾರೀಖು ನಡೆಯಲಿರುವ ಪಂಚಲಿಂಗದರ್ಶನದ ಜಾತ್ರೆಗೆ ಸಂಸ್ಥಾನ ಮತ್ತು ಇತರಕಡೆಯಿಂದ ೨-೩ ಲಕ್ಷ ಜನ ಯಾತ್ರಿಕರು ಬರಲಿದ್ದಾರೆಂದು ಹೇಳಲಾಗಿದೆ. ಶ್ರೀಮನ್ಮಹಾರಾಜರವರು ಕೂಡ ಮಹೋತ್ಸವಕ್ಕೆ ಬರುವ ನಿರೀಕ್ಷೆಇದೆ.

ಈ ಸಂಬಂಧದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಮೊನ್ನೆದಿನ ತಲಕಾಡಿಗೆ ಭೇಟಿ ಇತ್ತು ಅಲ್ಲಿ ಯಾತ್ರಿಕರಿಗಾಗಿ ನೀರು, ಆಸ್ಪತ್ರೆ ಮುಂತಾದ ಸೌಲಭ್ಯಗಳ ಏರ್ಪಾಡಿನ ಬಗ್ಗೆ ಪರಿಶೀಲನೆ ನಡೆಸಿದರು.

ಪುರಸಭಾಧಿಕಾರಿಗಳಿಗೆ ಪಾಠ ಕಲಿಸಿದರು

ರತ್ನಗಿರಿಯ ಬೀದಿಯೊಂದರಲ್ಲಿದ್ದ ವಿಶೇಷ ಕಸ್ಮಲವನ್ನು ತೆಗೆಯಬೇಕೆಂದು ಅಲ್ಲಿನ ಪುರಸಭೆಯ ಅಧಿಕಾರಿಗಳಿಗೆ ಎಷ್ಟು ಪ್ರಾರ್ಥಿಸಿಕೊಂಡರೂ ಅದು ಸಫಲವಾಗದುದರಿಂದ ಅತನ ಶ್ರೀ ಬಾಬೂ ಸೇಲ್‌ಹನ್‌ಸಾರೆ ಎಂಬುವರು ತಾವೇ ನಿಂತುಕೊಂಡು ಕೆಲಸಮಾಡಲು ಪ್ರಾರಂಭಿಸಿದರೆಂದೂ, ಅದನ್ನು ಕಂಡು ಇತರರು ಅವರಿಗೆ ಸಹಾಯಮಾಡಿದರೆಂದೂ ಹೇಳಲಾಗಿದೆ. ಪಾಠ ಕಲಿತ ಪುರಸಭಾಧಿಕಾರಿಗಳು ಅನಂತರ ಒಂದು ಕೆಲಸವನ್ನು ಪೂರೈಸಿದರಂತೆ.

ನಾಲ್ಕುಹೃದಯದ ಕೋಳಿ

ಲಂಡನ್ನಿನಲ್ಲಿ ನಾಲ್ಕುಹೃದಯಗಳಿರುವ ಕೋಳಿಯೊಂದು ಪತ್ತೆಯಾಗಿದೆ. ಪ್ರತಿಹೃದಯವೂ ಒಳ್ಳೆಯಸ್ಥಿತಿಯಲ್ಲಿದ್ದು, ಒಂದಾದನಂತರ ಮತ್ತೊಂದರಮೂಲಕ ರಕ್ತ ಚಲಿಸುತ್ತಿರುವುದು ಕಂಡುಬಂದಿದೆ.

ಆರುತಿಂಗಳು ಆಹಾರವಿಲ್ಲದೆ ಸುಖವಾಗಿರುವ ಯುವತಿ

ಕಳೆದ ಆರುತಿಂಗಳಿಂದಲೂ ಆಹಾರ ಅಥವ ನೀರನ್ನೂ ತೆಗೆದುಕೊಳ್ಳದಿದ್ದರೂ ನಿತ್ಯಚರಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಇತರ ಮನುಷ್ಯರಂತೆ ಸೌಖ್ಯವಾಗಿರುವ ೧೭ ವರ್ಷದ ಯುವತಿಯೊಬ್ಬಳು ಮಂಡಕೇರಿಗೆ ೧೨ ಮೈಲಿಯಲ್ಲಿರುವ ಶಾಂತಿಕೊಪ್ಪದಲ್ಲಿರುವುದಾಗಿ,ಆಕೆಯನ್ನು ಕಂಡ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಸೋಮಣ್ಣನವರು ತಿಳಿಸಿರುತ್ತಾರೆ.

ಪದಚ್ಯುತರಾಗುವ ಕಾಶ್ಮೀರ ಮಹಾರಾಜರಿಗೆ ವೇತನ

ಕಾಶ್ಮೀರ ಮಹಾರಾಜ ಹರಿಸಿಂಗ್‌ರವರು ಯಾವ ಷರತ್ತೂಇಲ್ಲದೆ ತಮ್ಮ ಸಿಂಹಾಸನವನ್ನು ತ್ಯಜಿಸುವರೆಂದು ಅವರ ಪುತ್ರ ಯುವರಾಜ ಕರಣಸಿಂಗ್‌ರವರು ಕಾಶ್ಮೀರ ಪ್ರಥಮ ಚುನಾಯಿತ ಸದರ್-ಇ-ರಿಯಾಸತ್-ಅಧಿಪತಿಯಾಗಲು ಸಿದ್ಧರಾಗಿರುವುದಾಗಿ ಗೊತ್ತಾಗಿದೆ

ಇತ್ತೀಚಿನ ವರದಿಗಳ ಪ್ರಕಾರಕಾಶ್ಮೀರ ಸರ್ಕಾರವು ಪದಚ್ಯುತರಾಗುವ ಮಹಾರಾಜರಿಗೆ ಯಾವ ವೇತನವನ್ನೂ ಕೊಡುವುದಿಲ್ಲ. ಆದರೆ ಭಾರತ ಸರ್ಕಾರವು ೧೦ ಲಕ್ಷ ರೂಪಾಯಿಗಳ ರಾಜಾದಾಯವನ್ನು ಮಂಜೂರ್ಮಾಡುತ್ತದೆ. ಅದ ಪೈಕಿ ಮಹಾರಾಜರಿಗೆ ೪ ಲಕ್ಷ ರೂ. ಮಹಾರಾಣಿಯವರಿಗೆ ಒಂದುಲಕ್ಷರೂಪಾಯಿ ಕೊಡಲಾಗುತ್ತದೆಯೆಂದುಒಪ್ಪಂದವಾಗಿರುವುದಾಗಿ ಹೇಳಲಾಗಿದೆ.

ಕರ್ನಾಟಕ ಪ್ರಾಂತ್ಯರಚನೆ

ಬೊಂಬಾಯಿ, ಮೈಸೂರು ಸರ್ಕಾರಗಳು

ಕಾರ್ಯರೂಪಕ್ಕೆ ತರಬೇಕು

ಕರ್ನಾಟಕ ಪ್ರಾಂತ್ಯರಚನೆಗೆ ಬೊಂಬಾಯಿ ಮತ್ತು ಮೈಸೂರು ಪ್ರಾಂತ್ಯಗಳು ತಕ್ಕ ವ್ಯವಸ್ಥೆಯನ್ನು ಮಾಡಬೇಕಾಗಿದೆಯೇ ವಿನಹ ಕೇಂದ್ರಸರ್ಕಾರವಲ್ಲ. ಕರ್ನಾಟಕ ಪ್ರಾಂತ್ಯರಚನೆ ಆಗುವುದು ಉತ್ತಮವೆಂದು ಕೇಂದ್ರ ಕೈಗಾರಿಕಾ ಉಪಮಂತ್ರಿ ಶ್ರೀ ಡಿ. ಪಿ. ಕಾರಮರಕರ್‌ರವರು ಹೇಳಿರುವರು.

ಪ್ರಮುಖ ಉಕ್ಕಿನ ಕಾರ್ಖಾನೆಗಳ ಮಿಳಿತ

ಭಾರತದಲ್ಲಿ ಅತ್ಯಂತ ಹಿರಿಯ ಉಕ್ಕಿನ ಕಾರ್ಖಾನೆಗಳಾದ ಸ್ಟೀಲ್ ಕಾರ್ಪೊರೇಷನ್ ಆಫ್ ಬೆಂಗಾಲ್ ಕಂಪೆನಿ ಮತ್ತು ಇಂಡಿಯನ್ ಐರನ್ ಮತ್ತು ಸ್ಟೀಲ್ ಕಂಪೆನಿ ಎಂಬ ಎರಡನ್ನು ಐಕ್ಯಗೊಳಿಸಿ ಒಂದು ಹೊಸ ಕಾರ್ಖಾನೆಯನ್ನು ಯನ್ನು ಸ್ಥಾಪಿಸಲು ಭಾರತ ರಾಷ್ಟ್ರಾಧ್ಯಕ್ಷರು ಒಂದು ಆರ್ಡಿನೆನ್ಸ್ ಹೊರಡಿಸಿರುವರು ಕೇಂದ್ರ ವಾಣಿಜ್ಯ ಮಂಡಲಿಯು ಈ ಸಲಹೆಯನ್ನು ನೀಡಿತ್ತು ಉಕ್ಕಿನಸಾಮಾನುಗಳ ಉತ್ಪತ್ತಿ ಖರ್ಚನ್ನು ಕಡಿಮೆಮಾಡಿ, ಹೆಚ್ಚಿಗೆ ಪ್ರಮಾಣದಲ್ಲಿ ಉಕ್ಕನ್ನು ತಯಾರಿಸುವುದೇ ಈ ಐಕ್ಯತೆಯ ಉದ್ದಿಶ್ಯ.

ಬ್ರಿಟಿಷ್ ರಾಣಿಯೊಡನೆ ಭೇಟಿ

ಭಾರತ ಉಪರಾಷ್ಟ್ರಾಧ್ಯಕ್ಷರಾದ ಡಾ|| ರಾಧಾಕೃಷ್ಣರವರನ್ನು ಲಂಡನ್ನಿನಲ್ಲಿ ಇಂಗ್ಲೆಂಡಿನ ರಾಣಿ ಎಲಿಜಬೆತ್‌ರವರು ಬಕಿಂಗ್‌ಹಾಂ ಅರಮನೆಗೆ ಬರಮಾಡಿಕೊಂಡು ೨ ಗಂಟೆಕಾಲ ಮಾತುಕತೆ ನಡೆಸಿದರೆಂದು ಗೊತ್ತಾಗಿದೆ.

ಸೇವಕ ದಿನಪತ್ರಿಕೆ

ಕಳೆದ ೩ ವರ್ಷಗಳಿಂದಲೂ ರಾಜಧಾನಿಯಲ್ಲಿ ಪ್ರಕಟವಾಗುತ್ತಿರುವ ೩ ಕಾಸಿನ "ಸೇವಕ" ದಿನಪತ್ರಿಕೆಯನ್ನು ಮುಂದಿನ ತಿಂಗಳು ೧ನೇ ತಾರೀಖಿನಿಂದ ಪಿ. ಟಿ. ಐ. ಮತ್ತು ರಾಯಿಟರ್ ತಂತಿ ಸುದ್ದಿಗಳೊಡನೆ ದಿನಕ್ಕೆ ಎರಡಾವೃತ್ತಿ ಪ್ರಕಟಿಸಲು ಅದರ ಸಂಪಾದಕರಾದ ಶ್ರೀ ಅನಂತಸುಬ್ಬರಾಯರು ನಿರ್ಧರಿಸಿದ್ದಾರೆ.

ಇಂತಹ ತಂತಿ ಸಮಾಚಾರ ತರಿಸಿ ಬೆಳಿಗ್ಗೆ ಮತ್ತು ಸಂಜೆ ಪ್ರಕಟವಾಗಲಿರುವ ಪತ್ರಿಕೆಯ ಉದ್ಯಮವು ರಾಜಧಾನಿಯಲ್ಲಿ ಇದೇ ಪ್ರಥಮಬಾರಿ. ಅದು ಯಶಸ್ವಿಯಾಗಲೆಂಬುದೇ ಎಲ್ಲರ ಆಶೆ. ಬೆಲೆ ಆರು ಕಾಸು.

ಕಾಶ್ಮೀರ ಮುಸ್ಲಿಮರಮೇಲೆ ಲಾಠಿ ಪ್ರಹಾರ

ಪಾಕೀಸ್ತಾನದ ಅಧೀನದಲ್ಲಿರುವ ಸಯಾಲ್‌ಕೋಟೆಯ ಕಾಶ್ಮೀರಿ ಮುಸ್ಲಿಮರು ಕಾಶ್ಮೀರಕ್ಕೆ ಹಿಂತಿರುಗಬೇಕೆಂದು ಭಾರಿ ಚಳುವಳಿ ಪ್ರಾರಂಭಿಸಿದ್ದಾರೆಂದು ವರದಿಯಾಗಿದೆ ಈ ಚಳುವಳಿಗಾರರನ್ನು ಚದುರಿಸಲು ಪಾಕೀಸ್ತಾನದ ಪೋಲೀಸಿನವರು ಲಾಠಿಪ್ರಹಾರಮಾಡಿ, ಅನೇಕರನ್ನು ದಸ್ತಗಿರಿಮಾಡಿದ್ದಾರೆ.

ರಾಜೂರನ್ನು ಬೇಲ ಮೇಲೆ ಬಿಡುಗಡೆ

ಬೊಂಬಾಯಿ ಪ್ರೆಸಿಡೆನ್ಸಿ ನ್ಯಾಯಾಲಯದ ತೀರ್ಪಿನಂತೆ ಶ್ರೀ ಎಲ್. ಎಸ್. ರಾಜೂರವರು ೨೫೦೦೦ ರೂಪಾಯಿಗಳ ಸ್ವಂತ ಮತ್ತು ೨೫೦೦೦ ರೂಪಾಯಿಗಳ ಮತ್ತೆರಡು ಜಾಮೀನನ್ನು ಕೊಟ್ಟಮೇಲೆ ಅವರನ್ನು ಬೇಲ್‌ಮೇಲೆ ಬಿಡುಗಡೆಮಾಡಲಾಗಿದೆ.

ವ್ಯಭಿಚಾರ ನಿರ್ಮೂಲ ಮಾಡಲು ಯೋಜನೆ

ಭಾರತದಲ್ಲಿ ಇತ್ತೀಚೆಗೆ ಬೆಳೆಯುತ್ತಿರುವ ಹೆಂಗಸರ ಮತ್ತು ಹೆಣ್ಣುಮಕ್ಕಳ ಮಾರಾಟ ವ್ಯಾಪಾರ ಮತ್ತು ವ್ಯಭಿಚಾರವನ್ನು ತಡೆಗಟ್ಟಲು ಕೇಂದ್ರ ಆಯೋಜನಾಸಮಿತಿ ಏಕನೀತಿಯ ಕಾನೂನನ್ನು ರಚಿಸಲು ಸಲಹಾಸಮಿತಿಯನ್ನು ರಚಿಸಬೇಕೆಂದು ಯೋಚಿಸುತ್ತಿರುವುದಾಗಿ ತಿಳಿದುಬಂದಿದೆ.

ಮೈಸೂರು ಪೇಟೆಧಾರಣೆ

ತಾ|| ೨೯-೧೦-೫೨

ಪಲ್ಲ	ರೂ-ಆ	ರೂ-ಆ
ಕಡಲೇಕಾಯಿ	೧೨-	೨೧-೮
ಎಳ್ಳು	೬೯-೮	೭೧-೧೨
ಹರಳು	೪೩-೮	೪೭-
ಹುರುಳಿ	೫೬-೬	೫೯-೮
ಹೆಸರು		
ಅಲಸಂದೆ	೫೮-೮	೭೦-
ಹುಚ್ಚೆಳ್ಳು		
ಮೆಣಸಿನಕಾಯಿ	೫-೧೦	೧೬-೦
ಹುಣಸೆಹಣ್ಣು	೫-೧	೬-೧೦
ಸೀಗೇಪುಡಿ	೫-೬	
ಬೆಲ್ಲ	೩-೪	೩-೮
ತೆಂಗಿನಕಾಯಿ ೧,೧೦೦ ಕ್ಕೆ ೧೬೧-೨೪೬		

ವರ್ಧಂತಿಗೆ ಉಡುಗೊರೆ ಬೇಡ

ನವಂಬರ್ ೧೪ ನೇ ತಾರೀಖು ಪ್ರಧಾನಿ ನೆಹರೂರವರ ವರ್ಧಂತಿಯ ಸಂದರ್ಭದಲ್ಲಿ ನೆಹರೂರವರು ಒಂದು ಮನವಿಯನ್ನು ಕಳುಹಿಸಿ ತಮ್ಮ ವರ್ಧಂತಿಯ ಸಮಯದಲ್ಲಿ ಅಥವಾ ಇನ್ನಾವಸಮಯದಲ್ಲೂ ತಮಗೆ ತಿಳಿದಿರುವವರು,ತಿಳಿಯದವರು ಯಾರೂಯಾವ ಉಡುಗರೆಗಳನ್ನೂ ಕಳುಹಿಸಬಾರದು. ತಮ್ಮ ವರ್ಧಂತಿಯದಿನ ಜನತೆ ಇಷ್ಟಪಟ್ಟರೆ ಮಕ್ಕಳಿಗೆ ಬೇಕಾದ ಬಹುಮಾನಗಳನ್ನು ಪಾಠಶಾಲೆ ಅಥವಾ ಸಂಸ್ಥೆಗಳಮೂಲಕ ಹಂಚಬಹುದೆಂದು ತಿಳಿಸಿದ್ದಾರೆ.

ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದು ಅಪರಾಧ

ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವುದನ್ನು ನಿಷೇಧಿಸಲು ಸರ್ಕಾರಕ್ಕೆ ಅಧಿಕಾರಕೊಡುವ ಒಂದು ಶಾಸನವನ್ನು ಪಂಜಾಬು ಶಾಸನಸಭೆಯು ಅಂಗೀಕರಿಸಿದೆ.

ಒಚ್ಚಲು ಅಥವಾ ಉಗುಳುವ ತೊಟ್ಟಿಗಳಲ್ಲಿ ವಿನಹ ಮಿಕ್ಕೆಡೆ ಉಗುಳಿದರೆ ೨೫ ರೂಪಾಯಿನವರೆವಿಗೆ ದಂಡ ವಿಧಿಸಬಹುದಾಗಿದೆ.

ರಾಜಕಮಲ್

31—10—52 ರಿಂದ

ಪ್ರತಿದಿನ ಮೂರು ಪ್ರದರ್ಶನಗಳು

ಅಮೋಘ ಪ್ರಾರಂಭ

ಮಲತಾಯಿ

ಅಥವಾ

[ಕುಸುಮಲತ]

(ತಮಿಳು)

ಭೂಮಿಕೆ: ರುಕ್ಮಿಣಿದೇವಿ, ಎಡ್ನಿ, ಜಯಮಣಿ.

ಏಷ್ಯಾ ವಿದ್ಯಾರ್ಥಿ ಸಮ್ಮೇಳನ

ಅಂತರಾಷ್ಟ್ರೀಯ ವಿದ್ಯಾರ್ಥಿಸಂಸ್ಥೆಯ ಆಶ್ರಯದಲ್ಲಿ ಡಿ|| ೧೫ನೇ ತಾರೀಖಿನಿಂದ ದೆಹಲಿಯಲ್ಲಿ ಏಷ್ಯಾ ವಿದ್ಯಾರ್ಥಿ ಸಮ್ಮೇಳನ ನಡೆಯುವುದು.

ಪ್ರಭಾ ೩೧-೧೦-೫೨ ರಿಂದ ಪ್ರತಿದಿನ ೩ ಪ್ರದರ್ಶನಗಳು

ಒಂದುವಾರಮಾತ್ರ

ಇದುವರೆವಿಗೂ ನೋಡದೆ ಇರುವಮತ್ತೊಮ್ಮೆ ನೋಡಲಿಚ್ಛಿಸುವವರ ಸಲುವಾಗಿ ಮತ್ತೊಮ್ಮೆ ಪ್ರದರ್ಶಿಸಲ್ಪಡುವ–

ವಿ. ಶಾಂತಾರಾಂರವರ

-- ಅಮರ್‌ಭೂಪಾಳಿ --

ಪಾತ್ರ:- ಸಂಧ್ಯಾ, ಪಂಡಿತರಾವ್ ನಾಗರ್‌ಕರ್, ಲಲಿತಾಪವರ್.

ಬೇಗಿನ ಪ್ರದರ್ಶನ ೩೧-೧೦-೫೨ ರಿಂದ ಮೂರು ದಿನಗಳು ನಳಿನಿಜಯವಂತ್, ವೇಬಿರ್ ನಟಿಸಿರುವ ಆಂಖೆ

ವುಡ್ ಲ್ಯಾಂಡ್ಸ್

21-10-52 ರಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಪ್ರದರ್ಶನಗಳು

ರಂಗೀಲಿ (ಹಿಂದಿ)

ಪಾತ್ರ:ರೆಹೆನಾ, ಯಾಕೂಬ್, ರಾಜಕುಮಾರ್.

ಅಪೇರ ೨೪-೧೦-೫೨ ರಿಂದ ಅಮೋಘ ೨ನೇವಾರ

ಪ್ರತಿದಿನ ಮೂರು ಆಟಗಳು

* ಮಾಪಿಳ್ಳೈ *

ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ್

ಕಮ್ಯೂನಿಸ್ಟ್ ರಾಷ್ಟ್ರಗಳ ಪ್ರಜೆಗಳು ಜಪಾನಿಗೆ ಬರಕೂಡದು

ಕಮ್ಯೂನಿಸ್ಟ್ ರಾಷ್ಟ್ರದಲ್ಲಿರುವ ಜನರು ಜಪಾನ್‌ರಾಷ್ಟ್ರಕ್ಕೆ ಬರಕೂಡದೆಂದು ಜಪಾನ್‌ಸರ್ಕಾರವು ಒಂದು ಆಜ್ಞೆಯನ್ನಿತ್ತಿರುವುದಾಗಿ ಗೊತ್ತಾಗಿದೆ. ಆದರೆ ಇದು ಯುಗೊಸ್ಲೋವೇಕ್ಕೆ ಅನ್ವಯಿಸುವುದಿಲ್ಲ.

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 58

೩೧-೧೦-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಪುರಸಭಾ ಸದಸ್ಯರ ಸಭಾ ಪರಿತ್ಯಾಗ

ಚುನಾವಣೆ ಮುಂದುವರಿಸಿದುದಕ್ಕೆ ಟೀಕೆ

ಉಪಾಧ್ಯಕ್ಷರ ಕಛೇರಿ ಯಾವಾಗಲು ಮುಚ್ಚಿರುತ್ತದೆ

ಪುರಸಭೆಯಲ್ಲಿ ನಡೆದ ಘಟನೆಗಳು

ಮೈಸೂರು ೩೧

ಪುರಸಭಾಧಿವೇಶನವು ನಿನ್ನೆ ಸಂಜೆ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಪುರಸಭಾ ಚುನಾವಣೆಯನ್ನು ಮುಂದುವರಿಸಿರುವ ಬಗ್ಗೆ ಜನರಲ್ಲಿ ಅನೇಕರೀತಿ ಊಹಾಪೋಹಗಳು ಉಂಟಾಗಿದೆಯೆಂದು ಕುಂಟುನೆಪ ಹಾಕಿಕೊಂಡು ಪುರಸಭೆಯವರೇ ಅದನ್ನು ಮುಂದಕ್ಕೆ ಹಾಕಿಕೊಂಡಿದ್ದಾರೆಂದು ಆಪಾದನೆ ಮಾಡಲಾಗುತ್ತಿದೆಯೆಂದು ಶ್ರೀ ಎ. ವೆಂಕಟೇಶಯ್ಯನವರು ತಿಳಿಸಿದರು.

ಶ್ರೀಗಳಾದ ಪಿ. ಸೀತಾರಾಮಯ್ಯ ಮತ್ತು ಕೆ. ಪುಟ್ಟಸ್ವಾಮಿರವರು ಮಾತನಾಡಿ ತಾವುಗಳು ವಿಧಾನಸಭೆ ಮತ್ತು ಕಿರಿಯ ಶಾಸನ ಸಭೆಗಳಲ್ಲಿ ಈ ವಿಷಯದಲ್ಲಿ ಒತ್ತಾಯಪಡಿಸಿದುದನ್ನು ತಿಳಿಸಿದರು. ಮೊದಲು ಜನವರಿ ತಿಂಗಳಿನಲ್ಲಿ ಚುನಾವಣೆಯು ನಡೆಯಬೇಕೆಂದು ಸರಕಾರ ತಿಳಿಸಿದಮೇಲೆ ಪುರಸಭೆಯವರು ಮಾರ್ಚಿ ತಿಂಗಳಿನಲ್ಲೇ ವಾರ್ಡುಗಳನ್ನು ವಿಂಗಡಿಸಿ, ಆರು ಮಾಹೆಯಾನ ಸಭೆ ನಡೆಸಿಕೊಂಡು ಬಂದಿದ್ದರೂ, ಆ ವಿಚಾರದಲ್ಲಿ ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ. ಆದರೆ ಹಿಂದಿನ ತಿಂಗಳು ಶಾಸನಸಭೆಗಳಲ್ಲಿ ಒತ್ತಾಯವಾದಕೂಡಲೇ ಪುರಸಭೆಗೆ ಆಗಸ್ಟ್ ೨೬ ನೇ ತಾ|| ಪತ್ರಬರೆದು ನವಂಬರ್ ೨ನೇ ತಾ|| ಪೊಳಗಾಗಿ ಓಟರುಗಳ ಪಟ್ಟಿಯನ್ನು ಪ್ರಕಟಿಸಬೇಕೆಂದು ತಿಳಿಸಿದರು. ಆದರೆ ಅದಕ್ಕೆ ಕಾಲಾವಕಾಶವಿಲ್ಲವೆಂದು ಪುರಸಭೆಯವರು ತಿಳಿಸಿದಮೇಲೆ ಚುನಾವಣೆಯನ್ನು ಮುಂದಕ್ಕೆ ಹಾಕಿದರು-ಎಂದು ಹೇಳಿದರು.

ಸಭಾಪರಿತ್ಯಾಗ

ವಾಣಿವಿಲಾಸಮೊಹಲ್ಲಾ ಮತ್ತು ಮಂಡಿ ಮೊಹಲ್ಲಾಗಳಲ್ಲಿ ಕ್ಷಯರೋಗದ ಬಗ್ಗೆ ಒಂದು ಸರ್ವೆ ನಡೆಸಬೇಕೆಂಬ ಬಿ. ಜಿ. ದಾಸ್‌ರವರ ನಿರ್ಣಯವನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ಅಧ್ಯಕ್ಷರು ಸೇರಿಸದೆ ಇರುವ ಬಗ್ಗೆ ಶ್ರೀ ದಾಸರು ಪ್ರತಿಭಟನೆ ಸೂಚಿಸಿ, ಆರೋಗ್ಯಕ್ಕೆ ಸಂಬಂಧಪಟ್ಟ ಬಹು ಮುಖ್ಯ ವಿಷಯವಾದ್ದರಿಂದ ಅದರಿಂದ ಅದನ್ನು ಪಟ್ಟಿಯಲ್ಲಿ ಸೇರಿಸಬೇಕೆಂದು ಒತ್ತಾಯಪಡಿಸಿದರು.

ವಾಣಿವಿಲಾಸ ಮೊಹಲ್ಲಾ ಎಂದು ಮೈಸೂರುನಗರದಲ್ಲಿ ಯಾವ ಮೊಹಲ್ಲಾವೂ ಇಲ್ಲವೆಂದೂ, ಯಾರು ಸರ್ವೆನಡೆಸಬೇಕೆಂದು ಸ್ಪಷ್ಟಪಡಿಸಿಲ್ಲವೆಂದೂ ಆದ್ದರಿಂದ ಅದನ್ನು ಪಟ್ಟಿಯಲ್ಲಿ ಸೇರಿಸಲು ಅವಕಾಶವಿಲ್ಲವೆಂದು ಅಧ್ಯಕ್ಷರು ತಿಳಿಸಿ ಅದನ್ನು ತಳ್ಳಿಹಾಕಿದರು.

ಅದಕ್ಕೆ ಪ್ರತಿಭಟನೆ ಸೂಚಿಸಿ, ಶ್ರೀ ದಾಸ್‌ರವರು ಸಭಾ ಪರಿತ್ಯಾಗ ಮಾಡಿದರು.

ಮನೆ ಕಂದಾಯ

ನಗರದಲ್ಲಿ ಮನೆಕಂದಾಯ ಸಮರ್ಪಕವಾಗಿ ನಡೆಯುತ್ತಿಲ್ಲ. ತಾತ್ಸಾರತೋರಿಸಲಾಗುತ್ತಿದೆ ಬಹಳ ಬಾಕಿನಿಂತು ಹೋಗಿದೆ ಪುರಸಭೆಯವರು ಅದನ್ನು ವಸೂಲು ಮಾಡಲು ಸಾಧ್ಯವಿಲ್ಲದಿದ್ದಲ್ಲಿ ಮತ್ತು ಜನರು ಅದನ್ನು ಕೊಡಲು ಶಕ್ತಿಯಿಲ್ಲವೆಂದು ಕಂಡು ಬಂದಲ್ಲಿ ಅದನ್ನು ರೈಟ್‌ಆಫ್ ಮಾಡುವುದೇ ಲೇಸೆಂದು ಶ್ರೀ ಎ. ವೆಂಕಟೇಶಯ್ಯನವರು ತಿಳಿಸಿದರು.

ಮನೆಬಾಡಿಗೆ ಕೊಡದೇ ಸ್ವಲ್ಪ ರಿಪೇರಿ ಮಾಡಿದ ಮನೆಗಳಿಗೂ ಕಂದಾಯ ಹೆಚ್ಚಿಸಿರುವುದು ಸರಿಯಲ್ಲವೆಂದೂ, ಹೆಚ್ಚಿರುವುದಕ್ಕೆ ಕಾರಣಕೊಟ್ಟು, ಅದರ ಬಗ್ಗೆ ಅಪೀಲು ಹೋಗಬಹುದೆಂದು ಜನರಿಗೆ ತಿಳುವಳಿಕೆ ಕೊಡಬೇಕೆಂದೂ ಶ್ರೀ ಚೌಡಯ್ಯನವರು ತಿಳಿಸಿದರು.

ಲಾರಿಹರಿದು ಹಳ್ಳಿಯುವನ ಮರಣ

ಮೈಸೂರು ೩೧

ಪಾಂಡವಪುರ ತಾಲ್ಲೂಕಿನ ಮಾಡರಹಳ್ಳಿಯ ಶ್ರೀ ಚೆನ್ನೇಗೌಡ ಎಂಬಾತನು ಮೊನ್ನೆ ಬೆಳಗಿನ ಜಾವ ನಗುನಹಳ್ಳಿ ಬಳಿ ಮೈಸೂರು-ಬೆಂಗಳೂರು ರಸ್ತೆಯ ಪಕ್ಕದಲ್ಲಿ ತನ್ನ ಗಾಡಿಯನ್ನು ನಿಲ್ಲಿಸಿಕೊಂಡು ಮಲಗಿದ್ದಾಗ ಲಾರಿಯೊಂದು ಆತನಮೇಲೆ ಹರಿದು ಸ್ಥಳದಲ್ಲೇ ಮೃತಪಟ್ಟನೆಂದು ವರದಿಯಾಗಿದೆ.

ಬಹಿರಂಗ ಸಭೆ

ಕಮ್ಯೂನಿಸ್ಟ್‌ಪಕ್ಷದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗಸಭೆ ನಡೆಯುವುದು. ಬೆಂಗಳೂರಿನ ಕಾರ್ಮಿಕ ಮುಖಂಡರಾದ ಶ್ರೀ ಕಕ್ಕಿಲಾಯ ಮತ್ತು ಶ್ರೀ ಮೊನ್ನಯ್ಯನವರು ಭಾಷಣಮಾಡುವರು.

ಅಂತರರಾಷ್ಟ್ರೀಯ ಸಹಕಾರ ದಿನಾಚರಣೆ

ಮೈಸೂರು ಜಿಲ್ಲಾ ಸಹಕಾರರ ಪ್ರಚಾರ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ರಾಜಧಾನಿಯ ಸಹಕಾರ ಭವನದಲ್ಲಿ ಅಂತರ ರಾಷ್ಟ್ರೀಯ ಸಹಕಾರ ದಿನಾಚರಣೆಯು ಜಿಲ್ಲಾನ್ಯಾಯಾಧೀಶರಾದ ಶ್ರೀ ಕೆ. ಆರ್. ತಿಮ್ಮರಾಯಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಹಿಂದಿ ಪ್ರಚಾರ ಸಭೆ

ಮೈಸೂರು ನಗರದ ಹಿಂದಿ ಪ್ರಚಾರ ಸಭೆಯ ವಾರ್ಷಿಕಸಭೆಯು ಮೊನ್ನೆದಿನ ನಡೆದು ನೂತನ ವರ್ಷಕ್ಕೆ ಶ್ರೀ ಅಂಬಳೆ ಸುಬ್ರಮಣ್ಯ ಅಯ್ಯರ್‌ರವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಕೆ. ವಿ. ಶ್ರೀನಿವಾಸಮೂರ್ತಿ ಮತ್ತು ಪಿ. ಗೋಪಾಲಕೃಷ್ಣಶೆಟ್ಟರವರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ಶ್ರೀರಂಗಾಚಾರ್ಯರು ಕಾರ್ಯದರ್ಶಿಯಾಗಿಯೂ, ಶ್ರೀ ಆರ್. ರಾಯರು ಖಜಾಂಚಿಯಾಗಿಯೂ ಚುನಾಯಿಸಲಾಯಿತು.

ಮಲ್ಲಿಕಾರ್ಜುನಪ್ಪನವರ ನಿಧನ

ಮೈಸೂರು ಜೈಲಿನ ನಿವೃತ್ತ ಸೂಪರಿಂಟೆಂಡೆಂಟರೂ ಮತ್ತು ಪಾರ್ಲಿಮೆಂಟ್ ಸದಸ್ಯ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರ ಮಾವಂದಿರೂ ಆದ ಶ್ರೀ ಆರ್. ಮಲ್ಲಿಕಾರ್ಜುನಪ್ಪನವರು ಮೊನ್ನೆ ದಿನ ತಮ್ಮ ೬೦ ನೇ ಮಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಆಹಾರಹತೋಟಿ ಇರಬೇಕು

ಇಂದಿನ ದೇಶದ ಆಹಾರ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಆಹಾರ ಹಂಚುವಿಕೆ ಮತ್ತು ಬಳಸುವಿಕೆಯಮೇಲೆ ಹತೋಟಿ ಅವಶ್ಯಕವೆಂದು ಪ್ರಜಾ ಸೋಷಲಿಸ್ಟ್ ನಾಯಕ ಶ್ರೀ ಅಶೋಕ ಮೆಹ್ತಾರವರು ಹೇಳಿರುವರು.

ಬೆವಿನ್ ವಿರೋಧ ಪಕ್ಷದ ವಿಸರ್ಜನೆ

ಬ್ರಿಟನ್ನಿನ ಲೇಬರ್ ಪಕ್ಷದಲ್ಲೇ ಒಳವಿರೋಧ ಪಂಗಡವೊಂದನ್ನು ರಚಿಸಿದ್ದ ಮಿ|| ಬೆವಿನ್‌ರವರು ಪಕ್ಷದ ಆಜ್ಞೆಗೆ ತಲೆಬಾಗಿ ತಮ್ಮ ವಿರೋಧ ಪಂಗಡವನ್ನು ರದ್ದು ಮಾಡಿದ್ದಾರೆ.

ವಿಶ್ವದಲ್ಲೇ ಉದ್ದವಾದ ಮೀಸೆ

ದೆಹಲಿಯ ಕೇಂದ್ರಸರ್ಕಾರದ ಆಡಾರಾಕಛೇರಿಯಲ್ಲಿ ನೌಕರರಾಗಿರುವ ೬೦ ವರ್ಷದ ಪ್ರೀತಂಸಿಂಗ್ ಎಂಬುವರಿಗೆ ವಿಶ್ವದಲ್ಲೇ ಉದ್ದವಾದಂತ ಮೀಸೆಯು ಇರುವುದಾಗಿಯೂ, ಅದನ್ನು ೬೨ ವರ್ಷಗಳಿಂದಲೂ ಅವರು ಪೋಷಿಸಿಕೊಂಡುಬಂದಿರುವುದಾಗಿಯೂ ವರದಿಯಾಗಿದೆ.

ಸುಂಕದಬಗ್ಗೆ ಕಿರುಕುಳ

ಪೌರಸಭೆಯ ಆಕ್ಟ್ರಾಯ್ ಶಾಖೆಯವರು ಸುಂಕ ವಸೂಲುಮಾಡುವಾಗ ಗಂಟೆಗಟ್ಟಲೆ ಕಾಲ ಜನರನ್ನು ನಿಲ್ಲಿಸಿ ತುಂಬಾ ಕಿರುಕುಳ ಕೊಡುತ್ತಿದ್ದಾರೆ. ಈ ತೊಂದರೆಯನ್ನು ಕೂಡಲೇ ತಪ್ಪಿಸಬೇಕೆಂದು ಶ್ರೀಗಳಾದ ಮಿರ್ಜಾನೂರ್ ಹುಸೇನ್ ಮತ್ತು ಮುದ್ದಯ್ಯನವರು ಒತ್ತಾಯ ಪಡಿಸಿದರು.

ಉಪಾಧ್ಯಕ್ಷರ ಕಛೇರಿ

ಪುರಸಭೆಯ ಉಪಾಧ್ಯಕ್ಷರ ಕಛೇರಿಯು ಯಾವಾಗಲೂ ಮುಚ್ಚಿರುತ್ತದೆ. ಕಾರ್ಯಾರ್ಥವಾಗಿ ಉಪಾಧ್ಯಕ್ಷರನ್ನು ಭೇಟಿಮಾಡಲು ಜನರು ಬಂದಾಗ ನಿರಾಶೆಯಿಂದ ವಾಪಸು ಆಗಬೇಕಾಗಿದೆ. ಉಪಾಧ್ಯಕ್ಷರು ದೆಹಲಿಯಲ್ಲೇ ಇರುವುದರಿಂದ ಅವರ ಕೆಲಸ ನಿರ್ವಹಣೆ ನಡೆಯುತ್ತಿಲ್ಲ ಎಂದು ಜನರು ಟೀಕೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಅದನ್ನು ಸರಿಪಡಿಸಬೇಕೆಂದು ಶ್ರೀ ಮಿರ್ಜಾನೂರ್‌ಹುಸೇನರು ತಿಳಿಸಿದರು.

ಬೊಂಬಾಯಿ ಪ್ರಾಂತ್ಯದಲ್ಲಿ ನಿಯಂತ್ರಣ ತೆಗೆಯಲು ಸಿದ್ಧ

ಮುಖ್ಯ ಸಚಿವರ ವಿವರಣೆ

ಬೊಂಬಾಯಿನ ಸರ್ಕಾರದ ಸಚಿವರುಗಳು, ೪ ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ಮತ್ತು ಶಾಸನಸಭೆಯ ಕಾಂಗ್ರೆಸ್‌ಪಕ್ಷದ ಸದಸ್ಯರ ಸಭೆಯು ನಿನ್ನೆದಿನ ಮುಖ್ಯಮಂತ್ರಿ ಶ್ರೀ ಮುರಾರ್ಜಿ ದೇಶಾಯಿಯವರ ಅಧ್ಯಕ್ಷತೆಯಲ್ಲಿ ನಡೆದು ಆಹಾರ ಪರಿಸ್ಥಿತಿಯಬಗ್ಗೆ ಪರಿಶೀಲನೆ ನಡೆಸಿತು.

ಭಾರತ ಸರ್ಕಾರವು ಆಹಾರನೀತಿಯ ವಿಷಯದಲ್ಲಿ ಏಕಮಾತ್ರ ನೀತಿಯನ್ನು ನಿರ್ಧರಿಸಿ ಆಹಾರ ನಿಯಂತ್ರಣವನ್ನು ತೆಗೆದುಹಾಕಿದರೆ ತಮ್ಮ ಸರ್ಕಾರವು ಅದಕ್ಕೆ ಬೆಂಬಲವಿತ್ತು ನಿಯಂತ್ರಣ ತೆಗೆದುಹಾಕುವುದಾಗಿ ಬೊಂಬಾಯಿನ ಮುಖ್ಯಮಂತ್ರಿ ತಿಳಿಸಿದರು. ಸಭೆಯಲ್ಲಿ ಇದಕ್ಕೆ ವಿರೋಧವೇನೂ ಬರಲಿಲ್ಲವೆಂದು ಗೊತ್ತಾಗಿದೆ.

ಪೆಪ್ಸು ಸರ್ಕಾರವುಸಹ ಆಹಾರ ನಿಯಂತ್ರಣವನ್ನು ತೆಗೆದುಹಾಕಲು ಸಿದ್ಧವಿರುವುದಾಗಿ ಅಲ್ಲಿಯ ಆಹಾರ ಸಚಿವರು ತಿಳಿಸಿರುವರು. ಅಸ್ಸಾಂನಲ್ಲಿ ಇಂದಿನ ಪರಿಸ್ಥಿತಿಯಲ್ಲಿ ನಿಯಂತ್ರಣವನ್ನು ಮುಂದುವರಿಸಿಕೊಂಡು ಹೋಗಲಾಗುತ್ತದೆ. ನಿಯಂತ್ರಣ ತೆಗೆದುಹಾಕಲು ಕಾಲಸನ್ನಿಹಿತವಾಗಿಲ್ಲವೆಂದು ಅಲ್ಲಿಯ ಆಹಾರ ಮಂತ್ರಿ ಹೇಳಿರುವರು.

ಭಾರತ ಸೇವಾದಳ

ಭಾರತ ಸೇವಾದಳದ ಮೈಸೂರು ಶಾಖೆಯ ಕಾರ್ಯಕಾರೀಸಮಿತಿಯ ನೂತನ ಚುನಾವಣೆ ನಡೆದು ಶ್ರೀ ಎ. ಜಿ. ರಾಮಚಂದ್ರರಾಯರು ಅಧ್ಯಕ್ಷರಾಗಿಯೂ, ಶ್ರೀ ವಿ. ಎಸ್. ನಾರಾಯಣರಾಯರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ಆರ್. ಗುರು ಪ್ರಧಾನ ಕಾರ್ಯದರ್ಶಿಯಾಗಿ, ಶ್ರೀ ರುಮಾಲೆ ಚನ್ನಬಸವಯ್ಯ ಸಂಘಟನಾ ಕಾರ್ಯದರ್ಶಿಯಾಗಿಯೂ ಚುನಾಯಿಸಲಾಗಿದೆ.

ಪಾಕೀಸ್ತಾನಕ್ಕೆ ಭಾರತ ಚಲನ ಚಿತ್ರಗಳ ರವಾನೆ ನಿಷೇಧ

ಭಾರತದಿಂದ ಚಲನ ಚಿತ್ರಗಳು ಪಾಕೀಸ್ತಾನಕ್ಕೆ ಹೋಗುತ್ತಲಿರುವುದರಿಂದ ಅಲ್ಲಿ ಚಲನಚಿತ್ರ ಕೈಗಾರಿಕೆಗೆ ವಿಶೇಷವಾಗಿ ಧಕ್ಕೆ ಉಂಟಾಗಿದೆಯೆಂದು ಭಾರತದಿಂದ ಪೂರ್ವಪಾಕೀಸ್ಥಾನಕ್ಕೆ ಚಲನ ಚಿತ್ರಗಳ ರವಾನೆಯನ್ನು ಪಾಕ್ ಸರ್ಕಾರವು ನಿಷೇಧಿಸಿ ಆಜ್ಞೆಯನ್ನಿತ್ತಿದೆ.

ಗಿರಣಿ ವಿವಾದ ಸಂಧಾನ ವಿಫಲ

ಕಳೆದ ಕೆಲವುದಿನಗಳಿಂದ ಭಾರತ ಸರ್ಕಾರದ ಕಾರ್ಮಿಕ ಸಚಿವ ಶ್ರೀ ವಿ.ವಿ. ಗಿರಿ ಮತ್ತು ಮದ್ರಾಸ್ ಸರ್ಕಾರದ ಕಾರ್ಮಿಕ ಸಚಿವ ಡಾ|| ಯು. ಕೃಷ್ಣರಾವ್‌ರವರು ಕೊಯಮತ್ತೂರಿನಲ್ಲಿ ಗಿರಣಿ ಮಾಲೀಕರ ಮತ್ತು ಕಾರ್ಮಿಕರ ನಡುವೆ ಉಂಟಾಗಿರುವ ವಿವಾದವನ್ನು ಬಗೆಹರಿಸಲು ನಡೆಸುತ್ತಲಿದ್ದ ಸಂಧಾನವೆಲ್ಲವೂ ವಿಫಲವಾದುದಾಗಿ ಗೊತ್ತಾಗಿದೆ.

ಬೋನಸ್ಸು, ಪರಿಹಾರ ಮುಂತಾದ ವಿಷಯಗಳಲ್ಲಿ ವಿವಾದವುಂಟಾಗಿ ೧೯೪೮ ರಿಂದ ಬಗೆಹರಿದಿಲ್ಲ.

ಈ ವಿವಾದವು ೭೨ ಗಿರಣಿಗಳಲ್ಲಿರುವ ಸುಮಾರು ೩೬೦೦೦ ಕೆಲಸಗಾರರಿಗೆ ಸಂಬಧಪಟ್ಟಿದೆ.

ದಕ್ಷಿಣ ಭಾರತ ಆಹಾರ ಪರಿಸ್ಥಿತಿ ಬಗ್ಗೆ ಪಾರ್ಲಿಮೆಂಟಿನಲ್ಲಿ ವರದಿ

ನವಂಬರ್ ಮತ್ತು ಡಿಸೆಂಬರ್ ಮಾಹೆಗಳಲ್ಲಿ ನಡೆಯುವ ಪಾರ್ಲಿಮೆಂಟ್ ಅಧಿವೇಶನಮುಂದೆ ಪ್ರಧಾನಿ ನೆಹರೂರವರು ತಮ್ಮ ದಕ್ಷಿಣಭಾರತ ಪ್ರವಾಸದಲ್ಲಿ ಕಂಡುಬಂದ ಆಹಾರ ಪರಿಸ್ಥಿತಿ ಬಗ್ಗೆ ವರದಿಯನ್ನು ಒಪ್ಪಿಸುವರೆಂದು ಗೊತ್ತಾಗಿದೆ.

ಆಂಧ್ರಪ್ರಾಂತ್ಯ ರಚನೆ ಬಗ್ಗೆ ಯೂ ವಿಷಯಚರ್ಚೆಗೆ ಬರುವುದಾಗಿ ಹೇಳಲಾಗಿದೆ.

ಮೈಸೂರು ಪೇಟೆಧಾರಣೆ

ತಾ|| ೩೦-೧೦-೫೨

ಪಲ್ಲ	ರೂ-ಆ	ರೂ-ಆ
ಕಡಲೇಕಾಯಿ	೧೨-೪	೧೯-೮
ಎಳ್ಳು	೭೩-೦	೭೭-೪
ಹರಳು	೪೫-೨	೪೬-
ಹುರುಳಿ	೫೯-೧೪	
ಹೆಸರು		
ಅಲಸಂದೆ		
ಹುಚ್ಚೆಳ್ಳು	೫೫-೧೪	
ಮೆಣಸಿನಕಾಯಿ	೫-೨	೧೫-೮
ಹುಣಸೆಹಣ್ಣು	೪-೧೨	
ಸೀಗೇಪುಡಿ	೫-೨	
ಬೆಲ್ಲ		
ತೆಂಗಿನಕಾಯಿ ೧,೧೦೦ ಕ್ಕೆ	೧೬೦-೨೧೫	

ಪಾಕೀಸ್ತಾನ ಕ್ರಿಕೆಟ್ ಟೀಮಿನಮೇಲೆ ವಿರೋಧ ಪ್ರದರ್ಶನ

ಪಾಕೀಸ್ತಾನವು ತನ್ನ ಹಿಂದೂ ಪ್ರಜೆಗಳನ್ನು ಹೆದರಿಸಿ ಬೆದರಿಸಿ ಓಡಿಸುತ್ತಿರುವಾಗ ಭಾರತವು ಅಲ್ಲಿಂದ ಕ್ರಿಕೆಟ್ ಟೀಮನ್ನು ಕರೆಸುವುದೆಂದರೆ ನಮ್ಮ ರಾಷ್ಟ್ರಕ್ಕೆ ಅಪಮಾನಮಾಡಿದಂತಾಗುವುದೆಂಬುದನ್ನು ಸಾರ್ವಜನಿಕರಿಗೆ ತಿಳಿಸಬೇಕೆಂದು ಅಖಿಲಭಾರತ ಹಿಂದೂ ಮಹಾಸಭಾಧ್ಯಕ್ಷರಾದ ಡಾ|| ಎನ್. ಬಿ. ಖರೆಯವರು ನಾಳೆದಿನ ನಾಗಪುರದಲ್ಲಿ ಪ್ರಾರಂಭವಾಗಲಿರುವ ಪಾಕೀಸ್ತಾನ್ ಮತ್ತು ಸೆಂಟ್ರಲ್ ಜೋನ್ ಕ್ರಿಕೆಟ್ ಆಟದ ಮೈದಾನದ ಮುಂದೆ ಪಿಕೆಟಿಂಗ್ ನಡೆಸುವುದಾಗಿ ತಿಳಿಸಿರುತ್ತಾರೆ.

ನವೆಂಬರ್ ೩ನೇ ತಾರೀಖು ಮೋಟಾರು ಕೆಲಸಗಾರರ ಮುಷ್ಕರ

ಬೊಂಬಾಯಿ ಸಂಸ್ಥಾನದಾದ್ಯಂತ ಮುಂದಿನತಿಂಗಳು ೩ನೇ ತಾ|| ಮುಷ್ಕರ ನಡೆಸಬೇಕೆಂದು ಬೊಂಬಾಯಿ ಸ್ಟೇಟ್ ಮೋಟಾರು ವಾಹನಗಳ ಕೆಲಸಗಾರರ ಸಂಘದವರು ನಿರ್ಧರಿಸಿದ್ದಾರೆ. ಸರ್ಕಾರದವರು ಹೊಸ ತೆರಿಗೆಯನ್ನು ವಿಧಿಸಿರುವುದನ್ನು ಪ್ರತಿಭಟಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ.

ಆಹಾರ ಹತೋಟಿ ರದ್ದುಗೊಳಿಸುವುದೇ ಕೇಂದ್ರ ಸರ್ಕಾರದ ಆಶಯ

ಆಹಾರ ಹತೋಟಿಯನ್ನು ರದ್ದುಗೊಳಿಸಿ ಜನತೆಗೆ ಸಾಧ್ಯವಾದಷ್ಟು ಸೌಕರ್ಯಗಳನ್ನು ಕಲ್ಪಿಸಬೇಕೆಂಬುದೇ ಭಾರತ ಸರ್ಕಾರದ ನೀತಿ ಆದರೆ ಇದರಿಂದ ಜನರ ಪೋಷಣೆಯುಂಟಾಗಿ ತೊಂದರೆಗೀಡಾಗುವರೆಂಬುದು ತಿಳಿದೊಡನೆಯೇ ಹತೋಟಿಯನ್ನು ವಿಧಿಸುವುದಲ್ಲದೆ ಬಿಗಿ ಪಡಿಸಲಾಗುತ್ತದೆ ಎಂದು ಪ್ರಧಾನಿ ನೆಹರೂ ಆಹಾರ ಹತೋಟಿ ಬಗ್ಗೆ ಮಾತನಾಡುತ್ತಾ ಹೇಳಿರುವರು.

ರಾಧಾಕೃಷ್ಣನ್-ಈಡನ್ ಭೇಟಿ

ಭಾರತ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರು ನಿನ್ನೆಯದಿನ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಈಡನ್‌ರವರನ್ನು ಭೇಟಿಮಾಡಿದ್ದರು. ಅಲ್ಲದೆ ಅನೇಕ ಪ್ರಮುಖವ್ಯಕ್ತಿಗಳನ್ನು ಶ್ರೀಯುತರು ಭೇಟಿಮಾಡಿ ಕೊರಿಯಾ, ದಕ್ಷಿಣ ಆಫ್ರಿಕಾ ಮುಂತಾದ ಅನೇಕ ವಿಶ್ವಸಮಸ್ಯೆಗಳನ್ನು ಚರ್ಚಿಸಿದರೆಂದು ತಿಳಿದುಬಂದಿದೆ.

ರಣಜಿತ್
31-10-52 ರಿಂದ
ಅಮೋಘ ಪ್ರಾರಂಭ
ಮೋತಿಮಹಲ್
ಸುರಯ್ಯ, ಅಜಿತ್, ಜೀವನ್, ಮೀರಾ

ಅಪೇರ ೩೧-೧೦-೫೨ ರಿಂದ ಅಮೋಘ ೨ನೇವಾರ
ಪ್ರತಿದಿನ ಮೂರು ಆಟಗಳು
* ಮಾಪಿಳ್ಳೈ *
ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

ವುಡ್ ಲ್ಯಾಂಡ್ಸ್
31-10-52 ರಿಂದ ಎರಡನೇ ವಾರ
ಪ್ರತಿದಿನ ೩ ಪ್ರದರ್ಶನಗಳು
ರಂಗೀಲಿ (ಹಿಂದಿ)
ಪಾತ್ರ: ರೆಹೆನಾ, ಯಾಕೂಬ್. ರಾಜಕುಮಾರ್.

—: ಪ್ರಕಾಶಕರು ಮತ್ತು ಮುದ್ರಕರು: —
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಅವಿಶ್ವಾಸನಿರ್ಣಯಕ್ಕೆ ಸೋಲು

೬೧ ಓಟುಗಳು ವಿರೋಧವಾಗಿ ಬಂದವು

ತಿರುವಾಂಕೂರ್ ಕೊಚಿನ್ ಸರ್ಕಾರದ ಮೇಲೆ ಅಲ್ಲಿಯ ವಿರೋಧಪಕ್ಷದವರು ಶಾಸನಸಭೆಯಲ್ಲಿ ಮಂಡಿಸಿದ್ದ ಅವಿಶ್ವಾಸ ನಿರ್ಣಯವು ನಿನ್ನೆಯದಿನ ಚರ್ಚೆಗೆ ಬಂದು ೪೬-೬೧ ಓಟುಗಳಿಂದ ಬಿದ್ದುಹೋಯಿತು.

§ ಪ್ರಧಾನಿನೆಹರೂರವರಿಗೆ ಮಧ್ಯಪ್ರದೇಶದ ವಿಶ್ವವಿದ್ಯಾನಿಲಯವು ಡಾಕ್ಟರ್ ಆಫ್‌ಲೆಟರ್ಸ್ ಎಂಬ ಗೌರವ ಪ್ರಶಸ್ತಿಯನ್ನು ನಿನ್ನೆ ವಿಶೇಷ ಘಟಿಕೋತ್ಸವ ನಡೆಸಿ ಕೊಟ್ಟಿತು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 59

೧-೧೧-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಯುವಕರಿಗೆ ಸೈನ್ಯಶಿಕ್ಷಣ ಅತ್ಯಗತ್ಯ

ಪ್ರಧಾನ ದಂಡನಾಯಕರ ಅಭಿಪ್ರಾಯ

ಭಾರತದಲ್ಲಿರುವ ಸೈನ್ಯ ಪ್ರಜಾಸೈನ್ಯ ಆದು ಪ್ರಜಾಸೇವೆಯನ್ನು ಅತ್ಯಂತ ಉತ್ತಮದರ್ಜೆಯಲ್ಲಿ ನಡೆಸುತ್ತಲಿದೆ. ಸೈನಿಕರು ಜನರಿಗಾಗಿ ಆಹಾರ ಬೆಳೆದಿದ್ದಾರೆ. ಸಾಗಿಸಿದ್ದಾರೆ. ಕೊನೆಗೆ ಅವಿದ್ಯೆಯನ್ನೂ ಸಹ ನಿರ್ಮೂಲನಮಾಡಲು ಸಹಾಯಮಾಡುತ್ತಿದ್ದಾರೆ. ಭಾರತ ರಕ್ಷಣೆಗಾಗಿ ದೊಡ್ಡ ಸೈನ್ಯವಿರಲೇಬೇಕು. ಯುವಕರಿಗೆಲ್ಲಾ ಸೈನ್ಯ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಬೇಕೆಂದು ನಿವೃತ್ತರಾಗಲಿರುವ ದಂಡನಾಯಕ ಜ|| ಕಾರಿಯಪ್ಪನವರು ಹೈದರಾಬಾದಿನಲ್ಲಿ ಹೇಳಿರುವರು.

ಜಿಲ್ಲಾ ಮೋಟಾರು ಕೆಲಸಗಾರರ ಕುಂದುಕೊರತೆಗಳು

ಮೈಸೂರು ೧

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಾರ್ಯನಿರ್ವಾಹಕ ಸಮಿತಿ ಸಭೆಯು ನಿನ್ನೆ ಶ್ರೀ ಕೆ. ದೌಲತ್‌ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆದು ಕೆಲಸಗಾರರಿಗೆ ಇಟ್ಟಿಗೆಗೂಡಿನಲ್ಲಿ ಕಡಿಮೆ ಬೆಲೆಗೆ ನಿವೇಶನಗಳನ್ನು ಟ್ರಿಸ್ಟ್‌ಬೋರ್ಡಿನವರು ಕೊಡಬೇಕೆಂದು ಪ್ರಾರ್ಥಿಸಲಾಯಿತು. ನಿಷ್ಕಾರಣವಾಗಿ ವಜಾಮಾಡಲ್ಪಟ್ಟ ಕೆಲಸಗಾರರ ಕೇಸುಗಳನ್ನು ಕೈಗಾರಿಕಾ ಕೋರ್ಟಿಗೆ ಹಾಕಬೇಕೆಂದು ಅನೇಕಬಾರಿ ಸರ್ಕಾರವನ್ನು ಕೇಳಿ ಕೊಂಡಾಗ್ಯೂ ಅವರು ಉದಾಸೀನ ಮಾಡುತ್ತಿರುವುದು ಕೆಲಸಗಾರರಲ್ಲಿ ಅಶಾಂತಿ ಉಂಟಾಗಿದೆಯೆಂದೂ, ಅವರುಗಳ ಕಷ್ಟ ಹೆಚ್ಚುತ್ತಿರುವುದರಿಂದ ಕೂಡಲೇ ಅವರ ಕೇಸುಗಳನ್ನು ಕೋರ್ಟಿಗೆ ಹಾಕಬೇಕೆಂದೂ ಕೋರಲಾಯಿತು.

ಪಂಚಾಯಿತ ಕೋರ್ಟಿನ ವರ್ತಮಾನವನ್ನು ಮಾಲೀಕರು ಇದುವರೆಗೂ ಜಾರಿಗೆ ತರದೆ ಉದಾಸೀನ ಮಾಡುತ್ತಿರುವುದಕ್ಕೆ ವಿಷಾದ ವ್ಯಕ್ತಪಡಿಸಿ, ಅದನ್ನು ಕೂಡಲೇ ಜಾರಿಗೆ ತರುವಂತೆ ಸರ್ಕಾರದವರು ಮಾಲೀಕರ ಮೇಲೆ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಪ್ರಾರ್ಥಿಸಲಾಯಿತು.

ಮಹಾಜನ ಹೈಸ್ಕೂಲು ನಿಧಿಗೆ ನೆರವುನೀಡಿ

ರಾಜಧಾನಿಯ ಒಂಟಿಕೊಪ್ಪಲಿನಲ್ಲಿರುವ ಮಹಾಜನ ಹೈಸ್ಕೂಲಿನ ವ್ಯವಸ್ಥಾಪಕ ಮಂಡಲಿಯವರು ನಿನ್ನೆಸಂಜೆ ನಗರದ ಪತ್ರಿಕೋದ್ಯೋಗಿಗಳನ್ನು ಬರಮಾಡಿಕೊಂಡು, ಹಣದ ಕೊರತೆಯಿಂದ ಶಾಲೆಯ ಅಭಿವೃದ್ಧಿಗೆ ವಿಶೇಷ ಅಡಚಣೆ ಉಂಟಾಗಿರುವುದನ್ನು ವಿವರಿಸಿ ಮಹಾಜನರು ಸಹಾಯ ಮಾಡಬೇಕೆಂದು ಕೋರಿದರು. ಶಾಲಾ ನಿಧಿಗಾಗಿ ಇದೇ ೧೬ನೇ ತಾ|| ನಡೆಯಲಿರುವ ಶ್ರೀಮತಿ ಸುಬ್ಬಲಕ್ಷ್ಮಿಯವರ ಸಂಗೀತಕಛೇರಿಗೆ ಮಹಾಜನರು ಪ್ರೋತ್ಸಾಹ ಕೊಡಬೇಕೆಂದು ತಿಳಿಸಿದರು.

ಪಿರಿಯಾಪಟ್ಟಣ ಮೊಕದ್ದಮೆ ವರ್ಗಾವಣೆಗೆ ಅರ್ಜಿ

ಹುಣಸೂರು ಮುನ್ಸಿಫ್-ಮ್ಯಾಜಿಸ್ಟ್ರೇಟ್ ಕೋರ್ಟಿನ ಮುಂದಿರುವ ಪಿರಿಯಾಪಟ್ಟಣದ ಸಾಗುವಾನಿಯ ಕಳ್ಳ ಸಾಗಾಣಿಕೆ ಮೊಕದ್ದಮೆಯನ್ನು ಮೈಸೂರುನಗರಕ್ಕೆ ವರ್ಗಾಯಿಸಬೇಕೆಂದು ಪೋಲೀಸರು ಜಿಲ್ಲಾ ಮ್ಯಾಜಿಸ್ಟ್ರೇಟರಮುಂದೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಈ ವಿಚಾರಣೆಗೆ ಪೂರ್ತಿಕಾಲದ ಒಬ್ಬ ನ್ಯಾಯಾಧೀಶರ ಆಗತ್ಯವಿದೆಯೆಂದೂ, ಹುಣಸೂರು ಕೋರ್ಟಿನಲ್ಲಿ ವಾರಕ್ಕೆ ಕೇವಲ ೩ದಿನಮಾತ್ರ ಕ್ರಿಮಿನಲ್ ಕೇಸುಗಳ ವಿಚಾರಣೆಗೆ ಅವಕಾಶ ಇರುವುದರಿಂದ ವಿಶೇಷ ತಡವಾಗಿದೆಯೆಂದೂ ಅರ್ಜಿಯಲ್ಲಿ ಸೂಚಿಸಲಾಗಿದೆ. ಅದರ ಪರಿಶೀಲನೆಯನ್ನು ಇದೇ ೧೦ನೇ ತಾರೀಖಿಗೆ ಹಾಕಲಾಗಿದೆ.

ಮೇಲ್ಕಂಡ ಮೊಕದ್ದಮೆಯು ಹುಣಸೂರು ಕೋರ್ಟಿನಲ್ಲಿ ಮೊನ್ನೆ ವಿಚಾರಣೆಗೆ ಬಂದು, ೭ ಮಂದಿ ಅಪರಾಧಿಗಳ ಪೈಕಿ ಟಿ. ವಿ ಗೌಡ್ ಎಂಬುವರು ಹಾಜರಿಲ್ಲದ ಪ್ರಯುಕ್ತ ಅವರಮೇಲೆ ಪುನಃ ಸಮನ್ಸ್ ಜಾರಿಮಾಡಿ, ಮೊಕದ್ದಮೆಯನ್ನು ೧೩ನೇ ತಾರೀಖಿಗೆ ಮುಂದುವರಿಸಲಾಯಿತು.

ಹೆಂಡತಿಯ ಕೊಲೆಪಾತಕನ ದಸ್ತಗಿರಿ

೧೯೪೦ ರಲ್ಲಿ ಹನುಮಶೆಟ್ಟಿ ಎಂಬುವನು ನಂಜನಗೂಡು ತಾಲ್ಲೂಕು ಮಲುಕುಂಡಿಯಲ್ಲಿ ತನ್ನ ಹೆಂಡತಿಯನ್ನು ಕೊಲೆಮಾಡಿ ಇಲ್ಲಿಯವರೆಗೆ ತಲೆಮರಿಸಿಕೊಂಡಿದ್ದವನನ್ನು ಪೋಲೀಸ್ ದಫೇದಾರ್ ಕೆ. ಮಾದಪ್ಪನವರು ದಸ್ತಗಿರಿಮಾಡಿ ನಂಜನಗೂಡು ನ್ಯಾಯಾಧೀಶರ ಮುಂದೆ ಹಾಜರ್ಪಡಿಸಿದರು ಮೊಕದ್ದಮೆಯನ್ನು ೧೩ನೇ ತಾರೀಖಿಗೆ ಹಾಕಲಾಗಿದೆ.

ಶ್ರೀಮನ್ಮಹಾರಾಜರವರು ಹಿಂತಿರುಗಿದರು

ದೆಹಲಿಗೆ ತೆರಳಿದ್ದ ಶ್ರೀಮನ್ಮಹಾರಾಜರವರು ನಿನ್ನೆರಾತ್ರಿ ೧೦ ಗಂಟೆಗೆ ರಾಜಧಾನಿಗೆ ಹಿಂತಿರುಗಿದರು.

ಗಮಕಗೋಷ್ಠಿ

ನಾಳೆಸಂಜೆ ೫-೩೦ ಗಂಟೆಗೆ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀಮತಿ ಚಂದ್ರಾರವರ ಮನೆಯಲ್ಲಿ ಮೈಸೂರು ಗಮಕ ಸಂಘದ ಆಶ್ರಯದಲ್ಲಿ ಗೊಷ್ಠಿ ನಡೆಯುತ್ತದೆ.

ರಹದಾರಿಯಿಲ್ಲದೆ ಬಸ್ಸು ನಡೆಸಿದ್ದಕ್ಕೆ ಶಿಕ್ಷೆ

ಮೈಸೂರು ೧

ರಹದಾರಿಯಿಲ್ಲದೆ ಬಸ್ಸು ಓಡಿಸುತ್ತಲಿದ್ದರೆಂಬ ಅಪಾದನೆ ಮೇಲೆ ಒಂದನೇ ದರ್ಜೆ ಮ್ಯಾಜಿಸ್ಟ್ರೇಟರು ಅಂಕನಾಥೇಶ್ವರ ಬಸ್ಸ್‌ಸರ್ವೀಸ್ ಮಾಲೀಕ ಅರ್ಜುನಪ್ಪ, ಯೂನಿಯನ್ ಬಸ್ ಡ್ರೈವರ್ ರಾಮಸ್ವಾಮಿ ಅರಕೆರೆ ಯೂನಿಯನ್ ಬಸ್ ಡ್ರೈವರ್ ರಾಮಸಿಂಗ್ ರವರಿಗೆ ತಲಾ ೫೦ ರೂ ಜುಲ್ಮಾನೆ ವಿಧಿಸಿದ್ದಾರೆ. ಸ್ವಂತಕಾರ್ ಡ್ರೈವರ್ ಮಾಯಣ್ಣನವರಿಗೆ ೬೨ ರೂ ದಂಡವಿಧಿಸಲಾಗಿದೆ.

ಕ್ಷಾಮ ಪರಿಹಾರ ನಿಧಿ

ಸಂಸ್ಥಾನದ ಮುಖ್ಯಮಂತ್ರಿಗಳ ಕ್ಷಾಮಪರಿಹಾರ ನಿಧಿಗೆ ಮೈಸೂರು ನಗರದ ಬಟ್ಟೆ ವರ್ತಕರ ಸಂಘದವರು ಒಟ್ಟು ೩೭೨೬ ರೂ. ಸಹಾಯಮಾಡಿದ್ದಾರೆ. ಶ್ರೀಗಳಾದ ಜವಾರಚಂದ್ ರೂಪಾಜಿ ಮತ್ತು ಮಾಣಿಕ್‌ಚಂದ್ ಪೂಕ್‌ರಾಜ್ ತಲಾ ೩೦ ರೂ. ಶ್ರೀಗಳಾದ ಇ. ಪಿ. ನಂಜಪ್ಪ ಮತ್ತು ಅಬ್ದುಲ್ ಕರೀಂ ಅಬುಬೇಕರ್ ತಲಾ ತಲಾ ೨೧೦ ರೂ, ಶ್ರೀಗಳಾದ ಜೋಗಲಾಲ್ ಬೀರ್‌ಚಂದ್, ಶೇಷಮಹಲ್ ಗೀನೋಜಿ, ಎ. ಆರ್. ಎ. ಬಾಲಕೃಷ್ಣ ಮೊದಲಿಯಾರ್, ರಾಮಕೃಷ್ಣರಾವ್ ಮತ್ತು ಕೆ. ಎನ್. ಅಂಜನಪ್ಪ ತಲಾ ೧೫೧ ರೂ, ಶ್ರೀಗಳಾದ ತೇಗರಾಜ್. ಹಿರಾಚಂದ್, ಕೆ. ಎನ್. ರಂಗಸ್ವಾಮಿ, ಗುಲಾಬ್‌ಚಂದ್, ಹಾಜಿ ಗುಲಾಂ ಹುಸೇನ್ ಖಾನ್, ಹಾಜಿ ಗುಲಾಂ ಅಹಮದ್‌ಖಾನ್, ಎಸ್. ಆರ್. ಎಲ್. ತಲ್ಲಂ ವಿಶ್ವನಾಥರಾವ್ ತಲಾ ೧೦೧ ರೂ. ಕೊಟ್ಟಿರುತ್ತಾರೆ.

ಭಾರತಕ್ಕೆ ಅಮೇರಿಕಾ ಆರ್ಥಿಕ ನೆರವು

೧೯೫೩ ನೇ ಜೂನ್ ಅಖೈರಿನವರೆಗೆ ಅಮೇರಿಕಾವು ಭಾರತಕ್ಕೆ ೪೫,೦೦೦,೦೦೦ ಡಾಲರುಗಳ ಆರ್ಥಿಕನೆರವನ್ನು ನೀಡಲು ತೀರ್ಮಾನಿಸಿರುವುದಾಗಿ ಗೊತ್ತಾಗಿದೆ.

ಈಗಾಗಲೇ ಭಾರತಕ್ಕೆ ತಾಂತ್ರಿಕಯೋಜನೆ ರೀತ್ಯಾ ಕೊಡಲಿರುವ 54,000,000 ಡಾಲರುಗಳ ಜೊತೆಗೆ ಈ ಹಣವನ್ನು ಕೊಡಲಾಗುತ್ತದೆ.

ಈ ಬಗ್ಗೆ ಭಾರತ ಪ್ರಧಾನಿ ನೆಹರೂ ಮತ್ತು ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಮಿ|| ಚೆಸ್ಟರ್‌ಬೌಲ್ಸ್‌ರು ಒಪ್ಪಂದ ಪತ್ರಕ್ಕೆ ಮುಂದಿನ ವಾರ ಸಹಿಹಾಕುವರೆಂದು ಗೊತ್ತಾಗಿದೆ.

ಅತಿಥಿ ಭವನಗಳಲ್ಲಿ ಶುಲ್ಕ

ಬೆಂಗಳೂರಿನಲ್ಲಿರುವ ರೆಸಿಡೆನ್ಸಿ, ಕಾರ್ಲಟನ್, ಕ್ರೆಸೆಂಟ್ ರೆಸಿಡೆನ್ಸಿ ಪಾರ್ಕ್ ಮತ್ತು ಮೈಸೂರಿನಲ್ಲಿರುವ ಸರ್ಕಾರಿಭವನ ಸ್ಟಾಫ್ ಕ್ವಾರ್ಟರ್ಸ್ ಮುಂತಾದುವನ್ನು ಉಪಯೋಗಿಸುವಾಗ ಕೊಡಬೇಕಾದ ಶುಲ್ಕವನ್ನು ಸರ್ಕಾರವು ನಿಗದಿಮಾಡಿದೆ. ಶಾಸನಸಭಾಸದಸ್ಯರು ಬೆಂಗಳೂರಿನಲ್ಲಿ ಅತಿಥಿ ಗೃಹಗಳನ್ನು ಶಾಸನಸಭಾಧಿವೇಶದಲ್ಲಿ ಉಪಯೋಗಿಸಿಕೊಳ್ಳುವಾಗ ಶುಲ್ಕ ಕೊಡಬೇಕಾಗಿಲ್ಲ. ಉಳಿದ ಸಮಯದಲ್ಲಿ ಅರ್ಧದರ ಕೊಡಬೇಕಾಗಿದೆ.

ತೆಂಗಿನಮರಕ್ಕೆ ಕಟ್ಟಿಹಾಕಿದ್ದ ಘಟನೆ

ಪಿರಿಯಾಪಟ್ಟಣ ತಾಲ್ಲೂಕು ಆರೇನಹಳ್ಳಿಯ ಶ್ರೀ ಎ. ಸಿ. ಬಸಪ್ಪ ಎಂಬುವರನ್ನು ಯಾವುದೊ ಜಿದ್ದಿನಮೇಲೆ ಶ್ರೀ ಕಾಳೇಗೌಡ ಮತ್ತು ಇತರರು ನಿನ್ನೆದಿನ ಬೆಳಿಗ್ಗೆ ತೆಂಗಿನಮರಕ್ಕೆ ಕಟ್ಟಿಹಾಕಿದ್ದರೆಂದೂ, ಅಷ್ಟರಲ್ಲಿ ಸಂಜೆ ಅಲ್ಲಿನ ಪೋಲೀಸ್ ಇನ್ಸ್‌ಪೆಕ್ಟರು ಬಂದು ಬಿಡಿಸಿದರೆಂದೂ ವರದಿಯಾಗಿದೆ. ಅಲ್ಲಿ ದೊಂಬಿ ನಡೆಯುವ ಸಂದರ್ಭವಿದೆಯೆಂದು ತಂತಿ ಬಂದಮೇಲೆ ಡಿ. ಎಸ್. ಪಿ. ಶ್ರೀ ಕೃಷ್ಣಮೂರ್ತಿಯವರು ರಿಜರ್ವ್ ಪಡೆಯೊಡನೆ ಸ್ಥಳಕ್ಕೆ ನಿನ್ನೆಸಂಜೆ ಹೋಗಿದ್ದರು. ಆದರೆ ಇನ್ನಾವ ಗಲಭೆಯೂ ನಡೆಯಲಿಲ್ಲವೆಂದು ಗೊತ್ತಾಗಿದೆ ಈ ಸಂಬಂಧದಲ್ಲಿ ಇಬ್ಬರನ್ನು ದಸ್ತಗಿರಿಮಾಡಲಾಗಿದೆ.

ಆಹಾರ ನಿಯಂತ್ರಣ ಪೂರ್ತ ತೆಗೆಯುವುದಿಲ್ಲ

ನಾಗಪುರದಲ್ಲಿ ಪ್ರಧಾನಿ ನೆಹರೂ ಭಾಷಣ

ದೇಶಾದ್ಯಂತ ಆಹಾರ ನಿಯಂತ್ರಣವನ್ನು ನಿಧಾನವಾಗಿ ತೆಗೆದುಹಾಕುವುದೇ ಭಾರತನೀತಿ ಆದರೆ ಪೂರ್ಣವಾಗಿ ನಿಯಂತ್ರಣವನ್ನು ತೆಗೆದುಹಾಕುವುದಿಲ್ಲ. ವಸ್ತುಗಳ ಮೇಲೆ ಯಾವುದಾದರೂ ಒಂದು ರೀತಿಯಾದ ಹತೋಟಿಯನ್ನು ಸರ್ಕಾರವು ಇಟ್ಟುಕೊಂಡು ಇದ್ದೇ ಇರುತ್ತದೆ ಎಂದು ಪ್ರಧಾನಿ ನೆಹರೂರವರು ನಿನ್ನೆ ನಾಗಪುರದ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

ಹುಡುಗಾಟಿಕೆ

ಪಾಕಿಸ್ಥಾನದಲ್ಲಿ ಅಲ್ಪಸಂಖ್ಯಾತರ ವಿಷಯವಾಗಿ ಪ್ರಧಾನಿ ಪ್ರಸ್ತಾಪಿಸುತ್ತಾ ಪಾಕೀಸ್ತಾನದ ಅಲ್ಪ ಸಂಖ್ಯಾತರಕ್ಷಣೆ ಮಾಡಬೇಕಾದುದು ಮುಖ್ಯ ಕರ್ತವ್ಯವಾಗಿದೆ. ಅದಕ್ಕೆ ತಕ್ಕ ಕಾರ್ಯಕ್ರಮವನ್ನು ಅನುಸರಿಸುತ್ತಿರಲಾಗಿದೆ. ಪಾಕೀಸ್ತಾನದ ಮೇಲೆ ಯುದ್ಧ ಹೂಡಬೇಕೆಂಬ ಕೆಲವು ವೃತ್ತಗಳಲ್ಲಿ ಹೇಳಲಾಗುತ್ತಿದೆ. ಇದು ಹುಡುಗಾಟಿಕೆ ಮಾತು ಮತ್ತು ಜವಾಬ್ದಾರಿ ರಹಿತವಾದುದೆಂದು ತಿಳಿಸಿದರು.

ಆಫ್ರಿಕಬಗ್ಗೆ ಸಹಾನುಭೂತಿ

ಆಫ್ರಿಕಾದಲ್ಲಿಯ ಈಗಿನ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಾ, ಪೂರ್ವ ಮತ್ತು ಪಶ್ಚಿಮ ಆಫ್ರಿಕಾಸ್ಥಿತಿಯ ಬಗ್ಗೆ ನಾವು ಚಿಂತೆ ಪಡಬೇಕಾಗಿದೆ. ಆಫ್ರಿಕಾ ಖಂಡದಂತಹ ದೊಡ್ಡ ದೇಶವನ್ನು ದಾಸ್ಯದಲ್ಲಿಟ್ಟಿರಲು ಸಾಧ್ಯವಿಲ್ಲ ಅದರ ಬಿಡುಗಡೆಗಾಗಿ ಭಾರತದ ಪೂರ್ಣ ಸಹಾನುಭೂತಿಯಿದೆ ಅಲ್ಲಿ ಸ್ವಾತಂತ್ರ ಗಳಿಸಿಕೊಡಲು ಭಾರತವು ಎಲ್ಲಾ ಅವಕಾಶಗಳನ್ನು ಕಲ್ಪಿಸಿಕೊಡಲು ಸಿದ್ಧವಿದೆ ದಕ್ಷಿಣ ಆಫ್ರಿಕಾ ವರ್ಣಭೇಧ ನೀತಿಯ ಬಗ್ಗೆ ನಾವು ವಿಷಾದ ಪಡಬೇಕಾಗಿದೆ ಅಲ್ಲಿ ಅಹಿಂಸಾತ್ಮಕವಾಗಿ ನಡೆಯುತ್ತಿರುವ ಚಳುವಳಿಗೆ ಭಾರತದ ಪೂರ್ಣ ಸಹಾನುಭೂತಿಯಿದೆಯೆಂದು ಪ್ರಧಾನಿ ತಮ್ಮ ಭಾಷಣದಲ್ಲಿ ತಿಳಿಸಿದರು.

ಭಾರತಕ್ಕೆ ವಿಶ್ವಬ್ಯಾಂಕಿನಿಂದ ಸಾಲ

ಭಾರತ ಕೈಗಾರಿಕಾ ಆರ್ಥಿಕ ಸಮಿತಿಗೆ ವಿಶ್ವಬ್ಯಾಂಕ್ ಸುಮಾರು ಒಂದುಕೋಟಿ ಡಾಲರುಗಳ ಸಾಲವನ್ನು ಕೊಡಲಿರುವುದಾಗಿ ಗೊತ್ತಾಗಿದೆ. ಖಾಸಗೀ ಕೈಗಾರಿಕಾ ಸಂಸ್ಥೆಗಳ ಅಭಿವೃದ್ಧಿಕಾರ್ಯಗಳಿಗಾಗಿ ಈ ಹಣವನ್ನು ಉಪಯೋಗಿಸಲಾಗುವುದಾಗಿ ಹೇಳಲಾಗಿದೆ.

೬೦ ಜನ ಕಾಂಗ್ರೆಸ್ಸಿಗರ ಮೇಲೆ ಶಿಸ್ತಿನ ಕ್ರಮ

ಮೈಸೂರು, ೧

ಮಹಾಚುನಾವಣೆ ಸಮಯದಲ್ಲಿ ಸಂಸ್ಥಾನದಲ್ಲಿ ಕೆಲವು ಕಾಂಗ್ರೆಸ್ಸಿಗರು ಸಂಸ್ಥೆಗೆ ವಿರುದ್ಧವಾಗಿ ನಡೆದರೆಂಬ ದೂರುಗಳನ್ನು ಪರಿಶೀಲಿಸಲು ರಚಿತವಾಗಿದ್ದ ಶ್ರೀ ಸುಬ್ರಮಣ್ಯಂರವರ ಸಮಿತಿಯುತನ್ನ ವರದಿಯನ್ನು ಪ್ರಾದೇಶಿಕ ಸಮಿತಿಗೆ ಒಪ್ಪಿಸಿದೆ.

ಒಟ್ಟು ೧೪೦ ಮಂದಿಪೈಕಿ ೬೦ಮಂದಿಗೆ ದೂರುಗಳು ರುಜುವಾತಾಗಿ ಅವರುಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಸಮಿತಿಯು ಶಿಫಾರಸುಮಾಡಿದೆಯೆಂದು ತಿಳಿದುಬಂದಿದೆ. ಶ್ರೀಗಳಾದ ಹೆಚ್. ಸಿ. ದಾಸಪ್ಪ, ಎಸ್. ಚನ್ನಯ್ಯ, ಟಿ. ಮರಿಯಪ್ಪ, ಎಸ್. ನಿಜಲಿಂಗಪ್ಪ, ಸಿ. ಮಹದೇವಯ್ಯ ಮುಂತಾದ ಮುಖಂಡರಮೇಲೆ ಬಂದಿದ್ದ ಆರೋಪಣೆಗಳು ನಿರಾಧಾರವಾದುದೆಂದು ಸಮಿತಿ ತಿಳಿಸಿದೆ ೬೦ ಮಂದಿಯ ಪೈಕಿ, ಕೆಲವರಿಗೆ ೩ ವರ್ಷ ಸದಸ್ಯತನದಿಂದ ವಜಾಮಾಡಬೇಕೆಂದೂ, ಇನ್ನು ಕೆಲವರು ಕ್ಷಮಾಪಣೆ ಕೇಳಬೇಕೆಂದೂ ಸಮಿತಿ ಶಿಫಾರಸುಮಾಡಿದೆಯೆಂದು ಹೇಳಲಾಗಿದೆ.

ಈ ಶಿಫಾರಸನ್ನು ಪರಿಶೀಲಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಪ್ರಾದೇಶ ಕಾಂಗ್ರೆಸ್ ಸಮಿತಿ ಪಾರ್ಲಿಮೆಂಟರಿ ಸಮಿತಿಯ ಉಪಸಮಿತಿಗೆ ಸೂಚನೆ ಕೊಟ್ಟಿದೆ.

ಕಾಫಿ ವರ್ತಕರಿಗೆ ಸಚಿವರ ಎಚ್ಚರಿಕೆ

ಕಾಫಿ ಬೆಲೆಯು ವಿಶೇಷವಾಗಿ ಏರಿಹೋಗುತ್ತಿದೆ. ಕಾಫಿ ಬೀಜವನ್ನು ವರ್ತಕರು ದಾಸ್ತಾನು ಮಾಡುತ್ತಾ ಹೋದರೆ ಹರಾಜು ಹಾಕುವ ಪದ್ಧತಿಯನ್ನು ಕೂಡಲೇ ನಿಲ್ಲಿಸಿ ಬೇರೆ ವ್ಯವಸ್ಥೆ ಮಾಡಲಾಗುತ್ತದೆ. ಆದ್ದರಿಂದ ಕಾಫೀ ದಾಸ್ತಾನನ್ನು ವರ್ತಕರು ತಡೆಗಟ್ಟಬೇಕೆಂದು ಕೇಂದ್ರ ವಾಣಿಜ್ಯ ಸಚಿವ ಶ್ರೀ ಟಿ. ಕೃಷ್ಣಮಾಚಾರಿಯವರು ಹೇಳಿರುವರು.

ಮೈಸೂರು ಪೇಟೆಧಾರಣೆ

ತಾ|| ೩೧-೧೦-೫೨

ಪಲ್ಲ	ರೂ–ಆ	ರೂ–ಆ
ಕಡಲೇಕಾಯಿ	೯-೨	೧೯-೧೪
ಎಳ್ಳು	೬೯-೦	೭೩-೧೪
ಹರಳು	೪೦-೮	೪೫
ಅಲಸಂದೆ	೭೧-೧೨	
ಮೆಣಸಿನಕಾಯಿ	೭-	೧೫-೪
ಹುಣಸೆಹಣ್ಣು	೭-	
ಸೀಗೇಕಾಯಿ	೪-೧೨	
ಬೆಲ್ಲ	೩-೮	

ತೆಂಗಿನಕಾಯಿ ೧,೧೦೦ ಕ್ಕೆ ೧೪೧-೨

ಸರ್ದಾರ್ ಪಟೇಲರ ಜಯಂತಿ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯ ಸಂಘದ ಆಶ್ರಯದಲ್ಲಿ ನಿನ್ನೆ ಶ್ರೀ ಡಿ. ಎಸ್. ಶಂಕರಪ್ಪನವರ ಅಧ್ಯಕ್ಷತೆಯಲ್ಲಿ ಸರ್ದಾರ್ ಪಟೇಲರ ಜನ್ಮ ಜಯಂತಿಯನ್ನು ಆಚರಿಸಲಾಯಿತು.

ರಣಜಿತ್
31-10-52 ರಿಂದ
ಅಮೋಘ ಪ್ರಾರಂಭ
ಮೋತಿಮಹಲ್
ಸುರಯ್ಯ, ಅಜಿತ್, ಜೀವನ್, ಮೀರಾ

ಅಪೇರ ೩೧-೧೦-೫೨ ರಿಂದ ಅಮೋಘ ೩ನೇವಾರ
ಪ್ರತಿದಿನ ಮೂರು ಆಟಗಳು
* ಮಾಪಿಳ್ಳೈ *
ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರನ್

ಹಿಂದೂ ಮಹಾಸಭಾಧ್ಯಕ್ಷರ ದಸ್ತಗಿರಿ–ಬಿಡುಗಡೆ

ಹಿಂದೂ ಮಹಾಸಭಾಧ್ಯಕ್ಷರಾದ ಎನ್. ಬಿ. ಖಾರೆಯವರನ್ನು ನಿನ್ನೆಯದಿನ ನಾಗಪುರದಲ್ಲಿ ಅವರ ಮನೆಯಲ್ಲಿಯೇ ಪೋಲೀಸಿನವರು ದಸ್ತಗಿರಿಮಾಡಿ, ೧೪ ಗಂಟೆಕಾಲ ಸೆರೆಯಲ್ಲಿದ್ದು ಅನಂತರ ಬಿಡುಗಡೆ ಮಾಡಿದರು. ಪಾಕೀಸ್ತಾನ ಟೀಮಿನವರು ಭಾರತಕ್ಕೆ ಆಗಮಿಸಿ ನಾಗಪುರದಲ್ಲಿ ಭಾರತ ಟೀಮಿನೊಡನೆ ಪಂದ್ಯನಾಡುವುದರ ವಿರುದ್ಧ ಪಿಕೆಟಿಂಗ್ ನಡೆಸಬೇಕೆಂದು ಡಾ|| ಖಾರೆಯವರು ನಿರ್ಧರಿಸಿದ್ದರು. ಅದಕ್ಕಾಗಿಈ ದಸ್ತಗಿರಿಯಾಗಿತ್ತು.

ಭತ್ತದ ಬೆಲೆ ಪಲ್ಲಾಕ್ಕೆ ೨೫ ರೂಪಾಯಿ

ಉತ್ತಮ ಭತ್ತ ಪಲ್ಲಾ ಒಂದಕ್ಕೆ ೨೫ ರೂ, ಮಧ್ಯಮವರ್ಗದ ಭತ್ತ ಪಲ್ಲಾಕ್ಕೆ ೨೩ ರೂ, ನಂತೆ ನಿರ್ಧರಿಸಲು ಮೈಸೂರು ಸರ್ಕಾರವು ಕೇಂದ್ರ ಸರ್ಕಾರದ ಅನುಮತಿಯನ್ನು ಕೇಳಿರುವುದಾಗಿ ಗೊತ್ತಾಗಿದೆ.

ವುಡ್ ಲ್ಯಾಂಡ್ಸ್
31-10-52 ರಿಂದ ಎರಡನೇ ವಾರ
ಪ್ರತಿದಿನ ೩ ಪ್ರದರ್ಶನಗಳು
ರಂಗೀಲಿ (ಹಿಂದಿ)
ಪಾತ್ರ:ರೆಹೆನಾ, ಯಾಕೂಬ್. ರಾಜಕುಮಾರ್.

FOR SALE
A GOLDEN OPPOURTUNITY FOR BUYERS
Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.
Rs. 16,000 or near offer
No brokers—Immediate possession—No encumbrence,
Enquire at :- M. NARAYANA RAO, Co.
c/o Tourist Bureau, Lansdowne Buildings, Mysore

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 60

೩-೧೧-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಹೊಟ್ಟೆಗಿಲ್ಲದವರ ಕಡೆ ಮೊದಲು ಗಮನಕೊಡಿ

ಕಮ್ಯೂನಿಸ್ಟ್ ನಾಯಕರ ಮನವಿ

ಮೈಸೂರು ೩

ಮೊನ್ನೆ ಸಂಜೆ ಪುರಭವನ ಮೈದಾನದಲ್ಲಿ ಕೇಂದ್ರ, ಹಿರಿಯಸಭೆಯ ಕಮ್ಯೂನಿಸ್ಟ್ ಸದಸ್ಯರಾದ ಮಂಗಳೂರಿನ ಶ್ರೀ ಕಕ್ಕಿಲಾಯರವರು ಭಾಷಣಮಾಡಿ ಈಗಿನ ಕಾಂಗ್ರೆಸ್ ಸರ್ಕಾರದ ನೀತಿಯನ್ನು ಉಗ್ರವಾಗಿ ಖಂಡಿಸಿದರು. ಸಾಮಾನ್ಯ ಜನರು ಹೊಟ್ಟೆಗಿಲ್ಲದೆ ನರಳುತ್ತಿರುವ ದೃಶ್ಯವನ್ನು ವಿವರಿಸಿ ಇದನ್ನು ತಡೆಗಟ್ಟಲು ಸರ್ಕಾರದವರು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದೆ ಮುಂದಿನ ಜನಾಂಗಕ್ಕಾಗಿ ಯೋಜನೆಗಳನ್ನು ತಯಾರಿಸುತ್ತಿರುವುದು ಸರಿಯಲ್ಲ ಮೊದಲು ಹೊಟ್ಟೆಗಿಲ್ಲದೆ ಸಾಯುತ್ತಿರುವವರನ್ನು ನೋಡಿಕೊಳ್ಳಬೇಕಾದುದು ಸರ್ಕಾರದ ಪ್ರಥಮ ಕರ್ತವ್ಯವೆಂದೂ ತಿಳಿಸಿದರು.

ಜನವಿರೋಧ ನೀತಿಯೇ ದೇಶದ ಅಧಿಕ ಮುಗ್ಗಟ್ಟಿಗೆ ಮುಖ್ಯಕಾರಣವಾಗಿದೆ. ಅದನ್ನು ಸಂದೂಗಿಸಲು ಸರ್ಕಾರವು ಹೊಸಹೊಸ ತೆರಿಗೆಗಳನ್ನು ಹಾಕಿ ಜನರಿಗೆ ತುಂಬಾ ಕಷ್ಟವನ್ನುಂಟುಮಾಡಿದೆ. ಜನಸಾಮಾನ್ಯರ ಕಷ್ಟಸುಖಗಳನ್ನು ಸ್ವತಂತ್ರ ಬಂದಮೇಲೂ ನಿವಾರಿಸದೆ ಇರುವಂತಹ ಕಾಂಗ್ರೆಸ್ ಸರ್ಕಾರವು ಅಧಿಕಾರದಲ್ಲಿ ಇರಬೇಕೆ ಬೇಡವೇ ಎಂಬುದು ಸಾರ್ವಜನಿಕರೇ ನಿರ್ಧರಿಸಬೇಕು ಎಂದು ಶ್ರೀಯುತರು ಹೇಳಿದರು.

ಭಾರತದ ಕಮ್ಯೂನಿಸ್ಟ್ ಪಕ್ಷದ ಧ್ಯೇಯವನ್ನು ಅವರು ವಿವರಿಸುತ್ತಾ, ಸರ್ಕಾರದ ಎಲ್ಲಾ ನೀತಿಯನ್ನು ವಿರೋಧಿಸುವುದೇ ಅದರ ಧ್ಯೇಯವಲ್ಲವೆಂದು ಆರ್ಥಿಕ ಕಾಶ್ಮೀರ ಪ್ರಶ್ನೆ, ಜಮೀನ್ದಾರಿ ರದ್ದು-ಮುಂತಾದ ಯೋಜನೆಗಳಲ್ಲಿ ಸರ್ಕಾರಕ್ಕೆ ತಮ್ಮ ಪಕ್ಷವು ಬೆಂಬಲವಿತ್ತಿದೆ. ಸಾಮಾನ್ಯ ಜನರ ಕಷ್ಟಗಳನ್ನು ನಿವಾರಿಸುವುದೇ ತಮ್ಮ ಪಕ್ಷದ ಮುಖ್ಯ ಗುರಿಯೆಂದು ಅವರು ತಿಳಿಸಿದರು. ಮಡಕೇರಿಯ ಶ್ರೀ ಮೊನ್ನಯ್ಯನವರು ಅನಂತರ ಭಾಷಣಮಾಡಿದರು.

ಸದ್ಯದಲ್ಲಿಯೇ ಹೊಸ ಆಹಾರ ನೀತಿ

ಧಾನ್ಯ ಸಂಗ್ರಹಣೆ ಕಾರ್ಯ ಮುಂದುವರಿಯುವುದು

ಪ್ರಧಾನಿ ನೆಹರೂರವರ ಹೇಳಿಕೆ

ಕೇಂದ್ರ ಆಹಾರ ಸಚಿವ ಮಿ|| ಕಿದ್ವಾಯಿಯವರು ಹೊಸ ಆಹಾರ ನೀತಿಯ ಬಗ್ಗೆ ನಿರ್ದಿಷ್ಟ ಸಲಹೆಗಳನ್ನು ಕೊಟ್ಟಮೇಲೆ ಅದರ ಆಧಾರದಮೇಲೆ ಮಂತ್ರಿಮಂಡಲ ಒಂದು ತೀರ್ಮಾನವನ್ನು ಮಾಡಲಿದೆ. ಆಹಾರ ನಿಯಂತ್ರಣವನ್ನು ತೆಗೆಯಬೇಕೆಂಬುದೇ ಸರ್ಕಾರದ ನೀತಿ ಇದರಿಂದ ಜನತೆಯ ಮೇಲೆ ಹೆಚ್ಚಿಗೆ ಹೊರೆ ಬೀಳಬಾರದು ಪದಾರ್ಥಗಳ ಬೆಲೆ ಏರದಂತೆ ತಡೆಗಟ್ಟಲಾಗುತ್ತದೆ. ಈ ಸಂಧರ್ಬದಲ್ಲಿ ತಕ್ಕಷ್ಟು ದಾಸ್ತಾನು ಅವಶ್ಯಕವಾಗಿದೆ ವಿದೇಶಗಳಿಂದ ಆಹಾರ ತರಿಸುವ ಪ್ರಮಾಣವನ್ನು ೨೫ ಲಕ್ಷಟನ್ನಿಗೆ ಇಳಿಸಲಾಗಿದೆ ತರಿಸುವ ವೇಳೆಗೆ ಇನ್ನೂ ಕಡಿಮೆಯಾಗ ಬಹುದು ದೇಶಾದ್ಯಂತ ಧಾನ್ಯಸಂಗ್ರಹಣೆ ಕಾರ್ಯವನ್ನು ಯಾವುದಾದರೂ ಒಂದು ರೀತಿಯಲ್ಲಿ ಮುಂದುವರಿಸಲಾಗುತ್ತದೆ ಎಂದು ಪ್ರಧಾನಿ ನೆಹರೂರವರು ದೇಶದ ಆಹಾರ ಪರಿಸ್ಥಿತಿ ಬಗ್ಗೆ ನಿನ್ನೆ ಪತ್ರಿಕಾ ಪ್ರತಿನಿಧಿಗಳಲ್ಲಿ ಮಾತನಾಡುತ್ತಾ ತಿಳಿಸಿರುವರು.

ಈ ಸಂದರ್ಭದಲ್ಲಿ ಶ್ರೀ ನೆಹರೂರವರು ಪಾಕೀಸ್ತಾನ, ಕಾಶ್ಮೀರ, ದಕ್ಷಿಣಆಫ್ರಿಕಾ ಮುಂತಾದ ಸಮಸ್ಯೆಗಳನ್ನು ಸಹಾ ಪ್ರಸ್ತಾಪಿಸಿ ಮಾತನಾಡಿದರು.

ಭಾರತದ ಫ್ರೆಂಚ್ ಸ್ವಾಸ್ಥ್ಯಗಳ ಬಗ್ಗೆ ಮಾತನಾಡುತ್ತಾ ಅಲ್ಲಿ ಪರಿಸ್ಥಿತಿಯು ಹದಗೆಟ್ಟುಹೋಗಿದೆ. ಪ್ರಜಾಭಿಪ್ರಾಯ ವಿಷಯ ಅಳಿದುಹೋಗಿದೆ. ಗುಂಡಾವರ್ತನೆ ಮಿತಿಮೀರಿ ಹೋಗಿದೆ ಮದ್ರಾಸಿನಲ್ಲಿದ್ದಾಗ ಈ ವಿಷಯ ಪ್ರಸ್ತಾಪಿಸಿ ಭಾರತ ಸರ್ಕಾರದ ನಿರ್ದಿಷ್ಟ ನೀತಿಯೇನೆಂಬುದನ್ನು ತಿಳಿಸಲಾಗಿದೆ. ಈಗಾಗಲೇ ಫ್ರೆಂಚ್ ಸರ್ಕಾರಕ್ಕೆ ೩ ಪತ್ರಗಳನ್ನು ಬರೆಯಲಾಗಿದೆ. ಅಲ್ಲಿಂದ ಯಾವ ಜವಾಬೂ ಬಂದಿಲ್ಲವೆಂದು ಪ್ರಧಾನಿ ಹೇಳಿದರು.

ಭಾರತ ಪಾಕೀಸ್ಥಾನ ಬಾಂಧವ್ಯ ವಿಷಯವಾಗಿ ಪ್ರಸ್ತಾಪಿಸಿ, ಭಿನ್ನತೆಗಳನ್ನು ವಿಶಾಲಗೊಳಿಸದೆ ಕಡಿಮೆಮಾಡುವಂತೆ ಉಭಯರಾಷ್ಟ್ರಗಳೂ ವರ್ತಿಸಬೇಕು. ಕಾಶ್ಮೀರ ಪ್ರಶ್ನೆಯು ಸದ್ಯದಲ್ಲೆ ಭದ್ರತಾ ಸಮಿತಿಯ ಮುಂದೆ ಚರ್ಚೆಗೆ ಬರಲಿಗೆ ಆದ್ದರಿಂದ ಅದರ ವಿಷಯ ಪ್ರಸ್ತಾಪಿಸುವುದಿಲ್ಲ ಆದರೆ ನಾವು ಯಾವರೀತಿಯಾದ ಕಡ್ಡಾಯತೀರ್ಮಾನಕ್ಕೆ ಒಪ್ಪುವುದಿಲ್ಲ ಶಾಂತರೀತಿ ಪರಿಹಾರಕ್ಕೆ ಸಹಕರಿಸುತ್ತೇವೆಂದು ಶ್ರೀ ನೆಹರೂ ತಿಳಿಸಿದರು.

ಆಫ್ರಿಕಾ ಖಂಡದಲ್ಲಿ ವಿಶೇಷ ಪರಿಸ್ಥಿತಿಯುಂಟಾಗಿದೆ. ಈ ವಿಷಯಗಳು ಇತರ ಖಂಡದವರಿಗೂ ಪ್ರಮುಖವಾದುದು ಸಹಾನುಭೂತಿ, ಸಹಕಾರಗಳಿಂದ ಈ ವರ್ಣ ಸಮಸ್ಯೆಯನ್ನು ಬಗೆ ಹರಿಸಬೇಕಾಗಿದೆ ಸರ್ಕಾರವು ದುಂಡಾವೃತ್ತಿ ನಡೆಸಬಾರದು ಎಂದು ತಿಳಿಸಿದರು.

ಎ. ಐ. ಸಿ. ಸಿ. ಗೆ ಚುನಾವಣೆ

ಮೈಸೂರು ೩

ಮೈಸೂರು ನಗರದಿಂದ ಎ. ಐ. ಸಿ. ಸಿ. ಗೆ ಇದೇ ೮ ನೇ ತಾರೀಖು ನಡೆಯಲಿರುವ ೨ ಪ್ರತಿನಿಧಿಗಳ ಚುನಾವಣೆಗೆ ಮೈಸೂರು ನಗರ ದಕ್ಷಿಣದಿಂದ ಶ್ರೀಗಳಾದ ಕೆ. ಎಸ್. ಸೂರ್ಯನಾರಾಯಣರಾವ್, ಎಸ್. ಎಸ್. ಶಾಸ್ತ್ರಿ, ಸಿ. ಜೆ. ದೇವನಾಥ್ ಮತ್ತು ಗೋಪಾಲ್, ಉತ್ತರದಿಂದ ಶ್ರೀಗಳಾದ ಎಸ್. ಚನ್ನಯ್ಯ, ಎಂ. ಶಂಕರಯ್ಯ ಮತ್ತು ವೆಂಕಟಪ್ಪನವರು ಉಮೇದುವಾರಿಕೆ ಸಲ್ಲಿಸಿದ್ದಾರೆ.

ಅಡಿಕೆ ಪಾರ್ಸಲ್ಲಿನಲ್ಲಿ ಚಿನ್ನ

೧೨ ಚೀಲಗಳಷ್ಟು ಬೆಳೆಯ ಅಡಕೆ ಪೊಟ್ಟಣದ ಪಾರ್ಸಲ್ಲಿನಲ್ಲಿ ಸುಮಾರು ೪೦೦೦ ರೂಪಾಯಿಗಳ ಚಿನ್ನವಿದ್ದುದನ್ನು ಮಧುರೆಯ ಸುಂಕದ ಅಧಿಕಾರಿಗಳು ಕಂಡುಹಿಡಿದಿದ್ದಾರೆ.

ಅನಿರ್ದಿಷ್ಟವಾಗಿ ಕಾಲ ಕಳೆಯಲು ಸಾಧ್ಯವಿಲ್ಲ

ವಿದೇಶಿ ಸ್ವಾಸ್ಥ್ಯಗಳ ಬಗ್ಗೆ ವಿಶ್ವಸಂಸ್ಥೆಯಲ್ಲಿ ಭಾರತ ಪ್ರತಿನಿಧಿಯ ಸಿಂಹಾವಲೋಕನ

ಭಾರತದಲ್ಲಿ ವಿದೇಶೀ ಸ್ವಾಸ್ಥ್ಯಗಳಿರುವುದನ್ನು ನಾವು ಸಹಿಸಲಾರೆವು ಭಾರತವನ್ನು ಇಂಗ್ಲೀಷರು ನಮ್ಮನ್ನು-೩೬೦೦ ಲಕ್ಷ ಜನರನ್ನು- ಸ್ವತಂತ್ರವಾಗಿ ಬಿಟ್ಟು ಹೋಗಿ ೫ ವರ್ಷಗಳ ಮೇಲಾದವು ಕೇವಲ ೧೦ ಲಕ್ಷಕ್ಕಿಂತಲೂಕಡಿಮೆವಾಸವಾಗಿರುವ ಪೋರ್ಚುಗೀಸ್ಮತ್ತು ಫ್ರೆಂಚ್ ಸ್ವಾಸ್ಥ್ಯಗಳಲ್ಲಿ ಜನರು ಸ್ವತಂತ್ರರಾಗಿಲ್ಲ ಈ ಪ್ರಾಂತ್ಯಗಳನ್ನು ಪೋರ್ಚುಗೀಸ್ ಮತ್ತು ಫ್ರೆಂಚ್ ಸರ್ಕಾರಗಳು ಬಿಟ್ಟುಹೋಗುವುವೆಂದು ಸಾವಧಾನದಿಂದ ಭಾರತವು ಇಲ್ಲಿಯವರೆಗೆ ಕಾದಿತು ಈ ಪ್ರಾಂತ್ಯಗಳು ಇತ್ತೀಚೆಗೆ ದರೋಡೆಗಾರರ ಸ್ವರ್ಗವಾಗಿ ಹೋಗಿದೆ. ನಮ್ಮ ಸರ್ಕಾರವು ಇಲ್ಲಿ ನಡೆಯುತ್ತಿರುವ ಕಳ್ಳತನ ಸಾಗಾಣಿಕೆಯಿಂದ ವಿಶೇಷ ನಷ್ಟವನ್ನು ಹೊಂದುತ್ತಿದೆ ಈ ಬಗ್ಗೆ ಪಾರ್ಲಿಮೆಂಟಿನಲ್ಲಿ ನಮ್ಮ ಪ್ರಧಾನಿ ಅನೇಕ ಟೀಕೆಗಳಿಗೆ ಗುರಿಯಾಗಬೇಕಾಯಿತು.

ಅನಿರ್ದಿಷ್ಟವಾಗಿ ಯಾವ ಪರಿಣಾಮವೂ ಇಲ್ಲದೆ ಭಾರತವು ಇನ್ನೂ ಸುಮ್ಮನೆ ಕುಳಿತಿರಲಾರದು ಎಂದು ಭಾರತ ಪ್ರತಿನಿಧಿ ಶ್ರೀ ಬಿ. ಶಿವರಾವ್ ವಿಶ್ವಸಂಸ್ಥೆ ಟ್ರಸ್ಟಿಷಿಪ್ ಕಮಿಟಿಯಲ್ಲಿ ಹೇಳಿದರು.

ಭಾರತಕ್ಕೆ ಚಾರ್ಲಿಚಾಪ್ಲಿನ್

§÷§

ವಿಶ್ವವಿಖ್ಯಾತನಟ ಚಾರ್ಲಿಚಾಪ್ಲಿನರು ಭಾರತಕ್ಕೆ ಬರುವಂತೆ ಅಮೆರಿಕಾಕ್ಕೆ ಭೇಟಿ ಕೊಟ್ಟಿರುವ ಭಾರತ ಚಲನಚಿತ್ರನಿಯೋಗವು ಆಹ್ವಾನಿಸಿದೆ.

ಭಾರತಗ್ರಾಮವೊಂದರಮೇಲೆ ಪಾಕೀಸ್ತಾನ ಪೋಲೀಸರ ಧಾಳಿ

ಭಾರತ ಪಾಕೀಸ್ಥಾನ ಗಡಿಯಲ್ಲಿರುವ ಡೋರಿ ಎಂಬ ಥಾನಕ್ಕೆ ಸೇರಿದ ಗ್ರಾಮದ ಮೇಲೆ ಮೊನ್ನೆ ರಾತ್ರಿ ಪಾಕೀಸ್ಥಾನ ಶಸ್ತ್ರಸಜ್ಜಿತ ಪೋಲಿಸರು ಗುಂಡುಹಾರಿಸಿ ಧಾಳಿ ನಡೆಸಿದರೆಂದು ಗೊತ್ತಾಗಿದೆ ಕೂಡಲೇ ಭಾರತ ಪೋಲೀಸಿನವರು ಸ್ಥಳಕ್ಕೆ ಧಾವಿಸಿ, ಪಾಕೀಸ್ಥಾನದವರ ಮೇಲೆ ಪ್ರತಿಧಾಳಿ ನಡೆಸಿದರೆಂದು ಈಗ ಹೆಚ್ಚಿನ ಸಂಖ್ಯೆಯಲ್ಲಿ ಸಿಬ್ಬಂದಿಯನ್ನು ಅಲ್ಲಿಗೆ ಕಳುಹಿಸಲಾಗಿದೆಯೆಂದು ಹೇಳಲಾಗಿದೆ.

ಕಳೆದ ಮಾಹೆ ೨೩ನೇ ತಾರೀಖು ಈ ಹಳ್ಳಿಯಲ್ಲಿ ಪೋಲೀಸರು ಭಾರತದ ಸೀರಾವರ ಇಲಾಕಾಧಿಖಾರಿಗಳ ಮೇಲೆ ಗುಂಡನ್ನು ಹಾರಿಸಿದ್ದರು. ಆ ಘರ್ಷಣೆಯು ೪ ಗಂಟೆಕಾಲ ನಡೆಯಿತು.

ಈರೀತಿ ಧಾಳಿಗಳನ್ನು ತಡೆಗಟ್ಟುವುದಾಗಿ ಲಾಹೋರಿನ ಪೋಲೀಸ್ ಮುಖ್ಯಾಧಿಕಾರಿಗಳು ಭಾರತ-ಪಾಕೀಸ್ತಾನ ಪೋಲೀಸ್ ಅಧಿಕಾರಿಗಳ ಸಮ್ಮೇಳನದಲ್ಲಿ ತಿಳಿಸಿದ್ದರು ಆದಾಗ್ಯೂ ಪುನಃ ಧಾಳಿ ನಡೆದಿದೆ

ಕಾರ್ಮಿಕ ಪ್ರಾವಿಡೆಂಟ್ ಫಂಡು ಯೋಜನೆ

ಭಾರತ ಸರ್ಕಾರವು ಸ್ಥಾಪಿಸಿರುವ ಕಾರ್ಮಿಕ ಪ್ರಾವಿಡೆಂಟ್ ಫಂಡು ಯೋಜನೆಯು ಮೊನ್ನೆಯಿಂದಜಾರಿಗೆಬಂದಿದೆ ಸಧ್ಯಕ್ಕೆ ಹತ್ತಿ, ಉಕ್ಕು, ಕಬ್ಬಿಣ, ಕಾಗದ ಮುಂತಾದ ಪ್ರಮುಖ ೬ ಕೈಗಾರಿಕಾ ಕಾರ್ಖಾನೆಗಳ ಕೆಲಸಗಾರರಿಗೆ ಈ ಹೊಸ ಯೋಜನೆ ಅನ್ವಯಿಸುತ್ತದೆ. ಈ ರೀತಿ ಕೈಗಾರಿಕಾ ಸಂಸ್ಥೆಗಳು ಸುಮಾರು ೧೬೦೦ ಕಾರ್ಖಾನೆಗಳು ಭಾರತದಲ್ಲಿವೆ. ಅವುಗಳಲ್ಲಿ ಒಟ್ಟು ೧೭ ಲಕ್ಷ ಕಾರ್ಮಿಕರಿರುವರು ಇವರಿಗೆಲ್ಲಾ ಇದು ಅನ್ವಯಿಸುತ್ತದೆ ಸಂಬಳ ಮತ್ತು ತುಟ್ಟಿಭತ್ಯದ ಮೇಲೆ ಕಾರ್ಮಿಕರು ರೂಪಾಯಿಗೆ ಒಂದಾಣೆಯಂತೆ ಚಂದಾ ಕೊಡಬೇಕಾಗಿದೆ ಇದರಿಂದ ೭॥ ಕೋಟಿ ರೂಪಾಯಿಗಳು ಸಂಗ್ರಹವಾಗುತ್ತದೆ ಮಾಲೀಕರು ಸಮವಾದ ಹಣವನ್ನು ಕೊಡಬೇಕಾಗಿದೆ

ಅಖಿಲ ಭಾರತ ರೈಲ್ವೆ ಕೆಲಸಗಾರರ ಮಹಾಧಿವೇಶನ

ಅಖಿಲಭಾರತ ರೈಲ್ವೆ ಕೆಲಸಗಾರರ ಫೆಡರೇಷನ್ನಿನ ಮಹಾಧಿವೇಶನವು ಮುಂದಿನವರ್ಷ ೩೧ ರಿಂದ ೩೪ ರವರೆಗೆ ಜನವರಿಯಲ್ಲಿ ಮೈಸೂರಿನಲ್ಲಿ ನಡೆಸಲು ರೈಲ್ವೆ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯು ನಿರ್ಧರಿಸಿದೆ.

ಉಳುವವನಿಗೆ ಮಾತ್ರ ಭೂಮಿ

ಉಳುವವನಿಗೆ ಮಾತ್ರ ಭೂಮಿ ಇರಬೇಕೆಂಬ ನೀತಿಯನ್ನು ಭಾರತ ಸರ್ಕಾರವು ಪುಷ್ಟೀಕರಿಸುತ್ತದೆ ಆಬಗ್ಗೆ ಯಾರಿಗೆ ಎಷ್ಟು ಪ್ರಮಾಣದಲ್ಲಿ ಭೂಮಿಯಿರಬೇಕೆಂಬುದನ್ನು ನಿರ್ಧರಿಸಲಾಗುತ್ತದೆ ಆದರೆ ಭಾರತಾದ್ಯಂತ ಈ ಬಗ್ಗೆ ಏಕೈಕ ಶಾಸನವನ್ನು ಮಾಡಲು ಸಾಧ್ಯವಿಲ್ಲವೆಂದು ಪ್ರಧಾನಿ ನೆಹರೂರವರು ನಾಗಪುರದಲ್ಲಿ ಮಾತನಾಡುತ್ತಾ ಹೇಳಿರುವರು

ಬ್ರಿಟನ್ನಿನ ಅಸಹಕಾರ

ಬ್ರಿಟಿಷ್ ಲೇಬರುಪಾರ್ಟಿ ಪ್ರತಿನಿಧಿ ಟಿಹರಾನಿನಿಂದ ಹೊರಡುವಾಗ ಪರ್ಷಿಯಾ ಪ್ರಧಾನಿ ಡಾ॥ ಮುಸಾದಿಕ್‌ರವರು ಬ್ರಿಟಿಷ್ ಜನರಿಗೊಂದು ಅಖಿಲ ಸಂದೇಶವನ್ನು ತೆಗೆದುಕೊಂಡು ಹೋಗಲು ನಿರಾಕರಿಸಿದರೆಂದು ಹೇಳಲಾಗಿದೆ.

ಹೈದರಾಬಾದ್ ಸರ್ಕಾರಕ್ಕೆ ಕೋರ್ಟಿನ ನೋಟೀಸ್

ತೆಲಂಗಾಣದಲ್ಲಿ ಬಂದನದಲ್ಲಿಟ್ಟಿರುವ ೮ ಜನ ಕಮ್ಯೂನಿಸ್ಟರನ್ನು ಯಾಕೆ ಬಿಡುಗಡೆ ಮಾಡಬಾರದೆಂದು ೩ ವಾರದ ಒಳಗಾಗಿ ಜವಾಬು ಕೊಡಬೇಕೆಂದು ಭಾರತ ಶ್ರೇಷ್ಠ ನ್ಯಾಯಾಲಯವು ಹೈದರಾಬಾದ್ ಸರ್ಕಾರಕ್ಕೆ ಒಂದು ನೋಟೀಸ್ ಕೊಟ್ಟಿದೆ.

ವರ್ಣಬೇಧ ವಿರುದ್ಧ ಸತ್ಯಾಗ್ರಹ

ದಕ್ಷಿಣಆಫ್ರಿಕಾದಲ್ಲಿ ಯೂರೋಪೇತ್ಯರರು ವರ್ಣಬೇಧ ವಿರುದ್ಧ ಚಳುವಳಿಯನ್ನು ಉಗ್ರವಾಗಿ ನಡೆಸುತ್ತಲಿರುವುದರಿಂದ ಯೂರೋಪಿಯನ್ನರ ಹಿತಾಶಯಗಳಿಗೆ ಧಕ್ಕೆಬರುತ್ತದೆ ಆದ್ದರಿಂದ ಈ ಚಳುವಳಿಯನ್ನು ತಡೆಗಟ್ಟಲು ಪೋಲೀಸಿನವರು ಸತ್ಯಾಗ್ರಹಿಗಳನ್ನು ಹೊಡೆಯುತ್ತಾರೆ. ಅವಶ್ಯಬಿದ್ದರೆ ಗುಂಡು ಸಹ ಹಾರಿಸುತ್ತಾರೆ. ಎಚ್ಚರದಿಂದಿರಬೇಕೆಂದು ದಕ್ಷಿಣಆಫ್ರಿಕಾದ ನ್ಯಾಯಾಂಗ ಸಚಿವರು ಹೇಳಿರುವರು.

ಮದ್ರಾಸ್ ಸಮಸ್ಯೆ ನಿರ್ಧಾರಕ್ಕೆ ಮತಗಣನೆ

ಮದ್ರಾಸ್ ನಗರದ ಮೇಲೆ ಆಂಧ್ರರಿಗೆ ಯಾವ ಹಕ್ಕೂ ಇರುವುದಿಲ್ಲ. ಆದರೂ ಮದ್ರಾಸ್ ಸಮಸ್ಯೆಯನ್ನು ಇತ್ಯರ್ಥಗಳಿಸಲು ಮತಗಣನೆ ಪಡೆಯುವುದು ಸೂಕ್ತ ಎಂದು ಪ್ರಾಂತ್ಯ ಶಾಸನಸಭೆಯ ಕಮ್ಯೂನಿಸ್ಟ್ ಪಕ್ಷದ ನಾಯಕ ಶ್ರೀ ಟಿ. ನಾಗಿರೆಡ್ಡಿಯವರು ಹೇಳಿರುತ್ತಾರೆ.

ಸಕ್ಕರೆ ಉತ್ಪತ್ತಿ ಬೆಲೆ ಕಡಿಮೆ ಮಾಡಲು ಸೂಚನೆ

ಸಕ್ಕರೆಯನ್ನು ಉತ್ಪತ್ತಿಮಾಡುವವರು ಉತ್ಪನ್ನದ ಬೆಲೆಯನ್ನು ಕಡಿಮೆಮಾಡಿ ಸುಲಭದರದಲ್ಲಿ ಜನರಿಗೆ ಸಕ್ಕರೆ ಸಿಕ್ಕುವಂತೆ ಮಾಡಬೇಕೆಂದು ಕೇಂದ್ರ ಆಹಾರ ಸಚಿವರ ಮಿ॥ ಕಿದ್ವಾಯಿಯವರು ಸಕ್ಕರೆ ತಯಾರಿಕೆಗಾರರಿಗೆ ಸೂಚನೆಯನ್ನಿತ್ತಿದ್ದಾರೆ.

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು
ನಿಮ್ಮ ಸದರುಗಳನ್ನು ಅಲಂಕರಿಸಲಿ
ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವನವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.
★
ಹೆಚ್ಚಿನ ವಿವರಗಳಿಗೆ ಬರೆಯಿರಿ:—
ಗೌರ್ನಮೆಂಟ್ ಪೋರ್ಸ್ಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ
ಬೆಂಗಳೂರು ೩.

ವಿದ್ಯಾಭ್ಯಾಸ ಸಮ್ಮೇಳನ

ಬೊಂಬಾಯಿನಲ್ಲಿ ಡಿಸೆಂಬರ್ ೧೨ನೇ ತಾರೀಖಿನಿಂದ ೨೩ನೇ ತಾರೀಖಿನವರೆವಿಗೆ ಯುನೆಸ್ಕೋವಿನ ವಿದ್ಯಾಭ್ಯಾಸ ಸಮ್ಮೇಳನವು ನಡೆಯುತ್ತದೆ. ಸಿಂಹಳ, ಭಾರತ, ಪಾಕೀಸ್ತಾನ, ಬರ್ಮಾ ಮುಂತಾದ ೧೩ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸುವರು.

ರಣಜಿತ್
31–10–52 ರಿಂದ
ಅಮೋಘ ಪ್ರಾರಂಭ
ಮೋತಿಮಹಲ್
ಸುರಯ್ಯ, ಅಜಿತ್, ಜೀವನ್, ಮೀರಾ

ಆಪೇರ ೩೧-೧೦-೫೨ ರಿಂದ ಅಮೋಘ ೩ನೇವಾರ
ಪ್ರತಿದಿನ ಮೂರು ಆಟಗಳು
* ಮಾಪಿಳ್ಳೈ *
ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

ವುಡ್ ಲ್ಯಾಂಡ್ಸ್
31-10-52 ರಿಂದ ಎರಡನೇ ವಾರ
ಪ್ರತಿದಿನ ೩ ಪ್ರದರ್ಶನಗಳು
ರಂಗೀಲಿ (ಹಿಂದಿ)
ಪಾತ್ರ:ರೆಹೆನಾ, ಯಾಕೂಬ್. ರಾಜಕುಮಾರ್.

ಪ್ರಭಾ ೭-೧೧-೫೨ ರಿಂದ
ಅಮೋಘ ಪ್ರಾರಂಭ
ದಿನವಹಿ ಮೂರು ಆಟಗಳು
ಪೀಪಲ್ಸ್ ಆರ್ಟ್ ಪ್ರೊಡಕ್ಷನ್ಸ್‌ರವರ ಅತ್ಯುತ್ತಮ ತೆಲುಗುಚಿತ್ರ.
ಪಲ್ಲೆಟೂರು
(ಹಳ್ಳಿ)
ಭೂಮಿಕೆ: ಎನ್. ಟಿ. ರಾಮರಾವ್ [ಪಾತಾಳಭೈರವಿ ಪ್ರಖ್ಯಾತಿ], ಸಾವಿತ್ರಿ, ರಂಗರಾವ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 61

೪-೧೧-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕಡೂರು-ಚಿಕ್ಕಮಗಳೂರು ರೈಲ್ವೆಗೆ ಚಳುವಳಿ

ಕಡೂರು-ಚಿಕ್ಕಮಗಳೂರು ರೈಲ್ವೆ ಮಾರ್ಗವನ್ನು ಕೇಂದ್ರ ಸರ್ಕಾರವು ಕೈಗೊಳ್ಳಬೇಕೆಂದು ಒತ್ತಾಯಪಡಿಸಿದೆ ಮೈಸೂರು ಸರ್ಕಾರವು ಅನುಸರಿಸುತ್ತಿರುವ ತಾತ್ಸಾರ ನೀತಿಯನ್ನು ತೀವ್ರವಾಗಿ ಖಂಡಿಸಿ, ಅದನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದೂ ಅದಕ್ಕೆ ಮೈಸೂರು ಸರ್ಕಾರ ತಕ್ಕ ವ್ಯವಸ್ಥೆ ಮಾಡದಿದ್ದಲ್ಲಿ ಅಸಹಕಾರ ಚಳುವಳಿ ನಡೆಸಬೇಕೆಂದೂ, ಚಿಕ್ಕಮಗಳೂರಿನಲ್ಲಿ ನಿನ್ನೆ ನಡೆದ ಬಹಿರಂಗ ಸಭೆಯಲ್ಲಿ ನಿರ್ಣಯಮಾಡಲಾಗಿದೆ

ಟೆನ್ನಿಸ್ ಪಂದ್ಯ

ಮೈಸೂರುನಗರದ ಕಾಸ್ಮಪಾಲಿಟನ್ ಕ್ಲಬ್ಬಿನ ಆಶ್ರಯದಲ್ಲಿ ಇದೇ ೧೦ ನೇ ತಾರೀಖಿನಿಂದ ಟೆನಿಸ್ ಛಾಂಪಿಯನ್ ಶಿಪ್ ಪಂದ್ಯಗಳು ನಡೆಯುವುವು ಪ್ರವೇಶ ಪತ್ರಗಳನ್ನು ಸ್ವೀಕರಿಸಲು ಇದೇ ೮ ನೇ ತಾರೀಖು ಕೊನೆಯದಿನ.

ಟೇಬಲ್ ಟೆನ್ನಿಸ್ ಪಂದ್ಯ

ಇದೇ ೭ ನೇ ತಾರೀಖಿನಿಂದ ಬನುಮಯ್ಯ ಶಾಲೆಯಲ್ಲಿ ನಾನ್ ಮೆಡಲಿಸ್ಟ್ ಟೇಬಲ್‌ಟೆನ್ನಿಸ್ ಪಂದ್ಯವು ನಡೆಯುತ್ತದೆ

ಕಬ್ಬಿನಸಿಪ್ಪೆಯಿಂದ ನ್ಯೂಸ್‌ಪ್ರಿಂಟ್

ಕಬ್ಬಿನ ಸಿಪ್ಪೆಯಿಂದ ನ್ಯೂಸ್‌ಪ್ರಿಂಟ್ ಕಾಗದವನ್ನು ತಯಾರಿಸುವ ಯೋಜನೆಗಳನ್ನು ಬೊಂಬಾಯಿನ ಕೈಗಾರಿಕೋದ್ಯಮಿ ಶ್ರೀ ಎಲ್. ಧನುಕಾರ್‌ರವರು ಅಮೆರಿಕಾದಿಂದ ಭಾರತಕ್ಕೆ ತರಲಿದ್ದಾರೆ.

ಭಾರತ ಸರ್ಕಾರಿ ಅಧಿಕಾರಿ ಹಣದೊಡನೆ ಪರಾರಿ

ರಾಜಾಸ್ತಾನದಲ್ಲಿರುವ ಧೋಲ್ಪುರ್ ಎಂಬಲ್ಲಿಯ ತಾಸೀಲದಾರರು ಸರ್ಕಾರಕ್ಕೆ ಸೇರಿದ ಒಂದುಲಕ್ಷ ರೂಪಾಯಿಗಳೊಡನೆ ಪಾಕೀಸ್ತಾನಕ್ಕೆ ಪರಾರಿಯಾಗಿದ್ದಾರೆ.

ಜಯಪುರದ ಜಿಲ್ಲಾಟ್ರೆಷರಿ ಆಫೀಸರೂ ಸಹ ಪಾಕೀಸ್ತಾನಕ್ಕೆ ಪರಾರಿಯಾಗಿದ್ದಾರೆ ಅವರು ತೆಗೆದುಕೊಂಡು ಹೋಗಿರುವ ಹಣದ ವಿವರ ಇನ್ನೂ ಪತ್ತೆಯಾಗಿಲ್ಲ.

ಶಾಸನಸಭೆಯಲ್ಲಿ ಆಂಧ್ರ ಭಾಷೆ ಗೊಂದಲ

ಮದ್ರಾಸ್ ಶಾಸನ ಸಭಾಧಿವೇಶನವು ನಿನ್ನೆ ಹಿಂದಿನ ಪ್ರಾರಂಭವಾಯಿತು. ಆಂಧ್ರ ಕಮ್ಯೂನಿಸ್ಟರು ತೆಲುಗಿನಲ್ಲಿ ಪ್ರಶ್ನೆಗಳನ್ನು ಹಾಕಲಾರಂಭಿಸಿದರು ಸರ್ಕಾರವು ಅವುಗಳಿಗೆ ಉತ್ತರಕೊಡಲು ನಿರಾಕರಿಸಿದುದರಿಂದ ಬಿಸಿ ವಾತಾವರಣವು ಉಂಟಾಯಿತು. ಪ್ರತಿಯೊಂದು ಪ್ರಶ್ನೆಗೂ ಸರ್ಕಾರ ನೋಟೀಸ್ ಎಂದು ಹೇಳುತ್ತಾ ಬಂದರು

ಪ್ರಶ್ನೋತ್ತರ ಕಾಲವಿಯುವುದು ವಿಷಯ ತಿಳಿದುಕೊಳ್ಳುವುದಕ್ಕಾಗಿ ಆದರೆ ಅದನ್ನು ಬೇರೆ ಉದ್ದೇಶದಿಂದ ಕಮ್ಯೂನಿಸ್ಟರು ಉಪಯೋಗಿಸಿಕೊಳ್ಳುವುದಾದರೆ ಅದೇ ತಂತ್ರವನ್ನೂ ತಾವೂ ಅನುಸರಿಸುವುದಾಗಿ ಮುಖ್ಯಮಂತ್ರಿ ಶ್ರೀ ಸಿ ರಾಜಗೋಪಾಲಾಚಾರಿಯವರು ಹೇಳಿದರು.

ಕಳೆದ ಶಾಸನಸಭೆಯಲ್ಲಿ ಈ ಸದಸ್ಯರೆಲ್ಲಾ ಇಂಗ್ಲೀಷಿನಲ್ಲಿ ಮಾತನಾಡುತ್ತಿದ್ದರು ಆಂಧ್ರಪ್ರಾಂತ್ಯ ತುರ್ತು ರಚನೆಗಾಗಿ ಈ ಅಧಿವೇಶನದಲ್ಲಿ ಎಲ್ಲರೂ ತೆಲುಗಿನಲ್ಲಿಯೇ ಮಾತನಾಡಬೇಕೆಂದು ಪಕ್ಷವು ನಿರ್ಧರಿಸಿತು ವಿರೋಧ ಪಕ್ಷದ ನಾಯಕ ಶ್ರೀ ವಿಶ್ವನಾಥರವರು ಈ ಸಂದರ್ಭದಲ್ಲಿ ಮಾತನಾಡುತ್ತಾ, ತಂತ್ರ ಎಂದು ಹೇಳುವುದು ನ್ಯಾಯವಿಲ್ಲ ರಾಜ್ಯಾಂಗ ಪ್ರಕಾರ ಸದಸ್ಯರು ಯಾವ ಭಾಷೆಯಲ್ಲಿ ಬೇಕಾದರೂ ಮಾತನಾಡಬಹುದು ಮಾತೃಭಾಷೆಯಲ್ಲಿ ಮಾತನಾಡುವುದು ಹಕ್ಕು ದುರುಪಯೋಗವಲ್ಲವೆಂದು ಹೇಳಿದರು.

ವಿಶೇಷ ನ್ಯಾಯಾಲಯಗಳು

ಲಂಚ ಅಪಾದನೆ ಮೊದ್ದಮೆಗಳನ್ನೆಲ್ಲಾ ವಿಚಾರಣೆ ನಡೆಸಲು ಬೊಂಬಾಯಿನಲ್ಲಿ ವಿಶೇಷ ನ್ಯಾಯಾಸ್ಥಾನವನ್ನು ಸರ್ಕಾರವು ರಚಿಸಿದೆ. ಲಂಚಕೊಡುವವರು ತೆಗೆದುಕೊಳ್ಳುವರು ಮುಂತಾದವುನ್ನೆಲ್ಲಾ ಕಂಡು ಹಿಡಿದು ಹಲವಾರು ಮೊಕದ್ದಮೆಗಳನ್ನು ಈ ನ್ಯಾಯಾಸ್ಥಾನದಲ್ಲಿ ವಿಚಾರಣೆ ಬರಲಿದೆ, ಜಿಲ್ಲೆಗಳಲ್ಲೂ ಈ ರೀತಿ ನ್ಯಾಯಾಲಯಗಳಲ್ಲೂ ಸ್ಥಾಪಿಸಲಾಗಿದೆ

ಆಫ್ರಿಕಾದಲ್ಲಿ ಸಾರ್ವತ್ರಿಕ ಮುಷ್ಕರ

ಆಫ್ರಿಕಾದಲ್ಲಿ ವರ್ಣಿಯರ ಒಹಿರಂಗ ಸಭೆಗಳ ಮೇಲೆ ಸರ್ಕಾರದವರು ವಿಧಿಸಿರುವ ನಿಷೇಧಾಜ್ಞೆಗಳನ್ನು ರದ್ದು ಮಾಡದಿದ್ದಲ್ಲಿ ಆಫ್ರಿಕಾ ಕಾಂಗ್ರೆಸ್ಸು ಇದೇ ೧೧ ನೇ ತಾರೀಖಿನಿಂದ ಸಾರ್ವತ್ರಿಕ ಮುಷ್ಕರ ಹೂಡಬೇಕೆಂದು ಸ್ಯೂಬ್ರೈಟನ್ ನಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದೆ ಇದರ ಜೊತೆಗೆ ಉಪವಾಸ ಸತ್ಯಾಗ್ರಹವನ್ನು ಕೈಗೊಳ್ಳಲಾಗುವುದು

† ಮೈಸೂರು ಸಂಸ್ಥಾನದಾದ್ಯಂತ ಧಾನ್ಯಗಳ ಮೇಲೆ ಹಕೋಟನ್ನು ತೆಗೆದು ಹಾಕಲು ಸರ್ಕಾರವು ಅನುಮತಿಯನ್ನು ಕೊಟ್ಟಿರುವುದಾಗಿ ಗೊತ್ತಾಗಿದೆ

ಹಿಮಾಲಯ ಪರ್ವತದಲ್ಲಿ ಹೊಸ ಶಿಬಿರ

ಹಿಮಾಲಯ ಪರ್ವತದಲ್ಲಿರುವ ಬದರೀನಾಥ್, ಕೇದಾರನಾಥ್ ಮತ್ತು ಗಂಗೋತ್ರಿ ಶಿಬಿರಗಳ ನಡುವೆ ೫೦ ಮೈಲಿ ಉದ್ದವಿರುವ ಸುಮೇರು ಎಂಬ ಪುರಾಣ ಪ್ರಸಿದ್ಧವಾದ ಶಿಖರವನ್ನು ಕಾಪ್ಟನ್ ಉಮಾಕಾಂತಶುಕ್ಲ ಎಂಬ ನಿವೃತ್ತ ಮಿಲಿಟರಿ ಅಧಿಕಾರಿಯೊಬ್ಬರು ಕಂಡುಹಿಡಿದಿರುವುದಾಗಿ ತಿಳಿಸಿರುವರು

ಹೊಸ ಮಾರಾಟ ತೆರಿಗೆ ಶಾಸನ

ಇದೇ ನವೆಂಬರ್ ಒಂದನೇ ತಾರೀಖಿನಿಂದ ಜಾರಿಗೆಗೆ ಬಂದಿರುವ ಹೊಸ ಮಾರಾಟ ತೆರಿಗೆ ಶಾಸನವು ನ್ಯಾಯ ಬಾಹಿರವೆಂದು ಯಾಕೆ ತೀರ್ಮಾನಿಸಬಾರದೆಂದು ಬೊಂಬಾಯಿ ಶ್ರೇಷ್ಠ ನ್ಯಾಯಾಲಯವು ಸರ್ಕಾರ ಮತ್ತು ಮಾರಾಟ ತೆರಿಗೆ ಕಲೆಕ್ಟರಿಗೆ ನೋಟೀಸ್ ಕೊಟ್ಟಿದೆ.

† ವಿಶ್ವಸಂಸ್ಥೆ ನಿರ್ಣಯಗಳನ್ನು ಜಾರಿಗೆ ತರುವುದಿಲ್ಲವೆಂದು ದಕ್ಷಿಣ ಆಫ್ರಿಕಾ ತಿಳಿಸಿದೆ.

ಭಾರತಕ್ಕೆ ಅಮೆರಿಕಾದಿಂದ ೧೮ ಕೋಟಿ ರೂ ನೆರವು

ಭಾರತ ಆರ್ಥಿಕ ಪ್ರಗತಿಕಾರ್ಯಗಳಿಗಾಗಿ ಅಮೆರಿಕಾವು ಪುನಃ ೩೮ ೩೫ ಮಿಲಿಯನ್ ಡಾಲರುಗಳ ೧೮.೩ ಕೋಟಿ ರೂಪಾಯಿಗಳು ಧನ ಸಹಾಯ ಮಾಡುವಂತೆ ಉಭಯ ಸರ್ಕಾರಗಳಿಗೆ ಒಪ್ಪಂದವಾಗಿದೆ. ಈ ಒಪ್ಪಂದ ಪತ್ರಕ್ಕೆ ನಿನ್ನೆಯದಿನ ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಚೆಸ್ಟರ್ ಬೌಲ್ಸ್ ಮತ್ತು ಭಾರತ ಆರ್ಥಿಕ ಸಚಿವರು ಸಹಿ ಹಾಕಿದರು.

ಕಬ್ಬಿಣ, ಉಕ್ಕು, ರಸಾಯನಿಕ ಗೊಬ್ಬರ ಮುಂತಾದವನ್ನು ತರಿಸಿಕೊಳ್ಳಲು, ವ್ಯವಸಾಯ ಮತ್ತು ವಿದ್ಯುಚ್ಛಕ್ತಿ ಯೋಜನೆಗಳು, ಮಲೇರಿಯಾ ನಿವಾರಕ ಕಾರ್ಯಕ್ರಮ, ಜನಪದ ಯೋಜನೆ ಕಾರ್ಯಗಳಿಗಾಗಿ ಈ ಹಣವನ್ನು ಉಪಯೋಗಿಸಿಕೊಳ್ಳಲಾಗುತ್ತದೆ.

ಫುಟ್‌ಬಾಲ್ ಪಂದ್ಯ ಪುನಃ ಡ್ರಾ ಆಯಿತು

ಬೆಂಗಳೂರು ೪

ಸಂತೋಷ ಸ್ಮಾರಕ ರಾಷ್ಟ್ರೀಯ ಫುಟ್‌ಬಾಲ್ ಪಂದ್ಯವು ನಿನ್ನೆಯೂ ಮೈಸೂರು ಮತ್ತು ಬೊಂಬಾಯಿನವರಿಗೆ ನಡೆದು ಪುನಃ ಡ್ರಾ ಆಯಿತು.

೮ ಜನರ ಕೊಲೆ

ಭಾರತದಲ್ಲಿ ಪೋರ್ಚುಗೀಸಿಗೆ ಸೇರಿದ ಡಾಮನ್‌ನಲ್ಲಿ ಹೊಲ ಗದ್ದೆಗಳನ್ನು ಕಾಯಲು ಮಲಗಿದ್ದ ೧೧ ಮಂದಿ ರೈತರ ಮೇಲೆ ಗುಂಪೊಂದು ಬಿದ್ದು ೮ ಜನರನ್ನು ಕೊಡಲಿಯಿಂದ ಕೊಲೆ ಮಾಡಿದರೆಂದೂ, ಇತರ ೩ ಮಂದಿಗೆ ಗಾಯವಾಗಿದೆಯೆಂದೂ ವರದಿಯಾಗಿದೆ.

ಅಮೆರಿಕಾದಲ್ಲಿ ಈದಿನ ರಾಷ್ಟ್ರಾಧ್ಯಕ್ಷರ ಚುನಾವಣೆ

ಅಮೆರಿಕದಲ್ಲಿ ರಾಷ್ಟ್ರಾಧ್ಯಕ್ಷರ ಚುನಾವಣೆಯು ಈ ದಿನ ನಡೆಯಲಿದೆ. ಒಟ್ಟು ಸುಮಾರು ೬ ಕೋಟಿ ಜನರು ಮತದಾನ ನೀಡುವ ನಿರೀಕ್ಷೆಯಿದೆ. ನಾಳೆಯ ದಿನ ಫಲಿತಾಂಶವು ಹೊರಬೀಳಬಹುದೆಂದು ಹೇಳಲಾಗಿದೆ. ಅಧ್ಯಕ್ಷ ಚುನಾವಣಾ ಪ್ರಚಾರವು ವಿಶೇಷ ಬಿರುಸಾಗಿ ನಡೆಯುತ್ತಿದೆ. ಡೆಮೋಕ್ರಾಟಿಕ್ ಪಕ್ಷದ ಸ್ಟೀವನ್‌ಸನ್ ಮತ್ತು ರಿಪಬ್ಲಿಕನ್ ಪಕ್ಷದ ಐಸನ್ ಹೋವರ್‌ರವರುಗಳ ಸ್ಪರ್ಧಿಗಳಾಗಿರುವರು ಉಭಯ ಪಕ್ಷದವರೂ ತಮ್ಮ ಪಕ್ಷಕ್ಕೆ ಜಯವಾಗುವುದೆಂದು ಹೇಳುತ್ತಿದ್ದಾರೆ. ರಾಷ್ಟ್ರಾಧ್ಯಕ್ಷ ಚುನಾವಣೆಯ ಚರಿತ್ರೆಯಲ್ಲಿ ಈ ಸಾರಿ ನಡೆಯುವಷ್ಟು ಬಿರುಸಾದ ಚುನಾವಣೆಯಾವಾಗಲೂ ನಡೆದಿಲ್ಲವೆಂದು ಹೇಳಲಾಗುತ್ತಿದೆ.

ನೂತನ ಕಾರ್ಯವರ್ಗ

ಅಖಿಲಭಾರತ ಅಂಚೆ ಮತ್ತು ತಂತಿ ಲೋಯರ್ ಗ್ರೇಡ್ ಕೆಲಸಗಾರರ ೨೫ ನೇ ವಾರ್ಷಿಕ ಸಭೆಯು ನಾಗಪುರದಲ್ಲಿ ಸೇರಿ ಮುಂದಿನ ಸಾಲಿಗೆ ರೋಹಿಣಿನಾಥ ಘಾರೇರವರನ್ನು ಅಧ್ಯಕ್ಷ, ಶ್ರೀ ಲಾಲಾ ಅಚ್ಚಿತರು ಮತ್ತು ಶ್ರೀ ಟಿ. ಎಸ್. ರಾಮಾನುಜಂರವರನ್ನು ಉಪಾಧ್ಯಕ್ಷ ಮತ್ತು ಶ್ರೀ ಎ ಜಿ. ದಸ್ತಿಯವರನ್ನು ಕಾರ್ಯದರ್ಶಿಯನ್ನಾಗಿ ಚುನಾಯಿಸಿತು.

ಅವಿರೋಧ ಆಯ್ಕೆ

ಮೈಸೂರು ಜಿಲ್ಲೆಯಿಂದ ಎ ಐ ಸಿ-ಸಿ ಅಧಿವೇಶನಕ್ಕೆ ಈ ಕೆಳಗೆ ನಮೂದಿಸಿರುವವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಿರಿಯಾಪಟ್ಟಣ ಕ್ಷೇತ್ರದಿಂದ ಶ್ರೀ ಹೆಚ್. ಎಂ. ಚನ್ನಬಸಪ್ಪ, ಹುಣಸೂರಿನಿಂದ ಶ್ರೀ ಶ್ರೀನಿವಾಸಯ್ಯಂಗಾರ್ ಹೆಗ್ಗಡದೇವನ ಕೋಟೆಯಿಂದ ಶ್ರೀ ಹೆಚ್. ಕೆ. ತಿಮ್ಮಯ್ಯ, ನಂಜನಗೂಡಿನಿಂದ ಶ್ರೀ ಪಿ. ಮಹದೇವಯ್ಯ ಮತ್ತು ಕೊಳ್ಳೇಗಾಲದಿಂದ ಶ್ರೀ ಟಿ.ಎಂ. ಸಿದ್ಧಯ್ಯ.

ಕಂದಾಯ ರಿಯಾಯಿತಿ

ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರು ಕೆರೆಯಲ್ಲಿ ಮಳೆಬಾರದೆ ಅಚ್ಚುಕಟ್ಟುದಾರರಿಗೆ ಬೆಳೆಯಾಗದಿಲ್ಲವಾಗಿ ೧೯೫೧-೫೨ ನೇ ಸಾಲಿನ ೪೨೦-೨-೫ ರೂ ಕಂದಾಯವನ್ನು ಸರ್ಕಾರವು ಮಾಫಿಮಾಡಿದೆ

ಕೈಮಗ್ಗದವರಿಗೆ ಪಂಚೆ, ಸೀರೆ ತಯಾರಿ ಮೀಸಲು

ಕೈಮಗ್ಗದವರಿಗೆ ಪಂಚೆ, ಸೀರೆಯನ್ನು ತಯಾರಿಸಲು ಮೀಸಲಾಗಿಡಬೇಕೆಂಬ ನಿರ್ಣಯವನ್ನು ನಿನ್ನೆಯ ದಿನ ಮದ್ರಾಸ್ ಶಾಸನ ಸಭೆಯಲ್ಲಿ ಕೈಗಾರಿಕಾಸಚಿವ ಡಾ|| ಯು. ಕೃಷ್ಣರಾವ್ ರವರು ಮಂಡಿಸಿದರು ಚರ್ಚೆಯು ನಿನ್ನೆ ಪ್ರಾರಂಭವಾಯಿತು. ಈ ದಿನವೂ ಆಗಲಿದೆ.

ಎ. ಐ. ಸಿ. ಸಿ. ಗೆ ಪ್ರತಿನಿಧಿಗಳ ಚುನಾವಣೆ

ಮೈಸೂರು ೪

ಅಖಿಲ ಭಾರತ ಕಾಂಗ್ರೆಸ್ಸಿಗೆ ಜಿಲ್ಲೆಯಿಂದ ಹನ್ನೊಂದು ಪ್ರತಿನಿಧಿಗಳನ್ನು ಚುನಾಯಿಸಬೇಕಾಗಿದ್ದು ಅರ್ಜಿಗಳನ್ನು ಸಲ್ಲಿಸಲು ಮೊನ್ನೆಯೇ ಕೊನೆಯ ದಿನವಾಗಿತ್ತು.

ಕೃಷ್ಣರಾಜ ನಗರದಿಂದ ಶ್ರೀಗಳಾದ ಶ್ರೀಕಂಠಶೆಟ್ಟರು, ಟೀ ನರಸೀಪುರದಿಂದ ಎಂ. ಎಲ್. ನಂಜುಂಡರಾಜೇಅರಸು ಶ್ರೀಗಳಾದ ಪುಟ್ಟಹೊನ್ನಪ್ಪನವರು ಮತ್ತು ಟಿ. ಪಿ. ಬೋರಯ್ಯನವರು, ಗುಂಡಲಪೇಟೆಯಿಂದ ಶ್ರೀಗಳಾದ ಹೆಚ್. ಸಿ. ದಾಸಪ್ಪನವರು ಮತ್ತು ದೊಡ್ಡಯ್ಯನವರು, ಯಳಂದೂರಿನಿಂದ ಶ್ರೀಗಳಾದ ಡಿ. ಸೂರ್ಯನಾಯಣ ಮತ್ತು ಪುಟ್ಟಹೊನ್ನಪ್ಪನವರು, ಚಾಮರಾಜನಗರದಿಂದ ಶ್ರೀಗಳಾದ ಕುದೇರು ಕುಮಾರಸ್ವಾಮಿ ಮತ್ತು ಶಂಕರಪ್ಪನವರೂ, ಮೈಸೂರು ತಾಲ್ಲೋಕಿನಿಂದ ಶ್ರೀಗಳಾದ ಕೆ. ಪುಟ್ಟಸ್ವಾಮಿ, ಶಿವನಂಜೇಗೌಡರು ಮತ್ತು ಹೆಚ್. ಸಿ. ದಾಸಪ್ಪನವರು ಅರ್ಜಿಸಲ್ಲಿಸಿದ್ದಾರೆ. ಈ ಕ್ಷೇತ್ರಗಳಿಂದ ಇದೇ ೧೫ನೇ ತಾ|| ಚುನಾವಣೆ ನಡೆಯುವುದು.

§ ಮೈಸೂರು ಪುರಸಭೆಯ ಮುಂದುವರಿದ ಅಧಿವೇಶನವು ನಾಳೆ ಮಧ್ಯಾಹ್ನ ನಡೆಯುತ್ತದೆ.

ಮೈಸೂರು ಪೇಟೆಧಾರಣೆ

ತಾರೀಖು ೩-೧೧-೫೨

ಪಲ್ಲ	ರೂ-	ಆ-	ರೂ-	ಆ
ಕಡಲೇಕಾಯಿ	೯-	೦	೨೨	—
ಎಳ್ಳು	೬೭	೮	೭೩	—
ಹುರಳು	೩೭	೮	೪೧	—
ಹೆಸರು	೫೪	೨	೬೦	—
ಅಲಸಂದೆ	೫೪	೦	೬೯	೪
ಮೆ|| ಕಾಯಿ	೬ ೧೨		೧೫	೧೪
ಸೀಗೇಕಾಯಿ	೪ ೧೫			
ತೆಂಗಿನಕಾಯಿ	೧೪೬		೨೧೬	

ಕಣ್ಣಿನ ಉಚಿತ ಚಿಕಿತ್ಸೆ

ಮಡಕೇರಿ ೨

ಕೊಡಗು ಸರ್ಕಾರದ ಆಶ್ರಯದಲ್ಲಿ ನಡೆಯುತ್ತಿರುವ ಡಾ|| ಮೋದಿಯವರ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ನಿನ್ನೆಯ ದಿನ ಡಾಕ್ಟರ್ ಮೋದಿಯವರು ಆಪರೇಷನ್‌ಗಳನ್ನು ಪ್ರಾರಂಭಿಸಿ ಸುಮಾರು ೭೫ ಆಪರೇಷನ್‌ಗಳನ್ನೂ ಮಾಡಿದರು. ಇದರಲ್ಲಿ ೪೭ ಜನ ಗಂಡಸರೂ ೨೮ ಜನ ಹೆಂಗಸರೂ ಇದ್ದಾರೆ. ೫೦ ಪೂರಿ ಆಪರೇಷನ್‌ಗಳೇ ಆಗಿವೆ. ಇವರುಗಳಿಗೆಲ್ಲಾ ಸಿವಿಲ್ ಆಸ್ಪತ್ರೆಯಲ್ಲಿಯೇ ಹಿಂದಿನ ದಿನ ವಸತಿ ಏರ್ಪಡಿಸಿ 'ಪ್ರೀ ಆಪರೇಟಿವ್' ಟ್ರೀಟ್‌ಮೆಂಟನ್ನು ಡಾಕ್ಟರುಗಳಾದ ಶ್ರೀ ಬೋಪಯ್ಯನವರೂ ಬಿಡ್ಡಯ್ಯನವರೂ ಮಾಡಿದ್ದರು ಎಲ್ಲರಿಗೂ ಆಸ್ಪತ್ರೆಯಲ್ಲಿಯೇ ಹಾಸಿಗೆ ಮಂಚ ಎಲ್ಲಾ ಒದಗಿಸಿ ಆಹಾರ ಮತ್ತು ಅವರ ನರ್ಸಿಂಗ್ ಕೂಡ ಅಲ್ಲಿಯೇ ಏರ್ಪಡಿಸಿದ್ದಾರೆ. ಸಾಯಂಕಾಲವು ನೇತ್ರಪರೀಕ್ಷೆ ಪ್ರಾರಂಭಿಸಿ ಸುಮಾರು ೧೨೦ ಜನರಿಗೆ ಕಣ್ಣು ಪರೀಕ್ಷೆ ಮಾಡಿ ಉಚಿತ ಔಷಧಿ ಮತ್ತು ಸಲಹೆಯನ್ನು ಕೊಟ್ಟರು. ಡಾ|| ಕಾರಿಯಪ್ಪನವರೂ, ಸಿವಿಲ್ ಸರ್ಜನರಾದ ಡಾ|| ಮೇದಪ್ಪನವರೂ ತುಂಬಾ ಸಹಕರಿಸುತ್ತಿದ್ದಾರೆ. ಚೀಫ್ ಸೆಕ್ರೆಟರಿಯವರಾದ ಶ್ರೀ ನರಸಿಂಹಮೂರ್ತಿಯವರೂ, ಗೃಹಮಂತ್ರಿಗಳಾದ ಮಲ್ಲಪ್ಪನವರೂ ಆಪರೇಷನ್ ಕಾಲದಲ್ಲಿ ಬಂದು ಎಲ್ಲಾ ವ್ಯವಸ್ಥೆಗಳನ್ನೂ ನೋಡಿಕೊಂಡು ಹೋದರು. ಕಾಂಗ್ರೆಸ್ ಸ್ವಯಂಸೇವಕರೂ, ಪೋಲೀಸ್‌ನವರೂ ಉತ್ತಮ ಸೇವೆ ಸಲ್ಲಿಸಿದ್ದಾರೆ, ನಾಳೆಯದಿನ ಪುನಃ ಇನ್ನೂ ೫೦-೬೦ ಆಪರೇಷನ್‌ಗಳನ್ನು ಮಾಡುವವರಾಗಿದ್ದಾರೆ ಮೆಳ್ಳೆಗಣ್ಣು ಮತ್ತು ತಿರುಗುಗಣ್ಣು ಆಪರೇಷನ್‌ಗಳು ನಾಳೆಯದಿನ ನಡೆಯುತ್ತದೆ.

ಅಧಿಕಾರವರ್ಗ

ಮೈಸೂರು ೪

ಶ್ರೀ ಕೃಷ್ಣರಾಜೇಂದ್ರ ಕೊ-ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳ ಸಭೆಯು ಮೊನ್ನೆಯ ದಿನ ನಡೆದು ನೂತನ ಅಧಿಕಾರವರ್ಗ ಚುನಾವಣೆಯಾಯಿತು. ಶ್ರೀ ಎಂ. ರಾಜಶೇಖರಮೂರ್ತಿ ಅಧ್ಯಕ್ಷರು, ಶ್ರೀ ಎಂ. ಎಗ್. ರಾಮಸ್ವಾಮಿ ಉಪಾಧ್ಯಕ್ಷರು ಶ್ರೀಗಳಾದ ಕೆ. ಎಂ. ಆರ್. ವಿ. ಶಾಸ್ತ್ರಿ ಹೀರೇಮಠ ಮತ್ತು ಎಂ. ವಿ. ವೆಂಕಟರಾಜು ಕಾರ್ಯದರ್ಶಿಗಳು ಶ್ರೀ ಬಿ. ಪದ್ಮಾರಾಬಯ್ಯ ನ್ಯಾಯ ಸಲಹಗಾರರು.

ಶಾಸನ ಸಭಾಧಿವೇಶನ

ಮೈಸೂರು ಶಾಸನಸಭೆಯ ಮುಂದಿನ ಅಧಿವೇಶನವು ಡಿಸೆಂಬರ್ ತಿಂಗಳಿನಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

ಅಭಾವ ಪರಿಹಾರ ಸಲಹಾ ಸಮಿತಿ

ಬೆಂಗಳೂರು ೪

ಮೈಸೂರು ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಬಾಯಿಂಗ್ ಕಾರ್ಯಕ್ರಮನಡೆಸುವ ಬಗ್ಗೆ ಭಾರತವು ನೇಮಿಸಿರುವ ಸಮಿತಿಯು ನಿನ್ನೆಯದಿನ ಶ್ರೀ ಎಸ್ ವಿ. ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಸಂಸ್ಥಾನದ ಕಂದಾಯ ಸಚಿವ ಶ್ರೀ ಕಡಿದಾಳುಮಂಜಪ್ಪ, ಆಹಾರ ಸಂಪರಾಜು, ವ್ಯವಸಾಯ, ಆಹಾರೋತ್ಪತ್ತಿ, ಕೈಗಾರಿಕೆ, ಮರಾಮತ್ ಶಾಖಾ ಮುಖ್ಯಾಧಿಕಾರಿಗಳು, ವ್ಯವಸಾಯ ಡಿವಿಸ್ಟೊ ಮರಾಮತ್ ಶಾಖಾ ಕಾರ್ಯಕರ್ತಗಳೂ, ಕೋಲಾರ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು. ಭಾರತ ಸರ್ಕಾರದ ಆರ್ಥಿಕ ಇಲಾಖಾ ಕಾರ್ಯದರ್ಶಿ, ನೀರು ಮತ್ತು ವಿದ್ಯುಚ್ಛಕ್ತಿ ಕಮಿಷನ್ನಿನ ಡೈರೆಕ್ಟರ್, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖಾ ವಿಶೇಷಧಿಕಾರಿ, ಪ್ಲಾನಿಂಗ್ ಕಮೀಷನ್ ಸಂಶೋಧನಾಕಾರ ಮುಂತಾದ ಪ್ರಮುಖ ಅಧಿಕಾರಿಗಳೂ ಇದ್ದರು.

ಸಮಿತಿಯು ಇಂದಿನಿಂದ ೩ ದಿನಕಾಲ ಅಭಾವ ಪ್ರದೇಶಗಳಿಗೆ ಭೇಟಿಕೊಟ್ಟು ಸ್ಥಿತಿಗಳನ್ನು ಪರಿಶೀಲಿಸಲು ನಿರ್ಧರಿಸಿತು. ನಿಯೋಗವು ಶಿವಮೊಗ್ಗಕ್ಕೆ ಭೇಟಿಕೊಟ್ಟು ಲಕ್ಕವಳ್ಳಿ ಜಲಾಶಯ ಯೋಜನೆಯನ್ನು ಪರಿಶೀಲಿಸಿ, ಪುನಃ ೭ ನೇ ತಾರೀಖು ಸಭೆ ಸೇರಲಿದೆ.

ರಾಜು ಅಪೀಲು ವಿಚಾರಣೆ

ಬೊಂಬಾಯಿ ಶ್ರೇಷ್ಠನ್ಯಾಯಾಧೀಶ ಮತ್ತು ನ್ಯಾಯಮೂರ್ತಿ ಶ್ರೀ ದೀಕ್ಷಿತರ ಸಮ್ಮುಖದಲ್ಲಿ ರಾಜುರವರ ಅಪೀಲು ಮೊಕದ್ದಮೆ ವಿಚಾರಣೆಯು ನಿನ್ನೆ ಬೊಂಬಾಯಿನಲ್ಲಿ ಪ್ರಾರಂಭವಾಯಿತು.

ವುಡ್ ಲ್ಯಾಂಡ್ಸ್
31-10-52 ರಿಂದ ಎರಡನೇ ವಾರ
ಪ್ರತಿದಿನ ೩ ಪ್ರದರ್ಶನಗಳು
ರಂಗೀಲಿ (ಹಿಂದಿ)
ಪಾತ್ರ: ರೆಹೆನಾ, ಯಾಕೂಬ್, ರಾಜಕುಮಾರ್.

—: ಪ್ರಕಾಶಕರು ಮತ್ತು ಮುದ್ರಕರು: —
ಜಿ. ಎಲ್. ಸ್ವಾಮಿ
ಕ... ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 62

೫-೧೧-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಜನರಲ್ ಐಸೆನ್‌ಹೋವರ್ ಅಮೆರಿಕಾ ಅಧ್ಯಕ್ಷರಾಗಿ ಚುನಾಯಿತರಾದರು

ಮುಂದಿನ ಜನವರಿ ೨೦ ನೇ ತಾ|| ಅಧಿಕಾರ ಸ್ವೀಕರಿಸುವರು

ದ್ವಿತೀಯ ಮಹಾಯುದ್ಧದಲ್ಲಿ ಪ್ರಖ್ಯಾತ ಸೇನಾನಿ ೬೨ ವರ್ಷ ವಯಸ್ಸಿನ ರಿಪಬ್ಲಿಕನ್ ಪಕ್ಷದ ಜನರಲ್ ಡ್ವೈಟ್ ಐಸನ್‌ಹೋವರ್‌ರವರು ಅವೆರಿಕಾದ ನೂತನ ಅಧ್ಯಕ್ಷರಾಗಿ ಚುನಾಯಿತರಾಗಿರುವರೆಂದು ಗೊತ್ತಾಗಿದೆ

ಹಾಲಿ ಅಧ್ಯಕ್ಷ ಟ್ರೂಮನ್ನರವರಿಂದ ಜನರಲ್ ಐಸೆನ್ ಹೋವರ್‌ರವರು ಮುಂದಿನ ಜನವರಿ ೨೦ ನೇ ತಾರೀಖು ಅಧಿಕಾರ ವಹಿಸಿಕೊಳ್ಳುರುತ್ತಾರೆ.

ಕಳೆದ ೨೦ ವರ್ಷಗಳಿಂದ ರಿಪಬ್ಲಿಕನ್ ಪಕ್ಷದವರು ಈ ಸ್ಥಾನವನ್ನು ಗಳಿಸಿರುವುದು ಇದೇ ಪ್ರಥಮವೆಂದು ಹೇಳಲಾಗಿದೆ.

ಸಂಸ್ಥಾನದ ಅಭಿವೃದ್ಧಿ ಯೋಜನೆ

ಕೇಂದ್ರದ ನೆರವಿಗಾಗಿ ಒತ್ತಾಯ

ಬೆಂಗಳೂರು ೫

ಭದ್ರಾ ಜಲಾಶಯದ ಯೋಜನೆಯನ್ನು ಕೇಂದ್ರವೇ ಕೈಗೊಳ್ಳಬೇಕೆಂದೂ, ಹೊನ್ನೇನುರಡು ಯೋಜನೆಗೆ ಕೇಂದ್ರವು ಸಹಾಯ ಮಾಡಬೇಕೆಂದೂ ಕೇಂದ್ರ ಪ್ಲಾನಿಂಗ್ ಕಮಿಷನ್ನಿನ ಮುಂದೆ ತಾವು ಇದೇ ೮ ನೇ ತಾರೀಖು ಒತ್ತಾಯಮಾಡುವುದಾಗಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ.

ಪ್ಲಾನಿಂಗ್‌ಕಮಿಷನ್ನಿನ ಯೋಜನೆಗಳಿಗಾಗಿ ಈಗ ಹಣವನ್ನು ಹೆಚ್ಚಿಸಿರುವುದರಿಂದ ಅದರ ಪ್ರಕಾರ ಮೈಸೂರು ಸಂಸ್ಥಾನದ ಕೆಳಗೆ ಕಂಡ ಯೋಜನೆಗಳಿಗೆ ಹಣದ ಸಹಾಯ ಮಾಡಬೇಕೆಂದು ಕೇಂದ್ರವನ್ನು ಒತ್ತಾಯ ಪಡಿಸುವುದಾಗಿಯು ಅವರು ಹೇಳಿದರು.

೧. ಬೆಂಗಳೂರಿನಲ್ಲಿ ಎಲೆಕ್ಟ್ರೋಪೋರ್ಸಲೇನ್ ಕಾರ್ಖಾನೆಯ ವಿಸ್ತರಣಕ್ಕೆ ೬೦ ಲಕ್ಷ ರೂ;

೨. ಸರ್ಕಾರಿ ವಿದ್ಯುಚ್ಛಕ್ತಿ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿ ಕೈಗಾರಿಕೆ ಮತ್ತು ಗೃಹಕೃತ್ಯದ ಉಪಕರಣಗಳ ತಯಾರಿಕೆಗೆ ೮ ಕೋಟಿ ರೂ; ೩. ಕಚ್ಚಾಫಿಲ್ಮ್ ತಯಾರಿಕೆಗಾಗಿ ೨೫ ಲಕ್ಷ ರೂ;

೪. ಕೈಗಾರಿಕೆಗಳ ಅಭಿವೃದ್ಧಿಗಾಗಿ ೨೫ ಲಕ್ಷ ರೂ; ೫. ಕೈಮಗ್ಗದ ಅಭಿವೃದ್ಧಿಗಾಗಿ ೫೦ ಲಕ್ಷ ರೂ.

ಸಂಸ್ಥಾನದಲ್ಲಿ ೩೬.೬ ಕೋಟಿ ರೂ. ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿ ಅದಕ್ಕೆ ಸರ್ಕಾರವು ೨೮.೬ ಕೋಟಿ ರೂ ಒದಗಿಸಲು ಅವಕಾಶವಿದೆಯೆಂದೂ, ಆದರೆ ಉಳಿದ ೮ ಕೋಟಿ ರೂ. ಒದಗಿಸುವುದೇ ವಿಶೇಷ ಸಮಸ್ಯೆಯಾಗಿದೆಯೆಂದೂ, ಅದನ್ನು ಸರಿಪಡಿಸಲು ಮೈಸೂರಿನ ಪ್ರವೀಣರೂ ಮತ್ತು ಮಹಾಜನರೂ ಸಲಹೆಕೊಡಬೇಕೆಂದೂ ಮುಖ್ಯ ಮಂತ್ರಿಗಳು ಮನವಿಮಾಡಿದ್ದಾರೆ.

ಈ ಸಂಬಂಧದಲ್ಲಿ ನಿನ್ನೆ ನಡೆದ ಇಲಾಖಾ ಮುಖ್ಯಾಧಿಕಾರಿಗಳ, ಮಾಜಿ ಮಂತ್ರಿಗಳ ಮತ್ತು ಹಲವು ರಾಜಕೀಯ ಪಕ್ಷಗಳ ಮುಖಂಡರುಗಳ ಸಭೆಯಲ್ಲಿ ಹೊನ್ನೇನುರಡು ಮತ್ತು ಲಕ್ಕವಳ್ಳಿ ಜಲಾಶಯ ಯೋಜನೆಗಳಿಗೆ ಕೇಂದ್ರವು ಪ್ರಥಮ ಪ್ರಾಶಸ್ತ್ಯವನ್ನು ಕೊಡಬೇಕೆಂದು ನಿರ್ಧರಿಸಲಾಯಿತು.

ಮಲೆನಾಡಿನ ಅಭಿವೃದ್ಧಿಗೆ ಮತ್ತು ಸಂಸ್ಥಾನದ ರೈಲ್ವೆಗಳ ಬಡಾವಣೆ ಅಭಿವೃದ್ಧಿಗೆ ಕೇಂದ್ರ ಸಹಾಯಪಡೆಯಲು ಒತ್ತಾಯಪಡಿಸಬೇಕೆಂದೂ, ಅಲ್ಲದೆ ಮೈಸೂರಿನಿಂದ ಪಶ್ಚಿಮ ದೇಶದ ಬಂದರಿಗೆ ರೈಲ್ವೆ ಸೌಕರ್ಯ ಅಗತ್ಯವೆಂದೂ ಅಭಿಪ್ರಾಯ ಪಡೆಯಲಾಯಿತು.

ಭಾರತದ ವಿದೇಶನೀತಿ

ಅಂತರ ರಾಷ್ಟ್ರೀಯ ವಿಚಾರಗಳಲ್ಲಿ ಎಲ್ಲಾ ರಾಷ್ಟ್ರಗಳೊಡನೆ ಮೈತ್ರಿಯಿಂದಿರುವುದೇ ಭಾರತದ ನೀತಿಯಾಗಿದೆಯೆಂದು ಉಪರಾಷ್ಟ್ರಾಧ್ಯಕ್ಷ ಡಾ|| ಎಸ್. ರಾಧಾಕೃಷ್ಣನ್‌ರವರು ಹೇಳಿರುವರು.

ಸರ್ಕಾರಿ ನೌಕರರು ಭಾರತ ಸೇವಕ ಸಮಾಜ ಸೇರಬಹುದು

ತಮ್ಮ ಕೆಲಸಕಾರ್ಯಗಳಿಗೆ ಕುಂದುಕಬಾರದಂತೆ ಸರ್ಕಾರಿ ನೌಕರರು ಭಾರತ ಸೇವಕ ಸಮಾಜವನ್ನು ಸೇರಬಹುದೆಂದು ಕೇಂದ್ರ ಸರ್ಕಾರದ ಗೃಹಶಾಖೆಯು ಆಜ್ಞೆ ಹೊರಡಿಸಿರುವುದಾಗಿ ಗೊತ್ತಾಗಿದೆ.

ಉಚಿತ ಆಹಾರ ಹಂಚಿಕೆ

ಶಿವಮೊಗ್ಗ ಜಿಲ್ಲೆಯಲ್ಲಿ ನಿರ್ಗತಿಕರಿಗೆ ವಾರಕ್ಕೆ ೨ ಸೇರು ಧಾನ್ಯವನ್ನು ಹಂಚಲು ಏರ್ಪಾಡು ಮಾಡಿರುವುದಾಗಿ ಅಲ್ಲಿಯ ಜಿಲ್ಲಾಧಿಕಾರಿಗಳು ಹೇಳಿರುವರು

ಕಾಶ್ಮೀರ ಪ್ರಶ್ನೆ ಚರ್ಚೆ

ವಿಶ್ವಸಂಸ್ಥೆಯ ಭದ್ರತಾ ಸಮಿತಿಯು ಮುಂದೆ ಕಾಶ್ಮೀರ ಸಮಸ್ಯೆ ವಿಷಯ ನಾಳೆ ಬೇಗ್ಗೆ ನಡೆಯಲಿದೆ

ಹೊಸ ಮೇಯರ್

ಶ್ರೀ ಟಿ. ಚೆಂಗಲ್ವರಾಯನ್‌ರವರು ಮದ್ರಾಸಿನ ಮೇಯರ್. ಶ್ರೀಮತಿ ಸಂಪತ್ತಿ ಪಾಂಡುರಂಗಂರವರು ಉಪಮೇಯರಾಗಿ ಚುನಾಯಿತರಾಗಿದ್ದಾರೆ ಉಭಯತ್ರರೂ ಕಾಂಗ್ರೆಸ್ ಪಕ್ಷಕ್ಕೆ ಸೇರಿದವರು.

ಮೋಟಾರು ವಾಹನ ತೆರಿಗೆ ಇಳಿತಾಯ

ಮೋಟಾರ ವಾಹನ ತೆರಿಗೆಯನ್ನು ಹೆಚ್ಚಿಸಿರುವುದನ್ನು ಶೀಘ್ರ ಮೂರನೇ ಒಂದರಷ್ಟು ಇಳಿಸಲು ಬೊಂಬಾಯಿ ಸರ್ಕಾರವು ನಿರ್ಧರಿಸಿರುವದಾಗಿ ಉಪಸಚಿವ ಶ್ರೀ ಟಿ. ಜಿ ಪಟೇಲ್‌ರು ಹೇಳಿದ್ದಾರೆ.

ಅಮೆರಿಕಾದಲ್ಲಿ ಅಧ್ಯಕ್ಷ ಚುನಾವಣೆ

ಅಮೆರಿಕಾದ ಹೊಸ ಅಧ್ಯಕ್ಷಸ್ಥಾನದ ಮತದಾನವು ನಿನ್ನೆಯದಿನ ಅಮೆರಿಕಾದ್ಯಂತ ಮುಕ್ತಾಯವಾಯಿತು. ವಿಶ್ವದ ನಾನಾ ಪ್ರದೇಶಗಳಲ್ಲಿರುವ ಅಮೆರಿಕನ್ನರು ಸಹ ತಮ್ಮ ಮತವನ್ನೂ ನೀಡಿದ್ದಾರೆ.

ಈ ಸ್ಥಾನಕ್ಕೆ ಜನರಲ್ ಐಸೆನ್‌ಹೋವರ್ ಮತ್ತು ಸ್ಟೀವನ್‌ಸನ್ ಸ್ಪರ್ಧಿಗಳಾಗಿರುವರು ಈ ಸ್ಥಾನಕ್ಕೆ ಆಯ್ಕೆಗೆ ಅಮೆರಿಕಾದಲ್ಲಿರುವ ೫೬೦ ಲಕ್ಷ ಪ್ರಜೆಗಳು ಮತದಾನ ನೀಡಿದ್ದಾರೆ ಇದೇ ಸಮಯದಲ್ಲಿ ಉಪಾಧ್ಯಕ್ಷ ಚುನಾವಣೆಯು ನಡೆಯಲಿದೆ

ಅಮೆರಿಕಾ ಸೈನ್ಯದವರೆಲ್ಲಾ ಮತದಾನ ನೀಡಿದ್ದಾರೆ. ಅಮೆರಿಕಾ ಚರಿತ್ರೆಯಲ್ಲಿ ಇಷ್ಟು ಬಿರುಸಾಗಿ ಅಧ್ಯಕ್ಷ ಚುನಾವಣೆಯು ಯಾವಾಗಲೂ ನಡೆದಿಲ್ಲವೆಂದು ಹೇಳಲಾಗಿದೆ ವಿಜಯಿಯಾಗುವ ಸ್ಪರ್ಧಿಗೆ ರಕ್ಷಣೆನೀಡಲು ಸ್ಪರ್ಧಿಗಳ ಸಮೀಪವಾದ ಅಮೆರಿಕಾ ಗೂಢಚಾರರ ತಂಡಗಳು ಸಿದ್ಧವಾಗಿ ನಿಂತಿವೆ.

ಈಗಾಗಲೇ ಮತದಾನ ಎಣಿಕೆಯು ಪ್ರಾರಂಭವಾಗಿದೆ. ಉಭಯ ಸ್ಪರ್ಧಿಗಳ ನಡುವೆ ಅಂತರವು ವಿಶೇಷಕಡಿಮೆಯಾಗಿದೆ ಯಾರು ಜಯಗಳಿಸುವರೆಂದು ಹೇಳುವುದು ಅಸಾಧ್ಯವಾಗಿದೆ.

† ಗಣಿ ಒಟ್ಟಿಯ ಮೇಲೆ ಸೆಸ್ ವಿಧಿಸಲು ಭಾರತ ಪಾರ್ಲಿಮೆಂಟಿನಲ್ಲಿ ಒಂದು ಮಸೂದೆಯನ್ನು ಸರ್ಕಾರವು ಮಂಡಿಸುವುದಾಗಿ ಗೊತ್ತಾಗಿದೆ.

ಮಾಗಡಿಬಳಿ ಬಸ್ಸು ಅಪಘಾತ

೪ ಜನರ ಮರಣ ೨೩ ಜನಕ್ಕೆ ಗಾಯ

ಮಾಗಡಿಯಿಂದ ಬೆಂಗಳೂರಿಗೆ ಹೋಗುತ್ತಿದ್ದ ಬಸ್ಸೊಂದು ಮೊನ್ನೆಯದಿನ ಸಂಜೆ ಮರಳುಗೊಂಡಾ ಎಂಬ ಗ್ರಾಮದ ಬಳಿ ಸೇತುವೆಯ ಕೆಳಕ್ಕೆ ೧೪ ಅಡಿ ಎತ್ತರದಿಂದ ಮಗುಚಿಕೊಂಡು ೪ ಜನ ಸ್ಥಳದಲ್ಲಿಯೇ ಸತ್ತರು ೨೩ ಜನಕ್ಕೆ ಗಾಯವಾಗಿದೆ. ಅವರಲ್ಲಿ ೪ ಜನರ ಸ್ಥಿತಿ ತೀರಾ ಚಿಂತಾಜನಕವಾಗಿರುವುದಾಗಿ ಗೊತ್ತಾಗಿದೆ.

ಗಾಯಗೊಂಡವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲೆ ಮಾಡಲಾಗಿದೆ.

ಗೃಹಸಚಿವ ಶ್ರೀ ಸಿದ್ದವೀರಪ್ಪ ಮತ್ತು ಸೀನಿಯರ್ ಸರ್ಜನ್ ಡಾ|| ಬಿ. ಆರ್. ಆರ್. ರೆಡ್ಡಿಯವರು ಆಸ್ಪತ್ರೆ ಭೇಟಿಯಿತ್ತು ಗಾಯಗೊಂಡವರ ಯೋಗಕ್ಷೇಮ ವಿಚಾರಿಸಿದರು ಸತ್ತವರಲ್ಲಿ ಬಸ್ಸುಡ್ರೈವರೂ ಇರುವನೆಂದು ಗೊತ್ತಾಗಿದೆ.

ಇದೇ ಮಾಹೆ ೧೪ ನೇ ತಾ॥ ಕಾಶ್ಮೀರ ಅಧಿಪತಿಯ ಚುನಾವಣೆ

ಇದೇ ಮಾಹೆ ೧೪ ನೇ ತಾರೀಖು ಕಾಶ್ಮೀರ ಶಾಸನಸಭೆಯು ತನ್ನ ಪ್ರಾಂತ್ಯದ ಅಧಿಪತಿಯನ್ನು ಚುನಾಯಿಸಿಕೊಳ್ಳುವುದೆಂದು ಗೊತ್ತಾಗಿದೆ.

೧೦ ನೇ ತಾ॥ ರಾಜ್ಯಾಂಗಸಭೆಯು ಸೇರಿ ತನ್ನರಾಜ್ಯಾಂಗದಲ್ಲಿ ಈ ಚುನಾವಣೆ ಬಗ್ಗೆ ತಕ್ಕ ತಿದ್ದುಪಡಿಯನ್ನು ಮಾಡಿಕೊಳ್ಳುವುದು.

ಕಾಶ್ಮೀರಕ್ಕೆ ನೂತನ ಲಾಂಛನ

ಸೋಮವಾರ ನಡೆಯಲಿರುವ ಕಾಶ್ಮೀರ ರಾಜ್ಯಾಂಗ ಸಭೆಯು ಪ್ರಾಂತ್ಯದ ನೂತನ ಲಾಂಛನದ ಬಗ್ಗೆ ತೀರ್ಮಾನಿಸುವುದಾಗಿ ಗೊತ್ತಾಗಿದೆ.

ಭಿಕ್ಷುಕನ ಹಣದ ಅಪಹರಣಕ್ಕೆ ೨ ವರ್ಷ ಶಿಕ್ಷೆ

ದೆಹಲಿಯ ಕಿವುಡು ಮತ್ತು ಮೂಕ ಭಿಕ್ಷುಕನ ಬಳಿ ಇದ್ದ ಹಣವನ್ನು ಅಪಹರಿಸಲು ಆತನಿಗೆ ದತ್ತೂರ ಮಿಶ್ರ ಸಿಹಿ ತಿಂಡಿಯನ್ನು ಕೊಟ್ಟು ಹಣವನ್ನು ದೋಚಿಕೊಂಡು ಹೋದ ಯುವಕನೊಬ್ಬನಿಗೆ ೨ ವರ್ಷ ಕಠಿಣ ಶಿಕ್ಷೆ ವಿಧಿಸಲಾಗಿದೆ.

ಪಾರ್ಲಿಮೆಂಟ್ ಅಧಿವೇಶನ

ಪಾರ್ಲಿಮೆಂಟ್ ಅಧಿವೇಶನವು ಈದಿನದಿಂದ ದೆಹಲಿಯಲ್ಲಿ ಪ್ರಾರಂಭವಾಯಿತು.

ಕೌನ್ಸಿಲ್ಆಫ್‌ಸ್ಟೇಟ್ ಸಭೆಯು ಇದೇ ೨೪ ನೇ ತಾರೀಖಿನಿಂದ ಪ್ರಾರಂಭವಾಗುವುದು.

ಭಾರತದಲ್ಲಿ ಅಮೇರಿಕನ್ನರು

ನಿನ್ನೆ ಪ್ರಾರಂಭವಾದ ಅಮೇರಿಕ ಅಧ್ಯಕ್ಷ ಚುನಾವಣೆಯಲ್ಲಿ ಭಾರತದಲ್ಲಿರುವ ೪೧೨೨ ಅಮೇರಿಕನ್ ಪ್ರಜೆಗಳೂ ಸಹ ಮತನೀಡಲು ಅರ್ಹರು. ಇದರಲ್ಲಿ ದೆಹಲಿಯಲ್ಲಿಯೇ ೧೨೦೬ ಜನರಿರುವರು

ಕೈಮಗ್ಗದವರಿಗೆ ನೆರವು

ಮದ್ರಾಸ್ ಪ್ರಾಂತ್ಯದಲ್ಲಿ ಕೈಮಗ್ಗದವರಿಗೆ ನೆರವು ಕೊಡಲೋಸುಗ ಸಂಜೆ ಮತ್ತು ಬಣ್ಣದ ಸೀರೆಗಳ ತಯಾರಿಯನ್ನು ನಿಷೇಧಿಸಬೇಕೆಂದು ಸರ್ಕಾರವು ಮಂಡಿಸಿದ ನಿರ್ಣಯವನ್ನು ಶಾಸನಸಭೆಯು ಸರ್ವಾನುಮತದಿಂದ ಅಂಗೀಕಾರ ಮಾಡಿತು

ಗೋವಧೆ ನಿರೋಧ ಚಳುವಳಿ

ಮೈಸೂರು ೫

ಭಾರತಾದ್ಯಂತ ಗೋವಧೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯ ಪಡಿಸುವ ಬಗ್ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದವರು ಕೈಗೊಂಡಿರುವ ಚಳುವಳಿಗೆ ಮೈಸೂರಿನ ಜನರು ತನು, ಮನ, ಧನಗಳ ನೆರವನ್ನು ನೀಡಬೇಕೆಂದು ಶ್ರೀಗಳಾದ ಎಂ. ರಾಮಸ್ವಾಮಿ, ಜಿ. ಆರ್. ಜೋಯ್ಸರ್, ಟಿ. ಚನ್ನಕೇಶವಯ್ಯ, ಹೆಚ್. ಕೆ. ಕುಮಾರಸ್ವಾಮಿ, ಎಂ. ಎಗ್. ತಿಮ್ಮಯ್ಯ, ಬಿ. ಜಿ. ದಾಸ್ ಮುಂತಾದ ೧೪ ಮಂದಿ ಒಂದು ಮನವಿಯನ್ನು ಹೊರಡಿಸಿರುತ್ತಾರೆ.

ಸಮಾಜ ಶಿಕ್ಷಣ ದಿನಾಚರಣೆ

ರಾಜಧಾನಿಯ ಬನುಮಯ್ಯನವರ ಕಾಮರ್ಸ್ ಕಾಲೇಜ್ ಸಂಘದ ಆಶ್ರಯದಲ್ಲಿ ಮೊನ್ನೆದಿನ ಸಮಾಜ ಶಿಕ್ಷಣ ದಿನಾಚರಣೆಯು ಶ್ರೀ ಹೆಚ್.ಎಸ್. ಕೃಷ್ಣಸ್ವಾಮಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ಉಪಾಧ್ಯಾಯ ಕಾಲೇಜಿನ ಶ್ರೀ ಎ. ಶೇಷಯ್ಯಂಗಾರ್ಯರು ಸಮಾಜ ಶಿಕ್ಷಣ ಮತ್ತು ವಿದ್ಯಾರ್ಥಿಗಳು ಎಂಬ ವಿಷಯದಲ್ಲಿ ಭಾಷಣ ಮಾಡಿದರು.

ಬ್ರಿಟಿಷ್ ಪಾರ್ಲಿಮೆಂಟ್

ಬ್ರಿಟಿಷ್ ಪಾರ್ಲಿಮೆಂಟನ್ನು ನಿನ್ನೆಯ ದಿನ ರಾಣಿ ಎಲಿಜಬೆತ್‌ರವರು ಲಂಡನ್ನಿನಲ್ಲಿ ಉದ್ಘಾಟನೆ ಮಾಡಿದರು.

ಮೈಸೂರು ಪೇಟೆಧಾರಣೆ

ತಾರೀಖು ೪—೧೧—೫೨

	ಪಲ್ಲ ರೂ.	ಆ.	ರೂ.	ಆ
ಕಡಲೇಕಾಯಿ	೮. ೦		೨೧	೪
ಎಳ್ಳು	೬೬	೮	೬೨	೧೨
ಹರಳು	೩೯		೪೨	೪
ಹುರುಳಿ	೫೮		೫೮	೧೨
ಹೆಸರು	೫೫	೨	೫೬	೬
ಅಲಸಂದೆ	೬೮	೧೦		
ಉದ್ದು	೫೮		೮	
ಮೆ॥ ಕಾಯಿ	೬ ೧೪		೧೬	೮
ಸೀಗೇಕಾಯಿ	೫	೧		
ಬೆಲ್ಲ	೩	೪		
ತೆಂಗಿನಕಾಯಿ	೧೩೫		೨೧೩	

ಡಾ॥ಮೋದಿಯವರ ಉಚಿತ ನೇತ್ರ ಚಿಕಿತ್ಸಾಶಿಬಿರ

ಮಡಕೇರಿ ೩

ಮೇಲ್ಕಂಡ ಶಿಬಿರದ ಆಶ್ರಯದಲ್ಲಿ ನಡೆಯುತ್ತಿರುವ ಉಚಿತ ನೇತ್ರಶಸ್ತ್ರಚಿಕಿತ್ಸಾ ಶಿಬಿರದಲ್ಲಿ ಈ ದಿನವೂ ಸಹ ಬೆಳಗ್ಗಿಯಿಂದ ಸಂಜೆಯವರೆಗೂ ಸುಮಾರು ೪೫ ಕಣ್ಣಿನ ಆಪರೇಷನ್‌ಗಳು ನಡೆದುವು

ನಿನ್ನೆಯಿಂದ ಒಟ್ಟು ೧೨೩ ಆಪರೇಷನ್‌ಗಳಾಗಿವೆ. ವಿಶೇಷವಾದ ಆಪರೇಷನ್ ಎಂದರೆ ಒಂದು ಮೂರು ವರ್ಷದ ಹುಡುಗಿಗೆ ಹುಟ್ಟಿದಾರಭ್ಯ ಕಾಣದಂತಹ ಹುಟ್ಟು ಕುರುಡು ಆಪರೇಷನ್ ಮತ್ತು ಒಬ್ಬ ೧೨ ವರ್ಷದ ಬಾಲಕನಿಗೂ ಹುಟ್ಟು ಕುರುಡಿನ ಆಪರೇಷನ್ ನಡೆದಿದೆ ಎಲ್ಲಾ ರೋಗಿಗಳಿಗೂ ಆಹಾರೋಪಚಾರಗಳನ್ನು ಸಿವಿಲ್ ಆಸ್ಪತ್ರೆಯಲ್ಲಿಯೇ ಸಿವಿಲ್ ಸರ್ಜನರಾದ ಡಾ॥ ಮೇದಪ್ಪನವರು ನೇತೃತ್ವದಲ್ಲಿ ನಡೆಯುತ್ತಾ ಇವೆ ಕೊಡಗಿನ ಮುಖ್ಯ ಮಂತ್ರಿಗಳಾದ ಶ್ರಿ ಪೂಣಚಾರವರು, ಗೃಹ ಮಂತ್ರಿಗಳಾದ ಶ್ರಿ ಮಲ್ಲಪ್ಪನವರೂ ಕ್ಯಾಂಪಿಗೆ ಭೇಟಿಕೊಟ್ಟರು

ಸಿವಿಲ್ ಆಸ್ಪತ್ರೆಯಲ್ಲಿ ಸ್ಥಳವು ಭರ್ತಿಯಾಗಿ ಪಕ್ಕದಲ್ಲೇ ಇರುವ ಸೆಂಟಮೈಕಲ್ಸ್ ಸ್ಕೂಲ್‌ಹಾಲಿನಲ್ಲಿ ಸ್ಥಳ, ವಸತಿ ಏರ್ಪಡಿಸಲಾಗಿದೆ ಇಲ್ಲಿಯವರೆಗೂ ಶಿಬಿರದಲ್ಲಿ ಒಟ್ಟು ೯೯೦ ಜನ ನೇತ್ರ ರೋಗಿಗಳು ಚಿಕಿತ್ಸೆಗಾಗಿ ಬಂದಿರುತ್ತಾರೆ

ವಿದ್ವಾಂಸರಿಗೆ ಸನ್ಮಾನ

ಬೆಂಗಳೂರು ೫

ಸುಪ್ರಸಿದ್ಧ ಸಾಹಿತಿಗಳಾದ ಸಂಬಸಗೂಡು ಶ್ರೀ ಶ್ರೀಕಂಠಶಾಸ್ತ್ರಿ ಮತ್ತು ಸುಪ್ರಸಿದ್ಧ ವಿದ್ವಾಂಸರೂ ವೀರಶೈವ ಸಾಹಿತ್ಯ ಸಂಶೋಧಕರೂ ಆದ ಶ್ರೀ ವೀರಭದ್ರಪ್ಪ, ಬ, ಹಾಲಬಾವಿ, ಧಾರವಾಡರವರುಗಳನ್ನು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತು ಇದೇ ೯ ನೇ ತಾರೀಖು ಸನ್ಮಾನಿಸಲಿದೆ.

ಭಾರತಕ್ಕೆ ನಿಯೋಗ

ಸಿಂಹಳದಲ್ಲಿರುವ ಭಾರತೀಯರ ಪೌರತ್ವ ಭಾದ್ಯತೆ ಬಗ್ಗೆ ಭಾರತಕ್ಕೆ ವಿಷಯಗಳನ್ನೆಲ್ಲಾ ಸಮಗ್ರ ತಿಳಿಸಲೋಸುಗ ಸಿಂಹಳದಲ್ಲಿರುವ ಭಾರತೀಯ ಕಾಂಗ್ರೆಸ್ ಒಂದು ನಿಯೋಗವನ್ನು ಇಲ್ಲಿಗೆ ಸಧ್ಯದಲ್ಲೇ ಕಳುಹಿಸಲು ತೀರ್ಮಾನಿಸಿದೆ

ತಲಕಾಡಿನ ಪಂಚಲಿಂಗ ದರ್ಶನ ಯಾತ್ರೆ

ಟಿ. ನರಸೀಪುರ ತಾಲ್ಲೂಕು ತಲಕಾಡಿನಲ್ಲಿ ಇದೇ ೧೭ ನೇ ತಾರೀಖು ನಡೆಯುವ ಪಂಚಲಿಂಗದರ್ಶನದ ಯಾತ್ರೆ ಬಗ್ಗೆ ಶ್ರೀ ಟಿ. ಆರ್. ಸೀತಾರಾಮಶಾಸ್ತ್ರಿಯವರು ಪ್ರಕಟಿಸಿರುವ ಪುಸ್ತಕವು ನಮ್ಮ ಸನ್ನಿಗತವಾಗಿದೆ. ಗಜಾರಣ್ಯ ಕ್ಷೇತ್ರ, ವೈದ್ಯನಾಥೇಶ್ವರ ಮತ್ತು ತಲಕಾಡು ಎಂಬ ಹೆಸರುಗಳು ಬರಲು ಕಾರಣ, ಪಂಚಲಿಂಗಗಳ ಮಹಿಮೆ, ಯಾತ್ರಾಫಲ ಮುಂತಾದ ವಿವರಗಳನ್ನು ಪುಸ್ತಕದಲ್ಲಿ ಹೋಗುವ ಯಾತ್ರಿಕರಿಗೆ ತುಂಬಾ ಉಪಯೋಗವಾಗಿದೆ. ಬೆಲೆ ೬ ಆಣೆ.

ವರ್ಣಭೇಧ ಪಕ್ಷಪಾತ ಕೂಡದು

ವರ್ಣಭೇಧಕ್ಕಾಗಿ ಒಂದು ಜನತೆಗೂ ಮತ್ತೊಂದು ಜನತೆಗೂ ಯಾವರೀತಿಯಾದ ಪಕ್ಷಪಾತವೂ ಇರಕೂಡದೆಂಬ ನಿರ್ಣಯವನ್ನು ವಿಶ್ವಸಂಸ್ಥೆಯ ಟ್ರಸ್ಟಿಷಿಪ್ ಸಮಿತಿಯು ಅಂಗೀಕರಿಸಿದೆ.

ಸಶಸ್ತ್ರಡಕಾಯಿತರ ದಸ್ತಗಿರಿ

ಮೊನ್ನೆ ಅರ್ಧರಾತ್ರಿಯಲ್ಲಿ ಬೊಂಬಾಯಿನ ಥಾಕುರ್ ಧಾರ್ ಎಂಬಲ್ಲಿ ಸರಾಫ್ ಅಂಗಡಿಯೊಂದರಲ್ಲಿ ಕಳ್ಳತನ ಮಾಡಲು ಪ್ರಯತ್ನಿಸಿದ ೫ ಮಂದಿ ಶಸಸ್ತ್ರಧಾರಿಗಳನ್ನು ಪೋಲೀಸಿನವರು ಉಪಾಯವಾಗಿ ಹಿಡಿದಿದ್ದಾರೆ.

ಸಿ. ಐ. ಡಿ. ಇಲಾಖೆಯ ೧೦-೧೨ ಅಧಿಕಾರಿಗಳು ಮಧ್ಯರಾತ್ರಿಯಲ್ಲಿ ತಲೆಮರಿಸಿಕೊಂಡು ವಿವಿಧ ಉಡುಪಿನಲ್ಲಿ ಈ ಭಾಗದಲ್ಲಿ ಓಡಾಡುತ್ತಿದ್ದಾಗ ಒಂದು ಅಂಗಡಿ ಬಳಿ ಮೋಟಾರೊಂದು ಬಂದು ನಿಂತು ೫ ಜನ ಸಶಸ್ತ್ರಧಾರಿಗಳು ಅದರಿಂದ ಇಳಿದು ಸರಾಫ್ ಅಂಗಡಿಬಳಿ ಹೋದರು. ಕೂಡಲೇ ಪೋಲೀಸಿನವರು ಅವರನ್ನೆಲ್ಲಾ ದಸ್ತಗಿರಿಮಾಡಿ, ಅವರಲ್ಲಿದ್ದ ಆಯುಧ, ಮದ್ದು, ಗುಂಡು, ಮೋಟಾರು ಮುಂತಾದುವನ್ನು ವಶಪಡಿಸಿಕೊಂಡರು.

ಅಪೇರ ೩-೧೧-೫೨ ರಿಂದ ಆಮೋಘ ೩ನೇವಾರ

ಪ್ರತಿದಿನ ಮೂರು ಆಟಗಳು

* ಮಾಪಿಳ್ಳೈ *

ಪಾತ್ರ:— ಪಿ. ಕೆ. ಸರಸ್ವತಿ, ರಾಮಚಂದ್ರ

—: ಪ್ರಕಾಶಕರು ಮತ್ತು ಮುದ್ರಕರು: —

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 63

೬-೧೧-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಸೂಯೇಜ್ ಫಾರಂ ಯೋಜನೆ

ಕೇಂದ್ರದಿಂದ ೮೦ ಸಾವಿರ ರೂ. ಸಾಲ

ಮೈಸೂರು ೬

ನಿನ್ನೆ ಸಂಜೆ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆದ ಪುರಸಭಾಧಿವೇಶನದಲ್ಲಿ ಸೂಯೇಜ್‌ಫಾರಂ ಅಭಿವೃದ್ಧಿ ಯೋಜನೆಗಾಗಿ ಕೇಂದ್ರ ಸರ್ಕಾರದಿಂದ ೮೦ ಸಾವಿರ ರೂ ಸಾಲವನ್ನು ಪಡೆದು ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಸರ್ವಾನುಮತದಿಂದ ನಿರ್ಧರಿಸಲಾಯಿತು.

ಕೇಂದ್ರ ಸರ್ಕಾರದ ಸೂಯೇಜ್ ಅಭಿವೃದ್ಧಿ ಸಲಹಾಧಿಕಾರಿಗಳಾದ ಡಾ॥ ಕಲಾಟಿರವರು ಮೊನ್ನೆದಿನ ಇಲ್ಲಿನ ಸೂಯೇಜ್ ಫಾರಂಗೆ ಭೇಟಿಕೊಟ್ಟು ಅದರ ಅಭಿವೃದ್ಧಿಬಗ್ಗೆ ಒಂದು ಯೋಜನೆಯನ್ನು ಪುರಸಭೆಗೆ ಕೊಟ್ಟಿದ್ದರು.

ಅದರ ಪ್ರಕಾರ ೧೦೦ ಎಕರೆ ಫಾರಂಗೆ ಸೂಯೇಜ್ ನೀರನ್ನು ಸರಬರಾಜುಮಾಡಲು ತಕ್ಕ ಯಂತ್ರಸಾಧನೆ ಮತ್ತು ಇತರ ಸೌಲಭ್ಯಗಳಿಗಾಗಿ ಒಟ್ಟು ೮೦ ಸಾವಿರ ರೂ ಬೇಕಾಗುವುದೆಂದೂ, ಅದನ್ನು ಕೇಂದ್ರ ಸರ್ಕಾರದವರು ೮ ಕಂತಿನಲ್ಲಿ ತೀರಿಸುವ ಸಾಲವನ್ನು ಕೊಡಲು ಸಿದ್ಧರಿರುವರೆಂದೂ, ಈ ಯೋಜನೆಯನ್ನು ಕೈಗೊಂಡಲ್ಲಿ ಪ್ರತಿ ವರ್ಷವೂ ಸಾಲದ ಕಂತು ಮತ್ತು ಇತರ ಖರ್ಚು ಸೇರಿ ವರ್ಷಕ್ಕೆ ೨೦ ಸಾವಿರ ರೂ ವರಮಾನಬರುವುದೆಂದೂ ಅವರು ನಿನ್ನೆ ದಿನ ಪುರಸಭೆಯಲ್ಲಿ ಖುದ್ದಾಗಿ ತಿಳಿಸಿದರು.

ಅದರ ಮೇಲೆ ಅವರ ಯೋಜನೆಯನ್ನು ಕೈಗೊಳ್ಳಬೇಕೆಂದೂ, ಅದಕ್ಕಾಗಿ ಕೇಂದ್ರದಿಂದ ಸಾಲಪಡೆದು, ಕಂತಿನಲ್ಲಿ ತೀರಿಸಲು ಮೈಸೂರು ಸರ್ಕಾರದವರು ಅನುಮತಿ ಕೊಡಬೇಕೆಂದೂ ಪ್ರಾರ್ಥಿಸುವ ನಿರ್ಣಯವು ಶ್ರೀ ಎ ವೆಂಕಟೇಶಯ್ಯನವರಿಂದಮಂಡಿಸಲ್ಪಟ್ಟು ಅಂಗೀಕೃತವಾಯಿತು.

ಆದಿತ್ಯನ್ನರಿಗೆ ಉಚ್ಚಾಟನೆ

ಮದರಾಸಿನ ಶಾಸನಸಭೆಯ ಕೆ. ಎಂ. ಪಿ. ಪಕ್ಷದ ಸದಸ್ಯರಾದ ಶ್ರೀ ಎಸ್. ಬಿ ಆದಿತ್ಯನ್‌ರವರು ಪಕ್ಷದ ಶಿಸ್ತಿಗೆ ವಿರುದ್ಧವಾಗಿ ವರ್ತಿಸಿದರೆಂದು ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ.

ಭಾರತಾದ್ಯಂತ ಏಕೈಕ ಮಿಶ್ರ ಆಹಾರ ನಿರೋಧ ಕಾನೂನು

ಭಾರತಾದ್ಯಂತ ಒಂದೇ ರೀತಿಯಾದ ಮಿಶ್ರ ಆಹಾರ ನಿರೋಧ ಶಾಸನವನ್ನು ನಿರ್ಮಿಸಲು ಪಾರ್ಲಿಮೆಂಟಿನಲ್ಲಿ ಆಹಾರ ಸಚಿವರು ಒಂದು ಮಸೂದೆಯನ್ನು ಮಂಡಿಸಿದ್ದಾರೆ. ಈ ಶಾಸನವು ಭಾರತಾದ್ಯಂತ ಅಸ್ತಿತ್ವಕ್ಕೆ ಬರುತ್ತದೆ. ಈಗ ಕೆಲವು ರಾಜ್ಯ ಸರ್ಕಾರಗಳಲ್ಲಿ ಮಾತ್ರ ಈ ಶಾಸನವು ಜಾರಿಯಲ್ಲಿದೆ ಒಂದು ಪ್ರಾಂತ್ಯದ ಶಾಸನ ಮತ್ತೊಂದು ಪ್ರಾಂತ್ಯದ ಶಾಸನಗಳಲ್ಲಿ ಬದಲಾವಣೆಯಿದೆ ಅದನ್ನೆಲ್ಲಾ ಏಕೀಕರಿಸಿ ಹೊಸ ಶಾಸನವಾಗಲಿದೆ

ಮಿಶ್ರ ಆಹಾರ ಪರಿಶೋಧನೆಗಾಗಿ ಕೇಂದ್ರ ಸಮಿತಿಯನ್ನು ನೇಮಿಸಲಾಗುವುದು.

ಡಾ॥ ಮೋದಿಯವರ ನೇತ್ರ ಚಿಕಿತ್ಸಾ ಶಿಬಿರ

ಮಡಕೇರಿ ೪

ಮೇಲ್ಕಂಡ ಉಚಿತ ನೇತ್ರ ಚಿಕಿತ್ಸಾಶಿಬಿರದಲ್ಲಿ ಈದಿನ ೨೪ ಆಪರೇಷನ್‌ಗಳು ನಡೆದವು ಸಿವಿಲ್ ಆಸ್ಪತ್ರೆ, ಸೇಂಟ್ ಮೈಕಲ್ ಹೈಸ್ಕೂಲಿಗಳಲ್ಲೂ ಆಪರೇಷನ್ ಮಾಡಿ ಜಾಗ ಸಾಲದೆ ಕೊ-ಆಪರೇಟಿವ್ ಬ್ಯಾಂಕ್ ಮಹಡಿಯಮೇಲೆ ಆಪರೇಷನ್‌ಗಳನ್ನು ಮಾಡಲಾಯಿತು. ಇಲ್ಲಿಯವರೆಗೆ ೧೪೪ ಆಪರೇಷನ್‌ಗಳು ಆಗಿವೆ. ಪುನಃ ಸಾಯಂಕಾಲ ಸಿವಿಲ್ ಆಸ್ಪತ್ರೆಯಲ್ಲಿ ಸುಮಾರು ೧೫೦ ಜನರಿಗೆ ನೇತ್ರಪರೀಕ್ಷೆ ಮಾಡಿ ಉಚಿತ ಔಷಧಿ ಮತ್ತು ಸಲಹೆಯನ್ನು ಶ್ರೀ ಮೋದಿಯವರು ನೀಡಿದರು.

ಸ್ಟೂಡೆಂಟ್ಸ್ ವಾಲಿಬಾಲ್ ಕ್ಲಬ್

ಮೈಸೂರು ಸಿಟಿ ಜಲಪುರಿಯಲ್ಲಿ ಇದೇ ೨ ನೇ ತಾ॥ ಸಂಜೆ ಮೇಲ್ಕಂಡ ವಾಲಿಬಾಲ್ ಕ್ಲಬ್ಬನ್ನು ಶ್ರೀ ಎಂ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು ಕಾರ್ಯದರ್ಶಿ ಶ್ರೀ ಶಿ. ಶಿವನಂಜುರವರಿಂದ ಸ್ವಾಗತ ಭಾಷಣವಾದ ನಂತರ ಅಧ್ಯಕ್ಷರು ಮಾತನಾಡುತ್ತಾ ಸದರಿ ಕ್ಲಬ್ಬಿನ ಬೆಳವಣಿಗೆ ವಿಚಾರದಲ್ಲಿ ಆಟಗಾರರು ಪ್ರೋತ್ಸಾಹ ತೋರಿಸಬೇಕೆಂದು ತಿಳಿಸಿದರು. ಶ್ರೀ ಡಿ. ರಂಗರಾಜುರವರಿಂದ ವಂದನಾರ್ಪಣೆಯಾದನಂತರ ಸಭೆಯು ಮುಕ್ತಾಯವಾಯಿತು.

ನಗರದ ಆರೋಗ್ಯ ,ಮಂದಿ

ಮೈಸೂರು ನಗರದಲ್ಲಿ ಕಳೆದ ೫೧ ನೇ ನೇ ತಾ॥ ಅಂತ್ಯದ ೧೫ ದಿನಗಳ ಅವಧಿಯಲ್ಲಿ ೨ ಟೈಫಾಯಿಡ್ ಮತ್ತು ೨ ಡಿಫ್ತೀರಿಯಾ ಕೇಸುಗಳು ಮಂದಿಯಾಗಿದ್ದುವು. ಅದನ್ನು ತಡೆಗಟ್ಟಲು ೨೩೪ ಇನಾಕ್ಯುಲೇಷನ್ ಮಾಡಲಾಯಿತು ಯಾವ ಕಾಲರ, ಸಿಡುಬು, ಪ್ಲೇಗು ರೋಗಗಳ ಕೇಸುಗಳೂ ಮಂದಿಯಾಗಿಲ್ಲವೆಂದು ಪುರಸಭಾ ಆರೋಗ್ಯ ಇಲಾಖಾವರದಿಯು ತಿಳಿಸುತ್ತದೆ

ಬ್ರಿಟನ್ನಿನೊಡನೆ ಐಕರ ಮಾತುಕತೆ

ಅಮೇರಿಕದ ನೂತನ ಚುನಾಯಿತ ಅಧ್ಯಕ್ಷ ಐಸೆನ್‌ಹೋವರು ಅಧಿಕಾರ ವಹಿಸಿಕೊಳ್ಳುವ ಮುನ್ನ ಬ್ರಿಟನ್ನಿನ ವಿದೇಶಾಂಗ ಮಂತ್ರಿ ಈಡನ್‌ರೊಡನೆ ಬ್ರಿಟಿಷ್ ಡಾಲರ್ ಅಭಾವ ಮತ್ತು ವ್ಯಾಪಾರ ಅನುಕೂಲತೆಗಳ ವಿಚಾರದಲ್ಲಿ ಸ್ವದಲ್ಲಿಯೇ ಮಾತುಕತೆ ನಡೆಸುವರೆಂದು ಹೇಳಲಾಗಿದೆ.

ಕಾಂಗ್ರೆಸ್ ಅಧ್ಯಕ್ಷತೆ ನೆಹರೂಗೆ ಬೇಡವೇ

ಪ್ರಧಾನಿ ಸ್ಥಾನದಲ್ಲಿದ್ದು ವಿಶೇಷ ಕಾರ್ಯಗೌರವಗಳಿರುವಾಗ್ಗೆ ಇನ್ನೂ ಕಾಂಗ್ರೆಸ್ ಅಧ್ಯಕ್ಷರಾಗಿ ಮುಂದುವರಿಯಲು ಪ್ರಧಾನಿ ನೆಹರೂರವರು ಸಮ್ಮತಿಸಿಲ್ಲವೆಂದೂ ಹೇಳಲಾಗಿದೆ

ಹೀಗೆ ನೆಹರೂರವರು ಈ ಸ್ಥಾನವನ್ನು ನಿರಾಕರಿಸಿದರೆ ಮೌಲಾನಾ ಅಜಾದ್ ಅಥವ ಶ್ರೀ ಹರೇಕೃಷ್ಣ ಮೆಹತಾಬ್‌ರವರು ಅಧ್ಯಕ್ಷರಾಗುವರೆಂದು ಕಾಂಗ್ರೆಸ್ ವೃತ್ತಗಳಲ್ಲಿ ಹೇಳಲಾಗುತ್ತಿದೆ

ಭಾರತಕ್ಕೆ ಅಮೇರಿಕದ ಯುವಕರೈತರು

ನ್ಯೂಯಾರ್ಕ್ ಸಂಸ್ಥಾನದ ತರುಣ ರೈತರಾದ ಜಾನ್ ಬ್ರೂನ್ ಮತ್ತು ಡಿಲಾವೇರ್ ಸಂಸ್ಥಾನದ ವಾಗನ್‌ಫಾರ್ಸ್ ಎಂಬುವರು ಆರು ತಿಂಗಳು ಕಾಲ ಕಳೆಯಲು ಬರುವರು

ಇಂಟರ್ ನ್ಯಾಷನಲ್ ಫಾರ್ಮ್ ಯೂಥ್ ಎಕ್ಸ್‌ಚೇಂಜ್ ಸಂಸ್ಥೆಯವರು ಈ ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಈ ಯೋಜನೆಯ ಪ್ರಕಾರ ನೂರಾರು ಅಮೇರಿಕನ್ನರು ಆಗಲೇ ವಿದೇಶಗಳಲ್ಲಿದ್ದಾರೆ ಇತರ ೨೯ ದೇಶಗಳ ರೈತರು ಅಮೇರಿಕೆಗೆ ಬಂದಿದ್ದಾರೆ

ಕಾಶ್ಮೀರ ಪ್ರಶ್ನೆ ಇತ್ಯರ್ಥಕ್ಕೆ ಅಮೆರಿಕಾ - ಬ್ರಿಟನ್ ಹೊಸ ನಿರ್ಣಯ

ಕಾಶ್ಮೀರ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಅಮೇರಿಕಾ ಮತ್ತು ಬ್ರಿಟನ್ ರಾಷ್ಟ್ರಗಳು ವಿಶ್ವಸಂಸ್ಥೆಯಲ್ಲಿ ನಾಳೆ ನಡೆಯಲಿರುವ ಚರ್ಚೆಯಲ್ಲಿ ಒಂದು ಹೊಸ ಸಂಯುಕ್ತ ನಿರ್ಣಯವನ್ನು ಮಂಡಿಸಲಿರುವರೆಂದು ಗೊತ್ತಾಗಿದೆ ಅದರ ವಿವರಗಳು ಇನ್ನೂ ತಿಳಿದಿಲ್ಲ

ಭಾರತದಫ್ರೆಂಚ್ ಸ್ವಾಸ್ಥ್ಯಗಳ ಸಮಸ್ಯೆ

ಭಾರತದಲ್ಲಿರುವ ಫ್ರೆಂಚ್ ಸ್ವಾಸ್ಥ್ಯಗಳ ಸಮಸ್ಯೆಯನ್ನು ಬಗೆಹರಿಸಲು ಒಂದೇ ಒಂದು ಮಾರ್ಗವಿದೆಯೆಂದೂ, ಅದು ಅವುಗಳು ಭಾರತಕ್ಕೆ ಸೇರಲೇಬೇಕೆಂಬ ಆಧಾರದ ಮೇಲೆ ಚರ್ಚೆ ಮಾತ್ರ ನಡೆಸುವುದಾದರೆ ಅದಕ್ಕೆ ಭಾರತ ಸಿದ್ಧವಿದೆಯೆಂದೂ ಫ್ರೆಂಚ್ ಸರ್ಕಾರಕ್ಕೆ ತಿಳಿಸಿರುವುದಾಗಿ ಪ್ರಧಾನಿ ನೆಹರೂರವರು ಲೋಕ ಸಭೆಯಲ್ಲಿ ತಿಳಿಸಿರುತ್ತಾರೆ.

ಅಮೆರಿಕಾ ಉಪರಾಷ್ಟ್ರಾಧ್ಯಕ್ಷ

ಸೆನೆಟಾರ್ ರಿಚರ್ಡ್ ಎಂ. ನಿಕ್ಸಾರವರು ಅಮೇರಿಕದ ಉಪರಾಷ್ಟ್ರಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ

ಕೊರಿಯಾಕ್ಕೆ ಅಮೆರಿಕಾ ನೂತನ ಅಧ್ಯಕ್ಷ ಐಸೆನ್‌ಹೋವರ್ ಭೇಟಿ

ಮುಂದಿನ ಜನವರಿ ೨೦ನೇ ತಾರೀಖು ನೂತನ ಅಧ್ಯಕ್ಷ ಅಧಿಕಾರವನ್ನು ವಹಿಸಿಕೊಳ್ಳುವ ಮುನ್ನ ತಾವು ಕೊರಿಯಾಕ್ಕೆ ಭೇಟಿ ಕೊಡುವುದಾಗಿ ಹೇಳಿದ್ದಾರೆ. ಅಧ್ಯಕ್ಷರ ವಿಮಾನವನ್ನು ನೆನ್ನೆ ಹೊಸದಾಗಿ ಚುನಾಯಿತರಾದ ಜ|| ಐಸೆನ್‌ಹೋವರ್‌ರವರು ಉಪಯೋಗಿಸಬೇಕೆಂದು ಅಧ್ಯಕ್ಷ ಟ್ರೂಮನ್ನರ ಆಹ್ವಾನವನ್ನು ನಿರಾಕರಿಸಿದ್ದಾರೆ. ಮಿಲಿಟರಿ ವಿಮಾನದಲ್ಲಿ ಅವರು ಹೋಗುವುದಾಗಿ ತಿಳಿಸಿದ್ದಾರೆ.

ಮಾಜಿ ಪ್ರಧಾನಿಯ ದಸ್ತಗಿರಿ

ಪರ್ಷಿಯಾ ಮಾಜಿಪ್ರಧಾನಿ ಗವಾಮಿ ಸುಲ್ತಾನರವರನ್ನು ದಸ್ತಗಿರಿಮಾಡಲು ಪರ್ಷಿಯಾ ಮುಜ್ಲಿಸ್ ಸಭೆಯು ಸರ್ಕಾರಕ್ಕೆ ಅಧಿಕಾರ ಕೊಡುವ ಮಸೂದೆಯನ್ನು ಅಂಗೀಕರಿಸಿದೆ.

ಮುಖ್ಯಮಂತ್ರಿಗಳ ಸಮ್ಮೇಳನ

ಪಂಚವಾರ್ಷಿಕಯೋಜನೆಯ ವರದಿಯನ್ನು ಪೂರ್ಣಗೊಳಿಸಲೋಸುಗ ಎಲ್ಲಾ ಪ್ರಾಂತ್ಯದ ಮುಖ್ಯಮಂತ್ರಿಗಳ ಸಭೆಯೊಂದನ್ನು ಸದ್ಯದಲ್ಲೇ ಕರೆಯುವುದಾಗಿ ಪ್ರಧಾನಿ ನೆಹರೂ ತಿಳಿಸಿದ್ದಾರೆ.

ಸರ್ಕಾರದ ಕಾರ್ಯದರ್ಶಿಗೆ ಒಂದುರೂಪಾಯಿ ಸಂಬಳ

ರಾಜಾಸ್ಥಾನ ಸರ್ಕಾರದಲ್ಲಿ ರೆವಿನ್ಯೂ ಕಾರ್ಯದರ್ಶಿಯಾಗಿರುವ ಶ್ರೀ ತ್ರಿವಾಜಿಂದ್ ಎಲ್. ಷಾರವರು ಈ ವಾರದಲ್ಲಿ ತಮ್ಮ ಸ್ಥಾನದಿಂದ ನಿವೃತ್ತರಾಗಬೇಕಾಗಿದ್ದಿತು. ಆದರೆ ಪ್ರಾಂತ್ಯದಲ್ಲಿ ಇನ್ನೂ ಅನೇಕ ಭೂ ಸುಧಾರಣಾ ಕಾರ್ಯಗಳನ್ನು ನಡೆಸಬೇಕಾಗಿರುವುದರಿಂದ ಅವರ ಸೇವೆಯು ಅಗತ್ಯವಾಗಿ ಕಾಣಬಂದಿತು. ಈ ವಿಷಯವು ಅವರಿಗೆ ತಿಳಿದೊಡನೇ ಈ ಕಾರ್ಯಗಳೆಲ್ಲವೂ ಮುಗಿಯುವವರೆಗೆ ತಾವು ಕೆಲಸದಲ್ಲಿರುವುದಾಗಿಯೂ ಆದರೆ ಮಾಹೆಯಾನಾ ಹೆಸರಿಗೆ ಮಾತ್ರಕ್ಕೆ ಒಂದುರೂಪಾಯಿ ಪಡೆಯುವುದಾಗಿ ತಿಳಿಸಿದ್ದಾರೆ. ಅವರು ೧೬೦೦ ರೂ ಸಂಬಳ ಪಡೆಯುತ್ತಿದ್ದಾರೆ.

ಸಕ್ಕರೆಮೇಲೆ ಹೊಸ ತೆರಿಗೆ

೫೩-೫೪ನೇ ಸಾಲಿನಲ್ಲಿ ಸಕ್ಕರೆ ಮೇಲೆ ಹೊಸ ತೆರಿಗೆ ವಿಧಿಸುವ ಮಸೂದೆಯನ್ನು ನೆನ್ನೆಯದಿನ ಹಣಕಾಸಿನ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ಪಾರ್ಲಿಮೆಂಟ್ ಅಧಿವೇಶನದಲ್ಲಿ ಮಂಡಿಸಿದರು. ಮಣ ಒಂದಕ್ಕೆ ಒಂದು ರೂ ತೆರಿಗೆಯನ್ನು ವಿಧಿಸಲು ಈ ಮಸೂದೆಯು ಸರ್ಕಾರಕ್ಕೆ ಅನುಮತಿ ನೀಡುತ್ತದೆ.

ಶಸ್ತ್ರಾಸ್ತ್ರಗಳು ಸರ್ಕಾರಕ್ಕೆ

ಹೈದರಾಬಾದಿನ ಶಾಸನಸಭೆಯ ಕಮ್ಯೂನಿಸ್ಟ್ ಪಕ್ಷದ ಸದಸ್ಯ ಶ್ರೀ ಎ.ಎಲ್. ನರಸಿಂಹ ರೆಡ್ಡಿ ಎಂಬುವವರು ತಮ್ಮಲ್ಲಿದ್ದ ೧೧ ವಿವಿಧ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ಒಪ್ಪಿಸಿದ್ದಾರೆ. ಇವರಲ್ಲಿ ಇಟಾಲಿಯನ್ ರೈಫಲ್ ಗಳಿವೆಯೆಂದು ಗೊತ್ತಾಗಿದೆ.

ಮೇವಿನ ಅಭಾವದಿಂದ ಜಾನುವಾರು ಮರಣ

ನೀರಿನ ಮತ್ತು ಮೇವಿನ ಅಭಾವದಿಂದ ಸೆಪ್ಟಂಬರ್ ಮಾಹೆಯೊಂದರಲ್ಲೇ ೨೪೪೪೩ ದನಗಳು ಆಹಾರವಿಲ್ಲದೆ ಕೋಲಾರ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಸತ್ತಿರುವುದಾಗಿ ಹೇಳಲಾಗಿದೆ.

ಮೈಸೂರು ಪೇಟೆಧಾರಣೆ

ತಾರೀಖು ೫-೧೧-೫೨

ಪಲ್ಲ	ರೂ.	ಆ.	ರೂ.	ಆ
ಕಡಲೇಕಾಯಿ	೯	೦	೧೮	೧೪
ಎಳ್ಳು	೬೬	೬	೬೩	೧೩
ಹರಳು	೪೦		೪೩	೨
ಹುರುಳಿ	೫೬	೧೪	೫೮	೦
ಹೆಸರು	೫೫	೮	೫೬	೬
ಅಲಸಂದೆ	೫೫	೮	೬೮	೧೪
ಹುಚ್ಚೆಳ್ಳು	೫೧	೦		
ಹೊಂಗೆಬೀಜ	೧೫	೧೨		
ಉಪ್ಪು				
ಮೆ|| ಕಾಯಿ	೯	೦	೧೨	೮
ಸೀಗೇಕಾಯಿ	೫	೫		
ಬೆಲ್ಲ	೩	೪		
ತೆಂಗಿನಕಾಯಿ	೧೩೧		೨೦೬	

ಅಮೆರಿಕಾ ಅಧ್ಯಕ್ಷಸ್ಥಾನ

ಅಮೆರಿಕಾದ ೩೪ನೇ ಅಧ್ಯಕ್ಷರಾಗಿ ಜನರಲ್ ಐಸೆನ್‌ಹೋವರವರು ಚುನಾಯಿತರಾದರು ಇವರು ಜನವರಿ ೩೦ ನೇ ತಾರೀಖು ಅಧಿಕಾರ ವಹಿಸಿಕೊಳ್ಳುತ್ತಾರೆ ಫಲಿತಾಂಶ ತಿಳಿದೊಡನೆಯೇ ಇವರ ಪ್ರತಿಸ್ಪರ್ಧಿಯಾಗಿದ್ದ ಸ್ಟೀವನ್‌ಸನ್‌ರವರು ಟೆಲಿವಿಷನ್ ಬ್ರಾಡ್ ಕಾಸ್ಟ್ ಮೂಲಕ ತಮ್ಮ ಸೋಲನ್ನು ಒಪ್ಪಿಕೊಂಡರು. ಜನರು ತಮಗಿಷ್ಟಬಂದವರನ್ನು ಆರಿಸಿಕೊಂಡಿದ್ದಾರೆ ಆ ತೀರ್ಪಿಗೆ ತಲೆಬಾಗುತ್ತೇನೆ-ಎಂದು ಅವರು ಹೇಳಿದರು.

...ಜಿ ... ಗಳಿಸಿದ ಐಸೆನ್‌ಹೋವರ್‌ರವರಿಗೆ ಅಭಿನಂದನಾ ಸಂತಿಯನ್ನು ಕಳುಹಿಸಿದರು. ಜನರ ತೀರ್ಪು ಬಂದೊಡನೆಯೇ ನಮ್ಮ ಭಿನ್ನತೆಗಳನ್ನು ಮರೆಯುವುದು ಸಂಪ್ರದಾಯ ನನ್ನ ಸಹಕಾರ ಪೂರ್ಣವಾಗಿ ಐಸೆನ್‌ಹೋವರಿಗಿದೆ ಎಂದು ... ರು ಹೇಳಿರುವರು.

ಐಸೆನ್ ಹೋವರರವರು ಶಾಂತಿ ರಕ್ಷಕರೂ ಆಗಿ ದುರಾಕ್ರಮಣವಾದ ಕಣಿವೆ, ಆಕ್ರಮಣ ... ಮೂಲಕ ... ಎಂದು ಅವರು ತಮ್ಮ ... ಯಲ್ಲಿ ಐಸೆನ್ ಹೋವರ್‌ರವರಿಗೆ ತಿಳಿಸಿದ್ದಾರೆ.

ಐಸೆನ್ ಹೋವರ್‌ರವರಿಗೆ ೩೦ ಮಿಲಿಯನ್ ಸ್ಟೀವನ್‌ಸನ್ ರವರಿಗೆ 24 ಮಿಲಿಯನ್ ಪ್ರಜಾ ಓಟುಗಳು ಬಂದಿವೆ.

ಅಮೆರಿಕಾ ಅಧ್ಯಕ್ಷ ಚುನಾವಣಾ ಚರಿತ್ರೆಯಲ್ಲಿ ಈಗ ಐಸೆನ್‌ಹೋವರ್‌ರವರಿಗೆ ಬಂದಿರುವಷ್ಟು ಓಟುಗಳು ಹಿಂದೆ ಯಾವ ಅಧ್ಯಕ್ಷನಿಗೂ ಬಂದಿರಲಿಲ್ಲವೆಂದು ಹೇಳಲಾಗಿದೆ.

ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷ ಸಭೆ

ಪಾರ್ಲಿಮೆಂಟಿನಲ್ಲಿರುವ ಕಾಂಗ್ರೆಸ್ ಪಕ್ಷದ ಸಭೆಯು ನಿನ್ನೆಯದಿನ ದೆಹಲಿಯಲ್ಲಿ ನಡೆಯಿತು ಪ್ರಧಾನಿ ನೆಹರೂರವರು ದೇಶದ ಆಹಾರ ಪರಿಸ್ಥಿತಿ ಮುಂತಾದ ವಿಷಯಗಳನ್ನು ಅಲ್ಲಿ ವಿವರಿಸಿದರೆಂದು ಗೊತ್ತಾಗಿದೆ.

ಮೈಸೂರಿಗೆ ಜಯ

ರಾಷ್ಟ್ರೀಯ ಫುಟ್‌ಬಾಲ್ ಕ್ವಾರ್ಟರ್ ಫೈನಲ್ಸ್ ನಲ್ಲಿ ಮೈಸೂರು ಬೊಂಬಾಯನ್ನು ೨-೧ ಗೋಲುಗಳಿಂದ ನಿನ್ನೆ ಸೋಲಿಸಿತು.

ಈದಿನ ಮೈಸೂರು ಪಂಗಡವು ಒರಿಸ್ಸಾ ಪಂಗಡದೊಡನೆ ಸೆಮಿ ಫೈನಲ್ ಆಟವಾಡುತ್ತದೆ.

ಬೆಂಗಳೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು

ಬೆಂಗಳೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರನ್ನಾಗಿ ಅಲ್ಲಿಯ ಕಾರ್ಪೊರೇಷನ್ ಇಂಜನಿಯರ್ ಶ್ರೀ ಆರ್. ಮಾಧವನ್ ರವರನ್ನು ಸರ್ಕಾರವು ನೇಮಿಸಿದೆ.

ಷಷ್ಟ್ಯಬ್ಧಿಪೂರ್ತಿ ಸಮಾರಂಭ

ಶೃಂಗೇರಿ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತೀಸ್ವಾಮಿಗಳ ಷಷ್ಟ್ಯಬ್ಧಿಪೂರ್ತಿಶಾಂತಿ ಮಹೋತ್ಸವವು ೧೯೫೩ನೇ ಫೆಬ್ರವರಿಯಲ್ಲಿ ೧೧ ದಿನಗಳ ಕಾಲ ನಡೆಯುವುದಾಗಿ ಗೊತ್ತಾಗಿದೆ.

ರಾಜಕಮಲ್, ಮೈಸೂರು
7—11—52 ರಿಂದ ಪ್ರಾರಂಭ
ಪ್ರತಿದಿನ 3 ಆಟಗಳು
ಸಾಧನವರ:— [ತೆಲುಗು ಚಿತ್ರ]
ಸಂಸಾರಂ
ಭೂಮಿಕೆ:—ಲಕ್ಷ್ಮಿರಾಜ್ಯಂ. ಪುಷ್ಪಲತ, ಎನ್. ಟಿ. ರಾಮರಾವ್, ನಾಗೇಶ್ವರರಾವ್, ರೇಲಂಗಿ.

★ ವುಡ್‌ಲ್ಯಾಂಡ್ಸ್ ★
ತಾ|| 7—11—52 ರಿಂದ
ಪ್ರತಿದಿನ 3 ಪ್ರದರ್ಶನಗಳು
ಅಮೋಘ 3 ನೇ ವಾರ
ರಂಗೀಲಿ ಹಿಂದಿ
ಪಾತ್ರ:—ರೆಹನಾ, ಯಾಕೂಬ್, ರಾಜ್‌ಕುಮಾರ್.

ಪ್ರಭಾ ೭-೧೧-೫೨ ರಿಂದ
ಅಮೋಘ ಪ್ರಾರಂಭ
ದಿನವಹಿ ಮೂರು ಆಟಗಳು
ಪೀಪಲ್ಸ್ ಆರ್ಟ್ ಪ್ರೊಡಕ್ಷನ್ಸ್‌ರವರ ಅತ್ಯುತ್ತಮ ತೆಲುಗುಚಿತ್ರ.
ಪಲ್ಲೆಟೂರು
(ಹಳ್ಳಿ)
ಭೂಮಿಕೆ: ಎನ್. ಟಿ. ರಾಮರಾವ್
[ಪಾತಾಳಭೈರವಿ ಪ್ರಖ್ಯಾತಿ], ಸಾವಿತ್ರಿ, ರಂಗರಾವ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 64

೭-೧೧-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಐಸನ್ ಹೋವರರಿಗೆ ಸಿಂಗ್‌ಮನ್ ರೀ ಆಹ್ವಾನ

ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್‌ಮನ್ ರೀಯವರು ತಮ್ಮ ದೇಶಕ್ಕೆ ಭೇಟಿ ಕೊಡಬೇಕೆಂದು ಅಮೇರಿಕಾ ಅಧ್ಯಕ್ಷರಾಗಿ ಚುನಾಯಿತರಾಗಿರುವ ಜನರಲ್ ಐಸೆನ್ ಹೋವರ್‌ರವರನ್ನು ಆಹ್ವಾನಿಸಿದ್ದಾರೆ. ಈ ಆಹ್ವಾನಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಾ, ಜ|| ಐಸೆನ್‌ಹೋವರ್‌ರವರು ಅಂಗೀಕರಿಸಿದ್ದಾರೆ.

ಮೋಸದಿಂದ ಮನಿಯಾರ್ಡರ್ ಪಡೆದವರ ದಸ್ತಗಿರಿ

ಮೈಸೂರು ೭

ರಾಜಧಾನಿಯಲ್ಲಿ ಕಳೆದ ೮ ನೇ ತಾರೀಖು ಇನ್ಸ್‌ಪೆಕ್ಟರ ಹೆಸರಿಗೆ ಬಂದ ೫೦೦ ರೂ. ಮನಿಯಾರ್ಡರು ಹಣವನ್ನು ಮೋಸದಿಂದ ಪಡೆದ ದಾವಣಗೆರೆಯ ವರ್ತಕರಾದ ಶ್ರೀ ಚೆನ್ನಪ್ಪರಾಯರ ಮಗನೆಂದು ತಿಳಿಸಿರುವ ಕೃಷ್ಣಾಜಿರಾವ್ ಎಂಬುವವನನ್ನು ಬೆಂಗಳೂರು ಪೋಲೀಸರು ದಸ್ತಗಿರಿ ಮಾಡಿ ಆತನನ್ನು ರಾಜಧಾನಿಯ ಪೋಲೀಸರ ವಶಕ್ಕೆ ಒಪ್ಪಿಸಿದ್ದಾರೆ ಈಗ ಆ ವ್ಯಕ್ತಿಯ ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಈ ಪ್ರಸಂಗದ ವಿವರವು, ಆ ರೀತಿ ಇದೆ ರಾಜಧಾನಿಯ ಇಂದ್ರಭವನ್ ಹೋಟೆಲಿನಲ್ಲಿ ಶಿವಮೊಗ್ಗ ವರ್ತಕರ ಮಗ ಶ್ರೀ ಬಿ.ವಿ. ನಾಗಯ್ಯ ಎಂಬುವರು ಇಳಿದುಕೊಂಡಿದ್ದರು. ಅವರ ಪಕ್ಕದ ರೂಮಿನಲ್ಲಿ ದಾವಣಗೆರೆಯ ಕೃಷ್ಣಾಜಿರಾವ್ ಎಂಬುವನು ಇಳಿದು ಕೊಂಡಿದ್ದನೆಂದೂ, ಆತನು ಶ್ರೀ ಬಿ.ವಿ. ನಾಗಣ್ಣನವರು ಕಳುಹಿಸಿದ ಹಾಗೆ ಒಂದು ತಂತಿಯನ್ನು ಶಿವಮೊಗ್ಗದ ಅವರ ತಂದೆಗೆ ಕಳುಹಿಸಿ, ೫೦೦ ರೂ ತಕ್ಷಣ ಬೇಕೆಂದೂ ಮಾಡರ್ನ್ ಕೆಫೆ ಹೋಟೆಲ್ ಅಡ್ರಸ್ಸಿಗೆ ಕಳುಹಿಸಬೇಕೆಂದೂ ತಿಳಿಸಿದ್ದರೆಂದೂ, ಅದರ ಮೇಲೆ ಹಣವನ್ನು ತಂತೀ ಮನಿಯಾರ್ಡರು ಮೂಲಕ ಶಿವಮೊಗ್ಗೆ ವರ್ತಕರು ಕಳುಹಿಸಿದರೆಂದೂ ಹೇಳಲಾಗಿದೆ. ಕೃಷ್ಣಾಜಿರಾವ್ ಎಂಬಾತನು ಆ ಹಣವನ್ನು ತಾನೇ ನಾಗಣ್ಣನೆಂದು ಹೇಳಿ ಹಣವನ್ನು ಪಡೆದು ಪರಾರಿಯಾಗಿದ್ದನೆಂದೂ ಪೋಲೀಸರಿಗೆ ಮಾಹಿತಿಯಾಗಿತ್ತು.

ನಾಗಣ್ಣನವರು ಶಿವಮೊಗ್ಗಕ್ಕೆ ವಾಪಸು ಹಿಂತಿರುಗಿದಾಗ, ಅವರು ಆ ರೀತಿ ಹಣಕ್ಕಾಗಿ ತಂತೀ ಕಳುಹಿಸಿಲ್ಲವೆಂದೂ, ಆ ಹಣವನ್ನು ಅವರು ಪಡೆಯಲಿಲ್ಲವೆಂದೂ ತಿಳಿದ ಮೇಲೆ ಪೋಲೀಸರಿಗೆ ದೂರು ಬಂದಿತ್ತು.

ಎ. ಐ. ಸಿ. ಸಿ. ಚುನಾವಣೆ

ಕೃಷ್ಣರಾಜನಗರದಿಂದ ಎ. ಐ. ಸಿ. ಸಿ. ಚುನಾವಣೆಗೆ ಶ್ರೀ ಎನ್. ಶ್ರೀಕಂಠಶೆಟ್ಟರು ತಮ್ಮ ಉಮೇದುವಾರಿಕೆಯನ್ನು ವಾಪಸ್ಸು ಪಡೆದುದರಿಂದ ಶ್ರೀ ಎಂ. ಎಲ್. ನಂಜರಾಜೇ ಅರಸಿನವರು ಅವಿರೋಧವಾಗಿ ಚುನಾಯಿತರಾದರು.

ಮೈಸೂರಿನಲ್ಲಿ ಮೂಲಶಿಕ್ಷಣ ಗೋಷ್ಠಿ

ಮೈಸೂರು ೭

ಕೇಂದ್ರ ಸರ್ಕಾರದ ಆಶ್ರಯದಲ್ಲಿ ಮುಂದಿನ ಮಾರ್ಚಿ ತಿಂಗಳಿನ ಮೊದಲನೇ ವಾರದಲ್ಲಿ ಚಿತ್ರ ಮತ್ತು ಮೂಲಶಿಕ್ಷಣ ವಿಚಾರ ಗೋಷ್ಠಿಯು ರಾಜಧಾನಿಯಲ್ಲಿ ನಡೆಯುವುದು ಈಸಂಬಂಧದಲ್ಲಿಯುಯುನೆಸ್ಕೋಸಂಸ್ಥೆಯ ಪ್ರವೀಣರೂ ಮತ್ತು ಗೋಷ್ಠಿಯ ಮೇಲ್ವಿಚಾರಕರೂ ಆದ ಕೆನಡಾದ ಮಿ|| ನಾರ್ಮನ್ ಮೆಕ್‌ಲಾರೆನ್‌ರವರು ಮೊನ್ನೆ ರಾಜಧಾನಿಗೆ ಆಗಮಿಸಿ ವಯಸ್ಕರ ಶಿಕ್ಷಣ ಸಮಿತಿಯವರೊಡನೆ ಮಾತುಕತೆ ನಡೆಸಿದರು.

ಕೊರಿಯಾ ಯುದ್ಧ ವಿಶ್ವ ಸಂಸ್ಥೆಗೆ ಸೇರಿದ ಪ್ರಶ್ನೆ

ಅಮೇರಿಕಾಧ್ಯಕ್ಷರಾಗಿ ಚುನಾಯಿತರಾಗಿರುವ ಜನರಲ್ ಐಸೆನ್‌ಹೋವರ್‌ರ ಕೊರಿಯಾ ಭೇಟಿಯ ಬಗ್ಗೆ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಮಿ|| ಈಡನ್‌ರವರು ಪ್ರಸ್ತಾಪಿಸಿ ಜನರಲ್ ಐಸೆನ್‌ಹೋವರು ಕೊರಿಯಾಕ್ಕೆ ಅಮೇರಿಕಾಧ್ಯಕ್ಷರಾಗಿ ಹೋಗುತ್ತಾರೆ ಆದರೆ ಕೊರಿಯಾ ಯುದ್ಧವು ವಿಶ್ವಸಂಸ್ಥೆಗೆ ಸೇರಿದ ಪ್ರಶ್ನೆಯೆಂದು ಎಲ್ಲರೂ ತಿಳಿಯಬೇಕೆಂದು ಹೇಳಿದ್ದಾರೆ.

ಅಣೆಕಟ್ಟು ಕಟ್ಟಲು ಖೈದಿಗಳ ನೆರವು

ಉತ್ತರ ಪ್ರದೇಶದಲ್ಲಿ ಚಂದ್ರಪ್ರಭಾ ಎಂಬ ಅಣೆಕಟ್ಟನ್ನು ಕಟ್ಟಲು ಪ್ರಾಂತ್ಯದ ನಾನಾ ಸೆರೆಮನೆಗಳಲ್ಲಿರುವ ಸುಮಾರು ೨೦೦೦ ಮಂದಿ ಖೈದಿಗಳ ಸಹಾಯದಿಂದ ಕೆಲಸ ಪ್ರಾರಂಭವಾಗಲಿದೆ. ಈ ಅಣೆಕಟ್ಟಿನ ವೆಚ್ಚವು ೬೭ ಲಕ್ಷ ರೂಗಳ ಅಂದಾಜಾಗಿದೆ

ಸಿಂಹಳ ನೀತಿಯ ಬಗ್ಗೆ ಭಾರತದ ನಿರಾಶೆ

ಸಿಂಹಳದಲ್ಲಿರುವ ಭಾರತೀಯರ ಪೌರಹಕ್ಕಿನ ಬಗ್ಗೆ ಅಲ್ಲಿಯ ಸರ್ಕಾರವು ಇತ್ತೀಚೆಗೆ ತಂದಿರುವ ಶಾಸನ ತಿದ್ದುಪಡಿಯ ಬಗ್ಗೆ ಭಾರತ ಸರ್ಕಾರವು ತನ್ನ ನಿರಾಶೆ ಮತ್ತು ಅಸಮಾಧಾನವನ್ನು ವ್ಯಕ್ತಪಡಿಸಿ ದೆಹಲಿಯಲ್ಲಿರುವ ಸಿಂಹಳ ಹೈ ಕಮೀಷನರಿಗೆ ಒಂದು ಪತ್ರವನ್ನು ಸಲ್ಲಿಸಿದೆ. ಈ ತಿದ್ದುಪಡಿಯಿಂದ ಭಾರತೀಯರಿಗೆ ಇನ್ನೂ ತೊಂದರೆಯಾಗಿ ಅವರ ಹಕ್ಕನ್ನು ಮಿತಿಗೊಳಿಸುತ್ತದೆ ಎಂದು ತಿಳಿಸಲಾಗಿದೆ.

ಡಾ|| ಮೋದಿಯವರ ಅದ್ಭುತಸೇವಾ ಪ್ರಶಂಸೆ

ಮಡಕೇರಿ ೫

ಇದೇ ಅಕ್ಟೋಬರ್ ೩೧ ನೇ ತಾರೀಖಿನಿಂದ ಪ್ರಾರಂಭವಾದ ಡಾ|| ಮೋದಿಯವರ ಉಚಿತ ನೇತ್ರಚಿಕಿತ್ಸಾ ಶಿಬಿರದಲ್ಲಿ ಇಲ್ಲಿಯವರೆಗೂ ೧೫೦೦ ಜನರಿಗಿಂತಲೂ ಮಿಗಿಲಾಗಿ ನೇತ್ರ ಪರೀಕ್ಷೆಯು ನಡೆಯಿತು. ಈ ದಿನ ಸಂಜೆ ಸರ್ಕಾರಿ ಗೆಸ್ಟ್‌ಹೌಸಿನಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಪೂಣಚ್ಚಾರವರು ಡಾ|| ಮೋದಿಯವರನ್ನು ಅವರ ಗೌರವ ಕಾರ್ಯದರ್ಶಿಗಳಾದ ಭದ್ರಾವತಿ ಸುಬ್ಬರಾಯರನ್ನು ಅವರ ಸಿಬ್ಬಂದಿಯನ್ನು ಆಹ್ವಾನಿಸಿ ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು.

ರಷ್ಯಾಕ್ಕೆ ಭಾರತದ ಶುಭಾಶಯ

ಇಂದು ಮತ್ತು ನಾಳೆ ರಷ್ಯಾದಲ್ಲಿ ನಡೆಯಲಿರುವ ಅಕ್ಟೋಬರ್ ಮಹಾಕ್ರಾಂತಿಯ ವಾರ್ಷಿಕೋತ್ಸವ ಸಂದರ್ಭದಲ್ಲಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್ ಮತ್ತು ಪ್ರಧಾನಿ ನೆಹರೂರವರು ರಷ್ಯಾ ಅಧ್ಯಕ್ಷ ಪ್ರಧಾನಿ ಮತ್ತು ಜನತೆಗೆ ಭಾರತದ ಶುಭಾಶಯಗಳನ್ನು ಕಳುಹಿಸಿದ್ದಾರೆ.

ಮೈಸೂರಿಗೆ ನೈಜೀರಿಯ ನಿಯೋಗ

ನೈಜೀರಿಯಾದಿಂದ ಸೌಹಾರ್ದ್ಯ ನಿಯೋಗವೊಂದು ಸದ್ಯದಲ್ಲೇ ಮೈಸೂರಿಗೆ ಆಗಮಿಸುವುದಾಗಿ ಗೊತ್ತಾಗಿದೆ. ಈ ನಿಯೋಗವು ಮದ್ರಾಸ್, ದೆಹಲಿ, ನಾಗಪುರ ಮುಂತಾದ ನಾನಾ ಭಾಗಗಳಿಗೂ ಭೇಟಿಕೊಡಲಿದೆ.

ಬಡವಿದ್ಯಾರ್ಥಿ ನಿಧಿಗೆ ಸಚಿವರ ಸಹಾಯ

ಮೈಸೂರು ೭

ಮಹಾರಾಜಾ ಕಾಲೇಜಿನ ಹಳೇ ವಿದ್ಯಾರ್ಥಿ ಸಂಘದ ಸಭೆಯು ಸಚಿವ ಶ್ರೀ ಎ.ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆದು, ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು ಶಿಕ್ಷಣ ವೇತನ ಮುಂತಾದ ಸೌಲಭ್ಯಗಳನ್ನು ಪಡೆದಿದ್ದ ವಿದ್ಯಾರ್ಥಿಗಳು ಈಗ ಆ ಹಣವನ್ನು ವಾಪಸುಮಾಡಬೇಕೆಂದೂ, ಅದರಿಂದ ಈಗ ನಿಧಿ ಏರ್ಪಡಿಸಿ, ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂದೂ ನಿರ್ಧರಿಸಲಾಯಿತು. ಈ ಸಂಬಂಧದಲ್ಲಿ ಸಚಿವ ಶ್ರೀ ರಾಮಚಂದ್ರರಾಯರು ತಿಂಗಳಿಗೆ ೬೦ ರೂ.ಗಳಂತೆ ಎರಡು ಕಂತುಗಳನ್ನು ಈ ನಿಧಿಗೆ ಕೊಟ್ಟರೆಂದೂ ತಿಳಿದುಬಂದಿದೆ.

ಪ್ರತಿ ವರ್ಷವೂ ಇನ್ನು ಮುಂದೆ ಕಾಲೇಜ್ ದಿನಾಚರಣೆಯನ್ನು ನಡೆಸಬೇಕೆಂದೂ ತೀರ್ಮಾನಿಸಲಾಯಿತು

ಸ್ಥಳೀಯ ಸಚಿವರ ಪ್ರವಾಸ

ಸ್ಥಳೀಯ ಸಚಿವರಾದ ಶ್ರೀ ಟಿ. ಚನ್ನಯ್ಯನವರು ಇದೇ ೮ ನೇ ತಾರೀಖಿನಿಂದ ನಂಜನಗೂಡು, ಚಾಮರಾಜನಗರ, ಮಂಡ್ಯ, ಟಿ ನರಸೀಪುರ, ತಲಕಾಡು, ಹೆಗ್ಗಡದೇವನಕೋಟೆ ಮತ್ತು ಸರಗೂರುಗಳಲ್ಲಿ ಪ್ರವಾಸಮಾಡುವರು.

ಹಣದದುರುಪಯೋಗಕ್ಕಾಗಿ ಮೊಕದ್ದಮೆ

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಯ ... ವರ್ಡ್ ಆಗಿದ್ದ ಬಿ. ಜಿ. ಸುಬ್ರಹ್ಮಣ್ಯಂ ಮತ್ತು ಗುಮಾಸ್ತರಾಗಿದ್ದ ಶ್ರೀ ಚಂದರಾಜ್ ಎಂಬುವರು ೧೯೪೮ ನೇ ಆಗಸ್ಟ್ ೨೮ ನೇ ತಾರೀಖಿನಿಂದ ೧೯೪೯ ನೇ ಜನವರಿ ೨೭ ನೇ ತಾರೀಖಿನ ವರೆಗೆ ಆಸ್ಪತ್ರೆಯ ಸುಮಾರು ೧೫೦೦ ರೂ ಗಳನ್ನು ದುರುಪಯೋಗಪಡಿಸಿಕೊಂಡರೆಂಬ ಅಪಾದನೆಯ ಮೇಲೆ ದೇವರಾಜ ಪೋಲೀಸರು ಅವರುಗಳ ಮೇಲೆ ಮೊಕದ್ದಮೆ ಹೂಡಿದ್ದಾರೆ.

ಎಲ್. ಎಸ್. ರಾಜು ಮೊಕದ್ದಮೆ ಅಪೀಲು ವಜಾ

ಸುಪ್ರೀಂ ಕೋರ್ಟಿಗೆ ಹೋಗಲು ಮನವಿ

ಮೈಸೂರಿನ ಶ್ರೇಷ್ಠನ್ಯಾಯಾಧೀಶ ಶ್ರೀ ಮೇದಪ್ಪನವರ ವಿಷಪ್ರಯೋಗ ಆಪಾದನೆಯಲ್ಲಿ ಶಿಕ್ಷಿತರಾಗಿದ್ದ ಎಲ್. ಎಸ್. ರಾಜು, ದಾಸಪ್ಪನಾಯುಡು ಮತ್ತು ಮಿಸೆಸ್ ಅಗ್ನೇಸ್‌ರವರು ಬೊಂಬಾಯಿ ಮುಖ್ಯನ್ಯಾಯಾಲಯದಲ್ಲಿ ಹೂಡಿದ್ದ ಅಪೀಲನ್ನು ಶ್ರೇಷ್ಠ ನ್ಯಾಯಾಧೀಶ ಮತ್ತು ನ್ಯಾಯಮೂರ್ತಿ ಶ್ರೀ ದೀಕ್ಷಿತ್‌ರವರು ತಳ್ಳಿಹಾಕಿ ಕೆಳಗಿನ ಕೋರ್ಟಿನ ಶಿಕ್ಷೆಯನ್ನು ಖಾಯಂಮಾಡಿದ್ದಾರೆ.

ರಾಜುರವರ ವಕೀಲರು ಭಾರತ ಶ್ರೇಷ್ಠ ನ್ಯಾಯಾಲಯಕ್ಕೆ ಅಪೀಲು ಹೋಗಲು ಅಪ್ಪಣೆಯನ್ನು ಕೇಳಿದರು. ಲಿಖಿತ ಮೂಲಕ ಅರ್ಜಿ ಸಲ್ಲಿಸಬೇಕೆಂದು ಶ್ರೇಷ್ಠ ನ್ಯಾಯಾಧೀಶರು ಉತ್ತರವಿತ್ತರು.

ರಾಜೂರವರ ತಿದ್ದ ಜಾಮೀನು ವಜಾ ಆಗಿ ಕೂಡಲೇ ಅವರನ್ನು ಜೈಲಿಗೆ ಕಳುಹಿಸಲಾಯಿತು.

ಶಾಸನಸಭಾ ಪ್ರಶ್ನೋತ್ತರ ಅಚ್ಚುಮಾಡಿಸಬೇಕು

ಮದ್ರಾಸ್ ಶಾಸನಸಭೆಯ ಕಮ್ಯೂನಿಸ್ಟ್ ಪಕ್ಷದ ಸದಸ್ಯ ಶ್ರೀ ವೆಂಕಟೇಶ್ವರಲುರವರು ನಿನ್ನೆ ಶಾಸನಸಭೆಯಲ್ಲಿ ಮಾತನಾಡುತ್ತಾ, ಸದಸ್ಯರು ಕೇಳುವ ಪ್ರಶ್ನೆ ಮತ್ತು ಸರ್ಕಾರದ ಉತ್ತರವನ್ನು ಇಂಗ್ಲೀಷ್ ಮತ್ತು ಇತರ ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟಿಸಿ ಹಂಚಿದರೆ ಉಪಪ್ರಶ್ನೆ ಕೇಳುವುದಕ್ಕೆ ಸಹಾಯವಾಗುವುದೆಂದು ಸೂಚಿಸಿದರು.

ವಿರೋಧಪಕ್ಷದ ನಾಯಕರು ಇದನ್ನು ಸಮರ್ಥಿಸಿದರು. ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರು ತಮ್ಮ ಸಹೋದ್ಯೋಗಿಗಳೊಡನೆ ಈ ವಿಷಯ ಚರ್ಚಿಸುವುದಾಗಿ ಹೇಳಿದರು, ಆದರೆ ಈಗಿನ ಅಧಿವೇಶನದಲ್ಲಿ ಕೆಲವು ಸದಸ್ಯರು ಕೆಲಗಿನಲ್ಲಿ ಪ್ರಶ್ನೆ ಕೇಳುತ್ತಿರುವುದರಿಂದ ಹೊಸ ಸಲಹೆಗೆ ರಾಜಕೀಯ ಹಿನ್ನೆಲೆಯನ್ನು ಬಿಟ್ಟು ಆಲೋಚಿಸುವುದು ಕಷ್ಟವೆಂದು ಮುಖ್ಯಮಂತ್ರಿ ಹೇಳಿದರು.

ಹೊಸ ಕಾಶ್ಮೀರ ಅಧಿಪತಿಯ ಅಧಿಕಾರ ಸ್ವೀಕಾರ

ಕಾಶ್ಮೀರ ಅಧಿಪತಿಯಾಗಿ ಇದೇ ೧೪ ನೇ ತಾ॥ ಚುನಾಯಿತರಾಗುವ ಯುವರಾಜ ಕರಣಸಿಂಗ್‌ರವರು ೧೯ ನೇ ತಾರೀಖು ಅಧಿಕಾರ ಸ್ವೀಕಾರ ಮಾಡುವುದಾಗಿ ಗೊತ್ತಾಗಿದೆ.

ಮಹಾರಾಜ ಹರಿಸಿಂಗರಿಗಿರುವ ಮನ್ನಣೆಯನ್ನು ರಾಷ್ಟ್ರಾಧ್ಯಕ್ಷರು ವಾಪಸ್ಸು ಪಡೆದು ಪ್ರಾಂತ್ಯದ ಹೊಸ ಅಧಿಪತಿಗೆ ಚುನಾವಣೆಯಾದನಂತರ ಮನ್ನಣೆ ಕೊಡುವರು.

ಪ್ರಮುಖ ಮಹಿಳೆಯರೊಡನೆ ಆಯೋಜನಾ ಸಮಿತಿಯ ಭೇಟಿ

ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಆಯೋಜನಾ ಸಮಿತಿಯು ನಿನ್ನೆಯ ದಿನ ದೇಶದ ಪ್ರಮುಖ ೪೬ ಮಹಿಳೆಯರನ್ನು ಭೇಟಿಮಾಡಿತೆಂದು ಗೊತ್ತಾಗಿದೆ.

ಶ್ರೀ ನೆಹರೂರವರು ಇವರನ್ನುದ್ದೇಶಿಸಿ ಮಾತನಾಡುತ್ತಾ, ದೇಶದ ಪ್ರಗತಿಕಾರ್ಯಗಳಲ್ಲಿ ಮಹಿಳೆಯರ ಪಾತ್ರವೇನೆಂಬುದನ್ನು ವಿವರಿಸಿದರು.

ಆಹಾರ ಅಭಾವಪರಿಸ್ಥಿತಿ

ದೇಶದ ಆಹಾರ ಕೊರತೆ ಪರಿಸ್ಥಿತಿಬಗ್ಗೆ ಕೇಂದ್ರಸರ್ಕಾರವು ನಿನ್ನೆಯದಿನ ವಿವರಣೆಯನ್ನೀಯುತ್ತಾ, ಉತ್ತರಪ್ರದೇಶದ ಅನೇಕ ಭಾಗಗಳಲ್ಲಿ ಪರಿಸ್ಥಿತಿ ತೃಪ್ತಿಕರವಾಗಿದೆ. ಆದರೆ ಮೈಸೂರು, ಮದ್ರಾಸಿನ ಕೆಲವುಭಾಗಗಳಲ್ಲಿ ಇನ್ನೂ ಉತ್ತಮಗೊಂಡಿಲ್ಲ. ಅನೇಕ ಪ್ರದೇಶಗಳಲ್ಲಿ ಕಳೆದ ಮಾಹೆಯಲ್ಲಿ ಫಸಲು ಹಾನಿ ಅಷ್ಟು ಆಗಿಲ್ಲವೆಂದು ತಿಳಿಸಲಾಗಿದೆ.

ನಾನಾ ನಗರ

ಅಖಿಲಭಾರತ ಕಾಂಗ್ರೆಸ್ಸಿನ ೫೮ ನೇ ಅಧಿವೇಶನವು ಹೈದರಾಬಾದಿನಲ್ಲಿ ನಡೆಯಲಿರುವ ಪ್ರದೇಶಕ್ಕೆ ನಾನಾ ನಗರವೆಂಬ ನಾಮಧೇಯವನ್ನು ಕೊಡಲಾಗಿದೆ. ಹೈದರಾಬಾದ್ ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷರಾದ ಶ್ರೀ ಗೋವಿಂದರಾವ್ ನಾನಾರವರ ಜ್ಞಾಪಕಾರ್ಥವಾಗಿ ಈ ಹೆಸರನ್ನು ಇಡಲಾಗಿದೆ. ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಸ್ವಾಮಿ ರಮಾನಂದತೀರ್ಥರನ್ನು ಚುನಾಯಿಸಲಾಗಿದೆ.

ರೈಲು ವ್ಯವಸ್ಥೆ

ಕಳೆದ ವರ್ಷದಲ್ಲಿ ೧೧೦೯ ಹೊಸ ರೈಲ್ವೆ ವ್ಯವಸ್ಥೆಗಳನ್ನು ಮಾಡಲಾಯಿತಲ್ಲದೆ ೧೧೦೦೮ ಹೊಸ ರೈಲ್ವೆ ವಿಸ್ತರಣವನ್ನು ಮಾಡಲಾಗಿದೆಯೆಂದು ತಿಳಿಯಬರುತ್ತದೆ.

ವನಸ್ಪತಿ ತುಪ್ಪ ಹಾನಿಕರವಲ್ಲ

ಕೇಂದ್ರ ಸರ್ಕಾರದ ತೀರ್ಮಾನ

ವನಸ್ಪತಿಯು ಆರೋಗ್ಯಕ್ಕೆ ಹಾನಿಕರವಲ್ಲ. ಆದ್ದರಿಂದ ಅದರ ತಯಾರಿಕೆಯನ್ನು ಪ್ರತಿಬಂಧಿಸಬೇಕಾಗಿಲ್ಲವೆಂದು ಭಾರತ ಸರಕಾರವು ಒಂದು ಪ್ರಕಟಣೆಯನ್ನಿತ್ತಿದೆ. ಈ ತುಪ್ಪಕ್ಕೆ ಬಣ್ಣಕಟ್ಟಲುಸಹ ಪ್ರತಿಬಂಧಕವಿಲ್ಲವೆಂದೂ ಈ ಪ್ರಕಟಣೆ ತಿಳಿಸುತ್ತದೆ.

ಈ ವಿಷಯವನ್ನು ಪರಿಶೀಲಿಸಲು ಕಳೆದ ಮಾಹೆಯಲ್ಲಿ ಭಾರತ ಸರ್ಕಾರವು ಒಂದು ಸಮಿತಿಯನ್ನು ನೇಮಿಸಿತ್ತು. ಇದರ ವರದಿಯನ್ನು ಪರಿಶೀಲಿಸಿ ಈ ಆಜ್ಞೆಯನ್ನು ಮಾಡಲಾಗಿದೆ. ಈ ಕೃತಕ ತುಪ್ಪದಲ್ಲಿ ವಿಟಮಿನ್ ಮತ್ತು ಎಳ್ಳೆಣ್ಣೆಯನ್ನು ಸರ್ಕಾರವು ತಿಳಿಸುವ ಪ್ರಮಾಣದಲ್ಲಿ ಸೇರಿಸಬೇಕಾಗಿದೆ.

ಆಂಧ್ರಪ್ರಾಂತ್ಯ ರಚನೆಗೆ ಒತ್ತಾಯ

ಆಂಧ್ರ ಪ್ರಾದೇಶಿಕ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿನ್ನೆಯ ದಿನ ಮದ್ರಾಸಿನಲ್ಲಿ ಸಭೆ ಸೇರಿ ವಿವಾದಕ್ಕೊಳಪಡದ ಪ್ರದೇಶಗಳನ್ನೆಲ್ಲಾ ಒಂದುಗೂಡಿಸಿ ಕೂಡಲೇ ಆಂಧ್ರ ಪ್ರಾಂತ್ಯ ರಚನೆಯಾಗಬೇಕೆಂದೂ ಮತ್ತು ಮದ್ರಾಸನ್ನು [illegible]ವನ್ನಾಗಿ ಮಾಡಬೇಕೆಂದೂ ನಿರ್ಣಯಗಳನ್ನು ಮಾಡಿತು.

ಇತ್ತೀಚಿನ ಪ್ರಾಂತ್ಯದ ಪರಿಸ್ಥಿತಿಯನ್ನು ನಿರ್ಧರಿಸಬೇಕಾಗಿದೆ. ಮದ್ರಾಸ್ ತಮಿಳರಿಗೆ ಸೇರಿದೆ. ಅದು ಮೇಲೆ ಆಂಧ್ರರಿಗೆ ಹಕ್ಕಿಲ್ಲ. ಇಷ್ಟೇ ಕೇವಲ ಕೇಳಬೇಕು ೧೬ ವರ್ಷ ಆಂಧ್ರರದ್ದಾರೆಂದು ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರು ಹೇಳಿರುವುದು ವಿವಾದಕರ. ಅವರು ಹೇಳಿರುವ ಅಂಕಿ ಅಂಶಗಳು ತಪ್ಪು ಎಂದು ನಿರ್ಣಯವು ತಿಳಿಸುತ್ತದೆ.

ಆಂಧ್ರ ಪ್ರಾಂತ್ಯ ರಚನೆ ಬಗ್ಗೆ ಚಳುವಳಿ ನಡೆಸುತ್ತಲಿರುವ ಸ್ವಾಮಿ ಸೀತಾರಾಮರವರು ಈಗಾಗಲೇ ಮದ್ರಾಸಿಗೆ ಆಗಮಿಸಿದ್ದಾರೆ. ಇತ್ತೀಚೆಗೆ ಪ್ರಧಾನಿ ನೆಹರೂ ಹೇಳಿರುವಂತೆ ಈ ವಿವಾದ ಬಗ್ಗೆ ಸರ್ವಸಮ್ಮತ ಸೂತ್ರವೇನೆಂಬುದನ್ನು ಏರ್ಪಡಿಸಲು ಅವರು ಸಂಬಂಧಪಟ್ಟ ಪಕ್ಷಗಳ ನಾಯಕರ ಭೇಟಿ ಮಾಡಲಿರುವರೆಂದು ಗೊತ್ತಾಗಿದೆ.

ಅತ್ಯಂತ ಬಲವಾದ ಆಯುಧ

ವಿಶ್ವದಲ್ಲೇ ಅತ್ಯಂತ ಶಕ್ತಿಯುತವಾದ ಆಯುಧವನ್ನು ಬ್ರಿಟನ್ನಿನಲ್ಲಿ ತಯಾರಿಸಲಾಗಿದೆಯೆಂದು ಅಲ್ಲಿನ ಪತ್ರಿಕೆಯೊಂದು ಬಹಿರಂಗ ಪಡಿಸಿದೆ.

ಕಾಶ್ಮೀರ ಬಗ್ಗೆ ಬ್ರಿಟನ್-ಅಮೆರಿಕಾ ಸಂಯುಕ್ತ ನಿರ್ಣಯ

ಕಾಶ್ಮೀರದಲ್ಲಿರುವ ಭಾರತ ಪಾಕೀಸ್ಥಾನ ಸೈನ್ಯಗಳನ್ನು ವಾಪಸ್ಸು ಪಡೆಯುವ ಬಗ್ಗೆ ಡಾ॥ ಗ್ರಹಾಂರವರು ಮಾಡಿರುವ ಸಲಹೆ ಪ್ರಕಾರ ಉಭಯ ರಾಷ್ಟ್ರಗಳೂ ನಡೆದುಕೊಳ್ಳಬೇಕೆಂದು ಈ ಬಗ್ಗೆ ತಮ್ಮ ಉತ್ತರವನ್ನು ಒಂದು ತಿಂಗಳೊಳಗಾಗಿ ಭದ್ರತಾ ಸಮಿತಿಗೆ ಈ ರಾಷ್ಟ್ರಗಳು ಕಳುಹಿಸಬೇಕೆಂದು ಸಂಯುಕ್ತ ನಿರ್ಣಯವನ್ನು ಬ್ರಿಟನ್ ಮತ್ತು ಅಮೆರಿಕಾಗಳ ಭದ್ರತಾ ಸಮಿತಿಯಲ್ಲಿ ಮಂಡಿಸಿವೆ. ಕಾಶ್ಮೀರದಲ್ಲಿ ಭಾರತ ಪಾಕೀಸ್ಥಾನಗಳ ವಶದಲ್ಲಿರುವ ಭಾಗಗಳ ತಾಟಸ್ಥರೇಖೆಯ ಇಕ್ಕೆಡೆಗಳಲ್ಲಿ ಭಾರತವು ೧೨೦೦೦ ರಿಂದ ೧೮೦೦೦ ವರೆಗೆ ಪಾಕೀಸ್ಥಾನವು ೩೦೦೦ ದಿಂದ ೬೦೦೦ ದವರೆಗೆ ಸೈನ್ಯವನ್ನು ಇಟ್ಟಿರಬಹುದೆಂಬ ಸೂಚನೆ ಡಾ॥ ಗ್ರಹಾಂ ವರದಿಯಲ್ಲಿದೆ.

ರಣಜಿತ್
7-11-52 ರಿಂದ
ಆಂದೋಲನ್
ಅಥವಾ
ನಾವು ನಡೆಸಿದ ಸ್ವಾತಂತ್ರ್ಯದ ಹೋರಾಟದ ಕಥೆ
[ಹಿಂದಿ]

ಪ್ರಭಾ ಇಂದಿನಿಂದ
ಅಮೋಘ ಪ್ರಾರಂಭ
ದಿನವಹಿ ಮೂರು ಆಟಗಳು
ಪೀಪಲ್ಸ್ ಆರ್ಟ್ ಪ್ರೊಡಕ್ಷನ್ಸ್‌ರವರ
ನೂತನ ಸಾಮಾಜಿಕ ತೆಲುಗು ಚಿತ್ರ
ಪಲ್ಲೆಟೂರು
ಭೂಮಿಕೆ: ಎನ್. ಟಿ. ರಾಮರಾವ್, ಸಾವಿತ್ರಿ, ಎಸ್.ವಿ.ರಂಗರಾವ್, ಅಚ್ಚಯ್ಯಚೌಧುರಿ, ಟಿ.ಜಿ. ಕಮಲಾದೇವಿ
ಸಂಗೀತ:– ಘಂಟಸಾಲ. ನಿರ್ದೇಶನ: ಟಿ. ಪ್ರಕಾಶರಾವ್

—: ಪ್ರಕಾಶಕರು ಮತ್ತು ಮುದ್ರಕರು: —
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 65

೮-೧೧-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಅರಮನೆಯ ಹಣದ ಮೋಸ

ಮೈಸೂರು ೮

ಬೊಂಬಾಯಿ 'ಆರ್‌ಲುಕ್ಕರ್' ಎಂಬ ಪತ್ರಿಕೆಯ ಪ್ರತಿನಿಧಿ ಕೆ. ಎಸ್. ಜಾರ್ಜ್ ಎಂಬುವರು ೧೯೫೧ ನೇ ಸೆಪ್ಟೆಂಬರ್ ೨೭ ಮತ್ತು ಅಕ್ಟೋಬರ್ ೨೨ ನೇ ತಾರೀಖುಗಳಲ್ಲಿ ಶ್ರೀ ಮಹಾರಾಜರವರ ಹುಜೂರ್ ಸೆಕ್ರೆಟರಿಯನ್ನು ಭೇಟಿಮಾಡಿ ಪತ್ರಿಕೆಯಲ್ಲಿ ಜಾಹಿರಾತಿಗಾಗಿ ಅವರಿಂದ ೧೫೦೦ ರೂಗಳನ್ನು ಪಡೆದು, ಅದಕ್ಕೆ ಪತ್ರಿಕೆಯ ರಶೀತಿಯನ್ನು ಕೊಟ್ಟು, ಆ ಹಣವನ್ನು ಸ್ವಂತಕ್ಕೆ ದುರುಪಯೋಗಪಡಿಸಿಕೊಂಡು ಪರಾರಿಯಾಗಿರುವರೆಂದು ಆ ಪತ್ರಿಕೆಯ ಡೈರೆಕ್ಟರಾದ ಶ್ರೀ ಎಚ್. ಜಿ. ಹ್ಯಾಮಿಲ್‌ಟನ್‌ರವರು ಪೋಲೀಸರಿಗೆ ದೂರುಕೊಟ್ಟಿದ್ದರು. ಅದರಮೇಲೆ ಮೈಸೂರು ಕೃಷ್ಣರಾಜ ಪೋಲೀಸರು ಆತನ ಮೇಲೆ ಮೊಕದ್ದಮೆ ಹೂಡಿ, ಮುಂದಿನ ತನಿಖೆ ನಡೆಸುತ್ತಿದ್ದಾರೆ, ಆಪಾದಿತನು ಇಲ್ಲಿಯವರೆಗೆ ಪತ್ತೆಯಾಗಿಲ್ಲ.

ಕ್ಷಾಮ ಪ್ರದೇಶಗಳಲ್ಲಿ ತಜ್ಞರ ಪ್ರವಾಸ

ಬೆಂಗಳೂರು ನ. ೮

ಭಾರತಸರ್ಕಾರವು ರಚಿಸಿರುವ ತಜ್ಞರ ಸಮಿತಿಯು ಮೈಸೂರು ಸಂಸ್ಥಾನದ ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲಾ ಕ್ಷಾಮಪೀಡಿತ ಪ್ರದೇಶಗಳಿಗೆ ಭೇಟಿಯಿತ್ತು, ಅಲ್ಲಿಯ ಸ್ಥಿತಿ ಗತಿಗಳನ್ನು ಖುದ್ದಾಗಿ ಪರಿಶೀಲಿಸಿ ಬೆಂಗಳೂರಿಗೆ ಹಿಂತಿರುಗಿದರು. ಮೈಸೂರು ಸರ್ಕಾರದ ಸಚಿವರು ಅಧಿಕಾರಿಗಳೂ ಇವರೊಡನೆ ಹೋಗಿದ್ದರು. ಅಲ್ಲಿ ನಡೆಯಬೇಕಾದ ಕಾರ್ಯಗಳಬಗ್ಗೆ ಮೈಸೂರು ಸರ್ಕಾರ ಒಂದು ಮನವಿಯನ್ನು ಸಲ್ಲಿಸಲಿದೆ. ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ವಿ. ರಾಮಮೂರ್ತಿಯವರು ಇಂದು ತಿರುವಾಂಕೂರಿಗೆ ತೆರಳಿದರು.

ಗೋಹತ್ಯ ನಿರೋಧ ಚಳುವಳಿ

ಮೈಸೂರು ೮

ನಾಳೆ ಸಂಜೆ ೬ ಗಂಟೆಗೆ ಪುರಭವನ ಮೈದಾನದಲ್ಲಿ ಗೋಹತ್ಯ ನಿರೋಧಚಳುವಳಿಯ ಅಂಗವಾಗಿ ಆರ್. ಎಸ್. ಎಸ್. ಆಶ್ರಯದಲ್ಲಿ ಬಹಿರಂಗಸಭೆ ಏರ್ಪಡಿಸಲಾಗಿದೆ.

ತಲಕಾಡು ಯಾತ್ರಿಕರಿಗೆ ಎಚ್ಚರಿಕೆ

ಮೈಸೂರು ೮

ಇದೇ ೧೭ ನೇ ತಾರೀಖು ಟಿ. ನರಸೀಪುರ ತಾಲ್ಲೂಕು ತಲಕಾಡಿನಲ್ಲಿ ಪಂಚಲಿಂಗದರ್ಶನ ಮತ್ತು ಜಾತ್ರೆ ನಡೆಯುತ್ತದೆ ಈ ಸಂದರ್ಭದಲ್ಲಿ ಕಾಲರ ಸಾಂಕ್ರಾಮಿಕ ರೋಗವು ಹರಡುವ ಸಂಭವವಿರುವುದರಿಂದ ತಲಕಾಡಿನ ೫ ಮೈಲಿ ಫಾಸಲೆಯೊಳಗೆ ನಾನಾ ಮಾರ್ಗಗಳಿಂದ ಬರುವ ಮತ್ತು ಹೋಗುವ ಯಾತ್ರಿಕರೆಲ್ಲಾ ಕಾಲರಾ ಇನಾಕ್ಯುಲೇಷನ್ ಹಾಕಿಸಿಕೊಂಡು ಬರಬೇಕು. ಈ ಬಗ್ಗೆ ಆರೋಗ್ಯ ಶಾಖೆಯ ಹೆಲ್ತ್ ಇನ್ಸ್‌ಪೆಕ್ಟರು ಅಥವಾ ಅವರ ಮೇಲ್ಪಟ್ಟ ಅಧಿಕಾರಿಗಳಿಂದಾಗಲಿ ಅಥವಾ ವೈದ್ಯ ಇಲಾಖೆಗೆ ಸೇರಿದ ಅಸಿಸ್ಟೆಂಟ್ ಸರ್ಜನ್ ಅಥವಾ ಅವರ ಮೇಲ್ಪಟ್ಟ ಅಧಿಕಾರಿಗಳಿಂದಲೂ ಇನಾಕ್ಯುಲೇಷನ್ ಹಾಕಿಸಿಕೊಂಡ ಬಗ್ಗೆ ಸರ್ಟಿಫಿಕೇಟನ್ನು ಪಡೆದುಕೊಂಡು ಬರಬೇಕು. ಇದಕ್ಕೆ ತಪ್ಪಿದರೆ ಜಾತ್ರೆಯ ಸ್ಥಳಕ್ಕೆ ಅಂತಹವರನ್ನು ಬಿಡುವುದಿಲ್ಲ. ಈ ಆಜ್ಞೆಗೆ ವಿರೋಧವಾಗಿ ನಡೆಯುವುದು ಕಾನೂನಿನ ಪ್ರಕಾರ ಶಿಕ್ಷಾರ್ಹ. ಈ ಆಜ್ಞೆಯು ಇದೇ ೧೪ ನೇ ತಾರೀಖಿನಿಂದ ೧೦ ದಿನಗಳ ಕಾಲ ಜಾರಿಯಲ್ಲಿರುತ್ತದೆ ಎಂದು ಮೈಸೂರು ಜಿಲ್ಲಾಧಿಕಾರಿಗಳು ಆಜ್ಞೆ ಹೊರಡಿಸಿದ್ದಾರೆ.

ಪೆನ್ಸಿಲಿನ್ ತಯಾರಿಕೆ

ಪೂನೆಯ ಬಳಿ ಕಟ್ಟಲಾಗುತ್ತಿರುವ ಪೆನ್ಸಿಲಿನ್ ಕಾರ್ಖಾನೆಯಲ್ಲಿ ತಯಾರಿಕಾ ಕಾರ್ಯವು ಮುಂಚೆ ನಿರ್ಧರಿಸಿದ ಕಾಲಕ್ಕಿಂತಲೂ ಮುಂಚಿತವಾಗಿಯೇ ಪ್ರಾರಂಭವಾಗುವುದೆಂದೂ, ಮುಂದಿನ ಜುಲೈ ತಿಂಗಳಿನಹೊತ್ತಿಗೆ ಪೆನ್ಸಿಲಿನ್ ಮಾರಾಟಕ್ಕೆ ಬರುವುದೆಂದು ಹೇಳಲಾಗಿದೆ.

ಸಿಲೋನಿಗೆ ಕೊಟ್ಟ ಯಂತ್ರವನ್ನು ಈಗ ಭಾರತಕ್ಕೆ ಕಳುಹಿಸಲಾಗುವುದೆಂದು ವರದಿಯಾಗಿದೆ.

ಗಂಟೆಗೆ ೨೫೦೦ ಮೈಲಿ ಸಂಚರಿಸುವ ವಿಮಾನ

೨ ಲಕ್ಷ ಅಡಿಗಳ ಎತ್ತರದಲ್ಲಿ ಗಂಟೆಗೆ ೨೫೦೦ ಮೈಲಿ ವೇಗದಲ್ಲಿ ಸಂಚರಿಸುವ ರಾಕೆಟ್ ಯುದ್ಧ ವಿಮಾನಗಳನ್ನು ರಷ್ಯದಲ್ಲಿ ತಯಾರಿಸಲಾಗುತ್ತಿದೆಯೆಂದು ವರದಿಯಾಗಿದೆ.

ಭದ್ರಾವತಿ ಉಕ್ಕಿನ ಕಾರ್ಖಾನೆಗೆ ಮೋಸ

ಮೈಸೂರು ೮

ಮೈಸೂರು ನಗರದಲ್ಲಿ ಎಲೈಟ್ ಇಂಜನಿಯರ್ಸ್ ಎಂಬ ಸಂಸ್ಥೆಯ ಮಾಲೀಕರೆಂದು ಹೇಳಿಕೊಂಡ ಎ. ಕೆ. ಸುಬ್ರಹ್ಮಣ್ಯಂ ಎಂಬವರು ೧೯೫೧ ನೇ ಫೆಬ್ರವರಿ ತಿಂಗಳಿನಿಂದ ಹಿಂದಿನ ತಿಂಗಳವರೆಗೆ ಭದ್ರಾವತಿ ಕಾರ್ಖಾನೆಯಿಂದ ಒಟ್ಟು ೪೭ ಹಂಡ್ರೆಡ್‌ವೇಟ್ ತೂಕದ ಕಬ್ಬಿಣವನ್ನು ತಮ್ಮ ಹೆಸರಿನಲ್ಲಿ ರವಾನೆ ಪಡೆದು ಇತರರಿಗೆ ಮಾರಿಕೊಂಡು ಮೋಸಪಡಿಸಿದರೆಂದೂ, ಇನ್ನೊಂದು ಬಾರಿ ಕ್ಯಾತನಹಳ್ಳಿಯ ಚನ್ನಯ್ಯ ಎಂಬುವರ ಹೆಸರನ್ನು ಫೋರ್ಜರಿ ಮಾಡಿ ಕಬ್ಬಿಣವನ್ನು ತರಿಸಿದರೆಂದೂ ಮೈಸೂರು ಪೋಲೀಸರಿಗೆ ದೂರು ಬಂದಿರುವುದಾಗಿ ವರದಿಯಾಗಿದೆ. ಈಗ ಪೋಲೀಸರು ಆತನ ಮೇಲೆ ೪೧೯ ಮತ್ತು ೪೭೦ ಸೆಕ್ಷನ್ ಪ್ರಕಾರ ಮೊಕದ್ದಮೆ ಹೂಡಿದ್ದಾರೆ. ಮೈಸೂರು ನಗರದಲ್ಲಿ ಎಲೈಟ್ ಇಂಜನಿಯರ್ಸ್ ಎಂಬ ಸಂಸ್ಥೆ ಯಾವುದೂ ಇಲ್ಲವೆಂದೂ, ಅಪರಾಧಿಯು ಪರಾರಿಯಾಗಿದ್ದಾನೆಂದೂ ಪೋಲೀಸರಿಗೆ ತಿಳಿದುಬಂದಿದೆ.

ದೇಶದ ಪ್ರಗತಿ ಪತ್ರಿಕೋದ್ಯೋಗಿಗಳನ್ನು ಅವಲಂಭಿಸುತ್ತದೆ

ದೇಶದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು ಪತ್ರಿಕೋದ್ಯೋಗಿಯ ಕರ್ತವ್ಯವಾದುದರಿಂದ ದೇಶದ ಮೇಲ್ಮೆ ಮತ್ತು ಸಂಸ್ಕೃತಿಯ ಲಕ್ಷಣವು ಪತ್ರಿಕೋದ್ಯೋಗಿಗಳನ್ನು ಅವಲಂಭಿಸಿದೆ–ಎಂದು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ನಿನ್ನೆಯದಿನ ಪತ್ರಿಕೋದ್ಯೋಗಿ ಸಂಘದ ಕ್ರೀಡಾಭಾಗದ ಆರಂಭೋತ್ಸವ ಮಾಡುತ್ತಾ ಹೇಳಿದರು.

ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ನಾಮಕರಣ

ಶ್ರೀಗಳಾದ ಎ. ಭೀಮಪ್ಪನಾಯಕ್, ಜಿ. ಎ. ತಿಮ್ಮಪ್ಪಗೌಡ, ಜಿ. ಜವರೆ, ಕೊಂಡಜ್ಜಿ ಬಸಪ್ಪ, ಎಂ. ಮಾದಯ್ಯ, ಸೈಯದ್ ಅಬ್ದುಲ್‌ರಹಮಾನ್, ಕೆ. ವೈ. ಮೈಲಾರಶೆಟ್ಟಿ, ರಾಮನಾರಾಯಣಚಲ್ಲಾರಾಂ, ಮಾಸ್ಟರ್ ನ್ಯಾಸ್, ಜಿ. ನಾರಾಯಣಗೌಡ ಮತ್ತು ಎಚ್. ಹುಚ್ಚಮಾಸ್ತಿಗೌಡರುಗಳನ್ನು ಮೈಸೂರು ವಿಶ್ವವಿದ್ಯಾನಿಲಯ ಸೆನೆಟ್‌ಗೆ ನಾಮಕರಣ ಮಾಡಲಾಗಿದೆ.

ಮೈಸೂರು ಜಿಲ್ಲಾ ಆಹಾರ ಅಭಾವ

ಪರಿಹಾರ ಕಾರ್ಯಕ್ಕಾಗಿ ೭೦ ಸಾವಿರ ರೂ. ಗ್ರಾಂಟ್

ಮೈಸೂರು ೮

ಮೈಸೂರು ಜಿಲ್ಲೆಯ ಆಹಾರಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯವನ್ನು ಕೈಗೊಳ್ಳಲು ಸರ್ಕಾರದವರು ೩೫ ಸಾವಿರ ರೂ. ಮತ್ತು ತಕ್ಕಾವಿ ಸಾಲಕ್ಕಾಗಿ ೩೫ ಸಾವಿರ ರೂಗಳನ್ನು ಕೊಟ್ಟಿರುತ್ತಾರೆ ಈ ಬಗ್ಗೆ ಸರ್ಕಾರದ ಆಜ್ಞೆಯು ನಿನ್ನೆದಿನ ಬಂದಿತೆಂದೂ, ಆ ಹಣವನ್ನು ಅಭಾವ ಪ್ರದೇಶಗಳಿಗೆ ಕೂಡಲೇ ಹಂಚಲಾಗುವುದೆಂದೂ ಜಿಲ್ಲಾಧಿಕಾರಿಗಳು ಈ ದಿನ ತಿಳಿಸಿದ್ದಾರೆ.

ಸಹಕಾರ ಸಂಘಗಳ ಅಭಿವೃದ್ಧಿಗೆ ೫ ಕೋಟಿ ರೂ.

ಭಾರತಾದ್ಯಂತ ಸಹಕಾರ ಸಂಘಗಳ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಯಲ್ಲಿ ೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿರುವುದಾಗಿ ಗೊತ್ತಾಗಿದೆ.

ರಾಜಧಾನಿಗೆ ಬೊಂಬಾಯಿ ಸಚಿವರು

ಬೊಂಬಾಯಿನ ಸ್ಥಳೀಯ ಮತ್ತು ಕೈಗಾರಿಕಾಸಚಿವ ಶ್ರೀ ಎಂ. ಪಿ. ಪಾಟೀಲರು ಈದಿನ ಸಂಜೆ ರಾಜಧಾನಿಗೆ ಮುಂಬೈದಿಂದ ಆಗಮಿಸಿ, ನಗರದ ಹಲವಾರು ಕಾರ್ಖಾನೆಗಳಿಗೆ ಭೇಟಿ ಕೊಡುವರು. ಸೋಮವಾರ ಅವರು ಶ್ರವಣ ಬೆಳಗೊಳಕ್ಕೆ ಪ್ರಯಾಣ ಬೆಳೆಸುವರು.

ತಲಕಾಡು ಮಹಾತ್ಮೆ

ಮೈಸೂರು ತಾಲ್ಲೂಕು ರಾಘವೇಂದ್ರಪುರದ ಶ್ರೀನಿವಾಸ್ ಅಂಡ್ ಕೋ ರವರು ಪ್ರಕಟಿಸಿರುವ ತಲಕಾಡು ಮಹಾತ್ಮೆ ಮತ್ತು ಪಂಚಲಿಂಗದರ್ಶನ ಕ್ರಮ ಎಂಬ ಪುಸ್ತಕವು ನಮ್ಮ ಹಸ್ತಗತವಾಗಿದೆ. ಇದು ಅಲ್ಲಿಗೆ ಹೋಗುವ ಯಾತ್ರಿಕರಿಗೆ ತುಂಬಾ ಉಪಯೋಗವಾಗಿದೆ. ಬೆಲೆ ೧ ಆಣೆ.

ಹಸ್ತಕೌಶಲ್ಯ ವಸ್ತ್ರ ಸಮಿತಿ

ದೇಶದಲ್ಲಿ ಹಸ್ತಕೌಶಲ್ಯ ವಸ್ತುಗಳ ಪ್ರಗತಿಯ ಬಗ್ಗೆ ಸರ್ಕಾರಕ್ಕೆ ಸಲಹೆನೀಡಲು ಭಾರತ ಸರ್ಕಾರವು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರ ಅಧ್ಯಕ್ಷತೆಯಲ್ಲಿ ೩೧ ಜನರ ಒಂದು ಸಮಿತಿಯನ್ನು ನೇಮಿಸಿದೆ.

ಹೆಚ್ಚು ಆಹಾರಬೆಳೆಗೆ ಒಂದೂವರೆ ಕೋಟಿ ರೂ ಸಾಲ

ಹೆಚ್ಚು ಆಹಾರ ಬೆಳೆ ಚಳುವಳಿಗಾಗಿ ೧೯೫೩-೫೪ ನೇ ಸಾಲಿಗೆ ಒಂದೂವರೆ ಕೋಟಿ ರೂಪಾಯಿಗಳ ಸಾಲ ಮತ್ತು ಗ್ರಾಂಟನ್ನು ಪಡೆಯಲು ಮೈಸೂರು ಸರ್ಕಾರವು ಕೇಂದ್ರಸರ್ಕಾರಕ್ಕೆ ಸದ್ಯದಲ್ಲೇ ಮನವಿ ಸಲ್ಲಿಸಲಿದೆಯೆಂದು ಗೊತ್ತಾಗಿದೆ.

ದೇಶದ ರಕ್ಷಣೆಗೆ ಸೈನ್ಯ ಅತ್ಯಗತ್ಯ

ಭಾರತದಲ್ಲಿ ದೊಡ್ಡ ಸೈನ್ಯವಿದೆ ಅದರ ಖರ್ಚು ಹೆಚ್ಚೆಂದು ಕೆಲವರು ಹೇಳುತ್ತಾರೆ. ಎಲ್ಲ ರಾಷ್ಟ್ರಗಳಲ್ಲೂ ಸೈನ್ಯ ಇರಲೇ ಬೇಕಾದುದು ಅತ್ಯಗತ್ಯ. ಸೈನ್ಯವು ರಕ್ಷಣೆ ನೀಡುತ್ತದೆ. ಇದರಿಂದ ಕೈಗಾರಿಕೆ ಮತ್ತು ಇತರ ಸಂಸ್ಥೆಗಳು ಬೆಳೆಯುತ್ತವೆ. ಆದರಿಂದ ಸೈನ್ಯದ ಖರ್ಚು ಹೆಚ್ಚಾದರೂ ದೇಶದ ರಕ್ಷಣೆಗೆ ಅದು ಅತ್ಯಗತ್ಯ ನಮ್ಮ ಸೈನ್ಯವು ಯಾವ ಪರಿಸ್ಥಿತಿಯನ್ನು ಎದುರಿಸಲೂ ಶಕ್ತವಕ್ತತೆಯಲ್ಲಿದೆ ಎಂದು ದಕ್ಷಿಣಭಾಗದ ಸೈನ್ಯಾಧಿಕಾರಿ ಲೆ॥ ಜ॥ ಮಹಾರಾಜ್ ಶ್ರೀ ರಾಜೇಂದ್ರ ಸಿನ್ಹಾಜಿಯವರು ಬೆಂಗಳೂರಿನಲ್ಲಿ ಹೇಳಿರುವರು.

ಯುನೇಸ್ಕೊ ಸಭೆಗೆ ಡಾ॥ ಸಂಜೀವರಾಯರು

ಬೆಂಗಳೂರು ಸೆಂಟ್ರಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ ಮತ್ತು ರಸಾಯನಶಾಸ್ತ್ರಜ್ಞರೂ ಆದ ಡಾ॥ ಸಂಜೀವರಾಯರು ಪ್ಯಾರಿಸ್ಸಿನಲ್ಲಿ ನಡೆಯುವ ಪ್ರಪಂಚ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕಸಂಸ್ಥೆಯ ಸಭೆಯಲ್ಲಿ ಭಾಗವಹಿಸಲು ಭಾರತದ ಪ್ರತಿನಿಧಿಯಾಗಿ ಹೋಗಲಿರುವರು.

ಈ ನಿಯೋಗಕ್ಕೆ ಡಾ॥ ರಾಧಾಕೃಷ್ಣರ್ ನಾಯಕರು. ಅಧಿವೇಶನ ಮುಗಿದನಂತರ ಡಾ॥ ಸಂಜೀವರಾಯರು ಪ್ರಪಂಚ ಆಹಾರ ಮತ್ತು ವ್ಯವಸಾಯ ಅಧಿಕಾರಿಗಳನ್ನು ಭೇಟಿಮಾಡಿ ತಾವು ಅಕ್ಕಿಯ ಬಗ್ಗೆ ನಡೆಸಿರುವ ಸಂಶೋಧನೆಗಳನ್ನು ತಿಳಿಸುವರು

ಫೈನಲ್ ಫುಟ್‌ಬಾಲ್ ಪಂದ್ಯ

ಬೆಂಗಳೂರಿನಲ್ಲಿ ನಡೆಯುತ್ತಲಿರುವ ಸಂತೋಷ್ ಟ್ರೋಫಿ ಪಂದ್ಯದ ಫೈನಲ್ ಆಟವು ಇದಿನ ೪-೩೦ಕ್ಕೆ ಮೈಸೂರಿಗೂ ಬಂಗಾಳಕ್ಕೂ ನಡೆಯುತ್ತದೆ.

ಆಡಳಿತ ವ್ಯವಸ್ಥೆ ಬದಲಾಯಿಸುವ ಯೋಜನೆ

ಅಮೆರಿಕಾ ಆಡಳಿತದಲ್ಲಿ ನಡೆಯಬೇಕಾಗಿರುವ ಬದಲಾವಣೆ ಬಗ್ಗೆ ಚರ್ಚಿಸಲು ಇನ್ನೂ ೧೦ ದಿನಗಳೊಳಗಾಗಿ ಟ್ರೂಮನ್‌ರವರು ಮತ್ತು ಐಸನ್‌ಹೋವರ್‌ರವರ ಭೇಟಿಯಾಗಲಿದೆಯೆಂದು ಹೇಳಲಾಗಿದೆ.

ಪರ್ಷಿಯಾ ಬಗ್ಗೆ ನೆಹರೂಗೆ ವರದಿ

ಮೈಸೂರು ಮಾಜಿ ದಿವಾನರಾದ ಮಿರ್ಜಾರವರು ಪರ್ಷಿಯಾದಲ್ಲಿ ತಾವು ನಡೆಸಿದ ಮಾತುಕತೆಗಳ ಬಗ್ಗೆ ಪ್ರಧಾನಿ ನೆಹರೂರವರಿಗೆ ತಮ್ಮ ವರದಿಯನ್ನು ಒಪ್ಪಿಸಲು ದೆಹಲಿಗೆ ಹೋಗಿರುವುದಾಗಿ ಗೊತ್ತಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೭-೧೧-೫೨

ಪಲ್ಲ	ರೂ-	ಆ-	ರೂ-	ಆ
ಕಡಲೇಕಾಯಿ	೯- ೨		೨೨	೦
ಎಳ್ಳು	೬೮	೧೦	೬೧	೬
ಹರಳು	೪೨	೧೦	೪೩	೧೪
ಹುರುಳಿ	೫೭	೮	೫೮	೧೦
ಹೆಸರು	೫೨	೪	೫೩	೮
ಅಲಸಂದೆ	೫೫	೧೨	—	—
ಹುಚ್ಚೆಳ್ಳು	೫೪	೦	—	—
ಹೊಂಗೆಬೀಜ	—	—	—	—
ಉಪ್ಪು	—	—	—	—
ಮೆ॥ ಕಾಯಿ	೭	೦	೧೮	೦
ಸೀಗೇಕಾಯಿ	೪	೧೧	೪	೧೩
ಬೆಲ್ಲ	೩	೮	—	—
ಹುಣಸೆಹಣ್ಣು	೫	೧೫	೬	೪
ತೆಂಗಿನಕಾಯಿ	೧೯೯		೨೪೪	

ವಿರೋಧ ಪ್ರದರ್ಶನ

ಪೋರ್ಚುಗೀಸಿನ ಹೊಸ ಗೌರ್‍ನರ್ ಜನರಲ್‌ರವರು ನಿನ್ನೆಯದಿನ ರೋಮಿನಿಂದ ಬೊಂಬಾಯಿಗೆ ಆಗಮಿಸಿ ಹೊಟೇಲೊಂದರಲ್ಲಿ ಇಳಿದುಕೊಂಡಾಗ ಬೊಂಬಾಯಿನಲ್ಲಿರುವ ೫೦ ಜನ ಗೌವರ್ನು ಹೊಟೇಲು ಬಳಿ ಕಪ್ಪು ಬಾವುಟ ಪ್ರದರ್ಶನ ನಡೆಸಿ ಕೂಡಲೇಹಿಂತಿರುಗಿಎಂಬಘೋಷಣೆಗಳನ್ನು ಮಾಡಿದರು ಪೊಲೀಸಿನವರುಪ್ರದರ್ಶನಗಾರರನ್ನು ಶಾಂತರೀತಿಯಲ್ಲಿ ಚದುರಿಸಿದರು.

ಸ್ಕ್ಯಾರ್‌ಮೂಷ್ ಚಿತ್ರ

ರಾಜಧಾನಿಯ ಗಾಯಿತ್ರಿ ಟಾಕೀಸಿನಲ್ಲಿ ನಿನ್ನೆಯಿಂದ ಪ್ರಾರಂಭವಾದ ಎಂ.ಜಿ.ಎಂ. ರವರ ಸುಪ್ರಸಿದ್ಧ ವರ್ಣರಂಜಿತ ಸಾಹಸ ಸ್ಕ್ಯಾರ್‌ಮೂಷ್ ಎಂಬ ಚಿತ್ರ ಪ್ರದರ್ಶನದ ಸಂಬಂಧದಲ್ಲಿ ನಗರದ ಪತ್ರಿಕೋದ್ಯೋಗಿಗಳನ್ನು ಆಹ್ವಾನಿಸಿದ್ದರು. ಫ್ರಾನ್ಸ್‌ದೇಶದ ಪ್ರಾಚೀನ ಚರಿತ್ರಾರ್ಹಘಟನೆಗೆ ಸಂಬಂಧಪಟ್ಟ ಕಥೆಯು ಅತ್ಯುತ್ತಮ ರೀತಿಯಲ್ಲಿ ತಯಾರಿಸಿ ಚಿತ್ತಾಕರ್ಷವಾಗಿದೆ.

ಕಂದಾಯ ಧಾನ್ಯ ರೂಪದಲ್ಲಿ ವಸೂಲಿ

ಜವಾರ್ [ಜೋಳ] ಧಾನ್ಯವನ್ನು ಪಡಿತರ ವಸ್ತುಗಳ ಪಟ್ಟಿಯಿಂದ ತೆಗೆದುಹಾಕುವುದಾಗಿ ಹೈದರಾಬಾದ್ ಸರ್ಕಾರವು ಪ್ರಕಟಿಸಿದೆ.

ಹೈದರಾಬಾದಿನಲ್ಲಿ ಆಹಾರ ಧಾನ್ಯಗಳನ್ನು ಕಂದಾಯ ಹಣದ ಬದಲಾಗಿ ತೆಗೆದುಕೊಳ್ಳಲಾಗುವುದೆಂದು ಅಲ್ಲಿಯ ಆಹಾರ ಸಚಿವ ಡಾ॥ ಚೆನ್ನಾರೆಡ್ಡಿಯವರು ಹೇಳಿದ್ದಾರೆ.

ಅಧಿಕಾರಿಗಳ ಸಂಬಳದಲ್ಲಿ ಖೋತಾ

ಹೆಚ್ಚು ಸಂಬಳ ಪಡೆಯುವ ಅಧಿಕಾರಿಗಳ ಸಂಬಳವನ್ನು ಖೋತಾ ಮಾಡುವ ಪ್ರಶ್ನೆಯು ಸರ್ಕಾರವು ಪರಿಶೀಲಿಸುತ್ತಿರುವುದಾಗಿ ಮದ್ರಾಸಿನ ಅರ್ಥಿಕ ಸಚಿವರು ಹೇಳಿದ್ದಾರೆ

ಸಕ್ಕರೆ ಬೆಲೆ ಇಳಿತಾಯ

ಸಕ್ಕರೆ ಬೆಲೆಯನ್ನು ಬೊಂಬಾಯಿನಲ್ಲಿ ಸೇರು ಒಂದಕ್ಕೆ ೬ ಕಾಸಿನಂತೆ ಇಳಿಸಲಾಗಿದೆಯೆಂದು ಅಧಿಕೃತವಾಗಿ ತಿಳಿಸಲಾಗಿದೆ

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,000 or near offer

No brokers–Immediate possession—No encumbrence,

Enquire at :— M. NARAYANA RAO, Co

c/o Tourist Bureau, Lansdowne Buildings, Mysore

ಎ. ಐ. ಸಿ. ಸಿ. ಚುನಾವಣೆ

ಎ.ಐ ಸಿ.ಸಿ.ಗೆ ಪ್ರತಿನಿಧಿಗಳಾಗಿ ಮೈಸೂರು ತಾಲ್ಲೂಕಿನಿಂದ ಸ್ಪರ್ಧಿಸಿದ್ದವರ ಪೈಕಿ ಶ್ರೀಗಳಾದ ಶಿವಸಂಜೆಗೌಡ, ಮತ್ತು ಬಸವೇಗೌಡರು ತಮ್ಮ ಅರ್ಜಿಗಳನ್ನು ವಾಪಸ್ಸು ಪಡೆದಿದ್ದಾರೆ. ಶ್ರೀಗಳಾದ ಹೆಚ್. ಸಿ. ದಾಸಪ್ಪ ಮತ್ತು ಕೆ. ಪುಟ್ಟಸ್ವಾಮಿಯವರಲ್ಲಿ ಈಗ ಸ್ಪರ್ಧೆಯಿದೆ.

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರು ತಮ್ಮ ಉಮೇದುವಾರಿಕೆಯನ್ನು ವಾಪಸ್ಸು ಪಡೆದದ್ದರಿಂದ ಶ್ರೀ ಬಿ. ದೊಡ್ಡಯ್ಯನವರು ಅವಿರೋಧವಾಗಿ ಚುನಾಯಿಸಿದಂತಾಯಿತು.

ಸಚಿವ ಸ್ಥಾನ

ಲಾಹೋರಿನಲ್ಲಿರುವ ಭಾರತ ಡೆಪ್ಯುಟಿ ಹೈಕಮೀಷನರಾದ ಶ್ರೀ ಎಸ್. ಕೆ. ಬ್ಯಾನರ್ಜಿಯವರಿಗೆ ಸಚಿವಸ್ಥಾನವನ್ನು ಕೊಡಲಾಗಿದೆ.

ಅಪೇರ

7—11—52 ರಿಂದ

ಅಮೋಘವಾದ 4 ನೇ ವಾರ

ಪ್ರತಿದಿನ ಮೂರು ಆಟಗಳು

ಮಾಪಿಳ್ಳೈ

ಪಾತ್ರ:—ಪಿ.ಕೆ. ಸರಸ್ವತಿ, ರಾಮಚಂದ್ರ.

ರಣಜಿತ್

7-11-52 ರಿಂದ

ಆಂದೋಲ್ಹ

ಅಥವಾ

ನಾವು ನಡೆಸಿದ ಸ್ವಾತಂತ್ರ್ಯದ ಹೋರಾಟದ ಕಥೆ

[ಹಿಂದಿ]

★ ವುಡ್‌ಲ್ಯಾಂಡ್ಸ್ ★

ತಾ॥ 7—11—52 ರಿಂದ

ಪ್ರತಿದಿನ 3 ಪ್ರದರ್ಶನಗಳು

ಅಮೋಘ 3 ನೇ ವಾರ

ರಂಗೀಲಿ ಹಿಂದಿ

ಪಾತ್ರ:—ರೆಹನಾ, ಯಾಕೂಬ್, ರಾಜ್‌ಕುಮಾರ್.

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 66

೧೦-೧೧-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಗಾಂಧಿಜೀ ತತ್ವಗಳನ್ನೆಲ್ಲಾ ಚೀಣಾ ಆಚರಿಸುತ್ತಿದೆ

ಆದರೆ ಭಾರತ ಅದನ್ನು ಸಮಾಧಿಮಾಡಿದೆ

ಪಂಡಿತ ಸುಂದರಲಾಲರ ಟೀಕೆ

ಮೈಸೂರು ೧೦

ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲ ಭಾರತ-ಚೀಣಾ ಸ್ನೇಹಸಂಘದ ಆಶ್ರಯದಲ್ಲಿನಡೆದ ಬಹಿರಂಗಸಭೆಯಲ್ಲಿ ಅಲಹಾಬಾದಿನ ಪಂಡಿತ ಸುಂದರಲಾಲ್‌ರವರು ತಮ್ಮ ಚೀಣಾಪ್ರವಾಸದ ಅನುಭವಗಳನ್ನು ವಿವರಿಸಿದರು. ಶ್ರೀ ತಗಡೂರು ರಾಮಚಂದ್ರರಾಯರು ಅಧ್ಯಕ್ಷತೆವಹಿಸಿದ್ದರು.

ಭಾರತ-ಚೀಣಾ ಸ್ನೇಹ ಸಂಘವು ಕಮ್ಯೂನಿಸ್ಟರ ಪ್ರೋತ್ಸಾಹದಿಂದ ಸ್ಥಾಪಿಸಲ್ಪಟ್ಟಿದೆಯೆಂಬುದು ಸತ್ಯಕ್ಕೆ ದೂರವಾದುದೆಂದೂ, ಚೀಣಕ್ಕೂ ಭಾರತಕ್ಕೂ ಮೊದಲಿನಿಂದಲೂ ವಿಶೇಷ ಸಂಪರ್ಕವಿದ್ದುದರಿಂದಲೂ ಮತ್ತು ಎರಡು ದೇಶಗಳ ಸಮಸ್ಯೆಗಳೂ ಒಂದೇ ತರಹವಾಗಿರುವುದರಿಂದಲೂ, ಹೆಚ್ಚಿನ ಬಾಂಧವ್ಯ ಹೊಂದಲು ಈ ಸಂಘವನ್ನು ಸ್ಥಾಪಿಸಲಾಗಿದೆಯೆಂದು ಅವರು ಹೇಳಿದರು.

ನೂತನ ಚೀಣಾದ ವಿಷಯದಲ್ಲಿ ಮಾತನಾಡುತ್ತಾ, ಅಧಿಕಾರವಹಿಸಿಕೊಂಡ ಈ ಮೂರು ವರ್ಷಗಳಲ್ಲಿ ಅನೇಕ ಕಷ್ಟ ಸಮಸ್ಯೆಗಳನ್ನು ಸರ್ಕಾರವು ಬಗೆಹರಿಸಲಿದೆಯೆಂದು ತಿಳಿಸಿದರು ಮೂರು ವರ್ಷಗಳಹಿಂದೆ ಚೀಣಾದಲ್ಲಿ ಆಹಾರ ಕೊರತೆ ಶೇಕಡ ೧೪ ರಷ್ಟು ಇದ್ದಿತು ಆದರೆ ಜನರ ಸಹಕಾರದಿಂದ ಅದನ್ನು ತೊಡೆದು ಹಾಕಿ ಕಳೆದ ವರ್ಷ ಅಂತ್ಯದಲ್ಲಿ ತಮ್ಮ ದೇಶಕ್ಕೆ ಬೇಕಾಗುವಷ್ಟನ್ನು ಳಿದ ಇತರ ೧೦ ಕೋಟಿ ಜನಂಗೆ ಬೇಕಾಗುವಷ್ಟು ಆಹಾರ ಹೆಚ್ಚಿಗೆ ಉಳಿತಾಯವಾಯಿತೆಂದೂ. ಈ ಯೋಜನೆಗೆ ಹೊರಗಿನಿಂದ ಹಣಪಡೆಯದೆ ಪ್ರತಿಯೊಂದು ಜಮೀನಿನಲ್ಲೂ ಬಾವಿಗಳನ್ನು ತೋಡಿಸಿ ಆಹಾರ ಸಮಸ್ಯೆಯನ್ನು ಸರ್ಕಾರ ಬಗೆಹರಿಸಿತೆಂದೂ ಹೇಳಿದರು

ಚೀಣಾಮುಖ್ಯನಗರವಾದ ಪೀಕಿಂಗಿನಲ್ಲಿ ಹೊಸಸರ್ಕಾರ ಬರುವುದಕ್ಕಿಂತ ಮುಂಚೆ ೨ ಸಾವಿರ ವೇಶ್ಯೆಯರಿದ್ದರು ಈಗ ಅಲ್ಲಿ ಒಬ್ಬ ವೇಶ್ಯೆಯೂ ಇಲ್ಲ ಅವರಿಗೆಲ್ಲಾ ಬೇರೆ ಉದ್ಯೋಗವನ್ನು ಕಲ್ಪಿಸಿಕೊಡಲಾಯಿತು. ಅವರಲ್ಲಿ ಅನೇಕ ಮಂದಿ ಈಗ ಸಂಸಾರಿಗಳಾಗಿ ಸುಖಜೀವನ ಮಾಡುತ್ತಿದ್ದಾರೆ. ಈ ಸಮಸ್ಯೆಯನ್ನು ಯಾವ ನಿರ್ಬಂಧ ಕಾನೂನಿಂದ ಬಗೆಹರಿಸಲಿಲ್ಲ. ವೇಶ್ಯೆಯರ ಮತ್ತು ಸಾರ್ವಜನಿಕರ ಸಹಕಾರದಿಂದಲೇ ಮಾಡಲಾಯಿತು. ಇಂತಹ ಅದ್ಭುತ ಕಾರ್ಯವನ್ನು ಪ್ರಪಂಚದಲ್ಲಿ ಯಾವ ಸರ್ಕಾರವೂ ಕೈಗೊಂಡಿಲ್ಲ-ಎಂದು ಪಂಡಿತ ಸುಂದರಲಾಲ್‌ರವರು ತಿಳಿಸಿದರು.

ಚೀಣಾದಲ್ಲಿ ಭಿಕ್ಷುಕರಿಲ್ಲ, ಲಂಚಕೋರತನವಿಲ್ಲ ಮತ್ತು ನಿರುದ್ಯೋಗಿಗಳಿಲ್ಲ ಸರ್ಕಾರವು ಎಲ್ಲರಿಗೂ ಉದ್ಯೋಗ ಕಲ್ಪಿಸಿದೆ. ಅಲ್ಲಿ ಕನಿಷ್ಟ ಸಂಬಳ ೧೫೦ ರೂ. ಮತ್ತು ಅತಿ ಹೆಚ್ಚಿನ ಸಂಬಳ ೩೫೦ ರೂ. ಅಲ್ಲಿ ಬಡವರು ಮತ್ತು ಧನಿಕರೂ ಎಂಬ ವ್ಯತ್ಯಾಸವೇ ಇಲ್ಲ ದೇಶದ ಅಧ್ಯಕ್ಷರಾಗಲೀ ಅಥವ ಶ್ರೇಷ್ಠನ್ಯಾಯಾಧೀಶರಾಗಲೀ ಅವರಿಗೆ ೩೫೦ ರೂ ಸಂಬಳ ಮಾತ್ರ. ಚೀಣಾದ ಸಮಸ್ಯೆಗಳನ್ನೆಲ್ಲಾ ಸರ್ಕಾರದವರು ಗಾಂಧಿಜೀಯವರ ತತ್ವಗಳ ಮೇಲೆ ಬಗೆ ಹರಿಸುತ್ತಿದ್ದಾರೆ. ಭಾರತವು ಗಾಂಧಿಜೀಯವರನ್ನು ಕೊಲೆ ಮಾಡಿದುದಲ್ಲದೆ ಅವರ ತತ್ವಗಳನ್ನೆಲ್ಲಾ ಹೂತಿಟ್ಟಿದೆ ಆದರೆ ಪರದೇಶದ ಚೀಣಾವು ಅದನ್ನು ಅನುಷ್ಠಾನಕ್ಕೆ ತಂದಿದೆ. ಇದು ಅಲ್ಲದೆ ದೇಶದ ಅಭಿವೃದ್ಧಿಗಾಗಿ ಜಾನನುಷಶಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸಬೇಕೆಂದು ಮಹಾತ್ಮರು ಹೇಳುತ್ತಿದ್ದುದನ್ನು ಚೀಣಾ ಕಾರ್ಯರೂಪಕ್ಕೆ ತಂದಿದೆ. ಅಲ್ಲಿ ಒಂದು ದೊಡ್ಡ ನದಿಯಲ್ಲಿ ವಿಪರೀತ ಪ್ರವಾಹ ಬಂದು ಪ್ರತಿವರ್ಷ ಲಕ್ಷಾಂತರ ಟನ್ ಆಹಾರ ಧಾನ್ಯ ನಾಶವಾಗುತ್ತಿದುದರಿಂದ, ಅದನ್ನು ತಡೆಗಟ್ಟಲು ೨-೩ ಲಕ್ಷ ಮಂದಿ ಜನರೇ ಮುಂದೆ ಬಂದು ೩೦೦ ಮೈಲಿ ಕಾಲುವೆಯನ್ನು ತೆಗೆದರು ಆದರೆ ಭಾರತದಲ್ಲಿ ಜನಶಕ್ತಿಯನ್ನು ಬಿಟ್ಟು ಪರದೇಶದ ಹಣವನ್ನು ಉಪಯೋಗಿಸುತ್ತಿರುವುದು ಶೋಚನೀಯ- ಎಂದು ಅವರು ಹೇಳಿದರು.

ಮೂರನೇ ಮಹಾಯುದ್ಧ ಸಂಭವಿಸುವ ಸೂಚನೆ ಕಂಡುಬರುತ್ತಿದೆ. ಚಿಯಾಂಗ್ ಕೈಷೇಕರೊಡನೆ ಸೇರಿ ಅಮೆರಿಕವು ನೂತನ ಚೀಣಾ ಮೇಲೆ ದಂಡೆಯಾತ್ರೆ ನಡೆಸಲು ಹವಣಿಸುತ್ತಿದೆ ಇದರಿಂದ ಇಡೀ ಪ್ರಪಂಚದ ಶಾಂತಿಗೆ ಧಕ್ಕೆ ಬರುವುದು ಮತ್ತು ಭಾರತಕ್ಕೂ ಅಪಾಯ ಸಂಭವಿಸುವುದು ಆರೀತಿ ನಡೆಯದಂತೆ ಎಲ್ಲರೂ ಶ್ರಮಿಸಬೇಕು- ಎಂದು ಕೊನೆಯಲ್ಲಿ ತಿಳಿಸಿದರು.

ಎ.ಐ.ಸಿ.ಸಿ. ಚುನಾವಣೆ

ಮೈಸೂರು ೧೦

ಎ.ಐ.ಸಿ.ಸಿ.ಗೆ ಮೈಸೂರುನಗರದಉತ್ತರದಿಂದ ಶ್ರೀಗಳಾದ ಶಂಕರಯ್ಯ ಮತ್ತು ವೆಂಕಟಪ್ಪನವರುಗಳು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದಿರುವುದರಿಂದ ಶ್ರೀ ಎಸ್. ಚೆನ್ನಯ್ಯನವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಪತ್ರಿಕಾಗೋಷ್ಠಿ

ಪಂಡಿತ ಸುಂದರಲಾಲರು ಇದಿನ ಬೆಳಗ್ಗೆ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿ ನೂತನ ಚೀಣಾ ಪ್ರಗತಿಯನ್ನು ವಿವರಿಸಿದರು. ಚೀಣಾದಲ್ಲಿ ಯಾವ ರಕ್ತಪಾತವೂ ಇಲ್ಲದೆ, ಜಮೀನುದಾರರ ಸಹಕಾರದಿಂದ ಭೂಸುಧಾರಣೆಯನ್ನು ಕೈಗೊಂಡು ೪೭॥ ಕೋಟಿ ಪ್ರಜಾಸಂಖ್ಯೆ ಪೈಕಿ ೩೦ ಲಕ್ಷ ಜನರಿಗೆ ಭೂಮಿಗಳನ್ನು ಒದಗಿಸಿದ್ದಾರೆಂದೂ, ಈಗ ಪ್ರತಿಯೊಬ್ಬ ರೈತನೂ ಭೂಮಿ ಮಾಲೀಕನಾಗಿದ್ದಾನೆಂದೂ ಅವರು ತಿಳಿಸಿದರು. ಕೈಗಾರಿಕೆ ವಿಚಾರವಾಗಿ ಮಾತನಾಡುತ್ತಾ, ದೊಡ್ಡ ದೊಡ್ಡ ಕೈಗಾರಿಕೆಗಳನ್ನೆಲ್ಲಾ ಸರ್ಕಾರದ ಸ್ವಾಧೀನದಲ್ಲಿ, ಚಿಕ್ಕ ಮತ್ತು ಇತರ ಗೃಹ ಕೈಗಾರಿಕೆಗಳಿಗೆ ಖಾಸಗೀಯವರಿಗೆ ಸರ್ಕಾರ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ ದೇಶದ ಅಭಿವೃದ್ಧಿಗಾಗಿ ಪರದೇಶಗಳ ಸಹಾಯ ಪಡೆಯುತ್ತಿಲ್ಲ-ಎಂದು ಅವರು ಹೇಳಿದರು

ಐಸೆನ್ ಹೋವರ್ ಚೈನಾಕ್ಕೆ

ಅಮೆರಿಕಾದ ನೂತನ ಅಧ್ಯಕ್ಷ ಜನರಲ್ ಐಸೆನ್ ಹೋವರ್‌ರವರು ತಮ್ಮ ಕೊರಿಯಾ ಪ್ರವಾಸಮುಗಿಸಿ ಕೊಂಡು ಸೊವಿಯೆಟ್ ಉನ್ನತ ಸಚಿವರನ್ನು, ಪ್ರಾಯಶಃ ಮಾಲಟೋವ್‌ರವರನ್ನು ಭೇಟಿಮಾಡಲು ಪಿಕಿಂಗ್‌ಗೆ ಹೋಗುವರೆಂದು ಹೇಳಲಾಗಿದೆ

ಶುದ್ಧವಾದ ಹಾಲು ಸರಬರಾಜು ಕೇಂದ್ರಗಳು

ಭಾರತದ ಪ್ರತಿಯೊಂದು ನಗರ ಮತ್ತು ಪಟ್ಟಣಗಳಲ್ಲಿ ಪರಿಶುದ್ಧವಾದ ಹಾಲನ್ನು ಸುಲಭ ಬೆಲೆಯಲ್ಲಿ ಒದಗಿಸಲು ಹಾಲಿನ ಕೇಂದ್ರವನ್ನು ಸ್ಥಾಪಿಸುವ ವ್ಯವಸ್ಥೆಯನ್ನು ಆಯೋಜನಾ ಸಮಿತಿ ಸಿದ್ಧಗೊಳಿಸಿದೆ.

ಶಾಂತಿ ಸಮ್ಮೇಳನ

ಶಾಂತಿ ಸಮ್ಮೇಳನವು ಕಮ್ಯೂನಿಸ್ಟರ ಪ್ರೇರಿತವಾಗಿರುವುದರಿಂದ ಕಾಂಗ್ರೆಸ್ಸಿಗರಾರೂ ಈ ಸಮ್ಮೇಳನದಲ್ಲಿ ಭಾಗವಹಿಸಕೂಡದೆಂದು ಕಾಂಗ್ರೆಸ್ ಸಂಸ್ಥೆಯು ಸೂಚಿಸಿರುವುದಾಗಿ ಗೊತ್ತಾಗಿದೆ.

ನೆಹರೂವಿಗೆಅರಬ್ಬಿಭಾಷೆಯ ಮಹಾಭಾರತ

ಲೆಬನಾನಿನ ವಾಡಿಯಾಬುಸ್ತಾನಿ ಎಂಬುವರು ಅರಬ್ಬಿಭಾಷೆಯಲ್ಲಿ ರಚಿಸಿರುವ ಮಹಾಭಾರತದ ಪ್ರತಿಯೊಂದನ್ನು ಪ್ರಧಾನಿ ನೆಹರೂರವರಿಗೆ ಅರ್ಪಿಸಲು ಅಲ್ಲಿನ ಪಾರ್ಲಿಮೆಂಟ್ ಸದಸ್ಯ ಎಮಿಲ್‌ಬುಸ್ತಾನಿ ಭಾರತಕ್ಕೆ ತೆರಳಿದ್ದಾರೆ.

ಗಫಾರ್‌ಖಾನರ ಬಿಡುಗಡೆ ಇಲ್ಲ

ಗಡಿನಾಡಿನ ಖಾನ್ ಅಬ್ದುಲ್‌ಗಫಾರ್ ಖಾನರನ್ನು ಬಿಡುಗಡೆಮಾಡುವ ಉದ್ದೇಶ ಸರ್ಕಾರಕ್ಕಿಲ್ಲವೆಂದು ಪಾಕೀಸ್ತಾನದ ಗಡಿನಾಡು ಪ್ರಾಂತ್ಯದ ಮುಖ್ಯಮಂತ್ರಿ ತಿಳಿಸಿದ್ದಾರೆ. ಗಫಾರ್‌ಖಾನರು ಪುನಃ ಅಸ್ವಸ್ಥರಾಗಿರುವುದರಿಂದ ಲಾಹೋರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಪುರಸಭಾಧಿವೇಶನ

ಮೈಸೂರು ಪುರಸಭೆಯ ವಿಶೇಷ ಅಧಿವೇಶನವು ಇದೇ ೧೨ ನೇ ತಾರೀಖು ಮಧ್ಯಾಹ್ನ ೪ ಗಂಟೆಗೆ ಸೇರಿ, ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮಪಡಿಸಲು ೩೧.೧ ಲಕ್ಷ ರೂ ಯೋಜನೆಯನ್ನು ಪರಿಶೀಲಿಸುವುದು.

ರಷ್ಯಾ ಮತ್ತು ಚೈನಾದೊಡನೆ ಒಪ್ಪಂದವಿಲ್ಲ

ರಷ್ಯಾ ಮತ್ತು ಚೈನಾ ದೇಶಗಳೊಡನೆ ಜಪಾನ್‌ರಾಷ್ಟ್ರವು ಯಾವರೀತಿಯಾದ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳುವುದಿಲ್ಲವೆಂದು ಅಲ್ಲಿಯ ಪ್ರಧಾನಿ ಹೇಳಿರುವುದಾಗಿ ವರದಿಯಾಗಿದೆ.

ಪಂಚವಾರ್ಷಿಕವರದಿಒಪ್ಪಿಗೆ

ಆಯೋಜನಾ ಸಮಿತಿಯು ತಯಾರಿಸಿರುವ ಪಂಚ ವಾರ್ಷಿಕ ಯೋಜನೆಗೆ ರಾಷ್ಟ್ರೀಯ ಅಭಿವೃದ್ಧಿ ಸಮಿತಿಯು ಪೂರ್ಣ ಒಪ್ಪಿಗೆಯನ್ನಿತ್ತಿದೆ.

ಕಾಶ್ಮೀರ ವಿವಾದ

ಕಾಶ್ಮೀರ ವಿವಾದ ಪರಿಹಾರ ಬಗ್ಗೆ ಪಾಕೀಸ್ತಾನವು ತನ್ನ ಶಾಂತ ಮನೋಭಾವ ಪಂವಾವಧಿಯನ್ನು ಮುಟ್ಟಿದೆ ವಿಶ್ವಸಂಸ್ಥೆಯು ಸಾವಧಾನರಾಗುವುದನ್ನು ಪಾಕೀಸ್ತಾನ ಇನ್ನು ಸಹಿಸಲಾರದು ಎಂದು ಪಾಕ್ ಪ್ರಧಾನಿ ಹೇಳಿರುವರು.

ಕಾಂಗ್ರೆಸ್ ಸಂಸ್ಥೆಗೂ ಕಾಂಗ್ರೆಸ್ ಸರ್ಕಾರಕ್ಕೂ ಬಾಂಧವ್ಯ

ಕಾಂಗ್ರೆಸ್ ಸಂಸ್ಥೆ ಮತ್ತು ಕಾಂಗ್ರೆಸ್ ಸರ್ಕಾರಕ್ಕೆ ಆಡಳಿತದಲ್ಲಿ ಮಧುರ ಬಾಂಧವ್ಯ ಉಂಟಾಗಲು ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪ್ರಮುಖ ಕಾಂಗ್ರೆಸ್ಸಿಗರು ಮತ್ತು ಆಡಳಿತದಲ್ಲಿರುವ ಕಾಂಗ್ರೆಸ್ ಸಚಿವರುಗಳೊಡನೆ ಸಮಾಲೋಚನೆ ನಡೆಸಿ ತೀರ್ಮಾನಕ್ಕೆ ಬಂದಿರುವುದಾಗಿ ಗೊತ್ತಾಗಿದೆ.

ಶಾಸನ ಸಭಾಧಿವೇಶನ ಪ್ರಾರಂಭದಲ್ಲಿ ಸರ್ಕಾರದ ಆಡಳಿತ ನೀತಿಯ ಬಗ್ಗೆ ಕಾಂಗ್ರೆಸ್ ಸಂಸ್ಥೆಯ ಪ್ರಮುಖರು ಮತ್ತು ಸಚಿವ ಮಂಡಲಿ ಚರ್ಚೆ ನಡೆಸಿ ತೀರ್ಮಾನಕ್ಕೆ ಬರಬೇಕಾಗಿದೆ. ಬಜೆಟ್ಟನ್ನು ಮೊದಲೇ ಬಹಿರಂಗಪಡಿಸಲು ಸಾಧ್ಯವಿಲ್ಲವಾದ್ದರಿಂದ ಶಾಸನಸಭೆಯಲ್ಲಿ ಅದನ್ನು ಮಂಡಿಸಿದೊಡನೆಯೇ ಪಕ್ಷದ ಪ್ರಮುಖರು ಮತ್ತು ಸಚಿವರು ಅದನ್ನು ಚರ್ಚಿಸಬೇಕಾಗಿದೆ.

ಸರ್ಕಾರದ ಪ್ರಮುಖ ನೀತಿಯ ಬಗ್ಗೆ ಮಾಹೆಗೊಂದು ಸರಿಯಾದರೂ ಉಭಯತ್ರರೂ ಸೇರಿ ಸಮಾಲೋಚಿಸಿ ನಡೆಸಬೇಕು. ಕಾಂಗ್ರೆಸ್ ಶಾಸನಸಭಾಸದಸ್ಯರು ಸರ್ಕಾರದ ನಿತ್ಯ ಕಾರ್ಯಗಳಲ್ಲಿ ಪ್ರವೇಶಿಸಬಾರದು. ಉಭಯಪಕ್ಷಗಳಲ್ಲಿ ಯಾವುದಾದರೂ ಭಿನ್ನಾಭಿಪ್ರಾಯವುಂಟಾದರೆ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸಲಹೆ ಮತ್ತು ತೀರ್ಮಾನವನ್ನು ಪಡೆಯಬೇಕು. ಸಾಧ್ಯವಾದಷ್ಟು ಉಭಯತ್ರರೂ ಶಿಸ್ತನ್ನು ಕಾಪಾಡಿ ಭಿನ್ನಾಭಿಪ್ರಾಯಗಳು ಮೂಡದಂತೆ ವರ್ತಿಸಬೇಕೆಂದು ತೀರ್ಮಾನ ಮಾಡುವುದಾಗಿ ಗೊತ್ತಾಗಿದೆ.

ಪಾಕ್ ವಿರುದ್ಧ ಅಜಾದ್ ಕಾಶ್ಮೀರ

ಅಜಾದ್ ಕಾಶ್ಮೀರ ಜನರು ತಮ್ಮನ್ನಾಳುತ್ತಿರುವ ಪಾಕೀಸ್ತಾನ ಸರ್ಕಾರದ ವಿರುದ್ಧ ದಂಗೆ ಏಳುವ ಪರಿಸ್ಥಿತಿ ಉಂಟಾಗಿದೆಯೆಂದು ವಿದೇಶೀ ವೀಕ್ಷಕರು ಹೇಳುತ್ತಲಿದ್ದಾರೆ. ಈ ಪ್ರದೇಶದಲ್ಲಿ ಪಾಕೀಸ್ತಾನ ವಿರುದ್ಧ ಚಳುವಳಿಯು ತೀವ್ರವಾಗಿ ನಡೆಯುತ್ತಲಿದೆಯೆಂದೂ ಅಲ್ಲಿಯ ಜನತೆಯು ಕಾಶ್ಮೀರವನ್ನು ಸೇರಲು ಬಯಸುತ್ತಲಿರುವುದಾಗಿ ತಿಳಿಯಬಂದಿದೆ.

ಸಚಿವ ಮಂಡಲದಲ್ಲಿ ಬಿಕ್ಕಟ್ಟು

ಭೂಪಾಲಿನ ಸಚಿವ ಮಂಡಲಿಯಲ್ಲಿ ಬಿಕ್ಕಟ್ಟುಂಟಾಗಿ ಅಲ್ಲಿಯ ಮುಖ್ಯಮಂತ್ರಿ ಡಾ|| ಶಂಕರದಯಾಳ್ ಶರ್ಮರವರು ಪ್ರಧಾನಿ ನೆಹರೂ ಮರೆಹೊಕ್ಕಿರುವುದಾಗಿ ಗೊತ್ತಾಗಿದೆ. ಭೂಪಾಲಿನ ಮಂತ್ರಿಮಂಡಲದಲ್ಲಿ ೩ ಸಚಿವರಿರುವರು ಅವರಲ್ಲಿ ಕಾಂತಪ್ರಸಾದ್‌ರು ಆರ್ಥಿಕಸಚಿವರು ಇವರು ಕಾಂಗ್ರೆಸ್ ಪಕ್ಷದಲ್ಲಿಯೇ ವಿರೋಧಗಾಮಿಗಳು. ಮುಖ್ಯಮಂತ್ರಿಗಳಿಗೂ ಇವರಿಗೂ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ತಲೆದೋರಿದೆ.

ಕಾಂಗ್ರೆಸ್ಸಿಗರಾಗಿ ಸಚಿವಸ್ಥಾನದಲ್ಲಿದ್ದು ಸರ್ಕಾರ ಆಡಳಿತವನ್ನು ಬಹಿರಂಗವಾಗಿ ಟೀಕಿಸುತ್ತಾ ಮುಖ್ಯಮಂತ್ರಿಗಳ ಮುಖಭಂಗ ಮಾಡುತ್ತಿದ್ದಾರೆ. ಆದ್ದರಿಂದ ಕಾಂಗ್ರೆಸ್ಸಿನ ಗೌರವಕ್ಕೆ ಚ್ಯುತಿ ಬಂದಿರುವುದಲ್ಲದೆ, ಕೂಡಲೇ ಅವರನ್ನು ಆಸ್ಥಾನಕ್ಕೆ ರಾಜೀನಾಮೆ ಕೊಡುವಂತೆ ಮಾಡಬೇಕು. ಇಲ್ಲವೇ ತಾವು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿ ಡಾ|| ಶಂಕರ್‌ದಯಾಳ್ ಶರ್ಮರವರು ಪ್ರಧಾನಿಗೆ ತಿಳಿಸಿರುವುದಾಗಿ ಹೇಳಲಾಗಿದೆ.

ರಾಷ್ಟ್ರಪತಿಯವರ ಅಸ್ವಸ್ಥತೆ

ರಾಷ್ಟ್ರಪತಿ ಡಾ|| ರಾಜೇಂದ್ರಪ್ರಸಾದ್‌ರವರು ಸ್ವಲ್ಪ ಅಸ್ವಸ್ಥರಾಗಿರುವುದರಿಂದ ಲಕ್ನೋದಲ್ಲಿ ಅವರ ಕಾರ್ಯಕ್ರಮವನ್ನೆಲ್ಲಾ ರದ್ದುಗೊಳಿಸಿ ಪೂರ್ಣವಿಶ್ರಾಂತಿಯನ್ನು ಪಡೆಯುತ್ತಿದ್ದಾರೆ. ನಾಳೆಯದಿನ ಅವರು ಅಲಹಾಬಾದಿಗೆ ಹೋಗುವ ಸಂಭಾವವಿರುವುದಾಗಿ ಗೊತ್ತಾಗಿದೆ

ಮಕ್ಕಳ ದಿನೋತ್ಸವ

ಇದೇ ನವೆಂಬರ್ ೧೪ ನೇ ತಾರೀಖು ಪ್ರಧಾನಿ ನೆಹರೂರವರ ಜನ್ಮದಿನೋತ್ಸವವನ್ನು ಭಾರತಾದ್ಯಂತ ಮಕ್ಕಳ ದಿನೋತ್ಸವವನ್ನಾಗಿ ಆಚರಿಸಲು ಅವರು ಒಪ್ಪಿಗೆಯಿತ್ತಿರುವುದಾಗಿ ಅಖಿಲಭಾರತ ಮಕ್ಕಳ ಸಂಘದ ಅಧ್ಯಕ್ಷೆ ಶ್ರೀಮತಿ ರಾಜಕುಮಾರಿ ಅಮೃತ್‌ಕೌರ್‌ರವರು ತಿಳಿಸಿದ್ದಾರೆ.

ರಾಜ್ಯಾಂಗ ಸಭೆ

ಕಾಶ್ಮೀರ ರಾಜ್ಯಾಂಗ ಸಭೆಯು ಈದಿನ ಸೇರಿ ತನ್ನ ಹೊಸ ಅಧಿಪತಿಯ ಚುನಾವಣೆ ಬಗ್ಗೆ ತಕ್ಕ ಕಾರ್ಯಕ್ರಮ ನಡೆಸುವುದಾಗಿ ಗೊತ್ತಾಗಿದೆ.

ಆಹಾರ ಸಚಿವರುಗಳ ಸಮ್ಮೇಳನ

ಆಹಾರ ನಿಯಂತ್ರಣ ಬಗ್ಗೆ ಅಂತ್ಯ ತೀರ್ಮಾನಕ್ಕಾಗಿ

ಆಹಾರ ನಿಯಂತ್ರಣ ಬಗ್ಗೆ ಅಂತ್ಯ ತೀರ್ಮಾನಕ್ಕೆ ಬರುವ ಸಲುವಾಗಿ ಸಧ್ಯದಲ್ಲಿಯೇ ಎಲ್ಲಾ ಪ್ರಾಂತ್ಯಗಳ ಆಹಾರ ಸಚಿವರುಗಳ ಸಮ್ಮೇಳನವು ದೆಹಲಿಯಲ್ಲಿ ನಡೆಯುವುದಾಗಿ ಪ್ರಧಾನಿ ನೆಹರೂರವರು ಹೇಳಿದ್ದಾರೆ.

ಆಹಾರ ನಿಯಂತ್ರಣ ವಿಷಯವಾಗಿ ಪ್ರಧಾನಿ ಮಾತನಾಡುತ್ತಾ, ಸಾರ್ವತ್ರಿಕವಾಗಿ ಆಹಾರ ನಿಯಂತ್ರಣವನ್ನು ತೆಗೆದುಹಾಕುವುದು ಅತ್ಯಂತ ಅಪಾಯಕರ. ಯಾವುದಾದರೂ ಒಂದು ರೀತಿಯಾದ ನಿಯಂತ್ರಣ ಇದ್ದೇ ಇರಬೇಕು, ಇಲ್ಲದಿದ್ದರೆ ಸಮಾಜ ಘಾತುಕ ಶಕ್ತಿಯನ್ನು ತುಳಿಯಲಾಗುವುದಿಲ್ಲ. ಜನರ ಸುಲಿಗೆಗೆ ಅವಕಾಶ ಕೊಟ್ಟಂತಾಗುತ್ತದೆ ಎಂದು ಅವರು ಹೇಳಿದರು.

ಐಸನ್ ಹೋವರ ಭಾಷಣ ಬಗ್ಗೆ ಕಟುಟೀಕೆ

ಅಮೆರಿಕಾ ಅಧ್ಯಕ್ಷರಾಗಿ ಚುನಾಯಿತರಾಗುವ ಎರಡುದಿನ ಪೂರ್ವ ಜನರಲ್ ಐಸನ್ ಹೋವರ್‌ರವರು ಕೊರಿಯಾ ಯುದ್ಧವು ಏಷನ್ನರಿಗೆ ಸೇರಿದ ಸಮರ. ಶಾಂತಿಸ್ಥಾನವಾಗಿ ಅಮೆರಿಕಾ ಬೆಂಬಲವನ್ನು ಮಾತ್ರ ನೀಡಬಹುದು ಎಂದು ಹೇಳಿರುವುದನ್ನು ವಿಶ್ವಸಂಸ್ಥೆಯ ಭಾರತ ಪ್ರತಿನಿಧಿ ಶ್ರೀಮತಿ ವಿಜಯ ಲಕ್ಷ್ಮಿಯವರು ಕಟುವಾಗಿ ಟೀಕಿಸಿದ್ದಾರೆಂದು ಗೊತ್ತಾಗಿದೆ.

ಡಾ|| ಮೋದಿಯವರ ನೇತ್ರ ಚಿಕಿತ್ಸಾಶಿಬಿರ

ಮಡಕೇರಿ ೮

ಡಾ|| ಮೋದಿಯವರಿಂದ ನಡೆಸಲ್ಪಡುತ್ತಿದ್ದ ನೇತ್ರ ಶಸ್ತ್ರ ಚಿಕಿತ್ಸೆಯು ನಿನ್ನೆ ದಿನಕ್ಕೆ ಮುಗಿಯಿತು. ಇಂದಿನಿಂದ ಆಪರೇಷನ್‌ಗಳನ್ನು ಮಾಡುತ್ತಾ ಇಲ್ಲ ಇದರ ನೇತ್ರಪರೀಕ್ಷೆಯನ್ನು ಮಾತ್ರ ಪ್ರತಿದಿನವೂ ಸಾಯಂಕಾಲ ೫ ಘಂಟೆಗೆ ಮಾಡಿ ಉಚಿತ ಔಷಧಿಯನ್ನೂ ಸಲಹೆಯನ್ನೂ ಕೊಡುತ್ತಾರೆ. ಇಲ್ಲಿಯವರೆಗೂ ೨೫೦ ಆಪರೇಷನ್‌ಗಳನ್ನೂ ಮಾಡಿರುತ್ತಾರೆ ಮತ್ತು ೨೦೦೦ ಜನ ರೋಗಿಗಳಿಗೆ ಪರೀಕ್ಷೆ ನಡೆಸಿದ್ದಾರೆ. ೧೦ ನೇ ತಾರೀಖಿನಿಂದ ಕೊಡಗಿನ ಇತರ ಭಾಗಗಳಾದ ಪೊನ್ನಂಪೇಟೆ, ಸೋಮವಾರಪೇಟೆ, ವಿರಾಜಪೇಟೆ, ಭಾಗಮಂಡಳ ಮುಂತಾದ ಊರುಗಳಿಗೆ ಭೇಟಿ ಇತ್ತು, ಉಚಿತಸಲಹೆಯನ್ನು ಕೊಡುತ್ತಾರೆ.

ಬೆಂಕಿ ತಗುಲಿ ಬಾಲಕಿಯ ಮರಣ

ರಾಜಧಾನಿಯ ಅಶೋಕರಸ್ತೆ ಹಿಂಭಾಗದ ಗೀತಾ ಪ್ರಾರ್ಥನೇ ಸಭೆಯ ಆವರಣದಲ್ಲಿರುವ ಅಶ್ವತ್ಥ ವೃಕ್ಷದ ಬಳಿ ಪೂಜೆ ಮಾಡುತ್ತಿದ್ದ ಶ್ರೀ ಎಲ್. ಪಸ್ನಂಗಯ್ಯನವರ ೮ ವರ್ಷದ ಜಯನಾಗಮ್ಮ ಎಂಬ ಬಾಲಕಿಯ ಸೆರಗಿಗೆ ಮೊನ್ನೆ ದಿನ ಬೆಂಕಿತಗುಲಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮರಣ ಹೊಂದಿದಳೆಂದು ವರದಿಯಾಗಿದೆ.

ರಣಜಿತ್
9-11-52 ರಿಂದ
5 ದಿನಗಳು ಮಾತ್ರ
ರೆಹನ, ರಾಜ್‌ಕಪೂರ್ ನಟಿಸಿರುವ
ಸರ್ ಗಮ್

★ ವುಡ್‌ಲ್ಯಾಂಡ್ಸ್ ★
ತಾ|| 7—11—52 ರಿಂದ
ಪ್ರತಿದಿನ ಪ್ರದರ್ಶನಗಳು
ಅಮೋಘ 3 ನೇ ವಾರ
ರಂಗೀಲಿ ಹಿಂದಿ
ಪಾತ್ರ:—ರೆಹನಾ, ಯಾಕೂಬ್, ರಾಜ್‌ಕುಮಾರ್.

ಅಪೇರ
7—11—52 ರಿಂದ
ಅಮೋಘವಾದ 4 ನೇ ವಾರ
ಪ್ರತಿದಿನ ಮೂರು ಆಟಗಳು
ಮಾಪಿಳ್ಳೈ
ಪಾತ್ರ:—ಪಿ. ಕೆ. ಸರಸ್ವತಿ, ರಾಮಚಂದ್ರ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 67

೧೧-೧೧-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ತಾಲ್ಲೂಕು ಕಛೇರಿ ಕಟ್ಟಡಕ್ಕೆ ಬೆಂಕಿ

ಮೈಸೂರು ೧೧

ಹೆಗ್ಗಡದೇವನಕೋಟೆ ತಾಲ್ಲೂಕು ಕಛೇರಿಯ ಕಟ್ಟಡಕ್ಕೆ ಮೊನ್ನೆ ಬೆಳಗಿನ ಝಾವ ಭಾರಿ ಬೆಂಕಿ ಬಿದ್ದು, ಅಲ್ಲಿನ ಆಹಾರ ಶಾಖಾ ಕಟ್ಟಡವು ಸಂಪೂರ್ಣವಾಗಿ ನಾಶವಾಯಿತೆಂದೂ, ಅದರಲ್ಲಿದ್ದ ಸರ್ಕಾರಿ ಕಾಗದ ಪತ್ರಗಳು ಮತ್ತು ಇತರ ಸಾಮಾನುಗಳು ಪೂರ್ಣವಾಗಿ ಬೆಂಕಿಗೆ ಆಹುತಿಯಾದುವೆಂದೂ ವರದಿಯಾಗಿದೆ. ಪಕ್ಕದಲ್ಲಿದ್ದ ಪೋಲೀಸ್ ಇನ್ಸ್‌ಪೆಕ್ಟರ್ ಕಛೇರಿಗೂ ಸ್ವಲ್ಪ ನಷ್ಟವುಂಟಾಗಿದೆ.

ರಾತ್ರಿ ೧ ಗಂಟೆ ಸಮಯದಲ್ಲಿ ಅಲ್ಲಿದ್ದ ಪೋಲೀಸ್ ಕಾವಲುಗಾರನು ಬೆಂಕಿ ಉರಿಯುತ್ತಿರುವುದನ್ನು ಕಂಡು ವರದಿ ಮಾಡಿದನೆಂದೂ, ಅನಂತರ ವಿಶೇಷ ಶ್ರಮದಿಂದ ಪೋಲೀಸರು ಬೆಂಕಿಯನ್ನು ಆರಿಸಿದರೆಂದೂ ವರದಿಯಾಗಿದೆ

ಜಿಲ್ಲಾ ಪೋಲೀಸ್ ಅಧಿಕಾರಿಗಳಾದ ಶ್ರೀ ಕೆ ಎಸ್. ಕೃಷ್ಣಮೂರ್ತಿಯವರು ನಿನ್ನೆ ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲನೆ ನಡೆಸಿದರು

ಬೆಂಕಿಯು ಆಕಸ್ಮಿಕವಲ್ಲವೆಂದೂ, ಯಾರೋ ದುಷ್ಕರ್ಮಿಗಳು ಬೇಕೆಂದು ಬೆಂಕಿ ಹಚ್ಚಿರುವರೆಂದೂ ಪೋಲೀಸರು ಭಾವಿಸಿದ್ದಾರೆ.

ಈ ಸಂಬಂಧದಲ್ಲಿ ೪೩೬ ನೇ ಸೆಕ್ಷನ್ ಪ್ರಕಾರ ಕೇಸು ರಿಜಿಸ್ಟರ್ ಮಾಡಿ, ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ

ಭಾರತದಲ್ಲಿ ೩ ಲಕ್ಷ ವಾಹನಗಳು

ಭಾರತದಲ್ಲಿ ೧, ೪೯, ೨೯೦ ಮೋಟಾರು ಕಾರುಗಳು, ೨೬೭೭೭ ಮೋಟಾರು ಸೈಕಲ್ಲುಗಳೂ ಮತ್ತು ೪೨೨೨ ಇತರ ವಾಹನಗಳು ಇವೆಯೆಂದು ಅಂದಾಜು ಮಾಡಲಾಗಿದೆ.

ಸುಭಾಷ್ ಬೋಸರು ಪುನಃ ಬರುವರು

ಸುಭಾಷ್ ಚಂದ್ರಬೋಸರು ಪುನಃ ನಮ್ಮ ಮಧ್ಯೆ ಬರುತ್ತಾರೆಂದು ಭಾವಿಸಿದ್ದೇನೆ ಎಂದು ಆಸ್ಟ್ರೀಯಾದಲ್ಲಿರುವ ಅವರ ಪತ್ನಿಯು ತಮಗೆ ತಿಳಿಸಿರುವುದಾಗಿ ಅಲ್ಲಿಂದ ಹಿಂತಿರುಗಿರುವ ಶ್ರೀ ಹೆಚ್. ವಿ. ಕಾಮತ್ ಹೇಳಿದ್ದಾರೆ.

ಸಂಸ್ಥಾನದಲ್ಲಿ ಭೂದಾನ ಯಜ್ಞಯೋಜನೆ

ಮೈಸೂರು ೧೧

ನಾಳೆ ಸಂಜೆ ೬ ಘಂಟೆಗೆ ರಾಜಧಾನಿಯ ಮಾದರಿ ಶಾಲೆಯಲ್ಲಿ ಭೂದಾನ ಯಜ್ಞದಲ್ಲಿ ಆಸಕ್ತಿವುಳ್ಳ ಕಾರ್ಯಕರ್ತರ ಸಭೆಯು ನಡೆಯುವುದು. ಮೈಸೂರು ಪ್ರಾಂತೀಯ ಭೂದಾನಯಜ್ಞ ಸಂಯೋಜಕರಾದ ಶ್ರೀ ಬಿ. ನಾರಾಣಪ್ಪನವರು ಸಂಸ್ಥಾನದಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ವಿಚಾರವನ್ನು ಸಭೆಯಲ್ಲಿ ಚರ್ಚಿಸುವರು.

ಇದೂ ಅಲ್ಲದೆ ಭಾರತದ ಸರ್ವ ಸೇವಾ ಸಂಘದ ಕಾರ್ಯದರ್ಶಿ ಶ್ರೀ ವಲ್ಲಭಸ್ವಾಮಿಯವರು ಸಂಸ್ಥಾನದಲ್ಲಿ ಭೂದಾನ ಯಜ್ಞ ಚಳುವಳಿ ಬಗ್ಗೆ ಇದೇ ೨೬ ನೇ ತಾರೀಖಿನಿಂದ ಪ್ರವಾಸಮಾಡಲಿರುವುದರಿಂದ ಅದರ ಬಗ್ಗೆ ವ್ಯವಸ್ಥೆಮಾಡಲು ಸಭೆಯಲ್ಲಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಲಾಗುವುದು

ಚೀಣಾಕ್ಕೆ ಚಾಂಗಚುಂಗ್ ರೈಲ್ವೆ ವಶ

ರಷ್ಯದ ಗಡಿಯಿಂದ ಪೋರ್ಟ್‌ಆರ್ಥರ್ ವರೆಗಿರುವ ೧ ಸಾವಿರ ಮೈಲಿ ಉದ್ದದ ಚಾಂಗಚುಂಗ್ ರೈಲ್ವೆಯ ಮಾಲೀಕತ್ವವನ್ನು ಈಗ ರಷ್ಯ ಚೀಣಾಕ್ಕೆ ವಹಿಸಿಕೊಟ್ಟಿದೆ.

ಉಪಹಾರ ಗೃಹನೋಡಲು ಶುಲ್ಕ

ನ್ಯೂಯಾರ್ಕ್‌ನಲ್ಲಿ ೧೨೫೦ ಅಡಿ ಎತ್ತರವಾದ ಅತ್ಯುನ್ನತ ಕಟ್ಟಡವನ್ನು ನೋಡಲು ತಲಾ ೬ ರೂಪಾಯಿ ನಂತೆ ಶುಲ್ಕವನ್ನು ಕೊಟ್ಟು ೧೫೦, ೦೦೦ ಜನರು ಹೋಗಿ ಬಂದಿದ್ದಾರೆ.

ಒಂದುಷಿಲಿಂಗ್‌ಗೆ ೭೫೦೦೦ ಪೌಂಡು ಬಹುಮಾನ

ಸ್ಟಾಕ್‌ಪೋರ್ಟಿನ ಅಲಿಯರ್ ಬೌಷರ್ ಎಂಬಾಕೆ ಮತ್ತು ಆಕೆಯ ಮಗ ೫ ವರ್ಷದ ಹೆರಾಲ್ಡ್ ಎಂಬಿಬ್ಬರೂ ಸೇರಿ ಫುಟ್‌ಬಾಲ್ ಪೂಲಿಗೆ ಒಂದುಷಿಲಿಂಗ್ ಹಾಕಿದ್ದಕ್ಕೆ ೭೫೦೦೦ ಪೌಂಡು ಬಹುಮಾನ ಪಡೆದಿದ್ದಾರೆ.

ಯುವಕರ ಶಿಕ್ಷಣ

ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಯುವಕರ ಶಿಕ್ಷಣ ಬಗ್ಗೆ ಹೆಚ್ಚು ಆಸಕ್ತಿಯನ್ನು ತೋರಿಸಬೇಕೆಂದು ಕಾಂಗ್ರೆಸ್ ಸೇವಾದಳದ ಸ್ಥಾಪಕರಾದ ಡಾ|| ಎನ್. ಎಸ್. ಹಾರ್ಡೀಕರ್‌ರವರು ಹೇಳಿದ್ದಾರೆ.

ಕಾಶ್ಮೀರ ಅಧಿಪತಿಯ ಪ್ರಮಾಣ ಸ್ವೀಕಾರ

ಕಾಶ್ಮೀರ ರಾಜ್ಯಾಂಗಕ್ಕೆ ಹೊರತು ಭಾರತ ರಾಜ್ಯಾಂಗಕ್ಕಿಲ್ಲ

ಕಾಶ್ಮೀರಕ್ಕೆ ಪ್ರತ್ಯೇಕ ರಾಜ್ಯಾಂಗ ಮತ್ತು ರಾಜ್ಯಾಂಗ ಸಭೆಯಿರುವುದರಿಂದ ಅಲ್ಲಿ ಚುನಾಯಿತರಾಗುವ ಹೊಸ ಅಧಿಪತಿಯು ಕಾಶ್ಮೀರ ಪ್ರಾಂತ್ಯಕ್ಕೆ ಸಂಬಂಧಪಟ್ಟಂತೆ ಅಲ್ಲಿಯ ರಾಜ್ಯಾಂಗಕ್ಕೆ ಪ್ರಮಾಣ ವಚನವನ್ನು ಸ್ವೀಕರಿಸುವರೇ ವಿನಃ ಭಾರತ ರಾಜ್ಯಾಂಗಕ್ಕಲ್ಲವೆಂದು ಹೇಳಲಾಗಿದೆ.

ಭಾರತದಲ್ಲಿ ರಾಷ್ಟ್ರಾಧ್ಯಕ್ಷರು, ಗೌರ್ನರುಗಳು, ರಾಜಪ್ರಮುಖರು ಭಾರತ ರಾಜ್ಯಾಂಗಕ್ಕೆ ಪ್ರಮಾಣಸ್ವೀಕರಿಸುತ್ತಾರೆ. ಕಾಶ್ಮೀರದಲ್ಲಿ ಮಾತ್ರ ಸದ್ಯಕ್ಕೆ ಈ ಪದ್ಧತಿಯಿಲ್ಲ.

ಸಂಸ್ಥಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಪ್ರಾರಂಭ

ಮೈಸೂರು ೧೧

ರಾಮಾಯಣ, ಮಹಾಭಾರತ ಮತ್ತು ಇತರ ಕೀರ್ತನ ಪ್ರಚಾರ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮೈಸೂರು ಸಂಸ್ಥಾನಾದ್ಯಂತ ಕೈಗೊಳ್ಳಬೇಕೆಂದು ಸರ್ಕಾರದವರು ನಿರ್ಧರಿಸಿದ್ದರಷ್ಟೆ. ಈಗ ಆ ಯೋಜನೆಯನ್ನು ಇದೇ ೨೭ ನೇ ತಾರೀಖು ಗೀತಾ ಜಯಂತಿದಿನ ಪ್ರಾರಂಭಿಸಲಾಗುವುದು ಅಂದು ಪ್ರತಿಯೊಂದು ಜಿಲ್ಲೆಯ ಒಂದೊಂದು ಗ್ರಾಮದಲ್ಲಿ ಅದನ್ನು ಆಚರಣೆಗೆ ತರಲಾಗುವುದು.

ಕಾಶ್ಮೀರದ ಬಗ್ಗೆ ಜಹಾದ್ ಚಳುವಳಿ

ಕಾಶ್ಮೀರದ ವಿವಾದ ಪರಿಹಾರಕ್ಕಾಗಿ ಭಾರತದ ಮೇಲೆ ಧರ್ಮಯುದ್ಧವನ್ನು ಹೂಡಬೇಕೆಂಬ ಚಳುವಳಿಯು ಪುನಃ ಪಾಕೀಸ್ಥಾನದಲ್ಲಿ ಪ್ರಾರಂಭವಾಗಿರುವುದಾಗಿ ಗೊತ್ತಾಗಿದೆ ಅಲ್ಲಿಯ ಪ್ರಧಾನಿ ಆದಿಯಾಗಿ ಎಲ್ಲರೂ ಈ ಚಳುವಳಿಗೆ ಬೆಂಬಲನೀಡುತ್ತಿರುವುದಾಗಿ ಹೇಳಲಾಗಿದೆ.

ಕಾಶ್ಮೀರ ಪ್ರಶ್ನೆಯನ್ನು ವಿಶ್ವಸಂಸ್ಥೆಯು ಸರಿಯಾಗಿ ಇತ್ಯರ್ಥ ಪಡಿಸದಿದ್ದಲ್ಲಿ ಕಾಶ್ಮೀರವನ್ನು ವಿಮೋಚನೆ ಮಾಡಲು ಯುದ್ಧ ಹೂಡಬೇಕೆಂದೂ, ಅದಕ್ಕಾಗಿ ಬೇರೆ ೩ ತಿಂಗಳಿನಲ್ಲಿ ಸಿದ್ಧವಾಗಿರಬೇಕೆಂದೂ ಪಾಕೀಸ್ತಾನದ ಪಂಜಾಬು ಮುಸ್ಲಿಂ ಲೀಗಿನ ಸಮ್ಮೇಳನವು ನಿರ್ಣಯನಾಡಿದೆ. ಈ ಸಂಬಂಧದಲ್ಲಿ ಪಾಕೀಸ್ಥಾನದ ಜನರ ಸಹನೆ ಈ ಪ್ರಶ್ನೆಯಬಗ್ಗೆ ಮಿತಿಮೀರಿದೆಯೆಂದೂ ಅದರ ಬಗ್ಗೆ ಇನ್ನು ತಡವಾಗಕೂಡದೆಂದೂ ಪ್ರಪಂಚಕ್ಕೆ ತಾವು ಎಚ್ಚರಿಸಿರುವುದಾಗಿಯೂ ಅಲ್ಲಿನಪ್ರಧಾನಿಯವರು ಹೇಳಿದ್ದಾರೆ.

ಲಲಿತಾ-ಪದ್ಮಿನಿ ಲಂಡನ್ನಿಗೆ

ದಕ್ಷಿಣಭಾರತ ಸುಪ್ರಸಿದ್ಧ ಚಲನಚಿತ್ರ ತಾರೆಯವರಾದ ಲಲಿತ ಮತ್ತು ಪದ್ಮಿನಿಯರು ಮೇ ತಿಂಗಳ ನಂತರ ಬ್ರಿಟನ್ನಿಗೆ ಹೋಗಿ ೬ ತಿಂಗಳಕಾಲ ಪ್ರವಾಸ ಮಾಡಿ ಬರಲಿದ್ದಾರೆ.

ಅಂತರ ರಾಷ್ಟ್ರೀಯ ಶಿಕ್ಷಣ ಸಮ್ಮೇಳನ

ದಕ್ಷಿಣ ಏಷ್ಯಾ ಮತ್ತು ಪೆಸಿಫಿಕ್ ರಾಷ್ಟ್ರಗಳ ಒತ್ತಾಯ ಶಿಕ್ಷಣ ಸಮ್ಮೇಳನವೊಂದು ಯುನೆಸ್ಕೋ ಸಂಸ್ಥೆಯ ಆಶ್ರಯದಲ್ಲಿ ಮುಂದಿನ ತಿಂಗಳು ೧೨ ನೇ ತಾರೀಖಿನಿಂದ ಬೊಂಬಾಯಿನಲ್ಲಿ ಸೇರುವುದು.

ಕ್ಷಾಮಪರಿಹಾರಕ್ಕೆ ಸಹಾಯ

ಭಾರತದ ರೆಡ್‌ಕ್ರಾಸ್ ಸಂಸ್ಥೆಯ ಕೇಂದ್ರ ಶಾಖೆಯು ಮೈಸೂರು ಕ್ಷಾಮಪರಿಹಾರ ಕಾರ್ಯಕ್ಕಾಗಿ ೭೬ ಸಾವಿರ ರೂಗಳನ್ನು ಕೊಟ್ಟಿದೆ. ಈ ಹಣದಿಂದ ಬಟ್ಟೆ ಹಂಚಬೇಕೆಂದು ಸೂಚಿಸಲಾಗಿದೆ.

೧೧೪ ವರ್ಷದ ಪಿತಾಮಹನ ನಿಧನ

ದೆಹಲಿಯ ವೃದ್ಧ ಪಿತಾಮಹನೆನಿಸಿದ್ದ ಲಾಲ್‌ಚಂದ್ ಎಂಬುವರು ತಮ್ಮ ೧೧೪ ನೆ ವಯಸ್ಸಿನಲ್ಲಿ ಮೊನ್ನೆ ದಿನ ನಿಧನರಾದರು.

'ಸಿ' ಭಾಗದ ಮುಖ್ಯಮಂತ್ರಿಗಳ ಸಭೆ

ಇದೇ ೨೩ ನೇ ತಾರೀಖು ಕೊಡಗಿನಲ್ಲಿ "ಸಿ"ವಿಭಾಗ ಪ್ರಾಂತ್ಯಗಳ ಮುಖ್ಯಮಂತ್ರಿಗಳ ಸಭೆಯು ಸೇರುತ್ತದೆ.

ಅಮೆರಿಕಾ ಬ್ರಿಟನ್ ಸಂಯುಕ್ತ ನಿರ್ಣಯಕ್ಕೆ ಭಾರತದ ತಿರಸ್ಕಾರ

ಕಾಶ್ಮೀರ ವಿವಾದ ಪರಿಹಾರ ಬಗ್ಗೆ ಅಮೆರಿಕಾ ಮತ್ತು ಬ್ರಿಟನ್ ಭದ್ರತಾ ಸಮಿತಿಯಲ್ಲಿ ಮಂಡಿಸಿರುವ ಸಂಯುಕ್ತ ನಿರ್ಣಯವನ್ನು ಭಾರತವು ಪೂರ್ಣವಾಗಿ ತಿರಸ್ಕರಿಸುವುದಾಗಿ ಗೊತ್ತಾಗಿದೆ.

೧೯೪೮-೪೯ ರಲ್ಲಿ ಭದ್ರತಾ ಸಮಿತಿಯು ಮಾಡಿದ್ದ ನಿರ್ಣಯಕ್ಕೆ ಇದು ವ್ಯತಿರಿಕ್ತವಾಗಿದೆ. ಹಿಂದೆ ನಡೆದ ತೀರ್ಮಾನಗಳನ್ನೆಲ್ಲಾ ನಿರ್ಲಕ್ಷಿಸಿದರೆ ಭಾರತವು ಸಂಧಾನವನ್ನು ಮುಂದುವರಿಸಲು ಇಷ್ಟಪಡುವುದಿಲ್ಲವೆಂದು ಹೇಳಲಾಗಿದೆ

ಪಾಕೀಸ್ಥಾನವು ಕಾಶ್ಮೀರದಮೇಲೆ ಆಕ್ರಮಣ ನಡೆಸಿರುವುದನ್ನು ವಿಚಾರಣೆ ನಡೆಸಬೇಕೆಂದು ೫ ವರ್ಷದ ಹಿಂದೆ ಭಾರತವು ಮುಂದಿಸಿದ ವಿಷಯವನ್ನೇ ಪರಿಶೀಲಿಸಬೇಕೆಂದು ವಿಶ್ವಸಂಸ್ಥೆಯ ಭಾರತ ಪ್ರತಿನಿಧಿ ಒತ್ತಾಯಪಡಿಸುತ್ತಿರುವುದಾಗಿ ಗೊತ್ತಾಗಿದೆ

ನೆಹರೂ ವರ್ಧಂತಿ ನಡೆಸಲು ಭಾರತಸೇವಾದಳಕ್ಕೆ ಸೂಚನೆ

ಪ್ರಧಾನಿ ನೆಹರೂರವರ ೬೩ನೇ ವರ್ಷ ವರ್ಧಂತಿಯನ್ನು ಇದೇ ೧೪ ನೇ ತಾರೀಖು ಸಂಸ್ಥಾನದ ಭಾರತ ಸೇವಾದಳದ ಎಲ್ಲ ಶಾಖೆಗಳು ಆಚರಿಸಬೇಕೆಂದು ಅದರ ವ್ಯವಸ್ಥಾಪಕರು ತಿಳಿಸಿರುತ್ತಾರೆ. ಬೆಳಗ್ಗೆ ಧ್ವಜಾರೋಹಣ, ಮತ್ತು ಪ್ರಾರ್ಥನೆ. ಸಂಜೆ ಆಯಾ ಸ್ಥಳಗಳಲ್ಲಿ ಮಹಾಜನರಿಂದ ಜರುಗುವ ಜಯಂತ್ಯುತ್ಸವಗಳಲ್ಲಿ ಸಹಕರಿಸುವುದು. ಇದೇ ಮುಂತಾದ ಕಾರ್ಯಕ್ರಮಗಳನ್ನು ನಡೆಸಬೇಕೆಂದು ತಿಳಿಸಲಾಗಿದೆ.

ಸರ್ಕಾರಿನೌಕರರ ನೇಮಕಕ್ಕೆ ಸ್ಪರ್ಧಾ ಪರೀಕ್ಷೆ

ಸರ್ಕಾರಿ ಉದ್ಯೋಗಗಳಲ್ಲಿ ಪ್ರವೇಶಕ್ಕೆ ಬೇಕಾದರೆ ಅವರುಗಳನ್ನು ನೇಮಿಸಿಕೊಳ್ಳುವ ಮುನ್ನ ಸ್ಪರ್ಧಾಪರೀಕ್ಷೆಗಳನ್ನು ನಡೆಸಿಕೊಳ್ಳುವುದು ಅಗತ್ಯವೆಂದು ಪಬ್ಲಿಕ್ ಸರ್ವಿಸ್ ಕಮೀಷನ್ನಿನವರು ಮಾಡಿರುವ ಸಲಹೆಯನ್ನು ಮೈಸೂರು ಸರ್ಕಾರವು ಅಂಗೀಕರಿಸಿ ಅದರಂತೆ ೧೯೫೩ ರಿಂದ ಅದನ್ನು ಜಾರಿಗೆ ತರಲಾಗುವುದೆಂದು ತಿಳಿದುಬಂದಿದೆ.

ಜಪಾನ್ ಚಕ್ರವರ್ತಿಯ ಉತ್ತರಾಧಿಕಾರಿ

[ಜಪಾನ್ ಚಕ್ರವರ್ತಿಹೀರೋಹಿಟೋರವರು ತಮ್ಮ ಜೇಷ್ಠ ಪುತ್ರ, ೧೮ ವರ್ಷ ವಯಸ್ಸಿನ ಅಕಿಹಿಟೋರವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದಾರೆ.

ಗಿರಣಿಬಟ್ಟೆ ಸುಂಕ ಮಸೂದೆ

ಖಾದಿ ಮತ್ತು ಕೈಮಗ್ಗ ಕೈಗಾರಿಕಾಭಿವೃದ್ಧಿಗೆ ಹಣವನ್ನು ಒದಗಿಸುವುದಕ್ಕಾಗಿ ಗಿರಣಿ ಬಟ್ಟೆಗಳಮೇಲೆ ತೆರಿಗೆ ರೂಪದಲ್ಲಿ ಸುಂಕವನ್ನು ವಿಧಿಸುವ ಮಸೂದೆಯನ್ನು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ಆರ್ಥಿಕ ಸಚಿವರು ಮಂಡಿಸಿದ್ದಾರೆ.

ಈ ಸುಂಕ ವಸೂಲಿಯಿಂದ ವರ್ಷಕ್ಕೆ ೬ ಕೋಟಿ ರೂಪಾಯಿ ಉತ್ಪತ್ತಿ ಬರುವುದಾಗಿ ಗೊತ್ತಾಗಿದೆ.

ರಾಜತ್ವ ರದ್ದಿನ ಮಸೂದೆ

ಕಾಶ್ಮೀರ ರಾಜ್ಯಾಂಗ ಸಭೆಯು ನಿನ್ನೆಯದಿನ ಶ್ರೀನಗರದಲ್ಲಿ ತನ್ನ ಅಧಿವೇಶನವನ್ನು ಪ್ರಾರಂಭಿಸಿತು. ಉಪಪ್ರಧಾನಿಯವರು ರಾಜತ್ವದಲ್ಲಿ ಮತ್ತು ಚುನಾಯಿತ ಅಧಿಕಾರಿ ಶೇಖರದಲ್ಲಿ ರಾಜ್ಯಾಂಗ ತಿದ್ದುಪಡಿ ಮಸೂದೆಯನ್ನು ಸಭೆಯಲ್ಲಿ ಮಂಡಿಸಿದರು. ಬುಧವಾರ ಮಸೂದೆಯು ಚರ್ಚೆಗೆ ಬರಲಿದೆಯೆಂದು ಹೇಳಲಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೧೦-೧೧-೫೨

	ಪಲ್ಲ ರೂ.	ಆ.	ರೂ.	ಆ
ಕಡಲೇಕಾಯಿ	೧೦-		೨೨	೦
ಎಳ್ಳು	೬೭	೨	೭೧	
ಹರಳು	೪೧	೮	೪೩	೧೦
ಹುರುಳಿ				
ಹೆಸರು	೫೧	೨	೫೨	೧೪
ಅಲಸಂದೆ	೫೭		೬೪	೧೪
ಹುಚ್ಚೆಳ್ಳು			—	—
ಹೊಂಗೆಬೀಜ	—	—	—	—
ಉದ್ದು	—	—	—	—
ಮೆಣಸಿನಕಾಯಿ	೭	೬	೧೭	೧೨
ಸೀಗೇಕಾಯಿ				
ಬೆಲ್ಲ	೩	೮	—	—
ಹುಣಸೆಹಣ್ಣು				
ತೆಂಗಿನಕಾಯಿ	೧೫೦		೨೦೨	

ಅಭಾವ ಪ್ರದೇಶಗಳಲ್ಲಿ ಖಾಯಂಕಾರ್ಯಗಳ ಯೋಜನೆ

ಬೆಂಗಳೂರು ೧೧

ಕೋಲಾರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿರುವ ಅಭಾವ ಪ್ರದೇಶಗಳಲ್ಲಿ ಖಾಯಂ ಕೆಲಸಕಾರ್ಯಗಳನ್ನು ಕೈಗೊಳ್ಳಲು ಮೈಸೂರು ಸರ್ಕಾರವು ಕೇಂದ್ರಪರಿಶಿಲನಾ ಸಮಿತಿಗೆ ೨೬ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರಿಸಿ ಒಪ್ಪಿಸಿರುವುದಾಗಿ ಗೊತ್ತಾಗಿದೆ.

ಈ ಹಣವನ್ನು ಗ್ರಾಂಟು ಅಥವಾ ಸಾಲದರೂಪದಲ್ಲಿ ಕೊಡಬೇಕೆಂದು ಮನವಿಮಾಡಿಕೊಂಡಿದೆ.

೧೮ ಕೋಟಿ ರೂಪಾಯಿಗಳ ವೆಚ್ಚದ ತುಂಗ ಮತ್ತು ಲಕ್ಕವಳ್ಳಿ ಜಲಾಶಯ ನಿರ್ಮಾಣ ಯೋಜನೆಯು ಇದರಲ್ಲಿ ಅಡಕವಾಗಿದೆ ಇದರಿಂದ ಸಮಾರು ೩ ಲಕ್ಷ ಎಕರೆ ಸಾಗುವಳಿಗೆ ಸೌಕರ್ಯವುಂಟಾಗುವುದೆಂದು ಯೋಜನೆಯಲ್ಲಿ ತಿಳಿಸಲಾಗಿದೆ.

ಇದಲ್ಲದೆ ಭಾರಿ ಕೆರೆಗಳಿಗಾಗಿ ೨ ಕೋಟಿ ರೂ; ಸಣ್ಣ ಪುಟ್ಟ ಕೆರೆಗಳ ದುರಸ್ತಿಗೆ ಅಭಾವ ಜಿಲ್ಲೆಗಳಿಗೆ ೧೫೦ ಲಕ್ಷ ರೂ. ಇತರ ಜಿಲ್ಲೆಗಳಿಗೆ ೩೦ ಲಕ್ಷ ರೂ; ನೀರಾವರಿ ಯೋಜನೆಗೆ ೩ ವರ್ಷಕ್ಕೆ ತಲಾ ೫೦ ಲಕ್ಷ ರೂ ಬೇಕೆಂದೂ ಕೇಳಲಾಗಿದೆ.

ಅಮೆರಿಕಾದಲ್ಲಿ ೧೨೦೦ ಉನ್ನತಾಧಿಕಾರಿಗಳ ನಿವೃತ್ತಿ

ಜನರಲ್ ಐಸನ್ ಹೋವರ್‌ರವರು ಅಮೆರಿಕಾ ಅಧ್ಯಕ್ಷ ಪದವಿಯನ್ನು ವಹಿಸಿಕೊಂಡೊಡನೆಯೇ ಶ್ವೇತಭವನ, ಸಚಿವ ಮಂಡಲಿ, ವಿದೇಶ ರಾಯಭಾರಿಹುದ್ದೆ ಮುಂತಾದವುಗಳೆಲ್ಲಾ ಬದಲಾವಣೆಯಾಗುವುದಾಗಿ ಹೇಳಲಾಗಿದೆ. ವಿದೇಶಗಳಲ್ಲಿರುವ ೭೫ ರಾಯಭಾರಿಗಳಲ್ಲದೆ ಎಲ್ಲಾ ಬಾಬುಗಳಲ್ಲಿ ಸುಮಾರು ೧೨೦೦ ಉನ್ನತ ಅಧಿಕಾರಿಗಳು ನಿವೃತ್ತರಾಗುವರೆಂದು ತಿಳಿಯಬರುತ್ತದೆ.

ನೈಜೀರಿಯಾ ಸೌಹಾರ್ದ್ಯ ನಿಯೋಗ

ನೈಜೀರಿಯಾ ಸೌಹಾರ್ದ್ಯ ನಿಯೋಗವೊಂದು ಮದ್ರಾಸಿಗೆ ಆಗಮಿಸಿದೆ. ನೈಜೀರಿಯಾ ಸರ್ಕಾರದ ಇಬ್ಬರು ಸಚಿವರು ಈ ನಿಯೋಗದಲ್ಲಿರುವರು. ಭಾರತದ ವಿವಿಧ ಕೈಗಾರಿಕೆ ಮತ್ತು ವ್ಯವಸಾಯ ಕೇಂದ್ರಗಳಿಗೆ ಭೇಟಿಕೊಡುವರು. ಪ್ರಮುಖ ನಗರಗಳಾದ ಮುಂಬಾಯಿ, ದೆಹಲಿ, ಕಲ್ಕತ್ತ, ಮುಂತಾದನಗರಗಳಲ್ಲಿ ಸುಮಾರು ೧೫ ದಿನ ಪ್ರವಾಸಮಾಡಿ ಅನಂತರ ಸ್ವದೇಶಕ್ಕೆ ಹಿಂತಿರುಗುವರೆಂದು ಗೊತ್ತಾಗಿದೆ

ಮರಣ ತೆರಿಗೆ ಮಸೂದೆ

ಒಬ್ಬ ವ್ಯಕ್ತಿಯು ಸತ್ತಮೇಲೆ ಆತನ ಆಸ್ತಿಗಳ ಬದಲಾವಣೆಯ ಕಾಲದಲ್ಲಿ ವಿಧಿಸಬೇಕೆಂದಿರುವ ಮರಣ ತೆರಿಗೆ ಬಗ್ಗೆ ಪಾರ್ಲಿಮೆಂಟಿನಲ್ಲಿ ಹಣಕಾಸಿನ ಸಚಿವರು ಮಂಡಿಸಿರುವ ಮಸೂದೆಯನ್ನು ಚುನಾಯಿತ ಸಮಿತಿಯ ಪರಿಶೀಲನೆಗೆ ಕಳುಹಿಸಲು ಪಾರ್ಲಿಮೆಂಟ್ ತನ್ನ ಒಪ್ಪಿಗೆಯನ್ನಿತ್ತಿದೆ.

ಈ ಸಮಯದಲ್ಲಿ ಆರ್ಥಿಕ ಸಚಿವರು ಮಾತನಾಡುತ್ತಾ ಈಕಾನೂನು ಮಹಾರಾಜರುಗಳ ಸ್ವತ್ತಿಗೂ ಅನ್ವಯಿಸುವುದಾಗಿ ಹೇಳಿದ್ದಾರೆ.

ಕೊರಿಯಾ ಯುದ್ಧ ಸಮಸ್ಯೆ ಪರಿಹಾರ ಸಂಧಾನ

ಕೊರಿಯಾ ಯುದ್ಧ ಸಮಸ್ಯೆಯನ್ನು ಬಗೆಹರಿಸಲು ಪ್ರಧಾನಿ ನೆಹರೂರವರು ಚೈನಾ ಪ್ರಧಾನಿ ಚೌಎನ್‌ಲೈರವರೊಡನೆ ಪತ್ರವ್ಯವಹಾರ ನಡೆಸುತ್ತಲಿರುವುದಾಗಿ ಹೇಳಲಾಗಿದೆ. ಈ ವಿಷಯದಲ್ಲಿ ಚೈನಾದಲ್ಲಿರುವ ಭಾರತ ರಾಯಭಾರಿ ಚೈನಾಪ್ರಧಾನಿಯನ್ನು ಭೇಟಿಮಾಡಿ ಮಾತುಕತೆ ನಡೆಸುತ್ತಲಿರುವರೆಂದು ಗೊತ್ತಾಗಿದೆ.

ವಿಶ್ವಸಂಸ್ಥೆ ಕಾರ್ಯದರ್ಶಿಯ ರಾಜೀನಾಮೆ

೧೯೪೬ ರಿಂದ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಯಾಗಿರುವ ಮಿ॥ ಟ್ರಿಗ್ವಿಲೈರವರ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನಿತ್ತಿದ್ದಾರೆಂದು ಗೊತ್ತಾಗಿದೆ ಹೊಸ ಕಾರ್ಯದರ್ಶಿಯ ನೇಮಕವು ಜನವರಿಯಲ್ಲಿ ನಡೆಯುವ ಮಹಾಧಿವೇಶನದಲ್ಲಿ ಜರುಗುವುದು.

ಅಪೇರ
11—11—52 ರಿಂದ
ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ಷಾನ್ [ಹಿಂದಿ]
ಪಾತ್ರ:—ಸುರಯ್ಯ. ರಹಿಮಾನ್, ದೇವಿಡ

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ ೬೮

೧೨-೧೧-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ತಲಕಾಡು ಪಂಚಲಿಂಗ ಜಾತ್ರೆ

ಮೈಸೂರು ೧೨

ಇದೇ ೧೭ ನೇ ತಾರೀಖು ತಲಕಾಡಿನಲ್ಲಿ ನಡೆಯಲಿರುವ ಪಂಚಲಿಂಗದರ್ಶನ ಜಾತ್ರೆಗೆ ೩ ಲಕ್ಷ ಮಂದಿ ಯಾತ್ರಿಕರು ಬರುವ ನಿರೀಕ್ಷೆ ಇರುವುದರಿಂದ ಅಲ್ಲಿ ಕಾಲರ ಉಪದ್ರವವು ಹರಡದಂತೆ ಎಲ್ಲ ಮುಂಜಾಗ್ರತೆ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ.

ಯಾತ್ರಿಕರಿಗೆ ಶುದ್ಧವಾದ ನೀರು ಒದಗಿಸಲು ಸರ್ಕಾರದವರು ಏರ್ಪಾಡುಮಾಡಿದ್ದಾರೆ. ಅಲ್ಲಿನ ನಾಲಾಬಳಿ ಹಂಗಾಮಿಯಾಗಿ ಬಾವಿಗಳನ್ನು ತೆಗೆಸಲಾಗಿದೆ. ನೀರನ್ನು ಕ್ಲೋರಿನ್ ಮೂಲಕ ಶುದ್ಧಮಾಡಿ ನಲ್ಲಿಗಳ ಮೂಲಕ ಸರಬರಾಜು ಮಾಡಲಾಗುವುದು. ಜಾತ್ರೆ ಪ್ರದೇಶದಲ್ಲಿ ನಿರ್ಮಲೀಕರಣವ್ಯವಸ್ಥೆ ಮಾಡಿ ೧೫೦ ಕಕ್ಕಸ್ಸುಗಳನ್ನು ಕಟ್ಟಲಾಗಿದೆ. ಹೋಟೇಲ್ ನಡೆಸುವವರು ಕಡ್ಡಾಯವಾಗಿ ಲೈಸೆನ್ಸ್ ಪಡೆಯಬೇಕು ಮತ್ತು ಪ್ರದೇಶವು ಸ್ವಚ್ಛವಾಗಿರುವಂತೆ ನೋಡಿಕೊಳ್ಳಲು ೧೫-೧೬ ಮಂದಿ ಆರೋಗ್ಯ ಇನ್ಸ್‌ಪೆಕ್ಟರುಗಳು ಇರುವರು. ತಲಕಾಡಿಗೆ ಹೋಗುವ ಮಾರ್ಗದಲ್ಲಿ ಹಳ್ಳಿಹಳ್ಳಿಗಳಲ್ಲೂ ಯಾತ್ರಿಕರಿಗೆ ಇನಾಕ್ಯುಲೇಷನ್ ಮಾಡಲು ವ್ಯವಸ್ಥೆಮಾಡಲಾಗಿದೆ.

ಗೋಹತ್ಯ ನಿರೋಧ ಚಳುವಳಿಗೆ ೫೦ ಸಾವಿರ ಸಹಿ

ಮೈಸೂರು ೧೨

ಭಾರತಾದ್ಯಂತ ಗೋಹತ್ಯ ನಿರೋಧ ಚಳುವಳಿಸಂಬಂಧದಲ್ಲಿ ಆರ್.ಎಸ್.ಎಸ್. ನವರು ಕಳೆದ ೨೬ ನೇ ತಾರೀಖಿನಿಂದ ಇಲ್ಲಿಯವರೆಗೆ ೫೦ ಸಾವಿರದಷ್ಟು ಹಸ್ತಾಕ್ಷರಗಳನ್ನು ಇಲ್ಲಿ ಸಂಗ್ರಹಿಸಿದ್ದಾರೆ. ಈ ಚಳುವಳಿಯು ಇದೇ ೨೨ನೇ ತಾರೀಖಿನವರೆಗೆ ಹಳ್ಳಿಗಳಲ್ಲೆಲ್ಲಾ ನಡೆಯುವುದರಿಂದ ಮಹಾಜನರು ತನುಮನ ಧನ ಸಹಾಯಮಾಡಬೇಕೆಂದು ಸಂಘದ ಕಾರ್ಯದರ್ಶಿಗಳು ಕೋರಿರುತ್ತಾರೆ.

ಈ ಸಂಬಂಧದಲ್ಲಿ ಮೊನ್ನೆ ಸಂಜೆ ಶ್ರೀ ಚಂದ್ರಶೇಖರ ಜೋಯಿಸರ ಅಧ್ಯಕ್ಷತೆಯಲ್ಲಿ ಟೌನ್ ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು.

ಮದುವೆ ಬಹುಮಾನ ತೆಗೆದುಕೊಳ್ಳಕೂಡದು

ಯಾವ ಅಧಿಕಾರಿಗಳೂ ತಮ್ಮ ಕೈಕೆಳಗಿನ ನೌಕರರಿಂದ ಯಾವರೀತಿಯಾದ ಮದುವೆ ಬಹುಮಾನಗಳನ್ನು ತೆಗೆದುಕೊಳ್ಳಕೂಡದೆಂದು ಮದರಾಸ್ ಸರ್ಕಾರವು ಜಿಲ್ಲಾ ಬೋರ್ಡ್ ಮತ್ತು ಪಂಚಾಯಿತಿಯ ಅಧಿಕಾರಿಗಳಿಗೆ ಸೂಚನೆಯನ್ನಿತ್ತಿದೆ.

ಎ. ಐ. ಸಿ. ಸಿ. ಚುನಾವಣೆ

ಮೈಸೂರು ೧೨

ಇದೇ ೧೫ ನೇ ತಾರೀಖು ನಡೆಯಲಿರುವ ಮೈಸೂರು ಜಿಲ್ಲಾ ಎ. ಐ. ಸಿ. ಸಿ. ಪ್ರತಿನಿಧಿ ಚುನಾವಣೆಗಳು ಬೆಳಗ್ಗೆ ೯ರಿಂದ ಸಂಜೆ ೫ ಗಂಟೆವರೆಗೆ ಕೆಳಕಂಡ ಕೇಂದ್ರಗಳಲ್ಲಿ ನಡೆಯುವುವು.

ಮೈಸೂರು ತಾಲ್ಲೂಕು—ಮೈಸೂರು ನಗರದಲ್ಲಿರುವ [ದೊಡ್ಡ ಗಡಿಯಾರದ ಬಳಿ] ಜಿಲ್ಲಾ ಕಾಂಗ್ರೆಸ್‌ಕಛೇರಿಯಲ್ಲಿ. ಚಾಮರಾಜನಗರ ಯಳಂದೂರು, ಟಿ.ನರಸೀಪುರಗಳಲ್ಲಿ ಆಯಾ ತಾಲ್ಲೂಕು ಕಾಂಗ್ರೆಸ್ ಕಛೇರಿಯಲ್ಲಿ.

ಬಾಕಿಗಾಗಿ ಸರ್ಕಾರದ ಮೇಲೆ ದಾವದ ಎಚ್ಚರಿಕೆ

ಬೆಂಗಳೂರು ಕಾರ್ಪೊರೇಷನ್ನಿನ ವರದಿಯ ಅಂಗೀಕಾರ ವಿಚಾರದಲ್ಲಿ ಮೊನ್ನೆ ಸಭೆ ನಡೆದಾಗ, ಅದರ ಸದಸ್ಯರಾದ ಶ್ರೀ ಸಿ.ಪಿ. ದೀನದಯಾಳುರವರು ಮಾತನಾಡಿ, ಕಾರ್ಪೊರೇಷನ್ನಿಗೆ ಸರ್ಕಾರದಿಂದ ೮ ಲಕ್ಷ ರೂ. ಬಾಕಿಬರಬೇಕಾಗಿದೆಯೆಂದೂ, ಅದನ್ನು ಸರ್ಕಾರವು ಎಷ್ಟು ಪ್ರಾರ್ಥಿಸಿ ಕೇಳಿದರೂ ಕೊಡದೆ ಅವರ ಕೆಲಸಕಾರ್ಯಗಳಿಗೆ ಆತಂಕ ತಂದಿದೆಯೆಂದೂ, ಕೂಡಲೇ ಬಾಕಿಯನ್ನು ಕೊಡದಿದ್ದ ಪಕ್ಷದಲ್ಲಿ ದಾವಾ ಹೂಡಬೇಕಾಗುವುದೆಂದೂ ಎಚ್ಚರಿಕೆ ಕೊಟ್ಟರು.

ಭಾರತದ ಚಲನಚಿತ್ರಕ್ಕೆ ಬಹಿಷ್ಕಾರ

ಭಾರತ ಚಲನಚಿತ್ರಗಳನ್ನು ಪಾಕೀಸ್ಥಾನಸರ್ಕಾರವು ಬಹಿಷ್ಕರಿಸುವುದನ್ನು ಅಲ್ಲಿನ ಚಲನಚಿತ್ರ ಸಮಿತಿಯು ತೀವ್ರವಾಗಿ ಖಂಡಿಸಿ, ಸರ್ಕಾರದ ಈ ನೀತಿಯಿಂದ ಪಾಕೀಸ್ಥಾನದಲ್ಲಿ ತಯಾರಾಗುವ ಚಿತ್ರಗಳಿಗೆ ಧಕ್ಕೆ ತಗುಲಿದೆ, ಪಾಕೀಸ್ಥಾನದಲ್ಲಿ ತಯಾರಾಗುವ ಚಿತ್ರಗಳಲ್ಲಿ ಶೇಕಡ ೮೦ ರಷ್ಟು ಭಾರತಕ್ಕೆ ಹೋಗುತ್ತದೆ, ಅದು ನಿಂತುಹೋಗುವದರಿಂದ ಪಾಕೀಸ್ಥಾನದಲ್ಲಿ ಚಲನಚಿತ್ರ ಕೈಗಾರಿಕೆಯು ಅಧೋಗತಿಗಿಳಿಯುತ್ತದೆ, ಪಾಕೀಸ್ಥಾನ ಸರ್ಕಾರವು ಕೂಡಲೇ ತನ್ನ ನೀತಿಯನ್ನು ಬದಲಾಯಿಸಬೇಕೆಂದು ತಿಳಿಸಿದೆ.

ಪ್ರತಿ ೫ ನಿಮಿಷಕ್ಕೆ ರೈಲು

ಬೊಂಬಾಯಿ ಮತ್ತು ಅದರ ಉಪನಗರಗಳ ನಡುವೆ ಪ್ರತಿ ೫ ನಿಮಿಷಗಳಿಗೊಂದರಂತೆ ರೈಲುಗಳನ್ನು ಮುಂದಿನ ಜನವರಿ ತಿಂಗಳಿನಿಂದ ಓಡಿಸಲು ವ್ಯವಸ್ಥೆಮಾಡಲಾಗುವುದೆಂದು ತಿಳಿಸಲಾಗಿದೆ.

ಸಂಸ್ಥಾನದ ಕ್ಷಾಮ ಪರಿಹಾರಕ್ಕೆ ಕೇಂದ್ರ ನೆರವು

ಪಾರ್ಲಿಮೆಂಟಿನಲ್ಲಿ ಸಚಿವರ ಹೇಳಿಕೆ

ಮೈಸೂರು ಸಂಸ್ಥಾನದಲ್ಲಿ ಸುಮಾರು ೫೦ ಲಕ್ಷ ಜನರು ಕ್ಷಾಮದ ಪರಿಣಾಮಕ್ಕೆ ತುತ್ತಾಗಿದ್ದಾರೆ ಈ ಬಗ್ಗೆ ಸೂಕ್ತ ವ್ಯವಹಾರಕಾರ್ಯ ಕೈಗೊಳ್ಳಲು ಸಂಸ್ಥಾನಕ್ಕೆ ಸೂಚನೆ ಕೊಡಲಾಗಿದೆ ಸಣ್ಣ ಸಣ್ಣ ಪರಿಹಾರಕ್ರಮಗಳಲ್ಲಿ ಬಾವಿತೋಡಿಸುವುದು, ಕೆರೆಗಳನ್ನು ದುರಸ್ತು ಮಾಡುವುದು, ಹೊಸ ಕೆರೆಗಳನ್ನು ಕಟ್ಟುವುದು ಗ್ರಾಮಾಂತರ ಸಮರ್ಪ ವ್ಯವಸ್ಥೆ ಮತ್ತು ನೀರು ಉತ್ತಮ ಸರಬರಾಜು. ಇನ್ನೂ ಹೆಚ್ಚಿನ ಗಂಜೀ ಕೇಂದ್ರಗಳನ್ನು ತೆರೆಯುವುದು. ತಕಾವಿ ಸಾಲ ಮತ್ತು ತಿಂಡಿ ಸಂದಾಯ ಕೊಡುವುದು. ಮುಂತಾದ ಕಾರ್ಯಗಳನ್ನು ಕೈಗೊಳ್ಳಲು ಕೇಂದ್ರವು ಸಹಾಯಮಾಡುವುದು. ಎಂದು ಪಾರ್ಲಿಮೆಂಟಿನಲ್ಲಿ ಆಹಾರ ಸಚಿವ ಕಿದ್ವಾಯಿಯವರು ತಿಳಿಸಿರುತ್ತಾರೆ.

ಭಾರಿದರೋಡೆಗಾರನ ದಸ್ತಗಿರಿ

ಪಾಕೀಸ್ಥಾನದ ಸಿಂಧ್ ಪ್ರಾಂತ್ಯದಲ್ಲಿ ೨೦೦ ಕೊಲೆ, ೧ ಸಾವಿರ ದರೋಡೆ, ೧೦೦ ಜನರ ಅಪಹಾರ ಮತ್ತು ಲೆಕ್ಕಾಂತರ ದನಗಳ ಬೆಲೆಯ ಬೆಳೆಯ ನಾಶಮಾಡಿದ್ದ ರಹಿಂ ಹಂಗಾರಿ ಎಂಬ ಭಾರಿ ದರೋಡೆಗಾರನನ್ನು ಈಗ ದಸ್ತಗಿರಿ ಮಾಡಲಾಗಿದೆ. ಆತನು ಜನರ ಮೇಲೆ ತೆರಿಗೆ ವಿಧಿಸಿ, ಕೊಡದಿದ್ದವರಿಗೆ ಮರಣ ದಂಡನೆ ಶಿಕ್ಷೆಯನ್ನು ಕೊಡುತ್ತಿದ್ದನೆಂದೂ, ಸಿಂಧಪ್ರಾಂತ್ಯದ ಮುಶೆರೂಡ್ ಕ್ಷೇತ್ರದಲ್ಲಿ ಎಂದೂ ಕಂದಾಯವನ್ನು ವಸೂಲಿಮಾಡುವಂತೆಯೇ ಇರಲಿಲ್ಲವೆಂದೂ ಹೇಳಲಾಗಿದೆ.

ಪಾಕೀಸ್ಥಾನ ಸೈನ್ಯಕ್ಕೆ ಅಮೆರಿಕದ ಸಹಾಯ

ಪಾಕೀಸ್ಥಾನವು ತನ್ನ ಸೈನ್ಯ ಬಲವನ್ನು ಹೆಚ್ಚಿಸಿಕೊಳ್ಳಲು ಅಮೆರಿಕ ಸಹಾಯ ಮಾಡುವುದಾಗಿ ತಿಳಿಸಿದೆಯೆಂದೂ, ಈ ಬಗ್ಗೆ ಒಂದುಯೋಜನೆ ತಯಾರಾಗಿ ನೂತನ ಅಧ್ಯಕ್ಷ ಐಸೆನ್ ಹೋವರ್‌ರವರ ಶೀಘ್ರದಲ್ಲಿಯೇ ಒಂದು ತೀರ್ಮಾನಕ್ಕೆ ಬರಲಿರುವರೆಂದೂ ವದಿಯಾಗಿದೆ

ಪಾಕೀಸ್ಥಾನ ಪಶ್ಚಿಮ ರಕ್ಷಣಾಕೂಟದ ರಾಷ್ಟ್ರಗಳಲ್ಲಿ ಒಂದಾಗಿರುವುದರಿಂದ ಅದರ ಸೈನ್ಯಬಲವನ್ನು ಬಲಪಡಿಸುವುದರ ಜೊತೆಗೆ ಅಲ್ಲಿ ಅಮೆರಿಕಾವು ಕೆಲವು ವಿಮಾನ ನಿಲ್ದಾಣಗಳನ್ನು ಸಹ ನಿರ್ಮಾಣ ಮಾಡಲಾಗುವುದೆಂದು ಹೇಳಲಾಗಿದೆ

ರಾಷ್ಟ್ರೀಯ ಸಂಸ್ಥೆ ಎಂದು ಕರೆಯಲು ಅನುಮತಿ

ಸಂಸ್ಥಾನದಲ್ಲಿ ಯಾವುದಾದರೂ ಸಂಸ್ಥೆಯನ್ನು ರಾಷ್ಟ್ರೀಯ ಎಂದು ಹೆಸರಿಡಬೇಕಾದರೆ ಕೇಂದ್ರ ಸರ್ಕಾರದ ಅನುಮತಿ ಪಡೆಯಬೇಕೆಂದು ಮೈಸೂರುಸರ್ಕಾರವು ಸೂಚನೆ ಇತ್ತಿದೆ.

ಪತ್ನಿಯತ್ಯಾಗಕ್ಕೆ ೧೦ ಲಕ್ಷ ರೂ

ಹೈದರಾಬಾದ್ ನೈಜಾಮರ ೨ ನೇ ಮಗ ರಾಜಕುಮಾರ ಮೋಜಾಂಜಾ ಬಹದ್ದೂರರವರು ೧೯೩೩ರಲ್ಲಿ ಮದುವೆಯಾದ ಟರ್ಕಿ ದೇಶದ ಪತ್ನಿಯನ್ನು ತ್ಯಜಿಸಿದ್ದಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಾಗಿ ವದಿಯಾಗಿದೆ.

ಭೂದಾನಯಜ್ಞಕ್ಕೆ ೯೦೫ ಎಕರೆ ಜಮೀನು

ಕನ್ನಾನೂರಿನ ಮಿ॥ ಸಿ. ಸ್ಯಾಮುಯಲ್ ಆರಾನ್ ಎಂಬುವರು ಆಚಾರ್ಯ ವಿನೋಬಭಾವೆಯವರ ಭೂದಾನ ಯಜ್ಞ ಚಳುವಳಿಗೆ ೯೦೫ ಎಕರೆ ಜಮೀನನ್ನು ಕೊಟ್ಟಿದ್ದಾರೆ.

ಕಮ್ಯೂನಿಸ್ಟ್ ಖೈದಿ ನಾಪತ್ತೆ

ಮದ್ರಾಸಿನ ಕಮ್ಯೂನಿಸ್ಟ್ ಖೈದಿ ಜನಾರ್ದನಪೂಜಾರಿಯವರ ನಾಪತ್ತೆ ವಿಷಯವನ್ನು ಪರಿಶೀಲಿಸಲು ಮದ್ರಾಸ್ ಸರ್ಕಾರವು ಒಂದು ಸಮಿತಿಯನ್ನು ನೇಮಿಸಿದೆ.

ಕಾಫಿಬೆಲೆ ಇಳಿಸಲು ಕಾರ್ಯಕ್ರಮ

ಕಾಫಿ ಬೆಲೆಯನ್ನು ಇಳಿಸಲು ಭಾರತ ಸರ್ಕಾರವು ಕೂಡಲೇ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲು ಪರ್ಯಾಲೋಚಿಸುತ್ತಿರುವುದಾಗಿ ಗೊತ್ತಾಗಿದೆ.

ಒಂದುಆಣೆ ವಿವಾದಕ್ಕೆ ೭ ವರ್ಷ ಶಿಕ್ಷೆ

ಫಿರೋಜ್‌ಪುರದಲ್ಲಿ ಚಮ್ಮಾರ ಹುಡುಗನೊಬ್ಬನು ಬೂಟ್‌ಪಾಲಿಷ್ ಮಾಡಿದ್ದಕ್ಕೆ ಎರಡಾಣೆ ಕೇಳಿದ, ಕರಮಸಿಂಗ್ ಎಂಬುವನು ಒಂದಾಣೆಯನ್ನು ಕೊಟ್ಟನು. ಅದಕ್ಕೆ ಮಾತು ಬೆಳೆದು ಕರಂಸಿಂಗ್ ಹುಡುಗನನ್ನು ಎತ್ತಿ ಬಿಸಾಡಿದನು. ಹುಡುಗ ಪ್ರಾಣಬಿಟ್ಟ ಕರಂಸಿಂಗನಿಗೆ ೭ ವರ್ಷ ಕಠಿಣ ಶಿಕ್ಷೆಯಾಯಿತು.

೪೦ ಕೋಟಿ ರೂ ಅಣೆಕಟ್ಟಿನ ನಿರ್ಮಾಣ

೪೦ ಕೋಟಿ ರೂಪಾಯಿಗಳ ವೆಚ್ಚದಿಂದ ಗಂಗಾನದಿಗೆ ಒಂದು ಅಣೆಕಟ್ಟನ್ನು ಕಟ್ಟುವ ಯೋಜನೆಯು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿದೆ

ಪತ್ರಿಕಾ ಸಂಪಾದಕರ ಮೇಲಿನ ಮೊಕದ್ದಮೆ ವಜಾ

ಬೊಂಬಾಯಿ ವಾರ ಪತ್ರಿಕೆಗಳಾದ ಬ್ಲಿಟ್ಸ್ ಸಂಪಾದಕರಾದ ಶ್ರೀ ಕಾರಂಜಿಯಾ ಮತ್ತು ಕರೆಂಟ್ ಸಂಪಾದಕರಾದ ಕಾರಂಕಾರವರ ಮೇಲೆ ಸರ್ಕಾರವು ಹೂಡಿದ್ದ ಮೊಕದ್ದಮೆಯನ್ನು ಬೊಂಬಾಯಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ನ್ಯಾಯಬಾಹಿರವೆಂದು ವಜಾ ಮಾಡಿದ್ದಾರೆ.

ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಮಿ॥ ಚಸ್ಟರ್‌ಬೌಲ್ಸ್‌ರವರು ಮಿ॥ ರಾಬಂಚಿಯೂರವರಿಗೆ ಒಂದು ಪತ್ರಬರೆದು ಅದು ಕರೆಂಟಿನಲ್ಲಿ ಪ್ರಕಟಿಸಿದ್ದುದು ಕೃತಕ ಪತ್ರವೆಂದು ಆರೋಪಣೆಮಾಡಿದ್ದರು.

೧೭ ನೇ ತಾರೀಖು ಆಹಾರ ಸಚಿವರ ಸಮ್ಮೇಳನ

ಆಹಾರ ನಿಯಂತ್ರಣವನ್ನು ಸಡಿಲಗೊಳಿಸುವ ಬಗ್ಗೆ ಪ್ರಾಂತ್ಯ ಮತ್ತು ಕೇಂದ್ರ ಆಹಾರ ಸಚಿವರುಗಳ ಸಮ್ಮೇಳನವು ಇದೇ ೧೭ ನೇ ತಾರೀಖು ದೆಹಲಿಯಲ್ಲಿ ನಡೆಯಲಿದೆಯೆಂದು ಗೊತ್ತಾಗಿದೆ.

ಪ್ಲಾನಿಂಗ್ ಕಮಿಷನ್ ಸದಸ್ಯರು ಕೇಂದ್ರದ ಸಚಿವರು, ಎಲ್ಲಾ ಪ್ರಾಂತ್ಯಗಳ ಮುಖ್ಯ ಮಂತ್ರಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುವರು ಸಮ್ಮೇಳನವು ೨ ದಿನ ನಡೆಯುವುದಾಗಿ ಹೇಳಲಾಗಿದೆ.

ಸಕ್ಕರೆ ಬೆಲೆಯಲ್ಲಿ ಇಳಿತಾಯ

ಸಕ್ಕರೆ ಬೆಲೆಯನ್ನು ಇಳಿಸಲು ಭಾರತ ಸರ್ಕಾರವು ನಿರ್ಧರಿಸಿರುವುದರಿಂದಸುಮಾರು ೨-೩ ಲಕ್ಷಟನ್ ಸಕ್ಕರೆಯನ್ನು ವಿದೇಶಗಳಿಗೆ ರವಾನೆಮಾಡಲಾಗುತ್ತದೆ. ಎಂದು ಆಹಾರ ಸಚಿವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ಸಾಧ್ಯವಾದಷ್ಟು ಕಡಿಮೆಬೆಲೆಯಲ್ಲಿ ಜನರಿಗೆ ಸಕ್ಕರೆಯನ್ನು ಒದಗಿಸಲಾಗುತ್ತದೆಯೆಂದು ಸಚಿವರು ಹೇಳಿದ್ದಾರೆ.

ಜಯಪ್ರಕಾಶ್ ನಾರಾಯಣ್

ಪ್ರಜಾಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶ್‌ನಾರಾಯಣರವರು ತಮ್ಮ ಪ್ರಾಂತ್ಯರಾದ ಬೀಹಾರಿನಲ್ಲಿ ಭೂದಾನಯಜ್ಞ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸುವರೆಂದು ಹೇಳಲಾಗಿದೆ.

ಅಮೆರಿಕಾ ವಸ್ತುಗಳನ್ನು ಬಹಿಷ್ಕರಿಸಿ

ವಿಶ್ವದಲ್ಲಿ ಶಾಂತಿಸ್ಥಾಪನೆಯನ್ನು ಮಾಡಬೇಕಾದರೆ ಅಮೆರಿಕಾವಸ್ತುಗಳನ್ನು ಬಹಿಷ್ಕರಿಸಬೇಕು. ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ಶಾಂತಿಸ್ಥಾಪನೆಯ ಕಾತುರತೆ ಕಾಣಬರುತ್ತದೆ ಆದರೆ ಅಮೆರಿಕಾ ಶಸ್ತ್ರಾಸ್ತ್ರಗಳಲ್ಲಿಯೇ ತೊಡಗಿದೆ ಎಂದು ಡಾ॥ ಜೆ. ಸಿ. ಕುಮಾರಪ್ಪನವರು ಹೇಳಿದ್ದಾರೆ.

ಭಾರತದಲ್ಲಿ ಇತ್ತೀಚೆಗೆ ಸ್ಥಾಪಿಸಿರುವ ಜನಪದ ಯೋಜನೆಯು ವಿದೇಶೀ ಬಂಡವಾಳದಮೇಲೆ ಕೂಡಿದೆ ಅದರಿಂದ ಭಾರತದಲ್ಲಿರುವ ಸ್ವಶಕ್ತಿಯೆಲ್ಲಾ ಮಾಯವಾಗುವಂತಾಗುತ್ತದೆ ಅಲ್ಲದೆ ಭಾರತದಲ್ಲಿ ಅಮೆರಿಕಾಪ್ರಾಬಲ್ಯ ಹೆಚ್ಚಿಸುವುದೆಂದು ಅವರು ಹೇಳಿದ್ದಾರೆ.

ಭಾರತದಲ್ಲಿ ಅಮೇರಿಕಾ ತಜ್ಞರು

ಭಾರತ-ಅಮೆರಿಕಾ ತಾಂತ್ರಿಕಯೋಜನೆ ಒಪ್ಪಂದ ಪ್ರಕಾರ ಭಾರತದಲ್ಲಿ ಈಗ ೫೭ ಜನ ಅಮೆರಿಕಾ ತಜ್ಞರು ವಿವಿಧ ಶಾಖೆಗಳಲ್ಲಿ ಕೆಲಸಮಾಡುತ್ತಿರುವರು ಅವರಲ್ಲಿ ಹೆಚ್ಚಿಗೆ ಸಂಖ್ಯೆಯು ಸಲಹೆಗಾರರಾಗಿಯೇ ಇದ್ದಾರೆ.

ಕೊರಿಯ ಸಮಸ್ಯೆ ಪರಿಹಾರ

ಕೊರಿಯಯುದ್ಧ ಮುಕ್ತಾಯಗೊಳಿಸಲು ಭಾರತವು ಮಾಡುತ್ತಿರುವ ಪ್ರಯತ್ನಕ್ಕಾಗಿ ವಿಶ್ವಸಂಸ್ಥೆಯ ಅಧ್ಯಕ್ಷ ಕೆನಡಾ ವಿದೇಶಾಂಗ ಸಚಿವ ಮಿ॥ ಪಿಯರ್‌ಸನ್‌ರವರು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ.

—ಮೈಸೂರುಪೇಟೆಧಾರಣೆ—

ತಾರೀಖು ೧೧-೧೧-೫೨

	ಪಲ್ಲ ರೂ-	ಆ-	ರೂ-	ಆ
ಕಡಲೇಕಾಯಿ	೧೧-೮		೨೧	೪
ಎಳ್ಳು	೬೫-		೬೮	೮
ಹರಳು	೪೩	೩	೪೪	೧೪
ಹುರುಳಿ	೫೮	೧೪	೫೯	
ಹೆಸರು	೫೦	೪	೫೦	೧೪
ಉದ್ದು	೬೪	೮	೬೬	೧೦
ಅಲಸಂದೆ	೫೫			
ಹುಚ್ಚೆಳ್ಳು			—	—
ಹೊಂಗೆಬೀಜ	—	—	—	—
ಮೆ॥ ಕಾಯಿ ೯			೧೭	೬
ಸೀಗೇಕಾಯಿ				
ಬೆಲ್ಲ	೩	೮	—	—
ಹುಣಸೆಹಣ್ಣು				
ತೆಂಗಿನಕಾಯಿ	೧೫೧		೨೦೮	

ದಕ್ಷಿಣ ಆಫ್ರಿಕಾ ವರ್ಣಭೇದ ನೀತಿ ವಿರೋಧ ನಿರ್ಣಯ

ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವ ವರ್ಣಭೇದ ನೀತಿಯಬಗ್ಗೆ ಏಷ್ಯ ಆಫ್ರಿಕಾ ಪ್ರತಿನಿಧಿಗಳು ಮಂಡಿಸಿದ್ದ ನಿರ್ಣಯವು ವಿಶ್ವಸಂಸ್ಥೆಯ ಮಹಾಸಭೆಯ ರಾಜಕೀಯ ಸಮಿತಿಯಲ್ಲಿ ೪೨-೧ ಓಟುಗಳಿಂದ ಅಂಗೀಕಾರವಾಯಿತು. ದಕ್ಷಿಣ ಆಫ್ರಿಕಾ ಒಂದೇ ವಿರೋಧಮತ ನೀಡಿತು. ೧೩ ರಾಷ್ಟ್ರಗಳು ತಟಸ್ಥವಾಗಿದ್ದುವು.

ಈ ಸಂದರ್ಭದಲ್ಲಿ ಭಾರತ ಪ್ರತಿನಿಧಿ ಶ್ರೀಮತಿ ವಿಜಯಲಕ್ಷ್ಮಿಯವರು ಮಾತನಾಡುತ್ತಾ, ದಕ್ಷಿಣ ಆಫ್ರಿಕಾ ವರ್ಣಭೇದ ನೀತಿಯಿಂದ ಪರಿಸ್ಥಿತಿಯೇ ಹದಗೆಗೆಡುತ್ತಿದೆ. ಯಾವ ಧ್ಯೇಯದ ಮೇಲೆ ವಿಶ್ವಸಂಸ್ಥೆಯು ಸ್ಥಾಪಿತವಾಗಿದೆಯೋ ಆ ನೀತಿಗೇ ಭಾರಿ ವಿಪತ್ತನ್ನು ದಕ್ಷಿಣ ಆಫ್ರಿಕಾ ತಂದೊಡ್ಡಿದೆ.

ಅಹಿಂಸಾತ್ಮಕ ಚಳವಳಿಯಲ್ಲಿ ಸಹಸ್ರಾರು ಸ್ತ್ರೀ ಪುರುಷರು ಸತ್ಯಾಗ್ರಹ ನಡೆಸಿ, ಮಹಾತ್ಮ ಗಾಂಧಿಯವರ ಆದರ್ಶನವನ್ನು ಅನುಸರಿಸುತ್ತಾ ಇದ್ದಾರೆ.

ಮಾನವ ಹಕ್ಕು, ಮೂಲಭೂತ ಹಕ್ಕುಗಳ ಕೇಳಿಕೆಯ ಅಪರಾಧಕ್ಕೆ ಸೆರೆಮನೆವಾಸ ಮತ್ತು ಛಡಿಏಟು ಅನುಭವಿಸಬೇಕಾಗಿದೆ. ಆದಾಗ್ಯೂ ಅಹಿಂಸಾತ್ಮಕ ರೀತಿಯಲ್ಲಿ ಚಳುವಳಿಯನ್ನು ನಡೆಸುತ್ತಲಿರುವುದಕ್ಕೆ ವಿಶ್ವದ ಮೆಚ್ಚಿಕೆಯನ್ನು ವಿರೋಧ್ಯೇತರು ಪಡೆದಿದ್ದಾರೆ, ಎಂದು ಹೇಳಿದರು.

ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳ ವಿಷಯವಾಗಿ ಪ್ರಸ್ತಾಪಿಸುತ್ತಾ, ವಿಶ್ವಸಂಸ್ಥೆಯನ್ನು ಸ್ಥಾಪಿಸುವಾಗ ಪ್ರಬಲರಾಷ್ಟ್ರಗಳು ಯಾವ ಮೊಣೆಯನ್ನು ಅನುಸರಿಸಿ ಕೊಳಿದನ್ನು ಮರೆತು ಭಿನ್ನತೆಯಿಂದ ಕೆಲಸಮಾಡುತ್ತಿರುವುದು. ವಿಶ್ವಸಂಸ್ಥೆಯನ್ನು ಹಾಳು ಮಾಡುವ ರೀತಿಯಾಗಿದೆ. ಅವು ತಮ್ಮ ನೀತಿಯನ್ನು ಬದಲಾಯಿಸಿಕೊಳ್ಳು ಬೇಕೆಂದು ಶ್ರೀಮತಿ ವಿಜಯಲಕ್ಷ್ಮಿಯವರು ಹೇಳಿದರು.

ದಕ್ಷಿಣ ಆಫ್ರಿಕಾ ವರ್ಣ ನೀತಿ ಬಗ್ಗೆ ಈಗ ಅಂಗೀಕೃತ ನಿರ್ಣಯದಲ್ಲಿ ಭಾರತ, ಪಾಕೀಸ್ಥಾನ ಮತ್ತು ದಕ್ಷಿಣ ಆಫ್ರಿಕಾಗಳಿಗೆ ಸಹಾಯ ನೀಡಲು ೩ ಜನ ಸದಸ್ಯರುಳ್ಳ ಸೌಹಾರ್ದ ಸಮಿತಿಯನ್ನು ನೇಮಿಸಿ ಮುಂದಿನ ಮಹಾಧಿವೇಶನದ ವೇಳೆಗೆ ಅದು ತನ್ನ ವರದಿಯನ್ನುಒಪ್ಪಿಸಬೇಕು. ಅಲ್ಲಿಯವರೆಗೆ ಈಗ ದಕ್ಷಿಣಆಫ್ರಿಕಾ ಅನುಸರಿಸುತ್ತಲಿರುವ ನೀತಿಯನ್ನು ರದ್ದುಗೊಳಿಸಬೇಕೆಂದು ತಿಳಿಸಿದೆ.

ಸಿಂಹಳದಲ್ಲಿ ಭಾರತೀಯರ ಪೌರಹಕ್ಕು

ಸಿಂಹಳದಲ್ಲಿರುವ ಭಾರತೀಯರ ಪೌರಹಕ್ಕಿನ ಬಗ್ಗೆ ಅಲ್ಲಿಯ ಪ್ರಧಾನಿ ಸೇನಾನಾಯಕೆಯವರು ಶಾಸನ ಸಭೆಯಲ್ಲಿ ೧೯೪೯ ನೇ ಪ್ರಜಾಹಕ್ಕಿನ ಶಾಸನ ತಿದ್ದುಪಡಿ ಮಸೂದೆಯನ್ನು ಮಂಡಿಸಿದ್ದಾರೆ ಈ ತಿದ್ದುಪಡಿ ಪ್ರಕಾರ ಸಿಂಹಳದಲ್ಲಿ ಪ್ರಜಾಹಕ್ಕುಪಡೆಯಲು ಭಾರತೀಯರು ೭ ವರ್ಷ ಕಾಲ ಅಲ್ಲಿ ವಾಸವಾಗಿರಬೇಕು ಅವರ ಪತ್ನಿ,ಅವಿವಾಹ ಮಕ್ಕಳು ಅಲ್ಲಿಯೇ ಇರಬೇಕಾಗಿದೆ.

ರಣಜಿತ್
9-11-52 ರಿಂದ
5 ದಿನಗಳು ಮಾತ್ರ
ರೆಹನ, ರಾಜ್‌ಕಪೂರ್ ನಟಿಸಿರುವ
ಸರ್‌ಗಮ್

★ ವುಡ್‌ಲ್ಯಾಂಡ್ಸ್ ★
14—11—52 ರಿಂದ ಪ್ರಾರಂಭ
ಪ್ರತಿದಿನ ಮೂರು ಆಟಗಳು
ನೌಬಹಾರ್ ಹಿಂದಿ
ಭೂಮಿಕೆ:--ಅಶೋಕ್ ಕುಮಾರ್, ನಳಿನಿಜಯವಂತ್, ಕುಲ್‌ದೀಪ್.

ಪ್ರಭಾ
೧೪-೧೧-೫೨ ರಿಂದ ಎರಡನೇ ವಾರ
ಪೀಪಲ್ಸ್ ಆರ್ಟ್ ಪ್ರೊಡಕ್ಷನ್ಸ್‌ರವರ
ನೂತನ ಸಾಮಾಜಿಕ ತೆಲುಗು ಚಿತ್ರ
ಪಲ್ಲೆಟೂರು
ಭೂಮಿಕೆ: ಎನ್. ಟಿ. ರಾಮರಾವ್, ಸಾವಿತ್ರಿ, ಎಸ್.ವಿ.ರಂಗರಾವ್, ಅಚ್ಚೆಯ್ಯ ಚೌಧುರಿ, ಟಿ.ಜಿ. ಕಮಲಾದೇವಿ
ಸಂಗೀತ:- ಘಂಟಸಾಲ. ನಿರ್ದೇಶನ: ಟಿ. ಪ್ರಕಾಶರಾವ್

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 69

೧೩-೧೧-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

೩೧.೧ ಲಕ್ಷ ರೂ. ನೀರು ಸರಪರಾಜು ಯೋಜನೆ

ಪುರಸಭೆಯಲ್ಲಿ ಅಂಗೀಕಾರ

ಮೈಸೂರು ೧೩

ನಿನ್ನೆಸಂಜೆ ಶ್ರೀ ಎ- ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆದ ಪುರಸಭೆಯ ವಿಶೇಷ ಅಧಿವೇಶನದಲ್ಲಿ ನಗರದಲ್ಲಿ ನೀರು ಸರಪರಾಜು ಉತ್ತಮಪಡಿಸುವ ಯೋಜನೆಯ ಮಂಜೂರಾತಿ ಬಗ್ಗೆ ಚರ್ಚೆ ನಡೆಯಿತು.

ಸರ್ಕಾರದವರು ಈ ವರ್ಷ ಸಂಸ್ಥಾನದ ಪುರಸಭೆಗಳ ನೀರು ಸರಪರಾಜು ಅಭಿವೃದ್ಧಿ ವ್ಯವಸ್ಥೆಗಾಗಿ ೫೦ ಲಕ್ಷ ರೂಗಳ ಗ್ರಾಂಟನ್ನು ಮಂಜೂರುಮಾಡಿರುವುದರಿಂದ ಮೈಸೂರು ಪುರಸಭೆಯವರು ಕೂಡಲೇ ಅದಕ್ಕಾಗಿ ಬೇಕಾಗುವ ಹಣ ಮತ್ತು ಯೋಜನೆಯನ್ನು ಸರ್ಕಾರಕ್ಕೆ ಕಳುಹಿಸಬೇಕೆಂದು ಸೂಚನೆ ಇತ್ತಿರುವುದನ್ನು ಅಧ್ಯಕ್ಷರು ಸಭೆಯ ಗಮನಕ್ಕೆ ತಂದರು.

ಹಿಂದೆ ಪುರಸಭೆಯವರು ೩೧.೧ ಲಕ್ಷ ರೂ ಯೋಜನೆಯೊಂದನ್ನು ಸರ್ಕಾರಕ್ಕೆ ಕಳುಹಿಸಿ, ಅದುಪೈಕಿ ಅರ್ಧಭಾಗವನ್ನು ಸರ್ಕಾರದವರು ಗ್ರಾಂಟಿನರೂಪದಲ್ಲೂ ಮಿಕ್ಕರ್ಧವನ್ನು ಸಾಲದರೂಪದಲ್ಲೂ ಕೊಟ್ಟು ಅದನ್ನು ಪ್ರತಿವರ್ಷ ಕಂತಿನಲ್ಲಿ ವಾಪಸುಪಡೆಯಬೇಕೆಂದೂ ಕೇಳಲಾಗಿತ್ತು. ಆ ಯೋಜನೆಯನ್ನು ಈಗ ಸರ್ಕಾರದವರು ಮಂಜೂರು ಮಾಡಬೇಕೆಂದು ಕೇಳುವುದೇ ಉತ್ತಮವೆಂದು ಶ್ರೀ ಎ. ಕೃಷ್ಣಮೂರ್ತಿರಾಯರು ತಿಳಿಸಿದರು.

ವಾಣಿವಿಲಾಸ ನೀರು ಸರಪರಾಜು ಕೇಂದ್ರದ ಅಧಿಕಾರಿಗಳಾದ ಶ್ರೀ ಅಂಬೇರ್‌ಕರ್‌ರವರು ಒಂದು ವಿವರಣೆಯನ್ನಿತ್ತು, ನಗರಕ್ಕೆ ೭ ಮಿಲಿಯನ್ ಗ್ಯಾಲನ್ ನೀರು ಸರಬರಾಜಿಗಾಗಿ ೩೧.೧ ಲಕ್ಷ ರೂ ಯೋಜನೆ ತಯಾರಿಸಿ ಅದರಲ್ಲಿ ೨೪ ಅಂಗುಲ ಪೈಪುಗಳನ್ನು ಬೆಳಗೊಳದಿಂದ ಜ್ಯೂಯಿಲ್ ಫಿಲ್ಟರಿಗೆ ಹಾಕಲು ೧೯ ಲಕ್ಷ ರೂ. ಈಗ ಹಾಲಿ ನಗರದಲ್ಲಿರುವ ಡಿಸ್ಟ್ರಿಬ್ಯೂಟರ ವ್ಯವಸ್ಥೆ ಮತ್ತು ೬೨೦೦ ಮೀಟರುಗಳನ್ನು ಹಾಕಲು ೧೫,೫೯,೫೦೦ ರೂ ಖರ್ಚು ಒದಗಿಸಲಾಗಿತ್ತು. ಆದರೆ ಕಬ್ಬಿಣ ಮತ್ತು ಇತರ ಸಾಮಗ್ರಿಗಳ ಬೆಲೆ ಈಗ ಹೆಚ್ಚಾಗಿರುವುದರಿಂದ ಆಯೋಜನೆಯು ಈಗ ೩೯ ೫ ಲಕ್ಷ ರೂ ಏರಿದೆಯೆಂದೂ ತಿಳಿಸಿದರು.

ಶ್ರೀ ಟಾಲಕ್ಕಿ ಸೀತಾರಾಮಯ್ಯನವರು ಮಾತನಾಡಿ, ಈಗಾಗಲೇ ಸರ್ಕಾರದವರು ೧೩ ಲಕ್ಷ ರೂ ವೆಚ್ಚದಲ್ಲಿ ೨೪ ಅಂಗುಲ ಪೈಪುಗಳನ್ನು ಈ ಯೋಜನೆಗಾಗಿ ಕಳೆದ ವರ್ಷವೇ ಸರಪರಾಜು ಮಾಡಿರುವುದರಿಂದ ಈಗ ಸರ್ಕಾರದವರು ಕೇವಲ ೨ ಲಕ್ಷ ರೂ ಗ್ರಾಂಟು ಮತ್ತು ೧೫ ಲಕ್ಷ ರೂ ಸಾಲ ಮಾತ್ರ ಕೊಡಬೇಕಾಗಿದೆಯೆಂದೂ,ಅದನ್ನು ಕೂಡಲೇ ಮಂಜೂರು ಮಾಡಬೇಕೆಂದು ಪ್ರಾರ್ಥಿಸಬೇಕೆಂದೂ ತಿಳಿಸಿದರು.

ಶ್ರೀ ವೆಂಕಟರಮಣಯ್ಯನವರು ಬೆಳಗೊಳದಿಂದ ಫಿಲ್ಟರಿಗೆ ಪೈಪುಹಾಕಲು ೨ ವರ್ಷ ಹಿಡಿಯುವುದರಿಂದ, ಈಗ ೧೯ ಲಕ್ಷ ರೂ ಮಂಜೂರು ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿ ಅನಂತರ ಇತರ ಕೆಲಸ ಕೈಗೊಳ್ಳುವುದು ಸೂಕ್ತವೆಂದು ಸಲಹೆ ಕೊಟ್ಟರು. ಶ್ರೀ ಶ್ರೀನಿವಾಸಅಯ್ಯಂಗಾರ್ಯರು ಮಾತನಾಡಿ, ದೊಡ್ಡ ಪೈಪುಗಳನ್ನು ಹಾಕುವುದಕ್ಕೆ ಮುಂಚೆ, ಈಗ ಪೋಲಾಗುತ್ತಿರುವ ನೀರನ್ನು ತಡೆದು ಡಿಸ್ಟ್ರಿಬ್ಯೂಟರಿ ವ್ಯವಸ್ಥೆಯನ್ನು ಉತ್ತಮ ಪಡಿಸಬೇಕೆಂದು ಹೇಳಿದರು. ಮೀಟರುಗಳು ಹಾಕುವುದನ್ನು ಶ್ರೀ ಮೀರ್ ನೂರ್ ಹುಸೇನರು ವಿರೋಧಿಸಿ, ಜನರು ಎಷ್ಟು ಬೇಕಾದರೂ ನೀರು ಉಪಯೋಗಿಸುವಂತೆ ಇರಬೇಕೆಂದು ಹೇಳಿದರು.

ಕೊನೆಯಲ್ಲಿ ಪುರಸಭೆಯವರು ಹಿಂದೆ ಕಳುಹಿಸಿರುವ ೩೧.೧ ಲಕ್ಷ ರೂ. ಯೋಜನೆಯನ್ನು ಸರ್ಕಾರವು ಈಗ ಮಂಜೂರು ಮಾಡಬೇಕೆಂದೂ, ಅದರಲ್ಲಿ ಹೆಚ್ಚಿಗೆತಗಲುವ ೮ ಲಕ್ಷ ರೂಗಳನ್ನು ಮೀಟರುಗಳನ್ನು ಕಡಿಮೆ ಮಾಡುವುದು ಮತ್ತು ಹಳೆಯ ಪೈಪುಗಳನ್ನೇ ಉಪಯೋಗಿಸುವುದು ಇವುಗಳಿಂದ ಸರಿದೂಗಿಸಬೇಕೆಂದು ಸೂಚಿಸುವ ನಿರ್ಣಯವು ಅಂಗೀಕಾರವಾಯಿತು.

ರಾಜಧಾನಿಗೆ ಭತ್ತ ತರಲು ರಹದಾರಿ ಬೇಕಿಲ್ಲ

ಮೈಸೂರು ೧೩

ಮೈಸೂರು ನಗರದಲ್ಲಿ ರೇಷನ್ ಪದ್ಧತಿ ರದ್ದಾಗಿರುವುದರಿಂದ ಸುಗ್ಗಿಕಾಲದಲ್ಲಿ ತಮ್ಮ ಭತ್ಯವನ್ನು ನಗರಕ್ಕೆ ತರುವವರು ಇನ್ನು ಮುಂದೆ ರೇಷನ್ ಕಾರ್ಡುಗಳ ಪ್ರತಿಯನ್ನು ತೋರಿಸಿ ರಹದಾರಿ ಪಡೆದು ತರಬೇಕಾಗಿಲ್ಲವೆಂದೂ, ತಮಗೆ ಬೇಕಾಗುವಷ್ಟು ಭತ್ಯವನ್ನು ಯಾವ ಅಡ್ಡಿ ಆತಂಕವೂ ಇಲ್ಲದೆ ತರಬಹುದೆಂದು ಸರ್ಕಾರವು ಸೂಚನೆ ಇತ್ತಿರುವುದಾಗಿ ತಿಳಿದುಬಂದಿದೆ

ಸಂಬಳದೊಡನೆ ತುಟ್ಟಿಭತ್ಯ ಐಕ್ಯ

೭೫೦ ರೂ. ಗಿಂತ ಕಮ್ಮಿ ಬರುತ್ತಿರುವ ಕೇಂದ್ರಸರ್ಕಾರದ ನೌಕರರ ತುಟ್ಟಿಭತ್ಯದ ಶೇಕಡ ೫೦ ರಷ್ಟನ್ನು ಮೂಲ ಸಂಬಳದೊಡನೆ ಐಕ್ಯಮಾಡಬೇಕೆಂದುಸಮಿತಿಯು ಸಲಹೆಮಾಡಿದೆಯೆಂದೂ, ಇದರಿಂದ ೧೫-೨೫ ಲಕ್ಷ ನೌಕರರಿಗೆ ಅನುಕೂಲವಾಗುವುದೆಂದೂ ಆದರೆ ಸರ್ಕಾರಕ್ಕೆ ೫ ಕೋಟಿ ರೂ ಹೆಚ್ಚು ಖರ್ಚಾಗುವುದೆಂದೂ ಪಾರ್ಲಿಮೆಂಟಿನಲ್ಲಿ ನಿನ್ನೆ ತಿಳಿಸಲಾಗಿದೆ.

ಜನಪದ ಯೋಜನೆ ಪರಿಶೀಲನೆ

ಭಾರತದಲ್ಲಿ ನಡೆಯುತ್ತಲಿರುವ ಜನಪದ ಯೋಜನೆಯ ಕಾರ್ಯವನ್ನು ಪರಿಶೀಲಿಸಲು ಪಾಕೀಸ್ತಾನದಿಂದ ೨೮ ಅಧಿಕಾರಿಗಳು ಬರುವರೆಂದು ಹೇಳಲಾಗಿದೆ.

ಕಾರ್ಮಿಕ ವಿನಿಮಯ ಪರಿಶೀಲನಾ ಸಮಿತಿ

ದೊಡ್ಡದೊಡ್ಡ ಕೈಗಾರಿಕಾ ಸಂಸ್ಥೆಗಳನ್ನು ಕಾರ್ಮಿಕರನ್ನು ಕಾರ್ಮಿಕ ವಿನಿಮಯ ಸಂಸ್ಥೆಗಳ ಮೂಲಕವೇ ಆರಿಸಿಕೊಳ್ಳುವಂತೆ ಮತ್ತು ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ತಕ್ಕ ಸಲಹೆ ನೀಡಲು ಕೇಂದ್ರವು ಪಾರ್ಲಿಮೆಂಟ್ ಸದಸ್ಯ ಶ್ರೀ ಬಿ. ಶಿವರಾಯರ ಅಧ್ಯಕ್ಷತೆಯಲ್ಲಿ ಒಂದುಸಮಿತಿಯನ್ನು ನೇಮಿಸಿದೆ.

ನೆಹರೂ ಚಿತ್ರಪಟವನ್ನು ಪೊಲೀಸರು ಸುಟ್ಟರು

ಪೋರ್ಚುಗೀಸರಿಗೆ ಸೇರಿದ ಪೆಂಜೋಣೆ ಎಂಬಲ್ಲಿ ಒಂದು ಉಪಹಾರ ಮಂದಿರದಲ್ಲಿ ಹಾಕಿದ್ದ ಭಾರತ ಪ್ರಧಾನಿ ನೆಹರೂರವರ ಚಿತ್ರಪಟವನ್ನು ಗೋವಾ ಪೊಲೀಸಿನವರು ಕಿತ್ತು, ಹರಿದು ಸುಟ್ಟರೆಂದೂ ಆರೀತಿ ಭಾರತ ನಾಯಕರ ಪಟವನ್ನು ಪ್ರದರ್ಶಿಸಕೂಡದೆಂದು ಅದರ ಮಾಲೀಕನಿಗೆ ಎಚ್ಚರಿಕೆಯಿತ್ತರೆಂದು ಗೊತ್ತಾಗಿದೆ.

ಆಹಾರ ಪಡಿತರ ರದ್ದಿಲ್ಲ

ಆಹಾರ ಪಡಿತರ ಪದ್ಧತಿಯನ್ನು ಸದ್ಯಕ್ಕೆ ತಮ್ಮ ಪ್ರಾಂತ್ಯದಲ್ಲಿ ರದ್ದುಗೊಳಿಸುವುದಿಲ್ಲವೆಂದು ತಿರುವಾಂಕೂರ್-ಕೊಚ್ಚಿ ಆಹಾರ ಸಚಿವರು ಹೇಳಿದ್ದಾರೆ.

ಕಾಶ್ಮೀರದ ನೂತನ ಲಾಂಛನ

ಗುರಾಣಿಯ ಆಕಾರದಲ್ಲಿದ್ದು ಅದರ ಮೇಲೆ ಸಮಾನ ದೂರದಲ್ಲಿ ಮೂರುಪಟ್ಟಿಗಳು ಮತ್ತು ಅದರ ಮೇಲ್ಭಾಗದಲ್ಲಿ ಅರಳಿದ ಕಮಲ, ಉಭಯಪಾರ್ಶ್ವಗಳಲ್ಲಿ ಎಡುರುಬದುರಾಗಿ ಎರಡು ನೇಗಿಲು ಇರುವ ನೂತನ ಲಾಂಛನವನ್ನು ಕಾಶ್ಮೀರದ ರಾಜ್ಯಾಂಗಸಭೆಯು ಅಂಗೀಕರಿಸಿದೆ.

ಆಹಾರನಿಯಂತ್ರಣ ರದ್ದಿನ ಬಗ್ಗೆ ಭಿನ್ನಾಭಿಪ್ರಾಯ

ದೇಶದಲ್ಲಿ ಆಹಾರ ನಿಯಂತ್ರಣವನ್ನು ರದ್ದುಗೊಳಿಸುವ ಬಗ್ಗೆ ಕೇಂದ್ರಸರ್ಕಾರ ಸಚಿವ ಮಂಡಲಿಯಲ್ಲಿ ಭಿನ್ನಾಭಿಪ್ರಾಯ ತಲೆದೋರಿರುವುದಾಗಿ ಹೇಳಲಾಗಿದೆ.

ಅರ್ಥಸಚಿವ ಶ್ರೀ ದೇಶಮುಖ್ ಮತ್ತು ಆಯೋಜನಾ ಶಾಖಾ ಸಚಿವ ಶ್ರೀ ನಂದಾರವರು ಆಹಾರ ನಿಯಂತ್ರಣ ರದ್ದಿಗೆ ವಿರೋಧವಾಗಿದ್ದಾರೆ.

ಆಹಾರಸಚಿವ ಶ್ರೀ ಕಿದ್ವಾಯಿಯವರು ಮಾತ್ರ ನಿಯಂತ್ರಣ ಪೂರ್ಣವಾಗಿ ತೆಗೆಯಲು ಇಷ್ಟಪಟ್ಟವರಾಗಿರುತ್ತಾರೆ ಈ ವಿಷಯಗಳು ಸಚಿವ ಮಂಡಲಿಯಲ್ಲಿ ತೀರ್ಮಾನವಾಗಿಲ್ಲವಾಗಿ ಎಲ್ಲಾ ಪ್ರಾಂತ್ಯ ಸರ್ಕಾರಗಳ ಪೂರ್ವಾಭಿಪ್ರಾಯವನ್ನು ಪಡೆಯಲು ೧೭ನೇ ತಾ॥ ಆಹಾರ ಸಚಿವರುಗಳ ಸಮ್ಮೇಳನವನ್ನು ಕರೆಯಲಾಗಿದೆಯೆಂದು ಹೇಳಲಾಗಿದೆ

ಭಾರತ ನಾಯಕರ ಭಾವಚಿತ್ರ ಪ್ರದರ್ಶನಕ್ಕೆ ನಿಷೇಧ ಆಜ್ಞೆ

ಪೋರ್ಚುಗೀಸರಿಗೆ ಸೇರಿರುವ ಗೋವಾದಲ್ಲಿ ಯಾವ ಸಾರ್ವಜನಿಕ ಪ್ರದೇಶಗಳಲ್ಲೂ ಭಾರತ ನಾಯಕರಾದ ಮಹಾತ್ಮ ಗಾಂಧಿ, ಪಂಡಿತ ನೆಹರೂ ಮುಂತಾದವರ ಭಾವಚಿತ್ರಗಳನ್ನು ಪ್ರದರ್ಶಿಸಕೂಡದೆಂದು ಅಲ್ಲಿಯ ಸರ್ಕಾರವು ಆಜ್ಞೆ ಹುಟ್ಟಿಸಿದೆ ಅವುಗಳ ಸ್ಥಾನದಲ್ಲಿ ಪೋರ್ಚುಗೀಸ್ ನಾಯಕರ ಮತ್ತು ಪ್ರಧಾನಿಯ ಭಾವಚಿತ್ರಗಳನ್ನು ಇಡಬೇಕೆಂದು ಸೂಚನೆ ಕೊಡಲಾಗಿದೆಯೆಂದು ಗೊತ್ತಾಗಿದೆ.

ಕಾಶ್ಮೀರಕ್ಕೆ ಚುನಾಯಿತ ಅಧಿಪತಿ

ಕಾಶ್ಮೀರಕ್ಕೆ ಅಧಿಪತಿಯನ್ನು ಚುನಾಯಿಸಿ ಕೊಳ್ಳಲು ಅಲ್ಲಿಯ ರಾಜ್ಯಾಂಗದಲ್ಲಿ ತಿದ್ದುಪಡಿಯನ್ನು ನಿನ್ನೆಯದಿನ ರಾಜ್ಯಾಂಗ ಸಭೆಯು ಸರ್ವಾನುಮತದಿಂದ ಅಂಗೀಕಾರ ಮಾಡಿದೆ

ಸಿ. ಆರ್. ಬೆಂಗಳೂರಿನಲ್ಲಿ

ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರು ಬೆಂಗಳೂರಿಗೆ ನಿನ್ನೆ ಆಗಮಿಸಿದರು.

ದಕ್ಷಿಣಆಫ್ರಿಕಾಕ್ಕೆ ಬ್ರಿಟನ್ನಿನ ಬೆಂಬಲ

ದಕ್ಷಿಣ ಆಫ್ರಿಕಾ ವರ್ಣಭೇದ ನೀತಿಯ ಬಗ್ಗೆ ಚರ್ಚೆಯು ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಪ್ರಾರಂಭವಾಗಿದೆ. ಭಾರತದ ಪ್ರತಿನಿಧಿ ಶ್ರೀಮತಿ ವಿಜಯಲಕ್ಷ್ಮಿಯವರು ದಕ್ಷಿಣ ಆಫ್ರಿಕಾ ನೀತಿಯನ್ನು ಕಟುವಾಗಿ ಟೀಕಿಸಿದರು. ಮಲಾನ್ ಸರ್ಕಾರದ ನೀತಿಯು ಒಳಾಡಳಿತಕ್ಕೆ ಸಂಬಂಧಪಟ್ಟಿರುವುದರಿಂದ ವಿಶ್ವಸಂಸ್ಥೆಯು ಈ ವಿಷಯ ಚರ್ಚಿಸಲು ಹಕ್ಕಿಲ್ಲವೆಂದು ದಕ್ಷಿಣ ಆಫ್ರಿಕಾ ಪ್ರತಿನಿಧಿ ವಾದಿಸಿದರು. ಅವರ ವಾದಕ್ಕೆ ಬ್ರಿಟಿಷ್ ಪ್ರತಿನಿಧಿ ತನ್ನ ಬೆಂಬಲನೀಡಿ ಮಾತನಾಡಿದರು. ಅನೇಕ ರಾಷ್ಟ್ರಗಳು ಇದನ್ನು ವಿರೋಧಿಸಿದುವು.

ಯುನೆಸ್ಕೊ ಅಧ್ಯಕ್ಷತೆ

ವಿಶ್ವಸಂಸ್ಥೆಯ ವೈಜ್ಞಾನಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಮುಂದಿನ ವರ್ಷದ ಅಧ್ಯಕ್ಷರಾಗಿ ಭಾರತದ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

೫೬ ರಾಷ್ಟ್ರಗಳ ೫೦೦ ಪ್ರತಿನಿಧಿಗಳು ಸೇರಿದ್ದ ೭ ನೇ ವಾರ್ಷಿಕಸಭೆಯಲ್ಲಿ ಈ ಚುನಾವಣೆ ನಡೆಯಿತು.

ಸಾಂಸ್ಕೃತಿಕ ಪ್ರಚಾರ ಆರಂಭೋತ್ಸವ

ಬೆಂಗಳೂರು ೧೩

ಸಂಸ್ಥಾನದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರಚಾರ ಮತ್ತು ಪ್ರೋತ್ಸಾಹ ಕಾರ್ಯಗಳನ್ನು ಕೈಗೊಳ್ಳುವ ಬಗ್ಗೆ ವಿದ್ಯಾಮಂತ್ರಿಗಳ ಅಧ್ಯಕ್ಷತೆಯಲ್ಲಿ ನಿನ್ನೆ ಒಂದು ಮುಖ್ಯಾಧಿಕಾರಿಗಳ ಸಭೆಯು ನಡೆಯಿತು. ಕೈಗಾರಿಕಾ ಮತ್ತು ಗೃಹಶಾಖಾಸಚಿವರು ಪ್ರಧಾನ ಮತ್ತು ಆರ್ಥಿಕಸಚಿವರು, ವಿದ್ಯಾಶಾಖಾ ಮುಖ್ಯಾಧಿಕಾರಿ, ಜಿಲ್ಲಾಧಿಕಾರಿಗಳು ಮುಂತಾದವರು ಹಾಜರಿದ್ದರು

ನವೆಂಬರ್ ೨೭ ನೇ ತಾರೀಖಿನದಿನ ಸಂಸ್ಥಾನದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಈ ಕಾರ್ಯ ಪ್ರಾರಂಭೋತ್ಸವವನ್ನು ಇಟ್ಟುಕೊಳ್ಳಬೇಕೆಂದು ಸಚಿವರು ಒಂದೊಂದೆಡೆ ನೆರವೇರಿಸಲು ನಿರ್ಧಾರವಾಯಿತು.

ಧನ್ವಂತರಿ ಜಯಂತಿ

ನಂಜನಗೂಡು ೧೩

ನಂಜನಗೂಡು ಸದ್ವೈದ್ಯಶಾಲಾ ಮಾಲೀಕರಾದ ಶ್ರೀ ಬಿ.ವಿ. ಪಂಡಿತರವರು ತಮ್ಮ ಸ್ವಗೃಹದಲ್ಲಿ ಧನ್ವಂತರಿ ಜಯಂತಿಯನ್ನು ಇದೇ ತಾರೀಖು ೧೫ನೇ ಸಂಜೆ ೫ ಗಂಟೆಗೆ ನೆರವೇರಿಸುವರು. ವಿದ್ಯಾಸಚಿವ ಶ್ರೀ ಎ.ಜಿ. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುತ್ತಾರೆ.

ಆಹಾರ ಸಚಿವರು ದೆಹಲಿಗೆ

ದೆಹಲಿಯಲ್ಲಿ ೧೭ ನೇ ತಾರೀಖು ನಡೆಯಲಿರುವ ಆಹಾರಸಚಿವರ ಸಮ್ಮೇಳನದಲ್ಲಿ ಭಾಗವಹಿಸಲು ಶ್ರೀ ಸಿದ್ದವೀರಪ್ಪನವರು ೧೬ ನೇ ತಾರೀಖು ವಿಮಾನದಲ್ಲಿ ದೆಹಲಿಗೆ ಪ್ರಯಾಣಮಾಡುತ್ತಾರೆ.

ಸಾಮಾಜಿಕ ಬಹಿಷ್ಕಾರ

ಜಮ್ಮು ಮತ್ತು ಕಾಶ್ಮೀರ ಪ್ರಾಂತ್ಯಕ್ಕೆ ಚುನಾಯಿತ ಅಧಿಪತಿಯ ಸ್ಥಾನವನ್ನೇನಾದರೂ ಅಂಗೀಕರಿಸಿದರೆ ಸಾಮಾಜಿಕಬಹಿಷ್ಕಾರವನ್ನು ಹಾಕುವುದಾಗಿ ಜಮ್ಮುಮತ್ತು ಕಾಶ್ಮೀರ ರಾಜಪುತ್ರರ ಸಭೆಯು ಯುವರಾಜ ಕರಣ್‌ಸಿಂಗ್‌ರವರಿಗೆ ತಿಳಿಸಿರುವುದಾಗಿ ಗೊತ್ತಾಗಿದೆ.

ಬೆಳೆಪರಿಸ್ಥಿತಿ ಆಶಾದಾಯಕವಾಗಿಲ್ಲ

ಕೋಲಾರ ಜಿಲ್ಲೆಯ ಯಾವಭಾಗದಲ್ಲೂ ಕಳೆದ ಕೆಲವು ವಾರಗಳಿಂದ ಮಳೆಯಾಗದೆ ಇರುವುದರಿಂದ ಅಲ್ಪಸ್ವಲ್ಪ ಬೆಳೆಯಾದ ಫಸಲೆಲ್ಲಾ ಒಣಗಿಹೋಗುತ್ತಿದೆ. ಈ ವರ್ಷ ಬೆಳೆಗಳ ಪರಿಸ್ಥಿತಿ ಆಶಾದಾಯಕವಾಗಿಲ್ಲವೆಂದು ಅಲ್ಲಿಯ ಜಿಲ್ಲಾಧಿಕಾರಿಗಳು ಹೇಳಿದ್ದಾರೆ.

ದಕ್ಷಿಣ ಆಫ್ರಿಕಾ ದಿನಾಚರಣೆ

ಭಾರತಾದ್ಯಂತ ಕಾ|| ಆಶ್ರಯದಲ್ಲಿ ೧೬ನೇತಾ|| ನಡೆಯುತ್ತೆ

ಇದೇ ೧೬ನೇ ತಾರೀಖು ಭಾರತಾದ್ಯಂತ ದಕ್ಷಿಣ ಆಫ್ರಿಕಾ ದಿನಾಚರಣೆಯನ್ನು ಆಚರಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ನಿರ್ಧರಿಸಿ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳಿಗೆಲ್ಲಾ ಸೂಚನೆಯನ್ನಿತ್ತಿದೆ. ಅದಿನ ಸಾರ್ವಜನಿಕ ಸಭೆ, ಮೆರವಣಿಗೆ. ತೊಂದರೆಪಡುತ್ತಿರುವ ಐರೋಪ್ಯೇತರ ಸಹಾಯಕ್ಕಾಗಿ ದ್ರವ್ಯವಸೂಲಿ ಮುಂತಾದುವನ್ನು ಮಾಡಲಾಗುತ್ತದೆ.

ಈ ದಿನವನ್ನು ಆಚರಿಸಲು ಕಾಂಗ್ರೆಸ್ ಸಂಸ್ಥೆಯು ಇತರ ರಾಜಕೀಯ ಪಂಗಡಗಳ ಸಹಕಾರವನ್ನು ಪಡೆಯಬೇಕೆಂದು ಸೂಚನೆ ಕೊಡಲಾಗಿದೆ.

ಕೇಂದ್ರ ಉಪಸಚಿವರ ಆಗಮನ

ಬೆಂಗಳೂರು ೧೩

ಕೇಂದ್ರ ಮರಾಮತ್ ಮತ್ತು ಸಂಬರಾಜು ಶಾಖಾ ಉಪಸಚಿವರ ಶ್ರೀ ಚರಾಗಿ ಹಾಶಿಮ್‌ರವರು ಇಲ್ಲಿಗೆ ಮೊನ್ನೆ ಸಂಜೆ ಆಗಮಿಸಿದರು ನಿನ್ನೆಯದಿನ ಟೆಲಿಫೋನ್ ವಿಮಾನ ಮುಂತಾದ ಕಾರ್ಖಾನೆಗಳಿಗೆ ಭೇಟಿಯಿತ್ತರು.

ಗಡಿನಾಡುಗಾಂಧಿ ದೇಹಸ್ಥಿತಿ

ಲಾಹೋರಿನ ಆಸ್ಪತ್ರೆಯಲ್ಲಿ ದಾಖಲಾಗಿರುವ ಗಡಿನಾಡು ಗಾಂಧಿ ಖಾನ್ ಅಬ್ದುಲ್‌ಗಫಾರ್ ಖಾನರವರ ದೇಹಸ್ಥಿತಿಯು ಉತ್ತಮವಾಗಿರುವುದಾಗಿ ಹೇಳಲಾಗಿದೆ.

ವಿಶ್ವವಿದ್ಯಾನಿಲಯ ಘಟಿಕೋತ್ಸವ

ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವವು ಡಿಸೆಂಬರ್ ೨ ನೇ ತಾರೀಖು ನಡೆಯುವುದೆಂದು ಗೊತ್ತಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೧೨-೧೧-೫೨

ಪಲ್ಲ	ರೂ-	ಆ-	ರೂ-	ಆ
ಕಡಲೇಕಾಯಿ	೧೩-೧೦	೨೨		೪
ಎಳ್ಳು	೭೧-೧೦	—		
ಹೆರಳು	೪೧	೦	೪೩	೮
ಹುರುಳಿ	೫೩	೧೨		
ಹೆಸರು	೫೧	೪	೫೩	೮
ಉದ್ದು				
ಅಲಸಂದೆ	೫೮		೬೫-	
ಹುಚ್ಚೆಳ್ಳು		—		—
ಹೊಂಗೆಬೀಜ	—	—	—	—
ಮೆ|| ಕಾಯಿ	೭-೧೦		೧೬	೧೦
ಸೀಗೇಕಾಯಿ				
ಬೆಲ್ಲ		—		—
ಹುಣಸೆಹಣ್ಣು				
ತೆಂಗಿನಕಾಯಿ	೧೫೯	೨೦೧		

ಮೈಸೂರು ಜಿಲ್ಲೆಯಲ್ಲಿ ರೆವಿನ್ಯೂ ಸಚಿವರ ಪ್ರವಾಸ

ರೆವಿನ್ಯೂ ಮತ್ತು ಮರಾಮತ್ ಸಚಿವರಾದ ಶ್ರೀ ಕಡಿದಾಳ್‌ಮಂಜಪ್ಪನವರು ೧೭-೧೮ ನೇ ತಾರೀಖುಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳುವರು. ೧೭ ನೇ ತಾ|| ತಲಕಾಡಿಗೆ ಭೇಟಿಕೊಡುವರು. ೧೮ ನೇ ತಾರೀಖು ನುಗು ಜಲಾಶಯಯೋಜನೆಯನ್ನು ಪರಿಶೀಲಿಸಿ ಮಧ್ಯಾಹ್ನ ಕೃಷ್ಣರಾಜಸಾಗರದಲ್ಲಿ ನಡೆಯುವ ಕೃಷ್ಣರಾಜಸಾಗರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಿ ಮಾರನೇ ದಿನ ಬೆಂಗಳೂರಿಗೆ ಹೋಗುತ್ತಾರೆ.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ಪ್ರಪಂಚಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮಿ|| ಟ್ರಿಗ್ವೇಲಿಯವರ ಸ್ಥಾನಕ್ಕೆ ಶ್ರೀ ಎ ರಾಮಸ್ವಾಮಿ ಮೊದಲಿಯಾರ್ ಅಥವಾ ಶ್ರೀ ಗಿರಿಜಾಶಂಕರ ಬಾಜಪೈರವನ್ನು ನೇಮಿಸಲಾಗುವುದೆಂದು ಹೇಳಲಾಗಿದೆ.

§ ಮೈಸೂರು ವಿಶ್ವವಿದ್ಯಾನಿಲಯದ ಸೆಪ್ಟಂಬರ್ ಪರೀಕ್ಷೆಗಳ ಫಲಿತಾಂಶವು ಇದೇ ಮಾಹೆ ೨೦ ನೇ ತಾರೀಖು ಪ್ರಕಟವಾಗುವುದೆಂದು ಗೊತ್ತಾಗಿದೆ.

ರಣಜಿತ್
14-11-52 ರಿಂದ ಪ್ರತಿದಿನ 3 ಆಟ
ನಯ ಸನ್ಸಾರ್‌ರವರ
ಅನ್‌ಹೋನೀ ಹಿಂದಿ
ಪಾತ್ರ:—ನರ್ಗಿಸ್, ರಾಜ್‌ಕಪೂರ್, ಆಗ, ಡೇವಿಡ್, ಬದ್ರಿಪ್ರಸಾದ್, ಜಾನಕಿದಾಸ್ ಮತ್ತು ಓಂಪ್ರಕಾಶ್.

ರಾಜಕಮಲ್, ಮೈಸೂರು
14-11-52ರಿಂದ 2 ನೇ ವಾರ
ಸಂಸಾರಂ
ಭೂಮಿಕೆ:—ಲಕ್ಷ್ಮಿರಾಜ್ಯಂ, ಪುಷ್ಪಲತ, ಎನ್. ಟಿ. ರಾಮರಾವ್, ನಾಗೇಶ್ವರರಾವ್, ರೇಲಂಗಿ.

ಅಪೇರ
14—11—52 ನೇ ಶುಕ್ರವಾರದಿಂದ
ದಿನವಹಿ 3 ಪ್ರದರ್ಶನಗಳು
ಮಾಯಲ - - ಮಾರಿ
[ತೆಲುಗು]
ಪಾತ್ರ:—ಅಂಜಲಿದೇವಿ, ನಾಗೇಶ್ವರರಾವ್, ಶಿವರಾವ್, ಮುಕ್ಕಾಮಲ.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 70

೧೪-೧೧-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ತಲಕಾಡು ಪಂಚಲಿಂಗ ದರ್ಶನ

ಮೈಸೂರು ೧೪

ಟಿ. ನರಸೀಪುರ ತಾಲ್ಲೂಕು ತಲಕಾಡಿನಲ್ಲಿ ಇದೇ ೧೭ ನೇ ತಾರೀಖು ನಡೆಯಲಿರುವ ಪಂಚಲಿಂಗ ದರ್ಶನ ಯಾತ್ರೆಯು ೧೩ ವರ್ಷಗಳ ಹಿಂದೆ ನಡೆದಿತ್ತು, ಆದ್ದರಿಂದ ಈ ವರ್ಷ ಜನಸಂದಣಿಯು ವಿಶೇಷವಾಗಿರುವುದೆಂದು ಭಾವಿಸಲಾಗಿದೆ.

ಯಾವ ಸಂವತ್ಸರದಲ್ಲಿ ಅಮಾವಾಸ್ಯೆ ಕಾರ್ತಿಕ ಮಾಸ, ವೃಶ್ಚಿಕಮಾಸ ಸೋಮವಾರ, ಕುಹೂಯೋಗ ಮತ್ತು ವಿಶಾಖಾ ನಕ್ಷತ್ರ ಈ ಯೋಗಗಳು ಸೇರುವುವೋ ಅಂತಹ ವಿಶೇಷ ದಿನದಲ್ಲಿ ಈ ದಕ್ಷಿಣ ಕಾಶಿ ಗಜಾರಣ್ಯ ಕ್ಷೇತ್ರವೆಂದು ಹೆಸರುವಾಸಿಯಾದ ತಲಕಾಡಿನಲ್ಲಿ ವೈದ್ಯನಾಥಾದಿಯಾಗಿ ಪಂಚಲಿಂಗಗಳನ್ನು ಒಂದೇ ದಿನದಲ್ಲಿ ಪೂಜಿಸುವ ದಿನಕ್ಕೆ ಪಂಚಲಿಂಗದರ್ಶನವೆಂದು ಹೆಸರುವಾಸಿಯಾಗಿದೆ. ವೈದ್ಯೇಶ್ವರ, ಅರ್ಕೇಶ್ವರ, ಪಾತಾಳೇಶ್ವರ, ಮರಳೇಶ್ವರ, ಮತ್ತು ಮಲ್ಲಿಕಾರ್ಜುನೇಶ್ವರ ದೇವಸ್ಥಾನಗಳು ಮರಳಿನಲ್ಲಿ ಮುಚ್ಚಿ ಹೋಗಿರುವುದರಿಂದ ಈಗ ಯಾತ್ರಿಕರಿಗಾಗಿ ಅವುಗಳು ಗೋಚರವಾಗುವಂತೆ ಮಾಡಲಾಗಿದೆ.

ಹಿಂದೆ ಕಾಶಿಯಲ್ಲಿ ಸೋಮದತ್ತನೆಂಬ ಬ್ರಾಹ್ಮಣನು ಮೋಕ್ಷ ಪಡೆಯಲು ಶ್ರೀ ವಿಶ್ವೇಶ್ವರ ಅನುಜ್ಞೆಯಂತೆ ತನ್ನ ಶಿಷ್ಯರೊಂದಿಗೆ ದಕ್ಷಿಣ ಕಾಶಿ ಎನಿಸಿದ ಗಜಾರಣ್ಯಕ್ಷೇತ್ರಕ್ಕೆ ಹೋಗುತ್ತಿದ್ದಾಗ ಅವನನ್ನು ಕಾಡಾನೆಗಳು ಸಂಹರಿಸಿಬಿಟ್ಟವು ಅವರು ಆನೆಗಳಾಗಿಯೇ ಹುಟ್ಟಿ ಊರುಗದ ಮರಕ್ಕೆ ಪೂಜೆಮಾಡುತ್ತಿರುವುದನ್ನು ತಲ, ಕಾಡ ಎಂಬ ಬೇಡರು ಕಂಡು ಕೊಡಲಿಯಿಂದ ಮರವನ್ನು ಕತ್ತರಿಸಿದರು. ಬುಡಕ್ಕೆ ಏಟು ಬಿದ್ದ ಕ್ಷಣದಲ್ಲಿಯೇ ರಕ್ತಧಾರೆಯಾಗಿ ಶಿವಲಿಂಗಕ್ಕೆ ಏಟುಬಿದ್ದಿರುವುದನ್ನು ಕಂಡು ಗಾಬರಿಯಾದರು ಆದರೆ ಪರಮೇಶ್ವರನ ಆಜ್ಞೆಯಂತೆ ಲಿಂಗಕ್ಕೆ ಔಷಧಿ ಹಾಕಲು ರಕ್ತವೆಲ್ಲವೂ ನಿಂತುಹೋಯಿತು ಗಜರೂಪದಲ್ಲಿದ್ದ ಋಷಿಗಳಿಗೆ ಮುಕ್ತಿ ದೊರೆಯಿತು. ಆದ್ದರಿಂದ ಈ ಕ್ಷೇತ್ರಕ್ಕೆ ತಲಕಾಡು ಎಂಬ ಹೆಸರು ಪ್ರಾಪ್ತವಾಯಿತು.

ಈ ಕ್ಷೇತ್ರದಲ್ಲಿ ಸ್ನಾನಮಾಡಿ ಪಂಚಲಿಂಗ ದರ್ಶನಮಾಡುವುದರಿಂದ ಇಷ್ಟಾರ್ಥಗಳು ನೆರವೇರುವುವೆಂದು ಹೇಳಲಾಗಿದೆ.

ನೆಹರೂ ಚಿರಕಾಲ ಬಾಳಲಿ

ಇಂದು ಪ್ರಧಾನಿ ಪಂಡಿತ ಜವಾಹರ್‌ಲಾಲ್ ನೆಹರೂರವರ ೬೩ ನೇ ವರ್ಷದ ವರ್ಧಂತಿಯ ಉತ್ಸವ ಸಮಯದಲ್ಲಿ ಅವರಿಗೆ ದೀರ್ಘಾಯುರಾರೋಗ್ಯವನ್ನು ದಯಪಾಲಿಸಿ, ದೇಶಕ್ಕೆ ಇನ್ನೂ ಹೆಚ್ಚಾಗಿ ಅವರು ಸೇವೆಸಲ್ಲಿಸುವಂತಾಗಲೆಂದ ಹಾರೈಸುತ್ತೇವೆ.—ಸಂ.

ಎ. ಐ. ಸಿ. ಸಿ. ಚುನಾವಣೆ

ಮೈಸೂರು ೧೪

ಮೈಸೂರು ನಗರದ ದಕ್ಷಿಣ ಕ್ಷೇತ್ರದಿಂದ ಎ. ಐ. ಸಿ. ಸಿ. ಪ್ರತಿನಿಧಿಗಳ ಚುನಾವಣೆಯು ಇಂದು ಪ್ರಾರಂಭವಾಯಿತು ಶ್ರೀಗಳಾದ ಸಿ. ಜೆ. ದೇವನಾಥ್ ಮತ್ತು ಕೆ. ಎಸ್. ಸೂರ್ಯನಾರಾಯಣರಾವ್‌ರವರು ಸ್ಪರ್ಧಿಗಳು.

ನಾಳೆದಿನ ಮೈಸೂರು ತಾಲ್ಲೂಕಿನಲ್ಲಿ ಶ್ರೀಗಳಾದ ಕೆ ಪುಟ್ಟಸ್ವಾಮಿ ಮತ್ತು ಹೆಚ್. ಸಿ ದಾಸಪ್ಪನವರುಗಳು ನಡುವೆ ಸ್ಪರ್ಧೆ ನಡೆಯಲಿದೆ

ಚೀಣಾದಲ್ಲಿ ಸುಭಾಷರು

ನೇತಾಜಿ ಸುಭಾಷ್‌ಚಂದ್ರಬೋಸರು ಜೀವಂತರಾಗಿದ್ದು ಈಗ ಚೀಣಾದಲ್ಲಿರುವರೆಂದೂ, ಯುದ್ಧ ಖೈದಿಗಳ ವಿಚಾರಣೆ ಅಂತರರಾಷ್ಟ್ರೀಯ ನ್ಯಾಯಾಲಯದಪಟ್ಟಿಯಲ್ಲಿ ಅವರ ಹೆಸರು ಇನ್ನೂ ಇರುವುದರಿಂದ ಅವರು ಹೊರಗೆ ಬರಲು ಸಾಧ್ಯವಾಗಿಲ್ಲವೆಂದೂ ಬೊಂಬಾಯಿನಲ್ಲಿ ಆಜಾದ್ ಹಿಂದ್‌ದಳದ ಮುಖ್ಯಾಧಿಕಾರಿ ಶ್ರೀ ರಾಜಗೋಪಾಲ್ ತಿಳಿಸಿದ್ದಾರೆ

ಅವಿರೋಧಆಯ್ಕೆ

ಮೈಸೂರು ೧೪

ಯಳಂದೂರು ಮತ್ತು ಟಿ. ನರಸೀಪುರ ಕ್ಷೇತ್ರದಿಂದ ಎ ಐ ಸಿ.ಸಿ. ಪ್ರತಿನಿಧಿ ಚುನಾವಣೆಗೆ ನಿಂತಿದ್ದ ಶ್ರೀ ಪುಟ್ಟತೊಸ್ಥಪ್ಪನವರು ತಮ್ಮ ಉಮೇದುವಾರಿಕೆಯನ್ನು ವಾಪಸು ಪಡೆದಿರುವುದರಿಂದ, ಯಳಂದೂರಿಗೆ ಶ್ರೀ ಟಿ. ಸೂರ್ಯನಾರಾಯಣ್ ಮತ್ತು ಟಿ. ನರಸೀಪುರದಿಂದ ಶ್ರೀ ಟಿ ಪಿ ಬೋರಯ್ಯನವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ

ಪಾರ್ಲಿಮೆಂಟ್‌ಹೈಕೋರ್ಟ್ ಆಕ್ರಮ

ದಕ್ಷಿಣ ಆಫ್ರಿಕಾದಲ್ಲಿ ವರ್ಣಜನಾಂಗದ ಮತದಾರರನ್ನು ಪ್ರತ್ಯೇಕ ಪಟ್ಟಿಗೆ ಸೇರಿಸಿದ ಪಾರ್ಲಿಮೆಂಟ್ ಶಾಸನವು ಅಕ್ರಮವೆಂದು ಸುಪ್ರೀಂಕೋರ್ಟ್ ತೀರ್ಪಿತ್ತ ನಂತರ ಅಲ್ಲಿನ ಪಾರ್ಲಿಮೆಂಟು ಒಂದು ಪ್ರತ್ಯೇಕ ಹೈಕೋರ್ಟನ್ನು ರಚಿಸಿತು. ಈಗ ದಕ್ಷಿಣ ಆಫ್ರಿಕದ ಶ್ರೇಷ್ಠನ್ಯಾಯಾಲಯವು ಆ ಕೋರ್ಟ್ ಅಕ್ರಮವೆಂದು ತೀರ್ಪಿತ್ತಿದೆ.

ಎರಡು ಮಕ್ಕಳಿಗಿಂತ ಹೆಚ್ಚಾಗಿರಕೂಡದು

ದೇಶದಲ್ಲಿ ಜನಸಂಖ್ಯೆ ಹೆಚ್ಚಿ ಜನತೆ ಕಷ್ಟಪಡುತ್ತಿರುವುದಕ್ಕೆ ಮಹಿಳೆಯರೇ ಕಾರಣರು ಅದನ್ನು ತಡೆಗಟ್ಟಲು ಮಹಿಳೆಯರ ಸಹಕಾರ ಅತ್ಯಗತ್ಯವಾಗಿದೆ ಉತ್ಪತ್ತಿ ಹೆಚ್ಚದೆ ಜನಸಂಖ್ಯೆ ಹೀಗೆ ಬೆಳೆದಿದ್ದಲ್ಲಿ ಇನ್ನು ೨೧ ವರ್ಷಗಳಲ್ಲಿ ಜನರು ರಸ್ತೆಯಲ್ಲಿ ಬಿದ್ದು ಸಾಯುವ ಸ್ಥಿತಿ ಉಂಟಾಗುವುದು ಆದ್ದರಿಂದ ಯಾರಿಗೂ ಎರಡು ಮಕ್ಕಳಿಗಿಂತ ಹೆಚ್ಚು ಇರಕೂಡದು-ಎಂದು ಡಾ|| ಎಂ. ವಿಶ್ವೇಶ್ವರಯ್ಯನವರು ನಿನ್ನೆ ಮಂಡ್ಯದ ಜಿಲ್ಲೆಯಲ್ಲಿ ಗ್ರಾಮ ಕೈಗಾರಿಕಾ ಯೋಜನೆಯ ಆರಂಭೋತ್ಸವವನ್ನು ನೆರವೇರಿಸುತ್ತಾ, ತಿಳಿಸಿದ್ದಾರೆ.

ರಷ್ಯದಮೇಲೆ ಅಣುಬಾಂಬ್ ಧಾಳಿ ಎಚ್ಚರಿಕೆ

ಅಮೆರಿಕ ಅಥವ ಉತ್ತರ ಅಟ್ಲಾಂಟಿಕ್ ರಾಷ್ಟ್ರಕೂಟಗಳಮೇಲೆ ರಷ್ಯ ಆಕ್ರಮಣ ನಡೆಸಿದ್ದೇಆದರೆ ಆಗ ಅಮೆರಿಕವು ಅದರ ಮೇಲೆ ಅಣುಬಾಂಬು ಪ್ರಯೋಗಿಸಲಾಗುವುದೆಂದು ಅಮೆರಿಕದ ವೈಜ್ಞಾನಿಕ ಶಾಖಾ ಕಾರ್ಯದರ್ಶಿ ಎಚ್ಚರಿಕೆ ಕೊಟ್ಟಿದ್ದಾರೆ.

ಕಾಶ್ಮೀರದ ಅಧಿಪತಿ ಆಯ್ಕೆಗೆ ವಿರೋಧ

ಕಾಶ್ಮೀರದಲ್ಲಿ ಪ್ರತ್ಯೇಕ ಚುನಾಯಿತ ಅಧಿಪತಿ ಮತ್ತು ಧ್ವಜಗಳ ಆಯ್ಕೆಯು ಜಮ್ಮು ಜನತೆಯ ಆಶೋತ್ತರಗಳಿಗೆ ವಿರುದ್ಧವಾಗಿದೆಯೆಂದೂ, ಅವನ್ನು ಜನರಮೇಲೆ ಬಲಾತ್ಕಾರವಾಗಿ ಹೊರಿಸಲಾಗಿದೆ-ಎಂದೂ, ಆದ್ದರಿಂದ ಸಂಸ್ಥಾನದ ಜನರು ಅವುಗಳನ್ನು ರದ್ದುಪಡಿಸಲು ಯಾವ ತ್ಯಾಗಕ್ಕಾದರೂ ಸಿದ್ಧವಾಗಿರಬೇಕೆಂದು ಅಲ್ಲಿನ ಪ್ರಜಾಪರಿಷತ್ತಿನ ಅಧ್ಯಕ್ಷರು ತಿಳಿಸಿದ್ದಾರೆ.

ಭಾರತದ ಪಂಚವಾರ್ಷಿಕ ಯೋಜನೆ

ಕೇಂದ್ರ ಆಯೋಜನಾ ಸಮಿತಿಯ ಪಂಚವಾರ್ಷಿಕ ಯೋಜನೆಯು ಮುಂದಿನ ತಿಂಗಳಿನ ಮೊದಲನೆಯವಾರದಲ್ಲಿ ಪ್ರಕಟಿಸಲ್ಪಡುವುದೆಂದೂ, ಅನಂತರ ಅದನ್ನು ಪಾರ್ಲಿಮೆಂಟು ಚರ್ಚಿಸುವುದೆಂದೂ ಹೇಳಲಾಗಿದೆ.

§ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯು ಡಿಸೆಂಬರ್ ೨೭ರಲ್ಲಿ ನಡೆಯುತ್ತದೆ. ನಾಮಕರಣ ಪತ್ರಗಳನ್ನು ಡಿ|| ೩ನೇ ತಾರೀಖಿನವರೆಗೆ ತೆಗೆದುಕೊಳ್ಳಲಾಗುವುದು. ಡಿಸೆಂಬರ್ ೨೯ನೇ ತಾರೀಖು ಫಲಿತಾಂಶ ಪ್ರಕಟವಾಗುತ್ತದೆ.

ಪಾಕೀಸ್ಥಾನದಲ್ಲಿ ಆಹಾರ ಇಲ್ಲದೆ ೧೦೦೦೦ ಜನರ ಮರಣ

ಪಾಕೀಸ್ಥಾನದಲ್ಲಿ ಇತ್ತೀಚೆಗೆ ಆಹಾರ ಪರಿಸ್ಥಿತಿಯು ತೀರ ಹದಗೆಟ್ಟುಹೋಗಿರುವುದಾಗಿ ವರದಿಯಾಗಿದೆ.

ಈ ಬಗ್ಗೆ ಅಲ್ಲಿನ ಪಾರ್ಲಿಮೆಂಟಿನಲ್ಲಿ ಸರ್ಕಾರ ಆಹಾರ ನೀತಿಯ ಬಗ್ಗೆ ಕಟುವಾದ ಟೀಕೆಗಳು ನಡೆಯುತ್ತಿವೆ.

ಪೂರ್ವ ಬಂಗಾಳದ ಖುಲ್ನಾ ಜಿಲ್ಲೆಯಲ್ಲಿ ಹೊಟ್ಟೆಗಿಲ್ಲದೆ ೧೦೦೦೦ ಜನರು ಸತ್ತಿದ್ದಾರೆಂದೂ ಇನ್ನೂ ಸಾವಿರಾರು ಜನರು ಸಾಯುತ್ತಿದ್ದಾರೆಂದೂ ಪಾರ್ಲಿಮೆಂಟಿನಲ್ಲಿ ಶ್ರೀ ಕಾಮಿನಿಕುಮಾರ್ ದತ್ತರವರು ಹೇಳಿದ್ದಾರೆ.

ವರ್ಗದ ಆಜ್ಞೆ ರದ್ದು

ಬೆಂಗಳೂರು ೧೪

ಮೈಸೂರು ಪೌರಸಭೆಗೆ ಬೆಂಗಳೂರು ಕಾರ್ಪೋರೇಷನ್ ಅ|| ಇಂಜನಿಯರ್ ಶ್ರೀ ಕೆ. ಎಸ್. ರಾಮಣ್ಣನವರನ್ನು ವರ್ಗಾಯಿಸಿರುವ ಆಜ್ಞೆಯನ್ನು ಸರ್ಕಾರವು ರದ್ದು ಮಾಡಿದೆ.

ಅಮೆರಿಕಾ ಅಧ್ಯಕ್ಷ ಚುನಾವಣೆ ಪ್ರತಿಕ್ರಿಯೆ

ಅಮೆರಿಕಾ ಅಧ್ಯಕ್ಷರಾಗಿ ಜನರಲ್ ಐಸೆನ್‌ಹೋವರ್‌ರವರು ಚುನಾವಣೆಯಾಗಿದ್ದರೂ ಅಮೆರಿಕಾವು ವಿದೇಶಗಳಿಗೆ ಆರ್ಥಿಕ ನೆರವು ನೀಡುತ್ತಿರುವ ನೀತಿಯಲ್ಲಿಯೇನೂ ಬದಲಾವಣೆಯಾಗುವುದಿಲ್ಲ ವೆಂದು ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಮಿ|| ಚೆಸ್ಟರ್ ಬೌಲ್ಸ್‌ರವರು ಹೇಳಿರುವರು.

ಮೈಸೂರಿಗೆ ೧೦೦೦೦ ಟನ್ ಜೋಳ

ನವೆಂಬರ್ ಮಾಹೆಯಲ್ಲಿ ಭಾರತ ಸರ್ಕಾರವು ಮೈಸೂರಿಗೆ ೧೦೦೦೦ ಟನ್ ಜೋಳವನ್ನು ಸರಬರಾಜು ಮಾಡುತ್ತದೆ.

ವಿನೋಬಾಭಾವೆಯವರ ಹೊಸ ಚಳುವಳಿ

ಆಚಾರ್ಯ ವಿನೋಬಾಭಾವೆಯವರು ನಡೆಸುತ್ತಲಿರುವ ಭೂದಾನಯಜ್ಞ ಚಳುವಳಿಯ ಅಂಗವಾಗಿ ಸಂಪತ್‌ದಾನಯಜ್ಞ ಚಳವಳಿಯನ್ನು ಪ್ರಾರಂಭಿಸುವರು ಭೂಮಿಯನ್ನು ಉಚಿತವಾಗಿ ಹಂಚಿದಮೇಲೆ ಅಲ್ಲಿ ವ್ಯವಸಾಯ ನಡೆಸಲು ದ್ರವ್ಯ ಸಹಾಯವನ್ನು ಮಾಡಲು ದ್ರವ್ಯ ಶೇಖರಣೆಯೇ ಈ ಚಳುವಳಿಯು ಮುಖ್ಯ ಧ್ಯೇಯವಾಗಿದೆ.

ರಾಜಾಜಿ ದೆಹಲಿಗೆ

ಆಹಾರ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಲು ಮದ್ರಾಸ್ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ದೆಹಲಿಗೆ ಹೋಗುವರೆಂದು ಹೇಳಲಾಗಿದೆ ನಾಳೆ ಅವರು ಬೆಂಗಳೂರಿನಿಂದ ಮದ್ರಾಸಿಗೆ ಹೋಗುತ್ತಾರೆ.

ಕಾಡುಮೃಗಗಳ ರಕ್ಷಣಾ ಸಮಿತಿ ಸಭೆ

ಮೈಸೂರು ನ ೧೪

ಕಾಡುಮೃಗಗಳ ರಕ್ಷಣಾ ವ್ಯವಸ್ಥೆ ಬಗ್ಗೆ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರವು ನೇಮಿಸಿರುವ ಸಮಿತಿಯ ಸಭೆಯು ಇದೇ ಮಾಹೆ ೨೫ ನೇ ತಾರೀಖಿನಿಂದ ಡಿಸೆಂಬರ್ ಒಂದರವರೆಗೆ ಮೈಸೂರಿನಲ್ಲಿ ನಡೆಯುತ್ತದೆ

ಈ ಸಭೆಯಲ್ಲಿ ಭಾರತದ ನಾನಾಭಾಗಗಳಿಂದ ಸುಮಾರು ೪೫ ಮಂದಿ ಸದಸ್ಯರು ಭಾಗವಹಿಸುವರು ಅಧಿವೇಶನದ ಕೊನೆಯದಿನ ಕೇಂದ್ರ ವ್ಯವಸಾಯ ಸಚಿವ ಶ್ರೀ ಪಂಜಾಬ್‌ರಾವ ದೇಶಮುಖ್‌ರು ಸಮ್ಮೇಳನದಲ್ಲಿ ಭಾಷಣಮಾಡುತ್ತಾರೆ. ಸಮಿತಿಯ ಸದಸ್ಯರು ಬಂಡೀಪುರಕ್ಕೆ ಭೇಟಿಕೊಡುವರೆಂದು ಗೊತ್ತಾಗಿದೆ.

ನೈಜೀರಿಯಾ ನಿಯೋಗದ ಆಗಮನ

ಪಶ್ಚಿಮ ಆಫ್ರಿಕಾದ ನೈಜೀರಿಯಾ ಸೌಹಾರ್ದ್ಯ ನಿಯೋಗದ ಸದಸ್ಯರು ಮದ್ರಾಸಿನಿಂದ ಬೆಂಗಳೂರಿಗೆ ನಿನ್ನೆದಿನ ಆಗಮಿಸಿದರು. ಕೈಗಾರಿಕಾಸಚಿವ ಶ್ರೀ ಟಿ ಸಿದ್ದಲಿಂಗಯ್ಯ, ಪ್ರಧಾನ ಕಾರ್ಯದರ್ಶಿ ಮುಂತಾದವರು ನಿಯೋಗದವರನ್ನು ವಿಮಾನನಿಲ್ದಾಣದಲ್ಲಿ ಸ್ವಾಗತಿಸಿದರು. ನಿನ್ನೆ ದಿನ ನಗರದ ನಾನಾ ಕೈಗಾರಿಕಾ ಸಂಸ್ಥೆಗಳಿಗೆ ನಿಯೋಗದವರು ಭೇಟಿಕೊಟ್ಟಿದ್ದರು

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ

ವಿಶ್ವಸಂಸ್ಥೆಯ ನೂತನ ಪ್ರಧಾನ ಪ್ರಧಾನ ಕಾರ್ಯದರ್ಶಿಯ ಸ್ಥಾನವು ಭಾರತದ ಶ್ರೀ ಬಿ. ಎನ್. ರಾವ್‌ರವರಿಗೆ ದೊರೆಯುವುದೆಂದು ಹೇಳಲಾಗಿದೆ.

ವಿಶ್ವಸಂಸ್ಥೆಯ ಎಲ್ಲಾ ರಾಷ್ಟ್ರಗಳ ಬೆಂಬಲವೂ ಇವರಿಗೆ ಹೆಚ್ಚಾಗಿರುವುದಾಗಿ ಹೇಳಲಾಗಿದೆ. ವರ್ಷಕ್ಕೆ ತೆಂಗೆರಹಿತ ೨೦.೦೦೦ ಡಾಲರು ಸಂಬಳ, ಗೃಹ ಮತ್ತು ವಾಹನಕ್ಕಾಗಿ ೫೦೦೦೦ ಡಾಲರುಗಳು, ೧೦೦೦೦ ಡಾಲರುಗಳ ನಿವೃತ್ತವೇತನವು ಈ ಸ್ಥಾನಕ್ಕೆ ಇದೆ.

ಕಾಶ್ಮೀರ ಅಧಿಪತಿಯ ಅವಿರೋಧ ಚುನಾವಣೆ

ಕಾಶ್ಮೀರ ಅಧಿಪತಿಯ ಸ್ಥಾನಕ್ಕೆ ನಿನ್ನೆಯದಿನ ರಾಜಕುಮಾರ್ ಕರನ್‌ಸಿಂಗ್‌ರವರ ಉಮೇದುವಾರಿಕೆ ಪತ್ರವನ್ನು ಮಾತ್ರ ಸಲ್ಲಿಸಲಾಗಿತ್ತು. ಉಮೇದುವಾರಿಕೆ ಪತ್ರ ಸಲ್ಲಿಸಲು ನಿನ್ನೆಯೇ ಕೊನೆದಿನ. ಇವರ ಹೆಸರನ್ನು ಪ್ರಧಾನಿ ಷೇಕ್‌ಅಬ್ದುಲ್ಲಾ ರವರು ಸೂಚಿಸಿ ಸಚಿವ ಡೋಗ್ರಾರವರು ಅನುಮೋದಿಸಿದ್ದಾರೆ. ಸ್ಪರ್ಧಿಗಳಾರೂ ಇಲ್ಲದಿರುವುದರಿಂದ ಅವಿರೋಧವಾಗಿ ಯುವರಾಜಕರಣಸಿಂಗ್‌ರವರು ಕಾಶ್ಮೀರ ಅಧಿಪತಿಯಾಗಿ ಚುನಾಯಿತರಾಗಿರುವುದಾಗಿ ಈದಿನ ಶಾಸನಸಭೆಯಲ್ಲಿ ಘೋಷಿಸಲಾಗುವುದು.

ಮಹಾಚುನಾವಣೆಯ ವೆಚ್ಚ

ಭಾರತದಲ್ಲಿ ನಡೆದ ಪ್ರಥಮ ಮಹಾಚುನಾವಣೆಯ ವೆಚ್ಚವು ೯-೩೫ ಕೋಟಿ ರೂ. ಗಳೆಂದು ತಿಳಿದುಬಂದಿದೆ. ಗುರ್ತಿಗಾಗಿ ಹಾಕುತ್ತಲಿದ್ದ ಶಾಯಿಗಾಗಿಯೇ ೨-೩೦ ಲಕ್ಷ ರೂ. ಮತದಾನದ ಚೀಟಿಗಳಿಗಾಗಿ ೧೦-೩೯ ಲಕ್ಷ ರೂ. ವೆಚ್ಚವಾಗಿದೆ.

ಫೀ ಮತ್ತು ಮತ್ತು ಮುಟ್ಟುಗೋಲು ಹಾಕಿದ ಮೊಬಲಗು ೨೨ ಲಕ್ಷರೂ. ಸರ್ಕಾರಕ್ಕೆ ಉತ್ಪತ್ತಿರೂಪದಲ್ಲಿ ಬಂದಿದೆ.

ತಿರುವಾಂಕೂರಿನಲ್ಲಿ ನೆಹರೂ ಪ್ರವಾಸ

ಡಿಸೆಂಬರ್ ಕೊನೆಯವಾರದಲ್ಲಿ ಪ್ರಧಾನಿ ನೆಹರೂರವರು ತಿರುವಾಂಕೂರು ಕೊಚ್ಚಿ ಪ್ರಾಂತ್ಯದಲ್ಲಿ ೪ ದಿನ ಪ್ರವಾಸ ಕೈಗೊಳ್ಳುವರೆಂದು ಗೊತ್ತಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೧೩-೧೧-೫೨

	ಪಲ್ಲ ರೂ-	ಆ-	ರೂ-	ಆ
ಕಡಲೇಕಾಯಿ	೧೦-೦	೨೨		೧೨
ಎಳ್ಳು	೬೬-೨	೬೭		೨
ಹರಳು	೪೩ ೨		೪೩	೧೪
ಹುರುಳಿ	೬೦ ೧೦			
ಹೆಸರು	೫೨ ೨		೫೪	೧೦
ಉದ್ದು				
ಅಲಸಂದೆ	೫೨ ೨		೬೪-	೮
ಹುಚ್ಚೆಳ್ಳು			—	—
ಹೊಂಗೆಬೀಜ	—	—	—	—
ಮೆ|| ಕಾಯಿ	೮-೨		೧೬	೮
ಸೀಗೇಕಾಯಿ				
ಬೆಲ್ಲ	೩ ೮		—	
ಹುಣಸೆಹಣ್ಣು				
ತೆಂಗಿನಕಾಯಿ	೨೦೮		೨೧೮	

ಸಕ್ಕರೆ ಕಂಪೆನಿ ಕೆಲಸಗಾರರ ಮುಷ್ಕರವೇ ?

ಮಂಡ್ಯದ ಸಕ್ಕರೆಕಂಪೆನಿಯ ಕೆಲಸಗಾರರಿಗೆ ಬಡ್ತಿ ಕೊಡುವುದನ್ನು ಆಡಳಿತಗಾರರು ಇನ್ನು ಒಂದುವಾರದಲ್ಲಿ ಇತ್ಯರ್ಥಪಡಿಸದಿದ್ದಲ್ಲಿ ಕಾನೂನುಬದ್ಧವಾಗಿ ಮುಷ್ಕರದಬ್ಯಾಲಟ್ ಪಡೆದು ಮುಷ್ಕರ ಹೂಡಬೇಕೆಂದು ಅಲ್ಲಿ ನ ಕೆಲಸಗಾರರಸಂಘ ನಿರ್ಧರಿಸಿದೆ.

ಅಂಚಿನ ಪಂಚೆ ತಯಾರಿಕೆ ಕೈಮಗ್ಗದವರಿಗೆ

ಅಂಚಿನ ಪಂಚೆಗಳ ತಯಾರಿಕೆಯನ್ನು ಮಾತ್ರ ಕೈಮಗ್ಗದವರಿಗೆ ಮದರಾಸ್ ಪ್ರಾಂತ್ಯಗಳಲ್ಲಿ ಮೀಸಲಾಗಿಡುವ ವಿಷಯವನ್ನು ಮಾತ್ರ ಕೇಂದ್ರಸರ್ಕಾರವು ಈಗ ಪರಿಶೀಲಿಸಿ ಅದರಬಗ್ಗೆ ಕೂಡಲೇ ಆಜ್ಞೆ ಕೊಡುವ ನಿರೀಕ್ಷೆಯಿರುವುದಾಗಿ ಗೊತ್ತಾಗಿದೆ.

ಪುರಸಭೆಯ ಇಂಜನಿಯರ್

ಬಿಲ್ಡಿಂಗ್ ಡಿವಿಜನ್ನಿನಲ್ಲಿರುವ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಡಿ. ನಂಜಪ್ಪನವರು ಮೈಸೂರು ಪುರಸಭೆಯ ಇಂಜನಿಯರಾಗಿ ನೇಮಕವಾಗಿದ್ದಾರೆ.

ಕಾರ್ಪೊರೇಷನ್ ಸದಸ್ಯರ ನಿಧನ

ಬೆಂಗಳೂರು ೧೪

ಬೆಂಗಳೂರುಕಾರ್ಪೊರೇಷನ್ ಸದಸ್ಯರಾದ ಶ್ರೀ ತಾಮರಿಕಣ್ಣರವರು ಮೊನ್ನೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನರಾದರು. ಇವರಿಗೆ ಕೇವಲ ೨೭ ವರ್ಷ ವಯಸ್ಸಾಗಿತ್ತು. ದಿವಂಗತರ ಗೌರವಾರ್ಥವಾಗಿ ನಿನ್ನೆ ಕಾರ್ಪೊರೇಷನ್ ಕಛೇರಿಮುಚ್ಚಲಾಗಿತ್ತು.

★ ವುಡ್‌ಲ್ಯಾಂಡ್ಸ್ ★
14—11—52 ರಿಂದ ಪ್ರಾರಂಭ
ಪ್ರತಿದಿನ ಮೂರು ಆಟಗಳು
ನೌಬಹಾರ್ ಹಿಂದಿ
ಭೂಮಿಕೆ:--ಅಶೋಕ್ ಕುಮಾರ್, ನಳಿನಿಜಯವಂತ್, ಕುಲ್‌ದೀಪ್.

—: ಪ್ರಕಾಶಕರು ಮತ್ತು ಮುದ್ರಕರು: -
ಜಿ. ಎಲ್. ಸ್ವಾಮಿ
ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3-
ಸಂಚಿಕೆ 71

೧೫-೧೧-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ನೆಹರೂಗೆ ಮಾ|| ಸ್ಟಾಲಿನ್ನರ ಶುಭಾಶಯ

ಪ್ರಧಾನಿ ನೆಹರೂರವರ ೬೩ ನೇ ವರ್ಷ ವರ್ಧಂತಿಯ ಸಮಯದಲ್ಲಿ ಅವರಿಗೆ ಶುಭಾಶಯಗಳನ್ನು ರಷ್ಯಾದ ಮಾರ್ಷಲ್ ಸ್ಟಾಲಿನ್‌ರವರು ಕಳುಹಿಸಿದ್ದಾರೆ.

ಗ್ರಾಮಗಳಲ್ಲಿ ಸಚಿವರ ಕಾಲುನಡಿಗೆ

ಅಸ್ಸಾಮಿನ ಗ್ರಾಮಾಭಿವೃದ್ಧಿ ಶಾಖಾ ಸಚಿವರಾದ ಶ್ರೀ ಮಹೇಂದ್ರ ಮೋಹನ ಚೌಧರಿಯವರು ಗ್ರಾಮಾಂತರ ಅಜನರಭಿವೃದ್ಧಿಗಾಗಿ ೨ ಸಾವಿರ ಮೈಲಿ ಕಾಲುನಡಿಗೆ ಪ್ರವಾಸವನ್ನು ಈ ಚಳಿಗಾಲದಲ್ಲಿ ಮಾಡಲು ನಿರ್ಧರಿಸಿದ್ದಾರೆ. ಅವರ ಸಂಗಡ ಅವರ ಶಾಖೆಯ ಅಧಿಕಾರಿಗಳು ಮತ್ತು ಸಾಮಾಜಿಕ ಕಾರ್ಯಕರ್ತರುಗಳೂ ಪ್ರವಾಸಮಾಡುವರು. ಸಚಿವರು ತಮ್ಮಪ್ರವಾಸದಲ್ಲಿ ಹಳ್ಳಿಯ ಜನರಲ್ಲೇ ತಂಗಿ, ರಸ್ತೆ, ಕೆರೆ, ಶಾಲಾಕಟ್ಟಡ, ವೈದ್ಯ ಇನ್ನೇ ಮುಂತಾದ ಕಾರ್ಯಗಳನ್ನು ಜನರ [illegible] ನವರು.

ವ್ಯ[illegible]ಯ ಕೆಲಸಗಾರರ ಕೂಲಿ ಪರಿಶೀಲನಾ ಸಮಿತಿ

ಬೆಂಗಳೂರು ೧೫

[illegible]ಸ್ಥಾನದ ವ್ಯವಸಾಯ ಕೆಲ[illegible] ಕನಿಷ್ಠ ಕೂಲಿ ನಿರ್ಧರಿಸಲು ಸರ್ಕಾರದವರು ಒಂದು ಸಮಿತಿಯನ್ನು ಲೇಬರ್ ಕಮೀಷನರ್ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದಾರೆ. ಶ್ರೀಗಳಾದ ಎನ್. ಮಾಧವರಾವ್ ಎಂ. ಕೆ. ಅಪ್ಪಾಜಪ್ಪ, ಬಿ. ಎಂ. ಪುಟ್ಟಣ್ಣಗೌಡ, ಹೆಚ್. ಎಂ. ಚನ್ನಬಸಪ್ಪ, ವಿ. ಮಾಸಿಯಪ್ಪ, ಕೆ. ವಿ. ವೀರಪ್ಪ, ಮುನಿಸ್ವಾಮಯ್ಯ ಮತ್ತು ಸಿ. ಟಿ. ಹನುಮಂತಯ್ಯ ಅದರ ಸದಸ್ಯರುಗಳು.

ಕೊರಿಯಾ ಬಿಕ್ಕಟ್ಟು ಬಗೆಹರಿಸಲು ಭಾರತದ ಯತ್ನ

ಕೊರಿಯಾ ಯುದ್ಧ ಖೈದಿಗಳನ್ನೆಲ್ಲಾ ಒಂದು ದ್ವೀಪದಲ್ಲಿಟ್ಟು ಅವರ ಮೇಲೆ ಯಾವ ಪ್ರಭಾವವನ್ನೂ ಬೀರದೆ ಅವರಿಗಿಷ್ಟ ಬಂದ ರೀತಿಯಲ್ಲಿ ಅವರ ಭವಿಷ್ಯ ನಿರ್ಧರಿಸಲು ಅವಕಾಶ ಕೊಡಬೇಕೆಂಬ ಭಾರತ ನಿಯೋಗದ ಸಲಹೆಗೆ ಅನೇಕ ರಾಷ್ಟ್ರಗಳ ಮುಖಂಡರು ಬೆಂಬಲವಿತ್ತಿದ್ದಾರೆಂದು ಹೇಳಲಾಗಿದೆ. ಕೊರಿಯಾ ಬಿಕ್ಕಟ್ಟನ್ನು ಬಗೆಹರಿಸಲು ಭಾರತವು ತೆರೆಯ ಹಿಂದೆ ಮಾತುಕತೆ ನಡೆಸುತ್ತಿದೆ.

ರಷ್ಯಕ್ಕೆ ಐಸೆನ್‌ಹೋವರ್ ಭೇಟಿ

ರಷ್ಯದೊಡನೆ ಮಾತುಕತೆ ನಡೆಸಲು ಅಮೆರಿಕದ ನೂತನ ಅಧ್ಯಕ್ಷ ಐಸೆನ್‌ಹೋವರ್‌ರವರು ರಷ್ಯಕ್ಕೆ ಭೇಟಿಕೊಡಬಹುದೆಂದು ಫ್ರಾನ್ಸಿನ ಪತ್ರಿಕೆಯೊಂದು ವರದಿ ಮಾಡಿದೆ.

ವಿಶ್ವಸಂಸ್ಥೆ ಅಧಿಕಾರಿಗಳ ಆತ್ಮಹತ್ಯೆ

ವಿಶ್ವಸಂಸ್ಥೆಯ ನ್ಯಾಯಾಂಗ ಶಾಖಾ ಮುಖ್ಯಾಧಿಕಾರಿ ಅಬ್ರಹಾಂ ಹೆಚ್. ಫೆಲ್ಲರ್ ಎಂಬುವರು ಮೊನ್ನೆದಿನ ಮಹಡಿಯ ಮೇಲಿನಿಂದ ಕೆಳಕ್ಕೆ ಧುಮಿಕಿ ಆತ್ಮಹತ್ಯೆ ಮಾಡಿಕೊಂಡರೆಂದು ಹೇಳಲಾಗಿದೆ. ಹಿಂದೆ ಅವರನ್ನು ಕಮ್ಯೂನಿಸ್ಟ ಚಟುವಟಿಕೆಗಾಗಿ ಪ್ರಶ್ನಿಸಲಾಗಿತ್ತು.

ಸಯಾಂ ಸರ್ಕಾರ ಉರುಳಿಸುವ ಪಿತೂರಿ

ಸಯಾಮಿನಲ್ಲಿ ಕಮ್ಯೂನಿಸ್ಟರು ರಕ್ತಪಾತಕ್ರಾಂತಿಯನ್ನು ನಡೆಸಿ ಈಗಿನ ಸರ್ಕಾರವನ್ನು ಉರುಳಿಸಿ ರಿಪಬ್ಲಿಕ್ ಮಾಡಲು ಪಿತೂರಿ ನಡೆಸುತ್ತಿದ್ದುದನ್ನು ಪೋಲೀಸರು ಪತ್ತೆಹಚ್ಚಿದರೆಂದು ವರದಿಯಾಗಿದೆ.

ಸಚಿವ ಮತ್ತು ಅಧಿಕಾರಿಗಳ ಸಂಪತ್ತಿನ ಬಗ್ಗೆ ವಿಚಾರಣೆ

ಪಾರ್ಲಿಮೆಂಟಿನಲ್ಲಿ ನಿರ್ಣಯ

ಭಾರತದ ರಾಷ್ಟ್ರಾಧ್ಯಕ್ಷರು, ಗವರ್ನರು, ರಾಜಪ್ರಮುಖರು, ಸಚಿವರುಗಳು, ಪಾರ್ಲಿಮೆಂಟರಿ ಸೆಕ್ರೆಟರಿಗಳು, ಉನ್ನತಾಧಿಕಾರಿಗಳು ಮತ್ತು ಸಂಸ್ಥಾನಗಳ ಸಚಿವರುಗಳು ಅಧಿಕಾರದಲ್ಲಿದ್ದಾಗ ಎಷ್ಟು ಹಣ ಗಳಿಸಿರುವರೆಂಬುದರ ಬಗ್ಗೆ ವಿಚಾರಣೆ ನಡೆಸಬೇಕೆಂದು ಪಾರ್ಲಿಮೆಂಟ್‌ಸದಸ್ಯ ಶ್ರೀ ಹುಕಂಸಿಂಗ್‌ರವರ ನಿರ್ಣಯವು ಇದೇ ೨೮ ನೇ ತಾರೀಖು ಚರ್ಚೆಗೆ ಬರಲಿದೆ.

ರೇಡಿಯೋ ಪ್ರಸಾರ

ಅಖಿಲಭಾರತ ಮೈಸೂರು ರೇಡಿಯೋ ಕೇಂದ್ರದಿಂದ ಈದಿನ ರಾತ್ರಿ ೯-೧೫ ಗಂಟೆಗೆ ನೈಜೀರಿಯಾ ನಿಯೋಗದವರಿಂದ ರೇಡಿಯೋ ಸಂದರ್ಶನದ ಪ್ರಸಾರ ಮಾಡಲಾಗುವುದು.

ಎ.ಐ.ಸಿ.ಸಿ. ಚುನಾವಣೆ ಕೇಂದ್ರದಲ್ಲೇ ಜೇಬುಕಳ್ಳ

ಮೈಸೂರು ೧೫

ಈ ದಿನ ಬೆಳಗ್ಗೆ ರಾಜಧಾನಿಯ ಪಡಿಯಾರ ಚೌಕದ ಬಳಿ ಇರುವ ಮೈಸೂರು ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಪ್ರಾರಂಭವಾದ ಎ ಐ ಸಿ ಸಿ ಪ್ರತಿನಿಧಿ ಚುನಾವಣೆಯ ಕಾಲದಲ್ಲಿ ಮತದಾನ ನೀಡಲು ಬಂದಿದ್ದವರೊಬ್ಬರ ಜೇಬಿನ ಕಳುವು ನಡೆಯಿತೆಂದು ವರದಿಯಾಗಿದೆ.

ಚಟ್ಟನಹಳ್ಳಿ ಹೋಬಳಿ ಮಾವನಹಳ್ಳಿಯ ಶ್ರೀ ಜವರೇಗೌಡ ಎಂಬುವರು ಈದಿನ ಬೆಳಗ್ಗೆ ಓಟುಮಾಡಲು ಬಂದಾಗ, ಅವರ ಎಡಜೇಬನ್ನು ಕತ್ತರಿಸಿದುದ್ದನ್ನು [illegible] ಪತ್ತೆಯಾಯಿತೆಂದೂ, ಆದರೆ ಏನೂ ಕಳುವಾಗಲಿಲ್ಲವೆಂದೂ ಹೇಳಲಾಗಿದೆ ಕಳ್ಳ ಪತ್ತೆ ಮಾತ್ರ ಆಗಲಿಲ್ಲ.

ಮೈಸೂರು ತಾಲ್ಲೂಕಿನಿಂದ ಎ. ಐ. [illegible] ಸಿ. ಪ್ರತಿನಿಧಿ ಚುನಾವಣೆ [illegible] ಅತಿ ಬಿರುಸಾಗಿ ನಡೆಯು[illegible]. ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. [illegible]ಮಸಪ್ಪನವರಿಗೂ ಶ್ರೀ ಕೆ. ಪುಟ್ಟಸ್ವಾಮಿಯವರಿಗೂ ಸ್ಪರ್ಧೆನಡೆದು, ಅವರವರ ಬೆಂಬಲಿಗರು ಚುನಾವಣಾ ಕೇಂದ್ರದ[illegible]ಸುತ್ತಿರುವುದು ಕಂಡಬಂ[illegible].

ವಿಶೇಷ ಚೀಫ್ ಇಂಜನಿಯರ ಹುದ್ದೆ ರದ್ದು

ಬೆಂಗಳೂರು ೧೫

ಸಂಸ್ಥಾನದ ವಿಶೇಷ ಚೀಫ್ ಇಂಜನಿಯರ ಹುದ್ದೆಯನ್ನು ಮಿತವ್ಯಯ ದೃಷ್ಟಿಯಿಂದ ರದ್ದುಗೊಳಿಸಿರುವುದಾಗಿ ಸರ್ಕಾರ ಪ್ರಕಟಣೆ ಹೊರಬಿದ್ದಿದೆ

ಅನ್ನ, ನೀರು ಇಲ್ಲದ ಯುವತಿಯ ವೈಚಿತ್ರ್ಯ

ಮಡಕೇರಿಯ ಕಾಫಿ ತೋಟದಲ್ಲಿ ಕಳೆದ ೬ ತಿಂಗಳಿನಿಂದಲೂ ಅನ್ನ, ನೀರು ತೆಗೆದುಕೊಳ್ಳದೆ ಎಲ್ಲರ ಹಾಗೆ ನಿತ್ಯ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿರುವ ಧನಲಕ್ಷ್ಮಿ ಎಂಬ ೧೭ ವರ್ಷದ ಯುವತಿಯನ್ನು ಈಗ ಅಲ್ಲಿನ ಆಸ್ಪತ್ರೆಯಲ್ಲಿ ಪರೀಕ್ಷೆಗಾಗಿ ಇಡಲಾಗಿದೆ ಈಗ ಕೆಲವು ದಿನಗಳ ಹಿಂದೆ ಸ್ವಲ್ಪ ಆಹಾರವನ್ನು ಸೇವಿಸಿದಳೆಂದೂ,ಆದರೆ ಅವೆಲ್ಲಾ ವಾಂತಿ ಯಾದುದರಿಂದ ಮತ್ತೆ ಆಹಾರ ನೀರು ನಿಲ್ಲಿಸಿದ್ದಾಳೆ. ಆಕೆಗೆ ಬೇಕಾದ ಶಕ್ತಿಯನ್ನು ಕನ್ಯೆಗಿರುವ ಅಣು ಶಕ್ತಿಯಿಂದ ಪಡೆಯುತ್ತಿರಬಹುದೆಂದು ಅಭಿಪ್ರಾಯಪಡಲಾಗಿದೆ. ಇಂತಹ ವೈಚಿತ್ರ್ಯವು ಪ್ರಪಂಚದಲ್ಲೇ ಆಶ್ಚರ್ಯವನ್ನುಂಟುಮಾಡಿದೆ.

ಆಯುರ್ವೇದ ಪತ್ರಿಕೆಗಳು ಬೆಳೆಯಬೇಕು

ಮೈಸೂರು ೧೫

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜು ಸಂಘದಲ್ಲಿ ಈದಿನ ನಡೆದ ಧನ್ವಂತರಿ ಜಯಂತಿಯ ಅಂಗವಾಗಿ ಆಯುರ್ವೇದ ಮಾಸಪತ್ರಿಕೆಯ ೫ ನೇ ವಾರ್ಷಿಕೋತ್ಸವವನ್ನು ಬೆಂಗಳೂರು ಶ್ರೀ ಜಯಚಾಮರಾಜೇಂದ್ರ ದೇಶೀಯ ವೈದ್ಯ ಸಂಸ್ಥೆಯ ಮುಖ್ಯಾಧಿಕಾರಿಗಳಾದ ಡಾ|| ಪಾರ್ಥನಾರಾಯಣ ಪಂಡಿತರು ನೆರವೇರಿಸಿದರು. ಕಾಲೇಜಿನ ಮುಖ್ಯೋಪಾಧ್ಯಾಯರಾದ ಡಾ|| ದ್ವಾರಕನಾಥರು ಅಧ್ಯಕ್ಷತೆ ವಹಿಸಿದ್ದರು. ಆಯುರ್ವೇದ ಶಾಸ್ತ್ರಕ್ಕೆ ಹೊಸ ಕಳೆಯನ್ನು ತುಂಬಿ, ಅದರಲ್ಲಿರುವ ಕಲಾವಿಶೇಷವನ್ನು ಹೊರಗೆಡವಿ, ವೈದ್ಯರೆಲ್ಲರ ಗಮನಕ್ಕೆ ತರಬೇಕಾದರೆ ಆಯುರ್ವೇದ ಪತ್ರಿಕೆಗಳು ಅತ್ಯವಶ್ಯಕ ವೈದ್ಯರನ್ನು ಒಕ್ಕೂಡಿಸಿ ಸಂಘಟನೆಯನ್ನು ವೃದ್ಧಿಮಾಡಲು ಇದರಿಂದ ಉಪಯೋಗವಾಗುವುದು. ಪ್ರತಿಯೊಬ್ಬ [illegible] ತನ್ನ ಸಂಪಾದನೆಯಲ್ಲಿ ಒಂದು ಭಾಗವನ್ನು ಈ ಪ್ರಚಾರ ಕಾರ್ಯಕ್ಕೆ ಮೀಸಲಾಗಿಡಬೇಕು ಮತ್ತು ಲೇಖನಗಳಿಂದ ಮತ್ತು ಅಭಿಪ್ರಾಯ ವಿನಿಮಯಗಳಿಂದ ಪತ್ರಿಕೆಯನ್ನು ಪುಷ್ಟಗೊಳಿಸಬೇಕು. ವೈದ್ಯರಲ್ಲಿ ಸಂಕುಚಿತ ಭಾವವು ಹೋಗಿ ತ್ಯಾಗದ ನೆಲೆಯಲ್ಲಿ ಅಡಿಯಿಟ್ಟರೆ ಆಯುರ್ವೇದ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ- ಎಂದು ಡಾ|| ಪಾರ್ಥನಾರಾಯಣ ಪಂಡಿತರು ತಿಳಿಸಿದರು.

ಪ್ರಾಥಮಿಕ ಶಿಕ್ಷಣ ಅವಧಿ ಹೆಚ್ಚಿಸಲಾಗುವುದು

ಸಂಸ್ಥಾನದಲ್ಲಿ ಪ್ರಾಥಮಿಕವಿದ್ಯಾಭ್ಯಾಸವನ್ನು ೪ ವರ್ಷದಿಂದ ೬ ವರ್ಷಗಳಿಗೆ ಹೆಚ್ಚಿಸಬೇಕೆಂದು ಮೈಸೂರು ವಿದ್ಯಾಭ್ಯಾಸ ಸುಧಾರಣಾಸಮಿತಿ ನಿರ್ಧರಿಸಿದೆಯೆಂದು ಸಚಿವ ಶ್ರೀ ಎ ಜಿ. ರಾಮಚಂದ್ರರಾಯರು ತಿಳಿಸಿಯತ್ತಾರೆ.

† ಡಿಸೆಂಬರ್ ಒಂದನೇ ತಾರೀಖಿನಿಂದ ಸಕ್ಕರೆ ಬೆಲೆಯನ್ನು ಮಣ ಒಂದಕ್ಕೆ ಒಂದು ರೂಪಾಯಿನಂತೆ ಇಳಿಸಲು ಭಾರತ ಸರ್ಕಾರ ನಿರ್ಧರಿಸಿದೆ.

ಸಕ್ಕರೆ ದಾಸ್ತಾನು ವಿಶೇಷವಾಗಿರುವುದರಿಂದ ಬೆಲೆಯು ಇನ್ನೂ ಇಳಿಯಬಹುದೆಂದು ಹೇಳಲಾಗಿದೆ.

ರಾಗಿ, ಜೋಳದ ಮೇಲೆ ಹತೋಟಿ ತೆಗೆಯುವುದಿಲ್ಲ

ಬೆಳೆಗಳು ಅಸಮರ್ಪಕವಾಗಿರುವುದೇ ಕಾರಣ

ಬೆಂಗಳೂರು ನ ೫

ಮೈಸೂರು ಪ್ರಾಂತ್ಯದಾದ್ಯಂತ ಮಳೆ ಬಾರದೆ ಪೈರೆಲ್ಲಾ ನಷ್ಟವಾಗುತ್ತಿರುವುದರಿಂದ, ಪರಿಸ್ಥಿತಿ ಇನ್ನೂ ಹದಗೆಡಬಹುದಾಗಿದೆ. ಆದ್ದರಿಂದ ಆಹಾರ ನೀತಿ ಬಗ್ಗೆ ಎಚ್ಚರಿಕೆಯಿಂದ ವರ್ತಿಸಬೇಕಾಗಿದೆ.

ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ರಾಗಿ ಮತ್ತು ಜೋಳದಮೇಲೆ ಹತೋಟಿಯನ್ನು ತೆಗೆದುಹಾಕಬೇಕೆಂದು ಶಾಸನಸಭೆಯು ಅನುಮೋದಿಸಿದ್ದ ಸರ್ಕಾರದ ಯೋಜನೆಯನ್ನು ಸದ್ಯಕ್ಕೆ ಕಾರ್ಯರೂಪಕ್ಕೆ ತರುವುದಿಲ್ಲವೆಂದು ಇತ್ತೀಚಿಗೆ ನಡೆದ ಸಂಸ್ಥಾನದ ಜಿಲ್ಲಾಧಿಕಾರಿಗಳ ಸಭೆಯಲ್ಲಿ ತೀರ್ಮಾನವಾಯಿತೆಂದು ಗೊತ್ತಾಗಿದೆ.

ಕಾಶ್ಮೀರ ಪ್ರಥಮ ಅಧಿಪತಿ

ಕಾಶ್ಮೀರ ಪ್ರಾಂತ್ಯಕ್ಕೆ ಪ್ರಥಮ ಅಧಿಪತಿಯಾಗಿ ಚುನಾಯಿತರಾಗಿರುವ ಯುವರಾಜ ಕರಣಸಿಂಗ್‌ರವರು ಇದೇ ೧೭ನೇ ತಾ॥ ಸೋಮವಾರದ ದಿನ ಪ್ರತಿಜ್ಞಾವಚನಪೂರ್ವಕ ಅಧಿಕಾರವನ್ನು ಶ್ರೀನಗರದಲ್ಲಿ ಸ್ವೀಕರಿಸುವರು.

ಯುವರಾಜಕರಣಸಿಂಗ್‌ರವರು ಅವಿರೋಧವಾಗಿ ಚುನಾವಣೆಯಾದುದಕ್ಕೆ ಕಾಶ್ಮೀರದ ಪ್ರಧಾನಿ ಷೇಕ್ ಅಬ್ದುಲ್ಲಾರವರು ಅವರನ್ನು ಅಭಿನಂದಿಸಿ ಈ ಅಧ್ಯಾಯ ಪ್ರಾರಂಭದಿಂದ ಜನತೆಗೆ ಪರಮಾಧಿಕಾರ ಲಭಿಸಿದಂತಾಯಿತೆಂದೂ, ಅನೇಕ ವರ್ಷಗಳಿಂದ ಬಂದಿದ್ದ ರಾಜತ್ವವು ಇದ್ದಾದರೂ ಹೊಸ ಅಧಿಪತಿ ಯುವರಾಜ ಕರಣಸಿಂಗ್‌ರವರು ವಿಶಿಷ್ಟ ಗೌರವಕ್ಕೆ ಪಾತ್ರರೆಂದು ಹೇಳಿದ್ದಾರೆ.

ಇವರ ಚುನಾವಣೆಬಗ್ಗೆ ಭಾರತ ರಾಷ್ಟ್ರಪತಿಯವರು ಒಂದು ವಿಶೇಷ ಘೋಷಣೆಯನ್ನು ಹೊರಡಿಸಲಿರುವರು.

ಅಖಿಲಭಾರತ ಸಂಸ್ಕೃತ ಸಮ್ಮೇಳನ

ಕಾಶಿಯಲ್ಲಿ ನಾಳೆಯಿಂದ ನಡೆಯಲಿರುವ ಅಖಿಲಭಾರತ ಸಂಸ್ಕೃತ ಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರಿನ ಪ್ರತಿನಿಧಿಗಳಾಗಿ ಸರ್ಕಾರದವರು ಶ್ರೀಗಳಾದ ದೇವಡು ನರಸಿಂಹಶಾಸ್ತ್ರಿ ಮತ್ತು ಟಿ. ಜಿ. ಸಿದ್ದಪ್ಪಾರಾಧ್ಯರನ್ನು ಕಳುಹಿಸಿದ್ದಾರೆ.

ಸಕ್ಕರೆ ಕಂಪೆನಿ ಕೆಲಸಗಾರರಿಗೆ ಬಡ್ತಿ

ಮಂಡ್ಯ ಸಕ್ಕರೆಕಂಪನಿಯಲ್ಲಿ ಕೆಲಸಮಾಡುವವರಿಗೆ ಈಸಾಲಿನಲ್ಲಿಬಡ್ತಿ ಕೊಡಲು ಆಡಳಿತವರ್ಗದವರು ನಿಶ್ಚಯಿಸಿರುವುದಾಗಿ ಗೊತ್ತಾಗಿದೆ.

ಕೂಡಲೇ ಬಡ್ತಿ ಕೊಡದಿದ್ದರೆ ಮುಷ್ಕರ ಹೂಡುವುದಾಗಿ ಕೆಲಸಗಾರರ ಸಂಘದವರು ನೋಟೀಸ್ ಕೊಟ್ಟಿದ್ದರ ಮೇಲೆ ಈ ತೀರ್ಮಾನವಾಯಿತೆಂದು ಹೇಳಲಾಗಿದೆ.

ಸೀಮೆಂಟಿನ ಬೆಲೆ

ಗೋಣೀಚೀಲಗಳಲ್ಲಿ ತುಂಬಿರುವ ಸೀಮೆಂಟಿನ ಬೆಲೆಯನ್ನು ಟನ್ ಒಂದಕ್ಕೆ ೮೩-೮-೦ ರೂಪಾಯಿಗಳಿಗೆ ಇಳಿಸಲಾಗಿದೆ.

ಭದ್ರಾಜಲಾಶಯ ನಿರ್ಮಾಣ

ಭದ್ರಾಜಲಾಶಯವನ್ನು ಆದಷ್ಟು ಬೇಗ ನಿರ್ಮಾಣಮಾಡಲು ಭಾರತ ಸರ್ಕಾರವು ಆಸಕ್ತಿವಹಿಸಿ, ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನೆಲ್ಲಾ ಪರಿಶೀಲಿಸುತ್ತಲಿರುವುದಾಗಿ ಗೊತ್ತಾಗಿದೆ.

ಅಂಚೆ, ತಂತಿ ಇಲಾಖಾ ನೌಕರರಿಗೆ ಖಾದಿ

ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಕೆಲಸಮಾಡುವ ನೌಕರರಿಗೆ ಉಡುಪನ್ನು ಕೊಡುವಾಗ ಖಾದಿಬಟ್ಟೆಯನ್ನೇ ಉಪಯೋಗಿಸಲು ಸರ್ಕಾರವು ನಿರ್ಧರಿಸಿರುವುದಾಗಿ ಸಂಚಾರ್ಯಶಾಖಾ ಸಚಿವರ ಶ್ರೀ ಜಗಜೀವನರಾಂರವರು ಹೇಳಿದ್ದಾರೆ.

†ಮದ್ರಾಸ್ ಪ್ರಾಂತ್ಯದಲ್ಲಿ ಖಾದಿ ಉತ್ಪತ್ತಿ ಮತ್ತು ಮಾರಾಟದ ಮೇಲಿದ್ದ ಎಲ್ಲಾ ನಿಷೇಧಾಜ್ಞೆಗಳನ್ನು ಸರ್ಕಾರವು ರದ್ದುಗೊಳಿಸಿರುವುದಾಗಿ ಗೊತ್ತಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೧೪-೧೧-೫೨

	ವಲ್ಲ ರೂ-	ಆ-	ರೂ-	ಆ
ಕಡಲೇಕಾಯಿ	೧೦-೪	೨೩		೧೩
ಎಳ್ಳು	೬೬-೩	೬೮		೧೩
ಹರಳು	೪೧ ೮	೪೫		—
ಹುರುಳಿ	—	—		
ಹೆಸರು	೫೩ ೦	೫೩		೧೩
ಉದ್ದು				
ಅಲಸಂದೆ	೫೭ ೦	೬೫-		೨
ಹುಚ್ಚೆಳ್ಳು		—		—
ಹೊಂಗೆಬೀಜ	— —	—		—
ಮೆ॥ ಕಾಯಿ	೯-೧೩	೧೭		೧೪
ಸೀಗೇಕಾಯಿ				
ಬೆಲ್ಲ	೩ ೮	೩		೮
ಹುಣಸೆಹಣ್ಣು				
ತೆಂಗಿನಕಾಯಿ	೧೮೪	೨೩೦		

ಎ. ಐ. ಸಿ. ಸಿ. ಚುನಾವಣೆ

ಮೈಸೂರು ೧೫

ಮೈಸೂರುನಗರ ದಕ್ಷಿಣ ಕ್ಷೇತ್ರದಿಂದಎ. ಐ.ಸಿ.ಸಿ.ಗೆ ಪ್ರತಿನಿಧಿಚುನಾವಣೆ ನಿನ್ನೆ ನಡೆದು ಶ್ರೀ ಕೆ. ಎಸ್. ಸೂರ್ಯನಾರಾಯಣರಾಯರು ಜಯಶೀಲರಾದರು ಶ್ರೀ ಕೆ. ಎಸ್. ಸೂರ್ಯನಾರಾಯಣರಾಯರು ೩೧೭ ಓಟು ಮತ್ತು ಶ್ರೀ ಸಿ. ಜೆ. ದೇವನಾಥ್‌ರವರು ೨೦೧ ಓಟುಗಳಿಸಿದರು.

ಆರತಕ್ಷತೆ

ಮೈಸೂರು ಹಿರಿಯ ಶಾಸನ ಸಭೆಯ ಉಪಾಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ತಮ್ಮ ಪುತ್ರ ಶ್ರೀ ಪಿ. ಲಕ್ಷ್ಮೀನಾರಾಯಣಶೆಟ್ಟಿ ಮತ್ತು ಚಿ॥ ಸೌ॥ ಶ್ರೀಮತಿ ದೇವಿಯವರ ವಿವಾಹಮಹೋತ್ಸವ ಸಂಬಂಧದಲ್ಲಿ ನಿನ್ನೆ ಸಂಜೆ ತಮ್ಮ ಗೃಹದಲ್ಲಿ ಆರತಕ್ಷತೆಯನ್ನು ಏರ್ಪಡಿಸಿದ್ದರು ನಗರದ ಅನೇಕ ಗಣ್ಯ ಮಹನೀಯರು ದಯಮಾಡಿಸಿ ವಧೂವರರನ್ನು ಆಶೀರ್ವದಿಸಿದರು.

ಶಾಂತಿಸ್ಥಾಪನೆ ಮಾರ್ಗ

ದೇಶದ ಒಳಗೂ ಹೊರಗೂ ಇರುವ ಅಶಾಂತಿಯನ್ನು ಹೋಗಲಾಡಿಸಬೇಕಾದರೆ ಮಹಾತ್ಮ ಗಾಂಧಿಯವರ ಸತ್ಯ, ಅಹಿಂಸೆ ಮಾರ್ಗವನ್ನು ಅನುಸರಿಸಿದರೆ ಮಾತ್ರ, ಸಾಧ್ಯವೆಂದು ರಾಷ್ಟ್ರಾಧ್ಯಕ್ಷರು ನಿನ್ನೆಯದಿನ ಅಲಹಾಬಾದಿನಲ್ಲಿ ಮಾತನಾಡುತ್ತಾ, ಹೇಳಿರುವರು.

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು
ನಿಮ್ಮ ಸದರುಗಳನ್ನು ಅಲಂಕರಿಸಲಿ
ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.
ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ಕೆಗಳು ವಹಿಸಲ್ಪಡುವುವು.
★
ಹೆಚ್ಚಿನ ವಿವರಗಳಿಗೆ ಬರೆಯಿರಿ:—
ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ
ಬೆಂಗಳೂರು ೩.

ಅಪೇರ
14—11—52 ನೇ ಶುಕ್ರವಾರದಿಂದ
ದಿನವಹಿ 3 ಪ್ರದರ್ಶನಗಳು
ಮಾಯಲ-
-ಮಾರಿ
[ತೆಲುಗು]
ಪಾತ್ರ:—ಅಂಜಲಿದೇವಿ, ನಾಗೇಶ್ವರರಾವ್, ಶಿವರಾವ್, ಮುಕ್ಕಾಮಲ.

★ ವುಡ್‌ಲ್ಯಾಂಡ್ಸ್ ★
14—11—52 ರಿಂದ ಪ್ರಾರಂಭ
ಪ್ರತಿದಿನ ಮೂರು ಆಟಗಳು
ನೌಬಹಾರ್ ಹಿಂದಿ
ಭೂಮಿಕೆ:—ಅಶೋಕ್ ಕುಮಾರ್, ನಳಿನಿಜಯವಂತ್, ಕುಲ್‌ದೀಪ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 72

೧೮-೧೧-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಅಗರಬತ್ತಿ ಸಹಕಾರಸಂಘ

ಮೈಸೂರು ೧೮

ರಾಜಧಾನಿಯಲ್ಲಿರುವ ಅಗರಬತ್ತಿ ತಯಾರಿಕಾಗಾರರು ಕಳೆದ ೧೨ನೇ ತಾ॥ ಸಭೆಸೇರಿ ಒಂದು ಸಹಕಾರ ಸಂಘವನ್ನು ಸ್ಥಾಪಿಸಿದರು. ಅದಕ್ಕೆ ಶ್ರೀ ಟಿ ಎಲ್. ಎಸ್. ಉಪಾಧ್ಯಾಯರು ಅಧ್ಯಕ್ಷರಾಗಿಯೂ, ಶ್ರೀ ಎಂ. ಯುಸೂಫ್‌ಸೇಟ್ ಉಪಾಧ್ಯಕ್ಷರಾಗಿಯೂ, ಶ್ರೀ ಲಕ್ಷ್ಮೀಚಂದ್‌ರು ಕಾರ್ಯದರ್ಶಿಯಾಗಿಯೂ ಚುನಾಯಿಸಲಾಯಿತು.

ವಾಲಿಬಾಲ್ ಪಂದ್ಯ

ಸಿಲ್ವರ್‌ಜ್ಯೂಬಿಲಿ ಅಂತರ ಪ್ರೌಢಶಾಲಾ ವಾಲೀಬಾಲ್ ಪಂದ್ಯದ ಫೈನಲ್ಸನಲ್ಲಿ ದಳವಾಯಿ ಹೈಸ್ಕೂಲಿನವರು ಬನುಮಯ್ಯ ಹೈಸ್ಕೂಲಿನವರನ್ನು ಮೊನ್ನೆ ದಿನ ೧೫-೧೩ ೧೫-೫ ಪಾಯಿಂಟುಗಳಿಂದ ಸೋಲಿಸಿದರು.

ದಕ್ಷಿಣ ಆಫ್ರಿಕಾ ದಿನಾಚರಣೆ

ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಮೇಲ್ಕಂಡ ದಿನಾಚರಣೆಯು ಶ್ರೀ ಜಿ. ವಿ. ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಡಿ.ಎಸ್. ಶಂಕರಪ್ಪ, ಕರ್ಣ,ರಾರ್ಜ,ಬೋರೇಗೌಡ, ಅನಂತಯ್ಯ, ಬಿ.ಆರ್. ರಾಮಯ್ಯ ಮತ್ತು ನಂಜುಂಡರಾವ್ ಮುಂತಾದವರು ಭಾಷಣ ಮಾಡಿದರು. ವಿಶ್ವಸಂಸ್ಥೆಯು ದಕ್ಷಿಣ ಆಫ್ರಿಕದ ವರ್ಣಭೇದದ ಅನ್ಯಾಯ ರೀತಿಯನ್ನು ಗಮನಿಸಿ ಅದರ ಜನಾಂಗವನ್ನು ಪಾರುಮಾಡಿ, ಮಲಾನ್ ಸರ್ಕಾರಕ್ಕೆ ಬುದ್ಧಿ ಕಲಿಸಬೇಕೆಂದು ಕೋರುವ ನಿರ್ಣಯಮಾಡಲಾಯಿತು.

ನೆಹರೂ ಜಯಂತಿ

ಪ್ರಧಾನಿ ಪಂಡಿತ ನೆಹರೂರವರ ೬೩ನೇ ವರ್ಷದ ಜಯಂತ್ಯುತ್ಸವವನ್ನು ಸಾರ್ವಜನಿಕ ವಿದ್ಯಾರ್ಥಿನಿಲಯದವರು ಮೊನ್ನೆ ಶ್ರೀ ಕುಪ್ಪಸ್ವಾಮಿಯವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಶ್ರೀಮತಿ ಕಾವೇರಮ್ಮ ಕುಪ್ಪಸ್ವಾಮಿಯವರು ಭಾಷಣಮಾಡಿದರು.

ಶಿವರಾತ್ರೀಶ್ವರ ಜಯಂತಿ

ರಾಜಧಾನಿಯ ವಾಣಿವಿಲಾಸ ರಸ್ತೆಯಲ್ಲಿರುವ ಶ್ರೀ ಶಿವರಾತ್ರೀಶ್ವರ ಜಯಂತಿ ಮಹೋತ್ಸವವು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಲಕಾಡು ಪಂಚಲಿಂಗ ದರ್ಶನ

ಮೈಸೂರು ೧೮

ಟಿ. ನರಸೀಪುರ ತಾಲ್ಲೂಕಿನ ತಲಕಾಡಿನಲ್ಲಿ ನಿನ್ನೆ ನಡೆದ ಪಂಚಲಿಂಗ ದರ್ಶನಕ್ಕಾಗಿ ೩ ಲಕ್ಷಕ್ಕಿಂತಲೂ ಹೆಚ್ಚಾಗಿ ಜನರು ಸೇರಿದ್ದರು. ಶ್ರೀಮನ್ಮಹಾರಾಜರವರು, ಮಹಾರಾಣಿ, ಯುವರಾಣಿ, ಗಾಯತ್ರೀದೇವಿಯವರೊಡನೆ ಬೆಳಗ್ಗೆ ೮-೩೦ ಕ್ಕೆ ಭೇಟಿ ಇತ್ತು, ಅಲ್ಲಿ ದೇವಸ್ಥಾನಗಳಿಗೂ ಕಾಲು ನಡಗೆಯಲ್ಲೇ ಹೋಗಿ ದೇವರ ದರ್ಶನ ಮಾಡಿದರು.

ಅಷ್ಟು ಜನಸಂದಣಿಯಿದ್ದರೂ, ಎಲ್ಲರೂ ದೇವರ ದರ್ಶನ ಮಾಡಲು ೪೦೦ ಮಂದಿ ಪೋಲೀಸರು ೧೫೦ ಮಂದಿ ಸೇವಾದಳದವರೂ ವಿಶೇಷ ಮುತುವರ್ಜಿಯಿಂದ ಏರ್ಪಾಡು ಮಾಡಿದ್ದರು. ಯಾವ ಘಟನೆಯೂ ನಡೆಯಲಿಲ್ಲ ಸಚಿವರುಗಳಾದ ಶ್ರೀಗಳಾದ ಟಿ ಸಿದ್ದಲಿಂಗಯ್ಯ, ಎ. ಜಿ ರಾಮಚಂದ್ರರಾವ್, ಕಡಿದಾಳ್‌ಮಂಜಪ್ಪ ಮತ್ತು ಟಿ ಚನ್ನಯ್ಯನವರುಗಳೂ ದಯಮಾಡಿಸಿದ್ದರು.

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಸ್ವಾಮಿನಾಥನ್, ಪೊಲೀಸ್ ಅಧಿಕಾರಿ ಶ್ರೀ ಕೃಷ್ಣಮೂರ್ತಿರವರು ಇಲ್ಲಿ ಮುಂಜಾಗ್ರತೆ ಕಾರ್ಯಕ್ರಮ ಕೈಗೊಂಡಿದ್ದರು. ಯಾತ್ರಿಕರಿಗೆ ನಲ್ಲಿಯ ಮೂಲಕ ಶುದ್ಧ ನೀರನ್ನು ಸರಬರಾಜುಮಾಡಲಾಗಿತ್ತು.

ಸುಬ್ಬಲಕ್ಷ್ಮಿಯವರ ಸಂಗೀತ

ಮಹಾಜನ ಹೈಸ್ಕೂಲು ನಿಧಿಯ ಸಹಾಯಕ್ಕಾಗಿ ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮಿಯವರ ಅಮೋಘ ಸಂಗೀತ ಕಛೇರಿಯು ಮೊನ್ನೆ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ರಾಮಚಂದ್ರ ಜೋಯಿಸರು ಸ್ವಾಗತಭಾಷಣ ಮಾಡಿ ನಿಧಿಗೆ ೫ ಸಾವಿರ ರೂ. ಸಹಾಯ ನೀಡಿದ ಸಾರ್ವಜನಿಕರನ್ನು ವಂದಿಸಿದರು.

ನಾಳೆ ವಿಶ್ವವಿದ್ಯಾನಿಲಯದ ಫಲಿತಾಂಶ

ಇದೇ ಸೆಪ್ಟಂಬರ್ ತಿಂಗಳಿನಲ್ಲಿ ನಡೆದ ವಿಶ್ವವಿದ್ಯಾನಿಲಯದ ಪರೀಕ್ಷಾ ಫಲಿತಾಂಶಗಳು ನಾಳೆ ಬೆಳಗ್ಗೆ ಹನ್ನೊಂದುಗಂಟೆಗೆ ಪ್ರಕಟಿಸಲಾಗುವುದು.

ಭೂದಾನಯಜ್ಞ ಚಳುವಳಿ

ಮೈಸೂರು ೧೮

ಮೈಸೂರು ಸಂಸ್ಥಾನಾದ್ಯಂತ ಭೂದಾನಯಜ್ಞ ಚಳುವಳಿ ಆರಂಭಿಸುವ ಬಗ್ಗೆ ಅಖಿಲಭಾರತ ಸರ್ವ ಸೇವಾಸಂಘದ ಕಾರ್ಯದರ್ಶಿ ಶ್ರೀ ವಲ್ಲಭಸ್ವಾಮಿಯವರು ಇದೇ ೨೦ನೇ ತಾರೀಖಿನಿಂದ ೨೭ರವರೆಗೆ ಸಂಸ್ಥಾನದಲ್ಲಿ ಪ್ರವಾಸಮಾಡುವರು. ಅವರು ಇದೇ ೨೫ನೇ ತಾರೀಖು ಸಂಜೆ ರಾಜಧಾನಿಯಲ್ಲಿ ನಡೆಯುವ ಸಭೆಯಲ್ಲಿ ಭಾಗವಹಿಸುವರು.

ಆಹಾರ ಅಭಾವ ಪ್ರದೇಶದಲ್ಲಿ ರೆಡ್‌ಕ್ರಾಸ್‌ನವರ ಸಹಾಯ

ಮೈಸೂರು ಸಂಸ್ಥಾನದ ಅಭಾವಪ್ರದೇಶಗಳಲ್ಲಿ ರೆಡ್‌ಕ್ರಾಸ್ ಸಂಸ್ಥೆಯು ಮೈಸೂರುಶಾಖೆಯು ಈಗ ೨೨೦ ಪರಿಹಾರ ಕೇಂದ್ರಗಳನ್ನು ತೆರೆದಿದೆಯೆಂದೂ, ಇನ್ನೂ ಹೆಚ್ಚಿಗೆ ತೆರೆಯಲು ಏರ್ಪಾಡು ಮಾಡಲಾಗಿದೆಯೆಂದೂ ಅದರ ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಈ ಕೇಂದ್ರಗಳಲ್ಲಿ ಹಾಲು ಮತ್ತು ವಿವಿಧ ಅನ್ನಾಂಗಗಳುಳ್ಳ ಗುಳಿಗೆ, ನಿಶ್ಶಕ್ತರಿಗೆ ಮತ್ತು ನಿರ್ಗತಿಕರಿಗೆ ಆಹಾರ ಒದಗಿಸಲಾಗುತ್ತಿದೆ. ಒಟ್ಟು ೮೦ ಸಾವಿರ ರೂ ಬೆಲೆಬಾಳುವ ಹಾಲಿನ ಪುಡಿ, ೧೫ ಲಕ್ಷ ರೂ ಆಹಾರಧಾನ್ಯ ಸರಬರಾಜು ಮಾಡಲಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೧೭-೧೧-೫೨

	ಪಲ್ಲ ರೂ-	ಆ-	ರೂ-	ಆ
ಕಡಲೇಕಾಯಿ	೧೧-೮	೧೯		೧೪
ಎಳ್ಳು	೭೦-೬	—		—
ಹರಳು	೪೩ ೮	೪೩		೧೦
ಹುರುಳಿ	೫೭ ೦	೬೧-		೦
ಹೆಸರು	೪೭ ೦	೫೩		೧೪
ಉದ್ದು				
ಅಲಸಂದೆ				
ಹುಚ್ಚೆಳ್ಳು		—		—
ಹೊಂಗೆಬೀಜ	೫೪ ೧೩	೬೫		೧೦
ಮೆ॥ ಕಾಯಿ	೧೦-೮	೧೭		೧೦
ಸೀಗೇಕಾಯಿ				
ಬೆಲ್ಲ	೩ ೮			
ಹುಣಸೆಹಣ್ಣು				
ತೆಂಗಿನಕಾಯಿ	೧೯೯	೨೩೯		

ಮೈಸೂರು ಅಭಾವ ಪ್ರದೇಶಕ್ಕೆ ಕೇಂದ್ರದ ಸಹಾಯ

ಮೈಸೂರು ಸಂಸ್ಥಾನದ ಆಹಾರ ಅಭಾವ ಪ್ರದೇಶಗಳಿಗಾಗಿ ಕೇಂದ್ರಸರ್ಕಾರವು ಇದೇ ನವಂಬರ್ ೭ನೇ ತಾ॥ ಅಂತ್ಯದವಾರದಲ್ಲಿ ೨೩೦೦ಟನ್ ಆಹಾರಧಾನ್ಯವನ್ನು ಕೊಟ್ಟಿದೆ ಪಶ್ಚಿಮಬಂಗಾಳ, ಮಧ್ಯಭಾರತ್, ಬೊಂಬಾಯಿ ಮತ್ತು ಇತರ ಪ್ರದೇಶಗಳಿಗೆ ಇದೇ ಕಾಲದಲ್ಲಿ ಒಟ್ಟು ೪೧,೨೫೦ ಟನ್ ಆಹಾರ ಒದಗಿಸಲಾಗಿದೆ.

ಪಂಡಿತರಿಗೆ ರಾಷ್ಟ್ರಾಧ್ಯಕ್ಷರಿಂದ ಸನ್ಮಾನ

ಕಾಶಿಯ ಸುಮಾರು ೨೦೦ ಮಂದಿ ಸಂಸ್ಕೃತ ಪಂಡಿತರನ್ನು ಬೆಳ್ಳಿಯ ಭದ್ರಾಸನದಮೇಲೆ ಕುಳ್ಳಿರಿಸಿ, ಪಾದಪೂಜೆಮಾಡಿ ಹಣೆಯಮೇಲೆ ಗಂಧವನ್ನಿಟ್ಟು, ಪ್ರತಿಯೊಬ್ಬರಿಗೂ ಹನ್ನೊಂದುರೂಪಾಯಿ ದಕ್ಷಿಣೆ ಮತ್ತು ಸಿಹಿ ತಿಂಡಿ ಕೊಟ್ಟು ಭಾರತ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರು ಮೊನ್ನೆ ದಿನ ಸನ್ಮಾನಿಸಿದರು.

ಧಾನ್ಯಸಂಗ್ರಹಣೆ

ಮದ್ರಾಸ್ ಪ್ರಾಂತ್ಯದ ಗೋದಾವರಿ, ಕೃಷ್ಣ,ತಂಜಾವೂರು ಮತ್ತು ಗುಂಟೂರುಜಿಲ್ಲೆಗಳಲ್ಲಿ ಈ ಸಾಲಿನಲ್ಲಿ ಧಾನ್ಯಸಂಗ್ರಹಣೆ ಕಾರ್ಯವನ್ನು ಮದ್ರಾಸ್ ಸರ್ಕಾರವು ಲೆವಿ ಪದ್ಧತಿ ಮೂಲಕ ನಡೆಸಲಿದೆ.

ಚೀಫ್ ಇಂಜನಿಯರ್ ರಾಜೀನಾಮೆ

ಕಳೆದ ಮೇ ಮಾಹೆಯಲ್ಲಿ ಕೃಷ್ಣಾನದಿಯಲ್ಲಿ ನಡೆದ ದುರಂತದ ಪರಿಣಾಮವಾಗಿ ಮದ್ರಾಸಿನ ನೀರಾವರಿ ಚೀಫ್ ಇಂಜನಿಯರ್ ಶ್ರೀ ಎ ಆರ್. ವೆಂಕಟಾಚಾರ್ಯರವರು ರಾಜೀನಾಮೆ ಕೊಟ್ಟಿದ್ದಾರೆ ಅದನ್ನು ಸರ್ಕಾರವು ಅಂಗೀಕರಿಸಿದೆ.

ಅಲ್ಲಿ ನಡೆದ ದುರಂತಕ್ಕೆ ತಾವು ಕಾರಣರಲ್ಲವಾದರೂ ತಾವು ಆ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದಾಗ ದುರಂತ ನಡೆದದ್ದಕ್ಕಾಗಿ ತಾವು ರಾಜೀನಾಮೆಕೊಟ್ಟಿರುವುದಾಗಿ ಶ್ರೀಯುತರು ತಿಳಿಸಿದ್ದಾರೆ.

† ಭಾರತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪತಂಜಲಿ ಶಾಸ್ತ್ರಿಯವರು ತಿರುವಾಂಕೂರ್ ಕೊಚ್ಚಿನ್‌ನಲ್ಲಿ ತಮ್ಮ ಪ್ರವಾಸ ಮುಗಿಸಿಕೊಂಡು ೨೦ ನೇ ತಾರೀಖು ಮೈಸೂರಿಗೆ ಬರಲಿರುವರೆಂದುಗೊತ್ತಾಗಿದೆ.

ಭಾರತ ಸರ್ಕಾರದ ಹೊಸ ಆಹಾರ ನೀತಿ

ಪಾರ್ಲಿಮೆಂಟಿನಲ್ಲಿ ಕಿದ್ವಾಯಿ-ನೆಹರೂರವರ ವಿವರಣೆ

ರಾಗಿ, ನವಣೆ ಮುಂತಾದವುಗಳ ಮೇಲೆ ಹತೋಟಿ ಸಡಿಲ

ನಿನ್ನೆಯದಿನ ಭಾರತ ಪಾರ್ಲಿಮೆಂಟಿನಲ್ಲಿ ಭಾರತ ಸರ್ಕಾರದ ಹೊಸ ಆಹಾರ ನೀತಿಯನ್ನು ಆಹಾರ ಸಚಿವ ಮಿ॥ ಕಿದ್ವಾಯಿಯವರು ಮತ್ತು ಪ್ರಧಾನಿ ನೆಹರೂರವರು ವಿವರಿಸಿದರು.

ಈ ಹೊಸ ನೀತಿಯ ಪ್ರಕಾರ ರಾಗಿ, ನವಣೆ, ಸಾವೆ ಮುಂತಾದ ಧಾನ್ಯಗಳ ಮೇಲೆ ಹತೋಟಿಯನ್ನು ಸಡಿಲಿಸಲಾಗಿದೆ. ಈ ಧಾನ್ಯಗಳ ಸಾಗಾಣಿಕೆಗೆ ಪ್ರಾಂತ್ಯದೊಳಗೆ ನಿರ್ಬಂಧವಿಲ್ಲ ಆದರೆ ಅಂತರ ಪ್ರಾಂತ್ಯ ನಿರ್ಬಂಧವು ಮುಂದುವರಿಯುತ್ತದೆ. ಪ್ರಾಂತ್ಯದೊಳಗೇ ಈ ನಿರ್ಬಂಧವನ್ನು ವಿಧಿಸಬೇಕಾದರೆ ಪ್ರಾಂತ್ಯ ಸರ್ಕಾರಗಳು ಕೇಂದ್ರದ ಅನುಮತಿಯನ್ನು ಪಡೆಯಬೇಕಾಗಿದೆ. ಹೆಚ್ಚು ಬೆಳೆಯಿರುವ ಪ್ರಾಂತ್ಯಗಳಿಂದ ಮತ್ತೊಂದು ಪ್ರಾಂತ್ಯ ಸರ್ಕಾರವು ಆಹಾರ ವಸ್ತುಗಳನ್ನು ತಂಸಿಕೊಳ್ಳಲು ಅಡ್ಡಿಯೇನೂ ಇರುವುದಿಲ್ಲ. ಬೆಲೆಯ ಮಟ್ಟವು ಮಾತ್ರ ಏರದಂತೆ ಎಲ್ಲ ವ್ಯವಸ್ಥೆ ಮಾಡಲಾಗುತ್ತದೆ. ಅಕ್ಕಿ ಮತ್ತು ಗೋಧಿಯ ಮೇಲೆ ಈಗಿರುವಂತೆಯೇ ಹತೋಟಿ ಮುಂದುವರಿಸಲಾಗುತ್ತದೆಯೆಂದು ಗೊತ್ತಾಗಿದೆ.

ಪಂಚವಾರ್ಷಿಕ ಯೋಜನೆಗೆ ನಿಯಂತ್ರಣ ಆಧಾರ

ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ಆಹಾರ ನೀತಿಯ ಬಗ್ಗೆ ಚರ್ಚೆ ನಡೆಯುವಾಗ ಕೇಂದ್ರ ಅರ್ಥಸಚಿವ ಶ್ರೀ ದೇಶಮುಖ್‌ರವರು ಮಾತನಾಡುತ್ತಾ, ಪಂಚವಾರ್ಷಿಕ ಯೋಜನೆಯು ನಿಯಂತ್ರಣ ಆಧಾರದ ಮೇಲೆ ನಿಂತಿದೆ ಆದುದರಿಂದ ನಿಯಂತ್ರಣವನ್ನು ತೆಗೆಯುವುದು ಸಾಧ್ಯವಲ್ಲವೆಂದು ಹೇಳಿರುತ್ತಾರೆ.

ಮದ್ರಾಸಿಗೆ ಕೇಂದ್ರದ ಸಾಲ

ಪಂಚವಾರ್ಷಿಕ ಯೋಜನೆಪ್ರಕಾರ ೫೩-೫೪ನೇ ಸಾಲಿನಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ನಡೆಯಲಿರುವ ಕಾರ್ಯಗಳಿಗೆ ಕೇಂದ್ರವು ೭ ಕೋಟಿ ೮೪ ಲಕ್ಷ ರೂ ಸಾಲವನ್ನು ಕೊಡಲಿದೆಯೆಂದು ಗೊತ್ತಾಗಿದೆ.

ಕಾಶ್ಮೀರ ಅಧಿಪತಿಯು ಅಧಿಕಾರ ಸ್ವೀಕಾರ

ಕಾಶ್ಮೀರದ ಚುನಾಯಿತ ಅಧಿಪತಿ ಶ್ರೀ ಕರಣಸಿಂಗ್‌ರವರು ನಿನ್ನೆಯದಿನ ಪ್ರತಿಜ್ಞಾಪೂರ್ವಕವಾಗಿ ತಮ್ಮ ಅಧಿಕಾರವನ್ನು ವಹಿಸಿಕೊಂಡರು. ಕಾಶ್ಮೀರ ಶ್ರೇಷ್ಠ ನ್ಯಾಯಾಲಯದ ಶ್ರೇಷ್ಠ ನ್ಯಾಯಮೂರ್ತಿಯವರು ಪ್ರಮಾಣ ವಚನ ಮಾಡಿಸಿದರು.

ಈ ಸಂದರ್ಭದಲ್ಲಿ ಶ್ರೀ ಕರಣಸಿಂಗ್‌ರವರು ಮಾತನಾಡುತ್ತಾ, ಜನತೆಯ ಸೇವಕನಾಗಿ ನಮ್ರತೆ ಮತ್ತು ತಮ್ಮ ಶಕ್ತಿ ಮೀರಿ ಶ್ರಮಿಸುವುದಾಗಿ ತಿಳಿಸಿದ್ದಾರೆ.

ನೇಪಾಳಕ್ಕೆ ಚೀಣಾ ಸೈನಿಕರ ಅಕ್ರಮ ಪ್ರವೇಶ

ನೇಪಾಳಕ್ಕೆ ಟಿಬೆಟ್ ಸರಹದ್ದಿನ ಮೂಲಕ ಚೀಣಾ ಸೈನಿಕರು ಬರುತ್ತಿರುವರೆಂದು ಅಖಿಲ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಆರ್. ಪಿ. ಉಪಾಧ್ಯಾಯರು ತಿಳಿಸಿರುತ್ತಾರೆ. ಟಿಬೆಟ್ಟಿನ ತಕಾರ್‌ಕೋಟೆ ಕಳೆದವರ್ಷದಿಂದ ಇಡಲಾಗಿದ್ದ ಚೀಣಾ ಸೈನಿಕರು ಈಗ ನೇಪಾಳ ಪ್ರದೇಶದ ಅರಣ್ಯಗಳಿಗೆ ಬಂದು, ಅಲ್ಲಿ ಅಕ್ರಮವಾಗಿ ಸಾಗುವಳಿಗಾಗಿ ವಶಪಡಿಸಿ ಸೈನ್ಯ ಶಿಬಿರಗಳನ್ನು ಕಟ್ಟುತ್ತಿರುವರೆಂದು ಅವರು ಹೇಳಿರುತ್ತಾರೆ.

[redacted]

ಅಪೇರ

14—11—52 ನೇ ಶುಕ್ರವಾರದಿಂದ ದಿನವಹಿ 3 ಪ್ರದರ್ಶನಗಳು

ಮಾಯಲ - - ಮಾರಿ

[ತೆಲುಗು]

ಪಾತ್ರ:—ಅಂಜಲಿದೇವಿ, ನಾಗೇಶ್ವರರಾವ್, ಶಿವರಾವ್, ಮುಕ್ಕಾಮಲ.

[redacted]

ಪರಿಹಾರ ನಿಧಿಗೆ ಸಹಾಯ

ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರು ಮೈಸೂರು ಸಂಸ್ಥಾನ ಪರಿಹಾರ ನಿಧಿಗಾಗಿ ೩೩೨-೮೦ರೂ ವಸೂಲ್ಮಾಡಿ ಕಳುಹಿಸಿರುತ್ತಾರೆ. (ಗುಬ್ಬಿ ಕಂಪೆನಿಯವರು ಪರಿಹಾರನಿಧಿ ಸಹಾಯಾರ್ಥವಾಗಿ ರತ್ನಾವಳಿ ಥಿಯೇಟರಿನಲ್ಲಿ ೧೯ನೇ ತಾ॥ ಸಂಜೆ ನಾಟಕ ಪ್ರದರ್ಶಿಸಲಿರುವರು. ಕೈಗಾರಿಕಾ ಸಚಿವ ಶ್ರೀ ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸುತ್ತಾರೆ.

ರ ಣ ಜಿ ತ್

14-11-52 ರಿಂದ ಪ್ರತಿದಿನ 3 ಆಟ

ನಯ ಸನ್ಸಾರ್‌ರವರ

ಅ ನ್ ಹೊ ನೀ ಹಿಂದಿ

ಪಾತ್ರ:—ನರ್ಗಿಸ್, ರಾಜ್‌ಕಪೂರ್, ಆಗ, ಡೇವಿಡ್, ಬದ್ರಿಪ್ರಸಾದ್, ಜಾನಕಿದಾಸ್ ಮತ್ತು ಓಂಪ್ರಕಾಶ್.

★ ವುಡ್‌ಲ್ಯಾಂಡ್ಸ್ ★

14—11—52 ರಿಂದ ಪ್ರಾರಂಭ ಪ್ರತಿದಿನ ಮೂರು ಆಟಗಳು

ನೌಬಹಾರ್ ಹಿಂದಿ

ಭೂಮಿಕೆ:—ಅಶೋಕ್ ಕುಮಾರ್ ನಳಿನಿಜಯವಂತ್, ಕುಲ್‌ದೀಪ್.

ಮೈಸೂರು ಪುರಸಭಾ ಕಛೇರಿ

ತಾ॥ ೧೩—೧೧—೫೨

ಈ ಮೂಲಕ ತಿಳಿಯಪಡಿಸುವುದೇನೆಂದರೆ:—೧೯೫೩—೫೪ (೧—೪—೧೯೫೩ ರಿಂದ ೩೧—೩—೧೯೫೪) ನೇ ಸಾಲಿಗೆ ಬೇಕಾಗುವ ಈಕೆಳಗೆ ವಿವರಿಸಿರುವ ಸಾಮಾನುಗಳನ್ನು ಮೈಸೂರು ಸಿಟಿ ಮುನಿಸಿಪಾಲಿಟಿಗೆ ಸಪ್ಲೈ ಮಾಡಲು ಮೊಹರಾದ (Sealed tenders with samples) ಟೆಂಡರುಗಳನ್ನು ಸ್ಯಾಂಪಲ್ಲುಗಳೊಡನೆ ೧೯೫೨ ನೇ ಇಸವಿ ನವಂಬರ್ ಮಾಹೆ ತಾ॥ ೨೭ ಗುರುವಾರ ಮಧ್ಯಾಹ್ನ ೪ ಘಂಟೆವರೆವಿಗೂ ಮುನಿಸಿಪಲ್ ಕಮಿಷನರ್‌ರವರಿಂದ ಸ್ವೀಕರಿಸಲಾಗುತ್ತೆ.

ಅಪೇಕ್ಷೆಯುಳ್ಳವರು ಈಕೆಳಗೆ ನಮೂದಿಸಿರುವಂತೆ ಟೆಂಡರುಡಿಪಾಜಿಟ್ಟು ಹಣವನ್ನು ಜಮಾಮಾಡಿ ಮುನಿಸಿಪಲ್ ಖಜಾನೆಯಿಂದ ಪಡೆದ ಸರ್ಟಿಫೈಡ್ ಚಲನ್ (Certified challan) ಸಮೇತ ತಮ್ಮ ಟೆಂಡರುಗಳನ್ನು ಕಳುಹಿಸತಕ್ಕದ್ದು. ಹೆಚ್ಚಿಗೆ ವಿವರಗಳನ್ನು ಆಫೀಸ್ ವೇಳೆಯಲ್ಲಿ ಮೊಕ್ತಾ ಪಡೆಯಬಹುದು. ಮತ್ತೂ ನೋಟೀಸ್‌ಬೋರ್ಡಿನಲ್ಲಿಯೂ ಕಾಣಬಹುದು.

—:ವಿವರ:—

ಬಾಬ್ತು		ಡಿಪಾಜಿಟ್
೧) ಹುರುಳಿ ಮತ್ತು ಉಪ್ಪು. ಸುಮಾರು ೧೦೦೦ ಪಲ್ಲ. ೫೦ ಪಲ್ಲ.		ರೂ. ೩೦೦
೨) ಒಣಗಿದ ನೆಲ್ಲು ಹುಲ್ಲು.	೮೦೦ ಟ.	೩೦೦
೩) ಚಗರಿ ಹಗ್ಗ. ಸುಮಾರು	೧೫೦೦ ರೀಸು.	
ನೂಲು ಹಗ್ಗ.	೩೦ ಮಣ	೧೫೦
ಎರೇ ಎಣ್ಣೆ.	೫೦ ಮಣ	

S. M. Abdul Rahim
ಮುನಿಸಿಪಲ್ ಕಮಿಷನರ್.

ಮೈಸೂರು ಸಿಟಿ ಮುನಿಸಿಪಲ್ ಕಮಿಷನರ್‌ರವರ ಆಫೀಸು

ಟೆಂಡರು ನೋಟಿಫಿಕೇಷನ್

ತಾ॥ ೧ ನೆಯ ನವಂಬರ್ ೧೯೫೨

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ. ಇದೇ ಮುನಿಸಿಪಲ್ ಫಾರಮ್ಸಿನ ತೆಂಗಿನ ಫಸಲನ್ನು ೧೯೫೩ ನೇ ಜನವರಿ ತಾರೀಖು ೧ ರ ಲಾಗಾಯ್ತು ೧೯೫೭ ನೇ ಡಿಸೆಂಬರ್ ೩೧ ನೇತಾರೀಖಿನವರೆಗೂ ರೂಢಿಸುವ ಸಲುವಾಗಿ ತಾ॥ ೨೦—೧೧—೫೨ ನೇ ಗುರುವಾರ ಮಧ್ಯಾಹ್ನ ೪ ಘಂಟೆಯೊಳಗೆ ಟೆಂಡರ್ ಅರ್ಜಿ ಜೊತೆಯಲ್ಲಿ ಟೆಂಡರ್ ಡಿಪಾಜಿಟ್‌ಗಾಗಿ ಒಂದು ಸಾವಿರ ರೂಪಾಯಿಗಳನ್ನು ಮೈಸೂರು ಸಿಟಿ ಮುನಿಸಿಪಲ್ ಖಜಾನೆಯಲ್ಲಿ ಜಮಾಮಾಡಿ ಅದರ ಚಲನ್ ಟೆಂಡರ್ ಅರ್ಜಿಯೊಂದಿಗೆ ಲಗತ್ತು ಮಾಡಿ ಮುನಿಸಿಪಲ್ ಕಮಿಷನರ್‌ರವರಿಗೆ ತಮ್ಮ ಟೆಂಡರು ಅರ್ಜಿಗಳನ್ನು ಸೀಲು ಮಾಡಿದ ಕವರಿನಲ್ಲಿ ಕೊಡಬಹುದು.

ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳಿಗೆ ಮುನಿಸಿಪಲ್ ಆಫೀಸಿನಲ್ಲಾಗಲಿ ಮುನಿಸಿಪಲ್ ಫಾರಂನಲ್ಲಾಗಲಿ ತಿಳಿಯಬಹುದು.

ಎಸ್. ಎಮ್. ಅಬ್ದುಲ್‌ರಹೀಂ.
ಮುನಿಸಿಪಲ್ ಕಮೀಷನರ್.

—:ಪ್ರಕಾಶಕರು ಮತ್ತು ಮುದ್ರಕರು:—
ಜಿ. ಎಲ್. ಸ್ವಾಮಿ
ಕರ್ನಾಟಕ ಪ್ರಿಂಟರ್ಸ್, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 73

೧೯-೧೧-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಮೈಸೂರಿನಲ್ಲಿ ಭತ್ತ ಮಾತ್ರ ಶೇಖರಣೆ

ರಾಗಿ, ಜೋಳ ಹತೋಟಿ ರದ್ದು

ನೂತನ ಧಾನ್ಯ ಸಂಗ್ರಹಣೆ ಆಜ್ಞೆ

ಬೆಂಗಳೂರು ೧೯

ಮೈಸೂರು ಸರ್ಕಾರದವರು ನೂತನ ಧಾನ್ಯ ಸಂಗ್ರಹಣದ ಬಗ್ಗೆ ನಿನ್ನೆ ಒಂದು ಆಜ್ಞೆಯನ್ನು ಹೊರಡಿಸಿ, ಸಂಸ್ಥಾನದಲ್ಲಿ ಈ ವರ್ಷ ಭತ್ತವನ್ನು ಮಾತ್ರ ಸಂಗ್ರಹಿಸಲಾಗುವುದೆಂದೂ, ರಾಗಿ, ಜೋಳ ಮತ್ತು ಇತರ ಧಾನ್ಯಗಳ ಮೇಲಿನ ಹತೋಟಿಯನ್ನು ರದ್ದುಮಾಡಲಾಗಿದೆಯೆಂದೂ ತಿಳಿಸಿರುತ್ತಾರೆ.

ಹೆಚ್ಚು ಬೆಳೆಯುವವರು ಅಮಲ್ದಾರರು ಗೊತ್ತುಮಾಡುವ ಭತ್ತದ ಪ್ರಮಾಣವನ್ನು ಸರ್ಕಾರಕ್ಕೆ ಕೊಡಬೇಕು, ಆದರೆ ಹಿಂದಿನ ವರ್ಷಗಳಲ್ಲಿ ಹೆಚ್ಚು ಬೆಳೆಯುವವರು ಸರ್ಕಾರಕ್ಕೆ ಸಲ್ಲಿಸಿರುವ ಅಂದಾಜು ಪ್ರಮಾಣದಲ್ಲಿ ಶೇಕಡ ೧೦ ರಷ್ಟು ಈ ವರ್ಷ ಕಡಿಮೆಮಾಡಿ ಶೇಖರಿಸಲಾಗುವುದು. ಬೆಳೆಯುವವರು ಫಸಲು ಕೊಯ್ದು ಆದ ಒಂದು ತಿಂಗಳೊಳಗಾಗಿ ಅಮಲ್ದಾರರು ಗೊತ್ತುಮಾಡುವ ಪ್ರಮಾಣವನ್ನು ಆ ಪ್ರದೇಶದ ಹತ್ತಿರವಿರುವ ಸರ್ಕಾರದ ಕೊಳ್ಳುವ ಡಿಪೋವಿಗೆ ತಂದುಕೊಡಬೇಕು. ಪ್ರತಿಯೊಂದು ಗ್ರಾಮದ ಹೆಚ್ಚು ಬೆಳೆಯುವವರ ಹೆಸರು ಮತ್ತು ಪ್ರಮಾಣ, ಕಾಲ ಮತ್ತು ಡಿಪೋವಿನ ವಿವರಗಳನ್ನೊಳಗೊಂಡಿರುವ ಪಟ್ಟಿಯನ್ನು ಆಯಾಗ್ರಾಮದ ಚಾವಡಿಯಲ್ಲಿ ಪ್ರಕಟಿಸಲಾಗುವುದು ಮತ್ತು ಟಾಂ ಟಾಂ ಮೂಲಕವೂ ಪ್ರಕಟಿಸಲಾಗುವುದು.

ಅಮಲ್ದಾರರು ಗೊತ್ತು ಮಾಡುವ ಪ್ರಮಾಣದ ಬಗ್ಗೆ ಪುನರ್ ಪರಿಶೀಲನೆಗೆ ಒಂದು ತಿಂಗಳೊಳಗಾಗಿ ಅವರಿಗೆ ಅರ್ಜಿಯನ್ನು ರೆವಿನ್ಯೂ ಇನ್ಸ್‌ಪೆಕ್ಟರ್ ಮೂಲಕ ಕಳುಹಿಸಬಹುದು. ಅಮಲ್ದಾರರ ಆಜ್ಞೆ ಮೇಲೆ ಸಬ್‌ಡಿವಿಜನ್ ಅಧಿಕಾರಿಗಳಲ್ಲಿ ೧೫ ದಿನಗಳೊಳಗಾಗಿ ಅಪೀಲಿಗೆ ಅವಕಾಶವಿದೆ.

ಈ ಸಂಬಂಧದಲ್ಲಿ ಜಿಲ್ಲಾಧಿಕಾರಿಗಳ ಆಜ್ಞೆಯೇ ಕಡೆಯದು. ಪುನರ್ ಪರಿಶೀಲನಾ ಅರ್ಜಿ ಅಥವ ಅಪೀಲು ಹಾಕುವಾಗ ಭತ್ತದ ಪ್ರಮಾಣವನ್ನು ಡಿಪೋವಿಗೆ ಸಲ್ಲಿಸಿರುವ ರಸೀತಿಯನ್ನು ಲಗತ್ತು ಮಾಡಬೇಕು.

ಹೆಚ್ಚು ಪ್ರಮಾಣ ನಿಗದಿ ಮಾಡಲ್ಪಟ್ಟ ಅಥವ ವಸೂಲಿ ಮಾಡಿದರ ಫಸಲನ್ನು ಅಮಲ್ದಾರರಿಗೆಬರಹರೂಪದಲ್ಲಿ ತಿಳವಳಿಕೆ ಕೊಟ್ಟು ಅವರಿಂದ ತಿಳವಳಿಕೆ ಕಂದಾಯದ ರಶೀತಿ ಬರುವವರೆಗೆ ಫಸಲನ್ನು ಕುಯ್ಯಕೂಡದು. ಕುಯ್ದ ಫಸಲನ್ನು ಅಧಿಕಾರಿಗಳ ಅನುಮತಿಯಿಲ್ಲದೆ ಸಾಗಿಸಕೂಡದು.

ಹೆಚ್ಚು ಬೆಳೆಯುವವರಿಗೆ ಕೊಯ್ದು ಮತ್ತು ಫಸಲುಸಾಗಿಸಲು ಅಜಿ ಸಲ್ಲಿಸಿದ ೨೦ ದಿನಗಳೊಳಗಾಗಿ ಆಜ್ಞೆ ಬರದೇಹೋದಲ್ಲಿ ಫಸಲನ್ನು ಕೊಯ್ದು ಸಾಗಿಸಲು ಸ್ವಾತಂತ್ರವಿದೆ. ಈ ಆಜ್ಞೆಗೆ ವಿರುದ್ಧವಾಗಿ ನಡೆಯುವವರ ಮೇಲೆ ಭೂಮಿ, ಸ್ಥಳ, ಕಟ್ಟಡವಾಹನ ಪ್ರವೇಶಿಸಿ ವಶಪಡಿಸಿಕೊಳ್ಳಲು ರೆವಿನ್ಯೂ ಇನ್‌ಸ್ಪೆಕ್ಟರ್ ಶ್ರೇಣಿಗೆ ಕಡಮೆಯಿಲ್ಲದೆ ಅಧಿಕಾರಿಗಳಿಗೂ ಅಧಿಕಾರಕೊಡಲಾಗಿದೆ.

ಸಂಸ್ಥಾನದ ಒಂದು ಸ್ಥಳದಿಂದ ಸಂಸ್ಥಾನದ ಹೊರಕ್ಕೆ ಅಥವ ಶಾಸನಬದ್ಧ ಪಡಿತರವಿರುವ ಪ್ರದೇಶಗಳಿಗೆ ಭತ್ತ ಸಾಗಿಸಲು ಅವಕಾಶವಿಲ್ಲ. ಸಂಸ್ಥಾನದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಭತ್ತ ಸಾಗಿಸಲು ಸರ್ಕಾರದ ಅನುಮತಿ ಬೇಕು.

ಆದರೆ ಶಾಸನ ಪಡಿತರ ಜಾರಿಯಲ್ಲಿರುವ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಥವ ಪಡಿತರ ಇಲ್ಲದ ಪ್ರದೇಶಕ್ಕೆ ಸ್ವಂತ ಉಪಯೋಗಕ್ಕಾಗಿ ಒಬ್ಬ ವಯಸ್ಕ ೧೦ ಸೇರು ಭತ್ತ ಅಥವ ೫ ಸೇರು ಅಕ್ಕಿ, ೮ ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಅದರ ಅರ್ಧದಷ್ಟು ಧಾನ್ಯ ತೆಗೆದುಕೊಂಡು ಹೋಗಬಹುದು.

ವಿಶ್ವವಿದ್ಯಾನಿಲಯ ಪರೀಕ್ಷಾ ಫಲಿತಾಂಶ

ಮೈಸೂರು ೧೯

ಇದೇ ಸೆಪ್ಟೆಂಬರ್ ತಿಂಗಳಿನಲ್ಲಿ ನಡೆದ ವಿಶ್ವವಿದ್ಯಾನಿಲಯ ಪರೀಕ್ಷಾ ಫಲಿತಾಂಶವು ಈದಿನ ಹೊರಬಿತ್ತು. ಉತ್ತೀರ್ಣರಾದ ಸಂಖ್ಯೆಯ ಶೇಕಡ ಈರೀತಿ ಇದೆ:—

ಇಂಟರ್ ಆರ್ಟ್ಸ್ ೪೩, ಇಂಟರ್ ಸೈನ್ಸ್ ೪೩.೮, ಬಿ. ಎ. ೪೩.೪, ಬಿ.ಎಸ್‌ಸಿ. ೪೨.೪, ಬಿ. ಎ. ಆನರ್ಸ್ ೭೭.೮, ಬಿ. ಎಸ್. ಸಿ. ಆನರ್ಸ್ ೭೪.೩, ಬಿ.ಕಾಂ ೪೭.೯, ಎಕಾಂ ೩೮.೧, ಬಿ ಎಲ್ ೩೦, ಇಂಜನಿಯರಿಂಗ್ ಫೈನಲ್ ೭೨, ಎಲ್. ಎಂ. ಪಿ. ಫೈನಲ್ ೭೫, ಬಿ ಎಸ್. ಸಿ. ಟೆಕ್ಸ್‌ಟೈಲ್ ೭೫, ಬಿ. ಎಸ್ ಸಿ. ಅಗ್ರಿಕಲ್‌ಚರ್ ೮೪.೨.

ಕಾಶ್ಮೀರ ಮಂತ್ರಿಮಂಡಲ ರಾಜೀನಾಮೆ

ಕಾಶ್ಮೀರದಲ್ಲಿ ಹೊಸ ಅಧಿಪತಿ ಚುನಾವಣೆಯಾಗಿ ರಾಜ್ಯಾಂಗವು ಜಾರಿಗೆ ಬಂದಿರುವುದರಿಂದ ಷೇಕ್ ಅಬ್ದುಲ್ಲಾ ಸರ್ಕಾರವು ರಾಜೀನಾಮೆಯನ್ನಿತ್ತಿದೆ. ಸದರ್-ಇರಿಯಸತ್‌ರವರು ರಾಜೀನಾಮೆಯನ್ನು ಅಂಗೀಕಾರಮಾಡಿ ಮುಂದಿನ ಮಂತ್ರಿಮಂಡಲ ರಚನೆಯಾಗುವವರೆಗೆ ತಾತ್ಕಾಲಿಕರಾಗಿ ಈಗಿನ ಮಂತ್ರಿಮಂಡಲವೇ ಮುಂದುವರಿಸಲು ಆಜ್ಞೆಮಾಡಿದ್ದಾರೆ. ಶಾಸನಸಭೆಯಲ್ಲಿ ಬಹುಮತ ಪಡೆದಿರುವ ರಾಷ್ಟ್ರೀಯ ಸಮಿತಿಯು ಈದಿನ ಸೇರಿ ತನ್ನ ನೂತನ ನಾಯಕನನ್ನು ಚುನಾಯಿಸಿಗೊಳ್ಳಲಿದೆಯೆಂದು ಗೊತ್ತಾಗಿದೆ.

ಪತ್ರಿಕೆಗಳ ರಿಜಿಸ್ಟ್ರೇಷನ್ ತಿದ್ದುಪಡಿ ಮಸೂದೆ

ಲೋಕಸಭೆಯಲ್ಲಿ ನಿನ್ನೆ ಕೇಂದ್ರ ಗೃಹ ಸಚಿವರು ಪತ್ರಿಕೆಯ ರಿಜಿಸ್ಟ್ರೇಷನ್ ಕಾನೂನಿನ ತಿದ್ದುಪಡಿ ಮಸೂದೆಯೊಂದನ್ನು ಮಂಡಿಸಿದರು ಪತ್ರಿಕೆಯ ಮುದ್ರಣ ಅಥವ ಪ್ರಕಟಣಾಲಯದ ಸ್ಥಳದತಾತ್ಕಾಲಿಕ ಬದಲಾವಣೆಗಳಿಗೆ ಪ್ರತ್ಯೇಕ ಡಿಕ್ಲರೇಷನ್ ಬೇಕಾಗಿಲ್ಲವೆಂದೂ, ೨೪ ಗಂಟೆಯೊಳಗಾಗಿ ಮ್ಯಾಜಿಸ್ಟ್ರೇಟರಿಗೆ ಅಂಚೆ ಮೂಲಕ ತಿಳಿಸಿದರೆ ಸಾಕೆಂದೂ ಈ ಮಸೂದೆಯಲ್ಲಿ ಸಮೂದಿಸಲಾಗಿದೆ. ಪ್ರಕಾಶಕರ ಬದಲಾವಣೆಯಾದಲ್ಲಿ ಮಾತ್ರ ಹೊಸ ಡಿಕ್ಲರೇಷನ್ ಅಗತ್ಯ.

ರೈಲ್ವೆ ವರ್ಕ್‌ಷಾಪಿಗೆ ಜನರಲ್ ಮ್ಯಾನೇಜರ್ ಭೇಟಿ

ಮೈಸೂರು ೧೯

ದಕ್ಷಿಣ ಭಾರತ ರೈಲ್ವೆ ಜನರಲ್ ಮ್ಯಾನೇಜರಾದ ಶ್ರೀ ರಾಮಾನುಜಂರವರು ಮೊನ್ನೆ ರಾಜಧಾನಿಯಲ್ಲಿರುವ ರೈಲ್ವೆ ವರ್ಕ್‌ಷಾಪಿಗೆ ಭೇಟಿ ಇತ್ತು ಪರಿಶೀಲನೆ ನಡೆಸಿದರು.

ರೈಲ್ವೆ ನೌಕರರ ಸಂಘದ ಶ್ರೀ ರಜಾಬ್ ಅಲಿಯವರು ಅವರನ್ನು ಅಲ್ಲಿ ಭೇಟಿಮಾಡಿ ಕೆಲಸಗಾರರ ತೊಂದರೆಗಳನ್ನು ವಿವರಿಸಿ, ಮುಖ್ಯವಾಗಿ ವೈದ್ಯ ಸೌಲಭ್ಯವಿಲ್ಲದಿರುವುದನ್ನು ತಿಳಿಸಿದರು. ಕೂಡಲೇ ಅಲ್ಲಿ ಒಂದು ಆಸ್ಪತ್ರೆಯನ್ನು ತೆರೆಯಲು ವ್ಯವಸ್ಥೆಮಾಡುವುದಾಗಿ ಜನರಲ್ ಮ್ಯಾನೇಜರು ಭರವಸೆ ಇತ್ತರೆಂದು ತಿಳಿದುಬಂದಿದೆ.

ಭತ್ತ ಕೊಳ್ಳುವ ಬೆಲೆ

ಬೆಂಗಳೂರು. ೧೯

ಮೊದಲನೆದರ್ಜೆಯ ಭತ್ತ ಪಲ್ಲಾ ೨೫ ರೂ. ಎರಡನೇದರ್ಜೆ ೨೩ ರೂಪಾಯಿನಂತೆ ಕೊಳ್ಳುವ ಬೆಲೆಯನ್ನು ಸರ್ಕಾರದವರು ನಿಗದಿಮಾಡಿದ್ದಾರೆ. ಸರ್ಕಾರಿ ಡಿಪೋಗಳಲ್ಲಿ ಈ ಸಾಲಿನಲ್ಲಿ ಭತ್ತವನ್ನು ಕೊಡುವವರಿಗೆ ಅಲ್ಲಿಯೇ ಹಣವನ್ನು ಕೊಡುವ ವ್ಯವಸ್ಥೆಮಾಡಲಾಗುತ್ತದೆಯೆಂದು ಗೊತ್ತಾಗಿದೆ.

ವಿಶ್ವವಿದ್ಯಾನಿಲಯಗಳ ಮಟ್ಟ ಅಧೋಗತಿ

ಭಾರತದ ವಿಶ್ವವಿದ್ಯಾನಿಲಯಗಳು ಸಮರ್ಪಕವಾಗಿ ಕೆಲಸಮಾಡುತ್ತಿಲ್ಲವೆಂದೂ, ಅವುಗಳ ಮಟ್ಟ ವಿಶೇಷವಾಗಿ ಇಳಿಯುತ್ತಿದೆಯೆಂದೂ, ಅಲ್ಲಿ ಬೇಕಾದಷ್ಟು ಪಿತೂರಿ ಇರುವುದೆಂದೂ, ಆದ್ದರಿಂದ ತಮಗೆ ಜಿಗುಪ್ಸೆ ಉಂಟಾಗಿದೆಯೆಂದೂ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ.

ಜಿಲ್ಲಾ ನ್ಯಾಯಾಧೀಶರು

ಬೆಂಗಳೂರಿನ ಅಡಿಷನಲ್ ಜಿಲ್ಲಾನ್ಯಾಯಾಧೀಶರಾದ ಶ್ರೀ ಜಿ. ನಟೋಜಿರಾವ್‌ರನ್ನು ಮೈಸೂರಿನ ಪ್ರಿನ್ಸಿಪಾಲ್ ಜಿಲ್ಲಾ ನ್ಯಾಯಾಧೀಶರಾಗಿ ವರ್ಗಾಯಿಸಲಾಗಿದೆ. ಸಿವಿಲ್ ಸ್ಟೇಷನ್ನಿನ ಸಬಾರ್ಡಿನೇಟ್ ಜಡ್ಜರಾದ ಶ್ರೀ ಕೆ. ಗುಬ್ಬಯ್ಯನವರನ್ನು ಬೆಂಗಳೂರಿನ ೩ನೇ ಅಡಿಷನಲ್‌ಜಿಲ್ಲಾ ಜಡ್ಜರಾಗಿ ನೇಮಕಮಾಡಲಾಗಿದೆ.

೩೦೦ ರೂ ಹೆಚ್ಚಿಗೆ ಬರುವವರ ಸಂಬಳದಲ್ಲಿ ಖೋತಾ

ಮದ್ರಾಸ್ ಸರ್ಕಾರದ ಆಜ್ಞೆ

300 ರೂಪಾಯಿಗಳಿಗಿಂತ ಹೆಚ್ಚಿಗೆ ಬರುವವರ ಸಂಬಳದಲ್ಲಿ 1953ನೇ ಜನವರಿಯಿಂದ ಶೇಕಡ ೧೦ ರಷ್ಟು ಖೋತಾ ಮಾಡಿ ಮದ್ರಾಸ್ ಸರ್ಕಾರವು ಆಜ್ಞೆಯನ್ನಿತ್ತಿದೆ. ಡಿಸೆಂಬರ್ ಮಾಹೆ ತಲಬು ಕೊಡುವಾಗಲೇ ಇದು ಜಾರಿಗೆ ಬರಲಿದೆ. ಈ ಖೋತಾ ಅಲೋಯನ್ಸ್‌ಗಳಿಗೆ ಮೊದಲನೇ ೧೦೦ ರೂಪಾಯಿಗಳಿಗೆ ಅನ್ವಯಿಸುವುದಿಲ್ಲ. ಇದು ಒಂದು ವರ್ಷಕಾಲ ಜಾರಿಯಲ್ಲಿರುತ್ತದೆ.

ಸಲಹೆಗಾರರಿಲ್ಲ

ಹೈದರಾಬಾದಿನಲ್ಲಿ ಕೇಂದ್ರ ಸರ್ಕಾರಿ ಸಲಹೆಗಾರರಾದ ಶ್ರೀ ಎಂ. ಕೆ. ವೆಲ್ಲೋಡಿ ಮತ್ತು ಶ್ರೀ ರಾಮಸ್ವಾಮಿ ಅಯ್ಯಂಗಾರ್ ಅವಧಿಯು ಮುಂದಿನ ತಿಂಗಳು ಮುಗಿಯುತ್ತದೆ. ಅನಂತರ ಇನ್ನು ಸಲಹೆಗಾರರನ್ನು ನೇಮಿಸುವುದಿಲ್ಲವೆಂದು ಗೊತ್ತಾಗಿದೆ.

ಕಾಂಗ್ರೆಸ್ ಚುನಾವಣೆಯಲ್ಲಿ ಗುದ್ದಾಟ

ಕಾಸ್ಪುರದಲ್ಲಿ ಎ. ಐ. ಸಿ. ಸಿ ಸದಸ್ಯರ ಚುನಾವಣೆ ಕಾಲದಲ್ಲಿ ಸ್ಪರ್ಧಿಗಳ ಪಕ್ಷಗಳಿಗೆ ತೀವ್ರ ಮಾತುಕತೆ ನಡೆದು ಕೊನೆಗೆ ಗುದ್ದಾಟ ಪ್ರಾರಂಭವಾಯಿತು. ಪೋಲೀಸಿನವರು ಬಂದು ಶಾಂತಿ ಸ್ಥಾಪಿಸಬೇಕಾಯಿತು. ಕೆಲವು ಕೇಂದ್ರಗಳಲ್ಲಿ ಚುನಾವಣೆಯೇ ನಡೆಯಲಿಲ್ಲವೆಂದು ಹೇಳಲಾಗಿದೆ.

ಕರ್ಣಾಟಕ ಪ್ರಾಂತ್ಯಕ್ಕೆ ಇನ್ನೂ ಕಾಯಬೇಕು

ರಾಷ್ಟ್ರದ ಇತರ ಅತ್ಯಂತ ಜರೂರಾದ ಸಮಸ್ಯೆಗಳೆಲ್ಲಾ ಕಾರ್ಯಗತವಾಗುವವರೆಗೆ ಕರ್ಣಾಟಕ ಏಕೀಕರಣಕ್ಕೆ ಕಾಯಬೇಕೆಂದು ಭಾರತ ಹಿರಿಯಶಾಸನಸಭೆಯ ಉಪಾಧ್ಯಕ್ಷ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ಹೇಳಿರುವರು.

ಕಾಶ್ಮೀರದಲ್ಲಿ ಪಾನನಿರೋಧ ಇಲ್ಲ

ಕಾಶ್ಮೀರ ಪ್ರಾಂತ್ಯವು ವಿಶ್ವದಲ್ಲೆಲ್ಲಾ ಅತ್ಯಂತ ಹಿರಿಯ ಪ್ರೇಕ್ಷಣೀಯ ಸ್ಥಳವಾಗಿ ಸಾವಿರಾರು ವಿದೇಶೀಯ ಜನರು ಇಲ್ಲಿಗೆ ಬರುವುದರಿಂದ ಪಾನನಿರೋಧವನ್ನು ಜಾರಿಗೆ ತರಲಾಗುವುದಿಲ್ಲವೆಂದು ಅಲ್ಲಿಯ ಸಚಿವರು ಹೇಳಿರುವರು.

ಮದ್ರಾಸಿನಲ್ಲಿ ಆಹಾರ ಸಂಗ್ರಹಣೆ

ಮದ್ರಾಸಿನಲ್ಲಿ ಆಹಾರ ಸಂಗ್ರಹಣೆ ಕಾರ್ಯವು ನಡೆಯಲು ಸರ್ಕಾರ ತೀರ್ಮಾನಿಸಿದೆ. ದೀರ್ಘಾವಧಿ ಫಸಲಿನ ಸಂತೆ ಮಾತ್ರವಸೂಲಿ ನಡೆಯುತ್ತದೆ.

ಕೇಳುವ ಬೆಲೆಯಲ್ಲಿ ವ್ಯತ್ಯಾಸವೇನೂ ಇರುವುದಿಲ್ಲ. ಬರೂರು ಪರಿಸ್ಥಿತಿಯನ್ನು ಎದುರಿಸಲು ಈ ಕ್ರಮವನ್ನು ಕೈಗೊಳ್ಳಲಾಗಿದೆ. ಮುಂಗಾರು ಮಳೆ ಸಮರ್ಪಕವಾಗಿ ಬಂದರೆ ಯೋಗ್ಯ ಬೆಲೆ ಅಂಗಡಿಗಳನ್ನು ಮುಂದುವರಿಸುವುದಿಲ್ಲ. ೫ ಎಕರೆಗಳಿಗಿಂತ ಕಡಮೆ ಜಮೀನುಳ್ಳವರಿಂದ ಧಾನ್ಯ ವಸೂಲಿಯಿಲ್ಲವೆಂದು ಹೇಳಲಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೧೯-೧೧-೫೨

ಪಲ್ಲ	ರೂ.	ಅ.	ರೂ.	ಅ.
ಕಡಲೇಕಾಯಿ	೧೦-೧೨	೨೩		
ಎಳ್ಳು	೭೦-೮	೭೧	—	
ಹರಳು	೩೮	೪೩		
ಹುರುಳಿ	೬೦	೬೧-		
ಹೆಸರು	೫೧-೮	೫೩	೧೨	
ಉದ್ದು	೬೫			
ಅಲಸಂದೆ	೫೩	೬೫	೧೨	
ಹುಚ್ಚೆಳ್ಳು	—	—		
ಹೊಂಗೆಬೀಜ				
ಮೆ॥ ಕಾಯಿ	೭	೧೬	೧೦	
ಸೀಗೇಕಾಯಿ				
ಬೆಲ್ಲ	೩	೮		
ಹುಣಸೆಹಣ್ಣು				
ತೆಂಗಿನಕಾಯಿ	೧೩೮	೨೨೦		

ದಳವಾಯ್ ಹೈಸ್ಕೂಲು

'ದಳವಾಯಿ ಪ್ರೌಢಶಾಲಾ ಹಳೆಯ ವಿದ್ಯಾರ್ಥಿಗಳ ಸಂಘದ ಪ್ರಥಮ ಸಭೆಯು ಇದೇ ಮಾಹೆ ೨೨ ನೆಯ ತಾರೀಖು ಶನಿವಾರ ಸಂಜೆ ೪-೩೦ ಘಂಟೆಗೆ ಶಾಲೆಯ ಒಳಾಂಗಣದಲ್ಲಿ ನಡೆಯಲೇರ್ಪಾಡಾಗಿದೆ. ಶಾಲೆಯ ಹಳೆವಿದ್ಯಾರ್ಥಿಗಳೆಲ್ಲರೂ ಅಧಿಕ ಸಂಖ್ಯೆಯಲ್ಲಿ ಆ ದಿನದ ಸಭೆಗೆ ತಪ್ಪದೆ ದಯಮಾಡಿ, ಸಂಘದ ಮುಂದಿನ ಕಾರ್ಯಕ್ರಮಗಳನ್ನು ರೂಪಿಸಲು ಸಹಾಯಕರಾಗಬೇಕೆಂದು ಸಂಚಾಲಕರು ಕೋರಿರುತ್ತಾರೆ.

ಹೆಚ್ಚುವರಿ ಆಹಾರ ಉತ್ಪನ್ನವಾದರೂ ಹತೋಟಿ ಹೋಗುವುದಿಲ್ಲ

ಭಾರತ ಸರ್ಕಾರದ ಆಹಾರ ಧೋರಣೆ ಬಗ್ಗೆ ನಿನ್ನೆ ಶಾಸನಸಭೆಯಲ್ಲಿ ಕೇಂದ್ರಸರ್ಕಾರದ ಆಹಾರಸಚಿವ ಮಿ॥ ಕಿದ್ವಾಯಿಯವರು ಮತ್ತು ಪ್ರಧಾನಿ ನೆಹರೂರವರು ವಿವರಣೆಯನ್ನಿತ್ತು ಭಾರತಾದ್ಯಂತ ಏಕೈಕ ಆಹಾರ ನೀತಿಯನ್ನು ಅನುಸರಿಸಲು ಸಾಧ್ಯವಿಲ್ಲ. ಪ್ರಾಂತ್ಯಗಳ ಸ್ಥಿತಿಗತಿಗಳನ್ನನುಸರಿಸಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಬೇಕಾಗಿದೆ. ಆದರೆ ಮೂಲಭೂತ ನೀತಿಯನ್ನು ಅತಿಕ್ರಮಿಸುವುದಿಲ್ಲ.

ಭಾರತದಲ್ಲಿ ಹೆಚ್ಚುವರಿ ಆಹಾರ ಉತ್ಪನ್ನವಾದರೂ ಹಿಡಿತ ಅತ್ಯವಶ್ಯಕ ಆದ್ದರಿಂದ ಹತೋಟಿ ಇರಲೇಬೇಕು ಎಂದು ತಿಳಿಸಿರುತ್ತಾರೆ.

ಭಾರತದ ಸಲಹೆಗೆ ಅಮೆರಿಕಾದ ತಿರಸ್ಕಾರ

ಕೊರಿಯಾ ಬಿಕ್ಕಟ್ಟನ್ನು ಬಗೆಹರಿಸಲು ಭಾರತವು ಸೂಚಿಸಿದ್ದ ಸಲಹೆಯನ್ನು ಅಮೆರಿಕ ತಿರಸ್ಕರಿಸಿದೆಯೆಂದು ಹೇಳಲಾಗಿದೆ. ಬಲಾತ್ಕಾರವಾಗಿ ಕೈದಿಗಳನ್ನು ಸ್ವಸ್ಥಾನಕ್ಕೆ ಹಿಂದಕ್ಕೆ ಕಳುಹಿಸುವ ತತ್ವವನ್ನು ಅಮೆರಿಕಾ ಒಪ್ಪುವುದಿಲ್ಲವೆಂದು ತಿಳಿಸಲಾಗಿದೆ.

ಭಾರತದಲ್ಲಿ ಹೊಸ ಉಕ್ಕಿನ ಕಾರ್ಖಾನೆ

ಭಾರತದಲ್ಲಿ ಹೊಸ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸುವ ವಿಚಾರದಲ್ಲಿ ವಾಷಿಂಗ್ಟನ್ನಿನಲ್ಲಿ ಮಾತುಕತೆ ನಡೆಯುತ್ತಿದೆ. ಈ ಕಾರ್ಖಾನೆಯನ್ನು ಒರಿಸ್ಸಾದಲ್ಲಿ ಸ್ಥಾಪಿಸಲಾಗುವುದೆಂದುಹೇಳಲಾಗಿದೆ.

ಅಪೇರ

21—11—52 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ವಳಯಾಪತಿ

[ತಮಿಳು]

ಪಾತ್ರ:- ಜಯಲಕ್ಷ್ಮಿ, ಶೇಖರ್, ಪುಳಿಮೂಟೆ.

14-11-52 ರಿಂದ

ಮಾಯಲಮಾರಿ

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ಣಾಟಕ ಪ್ರಿಂಟರ್ಸ್, ಮೈಸೂರು.

ಸ್ವೇಚ್ಛಾನುವರ್ತಿ ಪುತ್ರ-ಕರ್ತವ್ಯನಿಷ್ಠ ಪಿತ, ಅಸೂಯಪರಳಾದ ಮಲತಾಯಿ ಮತ್ತು ಹೇಡಿ ಪುತ್ರ ಇವರೆಲ್ಲರ ಕಾತ್ಯತತ್ಪರತೆಯ ಹಿನ್ನಲೆಯೇ ದಲಸುಖ್ ಎಂ. ಪಂಚೋಲಿಯವರ ಪ್ರತಿಭಾನ್ವಯುತ ಹೃದಯ ತಲ್ಲಣಿಸುವ ಭವ್ಯಚಿತ್ರ.

ಮೈಸೂರು ಪ್ರಭಾ ಚಿತ್ರಮಂದಿರದಲ್ಲಿ

ಫೋ; 569.

21—11—52 ರಿಂದ ಪ್ರಾರಂಭ ಪ್ರತಿದಿನ 3 ಆಟಗಳು

ಆಸ್ಮಾನ್

ಹಿಂದಿ

ಪಾತ್ರ:—ಶ್ಯಾಮ, ನಸೀರ್ ಖಾನ್, ಲಲಿತಾಪವರ್, ಬದ್ರಿಪ್ರಸಾದ್, ದೇವಿಡ್.

ಹಿನ್ನೆಲೆಯ ಸಂಗೀತ:-ಸಿ.ಹೆಚ್. ಆತ್ಮ. (ಸಂಗೀತ ಪ್ರಖ್ಯಾತಿ)

ಬೆಳಗಿನ ಪ್ರದರ್ಶನ:—21—11—52ರಿಂದ ಪ್ರಾರಂಭ

ನ್ಯೂಥಿಯೇಟರ್ಸ್‌ರವರ —ಅಂಜಾನ್ ಘಡ್—

ಪಾತ್ರ:—ಸುನಂದ, ಹೀರಾಲಾಲ್, ಬಿಪಿನ್ ಗುಪ್ತ.

ಸಂಗೀತ:—ಆರ್.ಸಿ. ಬೋರಾಲ್, ದಿಗ್ದರ್ಶನ:—ಬಿಮಲ್ ರಾಯ್

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 74

೨೦-೧೧-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕ್ಷಾಮ ಪರಿಹಾರ ನಿಧಿಗೆ ಸಹಾಯ

ಮೈಸೂರು ೨೦

ನಿನ್ನೆ ಸಂಜೆ ಶ್ರೀ ವೀರಣ್ಣನವರ ಗುಬ್ಬಿ ಕಂಪೆನಿಯವರು ಸಂಸ್ಥಾನದ ಕ್ಷಾಮಪರಿಹಾರ ನಿಧಿಯ ಸಹಾಯಾರ್ಥವಾಗಿ ಗುಲೇಬಕಾವಲಿ ಎಂಬ ನಾಟಕವನ್ನು ಪ್ರದರ್ಶಿಸಿದರು. ಕೈಗಾರಿಕಾ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಪುರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಭಾಷಣಮಾಡಿ ಶ್ರೀ ವೀರಣ್ಣನವರ ಸೇವೆಯನ್ನು ಪ್ರಶಂಸಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿದ್ದಲಿಂಗಯ್ಯನವರೂ ಸಹ ಶ್ರೀ ವೀರಣ್ಣನವರ ಕಲಾಸೇವೆಯನ್ನು ಕೊಂಡಾಡಿದರು. ಶ್ರೀ ವೀರಣ್ಣನವರು ಮಹಾಜನರ ಪ್ರೋತ್ಸಾಹಕ್ಕಾಗಿ ವಂದನೆ ಅರ್ಪಿಸಿದರು.

ಪರೀಕ್ಷೆಗೆ ವಿದ್ಯಾರ್ಥಿಗಳ ಬಹಿಷ್ಕಾರ

ನಿನ್ನೆ ಮತ್ತು ಮೊನ್ನೆ ನಡೆದ ಕಾಮರ್ಸ್ ಪರೀಕ್ಷೆಯ ಸೀನಿಯರ್ ಷಾರ್ಟ್ ಹ್ಯಾಂಡ್ ಪರೀಕ್ಷೆಯಲ್ಲಿ ಕುಳಿತಿದ್ದ ೧೮ ಮಂದಿ ವಿದ್ಯಾರ್ಥಿಗಳು ಪರೀಕ್ಷೆಗೆ ಬಹಿಷ್ಕಾರ ಹಾಕಿ ಹೊರಕ್ಕೆ ಬಂದರೆಂದೂ, ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ವಿದ್ಯಾರ್ಥಿಗಳು ತಂತಿ ಮೂಲಕ ತಿಳಿಸಿರುವರೆಂದೂ ಗೊತ್ತಾಗಿದೆ.

ಪರೀಕ್ಷಕರ ಉಕ್ತಲೇಖನದ ವೇಗವು ನಿಮಿಷಕ್ಕೆ ೧೨೦ ಪದಗಳಿಗಿಂತಲೂ ಹೆಚ್ಚಾಗಿದ್ದುದಲ್ಲದೆ ಉಚ್ಚಾರಣೆ ಕೂಡ ಸ್ಪಷ್ಟವಾಗಿರದೆ ತಮಗೆ ಕೇಳುತ್ತಲೇ ಇರಲಿಲ್ಲವೆಂದೂ, ಈ ಬಗ್ಗೆ ವಿದ್ಯಾರ್ಥಿಗಳು ಮಾಡಿದ ಕೋರಿಕೆಗೆ ಪರೀಕ್ಷಕರು ಮನ್ನಣೆಕೊಡಲಿಲ್ಲವೆಂದೂ, ಆದಕ್ಕಾಗಿ ಪ್ರತಿಭಟನೆ ಸೂಚಿಸಿ, ವಿದ್ಯಾರ್ಥಿಗಳು ಹೊರಕ್ಕೆ ಬಂದರೆಂದೂ ಹೇಳಲಾಗಿದೆ.

ಜಪಾನಿನಬಟ್ಟೆ ಆಮದುನಿಂದ ೫೫ ಲಕ್ಷ ರೂ ನಷ್ಟ

ಭಾರತವು ವಿಭಾಗವಾಗುವುದಕ್ಕೆ ಮುಂಚೆ ೧೯೪೭ರಲ್ಲಿ ಅರ್ಥಿಕ ಸಚಿವ ಶ್ರೀ ಲಿಯಾಕತ್ ಅಲಿಖಾನರ ಕಾಲದಲ್ಲಿ ಜಪಾನಿನಿಂದ ೬.೫ ಕೋಟಿ ರೂ ಬೆಲೆಬಾಳುವ ಬಟ್ಟೆಯನ್ನು ತರಿಸಿಕೊಂಡು, ಅದನ್ನು ಉಪಯೋಗಿಸದೆ ವಾಪಸು ಮಾಡಿದ ಸಂಬಂಧದಲ್ಲಿ ಸರ್ಕಾರಕ್ಕೆ ೫೫ ಲಕ್ಷ ರೂ. ನಷ್ಟವಾಗಿರುವ ವಿಚಾರವನ್ನು ಈಗ ಪರಿಶೀಲಿಸಲಾಗುತ್ತಿದೆಯೆಂದು ತಿಳಿದು ಬಂದಿದೆ.

ನಿಜಾಮರ ಅರಮನೆ ಮಾರಾಟ

ಬೊಂಬಾಯಿನಲ್ಲಿರುವ ಹೈದರಾಬಾದ್ ನಿಜಾಮರ ಅರಮನೆಯನ್ನು ಮಾರಲು ಅಲ್ಲಿನ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಬೊಂಬಾಯಿಗೆ ಹೋಗಿದ್ದಾರೆ.

ಖಾಸಗೀ ಕೈಗಾರಿಕೆಗಳಿಗೆ ನಿಜಾಮರ ಸಾಲ

ಹೈದರಾಬಾದಿನಲ್ಲಿ ನೂತನ ಕೈಗಾರಿಕೆಗಳನ್ನು ಸ್ಥಾಪಿಸಲು ಖಾಸಗೀಯವರಿಗೆ ನೈಜಾಮರು ಸಾಲವನ್ನು ಕೊಟ್ಟಿದ್ದಾರೆಂದೂ, ಭಾರತದ ಸರ್ಕಾರದ ಸೆಕ್ಯೂರಿಟಿಗಳಲ್ಲಿ ಅವರು ೨೦ ಕೋಟಿ ರೂ. ಇಟ್ಟಿರುವರೆಂದೂ ಹೇಳಲಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ೭ ಸಾವಿರಮಂದಿ ದಸ್ತಗಿರಿ

ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಯನ್ನು ಪ್ರತಿಭಟಿಸಿ ಅಲ್ಲಿ ನಡೆಸುತ್ತಲಿರುವ ಸತ್ಯಾಗ್ರಹದಲ್ಲಿ ಇಲ್ಲಿಯವರೆಗೆ ೭ ಸಾವಿರ ಮಂದಿ ವರ್ಣೀಯರನ್ನು ದಸ್ತಗಿರಿ ಮಾಡಲಾಗಿದೆ.

ಆಹಾರ ಕಾರ್ಯದರ್ಶಿಗಳ ಸಭೆ

ಇದೇ ೨೧ನೇ ತಾರೀಖು ದೆಹಲಿಯಲ್ಲಿ ಸಂಸ್ಥಾನ ಸರ್ಕಾರಗಳ ಆಹಾರ ಕಾರ್ಯದರ್ಶಿಗಳ ಸಭೆಯೊಂದು ನಡೆದ. ನೂತನ ಆಹಾರನೀತಿಯಬಗ್ಗೆ ಚರ್ಚೆ ನಡೆಯಲಿದೆಯೆಂದು ಗೊತ್ತಾಗಿದೆ.

ಶ್ರೀಮನ್ಮಹಾರಾಜರೊಡನೆ ಭೇಟಿ

ಕಂದಾಯ ಸಚಿವರಾದ ಶ್ರೀ ಕಡಿದಾಳ್ ಮಂಜಪ್ಪನವರು ನಿನ್ನೆ ಶ್ರೀಮನ್ಮಹಾರಾಜರನ್ನು ಭೇಟಿಮಾಡಿದ್ದರು.

ಮಧ್ಯಾಹ್ನ ಸಚಿವರು ಬೆಂಗಳೂರಿಗೆ ಹಿಂತಿರುಗಿದರು.

ಕೆನಡಾದಲ್ಲಿ ಅತ್ಯಧಿಕ ಗೋಧಿ ಬೆಳೆ

ಕೆನಡಾದಲ್ಲಿ ಈವರ್ಷ ಅತ್ಯಧಿಕ ಗೋಧಿ ಬೆಳೆ ಆಗಿದೆಯೆಂದೂ, ಆದನ್ನು ಶೇಖರಿಸಲು ಜಾಗವಿಲ್ಲದ. ಶಾಲಾ ಮತ್ತು ಸಿನಿಮಾ ಮಂದಿರಗಳಲ್ಲಿ ತುಂಬಲಾಗುತ್ತಿದೆಯೆಂದೂ ಹೇಳಲಾಗಿದೆ.

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಸಭೆ ರದ್ದು

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯ ಮುಖ್ಯ ಅಧಿವೇಶನವು ನಿನ್ನೆ ಪ್ರಾರಂಭವಾಗಬೇಕಾಗಿದ್ದುದನ್ನು ರದ್ದುಮಾಡಲಾಯಿತು. ಅದಕ್ಕೆ ಕಾರಣವನ್ನು ಕೊಟ್ಟಿಲ್ಲ. ಆದರೆ ಮುಂದೆ ದಕ್ಷಿಣಆಫ್ರಿಕಾ ಭಾರತೀಯರ ಪ್ರಶ್ನೆ ಬರಬೇಕಾಗಿದ್ದಿತು.

ವಿದ್ಯುಚ್ಛಕ್ತಿಯಿಂದ ಹೃದಯದ ಪುನರ್ಚಲನೆ

ಹೃದಯ ಚಲನೆ ನಿಂತುಹೋಗಿದ್ದ ಮನುಷ್ಯನೊಬ್ಬನಿಗೆ ವಿದ್ಯುಚ್ಛಕ್ತಿಯ ಪ್ರಯೋಗದಿಂದ ಹೃದಯವನ್ನು ಬಹಳ ಕಾಲ ಚಲಿಸುವಂತೆ ಮಾಡಿ ಆತನು ಬದುಕುವಂತೆ ಚಿಕಿತ್ಸೆ ನಡೆಸಿದ ಆಶ್ಚರ್ಯ ಸಂಗತಿ ಲಂಡನ್ನಿನಿಂದ ವರದಿಯಾಗಿದೆ.

ಚೀಣಾ ಸೈನ್ಯಕ್ಕೆ ಮಾಜಿ ಜರ್ಮನ್ ಬಂದಿಗಳು

ಸೈಬೀರಿಯಾದಲ್ಲಿದ್ದ ೬೦ ಸಾವಿರಮಂದಿ ಮಾಜಿ ಜರ್ಮನ್ ಕೈದಿಗಳನ್ನು ಚೀಣಾ ಸೈನ್ಯಕ್ಕಾಗಿ ತರಬೇತುಮಾಡಿ ಅವರನ್ನು ಈಗ ಚೀಣಾಕ್ಕೆ ಕಳುಹಿಸಲಾಗಿದೆಯೆಂದು ವರದಿಯಾಗಿದೆ.

ವಿಧಾನ ಪರಿಷತ್ತಿನ ಮತದಾರರಪಟ್ಟಿ ಪ್ರಕಟಣೆ

ಬೆಂಗಳೂರು ೨೦

ವಿಧಾನ ಪರಿಷತ್ತಿನ ಮತದಾರರ ಪಟ್ಟಿಯು ಆಯಾ ಚುನಾವಣಾ ಕ್ಷೇತ್ರಗಳಲ್ಲಿ ನಾಳೆಯದಿನ ಪ್ರಕಟವಾಗುತ್ತದೆ.

ಆಕ್ಷೇಪಣೆಗಳೇನಾದರೂ ಇದ್ದರೆ ಪ್ರಕಟವಾದ ೨೧ ದಿನಗಳೊಳಗಾಗಿ ಮತದಾರರು ರಿಜಿಸ್ಟ್ರೇಷನ್ ಅಧಿಕಾರಿಗಳಿಗೆ ತಿಳಿಸಬೇಕು ಎಂದು ಸರ್ಕಾರಿ ಪತ್ರಿಕಾ ಪ್ರಕಟಣೆ ತಿಳಿಸುತ್ತದೆ.

ಕಾಶ್ಮೀರ ಅಧಿಪತಿಗೆ ಸಂಬಳ

ಕಾಶ್ಮೀರದಲ್ಲಿ ಹೊಸದಾಗಿ ಚುನಾಯಿತರಾಗಿರುವ ಸದರ್-ಇ- ರಿಯಾಸತ್‌ರವರಿಗೆ ಮಾಹೆಯಾನ ೫೫೦೦ ರೂ. ಸಂಬಳ, ಅವರ ಪ್ರಯಾಣ, ಸಿಬ್ಬಂದಿ ಮುಂತಾದುವಕ್ಕೆ ವರ್ಷಕ್ಕೆ ೧,೯೯೦೦೦ ರೂಗಳನ್ನು ಅಲ್ಲಿಯ ಶಾಸನಸಭೆ ನಿರ್ಧರಿಸಿದೆ. ಇದಲ್ಲದೆ ಅವರಿಗೆ ಉಚಿತ ಭವನ ೨ ಕಾರುಗಳು ೩ ವ್ಯಾನುಗಳನ್ನು ಕೊಡಲಾಗುತ್ತದೆ.

ಲೇಡಿ ಕ್ರಿಪ್ಸರಪತ್ನಿಯು ಭಾರತಕ್ಕೆ

ಬ್ರಿಟನ್ನಿನ ಲೇಬರ್ ಸರ್ಕಾರದ ಕೋಶಾಧೀಶರಾಗಿದ್ದ ದಿವಂಗತ ಸರ್‌ಸ್ಟಾಫರ್ಡ್ ಕ್ರಿಪ್ಸರಪತ್ನಿಯು ಪ್ರಧಾನಿ ನೆಹರೂರವರ ಆಹ್ವಾನವನ್ನು ಮನ್ನಿಸಿ ಭಾರತಕ್ಕೆ ಬರಲಿರುವರೆಂದು ಗೊತ್ತಾಗಿದೆ.

ಆಹಾರವಿಲ್ಲದೆ ಇಬ್ಬರು ಸತ್ತಿರಬಹುದು

ಭಾರತ ಅಭಾವ ಪ್ರದೇಶಗಳಲ್ಲಿ ಆಹಾರ ವಿಲ್ಲದೆ ಅಥವಾ ಪುಷ್ಟಿರಹಿತ ಆಹಾರ ಸೇವನೆಯಿಂದ ಇಬ್ಬರು ಮಾತ್ರ ಸತ್ತಿರಬಹುದೆಂದು ಆಹಾರ ಉಪಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ಯುದ್ಧದಲ್ಲಿ ವಿಷವಾಯು ಪ್ರಯೋಗ ?

ಕೊರಿಯಾಯುದ್ಧದಲ್ಲಿ ಅಮೆರಿಕವು ವಿಷವಾಯುವಿನ ಬಾಂಬುಗಳನ್ನು ಪ್ರಯೋಗಿಸುತ್ತಲಿರುವುದಾಗಿ ಉತ್ತರಕೊರಿಯಾ ವಿಶ್ವಸಂಸ್ಥೆ ಅಧ್ಯಕ್ಷರಿಗೆ ತಂತಿಮೂಲಕ ಅಪಾದಿಸಿದೆ.

ಜ॥ ಐಸೆನ್ ಹೋವರವರಿಗೆ ರಕ್ಷಣೆ

ಅಮೆರಿಕಾ ನೂತನ ಅಧ್ಯಕ್ಷ ಜ॥ ಐಸನ್ ಹೋವರ್‌ರವರು ಕೊರಿಯಾಕ್ಕೆ ಭೇಟಿಕೊಡುವ ಕಾಲದಲ್ಲಿ ಅವರ ರಕ್ಷಣೆಗಾಗಿ ೪೦೦ ಮಂದಿ ಕೊರಿಯನ್ ಗುಪ್ತ ಚಾರ ದಳದವರು ಇರುವರೆಂದು ಹೇಳಲಾಗಿದೆ.

ಕೊಪ್ಪಕ್ಕೆ ದೇವನಗರವೆಂಬ ಹೆಸರು

ಕೊಪ್ಪಕ್ಕೆ ದೇವನಗರವೆಂಬ ಹೆಸರಿಡಬೇಕೆಂದು ಅಲ್ಲಿಯ ಪೌರಸಭೆಯು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯ ಮಾಡಿದೆ.

ಲೇಬರ್ ಸದಸ್ಯರ ಅಭಿನಂದನೆ

ಕೊರಿಯಾ ಯುದ್ಧ ಕೈದಿ ಸಮಸ್ಯೆಯನ್ನು ಬಗೆಹರಿಸಲು ಭಾರತ ನಡೆಸುತ್ತಿರುವ ಪ್ರಯತ್ನಕ್ಕೆ ಬ್ರಿಟಿಷ್ ಪಾರ್ಲಿಮೆಂಟಿನ ಲೇಬರ್ ಪಕ್ಷದ ೧೦೦ ಸದಸ್ಯರು ಶ್ರೀಮತಿ ವಿಜಯಲಕ್ಷ್ಮಿ ಯವರಿಗೆ ಅಭಿನಂದನೆ ತಂತಿ ಕಳುಹಿಸಿದ್ದಾರೆ.

ಲಕ್ಕವಳ್ಳಿ ಯೋಜನೆಗೆ ಕೇಂದ್ರದ ಸಹಾಯ

ಮುಖ್ಯ ಮಂತ್ರಿಗಳ ಹೇಳಿಕೆ

ಲಕ್ಕವಳ್ಳಿ ಜಲಾಶಯ ಯೋಜನೆಗೆ ಕೇಂದ್ರಸರ್ಕಾರವು ಸಹಾಯ ನೀಡಬಹುದೆಂದು ದೆಹಲಿಯಿಂದ ನಿನ್ನೆ ಹಿಂತಿರುಗಿದ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ.

ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆ ಚಳುವಳಿಗಾಗಿ ಈಗ ಕೇಂದ್ರವು ಕೊಟ್ಟಿರುವ ಒಂದೂವರೆ ಕೋಟಿ ರೂ. ಜೊತೆಗೆ ೧೬.೧೭ ಲಕ್ಷ ರೂ ಕೊಡಲಿದೆಯೆಂದೂ, ಮುಂದಿನವರ್ಷ ಒಂದೂವರೆ ಕೋಟಿ ರೂ. ಬರಬಹುದೆಂದೂ ಅವರು ಹೇಳಿರುತ್ತಾರೆ.

ಮುಂದಿನ ವರ್ಷಕ್ಕೆ ೧ ಲಕ್ಷ ೪೦ ಸಾವಿರ ಟನ್ ಆಹಾರ ಸಂಸ್ಥಾನಕ್ಕೆ ಬೇಕೆಂದು ಕೇಂದ್ರಕ್ಕೆ ಮನವಿ ಸಲ್ಲಿಸಲಾಗಿದೆಯೆಂದೂ ಮೈಸೂರಿನ ಭತ್ತದ ಸಂಗ್ರಹಣೆ ಬೆಲೆಯು ಮದ್ರಾಸ್‌ಗಿಂತ ಸ್ವಲ್ಪ ಕಡಿಮೆಯಾಗಿದೆಯೆಂದೂ ಮುಖ್ಯ ಮಂತ್ರಿಗಳು ತಿಳಿಸಿರುತ್ತಾರೆ.

ಡಾ|| ರಾಧಾಕೃಷ್ಣನ್‌ರವರಿಗೆ ಗೌರವ ಪ್ರಶಸ್ತಿ

ಭಾರತದ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರಿಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯವು ಡಾಕ್ಟರ್ ಆಫ್ ಸಿವಿಲ್ ಲಾಸ್' ಎಂಬ ಗೌರವ ಪ್ರಶಸ್ತಿಯನ್ನು ನೀಡಿದೆ.

ಭಾರತ ಚಲನಚಿತ್ರಗಳಿಗೆ ಬಹಿಷ್ಕಾರವಿಲ್ಲ

ಪಾಕೀಸ್ಥಾನ ಸರ್ಕಾರವು ಭಾರತ ಚಲನಚಿತ್ರಗಳಿಗೆ ಬಹಿಷ್ಕಾರವನ್ನು ಹಾಕಿದೆಯೆನ್ನುವುದು ನಿಜವಲ್ಲವೆಂದು ಕೇಂದ್ರದ ಕೈಗಾರಿಕಾ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಕಾಲರಾದಿಂದ ೫೨ ಮಂದಿ ಮರಣ

ಮೈಸೂರು ಸಂಸ್ಥಾನದಲ್ಲಿ ಇದೇ ೧೫ನೇ ತಾರೀಖು ಅಂತ್ಯದ ವಾರದಲ್ಲಿ ಬೆಂಗಳೂರು, ಮೈಸೂರು ಮತ್ತು ಚಿನ್ನದಗಣಿ ಜಿಲ್ಲೆಗಳ ೭ ತಾಲ್ಲೂಕುಗಳಲ್ಲಿ ಪ್ಲೇಗಿನಿಂದ ೫ ಮಂದಿ ಸತ್ತರು ಕೋಲಾರ ತಾಲ್ಲೂಕಿನಲ್ಲಿ ಸಿಡುಬುರೋಗವು ೪೨ ಮಂದಿಗೆ ತಗುಲಿತು. ಚಿನ್ನದಗಣಿ, ಕನಕಪುರ, ರಾಮನಗರ, ಬಂಗಾರಪೇಟೆ, ಹೊಸಕೋಟೆ ಮತ್ತು ಮದ್ದೂರುಗಳಲ್ಲಿ ಕಾಲರಾದಿಂದ ೫೦ ಜನರು ಸತ್ತರು—ಎಂದು ಆರೋಗ್ಯ ಇಲಾಖಾ ವರದಿ ತಿಳಿಸುತ್ತದೆ.

'ಸೇವಕ' ದಿನಪತ್ರಿಕೆ

ರಾಜಧಾನಿಯಿಂದ ಪಿ ಟಿ ಐ. ರಾಯಿಟರ್ ತಂತೀ ಸುದ್ದಿಗಳನ್ನೊಳಗೊಂಡು ಪ್ರಕಟವಾಗುತ್ತಿದ್ದ 'ಸೇವಕ' ದಿನಪತ್ರಿಕೆಯು ಭಾರಿ ವಿಘ್ನಗಳಿಂದ ಪ್ರಕಟನೆಯನ್ನು ನಿಲ್ಲಿಸಬೇಕಾಯಿತು. ಆದರೆ ಅದನ್ನು ಸದ್ಯದಲ್ಲಿಯೇ ಪ್ರಕಟಿಸಿ ನಿರಾತಂಕವಾಗಿ ಸೇವೆಸಲ್ಲಿಸಲಿದೆಯೆಂದು ಅದರ ಸಂಪಾದಕರಾದ ಶ್ರೀ ಕೆ. ಅನಂತಸುಬ್ಬರಾಯರು ತಿಳಿಸಿರುತ್ತಾರೆ.

ವಿದ್ಯಾಭ್ಯಾಸ ಸಮ್ಮೇಳನ

ಅಖಿಲಭಾರತ ಶಿಕ್ಷಣ ಸಮ್ಮೇಳನವು ಮುಂದಿನ ತಿಂಗಳು ೨೭ ನೇ ತಾರೀಖಿನಿಂದ ನಾಗಪುರದಲ್ಲಿ ಪ್ರೊ|| ದಿವಾನ್ ಚಂದ್ರ ಶರ್ಮರ ಅಧ್ಯಕ್ಷತೆಯಲ್ಲಿ ನಡೆಯುವುದು.

ನಿಧನ

ಮೈಸೂರು ೨೦

ನಗರದ ಪ್ರಜಾವಾಣಿ ಬಾತ್ಮೀದಾರರಾದ ಶ್ರೀ ಕೆ. ಕಾಳಪ್ಪನವರ ಪಾತ್ನಿ ಶ್ರೀಮತಿ ನಿಂಗಮ್ಮನವರು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಭಗವಂತನು ಶಾಂತಿ ಮತ್ತು ಅವರ ಬಂಧುವರ್ಗದವರಿಗೆ ದುಃಖವನ್ನು ಸಹಿಸಲು ಶಕ್ತಿಯನ್ನು ಕೊಡಲೆಂದು ಕೋರುತ್ತೇವೆ

—ಮೈಸೂರುಪೇಟೆಧಾರಣೆ—

ತಾರೀಖು ೧೯-೧೧-೫೨

ಪಲ್ಲ	ರೂ- ಆ-	ರೂ-	ಆ
ಕಡಲೇಕಾಯಿ	೧೧-೮	೨೩	೮
ಎಳ್ಳು	೬೯-೧೦	೭೨	೨
ಹರಳು	೩೮	೪೧	೮
ಹುರುಳಿ	೭೦-೬	-	
ಹೆಸರು	೫೧-೧೪	೫೩	೧೦
ಉದ್ದು			
ಅಲಸಂದೆ	೫೪-೧೦	೬೬	೪
ಹುಚ್ಚೆಳ್ಳು		—	—
ಹೊಂಗೆಬೀಜ			
ಮೆ|| ಕಾಯಿ	೭-೪	೧೫	೧೨
ಸೀಗೇಕಾಯಿ			
ಬೆಲ್ಲ			
ಹುಣಿಸೆಹಣ್ಣು			
ತೆಂಗಿನಕಾಯಿ	೧೭೭	೨೨೭	

ನಗರಾರೋಗ್ಯ

ಮೈಸೂರು ೨೦

ಮೈಸೂರು ನಗರದಲ್ಲಿ ಈ ಮಾಹೆ ೧೫ನೇ ತಾ|| ಅಂತ್ಯದವರೆಗೆ ಪ್ಲೇಗು ಸಿಡುಬು ರೋಗಗಳೇನೂ ಇರಲಿಲ್ಲ ೧೧೮೯ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು. ೨೭೬ ಪ್ರಥಮ ಮತ್ತು ೩೩೭ ಪುನಃ ದೇವಿ ಹಾಕಲಾಗಿದೆ.

ಇಬ್ಬರಿಗೆ ಡಿಫ್ತೀರಿಯಾ ರೋಗವು ತಗುಲಿ ಒಂದುಮರಣವಾಯಿತು ರೋಗವು ಹರಡದಂತೆ ಮುಂಜಾಗ್ರತೆ ಕಾರ್ಯಗಳನ್ನು ನಡೆಸಿ ೨೭ ಡಿಫ್ತೀರಿಯಾ ನಿರೋಧ ದೇವಿ ಹಾಕಲಾಯಿತು.

ನಗರದಲ್ಲೆಲ್ಲೂ ಕಾಲರಾ ಉಪದ್ರವವಿರಲಿಲ್ಲ. ೨೨೧೯ ಕಾಲರಾ ನಿರೋಧ ಇನಾಕ್ಯುಲೇಷನ್ ಈ ಪಕ್ಷದಲ್ಲಿಹಾಕಲಾಯಿತು-ಎಂಬುದಾಗಿ ಮೈಸೂರು ನಗರ ಆರೋಗ್ಯಾಧಿಕಾರಿಗಳ ವರದಿ ತಿಳಿಸುತ್ತದೆ.

ಎಕರೆಗೆ ೮೯೬೯ ಪೌಂಡ್ ಭತ್ತ

ಸೂರತ್ ಜಿಲ್ಲೆಯ ಗಾಂದೇವಿ ತಾಲ್ಲೂಕಿನ ಪತ್ರಿ ಎಂಬ ಹಳ್ಳಿಯಲ್ಲಿ ಮೊರಾರ್‌ಬಾಯಿ ಪಟೇಲ್ ಎಂಬ ರೈತನು ಒಂದು ಎಕರೆಗೆ ೮೯೬೯ ಪೌಂಡುಗಳಷ್ಟು ಭತ್ತವನ್ನು ಬೆಳೆದು ಪ್ರಥಮ ಸ್ಥಾನ ಗಳಿಸಿರುವನು ಆ ಪ್ರದೇಶದಲ್ಲಿ ಸರಾಸರಿ ಎಕರೆಗೆ ೧೬೦೦ ಪೌಂಡುಗಳಷ್ಟು ಭತ್ತ ಬೆಳೆಯಾಗುತ್ತಿದೆ.

ರಾಜಕಮಲ್, ಮೈಸೂರು

21-11-52 ರಿಂದ ಪ್ರಾರಂಭ

ಮಹಾತ್ಮಾರವರ:—

ನಾಗಕನ್ನಿಕ (ಕನ್ನಡ)

ಭೂಮಿಕೆ:—ಜಯಶ್ರೀ, ಬಳ್ಳಾರಿ ರತ್ನಮಾಲಾ, ರಾಘವೇಂದ್ರರಾವ್, ಮಹಾಬಲರಾವ್,

ವುಡ್‌ಲ್ಯಾಂಡ್ಸ್

21—11—52 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ನೌಬಹಾರ್ ಹಿಂದಿ

ಭೂಮಿಕೆ:—ಅಶೋಕ್ ಕುಮಾರ್ ನಳಿನಿಜಯವಂತ್, ಕುಲ್‌ದೀಪ್.

—:ಪ್ರಕಾಶಕರು ಮತ್ತು ಮುದ್ರಕರು:—

ಜಿ. ಎಲ್. ಸ್ವಾಮಿ

ಕರ್ನಾಟಕ ಪ್ರಿಂಟರ್ಸ್, ಮೈಸೂರು.

ವಿವಾಹ ವಿಚ್ಛೇದನ ಮಸೂದೆಗೆ ಒತ್ತಾಯ

ವಿವಾಹ ಮತ್ತು ವಿವಾಹವಿಚ್ಛೇದನ ಮಸೂದೆಯನ್ನು ಪಾರ್ಲಿಮೆಂಟಿನ ಈಗಿನ ಅಧಿವೇಶನದಲ್ಲಿಯೇ ಶಾಸನವಾಗುವಂತೆ ಲೋಕಸಭೆಯಲ್ಲಿರುವ ೧೧ ಜನ ಮಹಿಳಾ ಸದಸ್ಯರು ಒಂದು ಮನವಿಯನ್ನು ಹೊರಡಿಸಿದ್ದಾರೆ.

ಒಲಂಪಿಯಾ ಟಾಕೀಸ್

ಅಮೋಘ ಪ್ರಾರಂಭ

20—11—52ರಿಂದ ಪ್ರತಿದಿನ 3 ಆಟ

ಭಾರತಿ (ನ್ಯೂಥಿಯೇಟರ್ಸ್ ಪ್ರಖ್ಯಾತಿ) ಮತ್ತು ರಂಜನ್ ಪಾತ್ರವಹಿಸಿರುವ

ಬಾಗ್‌ದಾದ್

ಸಂಗೀತ, ನೃತ್ಯ, ಅತಿಭಯಂಕರ ಖಡ್ಗ ಕಾದಾಟಗಳಿಂದೊಡಗೂಡಿದ ಅದ್ಭುತಚಿತ್ರ.

ಸಹಾಯಕ ವರ್ಗ—ಭಗವಾನ್, ಯಶೋದರಖಟ್ಟು, ಮತ್ತು ಮಾತಾಡುವ ಕುದುರೆ

ಬೆಳಗಿನ ಪ್ರದರ್ಶನ:—ಕಿಸ್ಮತ್

ಮೈಸೂರು ನಗರಾಭಿವೃದ್ಧಿ ಸಮಿತಿ

‡ ಮೈಸೂರು ‡

ನಂ. B 4 C 262|52-3

ತಾ|| 10—11—1952

★ ಪ್ರಕಟಣೆ ★

ಮೈಸೂರು ನಗರಾಭಿವೃದ್ಧಿ ಸಮಿತಿಗೆ ಒಬ್ಬ ಅವೆನ್ಯೂ ಇನ್ಸ್‌ಪೆಕ್ಟರ್ ಬೇಕಾಗಿರುವುದರಿಂದ ಹಿಂದುಳಿದ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಂದ ೧೯೫೨ ನೇ ನವಂಬರ್ ೩೦ ನೇ ತಾರೀಖಿನೊಳಗಾಗಿ ಮೇಲ್ಕಂಡ ಕಛೇರಿಗೆ ತಲಪುವಂತೆ ಅರ್ಜಿಗಳನ್ನು ಸ್ವೀಕರಿಸಲಾಗುವುದು.

ನೌಕರಿಯ ಅವಧಿಯು ಕೇವಲ ಹಂಗಾಮಿಯಾಗಿದ್ದು ಮಾಹೆಯಾನ ತಲಬು ೫೦ ರೂಗಳ ಜೊತೆಗೆ ಜಾರಿಯಲ್ಲಿರುವ ರೂಲ್ಸ್ ಮೇರೆಗೆ ತುಟ್ಟಿ ಭತ್ಯವನ್ನೂ ಮಾಹೆಯಾನ ೧೫ ರೂ. ಕನ್ವೇಯನ್ಸ್ ಅಲೋಯನ್ಸನ್ನೂ ಕೊಡಲಾಗುವುದು. ಅರ್ಹತೆ:-ಮೈಸೂರು ಸರ್ಕಾರದ ಎಸ್. ಎಸ್. ಎಲ್. ಸಿ. (ಇ. ಸಿ. ಪಿ. ಎಸ್.) ಅಥವಾ ಅದರ ಸರಿಸಮವಾದ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು ಹಾರ್ಟಿಕಲ್ಚರ್ ಡಿಪ್ಲೋಮಾವನ್ನು ಪಡೆದಿರಬೇಕು. ಹುದ್ದೆಗೆ ಆರಿಸುವ ಕಾಲಕ್ಕೆ ಅರ್ಜಿದಾರರ ವಯಸ್ಸು ೨೮ ವರುಷಕ್ಕೆ ಮೀರಿರಕೂಡದು. ಸರ್ಕಾರಿ ನೌಕರಿಯಲ್ಲಿರುವವರು ತಮ್ಮ ಇಲಾಖಾಮೂಲಕ ಅರ್ಜಿಯನ್ನು ಕಳುಹಿಸಬೇಕು. ಈ ಕೆಳಗೆ ಸಹಿ ಮಾಡಿರುವವರು ಅಪೇಕ್ಷೆಪಟ್ಟಲ್ಲಿ ಅವರನ್ನು ಭೇಟಿಮಾಡಲು ಅರ್ಜಿದಾರರ ತಮ್ಮ ಸ್ವಂತ ಖರ್ಚಿನಿಂದ ಬರಬೇಕು.

(ಸಹಿ) ಎಸ್. ಲಿಂಗಣ್ಣ, ಛೇರ್ಮನ್

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ

ಸಂಪುಟ 3

ಸಂಚಿಕೆ 75

೨೧ ೧೧-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಪುರಸಭಾಧಿವೇಶನ

ಮೈಸೂರು ೨೧

ಪುರಸಭೆಯ ಮಾಹೆಯಾನಾ ಅಧಿವೇಶನವು ಇದೇ ೨೮ ನೇ ತಾರೀಖು ಶುಕ್ರವಾರ ನಡೆಯಲಿದೆ.

ಕೇಂದ್ರ ಸರ್ಕಾರದವರು ಮಾರಾಟ ತೆರಿಗೆಯ ವಿಚಾರದಲ್ಲಿ ಎಸನ್ಷಿಯಲ್ ಗುಡ್ಸ್ ೨೮೬ ನೇ ವಿಧಿಯ ಕಾನೂನು ಪ್ರಕಾರ ಮನುಷ್ಯನ ದಿನಚರಿ ಉಪಯೋಗಕ್ಕೆ ಬೇಕಾಗುವ ೪೨ ಆಹಾರ ವಸ್ತುಗಳ ಮೇಲೆ ಮಾರಾಟ ತೆರಿಗೆಯನ್ನು ವಿಧಿಸಕೂಡದೆಂದು ತೀರ್ಮಾನಿಸಿರುವ ಮೇಲೆ ಮೈಸೂರು ಸರ್ಕಾರದವರು ಸಹ ಕೇಂದ್ರ ನೀತಿಯನ್ನು ಅನುಸರಿಸುವಂತೆಕೋರುವ ನಿರ್ಣಯವನ್ನು ಶ್ರೀ ಚೌಡಯ್ಯನವರು ಮಂಡಿಸಿದ್ದಾರೆ.

ನಗರದ ನಾನಾಭಾಗಗಳಲ್ಲಿ ಕಳ್ಳತನವನ್ನು ತಪ್ಪಿಸಲು ಇನ್ನು ಹೆಚ್ಚಿಗೆ ಕಾರ್ಯಕ್ರಮ ನಡೆಸುವಂತೆ ಜಿಲ್ಲಾಧಿಕಾರಿಗಳನ್ನು ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನು ಕೋರುವ ನಿರ್ಣಯವನ್ನು ಶ್ರೀ ಬಿ. ಜಿ. ದಾಸ್‌ರು ಮಂಡಿಸಿದ್ದಾರೆ.

ಸಿದ್ದರಾಮಹುಂಡಿ ಕೊಲೆ ಆಪಾದಿತರ ಖುಲಾಸೆ

ಮೈಸೂರು ೨೧

ಮೈಸೂರು ತಾಲ್ಲೂಕು ಸಿದ್ದರಾಮಹುಂಡಿಯಲ್ಲಿ ಮರಿಗೌಡ ಮತ್ತು ೬ ಜನರು ೨೧-೫-೫೧ ನೇ ಬೆಳಗ್ಗೆ ೭ ಗಂಟೆ ಸಮಯದಲ್ಲಿ ಅಕ್ರಮವಾಗಿ ಗುಂಪುಸೇರಿ ಮಚ್ಚು. ಕೊಡಲಿ ಮತ್ತು ದೊಣ್ಣೆಗಳಿಂದ ಅಲ್ಲಿನ ೩೫ ವರ್ಷದ ಕೆಂಪೇಗೌಡ ಎಂಬುವನನ್ನು ಹೊಡೆದು ಕೊಲೆಮಾಡಿದರೆಂಬ ಆಪಾದನೆಯ ಮೇಲೆ ಸೆಷನ್ಸಿಗೆ ಗುರಿಯಾಗಿದ್ದವರನ್ನು ಮೈಸೂರು ಅಡಿಷನಲ್ ಸೆಷೆನ್ಸ್ ನ್ಯಾಯಾಧೀಶರಾದ ಶ್ರೀ ಎಂ. ಮುನಿಸ್ವಾಮಿಯವರು ನಿನ್ನೆ ಖುಲಾಸೆ ಮಾಡಿದರು. ಆಪಾದಿತರ ಪರವಾಗಿ ಶ್ರೀ ಟಿ. ಚನ್ನಕೇಶವಯ್ಯನವರು ವಕಾಲತ್ತು ವಹಿಸಿದ್ದರು.

ವಿದ್ಯುಚ್ಛಕ್ತಿ ಕೈಗಾರಿಕಾ ಉಪಕರಣ ಕಾರ್ಖಾನೆ

ಮೈಸೂರು ಸಂಸ್ಥಾನದಲ್ಲಿ ೮ ಕೋಟಿ ರೂ ಗಳ ಖರ್ಚಿನಿಂದ ಒಂದು ವಿದ್ಯುಚ್ಛಕ್ತಿ, ಮತ್ತು ಕೈಗಾರಿಕಾ ಉಪಕರಣಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಬೇಕೆಂದು ತಾವು ಕೇಂದ್ರ ಆಯೋಜನಾ ಸಮಿತಿಯಲ್ಲಿ ಒತ್ತಾಯಪಡಿಸಿರುವುದಾಗಿ ಮುಖ್ಯ ಮಂತ್ರಿಗಳು ತಿಳಿಸಿರುತ್ತಾರೆ ಬೆಂಗಳೂರಿನಲ್ಲಿರುವ ಪಿಂಗಾಣಿ ಕಾರ್ಖಾನೆಗೆ ಕೇಂದ್ರವು ಸಹಾಯಮಾಡಬೇಕೆಂದೂ ಕೇಳಲಾಗಿದೆ.

ಭದ್ರಾಯೋಜನೆಗೆ ೧೩.೪ ಕೋಟಿ ರೂ. ಖರ್ಚು

ಮೈಸೂರು ಸಂಸ್ಥಾನದಲ್ಲಿ ಕೈಗೊಂಡಿರುವ ಭದ್ರಾ ಯೋಜನೆಯನ್ನು ಪೂರೈಸಲು ೧೦ ವರ್ಷಗಳು ಬೇಕಾಗುವುದು ಮತ್ತು, ಅದಕ್ಕೆ ೧೩.೪ ಕೋಟಿ ರೂ. ಗಳು ಖರ್ಚಾಗುವುದು ಈಗಾಗಲೇ ಅದಕ್ಕೆ ೧.೭ ಕೋಟಿ ರೂ. ಖರ್ಚಾಗಿದೆ

ಸಂಸ್ಥಾನ ಸರ್ಕಾರವು ಒಂದು ವರ್ಷದಲ್ಲಿ ಕೊನೆಯಪಕ್ಷ ೨ ಕೋಟಿ ರೂ. ಗಳು ಮಾತ್ರ ಖರ್ಚುಮಾಡಲು ಸಾಧ್ಯ. ಈ ದೃಷ್ಟಿಯಿಂದ ಯೋಜನೆಯು ಮೊದಲನೇ ಘಟ್ಟವನ್ನು ಪೂರೈಸಲು ೫ ವರ್ಷಗಳಲ್ಲಿ ೯ ಕೋಟಿ ರೂ. ಬೇಕಾಗುವುದು ಆದ್ದರಿಂದ ಈ ಯೋಜನೆಯನ್ನು ತ್ವರಿತಗೊಳಿಸಲು ಕೇಂದ್ರಸರ್ಕಾರದವರು ಹಣಸಹಾಯವಮಾಡಬೇಕೆಂದು ಒತ್ತಾಯಪಡಿಸಲಾಗಿದೆ ಈಗ ಅದಕ್ಕೆ ಸಹಾಯ ಒದಗಿಸುವ ನಿರೀಕ್ಷೆ ಇದೆ-ಎಂದು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಿಳಿಸಿರುತ್ತಾರೆ.

ಈ ಯೋಜನೆಯು ಸಂಪೂರ್ಣವಾಗಿ ಕಾರ್ಯರೂಪಕ್ಕೆ ಬಂದಲ್ಲಿ ೧,೮೦,೦೦೦ ಎಕರೆಜಮೀನುಸಾಗುವಳಿಗೆಬರುವುದೆಂದೂ ೧೩೫೦೦ ಕಿಲೋವಾಟ್ಸ್ ವಿದ್ಯುಚ್ಛಕ್ತಿ ಉತ್ಪನ್ನವಾಗುವುದೆಂದೂ, ಅವರು ತಿಳಿಸಿದರು

ಭತ್ತದ ಬೆಲೆ ಏರಿಸಿದುದು ರೈತರು ಹೆಚ್ಚಿಗೆ ಬೆಳೆಯಲು

ಮೈಸೂರು ಸಂಸ್ಥಾನದಲ್ಲಿ ಸರ್ಕಾರದವರು ಸಂಗ್ರಹಿಸುವ ಭತ್ತದ ಬೆಲೆಯನ್ನು ೪ ರೂ ಗೆ ಹೆಚ್ಚಿಸಿರುವುದರಿಂದ ಬೆಳೆಯುವವರಿಗೆ ೭೦ ಲಕ್ಷ ರೂ ಹೆಚ್ಚಾಗಿ ಸಿಕ್ಕುವುದೆಂದೂ ಇದರಿಂದ ರೈತನು ಹೆಚ್ಚು ಬೆಳೆಮಾಡಲು ಪ್ರೋತ್ಸಾಹಕೊಟ್ಟಂತಾಗುವುದೆಂದೂ ಮುಖ್ಯಮಂತ್ರಿಗಳು ಹೇಳಿಯತ್ತಾರೆ.

ಈ ವರ್ಷ ರಾಗಿ, ಜೋಳ, ನವಣೆ, ಸಾಮೆ ಇತ್ಯಾದಿ ಧಾನ್ಯಗಳನ್ನು ಸರ್ಕಾರದವರು ಸಂಗ್ರಹಣೆ ಮಾಡುವುದಿಲ್ಲ. ಆದರೆ ರಾಗಿಯನ್ನು ಯಾವ ರೈತರಾದರೂ, ತಾವೇ ತಾವಾಗಿ ಕೊಟ್ಟರೆ ಸ್ವೀಕರಿಸಲಾಗುವುದು ಭತ್ತವನ್ನು ಸಂಗ್ರಹಿಸುವಾಗ್ಗೆ ಅದು ಶುದ್ಧವಾಗಿರುವಂತೆ ನೋಡಿಕೊಳ್ಳಲಾಗುವುದು. ಶುದ್ಧವಾಗಿಲ್ಲದಿದ್ದಲ್ಲಿ ಅದನ್ನು ಚೊಕ್ಕಟಪಡಿಸಲು ಆಗುವ ಖರ್ಚನ್ನು ಧಾನ್ಯ ಕೊಡುವವರಿಂದಲೇ ವಸೂಲುಮಾಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ-ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಕಾಡುಮೃಗಗಳ ರಕ್ಷಣ ಸಲಹಾ ಸಮಿತಿ

ಮೈಸೂರು ೨೧

ಇದೇ ೨೫ ನೇ ತಾರೀಖು ರಾಜಧಾನಿಯಲ್ಲಿ ಪ್ರಾರಂಭವಾಗುವ ಕೇಂದ್ರ ಕಾಡುಮೃಗ ರಕ್ಷಣಾ ಸಲಹಾಸಮಿತಿಯ ಸಭೆಯು ರಾಜಪ್ರಮುಖರ ಭಾಷಣದಿಂದ ಆರಂಭವಾಗಿ, ಆದಿನ ಕಾಡುಮೃಗಗಳ ರಕ್ಷಣೆಗಾಗಿ ಕೇಂದ್ರ ಮತ್ತು ಸಂಸ್ಥಾನಗಳಲ್ಲಿ ಶಾಸನ ಮಾಡುವ ವಿಷಯವನ್ನು ಚರ್ಚಿಸುವುದು ಚರ್ಮ ಮತ್ತು ತುಪ್ಪಟದ ವ್ಯಾಪಾರ, ಜೀವಂತ ಪ್ರಾಣಿಗಳನ್ನು ರಫ್ತು, ಮತ್ತು ಆಮದು ಮುಂತಾದ ವಿಷಯಗಳನ್ನು ಪರಿಶೀಲಿಸಲಾಗುವುದು. ೨೬ ನೇ ತಾರೀಖು ಸಮಿತಿಯು ಸದಸ್ಯರು ಬಂಡೀಪುರ, ಟ್ರೋಫಿಹಾಲ್', ಗಜಶಾಲೆ, ಮೃಗಾಲಯ ಮತ್ತು ಚಾಮರಾಜನಗರ ಅರಣ್ಯ ಪ್ರದೇಶಗಳಿಗೆ ಭೇಟಿ ಕೊಡುವರು ಡಿಸೆಂಬರ್ ೧ ನೇ ತಾರೀಖು ಕೇಂದ್ರ ವ್ಯವಸಾಯ ಶಾಖಾ ಸಚಿವರುಭಾಷಣ ಮಾಡುವರು.

ನೀತಿ ಜ್ಞಾನ ಪ್ರಸಾರ

ಜನರಲ್ಲಿ ಭಕ್ತಿ, ನೀತಿ ಮತ್ತು ಧರ್ಮಶ್ರದ್ಧೆ ಬೆಳೆಯಬೇಕೆನ್ನುವ ಉದ್ದೇಶದಿಂದ ಸಂಸ್ಥಾನಾದ್ಯಂತ ಇದೇ ೨೭ನೇ ತಾರೀಖು ರಾಮಾಯಣ, ಮಹಾಭಾರತ, ಶಿವಶರಣ ವಚನಗಳ ಚರಿತ್ರೆ ಮುಂತಾದ ಪಠಣ ಪ್ರಚಾರ ಜಯಂತಿಯನ್ನು ಸರ್ಕಾರದವರು ನಡೆಸಲು ವ್ಯವಸ್ಥೆ ಮಾಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಸಾರ್ವಜನಿಕರ ಸಹಕಾರದಿಂದ ಇದನ್ನು ನಡೆಸಲಾಗುವುದು.

ಮಿಡಿತೆಗಳ ಹಾವಳಿಯಿಂದ ಮಗುವಿನ ಮರಣ

ಜೋಧ್‌ಪುರದ ಹಳ್ಳಿಯೊಂದರಲ್ಲಿ ಮಿಡಿತೆಗಳ ಹಾವಳಿಯನ್ನು ತಡೆಗಟ್ಟಲು ತನ್ನ ಮಗುವನ್ನು ಹಿಂದಕ್ಕೆ ಬಿಟ್ಟು ತಾಯಿಯು ಮುಂದೆ ನುಗ್ಗಿದಾಗ ಆ ಮಗುವನ್ನು ಮಿಡಿತೆಗಳು ಕಚ್ಚಿದುದರಿಂದ ಅದು ಸತ್ತು ಹೋಯಿತೆಂದು ವರದಿಯಾಗಿದೆ.

ಮೈಸೂರಿನ ಸಾಬೂ ಮೇಲೆ ದಾವ

ಅಮೆರಿಕದ ಹಾಲಿವುಡ್ಡಿನಲ್ಲಿ ಪ್ರಖ್ಯಾತ ನಟ ಮೈಸೂರಿನ ಸಾಬುವು ತನ್ನ ಮನೆಗೆ ತಾನೇ ಬೆಂಕಿ ಇಟ್ಟು ವಿಮೆ ಕಂಪೆನಿಯೊಂದರಿಂದ ೯೯೨೩ ಪೌಂಡುಗಳನ್ನು ಪಡೆದು ಮೋಸಪಡಿಸಿದನೆಂದೂ ಆದ್ದರಿಂದ ಅದನ್ನು ವಾಪಸುಮಾಡಬೇಕೆಂದೂ ಆ ವಿಮಾಕಂಪೆನಿಯವರು ಆತನಮೇಲೆ ದಾವ ಹೂಡಿರುವರು.

ಬುಡಮೇಲು ಚಳುವಳಿ

ವಿಶ್ವಸಂಸ್ಥೆಯಲ್ಲಿ ಬುಡಮೇಲುಮಾಡುವ ಚಳುವಳಿಯಲ್ಲಿ ಅಲ್ಲಿನ ನೌಕರರು ತೊಡಗಿದ್ದರೆಂಬ ಆಪಾದನೆಯನ್ನು ವಿಚಾರಿಸಲು ನೇಮಿಸಿದ್ದ ಮಂಡಲಿಯಲ್ಲಿ ಸಾಕ್ಷಿ ಕೊಡಲು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮಿ|| ಟ್ರಿಗ್ವೆಲಿಯವರು ನಿರಾಕರಿಸಿರುವುದಾಗಿ ಹೇಳಲಾಗಿದೆ

ಕಾರ್ ಅಲೋಯನ್ಸ್ ಖೋತಾ

ಮದ್ರಾಸ್‌ನಗರದಲ್ಲಿ ಕಾರುಗಳನ್ನು ಹೊಂದಿರುವ ಸರ್ಕಾರಿ ನೌಕರರಿಗೆ ತಿಂಗಳಿಗೆ ೭೫ ರೂ ಸಂತೆ ಕೊಡುತ್ತಿದ್ದ ಕಾರ್ ಅಲೋಯನ್ಸನ್ನು ಮುಂದಿನ ಫೆಬ್ರವರಿಯಿಂದ ನಿಲ್ಲಿಸಲು ಮದ್ರಾಸ್ ಸರ್ಕಾರ ನಿರ್ಧರಿಸಲಿದೆ ಯೆಂದು ಗೊತ್ತಾಗಿದೆ.

ರಾಜೀನಾಮೆ ಹಿಂದಕ್ಕೆ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮಿ|| ಟ್ರಿಗ್ವಲಿಯವರು ತಮ್ಮ ಸ್ಥಾನಕ್ಕೆ ಇತ್ತಿರುವ ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಳ್ಳುವರೆಂದು ಹೇಳಲಾಗಿದೆ.

ನೌಕಾ ದಿನಾಚರಣೆ

ಡಿಸೆಂಬರ್ ೨ನೇ ತಾರೀಖು ಭಾರತಾದ್ಯಂತ ನೌಕಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಆದಿನ ಭಾರತದ ಬಂದರುಗಳಲ್ಲಿರುವ ಹಡಗುಗಳಿಗೆ ಮತ್ತು ಅವುಗಳ ಕಛೇರಿಗೆ ಪ್ರೇಕ್ಷಕರು ಭೇಟಿಕೊಡಬಹುದು.

ಮುಖ್ಯ ಮಂತ್ರಿಗಳು ಮೈಸೂರಿಗೆ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇದೇ ಮಾಹೆ ೨೬ ನೇ ತಾರೀಖು ಮೈಸೂರಿಗೆ ಆಗಮಿಸಿ ೨ ದಿನ ನಿದ್ದು ಬೆಂಗಳೂರಿಗೆ ಹಿಂತಿರುಗುವರು.

ನೆಹರೂ ಕಾಂಗ್ರೆಸ್ ಅಧ್ಯಕ್ಷರಾಗಿರಬೇಕು

ಮುಖ್ಯ ಮಂತ್ರಿಯವರ ಅಭಿಪ್ರಾಯ

ಬೆಂಗಳೂರು ೨೧

ದೇಶದ ಇಂದಿನ ಪರಿಸ್ಥಿತಿಯಲ್ಲಿ ಪ್ರಧಾನಿ ನೆಹರೂರವರೇ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿರಬೇಕೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೇಳಿದ್ದಾರೆ.

ಭಾರತಾದ್ಯಂತ ಕಾಂಗ್ರೆಸ್ ಪಕ್ಷದ ಅಭಿಪ್ರಾಯವೂ ಇದೇ ಆಗಿದೆ ಎಂದೂ ಅವರು ತಿಳಿಸಿರುತ್ತಾರೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗಳಲ್ಲೂ ಸಹ ಈ ಪದ್ಧತಿಯನ್ನೇ ಅನುಸರಿಸುವುದು ಸೂಕ್ತ. ಕಾಂಗ್ರೆಸ್ ಸಂಸ್ಥೆಯಲ್ಲಿ ಐಕಮತ್ಯ ಬೆಳೆಯಬೇಕಾದರೆ ಈ ಕ್ರಮವನ್ನೇ ಅನುಸರಿಸಬೇಕಾದುದು ಅಗತ್ಯ. ಆದರೆ ಅಧ್ಯಕ್ಷಸ್ಥಾನಕ್ಕೆ ಮುಖ್ಯಮಂತ್ರಿ ಸ್ಪರ್ಧಿಸಿ ಓಟು ಗಳಿಸುವುದನ್ನು ತಾವು ಒಪ್ಪುವುದಿಲ್ಲವೆಂದು ಶ್ರೀಯುತರು ಹೇಳಿದ್ದಾರೆ.

ಸಂಬಳಸಾರಿಕೆ ಪ್ರಶ್ನೆ ಮುಂದಿನ ಆರ್ಥಿಕ ಸಭೆಯಲ್ಲಿ

ಕೇಂದ್ರ ಮತ್ತು ಸಂಸ್ಥಾನ ಸರ್ಕಾರ ನೌಕರರ ಸಂಬಳಸಾರಿಗೆ ವ್ಯತ್ಯಾಸ ಹೋಗಬೇಕಾದ ಬಗ್ಗೆ ತಾವು ಕೇಂದ್ರಕ್ಕೆ ಕಳುಹಿಸಿರುವ ವಿಷಯವು ಮುಂದಿನ ಆರ್ಥಿಕ ಸಚಿವರ ಸಭೆಯಲ್ಲಿ ತೀರ್ಮಾನಕ್ಕೆ ಬರುವುದಾಗಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಕೊರಿಯಾ ಯುದ್ಧ ಸಮಸ್ಯೆ

ಕೊರಿಯಾ ಯುದ್ಧ ಖೈದಿಗಳ ಬಿಡುಗಡೆ ಬಗ್ಗೆ ಭಾರತವು ಮಂಡಿಸಿರುವ ನಿರ್ಣಯವು ವಿಶ್ವಸಂಸ್ಥೆಯಲ್ಲಿ ಬ್ರಿಟನ್ ಸಮರ್ಥನೆಯನ್ನು ನೀಡಿದೆ. ಈ ವಿಷಯದಲ್ಲಿ ಬ್ರಿಟಿಷ್ ವಿದೇಶಾಂಗ ಸಚಿವ ಮಿ|| ಈಡನ್‌ರವರು ಮಾತನಾಡುತ್ತಾ ಭಾರತದ ನೀಡಿರುವ ನಿರ್ಣಯವು ಸಮರ್ಪಕವಾಗಿದೆ ಎಂದು ಹೇಳಿದ್ದಾರೆ.

ಸ್ಥಾನಬದ್ಧ ಖೈದಿಗಳು

ಭಾರತದಲ್ಲಿ ಈಗ ಸ್ಥಾನಬದ್ಧ ಖೈದಿಗಳು ಕೇವಲ ೪೯೭ ಇದ್ದಾರೆ. ಇವರಲ್ಲಿ ೪೫ ಜನ ಕಳ್ಳವ್ಯಾಪಾರಿಗಳು. ೧೫೭ ಜನರು ಉಗ್ರದ್ರೋಹ ಕೆಲಸಗಳನ್ನು ಮಾಡಿದವರೆಂದು ಹೇಳಲಾಗಿದೆ.

ರೈಲ್ವೆ ಫೆಡರೇಷನ್ ಅಧ್ಯಕ್ಷತೆಯಿಂದ ನಿವೃತ್ತಿ

ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಅಧ್ಯಕ್ಷತೆಯಿಂದ ತಾವು ನಿವೃತ್ತರಾಗುವುದಾಗಿ ಪ್ರಜಾ ಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಜಯಪ್ರಕಾಶ ನಾರಾಯಣರವರು ತಿಳಿಸಿದ್ದಾರೆ.

ರಾಜಕೀಯ ಕೆಲಸದಲ್ಲಿ ತಮಗೆ ತುಂಬಾ ಬೇಸರವಾಗಿ, ಬರೀ ಭಾಷಣ, ಪ್ರವಾಸವೇ ದಿನಚರಿಯಾಗಿರುವುದರಿಂದ ತಮ್ಮ ಜೀವನದಲ್ಲಿ ಬದಲಾವಣೆಯಾಗಿ ಇನ್ನು ಮುಂದೆ ಸ್ವಗ್ರಾಮದಲ್ಲಿ ಕೆಲಸಮಾಡಲು ತಾವು ನಿರ್ಧರಿಸಿರುವುದಾಗಿ ಅವರು ಹೇಳಿದ್ದಾರೆ.

ವಿದ್ಯುಚ್ಛಕ್ತಿ ನೀರಾವರಿ ಪಂಪುಗಳು

ಸಂಸ್ಥಾನಕ್ಕೆ ಕೇಂದ್ರವು ಇತ್ತೀಚೆಗೆ ಕೊಟ್ಟಿರುವ ೪೦ ಲಕ್ಷ ರೂ.ಗಳನ್ನು ೧೧೦೦೦ ನೀರಾವರಿಪಂಪುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು ವಿನಿಯೋಗಿಸಲಾಗುವುದೆಂದೂ, ೧೯೫೩-೫೪ ರಲ್ಲಿ ೫೫ ಲಕ್ಷ ರೂ. ಖರ್ಚಿನಿಂದ ೩೩೮೭ ನೀರಾವರಿ ಪಂಪುಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆಯೆಂದೂ ಆಹಾರ ಸಚಿವ ಶ್ರೀ ಸಿದ್ದವೀರಪ್ಪನವರು ತಿಳಿಸಿರುತ್ತಾರೆ.

—ಮೈಸೂರು ಪೇಟೆಧಾರಣೆ—

ತಾರೀಖು ೨೦-೧೧-೫೨

	ಪಲ್ಲ ರೂ.	ಆ.	ರೂ.	ಆ.
ಕಡಲೇಕಾಯಿ	೧೨.		೨೮	೬
ಎಳ್ಳು	೬೯-೧೪		೭೨	
ಹರಳು	೪೩		೪೫	೧೪
ಹುರುಳಿ	೬೦-೨		೬೦	೧೪
ಹೆಸರು	೫೦-೧೪		೫೨	
ಉದ್ದು	೬೭-೨			
ಅಲಸಂದೆ	೫೪-		೭೫	೪
ಪುಚ್ಚೆಳ್ಳು	೬೩-೧೨			
ಹೊಂಗೆಬೀಜ				
ಮಿ|| ಕಾಯಿ	೭-		೧೫	೬
ಸೀಗೇಕಾಯಿ				
ಬೆಲ್ಲ				
ಹುಣಸೆಹಣ್ಣು				
ಕೊಂಗಿನಕಾಯಿ	೧೯೦		೨೧೩	

ಸಕ್ಕರೆ ಬೆಲೆಯಲ್ಲಿ ಇಳಿತಾಯ

ಮುಂದಿನ ತಿಂಗಳಿನಿಂದ ಜಾರಿಗೆ ಬರಲಿದೆ

ಮುಂದಿನ ವಾರದಿಂದ ಸಕ್ಕರೆ ಬೆಲೆಯನ್ನು ಮಣ ಒಂದಕ್ಕೆ ೪ ರೂಪಾಯಿಗಳಂತೆ ಕಡಮೆ ಮಾಡಲಾಗುವುದೆಂದು ಕೇಂದ್ರ ಆಹಾರ ಸಚಿವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ಸಕ್ಕರೆ ಮೇಲೆ ಮಣ ಒಂದಕ್ಕೆ ಒಂದು ರೂಪಾಯಿ ತೆರಿಗೆಯನ್ನು ವಿಧಿಸುವ ಮಸೂದೆಯನ್ನು ನಿನ್ನೆ ಪಾರ್ಲಿಮೆಂಟು ಅಂಗೀಕರಿಸಿತು. ಸಕ್ಕರೆ ತಯಾರಿಕೆ ವೆಚ್ಚವು ಈಗ ಕಡಿಮೆಯಾಗಿರುವುದರಿಂದ ಸುಲಭವಾಗಿ ಜನತೆಗೆ ಸಕ್ಕರೆ ದೊರೆಯಲೆಂದು ಬೆಲೆಯನ್ನು ಇಳಿಸಲಾಗುವುದೆಂದು ಹೇಳಲಾಗಿದೆ.

ನಿಜಾಮರ ಮೋಟಾರುಗಳ ಓಡಾಟ ನಿಲ್ಲಬೇಕು

ಹೈದರಾಬಾದಿನ ನೈಜಾಮರಿಗೆ ಸೇರಿದ ೩೫ ಮೋಟಾರು ಕಾರುಗಳು ಮತ್ತು ಹೊಸಂಕೆಗಳಿಂದ ಎಳೆಯಲ್ಪಟ್ಟ ೧೮ ವಾಹನಗಳು ನಂಬರ್ ಪ್ಲೇಟುಗಳಿಲ್ಲದೆ ನಗರದ ಬೀದಿಗಳಲ್ಲಿ ಹಗಲೂ ರಾತ್ರಿ, ವಿಪರೀತ ವೇಗದಲ್ಲಿ ಓಡಾಡಿ ಜನರಿಗೆ ತೊಂದರೆ ಕೊಡುತ್ತಿರುವುದರಿಂದ, ಅವುಗಳ ವಿಚಾರಣೆ ನಡೆದು ಇತ್ಯರ್ಥವಾಗುವವರೆಗೂ ಅವುಗಳ ಓಡಾಟವನ್ನು ನಿಲ್ಲಿಸಬೇಕೆಂದು ಅಲ್ಲಿನ ವಕೀಲರಾದ ಶ್ರೀ ಬಿ. ಜೆ. ಶೇಷಯ್ಯರ್ ನಗರ ನ್ಯಾಯಾಧೀಶರಮುಂದೆ ಅರ್ಜಿ ಸಲ್ಲಿಸಿದ್ದಾರೆ.

ಸಂಸ್ಥಾನದಲ್ಲಿ ಐದುಮುಕ್ಕಾಲು ಲಕ್ಷ ಆಹಾರಧಾನ್ಯ ದಾಸ್ತಾನು

ಮೈಸೂರು ಸಂಸ್ಥಾನದಲ್ಲಿ ಈಗ ೨,೫೧,೭೩೧ ಪಲ್ಲಾ ಅಕ್ಕಿ ೧೦೯೫೬೫ ಪಲ್ಲಾ ರಾಗಿ, ೧೪೭೮೧೪ ಪಲ್ಲಾ ದ್ವಿದಳ ಧಾನ್ಯಗಳು ಮತ್ತು ೪೨೬೫೭ ಪಲ್ಲಾ ಗೋಧಿ ದಾಸ್ತಾನು ಇದೆಯೆಂದೂ, ಮುಂದಿನವರ್ಷಕ್ಕೆ ೧.೪೦ ಲಕ್ಷ ಟನ್ ಆಹಾರ ಧಾನ್ಯ ಬೇಕಾಗುವುದೆಂದೂ, ಆಹಾರ ಸಚಿವರು ತಿಳಿಸಿರುತ್ತಾರೆ.

ಕಚ್ಚಾ ಫಿಲಂ ತಯಾರಿಕೆ ಕಾರ್ಖಾನೆ

ಮೈಸೂರಿನಲ್ಲಿ ೨೫ ಲಕ್ಷ ರೂ. ಖರ್ಚಿನಲ್ಲಿ ಖಾಸಗೀಯವರಿಂದ ಕಚ್ಚಾಫಿಲಂ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಲು ಯೋಚಿಸಲಾಗುತ್ತಿದೆ ಯೆಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಹೆಚ್ಚು ಆಹಾರ ಯೋಜನೆ

ಮೈಸೂರು ಸಂಸ್ಥಾನದಲ್ಲಿ ೧೯೫೩-೫೪ ರಲ್ಲಿ ಹೆಚ್ಚು ಆಹಾರ ಬೆಳೆ ಚಳುವಳಿಗಾಗಿ ೨ ಕೋಟಿ ರೂ. ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ.

೧೯೫೨-೫೩ ರಲ್ಲಿ ಈ ಯೋಜನೆಗಾಗಿ ೨೫,೯೭,೪೫೫ ರೂ. ಗ್ರಾಂಟ್ ಮತ್ತು ೮೨,೨೦,೦೦೦ ರೂ ಸಾಲ ಕೇಂದ್ರದಿಂದ ಬಂದಿದೆ. ಇತ್ತೀಚಿನ ಮಾತುಕತೆ ಫಲವಾಗಿ ಮೈಸೂರಿಗೆ ಈವರ್ಷಕ್ಕೆ ಕೇಂದ್ರದಿಂದ ೬,೬೨,೫೦೦ ರೂ ಗ್ರಾಂಟ್ ಮತ್ತು ೧೭ ಲಕ್ಷ ರೂ ಸಾಲವು ಹೆಚ್ಚಾಗಿ ದೊರೆತಿದೆ. ಈ ಹಣವನ್ನು ಕೆರೆಗಳ ದುರಸ್ತಿ, ಅಭಿವೃದ್ಧಿ ಮತ್ತು ಜೀರ್ಣೋದ್ಧಾರಕ್ಕಾಗಿ ಖರ್ಚುಮಾಡಲಾಗುವುದೆಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ನೇಪಾಳದಲ್ಲಿ ಚೈನಾ ಸಿಪಾಯಿಯ ದಸ್ತಗಿರಿ

ನೇಪಾಳ ರಾಜಧಾನಿ ಖಾಟ್ಮಂಡುವಿನಲ್ಲಿ ರಹದಾರಿಯನ್ನು ಪಡೆಯದೆ ಓಡಾಡುತ್ತಿದ್ದ ಒಬ್ಬ ಚೀಣಾ ಸೈನ್ಯಕನನ್ನು ಅಲ್ಲಿಯ ಪೋಲೀಸರು ದಸ್ತಗಿರಿಮಾಡಿದ್ದಾರೆ. ಆವನ ಬಳಿ ಒಂದು ಬಂದೂಕ ಮತ್ತು ಗುಂಡು ಮದ್ದುಗಳಿದ್ದವು.

ರಣಜಿತ್

21-11-52 ರಿಂದ 2 ನೇ ವಾರ

ಅನ್ಹೋನಿ ಹಿಂದಿ

ಪಾತ್ರ:—ನರ್ಗಿಸ್, ರಾಜ್‌ಕಪೂರ್, ಆಗ. ಡೇವಿಡ್, ಬದ್ರಿಪ್ರಸಾದ್, ಜಾನಕಿದಾಸ್ ಮತ್ತು ಓಂಪ್ರಕಾಶ್.

ವುಡ್‌ಲ್ಯಾಂಡ್ಸ್

21—11—52 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ನೌಬಹಾರ್ ಹಿಂದಿ

ಭೂಮಿಕೆ:—ಅಶೋಕ್ ಕುಮಾರ್ ನಳಿನಿಜಯವಂತ, ಕುಲ್‌ದೀಪ್.

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:—ಹಿ. ಕಾ. ಸುಬ್ಬರಾವ್

ಮೋಹನ್ ಮುದ್ರಣಾಲಯ, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 76

೨೨-೧೧-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಚುನಾವಣೆ ರದ್ದಾಗಬೇಕೆಂದು ತಕರಾರು ಅರ್ಜಿ

ಮೈಸೂರು ೨೨

ಮೈಸೂರು ತಾಲ್ಲೂಕಿನಿಂದ ಎ.ಐ.ಸಿ.ಸಿ.ಗೆ ನಡೆದ ಚುನಾವಣೆಯಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರು ಶ್ರೀ ಪುಟ್ಟಸ್ವಾಮಿಯವರನ್ನು ಸೋಲಿಸಿ ಚುನಾಯಿತರಾದುದಕ್ಕೆ ಈ ಸಂಬಂಧದಲ್ಲಿ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಚಿನ್ನಸ್ವಾಮಿಯವರು ಚುನಾವಣಾ ಟ್ರಿಬ್ಯುನಲ್ ಅಧಿಕಾರಿಗಳಾದ ಶ್ರೀ ಶೇಷಾದ್ರಿಯವರ ಮುಂದೆ ನಿನ್ನೆ ಒಂದು ತಕರಾರುಅರ್ಜಿಯನ್ನು ಸಲ್ಲಿಸಿ, ಚುನಾವಣೆಯು ಅಕ್ರಮವೆಂದೂ, ಅನೇಕ ಅನ್ಯಾಯಗಳು ನಡೆದಿವೆಯೆಂದೂ ಆದ್ದರಿಂದ ಅದನ್ನು ರದ್ದುಮಾಡಬೇಕೆಂದೂ ಕೋರಿರುತ್ತಾರೆ.

ಟೆನಿಸ್ ಪಂದ್ಯ

ನಗರದ ಕಾಸ್ಮೋಪಾಲಿಟನ್ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಟೆನಿಸ್ ಪಂದ್ಯದಲ್ಲಿ ನಿನ್ನೆ ಮದರಾಸಿನ ಪಿ. ಎಸ್. ಶೇಷಾದ್ರಿಯವರು ವಿಷ್ಣುಮೋಹನರವರನ್ನು ಸಿಂಗಲ್ಸ್‌ನಲ್ಲಿ ಸೋಲಿಸಿ ವಿಜಯಗಳಿಸಿದರು. ಮೊನ್ನೆ ನಡೆದ ಡಬ್ಬಲ್ ಫೈನಲ್ಸ್‌ನಲ್ಲಿ ಮದ್ರಾಸಿನ ಪಿ. ಎಸ್. ಶೇಷಾದ್ರಿ ಮತ್ತು ವಿಷ್ಣುಮೋಹನರವರು ಮೈಸೂರಿನ ಬಿ. ಎಲ್. ರಾಮರಾವ್ ಮತ್ತು ಮಲ್ಲಯ್ಯನವರನ್ನು ಸೋಲಿಸಿದರು.

ಅಗ್ನಿ ಪ್ರಮಾದ

ನಿನ್ನೆ ಸಂಜೆ ೪-೩೦ಗಂಟೆ ಸಮಯದಲ್ಲಿ ವಿದ್ಯುಚ್ಛಕ್ತಿ ಪ್ರಮಾದದಿಂದ ಅಶೋಕಾ ರಸ್ತೆಯಲ್ಲಿರುವ ಶ್ರೀ ವಜ್ರನಾಭಯ್ಯನವರ ಅಂಗಡಿಗೆ ಬೆಂಕಿ ತಗುಲಿತು. ವಿಷಯವು ತಿಳಿದೊಡನೆಯೇ ಅಗ್ನಿಶಮನ ದಳದವರು ಸ್ಥಳಕ್ಕೆ ಧಾವಿಸಿ ಕೂಡಲೇ ಬೆಂಕಿಯನ್ನು ಆರಿಸಿದರು. ಯಾವ ನಷ್ಟವೂ ಸಂಭವಿಸಲಿಲ್ಲವೆಂದು ಹೇಳಲಾಗಿದೆ.

ಚುನಾವಣೆಗಳಲ್ಲಿ ಗೌರವದಿಂದ ವರ್ತಿಸಿ

ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಕಾಂಗ್ರೆಸ್ ಧ್ಯೇಯಗಳು ಜನತೆಗೆ ತಿಳಿಯುವಂತೆ ಮಾಡಬೇಕು, ಎ. ಐ. ಸಿ. ಸಿ. ಪ್ರತಿನಿಧಿಗಳ ಚುನಾವಣೆ ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಗೆ ಗೌರವ ತರುವಂಥ ರೀತಿಯಲ್ಲಿ ವರ್ತಿಸಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ಸೂಚನೆಯಿತ್ತಿದ್ದಾರೆ.

ಮೈಸೂರಿನ ಕನ್ಯಾಪಹಾರ ಮೊಕದ್ದಮೆ

ಮೈಸೂರು ೨೨

ರಾಜಧಾನಿಯ ಕಿಲ್ಲೆ ಮೊಹಲ್ಲಾ ರಾಜಾರಾಂ ಅಗ್ರಹಾರದಲ್ಲಿರುವ ಪುರಸಭಾ ಮಾಜಿ ಆಫೀಸ್ ಇನ್‌ಸ್ಪೆಕ್ಟರ್ ಶ್ರೀ ರಂಗನಾಥ್‌ರವರ ಪುತ್ರಿ ಶ್ರೀಮತಿ ಇಂದಿರಾದೇವಿ ಎಂಬುವರನ್ನು ಚಾಮರಾಜಮೊಹಲ್ಲಾದಲ್ಲಿರುವ ಸಂಗೀತ ಮತ್ತು ನೃತ್ಯ ಶಿಕ್ಷಕರೆಂದು ಹೇಳುತ್ತಿದ್ದ ಶ್ರೀ ಎ ಜಾರ್ಜ್ ಎಂಬುವರು ೨೩-೪-೫೨ ನೇ ದಿನ ಅಪಹರಿಸಿಕೊಂಡು ಹೋಗಿದ್ದರೆಂಬ ಆಪಾದನೆಯ ಮೊಕದ್ದಮೆಯಲ್ಲಿ ನಿನ್ನೆ ನಗರನ್ಯಾಯಾಧೀಶರು ಅವರನ್ನು ಖುಲಾಸೆಮಾಡಿದ್ದಾರೆ.

ಹುಡುಗಿ ಇಂದಿರಾದೇವಿಯು ಕೋರ್ಟಿನ ಮುಂದೆ ತನಗೆ ೧೯ ವರ್ಷ ವಯಸ್ಸಾಗಿದೆಯೆಂದೂ, ತಾನು ಸ್ವತಂತ್ರಳಾಗಿ ಬಂದಿದ್ದೇನೆಂದೂ, ತಿಳಿಸಿ, ಆಪಾದಿತನ ಕಡೆಯೇ ಹೇಳಿಕೆಯನ್ನಿತ್ತಳು. ಆದ ಮೇಲೆ ನ್ಯಾಯಾಧೀಶರು ಅಪರಾಧಿಯನ್ನು ಬಿಡುಗಡೆ ಮಾಡಿದರು. ವೈದ್ಯ ಪರೀಕ್ಷೆಯಲ್ಲಿ ಆಕೆಯು ಮೇಜರ್ ಆಗಿರುವಳೆಂದೂ, ಗರ್ಭಿಣಿಯೆಂದು ಕೋರ್ಟಿಗೆ ಮಂದಿಯಾಗಿತ್ತು.

ಆಹಾರ ಹತೋಟಿ ರದ್ದಾಗಬೇಕೆಂದು ಕಾಂಗ್ರೆಸ್ ಮನವಿ

ಭಾರತದಲ್ಲಿ ಕ್ರಮೇಣ ಆಹಾರ ಹತೋಟಿಯನ್ನು ತೆಗೆದುಹಾಕಲು ಕೇಂದ್ರಸರ್ಕಾರವು ಕಾರ್ಯಕ್ರಮ ಕೈಗೊಳ್ಳಬೇಕೆಂದು ಸೂಚಿಸುವ ನಿರ್ಣಯವನ್ನು ಬೊಂಬಾಯಿನ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ಮಾಡಿದೆ. ಅದರ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲ್‌ರವರು ಕೇಂದ್ರಸರ್ಕಾರದ ಈಗಿನ ಆಹಾರ ನೀತಿಯನ್ನು ಟೀಕಿಸಿ, ಆಹಾರ ಹತೋಟಿಯು ಇನ್ನು ೧೦ ವರ್ಷ ಮುಂದುವರೆದರೆ ದೇಶವು ಅಧೋಗತಿಗೆ ಬರುವುದೆಂದೂ, ಆದ್ದರಿಂದ ಅದನ್ನು ತೆಗೆದುಹಾಕುವಂತೆ ಕಾಂಗ್ರೆಸ್ಸಿಗರು ಶ್ರಮಿಸಬೇಕೆಂದೂ ಮನವಿಮಾಡಿದ್ದಾರೆ.

ಈಗ ಸರ್ಕಾರವು ಅನುಸರಿಸುತ್ತಲಿರುವ ನೀತಿಯಿಂದ ೫೦ ವರ್ಷಗಳಾದರೂ ಹತೋಟಿ ತೆಗೆಯಲು ಸಾಧ್ಯವಿಲ್ಲ. ದಕ್ಷಿಣಭಾರತದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಅಧಿಕಆಹಾರ ಬೆಳೆಗೆ ವೆಚ್ಚಮಾಡಿದಾಗ್ಯೂ ಪ್ರಯೋಜನವಾಗಿಲ್ಲವೆಂದು ಹೇಳಿರುತ್ತಾರೆ.

ಭೂದಾನ ಯಜ್ಞ

ಮೈಸೂರು ೨೨

ಮೈಸೂರು ಸರ್ವೋದಯ ಸಮಾಜ ಆಶ್ರಯದಲ್ಲಿ ೨೪ನೇ ತಾರೀಖು ಸೋಮವಾರ ಸಂಜೆ ೬ ಗಂಟೆಗೆ ಸದ್ವಿದ್ಯಾಪಾಠಶಾಲೆಯಲ್ಲಿ ಅಖಿಲ ಭಾರತ ಸರ್ವ ಸೇವಾ ಸಂಘದ ಕಾರ್ಯದರ್ಶಿ ಶ್ರೀ ವಲ್ಲಭಸ್ವಾಮಿಯವರು ಆಚಾರ್ಯ ವಿನೋಬಭಾವೆಯವರು ಪ್ರಾರಂಭಿಸಿರುವ ಭೂದಾನ ಯಜ್ಞದ ವಿಷಯವಾಗಿ ಉಪನ್ಯಾಸ ಮಾಡುತ್ತಾರೆ. ಬೆಳಗುಂದ ಶ್ರೀ ಬಿ. ನಾರಾಣಪ್ಪನವರು ಅಧ್ಯಕ್ಷತೆ ವಹಿಸುವರು.

ಪಾಲಾರ್ ನದಿ ನೀರಿನ ಬಗ್ಗೆ ಮೈಸೂರು-ಮದರಾಸಿಗೆ ವ್ಯಾಜ್ಯ

ಮೈಸೂರಿನಲ್ಲಿ ಹುಟ್ಟಿ ಮದರಾಸಿನ ಉತ್ತರ ಆರ್ಕಾಟ್ ಮತ್ತು ಚಂಗಲ್‌ಪೇಟೆ ಜಿಲ್ಲೆಗಳಲ್ಲಿ ಹಾದು ಹಾಯುತ್ತಿರುವ ಪಾಲಾರ ನದಿಯ ನೀರಿನ ಮತ್ತು ಉಪಯೋಗದ ಬಗ್ಗೆ ಮೈಸೂರು ಮತ್ತು ಮದರಾಸ್ ಸರ್ಕಾರಗಳಿಗೆ ಉಂಟಾಗಿರುವ ವಿವಾದವನ್ನು ತನಿಖೆನಡೆಸಲು ಸಮಿತಿಯೊಂದನ್ನು ರಚಿಸಬೇಕೆಂದು ಪಾರ್ಲಿಮೆಂಟಿನ ಮೂರು ಮಂದಿಸದಸ್ಯರು ಪ್ರಧಾನಿಯವರಿಗೆ ಮನವಿ ಮಾಡಿದ್ದಾರೆ. ಮೈಸೂರು ಸರ್ಕಾರದವರು ಒಪ್ಪಂದಕ್ಕೆ ವಿರುದ್ಧವಾಗಿ ಪಾಲಾರ್ ನದಿಯ ನೀರನ್ನು ಪಡೆದು ಮದರಾಸಿಗೆ ನೀರಿಲ್ಲದಂತೆ ಮಾಡಿರುವರೆಂದು ಆಪಾದಿಸಲಾಗಿದೆ.

ದಕ್ಷಿಣ ಆಫ್ರಿಕ ಪ್ರಶ್ನೆಯ ಪರಿಶೀಲನಾ ಸಮಿತಿ

ದಕ್ಷಿಣ ಆಫ್ರಿಕ ವರ್ಣಭೇಧ ನೀತಿಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಬೇಕೆಂಬ ಸಲಹೆಯನ್ನು ವಿಶ್ವಸಂಸ್ಥೆಯ ೬೦ ರಾಷ್ಟ್ರಗಳ ವಿಶೇಷ ರಾಜಕೀಯ ಸಮಿತಿಯಲ್ಲಿ ಅನುಮೋದಿಸಲಾಯಿತು.

ಈ ನಿರ್ಣಯಕ್ಕೆ ದಕ್ಷಿಣ ಆಫ್ರಿಕಾ ಮನ್ನಣೆ ಕೊಡುವುದಿಲ್ಲವೆಂದು ತಿಳಿಸಿದೆ.

ಕರಡಿಗಳ ಬೇಟೆಗೆ ನಿಷೇಧ

ಸ್ಪೇನಿನಲ್ಲಿ ಇನ್ನು ೫ ವರ್ಷಕಾಲ ಕರಡಿ ಮತ್ತು ಕಾಡು ಮೇಕೆಗಳನ್ನು ಕೊಲ್ಲಬಾರದೆಂದು ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಫರೂಕರ ಸಾಲ ಆಸ್ತಿಯ ಮೂರರಷ್ಟು

ಈಜಿಪ್ಟಿನ ಮಾಜಿ ದೊರೆ ಫರೂಕರ ವರ್ಷಾದಾಯ ೬೫೦೦೦ ಪೌಂಡುಗಳು ಅವರ ಭೂಮಿಯ ಬೆಲೆ ೬ ಕೋಟಿ ಪೌಂಡುಗಳೆಂದು ಅಂದಾಜುಮಾಡಲಾಗಿದೆ.

ಫರೂಕರು ಅಪೂರ್ವ ಆಭರಣ, ಅಂಚೆಚೀಟಿ ಸಂಗ್ರಹಣೆ ಮುಂತಾದುವಕ್ಕೆ ಪ್ರತಿವರ್ಷ ಒಂದು ಕೋಟಿ ಪೌಂಡುಗಳನ್ನು ವೆಚ್ಚಮಾಡುತ್ತಿದ್ದರಂತೆ. ಅವರ ಆಸ್ತಿಪಾಸ್ತಿಗಳನ್ನು ನೋಡಿಕೊಳ್ಳಲು ನೇಮಿಸಿರುವ ಅಧಿಕಾರಿಗಳು ಫರೂಕರ ಸಾಲ ಮುಂತಾದವನ್ನು ಪರಿಶೀಲಿಸಿ ಅವರು ಬಿಟ್ಟುಹೋಗಿರುವ ಸಾಲವು ಆಸ್ತಿಗೆ ಮೂರರಷ್ಟಿದೆಯೆಂದು ತಿಳಿಸಿದ್ದಾರೆ. ಫರೂಕರನ್ನು ಹಣಕೇಳಿದರೆ ಅವರು ಜ|| ನಗೀಬರನ್ನು ತೋರಿಸುತ್ತಾರೆ. ಅವರನ್ನು ಕೇಳಿದರೆ ವಿಚಾರಣಾಧಿಕಾರಿಗಳನ್ನು ತೋರಿಸುತ್ತಾರೆ. ಸಾಲಗಾರರೆಲ್ಲಾ ಈಗ ಅವರ ಮೇಲೆ ವ್ಯವಹಾರ ಹೂಡಲಿದ್ದಾರೆಂದು ಹೇಳಲಾಗಿದೆ.

ಕೊರಿಯಾ ಯುದ್ಧ ಖೈದಿ ಸಮಸ್ಯೆ

ಕೊರಿಯಾದಲ್ಲಿರುವ ಯುದ್ಧ ಖೈದಿಗಳ ಬಿಡುಗಡೆಯ ಬಗ್ಗೆ ಭಾರತವು ಮಂಡಿಸಿರುವ ನಿರ್ಣಯ ಬಗ್ಗೆ ವಿಶ್ವಸಂಸ್ಥೆಯ ಎಲಾ ರಾಷ್ಟ್ರಗಳೂ ಪರಿಶೀಲಿಸುತ್ತಲಿವೆ, ಭಾರತ ಪ್ರತಿನಿಧಿ ಶ್ರೀ ವಿ. ಕೆ. ಕೃಷ್ಣಮೆನನ್‌ರವರು ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಮಿ|| ಈಡನ್ ಮತ್ತು ರಷ್ಯಾ ವಿದೇಶಾಂಗ ಸಚಿವ ಮಿ|| ವಿಶಿನ್ಸ್ಕಿ ಯವರನ್ನೂ ಭೇಟಿಮಾಡಿ ವಿಚಾರ ವಿನಿಮಯ ನಡೆಸಿದರೆಂದು ಗೊತ್ತಾಗಿದೆ.

ಅಂತರಾಷ್ಟ್ರೀಯ ಸಮಾಜ ಸೇವಾ ಸಮ್ಮೇಳನ

ಡಿಸೆಂಬರ್ ೧೪ ನೇ ತಾರೀಖು ಮದರಾಸಿನಲ್ಲಿ ಅಂತರರಾಷ್ಟ್ರೀಯ ಸಮಾಜ ಸೇವಾಕರ್ತರ ಸಮ್ಮೇಳನವು ಪ್ರಾರಂಭವಾಗುತ್ತದೆ. ಭಾರತ, ಪಾಕೀಸ್ತಾನ, ಈಜಿಪ್ಟ್, ಇಸ್ರೇಲ್, ಸಿಂಹಳ ಮುಂತಾದ ರಾಷ್ಟ್ರಗಳಿಂದ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುವರು ಅಮೆರಿಕಾದಿಂದ ೧೦೦ ಜನ ಬರಲಿರುವರು.

ಭಾರತದ ಅಭಾವ ಪರಿಹಾರಕ್ಕೆ ಚೈನಾ ಸಹಾಯ

ಭಾರತದ ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯಕ್ಕಾಗಿ ಚೈನಾವು ಪುನಃ ೪,೫೧,೯೪೦ ರೂಗಳ ರೂಪದಲ್ಲಿ ಸಹಾಯವನ್ನು ನೀಡಿದೆ. ಚೀನಾ ರೆಡ್'ಕ್ರಾಸ್ ಸಂಸ್ಥೆ ಮತ್ತು ಕೆಲವು ಪ್ರಜಾಸಂಸ್ಥೆಗಳು ಈ ನಿಧಿಯನ್ನು ಭಾರತ ರೆಡ್'ಕ್ರಾಸ್ ಸಂಸ್ಥೆಗೆ ಕಳುಹಿಸಿದೆ.

ಮೈಸೂರು ಸಂಸ್ಥಾನದ ಅಭಾವ ಪ್ರದೇಶಕ್ಕೂ ಇದರಲ್ಲಿ ಭಾಗವಿದೆ.

ಅಸಿಸ್ಟೆಂಟ್ ಕಮೀಷನರ ವರ್ಗ

ಮಂಡ್ಯ ಟ್ರೆಜರಿ ಅಧಿಕಾರಿ ಶ್ರೀ ಡಿ. ಜಿ. ನಾರಾಯಣಸಿಂಗ್'ಮತ್ತು ದಾವಣಗೆರೆ ಮುನಿಸಿಪಲ್ ಕಮೀಷನರ್ ಶ್ರೀ ಮಹಮದ್ ವಜೀರ್' ಅಹಮದ್'ರವರನ್ನು ವಿಶ್ವೇಶ್ವರಯ್ಯ ನಾಲಾ ಪ್ರದೇಶದ ವಿಶೇಷಾಧಿಕಾರಿಗಳಾಗಿಯೂ, ಸಕಲೇಶಪುರದ ಸಬ್'ಡಿವಿಜನ'ಲ್ ಆಫೀಸರ್ ಶ್ರೀ ಸ್ವಾಮಿ ...ಲ್'ಅಪ್ಪಾಜಿಯವರನ್ನು ಚಿತ್ರದುರ್ಗ ಸಬ್'ಡಿವಿಜನ್ನಿಗೂ ಅಲ್ಲಿದ್ದ ಶ್ರೀ ಟಿ. ಸಿದ್ದಲಿಂಗದೇವರನ್ನು ಪಾಂಡವಪುರಕ್ಕೂ ಅಲ್ಲಿಯ ಶ್ರೀ ಬಿ. ಎಸ್' ಹನುಮಂತರಾಯರನ್ನು ಸಕಲೇಶಪುರಕ್ಕೂ ವರ್ಗಾಯಿಸಲಾಗಿದೆ.

ಭಾರತದಲ್ಲಿ ಟೈಪ್'ರೈಟರ್ ತಯಾರಿಕೆ

ಭಾರತದಲ್ಲಿ ಟೈಪ್'ರೈಟರುಗಳನ್ನು ತಯಾರಿಸಲು ಎರಡು ಕಾರ್ಖಾನೆಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿರುವುದಾಗಿ ಗೊತ್ತಾಗಿದೆ. ಈ ಕಾರ್ಖಾನೆಗಳಲ್ಲಿ ಒಂದು ಭಾರತೀಯ ಮತ್ತೊಂದು ಅಮೆರಿಕಾ ಸಂಸ್ಥೆಗಳಾಗಿವೆ. ಇವುಗಳು ವರ್ಷಕ್ಕೆ ಸುಮಾರು ೩,೨೦೦ ಟೈಪ್ರೈಟರ್ ಯಂತ್ರಗಳನ್ನು ತಯಾರಿಸುತ್ತವೆಯೆಂದು ಹೇಳಲಾಗಿದೆ. ಪ್ರಕೃತ ಭಾರತದಲ್ಲಿ ವರ್ಷಂಪ್ರತಿ ೧೮೦೦೦ ಟೈಪ್ರೈಟರುಗಳು ಬೇಕಾಗುತ್ತವೆಂದು ಗೊತ್ತಾಗಿದೆ.

ಕೈಗಾರಿಕಾಭಿವೃದ್ಧಿಗೆ ನೆರವು

ಮೈಸೂರು, ಹೈದರಾಬಾದ್, ತಿರುವಾಂಕೂರು-ಕೊಚ್ಚಿನ್ ಪ್ರಾಂತ್ಯಗಳಲ್ಲಿರುವ ಪ್ರಮುಖ ೨೬ ಕೈಗಾರಿಕೆಗಳ ಅಭಿವೃದ್ಧಿಗೆ ನೆರವು ನೀಡಲು ಕೇಂದ್ರ ಆಯೋಜನಾ ಸಮಿತಿಯು ಪರಿಶೀಲಿಸುತ್ತಲಿರುವುದಾಗಿ ಗೊತ್ತಾಗಿದೆ.

ಕೊಲೆ ಆಪಾದನೆಯಲ್ಲಿ ಬಾಲರತ್ನಂರ ಖುಲಾಸೆ

ಬೆಂಗಳೂರು ೨೨

ದೊಡ್ಡಬಳ್ಳಾಪುರದ ಶ್ರೀ ವಿ. ರಾಮಕೃಷ್ಣಯ್ಯನವರನ್ನು ಕೊಲೆಮಾಡಿದರೆಂಬ ಆಪಾದನೆಯ ಮೇಲೆ ೩ ವರ್ಷ ಶಿಕ್ಷೆಗೆ ಗುರಿಯಾಗಿದ್ದ ಅವರ ಪುತ್ರ ಶ್ರೀ ವಿ. ಬಾಲರತ್ನಂರವರನ್ನು ನಿನ್ನೆ ಹೈಕೋರ್ಟಿನವರು ಖುಲಾಸೆ ಮಾಡಿದರು. ಇತರ ಆಪಾದಿತರಾದ ಹನುಮಂತ ಮತ್ತು ಚೌಡಯ್ಯಪ್ಪರನ್ನೂ ಬಿಡುಗಡೆ ಮಾಡಲಾಯಿತು.

ಬಾಲರತ್ನರವರ ತಂದೆಗೂ ತನ್ನ ಪತ್ನಿಗೂ ಅಕ್ರಮ ಆಪ್ತ ಸಂಬಂಧ ಇದ್ದುದನ್ನು ಸಹಿಸಲಾರದೆ ಅವರು ಚೌರಿ ಮತ್ತು ಹನುಮಂತರವರ ಸಹಾಯದಿಂದ ೧೯೫೧ ನೇ ಆಗಸ್ಟ್ ತಿಂಗಳಲ್ಲಿ ಬೆಂಗಳೂರಿನ ಲಾಲಾಬಾಗಿನ ಹತ್ತಿರ ಕೊಲೆಮಾಡಬೇಕೆಂಬ ಉದ್ದೇಶದಿಂದ ತೀವ್ರಗಾಯಪಡಿಸಿದರೆಂದು ಅವರುಗಳ ಮೇಲೆ ಆಪಾದನೆ ಹೊರಿಸಲಾಗಿತ್ತು.

ತಂದೆಮಕ್ಕಳು ಸಮರಸವಾಗಿ ಇದ್ದರೆಂಬುದೂ ತಮ್ಮ ತಂದೆಯು ತಮ್ಮ ಮನೆಯಲ್ಲಿರಲು ಬಾಲರತ್ನಂರವರು ಯಾವಾಗಲೂ ಆಕ್ಷೇಪಣೆ ಎತ್ತಲಿಲ್ಲವೆಂಬುದೂ ವೇದ್ಯವಾಗಿದೆಯೆಂದೂ, ಕೃತ್ಯದ ವಿಚಾರದಲ್ಲಿ ಯಾವ ಸ್ವತಂತ್ರ ಸಾಕ್ಷ್ಯವೂ ಇಲ್ಲವೆಂದೂ ನ್ಯಾಯಾಧೀಶರುಗಳು ಅಭಿಪ್ರಾಯಪಟ್ಟಿದ್ದಾರೆ.

—ಮೈಸೂರುಪೇಟೆಧಾರಣೆ—

ತಾರೀಖು ೨೦-೧೧-೫೨

ಪಲ್ಲ	ರೂ. ಆ.	ರೂ. ಆ.
ಕಡಲೇಕಾಯಿ	೮-೦	೨೨ ೦
ಎಳ್ಳು	೭೧-೦	
ಹರಳು	೩೮	೪೪
ಹುರುಳಿ	೫೫-೪	೫೮-೮
ಹೆಸರು	೫೦-೧೦	೫೩
ಉದ್ದು	೬೫-೬	೭೧-೧೨
ಅಲಸಂದೆ	೪೨-೨	೬೭ ೪
ಹುಚ್ಚೆಳ್ಳು		
ಹೊಂಗೆಬೀಜ		
ಮೆಣಸಿನ ಕಾಯಿ	೮-೮	೧೫ ೮
ಸೀಗೇಕಾಯಿ	೪-೧	
ಬೆಲ್ಲ	೩-೪	೩-೮
ಹುಣಸೆಹಣ್ಣು		
ತೆಂಗಿನಕಾಯಿ	೧೫೧	೨೨೬

ಮೈಸೂರು ಪೌರಸಭೆಗೆ ಜೀವದಾನ

ಮೈಸೂರು ೨೨

ಮೈಸೂರು ಪುರಸಭೆಯ ಅವಧಿಯನ್ನು ಸರ್ಕಾರವು ಏಪ್ರೆಲ್ ಒಂದನೇ ತಾರೀಖಿನವರೆಗೆ ಹೆಚ್ಚಿಸಿದ್ದಾರೆ. ವಯಸ್ಕರ ಮತದಾನ ಹಕ್ಕಿನಪ್ರಕಾರ ಮತದಾರರ ಪಟ್ಟಿಯನ್ನು ಪುನರ್ವಿಮರ್ಶಿಸಿ ಅದರ ಪ್ರಕಾರ ನೂತನ ಚುನಾವಣೆ ನಡೆಯಲು ಇನ್ನು ಕಾಲಾವಕಾಶ ಕೊಡಲು ಈ ರೀತಿ ಮಾಡಲಾಗಿದೆ ಎಂದು ಗೊತ್ತಾಗಿದೆ.

ತಾಲ್ಲೂಕು ಕಛೇರಿ ಬೆಂಕಿ ಪ್ರಕರಣದಲ್ಲಿ ಇಬ್ಬರ ದಸ್ತಗಿರಿ

ಮೈಸೂರು ೨೨

ಹೆಗ್ಗಡದೇವನಕೋಟೆ ತಾಲ್ಲೂಕು ಕಛೇರಿಯ ಕಟ್ಟಡದಲ್ಲಿರುವ ಸರ್ಕಾರಿ ಆಹಾರ ಇಲಾಖೆಗೆ ಇದೇ ೮ ನೇ ತಾರೀಖು ರಾತ್ರಿ ಬೆಂಕಿಬಿದ್ದು ಅಲ್ಲಿನ ಕಾಗದ ಪತ್ರಗಳೆಲ್ಲಾ ಸುಟ್ಟುಹೋದ ಸಂಬಂಧದಲ್ಲಿ ಅಲ್ಲಿನ ಆಹಾರಾ ಶಾಖಾ ಗುಮಸ್ತರಾದ ಶ್ರೀ ಬಾಲಕೃಷ್ಣರಾಯರನ್ನು ಮತ್ತು ಹಿಂದೆ ಗೋಡೌನ್ ಗುಮಸ್ತರಾಗಿದ್ದು ಈಗ ಉಪಾಧ್ಯಾಯರಾಗಿರುವ ಶ್ರೀ ಸುಬ್ಬರಾಯರನ್ನು ಪೋಲೀಸರು ದಸ್ತಗಿರಿಮಾಡಿ ೪೩೬ ನೇ ಐ. ಪಿ. ಸಿ. ಸೆಕ್ಷನ್ ಪ್ರಕಾರ ಮೊಕದ್ದಮೆಹೂಡಿ, ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಭಾರಿ ಮೊಬಲಗಿನ ನೋಟಿನ ಚಲಾವಣೆ

೧೦೦೦, ೫೦೦, ಮತ್ತು ೧೦೦೦೦ ರೂಪಾಯಿಗಳ ಮೌಲ್ಯದ ನೋಟುಗಳನ್ನು ಪುನಃ ಚಲಾವಣೆಗೆ ತರಲು ರಿಸರ್ವ್ ಬ್ಯಾಂಕಿಗೆ ಅಧಿಕಾರಕೊಡುವ ಮಸೂದೆಯೊಂದನ್ನು ಭಾರತ ಪಾರ್ಲಿಮೆಂಟಿನಲ್ಲಿ ಮಂಡಿಸಲಾಗಿದೆ.

ವುಡ್'ಲ್ಯಾಂಡ್ಸ್

21—11—52 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ನೌಬಹಾರ್ ಹಿಂದಿ

ಭೂಮಿಕೆ:- ಅಶೋಕ್ ಕುಮಾರ್ ನಳಿನಿಜಯವಂತ್, ಕುಲ್‌ದೀಪ್.

† ಭಾರತದ ಹಿರಿಯ ಶಾಸನ ಸಭೆಗೆ ಶ್ರೀ ಎಸ್.ಜಿ. ಗೋಪಾಲಸ್ವಾಮಯ್ಯಂಗಾರ್'ರವರ ಸ್ಥಾನದಲ್ಲಿ ನ್ಯಾಯಾಂಗಸಚಿವ ಮಿ॥ ಬಿಸ್ವಾಸ್'ರವರನ್ನು ಅವಿರೋಧವಾಗಿ ಚುನಾಯಿಸಲಾಗಿದೆ.

ಅಪೇರ

21—11—52 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ವಳಯಾಪತಿ

[ತಮಿಳು]

ಪಾತ್ರ:- ಜಯಲಕ್ಷ್ಮಿ, ಶೇಖರ್, ಪುಳಿಮೂಟಿ.

ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯ ಕಛೇರಿ
ಮೈಸೂರು, ತಾ॥ 20—11—52

ನಂ. Ex. 3-128|52-53

★ಪ್ರಕಟಣೆ★

ವಿಶ್ವವಿದ್ಯಾನಿಲಯದ 1952ನೇ ಸೆಪ್ಟೆಂಬರ್ ಪರೀಕ್ಷೆಯ ನವಂಬರ್ ಕಾರ್ಡುಗಳು

ಈ ಕೆಳಗೆ ನಮೂದಿಸಿರುವ 1952 ನೇ ಸೆಪ್ಟೆಂಬರ್ ಪರೀಕ್ಷೆಗಳ ನಂಬರ್ ಕಾರ್ಡುಗಳನ್ನು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದ ಆಯಾ ಕಾಲೇಜಿನ ಮುಖ್ಯಾಧಿಕಾರಿಗಳಿಗೆ ಕಳುಹಿಸಲಾಗುತ್ತದೆ.

1952ನೇ ನವಂಬರ್ 26ನೇ ತಾರೀಖಿನೊಳಗಾಗಿ ವಿದ್ಯಾರ್ಥಿಗಳು ತಮ್ಮ ನಂಬರ್ ಕಾರ್ಡುಗಳನ್ನು ಸಂಬಂಧಪಟ್ಟ ಕಾಲೇಜು ಮುಖ್ಯಾಧಿಕಾರಿಗಳಿಂದ ಪಡೆಯಬಹುದು.

ಐ. ಎ., ಐ. ಎಸ್. ಸಿ., ಐ. ಕಾಂ., ಬಿ. ಕಾಂ., ಬಿ. ಎ., ಬಿ. ಎಸ್. ಸಿ., ಬಿ. ಎ. (ಆನರ್ಸ್) ಪ್ರಿಲಿಮಿನರಿ, ಬಿ. ಎಸ್. ಸಿ. (ಆನರ್ಸ್) ಪ್ರಿಲಿಮಿನರಿ, ಎಲ್. ಎಂ. ಪಿ., ಬಿ. ಎಲ್., ಬಿ. ಎಸ್. ಸಿ. (ಅಗ್ರಿ) ಬಿ. ಎಸ್. ಸಿ. (ಟೆಕ್ಸ್‌ಟೈಲ್), ಇಂಜನಿಯರಿಂಗ್.

ಆಜ್ಞೆ ಮೇರೆ
(ಸಹಿ) ಸಿ. ರಂಗಾಚಾರ್,
ರಿಜಿಸ್ಟ್ರಾರ್.

ಪ್ರಕಾಶಕರು:— ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 77

೨೪-೧೧-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕಾರ್ಮಿಕರಿಗೆ ಪ್ರತ್ಯೇಕ ನಿಧಿ ನಿರ್ಮಾಣ

ಎಲ್ಲಾ ಕೈಗಾರಿಕಾ ಮತ್ತು ಇತರ ಸಂಸ್ಥೆಗಳವರು ಕಾರ್ಮಿಕರಿಗಾಗಿ ಪ್ರತ್ಯೇಕ ನಿಧಿಯನ್ನು ಏರ್ಪಡಿಸುವ ವಿಷಯದಲ್ಲಿ ಕೇಂದ್ರ ಸರ್ಕಾರವು ಪ್ರಾಂತ್ಯ ಸರ್ಕಾರಗಳಿಗೆ ಸೂಚನೆಯಿತ್ತಿರುವುದಾಗಿ ಗೊತ್ತಾಗಿದೆ. ಈ ಹಣವನ್ನು ಕಾರ್ಮಿಕರ ಆಟಪಾಟಗಳ, ಪುಸ್ತಕಭಂಡಾರ ಅಲ್ಲದೆ ನೀರಿನ ಸೌಕರ್ಯ ಕ್ವಾಂಟೀನ್'ಗಳು ಮುಂತಾದುವಕ್ಕೆ ಉಪಯೋಗಿಸಬೇಕೆಂದು ತಿಳಿಸಲಾಗಿದೆ.

ಮೊದಲನೆ ವರ್ಷವು ಕೈಗಾರಿಕಾ ಸಂಸ್ಥೆಗಳು ಪ್ರತಿಯೊಬ್ಬ ಕಾರ್ಮಿಕನಿಗೂ ಒಂದು ರೂಪಾಯಿನಂತೆ ಚಂದಾ ಕೊಡಬಹುದು ಮೂರನೇವರ್ಷದಿಂದ ೮ ಆಣೆಯಂತೆ ಕೊಡಬಹುದು ಕಾರ್ಮಿಕರೇ ಅದೇ ಣ ಕೊಡುತ್ತಾರೆ.

ಗಿರಣಿ ವ್ಯವಸ್ಥಾಪಕನ ದಸ್ತಗಿರಿ

ಅಹಮದಾಬಾದಿನ ಮಾಣಿಕ್ ಚೌಕ್ ಬಟ್ಟೆ ಗಿರಣಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಕೇಶವಲಾಲ್ ಪಟೇಲ್ ಎಂಬುವರನ್ನು ಅವರ ಮನೆ ಮತ್ತು ಗಿರಣಿಯನ್ನು ೭ ಗಂಟೆಕಾಲ ಪೋಲೀಸರು ಶೋಧಿಸಿದನಂತರ, ದಸ್ತಗಿರಿ ಮಾಡಿರುತ್ತಾರೆ.

ಗಿರಣಿಯ ಸುತ್ತಲೂ ರಿಸರ್ವ್‌ಪೋಲೀಸ್ ಪಡೆಯನ್ನು ಹಾಕಿ, ಒಂದು ಲಾರಿತುಂಬ ಲೆಕ್ಕ ಪುಸ್ತಕ ಮತ್ತು ಕಾಗದಪತ್ರಗಳನ್ನು ಪೋಲೀಸರು ಕೊಂಡೊಯ್ದಿದ್ದಾರೆ. ಮ್ಯಾನೇಜರ ಮನೆಯಲ್ಲಿ ಒಂದು ಬಂದೂಕ ಒಂದು ರಿವಾಲ್ವರ್'ಸಹ ಸಿಕ್ಕಿವೆ.

ಇದೇ ಗಿರಣಿಯ ಷೇರ್'ದಾರರಾದ ಮಿ॥ ಫೊಪಟ್ಲಾಲ್ ಷಾ ಎಂಬುವರ ಕೊಲೆಯತ್ನದಲ್ಲಿ ಇವರ ದಸ್ತಗಿರಿಯಾಗಿದೆ.

ಸುಳ್ಳು ಲೆಕ್ಕಪತ್ರಗಳನ್ನು ಬರೆದು ಲಕ್ಷಾಂತರ ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿರುವುದಾಗಿ ಮಿ॥ ಫೊಪಟ್ಲಾಲ್'ರು ಮ್ಯಾನೇಜರಿಗೆ ನೋಟೀಸ್'ಕೊಟ್ಟಿದ್ದರು. ಅನೇಕ ಸಂಧಾನಗಳು ನಡೆದರೂ ಇವರಲ್ಲಿ ಒಪ್ಪಂದವಾಗಲಿಲ್ಲ. ಆದ್ದರಿಂದ ಮಿ॥ ಫೊಪಾಲ್ಲಾಲ್'ರನ್ನು ಕೊಲೆಮಾಡುವ ಒಳಸಂಚು ನಡೆದಿತ್ತೆಂದೂ ಹೇಳಲಾಗಿದೆ.

ಭಾರತ ಸೇವಕ ಸಮಾಜಕ್ಕೆ ಸೇರಕೂಡದು

ಭಾರತ ಸೇವಕ ಸಮಾಜವು ಕಾಂಗ್ರೆಸ್ ಪಕ್ಷದ ಒಂದು ಅಂಗವಾಗಿದೆ. ಆದ್ದರಿಂದ ಅದಕ್ಕೆ ತಮ್ಮ ಪಕ್ಷದವರು ಸೇರಕೂಡದೆಂದು ಪ್ರಜಾಸೋಷಲಿಸ್ಟ್ ಪಕ್ಷವು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಪ್ರಾಂತೀಯ ಭಾಷೆಗಳ ಬೆಳವಣಿಗೆ

ಭಾರತದಲ್ಲಿ ಹಿಂದೀಭಾಷೆಯನ್ನು ಯಾರ ಮೇಲೂ ಒತ್ತಾಯಪಡಿಸಬಾರದು ಎಲ್ಲಾ ಪ್ರಾಂತೀಯ ಭಾಷೆಗಳೂ ಬೆಳವಣಿಗೆ ಆಗಲೇಬೇಕೆಂದು ಪ್ರಧಾನಿ ನೆಹರೂ ಹೇಳಿದ್ದಾರೆ.

ಸುಬ್ರಹ್ಮಣ್ಯ ಭಾರತಿ ದಿನಾಚರಣೆ

ದಕ್ಷಿಣಭಾರತದ ಸುಪ್ರಸಿದ್ಧ ತಮಿಳು ಸಾಹಿತಿ ಶ್ರೀ ಸುಬ್ರಹ್ಮಣ್ಯ ಭಾರತಿ ದಿನಾಚರಣೆಯನ್ನು ನಿನ್ನೆಯ ದಿ... ...ದಿಯಾವಲ್ಲಿ ಹಿಂದೀ ಸಾಹಿತಿಗಳೆಲ್ಲರೂ ನೆರವೇರಿಸಿದರು.

ಸಾಂಸ್ಕೃತಿಕ ಪ್ರಸಾರ ಯೋಜನೆ ಕಾರ್ಯಕ್ರಮ

ಬೆಂಗಳೂರು ೨೪

ಮೈಸೂರು ಸಂಸ್ಥಾನಾದ್ಯಂತ ೨೭ನೇ ತಾರೀಖು ನಡೆಯಲಿರುವ ಸಾಂಸ್ಕೃತಿಕ ಪ್ರಸಾರ ಯೋಜನೆ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರೇ ಆದಿಯಾಗಿ ಎಲ್ಲಾ ಸಚಿವರು ನಡೆಸುವರು.

ನಂಜನಗೂಡಿನಲ್ಲಿ- ಶ್ರೀಮನ್ಮಹಾರಾಜರು ಮುಖ್ಯಮಂತ್ರಿಗಳು ಭಾಗವಹಿಸುವರು

ಹಾಸನ- ವಿದ್ಯಾಸಚಿವರು.

ಚಿಕ್ಕಮಗಳೂರು- ಸ್ಥಳೀಯ ಸಂಸ್ಥೆ ಸಚಿವರು

ಚಿತ್ರದುರ್ಗ- ಕೈಗಾರಿಕಾಸಚಿವರು

ಮಂಡ್ಯ- ರೆವಿನ್ಯೂಸಚಿವರು.

ಉಳಿದ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಕೆಲವು ಖಾಸಗಿ ಮಹನೀಯರನ್ನು ಆರಿಸುತ್ತಾರೆ.

ಮರುವಸತಿಗೆ ೪೦ ಕೋಟಿ ರೂ. ವೆಚ್ಚ

ಭಾರತದಲ್ಲಿ ಇಲ್ಲಿಯವರೆಗೆ ಪಾಕಿಸ್ತಾನದಿಂದ ಬಂದ ನಿರಾಶ್ರಿತರ ಮರುವಸತಿಗಾಗಿ ೪೦ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಾಗಿದೆಯೆಂದು ಗೊತ್ತಾಗಿದೆ.

ರಾಷ್ಟ್ರೀಯ ಪಕ್ಷಗಳ ಮನ್ನಣೆ

ಮಹಾಚುನಾವಣಾ ದೃಷ್ಟಿಯಿಂದ ದೇಶದಲ್ಲಿ ರಾಷ್ಟ್ರೀಯ ಪಕ್ಷಗಳ ಸಂಖ್ಯೆಯನ್ನು ಅದಷ್ಟು ಕಡಿಮೆ ಮಾಡುವ ವಿಷಯವನ್ನು ಪಾರ್ಲಿಮೆಂಟ್ ಗಳೊಡನೆ ಸಮಾಲೋಚನೆ ಮಾಡುತ್ತಿರುವುದಾಗಿ ಕೇಂದ್ರ ಪ್ರಧಾನ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ

ಕಾಶ್ಮೀರ ಪ್ರಶ್ನೆ

ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಪ್ರಶ್ನೆಯೇನಾದರೂ ಕೂಡಲೇ ಇತ್ಯರ್ಥವಾಗದಿದ್ದಲ್ಲಿ ಲಂಡನ್ನಿನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ರಾಷ್ಟ್ರಗಳ ಸಮ್ಮೇಳನದಲ್ಲಿ ಈ ಪ್ರಶ್ನೆಯನ್ನು ತಾವು ತರುವುದಾಗಿ ಪಾಕೀಸ್ತಾನ ಪ್ರಧಾನಿ ಖ್ವಾಜಾನಜ್ಮುದ್ದೀನರವರು ಹೇಳಿದ್ದಾರೆ.

ಪೋಲೀಸ್ ಅಧಿಕಾರಿಗಳ ಸಭೆ

ಮೈಸೂರು, ೨೪

ನಗರದ ಎಲ್ಲಾ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರುಗಳ ಸಭೆಯೊಂದು ನಿನ್ನೆಯ ದಿನ ಮೈಸೂರು ಸೆಂಟ್ರಲ್ ಪೋಲೀಸ್ ಸ್ಟೇಷನ್ನಿನಲ್ಲಿ ನಡೆಯಿತು. ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಾದ ಶ್ರೀ ಕೆ. ಎಸ್. ಕೃಷ್ಣಮೂರ್ತಿಯವರು ನಗರದ ಟ್ರಾಫಿಕ್ ಮತ್ತು ಇತರ ವಿಷಯಗಳಲ್ಲಿ ಪೋಲೀಸಿನವರ ಕರ್ತವ್ಯದ ಬಗ್ಗೆ ಅನೇಕ ಸಲಹೆಗಳನ್ನು ಇತ್ತರೆಂದು ಗೊತ್ತಾಗಿದೆ.

೨೪ಗಂಟೆಕಾಲ ಭೂಸಮಾಧಿ

ಮೈಸೂರು ೨೪

ದೊಡ್ಡಕೆರೆ ಮೈದಾನದಲ್ಲಿ ಮೊನ್ನೆಯ ದಿನ ಮಧ್ಯಾಹ್ನ ಭೂಸಮಾಧಿಗ ಸ್ಥರಾಗಿದ್ದ ಹಿಮಾಲಯದ ಮಹಾಋಷಿ ಸಮರ್ಥಾಕಬೀರ್‌ದಾಸರ ಶಿಷ್ಯರಾದ ಸ್ವಾಮಿ ಜಿ.ಡಿ.ಡಿ. ಶರ್ಮರವರು ನಿನ್ನೆ ಸಂಜೆ ೫ ಗಂಟೆವೇಳೆಗೆ ಸಮಾಧಿಯಿಂದ ಹೊರಕ್ಕೆಬಂದರು. ಶ್ರೀಯುತರು ೨೪ ಗಂಟೆಗಳ ಕಾಲ ಸಮಾಧಿಗಸ್ಥರಾಗಿದ್ದರು. ಹೊರಕ್ಕೆ ಬಂದಾಗ ಸವಚ್ಛಕಸ್ಸದಿಂದ ಕೂಡಿದ್ದರು. ದೇಹಾಲಸ್ಯವೇನೂ ಕಾಣಬರಲಿಲ್ಲ. ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಮತ್ತು, ನಗರ ನ್ಯಾಯಾಧೀಶರಾದ ಶ್ರೀ ಶಿವನಂಜಯ್ಯನವರು ಈ ಸಮಯದಲ್ಲಿ ಹಾಜರಿದ್ದರು.

ಕಾಡುಮೃಗಗಳ ರಕ್ಷಣಾ ಸಮಿತಿ

ಮೈಸೂರು- ೨೪

ಕೇಂದ್ರದ ಸರ್ಕಾರ ನೇಮಿಸಿರುವ ಕಾಡುಮೃಗಗಳ ರಕ್ಷಣಾ ಸಮಿತಿ ಸಭೆಯು ನಾಳೆ ೧೧ ಗಂಟೆಗೆ ಲಲಿತಮಹಲ್ ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಇರಾಕಿನಲ್ಲಿ ಭಾರಿ ಗಲಭೆ

೧೩ ಜನರು ಸತ್ತರು., ನೂರಾರು ಮಂದಿಗೆ ಗಾಯ

ಇರಾಕಿನ ರಾಜಧಾನಿಯಾದ ಬಾಗದಾದಿನಲ್ಲಿ ನಿನ್ನೆ ೨೦ ಸಾವಿರ ಮಂದಿ ಶಸ್ತ್ರಸಜ್ಜಿತ ಪ್ರದರ್ಶನಕಾರರು ಅಮೆರಿಕ ಮತ್ತು ಬ್ರಿಟನ್ ಮತ್ತು ಸ್ಥಳೀಯ ಸರ್ಕಾರ ಕಛೇರಿಗಳ ಮೇಲೆ ಧಾಳಿ ನಡೆಸಿ ಗಲಭೆಮಾಡಿ ಅನೇಕ ಪ್ರದೇಶಗಳಿಗೆ ಬೆಂಕಿ ಇಟ್ಟರೆ ದೂ ಪೋಲೀಸರೂ ಪ್ರದರ್ಶನಕಾರರ ಗೂ ಘರ್ಷಣೆ ಆಗಿ ಗುಂಡುಹಾರಿಸಿದ್ದರಿಂದೂ ಗಲಭೆಯಲ್ಲಿ ೧೩ ಜನರು ಸತ್ತರು ಮತ್ತು ನೂರಾರು ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ, ಪ್ರಧಾನಿ ಮುಸ್ತಾಫಾಲುಮರಿಯವರ ಸರ್ಕಾರ ರಾಜೀನಾಮೆ ಇತ್ತು, ಮಹಾ ಚುನಾವಣೆ ನಡೆಯಬೇಕೆಂದು ಸಾರ್ವಜನಿಕರು ... ವ ಮುಷ್ಕರವೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಈಗ ಮುಸ್ತಾಫಾ ಸರ್ಕಾರ ರಾಜೀನಾಮೆ ಇತ್ತಿದೆ.

ಬೀಡಿ ಕೆಲಸಗಾರರ ತೊಂದರೆ

ಭಾರತದಿಂದ ಬೀಡಿ ಎಲೆಗಳ ಆಮದಿಗೆ ಅನುಮತಿಯಿತ್ತು ತಮ್ಮ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕೆಂದು ಪೂರ್ವ ಪಾಕೀಸ್ತಾನದ ಬೀಡಿಕೆಲಸಗಾರರು ಪಾಕ್ ಸರ್ಕಾರವನ್ನು ಕೋರಿದ್ದಾರೆ.

ಹಳೇವಿದ್ಯಾರ್ಥಿಗಳ ಸಂಘ

ಮೈಸೂರು ೨೩

ದೇವರಾಜ್ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಪ್ರಥಮ ಸಭೆಯು ೨೨ನೇ ತಾರೀಖು ತಹಿಸೀಲ್ದಾರ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು, ಸಂಘದ ಕಾರ್ಯಕ್ರಮಗಳನ್ನು ನಿರ್ವಹಿಸಲು ಕೆಳಕಂಡ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿತು.

ಶ್ರೀ ಹೆಚ್. ನಾಗಪ್ಪ ಅಧ್ಯಕ್ಷರು, ಎಂ. ಸೋಮಶೇಖರ್ ಉಪಾಧ್ಯಕ್ಷರು, ಆರ್ ಜಿ. ಪದಕಿ ಕಾರ್ಯದರ್ಶಿ ಮತ್ತು ಖಜಾಂಚಿ, ಬಿ ವಿ ನಾರಾಯಣ್ ಸಹಕಾರ್ಯದರ್ಶಿ.

ಮೂರನೇ ಯುದ್ಧ ತಪ್ಪದು

ಕೊರಿಯಾ ಯುದ್ಧ ಖೈದಿಗಳ ಸಮಸ್ಯೆ ಪರಿಹಾರಕ್ಕಾಗಿ ಭಾರತವು ಮಂಡಿಸಿರುವ ಸಲಹೆಗಳನ್ನು ವಿಶ್ವಸಂಸ್ಥೆಯು ಒಪ್ಪದಿದ್ದರೆ ಮೂರನೇ ಯುದ್ಧವು ತಪ್ಪದೆಂದು ಪ್ರಧಾನಿ ನೆಹರೂ ಹೇಳಿದ್ದಾರೆ.

ಪಂಚವಾರ್ಷಿಕ ಯೋಜನೆ ಬಗ್ಗೆ ಟೀಕೆ

ಪಂಚವಾರ್ಷಿಕಯೋಜನೆಯು ಕಾಂಗ್ರೆಸ್ ನೀತಿಯನ್ನು ಮಾತ್ರ ಅನುಸರಿಸುತ್ತದೆ ಭಾರತದ ಎಲ್ಲಾ ಪಕ್ಷದವರೂ ಸೇರಿ ಈ ಯೋಜನೆಯನ್ನು ತಯಾರಿಸಿಲ್ಲ ಸಾರ್ವಜನಿಕರ ಈ ಯೋಜನೆ ತಯಾರಿಕೆಯಲ್ಲಿ ಭಾಗವಹಿಸಿಲ್ಲ. ಇದರಲ್ಲಿ ಸಮಸ್ಯೆಯಿಲ್ಲ- ಯೋಜನೆಯು ಪೂರ್ತಿ ಹೊರಬಿದ್ದ ಮೇಲೆ ನಮ್ಮ ಪಕ್ಷದ ಖಚಿತವಾದ ಅಭಿಪ್ರಾಯವನ್ನು ಕೊಡಲಾಗುವುದೆಂದು ಪ್ರಜಾ ಸೋಷಲಿಸ್ಟ್ ಪಕ್ಷವು ತಿಳಿಸಿದೆ.

ಪೂರ್ವ ಬಂಗಾಳ ದಿನಾಚರಣೆ

ಭಾರತದ ನಾನಾ ಭಾಗಗಳಲ್ಲಿ ಪ್ರಜಾ ಸೋಷಲಿಸ್ಟ್, ಜನಸಂಘ, ಹಿಂದೂ ಮಹಾಸಭೆ ಮತ್ತು ಅಕಾಲಿಪಕ್ಷದವರು ಪೂರ್ವ ಬಂಗಾಳ ದಿನಾಚರಣೆಯನ್ನು ನಿನ್ನೆ ನಡೆಸಿ ಪಶ್ಚಿಮಬಂಗಾಳದಲ್ಲಿ ಅಲ್ಪ ಸಂಖ್ಯಾತರ ರಕ್ಷಣೆಮಾಡಬೇಕೆಂದು ಭಾರತಸರ್ಕಾರವನ್ನು ಕೋರುವ ನಿರ್ಣಯಮಾಡಿದರು. ಕಾಂಗ್ರೆಸ್ ಮತ್ತು ಕಮ್ಯೂನಿಸ್ಟರು ಈ ದಿನಾಚರಣೆಯಲ್ಲಿ ಭಾಗವಹಿಸಲಿಲ್ಲ.

ಡಾ| ರಾಜೇಂದ್ರಪ್ರಸಾದರಿಗೆ ದೇಹಾಲಸ್ಯ

ಡಾ| ರಾಜೇಂದ್ರಪ್ರಸಾದರಿಗೆ ಕೆಮ್ಮು ಮತ್ತು ಗಂಟಲು ನೋವಿನಿಂದ ದೇಹಾಲಸ್ಯವುಂಟಾಗಿದೆ ಇನ್ನು ಕೆಲವು ದಿವಸ ಭಾಷಣ, ಸಭೆ ಮುಂತಾದ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸುವುದಿಲ್ಲವೆಂದು ಅವರ ಪ್ರೈವೇಟ್ ಕಾರ್ಯದರ್ಶಿ ಪ್ರಕಟಿಸಿರುವರು.

ಸರ್ಕಾರಿ ಅಧಿಕಾರಿಗಳ ಮೇಲೆ ಕಾರ್ಯಕ್ರಮ

ಲಂಚನಿರೋಧ ಶಾಖೆಯ ವರದಿ

ಬೆಂಗಳೂರು ೨೪

ಸರ್ಕಾರಿವಸ್ತುಗಳ ಮತ್ತು ಹಣ ದುರುಪಯೋಗ, ಸುಳ್ಳು ಲೆಕ್ಕ ಪತ್ರ ರಚನೆ, ಲಂಚ ಸ್ವೀಕಾರ ಮುಂತಾದ ನಾನಾ ಕೃತ್ಯಗಳನ್ನು ಲಂಚನಿರೋಧ ಶಾಖೆಯವರು ಕಂಡು ಹಿಡಿದು ಅದಕ್ಕೆ ತೆಗೆದುಕೊಂಡಿರುವ ಕಾರ್ಯಕ್ರಮ ಮುಂತಾದವನ್ನು ೧೯೫೨ ನೇ ಸೆಪ್ಟೆಂಬರ್‌ವರೆಗೆ ಅಂತ್ಯವಾದ ತ್ರೈಮಾಸಿಕ ಅವಧಿಯ ವರದಿಯನ್ನು ಸರ್ಕಾರದವರು ಪ್ರಕಟಿಸಿದ್ದಾರೆ.

ಸರ್ಕಾರಿ ವಸ್ತುಗಳ ದುರುಪಯೋಗಕ್ಕಾಗಿ ಮೈಸೂರಿನಲ್ಲಿರುವ ಫರೋ ಅಲಾಯಿ ಕಾರ್ಖಾನೆಯ ಸೂಪರ್ ಇಂಟೆಂಡೆಂಟರಾದ ಶ್ರೀ ಎ. ಎಸ್. ರಾಜಗೋಪಾಲ್‌ರವರ ಕೆಲಸದಿಂದ ವಜಾಮಾಡಲಾಗಿದೆ ಲಂಚ ಸ್ವೀಕರಿಸಿದ್ದಕ್ಕೆ ಬೆಂಗಳೂರು ಜಿಲ್ಲಾ ಮತ್ತು ಸೆಷನ್ಸ್ ಕೋರ್ಟಿನ ರೆಕಾರ್ಡ್ ಕೀಪರ್ ಶ್ರೀ ನಿವಾಸರಾಯರನ್ನು ಕೆಲಸದಿಂದ ವಜಾಮಾಡಲಾಗಿದೆ

೩೦೦ ರೂ ಲಂಚ ತೆಗೆದುಕೊಂಡಿದ್ದಕ್ಕೆ ಮರಾಮತ್ ಇಲಾಖಾ ಸಬ್‌ಓವರ್ಸಿಯರ್ ಶ್ರೀ ಅಶ್ವತ್ಥನಾರಾಯಣರನ್ನು ಕೆಲಸದಿಂದ ವಜಾಮಾಡಿದೆ.

ಲಂಚ ಅಪಾದನೆ ಮೇಲೆ ರೇಷ್ಮೆ ಇಲಾಖಾ ಆಪರೇಟರ್ ಶ್ರೀ ವಿಠಲಮೂರ್ತಿಯವರ ವಜಾಆಗಿದೆ.

ಲಂಚ ಪಡೆದಿದ್ದಕ್ಕೆ ಅಕೌಂಟೆಂಟ್ ಶ್ರೀ ಸಿ. ತಮ್ಮಯ್ಯನವರನ್ನು ಕೆಲಸದಿಂದ ವಜಾ ಬೆಂಗಳೂರು ಸಿ. ಐ ಡಿ ಗೋಡಾನಿನಲ್ಲಿದ್ದ ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ದೊರೆಸ್ವಾಮಿಯವರು ಚೀಲಗಳನ್ನು ದುರುಪಯೋಗ ಪಡಿಸಿದ್ದಕ್ಕೆ ಕೆಲಸದಿಂದ ವಜಾ.

ರಾಗಿ ದುರುಪಯೋಗಕ್ಕೆ ಛಾಂಪಿಯನ್ ರೀಫ್ಸ್‌ನ ಡಿಪೋದ ಮ್ಯಾನೇಜರ್ ಶ್ರೀ ಕೃಷ್ಣೇಗೌಡರನ್ನು ಕೆಲಸದಿಂದ ವಜಾ,

೨೦ ರೂ ಲಂಚ ಪಡೆದಿದ್ದಕ್ಕೆ ಪೋಲೀಸ್ ಕಾನ್‌ಸ್ಟೇಬಲ್ ಶ್ರೀ ಹನುಮಂತರಾಯಪ್ಪ ಮತ್ತು ಗುಂಡಣ್ಣನವರವಜಾ.

ಸುಳ್ಳು ಪತ್ರನಿರ್ಮಾಣಕ್ಕಾಗಿ ಅಮಲ್ದಾರ್ ಶ್ರೀ ನರಸಿಂಹಲುರವರ ಸಂಬಳ ಬಡ್ತಿ, ಒಂದು ವರ್ಷ ಮುಂದಕ್ಕೆ ಮತ್ತು ಅವರಿಂದ ೨೦೬-೧೨-೦ ರೂ ವಸೂಲಿ

ಅಸಿಸ್ಟೆಂಟ್ ಇಂಜನಿಯರ್ ಶ್ರೀ ಬಿ ನಾಗೇಶರಾವ್‌ರವರು ಸುಳ್ಳುಲೆಕ್ಕ ಬರೆದಿದ್ದಕ್ಕೆ ೩ ವರ್ಷ ಸಂಬಳಬಡ್ತಿ, ತಡೆ ಮತ್ತು ೪೪೦-೫-೦ ವಸೂಲಿ.

ಅದೇ ಅಪಾದನೆ ಮೇಲೆ ಸಬ್ ಓವರ್ಸಿಯರು ಜಿ ಎ ಶ್ರೀನಿವಾಸರಾಯರಿಗೆ ೯೦ ರೂ. ಯಿಂದ ಅದಕ್ಕೆ ಸಂಬಳ ಇಳಿಸಲಾಯಿತು ೨ ವರ್ಷ ಕಾಲ ಸಂಬಳ ಬಡ್ತಿ ತಡೆ.

ಇದೇ ಅಪಾದನೆ ಮೇಲೆ ಸಬ್ ಇಂಜನಿಯರ್ ಶ್ರೀ ಎಂ ಎ ಸಂಪತ್‌ಕುಮಾರ್‌ರ ನಿವೃತ್ತಿ ಮತ್ತು ೨೨೨-೪-೦ ರೂ. ವಸೂಲಿ.

ಸರ್ಕಾರಿ ವಸ್ತು ಕಳುವಿನ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳದಿದ್ದದ್ದಕ್ಕೆ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಎಂ ಸಿ. ಮಲ್ಲಪ್ಪನವರ ಒಂದು ಇನ್‌ಕ್ರಿಮೆಂಟ್ ತಡೆ

ತನ್ನ ಕರ್ತವ್ಯವನ್ನು ಸರಿಯಾಗಿಪಾಲಿಸಲಿಲ್ಲವೆಂದು ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಎಸ್ ಡಿ. ಕುಮಾರ್‌ರವರಿಗೆ ಒಂದು ವರ್ಷ ಸಂಬಳ ಬಡ್ತಿ ತಡೆ.

ಲಂಚಪಡೆದಿದ್ದಕ್ಕೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಬಿ. ಎ. ಹುಚ್ಚಪ್ಪನವರಿಗೆ ೨ವರ್ಷ ಸಂಬಳ ಬಡ್ತಿ ತಡೆ

ಲಂಚಪಡೆದಿದ್ದಕ್ಕೆ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಓಬಲನರಸಯ್ಯನವರನ್ನು ಜಮೇದಾರ್ರಾಗಿ ವರ್ಗ.

ಪರ್ಮಿಟ್ ಇಲ್ಲದೆ ಮದರಾಸಿನಿಂದ ಭತ್ತ ತರಲು ಪ್ರಯತ್ನಿಸಿದ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಎಲ್. ಶರಾಫರಿಗೆ ೨ ವರ್ಷಕಾಲ ಬಡ್ತಿ ತಡೆ

ಲಂಚ ಪಡೆದಿದ್ದಕ್ಕೆ ಸಬ್ ರಿಜಿಸ್ಟ್ರಾರ್ ಆಫೀಸ್ ಹೆಡ್ ಕ್ಲಾರ್ಕ್ ಶ್ರೀ ವೆಂಕೋಜಿರಾವ್ ಮತ್ತು ಕ್ಲಾರ್ಕ್ ಸಿದ್ದಯ್ಯನವರಿಗೆ ೨ ಇನ್‌ಕ್ರಿಮೆಂಟ್ ತಡೆ

ಲಂಚಪಡೆದಿದ್ದಕ್ಕೆ ವೆಟರಿನರಿ ಇನ್ಸ್‌ಪೆಕ್ಟರ್ ಶ್ರೀ ಎಲ್ ಗುರುನಾಥರವರಿಗೆ ೨ ಇನ್‌ಕ್ರಿಮೆಂಟ್ ಮೋತಾ.

ಸೆಂಟ್ರಲ್ ಜೈಲ್ ಕಾಂಪೌಂಡಿನಲ್ಲಿರುವ ಮರಗಳನ್ನು ಕಡಿಸಿ ಸ್ವಂತಕ್ಕಾಗಿ ಉಪಯೋಗಿಸಿಕೊಂಡಿದ್ದಕ್ಕೆ ಜೈಲು ಸೂಪರಿಂಟೆಂಡೆಂಟು ಬಗ್ಗೆ ಶ್ರೀ ಅಮೀರ್‌ರವರಿಗೆ ಎಚ್ಚರಿಕೆ ಮತ್ತು ೪೮೦-೮-೦ರೂ-ವಸೂಲಿ-

ಪಾನನಿರೋಧ ಶಾಸನ ಜಾರಿಯಲ್ಲಿರುವ ಸ್ಥಳದಲ್ಲಿ ಮದ್ಯ ಮಾರಿದ್ದಕ್ಕೆ ಇಬ್ಬರು ಅರುವಾರು ಕಠಿಣಶಿಕ್ಷೆ ವಿಧಿಸಲಾಯಿತು-

ಅವಾನನ ಸಂಬಳವನ್ನು ಮಧುಗಿರಿ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಜಿ-ಆರ್. ರಂಗಸ್ವಾಮಿಯವರುವಿದ್ಯಾರ್ಥಿಗಳಿಂದ ವಸೂಲ್ ಮಾಡಿಕೊಂಡಿದ್ದಕ್ಕೆ ಎಚ್ಚರಿಕೆಕೊಡಲಾಗಿದೆ

× ೧೯೫೩ನೇ ಏಪ್ರಿಲ್ ತಿಂಗಳಿನಿಂದ ಉಸ್ಮಾನಿಯ ರೂಪಾಯಿಗಳ ಚಲಾವಣೆಯನ್ನು ರದ್ದುಗೊಳಿಸಲಾಗುವುದೆಂದು ಹೈದರಾಬಾದ್ ಅರ್ಥಿಕ ಸಚಿವರು ಹೇಳಿದ್ದಾರೆ.

ರಣಜಿತ್

21-11-52 ರಿಂದ 2 ನೇ ವಾರ

ಅನ್ಹೋನಿ ಹಿಂದಿ

ಪಾತ್ರ:—ನರ್ಗಿಸ್, ರಾಜ್‌ಕಪೂರ್, ಅಗ, ಡೇವಿಡ್, ಬದ್ರಿಪ್ರಸಾದ್, ಜಾನಕಿದಾಸ್ ಮತ್ತು ಓಂಪ್ರಕಾಶ್.

ಅಪೇರ

21—11—52 ನೇ ಶುಕ್ರವಾರದಿಂದ

ಅಮೋಘ ಪ್ರಾರಂಭ

ವಳಯಾಪತಿ

[ತಮಿಳು]

ಪಾತ್ರ:- ಜಯಲಕ್ಷ್ಮಿ, ಶೇಖರ್, ಪುಳಿಮೂಟೆ.

ವುಡ್‌ಲ್ಯಾಂಡ್ಸ್

21—11—52 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ನೌಬಹಾರ್ ಹಿಂದಿ

ಭೂಮಿಕೆ:--ಅಶೋಕ್ ಕುಮಾರ್ ನಳಿನಿಜಯವಂತ್, ಕುಲ್‌ದೀಪ್.

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:—ಹಿ. ಕಾ. ಸುಬ್ಬರಾವ್

ಮೋಹನ ಮುದ್ರಣಾಲಯ, ಮೈಸೂರು.

FOR SALE

A GOLDEN OPPOURTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights, flush-outs, taps and well, containing 6 living rooms in the main building with two out houses fetching a rent of Rs. 75/- per month.

Rs. 16,000 or near offer

No brokers–Immediate possession—No encumbrence

Enquire at :— M. NARAYANA RAO, Co c/o Tourist Bureau, Lansdowne Buildings, Mysore

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 78

೨೫-೧೧-೧೯೫೨ ನೇ ಮಂಗಳವಾರ] ★ ಸಂಪಾದಕರು:- ಜಿ. ಎಲ್. ಸ್ವಾಮಿ

ಮುಖ್ಯಮಂತ್ರಿಗಳು ಅಸ್ವಸ್ಥ

ಬೆಂಗಳೂರು ೨೫

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆಯದಿನ ನೆಲಮಂಗಲಕ್ಕೆ ಹೋದಾಗ ದಾರಿಯಲ್ಲಿ ಸ್ವಲ್ಪ ಅಸ್ವಸ್ಥರಾಗಿ ಬೆಂಗಳೂರಿಗೆ ಹಿಂತಿರುಗಿ ಬೌರಿಂಗ್ ಅಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಹಾಸನಜಿಲ್ಲೆಯ ಅವರ ಪ್ರವಾಸ ರದ್ದಾಗಿದೆ. ಆದರೆ ಮುಖ್ಯಮಂತ್ರಿಗಳು ಭಾಗವಹಿಸಬೇಕಾಗಿದ್ದ ಸಮಾರಂಭಗಳಲ್ಲಿ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಭಾಗವಹಿಸಲು ತೆರಳಿದ್ದಾರೆ.

ರೆವೆನ್ಯೂ ಬೋರ್ಡ್ ನೇಮಕವಿಲ್ಲ

ಬೆಂಗಳೂರು ೨೫

ಸಂಸ್ಥಾನದಲ್ಲಿ ರೆವೆನ್ಯೂ ಬೋರ್ಡು ಒಂದನ್ನು ರಚಿಸಲು ಪ್ರಾಥಮಿಕ ನಿರ್ಧಾರವನ್ನು ಸರ್ಕಾರದವರು ಕೈಬಿಟ್ಟಿರುವುದಾಗಿ ಗೊತ್ತಾಗಿದೆ

ಭಾರತದ ಕೊರಿಯಾ ಸಲಹೆಗೆ ಅಮೆರಿಕದ ಒಪ್ಪಿಗೆ

ಕೊರಿಯಾ ಬಿಕ್ಕಟ್ಟನ್ನು ಬಗೆಹರಿಸಲು ಭಾರತವು ಸೂಚಿಸಿರುವ ಸಲಹೆಯನ್ನು ಅಮೆರಿಕವು ಒಪ್ಪುವುದಾಗಿಯೂ, ಆದರೆ ಯುದ್ಧ ಖೈದಿಗಳನ್ನು ಬಲವಂತವಾಗಿ ಸ್ವದೇಶಕ್ಕೆ ವಾಪಸು ಕಳುಹಿಸಕೂಡದು ಮತ್ತು ಬಂದಿಗಳನ್ನು ಬಲವಂತದಿಂದ ಸ್ವದೇಶಕ್ಕೆ ಕಳುಹಿಸುವುದು ಕೂಡದೆಂದು ಪರಿಷ್ಕೃತ ಸೂಚನೆ ನೀಡಿದೆಯೆಂದೂ ಹೇಳಲಾಗಿದೆ

ಆಹಾರ ಸಬ್ಸಿಡಿ ಇಲ್ಲ

ರಾಗಿ, ಜೋಳ ಮುಂತಾದ ಧಾನ್ಯಗಳ ಮೇಲಿನ ಕಂಟ್ರೋಲನ್ನು ತೆಗೆದ ಮೇಲೆ ಬೆಲೆಯೇನಾದರೂ ಏರಿದರೆ ಕೇಂದ್ರಸರ್ಕಾರವು ಪ್ರಾಂತ್ಯ ಸರ್ಕಾರಗಳಿಗೆ ಯಾವ ರೀತಿಯಾದ ಸಬ್ಸಿಡಿಯನ್ನೂ ಕೊಡುವುದಿಲ್ಲ ವೆಂದು ತಿಳಿಸಿರುವುದಾಗಿ ಹೇಳಲಾಗಿದೆ

ಪಂಚವಾರ್ಷಿಕಯೋಜನೆ ವರದಿ

ಭಾರತ ಸರ್ಕಾರವು ತಯಾರಿಸಿರುವ ಪಂಚವಾರ್ಷಿಕ ಯೋಜನೆಯ ವರದಿಯು ಇನ್ನು ೧೫ ದಿನಗಳೊಳಗಾಗಿ ಪ್ರಕಟವಾಗುವುದೆಂದು ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಹೇಳಿದ್ದಾರೆ.

ಪಂಚವಾರ್ಷಿಕ ಯೋಜನೆಯಲ್ಲಿ ಲಕ್ಕವಳ್ಳಿ ಯೋಜನೆ

ಬೆಂಗಳೂರು ೨೫

ಕೇಂದ್ರ ಸರ್ಕಾರದ ಪಂಚವಾರ್ಷಿಕ ಯೋಜನೆಯಲ್ಲಿ ಮೈಸೂರಿನ ಲಕ್ಕವಳ್ಳಿ ಸೀರಾಮ ಯೋಜನೆಯನ್ನು ಸೇರಿಸಲು ಆಯೋಜನಾ ಸಮಿತಿಯು ಒಪ್ಪಿದೆಯೆಂದೂ, ಈ ರಾಮ ಕಾಮಗಾರಿಗಳಿಗಾಗಿ ಕೇಂದ್ರವು ೨೫ ಲಕ್ಷ ರೂ. ಸಹಾಯ ಮಾಡಿದೆಯೆಂದೂ ದೆಹಲಿಯಿಂದ ಹಿಂತಿರುಗಿದ ಚೀಫ್ ಇಂಜನಿಯರ್ ಶ್ರೀ ಕೆ ಎಸ್. ಗಂಗಾಧರರವರು ತಿಳಿಸಿರುತ್ತಾರೆ.

ಸಿಂಹಳಕ್ಕೆ ಮಹಿಳಾಸಂಗೀತಗಾರರು ಬರಕೂಡದು

ಭಾರತದಿಂದ ಸಿಂಹಳಕ್ಕೆ ಮಹಿಳಾ ಸಂಗೀತಗಾರರು ಬರುವುದಕ್ಕೆ ಅದರ ಸರ್ಕಾರವು ಇಷ್ಟಪಡುವುದಿಲ್ಲವೆಂದೂ. ಆದರೆ ಪುರುಷ ಸಂಗೀತಗಾರರು ತಕ್ಕ ಆಧಾರವನ್ನು ಪಡೆದು ಬರಲು ಅವಕಾಶ ಮಾಡಿಕೊಡಲಾಗುವುದೆಂದು ಅಲ್ಲಿಯ ಅಧಿಕಾರಿಗಳು ತಿಳಿಸಿದ್ದಾರೆ

ದಕ್ಷಿಣಆಫ್ರಿಕ ಸರ್ಕಾರದ ಬೆದರಿಕೆ

ದಕ್ಷಿಣ ಆಫ್ರಿಕಾ ಸರ್ಕಾರದ ವರ್ಣಭೇದ ನೀತಿಯನ್ನು ತನಿಖೆ ನಡೆಸಬೇಕೆಂಬ ವಿಶ್ವಸಂಸ್ಥೆಯ ನಿರ್ಣಯವನ್ನು ಆದರ ಸರ್ಕಾರವು ತಿರಸ್ಕರಿಸುವುದೆಂದೂ, ತನ್ನ ದೇಶದ ಒಳಾಡಳಿತದ ವಿಷಯಗಳಲ್ಲಿ ವಿಶ್ವಸಂಸ್ಥೆಯು ತಲೆಹಾಕುವುದಾದರೆ ಆ ಸಂಸ್ಥೆಯನ್ನು ತ್ಯಜಿಸುವ ವಿಷಯವನ್ನು ತಮ್ಮ ಸರ್ಕಾರವು ಪರಿಶೀಲಿಸುವುದೆಂದೂ ಅದರ ಸಚಿವರು ಬೆದರಿಕೆ ಹಾಕಿದ್ದಾರೆ

ಸರ್ಕಾರದಮೇಲೆ ಅವಿಶ್ವಾಸ

ಪಾಕೀಸ್ಥಾನದಲ್ಲಿ ನಾಜಿಮುದ್ದೀನ್ ಸರ್ಕಾರದ ಮೇಲೆ ರಾಜ್ಯದ ಜನರಿಗೆ ವಿಶ್ವಾಸವಿಲ್ಲವೆಂದು ಜಿನ್ನಾ ಅವಾಮಿ ಮುಸ್ಲಿಂಲೀಗಿನ ಹೆಚ್ ಎಸ್ ಸುಹ್ರವರ್ದಿ ಯವರು ಹೇಳಿದ್ದಾರೆ

ಕಾಶ್ಮೀರದಲ್ಲಿ ಸತ್ಯಾಗ್ರಹ

ಕಾಶ್ಮೀರವು ಭಾರತಕ್ಕೆ ಪೂರ್ಣವಾಗಿ ಸೇರುವವರೆಗೆ ಅಲ್ಲಿಯ ಪ್ರಜಾಪರಿಷತ್ ದೇಶವ್ಯಾಪಕ ಸತ್ಯಾಗ್ರಹ ನಡೆಸುವುದೆಂದು ಆ ಪಕ್ಷದ ಅಧ್ಯಕ್ಷರು ತಿಳಿಸಿದ್ದಾರೆ

ಕಾಡುಮೃಗಗಳ ಕೊಲೆ ನಿಲ್ಲಬೇಕು

ಶ್ರೀಮನ್ಮಹಾರಾಜರ ಮನವಿ

ಮೈಸೂರು ನ ೨೫

ಕೇಂದ್ರಸರ್ಕಾರದಿಂದ ರಚಿಸಲ್ಪಟ್ಟಿರುವ ಕಾಡುಮೃಗಗಳ ರಕ್ಷಣಾ ಸಲಹಾ ಸಮಿತಿಯು ಸಭೆಗೆ ಈದಿನ ಬೆಳಗ್ಗೆ ೧೧ ಗಂಟೆಗೆ ಲಲಿತಮಹಲ್ ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಬೊಂಬಾಯಿ, ಬಂಗಾಳ, ಮದರಾಸ್, ಒರಿಸ್ಸಾ, ಅಜ್ಮೀರ್, ಹೈದರಾಬಾದ್, ತಿರುವಾಂಕೂರು, ಕೊಡಗು, ರಾಜಸ್ಥಾನ ಮುಂತಾದ ಸಂಸ್ಥಾನದ ಮುಖ್ಯ ಅರಣ್ಯಾಧಿಕಾರಿಗಳು, ಭಾವನಗರದ ಶ್ರೀ ಧರ್ಮಕುಮಾರ್ ಸಿಂಗಜಿ, ಮೊದಲಾದ ೨೪ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಸಚಿವ ಶ್ರೀ ಟಿ. ಚನ್ನಯ್ಯ, ಶಾಸನಸಭಾಧ್ಯಕ್ಷ ಶ್ರೀ ಹೆಚ್. ಸಿದ್ದಯ್ಯ ಶ್ರೀನ್ಯಾಯಮೂರ್ತಿ ಶ್ರೀ ಮೇದಪ್ಪ, ಶ್ರೀ ಹೆಚ್. ಸಿ. ದಾಸಪ್ಪ, ಶ್ರೀ ಎ. ಕೃಷ್ಣಮೂರ್ತಿರಾವ್ ಮುಂತಾದ ಹಲವಾರು ಗಣ್ಯ ರುಹನೀಯರುಗಳೂ ದಯಮಾಡಿಸಿದ್ದರು.

ಕೇಂದ್ರಸರ್ಕಾರದ ಮುಖ್ಯ ಅರಣ್ಯಾಧಿಕಾರಿಗಳು ಮತ್ತು ಸಮಿತಿಯ ಉಪಾಧ್ಯಕ್ಷರೂ ಆದ ಶ್ರೀ ಎಂ. ಡಿ. ಚತುರ್‌ವೇದಿಯವರು ಸ್ವಾಗತಭಾಷಣಮಾಡಿ, ಭಾರತದ ಅರಣ್ಯ ಮೃಗಗಳ ರಕ್ಷಣಾ ಅವಶ್ಯಕತೆಯನ್ನು ತಿಳಿಸಿದರು. ಶ್ರೀಮನ್ಮಹಾರಾಜರವರ ಪ್ರಶಂಸೆಯನ್ನು ಮಾಡಿ ಅವರು ಕಾಡುಮೃಗಗಳ ರಕ್ಷಣಾ ಪುರುಷರೆಂದು ತಿಳಿಸಿದರು.

ಶ್ರೀಮನ್ಮಹಾರಾಜರವರು ೫೦ ನಿಮಿಷಗಳ ಕಾಲ ದೀರ್ಘಭಾಷಣಮಾಡಿ, ದೇಶದ ಅರಣ್ಯ ಮತ್ತು ಕಾಡುಮೃಗಗಳ ರಕ್ಷಣಾ ಅವಶ್ಯಕತೆಯನ್ನು ಒತ್ತಿಹೇಳಿದರು. ಅನೇಕ ದುಷ್ಕರಾಮಿಗಳಿಂದ ಈಗ ನಾಶವಾಗಿ, ಉಳಿದಿದ್ದ ಕಾಡುಮೃಗಗಳೂ ಸಹ ಕೊಲೆ ಮಾಡಲ್ಪಟ್ಟಿವೆ, ಇದೇ ರೀತಿ ಮುಂದುವರೆದರೆ ಮುಂದೆ ಕಾಡುಮೃಗಗಳೇ ಇಲ್ಲದಂತಾಗುವುದು ಈ ತರಹ ಕೊಲೆಯನ್ನು ಕೂಡಲೇ ನಿಲ್ಲಿಸಬೇಕು ಅದಕ್ಕೆ ಪ್ರತಿಸಂಸ್ಥಾನದವರೂ ಕೇಂದ್ರ ದೊಡನೆ ಸಹಕರಿಸಿ ಆ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು. ೧೯೦೪ ರಲ್ಲಿ ನೇಪಾಳದಲ್ಲಿ ಪುರಾತನ ಪ್ರಸಿದ್ಧವಾದ ಒಂದು ಕೊಂಬಿನ ಮೃಗಗಳು ಸಾವಿರಾರು ಇದ್ದು ೧೯೪೯ ರಲ್ಲಿ ಕೇವಲ ೫೦ ಮಾತ್ರ ಇದ್ದವು ಉತ್ತರಭಾರತದಲ್ಲಿ ಸಾವಿರಾರು ಹುಲಿಗಳು ಇದ್ದು ೧೯೫೦ ರಲ್ಲಿ ಕೇವಲ ೩೦೦ ಹುಲಿಗಳು ಮಾತ್ರ ಉಳಿದಿವೆಯೆಂದು ತಿಳಿಸಲಾಗಿದೆ.

ಕಾಡುಮೃಗಗಳನ್ನು ರಕ್ಷಿಸಿ, ಅವುಗಳನ್ನು ಜನರು ವೀಕ್ಷಿಸಲು ರಾಷ್ಟ್ರೀಯ ಪಾರ್ಕುಗಳನ್ನು ಸ್ಥಾಪಿಸುವುದರಿಂದ ಭಾರತಕ್ಕೆ ಹೊರಗಿನಿಂದ ಜನರು ಬರಲು ಅನುಕೂಲವಾಗುವುದು ಪ್ರಾಚೀನ ಕಾಲದಲ್ಲೂ ಸಹ ಕೆಲವು ಕಾಡುಮೃಗಗಳನ್ನು ಕೊಲೆಮಾಡುತ್ತಿರಲಿಲ್ಲ ಆದರೆ ಈಗ ಮನುಷ್ಯ ತನ್ನ ದುರಾಶೆಯಿಂದ ಇಂತಹ ಕೃತ್ಯಗಳನ್ನು ನಡೆಸುತ್ತಿರುವುದು ಶೋಚನೀಯ ವಿಷಾದಕರ ಅದನ್ನು ತಡೆಗಟ್ಟಲು ಸೂಕ್ತ ಕಾನೂನನ್ನು ಮಾಡಬೇಕೆಂದು ಶ್ರೀಮನ್ಮಹಾರಾಜರವರು ತಿಳಿಸಿದರು.

ರೇಡಿಯೋ ಪ್ರಸಾರ

ಲಲಿತಮಹಲ್ ಅರಮನೆಯಲ್ಲಿ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ಕಾಡುಮೃಗಗಳ ರಕ್ಷಣಾ ಸಮಿತಿಸಭೆಯ ಇಂದಿನ ಕಾರ್ಯಕಲಾಪಗಳನ್ನು ಇದೇ ರಾತ್ರಿ, ೯-೩೦ ಗಂಟೆಗೆ ಮೈಸೂರು ಆಲ್ ಇಂಡಿಯಾ ರೇಡಿಯೋ ಕೇಂದ್ರದಿಂದ ಪುನಃಪ್ರಸಾರ ಮಾಡಲಾಗುತ್ತಿದೆ.

ಜನ್ಮದಿನ ತಪ್ಪುತಿಳಿಸಿದ್ದಕ್ಕೆ ವಜಾ

ಬೆಂಗಳೂರು ನ ೨೫

ಹುಟ್ಟಿದ ತಾರೀಖನ್ನು ತಪ್ಪಾಗಿ ತಿಳಿಸಿದ್ದಕ್ಕಾಗಿ ಚಿತ್ರದುರ್ಗ ಜಿಲ್ಲಾ ಪ್ರಾಥಮಿಕ ಶಾಲಾ ಉಪಾಧ್ಯಾಯರಾದ ಶ್ರೀಗಳಾದ ಬಿ ಸಿದ್ದಪ್ಪ, ಪಿ. ಚನ್ನಪ್ಪ, ಕೆ. ರಂಗಪ್ಪ ಎಂಬುವರನ್ನು ಕೆಲಸದಿಂದ ವಜಾ ಮಾಡಿ ಪುನಃ ಅವರಿಗೆ ಎಲ್ಲೂ ಕೆಲಸ ಕೊಡದಂತೆ ಸರ್ಕಾರ ಆಜ್ಞೆ ಇತ್ತಿದೆ.

ಮೈಸೂರಿನಲ್ಲಿ ಆಹಾರ ಸಾಗಾಣಿಕೆ ನಿರ್ಬಂಧ ಸಡಿಲ

ಕ್ರಮೇಣ ಫೇರ್ ಪ್ರೈಸ್ ಡಿಪೋಗಳ ರದ್ದು

ಲೋಕಸಭೆಯಲ್ಲಿ ಕೇಂದ್ರ ಸಚಿವರ ಹೇಳಿಕೆ

ಮೈಸೂರು ಸಂಸ್ಥಾನದಲ್ಲಿ ಆಹಾರ ಸಾಗಾಣಿಕೆ ನಿರ್ಬಂಧವನ್ನು ಈ ಸಂದಭ, ಸಂಗ್ರಹಣೆ ಆದನಂತರ ಮತ್ತಷ್ಟು ಸಡಿಲಗೊಳಿಸಲಾಗುವುದು. ಭತ್ತಸಂಗ್ರಹಣೆ ಈಗಿನ ಪದ್ಧತಿಯಲ್ಲಿ ಹಲವು ಮಾರ್ಪಾಡುಗಳಾಗಿ ಮುಂದುವರಿಯುವುದು ಕ್ರಮೇಣ ಫೇರ್‌ಪ್ರೈಸ್ ಡಿಪೋಗಳನ್ನು ರದ್ದುಮಾಡಲಾಗುವುದು ಎಂದು ಲೋಕಸಭೆಯಲ್ಲಿ ಆಹಾರಸಚಿವ ಶ್ರೀ ಕಿದ್ವಾಯ್‌ರವರು ತಿಳಿಸಿರುತ್ತಾರೆ.

ಅಂತರ ಕರ್ನಾಟಕ ವಿದ್ಯಾರ್ಥಿನಿಲಯ ಚರ್ಚಾ ಸ್ಪರ್ಧೆ

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದ ಆಶ್ರಯದಲ್ಲಿ ಮುಂದಿನ ತಿಂಗಳು ೨೧ ನೇ ತಾರೀಖು ಭಾನುವಾರ ಸಂಜೆ ಅಂತರ ಕರ್ನಾಟಕ ವಿದ್ಯಾರ್ಥಿನಿಲಯಗಳ ಚರ್ಚಾಸ್ಪರ್ಧೆಯು ನಡೆಯುವುದು. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿನಿಲಯಗಳು ಡಿಸೆಂಬರ್ ೧೨ನೇ ತಾರೀಖಿನೊಳಗಾಗಿ ೨ ರೂ. ಪ್ರವೇಶಧನದೊಡನೆ ಇಬ್ಬರ ಪ್ರತಿನಿಧಿಗಳ ಹೆಸರನ್ನು ಕಳುಹಿಸಬೇಕೆಂದ. ಗೆದ್ದವರಿಗೆ ಹೊರಗಿನಿಂದ ಬರುವವರಿಗೆ ಊಟ, ವಸತಿ ಏರ್ಪಡಿಸಲಾಗುವುದು.

ಸುಳ್ಳುಲೆಕ್ಕ ಬರೆದಿದ್ದಕ್ಕೆ ಶಿಕ್ಷೆ

ಬೆಂಗಳೂರು ೨೫

ಬೆಂಗಳೂರು ಸಿವಿಲ್ ಪ್ರದೇಶದಲ್ಲಿರುವ ೩, ೬, ಮತ್ತು ನಗರದಲ್ಲಿರುವ ೯ ನೇ ರೇಷನ್ ಡಿಪೋಗಳಲ್ಲಿ ಸುಳ್ಳುಲೆಕ್ಕ ಬರೆದಿದ್ದಕ್ಕೆ ಲೈಸೆನ್‌ದಾರರಿಗೆ ತಲಾ ೫೦೦ ಜುಲ್ಮಾನೆ ಮತ್ತು ೩ನೇ ಡಿಪೋದವರಿಗೆ ೪೦೦ ರೂ, ೪ನೇ ಡಿಪೋದವರಿಗೆ ೨೦೦ ರೂ, ೬ ನೇ ಡಿಪೋದವರಿಗೆ ೧೦೦ ರೂ ಜುಲ್ಮಾನೆಯನ್ನು ವಿಧಿಸಲಾಗಿದೆ ಎಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಶ್ರೀ ಸತೀಶಚಂದ್ರ ಉಪಮಂತ್ರಿ

ಪಾರ್ಲಿಮೆಂಟಿನ ಕಾರ‍್ಯದರ್ಶಿಯಾದ ಶ್ರೀ ಸತೀಶಚಂದ್ರರವರನ್ನು ರಾಷ್ಟ್ರಾಧ್ಯಕ್ಷರು ಕೇಂದ್ರ ಉಪಮಂತ್ರಿಯಾಗಿ ನೇಮಿಸಿದ್ದಾರೆ.

ಅಂತರರಾಷ್ಟ್ರೀಯ ಕುಟುಂಬ ಯೋಜನಾ ಸಮ್ಮೇಳನ

ಅಂತರರಾಷ್ಟ್ರೀಯ ಕುಟುಂಬ ಯೋಜನ ಸಮ್ಮೇಳನವನ್ನು ನಿನ್ನೆ ಬೊಂಬಾಯಿನಲ್ಲಿ ಭಾರತ ರಾಷ್ಟ್ರಾಧ್ಯಕ್ಷ ಡಾ॥ ರಾಧಾಕೃಷ್ಣನವರು ಉದ್ಘಾಟಿಸಿದರು. ಅಮೆರಿಕಾ, ಚೀನಾ, ಬರ್ಮಾ, ಪಾಕಿಸ್ತಾನ ಮುಂತಾದ ೧೪ ರಾಷ್ಟ್ರಗಳಾದ ಸುಮಾರು ೪೦೦ ಜನ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ.

ದೇಶಗಳ ಈಗಿನ ಜನಸಂಖ್ಯೆಯನ್ನು ಪರಿಗಣಿಸಿ ಜನಸಂಖ್ಯೆ ಬೆಳವಣಿಗೆಯನ್ನು ನಿಯತಗೊಳಿಸಲು ತೆಗೆದುಕೊಳ್ಳಬೇಕಾದ ಕ್ರಮವನ್ನು ಈ ಸಮ್ಮೇಳನ ಚರ್ಚಿಸಲಿದೆ.

ಹೈದರಾಬಾದ್ ನಾಣ್ಯ ವಿನಿಮಯ

ಹೈದರಾಬಾದಿನಲ್ಲಿ ಸುಮಾರು ೪೦ ಕೋಟಿ ಉಸ್ಮಾನಿಯ ರೂಪಾಯಿಗಳು ಚಲಾವಣೆಯಲ್ಲಿವೆ. ೧೯೫೩ ನೇ ಏಪ್ರಿಲ್ ನಂತರ ಈ ನಾಣ್ಯಗಳನ್ನು ಭಾರತ ರೂಪಾಯಿಗಳಿಗೆ ವಿನಿಮಯ ಮಾಡಿಕೊಳ್ಳಲು ತಕ್ಕ ಕಾರ‍್ಯಕ್ರಮ ತೆಗೆದುಕೊಳ್ಳಲಾಗುತ್ತದೆ ಈ ವಿನಿಮಯಕ್ಕೆ ಸುಮಾರು ೨-೩ ವರ್ಷಗಳಾಗಬಹುದೆಂದು ಹೇಳಲಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೨೪-೧೧-೫೨

ಪಲ್ಲ	ರೂ.	ಆ.	ರೂ.	ಆ.
ಕಡಲೇಕಾಯಿ	೧೩-೨		೨೧	೬
ಎಳ್ಳು	೬೮-೦		೬೩	೨
ಹುರಳು	೪೨		೪೩	೮
ಹುರುಳಿ	೫೧-		೫೬-	
ಹೆಸರು	೫೦-		೫೪	
ಅಲಸಂದೆ	೫೦-		೬೩	೧೪
ಹುಚ್ಚೆಳ್ಳು	೬೧		೬೩	೮
ಉದ್ದು	೬೬-೬		೭೦-	
ಹೊಂಗೆಬೀಜ				
ಮೆ॥ ಕಾಯಿ	೧೦-೪		೧೫	೧೦
ಹುಣಸೆಹಣ್ಣು	೪-೪			
ಸೀಗೇಕಾಯಿ	೪-೫			
ಬೆಲ್ಲ	೩-೮			
ತೆಂಗಿನಕಾಯಿ	೨೦೯		೨೧೬	

ಎಲ್. ಎಸ್. ರಾಜು ಅಪೀಲ್ ಹಾಕಲು ತಿರಸ್ಕಾರ

ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರಿಗೆ ವಿಷಪ್ರಾಶನ ಮಾಡಲೆತ್ನಿಸಿದರೆಂಬ ಆಪಾದನೆಯಮೇಲೆ ಶಿಕ್ಷೆ ವಿಧಿಸಲ್ಪಟ್ಟಿರುವ ಎಲ್. ಎಸ್. ರಾಜು, ದೇಸಪ್ಪನಾಯ್ಡು ಮತ್ತು ಅಗ್ನೀಸರವರು ಸುಪ್ರೀಂಕೋರ್ಟಿಗೆ ಅಪೀಲುಹೋಗಲು ಬೊಂಬಾಯಿ ಶ್ರೇಷ್ಠ ನ್ಯಾಯಾಲಯವು ಅನುಮತಿಯನ್ನು ತಿರಸ್ಕರಿಸಿದೆ

ವಿಶೇಷ ನ್ಯಾಯಾಲಯದಲ್ಲಿ ರಾಜು ಮತ್ತಿತರರಿಗೆ ಶಿಕ್ಷೆ ಮತ್ತು ಜುಲ್ಮಾನೆ ವಿಧಿಸಲಾಗಿತ್ತು. ಅದರ ಮೇಲೆ ಬೊಂಬಾಯಿ ಶ್ರೇಷ್ಠ ನ್ಯಾಯಾಲಯದಲ್ಲಿ ಹೂಡಲಾಗಿದ್ದ ಅಪೀಲು ತಿರಸ್ಕೃತವಾಗಿ ಶಿಕ್ಷೆ ಖಾಯಂ ಆಯಿತು.

'ಶಾಂತಿ'ಯ ಮೇಲೆ ಪ್ರಬಂಧ

ವಿಶ್ವಶಾಂತಿ ಸ್ಥಾಪಿಸಲು ಏನು ಮಾಡಬೇಕು ಎಂಬ ವಿಷಯದಲ್ಲಿ ಒಂದು ಪ್ರಬಂಧ ಸ್ಪರ್ಧೆಯನ್ನು ಅಮೆರಿಕಾದ ಲಾರೆನ್ಸ್ ಎಸ್. ಮೇಯರ್ ಸ್ಪರ್ಧೆ ಸಮಿತಿಯು ಏರ್ಪಡಿಸಿದೆ, ಭಾರತ ವಿಶ್ವವಿದ್ಯಾನಿಲಯಗಳ ಜೂನಿಯರ್ ಮತ್ತು ಸೀನಿಯರ್ ಇಂಟರ್ ಮೀಡಿಯಟ್ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಬಹುದು ಡಿಸಂಬರ್ ೩೧ ನೇ ತಾ॥ ನೊಳಗಾಗಿ ಉತ್ತಮವಾದ ಪ್ರಬಂಧವನ್ನು ಸಂಭಂಧಪಟ್ಟ ವಿಶ್ವವಿದ್ಯಾನಿಲಯವು ಕೇಂದ್ರಸರ್ಕಾರದ ವಿದ್ಯಾಸಚಿವ ಶಾಖೆಗೆ ಕಳುಹಿಸಬೇಕಾಗಿದೆ. ಪ್ರಥಮ ಬಹುಮಾನ ೧೦೦೦ ಡಾಲರು, ದ್ವಿತೀಯ ೫೦೦ ಡಾಲರು ತೃತೀಯ ೨೫೦ ಡಾಲರು.

ಭೂದಾನ ಯಜ್ಞಕ್ಕೆ ನೆರವು

ಪ್ರಜಾ ಸೋಷಲಿಸ್ಟ್ ಪಕ್ಷದ ಸದಸ್ಯರುಗಳು ತಾವು ಹೊಂದಿರುವ ಜಮೀನುಗಳಲ್ಲಿ ಸ್ವಲ್ಪಭಾಗವನ್ನು ಭೂದಾನಯಜ್ಞ ಚಳುವಳಿಗೆ ಕೊಡಬೇಕೆಂದು ಕಲ್ಕತ್ತಾದಲ್ಲಿ ನಡೆದ ಪ್ರಜಾ ಸೋಷಲಿಸ್ಟ್ ಪಕ್ಷದ ಸಭೆ ತೀರ್ಮಾನಿಸಿದೆ.

ಗೋಹತ್ಯ ನಿರೋಧ ಶಾಸನಕ್ಕೆ ಬೆಂಬಲ

ಗೋಹತ್ಯೆಯನ್ನು ನಿರೋಧಿಸಿ ಸರಕಾರವು ಶಾಸನವನ್ನು ಮಾಡಿದರೆ ಅದನ್ನು ಮುಸ್ಲಿಮರು ವಿರೋಧಿಸಕೂಡದೆಂದು ಲಾಹೋರ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷ ಮಿ॥ ಕಲೀಫಾ ಫಸಲ್‌ದಿನ್ ರವರು ಹೇಳಿಕೆಯನ್ನಿತ್ತಿದ್ದಾರೆ.

ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡಬೇಕು

ಮಕ್ಕಳ ವಿದ್ಯಾಭ್ಯಾಸಕ್ಕಿಂತ ಹೆಚ್ಚಿನ ಪ್ರಮುಖ ಕೆಲಸ ಬೇರೊಂದಿಲ್ಲ ಮಕ್ಕಳಲ್ಲಿ ಔದಾರ ಮತ್ತು ಸಹಾನುಭೂತಿ ಹೆಚ್ಚುವಂತೆ ಮಾಡುವ ವಿದ್ಯಾಭ್ಯಾಸವನ್ನು ಒದಗಿಸಬೇಕು- ಎಂದು ಭಾರತದ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ಮೊನ್ನೆ ಬೊಂಬಾಯಿನಲ್ಲಿ ಶಾಲೆಯೊಂದರ ಪ್ರಾರಂಭೋತ್ಸವದ ಕಾಲದಲ್ಲಿ ತಿಳಿಸಿರುತ್ತಾರೆ.

ದೇವರಿಗೆ ನರಬಲಿ

ಉತ್ತರ ಭಾರತದ ಥಾಕೂರ್‌ವಾರಾ ಎಂಬಲ್ಲಿನ ಒಂದು ಶಿವದೇವಾಲಯದ ಪ್ರತಿಷ್ಠಾಪನಾ ಸಂಬಂಧದಲ್ಲಿ ೧೯ ವಯಸ್ಸಿನ ಯುವಕನೊಬ್ಬನನ್ನು ಬಲಿಯಾಗಿ ಕೊಟ್ಟ ಪ್ರಸಂಗ ವರದಿಯಾಗಿದೆ. ಆ ಬಾಲಕನು ಗುಡ್ಡದಿಂದ ವಾಪಸು ಬರುತ್ತಿದ್ದಾಗ ಅಪರಿಚಿತನೊಬ್ಬನು ಅತನನ್ನು ಕರೆದುಕೊಂಡುಹೋಗಿ ಬಲಿಕೊಟ್ಟನೆಂದು ಹೇಳಲಾಗಿದೆ

ರಕ್ಷಣಾದಳದವರಿಂದ ಗೌರ್ನರ ದಸ್ತಗಿರಿ

ನೇಪಾಳದ ಗಾರ್ಡ್ ಎಂಬ ಪ್ರಾಂತ್ಯದ ಗೌರ್ನರರನ್ನು ಆ ಪ್ರಾಂತ್ಯದಲ್ಲಿ ಪ್ರಸಿದ್ಧ ಡಕಾಯಿತನಾದ ಕೆಐ ಸಿಂಗ್‌ರವರ ಬಾಹಿರ ರಕ್ಷಣಾ ದಳದವರು ದಸ್ತಗಿರಿ ಮಾಡಿರುವುದಾಗಿ ಹೇಳಲಾಗಿದೆ.

ವುಡ್‌ಲ್ಯಾಂಡ್ಸ್

21—11—52 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ನೌಬಹಾರ್ ಹಿಂದಿ

ಭೂಮಿಕೆ:—ಅಶೋಕ್ ಕುಮಾರ್ ನಳಿನಿಜಯವಂತ್, ಕುಲ್‌ದೀಪ್.

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:—ಹಿ. ಕಾ. ಸುಬ್ಬರಾವ್

ಮೋಹನ ಮುದ್ರಣಾಲಯ, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 79

೨೬-೧೧-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಬಂಗಾರುಪೇಟೆಯಿಂದ ವಿಧಾನ ಸಭೆಗೆ ಚುನಾವಣೆ

ಬೆಂಗಳೂರು ೨೬

ಕೇಂದ್ರ ಉತ್ಪಾದನಾ ಸಚಿವ ಶ್ರೀ ಕೆ. ಸಿ.ರೆಡ್ಡಿಯವರು ರಾಜೀನಾಮೆಯಿತ್ತ ವಿಧಾನಸಭೆಯ ಸ್ಥಾನಕ್ಕೆ ಉಮೇದುವಾರರನ್ನು ಚುನಾಯಿಸುವ ಬಗ್ಗೆ ಮೈಸೂರು ಪ್ರದೇಶ ಕಾಂಗ್ರೆಸ್ ಪಾರ್ಲಿಮೆಂಟರಿ ಉಪಸಮಿತಿಯವರು ತಾಲ್ಲೂಕು ಕಾಂಗ್ರೆಸ್ಸಿಗರ ಅಭಿಪ್ರಾಯವನ್ನು ಪಡೆಯಲು ಬಂಗಾರುಪೇಟೆಗೆ ತೆರಳಿದ್ದರು

ಶ್ರೀ ಕೆ.ಸಿ. ರೆಡ್ಡಿಯವರ ಸಹೋದರರಾದ ಶ್ರೀ ವೆಂಕಟರಾಮರೆಡ್ಡಿಯವರು ಈ ಸ್ಥಾನಕ್ಕೆ ಸ್ಪರ್ಧಿಸಬೇಕೆಂದೂ ಅವರೊಪ್ಪದಿದ್ದರೆ ಶ್ರೀ ರಾಜಾ ಆದಿನಾರಾಯಣ ಶೆಟ್ಟರು ಸ್ಪರ್ಧಿಸಬೇಕೆಂದು ಅಲ್ಲಿಯ ಕಾಂಗ್ರೆಸ್ಸಿಗರ ಅಭಿಪ್ರಾಯವೆಂದು ಗೊತ್ತಾಗಿದೆ.

ಗೀತಾ ಜಯಂತಿ

ಮೈಸೂರು ನ. ೨೬

ಮೈಸೂರು ಪುರಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಪುರಸಭಾಧ್ಯಕ್ಷ ಶ್ರೀ ಎ.ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿ ಪ್ರಸಾರ ಯೋಜನೆ ಅಂಗವಾಗಿ ಗೀತಾ ಜಯಂತಿ ನಡೆಯುತ್ತದೆ ಶ್ರೀ ಹೆಚ್. ಎಸ್. ರಾಘವೇಂದ್ರರಾಯರ ಭಾಷಣ, ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ಗಮಕವಾಚನ ನಡೆಯುತ್ತದೆ.

'ಮಂಗ' ನಾಗುವ ಮನುಷ್ಯ

ಸಲವತ್ತೇಳು ವಯಸ್ಸಿನ ಮನುಷ್ಯನೊಬ್ಬನು ಲಂಡನ್ನಿನಲ್ಲಿ ವೈದ್ಯಚಿಕಿತ್ಸೆಗಾಗಿ ಡಾಕ್ಟರುಗಳ ಬಳಿಗೆ ಹೋಗಿದ್ದಾನೆ. ಹಗಲೆಲ್ಲಾ ಈತನು ಮನುಷ್ಯನಂತೆಯೇ ಇರುತ್ತಾನೆ. ಆದರೆ ರಾತ್ರಿ ೨ ಗಂಟೆ ಹೊತ್ತಿಗೆ ಆತನಿಗೆ ಆವೇಶ ಬರುತ್ತದೆ ಆಗ ಆತನು ಹಾಸಿಗೆಯಿಂದ ಹಾರಿ, ಮರಗಳನ್ನು ಹತ್ತಿ, ಇಳಿದು ಹುಚ್ಚಾಪಟ್ಟೆ ಚೇಷ್ಟೆ ಮಾಡುತ್ತಾನೆ. ಮನೋಶಾಸ್ತ್ರ ನಿಪುಣರು ಈತನಿಗೆ ಚಿಕಿತ್ಸೆ ನಡೆಸುತ್ತಿದ್ದಾರೆ ನಿದ್ರೌಷಧಿಯನ್ನು ಈತನಿಗೆ ಕೊಟ್ಟರೂ ಏನೂ ಪ್ರಯೋಜನವಾಗಿಲ್ಲವೆಂತು ಹೇಳಲಾಗಿದೆ

ವರ್ಣಭೇದವಿರಕೂಡದು

ಅಮೇರಿಕದ ಅಧ್ಯಕ್ಷರಾಗಿ ಚುನಾಯಿತರಾದ ಸೇನಾಪತಿ ಐಸೆನ್ ಹೋವರು ಜನಾಂಗ ಅಥವಾ ವರ್ಣಭೇದವಿರಕೂಡದೆಂದೂ, ಅದು ಅಮೇರಿಕದ ಜೀವನಕ್ಕೆ ಸರಿಯಲ್ಲವೆಂದೂ ವರ್ಣಭೇದದ ಬಗ್ಗೆ ನಡೆದ ಚರ್ಚಾಕೂಟವೊಂದಕ್ಕೆ ಸಂದೇಶವನ್ನು ಕಳುಹಿಸುತ್ತಾ, ತಿಳಿಸಿದ್ದಾರೆ

ಈ ಚರ್ಚಾಕೂಟವನ್ನು ಯುನೈಟೆಡ್ ನೀಗ್ರೋ ಕಾಲೇಜ್ ನಿಧಿಯಿಂದ ಏರ್ಪಡಿಸಲಾಗಿತ್ತು. ಶ್ರೀಮತಿ ಎಡಿಲ್ ಸ್ಯಾಂಪ್ಸನ್ನರು ಮಾತನಾಡುತ್ತಾ, ಅಮೇರಿಕದ ದಕ್ಷಿಣದ ಸಂಸ್ಥಾನಗಳಲ್ಲಿ ವರ್ಣಭೇದವು ತುಂಬಾ ಕಡಿಮೆಯಾಗುತ್ತಿದೆ—ಎಂದು ತಿಳಿಸಿದರು.

ಅಮೇರಿಕದಲ್ಲಿ ಕಾಂಡವಾಡುತ್ತಿರುವ ಎರಡನೇ ನಾಗರೀಕ ದರ್ಜೆಯು ನಿರ್ಮೂಲವಾಗಬೇಕೆಂದು, ಅಧ್ಯಕ್ಷ ಸೇನಾಪತಿ ಐಸೆನ್‌ಹೋವರು ತಿಳಿಸಿದ್ದಾರೆ

ಭಾರತಕ್ಕೆ ಅಟ್ಲಿ

ಬ್ರಿಟನ್ನಿನ ಮಾಜಿ ಪ್ರಧಾನಿ ಮತ್ತು ಲೇಬರ್‌ಪಕ್ಷದ ನಾಯಕ ಮಿ॥ ಅಟ್ಲಿಯವರು ಜನವರಿಯಲ್ಲಿ ಪ್ರಧಾನಿ ನೆಹರೂರವರ ಅತಿಥಿಯಾಗಿ ೨ ದಿನ ದೆಹಲಿಯಲ್ಲಿದ್ದು ಅನಂತರ ರಂಗೂನಿಗೆ ತೆರಳುವರೆಂದು ಗೊತ್ತಾಗಿದೆ.

ಅಮೆರಿಕಾ ಧಾನ್ಯದಲ್ಲಿ ಕಲ್ಲುಮಣ್ಣು

ಅಮೆರಿಕಾವು ಭಾರತಕ್ಕೆ ಸಾಲಕೊಟ್ಟಿರುವ ಆಹಾರಧಾನ್ಯಗಳಲ್ಲಿ ಕಲ್ಲುಮಣ್ಣು, ಮುಂತಾದುವು ಶೇಕಡ ೨೦ ರಷ್ಟು ಇತ್ತೆಂದು ಕೇಂದ್ರ ಆಹಾರ ಉಪಮಂತ್ರಿಯವರು ಹೇಳಿದ್ದಾರೆ.

ಭೂದಾನ ಪತ್ರಕ್ಕೆ ಶುಲ್ಕವಿಲ್ಲ

ಭೂದಾನಯಜ್ಞ ಸಂಬಂಧದಲ್ಲಿ ಜಮೀನುಗಳನ್ನು ಹಂಚುವಾಗ ನಡೆಯಬೇಕಾದ ಕಾಗದ ಪತ್ರಗಳನ್ನು ರಿಜಿಸ್ಟರ್ ಮಾಡಿಸುವಾಗ ಶುಲ್ಕವನ್ನು ಕೊಡಬೇಕಾಗಿಲ್ಲವೆಂದು ಉತ್ತರಪ್ರದೇಶ ಸರ್ಕಾರವು ನಿರ್ಧರಿಸಿದೆ. ಇದನ್ನು ಶಾಸನವನ್ನಾಗಿ ಮಾಡಲು ಒಂದು ಮಸೂದೆಯನ್ನು ಶಾಸನಸಭೆಯಲ್ಲಿ ತರಲಾಗುತ್ತದೆ.

ಮುಖ್ಯಮಂತ್ರಿಗಳು ಮೈಸೂರಿಗೆ

ಬೆಂಗಳೂರು ನ. ೨೬

ಚೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈಗ ಗುಣಮುಖರಾಗಿದ್ದಾರೆ.

ನಾಳೆ ಬೇಗ್ಗೆ ಇವರು ಮೈಸೂರಿಗೆ ಆಗಮಿಸಿ ನಂಜನಗೂಡಿನಲ್ಲಿ ನಡೆಯಲಿರುವ ಸಾಂಸ್ಕೃತಿಕ ಕಾರ‍್ಯಕ್ರಮದಲ್ಲಿ ಭಾಗವಹಿಸಿ ೨೮ಕ್ಕೆ ಬೆಂಗಳೂರಿಗೆ ಹಿಂತಿರುಗುವರು ಪುನಃ ಡಿಸೆಂಬರ್ ಒಂದನೇ ತಾರೀಖು ಮೈಸೂರಿಗೆ ಬಂದು ವನ ಮೃಗಗಳ ಸಂರಕ್ಷಣಾಸಭೆಯಲ್ಲಿ, ೨ನೇ ತಾರೀಖು ಪದವೀದಾನ ಸಮಾರಂಭ ಮತ್ತು ಮಹಾರಾಜಾಕಾಲೇಜ್ ಸಂಘ ವಾರ್ಷಿಕೋತ್ಸವದಲ್ಲಿ ಭಾಗವಹಿಸಿ ೩ನೇ ತಾರೀಖು ಬೆಂಗಳೂರಿಗೆ ಹಿಂತಿರುಗುವರು.

ಕೈಗಾರಿಕಾ ಆರ್ಥಿಕ ಕಾರ್ಪೊರೇಷನ್ ತಿದ್ದುಪಡಿ ಮಸೂದೆ

ಭಾರತಕೈಗಾರಿಕಾ ಆರ್ಥಿಕ ಕಾರ್ಪೊರೇಷನ್‌ಗೆ ವಿಶ್ವಬ್ಯಾಂಕ್ ಸಾಲವನ್ನು ಕೊಡಲು ಭಾರತ ಸರ್ಕಾರವು ಅದಕ್ಕೆ ಜಾಮೀನು ಆಗಲು ಸಾಧ್ಯವಾಗುವಂತೆ ಕಾರ್ಪೊರೇಷನ್ ಕಾನೂನು ತಿದ್ದುಪಡಿ ಮಸೂದೆಯನ್ನು ಭಾರತ ಲೋಕಸಭೆಯಲ್ಲಿ ಮಂಡಿಸಲಾಗಿದೆ

ರಾಜಪ್ರಮುಖರು ಬೆಂಗಳೂರಿಗೆ

ಬೆಂಗಳೂರು ನಗರದಲ್ಲಿ ಪುಟ್ಟಣ್ಣಚೆಟ್ಟಿ ಪುರಭವನದಬಳಿ ಕಟ್ಟಿರುವ ನೂತನ ಶಿಶು ಸಂರಕ್ಷಣಾ ಕೇಂದ್ರದ ಆರಂಭೋತ್ಸವವನ್ನು ರಾಜಪ್ರಮುಖರು ನೆರವೇರಿಸಲು ಮುಂದಿನತಿಂಗಳು ೯ನೇ ತಾರೀಖು ಬೆಂಗಳೂರಿಗೆ ಹೋಗುತ್ತಾರೆ.

ಪಾಕೀಸ್ಥಾನದಲ್ಲಿ ಹಿಂದುಗಳಿಗೆ ರಕ್ಷಣೆಯಿಲ್ಲ

ಹಿಂದೂ ಅಲ್ಪಸಂಖ್ಯಾತರಿಗೆ ಪಾಕೀಸ್ಥಾನದಲ್ಲಿ ರಕ್ಷಣೆ ದೊರೆಯುತ್ತಿಲ್ಲವೆಂದು ಅಜಾದ್ ಪಾಕೀಸ್ಥಾನ ಪಕ್ಷದ ನಾಯಕ ಮಿಯಾನ್ ಇಫ್ತಿಕರುದ್ದೀನರು ಹೇಳಿದ್ದಾರೆ.

ರಾಜಪ್ರಮುಖ ಸ್ಥಾನ ರದ್ದುಗೊಳಿಸಿ

ಪೆಪ್ಸು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಸರ್ದಾರ್ ಹುಕುಂಸಿಂಗ್‌ರವರ ಅಧ್ಯಕ್ಷತೆಯಲ್ಲಿ ಪಾಟಿಯಾಲಾದಲ್ಲಿ ಸರ್ವಪಕ್ಷಗಳ ಸಭೆಯೊಂದು ನಡೆದು ಬಿ ವಿಭಾಗ ಸಂಸ್ಥಾನಗಳಲ್ಲಿ ರಾಜಪ್ರಮುಖರ ಹುದ್ದೆಗಳನ್ನು ಶೀಘ್ರದಲ್ಲಿ ರದ್ದುಗೊಳಿಸಿ ಆಡಳಿತ ಸೂತ್ರಗಳನ್ನು ಚುನಾಯಿತ ಅಧಿಪತಿಗೆ ವಹಿಸಿಕೊಡಬೇಕೆಂಬ ನಿರ್ಣಯವನ್ನು ಮಾಡಿದೆ.

ಉತ್ತಮ ಬರಹಗಾರರಿಗೆ ಗೌರವ

ಅತ್ಯುತ್ತಮ ಬರಹಗಾರರಿಗೆ ಮತ್ತು ಕಲಾವಿದರಿಗೆ ತಕ್ಕ ಗೌರವ ಧನವನ್ನು ಕೊಡಲು ಕೇಂದ್ರ ಸರ್ಕಾರವು ನಿರ್ಧರಿಸಿದೆ.

ಅಂಥಹ ಸಹಾಯ ಅಪೇಕ್ಷಿಸುವವರು ಕೇಂದ್ರ ಶಿಕ್ಷಣಶಾಖಾ ಸಚಿವರಿಗೆ ಅರ್ಜಿ ಕಳುಹಿಸಬೇಕು. ಇದು ತೀರ್ಮಾನಕ್ಕಾಗಿ ಪ್ರಧಾನಿ, ಶಿಕ್ಷಣ ಮತ್ತು, ಹಣಕಾಸಿನ ಸಚಿವರುಗಳ ಸಮಿತಿಯನ್ನು ನೇಮಿಸಲಾಗಿದೆ

ಭಾರತ ಗಡಿಯಲ್ಲಿ ಚೀನಾ ಸೈನ್ಯ

ಭಾರತ ಟಿಬೆಟ್ ಗಡಿ ಪ್ರದೇಶದಲ್ಲಿ ೩೦೦ ಅಧಿಕಾರಿಗಳು. ೪೦೦೦ ಸೈನ್ಯಾಧಿಕಾರಿಗಳ ಚೈನಾ ದಳವಿರುವುದಾಗಿ ಗೊತ್ತಾಗಿದೆ.

ಭಾರತೀಯ ವ್ಯವಸಾಯ ಸಮ್ಮೇಳನ

ಭಾರತೀಯ ವ್ಯವಸಾಯ ಸಮ್ಮೇಳನವೊಂದು ತಿರುವನಂತಪುರದಲ್ಲಿ ಡಿಸೆಂಬರ್ ೨೬ ರಿಂದ ೨೮ ರವರೆಗೆ ನಡೆಯುತ್ತದೆ. ಅನೇಕ ವಿದೇಶಿ ತಜ್ಞರು ಈ ಸಮ್ಮೇಳನದಲ್ಲಿ ಭಾಗವಹಿಸುವರು.

ಸಾಂಸ್ಕೃತಿಕ ಪ್ರಸಾರ ಯೋಜನಾಪ್ರಾರಂಭೋತ್ಸವ

ನಾಳೆ ಸಂಜೆ ನಂಜನಗೂಡು ರೆಸಿಡೆನ್ಸಿಯಲ್ಲಿ ಶ್ರೀಮನ್ಮಹಾರಾಜರು ಸಾಂಸ್ಕೃತಿಕ ಪ್ರಸಾರ ಯೋಜನಾ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾರೆ. ಈ ಸಮಾರಂಭಕ್ಕೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸುತ್ತಾರೆ. ಶ್ರೀಗಳಾದ ಸಿ.ಕೆ.ವೆಂಕಟರಾಮಯ್ಯ ಮತ್ತು ಮೋಟಗಾನಹಳ್ಳಿ ಸುಬ್ರಹ್ಮಣ್ಯಶಾಸ್ತ್ರಿಗಳು ಭಾಷಣ ಮಾಡುತ್ತಾರೆ.

ಪಾಕೀಸ್ಥಾನದಲ್ಲಿ ಭಂಡಾರಗಳೆಲ್ಲಾ ಬರಿದಾಗಿವೆ

ಜಿನ್ನಾ ಅವಾಮಿಲೀಗಿನ ಅಧ್ಯಕ್ಷರ ಹೇಳಿಕೆ

ಪಾಕೀಸ್ತಾನಸರ್ಕಾರದ ಈಗಿನ ನೀತಿಯು ಸ್ವಲ್ಪವೂ ಸಮರ್ಪಕವಾಗಿಲ್ಲ ಪಾಕೀಸ್ತಾನದಲ್ಲಿ ಆರ್ಥಿಕ ದುಃಸ್ಥಿತಿಯು ವಿಷಮಿಸಿಕೊಂಡಿದೆ ಸನ್ನದಲ್ಲಿಯೇ ಕುಸಿದು ಬೀಳುವುದಾಗಿದೆ ಪ್ರಧಾನಿ ಖ್ವಾಜಾನಾಜಿಮುದ್ದೀನರು ಭಿಕ್ಷಾಪಾತ್ರೆ ಹಿಡಿದುಕೊಂಡು ಲಂಡನ್ನಿಗೆ ತೆರಳಿದ್ದಾರೆ ಪಾಕಿಸ್ತಾನದಲ್ಲಿ ತಯಾರಾಗುವ ವಸ್ತುಗಳನ್ನು ಕೊಳ್ಳುವವರೇ ಇಲ್ಲ ವಿಶೇಷ ಪ್ರಮಾಣದಲ್ಲಿ ವಿದೇಶೀ ಸಾಲವನ್ನು ಪಡೆದುಬಂದರೆ ಸ್ವಲ್ಪ ಚೇತರಿಸಿಕೊಳ್ಳಬಹುದು. ಇಲ್ಲದಿದ್ದರೆ ಪಾಕೀಸ್ತಾನವು ಅಧೋಗತಿಗಿಳಿಯುವುದರಲ್ಲಿ ಸಂದೇಹವಿಲ್ಲವೆಂದು ಪಾಕೀಸ್ತಾನದ ಜಿನ್ನಾ ಅವಾಮಿ ಮುಸ್ಲಿಂಲೀಗಿನ ಅಧ್ಯಕ್ಷ ಮಿ|| ಸುಹರವರ್ದಿಯವರು ಹೇಳಿದ್ದಾರೆ

ಜಿಲ್ಲಾಬೋರ್ಡ್ ಸಭೆ

ಮೈಸೂರು ನ ೨೬

ಮೈಸೂರು ಜಿಲ್ಲಾಬೋರ್ಡ್ ಸಭೆಯು ಡಿಸೆಂಬರ್ ೧೦ನೇ ತಾರೀಖು ಮಧ್ಯಾಹ್ನ ೨ ಗಂಟೆಗೆ ಚಾಮುಂಡಿ ಬೆಟ್ಟದಮೇಲೆ ನಡೆಯಲಿರುವುದಾಗಿದೆ

ನಿಯಂತ್ರಣ ಪರಿಶೀಲನಾ ಸಮಿತಿ

ಬೆಂಗಳೂರು ನ. ೨೬

ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿರುವ ನಾನಾ ವಿಧವ ನಿಯಂತ್ರಣಾಜ್ಞೆಗಳನ್ನು ಪರಿಶೀಲಿಸಿ ಅವುಗಳನ್ನು ಸುಧಾರಿಸಲು ಮತ್ತು ಇತರ ಬದಲಾವಣೆ ಅಥವಾ ರದ್ದುಗೊಳಿಸುವ ಬಗ್ಗೆ ಸರ್ಕಾರಕ್ಕೆ ಸಲಹೆನೀಡಲು ೪ ಜನರ ಸಮಿತಿಯೊಂದನ್ನು ಸರ್ಕಾರದವರು ನೇಮಿಸಿದ್ದಾರೆ.

ಈ ಸಮಿತಿಯ ಅಧ್ಯಕ್ಷರು ವಾಣಿಜ್ಯ ಮತ್ತು ಕೈಗಾರಿಕಾ ಶಾಖಾ ಡೈರೆಕ್ಟರು. ಆಹಾರ ಇಲಾಖೆ ಡೈರೆಕ್ಟರ್ ಮತ್ತು ಭದ್ರಾವತಿ ಉಕ್ಕಿನ ಮತ್ತು ಕಬ್ಬಿಣ ಕಂಟ್ರೋಲರ್‌ಗಳುಸದಸ್ಯರು. ಸಿವಿಲ್‌ಸಪ್ಲೈ ಅಸಿಸ್ಟೆಂಟ್ ಕಂಟ್ರೋಲರ್ ಕಾರ್ಯದರ್ಶಿಗಳು. ಸಮಿತಿಯು ೩ ತಿಂಗಳೊಳಗಾಗಿ ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗಿದೆ.

ಕೇಂದ್ರ ಸರ್ಕಾರದ ಮೇಲೆ ದಾವಾ

ಭಾರತ ಸರ್ಕಾರದ ಮಾಜಿ ಫರ್ಟಿಲೈಸರ್ ಡೈರೆಕ್ಟರ್ ಶ್ರೀ ಸಿ. ಎಸ್. ಡಿ ಸ್ವಾಮಿಯವರು ತಮ್ಮನ್ನು ಸರ್ಕಾರವು ಅಕ್ರಮವಾಗಿ ಕೆಲಸದಿಂದ ವಜಾಮಾಡಿದರೆಂದು ೫೦ ಸಾವಿರ ರೂ. ಪರಿಹಾರಕ್ಕೆ ದಾವಾ ಹೂಡಿದ್ದಾರೆ

ಅಕೆಡೆಮಿಕ್ ಕೌನ್ಸಿಲ್ಲಿಗೆ ನಾಮಕರಣ

ಬೆಂಗಳೂರು ೨೬

ಬೆಂಗಳೂರು ಮೆಡಿಕಲ್‌ಸ್ಕೂಲಿನಪ್ರಿನ್ಸಿಪಾಲ್‌ರು ಮತ್ತು ಶ್ರೀಗಳಾದ ಎಂ.ಎಲ್. ನಂಜರಾಜೇ ಅರಸು, ಜಿ ಆರ್. ಮಾಧವರಾವ್, ಡಿ ಎಂ. ಸಿದ್ದಯ್ಯ, ಮತ್ತು ಡಾ|| ಎಂ. ಸಿದ್ದಲಿಂಗಯ್ಯನವರನ್ನು ಮೈಸೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ಲಿಗೆ ೩ ವರ್ಷಕಾಲ ಸದಸ್ಯರಾಗಿ ಸರ್ಕಾರ ನೇಮಿಸಿದೆ.

ಕಾಮನ್‌ವೆಲ್ತ್ ರಾಷ್ಟ್ರಗಳ ಆರ್ಥಿಕ ಸಮ್ಮೇಳನ

ಕಾಮನ್‌ವೆಲ್ತ್, ರಾಷ್ಟ್ರಗಳ ಆರ್ಥಿಕ ಸಮ್ಮೇಳನವು ಸುಮಾರು ೨ ವಾರಕಾಲ ಲಂಡನ್ನಿನಲ್ಲಿ ನಡೆಯುತ್ತದೆ ಅನೇಕ ರಾಷ್ಟ್ರಗಳ ಪ್ರಧಾನಿಗಳು, ಭಾರತ ಮತ್ತು, ದಕ್ಷಿಣ ಆಫ್ರಿಕಾ ಅರ್ಥಿಕ ಸಚಿವರು ಈ ಸಮ್ಮೇಳನದಲ್ಲಿ ಭಾಗವಹಿಸುವರು.

ಕಮ್ಯೂನಿಸ್ಟ್ ಸ್ಥಾನಬದ್ಧರ ಬಿಡುಗಡೆ

ಸೆರೆಮನೆಯಲ್ಲಿದ್ದ ಹೈದರಾಬಾದಿನ ೨೭ ಕಮ್ಯೂನಿಸ್ಟ್ ಸ್ಥಾನಬದ್ಧರನ್ನು ಭಾರತ ಶ್ರೇಷ್ಠ ನ್ಯಾಯಲಯವು ಬಿಡುಗಡೆಮಾಡಿದೆ. ಇವರ ಸ್ಥಾನಬದ್ಧ ಅವಧಿಯು ಸೆಪ್ಟಂಬರ್ ೩ಂಕ್ಕೆ ಮುಕ್ತಾಯವಾಯಿತು. ಅದನ್ನು ಡಿಸೆಂಬರ್ ೩೧ರವರೆಗೆ ಹೈದರಾಬಾದ್ ಸರ್ಕಾರವು ಹೆಚ್ಚಿಸಿತು. ಈರೀತಿ ಹೆಚ್ಚಿಸಲು ಹೈದರಾಬಾದ್ ಸರ್ಕಾರಕ್ಕೆ ಅಧಿಕಾರವಿಲ್ಲವೆಂದು ಶ್ರೇಷ್ಠ ನ್ಯಾಯಾಲಯವು ಇವರನ್ನು ಬಿಡುಗಡೆಮಾಡಿದೆ.

ಆಹಾರ ಸಚಿವರ ಸಭೆ

ವಿದೇಶಗಳಿಂದ ಆಹಾರ ಆಮದು ಪ್ರಶ್ನೆಯನ್ನು ಚರ್ಚಿಸಲು ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಆಹಾರ ಸಚಿವರುಗಳ ಸಭೆಯು ಮುಂದಿನ ತಿಂಗಳು ನಡೆಯುವುದಾಗಿ ಗೊತ್ತಾಗಿದೆ.

ಕಳೆದ ಸಾಲಿನಲ್ಲಿ ೪೭ ಲಕ್ಷ ಟನ್ ಆಹಾರವನ್ನು ತರಿಸಿಕೊಳ್ಳಲಾಯಿತು ಈ ಸಾಲಿನಲ್ಲಿ ಆಮದು ೩೯ ಲಕ್ಷ ಟನ್ ಗಳಿಗಿಳಿಯಿತು. ಮುಂದಿನಸಾಲಿನಲ್ಲಿ ಕೇವಲ ೨೫ ಲಕ್ಷ ಟನ್ ಆಹಾರವನ್ನು ತರಿಸಿಕೊಳ್ಳಲಾಗುವುದೆಂದು ಕೇಂದ್ರ ಆಹಾರ ಸಚಿವರು ಹೇಳಿದ್ದಾರೆ.

ಪಂಚೆ ತಯಾರಿಕೆ ಬಗ್ಗೆ ಹೊಸ ಆಜ್ಞೆ

ಗಿರಣಿಗಳಲ್ಲಿ ಶೇ|| ೬೦ ರಷ್ಟು ಮಾತ್ರ ಉತ್ಪತ್ತಿ

ಪಂಚೆ, ಬಣ್ಣದಸೀರೆ ಮುಂತಾದುವುಗಳ ತಯಾರಿಕಾ ಬಗ್ಗೆ ಭಾರತ ಸರ್ಕಾರವು ನಿನ್ನೆಯದಿನ ಮುಖ್ಯವಾದ ಎರಡು ಅಂಶಗಳನ್ನೊಳಗೊಂಡ ಆಜ್ಞೆಯನ್ನು ಇತ್ತಿದೆ.

ಮುಂದಿನ ತಿಂಗಳಿನಿಂದ ಗಿರಣಿಗಳು ೧೯೫೧ ನೇ ಸಾಲಿನಲ್ಲಿ ತಯಾರಿಸುತ್ತಲಿದ್ದ ಪ್ರಮಾಣದಲ್ಲಿ ಶೇಕಡ ೬೦ರಷ್ಟು ಮಾತ್ರ ತಯಾರಿಸಬೇಕಾಗಿದೆ

ಪಂಚೆ ಮತ್ತು ಬಣ್ಣದ ಸೀರೆ ತಯಾರಿಕೆಯನ್ನು ಗಿರಣಿಗಳಲ್ಲಿ ತಯಾರಿಸುವುದನ್ನು ನಿಷೇಧಿಸಿ, ಕೈಮಗ್ಗದವರಿಗೇ ಇದನ್ನು ವಹಿಸಲಿಡಬೇಕೆಂಬ ಸಲಹೆಯನ್ನು ಪೂರ್ಣವಾಗಿ ಜಾರಿಗೆ ತರಲು ಸಾಧ್ಯವಿಲ್ಲವೆಂದು ಈ ಆಜ್ಞೆ ತಿಳಿಸಿದೆ.

ದೇಶದಲ್ಲಿ ಬಟ್ಟೆಯ ಅವಶ್ಯಕತೆ, ಉತ್ಪಾದಕ ಸ್ಥಳಾನಿಲೆ ಪೂರಾಟ, ವಿದೇಶಿ ನಾಣ್ಯಸಂಪಾದನೆ, ವ್ಯವಸ್ಥೆ, ಅಭಿವೃದ್ಧಿ ಮುಂತಾದುವನ್ನೆಲ್ಲಾ ಪರಿಶೀಲಿಸಿ ಸರ್ಕಾರಕ್ಕೆ ಸಲಹೆನೀಡಲು ೧೦ ಜನ ಪರಿಣತರುಳ್ಳ ಸಮಿತಿಯನ್ನು ಸರ್ಕಾರವು ನೇಮಿಸಿದೆ. ಈ ಸಮಿತಿಯ ಕಛೇರಿಯು ಬೊಂಬಾಯಿನಲ್ಲಿ ಸ್ಥಾಪಿಸಲಾಗುತ್ತದೆಂದು ತಿಳಿದುಬಂದಿದೆ

ಭಾರತ ಸಿಂಹಳ ಪ್ರಧಾನಿಗಳ ಭೇಟಿ

ಸಿಂಹಳದಲ್ಲಿರುವ ಭಾರತೀಯರ ಪೌರಸ್ವಾತಂತ್ರ್ಯ ಬಗ್ಗೆ ಉಂಟಾಗಿರುವ ಬಿಕ್ಕಟ್ಟನ್ನು ಪರಿಹರಿಸಲು ಭಾರತ ಮತ್ತು ಸಿಂಹಳ ಪ್ರಧಾನಿಗಳ ಭೇಟಿಯು ಸಿಂಹಳ ಪ್ರಧಾನಿ ಲಂಡನ್ನಿನಿಂದ ಹಿಂತಿರುಗಿದೊಡನೆಯೇ ನಡೆಯುವುದೆಂದು ಗೊತ್ತಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೨೫-೧೧-೫೨

ಪಲ್ಲ	ರೂ- ಆ-	ರೂ-	ಆ
ಕಡಲೇಕಾಯಿ	೧೧-೧೪	೨೧	
ಎಳ್ಳು	೬೮-೧೪		
ಹರಳು	೪೩	೪೫	೨
ಹುರುಳಿ	೫೩-೮	೫೪	೮
ಹೆಸರು	೫೦-	೫೪	೮
ಅಲಸಂದೆ	೪೬-೨	೬೬	೪
ಹುಚ್ಚೆಳ್ಳು	೫೯-೧೨	೬೦	೮
ಉದ್ದು	-		
ಹೊಂಗೆಬೀಜ			
ಮೆ|| ಕಾಯಿ	೭-೬	೧೫	೧೨
ಹುಣಸೆಹಣ್ಣು	೬-೫		
ಸೀಗೇಕಾಯಿ	೩-೧		
ಬೆಲ್ಲ	೩-೮		
ತೆಂಗಿನಕಾಯಿ	೨೦೭	೨೧೫	

ಅಪೇರ

21—11—52 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ವಳಯಾಪತಿ

[ತಮಿಳು]

ಪಾತ್ರ:- ಜಯಲಕ್ಷ್ಮಿ, ಶೇಖರ್, ಪುಳಿಮೂಟೆ.

ಪ್ರಕಾಶಕರು:— ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಶಾ. ಸುಬ್ಬರಾವ್

ಮೋಹನ್ ಮುದ್ರಣಾಲಯ, ಮೈಸೂರು.

ಪ್ರಭಾ — ಬುಧವಾರದ 2ನೇವಾರ 28-11-52ರಿಂದ ದಿನ 3 ಆಟಗಳು

ದಲ್‌ಸುಖ್ ಎಂ. ಪಂಚೋಲಿಯವರ ಪ್ರತಿಭಾನ್ವಯುತ, ಹೃದಯ ತಲ್ಲಣಿಸುವ, ಉತ್ತಮ ಸಂಗೀತದಿಂದಕೂಡಿದ ಹಿಂದಿ ಚಿತ್ರ

ಆಸ್ಮಾನ್ ★

ಪಾತ್ರ:— ಶ್ಯಾಮಾ, ನಸೀರ್ ಖಾನ್. ಲಲಿತಾಪವರ್, ಡೇವಿಡ್.

ಹಿನ್ನೆಲೆ ಸಂಗೀತ ಸಿ. ಹೆಚ್. ಆತ್ಮ [ನಗೀನ ಪ್ರಖ್ಯಾತಿ]

ಬೆಳಗಿನ ಪ್ರದರ್ಶನ 28 - 11—52 ರಿಂದ ಮೂರು ದಿನಗಳುಮಾತ್ರ

ನ್ಯೂ ಥಿಯೇಟರ್ಸ್‌ರವರ ★ ಕಾಶೀನಾಥ್ ★

ಪಾತ್ರ:— ಭಾರತಿ, ಅಜಿತ್‌ಬರಾನ್, ಸುನಂದ, ನವಾಬ್.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 80

೨೭-೧೧-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಹೈದರಾಬಾದಿನಿಂದ ಮೈಸೂರಿಗೆ ಆಹಾರ

೧೯೫೩ ನೇ ಸಾಲಿನಲ್ಲಿ ಹೈದರಾಬಾದ್ ಸರ್ಕಾರವು ಮೈಸೂರಿಗೆ ೫೦೦೦೦ ಟನ್ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲು ಒಪ್ಪಿಕೊಂಡಿರುವುದಾಗಿ ಗೊತ್ತಾಗಿದೆ ಈ ವಿಚಾರವನ್ನು ಆಲ್ಲಿಯ ಆಹಾರ ಸಚಿವ ಡಾ|| ಚೆನ್ನಾರೆಡ್ಡಿಯವರು ಹೊರಗೆಡಹುತ್ತ ಕಳೆದ ಎರಡು ತಿಂಗಳುಗಳಿಂದ ಹೈದರಾಬಾದ್ ಇತರ ಪ್ರಾಂತ್ಯಗಳಿಗೆ ೯೦೦೦೦ ಟನ್ ದ್ವಿದಳ ಧಾನ್ಯಗಳನ್ನು ಸರಬರಾಜುಮಾಡಿದೆ ೧೯೫೨ ನೇ ಅಂತ್ಯದ ವೇಳೆಗೆ ಮಧ್ಯಪ್ರದೇಶವು ಹೈದರಾಬಾದಿಗೆ ೫೦೦೦ ಟನ್ ಅಕ್ಕಿ ಕೊಡಲಿದೆಯೆಂದು ಅವರು ತಿಳಿಸಿದ್ದಾರೆ.

ಮುಂದಿನ ವರ್ಷ ೨೫ ಲಕ್ಷ ಟನ್ ಧಾನ್ಯ ಮಾತ್ರ ಆಮದು

ಪರದೇಶಗಳಿಂದ ಹೆಚ್ಚು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳದೆ ದೇಶದ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ವಿಚಾರವನ್ನು ಪರಿಶೀಲಿಸಲು ಮುಂದಿನ ತಿಂಗಳಿನಲ್ಲಿ ಆಹಾರ ಸಚಿವರ ಸಮ್ಮೇಳನ ಕರೆಸುವುದಾಗಿ ಕೇಂದ್ರ, ಆಹಾರ ಸಚಿವ ಶ್ರೀ ಕಿದ್ವಾಯಿ ತಿಳಿಸಿರುತ್ತಾರೆ

೧೯೫೩ ರಲ್ಲಿ ಕೇವಲ ೨೫ ಲಕ್ಷ ಟನ್ ಆಹಾರಧಾನ್ಯ ಮಾತ್ರಆಮದು ಮಾಡಲಾಗುವುದು ೧೯೫೦ರಲ್ಲಿ ೩೧ ಲಕ್ಷ ಟನ್ ೧೯೫೧ ರಲ್ಲಿ ೪೭ ಲಕ್ಷ ಟನ್, ಆಹಾರಧಾನ್ಯ ಹೊರಗಿನಿಂದ ತರಿಸಲಾಯಿತು. ಹೆಚ್ಚು ಆಹಾರ ಆಮದು ಮಾಡದೆ ದೇಶದ ಬೆಳೆಯು ಸಾಕಾದಷ್ಟಿಲ್ಲದಿದ್ದರೆ ಬೆಲೆ ಏರಿಕೊಳ್ಳುವ ಶಕ್ತಿ, ಶಕ್ತಿಮೀರಿದಾಗ ಜನರು ಉಪವಾಸವಿಂಬೇಕಾಗುವುದರಿಂದ ಯುಕ್ತವಾದ ಹತೋಟಿ ಅಗತ್ಯ ಎಂದು ಸಚಿವರು ಹೇಳುತ್ತಾರೆ.

ಮುಂದಿನವರ್ಷ ಕೊರತೆ ಪ್ರದೇಶಗಳಿಗೆ ೧೦ ಲಕ್ಷ ಟನ್ ಅಕ್ಕಿ ಬೇಕಾಗುವುದು. ಮಧ್ಯಪ್ರದೇಶ ಮತ್ತು ಒರಿಸ್ಸಾ ೫ ಲಕ್ಷ ಟನ್ ಅಕ್ಕಿ ಕೊಡಲು ಒಪ್ಪಿದೆ.

ಸಂಸ್ಕೃತಿ ಪ್ರಸಾರ ಯೋಜನೆ

ಶ್ರೀಮನ್ಮಹಾರಾಜರ ಮತ್ತು ರಾಜಾಜಿ ಶುಭ ಸಂದೇಶ

ಮೈಸೂರು ೨೭

ಸಂಸ್ಥಾನಾದ್ಯಂತ ಇದಿನ ನಡೆಯಲಿರುವ ಗೀತಾ ಪ್ರಚಾರ ಯೋಜನೆಗೆ ಯಶಸ್ಸನ್ನು ಕೋರಿ ಶ್ರೀಮನ್ಮಹಾರಾಜರವರೂ ಮತ್ತು ಮದರಾಸಿನ ಮುಖ್ಯಮಂತ್ರಿ ರಾಜಾಜಿಯವರೂ ಶುಭಸಂದೇಶ ಕಳುಹಿಸಿದ್ದಾರೆ

ಸಂಸ್ಕೃತಿಕ ಪ್ರಸಾರವು ದೇಶೋನ್ನತಿ ಸಾಧನೆಯ ಕಾರ್ಯಕಲಾಪಗಳಲ್ಲಿ ಅತಿಮುಖ್ಯವಾದುವುಗಳ ಗುಂಪಿಗೆ ಸೇರಿದೆ ಸಂಸ್ಕೃತಿಯ ಮಟ್ಟವು ಏರದಷ್ಟು ಜನಾಂಗದ ಘನತೆ ಗೌರವಗಳೂ ಹೆಚ್ಚಾಗುತ್ತವೆ. ಈ ಯೋಜನೆಯು ಪ್ರಚಾರವರ್ಗದಲ್ಲಿ ಅಮಿತವಾದ ಉತ್ಸಾಹವನ್ನು ತುಂಬಿ ನಾಡಿನ ಉಸಿರೆನೋಪಾದಿಯಲ್ಲಿರುವ ಪ್ರಾಚೀನವೂ ಅಮೋಘವೂ ಆದ ನಮ್ಮ ಸಂಸ್ಕೃತಿಯ ವೈಶಿಷ್ಟದ ಕಡೆಗೆ ಎಲ್ಲರ ದೃಷ್ಟಿಯನ್ನೂ ತೀವ್ರವಾಗಿ ಸೆಳೆದು ಸಮಭಾರತದ ಪುರೋಭಿವೃದ್ಧಿ ಸಾಧನೆಗೆ ಅತ್ಯವಶ್ಯಕವಾಗುವುದು ಎಂದು ಪ್ರಭುಗಳು ತಿಳಿಸಿರುತ್ತಾರೆ

"ಜನರಲ್ಲಿ ಭಕ್ತಿವಿಶ್ವಾಸಗಳನ್ನು ಪುನಃಸ್ಥಾಪನೆಮಾಡಲು ನೀವು ನಡೆಸುತ್ತಿರುವ ಮಹಾ ಪ್ರಯತ್ನಗಳನ್ನು ಕಂಡು ನನಗೆ ನಿಜವಾಗಿಯೂ ಸಂತೋಷವಾಗಿದೆ ನಾವು ಭಗವಂತನನ್ನು ಮನೋಮಂದಿರದಲ್ಲಿ ಇರಿಸಿಕೊಂಡಲ್ಲಿ ಮಾತ್ರ ನಾವು ಪುರೋಭಿವೃದ್ಧಿಹೊಂದುವುದೂ ಸುಖಮಯವಾಗಿರುವುದೂ ಸಾಧ್ಯ" ಎಂದು ರಾಜಾಜಿ ತಿಳಿಸಿದ್ದಾರೆ

ಭಾರತದ ಕೋರಿಯಾ ಸಲಹೆಗೆ ಚೀಣಾ ತಿರಸ್ಕಾರ

ಕೊರಿಯಾ ಬಿಕ್ಕಟ್ಟನ್ನು ಬಗೆಹರಿಸಲು ಭಾರತವು ಸೂಚಿಸಿರುವ ಸಲಹೆಯನ್ನು ಕಮ್ಯೂನಿಸ್ಟ್ ಚೀಣಾ ಸರ್ಕಾರ ತಿರಸ್ಕರಿಸಿದೆಯೆಂದು ಹೇಳಲಾಗಿದೆ.

ವಿಶ್ವಸಂಸ್ಥೆಯ ರಾಜಕೀಯಸಮಿತಿಯಲ್ಲಿ ಭಾರತದ ಸಲಹೆಗೆ ೪೯-೫ ಮತಗಳಿಂದ ಅನುಮತಿ ದೊರೆಯಿತು.

ಜಿಲ್ಲಾ ಟ್ರಜರಿಯಲ್ಲಿ ಹಣದ ಅಪಹರಣ

ಮೈಸೂರು ೨೭

ಮೈಸೂರು ಜಿಲ್ಲಾ ಟ್ರಜರಿ ಬಳಿ ನಿನ್ನೆ ಮಧ್ಯಾಹ್ನ ೧೩೧ ರೂ ದರೋಡೆ ಪ್ರಕರಣ ವರದಿಯಾಗಿದೆ ನಗರದ ಅರಮನೆ ಕಛೇರಿಯ ಚೆನ್ನಯ್ಯ ಎಂಬಾತನು ಟ್ರಜರಿಗೆ ೧೩೧-೧೩-೦ ರೂ ಕಟ್ಟಲು ಆ ಫಿಸ ಕೌಂಟರಿನ ಬಳಿ ಹಣ ಇಟ್ಟುಕೊಂಡಿದ್ದಾಗ ಅಲ್ಲಿ ನಿಂತಿದ್ದ ವೇಲು ಎಂಬಾತನು ೭ ಆಣೆ ಕೆಳಗೆಬಿದ್ದಿದೆ ತೆಗೆದುಕೊಳ್ಳಿ ಎಂದು ಚನ್ನಯ್ಯನಿಗೆ ಹೇಳಿದನೆಂದೂ, ಅದನ್ನು ಕಂಡು ಬಗ್ಗಿ ತೆಗೆದುಕೊಳ್ಳುತ್ತಿರುವಾಗ ಇನ್ನೊಬ್ಬನು ಕೌಂಟರಿನ ಮೇಲಿದ್ದ ಹಣವನ್ನು ತೆರೆದು ಕೊಂಡು ಹೊರಗೆ ಇದ್ದ ಸೈಕಲ್ ಮೇಲೆ ಪರಾರಿಯಾದನೆಂದೂ ಹೇಳಲಾಗಿದೆ. ಅಷ್ಟರಲ್ಲೇ ಚನ್ನಯ್ಯನು ಕೂಗಿಕೊಳ್ಳಲು ಪೋಲೀಸರು ವೇಲುವನ್ನು ದಸ್ತಗಿರಿ ಮಾಡಿ ವಿಚಾರಿಸಿದಲ್ಲಿ ಆತನೂ ಮತ್ತು, ಇನ್ನೊಬ್ಬ ಸುಬ್ರಹ್ಮಣ್ಯಂ ಎಂಬಾತನು ಮಧುರೆಗೆ ಸೇರಿದವರೆಂದು ಗೊತ್ತಾಯಿತು. ಕೊನೆಯಲ್ಲಿ ಸುಬ್ರಹ್ಮಣ್ಯಂನನ್ನು ದಸ್ತಗಿರಿ ಮಾಡಿ ಹಣವನ್ನು ವಶಪಡಿಸಿಕೊಳ್ಳಲಾಯಿತು.

ಗೋಹತ್ಯ ನಿರೋಧ ಚಳುವಳಿ

ಸಂಸ್ಥಾನಾದ್ಯಂತ ಕಳೆದತಿಂಗಳು ೨೬ ರಿಂದ ಇದೇ ೨೬ನೇ ತಾರೀಖಿನವರೆಗೆ ಆರ್. ಎಸ್. ಎಸ್. ಸಂಸ್ಥೆಯವರು ಕೈಗೊಂಡಿದ್ದ ಗೋಹತ್ಯಾ ನಿರೋಧ ಚಳುವಳಿಯಲ್ಲಿ ಲಕ್ಷಾಂತರ ಹಸ್ತಾಕ್ಷರ ಸಂಗ್ರಹ ಮಾಡಲಾಗಿದೆಯೆಂದೂ, ಅದನ್ನು ರಾಜಪ್ರಮುಖರಿಗೆ ಒಪ್ಪಿಸಿ. ಅವರಮೂಲಕ ಕೇಂದ್ರಸರ್ಕಾರವನ್ನು ಒತ್ತಾಯಪಡಿಸಲು ಶ್ರೀಗಳಾದ ಚಾಮಡಿಸುಬ್ಬರಾಯಶೆಟ್ಟಿ, ಪಿ. ಹೆಚ್. ಕೃಷ್ಣರಾವ್ ಮತ್ತು ಜಿ. ಪರಮಶಿವಯ್ಯನವರುಗಳು ಒಂದು ನಿಯೋಗ ಹೋಗಲಿರುವರೆಂದೂ ಗೊತ್ತಾಗಿದೆ.

ಅಧಿಕಾರಿಗಳ ಪತ್ನಿಯರಿಗೆಲ್ಲಾ ಪ್ರಯಾಣ ಭತ್ಯ

ಪಾಕೀಸ್ತಾನ ನೌಕರರು ಪ್ರಯಾಣ ಭತ್ಯವನ್ನು ತೆಗೆದುಕೊಳ್ಳುವಾಗ ಒಬ್ಬ ಪತ್ನಿಗೆ ಮಾತ್ರ ಭತ್ಯ ತೆಗೆದುಕೊಳ್ಳುವ ಸೌಲಭ್ಯವಿತ್ತು, ಈಗ ಅದನ್ನು ೪ ಪತ್ನಿಯರವರೆಗೂ ಕೊಡಬಹುದೆಂದು ಕಾನೂನು ತಿದ್ದುಪಡಿಯಾಗಿದೆ

ಕಪ್ಪುಬಾವುಟ ಪ್ರದರ್ಶನ ?

ಮೈಸೂರು ೨೭

ಕಾರ್ಪೊರೇಷನ್ ಹಾಲಿನಲ್ಲಿ ನಡೆದ ಗಲಾಟೆ ಸಂದರ್ಭದಲ್ಲಿ ವಿದ್ಯಾರ್ಥಿಗಳ ಮೇಲಿನ ಮೊಕದ್ದಮೆಯನ್ನು ಹಿಂದಕ್ಕೆ ತೆಗೆದುಕೊಳ್ಳದಿದ್ದರೆ ಮುಂದಿನ ತಿಂಗಳು ೨ನೇ ತಾರೀಖು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮಹಾರಾಜಾ ಕಾಲೇಜಿನ ದಿನೋತ್ಸವದಲ್ಲಿ ಭಾಗವಹಿಸಲು ಬಂದಾಗ್ಗೆ ಕಪ್ಪುಬಾವುಟಪ್ರದರ್ಶಿಸಬೇಕೆಂದು ಇದಿನ ಕಾಲೇಜಿನಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿರುವುದಾಗಿ ಗೊತ್ತಾಗಿದೆ

ದನಗಳ ರೋಗಗಳ ಬಗ್ಗೆ ಚರ್ಚಾಕೂಟ

ದನಗಳಿಗೆ ಬರುವ ಮುಖ್ಯವಾದ ೫ ರೋಗಗಳು ಮನುಷ್ಯನಿಗೆ ಹೇಗೆ ಬರುತ್ತವೆ ಎಂಬುದನ್ನು ಕಂಡು ಹಿಡಿಯಲು ವಿಶ್ವಸಂಸ್ಥೆ ಮತ್ತು ಆಸ್ಟ್ರಿಯಾ ಸರ್ಕಾರದ ಆಶ್ರಯದಲ್ಲಿ ಒಂದು ಚರ್ಚಾಕೂಟವು ನಡೆಯುತ್ತದೆ

ಎರಡನೆಯ ಮಹಾಯುದ್ಧವಾದ ನಂತರ ಇಂತಹ ಸಾರ್ವಜನಿಕ ಸಮ್ಮೇಳನ ನಡೆಯುವುದು ಇದೇ ಪ್ರಥಮ.

ಯೂರೋಪಿನ ಮತ್ತು ಮಧ್ಯಪ್ರಾಚ್ಯದ ೨೦ ತಜ್ಞರು ಈಸಮ್ಮೇಳನದಲ್ಲಿ ಭಾಗವಹಿಸುವರು. ಈಸಮ್ಮೇಳನದಲ್ಲಿ ಟರ್ಕಿ ಟ್ಯೂನೀಷಿಯಾ ಗ್ರೀಸ್ ಮೊರಾಕೋ ಆಸ್ಟ್ರಿಯಾ. ಬೆಲ್ಜಿಯಂ, ಡೆನ್‌ಮಾರ್ಕ್ ಫಿನ್‌ಲೆಂಡ್, ಫ್ರಾನ್ಸ್, ಜರ್ಮನಿ ಐರ್ ಲೆಂಡ್ ಐಸ್ಲೆಂಡ್, ಇಟಲಿ, ನಾರ್ವೆ, ನೆದರ್‌ಲೆಂಡ್ಸ್, ಪೋರ್ಚುಗಲ್ ಸ್ಪೇನ್, ಸ್ವೀಡನ್, ಸ್ವಿಟ್ಜರ್ಲೆಂಡ್ ಮತ್ತು ಯುಗೋಸ್ಲೇವಿಯ ದೇಶಗಳು ಭಾಗವಹಿಸುತ್ತವೆ.

ನುಗ್ಗೇಹಳ್ಳಿ-ನವನಗರಿ

ಚನ್ನರಾಯಪಟ್ಟಣತಾಲ್ಲೂಕು ನುಗ್ಗೇಹಳ್ಳಿಗೆ ನವನಗರಿ ಎಂಬ ಹೆಸರನ್ನು ಬರುವ ಜನವರಿಯಿಂದ ಕೊಡಲಾಗುತ್ತದೆ.

ನೆಹರೂ ಪುನಃ ಕಾಂಗ್ರೆಸ್ ಅಧ್ಯಕ್ಷರಾಗುವರೇ

ಕಾಂಗ್ರೆಸ್ ಅಧ್ಯಕ್ಷರಾಗಿ ಪುನಃ ಶ್ರೀ ನೆಹರೂರವರೇ ಇರಬೇಕೆಂದು ಹಲವಾರು ಉಮೇದುವಾರಿಕೆ ಪತ್ರಗಳು ಈಗಾಗಲೇ ಎ. ಐ. ಸಿ. ಸಿ. ಕಛೇರಿಗೆ ಸೇರಿರುವುದಾಗಿ ಗೊತ್ತಾಗಿದೆ. ಪಾರ್ಲಿಮೆಂಟಿನ ಸಚಿವರೂ ಪಕ್ಷದ ಚೀಫ್ ವಿಫ್ಪರವರಾದ ಶ್ರೀ ಸತ್ಯನಾರಾಯಣ ಸಿನ್ಹರವರೂ ಈ ಸ್ಥಾನಕ್ಕೆ ನೆಹರೂರವರನ್ನು ಸೂಚಿಸಿ ಉಮೇದುವಾರಿಕೆ ಪತ್ರ ಕಳುಹಿಸಿರುವುದಾಗಿ ಗೊತ್ತಾಗಿದೆ ಶ್ರೀ ನೆಹರೂರವರು ಇದಕ್ಕೆ ಒಪ್ಪಿಗೆ ಕೊಟ್ಟಿರುವುದಾಗಿ ತಿಳಿದು ಬಂದಿದೆ

ಲಾ ಕಾಲೇಜು ಕೌನ್ಸಿಲ್

ಬೆಂಗಳೂರು ನ. ೨೭

ಲಾ ಕಾಲೇಜಿನ ಕೌನ್ಸಿಲನ್ನು ಸರ್ಕಾರದವರು ಪುನಃ ಚುನಾಯಿಸಿದ್ದಾರೆ. ವಿಶ್ವವಿದ್ಯಾನಿಲಯದ ಉಪಸಭಾಪತಿ, ಅಡ್ವೋಕೇಟ್ ಜನರಲ್, ಅಡ್ವೋಕೇಟ್ ಶ್ರೀಮತಿ ರತ್ನಾಬಾಯಿ ಚಿಕ್ಕೂರ್, ಬೆಂಗಳೂರು ಶ್ರೇಷ್ಠ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಶ್ರೀ ಎಸ್. ವೆಂಕಟರಂಗಯ್ಯಂಗಾರ್ ಬೆಂಗಳೂರಿನ ಅಡ್ವೋಕೇಟರುಗಳಾದ ಶ್ರೀ ಹೆಚ್. ಎಸ್. ನಂಜಪ್ಪ, ಶ್ರೀ ಎನ್. ಲಿಂಗಪ್ಪ ಮತ್ತು ವಿ. ಕೆ. ಗೋವಿಂದರಾಜಲು ಈ ಸಮಿತಿಯ ಸದಸ್ಯರುಗಳು. ಕಾಲೇಜಿನ ಪ್ರಿನ್ಸಿಪಾಲರು ಸಮಿತಿಯ ಕಾರ್ಯದರ್ಶಿ.

ಬಟ್ಟೆಕೈಗಾರಿಕಾ ಸಲಹಾ ಸಮಿತಿ

ದೇಶದಲ್ಲಿ ಬಟ್ಟೆತಯಾರಿಕೆ ಬಗ್ಗೆ ವಿಚಾರಣೆ ನಡೆಸಲು ಭಾರತಸರ್ಕಾರವು ೧೦ ಜನ ಸದಸ್ಯರುಳ್ಳ ಸಮಿತಿಯೊಂದನ್ನು ನೇಮಿಸಿದೆ. ಪಾರ್ಲಿಮೆಂಟ್ ಸದಸ್ಯರಾದ ಒರಿಸ್ಸಾದ ಶ್ರೀ ನಿತ್ಯಾನಂದ ಕನುಂಗೋರವರು ಈ ಸಮಿತಿಯ ಅಧ್ಯಕ್ಷರು ಮೈಸೂರು ಪ್ರದೇಶ ಕಾಂಗ್ರೆಸ್‌ಸಮಿತಿ ಅಧ್ಯಕ್ಷ ಶ್ರೀ ಹೆಚ್. ಸಿ. ದಾಸಪ್ಪನವರು ಈ ಸಮಿತಿಯ ಒಬ್ಬ ಸದಸ್ಯರು.

ಹೆಚ್ಚುವರಿ ಪ್ರದೇಶದಿಂದ ಅಕ್ಕಿ

ಭಾರತದಲ್ಲಿ ಹೆಚ್ಚುವರಿ ಅಕ್ಕಿಬೆಳೆಯುವ ಒರಿಸ್ಸಾ ಮತ್ತು ಮಧ್ಯಪ್ರದೇಶಗಳು ಕೇಂದ್ರಕ್ಕೆ ತಲಾ ಎರಡೂವರೆ ಲಕ್ಷ ಟನ್ ಅಕ್ಕಿಯನ್ನು ಸರಬರಾಯಿಮಾಡಲು ಒಪ್ಪಿದೆಯೆಂದು ಗೊತ್ತಾಗಿದೆ.

ಸಂಸ್ಕೃತಿ ಪ್ರಸಾರ ಬೊಂಬಾಯಿನಲ್ಲಿ

ಮೈಸೂರಿನಲ್ಲಿ ಈದಿನ ಪ್ರಾರಂಭವಾಗಲಿರುವ ಸಂಸ್ಕೃತಿಕ ಪ್ರಸಾರಯೋಜನೆಯ ಕಾರ್ಯಕ್ರಮದಂತೆ ಬೊಂಬಾಯಿನಲ್ಲಿ ನಡೆಸಲು ಅಲ್ಲಿರುವ ಮೈಸೂರು ಸಂಘವನ್ನು ಮೈಸೂರು ಸರ್ಕಾರದ ಪ್ರಾರ್ಥಿಸಿದೆ. ಈಗ ಬೊಂಬಾಯಿನಲ್ಲಿರುವ ಗೃಹಸಚಿವ ಶ್ರೀ ಸಿದ್ದವೀರಪ್ಪನವರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಸ್ಥಳೀಯ ಸಂಸ್ಥೆ ಮತ್ತು ಪ್ಲಾನಿಂಗ್ ಕಾರ್ಯದರ್ಶಿ

ಬೆಂಗಳೂರು ನ. ೨೭

ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳಾದ ಶ್ರೀ ಜಿ. ವಿ. ಕೆ. ರಾವ್‌ರವರನ್ನು ಸರ್ಕಾರದ ಸ್ಥಳೀಯ ಸಂಸ್ಥೆ ಮತ್ತು ಪ್ಲಾನಿಂಗ್ ಇಲಾಖೆಗಳ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ತಮ್ಮ ಈಗಿನ ಕೆಲಸದ ಜೊತೆಗೆ ಈ ಹುದ್ದೆಯನ್ನೂ ಇವರು ನೋಡಿಕೊಳ್ಳುವರು.

ರವೀಂದ್ರನಾಥ ಠಾಕೂರ್ ದಿನಾಚರಣೆ

ರಾಜಧಾನಿಯ ಬನುಮಯ್ಯನವರ ಕಾಮರ್ಸ್ ಕಾಲೇಜ್ ಸಂಘದ ಆಶ್ರಯದಲ್ಲಿ ಕಳೆದ ಶನಿವಾರ ರವೀಂದ್ರನಾಥ ಠಾಕೂರರ ದಿನಾಚರಣೆಯು ಶ್ರೀ ನ. ಭದ್ರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ಮಹಾರಾಜಾ ಕಾಲೇಜಿನ ಶ್ರೀ ಎ. ಟಿ. ತಿರುನಾರಾಯಣಯ್ಯಂಗಾರ್ ಭಾಷಣಮಾಡಿದರು. ಸಂಘದ ಅಧ್ಯಕ್ಷ ಶ್ರೀ ಬಿ. ಸತ್ಯನಾರಾಯಣ ಸಿಂಗರಿಂದ ಸ್ವಾಗತ ಮತ್ತು ಕಾರ್ಯದರ್ಶಿ ಶ್ರೀ ಕೆ. ವಿ. ಶ್ರೀನಿವಾಸರವರಿಂದ ವಂದನೆ ಆಯಿತು.

ದಂತಯಜ್ಞ

ಸಾರ್ವಜನಿಕರು ತಮ್ಮ ಹಲ್ಲುಗಳನ್ನು ಶುಚಿ ಮತ್ತು ಆರೋಗ್ಯಕರವಾಗಿ ಇಟ್ಟುಕೊಂಡಿರಲು ಸೂರತ್‌ನಲ್ಲಿ ಒಂದು ದಂತಯಜ್ಞ ಚಳುವಳಿ ಪ್ರಾರಂಭಮಾಡಲಾಗಿದೆ. ಅಲ್ಲಿನ ಮಾಧಿ ಎಂಬ ಹಳ್ಳಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ಸುಮಾರು ೨೨ ಮಂದಿ ವೈದ್ಯರು ಉಚಿತ ಚಿಕಿತ್ಸೆ ನಡೆಸುತ್ತಿದ್ದಾರೆ. ಈ ಶಿಬಿರದಲ್ಲಿ ರೋಗಿಗಳಿಗೆ ಉಚಿತ ಊಟದ ಏರ್ಪಾಡೂ ಮಾಡಲಾಗಿದೆ.

ಪ್ರಜಾಪರಿಷತ್ತಿನ ಅಧ್ಯಕ್ಷ ಡೋಗ್ರಾರ ದಸ್ತಗಿರಿ

ಕಾಶ್ಮೀರ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಪಂಡಿತ ಪ್ರೇಮನಾಥಡೋಗ್ರಾ ಮತ್ತು ಇತರ ೧೪ ಜನರನ್ನು ನಿನ್ನೆಯದಿನ ಜಮ್ಮುವಿನಲ್ಲಿ ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

ಸರ್ಕಾರದವರು ವಿಧಿಸಿದ್ದ ಪ್ರತಿಬಂಧ ಆಜ್ಞೆಗಳನ್ನು ಇವರು ಮುರಿದು ಶಾಂತಿಭಂಗ ಕರವಾದ ರೀತಿಯಲ್ಲಿ ನಡೆಸಿದರೆಂಬ ಅಪಾದನೆ ಮೇಲೆ ದಸ್ತಗಿರಿ ಮಾಡಲಾಗಿದೆ ಈ ಪಕ್ಷಕ್ಕೆ ಸಹಾಯ ನೀಡುವುದಾಗಿ ಹೇಳುತ್ತಾ ಕೆಲವು ದುಷ್ಟವ್ಯಕ್ತಿಗಳು ಪುಂಡುತನ ನಡೆಸುತ್ತಿರುವುದರಿಂದ ಸರ್ಕಾರವು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆಯೆಂದು ಸರ್ಕಾರವು ತಿಳಿಸಿದೆ.

ಅಸಿಸ್ಟೆಂಟ್ ಕಮಿಷನರಾಗಿ ಬಡ್ತಿ

ಅಮಲ್ದಾರರಾಗಿದ್ದ ಶ್ರೀ ಎ. ಮರುಳು ಸಿದ್ದಪ್ಪ, ಬಿ.ಎ. ಮರುಳುಸಿದ್ದಪ್ಪನವರನ್ನು ಅಸಿಸ್ಟೆಂಟ್ ಕಮಿಷನರಾಗಿ ಬಡ್ತಿ ಮಾಡಲಾಗಿದೆ.

ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ

ಮೈಸೂರು ನ. ೨೭

ಸಪ್ಟೆಂಬರ್ ಮಾಹೆಯಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶವು ಇದೇ ಮಾಹೆ ೨೯ನೇ ತಾರೀಖು ಶನಿವಾರ ಬೆಳಿಗ್ಗೆ ೧೧ ಗಂಟೆಗೆ ಪ್ರಕಟವಾಗುತ್ತದೆ.

ಅಮೆರಿಕಾದಿಂದ ಭಾರತಕ್ಕೆ ಕಬ್ಬಿಣ

ಭಾರತಕ್ಕೆ ಅಮೆರಿಕಾವು ೫೦೦೦೦ ಟನ್ ಕಬ್ಬಿಣ ಮತ್ತು ಉಕ್ಕನ್ನು ಸರಬರಾಜು ಮಾಡಲು ನಿನ್ನೆಯದಿನ ಒಂದು ಒಪ್ಪಂದಕ್ಕೆ ಉಭಯಸರ್ಕಾರಗಳ ಪ್ರತಿನಿಧಿಗಳು ಸಹಿ ಹಾಕಿದರು.

ರಣಜಿತ್

28-11-52 ರಿಂದ ಅಮೋಘ ಪ್ರಾರಂಭ

ಮೈಸೂರು ಸಾಬು ನಟಿಸಿರುವ

ಬೋಲ್ತಾ ಜಂಗಲ್ ಹಿಂದಿ

ಭಯಂಕರ ದೃಶ್ಯದಿಂದಕೂಡಿದ ಅರಣ್ಯಚಿತ್ರ

[ವರ್ಣರಂಜಿತ ಚಿತ್ರ]

ವುಡ್‌ಲ್ಯಾಂಡ್ಸ್

21—11—52 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ನೌಬಹಾರ್ ಹಿಂದಿ

ಭೂಮಿಕೆ:—ಅಶೋಕ್ ಕುಮಾರ್ ನಳಿನಿಜಯವಂತ್, ಕುಲ್‌ದೀಪ್.

ಪ್ರಕಾಶಕರು:— ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಕಾ. ಸುಬ್ಬರಾವ್

ಮೋಹರ್ ಮುದ್ರಣಾಲಯ, ಮೈಸೂರು.

ರಾಜಕಮಲ್, ಮೈಸೂರು

28—11—52 ರಿಂದ

ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಜೈಮಿನಿಯವರ

ಚೆನ್ನಮ್ಮಕಥಾ

[ತೆಲುಗು]

ಭೂಮಿಕೆ:— ಕೃಷ್ಣಕುಮಾರಿ, ಶೇಷಮಾಂಬ, ಬೇಬಿ ಅನ್ನಪೂರ್ಣ, ಡಾ|| ಸುಬ್ಬರಾವ್, ಶಿವರಾವ್

ಫೋನ್ 574 ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 81

೨೮-೧೧-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕಾರ್ಗತ್ತಲೆಯಿಂದ ಜನರನ್ನು ಮುಕ್ತಮಾಡಬೇಕು

ಸಂಸ್ಕೃತಿ ಪ್ರಸಾರ ಸಮಾರಂಭದಲ್ಲಿ ಮಹಾರಾಜರ ಮನವಿ

ಮೈಸೂರು ೨೮

ಸಂಸ್ಥಾನಾದ್ಯಂತ ಸರ್ಕಾರದವರು ಕೈಗೊಂಡಿರುವ ಸಂಸ್ಕೃತಿ ಪ್ರಸಾರ ಯೋಜನೆಯ ಪ್ರಾರಂಭೋತ್ಸವವನ್ನು ನಿನ್ನೆ ಸಂಜೆ ನಂಜನಗೂಡಿನ ರೆಸಿಡೆನ್ಸಿ ಭವನದಲ್ಲಿ ಪ್ರಭುಗಳುನೆರವೇರಿಸಿದರು. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆವಹಿಸಿದ್ದರು

ಪ್ರಭುಗಳ ಭಾಷಣ:—

ಪ್ರಾರ್ಥನೆಯಾದನಂತರ ಶ್ರೀಮನ್ಮಹಾರಾಜರು ಭಾಷಣಮಾಡಿ ಈರೀತಿ ತಿಳಿಸಿದರು:—

ನಮ್ಮ ದೇಶದ ಸಂಸ್ಕೃತಿಯು ಬಹಳ ಪ್ರಾಚೀನವಾದ ಮತ್ತು ಶ್ರೇಷ್ಠವಾದ ಸಂಸ್ಕೃತಿ ಹಲವಾರು ದೇಶಗಳ ಸಂಸ್ಕೃತಿಗಳು ಅಳಿಸಿಹೋದರೂ ಭಾರತೀಯಸಂಸ್ಕೃತಿಯು ಮಾತ್ರ ಸ್ಫೂರ್ತಿದಾಯಕವಾಗಿಯೂ ಸಜೀವವಾಗಿಯೂ ಇದ್ದು ಪ್ರಪಂಚದಲ್ಲಿ ಭಾರತಕ್ಕೆ ಹೆಮ್ಮೆ ಗೌರವವನ್ನು ದೊರಕಿಸಿ ಕೊಟ್ಟಿದೆ. ನಮ್ಮ ಪೂರ್ವಿಕರು ಕೇವಲ ಐಹಿಕ ಸಂಪತ್ತಿನಿಂದ ತೃಪ್ತರಾಗದೆ ಪಾರಮಾರ್ಥಿಕ ಸಂಪತ್ತನ್ನು ವೃದ್ಧಿ ಮಾಡಿಕೊಳ್ಳಲು ದೇಶದ ಸಂಸ್ಕೃತಿಯನ್ನು ರೂಪಿಸಿದರು.

ರಾಮಾಯಣ, ಮಹಾಭಾರತ, ಭಾಗವತ, ಶಿವಚರಣ, ಹರಿದಾಸರ ಕೃತಿ ಮತ್ತು ಗೀತಾಗಳು ನಮ್ಮ ಸಂಸ್ಕೃತಿಯ ಆಗರಗಳಂತೆ ಬೆಳಗುತ್ತಿವೆ ಜನರಲ್ಲಿ ಧಾರ್ಮಿಕ ಪ್ರವೃತ್ತಿ, ನೀತಿ, ನಿಷ್ಠೆ, ದೈವಭಕ್ತಿ, ಭೂತದಯೆ, ಸತ್ಯಪ್ರಿಯತೆ, ವಿಶ್ವಪ್ರೇಮ ಮುಂತಾದ ಸದ್ಗುಣಗಳು ಬೆಳೆಯಲು ಸಹಾಯವಾಗುತ್ತದೆ. ಅದರ ಮಾದರಿಯನ್ನು ಅನುಸರಿಸುವುದರಿಂದ ಜನರ ನಡೆನುಡಿಗಳು ಶಾಶ್ವತವಾಗಿಯೇ ಸಂಸ್ಕೃತವಾಗುತ್ತವೆ. ಮತ್ತು ದೇಶೋನ್ನತಿ ಸಾಧನೆಗೆ ಸಹಾಯವಾಗುತ್ತದೆ,

ಆದರೆ ಈಚೆಗೆ ಬಹುಕಾಲದಿಂದಲೂ ಅವುಗಳ ವಿಚಾರಕ್ಕೆ ತಕ್ಕಷ್ಟು ಗಮನ ಕೊಡಲಿಲ್ಲ ಕಳೆದ ಶತಮಾನದಲ್ಲಿ ಪಾಶ್ಚಾತ್ಯ ವಿದ್ಯಾಭ್ಯಾಸದ ಫಲವಾಗಿಯೂ ಮತ್ತಿತರ ಕಾರಣಗಳಿಂದಲೂ ನಮ್ಮ ಸಂಸ್ಕೃತಿಯ ಕಡೆಗೆ ದಿನೇದಿನೇ ಅಭಿಮಾನವು ಕುಂಠಿತವಾಗುತ್ತಾಬಂದಿದೆ. ಜನತೆಯಲ್ಲಿ ಮನೋದೌರ್ಬಲ್ಯವು ಬೆಳೆದುಬಂದಿದೆ. ಧಾರ್ಮಿಕ ವಿಚಾರಗಳನ್ನು ಗ್ರಹಿಸುವ ಶಕ್ತಿಯೂ ಸಹ ಕುಗ್ಗಿ ಒಂದು ವಿಧವಾದ ಮಸುಕು ಆವರಿಸಿದೆ. ಭಾರತದ ಸಂಸ್ಕೃತಿಯ ವಿಚಾರದಲ್ಲಿ ಅಭಿಮಾನವೂ, ಹಾಗೂ ನಮ್ಮ ಧರ್ಮದರೂಪ, ಆದರ್ಶ ಇವುಗಳ ವಿಚಾರದಲ್ಲಿ ತಿಳುವಳಿಕೆಯೂ ಕಡಿಮೆಯಾಗಿ ಶೋಚನೀಯವಾದ ವಾತಾವರಣವೊಂದು ನಮ್ಮನ್ನು ಆವರಿಸಿದೆ. ಈಒಂದು ಕಾರ್ಗತ್ತಲೆಯಿಂದ ಜನಾಂಗವನ್ನು ಮುಕ್ತರನ್ನಾಗಿಮಾಡಿ ಸ್ಫೂರ್ತಿಯನ್ನು ಜನರಲ್ಲಿ ತುಂಬುವುದು ಸರ್ಕಾರದ ಮತ್ತು ನಾಯಕರ ಕರ್ತವ್ಯವಾಗಿದೆ. ನಮ್ಮ ಸರ್ಕಾರದವರು ಈ ವಿಚಾರದಲ್ಲಿ ತೀವ್ರಾಸಕ್ತಿಯನ್ನು ವಹಿಸಿ ಈ ಯೋಜನೆಯೊಂದನ್ನು ಸಿದ್ಧಗೊಳಿಸಿರುವುದಕ್ಕಾಗಿ ನಮ್ಮ ಸರ್ಕಾರವನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

ಮೈಸೂರಿನಲ್ಲಿ

ಇದೇರೀತಿಯ ಮೊಲ್ಕಂಡ ಸಮಾರಂಭವನ್ನು ಮೈಸೂರುನಗರದಲ್ಲೂ ಆಚರಿಸಲಾಯಿತು ನಿನ್ನೆ ಸಂಜೆ ಪುರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸಮಾರಂಭವು ಟೌನ್‌ಹಾಲಿನಲ್ಲಿ ನಡೆಯಿತು. ಅರಮನೆ ಧರ್ಮಾಧಿಕಾರಿ ಶ್ರೀ ಹೆಚ್. ಎನ್. ರಾಘವೇಂದ್ರಾಚಾರ್ಯರು ಭಾಷಣಮಾಡಿದರು ಶ್ರೀ ಕೃಷ್ಣಗಿರಿ ಕೃಷ್ಣರಾಯರು ಭಾರತ ಪಠಣ ಮಾಡಿದರ

[ಹಿಂದಿನ ಪುಟದಿಂದ]

ಅನಂತರ ಮೋಟಗಾನಹಳ್ಳಿ ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳಿಂದಭಾರತವಾಚನ, ಶ್ರೀಮತಿ ಸ್ವರ್ಣಮ್ಮನವರಿಂದ ಶಿವಶರಣಾಕೃತಿ, ಶ್ರೀ ಮಹದೇವಸ್ವಾಮಿಗಳಿಂದ ದೇವಿಮಹಾತ್ಮೆ ಪಠಣವಾಯಿತು. ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಭಾರತದ ಸಂಸ್ಕೃತಿಯ ವಿಷಯವಾಗಿ ಭಾಷಣ ಮಾಡಿದರು.

ಅನಂತರ ಮುಖ್ಯಮಂತ್ರಿಗಳು ತಮ್ಮ ಪರಿವಾರದೊಡನೆ ಶ್ರೀಕಂಠೇಶ್ವರದೇವಸ್ಥಾನಕ್ಕೆ ಭೇಟಿ ಇತ್ತು ಪೂಜೆಮಾಡಿಸಿದರು.

ಮತದಾನ ಪೆಟ್ಟಿಗೆಗೆ ಕ್ಷೀರಾಭಿಷೇಕ

ರಾಯಪುರದಲ್ಲಿ ವಿಧಾನಸಭಾಸ್ಥಾನಕ್ಕೆ ಚುನಾವಣೆ ನಡೆಯುವಾಗ ಮತದಾರರೊಬ್ಬನು ಮತದಾನಚೀಟಿಯನ್ನು ಪೆಟ್ಟಿಗೆಯಲ್ಲಿ ಹಾಕುವಾಗ ಆಪೆಟ್ಟಿಗೆಗೆ ಪೂಜೆ ಮಾಡಿ ಹಾಲಿನ ಅಭಿಷೇಕ ಮಾಡಿದುದು ವರದಿಯಾಗಿದೆ. ಮತದಾನವಾದನಂತರ ಪೆಟ್ಟಿಗೆಯನ್ನು ರಾಯಪುರ ಟ್ರೆಷರಿಗೆ ಕೊಂಡೊಯ್ಯುವಾಗ್ಗೆ ಹಾಲಿನ ತೊಟ್ಟುಗಳು ಬೀಳುತ್ತಿದ್ದುವು. ಪೆಟ್ಟಿಗೆಯನ್ನು ಬಗ್ಗಿಸಲು ಧಾರಾಕಾರವಾಗಿ ಹಾಲು ಹೊರಕ್ಕೆ ಸುರಿಯಿತು.

ರಾಜೀನಾಮೆ ಹಿಂದಕ್ಕೆ

ಪ್ರಜಾಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎ.ಜಿ. ಟ್ರಿಗ್ವಿಲೀಯವರು ತಮ್ಮ ಸ್ಥಾನಕ್ಕೆ ಇತ್ತಿರುವ ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಂಡು ಇನ್ನು ೧೯೫೩ನೇ ಫೆಬ್ರವರಿ ಅಂತ್ಯದವರೆಗೆ ಕೆಲಸಮಾಡಲು ಒಪ್ಪಿರುವುದಾಗಿ ಗೊತ್ತಾಗಿದೆ. ಈ ಸ್ಥಾನಕ್ಕೆ ತಕ್ಕವರು ಸಿಗದಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಕಾಂಗ್ರೆಸ್ಸಿನವರಿಗೆ ಸೂಚನೆ

ಆರ್.ಎಸ್.ಎಸ್. ಸಂಸ್ಥೆಯು ಪ್ರಾರಂಭಿಸಿರುವ ಗೋಹತ್ಯ ವಿರೋಧ ಚಳುವಳಿಯಲ್ಲಿ ಕಾಂಗ್ರೆಸ್ಸಿನವರು ಯಾವವಾತ್ರವನ್ನೂ ವಹಿಸ ಕೂಡದೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಎಲ್ಲಾ ಪ್ರಾಂತೀಯ ಕಾಂಗ್ರೆಸ್ ಸಮಿತಿಗಳಿಗೆ ಸೂಚನೆಯನ್ನಿತ್ತಿದೆ.

ಹರಿಜನಾಭಿವೃದ್ಧಿ

ಪಾನನಿರೋಧ ಚಳುವಳಿಯು ಪೂರ್ಣವಾಗಿ ಯಶಸ್ವಿಯಾದರೆ ಮಾತ್ರ ಹರಿಜನ ಅಭಿವೃದ್ಧಿಯಾಗುತ್ತದೆ ಆದ್ದರಿಂದ ಹರಿಜನರೆಲ್ಲರೂ ಪಾನನಿರೋಧ ಯಶಸ್ವಿಯಾಗಲು ಸಹಕರಿಸಬೇಕೆಂದು ಮದ್ರಾಸಿನ ಸಚಿವ ಶ್ರೀ ಪಳನಿಸ್ವಾಮಿ ಗೌಂಡರು ಹೇಳಿರುವರು.

ಮೈಸೂರಿಗೆ ಕೊಡಗಿನ ಅಕ್ಕಿ

ಕೊಡಗಿನಿಂದ ಸಾಧ್ಯವಾದಷ್ಟು ಅಕ್ಕಿಯನ್ನು ಮೈಸೂರಿಗೆ ಸಂಬರಾಜು ಮಾಡುವುದಾಗಿ ಅಲ್ಲಿಯ ಗೃಹ ಸಚಿವ ಶ್ರೀ ಮಲ್ಲಪ್ಪನವರು ತಿಳಿಸಿದ್ದಾರೆ.

ಮುಖ್ಯ ಮಂತ್ರಿಗಳಲ್ಲಿ ವಿದ್ಯಾರ್ಥಿಗಳ ನಿಯೋಗ

ಮೈಸೂರು ೨೮

ನಿನ್ನೆ ಮಹಾರಾಜಾಕಾಲೇಜಿನ ಮುಂಭಾಗದಲ್ಲಿ ವಿದ್ಯಾರ್ಥಿಗಳ ಸಭೆ ನಡೆದು ಕಾಫಂಡ್ ಹಾಲಿನ ಸಂಬಂಧದಲ್ಲಿ ನಡೆದ ಘಟನೆಯ ವಿಚಾರದ ಮೊಕದ್ದಮೆಗಳನ್ನು ಮುಂದಿನ ತಿಂಗಳು ೩ನೇ ತಾರೀಖಿನೊಳಗಾಗಿ ವಾಪಸು ತೆಗೆದುಕೊಳ್ಳದಿದ್ದಲ್ಲಿ ಇದಿನ ಮುಖ್ಯ ಮಂತ್ರಿಗಳು ಮಹಾರಾಜಾ ಕಾಲೇಜಿನಲ್ಲಿ ಮಾತುಗಳ ಬಾಧಿತನ ಬಹಿಷ್ಕರಿಸಿ ಕಪ್ಪು ಬಾವುಟ ಪ್ರದರ್ಶನ ಮಾಡಬೇಕೆಂದು ನಿರ್ಧರಿಸಿರುವುದನ್ನು ಮುಖ್ಯ ಮಂತ್ರಿಗಳಿಗೆ ತಿಳಿಸಲು ಡಿಸೆಂಬರ್ ೧ನೇ ತಾರೀಖು ವಿದ್ಯಾರ್ಥಿ ನಿಯೋಗವೊಂದು ಅವರಲ್ಲಿ ಹೋಗಲಿದೆ.

ಮಾರಾಟತೆರಿಗೆ ಅಧಿಕಾರಿಗಳು

ಬೆಂಗಳೂರು ನ. ೨೮

ಮೈಸೂರುನಗರ ಸರ್ಕಲ್ಲಿನ ಮಾರಾಟತೆರಿಗೆ ಅಧಿಕಾರಿಗಳಾದ ಶ್ರೀ ಎನ್. ಸಿದ್ದಯ್ಯನವರನ್ನು ಬೆಂಗಳೂರು ೩ ನೇ ಸರ್ಕಲ್ಲಿಗೆ ಅಲ್ಲಿಂದ ಶ್ರೀ ಎಚ್.ಎಸ್.ನುಲ್ಲರಾಜೇಅರಸುರವರನ್ನು ಮೈಸೂರಿಗೆ ವರ್ಗಾಯಿಸಲಾಗಿದೆ.

ಸಂಬಳದೊಡನೆ ತುಟ್ಟಿಭತ್ಯ ಐಕ್ಯ

ತುಟ್ಟಿಭತ್ಯದಲ್ಲಿ ಕೆಲವು ಅಂಶವನ್ನು ಸಂಬಳದೊಡನೆ ಐಕ್ಯಗೊಳಿಸಬೇಕೆಂದು ಗಾಡ್ಗಿಲ್ ಸಮಿತಿಯು ಸಲಹೆಯನ್ನು ಕೇಂದ್ರ ಸರ್ಕಾರವು ಒಪ್ಪಿದೆಯೆಂದೂ ಆ ಬಗ್ಗೆ ಒಂದು ನಿರ್ಣಯವನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗುವುದಾಗಿ ಗೊತ್ತಾಗಿದೆ.

ವಿದ್ಯಾರ್ಥಿಗಳಿಗೆ ಕಡ್ಡಾಯ ದೇಹದುಡಿಮೆ

ಪ್ರೌಢಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆಲ್ಲಾ ವರ್ಷಕ್ಕೊಮ್ಮೆ ೧೫ ದಿನಕಾಲ ದೇಹದುಡಿಮೆಯನ್ನು ಕಡ್ಡಾಯವನ್ನಾಗಿ ಮಾಡಲು ಕೊಡಗು ಸರ್ಕಾರವು ನಿರ್ಧರಿಸಿದೆ. ರಸ್ತೆರಿಪೇರಿ, ಗ್ರಾಮ ನೈರ್ಮಲ್ಯ, ಕೆರೆ ಶುದ್ಧೀಕರಣ ಮುಂತಾದ ಕಾರ್ಯಗಳೆಲ್ಲವೂ ಇವರಲ್ಲಿ ಸೇರಿವೆ.

ದಕ್ಷಿಣಭಾರತ ಪ್ರವಾಸ

ಪಾರ್ಲಿಮೆಂಟಿನ ಅಧ್ಯಕ್ಷರಾದ ಶ್ರೀ ಮಾವಲಂಕರ್‌ರವರು ಈ ಸಾಲಿನ ಪಾರ್ಲಿಮೆಂಟು ಅವಧಿ ಮುಗಿದನಂತರ ಡಿಸೆಂಬರ್ ೨೦ ರಿಂದ ಜನವರಿ ೧೦ ವರೆಗೆ ದಕ್ಷಿಣ ಭಾರತಪ್ರವಾಸ ಕೈಗೊಳ್ಳುವರೆಂದು ಗೊತ್ತಾಗಿದೆ.

ಭಾರತ ಸಲಹೆಯನ್ನು ವಿಶ್ವಸಂಸ್ಥೆ ಅಂಗೀಕರಿಸಬೇಕು

ವಿಶ್ವಸಂಸ್ಥೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಲಂಡನ್ನಿಗೆ ಹಿಂತಿರುಗಿದ ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಮಿ|| ಈಡನ್‌ರವರು ನಿನ್ನೆಯದಿನ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ, ಕೊರಿಯಾ ಬಿಕ್ಕಟ್ಟು ಪರಿಹಾರಕ್ಕೆ ಭಾರತವು ಮಂಡಿಸಿರುವ ನಿರ್ಣಯವನ್ನು ವಿಶ್ವಸಂಸ್ಥೆಯು ಅಂಗೀಕರಿಸಿ ಅದರಂತೆ ನಡೆದರೆ ಕೊರಿಯಾ ಯುದ್ಧವು ಮುಕ್ತಾಯವಾಗುವುದರಲ್ಲಿ ಸಂದೇಹವಿಲ್ಲ ಅವಶ್ಯಕವಿದ್ದರೆ ಈ ಸಲಹೆಯಲ್ಲಿ ಕೆಲವು ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಳ್ಳಬಹುದು. ಆದರೆ ಮೂಲತತ್ವದಲ್ಲಿ ಬದಲಾವಣೆಯೇನೂ ಮಾಡಬೇಕಾಗಿಲ್ಲ ಎಂದು ತಿಳಿಸಿರುತ್ತಾರೆ

ಅಧಿಕಾರ ವರ್ಗ

ಮೈಸೂರು ೨೮

ಪ್ರಜಾಪರಿಷತ್ತಿನ ಮೈಸೂರು ಪ್ರಾಂತೀಯ ಕಾರ್ಯಕಾರಿ ಸಮಿತಿಯು ೨೧ ನೇ ತಾರೀಖು ನಡೆದು ಈ ಕೆಳಗೆ ನಮೂದಿಸಿರುವವರು ಕಾರ್ಯಕಾರಿ ಸಮಿತಿಯ ಸ. ಮೈಸೂರಿಗೆ ರಚಿಸಿದೆ ಶ್ರೀಗಳಾದ ಬಿ ಜಿ ದಾಸ್, ಬಿ ಕೆ ಗೌಡ, ಬಿ ಶ್ರೀಕಂಠಪ್ಪ, ಶ್ರೀಕಂಠವರ್ಮ, ಎಂ.ಎಲ್ ತಿಮ್ಮಯ್ಯ, ಬಿ. ಸುಬ್ಬಣ್ಣ, ಕೆ ಕಾಳಯ್ಯ, ಕೆ. ವಿಶ್ವನಾಥ್, ಟಿ ವಿ ಶ್ರೀನಿವಾಸರಾವ್. ಎಸ್ ಎಂ. ಸಿದ್ದಯ್ಯ ಮತ್ತು ವಿಜಾರ್‌ಸೂರ್ ಹುಸೇನ್ (ಕಾರ್ಯದರ್ಶಿ) ಹೊಸ ಕಾರ್ಯಕಾರಿ ಸಮಿತಿಯು ನಾಳೆ ಬೆಳಗ್ಗೆ ಅಶೋಕಾ ರಸ್ತೆಯಲ್ಲಿರುವ ತನ್ನ ಕಛೇರಿಯಲ್ಲಿ ಸಭೆ ಸೇರಲಿದೆ

—ಮೈಸೂರು ಪೇಟೆಧಾರಣೆ—

ತಾರೀಖು ೨೭-೧೧-೫೨

ಪಲ್ಲ	ರೂ-	ಆ.	ರೂ-	ಆ
ಕಡಲೇಕಾಯಿ	೧೧-೧೪		೨೦	
ಎಳ್ಳು	೬೫-೨			
ಹರಳು	೪೩-೧೨		೪೫	೧೦
ಹುಚ್ಚೆಳ್ಳು	೫೬-೧೨		೫೯	೬
ಹುರುಳಿ	೫೪-೧೪		೫೭	
ಹೆಸರು	೫೨-		೫೩	೮
ಅಲಸಂದೆ	೫೧-೨		೬೬	೮
ಉದ್ದು	೬೮-		೬೮	೮
ಹೊಂಗೆಬೀಜ				
ಮೆಣಸಿನಕಾಯಿ	೮-೮		೧೬	೧೨
ಹುಣಸೆಹಣ್ಣು	-			
ಸೀಗೇಕಾಯಿ	-			
ಬೆಲ್ಲ	-			
ತೆಂಗಿನಕಾಯಿ	೧೬೯		೨೧೫	

ಕೊಡಗಿಗೆ ಜೋಗ್‌ನಿಂದ ವಿದ್ಯುಚ್ಛಕ್ತಿ

ಕೊಡಗಿಗೆ ವಿದ್ಯುಚ್ಛಕ್ತಿಯನ್ನು ಜೋಗ್ ವಿದ್ಯುಕ್ಕೇಂದ್ರದಿಂದ ಸರಬರಾಯಿ ಮಾಡುವುದಾಗಿ ಮೈಸೂರು ಸರ್ಕಾರವು ಆಶ್ವಾಸನ ಕೊಟ್ಟಿರುವುದಾಗಿ ಕೊಡಗಿನ ಒಳಾಡಳಿತ ಸಚಿವರು ಹೇಳಿದ್ದಾರೆ.

† ಮೈಸೂರು ಮಂಡಿಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚಾಮೇಶ್ವರ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ಶಿವಲಿಂಗ ಸ್ವಾಮಿ ಹಿರೇಮಠರವರಿಂದ ಸುಮಾರು ಒಂದೂವರೆ ತಿಂಗಳಿಂದ ಶಿವಕಥೆ ಹರಿಕಥೆಗಳು ನಡೆದು ಇದೇ ಸಂಜೆ ಕೊನೆ ದಿನಗಳ ಕ್ರಮ ... ಗಿರಿಜಾಕಲ್ಯಾಣವೆಂಬ ಶಿವಕಥೆ ... ಅಮ್ಮನವರಿಗೆ ಉತ್ಸವ ಪಾರ್ವತಿ ಅಲಂಕಾರವೂ ನಾಳೆ ಬೆಳಗ್ಗೆ ಇದೇ ಬೀದಿಯಲ್ಲಿರುವ ಶ್ರೀ ರಂಗಯ್ಯನವರ ಮನೆಯಲ್ಲಿ ಶ್ರೀ ಹನುಮಂತ ಪ್ರಯುಕ್ತ ಶ್ರೀ ವಸಂತ ವೈಣಿಕ ವಿದ್ವಾನ್ ಡಿ. ರಂಗರಾವ್ ರವರ ವೀಣಾವಾದನ ನಡೆಯುತ್ತದೆ.

ಅಪೇರ

21—11—52 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ವಳಯಾಪತಿ

[ತಮಿಳು]

ಪಾತ್ರ:- ಜಯಲಕ್ಷ್ಮಿ, ಶೇಖರ್, ಪುಳಿಮೂಟೆ.

ವುಡ್‌ಲ್ಯಾಂಡ್ಸ್

29—11—52 ರಿಂದ ಅಮೋಘ ಪ್ರಾರಂಭ

ಇನ್ಸಾಫ್ ಹಿಂದಿ

ಭೂಮಿಕೆ:-ಪೃಥ್ವಿರಾಜ್, ರಾಗಿಣಿ, ಕಮಲ್‌ಕಪೂರ್.

ಪ್ರಕಾಶಕರು:— ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಶಾ. ಸುಬ್ಬರಾವ್

ಮೋಹನ ಮುದ್ರಣಾಲಯ, ಮೈಸೂರು.

ರಾಮಾಯಣ ಮಹಾಭಾರತಗಳಿಂದ ತಮ್ಮ ರೀತಿನೀತಿ ಬದಲಾವಣೆ

ಮುಖ್ಯಮಂತ್ರಿ ಹನುಮಂತಯ್ಯನವರ ಹೇಳಿಕೆ

ಮೈಸೂರು ೨೮

ನಿನ್ನೆ ಸಂಜೆ ಸಂಜನಗೂಡಿನಲ್ಲಿ ನಡೆದ ಸಂಸ್ಕೃತಿ ಪ್ರಸಾರ ಯೋಜನೆಯ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ, ಶ್ರೀ ಕೆ ಹನುಮಂತಯ್ಯನವರು ಈರೀತಿ ಭಾಷಣಮಾಡಿದರು.

ಜನ ಜೀವನದ ಮಟ್ಟವನ್ನು ಹೆಚ್ಚಿಸುವುದು ಎಲ್ಲ ಸರಕಾರಗಳ ಕಾರ್ಯನೀತಿಯಾಗಿದೆ. ಅದನ್ನು ಸಾಧಿಸಲು ಪಂಚವಾರ್ಷಿಕ ಮುಂತಾದ ಯೋಜನೆ ಕೈಗೊಳ್ಳಲಾಗಿದೆ ಆದರೆ ಸರ್ಕಾರ ನೈತಿಕ ಜೀವನದ ಮಟ್ಟವನ್ನು ಹೆಚ್ಚಿಸುವ ಗೊಡವೆಗೇ ಹೋಗಿಲ್ಲ

ನವೀನ ಕಾಲದಲ್ಲಿ ಧರ್ಮ ಗ್ರಂಥಗಳ ಶ್ರವಣ ಮತ್ತು ದೇವಾಲಯಕ್ಕೆ ಹೋಗುವುದು ಕಡಿಮೆಯಾಗುತ್ತಿದೆ ಇದರ ಫಲವಾಗಿ ಜನರ ನೀತಿಯ ಮಟ್ಟವು ಇಂದು ಮನಶ್ಶಾಂತಿಯು ಕಳೆಯುತ್ತಿದೆ. ಎಲ್ಲೆಲ್ಲಿಯೂ ಅಸಮಾಧಾನ, ಅತೃಪ್ತಿ, ಆರೋಪಣೆ, ಹಿಂಸೆ, ನಿಂದೆ, ಸ್ವಾರ್ಥ ಇತ್ಯಾದಿ ಗುಣಗಳು ಬೆಳೆಯುತ್ತಿವೆ. ದೇಶದಲ್ಲಿ ಅನೀತಿ ಹೆಚ್ಚಿದಷ್ಟೂ ಕಷ್ಟಕಾರ್ಪಣ್ಯಗಳು ಹೆಚ್ಚುತ್ತವೆ ಮತ್ತು ಪಾಪ ಹೆಚ್ಚಿದಷ್ಟೂ ಕ್ಷಾಮ ಡಾಮರಗಳು ಬರುತ್ತವೆ.

ಆದ್ದರಿಂದ ಇದನ್ನು ಹೋಗಲಾಡಿಸಿ, ಜನರ ನೈತಿಕ ಮಟ್ಟವನ್ನೂ ಧರ್ಮಪ್ರವೃತ್ತಿಯನ್ನೂ ಉತ್ತಮಪಡಿಸಲು ಈ ಪ್ರಸಾರ ಕಾರ್ಯಕ್ರಮ ಸರ್ಕಾರ ಕೈಗೊಂಡಿದೆ ಮಹಾಭಾರತ ಮುಂತಾದ ಸದ್ಗ್ರಂಥಗಳ ಪಠನದಿಂದ ಜೀವನ ಮಟ್ಟವು ಏರುತ್ತದೆ.

ಪ್ರಪಂಚದಲ್ಲಿ ಎಲ್ಲಕಾರ್ಯಗಳೂ ದೇವರಿಂದಲೇ ನಡೆಯುವುದು ಅದಕ್ಕೆ ಅನುಗುಣವಾಗಿ ನಡೆಯಬೇಕೆಂಬುದೇ ಪುರಾಣ, ಭಾಗವತಗಳ ಮುಖ್ಯಸಾರಾಂಶ. ಆದ್ದರಿಂದ ಜನರು ಅದರಲ್ಲಿ ಆಸಕ್ತಿತೋರಿ ಅವುಗಳನ್ನು ಅನುಸರಿಸಬೇಕೆಂದು ತಿಳಿಸಿದರು

ಈ ಸಂಸ್ಕೃತಿಯ ಬಗ್ಗೆ ಶ್ರೀಮನ್ಮಹಾರಾಜರವರಲ್ಲಿರುವ ಆಸಕ್ತಿ, ಅನುಷ್ಠಾನ ಮುಂತಾದ ವಿಷಯಗಳನ್ನು ಪ್ರಸ್ತಾಪಿಸಿ, ಅವರು ರಾಜಪ್ರತಿನಿಧಿಗಳಾಗಿರುವ ಮಹಾಸ್ಥಾನದಲ್ಲಿ ಸಾಹಿತ್ಯದಲ್ಲಿ ಶ್ರೀಮನ್ಮಹಾರಾಜರವರು ಶ್ರದ್ಧೆ ವಹಿಸಲು ಆಸಮರ್ಥ್ಯ ... ತಮ್ಮ ಮನಸ್ಸು ಹುಟ್ಟಬೇಕಾದರೆ ಅದು ಶ್ರೀಮನ್ಮಹಾರಾಜರ ಪ್ರೇರೇಪಣೆಯಿಂದಲೇ. ತಾವು ಹಿಂದೆ ಕಾರಾಗೃಹದಲ್ಲಿದ್ದಾಗಲೇ ರಾಮಾಯಣ, ಮಹಾಭಾರತ ಮುಂತಾದುವುಗಳನ್ನು ಓದಿದುದರಿಂದ ತಮ್ಮ ರೀತಿನೀತಿಗಳೇ ಬದಲಾಯಿಸಿದುವು. ಅಂದಿನಿಂದ ತಮಗೆ ಇತ್ತೀಚೆಗೆ ಗ್ರಂಥಗಳನ್ನು ಕಲಿಸಿಕೊಡಲಾಯಿತೆಂದೂ ಹೇಳಿದರು-

[ಮುಂದಿನಪುಟ ನೋಡಿ]

★ ಹರಾಜು ನೋಟೀಸ್ ★

—§‡§—

ಅರಮನೆ ಮೋತೀಖಾನಾ ಹಿಂಭಾಗದಲ್ಲಿರುವ ಹೊಸದಾಗಿ ಕಟ್ಟಿರುವ ಷಾಪ್ ಗೋಡೌನ್‌ಗಳನ್ನು ಬಾಡಿಗೆಗೆ ಕೊಡಲು ಟೆಂಡರುಗಳನ್ನು ಸ್ವೀಕರಿಸಲು ಇದೇ ಮಾಹೆ 28 ನೇ ತಾರೀಖು ಗೊತ್ತುಪಡಿಸಲಾಗಿತ್ತಷ್ಟೆ.

ಆದರೆ ಮಹಾಜನಗಳ ಕೋರಿಕೆ ಮೇರೆ ಸದರಿ ಗೋಡೌನ್‌ಗಳ ಬಾಡಿಗೆಯನ್ನು ಹರಾಜು ಮೂಲಕ ವಿಲೇವಾರಿ ಮಾಡಲು ಸದರಿ ಬಿಲ್ಡಿಂಗ್ ಬಳಿ ಇದೇ ಮಾಹೆ 30 ನೇ ತಾರೀಖು ಭಾನುವಾರ ಪ್ರಾತಃಕಾಲ 9 ಘಂಟೆಯಿಂದ ಹರಾಜು ನಡೆಸಲು ಏರ್ಪಡಿಸಿರುತ್ತೆ. ಹೆಚ್ಚಿನ ವಿವರಗಳನ್ನು ಅರಮನೆ ಇಂಜನಿಯರವರ ಆಫೀಸಿನಲ್ಲಿ ತಿಳಿಯಬಹುದು.

H. K. ಪಂಡಿತಾರಾಧ್ಯ,

ಪ್ಯಾಲೆಸ್ ಇಂಜನಿಯರ್.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ ಸಂಪುಟ 3 ಸಂಚಿಕೆ 82

೨೯-೧೧-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಸರ್ಕಾರಿ ಕೆಲಸಕ್ಕೆ ಶಿಫಾರ್ಸು ಅನರ್ಹತೆ

ಅರ್ಜಿದಾರರಿಗೆ ಎಚ್ಚರಿಕೆ

ಬೆಂಗಳೂರು ನ. ೨೮

ಸರ್ಕಾರಿ ಕೆಲಸಗಳಿಗೆ ಅರ್ಜಿ ಹಾಕಿಕೊಳ್ಳುವ ಉಮೇದುವಾರರು ಮೈಸೂರು ಪಬ್ಲಿಕ್ ಸರ್ವಿಸ್ ಕಮೀಷನ್ ಸದಸ್ಯರಿಗೆ ಯಾವ ರೀತಿಯಾದ ಶಿಫಾರಸುಗಳನ್ನೂ ತರಕೂಡದೆಂದೂ ಹಾಗೆ ಶಿಫಾರಸು ತಂದಲ್ಲಿ ಅದು ಒಂದು ಅನರ್ಹತೆಯಾಗಿ ಪರಿಗಣಿಸಲಾಗುತ್ತದೆಯೆಂದು ಮೈಸೂರು ಪಬ್ಲಿಕ್ ಸರ್ವಿಸ್ ಕಮೀಷನ್ ಒಂದು ಪತ್ರಿಕಾಪ್ರಕಟಣೆ ಹೊರಡಿಸಿ, ಅರ್ಜಿ ಹಾಕಿಕೊಳ್ಳುವವರಿಗೆ ಒಂದು ಎಚ್ಚರಿಕೆಯನ್ನಿತ್ತಿದೆ.

ಸಾರ್ವಜನಿಕರಲ್ಲಿ ಕೆಲವರೂ ಮತ್ತು ಕೆಲವು ಶಾಸನಸಭಾ ಸದಸ್ಯರು ಹಲವು ಅರ್ಜಿದಾರರ ಪರವಾಗಿ ಪಬ್ಲಿಕ್ ಸರ್ವೀಸ್ ಕಮೀಷನ್ ಸದಸ್ಯರಮೇಲೆ ಪ್ರಭಾವಬೀರುತ್ತಿರುವ ನಿದರ್ಶನಗಳಿವೆಯೆಂದೂ ಇದು ಸರಿಯಲ್ಲವೆಂದೂ ಈ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೊಹಲ್ಲಾ ದಿನಾಚರಣೆ

ಮೈಸೂರು ೨೮

ಮೈಸೂರು ಪುರಸಭೆಯ ಆಶ್ರಯದಲ್ಲಿ ಚಾಮರಾಜಮೊಹಲ್ಲಾ ದಿನಾಚರಣೆಯು ಮುಂದಿನ ತಿಂಗಳು ೩ನೇ ತಾರೀಖು ನಡೆಯುತ್ತದೆ,

ಇದರ ಅಂಗವಾಗಿ ಅದಿನ ಬೆಳಗ್ಗೆ ೫-೬ ಗಂಟೆಯಿಂದ ೯-೩೦ ಗಂಟೆಯವರೆಗೆ ಮೊಹಲ್ಲಾ ನಿರ್ಮಲೀಕರಣ ಕೆಲಸ ನಡೆಯುತ್ತದೆ. ದೇವಿ ಹಾಕುವುದು, ಮಕ್ಕಳ ಪರೀಕ್ಷೆ ಮತ್ತು ಗರ್ಭಿಣಿಸ್ತ್ರೀಯರ ಪರೀಕ್ಷೆ ಆದಿಕರ್ನಾಟಕ ಪುರದಲ್ಲಿರುವ ಮಲ್ಲಮ್ಮ ಹಾಲಿನ ಕೇಂದ್ರದಲ್ಲಿ ನಡೆಯುವುದು.

ಸಂಜೆ ೬ ಘಂಟೆಗೆ ಆದಿಕರ್ನಾಟಕ ಪುರದ ಶ್ರೀ ಜಿ ಲಿಂಗಯ್ಯನವರ ಶಿಕ್ಷಣಾಲಯದಲ್ಲಿ ಪೌರಸಭಾಧ್ಯಕ್ಷರ ನೇತೃತ್ವದಲ್ಲಿ ಒಂದು ಬಹಿರಂಗ ಸಭೆ ಏರ್ಪಡಿಸಲಾಗಿದೆ.

ಗೀತಾ ಸಪ್ತಾಹ

ಗೀತಾ ಸಪ್ತಾಹದ ಪ್ರಯುಕ್ತ ಅಶೋಕರಸ್ತೆಯಲ್ಲಿರುವ ಮೈಸೂರು ಗೀತಾ ಪ್ರಚಾರಿಣಿ ಸಭೆಯ ಆಶ್ರಯದಲ್ಲಿ ಈಸಂಜೆ ೬ ಗಂಟೆಗೆ 'ಗೀತೆಯ ಸಾಮರಸ್ಯ' ವಿಷಯವಾಗಿ ಶ್ರೀ ಸ್ವಾಮಿ ಸೋಮನಾಥ ನಂದಜೀಯವರು ಮತ್ತು ಶ್ರೀ ಯಾಮುನಾಚಾರ್ಯರು ಭಾಷಣಮಾಡುತ್ತಾರೆ

ನಾಳೆ 'ಭಕ್ತಿಯೋಗ' ಎಂಬ ವಿಚಾರವಾಗಿ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಭಾಷಣಮಾಡುವರು

ಅರಗು ಮತ್ತು ಬಣ್ಣದ ಕಾರ್ಖಾನೆ ನೂತನ ಅಧ್ಯಕ್ಷ

ಮೈಸೂರು ಪುರಸಭೆಯ ಮಾಜಿ ಅಧ್ಯಕ್ಷರಾದ ಶ್ರೀ ಟಿ ನರಸಿಂಹಯ್ಯಂಗಾರ್‌ರನ್ನು ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯ ಅಧ್ಯಕ್ಷ ಮತ್ತು ಮ್ಯಾನೇಜಿಂಗ್ ಡೈರೆಕ್ಟರಾಗಿ ಸರ್ಕಾರವು ನೇಮಿಸಿದೆ-

ಬಾಡಿಗೆ ಹತೋಟಿ ಅಧಿಕಾರಿಗಳು

ನಗರದ ಅಡಿಷನಲ್ ಫಸ್ಟ್ ಮುನ್ಸಿಫ್‌ರಾದ ಶ್ರೀ ಟಿ ರಾಮಸ್ವಾಮಿಯವರನ್ನು ಮೈಸೂರುನಗರ ಬಾಡಿಗೆ ಹತೋಟಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ-

ನೂತನ ವರ್ತಕ ಸಂಘ

ಮೈಸೂರು ೨೮

ಸರ್ಕಾರವು ವಿಧಿಸಿರುವ ಮಾರಾಟತೆರಿಗೆ ಮತ್ತು ಆದಾಯತೆರಿಗೆ ತೊಂದರೆ ನಿವಾರಣೆಗಳನ್ನು ಸರಿಪಡಿಸಲು ಮೈಸೂರು ನಗರದ ವರ್ತಕರೆಲ್ಲರೂ ಸೇರಿ ಒಂದು ನೂತನ ಸಂಘವನ್ನು ಸ್ಥಾಪಿಸಿ, ತನ್ಮೂಲಕ ಎಲ್ಲಾ ವ್ಯವಹಾರಗಳನ್ನು ನಡೆಸಬೇಕೆಂದು ತೀರ್ಮಾನಿಸಿರುವುದರಿಂದ ನಾಳೆ ಬೆಳಗ್ಗೆ ೧೦ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರ್ ಹಾಲ್ ಮಹಡಿಯ ಮೇಲೆ ಒಂದು ಸಭೆಯನ್ನು ಏರ್ಪಡಿಸಲಾಗಿದೆ

ಸರ್ಕಾರಿ ಅಧಿಕಾರಿಗಳ ಆಸ್ತಿಗಳ ಬಗ್ಗೆ ವಿಚಾರಣೆ

ಸರ್ಕಾರಿ ಅಧಿಕಾರಿಗಳು ಮತ್ತು ರಾಜ್ಯಾಂಗ ಪ್ರಕಾರ ಅಧಿಕಾರದಲ್ಲಿರುವವರ ಆಸ್ತಿಪಾಸ್ತಿಗಳನ್ನು ವಿಚಾರಿಸಿ, ಅಧಿಕಾರದಲ್ಲಿಯೇ ವಿಶೇಷ ಆಸ್ತಿಯನ್ನು ಸಂಪಾದಿಸಿದ್ದರೆ ಅವರಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ದಾರ್ ಹುಕುಂಸಿಂಗ್‌ರವರು ಮಂಡಿಸಿದ್ದ ಅನಧಿಕೃತ ನಿರ್ಣಯವು ನಿನ್ನೆಯದಿನ ಕೇಂದ್ರ ಶಾಸನಸಭೆಯಲ್ಲಿ ಚರ್ಚೆಗೆಬಂದಿತು.

ಈ ನಿರ್ಣಯಕ್ಕೆ ಸುಮಾರು ೩೦ ತಿದ್ದುಪಡಿಗಳನ್ನು ಸೂಚಿಸಲಾಗಿದೆ. ಈಶಾಸನದ ವ್ಯಾಪ್ತಿಗೆ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಸಚಿವರುಗಳೂ ಸಹ ಸೇರಬೇಕೆಂದು ಒಂದು ತಿದ್ದುಪಡಿ ಬಂದಿದೆ.

ಈ ನಿರ್ಣಯವನ್ನು ಮುಂದಿನ ಶಾಸನ ಸಭಾಧಿವೇಶನದಲ್ಲಿ ತೆಗೆದುಕೊಳ್ಳುವಂತೆ ತೀರ್ಮಾನವಾಯಿತು.

ಆಹಾರ ಇಲಾಖಾ ಚೀಫ್ ಅಕೌಂಟ್ಸ್ ಆಫೀಸರು

ಬೆಂಗಳೂರು ಕಾರ್ಪೊರೇಷನ ಆಡಿಟರಾಗಿರುವ ಶ್ರೀ ಕೆ. ದಾಸಪ್ಪನವರನ್ನು ಆಹಾರ ಇಲಾಖಾ ಚೀಫ್ ಅಕೌಂಟ್ಸ್ ಆಫೀಸರಾಗಿ ನೇಮಿಸಲಾಗಿದೆ. ಅಲ್ಲಿ ಕೆಲಸಮಾಡುತ್ತಿದ್ದ ಶ್ರೀ ಹೆಚ್. ಚಿಕ್ಕಣ್ಣನವರನ್ನು ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಗೆ ವರ್ಗಾಯಿಸಲಾಗಿದೆ.

ರೇಷನ್‌ಕಾರ್ಡುದಾರರ ಸಭೆ

ರಾಜಧಾನಿಯ ರೇಷನ್ ಕಾರ್ಡುದಾರರ ಬಹಿರಂಗಸಭೆಯು ಡಿಸೆಂಬರ್ ೨ನೇ ತಾರೀಖು ಸಂಜೆ ೬ ಗಂಟೆಗೆ ಪುರಭವನ ಮೈದಾನದಲ್ಲಿ ನಡೆಯುತ್ತದೆ

ಮೈಸೂರು ಹೈಕೋರ್ಟ್ ವ್ಯಾಪ್ತಿಗೆ ಕೊಡಗು

ಕೊಡಗು ಸಂಸ್ಥಾನವು ಮೈಸೂರು ಹೈಕೋರ್ಟ್ ವ್ಯಾಪ್ತಿಗೆ ಸೇರುವ ಮಸೂದೆಯು ನಿನ್ನೆಯದಿನ ರಾಜ್ಯಪರಿಷತ್ತಿನಲ್ಲಿ ಅಂಗೀಕೃತವಾಯಿತು.

ನೈಜಾಮರ ಆಸ್ತಿಯಮೇಲೆ ತೆರಿಗೆ

ಹೈದರಾಬಾದ್ ಪಟ್ಟಣದ ಸರಹದ್ದಿನೊಳಗಿರುವ ನೈಜಾಮರು ಸ್ವಂತ ಆಸ್ತಿಗಳ ಮೇಲೆ ಅವರು ಪ್ರತಿವರ್ಷವೂ ಸುಮಾರು ಒಂದೂವರೆ ಲಕ್ಷ ರೂಪಾಯಿಗಳ ತೆರಿಗೆಯನ್ನು ಕೊಡಬೇಕಾಗುವುದೆಂದೂ ಸರ್ಕಾರವು ಈ ತೆರಿಗೆಗೆ ವಿನಾಯಿತಿ ಕೊಡುವುದಿಲ್ಲವೆಂದು ತಿಳಿದುಬಂದಿದೆ.

ಇಲ್ಲಿಯವರೆಗೆ ಅವರು ತೆರಿಗೆಯನ್ನೇನೂ ಕೊಟ್ಟಿಲ್ಲವೆಂದೂ ತಾವು ಕೊಡಬೇಕಾದ ತೆರಿಗೆಗಳ ಬದಲು ನೈಜಾಮರು ಪುರಸಭೆಗೆ ೫೦೦೦೦ ರೂ ಸಹಾಯ ಕೊಟ್ಟಿರುವುದಾಗಿ ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಅಣ್ಣಾರಾಯರು ಅಲ್ಲಿಯ ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಗೋಹತ್ಯ ನಿರೋಧ ಚಳುವಳಿ

ಮೈಸೂರು ನ. ೨೮

ಗೋಹತ್ಯ ನಿರೋಧ ಚಳುವಳಿ ಕಾರ್ಯಕ್ರಮವನ್ನು ಪ್ರಾರಂಭಿಸಿ ಇಲ್ಲಿಯವರೆಗೆ ಸುಮಾರು ಐದೂವರೆಲಕ್ಷ ಹಸ್ತಾಕ್ಷರಗಳನ್ನು ಸಂಗ್ರಹಿಸಿರುವ ಆರ್. ಎಸ್.ಎಸ್. ಸಂಸ್ಥೆಯ ಪರವಾಗಿ ಶ್ರೀಗಳಾದ ಪಿ.ಹೆಚ್. ಕೃಷ್ಣರಾವ್, ಪಾಮಡಿ ಸುಬ್ಬರಾಮಶೆಟ್ಟಿ, ಪುರುಷೋತ್ತಮಸಿಂಗ್ ... ಬಿ. ಜಿ. ದಾಸ್ ಮತ್ತು ಯಾದವರಾವ್ ಜೋಷಿಯವರ ಈದಿನ ಬೆಳಗ್ಗೆ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿ ತಾವು ಸಂಗ್ರಹಿಸಿರುವ ಹಸ್ತಾಕ್ಷರ ಪ್ರತಿಯನ್ನು ಅವರಿಗೆ ಒಪ್ಪಿಸಿ ಅವನ್ನು ಭಾರತ ರಾಷ್ಟ್ರಾಧ್ಯಕ್ಷರಿಗೆ ಕಳುಹಿಸಿ ಗೋಹತ್ಯ ನಿರೋಧ ಶಾಸನವನ್ನು ಮಾಡಿಸಬೇಕೆಂದು ಕೋರಿದರು. ಶ್ರೀಮನ್ಮಹಾರಾಜರು ಸಾವಧಾನವಾಗಿ ಎಲ್ಲವನ್ನೂ ಕೇಳಿ ತಾವು ತಮ್ಮ ಸರ್ಕಾರವು ಸಾಧ್ಯವಾದಷ್ಟು ನೆರವುನೀಡುವುದಾಗಿ ತಿಳಿಸಿದರೆಂದು ಗೊತ್ತಾಗಿದೆ.

ಗೋಹತ್ಯ ನಿರೋಧದ ಜೊತೆಗೆ ಅವುಗಳನ್ನು ಸಾಕುವ ವಿಷಯದಲ್ಲಿ ಜನರು ಹೆಚ್ಚು ಆಸಕ್ತಿ ವಹಿಸಬೇಕೆಂದು ಶ್ರೀಮನ್ಮಹಾರಾಜರು ಸಲಹೆಮಾಡಿದುದಾಗಿ ಗೊತ್ತಾಗಿದೆ. ಈ ಭೇಟಿ ಯಾದನಂತರ ಪುರಭವನದಲ್ಲಿ ಶ್ರೀ ಪಿ. ಹೆಚ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಶ್ರೀಗಳಾದ ಪಾಮಡಿಸುಬ್ಬರಾಮಶೆಟ್ಟರು ಬಿ.ಜಿ. ದಾಸ್ ಮುಂತಾದವರು ಮಾತನಾಡಿ ತಮ್ಮ ಈ ಚಳುವಳಿಗೆ ಜನತೆಯ ಸಹಕಾರವನ್ನು ಕೋರಿದರು.

ಅನಂತರ ಗಾಯತ್ರಿ ಭವನದಲ್ಲಿ ಶ್ರೀ ಪಿ. ಎಚ್. ಕೃಷ್ಣರಾಯರು ಪತ್ರಿಕಾ ಗೋಷ್ಠಿಯನ್ನು ನಡೆಸಿ ತಮ್ಮ ಕಾರ್ಯಕಲಾಪಗಳ ಬಗ್ಗೆ ವಿವರಣೆಯನ್ನಿತ್ತರು.

ಗೋಹತ್ಯೆ ನಿರೋಧ ಮತ್ತು ಗೋಪಾಲನೆ ವಿಷಯದಲ್ಲಿ ಸರ್ಕಾರವು ಇತ್ತೀಚೆಗೆ ಹೆಚ್ಚು ಗಮನ ಕೊಡುತ್ತಿಲ್ಲ ಹೆಚ್ಚು ಆಹಾರಬೆಳೆ ಯೋಜನೆಯಲ್ಲಿ ಗೋಮಾಳಗಳೆಲ್ಲಾ ನಾಶವಾಗುತ್ತಿವೆ. ಗೋವುಗಳಿಗೆ ಮೇವೇ ಸಿಕ್ಕುವುದಿಲ್ಲ. ಗೋಮಾಳಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯಕ್ರಮವನ್ನು ಸರ್ಕಾರವು ಕೈಗೊಳ್ಳಬೇಕೆಂದು ಅವರು ತಿಳಿಸಿದರು.

ರಸ್ತೆಗಳಿಗೆ ಪರದೇಶಿಯರ ಹೆಸರು ಬದಲಾಯಿಸಬೇಕು

ಪೌರಸಭೆಯಲ್ಲಿ ನಿರ್ಣಯಕ್ಕೆ ತಿರಸ್ಕಾರ

ಮೈಸೂರು ೨೯

ಮೈಸೂರು ನಗರದಲ್ಲಿರುವ ಬಸ್ತಿ, ಕಟ್ಟಡ ಮತ್ತು ಇತರ ಸಾರ್ವಜನಿಕ ಪ್ರದೇಶಗಳಿಗೆ ಇಟ್ಟಿರುವ ಪರದೇಶದವರ ಹೆಸರುಗಳನ್ನು ತೆಗೆದುಹಾಕಿ ರಾಷ್ಟ್ರದ ನಾಯಕರ ಹೆಸರನ್ನಿಡಬೇಕೆಂದು ಶ್ರೀ ವಿಠಾರ ಸೂರ್ ಹುಸೇನರು ಮಂಡಿಸಿದ ನಿರ್ಣಯವು ನಿನ್ನೆ ಸಂಜೆ ನಡೆದ ಪುರಸಭಾಧಿವೇಶನದಲ್ಲಿ ತಿರಸ್ಕೃತವಾಯಿತು.

ಪ್ರಜಾಸೋಷಲಿಸ್ಟ್ ನಾಯಕರೂ ಮತ್ತು ಪುರಸಭಾ ಕಾಂಗ್ರೆಸ್ ಪಕ್ಷದವರ ಬೆಂಬಲವುಳ್ಳವರೂ ಆದ ವಿಠಾರ ಸೂರ್ ಹುಸೇನರು ವಿಚಾರದಲ್ಲಿ ಮಾತನಾಡುತ್ತಾ, ಕಾಂಗ್ರೆಸ್ಸಿನವರು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪರದೇಶದವರನ್ನು ಹೊರಕ್ಕೆ ಅಟ್ಟಿರುವಾಗ ಅವರುಗಳ ಹೆಸರುಗಳನ್ನು ಸ್ಥಿರವಾಗಿಟ್ಟುಕೊಂಡಿರುವುದು ಆಶ್ಚರ್ಯವೆಂದೂ, ಅವರ ನೀತಿಯು ಸರಿಯಾಗಿಲ್ಲವೆಂದು ಉಗ್ರವಾಗಿ ಟೀಕಿಸಿದರು.

ಕಾಂಗ್ರೆಸ್ ಪಕ್ಷದ ಶ್ರೀ ಕೆ ಪುಟ್ಟಸ್ವಾಮಿಯವರು ಮಾತನಾಡಿ, ಶ್ರೀ ವಿಠಾರ ಸೂರ್ ಹುಸೇನರು ಈ ರೀತಿ ಟೀಕಿಸುವುದು ಸರಿಯಲ್ಲವೆಂದೂ, ಪರದೇಶದ ದಾಸ್ಯವನ್ನು ಹೊಂದಬೇಕಾದ ಮಾತ್ರಕ್ಕೆ ಪರದೇಶದವರನ್ನು ದ್ವೇಷಿಸಬೇಕಾಗಿಲ್ಲವೆಂದೂ, ಅವರಲ್ಲಿ ಅನೇಕರು ನಮ್ಮ ದೇಶಕ್ಕೆ ಅಮೋಘ ಸೇವೆ ಸಲ್ಲಿಸಿದ್ದಾರೆಂದೂ ತಿಳಿಸಿದರು. ನಗರದಲ್ಲಿ ಒಂದು ಬಸ್ತಿಗೆ ಪ್ರಸಿದ್ಧ ಸಾಹಿತಿ ಉಮ್ಮರ್ ಖಯ್ಯಾಂರವರ ಹೆಸರನ್ನು ಇಟ್ಟಿರುವುದನ್ನು ಅವರು ಹೊಸ ಸವರಾದರಿಂದ ತೆಗೆಯಬೇಕೆಂದು ಶ್ರೀ ಪುಟ್ಟಸ್ವಾಮಿಯವರು ಕೇಳಿದರು. ಉಮ್ಮರ್ ಖಯ್ಯಾಂರವರು ಪರದೇಶದವರಲ್ಲವೆಂದು ಶ್ರೀ ವಿಠಾರ ಸೂರ್ ಹೇಳಿದರು. ನಿರ್ಣಯವು ಸ್ಪಷ್ಟವಾಗಿಲ್ಲವಾದ್ದರಿಂದ ಅದನ್ನು ಒಪ್ಪಲು ಸಾಧ್ಯವಿಲ್ಲವೆಂದು ಕಾಂಗ್ರೆಸ್ ಸದಸ್ಯರು ತಿಳಿಸಿದರು.

ಅಸಂತುಷ್ಟ ಕಾಂಗ್ರೆಸ್ ಪಕ್ಷದವರ ನೀತಿಯನ್ನು ಪ್ರತಿಭಟಿಸಿ ತಾವು ಇನ್ನು ಮುಂದೆ ಅವರೊಡನೆ ಕಲೆತುಕೊಳ್ಳದೆ ವಿರೋಧ ಪಕ್ಷದವರೊಡನೆ ಕಲೆತುಕೊಳ್ಳುವುದಾಗಿ ತಿಳಿಸಿ, ಅವರು ತಮ್ಮ ಸ್ಥಾನದಿಂದ ಹೊರಟು ಹೋದರು.

ನಗರದ ಆರೋಗ್ಯ ಮತ್ತು ಬಸ್ತಿ ಪುರೋಭಿವೃದ್ಧಿ ದೃಷ್ಟಿಯಿಂದ ಮೈಸೂರು ನಗರದ ಬಸ್ತಿ ಗೃಹ, ಆರೋಗ್ಯ ಮತ್ತು ಇತರ ವಿಷಯಗಳ ಬಗ್ಗೆ ಒಂದು ಪರಿಶೀಲನೆ ನಡೆಸಿ ಬಡವರ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕೆಂದು ಶ್ರೀ ವಿಠಾರ ಸೂರ್ ಹುಸೇನರು ಮಂಡಿಸಿದ ಮತ್ತೊಂದು ನಿರ್ಣಯದ ಬಗ್ಗೆ ಸಭೆಯು ಅದರ ನೀತಿಯನ್ನು ಒಪ್ಪಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಸ್ಟ್ಯಾಂಡಿಂಗ್ ಸಮಿತಿಗೆ ಅದನ್ನು ಒಪ್ಪಿಸಲಾಯಿತು.

ಮೈಸೂರು ನಗರದಲ್ಲಿ ೨೬೨೭ ಸಾರ್ವಜನಿಕ ದೀಪಗಳಿಗಾಗಿ ಪುರಸಭೆಯವರು ಹಣಕೊಡುತ್ತಿರುವರೆಂದೂ, ಆದರೆ ಇನ್ನೂ ೧೨೫೦ ದೀಪಗಳಿದ್ದು ಅದಕ್ಕೆ ಹಣ ಕೊಡುತ್ತಿರುವರೆಂಬುದು ಗೊತ್ತಿಲ್ಲವೆಂದೂ ಅಧ್ಯಕ್ಷರು ಎ ಕೃಷ್ಣಮೂರ್ತಿರಾಯರು ಶ್ರೀ ಮೀರ ಸೂರ್ ಹುಸೇನ್ ರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಈ ರೀತಿ ಸ್ಟ್ರೀಲಿಂಗ್ (ಕಳ್ಳತನದಲ್ಲಿ) ಮಾಡಿ ದೀಪ ಉಪಯೋಗಿಸುವುದು ಸರಿಯಲ್ಲವೆಂದು ಶ್ರೀ ಸೂರ್ ಹೇಳಿದರು. ಸ್ಟ್ರೀಲಿಂಗ್ ಎಂಬುದಕ್ಕೆ ಸದಸ್ಯರು ಆಕ್ಷೇಪಣೆ ಎತ್ತಿ, ಅದನ್ನು ವಾಪಸ ತೆಗೆದುಕೊಳ್ಳಬೇಕೆಂದು ಹೇಳಿದರು. ಆದರೆ ಶ್ರೀ ಸೂರ್ ಒಂದು ವಿವರಣೆಯನ್ನಿತ್ತು, ತಾವು ಯಾವ ಆರೋಪಣೆಯನ್ನೂ ಮಾಡುತ್ತಿಲ್ಲವೆಂದೂ, ಆದರೆ ದುಡ್ಡು ಕೊಡದೆ ಉಪಯೋಗಿಸಬಾರದೆಂಬುದೇ ತಮ್ಮ ಉದ್ದೇಶವೆಂದು ಹೇಳಿದರು. ಅಲ್ಲಿಗೆ ಆ ಪ್ರಕರಣ ಮುಕ್ತಾಯವಾಯಿತು.

ಔದ್ಯೋಗಿಕ ಶಾಲೆ ವಿಶೇಷ ಅಧಿಕಾರಿಗಳು

ಸಂಸ್ಥಾನದ ವಿದ್ಯಾಭ್ಯಾಸ ಸಹಾಯಕ ನಿರ್ದೇಶಕರುಗಳನ್ನು ಔದ್ಯೋಗಿಕ ಶಾಲೆಗಳ ವಿಶೇಷಾಧಿಕಾರಿಗಳನ್ನಾಗಿಯೂ ಸರ್ಕಾರದವರು ನೇಮಿಸಿದ್ದಾರೆ.

—ಮೈಸೂರು ಪೇಟೆಧಾರಣೆ—

ತಾರೀಖು ೨೮-೧೧-೫೨

	ಪಲ್ಲ ರೂ.	ಆ.	ರೂ.	ಆ
ಕಡಲೇಕಾಯಿ	೧೨-೨		೨೨	೧೨
ಎಳ್ಳು	೬೫-೨		೬೯	
ಹರಳು	೪೨-೦		೪೬	೮
ಹುಚ್ಚೆಳ್ಳು	೫೨-೮		೫೬	೮
ಹುರುಳಿ	೫೪-೦		೫೪	೧೪
ಹೆಸರು	೫೦-೮		೫೩	೬
ಅಲಸಂದೆ	೫೦-೦		೬೭	೦
ಉದ್ದು	೬೬-೬		೬೮	೧೦
ಹೊಂಗೆಬೀಜ				
ಮೆ.ಕಾಯಿ	೧೧-೦		೧೬	೮
ಹುಣಸೆಹಣ್ಣು	-			
ಸೀಗೇಕಾಯಿ	-			
ಬೆಲ್ಲ	೩-೮			
ತೆಂಗಿನಕಾಯಿ	೨೦೩		೨೩೦	

ನಾನ್‌ಗೆಜಿಟೆಡ್ ನೌಕರರಿಗೆ ಸೂಚನೆ

ಬೆಂಗಳೂರು ನ. ೨೯

ಎಲ್ಲಾ ನಾನ್-ಗೆಜಿಟೆಡ್ ನೌಕರರು ತಮ್ಮ ಹುಟ್ಟಿದ ತಾರೀಖನ್ನು ಸರಿಯಾಗಿ ೧೯೫೩ನೇ ಜೂನ್ ತಿಂಗಳೊಳಗಾಗಿ ಸರ್ಕಾರಕ್ಕೆ ತಿಳಿಸಬೇಕೆಂದೂ ಅನಂತರ ಲೋಪದೋಷಗಳು ಕಂಡುಬಂದಲ್ಲಿ ಅಂಥವರನ್ನು ಕೆಲಸದಿಂದ ಕೂಡಲೇ ತೆಗೆದುಹಾಕಲಾಗುವುದೆಂದು ಸರ್ಕಾರವು ಸೂಚನೆಯನ್ನಿತ್ತಿದೆ.

ಅಪೇರ

28—11—52 ನೇ ಶುಕ್ರವಾರದಿಂದ

ಅಮೋಘ 2ನೇ ವಾರ

ವಳಯಾಪತಿ

[ತಮಿಳು]

ಪಾತ್ರ:- ಜಯಲಕ್ಷ್ಮಿ, ಶೇಖರ್, ಪುಳಿಮೂಟಿ.

ರಣಜಿತ್

28-11-52 ರಿಂದ ಅಮೋಘ ಪ್ರಾರಂಭ

ಮೈಸೂರು ಸಾಬುನ ಟಿಸಿರುವ

ಬೋಲ್ತಾ ಜಂಗಲ್ ಹಿಂದಿ

ಭಯಂಕರ ದೃಶ್ಯದಿಂದಕೂಡಿದ ಅರಣ್ಯಚಿತ್ರ

[ವರ್ಣರಂಜಿತ ಚಿತ್ರ]

ಪ್ರತಿದಿನ ಮೂರು ಆಟಗಳು

ವುಡ್‌ಲ್ಯಾಂಡ್ಸ್

29—11—52 ರಿಂದ

ಅಮೋಘ ಪ್ರಾರಂಭ

ಇನ್ ಸಾಫ್ ಹಿಂದಿ

ಭೂಮಿಕೆ:-ಪೃಥ್ವಿರಾಜ್, ರಾಗಿಣಿ, ಕಮಲ್‌ಕಪೂರ್.

ಮೈಸೂರು ಪಿಂಗಾಣಿಯ ಸುಭಗ ಚಿತ್ರಗಳು

ನಿಮ್ಮ ಸದರುಗಳನ್ನು ಅಲಂಕರಿಸಲಿ

ಅವು ನಿಮ್ಮ ಕೋಣೆಗಳ ಸೌಂದರ್ಯವನ್ನು ಹೆಚ್ಚಿಸುತ್ತಿದ್ದು ಅಗ್ಗವೂ ಬಾಳಿಕೆ ಬರುವವೂ ಆಗಿವೆ.

ಇತರ ಪಿಂಗಾಣಿ ಸಾಧನೋಪಕರಣಗಳ ಕೇಳ್ವಿಕೆಗಳು ವಹಿಸಲ್ಪಡುವುವು.

★

ಹೆಚ್ಚಿನ ವಿವರಗಳಿಗೆ ಬರೆಯಿರಿ:—

ಗೌರ್ನಮೆಂಟ್ ಪೋರ್ಸಲೇನ್ ಫ್ಯಾಕ್ಟರಿ, ಮಲ್ಲೇಶ್ವರಂ

ಬೆಂಗಳೂರು ೩.

Special Concession

For

CONVOCATION PHOTOGRAPHS

at

A. V. Varadacharlu & Son

Photographers & Dealers

Curzon Park Road

[Near Electric Office]

MYSORE.

ಪ್ರಕಾಶಕರು:— ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಶಾ. ಸುಬ್ಬರಾವ್

ಮೋಹನ ಮುದ್ರಣಾಲಯ, ಮೈಸೂರು.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ

ಸಂಪುಟ 3

ಸಂಚಿಕೆ 83

೧-೧೨-೧೯೫೨ ನೇ ಸೋಮವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಅಕ್ರಮ ಬೇಟೆಗಾರನು ಉಪದೇಶಿಯಾಗಬೇಕು

ಕಾಡುಮೃಗ ರಕ್ಷಣಾ ಸಮಿತಿಯ ಸಭೆಯಲ್ಲಿ

ಸಚಿವರ ಮನವಿ

ಮೈಸೂರು ೧

ರಾಜಧಾನಿಯಲ್ಲಿ ಕಳೆದ ೨೫ ನೇ ತಾ॥ ನಿಂದ ನಡೆಯುತ್ತಿದ್ದ ಕೇಂದ್ರ ಕಾಡುಮೃಗಗಳ ರಕ್ಷಣಾ ಬೋರ್ಡಿನ ಅಧಿವೇಶನವು ಈದಿನ ಮುಕ್ತಾಯವಾಯಿತು.

ದೇಶದಲ್ಲಿ ಪ್ರಮುಖ ಕಾಡುಮೃಗಗಳಾದ ಸಿಂಹ,ಹುಲಿ,ಆನೆ,ಜಿಂಕೆ, ನೀರುಕುದುರೆ ಮುಂತಾದವುಗಳನ್ನು ರಕ್ಷಿಸಲು ರಾಷ್ಟ್ರೀಯ ಆಶ್ರಯ ಸ್ಥಾನ ಮತ್ತು ವನಗಳನ್ನು ಸ್ಥಾಪಿಸಬೇಕೆಂದೂ, ಅಕ್ರಮವಾಗಿ ಇಂತಹ ಮೃಗಗಳನ್ನು ಕೊಲೆಮಾಡುವುದನ್ನು ತಪ್ಪಿಸಲು ಸೂಕ್ತ ಕಾನೂನನ್ನು ಮಾಡಿ,ಭಾರತದ ರಾಜ್ಯಾಂಗದಲ್ಲಿ ಅದನ್ನು ನಮೂದಿಸಬೇಕೆಂದೂ, ಸಂಸ್ಥಾನಗಳು ಸ್ಥಳೀಯ ರಕ್ಷಣಾ ಸಮಿತಿಗಳನ್ನು ರಚಿಸಬೇಕೆಂದೂ ಕೋರುವ ನಿರ್ಣಯಗಳನ್ನು ಬೋರ್ಡಿನವರು ಅಂಗೀಕರಿಸಿ, ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರೆ.

ಈದಿನ ೧೧-೩೦ ಗಂಟೆಗೆ ಲಲಿತಮಹಲ್ ಅರಮನೆಯಲ್ಲಿ ನಡೆದ ಮುಕ್ತಾಯ ಸಮಾರಂಭದಲ್ಲಿ ಕೇಂದ್ರ ವ್ಯವಸಾಯ ಸಚಿವ ಡಾ॥ ಪಂಜಾಬರಾವ್ ದೇಶಮುಖ್‌ರವರು ಭಾಷಣಮಾಡಿ, ಕಾಡುಮೃಗಗಳ ರಕ್ಷಣಾ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಕಾಡುಮೃಗಗಳ ರಕ್ಷಣೆಗೆ ಕಾನೂನು ಅಗತ್ಯವಾಗಿದ್ದರೂ, ಅದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಜನತೆಯಲ್ಲಿ ಈ ಬಗ್ಗೆ ಹೆಚ್ಚು ಸಹಾನುಭೂತಿ ಮತ್ತು ಕರುಣೆ ಉಂಟಾಗುವಂತೆ ಪ್ರಚಾರ ನಡೆಸಬೇಕು. ಅಕ್ರಮವಾಗಿ ಬೇಟೆ ಮಾಡುವವರು ಅದನ್ನು ನಿಲ್ಲಿಸಿ ಬೋಧಕರಾಗುವಂತೆ ಮಾಡಬೇಕಾದುದು ಅಗತ್ಯ.

ಆಹಾರ ಬೆಳೆಗಳನ್ನು ನಾಶಪಡಿಸುವ ಹಂದಿ, ಕಾಡುಕತ್ತೆ, ಕಪಿ ಮುಂತಾದ ಮೃಗಗಳನ್ನು ರಕ್ಷಿಸಬೇಕಾದ ಅವಶ್ಯಕತೆಯಿಲ್ಲ. ಅಸ್ಸಾಮಿನಲ್ಲಿ ಕೇವಲ ವಿರಳವಾಗಿರುವ ಖಡ್ಗಮೃಗ ಮತ್ತು ಗಿರ್ ಅರಣ್ಯಗಳಲ್ಲಿರುವ ಸಿಂಹಗಳ ರಕ್ಷಣೆಯ ಬಗ್ಗೆ ಬೋರ್ಡಿನವರು ಸೂಕ್ತ ಕಾರ್ಯಕ್ರಮ ಕೈಗೊಂಡಿರುವುದು ಪ್ರಶಂಸನೀಯವಾದುದು ಎಂದು ಸಚಿವರು ಹೇಳಿದರು.

ಬೋರ್ಡಿನ ಅಧ್ಯಕ್ಷರಾದ ಶ್ರೀಮನ್ಮಹಾರಾಜರವರ ಬಗ್ಗೆ ಸಚಿವರು ಪ್ರಸ್ತಾಪಿಸಿ ಅವರು ಸುಪ್ರಸಿದ್ಧ ಕ್ರೀಡಾಭಿಮಾನಿಗಳೆಂದೂ, ಅವರ ನೇತೃತ್ವದಲ್ಲಿ ಕಾಡುಮೃಗಗಳ ರಕ್ಷಣೆ ಸುರಕ್ಷಿತವಾಗಿ ನಡೆಯುವುದರಲ್ಲಿ ಸಂದೇಹವಿಲ್ಲವೆಂದೂ ತಿಳಿಸಿದರು.

ಬೋರ್ಡಿನ ಉಪಾಧ್ಯಕ್ಷರಾದ ಭಾವನಗರದ ಶ್ರೀ ಧರ್ಮಕುಮಾರ್ ಸಿಂಗ್‌ಜಿಯವರು ಪ್ರಾರಂಭದಲ್ಲಿ ಎಲ್ಲರನ್ನೂ ಸ್ವಾಗತಿಸಿದರು.

ಮೈಸೂರು ಸಂಸ್ಥಾನದ ಕಾಡುಮೃಗಗಳ ರಕ್ಷಣಾ ಸಮಿತಿಯ ಅಧ್ಯಕ್ಷರೂ ಮತ್ತು ಮುಖ್ಯಮಂತ್ರಿಗಳೂ ಆದ ಶ್ರೀ ಕೆ. ಹನುಮಂತಯ್ಯನವರು ಭಾಷಣಮಾಡಿ ಮೈಸೂರಿನಲ್ಲಿ ಈಬಗ್ಗೆ ಕೈಗೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿದರು.

ಬೋರ್ಡಿನ ಅಧ್ಯಕ್ಷರಾದ ಶ್ರೀಮನ್ಮಹಾರಾಜರವರು ನಿರ್ಣಯಗಳನ್ನು ಮಂಡಿಸಿದರು.

ಕೊನೆಯಲ್ಲಿ ಕೇಂದ್ರ ಸರ್ಕಾರದ ಮುಖ್ಯ ಅರಣ್ಯಾಧಿಕಾರಿಗಳಾದ ಶ್ರೀ ಎಂ. ಡಿ. ಚತುರ್ವೇದಿಯವರು ವಂದನೆಯನ್ನು ಅರ್ಪಿಸಿದರು.

ಹಾಸನ ಮಂಗಳೂರು ರೈಲ್ವೆ ಸಂಪರ್ಕ

ಹಾಸನ ಮಂಗಳೂರು ರೈಲು ಸಂಪರ್ಕವು ಮೈಸೂರು ಮತ್ತು ಕೊಡಗು ಪ್ಲಾಂಟೇಷನ್ ಕೈಗಾರಿಕಾಭಿವೃದ್ಧಿಗೆ ಪ್ರಮುಖವಾದುದರಿಂದ ಅದನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕೆಂದು ದಕ್ಷಿಣಭಾರತ ಸಂಯುಕ್ತ ಪ್ಲಾಂಟೇಷನ್ ಸಂಘವು ಕೇಂದ್ರಸರ್ಕಾರವನ್ನು ಕೋರಿದೆ.

ಮೈಸೂರು ಸರ್ಕಾರಿ ನೌಕರರ ಸಂಬಳ ಸಾರಿಗೆ ಸುಧಾರಣೆ

ಸರ್ಕಾರದ ನಿರ್ಧಾರ ಸದ್ಯದಲ್ಲೇ ಹೊರಬೀಳುವ ನಿರೀಕ್ಷಣೆ

ಬೆಂಗಳೂರು ಡಿ. ೧

ಮೈಸೂರು ಸರ್ಕಾರದ ನಾನ್ ಗೆಜಿಟೆಡ್ ನೌಕರರ ಸಂಬಳ ಸಾರಿಗೆಯನ್ನು ಕೇಂದ್ರ ಸರ್ಕಾರದ ಸಂಬಳ ಮಟ್ಟಕ್ಕೆ ಏರಿಸುವ ವಿಷಯ ನಿರ್ಧಾರವಾಗುವವರೆಗೆ ತಾತ್ಕಾಲಿಕವಾಗಿ ತುಟ್ಟಿಭತ್ಯವನ್ನು ಏರಿಸಬೇಕೆಂಬ ಮನವಿಯನ್ನು ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿರುವುದಾಗಿ ಗೊತ್ತಾಗಿದೆ. ಈ ಬಗ್ಗೆ ಎನ್ ಜಿ ಓ ಸಂಘಕ್ಕೆ ಸರ್ಕಾರವು ಒಂದು ಸಮಾಧಾನ ಪತ್ರವನ್ನೂ ಬರೆದಿದೆ.

ಸಂಸ್ಥಾನದ ನಾನ್‌ಗೆಜಿಟೆಡ್ ನೌಕರರಿಗೆ ಉಚಿತ ವೈದ್ಯ ಸಹಾಯಕೊಡುವ ಪ್ರಶ್ನೆಯನ್ನೂ ಸರ್ಕಾರವು ಪರಿಶೀಲಿಸುತ್ತಿರುವುದಾಗಿ ಗೊತ್ತಾಗಿದೆ. ಈ ಬಗ್ಗೆ ಸದ್ಯದಲ್ಲಿ ಸರ್ಕಾರಿ ಆಜ್ಞೆ ಹೊರಬೀಳುವ ನಿರೀಕ್ಷೆಯಿದೆ.

ಪಾನನಿರೋಧಕ್ಕೆ ಬದಲು ಪಾನ ನಿಯಂತ್ರಣ

ಮಧ್ಯಪ್ರದೇಶದ ಎರಡು ಜಿಲ್ಲೆಗಳಲ್ಲಿ ಪಾನನಿರೋಧಕ್ಕೆ ಬದಲಾಗಿ ಪಾನನಿಯಂತ್ರಣವನ್ನು ಜಾರಿಗೆತರುವ ಯೋಜನೆಗೆ ಅಲ್ಲಿಯ ಶಾಸನಸಭೆಯ ಕಾಂಗ್ರೆಸ್ ಪಕ್ಷವು ಸಮ್ಮತಿಯನ್ನು ಕೊಟ್ಟಿರುವುದಾಗಿ ಗೊತ್ತಾಗಿದೆ. ಈ ಯೋಜನೆ ಸದ್ಯದಲ್ಲೇ ಜಾರಿಗೆ ಬರಲಿದೆಯೆಂದು ಗೊತ್ತಾಗಿದೆ.

ಕೊರಿಯಾ ಸಮಸ್ಯೆ ಪರಿಹಾರಕ್ಕೆ ಭಾರತದ ಪ್ರಯತ್ನ

ಕೊರಿಯಾ ಯುದ್ಧ ಕೈದಿಗಳ ಸಮಸ್ಯೆ ಪರಿಹಾರಕ್ಕೆ ಭಾರತದ ಸಲಹೆಗಳನ್ನು ಚೈನಾ ನಿರಾಕರಿಸಿರುವುದರ ಬಗ್ಗೆ ಪ್ರಧಾನಿ ನೆಹರೂರವರು ಚೈನಾ ಪ್ರಧಾನಿಯವರಿಗೆ ಭಾರತ ಸಲಹೆ ಬಗ್ಗೆ ವಿವರಗಳನ್ನಿತ್ತು, ಪುನಃ ಪತ್ರ ಬರೆಯುವುದಾಗಿ ಗೊತ್ತಾಗಿದೆ.

ಆಹಾರ ಸಂಶೋಧನಾ ಕೇಂದ್ರಕ್ಕೆ ಸಚಿವರ ಭೇಟಿ

ಮೈಸೂರು ಡಿ. ೧

ಆಹಾರ ಸಂಶೋಧನಾ ಕೇಂದ್ರಕ್ಕೆ ವ್ಯವಸಾಯ ಸಚಿವ ಡಾ॥ ಪಂಜಾಬ್‌ರಾವ್ ದೇಶಮುಖ್‌ರವರು ಈ ಮಧ್ಯಾಹ್ನ ಭೇಟಿಯಿತ್ತು, ಅಲ್ಲಿಯ ಕಾರ್ಯಕಲಾಪಗಳನ್ನು ಪರಿಶೀಲಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಕುಮಾರಪ್ರೆಸ್ ಶೋಧನೆ

ನಾಳೆಯದಿನ ಕಾಲೇಜಿನ ಹಳೇವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸುವ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಗೆ ಕಪ್ಪುಬಾವುಟ ಪ್ರದರ್ಶಿಸಲು ಒಂದು ಮನವಿಯನ್ನು ಅರುಣಪತ್ರಿಕೆಯ ಕುಮಾರಪ್ರೆಸ್ಸಿನಲ್ಲಿ ಮುದ್ರಿಸಿದರೆಂದು ಈದಿನ ಪೋಲೀಸಿನವರು ವಾರಂಟಿನ ಮೇಲೆ ಮುದ್ರಣಾಲಯವನ್ನು ಶೋಧಿಸಿ ಹಸ್ತಪ್ರತಿಯನ್ನು ಕೊಂಡೊಯ್ದರೆಂದು ಗೊತ್ತಾಗಿದೆ.

ಶ್ರೀ ಕೆ.ನರಸಿಂಹಯ್ಯಂಗಾರ್ ವರ್ಗ

ಮಹಾರಾಜರ ಉಪಕಾರ್ಯದರ್ಶಿಗಳಾಗಿರುವ ಶ್ರೀ ಕೆ. ನರಸಿಂಹಯ್ಯಂಗಾರ್‌ರನ್ನು ದಾವಣಗೆರೆ ಮುನಿಸಿಪಲ್ ಕಮೀಷನರಾಗಿ ಆಸ್ಥಾನಕ್ಕೆ ಹಾಸನ ಸಬ್‌ಡಿವಿಜನ್ ಅಧಿಕಾರಿಗಳಾದ ಶ್ರೀ ನಾರಾಯಣಮೂರ್ತಿಯವರನ್ನು ವರ್ಗಾಯಿಸಲಾಗಿದೆ.

ಪೈಗಂಬರ್ ದಿನಾಚರಣೆ

ಸಾರ್ವಜನಿಕ ವಿದ್ಯಾರ್ಥಿನಿಲಯದ ನೂತನ ಕಟ್ಟಡದಲ್ಲಿ ಈದಿನ ಸಾಯಂಕಾಲ ೬ ಗಂಟೆಗೆ ಶ್ರೀಗಳಾದ ಹೆಚ್. ಎಂ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಮಹಮ್ಮದ್ ಪೈಗಂಬರ ದಿನಾಚರಣೆಯನ್ನು ಆಚರಿಸಲಾಗುವುದು. ಶ್ರೀಗಳಾದ ಡಿ. ಎಂ. ಸಿದ್ದಯ್ಯನವರು ಭಾಷಣಮಾಡಲಿದ್ದಾರೆ.

ಮೈಸೂರು ಬ್ಯಾಂಕಿನಿಂದ ಸರ್ಕಾರಕ್ಕೆ ೫೦ ಲಕ್ಷ ರೂ. ಸಾಲ

ಕುಡಿಯುವ ನೀರಿನ ಸೌಕರ್ಯಕ್ಕಾಗಿ ಉಪಯೋಗ

ಬೆಂಗಳೂರು ಡಿ. ೧

ಮೈಸೂರು ಸರ್ಕಾರದವರು ೫೦ ಲಕ್ಷ ರೂಪಾಯಿಗಳ ಸಾಲವನ್ನು ಮೈಸೂರು ಬ್ಯಾಂಕಿನಿಂದ ಪಡೆಯಲು ಯೋಚಿಸುತ್ತಲಿರುವುದಾಗಿ ಗೊತ್ತಾಗಿದೆ. ಈ ಹಣವನ್ನು ಸ್ಥಳೀಯ ಸಂಸ್ಥೆಗಳಿಗೆ ಸಾಲದರೂಪದಲ್ಲಿ ಕೊಟ್ಟು ಅದನ್ನು ನೀರಿನ ಸರಬರಾಯಿ ವ್ಯವಸ್ಥೆಗೆ ಉಪಯೋಗಿಸಲಾಗುವುದೆಂದು ಹೇಳಲಾಗಿದೆ.

ಯಾವಯಾವ ಸ್ಥಳೀಯ ಸಂಸ್ಥೆಗೆ ಎಷ್ಟು ಹಣವನ್ನು ಕೊಡಬಹುದೆಂಬ ವಿಚಾರದಲ್ಲಿ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಲು ಒಂದು ಸಮಿತಿಯನ್ನು ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ಬೀದಿಯ ಹೆಸರು ಬದಲಾವಣೆಗೆ ವಿರುದ್ಧ ತೀರ್ಪು

ಬೆಂಗಳೂರು ಡಿ. ೧

ಬೆಂಗಳೂರುನಗರದ ಕುಂಬಾರಪೇಟೆ ಎಂಬ ಬೀದಿಯ ಹೆಸರನ್ನು ಕೊಡಗಿ ಚೆನ್ನರಾಮಪ್ಪ ಬೀದಿ ಎಂದು ಬದಲಾಯಿಸಿದ್ದಕ್ಕೆ ವಿರೋಧವಾಗಿ ಅಲ್ಲಿಯ ನಿವಾಸಿಗಳು ಮುನಸೀಫ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಲು ಹೆಸರು ಬದಲಾಯಿಸಿದ್ದು ಸರಿಯಲ್ಲವೆಂದು ಮುನಸೀಫ್‌ರು ತೀರ್ಪಿತ್ತಿದ್ದಾರೆ.

ಕಣ್ಣೀರು ಸುರಿಸಿದ ಶಿಲಾಮೂರ್ತಿ

ಸಬರಮತಿ ಸಮೀಪದಲ್ಲಿರುವ ರಾಮನಗರ ಎಂಬಲ್ಲಿ ಇತ್ತೀಚೆಗೆ ಜೈನದೇವಸ್ಥಾನ ಒಂದರಲ್ಲಿ ಪಾರ್ಶ್ವನಾಥಸ್ವಾಮಿಯ ಶಿಲಾಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವ ಸಮಯದಲ್ಲಿ ಅದರಲ್ಲಿ ಕಣ್ಣೀರು ಸುರಿಯಿತೆಂದೂ ಅದು ಎಲ್ಲರಿಗೂ ಚೆನ್ನಾಗಿ ಗೋಚರವಾಯಿತೆಂದೂ ಹೇಳಲಾಗಿದೆ.

ಲಂಡನ್ನಿಗೆ ನೆಹರೂ

ಮುಂದಿನವರ್ಷ ಲಂಡನ್ನಿನಲ್ಲಿ ನಡೆಯಲಿರುವ ಬ್ರಿಟನ್ನಿನ ರಾಣಿ ಎಲ್ಲಿಜಬೆತ್‌ರವರ ಕಿರೀಟಧಾರಣ ಮಹೋತ್ಸವಕ್ಕೆ ಪ್ರಧಾನಿ ನೆಹರೂರವರು ತಮ್ಮ ಪುತ್ರಿ ಸಮೇತ ಹೋಗುವರೆಂದು ಗೊತ್ತಾಗಿದೆ.

ಉಚಿತ ಸಹಾಯ

ಬೊಂಬಾಯಿನಲ್ಲಿರುವ ಕೆ. ಇ. ಎಂ. ಆಸ್ಪತ್ರೆಗೆ ರಷ್ಯಾವು ೫೦೦೦೦ ರೂ. ಬೆಲೆಬಾಳುವ ಒಂದು ಅಂಬ್ಯುಲೆನ್ಸ್ ಮೋಟಾರನ್ನು ಉಚಿತವಾಗಿ ಕೊಟ್ಟಿದೆ.

ಋತ್ವಿಕ್ ರಾಮಶಾಸ್ತ್ರಿಗಳ ನಿಧನ

ಅರಮನೆಯ ಋತ್ವಿಕರಾಗಿದ್ದ ಶ್ರೀ ರಾಮಶಾಸ್ತ್ರಿಗಳು ಮೊನ್ನೆಯದಿನ ಚಾಮರಾಜ ಅಗ್ರಹಾರದಲ್ಲಿರುವ ಅವರ ಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀ ಕೃಷ್ಣರಾಜ ಒಡೆಯರು ಯೂರೋಪ್‌ಗೆ ಹೋಗಿದ್ದಾಗ ಶ್ರೀ ಶಾಸ್ತ್ರಿಯವರೂ ಹೋಗಿದ್ದರು.

—ಮೈಸೂರುಪೇಟೆಧಾರಣೆ—

ತಾರೀಖು ೨೯-೧೧-೫೨

ಪಲ್ಲ	ರೂ.- ಆ.	ರೂ.-	ಆ
ಕಡಲೇಕಾಯಿ	೯-	೨೨-೮	
ಎಳ್ಳು	೬೬-೧೦		
ಹರಳು	೪೪-೧೪	೪೫	೧೨
ಹುಚ್ಚೆಳ್ಳು	೫೨-	೫೬	೧೪
ಹುರುಳಿ	೫೨-೨	೫೫	೧೨
ಹೆಸರು	೫೦-	೫೩	೪
ಉದ್ದು	೬೦-೬	೬೪	
ಅಲಸಂದೆ	೫೦-೦	೬೬	೪
ಹೊಂಗೆಬೀಜ			
ಮೆ॥ ಕಾಯಿ	೧೦-೮	೧೫	೧೪
ಹುಣಸೆಹಣ್ಣು	-		
ಸೀಗೇಕಾಯಿ	-		
ಬೆಲ್ಲ	೩-೪	೩	೮
ತೆಂಗಿನಕಾಯಿ	೧೩೫	೨೧೨	

ವುಡ್‌ಲ್ಯಾಂಡ್ಸ್
29—11—52 ರಿಂದ
ಅಮೋಘ ಪ್ರಾರಂಭ
ಇನ್‌ಸಾಫ್ ಹಿಂದಿ,
ಭೂಮಿಕೆ:- ಪೃಥ್ವಿರಾಜ್, ರಾಗಿಣಿ
ಕಮಲ್‌ಕಪೂರ್.

ಗೋಹತ್ಯ ನಿರೋಧ ಬಗ್ಗೆ ಶಾಸನ ಮಾಡುವುದಿಲ್ಲ

ಪ್ರಧಾನಿ ನೆಹರೂ ಹೇಳಿಕೆ

ದೇಶದಲ್ಲಿ ಗೋಹತ್ಯೆಯನ್ನು ನಿಷೇಧಿಸುವುದಕ್ಕೆ ಒಂದು ಕೇಂದ್ರ ಶಾಸನವನ್ನು ಮಾಡಲು ತಾವು ಅವಕಾಶ ಕೊಡುವುದಿಲ್ಲವೆಂದು ಪ್ರಧಾನಿ ನೆಹರೂ ಸಾಂಚಿಗೆ ೬ ಮೈಲಿ ದೂರದಲ್ಲಿರುವ ಭಿಲ್ಸಾ ಎಂಬಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸ್ಪಷ್ಟವಾಗಿ ತಿಳಿಸಿರುವರು.

ದೇಶದ ವಿವಿಧ ಭಾಗದ ಜನರ ಮನೋಭಾವ, ಸಂಪ್ರದಾಯಗಳನ್ನು ಗಮನಿಸದೆ ಈ ರೀತಿ ನಿಷೇಧಾಜ್ಞೆಗಳನ್ನು ವಿಧಿಸುವುದು ಎಲ್ಲಾ ತತ್ವಗಳಿಗೂ ಸಂಪ್ರದಾಯಗಳಿಗೂ ವಿರೋಧ. ಆದರೆ ಪ್ರಾಂತ್ಯಸರ್ಕಾರಗಳು ಈ ನಿಷೇಧಾಜ್ಞೆಗಳನ್ನು ಜಾರಿಗೆ ತರಲು ಸ್ವತಂತ್ರವಾಗಿರುತ್ತವೆ ಎಂದು ಅವರು ಹೇಳಿದ್ದಾರೆ.

ಗೋಹತ್ಯ ನಿರೋಧ ಚಳುವಳಿಯನ್ನು ಮಾಡುವುದಕ್ಕಿಂತ ಅವುಗಳ ಬೆಳವಣಿಗೆ ಬಗ್ಗೆ ಜನತೆಯು ಹೆಚ್ಚು ಆಸಕ್ತಿ ವಹಿಸಬೇಕು. ಪಾಶ್ಚಾತ್ಯ ದೇಶಗಳಲ್ಲಿ ಗೋಹತ್ಯೆ ನಿರೋಧ ಶಾಸನಗಳಿಲ್ಲದಿದ್ದರೂ ಅಲ್ಲಿಯ ದನಕರುಗಳು ಪುಷ್ಟಿಕರವಾಗಿದ್ದು ಹೆಚ್ಚು ಹಾಲನ್ನೂ ಕೊಡುತ್ತವೆ. ನಮ್ಮಲ್ಲಿ ಈಗಿರುವ ಹಾಲು ಮತ್ತು ಬೆಣ್ಣೆ ಕೊರತೆಯನ್ನು ನಿವಾರಿಸಲು ದನಕರುಗಳನ್ನು ಉತ್ತಮ ರೀತಿಯಲ್ಲಿ ಸಂರಕ್ಷಿಸುವ ಪ್ರಚಾರ ಅತ್ಯಗತ್ಯ. ಆದ್ದರಿಂದ ಈಗಿನ ಗೋಹತ್ಯ ನಿರೋಧ ಚಳುವಳಿಗಾರರು ಗೋಪಾಲನಾ ಚಳುವಳಿಮಾಡಲಿ ಎಂದು ಶ್ರೀ ನೆಹರೂ ತಿಳಿಸಿದ್ದಾರೆ.

ಅಪೇರ
5-12-52 ರಿಂದ ಅಮೋಘ ಪ್ರಾರಂಭ
ಪಸಿಯಿರ್ಕ್-- ಕೊಡುಮೈ
[ತಮಿಳು]
ಪಾತ್ರ:- ಎಂ. ಸ್. ದ್ರೌಪತಿ, ತಂಗಂ, ಶಿಕ್ಕರುಸಿ
೨೮-೧೧-೫೨ ರಿಂದ ೨ನೇ ವಾರ
ವಳಯಾಪತಿ

ಕಪ್ಪುಬಾವುಟ ಪ್ರದರ್ಶನಕ್ಕೆ ವಿದ್ಯಾರ್ಥಿಗಳ ಬೆಂಬಲವಿಲ್ಲ

ಮೈಸೂರು ೧

ಮಹಾರಾಜಾ ಕಾಲೇಜು ಹಳೇ ವಿದ್ಯಾರ್ಥಿಗಳನ್ನುದ್ದೇಶಿಸಿ ನಾಳೆ ಸಂಜೆ ಮುಖ್ಯ ಮಂತ್ರಿಯವರು ಭಾಷಣಮಾಡಲು ಬಂದಾಗ್ಗೆ ಕಪ್ಪುಬಾವುಟ ಪ್ರದರ್ಶಿಸಬೇಕೆಂದು ಇತ್ತೀಚೆಗೆ ವಿದ್ಯಾರ್ಥಿಗಳು ತೀರ್ಮಾನಿಸಿರುವರಷ್ಟೆ.

ಈರೀತಿ ಕಪ್ಪುಬಾವುಟಪ್ರದರ್ಶನ ನಡೆಸಬೇಕೆಂದು ತೀರ್ಮಾನಿಸಿರುವುದು ಕೇವಲ ಕೆಲವು ವೈಯುಕ್ತಿಕ ವಿದ್ಯಾರ್ಥಿಗಳ ಅಭಿಪ್ರಾಯ ನಾಲ್ಕೈದು ವಿದ್ಯಾರ್ಥಿಗಳು ಮಾತ್ರ ಸೇರಿ ಈ ನಿರ್ಣಯಮಾಡಿದರು.

ಇದಕ್ಕೆ ಬಹುಮತ ವಿದ್ಯಾರ್ಥಿಗಳ ಬೆಂಬಲವಿಲ್ಲವೆಂದು ಅಭಿಪ್ರಾಯಪಟ್ಟು ಈ ಬಗ್ಗೆ ಮಹಾರಾಜಾ ಕಾಲೇಜು ಆವರಣದಲ್ಲಿ ನಿನ್ನೆಯ ದಿನ ಮತ್ತೆ ಸುಮಾರು ೧೦೦-೧೫೦ ವಿದ್ಯಾರ್ಥಿಗಳು ಸೇರಿ ಕಪ್ಪುಬಾವುಟ ಪ್ರದರ್ಶನ ಪ್ರತಿಭಟಿಸಿ ಶ್ರೀ ಗಾಡಿಗೆನಾಗಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ನಿರ್ಣಯಮಾಡಿದ್ದಾರೆ.

ಭದ್ರಾವತಿಗೆ ಮುನಸೀಫ್ ಕೋರ್ಟು

೧೯೫೩ನೇ ಜನವರಿಯಿಂದ ಭದ್ರಾವತಿಯಲ್ಲಿ ಒಂದು ಮುನಸೀಫ್ ಕೋರ್ಟನ್ನು ತೆರೆಯಲು ಸರ್ಕಾರವು ಆಜ್ಞೆಮಾಡಿದೆ.

ರಣಜಿತ್
28-11-52 ರಿಂದ ಅಮೋಘ ಪ್ರಾರಂಭ
ಮೈಸೂರು ಸಾಬು ನಟಿಸಿರುವ
ಬೋಲ್ತಾ ಜಂಗಲ್ ಹಿಂದಿ
ಭಯಂಕರ ದೃಶ್ಯದಿಂದಕೂಡಿದ ಅರಣ್ಯಚಿತ್ರ
[ವರ್ಣರಂಜಿತ ಚಿತ್ರ]
ಪ್ರತಿದಿನ ಮೂರು ಆಟಗಳು

ಪ್ರಕಾಶಕರು:— ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಮೋರ್ಹ ಮುದ್ರಣಾಲಯ, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 84

೨-೧೨-೧೯೫೨ ನೇ ಮಂಗಳವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಸತ್ಕಾರಕೂಟ

ಮೈಸೂರು ೨

ಕೇಂದ್ರ ಕಾಡುಮೃಗಗಳ ರಕ್ಷಣಾ ಸಮಿತಿಯ ಅಧ್ಯಕ್ಷರಾದ ಶ್ರೀಮನ್ಮಹಾರಾಜರವರ ಮತ್ತು ಅದರ ಸದಸ್ಯರ ಗೌರವಾರ್ಥವಾಗಿ ನಿನ್ನೆ ಸಂಜೆ ಸರ್ಕಾರಿ ಭವನದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಕೇಂದ್ರ ವ್ಯವಸಾಯಸಚಿವ ಶ್ರೀ ಪಂಜಾಬ್‌ರಾವ್‌ದೇಶಮುಖ್, ಸಚಿವ ಶ್ರೀ ಟಿ ಚನ್ನಯ್ಯ ಮತ್ತು ಇನ್ನೂ ಅನೇಕ ಗಣ್ಯ ಮಹಶಯರು ದಯಮಾಡಿಸಿದ್ದರು.

ಕಡಲೇಕಾಯಿ ಮೊಸರಿನಿಂದ ಮಕ್ಕಳ ಆರೋಗ್ಯ ಉತ್ತಮ

ನಿನ್ನೆ ಸಂಜೆ ಕೇಂದ್ರ ಸಚಿವ ಶ್ರೀ ಪಂಜಾಬರಾವ್‌ದೇಶ್‌ಮುಖ್‌ರವರು ಗುಡ್‌ಷೆಪರ್ಡ್ ಕಾನ್ವೆಂಟಿಗೆ ಭೇಟಿಇತ್ತು, ಅಲ್ಲಿ ಕೇಂದ್ರ ಆಹಾರ ಸಂಶೋಧನಾಲಯದವರು ಕಡಲೇಕಾಯಿನಿಂದ ತಯಾರಾದ ಮೊಸರನ್ನು ಕೊಟ್ಟು ೯೮ ಮಂದಿ ಮಕ್ಕಳ ಆರೋಗ್ಯದ ಬಗ್ಗೆ ನಡೆಸುತ್ತಿರುವ ಪ್ರಯೋಗವನ್ನು ಪರಿಶೀಲಿಸಿದರು ಕಳೆದ ೪ ತಿಂಗಳಿನಿಂದ ಈ ಮಕ್ಕಳು ತಮ್ಮ ಆಹಾರದ ಜೊತೆಗೆ ಈ ಮೊಸರನ್ನು ತೆಗೆದುಕೊಳ್ಳುತ್ತಿರುವರೆಂದೂ ಇದರಿಂದ ಅವರ ಆರೋಗ್ಯ ಉತ್ತಮಗೊಂಡು ತೂಕದಲ್ಲಿ ೪ ಪೌಂಡು ಹೆಚ್ಚಾಗಿದ್ದರೆಂದೂ ಡೈರೆಕ್ಟರ್ ಡಾ॥ ಸುಬ್ರಹ್ಮಣ್ಯಂ ತಿಳಿಸಿದರು.

ಸೀಮೆಯೆಣ್ಣೆ ಬೆಲೆ ಇಳಿತಾಯ

ಫಿನ್ನೆಯಿಂದ ಸೀಮೆಯೆಣ್ಣೆ ದರವನ್ನು ೮ ಗ್ಯಾಲನ್ನಿನ ಒಂದು ಯೂನಿಟ್ಟಿಗೆ ಒಂದಾಣೆಯಿಂದ ಮೂರೂವರೆಆಣೆಗೂ, ಪೆಟ್ರೋಲ್‌ಬೆಲೆಯನ್ನು ಗ್ಯಾಲನ್ನಿಗೆ ೬ ಕಾಸಿನಂತೆ ಇಳಿಸಲಾಗಿದೆ.

ಸಿಮೆಂಟಿನ ಬೆಲೆ

ಒಂದು ಟನ್ ಸಿಮೆಂಟಿಗೆ ೬೧ ರೂ. ಮತ್ತು ಅದರ ಜೊತೆಗೆ ೧೪-೧೧-೦ ರೂ.ಗೆ ಮೀರದಂತೆ ಪ್ಯಾಕಿಂಗ್ ಬೆಲೆ ಇರಬೇಕೆಂದು ಸರ್ಕಾರದವರು ಸಿಮೆಂಟಿನ ಬೆಲೆಯನ್ನು ನಿರ್ಧರಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷತೆಗೆ ನೆಹರೂ ಹೆಸರು ಸೂಚನೆ

ಮೈಸೂರು ಪ್ರದೇಶದ ೧೦ ಮಂದಿ ಪ್ರತಿನಿಧಿಗಳು ಭಾರತ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಶ್ರೀ ನೆಹರೂರವರನ್ನು ಸೂಚಿಸಿದ್ದಾರೆ.

ಜ್ಞಾನಭಂಡಾರ ಹೆಚ್ಚಿಸುವುದೇ ವಿಶ್ವವಿದ್ಯಾನಿಲಯದ ಕರ್ತವ್ಯ

ಘಟಿಕೋತ್ಸವದಲ್ಲಿ ಜನ್ನಿಂಗ್ಸ್‌ರವರ ಭಾಷಣ

ಮೈಸೂರು ೨

ಈದಿನ ಬೆಳಗ್ಗೆ ೯ ಗಂಟೆಗೆ ವಿಶ್ವವಿದ್ಯಾನಿಲಯದ ಘಟಿಕೋತ್ಸವವು ಕ್ರಾಫರ್ಡ್ ಹಾಲಿನ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು ಸಿಂಹಳ ವಿಶ್ವವಿದ್ಯಾನಿಲಯದ ಉಪಸ್ಥಾನಪತಿ ಸರ್ ಇವಾಲ್ ಜನಿಂಗ್ಸ್‌ರು ಪದವೀಧರರನ್ನುದ್ದೇಶಿಸಿ ಭಾಷಣ ಮಾಡಿದರು.

ಸಿಂಹಳ ದ್ವೀಪಕ್ಕೂ ಮೈಸೂರಿಗೆ ನೂರಾರು ವರ್ಷಗಳಿಂದ ಹೆಚ್ಚು ಸಂಪರ್ಕವಿದೆ ಮತ್ತು ಭಾರತದ ಇಂಟರ್‌ಯೂನಿವರ್ಸಿಟಿ ಬೋರ್ಡಿನಲ್ಲಿ ಸಿಂಹಳ ವಿಶ್ವವಿದ್ಯಾನಿಲಯವು ಸದಸ್ಯರಾಗಿದೆ. ಆದ್ದರಿಂದ ಈ ಮಧುರಬಾಂಧವ್ಯ ಇನ್ನೂ ಮುಂದುವರೆಯಬೇಕು ಎಂದು ಅವರು ತಿಳಿಸಿದರು.

ಜ್ಞಾನಭಂಡಾರವನ್ನು ಅಭಿವೃದ್ಧಿಪಡಿಸುವುದೇ ವಿಶ್ವವಿದ್ಯಾನಿಲಯದ ಪ್ರಥಮ ಕರ್ತವ್ಯ ಈ ಕಾರ್ಯದಲ್ಲಿ ಅಧ್ಯಾಪಕರ ಮತ್ತು ಪದವೀಧರರ ಹೊಣೆ ವಿಶೇಷವಾಗಿದೆ. ಪಾಶ್ಚಾತ್ಯ ದೇಶಗಳ ಅನೇಕ ವಿಶ್ವವಿದ್ಯಾನಿಲಯಗಳ ಸರ್ಕಾರದ ನೆರವು ಇಲ್ಲದೆ ಸಾರ್ವಜನಿಕರ ಸಹಾಯದಿಂದ ನಡೆಯುತ್ತಿವೆ.

ಯುವಕರು ವಿದ್ಯಾವಂತರಾಗಿ ಉತ್ತಮ ಕೆಲಸ ಹೊಂದಿ ಭಾರಿ ಸಂಬಳ ಪಡೆಯಲೆಂದು ಸಾರ್ವಜನಿಕರು ಅವರಿಗಾಗಿ ಹಣ ಖರ್ಚುಮಾಡುತ್ತಿಲ್ಲ. ಯುವಕರು ತಮ್ಮ ವಿದ್ಯಾಭ್ಯಾಸದಿಂದ ದೇಶಕ್ಕೆ ಉಪಯೋಗವಾಗಿ ಜ್ಞಾನಭಂಡಾರ ಉತ್ತಮವಾಗಬೇಕೆಂದು ಜನತೆ ಪದವೀಧರರಿಂದ ನಿರೀಕ್ಷಿಸುತ್ತಿದ್ದಾರೆ. ಆದ್ದರಿಂದ ಪದವೀಧರರಮೇಲೆ ಹೆಚ್ಚು ಹೊಣೆ ಬಿದ್ದಿದೆ.

ಈ ಜ್ಞಾನದಲ್ಲಿ ಐಕ್ಯತೆ ಇರಬೇಕು. ಜ್ಞಾನವೆಲ್ಲಾ ಪಾಶ್ಚಾತ್ಯ ದೇಶಗಳಿಂದ ಬಂದಿದೆಯೆಂದು ಹೇಳುವುದು ಸರಿಯಲ್ಲ. ಭಾರತ ಮತ್ತು ಚೀನಾ ದೇಶಗಳಲ್ಲಿ ಪುರಾತನ ನಾಗರೀಕತೆ ಇದ್ದು ಯುಗಾಂತರಗಳಿಂದ ಪ್ರಸಿದ್ಧವಾಗಿವೆ. ಆದರೆ ಇತ್ತೀಚಿನ ರಾಷ್ಟ್ರೀಯ ಚಳುವಳಿಯಿಂದ ಜ್ಞಾನವನ್ನು ಪಶ್ಚಿಮ ಮತ್ತು ಪೂರ್ವ ಎಂದು ವಿಭಾಗಮಾಡಲಾಗಿದೆ. ಈರೀತಿ ವಿಭಾಗಿಸುವುದು ವಿಷಾದಕರ. ಜ್ಞಾನವು ಒಂದು ಭಾಗಕ್ಕೆ ಸೇರಿದ್ದಲ್ಲ. ಅದು ವಿಶ್ವವಿಶಾಲವಾದುದು. ಆದ್ದರಿಂದ ಈ ಸಂಕುಚಿತ ಮನೋಭಾವ ಹೋಗಿ ವಿಶ್ವದ ಜನರೆಲ್ಲರ ಪುರೋಭಿವೃದ್ಧಿಗೆ ಜ್ಞಾನವನ್ನು ಉಪಯೋಗಿಸಬೇಕು.

ವಿಶ್ವವಿದ್ಯಾನಿಲಯಗಳಿಗೆ ಹೆಚ್ಚು ಹಣದ ಕೊರತೆ ಉಂಟಾಗಿದೆ. ಆದ್ದರಿಂದ ವಿದ್ಯಾವಂತರಾಗಿ ಪದವಿ ಪಡೆದವರು ತಮ್ಮ ತಾಯಿಯನ್ನು ಮರೆಯದೆ ಅದಕ್ಕೆ ಹಣ ಮತ್ತು ಸ್ವಯಂಸೇವೆ ಸಲ್ಲಿಸಬೇಕು. ಎಂದು ಅವರು ತಿಳಿಸಿದರು.

ಮರಣ ಪರಿಹಾರ ನಿಧಿ

ಮದ್ರಾಸ್ ಸರ್ಕಾರಿ ನಾನ್ ಗೆಜಿಟೆಡ್‌ನ ಉಪಸದಸ್ಯರಾಗಿದ್ದು ನಿಧನರಾದರೆ ಅವರ ಕುಟುಂಬಕ್ಕೆ ತಕ್ಷಣ ಪರಿಹಾರನೀಡಲು 'ಮರಣ ಪರಿಹಾರ ನಿಧಿ' ಎಂಬ ನಿಧಿಯನ್ನು ಸ್ಥಾಪಿಸಿದೆ. ಈ ಸಂಘದ ನಿಧಿಗೆ ಸದಸ್ಯರು, ಸರ್ಕಾರಿಸಂಸ್ಥೆ, ಸರ್ಕಾರಿಂದಲೂ ಕಾರಪಡೆದು ಇತರರಿಂದ ಹಣವನ್ನು ವಸೂಲ್ಮಾಡಲಾಗುವುದೆಂದ ಗೊತ್ತಾಗಿದೆ.

ನಿಷೇಧಾಜ್ಞೆ ಮುರಿಯುವುದಾಗಿ ಸುಹವರ್ದಿ

ಲಂಡನ್ನಿನಿಂದ ಪಾಕೀಸ್ತಾನ ಪ್ರಧಾನಿ ಕರಾಚಿಗೆ ಹಿಂತಿರುಗಿದೊಡನೆಯೇ ಸರ್ಕಾರವು ಪೌರ ಸ್ವಾತಂತ್ರವನ್ನು ಅಕ್ರಮವಾಗಿ ತಡೆಗಟ್ಟಿರುವ ೧೪೪ ನೇ ಸೆಕ್ಷನ್ ನಿಷೇಧಾಜ್ಞೆಯನ್ನು ಮುರಿಯುವುದಾಗಿ ಪಾಕೀಸ್ಥಾನ್ ಅವಾಮಿ ಮುಸ್ಲಿಂಲೀಗಿನ ನಾಯಕ ಮಿ॥ ಎಚ್. ಎಸ್. ಸುಹವರ್ದಿಯವರು ಹೇಳಿದ್ದಾರೆ. ಪಾಕ್ ಸರ್ಕಾರದ ತಪ್ಪು ರೀತಿ ನೀತಿಗಳಿಂದ ದೇಶದಲ್ಲಿ ತೀವ್ರ ಆರ್ಥಿಕ ಪರಿಸ್ಥಿತಿಯುಂಟಾಗಿ ಕೈಗಾರಿಕೆಗಳೆಲ್ಲಾ ಹಾಳಾಗುತ್ತಾ ನಿರುದ್ಯೋಗ ತಲೆದೋರಿದೆಯೆಂದು ಅವರು ಟೀಕಿಸಿದ್ದಾರೆ.

೧೧೬೪ ಮಂದಿ ಪದವೀಧರರು

ಮೈಸೂರು ೨

ಈವರ್ಷದ ಘಟಿಕೋತ್ಸವದಲ್ಲಿ ೧೧೬೪ ವಿದ್ಯಾರ್ಥಿಗಳು ಪದವಿಗಳನ್ನು ಪಡೆದರು. ಅದರಲ್ಲಿ ೧೬೭ ಮಹಿಳಾ ಪದವೀಧರರಿದ್ದಾರೆ. ೫೦ ಚಿನ್ನದ ಪದಕ ಮತ್ತು ೫೬ ಬಹುಮಾನಗಳನ್ನು ಕೊಡಲಾಯಿತು.

ಬಿ. ಎ. ಆನರ್ಸ್ ಪದವಿಪಡೆದ ಶ್ರೀಮತಿ ಸುನಂದರವರಿಗೆ ಮೂರು ಚಿನ್ನದ ಪದಕ, ಎಂ. ಎ. ಪದವೀಧರ ಶ್ರೀ ಬಿ. ಎಸ್. ಮಂಜುನಾಥಭಟ್ಟರವರಿಗೆ ಮತ್ತು ಎಂ. ಎಸ್. ಸಿ. ಯ ಶ್ರೀಮತಿ ವೈ. ವಿ. ಸತ್ಯಭಾಮಾದೇವಿರವರಿಗೆ ತಲಾ ೨ ಪದಕಗಳು ದೊರೆತವು. ಬಿ. ಎಸ್. ಸಿ. ಯ ಶ್ರೀಮತಿ ನಾಗರತ್ನಮ್ಮನವರಿಗೆ ೨ ಪದಕ ಒಂದು ಬಹುಮಾನ ಎಂ. ಬಿ. ಬಿ. ಎಸ್. ನ ಶ್ರೀ ಎಂ. ಎಸ್. ನರಸಿಂಹಮೂರ್ತಿಗೆ ೩ ಪದಕ ಮತ್ತು ಒಂದು ಬಹುಮಾನ ಬಂದುವು. ಒಳ್ಳೆ ನಡತೆಗೆ ಬಿ. ಎ. ಪದವಿಪಡೆದ ಶ್ರೀಮತಿ ಕೆ. ಸುಬ್ಬಮ್ಮನವರಿಗೆ ವಿಶೇಷ ಪದಕ ಕೊಡಲಾಯಿತು.

ಚಂಡಮಾರುತ

ಭಾನುವಾರ ಬಂಗಾಳಕೊಲ್ಲಿಯಲ್ಲಿ ಉದ್ಭವಿಸಿದ ಚಂಡಮಾರುತದಿಂದ ತಮಿಳುನಾಡು ಪ್ರಾಂತ್ಯದಲ್ಲಿ ವಿಶೇಷ ಮಳೆ ಉಂಟಾಯಿತು. ಅದು ಈಗ ಅರೇಬಿಯಾ ಸಮುದ್ರದಕಡೆ ಚಲಿಸುತ್ತಿದೆ. ಚಂಡಮಾರುತವು ಇನ್ನೂ ಬಲಗೊಳ್ಳುತ್ತಲಿರುವುದರಿಂದ ಭಾರಿ ಮಳೆ ಬರುವ ಸಂಭವವಿರುವುದಾಗಿ ಗೊತ್ತಾಗಿದೆ.

ಕಾಂಗ್ರೆಸ್ ಅಧ್ಯಕ್ಷತೆಗೆ ನಿಜಲಿಂಗಪ್ಪನವರ ಹೆಸರು

ತುಮಕೂರಿನ ಶ್ರೀ ಟಿ. ಸುಬ್ರಹ್ಮಣ್ಯಂ ಮತ್ತು ಆರ್. ಚೆನ್ನಿಗರಾಮಯ್ಯ ಮುಂತಾದ ೧೦ ಮಂದಿ ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷತೆಗೆ ಶ್ರೀ ನಿಜಲಿಂಗಪ್ಪನವರ ಹೆಸರನ್ನು ಸೂಚಿಸಿದ್ದಾರೆ.

ಭೂದಾನಯಜ್ಞಕ್ಕೆ ಕಾಣಿಕೆ

ಆಚಾರ್ಯವಿನೋಬಭಾವೆಯವರ ಭೂದಾನಯಜ್ಞಕ್ಕೆ ಬೆಂಗಳೂರಿನ ಶ್ರೀಮತಿ ಸರಸ್ವತಿ ನಟರಾಜರವರು ದೇವನಹಳ್ಳಿ ತಾಲ್ಲೂಕಿನಲ್ಲಿ ೧೬ ಎಕರೆಯಷ್ಟು ಜಮೀನನ್ನು ಕಾಣಿಕೆಯಾಗಿ ಕೊಟ್ಟಿದ್ದಾರೆ.

ಭಾರತ ನಿರ್ಣಯಕ್ಕೆ ವಿಶ್ವಸಂಸ್ಥೆ ರಾಜಕೀಯ ಸಮಿತಿಯ ಅನುಮೋದನೆ

ಕೊರಿಯಾ ಯುದ್ಧ ಖೈದಿಗಳ ಸಮಸ್ಯೆ ಪರಿಹಾರಕ್ಕಾಗಿ ಭಾರತವು ವಿಶ್ವಸಂಸ್ಥೆಯಲ್ಲಿ ಮಂಡಿಸಿರುವ ನಿರ್ಣಯವನ್ನು ರಾಜಕೀಯ ಸಮಿತಿಯು ಬಹುಮತದಿಂದ ಅಂಗೀಕಾರಮಾಡಿರುವುದಾಗಿ ಗೊತ್ತಾಗಿದೆ. ರಷ್ಯಾ ಮತ್ತು ಅದರ ೫ ಮಿತ್ರರಾಷ್ಟ್ರಗಳು ಮಾತ್ರ, ಈ ನಿರ್ಣಯಕ್ಕೆ ವಿರೋಧವಾಗಿ ಮತಕೊಟ್ಟಿತು. ಈ ನಿರ್ಣಯವು ಇನ್ನು ಭದ್ರತಾ ಸಮಿತಿಯ ಮುಂದೆ ಹೋಗಲಿದೆ.

ಈ ವಿಷಯವಾಗಿ ಭಾರತ ಪ್ರತಿನಿಧಿ ಶ್ರೀ ಕೃಷ್ಣಮೆನನ್‌ರವರು ಮಾತನಾಡುತ್ತಾ, ಕೊರಿಯಾ ಮತ್ತು ಚೈನಾದೊಡನೆ ವಿಶ್ವಸಂಸ್ಥೆಯ ಸಂಧಾನ ಇನ್ನು ನಡೆಸಬೇಕೆಂದು ತಿಳಿಸಿದ್ದಾರೆ.

ಕೊರಿಯಾ ಯುದ್ಧ ಮುಕ್ತಾಯ ಬಗ್ಗೆ ಐಸೆನ್‌ಹೋವರ್

ಕೊರಿಯ ಯುದ್ಧ ಮುಕ್ತಾಯಕ್ಕಾಗಿ ಸಲಹೆಗಳನ್ನು ಕಳುಹಿಸುವಂತೆ ಅಮೆರಿಕಾ ನೂತನ ಅಧ್ಯಕ್ಷ ಜ॥ ಐಸೆನ್‌ಹೋವರು ವಿವಿಧ ಮುಖ್ಯ ಸೈನ್ಯಾಧಿಕಾರಿಗಳಿಗೆ ಸೂಚನೆಯಿತ್ತಿರುವುದಾಗಿ ಹೇಳಲಾಗಿದೆ.

ಸಂಬಳ ಖೋತಾಕ್ಕೆ ಅನುಮತಿ ಬಂದಿಲ್ಲ

೩೦೦ ರೂಗಳಿಗಿಂತ ಹೆಚ್ಚಿಗೆ ಪಡೆಯುವವರ ಸಂಬಳದಲ್ಲಿ ಶೇಕಡ ೧೦ ರಷ್ಟು ಖೋತಾಮಾಡಲು ಮದ್ರಾಸ್ ಸರ್ಕಾರ ನಿರ್ಧರಿಸಿರುವುದಕ್ಕೆ ಕೇಂದ್ರಸರ್ಕಾರವು ಇನ್ನೂ ಅನುಮತಿ ನೀಡಿಲ್ಲವೆಂದು ಗೊತ್ತಾಗಿದೆ.

ಪಾಕ್ ಮಂತ್ರಿಗಳ ಆಸೆ

ಕಾಶ್ಮೀರವಿಲ್ಲದೆ ಪಾಕೀಸ್ತಾನ ಉಳಿಯಲು ಹಾಗೂ ಪ್ರಗತಿಸಾಧಿಸಲು ಸಾಧ್ಯವೇ ಇಲ್ಲವೆಂದು ಪಾಕೀಸ್ತಾನ ಕಾಶ್ಮೀರ ವ್ಯವಹಾರ ಮಂತ್ರಿ, ಡಾ॥ ಮಹಮದ್ ಹುಸೇನ್ ಹೇಳಿದ್ದಾರೆ.

ಟೆಲಿಫೋನ್ ದರ ಏರಿಕೆ

ಬೆಂಗಳೂರು, ಮದ್ರಾಸು, ಮೈಸೂರುಗಳಲ್ಲಿ ಮುಂದಿನ ಜನವರಿ ಒಂದನೇ ತಾರೀಖಿನಿಂದ ಟೆಲಿಫೋನ್ ದರ ತಿಂಗಳಿಗೆ ೩೦ ರೂ. ಗಳಿಗೆ ಏರಿಸಲಾಗುವುದೆಂದು ಗೊತ್ತಾಗಿದೆ.

ಕನ್ನಡ ಹಬ್ಬ

ಮೈಸೂರು ೨

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್‌ನ ಕರ್ನಾಟಕ ಸಂಘವು ಇದೇ ೬ ಮತ್ತು ೭ ನೇ ತಾರೀಖುಗಳಲ್ಲಿ ಕನ್ನಡ ಹಬ್ಬವನ್ನು ಇನ್‌ಸ್ಟಿಟ್ಯೂಟಿನ ವಿದ್ಯಾರ್ಥಿನಿಲಯದಲ್ಲಿ ನೆರವೇರಿಸುವುದು. ಆರಂಭೋತ್ಸವದ ದಿನ ಕಾರ್ಯಕಲಾಪಗಳು ಮಹಾರಾಜಾ ಕಾಲೇಜು ಪ್ರಿನ್ಸಿಪಾಲ್ ಶ್ರೀ ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುತ್ತವೆ.

ಸಾಂಸ್ಕೃತಿಕ ಮನೋರಂಜನೆ

ಈ ತಿಂಗಳಲ್ಲಿ ನಡೆಯುವ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಸಮಯದಲ್ಲಿ ಸಾಂಸ್ಕೃತಿಕ ಮನೋರಂಜನ ಕಾರ್ಯಕ್ರಮವೂ ನಡೆಯುತ್ತದೆ.

ನಿಜಾಮರ ಆಸ್ತಿಯನ್ನು ಕಿತ್ತುಕೊಳ್ಳಿ

ಹೈದರಾಬಾದ್ ಶಾಸನ ಸಭೆಯಲ್ಲಿ ವಿರೋಧಪಕ್ಷದ ಸದಸ್ಯರಾದ ಮಕ್‌ದೂಮ್ ಮೊಹಿಯುದ್ದೀನರವರು ಮಾತನಾಡುತ್ತಾ ನಿಜಾಮರು ಸಮಾಜ ವಿರೋಧಿ ಅವರ ಆಸ್ತಿಪಾಸ್ತಿಗಳನ್ನೆಲ್ಲಾ ಸರ್ಕಾರವು ವಶಪಡಿಸಿಕೊಂಡು ಅವರಿಗೆ ೩ ಕಾಸು ಪರಿಹಾರ ಕೊಡಿ ಎಂದು ಹೇಳಿದರು.

ಅಧ್ಯಕ್ಷರು ನಡುವೆ ಮಾತನಾಡಿ ವೈಯಕ್ತಿಕವಾಗಿ ಹೀಗೆ ಮಾತನಾಡಬಾರದೆಂದು ಎಚ್ಚರಿಸಿದರು.

—ಮೈಸೂರುಪೇಟೆಧಾರಣೆ—

ತಾರೀಖು ೧-೧೨-೫೨

	ಪಲ್ಲ ರೂ- ಆ:	ರೂ- ಆ
ಕಡಲೇಕಾಯಿ	೮-೧೨	೨೨-೪
ಎಳ್ಳು	೬೮-೮	
ಹರಳು	೩೬-೦	೪೫-೬
ಹುಚ್ಚೆಳ್ಳು	೪೫-೧೨	೫೩-೦
ಹುರುಳಿ	೫೨-೧೦	೫೪-೬
ಹೆಸರು	೪೮-೦	೫೩-೦
ಉದ್ದು	೬೭-೨	
ಅಲಸಂದೆ	೫೧-೦	೬೫-೪
ಮೆ॥ ಕಾಯಿ	೯-೦	೧೫-೬
ಬೆಲ್ಲ	೩-೮	
ತೆಂಗಿನಕಾಯಿ	೧೩೧	೨೩೧

ಪುಷ್ಟಿಕರ ಆಹಾರ ಗುಳಿಗೆ ತಯಾರಾಗಬೇಕು

ಆಹಾರ ಸಂಶೋಧನಾ ಕೇಂದ್ರದಲ್ಲಿ ಸಚಿವರ ಸಲಹೆ

ಮೈಸೂರು ೨

ಕೇಂದ್ರ ವ್ಯವಸಾಯ ಸಚಿವ ಡಾ॥ ಪಂಜಾಬ್‌ರಾವ್‌ರವರು ನಿನ್ನೆ ಮಧ್ಯಾಹ್ನ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಭೇಟಿ ಇತ್ತು, ಅಲ್ಲಿನ ನೌಕರರನ್ನುದ್ದೇಶಿಸಿ ಭಾಷಣಮಾಡಿದರು.

ಡೈರೆಕ್ಟರ್ ಡಾ॥ ವಿ. ಸುಬ್ರಹ್ಮಣ್ಯನ್‌ರು ಸ್ವಾಗತ ಭಾಷಣಮಾಡಿ, ಕೇಂದ್ರದಲ್ಲಿ ನಡೆದಿರುವ ಮುಖ್ಯ ಆಹಾರದ ಬಗ್ಗೆ ಸಂಶೋಧನೆಗಳನ್ನು ವಿವರಿಸಿದರು. ಮೈಸೂರು ಪ್ರಾಂತ್ಯ, ಮುದರಾಸಿನ ಕೆಲವು ಆಹಾರ ದುರ್ಭಿಕ್ಷ ದೇಶಗಳಲ್ಲಿ ಕೇಂದದಿಂದ ತಯಾರಾದ ಕಡಿಮೆ ದರದ ಪುಷ್ಟಿಕರವಾದ ಆಹಾರವನ್ನು ಸರಬರಾಜು ಮಾಡಲಾಗುತ್ತಿದೆಯೆಂದೂ, ಇದರ ಜೊತೆಗೆ ಕಡಲೇಕಾಯಿಯಿಂದ ತಯಾರಾದ ಮೊಸರನ್ನೂ ಕೊಡಲಾಗುತ್ತಿದೆಯೆಂದೂ, ಇದಕ್ಕೆ ಕೇವಲ ೨ ಔನ್ಸಿಗೆ ೨ ಆಣೆ ಖರ್ಚುಬೀಳುವುದೆಂದೂ ತಿಳಿಸಿದರು.

ಸಚಿವರು ಭಾಷಣ ಮಾಡಿ ಕೇಂದ್ರದ ಕೆಲಸಕಾರ್ಯಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ದೇಶದಲ್ಲಿ ಈಗಿರುವ ಆಹಾರದ ಕೊರತೆ ಕಾಲದಲ್ಲಿ ಇಂತಹ ಕೇಂದ್ರಗಳು ಅತ್ಯಗತ್ಯ. ಆದರೆ ವಿಜ್ಞಾನಿಗಳು ಇತರರ ಟೀಕೆಗಳಿಗೆ ಗಮನಕೊಟ್ಟು ನಿರಾಶೆಗೊಳ್ಳದೆ ಸಾಮಾನ್ಯ ಜನರಿಗೆ ಸುಲಭ ದರದಲ್ಲಿ ಆಹಾರ ಪದಾರ್ಥಗಳು ದೊರೆಯುವಂತೆ ಸಂಶೋಧನೆ ನಡೆಸಬೇಕು. ಈ ಕೇಂದ್ರದಲ್ಲಿ ಕಂಡುಹಿಡಿದಿರುವ ಕೃತಕ ಅಕ್ಕಿಯನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚು ಬೆಲೆ ಆಗದಂತೆ ತಯಾರಿಸಬೇಕು. ಆಹಾರ ದುಃಸ್ಥಿತಿ ಪ್ರದೇಶಗಳಲ್ಲಿ ಸುಲಭ ದರದ ಮತ್ತು ಪುಷ್ಟಿಕರವಾದ ಆಹಾರ ಗುಳಿಗೆಗಳನ್ನು ಕೇಂದ್ರವು ತಯಾರಿಸುವುದಾದರೆ ಅವುಗಳನ್ನು ಸರ್ಕಾರವು ಕೊಂಡು ಉಚಿತವಾಗಿ ಜನರಿಗೆ ಹಂಚಲಾಗುವುದು. ಈಗ ಉಪಯೋಗಿಸದೆ ಬೀದಿಗೆ ಎಸೆಯುವ ಅನೇಕ ಸಿಪ್ಪೆ ಮುಂತಾದವುಗಳಿಂದ ಆಹಾರ ಪದಾರ್ಥಗಳನ್ನು ತಯಾರಿಸಲು ಸಂಶೋಧನೆ ನಡೆಸಬೇಕು ಎಂದು ಸಚಿವರು ತಿಳಿಸಿದರು.

ಸಂಸ್ಥಾನದ ಸಚಿವ ಶ್ರೀ ಟಿ. ಚನ್ನಯ್ಯನವರು ಮಾತನಾಡಿ, ಜನರಲ್ಲಿ ಕೇಂದ್ರದ ಕೆಲಸಕಾರ್ಯಗಳು ಹೆಚ್ಚು ತಿಳಿಯುವಂತೆ ಅದನ್ನೂ ಹಳ್ಳಿಗಳಲ್ಲಿ ಪ್ರಚಾರ ಮಾಡಬೇಕೆಂದು ಹೇಳಿದರು.

ಇನ್ನು ವಿಶ್ವವಿದ್ಯಾನಿಲಯಗಳ ಸ್ಥಾಪನೆ ನಿಲ್ಲಬೇಕು

ಭಾರತದಲ್ಲಿ ಈಗಿರುವ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಮಟ್ಟವು ದಿನೇದಿನೇ ಕ್ಷಯಿಸುತ್ತಲಿದೆ. ಪಬ್ಲಿಕ್ ಸರ್ವೀಸ್ ಕಮೀಷನ್ ಮತ್ತು ಇತರ ಕಡೆಗಳಿಂದ ಇದು ನಿಚ್ಚಳವಾಗಿ ತಿಳಿಯಬರುತ್ತಲಿದೆ.

ಈಗಿರುವ ಶಿಕ್ಷಣ ಪದ್ಧತಿಯನ್ನು ಪೂರ್ಣವಾಗಿ ಮಾರ್ಪಾಟು ಮಾಡಬೇಕಾದುದು ಅತ್ಯವಶ್ಯಕವೇ. ಹೊರತು ವಿಶ್ವವಿದ್ಯಾನಿಲಯಗಳ ಸಂಖ್ಯೆಯನ್ನು ಹೆಚ್ಚಿಸುವುದು ಉಚಿತವಲ್ಲವೆಂದು ಪ್ರಧಾನಿ ನೆಹರೂರವರು ನಿನ್ನೆಯದಿನ ಗ್ವಾಲಿಯರ್‌ನಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಹೊಸದಾಗಿ ಬಂದಿವೆ
ಬಿ. ಎಸ್. ಎ. ಬೈಸಿಕಲ್‌ಗಳು, ಮಕ್ಕಳ ಗಾಡಿಗಳು.
ಶಾರದಾ ಸೈಕಲ್ ಮತ್ತು ವಾಚ್ ಸ್ಟೋರ್ಸ್
ದೊಡ್ಡಗಡಿಯಾರದ ಚೌಕ, ಮೈಸೂರು.

ವುಡ್‌ಲ್ಯಾಂಡ್ಸ್
29—11—52 ರಿಂದ
ಅಮೋಘ ಪ್ರಾರಂಭ
ಇನ್‌ಸಾಫ್ ಹಿಂದಿ,
ಭೂಮಿಕೆ:-ಪೃಥ್ವಿರಾಜ್, ರಾಗಿಣಿ
ಕಮಲ್‌ಕಪೂರ್.

ಒಲಂಪಿಯಾ
ಅಮೋಘ ಪ್ರಾರಂಭ
4—12—52ರಿಂದ ಪ್ರತಿದಿನ 3 ಆಟ
ಪ್ರಕಾಶ್ ಪಿಕ್ಚರ್ಸ್‌ರವರ ಉತ್ಕೃಷ್ಟ ಸಂಗೀತಮಯ ಚಿತ್ರ.
ಬೈಜೂಭಾವರ
ಪಾತ್ರ:—ಮೀನಾಕುಮಾರಿ, ಕುಲ್‌ದೀಪ್, ಭರತ್‌ಭೂಷಣ್ ಮತ್ತು ಸುರೇಂದ್ರ.
ನಿರ್ದೇಶನ:—ವಿಜಯಭಟ್
ಸಂಗೀತ:—ನೌಷದ್

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:—ಹಿ. ಕಾ. ಸುಬ್ಬರಾವ್
ಮೋಹನ್ ಮುದ್ರಣಾಲಯ, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 85

೩-೧೨-೧೯೫೨ ನೇ ಬುಧವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಕಪ್ಪು ಬಾವುಟ ಪ್ರದರ್ಶಿಸಿದ್ದಕ್ಕೆ ದಸ್ತಗಿರಿ—ಬಿಡುಗಡೆ

ಮೈಸೂರು ೩

ಮಹಾರಾಜಾ ಕಾಲೇಜಿನಲ್ಲಿ ನಿನ್ನೆ ಕಾಲೇಜಿನ ದಿನಾಚರಣೆಯ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಗೆ ಕಪ್ಪುಬಾವುಟ ಪ್ರದರ್ಶಿಸಲು ಬಂದ ಶ್ರೀಗಳಾದ ಶಾಂತಮೂರ್ತಿ, ಬಿ. ಶ್ರೀಕಂಠಪ್ಪ, ಹೆಮ್ಮಿಗೆ ವೇದಾಂತ ಮುಂತಾದ ೬ ಜನರನ್ನು ಪೋಲೀಸಿನವರು ದಸ್ತಗಿರಿಮಾಡಿದರು.

ಸುಮಾರು ೩—೫೦ ರ ವೇಳೆಗೆ ಮುಖ್ಯಮಂತ್ರಿಗಳು ಬರುವ ಮುನ್ನ ಶ್ರೀಗಳಾದ ಶಾಂತಮೂರ್ತಿ, ಕೆ. ಬಿ. ಶಿವಯ್ಯ ಮತ್ತು ಜಿ. ವಿ. ಅಂಜನಪ್ಪನವರುಗಳು ಕಪ್ಪುಬಾವುಟಗಳನ್ನು ಹಿಡಿದುಕೊಂಡು ಕಾಲೇಜು ಹೆಬ್ಬಾಗಿಲಿನಬಳಿ ಬಂದು ನಿಂತರು. ಡಿ. ಎಸ್. ಪಿ. ಶ್ರೀ ಮುಕುಂದರಾವ್ ಸಿಂಧ್ಯರವರು ಬಂದು ಈ ಮೂವರನ್ನು ದಸ್ತಗಿರಿಮಾಡಿ ಕೊಂಡೊಯ್ದರು.

ಅನಂತರ ಶ್ರೀಗಳಾದ ಶ್ರೀಕಂಠಪ್ಪ, ವೇದಾಂತ ಹೆಮ್ಮಿಗೆ ಮತ್ತು ವಿಶ್ವನಾಥ ಇವರುಗಳು ಕಪ್ಪುಬಾವುಟ ಹಿಡಿದು ಆ ಸ್ಥಾನದಲ್ಲಿ ಬಂದುನಿಂತರು. ಅವರನ್ನೂ ದಸ್ತಗಿರಿಮಾಡಿ, ಎಲ್ಲರನ್ನೂ ಒಂಟಿಕೊಪ್ಪಲು ಪೋಲೀಸ್‌ಸ್ಟೇಷನ್ನಿಗೆ ಕೊಂಡೊಯ್ದು ರಾತ್ರಿ ೧೧ ಗಂಟೆಯವರೆವಿಗೂ ಅಲ್ಲಿಯೇ ಇರಿಸಿದ್ದು ಅನಂತರ ಬಿಡುಗಡೆ ಮಾಡಿದರು.

೪೪೬೪ ನೌಕರರ ನಿವೃತ್ತಿ

ಮದ್ರಾಸಿನಲ್ಲಿ ಆಹಾರ ನಿಯಂತ್ರಣವನ್ನು ತೆಗೆದುಹಾಕಿದುದರ ಪರಿಣಾಮವಾಗಿ ೪೪೬೪ ನೌಕರರನ್ನು ಕೆಲಸದಿಂದ ವಜಾಮಾಡಲಾಗಿದೆಯೆಂದು ಆಹಾರ ಸಚಿವ ಶ್ರೀ ಸಿ. ಸುಬ್ರಹ್ಮಣ್ಯಂರವರು ಶಾಸನಸಭೆಯಲ್ಲಿ ಹೇಳಿದ್ದಾರೆ.

ಸಂಗೀತಕಛೇರಿ

ವರಲಕ್ಷ್ಮೀ ಸಂಗೀತ ವಿದ್ಯಾಮಂದಿರದ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ಸಾಯಂಕಾಲ ೬ ಗಂಟೆಗೆ ಸಂಗೀತ ಸಾಹಿತ್ಯ ವಿದ್ವಾನ್ ಶ್ರೀ ಹೆಚ್. ರಾಮಾನುಜಾಚಾರ್ಯರಿಂದ ಸಂಗೀತಕಛೇರಿ ನಡೆಯುತ್ತದೆ.

ಚಿತ್ರಮಂದಿರಗಳ ಕಾಲ ನಿಗದಿ

ಅಂಗಡಿ ಸಿಬ್ಬಂದಿ ಶಾಸನದ ಪ್ರಕಾರ ಮೈಸೂರು, ದಾವಣಗೆರೆ, ಬೆಂಗಳೂರು, ಕೆ. ಜಿ. ಎಫ್. ನಗರಗಳಲ್ಲಿ ಮತ್ತು ಶಿವಮೊಗ್ಗ, ಚಿಕ್ಕಮಗಳೂರು ಪಟ್ಟಣಗಳಲ್ಲಿ ಚಿತ್ರ ಮತ್ತು ನಾಟಕ ಮಂದಿರಗಳನ್ನು ಬೆಳಿಗ್ಗೆ ೯ ಗಂಟೆಗೆ ಮುಂಚೆ ರಾತ್ರಿ ೨-೩೦ ನಂತರ ತೆಗೆದಿರಕೂಡದೆಂದು ಸರ್ಕಾರವು ಸೂಚನೆಯನ್ನಿತ್ತಿದೆ. ಈ ಆಜ್ಞೆಯು ಇದೇ ಡಿಸೆಂಬರ್ ೧೫ ರಿಂದ ಜಾರಿಗೆ ಬರುತ್ತದೆ.

ಹಿಂದೂಮಹಾಸಭಾಧ್ಯಕ್ಷ

ಬಂಗಾಳಾ ಹಿಂದೂಮಹಾಸಭಾಧ್ಯಕ್ಷ ಮತ್ತು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎನ್. ಸಿ. ಛಟರ್ಜಿಯವರು ಅಖಿಲಭಾರತ ಹಿಂದೂಮಹಾಸಭಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಮಿಡಲ್‌ಸ್ಕೂಲ್ ಡೆಪ್ಯುಟಿ ಡೈರೆಕ್ಟರು

ಶಿಕ್ಷಣ ಸುಧಾರಣಾ ಸಮಿತಿಯ ಉಪಕಾರ್ಯದರ್ಶಿಗಳಾದ ಶ್ರೀ ಟಿ. ಎನ್. ಕೃಷ್ಣರಾಯರನ್ನು ರಜಾದಮೇಲಿರುವ ಶ್ರೀ ಎಲ್. ಅಬ್ದುಲ್ ಅಜೀಜ್‌ರವರ ಸ್ಥಾನದಲ್ಲಿ ಮಿಡ್ಲ್‌ಸ್ಕೂಲ್‌ಗಳ ಡೆಪ್ಯುಟಿ ಡೈರೆಕ್ಟರಾಗಿ ನೇಮಿಸಲಾಗಿದೆ.

ಅಶೋಕ ಚಕ್ರವರ್ತಿಯ ಪುತ್ರನ ಅವಶೇಷ

ಸಿಂಹಳದಲ್ಲಿರುವ ಅನೂರಾಧಾಪುರದಲ್ಲಿ ದೊರೆತಿರುವ ಅಶೋಕ ಚಕ್ರವರ್ತಿಯ ಪುತ್ರ, ಮಹಾ ಮಹೇಂದ್ರನ ಅವಶೇಷವನ್ನು ಮುಂದಿನವರ್ಷ ಭಾರತಕ್ಕೆ ತರಲು ಪ್ರಧಾನಿ ನೆಹರೂರವರು ಎಲ್ಲಾ ಸೌಕರ್ಯಗಳನ್ನು ಕೊಡಲು ಒಪ್ಪಿರುವುದಾಗಿ ಗೊತ್ತಾಗಿದೆ.

ಪುರಸಭಾಧಿವೇಶನ

ಮುಂದುವರಿದ ಮೈಸೂರು ಪುರಸಭೆಯ ಅಧಿವೇಶನವು ೫ನೇ ತಾರೀಖು ನಡೆಯುತ್ತದೆ.

ಕಲಹ ಸಾಧನೆಯಾಗದೆ ಕಾರ್ಯ ಸಾಧನೆಯಾಗಬೇಕು

ನೀರು ಸರಬರಾಜು ಕೆಲಸಗಾರರಿಗೆ ಮುಖ್ಯ ಮಂತ್ರಿಗಳ ಸಲಹೆ

ಮೈಸೂರು ೩

ರಾಜಧಾನಿಯ ವಾಣಿವಿಲಾಸ ನೀರು ಸರಬರಾಜು ಕೇಂದ್ರದ ಕೆಲಸಗಾರ ಸಂಘದ ವಾರ್ಷಿಕೋತ್ಸವವು ಅದಿನ ಬೆಳಿಗ್ಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಂಘದ ಅಧ್ಯಕ್ಷ ಶ್ರೀ ವಿ. ರಾಮಸ್ವಾಮಿ ಅಯ್ಯಂಗಾರ್ ಸ್ವಾಗತವಾದನಂತರ ಉಪಾಧ್ಯಕ್ಷ ಶ್ರೀ ಬಿ. ಎಸ್. ಚಂದ್ರಶೇಖರಯ್ಯನವರು ವರದಿಯನ್ನು ಒಪ್ಪಿಸಿದರು. ಸಂಘವು ೧೯೪೭ ರಲ್ಲಿ ಸ್ಥಾಪಿತವಾಗಿ ಈಗ ೧೪೦ ಮಂದಿ ಸದಸ್ಯರಿರುವರೆಂದೂ, ನೌಕರರಿಗೂ ಮತ್ತು ಅಧಿಕಾರಿಗಳಿಗೂ ಪರಸ್ಪರ ಸೌಹಾರ್ದವಿದೆಯೆಂದೂ ತಿಳಿಸಿದರು. ಕೆಲಸಗಾರರಿಗಾಗಿ ಒಂದು ರಾತ್ರಿ ಶಾಲೆ ಮತ್ತು ಸಹಕಾರ ಸಂಘವನ್ನು ಸ್ಥಾಪಿಸಲಾಗಿದೆಯೆಂದೂ ಅವರು ಹೇಳಿದರು.

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಭಾಷಣಮಾಡಿ, ಸಂಘದಲ್ಲಿ ಕೆಲಸಕಾರ್ಯಗಳು ಚೆನ್ನಾಗಿ ನಡೆಯುತ್ತಿರುವುದಕ್ಕೂ ಮತ್ತು, ಕೆಲಸಗಾರರಿಗೂ, ಅಧಿಕಾರ ವರ್ಗದವರಿಗೂ ಸೌಹಾರ್ದವಿರುವುದಕ್ಕೂ ಅವರನ್ನು ಅಭಿನಂದಿಸಿದರು. ದುಡಿಯುವವರಿಗೂ ಅಧಿಕಾರ ವರ್ಗದವರಿಗೂ ಬೇಧಭಾವವಿದ್ದಲ್ಲಿ ಲೋಕ ಕಲ್ಯಾಣವಾಗುವುದಿಲ್ಲ. ಕೆಲಸಗಾರರು ತಮ್ಮ ಕುಂದು ಕೊರತೆಗಳನ್ನು ಮುಷ್ಕರ, ಪ್ರದರ್ಶನ ಮುಂತಾದುವುಗಳಿಂದ ನಿವಾರಿಸಿಕೊಳ್ಳಬಹುದೆಂದು ಭಾವಿಸಿದ್ದರೆ ಅದು ಸಾಧ್ಯವಾದುದಲ್ಲ. ಇದರಿಂದ ದೇಶಕ್ಕೇ ಕೇಡುಂಟಾಗುವುದು. ಕಲಹ ಸಾಧನೆಯಾಗದೆ, ಸ್ನೇಹದಿಂದ ಕಾರ್ಯ ಸಾಧನೆ ಆಗಬೇಕು—ಎಂದು ಮುಖ್ಯಮಂತ್ರಿಗಳು ಸಲಹೆಮಾಡಿದರು.

ಕೆಲಸಗಾರರಿಗೆ ಪೆನ್ಷನ್ ಕೊಡಬೇಕೆಂಬ ಪ್ರಾರ್ಥನೆ ವಿಚಾರ ಮಾತನಾಡಿ, ಈ ತತ್ವವನ್ನು ಸರ್ಕಾರವು ಒಪ್ಪಿದೆಯೆಂದೂ, ಆದರೆ ಅದಕ್ಕೆ ಮೈಸೂರು ಪುರಸಭೆಯವರು ಹಣಕೊಡಲು ನಿರಾಕರಿಸಿರುವರೆಂದೂ, ಆದರೂ ಸರ್ಕಾರದವರು ಪುರಸಭೆಯವರಲ್ಲಿ ಚರ್ಚೆಮಾಡಿ ಕೂಡಲೇ ಆ ಸೌಲಭ್ಯವನ್ನು ಏರ್ಪಡಿಸುವುದಾಗಿ ಭರವಸೆ ಕೊಟ್ಟರು.

ಕಾಲೇಜು ದಿನೋತ್ಸವಕ್ಕೆ ಬಲವಾದ ಪೋಲೀಸ್ ಕಾವಲು

ಮೈಸೂರು ೩

ನಿನ್ನೆಯದಿನ ನಡೆದ ಮಹಾರಾಜಾ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಂದ ಗಲಭೆ ನಡೆಯಬಹುದೆಂಬ ಶಂಕೆಯಿಂದ ಕಾಲೇಜಿನ ಸುತ್ತಮುತ್ತ ಬಲವಾದ ಪೋಲೀಸರ ಕಾವಲನ್ನು ಹಾಕಲಾಗಿತ್ತು. ಕಾಲೇಜಿನ ಮುಂಭಾಗದ ದ್ವಾರಬಿಟ್ಟು ಮಿಕ್ಕ ಬಾಗಿಲುಗಳನ್ನೆಲ್ಲಾ ಭದ್ರವಾಗಿ ಮುಚ್ಚಲಾಗಿತ್ತು. ಆಹ್ವಾನಿತರೂ ಮತ್ತು ವಿದ್ಯಾರ್ಥಿಗಳೂ ಪ್ರವೇಶಿಸಲು ಈ ಒಂದೇ ಮಾರ್ಗವಿದ್ದುದರಿಂದ ಅಲ್ಲಿ ಜನಸಂದಣಿ ವಿಶೇಷವಾಗಿತ್ತು. ಇದರಿಂದ ಅನೇಕ ಆಹ್ವಾನಿತ ಮಹನೀಯರು, ಮಹಿಳೆಯರು ಗಂಟೆಕಾಲ ಹೊರಗೆ ಕಾದಿದ್ದರೂ ಅವರಿಗೆ ಪ್ರವೇಶ ದೊರೆಯದೆ ನಿರಾಶೆಗೊಂಡು ಅನೇಕರು ವಾಪಸ್ಸು ಹಿಂತಿರುಗಿದರು.

ವಿದ್ಯಾರ್ಥಿಗಳು ತಮ್ಮ ಲೈಬ್ರರಿ ಕಾರ್ಡನ್ನು ತೋರಿಸಿದರೆ ಮಾತ್ರ ಪ್ರವೇಶವೆಂದು ತಿಳಿಸಿದಾಗ್ಯೂ ಎಲ್ಲರಿಗೂ ಪ್ರವೇಶದೊರೆಯದೆ ನೂರಾರು ಮಂದಿ ದ್ವಾರದ ಬಳಿಯಲ್ಲೇ ಹೊರಗೆ ನಿಂತು ನಿರಾಶೆಗೊಂಡ ಪ್ರಸಂಗ ಕಾಣಬರುತ್ತಿತ್ತು. ಈ ರೀತಿ ವಿದ್ಯಾರ್ಥಿಗಳನ್ನೇ ಸಮಾರಂಭಕ್ಕೆ ಬಿಡದೆ ತಕ್ಕ ಏರ್ಪಾಡು ಮಾಡಿದಿದ್ದುದು ಶೋಚನೀಯ.

ಅಧಿಕಾರಿ ವರ್ಗದವರು ವಿದ್ಯಾರ್ಥಿಗಳ ಪ್ರವೇಶಕ್ಕೆ ಬಂದು ಸ್ಥಳ ಆಹ್ವಾನಿತ ಮಹಿಳೆಯರಿಗೆ ಮತ್ತು ಮಹನೀಯರಿಗೆ ಬೇರೆ ಬೇರೆ ಪ್ರದೇಶ ಏರ್ಪಡಿಸಿದ್ದರೆ ಯಾರು ನಿರಾಸೆಗೊಂಡು ವಾಪಸ್ಸು ಹೋಗುತ್ತಿರಲಿಲ್ಲ.

ಅವರುಗಳಿಗೆ ಗೃಹವಸತಿಯ ವಿಚಾರದಲ್ಲಿ ಸರ್ಕಾರದವರು ಸಹಾನುಭೂತಿಯಿಂದ ವರ್ತಿಸಿ ಅವರಿಗೆ ಸುಲಭದರದಲ್ಲಿ ನಿವೇಶನ ಕೊಡಿಸುವುದಾಗಿಯೂ, ಮನೆಗಳನ್ನು ಸಹಕಾರ ಸಂಘದ ಮೂಲಕ ಕಟ್ಟಿಸಿಕೊಳ್ಳಬೇಕೆಂದೂ ಹೇಳಿದರು.

ಹೊಸದಾಗಿ ಬಂದಿವೆ
ಬೇಬಿ ಪೆರಾಂಬ್ಯುಲೇಟರ್,
ಬೇಬಿ ಪುಶ್‌ಚೇರ್ಸ್,
ಮಕ್ಕಳ ಬೈಸಿಕಲ್ ಮತ್ತು ಟ್ರೈಸಿಕಲ್‌ಗಳು
ಶಾರದಾ ಸೈಕಲ್ ಮತ್ತು ವಾಚ್ ಸ್ಟೋರ್ಸ್
ದೊಡ್ಡಗಡಿಯಾರದ ಚೌಕ, ಮೈಸೂರು.

ರೇಷನ್‌ದಾರರ ಸಭೆ

ಮೈಸೂರು ೩

ಮೈಸೂರು ನಗರದ ರೇಷನ್‌ದಾರರ ಸಂಘದಸಭೆಯು ಮೊನ್ನೆ ಭಾನುವಾರ ಪುರಭವನದ ಮೈದಾನದಲ್ಲಿ ನಡೆಯಿತು.

ಮೈಸೂರು ಆಹಾರ ಪರಿಸ್ಥಿತಿ ಬಗ್ಗೆ ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಲೋಕಸಭೆಯಲ್ಲಿ ಇತ್ತೀಚೆಗೆ ಕೊಟ್ಟಿರುವ ಹೇಳಿಕೆಯು ಜನರಿಗೆ ನಿರಾಶೆಯನ್ನುಂಟುಮಾಡಿದೆ. ಇಲ್ಲಿಯ ಸ್ಥಿತಿಗತಿಗಳನ್ನು ಅವರು ಖುದ್ದಾಗಿ ಪರಿಶೀಲಿಸಿಲ್ಲ. ಈಗಲಾದರೂ ಈ ಸಂಸ್ಥಾನಕ್ಕೆ ಅವರು ಭೇಟಿಕೊಟ್ಟು ಅನಂತರ ಇಲ್ಲಿಯ ಆಹಾರ ನೀತಿಯನ್ನು ನಿರ್ಧರಿಸಬೇಕೆಂದು ಕೋರುವ ನಿರ್ಣಯವನ್ನು ಮಾಡಲಾಯಿತು.

ಮೈಸೂರು ಸರ್ಕಾರದವರು ಭತ್ತದ ಬೆಲೆಯನ್ನು ೨೫ ರೂಗೆ ಏರಿಸಿರುವುದನ್ನು ತೀವ್ರವಾಗಿ ವಿರೋಧಿಸಿ ಇದರಿಂದ ರೈತರಿಗೆ ಪ್ರಯೋಜನವಿಲ್ಲ. ಹೆಚ್ಚು ಭತ್ತ ಬೆಳೆಯುವವರಿಗೆ ಪ್ರಯೋಜನವಾಗುತ್ತದೆ ಈಹೆಚ್ಚಿಗೆ ಬೆಳೆಯನ್ನು ಕೊಳ್ಳುವವರು ಕೊಡಬೇಕಾಗಿದೆ ರೈತರಿಂದವಸೂಲುಮಾಡುವ ಭತ್ತಕ್ಕೆ ೨೩ ಅಥವಾ ೨೫ ರೂ. ಕೊಡಲಿ ಆದರೆ ಹೆಚ್ಚುವರಿ ಬೆಳೆಬೆಳೆಯುವ ಜಮೀನ್ದಾರರಿಂದವಸೂಲುಮಾಡುವ ಭತ್ತವನ್ನು ಮಾತ್ರ ೧೫ ಅಥವಾ ೧೬ ರೂಗೆ ಕೊಂಡು ದಪ್ಪಕ್ಕಿಯನ್ನು ರೂಗೆ ೩|| ಸೇರಿನಂತೆ ಸಣ್ಣಕ್ಕಿಯನ್ನು ರೂಗೆ ೨ ಸೇರಿನಂತೆ ಸರ್ಕಾರ ಮಾರಬೇಕೆಂದು ಒತ್ತಾಯ ಪೂರ್ವಕವಾದ ಮತ್ತೊಂದು ನಿರ್ಣಯವನ್ನು ಸಭೆಯು ಮಾಡಿತು.

ಪೌರಸಭಾಧ್ಯಕ್ಷರ ಚುನಾವಣೆ

ಮೈಸೂರು ಡಿ. ೩

೧೯೫೩ ನೇ ಮಾರ್ಚಿ ಆಖೈರಿನವರೆಗೆ ಮೈಸೂರು ಪುರಸಭೆಗೆ ಸರ್ಕಾರವು ಜೀವದಾನ ಕೊಟ್ಟಿರುವುದರಿಂದ ೧೯೫೩ ನೇ ಜನವರಿಯಿಂದ ಅಲ್ಲಿಯವರೆಗೆ ಹೊಸ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯು ಇದೇ ಮಾಹೆ ೧೭ ನೇ ತಾರೀಖು ವಿಶೇಷ ಸಭೆಯಲ್ಲಿ ನಡೆಯುತ್ತದೆ.

ಪೈಗಂಬರ್ ಜಯಂತಿ

ಮೈಸೂರು ೩

ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಮೊನ್ನೆಯದಿನ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಪೈಗಂಬರ್ ಜಯಂತಿಯನ್ನು ಆಚರಿಸಲಾಯಿತು. ಶ್ರೀಗಳಾದ ಡಿ. ಎಂ. ಸಿದ್ದಯ್ಯ, ಡಿ. ದೇವರಾಜಅರಸ್, ಕೃಷ್ಣಮೂರ್ತಿ, ದಾವೂದಷರೀಫ಼್ ಮುಂತಾದವರು ಭಾಷಣಮಾಡಿದರು. ಜಯಂತಿಯ ದಿನದ ಮಹತ್ವವನ್ನು ಅಧ್ಯಕ್ಷರು ವಿವರಿಸಿದರು.

ವಿದ್ಯಾಭ್ಯಾಸ ಕ್ರಮ ಮಾರ್ಪಾಟ್ಟ ಮೇಲೆ ಕನ್ನಡ ಬೆಳವಣಿಗೆ

ಮಹಾರಾಜ ಕಾಲೇಜು ದಿನೋತ್ಸವದಲ್ಲಿ

ಮುಖ್ಯಮಂತ್ರಿಗಳ ಭಾಷಣ

ಮೈಸೂರು ೩

ಮಹಾರಾಜಾ ಕಾಲೇಜಿನ ದಿನಾಚರಣೆಯು ನಿನ್ನೆಯ ದಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ವಾರ್ಷಿಕೋತ್ಸವದ ಸಂಘದ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಸ್ವಾಗತ ಭಾಷಣಮಾಡುತ್ತಾ, ದೇಶಾಭಿಮಾನಕ್ಕೋಸ್ಕರ ಹೋರಾಡಿ ಈಗ ನಮ್ಮ ಮಾತೃಭಾಷೆಯನ್ನು ಮರೆತರೆ ನಾವು ದ್ರೋಹಿಗಳಾಗುತ್ತೇವೆ ಈಗ ಸಂದಿಗ್ಧ ಸಮಯ ನಾವು ತಾಳ್ಮೆಯಿಂದ ವರ್ತಿಸಬೇಕಾಗಿದೆ. ನಾವು ಮಾತೃಭಾಷೆಯನ್ನು ಚೆನ್ನಾಗಿ ಕಲಿಯಬೇಕು. ಅನಂತರ ಇಂಗ್ಲೀಷುಭಾಷೆಯನ್ನು ಬಿಟ್ಟುಬಿಡೋಣ ನಮ್ಮ ಮಾತೃಭಾಷೆಗೆ ದ್ರೋಹವೆನಿಸದೆ ಇಂಗ್ಲೀಷು ಭಾಷೆಯನ್ನು ಸ್ವಲ್ಪ ತಿಳಿಯುವುದು ಉತ್ತಮ. ಪ್ರತಿಯೊಂದು ಕಾರ್ಯ ಮಾಡುವಾಗಲೂ ನಾವು ಒಟ್ಟಾಗಿ ಕೆಲಸ ನಡೆಸಬೇಕು. ಜೀವನದಲ್ಲಿ ಅನೇಕ ತೊಡಕುಗಳು ಬರುತ್ತವೆ. ಅದನ್ನು ಶಾಂತರೀತಿಯಿಂದ ಎದುರಿಸಬೇಕು.

ಸಾಂಸ್ಕೃತಿಕ ಬೆಳವಣಿಗೆಗೋಸ್ಕರ ಹಿಂದೂ ದೇಶದಲ್ಲಿ ಯಾರೂ ನಮ್ಮ ರೀತಿ ಮಾಡಿಲ್ಲ. ನಾವು ಇದನ್ನು ಪ್ರಾರಂಭಿಸಿದ ಮೇಲೆ ರಾಜಾಜಿಯವರು ಫಲಪ್ರದವಾದರೆ ತಾವೂ ಅನುಸರಿಸುವುದಾಗಿ ಹೇಳಿದ್ದಾರೆ. ನಾವು ನಮ್ಮ ಸಂಸ್ಕೃತಿ, ನಮ್ಮ ಚರಿತ್ರೆ ಚನ್ನಾಗಿ ಅರಿತುಕೊಳ್ಳಬೇಕು. ನಮ್ಮಲ್ಲಿ ಭಿನ್ನಾಭಿಪ್ರಾಯ ಮೂಡಿದರೆ ಕಾದು ನೋಡಬೇಕು. ನಮ್ಮ ಕ್ರಿಯೆ ಅದನು ಸರಿಪಡಿಸಿಕೊಳ್ಳಬೇಕು. ಈ ಕಾಲೇಜಿನ ಅಭಿವೃದ್ಧಿಗಾಗಿ ಶ್ರೀಮನ್ಮಹಾರಾಜರು ಬಹಳ ಸಹಾಯಮಾಡುತ್ತಲಿರುವುದರಿಂದ ಅವರಿಗೆ ನಾವು ಬಹಳ ಕೃತಜ್ಞರಾಗಿರಬೇಕು ಎಂದು ತಿಳಿಸಿದರು.

ಅನಂತರ ಮಹಾರಾಜಾಕಾಲೇಜು ಪ್ರಿನ್ಸಿಪಾಲರಾದ ಶ್ರೀ ಎಸ್. ವಿ. ರಂಗಣ್ಣನವರು ಕಾಲೇಜಿನ ವರದಿಯನ್ನು ಒಪ್ಪಿಸಿದರು.

ಕನ್ನಡ ಮುಖ್ಯ ಅಧ್ಯಾಪಕರಾದ ಶ್ರೀ ಕೆ. ವಿ. ಪುಟ್ಟಪ್ಪನವರು ಭಾಷಣ ಮಾಡುತ್ತಾ ವಿಶ್ವವಿದ್ಯಾನಿಲಯ ಮಾತೃ ಮಂದಿರವನ್ನು ಬೀಳ್ಕೊಡುವ ನಿಲಯವಾಗಬೇಕೆಂದು ಶ್ರೀ ಕೃಷ್ಣರಾಜಒಡೆಯರು ಹೇಳಿದ್ದರು ಅದು ಸ್ವಪ್ನಪ್ರಾಯವಾಗಿದೆ. ಅದು ನಿಜವಾಗಲೇಬೇಕು. ಸಂಸ್ಕೃತ ಪ್ರಚಾರಕಾರ್ಯದ ಅನುಭವವು ಹಲವಾರು ವರ್ಷಗಳಾದನಂತರ ಗೊತ್ತಾಗುತ್ತದೆ. ಮಹಾಭಾರತ, ರಾಮಾಯಣಗಳಲ್ಲಿ ಆಧ್ಯಾತ್ಮಶಕ್ತಿಯಿದೆ ಅದು ಮಹತ್ವವಾದುದು ನಮ್ಮ ವಿದ್ಯಾಭ್ಯಾಸವು ಹೂವಿನ ಕುಂಡದಂತಿದೆ ಆಯುವವರ ಶಕ್ತಿಯೆಲ್ಲಾ ಆಯುಸುಕೊಳ್ಳುವವದೇ ಎಂಬುದನ್ನು ಯಾರೂ ಮರೆಯಬಾರದೆಂದು ಹೇಳಿದರು.

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕೊನೆಯಲ್ಲಿ ಅಧ್ಯಕ್ಷಭಾಷಣ ಮಾಡುತ್ತಾ, ಈದಿನ ಜೀವನದಲ್ಲಿ ಒಂದು ಸುಕೃತ ದಿವಸ ಮುಖ್ಯಮಂತ್ರಿ ಪದವಿಗಿಂತ ಈದಿನ ಸಮಾರಂಭದಲ್ಲಿ ಅಧ್ಯಕ್ಷಪದವಿ ಬಂದಿರುವುದು ದೊಡ್ಡದೆಂದು ಹೇಳಿದರು.

ಇಂದಿನ ಸಮಾರಂಭದಲ್ಲಿ ಹಳೆಯ ಹುಡುಗರು, ನೂತನ ತರುಣರು ಮತ್ತು ಅಧ್ಯಾಪಕರು ಸೇರಿದ್ದಾರೆ. ತ್ರಿವೇಣೀಸಂಗಮದಲ್ಲಿ ಸ್ನಾನಮಾಡಿ ನಾವು ಜೀವನ ಪಾವನಮಾಡಿಕೊಂಡಂತೆ ಇಲ್ಲಿ ಸೇರಿರುವುದು ಹೀಗೆ ನಾವು ಪ್ರತಿವರ್ಷವೂ ಸೇರಬೇಕೆಂದು ಹೇಳಿದರು.

ವಿದ್ಯಾಭ್ಯಾಸ ವಿಷಯವಾಗಿ ಮಾತನಾಡುತ್ತಾ ವಿದ್ಯಾಭ್ಯಾಸಕ್ರಮವನ್ನು ಮಾರ್ಪಡಿಸಲು ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯ ಸಲಹೆಗಳು ರೂಪಗೊಂಡಮೇಲೆ ಕನ್ನಡಬೆಳವಣಿಗೆಗೆ ಅನುಕೂಲವಾಗುತ್ತದೆ. ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಅಧ್ಯಕ್ಷ ಭಾಷಣವಾದ ನಂತರ ಸಂಗೀತ ನಾಟಕ ಮುಂತಾದ ಮನೋರಂಜನೆ ಕಾರ್ಯಕ್ರಮಗಳು ನಡೆದವು.

ಡಾ|| ರಾಧಾಕೃಷ್ಣನ್ ಮೈಸೂರಿಗೆ

ಇದೇ ಮಾಹೆ ೨೭ ನೇ ತಾರೀಖಿನಿಂದ ಮೈಸೂರಿನಲ್ಲಿ ನಡೆಯಲಿರುವ ಅಖಿಲಭಾರತ ತತ್ವಶಾಸ್ತ್ರ ಕಾಂಗ್ರೆಸ್ ಸಮ್ಮೇಳನಕ್ಕೆ ಭಾರತ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್ ಬರುವರೆಂದು ತಿಳಿಯಬಂದಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೩-೧೨-೫೨

ಪಲ್ಲ	ರೂ. ಆ.	ರೂ. ಆ.
ಕಡಲೇಕಾಯಿ	೯-೧೩	೩೩-೮
ಎಳ್ಳು	೬೬-೦	
ಹರಳು	೪೪-೩	೪೩-೧೦
ಹುಚ್ಚೆಳ್ಳು	೪೩-೮	೫೩-೦
ಹುರುಳಿ	೪೬-೧೪	೫೦-೮
ಹೆಸರು	೪೯-೦	೫೩-೪
ಅಲಸಂದೆ	೪೯-೦	೬೫-೩
ಮೆ|| ಕಾಯಿ	೧೨-೮	೧೬-೪
ತೆಂಗಿನಕಾಯಿ	೧೮೪	೨೦೪

ಪ್ರಭಾ ಅಮೋಘ ಪ್ರಾರಂಭ 5-12-52 ರಿಂದ ದಿನವಹಿ 3 ಆಟಗಳು
ಮುಗ್ಧೆ ಮತ್ತು ಕಳಂಕರಹಿತ ಓರ್ವ ತರುಣಿಯ ದುರಂತ ಜೀವನವನ್ನು ರೂಪಿಸುವ ಆಲ್ಹಾದ್ ಚಿತ್ರರವರ ಅತ್ಯುತ್ತಮ
ಮರಾಠಿ ಚಿತ್ರ
★ ಬಾಲ-ಜೋ-ಜೋರೆ ★
ಭೂಮಿಕೆ:—ಉಷಾಕಿರಣ್, ಸುಲೋಚನ, ಸೂರ್ಯಕಾಂತ್.
ನಿರ್ಮಾಪಕ ಮತ್ತು ದಿಗ್ದರ್ಶನ-ದತ್ತಾದರ್ಮಾಧಿಕಾರಿ [ನೆಸ್ತೆಮುನ್ಹೆ ಪ್ರಖ್ಯಾತಿ]
ಬೆಳಗಿನ ಪ್ರದರ್ಶನ: 5-12-52 ರಿಂದ ಮೂರುದಿನಗಳು ಮಾತ್ರ
ನಳಿನಿ ಜಯವಂತ್, ನರ್ಗಿಸ್, ದಿಲೀಪ್‌ಕುಮಾರ್ ನಟಿಸಿರುವ
ಅನೋಖ ಪ್ಯಾರ್

ಅಪೇರ
5-12-52 ರಿಂದ ಅಮೋಘ ಪ್ರಾರಂಭ
ಪಸಿಯಿರ್--
ಕೊಡುಮೈ
[ತಮಿಳು]
ಪಾತ್ರ:- ಎಂ. ಸ್. ದ್ರೌಪತಿ,
ತಂಗಂ, ತಿಕ್ಕುರುಸಿ

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:—ಹಿ. ಕಾ. ಸುಬ್ಬರಾವ್
ಬೋರ್ಹ ಮುದ್ರಣಾಲಯ, ಮೈಸೂರು.

ಫೋನ್ 574
ರಿಜಿಸ್ಟರ್ಡ್
ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 86

೪-೧೨-೧೯೫೨ ನೇ ಗುರುವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಚಿಲ್ಲರೆ ತರಕಾರಿ ವರ್ತಕರ ಮೇಲೆ ಮಾರಾಟತೆರಿಗೆ ಕೂಡದು

ಮೈಸೂರು ೪

ರಾಜಧಾನಿಯಲ್ಲಿ ತರಕಾರಿ, ಎಲೆಯಡಿಕೆ ಸೊಪ್ಪು ಮುಂತಾದ ಸಣ್ಣಪುಟ್ಟ ತರಕಾರಿ ವ್ಯಾಪಾರಿಗಳಮೇಲೆ ವಿಧಿಸುತ್ತಿರುವ ಮಾರಾಟತೆರಿಗೆಯಿಂದ ತಮಗೆ ಬಹಳ ತೊಂದರೆಯಾಗಿದೆಯೆಂದೂ, ಮೂರು ಆರು ಕಾಸು ಸೊಪ್ಪಿನ ವ್ಯಾಪಾರದಮೇಲೆ ತೆರಿಗೆಹಾಕುವುದು ಅನ್ಯಾಯವೆಂದೂ ನಗರದ ದೇವರಾಜಾ ಮಾರ್ಕೆಟ್ಟಿನ ಗುಡಿಸಲು ಮತ್ತು ಹೆಂಗಸರೂ ಆದಿಯಾಗಿ ೭೦ ಮಂದಿ ವ್ಯಾಪಾರಿಗಳು ಮೊನ್ನೆ ದಿನ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರಲ್ಲಿ ಶ್ರೀಗಳಾದ ಬಿ. ನಾರಾಯಣಸ್ವಾಮಿ ಮತ್ತು ಎ ಶಿವಣ್ಣನವರ ನೇತೃತ್ವದಲ್ಲಿ ನಿಯೋಗ ಹೋಗಿದ್ದರು. ಸಣ್ಣ ಪುಟ್ಟ ವ್ಯಾಪಾರಸ್ಥರಿಗೆ ಇದರಿಂದ ಕಿರುಕುಳ ಉಂಟಾಗುವುದೆಂಬುದು ತಮಗೆ ಮನವರಿಕೆ ಆಗಿದೆಯೆಂದೂ, ಅದರ ಬಗ್ಗೆ ಸೂಕ್ತ ಪರಿಹಾರ ವ್ಯವಸ್ಥೆ ಮಾಡಲಾಗುವುದೆಂದೂ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟರೆಂದು ತಿಳಿದುಬಂದಿದೆ.

ಕ್ರಿಕೆಟ್ ಪಂದ್ಯದ ರೇಡಿಯೋ ಪ್ರಸಾರ

ಮೈಸೂರು ೪

ಬೆಂಗಳೂರಿನಲ್ಲಿ ನಾಳೆಯಿಂದ ಮೂರು ದಿನಗಳು ನಡೆಯುವ ಭಾರತದ ವಿಶ್ವವಿದ್ಯಾನಿಲಯಗಳ ಮತ್ತು ಪಾಕೀಸ್ತಾನ ಕ್ರಿಕೆಟ್ ಪಂದ್ಯದ ವಿವರಗಳನ್ನು ಅಖಿಲಭಾರತ ರೇಡಿಯೋದ ಮೈಸೂರುಕೇಂದ್ರದಿಂದ ಪ್ರಸಾರ ಮಾಡಲಾಗುವುದು ಬೆಳಿಗ್ಗೆ ೧೧ರಿಂದ ೧೩ ಗಂಟೆ, ಸಂಜೆ ೪ ರಿಂದ ೫ ಗಂಟೆವರೆಗೆ ೩೧೦ ಮತ್ತು೪೯.೪೬ ಮೀಟರುಗಳಲ್ಲಿ ಅದನ್ನು ಕೇಳಬಹುದು ಶ್ರೀಗಳಾದ ಸಫಿದಾರಾಷಾ, ವಿಜಯಸಾರಥಿ ಮತ್ತು ಎಂ. ಎಂ. ಪಾರ್ಥಸಾರಥಿಯವರು ಪ್ರಸಾರ ಮಾಡುವರು.

ಕಾರ್ಮಿಕ ಸಚಿವರ ಸಮ್ಮೇಳನ

ಕಾರ್ಮಿಕರಿಗೆ ಸಂಬಂಧಪಟ್ಟಂತೆ ಕಾನೂನು ತಿದ್ದುಪಡಿ, ರಚನೆ ಮುಂತಾದ ಕಾರ್ಯಗಳನ್ನು ಪರಿಶೀಲಿಸಲು ಮುಂದಿನತಿಂಗಳನಲ್ಲಿ ಎಲ್ಲಾ ಪ್ರಾಂತ್ಯಗಳ ಕಾರ್ಮಿಕ ಸಚಿವರ ಸಮ್ಮೇಳನವು ದೆಹಲಿಯಲ್ಲಿ ನಡೆಯುವುದೆಂದು ಗೊತ್ತಾಗಿದೆ.

ನೀರು ಸರಾಪರಾಜು ಕೇಂದ್ರದ ಎದುರು ಪ್ರದೇಶ ಪಾರ್ಕು

ಮೈಸೂರು ೪

ರಾಜಧಾನಿಯ ವಾಣೀವಿಲಾಸಮೊಹಲ್ಲಾದಲ್ಲಿರುವ ನೀರು ಸರಬರಾಜು ಕೇಂದ್ರದ ಎದುರುಭಾಗದ ಖಾಲಿಪ್ರದೇಶವನ್ನು ಪಾರ್ಕಾಗಿ ಪರಿವರ್ತಿಸಬೇಕೆಂದೂ ಅಥವ ಅದನ್ನು ಭೂದೇವಿಛತ್ರಕ್ಕೆ ಕೊಡಬೇಕೆಂದು ನಿನ್ನೆ ಬೆಳಿಗ್ಗೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಸ್ಥಳವನ್ನು ಪರಿಶೀಲಿಸಿ ಪುರಸಭಾಕಮೀಷನರಿಗೆ ಸೂಚನೆಕೊಟ್ಟರೆಂದು ತಿಳಿದುಬಂದಿದೆ

ಭಾರತದ ಅಧ್ಯಕ್ಷರು ಕೇವಲ ೩೬೦೦ರೂ. ಸಂಬಳ ಪಡೆಯುತ್ತಿದ್ದಾರೆ

ಬಡ ಭಾರತದಲ್ಲಿ ಅಧ್ಯಕ್ಷರು ೧೦ ಸಾವಿರ ರೂ ಸಂಬಳ ಪಡೆಯುವುದು ಸರಿಯಲ್ಲವೆಂಬ ಟೀಕೆ ನಿರಾಧಾರವಾದುದೆಂದೂ-ಅಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ತಿಂಗಳಿಗೆ ಕೇವಲ ೩೬೦೦ ರೂ. ಪಡೆಯುತ್ತಿರುವರೆಂದೂ, ರಾಷ್ಟ್ರಭವನದಲ್ಲಿರುವ ೩೪೦ ಕೊಠಡಿಗಳ ಪೈಕಿ ಅವರು ೧೮ ಕೊಠಡಿಗಳನ್ನು ಮಾತ್ರ ಉಪಯೋಗಿಸುತ್ತಿದ್ದು, ಮಿಕ್ಕವುಗಳನ್ನು ಸರ್ಕಾರದ ಕಛೇರಿ, ಮ್ಯೂಸಿಯಂ ಮುಂತಾದವುಗಳಿಗೆ ಉಪಯೋಗಿಸಲು ಅವಕಾಶ ಕೊಟ್ಟಿದ್ದಾರೆಂದೂ ತಿಳಿಸಲಾಗಿದೆ.

ಚಂಡಮಾರುತದ ಹಾವಳಿ

ಭಾನುವಾರದಿಂದ ಪ್ರಾರಂಭವಾದ ಚಂಡಮಾರುತದಿಂದ ಮದ್ರಾಸ್ ಪ್ರಾಂತ್ಯದ ಮಲಬಾರ್ ತೀರ ಪ್ರದೇಶದಲ್ಲಿ ಸುಮಾರು ೭೦ ಮೈಲಿ ದೂರದವರೆಗೆ ತೆಂಗಿನ ಮತ್ತಿತರ ಅನೇಕ ಫಸಲನ್ನು ನಾಶವಾಗಿ ಲಕ್ಷಾಂತರ ರೂಪಾಯಿನ ನಷ್ಟಸಂಭವಿಸಿದೆಯೆಂದು ಗೊತ್ತಾಗಿದೆ

ಬೊಂಬಾಯಿನಲ್ಲಿ ೧೦೦ ಲಕ್ಷ ಮಂದಿಗೆ ಅಹಾರ ದುಸ್ಥಿತಿ

ಬೊಂಬಾಯಿ ಸಂಸ್ಥಾನದಲ್ಲಿ ೧೦೦ ಲಕ್ಷ ಜನರು ಆಹಾರದುಸ್ಥಿತಿಗೆ ಒಳಗಾಗಿದ್ದರೆಂದೂ, ಅವರುಗಳಿಗೆ ಕೂಡಲೇ ಪರಿಹಾರವನ್ನು ಕೊಡಲಾಗುವುದೆಂದೂ ಅಲ್ಲಿನ ರೆವಿನ್ಯೂ ಸಚಿವರು ತಿಳಿಸಿರುತ್ತಾರೆ.

ತಾಲ್ಲೂಕು ಕಛೇರಿ ಬೆಂಕಿಯ ಪ್ರಸಂಗ

೫ ಮಂದಿಯ ಮೇಲೆ ಮೊಕದ್ದಮೆ

ಮೈಸೂರು ೪

ಹೆಗ್ಗಡದೇವನಕೋಟೆ ತಾಲ್ಲೂಕಿನ ಕಛೇರಿಯಲ್ಲಿ ಕಳೆದ ತಿಂಗಳು ೧೧ ನೇ ತಾ|| ಬೆಂಕಿಬಿದ್ದು ಆಹಾರ ಶಾಖೆಯ ಕಾಗದಪತ್ರ ಮುಂತಾದವುಗಳು ಸಂಪೂರ್ಣವಾಗಿ ನಾಶವಾದ ಸಂಬಂಧದಲ್ಲಿ ಅದರ ನೌಕರರುಗಳಾದ ಬಾಲಕೃಷ್ಣ, ರಾಮರಾವ್, ದೀಕ್ಷಿತ್, ವೆಂಕಟರಾವ್ ಮತ್ತು ಉಪಾಧ್ಯಾಯ ಸುಬ್ಬರಾವ್ ಮುಂತಾದ ೫ ಮಂದಿಯನ್ನು ಪೋಲೀಸರು ದಸ್ತಗಿರಿಮಾಡಿ, ಅವರ ಮೇಲೆ ಹುಣಸೂರು ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ೪೩೬ ಮತ್ತು ೩೪ ಐ. ಪಿ. ಸಿ. ಪ್ರಕಾರ ಮೊಕದ್ದಮೆ ಹೂಡಿದ್ದಾರೆ

ನಗರಾರೋಗ್ಯ

ಮೈಸೂರು ೪

ಮೈಸೂರು ನಗರದಲ್ಲಿ ಪ್ಲೇಗು, ಸಿಡುಬು ಮತ್ತು ಕಾಲರ ರೋಗಗಳಾವುವು ಇರಲಿಲ್ಲ. ಆದಾಗ್ಯೂ ಮುಂಜಾಗ್ರತೆಗಾಗಿ ೧೩೪೧ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು. ೧೫೭ ಪ್ರಾಥಮಿಕ ಮತ್ತು ೨೪೩೪ ಪುನಃ ದೇವಿ, ೨೬೭೭ ಕಾಲರಾ ನಿರೋಧಕ ಇನಾಕ್ಯುಲೇಷನ್ ಹಾಕಲಾಯಿತು. ಡಿಫ್ತೀರಿಯಾ ರೋಗವು ೫ ಜನಕ್ಕೆ ತಗುಲಿ ೧ ಮರಣವೂ ಟೈಫಾಯಿಡ್‌ನಿಂದ ೨ ಮರಣಗಳೂ ಆದುವು ಟೈಫಾಯಿಡ್ ನಿರೋಧ ಇನಾಕ್ಯುಲೇಷನ್‌ಗಳನ್ನು ೮೪ ಹಾಕಲಾಗಿದೆ ಎಂದು ಪುರಸಭೆಯ ಆರೋಗ್ಯ ಶಾಖೆಯವರು ಪ್ರಕಟಿಸಿರುವ ನವಂಬರ್ ಅಂತ್ಯದ ವರದಿಯಿಂದ ತಿಳಿದುಬರುತ್ತದೆ.

ವ್ಯವಸಾಯ ಅಧಿಕಾರಿಗಳ ಸಭೆ

ಬೆಂಗಳೂರು ೪

ವ್ಯವಸಾಯ ಇಲಾಖೆಯ ದಕ್ಷತೆಯನ್ನು ಹೆಚ್ಚಿಸಿ ಇನ್ನೂ ಜನೋಪಕಾರಿಯಾಗುವಂತೆ ಚರ್ಚಿಸಲು ನಿನ್ನೆಯದಿನ ವ್ಯವಸಾಯ ಸಚಿವ ಶ್ರೀ ಸಿದ್ದವೀರಪ್ಪನವರ ಅಧ್ಯಕ್ಷತೆಯಲ್ಲಿ ಸಂಸ್ಥಾನದ ಎಲ್ಲಾ ವ್ಯವಸಾಯ ಅಧಿಕಾರಿಗಳ ಸಭೆ ನಡೆಯಿತೆಂದು ಗೊತ್ತಾಗಿದೆ.

ಮಂಡ್ಯ ಜಿಲ್ಲಾಬೋರ್ಡ್ ಅಧ್ಯಕ್ಷ

ಮಂಡ್ಯ ಜಿಲ್ಲಾಬೋರ್ಡು ಅಧ್ಯಕ್ಷರಾಗಿ ಶ್ರೀ ಜಿ. ಎಸ್. ಬೊಮ್ಮೇಗೌಡರು ಅವಿರೋಧವಾಗಿ ಚುನಾಯಿತರಾಗಿದ್ದಾರೆ. ಇವರು ಕಾಂಗ್ರೆಸ್ ಸ್ಪರ್ಧಿಗಳು.

ಮೊಹಲ್ಲಾ ದಿನಾಚರಣೆ

ಮೈಸೂರು ೪

ಪುರಸಭೆಯ ಆಶ್ರಯದಲ್ಲಿ ಚಾಮರಾಜಮೊಹಲ್ಲಾ ದಿನಾಚರಣೆಯು ನಿನ್ನೆ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು

ಬೆಳಿಗ್ಗೆ ಮೊಹಲ್ಲಾ ನಿರ್ಮಲೀಕರಣ ಮತ್ತು ರಸ್ತೆ ರಿಪೇರಿ ಮುಂತಾದ ಕಾರ್ಯಕ್ರಮಗಳು, ಅದಿಕರ್ನಾಟಕ ಪುರದಲ್ಲಿರುವ ವಲ್ಲಿಮ್ಮ ಹಾಲಿನ ಕೇಂದ್ರದಲ್ಲಿ ಗರ್ಭಿಣೀಸ್ತ್ರೀಯರ ಮತ್ತು ಮಕ್ಕಳ ಪರೀಕ್ಷೆ, ದೇವಿಹಾಕುವುದು ಮುಂತಾದ ಕಾರ್ಯಕ್ರಮಗಳು ಜರುಗಿದುವು. ಸಂಜೆ ನಡೆದ ಸಭೆಯಲ್ಲಿ ಶ್ರೀಗಳಾದ ಎ. ವೆಂಕಟೇಶಯ್ಯ, ಬಿ.ಜಿ. ದಾಸ್ ಮತ್ತು ಬಿ.ಕೆ. ರಾಮಕೃಷ್ಣಯ್ಯನವರು ಭಾಷಣಮಾಡಿದರು. ಅಧ್ಯಕ್ಷರು ಮನೆಗಳನ್ನು ವಿಶೇಷ ಸ್ವಚ್ಛವಾಗಿಟ್ಟುಕೊಂಡಿರುವವರಿಗೆ ಬಹುಮಾನಕೊಟ್ಟರು.

ಉಪಚುನಾವಣೆಗೆ ಕಾಂಗ್ರೆಸ್ ಸ್ಪರ್ಧಿ

ಮೈಸೂರು ವಿಧಾನ ಸಭೆಗೆ ಶ್ರೀ ಕೆ. ಸಿ. ರೆಡ್ಡಿಯವರು ಬಂಗಾರು ಪೇಟೆ ಕ್ಷೇತ್ರದಿಂದ ರಾಜೀನಾಮೆಕೊಟ್ಟಿರುವ ಸ್ಥಾನಕ್ಕೆ ಕಾಂಗ್ರೆಸ್ ಪರವಾಗಿ ಶ್ರೀ ಇ. ನಾರಾಯಣಗೌಡರು ಸ್ಪರ್ಧಿಸಬೇಕೆಂದು ಅಲ್ಲಿಯ ತಾಲ್ಲೂಕು ಸಮಿತಿಯು ಸಭೆಸೇರಿ, ಸರ್ವಾನುಮತದಿಂದ ತೀರ್ಮಾನಿಸಿದೆ.

ಸರ್ಕಾರಿ ರಜಾ

ಬೆಂಗಳೂರು ೪

ಪಾಕೀಸ್ತಾನ ಮತ್ತು ಕಂಬೈನ್ಡ್ ವಿಶ್ವವಿದ್ಯಾನಿಲಯಗಳ ಟೀಮುಗಳಿಗೆ ನಾಳೆಯಿಂದ ಪ್ರಾರಂಭವಾಗುವ ಕ್ರಿಕೆಟ್ ಪಂದ್ಯಕ್ಕಾಗಿ ಬೆಂಗಳೂರು ಕಾರ್ಪೊರೇಷನ್ ಪ್ರದೇಶದಲ್ಲಿರುವ ಎಲ್ಲಾ ವಿದ್ಯಾಸಂಸ್ಥೆಗಳಿಗೆ ೫,೬ ಮತ್ತು ೭ ನೇ ತಾರೀಖು ರಜಾ ಕೊಡಲಾಗಿದೆ.

ಭಾರತದಲ್ಲಿ ನಿರುದ್ಯೋಗಿಗಳು

೧೯೭೦೫೫ ಪದವೀಧರರು, ೧೧೧೦೯೪೪ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸುಮಾಡಿದವರು ನಿರುದ್ಯೋಗಿಗಳೆಂದು ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ಇಲ್ಲಿಯವರೆಗೆ ದಾಖಲೆ ಮಾಡಿಕೊಂಡಿರುವುದಾಗಿ ಗೊತ್ತಾಗಿದೆ.

ಕಾರ್ಮಿಕರಿಗೆ ೮ ತಿಂಗಳ ಬೋನಸ್

ಮಂಡ್ಯ, ಸಕ್ಕರೆ ಕಾರ್ಖಾನೆಯು ಕೆಲಸಗಾರರಿಗೆಲ್ಲಾ ೪ ತಿಂಗಳ ಬೋನಸ್ಸನ್ನು ಕೊಡಲು ಆಡಳಿತವರ್ಗ ನಿರ್ಧರಿಸಿರುವುದಾಗಿ ಹೇಳಲಾಗಿದೆ.

ಕಾಂಗ್ರೆಸ್ ಗಾದಿಗೆ ಮೂವರ ನಾಮಕರಣ ಪತ್ರ

ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಪ್ರಧಾನಿ ನೆಹರೂರವರ ಹೆಸರನ್ನು ಸೂಚಿಸಿ ೧೪, ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಹೆಸರು ಸೂಚಿಸಿ ೩, ಕೇಂದ್ರ ರೈಲ್ವೆ ಸಚಿವ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರನ್ನು ಸೂಚಿಸಿ ಒಂದು ನಾಮಕರಣ ಪತ್ರಗಳು ಬಂದಿರುವುದಾಗಿ ಗೊತ್ತಾಗಿದೆ.

ನಾಮಕರಣ ಪತ್ರಗಳನ್ನು ಸಲ್ಲಿಸಲು ನಿನ್ನೆಯೇ ಕೊನೆಯ ದಿನ. ಉಮೇದುವಾರಿಕೆ ಹೆಸರುಗಳನ್ನು ವಾಪಸ್ಸು ತೆಗೆದುಕೊಳ್ಳಲು ೧೧ನೇ ತಾರೀಖು ಕೊನೆಯ ದಿನವಾಗಿದೆ.

ಪ್ರಜಾ- ಸೋಷಿಯಲಿಸ್ಟ್ ಪಕ್ಷಕ್ಕೆ ಸೇರಿಲ್ಲ

ಇತ್ತೀಚೆಗೆ ಪತ್ರಿಕೆಗಳಲ್ಲಿ ನಾನು ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಕಾರ್ಯಕಾರಿ ಸಮಿತಿಯ ಸದಸ್ಯನಾಗಿರುವುದಾಗಿ ಪ್ರಕಟವಾಗಿರುವುದು ನನ್ನ ಗಮನಕ್ಕೆ ಬಂದಿದೆ. ನಾನು ಈವರೆವಿಗೂ ಯಾವ ಪಾರ್ಟಿಯ ಸದಸ್ಯನಾಗಿದ್ದು ರಾಜಧಾನಿಯ ಪೌರಸಭೆಯ ಸದಸ್ಯನಾಗಿ ಕೆಲಸ ಮಾಡುತ್ತಿರುತ್ತೇನೋ ಆ ಪಾರ್ಟಿಯ ತೀರ್ಮಾನವಿಲ್ಲದೆ ನಾನು ಯಾವ ಪಾರ್ಟಿಯ ಸದಸ್ಯನಾಗಲು ಸಾಧ್ಯವಿಲ್ಲವೆಂಬುದನ್ನು ಈ ಮೂಲಕ ತಿಳಿಸುತ್ತೇನೆಂದು ಮೈಸೂರು ಪುರಸಭಾ ಸದಸ್ಯ ಶ್ರೀ ಪಿ. ಸುಬ್ಬಣ್ಣನವರು ತಿಳಿಸುತ್ತಾರೆ.

ಶಾಸನಸಭಾಧ್ಯಕ್ಷರಿಗೆ ರಾಜಕೀಯ ಬೇಡ

ಭಾರತ ಶಾಸನಸಭೆಗಳ ಅಧ್ಯಕ್ಷರುಗಳು ರಾಜಕೀಯದಲ್ಲಿ ಪ್ರಮುಖ ಪಾತ್ರವನ್ನು ವಹಿಸಬಾರದೆಂದು ಪ್ರಧಾನಿ ನೆಹರೂ ತಿಳಿಸಿದ್ದಾರೆ. ಇವರು ಪಕ್ಷದ ಸಾಮಾನ್ಯ ಸದಸ್ಯರಾಗಿರಲು ಅಭ್ಯಂತರವಿಲ್ಲ ಆದರೆ ರಾಜಕೀಯ ಗೊಂದಲದಿಂದ ದೂರವಾಗಿರಬೇಕು. ಭೂಪಾಲ ಶಾಸನ ಸಭಾಧ್ಯಕ್ಷರು ಇತ್ತೀಚೆಗೆ ಕಾಂಗ್ರೆಸ್ ಚುನಾವಣೆಗಳಲ್ಲಿ ಭಾಗವಹಿಸಿರುವುದು ಅಕ್ಷಮ್ಯವೆಂದು ಹೇಳಿದ್ದಾರೆ.

ಕಮ್ಯೂನಿಸ್ಟರ ಬಿಡುಗಡೆ

ಭಾರತದ ಶ್ರೇಷ್ಠ ನ್ಯಾಯಾಲಯದ ತೀರ್ಪಿನಂತೆ ಹೈದರಾಬಾದ್ ಸರ್ಕಾರವು ೨೮ ಜನ ಕಮ್ಯೂನಿಸ್ಟ್ ಸ್ಥಾನಬದ್ಧ ಕೈದಿಗಳನ್ನು ಬಿಡುಗಡೆ ಮಾಡಿದೆ.

ಭಾರತದ ನಿರ್ಣಯಕ್ಕೆ ವಿಶ್ವಸಂಸ್ಥೆಯ ಅಂಗೀಕಾರ

ಅತ್ಯಧಿಕ ಬಹುಮತದಿಂದ ಒಪ್ಪಿಗೆ

ಕೊರಿಯಾ ಯುದ್ಧ ಕೈದಿಗಳ ಬಿಕ್ಕಟ್ಟು ಪರಿಹಾರಕ್ಕೆ ಭಾರತವು ಮಂಡಿಸಿದ ನಿರ್ಣಯವನ್ನು ವಿಶ್ವಸಂಸ್ಥೆಯ ಮಹಾಧಿವೇಶನವು ಅತ್ಯಧಿಕ ಬಹುಮತದಿಂದ ಅಂಗೀಕರಿಸಿದೆ.

ಪರವಾಗಿ ೫೪ ಮತ, ವಿರೋಧವಾಗಿ ೫ ಮತಗಳು ಬಂದಿದೆ. ರಷ್ಯಾ ಮತ್ತು ಅದರ ಅನುಯಾಯಿಗಳಾದ ೪ ರಾಷ್ಟ್ರಗಳು ಮಾತ್ರ ವಿರೋಧವಾಗಿ ಮತ ನೀಡಿದುವು.

ವಿಶ್ವಸಂಸ್ಥೆಯು ಈ ನಿರ್ಣಯವನ್ನು ಇನ್ನು ಚೈನಾ ಸರ್ಕಾರಕ್ಕೆ ಕಳುಹಿಸಲಾಗುತ್ತದೆ.

ಕಾರ್ಮಿಕ ವಸತಿ ನಿರ್ಮಾಣಕ್ಕೆ ೩೭ ಲಕ್ಷರೂ. ಸಹಾಯ

ಹೈದರಾಬಾದಿನಲ್ಲಿ ಕಾರ್ಮಿಕರಿಗೆ ವಸತಿ ಗೃಹನಿರ್ಮಾಣಕ್ಕಾಗಿ ಕೇಂದ್ರಸರ್ಕಾರವು ೩೭ ಲಕ್ಷ ರೂಪಾಯಿಗಳನ್ನು ಸಾಲ ಮತ್ತು ಸಹಾಯ ರೂಪದಲ್ಲಿ ಕೊಟ್ಟಿದೆ. ಸುಮಾರು ೧೭೦೦ ಮನೆಗಳನ್ನು ಈ ಹಣದಿಂದ ಕಟ್ಟಲಾಗುವುದೆಂದು ಗೊತ್ತಾಗಿದೆ.

ಜಾನುವಾರುಗಳು ಕಾಡಿಗೆ

ಕೊಯಮತ್ತೂರು ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಜಾನುವಾರುಗಳ ಆಹಾರಕ್ಕೆ ವಿಶೇಷ ಅಭಾವವುಂಟಾಗಿರುವುದರಿಂದ ಅವುಗಳನ್ನೆಲ್ಲಾ ಕಾಡಿಗೆ ಸಾಗಿಸಲು ಮದ್ರಾಸ್ ಸರ್ಕಾರವು ಯೋಚಿಸುತ್ತಲಿರುವುದಾಗಿ ಗೊತ್ತಾಗಿದೆ.

—ಮೈಸೂರುಪೇಟೆಧಾರಣೆ—

ತಾರೀಖು ೩-೧೨-೫೨

	ಪಲ್ಲ ರೂ- ಆ-	ರೂ- ಆ
ಕಡಲೇಕಾಯಿ	೧೨-	೨೦-
ಎಳ್ಳು	೬೯-	
ಹರಳು	೩೮-	೪೫-೧೪
ಹುಚ್ಚೆಳ್ಳು	೪೫-	೫೦-೧೨
ಹುರುಳಿ	೪೬-೧೨	೪೭-೧೨
ಹೆಸರು	೪೮-೪	೫೪-೧೦
ಅಲಸಂದೆ	೫೦-೨	೬೩-೬
ಮೆಣಸಿನಕಾಯಿ	೧೦-	೧೬-೧೦
ಸೀಗೆಕಾಯಿ	೩-೧೧	
ತೆಂಗಿನಕಾಯಿ	೧೮೪	೨೧೨

ಮಾರಾಟ ತೆರಿಗೆ ಬಗ್ಗೆ ಮುಖ್ಯಮಂತ್ರಿಗಳಲ್ಲಿ ನಿಯೋಗ

ಮೈಸೂರು ೪

ನಗರದ ಸಂತೇಪೇಟೆ ವರ್ತಕರುಗಳಾದ ಶ್ರೀ ನಂದೀಶಪ್ಪ, ಚೌಡಯ್ಯ, ಮುಂತಾದವರು ಮೊನ್ನೆ ದಿನ ಮುಖ್ಯಮಂತ್ರಿಗಳಲ್ಲಿ ನಿಯೋಗಹೋಗಿ ಈಗ ವಿಧಿಸುತ್ತಿರುವ ದ್ವಿಮುಖ ಮಾರಾಟತೆರಿಗೆಯಿಂದ ವರ್ತಕರಿಗೆ ವಿಶೇಷ ಕಿರುಕುಳ ಉಂಟಾಗುತ್ತಿದೆಯೆಂದೂ, ಇದರ ಬದಲು ಒಂದೇ ಸಲ ಇಷ್ಟು ಹಣ ಎಂಬುದನ್ನು ನಿಗದಿಪಡಿಸಿ ವಸೂಲು ಮಾಡಬೇಕೆಂದೂ ಅವರು ಮನವಿಮಾಡಿಕೊಂಡರು.

ವರ್ತಕರಿಗೆ ತೊಂದರೆ ಕೊಡಬೇಕೆಂಬುದು ಸರ್ಕಾರದ ಉದ್ದೇಶವಲ್ಲ. ಆದರೆ ಸರ್ಕಾರಕ್ಕೆ ಸರಾಸರಿ ಮಾರಾಟತೆರಿಗೆಯಿಂದ ೨ ಕೋಟಿ ರೂ. ವರಮಾನ ಬರಬೇಕು. ಇಷ್ಟು ಹಣವನ್ನು ಹೇಗೆ ವಸೂಲು ಮಾಡಬೇಕೆಂಬುದಕ್ಕೆ ವರ್ತಕರೇ ವಿಧಾನವನ್ನು ಸೂಚಿಸಿದರೆ ಅದರಂತೆ ಮಾಡಲಾಗುವುದೆಂದು ನಿಯೋಗದವರಿಗೆ ಮುಖ್ಯಮಂತ್ರಿ ತಿಳಿಸಿದರೆಂದು ಹೇಳಲಾಗಿದೆ.

ಅಡಿಕೆ ಆಮದು ನಿಲ್ಲಿಸಬೇಕು

ಮೈಸೂರು ೪

ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿರುವ ಅಖಿಲಭಾರತ ಸುಪಾರಿ ಸಂಘದ ಅಧ್ಯಕ್ಷ ಶ್ರೀ ಶ್ರೀಕಂಠಯ್ಯನವರು, ಮತ್ತು ಮಲೆನಾಡು ಅಡಿಕೆಬೆಳೆಯುವವರ ಸಂಘದ ಅಧ್ಯಕ್ಷ ಶ್ರೀ ಬದರೀನಾರಾಯಣರವರು ರಾಜಧಾನಿಗೆ ಆಗಮಿಸಿದ್ದ ಕೇಂದ್ರವ್ಯವಸಾಯ ಸಚಿವ ಶ್ರೀ ಪಂಜಾಬರಾವ್ ದೇಶ್‌ಮುಖ್‌ರವರನ್ನು ಭೇಟಿಮಾಡಿ, ಪರದೇಶದಿಂದ ಅಡಿಕೆ ಆಮದು ಮಾಡುತ್ತಿರುವುದರಿಂದ ಭಾರತದ ಅಡಿಕೆ ಬೆಳೆಯುವವರಿಗೆ ತುಂಬಾನಷ್ಟವುಂಟಾಗುತ್ತಿದೆಯೆಂದೂ, ಈಗ ವಿಶೇಷ ಅಡಿಕೆ ದಾಸ್ತಾನು ಇದೆಯೆಂದೂ ಆದ್ದರಿಂದ ೬ ತಿಂಗಳು ಕಾಲ ಆಮದನ್ನು ನಿಲ್ಲಿಸಬೇಕೆಂದೂ ಅಥವ ಹೊರಗಿನಿಂದ ಬರುವ ಅಡಿಕೆ ಮೇಲೆ ಹೆಚ್ಚುತೆರಿಗೆ ಹಾಕಬೇಕೆಂದು ಮನವಿ ಮಾಡಿಕೊಂಡರು.

ಉಪವಾಸ ಮುಕ್ತಾಯ ಮಾಡಲು ಮನವಿ

ಆಂಧ್ರಪ್ರಾಂತ್ಯ ರಚನೆಗಾಗಿ ಆಮರಣಾಂತ ಉಪವಾಸವನ್ನು ಕೈಗೊಂಡಿರುವ ಶ್ರೀರಾಮುಲುರವರಿಗೆ ಪಾರ್ಲಿಮೆಂಟಿನ ೨೮ ಜನರು ಒಂದು ಮನವಿಯನ್ನು ಕಳುಹಿಸಿ ಉಪವಾಸ ಮುಕ್ತಾಯಮಾಡಬೇಕೆಂದು ಕೋರಿದ್ದಾರೆ. ಆಂಧ್ರಪ್ರಾಂತ್ಯ ರಚನೆ ಈಗ ಆಶಾದಾಯಕವಾಗಿದೆ. ಇಂತಹ ಸನ್ನಿವೇಶದಲ್ಲಿ ಉಪವಾಸಮಾಡಿ ಪ್ರಾಣವನ್ನೊಪ್ಪಿಸುವುದು ಸರಿಯಲ್ಲವೆಂದು ಅವರು ಹೇಳಿದ್ದಾರೆ.

ರಾಜಕಮಲ್, ಮೈಸೂರು
4—12—52 ರಿಂದ
ಅಮೋಘ ೨ ನೇವಾರ
ಜೈಮಿನಿಯವರ
ಚಿನ್ನಮ್ಮಕಥಾ

ರಣಜಿತ್
5-12-52 ರಿಂದ ಅಮೋಘ ಪ್ರಾರಂಭ
ಏಷ್ಯನ್ ಪಿಕ್ಚರ್ಸಿನವರ
ಶ್ರೀ ಶಾ [ಹಿಂದಿ]
ಪಾತ್ರ:—ನರ್ಗೀಸ್, ಸಜ್ಜನ್, ಕಂಪನಿ.

ವುಡ್‌ಲ್ಯಾಂಡ್ಸ್
29—11—52 ರಿಂದ
ಅಮೋಘ ಪ್ರಾರಂಭ
ಇನ್‌ಸಾಫ್ ಹಿಂದಿ,
ಭೂಮಿಕೆ:-ಪೃಥ್ವಿರಾಜ್, ರಾಗಿಣಿ ಕಮಲ್‌ಕಪೂರ್.

ಹೊಸದಾಗಿ ಬಂದಿವೆ
ಬೇಬಿ ಪೆರಾಂಬ್ಯುಲೇಟರ್,
ಬೇಬಿ ಪುಶ್‌ಚೇರ್ಸ್,
ಮಕ್ಕಳ ಬೈಸಿಕಲ್ ಮತ್ತು ಟ್ರೈಸಿಕಲ್‌ಗಳು
ಶಾರದಾ ಸೈಕಲ್ ಮತ್ತು ವಾಚ್ ಸ್ಟೋರ್ಸ್
ದೊಡ್ಡಗಡಿಯಾರದ ಚೌಕ, ಮೈಸೂರು.

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:—ಹಿ. ಶಾ. ಸುಬ್ಬರಾವ್
ಮೋಹನ ಮುದ್ರಣಾಲಯ, ಮೈಸೂರು.

ಫೋನ್ 574
ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ
ಸಂಪುಟ 3
ಸಂಚಿಕೆ 87

೫-೧೨-೧೯೫೨ ನೇ ಶುಕ್ರವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಗಂಜಿ ಕೇಂದ್ರಗಳಿಗೆ ಪೌಷ್ಟಿಕ ಆಹಾರ ಸರಬರಾಜು

ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಪ್ರಧಾನಿಯವರಿಂದ ೫ ಸಾವಿರ ರೂ. ಸಹಾಯ

ಮೈಸೂರು. ೫

ಮದರಾಸಿನ ಕ್ಷಾಮ ಕಮೀಷನರಾದ ಶ್ರೀ ಹೆಚ್.ವಿ.ಆರ್. ಐಂಗಾರ್‌ರವರು ನಿನ್ನೆ ದಿನ ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಭೇಟಿಕೊಟ್ಟು, ಅಲ್ಲಿ ತಯಾರಾದ ಸುಲಭ ಬೆಲೆ ಮತ್ತು ಪೌಷ್ಟಿಕ ಆಹಾರವನ್ನು ಆಹಾರ ಅಭಾವ ಪ್ರದೇಶಗಳಿಗೆ ಸರಬರಾಜು ಮಾಡುತ್ತಿರುವ ವಿಷಯವನ್ನು ಡೈರೆಕ್ಟರ್ ಡಾ|| ಎ. ಸುಬ್ರಹ್ಮಣ್ಯರವರೊಡನೆ ಮಾತುಕತೆ ನಡೆಸಿದರು.

ಮೈಸೂರು ಸಂಸ್ಥಾನದ ಕೆಲವು ಕೇಂದ್ರ ಮತ್ತು ಮದರಾಸಿನ ಪೆನುಗೊಂಡ ಮತ್ತು ಅನ್ನಮ್ಮಾರ್ ಗಂಜಿ ಕೇಂದ್ರಗಳಲ್ಲಿ ದಿನಕ್ಕೆ ಕೇವಲ ಒಂದು ಮಕ್ಕಾಲು ಆಣೆ ವೆಚ್ಚವಾಗುವ ಪೌಷ್ಟಿಕ ಆಹಾರವನ್ನು ಮತ್ತು ಕಡಲೇಕಾಯಿನಿಂದ ತಯಾರಾದ ಮೊಸರನ್ನೂ ಸಹ ಆಹಾರ ಸಂಶೋಧನಾಲಯದವರು ಸರಬರಾಜು ಮಾಡುತ್ತಿರುವರೆಂತಲೂ, ಈ ಕೆಲಸವನ್ನು ಇನ್ನು ವಿಶೇಷವಾಗಿ ಕೈಗೊಳ್ಳಲು ಪ್ರಧಾನಿ ಪಂಡಿತ ನೆಹರೂರವರು ಇತ್ತೀಚೆಗೆ ೫ ಸಾವಿರ ರೂಗಳನ್ನು ಕೊಟ್ಟಿರುವರೆಂದೂ ಡೈರೆಕ್ಟರ್ ಶ್ರೀ ಸುಬ್ರಹ್ಮಣ್ಯರವರು ತಿಳಿಸಿದರು.

ಮದರಾಸಿನಲ್ಲಿ ಆಹಾರ ಅಭಾವ ಪ್ರದೇಶಗಳಲ್ಲಿ ಒಟ್ಟು ೩ ಸಾವಿರ ಗಂಜೀಕೇಂದ್ರಗಳನ್ನು ತೆರೆಯಲಾಗಿದೆ. ಅಲ್ಲಿ ಮುದುಕರು, ಮಕ್ಕಳು ಗರ್ಭಿಣಿಯರು ಮತ್ತು ತಾಯಂದಿರು ಅದಿಯಾಗಿ ಒಟ್ಟು ೯ ಲಕ್ಷ ಮಂದಿಗೆ ದಿನಕ್ಕೆ ಎರಡು ಬಾರಿ ಆಹಾರವನ್ನು ಮದರಾಸ್ ಸರ್ಕಾರದವರು ಒದಗಿಸುತ್ತಿದ್ದಾರೆ. ಈಗ ಮೈಸೂರಿನ ಆಹಾರ ಕೇಂದ್ರದವರು ಸರಬರಾಜು ಮಾಡುತ್ತಿರುವ ಪೌಷ್ಟಿಕ ಆಹಾರವನ್ನು ಇನ್ನೂ ಇತರ ಗಂಜಿ ಕೇಂದ್ರಗಳಿಗೆ ಸುಲಭ ದರದಲ್ಲಿ ಹಂಚಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲು ತಾವು ಈಗ ಇಲ್ಲಿಗೆ ಬಂದಿರುವುದು ಎಂದು ತಿಳಿಸಿದರು.

ಅದಿನ ಅವರು ಮತ್ತು ಡೈರೆಕ್ಟರ್ ಸುಬ್ರಹ್ಮಣ್ಯಂರವರು ಪೆನುಗೊಂಡಾ ಗಂಜಿ ಕೇಂದ್ರವನ್ನು ಪರಿಶೀಲಿಸಲು ಅಲ್ಲಿಗೆ ಪ್ರಯಾಣ ಬೆಳೆಸಿದರು.

ನಿಜಾಮರ ಅರಮನೆ ಕೆಲಸಗಾರರ ಪ್ರದರ್ಶನ

ಹೈದರಾಬಾದಿನ ನಿಜಾಮರ ಅರಮನೆಯ ಊಳಿಗದ ಕೆಲಸಗಾರರು ತಮ್ಮ ಸಂಬಳ ಸಾರಿಗೆ ಉತ್ತಮಪಡಿಸಬೇಕೆಂದು ಎಷ್ಟು ಬಾರಿ ಪ್ರಾರ್ಥಿಸಿದರೂ ಅದು ಸಫಲವಾಗದುದರಿಂದ ಅವರುಗಳು ಇದೇ ೧೪ ನೇ ತಾರೀಖಿನಿಂದ ಅರಮನೆ ಮುಂದೆ ಪ್ರದರ್ಶನ ನಡೆಸಲು ನಿರ್ಧರಿಸಿದ್ದಾರೆ.

ವಿಶ್ವಬ್ಯಾಂಕಿನಿಂದ ಭಾರತಕ್ಕೆ ಸಾಲ

ಭಾರತದ ಕೈಗಾರಿಕಾ ಕಾರ್ಪೋರೇಷನ್ನಿನ ನೆರವಿಗಾಗಿ ಈಗ ೮೦ ಲಕ್ಷ ರೂ ಸಾಲವನ್ನು ವಿಶ್ವಬ್ಯಾಂಕಿನಿಂದ ಪಡೆಯಲಾಗುವುದೆಂದೂ, ಮುಂದೆ ವರಮಾನ ಹೆಚ್ಚಿದಾಗ ಇನ್ನು ಹೆಚ್ಚಿನ ಸಾಲ ತೆಗೆದುಕೊಳ್ಳಲಾಗುವುದೆಂದೂ ಕೇಂದ್ರಸಚಿವರು ತಿಳಿಸಿರುತ್ತಾರೆ.

ವಿದ್ಯಾರ್ಥಿಗೆ ಹೊಡೆದಿದ್ದಕ್ಕೆ ಉಪಾಧ್ಯಾಯರ ವಿಚಾರಣೆ

ದೆಹಲಿಯ ಶಾಲೆಯೊಂದರಲ್ಲಿ ವಿದ್ಯಾರ್ಥಿಯೊಬ್ಬನನ್ನು ಬೆತ್ತದಿಂದ ಹೊಡೆದುದಕ್ಕಾಗಿ ಅದರ ಪ್ರಿನ್ಸಿಪಾಲರು ಮತ್ತು ಇಬ್ಬರು ಉಪಾಧ್ಯಾಯರನ್ನು ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಲಾಗಿದೆ.

ಉಪವಾಸ ಸತ್ಯಾಗ್ರಹಿಯ ಸ್ಥಿತಿ

ಆಂಧ್ರ ಪ್ರಾಂತ್ಯ ರಚನೆಗಾಗಿ ಉಪವಾಸಮಾಡುತ್ತಿರುವ ಶ್ರೀ ಪೊ. ಶ್ರೀರಾಮುಲುರವರ ಸ್ಥಿತಿ ಉತ್ಕಟವಾಗಿದೆಯೆಂದು ಅವರನ್ನು ಪರೀಕ್ಷಿಸಿದ ವೈದ್ಯರು ಪ್ರಕಟಿಸಿದ್ದಾರೆ.

ಬ್ಯಾಸ್ಕೆಟ್‌ಬಾಲ್ ಪಂದ್ಯ

ನಿನ್ನೆ ಮೈಸೂರ್ ಸ್ಟೇಟ್ ಸಿಲ್ವರ್ ಜೂಬ್ಲಿ ಬ್ಯಾಸ್ಕೆಟ್‌ಬಾಲ್ ಪಂದ್ಯವು ಬನುಮಯ್ಯ ಹೈಸ್ಕೂಲಿಗೂ ಮತ್ತು ದಳವಾಯಿ ಹೈಸ್ಕೂಲಿಗೂ ನಡೆದು ಬನುಮಯ್ಯ ಹೈಸ್ಕೂಲಿನವರು ೩೯ ಪಾಯಿಂಟಿನಿಂದ ದಳವಾಯಿ ಹೈಸ್ಕೂಲನ್ನು ಸೋಲಿಸಿದರು.

ದಾಸಪ್ಪನವರು ದೆಹಲಿಗೆ

ಎಂ. ಪಿ. ಸಿ. ಸಿ. ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ದೆಹಲಿಯಲ್ಲಿ ನಡೆಯಲಿರುವ ಹತ್ತಿಬಟ್ಟೆ ಸಲಹಾ ಸಮಿತಿಯಲ್ಲಿ ಭಾಗವಹಿಸಲು ನಿನ್ನೆ ಬೆಂಗಳೂರಿನಿಂದ ವಿಮಾನದಲ್ಲಿ ತೆರಳಿದರು.

ಚಂಡಮಾರುತ ಹಾವಳಿಯಿಂದ ೪೨ ಜನರ ಮರಣ

ಫ್ರೆಂಚ್ ಸ್ವಾಸ್ಥ್ಯವಾದ ಕಾರೈಕಲ್‌ನಲ್ಲಿ ಕಳೆದ ಭಾನುವಾರ ಉದ್ಭವಿಸಿದ ಚಂಡಮಾರುತ ಫಲವಾಗಿ ೪೨ ಜನರು ಸತ್ತಿರುವುದಾಗಿ ಗೊತ್ತಾಗಿದೆ. ಹತ್ತಿರದಲ್ಲಿರುವ ಗ್ರಾಮಗಳೆಲ್ಲಾ ನೀರಿನಲ್ಲಿ ಮುಳುಗಿ ಹೋಗಿವೆ. ಸುಮಾರು ೫೦೦೦ ಮನೆಗಳು, ಸಾವಿರಾರು ದನಕರುಗಳು ನಾಶವಾಗಿವೆ. ನಷ್ಟವು ಸುಮಾರು ೨೦ ಲಕ್ಷ ರೂ ಗಳೆಂದು ಅಂದಾಜು ಮಾಡಲಾಗಿದೆ.

ತಂಜಾವೂರು ಜಿಲ್ಲೆ ನಾಗಪಟ್ಟಣದಲ್ಲಿಯೂ ಚಂಡಮಾರುತ ಹಾವಳಿ ವಿಶೇಷವಾಗಿದೆ. ಅಲ್ಲಿಯು ಅನೇಕ ಲಕ್ಷ ರೂಪಾಯಿಗಳ ನಷ್ಟಸಂಭವಿಸಿರುವುದಾಗಿ ಅಂದಾಜು ಮಾಡಲಾಗಿದೆ. ಸಾವಿರಾರು ಜನರು ಮನೆಮಠಗಳನ್ನು ಕಳೆದುಕೊಂಡಿದ್ದಾರೆ. ನಾಗಪಟ್ಟಣದಲ್ಲಿ ಆಸ್ಪತ್ರೆಯಲ್ಲಿ ೧೦ ಅಡಿ ನೀರುನಿಂತು ರೋಗಿಗಳೆಲ್ಲಾ ಅನೇಕ ತೊಂದರೆಗೀಡಾಗಿದ್ದಾರೆಂದು ಹೇಳಲಾಗಿದೆ. ಇದೇರೀತಿ ತಿರುಚಿ, ಮಧುರೆ ಮುಂತಾದೆಡೆಗಳಲ್ಲೆಲ್ಲಾ ವಿಶೇಷ ನಷ್ಟ ಸಂಭವಿಸಿದೆ.

ಕ್ಷಾಮ ತಡೆಗಟ್ಟಲು ಖಾಯಂ ಯೋಜನೆ

ಮೈಸೂರಿನ ಮತ್ತು ರಾಯಲಸೀಮೆ ಕ್ಷಾಮಪ್ರದೇಶಗಳಿಗೆ ಭೇಟಿಕೊಟ್ಟು ಕ್ಷಾಮವನ್ನು ಖಾಯಮ್ಮಾಗಿ ತಡೆಗಟ್ಟುವ ಬಗ್ಗೆ ತಜ್ಞರು ಇತ್ತ ಸಲಹೆಗಳನ್ನು ಕೇಂದ್ರಸರ್ಕಾರವು ಪರಿಶೀಲಿಸುತ್ತಿದೆಯೆಂದು ಕೇಂದ್ರಹಿರಿಯ ಶಾಸನಸಭೆಯಲ್ಲಿ ವ್ಯವಸಾಯ ಸಚಿವರು ತಿಳಿಸಿರುತ್ತಾರೆ. ಈ ಸಲಹೆಗಳನ್ನು ಪಂಚವಾರ್ಷಿಕಯೋಜನೆಯಲ್ಲಿ ಸೇರಿಸಲು ಯಾವ ಅಭ್ಯಂತರವೂ ಇಲ್ಲವೆಂದು ಸಚಿವರು ಹೇಳಿರುತ್ತಾರೆ.

ನಿಜಾಮರಿಗೆ ೨೩ ಸಾವಿರ ಎಕರೆ ಸ್ವಂತ ಜಮೀನು

ಸುಮಾರು ೨೩ ಸಾವಿರ ಎಕರೆ ಜಮೀನು ನೈಜಾಮರ ಸ್ವಂತ ಆಸ್ತಿಯೆಂದು ಪರಿಗಣಿಸಲಾಗಿದೆಯೆಂದೂ ಆದ್ದರಿಂದ ಅವನ್ನು ವಶಪಡಿಸಿಕೊಂಡಿಲ್ಲವೆಂದೂ ಹೈದರಾಬಾದ್ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಅಗ್ನಿ ಪರೀಕ್ಷೆ

ಸೌರಾಷ್ಟ್ರದ ಒಂದು ಹಳ್ಳಿಯಲ್ಲಿ ಸೈಕಲ್ ಕದ್ದರೆಂಬ ಅಪಾದನೆ ಸುಳ್ಳು ಎಂದು ರುಜುವಾತುಮಾಡಲು ಏಳು ಮಂದಿ ಬಾಲಕರನ್ನು ಕುದಿಯುವ ಎಣ್ಣೆಯಲ್ಲಿ ಅವರ ಕೈ ಅದ್ದಿಸಲಾಯಿತೆಂದೂ, ಅವರೆಲ್ಲರಿಗೂ ಕೈ ಸುಟ್ಟು ವಿಪರೀತ ಗಾಯವಾಯಿತೆಂದೂ ವರದಿಯಾಗಿದೆ. ಈ ರೀತಿ ಸಲಹೆ ಕೊಟ್ಟ ಮಂತ್ರವಾದಿ ಪರಾರಿಯಾಗಿದ್ದಾನೆ.

ಅಸಿಸ್ಟೆಂಟ್ ಇಂಜನಿಯರ ವರ್ಗ

ಮೈಸೂರು ಪುರಸಭಾ ಇಂಜನಿಯರಾಗಿದ್ದು ಈಗ ರಜದ ಮೇಲಿರುವ ಶ್ರೀ ಎ. ಕೆ. ಮುಕುಂದರವರನ್ನು ಬೆಂಗಳೂರು ಬಿಲ್ಡಿಂಗ್ ಸಬ್‌ಡಿವಿಜನ್ನಿಗೆ ವರ್ಗಾಯಿಸಲಾಗಿದೆ.

ಮಹಾರಾಜರಿಂದ ಅಂತರ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಬೆಂಗಳೂರು ೫

ಬೆಂಗಳೂರು ಕಲಾಸಂಘದವರು ಏರ್ಪಡಿಸಿರುವ ಅಂತರ ರಾಷ್ಟ್ರೀಯ ಸಂಗೀತ ಕಾರ್ಯಕ್ರಮವನ್ನು ಶ್ರೀಮನ್ಮಹಾರಾಜರು ಇದೇ ೯ ನೇ ತಾರೀಖು ಸಂಜೆ ಬೆಂಗಳೂರಿನಲ್ಲಿ ಪಟ್ಟಣ್ಣಚೆಟ್ಟಿ ಪುರಭವನದಲ್ಲಿ ನೆರವೇರಿಸುತ್ತಾರೆ.

ಈ ರಾಷ್ಟ್ರೀಯ ಸಂಗೀತ ಕಾರ್ಯಕ್ರಮದಲ್ಲಿ ನ್ಯೂಜಿಲೆಂಡ್, ಸ್ಪೇನ್, ಜರ್ಮನಿ, ಬೆಲ್ಜಿಯಂ ಮುಂತಾದ ಕಡೆಗಳಿಂದ ಕಲಾವಿದರು ಬಂದು ಭಾಗವಹಿಸುತ್ತಾರೆ.

ಧ್ವಜ ದಿನಾಚರಣೆ ನಿಧಿ

ಸೈನ್ಯಕರ ಸಹಾಯಾರ್ಥವಾಗಿ ನಿಧಿ ಕೂಡಿಸಲು ಡಿಸೆಂಬರ್ ೭ ನೇ ತಾರೀಖು ನಡೆಯುವ ಧ್ವಜ ದಿನಾಚರಣೆ ಸಂಬಂಧದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮನವಿಯೊಂದನ್ನು ಹೊರಡಿಸಿ ಸಾರ್ವಜನಿಕರು ಉದಾರ ಸಹಾಯ ನೀಡಬೇಕೆಂದು ಕೋರಿದ್ದಾರೆ.

ಸ್ಟಾಂಪುಇಲ್ಲದ ಅರ್ಜಿಗಳ ತಿರಸ್ಕಾರ

ಬೆಂಗಳೂರು ಡಿ. ೫

ಕಾನೂನು ರೀತ್ಯಾ ಸರ್ಕಾರ ಮತ್ತು ಇತರ ಕಛೇರಿಗಳಿಗೆ ಸ್ಟಾಂಪುಗಳನ್ನು ಹಚ್ಚಿ ಕಳುಹಿಸಬೇಕಾದ ಅರ್ಜಿಗಳಿಗೆ ಸ್ಟಾಂಪು ಇಲ್ಲದೆ ಹಾಗೆಯೇ ಕಳುಹಿಸಿದರೆ, ಅವುಗಳನ್ನು ಹಿಂದಕ್ಕೆ ಕಳುಹಿಸಲಾಗುತ್ತದೆ ಅಥವ ತಿರಸ್ಕರಿಸಲಾಗುತ್ತದೆ ಎಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ.

ನೆಹರೂರವರೇ ಕಾಂಗ್ರೆಸ್ ಅಧ್ಯಕ್ಷರು

ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಶ್ರೀಗಳಾದ ನಿಜಲಿಂಗಪ್ಪ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರಿಯವರು ತಮ್ಮ ಉಮೇದುವಾರಿಕೆಯನ್ನು ವಾಪಸ್ಸು ತೆಗೆದುಕೊಳ್ಳುವರಾದ್ದರಿಂದ ಅವಿರೋಧವಾಗಿ ಪಂಡಿತ ನೆಹರೂರವರೇ ಪುನಃ ಅಧ್ಯಕ್ಷರಾಗುವರೆಂದು ಹೇಳಲಾಗಿದೆ.

ಶ್ರೀ ಸುತ್ತೂರು ಮಠಕ್ಕೆ ಸಚಿವರ ಭೇಟಿ

ನಂಜನಗೂಡು ತಾಲ್ಲೂಕು ಶ್ರೀ ಸುತ್ತೂರು ಶ್ರೀ ವೀರಸಿಂಹಾಸನ ಮಠಕ್ಕೆ ಗೃಹಸಚಿವ ಶ್ರೀ ಸಿದ್ದವೀರಪ್ಪನವರು ಭೇಟಿಕೊಟ್ಟು ಶ್ರೀ ಮಠದ ಎಲ್ಲಾ ದೇವಸ್ಥಾನಗಳನ್ನೂ ಸಂದರ್ಶಿಸಿ ಶ್ರೀ ಸ್ವಾಮಿಗಳವರ ದರ್ಶನ ಪಡೆದು ಸಂಸ್ಥಾನದ ವಿದ್ಯಾ ಪ್ರಗತಿಗಾಗಿ ವಿದ್ಯಾರ್ಥಿ ನಿಲಯಗಳ ಮೂಲಕ ಶ್ರೀ ಮಠವು ಮಾಡುತ್ತಿರುವ ಮಹತ್ತರ ಕಾರ್ಯವನ್ನು ಪ್ರಶಂಸಿಸಿದರು.

ಗೃಹಸಚಿವರು ನಂತರ ಮಾಧ್ಯಮಿಕ ಶಾಲಾಸಂಘಕ್ಕೆ ಭೇಟಿಕೊಟ್ಟು, ಒಂದುವಾರದಿಂದಲೂ ಸಂಘದ ಅಧ್ಯಕ್ಷರಾದ ಶ್ರೀ ಪ್ರಭುಸ್ವಾಮಿ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಸಂಸ್ಕೃತಿ ಪ್ರಸಾರ ಸಮಾರಂಭದ ಮುಕ್ತಾಯ ಭಾಷಣಮಾಡಿದರು.

ಇಂಜನಿಯರಿಂಗ್ ವಿದ್ಯಾರ್ಥಿಗಳ ಸಮ್ಮೇಳನ

ಅಖಿಲ ಭಾರತ ಇಂಜನೀಯರಿಂಗ್ ವಿದ್ಯಾರ್ಥಿಗಳ ಸಮ್ಮೇಳನವು ಇದೇ ಮಾಹೆ ೨೨-೨೪ನೇ ತಾರೀಖುಗಳಲ್ಲಿ ಕಲ್ಕತ್ತಾದಲ್ಲಿ ನಡೆಯುತ್ತದೆ.

ಹಿಂದೂ ಮಹಾಸಭಾ ಅಧಿವೇಶನ

ಮೈಸೂರು ಹಿಂದೂ ಮಹಾಸಭೆಯ ೫ನೇ ಅಧಿವೇಶನವು ಶಿವಮೊಗ್ಗ ಜಿಲ್ಲಾ ಸಾಗರದಲ್ಲಿ ಬರುವ ಫೆಬ್ರವರಿಯಲ್ಲಿ ನಡೆಯುತ್ತದೆ. ಅಖಿಲಭಾರತ ಹಿಂದೂ ಮಹಾಸಭಾಧ್ಯಕ್ಷ ಶ್ರೀ ಎನ್. ಸಿ. ಚಟರ್ಜಿಯವರು ಅಧಿವೇಶನವನ್ನು ಉದ್ಘಾಟಿಸುವರೆಂದು ಗೊತ್ತಾಗಿದೆ.

ಡಾ|| ಮೋದಿಯವರ ಕಾರ್ಯಕ್ರಮ

ಸುಪ್ರಸಿದ್ಧ ಕಣ್ಣು ವೈದ್ಯರಾದ ಡಾ|| ಎಂ. ಸಿ. ಮೋದಿಯವರು ಇದೇ ೧೦ರಿಂದ ೧೯ನೇ ತಾರೀಖಿನವರೆಗೆ ಬೆಂಗಳೂರು ಜಿಲ್ಲೆಯಲ್ಲಿ ಪ್ರವಾಸಮಾಡಿ ಉಚಿತ ಔಷಧಿ ಮತ್ತು ಸಲಹೆಯನ್ನು ಕೊಡುವರು. ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಮಾಗಡಿ, ಚೆನ್ನಪಟ್ಟಣ, ರಾಮನಗರ, ಕಾನಕಾನಹಳ್ಳಿ, ಯಲಹಂಕ, ಸುಬ್ರಮಣ್ಯಪುರ ಮತ್ತು ಆನೇಕಲ್ ಮುಂತಾದ ಪ್ರದೇಶಗಳಿಗೆ ಭೇಟಿಕೊಡುವರು.

ಕೇಂದ್ರ ಅಹಾರ ಸಚಿವರು ಮದ್ರಾಸಿಗೆ

ಕೇಂದ್ರ ಆಹಾರ ಸಚಿವ ಶ್ರೀ ರಫಿಅಹಮದ್ ಕಿದ್ವಾಯಿಯವರು ನಾಳೆಯದಿನ ಮದ್ರಾಸಿಗೆ ಆಗಮಿಸಿ, ಅಲ್ಲಿಯ ಆಹಾರ ಪರಿಸ್ಥಿತಿ ಬಗ್ಗೆ ಮುಖ್ಯಮಂತ್ರಿ ಸಿ. ರಾಜಗೋಪಾಲಾಚಾರಿ ಮತ್ತಿತರೊಡನೆ ಸಮಾಲೋಚನೆ ನಡೆಸಿ ೭ ನೇ ತಾರೀಖು ಹಿಂತಿರುಗುವರೆಂದು ಗೊತ್ತಾಗಿದೆ.

ಕಾಂಗ್ರೆಸ್ ಮಂತ್ರಿಗಳಿಗೆ ಕಾಂಗ್ರೆಸ್ಸಿಗರಿಂದಲೇ ಕಪ್ಪುಬಾವುಟ ಪ್ರದರ್ಶನ

ಮಲೆನಾಡು ಪ್ರಜೆಗಳಿಗೆ ಸುಲ್ಕು ಭೂಮಿಗಳನ್ನು ಕೊಟ್ಟು ಅಲ್ಲಿಯ ಜನರಿಗೆ ತುಂಬಾ ಜಿಗುಪ್ಸೆಯುಂಟು ಮಾಡಿರುವುದರಿಂದ ತಮ್ಮ ಪುರಸಭೆಯು ಗಡಿಯೊಳಕ್ಕೆ ಯಾವ ಮಂತ್ರಿಯೇ ಬಂದರೂ ಅವರಿಗೆ ಕಪ್ಪು ಬಾವುಟವನ್ನು ಪ್ರದರ್ಶಿಸುವುದಾಗಿ ಪುರಸಭೆಯವರು ಮತ್ತು ಸಾರ್ವಜನಿಕರು ನಿರ್ಧರಿಸಿರುವುದಾಗಿ ಚಿಕ್ಕಮಗಳೂರು ಪುರಸಭಾಧ್ಯಕ್ಷ ಶ್ರೀ ಸಿ. ಎ. ಧ್ರುವರವರು ಆರೋಗ್ಯಮಂತ್ರಿ ಶ್ರೀ ಟಿ. ಚನ್ನಯ್ಯನವರಿಗೆ ಅಲ್ಲಿ ನಡೆದ ಸತ್ಕಾರಕೂಟದಲ್ಲಿ ತಿಳಿಸಿದ್ದಾರೆ.

ಈವರ್ಷ ೮೫೦ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಜು

೧೯೫೨ ನೇ ಅಕ್ಟೋಬರ್ ತಿಂಗಳ ಅಂತ್ಯದ ವೇಳೆಗೆ ಮೈಸೂರು ಸಂಸ್ಥಾನದ ೪೮೫೦ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಯಿತು. ನೀರಾವರಿ ಪಂಪುಗಳು ೫೯೦೮, ಶಿನಿಮಾಗಳು ೨೦೦, ಬೀದಿ ದೀಪಗಳು ೨೪೧೬೬, ಇದ್ದುವು. ಅಕ್ಟೋಬರ್ ತಿಂಗಳಲ್ಲಿ ವಿದ್ಯುಚ್ಛಕ್ತಿ ಇಲಾಖೆಯವರು ೮೪೭ ವಿದ್ಯುಚ್ಛಕ್ತಿ ಇನ್‌ಸ್ಟಲೇಷನ್ ಮತ್ತು ೪೪ ನೀರಾವರಿ ಪಂಪುಗಳನ್ನು ಹಾಕಿದರು—ಎಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ಎರಡೂವರೆ ಲಕ್ಷ ರೂ. ಗಳ ಹಣದ ಚೀಲ ಮಾಯ

ಕಲ್ಕತ್ತಾ, ಕಾರ್ಪೊರೇಷನ್ ಟ್ರೆಷರಿಯಲ್ಲಿ ಮೊನ್ನೆಯದಿನ ೧೦ ಗಂಟೆವೇಳೆಯಲ್ಲಿ ಬ್ಯಾಂಕ್ ಗುಮಾಸ್ತನು ತನ್ನ ಕೌಂಟರಿನ ಒಳ ಇಟ್ಟುಕೊಂಡಿದ್ದ ೨,೬೦,೦೦೦ ರೂಗಳ ಹಣದ ಚೀಲವು ಇದ್ದಕ್ಕಿದ್ದಂತೆಯೇ ಮಾಯವಾಯಿತು. ವಿಷಯವು ಪೋಲೀಸಿನವರಿಗೆ ತಿಳಿದಕೂಡಲೇ ಸ್ಥಳಕ್ಕೆ ಧಾವಿಸಿ ೮ ಗಂಟೆಕಾಲ ಅಲ್ಲಿಯ ನೌಕರರನ್ನು ಹೊರಕ್ಕೆ ಬಿಡದೆ ಹುಡುಕಲಾಯಿತು. ಹಣವು ಪತ್ತೆಯಾಗಲೇ ಇಲ್ಲ.

—ಮೈಸೂರುಪೇಟೆಧಾರಣೆ—

ತಾರೀಖು ೪-೧೨-೫೨

ಪಲ್ಲ	ರೂ- ಆ-	ರೂ- ಆ
ಕಡಲೇಕಾಯಿ	೯-೨	೨೩-೪
ಎಳ್ಳು	೬೫-	
ಹರಳು	೩೯-೪	೪೬-
ಹುಚ್ಚೆಳ್ಳು	೪೩-೮	೪೯-೪
ಹುರುಳಿ	೪೭-೧೨	೫೦-೬
ಹೆಸರು	೪೭-೪	೫೩-
ಅಲಸಂದೆ	೪೯-೮	೬೨-೮
ಉದ್ದು	-	
ಹೊಂಗೆಬೀಜ		
ಮೆ|| ಕಾಯಿ	೧೨-೪	೧೬-೧೦
ಹುಣಸೆಹಣ್ಣು	೬-೪	
ಸೀಗೆಕಾಯಿ	೪-೧೨	
ಬೆಲ್ಲ	೩-೪	
ತೆಂಗಿನಕಾಯಿ	೧೮೪	೨೬೧

ಅಪೇರ

5-12-52 ರಿಂದ ಅಮೋಘ ಪ್ರಾರಂಭ

ಪಸಿಯಿರ್--ಕೊಡುಮೈ

[ತಮಿಳು]

ಪಾತ್ರ:- ಎಂ. ಸ್. ದ್ರೌಪತಿ, ತಂಗಂ, ತಿಕ್ಕುರುಸಿ

ಸ್ವೀಕಾರ—

ಹೊಸಚೀನಾ-ಹೊಸಪ್ರಪಂಚ

ಮೈಸೂರಿನಲ್ಲಿರುವ ಭಾರತ-ಚೀನಾ ಸ್ನೇಹಾ ಸಂಘದವರು ಪ್ರಕಟಿಸಿರುವ ಹೊಸಚೀನ-ಹೊಸ ಪ್ರಪಂಚ ಎಂಬ ಕನ್ನಡ ಪುಸ್ತಕವನ್ನು ಆದಾರದಿಂದ ಸ್ವೀಕರಿಸಿದ್ದೇವೆ. ಎ|| ಅರ್ಥರ್‌ಕ್ಲೆಗಾರವರು ಬರೆದಿರುವ ಪ್ರಬಂಧವನ್ನು ಕನ್ನಡಕ್ಕೆ ಅನುವಾದ ಮಾಡಲಾಗಿದೆ ನೂತನ ಚೀನಾ ಪ್ರಭುತ್ವವು ಮಾವೋಟ್ಸೆ ತುಂಗನ ನಾಯಕತ್ವದಲ್ಲಿ ಕಳೆದ ನಾಲ್ಕುವರ್ಷಗಳಲ್ಲಿ ಹಳೆಯ ಸಮಾಜವನ್ನು ನಿರ್ಮೂಲವಮಾಡಿ ಯಾವ ರೀತಿ ಪ್ರಗತಿದಾಯಕವಾಗಿ ನೂತನ ಸಮಾಜವನ್ನು ಕಟ್ಟುತ್ತಲಿದೆಯೆಂಬುದನ್ನು ತಿಳಿಯಲು ಈ ಪುಸ್ತಕವು ತುಂಬಾ ಸಹಾಯವಾಗುತ್ತದೆ ಇಂತಹ ಪ್ರಗತಿದಾಯಕ ಪ್ರಬಂಧಗಳನ್ನು ಪ್ರಕಟಿಸಿರುವುದು ಶ್ಲಾಘ್ಯನೀಯ- ಬೆಲೆ ೧ ರೂ

ಅಮೇರಿಕಾದಲ್ಲಿ ನೀಗ್ರೊ

ಭಾರತದಲ್ಲಿರುವ ಅಮೆರಿಕದ ವಾರ್ತಾ ಸಂಸ್ಥೆಯವರು ಪ್ರಕಟಿಸಿರುವ "ಅಮೆರಿಕ ಜೀವನದಲ್ಲಿ ನೀಗ್ರೊ" ಎಂಬ ಸಚಿತ್ರ ಪುಸ್ತಕವು ನಮ್ಮ ಹಸ್ತಗತವಾಗಿದೆ.

ಹೊಸದಾಗಿ ಬಂದಿವೆ

ಬೇಬಿ ಪೆರಾಂಬ್ಯುಲೇಟರ್,

ಬೇಬಿ ಪುಶ್‌ಚೇರ್ಸ್,

ಮಕ್ಕಳ ಬೈಸಿಕಲ್ ಮತ್ತು ಟ್ರೈಸಿಕಲ್‌ಗಳು

ಶಾರದಾ ಸೈಕಲ್ ಮತ್ತು ವಾಚ್ ಸ್ಟೋರ್ಸ್

ದೊಡ್ಡಗಡಿಯಾರದ ಚೌಕ, ಮೈಸೂರು.

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:—ಹಿ. ಶಾ. ಸುಬ್ಬರಾವ್

ಮೋಹನ್ ಮುದ್ರಣಾಲಯ, ಮೈಸೂರು,.

FOR SALE

A GOLDEN OPPORTUNITY FOR BUYERS

Newly constructed Bungalow (Madras terraced) at Chamundipuram, Mysore, fitted with electric lights. flush-outs, taps and well, containing 6 living rooms in the main building with two out houses fetching arent of Rs. 75/- per month.

Rs. 16,000 or near offer

No brokers–Immediate possession—No encumbrence

Enquire at :— M. NARAYANA RAO,

c/o Tourist Bureau, Lansdowne Buildings, Mysore.

ಫೋನ್ 574

ರಿಜಿಸ್ಟರ್ಡ್ ನಂ. ಎಂ. 5318

ಸಮಾಚಾರ

ದಿನಪತ್ರಿಕೆ

ಸಂಪುಟ 3

ಸಂಚಿಕೆ 88

೬-೧೨-೧೯೫೨ ನೇ ಶನಿವಾರ] ★ ಸಂಪಾದಕರು: ಜಿ. ಎಲ್. ಸ್ವಾಮಿ

ಸರ್ವೋದಯ ವಿಚಾರ ಗೋಷ್ಠಿ

ಮೈಸೂರು ೬

ದೇವರಾಜ ಮೊಹಲ್ಲಾ ದಿವಾನ ಅಗ್ರಹಾರದಲ್ಲಿರುವ ಮಹಿಳಾ ಸದನದಲ್ಲಿ ನಾಳೆ ಬೆಳಗ್ಗೆ ೭ ಗಂಟೆಗೆ ಸಾಮೂಹಿಕ ಪ್ರಾರ್ಥನೆ ಮತ್ತು ಸರ್ವೋದಯ ವಿಚಾರ ಗೋಷ್ಠಿ ಏರ್ಪಡಿಸಲಾಗಿದೆ

ಚೀನಾದಿಂದ ಭಾರತಕ್ಕೆ ಅಕ್ಕಿ

ಈ ವರ್ಷದ ನವೆಂಬರ್ ತಿಂಗಳ ಅಂತ್ಯದವರೆಗೆ ಒಟ್ಟು ೧,೦೯,೮೦೦ ಟನ್ ಅಕ್ಕಿಯನ್ನು ಚೀನಾದಿಂದ ಕೊಳ್ಳಲಾಗಿದೆಯೆಂದು ಪಾರ್ಲಿಮೆಂಟಿನಲ್ಲಿ ಕೇಂದ್ರ ಆಹಾರ ಉಪಸಚಿವರು ತಿಳಿಸಿರುತ್ತಾರೆ.

ಪಂಚವಾರ್ಷಿಕಯೋಜನೆಯಲ್ಲಿ ನಿರುದ್ಯೋಗಪ್ರಶ್ನೆ

ಭಾರತದ ಪಂಚವಾರ್ಷಿಕಯೋಜನೆಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ವಿಚಾರವನ್ನು ಸೇರಿಸಲು ಆಯೋಜನಾ ಸಮಿತಿ ಒಪ್ಪಿಗೆ ಇತ್ತಿದೆಯೆಂದು ತಿಳಿದುಬಂದಿದೆ.

ಉತ್ಸವ ವೀಕ್ಷಿಸುತ್ತಿದ್ದ ಬಾಲಕನ ಮರಣ

ದಾವಣಗೆರೆಯಲ್ಲಿ ಶ್ರೀ ವೀರಭದ್ರೇಶ್ವರ ದೇವಾಲಯದ ವಾರ್ಷಿಕೋತ್ಸವ ನಡೆಯುತ್ತಿದ್ದಾಗ ವಾದ್ಯಗಳ ಶಬ್ದಕ್ಕೆ ಎತ್ತಿನಗಾಡಿಯ ಎತ್ತು, ಗಾಬರಿಗೊಂಡು ಅಲ್ಲಿ ನಿಂತಿದ್ದ ಬಾಲಕನಮೇಲೆ ನುಗ್ಗಿತೆಂದೂ, ಅನಂತರ ಗಾಡಿಯು ಬಾಲಕನ ಮೇಲೆ ಹರಿದು ಹುಡುಗನು ಮರಣಹೊಂದಿದನೆಂದು ವರದಿಯಾಗಿದೆ

ಜಹಗೀರದಾರರಿಗೆ ೨೦ ಲಕ್ಷ ರೂ ಪರಿಹಾರ

ಹೈದರಾಬಾದಿನಲ್ಲಿ ಸರ್ಕಾರವು ಜಹಗೀರುದಾರರಿಗೆ ಇಲ್ಲಿಯವರೆಗೆ ೨೫ ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಟ್ಟಿರುವುದಾಗಿ ಗೊತ್ತಾಗಿದೆ.

ಶಾಸನಸಭೆ ಅಧ್ಯಕ್ಷರುಗಳ ಸಂಬಳದಲ್ಲಿ ಖೋತಾ

ಮದರಾಸ್ ಶಾಸನಸಭೆಗಳ ಅಧ್ಯಕ್ಷರುಗಳು ತಮ್ಮ ಸಂಬಳದಲ್ಲಿ ಶೇಕಡ ೧೦ ರಷ್ಟು ಕಡಿಮೆಮಾಡಿಕೊಳ್ಳಲು ತಾವಾಗಿಯೇ ಮುಂದೆ ಬಂದಿದ್ದಾರೆ.

ಆಹಾರ ಪದಾರ್ಥಗಳ ಮೇಲೆ ಮಾರಾಟತೆರಿಗೆ ಕೂಡದು

ಪುರಸಭೆಯಲ್ಲಿ ನಿರ್ಣಯ

ಮೈಸೂರು ೬

ಮೈಸೂರು ಪುರಸಭೆಯ ಮುಂದುವರಿದ ಅಧಿವೇಶನವು ನಿನ್ನೆ ಸಂಜೆ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು ಪತ್ರಿಕೆ ಸಂಪಾದಕರಾದ ಶ್ರೀ ಟಿ. ನಾರಾಯಣರವರಿಗೆ ಸಹಕಾರಭವನದ ಹಿಂಭಾಗದಲ್ಲಿ ಟ್ರಸ್ಟ್‌ಬೋರ್ಡಿನವರು ಹಿಂದೆ ಕೊಟ್ಟಿದ್ದ ನಿವೇಶನವನ್ನು ವಾಪಸು ಅಕ್ವೈರ್ ಮಾಡಿಕೊಳ್ಳಬೇಕೆಂದು ಟ್ರಸ್ಟ್‌ಬೋರ್ಡಿನವರ ನಿರ್ಧಾರವನ್ನು ರಿಕಾರ್ಡು ಮಾಡಲಾಯಿತು.

ಮನುಷ್ಯನ ದಿನಚರಿ ಉಪಯೋಗಕ್ಕಾಗಿ ಬೇಕಾಗುವ ೪೨ ಆಹಾರಪದಾರ್ಥಗಳಮೇಲೆ ಮಾರಾಟತೆರಿಗೆಯನ್ನು ವಿಧಿಸಕೂಡದೆಂದು ಕೇಂದ್ರಸರ್ಕಾರದವರು ತೀರ್ಮಾನಿಸಿರುವ ರೀತಿಯಲ್ಲೇ ಮೈಸೂರುಸರ್ಕಾರದವರು ಸಹ ಅನುಸರಿಸಬೇಕೆಂದು ಪ್ರಾರ್ಥಿಸುವ ಶ್ರೀ ಚೌಡಯ್ಯನವರು ನಿರ್ಣಯವು ಅಂಗೀಕೃತವಾಯಿತು.

ನಗರದಲ್ಲಿ ಇತ್ತೀಚೆಗೆ ಕಳ್ಳತನ ಹೆಚ್ಚಾಗಿರುವುದನ್ನು ತಡೆಗಟ್ಟಲು ಜಿಲ್ಲಾಧಿಕಾರಿಗಳೂ ಮತ್ತು ಪೋಲೀಸ್ ಮುಖ್ಯಾಧಿಕಾರಿಗಳು ಸೂಕ್ತ ಕಾರ್ಯಕ್ರಮ ಕೈಗೊಂಡು, ಕೆಲವು ಮೊಹಲ್ಲಾಗಳಲ್ಲಿ ಮುಂಜಾಗ್ರತಾ ಸಮಿತಿಗಳು ಮತ್ತು ಕುದುರೆ ಸವಾರರು ಅಥವ ಟ್ರೈವ್ ಪೋಲೀಸು ಗಸ್ತನ್ನು ಏರ್ಪಡಿಸಬೇಕೆಂದೂ ಪ್ರಾರ್ಥಿಸುವ ನಿರ್ಣಯ ಶ್ರೀ ಬಿ ಜಿ ದಾಸರಿಂದ ಮಂಡಿಸಲ್ಪಟ್ಟು ಅಂಗೀಕಾರವಾಯಿತು.

ನಗರದ ಟ್ರಸ್ಟ್ ಬೋರ್ಡಿನವರು ಒಂದು ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿ, ಅದರ ಮೂಲಕ ಗಲೀಜು ಪ್ರದೇಶ ಉತ್ಪಾದನೆ, ಬೀಚರಂಡಿ ವ್ಯವಸ್ಥೆ, ನಗರದ ಸುತ್ತಮುತ್ತಲಿರುವ ಹಳ್ಳಿಗಳ ಅಭಿವೃದ್ಧಿ ಮತ್ತು ಬಡಜನರಿಗೆ ವಸತಿಗೃಹ ಮುಂತಾದ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಪ್ರಾರ್ಥಿಸುವ ಶ್ರೀ ಬಿ ಜಿ ದಾಸರ ನಿರ್ಣಯಕ್ಕೆ ಅನುಮೋದನೆ ದೊರೆಯಿತು.

ಉಪಾಧ್ಯಕ್ಷರ ರಜಾ

ಪುರಸಭಾಉಪಾಧ್ಯಕ್ಷ ಶ್ರೀ ಎನ್. ರಾಜಯ್ಯನವರು ಪಾರ್ಲಿಮೆಂಟಿನಲ್ಲಿ ಭಾಗವಹಿಸಲು ಹೋಗಿರುವುದರಿಂದ ಒಂದು ತಿಂಗಳು ರಜಾಕ್ಕೆ ಬರೆದಿದ್ದ ಅರ್ಜಿಯು ಪರಿಶೀಲನೆಗೆ ಬಂದಾಗ ಶ್ರೀಗಳಾದ ವಿ. ಆರ್. ನೂರ್‌ಹುಸೇನ್, ಬಿ ಜಿ ದಾಸ್ ಮತ್ತಿತರರು ಆಕ್ಷೇಪಣೆಯೆತ್ತಿ, ಶ್ರೀ ರಾಜಯ್ಯನವರು ಉಪಾಧ್ಯಕ್ಷರಾಗಿ ಚುನಾಯಿತರಾದಾರಭ್ಯ ಅವರು ತಮ್ಮ ಕಾರ್ಯದಲ್ಲಿ ನಿರತರಾಗದೆ ಒಂದಲ್ಲ ಒಂದು ರೀತಿ ರಜಾ ಪಡೆಯುತ್ತಿರುವುದರಿಂದ ಅಂತಹವರು ಉಪಾಧ್ಯಕ್ಷರಾಗಿದ್ದರೆ ಏನೂ ಪ್ರಯೋಜನವಿಲ್ಲ. ಬೇರೆಯವರನ್ನು ಚುನಾಯಿಸಿಕೊಳ್ಳುವುದು ಉತ್ತಮವೆಂದು ಹೇಳಿದರು.

ಮುಂದಿನ ಜನವರಿಯಿಂದ ಬೇರೆ ಉಪಾಧ್ಯಕ್ಷರು ಚುನಾಯಿತರಾಗಿ ಬರುವುದರಿಂದ ಕೇವಲ ೧೫, ೨೦ ದಿನಗಳಿಗೆ ಬೇರೆಯವರನ್ನು ಚುನಾಯಿಸುವುದು ಅಷ್ಟು ಸೂಕ್ತವಲ್ಲವೆಂದು ಅಧ್ಯಕ್ಷರು ತಿಳಿಸಿದ ಮೇಲೆ ಶ್ರೀ ಎನ್. ರಾಜಯ್ಯನವರಿಗೆ ರಜಾ ಕೊಡಲಾಯಿತು.

ಡಕಾಯಿತನಿಂದ ಹಣ ಮತ್ತು ಬಾಲಕರ ಅಪಹರಣ

ಪೆಷಾವರಿನ ಗೋಸ್ಪಿಯರ್ ಎಂಬ ಪ್ರದೇಶದ ವ್ಯಾಪಾರಿಯೊಬ್ಬರ ಅಂಗಡಿಗೆ ಸಶಸ್ತ್ರ ಡಕಾಯಿತರು ನುಗ್ಗಿ ಹಣದ ಪೆಟ್ಟಿಗೆ ಮತ್ತು, ಇಬ್ಬರು ಬಾಲಕರನ್ನು ಹೊತ್ತುಕೊಂಡು ಪರಾರಿಯಾದರು. ಈಗ ಆ ಬಾಲಕರನ್ನು ಬಿಡುಗಡೆ ಮಾಡಲು ೨೦ ಸಾವಿರ ರೂ ಹಣಕೊಡಬೇಕೆಂದು ಡಕಾಯಿತರು ತಿಳಿಸಿರುತ್ತಾರೆ.

ರಾಜಧನ ಹೆಚ್ಚಿತು

ತಿರುವಾಂಕೂರ್ ರಾಜಮನೆತನದವರಿಗೆ ಭಾರತ ಸರ್ಕಾರವು ಕೊಡುತ್ತಲಿದ್ದ ೨,೯೪,೦೦೦ ರೂ ರಾಜಧನವನ್ನು ೩,೮೫,೦೦೦ ರೂಗಳಿಗೆ ಹೆಚ್ಚಿಸಲಾಗಿದೆಯೆಂದು ಗೊತ್ತಾಗಿದೆ.

ಪಾರ್ಲಿಮೆಂಟಿನಲ್ಲಿ ಮಾರಾಮಾರಿ

ಇಟಲಿಯ ಪಾರ್ಲಿಮೆಂಟಿನಲ್ಲಿ ಸದಸ್ಯರಲ್ಲಿಯೇ ಜಗಳ, ಹೋರಾಟವಾಗಿ ಅನೇಕರಿಗೆ ಘಾಯಗಳಾಗಿ ಕೆಲವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆಯೆಂದು ಗೊತ್ತಾಗಿದೆ.

೧೫ ನಿಮಿಷಕಾಲದ ಈ ಹೋರಾಟದಲ್ಲಿ ಕುರ್ಚಿಗಳನ್ನೂ, ಶಾಯಿಕುಡಿಕೆಗಳನ್ನೂ ಪಾದರಕ್ಷೆಗಳನ್ನೂ ಉಪಯೋಗಿಸಲಾಯಿತೆಂದು ಹೇಳಲಾಗಿದೆ.

'ನೀರಾ'ಕ್ಕೆ ಸರ್ಕಾರದ ಪ್ರೋತ್ಸಾಹ

ಪಾನ ನಿರೋಧಕ್ಕೆ ಧಕ್ಕೆ ಬರದಂತೆ 'ನೀರಾ' ಎಂಬ ಪಾನೀಯವನ್ನು ತಯಾರಿಸಿ, ಪ್ರೋತ್ಸಾಹಿಸುವ ವಿಷಯವು ತಮ್ಮ ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ಮದ್ರಾಸಿನ ಪಾನನಿರೋಧ ಸಚಿವ ಶ್ರೀ ಪಳನಿಸ್ವಾಮಿಗೌಂಡರು ಹೇಳಿದ್ದಾರೆ.

ವಿಜ್ಞಾನ ಕಾಂಗ್ರೆಸ್ ಅಧಿವೇಶನ

ಭಾರತೀಯ ವಿಜ್ಞಾನ ಕಾಂಗ್ರೆಸ್ಸಿನ ೪೦ ನೇ ಅಧಿವೇಶನವು ಬರುವ ಜನವರಿ ೩ ನೇ ತಾರೀಖಿನಿಂದ ಲಕ್ನೋದಲ್ಲಿ ನಡೆಯುತ್ತದೆ. ಇಂಗ್ಲೆಂಡ್, ಸ್ವಿಟ್ಸರ್‌ಲೆಂಡ್, ಬೆಲ್ಜಿಯಂ ಮುಂತಾದ ನಾನಾ ರಾಷ್ಟ್ರಗಳ ವಿಜ್ಞಾನಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುವರು.

ವಿದ್ಯಾರ್ಥಿಗಳ ಪ್ರದರ್ಶನ

ಮದರಾಸಿನ ಎಸ್. ಎಸ್. ಎಲ್. ಸಿ. ತರಗತಿಗಳಲ್ಲಿ ಪುನಃ ಸೆಲೆಕ್ಷನ್ ಪರೀಕ್ಷೆಗಳನ್ನು ಜಾರಿಗೆ ತಂದಿರುವುದನ್ನು ಪ್ರತಿಭಟಿಸಿ, ಅಲ್ಲಿನ ಸಹಸ್ರಾರು ಹೈಸ್ಕೂಲು ವಿದ್ಯಾರ್ಥಿಗಳು ಶಾಲೆಗೆ ಹೋಗದೆ ಮೆರವಣಿಗೆ ಪ್ರದರ್ಶನ ನಡೆಸಿದರು.

ಕೊರಿಯಾಯುದ್ಧದಲ್ಲಿ ಅಮೆರಿಕನ್ನರ ಮರಣ

ಕೊರಿಯಾಯುದ್ಧದಲ್ಲಿ ಇಲ್ಲಿಯವರೆಗೆ ೧೨೬೩೮೩ ಮಂದಿ ಅಮೆರಿಕನ್ನರು ಸತ್ತಿರುವುದಾಗಿ ಅಧಿಕೃತವಾಗಿ ಪ್ರಕಟಿಸಲಾಗಿದೆ.

÷ ಭಾರತದ ಕೆಲವು ಪ್ರಮುಖ ನಗರಗಳಲ್ಲಿ ವಿದ್ಯುತ್ ರೈಲ್ವೆಯನ್ನು ಹಾಕಲು ಯೋಜನೆಯೊಂದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಕೇಂದ್ರ ರೈಲ್ವೆ ಶಾಖಾ ಸಚಿವರು ಹೇಳಿದ್ದಾರೆ.